ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA.

ಪ್ರತಿ ಸೋಮವಾರ ಪ್ರಾತಃಕಾಲದಲ್ಲಿ ಪ್ರಕಟಿಸಲ್ಪಡುವದು.

Published every Monday Morning.

ಪ್ರಕಾಮವಿವಿಧಪ್ರವೃತ್ತ್ಯಜಗವಾರ್ತಾ ಕರ್ಣಾಟಕಪ್ರಕಾಶನಪರಾ [illegible] ॥ [illegible]

Vol. XV] BANGALORE:—MONDAY, JANUARY 9, 1888. [No. 1.

ಪುಸ್ತಕ ೧೫.] ಬೆಂಗಳೂರು:—ಸರ್ ೧೮೮೮ನೇ ಇಸವಿ ಜನವರಿ ೯ನೇ ತಾರೀಖ್ ಸೋಮವಾರ. [ಸಂಚಿಕೆ ೧

ಕರ್ಣಾಟಕ ಪ್ರಕಾಶಿಕಾ

ಪತ್ರಿಕೆಯ ಚಂದಾ ದರಗಳು,
೧೮೮೮ನೇ ಇಸವಿ ಜನವರಿಯಾರಭ್ಯ
ಕಡಿಮೆಮಾಡಲ್ಪಟ್ಟಿರುತ್ತದೆ.

ಈ ಪತ್ರಿಕೆಯ ಚಂದಾದಾರರಲ್ಲಿ ಅನೇಕರ ಅಪೇಕ್ಷೆಯನ್ನು ನೆರವೇರಿಸುವ ಉದ್ದೇಶದೊಡನೆಯೂ, ಪರಿಮಿತವಾದ ಆದಾಯವುಳ್ಳವರಿಗೆಲ್ಲ ಈ ಪತ್ರಿಕೆಯು ಸುಲಭವಾಗಿ ಲಭಿಸುವಂತಿರಬೇಕೆಂಬ ಅಭಿಪ್ರಾಯದೊಡನೆಯೂ ಇದರ ಚಂದಾದರವನ್ನು ಇದರಡಿ ಕಂಡಂತೆ ಕಡಿಮೆಮಾಡಿರುತ್ತೇವೆ:

ಇಂಗ್ಲಿಷ ಮತ್ತು ಕನ್ನಡಭಾಗಗಳಿಗೆ.

	ಸ್ಥಳದವರಿಗೆ	ಪರಸ್ಥಳದವರಿಗೆ.
12 ತಿಂಗಳಿಗೆ	8 0 0	9 0 0
6 „	4—0—0	4 8 -0
3 „	2 - 8—0	2 - 8 - 0

ಇಂಗ್ಲಿಷ ಅಥವಾ ಕನ್ನಡಭಾಗಗಳಿಗೆ.

	ಸ್ಥಳದವರಿಗೆ	ಪರಸ್ಥಳದವರಿಗೆ.
12 ತಿಂಗಳಿಗೆ	4—0—0	5—0—0
6 „	2—0—0	2—8—0
3 „	1—4—0	1—8—0

ಷರಾ — [illegible]

[illegible]

ಪ್ರಕಟನೆಯ ವಿವಾಜಿ.

ಮೊದಲನೆಯ ಸಲ ಪಂಕ್ತಿ ಒಂದಕ್ಕೆ ೧—೬ ೦

ಎರಡನೆಯ ಸಲ ಪಂಕ್ತಿ ಒಂದಕ್ಕೆ ೦-೧ ೦

ಷರಾ — [illegible]

"IT RECOMMENDS ITSELF"

ALL WHO SUFFER FIND SURE RELIEF.

LITTLES'

ORIENTAL BALM

THE MOST EFFECTUAL MODERN REMEDY FOR PAIN.

ಲಿಟಲ್ ಎಂಬವರಿಂದ ತಯಾರಿಸಲ್ಪಟ್ಟ "ಓರಿಯಂಟಲ್ ಬಾಮ್" ಎಂಬ ಪೂರ್ವದೇಶ ಸಂಬಂಧವಾದ ಅಮೂಲ್ಯವು [illegible] ಬಹಳ ಸುಲಭವಾದ ನೂತನ ಪ್ರತಿಕ್ರಿಯಾರೂಪವಾದ ಔಷಧವು. [illegible]

[illegible]

ಪರಿಶೀಲಕರ ಅಭಿಪ್ರಾಯವು.

[illegible] (C. R. TICHBORNE, L. L. D., F. C. S., M. R. I. A.,) [illegible]

[illegible]

AGENTS,— Messrs, J. West, Chemist, &c, Bangalore.
Captain & Co. Chemists, Bangalore
Riggs & Co., Chemists, Bangalore; and of
Mahomed Yoosoof and Sons, The Cash Bazaar, Bangalore,
A. C. Gerrykan & Co.,
20 Sambodoss Street Madras.

NOTICE.

VAIDYASARA SANGRAHA

A TREATISE ON THE PRINCIPLES OF

HINDU MEDICINE.

Price including Postage Rs 5 6 0

ವೈದ್ಯಸಾರ ಸಂಗ್ರಹ.

ಈಗಂತಾದೇಶೀಯುಳ್ಳವರು ಮೊಬಲಗಿನೊಡನೆ ಕೆಳಗೆ ರುಜುಮಾಡಿರತಕ್ಕವರ ಹೆಸರಿಗೆ ಬರೆದುಕೊಂಡರೆ ಪುಸ್ತಕ ಕೂಡಲೇ ಕಳುಹಿಸಲ್ಪಡುವದು. ಮೊಬಲಗು ಇಲ್ಲದ ದರಖಾಸ್ತುಗಳಿಗೆ ಸ್ವೀಕರಿಸಲ್ಪಡಲಾರದು.

ಕ್ರಯ ... ...ರೂ॥ ೫ - ೦—೦
ಪ್ಯಾಕಿಂಗ ಮತ್ತು ಅಂಚೆಸಾಸಲ್, ೦—೬—೦

ಟಿ. ಬಿ. ವೆಂಕಟಾಚಾರ್,
ಆಸ್ಪತ್ರೆರೋಡ, ಬೆಂಗಳೂರು.

ನೋಟೀಸು.

ಇದರಿಂದ ನಾವು ಎಲ್ಲರಿಗೂ ತಿಳಿಯಪಡಿಸುವದೇನಂದರೆ—

ಮಾಯೇ ಮುಖಕೂರ ಗುರ್ರೇಲಾಗಾಯತು ಈ ಪತ್ರಿಕೆಯು ಸಕಲ ಜನಗಳಿಗೂ ಸುಲಭವಾಗಿ ಲಭಿಸುವಂತೆ ಇದರ ಚಂದಾದರವನ್ನು ಕಡಮೆಮಾಡಿರುತ್ತೇವೆ. ಕಳೆದ ಡಿಸಂಬರ್ ಆಖೈರವರಿಗೆ ಚಂದಾ ಮೊಬಲಗನ್ನು ಬೇಬಾಕಾಗಿ ಕೊಟ್ಟಿರತಕ್ಕವರಿಗೆ ಈ ವಾರದಲಾಗಾಯತು ಎರಡು ವಾರಗಳವರಿಗೆ ಪತ್ರಿಕೆಗಳು ಅದಮಾಯಿಷೀತರೀಕ ರವಾನಿಸಲ್ಪಡುವವು. ಅದರೊಳಗಾಗಿ ಚಂದಾ ಹಣವನ್ನು ಕಳುಹಿಸಿದವರಿಗೆ ಮಾತ್ರವೇ ಮೂರನೇವಾರದ ಮೊದಲು ಪತ್ರಿಕೆ ರವಾನಿಸಲ್ಪಡುವದು. ಈಗ ಕಡಮೆ ಮಾಡಲ್ಪಟ್ಟಿರುವ ದರವು ಫಕತ್ ಅಡ್ವಾನ್ಸ ಕಳುಹಿಸುವವರಿಗೆ ಮಾತ್ರವೇ ಉದ್ದೇಶ್ಯವಾಗಿರುತ್ತವೆ.

ಬೆಂಗಳೂರು, ತಾ॥೯ನೇ ಜನವರಿ ೧೮೮೮.

ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA.

MONDAY, JANUARY 9 1888.
೧೮೮೮ನೇ ಜನವರಿ ೯ನೇ ತಾ॥ ಸೋಮವಾರ

THE YEAR 1887.

ಈಗ ಗತಿಸಿದ ಸರ್ ೧೮೮೭ನೇ ಇಸವಿಯು ಅದರ ಹಿಂದಿನ ವರುಷದಂತೆ ಶುಭಾಶುಭ ಮಿಶ್ರಗಳಾದ ಬಹ್ವಂಶಗಳಿಂದೊಡಗೂಡಿದ್ದಾಗಿದ್ದರೂ ಕೆಲವು ಮುಖ್ಯಾಂಶಗಳಿಂದದು ಪ್ರಜೆಗಳಿಗೆ ವಿಶೇಷತಃ ಸ್ಮರಣೀಯವಾದದ್ದಾಗಿರುತ್ತದೆ. ಇದು ಪ್ರಥಮತಃ ದುಃಖದಿಂದುಪಕ್ರಮವಾದರೂ ಕಡೆಗೆ ಸುಖ ಸಮಾಧಾನಗಳಿಂದ ಪ್ರಾಪ್ತಿಸಿತಾಗಿ ಸಾಮಾನ್ಯೇನ ಗತವರುಷವು ಸುಖಪ್ರಚುರ ಮಾದದ್ದಾಗಿತ್ತೆಂದು ಹೇಳಬಹುದಾಗಿದೆ.

ಕಳೆದ ಸಂವತ್ಸರಾದಿಯಲ್ಲಿ ಇಂಡ್ಯದೇಶದ ಪ್ರಜೆಗಳ ಪೈಕಿ ಏಕದೇಶೀಯರಾದ ಮದರಾಸ ಪ್ರೆಸಿಡೆನ್ಸೀ ಪ್ರಜೆಗಳು, ಅಲ್ಲಿನ ಹೇಪಿಲ್ಸ ರ್‍ಕ ವಿಪತ್ತಿಗೊಳಗಾಗಿ ನಷ್ಟಪಟ್ಟ ಇಷ್ಟಮಿತ್ರರ ವಿಯೋಗ ಜನ್ಯವಾದ ಕ್ಲೇಶದಿಂ ಪೀಡಿತರಾಗಿರುವಾಗ್ಯೂ, ಅವರ ದುಃಖೋಪಶಾಮಕವಾದ ಜೇರಿಸೊಂದು ವಿಷಯವು ಶೀಘ್ರದಲ್ಲಿಯೇ ಪ್ರಾಪ್ತವಾಗಿ, ಅದು ಜನಗಳ ಮನೋವ್ಯಸನೆಯಂ ನಿವೃತ್ತಿಸಿ ಸಾರ್ವಜನೀನವಾದ ಆನಂದವನ್ನುಂಟುಮಾಡುವದಾಗಿತ್ತು. ಅದು ಯಾವದೆಂದರೆ:—

ಶ್ರೀಮರ್ಚ ಮಹಾರಾಜ್ಞೀ ವಿಕ್ಟೋರಿಯಾ ಇಂಡ್ಯಾ ಚಕ್ರವರ್ತಿನೀಯವರು, ಬರ್ಕಸ್ವಿಕವಂತ ಪರಂಪರಾಗತವಾದ ಸಿಂಹಾಸನಾರೋಹಣಾನಂತರ ತಮ್ಮ ಸ್ವತ್ವಕರ್ತವ್ಯವನ್ನೂ, ತಮ್ಮ ಭುಜಬಲದಿ ನೂತನವಾಗಿ ಆರ್ಜಿಸಿದ ನವೀನ ರಾಜ್ಯಗಳನ್ನೂ, ಗತ ಐವತ್ತು ವರುಷಗಳಕಾಲ ಅವಿಚ್ಛಿನ್ನವಾಗಿ, ಸಕಲಜನಾಭಿಮತ ನೀತಿಯವಾಗಿರುವಂತೆ, ಪಾಲಿಸುತ ಬಂದವರಿಂದ, ತತ್ಪ್ರಯುಕ್ತ ಸಾಮಾನ್ಯವಾಗಿ ಉಂಟಾದ ಬಹುತರ ಪ್ರಯೋಜನಗಳನ್ನು ಪರ್ಯಾಲೋಚಿಸಿ, ಆ ಕೆಯವರ ಪಾಲನೆಗೊಳಗಾದ ಪ್ರಜೆಗಳೆಲ್ಲರೂ ತಮ್ಮ ಹೃದಯಂಗಮಗಳಾದ ರಾಜಭಕ್ತಿ ಕೃತಜ್ಞತಾದಿ ಭಾವಗಳನ್ನು ಬಹುರೀತಿಯಿಂದ ವ್ಯಕ್ತಪಡಿಸಿ ಸದರೀ ಮಹತ್ಸಂದರ್ಭವು ತಮ್ಮ ಕೀರ್ತಿ ಪ್ರತಿಷ್ಠೆಗಳಿಗೆ ಅನುಗುಣವಾಗಿ ವಿಭವದಿಂ ಕೊಂಡಾಡಿ, ಸತ್ಪುರುಷರ ವ್ಯವಹಾರೋದಾಹರಣರೂಪವಾದ ಆಕೆಯವರ ನಿರಂತರ ವಾತ್ಸಲ್ಯಕ್ಕೆ ಪಾತ್ರರಾದರು. ಪ್ರಸಕ್ತ ಜ್ಯೂಬಿಲೀ ಉತ್ಸವವು ನ್ಯಾಯವಾಗಿ ಸರ್ವತ್ರ ಒಂದೇದಿನದೊಳು ನಡೆಯತಕ್ಕದ್ದಾಗಿದ್ದರೂ, ಲಾರ್ಡ ಡಫ್ರಿನ್ನಯವರ ಪ್ರೇರಣೆಯಿಂದ ಈ ದೇಶದಲ್ಲಿ ನಾಲ್ಕು ತಿಂಗಳಿಗೆ ಪ್ರಥಮವೇ ನಡೆಸಲ್ಪಟ್ಟಿತು. ತರುವಾಯ ಕಳೆದ ಜೂನ್ ತಿಂಗಳಲ್ಲಿ, ಮಹಾರಾಜ್ಞೀಯವರು ಸಿಂಹಾಸನಾರೋಹಣಾಗ್ರದ ಶುಭ ದಿನದೊಳು, ಬರ್ದ ಪಟ್ಟಣದಲ್ಲಿ ಜ್ಯೂಬಿಲೀ ಉತ್ಸವವು ವಿಶೇಷ ಸಂಭ್ರಮದೊಡನೆ ನಡೆಯಿತು. ಅದಕ್ಕಾಗಿ ಇಂಡ್ಯದೇಶದಿಂದ ಹೋಲ್ಕರ್, ಸಿಂಧಿಯಾ ಮೊದಲಾದ ಕೆಲವರು ನೇಟಿವ್ ಸಂಸ್ಥಾನಾಧಿಪತಿಗಳು, ಅನುಗ್ರಹನೀಯರುಗಳಾದ ತಮ್ಮ ಜಾತಿ ಮತ ನಿಯ

ಗಳಿಗಿಂತಲೂ ಮಹಾರಾಣಿಯವರಲ್ಲಿ ತಮಗಿರುವ ರಾಜಭಕ್ತಿ ವಿಶ್ವಾಸಗಳೇ ಶ್ರೇಷ್ಠವೆಂದೆಣಿಸಿ ಅವು ತೋರ್ಪಡಿಸುವಬಗ್ಗೆ ಸ್ವತಃ ಇಂಗ್ಲಾಂಡಿಗೆ ಹೋಗಿದ್ದರು. ಶ್ರೀಮನ್ಮಹಾರಾಣಿಯವರು ಅವರಂ ಬಹಳ ಪ್ರೀತಿ ಗೌರವಗಳೊಡನೆ ಬರಮಾಡಿಕೊಂಡು ಸತ್ಕರಿಸಿದಾಗ್ಯೂ, ರಾಜನೀತ್ಯಾನಭಿಜ್ಞರಾದ ಕೆಲವರು ಇಂಗ್ಲಿಷ್ ಅಧಿಕಾರಿಗಳ ಅಶ್ರದ್ಧೆಯಿಂದ ನಡೆದ ಮರ್ಯಾದೋಲ್ಲಂಘನಕ್ಕಾಗಿ ಹೋಳ್ಕರ್ ಮಹಾರಾಜರವರು ಅಸಮಾಧಾನದೊಡನೆ ಸ್ವದೇಶಕ್ಕೆ ಹಿಂತಿರುಗಿ ಬರುವಂತೆ ಪ್ರಾಪ್ತವಾಯಿತು.

ನೇಟಿವ್ ಸಂಸ್ಥಾನಾಧಿಪತಿಗಳು ತಮ್ಮ ರಾಜಭಕ್ತಿ ಪ್ರದರ್ಶನಕ್ಕೆ ಹಿಡಿದಿಟ್ಟಿದ್ದ ಒಂದೊಂದು ಮಾರ್ಗವನ್ನವಲಂಬಿಸಿದಾರೆ ಹ್ಯಾಗಂದರೆ— ಗ್ವಾಲಿಯರ್ ಮಹಾರಾಜರವರು ತಾವಾಗಿಯೋ ಅಥವಾ ಅನ್ಯರ ಪ್ರೇರಣೆಯಿಂದಲೋ ಬ್ರಿಟಿಷ್ ಗವರ್ನ್‌ಮೆಂಟಿಗೆ ಮೂರುವರೆಕೋಟಿ ರೂಪಾಯಿಗಳು ಸಾಲಕೊಟ್ಟರು. ಇದರಿಂದ ಗ್ವಾಲಿಯರ್ ಸಂಸ್ಥಾನದ ಸ್ವಾತಂತ್ರ್ಯಕ್ಕುಂಟಾಗ ಬಹುದಾದ ಲೋಪವನ್ನರುಹಿ, ಈರೀತಿ ಸಾಲಕೊಡುವದಾಗಲಿ, ತೆಗದುಕೊಳ್ಳುವದಾಗಲಿ, ಗೌರವಾವಹವಲ್ಲವೆಂದು ಸೂಚಿಸಿದ್ದೆವು. ಹೈದರಾಬಾದ್ ನಿಜಾಮರವರು ಸರಹದ್ದು ಪ್ರಾಂತದ ಬಂದೋಬಸ್ತಿನ ಬಗ್ಗೆ ೬೦ ಲಕ್ಷ ರೂಪಾಯಿಗಳು ಕೊಡುವಂತೆ ವಾಗ್ದಾನಮಾಡಲು ಆ ಗವರ್ನ್‌ಮೆಂಟಿನವರು ತಮ್ಮ ಕೀರ್ತಿ ಪ್ರಾಭವಗಳಿಗುಂಟಾಗಬಹುದಾದ ನ್ಯೂನತೆಯಂ ಸಹ ಚಿಂತಿಸದೆ ಅಂಗೀಕರಿಸಿದರು. ಇದನ್ನೋಡಿ ಕೆಲವರು ಇತರ ಸಂಸ್ಥಾನಾಧಿಪತಿಗಳು ಕೂಡ ತಮ್ಮ ಉತ್ಪನ್ನ ಸಂಪತ್ತಿಗಳನ್ನು ಕುದ್ದಾಂಗ ಪರ್ಯಾಲೋಚಿಸದೆ, ಸರ್ವಸ್ವವನ್ನೊಪ್ಪಿಸಲಿಕ್ಕೆ ಸನ್ನದ್ಧರಾಗಿರುವಂತೆ ತಿಳಿಸಲಾರಂಭಿಸಿದಾರೆ.

ಪಬ್ಲಿಕ್ ಸರ್ವಿಸ್ ಕಮಿಷನಿನವರ ವಿಚಾರವೆಲ್ಲವು ಪೂರೈಸಿತು. ಆವಿಷಯದಲ್ಲಿ ಇಂಡ್ಯದೇಶದ ಮೂರು ಪ್ರೆಸಿಡೆನ್ಸಿಗಳಲ್ಲಿರತಕ್ಕ ಪ್ರಮುಖರಾದ ದೊಡ್ಡ ಮನುಷ್ಯರನೇಕರ ಅಭಿಪ್ರಾಯಗಳು ತೆಗದುಕೊಳ್ಳಲ್ಪಟ್ಟವು. ಪ್ರಸಕ್ತ ಕಮಿಷನ್ನವರ ಆಖೈರ್ ರಿಪೋರ್ಟು ಅದ್ಯಾಪಿ ಹೊರಬಾಗದೆ ಇರುವದರಿಂದ ಬಹುತಃ ಅದು ಇಂಡ್ಯ ದೇಶೀಯರಿಗೆ ಹಿತಕರವಾದದ್ದಾಗಿಯೇ ಇರಬಹುದೆಂದೆಣಿಸುತ್ತೇವೆ. ಮುಖ್ಯವಾಗಿ ಇದರಿಂದ ನೇಟಿವ್‌ಗಳು ಯಾವ ಉದ್ಯೋಗಗಳಿಗೆ ಲಾಯಖಾದವರೆಂಬದೂ, ಯಾವದು ಅವರಿಗೆ ನಿರ್ಭ್ಯಂತರವಾಗಿ ಕೊಡಲ್ಪಡಬಹುದೆಂಬದೂ ಪರ್ಯವಸಿತವಾಗಿರುವದರಿಂದ ಹಿಂದೂಗಳದು ಬಹಳ ಆತುರದೊಡನೆ ನಿರೀಕ್ಷಿಸುತಲಿದಾರೆ.

ಗತ ಸಂವತ್ಸರದ ಆಖೈರ್‌ಭಾಗದಲ್ಲಿ ಯೂರೋಪಿಯನ್ ಸಮೂಹಕ್ಕೇ ಕೇವಲ ಅವಮಾನಕರವಾದ ಒಂದು ವ್ಯಭಿಚಾರ ಮೊಕದ್ದಮೆಯು ಮದರಾಸ್ ಹೈಕೋರ್ಟ್ ರಿಜಿಸ್ಟ್ರಾರಾದ ಮೆ|| ರಾಸ್ ಎಂಬವರಮೇಲೆ ತರಲ್ಪಟ್ಟು ಅದು ಒಂದೆರಡು ವಾರಗಳ ತನಕ ಅಲ್ಲಿನ ಹೈಕೋರ್ಟ್ ಚೀಫ್ ಜಸ್ಟಿಸಯವರಿಂದಲೇ ವಿಚಾರಿಸಲ್ಪಟ್ಟು ಕಡೆಗೆ ಮೆ|| ರಾಸಿಯವರು ನಿರಪರಾಧಿಯೆಂಬದಾಗಿ ವ್ಯವಸ್ಥೆಯಾಯಿತು. ಒಂದು ವ್ಯಭಿಚಾರ ಮೊಕದ್ದಮೆಯನ್ನು ಪ್ರಾಧಾನ್ಯೇನ ಇಲ್ಲಿ ನಮೂದಿಸಲಿಕ್ಕೆ ನಮ್ಮ ಉದ್ದೇಶವೇನಂದರೆ, ಗೌರವ್ಯನಾದ ಒಬ್ಬ ದೊಡ್ಡ ಅಧಿಕಾರಿಯು ಶಂಕಿಸದೆ ಮತ್ತೊಬ್ಬನ ಭಾರ್ಯೆಯಂ ಪಬ್ಲಿಕ್ ರೋಡಿನಲ್ಲಿ ಸಂಚರಿಸುವಾಗ್ಯೆ ಗಾಡಿಯಲ್ಲಿ ಕೆಡಿಸಲೆತ್ನಿಸಿದ್ದೂ, ಗೌರವ್ಯಳಾದ ದೊರಸಾನಿ ಯೋರ್ವಳು ಪ್ರಥಮತಃ ಅನ್ಯಪುರುಷನ ಸಂಭೋಗಕ್ಕೊಳಪಟ್ಟು ತರುವಾಯ ತನ್ನ ನಿರಪರಾಧಿತ್ವವನ್ನು ನಿರೂಪಿಸುವ ವ್ಯಾಜದಿಂ ಲಜ್ಜೆ ಇಲ್ಲದೆ ಒಬ್ಬ ಆಫಿಸರನ ಹೆಸರನ್ನು ಬಯಲಿಂ ಪಡಿಸುವ ಬಗ್ಗೆ ಕೋರ್ಟಿಗೆ ಬಂದದ್ದೂ, ಮಹೋನ್ನತಾಧಿಕಾರವಂ ಕೈಗೊಂಡು, ನ್ಯಾಯ ವಿಮರ್ಶಕರೆಂದೆನ್ನಿಸಿಕೊಂಡಿರುವವರು, ಈ ಮೊಕದ್ದಮೆಯ ವಿಚಾರಣೆ ಕಾಲದಲ್ಲಿ ಮೆ|| ರಾಸಿಯವರ ವಿಷಯದೊಳು ಅಸಾಧಾರಣಗಳಾದ ಕೆಲವು ಪಕ್ಷಪಾತಗಳಂ ತೋರಿಸಿದ್ದೂ, ಹಿಂದೂದೇಶ ಚರಿತ್ರ ಗ್ರಂಥದೊಳು ಬರೆದಿಟ್ಟು ಅದಂ ಓದತಕ್ಕ ನಮ್ಮ ಬಾಲಕರಿಗೆ ಪ್ರಕಟಪಡಿಸಬೇಕೆಂಬದು.

ಹಿಂದೂ ವೈವಾಹಿಕ ಧರ್ಮಶಾಸ್ತ್ರಕ್ಕೆ ಮೂಲತಃ ಹಾನಿಯನ್ನುಂಟುಮಾಡತಕ್ಕದ್ದಾಗಿಯೂ, ಸ್ತ್ರೀಯರ ಸ್ವಾತಂತ್ರ್ಯ ವೈಲಕ್ಷಣ್ಯಾದಿಗಳಿಗೆ ದೃಷ್ಟಾಂತವಾದದ್ದಾಗಿಯೂ, ಗೃಹಸ್ಥರಾದವರಿಗೆ ಮನೋವ್ಯಥೆಯನ್ನೂ, ಉಚ್ಛೃಂಖಲ ಪ್ರವೃತ್ತಿಯುಳ್ಳ ಯುಗಸರಿಗೆ ಹೃದಯಾನಂದವನ್ನು ಸಹ ಉಂಟುಮಾಡತಕ್ಕದ್ದಾಗಿಯೂ ಇರುವ ಒಂದ ಮೊಕದ್ದಮೆಯು, ಸ್ವದೇಶಾನ್ಯದೇಶೀಯರ ವಿಚಾರಕ್ಕೆ ವಿಷಯವಾಗಿ ಅದರಮೇಲೆ ಅವರವರು ನಾನಾವಿಧ ಅಭಿಪ್ರಾಯಗಳಂ ವ್ಯಕ್ತಪಡಿಸಿದರು. ಅದುಯಾವದೆಂದರೆ—ಮುಂಬೈನಿವಾಸಿಯಾದ ದಾದಾಜಿ ಎಂಬಾತನು ನವೀನ ನಾಗರಿಕತೆಯಿಂದ ಪರಿಪೂರ್ಣಳಾದ ರುಕ್ಮಾಬಾಯಿಯೆಂಬಾಕೆಯನ್ನು ವಿವಾಹ ಮಾಡಿಕೊಂಡನು. ಆಕೆ ಪ್ರೌಢೆಯಾದ ಮೇಲೆ ವಿವಾಹಿತಪತಿಯಂ ಪರಿತ್ಯಾಗಮಾಡಿ ಅವನೊಡನೆ ವಸಿಸಲಿಕ್ಕೆ ನಿರಾಕರಿಸಿದಳು. ಬಳಿಕ ಗಂಡನು ತನ್ನ ಭಾರ್ಯೆಯ ಮೇಲೆ ಫಿರ್ಯಾದಮಾಡಿ ಬಹಳ ಪಟ್ಟುಗಳಾಯಿಸಿದ್ದರಿಂದ ಅಪೀಲ್ ಕೋರ್ಟಿನಲ್ಲಿ ರುಕ್ಮಾಬಾಯಿಯು ಗಂಡನೊಡನೆ ಸಂಸಾರ ಮಾಡತಕ್ಕದ್ದೆಂತಲೂ ಅದಕ್ಕೆ ತಪ್ಪಿದೊಡೆ ಆಕೆಗೆ ಆರುತಿಂಗಳ ಸಜಾ ವಿಧಿಸುವಂತೆಯೂ ತೀರ್ಮಾನಿಸಿದರು. ಸ್ತ್ರೀಸಮಾಜಕ್ಕೆ ಉಂಟಾದ ಸ್ವಾತಂತ್ರ್ಯಕ್ಕೆ ಭಂಗವುಂಟಾಯಿತಲ್ಲಾ ಎಂಬ ದುಃಖಯುತರಾದ ಕುಲಾಂಗನೆಯರನೇಕರು ರುಕ್ಮಾಬಾಯಿಯ ನಷ್ಟವಾದ ಸ್ವಾತಂತ್ರ್ಯರಕ್ಷಣೆಯ ಬಗ್ಗೆ ಬೇಕಾದ ದ್ರವ್ಯಸಹಾಯ ಮಾಡಲಾದರು. ಈಗ ಅಹಲ್ಯಾ ದ್ರೌಪದೀ ಸೀತಾ ಮೊದಲಾದ ಆರ್ಯಮಹಿಳೆಯರಂತೆ ರುಕ್ಮಿಣೀ ಬಾಯಿಯು ನಮಗೆ ಪತಿವ್ರತಾ ಧರ್ಮಬೋಧಕಳಾಗಿಯೂ, ವೈವಾಹಿಕ ಧರ್ಮಗಳಂ ನಿರೂಪಿಸಿ ತಿಳಿಸತಕ್ಕವಳಾಗಿಯೂ ಇರುವದರಿಂದ ಆಕೆಯ ಸ್ಮರಣೆಯು "ಪಂಚಕನ್ಯಾ ಸ್ಮರೇನ್ನಿತ್ಯಂ ಮಹಾಪಾತಕ ನಾಶನಂ" ಎಂಬುವಂತೆ ನಮ್ಮ ದೈನಂದಿನ ಪಾಪನಿವಾರಕ ವಾದದ್ದಾಗಿರುತಿದೆ.

ಮದರಾಸ್ ಗವರ್ನರಾದ ಲಾರ್ಡ್ ಕಾನಿಮರಾಯವರು ದಕ್ಷಿಣ ದೇಶದಲ್ಲಿರುವ ತಿರುವಾಂಕೂರು ಕೊಚ್ಚಿ ವಗೈರೆ ಕೆಲವು ನೇಟಿವ್ ಸಂಸ್ಥಾನಗಳಿಗೆ ದಯಮಾಡಿ ಅಲ್ಲಿನ ಅರಸರು ಮಾಡಿದ ಸತ್ಕಾರಗಳನ್ನಂಗೀಕರಿಸಿ ದೇಶದ ಪ್ರಜೆಗಳಸ್ಥಿತಿಗತಿಗಳಂ ಸ್ವತಃ ನೋಡಿಕೊಂಡು ಅಲ್ಲಿಯಲ್ಲಿ ಪ್ರಜೆಗಳ ಪ್ರಾರ್ಥನೆಗಳಿಗೆ ಅವಧಾನವನ್ನಿತ್ತು ಅವರ ಕೋರಿಕೆಗಳನ್ನು ಸಾಧ್ಯವಾದ ಮಟ್ಟಿಗೆ ಈಡೇರಿಸುವಂತೆ ವಾಗ್ದಾನ ಮಾಡಿ ಬಂದರು. ಸದರೀ ಸಂದರ್ಭದಲ್ಲಿ ತಿರುವಾಂಕೂರು ಸಂಸ್ಥಾನದ ಕೆಲವು ಅವ್ಯವಸ್ಥೆಗಳು ಪ್ರಾಧಾನ್ಯೇನ ಗವರ್ನರವರ ಅವಧಾನಕ್ಕೆ ತರಲ್ಪಟ್ಟಾಗ್ಯೂ ಅವರು ಅವುಗಳಿಗೆ ನಿಗೇ ಕೊಟ್ಟಂತೆ ಕಾಣಿಸಲಿಲ್ಲವು.

ಇಂಡ್ಯ ದೇಶದ ನೇಟಿವ್ ಸಂಸ್ಥಾನಾಭಿಮಾನಿಯಾಗಿಯೂ, ಅವುಗಳ ಅಭಿವೃದ್ಧಿಯಂ ಬಯಸಿ ತದರ್ಥ ಬಹುವಿಧ ಕ್ಲೇಶಗಳನ್ನನುಭವಿಸಿದವರಾಗಿಯೂ ಇದ್ದ ಪ್ರಸಿದ್ಧರಾದ ಮೇಜರ್ ಇವಾನ್ಸ್ ಬೆಲ್ ಎಂಬವರು ಗತ ಸೆಪ್ಟೆಂಬರ್ ತಿಂಗಳಲ್ಲಿ ಕಾಲಗತಿಯನ್ನೈದಿದರು. ಸಾಮಾನ್ಯೇನ ನೇಟಿವ್ ಸಂಸ್ಥಾನಗಳ ವಿಷಯದಲ್ಲಿಯೂ, ಮುಖ್ಯವಾಗಿ ಅನಾದಿಸಿದ್ಧವಾದ ಈ ಮೈಸೂರು ರಾಜವಂಶವು ಊರ್ಜಿತವಾದ ವಿಷಯದಲ್ಲಿಯೂ, ಮೇಲ್ಕಂಡ ದೊಡ್ಡಮನುಷ್ಯರು ಮಾಡಿದ ಉಪಕೃತಿಯನ್ನು ಕೃತಜ್ಞತೆಯೊಡನೆ ಸ್ಮರಿಸತಕ್ಕಂತವರಿಗೆಲ್ಲ ಮೇಜರ್ ಬೆಲ್‌ಯವರ ಮರಣ ವೃತ್ತಾಂತವು ಸ್ಮರಿಸಿದಾಗಲೆಲ್ಲ ಹೃದಯವ್ಯಥಾಕಾರಿಯಾಗಿರುತಿದೆ.

ಗತವಾರದಲ್ಲಿ ನಾವು ತಿಳಿಸಿದ್ದಂತೆ ನ್ಯಾಷನಲ್ ಕಾಂಗ್ರೆಸ್ ಯೆಂಬ ಮಹಾಜನ ಸಭೆಯು ಕಳೆದತಿಂಗಳ ೨೭ನೇ ತಾರೀಖು ಮಂಗಳವಾರದವಿನ ಮಧ್ಯಾಹ್ನ ಮದರಾಸ್ ಮೌಂಟ್‌ರೋಡಿನೊಳಿರುವ ಮೆಕೆ ಯೆಂಬವರ ತೋಟದಲ್ಲಿ ಸೇರಿತ್ತು. ತದರ್ಥ ಸದರೀ ತೋಟದಲ್ಲಿ ವಿಶಾಲ ರಮಣೀಯವಾದ ಚಪ್ಪರ ಒಂದು ಹಾಕಲ್ಪಟ್ಟು ಅದರಲ್ಲಿ ಪ್ರತಿನಿಧಿಗಳಿಗೆ ಬೇಕಾದ ಏರ್ಪಾಡುಗಳೆಲ್ಲವೂ ಮಾಡಲ್ಪಟ್ಟಿದ್ದವು. ಇದಕ್ಕಾಗಿ ದೇಶಾಂತರಗಳಿಂದ ಬಂದಿದ್ದ ಪ್ರತಿನಿಧಿಗಳ ಸಂಖ್ಯೆಯು ಅದರ ಹಿಂದಿನ ವರುಷಗಳಲ್ಲಿದ್ದದಕ್ಕಿಂತ ಅತ್ಯಧಿಕವಾಗಿತ್ತು. ೧೮೮೫ನೇ ಇಸವಿಯಲ್ಲಿ ಪ್ರಸಕ್ತ ಸಭೆಯು ಪ್ರಥಮತಃ ಸೇರಿದಾಗ ಸುಮಾರ್ ೭೫ ಮಂದಿಗಿಂತ ಅಧಿಕವಾಗಿ ಪ್ರತಿನಿಧಿಗಳು ಬಂದಿರಲಿಲ್ಲವು. ಇದರ ಸ್ವರೂಪ ಪ್ರಯೋಜನೋದ್ದೇಶ್ಯಗಳು ಹೊರಗಾದ ಬಳಿಕ ೧೮೮೬ನೇ ಇಸವಿಯಲ್ಲಿ ೪೫೦ ರ ತನಕ ಅವರ ಸಂಖ್ಯೆಯು ವೃದ್ಧಿಯನ್ನೈದಿತು. ಈಸಲ ೬೦೦ ಮಂದಿಯವರಿಗೆ ಪ್ರತಿನಿಧಿಗಳು ನೆರದಿದ್ದರು. ಈ ಸಭೆಯು ರಾಜ್ಯಾವಳಿತ ವಿಷಯದಲ್ಲಿ ಗವರ್ನ್‌ಮೆಂಟಿನವರಿಗೆ ಸಹಾಯಕವಾಗಿರುವದೆಂದೂ ಹೇಳಲಿಕ್ಕೆ ಈಗಲೇ ಅನೇಕ ಸೂಚನೆಗಳು ಕಂಡುಬರುತವೆ. ಮೊದಲನೆಯ ದಿನ ರಾಜಾ ಸರ್ ಟಿ. ಮಾಧವರಾಯರವರು ಅಗ್ರಾಸನದಿಂ ಮಂಡಿಸಿ ಸಭೆಯ ಉದ್ದೇಶವನ್ನರುಹಿ ಪ್ರತಿನಿಧಿಗಳನ್ನು ಸ್ವಾಗತಪೂರ್ವಕ ಬರಮಾಡಿಕೊಂಡರು. ಅನಂತರ ಮೆ|| ಬದ್ರುದ್ದೀನ್ ತಯಾಬ್ಜಿಯವರು ಸಭಿಕರೆಲ್ಲರ ಅಭಿಪ್ರಾಯಾನುಸಾರ ಪ್ರೆಸಿಡೆಂಟಾಗಿ ಚುನಾಯಿಸಲ್ಪಟ್ಟರು. ಸದರೀ ದೊಡ್ಡ ಮನುಷ್ಯರು ಅಗ್ರಾಸನವ ವಹಿಸಿ, ಉಪೋದ್ಘಾತ ರೂಪವಾಗಿ ಮಾಡಿದ ಉಪನ್ಯಾಸವು ಬಹಳ ಶ್ಲಾಘ್ಯವಾಗಿತ್ತು. ಅದು ಮೊದಲು, ೩ ದಿನಗಳು ಸಭೆಸೇರಿ ಮುಖ್ಯಗಳಾದ ಏಳೆಂಟು ವಿಷಯಗಳಂ ಕುರಿತು ವಿಚಾರ ಮಾಡಿ ನಿಶ್ಚಯಿಸಿದರು. ಅವುಗಳ್ಯಾವವೆಂದರೆ, ಪ್ರಸಕ್ತ ಸಭೆಯ ನಡವಳಿತದ ಬಗ್ಗೆ ಅದಕ್ಕೆ ಜನರು ಪ್ರತಿನಿಧಿಗಳಾಗಿ ಚುನಾಯಿಸಲ್ಪಡಬೇಕಾದ ಕ್ರಮಗಳ ಏರ್ಪಾಟಿನ ಬಗ್ಗೆ ಕೆಲವು ನಿಬಂಧನೆಗಳನ್ನು ಮಾಡುವ ವಿಚಾರ; ವೈಸ್‌ರಾಯಿಯವರ ನ್ಯಾಯ ವಿಧಾಯಕ ಸಭೆಯ ಮೆಂಬರ್‌ಗಳಲ್ಲಿ, ಪ್ರಜೆಗಳಿಂದ ಚುನಾಯಿಸಲ್ಪಟ್ಟವರ ಸಂಖ್ಯೆಯನ್ನು ವೃದ್ಧಿಪಡಿಸುವಣ; ಜ್ಯುಡಿಷಲ್ ಮತ್ತು ರೆವಿನ್ಯೂ ವಗೈರೆ ಕಾರ್ಬಾರೀ ಅಧಿಕಾರಗಳನ್ನು ಪ್ರತ್ಯೇಕಿಸುವಣ; ನೇಟಿವ್‌ಗಳನ್ನು ಯುದ್ಧನೌಕರಿಗಳಲ್ಲಿ ದಾಖಲ್ಮಾಡಿಕೊಳ್ಳುವಣ; ನೇಟಿವ್‌ಗಳನ್ನು ಮಿಲಿಟರಿ ವಾಲಂಟೀಯರ್‌ಗಳನ್ನಾಗಿ ಅಂಗೀಕರಿಸುವಣ; ಇನ್‌ಕಂಟ್ಯಾಕ್ಸ್ ವಿಚಾರ; ಆರ್ಮ್ಸ್ ಆಕ್ಟನ್ನು ರದ್ದುಪಡಿಸತಕ್ಕವಿಷಯ; ಶ್ರೇಷ್ಠವಾದ ಕೆಲಸಗಳನ್ನು ಜನಗಳಿಗೆ ಕಲಿಸಬೇಕಾದ್ದರ ಆವಶ್ಯಕತೆ; ಈವಿಷಯಗಳಂ ಕುರಿತು ಮೂರು ಪ್ರೆಸಿಡೆನ್ಸಿಗಳಿಂದಲೂ ಬಂದಿದ್ದ ಪ್ರಸಿದ್ಧರಾದ ನೇಟಿವ್ ದೊಡ್ಡಮನುಷ್ಯರನೇಕರು, ಬಹಳ ಶ್ಲಾಘ್ಯವಾಗಿ ವಿಚಾರ ಮಾಡಿ ತಮ್ಮ ಅಭಿಪ್ರಾಯಗಳಂ ತಿಳಿಯಪಡಿಸಿದರು. ಮುಖ್ಯವಾಗಿ ಆಯಾ ವಿಷಯಗಳಂ ಕುರಿತು ಅನುಭವಶಾಲಿಗಳಾದವರು ತಿಳಿಸಿದ ಅಂತರಂಗಗಳಂ ಸೂಚಿಸಲಿಕ್ಕೆ ಈ ಪತ್ರಿಕೆಯಲ್ಲಿ ಅವಕಾಶವಿಲ್ಲದೆ ಹೋದದಕ್ಕಾಗಿ ನಾವು ಬಹಳ ಚಿಂತಿಸುವೆವು. ಈ ಸಭೆಯಲ್ಲಿ ಮಾತನಾಡಿದವರಲ್ಲಿ ಪ್ರತಿಯೊಬ್ಬರವಾಕ್ಚಾತುರ್ಯವೂ, ಸರಳತೆಯೂ, ಧಾಟಿಯೂ ಬಹಳ ಕೊಂಡಾಡತಕ್ಕವಾಗಿದ್ದವು. ತತ್ರಾಪಿ ಮೆ|| ಸುರೇಂದ್ರನಾಥ ಬ್ಯಾನರ್ಜಿ ಎಂಬವರ ಸಾನುಸ್ಪರ್ಶವೂ ವಾಕ್ಪಟುತ್ವವೂ ಆಶ್ಚರ್ಯಕರವಾದದ್ದಾಗಿತ್ತು. ಈಸಭೆಯು ಮುಂದಿನ ವರುಷದೊಳಗೆ ಅಲಹಾಬಾದಿನೊಳು ಸೇರುವಂತೆ ನಿಶ್ಚಯವಾಗಿರುತಿದೆ. ಪ್ರಸಕ್ತ ಸಭೆಯವರು ತಮ್ಮ ಕರ್ತವ್ಯವನ್ನು ಬಹಳ ಶ್ರದ್ಧಾ ಜಾಗರೂಕತೆಗಳೊಡನೆ ನೆರವೇರಿಸಿದಬಗ್ಗೆ ನಾವು ಬಹಳ ಸಂತೋಷಿಸುತ್ತೇವೆ. ಈ ಕಾಂಗ್ರೆಸ್ಸಿನ ಅಧ್ಯಕ್ಷತೆಯನ್ನು ಐಕಮತ್ಯದೊಡನೆ ಒಬ್ಬ ಮುಸಲ್ಮಾನ್ ದೊಡ್ಡ ಮನುಷ್ಯರಿಗೆ ಕೊಟ್ಟದ್ದು ಕೇವಲ ಹಿಂದೂ ಸಭಾಜನವೆಂಬ ಅಪಪ್ರಥೆಯನ್ನು ಹೋಗಲಾಡಿಸಿದಂತಾಯಿತು. ರಾಜಾ ಸರ್ ಟಿ. ಮಾಧವರಾಯರು ವಗೈರೆ ಪ್ರಸಿದ್ಧರಾದವರ ಸಂಬಂಧದಿಂದ ಸಭೆಗೆ ವಿಶೇಷ ಪ್ರಾಶಸ್ತ್ಯ ವುಂಟಾಗಲಿಕ್ಕೆ ಕಾರಣವಾಯಿತು. ಬಹುಜನ ಯೂರೋಪಿಯನ್ ಸರದಾರರ ಅಭಿಮಾನದಿಂದ ರಾಜದ್ರೋಹಿಗಳಾದವರ ದೊಂಬಿ ಯೆಂಬ ದೂಷಣೆಗೆ ಅನವಕಾಶವಾಯಿತು.

ಗವರ್ನರ್ ಮುಂತಾದವರ ಪ್ರೋತ್ಸಾಹದಿಂದ, ಪ್ರಜಾಭಿಪ್ರಾಯಗಳಂ ಸರ್ಕಾರದವರು ಪುರಸ್ಕರಿಸಿ ಗೌರವಿಸುವ ಅಭಿಲಾಷೆಯುಳ್ಳವರಾಗಿದಾರೆ ಎಂಬ ಆಶೆ ಸ್ಪಷ್ಟವಾಗುತಿದೆ. ನಾನಾ ದೇಶೀಯರು ಜಾತಿ ಮತ ಪ್ರಯುಕ್ತಗಳಾದ ವ್ಯಾವ್ಯಾಪಕ ಭಾವಗಳಂ ಚಿಂತಿಸದೆ ಸಮರಸದಿಂ ಏಕತ್ರ ಸೇರಿ ಒಂದುವಿಷಯದಂ ವಿಚಾರ ಮಾಡುವದರಿಂದ, ಜನಗಳಿಗೆ ಪರಸ್ಪರ ವಿರುವ ಪ್ರೀತಿ ಗೌರವ ಐಕಮತ್ಯಾದಿಗುಣ ಪ್ರವರ್ತನಗಳಿಗೆ ಆಸ್ಪದವನ್ನುಂಟುಮಾಡಿದಂತೆ ಯಾಗುತಿದೆ. ಹೀಗೆ ಪ್ರಜಾಭಿಪ್ರಾಯಗಳು ಗವರ್ನ್‌ಮೆಂಟಿನವರು ಲಕ್ಷ್ಯವಿಟ್ಟು ಗೌರವಿಸುತ ಬರುವದರಿಂದ ಸೌಖ್ಯಾನುಕರಣಿಗಿರುವ ಸ್ನಿಗ್ಧತೆಯು ಚಿರತರಗಾಗಿ ಶತ್ರು ರಾಜರ ಪ್ರಯತ್ನವು ಕುಂಗಲಿಕ್ಕೆ ಕಾರಣವಾಗುವದು. ದೈವಾನುಗ್ರಹದಿಂ ಇದಕ್ಕೆ ಬೇಲ್ಲಾದಿನ ಉಪಪತ್ತಿಗಳು ಸಿದ್ಧಿಸಿ ಇದು ಉತ್ತರೋತ್ತರಾಭಿವೃದ್ಧಿಯನ್ನೈದುತ ಬರಬೇಕೆಂದು ಕೋರುವೆವು.

ಹೈದರಾಬಾದು ಸಂಸ್ಥಾನದ ನವಾಬರವರಿಗೂ ಅವರ ಮಂತ್ರಿಯಾದ ಸರ್‌ಸಾಲಾರ್‌ಜಂಗರವರಿಗೂ ಈಚೆಗೆ ಕೆಲವುಕಾಲದಮೊದಲು ನೆಲಗೊಂಡಿದ್ದ ವೈಮನಸ್ಯವು ಆಖೈರಿಗೆ ಯೆರಡನೆಯವರ ರಾಜೀನಾಮೆಪೂರ್ವಕ ಮುಕ್ತಾಯವಾಯಿತು. ಸರ್ ಸಾಲಾರ್‌ಜಂಗರವರು ಆಸಂದರ್ಭದಲ್ಲಿ ಇಂಗ್ಲಾಂಡಿಗೆಹೋಗಿ ಅಲ್ಲಿ ಕೆಲವುತಿಂಗಳಕಾಲವಿದ್ದು ಅಲ್ಲಿ ಮಹಾರಾಣಿ ಮುಂತಾದವರ ಪ್ರೀತಿ ಗೌರವಗಳಿಗೆ ಪಾತ್ರರಾಗಿದ್ದರು. ಇವರ ಪ್ರಾಶಸ್ತ್ಯವು ಹೈದರಾಬಾದಿನೊಳು ಕೆಲವರಿಗೆ ಅಂತಃಬಾಧಕವಾಗಿದ್ದದರಿಂದ ಮರಳಿ ಇವರಿಗೆ ಪುರಪ್ರವೇಶವು ಕಷ್ಟಸಾಧ್ಯವಾಗಿ ಏರ್ಪಟ್ಟಿತು. ಸರ್ ಸಾಲಾರ್‌ಜಂಗರವರು ಕೆಲಸದಿಂ ನಿವೃತ್ತರಾದಕೂಡಲೇ ಕರ್ನಲ್ ಮಾರ್ಷತ್‌ಯೆಂಬ ಒಬ್ಬ ಯೂರೋಪಿಯನ್ ಆಫಿಸರರ ಪ್ರವೇಶಕ್ಕೆ ಅವಕಾಶವುಂಟಾಯಿತು. ನಾಮಮಾತ್ರಕ್ಕೆ ಇವರು ನಿಜಾಮರವರಿಗೆ ಒಬ್ಬ ಪ್ರೈವೇಟ್ ಸೆಕ್ರೆಟರಿ ಯೆನಿಸಿಕೊಂಡಿದ್ದಾಗ್ಯೂ ಸದರೀ ರಾಜ್ಯಕ್ಕೆ ಮುಖ್ಯ ಕಾರ್ಬಾರೀ ಅಧಿಕಾರಿಯಾಗಿದಾರೆ. ಇವರ ಸಂಬಂಧದಿಂದ ಅನೇಕ ವಿಷಯಗಳು ವೈಪರೀತ್ಯವನ್ನೈದುವವೆಂದು ತೋರುತಿದೆ. ಈ ಸಂಸ್ಥಾನದಿಂದ ಜ್ಯುಬಿಲೀಕಾಲದಲ್ಲಿ ಇಂಗ್ಲಾಂಡಿಗೆ ಕೆಲವರು ಪ್ರತಿನಿಧಿಗಳು ಕಳುಹಿಸಲ್ಪಟ್ಟು ಅವರಿಗೆ ಅಲ್ಲಿ ಸ್ವರೂಪಾನುಗುಣಗಳ ಮರ್ಯಾದೆಗಳು ಜರಿಗಿದವಲ್ಲವೆ ಮಹಾರಾಣಿಯವರು ಕೆಲವು ಬಹುಮಾನಗಳನ್ನು ಕಳುಹಿಸಿದರು.

ಬರೋಡೇ ಮಹಾರಾಜರಾದ ಸೈಯಾಜಿರಾವ್ ಗಾಯಕವಾಡಿ ಯವರು ತಮ್ಮ ಪಟ್ಟ ಮಹಿಷಿಯೊಡನೆ ಯೂರೋಪ್ ದೇಶದೊಳಗಣ ಪ್ರಸಿದ್ಧಗಳಾದ ಪ್ರದೇಶಗಳಿಗೆ ದಯಮಾಡಿ ಅಲ್ಲಿ ದರ್ಶನೀಯಗಳಾದವನ್ನೆಲ್ಲ ಕಟಾಕ್ಷಿಸುತ್ತ, ಅವರಾತಿಥ್ಯದೊಡನೆ ಮಾಡಲ್ಪಟ್ಟ ಅಲ್ಲಿನವರ ಸತ್ಕಾರಗಳಂ ಕೈಗೊಂಡು ಈಗ ಲಂಡನ್ನಿನಲ್ಲಿರುತಲಿದಾರೆ. ಕಳೆದ ತಿಂಗಳಲ್ಲಿ ಇವರಿಗೆ ಶ್ರೀಮನ್ಮಹಾರಾಣಿಯವರ ಪ್ರೀತ್ಯರ್ಥವಾಗಿ ಅವರು ಕೆ.ಜಿ.ಸಿ ಎಂಬ ಘನತರವಾದ ಪ್ರಶಸ್ತಿಯಂ ಕೃಪಗೈದು ಸುಂದರವಾದ ತಮ್ಮದೊಂದು ತಸಬೀರನ್ನು ಕೊಟ್ಟರು. ಕ್ಷಿಪ್ರದಲ್ಲಿಯೇ ಅವರು ಇಂಡ್ಯದೇಶಕ್ಕೆ ವಾಪಸ್ ದಯಮಾಡುವರೆಂದು ತೋರುತಿದೆ.

ಭೂಪಾಲ್ ಸಂಸ್ಥಾನದ ಪೊಲಿಟಿಕಲ್ ಏಜೆಂಟರಾದ ಸರ್ ಲೆಪೆಲ್ ಗ್ರಿಫಿನ್‌ಯವರು ಅಲ್ಲಿನ ರಾಣಿಯವರಾದ ಬೇಗಂಯವರ ವಿಷಯದಲ್ಲಿ ಆಗಿಂದಾಗ್ಯೆ ತೋರಿಸುತಬರುವ ಅಮರ್ಯಾದೆಗಳೂ ಅವರ ರಾಜ್ಯಾವಳಿತ ವಿಷಯದಲ್ಲಿ ಮನಸ್ವೀ ಪ್ರವೇಶಿಸಿ ಮಾಡಿದ ನಿರ್ಬಂಧಗಳೂ ಬಹಳ ಅಸಮಾಧಾನ ಕರಗಳಾದವಾಗಿರುತಿವೆ. ಆ ಸಂಸ್ಥಾ

ನವಲ್ಲಿ ಪೊಲಿಟಿಕಲ್ ಏಜಂಟರು ನಡೆಸಿದ ದಾಂಧ ಲೆಗಳನ್ನು ಕಲ್ಕತ್ತೆಯ ಅಮೃತಬಜಾರ್ ಪತ್ರಿಕೆಯು ಧೈರ್ಯವಾಗಿ ಹೊರಪಡಿಸದಿದ್ದರೆ ಅವು ಇತರವಿಧದಿಂ ಜನಗಳಿಗೆ ತಿಳಿಯಬರುತಿರಲಿಲ್ಲವು. ಈ ವಿಷಯದಲ್ಲಿ ಸದರೀ ಪತ್ರಿಕೆಯಿಂ ಭೂಪಾಲ್ ಸಂಸ್ಥಾನಕ್ಕೆ ಪರಂಪರೆಯಾಗಿಯೂ, ಬೇಗಂಯವರ ವಿಷಯದೊಳು ಸಾಕ್ಷಾತ್ತಾಗಿಯೂ ನಡೆದ ಶ್ಲಾಘ್ಯತರವಾದ ಉಪಕಾರವು ಚಿರಸ್ಮರಣೀಯವಾದದ್ದಾಗಿರುತದೆ. ಮೇಲೆ ಕಂಡ ಪತ್ರಿಕೆಯು ಆರೋಪಿಸಿದ ದೋಷಗಳೆಲ್ಲವೂ ನಿರಾಧಾರಗಳಾದವರಿಂದ ಅದರಮೇಲೆ ಫಿರ್ಯಾದ ಮಾಡಲಿ ಕ್ಕಾಗಲಿ, ಅದರ ಮಾತುಗಳಂ ಖಂಡಿಸಲಿಕ್ಕಾಗಲಿ ಹುಕುಂ ಕೊಡಬೇಕೆಂದು ಸರ್ ಲಿಪೆಲ್ ಗ್ರಿಫಿನ್ ಯವರು ಇಂಡ್ಯ ಗವರ್ನ್‌ಮೆಂಟಿನವರನ್ನು ಕೇಳಿದ್ದಕ್ಕೆ ಅವರು ಆ ರೀತಿ ಮಾಡುವದು ಅನುಚಿತ ವೆಂಬದಾಗಿ ಜವಾಬುಕೊಟ್ಟರು. ಇದರಿಂದ ಸರ ಲಿಪೆಲ್ ಗ್ರಿಫಿನ್‌ಯವರ ದೋಷವನ್ನು ಕೆಲವುಮಟ್ಟಿಗೆ ಗವರ್ನ್‌ಮೆಂಟಿನವರೇ ಒಪ್ಪಿಕೊಂಡರು ಎಂತ ತೋರುತದೆ.

ಕ್ಯಾಂಬೇ ಸಂಸ್ಥಾನದ ಜವಾನರಾದ ನೇ|| ಶಾ ಮರಾಯರವರು ಅಲ್ಲಿನ ಪೊಲಿಟಿಕಲ್ ಏಜಂಟರಾದ ಮು|| ವಿಲ್ಸನ್ ಎಂಬವರಮೇಲೆ ಕೆಲವು ತಕ್ಸೀರುಗಳನ್ನು ಆರೋಪಿಸಿ ಫಿರ್ಯಾದು ಮಾಡಿದ್ದರು. ಇವರ ದರ್ಖಾಸ್ತಿನ ಬಗ್ಗೆ ಕಳೆದ ಫೆಬ್ರುವರಿ ತಿಂಗಳಲ್ಲಿ ಅಹಮದಾಬಾದಿನಲ್ಲಿ ಒಂದು ಸ್ಪೆಷಲ್ ಕಮಿಷನ್ ಪ್ರತ್ಯೇಕವಾಗಿ ವಿಚಾರಣೆ ನಡೆಯಿತು. ಮು|| ವಿಲ್ಸನ್ ಎಂಬವರು ದುರಭಿಪ್ರಾಯದಿಂದ ನವಾಬರ ಮಗಳಿಂ ಕರೆಯಿಸಲಿಕ್ಕೆ ಪ್ರಯತ್ನಿಸಿ ಅಂತ ರುಜುವಾತ್ತಾಗಲು ಮುಂಬಯಿ ಗವರ್ನ್‌ಮೆಂಟಿನವರು ಅವರ ನಡತೆಯ ಕುರಿತು ಬಹಳವಾಗಿ ಆಕ್ಷೇಪಿಸಿದರು. ಅದರಮೇಲೆ ಪೊಲಿಟಿಕಲ್ ಏಜಂಟರು ಸ್ಟೇಟ್ ಸೆಕ್ರೆಟರಿಯವರ ಕೌಂಸಿಲ್‌ಗೆ ಅಪೀಲ್ ಮಾಡಿಕೊಂಡದ್ದರಮೇಲೆ ಅವರು ತಕ್ಸೀರ್ ದೃಷ್ಟಾಂತವಾಗಿ ರುಜುವಾತ್ತಾಗಲಿಲ್ಲವೆಂದು ಅಭಿಪ್ರಾಯಪಟ್ಟರು. ಬಳಿಕ ಮು|| ವಿಲ್ಸನ್‌ಯವರು ತಮ್ಮ ನೌಕರಿಯಿಂದ ನಿವೃತ್ತರಾದರು. ಈ ಮೊಕದ್ದಮೆಯು ಗತ ವರುಷದಲ್ಲಿ ಕೆಲವುಕಾಲ ಜನಗಳ ಅವಧಾನಕ್ಕೆ ಮುಖ್ಯವಿಷಯವಾಗಿತ್ತು.

ಗತ ಸಂವತ್ಸರದ ಆದಿಭಾಗದಲ್ಲಿ ತಿರುವಾಂಕೂರ್ ಸಂಸ್ಥಾನದ ದಿವಾನರಾದ ಆನರೆಬಲ್ ಮಿಸ್ಟರ್ ರಾಮೈಯ್ಯಂಗಾರ್ರವರು ತಮ್ಮ ಪದವಿಯಿಂದ ನಿವೃತ್ತರಾಗಲು ಅದಕ್ಕೆ ದಿವಾನ್ ಪೇಷ್ಕಾರ್ ಮಿಸ್ಟರ್ ರಾಮರಾಯರವರು ನೇಮಕರಾದರು. ತಿರುವಾಂಕೂರ್ ಮಹಾರಾಜರವರ ಸನ್ನಿಧಿಯ ಕೆಲವರ ಪ್ರಾಬಲ್ಯದಿಂದ, ಅರಮನೆ ಕೀರ್ತಿಗೌರವಗಳಿಗೆ ಹಾನಿಕರಗಳಾದ ಅನೇಕ ಕಳಂಕ ತರವೊಳಗೆ ಅವು ಕರಿಗೆ ವೃತ್ತಾಂತಪತ್ರಿಕೆಗಳ ಭೂಷಣ ದೂಷಣಗಳಿಗೆ ವಿಷಯಗಳಾಗಿ ಬಿದ್ದವು. ಇದರಿಂದ ಸದರೀ ರಾಜ್ಯದಲ್ಲಿ ಪಕ್ಷಭೇದಗಳೇರ್ಪಟ್ಟು ಪರಸ್ಪರ ವೈರವ್ಯಾಧಿ ವೃದ್ಧಿಗೆ ಕಾರಣವಾಗಿದೆ. ಮುಖ್ಯವಾಗಿ ಸದರೀ ಸಂಸ್ಥಾನದ ಶ್ರೇಯೋಭಿವೃದ್ಧಿಗೆ ಬಾಧಕಗಳಾದ ಅಂತಗಳು ಅನೇಕ ಇರುವದರಿಂದ ಅವು ದೈವಾನುಗ್ರಹದಿಂ ನಿವೃತ್ತಿ ಯಾಗಬೇಕಾಗಿರುತದೆ.

ತಿರುವಾಂಕೂರು ಸಂಸ್ಥಾನದ ದಿವಾನರಾದ ಆನರೆಬಲ್ ಮಿ ರಾಮಕ್ಕಂ ರಾಮೈಯ್ಯಂಗಾರ್, ಸಿ. ಎಸ್. ಐ. ಯವರು ಕಳೆದ ಮೇ ತಿಂಗಳ ೧೨ನೇ ತಾರೀಖಿನ ದಿನ ಕಾಲಗತಿಯನ್ನೈದಿದರು. ಇವರ ಯೋಗ್ಯತೆಯೂ ಸಂಪತ್ಪ್ರಭಾವಗಳೂ ಅನೇಕರ ಗೌರವಕ್ಕೆ ಕಾರಣಂಗಳಾಗಿದ್ದವಲ್ಲದೆ ಇವರು ಮೊದಲು ಸಾಮಾನ್ಯವಾದ ಒಂದು ಕುಟುಂಬದೊಳು ಜನಿಸಿ ತಮ್ಮ ಮೇಧಾ ಶಕ್ತಿಗಳಿಂದ ವಿಶೇಷ ಕೀರ್ತಿ ಪ್ರಶಸ್ತಿಗಳಂ ಪಡೆದು ಅನೇಕರವಶ್ಯಕರಿಗೆ ವಿಷಯರಾಗಿದ್ದರು. ಇಂತವರ ಮರಣವು ಈ ಸಂದರ್ಭದಲ್ಲಿ ಸ್ಮರಣೀಯವಾಗದೆ ಹೋಗಲಾರದು.

ಇಲ್ಲಿನ ಬ್ರಿಟಿಷ್ ರೆಸಿಡೆಂಟರಾದ ಮಿ ಲೈಲ್ ಯವರು ಪಂಜಾಬ ದೇಶದ ಲೆಫ್ಟಿನೆಂಟ್ ಗವರ್ನರಾಗಿ ನೇಮಕರಾಗಲ್ಪಟ್ಟು ಕಳೆದ ಮಾರ್ಚತಿಂಗಳ ಮಧ್ಯಭಾಗದಲ್ಲಿ ತಮ್ಮ ಕೆಲಸದ ಚಾರ್ಜನ್ನು ವಹಿಸತಕ್ಕ ಬಗ್ಗೆ ಇಲ್ಲಿಂದ ಪ್ರಯಾಣವಾದರು. ಅವರ ಕೆಲಸಕ್ಕೆ ಇಂಡ್ಯ ಗವರ್ನ್‌ಮೆಂಟಿನ ಲೆಜಿಸ್ಲೆಟಿವ್ ಸೆಕ್ರೆಟರಿಯಾದ ಮಿ|| ಫಿಟ್ಜ್‌ಪ್ಯಾಟ್ರಿಕ್ ಯವರು ಆಕ್ಟಿಂಗ್‌ತರೀಕ್ ನಿಯಮಿಸಲ್ಪಟ್ಟು ಅದನ್ನು ನಿರ್ವಹಿಸುತಲಿದ್ದರು. ಕಳೆದ ಅಕ್ಟೋಬರ್ ತಿಂಗಳಲ್ಲಿವರಿಗೆ ಆನರೆಬಲ್ ಕಮ್ಮಿಷನರ ಕೆಲಸವಾಗಿ ಅಲ್ಲಿಗೆ ಹೊರಟುಹೋಗಲು ಅವರಕೆಲಸಕ್ಕೆ ಸರ್‌ಹಾರಿ ಪ್ರಿಡೊಕ್ಸ್‌ಯವರು ಹಂಗಾಮಿ ತರೀಕ್‌ನೇಮಕರಾಗಿಬಂದರು. ಹೀಗೆಯೇ ಕಳೆದ ವರುಷದಲ್ಲಿ ಅಸಿಸ್ಟೆಂಟ್ ರೆಸಿಡೆಂಟ್ ಕೆಲಸದಲ್ಲಿ ನಡಕೆಲವು ಬದಲಾವಣೆಗಳು ನಡೆದವು.

ಗತಸಂವತ್ಸರದಲ್ಲಿ ಈಸೀಮೆಯ ನಡೆಇವಳಿಯಾ ತ ಅದಲತವು ಅದರ ಹಿಂದಿನ ವರುಷಗಳಿಗಿಂತ ಬಹಳ ಲಾಭಕರವಾಗಿಯೂ, ಉತ್ತರೋತ್ತರ ಸರ್ಕಾರದವರಿಗೆ ಭರವಸೆಯನ್ನುಂಟುಮಾಡುವಂತಾದ್ದಾಗಿಯೂ ಇತ್ತು. ಕಳೆದ ಸಾಲಿನಲ್ಲಿ ಪದಿಮೂರು ಕಾಲುಲಕ್ಷರೂಪಾಯಿಗಳು ಅನೇಕಬಾಬುಗಳಲ್ಲಿ ಜಾಸ್ತಿ ಹುಟ್ಟಿದವಾಗಿ ನಿಶ್ಚಯಿಸಲಭ್ಯವಾಯಿತ್ತೇ ನೇಟಿವ್‌ಪ್ರಭುತ್ವಕ್ಕೆ ಶ್ರೇಯಸ್ಕರವಾಗಿರುತದೆ. ಇದರಿಂದ ಈ ರಾಜ್ಯವು ಮುಂದೆ ಅಭಿವೃದ್ಧಿಯನ್ನೈದಿ ಉತ್ಕರ್ಷಕ್ಕೆ ಬರಬಹುದೆಂಬ ದೃಢವಾದನಂಬಿಕೆಯು ಅನೇಕರಿಗೆ ಉಂಟಾಗಲಿಕ್ಕೆ ಕಾರಣವಾಯಿತು.

ಕಳೆದ ವರುಷದ ಆದಿಭಾಗದಲ್ಲಿ ಮೈಸೂರು ಸಂಸ್ಥಾನದ ದಿವಾನರಾದ ಮು|| ಕೇಶಾದ್ರಿಅಯ್ಯರವರಿಗೆ ಸಿ. ಎಸ್. ಐ. ಎಂಬ ಬಿರುದೂ, ದರ್ಬಾರ್ ಬಕ್ಷಿ ಮು|| ನರಸಿಂಹೈಯ್ಯಂಗಾರ್, ಸಿಟಿ ಇಂಪ್ರೂವ್‌ಮೆಂಟ್ ಕಮಿಟಿ ಪ್ರೆಸಿಡೆಂಟ್ ಮು|| ಕ್ರಿಷ್ಣಾಚಾರ್ಯರು, ಇವರಿಗೆ ಅನುಕ್ರಮವಾಗಿ ರಾವಬಹದ್ದೂರ್ ಎಂಬ ಪ್ರಶಸ್ತಿಯೂ, ಶ್ರೀಮನ್ಮಹಾರಾಜ್ಞಿಯವರ ನಿಯಮಿತದರ್ಬಾರಿನ ಪ್ರತಿನಿಧಿಯಾಯುವರಿಂದ ದಯಪಾಲಿಸಲ್ಪಟ್ಟವು.

೧೮೮೭ನೇ ಇಸವಿ ಆಗಸ್ಟು ತಿಂಗಳಲ್ಲಿ ಈ ನೂರು ಸಿವಿಲ್ ವ ಮಿಲಿಟರಿ ಸ್ಟೇಷನಿನಲ್ಲಿ ಸುಜರಾಸ್ ೧೦ನೇ ನೇಟಿವ್ ರಿಜಿಮೆಂಟಿಗೆಸೇರಿದ ಅದ್ಧುಜಂಪಿ ಜಮೇದಾರ್ ಕೊಂದಯ್ಯನೆಂಬವನು, ತನ್ನ ರಿಜಿಮೆಂಟಿನ ಒಬ್ಬ ಸುಬೇದಾರನನ್ನು ಖೂನಿಮಾಡಿ, ಕಡೆಗೆ ತನ್ನ ಹೆಂಡತಿಯನ್ನು ವಧಿಸಿ ತಾನೂ ಪ್ರಾಣತ್ಯಾಗ ಮಾಡಿಕೊಂಡಿದನು. ಈ ವೃತ್ತಾಂತ ಪುರವಾಸಿಗಳಿಗೆಲ್ಲ ಬಹಳ ಸಂತಾಪದ ನ್ನುಂಟುಮಾಡುವದಾಗಿತ್ತು. ಈ ಘೋರ ಮರಣ ಕಾರಣವು ಸ್ಪಷ್ಟವಾಗಿಹೊರಗಾದ್ದಾಗ್ಯೂ ಅದು ನಿಜಾಬಿನಿರತಕ್ಕದಲ್ಲಿದೆ ಹೋದರು.

ಮೈಸೂರು ರಾಜವಂಶಕ್ಕೆಸೇರಿದ ಬಳಿಕೆರೆ ನಿವಾಸರಾದ ರಿಸಾಲ್‌ದಾರ್ ಕೆಂಪರಾಜೇಅರಸಿನವರು ಕಳೆದ ಮೇ ತಿಂಗಳ ೨೨ನೇ ತಾರೀಖಿನದಿನ ಕಾಲವಶರಾದರು. ಈ ದೊಡ್ಡಮನುಷ್ಯನ ಮರಣದಮೂಲಕ ಮೈಸೂರುಸಂಸ್ಥಾನಕ್ಕೆವು ಬಾಧವಸ್ಪದವು ಅದ್ಭುತ ಅನ್ಯತೀಕಾರವಾಗಿ ಬಂದಿರುತದೆ.

ಈ ವರುಷದಲ್ಲಿ ಕೇವಲ ಪ್ರಸಿದ್ಧ ರೆನಿಸಿಕೊಂಡಿದ್ದ ರಾಯಬಹದ್ದೂರ್ ಯತೀ ಮಲ್ಲಸ್ವಕೇಶ್ವರವರು ಕಳೆದ ಮೇ ತಿಂಗಳ ೩೧ನೇ ತಾರೀಖಿನಲ್ಲಿ ಇಹಲೋಕ ಸಂಬಂಧವು ನಿವೃತ್ತಿಸಿಕೊಂಡರು. ಇವರು ಪ್ರಸಿದ್ಧರಾದವರಾಗಿಯೂ, ಲೋಕೋಪಕಾರಕಗಳಾದ ಕಾರ್ಯಗಳಲ್ಲಿ ಶ್ರದ್ಧಾಳುಗಳಾಗಿಯೂ, ದೇಶಕ್ಷೇಮಾಭಿಲಾಷಿಗಳಾಗಿಯೂ ಇದ್ದರೆಂಬ ಅಂಶವನ್ನು ಅವರ ಹೆಸರಿನೊಳಿರುವ ಪ್ರಸವ ಆಸ್ಪತ್ರೆಯು ಜನಗಳಿಗೆ ಸ್ಮರಣೆಯೊಳು ತರದೆ ಇರುವದಿಲ್ಲವು.

ಈ ಸಂಸ್ಥಾನದ ನೌಕರಿಯೊಳರತಕ್ಕ ಮಹದಿಯಾಳ್ ಆಫಿಸರುಗಳಲ್ಲೊಕ್ಕೆ ಬಹಳ ಹಳಬರಾಗಿಯೂ, ವಯೋವೃದ್ಧರಾಗಿಯೂ ಮಾನನೀಯರಾಗಿಯೂ ಇದ್ದ ಮೈಸೂರು ಡಿಸ್ಟ್ರಿಕ್ಟ್ ಡೆಪ್ಯುಟಿ ಕಮ್ಮಿಷನರಾದ ಖಾನ್ ಬಹದೂರ್ ಮಿಸ್ಟರ್ ಅಬ್ದುಲ್ ವಾಹಿದವರು ಕಳೆದ ಫೆಬ್ರುವರಿತಿಂಗಳಲ್ಲಿ ಕಾಲಗತಿಯನ್ನೈದಿದರು. ಇವರು ಸ್ವಭಾವತಃ ದೊಡ್ಡಮನುಷ್ಯರಾಗಿಯೂ, ಈ ದೇಶದಲ್ಲಿ ನೌಕರಿಮಾಡಿ ದೇಶ ಜನಸ್ಥಿತಿಗಳನ್ನರಿತವರೊಳೊಬ್ಬರಾಗಿಯೂ ಇದ್ದು ಗತಿಸಿದ್ದರಿಂದ ಅವರ ನಷ್ಟವೆಂಕುರಿತು ಇಲ್ಲಿನವರನೇಕರು ಚಿಂತಿಸಿದರು.

ಕಳೆದ ೧೮೮೭ನೇ ಇಸವಿಯು ಇತರರಿಗೆ ಸುಖಕರವಾದದ್ದಾಗಿದ್ದರೂ ಈ ದೇಶದ ರೈತರಿಗೆ ಮಾತ್ರ ಬಹಳ ಹಿಂಸಕರವಾದದ್ದಾಗಿತ್ತೆಂದು ನುಡಿಯಬಹುದಾಗಿದೆ. ಈ ದೇಶದ ಕೆರೆಗಳ ರಿಪೇರಿವಿಷಯದಲ್ಲಿ ತೋರಿಸಲ್ಪಟ್ಟ ಅಕ್ರಮ್ದೈಯಿಂದುಂಟಾದ ನಷ್ಟವನ್ನು ರೈತರಮೇಲೆ ಹೊರಿಸಿ ತಾವು ನಿಷ್ಪ್ರಯೋಜಕರಾಗಬೇಕೆಂಬ ಅಭಿಪ್ರಾಯವು ಗವರ್ನ್‌ಮೆಂಟಿನವರಿಗುಂಟಾದದರಿಂದ ರೈತರ ಮೂಲಕಕೆರೆಗಳ ರಿಪೇರಿಯಂಮಾಡಿಸತಕ್ಕದ್ದೆಂದು ಕೊಟ್ಟ ಹುಕುಂ ಬಹಳಮಟ್ಟಿಗೆ ಅವರಿಗೆ ನಿರ್ಬಂಧವನ್ನೂ ಮನಃ ಕ್ಲೇಶವನ್ನೂ ಉಂಟುಮಾಡಿತು. ಇದರಮೇಲೆ ರೈತರು ಗುಂಪುಗುಂಪಾಗಿಸೇರಿ ದಿವಾನರಿಗೆ ಅರ್ಜಿಗಳನ್ನು ಕೊಡುತಲಿದ್ದಾರೆ. ಈಚೆಗೆ ದಿವಾನರವರು ಬಳಿಕತಕ್ಕ ರವಾನೆ ರೈತರಿಂದ ಕಾಮಗಾರಿ ಮಾಡಿಸದಿರಬೇಕೆಂದು ಹುಕುಂ ಕೊಟ್ಟಿರುವರೆಂದು ಕೇಳುತ್ತೇವೆ.

ಈ ಸಂಸ್ಥಾನದ ದಿವಾನರವರು ಕಳೆದ ವರುಷದ ಮಧ್ಯಭಾಗದಲ್ಲಿ ಕೋಲಾರ್ ವಗೈರೆ ಡಿಸ್ಟ್ರಿಕ್ಟ್‌ಗಳಲ್ಲಿ ಸರ್ಕ್ಯೂಟ್‌ದೌರೆಯಮಾಡಿ, ಆ ಡಿಸ್ಟ್ರಿಕ್ಟಿನ ಸ್ಥಿತಿಗತಿಗಳನ್ನು ಸಾಕ್ಷಾತ್ತಾಗಿ ನೋಡಿ, ತಮಗೆ ಅಲ್ಲಿಗೋಚರವಾದ ಅವ್ಯವಸ್ಥೆಗಳನ್ನು, ಡಿಸ್ಟ್ರಿಕ್ಟ್ ಅಧಿಕಾರಿಗಳ ಮೂಲಕ ಕ್ರಮಪಡಿಸಿ, ಅಲ್ಲಿನ ಪ್ರಜೆಗಳ ಫಿರ್ಯಾದುಗಳಿಗೆ ಕಿವಿಕೊಟ್ಟು ಸಂಧ್ಯವಾದದು ನೆರವೇರಿಸುವಂತೆ ಅವರಿಗೆ ಆಜ್ಞಾಪಿಸುತಲಿದ್ದರು. ಈ ದಿವಾನ್ ಅಧಿಕಾರಿಗಳ ಅಪ್ಪಣೆಯಿಂದ ಬಾಕೀ ನಿಂತಿದ್ದ ಕಂದಾಯಗಳನ್ನು ಕೊಡಲಿಕ್ಕೆ ವಸೂಲ್ಮಾಡುವಂತೆ, ಹುಕುಂ ಮಾಡಿದರು.

ದಕ್ಷಿಣ ಮಹಾರಾಷ್ಟ್ರ ರೈಲ್ವೇ ಕಂಪೆನಿಯವರು ರೆಯಿಲ್ ರಸ್ತೆಯ ಕಾಮಗಾರಿಯನ್ನು ಜಾಗ್ರತೆಯಾಗಿ ಪೂರೈಸುವ ಪ್ರಯತ್ನದೊಳಿದ್ದಾರೆ. ಕಳೆದ ವರುಷದಲ್ಲಿ ಸದರೀ ರಸ್ತೆ ಕಾಮಗಾರಿಯು ಬಹಳಮಟ್ಟಿಗೆ ಜರಿಗಿದಂತೆ ತಿಳಿಯಬರುತದೆ. ಶೀಘ್ರದಲ್ಲಿಯೇ ಪೂರೈಸಿ ಜನಗಳ ಆವಾಡ ರಸ್ತಿಗೆ ಅನುಕೂಲಿಸಬಹುದೆಂದು ತೋರುತದೆ.

ಈ ಸಂಸ್ಥಾನದ ಅಂಚೇ ದವಾಖಾನೆಯು ಬ್ರಿಟಿಷ್ ಪೋಸ್ಟಿನೊಡನೆ ಸೇರಿಸಲ್ಪಡುವದೆಂಬ ವಿಚಾರವೊಂದು ಗತ ಸಂವತ್ಸರದಲ್ಲಿ ಬಹುಮಂದಿ ಅನೇಕರಿಗೆ ಅತೃಪ್ತಿಯನ್ನುಂಟುಮಾಡಿತು. ಇದರ ವಿಷಯ ಕ್ರಮವನ್ನರಿಯಲಿಕ್ಕೆ ಇಲ್ಲಿನ ಪ್ರಜೆಗಳಲ್ಲರೂ ಬಹಳ ಆತುರಗೊಂಡರು. ಇದು ಅನ್ಯರಿಗೆ ಕೊಡುವವಿಷಯವಲ್ಲೆಂಬ ನಿರ್ಧಾರ ಆಧಾರಗಳನ್ನು ಹಿಂದಿನವಾರದಲ್ಲಿ ತಿಳಿಸಿದ್ದೇವಾಗಿ ಇಲ್ಲಿ ಅವರವು ಪ್ರಸ್ತಾವನೆ ಸಾಕಾಗಿರುತದೆ.

ಕಳೆದ ತಿಂಗಳ ಮಧ್ಯಭಾಗದಲ್ಲಿ ಶ್ರೀಮನ್ಮಹಾರಾಜರವರು ತಮ್ಮ ಪರಿವಾರದೊಡನೆ ಉತ್ತರದೇಶಸಂಚಾರಾರ್ಥ ಇಲ್ಲಿಂದ ದಯಮಾಡಿದರು, ಮುಂಬೈ ಕಲ್ಕತ್ತಾ ಲಾಹೋರ್ ಮೊದಲಾದ ಪ್ರಸಿದ್ಧಸ್ಥಳಗಳನ್ನು ಕಂಡು ಸಮಸ್ತ ಭೂಮಿಯು ಸ್ವಾಮಿವರ ಸಂದರ್ಶನಮಾಡಿಕೊಂಡು ಬರುವದಾಗಿ ಗಳಲ್ಲಿ ತಮ್ಮ ರಾಜಧಾನಿಗೆ ವಾಪಸುಬರುವರು. ಈಗಿನ ದೇಶಾಟನದಿಂದ ಮಹಾರಾಜರವರಿಗೆ ಬಹಳ ಪ್ರಯೋಜನ ವುಂಟಾಗುವದೆಂದೆಣಿಸುತ್ತೇವೆ.

ಇನ್ನು ದೇಶದ ಸ್ಥಿತಿಯಂ ಕುರಿತು ಆಲೋಚಿಸಿ ನೋಡಲಾಗಿ, ಕೆಲವು ಕಡೆಗಳಲ್ಲಿ ವ್ಯವಸಾಯ ವದ್ವವಗಳು ನಡೆಯದಿರಿ ಜನಗಳ ಮನಸ್ಸಿಗೆ ಕೊರತೆ ಉಂಟಾಗಿತ್ತು. ಅನ್ಯತ್ರ ಜನಾರೋಗ್ಯವೂ ಪಶುಗಳಿಗೆ ಸುಭಿಕ್ಷ ಪ್ರಶಾಂತಗಿದ್ದವು. ಕಳೆದ ವರುಷದಲ್ಲಿ ಅತಿವೃಷ್ಟಿಯಾಗಲಿ, ಅನಾವೃಷ್ಟಿಯಾಗಲಿ, ಕೇವಲ ಸುಭಿಕ್ಷವಾಗಲಿ ಅತಿ ದುರ್ಭಿಕ್ಷವಾಗಲಿ ಉಂಟಾಗಿರಲಿಲ್ಲವು. ಸಾಮಾನ್ಯರ ಗತ ೧೮೮೭ನೇ ಇಸವಿಯು ಪ್ರಜೆಗಳಿಗೆ ಸುಖ ಸಮಾಧಾನಕರವಾದದ್ದಾಗಿರುತ್ತೆಂದು ಹೇಳುವೆವು.

Occasional Notes.
ನೈಮಿತ್ತಿಕ ವಿಷಯಗ್ಳು.

Marriage of a widow.—ಅಹಮದಾಬಾ ದಿನಲ್ಲಿ ಕೇವಲ ಬಾಲ್ಯದಲ್ಲಿಯೇ ವೈಧವ್ಯವಂ ಹೊಂದಿದ ಒಬ್ಬ ಬ್ರಾಹ್ಮಣಸ್ತ್ರೀಯು ಸಜಾತೀಯನಾದವನೊಬ್ಬನು ಕಳೆದತಿಂಗಳ ೩೦ನೇ ತಾರೀಖಿನಲ್ಲಿ ಕ್ರಮವಾಗಿ ವಿವಾಹವಾಗಿಕೊಂಡಿರುತ್ತಾಳೆ.

Appointment—ಪಂಡಿತ ರಾಮಕುಮಾರ್ ಎಂಬುವರು ಬಂಗಾಳೆ ಪ್ರೆಸಿಡೆನ್ಸಿಯಲ್ಲಿ ಸ್ಟ್ಯಾಟ್ಯೂಟರಿ ಸಿವಿಲ್ ಸರ್ವೀಸ್ ಮೆಂಬರಾಗಿ ಚೊಕರ ಮಾಡಲ್ಪಟ್ಟು, ವಾಯವ್ಯದೇಶ ಮತ್ತು ಅಯೋಧ್ಯಾ ಕಲೆಕ್ಟರ ಅಸಿಸ್ಟೆಂಟರಾಗಿ ನಿಯಮಿಸಲ್ಪಟ್ಟಿರುತ್ತಾರೆ.

The India Council.—ಹಾಲಿಯಾ ಸ್ಟೇಟ್ ಸೆಕ್ರೆಟರಿಯವರ ಮಂತ್ರಾಲೋಚಕ ಸಭಾಜದ ಮೆಂಬರಾದ ಸರ್ ಆಶ್ಲಾಂಡ್ ಕಾಲ್ವಿನ್ ಯವರು ಕೆಲಸವ ಬಿಡುವಲ್ಲಿ ಅದಕ್ಕೆ ಸರ್ ಆಲ್ಫ್ರೆಡ್ ಲೈಯಲ್‌ಯವರು ನಿಯಮಿಸಲ್ಪಡುವರೆಂದು ಒಂದಾನೊಂದುಪತ್ರಿಕೆ ಹೇಳುತದೆ.

The Nellore-Tirupathi Railway.—ನೆಲ್ಲೂರಿಂದ ತಿರುಪತಿಯವರಿವಿಗೆ ಹಾಕಲ್ಪಡುತಲಿದ್ದ ರೆಯಿಲ್ ರಸ್ತೆಯ ಕಾಮಗಾರಿ ಪೂರ್ತಿಯಾಗಿ, ಈಗ ಪ್ರಯಾಣಸ್ಥರ ಗಾಡಿಗಳು ನಡೆಸಲ್ಪಡುತವೆ. ತಿರುಪತಿಯಿಂದ ಬೆಳಗ್ಗೆ ೬ ಘಂಟೆಗೆ ಹೊರಟು ೧೧ಘಂಟೆಗೆ ನೆಲ್ಲೂರು ಸೇರುತದೆ. ನೆಲ್ಲೂರಿಂದ ಬೆಳಗ್ಗೆ ೫ಘಂಟೆಗೆ ಹೊರಟು ಸುಮಾರು ೧೧ಘಂಟೆಗೆ ತಿರುಪತಿ ಸೇರುತದೆ ತಿರುಪತಿಯಿಂದ ನೆಲ್ಲೂರಿಗೆ ೭೫ಮೈಲ್‌ಗಳ ಫಾಸಲೆಯಿರುತದೆ.

Burma News.—ಬರ್ಮಾದೇಶದಲ್ಲಿ ಕಲಹಪ್ರವರ್ತಕರಾದ ದರೋಡೆ ಜನಗಳಿಂದ ಉಂಟುಮಾಡಲ್ಪಡುವ ಸಂಕಟಗಳು ದಿನೇದಿನೆ ವೃದ್ಧಿಯಾಗುವದೆಯೇ ಹೊರತು ಕಾಂತವಾಗುವ ಸೂಚನ ತೋರಲಿಲ್ಲವೆಂದು ಒಂದಾನೊಂದು ಪತ್ರಿಕೆಯು ತಿಳಿಸುತದೆ. ಅದಕ್ಕಿಂತಲೂ ಬೇರೆ ವಿಧವನ್ನು ನಿರೀಕ್ಷಿಸುವದಕ್ಕೆ ಹ್ಯಾಗೆ ಸಾಧ್ಯವಾ ಇತ್ತು.

The Gackwar of Baroda in England.—ಬರೋಡೇ ಗಾಯಕವಾಡ ಮಹಾರಾಜರವರು ಈಗಇಂಗ್ಲಾಂಡಿನಲ್ಲಿರುವದುನರಿಯಸ್ಪ. ಸದರೀ ಯವರನ್ನು ಅವರ ರಾಣಿಯವರೊಡನೆ, ಕಳೆದ ತಿಂಗಳ ೧೬ನೇ ತಾರೀಖಿನಲ್ಲಿ ಪ್ರಿನ್ಸ್ ಆಫ್ ವೇಲ್ಸರವರು ಮಾರ್ಲ್‌ಬರೋ ಹೌಸ್ ಎಂಬ ಸ್ವಗೃಹದೊಳು ಬರಮಾಡಿಕೊಂಡರು. ಇದಕ್ಕೆ ಪೂರ್ವ ಮಹಾರಾಣೀ ಜನ್ಮಾಬಾಯಿಯವರನ್ನು ಸಹ ಪ್ರಿನ್ಸ್ ಆಫ್ ವೇಲ್ಸ್ ಮತ್ತು ಅವರಭಾರ್ಯೆಯವರು ಬರಮಾಡಿಕೊಂಡಿದ್ದರು. ಅವಿನ ಮಧ್ಯಾನ್ನಾತ್ಪರ ಪ್ರಿನ್ಸ್ ಆಫ್ ವೇಲ್ಸರವರು ವಿಕ್ಟೋರಿಯಾ ಸ್ಟ್ರೀಟ್ ಯೆಂಬ ಬೀಧಿಯಲ್ಲಿ ಗಾಯಕವಾಡಯವರ ವಾಸಗೃಹಕ್ಕೆ ಹೋಗಿಬಂದರು.

A memorial.—ಈಚೆಗೆ ಕೆಲವು ತಿಂಗಳ ಹಿಂದೆ ಅಯೋಧ್ಯಾ ದೇಶದ ನವಾಬರವರು ಕಲಕತ್ತೆಯಲ್ಲಿ ಮೃತಪಟ್ಟ ವೃತ್ತಾಂತವನ್ನು ಈ ಪತ್ರಿಕೆಯ ಮೂಲಕ ಪ್ರಕಟಪಡಿಸಿರುತ್ತೇವೆಯಷ್ಟೆ. ಅವರ ಮರಣಾನಂತರ ಅವರ ಜಂದಗಿಗಳನ್ನು ಬಂದೋಬಸ್ತು ಮಾಡತಕ್ಕಬಗ್ಗೆ ನಿಯಮಿಸಲ್ಪಟ್ಟ ಕೆಲವರು ಅಧಿಕಾರಿಗಳು ಸದರೀ ನವಾಬರವರ ಸ್ವಂತ ಜಂದಗಿಗಳ ವಿಷಯದಲ್ಲಿ ನಡೆಸಿದ ಅಕೃತ್ಯಗಳನ್ನು ತಪ್ಪಿಲ್ಲಾಗಿ ನಮೂದಿಸಿ ವೈಸ್‌ರಾಯ್ ಯವರಿಗೆ ಅರ್ಜಿ ಕಳುಹಿಸಲ್ಪಟ್ಟಿರುವದಾಗಿ ತಿಳಿಯಲಾಗಿದ್ದು.

Consignment of funeral ashes.—ಮೃತಪಟ್ಟ ಮಹಾರಾಜಾ ಸಿಂಧಿಯಾಯವರ ಅಸ್ಥಿಯನ್ನು ಕಳೆದತಿಂಗಳ ೨೨ನೇ ತಾರೀಖಿನಲ್ಲಿ

ಅಲಹಾಬಾದಿನ ಕೋಟೆಯ ಹೊರಗಡೆ, ಗಂಗಾನದಿಯಲ್ಲಿ ಸೇರಿಸಿದರು. ಆಕಾಲದಲ್ಲಿ ಸರ್ವಾಲಂಕಾರ ಭೂಷಿತರಾಗಿದ್ದ ಏಳು ಕ್ಷೇತ್ರಾಶ್ವ, ಒಂದು ಆನೆ, ನಗದು, ಬೆಳ್ಳಿ ಸಾಮಾನುಗಳು ಸುಮಾರು ಹತ್ತು ಸಾವಿರ ರೂಪಾಯಿಗಳು ವೈದಿಕಬ್ರಾಹ್ಮಣರಿಗೆ ಕೊಡಲ್ಪಟ್ಟವು. ಸದರೀ ಸಂದರ್ಭದ ಸೂಚನೆಯಬಗ್ಗೆ ಇಪ್ಪತ್ತೊಂದುತೋಪುಗಳು ಹಾರಿಸಲ್ಪಟ್ಟದ್ದಲ್ಲದೆ ಕೋಟೆಯ ಬಾವುಟವು ಸ್ವಲ್ಪಇಳಿಸಲ್ಪಟ್ಟಿತು. ಇತರ ರಾಜಮರ್ಯಾದೆಗಳೆಲ್ಲವು ಜರಗಿದವು.

A durbar.—ಗೊಂಡಲಿ ಸಂಸ್ಥಾನವನ್ನು ಕಾಟಿವಾಡಿದೇಶದ ಅನ್ಯಾಧಿಕರಗತಿ ಸಂಸ್ಥಾನಗಳಲ್ಲೊಂದಾಗಿ ಗವರ್ನಮೆಂಟಿನವರು ಅಂಗೀಕರಿಸಿದ ವಿಶೇಷ ಸಂದರ್ಭ ಸೂಚಕವಾಗಿ, ಸದರೀ ಸಂಸ್ಥಾನದೊಳು, ಈತಿಂಗಳ ಮೂರ್ನೇತಾರೀಖಿನಲ್ಲಿ ಒಂದು ಪ್ರಬಲ ದರ್ಬಾರ್ ನಡೆಸಲ್ಪಟ್ಟು, ಆಕಾಲದಲ್ಲಿ ಅಲ್ಲಿನ ದಿವಾನರವರು ಅರಸರಿಗೆ ಶುಭವಾದ ನ ರೂಪವಾಗಿ ಒಂದು ಉಪನ್ಯಾಸ ಮಾಡಲು ಅದಕ್ಕೆ ಅರಸರವರು ಉಚಿತ ಶಬ್ದಗಳಿಂದ ಉತ್ತರಕೊಟ್ಟರು. ಸದರೀ ಸಂದರ್ಭದ ಗೌರವಾರ್ಥವಾಗಿ ಅರಸರವರು ತಮ್ಮ ಪ್ರಜೆಗಳಿಗೆ ಕೇವಲ ಮುಖ್ಯವಾದ ಕೆಲವು ಅನುಕೂಲ್ಯಗಳು ಕಲ್ಪಿಸಿದ್ದಲ್ಲದೆ, ಅವರಿಗೆ ಬಾಧಕವಾಗಿದ್ದ ಕೆಲವು ತೆರಿಗೆಗಳಂ ವಜಾಮಾಡಿ, ಅವರಿಗೆ ಕೆಲವು ವಿಷಯಗಳಲ್ಲಿ ಸ್ವಾತಂತ್ರ್ಯ ಮತ್ತು ಬಾಧ್ಯತೆಯನ್ನುಂಟುಮಾಡಿ, ತನ್ನ ಸಂಸ್ಥಾನಕ್ಕೆ ಸೇರಿದ ವಿಶಿಷ್ಟ ನೌಕರರಿಗೂ ಒಂದು ತಿಂಗಳಸಂಬಳ ಇನಾಂಕೊಟ್ಟಿರುತ್ತಾರೆ.

LOCAL AND PROVINCIAL NEWS.
ಒಳದೇಶ ಮತ್ತು ತಾಲ್ಲೂಕ್‌ವಾರ ವೃತ್ತಾಂತವು

---o---

H. H. the Maharaja.—ಶ್ರೀಮನ್ಮಹಾರಾಜರವರ ಸವಾರಿಯು ಈಗ ಅಲಹಾಬಾದಿನೊಳು ಚಿಕ್ಕೈಸಿರುವಂತೆ ತಿಳಿಯಬರುತಿದೆ.

Pongal.—ಬರುವ ಶುಕ್ರ ಶನಿವಾರಗಳ ದಿನಗಳು ಸಂಕ್ರಾಂತಿ ಹಬ್ಬವಾದದರಿಂದ ತತ್ಸಂಬಂಧಕ್ಕೆ ಸರ್ಕಾರ್ ಇಲಾಖೆಗಳಿಗೆಲ್ಲ ಮಾಮೂಲ್‌ಮೇರೆ ರಜಾ ಕೊಡಲ್ಪಡುವದು.

City Market Show.—ಈದಿನ ಬೆಳಿಗ್ಗೆ ಈನಗರದ ಷಹರ್ ಮಾರ್ಕೆಟಿನಲ್ಲಿ ಫಲ ಪುಷ್ಪ ಪ್ರದರ್ಶಕ ವಿನೋದವು ಜರಗತಕ್ಕಬಗ್ಗೆ ಮ್ಯುನಿಸಿಪಾಲಿಟಿಯವರಿಂದ ಬೇಕಾದ ಏರ್ಪಾಡುಗಳು ನಡೆಲ್ಪಟ್ಟಿರುತಿವೆ.

Return of the Mysore Delegates. ಮದರಾಸ್ ಕಾಂಗ್ರೆಸ್ಸಿಗೆ ಈ ದೇಶದಿಂದ ಹೋಗಿದ್ದ ಡೆಲಿಗೇಟುಗಳು ಅಂದರೆ ಪ್ರತಿನಿಧಿಗಳು ಗತವಾರದಲ್ಲಿ ಇಲ್ಲಿಗೆ ವಾಪಸ್‌ಬಂದರು. ಇಲ್ಲಿನವರು ಸದರೀ ಸಭೆಯಲ್ಲಿ ಮಾಡಿದ ವಿಚಾರವು ಮುಂದಿನ ಪೀಪಲ್ಸ್ ಮೀಟಿಂಗಿನಲ್ಲಿ ನಿರ್ಧರ ವಾಗಬೇಕಾಗಿರುತಿದೆ.

Re-opening of Public offices.—ಕ್ರಿಸ್ಮಸ್‌ಹಬ್ಬದಪ್ರಯುಕ್ತ ಕಳೆದ ತಿಂಗಳ ೨೪ನೇ ತಾರೀಖ್ ಲಾಗಾಯಿತು ಸರ್ಕಾರಿ ಇಲಾಖೆಗಳಿಗೆಲ್ಲ ಕೊಡಲ್ಪಟ್ಟಿದ್ದ ರಜಾ ಗತ ಬುಧವಾರದೊಡನೆ ಪೂರೈಸಿದ್ದರಿಂದ ಗುರುವಾರದಾರಭ್ಯ ಮರಳಿ ವಿಶಿಷ್ಟ ಆಫೀಸುಗಳೂ ತೆಗೆಯಲ್ಪಟ್ಟು ಖಾಲ್ತೀಕೆಲಸಗಳು ನಡೆಸಲ್ಪಡುತಿವೆ.

Re-opening of schools.—ಮಾಹೇ ಮಜಕೂರ್ ೧೦ನೇ ತಾರೀಖ್ ಲಾಗಾಯಿತು ಒಳದೇಶದ ಸ್ಕೂಲ್‌ಗಳು ಕೆಲವು ತೆಗೆಯಲ್ಪಟ್ಟು ಪಾಠಪ್ರವಚನಗಳಿಗೆ ಪ್ರಾರಂಭಿಸಲ್ಪಡುವವು. ವರುಷ ಮೆಟ್ರಿಕ್ಯುಲೇಷನ್ ಎಫ್. ಎ. ಪರೀಕ್ಷೆಗಳ ಫಲಿತಾಂಶಗಳು ತಿಳಿಯಬರಲಿಕ್ಕೆ ಇನ್ನೂ ಒಂದೆರಡುವಾರಗಳು ಹಿಡಿಯಬಹುದೆಂದೆಣಿಸುತ್ತೇವೆ. ಪರೀಕ್ಷೆಗೆ ಹೋಗಿದ್ದ ಉಮೇದವಾರರು ಸದರೀಕಾಲವನ್ನು ಬಹಳ ಆತುರದೊಡನೆ ನಿರೀಕ್ಷಿಸುತಲಿವಾರೆ.

Hitopadesa.—ಮುಂಬೈ ಭಾರತೀ ಮುದ್ರಾಕ್ಷರಶಾಲೆಯಲ್ಲಿ ತಿಂಗಳಿಗೊಂದಾವರ್ತಿ ಪ್ರಕಟಿಸಲ್ಪಡತಕ್ಕ ಹಿತೋಪದೇಶವೆಂಬ ಒಂದು ಕನ್ನಡ ಪತ್ರಿಕೆಯು ಈ ವಾರದಲ್ಲಿ ನಮಗೆ ಕಳುಹಿಸಲ್ಪಟ್ಟಿತು. ಇದರ ಮೊದಲು ನಾಲ್ಕು ಪುಟಗಳಲ್ಲಿ ನಾಲ್ಕುವಿಧ ತಸ್ವೀರುಗಳು ಮುದ್ರಿಸಲ್ಪಟ್ಟಿರುತಿವೆ. ಅವುಗಳಲ್ಲೊಕೆ ಮೊದಲನೆಯದು ನಮಗೆ ಸಂಬಂಧಪಟ್ಟದ್ದಾಗಿರುತಿದೆ. ಹ್ಯಾಗಂದರೆ— ಈಮೈಸೂರು ರಾಜ್ಯವನ್ನು ಒಂದು ಸ್ತ್ರೀಯನ್ನಾಗಿ ಭಾವಿಸಿ ಬರೆದು ಅವಳಂ ಭೋಗಾಕಾಂಕ್ಷಿಗಳಾದ ಅನ್ಯ ಪುರುಷರಿಬ್ಬರುಬಲಾತ್ಕರಿಸುವಂತೆಯೂ, ಆಕೆ ಆರ್ತಳಾಗಿ ತನ್ನ ಮಕ್ಕಳ ಸಹಾಯವು ಬೇಡುವಂತೆಯೂ, ಅಶಕ್ತರಾದ ಅವರು ನಿರ್ವೇದದೊಡನೆ ತಲೆಯಂ ಬಾಗಿಸಿಕೊಂಡು ಕರ್ತವ್ಯವನ್ನರಿಯದೆ ಸಂಕಟಪಡುತಲಿರುವಂತೆಯೂ ತೋರ್ಪಡಿಸಲ್ಪಟ್ಟಿರುತಿದೆ. ಇದರ ಭಾವವು ಸ್ಪಷ್ಟವಾಗಿಯೇ ಇರುತಿದೆ. ಏತತ್ಸಮಾನಾರ್ಥಗಳುಳ್ಳ ಬೇರೆ ವಿಷಯಗಳಂ ಬೋಧಿಸುವ ಮೂರು ಚಿತ್ರಗಳು ಬರೆಯಲ್ಪಟ್ಟಿರುತಿವೆ. ಈ ಮಾಸಪತ್ರಿಕೆಯು ನೋಡುವದಕ್ಕೆ ಬಹಳ ವಿನೋದಕರವಾಗಿಯೂ ಅನೇಕ ವಿಷಯಗಳಿಂದೊಡಗೂಡಿದ್ದಾಗಿಯೂ ಉಪಯುಕ್ತವಾದದ್ದಾಗಿಯೂ ಇರುತಿದೆ. ಇಂತಾ ಪತ್ರಿಕೆಯೊಂದು ಈರಾಜ್ಯಕ್ಕಿಲ್ಲದಿರುವದು ಬಹಳ ಕೊರತೆಯಾಗಿದೆ.

SUMMARY OF NEWS
ವೃತ್ತಾಂತ ಸಂಗ್ರಹವು.

ಗ್ವಾಲಿಯರ್ ರಾಜಕುಮಾರರು ಒಂದು ದಿವಸ ತಮ್ಮ ವಾಡಿಯಲ್ಲಿ ಭೋಜನೋತ್ತರ, ಒಂದು ಅಡಿಕೆಯ ಚೂರನ್ನು ಬಾಯಲ್ಲಿಟ್ಟುಕೊಂಡಿರುವ ವೇಳೆಯಲ್ಲಿ ಒಬ್ಬ ಟೋಪಿವಾಲರು ದಯಮಾಡಿಸಿದರು. ಈ ಬಹದ್ದೂರರವರಿಗೆ ರಾಜಕುಮಾರರು ಅಡಿಕೆಯನ್ನು ಬಾಯಿಯಲ್ಲಿಟ್ಟುಕೊಂಡಿರುವನು ಕಂಡ ಕೂಡಲೇ, ಸಿಟ್ಟಿನಿಂದ ಬಂದು ರಾಜಕುಮಾರರ ಬಾಯಿಯನ್ನು ಅದುಮಿಕೊಂಡು ಅದನ್ನು ಉಗಿಯಲಿಕ್ಕೆ ಗದರಿಸಿದರು. ಆಗ ರಾಜಕುಮಾರರ ಅಂಗರಕ್ಷಕರು ಬಂದು, ಸಾಹೇಬ್ ಬಹದ್ದೂರರವರಿಗೆ ತಕ್ಕ ಪ್ರಾಯಶ್ಚಿತ್ತವನ್ನಿಡುವದರಲ್ಲಿ ಟೋಪಿಯನ್ನವಚಿಕೊಂಡು ಸವಾರಿಯು ಪಲಾಯನ ಮಾಡಿಕೊಂಡರು. ಅವರ ದೈವ ಒಳ್ಳೇದಿದ್ದದರಿಂದ, ಇಷ್ಟೇ ಪ್ರಾಯಶ್ಚಿತ್ತದಿಂದ ಬದುಗಡೆಯಾದರು.— ಹಿ. ಸು.

ನಿಜಾಂ ಸರ್ಕಾರದವರು ತಮ್ಮ ಪ್ರಾಂತದೊಳಗೆ ಹೊರಡುತ್ತಿರುವ ವರ್ತಮಾನ ಪತ್ರಕರ್ತರ ಸಂಬಂಧವಾಗಿ ಕಾಯಿದೆಯನ್ನು ಮಾಡುವ ಇಚ್ಛೆಯುಳ್ಳವರಾಗಿರುತ್ತಾರೆಂದು ತಿಳಿದು ಬರುತ್ತದೆ. ಇಂತಾ ಕಾಯಿದೆಯನ್ನು ಮಾಡುವದಕ್ಕಿಂತಲೂ, ಅನ್ಯಾಯ ನಡೆಯದೆ ಇರುವಂತೆ ಏನಾದರೂ ವಿಶೇಷ ಏರ್ಪಾಡನ್ನು ಮಾಡುವದಕ್ಕೆ ಪ್ರಯತ್ನಿಸಿದರೆ ಬಹಳ ಉತ್ತಮವಾಗುವದು. ಹೀಗಾದರೆ ಪ್ರೆಸ್ ಆಕ್ಟ್ ಮಾಡುವ ಅಗತ್ಯವೇ ಉಳಿಯಲಿಲ್ಲ! ಬರೇ ಇಂಗ್ಲಿಷನವರ ಡೋಲನ್ನು ಅನುಸರಿಸುವದಕ್ಕಿಂತಲೂ, ದೇಶ, ಕಾಲ, ವರ್ತಮಾನವನ್ನನುಸರಿಸಿ ನಡೆದರೆ ಬಹಳ ಉತ್ತಮವಾಗುವದು. ಯಾವದಾದರೊಂದು ಪ್ರಸಂಗದಲ್ಲಿಯಾದರೂ ವರ್ತಮಾನ ಪತ್ರಕರ್ತರು ಏನೇನೂ ಸಂಶಯವನ್ನಿಡದೆ ಬರೆಯುತ್ತಿರುತ್ತಾರೆ. ಇದು ಅನೇಕರಿಗೆ ಸಹಿಸುವದಿಲ್ಲ; ವರ್ತಮಾನ ಪತ್ರಕರ್ತರಿಗೆ ಇಂಗ್ಲಿಷ್‌ಸರ್ಕಾರದವರು ಮೊದಲಿಗೆ ಕೊಟ್ಟ ಸ್ವತಂತ್ರತೆಯನ್ನು ಲಾರ್ಡ್ ಲಿಟ್ಟನ್ ಎಂಬವರು ಇಂಡ್ಯಾದೇಶದ ಅಧಿಪತ್ಯವನ್ನು ವಹಿಸಿರುವಾಗ ತೆಗೆದಿದ್ದರು. ಆ ಸ್ವಾತಂತ್ರ್ಯತೆಯು ಲಾರ್ಡ್ ರಿಪ್ಪನರವರ ಕಾಲದಲ್ಲಿ ವಿಚಾರವಾಗಿ ವರ್ತಮಾನ ಪತ್ರಕರ್ತರಿಗೆ ಪುನಃ ಸ್ವತಂತ್ರತೆ ಸಿಕ್ಕಿರುತ್ತದೆ. ಪತ್ರಕರ್ತರು ಈ ತೆರದ ಸ್ವತಂತ್ರತೆಯುಳ್ಳವರಾದ್ದರಿಂದಲೇ ಲೋಕದ ಅನ್ಯಾಯ ಹೆಚ್ಚಾಗಿ ತಲೆಯೆತ್ತುವದಕ್ಕೆ ಭಯವುಳ್ಳದ್ದಾಗಿರುತ್ತದೆ. ವರ್ತಮಾನಪತ್ರಕರ್ತರಸ್ವಾತಂತ್ರ್ಯವೇ ನಮ್ಮ ದೇಶದಲ್ಲಿನ ಅಭ್ಯುದಯಕ್ಕೆ ಒಂದು ಸಾಧನವಾಗಿರುತ್ತದೆ. ಆದರೆ ನಿಜಾಂ ಸರ್ಕಾರದವರು ಇಂತಾ ಸ್ವತಂತ್ರತೆಗಳುಳ್ಳ ತಮ್ಮ ಪ್ರಾಂತದ ವರ್ತಮಾನ ಪತ್ರಕರ್ತರಿಗೆ ಪ್ರತಿ ಬಂಧಕವನ್ನುಂಟುಮಾಡಿದರೆ, ಅವರು ವಿಚಾರ ಪುರುಷರೊಳಗೆ ಪರಿಗಣಿಸಲಿಕ್ಕೆ ಯೋಗ್ಯರಾದಾರೆಂದು ನಾವು ಹೇಳಲಾರೆವು.

THE MYSORE GAZETTE.
ಮೈಸೂರು ಗೆಜೆಟ್.

:o:

ಶ್ರೀಮನ್ಮಹಾರಾಜ ರಾಜಾಸಾಹೆಬ್ ಬಹದೂರವರ ದಿವಾನರವರಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು

ನೊಕ್ಯಾಂ ನಂ. ೨೦೭೭—೨೮ನೇ ಡಿಸಂಬರ್ ೮೭—ನಂಜನಗೂಡು ತಾಲ್ಲೂಕು ಶಿರಸ್ತೇದಾರ್ ಸುಬ್ಬಣ್ಣನವರು, ಸದರೀ ತಾಲ್ಲೂಕು ಅಮಲ್ದಾರ್ ವ ಮೂರನೇ ಕ್ಲಾಸ್ ಮ್ಯಾಜಿಸ್ಟ್ರೇಟರಾಗಿ ಮೃತಪಟ್ಟ ವೆಂಕಟಪ್ಪಯ್ಯನವರಿಗೆ ಬದಲು, ರಾಘವೇಂದ್ರರಾಯರಿಂದ ಚಿಮುಗಡೆಯಾಗುವತನಕ ಆಕ್ಟ್ ಮಾಡುತಲಿರುವಂತೆ ನೊಕರರ್ರಾದಲ್ಪಟ್ಟಿರುತ್ತಾರೆ.

ನೊಕ್ಯಾಂ ನಂ. ೨೯೯೧ ತಾ ೩ನೇ ಜನವರಿ ೧೮೮೮—ಇದರಡಿ ಕಂಡ ಅಮಲ್ದಾರರು, ಮತ್ತು ಡೆಪ್ಯುಟಿ ಅಮಲ್ದಾರರು, ಅವರವರ ತಾಲ್ಲೂಕು ಚಾರ್ಜುಗಳಿಂದ ಬಿಡುಗಡೆ ಮಾಡಲ್ಪಡುವ ತಾರೀಖು ಲಾಗಾಯಿತು ಕೆಲಸದಿಂದ ನಿವೃತ್ತರಾಗತಕ್ಕದ್ದು.

ಮಾಗಡಿ	ತಾ. ಅಮಲ್‌ದಾರ್	ಅಣ್ಣನಕ್ಕಿ ಆಚಾರರು
ಅತ್ತಿಕುಪ್ಪೆ	„ „	ವೆಂಕಟಾಚಾರ್ಯರು.
ಅರಕಲ್‌ಗೂಡು	„ „	ತಿರುವೆಂಗಡಮೊದಲಿಯಾರ್.
ಹೊನ್ನಾಳಿ	„ „	ಲಿಂಗಪ್ಪಯ್ಯನವರು
ಹೊಳೇನರಸೀಪುರ	„	ಗೋಪಾಲ ಕೃಷ್ಣಯ್ಯಂಗಾರ್ರು.
ಚೆನ್ನಪಟ್ಟಣ	ಡೆ ಅಮಲ್‌ದಾರ್	ರಾಘವೇಂದ್ರರಾಯರು
ಕುಂಸಿ	„	ಗುಲಾಂ ಮಹಮದ್‌ಖಾನರು

ಇವರಡಿಕಂಡ ನೊಕರರಾತಿಗಳೂ ವರ್ಗಾವರ್ಗಿಗಳು ಸಹ ಮಂಜೂರ್‌ಮಾಡಲ್ಪಟ್ಟಿರುತಿವೆ.—

ನೊಕರರಾತಿಗಳು.

ಇವರಡಿಕಂಡವರು ಹಾಸ್ನ ಅಲೋವೆನ್ಸ್‌ಸೇರಿ ೧೫೦ ರೂಪಾಯಿಗಳ ಶಂಬಳದಲ್ಲಿ ೫ನೇ ಗ್ರೇಡ್ ಅಮಲ್ದಾರರುಗಳಾಗಿರತಕ್ಕದ್ದು.

ರೆಸಿಡೆಂಟ್‌ರ ಆಫೀಸ್ ಕ್ಲರ್ಕ್, ಮಿ ೦ಲಿ೬೪.

ದಿವಾನರ ಆಫೀಸ್ ಕ್ಲರ್ಕ್, ಏ. ಪಾರ್ಥಸಾರಥಿ ಅಯ್ಯಂಗಾರ್.

ಸಾಬಿಕ್ ಕನ್‌ಸರ್ವೆಟಿಂಗ್ ಡಿಪಾರ್ಟ್‌ಮೆಂಟಿನ ಆಫೀಸ್ ಸ್ಯುಪರ್ ನ್ಯೂಮರರಿ ಏ. ಸುಬ್ಬರಾವ್‌ನಾಯುಡು.

ಚೀಫ್‌ಕೋರ್ಟ್ ಟ್ರಾನ್ಸ್‌ಲೇಟರ್ ನಾರಾಣಪ್ಪನವರು.

ತುಮಕೂರ್ ಡಿಸ್ಟ್ರಿಕ್ಟ್ ಹೆಡ್ ಅಕಾಂಟೆಂಟ್ ಗೋಪಾಲಯ್ಯಂಗಾರ್ರು.

ಮಿಲಿಟರಿ ಸೆಕ್ರೆಟರಿಆಫೀಸ್ ಕ್ಲರ್ಕ್, ಜಾಗೀರ್‌ದಾರ್ ಶ್ರೀನಿವಾಸರಾಯರು.

ಶ್ರೀರಂಗಪಟ್ಟಣದ ಡೆಪ್ಯುಟಿ ಅಮಲ್ದಾರ್ ರಾಘವೇಂದ್ರರಾಯರು.

ಇವರಡಿಕಂಡವರು ಹಾಸ್ನ ಅಲೋವೆನ್ಸ್ ಸೇರಿ ೮೫ ರೂಪಾಯಿಗಳ ಶಂಬಳದಲ್ಲಿ ೧ನೇ ಗ್ರೇಡ್ ಡೆಪ್ಯುಟಿ ಅಮಲ್ದಾರರುಗಳಾಗಿರತಕ್ಕದ್ದು.

ಮೈಸೂರು ಡಿ|| ಚಾಮರಾಜನಗರ ತಾ|| ಶಿರಸ್ತೇದಾರ್ ವೆಂಕಟರಾಯರು.

ಶಿವಮೊಗ್ಗಾ ಡೆಪ್ಯುಟಿಕಮ್ಮಿಷನರವರ ಆಫೀಸ್ ಜಾಡಿಷಿಯಲ್ ಡಿ ಮುನ್‌ಷಿ ಆರ್ ಸುಬ್ಬರಾಯರವರು.

ಟೋಪೋಗ್ರಾಫಿಕಲ್ ಸರ್ವೇ ಇಲಾಖೆಯಲ್ಲಿ ಹಿಂದೆ ನೌಕರಿಯೊಳಿದ್ದು ಈಗ ಫ್ರೀದರಾಗಿರುವ ಕೆ. ಕೃಷ್ಣರಾಯರವರು.

ಹಾಸನ ಅಸಿಸ್ಟೆಂಟ್ ಕಮ್ಮಿಷನರ ಆಫೀಸ್ ಹೆಡ್‌ಮುನಿಷಿ ಮಾಧವರಾಯರು.

ವರ್ಗಾವರ್ಗಿಗಳು, ಮತ್ತು ಸ್ಥಳ ನಿಯಾಮಕ.

ನಗರತಾ|| ಅಮಲ್ದಾರ್ ವ ಮೂರನೇಕ್ಲಾಸ್ ಮ್ಯಾಜಿಸ್ಟ್ರೇಟಲಾಜರಸ್‌ಡಿಮಿಂಗೋಯವರು, ಹೊನ್ನಾಳಿ ತಾಲ್ಲೂಕು ಅಮಲ್ದಾರ್ ವ ಮೂರನೇಕ್ಲಾಸ್ ಮ್ಯಾಜಿಸ್ಟ್ರೇಟರಾಗಿರತಕ್ಕದ್ದು.

ತೀರ್ಥಹಳ್ಳಿತಾ|| ಅಮಲ್ದಾರ್ ವ ೩ನೇ ಕ್ಲಾಸ್ ಮ್ಯಾಜಿಸ್ಟ್ರೇಟ್‌ತಿರುಮಲಾಚಾರ್ರು ಅತ್ತಿಕುಪ್ಪೆ ತಾ|| ಅಮಲ್ದಾರ್ ವ ಮೂರನೇ ಕ್ಲಾಸ್ ಮ್ಯಾಜಿಸ್ಟ್ರೇಟರಾಗಿರತಕ್ಕದ್ದು.

ಮಳವಳ್ಳಿ ತಾ|| ಅಮಲ್ದಾರ್ ನಂಜುಂಡಮೊದಲಿಯಾರ್ರು ಮಾಗಡಿ ತಾ|| ಅಮಲ್ದಾರ್ ವ ಮೂರನೇಕ್ಲಾಸ್ ಮ್ಯಾಜಿಸ್ಟ್ರೇಟರಾಗಿರತಕ್ಕದ್ದು.

ಗ್ರಾಮದ ಸಬ್ ತಾ|| ಡೆ|| ಅ|| ನರಸಿಮ್ಹಮೂರ್ತಿರಾಯರವರು ಚೆನ್ನಪಟ್ಟಣದ ಡೆಪ್ಯುಟಿ ಅಮಲ್ದಾರ್ ವ ಮೂರನೇಕ್ಲಾಸ್ ಮ್ಯಾಜಿಸ್ಟ್ರೇಟರಾಗಿರತಕ್ಕದ್ದು.

ಸ್ಥಳ ನಿಯಾಮಕ.

ಮಿ|| ಲಿ೬೪ಯವರು	ಅರಕಲಗೂಡು
ಪಾರ್ಥಸಾರಥಿಯ್ಯಂಗಾರ್	ಹೊಳೇನರಸೀಪುರ
ಪಿ. ಸುಬ್ಬರಾವ್ ನಾಯುಡು	ತಿಪಟೂರು
ನಾರಣಪ್ಪ	ನಗರ.
ಗೋಪಾಲಯ್ಯಂಗಾರ್	ಸೊರಬ
ಜಾ. ಶ್ರೀನಿವಾಸರಾಯರು	ತೀರ್ಥಹಳ್ಳಿ
ರಾಘವೇಂದ್ರ ರಾಯರು	ನಂಜನಗೂಡು
ವೆಂಕಟರಾಯರು	ಹೊಸದುರ್ಗ

ತಾಲ್ಲೂಕುಗಳ ಅಮಲ್ದಾರ್ ವ ೩ನೇ ಕ್ಲಾಸ್ ಮ್ಯಾಜಿಸ್ಟ್ರೇಟುಗಳಾಗಿಯೂ,

ಆರ್. ಸುಬ್ಬರಾಯರು	ಕುಂಸಿ,
ಮಾಧವರಾಯರು	ಶ್ರೀರಂಗಪಟ್ಟಣ.
ಕೆ. ಕೃಷ್ಣರಾಯರು	ಗ್ರಾಮ.

ಈ ಸಬ್ ತಾಲ್ಲೂಕುಗಳ ಡೆಪ್ಯುಟಿ ಅಮಲ್ದಾರ್ ವ ೩ನೇ ಕ್ಲಾಸ್ ಮ್ಯಾಜಿಸ್ಟ್ರೇಟುಗಳಾಗಿಯೂ ಇರತಕ್ಕದ್ದು.

ಹೊಸದುರ್ಗದ ಡೆಪ್ಯುಟಿಅಮಲ್ದಾರ್ ಕುಮಾರಸ್ವಾಮಿ ನಾಯಕರು. ಮಾಗಡಿ ತಾಲ್ಲೂಕಿಗೆ ವರ್ಗಮಾಡಲ್ಪಟ್ಟ ನಂಜುಂಡ ಮೊದಲಿಯಾರ್ರವರಿಗೆ ಬದಲು ಮಳವಳ್ಳಿ ತಾ|| ಅಮಲ್ದಾರ್ ವ ೩ನೇ ಕ್ಲಾಸ್ ಮ್ಯಾಜಿಸ್ಟ್ರೇಟರಾಗಿ ನೊಕರರ್ರಾದಲ್ಪಟ್ಟಿರುತ್ತಾರೆ.

ಹಿರಿಯೂರು ಅಮಲ್ದಾರ್ ಲಕ್ಷ್ಮಣರಾಯರು ಸಸ್ಪೆಂಡ್ ಮಾಡಲ್ಪಟ್ಟಿರುವದರ ಮೂಲಕ ದುಂಗಾಡಿಯಾಗಿ ಹೋಗಿರುವ ಕಾಲದಲ್ಲಿ, ಕೊಮಾರಸ್ವಾಮಿ ನಾಯಕರವರು ಆಕ್ಟಿಂಗ್ ತರೀಕ್ ಕೆಲಸ ನೋಡತಕ್ಕದ್ದು.

ನೊಕ್ಯಾಂ ನಂ. ೨೨೦೮, ತಾ ೪ನೇ ಜನವರಿ, ೧೮೮೮.—ಸೊರಬ ತಾಲ್ಲೂಕು ಅಮಲ್ದಾರ್ ಗೋಪಾಲಯ್ಯಂಗಾರ್ರು ಮತ್ತೊಂದು ಹುಕುಂ ಕೊಡಲ್ಪಡುವ ತನಕ, ಮಧ್ಯಗಿರಿತಾಲ್ಲೂಕು ಅಮಲ್ದಾರ್ ವ ಮೂರನೇಕ್ಲಾಸ್‌ಮ್ಯಾಜಿಸ್ಟ್ರೇಟರಾಗಿ ಕೆಲಸ ನೋಡುತ ಲಿರತಕ್ಕದ್ದು.

ಶಿವಮೊಗ್ಗಾ ಡಿಸ್ಟ್ರಿಕ್ಟ್ ರೆವಿನ್ಯೂ ಶಿರಸ್ತೇದಾರ್ ಎ. ವೀರರಾಘವಲು ನಾಯುಡವರು ಮತ್ತೊಂದು ಹುಕುಂ ಕೊಡುವ ತನಕ ಸೊರಬ ತಾಲ್ಲೂಕು ಅಮಲ್ದಾರ್ ವ ಮೂರನೇಕ್ಲಾಸ್ ಮ್ಯಾಜಿಸ್ಟ್ರೇಟರಾಗಿ ನೊಕರರ್.

ನಂ|| ೧೦೩೩, ತಾ|| ೬ನೇ ಜನವರಿ, ೧೮೮೮.—ಇದರಿಂದ ಸರ್ವಜನರಿಗೂ ತಿಳಿಯಪಡಿಸುವದೇನುವದೆ, ದಕ್ಷಿಣ ಕನ್ನಡಾ ಜಿಲ್ಲೆಗೆ ಸೇರಿದ ಉಡುಪಿ ಮತ್ತು ಅದರ ಆಸುಪಾಸು ಸ್ಥಳಗಳಲ್ಲಿ ಉಡಾಲ್ ಜ್ವರ ವ ಸ್ಮಾಲ್‌ಪಾಕ್ಸ್ ರೋಗಗಳು ವ್ಯಾಪಿಸಿರುವದರಿಂದ ಆ ಸ್ಥಳದಲ್ಲಿ ಮಾಹೇ ಮಜಕೂರ್ ೭ನೇ ತಾರೀಖ್ ಲಾಗಾಯಿತು ೧೭ನೇ ತಾರೀಖ್‌ವರಿವಿಗೆ ನಡೆಯತಕ್ಕ ಪರಿಯಾಯದ ಜಾತ್ರೆಗಾಗಿ ಹೋಗಲಿಚ್ಛೆಯುಳ್ಳ ಜನಗಳು ಅವುಗಳಿಂದನುಭವಿಸಬಹುದಾದ ಅಪಾಯಗಳಿಗೆ ಗುರಿಯಾದಾರೆಂದು ಇದರಿಂದ ಎಚ್ಚರಿಸಿರುತ್ತೆ.

BANGALORE.—Printed and published for the Proprietor, at the KARNATIC Press.—1888.

ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA.

ಪ್ರತಿ ಸೋಮವಾರ ಪ್ರಾತಃಕಾಲದಲ್ಲಿ ಪ್ರಕಟಿಸಲ್ಪಡುವದು.

Published every Monday Morning.

ಪ್ರಕಾಮವಿವಿಧರಮ್ಯತ್ಯವನಗಮಾರ್ಥ್ಯ ಕರ್ಣಾಟಕಪ್ರಕಾಶನವರಾಬದಾಪ್ರಥಿತಸಾಹಿತೀಶೋಭಿತಾ ॥ ಮ್ಯಾನಾಂಕಹಿತಮಾಸರನಿಹಿತಮುದ್ರಣಾಸದ್ಯನ್ಯೈರ್ಭಿಕಾಸುಪರಿಪೋಷಿತಾವಿಕಶಿತಮಾನಸಂಸುಮಂ॥

Vol XV]	BANGALORE—MONDAY JANUARY 16, 1888	[No 2
ಸಂಪುಟ ೧೫]	ಬೆಂಗಳೂರು — ಸನ್ ೧೮೮೮ನೇ ಇಸವಿ ಜನವರಿ ೧೬ನೇ ತಾರೀಖು ಸೋಮವಾರ.	[ಸಂಚಿಕೆ ೨.

ಕರ್ಣಾಟಕ ಪ್ರಕಾಶಿಕಾ

ಪತ್ರಿಕೆಯ ಚಂದಾ ದರಗಳು,
೧೮೮೮ನೇ ಇಸವಿ ಜನವರಿ ಆರಂಭ ಮೊದಲು
ಕಡಮೆ ಮಾಡಲ್ಪಟ್ಟಿರುತ್ತವೆ.

ಈ ಪತ್ರಿಕೆಯ ಚಂದಾದಾರರಲ್ಲಿ ಅನೇಕರ ಅಪೇಕ್ಷೆಯನ್ನು ನೆರವೇರಿಸುವ ಉದ್ದೇಶದೊಡನೆಯೂ, ಪರಿಮಿತವಾದ ಆಯಾತಿಯುಳ್ಳವರಿಗೆಲ್ಲ ಈ ಪತ್ರಿಕೆಯು ಸುಲಭವಾಗಿ ಲಭಿಸುವಂತಿರಬೇಕೆಂಬ ಅಭಿಪ್ರಾಯದೊಡನೆಯೂ ಇದರ ಚಂದಾ ದರವನ್ನು ಇದರಡಿಕಂಡಂತೆ ಕಡಮೆ ಮಾಡಿರುತ್ತೇವೆ ಅದೇನೆಂದರೆ —

ಇಂಗ್ಲಿಷ್ ಮತ್ತು ಕನ್ನಡಭಾಗಗಳಿಗೆ.

	ಸ್ಥಳದವರಿಗೆ	ಪರಸ್ಥಳದವರಿಗೆ
12 ತಿಂಗಳಿಗೆ	8—0—0	9—0—0
6 ,,	4—0—0	4—8—0
3 ,,	2—8—0	2—8—0

ಇಂಗ್ಲಿಷ್ ಅಥವಾ ಕನ್ನಡಭಾಗಗಳಿಗೆ.

	ಸ್ಥಳದವರಿಗೆ	ಪರಸ್ಥಳದವರಿಗೆ
12 ತಿಂಗಳಿಗೆ	4—0—0	5—0—0
6 ,,	2—0—0	2—8—0
3 ,,	1—1—0	1—8—0

ಷರಾ—ಅಂಚೆ ವಗೈರೆಗಳು, ಸೇಬಲ್ ಪೋಸ್ಟ್ ಹಾಲ್ಫ್ ಸ್ಕಾಲರ್‌ಶಿಪ್ ಗಳು, ಶಾಲೆಗಳು, ಪಂಡಿತರು, ವಿದ್ಯಾರ್ಥಿಗಳು, ಇವರಿಗೆಲ್ಲ ಈ ಪತ್ರಿಕೆಯು ಮೇಲ್ ಕಂಡ ದರಕ್ಕೆ ಕೊಡಲ್ಪಡುವದು. ಮುಂಗಡವಾಗಿ ಕೊಡದವರು ... ಇಂಗ್ಲಿಷ್ ಭಾಗವನ್ನಾಗಲಿ ಕನ್ನಡಭಾಗವನ್ನಾಗಲಿ ಅಥವಾ ಎರಡನ್ನಾಗಲಿ ತರಿಸಿಕೊಳ್ಳಬಹುದು. ಚಂದಾಹಣವನ್ನು ಮುಂಗಡವಾಗಿಯೇ ಕಳುಹಿಸತಕ್ಕದ್ದು. ಮೂರು ತಿಂಗಳಿಗಿಂತ ಕಡಮೆಯಾಗಿ ಚಂದಾ ಮೊಬಲಗು ಅಂಗೀಕರಿಸಲ್ಪಡುವದಿಲ್ಲ.

ನೋಟುಗಳು ರವಾನಿಸತಕ್ಕವರು ಮೊದಲು ಕಳುಹಿಸುವ ಅರ್ಧನೋಟು ತಲುಪಿದ ಬಗ್ಗೆ ನಮ್ಮ ಕಾಗದವು ಬಂದ ಕೂಡಲೆ ಬಾಕಿ ಅರ್ಧ ನೋಟನ್ನು ರವಾನಿಸತಕ್ಕದ್ದು. ಸ್ಟಾಂಪುಗಳು ಕಳುಹಿಸತಕ್ಕವರು ರೂಪಾಯಿ ಒಂದಕ್ಕೆ ಒಂದು ಆಣೆ ... ಕಳುಹಿಸತಕ್ಕದ್ದು. ... ಕಳುಹಿಸಕೂಡದು. ... ಕಳುಹಿಸಲ್ಪಡುವ ಮೊಬಲಗಿನಲ್ಲಿ ಅದು ... ಲೆಕ್ಕಕ್ಕೆ ದಾಖಲು ಮಾಡಲ್ಪಡುವದು.

ಪ್ರಕಟನೆಯ ರಿವಾಜ್

ಮೊದಲನೆಯದಫಾ ಪಂಕ್ತಿ ಒಂದಕ್ಕೆ	೦—೨—೦	
ಎರಡನೆಯದಫಾ ಪಂಕ್ತಿ ಒಂದಕ್ಕೆ	೦—೧—೦	

ಷರಾ—ಎರಡಾವರ್ತಿಗಿಂತ ಒಂದಾವರ್ತಿಗೆ ಎಷ್ಟು ... ಕಮಿಷನ್ ... ಒಂದಕ್ಕೆ ... ಲೆಕ್ಕ ಮಾಡಲ್ಪಡುವದು. ಈ ಪತ್ರಿಕೆಯಲ್ಲಿ ಕಮಿಷನ್ ಮಾಡುವ ಬಗ್ಗೆ ಪ್ರಕಟನೆಗಳನ್ನು ಕಳುಹಿಸುವವರು ಅವು ಎಷ್ಟಾವರ್ತಿ ... ಮಾಡಲ್ಪಡಬೇಕೋ ಆ ಅಂಶವನ್ನು ಸ್ಪಷ್ಟವಾಗಿ ತಿಳಿಸತಕ್ಕದ್ದು. ಇಲ್ಲದಪಕ್ಷಕ್ಕೆ ಅವು ನಮಗೆ ತಿಳಿಸ ಬರೆಯುವತನಕ ಅವು ಪ್ರಕಟಿಸುತ್ತಿದ್ದು ಬಾಕಿ ಎಷ್ಟಾವರ್ತಿ ಪ್ರಕಟಿಸಲ್ಪಟ್ಟಿವೆಯೋ ... ದರದಂತೆ ಕಿಮ್ಮತ್ ವಸೂಲ್ ಮಾಡಲ್ಪಡುವದು. ಪ್ರಕಟನೆಯಬಗ್ಗೆ ಕಳುಹಿಸಲ್ಪಡತಕ್ಕ ಪ್ರಕಟನೆಗಳನ್ನು ... ಮತ್ತು ... ಪ್ರಕಟನೆಯಬಗ್ಗೆ ಈ ಪತ್ರಿಕೆಗೆ ಕಳುಹಿಸಲ್ಪಡತಕ್ಕ ಕಾಗದಗಳೆಲ್ಲವೂ ... ನಾವು ... ಕ್ರಮವಾಗಿ ... ಯಾವ ಕಾಗದವನ್ನು ಪ್ರಕಟಿಸಲೊಲ್ಲೆವೊ ಅವು ... ಕಾಗದಗಳನ್ನು ರವಾನಿಸಲ್ಪಡಲಾರವು.

"IT RECOMMENDS ITSELF"

ALL WHO SUFFER FIND SURE RELIEF

LITTIES'

ORIENTAL BALM

THE MOST EFFECTUAL MODERN REMEDY FOR PAIN

ಲಿಟಲ್ ಕಂಪನಿಯಿಂದ ತಯಾರ್ ಮಾಡಲ್ಪಟ್ಟ "ಓರಿಯಂಟಲ್ ಬಾಮ್" ಎಂಬ ಪೂರ್ವದೇಶ ತೈಲವೆಂಬ ಅಮೂಲ್ಯ ತೈಲವು ಸ್ವಲ್ಪ ಪ್ರಯೋಗದಿಂದಲೇ, ಮತ್ತು ಸಫಲವಾದ ನವೀನ ಪ್ರತಿಕ್ರಿಯೆಯುಳ್ಳದ್ದಾದ ಔಷಧವು. ಇದರಿಂದ ಸಕಲ ವಾತರೋಗಗಳೂ, ವಾತಸಂಬಂಧವಾದ ನೋವುಗಳು ನಿವೃತ್ತಿಯಾಗುವವು. ಮುಖ್ಯವಾಗಿ ... ತಲೆನೋವು, ಕೀಲುವಾಯು, ಕಟಿವಾಯು, ಉಳುಕು ನೋವು, ... ಮುಂತಾದ ರೋಗಗಳೆಲ್ಲ ನಿಸ್ಸಂಶಯವಾಗಿ ... ಪ್ರಯೋಜನವನ್ನುಂಟು ಮಾಡತಕ್ಕದ್ದು. ಈ ತೈಲವನ್ನು ನೋವುಳ್ಳ ಸ್ಥಳಗಳಲ್ಲಿ ... ತನ್ನಷ್ಟಕ್ಕೆ ... ಮತ್ತು ಜೋಮು ... ನಿವೃತ್ತಿಯಾಗುವದು ... ಈ ತೈಲವು ಅದ್ಭುತವಾದ ಮತ್ತು ಶೀಘ್ರವಾದ ಗುಣವನ್ನುಂಟು ಮಾಡುವದು. ಅದ್ಭುತವಾದ ಈ ಔಷಧವನ್ನು ... ಅದರ ಪ್ರಯೋಜನವು ಸ್ವತಃ ವ್ಯಕ್ತವಾಗುವದು. ಈ ತೈಲವು ಶೀತ ... ಪ್ರಯಾಣಿಕರು, ಬೇಟೆಯಾಡುವವರು, ದೇಶಾಟನ ಮಾಡುವವರು, ಮುಂತಾದವರಿಗೆಲ್ಲ ಅಮೂಲ್ಯವಾದದ್ದು.

ಪರಿಶೀಲಕರ ಅಭಿಪ್ರಾಯವು

ಐರ್ಲ್ಯಾಂಡ್ ದೇಶದ ಫಾರ್ಮಸ್ಯೂಟಿಕಲ್ ಸೊಸೈಟಿಯವರ ಔಷಧಶಾಲೆಯ ಪ್ರೊಫೆಸರರೂ, ... ಸೊಸೈಟಿ ... ಸಭಾಸದರೂ, ... ಲಾ ... ಮುಂತಾದ ... ವಿಷಯದಲ್ಲಿ ಅನೇಕ ಲೇಖನಾಧಿಕಾರಿಗಳೂ, ಇರುವ ಡಾಕ್ಟರ್ ಟಿಚ್ ಬೋರನ್ (C R TICHBORNE, L L D, F C S, M R I A,) ಎಂಬವರು ಅಭಿಪ್ರಾಯ ಪಟ್ಟಿರುತ್ತಾರೆ ಏನೆಂದರೆ—ಲಿಟಲ್ ಎಂಬವರ ಓರಿಯಂಟಲ್ ತೈಲವನ್ನು ಒಳ್ಳೇ ... ಪರೀಕ್ಷಿಸಿದ್ದೇನೆ. ... ಉಪಯೋಗಿಸಲ್ಪಡುವಾಗ ... ನಿಜವಾಗಿ ... ರೋಗ ... ಈ ಮಿಶ್ರೌಷಧವು ನರಗಳನ್ನು ... ತರತಮ್ಯ ... ರೋಗಗಳಿಗೆ ಉಪಯುಕ್ತವೆಂದು ... ರೋಗಗಳಲ್ಲಿ ಅದರ ಪ್ರಯೋಜನವು ವ್ಯಕ್ತವಾಗುವದು. ಈ ತೈಲವು ಸಂಪೂರ್ಣ ... ತಯಾರ್ ಮಾಡಲ್ಪಟ್ಟಿರುತ್ತದೆ.

ಇದರ ಕ್ರಯ—ಸೀಸೆ ಒಂದಕ್ಕೆ ೧ ರೂಪಾಯಿ

ಇದು ... ಔಷಧ ಶಾಲೆಯಲ್ಲಿಯೂ, ಮದರಾಸ್ ... ನಂಬರ್ ... ಎ ಸಿ ಬೆಲ್ರ್ಮಾನ್ ಯವರಲ್ಲಿಯೂ, ಈ ಸ್ಥಳದಲ್ಲಿರುವ ಅವರ ಏಜಂಟರುಗಳಾದ ಜೆ ವೆಸ್ಟ್ ಯವರ ಕಂಪನಿಯಲ್ಲಿಯೂ ಮೆ ಕೆಲ್ಲರ್ ಅಂಡ್ ಕಂಪನಿಯವರಲ್ಲಿಯೂ ... ಕಂಪನಿಯವರಲ್ಲಿಯೂ ದೊರೆಯುವದು.

AGENTS—Messrs, J WEST, Chemist &c Bangalore
CALLAIN & Co Chemists, Bangalore
R G S & Co Chemists Bangalore, and of
MAHOMED YOUSOFF AND SONS, The Cash Bazarr, Bagalore
A C BELLYMAN & Co
20 Samboloss Street Madras

NOTICE.

VAIDYASARA SANGRAHA

A TREATISE ON THE PRINCIPLES OF

HINDU MEDICINE

Price including Postage Rs 5 6 0

ವೈದ್ಯಸಾರ ಸಂಗ್ರಹ.

ಈಗ ಅಪೇಕ್ಷೆಯುಳ್ಳವರು ಮೊಬಲಗಿನೊಡನೆ ಈ ಕೆಳಗೆ ರುಜು ಮಾಡಿರತಕ್ಕವರ ಹೆಸರಿಗೆ ಬರೆದುಕೊಂಡರೆ ಪುಸ್ತಕ ಕೂಡಲೇ ಕಳುಹಿಸಲ್ಪಡುವದು. ಮೊಬಲಗು ಇಲ್ಲದ ದರಖಾಸ್ತುಗಳಿಗೆ ಸುತರಾಂ ನಿಗೆ ಕೊಡಲ್ಪಡಲಾರದು

ಇದರ ಕ್ರಯ	ರೂ॥ ೫—೦—೦
ಪ್ಯಾಕಿಂಗ್ ಮತ್ತು ಅಂಚೇಹಾಸಲ್,	೦—೬—೦

ಟಿ ಬಿ. ವೆಂಕಟಾಚಾರ್,
ಆಸ್ಪತ್ರೆ ರೋಡ, ಬೆಂಗಳೂರು

ನೋಟಿಸ್.

ಇದರಿಂದ ನಮ್ಮ ಚಂದಾದಾರರಿಗೆ ಪ್ರಕಟಪಡಿಸುವದೇನಂದರೆ

ಈ ಪತ್ರಿಕೆಯ ೧ನೇ ಕಾಲಂನಲ್ಲಿ ಪ್ರಕಟಿಸಲ್ಪಟ್ಟಿರುವ ಪ್ರಕಟನೆಯ ಮೂಲಕ ಈ ಸಾಲಿನಲ್ಲಿ ಈ ಪತ್ರಿಕೆಯ ಚಂದಾ ದರವನ್ನು ಕಡಿಮೆ ಮಾಡಿರುವದು ಯೆಲ್ಲರಿಗೂ ತಿಳಿಯಬಹುದು. ಕಳೆದ ಸಾಲ ಡಿಸೆಂಬರ್ ಆಖೈರ್‌ವರಿವಿಗೆ ಚಂದಾ ಮೊಬಲಗನ್ನು ಪೂರಾ ಪಾವತೀ ಮಾಡಿರತಕ್ಕವರ ಹೆಸರುಗಳನ್ನು ಮಾತ್ರ ದಾಖಲ್ ಮಾಡಿಕೊಂಡು ಈ ತಿಂಗಳ ಆಖೈರ್‌ವರಿವಿಗೆ ಪತ್ರಿಕೆಯನ್ನು ಕಳುಹಿಸುತ ಬರುವೆವು. ಪತ್ರಿಕೆಯ ಅಪೇಕ್ಷೆ ಇಲ್ಲದವರು ಕೂಡಲೇ ನಮಗೆ ತಿಳಿಸಬೇಕು. ಅದರ ಆವಶ್ಯಕತೆ ಇರತಕ್ಕವರು ಚಂದಾ ಮೊಬಲಗನ್ನು ಕೂಡಲೇ ರವಾನಿಸಬೇಕು. ಬರುವ ತಿಂಗಳ ೮ನೇ ತಾರೀಖಿನೊಳಗಾಗಿ ಯಾರ ಚಂದಾ ಬರುವದಿಲ್ಲವೊ ಅಂತವರಿಗೆಲ್ಲ ಅದೇ ತಿಂಗಳ ೬ನೇ ತಾರೀಖ್ ಮೊದಲು ಪತ್ರಿಕೆ ರವಾನಿಸಲ್ಪಡಲಾರದು

ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA.

MONDAY, JANUARY 16 1888
೧೮೮೮ನೇ ಜನವರಿ ೧೬ನೇ ತಾ॥ ಸೋಮವಾರ

THE BANGALORE GIRLS' SCHOOL

ಇಲ್ಲಿನ ಗವರ್ನಮೆಂಟ್ ಬಾಲಿಕಾ ಪಾಠಶಾಲೆಯ ವರ್ತಮಾನ ಸ್ಥಿತಿಯಂ ಕುರಿತು ಈ ಊರ ನಿವಾಸಿಗಳಾದ (ಕನ್ಯಾ ಪಿತೃಗಳು) ದೊಡ್ಡ ಮನುಷ್ಯರು ಕೆಲವರು ನಮಗೆ ಬರೆದ ಒಂದು ಲೇಖನವನ್ನು ಪ್ರೆಸಿಡೆಂಟರವರ ಮುಖ್ಯಾವಧಾನದಬಗ್ಗೆ ಕಳೆದ ತಿಂಗಳ ೨೬ನೇ ತಾರೀಖಿನ ಈ ಪತ್ರಿಕೆಯಲ್ಲಿ ಪ್ರಾರ್ಥನಾಪೂರ್ವಕ ಪ್ರಕಟಿಸಿದ್ದೆವಷ್ಟೆ. ಅದು ಪ್ರೆಸಿಡೆಂಟರವರ ತಿಳುವಳಿಕೆಗೆ ಬಾರದಿರಬಹುದೆಂದು ನಂಬುತ್ತೇವೆ. ವಿಚಾರಪೂರ್ವಕವಾದ ಅವರ ವಿಮರ್ಶೆಗೆ ಪಿತೃಗಳು ಹೇಳಿದ ಹಿಂದೆರಡು ಅಂಶಗಳನ್ನು ಇದರಲ್ಲಿ ತಿಳಿಸುವದಾವಶ್ಯಕವೆಂದು ಭಾವಿಸುವೆವು

ಈಗ ಖಾಲಿಯಾಗುವದಾಗಿರುವ ಸದರೀ ಸ್ಕೂಲಿನ ಹೆಡ್ಮಾಸ್ಟರ್ ಕೆಲಸಕ್ಕೆ ಅನೇಕರು ಅರ್ಜಿಗಳಂ ಬರೆದುಕೊಂಡೂ ಕೊಳ್ಳುತಲೂ ಇದ್ದಾರೆಂತಲೂ, ಅದಕ್ಕಾಗಿ ಅಲ್ಲಿಯೇ ಒಬ್ಬರು ಎಫ್ ಎ ಪ್ಯಾಸ್ ಮಾಡಿದವರೂ, ಮೆಟ್ರಿಕ್ಯುಲೇಷನ್ ಪರೀಕ್ಷೆಯನ್ನಿತ್ತ ಮತ್ತೊಬ್ಬರು ಸಹ ಉಮೇದವಾರರಾಗಿರುತಲಿದ್ದಾರೆಂತಲೂ ಕೇಳುತ್ತೇವೆ. ಇಷ್ಟು ಜನರ ಪೈಕಿ ಯಾರಿಗದು ಲಭಿಸುವದೋ, ಸ್ಕೂಲಿನ ಅಧಿಕಾರಿಗಳ ದೃಷ್ಟಿಯಲ್ಲಿ ಯಾರು ಸಮರ್ಥರೆಂದು ತೋರಬಹುದೋ ಅದನ್ನೀಗ ತಿಳಿಯಲಸಾಧ್ಯವಾಗಿದೆ. ಪರಂತು ಪ್ರಸಕ್ತ ವಿಷಯವು ಶೀಘ್ರದಲ್ಲಿಯೇ ವ್ಯವಸ್ಥೆಯನ್ನೈದುವದೆಂದು ತೋರುವದರಿಂದ, ಸ್ಕೂಲಿನ ವಿಚಾರಣಾಧಿಕಾರಿಗಳು ಇದರಡಿ ಕಂಡ ನಮ್ಮ ಅಭಿಪ್ರಾಯದ ಔಚಿತ್ಯವಂ ಪರ್ಯಾಲೋಚಿಸಿ ಯುಕ್ತವಾಗಿ ನಿರ್ಣಯಿಸುವರೆಂದು ನಂಬುತ್ತೇವೆ. ಅನೇಕಸಂವತ್ಸರಗಳಕಾಲ ಶಾರೀರಕ ಮಾನಸಿಕ ಕ್ಲೇಶಗಳನ್ನನುಭವಿಸುತ ಬಹ್ವರ್ಥ ವ್ಯಯದಿಂ ಸಂಪಾದಿಸಿದ ವಿದ್ಯಾ ಪ್ರಯುಕ್ತವಾದ ಜ್ಞಾನವು ಈ ದೇಶದಲ್ಲಿ ಪುರಸ್ಕರಿಸಲ್ಪಡದದಕ್ಕೆ ವಿಧಾನವು ನಮಗೆ ಮಿತಿಯಿಲ್ಲದ ವಿಷಾದವನ್ನುಂಟುಮಾಡತಕ್ಕದ್ದಾಗಿದೆ. ಮುಸಲಾ ಬಿ. ಎ ಪರೀಕ್ಷೆಗೆ ಇಬ್ಬರು ಉಮೇದವಾರರು ಹೋಗಿ ಅವರ ಪೈಕಿ ಒಬ್ಬನು ಕೇಗಾಡಿಯಾಗಿ ಗ್ರಾಜ್ಯುಯೇಟ್ ಎನಿಸಿಕೊಳ್ಳುತ್ತಾನೆ. ಮತ್ತೊಬ್ಬನಿಗೆ ಅರ್ಧ ಮಾರ್ಕು ಕಡಮೆಯಾಗಿ ಪರೀಕ್ಷೆಯಲ್ಲಿ ತಪ್ಪಿ ಹೋಗಿರುತ್ತಾನೆ. ಇವರಿಗೆ ಪರಸ್ಪರವಿರುವ ಯೋಗ್ಯತಾ ತಾರತಮ್ಯ ಅರ್ಧ ಮಾರ್ಕಿಗಿಂತ ಅಧಿಕವಾಗಿರುವದಿಲ್ಲವು. ಇದರಿಂದ ಅವರಿಬ್ಬರ ಜ್ಞಾನದಲ್ಲಿ ಒಬ್ಬನದು ಶ್ರೇಷ್ಠವೆಂತಲಾಗಲಿ, ಮತ್ತೊಬ್ಬನದು ನಿಕೃಷ್ಟವೆಂತಲಾಗಲಿ ಭಾವಿಸುವದನುಚಿತವು. ಕ್ರಮವಾದ ಪ್ರಾಶಸ್ತ್ಯವನ್ನೈದಲಿಕ್ಕೆ ಯೆರಡನೆಯವನು ಅನರ್ಹನೆನಿಸಿಕೊಂಡಾಗ್ಯೂ ಫಲಪ್ರಾಪ್ತಿಯ ವಿಷಯದಲ್ಲಿ ತಾರತಮ್ಯ ಕಲ್ಪನವು ಅಸಮಂಜಸವೆಂದೆಣಿಸುವೆವು. ಬಿ. ಎ ಪರೀಕ್ಷೆಯಲ್ಲಿ ದೌರ್ಭಾಗ್ಯವಶಾತ್ ಅರ್ಧ

ಪಾರ್ಕ್ ಕಡಮೆಯಾಗಿ ತೇರ್ಗಡೆಯಾಗದ ಒಬ್ಬ ಉಮೇದವಾರನಿಗೆ ಒಂದು ಮ್ಯೂನಿಸಿಪಲ್ ಇಲಾಖೆಯಲ್ಲಿ ಮಾಹೇಯಾನಾ ೧೫ ರೂಪಾಯಿಗಳ ತಲಬ ದೊರೆಯುವದು ಬಹಳ ಪ್ರಯಾಸಕರವಾಗಿ ಏರ್ಪಟ್ಟಿದೆ. ತೇರ್ಗಡೆಯಾಗದ ಗ್ರ್ಯಾಜ್ಯುಯೇಟನ ಯೋಗ್ಯತೆಯು ೧೫ ರೂಪಾಯಿಗಳ ಮೌಲ್ಯವುಳ್ಳದ್ದೆಂದೇರ್ಪಟ್ಟ ಬಳಿಕ ಪ್ಯಾಸ್ ಮಾಡಿದವನಿಗೆ ಇನ್ನೊಂದು ಹತ್ತು ರೂಪಾಯಿಗಳಿಗಿಂತಮೇಲ್ಪಟ್ಟು ದೊರೆಯಲಾರದಷ್ಟೆ. ಅತಏವ ಬಿ. ಎ. ಪ್ಯಾಸ್ ಮಾಡಿದವನ ಶ್ರಮವೂ, ಜ್ಞಾನವೂ ೨೫ ರೂಪಾಯಿಗಳಿಗಿಂತ ಅಧಿಕವಾಗಿ ಮನ್ನಿಸಲ್ಪಡುವದಿಲ್ಲವೆಂದು ನಿಶ್ಚಯಿಸಬೇಕಾಗಿದೆ. ಗ್ರ್ಯಾಜ್ಯುಯೇಟರಿಗೆ ೨೫ ರೂಪಾಯಿಗಳೆಂದು ಕಲ್ಪಿಸಿದ ಬಳಿಕ, ಅಂಡರ್ ಗ್ರ್ಯಾಜ್ಯುಯೇಟರಿಗೂ, ಮೆಟ್ರಿಕ್ಯುಲೇಶನ್ ಮತ್ತು ಮಿಡಲ್‌ಸ್ಕೂಲ್ ಪರೀಕ್ಷೆಗಳಲ್ಲಿ ಕೊಟ್ಟವರಿಗೂ ಲಭಿಸಬಹುದಾದ ವೇತನವನ್ನು ಕುರಿತು ತಿಳಿಸಬೇಕಾದುದೇ ಇಲ್ಲವು. ಇವರ ಸ್ಥಿತಿಯಿಂತಿರುವಲ್ಲಿ ಪ್ಯಾಸಮಾಡದವರಗತಿಯು ಮ್ಯೂನಿಸಿಪಲ್ ಜಾಡಮಾಲಿಗಳಿಗಿಂತಲೂ ನಿಕೃಷ್ಟತ್ವೇನ ಬಹಿಸಲ್ಪಡುತ್ತಿರುವದೇನೂ ಆಶ್ಚರ್ಯವಲ್ಲವು. ಇಷ್ಟರ ಅನರ್ಥಗಳಿಗೆ ಕಾರಣವು ಅಧಿಕಾರಯುಕ್ತರಾದ ನಮ್ಮ ಆಳಿಕರ ಅವಿವೇಕವೆಂದು ನುಡಿಯಬಹುದಾಗಿದೆ. ಗವರ್ನ್‌ಮೆಂಟು ತಂಬನ್ನಿರೀಕ್ಷಿಸುತ ಗ್ರ್ಯಾಜ್ಯುಯೇಟರುಗಳಂತೂರೆದು ಅನುಸರಿಸುವದಕ್ಕೆ ಶ್ರಮಪಟ್ಟರಾಗಿ ಅತಿ ಅಲ್ಪ ಕೆಲಸಗಳಿಗೆಲ್ಲ ಮೇಲ್ಬಿದ್ದು ಹೋಗುವದರಿಂದ ತಮ್ಮ ಗೌರವವು ಬೀಳುವದು ಕಂಡುಕೊಳ್ಳುವದುನೂ ಶಕ್ಯವಿಲ್ಲವೆ ಗವರ್ನ್‌ಮೆಂಟಿನವರನ್ನು ವ್ಯರ್ಥವಾದ ಸ್ವಪ್ರತಿಷ್ಠೆಗೆ ಪಾತ್ರರನ್ನಾಗಿ ಮಾಡುತ್ತಾರೆ. ಹೀಗೆ ಮಾಡುವದರಿಂದ ಗವರ್ನ್‌ಮೆಂಟಿನವರು ಸಂದರ್ಭಾನುಸಾರ ೧೦ ರೂಪಾಯಿ ಕೊಡಲಿಕ್ಕೂ, ೧೫ರೂಪಾಯಿಗಳಿಗೆ ಬಿ. ಎ. ಗಳು ದೊರೆಯುವಾಗ ನಿನಗೇನು ಲಭಿಸುವದೆಂದು ನುಡಿಯುತ ಚೌಕಶಿ ಮಾಡಲಿಕ್ಕೂ ಆಸ್ಪದವಾಗಿದೆ. ಇದರ ವಿಚಾರವಂತಿರಲಿ ಒಬ್ಬ ಸ್ಕೂಲ್ ಹೆಡ್ ಮ್ಯಾಸ್ಟರನಾದವನಿಗೆ ಎಷ್ಟರೂಪಾಯಿಗಳು ಕೊಡಲ್ಪಡುವದಕ್ಕೆ ಅವನ ಅಸಿಸ್ಟೆಂಟರ ತಲಬಗಳು ಎಷ್ಟರಮಟ್ಟಿನದಾಗಿರಬಹುದೆಂಬದು ವಿವೇಕಿಗಳೇ ಆಲೋಚಿಸಬಹುದು. ಕಡೆಗೆ ನೋಡಲಾಗಿ, ಕನ್ನೇಕ್ಯಾಸಿನ ಉಪಾಧ್ಯಾಯನ ವೇತನಕ್ಕೂ, ಅವರವರ ಮನೆಗಳಿಗೆ ನೀರು ಹೊತ್ತು ಮುಕ್ಕಳಂಕರೆದುಕೊಂಡು ಬರುವ ಜವಾನರ ತಲಬಿಗೂ ವ್ಯತ್ಯಾಸ ಕಂಡುಬರುವದಿಲ್ಲವು. ಒಬ್ಬ ಜವಾನನ ಯೋಗ್ಯತೆಯನ್ನೂ ಒಬ್ಬ ಉಪಾಧ್ಯಾಯನ ಯೋಗ್ಯತೆಯನ್ನೂ ಸಮಾನತ್ವೇನ ಪರಿಗಣಿಸುವದು, ಕಸ್ತೂರಿಯಿಟ್ಟ ಸಂಪುಟದಲ್ಲಿ ಇರುಗುವನ್ನಿರಲೆತ್ನಿಸುವಂತಿರುವದು. ಅವರ ಯೋಗ್ಯತೆಯ ವಿಷಯವು ಪರಿಗಣಿಸಲ್ಪಡದಿದ್ದರೂ ಅವರ ಸ್ವಾಮಿತ್ವ ಭೃತ್ಯತ್ವಗಳಂ ಕುರಿತಾದರೂ ಸ್ವಲ್ಪ ಆಲೋಚಿಸಬೇಕಾದದ್ದು ಆವಶ್ಯಕವಾಗಿರುತಿದೆ. ವೇತನದಲ್ಲಿ ಒಬ್ಬ ಉಪಾಧ್ಯಾಯನೂ ಜವಾನನೂ ಸಮಾನರಾಗುವದಕ್ಕೆ ಮೊದಲನೇಯವನಲ್ಲಿ ಎರಡನೇಯವನಿಗೆ ಎಷ್ಟರ ಭಕ್ತಿ ಗೌರವಗಳಿರುವವೋ, ಅವನೆಷ್ಟು ಆಜ್ಞಾಬದ್ಧನಾಗಿರುವನೋ ಅದು ದೂರದೃಷ್ಟಿಯುಳ್ಳ ಪುರುಷರಿಂದಲೇ ಪರ್ಯಾಲೋಚಿಸಲ್ಪಡುವದು. ಹೀಗೆಯೇ ಹೆಡ್‌ಮ್ಯಾಸ್ಟರ ಮತ್ತು ಅವರ ಅಸಿಸ್ಟೆಂಟರ ವಿಷಯಗಳಲ್ಲಿ ಸಹ ಧಾರಾಳವಾಗಿ ಹೇಳಬಹುದಾಗಿರುತಿದೆ. ಹೀಗೆ ಅಲ್ಪವೇತನಗಳುಳ್ಳ ಉಪಾಧ್ಯಾಯನ ಜವಾಬ್ದಾರಿಯ ಸ್ವರೂಪವನೀತರ ನಾದ್ದೆಂಬದು ಈ ಸಂದರ್ಭದಲ್ಲಿ ಕಮಿಟಿಯವರ ಅವಧಾನಕ್ಕೆ ಮುಖ್ಯವಾಗಿ ತರುವೆವು. ಹ್ಯಾಗೆಂದರೆ —ಬಾಲಿಕಾ ಪಾಠಶಾಲೆಗಳ ಉಪಾಧ್ಯಾಯರುಗಳಿಗೆ ಅನೇಕ ವಿಷಯಗಳಲ್ಲಿ ವಿಶೇಷ ಜವಾಬ್ದಾರಿಗಳೂ, ನಿರ್ಬಂಧಗಳೂ ಉಂಟಾಗಿರುತಿವೆ. ಉಪಾಧ್ಯಾಯರುಗಳು ಹುಡುಗರ ವಿಷಯದಲ್ಲಿ ನಡೆದುಕೊಳ್ಳುವಂತೆ ಹುಡುಗಿಯರ ವಿಷಯದಲ್ಲಿ ನಡೆಯಲಾಗದು. ಒಬ್ಬ ಹುಡುಗನನ್ನು ಎಲೋ ಎಂದು ಕರೆಯುವಂತ ಎಲ್ಯೆ, ಅಥವಾ ಎಲೌ ಎಂದು ಒಬ್ಬ ಹೆಂಕರೆಯುವ ಸ್ವಾತಂತ್ರ್ಯವು ಸುತರಾಂ ಉಪಾಧ್ಯಾಯನಿಗಿರುವದಿಲ್ಲ. ಬಾಲೆಗಳಂ ಕ್ರಮವಾಗಿ ಒಪ್ಪಿಸದಿದ್ದರೆ ಗಮ ಹುಡುಗರು ನಿರ್ಬಂಧಿಸುವಂತೆ ಬಲವು ನಿರ್ಬಂಧಿಸಲಾಗದು. ಬಾಲಕರು ಕುರಿತು ಹೇಳುವ ಸರಳ ಮಾತುಗಳು ಕದಾಚಿತ್ ಹೆಣ್ಣುಮಕ್ಕಳಿಗೆ ಅತಿ ಕಠಿಣಗಳಾಗಿ ಪರಿಣಮಿಸುವವು. ದುಡಿಗಿಯೊಬ್ಬಳು ತನ್ನ ಮನೆಯಿಂದ ಸ್ಕೂಲಿಗೆ ಬಂದದ್ದು ಮೊದಲು, ಸ್ಕೂಲಿನಿಂದ ಮರಳಿ ಮನೆಗೆ ಹೋಗುವವರೆಗೆ ಅವಳು ವಹಿಸಿರುವ ಒಡವೆ ಭರಣಗಳಿಗೆಲ್ಲ ಉಪಾಧ್ಯಾಯನು ಜವಾಬ್ದಾರನಾಗಿರಬೇಕಾಗಿದೆ. ವಿಶೇಷ ಬೆಳೆಸಲ್ಯಾಕೆ, ಹೆಣ್ಣು ಮಕ್ಕಳಿಗಾಗಿ ಅವನು ಅನುಭವಿಸಬೇಕಾದ ಶ್ರಮಗಳೂ ಸಂಕಟಗಳೂ ಇಷ್ಟರವೆಂದು ನುಡಿಯಲಸಾಧ್ಯವು. ಕ್ರಮವಾದ ತನ್ನ ಕರ್ತವ್ಯವನು ಬುದ್ಧಿವಂತನಾಗಿ ನೆರವೇರಿಸುವನಾದರೆ ವಿದ್ಯಾರ್ಥಿನೀಗಣದ ಮತ್ತು ಅವರ ತಾಯಿತಂದೆಗಳ ವೈಮನಸ್ಯಕ್ಕೆ ಗುರಿಯಾಗಬೇಕಾಗುವದು. ಆಕರ್ತವ್ಯವನ್ನು ಸ್ವಲ್ಪವಿಚಾರ ಶೂನ್ಯನಾಗಿ ಅನೀತಿಯಿಂದನಾಗಿ ನಡೆಸುವನಾದರೆ ಅಧಿಕಾರಿಗಳಾದವರ ಆಕ್ಷೇಪಣೆಗಳಿಗೆ ವಿಷಯನಾಗುವನು. ಹೀಗೆ ಇಷ್ಟರ ನಿರ್ಬಂಧಗಳಂ ಸಹಿಸಿಕೊಂಡು, ಅನೇಕ ಉಪಾಧ್ಯಾಯರುಗಳನ್ನು ಬೆನ್ನ ತಾಳಿಕೊಳ್ಳುತ್ತಿರೆಂದು, ಬಹುಮಂದಿ ವಿದ್ಯಾರ್ಥಿನೀಯರ ಹಾನಿವೃದ್ಧಿಗಳಿಗೆ ಜವಾಬ್ದಾರನಾಗಿರುವದು ಸಾಮಾನ್ಯವೆಂದು ನುಡಿಯಲಾಗದು. ಇಂತಹರ ಗೌರವ ಅಧಿಕಾರ ಹನಿಗಳಿಗೆ ಅನುಗುಣವಾದ ವೇತನವನ್ನಿಂಯದೊಂ ನ್ಯಾಯ್ಯವಾದ ಕರ್ತವ್ಯವು ನಿರ್ದಾಕ್ಷಿಣ್ಯವಾಗಿ ನೆರವೇರಿಸುವನೆಂದು ನಿರೀಕ್ಷಿಸುವದಾಗದು. ಆ ಬಗ್ಗೆ ಅವನು ಒಳ್ಳೆಯಕಾರ್ಯನಿರೂಪಣೆಯಿಂದು ಯೋಗ್ಯನೆಂದು ನುಡಿಯಲಾರೆವು. ಮುಖ್ಯವಾಗಿ ಪ್ರಸಕ್ತ ಹೆಡ್‌ಮ್ಯಾಸ್ಟರ್ ಕೆಲಸವನ್ನೂ ಖಾಲಿಯಾಗಿರುವ ಇತರ ಕೆಲಸಗಳನ್ನೂ ಚರ್ಚಿಸುವ ವಿಷಯವು ಕುರಿತು ಕಮಿಟಿಯವರು ಆಲೋಚಿಸುವಾಗ್ಯೆ ತಾವು ಮೊದಲು ಆಲೋಚಿಸತಕ್ಕ ಯೋಗ್ಯತೆಯನ್ನು, ಅವರು ನಿರ್ವಹಿಸತಕ್ಕ ಅಧಿಕಾರ ಸ್ವರೂಪವನ್ನೂ, ಆಬಗ್ಗೆ ಅವರಿಗೆ ಆವಶ್ಯಕವಾದ ಭಾಷಾಜ್ಞಾನವನ್ನೂ ಚೆನ್ನಾಗಿ ಪರ್ಯಾಲೋಚಿಸಿ, ವೇತನವು ಮಾಡುವದು ಬಹಳ ಯೋಗ್ಯವಾಗಿರುವದು. ಹಾಗಿಲ್ಲದೆ ಅನುಭವಶೂನ್ಯರಾದರೂ ಚಿಂತೆಯಿಲ್ಲವು, ಪ್ಯಾಸ್ ಮಾಡಿದವರು ಅಲ್ಪಸಂಬಳಕ್ಕೆ ದೊರೆಯುತ್ತಾನಲ್ಲಾ ಎಂದು ನುಡಿಯುವದಾಗಿ ಹೋದಲ್ಲಿ ಅದರಿಂದುಂಟಾಗಬಹುದಾದ ಬಾಧಕಗಳಿಗಾಗಿ ಎಲ್ಲರೂ ವಿಷಾದಿಸಬೇಕಾಗಿರುವದು.

A RELIGIOUS CATECHISM

ಕಳೆದ ಡಿಸಂಬರ್ ತಿಂಗಳ ಅವಿಬಾಗದಲ್ಲಿ ಈ ನಗರಿಗೆ ಬಂದು ಸಂಸ್ಕೃತ ಆಂಧ್ರ ದ್ರಾವಿಡ ಭಾಷೆಗಳಲ್ಲಿ ನಾನಾ ವಿಷಯಗಳಂ ಕುರಿತು ಪ್ರಸಂಗಿಸಿ, ಸನ್ಮಾರ್ಗ ಇಲ್ಲಿನ ಪ್ರಜೆಗಳ ಮನಸ್ಸನ್ನಾಕರ್ಷಿಸಿ, ಸ್ವಾಧೀನಪಡಿಸಿಕೊಂಡು ಹೋದ ಕವಳೆ ನಿವಾಸಿಯಾದ ಶ್ರೀನಿವಾಸ ಭಾಷ್ಯಾಚಾರ್ಯನೆಂಬ ಪಂಡಿತರು ಪ್ರಾಯೇಣ ಇಲ್ಲಿನವರೆಲ್ಲರೂ ಅರಿತಿರಬಹುದಷ್ಟೆ. ಇವರು ಮರಳಿ ಈಪೂರಿಗೆ ಬಂದಿರುವರೆಂಬದು ಕೇಳಲಿಕ್ಕೆ ನಾವು ಬಹಳ ಸಂತೋಷಿಸುವೆವು. ಈ ಪಂಡಿತರಿಂದ ಈಚೆಗೆ ಇಂಗ್ಲಿಷ್ ಭಾಷೆಯಲ್ಲಿ ರಚಿಸಲ್ಪಟ್ಟ ವಿಶಿಷ್ಟಾದ್ವೈತ ಸಿದ್ಧಾಂತ ಪ್ರಶ್ನೋತ್ತರಾವಳಿ ಎಂಬ ಒಂದು ಸಣ್ಣ ಗ್ರಂಥವು ನಮಗೆ ಕಳುಹಿಸಲ್ಪಡಲು ಅದು ನಾವು ಉತ್ಸಾಹದಿಂದನೆ ಬರಮಾಡಿಕೊಂಡೆವು. ಪ್ರಸಕ್ತ ಗ್ರಂಥವು ಶ್ರೀರಾಮಾನುಜಾಚಾರ್ಯರವರ ಕಾಲಾನಂತರ ಗರುಡವಾಹನ ಪಂಡಿತರಿಂದ ವಿರಚಿತವಾಗಿರುವ ದಿವ್ಯಸೂರಿ ಚರಿತ ಶ್ರೀಭಾಷ್ಯ ಮೊದಲಾದ ಶ್ರೇಷ್ಠಗ್ರಂಥಗಳ ಆಧಾರದಮೇಲೆ ರಚಿಸಲ್ಪಟ್ಟ ಹಿಂದರಕ್ಕವರಿಗೆ ಶುದ್ಧವಾದ ಸಿದ್ಧಾಂತ ಜ್ಞಾನವನ್ನುಂಟುಮಾಡತಕ್ಕದ್ದಾಗಿರುತಿದೆ. ಈ ಗ್ರಂಥಕರ್ತರು ಸ್ವತಃ ಪಂಡಿತರಾಗಿಯೂ ವಿಶಿಷ್ಟಾದ್ವೈತ ಸಿದ್ಧಾಂತಾನುಯಾಯಿಯಾಗಿಯೂ, ಸದರೀ ಭಾಷ್ಯವು ಕ್ರಮವಾಗಿ ರಮ್ಯ ಆಚಾರ್ಯ ಮುಖೇನ ತಿಳಿದುಕೊಂಡವರಾಗಿಯೂ ಇರುವದರಿಂದ ಇವರ ಬರವಣಿಗೆಯು ಪ್ರಾಯಶಃ ನಿರಾಕ್ಷೇಪಣೀಯವಾದದ್ದಾಗಿಯೇ ಇರುವದು. ತತ್ರಾಪಿ ಇವರ ಜ್ಞಾನವು ಲೌಕಿಕ ಸಂಬಂಧದಿಂದ ಪ್ರಕೃತ ಜನಗಳ ಸ್ಥಿತಿಗಳಿಗೆ ಅನುರೂಪವಾಗಿ ಅರಿವಿಂದದನ್ನಕುಂತಿಸಲ್ಪಡತಕ್ಕದ್ದಾಗಿರುತಿದೆ ಯಾಗಿ ಅಲ್ಲಿಯಲ್ಲಿ ತಿಳಿಸಲ್ಪಡುವ ಇವರ ಅಭಿಪ್ರಾಯಗಳು ಸಕಲಜನ ಸಮ್ಮತವಾದವಾಗಿರುವವು.

RESOLUTIONS PASSED AT THE THIRD INDIAN NATIONAL CONGRESS

ಕಳೆದ ಡಿಸಂಬರ್ ತಿಂಗಳ ೨೭, ೨೮, ೨೯ ಮತ್ತು ೩೦ನೇ ತಾರೀಖುಗಳಲ್ಲಿ ಮದರಾಸಿನೊಳು ಶೇರಿ ಸಭೆಯು ಸೇರಿದ ಇಂಡಿಯನ್ ನ್ಯಾಶನಲ್ ಕಾಂಗ್ರೆಸ್ಸೆಂಬ ಸಭೆಯಲ್ಲಿ ಮಾಡಲ್ಪಟ್ಟ ನಿರ್ಣಯಗಳು ಯಾವವೆಂದರೆ —

೧ ಈ ಸಭೆಯನ್ನು ಸೇರಿಸಬೇಕಾದ ಮತ್ತು ಅದರ ಕೆಲಸಗಳನ್ನು ನಡೆಸಬೇಕಾದ ವಿಷಯದಲ್ಲಿ ಯಾವ ನಿಬಂಧನೆಗಳನ್ನು ಮಾಡಿದರೆ ಉಪಯುಕ್ತಗಳಾಗಿರುವವೋ ಅವು ಕುರಿತು ಆಲೋಚಿಸಿ ೩೦ನೇ ತಾರೀಖಿನ್ನ ಸಭೆಗೆ ವಿಜ್ಞಾಪಿಸುವ ಮಾಡುವದಕ್ಕೆಂದು ಕಮಿಟಿ ನೇಮಿಸತಕ್ಕದ್ದು.

೨ ಸನ್ ೧೮೮೫ ಮತ್ತು ೮೬ನೇ ಇಸವಿಗಳಲ್ಲಿ ಸೇರಿದ ಸಭೆಯಾಗಿ ಮಾಡಲ್ಪಟ್ಟ ೩ನೆಂಬರ್ ನಿರ್ಣಯದಲ್ಲಿ ನಿರ್ದೇಶಿಸಲ್ಪಟ್ಟಂತೆ, ಗವರ್ನರ್ ಜನರಲರ ಸಭೆಯಾ ಎಡಾಯಿಸು ಸಭೆಗಳಿಗೆ ಮತ್ತು ಇತರ ದೊಡ್ಡ ಗವರ್ನರುಗಳ ಮಂತ್ರಾಲೋಚಕ ಸಭೆಗಳಲ್ಲಿ ವೃದ್ಧಿಪಡಿಸಿ ನಿರ್ಮಾಣ ಮಾಡಬೇಕಾದ ವಿಷಯದಲ್ಲಿಂಟಾಗಿರುವ ಆವಶ್ಯಕತೆಯನ್ನು, ಈ ಸಭೆಯು ಮರಳಿ ದೃಢೀಕರಿಸಿ ಹೇಳುವದಲ್ಲದೆ ಮುಂಬರುವ ದ ಬಂದಿಸಿದ ಮಾಡುವ ವಿಷಯದಲ್ಲಿ ಗವರ್ನ್‌ಮೆಂಟಿನವರು ಇನ್ನು ಕಾಲವಿಳಂಬ ಮಾಡಲಾರರೆಂದು ಈ ಸಭಿಕರು ಆತುರದಿಂದ ನಿರೀಕ್ಷಿಸುತ್ತಿರುವರು.

೩ ಒಬ್ಬ ಆಫೀಸರನಲ್ಲಿ ಸೇರಿರುವ ಅಧಿಕಾರಗಳು ಸೇರಿ ಇರುವಂತೆ, ಅಂದರೆ ರೆವಿನ್ಯೂ ಮತ್ತು ಜುಡಿಶಲ್ ಅಧಿಕಾರಗಳನ್ನು ಸಂಪೂರ್ಣವಾಗಿ ಪ್ರತ್ಯೇಕಿಸಬೇಕಾದ್ದು ಅವಶ್ಯಕವೆಂದು ಸಾಮಾನ್ಯವಾಗಿ ಎಲ್ಲರಿಗೂ ಉಂಟಾಗಿರುವ ಅಭಿಪ್ರಾಯವನ್ನು ಈ ಸಭಿಕರು ಮರಳಿ ತಿಳಿಸುವದಲ್ಲದೆ, ಹಾಗೆ ಮಾಡುವದರಿಂದ ಕೆಲವು ಪ್ರಾಂತಗಳಲ್ಲಿ ಜಾಸ್ತಿ ಖರ್ಚು ಉಂಟಾಗುವ ಸದರೀ ಅಧಿಕಾರಗಳನ್ನು ಇನ್ನು ಕಾಲಯಾಪನೆಮಾಡದೆ ಪ್ರತ್ಯೇಕಿಸುವದು ಗವರ್ನ್‌ಮೆಂಟಿನವರಿಗೆ ಯುಕ್ತವಾಗಿರುವದು.

೪. ಹಿಂದೆಯೂ ಸಭೆಯವರು ಮಹಾರಾಜ್ಞೀಯವರ ಹಿಂದೂದೇಶದ ಪ್ರಜೆಗಳ ರಾಜಭಕ್ತಿಯನ್ನಾಲೋಚಿಸಿ, ಮಹಾರಾಜ್ಞಿಯವರಿಂದ ಕೊಡಲ್ಪಟ್ಟಿರುವ ಇಷ್ಟು ಧರ್ಮ ಅನುವಿನ್ಯರತಕ್ಕದ್ದು, ಮೇಲ್ಪಟ್ಟ ದರಗತಿ ಮಿಲಿಟರಿ ಅಧಿಕಾರಗಳು ಈ ದೇಶದ ನೇಟಿವ್‌ಗಳಿಗೆ ಕೊಡಲ್ಪಡತಕ್ಕದ್ದು, ಈದೇಶದಲ್ಲಿ ಮಿಲಿಟರಿ ಕಾಲೇಜುಗಳನ್ನು ಏರ್ಪಡಿಸಿ, ಸ್ವಯಂಸೇವಕ ಎಂಬ ಶಾಸನದಲ್ಲಿ ವಿಧಿಸಲ್ಪಟ್ಟಿರುವಂತೆ, ಇಂಡ್ಯಾದೇಶದ ಸೈನ್ಯದ ಆಫೀಸರ್‌ಗಳಾಗುವದಕ್ಕೆ ತಕ್ಕಂತೆ ಅವರಿಗೆ ಶಸ್ತ್ರವಿದ್ಯೆಯಂ ಕಲಿಸತಕ್ಕದ್ದು, ಇದು ಆವಶ್ಯಕವಾದದೆಂದು ಈ ಸಭೆಯವರು ಅಭಿಪ್ರಾಯಪಡುತ್ತಾರೆ.

೫ ಯೂರೋಪ್ ದೇಶದಲ್ಲುಂಟಾಗಿರುವ ಗಲಾಟೆಯನ್ನು, ಯಾವದಾದರು ಬಲವಾದ ಸಂಕಟಗಳುಂಟಾಗುವ ಪಕ್ಷದಲ್ಲಿ, ಈದೇಶೀಯರು ರಾಯಭಾಗಿರುವ ಪಕ್ಷಕ್ಕೆ ಗ್ರೇಟ್ ಬ್ರಿಟನ್ ಸಂಸ್ಥಾನಕ್ಕೆ ಮಾಡುವದಕ್ಕೆ ಸಾಧ್ಯವಾಗಿರುವ ವಿಶೇಷಸಹಾಯಗಳನ್ನು ಯೋಚಿಸಿ, ತಮಗೆ ಯುಕ್ತವಾಗಿ ತೋರುವ ನಿಬಂಧನೆಗಳಿಗೂ ನಿರ್ಬಂಧಗಳಿಗೂ ಒಳಪಟ್ಟು, ಸಂಕಟಕಾಲಗಳಲ್ಲಿ ಗವರ್ನ್‌ಮೆಂಟಿನವರಿಗೆ ಸಹಾಯಮಾಡುವದಕ್ಕೆ ಅನುಕೂಲವಾಗಿರುವಂತೆ, ಇಂಡ್ಯಾದೇಶೀಯರಿಗೆ ವಾಲಂಟಿಯರ್ ಪದ್ಧತಿಯನ್ನು ಏರ್ಪಡಿಸಬೇಕೆಂದು ಈ ಸಭೆಯವರು ಗವರ್ನ್‌ಮೆಂಟಿನವರನ್ನು ವಿನಯಪೂರ್ವಕವಾಗಿ ಕೇಳಿಕೊಳ್ಳುತ್ತಾರೆ.

೬ ಇನ್‌ಕಮ್‌ಟ್ಯಾಕ್ಸ್ ಎಂಬ ಆದಾಯದ ತೆರಿಗೆಯ ಕ್ರಮವು, ಮುಖ್ಯವಾಗಿ ೫೦೦ ರೂಪಾಯಿಗಳಿಗೆ ಒಳಪಟ್ಟ ಆದಾಯದ ವಿಷಯದಲ್ಲಿ, ಕೇವಲ ಅತೃಪ್ತಿಕರವಾಗಿರುವದರಿಂದ ತೆರಿಗೆಗೆ ಗುರಿಯಾಗಬೇಕಾದ ಮೊಬಲಗು ೧೦೦೦ ರೂಪಾಯಿಗಳಿಗೆ ಹೆಚ್ಚಿಸಲ್ಪಡಬೇಕಾದ್ದು ಮುಖ್ಯವಾದದ್ದೆಂದು ಈ ಸಭೆಯವರು ಅಭಿಪ್ರಾಯಪಡುತ್ತಾರೆ. ಹಾಗಮಾಡುವದರಿಂದ ಸರ್ಕಾರ ಆದಾಯದಲ್ಲಿ ಉಂಟಾಗುವ ಕೊರತೆಯನ್ನು ಅರ್ಥವಿಧಾಯಕವಾದ ಇತರ ಸುಂಕಗಳಿಂದ, ಈಗ ಇರುವ ಸಂಸ್ಕಾರ ವೆಚ್ಚಗಳನ್ನು ಕಡಮೆ ಮಾಡುವದರ ಮೂಲಕ ಬಿಟ್ಟಿರುವಂತೆ ಕ್ರಮವು, ಅದು ಅಶಕ್ಯವಾಗಿ ತೋರುವ ಪಕ್ಷಕ್ಕೆ ನ್ಯಾಯವಾದ ಬಗೆಗಳಿಗೆ ಆಮದ ತೆರಿಗೆ ಮೊದಲ್ಮಾಡುವದರ ಮೂಲಕ ಪೂರ್ತಿಮಾಡಿಕೊಳ್ಳಬೇಕು.

೭ ಜನಗಳ ದಾರಿದ್ರ್ಯಸ್ಥಿತಿಯನ್ನಾಲೋಚಿಸಿ, ದೇಶದ ಸ್ಥಿತಿಗೆ ಅನುಗುಣವಾದ ಕಸಬುಗಳ ವಿದ್ಯೆಗಳಂ ಕಲಿಸುವ ಪದ್ಧತಿಯು ವೃದ್ಧಿಪಡಿಸಬೇಕೆಂದಲೂ, ಸರ್ಕಾರಿ ಕೆಲಸಗಳಿಗೆ ಸ್ವದೇಶ ತಯಾರಿ ಪದಾರ್ಥಗಳನ್ನು ಕೊಳ್ಳಬೇಕಾದ ವಿಷಯದಲ್ಲಿ ಈಗ ಜಾರಿಯಲ್ಲಿರುವ ಹುಕುಮುಗಳನ್ನು ಬುದ್ಧಿವಾಗಿ ಆಚರಣೆಗೆ ತರುವದರ ಮೂಲಕ ಸ್ವದೇಶದ ಕಸಬುಗಳಿಗೆ ಪ್ರೋತ್ಸಾಹವನ್ನುಂಟುಮಾಡಬೇಕೆಂತಲೂ, ಈಗ ಇರ ವದಕ್ಕಿಂತಲೂ ಅಧಿಕವಾಗಿ ಸಮರ್ಥರಾದ ದೇಶದ ಕಸಬುದಾರರಿಗೆ ಕೆಲಸಗಳು ಕೊಡತಕ್ಕದ್ದೆಂತಲೂ ಗವರ್ನ್‌ಮೆಂಟಿನವರ ಅವಧಾನಕ್ಕೆ ತರಬೇಕಾದ್ದು ಅವಶ್ಯಕವಾಗಿರುತಿದೆ.

೮ ಜನಗಳ ರಾಜಭಕ್ತಿಯನ್ನೂ, ಈಗ ಜಾರಿಯೊಳಿರುವ ಆರ್ಮ್ಸ್ ಆಕ್ಟಿನ (೧೮೭೮ನೇ ಇಸವಿ ೧೧ನೇ ನಂಬರ್ ಆಕ್ಟು) ದೆಸೆಯಿಂದುಂಟಾಗಿರುವ ಕಷ್ಟಗಳನ್ನೂ, ಈ ದೇಶದ ಜನಗಳಿಗೆ ಅನ್ಯಾಯವಾಗಿ ಉಂಟುಮಾಡಲ್ಪಟ್ಟಿರುವ ಅವಮಾನವನ್ನೂ ಆಲೋಚಿಸಿ, ಸದರೀ ಆಕ್ಟಿನ ಆರನೇ ಅಧ್ಯಾಯವನ್ನು, ಆವಶ್ಯಕತೆ ಕಂಡುಬಂದರೆ, ಅದರ ಇತರ ಭಾಗಗಳನ್ನು ಬದಲಾಯಿಸಿ, ಇಂಡ್ಯಾ ಗವರ್ನ್‌ಮೆಂಟಿನವರಿಂದ, ಅಥವಾ ಅವರಿಂದ ಯಾವ ಪದದ ಸ್ಥಳಿಕ ಗವರ್ನ್‌ಮೆಂಟಿನವರಿಂದ, ಮಂಜೂರಾದ ಲೈಸನ್ಸುಗಳಿಂದ ಅಥವಾ ತರಗತಿಗೆ ಸೇರಿದವನೆಂಬ ಕಾರಣದ ಮೇಲೆ ವ್ಯಕ್ತಿಗಳಿಗೆ ವಿನಾಯಿತಿ ಕೊಡಲ್ಪಟ್ಟವರನ್ನುಳಿದು, ಸಾಮಾನ್ಯವಾಗಿ ಎಲ್ಲರೂ ಆಯುಧಗಳು ಧರಿಸುವದಕ್ಕೆ ಅವಕಾಶವನ್ನುಂಟುಮಾಡಬೇಕೆಂದು ಗವರ್ನ್‌ಮೆಂಟಿನವರಂ ಕೇಳಿಕೊಳ್ಳತಕ್ಕದ್ದು.

೯. ೧೮೮೬ ನಿರ್ಣಯವನ್ನನುಸರಿಸಿ ಮೊದಲು ಮಾಡಲ್ಪಟ್ಟ ಕಮಿಟಿಯವರಿಂದ ಮಸೂದೆಯಾಗಿ ಮಾಡಲ್ಪಟ್ಟ ನಿಬಂಧನೆಗಳನ್ನು ಮುಂದಿನ ವರ್ಷದ ಸಭೆ ಸೇರುವವರಿಗೆ ನಿಲ್ಲಿಸಿಡತಕ್ಕದ್ದು, ಮತ್ತು ಅದರ ಪ್ರತಿಗಳನ್ನು ಪ್ರತಿಯೊಂದು ಕಾಂಗ್ರೆಸ್ ಕಮಿಟಿಗಳಿಗೆಲ್ಲ ಕಳುಹಿಸಿ, ಮುಂದಿನವರ್ಷದಲ್ಲಿ, ಅವರಿಗೆ ಸಾಧ್ಯವಾಗಿಯೂ ಆವಶ್ಯಕವಾಗಿಯೂ ತೋರುವ ಬದಲಾವಣೆಗಳೊಡನೆ ಸದರೀ ನಿಬಂಧನೆಗಳಿಗೆ ಅನುಗುಣವಾಗಿ ನಡೆದುಕೊಳ್ಳುವದಲ್ಲದೆ, ಅದರಮೇಲೆ ಅವರಿಗೆ ಯುಕ್ತವಾಗಿ ತೋರುವ ಸಲಹೆಗಳೊಡನೆ ಮುಂದಿನ ಮೀಟಿಂಗಿಗೆ ರಿಪೋರ್ಟ್ ಮಾಡತಕ್ಕದ್ದು.

೧೦ ನಾಲ್ಕನೇದಾಗಿ ಈ ಸಭೆಯು, ಸನ್ ೧೮೮೮ನೇ ಇಸವಿ ಡಿಸಂಬರ್ ೨೬ನೇ ತಾರೀಖಿನಲ್ಲಿ ಅಲಹಾಬಾದಿನೊಳು ಸೇರತಕ್ಕದ್ದು.

೧೧ ಈ ನಿರ್ಣಯಗಳ ನಕಲನ್ನು ಮಂತ್ರಾಲೋಚಕ ಸಮಾಜದೊಳಗಣ ವೈಸರಾಯ್ ಸಾಹೇಬರವರಿಗೆ ಕಳುಹಿಸಿ, ಅವರಲ್ಲಿ ಕಂಡ ನಿರ್ಣಯಗಳನ್ನೆಲ್ಲ ಮಹಾರಾಜ್ಞೀಯವರ ಇಂಡಿಯಾ ಸ್ಟೇಟ್ ಸೆಕ್ರೆಟರಿಯವರ ಮುಂದೆ ಇಡಬೇಕೆಂತಲೂ, ವೈಸರಾಯಿಯವರು ಸಹ ತಮ್ಮ ಮಂತ್ರಾಲೋಚಕ ಸಭೆಯ ಮೆಂಬರ್‌ಗಳೊಡನೆ ಆಲೋಚಿಸಿ, ಅನುಕೂಲವಾಗಿ ವ್ಯವಸ್ಥೆಮಾಡಬೇಕೆಂತಲೂ ಅವರನ್ನು ವಿನಯಪೂರ್ವಕವಾಗಿ ಪ್ರಾರ್ಥಿಸತಕ್ಕದ್ದು.

Occasional Notes.
ನೈಮಿತ್ತಿಕ ವಿಷಯನ್ಯಾಸ.

A liberal subscription.—ಹೈದರಾಬಾದ ನಿಜಾಮರವರು, ಬಾಗದಾದಿನಲ್ಲಿ ಸ್ಥಾಪಿಸಲ್ಪಟ್ಟಿರುವ ಮಹಮ್ಮದ್ ಕಾಲೇಜಿಗೆ ನಾಲ್ಕು ಸಾವಿರ ರೂಪಾಯಿಗಳು ಚಂದಾ ಮಾಡಿರುತ್ತಾರೆ.

The Bombay High Court.—ಮಹಾರಾಜ್ಞಿಯವರು, ಮುಂಬಯಿ ಹೈಕೋರ್ಟಿನಲ್ಲಿ ಒಂದು ಜಸ್ಟೀಸ್ ಕೆಲಸವನು, ಬಹಳ ದಿವಸದಿಂದ ತೆರಿತಿರುವ ಮಿ॥ ಜಸ್ಟಿಸ್ ಪಾರ್ಸನ್ ಯೆಂಬವರನ್ನು ಖಾಯಂ ಕೆಲಸದಲ್ಲಿ ನೇಮಿಸಿರುತ್ತಾರೆ.

The Ameer of Cabul.—ಅಮೀರರವರು ಕಾಬೂಲ್ ಪಟ್ಟಣ ಬಹಳ ಚಳಿಯಾಗಿರುವುದು ಯೋಚಿಸಿ ಅದಕ್ಕಿಂತಲು ಶಾಂತವಾದ ಹವಾ ಉಳ್ಳ ಜಲಾಲಬಾದಿಗೆ ಹೋಗುವರಾಗಿದಾರೆಂದು ತಿಳಿಯಬರುತಿದೆ.

Ayubkhan's disposal.—ಅಯೂಬಖಾನನನ್ನು ...

Purchase of diamonds.—ಹೈದರಾಬಾದ ನಿಜಾಮರವರು ...

Lady Dufferin Fund.—ಮೈಸೂರು ...

A railway to be opened.—...

The Surat Municipality.—ಸುರತ್ತಿನಲ್ಲಿ ...

Death rate in Bombay.—...

Cholera at Trichinopoly.—...

LOCAL AND PROVINCIAL NEWS.
ಒಳದೇಶ ಮತ್ತು ಪ್ರಾಂತ್ಯ ವರ್ತಮಾನಗಳು.

University Examination Results.—...

M. S. Examination.—...

The Resident's Treasury.—...

Robbing the Ambu...—...

Smallpox.—...

Dowry.—...

Obituary.—...

Allay.—...

Regulation II of 1887.—...

Scholarships for Pallegars.—...

Sea-voyage purification.—...

NEWS LETTERS.
ವೃತ್ತಾಂತಪತ್ರ.

...

ಪೇಟೆಯಲ್ಲಿರುವ ಬಸವಣ್ಣನ ದೇವಸ್ಥಾನದಲ್ಲಿ ಇದರ ಕೆಳಗೆ ಕಂಡ ದೊಡ್ಡ ಮನುಷ್ಯರು ೧೮೮೭ನೇ ಇಸವಿ ನವಂಬರ್ ತಾರೀಖು ೨೮ನೇ ಪ್ರಾತಃಕಾಲ ೭ ಘಂಟೇ ಆಗಾಯಿತು ೧೦ ಘಂಟೇ ವರಿವಿಗೆ ಸಭೆ ಸೇರಿ ಮಾಡಿದ ಪ್ರೊಸೀಡಿಂಗ್ಸ್.

ಹಾಜರಿದ್ದ ಸಭಿಕರು.

ಮು|| ರಾ|| ಅಮಲ್ದಾರ್ ಲಕ್ಷ್ಮೀನರಾಯರವರು, ಸುಂಕದ ಶ್ರೀಕಂಠರಾಯರವರು, ಶಿರಸ್ತೇದಾರ್ ಸುಬ್ಬರಾಯರು, ಕೃಷ್ಣಮೂರ್ತ್ಯಾಚಾರ್ಯರವರು, ಹಡೆಮುನಿಬ ಲಕ್ಷ್ಮೀನಾರಣಪ್ಪನವರು, ಸಾ|| ರಂಗಣ್ಣನವರು, ದೇವಾಂಗದ ಚಿಕ್ಕಆದೆಪ್ಪನವರು, ಪಟೇಲ್ ತಿಮ್ಮಯ್ಯನವರು, ಗು. ರಾಘವೇಂದ್ರ ರಾಯರವರು, ಆನೂರು ಶೀತಪ್ಪನವರು, ಗು|| ವೆಂಕಟಪತಯ್ಯನವರು.

೧. ಸಭಿಕರಪೈಕಿ ಸುಂಕದ ಶ್ರೀಕಂಠರಾಯರವರು ಸಭಾಧ್ಯಕ್ಷರಾಗಿಯೂ, ಮು|| ಅ. ಗೋಪಾಲಾಚಾರ್ಯರವರು ಸಭಾ ಸೆಕ್ರಟೆರಿಯಾಗಿಯೂ ಇರಬೇಕೆಂದು ಸಭಿಕರು ಕೋರಿದ ಪ್ರಕಾರ ಸದರೀಯವರು ಅಂಗೀಕರಿಸಿದರು.

೨. ಈ ಕಸಬೆಯಲ್ಲಿರುವ ಶ್ರೀ ವೇಣುಗೋಪಾಲ ಸ್ವಾಮಿಯವರಿಗೆ ಇದುವರಿವಿಗೂ ನಡೆಯುತಲಿರುವ ಉತ್ಸವಗಳನ್ನು ಬಿಜಯಮಾಡಿಸುವದಕ್ಕಾಗಿ ಬರುತಲಿರುವ ಬಸ್ತರಿಗೆ ದೇವಸ್ಥಾನದಲ್ಲಿ ವೇತನ ವಗೈರೆ ಕೊಡುವದಕ್ಕೆ ತಸ್ತಿಕ್‌ನಲ್ಲಿ ಅವಕಾಶವಿಲ್ಲದೆ ಘಟ್ಟಿ ನಿರ್ಬಂಧದಿಂದಲೇ ನಡೆಯುತಲಿರುವದರಿಂದ ಉದ್ದಿಷ್ಟಕಾಲಕ್ಕೆ ಉತ್ಸವಗಳು ನಡೆಯುವದಿಲ್ಲವಾಗಿ ಉತ್ಸವ ಪ್ರವರ್ತಕರಿಗೂ ದರ್ಶನ ಮಾಡತಕ್ಕವರಿಗೂ ಸಾವಕಾಶದಿಂದ ಪ್ರಂಟಾಗತಕ್ಕ ಅಸಮಾಧಾನವನ್ನು ತಪ್ಪಿಸುವದಕ್ಕಾಗಿ ಬೆಂಗಳೂರಲ್ಲಿರುವ ನಮೂನೆ ಉತ್ಸವದ ಘಡಿಯನ್ನು ಮಾಡಿಸಿದಲ್ಲಿ ಉತ್ಸವಗಳು ಕಾಲಕ್ಕೆ ಸರಿಯಾಗಿ ನಡಯಬಹುದು. ಬೆಂಗಳೂರಲ್ಲಿಯೇ ಉತ್ಸವದ ಘಡಿಯನ್ನು ತಯಾರ್ ಮಾಡಿಸುವದಕ್ಕಾಗಿ ಏರ್ಪಾಡು ಮಾಡಬೇಕೆಂದು ಸಭಾ ಸೆಕ್ರಟರಿಯವರು ಪ್ರಸ್ತಾಪಿಸಿದ್ದಕ್ಕೆ ಸಭಿಕರೆಲ್ಲರೂ ಸದರೀ ಏರ್ಪಾಡು ಆವಶ್ಯಕವಾಗಿ ಮಾಡತಕ್ಕದ್ದೆಂದು ಐಕಕಂಠ್ಯದೊಡನೆ ಒಪ್ಪಿದರು

೩. ಸದರೀ ಘಡಿಯಲಾಗವಡು ಬೆಂಗಳೂರಲ್ಲಿ ಮರ ಕೆಲಸದವರು ಬರೆಸಿರುವ ಪಟ್ಟಿಯಂತೆ ಮೇಲಿನ ಚೋಳ ಚಪ್ಪರ ವಗೈರೆಗಳಿಗೆ ೭೫೦ ರೂಪಾಯಿಗಳು ತಗಲುವದರಿಂದ ಸದರೀ ಮೊಬಲಗು ಚಂದಾ ಮೂಲಕವೇ ಜಮೆಯಾಗಿ ಕೆಲಸ ನೆರವೇರಬೇಕಾಗಿರುವದರಿಂದ ಒಂದು ಚಂದಾಪಟ್ಟಿ ತಯಾರಾಗತಕ್ಕದ್ದು.

೪. ಚಂದಾಪಟ್ಟಿಯಲ್ಲಿ ನಮೂದಾಗುವ ಮೊಬಲಗಿನ ವಸೂಲೀ ವಿಷಯದಲ್ಲಿಯೂ ಚಂದಾ ಮಾಡಿಸುವ ವಿಷಯದಲ್ಲಿಯೂ ಮಹಾರಾಜಶ್ರೀ ಅ|| ಗೋಪಾಲಾಚಾರ್ಯರೂ ಪಟೇಲ್ ತಿಮ್ಮಯ್ಯನವರೂ, ದೇ. ಚಿಕ್ಕ ಆದೆಪ್ಪನವರೂ ಕುಮ್ಮಕ್ಕು ಮಾಡತಕ್ಕದ್ದು.

೫. ವಸೂಲಾದ ಮೊಬಲಗನ್ನು ವಾರಕ್ಕೆ ಒಂದು ದಫಾ ಗವರ್ನಮೆಂಟ್ ಸೇವಿಂಗ್ಸ್ ಬ್ಯಾಂಕಿನಲ್ಲಿಟ್ಟು ಅದರ ಜಮಾಖರ್ಚನ್ನು ಇಡುವಬಗ್ಯೆ ಮು|| ರಾ|| ಶ್ರೀಕಂಠರಾಯರು ಟ್ರಜರರಾಗಿರತಕ್ಕದ್ದು.

೬. ಮೊಬಲಗು ಜಮೆ ಆದನಂತರ ಬೆಂಗಳೂರಿಂದ ಯೋಗ್ಯನಾದ ಮರ ಕೆಲಸದವನನ್ನು ಕರೆಯಿಸಿ ಕೆಲಸ ಪೂರೈಸಿಕೊಡುವ ಕಾಲ ವಗೈರೆ ನಮೂದಿನಿಂದ ಒಂದು ಕರಾರ್ ಅವರಿಂದ ಬರೆಸಿ ತೆಗದುಕೊಳ್ಳತಕ್ಕದ್ದು.

೭. ದೇವಸ್ಥಾನದಲ್ಲಿ ಯಾವಾಗಲಾದರೂ ನೈಮಿತ್ತಿಕವಾಗಿ ಒಂದು ಉತ್ಸವ ಯಾ ವಾಹನ ಯಾ ಇತರವಾದ ಕೆಲಸಗಳು ನಡೆಯಬೇಕಾದರೆ ತಸ್ತೀಕಿನ ಸಹಾಯವಿಲ್ಲವಾಗಿ ತತ್ಕಾಲದಲ್ಲಿ ಚಂದಾಮೂಲಕ ಮೊಬಲಗು ಶೇಖರ ಮಾಡಬೇಕಾದರೆ ಕೇವಲ ಅಸಾಧ್ಯವಾಗಿರುವದರಿಂದ ಪ್ರತಿ ಮಾಹೆಯಲ್ಲಿಯೂ ಕಾಲಾಕಾಲಗೆ ಕಮ್ಮಿ ಇಲ್ಲದೆಯೂ, ಹುಂಡಾಣಿಗೆ ಮೇಲ್ಪಡದೆಯೂ ದೇವರಿಗಾಗಿ ಕೊಡುವಂತೆ ಕೆಲವರು ಉದ್ಯೋಗಸ್ಥರು ಮತ್ತು ಉಪವತ್ತಿಯುಳ್ಳ ಕೆಲವರು ದೊಡ್ಡಮನುಷ್ಯರು ಸಹ ಒಪ್ಪಿರುತ್ತಾರೆಯಾಗಿ ಇದಕ್ಕೆ ಒಂದು ಪಟ್ಟಿ ತಯಾರ್ಮಾಡಿ ಪ್ರತಿಮಾಹೆಯಲ್ಲಿಯೂ ವಸೂಲಾದ ಮೊಬಲಗು ದೇವರ ಹೆಸರಿನಲ್ಲಿ ಗವರ್ನಮೆಂಟ್ ಸೇವಿಂಗ್ಸ್ ಬ್ಯಾಂಕಿನಲ್ಲಿಟ್ಟು, ಒಂದು ಸಾಲ್ ಪೂರ್ತಿಯಾದನಂತರ ಅದುವರಿವಿಗೆ ಜಮೆಯಾಗಿರುವ ಮೊಬಲಗಿನ ವಿಲೇವಾರೀಬಗ್ಯೆ ಮೀಟಿಂಗ್‌ಮಾಡಿ ಇಷ್ಟಾರ್ಥವಾಗುವ ರೀತಿ ವಿನಿಯೋಗಿಸತಕ್ಕದ್ದು. ಈ ಮೊಬಲಗಿನ ಜಮಾಖರ್ಚ ವಗೈರೆ ಲೆಕ್ಕವಿಡಲು ಮೈಸೂರು ಕೃಷ್ಣರಾಯರವರು ಸಹ ಟ್ರಜರರಾಗಿರತಕ್ಕದ್ದು.

೮. ಈ ಪ್ರೊಸೀಡಿಂಗ್ಸ್ ನಕಲಿಗಳನ್ನು ಘಾಯಿಷ್ಮಾಡಲು ವೃತ್ತಾಂತ ಪತ್ರಿಕೆಗಳಿಗೂ ಮತ್ತು ದಾಖಲೇಬಗ್ಯೆ ದೇವಸ್ಥಾನದ ಧಾರಪತ್ತೇಗಾರರ ಮಾರ್ಫತ್ತು ತಾಲ್ಲೂಕು ಟ್ರಜರೀಗೂ ರವಾನಿಸತಕ್ಕದ್ದು.

ಈಮೇರೆ ಮೀಟಿಂಗ್ ನಡೆದು ಸಭೆ ಬರಖಾಸ್ತಾಯಿತು.

(ಚೈರ್ಮನ್)
ಅ|| ಗೋಪಾಲಾಚಾರ್,
ಸಭಾ ಸೆಕ್ರಟರಿ.

CORRESPONDENCE

ಅಯ್ಯಾ,—ವೃತ್ತಾಂತ ಪತ್ರಿಕೆ ಯೆಂಬ ಒಂದು ಕನ್ನಡ ಪತ್ರಿಕೆಯು ಇತರ ಪತ್ರಿಕೆಗಳಂತೆ ತಮಗೆ ಬರುತಿದೆಯೋ ಇಲ್ಲವೋ ನಾನರಿಯೆನು. ಬಹುಶಃ ಪದ್ಧತಿಯ ಪ್ರಕಾರ ಬರಬಹುದೆಂದೇ ಎಣಿಸುತ್ತೇನೆ. ಮಾಹೇ ಮಜಕೂರು ೧೦ನೇ ತಾರೀಖಿನ ಸದರೀ ಪತ್ರಿಕೆಯಲ್ಲಿ, ದೇವಾಂಗದವರು ವಗೈರೇರು ತಾವೇ ಬ್ರಾಹ್ಮಣರೆಂಬದಾಗಿಯೂ, ಇತರರಲ್ಲವೆಂತಲೂ, ತಿಳಿಸುವಂತೆ ಪ್ರಕಟಿಸಲ್ಪಟ್ಟಿರುತಿದೆ. ಪ್ರಪಂಚದಲ್ಲಿ ನಿಜಸ್ಥರೆಂದು ಸ್ವತಃ ಹೇಳಿಕೊಳ್ಳುವಂತೆ ಯೆಲ್ಲರೂ ಬ್ರಾಹ್ಮಣರೆಂದು ಹೇಳಿಕೊಳ್ಳುವದರಿಂದ ಬ್ರಾಹ್ಮಣ್ಯ ಶಬ್ದಕ್ಕೆ ಮತ್ತಷ್ಟು ಗೌರವವಂ ಕಲ್ಪಿಸಿದಂತಾಯಿತು. ಯೂರೋಪಿಯರ್ನರಾದ ಕರ್ನಲ್ ಆಲಿಕಾಟಿಯವರೂ, ನಾನಾ ಜಾತಿಯವರು ಸೇರಿರತಕ್ಕ ಬ್ರಹ್ಮ ಸಮಾಜದವರು ಸಹ ಇದೇರೀತಿ ಬ್ರಾಹ್ಮಣಶಬ್ದವಂ ಗೌರವಿಸುತಲಿದಾರೆ. ಬೇರೆ ಕಂಡ ಪತ್ರಿಕಾ ಲೇಖಕರು ಜಾತ್ಯಾ ಕ್ರಿಶ್ಚಿಯನ್ನರಾದಾಗ್ಯೂ ಕಡೆಗೆ ಬ್ರಾಹ್ಮಣ ಪದಕ್ಕೇ ಮಹಿಮೆಯನ್ನಾರೋಪಿಸಿದಾರೆ. ಇದೇರೀತಿ ಕ್ರಿಶ್ಚಿಯನ್ ಶಬ್ದವು ಯಾಕೆ ಗೌರವಿಸಲ್ಪಡುವದಿಲ್ಲವು? ಪೇದಿಬೇದಿಗಳಲ್ಲಿ ಸಾರಿದಾಗ್ಯೂ, ಕತ್ತಾಯಕ್ಕೆ ಕ್ರಿಸ್ತ ಪುಸ್ತಕಗಳನ್ನು ಮುಫತ್ಕೊಟ್ಟಾಗ್ಯೂ ಉದರ್ಕ ಪಟ್ಟಣಕ್ಕೆ ಹೋಗಿ ಬಂದಾಗ್ಯೂ, ದೊಡ್ಡದೊಡ್ಡ ಅಧಿಕಾರಗಳು ಪ್ರಾಪ್ತವಾದಾಗ್ಯೂ, ಜನಗಳು ಮಾತ್ರ ಕ್ರಿಶ್ಚಿಯನ್ನರಾಗಲಿಕ್ಕೆ ಯಾತಕ್ಕೆ ಒಡಂಬಡುವದಿಲ್ಲವು? ಇದರಿಂದ ನಾನು ತಿಳಕೊಂಡಿರುವದೇನಂದರೆ—ಕ್ರಿಸ್ತ, ಮಹಮದ್ ಎಂಬ ಪದಗಳು ಗತಿಸಿದವರಪೈಕಿ ಯೊಬ್ಬೊಬ್ಬರ ಹೆಸರುಗಳಾಗಿರಬಹುದೆಂಬದು. ಅಂತವರಿಂದನುಷ್ಠಿಸಲ್ಪಡುತಿದ್ದ ಮತವಾದದರಿಂದ ಅವಂ ಈಗ ಕೆಲವರು ಗೌರವಿಸಬಹುದು. ಬ್ರಹ್ಮಶಬ್ದವೂ, ಬ್ರಾಹ್ಮಣ್ಯವೂ ಸದರೀಕ್ರಮಕ್ಕೆ ಒಡಂಬಟ್ಟವಲ್ಲದ್ದರಿಂದ ಶುದ್ಧ ದೈವ ಸಂಬಂಧವಾದ ಅವುಗಳಿಗಾಗಿ ಎಲ್ಲರೂ ಗುದ್ದಾಡುತಲಿದಾರೆ.

ತಮ್ಮ ವಿಧೇಯನಾದ,
ಬ್ರಾಹ್ಮಣ್ಯಾಭಿಲಾಷಿ.

EXTRACTS.

ನ್ಯಾಷನಲ್ ಕಾಂಗ್ರೆಸ್.—ನ್ಯಾಷನಲ್ ಕಾಂಗ್ರೆಸ್ ಸಭೆಯು ಈಗ ಮೂರುವರುಷ ನಿರ್ವಿಘ್ನವಾಗಿ ಜರಗಿದ್ದನ್ನು ಕಂಡು ಒಂದು ನ್ಯಾಷನಲ್ ಫಂಡನ್ನು ಏರ್ಪಡಿಸಬಹುದೆಂದು ಒಬ್ಬ ಪತ್ರಿಕರ್ತರು ಸೂಚಿಸಿರುತ್ತಾರೆ. ನ್ಯಾಷನಲ್ ಸಭೆಯನ್ನು ಕೂಡಿಸಿ ಅದನ್ನು ಶಾಶ್ವತವಾಗಿ ನಡಿಸುವದಕ್ಕೆ ಶಕ್ತಿಯುಳ್ಳವರು ನ್ಯಾಷನಲ್ ಫಂಡು ಸೇರಿಸುವದೇನೂ ದೊಡ್ಡಕೆಲಸವಲ್ಲ. ಮತ್ತು ಇಂತಾದ್ದೊಂದು ಫಂಡು ಹಿಂದುಸ್ಥಾನಕ್ಕೆ ಅವಶ್ಯವಾಗಿದೆಂಬದು ನಿಜವು. ಆದರೆ ಇದನ್ನು ಸೇರಿಸುವ ಸಮಯವು ಬಂದೊದಗಿದೆಯೋ? ಒದಗಿದರೆ ಹ್ಯಾಗೆ ಸೇರಿಸಬೇಕು? ಈ ಎರಡು ಮಾತುಗಳು ಮುಂದಾಗಿ ವಿಚಾರಮಾಡತಕ್ಕಂಥವಾಗಿವೆ. ಇಂಥ ಸಮಯವು ಬಂದೊದಗಿದೆಯೆಂದು ಹೇಳಲಿಕ್ಕೆ ಅಡ್ಡಿ ಕಾಣಾವದಿಲ್ಲ. ಯಾಕಂದರೆ, ನ್ಯಾಷನಲ್ ಕಾಂಗ್ರೆಸ್ ಅಂದರೇನು, ಅದರಿಂದ ಉಂಟಾಗುವ ಲಾಭಗಳೇನೆಂಬದು ಸಾಮಾನ್ಯ ಜನರಿಗೆ ತಿಳದಿರುತ್ತದೆ. ಹಿಂದೂ ಮುಸಲ್ಮಾನ್ ಕ್ರಿಶ್ಚಿಯನ್ ಮೊದಲಾದ ಎಲ್ಲ ಮತದ ಜನರಿಗೂ ಈ ಸಭೆಯಲ್ಲಿ ಪೂರ್ಣ ಅಭಿಮಾನವುಂಟಾಗಿದೆ, ಮತ್ತು ಈಗಲೇ ಎಷ್ಟೋ ಉದಾರ ಗೃಹಸ್ಥರು ಒಬ್ಬೊಬ್ಬರೇ ಕಾಂಗ್ರೆಸ್ಸಿನ ಬಗ್ಯೆ ದೊಡ್ಡದೊಡ್ಡ ರಕಮುಗಳನ್ನು ಕೊಡಲುದ್ಯುಕ್ತರಾಗಿರುತ್ತಾರೆ. ಇಂಥ ಸಮಯದಲ್ಲಿ ನ್ಯಾಷನಲ್ ಫಂಡನ್ನು ಕುರಿತು ಸೂಚನೆ ಮಾಡಿದರೆ, ಎಷ್ಟೋ ಜನರು ಬಹಳ ಸಂತೋಷದಿಂದ ತಮ್ಮ ತಮ್ಮ ಶಕ್ತ್ಯನುಸಾರವಾಗಿ ಚಂದಾವನ್ನು ಕೊಡಲಿಕ್ಕೆ ಉದ್ಯುಕ್ತರಾದಾರು. ಎರಡನೇ ಮಾತು ಏನಂದರೆ, ಈ ಫಂಡು ಹ್ಯಾಗೆ ಸೇರಿಸಿಬೇಕು? ಕಾಂಗ್ರೆಸ್ಸಿಗೆ ಬರುವ ಪ್ರತಿ ಒಬ್ಬ ಡೆಲಿಗೇಟನು ೨೫ ರೂಪಾಯಿಗಳನ್ನು ಕೊಡಬೇಕೆಂದು ಮೇಲಿನ ಪತ್ರಕರ್ತರೇ ಹೇಳುತ್ತಾರೆ. ಆದರೆ ಕಾಂಗ್ರೆಸ್ಸಿನ ಕೆಲಸಕ್ಕೆ ತಮ್ಮ ತಮ್ಮ ಸ್ವಂತ ಖರ್ಚಿನಿಂದ ಎಷ್ಟೋ ಅನಾನುಕೂಲತೆಗಳನ್ನು ಸಹಿಸಿಕೊಂಡು ಬರತಕ್ಕ ಡೆಲಿಗೇಟರು ಇನ್ನೂ ಇಪ್ಪತ್ತೈದು ರೂಪಾಯಿಗಳಂ ಕೊಡಬೇಕೆಂದರೆ, ಇವರಲ್ಲಿ ಮೂರುವರುಷದಿಂದಿತ್ತಲಾಗಿ ಜನಿಸಿ ತಲೆದೋರುತ್ತಿರುವ ದೇಶಾಭಿಮಾನದ ಕೋಮಲ ಅಂಕುರಕ್ಕೆ ವಿಶೇಷ ಭಾರವಾದೀತೋ ಏನೋ ಎಂಬ ಅನುಮಾನ ಹುಟ್ಟುತ್ತದೆ. ಆದದರಿಂದ ಈ ಇಪ್ಪತ್ತೈದು ರೂಪಾಯಿಯ ಭಾರವು ಇವರೊಬ್ಬರ ಮೇಲೆ ಹಾಕುವದಕ್ಕಿಂತಲೂ ಇವರನ್ನು ಆರಿಸಿ ಕಳುಹಿಸುವವರ ಮೇಲೆ ಹಾಕಿದರೆ ಅವರು ಸಂತೋಷದಿಂದ ಕೊಡತಾರೆಂದು ಕಾಣುತ್ತದೆ. ಡೆಲಿಗೇಟರನ್ನು ಕಳುಹಿಸುವವರು ಪ್ರತಿ ಒಬ್ಬ ಡೆಲಿಗೇಟನಿಗೂ ೨೫ ಅಥವಾ ೫೦ ರೂಪಾಯಿ ಪ್ರಕಾರ ಫೀ ಕೊಡಬೇಕೆಂದು ಏರ್ಪಾಡುಮಾಡಿದರೆ ಯಾರೊಬ್ಬರ ಮೇಲೂ ಜಾಸ್ತೀಭಾರ ಬೀಳದೆ ಸುಲಭವಾಗಿಯೂ ಈಗ ಅತ್ಯಗತ್ಯವಾಗಿಯೂ ಇರುವ ನ್ಯಾಷನಲ್ ಫಂಡು ಶೀಘ್ರಕ್ಕೆ ಸೇರಬಹುದು.—ಸುವಾರ್ತೆ

ಹೈದರಾಬಾದ್ ನಿಜಾಮರವರು ಶತ್ರುರಾಜರ ಪ್ರವೇಶಕ್ಕೆ ಅವಕಾಶ ವಿಲ್ಲದಿರುವಂತೆ ಇಂಡ್ಯ ರಾಜ್ಯದ ಸರಹದ್ದುಪ್ರಾಂತ್ಯ ಬಂದೋಬಸ್ತಿಯಬಗ್ಯೆ ಅರ್ಥಸಹಾಯ ಮಾಡಿದ್ದುಮೊದಲು ಪಂಜಾಬದೇಶದ ಮುಖ್ಯಮುಖ್ಯ ನೇಟಿವ್ ಅರಸರೆಲ್ಲರು ತಮತಮಗೆ ಉಂಟಾಗಿರುವ ಸೈನಿಕ ಸಂಪತ್ತನ್ನೆಲ್ಲ ಇಂಡ್ಯಾ ಗವರ್ನಮೆಂಟಿನವರ ವಶಮಾಡುವದಾಗಿ ತಿಳಿಸಿದರು. ಪರಂತು ಲಾರ್ಡ ಡಫರಿನ್ಸಾಹೇಬರವರು ಹಾಗೆ ಸಹಾಯಮಾಡುವದಾಗಿ ಬರೆಯಲ್ಪಟ್ಟ ಕಾಗದಗಳನ್ನೆಲ್ಲ ಮರ್ಯಾದೆಯೊಡನೆ ಅಂಗೀಕರಿಸಿದರೇ ಹೊರತು ಆ ವಿಷಯದಲ್ಲಿ ಮುತ್ಸಾವಕ್ರಮವು ನಡೆಸಲಿಲ್ಲವು. ಕಳೆದ ೧೨ ಸಂವತ್ಸರಗಳ ಕಾಲದಲ್ಲಿ ಮೂರನೇ ಆವರ್ತಿ ಇಂಡ್ಯದೇಶದ ಅರಸರೂ ಪ್ರಮುಖರೂ ದೇಶದ ಸಂರಕ್ಷಕರೊಡನೆ ತಾವೂ ಪರಿಗಣಿಸಲ್ಪಡಬೇಕೆಂಬ ಆತುರವಾದ ಕೋರಿಕೆಯನ್ನು ವ್ಯಕ್ತಪಡಿಸಿದರು. ನೇಟಿವ್ ಅರಸರವರಿಂದ ಕೊಡಲ್ಪಡುವ ದ್ರವ್ಯವನ್ನು ಸರಹದ್ದು ಬಂದೋಬಸ್ತು ವಿಷಯದಲ್ಲಿ ವಿನಿಯೋಗಿಸುವದು ಇಂಡ್ಯಗವರ್ನಮೆಂಟಿನವರಿಗೆ ಯುಕ್ತವಾಗಿರಲಾರದು. ಈ ವಿಷಯ ಇನ್ನೂ ಚರ್ಚಾಸ್ಪದವಾಗಿರುತಿದೆ. ನಿಜಾಮರವರು ಅರ್ಥಸಹಾಯಮಾಡುವದಾಗಿ ತಿಳಿಸಿದ ಅಂಶ ಹೊರಗಾದಕೂಡಲೆ, ಅದನ್ನು ಉತ್ತಮವಾದ ಕೆಲಸಕ್ಕೆ ಉಪಯೋಗಿಸಬೇಕಾದರೆ, ನೇಟಿವ್ ಸೈನ್ಯವನ್ನು ಕ್ರಮಪಡಿಸುವ ಯೋಗ್ಯವಾದ ಕಾರ್ಯವನ್ನು ಪಕ್ರಮಿಸುವದಕ್ಕೆ ಒಳ್ಳೆಯ ಸಮಯವೆಂದು ನಾವು ತಿಳಿಸಿದ್ದಂತೆ ಮರಳಿ ತಿಳಿಸುತ್ತೇವೆ. ಇಂಡ್ಯ ಗವರ್ನಮೆಂಟಿನವರು, ಯಾವವಿಧದಲ್ಲೂ, ಅವಪ್ರಥೆಗೆ ಗುರಿಯಾಗದೆ ನಿಜಾಮರವರಿಗೂ ಇತರ ನೇಟಿವ್ ಅರಸರುಗಳಿಗೂ ಇದರಡಿಕಂಡುತಿಳಿಸಬಹುದು ಹ್ಯಾಗಂದರೆ—"ನೀವು ತಿಳಿಸುವ ಸಹಾಯವನ್ನು ನಾವು ಅಂಗೀಕರಿಸುತ್ತೇವೆ, ಪರಂತು, ನಿಮ್ಮ ಸೈನ್ಯಗಳು ಅದರ ಪ್ರಸ್ತುತಸ್ಥಿತಿಯಲ್ಲಿ ಅನುಪಯುಕ್ತವಾದವು. ಹಿಂದೆ ಅವು ರಾಜ್ಯದ ಸ್ಥೈರ್ಯಕ್ಕೆ ಭಯವನ್ನುಂಟುಮಾಡುತಲಿದ್ದವು, ಪರಂತು ಅತಿ ಭಯಂಕರವಾಗಿರಲಿಲ್ಲವೆಂಬದು ಯಥಾರ್ಥವಾದದ್ದು, ಆದರೆ ನಿಮ್ಮ ರಾಜಭಕ್ತಿಯ ವಿಷಯವು ನಿಸ್ಸಂಶಯವಾದದ್ದಾಗಿರುತಿದೆ. ಈಗ ನೀವು ನಮಗೆ ಕೊಡುವದಾಗಿ ಹೇಳುವ ದ್ರವ್ಯವನ್ನು ನಿಮ್ಮ ಸೈನ್ಯದವಿಷಯದಲ್ಲಿ ವ್ಯಯಮಾಡಿದರೆ, ಬಲವಾದ ಸೈನ್ಯವನ್ನು ಇಟ್ಟುಕೊಳ್ಳುವ ವಿಷಯದಲ್ಲಿ ನಿಮ್ಮ ಬಾಧ್ಯತೆಯನ್ನು ನಾವು ಒಪ್ಪಿ, ನಿಮಗೆ ಆಯುಧಗಳಂಕೊಟ್ಟು ನಿಮ್ಮ ಸೈನ್ಯದಪೈಕಿ ಒಂದು ಭಾಗವನ್ನು ಕ್ರಮಪಡಿಸುವ ವಿಷಯದಲ್ಲಿ ಬ್ರಿಟಿಷರವರ ಬುದ್ಧಿವಾದದಮೂಲಕ ಸಹಾಯಮಾಡುವದಲ್ಲದೆ, ಯೆಲ್ಲರಿಗೂ ಶತ್ರುವಾಗಿ ಬರತಕ್ಕಂತಾವರಮೇಲೆ ಶಸ್ತ್ರಪಾಣಿಗಳಾಗಿ ಹೋಗತಕ್ಕಕಾಲ ಇಂಡ್ಯದೇಶಕ್ಕೆ ಪ್ರಾಪ್ತವಾಗುವ ಸಂದರ್ಭವುಂಟಾಗುವಲ್ಲಿ ಅಂತಾ ಸೈನ್ಯವನ್ನು ಯುದ್ಧರಂಗಕ್ಕೆ ಸಂತೋಷದೊಡನೆ ಬರಮಾಡಿಕೊಳ್ಳುವೆವು, ಎಂಬದು." ನೇಟಿವ್ ಅರಸರಪೈಕಿ ಯಾರೇ ಆಗಲಿ ಈಗಿರುವ ತಮ್ಮ ಸೈನ್ಯದ ಪೈಕಿ ಒಂದು ಭಾಗಕ್ಕೆ ಅಧಿಕವಾಗಿ ಒಳ್ಳೆಯ ಸ್ಥಿತಿಯಲ್ಲಿಟ್ಟುಕೊಂಡಿರುವದಕ್ಕೆ ಇಷ್ಟಪಡಲಾರರು, ಯಾತಕ್ಕಂದರೆ, ಯೆಲ್ಲಾ ಸೇನೆಯನ್ನೂ ಕ್ರಮಪಡಿಸಿ ಅದಕ್ಕೆ ಬೇಕಾದ್ದನ್ನೆಲ್ಲ ಒದಗಿಸುವದು ಬಹ್ವರ್ಥವ್ಯಯ ಸಾಧ್ಯವಾದ ಕಾರ್ಯವು, ಮತ್ತು, ಅವರ ಸೇನೆಯಪೈಕಿ ಬಹಳ ಮಟ್ಟಿಗೆ ಅನೇಕ ನೇಟಿವ್ ಸಂಸ್ಥಾನಗಳಲ್ಲಿ ಪೋಲೀಸ್ ನೌಕರಿ ಮಾಡುತಲಿದೆ. ನೇಟಿವ್ ಸರ್ಕಾರದವರು ಅಂತಾ ಸೋಜಾರಿಗಳ ವಿಷಯದಲ್ಲಿ ಈಗ ಮಾಡುವದಕ್ಕಿಂತಲು ಅಧಿಕವಾಗಿ ವ್ಯಯಮಾಡುವದಕ್ಕೆ ಸಮ್ಮತಿಸಲಾರರು. ಇಂಡ್ಯದೇಶವು ಈಗ ಹೊರಗಿನ ಶತ್ರುವಿನ ನಿರೀಕ್ಷಣೆಯಲ್ಲಿದೆ. ಮುಂದೆ ರಾಜಭಕ್ತಿ ಭರಿತರಾದ ಕಪ್ಪಒಡಿಸುಸ್ಥಾನದವರ ಸಹಾಯವು ಉಪಯುಕ್ತವಾಗಿರುವದು ಯುದ್ಧವೆಂಬ ಮೇಘವಾತಳೆಯು ಆವರಿಸುತಲಿದೆ. ಬಿರುಗಾಳಿಯು ಸ್ವಲ್ಪ ಸವಕಾಶದಿಂದಲಾದರೂ ಉಗ್ರವಾಗುವದು. ಒಂದುವೇಳೆ ನಾವು ನಿರೀಕ್ಷಿಸುವದಕ್ಕಿಂತಲೂ ಮುಂಚಿತವಾಗಿಯೇ ಪ್ರಾರಂಭವಾಗುವದು. ರಾಜಭಕ್ತಿ ಪುರಸ್ಸರವಾಗಿಯೂ, ಔದಾರ್ಯದೊಡನೆಯೂ ನಿಜಾಮರವರಿಂದಲೂ ಪಂಜಾಬ ದೇಶದ ಅರಸರಿಂದಲೂ ದೊರೆಯಲ್ಪಡುವ ಸಹಾಯ ವಿಷಯದಲ್ಲಿ ನಮಗೆ ತಿಳಿಯಬರುವ ಮಟ್ಟಿಗೆ ಸಾಮಾನ್ಯವಾಗಿ ಅವರು ತಮಗೆ ಸಾಧ್ಯವಾದ ಸಹಾಯಗಳನ್ನೆಲ್ಲ ಇಂಡ್ಯ ಗವರ್ನಮೆಂಟಿಗೆ ಮಾಡಲಪೇಕ್ಷಿಸುತ್ತಾರೆ. ಅವರು ತಮ್ಮ ಸೈನ್ಯಗಳಪೈಕಿ ಒಂದು ಭಾಗವನ್ನು ಯುದ್ಧಕ್ಕೆ ಸನ್ನದ್ಧವಾಗಿ ಮಾಡಲ್ಪಟ್ಟಿರುವಂತೆ ಪ್ರೋತ್ಸಾಹಗೊಳಿಸಲ್ಪಟ್ಟರೆ ಅವರು ಗವರ್ನಮೆಂಟಿನವರಿಗೆ ಬಹಳ ಸಹಾಯಕರಾಗಿರುವರು. ಅರಸರುಗಳು ಸೈನ್ಯವನ್ನು ಕ್ರಮಪಡಿಸುವ ವಿಷಯದಲ್ಲಿ ಖರ್ಚುಮಾಡಬಹುದಾದ ದ್ರವ್ಯಕ್ಕೆ ಬದಲಾಗಿ, ಗವರ್ನಮೆಂಟಿನವರು ಬುದ್ಧಿವಾದವನ್ನೂ, ಆಯುಧಗಳನ್ನೂ, ಮುಂಗಾಮಿಯಾಗಿ ಬ್ರಿಟಿಷ್ ಆಫೀಸರಿಗಳನ್ನೂ ಕೊಡುವದರ ಮೂಲಕ ತಮಗೆ ಸಾಧ್ಯವಾದ ಸಹಾಯಗಳನ್ನೆಲ್ಲ ಮಾಡುವದುಚಿತವಾಗಿರುವದು. ನಾವು ಇದುವರಿವಿಗೆ ಅನೇಕ ಸಂದರ್ಭಗಳಲ್ಲಿ ಸೂಚಿಸಿದಂತೆ, ಬರೋಡಿಯಲ್ಲಿ ಹಾಗೆ ಮಾಡುವದರ ಮೂಲಕ ಒಳ್ಳೆಯ ಫಲ ವುಂಟಾಯಿತು, ಅದರಂತೆಯೇ ಇನ್ನು ಸ್ವಲ್ಪ ಅಧಿಕವಾಗಿ ಅಜಮಾಯಿಷೀ ಮಾಡಿ ನೋಡಬಹುದು.—ಇಂಡ್ಯನ್ಸ್.

BANGALORE:—Printed and published for the Proprietor, at the KARNATIC Press.—1888.

ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA.

ಪ್ರತಿ ಸೋಮವಾರ ಪ್ರಾತಃಕಾಲದಲ್ಲಿ ಪ್ರಕಟಿಸಲ್ಪಡುವದು.

Published every Monday Morning.

ಪ್ರಕಾಮವಿವಿಧಪ್ರವೃತ್ತ್ಯುಪಗಮಾರ್ಥ ಕರ್ಣಾಟಕಪ್ರಕಾಶಕನಿರಾಭಿದಾಪ್ರಥಿತಸಾಹಿತೀಶೋಭಿತಾ ॥ ಮೃಗಾಂಕಹಿತವಾಸರೇನಿಹಿತಮುದ್ರಣಾ ಸಜ್ಜನೈರ್ದ್ದಿಶಾ ಸುಪರಿಪೋಷಿತಾ ದಿಶತಿ ಮಾನಸಾನಂದಮುಂ ॥

Vol. XV.] BANGALORE:—MONDAY. JANUARY 23, 1888. [No. 3.

ಸಂಪುಟ ೧೫.] ಬೆಂಗಳೂರು:—ಸನ್ ೧೮೮೮ನೇ ಇಸವಿ ಜನವರಿ ೨೩ನೇ ತಾರೀಖ್ ಸೋಮವಾರ. [ಸಂಖ್ಯೆ ೩.

ಕರ್ಣಾಟಕ ಪ್ರಕಾಶಿಕಾ

ಪತ್ರಿಕೆಯ ಚಂದಾ ದರಗಳು,
೧೮೮೮ನೇ ಇಸವಿ ಜನವರಿಯಿಂದಾರಭ್ಯ
ಕಡಿಮೆ ಮಾಡಲ್ಪಟ್ಟಿರುತ್ತವೆ.

ಈ ಪತ್ರಿಕೆಯು ಚಂದಾದಾರರಸ್ಸಂಖ್ಯೆ ಅನೇಕ ಪಟ್ಟು ಹೆಚ್ಚಿಸಬೇಕೆಂಬ ಉದ್ದೇಶದಿಂದಲೂ, ಪರಿಮಿತವಾದ ಆದಾಯವುಳ್ಳವರಿಗೆಲ್ಲ ಈ ಪತ್ರಿಕೆಯು ಸುಲಭವಾಗಿ ಲಭಿಸುವಂತಿರಬೇಕೆಂಬ ಅಭಿಪ್ರಾಯದಿಂದಲೂ ಇದರ ಚಂದಾದರವನ್ನು ಇದರಡಿಯಂತೆ ಕಡಿಮೆ ಮಾಡಿರುತ್ತೇವೆಂತೆಂದರೆ:—

ಇಂಗ್ಲಿಷ್ ಮತ್ತು ಕನ್ನಡಭಾಗಗಳಿಗೆ.

		ಸ್ಥಳದವರಿಗೆ	ಪರಸ್ಥಳದವರಿಗೆ.
12	ತಿಂಗಳಿಗೆ	8—0—0	9—0—0
6	„	4—0—0	4—8—0
3	„	2—8—0	2—8—0

ಇಂಗ್ಲಿಷ್ ಅಥವಾ ಕನ್ನಡಭಾಗಗಳಿಗೆ.

		ಸ್ಥಳದವರಿಗೆ	ಪರಸ್ಥಳದವರಿಗೆ.
12	ತಿಂಗಳಿಗೆ	4—0—0	5—0—0
6	„	2—0—0	2—8—0
3	„	1—4—0	1—8—0

ಷರಾ—ಅಂಚೆ ಮುನ್ಷಿಗಳು, ಪೋಲೀಸ್ ಮತ್ತು ತಾಲೂಕ್ ಸ್ಕೂಲ್‌ಮಾಸ್ಟರುಗಳು, ಶ್ಯಾನುಭೋಗರು, ಪಟೇಲರು, ವಿದ್ಯಾರ್ಥಿಗಳು, ಇವರಿಗೆಲ್ಲ ಈ ಪತ್ರಿಕೆಯು ಪರಸ್ಥಳದವರಿಗೆ ಕೊಡಲ್ಪಡುವದು. ಅಡ್ವಾನ್ಸ್ ಮೊಬಲಗು ಬಾರದ ದರಖಾಸ್ತುಗಳಿಗೆ ಮಾತ್ರ ನಿಗೆ ಕೊಡಲ್ಪಡಲಾರದು. ಚಂದಾದಾರರು ಇಂಗ್ಲಿಷ್ ಭಾಗವನ್ನಾಗಲಿ ಕನ್ನಡಭಾಗವನ್ನಾಗಲಿ ಅಥವಾ ಎರಡನ್ನಾಗಲಿ ತೆಗೆದುಕೊಳ್ಳಬಹುದು. ಚಂದಾಹಣವನ್ನು ಮುಂಗಡವಾಗಿಯೇ ಕಳುಹಿಸತಕ್ಕದ್ದು. ಮೂರು ತಿಂಗಳಿಗಿಂತ ಕಡಿಮೆಯಾಗಿ ಚಂದಾ ಮೊಬಲಗು ಅಂಗೀಕರಿಸಲ್ಪಡುವದಿಲ್ಲ.

ನೋಟುಗಳು ರವಾನಿಸತಕ್ಕವರು ಮೊದಲು ಕಳುಹಿಸುವ ಅರ್ಧನೋಟು ತಲುಪಿದುದಕ್ಕೆ ನಮ್ಮ ಉತ್ತರವು ಬಂದ ಕೂಡಲೇ ಬಾಕೀ ಅರ್ಧ ನೋಟನ್ನು ರವಾನಿಸತಕ್ಕದ್ದು. ಟಿಕೆಟ್‌ಗಳು ಕಳುಹಿಸತಕ್ಕವರು ರೂಪಾಯಿ ಒಂದಕ್ಕೆ ಒಂದಾಣೆಯಂತೆ ಡಿಸ್ಕೌಂಟ್ ಸಹ ಸೇರಿಸಿ ಕಳುಹಿಸತಕ್ಕದ್ದು. ಅರ್ಥಾತ್ ಪೋಸ್ಟೇಜ್ ಮುದ್ರೆಯುಳ್ಳ ಟಿಕೆಟ್‌ಗಳನ್ನು ಕಳುಹಿಸಿದರೆ ಡಿಸ್ಕೌಂಟಿಲ್ಲದೆ ಕಳುಹಿಸಲ್ಪಡುವ ಮೊಬಲಗಿನಲ್ಲಿ ಅದು ವಜಾ ಮಾಡಲ್ಪಟ್ಟು ಮಿಕ್ಕ ಮೊಬಲಗು ಲೆಕ್ಕಕ್ಕೆ ದಾಖಲು ಮಾಡಿಕೊಳ್ಳಲ್ಪಡುವದು.

ಪ್ರಕಟನೆಯ ರಿವಾಜ್.

ಮೊದಲನೆಯ ದಫಾ ಪಂಕ್ತಿ ಒಂದಕ್ಕೆ	೦—೨—೦
ಎರಡನೆಯ ದಫಾ ಪಂಕ್ತಿ ಒಂದಕ್ಕೆ	೦—೧—೦

ಷರಾ—ಎರಡಾವರ್ತಿಗಿಂತ ಜಾಸ್ತಿಯಾಗಿ ಎಷ್ಟು ಸಲ ಪ್ರಕಟಿಸಬೇಕೋ ಕಾಂಟ್ರಾಕ್ಟ್ ಮಾಡಿದಾಗ್ಯೂ ಪಂಕ್ತಿ ಒಂದಕ್ಕೆ ೧ ಆಣೆಯಂತೆಯೇ ಲೆಕ್ಕ ಮಾಡಲ್ಪಡುವದು. ಈ ಪತ್ರಿಕೆಯಲ್ಲಿ ಛಾಪಿಸ ಮಾಡುವುದಕ್ಕೆ ಪ್ರಕಟನೆಗಳು ಕಳುಹಿಸುವವರು ಅವು ಎಷ್ಟಾವರ್ತಿ ಛಾಪಿಸ್ ಮಾಡಲ್ಪಡಬೇಕೋ ಆ ಅಂಶವನ್ನು ಸ್ಪಷ್ಟವಾಗಿ ತಿಳಿಸತಕ್ಕದ್ದು. ಇಲ್ಲದಿದ್ದರೆ ಅವರು ನಮಗೆ ನಿಲ್ಲಿಸುವಂತೆ ಬರೆಯುವ ತನಕ ಅವು ಪ್ರಕಟಿಸುತ್ತಿದ್ದು ಹಾಗೆ ಎಷ್ಟಾವರ್ತಿ ಪ್ರಕಟಿಸಲ್ಪಟ್ಟಿದ್ದಾಗ್ಯೂ ಮೇಲೆ ಹೇಳಿದ ದರದಂತೆ ಕಿಮ್ಮತ್ ವಸೂಲ್ ಮಾಡಲ್ಪಡುವದು. ಪ್ರಕಟನೆಯ ಬಗ್ಗೆ ಕಳುಹಿಸಲ್ಪಡತಕ್ಕ ಪ್ರಕಟನೆಗಳನ್ನು ಆದಿವಾರದ ಮಧ್ಯಾಹ್ನ ೨ ಘಂಟೆಯೊಳಗಾಗಿ ಕಳುಹಿಸಬೇಕು. ಪ್ರಕಟನೆಯ ಬಗ್ಗೆ ಈ ಪತ್ರಿಕೆಗೆ ಕಳುಹಿಸಲ್ಪಡತಕ್ಕ ಕಾಗದಗಳಲ್ಲಿ ತಿಳಿಸಲ್ಪಡುವ ಅಭಿಪ್ರಾಯಗಳಿಗೆ ನಾವು ಜವಾಬ್ದಾರರಾಗಲಾರೆವು. ಕ್ರಮವಾಗಿ ರುಜು ಮಾಡಿದ ಹೊರತು ಯಾವ ಕಾಗದವನ್ನು ಪ್ರಕಟಿಸಲಾರೆವು. ಸಿರಾಕಿಸ್ಪಾಕ್ಷೆ ಕಾಗದಗಳು ಮರಳಿ ವಾಪಸ್ ಕಳುಹಿಸಲ್ಪಡಲಾರವು.

"IT RECOMENDS ITSELF"

ALL WHO SUFFER FIND SURE RELIEF.

LITTLES'

ORIENTAL BALM

THE MOST EFFECTUAL MODERN REMEDY FOR PAIN.

ಲಿಟಲ್ ಯೆಂಬವರಿಂದ ತಯಾರ್ಮಾಡಲ್ಪಟ್ಟ "ಬಾಧೆಸಂಹಾರಿಣೀ" ಎಂಬ ಪೂರ್ವದೇಶ ಸಂಬಂಧವಾದ ಅಮೂಲ್ಯ ತೈಲವು ಸ್ವಶಕ್ತಿ ಪ್ರದರ್ಶಕವಾದದ್ದು, ಮತ್ತು ಸಫಲವಾದ ನವೀನ ಪ್ರತಿಕ್ರಿಯೋಪಯೋಗವಾದ ಔಷಧವು. ಇದರಿಂದ ಸಕಲ ವಾತರೋಗಗಳೂ, ವಾತಸಂಬಂಧಗಳಾದ ಸಂಧಿಬಂಧಗಳೂ ನಿವೃತ್ತಿಯಾಗುವವು. ಮುಖ್ಯವಾಗಿ ಬೆರಕೆಯಿಕೆ ವಾದ ವಾತರೋಗಗಳು, ಕಾಸ, ಗಂಟಲಿನಲ್ಲಿ ಉರಿ, ನಡುವಿನನೋವು, ಕೀಲುವಾಯು, ಕಟಿವಾಯು, ಉಳುಕು ನೋವು, ತಲೆನೋವು, ತಿಮಿರ್ವಾಯು ಮುಂತಾದ ರೋಗಗಳಿಗೆಲ್ಲ ನಿಸ್ಸಂದೇಹವಾಗಿ ಸಕಲ ಪ್ರಯೋಜನವನ್ನುಂಟು ಮಾಡತಕ್ಕದ್ದು. ಈ ತೈಲವನ್ನು ನೋವುಳ್ಳ ಸ್ಥಳಗಳಲ್ಲಿ ಕೆಲವಾವರ್ತಿ ಸವರಿ ಶಾಖಕೊಟ್ಟಾಗುವಂತೆ ಚೆನ್ನಾಗಿ ತಿಕ್ಕಿದಲ್ಲಿ ಸಮಸ್ತವಾದ ಯೆಲ್ಲಾ ನೋವುಗಳನ್ನು ನಿವೃತ್ತಿ ಮಾಡುವಂತಾ ಉತ್ತಮ ತೈಲವಾಗಿರುತ್ತದೆ. ಸಕೃತ್ಸ್ನೇಹದಿಂದಲೇ ಅರೆತಲೆನೋವು ಮತ್ತು ಜೋಮು ಕುಬ್ಜಾಂಗ ನಿವೃತ್ತಿಯಾಗುವದು. ಗಂಟಲಿನಲ್ಲುಂಟಾಗುವ ಉರಿ ಅಥವಾ ವ್ರಣಗಳಿಗೆ ಈ ತೈಲವು ಅದ್ಭುತವಾದ ಮತ್ತು ತೀವ್ರವಾದ ಸಂಪೂರ್ಣ ಗುಣವನ್ನುಂಟುಮಾಡುವದು. ಅದ್ಭುತವಾದ ಈ ಔಷಧವನ್ನು ಉಪಯೋಗಿಸಿದಲ್ಲಿ ಅದರ ಪ್ರಯೋಜನವು ಸ್ವತಃವೆ ವ್ಯಕ್ತವಾಗುವದು. ಈ ತೈಲವು ಶೀತಗಾಳಿ ಮಂಜುಮುಂತಾದವುಗಳಿಗೊಳಗಾಗಿ ಸಂಚರಿಸುವಂತಾ ಪ್ರಯಾಣಿಕರು, ಬೇಟೆಯಾಡುವವರು, ದೇಶಾಟನ ಮಾಡುವವರು, ಮುಂತಾದವರಿಗೆಲ್ಲ ಅಮೂಲ್ಯವಾದದ್ದು.

ಪರಿಶೀಲಕರ ಅಭಿಪ್ರಾಯವು.

ಐರ್ಲ್ಯಾಂಡ್ ದೇಶದ ಫಾರ್ಮಸ್ಯುಟಿಕಲ್ ಸೊಸೈಟಿಯೆಂಬ ಔಷಧಶಾಲೆಯ ಪ್ರೆಸಿಡೆಂಟರಾಗಿಯೂ, ಸದರೀ ದೇಶದ ಜಿಯಾಲಜಿಕಲ್ ಸೊಸೈಟಿ ಯೆಂಬ ಮೃತ್ತಾಷಾಣಾದಿಧಾತುವಿವೇಚಕ ಸಮಾಜದ ಮೆಂಬರಾಗಿಯೂ, "ಮಿನರಲ್ ವಾಟರ್ಸ್ ಆಫ್ ಯೂರಪ್" ಎಂಬ ಗ್ರಂಥಕರ್ತರಾಗಿಯೂ, ರಸಾದಿ ವಿಭಜನ ವಿಷಯಕವಾದ ಅನೇಕ ಲೇಖನಾಧಿಕಾರಿಯಾಗಿಯೂ, ಇರುವ ಪ್ರೊಫೆಸರ್ ಟಿಚ್ ಬೋರ್ನ್ (C. R. Tichborne, L. L. D., F. C. S., M. R. I. A.) ಯೆಂಬುವರು ಅಭಿಪ್ರಾಯ ಪಟ್ಟಿರುತ್ತಾರೇನಂದರೆ—ಲಿಟಲ್‌ಯವರ ಓರಿಯಂಟಲ್ ತೈಲವನ್ನು ಜಾಗರೂಕತೆಯಿಂದ ಪರೀಕ್ಷಿಸಿದ್ದರಲ್ಲಿ ಇದು ಬಹುವಿಧ ಮೂಲಿಕೆಗಳ ರಸಮಿಶ್ರವಾದ ತೈಲವೆಂದೇ ಹೇಳಬಹುದಲ್ಲದೆ, ಇದು ಹೊರಕ್ಕೆ ಉಪಯೋಗಿಸಲ್ಪಡುವಾಗ ಕೊಂಚವೂ ನಿರುಪದ್ರವಕರವಾದದ್ದಾಗಿದ್ದರೂ, ನಿಜವಾಗಿ ಪ್ರಬಲ ರೋಗ ನಿವಾರಕ ಶಕ್ತಿಯುಳ್ಳದ್ದಾಗಿರುತ್ತದೆ. ಈ ಮಿಶ್ರೌಷಧವು ನರಗಳನ್ನು ಸ್ಥಿಮಿತಕ್ಕೆ ತರತಕ್ಕದ್ದಾಗಿರುವದರಿಂದ ಇದು ಯಾವ ತರದ ರೋಗಗಳಿಗೆ ಉಪಯುಕ್ತವೆಂದು ತಿಳಿಸಲ್ಪಟ್ಟಿದೆಯೋ ಸದರೀ ರೋಗಗಳಲ್ಲಿ ಅದರ ಪ್ರಯೋಜನವು ವ್ಯಕ್ತವಾಗುವದು. ಈ ತೈಲವು ಸಂಪೂರ್ಣ ಜಾಗರೂಕತೆಯೊಡನೆ ತಯಾರ್ಮಾಡಲ್ಪಡುತ್ತಿರುತ್ತದೆ.

ಇದರ ಕ್ರಯ—ಸೀಸೆ ಒಂದಕ್ಕೆ ೧ ರೂಪಾಯಿ.

ಇದು ವೆಸ್ಟ್ ಔಷಧ ಶಾಲೆಯಲ್ಲಿಯೂ, ಮದರಾಸ್ ಶಂಭುದಾಸ್ ಬೀದಿಯಲ್ಲಿ, ೨೦ನೇ ನಂಬರ್ ಮನೆಯೊಳಗಿರುವ, ಮೆ. ಎ. ಸಿ ಬೆರ್ರಿಮನ್ ಯೆಂಬವರಲ್ಲಿಯೂ, ಈ ಪೇಟೆಯಲ್ಲಿರುವ ಅವರ ಏಜಂಟರಾದ ಜೆ. ವೆಸ್ಟ್ ಯವರ ಕೆಂಪನಿಯಲ್ಲಿಯೂ, ಮೆ. ಕೆಪ್ಟನ್ ಅಂಡ್ ಕೆಂಪನಿ ಯವರಲ್ಲಿಯೂ, ರಿಗ್ಸ್ ಯವರ ಕಂಪನಿಯಲ್ಲಿಯೂ ದೊರೆಯುವದು.

Agents.— Messrs, J. West, *Chemist, &c., Bangalore.*
Captain & Co. *Chemists, Bangalore.*
Riggs & Co, *Chemits, Bangalore*; and of
Mahomed Yousoff and Sons, *The Cash Bazarr, Bagalore*
A. C. Berryman & Co.,
20 *Sambodoss Street Madras.*

NOTICE.

VAIDYASARA SANGRAHA

A TREATISE ON THE PRINCIPLES OF

HINDU MEDICINE.

☞ *Price including Postage Rs 5 6-0*

ವೈದ್ಯಸಾರ ಸಂಗ್ರಹ.

ಈಗ್ರಂಥಾಪೇಕ್ಷೆಯುಳ್ಳವರು ಮೊಬಲಗಿನೊಡನೆ ಈ ಕೆಳಗೆ ರುಜುಮಾಡಿರತಕ್ಕವರ ಹೆಸರಿಗೆ ಬರೆದುಕೊಂಡರೆ ಪುಸ್ತಕ ಕೂಡಲೇ ಕಳುಹಿಸಲ್ಪಡುವದು. ಮೊಬಲಗು ಇಲ್ಲದ ದರಖಾಸ್ತುಗಳಿಗೆ ಸುತರಾಂ ನಿಗೆ ಕೊಡಲ್ಪಡಲಾರದು.

ಇದರ ಕ್ರಯ	ರೂ॥ ೫—೨—೦
ಪ್ಯಾಕಿಂಗ್ ಮತ್ತು ಅಂಚೆಹಾಸಲ್,	೦—೬—೦

ಟಿ. ಬಿ. ವೆಂಕಟಾಚಾರ್,
ಆಸ್ಪತ್ರೆರೋಡ್, ಬೆಂಗಳೂರು.

ನೋಟಿಸ್.

ಇದರಿಂದ ನಮ್ಮ ಚಂದಾದಾರರಿಗೆ ಪ್ರಕಟಿಸುವದೇನಂದರೆ. ಈ ಪತ್ರಿಕೆಯ ೧ನೇ ಕಾಲಂನಲ್ಲಿ ಪ್ರಕಟಿಸಲ್ಪಟ್ಟಿರುವ ಪ್ರಕಟನೆಯ ಮೂಲಕ ಈ ಸಾಲಿನಲ್ಲಿ ಈ ಪತ್ರಿಕೆಯ ಚಂದಾ ದರವನ್ನು ಕಡಿಮೆ ಮಾಡಿರುವದು ಯೆಲ್ಲರಿಗೂ ತಿಳಿಯಬಹುದಾಗಿರುವದು. ಕಳೆದ ಸಾಲ್ ಡಿಸಂಬರ್ ಆಖೈರವರಿವಿಗೆ ಚಂದಾ ಮೊಬಲಗನ್ನು ಪೂರಾ ಬಾಖ್ತೀ ಮಾಡಿರತಕ್ಕವರ ಹೆಸರುಗಳನ್ನು ಮಾತ್ರ ದಾಖಲಿಮಾಡಿಕೊಂಡು ಈ ತಿಂಗಳ ಆಖೈರವರಿವಿಗೆ ಪತ್ರಿಕೆಯನ್ನು ಕಳುಹಿಸುತ್ತ ಬರುವೆವು. ಪತ್ರಿಕೆಯ ಅಪೇಕ್ಷೆ ಇಲ್ಲದವರು ಕೂಡಲೇ ನಮಗೆ ತಿಳಿಸಬೇಕು. ಅದರ ಆವಶ್ಯಕತೆ ಇರತಕ್ಕವರು ಚಂದಾ ಮೊಬಲಗನ್ನು ಕೂಡಲೇ ರವಾನಿಸಬೇಕು. ಬರುವ ತಿಂಗಳ ೧ನೇ ತಾರೀಖಿನೊಳಗಾಗಿ ಯಾರ ಚಂದಾ ಬರುವದಿಲ್ಲವೋ ಅಂತವರಿಗೆಲ್ಲ ಅದೇ ತಿಂಗಳ ೭ನೇ ತಾರೀಖ್ ಮೊದಲು ಪತ್ರಿಕೆ ರವಾನಿಸಲ್ಪಡಲಾರದು.

ನೋಟಿಸ್.

Bangalore City Municipality.

ಸನ್ ೧೮೮೮ನೇ ಇಸವಿ ಜನವರಿ ೨೮ನೇ ತಾರೀಖ್ ಶನಿವಾರ ಪ್ರಾತಃಕಾಲ ೭½ ಘಂಟೆಗೆ ಸಿಟಿ ಮ್ಯೂನಿಸಿಪಲ್ ಕಮಿಷನರ್‌ಗಳು, ಡಿಸ್ಟ್ರಿಕ್ಟ್ ಆಫೀಸ್ ಕಟ್ಟಡದಲ್ಲಿರುವ ತಮ್ಮ ಆಫೀಸಿನೊಳು ಸಭೆ ಸೇರುವಾಗ ಅವರ ಆಲೋಚನೆಗೆ ತರಲ್ಪಡುವ ವಿಷಯಗಳು.

೧. ಸನ್ ೧೮೮೭ನೇ ಇಸವಿ ಡಿಸಂಬರ್ ತಿಂಗಳ ಬಾಬತು ಚಾಲ್ತೀ ನಗದು ಜಮಾಖರ್ಚ್ ಲೆಕ್ಕ ಮತ್ತು ಮರಣ ಲೆಕ್ಕಗಳು.

೨. ಸಿಟಿ ಮ್ಯೂನಿಸಿಪಲ್ ಸರಹದ್ದಿನೊಳಗೆ ಬಂಡೀಮೋಟನ ವಿಷಯವಾಗಿ ಗವರ್ನ್‌ಮೆಂಟಿಗೆ ಕಳುಹಿಸಲ್ಪಟ್ಟ ಮುಸವಿದಾ ರೂಲ್ಸ್‌ಗಳ ವಿಷಯದಲ್ಲಿ ಕೆಲವು ಅಭಿಪ್ರಾಯ ಪ್ರಾರ್ಥ್ಯಕವಾಗಿ, ಸನ್ ೧೮೮೭ನೇ ಇಸವಿ ಡಿಸಂಬರ್ ೨೮ನೇ ತಾರೀಖಿನಲ್ಲಿ ದಿವಾನರವರು ಮಾಡಿದ ಪ್ರೊಸೀಡಿಂಗ್ಸ್.

೩. ಮುಂದಿನ ಸರ್ಕಾರ್ ಸಾಲಿನಲ್ಲಿ ಮೊದಲು ಆಲೋಚಿಸಲ್ಪಟ್ಟಿರುವ ಹೊಸ ಕಾಮಗಾರೀಗಳ ಪಟ್ಟಿಯೊಡನೆ ಸಬ್ ಕಮಿಟಿಯವರು ಮಾಡಿದ ರಿಪೋರ್ಟ್.

೪. ಸನ್ ೧೮೮೮—೮೯ನೇ ಸರ್ಕಾರ್ ಸಾಲಿನಲ್ಲಿ ಮ್ಯೂನಿಸಿಪಲ್ ಫಂಡಿನ ಜಮಾಖರ್ಚ್ ಬಜೆಟ್ ಅಂದಾಜಿನ ಮುಸವಿದಾ.

೫. ಸೇಟ್ ಮೋತಿಲಾಲ್‌ಯವರ ಆಸ್ಪತ್ರೆಗೆ ಪಶ್ಚಿಮವಾಗಿಯೂ ಡಿಸ್ಟ್ರಿಕ್ಟ್ ಲಾಕಪ್‌ಗೆ ಸೇರಿದ ಜಾಗೆಯೂ ಜಾಸ್ತಿಯಾಗಿ ಕಟ್ಟಡವು ಕಟ್ಟುವ ವಿಷಯದಲ್ಲಿ ಲೇಡೀ ಸುಪೀರಿಯರವರು ಬರೆದ ಸನ್ ೧೮೮೭ನೇ ಇಸವಿ ಡಿಸಂಬರ್ ೨೩ನೇ ಮಕ್ತ್ಯಮಿನ ಲೆಟರ್.

೬. ತುರ್ತ್ ಮಾಡಬೇಕಾದ ಕೆಲವು ಕಾಮಗಾರಿಗಳನ್ನು ಮಂಜೂರ್ ಮಾಡಬೇಕೆಂದು ಸನ್ ೧೮೮೮ನೇ ಜನವರಿ ೧೯ನೇ ತಾರೀಖಿನಲ್ಲಿ ಮ್ಯೂನಿಸಿಪಲ್ ಓವರ್ಸಿಯರು ಬರೆದ ರಿಪೋರ್ಟ್.

೧೯ನೇ ಜನವರಿ ೧೮೮೮.

A. Srinivasacharlu, B. A.,
Vice-President,
City Municipal Commission.

ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA.

MONDAY, JANUARY 23 1888.
೧೮೮೮ನೇ ಜನವರಿ ೨೩ನೇ ತಾ॥ ಸೋಮವಾರ.

MYSORE SAVINGS BANKS.

ಬ್ರಿಟಿಷ್ ಸೈನ್ಯದೊಳಗಿರತಕ್ಕ ಸೋಲ್ಜರ್‌ಗಳು ತಮ್ಮ ಆಯತಿಯನ್ನೆಲ್ಲ ಮನಸ್ವೀ ವ್ಯಯಮಾಡಿ ಕೆಲಸದಿಂದ ನಿವೃತ್ತರಾಗತಕ್ಕ ಕಾಲದಲ್ಲಿ ಅನುಪಪನ್ನರಾಗಿ ಬಹಳ ಶ್ರಮಪಡುವದರಿಂ ಗವರ್ನ್‌ಮೆಂಟಿನವರು ಪರ್ಯಾಲೋಚಿಸಿ ಸದರೀ ಸೋಲ್ಜರ್‌ಗಳು ತಮಗೆ ಬರುವ ಸಂಬಳ ವೃತ್ತಿ ಯಥೋಚಿತ ಕೂಡಿಡುವದಕ್ಕೆ ಅನುಕೂಲವಾಗಿರುವಂತೆ ರಿಜಿಮೆಂಟ್ ಗಳಲ್ಲಿ ಸೇವಿಂಗ್ಸ್‌ಬ್ಯಾಂಕ್‌ಗಳನ್ನು ಮೊದಲು ಸ್ಥಾಪಿಸಿದರು. ಈ ಏರ್ಪಾಡು ಬಹಳ ಪ್ರಯೋಜನಕರವೆಂದು ಕಂಡು ಬಂದದರಿಂದ

ಸಿವಿಲಿಯರ್ ಜನಗಳಿಗೆ ಸಹ ಅದು ಅನುಕೂಲಿಸುವಂತೆ ಆಯಾ ಸ್ಥಳಗಳಲ್ಲಿ ಗವರ್ನಮೆಂಟ ಸೇವಿಂಗ್ಸ್ ಬ್ಯಾಂಕ್‌ಗಳು ನೆಲಗೊಳಿಸಲ್ಪಟ್ಟವು. ಏತದರ್ಥ ಕ್ರಮವಿಂದ ಆಕ್ಟು ಕೂಡಾ ಒಂದು ಜಾರೀಯಲ್ಲಿ ತರಲ್ಪಟ್ಟಿರುತಿದೆ ಈ ಮೈಸೂರು ರಾಜ್ಯವು ಬ್ರಿಟಿಷ ಗವರ್ನಮೆಂಟಿನವರ ಪಾಲನಾಧಿಕಾರದೊಳಿದ್ದದರಿಂದಲೂ, ಇಲ್ಲಿ ಹರಿಮೇಜಸ್ಟೀಸ ಖಜಾನೆ ಇದ್ದದರಿಂದಲೂ ಮೇಲೆಕಂಡ ಸೇವಿಂಗ್ಸ್ ಬ್ಯಾಂಕ್ ಕ್ರಮವು ಈದೇಶದಲ್ಲಿಯೂ ಜಾರೀಯಲ್ಲಿ ಬರಲಿಕ್ಕೆ ಕಾರಣವಾಯಿತಲ್ಲದೆ ಕ್ರಮೇಣ ಪ್ರತಿ ಡಿಸ್ಟ್ರಿಕ್ಟ ಹೆಡ್‌ಕ್ವಾರ್ಟರ್‌ನಲ್ಲಿಯೂ ಒಂದೊಂದು ಏರ್ಪಟ್ಟಿತು ಹೀಗಿರುವಲ್ಲಿ ಹರ್ ಮೇಜಸ್ಟೀ ಶೀಮೆಯೊಳು ಪೋಸ್ಟಲ್ ಸೇವಿಂಗ್ಸ್ ಬ್ಯಾಂಕ್ ಪದ್ಧತಿಯು ಜಾರೀಗೆ ಬಂದ ಕೂಡಲೇ ಬಡ್ಡೀ ದರವು ೪-೩-೪ರಿಂದ ನೇಕಡಾ ೩ ೧೨೦ ರೂಪಾಯಿಗಳಿಗೆ ಬದಲಾಯಿಸಲ್ಪಟ್ಟಿತು ಇಲ್ಲಿ ಮಾತ್ರ ಹಿಂದಿನ ದರವೇ (೪-೩-೪) ಇದ್ದದರಿಂದ ಜನಗಳು ತಮ್ಮ ಲೇವಣೀ ಮೊಬಲಗಿನ ವಿಷಯವಾಗಿ ಆಲೋಚಿಸದೆ ನಿರ್ಭಯರಾಗಿದ್ದರು. ಬರುವ ಏಪ್ರಿಲ್ ತಿಂಗಳ ಲಾಗಾಯತು ಇಲ್ಲಿಯೂ ೩ ೧೨೦ ರೂಪಾಯಿಗಳಂತೆ ಬಡ್ಡೀ ದರವು ತಗ್ಗಿಸಲ್ಪಡುವದೆಂಬದಾಗಿ ಗತವಾರದ ಮೈಸೂರು ಗೆಜೆಟಿನ ಮೂಲಕ ತಿಳಿಯಬರುತಿದೆ. ಪೋಸ್ಟಾಫೀಸ ಸೇವಿಂಗ್ಸ್ ಬ್ಯಾಂಕ್‌ಗಳಲ್ಲಿ ಅನೇಕವಿಧ ಅನುಕೂಲ್ಯಗಳಿದ್ದಾಗ್ಯೂ ಜಾಸ್ತೀ ಬಡ್ಡಿ ಬರುತಿದೆಂಬ ಅಭಿಪ್ರಾಯದಿಂದ ಡಿಪಾಜಿಟದಾರರೆಲ್ಲರೂ ವಾಪಸ್ ತೆಗದುಕೊಳ್ಳದೆ ಸುಮ್ಮನಿರುತಿದ್ದರು. ಈಗ ಅಂಥಾ ಅನುಕೂಲ್ಯಗಳೂ ಇಲ್ಲದೆ ಜಾಸ್ತೀ ಬಡ್ಡಿಯೂ ಇಲ್ಲದಿರುವಾಗ್ಯೆ ಇಲ್ಲಿನ ಸೇವಿಂಗ್ಸ್ ಬ್ಯಾಂಕ್‌ಗಳಲ್ಲಿ ಲೇವಣೀ ಇಟ್ಟರಲಿಕ್ಕೆ ಜನರು ಒಪ್ಪುವರೆಂಬ ವಿಷಯವು ನಮಗೆ ಬಹಳ ಸಂದೇಹಾಸ್ಪದವಾಗಿದೆ. ಇಲ್ಲಿನ ಸೇವಿಂಗ್ಸ್ ಬ್ಯಾಂಕ್‌ನಲ್ಲಿ ೩-೧೨೦ ರೂಪಾಯಿಗಳ ಬಡ್ಡಿಗೆ ಡಿಪಾಜಿಟ ಇಡುವದಕ್ಕಿಂತಲೂ ಹರಿಮೇಜಸ್ಟೀ ಶೀಮೆಯಲ್ಲಿ ೪ ರೂಪಾಯಿಗಳ ಪ್ರಾಮಿಸರೀನೋಟುಗಳನ್ನು ಸುಲಭವಾಗಿ ತೆಗದುಕೊಳ್ಳಬಹುದೆಂದೆಣಿಸುತ್ತೇವೆ ಬೆಂಗಳೂರು ಡಿಸ್ಟ್ರಿಕ್ಟ ಖಜಾನೆ ಯೊಂದರಲ್ಲಿಯೇ ಸುಮಾರ್ ಆರುಲಕ್ಷ ರೂಪಾಯಿಗಳ ತನಕ ಡಿಪಾಜಿಟ ಮೊಬಲಗು ಜಮೆ ಯಾಗಿರುತಿದೆ. ಈ ಮೊಬಲಗಿಗೆ ಏಕಕಾಲದಲ್ಲಿ ತಗಾದೆ ಯುಂಟ ದರೆ ಆಗ ಮೈಸೂರು ಸರ್ಕಾರದವರು ಏನು ಮಾಡ ಲಾಲೋಚಿಸುವರೋ ತಿಳಿಯಲಿಲ್ಲವು. ಗತ ಸಂವತ್ಸರ ಹುಟ್ಟುವಳಿಯಲ್ಲಿ ತೋರಿಸಲ್ಪಟ್ಟ ಜಾಸ್ತೀ ಭಾಗ ಸಹ ಬೇರೇ ಕೆಲಸಗಳಿಗೆ ವಿನಿಯೋಗಿಸಲ್ಪಟ್ಟಿರುತಿದೆ. ಮುಖ್ಯವಾಗಿ ಮೈಸೂರು ಗವರ್ನಮೆಂಟಿನವರ ಅನುಕರಣ ಶಕ್ತಿಯೂ ಅನ್ಯಾಧ್ಯಕವೆಂದು ಹಿಂದೆಯೇ ತಿಳಿಸಿರುತ್ತೇವೆಯಷ್ಟೆ. ಬ್ರಿಟಿಷ ಗವರ್ನಮೆಂಟಿನವರು ಬಡ್ಡೀ ದರವು ಇನಲೂ ಕಡಮೆ ಮಾಡಿದರೇ ಹೊರತು ಅದರಿಂದ ಮುಂದೆ ಉಂಟಾಗುವ ನಷ್ಟವಂ ಕುರಿತು ಸ್ವಲ್ಪವೂ ಚಿಂತಿಸದೆ ಹೋದರು. ಇದರಿಂದ ತಮ್ಮ ನಷ್ಟವನ್ನು ಗಣಿಸದೆ ಅನ್ಯರಿಗೆ ಗಿರಾಕಿಯನ್ನುಂಟುಮಾಡಿಕೊಳ್ಳುವಂತೆ ಏರ್ಪಡುತಿದೆ ನಾಲ್ಕು ರೂಪಾಯಿಗಳ ಪ್ರಾಮಿಸರೀನೋಟನ್ನು ಕಲ್ಪಿಸಿ ತನ್ಮೂಲಕ ಬರುವ ಮೊಬಲಗನ್ನೆಲ್ಲ ಈಗ ಐದುರೂಪಾಯಿಗಳಂತೆ ತೆಗದಿರುವ ಸಾಲಕ್ಕೆ ಭರ್ತಿ ಮಾಡಿದಲ್ಲಿ ಗವರ್ನಮೆಂಟಿಗೆ ನೇಕಡಾ ೧ ರೂಪಾಯಿ ಶಿಲ್ಕಾಯಿತ್ತಾಗುವದಲ್ಲದೆ ಪ್ರಜೆಗಳಿಗೆ ಲಾಭಕರವಾಗಿರುವದೆಂದೆಣಿಸುತ್ತೇವೆ. ಈಗ ಘಾಯಿಷ್ ಮಾಡಲ್ಪಟ್ಟಿರುವ ರೂಲ್ಸಗಳು ಅನೇಕಜನ ಡಿಪಾಜಿಟದಾರರಿಗೆ ತಮ್ಮ ಡಿಪಾಜಿಟ ಮೊಬಲಗನ್ನ ವಾಪಸ ತೆಗದುಕೊಳ್ಳುವಂತೆ ಪ್ರೇರಿಸತಕ್ಕವಾಗಿರುತಿವೆ.

Occasional Notes
ನೈಮಿತ್ತಿಕ ವಿಷಯನ್ಯಾಸ.

Offer of pecuniary aid.—ಭರತಪುರದ ಮಹಾರಾಜರವರು ಇಂಡ್ಯದೇಶದ ಸರಹದ್ದು ಪ್ರಾಂತದ ಬಂದೋಬಸ್ತಿಯ ಬಗ್ಯೆ ತಾವು ಒಂಬತ್ತುಲಕ್ಷ ರೂಪಾಯಿಗಳು ಕೊಡುವದಾಗಿ ಇಂಡ್ಯಗವರ್ನಮೆಂಟಗೆ ತಿಳಿಸಿದರೆಂದು ಅಲಹಾಬಾದ ಪೋಸ್ಟೆಂಬ ಪತ್ರಿಕೆ ಹೇಳುತಿದೆ.

An offer declined.—ವೈಸ್‌ರಾಯ್‌ಯವರ ಮಂತ್ರಾಲೋಚಕ ಸಭೆಯೊಳು ರಾಜಾ ಸರ್ ಟಿ. ಮಾಧವರಾಯರವರಿಗೆ ಒಬ್ಬ ಮೆಂಬರ್‌ಸ್ಥಾನವಂ ಕೊಡುವ ಅಭಿಪ್ರಾಯ ಅವರಿಗೆ ತಿಳಿಸಲ್ಪಟ್ಟು, ಅದು ರಿಮಗೆ ಬೇಕವೆಂದು ಸದರೀ ರಾಯರವರು ಉತ್ತರಕೊಟ್ಟಂತೆ ಪಯೋನಿಯರ್‌ಪತ್ರಿಕೆ ಹೇಳುತಿದೆ.

An invitation accepted.—ಬರುವತಿಂಗಳ ೭ನೇ ತಾರೀಖ್ ಸುಮಾರಿಗೆ, ಕಲ್ಕತ್ತೆಯೊಳು ನಡೆಯುವದಾಗಿರುವ ದರ್ಬಾರಿಗೆಬಂದು ಅವರಿಗಾಗಿ ನಿಶ್ಚಯಿಸ್ಪಟ್ಟವಾಗಿರುವ ಪ್ರಶಸ್ತಿಯಂ ಸ್ವೀಕರಿಸಬೇಕೆಂದು ವೈಸ್‌ರಾಯ್‌ಯವರು ವಿಜಯನಗರ ಮಹಾರಾಜರವರಿಗೆ ಆಹ್ವಾನಪತ್ರಿಕೆಯಂ ಬರೆದು ಅವರದನ್ನಂಗೀಕರಿಸಿರುತ್ತಾರೆ.

Robbery on the N. W. Railway.—ವಾಯವ್ಯದೇಶದೊಳಗಣ ಷಾಂಭು ಯೆಂಬಸ್ಟೇಷನ್ ಮ್ಯಾಸ್ಟರು, ರನ್ನ ಪ್ರೈವೇಟ ರೂಮಿನ ಬಡವೆಗಳೂ ಮೂರುದಿನಗಳ ಹುಟ್ಟುವಳಿಯೂ ಸೇರಿ ನಾಲ್ಕುಸಾವಿರ ರೂಪಾಯಿಗಳು ಕಳವಾದಂತೆ ಪೋಲೀಸಿನವರಿಗೆ ರಿಪೋರ್ಟುಮಾಡಿದರಂತೆ ಇದೇ ಸ್ಟೇಷನಿಗೆ ಕೆಲವು ದಿನಗಳಹಿಂದೆಯೂ ಕಿಡಬಟ್ಟಲ್ಪಟ್ಟರು

Receipt of a reply.—ಮುಂಬೈ ಚೀಫ್ ಪ್ರೆಸಿಡೆನ್ಸೀ ಮ್ಯಾಜಿಸ್ಟ್ರೇಟ ಕೆಲಸಕ್ಕೆ ನವಿಯನ್ನು ನೇಮಕರಮ್ಮಾಡಿಕೊಡದೆಂದು ಅಲ್ಲಿನ ಪ್ರಜೆಗಳು ಸ್ಟೇಟ ಸೆಕ್ರೇಟರಿಯವರಿಗೆ ಬರೆದುಕೊಂಡ ಅರ್ಜಿಗೆ ಅವರು ಕೊಟ್ಟ ಜವಾಬಿನಲ್ಲಿ, ಸದರೀಕೆಲಸಕ್ಕೆ ಸಿವಿಲಿಯರ್‌ಗಳಿಗೂ ಬ್ಯಾರಿಸ್ಟರ್‌ಗಳಿಗೂ ಸಮಾನ ಬಾಧ್ಯತೆ ಇರುವದರಿಂದ ಗವರ್ನಮೆಂಟಿನವರಿಗೆ ಆಯಾ ಸಂದರ್ಭಗಳಲ್ಲಿ ಅನುಕೂಲ್ಯತೆ ಕಂಡುಬರುವಂತೆ ಸಿವಿಲಿಯನನ್ನಾದರೂ ಬ್ಯಾರಿಸ್ಟರನ್ನಾದರೂ ನೇಮಕರಮ್ಮಾಡುವ ಅಧಿಕಾರವನ್ನು ತಪ್ಪಿಸುವದಕ್ಕೆ ತಮಗೆ ಕಾರಣ ತೋರವಿಲ್ಲವೆಂದು ನಮೂದ ಮಾಡಿರುತ್ತಾರೆ

The succession of Mr. Gladstone.—ನೇಟಾಳ ಸಂಸ್ಥಾನದ ರೆಸಿಡೆಂಟರಾದ ಮಿಸ್ಟರ್ ಗ್ಲಾಡ್‌ಸ್ಟೋನ್‌ಯವರು ತಮ್ಮ ಕೆಲಸವಂಬಿಟ್ಟು ನಿವೃತ್ತಿಸುವ ಪಡೆಯುವ ಉದ್ದೇಶದೊಡನೆ ರಜಾ ಪಡಕೊಂಡು ಸ್ವದೇಶಕ್ಕೆ ಹೋಗುವಲ್ಲಿ ಅವರಕೆಲಸಕ್ಕೆ ಅಧ್ವಾರ ಸಂಸ್ಥಾನದ ಪೊಲಿಟಿಕಲ್ ಏಜಂಟರಾದ ಕರ್ನಲ್ ಬೀಕಾಕ್ಸಿಯವರುನೇಮಕರಮ್ಮಾದಲ್ಪಡುವರು

Construction of a branch line.—ಹೈದರಾಬಾದ್ ಸ್ಟೇಟ ರೈಲ್ವೆ ರಸ್ತೆಯಿಂದ ಚಾಂದಾಯೆಂಬ ಪ್ರದೇಶಕ್ಕೆ ಒಂದು ರಸ್ತೆಯನ್ನು ಹಾಕುವದಕ್ಕಿಂತಲೂ ಸೆಂಟ್ರಲ್ ಪ್ರಾವಿನ್ಸೆಸ್‌ಯೆಂಬ ಮಧ್ಯದೇಶಗಳೊಳಗಣ ವೇರೂರ್ ಯೆಂಬಸ್ಥಳಕ್ಕೆ ಒಂದು ಶಾಖಾಮಾರ್ಗ ನಿರ್ಮಾಣವು ವಿಶೇಷ ಫಲಕಾರಿಯಾಗಿರುವದೆಂದು ಯೋಚಿಸಲ್ಪಟ್ಟಿರುವಂತೆ ಡೆಕ್ಕನ್ ಟೈಮ್ಸ್‌ಪತ್ರಿಕೆ ಹೇಳುತಿದೆ.

The opium revenue of India.—ಸನ್ ೧೮೮೬—೮೭ನೇ ಸರ್ಕಾರ್ ಸಾಲ್‌ನಲ್ಲಿ, ಇಂಡ್ಯದೇಶದ ಅಫೀಂಹುಟ್ಟುವಳಿಯು, ಬಜೆಟ್ ಅಂದಾಜಿಗಿಂತಲೂ ೫೪ ಲಕ್ಷರೂಪಾಯಿಗಳು ಕಮ್ಮಿ ಆಯಿತು ಇದಕ್ಕೆ ಕಾರಣವೇನೆಂದರೆ, ಬಂಗಾಳೇ ಅಫೀಂ ಹುಟ್ಟುವಳಿಯಲ್ಲಿ ೧೮,೮೮,೩೭೫ ರೂಪಾಯಿಗಳೂ, ಮುಂಬೈ ಅಫೀಂ ಹುಟ್ಟುವಳಿಯಲ್ಲಿ ೪,೯೩,೬೩೫ ರೂಪಾಯಿಗಳೂ ಕಡಮೆಯಾಯಿತು.

A trip to Europe.—ಹೈದರಾಬಾದ ಸಂಸ್ಥಾನದ ಚೀಫ್ ಜಸ್ಟೀಸರವರಾದ ನವಾಬ್ ಫತ್ತೆ ನವಾಜ್‌ಜಂಗರವರು, ಆರುತಿಂಗಳಕಾಲ ಯೂರೋಪ್‌ದೇಶ ಸಂಚಾರವನ್ನಾಡಿಕೊಂಡು ಬರಬೇಕೆಂಬ ಉದ್ದೇಶದೊಡನೆ ಬರುವತಿಂಗಳ ೧೮ನೇ ತಾರೀಖ್‌ನಲ್ಲಿ ಪ್ರಯಾಣಮಾಡುವ ಸನ್ನಾಹದಲ್ಲಿರುತಾರೆಂತಲೂ, ಅವರ ಸಂಗಡ ಸದರೀ ಕೋರ್ಟಿನ ಇನ್ನೊಬ್ಬ ಜಡ್ಜಿಯವರಾದ ಮೌಲ್ವೀ ಇಕಾಯತ್ ಅಲ್ಲಿಯವರು ಸಹ ಹೊರಡುವ ಸಂಭವ ಕಾಣಬರುವದಾಗಿಯೂ ಅಲ್ಲಿನ ಪತ್ರಿಕೆಯೊಂದರಮೂಲಕ ತಿಳಿಯಬರುತಿದೆ

Reception of National Congress delegates.—ಕಳೆದತಿಂಗಳ ಅಂತ್ಯಭಾಗದೊಳು ಮದರಾಸ್‌ನಲ್ಲಿ ಸೇರಿದ ನ್ಯಾಷನಲ್ ಕಾಂಗ್ರೆಸ್ಸೆಂಬ ಸಭೆಗೆ ಬಂದಿದ್ದ ಪ್ರತಿನಿಧಿಗಳು ಸ್ವದೇಶಗಳಿಗೆ ವಾಪಸ ಹೋಗುವಲ್ಲಿ, ಪುನೆಯ ಸಾರ್ವಜನಿಕ ಸಭೆಯವರ ಅಭಿಪ್ರಾಯಾನುಸಾರ ಈ ತಿಂಗಳ ೧೩ನೇ ತಾರೀಖಿನಲ್ಲಿ, ಲಾಲಾಮುದಾಬಾಪತ್ ಬಳಿ ಒಂದು ಪ್ರಬಲ ಸಮಾಜಸೇರಿ ಸದರೀ ಪ್ರತಿನಿಧಿಗಳು ಒತ್ತಾಯಾಡಿಕೊಂಡು, ಸದರೀಯವರ ವಿಷಯದಲ್ಲಿ ಮದರಾಸ್ ಕಮಿಟಿಯವರು ತೋರಿಸಿದ ಗೌರವ ವಿಶ್ವಾಸಗಳಿಗಾಗಿ ಅವರಿಗೆ ತಮ್ಮ ವಂದನೆಯನ್ನರ್ಪಿಸತಕ್ಕದ್ದೆಂದು ನಿರ್ಧರಿಸಿದರು

Offer of bribery.—ತಿರುವಾಂಕೂರು ಮಹಾರಾಜರವರಿಗೆ ಯುವರಾಜರವರು ಲಂಚ ಕೊಡುವದಕ್ಕೆ ಪ್ರಯತ್ನ ಪಟ್ಟರೆಂದು ಅಲ್ಲಿನ ರೆಸಿಡೆಂಟರು ಗವರ್ನಮೆಂಟಗೆ ರಿಪೋರ್ಟ ಮಾಡಲು ಯುವರಾಜರವರು ರೆಸಿಡೆಂಟರಮೇಲೆ ಚಾರ್ಜ್ ಮಾಡಿರುತ್ತಾರೆಂದಲೂ, ಅದರ ವಿಚಾರಣೆಯ ಬಗ್ಯೆ ಗವರ್ನಮೆಂಟಿನವರು ಮಾ|| ಸ್ಟೋಕ್ಸ್ ಎಂಬವರನ್ನು ಅಲ್ಲಿಗೆ ಕಳುಹಿಸುವವರಾಗಿರಾರೆಂತಲೂ, ಯುವರಾಜರವರು ತಮ್ಮ ಸೇವಕತ್ವದಲ್ಲಿ ಬ್ಯಾರಿಸ್ಟರ್ ಮಿ ನಾರ್ಟನ್‌ಯವರ ಸಂಗತ ಯೋಚಿಸುವದಕ್ಕಾಗಿ ಮದರಾಸಿಗೆ ಬಂದಿರುತ್ತಾರೆಂತಲೂ ಆಂಧ್ರಪ್ರಕಾಶಿಕಾ ಪತ್ರಿಕೆ ತಿಳಿಸುತಿದೆ.

Fraud punished.—ಅಯೋಧ್ಯ ಮತ್ತು ರೋಹಿಲಖಂಡ ರೈಲ್ವೆ ನೌಕರರಿಬ್ಬರು, ಅಂದರೆ ಟಿಕ್ಕೆಟುಕೊಡುವದಕ್ಕೂ, ಪ್ರಯಾಣಸ್ಥರು ಗಾಡಿಯಿಳಿಯುವಕಾಲದಲ್ಲಿ ಅವರಿಂದ ಅವನ್ನು ತೆಗದುಕೊಳ್ಳುವದಕ್ಕಾಗಿಯೂ ನಿಯಾಮಕರಾಗಿದ್ದ ಇಬ್ಬರು ರ್‍ಯಾಂಕ್‌ಗಳು ಕಂಪೆನಿಯವರು ಮೋಸಗೊಳಿಸುವ ಉದ್ದೇಶದೊಡನೆ ತಮ್ಮೊಳಗೆ ತಾವು ಸಂಕೇತವಮಾಡಿಕೊಂಡು, ಬನಾರಸ್ ಅಥವಾ ತಾರೀಖ್‌ಗಳಲ್ಲದೆ ಲಕ್ನೋ ಸ್ಟೇಷನ್ನಿಂದ ಫೈಜಾಬಾದ ವರಿವಿಗೆ ಪ್ರಯಾಣಸ್ಥರಿಗೆ ಟಿಕೆಟುಕೊಟ್ಟ ತಪ್ಪಿನಬಗ್ಯೆ ಬೀಯಸು ಎರಡುವರುಷಗಳ ಕಠಿಣಸಜಾ ಮತ್ತು ಜುರ್ಮಾನೆ ವಿಧಿಸಲ್ಪಟ್ಟರೆಂದು ಅಲ್ಲಿನ ಪತ್ರಿಕೆ ಯೊಂದರಮೂಲಕ ತಿಳಿಯಲಾದೆವು ಸದರೀ ಇಬ್ಬರೂ, ಹಿಂದೆ ಮದರಾಸ್ ರೈಲ್ವೆ ಕಂಪೆನಿಯಲ್ಲಿದ್ದು ಇಂತಾ ತಕ್ಸೀರ್ ನಡೆಸಿ ಸಜಾ ಹೊಂದಿದ ಏರ್ನಸ್ಟ್ ಮತ್ತು ರಾಮಕೃಷ್ಣಯೆಂಬುವವರೆಂಬ ಇಬ್ಬರ ಬಂಧೇಕದ ವಿದ್ಯಮಾನ ಮಾಡಿದರೆಂದು ತೋರುತಿದೆ.

Religious prejudices.—ಸಿಲೋನ್ ದ್ವೀಪದೊಳಗಣ ಪ್ಯಾಟಾಣ ಎಂಬ ಸ್ಥಳದಲ್ಲಿ ನಡೆಸಲ್ಪಟ್ಟ ಒಂದು ಖೂನೀಮೊಕದ್ದಮೆಯಲ್ಲಿ ಕುಮಾರವೇಲು ಮತ್ತು ಕಂಬಯ್ಯನೆಂಬ ಇಬ್ಬರು ಅಪರಾಧಿಗಳು ಮರಣದಂಡನೆ ವಿಧಿಸಲ್ಪಟ್ಟು ಜೈಲಿನಲ್ಲಿರುವಾಗ್ಯೆ ಕುಮಾರವೇಲು ಎಂಬವನು ಕ್ರಿಶ್ಚಿಯನ್‌ಮತಕ್ಕೆ ಸೇರಬೇಕೆಂಬ ಅಭಿಪ್ರಾಯ ತನಗಿರುವಂತೆ ವ್ಯಕ್ತಪಡಿಸಲು ಕೂಡಲೇ ಪಾದರಿಗಳು ಜೈಲಿನಲ್ಲಿ ಪ್ರವೇಶಿಸಿ ಯೆಲ್ಲರಮುಂದೆ ಅವನನ್ನು ತಮ್ಮ ಮತಕ್ಕೆ ಸೇರಿಸಿಕೊಂಡ ಒಡನೇ ಅವನು ಖುಲಾಸೇ ಮಾಡಲ್ಪಟ್ಟನು. ಕಂಬಯ್ಯನೆಂಬವನು ಗಲ್ಲಿಗೆಹಾಕಲ್ಪಡುವದಕ್ಕೆ ಸಿದ್ಧವಾಗಿರುವಲ್ಲಿ ಕೊಲುಪೋಯಿಷ್ಟಣದಲ್ಲಿದ್ದ ಸಿಲೋನ್ ಗವರ್ನರರವರ ಕಡೆಯಿಂದ ಸದರೀ ದಂಡನೆಯನ್ನು ಹದಿನೈದು ದಿನಗಳ ವರಿವಿಗೆ ನಿಲ್ಲಿಸಿದುದುತ ತುತಿನೂಲಕಹುಕುಂಬಂತು ಮೇಲೆಕಂಡಇಬ್ಬರೂ ಹಿಂದೂಗಳಾಗಿದ್ದು ಖೂನೀಮಾಡಿದ್ದಕ್ಕಾಗಿ ಮರಣ ದಂಡನೆ ವಿಧಿಸುವಣ, ಜೈಲಿನಲ್ಲಿರುವಾಗ್ಯೆ ಪಾದರಿಗಳು ಹೋಗಿ ಅವರಿಬ್ಬರೂ ಕ್ರಿಶ್ಚಿಯನ್‌ರು ಆದರೆ ಅವರ ಅಪರಾಧಗಳು ಮನ್ನಿಸಲ್ಪಡುವವೆಂದು ಹೇಳುವಣ, ಕುಮಾರವೇಲು ಯೆಂಬವನು ಕ್ರಿಶ್ಚಿಯನ್ ಮತಕ್ಕೆ ಸೇರುವನೆಂಬ ನಂಬಿಕೆ ಯುಂಟಾದ ಕೂಡಲೇ ಅವನು ಖುಲಾಸೇ ಮಾಡಲ್ಪಡುವಣ, ಕಂಬಯ್ಯನೆಂಬವನಿಗೆ ವಿಧಿಸಲ್ಪಟ್ಟ ಸಜಾವನ್ನು ಹದಿನೈದು ದಿನಗಳವರಿವಿಗೆ ನಿಲ್ಲಿಸತಕ್ಕದ್ದೆಂದು ಗವರ್ನರ್ ಕಡೆಯಿಂದ ತಂತಿ ಮೂಲಕ ಹುಕುಂ ಬರುವಣ, ಇವೆಲ್ಲವಂ ನೋಡಿದರೆ ಖೈದಿಗಳು ಜೈಲಿನಲ್ಲಿರುವಾಗ್ಯೆ ಕ್ರಿಶ್ಚಿಯನ್ ಮತಕ್ಕೆ ಸೇರಿದರೆ ಅವರ ಅಪರಾಧಗಳು ಮನ್ನಿಸಲ್ಪಡುತವೆಯೆಂದು ತೋರುಂದೆ. ಇದುವರಿವಿಗೆ, ಕ್ರಿಶ್ಚಿಯನ್‌ಮತಕ್ಕೆ ಸೇರಿದರೆ ನೌಕರೀ ಬಡ್ತಿಯಾಗುತದೆಂಬ ನಂಬಿಕೆ ಯುಂಟಾಗಿತ್ತು, ಇನ್ನು ತಪ್ಪುಗಳು ಮನ್ನಿಸಲ್ಪಡುವವೆಂಬ ಭರವಸೆ ಯುಂಟಾಯಿತೆಂದು ಮದರಾಸು ಆಂಧ್ರಪ್ರಕಾಶಿಕೆ ಹೇಳುತಿದೆ.

LOCAL AND PROVINCIAL NEWS
ಒಳದೇಶ ಮತ್ತು ತಾಲ್ಲೂಕುವಾರು ವೃತ್ತಾಂತವು

London Mission School.—ಈ ವೂರು ಲಂಡನ್ ಮಿಷನ್‌ಸ್ಕೂಲ್‌ನಿಂದ ಮಿಡಲ್ ಸ್ಕೂಲಿನ ಪರೀಕ್ಷೆಗೆ ಹೋಗಿದ್ದ ೫೩ ಮಂದಿ ವಿದ್ಯಾರ್ಥಿಗಳ ಪೈಕಿ ೩೮ ಜನ ತೇರ್ಗಡೆಯಾದರೆಂದು ಕೇಳುತ್ತೇವೆ. ಆದರೆ ೩೦ ಮಂದಿಯನ್ನೇ ಪ್ರಿನ್ಸಿಪಾಲರವರು ಚುನಾಯಿಸಿದ್ದರೆಂದಲೂ ಮಿಕ್ಕವರೆಲ್ಲ ಅವರ ಅನುಮತಿಯಿಲ್ಲದೆ ದರಖಾಸ್ತು ಕಳುಹಿಸಿದ್ದರೆಂತಲೂ ತಿಳಿಯಬರುತಿದೆ. ರಾ|| ಮೊಹಾಬ್ಬರ್‌ಯವರು ರಜಾಮೇಲೆ ಇಂಗ್ಲೆಂಡಿಗೆ ಹೋಗುವವರಾಗಿರುವಂತೆ ಒಳದೇಶದಪತ್ರಿಕೆಯೊಂದು ತಿಳಿಸುತಿದೆ.

The B. A. Pass list.—ಈಸಲದ ಬಿ. ಏ ಪರೀಕ್ಷೆಯ ಪೂರ್ವಭಾಗದಲ್ಲಿ ತೇರ್ಗಡೆಯಾದವರ ಹೆಸರುಗಳಪಟ್ಟಿಯು ಗತವಾರದ ಮದರಾಸ್ ಪೋರ್ಟ್‌ಸೆಂಟ ಜಾರ್ಜ ಗೆಜಟನಲ್ಲಿ ಪ್ರಕಟಿಸಲ್ಪಟ್ಟಿರುತದೆ ಈ ವೂರಿಂದ ಸದರೀ ಪರೀಕ್ಷೆಗೆ ಹೋಗಿದ್ದ ೩೫ ಜನರಪೈಕಿ ತೇರ್ಗಡೆಯಾದವರು ೧೨ ಮಂದಿ ಹೀಗಲ್ಲಾಗಿ ಮಿಕ್ಕವರಪೈಕಿ ಐವರು ಕನ್ನಡಭಾಷೆಯಲ್ಲಿಯೂ, ಆರ್‍ವರು ಇಂಗ್ಲಿಷ್ ಮತ್ತು ಕನ್ನಡ ಭಾಷೆಗಳಲ್ಲಿಯೂ, ೧೨ ಜನ ಪಕ್ಕಾ ಇಂಗ್ಲಿಷ್ ಒಂದರಲ್ಲಿಯೂ ತಪ್ಪಿಹೋದರೆಂದು ತಿಳಿಯಬರುತಿದೆ.

H. H. the Maharaja.—ಶ್ರೀಮನ್ಮಹಾರಾಜರವರು ಈಗ ಲಾಹೋರ್ ಪಟ್ಟಣದಲ್ಲಿ ಲೆಫ್ಟಿನೆಂಟ ಗವರ್ನರ್ ಮಿ ಲೈಲ್ ಯವರ ಆತಿಥ್ಯವನ್ನಂಗೀಕರಿಸಿಕೊಂಡು ದಯಮಾಡಿರುತ್ತಾರೆ, ಇವರು ನಾಳೆಯದಿನ ಬೆಳಗ್ಯೆ ಅಲ್ಲಿಂದ ಪ್ರಯಾಣವಾಗಿ ಅಮೃತಸರಸ್ಸು, ದೆಹಲಿ, ಮಧುರೆ, ಆಗ್ರಾ, ಜಯಪುರ, ಅಜಮೀಯರ್, ಜೋಧಪುರ, ಅಹಮದಾಬಾದ, ಬರೋಡೆ, ಮುಂತಾದ ಪ್ರಸಿದ್ಧ ಸ್ಥಳಗಳಂ ಸಂಚರಿಸಿಕೊಂಡು ಬರುವ ತಿಂಗಳ ೧೫ನೇ ತಾರೀಖಿಗೆ ಸರಿಯಾಗಿ ಇಲ್ಲಿಗೆ ದಯಮಾಡುವರು ಮಹಾರಾಜರವರು ದೇಶ ಸಂಚಾರ ಕಾಲದಲ್ಲಿ ತಮ್ಮ ಅವಧಾನಕ್ಕೆ ವಿಷಯಗಳಾದ ವಿಶೇಷಾಂಶಗಳನ್ನೆಲ್ಲ ಮದರಾಸ್‌ಗವರ್ನರ್ ಮೊದಲಾದವರಂತೆ ಮಿನಿಟ್ಸ ಬರೆದು ತಮ್ಮ ಪ್ರಜೆಗಳಿಗೆ ವ್ಯಕ್ತಪಡಿಸದೆ ಹೋಗಲಾರರೆಂದು ನಂಬುತ್ತೇವೆ.

Fraud.—ಇದೇ ತಿಂಗಳ ೧೩ ನೇ ತಾರೀಖಿನ ರಾತ್ರಿ ಸುಮಾರು ೯ ಗಂಟೇ ಸಮಯದಲ್ಲಿ ಸುಲ್ತಾನ್‌ಪೇಟೆಯಲ್ಲಿರುವ ಯತಿರಾಜ ಶೆಟ್ಟಿ ಅಂಗಡಿಗೆ ಯಾವನೋ ಒಬ್ಬನು ಬಂದು ತನಗೆ ಕೆಲವುಸಾಮಾನುಗಳು ಬೇಕೆಂದು ಕೇಳ ಸುಮಾರು ೫೦-೬ ರೂಪಾಯಿನ ಸಾಮಾನುಗಳನ್ನು ತೆಗದುಕೊಂಡು ಆಮೇಲೆ ಕೆಲವು ಸಾಮಾನುಗಳನ್ನು ಆತನ ಅಂಗಡಿಯಲ್ಲೇ ಬಿಟ್ಟು ಬಾಕಿ ಸಾಮಾನು

ಗಳನ್ನು ತೆಗದುಕೊಂಡು ತಾನು ಸೊಸುವೆಯನ್ನು ಈ ಊರಿಗೆ ತಂದು ಮಾರಿರುವದಾಗಿಯೂ ಅವರ ಹಣ ಬರಬೇಕು ಅವನ್ನು ತೆಗದುಕೊಂಡು ಬಂದು ಈ ಜಿನಸುಗಳ ಮೊಬಲಗನ್ನು ನಿಮಗೆ ಕೊಟ್ಟುಬಿಡುತ್ತೇನೆ. ಅವರಿಗೂ ನನ್ನ ಸಾವಕಾಶ ನಿನಗಂಟು ಇಲ್ಲೇ ಇರಲಿಎಂದು ಹೇಳಿ ತಾನು ತಂದಿದ್ದ ಒಂದು ಗೋಣಿಚೀಲವನ್ನು ಆತನ ಅಂಗಡಿಯಲ್ಲಿಟ್ಟು ನೀರಿಗೆ ಹಗ್ಗಬೇಕಾಗಿರುತ್ತೆ, ಅದಕ್ಕಾಗಿ ನನ್ನಲ್ಲಿ ಮದ್ದು ಯಾವದೂ ಇಲ್ಲ, ಎರಡು ಕಾಸನ್ನು ಕೊಡಿ ನಾನು ಪುನಃ ಬಂದಾಗ ಕೊಡುತ್ತೇನೆಂದು ಹೇಳಿ ಅಂಗಡಿಯವನಿಂದ ಎರಡು ಕಾಸನ್ನು ತೆಗದುಕೊಂಡು ಹೊರಟುಹೋದವನು ಮಾರನೇ ದಿವಸ ಬೆಳಗ್ಗೆ ಸುಮಾರು ೯-೧೦ ಗಂಟೆವರೆವಿಗೂ ಬಾರದೇ ಇದ್ದದ್ದರಿಂದ ಅಂಗಡಿಯವನಿಗೆ ಅನುಮಾನಹುಟ್ಟಿ ಅವನು ಹೋಗುವಾಗ್ಯೆ ಅಂಗಡಿಯಲ್ಲಿಟ್ಟಿದ್ದ ಗೋಣಿಯನ್ನು ಬಿಚ್ಚಿ ನೋಡಲು ಅದರಲ್ಲಿ ಹಟ್ಟಿಗೆ ಚೂರುಗಳು, ಅಡಿಕೆ ಸಿಪ್ಪೆ, ರಾಗಿಹೊಟ್ಟು ಮುಂತಾದ ಅಮೂಲ್ಯವಾದ ಸರಕುಗಳು ಇದ್ದವು. ಇದನ್ನು ನೋಡಿ ತನ್ನ ಶಾವು ಮೋಸಹೋದದ್ದಕ್ಕಾಗಿ ತುಂಬಾ ವ್ಯಸನಪಟ್ಟು ತಾವು ಮೋಸಹೋದಸಂಗತಿಯನ್ನು ಇತರರೊಡನೆ ಹೇಳುವದಕ್ಕೆ ನಾಚಿಕೊಂಡು ಸುಮ್ಮನಾದನು. ಆದರೆ ಅವನು ತೆಗದುಕೊಂಡುಹೋದ ಜಿನಸುಗಳ ಬದಲಿನಲ್ಲಿ ಇದ್ದವುಗಳನ್ನು ಇಟ್ಟುಕೊಂಡಿರುತ್ತಾನಲ್ಲವೆ? ಮ್ಯಾ. ಪ್ರ ಚಿಂ

Purification ceremonies.—ಶ್ರೀಬಸವ ಅಪ್ಪಸ್ವಾಮಿ ಕನ್ನಿಕಾಸದರ್ ಮ|| ಕೃಷ್ಣಸ್ವಾಮಯ್ಯಂಗಾರ್ಯರ ಪುತ್ರರಾದ ಮ|| ರಾಮಸ್ವಾಮಯ್ಯಂಗಾರ್ಯರಿಗೆ ಸಮುದ್ರಯಾನದ್ವೀಪಾಂತರವಾಸ ಪ್ರಾಯಶ್ಚಿತ್ತಗಳು ಮಾಡಲ್ಪಟ್ಟವೆಂಬದಾಗಿ ಗತವಾರದಲ್ಲಿ ಸೂಚಿಸಿದ್ದೆವಷ್ಟೆ. ಆಕಾಲದೊಳು ಅಲ್ಲಿ ಸೇರಿದ್ದ ಸ್ವದೇಶಾನ್ಯದೇಶೀಯರಾದ ಮತ್ತು ಮತತ್ರಯಾವಲಂಬಿಗಳಾದ ಕೆಲವರು ದ್ವಿಜಸಮೂಹದವರು ಪ್ರಾಯಶ್ಚಿತ್ತಾನಂತರ ಮೇಲೆಕಂಡ ಸಮುದ್ರಯಾಯಿಗೆ ಕೊಟ್ಟ ಒಂದು ಶುದ್ಧಪತ್ರಿಕೆಯ ಪ್ರತಿಯು ನಮಗೆ ಕಳುಹಿಸಲ್ಪಟ್ಟದ್ದಾಗಿ ಅದು ಸಕಲಜನರಿಗೆ ತಿಳುವಳಿಕೆಯಾಗಲೆಂದು ಇದರಡಿ ಪ್ರಕಟಿಸುವೆವು ಹ್ಯಾಗಂದರೆ:—

"ಶುದ್ಧಿಪತ್ರಿಕಾ.—ಮಹೀಶೂರಪುರ ರಾಷ್ಟ್ರಾಂತರ್ಗತ ಕಲ್ಯಾಣಪುರ ನಿವಾಸಿ ಯಜುರ್ವೇದಿ ಬಾದರಾಯಣಸಗೋತ್ರ ಕೆಂಪ್ಪರು ಕೃಷ್ಣಸ್ವಾಮಯ್ಯಂಗಾರ್ಯ ಸುಧೀರು ಶ್ರೀವೈಷ್ಣವ ಕುಲಶೋಭಕತನೂಜಸ್ಯ ಬಾದರಾಯಣಸಗೋತ್ರ ರಾಮಸ್ವಾಮಯ್ಯಂಗಾರ್ಯಶರ್ಮಣಃ, ಸ್ವಾನುಚರ ಶ್ರೀರಂಗಪುರ ನಿವಾಸ್ಯಾತ್ರೇಯಸಗೋತ್ರ ನೃಸಿಂಹಾಚಾರ್ಯಸುತ ಶೇಷಾಚಾರ್ಯಸಹಿತಸ್ಯ ಭಾರತವರ್ಷಾನ್ನಿರ್ಗತಸ್ಯ ನಾವಮಾರುಹ್ಯ ಸಮುದ್ರಯಾನೇನ ಮ್ಲೇಚ್ಛವಾಸ ದ್ವೀಪಾಂತರಂಗತ್ವಾ ತದ್ದೇಶವಾಸೇನ ತದ್ದೇಶೀಯ ಸಹವಾಸಾತ್ ಸಂಭಾವಿತ ಕೃತ್ಯಕರಣ ಕೃತ್ಯಾಕರಣ ಪ್ರಯುಕ್ತ ಪಾತಕಸಂಭಾವನಾತ್ ತದ್ದೋಷ ನಿವೃತ್ಯೈ ಸಮಾಗತ್ಯ ಆತ್ಮನಃ ಶುದ್ಧಿಂ ಕಾಮಯಮಾನಸ್ಯಾನಂತರಂ ತಸ್ಯ ಪ್ರಾಯಶ್ಚಿತ್ತಾನುಷ್ಠಾನೇ ಅನುಷ್ಠಿತೇ ಚ ಪ್ರಾಯಶ್ಚಿತ್ತೇ ಸಾತಿಸ್ಯ ನಿವೃತ್ತೌ ಚ ಬಹುಧಾನುಚಿಂತನಾತ್ ಪರಸ್ಪರ ವಿಮೃಶ್ಯ ವಯಂ ದ್ವಿಜಾಃ ಮಿಲಿತಾಃ ಧರ್ಮಶಾಸ್ತ್ರ ವಿಚಾರೇಣ ತಸ್ಯ ಧರ್ಮಶಾಸ್ತ್ರ ವಿಹಿತ ಪ್ರಾಯಶ್ಚಿತ್ತಾನುಷ್ಠಾನ ಯೋಗ್ಯತಾಂತೇನಾನುಷ್ಠಿತಂ ಚ ಪಾತಕ ನಿವೃತ್ತ್ಯಾ ಶ್ರಾತತ್ವಂ ಚ ನಿರಣೈಷ್ಮ ತತ್ರ ಕಾಂಚೀಮಂಡಲ ಮಂತ್ರನಾಯಮಾನ ಸಕಲಶಾಸ್ತ್ರ ಪಾರಂಗತ ಶ್ರೀ ಶತಮರ್ಷಣ ಕುಲತಿಲಕ ಶ್ರೀಶೈಲ ಪೂರ್ಣಮಹಾಪುರುಷ ಲಕ್ಷ್ಮೀಕುಮಾರ ತಾತದೇಶಿಕ ಕುಲಾಂಬುಧಿ ಶೀತಭಾನು ಶ್ರೀಮದ್ವೈದಿಕಮಾರ್ಗ ಪ್ರತಿಷ್ಠಾಪನಾಚಾರ್ಯೈರುಭಯ ವೇದಾಂತಾಚಾರ್ಯಾಣಾಂ ಮಹಾಮಹೋಪಾಧ್ಯಾಯ ಶ್ರೀಕೃಷ್ಣ ತಾತಾಚಾರ್ಯಾಣಾಂ ಅವೇಕ್ಷತ್ರಕಾನುಸಾರೇಣ ಕಲ್ಯಾಣಪುರ್ಯಾಂ ಸರ್ವಜಿತ್ಸಂವತ್ಸರ ಪುಷ್ಯಬಹುಳ ಚತುರ್ದಶ್ಯಾಂ ಗುರುವಾಸರೇ ಬಾದರಾಯಣಸಗೋತ್ರ ರಾಮಸ್ವಾಮಯ್ಯಂಗಾರ್ಯೇಣ ಸ್ವಾನುಚರಾತ್ರೇಯ ಶೇಷಾಚಾರ್ಯ ಸಹಿತೇನ ಶ್ರೀರಂಗ ಕಾಂಚೀಪುರಾದಿ ದಿವ್ಯಕ್ಷೇತ್ರವಾಸಿಭಿಃ ಶ್ರೀವೈಷ್ಣವಾಗ್ರಸರೈಃ ಅನ್ಯದೇಶೀಯೈಃ ಏತದ್ದೇಶವಾಸಿಭಿಶ್ಚ ಮತತ್ರಯಾವಲಂಬಿಭಿಃ ದ್ವಿಜಾಗ್ರಸರೈಃ ಸಮಲಂಕೃತೇ ಸದಸಿ ಯಥಾಶಾಸ್ತ್ರಮನುಷ್ಠಿತೇ ಪ್ರಾಯಶ್ಚಿತ್ತೇ ಸರ್ವೈರನುಗೃಹೀತಃ ಕೃತಪ್ರಾಯಶ್ಚಿತ್ತಃ ಕಥಂಚಿದ ರಾಮಸ್ವಾಮಯ್ಯಂಗಾರ್ಯಃ ಸ್ವಾನುಚರಾತ್ರೇಯ ಶೇಷಾಚಾರ್ಯೇಣ ಸಾಕಂ ಇತಃ ಪ್ರಭೃತಿ ಬ್ರಾಹ್ಮಣಸಮಾಜೇ ಬಂಧುಜನ ತಾಯನಾಂ ಚ ಪಾತಿತ್ಯಸಂಭಾವನಾವಿಹೀನಃ ಶುದ್ಧಃ ಪರಿಗಣನೀಯಃ 'ಕೃತನಿರ್ಣೇಜನಾಂಶ್ಚೈವ ನಜುಗುಪ್ಸೇತಕರ್ಹಿಚಿತ್' ಇತಿ ಮನುವಚನರೀತ್ಯಾ ನಜುಗುಪ್ಸಾಮರ್ಹತೀತಿ ಸರ್ವೈಃ ದ್ವಿಜಾತಯಸ್ಸುಧೀಯಶ್ಚ ವಿದಾಂಕುರ್ವಂತು."

ಎಂಬಾರ್ ರಂಗಾಚಾರ್
ನರಸಂಭಟ್ಟ ರುಜಾವು
ವೆಂಕಟರಾಮಶಾಸ್ತ್ರಿ ಸಮ್ಮತಿಃ
ಪರಮೇಶ್ವರಪಂಡಿತ ಸಮ್ಮತಿಃ
ಸುಬ್ಬಾಭಟ್ಲು
ತ್ರಿವೇಂಕಟಶಾಸ್ತ್ರಿ ರುಜು
ಆಕುವಾಳ್ಳ ಪುಟ್ಟಸೋಮಯ್ಯಲ ಸಮ್ಮತಿಃ
ವಸಂತಾಚಾರ್
ಶೀತಾರಾಮ ಶಾಸ್ತ್ರಿ

ಭಾಷ್ಯಾಚಾರ್ ವಗೈರೆ ೩೯ಜನಗಳು ಇದಕ್ಕೆ ಸಮ್ಮತಿಸುವಂತೆ ವ್ಯಕ್ತವಾಗಿರುತಿವೆ.

CORRESPONDENCE

HOW CAN MEN GOING TO ENGLAND PROMOTE THE GOOD OF THE COUNTRY?

ಈಗ್ಗೆ ಕೆಲವು ಕಾಲದ ಮೊದಲು ಲೀನವಾಗಿದ್ದ ಸಮುದ್ರಯಾನ ವಿಷಯಕ್ಕೆ ಪುನಃ ಜೀವ ಕಳೆ *ಯುಂಟಾದದ್ದು ಗತವಾರದ ತಮ್ಮ* ಪತ್ರಿಕಾ ಮೂಲಕ ತಿಳಿದು ಸಂತೃಪ್ತನಾದೆನು. ಈ ವಿಷಯದಲ್ಲಿ ನನಗುಂಟಾಗಿರುವ ಸಂಶಯ ಪರಿಹಾರಾರ್ಥ ಬರೆಯಲ್ಪಟ್ಟ ನನ್ನ ಲೇಖನವು ವಿರುದ್ಧಾಭಿಪ್ರಾಯ ಪುಳ್ಳದ್ದೆಂದು ಯಾರೂ ಭಾವಿಸಲಾಗದು. ಪ್ರಸಕ್ತ ಸಮುದ್ರಯಾನ ಕ್ರಮವಂ ಕುರಿತು ನಾನೀಗ ವಿಚಾರಣಾದ ಲಿತ್ನಿಸಿದವನಲ್ಲವು. ಅದರ ಯುಕ್ತಾಯುಕ್ತ ವಿಮರ್ಶೆಯು ನನಗ ಆವಶ್ಯಕವಾಗಿಲ್ಲವು. ದೇಶಾಂತರಗತಾಗತರ್ಕ್ಕವರ ಕೋರಿಕೆಯಂ ನಾನು ಭಂಗಪಡಿಸಬೇಕೆಂಬ ಸಂಕಲ್ಪ ವುಳ್ಳವನಲ್ಲವು. ಅಥವಾ ಪೂರ್ವಿಕರಿಂದನುಷ್ಠಿತಗಳಾದ ಆಚಾರವ್ಯವಹಾರಾದಿ ನಿಯಮಗಳನ್ನೆಲ್ಲ ತೊರೆದು ಇಷ್ಟಾನುಸಾರ ವರ್ತಿಸುವಂತೆ ಜನರು ಪ್ರೇರಿಸುವಷ್ಟು ಸಾಹಸಪರನಲ್ಲವು. ಹಿತವನುವೋದಕರಾದವರಿಂದ ನೂರಪ್ಪುರತಕ್ಕ ಪ್ರಾಯಶ್ಚಿತ್ತ ವಿಧಾನಗಳ ಔಚಿತ್ಯವಂ ಕುರಿತು ವಿಚಾರ ಮಾಡಬೇಕಾದ ಶ್ರಮಕ್ಕೆ ಒಳಗಾಗುವ ತಾತ್ಪರ್ಯವು ನನಗಿಲ್ಲವು. ನನಗೆ ಒಂದುವಿಷಯ ಮಾತ್ರ ನನಗನಿತಿ ಇಲ್ಲದ ಅನುತಾಪವನ್ನುಂಟುಮಾಡಿದೆ, ಅದು ಯಾವದೆಂದರೆ—ಅನಾದಿ ಸಿದ್ಧಗಳಾದ ಜಾತಿಮತ ಕುಲಾಚಾರಗಳಂ ತ್ಯಜಿಸಿ, ಇಷ್ಟಮಿತ್ರರಾದವರನ್ನೆಲ್ಲ ತೊರೆದು, ನಾನಾವಿಧ ಪರಿಶ್ರಮಗಳನ್ನೆಲ್ಲ ಸಹಿಸಿಕೊಂಡು, ನಮ್ಮದೇಶೀಯರು ಕೆಲವರು ಅನ್ಯದೇಶಗಳಿಗೆ ಹೋಗಿ ಅಲ್ಲಿನ ವೇಷಭಾಷಾಚಾರಗಳಂ ಕಲಿತುಕೊಂಡು ಬರುವದನ್ನು ಕೇವಲ ಪರೋಪಕಾರಾರ್ಥವೆಂತಲೂ, ಅಂತವರೇ ಸ್ವದೇಶೋದ್ಧಾರಕರಾಗುವರೆಂತಲೂ, ಅಂತವರ ಸಂಖ್ಯಾಬಾಹುಳ್ಯವೇ ದೇಶದ ಐಶ್ವರ್ಯಾಭಿವೃದ್ಧಿಗೆ ಮುಖ್ಯಕಾರಣವೆಂತಲೂ, ಅಂತವರ ಮೂಲಕವೇ ಇತರರು ಸಹ ಅಭಿವೃದ್ಧಿಗೆ ಬರಬೇಕಾಗಿರುವರೆಂತಲೂ, ಅನೇಕರು ಆಗಿಂದಾಗ್ಯೆ ನಾನಾವಿಧದಿಂ ಪ್ರಕಟಿಸುತ ತಿಳಿಸುವ ಮಾತುಗಳಂ ನಾವು ಅನೇಕಸಹಸ್ರಾವರ್ತಿ ಕೇಳುತ್ತೇವೆ. ಇವರು ವಿದೇಶಜನ ಮಧ್ಯದಲ್ಲಿ ಸಾಧಿಸಿ ಇತರರಿಗುಂಟುಮಾಡುವ ಪ್ರಯೋಜನವ್ಯಾವುದೆಂದರೆ ನಾನರಿಯೆನು. ಪ್ರಜೆಗಳೆಲ್ಲರ ಸಂಪತ್ಪ್ರಭವಗಳಿಗೆ ಅವರು ಹ್ಯಾಗೆ ಕಾರಣರಾಗುವರೋ ನನಗೆ ತಿಳಿಯದು. ಮನೆಯ ಒಂದು ಕುಟುಂಬದಲ್ಲೊಬ್ಬನು ಇಂಗ್ಲಾಂಡಿಗೆ ಹೋಗಿ ಒಂದು ಪರೀಕ್ಷೆ ಕೊಟ್ಟುಬಂದ ಮಾತ್ರದಿಂದಲೇ ತನ್ನ ಕುಟುಂಬದವರನ್ನೆಲ್ಲ ಸಂರಕ್ಷಿಸುವಂತವನಾಗುತ್ತಾನೆಯೆ? ಪ್ರಪಂಚದಲ್ಲಿ ಎಂತಾ ಸತ್ಪುರುಷನಾದಾಗ್ಯೂ ಸ್ವಪ್ರಯೋಜನಾನಂತರ ಕದಾಚಿತ್ ಪರಪ್ರಯೋಜನವು ಯಥೋಚಿತ ಚಿಂತಿಸುವನೇ ಹೊರ್ತು ಆತ್ಮನಸ್ಯಗಳಂ *ಕೂಡ ಗಣಿಸದೆ* ಅನ್ಯರ ಕ್ಷೇಮಾಭಿವೃದ್ಧಿಗಾಗಿ ಸತತಂ ಶ್ರಮಿಸಲಾರನು. ಹೀಗಿರುವಲ್ಲಿ ಈ ಇಂಡ್ಯಾದೇಶದ ಇಪ್ಪತ್ತೈದು ಕೋಟಿ ಪ್ರಜೆಗಳ ಕ್ಷೇಮಕ್ಕಾಗಿ ಕೆಲವರು ವಿದೇಶಕ್ಕೆ ಹೋಗಿ ಉಂಟುಮಾಡುತ್ತಾರೆಂಬದಕ್ಕಿಂತ ಹಾಸ್ಯಕರವಾದದ್ದು ಬೇರೊಂದೂ ಇರಲಾರದೆಂದೆಣಿಸುತ್ತೇನೆ. ಈಗ ಇಂಗ್ಲಾಂಡ್‌ವಗೈರೆ ಅನ್ಯದೇಶಗಳಿಗೆ ಹೋಗಿ ಬಂದಿರತಕ್ಕವರು ಸ್ವದೇಶಜನ ಕ್ಷೇಮಾಭಿವೃದ್ಧಿಗಾಗಿ ಅವಿರತವಂ ಮಾಡುತಲಿರುವ ಸಾಹಸವನ್ನೂ ಅನುಭವಿಸುತಲಿರುವ ಶ್ರಮವನ್ನೂ ನೋಡುತಲಿರುವಲ್ಲಿ ಮುಂದೆ ಅಲ್ಲಿಗೆ ಹೋಗಿ ಬರತಕ್ಕವರ ಮೂಲಕ ನಮಗೆ ಲಭಿಸಬಹುದಾದ ಪ್ರಯೋಜನ ಸಹ ಅತ್ಯಲ್ಪನಾದದ್ದಾಗಿಯೇ ಇರುವದೆಂದು ಧಾರಾಳವಾಗಿ ನುಡಿಯಬಹುದಾಗಿದೆ. ಸ್ವದೇಶೋಪಕಾರಕರಾದ ಇವರೆಲ್ಲ ಅನ್ಯದೇಶಗಳಿಗೆ ಹೋಗಿ ಅಲ್ಲಿನ ಭಾಷೆಗಳಂ ಕಲಿತು ಇಲ್ಲಿಗೆ ಬಂದ ಬಳಿಕ ಹೈಕೋರ್ಟ್ ಜಡ್ಜಿಗಳಾಗಿಯೂ, ಕವೆನಾಂಟೆಡ್ ಆಫೀಸರ್‌ಗಳಾಗಿಯೂ, ಬಾರಿಸ್ಟರ್‌ಗಳಾಗಿಯೂ, ಇಂಜನಿಯರ್‌ಗಳಾಗಿಯೂ ಸಂಪಾದಿಸುವ ದ್ರವ್ಯದಲ್ಲಿ ಸ್ವಲ್ಪವೊ ಸ್ವಂತಕ್ಕೆ ಬಳಸಿಕೊಳ್ಳದೆಯೂ ಅಥವಾ ಬ್ಯಾಂಕ್‌ಗಳಿಗೆ ಕಳುಹಿಸದೆಯೂ ಪ್ರತಿತಿಂಗಳ ಗುರ್ರೇ ತಾರೀಖಿನ ದಿನ ನಮ್ಮ ಆಯ ತಿಯನ್ನೆಲ್ಲ ದೇಶಕ್ಷೇಮಾಭಿವೃದ್ಧಿಗಾಗಿಯೇ ವಿನಿಯೋಗಿಸುತಲಿದ್ದಾರೆ ಯಲ್ಲವೆ? *ಅನರ್ಘಗಳಾದ ವಸ್ತ್ರಾಭರಣ ವಾಹನ ಗೃಹಾ*ರಾಮಾದಿ ಭೋಗೋಪಕರಣಗಳಲ್ಲಿ ಅವರಿಗೆ ಅಭಿರುಚಿ ಇಲ್ಲದಿದ್ದರೂ ಕೇವಲ ನಮ್ಮ ಉದ್ಧಾರಾರ್ಥವಲ್ಲವೆ ಅವರು ಅವು ಪರಿಗ್ರಹಿಸಿದಾರೆ? ವಿದೇಶಜನಾಚಾರ ವ್ಯವಹಾರಗಳನ್ನೆಲ್ಲ ಆದರಪೂರ್ವಕ ಸ್ವೀಕರಿಸಿರುವದು ನಮ್ಮ ಶ್ರೇಯೋಭಿಲಾಷೆಯಿಂದಲ್ಲವೆ? ಸ್ವಜನರನ್ನಗಲಿ ಅನ್ಯದೇಶೀಯರ ಪರಿಚಯ ಸಾಹಚರ್ಯಗಳಂ ಬಯಸುವದು ನಮಗೆ ಇಂಡ್ಯಾದೇಶದ ಪ್ರಾಭವ ವೈಭವಕ್ಕಾಗಿ ಯಲ್ಲವೆ? ಆಹ! ಇಂತಾ ದೇಶೋಪಕಾರಿಗಳು ಕೇವಲ ನಮ್ಮ ಪುಣ್ಯ ಪರಿಪಾಕದಿಂ ಲಭಿಸಿದವರೆಂದು ಭಾವಿಸಬೇಕಲ್ಲದೆ ಬೇರಲ್ಲವು. ಸ್ವಪ್ರಯೋಜನವಿಲ್ಲದೆ ಕೇವಲ ಅನ್ಯರಿಗಾಗಿ ಶ್ರಮಿಸುತ ದುಃಖಿಸುವದಕ್ಕಿಂತಲೂ ಇವರು ತಮಗೆ ಲಾಭಕರಗಳಾದ ವಿಷಯಗಳಲ್ಲಿ ಪ್ರವೇಶಿಸಿ ಯಾತಕ್ಕೆ ಸುಖಿಸಬಾರದೋ ನಾನರಿಯೆನು. ಇಪ್ಪತ್ತು ವರುಷಗಳ ವಯಸ್ಸುಳ್ಳ ಒಬ್ಬ ಶ್ರೀವೈಷ್ಣವ ಬಾಲಕನು ಗತಮಾಸದಲ್ಲಿ ಮದರಾಸಿನಿಂದ ಲಂಡನ್ ಪಟ್ಟಣಕ್ಕೆ ಹೊರಟು ಹೋದನೆಂದು ತಿಳಿಯಲಾದೆನು. ಈತನ ಐಶ್ವರ್ಯವು ಕಡೆಗೆ ಲಂಡನ್ ಪಟ್ಟಣಕ್ಕೆ ಹೋಗಿ ಒಂದು ತಿಂಗಳಕಾಲ ಅಲ್ಲಿ ಇರಲಿಕ್ಕೆ ಸಾಕಾದ್ದಾಗಿರುವದಿಲ್ಲವು. ಈತನ ವಿದ್ಯಾಮೂಲಕವಾದ ಜ್ಞಾನವು ಅತ್ಯಲ್ಪವಾದದ್ದಾಗಿರುತಿದೆ. ಈತನೀಗ ಹೋಗಿರುವದು ನೋಡಲಾಗಿ, ಇಂಡ್ಯಾದೇಶೀಯರ ಸುಖ ದುಃಖಗಳನ್ನೆಲ್ಲ ಹೌಸಾಫ್ ಕಾಮನ್ಸ್ ಸಮಾಜದಲ್ಲಿ ವ್ಯಕ್ತಪಡಿಸಿ ಅವರಮೂಲಕ ನಮ್ಮೆಲ್ಲರಿಗೂ ಮೇಲುಂಟುಮಾಡುವದಕ್ಕಾಗಿ ಪ್ರಯತ್ನ ಪಟ್ಟಿರುವಂತೆ ಭಾವಿಸಬೇಕಾಗಿದೆ. ಮುಖ್ಯವಾಗಿ ಇವೆಲ್ಲವೂ ಸ್ವಚ್ಛಂದಪ್ರವೃತ್ತಿಗೆ ದ್ಯೋತಕಗಳಾದ ಕುಂಠಿತೋಕ್ತಿಗಳೆಂದು ಯೆಣಿಸುತ್ತೇನೆ. ಪೊಲಿಟಿಕಲ್ ಎಕಾನಮಿಯ ಸಿದ್ಧಾಂತಕ್ಕೂ, ಇಂಗ್ಲಿಷ್ ಓದಿದ ಬಾಲಕರ ಅಭಿರುಚಿಗೂ, ನನ್ನ ಅಭಿಪ್ರಾಯವು ವಿರುದ್ಧವಾಗಿರಬಹುದು. ಪರಂತು ನಿಸ್ಪೃಹಪಾತಿಗಳಾದ ವಿಚಾರಪರರು ಇದು ನಿರಾಕರಿಸುವರೆಂದು ಯೆಣಿಸಲಾರೆನು.

ತಮ್ಮ ವಿಧೇಯನಾದ,
ದೇಶಕ್ಷೇಮಾಭಿಲಾಷಿ.

TELEGRAMS.
ತಂತಿ ವೃತ್ತಾಂತಗಳು.

ಸೋಫಿಯಾ, ೧೮ನೇ ಜನವರಿ-ಬಲ್ಗೇರಿಯಾ ದೇಶದ ಅರಸರಾದ ಫರ್ಡಿನಾಂಡ್ ಯೆಂಬವರು, ಹೊಸ ಸಂವತ್ಸರ ದ ಪ್ರಯುಕ್ತವಾಗಿ ಈ ತಿಂಗಳ ಗುರ್ರೇ ತಾರೀಖಿನಲ್ಲಿ, ತಮಗೆ ಶುಭವಾದದನ ಹಾಡುವದಕ್ಕಾಗಿ ತಮ್ಮಲ್ಲಿಗೆ ಬಂದ ಆಫಸರಗಳನ್ನು ಬರಮಾಡಿಕೊಂಡು, ಪ್ರಕೃತ ಸಂದರ್ಭದಂನೊಳೇತವಾಗಿ ಬಲ್ಗೇರಿಯಾ ದೇಶೀಯರು ಆಯುಧಗಳ ಮೂಲಕ ತಮ್ಮ ಹಕ್ಕನ್ನು ಕಾಪಾಡಿಕೊಳ್ಳಬೇಕಾಗಿರುವದೆಂತಲೂ, ಆಗ ತಾವು ಆಳುವದಕ್ಕೆ ಬಂದಿರುವ ದೇಶಕ್ಕಾಗಿ ಸಾಹಸ ಪೂರ್ವಕವಾದ ಅನಿವಾರ್ಯಕವಾದ ಸಂದರ್ಭ ಬಿದ್ದಲ್ಲಿ ಪ್ರಾಣವಂ ಕೊಡುವದಕ್ಕೆ ಸಹ ಸನ್ನದ್ಧರಾಗಿರಬೇಕಾಗಿದೆಯೆಂತಲೂ ತಿಳಿಸಿದರು.

ಪೇರಿಸ್, ೧೫ನೇ ಜನವರಿ-ಲಾರ್ಡ್ ರಾಂಡಾಲ್ಫ್ ಚರ್ಚಿಲ್‌ರವರು ಈಗ ರಷಿಯಾದೇಶದಲ್ಲಿರುವದರಿಂದ ಇಂಗ್ಲಾಂಡ್, ರಷಿಯಾ, ಮತ್ತು ಫ್ರಾನ್ಸ್ ದೇಶಗಳಿಗೆ ಪರಸ್ಪರ ಐಕಮತ್ಯ ವುಂಟಾಗಬಹುದೆಂದು ಎಂ. ಫ್ಲೂರೆನ್ಸ್ ಯವರು ನಂಬುವದಕ್ಕೆ ಕಾರಣವಾಯಿತೆಂತಲೂ, ಅಂತಾ ಸ್ನೇಹವನ್ನುಂಟುಮಾಡುವದಕ್ಕೆ ಅವರು ಉಪಾಯಗಳನ್ನು ಯೋಚಿಸುತಲಿರುವಂತೆಯೂ ಇಲ್ಲಿ ಪ್ರಸ್ತಾಪ ನಡೆಯುತಲಿದೆ.

ಕೈರೊ, ೧೫ನೇ ಜನವರಿ—ಅಬಿಸೀನಿಯಾ ದೇಶದ ಅರಸರಾದ ಜಾನ್ ಯೆಂಬವರು, ಇಟಲೀ ದೇಶದ ಸೇನೆಯಮೇಲೆ ದಂಡೆತ್ತಿ ಹೋಗುವಂತೆ ಹುಕುಂ ಕೊಡುವದಕ್ಕೆ ಮುಂಚಿತವಾಗಿ ತಮ್ಮ ಸಂಸ್ಥಾನದ ಪ್ರಮುಖರನ್ನೆಲ್ಲ ಕರೆಯಿಸಿ ಆಲೋಚಿಸುತಲಿದ್ದಾರೆ

ಬರ್ಲಿನ್, ೧೭ನೇ ಜನವರಿ—ಫ್ರಾನ್ಸ್, ರಷಿಯಾ ಮತ್ತು ಇಂಗ್ಲಾಂಡ್ ದೇಶಗಳಿಗೆ ಪರಸ್ಪರ ಮೈತ್ರಿಯನ್ನುಂಟುಮಾಡಬೇಕೆಂದು ಎಂ. ಫ್ಲೂರೆನ್ಸ್ ಎಂಬವರು ಈಗ ಮಾಡುತಲಿರುವ ಪ್ರಯತ್ನವು ಖಂಡಿತವಾಗಿ ಭಂಗವನ್ನೈದುವದೆಂದು ಯೆಲ್ಲರೂ ತಿಳದಿರುತ್ತಾರೆ.

ಬರ್ಲಿನ್, ೧೭ನೇ ಜನವರಿ—ಜರ್ಮನೀ ಸರ್ಕಾರದವರು ಯುದ್ಧ ಸನ್ನಾಹಗಳಂ ಮಾಡುತಲಿದ್ದಾರೆಂಬ ಅರ್ಥದ್ಯೋತಕವಾಗಿ ರಷಿಯಾದೇಶದ ಒಂದು ವೃತ್ತಾಂತ ಪತ್ರಿಕೆಯು ಕೆಲವು ಸಂಗತಿಗಳಂ ತಿಳಿಸಲು, ಬರ್ಲಿನ್ ಸರ್ಕಾರೀ ಮಿಲಿಟರಿ ಪತ್ರಿಕೆ ಯೊಂದು, ತಮ್ಮಲ್ಲಿ ಅಂತಾ ಪ್ರಯತ್ನ ನಡೆಯುವದು ಸುತರಾಂ ಸುಳ್ಳೆಂದು ಹೇಳುತಿದೆ.

ವೈಯನಾ, ೧೮ನೇ ಜನವರಿ-ರಷಿಯಾದೇಶದ ಚಕ್ರವರ್ತಿಯವರಾದ ಜಾರ್‌ರವರು ಈಚೆಗೆ ತಿಳಿಸಿದ ಸಮಾಧಾನ ಸೂಚಕಗಳಾದ ಭರವಸೆಗಳಲ್ಲಿ ಇಲ್ಲಿ ಯಾರಿಗೂ ಬಹಳ ನಂಬಿಕೆ ಯುಂಟಾಗಲಿಲ್ಲವು.

ಲಂಡನ್, ೧೮ನೇ ಜನವರಿ—ಸರ್ ಮಿಚೇಲ್ ಹಿಕ್ಸ್ ಬೀಚ್ ಯವರು ಕ್ಲಿಫ್ಟನ್ ಯೆಂಬ ಪಟ್ಟಣದಲ್ಲಿ ಉಪನ್ಯಾಸ ಮಾಡುವ ಸಂದರ್ಭದೊಳು, ಐರ್ಲಾಂಡ್ ದ್ವೀಪದಲ್ಲಿ ಕಲಹಗಳು ಶಾಂತವಾದ ಮೇಲೆ ಲೋಕಲ್‌ಸೆಲ್ಫ್ ಗವರ್ನಮೆಂಟೆಂಬುವ ಸ್ವದೇಶ ಪಾಲನಾಧಿಕಾರವಂ ಅಲ್ಲಿನವರಿಗೇನೇ ಉಂಟುಮಾಡಿ, ಪಾರ್ಲಿಮೆಂಟ್ ಮೆಂಬರ್‌ಗಳ ಪೈಕಿ ಐರ್ಲಾಂಡ್ ದೇಶೀಯರನ್ನು ಸ್ಕಾಟ್‌ಲೆಂಡ್ ದೇಶದ ಮೆಂಬರ್‌ಗಳಿಗೆ ಸಮಾನವಾದ ದರ್ಜೆಯಲ್ಲಿಡುವದು ತಮಗೆ ಅಭಿಮತವೆಂತಲೂ, ಒಳದೇಶದ ಆತಳತಗಳ ವ್ಯವಸ್ಥೆಯ ವಿಷಯದಲ್ಲಿ ಮಂತ್ರಾಲೋಚಕ ಸಭೆಗೆ ತಾವು ಸೇರಬೇಕಾದ ಆವಶ್ಯಕತೆಯುಂಟಾದಾಗ್ಯೆ ತಾವು ಸೇರುವದಕ್ಕೆ ಸಂಪೂರ್ಣ ಇಷ್ಟವುಳ್ಳವರಾಗಿರುವಂತೆಯೂ ತಿಳಿಸಿದರು.

ಲಂಡನ್, ತಾ ೨೧ನೇ ಜನವರಿ.—ಪ್ರಿನ್ಸ್ ಆಫ್ ವೇಲ್ಸ್‌ರವರ ಆಪರೇಶನ್ ಏಡಿಕಾಂಗಾದ ಸರ್ ಪ್ರತಾಪಸಿಂಗರವರು, ಬ್ರಿಟಿಷ್ ಸೈನ್ಯದಲ್ಲಿ ಒಬ್ಬ ಆನರರಿ ಕರ್ನಲಾಗಿ ನೇಮಕರಾಗಲ್ಪಟ್ಟಿರುತ್ತಾರೆ

SUMMARY OF NEWS.
ವೃತ್ತಾಂತ ಸಂಗ್ರಹವು.

A wonderful bird.—ಪನ್ನಾ ಎಂಬ ಸ್ಥಳದಲ್ಲಿ ಒಂದು ಪಕ್ಷಿಯು ಹುಣಸೇಮರದಮೇಲೆ ಕುಳತು ರಾತ್ರಿಯಲ್ಲಿ ೧೨ ಘಂಟೆ ಹೊಡೆದನಂತರ "ಚಲೋಚಲೋ ಉಟೋಉಟೋ ಅಬಯುಹ ಸರಹೋ" ಎನ್ನುತ್ತಾ ಮನುಷ್ಯವಾಣಿಯಂತೆ ಈಗ ೬-೭ ದಿವಸಗಳಿಂದ ಅರ್ಧ ಘಂಟೆಯವರಿಗೂ ಕೂಗುತ್ತಿರುತ್ತದೆ. ಅದರ ಆಕಾರವು ಹದ್ದಿನಂತೆ ಇರುತಿದೆಯಂತೆ.

A camphor factory.—ಸ್ವದೇಶಾಭಿಮಾನಿಯಾದ ಒಬ್ಬ ವಿದ್ವಾಂಸರು, ಕಲ್ಯಾಣಿಯೆಂಬ ಸ್ಥಳದಲ್ಲಿ ಒಂದು ಹೊಸ ಕರ್ಪೂರ ಕಾರ್ಖಾನೆಯನ್ನು ಸ್ಥಾಪಿಸಿರುತ್ತಾರೆ. ಅದರಲ್ಲಿ ಕರ್ಪೂರವು ವಿಲಾಯತಿ ಕರ್ಪೂರಕ್ಕಿಂತಲೂ ಅಗ್ಗವಾಗಿ ದೊರೆಯುತ್ತದೆ. ನಮ್ಮ ನೂತನ ವಿದ್ವಾಂಸರ ವಾಕ್ಪಾಂಡಿತ್ಯಕ್ಕಿಂತಲೂ ಈ ವಿದ್ವಾಂಸರು ಕಾರ್ಯತಃ ಮಾಡಿದ ಉಪಕಾರವನ್ನು ನಾವು ಬಹಳವಾಗಿ ಸ್ಮರಿಸುತ್ತೇವೆ.

The gold of Mysore.—ಮೈಸೂರು ಗೋಲ್ಡ್ ಮೈನಿಂಗ್ ಕಂಪೆನಿಯವರು, ಕಳೆದ ಅಕ್ಟೋಬರ್ ತಿಂಗಳಲ್ಲಿ ಸಿಕ್ಕಿದ ಚಿನ್ನವನ್ನು ೬,೨೩೮ ಪೌಂಡುಗಳಗೂ, ನಂದೀದುರ್ಗ ಗೋಲ್ಡ್ ಮೈನಿಂಗ್ ಕಂಪೆನಿಯವರು ಅದೇ ತಿಂಗಳಲ್ಲಿ ತಮಗೆ ಸಿಕ್ಕಿದಚಿನ್ನವನ್ನು ೧,೭೩೪ ಪೌಂಡುಗಳಗೂ, ಇಂಡಿಯನ್ ಕನ್ಸೊಲಿಡೇಟೆಡ್ ಗೋಲ್ಡ್ ಕಂಪೆನಿಯವರು ಕೋಲಾರ ಪ್ರಾಂತವಲ್ಲಿನ ತಮ್ಮ ಗನಿಗಳಲ್ಲಿ ಸಿಕ್ಕಿದ ಚಿನ್ನವನ್ನು ೪,೫ ಪೌಂಡುಗಳಗೂ ಮಾರಿದರು.

The Gaekwar and old MSS—ಬರೋಡೇ ಗಾಯಕವಾಡಿ ಮಹಾರಾಜರವರು, ಪ್ಯಾಟ್ನಾ ಅಂದರೆ, ಪಟ್ಟಣವೆಂಬ ಪಟ್ಟಣದಿಂದ ಬೊನಾಯಿಸಿ ತರಿಸಿದ ಪುರಾತನವಾದ ಕೆಲವು ಗ್ರಂಥಗಳನ್ನು ಮಹಾರಾಷ್ಟ್ರ ಮತ್ತು ಗುಜರಾತಿ ಭಾಷೆಗಳಲ್ಲಿ ತರ್ಜುಮೆ ಮಾಡುವಂತೆ ಹುಕುಂ ಕೊಟ್ಟಿರುವವಾಗಿಕೇಳ ಸಂತೋಷಿಸುತ್ತೇವೆ. ವಿವೇಕ ಪೂರ್ವಕವಾದ ಇಂತಾ ಏರ್ಪಾಡಿನ ಬಗ್ಗೆ ಮಹಾರಾಜರವರನ್ನು ಕೊಂಡಾಡಬೇಕಾಗಿರುತಿದೆ. ಮುಂಬೈ ಗವರ್ನಮೆಂಟಿನವರು ಬಹುಕಾಲದ ಮೊದಲು ಪುರಾತನವಾಗಿಯೂ ಅನರ್ಘ್ಯವಾಗಿಯೂಇರುವ ಬರವಣಿಗೆ ಗ್ರಂಥಕೋಶದಲ್ಲಿ ಪ್ರವರ್ತಿಸಿರುತ್ತಾರೆ. ಗವರ್ನಮೆಂಟಿನವರು ಹಾಗೆಯೇ ಅಂತಾ ಗ್ರಂಥಗಳನ್ನೆಲ್ಲ ಜಾಹಿರಾತಿಸುವದಕ್ಕೆ ತಕ್ಕ ಏರ್ಪಾಡುಗಳಂ ಮಾಡಿದರೆ ಪ್ರಜೆಗಳಿಗೆ ಉಪಯುಕ್ತವಾಗಿರುವದು. ಅನುಕೂಲವಾಗಿದ್ದಲ್ಲಿ ಸಂಸ್ಕೃತ ಅಥವಾ ಇಂಗ್ಲಿಷ್ ಭಾಷೆಗಳು ತಿಳಿಯದವರಾಗಿರುವ ಜನಗಳಿಗೆ ಉಪಯುಕ್ತವಾಗಿರುವ ಭಾಷೆಯಲ್ಲಿ ತರ್ಜುಮೆ ಮಾಡಿಸಿ ಪ್ರಕಟಿಸಬೇಕು—ಮರಾಟಾ.

An honor to Lord Connemara—ಮದರಾಸಿನಲ್ಲಿ ನಡೆದ ನ್ಯಾಷನಲ್ ಕಾಂಗ್ರೆಸ್ಸಿಗೆ, ಪರದೇಶಗಳಿಂದಬಂದ ಡೆಲಿಗೇಟ್ಸ್, ಅಂದರೆ, ಪ್ರತಿನಿಧಿಗಳನ್ನು ಬರಮಾಡಿಕೊಂಡು ಅವರಿಗೆ ಸ್ಥಳ ಜಲ ಮೊದಲಾದ ಅನುಕೂಲ್ಯಗಳಂ ಕಲ್ಪಿಸಬೇಕಾದ ಕಾರ್ಯದ ವಿಷಯದಲ್ಲಿ, ಅದಕ್ಕೆ ಏರ್ಪಾಡಾಗಿದ್ದ ಕಮಿಟಿಯವರಿಗೆ ಸರ್ಕಾರದವರು ಮಾಡಿದ ಸಹಾಯದಿಂದಲೇ ಅದರಲ್ಲಿ ಯಾವವಿಧ ಕೊರತೆಯೂ ಇಲ್ಲದೆ ನೆರವೇರಿತು. ಇದೂ ಅಲ್ಲದೆ, ಅಲ್ಲಿನ ಯೂರೋಪಿಯನ್ನರು ಸಹ ಅನುಕೂಲರಾಗಿದ್ದರು. ಕಮಿಸೆರಿಯಟ್ ಇಲಾಖೆಯವರು ಬೇಕಾದಷ್ಟು ಡೇರೆಗಳನ್ನೂ ಗುಡಾರಗಳನ್ನೂ ಸರಬರಾಯಿಮಾಡಿದರು. ಪೋಲೀಸ್ ಇಲಾಖೆಯವರು ಸಹ ಬಹಳ ಸಹಾಯಕರಾಗಿದ್ದರು. ಇದಕ್ಕೆ ಉಂಟಾದ ಅಂತರವಾದ ಕಾರಣವು ವಿಚಾರಿಸಲಾಗಿ, ಜನಸಮಾಜದ ಉದ್ದೇಶ, ಅದಕ್ಕೆ ನಡೆಸಿದ್ದುದುವ ಸನ್ನಾಹಗಳು, ಅದಕ್ಕಾಗಿ ಬರತಕ್ಕ ಪ್ರತಿನಿಧಿಗಳ ಗೌರವ ಯೋಗ್ಯತೆಗಳು, ಇವುಗಳನ್ನೆಲ್ಲ ಘನತೆಯಂಪಡೆದ ಮದರಾಸ್ ಗವರ್ನರಾದ ಲಾರ್ಡ್ ಕಾನಿಮಾರಾ ಯವರು ಕೇವಲ ಅಭಿಮಾನದೊಡನೆ ವಿಚಾರಿಸುತಲಿದ್ದರೆಂದು ತಿಳಿಯಬರುತಿದೆ. ಗವರ್ನರವರು ತಮ್ಮ ಅಧಿಕಾರ ಬಲಕ್ಕೆ ಅನುಗುಣವಾಗಿ ಯೆಷ್ಟುಮಟ್ಟಿಗೆ ಕುಮ್ಮಕ್ ಮಾಡುವದು ಉಚಿತವಾಗಿರುವದೊ ಅಷ್ಟರ ಮಟ್ಟಿಗೆ ಪ್ರೋತ್ಸಾಹವನ್ನೂ ಸಹಾಯವನ್ನೂ ಮಾಡಿದಂತೆ ಕಾಣುತಿದೆ.—ಮರಾಟಾ.

Obituary—ಪುನೇಯಲ್ಲಿ ಬಹಳ ವಿಖ್ಯಾತರಾದರಾವ್ ಸಾಹೇಬ್ ಮಹದೇವ ಮೋರೇಶ್ವ ಕುಂಟೆಯವರ ಜ್ಯೇಷ್ಠಪುತ್ರರು ಮಹಾಮಾರಿಯ ಅವಾಂತರದಲ್ಲಿಸಿಕ್ಕಿ ಮೃತಪಟ್ಟಸಂಗತಿಯನ್ನು ಕೇಳಲಿಕ್ಕೆ ನಾವು ಬಹಳವಿಷಾದಿಸುತ್ತೇವೆ. ಮಹದೇವಯವರು ಅಲ್ಲಿ ಸ್ಥಾಪಿಸಿರುವ ಪೆನ್ಸಿಲ್ ಕಾರಖಾನೆಯಲ್ಲಿ ಈಗ ಮೃತಪಟ್ಟವರು ಪೂರ್ಣಜ್ಞಾನವುಳ್ಳವರು, ಸ್ವತಃ ಕೆಲಸ ನಡೆಸುವದ್ಕ್ಕೆ ಶಕ್ತಿವಂತರಾಗಿದ್ದರು. ಅದಕ್ಕಾಗೀಗ ಬಹುಜನರು ಕಳವಳಗೊಳ್ಳುತ್ತಾರೆ. ನಮ್ಮ ದೇಶದಲ್ಲಿ ಇಂತಾದ್ದೇನಾದರೊಂದು ಕೆಲಸವು ಪ್ರಾರಂಭವಾಗುವದೇ ಬಹಳಅಪೂರ್ವವು. ಅಂತಾದ್ದರಲ್ಲಿ ಯಾರಾದರೊಬ್ಬವಿದ್ವಾಂಸರು, ಕಂಕಣಬದ್ಧರಾದರೆ ಅವರಿಗೆ ಇಲ್ಲದ ವಿಘ್ನಗಳೂ, ಅನುತ್ತೇಜಕತ್ವವೂ ಸಂಭವಿಸುವದು ಕೇವಲ ಅಭಾಗ್ಯವಾದ ಹಿಂದೂದೇಶದ ಊರ್ಜಿತ ಕರ್ಮವಾಗಿರುತಿದೆ. ಇದೊಂದೇ ಉದಾಹರಣೆಯಿಂದ ನಾವು ಈರೀತಿ ನುಡಿಯಲಿಲ್ಲವು. ವಿಷ್ಣು ಕೃಷ್ಣಶಾಸ್ತ್ರಿ ಚಿಪಳೂಣಕರವರು, ಸಾ|| ಡಾಕ್ಟರ್ ಆನಂದಬಾಯಿಯವರು, ಮುಂತಾದ ಇನ್ನೂ ಕೆಲವು ಸ್ವದೇಶಾಭಿಮಾನಿಗಳ ಮರಣದಿಂದ ಈದೇಶದ ದೈವದ ದುರ್ವಿಲಾಸತ್ವವನ್ನು ತಿಳದುಕೊಳ್ಳಲಿಕ್ಕೆ ತಕ್ಕರಾಗಲಿಲ್ಲವು, ಇದುಹೀಗಿರಲಿ. ಆಗಿಹೋದದುಮಾತನ್ನು ನೆನಸಿ ದುಃಖಪಡುವದು ಸರಿಯಲ್ಲವು. ಮಹದೇವ್‌ಯವರು, ತಮ್ಮ ಪ್ರಿಯನಾದ ಮತ್ತು ಗುಣಸಂಪನ್ನನಾದ ಪುತ್ರನನ್ನು ಎಂದಿಗೂ ಮರೆಯಲಾರರು. ಆದರೂ ಮರಣವೆಂಬದು ಪ್ರಾಣಿಮಾತ್ರಕ್ಕೆ ನಿಯತವಾದದ್ದೆಂದರಿತುಸಕಲಜುತ್ಸಾಹದಿಂದ ತಾವು ಕೈಕೊಂಡಕೆಲಸವನ್ನು ಹಾಗೇನಡೆಸಲು ಸಮರ್ಥರಾಗಬೇಕೆಂದು ಕೋರುವೆವು.

Military outrages—ಕಳೆದ ತಿಂಗಳ ೨೬ನೇ ತಾರೀಖಿನದಿನ ಕೆಲವರು ದೊಡ್ಡಮನುಷ್ಯರ ಮನೆಯಹೆಂಗಸರು, ರೆಮಿಂಗ್ಟನ್ ಕಂಪೆನಿಯಿಂದ ಕರೆತಂದು ಕೊಂಡು ನಗರದ ರೈಲ್ವೇಸ್ಟೇಷನ್ ಪ್ಲಾಟ್‌ಫಾರಂನೊಳು ಕುಳಿತಿದ್ದ ಸಮಯದಲ್ಲಿಗ್ಯಾರಿಸ್ಟರ್ ರಿಜಮೆಂಟಿಗೆ ಸೇರಿದ ಇಬ್ಬರು ಮೂವರು ಸೋಲ್ಜರುಗಳು ಮದೋನ್ಮತ್ತರಾಗಿ ಸದರೀ ಹೆಂಗಸರಮೇಲೆ ಬಿದ್ದು ಅವರಲ್ಲೊಬ್ಬಳ ಸೆರಗು ಹಿಡಿದು ಸೆಳೆಯಲಾರಂಭಿಸಿದರು. ಆಗ ಸಮೀಪದಲ್ಲಿದ್ದ ಪೋರ್ಟರ್‌ವಗೈರೆ ಜನರು ಬಂದು ಕುಮ್ಮಕ್ಕು ಮಾಡಿದಾಗ್ಯೂ ಆ ಸೋಲ್ಜರುಗಳು ಸಹಾಯಕರು ಗಣಿಸದೆ ಜುಲುಂ ಮಾಡಲಾರಂಭಿಸುವಷ್ಟರಲ್ಲಿ ಒಬ್ಬ ನೇಟಿವ್ ದೊಡ್ಡಮನುಷ್ಯನು ಸಮೀಪದಲ್ಲಿ ಪೈದಿಗಳ ಉಸ್ತುವಾರಿಯೊಳಿದ್ದ ಯೂರೋಪಿಯನ್ ಪಹರೆದಾರನಿಗೆ ತಿಳಿಯಪಡಿಸಲು ಆತನು ಕೂಡಲೇ ಬಂದು ಆ ಹೆಂಗಸರಂ ಸೋಲ್ಜರುಗಳಿಂದ ಬಿಡಿಸಿ ಕಳುಹಿಸಿದನು. ಆರಣ್ಯಕ ಮೃಗಗಳಾಗಿದ್ದ ಸದರೀ ಸೋಲ್ಜರುಗಳಿಗೆ ಕಾಲಗತಿಯಿಂದ ಸ್ಥಿತಿಭೇದ ಉಂಟಾದಾಗ್ಯೂ ಸ್ವಾಭಾವಿಕವಾದ ಕ್ರೌರ್ಯವು ನಿವೃತ್ತಿಯಾಗುವದು ಪ್ರಯಾಸವಾದ ಕಾರಣ ಅಂತಾ ಕ್ರೂರಸತ್ವಗಳಿಂದ ಇತರ ಪ್ರಾಣಿಗಳಿಗೆ ಒಂದು ಭಾಧೆಯುಂಟಾಗುವದೇನೂ ಆಶ್ಚರ್ಯವಲ್ಲವು. ಪರಂತು ಮಾನಿಗಳೆಂದು ನಟಿಸುತ ಆದರಸಂರಕ್ಷಣೆಗಾಗಿ ಪೇಚಾಡಿದ ಆ ಹೆಂಗಸರು ಇತರ ಪುರುಷ ಸಹಾಯವಿಲ್ಲದೆ ಸಂಚಾರಾರ್ಥ ಧೈರ್ಯವಾಗಿ ಹೊರಗೆ ಹೊರಟದ್ದು ಬಹಳ ಆಶ್ಚರ್ಯಪಡತಕ್ಕದ್ದಾಗಿದೆ. ಇದರಿಂದಲೇ ಅವರು ವಿದ್ಯಾವತಿಯರಾಗಿಯೂ, ನವೀನ ನಾಗರಿಕತೆಯುಳ್ಳವರಾಗಿಯೂ ಇರಬಹುದೆಂದೂಹಿಸಬೇಕಾಗಿದೆ. ಈ ಸಂದರ್ಭದೊಳ್ಳಾಕೆ ಅವುಗಳತಿಳ್ಳಂದೂ ಅವರಂ ಕಾಪಾಡಲಾರದೆ ಹೋಯಿತೋ ತಿಳಿಯಲಿಲ್ಲವು. ಸ್ತ್ರೀ ಸ್ವಾತಂತ್ರ್ಯವು ಎಂದಿಗಾದರೂ ಅಪಾಯಕರವೆಂಬದಕ್ಕೆ ಇದೂ ಒಂದು ನಿದರ್ಶನವೆಂದರಿಯುವದು.—ಹವ್ಯಕ ಸುಬೋಧ.

Result of poverty and subordination ಒಬ್ಬ ಮನುಷ್ಯನು ತನ್ನ ಹೆಂಡತಿ ಮತ್ತು ಮಗನಸಹಿತ ಆಸಾಂ ಪ್ರಾಂತದಲ್ಲಿರುವ ಕಾಫೀತೋಟದ ಮಾಲೀಕನಾದ ಒಬ್ಬ ದೊರೆಯಲ್ಲಿ ಚಾಕರಿಗೆ ಒಪ್ಪಿಕೊಂಡನು. ಕುಟುಂಬಸಹಿತ ಅವನು ಆರುತಿಂಗಳವರಿಗೆ ಕೆಲಸ ಮಾಡುತಿದ್ದನು ಪರಂತು ಆಸೇವಾವೃತ್ತಿಯಿಂದ ಅವನ ಕುಟುಂಬಭರಣವು ಸಾಗದೆ ಹೋದದರಿಂದ ಕೆಲವು ದಿವಸದಲ್ಲಿಯೇ ಮಗನು ಸತ್ತುಹೋದನು. ಅದರೂ ಒಂದು ಕರಾರಿನಿಂದ ಅವನು ಬದ್ಧನಾಗಿದ್ದದರಿಂದ ಅವನು ಅನ್ಯತ್ರ ನೌಕರಿಮಾಡಿ ಜೀವಿಸಲಿಕ್ಕೆ ಅನುಕೂಲವಾಗಲಿಲ್ಲ. ಬರುತಬರುತ ಅವನಕುಟುಂಬ ನಿರ್ವಹಣೆಯು ಸಾಗದೆಹೋಗಲು ಒಂದುದಿವಸ ಅವನಹೆಂಡತಿಯೊಡನೆ ಅವನು ಆಲೋಚಿಸಿದ್ದೇನೆಂದರೆ,—ಹೀಗೆ ಅರ್ಧಹೊಟ್ಟೇ ಉಂಡು ಇರುವದಕ್ಕಿಂತಲೂ ಒಂದೇಸಲ ಸತ್ತುಹೋಗುವದು ಮೇಲು, ಆದದರಿಂದ ನೀನು ನನ್ನನ್ನು ಮೊದಲು ಕೊಲ್ಲುಯೆಂದು ಗಂಡನು ಹೇಳಿದನು. ಅದನ್ನು ಕೇಳಿ ಹೆಂಡತಿಯು ಅಂದದ್ದೇನೆಂದರೆ—"ಛೀ ಛೀ ನನ್ನಿಂದಾಗದು, ಹೆಂಡರು ಗಂಡನನ್ನು ಕೊಲ್ಲುವದೆಂದರೆ ಮಹಾ ಪಾಪಕರ್ಮವು ನನ್ನನ್ನು ನೀವು ಮೊದಲುಕೊಂದು ಸರಕಾರದಲ್ಲಿ ಈ ಸಂಗತಿಯನ್ನು ತಿಳಿಸಿರಿ, ಕೂಡಲೇ ನಿಮ್ಮನ್ನು ಗಲ್ಲಿಗೆಹಾಕಿ ನಿಮ್ಮ ಪ್ರಾಣ ತೆಗದುಕೊಳ್ಳುವರೆಂದು ಹೇಳಿ ತಲೆಯನ್ನು ಬಗ್ಗಿಸಿದಳು. ಆಗ ಗಂಡನು ಕಾಡುಗೋಲಿನಿಂದ ಅವಳ ಕುತ್ತಿಗೆಯನ್ನು ತತ್ಕ್ಷಣವೇ ಕಡಿದನು. ಮತ್ತು ಈಸುದ್ದಿಯನ್ನು ತಾನೇ ಪೋಲೀಸಿನವರಿಗೆ ತಿಳಿಸಿ ಅವರ ಬಂಧನಕ್ಕೊಳಗಾದನು. ನ್ಯಾಯಾಧೀಶರು ಆಪ್ರಕರಣವನ್ನು ವಿಚಾರಿಸುವಾಗ ಅವನ ಒಡೆಯನನ್ನುಕರೆಯಿಸಿದರು. ಅವನಿಗೆ ಪ್ರತಿದಿವಸ ಎಷ್ಟು ಅನ್ನವನ್ನು ಕೊಡುತ್ತಾನೆಂದು ಆ ಒಡೆಯನ ಲೆಕ್ಕವನ್ನು ಪರಿಶೋಧಿಸಿ ನೋಡಿದರು ಮತ್ತು ಅವನು ಪ್ರತಿದಿನದಲ್ಲೂ ಎಷ್ಟುವೇಳೆ ಯಾವದು ಕಾರ ಕೆಲಸಮಾಡುತ್ತಾನೆಂಬದನ್ನೂ ತಿಳದುಕೊಂಡು ನಿರ್ಣಯಿಸಿದ್ದೇನೆಂದರೆ,—ಹೊಟ್ಟೆಗೆಸಾಲದ ಕಾರಣದಿಂದಲೇ ಭಯಂಕರವಾದ ಈಘೋರಕೃತ್ಯವು ಆವನಿಂದ ನಡೆಸಲ್ಪಟ್ಟಿತೆಂದು ಸಿದ್ಧಾಂತಮಾಡಿದರು. ಒಡೆಯನಾದವನಿಗೆ ಶಿಕ್ಷೆಯಿಡುವದಕ್ಕೆ ಆ ನ್ಯಾಯಾಧೀಶರಮನಸ್ಸು ಒಡಂಬಡಲಿಲ್ಲವು. ಆ ಚಾಕರನುಮಾತ್ರ ತನ್ನ ತಪ್ಪನ್ನು ಒಪ್ಪಿಕೊಂಡದ್ದರಿಂದ ಅವನನ್ನು ಗಲ್ಲಿಗೆ ಹಾಕಿಸಿದರು. ಹರಹರ !!! ಯಾವ ಸರಕಾರದಲ್ಲಿ ಇಂತಾ ಘೋರ ಕೃತ್ಯವು ಸಂಭವಿಸುತ್ತದೆಯೋ ಮತ್ತು ಯಾವ ರಾಜ್ಯದಲ್ಲಿ ಈಬಡಮನುಷ್ಯರುಗಳು ಮೃತ್ಯುಮುಖಕ್ಕೆ ಆಹುತಿಯಾದರೋ ಅಂತವರ ನಡತೆಗಳನ್ನೆಷ್ಟುವಿಧದಿಂ ನಿಂದಿಸಿದರೂ ಸಾಲದ್ದಾಗಿರುತಿದೆ—ಹ. ಸು.

THE MYSORE GAZETTE
ಮೈಸೂರು ಗೆಜೆಟ್.

ಶ್ರೀಮನ್ಮಹಾರಾಜ ರಾಜಾ ಸಾಹೇಬ ಬಹದ್ದೂರರ ಪ್ರಾನರದಿಂದ ಕೊಡೋಣವಾದ ಇಸ್ತಿಹಾರ್‌ನಾಮೆಗಳು

ಮೊಕ್ಕಾಂನಂ. ೭೮೫, ತಾರೀಖು ೧೭ನೇ ಜನವರಿ ೧೮೮೮—ಇದರಡಿ ಕಂಡ ಮುನಸೀಫರುಗಳ ವರ್ಗಾವರ್ಗಿಗಳು ಮಂಜೂರ್ಮಾಡಲ್ಪಟ್ಟಿರುತಿವೆ, ಬಿ. ಶ್ರೀನಿವಾಸರಾಯರವರು ಕೋಲಾರದಿಂದ ಹೊನ್ನಾಳಿಗೆ, ಪಿ. ವೆಂಕಟರಾಯರವರು, ಹೊನ್ನಾಳಿಯಿಂದ ಕೋಲಾರಕ್ಕೆ.

ಮೊಕ್ಕಾಂನಂ ೭೮೭—ಎಡತೊರೆ ತಾಲ್ಲೂಕು ಅಮಲ್ದಾರ್ ಕೃಷ್ಣಮೂರ್ತಿರಾಯರವರಿಗೆ ಅವರುಪಯೋಗಿಸಿಕೊಳ್ಳುವ ತಾರೀಖ್ ಲಾಗಾಯಿತು ಮೂರುವಾರಗಳ ಪ್ರಿವಿಲೇಜ್‌ರಜಾ ಕೊಡಲ್ಪಟ್ಟಿರುತಿದೆ. ತಾಲ್ಲೂಕು ಶಿರಸ್ತೇದಾರ್ ವೆಂಕಟಯ್ಯಂಗಾರ್ರವರು, ಕೃಷ್ಣಮೂರ್ತಿರಾಯರವರ ಗೈರ್‌ಹಾಜರಿಯಲ್ಲಿ ಅಥವಾ ಮತ್ತೊಂದು ಹುಕುಂ ಕೊಡಲ್ಪಡುವತನಕ ಸದರೀ ತಾಲ್ಲೂಕು ಚಾರ್ಜನಲ್ಲಿರತಕ್ಕದ್ದಲ್ಲದೆ ಮೂರನೇಕ್ಲಾಸ್‌ಮಾಜಿಸ್ಟ್ರೇಟ್‌ಅಧಿಕಾರಗಳು ಕೊಡಲ್ಪಟ್ಟಿರುತ್ತಾರೆ.

ನಂ ೧೮೦—ಮುಳಬಾಗಲ್ ತಾಲ್ಲೂಕು ಅಮಲ್ದಾರ್ ಕುಮಾರಸ್ವಾಮಿ ಮೊದಲಿಯಾರ್ರವರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖ್ ಲಾಗಾಯತು ಒಂದುತಿಂಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿರುತದೆ.

ಮೊಕ್ಕಾಂ ನಂ. ೭೩೯೩ ತಾ|| ೧೩ನೇ ಜನವರಿ ೧೮೮೮—೧೮೭೭ನೇ ಇಸವಿಯ ೩ನೇ ನಂಬರ್ ಇಂಡಿಯನ್ ರಿಜಿಸ್ಟ್ರೇಷನ್ ಆಕ್ಟಿನ ೬೯ನೇ ಸೆಕ್ಷನಿನ ನಿಯಮಗಳನ್ನನುಸರಿಸಿ, ಮೈಸೂರು ರಿಜಿಸ್ಟ್ರೇಷನ್ ಇನ್ಸ್‌ಪೆಕ್ಟರ್ ಜನರಲ್ಲವರಿಂದ ಏರ್ಪಡಿಸಲ್ಪಟ್ಟ ರಿಜಿಸ್ಟ್ರೇಷನ್ ರೂಲ್ಸಿಗಳಿಗೆ ಸೇರಿಸಬೇಕಾಗಿರುವ ಇದರಡಿ ಕಂಡ ಜಾಸ್ತೀ ಅಂಶವು ಗವರ್ನಮೆಂಟಿನವರಿಂದ ಮಂಜೂರ್ಮಾಡಲ್ಪಟ್ಟು ಸಕಲ ಜನಗಳ ತಿಳುವಳಿಕೆಯಬಗ್ಗೆ ಇದರಡಿ ಪ್ರಕಟಿಸಿ ಮಾಡಲ್ಪಟ್ಟಿರುತಿದೆ. ಪ್ಯಾರಾ ೭೩-A-ಸರಿಯಾದ ಸ್ಟಾಂಪ್ ವಿಷಯದಲ್ಲಿ ಒಬ್ಬ ಪತ್ರದಾರನಿಗೆ ಅನುಮಾನ ವುಂಟಾಗಿ ಆತನು ಅದು ಕ್ರಮವಾಗಿ ಹಾಜರ್ಮಾಡಲಿಕ್ಕೆ ಮುಂಚಿತವಾಗಿ ಸದರೀ ವಿಷಯವು ಕುರಿತು ರಿಜಿಸ್ಟರಿಂಗ್ ಆಫಿಸರೊಡನೆ ಆಲೋಚಿಸುವಪಕ್ಷಕ್ಕೆ ಅವರು ಪತ್ರವನ್ನು ಇಂಪೌಂಡ್ ಮಾಡುವದಕ್ಕೆ ನ್ಯಾಯಚಿತವಾಗಿ ಆತನಿಗೆ ಅವಶ್ಯಕವಾದ ತಪ್ಸೀಲುಗಳನ್ನೆಲ್ಲ ತಿಳಿಸತಕ್ಕದ್ದು. ಒಂದು ಸರ್ಕಾರಿ ಆದಾರ ಪೂರ್ವಕವಾದ ಅಭಿಪ್ರಾಯವು ಬೇಕಾದ್ದಲ್ಲಿ ೧೮೭೯ನೇ ಇಸವಿ ೧ನೇ ನಂಬರ್ ಸ್ಟಾಂಪ್ ಆಕ್ಟಿನ ೩೦ನೇ ಸೆಕ್ಷನಿನ ಪ್ರಕಾರ ಡಿಸ್ಟ್ರಿಕ್ಟ್ ಡೆಪ್ಯುಟಿ ಕಮಿಷನರಿಗೆ ಮತ್ತು ಸ್ಟಾಂಪ್ ಕಲೆಕ್ಟರಿಗೆ ಬರೆಮಕೊಳ್ಳತಕ್ಕದ್ದೆಂದು ಅದೇಕಾಲದಲ್ಲಿ ಪತ್ರದಾರನಿಗೆ ತಿಳಿಸಲ್ಪಡತಕ್ಕದ್ದು. ಮೇಲ್ಕಂಡ ನಿಬಂಧನೆಯು ೧೮೮೮ನೇ ಇಸವಿ ಫೆಬ್ರವರಿ ೧ನೇ ತಾರೀಖ್ ಲಾಗಾಯತು ಜಾರೀಯಲ್ಲಿ ತರಲ್ಪಡತಕ್ಕದ್ದು.

ನಂ ೧೮೧ ತಾ|| ೧೩ನೇ ಜನವರಿ ೧೮೮೮ನೇ ಇಸವಿ ಜನವರಿ ೧೭ನೇ ಮೊಕ್ಕಾಂ ೧೮೦ನೇ ನಂಬರುಳ್ಳ ಈ ಆಫೀಸ್ ಇಸ್ತಿಹಾರ್‌ನಾಮೆಯನ್ನನುಸರಿಸಿ ಅಮಲ್ದಾರ್ ಕುಮಾರಸ್ವಾಮಿ ಮೊದಲಿಯಾರ್ರವರು ಪ್ರಿವಿಲೇಜ್ ರಜಾದಮೇಲಿರುವ ಕಾಲದಲ್ಲಿ ಅಥವಾ ಮತ್ತೊಂದುಹುಕುಂ ಕೊಡಲ್ಪಡುವತನಕ ಮುಳಬಾಗಲ್ ತಾಲ್ಲೂಕು ಶಿರಸ್ತೇದಾರ್ ಕೆ. ರಂಗಯ್ಯಂಗಾರ್ರವರು ಸದರೀ ತಾಲ್ಲೂಕು ಚಾರ್ಜನಲ್ಲಿ ಮೂರನೇ ಕ್ಲಾಸ್ ಮ್ಯಾಜಿಸ್ಟ್ರೇಟ್ ಅಧಿಕಾರಗಳನ್ನು ಚಲಾಯಿಸುತ ಇರತಕ್ಕದ್ದು.

ನಂ. ೧೮೨, ತಾ|| ೧೯ನೇ ಜನವರಿ ೧೮೮೮—ಶ್ರೀಮನ್ಮಹಾರಾಜರವರ ಮಿಲಿಟರಿ ಸೆಕ್ರೆಟರಿ ಕರ್ನಲ್ ಎ. ಸಿ. ಜೆ ಸಾಹೇಬರವರಿಗೆ ೮೮ನೇ ಇಸವಿ ಜನವರಿ ೧೪ನೇ ಮೊಕ್ಕಾಂ ೧೩೯ನೇ ನಂ. ಇಸ್ತಿಹಾರ್‌ಮೂಲಕ ಕೊಡಲ್ಪಟ್ಟಿದ್ದ ರಜಾದಿಂದ ವಾಪಸ್ ಬಂದಿರುತ್ತಾರೆ.

ನಂ. ೧೮೩, ತಾ|| ೨೦ನೇಜನವರಿ ೧೮೮೮—ಕೋಲಾರ್ ಡಿಸ್ಟ್ರಿಕ್ಟ್ ಪೋಲೀಸ್ ಅಸಿಸ್ಟೆಂಟ್ ಕಮಿಷನರ್ ಮೆ|| ನಾರ್ಥೆಯವರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖ್‌ಲಗಾಯತು ೬ ತಿಂಗಳು ೧೨ ದಿನಗಳ ಪ್ರಿವಿಲೇಜ್‌ರಜಾಕೊಡಲ್ಪಟ್ಟಿರುತಿದೆ. ಮೆ|| ನಾರ್ಥೆಯವರ ಗೈರ್‌ಹಾಜರಿಯಲ್ಲಿ ಅಥವಾ ಮತ್ತೊಂದುಹುಕುಂ ಕೊಡಲ್ಪಡುವತನಕ ತುಮಕೂರು ಡಿಸ್ಟ್ರಿಕ್ಟ್ ಟ್ರೆಜರಿ ಅಸಿಸ್ಟೆಂಟ್ ಕಮಿಷನರ್ ಮಿಸ್ಟರ್ ಅಣ್ಣಾಜಿರಾಯರವರು ಪ್ರೋಬೇಷನ್ ಅಸಿಸ್ಟೆಂಟ್ ಕಮಿಷನರಾ ನೇಮಕರಮ್ಮಾಡಲ್ಪಟ್ಟಿರುತ್ತಾರೆ.

BANGALORE—Printed and published for the Proprietor, at the KARNATAKA Press.—1888.

ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA.

ಪ್ರತಿ ಸೋಮವಾರ ಪ್ರಾತಃಕಾಲದಲ್ಲಿ ಪ್ರಕಟಿಸಲ್ಪಡುವದು.

Published every Monday Morning.

ಪ್ರಕಾಮವಿವಿಧಸ್ರವೃತ್ತ್ಯುಪಗಮಾರ್ಥ ಕರ್ಣಾಟಕಪ್ರಕಾಶನದರಾಭಿದಾಪ್ರಥಿತಶಾಹಿತೀಶೋಭಿತಾ ॥ ವ್ಯಗಾಂಕಹಿತವಾಸಲೆನಿಹಿತಮುಪ್ರಣಾಸಜ್ಜನೈರ್ನಿ ಕಾಸುಪರಿಶೋಧಿತಾಬಿರತಿಹಾನಸಂಸುಮಂ ॥

Vol. XV |	BANGALORE:—MONDAY, JANUARY 30, 1888.	[No. 4.
ಸಂಪುಟ ೧೫. |	ಬೆಂಗಳೂರು:—ಸನ್ ೧೮೮೮ನೇ ಇಸವಿ ಜನವರಿ ೩೦ನೇ ತಾರೀಖ್ ಸೋಮವಾರ.	[ಸಂಖ್ಯೆ ೪.

ಕರ್ಣಾಟಕ ಪ್ರಕಾಶಿಕಾ

ಪತ್ರಿಕೆಯ ಚಂದಾ ದರಗಳು,
೧೮೮೮ನೇ ಇಸವಿ ಜನವರಿಯಿಂದಾರಂಭಿಸಿ
ಕಡಮೆಮಾಡಲ್ಪಟ್ಟಿರುತ್ತದೆ.

ಈ ಪತ್ರಿಕೆಯ ಚಂದಾದಾರರಲ್ಲಿಕಿ ಅನೇಕರ ಅಪೇಕ್ಷೆಯನ್ನನುಸರಿಸುವ ಉದ್ದೇಶದೊಡನೆಯೂ, ಪರಿಮಿತವಾದ ಆದಾಯವುಳ್ಳವರಿಗೆಲ್ಲ ಈ ಪತ್ರಿಕೆಯು ಸುಲಭವಾಗಿ ಲಭಿಸುವಂತಿರಬೇಕೆಂಬ ಅಭಿಪ್ರಾಯದೊಡನೆಯೂ ಇದರ ಚಂದಾದರವನ್ನು ಇದರಡಿಕಂಡಂತೆ ಕಡಮೆಮಾಡಿರುತ್ತೇವೆ:—

ಇಂಗ್ಲಿಷ್ ಮತ್ತು ಕನ್ನಡಭಾಗಗಳಿಗೆ.

		ಸ್ಥಳದವರಿಗೆ	ಪರಸ್ಥಳದವರಿಗೆ.
12	ತಿಂಗಳಿಗೆ	8—0—0	9—0—0
6	„	4—0—0	4—8—0
3	„	2—6—0	2—8—0

ಇಂಗ್ಲಿಷ್ ಅಥವಾ ಕನ್ನಡಭಾಗಗಳಿಗೆ.

		ಸ್ಥಳದವರಿಗೆ	ಪರಸ್ಥಳದವರಿಗೆ
12	ತಿಂಗಳಿಗೆ	4—0—0	5—0—0
6	„	2—0—0	2—8—0
3	„	1—4—0	1—6—0

ಷರಾ—ಅಂಚೆ ಮುದ್ರೆಗಳು, ಬೇಬುಳ ಮತ್ತು ತಾಲ್ಲೂಕ್ ಸ್ಕೂಲ್ ಮಾಸ್ಟರುಗಳು, ಶ್ಯಾನುಭೋಗರು, ಪಟೇಲರು, ವಿದ್ಯಾರ್ಥಿಗಳು, ಇವರಿಗೆಲ್ಲ ಈ ಪತ್ರಿಕೆಯು ಷರಾಯಿ ಚಂದಾದರಕ್ಕೆ ಕೊಡಲ್ಪಡುವದು. ಆರ್ಡರ್ ಮಾಡುವ ಸುದ್ದಿ ಬರದ ದಿನವಾಸ್ತವಾಗಿ ಸುತರಾಂ ವಿನಯೊದಲ್ಲದವರು ಚಂದಾದಾರರು ಇಂಗ್ಲೀಷ್ ಭಾಗವನ್ನಾಗಲಿ ಕನ್ನಡಭಾಗವನ್ನಾಗಲಿ ಅಥವಾ ಎರಡನ್ನಾಗಲಿ ತಿಂಗಳಿಗೆ ತೆಗೆದುಕೊಳ್ಳುವದು ಬಂಗಾರದೊಡನೆ ಕಳುಹಿಸಬೇಕಾದ್ದು. ಮೂರುತಿಂಗಳಿಗಿಂತ ಕಡಮೆಯಾಗಿ ಚಂದಾ ನೊಬಲಗು ಅಂಗೀಕರಿಸಲ್ಪಡಲಾರದು.

ನೋಟುಗಳು ರವಾನಿಸತಕ್ಕವರು ಮೊದಲು ಕಳುಹಿಸುವ ಅರ್ಧನೋಟು ತಲುಪಿದ ಬಗ್ಗೆ ನಮ್ಮ ಕಾಗದವು ಬಂದ ಕೂಡಲೇ ಬಾಕಿ ಅರ್ಧ ನೋಟನ್ನು ರವಾನಿಸತಕ್ಕದ್ದು. ಲಕೋಟೆಗಳು ಕಳುಹಿಸತಕ್ಕವರು ರೂಪಾಯಿ ಒಂದಕ್ಕೆ ಒಂದು ಆಣೆಯಂತೆ ಡಿಸ್ಕೌಂಟು ಸಹ ಸೇರಿಸಿ ಕಳುಹಿಸತಕ್ಕದ್ದು. ಅರ್ಧ ಆಣೆಗಿಂತ ಜಾಸ್ತಿ ಕ್ರೆಡಿಟ್ ಬಿಲ್‌ಗಳನ್ನು ಕಳುಹಿಸಬಾರದು. ಡಿಸ್ಕೌಂಟಿಲ್ಲದೆ ಕಳುಹಿಸಲ್ಪಡುವ ನೊಬಲಗನ್ನು ಅದು ಪಡೆಯಲ್ಪಟ್ಟ ದಿನ ಲೆಕ್ಕಕ್ಕೆ ಜಮಾ ಮಾಡಿಕೊಳ್ಳಲ್ಪಡುವದು ಪ್ರಕಟನೆಯ ರಿವಾಜ್.

ಮೊದಲನೆಯದಫಾ ಪಂಕ್ತಿ ಒಂದಕ್ಕೆ ೦—೨—೦

ಎರಡನೆಯದಫಾ ಪಂಕ್ತಿ ಒಂದಕ್ಕೆ ೦—೧—೦

ಷರಾ—ಎರಡುಸಾವರ್ತಿಗಿಂತ ಜಾಸ್ತಿಯಾಗಿ ಎಷ್ಟು ದಫಾ ಬೇಕಾದರೂ ಪ್ರಕಟಿಸಲು ಬೇಕಾದವರು ಪಂಕ್ತಿ ಒಂದಕ್ಕೆ ೧ ಆಣೆ ಲೆಕ್ಕ ಮಾಡಲ್ಪಡುವದು. ಈ ಪತ್ರಿಕೆಯಲ್ಲಿ ಪ್ರಕಟಿಸುವ ಬಗ್ಗೆ ಪ್ರಕಟನೆಗಳು ಕಳುಹಿಸುವವರು ಅವು ಎಷ್ಟುಸಾರಿ ಪ್ರಕಟ ಮಾಡಲ್ಪಡಬೇಕೋ ಆ ಅಂಕವನ್ನು ಸ್ಪಷ್ಟವಾಗಿ ತಿಳಿಸತಕ್ಕದ್ದು. ಇಲ್ಲದಿದ್ದರೆ ಅವರು ಪ್ರತಿಕಲಿ ನಿಲ್ಲಿಸುವಂತೆ ಬರೆಯುವವರೆಗೂ ಅವು ಪ್ರಕಟಿಸುತ್ತಿದ್ದು ಹಾಗೆ ಎಷ್ಟುಸಾರಿ ಪ್ರಕಟಿಸಲ್ಪಟ್ಟಿದ್ದಾಗ್ಯೂ ಮೇಲ್ಕಂಡ ದರದಂತೆ ಕಿಮ್ಮತ್ತ್ ವಸೂಲ್ಮಾಡಲ್ಪಡುವದು. ಪ್ರಕಟನೆಯ ಬಗ್ಗೆ ಕಳುಹಿಸಲ್ಪಡತಕ್ಕ ಪ್ರಕಟನೆಗಳನ್ನು ಆ ದೊಡ್ಡಸೋಮವಾರದ ಮಧ್ಯಾಹ್ನ ೨ ಘಂಟೆಯೊಳಗಾಗಿ ಕಳುಹಿಸಬೇಕು. ಪ್ರಕಟನೆಗಳ ಬಗ್ಗೆ ಈ ಪತ್ರಿಕೆಗೆ ಕಳುಹಿಸಲ್ಪಡತಕ್ಕ ಕಾಗದಗಳಲ್ಲಿ ತಿಳಿಸಲ್ಪಡುವ ಅಭಿಪ್ರಾಯಗಳಿಗೆ ನಾವು ಜವಾಬ್ದಾರರಾಗಲಾರೆವು. ಕ್ರಮವಾಗಿ ರುಜುಮಾಡಿ ದಸ್ತೂರ್ ಯಾವ ಕಾಗದವನ್ನು ಪ್ರಕಟಿಸಲಾರೆವು. ನಿರಾಕರಿಸಲ್ಪಟ್ಟ ಕಾಗದಗಳು ವಾಪಸ್ ಕಳುಹಿಸಲ್ಪಡಲಾರವು.

"IT RECOMMENDS ITSELF"

ALL WHO SUFFER FIND SURE RELIEF.

LITTLE'S

ORIENTAL BALM

THE MOST EFFECTUAL MODERN REMEDY FOR PAIN

ಲಿಟಲ್ ಸಾಹೇಬರಿಂದ ತಯಾರುಮಾಡಲ್ಪಟ್ಟ "ಬಾಧಶಂಹಾರಿಣೀ" ಎಂಬ ಪೂರ್ವದೇಶ ಸಂಬಂಧವಾದ ಅಮೂಲ್ಯ ತೈಲವು ಸ್ವಶಕ್ತಿ ಪ್ರಕಾಶಕವಾದದ್ದು, ಮತ್ತು ಸಕಲವಾದ ನವೀನ ಪ್ರತಿಕ್ರಿಯಾರೂಪವಾದ ಔಷಧವು. ಇದರಿಂದ ಕೈಲಿ ವಾತರೋಗಗಳೂ, ವಾತಸಂಬಂಧಗಳಾದ ಸಂಧಿವಾತಗಳೂ ನಿವೃತ್ತಿಯಾಗುವವು. ಮುಖ್ಯವಾಗಿ ಚರ್ಮಬೇನೆ ಮುಂತಾದ ವಾತರೋಗಗಳು, ಕೀಲು, ಸಂಧಿ, ನರದೌರ್ಬಲ್ಯ, ಚಳಿಜ್ವರ, ಕಟಿವಾಯು, ಉಳುಕು ನೋವು, ತಲೆನೋವು, ಹಲ್ಲುನೋವು ಮುಂತಾದ ರೋಗಗಳೆಲ್ಲ ನಿಶ್ಶೇಷವಾಗಿ ಬಹಳ ಸ್ವಲ್ಪ ಪ್ರಯೋಜನವನ್ನುಂಟುಮಾಡುತ್ತದೆ. ಈ ತೈಲವನ್ನು ಉಪಯೋಗಿಸಿದ ಕೂಡಲೆ ರೋಗಗಳು ಶಾಂತವಾಗುವಂತೆ ಬಹಳ ಶೀಘ್ರ ಗುಣವಾಗುವದು. ಈ ತೈಲವು ಶೀತ ರೋಗಗಳನ್ನು ಶಮನಮಾಡುವದರಲ್ಲಿ ಅದರ ಪ್ರಯೋಜನವು ಸ್ಪಷ್ಟವಾಗಿ ವ್ಯಕ್ತವಾಗುವದು. ಇದು ಸರ್ವರಿಗೂ ಉಪಯುಕ್ತವಾದದ್ದು.

ಪರೀಕ್ಷಕರ ಅಭಿಪ್ರಾಯವು.

ಐರ್‌ಲ್ಯಾಂಡ್ ದೇಶದ ಫಾರ್ಮಸ್ಯೂಟಿಕಲ್ ಸೊಸೈಟಿಯ ಔಷಧಶಾಲೆಯ ಪ್ರಕಾಶಕರಾಗಿಯೂ, ಸದರೀ ದೇಶದ ಫಾರ್ಮಸ್ಯೂಟಿಕಲ್ ಸೊಸೈಟಿ ಮುಂತಾದ ಸಮಾಜಗಳ ಸಭಿಕರಾಗಿಯೂ, ರಸಾಯನ ವಿದ್ಯೆಯ ವಿಷಯವಾದ ಅನೇಕ ಲೇಖನಗಳ ಕರ್ತರಾಗಿಯೂ, ಇರುವ ಪ್ರೊಫೆಸರ್ ಸಿ. ಆರ್. ಟಿಚ್‌ಬೋರ್ನ್ (C. R. TICHBORNE, L. L. D., F. C. S., M. R. I. A.) ಇವರು ಅಭಿಪ್ರಾಯಪಡುತ್ತಾರೇನೆಂದರೆ—ಲಿಟಲ್‌ರವರ ಓರಿಯೆಂಟಲ್ ತೈಲವನ್ನು ಬಹಳ ಜಾಗ್ರತೆಯಿಂದ ಪರೀಕ್ಷಿಸಿದ್ದರಲ್ಲಿ ಇದು ಬಹುವಿಧ ಮೂಲಿಕೆಗಳ ರಸಮಿಶ್ರವಾದ ತೈಲವೆಂದು ತಿಳಿದಿದೆ. ಇದು ನೋವು ಮೊದಲಾದವುಗಳಲ್ಲಿ ಉಪಯೋಗಿಸಲ್ಪಡುವುದಕ್ಕೆ ಯೋಗ್ಯವಾದದ್ದಾಗಿದ್ದರೂ, ಸಹಜವಾಗಿ ಪ್ರಬಲ ರೋಗ ನಿವಾರಕವಾಗಿರುತ್ತದೆ. ಈ ಮಿಶ್ರೌಷಧವು ನರಗಳನ್ನು ಸ್ಥಿಮಿತಕ್ಕೆ ತರತಕ್ಕದ್ದಾಗಿರುವದರಿಂದ ನಾನಾ ತರದ ರೋಗಗಳಿಗೆ ಉಪಯುಕ್ತವೆಂದು ತಿಳಿಸಲ್ಪಟ್ಟಿದೆಯೋ ಸದರೀ ರೋಗಗಳಲ್ಲಿ ಅದರ ಪ್ರಯೋಜನವು ವ್ಯಕ್ತವಾಗುವದು. ಈ ತೈಲವು ಸಂಪೂರ್ಣ ಜಾಗರೂಕತೆಯೊಡನೆ ತಯಾರಿಸಲ್ಪಟ್ಟಿರುವದೆ.

ಇದರ ಕ್ರಯ—ಸೀಸೆ ಒಂದಕ್ಕೆ ೧ ರೂಪಾಯಿ.

ಇದು ಮಿಸ್ಟರ್ ಔಷಧ ಶಾಲೆಯಲ್ಲಿಯೂ, ಮಾರ್ಕೆಟ್ ಕೆಂಪನಿಯ ಬೀದಿಯಲ್ಲಿ, ಎಲ್. ನಂಬರ್ ನೂರ ಹದಿನಾರನೆ, ಮ ಎ ಸಿ ಬೈರ್ಮನ್ ಇವರಲ್ಲಿಯೂ, ಈ ಪೇಟೆಯಲ್ಲಿರುವ ಅವರ ಏಜಂಟರಾದ ಜೆ. ವೆಸ್ಟ್ ಇವರ ಕಂಪನಿಯಲ್ಲಿಯೂ, ಮ. ಕೆಪ್ಟನ್ ಅಂಡ್ ಕಂಪೆನಿಯವರಲ್ಲಿಯೂ, ರಿಗ್ಸ್ ಮೊದಲಾದ ಕಂಪನಿಯವರಲ್ಲಿಯೂ ದೊರೆಯುವದು.

AGENTS.— Messrs, J. WEST, *Chemist, &c., Bangalore.*
CAPTAIN & Co. *Chemists, Bangalore*
RIGGS & Co., *Chemists, Bangalore*, and of

MAHOMED YOUSOFF AND SONS, *The Cash Bazaar, Bangalore.*
A. C. BYERMAN & Co.,
20 *Sunkoduss Street, Madras.*

NOTICE.

VAIDYASARA SANGRAHA

A TREATISE ON THE PRINCIPLES OF

HINDU MEDICINE

Price including Postage Rs 5 6 0

ವೈದ್ಯಸಾರ ಸಂಗ್ರಹ.

ಈಗ್ರಂಥಾಪೇಕ್ಷೆಯುಳ್ಳವರು ಮೊಬಲಗಿನೊಡನೆ ಕೆಳಗೆ ರುಜುಮಾಡಿರತಕ್ಕವರ ಹೆಸರಿಗೆ ಬರೆದುಕೊಂಡರೆ ಪುಸ್ತಕ ಕೂಡಲೇ ಕಳುಹಿಸಲ್ಪಡುವದು. ಮೊಬಲಗು ಇಲ್ಲದ ದರಖಾಸ್ತುಗಳಿಗೆ ಸುತರಾಂ ನಿಗೇಕೊಡಲ್ಪಡಲಾರದು.

ಇದರ ಕ್ರಯ ... ... ರೂ॥ ೫—೦—೦

ಪ್ಯಾಕಿಂಗ್ ಮತ್ತು ಅಂಚೆಖರ್ಚು ೦—೬—೦

ಟಿ. ಬಿ. ವೆಂಕಟಾಚಾರ್,
ಆಸ್ಪತ್ರಿರೋಡು, ಬೆಂಗಳೂರು.

ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA.

MONDAY, JANUARY 30 1888

೧೮೮೮ನೇ ಜನವರಿ ೩೦ನೇ ತಾ॥ ಸೋಮವಾರ.

OSCILLATION.

ಈ ಪ್ರಾಂತ ಗವರ್ನಮೆಂಟ್ ಬಾಲಿಕಾ ಪಾಠಶಾಲೆಯ ಪ್ರಥಮೋಪಾಧ್ಯಾಯರ ಕೆಲಸವು ಖಾಲಿಯಾಗುವದಾಗಿರುವಂತೆಯೂ, ಅದಕ್ಕೆ ಮೊಕದ್ದಮಾಗತಕ್ಕವರು ಸರಳಾಂಡದಿಂದಲೂ ಅರ್ಹರಾದವರಾಗಿರಬೇಕೆಂತಲೂ, ಈಗ್ಯೆ ಹಿಂದೆರಡು ವಾರಗಳ ಹಿಂದೆ ತಿಳಿಸಿದ್ದನಷ್ಟೆ. ಸದರೀ ಕೆಲಸ ಅದ್ಯಾಪಿ ಭರ್ತಿಯಾಗದೆ ಇರುವಂತೆಯೂ, ಅದು ಭರ್ತಿಮಾಡತಕ್ಕ ವಿಷಯದಲ್ಲಿ ಸ್ಕೂಲ್ ಅಧಿಕಾರಿಗಳು ಬಹಳ ಆಲೋಚಿಸುತ್ತಿದ್ದಾರೆಂತಲೂ, ಇದರಿಂದ ಪ್ರಾಕ್ತನದ ಉಪಾಧ್ಯಾಯರು ತಮ್ಮ ಕೆಲಸವನ್ನುಬಿಟ್ಟು ಹೋಗಲಿಕ್ಕೆ ಅನುಕೂಲಿಸದೆ ಕಳವಳ ಪಡುತ್ತಲಿರುವಂತೆಯೂ, ಪ್ರತಿಕ್ಷಣದಲ್ಲಿಯೂ ಒಬ್ಬೊಬ್ಬರು ಮುಖ್ಯರಾಗುತ್ತಲಿದ್ದಾರೆಂತಲೂ ಪರಂತು ಒಬ್ಬರ ಶಿಫಾರಸ್ಸು ಮತ್ತೊಬ್ಬರಿಗೆ ಸರಿಬೀಳದೆ ಆಗಿಂದಾಗ್ಯೆ ಮುಂಜೂರಾಗುತ್ತಲೂ ರದ್ದಾಗುತ್ತಲೂ ಇರುವಂತೆಯೂ ಸದರೀ ಶಾಲೆಯಲ್ಲಿ ಓದುತ್ತಲಿರುವ ವಿದ್ಯಾರ್ಥಿನಿಯೊಬ್ಬಳ ಮೂಲಕ ತಿಳಿದು ಬಹಳ ಆಶ್ಚರ್ಯಪಡುತ್ತೇವೆ. ಈ ವಿಷಯದಲ್ಲಿ ಹುಡುಗಿಯರ ಸಂರಕ್ಷಕರ್ಯಾರಾದರೂ ಅಕ್ಕರೆಯಂ ವಹಿಸಿ ವ್ಯವಸ್ಥೆ ಮಾಡಿಕೊಳ್ಳದೆ ಉದಾಸೀನರಾಗಿದ್ದಾರೆಯೋ ತಿಳಿಯಲಿಲ್ಲವು. ಪ್ರಸಕ್ತ ವಿಷಯವು ತಮ್ಮ ಹೆಣ್ಣುಮಕ್ಕಳ ಕ್ಷೇಮಾಭಿವೃದ್ಧಿಗೆ ಕಾರಣವಾದದ್ದಲ್ಲವೆಂದು ಪ್ರಾಯಶಃ ಈ ನಗರನಿವಾಸಿಗಳು ಭಾವಿಸಿರಬಹುದೆಂದೆಣಿಸುತ್ತೇವೆ. ಇದೇ ಸ್ಕೂಲ್ ಸಾಧಕದಲ್ಲಿ ಈಗಿನ ದಿವಾನರಾದ ಮ॥ ಶೇಷಾದ್ರಿ ಅಯ್ಯರವರು ಶ್ರೀಮನ್ಮಹಾರಾಜರವರ ಸಾನ್ನಿಧ್ಯದಲ್ಲಿ ತಿಳಿಸಿದ ಅಭಿಪ್ರಾಯಗಳುಂ ಮರಳಿ ಈ ಸಂದರ್ಭದಲ್ಲಿ ಪ್ರಜೆಗಳ ಜ್ಞಾಪಕಕ್ಕೆ ತಂದು ಅವರನ್ನೆಚ್ಚರಿಸಬೇಕಾದದ್ದು ಕೇವಲ ಅವಶ್ಯಕವೆಂದು ಭಾವಿಸುವೆವು. ಅವುಗಳ್ಯಾವುವೆಂದರೆ—ಸ್ಕೂಲ್ ಅವಳತಗಳು ವಿದ್ಯಾರ್ಥಿನಿಯರ ತಾಯಿ ತಂದೆಗಳಿಗೆ ಇಷ್ಟವಿಲ್ಲದಿರುವಾಗಲೂ, ತಮ್ಮ ಮಕ್ಕಳ ಅಭಿವೃದ್ಧಿಗೆ ನಿಮಿತ್ತಗಳಾದ ಅಂಶಗಳುಂ ಸೂಚಿಸಿ ಅದುಂ ಆಚರಣೆಯಲ್ಲಿ ತರುವ ಅಭಿಲಾಷೆ ಯುಂಟಾದಾಗಲೂ ಅವರು ತಮ್ಮ ಅಭಿಪ್ರಾಯಗಳುಂ ಧಾರಾಳವಾಗಿ ತಿಳಿಸಿ ಸ್ಕೂಲ್ ವಿಚಾರಣಾಧಿಕಾರಿಗಳ ಮೂಲಕ ವ್ಯವಸ್ಥೆ ಮಾಡಿಕೊಳ್ಳಬಹುದೆಂತಲೂ, ಅಂತಾ ಪರ ಅಭಿಪ್ರಾಯಗಳುಂ ಆದರಿಸಲಿಕ್ಕೆ ಸ್ಕೂಲ್ ಕಮಿಟಿಯವರು ಬದ್ಧರಾಗಿರುವರೆಂತಲೂ, ಅವುಗಳು ಪೇಕ್ಷಿಸಲ್ಪಡದಿರುವಂತೆ ಶ್ರೀಮನ್ಮಹಾರಾಜಾ ಸರ್ಕಾರದವರು ಅಕ್ಕರೆಯೊಡನೆ ಅನವರತ ನೋಡಿಕೊಳ್ಳಲಿಕ್ಕೆ ಕುತೂಹಲಪಟ್ಟವರಾಗಿರುತ್ತಾರೆಂತಲೂ, ಅದರಿಂದ ಈ ಪಾಠಶಾಲೆಯಲ್ಲಿ ಸರ್ಕಾರದವರಿಗಿರುವಂತೆಯೇ ಅವರಲ್ಲಿ ವಿದ್ಯಾಭ್ಯಾಸ ಮಾಡತಕ್ಕ ಬಾಲಿಯರ ತಾಯಿ ತಂದೆಗಳಿಗೆ ಸಹ ಸಮಾನ ಅಧಿಕಾರಸ್ವಾತಂತ್ರ್ಯಗಳು ಇರುವವೆಂತಲೂ, ವಗೈರೆ ವ್ಯಕ್ತಪಡಿಸಿದ್ದಂತೆ, ನಮ್ಮ ಜ್ಞಾಪಕದಲ್ಲಿರುತ್ತದೆ. ಇದು ನಿಜವಾಗಿ ಪ್ರಜಾಪಕ್ಷಕ್ಕೆ ದಿವಾನರವರ ಸದರೀ ಶ್ಲಾಘ್ಯವಾದ ವಾಕ್ಯಗಳುಂ ಜನಗಳು ಅನವರತ ಸ್ಮರಿಸಿಕೊಳ್ಳುತ್ತಕೊಂಡು ವರ್ತಿಸುವರೆಂದು ನಂಬುತ್ತೇವೆ. ಪ್ರಸಕ್ತ ಕೆಲಸ ಇದುವರಿವಿಗೂ ಖಾಲಿಯಾಗಿರುವದು ನೋಡಲಾಗಿ ಅದಕ್ಕೆ ಲಾಯಕ್ಕಾದವರೊಬ್ಬರೂ ದೊರೆಯದಿರಬಹುದೆಂದು ತೋರುತ್ತದೆ. ಆಲಾಯಖಿ ಯೆಂಬದು ಅವರವರ ಭಾವನಾಧೀನವಾದದ್ದಾಗಿ ಏರ್ಪಟ್ಟಿರುವದರಿಂದ ಅದು ಏವಂವಿಧವಾದದ್ದೆಂದು ನಿರ್ಧರಿಸುತ್ತಿಯ ಕೂಡದ್ದಾಗಿದೆ. ಈ ಪ್ರಪಂಚ ಜಾತಗಳಾದ ಸಕಲವಸ್ತುಗಳೂ ಭಿನ್ನಭಿನ್ನಗಳಾಗಿರುವದರಿಂದಲೂ, ಅದರಲ್ಲಿ ಸ್ವಲಕ್ಷಣವಾದದ್ದಾಗಿರುವದರಿಂದಲೂ, ಒಂದಕ್ಕೊಂದು ರೂಪಸಾದೃಶ್ಯ ಸಾಮರಸ್ಯತೆಗೆ ಳುಂಟಾಗಿರುವದೆಂದೆಣಿಸುವದು ಯಾವಾಗಲು ಭ್ರಾಂತಿಕಲ್ಪಿತವಾದದ್ದಾಗಿರುತ್ತದೆ. ಅದರಿಂದ ಈಗಿನ ಸ್ಥಿತಿಯಲ್ಲಿ ವಿಚಾರಣಾಧಿಕಾರಿಗಳಾದವರೆಲ್ಲರಿಗೂ ಸಮರ್ಪಕವಾಗಿರುವಂತೆ ಲಾಯಖಿಯು ತೂಗುತಿರುವದು ಪ್ರಯಾಸವು.

THE ANNEXATION OF TRAVANCORE

ತಿರುವಾಂಕೂರು ಸಂಸ್ಥಾನದ ಪ್ರಕೃತ ಸ್ಥಿತಿಯನ್ನಾಲೋಚಿಸಿ ಮದರಾಸ್ ಸ್ಟ್ಯಾಂಡಾರ್ಡ್ ಪತ್ರಿಕೆ ಅಭಿಪ್ರಾಯಪಡುವದೇನಂದರೆ.—

ಈಗ ತಿರುವಾಂಕೂರ್ ಸಂಸ್ಥಾನದ ವಿಷಯದಲ್ಲಿ ಮದರಾಸ್ ಗವರ್ನಮೆಂಟಿನವರು ತೋರಿಸುತಬರುವ ಔದಾಸೀನ್ಯತೆಯು ಕಂಡು ನಾವು ಬಹಳ ಭೀತಿಗೊಂಡಿರುತ್ತೇವೆ. ಇತರರು ಅನುಕರಿಸಬೇಕಾದ ಸ್ಥಿತಿಯಲ್ಲಿದ್ದ ತಿರುವಾಂಕೂರು ಸಂಸ್ಥಾನವು ನಾಶನವನ್ನೊಂದುತಲಿರುವದನ್ನು ನೋಡಿ ಅದರ ಪರಿಹಾರದ ವಿಷಯದಲ್ಲಿ ಮದರಾಸ್ ಗವರ್ನಮೆಂಟಿನವರು ನಿಷ್ಪ್ರಯತ್ನರಾಗಿರುವರೆಂದು ಎಣಿಸುವದಕ್ಕಾಗುವದಿಲ್ಲವು. ಸಮುದ್ರದಲ್ಲಿ ಒಂದು ಹಡಗು, ಅದರಲ್ಲಿನ ಸಾಮಾನುಗಳೊಡನೆಯೂ, ಗುಮಾಸರು, ಹೆಂಗಸರು, ಮಕ್ಕಳು ಮೊದಲಾದ ಪ್ರಯಾಣಸ್ಥರೊಡನೆಯೂ ಮುಳುಗಿಹೋಗುವದನ್ನು ಪರ್ವತ ಶಿಖರದಮೇಲಿನಿಂದ ನೋಡಿ ಸಂತೋಷಿಸುವಂಥಾವರು ಕೆಲವರಿರಬಹುದು, ಪರಂತು ಹೃದಯವ್ಯಥಾಕಾರಿಯಾದ ಅಂಥಾ ವಿಪತ್ತನ್ನು ನೋಡಿ ತಡಮಾಡಿಕೊಳ್ಳುವದಕ್ಕೆ ಯೆಲ್ಲರಿಗೂ ಸಹನೆಯು ಬೇಕರೀತಿಯಾಗಿರಲಾರದು. ಮತ್ತು ಲಾರ್ಡ್ ಕಾನಿಮರಾ ಯವರ ಆಧಿಪತ್ಯದಲ್ಲಿ ಮದರಾಸ್ ಗವರ್ನಮೆಂಟಿನವರು ಅಂತಾ ಸ್ಥಿತಿಯನ್ನು ಯೆಂದಿಗೂ ತೋರಲಾರರು. ತಿರುವಾಂಕೂರಲ್ಲಿ ತಲೆದೋರಿರುವ ಲಂಚ ಮತ್ತು ವ್ಯಭಿಚಾರ ಮೊದಲಾದ ದುರ್ನಡತೆಗಳನ್ನು ಗವರ್ನಮೆಂಟಿನವರು ಯೆಸ್ಟು ದಿನಗಳ ವರಿವಿಗೆ ತಟಸ್ಥರಾಗಿ ನೋಡಿಕೊಂಡಿರುವವರಾಗಿರಾರೆ! ಇದು ಲಾರ್ಡ್ ಡಫರಿನ್‌ರವರ ಕಾಲವಾಗಿದ್ದಿರುವದಾದರೆ ಸುಪ್ರೀಂ ಗವರ್ನಮೆಂಟಿನವರು ತೋರಿಸುತಬರುವ ಔದಾಸೀನ್ಯತೆಗೆ ಕಾರಣವನ್ನು ಸ್ಪಷ್ಟವಾಗಿ ತಿಳಿಸುವೆವು. ಲಾರ್ಡ್ ಡಫರಿನ್ ಸಾಹೇಬರವರು ಬ್ರಿಟಿಷ್ ಆಧಿಪತ್ಯವನ್ನು ಬಡಾಯಿಸಬೇಕೆಂಬ ಉದ್ದೇಶದೊಡನೆ ನೇಟಿವ್ ಸಂಸ್ಥಾನಗಳಲ್ಲಿನ ದುರ್ನಡತೆಗಳನ್ನು ಪ್ರಾರಂಭದಲ್ಲೇ ಪರಿಹರಿಸದೆ ಸುಮ್ಮನಿದ್ದರು, ಹಾಗೆ ಮಾಡದೆ ಹೋದರೆ ಮುಂದೆ ನೇಟಿವ್ ಸಂಸ್ಥಾನಗಳನ್ನು ಬ್ರಿಟಿಷ್ ಸರ್ಕಾರಕ್ಕೆ ಸೇರಿಸಿಕೊಳ್ಳುವದಕ್ಕೆ ತಕ್ಕ ಕಾರಣಗಳೊದಗಿರಲಾರವು. ಸ್ವೇಚ್ಛಾಪೂರ್ವಕವಾಗಿ, ತಮ್ಮ ರಾಜ್ಯ ಕಾರ್ಯಗಳಂತೊಳೆದು ಮನಸ್ಸಿಗೆ ವರ್ತಿಸುತಲಿದ್ದ ಅರಸರುಗಳು, ಬ್ರಿಟಿಷ್ ಗವರ್ನಮೆಂಟಿನವರು ರಣಹದ್ದುಗಳಂತೆ ಮೇಲ್ಬಿದ್ದು ತಮ್ಮ ರಾಜ್ಯಗಳಂ ಕಿತ್ತುಕೊಳ್ಳುವತನಕ ದುಷ್ಕೃತ್ಯದಲ್ಲಿ ಪ್ರೋತ್ಸಾಹ ಪ್ರಂಟುಮಾಡಲ್ಪಡುತಬಂದವು. ಕರ್ನಾಟಕ ರಾಜಕುಮಾರರು, ಸತಾರಾ, ಜಾನ್ಸಿ, ನಾಗಪೂರ್, ಈಸಂಸ್ಥಾನಗಳ ಅರಸರುಗಳ ಗತಿ ನಮ್ಮೆಲ್ಲರಿಗೂ ಚೆನ್ನಾಗಿ ತಿಳಿದೇಯಿದೆ. ತಿರುವಾಂಕೂರ್‌ವಿಷಯದಲ್ಲಿ ಸಹ ಅಂತಾ ದುಸ್ಥಿತಿಯನ್ನು ನೋಡುವ ದೌರ್ಭಾಗ್ಯ ನಮಗೆ ಪ್ರಾಪ್ತವಾಗದಿರಬೇಕೆಂದು ಕೋರುತ್ತೇವೆ ಈಗ ಅಲ್ಲಿ ವೃದ್ಧಿಯಾಗುತಲಿರುವ ಕೆಡುಕುಗಳು ಕೂಡಲೇ ನಿವೃತ್ತಿಮಾಡಲ್ಪಟ್ಟರೆ ತಿರುವಾಂಕೂರು ಸಂಸ್ಥಾನವು ಉಳಿದು ಅಲ್ಲಿನವರು ಸರ್ವೋನ್ನತಾಧಿಕಾರಿಗಳಾದ ಬ್ರಿಟಿಷನವರ ಶ್ರೇಯೋಭಿಪ್ರಾರ್ಥನೆಮಾಡುವರು, ಹಾಗಲ್ಲದೆ ಮಹಾರಾಜರವರ ಮತ್ತು ಅವರ ದಿವಾನರವರ ಇಷ್ಟಾನುಸಾರ ರಾಜ್ಯ ಕಾರ್ಯಗಳಂ ನಡೆಸುವದಕ್ಕೆ ಅವಕಾಶ ಪ್ರಂಟುಮಾಡಲ್ಪಟ್ಟರೆ ಸದರೀ ರಾಜ್ಯವನ್ನು ತಮ್ಮ ಅಧಿಕಾರಕ್ಕೆ ಸೇರಿಸಿ ಕೊಳ್ಳುವದು ನ್ಯಾಯವೆಂದು ಹೇಳುವದಕ್ಕೆ ಬ್ರಿಟಿಷ್ ಗವರ್ನಮೆಂಟಿನವರಿಗೆ ಸುಲಭವಾಗಿ ಕಾರಣದೊರೆಯುವದು. ಈಗಿನ ಅರಸರವರಿಗೆ ತಮ್ಮ ಕಾಲಾನಂತರ ತಮ್ಮ ರಾಜ್ಯವು ಬ್ರಿಟಿಷ್ ಆಧಿಪತ್ಯಕ್ಕೆ ಸೇರಿಸಿಕೊಳ್ಳಲ್ಪಡುವ ವಿಷಯದಲ್ಲಿ ಸಮ್ಮತವೇ ಯೆಂದು ತಿಳಿದುಕೊಳ್ಳಬಹುದು. ಇವಕ್ಕೆ ಕಾರಣವೇನೆಂದರೆ, ಈಗಿನ ಅರಸರಿಗೂ ಮುಂದೆ ಅವರ ಪದವಿಗೆ ಬರತಕ್ಕ ನಾನಾ ಕುಟುಂಬಗಳಿಗೆ ಸೇರಿದವರಿಗೂ ಇರುವ ದೂರಸಂಬಂಧದಿಂದಲೂ, ಅವರ ವಿಷಯದಲ್ಲಿ ಯಿವರಿಗಿರುವ ದ್ವೇಷದಿಂದಲೂ, ಮುಂದೆ ಬರತಕ್ಕವರಿಗೆ ರಾಜ್ಯಪದವಿ ತಪ್ಪಿಹೋಗಲೆಂದು ಕೋರುವಂತಾವರಾದರು ದಿವಾನರಾದರೊ ಅನ್ಯದೇಶೀಯರು, ಅವರ ಮಿತ್ರರಿಗೂ ಬಂಧುಗಳಿಗೂ ಅಧಿಕಾರಗಳು ಸಿಕ್ಕಿಹೋದರೆ ತಾವು ನೇಟಿವ್ ಸಂಸ್ಥಾನದಲ್ಲಿದ್ದರೂ ಬ್ರಿಟಿಷ್ ರಾಜ್ಯದಲ್ಲಿದ್ದರು ಚಿಂತೆಯಿಲ್ಲವು ಸರ್ವೋನ್ನತಾಧಿಕಾರಿಗಳಾದ ಬ್ರಿಟಿಷನವರ ಆಜ್ಞಾಪೂರ್ತಿ ಮಾಡುವ ಬ್ರಿಟಿಷ್ ರೆಸಿಡೆಂಟರುಗಳಿಗೆ ಪ್ರಶಸ್ತಿಗಳು ದೊರೆತು, ಪೂರ್ವ ದೇಶದಲ್ಲಿ ಬ್ರಿಟಿಷ್ ಆಧಿಪತ್ಯವನ್ನು ಉಜ್ಜೀವಿಸಲು ಮತ್ತು ಅದಕ್ಕೆ ಪ್ರೋತ್ಸಾಹಕರಾದವರ ಪಟ್ಟಿಗೆ ದಾಖಲಾಗುವದಕ್ಕೆ ಅನುಕೂಲವಾಗುತಿದೆ. ಈಗ ಅಧಿಕಾರ ಪದದಲ್ಲಿರುವ ಸಾರ್ವಿಯಮೆಂಟ್ ಮೆಂಬರಿಗಳಸ್ಟ್ರೆ ಕನ್ಸರ್ವೆಟಿವ್ ಕಕ್ಷಿಗೆ ಸೇರಿ, ಬರ್ಮಾದೇಶವನ್ನು ಬ್ರಿಟಿಷ್ ರಾಜ್ಯಭಾರಕ್ಕೆ ಸೇರಿಸಿಕೊಂಡ ವಿಷಯದಲ್ಲಿ ಉದಾಸೀನರಾಗಿದ್ದವರಲ್ಲಿ ಈಗಿನ ಮದರಾಸ್ ಗವರ್ನರೊಬ್ಬರಾಗಿದಾರೆ. ತಿರುವಾಂಕೂರು ಸಂಸ್ಥಾನದ ಕ್ಷೇಮ ಚಿಂತಕರಾದವರ ಮನೋಭಾವವನ್ನೂ ಸದರೀ ನೇಟಿವ್‌ಸಂಸ್ಥಾನದ ದುರವಸ್ಥೆಯನ್ನೂ ನೋಡಲಾಗಿ ಮುಂಬಿನ ಅದರಸ್ಥಿತಿಯು ಬಯಲನ್ನುಂಟುಮಾಡತಕ್ಕದ್ದಾಗಿದೆ. ಪರಂತು ನಾವು ಈಗ ಎಣಿಸುವಂತೆ ಆಗದೆ ಇರಬೇಕೆಂದು ಮನಃಪೂರ್ವಕವಾಗಿ ಕೋರುತ್ತೇವೆ, ಎಂಬುದು.

Occasional Notes.
ನೈಮಿತ್ತಿಕ ವಿಷಯನ್ಯಾಸ.

Ayubkhan.—ಅಯೂಬ್‌ಖಾನನೂ ಇತರ ಮುಖ್ಯ ಸರ್ದಾರ್‌ಗಳೂ ಈ ತಿಂಗಳ ೧೯ನೇ ತಾರೀಖಿನಲ್ಲಿ ಟಿಹರಾನ್‌ಮಾರ್ಗವಾಗಿ ಇಂಡ್ಯಾದೇಶಕ್ಕೆ ಪ್ರಯಾಣವಾದರು.

• The Resident of Nepaul.—ನೇಪಾಳ ದೇಶದ ರೆಸಿಡೆಂಟರಾದ ಮಿ|| ಗಿರ್ಡಲ್‌ಸ್ಟೋನ್‌ಯವರು ಕಾಹಿಲೆಯಿಂದ ಸ್ವದೇಶ ಗಮನೋದ್ಯುಕ್ತರಾಗಿ ತಮ್ಮ ಕೆಲಸದ ಚಾರ್ಜನ್ನು ಕರ್ನಲ್ ಬೀಕಾಕ್‌ಯೆಂಬವರಿಗೆಕೊಟ್ಟರು.

American railways.—ಅಮೆರಿಕಾ ದೇಶದಲ್ಲಿ ಈಗ ರೈಲುರಸ್ತೆಯು ೧,೫೦,೭೫೦ ಮೈಲಿಗಳದೂರ ಹಾಕಲ್ಪಟ್ಟಿರುತದೆ. ಅದರಲ್ಲಿ ೧೨,೭೦೦ ಮೈಲಿಗಳದೂರ ಸನ್ ೧೮೮೭ನೇ ಇಸವಿಯಲ್ಲಿ ಹಾಕಲ್ಪಟ್ಟವು.

The Secretaryship of Lady Dufferin's Fund.—ಬರುವ ಮಾರ್ಚಿ ತಿಂಗಳಲ್ಲಿ, ಲೇಡೀ ಡಫರಿನ್‌ಯವರಿಂದ ಸ್ಥಾಪಿಸಲ್ಪಟ್ಟಿರುವ ಫಂಡಿನ ಸೆಕ್ರಟರಿ ಕೆಲಸವನ್ನು ಇಂಡ್ಯಾ ಗವರ್ನಮೆಂಟಿನ ಫಾರಿನ್‌ಡಿಪಾರ್ಟ್‌ಮೆಂಟ್ ಸೆಕ್ರಟರಿಯಾದ ಮಿಸ್ಟರ್ ಡ್ಯುರಾಂಡ್‌ಯವರು ವಹಿಸುವರು.

The investiture ceremony at Calcutta.—ಜಯಪುರ ಮತ್ತು ಮೈಸೂರ್ ಸಂಸ್ಥಾನಗಳ ಮಹಾರಾಜರುಗಳು, ಪ್ರಶಸ್ತಿಗಳಂ ಕೊಡತಕ್ಕ ಬಗ್ಗೆ ನಿಶ್ಚಯಿಸ್ಪವಾಗಿರುವ ದರ್ಬಾರಿಗೆ ಕರೆಯಲ್ಪಟ್ಟು ಕಲ್ಕತ್ತೆಗೆ ಪ್ರಯಾಣಮಾಡುವವರಾಗಿದಾರೆ ಅದೇ ದರ್ಬಾರಿಗೋಸ್ಕರ ಮದರಾಸ್ ಗವರ್ನರಾದ ಲಾರ್ಡ್ ಕಾನಿಮರಾಯವರು ತಮ್ಮ ಭಾರ್ಯೆಯವರೊಡನೆ ಈದಿನ ಹೊರಡುತ್ತಾರೆ.

Election of a President.—ಕಲ್ಕತ್ತೆಯಲ್ಲಿ ಸ್ಥಾಪಿಸಲ್ಪಟ್ಟಿರುವ ಮೆಡಿಕಲ್ ಸೊಸೈಟಿ, ಅಂದರೆ ವೈದ್ಯಸಮಾಜಕ್ಕೆ ಡಾಕ್ಟರ್ ಲಾಲ್ ಮಾದವ ಮೊಕರ್ಜಿ ಯೆಂಬವರು ಪ್ರೆಸಿಡೆಂಟರಾಗಿ ಚುನಾಯಿಸಲ್ಪಟ್ಟರು. ಈ ಕೆಲಸಕ್ಕೆ ನೇಟಿವ್ ದೊಬ್ಬಮನುಷ್ಯನು ಚುನಾಯಿಸಲ್ಪಡುವದಕ್ಕೆ ಇದೇ ಪ್ರಾರಂಭವಾಗಿರುತಿದೆ.

The sea and land customs revenue of India.—ಚಾಲತೀ ಸರ್ಕಾರ್ ಸಾಲಿನಲ್ಲಿ ಮೊದಲು ಒಂಭತ್ತು ತಿಂಗಳಕಾಲಕ್ಕೆ, ನಮ್ಮ ಕಡೆ ಲೆಕ್ಕದ ಪ್ರಕಾರ, ಇಂಡ್ಯಾದೇಶದಲ್ಲಿ ಸಮುದ್ರ ಮತ್ತು ಜಲಭೂಮಾರ್ಗವಾಗಿ ಆಮದ್ ರಫ್ತಾಗುವ ಸರಕುಗಳ ಮೇಲಿನ ಶೀರ್ವೆಯಬಗ್ಗೆ ೭೩,೪೪,೦೦೦ ರೂಪಾಯಿಗಳು ವಸೂಲಾಗಿರುತಿದೆ. ಕಳೆದ ಸಾಲಿನಲ್ಲಿ ಅದೇ ಒಂಭತ್ತು ತಿಂಗಳಕಾಲಕ್ಕೆ ಸದರೀಬಗ್ಗೆ ೭೨,೮೩,೦೦೦ ರೂಪಾಯಿಗಳು ವಸೂಲಾದವು.

Success of a Mahomedan candidate.—ಈಚೆಗೆ ಮುಂಬೈ ಯೂನಿವರ್ಸಿಟಿಯಲ್ಲಿ ನಡೆದ ಮೆಟ್ರಿಕ್ಯುಲೇಷನ್ ಪರೀಕ್ಷೆಯಲ್ಲಿ ತೇರ್ಗಡೆಯಾದ ೭೪೧ ಮಂದಿ ವಿದ್ಯಾರ್ಥಿಗಳಸ್ಟೆ ಒಬ್ಬ ಮಹಮ್ಮದೀಯನು ಮೊದಲನೆಯವನಾದನು ಇಂಗ್ಲಿಷ್ ಭಾಷಾಜ್ಞಾನ ಸಂಪಾದನಕ್ಕಾಗಿ ನಿಶ್ಚಯಿಸ್ಪವಾಗಿದ್ದ ಇನಾಂ ಸಹ ಒಬ್ಬ ಮಹಮ್ಮದೀಯನಿಗೇ ಕೊಡಲ್ಪಟ್ಟಿತು.

A petition returned.—ಜಲಂದರ್ ಮತ್ತು ಲಾಹೋರ್ ಡಿವಿಜನಿಂದ ಮಹಾರಾಣಿಯವರ ಹೆಸರಿಗೆ ಕಳುಹಿಸಲ್ಪಟ್ಟ ಒಂದು ಅರ್ಜಿಯು, ಇಂಗ್ಲಾಂಡಿಗೆ ಸರಿಯಾದ ಮಾರ್ಗದಲ್ಲಿನಿಂತ ಕಳುಹಿಸಲ್ಪಡುವ ಅರ್ಜಿಗಳಿಗೆ ನಿಗದಿ ಕೊಡಲ್ಪಟ್ಟ ತಲಾರಮೆಂಬ ಪರಾನಿಂತ, ಸದರೀ ಅರ್ಜಿ ಇಂಡ್ಯಾ ಗವರ್ನಮೆಂಟಿನವರ ಮೂಲಕ ಅರ್ಜಿದಾರರಿಗೆ ವಾಪಸ್ ಕಳುಹಿಸಲ್ಪಟ್ಟಿತು.

The Maharaja of Travancore.—ಬಾಲಕರಾದ ತಿರುವಾಂಕೂರು ಮಹಾರಾಜರವರು, ಮುಂಬೈತನಕ ಸಂಚಾರಾರ್ಥ ಆಸ್ ಬೃಹಸ್ಪತಿವಾರ ತಮ್ಮ ರಾಜಧಾನಿಯಿಂದ ಪ್ರಯಾಣವಾದರು. ಬರುವ ತಿಂಗಳ ೪ನೇ ತಾರೀಖಿನಲ್ಲಿ ಪ್ರಮಚ್ಛೇರಿಗೆ ಬಂದು ೧೬ನೇ ತಾರೀಖಿನ ದಿನ ಮುಂಬೈ ಸೇರುವರು ಅಲ್ಲಿಂದ ಸ್ಟೀಮರ್ ಮೇಲೆ ತಾರೀಖಿನಲ್ಲಿ ಹೊರಟು ೩ನೇ ತಾರೀಖಿನ ದಿನ ಮದರಾಸ್ ಸೇರಬೇಕೆಂದು ಆಲೋಚಿಸುತಿರುವಂತೆ ಕಾಣುತಿದೆ.

Increase of duty on salt.—ಮುಂದೆ ಸನ್ನಾಹಕ ತೆರಿಗೆಯು ದಕ್ಷಿಣ ಬರ್ಮಾದೇಶದಲ್ಲಿ ಮಣ ಒಂದಕ್ಕೆ ಒಂದು ರೂಪಾಯಿಯಂತೆಯೂ, ಬ್ರಿಟಿಷ್‌ಇಂಡಿಯಾದೇಶದೊಳು ಮಣ ಒಂದಕ್ಕೆ ಈಗ ಇರುವ ಎರಡು ರೂಪಾಯಿಗಳಿಗೆ ಬದಲು ಮೂರು ರೂಪಾಯಿಯಂತೆಯೂ ವಸೂಲ್ಮಾಡಲ್ಪಡುವದೆಂದು ಪ್ರಕಟಿಸಲ್ಪಟ್ಟಿರುತಿದೆ. ಈ ಜಾಸ್ತೀ ತೆರಿಗೆಯ ಮೂಲಕ ಇಂಡ್ಯಾ ದೇಶದಲ್ಲಿ ಮುಂದೆ ಎರಡೂವರೆ ತಿಂಗಳ ಕಾಲಕ್ಕೆ ಸುಮಾರು ಇಪ್ಪತ್ತೈದುಲಕ್ಷರೂಪಾಯಿಗಳು ಹುಟ್ಟುವಳಿಯಾಗಬಹುದು. ಬರ್ಮಾ ದೇಶದಲ್ಲಿ ಸದರೀ ತೆರಿಗೆಯನ್ನು ಮೂರಾಣೆಯಿಂದ ಒಂದುರೂಪಾಯಿಗೆ ಜಾಸ್ತೀಮಾಡಿದ್ದರಿಂದ ಎರಡು ಲಕ್ಷರೂಪಾಯಿಗಳು ಹುಟ್ಟುವಳಿಯಾಗುವದು. ಬರುವ ಸರ್ಕಾರಿಸಾಲಿನಲ್ಲಿ ಈ ಜಾಸ್ತಿ-ತೆರಿಗೆಯ ಮೂಲಕ ಇಂಡ್ಯಾದೇಶದಲ್ಲಿ ೧,೫೦,೦೦,೦೦೦ ರೂಪಾಯಿಗಳೂ, ಬರ್ಮಾ ದೇಶದೊಳು ೧೨,೫೦,೦೦೦ ರೂಪಾಯಿಗಳೂ, ಹುಟ್ಟುವಳಿಯಾಗಬಹುದೆಂದು ಒಂದಾನೊಂದು ಪತ್ರಿಕೆ ಅಂದಾಜು ಮಾಡುತಿದೆ.

ನೋಟಿಸ್.

ಇದರಿಂದ ನಮ್ಮ ಚಂದಾದಾರರಿಗೆ ಪ್ರಕಟಿಸಿಸುವ ದೇನಂದರೆ.

ಕಳೆದ ಡಿಸೆಂಬರ್ ಆಖೈರ್‌ವರಿವಿಗೆ ಬೇಬಾಕ್ ಬರತಕ್ಕವರಿಗೂ ನೂತನವಾಗಿ ಈಸಾಲಿನಲ್ಲಿ ಪರವಾಸ್ತು ಮಾಡಿದವರಿಗೂ, ಈ ತಿಂಗಳಲ್ಲಿ ಪತ್ರಿಕೆಯನ್ನು ಕಳುಹಿಸುತ ಬಂದೆವು, ಪರಂತು ಈ ಸಾಲಿನಲ್ಲಿ ಚಂದಾ ಹಣಗಳನ್ನು ಕಳುಹಿಸಿರೂಡಿ ಪನ್ಮೂಲಕ ಚಂದಾದಾರರಿಗೆ ನಾವು ಉಂಟುಮಾಡಿದ ಸೌಲಭ್ಯವನ್ನು ಪರಿಭಾವಿಸಿ, ಯೆಲ್ಲರೂ ತಮ್ಮ ತಮ್ಮ ಚಂದಾ ಹಣಗಳನ್ನು ಮುಂಗಡವಾಗಿ ಕಳುಹಿಸಿಕೊಟ್ಟು ನಮಗೆ ಪ್ರೋತ್ಸಾಹವನ್ನುಂಟುಮಾಡುವರೆಂಬ ವಿಷಯದಲ್ಲಿ ನಮಗುಂಟಾಗಿರುವ ನಂಬಿಕೆಯನ್ನು ಸ್ಥಿರಪಡಿಸಬೇಕೆಂದು ಮತ್ತೊಂದಾವರ್ತಿ ಜ್ಞಾಪಕ ಕೊಡುತ್ತೇವೆ.

LOCAL AND PROVINCIAL NEWS.
ಒಳದೇಶ ಮತ್ತು ತಾಲ್ಲೂಕಿಜಾತಿ ವೃತ್ತಾಂತವು

Extension of leave.—ಮುಳಬಾಗಲ್‌ತಾಲ್ಲೂಕ್ ಅಮಲ್ದಾರ್ ಮಿ|| ಕುಮಾರಸ್ವಾಮಿ ಮುದಲಿಯಾರ್‌ರವರಿಗೆ ಮಾಹೇ ಮಜಕೂರ್ ೧೨ನೇ ತಾರೀಖ್ ೧೧೮ನೇ ನಂಬರುಳ್ಳ ದಿವಾನರವರ ಇಸ್ತಿಹಾರ್‌ನಾಮೆಯ ಮೂಲಕ ಕೊಡಲ್ಪಟ್ಟಿದ್ದ ರಜಾಯಿಗೆ ಸೇರಿದಂತೆ ಮೆಡಿಕಲ್ ಸರ್ಟಿಫಿಕೇಟಿನಮೇಲೆ ಜಾಸ್ತೀಯಾಗಿ ೩ ತಿಂಗಳ ಕಾಹಿಲೇರಜಾ ಕೊಡಲ್ಪಟ್ಟಿರುವಂತೆ ತಿಳಿಯಬರುತಿದೆ

Murder.—ಆಚೇವಾರದಲ್ಲಿ ಕೋಲಾರ್‌ಪೇಟೆ ತಾಲ್ಲೂಕು ಅಬ್ಬೂರು ತಿರುನಾರಣಯ್ಯಂಗಾರ್ಲೆಂಬವರನ್ನು ಅದೇಗ್ರಾಮದ ಇಬ್ಬರು ಒಕ್ಕಲಿಗರು ಸೇರಿ ಖೂನಿಮಾಡಿದಂತೆಯೂ, ನ್ಯಾಯಸ್ಥನವರು ಇದುವರಿವಿಗೆ ಪತ್ತೆಯಾಗಲಿಲ್ಲವಂತಲೂ ತಿಳಿಯಬರುತಿದೆ. ಪೋಲೀಸಿನವರು ಮೊಕದ್ದಮೆಯನ್ನು ಪತ್ತೇ ಮಾಡುವ ತರದೂದಿನಲ್ಲಿ ದಾರಿಂಬು ಹೇಳಬೇಕಾದ್ದಿಲ್ಲವಸ್ಟೆ.

Housebreaking.—ಕೊಡಗಲಿ ತಾಲ್ಲೂಕ್ ಹೆಸರುಗಟ್ಟೆಯೆಂಬ ಗ್ರಾಮದಲ್ಲಿ ಈಗ್ಯೆ ಯೆಂಟು ಹತ್ತು ದಿನಗಳ ಹಿಂದೆ, ಒಬ್ಬ ತಿಗಳರವನ ಮನೆಗೆ ಕಳ್ಳರು ಕನ್ನಹೊಡೆದು ಮನೆಯೊಳಗೆಹೋದ ನಾಲ್ಕುಮಂದಿ ಕಳ್ಳರ ಪೈಕಿ ಇಬ್ಬರನ್ನು ಮನೆಯ ಯಜಮಾನನು ಕತ್ತಿಯಿಂದ ಕಡಿದಂತೆಯೂ ಉಳಿದ ಇಬ್ಬರೂ ತಪ್ಪಿಸಿಕೊಂಡು ಓಡಿಹೋದಂತೆಯೂ, ಗಾಯ ಪಡೆದವರು ಸಿಕ್ಕಿಕೊಂಡು ಪೋಲೀಸಿನವರಮೂಲಕ ಅದಕ್ಕೆ ಬಗ್ಗೆ ವಿಚಾರಣೆ ಆಸ್ಪತ್ರೆಯಲ್ಲಿ ಇಡಲ್ಪಟ್ಟಿರುವದಾಗಿಯೂ ತಿಳಿಯಬರುತಿದೆ.

Assault.—ಈಚೆಗೆ ಕೆಲವು ದಿನಗಳ ಹಿಂದೆ ಈನಗರದ ಸವಿಾಪದಲ್ಲಿರುವ ಗವೀಪುರದಲ್ಲಿ ನಡೆದ ಸ್ಮಾರ್ತ ಬ್ರಾಹ್ಮಣರ ಸಾತ್ವೀಕದ ಸಮಾರಾಧನೆಯೊಳು ಭೋಜನಾರ್ಥ ಹೋಗಿದ್ದ ಚೇರದಳ್ಳಿ ಸುಬ್ಬರಾಮಶಾಸ್ತ್ರಿಯ ಎಂಬವರನ್ನು ಕೆಲವರು ಬ್ರಾಹ್ಮಣರು ಸೇರಿ ಊಟದ ಮುಂದೆ ಭೋಜನಕ್ಕೆ ಕುಳಿತಿರುವಾಗ್ಯೆ ಕೈಹಿಡಿದು ಸೆಳೆದು ಹೊರಗಟ್ಟಿದಂತೆಯೂ ಅದಕ್ಕಾಗಿ ಸದರೀ ಹೆಂಗಸು ಇಲ್ಲಿನ ಟೌನ್ ಮ್ಯಾಜಿಸ್ಟ್ರೇಟರ ಕೋರ್ಟಿನಲ್ಲಿ ಆ ಬ್ರಾಹ್ಮಣರಮೇಲೆ ಕ್ರಿಮಿನಲ್ ಚಾರ್ಜ್‌ಮಾಡಿ ಈಗ ವಿಚಾರಣೆ ನಡೆಯುತಲಿದೆ. ಇದರ ಪರ್ಯವಸಾನವನ್ನು ಮುಂದೆ ತಿಳಿಸುವೆವು.

Exposure of a new-born child.—ಕಳೆದ ವಾರದಲ್ಲಿ ಈನಗರದ ಬಳೇಪೇಟೆಯಲ್ಲಿರುವ ಸುಗ್ರೀವನ ದೇವಸ್ಥಾನದ ಬಳಿ ಚರಂಡಿಯಲ್ಲಿ ಆಗತಾನೆ ಹುಟ್ಟಿದ ಒಂದು ಗಂಡು ಮಗುವನ್ನು ಬಾಳೇ ಯೆಲೆಯಲ್ಲಿ ಸುತ್ತಿ ಇಟ್ಟಿರಲು, ಬೀದಿಯಲ್ಲಿ ಆಟವಾಡುತಲಿದ್ದ ಹುಡುಗರ ಚಂಡು ಹಾರಿಹೋಗಿ ಚರಂಡಿಯಲ್ಲಿ ಬಿದ್ದು ಅದನ್ನು ತೆಗೆಯುವದಕ್ಕೆ ಹೋಗುವಾಗ್ಯೆ ಸದರೀ ಮಗು ಕಂಡುಬಂದು ಅವರ ಮೂಲಕ ಪೋಲೀಸಿನವರಿಗೆ ತಿಳಿಯಬಂದು ಅವರು ಹೋಗಿ ಮಗುವನ್ನು ತೆಗೆದುಕೊಂಡು ಆಸ್ಪತ್ರೆಗೆ ಕಳುಹಿಸಿದರು. ಎರಡನೇ ದಿನ ಮಗು ಆಸ್ಪತ್ರೆಯಲ್ಲಿ ಸತ್ತುಹೋಯಿತು. ಈಕೃತ್ಯ ಮಾಡಿದವರ ಪತ್ತೆಯಬಗ್ಯೆ ಪೋಲೀಸಿನವರು, ಮನೆಮನೆಗೆಹೋಗಿ ಗಂಡುಸರ ಗೈರುಹಾಜರೀ ಕಾಲದಲ್ಲಿ ಬಾಲ ವಿಧವೆಯರನ್ನೆಲ್ಲ ನಾನಾವಿಧವಾಗಿ ಹಿಂಸಿಸಿ ಪತ್ತೇ ತರದೂದ್ ಮಾಡುತಲಿದಾರೆ. ಈಕೃತ್ಯವು ಬೆಂಗಳೂರಲ್ಲಿನ ಅರವತ್ತುನಾಲ್ಕು ಪೇಟೆಯ ಪೈಕಿ ಯಲ್ಲಿ ನಡೆಯಿತೊ ಅದನ್ನು ಕಂಡುಹಿಡಿಯುವದು ಅಸಾಧ್ಯವಾಗಿ ತೋರಿ ಸದರೀಮಗು ಬಿದ್ದಿದ್ದ ಬೀದಿಯ ಹೆಂಗಸರನ್ನು ಬೇಮಾನೀಮಾಡುವದು ಪೋಲೀಸ್‌ನವರ ಅಸಮರ್ಥತೆಯನ್ನು ವ್ಯಕ್ತಪಡಿಸುತಿದೆ.

The weather.—ಗತ ರಥಸಪ್ತಮಿಯಿಂದ ಗಾಯಿತು ಕಾಲಸ್ಥಿತಿಯು ಋತುಧರ್ಮವನ್ನನು

ಹೋಗಿ ಬದಲಾಯಿಸಿದೆ. ಮಂಜು ಬಹಳ ಕಡಮೆಯಾಗಿದೆಯಲ್ಲದೆ ಚಳಿಯೂ ವಿಶೇಷವಿಲ್ಲವು. ಬಿಸಿಲು ಬಹಳ ತೀಕ್ಷ್ಣವಾಗಿದೆ. ಮಾಜೀಮುಜಕೂರ್ ೨೦ನೇ ತಾರೀಖಿಗೆ ಪ್ರಕಟವಾದ ಪಬ್ಲಿಕ್ ಸರ್ಕಾರೀ ರಿಪೋರ್ಟುಗಳ ದೆಸೆಯಿಂದ ಸರ್ವತ್ರ ಕಾಲಸ್ಥಿತಿ ಅನುಕೂಲವಾಗಿರುವಂತೆಯೂ, ಜಾನುವಾರುಗಳ್ಳೂ ಚೆನ್ನಾಗಿರುವಂತೆಯೂ, ಜನರಿಗೆ ಜಲತೃಣ ಸಮೃದ್ಧಿಯುಂಟೆಂತಲೂ ತಿಳಿಯಬರುತಿದೆ. ಬೆಳೆಯಲ್ಲಿರುವ ಫಸಲುಗಳು ಸರ್ವತ್ರ ಚೆನ್ನಾಗಿರುತಿವೆಯಲ್ಲದೆ ಕೆಲವು ಕಡೆಗಳಲ್ಲಿ ಭತ್ತ, ಗನ್ನಾ, ದುರಳ, ಹೆಸರು, ವಗೈರೆ ಕೆಲ ಧಾನ್ಯಗಳು ಕಟಾವಾಗಿರುವುದಾಗಿ ಕೇಳುತ್ತೇವೆ.

Another attempt at purification — ಈಗ್ಯೆ ಒಂದೆರಡುವಾರಗಳಿಂದೆ ಈ ಸ್ಥಳದಲ್ಲಿ ಬ್ಯಾರಿಸ್ಟರ್ ಮ|| ಎ. ಬಿ. ರಾಮಸ್ವಾಮಿಯಯ್ಯಂಗಾರ್ರವರಿಗೆ [illegible] ಶಾಸ್ತ್ರಾರ್ಥಗಳು ನಡೆದು ಪ್ರಾಯಶ್ಚಿತ್ತವಾಗಬೇಕೆಂದು ನಿರ್ಣಯಿಸಿದ್ದವಷ್ಟೆ. ಇದೇ ದೃಷ್ಟಾಂತಾಧಾರಗಳ ಮೇಲೆ ಬ್ಯಾರಿಸ್ಟರ್ ಮ|| ಪಿ. [illegible] ರವರಿಗೆ ಸಹ ಪ್ರಾಯಶ್ಚಿತ್ತ ವಿಧಿಗಳನ್ನು ಮಾಡಿಸುವ ಪ್ರಯತ್ನವು ನಡೆಯುತ್ತಲಿರುವುದಾಗಿ [illegible] ಅವರು ಪ್ರಯತ್ನಪಟ್ಟರೆ ಅಲ್ಲಿ ಸುಲಭವಾಗಿ ನೆರವೇರುವದೆಂದು [illegible]. ಇದು ನಿಜವಾಗಿರುವ ಪಕ್ಷಕ್ಕೆ ಪಾಪ ರಕ್ಕೆ ಆಗಕೂಡದು ?

The University result — ಈ ಸಲದ ಮೆಟ್ರಿಕ್ಯುಲೇಷನ್ ಮತ್ತು ಎಫ್. ಎ. ಪರೀಕ್ಷೆಗಳ ಫಲಿತಾಂಶವು ಕ್ರಮವಾಗಿ [illegible] ಗಳಲ್ಲಿ ಹೊರಗಾಗುವ ಕಾಲದಲ್ಲಿ ಬಹಳ ಅತೃಪ್ತಿಕರವಾಗಿರುವದೆಂದು ತೋರುತ್ತದೆ. ಸೆಕೆಂಡ್ ಮುಂದಿನ ದೇಶ ಚರಿತ್ರೆಯಲ್ಲಿ ಫೇಲಾದವರು ಯಾಗಿರುತ್ತಾರೆಂದು ತಿಳಿಯಬರುತಿದೆ. ಇದರಿಂದ ಎಫ್. ಎ. ಪರೀಕ್ಷೆಯಲ್ಲಿ ಪೇಗಾದವರಾಗುವವರಸಂಖ್ಯೆ ಅಲ್ಪವಾಗಿರಬಹುದೆಂದು ತೋರುತ್ತೇನೆ. ಇದೇರೀತಿ ಮೆಟ್ರಿಕ್ಯುಲೇಷನ್ ಪರೀಕ್ಷೆಯಲ್ಲಿ ಭೌತಿಕಶಾಸ್ತ್ರ ಮತ್ತು ರಸಾಯನ ಶಾಸ್ತ್ರಗಳ ಪ್ರಶ್ನೆಗಳು ಕಠಿಣಗಳಾಗಿದ್ದದರಿಂದ ಬಹಳಜನ ಅದರಲ್ಲಿ ಫೇಲಾದ ಹಾಗೆ ಇಲ್ಲವೆಂತಲೂ ತಿಳಿಯಬರುತಿದೆ. ವಿದ್ಯಾರ್ಥಿಗಳ ಯೋಗ್ಯತೆಯನ್ನು ಪರೀಕ್ಷಿಸುವುದಕ್ಕಾಗಿ ಉದ್ದಿಷ್ಟವಾಗಿರುವ ಪರೀಕ್ಷೆಗಳು ಬರುತಬರುತ ಪರೀಕ್ಷಕರ ಸ್ವಬುದ್ಧಿಪ್ರದರ್ಶನಾರ್ಥವೆಂದು ಭಾವಿಸಲ್ಪಟ್ಟಿರುವಂತೆ ತೋರುತ್ತದೆ. ಯಾತಕ್ಕೆಂದರೆ, ಪ್ರತಿವರುಷದಲ್ಲಿಯೂ ಪ್ರಶ್ನೆಗಳು ಬಹಳ ಕಠಿಣಗಳಾಗಿ ವಿದ್ಯಾರ್ಥಿಗಳ ಶಕ್ತಿಗೆ ವಿಗಾಢವಾಗಿರುತ್ತವೆ. ಹೀಗೆ ವಿದ್ಯಾರ್ಥಿಗಳನ್ನು ಸಂಕಟಪಡಿಸುವದರಿಂದ ಬರುವ ಪ್ರತಿಷ್ಠೆ ಯಾವತರದ್ದೋ ತಿಳಿಯಲಿಲ್ಲವು.

The Resident's Treasury — ಇಲ್ಲಿನ ರೆಸಿಡೆಂಟರವರ ಖಜಾನೆಯಲ್ಲಿ ನಗದು ಆದಾಯದ ಮಾತ್ರ ಇಲ್ಲಿರುವ ಮದರಾಸ್ ಬ್ಯಾಂಕಿಗೆ ವರ್ಗ ಮಾಡಲ್ಪಡುವದೆಂತಲೂ, ಲೆಕ್ಕಗಳು ಈಗಿನಂತೆ ಇಲ್ಲಿಯೇ ಇಟ್ಟುಕೊಳ್ಳಲ್ಪಡುವವೆಂತಲೂ, ಈಬಗ್ಗೆ ಪರಿಮಿತವಾದ ಸಿಬ್ಬಂದಿ ಉಳಿಸಿಕೊಳ್ಳಲ್ಪಡುವದೆಂತಲೂ ತಿಳಿಯಬರುತಿದೆ. ಬ್ರಿಟಿಷ್ ಆಳ್ವಿಕೆಯಲ್ಲಿ ರಾಜ್ಯವು ಸೇರಿಕೊಂಡಿದ್ದ ಕಾಲದಲ್ಲಿ ಮೈಸೂರು ಮತ್ತು ಹರಿಹರ [illegible] ಖಜಾನೆಗಳಿರದೂ ಅಗ್ಗೆ [illegible] ಆಗಿದ್ದ ಮ|| ಡಪರ್ನಿಯವರ ವಿಚಾರಣೆಯೊಳಗಿರುತಲಿದ್ದವು. ರಾಜ್ಯವು ಮಹಾರಾಜರವರಿಗೆ ಒಪ್ಪಿಸಲ್ಪಟ್ಟ ಬಳಿಕ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟ್ ಖಜಾನೆಯು ಪ್ರತ್ಯೇಕವಾಗಿ ರೆಸಿಡೆಂಟರ ಖಜಾನೆಯಾಗಿ ಏರ್ಪಟ್ಟಿತು. ಕೆಲವು ಕಾಲದ ವರಿವಿಗೆ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರು ಸದರೀ ಖಜಾನೆ ಚಾರ್ಜಿನೊಳಗಿರುತಲಿದ್ದರು, ಪರಂತು ಒಂದು ಡಿಸ್ಟ್ರಿಕ್ಟ್ ಕಲೆಕ್ಟರು ಟ್ರೆಜರೀ ಆಫೀಸರಾಗಿ ಇರಕೂಡದೆಂಬ ಗವರ್ನಮೆಂಟಿನ ಹುಕುಂ ಅನುಸರಿಸಿ ಮ|| ರವುಸ್ ಎಂಬವರು ಟ್ರೆಜರೀ ಆಫೀಸರಾಗಿ ನೇಮಕ ಮಾಡಲ್ಪಟ್ಟರು. ಇವರಿಗೆ ಈಗ ಅದಕ್ಕಾಗಿ ಮಾಹೆಯಾನಾ ೧೦೦ ರೂಪಾಯಿಗಳೂ, ಸಿವಿಲ್ ಮಿಲಿಟರಿ ಸ್ಟೇಷನಿನ ಸಬ್‌ರಿಜಿಸ್ಟ್ರಾರ್ ಕೆಲಸ ನೋಡುವದಕ್ಕಾಗಿ ೪೦ ರೂಪಾಯಿಗಳೂ ಕೊಡಲ್ಪಡುತಿವೆ. ಮುಂದೆ ಇವರಿಗೆ ಇಷ್ಟರ ಸಂಬಳ ದೊರೆಯುವದೆಂಬ ವಿಷಯ ಸಂದೇಹಿಸಬೇಕಾದದ್ದಾಗಿರುತಿದೆ.

Temporary arrangement — ಅಸಿಸ್ಟೆಂಟ್ ಕಮಿಷನರ್ ಸೆಷನ್ ಜಡ್ಜಿಯರಾದ ಮ|| ರಾಜ್ಯಮಾಜಿ ರಾಯರವರು ಕಾಹಿಲೇ ಸಬಬ್ ಮೂರು ತಿಂಗಳ ಪ್ರಿವಿಲೇಜ್ ರಜಾ ತೆಗದುಕೊಳ್ಳುವರೆಂತಲೂ, ಅವರ ಗೈರಹಾಜರೀ ಕಾಲದಲ್ಲಿ ಸದರೀ ಕೆಲಸವನ್ನು ಬೆಂಗಳೂರು ಸಬಾರ್ಡಿನೇಟ್ ಜಡ್ಜಿಯರಾದ ಮ|| ಕ್ರಾಸ್ ಸಾಹೇಬರವರು ನಿರ್ವಹಿಸುತಲಿರುವರೆಂತಲೂ, ಅವರ ಕೆಲಸಕ್ಕೆ ಮೈಸೂರು ಸಬ್‌ಜಡ್ಜಿ ಮ|| ಸಿ. ಶ್ರೀನಿವಾಸಯ್ಯಂಗಾರ್ರವರು ನೇಮಕರಾಗುವರೆಂತಲೂ ಕೇಳುತ್ತೇವೆ. ಈಗಿರತಕ್ಕ ಸಬಾರ್ಡಿನೇಟ್ ಜಡ್ಜಿ ಕ್ರಾಸ್‌ರವರು ಸೀನಿಯರ್ ಆಫೀಸರಾಗಿಯೂ, ಬಹಳ ಅನುಭವಶಾಲಿಗಳಾಗಿಯೂ ಇರುತ್ತಾರೆ. ಇವರಿಗೆ ಪ್ರಾಕ್ಟಿಕಲ್ ಆಗಿ ಡಿಸ್ಟ್ರಿಕ್ಟ್ ಜಡ್ಜಿ ಕೆಲಸವಾಗದೇ ಇರುವದು ಯಾತಕ್ಕೋ? ಒಂದು ಕಾರಣದಿಂದ ಆಗದೆ ಇದ್ದಪಕ್ಷದಲ್ಲಿ, ಮ|| ರಾಜ್ಯಮಾಜಿ ರಾಯರವರು ತಮ್ಮ ಕೆಲಸದಿಂದ ನಿವೃತ್ತರಾಗುವರೆಂಬ ಪ್ರವಾದ ಒಂದು ಈಬಗ್ಗೆ ಪ್ರಬಲಗೊಂಡಿರುವದರಿಂದ ಅದೊಂದುವೇಳೆ ನಿಜವಾಗುವಪಕ್ಷಕ್ಕೆ ಮ|| ಕ್ರಾಸ್ ಯವರು ಡಿಸ್ಟ್ರಿಕ್ಟ್ ಜಡ್ಜಿಯರಾಗಿ ಕಾಯಂ ಮಾಡಲ್ಪಡಬಹುದು ಎಂದು ತೋರುತಿದೆ.

Mob Ahmes — ಈ ತಿಂಗಳ ೧೦ನೆ ತಾರೀಖು ಮೊದಲ್ಗೊಂಡು ರಾತ್ರಿಗಳಲ್ಲಿ ಬೆಂಗಳೂರಿನ ದಂಡಿಗೆ ಹೋಗುವ ರಸ್ತೆಯಲ್ಲಿ ಸೈಂಟ್ ಜಾನ್ಸ್ ಹಿಲ್ ಸ್ಟೇಷನಿಗೂ ಮೈದಾನದ ಬಳಿಗೂ ಮಧ್ಯೆ ರಾತ್ರಿ ಒಂಭತ್ತು ಹತ್ತು ಗಂಟೆಯ ವೇಳೆಯಲ್ಲಿ ಬರುವಂಥವರನ್ನು ಕಳ್ಳರು ಹೊಡೆದು ಜೇಬುಗಳನ್ನು ಕಿತ್ತುಕೊಂಡು ಹೋಗಿ ಇವುಗಳಲ್ಲಿದ್ದ ಬಾಬುಗಳು ಮತ್ತು ರಿವಾಲ್ವರ್ ಲಕೋಟೆಗಳನ್ನು ಮಾತ್ರ ತೆಗದುಕೊಂಡು ಉಳಿದ ಲಕೋಟೆ ವಗೈರೆಗಳನ್ನು ದಾರಿಯೊಳು ಬಿಸಾಟು ಹೋದರು. ಅವುಗಳ ಪೈಕಿ ಕೆಲವು ಮಾರುದಿವಸ ಸಿಕ್ಕಿದವು. ಕಳವಾದ ಮಾರ್ಗಗಳಲ್ಲಿ ಚಿನ್ನದ ಗಟ್ಟಿಗಳು ನೋಟುಗಳು ವಗೈರೆ ಸೇರಿದ್ದವು. ಇದುವರಿವಿಗೆ ಸ್ವಲ್ಪವೂ ಪತ್ತೆ ಇಲ್ಲ, ಪರಂತು ಅನುಮಾನದಮೇಲೆ ಮೇಳೆಯ ಜನಗಳನ್ನು ಹಿಡಿದು ಪೋಲೀಸಿನವರು ತಮ್ಮ ವಶದಲ್ಲಿಟ್ಟುಕೊಂಡಿರುತ್ತಾರೆ. ಸದರೀ ಜನಗಳ ಪೈಕಿ ಕೆಲವರು ಮೇಲಿನ ಕೃತ್ಯವನ್ನು ತಾವು ನಡೆಸಿದವರೆಂದು ಕಬೂಲ್ಪಡುವದಾಗಿ ಸಹ ಕೇಳುತ್ತೇವೆ. ಅದರೆ, ಈ ಜನಗಳೇ ಸದರೀ ಕೃತ್ಯವನ್ನು ನಡೆಸಿದವರಾಗಿರುವರಾದರೆ ಮಾಲ್‌ಗಳು ಪತ್ತೆಯಾಗದೆ ಹೋಗುವದಕ್ಕೆ ಕಾರಣವೇನಿರಬೇಕು. ಈ ಕಳವು ನಡೆದಮೇಲೆ ಸದರೀ ರಸ್ತೆಯಲ್ಲಿ ಸಾಯಂಕಾಲ ಆರು ಘಂಟೇ ಲಾಗಾಯತು ರಾತ್ರಿ ಹನ್ನೊಂದು ಘಂಟೆಯ ವರಿವಿಗೆ ಸವಾರ್ ಕುದುರೆಗಳು ಗಸ್ತುವಾರಿ ಹೋಗಿ ಬರುತಲಿರುವಂತೆ ಕೇಳುತ್ತೇವೆ. ಕಣ್ಣು ಕೆಟ್ಟಮೇಲೆ ಸೂರ್ಯನಮಸ್ಕಾರವಂತಾಯಿತು.

The Ag Dewan's visit to the Bashojjivini school. — ಕಳೆದ ಶನಿವಾರದ್ದು ತಿಕಾಲ ೪ ಗಂಟೇವೇಳೆಯಲ್ಲಿ ಆಕ್ಟಿಂಗ್ ದಿವಾನ ರಾವ ರೆಂಬೂಚಿಟ್ಟರವರು ಸಬ್‌ಜಡ್ಜಿ ಶ್ರೀನಿವಾಸಯ್ಯಂಗಾರ್ಯರವರೊಡನೆ ಭಾಷೋಜ್ಜೀವಿನೀ ಪಾಠಶಾಲೆಗೆ ದಯಮಾಡಿಸಿದ್ದರು. ಆ ಕಾಲದಲ್ಲಿ ಕಾರ್ಯದರ್ಶಿಗಳಾದ ಮಹಾರಾಜಶ್ರೀ ಕಾಮರಾವ್ ಎಂ. ಎ. ಯವರು ಹೊರಗೆಬಂದು ಇವರುಗಳನ್ನು ಕರೆದುಕೊಂಡು ಪ್ರಾರ್ಥನಾ ಶಾಲೆಗಾಗಿ ಏರ್ಪಡಿಸಿದ್ದ ಉಚಿತಾಸನದಲ್ಲಿ ಕೂಡಿಸಿ, ಪುಷ್ಪಮಾಲಿಕೆಗಳನ್ನು ಹಾಕಿದನಂತರ ಪ್ರತಿಯೊಂದು ತರಗತಿಗೂ ಎಲ್ಲರೂ ಹೋದರು. ಕನ್ನಡ ತರಗತಿಯವರಲ್ಲಿ ಒಬ್ಬ ವಿದ್ಯಾರ್ಥಿಯು ದಿವಾನರವರ ಅಪ್ಪಣೆಮೇರೆಗೆ ಜೈಮಿನಿಯಲ್ಲಿ ಒಂದು ಎರಡು ಪದ್ಯಗಳನ್ನು ಓದಿ ಅರ್ಥ ಹೇಳಿದನು. ಸಂಸ್ಕೃತ ತರಗತಿಯಲ್ಲೊಬ್ಬನು ಶ್ಲೋಕವನ್ನು ಓದಿ ಅರ್ಥವನ್ನು ಹೇಳಿದನು. ಮತ್ತೊಬ್ಬನು ದಿವಾನರವರ ಆಗಮನಾರ್ಥವಾಗಿ (ಅವನೇ) ವಿಜ್ಞಾಪನೆಪತ್ರಿಕೆಯನ್ನು ಓದಿದನು. ಇವುಗಳನ್ನೆಲ್ಲಾ ಆಕ್ಟಿಂಗ್ ದಿವಾನರವರು ಕೇಳಿ ಬಹಳ ಸಂತೋಷಪಟ್ಟು ಪಾಠಶಾಲೆಗೆ ಉಚಿತಾರ್ಥವಾಗಿ ೫೦ ರೂಪಾಯಿಗಳನ್ನು ಕೊಟ್ಟು ಕಾಮರಾಯರವರನ್ನು ಅವರ ಮೆಹನತ್ತಿಗಾಗಿ ಶ್ಲಾಘಿಸಿ ದಯಮಾಡಿಸಿದರು. ಅದೇದಿನ ಸಾಯಂಕಾಲ ೭ ಘಂಟೆಗೆ ಸರಿಯಾಗಿ ಮುನಿಸಿಪಲ್ಲಿನವರ ಸ್ಕೂಲಿನಲ್ಲಿ ಮ|| ಕಾಮರಾಯರವರಿಂದ ಸ್ಥಾಪಿಸಲ್ಪಟ್ಟಿರುವ (ಪ್ರೈವೆಸ್ಕೂಲ್) ರಾತ್ರಿಸ್ಕೂಲಿಗೆ ದಿವಾನರವರು ದಯಮಾಡಿಸಿ ಕಾಮರಾಯರವರೊಡನೆ ಪ್ರತಿಯೊಂದು ತರಗತಿಯನ್ನು ನೋಡಿದ್ದಲ್ಲದೆ ಅನಾಥರಿಗಾಗಿ ಆ ಸ್ಕೂಲನ್ನು ಏರ್ಪಡಿಸಿದ್ದಕ್ಕಾಗಿ ಕಾಮರಾಯರವರನ್ನು ತುಂಬಾ ಕೊಂಡಾಡಿದರು. — ವ್ಯ. ಬು.

TELEGRAMS.

ತಂತಿ ವರ್ತಮಾನಗಳು.

ಲಂಡನ್, ೧೭ನೇ ಜನವರಿ — ಈಚಿನ ಪ್ರಾತಃಕಾಲದಲ್ಲಿ ಘಾಯಿಪಡಿಸಲ್ಪಟ್ಟ ಸ್ಟ್ಯಾಂಡಾರ್ಡ್ ಪತ್ರಿಕೆಯು, ಇಂಡ್ಯ ಗವರ್ನಮೆಂಟಿನವರು ಈ ಬಗೆ ಇಂಡ್ಯದೇಶದ ನಮ್ಮಕ್ ತೆರಿಗೆಯನ್ನು ಜಾಸ್ತಿ ಮಾಡಬೇಕಾಗಿ ಬಂದಬಗ್ಗೆ ಟೀಕಿಸಬೇಕಾಗಿದ್ದಾಗ್ಯೂ ಅದು ಅವಶ್ಯಕವಾಗಿ ಏರ್ಪಟ್ಟಿತೆಂದು ಭಾವಿಸಿ, ಮುಖ್ಯವಾಗಿ ಈ ತೆರಿಗೆಯ ವಿಷಯದಲ್ಲಿ ಪ್ರಜೆಗಳಿಗೆ ಇಷ್ಟವಿಲ್ಲದೆ ಹೋದಾಗ್ಯೂ ಇಂಡಿಯಾ ಗವರ್ನಮೆಂಟಿನವರು ಖರ್ಚು ಜಾಸ್ತಿಯನ್ನು ಉಳಿಸಬೇಕೆಂದು ಮಾಡಿದ ನಿರ್ಣಯವು ಶ್ಲಾಘ್ಯವಾದದ್ದೆಂದು ಅಭಿಪ್ರಾಯಪಡುತಿದೆ.

ಬರ್ಲಿನ್ ೧೮ನೇ ಜನವರಿ — ಲಾರ್ಡ್ ರಾಂಡಾಲ್ಫ್ ಚರ್ಚಿಲ್‌ಯವರು ಸೆಂಟ್‌ಪೀಟರ್ಸ್‌ಬರ್ಗಿನಿಂದ ಇಲ್ಲಿಗೆ ಬಂದಿರುತ್ತಾರೆ, ಮತ್ತು ಸೇಂಟ್‌ಪೀಟರ್ಸ್‌ಬರ್ಗಿನಲ್ಲಿ ಸಮಾಧಾನಪರವಾದ ತಾತ್ಪರ್ಯವಿರುತಿದೆಯೆಂದು ಬಹಿರಂಗವಾಗಿ ಹೇಳುತ್ತಾನೆ.

ಬರ್ಲಿನ್, ೧೯ನೇ ಜನವರಿ, ಜರ್ಮನೀದೇಶದ ಪ್ರಧಾನಮಂತ್ರಿಯವರಾದ ಪ್ರಿನ್ಸ್ ಬಿಸ್‌ಮಾರ್ಕ್‌ಯವರು ಅಂತರಂಗದಲ್ಲಿ ಸ್ವಸ್ತ್ಯಾನದ್ವೇನ ಈ ಸಂವತ್ಸರದೊಳಗಿಯೂರೋಪ್‌ದೇಶದಲ್ಲಿಯುದ್ಧ ಪ್ರಾರಂಭವಾಗಲಾರದೆಂಬ ನಂಬಿಕೆ ತಮಗೆ ಉಂಟಾಗಿರುವಂತೆಯೂ, ಇನ್ನು ಮೆರಡುಮೂರು ವರುಷಗಳವರಿವಿಗೆ ಯುದ್ಧಪ್ರಾರಂಭವಾಗದೆ ಇರಬೇಕೆಂದು ತಾವು ತೋರುವಂತೆಯೂ ತಿಳಿಸಿದರು.

ಲಂಡನ್, ೧೯ನೇ ಜನವರಿ — ಐರ್ಲ್ಯಾಂಡಿನ ರಾಜಧಾನಿಯಾದ ಡಬ್ಲಿನ್ ಪಟ್ಟಣಕ್ಕೆ ಲಾರ್ಡ್ ರಿಪನ್ ಮತ್ತು ಮ|| ಜಾನ್ ಮಾರ್ಲಿಯವರು ಹೋಗುತ್ತಾರಾಗಿ ಅವರನ್ನು ಉಚಿತ ಮರ್ಯಾದೆಗಳೊಡನೆ ಬರಮಾಡಿಕೊಳ್ಳುವದಕ್ಕಾಗಿ ಅಲ್ಲಿನ ನ್ಯಾಷನಲಿಸ್ಟ್ಸ್ ಎಂಬ ಜನಗಳು ಪ್ರಬಲ ಸನ್ನಾಹಗಳು ಮಾಡುತಲಿದ್ದಾರೆ.

EXTRACTS.

ರೈಡೆ ಎಂಬ ಸ್ಥಳದಲ್ಲಿರುವ ಪರಮರದೆಂಬ ನದಿಯಲ್ಲಿ ಡಿಸೆಂಬರ್ ೩೦ನೇ ತಾರೀಖಿನಲ್ಲಿ ಕೆಲವರು ಜನಗಳು ಸ್ನಾನಮಾಡಬೇಕೆಂದು ಕಾಂಕ್ಷೆಯಿಂದ ಅಲ್ಲಿಗೆಬಂದು ಸ್ನಾನ ಮಾಡುತ್ತಿರಲು ಒಂದು ದೊಡ್ಡ ಮತ್ಸ್ಯ ವಿಶೇಷವು ಇವರಿದ್ದವರನ್ನುನೋಡಿ ರೆಕ್ಕೆ ಬಡಿದಕ್ಕೆ ಇಲ್ಲಿ ಅನುಕೂಲವಾಗಿರುವದೆಂದು ತಿಳಿದು ನೀರಿನೊಳಗೆ ಒಬ್ಬರಿಗೂ ತಿಳಿಯದಹಾಗೆ ಬಂದು ಥಾಮಸ್ ಕೋಕ್ಸ್‌ ಎಂಬ ಯೌವನಸ್ಥನನ್ನು ಸೆಳೆದುಕೊಂಡುಹೋಯಿತು. ಅದನ್ನು ಬಿಡಿಸಬೇಕೆಂದು ಪ್ರಯತ್ನಮಾಡಿದ ಮತ್ತೊಬ್ಬನನ್ನು ಘಾಸಿಮಾಡಿತು, ೮—೫ ನಿಮಿಷಗಳನಂತರ ಆತನ ದೇಹವು ಮತ್ಸ್ಯಸಮೇತವಾಗಿ ನೀರಿನ ಮೈಭಾಗದಲ್ಲಿ ಕಾಣಿಸಿತು. ಅಷ್ಟರಲ್ಲಿಯೇ ಪ್ರಾಣ ತೆಗೆ ಎಳೆದುಕೊಂಡುಹೋಯಿತು. ಡಿಸೆಂಬರು ೨ನೇ ತಾರೀಖಿನಲ್ಲಿ ಛಿದ್ರಛಿದ್ರವಾದ ಅವನ ದೇಹವು ನೀರಿನ ಮೇಲ್ಭಾಗದಲ್ಲಿ ತೇಲುತಿತ್ತು, ಅದನ್ನುನೋಡಿ ಅವನನ್ನರಿತ ಸ್ನೇಹಿತರೂ ಬಹಳ ವ್ಯಸನಪಟ್ಟರು.

ಸಿಕಿಂದರಾಬಾದಿನಿಂದ ವಾಡಿಯೆಂಬಸ್ಥಳಕ್ಕೆ ೨ನೇ ತರಗತಿಯ ರೈಲುಗಾಡಿಯಲ್ಲಿ ಒಬ್ಬ ವೃದ್ಧಮನುಷ್ಯನ ಯುವತಿಯು ಆಭರಣಗಳ ಪೆಟ್ಟಿಗೆಯನ್ನು ಇಟ್ಟುಕೊಂಡು ಹೋಗುತ್ತಿದ್ದ ಸಂದರ್ಭವನ್ನು ಆಗಾಧಿಯ ಉಸ್ತುವಾರಿಯನ್ನು ನೋಡುತಿದ್ದ ಒಬ್ಬ ಚಿಟ್ಟೆಗಾರನು ತಿಳಿದು, ಪೆಟ್ಟಿಗೆಯಲ್ಲಿರತಕ್ಕ ಆಭರಣಗಳನ್ನು ಅಪಹರಿಸಬೇಕೆಂಬ ಯೋಚನೆಯಿಂದ ತನ್ನಬಳಿಯಲ್ಲಿದ್ದ ಬೀಗದ ಕೈಗಳಲ್ಲಿ ಅದಕ್ಕೆ ಸರಿಯಾದ ಒಂದು ಬೀಗದಕೈಯನ್ನು ಒಳಗೆ ತಿಳಿಯದಹಾಗೆ ಆ ಪೆಟ್ಟಿಗೆಗೆ ಹಾಕಿ ಬಾಗಿಲನ್ನು ಮುತ್ತಿಗೆತೆಗೆದು ಕರ್ಣ, ಕಂಠ, ಹಸ್ತ, ಇವುಗಳ ಆಭರಣಗಳನ್ನೂ ಕೆಲವು ನೋಟುಗಳನ್ನೂ ತೆಗದುಕೊಂಡನು. ಕೊನೆಗೆ ಆತನು ಪೋಲೀಸಿನವರಿಗೆ ಸಿಕ್ಕಿ ಅಲ್ಲಿನ ಮ್ಯಾಜಿಸ್ಟ್ರೇಟ್ ಕೋರ್ಟಿನಲ್ಲಿ ಅವನನ್ನು ವಿಚಾರಿಸುತಮಾಡುತಲಿದ್ದಾರೆ, ಪರ್ಯವಸಾನವೇನೋ ನೋಡಬೇಕಾಗಿದೆ.

ನೀರಿನಮೇಲೆ ಹೋಗುವ ಒಂದುಚಕ್ರದಗಾಡಿ. ಕಾಲುತುಳಿತದಿಂದ ಬಹು ವೇಗವಾಗಿ ನಡೆಯುವ ಎರಡು ಚಕ್ರಗಳ ಗಾಡಿಯವಿಷಯವು ವಾಚಕರೆಲ್ಲರಿಗೂ ತಿಳಿಯದೆ ಇರಲಾರದು. ಈಗಾಡಿಗಳು ಭೂಮಿಯಮೇಲೆ ಮಾತ್ರ ನಡೆಯುತವೆ. ನ್ಯೂಯಾರ್ಕ್ ಪಟ್ಟಣದೊಳು ಒಬ್ಬ ವಿದ್ವಾಂಸನು, ನೀರಿನಮೇಲೆ ಕಾಲ್ತುಳಿತದಿಂದ ಹೋಗುವಂಥಾ ೧ ಚಕ್ರದ ಗಾಡಿಯನ್ನು ಕಲ್ಪನೆ ಮಾಡಿದ್ದಾನೆ. ಭೂಮಿಯಮೇಲೆ ನಡೆಸುವ ಈ ಜಾತಿಯವಾದ ಗಾಡಿಯಮೇಲೆ ಕೂಡುವಂತೆಯೇ, ಇದರಮೇಲೂ ಕೂತುಕೊಳ್ಳಬೇಕಾಗಿದೆ. ಕಲ್ಪನೆಗಾರನು ಈ ನವೀನವಾದ ಗಾಡಿಯನ್ನು ನ್ಯೂಯಾರ್ಕ್ ಪಟ್ಟಣದ ಬಳಿಯಣ ಸಮುದ್ರ ತೀರದಲ್ಲಿ, ೩ ಮೈಲುಗಳ ದೂರ ಅದರಮೇಲೆ ತಾನೇ ಕೂತುಕೊಂಡು ನಡೆಸಿದನು. ಈ ವಿನೋದವನ್ನು ನೋಡುವದಕ್ಕೆ ಸಾವಿರಾರುಜನರು ಅಲ್ಲಿಗೆ ಬಂದು ನಿಂತಿದ್ದರು. ಆ ಕಾಲದಲ್ಲಿ ಸಾಧಾರಣವಾದ ಬಿರುಗಾಳಿಯು ಬೀಸುತಿತ್ತು. ಸಮುದ್ರದ ಏಳತ ಭರತದ ನೀರಿನ ಸೆಳವು ಬಲವಾಗಿತ್ತು. ಅಲೆಗಳು ಅಲ್ಲಕಲ್ಲೋಲವಾಗಿ ಭಯಂಕರವಾದ ಘೋಷದಿಂದ ಬರುತ್ತಿದ್ದವು. ತೀರದಮೇಲೆ ನಿಂತಿದ್ದ ನೋಟಕರು, ಕಲ್ಪನೆಗಾರನು ಗಾಡಿಯೊಂದಿಗೆ ಮುಣುಗಿ ಸಾಯುವನೆಂದು ಯೋಚಿಸುತ್ತಿದ್ದರು. ಆದರೆ ಆತನು ಜನರೆಲ್ಲರಿಗೂ ಆಶ್ಚರ್ಯವನ್ನುಂಟುಮಾಡಿ, ತನ್ನ ನವೀನವಾದ ಯುಕ್ತಿಚಮತ್ಕಾರ ಸಾಧನವನ್ನು ಸ್ಥಿರಪಡಿಸುವಂತೆ, ಆ ಗಾಡಿಯಮೇಲೆ ಲೇವಿನಿಂದ ೩ಮೈಲುಗಳದೂರ ಹೋಗಿ, ಅಲ್ಲಿಂದ ಹಿಂತಿರಿಗಿಬಂದು ಕ್ಷೇಮವಾಗಿ ದಡವನ್ನು ಸೇರಿದನು.

ಬಾರೋಮೀಟರ್‌ಎಂಬ ವಾಯುಮಾಪಕಯಂತ್ರ, (ಗಾಳಿ, ಮಳೆ, ಬಿರುಗಾಳಿ, ತುಫಾನು, ನಿರ್ಮಲಾಕಾಶ, ಈ ಮೊದಲಾದ ಕಾಲಸ್ಥಿತಿಗಳ ಸೂಚನಾಯಂತ್ರ) ಈವಿಷಯಗಳನ್ನು ತಿಳಿಯುವದಕ್ಕಾಗಿ, ಅಂಕೆಗಳಿಂದ ಕೂಡಿದ ಗಾಜಿನಿಂದ ಮಾಡಲ್ಪಟ್ಟ ಒಂದು ಕೊಳವೆಯು ಸಾಧಕವಾಗಿದೆ. ಇದರಲ್ಲಿ ಪಾದರಸವು ಸುರಿಯಲ್ಪಟ್ಟಿರುತ್ತೆ. ಕಾಲಾನುಗುಣವಾಗಿ ರಸವು ಮೇಲಕ್ಕೆ ಏರುತ್ತೆ ಕೆಳಕ್ಕೆ ಇಳಿಯುತ್ತೆ. ಕಾಲಸ್ಥಿತಿಯನ್ನು ತಿಳಿಯಲು ರಸವು ನಿಲುಕಡೆಯಾಗಿರುವ ಸ್ಥಳದ ಅಂಕೆಯನ್ನು ನೋಡಬೇಕು. ಈಯಂತ್ರವು ೨-೩ ರೂಪಾಯಿಗೆ ಕಮ್ಮಿಯಾಗಿ ದೊರೆಯುವದಿಲ್ಲ. ಆದದರಿಂದ ಫ್ರಾನ್ಸ್‌ದೇಶದ ಒಬ್ಬ ವಿದ್ವಾಂಸನು ಈಯಂತ್ರ ಕಲ್ಪನಾರೀತಿಯನ್ನು ಸರ್ವರಿಗೂ ಸುಲಭಸಾಧ್ಯವಾಗಿರುವಹಾಗೆ, ಇದರಡಿಕಂಡಂತೆ ತಿಳುಹಿಸುತ್ತಾನೆ. ನಿರ್ಮಲವಾಗಿರುವ ಸಾಧಾರಣವಾದ ಒಂದು ಬೀಳೇಸೆಯಲ್ಲಿ ಅರ್ಧಕ್ಕೆ ನೀರನ್ನುತುಂಬಿ ಅದರೊಳು ಒಂದು ಜಿಗಣೆ

ಯನ್ನು ಬಿಡು, ಟೀಸೆಯು ಉದ್ದವಾಗಿರುವದಕ್ಕಿಂತಲೂ ಅಗಲವಾಗಿರಲಿ ; ಅದರ ಬಾಯನ್ನು ದಪ್ಪವಾದ ಒಂದು ಬಟ್ಟೆಯ ತುಂಡಿನಿಂದ ಮುಚ್ಚು , ಅದರಲ್ಲಿರುವ ನೀರನ್ನು ಹದಿನೈದು ದಿನಗಳಿಗೆ ಒಂದಾವರ್ತಿ ಬದಲಾಯಿಸು , ಇಷ್ಟಾದರೆ ಈ ಯಂತ್ರವು ಪೂರೈಸಿತು. ಜಿಗಣೆಯು ತಿಂದಿಸುತ್ತಿಕೊಂಡು ಟೀಸೆಯ ತಳದಲ್ಲಿ ಇದ್ದರೆ, ಆದಿನ ನಿರ್ಮಲಾಕಾಶವಾಗಿರುವದು. ಆದರೆ ಅದು ನೀರಿನ ಮೇಲ್ಭಾಗಕ್ಕೆ ಬಂದರೆ ಮಳೇ ಬರುತ್ತೆ. ಜಿಗಣೆಯು ಟೀಸೆಯಲ್ಲಿ ಬಲಾತ್ಕಾರವಾಗಿ ಓಡ್ಯಾಡಿದರೆ ಬಿರುಗಾಳಿಯು ಸಂಭವಿಸುವದು. ಒದ್ದಾಡಿದರೆ ತುಫಾನು(ಅತ್ಯಂತ ಸುಂಟರಗಾಳಿ) ಉಂಟಾಗುತ್ತೆ.

ನಮ್ಮ ಗವರ್ನಮೆಂಟಿನ ಸದ್ಯಾವಾಗ ನೋಡಿದರೂ ಜನಗಳಿಗೆ ಪ್ರಶಸ್ತಿಗಳು ದಾನವಾದುವ ಸಮಾರಂಭದಲ್ಲಿಯೇ ಇರುತಲಿರುವಂತೆ ತೋರುತಿದೆ. ಗ್ವಾಲಿಯರ್ ಸಂಸ್ಥಾನದ ದಿವಾನರಾದ ಸರ್ ಗಣಪತಿರಾಯರವರಿಗೆ ಪತಕಗಳು ಹಾಕಲ್ಪದತಕ್ಕ ಗೌರವವನ್ನು ಶ್ರೀಮನ್ಮಹಾರಾಣಿಯವರು ದಯಪಾಲಿಸಿದರು ಈ ವಿಷಯವಾನವು ಇವರು ಮಾಡಿದ ಮಹನ್ನತಿಗೆ ಅವರಾದ್ದೆಂದು ನುಡಿಯಲಾಗದು ಯಾತಕ್ಕೆಂದರೆ, ಸುಸ್ಥಾನದಲ್ಲಿ ಪ್ರಾಪ್ತರಾಜರಿಂದ ಗರವಾಗಿಟ್ಟದ್ದ ದ್ರವ್ಯವು ಪ್ರಮುಖ ಕಂದುಹಿಡಿದು ಬ್ರಿಟಿಷ ಗವರ್ನಮೆಂಟಿನವರಿಗೂ, ಗ್ವಾಲಿಯರ್ ಮಹಾರಾಜರಿಗೂ ಮಧ್ಯವರ್ತಿಯಾಗಿದ್ದು ೩|| ಕೋಟಿ ರೂಪಾಯಿಗಳ ಸಾಲಾ ಕೊಡಿಸಿದ್ದು ಸಾಮಾನ್ಯ ಕೆಲಸವೆಂದು ಹೇಳಬಹುದೆ ? ಇದಕ್ಕೆ ಇನ್ನಿಷ್ಟು ಬಹುಮಾನ ಕೊಟ್ಟರೂ ಸಾಲದ್ದಾಗಿರುತಿದೆ. ಮೈಸೂರು ಸಂಸ್ಥಾನದ ದಿವಾನರವರಿಗೆ ಸಹ ಸಿ. ಎಸ್ ಐ. ಎಂಬ ಅಲ್ಕಾಬ್ ಕೊಡಲ್ಪಟ್ಟಿತು. ಆದರೆ ಮೈಸೂರು ಸಂಸ್ಥಾನವು ಗ್ವಾಲಿಯರ್ ರಾಜ್ಯದಂತೆ ಉತ್ಪತ್ತಿಯುಳ್ಳದ್ದಾಗಿದ್ದರೆ ಅದರ ದಿವಾನರು ಕೂಡಾ, ಸರ್ ಗಣಪತಿರಾಯರವರು ಸ್ವಸಾಮರ್ಥ್ಯದಿಂ ಸಂಪಾದಿಸಿಕೊಂಡಂತಾ ಗಂಡಕ ಬಿರುದುಳ್ಳ ಮೂಲಕವಾದ ಗೌರವವನ್ನು ಸ್ವತಃ ಸಂಪಾದಿಸಿಕೊಳ್ಳದೆ ಹೋಗಿರಲಾರರು. ಬರುಬರುತ್ತ ಮುಂದಿನಲ್ಲಿಯೇ ಮೈಸೂರು ರಾಜ್ಯಕ್ಕೆ ಸಾಲ ವೃದ್ಧಿಯಾಗಿ ಪಂಚಾಕ್ಷರ ಘಟನೆ ಶಬ್ದ ಒಂದು ಮುಸಲಾವದೊವನೆ ಸೇರಿಸಿಟ್ಟಿರುವದರಿಂದ ಅದನ್ನೇ ಅನಂತರದ ಪುನಸ್ಕಾರಣೆ ಮಾಡುತಲಿರುವ ಅಲ್ಲಿನ ದಿವಾನರು ಏನೂ ಮಾಡಲಾರದೆ ಸುಕಟನದುತಿ[illegible]. ಹೀಗೆಯೇ ಸಿಫಾರಸ್ ಮಾಡತಕ್ಕವರ ಮಮತೆಗೆ ಪಾತ್ರರಾಗತಕ್ಕವರಿಗೆಲ್ಲ ಸಿ. ಎಸ್ ಐ. ಕೆ ಸಿ ಎಸ್ ಐ ಸಿ. ಐ. ಇ ಕರ್ನಲ್, ಜನರಲ್, ರಾಯಬಹದ್ದೂರ್, ಖಾನ್‌ಬಹದೂರ್, ದಿ ಪ ಸಾಹೆಬ್, ಮಹಾಮಹೋಪಾಧ್ಯಾಯ ವಗೈರೆ ನಿರರ್ಥಕಗಳಾದ ಅಂಕಿತಗಳು ಕೊಳ್ಳೆಯಾಗಿ ಹೋದವು ಆದರೆ ನಮ್ಮ ಸರ್ಕಾರದವರು ಈಗ ದಾನ ಮಾಡುತಿರುವಂತೆ ಪೂರ್ವದಲ್ಲಿ ಯಾವ ಚಕ್ರವರ್ತಿಯೂ ಮಾಡಿದ್ದಂತೆ ನಿರೂಪಣೆಗೆ ಬರಲಿಲ್ಲವು ದಯಾಳುಗಳಾದ ನಮ್ಮ ರಾಜ್ಯಕರ್ತರು ಎಂದಿಗೂ ಕೋಟಿಸದಂತಾ ಅಕ್ಷರ ನಿಕ್ಷೇಪನು ಹುದಿಕೆ ಸ್ವಾಧೀನ ಪಡಿಸಿಕೊಂಡಿರುವಾಗ ಅವರು ಅದರಿಂದೆಷ್ಟು ತೆಗದು ದಾನ ಮಾಡಿದಾಗ್ಯೂ ಅದು ತಿಲಮಾತ್ರ ಸಹ ಕಡಮೆಯಾಗತಕ್ಕದ್ದಲ್ಲವು. ಇಂತಾ ಔದಾರ್ಯವು ಸಾರ್ವಭೌಮರಾದ ನಮ್ಮ ಪೂರ್ವರಾಜರಲ್ಲಿ ಯಾರಿಗೂ ಇದ್ದಿರಲಿಲ್ಲವು ಇದನ್ನು ಈ ಕಾಲದಲ್ಲಿ ಮಾತ್ರ ನಾವು ನೋಡಿದ್ದು ನಮ್ಮ ಪುಣ್ಯವಲ್ಲವೆ? ಇದರಿಂದ ಗವರ್ನಮೆಂಟಿನವರಿಗೆ ನಷ್ಟವಾಗದೆ, ಪ್ರಜೆಗಳಿಗೊಂದು ಪ್ರಯೋಜನವಾಗದೆ ಕುಪ್ಪಡಂಗ ಉಂಟಾಗುವದಿಲ್ಲವು, ಮತ್ತು ಇದು ಸದರೀ ಬಿಬ್ಬರಿಗೂ ಆಮುಷ್ಮಿಕ ಸಾಧನಗಳಾಗಲಾರವು—ಧ ಸು

ಸರ್ ಸೈಯದ್ ಅಹಮದ್ ಎಂಬವರು, ಈಚೆಗೆ ಕೆಲವು ದಿನಗಳ ಹಿಂದೆ ಲಕ್ನೋ ಪಟ್ಟಣದೊಳು ನಡೆದ ಮಹಮ್ಮದೀಯ ಕಾಂಗ್ರೆಸ್ಸೆಂಬ ಮುಸಲ್ಮಾನರ ಸಮಾಜದಲ್ಲಿ ಉಪನ್ಯಾಸ ಮಾಡುವ ಸಂದರ್ಭದೊಳು, ಇಂಡ್ಯದೇಶವನ್ನು ಆಳೇಳು ತರಮಾನಗಳ ಕಾಲ ಆಳಿದವರು ತಾವೆಂದು ಪ್ರಸಂಸೆ ಮಾಡಿಕೊಂಡರು. ಆಳೇಳು ತರಮಾನಗಳ ಕಾಲ ಆಳಿದ್ದು ನಿಜವೆ, ನಿಮ್ಮ ಅವಿವೇಕದಿಂದಲೇ ಇಂಡ್ಯದೇಶವನ್ನು ಹೀಗಳಾಡಿಸಿಕೊಂಡದ್ದೂ ನೀವೇ ಯೆಂದು ಜ್ಞಾಪಕದಲ್ಲಿಡಬೇಕು. ಹಿಂದಿನ ತಮ್ಮ ನಡತೆಯನ್ನು ಕುರಿತು ಪ್ರಸ್ತಾಪಿಸಿಕೊಳ್ಳತಕ್ಕವರು ಇಂಡ್ಯದೇಶದಲ್ಲಿ ಯಾವ ಜಾತಿಯವರೂ ಇಲ್ಲವೆಂದು ನಾವು ನಂಬುತ್ತೇವೆ. ಹಿಂದೆ ಯೆಲ್ಲರೂ ವಿವೇಕ ಶೂನ್ಯರಾಗಿದ್ದವರೆ, ಅದರ ಫಲ ಪರ್ಯವಸಾನವೇ ಈಗ ಬ್ರಿಟಿಷ ಅಧಿಪತ್ಯ ನೆಂಗೊಂಡಿರುವದು. ಇಂತಾ ಯಥಾರ್ಥವನ್ನು ಯಾತಕ್ಕೆ ಒಪ್ಪಿಕೊಳ್ಳಬಾರದು. ಅಸಮರ್ಥತೆಯ ಮೂಲಕ ತಪ್ಪಿಹೋದ ಹಿಂದಿನ ಮಹಿಮೆಯನ್ನು ಕುರಿತು ಪ್ರಸ್ತಾಪಿಸಿದ್ದರಿಂದ ಸರ್ ಸೈಯದ್ ಅಹಮ್ಮದಿಯವರು ದೇಶ ಚರಿತ್ರೆಯನ್ನು ಚೆನ್ನಾಗಿ ಓದಿದವರಲ್ಲವೆಂದು ಕಾಣಬರುತಿದೆ ಮಹಮ್ಮದೀಯರನ್ನು ಇಂಡ್ಯದೇಶವನ್ನಾಳಿದವರೆಂದು ಹೇಳುವಲ್ಲಿ, ದಕ್ಷಿಣ ಚಕ್ರವರ್ತಿಗಳು ಅಂತಃವಾಗಿ ಮಹಾರಾಷ್ಟ್ರರಿಗೆ ಸೇರುತಲಿದ್ದರೆಂಬ ಅಂಶವನ್ನು ಮರೆತುಹೋಗಲಿಲ್ಲವೆ ? ವಿವೇಕಶಾಲಿಯಾದ ಅಕಬರ್ ಚಕ್ರವರ್ತಿಯವರು ತಮ್ಮ ಪ್ರಜೆಗಳಲ್ಲಿ ನಂಬಿಕೆ ಇಟ್ಟು ಅವರಿಗೆಲ್ಲ ದೊಡ್ಡ ಅಧಿಕಾರಗಳು ಕೊಟ್ಟರೆಂದು ಇವರಿಗೆ ತಿಳಿಯದೆ ? ಟೋಡರಮಲ್, ರಾಜಾ ಮಾನ್‌ಸಿಂಗ ವಗೈರೇರು ಸಮರ್ಥರಾದ ರಾಜ ಮಂತ್ರಿಜ್ಞರೆಂತಲೂ ಸೇನಾನಾಯಕರೆಂತಲೂ ಕೀರ್ತಿಯಂ ಪಡೆದಿದ್ದರು ಮಹಮ್ಮದೀಯರು ಆಳೇಳು ತರಮಾನಗಳ ಕಾಲ ಇಂಡ್ಯ ರಾಜ್ಯವನ್ನಾಳುತಲಿದ್ದರೆಂದು ಪ್ರಶಂಸಿಸಿಕೊಳ್ಳುವದು ವ್ಯರ್ಥಾಲಾಪವಾಗಿರುತಿದೆ ಮಹಮ್ಮದೀಯರು ಯೆಷ್ಟರ ವರಿವಿಗೆ ವಿವೇಕಶಾಲಿಗಳಾಗಿದ್ದರೊ ಅಷ್ಟರ ವರಿವಿಗೆ ಇಂಡ್ಯದೇಶವನ್ನಾಳಿದರು ಪ್ರಜೋದ್ದೃಷ್ಟಿಯುಳ್ಳವರಾಗಿಯೂ ವಿಸ್ತಾರಾಗಿಯೂ ಇದ್ದ ಔರಂಗಜೇಬ ಚಕ್ರವರ್ತಿಯವರು ತಾವು ಜೈಸಿದ ದೇಶವನ್ನು ತಮ್ಮ ಅಧಿಕಾರದಲ್ಲಿಟ್ಟುಕೊಳ್ಳಬೇಕೆಂದು ಮಾಡಿದ ಪ್ರಯತ್ನ ಕೈಗೂಡದೆ ಬಂಗಪಟ್ಟರು. ಇಂತಾ ವಿಷಯಗಳೆಲ್ಲವು ಪ್ರತ್ಯಕ್ಷವಾಗಿರುವಲ್ಲಿ, ಮಹಮ್ಮದೀಯರು ಹಿಂದೆ ಮಾಡಿದ ಕಾರ್ಯಗಳನ್ನು ಕುರಿತು, ಲಜ್ಜೆ ಇಲ್ಲದೆ ಸರ್ ಸೈಯದ ಅಹಮ್ಮದಿಯವರು ಪ್ರಸ್ತಾಪಿಸುವದಕ್ಕೆ ಉದ್ದೇಶವು ನಮ್ಮ ಬುದ್ಧಿಸ್ವಾಗಲಿಲ್ಲವು—ಸುಗುಣ

"ಜ್ಞಾನವು ಬಲವು" ಎಂತ ಒಬ್ಬ ಪ್ರಖ್ಯಾತ ಇಂಗ್ಲಿಷ ಪಂಡಿತನು ಹೇಳಿದ್ದಾನೆ ಇದು ಮುಖ್ಯವಾಗಿ ಪ್ರಕೃತಿ ಶಾಸ್ತ್ರಗಳಿಗೆ ಲಾಗುವದು ನಮ್ಮ ಸುತ್ತಲೂ ಇರುವಂತಾ ವಸ್ತುಗಳನ್ನು ಮನಸ್ಸುಕೊಟ್ಟು ನೋಡಿ ಅವುಗಳಿಂದ ಜ್ಞಾನವನ್ನು ಪಡಕೊಂಡವರಿಂದ ಮನುಷ್ಯರ ಐಶ್ವರ್ಯ ಇತ್ಯಾದಿ ವಾಸ್ತವಿಕ ಸುಖಗಳು ಹೆಚ್ಚಿದ್ದಾವೆ ಇದಕ್ಕೆ ಉದಾಹರಣೆಯಾಗಿ ಹೊಗೆಬಂಡಿ ಟೆಲಿಗ್ರಾಫ್ ಮೊದಲಾದವುಗಳನ್ನು ಹೇಳಬಹುದು ಆದರೆ ಇದಲ್ಲದೆ ಅಜ್ಞಾನಾಂಧಕಾರವನ್ನು ಓಡಿಸಿ ಜ್ಞಾನದ ಪ್ರಭೆಯನ್ನು ಸುರಿಸಿ ಈ ಸುಂದರವಾದ ಲೋಕದಲ್ಲಿರುವ ವಸ್ತುಗಳ ವಿಷಯ ತಿಳುವಳಿಕೆಯನ್ನು ನಮ್ಮ ಮನಸ್ಸಿನಲ್ಲಿ ಹುಟ್ಟಿಸಿ ಸತ್ಯಕ್ಕೆ ಪ್ರೀತಿ ಮತ್ತು ಅಸತ್ಯಕ್ಕೆ ಅಸಹ್ಯವನ್ನು ನಮ್ಮಲ್ಲಿ ಉಂಟುಮಾಡಿ ಸೃಷ್ಟಿಯಲ್ಲಿ ಪ್ರತಿನಿಮಿಷವು ಆಗುವಂತಾ ಮಹದದ್ಭುತಗಳನ್ನು ನಮಗೆ ತಿಳಿಸಿ, ಪರಮಾತ್ಮನ ಕೃಪೆ ಪ್ರಾಣಬುದ್ಧಿ ಮೊದಲಾದವುಗಳನ್ನು ನಮ್ಮ ಮನಸ್ಸಿನಲ್ಲಿ ದೃಢಪಡಿಸುವಂತಾ ಇಹಪರ ಸುಖಗಳಿಗೆ ಸಾಧನವಾದ ಪ್ರಕೃತಿ ಶಾಸ್ತ್ರದ ಒಂದು ಸಣ್ಣ ಅಂಶವನ್ನು ಕುರಿತು ವಿಚಾರಿಸುವಣ.

ಪ್ರಾಣಿಗಳಲ್ಲಿ ವಾನರಗಳೇ ಮನುಷ್ಯರಿಗೆ ಅತಿಸನಿಹಿತವಾದವು ಎಂತ ಎಲ್ಲರು ಒಪ್ಪುವರು [illegible] ಎಂಬ ಮೃಗಗಳು ವಾನರಗಳು ಮನುಷ್ಯರ ಜಾತಿವರ್ಗದಲ್ಲಿ ಶ್ರೇಷ್ಠ ಸ್ಥಾನದವರು. ವಾನರಗಳ ಮುಖದಾಕೃತಿಯು ಅತಿ ಮಾನುಷ್ಯವಾಗಿರುವದು. ಇವುಗಳಿಗೆ ಮನುಷ್ಯರಿಗಾಗೆ ಮೂವತ್ತೆರಡು ಹಲ್ಲುಗಳು ಇದ್ದಾಗ್ಯೂ ಹಲ್ಲುಗಳ ನಡುವೆ ಒಂದು ಕಡೆಯಲ್ಲಿ ಖಾಲಿಜಾಗ ಯಿರುವದು. ಮನುಷ್ಯರು ಮಾಡುವ ಅನೇಕ ಕೆಲಸಗಳನ್ನು ಇವು ಮಾಡುವವು

ಮಂಗಗಳಿಗಿರುವ ಮನುಷ್ಯರ ಹೋಲಿಕೆಯು ಮುಖದ ಅವಯವಗಳ ಸ್ಥಾನದ ಸಂಬಂಧದಿಂದ ಬಹಳ ಹೆಚ್ಚಾಗುತ್ತದೆ ಕಣ್ಣುಗಳ ಮೇಲೆ ಇವುಗಳಿಗೆ ಹುಬ್ಬುಗಳುಂಟು, ಮತ್ತು ಇವುಗಳ ನಡುವೆ ಉದ್ದವಾದ ಮೂಗುಂಟು, ಇವರ ಮುಖಯು ಕೆಲವು ವಾನರಗಳಲ್ಲಿ ಮನುಷ್ಯನ ಮುಖ ನಮೂನೆಗೆ ಬಹಳ ಹೋಲಿಕೆಯುಳ್ಳದ್ದು. ಕೋಪ ದುಃಖ ಸಂತೋಷ ಮತ್ತು ದುಷ್ಟ ಇತ್ಯಾದಿಗಳನ್ನು ಮನುಷ್ಯರು ತೋರಿಸುವ ಹುಬ್ಬುಗಳ ಮೇಲೆ ಮತ್ತು ಬಾಯಿಯ ಸುತ್ತಲೂ ಇರುವ ಚರ್ಮ ಮತ್ತು ಸ್ನಾಯುಗಳ ಚಲನೆಗಳ [illegible] ನ ಚಲನೆಗಳಿಂದ ಮೇಲ ಹೇಳಿದ ಸ್ಥಿತಿಗಳನ್ನು ತೋರಿಸುತ್ತವೆ ಇದರಿಂದ ವಾನರಗಳಿಗಿರುವ ಮನುಷ್ಯನ ಹೋಲಿಕೆಯು ಇನ್ನೂ ಹೆಚ್ಚಾಗುತ್ತದೆಯೆಂದು ಡಾರ್ವಿನ್ ಎಂಬ ಪ್ರಖ್ಯಾತ ವಿದ್ವಾಂಸನೊಬ್ಬನು ಹೇಳುತ್ತಾನೆ.

ಮನುಷ್ಯರಿಗೆ ಇನ್ನೂ ಸನಿಹವಾಗಿರುವ ನರಾಕೃತಿಯ ವಾನರಗಳು ಎಂಬ ಹೆಸರು ಪಡೆದ ಪ್ರಾಣಿಗಳು ಇವೆ ಇವು ವಿಶೇಷವಾಗಿ ಆಫ್ರಿಕಾದ ಅರಣ್ಯಗಳಲ್ಲಿಯೂ ಬೋರ್ನಿಯೋ [illegible] ಲಾದ [illegible] ಗಳಲ್ಲಿಯೂ ಇರುವವು ಇವುಗಳಲ್ಲಿ ಕೆಲವು ಮನುಷ್ಯರಿಗಿಂತ ಹೆಚ್ಚುಗಾತ್ರವುಳ್ಳವು ಇವು ಸಾಧಾರಣ ನಿಟ್ಟಗೆ ನಡಿಯುತ್ತವೆ ಇವುಗಳಿಗೆ ಬಾಲವಿಲ್ಲ

ಆಫ್ರಿಕ ಖಂಡದ ಗಬೂನ ನದಿಯ ಹತ್ತಿರ ವಾಸವಾಗಿರುವ ಗೊರಿಲ್ಲಾಯೆಂಬ ವಾನರವು ಪ್ರಖ್ಯಾತಿಪಟ್ಟದ್ದಾಗಿರುವದು. ಇತ್ತೀಚೆಗಿನವರೆಗೆ ಈ ಮೃಗದ ವಿಷಯದಲ್ಲಿ ನಿಶ್ಚಯವಾದ ಸಂಗತಿಗಳು ತಿಳಿಯಲಿಲ್ಲ ಈ ಮೃಗ ಪ್ರಾಣದ [illegible] ಇಲ್ಲವೆಂದು ಕೆಲವರು ಹೇಳುತ್ತಾರೆ [illegible] ಕಾಡಿನಲ್ಲಿ ಆಫ್ರಿಕ [illegible] ಹೋಬಸಲಿಕ್ಕೆ [illegible] ನು ಈ ಮೃಗದ ವಿಷಯವಾಗಿ ಬರೆದ [illegible] ವನು ಹೇಳುವದೇನೆಂದರೆ ಗೊರಿಲ್ಲವು ಸುಮಾರು ಆರು ಅಡಿ ಎತ್ತರವು ಆಗಿರುತದೆ ಕೋಪಬಂದಾಗ ಎದೆಯನ್ನು ಮುಷ್ಟಿಗಳಿಂದ ತನಿದು ಹೊರಿಯುಂತವ್ವ ಧ್ವನಿಯನ್ನು ಮಾಡುತದೆ ಇದರ ಕೂಗು ನಾಯಿಯ ಬೊಗಳುವಾಗ ಮೊದಲಾಗಿ ಮೇಘ ಗರ್ಜನೆಯಂತೆ ಧ್ವನಿಯುಂಟಾಗುತದೆ. ಅದು ಅತಿ ಭಯಂಕರವಾದ ಮೃಗವುಳ್ಳದ್ದು. ಬಾಳೇ ಗಿಡಗಳನ್ನು ತನ್ನ ಬಾಜಬಲದಿಂದ ಮುರಿದು ತಿನ್ನುತದೆ. ಕಬ್ಬು ಮತ್ತು ಅನನಾಸು ಇದರ ಪ್ರಿಯಕರವಾದ ಆಹಾರವಾಗಿದೆ. ಒಟ್ಟಾರೆ ಗೊರಿಲ್ಲವು ಅತಿ ಕ್ರೂರವಾದದ್ದು ಎಂದು ಇವನ ತಾತ್ಪರ್ಯವಾಗಿದೆ.

ಓರಂಗ ಊಟಂಗ ಎಂಬ ವಾನರವು ಕಾಡು ಮನುಷ್ಯನೆಂಬ ಹೆಸರುಳ್ಳದ್ದು ಬೋರ್ನಿಯೋ ದ್ವೀಪದ ವನಗಳಲ್ಲಿ ವಾಸಮಾಡಿಕೊಂಡಿದೆ ಇದು ಕೆಲವು ವಿಷಯಗಳಲ್ಲಿ ಮನುಷ್ಯನಿಗೆ ಗೊರಿಲ್ಲಕ್ಕಿಂತ ಹೆಚ್ಚು ಸನಿಹವಾಗಿರುತದೆ. ಇದಕ್ಕೆ ಮನುಷ್ಯರಷ್ಟು ಅಥವಾ ಹನ್ನೆರಡು ಪಕ್ಕೆಲುಬುಗಳು ಒಂದೊಂದು ಬದಿಯಲ್ಲಿವೆ ಆದರೆ ಗೊರಿಲ್ಲಕ್ಕೆ ಹದಿಮೂರು ಇರುತ್ತವೆ. ಅದು ಕಂದು ವರ್ಣದ್ದು, ಮೊಸಳೆಯು ಬಾಯಿಯಲ್ಲಿ ಕೈಹಾಕಿ ಅದನ್ನು ಕೊಲಬಹುದಾಗ್ತದೆ ಮರಗಳಲ್ಲಿ ವಾಸಮಾಡಿಕೊಂಡು ಮರದ ಗೆಲ್ಲುಗಳಿಂದಲೂ ಎಲೆಗಳಿಂದಲೂ ಗೂಡು ಕಟ್ಟುತ್ತದೆ ಇದು ಸುಮಾರು ನಾಲ್ಕು ಅಡಿ ಎರಡು ಇಂಚು ಎತ್ತರವಾಗಿರುತದೆ ಗೊರಿಲ್ಲದ ಮೆದುಳಿನ ಸ್ಥಾನವು ಸುಮಾರು ಮನುಷ್ಯನ ಮೆದುಳಿನ ಸ್ಥಾನದ ಮೂರರಲ್ಲಿ ಒಂದು ಅಂಶಕ್ಕಿಂತ ಕಡಮೆ ಆದರೆ ಓರಂಗ ಉಟಾಂಗಿನದು ಅರ್ಧಪಾಲಷ್ಟು ಮೆದುಳಿನ ವಿಷಯದಲ್ಲಿ ಈ ಒಂದು ಸಂಗತಿಯೇ ನಮಗೆ ಗೊತ್ತಿದ್ದರೆ ಓರಂಗ ಊಟಂಗವು ಗೊರಿಲ್ಲಕ್ಕಿಂತ ಬುದ್ಧಿಶಾಲಿಯು ಎಂತ ನೆನಸಬಹುದು

ಚಿಂಪಾಂಜಿ ಎಂಬ ಆಫ್ರಿಕಾ ನಿವಾಸಿಯಾದ ಇನ್ನೊಂದು ನರಾಕೃತಿಯು ವಾನರದ ಮೆದುಳಿನ ಸ್ಥಾನವು ಗೊರಿಲ್ಲದ ಮೆದುಳಿನ ರುದ್ರತ್ಕಿಂತಾ ಸಣ್ಣದಾಗಿದೆ ಇದು ಕೈಯಲ್ಲಿ ಕೋಲುಗಳನ್ನು ಹಿಡಿದು ಗುಂಪು ಕೂಡಿಕೊಂಡು ಹೋಗುತ್ತಿರುತ್ತೆ.

ಸೋಕೋ ಎಂಬ ಇನ್ನೊಂದು ವಾನರವು ಮಕ್ಕಳನ್ನು ಕದ್ದುಕೊಂಡು ಹೋಗಿ ಮರಗಳ ಮೇಲೆ ಕೂತುಕೊಳ್ಳುತದೆ. ಈ ಸಮಯದಲ್ಲಿ ಪಶುಗಳನ್ನು ಅತ್ತಿತ್ತ ತಂದರೆ ಮಗುವನ್ನು ಕೆಳಕ್ಕೆ ಬಿಡುತದಂತೆ, ಇದು ಮಹಾ ಚೇಷ್ಟೆಯುಳ್ಳದ್ದು ಒಬ್ಬನೊಬ್ಬ ಮನುಷ್ಯನು ಅಗೆಯುತಿರುವಾಗ ಈ ಸೋಕೋ ಎಂಬ ವಾನರವು ಬಂದು ಅವನನ್ನು ಹಿಡಿಯಲು ಅವನು ಬೊಬ್ಬೆ ಇಡಲು, ಸೋಕೋ ಮೃಗವು ಹಲ್ಲುಕಿಸ್ಟು [illegible] ಇಲ್ಲದ ಮನುಷ್ಯನನ್ನು ಕಂಡರೆ ಅದು ಸುಮ್ಮಗಿರುತದೆ. ಹೆಂಗಸರು ಕೆಲವು ಸಾರಿ [illegible] ಮಕ್ಕಳು ಅವರ [illegible] ಹೋಗುವದಿಲ್ಲ, ಆದರೆ ಸೋಯ ಸಿಕ್ಕಿದರೆ ಸೋಕೋ ವಾನರವು ಆ ಮನುಷ್ಯನ ಬೆರಳುಗಳನ್ನು ಕಚ್ಚಿ ತೆಗದು ಕೆನ್ನೆಯನ್ನು ಹೊಡೆದು ಬಿಡುವದೆ [illegible] ತಪ್ಪು ಮಾಡಿದವರನ್ನು ಅದು [illegible]

ಈ ವಾನರಗಳು ಮನುಷ್ಯನಿಗೆ ರೂಪ, ಆಕಾರ, [illegible] ಬಹಳ ಸನಿಹವಾಗಿರುತ್ತವೆ. ಡಾರ್ವಿನ್ ಎಂಬ ಮಹಾ ವಿದ್ವಾಂಸನು [illegible] ವಾನರಗಳಲ್ಲಿ ಒಂದು [illegible] ಮನುಷ್ಯನಿಗೆ ಜನನ ಕೊಟ್ಟಿತೆಂದು ಹೇಳುತ್ತಾನೆ [illegible] ಗುಣಗಳನ್ನು [illegible] ವಾಗ [illegible] ದಾಸ್ತಿಯಾದರೂ [illegible] ಹೋಲಿಕೆಯು ಬಹಳವಾದರೂ [illegible] ವ್ಯತ್ಯಾಸ ಉಂಟು ಈ ವ್ಯತ್ಯಾಸಗಳು [illegible] ವರಗಳಲ್ಲಿ ಕ್ರಮೇಣ ಹೆಚ್ಚಿದರೆ [illegible] ವಗಳ ಹಿಂದೆ [illegible] ಕಾರ್ಯ [illegible] ಬಹ [illegible] ಆದರೆ ಎಂತಾ ವ್ಯತ್ಯಾಸಗಳು ಅಷ್ಟು ಅವಾವ ? ಎಂತ ಕೇಳಿದ [illegible] ನರಾಕೃತಿಯು ವಾನರಗಳು ನರರಾಗುವದಕ್ಕಿಂತ ಹೆಚ್ಚು [illegible] ನೇಚರಲ್ ಸೆಲೆಕ್ಷನ್ ಎಂಬ ಸೂತ್ರದ ಪ್ರಕಾರ ಆಗಿವೆ ಎಂಬವಕ್ಕೆ ದೃಷ್ಟಾಂತ ಉಂಟು ಇದೆಲ್ಲ ಬರೀ [illegible] ಮನುಷ್ಯರಲ್ಲ ಅತಿಕ್ರಮಿಸಿಟ್ಟು [illegible] ವಾದವಾಗಿದೆ ಆದರೂ ವೆಲ್ಲಿಸ್ ಮಾರ್ಷಲ್ ಮೊದಲಾದ ಇತರ ವಿದ್ವಾಂಸರು [illegible] ನೇಚರಲ್ ಸಿಲೆಕ್ಷನ್ ಎಂಬ ಸೂತ್ರದ [illegible] ಕ್ರಮೇಣ ಇತರ ಪ್ರಾಣಿಗಳಾದರೂ ನರಾಕೃತಿಯ ವಾನರವು ನರನಾಗಲಿಲ್ಲವೆಂದು ಹೇಳುತ್ತಾರೆ. ವೆಲ್ಲಿಸ್ ಎಂಬ ಪಂಡಿತನು ರೂಪ ಸಮಾನತ್ವವು ಏಕೋತ್ಪತ್ತಿಯನ್ನು ತೋರಿಸುವದಿಲ್ಲ ದೇಹದ ರಚನೆಯುಳ್ಳ ಮೇಲಾಗಿರುವ [illegible] ದೇಹ ರಚನೆಯಲ್ಲಿ ಕೀಳಾಗಿರುವ [illegible] ಎಂಬ ಪ್ರಾಣಿಗಳಿಗಿಂತ ಮೇಲಿನದಲ್ಲ ಮನುಷ್ಯನ ಬುದ್ಧಿ ಮತ್ತು ಧರ್ಮ ವಿಚಾರಗಳು ವಾನರಗಳಲ್ಲಿರುವ ಗುಣಕ್ಕಿಂತ ಅತ್ಯುನ್ನತವಾಗಿರುತವೆಂತ ಹೇಳುತ್ತಾನೆ. ವೆಲ್ಲಿಸ್ ಎಂಬ ಪಂಡಿತನು ನೇಚರಲ್ ಸಿಲೆಕ್ಷನ್ ವಾನರವನ್ನು ಮನುಷ್ಯನಾಗಿ ಮಾಡುವದಕ್ಕೆ ಸಮರ್ಥವಾಗಿರುವದಿಲ್ಲ, ಬೇರೇ ಕಾರಣಗಳಿಂದ ನರಾಕೃತಿಯ ವಾನರದಿಂದ ಮನುಷ್ಯನು ಉತ್ಪನ್ನನೆಂದು ಹೇಳುತ್ತಾನೆ—ಸುದರ್ಶನ

Bangalore —Printed and published for the Proprietors at the Karnatak Press. —1888

ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA.

ಪ್ರತಿ ಸೋಮವಾರ ಪ್ರಾತಃಕಾಲದಲ್ಲಿ ಪ್ರಕಟಿಸಲ್ಪಡುವದು.

Published every Monday Morning.

[illegible]

Vol. XV.] BANGALORE—MONDAY, FEBRUARY 6, 1888. [No. 5.

ಸಂಪುಟ ೧೫.] ಬೆಂಗಳೂರು:—ಸನ್ ೧೮೮೮ನೇ ಇಸವಿ ಫೆಬ್ರುವರಿ ೬ನೇ ತಾರೀಖ್ ಸೋಮವಾರ. [ಸಂಖ್ಯೆ ೫.

ಕರ್ಣಾಟಕ ಪ್ರಕಾಶಿಕಾ

ಪತ್ರಿಕೆಯ ಚಂದಾ ವರಗಳು,
೧೮೮೮ನೇ ಇಸವಿ ಜನವರಿಯಿಂದಾಯಿತು
ಕಡಮೆಮಾಡಲ್ಪಟ್ಟಿರುತ್ತದೆ.

ಈ ಪತ್ರಿಕೆಯು ಚಂದಾದಾರರನ್ನಾಗಿ ಅನೇಕರ ಅಪೇಕ್ಷೆಯನ್ನು ನೆರವೇರಿಸುವ ಉದ್ದೇಶದೊಡನೆಯೂ, ಪರಿಮಿತವಾದ ಆದಾಯವುಳ್ಳವರಿಗೆಲ್ಲ ಈ ಪತ್ರಿಕೆಯು ಸುಲಭವಾಗಿ ಲಭಿಸುವಂತಿರಬೇಕೆಂಬ ಅಭಿಪ್ರಾಯದೊಡನೆಯೂ ಇದರ ಚಂದಾದರವನ್ನು ಇದರಡಿಯಲ್ಲಿರುವಂತೆ ಕಡಮೆಮಾಡಿರುತ್ತೇವೆ:—

ಇಂಗ್ಲಿಷ್ ಮತ್ತು ಕನ್ನಡ ಭಾಗಗಳಿಗೆ.

	ಮುಂಗಡವಾಗಿ	ಹಿಂದುಗಡೆ
12 ತಿಂಗಳಿಗೆ	8—0—0	9—0—0
6 ,,	4—0—0	4—8—0
3 ,,	2—8—0	2—8—0

ಇಂಗ್ಲಿಷ್ ಅಥವಾ ಕನ್ನಡ ಭಾಗಗಳಿಗೆ.

	ಮುಂಗಡವಾಗಿ	ಹಿಂದುಗಡೆ
12 ತಿಂಗಳಿಗೆ	4—0—0	5—0—0
6 ,,	2—0—0	2—8—0
3 ,,	1—4—0	1—8—0

ಸಹಾ—ಚಂದಾ ಮುಸ್ಸಿಂಗಳು, ಹೊಟೇಲ್ ಮತ್ತು ತಾಲೂಕ್ ಸ್ಕೂಲ್ ಮಾಸ್ಟರುಗಳು, ಶ್ಯಾನಭೋಗರು, ಪಟೇಲರು, ವಿದ್ಯಾರ್ಥಿಗಳು, ಇವರಿಗೆ ಈ ಪತ್ರಿಕೆಯು ಮೇಲ್ ಕಂಡವರಿಗೆ ಕೊಡಲ್ಪಡುವದು. ಅವ್ವಾರ್ಷಿಕರೊಬ್ಬರು [illegible]

[illegible]

ಪ್ರಕಟನೆಯ ದಿವಾಜ್.

ಮೊದಲನೆ ಸಲದಲ್ಲಿ ಪಂಕ್ತಿ ಒಂದಕ್ಕೆ ೦—೨—೦
ಎರಡನೇ ಸಲದಲ್ಲಿ ಪಂಕ್ತಿ ಒಂದಕ್ಕೆ ೦—೧—೦

[illegible]

"IT RECOMMENDS ITSELF"

ALL WHO SUFFER FIND SURE RELIEF.

LITTLE'S

ORIENTAL BALM

THE MOST EFFECTUAL MODERN REMEDY FOR PAIN.

[illegible]

ಪರಿಶೀಲಕರ ಅಭಿಪ್ರಾಯವು.

[illegible] (C. R. TICHBORNE, L. L. D., F. C. S., M. R. I. A.) [illegible]

ಇದರ ಕ್ರಯ—ಶೀಶೆ ಒಂದಕ್ಕೆ ೧ ರೂಪಾಯಿ.

[illegible]

AGENTS.— Messrs. J. WEIR, Chemist, &c., Bangalore.
CARTER & Co. Chemists, Bangalore.
RIGGS & Co., Chemists, Bangalore; and of
MAHOMED YOUSUF AND SONS, The Cash Bazaar, Bangalore.
A. C. BAKKAMAN & Co.,
20 Sambodoss Street Madras

NOTICE.

VAIDYASARA SANGRAHA

A TREATISE ON THE PRINCIPLES OF

HINDU MEDICINE.

Price including Postage Rs 5 6 0

ವೈದ್ಯಸಾರ ಸಂಗ್ರಹ.

ಈಗ್ರಂಥವಪೇಕ್ಷೆಯುಳ್ಳವರು ಮೊದಲಿಗೆ [illegible]

ಇದರ ಕ್ರಯ ... ... ರೂ॥ ೫—೦—೦
ಟ್ಯಾಪಿಗೆ ಮತ್ತು ಅಂಚೆಯಾಸಲ್, ೦—೬—೦

ಬಿ. ಬಿ. ವೆಂಕಟಾಚಾರ್,
ಆಸ್ಪತ್ರಿಶೋಧಕ, ಬೆಂಗಳೂರು.

ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA.

MONDAY, FEBRUARY 6 1888.

೧೮೮೮ನೇ ಫೆಬ್ರುವರಿ ೬ನೇ ತಾ॥ ಸೋಮವಾರ.

THE PROSPERITY OF AMERICA.

ಈಗ ಅಮೆರಿಕಾದೇಶೀಯರ ಸ್ಥಿತಿಯು, ಅದು ವಿಶೇಷ ಅಭಿವೃದ್ಧಿಯನ್ನೈದಿದೆ ಎಂಬದಾಗಿ ಭಾವಿಸಿರುವ [illegible] ಯುನೈಟೆಡ್ ಸ್ಟೇಟ್ಸ್ ಎಂಬ ಸಂಯುಕ್ತ ಸಂಸ್ಥಾನಗಳ [illegible] ಜನರ ಸ್ಥಿತಿಯು ಚೆನ್ನಾಗಿ ವ್ಯಕ್ತಪಡಿಸುತ್ತದೆ. ಸನ್ ೧೭೭೬ನೇ ಇಸವಿಯ ಮೊದಲು ಮೇರಿಕಾದ ಸಂಯುಕ್ತ ಸಂಸ್ಥಾನಗಳೆಲ್ಲವೂ ಇಂಗ್ಲಿಷರ ಅಧೀನತೆಗೊಳಗಾದವಾಗಿದ್ದವು. ಆಗ ಅಲ್ಲಿ ಪ್ರಜೆಗಳು ಈಗ ಇಂಡ್ಯದೇಶೀಯರಂತೆ ಇಂಗ್ಲಿಷ ಪ್ರಭುತ್ವದಲ್ಲಿ ಪ್ರಬಲ ಸಂಕಟಗಳನ್ನನುಭವಿಸುತಲಿದ್ದರು. ನಾನಾವಿಧ ಸುಂಕ ತೆರಿಗೆಗಳು ಈಗಿನಂತೆ ಅವರಮೇಲೆ ಅನ್ಯಾಯವಾಗಿ ಹೊರಿಸಲ್ಪಟ್ಟವು. ಇದಕ್ಕಾಗಿ ಅಲ್ಲಿನ ಪ್ರಜೆಗಳು ಈಗ ಇಂಡ್ಯ ದೇಶೀಯರು ವ್ಯಕ್ತಪಡಿಸುತಲಿರುವಂತೆಯೇ ತಮ್ಮ ಅಪ್ರೀತಿಯನ್ನು ಬಹಳವಾಗಿ ತೋರಪಡಿಸಲಾರಂಭಿಸಿದರು. [illegible] ಇಂಗ್ಲಿಷಿನವರ ಜೋರಾವರಿಯ ಮುಂದೆ ಯಾರ ಪ್ರಯತ್ನಗಳು ತಾನೆ ಸಾಗುವವು? ಈಗ ನಮ್ಮಕ್ ತೆರಿಗೆಯನ್ನು ನಿಷ್ಕಾರಣವಾಗಿ ಹೆಚ್ಚಿಸಿದರಲ್ಲವೆ, ಇದು ಕುರಿತು ಪ್ರಜೆಗಳೊಡನೆ ಯಾರಾದರೂ ಆಲೋಚಿಸಿದರೆ? ಇಂತಾ ನಷ್ಟಕರವಾದ ತೆರಿಗೆಯನ್ನು ಜಾಸ್ತೀ ಮಾಡಿದ್ದಕ್ಕೆ ಪ್ರಜೆಗಳೇನಾದರು ಕೊಡುವದಿಲ್ಲವೆಂದು ನಿರಾಕರಿಸುವುದುಂಟೆ? ಹಿಂದೊಮ್ಮೆ ಕೊಡುವದಿಲ್ಲವೆಂದು ನಿಷೇಧಿಸಿದರೆ ಅವರು ಗವರ್ನಮೆಂಟಿನವರು [illegible] ಅವ್ಯಾವೂ ಇಲ್ಲವು. ಈಗ ಇಂಡ್ಯದೇಶೀಯರು ಹ್ಯಾಗೆ ಸಕಲವಿಧ ಆಕ್ರಮಗಳೂ ಹೊರಿಸಲ್ಪಟ್ಟು [illegible] ಅಮೆರಿಕಾ ದೇಶೀಯರ ಸ್ಥಿತಿಯು ಸಹ ಬಹಳ ಅನುತಾಪಕರವಾದದ್ದಾಗಿತ್ತು. [illegible] ಕಾಲದ ಮೇಲೆ ಅಲ್ಲಿನ ಪ್ರಜೆಗಳು ತಮ್ಮ ಸ್ವಾತಂತ್ರ್ಯಸ್ವರೂಪವು ತಾವೆಂದು ತಿಳಿದ [illegible] ಈಗ ಹಿಂದೂಗಳು ಹೋರಿಪುದುವಂತೆ [illegible] ಬ್ರಿಟಿಷ್ ಗವರ್ನಮೆಂಟು, ಅಂದರೆ ಪ್ರಜೆಗಳಿಂದ ಚುನಾಯಿಸಲ್ಪಡುವ ಪ್ರತಿನಿಧಿಗಳಲ್ಲಿ ಪ್ರಭುತ್ವ ನಾವು ಒಬ್ಬ ಅಧಿಕಾರಿಯಿಂದ ಆಳಲ್ಪಡಬೇಕಲ್ಲದೆ ಆತನ ಸಹಾಯಾರ್ಥ [illegible] ಬ್ರಿಟಿಷ್ ಪಾರ್ಲಿಮೆಂಟು, ಅಂದರೆ ಪ್ರಜೆಗಳ ಅಧೀನ [illegible] ಪ್ರಜೆಗಳು ಪ್ರತಿನಿಧಿಗಳ ಸಭೆಯೊಂದು ಬ್ರಿಟಿಷ್ ಪಾರ್ಲಿಮೆಂಟಿನಂತೆ ನೆಲಗೊಳಿಸಬೇಕೆಂತಲೂ, ಇದೇರೀತಿ ಮಾಡದ ಪಕ್ಷಕ್ಕೆ ತಾವು ಕಂದಾಯಗಳು ಕೊಡುವದಿಲ್ಲವೆಂತಲೂ ಪ್ರತಿಭಟಿಸಿದರು. ಆಗ ಅಲ್ಲಿನ ಪ್ರಜೆಗಳಿಗೂ ಬ್ರಿಟಿಷ್ ಗವರ್ನಮೆಂಟಿನವರಿಗೂ ಯುದ್ಧ ಪ್ರಾಪ್ತವಾಗಿ ಅದು ೭ ಸಂವತ್ಸರಗಳ ಕಾಲ ಅನುಸ್ಯೂತವಾಗಿ ನಡೆಯುತಲಿತ್ತು. ಸ್ವಸ್ವಾತಂತ್ರ್ಯ ಸಂರಕ್ಷಣಾರ್ಥ ಮಾಡಲ್ಪಟ್ಟ ಪ್ರಸಿದ್ಧ ಯುದ್ಧದಲ್ಲಿ ಕಡೆಗೆ ಇಂಗ್ಲಿಷಿನವರು ಪರಾಜಿತರಾಗಿ ದೇಶವು ಬಿಟ್ಟು ಹೋಗುವಂತೆ ಪರಿಣಮಿಸಿತು. ಅದುಮೊದಲು ಅಮೆರಿಕಾ ದೇಶೀಯರು ಸ್ವತಂತ್ರರಾದ ಒಂದು ಜನಾಂಗವೆನಿಸಿಕೊಂಡು ಮೇಲೆ ಕಂಡ ರಿಪಬ್ಲಿಕ್ ರಾಜ್ಯಾಡಳಿತ ಕ್ರಮವೇ ನೆಲೆಗೊಳಿಸಿ ಅದ್ಯಾಪಿ ತೃಪ್ತಿಕರವಾಗಿ ನಡೆಸುತಬರುತಲಿದ್ದಾರೆ. ಈಗ ಅಲ್ಲಿನ ಆಳಿಕೆ ವಿಷಯವಾಗಿ ನಮಗೆ ತಿಳಿಯಬರುತದೇನೆಂದರೆ—ಇಂಗ್ಲಿಷರ ಪ್ರಭುತ್ವಕ್ಕೆ ಪಾರ್ಲಿಮೆಂಟ್ ಸಭೆಯು ಹ್ಯಾಗೆ ಮುಖ್ಯಾಧಾರವಾದದ್ದಾಗಿರುತಲಿದೆಯೋ ಹಾಗೆ ಅಮೆರಿಕಾ ದೇಶೀಯರು ನ್ಯಾಯಾಧಿಕಾರಿ ಕಾಂಗ್ರೆಸ್ ಎಂಬ ಮಹಾಜನ ಸಭೆಯನ್ನೇರ್ಪಡಿಸಿಕೊಂಡು ಅದರ ಸಹಾಯದಿಂದ ಆಳಿಕೆಯನ್ನು ನಡೆಸು

ತಲಿದಾರೆ ಈ ವರುಷದಲ್ಲಿ ಸೇರಿದ ಕಾಂಗ್ರೆಸ್ಸಿನೊಳು ಪ್ರಜೆಗಳಿಂದ ನಿಯಮಿತರಾದ ಪ್ರಸಿಡೆಂಟರವರು ಒಂದು ಪ್ರಜಾ ಪತ್ರಿಕೆಯನ್ನು ತಮ್ಮ ದೇಶೀಯರ ತಿಳುವಳಿಕೆಯಬಗ್ಗೆ ಶಾಯಿಷ್ ಮಾಡಿರುತ್ತಾರೇನಂದರೆ—ಈಗ ಸರ್ಕಾರ್ ಖಜಾನೆಯಲ್ಲಿ, ಮುಂದಿನ ಸಾಲಿನೊಳು ಅಂದಾಜ್ ಮಾಡಲ್ಪಟ್ಟಿರುವ ಖರ್ಚು ವೊಬಲಗು ಜಾತಾ ಇಪ್ಪತ್ತೈದು ಕೋಟಿ ರೂಪಾಯಿಗಳು ನಿಷ್ಪ್ರಯೋಜನವಾಗಿ ಸಿಲ್ಕು ನಿಂತಿರುತಿವೆ. ಈ ದ್ರವ್ಯವೆಲ್ಲವೂ ಪ್ರಜೆಗಳಿಂದ ಶೇಖರವಾದವಲ್ಲದೆ ಪ್ರತ್ಯೇಕವಾಗಿ ಬಂದದ್ದಲ್ಲವು. ಇಷ್ಟರ ದ್ರವ್ಯವು ಸರ್ಕಾರ ಖಜಾನೆಯೊಳು ಅನುಪಯುಕ್ತವಾಗಿರುವಪಕ್ಷಕ್ಕೆ ರಾಜ್ಯಕ್ಕೆ ಒಂದುಬಗೆ ದೌರ್ಬಲ್ಯವನ್ನು ನಾವಾಗಿ ಉಂಟುಮಾಡಿದಂತೆ ಯಾಗುವದು. ಆದದರಿಂದ ಈ ದ್ರವ್ಯವನ್ನು ದಾರಳ ಪ್ರಜೆಗಳ ಉಪಯೋಗಕ್ಕಾಗಿ ವಿನಿಯೋಗಿಸುವದು ಯೋಗ್ಯವೆಂದು ತೋರುತಿದೆ. ಒಂದುವೇಳೆ ಕಾಂಗ್ರೆಸ್ಸಿನವರು ಧರ್ಮಶಾಲೆ, ವೈದ್ಯಶಾಲೆ, ವಿದ್ಯಾಲಯಗಳು ಮೊದಲಾದ ಸಾರ್ವಜನೀನವಾದ ಉಪಯುಕ್ತಾಂಶಗಳ ಅಭಿವೃದ್ಧಿಗಾಗಿ ಯಾತಕ್ಕೆ ವಿನಿಯೋಗಿಸಕೂಡದೆಂಬದಾಗಿ ಕೇಳಬಹುದು. ಮುಂದಿನವರುಷದ ಬಜೆಟಿನಲ್ಲಿ ಇವುಗಳ ಖರ್ಚಿನಬಗ್ಗೆ ಸಹ ಆಧಾರ ಕಲ್ಪಿಸಲ್ಪಟ್ಟು ಬೇಕಾದ ವೊಬಲಗು ಪ್ರತ್ಯೇಕವಾಗಿ ಯೆತ್ತಿಡಲ್ಪಟ್ಟಿರುತಿದೆ. ಅದೆಲ್ಲ ಕಳೆದು ಈಗ ೨೫ ಕೋಟಿ ರೂಪಾಯಿಗಳು ಸಿಲ್ಕು ನಿಂತಿರುವದರಿಂದ ಮರಳ ಯಾವ ಮೂಲಕ ಇವು ಪ್ರಜೆಗಳಿಗೆ ಉಪಯೋಗಿಸುವಂತೆ ಮಾಡಬಹುದೋ ಅದು ಕಾಂಗ್ರೆಸ್ಸಿನವರು ಆಲೋಚಿಸಿ ಯೋಗ್ಯವಾದ ಒಂದು ಉಪಾಯವನ್ನು ತಿಳಿಸಿದರೆ ಅದರಂತೆ ನಡೆಸುವದರಲ್ಲಿ ಸಂದೇಹವಿಲ್ಲವು, ಎಂಬದು.

ಪ್ರಸಿಡೆಂಟರವರ ಮೇಲೆ ಕಂಡ ಪ್ರಕಟನೆಯಲ್ಲಿ ತಿಳಿಸಲ್ಪಟ್ಟ ವಿಷಯವು ಬಹಳ ಆಶ್ಚರ್ಯವನ್ನುಂಟುಮಾಡದೆ ಇರುವದಿಲ್ಲವು. ಯಾತಕ್ಕಂದರೆ, ಯೂರೋಪ ದೇಶದಲ್ಲಿರುವ ವಿಶಿಷ್ಟ ಸಂಸ್ಥಾನಗಳಿಗೂ ಅಪರಿಮಿತಗಳಾದ ಸಾಲಗಳು ನಿಯತಗಳಾಗಿವೆ. ಪ್ರತಿ ವರುಷದಲ್ಲಿಯೂ ಹೊಸದಾಗಿ ಸಾಲ ಮಾಡುತಲಿದಾರೆ. ಹೀಗೆ ಒಂದು ರಾಜ್ಯಕ್ಕೆ ಸಾಲವಿರಬೇಕಾದದ್ದು ಆವಶ್ಯಕವೆಂತಲೂ, ಅದರ ಬಂದೋಬಸ್ತಿಗೆ ಸಾಧಕವೆಂತಲೂ, ಅದು ಊರ್ಜಿತವಾಗಿರಬೇಕೆಂಬ ಕೋರಿಕೆಯು ಅದರ ಪ್ರಜೆಗಳಿಗೆ ಅಧಿಕವಾಗಿರುವದೆಂತಲೂ, ಐಶ್ವರ್ಯವು ಏಕತ್ರ ಸೇರಿದ್ದರೆ ಅದು ಶತ್ರುಗಳಿಗೆ ಅಕ್ಷಿವೇದನೆಯನ್ನುಂಟುಮಾಡುವದೆಂತಲೂ ಕೆಲವರು ಅಭಿಪ್ರಾಯವುಳ್ಳವರಾಗಿರುತ್ತಾರೆ. ಹೀಗಿದ್ದಾಗ್ಯೂ ಕೇವಲ ಪ್ರಜಾಪಾಲಿತವಾದ ಒಂದು ರಾಜ್ಯದಲ್ಲಿ ಅಪರಿಮಿತವಾದ ದ್ರವ್ಯವು ನಿರುಪಯುಕ್ತವಾಗಿರುತ ಅದರ ವಿನಿಯೋಗಾರ್ಥ ಜನಗಳು ಉಪಾಯಗಳು ಹುಡುಕುತಲಿರುವದು ಅತ್ಯಾಶ್ಚರ್ಯಕರವಾದ ವಿಷಯವಾಗಿರುತಿದೆ. ಇಂತಾ ಸ್ಥಿತಿಯು ಈ ದೇಶಕ್ಕೆ ಯಾವಾಗಲೂ ಪ್ರಾಪ್ತವಾಗಲಾರದೆಂದೆಣಿಸುತ್ತೇವೆ, ಯಾತಕ್ಕಂದರೆ—ಇಲ್ಲಿನ ಐಶ್ವರ್ಯವೆಲ್ಲವೂ ಛಿನ್ನಾಭಿನ್ನವಾಗಿ ನಾನಾರೀತಿಯಿಂದ ಅನ್ಯದೇಶಗಳಿಗೆ ಸಾಗಿಹೋಗಿಯೂ ಹೋಗುತಲೂ ಇದೆ. ಪ್ರಜೆಗಳು ಬಹುವಿಧ ನಿರ್ಬಂಧಗಳಿಗೊಳಗಾಗಿ ಪ್ರಾಯಶಃ ಬಹುಜನ ಅನುಪಪನ್ನರಾಗಿದಾರೆ. ದೇಶ ಜನಜಾತಿಮತ ಪ್ರಭೇದಗಳಿಂದ ಜನಗಳಲ್ಲಿ ಪರಸ್ಪರ ಅನುರಾಗೈಕಮತ್ಯಗಳೆಂಬವು ಶೂನ್ಯವಾಗಿವೆ ಶಕ್ತಿ ಉಪಪತ್ತಿಯೂ ಪ್ರೋತ್ಸಾಹಗಳೂ ಜನಗಳಿಗೆ ಇಲ್ಲದೆ ಇರುವದರಿಂದ ಲಾಭಕರಗಳಾದ ವೃತ್ತಿಗಳೆಲ್ಲವು ನಶಿಸುತ ಬಂದವು. ಜನಗಳಿಗೆ ದಾರಿದ್ರ್ಯವೂ ನಿರ್ಬಂಧಗಳೂ ಅಧಿಕವಾಗುತ, ತಕ್ಕ ಆಯತಿ ಇಲ್ಲದಿರುವದರಿಂದ ಅವರಿಗೆ ಕಾರ್ಪಣ್ಯವೂ ಪರಸ್ಪರ ಅಸೂಯೆಯೂ ವಿದ್ವೇಷವೂ ಅಧಿಕವಾಗುತ ಬರುತಿವೆ. ಗವರ್ನಮೆಂಟಿನವರು ಕೇವಲ ಅರ್ಥೈಕಪರರಾಗಿ ತತ್ಸಂಗ್ರಹಣೋಪಾಯದಲ್ಲಿ ಅತ್ಯಾಸಕ್ತರಾಗಿರುವದರಿಂದ ಅವರಿಗೆ ಬೇರೊಂದೂ ಬೇಡವಾಗಿದೆ. ಇಂತಾ ಸ್ಥಿತಿಯಲ್ಲಿ ಇಂಡ್ಯ ದೇಶೀಯರು ಯುನೈಟೆಡ್ ಸ್ಟೇಟಿನ ಪ್ರಜೆಗಳ ಸ್ಥಿತಿಯಂ ಕೋರಿದಲ್ಲಿ ಅದು ಅವರಿಗೆ ಜನ್ಮಶತವಾದಾಗ್ಯೂ ಲಭಿಸುವದೆಂದು ನಾವೆಣಿಸುವದಿಲ್ಲವು ಅಮೆರಿಕಾ ದೇಶೀಯರ ಸ್ವಾತಂತ್ರ್ಯೈಶ್ವರ್ಯಾಭಿವೃದ್ಧಿಗಳಿಗೆ ಕಾರಣಗಳಾದ ವಿಷಯಗಳಂ ನಮ್ಮವರು ಕಂಡು ತಿಳಿದು ಅದರಂತೆ ವರ್ತಿಸಿದರೆ ಆಗ ಒಂದುವೇಳೆ ತಮ್ಮ ಅಭೀಷ್ಟವು ಸಿದ್ಧಿಸಬಹುದೇ ಹೊರ್ತು ಅನ್ಯಥಾ ಲಭಿಸಲಾರದು.

Occasional Notes
ನೈಮಿತ್ತಿಕ ವಿಷಯನ್ಯಾಸ.

Return of the Guickwar.—ಗಾಯಕವಾಡ ಮಹಾರಾಜರವರು ಈಗ ಇಂಗ್ಲಾಂಡಿನಲ್ಲಿರುತ್ತಾರೆಯಷ್ಟೇ. ಸದರೀಯವರು ಈತಿಂಗಳ ೯ನೇ ತಾರೀಖಿನಲ್ಲಿ ಬ್ರಿಂಡಿಸಿಯಿಂದ ಇಂಡ್ಯದೇಶಕ್ಕಾಗಿ ಹಡಗು ಹತ್ತುವರು.

Establishment of a branch bank.—ಮೈಸೂರು ಪಟ್ಟಣದಲ್ಲಿ, ಮದರಾಸ ಬ್ಯಾಂಕಿನ ಒಂದು ಬ್ರಾಂಚ್ ಬ್ಯಾಂಕನ್ನು ಸ್ಥಾಪಿಸಬೇಕೆಂಬ ಸದರೀ ಬ್ಯಾಂಕಿನ ಡೈರೆಕ್ಟರುಗಳ ಅಭಿಪ್ರಾಯವನ್ನು ಅನುಮೋದಿಸಿ ಇಂಡ್ಯ ಗವರ್ನಮೆಂಟಿನವರು ಆಬಗ್ಗೆ ಹುಕುಂ ಕೊಟ್ಟಿರುವಂತೆ ಅರಿತೆವು

Offer of military aid.—ರಾಮಪುರದ ಮಹಾರಾಜರವರು, ರಾಮಪುರದ ರಿಜಿಮೆಂಟೆಂಬ ಹೆಸರಿನಿಂದ ಒಂದು ರಿಜಿಮೆಂಟನ್ನು ಕಟ್ಟಿ ಇಟ್ಟಿದ್ದು ಇಂಡ್ಯ ಗವರ್ನಮೆಂಟಿಗೆ ಬೇಕಾದ ಕಾಲದಲ್ಲಿ ಅದನ್ನು, ಕಳುಹಿಸಿಕೊಡುವದಾಗಿ ತಿಳಿಸಲು ಲಾರ್ಡ್ ಡಫರಿನ್ ಸಾಹೇಬರವರು ಅದನ್ನು ಪ್ರೀತಿಗೌರವಪೂರ್ವಕ ಅಂಗೀಕರಿಸಿ ಉತ್ತರ ಕೊಟ್ಟಿರುತ್ತಾರೆ.

A meeting.—ಇಂಡ್ಯದೇಶದ ಹೆಂಗಸರಿಗೆ ವೈದ್ಯವಿಷಯದಲ್ಲಿ ಸಹಾಯ ಮಾಡುವ ಉದ್ದೇಶದೊಡನೆ ಏರ್ಪಾಡಾಗಿರುವ ನ್ಯಾಷನಲ್ ಅಸೋಸಿಯೇಷನ್ ಯೆಂಬ ಸಮಾಜದ ಬರುವತಿಂಗಳ ೯ನೇ ತಾರೀಖಿನಲ್ಲಿ ಕಲ್ಕತ್ತೆಯೊಳು ಸಭೆಸೇರುವ ಕಾಲದಲ್ಲಿ ಇಂಡ್ಯದೇಶದ ವೈಸರಾಯ್ ಯವರಾದ ಲಾರ್ಡ್ ಡಫರಿನ್ ಸಾಹೇಬರವರು ಅಗ್ರಾಸನವಂ ವಹಿಸುವರು.

A restriction removed.—ಕಾರ್ಡಿನಲಾಟಿಯವರಿಂದ ಪ್ರಕಟಿಸಲ್ಪಟ್ಟಿರುವ ಕಾಶ್ಮೀರದೇಶ ಸಂಬಂಧವಾದ ವಿಮರ್ಶಿಸಲ್ಪಟ್ಟ ನಿಬಂಧನೆಯನ್ನನುಸರಿಸಿ ಸೈನ್ಯಗಳ ಆಫೀಸರುಗಳು, ಯಾವಕಾಲದಲ್ಲಾಗಲಿ, ರಹದಾರಿಯಾಗಲಿ ಯಾವವಿಧ ನಿರ್ಬಂಧವಾಗಲಿ ಇಲ್ಲದೆ ಕಾಶ್ಮೀರದೇಶಕ್ಕೆ ಹೋಗಿ ವಾಸಮಾಡಬಹುದೆಂದು ಏರ್ಪಾಡಾಗಿದೆ.

The Maharaja of Nepaul.—ನೇಪಾಲ ಸಂಸ್ಥಾನದ ಮಹಾರಾಜರವರು ಮಹಾರಾಣಿಯವರೊಡನೆಯೂ, ೧೨೫ ಮಂದಿ ಪರಿವಾರದೊಡನೆಯೂ, ಕಳೆದ ಸೋಮವಾರದದಿನ ಸ್ಪೆಶಲ್ ಟ್ರೇಯಿನ್ನಲ್ಲಿ ಕಲ್ಕತ್ತೆಗೆ ದಯಮಾಡಿದರು. ಆ ಕಾಲದಲ್ಲಿ ಇಂಡ್ಯ ಗವರ್ನಮೆಂಟಿನ ಫಾರಿನ್ ಸೆಕ್ರೆಟರಿಯವರೂ, ಗವರ್ನರ್ ಜನರಲವರ ಏಡಿಕಾಂಗ್ ಯವರೂ, ಕಲ್ಕತ್ತೆಯಲ್ಲಿರುವ ನೇಪಾಳ ಸಂಸ್ಥಾನದ ಪ್ರತಿನಿಧಿಯವರೂ ಹಾಜರಿದ್ದು ಮಹಾರಾಜರವರನ್ನು ಉಚಿತಮರ್ಯಾದೆಗಳೊಡನೆ ಬರಮಾಡಿಕೊಂಡರು.

Repayment of a fine.—ಕೆಲವು ಸಂವತ್ಸರಗಳಹಿಂದೆ, ಮೊಹರಂಹಬ್ಬದ ಸಂದರ್ಭದೊಳು, ಹೈದರಾಬಾದಿನಲ್ಲಿ ಅರಬೀ ಜನಗಳಿಂದ ನಡೆಸಲ್ಪಟ್ಟ ಕಲಹದಬಗ್ಗೆ ಅಲ್ಲಿನ ಪೊಲೀಸ್ ಖಾತಾ ಮೊಹತ್ತೇಸರರಾದ ಸುಲ್ತಾನನವಾಜ್ ಜಂಗರವರಿಗೆ ಸದರೀ ಸರ್ಕಾರದವರು ಒಂದುಲಕ್ಷ ರೂಪಾಯಿಗಳ ಜುಮರ್ಮಾನೆ ವಿಧಿಸಿದ್ದುದಷ್ಟೆ. ಸದರೀ ಜುಮರ್ಮಾನೆಯು ಸುಲ್ತಾನವಾಜ್ ಜಂಗರವರಿಗೆ ವಾಪಸ್ ಕೊಡಲ್ಪಡುವದೆಂದು ಒಂದಾನೊಂದು ಪತ್ರಿಕೆ ಹೇಳುತಿದೆ.

A valuable present.—ರಷ್ಯಾ ಚಕ್ರವರ್ತಿಯವರಾದ ಜಾರ್ಯವರು ತಮ್ಮ ಭಾರ್ಯೆಯವರ ವರ್ಷವರ್ಧಂತಿದಿನ ಆಕೆಯವರಿಗೆ ನಿರ್ದುಷ್ಟವಾದ ನಾಲ್ವತ್ತು ಪಚ್ಚೆಗಳು ಕೆತ್ತಲ್ಪಟ್ಟ ಒಂದು ಕಂಠಾಭರಣವನ್ನು ಬಹುಮಾನಮಾಡಿದರು. ಸದರೀ ರತ್ನಗಳ ಸಂಪಾದನಾರ್ಥ ರಷ್ಯಾಸಂಸ್ಥಾನದ ಏಜಂಟರು ಒಂಭತ್ತು ತಿಂಗಳ ಕಾಲ ಯೂರೋಪ್ ದೇಶದಲ್ಲಿ ದೊಡ್ಡದೊಡ್ಡ ಪಟ್ಟಣಗಳಿಗೆ ಹೋಗಿಬಂದರು. ರಷ್ಯಾ ಚಕ್ರವರ್ತಿನೀಯವರಲ್ಲಿ, ಯೂರೋಪದೇಶದ ಸಂಸ್ಥಾನಾಧಿಪತಿಗಳು ಯಾರಲ್ಲೂ ಇಲ್ಲದಷ್ಟು ಅನರ್ಘವಾದ ರತ್ನಗಳಿರುತಿವೆ

Offer of service.—ಇಂಡ್ಯದೇಶದ ಸರಹದ್ದುಪ್ರಾಂತದ ಬಂದೋಬಸ್ತಿಯಬಗ್ಗೆ ಇಂಡಿಯಾದೇಶದ ನೇಟಿವ್ ಸಂಸ್ಥಾನಾಧಿಪತಿಗಳಲ್ಲಿ ಅನೇಕರು ಅರ್ಥರೂಪವಾಗಿಯೂ ಸೈನ್ಯದಮೂಲಕವಾಗಿಯೂ ಸಹಾಯ ಮಾಡುವದಕ್ಕೆ ತಾವು ಸನ್ನದ್ಧರಾಗಿರುವಂತೆ ಇಂಡಿಯಾ ಗವರ್ನಮೆಂಟಿನವರಿಗೆ ತಿಳಿಸಿರುತ್ತಾರೆಯಷ್ಟೆ. ಅವರು ತೆಯೇ ಸೂರತ್ ಸಂಸ್ಥಾನದ ಅರಸರವರು ಸಹ ಗವರ್ನಮೆಂಟಿನವರಿಗೆ ಯುಕ್ತವಾಗಿ ತೋರುವ ರೀತಿಯಲ್ಲಿ ತಾವು ಸಹಾಯಮಾಡುವದಾಗಿ ತಿಳಿಸಿರುತ್ತಾರೆ.

The financial position of the Nizam's Govt.—ಹೈದರಾಬಾದ ಸಂಸ್ಥಾನದ ಪ್ರಕೃತ ಆರ್ಥಿಕಸಂಪತ್ತಿಯಂ ಕುರಿತು ವಿಚಾರಮಾಡಿ, ಸಂಸ್ಥಾನದ ಖರ್ಚುಗಳನ್ನು ಯಾವಬಗೆಯಲ್ಲಿ ಕಡಿಮೆ ಮಾಡಬಹುದೆಂಬ ಅಂಶವನ್ನು ಕುರಿತು ಪರ್ಯಾಲೋಚಿಸುವದಕ್ಕಾಗಿ ಕಳೆದ ಮಂಗಳವಾರದದಿನ ಸದರೀ ಸಂಸ್ಥಾನದ ಮಂತ್ರಿಯವರೂ ನಿಜಾಮರವರ ಪ್ರೈವೇಟ್ ಸೆಕ್ರೆಟರಿಯವರಾದ ಕರ್ನಲ್ ಮಾರ್ಷಲ್ ಯವರೂ ಒಂದು ಕಡೆ ಸೇರುವವರಾಗಿದ್ದರು. ಈ ಸ್ಥಿತಿಯಲ್ಲಿ ಸರಹದ್ದು ಪ್ರಾಂತದ ಬಂದೋಬಸ್ತಿಯ ಖರ್ಚಿನಬಗ್ಗೆ ಸಾಲೀಯಾನಾ ೨೦ ಲಕ್ಷ ರೂಪಾಯಿಗಳಮೇರೆ ಮೂರು ವರ್ಷಗಳ ಕಾಲ ೬೦ ಲಕ್ಷರೂಪಾಯಿಗಳು ಕೊಡುವದಾಗಿ ಇಂಡ್ಯ ಗವರ್ನಮೆಂಟಿಗೆ ತಿಳಿಸಿದ್ದಕ್ಕೆ ಯಾವದು ಪ್ರೇರಕಸಾಮಗ್ರಿಯೋ ತಾವರಿಯೆವು

An anomaly in the salt tax.—ಈಚೆಗೆ ಉಪ್ಪಿನಮೇಲಿನ ತೆರಿಗೆಯು ಮಣ ೧ಕ್ಕೆ ೨ರೂಪಾಯಿಯಿಂದ ೨½ ರೂಪಾಯಿಗೆ ಹೆಚ್ಚಿಸಲ್ಪಟ್ಟಿತಷ್ಟೆ. ಕಳೆದತಿಂಗಳ ೨ನೇ ತಾರೀಖಿಗೆ ಹಿಂದೆ ಇಂಗ್ಲಾಂಡ ಮೊದಲಾದ ಸ್ಥಳಗಳಿಂದ ಹಡಗು ಹತ್ತಿಸಲ್ಪಟ್ಟು ಇಂಡ್ಯದೇಶಕ್ಕೆ ಬರುತಲಿರುವ ಉಪ್ಪು ಜಾಸ್ತೀ ತೀರ್ವೆಯಿಂದ ವಿನಾಯಿಸಲ್ಪಟ್ಟು ಹಿಂದಿನದರವನ್ನನುಸರಿಸಿ ಮಣ೧ಕ್ಕೆ ೨ ರೂಪಾಯಿನಂತೆಯೂ, ಇದುವರಿವಿಗೇನೇ, ಅಂದರೆ, ಹಿಂದಿನತಿಂಗಳ೨೦ನೇತಾರೀಖಿಗೆಹಿಂದೆ ಕಲ್ಕತ್ತೆಗೆ ಆಮದ್ ಮಾಡಲ್ಪಟ್ಟು ಗವರ್ನಮೆಂಟ್ ಕೋಠಿಯಲ್ಲಿಡಲ್ಪಟ್ಟಿರುವ ಉಪ್ಪಿಗೆ ಜಾಸ್ತೀ ತೆರಿಗೆ ವಸೂಲ್ಮಾಡಬೇಕೆಂತಲೂ ಏರ್ಪಾಡಾಗಿರುವದನ್ನು ನೋಡಲಾಗಿ ಆಶ್ಚರ್ಯವಾಗುತಿದೆ.

A fatal accident.—ಪೇರಿಸ್ ಪಟ್ಟಣದಲ್ಲಿ ಯೇಳು ವರುಷಗಳ ವಯಸ್ಸುಳ್ಳ ಒಬ್ಬ ಹುಡುಗನು ತನ್ನ ತಂದೆಯ ಮನೆಯೊಳು ಆಡುತ್ತಿರುವಾಗ್ಯೆ ಒಂದು ಕಬ್ಬಿಣದ ದೊಡ್ಡ ಪೆಟ್ಟಿಗೆ ತೆರೆದಿದ್ದದು ನೋಡಿ ಅದರಲ್ಲಿ ಇಳಿದುಬಿಟ್ಟನು. ಕೂಡಲೇ ತಂದೆಯಾದವನು ಕೊಠಡಿಗೆ ಬಂದು ತನ್ನ ಕೆಲಸಕ್ಕೆ ತಾನು ಹೊರಡಬೇಕಾಗುವದಕ್ಕೆ ಮುಂಚಿತವಾಗಿ ಸದರೀ ಪೆಟ್ಟಿಗೆಗೆ ಬೀಗ ಹಾಕಿಕೊಂಡು ಹೋಗುವಲ್ಲಿ ಅದರೊಳಗಿದ್ದ ಹುಡುಗನು ಸುದ್ದಿ ಮಾತದೆ ಇದ್ದುಬಿಟ್ಟನು. ಸ್ವಲ್ಪ ಹೊತ್ತಿನಮೇಲೆ ಹುಡುಗನು ಕಾಣದೆ ಹೋಗಲಾಗಿ ಪೊಲೀಸ್ನವರಿಗೆ ತಿಳಿಸಿದರು. ಮರುದಿನ ತಂದೆಯಾದವನು ಪೆಟ್ಟಿಗೆಯನ್ನು ತೆಗೆಯುವಾಗ್ಯೆ ಮಗನು ಸತ್ತು ಬಿದ್ದಿದ್ದನು

Offer of pecuniary help.—ಜೋಧಪುರದ ಮಹಾರಾಜರವರು ಸರಹದ್ದುಪ್ರಾಂತದ ಬಂದೋಬಸ್ತಿಯಬಗ್ಗೆ ಸಾಲೀಯಾನಾ ೨ಲಕ್ಷರೂಪಾಯಿಗಳಂತೆ ೫ವರ್ಷಕ್ಕೆ ೧೦ಲಕ್ಷರೂಪಾಯಿಗಳು ಕೊಡುವದಾಗಿ ಇಂಡ್ಯಾಗವರ್ನಮೆಂಟಿಗೆ ತಿಳಿಸಿರುತ್ತಾರೆಂದು ಮದರಾಸ್ ಮೈಲ್ ಪತ್ರಿಕೆ ಹೇಳುವಲ್ಲಿ ಅಭಿಪ್ರಾಯಪಡುವದೇನಂದರೆ:—ಮಹಾರಾಜರಿಂದಲಾಗಲಿ, ಇತರ ಚಿಕ್ಕಬಡ ಸಂಸ್ಥಾನಾಧಿಪತಿಗಳಿಂದಾಗಲಿ ಅರ್ಥರೂಪವಾದದಾಕ್ಷಿಣ್ಯಕ್ಕೆ ಒಳಗಾಗದೆ ಮರ್ಯಾದೆಯಿಂದ ಅಂತಾ ಸಹಾಯಗಳನ್ನೆಲ್ಲ ನಿರಾಕರಿಸುವಷ್ಟು ಮನೋದಾರ್ಢ್ಯವಂ ಗವರ್ನಮೆಂಟಿನವರು ವಹಿಸುವರೆಂದು ನಾವು ನಂಬುತ್ತೇವೆ. ಅರಸರುಗಳಿಂದ ಇಂತಾ ಅಲ್ಪದ್ರವ್ಯಗಳಂ ಅಂಗೀಕರಿಸುವದರ ಮೂಲಕ ಗವರ್ನಮೆಂಟನವರು ತಮ್ಮ ಗೌರವವನ್ನು ಬಹಳಮಟ್ಟಿಗೆ ಹೋಗಲಾಡಿಸಿಕೊಳ್ಳುವರು. ಇದರಿಂದ ಪ್ರಜೆಗಳು ತಮ್ಮ ಅರಸರಿಗುಂಟಾದ ನಷ್ಟವನ್ನು ವಹಿಸಬೇಕಾಗುವದು, ಎಂಬದು

Statistics of horses.—ಈಚೆಗೆ ತಯಾರಾದ ಲೆಕ್ಕದ ಮೇರೆ, ದೇಶಾಂತರಗಳಲ್ಲಿ ಹಾಜರಿರುವ ಕುದುರೆಗಳು ಮತ್ತು ಹೇಸರ ಕತ್ತೆಗಳು

ರಷ್ಯಾ ದೇಶದಲ್ಲಿ	೨೧,೫೭೧,೦೦೦
ಅಮೆರಿಕಾ ದೇಶದಲ್ಲಿ	೯,೫೦೦,೦೦೦
ದಕ್ಷಿಣ ಅಮೆರಿಕಾ ದೇಶದಲ್ಲಿ	೪,೦೦೦,೦೦೦
ಆಸ್ಟ್ರಿಯಾ ದೇಶದಲ್ಲಿ	೩,೫೦೦,೦೦೦
ಜರ್ಮನೀ ದೇಶದಲ್ಲಿ	೩,೩೫೦,೦೦೦
ಫ್ರಾನ್ಸ ದೇಶದಲ್ಲಿ	೨,೮೦೦,೦೦೦
,, ಹೇಸರಕತ್ತೆಗಳು	೩೦೦,೦೦೦
ಇಂಗ್ಲಾಂಡ ದೇಶದಲ್ಲಿ	೨,೭೯೦,೦೦೦
ಕೆನಡಾ ,,	೨,೬೨೪,೦೦೦
ಸ್ಪೈನ್ ,,	೬೮೦,೦೦೦
,, ಹೇಸರಕತ್ತೆಗಳು	೨,೩೦೦,೦೦೦
ಇಟಲೀ ದೇಶದಲ್ಲಿ	೨,೦೦೦,೦೦೦
ಬೆಲ್ಜಿಯಂ ,,	೩೮೩,೦೦೦
ಡೆನ್ಮಾರ್ಕ ,,	೩೧೬,೦೦೦
ಆಸ್ಟ್ರೇಲಿಯಾ,,	೩೦೧,೦೦೦
ಪೋರ್ಚುಗಲ್ ,,	೧೨೫,೦೦೦
ಲೋಕ್ಸೆಂಬರ್ಗ,,	೮೮,೦೦೦
,, ಹೇಸರಕತ್ತೆಗಳು	೫೦,೦೦೦

LOCAL AND PROVINCIAL NEWS.
ಜಿಲ್ಲೆ ಮತ್ತು ತಾಲ್ಲೂಕ್‌ವಾರ್ ವೃತ್ತಾಂತವು

Mr Ramaswami Iyer.—ಇಲ್ಲಿನ ಸೆಂಟ್ರಲ್ ಕಾಲೇಜ್ ಸ್ಕೂಲ್ ಪ್ರಿನ್ಸಿಪಾಲರಾದ ಮೇ|| ರಾಮಸ್ವಾಮಿ ಅಯ್ಯರ್ ಬಿ ಎ ಯವರಿಗೆ ಶೀಘ್ರದೊಳು ಒಂದು ಪರ್ಮನೆಂಟ್ ಕೆಲಸ ಕೊಡಲ್ಪಡುವದೆಂಬ ಪ್ರವಾದ ಪ್ರಬಲವಾಗಿರುವಂತೆ ಜಿಲ್ಲಾದೇಶದ ಸ್ಪೆಕ್ಟೇಟರ್ ಪತ್ರಿಕೆ ತಿಳಿಸುತಿದೆ. ಇದು ನಿಜವಾಗಿರುವಪಕ್ಷಕ್ಕೆ ಸದರೀ ಕೆಲಸಕ್ಕೆ ಬಹಳ ಲಾಯಖಾದವರೆಂದು ಹೇಳದಿರಲಾರೆವು.

A cobra killed by a cat.—ಇದೇ ಜನವರಿ ೨೭ ರಲ್ಲಿ ಹಿರಿಯೂರಿನಲ್ಲಿ ಒಂದು ನಾಗರಹಾವಿಗೂ ೧ ಬೆಕ್ಕಿಗೂ ವಿಚಿತ್ರವಾದ ಯುದ್ಧನಡೆಯಿತು ಹ್ಯಾಗಂದರೆ, ಅಲ್ಲಿನ ಸ್ಟೇಷನ್ ಮ್ಯಾಸ್ಟರ ಮನೆಯಲ್ಲಿದ್ದ ೧ ಬೆಕ್ಕು ಅಪರಾಹ್ನ ಕಾಲ ೯|| ಘಂಟೆಯಲ್ಲಿ ಹೊರಗೆಬಂದು ಬಿಸಲಿನಲ್ಲಿ ಓಡ್ಯಾಡುತ್ತಿದ್ದು ಸಮೀಪದಲ್ಲಿದ್ದ ಬೇಲಿಯಬಳಿಗೆ ಓಡಿತು. ಅಷ್ಟರಲ್ಲಿ ಅಲ್ಲಿದ್ದ ಹುತ್ತದಿಂದ ೧ ಕೃಷ್ಣ ಸರ್ಪವು ಮೇಲಕ್ಕೆ ಬಂದದ್ದನ್ನು ಕಂಡು ಬೆಕ್ಕು ಹಠಾತ್ತಾಗಿ ಮೇಲೆಬಿದ್ದು ಸರ್ಪದ ತಲೆಯನ್ನು ಕಚ್ಚಿ ಗಾಯಮಾಡಿ ತಾನು ಅದರಿಂದ ಕಚ್ಚಿಸಿಕೊಳ್ಳದೆ ಯುಕ್ತಿಯಿಂದಲೂ ಧೈರ್ಯದಿಂದಲೂ ಅದರಕೂಡ ಯುದ್ಧಮಾಡಿ ಕೊನೆಗೆ ಜಯವನ್ನು ಹೊಂದಿ ನೋಡುತ್ತಿದ್ದ ಜನರಿಗೆಲ್ಲಾ ಆನಂದವನ್ನೂ ಆಶ್ಚರ್ಯವನ್ನೂ ಉಂಟುಮಾಡಿತು—ವ್ಯ—ಚಿ.

Dacoity.—ಇದೇತಿಂಗಳು ತಾ||೧೩ ನೇರಾತ್ರಿ ೭ಘಂಟೆಹೊತ್ತಿನಲ್ಲಿ ಅರಸೀಕೆರೆಗೆ ೧ ಮೈಲಿದೂರದಲ್ಲಿ ಸಲೆಯಿಂದ ಸಂತೆಗೆಬರುತ್ತಿದ್ದ ದಾವಣಗೆರೆಪ್ರಾಂತದ ೧೦ಗಾಡಿಜನಗಳಮೇಲೆ ೨೦—೩೦ ಜನಕಳ್ಳರು

ಸಿದ್ಧ ಗಾಡಿಯವರನ್ನು ಹೊಡೆದು ದರೋಡೆಯಿಂದ ೩೩ ಕಂಬಳಿ, ತಲೆಗೆ ವಸ್ತ್ರ ತೆಗದುಕೊಂಡುಹೋದರು. ಒಡನೆ ವರ್ತಮಾನ ತಿಳಿದು ಪೋಲೀಸಿನವರು ಕೂಡ್ಲೆ ಹೋಗಿ ತರವೂದು ನಡಿಸುತ್ತಿರುವಲ್ಲಿ ಕೃತ್ಯನಡದ ಸಮೀಪದಲ್ಲಿ ಇದ್ದ ರೇಲ್ವೆ ಕಾಂಗಾರಿ ವಡ್ಡರಅಜಮಾಯಿಷಿಲಿ ಕೃತ್ಯ ನಡೆದ ತರೆಗಳು ಕಂಡುಬಂದು ಅಲ್ಪ ಸ್ವಲ್ಪ ಮಾಲು ದೊರತದ್ದರಿಂದ ೧೩ ಜನಗಳನ್ನು ದಸ್ತಗಿರಿ ಮಾಡಿ ಹಾಸನಡಿಸ್ಟ್ರಿಕ್ಟ ಜನರಲ್ ಅ|| ಕ|| ಸಾಹೇಬರವರ ಕೋರ್ಟಿಗೆ ಕಳುಹಿಸಿದಾಗಿ. ಫಲಿತಾಂಶವನ್ನು ಮುಂದೆ ತಿಳಿಸುವೆನು.

Assumption of charge.—ಶ್ರೀರಂಗಪಟ್ಟಣದ ಮುನಸಿಫರಾದ ಮೆ. ರಾಮಸ್ವಾಮಿಅಯ್ಯರ್, ಬಿ. ಎ. ಬಿ. ಎ. ಯವರು ಕಳೆದ ಶುಕ್ರವಾರದಿನ ಇಲ್ಲಿಗೆ ಬಂದು ಸಬಾರ್ಡಿನೇಟಿ ಜಡ್ಜಿಯವರ ಕೋರ್ಟ ಛಾರ್ಜಂವಹಿಸಿದರು.

Acknowledgment.—ಈಚೆಗೆ ಮೆಸ್ಟರ್ ಬಿ. ಸೂರ ನಾರಾಯಣರಾವ್ ಬಿ. ಎ. ಯವರು ನೂತನವಾಗಿ ಕನ್ನಡಭಾಷೆಯಲ್ಲಿ ತಾವು ರಚಿಸಿದ ಭೂಗೋಳದ ಸ್ವ್ರನ ಪ್ರತಿಯೊಂದನ್ನು ನಮಗೆ ಕಳುಹಿಸಲು ನಾವು ಅದನ್ನು ಸಂತೋಷದೊಡನೆ ಒರವಾಡಿಕೊಂಡೆವು. ಅದರ ಗುಣದೋಷ ವಿಚಾರಕ್ಕೆ ಈ ವಾರದಲ್ಲಿ ಅವಕಾಶ ಸ್ವಲ್ಪವಾಗಿದ್ದದರಿಂದ ಮುಂದಿನವಾರದವರೆವಿಗೆ ನಿಲ್ಲಿಸಬೇಕಾಯಿತು.

Recognition of service.—ಈಗ ಶ್ರೀಮನ್ಮಹಾರಾಜರವರ ಕೌನ್ಸಿಲರಾಗಿರುವ ರಾಯಬಹದೂರ್ ಮೆ|| ಆರ್. ಎ. ಸಭಾಪತಿ ಮೊದಲಿಯಾರ್ಯರು ಈ ಸಂಸ್ಥಾನದಲ್ಲಿ ಮಾಡಿದ ಶ್ಲಾಘ್ಯತರವಾದ ನೌಕರಿಯಂ ಗೌರವಿಸಿ, ಮೈಸೂರುಸರ್ಕಾರದವರು ಸದರೀಯವರ ಕುಮಾರರಾದ ಮೆ|| ಎ. ಆರ್. ಅಣ್ಣಾಸ್ವಾಮಿ ಮೊದಲಿಯಾರ್ಯರು ದಿವಾನರ ಆಫೀಸಿನಲ್ಲಿ ಒಂದು ಉದ್ಯೋಗ ಕೊಡಲ್ಪಟ್ಟರೆಂದು ಬೆಂಗಳೂರಿನ ಸ್ಪೆಕ್ಟೇಟರ್ ಪತ್ರಿಕೆ ಹೇಳುತಿದೆ.

The British Resident.—ಈ ಸಂಸ್ಥಾನದ ಬ್ರಿಟಿಷ್ ರೆಸಿಡೆಂಟರವರು ಕೆಲವು ದಿನಗಳ ಹಿಂದೆ ಒಂದುವರ್ಷ ರಜೆಯಲ್ಲಿ ಸ್ವದೇಶಕ್ಕೆ ಹೋಗಿ ಬಂದರಷ್ಟೆ. ಆ ಕಾಲದಲ್ಲಿ ನೋಡದಸ್ಥಳಗಳನ್ನೆಲ್ಲ ನೋಡಬರುವ ಉದ್ದೇಶದೊಡನೆ ಈ ತಿಂಗಳ ಮಧ್ಯಭಾಗದಲ್ಲಿ ಮರಳಿ ಅಲ್ಲಿಗೆ ಪ್ರಯಾಣ ಮಾಡುವ ಸಂಭವ ಪುಂಟೆಂತಲೂ, ಮುಂಬೈ ಕಮಾಂಡರ್ ಇನ್ ಚೀಫರವರು ಸ್ವದೇಶಕ್ಕೆ ಹೊರಟುಹೋಗುವರೆಂತಲೂ ಅವರ ಕೆಲಸಕ್ಕೆ ಸರ್ ಹ್ಯಾರಿ ಪ್ರೆಂಡರ್ಗ್ಯಾಸ್ಟರವರು ನಿಯಮಿಸಲ್ಪಡುವರೆಂತಲೂ ಬೆಂಗಳೂರಿನ ಸ್ಪೆಕ್ಟೇಟರ್‌ಪತ್ರಿಕೆಯೊಂದು ಹೇಳುತಿದೆ.

False personation.—ಈ ಪಟ್ಟಣದ ರೇಲ್ವೇ ಸ್ಟೇಷನ್ ಬಳಿಯಿರುವ ಕುಮಾರ್ ಎಂಬವರುಗಳ ಮನೆಯಲ್ಲಿ ಮಿಸ್ ಬಾರ್ಕ್ ಎಂಬ ಒಬ್ಬ ಈಸ್ಟ್‌ಇಂಡಿಯನ್ ಹೆಂಗಸು ಸ್ವಾಭಾವಿಕಗಳಾದ ತನ್ನ ವೇಷ ಭಾಷಾಚಾರಗಳನ್ನು ಬದಲಾಯಿಸಿಕೊಂಡು ಒಂದೊಂದುವೇಳೆ ಮುಸಲ್ಮಾನ ಹೆಂಗಸಿನಂತೆ ನಟಿಸುತ್ತ ಈ ಪ್ರಾರು ಗಾಣಿಗರಮುಟಪೇಟೆಯಲ್ಲಿ ಕೆಲವುಕಾಲದವರೆಗು ವಾಸವಾಗಿರುತಲಿದ್ದಳೆಂತಲೂ ಹೀಗಿರುವಲ್ಲಿ ಈಚೆಗೆ ಇವಳಮೇಲೆ ಒಂದು ಕ್ರಿಮಿನಲ್‌ಮೊಕದ್ದಮೆಯು ತರಲ್ಪಟ್ಟು, ಇಲ್ಲಿನ ಟೌನ್ ಮ್ಯಾಜಿಸ್ಟ್ರೇಟರ ಕೋರ್ಟಿನಲ್ಲಿ ವಿಚಾರಣೆನಡೆಯುತಲಿರುವುದೆಯೂ, ಪ್ರಥಮದಿನದಲ್ಲಿ ಕೋರ್ಟಿಗೆ ಘೋಷಾ ಹೆಂಗಸಿನಂತೆ ಬಂದಿದ್ದಳೆಂತಲೂ, ಮಾರನೆಯ ದಿನ ಪೂರ್ವದಂತೆ ಈಸ್ಟ್‌ಇಂಡಿಯನ್ ವೇಷದೊಡನೆ ಹಾಜರಾಗಿ, ತಾನು ಬ್ರಿಟಿಷ್ ಪ್ರಜೆಯಾದ್ದರಿಂದ ಇಲ್ಲಿ ವಿಚಾರಿಸಲ್ಪಡಕೂಡದೆಂತ ತಿಳಿಸಿದಳೆಂತಲೂ, ಈ ಮೊಕದ್ದಮೆಯ ವಿಚಾರಣೆಯ ಕಾಲದಲ್ಲಿ ಕೋರ್ಟಿನೊಳು ಸ್ವಲ್ಪವೂ ಸ್ಥಳವಿಲ್ಲದಂತೆ ಜನಗಳು ಭರ್ತಿಯಾಗಿರುತ್ತಾರೆಂತಲೂ ತಿಳಿಯಬರುತಿದೆ.

Manchester goods.—ಇಂಗ್ಲಾಂಡ ದೇಶಕ್ಕೆ ಸೇರಿದ ಮ್ಯಾಂಚೆಸ್ಟರ್ ಪಟ್ಟಣದಲ್ಲಿ ಕೊರಾಪಗ್ಗೆರೇ ಬಟ್ಟೆಗಳಲ್ಲದೆ, ಇಂಡ್ಯದೇಶದಲ್ಲಿ ತಯಾರಾಗುವ ನಮೂನೆ ಧೋತ್ರಗಳು, ಪಂಚೆಗಳು, ಹೆಂಗಸರ ಸೀರೆಗಳು ತಯಾರಾಗಿಬಂದು, ಇಲ್ಲಿತಯಾರಾಗಿ ಮಾರಲ್ಪಡುವ ಬಟ್ಟೆಗಳಿಗಿಂತಲೂ ಅಗ್ಗವಾಗಿ ಮಾರಲ್ಪಡುತಿದೆಯಾಗಿ, ಈ ದೇಶದ ನೆಯಿಗೆಯವರು ಹೊಸನಮೂನೆ ಬಟ್ಟೆಗಳನ್ನು ತಯಾರ್ಮಾಡದಪಕ್ಷಕ್ಕೆ ಅನ್ಯದೇಶದ ಪೋಟಾಪೋಟಿಯಮೂಲಕ ಇಲ್ಲಿನವರು ತಮ್ಮ ಕಸಬನ್ನು ಹೋಗಲಾಡಿಸಿಕೊಳ್ಳಬೇಕಾಗಿರುವದೆಂದು ಬೆಂಗಳೂರಿನ ಸ್ಪೆಕ್ಟೇಟರ್‌ಪತ್ರಿಕೆ ಹೇಳುವದು ಯುಕ್ತವಾಗಿಯೇ ಕಾಣುತಿದೆ.

The F. A. Examination.—ಗತವಾರದಲ್ಲಿ ನಾವು ತಿಳಿಸಿದ್ದಂತೆ ಎಫ್. ಎ. ಪರಿಕ್ಷೆಯ ಫಲಿತಾಂಶವು ಬಹಳ ಅತೃಪ್ತಿಕರವಾಗಿ ಹೊರಗಾಯಿತು. ಸದರೀ ಪರೀಕ್ಷೆಗೆ ಈ ಪ್ರಾಂತ್ಯದಿಂದ ಹೋಗಿದ್ದ ೭೦ ಮಂದಿ ಉಮೇದವಾರರ ಪೈಕಿ ಕುಮಾರ್ ೧೭ ಮಂದಿ ಮಾತ್ರ ತೇರ್ಗಡೆಯಾದರಂತಲೂ, ಇವರಲ್ಲಿ ಸೆಂಟ್ರಲ್ ಕಾಲೇಜಿಗೆ ಸೇರಿದವರು ೧೪ ಮಂದಿಯೆಂತಲೂ, ಇಬ್ಬರು ಸೆಂಟ್ ಜೋಸಫ್ಸ ಕಾಲೇಜಿಗೆ ಸೇರಿದವರೆಂತಲೂ, ತಿಳಿಯಬರುತಿದೆ. ಮೈಸೂರು ಮಹಾರಾಜರವರ ಕಾಲೇಜಿನಲ್ಲಿ ಕುಮಾರ್ ೩೦ ಜನ ತೇರ್ಗಡೆಯಾದಂತೆ ಕೇಳುತ್ತೇವೆ. ಫಸ್ಟ್‌ಕ್ಲಾಸ್‌ನಲ್ಲಿ ಈ ಊರು ಸೆಂಟ್ರಲ್ ಕಾಲೇಜಿನವರಿಬ್ಬರೂ, ಮೈಸೂರು ಕಾಲೇಜಿನವರು ಮೂವರೂ ತೇರ್ಗಡೆಯಾಗಿರುತ್ತಾರೆ. ಮದರಾಸಿನಿಂದ ಹೋಗಿದ್ದ ೩೬೦ ಜನರಪೈಕಿ ೧೭೭ಜನ ತೇರ್ಗಡೆಯಾಗಿರುತ್ತಾರೆ. ಇದನ್ನು ನೋಡಲಾಗಿ, ಪ್ರಸಕ್ತ ಪರಿಕ್ಷೆಯ ಫಲಿತಾಂಶವು ಬಹಳ ಅತೃಪ್ತಿಕರವೆಂದು ನುಡಿಯಬಹುದಾಗಿರುತಿದೆ ಪ್ರತಿಸಂವತ್ಸರದಲ್ಲಿಯೂ, ಎಫ್. ಎ. ಪರೀಕ್ಷೆಯಲ್ಲಿತೇರ್ಗಡೆಯಾಗುವವರಸಂಖ್ಯೆಯು ಇಲ್ಲಿಗಿಂತ ಮೈಸೂರು ಕಾಲೇಜಿನಲ್ಲಿ ಅಧಿಕವಾಗಿರಲಿಕ್ಕೆ ಕಾರಣವು ಊಹಿಸಕೂಡದೆಯಿದೆ. ಪಂಡಿತರ ಸಂಖ್ಯೆಯು ಇಲ್ಲಿ ಕಡಮೆಯಾಗಿರಲಿಲ್ಲವು ಒಬ್ಬೊಬ್ಬರ ಯೋಗ್ಯತೆಗಳಾದರೂ, ಜಗತ್ಪ್ರಸಿದ್ಧಗಳಾದವಾಗಿರುತಿವೆ. ಇಷ್ಟಾದಾಗ್ಯೂ ವಿದ್ಯಾಸನದಲ್ಲಿ ಸಲವಾತ್ರ ಅಲ್ಪವಾಗುವದು ಕಾಲೇಜಿನ ಪ್ರಶಸ್ತ್ಯಕ್ಕೆ ಬಹಳ ಕೊರತೆಯುಂಟಿಸುತ್ತೇವೆ. ತೆಂಗಳೂರಿಂದಹೋಗಿದ್ದವರ ಪೈಕಿ ಇವರುಗಳು ಕಂಡವರು ತೇರ್ಗಡೆಯಾಗಿರುತ್ತಾರೆ, ಅವರುಗಳ್ಯಾರುದರೆ—ಫಸ್ಟ್‌ಕ್ಲಾಸ್-ಡಿ-ಎಂ. ನರಸಿಂಗರಾವ್, ಎ. ಪುಟ್ಟಸ್ವಾಮಿಶೆಟ್ಟಿ ; ಸೆಕಂಡಕ್ಲಾಸ್—ಆರಾಮುದಅಯ್ಯಂಗಾರ್; ಎ. ಭೀಮಾಚಾರ್, ಸಿ. ಬಿ. ಗೋಪಾಲರಾವ್ ; ಆರ್ ಗುಂಡೂರಾವ್, ಎಸ್ ಕೃಷ್ಣರಾವ್, ಕೆ. ಕೃಷ್ಣಸ್ವಾಮಿಅಯ್ಯ, ಟಿ ಎನ್. ಕೃಷ್ಣಸ್ವಾಮಿಅಯ್ಯರ್ ; ಎಂ ಪೊನ್ನುಸ್ವಾಮಿ ; ನಾಗರತ್ನಂಪಿಳ್ಳೆ ; ನಾರಾಯಣರಾವ್, ಎ. ರಾಮರಾವ್ ; ಡಿ. ಸಕ್ಕಾರಾಂ ; ಡಿ. ಸುಬ್ಬರಾವ್ ; ಟಿ. ವೆಂಕೋಬರಾವ್ ; ಮತ್ತು ಸಿ. ವಿಜಯರಂಗನಾಯುಡು

Agnishtoma ceremony.—ಕಳೆದತಿಂಗಳ ೩೦ನೇ ತಾರೀಖಿನಲ್ಲಿ ಹರಿಹರದಿಂದ ಒಬ್ಬ ಬಾತ್ಮೀದಾರನು ಬರೆಯುತ್ತಾನೇನೆಂದರೆ.—ಪುರಾಣಪ್ರಸಿದ್ಧವಾದ ಈ ಹರಿಹರ ಕ್ಷೇತ್ರದಲ್ಲಿ ಮೊನ್ನೆಯದಿನ ಶ್ರೀಹರಿಹರೇಶ್ವರನಿಗೆ ರಥೋತ್ಸವವು ಅತಿವಿಜೃಂಭಣೆಯಾಗಿ ನಡೆಯಿತು. ದೇವರದರ್ಶನಾರ್ಥ ಈಸಲ ವಿಶೇಷ ಜನ ಬಂದಿದ್ದರು. ಹೊಸೂರು ನಿವಾಸಸ್ಥರಾದ ಕೃಷ್ಣಮಾಚಾರ್ಯರವರು ಈ ಊರಲ್ಲಿ ಅಗ್ನಿಷ್ಟೋಮವು ಮಾಡಿದರು. ಈ ಯಜ್ಞಶಾಲೆಯು ಇಲ್ಲಿನ ದೇವಸ್ಥಾನಕ್ಕೆ ಸಮೀಪದೊಳು ನಿರ್ಮಿಸಲ್ಪಟ್ಟಿತು. ಯಾಜ್ಞಿಕರು ಕ್ರತುವಿಗೆ ಬೇಕಾದ ಋತ್ವಿಕ್ಕುಗಳನ್ನು ಹುಗಲ್, ತಿರುಚೂರು ಮುಂತಾದ ಸ್ಥಳಗಳಿಂದ ಕರೆಯಿಸಿರುತ್ತಾರಲ್ಲದೆ ಅವರಿಗೆ ಅಡ್ವಾನ್ಸಾಗಿ ೩೦೦ ರೂಪಾಯಿಗಳ ತನಕ ಕೊಟ್ಟರೆಂದು ತಿಳಿಯಬರುತಿದೆ. ಕಳೆದ ತಿಂಗಳ ೧೪ನೇ ತಾರೀಖಿನದಿನ ಕ್ರತುಸಂಕಲ್ಪ ಮಾಡಲ್ಪಟ್ಟು ಅದು ಕ್ರಮವಾಗಿ ೫ ದಿನಗಳ ತನಕ ನಿರ್ವಿಘ್ನವಾಗಿ ಜರಿಗಿತಲ್ಲದೆ ವೇದ ಘೋಷದಿಂದಲೂ, ವಿಪ್ರಸಮೂಹದಿಂದಲೂ, ಸದರೀ ಯಾಗಶಾಲೆಯು ಬಹಳ ಮನೋಹರವಾಗಿ ಕಣ್ಗೊಳಿಸುತಲಿತ್ತು. ಕ್ರತುಉಪಕ್ರಮವಾದನೊ[illegible] ದಿನಗಳಲ್ಲಿ ಕುಮಾರ್ ಸಾವಿರಜನಗಳವರೆವಿಗೆ ಬ್ರಾಹ್ಮಣ ಭೋಜನನಡೆಯುತಲಿತ್ತು. ಕಡೆ ೩ ದಿನಗಳಲ್ಲಿಬ್ರಾಹ್ಮಣಸಂಖ್ಯೆಯು, ೩೦೦೦ ವರಿವಿಗೆ ಜಾಸ್ತಿಯಾಯಿತು. ಕ್ರತು ದಕ್ಷಿಣೆಯಿಂದಲೂ, ಅನ್ನಸಂತರ್ಪಣೆಯಿಂದಲೂ, ಆಗಂತುಕರಾದ ಬ್ರಾಹ್ಮಣರು ಬಹಳ ಸಂತೃಪ್ತರಾಗಿದ್ದರು. ಕ್ರತುವಿನ ಪ್ರಥಮದಿನದಾರಭ್ಯ ಯಾಜ್ಞಿಕರಿಗೆ ನಿದ್ರಾಹಾರಾದಿಗಳೊಂದೂ ಇಲ್ಲದಿದ್ದಾಗ್ಯೂ ಕರ್ಮಶ್ರದ್ಧೆಯೆಂಬುದು ಅವರ ಶರೀರೋತ್ಸಾಹಗಳಂ ಸ್ವಲ್ಪವೂ ಕಡಮೆ ಮಾಡಲಿಲ್ಲವು. ಇಲ್ಲಿನ ತುಂಗಭದ್ರಾನದಿಗೆ ದಕ್ಷಿಣ ಮಹಾರಾಷ್ಟ್ರ ರೆಯಿಲ್ವೇ ಕಂಪೆನಿಯವರು ಸೇತುವೆ ಕಟ್ಟುತಲಿದ್ದಾರೆ. ಇದರ ಕಾಮಗಾರಿಯು ಬಹಳ ತೀವ್ರವಾಗಿ ನಡೆಯುತಲಿದೆ ಈ ಬಗ್ಗೆ ಮಧ್ಯ ಹೊಳೆಯಲ್ಲಿ ರಾತ್ರೀಹಗಲು ೧೫೦ಜನ ಕೂಲಿಯವರು ತಪ್ಪದೆ ಕೆಲಸ ಮಾಡುತಲಿದ್ದಾರೆ ಇದು ಶೀಘ್ರದೊಳು ಪೂರೈಸುವ ತಾತ್ಪರ್ಯದೊಡನೆ ಎಗ್ಜಿಕ್ಯೂಟಿವ್ ಇಂಜನಿಯರವರು ತಮ್ಮ ಆಫೀಸ್ ನೌಕರ್ ಮಾನೆರೊಡನೆ ಇಲ್ಲಿ ಮೊಕ್ಕಾಂ ಮಾಡಿದ್ದಾರೆ. ಬರುವ ಜೂನ್ ತಿಂಗಳಲ್ಲಿ ಪ್ರಾರಂಭದ ಮೊದಲು ಇಲ್ಲಿಂದ ಗುಬ್ಬಿಯವರಿವಿಗ ಗಾಡಿ ಬಿಡಬೇಕೆಂಬದಾಗಿ ಕಂಪನಿಯವರಿಂದ ಹುಕುಂ ಬಂದಿರುವದಾಗಿ ತಿಳಿಯಬರುತಿದೆ. ಶೀಘ್ರದಲ್ಲಿ ಈ ಊರೊಳು ಒಂದು ಇಂಗ್ಲಿಷಸ್ಕೂಲ್ ಸ್ಥಾಪಿಸಲ್ಪಡುವದೆಂದು ಕೇಳುತ್ತೇವೆ ಇದು ನಿಜವಾಗಿರುವ ಪಕ್ಷಕ್ಕೆ ಜನಗಳಿಗೆ ಬಹಳ ಪ್ರಯೋಜನಕರವೆಂದೆಣಿಸುತ್ತೇನೆ. ಇಲ್ಲಿನ ಪ್ರಜೆಗಳು, ವಿದ್ಯಾಸಂಗ್ರಹಣಾರ್ಥ ತಮ್ಮತಮ್ಮ ಮಕ್ಕಳನ್ನು ಬಳ್ಳಾರಿ ಮುಂತಾದ ಪರಸ್ಥಳಗಳಿಗೆ ಕಳುಹಿಸಿ, ಅವರ ಯೋಗಕ್ಷೇಮವಂ ಕುರಿತು ರಾತ್ರಿಹಗಲು ಚಿಂತಿಸುತಲಿರುತ್ತಾರೆ. ಮುಂದೆ ಇದಕ್ಕೆ ಅವಕಾಶ ಕಡಮೆಯಾಗಬಹುದು ಬಿಸಲು ಬಹಳ ತೀಕ್ಷ್ಣವಾಗಿದೆ. ಈ ವರೆಗೆ ರೆಯಿಲ್ವೆಮೂಲಕ ವಾದ ಸಂಬಂಧವು ಜನಗಳ ರಾಕ್ಷ್ಯಂ ಅಧಿಕವಾಗಲು ಇಲ್ಲಿನ ಪ್ರಜಾಸಂಖ್ಯೆಯು ಅವರಿಂದ ಹತ್ತುಸಾವಿರ ಮಂದಿಯತನಕ ವೃದ್ಧಿಯನ್ನೈದಿರುತಿವೆ. ಈ ಪ್ರಾರು ಮುಂದೆ ಬಹಳ ಅಭಿವೃದ್ಧಿಗೆ ಬರುವದರೊಳೇನೂ ಸಂಶಯವಿಲ್ಲವು. ಮಹಾರಾಜಾ ಸರ್ಕಾರದವರು ಜನಗಳ ಅನುಕೂಲ್ಯವಂ ಪರ್ಯಾಲೋಚಿಸಿ ಇಲ್ಲಿಯೊಬ್ಬ ಫಸ್ಟ್‌ಕ್ಲಾಸ್ ಅಸಿಸ್ಟೆಂಟರನ್ನು ಕಾಯಮಾಗಿಟ್ಟದ್ದರೆ ಬಹಳ ಪ್ರಯೋಜನಕರವಾಗಿರುವದೆಂದೆಣಿಸುತ್ತೇನೆ.

CORRESPONDENCE

ಎಡಿಟರವರ ಸಮಕ್ಷಮಂಗಳಿಗೆ—ಈ ಚೆಗೆ ಈ ಪುರದಲ್ಲಿ ಈಸ್ಟ್‌ಇಂಡಿಯನ್ ತರುಣಿಯೊಬ್ಬಳು ಪ್ರಬಲಿಸಿ ಇವಳು ನಾನಾವಿಧದಿಂ ಪ್ರಸಿದ್ಧಿಗೆ ಬರುತಲಿದಾಳೆ. ಈಕೆಯು ಆಯಾ ಸಂದರ್ಭೋಚಿತಗಳಾದ ವೇಷಭಾಷೆಗಳಿಂದಲೂ ರೂಪವಯೋವಿಭ್ರಮ ಸರಸ ಸಲ್ಲಾಪಾದಿಗಳಿಂದಲೂ ನೂತನ ರಸಾಸ್ವಾದನಾಭಿಲಾಷಿಗಳಾದ, ರಸಿಕ ಶಿರೋಮಣಿಗಳೆನಿಸಿದ ಕೆಲವರು ಮಾನನೀಯರಿಗೆ ಬಹಳ ವ್ಯಾಮೋಹವನ್ನುಂಟುಮಾಡುತಲಿದ್ದಾಳೆಂತಲೂ, ಪರಕೀಯಾನುರಕ್ತರಾದ ಅವರು ಮೋಹ ಪಾರವಶ್ಯದಿಂದಾಕೆಗೆ ಬರೆದ ಕೆಲವು ಪ್ರಣಯ ಪತ್ರಿಕೆಗಳು ಅದ್ಯಾಪಿ ಅವಳಲ್ಲಿರುವುವೆಯೂ, ಅವು ವಾಪಸ್ ತರಿಸಿಕೊಳ್ಳುವದರಲ್ಲಿ ಸದರೀ ಪತ್ರಿಕಾ ಲೇಖಕರು ಬಹಳ ಪ್ರಯತ್ನಗಳಂ ನಡೆಸಿ ತಲಿದಾರೆಂತಲೂ, ಪರಂತು ಆಕೆಗೆ ಅವುಗಳು ಸಹ ತತ್ಕಾಲದಲ್ಲಿ ಜೀವನಾಧಾರಗಳಾಗಿ, ಸಹಾಯಕಗಳಾಗಿವೆಯೆಂತಲೂ, ಉಚಿತ ಸಂದರ್ಭದಲ್ಲಿ ಅವುಗಳಂ ಹೊರಪಡಿಸುವ ತಾತ್ಪರ್ಯವುಳ್ಳವಳಾಗಿದಾಳೆಂತಲೂ ತಿಳಿಯಲಾದೆನು. ಸದರೀ ಗೌರವಮನುಷ್ಯರ ವಿದ್ಯಾವಿವೇಕ ಅಧಿಕಾರ ಸಂಪದೈಶ್ವರ್ಯ ಆಭಿಜಾತ್ಯಾದಿ ಸುಗುಣಗಳ ವಿಕಾಸಕ್ಕೆ ಮಲಕಂಡ ಪಾತ್ರಕ್ಕಿಂತ ಯೋಗ್ಯವಾದದ್ದು ಬೇರೊಂದೂ ಅವರಿಗೆ ದೊರೆಯದೆ ಹೋದಬಗ್ಗೆ ಆಶ್ಚರ್ಯಪಡಬೇಕಾಗಿರುತಿದೆ.

ತಮ್ಮ ವಿಧೇಯನಾದ,

ನಗರಶೋಧಕ.

ಮೇಲೆಕಂಡ ನಗರಶೋಧಕನು ಬರೆದಿರುವ ವಿಷಯವು ನಿಜವಾಗಿರುವಪಕ್ಷಕ್ಕೆ ಮನೋವ್ಯಥಾಕಾರಿಯಾದ ವಿಷಯವು ಅದಕ್ಕಿಂತ ಬೇರೊಂದಿರುವದೆಂದು ನಾವೆಣಿಸಲಾರೆವು. ಇದಕ್ಕಿಂತ ಪ್ರತ್ಯವಾಯವಾದ ಮತ್ತು ಮಾನಹಾನಿಕರವಾದದ್ದು ಬೇರೊಂದು ಆವಶ್ಯಕವಿರುವದಿಲ್ಲವು. ಮುಖ್ಯವಾಗಿ ಲೋಕದಲ್ಲಿ ಮನುಷ್ಯನು ಜನಿಸಿದ ಬಳಕ ಮೂವರಿಗೆ ಹೆದರಿ ವರ್ತಿಸಬೇಕಾದದ್ದು ಉಚಿತವಾಗಿರುತಿದೆ, ಹ್ಯಾಗಂದರೆ.—ನಾನವರ ಸನ್ಮಾರ್ಗನುಗುಣಗಳಾಗಿ ಫಲವನ್ನೀಯುವ ಸರ್ವವ್ಯಾಪಿಯಾದಭಗವಂತನಿಗೆ ಹೆದರಿ ನಡೆಯಬೇಕಾದ್ದೊಂದು ; ಪ್ರಜಾಪಾಲಕನಾದ ಅರಸನಿಗೆ ಹೆದರಿ ವರ್ತಿಸಬೇಕಾದ್ದೊಂದು ; ಲೋಕಾಪವಾದಕ್ಕೂ, ತಮಗಿಂತ ದೊಡ್ಡವರಾದವರಿಗೂ ಅಂಜಿ, ಸಮಾನರಾದವರಿಗಾಗಿ ನಾಚಿಕೊಂಡು, ಕಡಮೆಯಾದವರ ದೂಷಣೆಗಾಗಿ ಶಂಕಿಸುತ, ಅನುಚಿತ ವ್ಯಾಪಾರಗಳಂ ತೊರೆದು, ಜನ ಸಮ್ಮತಿಗಾಗಿಯೂ, ಸ್ವಗೌರವಕ್ಕಾಗಿಯೂ, ಮಾಡತಕ್ಕ ಕೆಲಸಗಳನ್ನು ಉಚಿತವಾಗಿ ಮಾಡುವದೊಂದು; ಈ ಮೇರೆ ಮೂರುಬಗೆಗಳುಳ್ಳ ಅಂಜಿಕೆಗಳೆಂಬವು ಈ ಲೋಕದಲ್ಲಿ ಮನುಷ್ಯನಿಗೆ ಕೀರ್ತಿ ಗೌರವ ಐಶ್ವರ್ಯಗಳೆಂಬ ತ್ರಿವಿಧ ಪ್ರಯೋಜನಗಳನ್ನುಂಟುಮಾಡುನವು. ಈ ಅಂಜಿಕೆಯಿಂದಲೇ ಮನುಷ್ಯನು ಅಕಾರ್ಯಗಳಂ ಮಾಡದೆ ಬಿಡುವನಲ್ಲದೆ ಇತರ ಕಾರಣಗಳಷ್ಟು ಪ್ರಬಲವಾದವುಗಳಲ್ಲವೆಂದು ಶಾಸ್ತ್ರಗಳು ತಿಳಿಸುತಿವೆ. ಚಪಲವಾದ ಮನುಷ್ಯನ ಹೃದಯದಲ್ಲಿ ತೋರುವ ನಾನಾವಿಧ ದುಷ್ಟಭಾವಗಳನ್ನು ಹೊರಪಡಿಸದೆಯೂ, ಅದರಂತೆ ನಡಿಸದೆಯೂ, ಇರುವಂತೆ ಅಡ್ಡಿಗೊಳಿಸುವದ್ಯಾವದು? ಅದು ಮೇಲೆತಿಳಿಸಲ್ಪಟ್ಟ ಅಂಜಿಕೆಯಲ್ಲವೆ, ಅದಿಲ್ಲದಿದ್ದರೆ ಮಾನವರು ತಾವು ಎಣಿಸುವಂತೆ ಮಾಡಲೇನಾತಂಕವು? ಇಷ್ಟರ ಪ್ರಶಂಸೆಗೆ ಯೋಗ್ಯವಾದ ಆ ಅಂಜಿಕೆಯು ಮಾನವ ಜನ್ಮಕ್ಕೆ ಮುಖ್ಯಭೂಷಣವೆಂದು ನಾವು ಎಣಿಸದಿರಲಾರೆವು. ಇಂತಾದ್ದನ್ನು ಕೊರೆದು ಮನುಷ್ಯರು ತಮ್ಮತಮ್ಮಹೃದಯಕ್ಕೆ ವಶ್ಯರಾಗಲಿಕ್ಕೆ ಅನೇಕ ಕಾರಣಗಳುಂಟಾಗಿದ್ದರು ಅವುಗಳಲ್ಲಿ ಮುಖ್ಯವಾಗಿ ಧನ, ಅಧಿಕಾರ ಮೊದಲಾದವುಗಳಿಂದುಂಟಾದ ಮತ್ತತೆಯು ಜನಗಳಿಗೆ ಅಂಜಿಕೆಯುಂತಪ್ಪಿಸಿ ನಾನಾವಿಧ ದುಷ್ಕಾರ್ಯಗಳಲ್ಲಿ ಪ್ರವೃತ್ತಿಯನ್ನುಂಟುಮಾಡುತಿದೆ. ಅವುಗಳಲ್ಲೊಂದೊಂದೂ ಪ್ರಬಲಾನರ್ಥಕಾರಿಯಾಗಿ ಪರಿಣಮಿಸುವದು ಸಹಜವಾಗಿರುತಿದೆ. ಇಂತಾ ಪ್ರಬಲಾನಿಷ್ಟಗಳಿಗೆ ಗುರಿಯಾಗಿ ನಶಿಸತಕ್ಕವರಿಗಾಗಿ ಅಭಿಜ್ಞರೆಷ್ಟು ದುಃಖಿಸುವರೋ ಅದಕ್ಕಿಂತ ಅನೇಕಪಾಲು ಅಧಿಕವಾಗಿ ದುರ್ವ್ಯಸನಿಗಳ ಇಷ್ಟ ಬಾಂಧವರು ವಿಷಾದಿಸುವರು. ಮುಖ್ಯವಾಗಿ ಕೃತ್ಯಾಕೃತ್ಯಗಳಲ್ಲಿ ದೊಡ್ಡವರ ಪ್ರವೃತ್ತಿನಿವೃತ್ತಿಗಳೇ ಚಿಕ್ಕವರಿಗೆ ಬೋಧಕಗಳೆಂಬದು ಪ್ರಸಿದ್ಧವಾಗಿರುವಲ್ಲಿ ಅಕಾರ್ಯಪರರಾದ ದೊಡ್ಡವರಮಕ್ಕಳು ತಮ್ಮ ವಂಶ ಗೌರವವಂಕೂಡ ಲಕ್ಷ್ಯದೊಳಿಡದೆ ಮೇಲೆ ಕಂಡಂತೆ ಕೆಟ್ಟರೆ ಅವರಿಗೆ ಬುದ್ಧಿಹೇಳತಕ್ಕವರು ಈ ಪ್ರಪಂಚದಲ್ಲಿ ಯಾರೂ ಇರಲಾರರು. ಲೋಕದಲ್ಲಿ ಗೌರವವೆಂಬುವದೊಂದು ಪದಾರ್ಥದಿಂದ ದೈವಭಕ್ತಿನ್ಯಾಯಗಳೂ ಸ್ವಾಮಿ ಭೃತ್ಯ ಮರ್ಯಾದೆಗಳೂ, ಗುರುಶಿಷ್ಯ ನಿಬಂಧನೆಗಳೂ, ವ್ಯಾಪ್ಯವ್ಯಾಪಕ ಭಾವಗಳೂ, ಉಂಟಾಗಬೇಕಾದವಾಗಿದೆಯೋ ಹೊರ್ತು ಅದು ತೊರೆದಬಳಕ ತಿಳಿಸಬೇಕಾದ್ದೇನೂ ಇರಲಾರದು.

SUMMARY OF NEWS
ವೃತ್ತಾಂತ ಸಂಗ್ರಹ.

ಧಾರವಾಡದಲ್ಲಿ ಒಬ್ಬ ಸ್ತ್ರೀಯು ತನ್ನ ಗಂಡನ ಸತ್ತ ದುಃಖವನ್ನು ಸಹಿಸಲಾರದೆ ತನ್ನ ಪ್ರಾಣವನ್ನು ಯಮನಿಗೆ ಅರ್ಪಿಸಿದಳೆಂದು ಕೇಳುತ್ತೇವೆ.

ಈಗಿನ ವೈಸ್‌ರಾಯಿಯವರಾದ ಲಾರ್ಡ ಡಫರಿನ್ ದೊರೆಗಳ ಬಳಿಕ ಯಾರು ಇವರ ಪದವಿಯನ್ನು ಹೊಂದುವರೋ ಎಂಬದಾಗಿ ಲಂಡನಿನಲ್ಲಿ ಬಹಳ ಗದ್ದಲ ಹುಟ್ಟಿರುತ್ತದೆ.

ಹೋದ ಮಂಗಳವಾರದವರೆಗಿನ ಒಂದುವಾರದಲ್ಲಿ ಮುಂಬೈಯೊಳು ೭೫೩ ಹುಡುಗರು ಹುಟ್ಟಿದರು. ಮತ್ತು ೩೯೬ ಜನರು ಮೃತ್ಯುವಿಗೆ ಎರೆಯಾದರು.

ಬರೋಡೆ ಸಂಸ್ಥಾನದ ಅಧಿಪತಿಗಳಾದ ಶ್ರೀ ಸಯಾಜಿರಾವ್ ಗಾಯಕವಾಡಿ ಯವರು ಇನ್ನೊಂದು ತಿಂಗಳಲ್ಲಿ ಪುಣೆಗೆ ಬಂದು ಅಲ್ಲಿ ಕೆಲವು ದಿವಸವಿದ್ದು ಬಳಿಕ ಮದರಾಸ್, ನೀಲಗಿರಿ, ಮುಂತಾದ ಪ್ರದೇಶಗಳಿಗೆ ಪ್ರಯಾಣಮಾಡುವರು.

ಮೊನ್ನೆ ಆದ ಚಂದ್ರಗ್ರಹಣವು ಗ್ರಸ್ತಾಸ್ತವೆಂದು, ಅನೇಕ ಪಂಚಾಂಗಕರ್ತರು ಬರೆದಿದ್ದರು ಪರಂತು ಗ್ರಹಣವು, ಗ್ರಸ್ತಾಸ್ತವಾಗಲಿಲ್ಲ ಈ ಗ್ರಹಣವು ಮುಂಬೈಯಲ್ಲಿ ಪ್ರಸಿದ್ಧವಾದ ಕ್ರಾಫರ್ಡ ಮಾರ್ಕೆಟಿಗೆ ಎಲ್ಲರೂ ಹೋದ ಹಾಗಾಯಿತು. ಪರಂತು ಖಗ್ರಾಸವಾಗದೆ ಕಂಕಣಗ್ರಹಣವಾಯಿತು.

ಕಳೆದ ಮಂಗಳವಾರ ಸಾಯಂಕಾಲದಲ್ಲಿ ಪ್ರೆಸಿಡೆನ್ಸಿ ಅಸ್ಸೋಸಿಯೇಷನ್ ಸಭೆಯು ನೆರೆದಿತ್ತು. ಸ್ವರ್ಗಸ್ಥರಾದ ಮಿ. ಬಾಳ ಮಂಗೇಶವಾಗಲೆಯವರಿಗೋಸ್ಕರ, ಮಿ. ದಾದೋಬ ಅಜಾಜೀ ಖರೇ, ಎಂಬವರನ್ನು ನಿಯಮಿಸಿದರಲ್ಲದೆ ಉಪ್ಪಿನ ಮೇಲೆ ಈಗ ಹೆಚ್ಚಾದ ತೆರಿಗೆ ಕಡಮೆ ಮಾಡುವ ಬಗ್ಗೆ ಅರ್ಜಿಯನ್ನು ತಯಾರ್ ಮಾಡಬೇಕೆಂಬವಾಗಿ ಆಸಂಘದಲ್ಲಿ ನಿರ್ಣಯವಾಯಿತು.

ಚೀನಾ ದೇಶದಲ್ಲಿ ೩೯ ವರ್ಷ ವಯಸ್ಸುಳ್ಳ ಒಬ್ಬ ಸ್ತ್ರೀಯು ಏಕಕಾಲದಲ್ಲಿ ಮೂರು ಹೆಣ್ಣುಮಕ್ಕಳನ್ನು ಹೆತ್ತಳು. ಹೀಗಾಗುವದು ಆದೇಶದಲ್ಲಿ ಬಹಳ ಅಪೂರ್ವ. ಮೂರು ಗಂಡು ಮಕ್ಕಳಾಗಿದ್ದರೆ ಅವರ ನೇಮಪ್ರಕಾರ ಅಲ್ಲಿನ ಸರಕಾರದವರು ೩ ಮಕ್ಕಳನ್ನೂ ಕಳೆಹೊಯ್ಯುತ್ತಿದ್ದರು. ಯಾಕೆಂದರೆ, ಹೀಗೆ ೩ ಗಂಡುಮಕ್ಕಳು ಏಕಗರ್ಭದಲ್ಲಿ ಜನಿಸಿದರೆ ಹಿರಿಯಮಗನಾದವನು ಅಲ್ಲಿನ ಚಕ್ರವರ್ತಿ ಪದವಿಯನ್ನು ಆಕ್ರಮಿಸುವನೆಂಬ ಒಂದು ಪ್ರತೀತಿ ಯುಂಟು.

ಅಮೆರಿಕಾದಲ್ಲಿರುವ ಸ್ತ್ರೀಯರು ಬಹು ಸ್ವಲ್ಪಕಾಲದಲ್ಲಿ ಪುರುಷರಿಗೆ ಅಧಿಕಾರವೇ ಸಿಕ್ಕದಂತೆ ಮಾಡುತ್ತಾರೆಂದು ಬೆದರಿಸುತ್ತಾರುತೆ. ಯಾವ ಇಲಾಖೆಯಲ್ಲಿ ನೋಡಿದರೂ ಸ್ತ್ರೀಯರೇ ಅಧಿಕವಾಗುತ್ತ ಬಂದಿರುತ್ತಾರೆ. ವೈದ್ಯವಮಾಡುವ ಸ್ತ್ರೀಯರು ಕಾಸಿಗೊಂದು ಕೊಸರಿಗೊಂದು ಆಗಿದ್ದಾರೆ. ಅನೇಕ ಸ್ತ್ರೀಯರು ವಕೀಲರು ಮಾಡುವ ಕೆಲಸವನ್ನು ನೋಡುತಲಿದಾರೆ. ಇನ್ನು ಅನೇಕರು ಜಡ್ಜಿಗಳಾಗಿದ್ದಾರೆ. ಹಲವುಗಳಲ್ಲಿಯೂ ಮ್ಯುನಿಸಿಪಲ್ ಸಂಘದಲ್ಲಿಯೂ, ಇತರ ಸರಕಾರದ ಉದ್ಯೋಗಗಳಲ್ಲಿಯೂ ಎಲ್ಲಿ ನೋಡಿದರೂ ಇವರೇ ಅಧಿಕಾರಿಗಳಾಗಿರುತ್ತಾರೆ.

ಸ್ವಧರ್ಮಾಭಿಮಾನ.–ಕಳೆದತಿಂಗಳ ೭ನೇ ತಾ|| ದಿವಸ ಮದ್ರಾಸ್ಸಿನ ಮೇಲೆ ಸೇಲಂಪುರದಿಂದ ಬರುವಂತಾ ಪ್ಯಾಸೆಂಜರ್ ಟ್ರೇನಿನ್ನಿಂದ ಒಬ್ಬ ತರುಣರಾದ ಬಿಳೀ ಬಣ್ಣದ ವರ್ಣಪುಷ್ಪಳ್ಳತಾ, ರೇಷ್ಮೆ ಅಂಚಿನ ಧೋತ್ರವನ್ನು ಸೆರೆಹಿಡಿದುಟ್ಟಂತಾ, ಇಂಗ್ಲಿಷ್ ನಮೂನೆಯ ಕೋಟನ್ನು ಹಾಕಿದ್ದಂತಾ, ಕಾಲಲ್ಲಿ ಬೂಟಿನ ಸ್ಟಾಕಿಂಗ್ಸಿನಿಂದ ಜಬ್ ಜಬ್ ಶಬ್ದ ಮಾಡುವಂತಾ, ಮುಕ್ತ ಚಂಡಿಕೆಯುಳ್ಳ ಬರಿದಲೆಯವರಾದಂತಾ ಒಬ್ಬ ಉತ್ತಮ ಹಿಂದೂ ಗೃಹಸ್ಥರು ಮೂರನೇ ಕ್ಲಾಸ್ ಬಂಡಿಯೊಳಗಿನಿಂದ ಇಳಿದು ನೆಟ್ಟಗೆ ರಿಫ್ರೆಷ್ ಮೆಂಟ್ ರೂಮಿನೊಳಗೆ ಹೋದರು. ಅನಂತರ ಅಲ್ಲಿನ ಬಟ್ಲರ್‌ನಾಯಕ ಇವರಿಗೆ ಬಿಸ್ಕೆಟ್ ಬೆಣ್ಣೆ ಮತ್ತು ಕಾಫೀ ತರಿಸಿಕೊಂಡ ತಕ್ಷಣವೇ ಬಳಿಕ ಅವನಿಗೆ ಬೆಲೆ ಕೊಟ್ಟು ಪ್ಲಾಟಫಾರಮಿನಲ್ಲಿ ಗಾರ್ಡ ಡ್ರೈವರ್ ಜನರುಗಳು ಇಷ್ಟು ನೀರಿನಲ್ಲಿ ಬಾಯಿ ಮುಕ್ಕಳಿಸಿ ತಮ್ಮ ಗಾಡಿ ... ಳರು ಪ್ಲಾಟ್‌ಫಾರಮಿನಲ್ಲಿ ... ಯಮಾಜನರು ಈ ಯೆಲ್ಲಾ ಕೃತ್ಯವನ್ನು ನೋಡಿ ಬಹಳ ಚಕಿತರಾದರು. ಆ ಗೃಹಸ್ಥರಿಗೆ ಸ್ವಮತ ಸಂಬಂಧವಾದ ಲಜ್ಜೆಯು ಸ್ವಲ್ಪವೂ ಇರಲಿಲ್ಲ. ಈಗಿನಕಾಲದಲ್ಲಿ ಇಂತಾ ವ್ರಗಳೇ ದೊಡ್ಡಸ್ಥಿತಿಯೆಂದು ಎಣಿಸಲ್ಪಡುತಿವೆ.

ಕಳೆದ ಗುರುವಾರದದಿವಸ ಶಿರೀನ ಬಾಯಿಎಂಬ ಒಬ್ಬ ಪಾರಿಸೀ ಸ್ತ್ರೀಯು, ಪ್ರೆಸಿಡೆನ್ಸೀ ಮ್ಯಾಜಿಸ್ಟ್ರೇಟರಾದ ಮಿ. ಹ್ಯಾಮಿಲ್ಟನ್ ಯೆಂಬವರಮುಂದೆ ತಿಳಿಸಿದ್ದೇನೆಂದರೆ —ನಾನು ನನ್ನ ಗಂಡನೊಡನೆ ಈಗ ಐದು ವರ್ಷಗಳಿಂದಿದ್ದರೂ ಒಂದು ದಿವಸವಾದರೂ ನಾನು ಅವನಿಂದ ಹೊಟ್ಟೆತುಂಬ ಅನ್ನ ಕಾಣಲಿಲ್ಲವು ಮತ್ತು ಅತನು ನನಗೆ ಬಹಳ ಉಪದ್ರವಪಡಿಸುತ್ತಾನೆ, ತನ್ನ ಪ್ರತಿ ದಿನಸಿಂದ ನನಗೆ ಅನ್ನವಸ್ತ್ರವನ್ನು ಕೊಡಿಸಬೇಕಲ್ಲದೆ, ಅವನುಬಿಟ್ಟು ಬೇರೆ ಇರಲಿಕ್ಕೆ ಅಪ್ಪಣೆ ಕೊಡಬೇಕೆಂದು ಕೇಳಿಕೊಂಡಳು ಆಗ ಅವರು ಅವಳನ್ನು ಚೆನ್ನಾಗಿನೋಡಿ ನೀನು ಸೆಲುವನೆಹಾಗು ಸರ್ವದಾ ನಿತ್ಯವಾದಮ್ಮ. ಐದು ವರ್ಷಗಳಿಂದ ನಿನ್ನ ಜೀವನೋಪಾಯವು ಚೆನ್ನಾಗಿ ನಡೆಯುತಿದ್ದರೆ, ನೀನು ಇಷ್ಟು ಪುಷ್ಟಿ ಒಡೆಯವಳಾಗಿ ಇರುತಿದ್ದಿಲ್ಲವೆಂದು ನುಡಿದರು. ಹೀಗೆ ಹೇಳುವ ಮ್ಯಾಜಿಸ್ಟ್ರೇಟರ ಮಾತುಗಳಿಂ ಕೇಳಿ ಬಾಡಿದವೋರೆಯಿಂದ ಅವಳು ತನ್ನ ಗಂಡನ ಬಳಿಗೆ ಹೊರಟುಹೋದಳು.

EXTRACTS.

ಮುಂಬೈಯಲ್ಲಿರುವ ಯುರೋಪಿಯನ್ ಸೂಳೆಯರ ಧುಮಕನು.—ಈ ಮುಂಬೈ ಪಟ್ಟಣದಲ್ಲಿ ಒಟ್ಟಿಗೆ ೪೦ ಸಾವಿರ ರಂಡೆ ಮುಂಡೇರು ವ್ಯಭಿಚಾರ ವೃತ್ತಿಯಿಂದ ಜೀವಿಸುತ್ತಿರುತ್ತಾರೆ. ಇವರ ಪೈಕಿ ಯುರೋಪಿಯನ್ ಹೆಂಗಸರೇ ಹೆಚ್ಚಾಗಿರುತ್ತಾರೆ. ಇವರು ಬಹುತಾ ಬಾಜಾರ್ ಮಧ್ಯದಲ್ಲಿಯೇ ಈ ವ್ಯಾಪಾರದ ತಮ್ಮ ಅಂಗಡಿಗಳನ್ನು ಇಟ್ಟುಕೊಂಡಿರುತ್ತಾರೆ ನೇಟಿವ್‌ದವರು ಬಾಂಗಡಿಯವರು ಸಹ ಅಲ್ಲಿಯೇ, ಇವೇ ಪ್ರಕಾರದ ಅಂಗಡಿಗಳನ್ನು ಹಾಕಿಕೊಂಡರೂ, ಯುರೋಪಿಯನರೊಳಗಿರುವ ಅಸಹ್ಯ ವರ್ತನೆಗಳನ್ನು ಮಾಡುವದಿಲ್ಲ ಯುರೋಪಿಯನ್ ಹೆಂಗಸರು ನಡೆಸುವ ಧುಮಕನ ವರ್ತನೆಯನ್ನು ನಮಗೆ ತಿಳಿದಂಬಂದಷ್ಟಿಗೆ ಈ ಕೆಳಗೆ ಬರಿಯುತ್ತೇವೆ. ಮಾರ್ಗದಲ್ಲಿ ನಡುಮನೆಯಾದ ಪ್ರೊಷಾಕುಳ್ಳವನು ಹೋದದ್ದನ್ನು ಕಂಡರೆ ಮನೆಗಳ ಅಂಚಿನಲ್ಲಿ ಉಗಳಲ್ಲಿ ಕಿಟಕಿಗಳ ಮೇಲೆ ಚಿತ್ರದ ಗೊಂಬೆಗಳಂತೆ ಶೃಂಗಾರವನ್ನು ಮಾಡಿ ಕೂತಿರುವ ಈ ಮುಂಡೇರು ತಮ್ಮ ಕಡೆ ದೂತನಿಗೆ ಸೂಚನೆ ಮಾಡುತ್ತಾರೆ. ಆಮೂತನು ಕೂಡಲೇ ಹೋಗುತಿದ್ದವನ ಮುಂದೆ ಬಂದು ಅಡ್ಡನಿಂತು "ಸಾಹೇಬ್! ಮೇಮ ಸಾಹೇಬ್, ಅಚ್ಛಾ ನವೀನ ಸೋಕರಿ ಆಹೆ, ಸಹಾ ಮೋಹೆ" ಇವನು ಅದಕ್ಕುತ್ತರ ಕೊಡುವದಕ್ಕೆ ಪ್ರಾರಂಭ ಮಾಡಿದನೆಂದರೇ ಕೂಡಲೇ ಸಜೀವ ಗೊಂಬೆಗಳು ೨-೩ ಬಂದು ಸುತ್ತಲೂ ನಿಂತು ನಾನಾ ತಾವಲಿಕ್ಕೆ ಪ್ರಕ್ರಮಿಸುತವೆ. ಆವಮಾತನ್ನು ಇಲ್ಲಿ ಬರೆಯುವುದು ಯೋಗ್ಯವಲ್ಲ. ಅವರೆ ಆರಿಸಿ, ಸಾಧಾರಣವಾಗಿರುವ ಕೆಲವು ಶಬ್ದಗಳನ್ನು ಮಾತ್ರ ನಾವು ಇಲ್ಲಿ ಸೂಚಿಸುತ್ತೇವೆ (ಅಜಿಜಾನಿ! ಮಣಿಟೆಹನ, ಬಹುತ್ ಸಸ್ತಾ ಮೈ! ನವಾಜೀ ಜಬರಾಯಿಂಗೆ! ಯಂಗ್ ಬ್ಯೂಟಿಫುಲ್!! ಬಾಜ್ ಓಲ್ಡೀ ಟೂ ರೂಪೀಸ್, ಕವರ್ನ ಜಾನೀ, ಸಬ ಕಪತಾ ... ಬತಾಯಿಂಗೆ' ಎಂಬ ಈತೆರದ ಇನ್ನೂ ಅನೇಕ ಅಜ್ಞಾನಜ್ಯೋತಿಕರವಾದ ಮಾತುಗಳನ್ನು ಪಬ್ಲಿಕ್ ರಸ್ತೆಯಲ್ಲಿ ಘಟ್ಟಿಯಾಗಿ ಆಡುತ್ತಿರುತ್ತಾರೆ ಒಬ್ಬನಾಗಿದ್ದರೆ ಅವನನ್ನು ರಸ್ತೆಯಲ್ಲಿಯೇ ಒಬ್ಬಳು ಆಲಿಂಗನ ಮಾಡಿಕೊಂಡು ಮುತ್ತಿಡ ತೊಡಗುತ್ತಾಳೆ. ಮತ್ತೊಬ್ಬಳು, ಹಾಕಿರುವ ಅಂಗೀ ಕಿಸೇಕೊಡವೆ ಮಾಡಿ ಇದ್ದದ್ದನ್ನು ಬರಗುತ್ತಾಳೆ. ಬಂದಾಗ ಮತ್ತು ಜುಲುಂಗಳನ್ನು ಇವರು ನಿರ್ಭಯವಾಗಿ ಮಾಡುತ್ತಿದ್ದರೂ, ಸರಕಾರದವರು ಇವರ ವಿಷಯದಲ್ಲಿ ಯಾವ ವಿಧ ಪ್ರತಿಬಂಧಕವನ್ನೂ ಮಾಡುವದಿಲ್ಲ. ಸೋಲ್ಜರರು ಬಂದರೆ ತೀರಿಯೇ ಹೋಯಿತು. ಮದ್ಯಪದಾರ್ಥಗಳನ್ನು ಕೊಟ್ಟು ಉಟ್ಟ ಅರಿವೆ ವಸ್ತ್ರಗಳನ್ನು ಸಹ ಎಳೆಕೊಂಡು ಬತ್ತಲೇ ಮಾಡಿ ಎಲ್ಲಿಯಾದರೂ ಚರಂಡಿಗಳ ಬಳಿಯಲ್ಲಾಗಲೀ, ರಸ್ತೆಯಮೇಲಾಗಲೀ, ಮಲಗಿಸಿ ಬಿಡುತ್ತಾರೆ. ಇಂತಾ ಮುಂಡೇರ ಧೀಭತ್ಸಕರವಾದ ವರ್ತನಗಳನ್ನು ಇಷ್ಟರಮಟ್ಟಿಗೆ ಬಹಿರಂಗವಾಗಿ ನಡೆಯಗೊಡಿಸುವದು ಬಹಳನಾಚಿಕೆಕೇಡಾದ ಸಂಗತಿಯಾಗಿರುತ್ತದೆ, ಆದ್ದರಿಂದ ಸರಕಾರದವರು ಇವರನ್ನು ಇನ್ನುಮೇಲಾದರೂ, ಊರಹೊರಗೆ ದೂರವಾಗಿರುವಂತೆ ಮಾಡಿ, ಇಂತಾಧೀಭತ್ಸ ವರ್ತನೆಯು ಅವರಿಂದುಂಟಾಗದಂತೆ ಬಂದೋಬಸ್ತು ಪಡಿಸಬೇಕೆಂಬದಾಗಿ ಸೂಚಿಸುತ್ತೇವೆ. —ಧ ಸು.

ಭೂಪಾಲ ಸಂಸ್ಥಾನದ ಆಡಳಿತವು ಅನ್ಯಾಯದಿಂದ ನಡೆಯುತ್ತಿರುವ ಹಿಂದುಗಳ ವಿಚಾರಕ್ಕೆ ಗುರಿಯಾಗಿರುವ ವಿಷಯಗಳಲ್ಲೊಂದಾಗಿ ಎಣಿಸಲ್ಪಟ್ಟಿರುತಿವೆ. ಕಳೆದ ಜನವರಿ ೧೬ನೇ ತಾರೀಖಿನ ಸಿವಲ್ ಪತ್ರಿಕೆಯಲ್ಲಿ ಭೂಪಾಲ ಸಂಸ್ಥಾನದ ದರ್ಬಾರ್‌ವಿಷಯವನ್ನು ಕುರಿತು ಕೆಲವು ಅಂಶಗಳನ್ನು ವಿವರವಾಗಿ ತಿಳಿಸಿ, ಅದರಲ್ಲಿ ಆಗ್ನೇಯ ಪ್ರೊವಿನ್ಸಿನ ಏಜಂಟರಾದ ಸರ್ ಲೇಪಲ್ ಗ್ರಿಫಿನ್‌ಯವರು, ಸಂಸ್ಥಾನಕ್ಕೆ ವಿರೋಧಿಗಳಾಗಿಯೂ, ಅಲ್ಲಿ ಸರ್ಕಾರಕ್ಕೆ ದರ್ಬಾರಿಗೆ ವಿರುದ್ಧವಾಗಿಯೂ ಇರುವ ಕೆಲವು ದರ್ಬಾರ ಜನಗಳ ಸಹಾಯದಲ್ಲಿ ಬೇಗಮ್‌ರವರ ಗಂಡನವರನ್ನು ಮುಟ್ಟಿ ದೂಷಿಸುತ್ತಿದ್ದಾರೆಂದು ಹೇಳುತಿವೆ. ಸದರೀ ದರ್ಬಾರಿನಲ್ಲಿ, ರಾಣಿಯವರ ಪತಿಯವರಿಗೆ ಸಲ್ಲುತಲಿದ್ದ ತೋಪಿನ ಮೊದಲಾದ ಮರ್ಯಾದೆಗಳೆಲ್ಲವು ತಪ್ಪಿಸಲ್ಪಟ್ಟು ಸರ್ ಲೇಪಲ್ ಗ್ರಿಫಿನ್‌ಯವರು ಅವರನ್ನು ಕುರಿತು ಆಡಿದ ದುರ್ಭಾಷೆಗಳ ದೆಸೆಯಿಂದ ಆಗಿರ ಬಾತ್ಮೆಯವರಾದ ರಾಣಿಯವರಿಗೆ ಬಹಳ ಕೋಪ ಹುಟ್ಟಿಯಿತು. ಅದೇದಿವಸ ಸಾಯಂಕಾಲ ರೆಸಿಡೆನ್ಸಿಯಲ್ಲಿ ನಡೆದ ದರ್ಬಾರಿನೊಳು, ರಾಣಿಯವರ ಪತಿಯವರ ಮರ್ಯಾದೆಗಳೂ ಮುಂತಾಗಿರುವ ಅಧಿಕಾರಗಳೂ ತಪ್ಪಿಸಲ್ಪಟ್ಟವೆಂತಲೂ, ಬೇರೆ ಮಂತ್ರಿಯನ್ನು ನೇಮಕ ಮಾಡುವಂತೆ ಬೇಗಂರವರಿಗೆ ಹುಕುಂ ಆಗಿರುವಂತೆಯೂ ಸಮಾಚಾರ ನೋಟೀಸ್ ಪ್ರಸಿದ್ಧಿ ಮಾಡಿ ದರ್ಬಾರಿಗೆ ಬಂದಿದ್ದವರೆಲ್ಲರಿಗೂ ಕೊಡಲ್ಪಟ್ಟಂತೆ ತಿಳಿಯಲಾದೆವು, ಪರಂತು ಇದಕ್ಕೆ ಯಾರು ಪ್ರೇರಕರೊ ಅದುಮಾತ್ರ ವ್ಯಕ್ತವಾಗಲಿಲ್ಲವು. ಆದರೆ ಸರ್ ಲೇಪಲ್ ಗ್ರಿಫಿನ್‌ಯವರು ಇಂತಾ ಕಾರ್ಯವನ್ನು ನಿರೋಧಿಸಿದವರಲ್ಲವು, ಮತ್ತು ಅದುಕುರಿತು ವಿಚಾರಿಸಿದವರೂ ಅಲ್ಲವು. ರಾಣಿಯವರ ಪತಿಯವರ ಶಿಕ್ಷೆಯನ್ನು ಸಮರ್ಥಿಸುವದಕ್ಕೆ ನಾವು ಪ್ರಯತ್ನ ಪಡುವದಿಲ್ಲವು. ಅವರು ನಡತೆಯು ಕೆಟ್ಟದ್ದಾಗಿದ್ದರೂ ಆ ರಲಿ. ಅಮೃತ ಬಜಾರ್ ಪತ್ರಿಕೆ ಹೇಳುವರೀತ್ಯಾ ರಾಣಿಯವರನ್ನು ಅಗೌರವಿಸುವುದಕ್ಕೆ ಪೊಲಿಟಿಕಲ್ ಏಜಂಟರವರಿಗೆ ಯೇನು ಕಾರಣ ಉಂಟಾಯಿತೆಂಬ ಅಂಶ ವಿಚಾರಾರ್ಹವಾಗಿದೆ ಅನೇಕದಿವಸ ಕೇಳಿದಾಗ್ಯೂ ಬೇರೆ ಮಂತ್ರಿಯನ್ನು ನೇಮಕ ಮಾಡಬೇಕೆಂದು ನಮೂದಿಸಿ ತಾವೀಗಿಲ್ಲದೆ ಇಂಡ್ಯ ಗವರ್ನಮೆಂಟಿನಿಂದ ವ ಒಂದು ಹುಕುಮನ್ನು ಮಾತ್ರ ಪೊಲಿಟಿಕಲ್ ಏಜಂಟರವರು ತೋರಿಸಿದರು. ಈ ವಿಷಯಗಳೆಲ್ಲವು ವಿಮರ್ಶೆಗೆ ಅರ್ಹಗಳಾಗಿರುತಿವೆ. ಪೊಲಿಟಿಕಲ್ ಏಜಂಟರುಗಳೆಲ್ಲರು ಕೆಟ್ಟವರೆಂದು ನಾವು ಹೇಳುವದಿಲ್ಲವು. ಅವರಪೈಕಿ ಅನೇಕರು ಯೋಗ್ಯರಿರುತ್ತಾರೆ. ಸರ್ ಲೇಪಲ್ ಗ್ರಿಫಿನ್‌ಯವರು ಸಹ ಒಳ್ಳೆಯವರೆಂದು ಅವರ ಪರಿಚಿತರನೇಕರು ಹೇಳುತ್ತಾರೆ. ಈ ವಿಷಯದಲ್ಲಿ ನಾವು ಹೇಳಬೇಕಾದ್ದೇನೂ ಇಲ್ಲವು. ಸರ್ ಲೇಪಲ್‌ಯವರು ತಮ್ಮ ಅಧಿಕಾರಬಲದಲ್ಲಿ ಭೂಪಾಲ ಸಂಸ್ಥಾನದ ಬೇಗಂಯವರಿಗೆ ಸಾಧ್ಯವಾದ ಅಮರ್ಯಾದೆಗಳನ್ನೆಲ್ಲ ಮಾಡಿದಂತೆಕಾಣುತಿದೆ. ಬೇಗಂಯವರ ವಿಷಯದಲ್ಲಿ ಇಷ್ಟು ಕಠಿಣವಾಗಿ ನಡಿಸಿದ್ದು ಯುಕ್ತವೆ, ಹಾಗೆ ಯುಕ್ತವಾಗಿ ಕಂಡುಬರುವದಕ್ಕೆ ಅದರಿಂದ ಸರ್ಕಾರದ ಪೊಲಿಟಿಕಲ್ ಅಧಿಕಾರಿಗಳಿಗೆ ಯೇನಾದರು ಸಾಧಕವುಂಟೇ ಎಂಬುವ ಅಂಶವನ್ನು ಕುರಿತು ಇಂಡ್ಯ ಗವರ್ನಮೆಂಟಿನವರು ಆಲೋಚಿಸಬೇಕಾದ್ದು ಅವರ ಕರ್ತವ್ಯವಾಗಿರುತಿದೆ—ವುರಾಟ.

THE MYSORE GAZETTE.
ಮೈಸೂರು ಗೆಜೆಟ್.

ಶ್ರೀಮನ್ಮಹಾರಾಜ ಬಹಾದೂರ್ ವರ ದಿವಾನರವರಿಂದ ಹೊರಡಿಸಲ್ಪಟ್ಟ ಇಸ್ತಿಹಾರ್‌ನಾಮೆಗಳು.

ಮೊಕ್ಕಾಂ. ನಂಬರ್ ೭೮೧೫, ತಾರೀಖ್ ೭೩ನೇ ಜನವರಿ ೧೮೮೮.—ಮೈಸೂರು ಡಿಸ್ಟ್ರಿಕ್ಟಿನ ಸರ್ವಿಸ್ ಜಡ್ಜಿಯರಾದ ಮೆ|| ಎಸ್. ಕೃಷ್ಣಾಜಿ ರಾಯರವರಿಗೆ ಮಾಹೇ ಮಜಕೂರ್ ೭೫ನೇ ತಾರೀಖ್‌ನಿಂದಾರಂಭಿಸಿ ಅಥವಾ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಎರಡು ತಿಂಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿರುತಿದೆ. ಬೆಂಗಳೂರು ಸಬ್ ಡಿವಿಸನಲ್ ಜಡ್ಜಿ ಮೆ|| ಸಿ. ಕೃಷ್ಣಯವರು ಮೈಸೂರು ಹೇಮಾವತಿ ಸರ್ಕಲ್ ಜಡ್ಜಿಯಾಗಿ ... ಆದಾಗ ಮತ್ತು ಮುಂದು ಹುಕುಂ ಕೊಡಲ್ಪಡುವವರೆಗೆ ಮೈಸೂರು ಡಿಸ್ಟ್ರಿಕ್ಟಿನ ಸರ್ವಿಸ್ ಜಡ್ಜಿಯಾಗಿ ಆಕ್ಟ್ ಮಾಡುವಂತೆ ನೇಮಕ ಮಾಡಲ್ಪಟ್ಟಿರುತ್ತಾರೆ. ಶ್ರೀರಂಗಪಟ್ಟಣದ ೧ನೇಗ್ರೇಡ್ ಮುನಸೀಫ್ ರಾದ ಸ್ವಾಮಿ ಅಯ್ಯರ್ ಬಿ. ಎ. ಬಿ. ಎಲ್ ರವರು ಬೆಂಗಳೂರು ಸಬ್ ಡಿವಿಸನಲ್ ಜಡ್ಜಿಯಾಗಿ ಆಕ್ಟ್ ಮಾಡುವಂತೆ ನೇಮಕರು. ನಾಗರದ ೩ನೇಗ್ರೇಡ್ ಮುನಸೀಫ್ ಮೆ|| ಬಿ. ನರಸಿಂಹಯ್ಯಂಗಾರ್ರವರು ೧ನೇ ಗ್ರೇಡಿನಲ್ಲಿ ಶ್ರೀರಂಗಪಟ್ಟಣದ ಮುನಸೀಫಾಗಿ ಆಕ್ಟ್ ಮಾಡುವಂತೆ ನೇಮಕರು. ಶಿವಮೊಗ್ಗ ದಿ ಪಬ್ಲಿಕ್ ಪ್ರಾಸಿಕ್ಯೂಟರ್ ಮೆ|| ರಾಮರಾಯರವರು ನಾಗರ ಮುನಸೀಫಾಗಿ ಆಕ್ಟ್ ಮಾಡುವಂತೆ ನೇಮಕರು.

ಮೊಕ್ಕಾಂ ನಂ ೭೮೩ ... ಹೆಗ್ಗಡದೇವನಕೋಟೆ ತಾಲ್ಲೂಕ್ ಅಮಲ್ದಾರ್ ನಾಮಯ್ಯಂಗಾರ್ರವರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖ್ ಮೊದಲು, ಐವತ್ತು ದಿವಸಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿರುತಿದೆ ೧೮೮೮ನೇ ಇಸವಿ ಜನವರಿ ೩ನೇ ತಾರೀಖು ೭-೯೧ನೇ ನೆಂಬರ್ ಮೊಕ್ಕಾಂ ನಂಬರ್‌ನ ಇಸ್ತಿಹಾರ್‌ನಾಮೆಯಲ್ಲಿ ಕಂಡಂತೆ ಹೊಳೇನರಸೀಪುರದ ತಾಲ್ಲೂಕಿಗೆ ನಿಯಮಿಸಲ್ಪಟ್ಟ ಪಿರಾನರಸಿಪುರ ಕ್ಯಾಂಪ್ ಹೆಡ್ಡ ಸರಿಸ್ತೆ ಅಯ್ಯಂಗಾರ್ರವರು ಕೆ. ರಾಮಯ್ಯಂಗಾರ್ರವರು ರಜಾ ಮೇಲೆ ಗೈರುಹಾಜರಾಗಿರತಕ್ಕ ಕಾಲದಲ್ಲಿ ಅಥವಾ ಮತ್ತೊಂದು ಹುಕುಂ ಕೊಡಲ್ಪಡುವವರೆಗೆ ಹೆಗ್ಗಡದೇವನಕೋಟೆ ತಾಲ್ಲೂಕ್ ಅಮಲ್ದಾರ್ ವ ವಿ ... ರಾಗಿ ಆಕ್ಟ್ ಮಾಡುವಂತೆ ನೇಮಕ ಮಾಡಲ್ಪಟ್ಟಿರುತ್ತಾರೆ.

ನಂ ೧೮೭೨.—ತಾರೀಖ್ ೩೦ನೇ ಜನವರಿ.೮೮. ಮಾಹೇಮಜಕೂರ್ ೫ನೇ ತಾರೀಖ್ ಆಗಾಯಿತು, ಇದರ ಕೆಳಕಂಡ ಅಸಿಸ್ಟೆಂಟ್ ಅಸಿಸ್ಟೆಂಟಗಳು, ಆರುತಿಂಗಳಕಾಲ ಅಜಮಾಯಿಷೀ ತರೀಕಿ ಮಾಡಲ್ಪಟ್ಟಿದ್ದು ಕೊಳ್ಳಲ್ಪಟ್ಟಿರುತ್ತಾರೆ.—ಮಿ. ಪ್ರಬಲಾನಂದಪ್ಪ, ಜನ್ಮಾವಶ್ಯಕಾತರಪ್ಪ, ೩ವೇಂಕಟ್ಟಪ್ಪ.

ಸನ್ ೧೮೮೮ನೇ ಇಸವಿ ಫೆಬ್ರುವರಿ ತಿಂಗಳಲ್ಲಿ ನಡೆಯುವ ಮೈಸೂರು ದೇಶೀಯ ಉಪಾಧ್ಯಾಯರ ಪರೀಕ್ಷೆಯಲ್ಲಿ ಕನ್ನಡಭಾಷೆಯೊಳು ತೇರ್ಗಡೆಯಾದವರಿಗೆ ಕರ್ಣಾಟಕ ಭಾಷೋಜ್ಜೀವಿನೀ ಸಭೆಯಿಂದ ಇವರದಿಕಂಡ ಬಹುಮಾನಗಳು ಕೊಡಲ್ಪಡುವವು. ೧೦ ರೂ|| ದ್ರವ್ಯರೂಪವಾಗಿಯಾಗಲಿ, ಪುಸ್ತಕರೂಪವಾಗಿಯಾಗಲಿ, ವಿಶಿಷ್ಟಾಂಕಗಳೂ ಸೇರಿ ಅಧಿಕವಾದ ನಂಬರುಗಳನ್ನು ಪಡೆಯತಕ್ಕವರಿಗೂ, ೧೦ ರೂಪಾಯಿ—ಭಾಷೆಯಲ್ಲಿ ಅಧಿಕವಾದ ನಂಬರುಗಳನ್ನು ಪಡೆಯತಕ್ಕವರಿಗೂ ಕೊಡಲ್ಪಡುವವು

BANGALORE.—Printed and published for the Proprietor, at the KARNATIC PRESS.—1888

ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA.

ಪ್ರತಿ ಸೋಮವಾರ ಪ್ರಾತಃಕಾಲದಲ್ಲಿ ಪ್ರಕಟಿಸಲ್ಪಡುವದು.

Published every Monday Morning.

ಪ್ರಕಾಮವಿವಿಧಪ್ರಸ್ತಾವ್ಯವಗನುರ್ವ್ವ ಕರ್ಣಾಟಕಪ್ರಕಾಶನವರಾಭಿದಾಪ್ರಥಿತಸಾಹಿತಿಕಲೋಭಿತಾ ॥ ನೃಗಾಂಕಮಿರವಾನರಿನಿಮಿತಮುದ್ರಣಾಸಜ್ಜ್ವಸ್ಯೈರ್ನಿ ಹಾಸುಪರಿಪೂರ್ಣ ಕಾಡಕತಿಮಾಸನಂನುಮದಂ॥

Vol XV] BANGALORE—MONDAY, FEBRUARY 13, 1888 [No. 6.

ಸಂಪುಟ ೧೫] ಬೆಂಗಳೂರು — ಸನ್ ೧೮೮೮ನೇ ಇಸವಿ ಫೆಬ್ರುವರಿ ೧೩ನೇ ತಾರೀಖು ಸೋಮವಾರ. [ಸಂಚಿಕೆ ೬.

ಕರ್ಣಾಟಕ ಪ್ರಕಾಶಿಕಾ

ಪತ್ರಿಕೆಯ ಚಂದಾ ದರಗಳು,
೧೮೮೮ನೇ ಇಸಿವಿ ಜನವರಿ೧ಗಾಯತು
ಕಡಮೆಮಾಡಲ್ಪಟ್ಟಿರುತಿವೆ.

ಈ ಪತ್ರಿಕೆಯ ಚಂದಾದಾರರಲ್ಲಿ ಅನೇಕರ ಅಪೇಕ್ಷೆಯನ್ನೀಡೇರಿಸುವ ಉದ್ದೇಶದಿಂದಲೂ, ಪರಿಮಿತವಾದ ಆದಾಯವುಳ್ಳವರಿಗೆಲ್ಲ ಈ ಪತ್ರಿಕೆಯು ಸುಲಭವಾಗಿ ಲಭಿಸುವಂತಿರಬೇಕೆಂಬ ಅಭಿಪ್ರಾಯದಿಂದಲೂ ಇದರ ಚಂದಾದರವನ್ನು ಇದರಡಿಕಂಡಂತೆ ಕಡಮೆಮಾಡಿರುತ್ತೇವೆಂತಿರುವದು -

ಇಂಗ್ಲಿಷ್ ಮತ್ತು ಕನ್ನಡಭಾಗಗಳಿಗೆ.

	ಸ್ಥಳದವರಿಗೆ	ಪರಸ್ಥಳದವರಿಗೆ
12 ತಿಂಗಳಿಗೆ	8—0—0	9—0—0
6 „	4—0—0	4—8—0
3 „	2—6—0	2—6—0

ಇಂಗ್ಲಿಷ್ ಅಥವಾ ಕನ್ನಡಭಾಗಗಳಿಗೆ.

	ಸ್ಥಳದವರಿಗೆ	ಪರಸ್ಥಳದವರಿಗೆ
12 ತಿಂಗಳಿಗೆ	4—0—0	5—0—0
6 „	2—0—0	2—8—0
3 „	1—4—0	1—8—0

ಮಠಾ—ಅಂದರೆ ಮುನ್ಸಿಫರು, ಡೆಪ್ಯುಟಿ ಮತ್ತು ತಾಲ್ಲೂಕ್ ಸಕ್ಕೂಲ್‌ಮಾಸ್ತರರುಗಳು, ಶ್ಯಾನುಭೋಗರು, ಪಟೇಲರು, ವಿದ್ಯಾರ್ಥಿಗಳು, ಇವರಿಗೆಲ್ಲ ಈ ಪತ್ರಿಕೆಯು ಮಠದ ಚಂದಾದರಕ್ಕೆ ಕೊಡಲ್ಪಡುವದು [illegible] ಚಾರದ ದರದಾಸ್ತ್ಯಗಳಿಗೆ ಸುಲಭವಾಗಿ [illegible] ಬೇಕಾದವರು ಇಂಗ್ಲಿಷ್ ಭಾಗವನ್ನಾಗಲಿ ಕನ್ನಡಭಾಗವನ್ನಾಗಲಿ ಅಥವಾ ಎರಡನ್ನೂ ತೆಗೆದುಕೊಳ್ಳಬಹುದು [illegible] ಬೇಕಾದ [illegible] ಚಂದಾ [illegible] ಕೊಡಬೇಕೆಂದು ಪ್ರಕಟಿಸಿರುವರು.

[illegible] ರವಾನಿಸ್ತಕ್ಕವರು ಕೊಡಲು [illegible] ಕೊಡದೆ [illegible] ರವಾನಿಸತಕ್ಕದ್ದು [illegible] ಚಂದಾ ಹಣವನ್ನು [illegible] ಮುಂಗಡವಾಗಿ ಕೊಡಬೇಕೆಂದು ಪ್ರಕಟಿಸಿದೆ.

ಮೊದಲನೆಸಾರಿ ಪ್ರಕಟಿಸುವದಕ್ಕೆ ಪಂಕ್ತಿ ಒಂದಕ್ಕೆ ೦—೨—೦
ಎರಡನೆಸಾರಿ ಪ್ರಕಟಿಸುವದಕ್ಕೆ ಪಂಕ್ತಿ ೧ ಒಂದಕ್ಕೆ ೦—೧—೦

ಮಠಾ—ಎರಡಾವರ್ತಿಗಿಂತ ಹೆಚ್ಚಿನವುಗಳಿಗೆ ವಿಶೇಷ [illegible] ಈ ಪತ್ರಿಕೆಯಲ್ಲಿ ಹಾಕು [illegible] ಪ್ರಕಟಿಸಬೇಕು [illegible] ಅವರ [illegible] ಕ್ರಮವಾಗಿ [illegible] ಈ ಪತ್ರಿಕೆ [illegible] ರಿಜಿಸ್ಟರ್ [illegible] ಜವಾಬ್ದಾರರಾಗಿರುವರು [illegible] ದಾರರು

"IT RECOMMENDS ITSELF"

ALL WHO SUFFER FIND SURE RELIEF

LITTLE'S

[illegible]

THE MOST EFFECTUAL MODERN REMEDY FOR PAIN

[illegible]

ಪರಿಶೀಲಕರ ಅಭಿಪ್ರಾಯವು.

[illegible] (C. R. TICHBORNE, L. K. D., F. C. S., M. R. [illegible]) [illegible]

ಇದರ ಕ್ರಯ—ಸೀಸೆ ಒಂದಕ್ಕೆ ೧ ರೂಪಾಯಿ

[illegible]

AGENTS —
Messrs, J. WISE, Chemist &c., Bangalore.
C. [illegible] & Co. Chemists Bangalore.
RIPS & Co., Chemists, Bangalore, and of
MAHOMED [illegible] AND SONS, The Cash Bazarr, Bagalore
A. C. BERRYMAN & Co.,
20 Sarbodoss Street Madras

NOTICE.

VAIDYASARA SANGRAHA

A TREATISE ON THE PRINCIPLES OF

HINDU MEDICINE

Price including Postage Rs 5 0 0

ವೈದ್ಯಸಾರ ಸಂಗ್ರಹ.

ಈಗ್ರಂಥಾಪೇಕ್ಷೆಯುಳ್ಳವರು ಮೊಬಲಗಿನೊಡನೆಈ ಕೆಳಗೆ ರುಜುಮಾಡಿರತಕ್ಕವರ ಹೆಸರಿಗೆ ಬರೆದುಕೊಂಡರೆ ಪುಸ್ತಕ ತೊಡಲೇ ಕಳುಹಿಸಲ್ಪಡುವದು. ಮೊಬಲಗು ಇಲ್ಲದ ದರಖಾಸ್ತುಗಳಿಗೆ ಸುತರಾಂ ನಿಗೇಜೊಡಲ್ಪಡಲಾರದು.

ಇದರ ಕ್ರಯ ... ...ರೂ. ೫—೦—೦
ಪ್ಯಾಕಿಂಗ ಮತ್ತು ಅಂಚೇಖರ್ಚು, ೦—೬—೦

ಟಿ. ಬಿ. ನಂಜುಂಡಾಚಾರ್,
ಆಸ್ಪತ್ರೆ, [illegible], ಬೆಂಗಳೂರು

ನೋಟಿಸ್.

ಹೈದರಾಬಾದ ನಿಜಾಂ ಸರಕಾರದ ಸರ್ವೇ ಸೆಟಲ್‌ಮೆಂಟ್ ಖಾತೆಯಲ್ಲಿ ನೂರುಮಂದಿ ಮೋಜಣಿದಾರರ ಅವಶ್ಯಕವಿದೆ. ಆದರೆ ಸರ್ವೇಸೆಟಲ್‌ಮೆಂಟ್ ಬಾಂಗ್ಲೆಯವರು ತಮ್ಮ ಬಳಿಯಲ್ಲಿರುವ ಸರ್ಟಿಫಿಕೇಟಿನ ನಕಲು ಸಹಿತವಾಗಿ ಇದರಕೆಳಗೆ ಸಹಿಮಾಡಿರುವವರಿಗೆ ದರಖಾಸ್ತು ಕಳುಹಿಸತಕ್ಕದ್ದು. ಅಂದರೆ, ಅವರವರ ಯೋಗ್ಯತಾನುಸಾರ ೧೫ ರೂಪಾಯಿಗಳು ಮೊದಲುಗೊಂಡು ೩೦ ರೂಪಾಯಿಗಳ (ಹಾಲಿಸಿಕ್ಕಾ) ವರಿಗೂ ಸಂಬಳ ಸಿಕ್ಕುವದು.

ಎ. ಜೆ. ಡನ್‌ಲಾಪ್,
ಇನ್‌ಸ್ಪೆಕ್ಟರ್‌ಜನರಲ್ ಮಾಲಗುಜಾರಂ,
ಬಂದೋಬಸ್ತು ಮುಲ್ಕು,
ಸರಕಾರ್, ಆಲಿ ಹೈದರಾಬಾದ್.

ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA.

MONDAY, FEBRUARY 13 1888.

೧೮೮೮ನೇ ಫೆಬ್ರುವರಿ ೧೩ನೇ ತಾ॥ ಸೋಮವಾರ.

RESIGNATION OF LORD DUFFERIN.

[OFFICIAL INTELLIGENCE.]

ಮಾಹೇಮಾಜಕೂರ್ ೯ನೇ ತಾರೀಖಿನಲ್ಲಿ ಪ್ರೆಸ್ ಕಮಿಷನರವರು ಕಳುಹಿಸಿದ ಅನಿರೀಕ್ಷಿತವಾದ ಒಂದು ತಂತಿ ವೃತ್ತಾಂತವು ಪ್ರಾಯಶಃ ಇಂಡ್ಯ ದೇಶೀಯರಿಗೆಲ್ಲ ಮಿತಿಯಿಲ್ಲದ ಆಶ್ಚರ್ಯವನ್ನುಂಟುಮಾಡಿರುವದೆಂದೆಣಿಸುತ್ತೇವೆ. ಅದೇನೆಂದರೆ, ಇಂಡ್ಯದೇಶದ ಈಗಿನ ವೈಸರಾಯಿ ವ ಗವರ್ನರ್ ಜನರಲರಾದ ಅರ್ಲ್ ಡಫ್ರಿನ್‌ಯವರು ಈ ಸಂವತ್ಸರದ ಆಖೈರ್ ಭಾಗದಲ್ಲಿ ತಮ್ಮ ಉದ್ಯೋಗದಿಂದ ನಿವೃತ್ತರಾಗುವಿಕ್ಕೆ ಹುಕುಂ ಕೊಡಬೇಕೆಂಬದಾಗಿ ಶ್ರೀಮನ್ಮಹಾರಾಣೀ ಸರ್ಕಾರದವರನ್ನು ಪ್ರಾರ್ಥಿಸಿಕೊಂಡಿರುತ್ತಾರೆ. ಕನಡಾ ರಾಜ್ಯದ ಪ್ರಕೃತ ಗವರ್ನರ್ ಜನರಲ್ಲಾದ ಮಾರ್ಕ್ವಿಸ್ ಲಾಂಡ್ಸ್ ಡೌನ್ ಎಂಬವರು ಈವರುಷದ ಅಂತ್ಯಭಾಗದಲ್ಲಿ ಇಂಡ್ಯದೇಶದ ವೈಸರಾಯಿಯಾಗಿ ನೇಮಕರಮಾಡಲ್ಪಟ್ಟು ಇಲ್ಲಿಗೆ ಬರುವರೆಂದು ನಿರೀಕ್ಷಿಸಲ್ಪಟ್ಟಿರುವಂತೆ ತಿಳಿಯಬರುತಿದೆ ಲಾರ್ಡ್ ಡಫ್ರಿನ್‌ಯವರು ಕ್ಲುಪ್ತಕಾಲಕ್ಕಿಂತ ಮುಂದಾಗಿ ತಮ್ಮ ಕೆಲಸದಿಂದ ನಿವೃತ್ತರಾಗುವರೆಂದು ಇದುವರಿವಿಗೆ ಯಾರೂ ನಿರೀಕ್ಷಿಸಲಿಲ್ಲವು. ಸಾಧಾರಣವಾಗಿ ಇಂಥಾ ವಿಶೇಷ ವಿಷಯಗಳು ಪ್ರಾಪ್ತವಾಗುವ ಸಂದರ್ಭಗಳಲ್ಲಿ ಅವರ ಸೂಚನೆಗಳು ತ ಎಂಚಿತವಾಗಿ ಕಂಡುಬರವಣವು ವಾಡಿಕೆಯಾಗಿರುತಿದೆ. ಪ್ರಕೃತ ಸಂದರ್ಭದಲ್ಲಿ ಅಂತಾದ್ದೊಂದೂ ಇಲ್ಲವು. ಸದರೀ ತಂತಿ ವೃತ್ತಾಂತವು ಲಾರ್ಡ್ ಡಫ್ರಿನ್‌ಯವರು ರಾಜೀನಾಮೆ ಕೊಡಲಿಕ್ಕೆ ಉಂಟಾದ ಕಾರಣವನ್ನು ಸ್ವಲ್ಪವೂ ತಿಳಿಸಲಿಲ್ಲವು. ಪರಂತು ಮಾರ್ಕ್ವಿಸ್ ಲಾಂಡ್ಸ್ ಡೌನ್‌ಯವರು ಲಾರ್ಡ್ ಡಫ್ರಿನ್‌ಯವರ ಪ್ರತ್ಯೇಕವಾಗಿ ನೇಮಕರಮಾಡಲ್ಪಡುವರೆಂದು ಸರ್ವಾರ್ಥೀ ವಾಗಿ ತಿಳಿಸಲ್ಪಟ್ಟಿರುವದು ನೋಡುವಲ್ಲಿ ರಷ್ಯಾ, ಇಂಗ್ಲೆಂಡ್, ಕೆನಡಾ, ಈ ಮೂರು ಪ್ರದೇಶಗಳಿಗೂ ತಂತಿವೃತ್ತಾಂತಗಳು ಹೋಗಿ ಬರುತಲಿರಬಹುದೆಂದು ಎಣಿಸಬೇಕಾಗಿದೆ. ಈ ವಿಷಯವನ್ನು ಪರಿಭಾವಿಸಲಾಗಿ, ಲಾರ್ಡ್ ಡಫ್ರಿನ್‌ಯವರು ಇನ್ನು ಎರಡು ವರುಷಗಳ ಕಾಲ ನ್ಯಾಯವಾಗಿ ಇಲ್ಲಿ ಉದ್ಯೋಗ ಮಾಡಬೇಕಾದವರಾಗಿದ್ದಾಗ್ಯೂ, ಒಂದುವರುಷಕ್ಕೆ ಮುಂಚಿತವಾಗಿ ಕೆಲಸದಿಂ ವಿರಮಿಕ್ಕೆ ಯಾವದೋ ಒಂದು ಪ್ರಬಲ ಕಾರಣವಿರಬಹುದೆಂದು ಸುಬುತ್ತೇವೆ. ಲಾರ್ಡ್ ಡಫ್ರಿನ್‌ಯವರು ೧೮೮೪ನೇ ಇಸವಿಯ ಡಿಸಂಬರ್ ತಿಂಗಳಲ್ಲಿ ಮುಂಬೈಗೆ ಬಂದು ಅದೇ ತಿಂಗಳ ೧೩ನೇತಾರೀಖಿನಲ್ಲಿ ಕಲ್ಕತ್ತೆಯೊಳು ವೈಸರಾಯಿ ಕೆಲಸದ ಚಾರ್ಜನ್ನು ವಹಿಸಿದರು. ಮುಖ್ಯವಾಗಿ ಇವರು ಈ ಇಂಡ್ಯದೇಶದ ಆಧಿಪತ್ಯವು ಕೈಗೊಂಡದ್ದು ಮೊದಲು ಇದುವರಿವಿಗೆ ಅವರ ಪಾಲನೆಗೊಳಗಾದ ವಿಶಿಷ್ಟ ಪ್ರಜೆಗಳೆಂದರೆ, ಕೊಂಡಾಡಲ್ಪಡುತಲಿದ್ದಾಗ್ಯೂ ಇವರ ಪ್ರಾರ್ಥಿಕರಾದ ಲಾರ್ಡ್ ರಿಪನ್‌ಯವರಂತೆ, ಅನೇಕ ವಿಷಯಗಳಲ್ಲಿ ಪ್ರಜಾ ರಂಜಕರಾಗದೇ ಹೋದದರಿಂದ, ಅವರಿಗುಂಟಾದಷ್ಟು ಕೀರ್ತಿ ಪ್ರಶಸ್ತಿಗಳವರಿಗೆ ಲಭಿಸಲಿಲ್ಲವು.

GOLLARS.

ಚಿತ್ರದುರ್ಗ ಡಿಸ್ಟ್ರಿಕ್ಟಿನಲ್ಲಿ ಈಗ ವಾಸವಾಗಿರುವ ಕೆಲವರು ಗೊಲ್ಲಸ್ತ್ರೀಯರು ಪ್ರಸವ ಕಾಲದಲ್ಲಿ ಅನುಭವಿಸುವ ಕ್ರೂರತರವಾದ ನಿರ್ಬಂಧಗಳಂ ನೋಡಲಾಗಿ ಅವು ಗವರ್ನಮೆಂಟಿನವರಿಂದ ಕಡ್ಡಾಯ ನಿರೋಧಿಸಲ್ಪಡತಕ್ಕವಾಗಿರುತಿವೆ ಯೆಂಬದಾಗಿ ಈಗ್ಯೆ ಕೆಲವು ತಿಂಗಳ ಹಿಂದೆ ಒಳದೇಶದ ವೃತ್ತಾಂತಪತ್ರಿಕೆ ಯೊಂದು ಪ್ರಕಟಿಸಿತ್ತು. ಸದರೀ ಪತ್ರಿಕೆಯ ವಾಕ್ಯವನ್ನು ಮಹಾರಾಜಾ ಸರ್ಕಾರದವರು ನಿಜವೆಂದು ನಂಬಿ, ನಿಜಸ್ಥಿತಿಯಂ ವಿಚಾರಿಸಿ ತಮಗೆ ರಿಪೋರ್ಟು ಮಾಡುವಂತೆ ಆ ಡಿಸ್ಟ್ರಿಕ್ಟು ಡೆಪ್ಯುಟಿ ಕಮಿಷನರವರಿಗೆ ಹುಕುಂಮಾಡಿದ್ದರು. ಅದರಮೇಲೆ ಚಿತ್ರದುರ್ಗ ಡೆಪ್ಯುಟಿ ಕಮಿಷನರವರು ಅಲ್ಲಿನ ಗೊಲ್ಲರಲ್ಲಿ ಮುಖ್ಯರಾದವರ ಮೂಲಕವಾಗಿಯೂ ಇತರ ವಿಧವಾಗಿಯೂ ಮೇಲೆಕಂಡ ವಿಷಯದ ಯಾಥಾರ್ಥ್ಯವನ್ನು ತಿಳಕೊಂಡು ಗವರ್ನಮೆಂಟಿನವರಿಗೆ ರಿಪೋರ್ಟು ಮಾಡಿರುತ್ತಾರೇನೆಂದರೆ—ಬಾಣಂತಿಗಳನ್ನು ತಾವು ವಾಸಮಾಡುವ ಮನೆಗಳಲ್ಲಾಗಲಿ, ತಮ್ಮ ಹಟ್ಟಿಗಳಲ್ಲಾಗಲಿ ಇರಗೊಡಿಸುವದಿಲ್ಲವೆಂಬ ಅಂಶ ನಿಜವು. ಇದಲ್ಲದೆ ಈ ಜನಗಳು ಗೋಪಾಲಕರಾದದರಿಂದ ಅವರು ವಾಸವಾಗಿರುವ ಸ್ಥಳವು ಕ್ಲುಪ್ತವಾಗಿರುವದಿಲ್ಲವು. ಮತ್ತು ಇವರು ಸಮಯೋಚಿತಗಳಾದ ಆವರಣಗಳನ್ನು ಕಲ್ಪಿಸಿಕೊಂಡು ಕಾಲವು ಕಳೆಯುವರಾದದರಿಂದ ಅವು ಪ್ರಾಯೇಣ ದುರ್ಬಲಗಳಾಗಿಯೇ ಇರುವವು. ಅಪವಿತ್ರರಾದ ಹೆಂಗಸರನ್ನು ತಮ್ಮೊಡನೆ ಇಟ್ಟುಕೊಂಡರೆ ಅಶುಚಿಯೆಂತಲೂ, ಬಹಳ ಪಾತಕವೆಂತಲೂ ಭಾವಿಸುತ್ತಾರೆ. ಪ್ರಸವಿಸಲಿಕ್ಕೆ ಸಮೀಪಿತವಾಗಿ ಆ ಹೆಂಗಸನ್ನು ತಮ್ಮ ಮನೆಗೆ ಸ್ವಲ್ಪ ದೂರದಲ್ಲಿ ಪ್ರತ್ಯೇಕವಾಗಿ ಏತದರ್ಥ ಕಟ್ಟಿರುವ ಒಂದು ಗುಡುಸಲಿಗೆ ಕಳುಹಿಸುತ್ತಾರೆ. ಅಲ್ಲಿ ಅವಳು ಪ್ರಸವಿಸಿದ ಬಳಿಕ ಸುಮಾರು ೩೦ ದಿನಗಳ ವರಿವಿಗೆ ತನ್ನ ಮಗುವಿನೊಡನೆ ಇರುಕಲಿದ್ದು ಬಳಿಕ ತನ್ನ ಮನೆಗೆ ಬರುವ ವಾಡಿಕೆಯಾಗಿರುತಿದೆ. ಪ್ರಸವ ವೇದನೆಯಿಂದ ಸಂಕಟಪಡುವ ಗರ್ಭಿಣಿಯರಿಗೆ ಬೇಕಾದ ಸಹಾಯಗಳೂ ಉಪಚಾರಗಳೂ ಮಾಡಲ್ಪಡುತಿವೆ.

ಬಾಣಂತಿಯು ಸೌಖ್ಯವಾಗಿದ್ದರೆ, ಅವಳು ಆ ಜೋಪಡಿಯಲ್ಲಿ ಏಕಾಂಗಿಯಾಗಿರುತ್ತಾಳೆ. ಅವಳ ಸಮೀಪದಲ್ಲಿ ಬಂಧುಗಳ್ಯಾರಾದರು ಕೂಗಿದರೆ ಕೇಳಬರುವಷ್ಟು ದೂರದಲ್ಲಿ, ಅನವರತ ಕಾದುಕೊಂಡಿದ್ದು ಅವಳಿಗೆ ಅನ್ನೋದಕಗಳಂ ತೆಗದುಕೊಂಡುಹೋಗಿ ಕೊಡುತ್ತಾರೆ. ಅವಳು ಕಾಹಿಲೆಯಾದರೆ, ಅವಳ ಸಹಾಯದಬಗ್ಯೆ ಸೂಲಗಿತ್ತಿಯನ್ನು ಕಳುಹಿಸುವರು. ಅವಳಿಗೆ ಆಹಾರವನ್ನು ಗುಡಸಲಿನ ಹೊರಭಾಗದಲ್ಲಿ ಇಟ್ಟರೆ ಅವಳೇ ತೆಗದುಕೊಳ್ಳುವಳು. ಗೊಲ್ಲರು ಅವಳಿಗೆ ಔಷಧೋಪಚಾರಗಳನ್ನು ಮಾಡುವದಿಲ್ಲವೆಂದು ನೆನಸಕೂಡದು. ಎಲ್ಲಾ ಗೊಲ್ಲರ ಆಚಾರಗಳೂ ಒಂದೇರೀತಿಯಾಗಿರುವದಿಲ್ಲವು. ಕೆಲವರಲ್ಲಿ ಗರ್ಭಿಣಿಯು ವಾಸವಾಗಿರುವ ಗುಡಸಲಿನಲ್ಲಿ ಹೆರುತ್ತಾಳೆ. ತರುವಾಯ ಅವಳನ್ನು ಶಿಶುವಿನೊಡನೆ ಊರಹೊರಗೆ ಹಾಕಿರುವ ಒಂದು ಗುಡಸಲಿಗೆ ಕಳುಹಿಸುತ್ತಾರೆ. ಕೆಲವರು ಮನೆಗಳಲ್ಲಿ ಪ್ರಸವಿಸುವದು ಸೂತಕವೆಂದು ಭಾವಿಸಿ, ಗರ್ಭಿಣಿಯನ್ನು ಊರಾಚೆಯಿರುವ ಮತ್ತೊಂದು ಸ್ಥಳಕ್ಕೆ ಕಳುಹಿಸುವರು. ಈ ಪದ್ಧತಿಯು ಮೂಢಭಕ್ತಿಯಿಂದುಂಟಾದದ್ದೆಹೊರ್ತು ಬೇರಿಲ್ಲವು. ಇದು ಇಲ್ಲಿನವರ ಕ್ರೂರತನವಾಗಿಯೂ ವಿಶೇಷ ಕನಿಕರಕ್ಕೆ ಪಾತ್ರವಾಗಿಯೂ ಭಾವಿಸಕೂಡದು. ನಿಲುಕಡೆಯಾದ ವಾಸಸ್ಥಾನಗಳಿಲ್ಲದೆ, ಪಶುಪಾಲಕರಾಗಿ ಸಂಚರಿಸುವ ಗೊಲ್ಲರು ಬಯಲಿನಲ್ಲಿರುವದನ್ನು ಕ್ರಮವಾಗಿ ಭಾವಿಸುವದಿಲ್ಲವು. ಇವರು ಬೈಲುಗಳಲ್ಲಿ ವಾಸಮಾಡುವದಾಗಿ ಅದು ಈ ಪದ್ಧತಿಗೆ ಒಂದು ಸಾಧಕವಾಗಿದೆ, ಈ ರೀತಿ ಮಾಡಿದಾಗ್ಯೂ ಪ್ರಸವವೇದನೆಕಾಲದಲ್ಲಿ ಅವರು ನಿಷ್ಕರುಣಿಗಳಾಗಿ ತಮ್ಮ ಹೆಂಗಸರನ್ನು ಅಲಕ್ಷ್ಯಮಾಡುವದಿಲ್ಲ. ಆದದರಿಂದ ಈ ವಿಷಯದಲ್ಲಿ ಅವರಿಗಿಂತಲೂ ಬುದ್ಧಿವಂತರಾದವರು ಅವರಿಗೆ ತಿಳುವಳಿಕೆಯನ್ನು ಹುಟ್ಟಿಸಿ ತಾತ್ಕಾಲದಲ್ಲಿ ಅವರಿಗಿರುವ ಮೂಢಭಕ್ತಿಯಿಂದುಂಟಾದ ನಂಬಿಕೆಯನ್ನು ಹೋಗಲಾಡಿಸಬೇಕಾಗಿದೆಯೇ ಹೊರ್ತು ಸರ್ಕಾರದವರನಿರ್ಬಂಧಪೂರ್ವಕವಾದ ಪ್ರವೇಶವು ಈ ವಿಷಯದಲ್ಲಿ ಆವಶ್ಯಕವೆಂದು ತೋರಲಿಲ್ಲವು, ಎಂಬದು. ಈ ರಿಪೋರ್ಟನಮೇಲೆ ಆಫಿಸಿಯೇಟಿಂಗ್ ದಿವಾನರವರು ಕೊಟ್ಟಿರುವ ಕಳೆದ ತಿಂಗಳ ೧೩ನೇ ಮರ್ಕುಂಪೃಷ್ಠ ಪ್ರೊಸೀಡಿಂಗಿನನ್ನು ಈ ಪತ್ರಿಕೆಯ ಕಡೇಪುಟದಲ್ಲಿ ಪ್ರಕಟಿಸಿರುವೆವಾದದರಿಂದ ತನ್ಮೂಲಕ ದಿವಾನರವರ ಅಭಿಪ್ರಾಯವು ಸ್ಪಷ್ಟವಾಗಬಹುದು.

ಪ್ರಸಕ್ತವಿಷಯವನ್ನು ಮಿಷನರಿಗಳು, ಪ್ರಮಾದಕ್ಷೀನ ಪರಿಗಣಿಸಿ, ಪ್ರತಿಕ್ರಿಯೆಯಂ ಬಯಸಿದ್ದೂ, ಅದು ಆಫಿಸಿಯೇಟಿಂಗ್ ದಿವಾನರವರು ವಿಚಾರಾರ್ಹವಾದದ್ದೆಂದು ಭಾವಿಸಿ ಕಾಲಕ್ರಮೇಣ ವಿದ್ಯಾಭಿವೃದ್ಧಿಯೂ ಭೂತದಯಾನುರಾಗಗಳೂ ಉಂಟಾಗುತಬರುವುದೆಲ್ಲ ಈ ಪದ್ಧತಿಯು ಸ್ವತಯೇವ ನಿಂತುಹೋಗುವದಾದಕಾರಣ ಕಾಲಾಂತರದಲ್ಲಿ ವಿದ್ಯಮಾನಗಳುಂಟಾಗುವ ಫಲವನ್ನು ಈಗ ಅಪೇಕ್ಷಿಸುವದು ನಿಷ್ಪ್ರಯೋಜನವಾಗಿದೆಯೆಂಬದಾಗಿ ತೀರ್ಮಾನಿಸಿದ್ದೂ ನಮಗೆ ಮಿತಿಯಿಲ್ಲದ ಆಶ್ಚರ್ಯವನ್ನುಂಟುಮಾಡಿದವು. ಇದಕ್ಕೆ ಕಾರಣವೇನೆಂದರೆ—ಸಹಗಮನ, ಬಲಿ, ಬೆರಳು ಕತ್ತರಿಸುವಣ ವಗೈರೆ ಪ್ರಾಣಹಿಂಸಕಗಳಾದ ಕ್ರೂರಕೃತ್ಯಗಳಲ್ಲಿ ಪ್ರಸಕ್ತ ಸಂಪ್ರದಾಯವೂ ಒಂದಾಗಿದ್ದು, ಅದರಿಂದ ಅನ್ಯರಿಗೆ ಸ್ವರೂಪತಃ ಪ್ರಬಲಹಾನಿ ಯುಂಟಾಗುವದಾಗಿರುವಪಕ್ಷಕ್ಕೆ ಆಗ ಗವರ್ನಮೆಂಟಿನ ಪ್ರವೇಶವನ್ನು ನಾವು ಅಪೇಕ್ಷಿಸಬಹುದೇಹೊರ್ತು ಇಲ್ಲದಿದ್ದರೆ ಅವರ ಅವಧಾನಾರ್ಹವೆಂದೆಣಿಸಲಾಗದು. ಮೇಲೆಕಂಡ ಜನರು ಊರು ಗೊಲ್ಲರೆಂತಲೂ, ಕಾಡುಗೊಲ್ಲರೆಂತಲೂ, ಎರಡುಬಗೆಯವರಾಗಿರುತ್ತಾರೆ. ಊರುಗೊಲ್ಲರು ಪ್ರಾಯಶಃ ಊರುಗಳಲ್ಲೇ ವಾಸವಾಗಿರುತ ಅಲ್ಲಿನವರ ಆಚಾರ ವ್ಯವಹಾರಗಳುಳ್ಳವರಾಗಿ ಸ್ವಲ್ಪ ನಾಗರಿಕತೆಯುಳ್ಳವರಾಗಿರುತ್ತಾರೆ. ಕಾಡುಗೊಲ್ಲರಿಗೆ ವಿಶೇಷ ನಾಗರಿಕತೆ ಇಲ್ಲವಾದಕಾರಣ ಅವರು ತಮಗೆ ಬೇಕಾದ ಕಡೆಗಳಲ್ಲಿ ಇಷ್ಟಬಂದಂತೆಲ್ಲ ವಾಸಮಾಡುವರು. ವ್ಯಾಧರಂತೆ ಇವರು ಯಾವಾಗಲು ಅರಣ್ಯವಾಸವನ್ನೇ ಕೊಂಡಾಡುತ್ತಾರೆ. ಈ ಜನರು ಆದಿಯಿಂದಲೂ ಅನ್ಯರಂತೆ ತಮ್ಮ ಜಾತಿ ನಿಯಮಗಳಲ್ಲಿ ವಿಶ್ವಾಸ ವುಳ್ಳವರಾಗಿರುವವರಿಂದ ಅದಕ್ಕೆ ಯಥೋಚಿತ ಭಂಗವುಂಟುಮಾಡಿದರೆ ಅದುಸಹ ಅವರು ಬಹಳ ಅತೃಪ್ತಿಯೊಡನೆ ನೋಡುವರು. ಅರಣ್ಯ ನಿವಾಸಿಗಳಾದವರು ರಜಸ್ವಲಾಸ್ತ್ರೀಯರನ್ನೂ ಬಾಣಂತಿಯರನ್ನೂ ದೂರದೊಳಿಡುತ್ತಾರೆಂಬದು ಈಗ ಪ್ರಬಲ ಆಕ್ಷೇಪನೀಯಾಂಶವಾಗಿ ಏರ್ಪಟ್ಟಿದೆ. ಹಿಂದೂಜನರಲ್ಲಿ ನಡೆದುಬರುವ ಅನಾದಿಸಿದ್ಧಗಳಾದ ಸಂಪ್ರದಾಯಗಳಲ್ಲಿ ಇದೂ ಒಂದೆಂಬುದಾಗಿ ಭಾವಿಸಲ್ಪಟ್ಟಿರುತಿದೆ. ಈ ಸಂಪ್ರದಾಯವು ಅನಿರೂಪಕವೆಂದು ನುಡಿಯುವಪಕ್ಷಕ್ಕೆ ಆಗ ನಾವು ಆಕ್ಷೇಪಿಸಬಹುದೇಹೊರ್ತು ಇದಕ್ಕೆ ಬಲವತ್ತರಗಳಾದ ಕಾರಣಗಳಿರುವಲ್ಲಿ ಸುಲಭವಾಗಿ ಇದು ನಾವು ತಿರಸ್ಕರಿಸುವದನುಚಿತವು. ಸ್ತ್ರೀಯು ರಜಸ್ವಲೆಯಾಗಿರುವಾಗಲೂ, ಪ್ರಸವಿಸಿರುವಾಗಲೂ, ತಮ್ಮ ಮೂಲಕ ಅನ್ಯರಿಗೆ, ತತ್ರಾಪಿ ತಮ್ಮ ಪುರುಷರಿಗೊಂದು ಹಾನಿ ಉಂಟಾಗಬರುವಬಗ್ಯೆ ಆಕಾಲವನ್ನು ಅವರು ಪ್ರತ್ಯೇಕವಾಗಿದ್ದು ಕಳೆಯುವದು ಹಿಂದೂಗಳಲ್ಲಿ ಅದ್ಯಾಪಿನೆಲಗೊಂಡಿರುವ ಸಾಮಾನ್ಯ ವಾಡಿಕೆಯಾಗಿರುತಿದೆ. ಇಂತಾಸ್ಥಿತಿಯಲ್ಲಿ ಹೆಂಗಸರಿಗೆ ಬೇಕಾದ ಉಪಚಾರಗಳನ್ನು ಅನ್ಯರಂತೆ ಮೇಲೆಕಂಡ ಗೊಲ್ಲರು ಸಹ ಧಾರಾಳವಾಗಿ ಮಾಡುತ್ತಾರೆಂದು ಡೆಪ್ಯುಟಿ ಕಮಿಷನರವರ ರಿಪೋರ್ಟನಿಂದ ತಿಳಿಯಬರುತಿದೆ. ಸಾಧಾರಣವಾಗಿ ದನಕರುಗಳಿಗೆ ಯಾವವಿಧ ಮೈಲಿಗೆಗಳು ಸೋಕಿದಾಗ್ಯೂ ಅವುಗಳಿಗೆ ರೋಗ ಪ್ರಾಪ್ತವಾಗುವಣವೂ, ಹಾಲು ಕರೆಯುವದು ಕಡ್ಡಾಯ ನಿಂತು ಹೋಗುವಣವೂ, ಕದಾಚಿತ್ ಹಿಂಪದ ಹಾಲಿನಲ್ಲಿ ಅನೇಕ ದೋಷಗಳು ತಲೆದೋರಿ ಅದು ಸೇವಿಸುವವರಿಗೆ ವಿರೋಧಿಸುವಣವೂ ಪ್ರಸಿದ್ಧವಿಷಯಗಳಾಗಿರುತಿವೆ. ಈ ವಿಷಯಗಳು ಕಾಡುಗಳಲ್ಲಿ ಬೆಳೆಯುತಲಿರುವ ಅನ್ಯ ಪಮರುಹರ ದನಗಳ ಮೂಲಕ ಬ್ರಿಟಿಷ್ ಗವರ್ನಮೆಂಟಿನವರಿಗೆ ಚೆನ್ನಾಗಿ ವ್ಯಕ್ತವಾಗಿರುತಿವೆ. ಇದಲ್ಲದೆ ಬಳತೆಗೆಯಿಸುವದು, ಪೂಜೆ ಹಾಕಿಸುವದು, ಬಲಿ ಕೊಡಿಸುವದು, ಧೂಪ ಹಾಕಿಸುವದು ಮುಂತಾದ ಕೆಲಸಗಳು ಅದ್ಯಾಪಿ ಸರ್ಕಾರ್ ಖರ್ಚಿನಿಂದಲೇ ನಡೆಯುತ್ತಲಿರುತಲಿವೆ. ಗೊಲ್ಲರ ಮನೆಗಳಲ್ಲಾಗಲಿ, ಸಾಮಾನ್ಯವಾಗಿ ದನಗಳು ಕಟ್ಟಿಕೊಂಡಿರುವವರ ಮನೆಗಳಲ್ಲಾಗಲಿ, ದನಗಳ ಕೊಟ್ಟಿಗೆಗೆ ಹೋಗಲಿಕ್ಕೆ ಯಾರಿಗೂ ಅವಕಾಶವಿರುವದಿಲ್ಲವು. ಮತ್ತು ಅನ್ಯರು ನೋಡುತಲಿರುವಂತೆ ಹಾಲು ಕರೆಯುವದನ್ನಾಗಲಿ, ಮೊಸರು ಕಡೆಯುವದನ್ನಾಗಲಿ, ಮನೆಯವರು ಒಪ್ಪಲಾರರು. ಕಡೆಗೆ ಬೇಕಾದಾಗ ಹಾಲು ಕಾಯಿಸುವ ಮಡಿಕೆಗಳನ್ನು ತಾವು ಕೂಡಾ ಮುಟ್ಟಲಿಕ್ಕೆ ನಿರಾಕರಿಸುವವರಲ್ಲದೆ ನಿಯಮವುಳ್ಳವರು ಮೇಲೆ ಕಂಡ ಕಾರ್ಯಗಳಿಗೆ ಸಿಕ್ಕಿದವರನ್ನು ನಿಯಮಿಸದೆ ತಾವೇ ಮಾಡುವರು. ಈ ವಿಷಯದೊಳಿಷ್ಟರ ನಿಯಮಗಳಿರುವವರಿಂದ ಗೋಸಮೂಹಗಳಲ್ಲಿಯೇ ಯಾವಾಗಲೂ ನಿಯತರಾಗಿರುವ ಸದರೀ ಕಾಡುಗೊಲ್ಲರಿಗೆ ಈಶ್ವರನಲ್ಲಿ ನಿರೂಢವಾದ ಭಕ್ತಿಯೂ, ಆತನು ಆಪನ್ನಿವಾರಕನೆಂಬ ನಂಬಿಕೆಯೂ, ಪ್ರಾಚ್ಯ ಸಂಪ್ರದಾಯಗಳು ಬಲವತ್ತರವಾದ ಮೂಲಾಧಾರದಮೇಲೆ ಏರ್ಪಟ್ಟವಾಗಿರುತಿವೆಯಾಗಿ ಅದು ಕಾದುಕೊಂಡು ಬರುವದು ವಿಶೇಷಶ್ರೇಯಸ್ಕರವೆಂಬಭಾವನೆಯೂ, ನಗರವಾಸಿಗಳಾದ ಆಧುನಿಕ ನವನಾಗರಿಕರಿಗಿಂತ ಅಧಿಕವಾಗಿರುವವರಿಂದ ಗೋಸಂರಕ್ಷಣಾರ್ಥ ಮೈಲಿಗೆಯುಳ್ಳ ಹೆಂಗಸರನ್ನು ಪ್ರತ್ಯೇಕ ಸ್ಥಳಕ್ಕೆ ಕಳುಹಿಸಬೇಕಾದರೆ ಸ್ವಲ್ಪ ದೂರದಲ್ಲಿಯೇ ಅವರನ್ನಿಡಬೇಕಾಗುವದಲ್ಲದೆ ಅವರ ಸಂಸರ್ಗಗಳನ್ನು ಸಹ ಪ್ರತ್ಯೇಕಿಸಬೇಕಾಗುತಿವೆ. ಇಂತಾ ಸ್ಥಿತಿಯಲ್ಲಿ ಉಪಪತ್ತಿಯೂ ಜನಾನುಕೂಲ್ಯವೂ ಕಡಮೆಯಾಗಿರತಕ್ಕವರು ಅದಕ್ಕೆ ತಕ್ಕ ಫಲವನ್ನು ಅನುಭವಿಸಬೇಕಾಗುವದೇನೂ ಆಶ್ಚರ್ಯವಲ್ಲವು. ಮುಖ್ಯವಾಗಿ ಅನಾದಿ ಸಿದ್ಧಗಳಾದ ಆಚಾರಗಳನ್ನು ಇದಂಪ್ರಥಮೇಣ ತಪ್ಪಿಸಬೇಕೆಂಬ ಉದ್ದೇಶವಿರತಕ್ಕವರು ಪ್ರಸಕ್ತಸಂಪ್ರದಾಯವು ಬಹಳ ನಿಕೃಷ್ಟವೆಂದು ಭಾವಿಸುವರೇ ಹೊರ್ತು ರೂಪಕರರಂ ನಿಂದಿಸಲಾರರು.

———o———

ಗತವಾರದಲ್ಲಿ ನಗರಶೋಧಕನೊಬ್ಬನು ನಮಗೆ ಬರೆದಿದ್ದ ಒಂದು ಕಾಗದದ ಮೇಲೆ ನಾವು ತಿಳಿಸಿದ್ದ ಅಭಿಪ್ರಾಯವನ್ನು ಕುರಿತು ಮಾಹೇ ಮಜಕೂರ್ ೧೧ನೇ ತಾ||ನಲ್ಲಿ ತಿರುಪತಿಯಿಂದ ಒಬ್ಬ ದೊಡ್ಡಮನುಷ್ಯರು ಬರೆಯುತ್ತಾರೇನೆಂದರೆ:—

“ತಮ್ಮ ಇಲಾಖೆಯಿಂದ ಬಂದ ಈ ತಿಂಗಳ ೬ನೇ ತಾರೀಖಿನ ಕರ್ಣಾಟಕ ಪ್ರಕಾಶಿಕಾ ಪೇಪರಿನ ೩ನೇ ಪೇಜಿನಲ್ಲಿ ನಗರ ಶೋಧಕನು, ಒಬ್ಬ ಸ್ತ್ರೀ ನಿಮಿತ್ತವಾಗಿ ಬರೆದ ಕಾಗದದಮೇಲೆ ತಾವು ಸವಿಸ್ತಾರವಾಗಿ ಉದಹರಿಸಿರುವ ನೀತಿ ವಾಕ್ಯಗಳನ್ನು ನಾನು ನೋಡಿ ಅತ್ಯಂತ ಸಂತುಷ್ಟನಾದೆನು. ಇಂತಾ ನೀತಿವಾಕ್ಯಗಳು ಪುರಾಣೇತಿಹಾಸಗಳಲ್ಲಿ ಕೆಲವು ಸ್ಥಳಗಳಲ್ಲಿ ಉಕ್ತವಾಗಿದ್ದಾಗ್ಯೂ ಅವುಗಳ ಸಾರತರವಾಗಿ ತಮ್ಮ ಪೇಪರಿನಲ್ಲಿ ಏಕತ್ರ ಉದಹರಿಸಿರುಪದನ್ನು ನೋಡಿದರೆ ಯೆಂತಾ ಮುಗ್ಧನಿಗಾದರೂ ಮೂರ್ಖನಿಗಾದರೂ ಜ್ಞಾನೋದಯವಾಗದೆ ಇರಲಾರದು. ನನಗಂತೂ ಅವನ್ನು ನೋಡಿದಾರಭ್ಯ ಒಂದು ಅತ್ಯಂತ ಸಂತೋಷ ವುಂಟಾಗಿ ಯೆಷ್ಟುದಫಾ ನೋಡಿದಾಗ್ಯೂ ತೃಪ್ತಿ ಸಾಲದೆ ಸರ್ವದಾ ಅವನ್ನು ನೋಡುತಲೇಇರಬೇಕೆಂಬಷ್ಟು ಕುತೂಹಲ ವುಂಟಾಗಿದೆ. ಈ ಹೃದ್ಯವಾದ ನೀತಿ ವಾಕ್ಯಗಳನ್ನು ಲೀಲಾಜಾಲವಾಗಿ ತಾವು ಪೇಪರ್ನಲ್ಲಿ ಉದಹರಿಸುವ ತಮ್ಮ ಪ್ರಾಜ್ಞತೆಯನ್ನೂ ವಿವೇಕ ವೈಭವವನ್ನೂ ಕುರಿತು ಯೆಷ್ಟು ಶ್ಲಾಘನೆ ಮಾಡಿದರೂ ತೃಪ್ತಿ ಆಗದು. ಇಂತಾ ನೀತಿವಾಕ್ಯ ನಿಕ್ಷೇಪವಾದ ತಮ್ಮ ಪೇಪರ್ ಸರ್ವದಾ ಶಾಶ್ವತವಾಗಿ ವೃದ್ಧಿ ಹೊಂದುತಲಿರಬೇಕೆಂದು ಕೋರುತ್ತೇನೆ.”

Occasional Notes.
ನೈಮಿತ್ತಿಕ ವಿಷಯನ್ಯಾಸ.

Abolition of an appointment.—ಮದರಾಸ್ ಮತ್ತು ಮುಂಬೈ ಗವರ್ನಮೆಂಟಿಗಳಲ್ಲಿ ಜಡ್ಜ್ ಅಡ್ವೋಕೇಟ್ ಜನರಲ್ ಕೆಲಸಗಳು ವಜಾಮಾಡಲ್ಪಡುವದೆಂದುಪ್ರಸ್ತಾವ ವುಂಟಾಗಿದೆ.

Completion of a railway.—ಕ್ಯಾಸ್ಪಿಯನ್ ಸಮುದ್ರತೀರದ ಮಾರ್ಗವಾಗಿ ರಷಿಯಾ ಸರ್ಕಾರದವರಿಂದ ಹಾಕಲ್ಪಡುತಲಿರುವ ರಯಿಲ್ವೆಯ ಕಾಮಗಾರಿಯು ಸಮರ್ಕಂಡ್ವರಿವಿಗೆ ಬರುವ ಮೇ ತಿಂಗಳೊಳಗಾಗಿ ಪೂರ್ತಿಯಾಗುವದು ಕೆಲವುಕಾಲೆಗಳಿಗೆ ಯೆರಡುದೊಡ್ಡ ಸೇತುವೆಗಳು ಕಟ್ಟಬೇಕಾದೊಂದೇ ಬಾಕೀಯಲ್ಲಿರುತಿದೆಯೆಂದು ತುರ್ಕಿಸ್ತಾನ ಗೆಜೆಟ್ ಪತ್ರಿಕೆ ತಿಳಸುತಿದೆ.

Discovery of rich gold reefs.—ಧಾರವಾಡ ಡಿ||ಗೆ ಸೇರಿದ ಗದಗದಲ್ಲಿ ಕೆಲವುಕಡೆ ಹೊಸದಾಗಿ ಚಿನ್ನದ ಗನಿಗಳು ಕಂಡುಬಂದು ಅವರೊಳಗಿನ ಕಲ್ಲುಗಳನ್ನು ತೆಗದು ಒಡೆದುನೋಡುವಲ್ಲಿ ವಿಶೇಷವಾಗಿ ಚಿನ್ನ ದೊರೆತು ಆಸಂಗತಿ ಮುಂಬೈ ಗವರ್ನಮೆಂಟಿಗೆ ರಿಪೋರ್ಟಾಗಿರುತಿದೆ.

A claim settled.—ಸರ್ ಹೋರೇಸ್ ರಂಬೋಲ್ಡ್ ಎಂಬವರು ಹೈದರಾಬಾದ್ ಸಂಸ್ಥಾನದಿಂದ ತಮಗೆ ನಾಲ್ಕಾರುಲಕ್ಷ ರೂಪಾಯಿಗಳು ಬರಬೇಕೆಂದು ತಂದ ದಾವೆಯ ಪರ್ಯಾಪ್ತಿಬಗ್ಯೆ ಏರ್ಪಾಡಾದ ಕಮಿಟಿಯ ಮೆಂಬರ್ಗಳ ಅಭಿಪ್ರಾಯಗಳು ಭಿನ್ನಗಳಾಗಲು, ಸದರೀ ಸರ್ಕಾರದವರು ದಾವೇದಾರರಿಗೆ ಮೂರುಲಕ್ಷ ರೂಪಾಯಿಗಳು ಕೊಟ್ಟು ಇನ್ನೇನೂ ಬಾಕೀ ಇಲ್ಲವೆಂದು ಸರ್ ಹೋರೇಸ್ಯವರಿಂದ ರಸೀದಿ ಬರೆಸಿಕೊಂಡರೆಂದು ಅಲ್ಲಿನ ಪತ್ರಿಕೆಯೊಂದು ತಿಳಸುತಿದೆ.

False personation.—ಕಳೆದ ಸಂವತ್ಸರದೊಳು, ಕಾಶೀಯಲ್ಲಿ ನಡೆದ ಮಿಡಿಲ್ಸ್ಕೂಲ್ ಪರೀಕ್ಷೆಯಲ್ಲಿ ನಾರಾಯಣಸಿಂಗ್ ಯೆಂಬಾತನು ಠಾಕೂರ್ ಪ್ರಸಾದ್ ಯೆಂಬವನಿಗೆ ಕೆಲವು ಹಣ ಕೊಟ್ಟು ತನ್ನ ಹೆಸರು ಹೇಳಕೊಂಡು ಸದರೀ ಪರೀಕ್ಷೆಗೆ ಹೋಗುವಂತೆ ಮಾಡಿದ್ದನು. ಈ ಮೋಸಕೃತ್ಯವು ಈಚೆಗೆ ಹೊರಗೆ ಬಂದು ಸದರೀ ಇಬ್ಬರು ಅಪರಾಧಿಗಳೂ ಇಂಡಿಯನ್ ಪಿನಲ್ಕೋಡ ಅನುಸರಿಸಿ ಕ್ರಿಮಿನಲ್ಚಾರ್ಜುಮಾಡಲ್ಪಡುವವರಾಗಿದ್ದಾರೆ.

Arrest of a forger.—ಐದು ರೂಪಾಯಿಗಳ ಬಾಬತು ಕರೆನ್ಸೀ ನೋಟುಗಳನ್ನು ಬನಾವಟಿ ಮಾಡಿದ ಒಬ್ಬ ಬಂಗಾಳಿ ದೇಶೀಯನು ಕಡೆಗೆ ಕಾಶಿಯಲ್ಲಿ ದಸ್ತಗಿರಿ ಮಾಡಲ್ಪಟ್ಟನು. ಅವನಲ್ಲಿ ೫ ರೂಪಾಯಿಗಳ ಬಾಬತು ೨೦೦ ನೋಟುಗಳು ಸಿಕ್ಕಿದವು. ಸದರೀಯವನ ವಿಚಾರಣೆಯಲ್ಲಿ, ತನಗೆ ಕುಮ್ಮಕ್ಕಾಗಿ ಮೂವರು ಯುರೋಪಿಯನ್ಗಳೂ ಕೆಲವರು ಬಂಗಾಳಿಗಳುಸೇರಿದ್ದಂತೆ ಹೇಳುತ್ತಾನಂತೆ.

Social progress in Baroda.—ಇತ್ತ ದೇಶದೊಳಗಣ ಇತರ ನೇಟಿವ್ ಸಂಸ್ಥಾನಾಪೇಕ್ಷೆಯಾ ಬರೋಡೆಯೊಳು ಕೆಲವುಅಂಶಗಳಲ್ಲಿ ವೈಲಕ್ಷಣ್ಯ ವೃದ್ಧಿಯಾಗುತಲಿದೆ. ಗಾಯಕವಾಡ ಮಹಾರಾಜರವರ ಪ್ರಜೆಗಳ ಪೈಕಿ ಕೆಲವರು ಆಗಿಂದಾಗ್ಯೆ ಸಭೆ ಸೇರಿ, ಗೃಹಕೃತ್ಯ ನಿರ್ವಹಣ ಕ್ರಮವನ್ನು ಕುರಿತು ಉಪನ್ಯಾಸ ಮಾಡುತ್ತಾರೆ. ಒಂದುದಿನ, ಈ ಸಭೆಗೆ ಇಬ್ಬರು ನೇಟಿವ್ ಹೆಂಗಸರುಬಂದು ಅಲ್ಲಿ ನಡೆದ ಉಪನ್ಯಾಸಗಳ ಕೇಳಿ, ಅದು ಮುಗಿದ ತರುವಾಯ, ಸಭಿಕರನ್ನುದ್ದೇಶಿಸಿ, ಬುದ್ಧಿ ಚಮತ್ಕಾರ ಪೂರ್ವಕವಾಗಿ

ಕೆಲವುಹೊತ್ತು ಮಾತನಾಡಿದರೆಂದು ಒಂದಾನೊಂದು ನೇಟಿವ್ ವೃತ್ತಾಂತಪತ್ರಿಕೆ ಹೇಳುತ್ತದೆ. ಈ ಕಾಲದಲ್ಲಿ ಪುರುಷರಿಗೆ ಸಮಾನವಾಗಿ ಸ್ತ್ರೀಯರು ಸಹ ವಿದ್ಯಾವಂತರಾಗುತ ಬರುತ್ತಾರೆಂಬ ಅಂಶವು ಪ್ರಕಟಿಸುವದೇ ಸದರೀ ಪತ್ರಿಕಾ ಲೇಖಕರ ಉದ್ದೇಶವೇ ಹೊರತು ಪುರುಷರಿಗಿಂತ ಸ್ತ್ರೀಯರು ವಿದ್ಯಾಬಲ ಉಳ್ಳವರೆಂದು ತಿಳಿಸುವದಕ್ಕೆ ಪ್ರವರ್ತಿಸಿದವರಲ್ಲವು.

Fatal love.—ಈಚೆಗೆ ಕೆಲವುದಿವಸಗಳಹಿಂದೆ ಲಕ್ನೋಪಟ್ಟಣದಲ್ಲಿ ಸುನ್ನೀಮತಕ್ಕೆ ಸೇರಿದ ಒಬ್ಬ ಮುಸಲ್ಮಾನನು ಷಿಯಾಮತಕ್ಕೆ ಸೇರಿದ ಒಬ್ಬಾತನ ಮಗಳ ರೂಪ ಯೌವನಾದಿಗಳಿಂದ ಮೋಹಿತನಾಗಿ ಅವಳನ್ನು ಮದುವೆ ಮಾಡಿಕೊಳ್ಳಬೇಕೆಂದು ಯೋಚಿಸಿ, ಅವಳ ತಂದೆ ತಾಯಿಗಳನ್ನು ಕೇಳಲಾಗಿ ತಮ್ಮ ಷಿಯಾಮತಕ್ಕೆ ಸೇರಿದರೆ ತಮ್ಮ ಮಗಳನ್ನು ಮದುವೆಮಾಡಿಕೊಡುವದಾಗಿ ಅವರಿಬ್ಬರೂ ಹೇಳಿದರು, ಪರಂತು ಅವನು ಅದಕ್ಕೆ ಒಪ್ಪದೆ, ತನ್ನ ಉದ್ದೇಶ ಸಿದ್ಧಿಗೆ ಬೇರೆ ಮಾರ್ಗವನ್ನು ತಿಳಿಯಲಾರದೆ ಅಫೀಮನ್ನು ತಿಂದು ಪ್ರಾಣಬಿಟ್ಟನಂತೆ. ಇದು ಕೇವಲ ಆಶ್ಚರ್ಯಕರವಾದ ವಿಷಯವಾಗಿರುತ್ತದೆ, ಯಾಕಂದರೆ, ಮಹಮ್ಮದೀಯರ ಆ ಪ್ರಕಾರ, ಕ್ರಿಸ್ತ ಮತ್ತು ಯಹೂದೀ ಮತಸ್ಥರಾದವರ್ಗ್ಯ ದುಹಿತೆಗಳಾಗಿರುವದಕ್ಕೆ ಬಾಧಕವಿರುವದಿಲ್ಲವು. ಹಾಗಿರಲಾಗಿ, ಮುಸಲ್ಮಾನರಲ್ಲಿ ಯೂ ಒಬ್ಬಾಗಿರುವ ಒಂದು ಸಂಪ್ರದಾಯ ಭೇದಕ್ಕಾಗಿ ವಿವಾಹಕ್ಕೆ ಪ್ರತಿಬಂಧಕ ಸಾಮಗ್ರಿಯಾಗಿ ಏರ್ಪಟ್ಟದ್ದು ಚಿರಕಾಲ ಈ ಇಂಡಿಯಾದೇಶ ವಾಸದಿಂದುಂಟಾದ ಅಭಿಮಾನವಾಗಿ ಕಾಣುತ್ತದೆ. ಮುಸಲ್ಮಾನರಲ್ಲಿ ಶಾಸ್ತ್ರರೀತ್ಯಾ ವಿಧವೆಯರಿಗೆ ವಿವಾಹ ಮಾಡುವದಕ್ಕೆ ಅಡ್ಡಿ ಮದ್ದು ಕೆಲವುಕೆಲವುಕಡೆ ಆಚಾರವಿದ್ದಾಗ್ಯೂ ದೊಡ್ಡ ಮನೆತನಗಳಲ್ಲಿ ಹಿಂದೂ ಸಂಪ್ರದಾಯವನ್ನವಲಂಬಿಸುತ್ತಾರೆ. ಪ್ರಸಕ್ತ ವಿಷಯದಲ್ಲಿ ಪತಿಯಾಗಬೇಕೆಂದಪೇಕ್ಷಿಸಿದವನು ವಿರಹದ ಪರಾಕಾಷ್ಟೆಯನ್ನನುಭವಿಸಿದಂತಾಯಿತು.

H. H. the Maharaja of Mysore at Baroda.—ಬರೋಡೆ, ೨ನೇ ಫೆಬ್ರುವರಿ—ಮೈಸೂರು ಮಹಾರಾಜರವರು, ಈದಿನಬೆಳಿಗ್ಗೆ ೧೧ ಘಂಟೆಗೆ, ಮಿ॥ ಪೊಲಿಟಿಕಲ್ ಏಜಂಟರಾದ ಮಿ॥ ಕಿಂಗ್, ತಮ್ಮ ದಿವಾನರವರು, ತಮ್ಮ ಭಾವಮೈದನರಿಬ್ಬರು, ಚೀಫ್‌ಸೆಕ್ರೆಟರಿಯವರು, ನೂರ ಐವತ್ತು ಮಂದಿ ಪರಿಜನರು, ಇವರುಗಳೊಡನೆ ಸ್ಪೆಷಲ್ ಟ್ರೇನಿನಲ್ಲಿ ಇಲ್ಲಿಗೆ ದಯಮಾಡಿದರು. ಆಕಾಲದಲ್ಲಿ ರೈಲ್ ಸ್ಟೇಷನ್ನಿನಲ್ಲಿ ಇಲ್ಲಿನ ಪೊಲಿಟಿಕಲ್ ಏಜಂಟರಾದ ಸರ್ ಆಲಿವರ್ ಸೇಂಟ್‌ಜಾನ್, ದಿವಾನರು, ನಾಯಬ್‌ದಿವಾನರು ಮತ್ತು ನವಾಬ ಸರ್ದಾರರು ಮೊದಲಾದವರು ಹಾಜರಿದ್ದು ಮಹಾರಾಜರವರನ್ನು ಉಚಿತ ಮರ್ಯಾದೆಗಳೊಡನೆ ಬರಮಾಡಿಕೊಂಡರು. ಮಹಾರಾಜರವರ ಆಗಮನ ಸೂಚಕವಾಗಿ ೨೧ ತೋಪುಗಳು ಹಾಕಲ್ಪಟ್ಟವು. ಬ್ರಿಟಿಷ್ ಮತ್ತು ನೇಟಿವ್‌ಸೇನೆಗಳು ಹಾಜರಿದ್ದು ಪ್ರಜೆಂಟ್‌ಮಾಡಿದವು. ರೈಲ್ವೇಸ್ಟೇಷನ್ ಕಟ್ಟಡವು ವಿವಿಧಾಲಂಕಾರ ಶೋಭಿತವಾಗಿ ಕಣ್ಗೊಳಿಸುತಲಿತ್ತು. ಮಹಾರಾಜರವರು ಕೆಲವು ನಿಮಿಷಗಳಕಾಲ ರೆಸಿಡೆಂಟರವರೊಡನೆ ಮಾತನಾಡಿದಮೇಲೆ ಅವರಿಗಾಗಿ ನಿಯತವಾಗಿದ್ದ ರಥವನ್ನಧಿರೋಹಿಸಿ, ಅಲಂಕಾರಪೂರ್ವಕ ಶೋಭಿತವಾಗಿದ್ದ ಮಾರ್ಗವಾಗಿ ಮೋತೀಬಾಗ್ ಎಂಬ ತೋಟಕ್ಕೆ ಬಿಜಮಾಡಿದರು. ಅಲ್ಲಿ ನಡೆದ ದರ್ಬಾರಿನಲ್ಲಿ ಇಲ್ಲಿನ ದಿವಾನರವರು ಇಲ್ಲಿನ ಪ್ರಮುಖರಿಗೂ ಆಫೀಸರುಗಳಿಗೂ ಮಹಾರಾಜರವರ ಭೇಟೀಮಾಡಿಸಿದರು. ತರುವಾಯ ಮೈಸೂರು ಮಹಾರಾಜರವರ ಪರಿಜನರಿಗೆಲ್ಲ ಪುಷ್ಪಹಾರಗಳು, ಅತ್ತರ್ ತಾಂಬೂಲಗಳು ಕೊಡಲ್ಪಟ್ಟವು. ಮರ್ಯಾದಾರ್ಥವಾಗಿ ತಾಪೆ ಮೊದಲಾದವುಗಳು ನಡದಮೇಲೆ ಮಹಾರಾಜರವರು ಈ ಪಟ್ಟಣವನ್ನೂ ಇತರಸ್ಥಾನಗಳನ್ನೂ ನೋಡುವದಕ್ಕೆ ಹೊರಟರು. ಆ ವಿಶೇಷ ಸಂದರ್ಭ ಗೌರವಾರ್ಥ ಇಲ್ಲಿನ ಕಚ್ಚೇರಿಗಳಿಗೆಲ್ಲ ಒಂದುದಿನ ರಜಾ ಕೊಡಲ್ಪಟ್ಟಿತು. ಮೋತಿಬಾಗ ತೋಟದಲ್ಲೂ ಫೇಬಿರ್ಸ್‌ಪಾರ್ಕ್ ಎಂಬ ತೋಟದಲ್ಲೂ ದೀಪೋತ್ಸವ ನಡೆದವು. ಈದಿನರಾತ್ರಿ ಬಾಣವಿನೋದಗಳಿಗೆ ಏರ್ಪಾಡಾಗಿರುತ್ತದೆ. ನಾಳೆಯ ದಿನ ಸೈನಿಕಪ್ರವರ್ತನ ನಾಗುವದು. ತರುವಾಯ ನಜರ್‌ಬಾಗ್‌ನಲ್ಲಿ ಅರಮನೆ ಜವಾಹಿರಿಗಳನ್ನು ನೋಡುವರು. ಮಧ್ಯಾನ್ಹೋತ್ತರ ನಜರ್‌ಬಾಗ್‌ನಲ್ಲಿ ಮಹಾರಾಜರವರನ್ನು ದಯಮಾಡಿಸಿ ಅವರಿಗೂ ಅವರ ಪರಿವಾರಕ್ಕೂ ಖಿಲ್ಲತ್ತುಗಳು ಕೊಡಲ್ಪಡುವವು. ತೋಟದ ಅಂಗಳದಲ್ಲಿ ಬಹುವಿಧ ಆಟಗಳು ನಡೆಸಲ್ಪಡುವವು. ಬುಧವಾರದದಿನ ರಾತ್ರಿ ಹತ್ತು ಗಂಟೆಗೆ ಮಹಾರಾಜರವರು ಮುಂಬೈಗೆ ಪ್ರಯಾಣ ಬೆಳೆಸುವರು. ದೀಪೋತ್ಸವಗಳೂ, ಪೊಲೀಸ್ ಮೊದಲಾದ ಇತರ ಏರ್ಪಾಡುಗಳೂ ಬಹಳ ಚನ್ನಾಗಿ ನಡೆದವು. ಮಹಾರಾಜರವರ ಸಂದರ್ಶನಾರ್ಥ ಬಹುಮಂದಿ ಬಂದುಸೇರಿದ್ದರು — ಇಂಡ್ಯ ಟೈಂಸ್ ಬಾತಮಿದಾರನ ಕಾಗದ.

LOCAL AND PROVINCIAL NEWS.
ಒಳದೇಶ ಮತ್ತು ತಾಲ್ಲೂಕ್‌ಜಾತ ವೃತ್ತಾಂತವು

——೧——

The British Resident.—ಇಲ್ಲಿನ ಆಫಿಸಿಯೇಟಿಂಗ್ ಬ್ರಿಟಿಷ್ ರೆಸಿಡೆಂಟರಾದ ಸರ್‌ಹಾರಿ ಪ್ರಿಡರ್‌ಗಾಸ್ಟ್‌ಯವರು ಈದಿನ ಮೈಸೂರು ಮಾರ್ಗವಾಗಿ ಕೊಡಗುಪ್ರಾಂತಕ್ಕೆ ಸರ್ಕ್ಯೂಟಿಗೆ ಪಯನಮಾಡುವರೆಂದು ತಿಳಿಯಬರುತ್ತದೆ.

Purification.—ಮಾಹೇವಾರ ಜನೂರಿ ೧೫ನೇ ತಾರೀಖಿನಲ್ಲಿ ನಗರ ಶೋಧಕನು ಬರೆಯುತ್ತಾನೇನಂದರೆ —"ಈಚೆಗೆ ನಡೆದ ಸಮುದ್ರಯಾನ ಪ್ರಾಯಶ್ಚಿತ್ತಕ್ಕೆ ವಶ್ಪಣೆಗಾಗಿಯೂ, ಲೋಕೋಪಕಾರಿ ಮತ್ತು ವೈಲಕ್ಷಣ್ಯಾಭಿಲಾಷಿಯೆಂಬ ಪ್ರಶಂಸೆಗಾಗಿಯೂ ಹೋಗಿದ್ದವರನ್ನು ಅವರ ಇಷ್ಟಬಂಧುಗಳು ಅಂಗೀಕರಿಸದೆ ನಿರಾಕರಿಸುವದರಿಂದ ಈಗ ಒಬ್ಬೊಬ್ಬರಾಗಿ ಪ್ರಾಯಶ್ಚಿತ್ತಗಳನ್ನು ಮಾಡಿಸಿಕೊಳ್ಳುತಲಿದಾರೆಂದು ತಿಳಿಯಬರುತ್ತದೆ," ಎಂಬದು.

Subscriptions and donations.—ದಕ್ಷಿಣ ಮಹಾರಾಷ್ಟ್ರ ರೈಲ್ವೇ ಕಂಪೆನಿಯಲ್ಲಿ ಅಂಡರ್‌ಗಾರ್ಡ್ ಕೆಲಸದೊಳಿದ್ದ ರಾಮರಾವ್ ಎಂಬಾತನು ತನ್ನ ಕುಟುಂಬಕ್ಕೆ ಸೇರಿದವರನ್ನೆಲ್ಲ ನಿರ್ಗತಿಕರನ್ನಾಗಿಬಿಟ್ಟು ಮೃತಪಟ್ಟದರಿಂದ ಅವರಿಗೆ ಜೀವನೋಪಾಯವು ಕಲ್ಪಿಸಬೇಕೆಂಬ ಅಭಿಪ್ರಾಯವು ಈಚೆಗೆ ಕಂಪೆನಿಯವರಿಗುಂಟಾಗಿ ಧರ್ಮಾರ್ಥ ಸಹಾಯ ಮಾಡುವವರಮೂಲಕ ಚಂದಾ ವಸೂಲ್ಮಾಡಲಿಕ್ಕೆ ತಮ್ಮನೌಕರರಲ್ಲೊಬ್ಬರಿಗೆ ಹುಕುಂಕೊಟ್ಟಿರುತ್ತಾರೆಂದು ತಿಳಿಯಬರುತ್ತದೆ.

Accident by fire.—ಈಪೂರು ಪಾಂಚಾಳಪೇಟೆಯಲ್ಲಿರುವ ಸದರೀ ಜಾತಿಯವಳಾದ ಸುಮಾರು ೧೨—೧೩ ವರುಷಗಳ ವಯಸ್ಸುಳ್ಳ ಹುಡಿಗಿಯೊಬ್ಬಳು ಆದಿಭಾನುವಾರದದಿನ ರಾತ್ರಿ ೯ ಘಂಟೆಯ ವೇಳೆಯಲ್ಲಿ ಅಡಿಗೆ ಮಾಡುತಲಿರುವಾಗ್ಯೆ ಅವಳು ಉಟ್ಟಿದ್ದ ಸೀರೆಯ ಸೆರಗಿಗೆ ಸನಿಹದೊಳಿದ್ದ ದೀಪ ತಗಲಿ ಹತ್ತಿಕೊಳ್ಳಲು ಅದು ಬಿಚ್ಚಲಿಕ್ಕೆ ಸ್ವಲ್ಪ ಸಾವಕಾಶವಾದದರಿಂದ ಅಷ್ಟರಲ್ಲಿ ಅವಳ ಮೈಯೆಲ್ಲಾ ಸುಟ್ಟುಹೋಯಿತು. ಕೂಡಲೇ ಅವಳನ್ನು ಚಿಕಿತ್ಸೆಯಬಗ್ಗೆ ಆಸ್ಪತ್ರೆಗೆ ಕರೆದುಕೊಂಡು ಹೋದರು ಪರಂತು ಅಲ್ಲಿ ಅಸಾಧ್ಯವೆಂದು ಏರ್ಪಟ್ಟದರಿಂದ ಮನೆಗೆ ವಾಪಸ್ ತಂದರು. ಮಾರನೆಯದಿನ ರಾತ್ರಿ ಸದರೀ ಹುಡಿಗಿ ಮೃತಪಟ್ಟಳೆಂದು ತಿಳಿಯಬರುತ್ತದೆ. ಇಂತಾ ಅಪಾಯಗಳು ಅಲ್ಲಲ್ಲಿ ಉಂಟಾಗುತಲಿರುತ್ತವೆಯಾಗಿ ಜೋಕೆಯ ಸವಿಷಯದಲ್ಲಿ ಬಹಳ ಜಾಗರೂಕರಾಗಿರಬೇಕಲ್ಲದೆ ಚಿಕ್ಕವಯಸ್ಸಿನವರನ್ನು ಇಂತಾ ಕೆಲಸಗಳಿಗೆ ನಿಯಮಿಸುವದು ಅನುಚಿತವು.

Dismissal.—ಗವೀಪುರದ ಸಾತ್ರೀಹವನದ ಸಂತರ್ಪಣೆಯಲ್ಲಿ ಅಪಮಾನ ಪಡಿಸಿದರೆಂದು ಜೇಡರಹಳ್ಳಿ ನಂಜುಂಡಶಾಸ್ತ್ರಿಗಳಭಾರ್ಯೆ ಲಕ್ಷ್ಮಮ್ಮನೆಂಬಾಕೆಯು ವೀರರಾಘವಶಾಸ್ತ್ರಿಗಳು ವಗೈರೆ ಬ್ರಾಹ್ಮಣರಮೇಲೆ ತಂದಿದ್ದ ಕ್ರಿಮಿನಲ್ ಮೊಕದ್ದಮೆಯು ಇಲ್ಲಿನ ಟೌನ್ ಮ್ಯಾಜಿಸ್ಟ್ರೇಟಿಕೋರ್ಟಿನಲ್ಲಿ ವಿಚಾರಣೆಯಾಗಿ ಕಡೆಗೆ ರುಜುವಾತು ಸಾಲದೆ ಮೊಕದ್ದಮೆಯು ಡಿಸ್‌ಮಿಸ್ ಆಯಿತೆಂದು ತಿಳಿಯಬರುತ್ತದೆ. ಇದೇರೀತಿ ಮಿಸ್‌ಬಾಯೀ ಎಂಬಾಕೆಯಮೇಲೆ ತರಲ್ಪಟ್ಟ ಮೊಕದ್ದಮೆಯೂ, ಅವಳು ಇನ್ನು ಕೆಲವರಮೇಲೆ ತಂದಿದ್ದ ಬದಲು ದಾವೆಯೂ ಕ್ರಮವಾಗಿ ದರ್ಯಾಪ್ತಾಗಿ ಎರಡೂ ತಳ್ಳಿಹಾಕಲ್ಪಟ್ಟವು. ಮುಖ್ಯವಾಗಿ ಇಂತಾ ಮೊಕದ್ದಮೆಗಳು ಆಗಿಂದಾಗ್ಗೆ ಬರುತಲಿದ್ದರೆ ಮೊಕದ್ದಮೆಗಳನ್ನು ನಡೆಸುವ ವಕೀಲರಿಗೂ ಅವುಗಳಂ ದರ್ಯಾಪ್ತುಮಾಡುವ ಮ್ಯಾಜಿಸ್ಟ್ರೇಟರಿಗೂ, ಅವುಗಳಂ ಕೆಲಸಬಿಟ್ಟು ನೋಡತಕ್ಕ ಇತರರಿಗೂ ಸ್ವಲ್ಪ ವಿಶ್ರಾಂತಿ ಪ್ರಯುಕ್ತವಾದ ಸಂತೋಷವನ್ನುಂಟುಮಾಡಲಿಕ್ಕೆ ಆಸ್ಪದವಾಗಿರುವದು.

H. H. the Maharaja.—ಶ್ರೀಮನ್ಮಹಾರಾಜರವರು ಉತ್ತರದೇಶ ಸಂಚಾರವಂ ಪೂರೈಸಿಕೊಂಡು ಸ್ಪೆಷಲ್‌ಟ್ರೇಯಿನಿನಲ್ಲಿ ಬರುವ ಗುರುವಾರದದಿನ ಬೆಳಿಗ್ಗೆ ೭½ ಘಂಟೆಗೆ ಈ ಊರಿಗೆಬಂದು ಕೂಡಲೆ ರಾಜಧಾನಿಗೆ ಸವಾರಿ ಚಿತ್ತೈಸುವರೆಂದು ತಿಳಿಯಬರುತ್ತದೆ. ಶುಕ್ರವಾರದದಿನ ಮಹಾರಾಜರವರ ಜನ್ಮ ವರ್ಷವರ್ಧಂತಿ ಯಾದದರಿಂದ ಪ್ರಯಾಣಾಯಾಸವು ಸಹ ನಿವಾರಿಸಿಕೊಳ್ಳಲಿಕ್ಕೆ ಅವಕಾಶವಿಲ್ಲದೆ ಕೂಡಲೆ ಹೊರಡಬೇಕಾದ ಆವಶ್ಯಕತೆ ಉಂಟಾದಂತೆ ತೋರುತ್ತದೆ. ಈಸಲ ಬಿಸಿಲುಕಾಲವು ಸ್ವಲ್ಪ ಮುಂಚಿತವಾಗಿಯೇ ಪ್ರಾರಂಭವಾದಂತೆ ಕಂಡುಬರುವದರಿಂದ ಮಹಾರಾಜರವರು ಪೂರ್ವಕಾರ ಮಾರ್ಚಿ ಮಧ್ಯಭಾಗದಲ್ಲಿಯೇ ನೀಲಗಿರಿಗೆ ದಯಮಾಡುವರೆಂದೆಣಿಸುತ್ತೇವೆ. ಮುಖ್ಯವಾಗಿ ಮಹಾರಾಜರವರಿಗೆ ದೇಶಸಂಚಾರದೊಳಿರುವ ಕೋರಿಕೆ ಉತ್ಸಾಹಗಳು ಅವರಿಗೆ ತಕ್ಕ ಫಲವನ್ನೀಯ್ಯಬೇಕೆಂದು ಕೋರುವೆವು.

The Geographical Primer Series.—ಮೆ॥ ಸೂರ್ಯನಾರಾಯಣರಾವ್ ಬಿ. ಎ. ಯವರಿಂದ ಈಚೆಗೆ ರಚಿಸಲ್ಪಟ್ಟ ಭೂಗೋಳ ಶಾಸ್ತ್ರವೆಂಬ ಒಂದು ಸಣ್ಣ ಗ್ರಂಥದ ಪ್ರತಿಯು ನಮಗೆ ಕಳುಹಿಸಲ್ಪಟ್ಟಿತು. ಇದು ಡಿಮ್ಮಿ ಮೂರುವರೆ ಫಾರಂಗಳುಳ್ಳದ್ದಾಗಿ ಸ್ಫುಟಗಳಾದ ಅಕ್ಷರಗಳಿಂದ ಉತ್ತಮವಾದ ಕಾಗದದಲ್ಲಿ ಪ್ರಕಟಿಸಲ್ಪಟ್ಟದ್ದಾಗಿರುತ್ತದೆ. ಈ ಗ್ರಂಥಕರ್ತರು ಕರ್ಣಾಟಭಾಷೆಗೆ ಉಂಟಾಗಿರುವ ಬಹುವಿಧ ಲೋಪಗಳನ್ನೆಲ್ಲ ಒಂದೊಂದಾಗಿ ನಿವಾರಿಸತಕ್ಕ ಜ್ಯೋತಿಷ ಮುಂತಾದ ಶಾಸ್ತ್ರಗಳನ್ನು ಪ್ರಚಾರದೊಳು ತಂದವರಾದರು. ಈಗ ಭೂಗೋಳ ಶಾಸ್ತ್ರವನ್ನು ಜನಗಳಿಗೆ ತಿಳಿಸಲಿಕ್ಕೆ ಯೋಗ್ಯವಾದ ಪುಸ್ತಕಗಳು ಕನ್ನಡಭಾಷೆಯಲ್ಲಿ ಪ್ರಕೃತದೊಳಿಲ್ಲದಿರುವದರಿಂದ ಆ ಲೋಪವನ್ನು ಸಹ ಪರಿಹಾರ ಮಾಡಬೇಕೆಂದು ಈ ಗ್ರಂಥವು ರಚಿಸಲುದ್ಯುಕ್ತರಾದಂತೆ ಪೀಠಿಕಾ ಭಾಗದ ಅವರ ವಾಕ್ಯಗಳಿಂದಲೇ ಸ್ಪಷ್ಟವಾಗುತ್ತದೆ. ಭೂಗೋಳಶಾಸ್ತ್ರವನ್ನು ಭೂಪಟಗಳಿಲ್ಲದೆ ಓದಿದರೆ ಎಷ್ಟುಮಾತ್ರವೂ ಪ್ರಯೋಜನವಿಲ್ಲವೆಂದು ತಿಳಿಸಿ, ತಮ್ಮ ಭೂಗೋಳವನ್ನಭ್ಯಸಿಸುವ ಬಾಲಕರ ಸೌಕರ್ಯಾರ್ಥ [illegible] ಮುದ್ರದ ಇಂಗ್ಲಿಷ್ ಮ್ಯಾಪ್ ಒಂದನ್ನು ಪ್ರಸಕ್ತ ಗ್ರಂಥದ ೧೪—೧೫ನೇ ಪುಟಗಳ ಮಧ್ಯೆ ಸೇರಿಸಿರುತ್ತಾರೆ. ಇದರಿಂದ ಈ ಗ್ರಂಥವನ್ನು ಓದತಕ್ಕ ಹುಡುಗರಿಗೆ ಇಂಗ್ಲಿಷ್ ಭಾಷಾಜ್ಞಾನವು ಸಹ ಕೇವಲ ಅಪೇಕ್ಷಿತವೆಂದು ನುಡಿಯಬೇಕಾಗಿದೆ. ಆದದರಿಂದ ಸ್ವದೇಶಾನ್ಯದೇಶ ಭಾಷೆಗಳೆರಡನ್ನೂ ಬಾಲಕರು ಮುಂದಾಗಿ ಪರಿಚಯಮಾಡಿ ಈ ಗ್ರಂಥವನ್ನು ಅಭ್ಯಸಿಸಿ ಗ್ರಂಥಕರ್ತರ ಶ್ರಮವಂ ಸಫಲಗೊಳಿಸುವದರ ಮೂಲಕ ಇದು ಸಕಲರಿಗೂ ಉಪಯೋಗವಾಗಬೇಕೆಂಬ ಅವರ ಕೋರಿಕೆಯನ್ನೀಡೇರಿಸಬೇಕೆಂದು ಕೋರುವೆವು.

EXTRACTS.

INDIAN GOVERNMENT SCHOLARS IN ENGLAND.

ವಿದ್ಯಾಭ್ಯಾಸಕ್ಕಾಗಿ ಇಂಡ್ಯಾಗವರ್ನ್‌ಮೆಂಟಿನವರಿಂದ ವೇತನವಂಪಡೆದು ಇಂಗ್ಲೆಂಡಿಗೆಹೋಗುವಂತಾ ನೇಟಿವ್ ವಿದ್ಯಾರ್ಥಿಗಳ ವಿಷಯದಲ್ಲಿ ಸ್ಟೇಟ್ ಸೆಕ್ರೆಟರಿಯವರು ಇದರಡಿಕಂಡ ನಿಬಂಧನೆಗಳುಂ ಮಾಡಿರುತ್ತಾರೇನಂದರೆ:—

೧. ಪ್ರತಿವಿದ್ಯಾರ್ಥಿಯೂ, ಇಂಗ್ಲೆಂಡ್ ಸೇರಿದಕೂಡಲೆ ಇಂಡಿಯಾಆಫೀಸ್‌ನಲ್ಲಿಹಾಜರಾಗಿ ತಾನುಬಂದಿರುವ ಸಂಗತಿಯನ್ನು ಲಿಖಿತಮೂಲಕ ಸ್ಟೇಟ್ ಸೆಕ್ರೆಟರಿಯವರಿಗೆ ತಿಳಿಸತಕ್ಕದ್ದು.

೨. ಪ್ರತಿಯೊಬ್ಬ ವಿದ್ಯಾರ್ಥಿಯೂ, ಅನಾವಶ್ಯಕವಾಗಿ ಕಾಲಯಾಪನೆಮಾಡದೆ, ಯಾವ ಯೂನಿವರ್ಸಿಟಿಗೆ ತಾನು ಹೋಗಿ ಸೇರಬೇಕೆಂದು ಅಪೇಕ್ಷಿಸುತ್ತಾನೊ ಅದನ್ನು ಸ್ಟೇಟ್ ಸೆಕ್ರೆಟರಿಯವರಿಗೆ ತಿಳಿಸಿ, ತಾನು ಚುನಾಯಿಸುವ ಯೂನಿವರ್ಸಿಟಿಯಂ ಸೇರುವದಕ್ಕೆ ಕೂಡಲೇ ಪ್ರಯತ್ನಮಾಡಬೇಕು, ಅಥವಾ ಸ್ಟೇಟ್ ಸೆಕ್ರೆಟರಿಯವರ ಅಪ್ಪಣೆಯಮೇಲೆ ಕಾಲೇಜಿಗೆಸೇರದೇನೇ ವಿದ್ಯಾಭ್ಯಾಸಕ್ಕೆ ಪ್ರಾರಂಭಿಸಬೇಕು.

೩. ಪ್ರತಿಯೊಬ್ಬ ವಿದ್ಯಾರ್ಥಿಯೂ, ಇಂಗ್ಲೆಂಡ್ ಸೇರಿದ ನಾಲ್ಕು ವಾರಗಳೊಳಗಾಗಿ, ತಾನು ಓದಲಪೇಕ್ಷಿಸುವ ವಿಷಯಗಳ ಪಟ್ಟಿಯನ್ನು ತಯಾರ್ಮಾಡಿ ಸ್ಟೇಟ್ ಸೆಕ್ರೆಟರಿಯವರ ಮಂಜೂರಾತಿಯಬಗ್ಗೆ ಹಾಜರ್ಮಾಡತಕ್ಕದ್ದು. ಹಾಗೆ ಮಂಜೂರಾದ ಪಾಠಗಳ ಕ್ರಮವನ್ನು ಸ್ಟೇಟ್ ಸೆಕ್ರೆಟರಿಯವರ ಆಜ್ಞೆಯಿಲ್ಲದೆ ಬದಲಾಯಿಸಕೂಡದು.

೪. ಪ್ರತಿಯೊಬ್ಬ ವಿದ್ಯಾರ್ಥಿಯೂ ತನಗೆ ಕ್ಲುಪ್ತವಾದಕಾಲ ಪೂರ್ತಿಯಾಗಿ ಬರುವಲ್ಲಿ, ಕಾಲೇಜ್ ಅಥವಾ ಯೂನಿವರ್ಸಿಟಿ ಅಧಿಕಾರಿಗಳಿಂದ ತನ್ನವಾಸ, ನಡತೆ, ಮತ್ತು ನಿಯಮಿತಕಾಲದಲ್ಲಿ ವಿದ್ಯಾಭ್ಯಾಸ ತೃಪ್ತಿಕರವಾಗಿ ನಡೆಯಿತೆಂಬವಿಷಯದಲ್ಲಿ ಸರ್ಟಿಫಿಕೇಟ್ ಹಾಜರ್ಮಾಡತಕ್ಕದ್ದು.

೫. ಪ್ರತಿಯೊಬ್ಬ ವಿದ್ಯಾರ್ಥಿಯೂ ಸ್ಟೇಟ್ ಸೆಕ್ರೆಟರಿಯವರು ಯಾವಕಾಲದಲ್ಲಿ ಯಾವದು ಹುಕುಂಕೊಟ್ಟಾಗ್ಯೂ ಅದರಂತೆ ನಡೆದುಕೊಳ್ಳುವದಕ್ಕೆ ಬದ್ಧನಾಗಿರಬೇಕು.

೬. ಮೇಲಿನ ಷರತ್ತುಗಳಿಗೆ ಒಳಪಟ್ಟು ಸಾಲೀಯಾನಾ ೨೦೦ ಪೌಂಡುಗಳಮೇರೆ ೩ ವರ್ಷಗಳಕಾಲ ವಿದ್ಯಾರ್ಥಿಯು ಇಂಗ್ಲೆಂಡ್ ಸೇರಿದ್ದಾಗಿ ರಿಪೋರ್ಟುಮಾಡಿದ ತಾರೀಖ್‌ಲಾಗಾಯತು ಪ್ರತಿತಿಂಗಳಲ್ಲಿಯೂ ಇಂಡಿಯಾ ಆಫೀಸಿನಲ್ಲಿ ಅಡ್ವಾನ್ಸ್ ಕೊಡಲ್ಪಡುವದು.

೭. ದೇಹಾಲಸ್ಯ ಅಥವಾ ಸ್ಟೇಟ್ ಸೆಕ್ರೆಟರಿಯವರು ಸರಿಯಾದದ್ದೆಂದು ಭಾವಿಸುವ ಯಾವದಾದರೊಂದು ಕಾರಣವಿನಾ, ಬೇರೇ ಕಾರಣಗಳಮೇಲೆ ಪೂರಾ ಮೂರುವರ್ಷಗಳಕಾಲ ಇಂಗ್ಲೆಂಡಿನಲ್ಲಿ ವಾಸಮಾಡುವದಕ್ಕೆ ತಪ್ಪಿಹೋಗುವ, ಅಥವಾ ದುರ್ನಡತೆಯುಳ್ಳವನಾಗುವ, ಅಥವಾ ಸ್ಟೇಟ್ ಸೆಕ್ರೆಟರಿಯವರ ಹುಕುಮನ್ನು ತಿರಸ್ಕರಿಸುವ ಪ್ರತಿಯೊಬ್ಬ ವಿದ್ಯಾರ್ಥಿಯೂ ತನ್ನ ವೇತನವನ್ನು ಕಳೆದುಕೊಳ್ಳುವನು. ಹಾಗೆ ವಿದ್ಯಾರ್ಥಿವೇತನ ತಪ್ಪಿಹೋದಮೇಲೆ ಇಂಡ್ಯಾದೇಶಕ್ಕೆ ಸರ್ಕಾರ್ ಚಾರ್ಜಿನಲ್ಲಿ ವಾಪಸ್ ಬರುವದಕ್ಕೆ ಹಕ್ಕು ತಪ್ಪಿಹೋಗುವದಲ್ಲದೆ ಇಂಗ್ಲೆಂಡಿಗೆ ಹೋದದಕ್ಕೆ ಸರ್ಕಾರದವರು ವಹಿಸಿದಖರ್ಚನ್ನು ಸಹಾ ವಾಪಸ್ ಕೊಡಬೇಕಾಗುವದು, ಎಂಬದು.

ಮಂತ್ರಾಲೋಚಕ ಸಮಾಜದೊಳಗಣ ಗವರ್ನರ್ ಜನರಲವರು ವಿದ್ಯಾಭ್ಯಾಸಕ್ಕಾಗಿ ಇಂಗ್ಲೆಂಡಿಗೆಹೋಗುವಂತೆ ಚುನಾಯಿಸಲ್ಪಡುವ ಪ್ರತಿಯೊಬ್ಬ ವಿದ್ಯಾರ್ಥಿಗೂ ಇವರ ನಕಲನ್ನು ಸರಬರಾಯ್ ಮಾಡಬೇಕೆಂದು ಅಪೇಕ್ಷಿಸುತ್ತಾರೆ.

ಬರ್ಮಾದೇಶಸ್ಥನೊಬ್ಬನು, ಬರ್ಮಾದಿಂದ ಬಹು ಪ್ರಕಾಶಮಾನವಾದಂತಾ, ನಿರ್ದೋಷವಾಗಿರುವಂತಾ, ಅಪರೂಪವಾದಂತಾ ಒಂದು ಕೆಂಪನ್ನು (ರತ್ನ) ತೆಗೆದುಕೊಂಡು ಕಲ್ಕತ್ತಾ ಪಟ್ಟಣಕ್ಕೆ ಹೋದನು. ಆ ರತ್ನವು ಅಲ್ಲಿ ೯೬,೦೦೦ ರೂಪಾಯಿಗಳಿಗೆ ವಿಕ್ರಯವಾಯಿತು.

ಕಳೆದ ಡಿಸಂಬರ್ ತಿಂಗಳಲ್ಲಿ ನಡೆದ ಮದರಾಸ್ ನ್ಯಾಷನಲ್ ಕಾಂಗ್ರೆಸ್‌ಗೆ ನಾಜವಾರಿ ಪ್ರಾಂತದಿಂದ ಬಂದಿದ್ದ ಗೋವಧ ನಿಷೇಧಕ ಮಂಡಲಿಯ ಮೆಂಬರ್‌ಗಳು ಕೆಲವರು ಸದರೀ ವಿಷಯವನ್ನು ಸಭೆಯಲ್ಲಿ ಸೂಚಿಸಲಿಕ್ಕೆ ಪ್ರಯತ್ನಪಡಲು ಅಷ್ಟರಲ್ಲಿ ಅಲ್ಲಿದ್ದ ಮುಸಲ್ಮಾನ್ ಡಲಿಗೇಟರೊಬ್ಬರು ಸದರೀ ಪ್ರಸ್ತಾವವು ತಮಗೆ ಬಹಳ ಅತ್ಯಪ್ರಿಯಕರವಾಗಿದೆ ಯೆಂದು ಅಭಿಪ್ರಾಯಪಟ್ಟರು. ಆ ಸಂದರ್ಭದಲ್ಲಿ ಪ್ರಸಕ್ತ ವಿಷಯವನ್ನು ಕುರಿತು ಸೂಚಿಸದಿದ್ದದ್ದೇ ಬಹಳ ಯೋಗ್ಯವೆಂದೆಣಿಸುತ್ತೇವೆ. ಯಾತಕ್ಕೆಂದರೆ, ಇತರ ಜಾತೀಯವರಿಗೆ ಅಪ್ರಿಯವಾದ ವಿಷಯವನ್ನು ಎಕಾಏಕಿ ಹೊರಪಡಿಸಲಿಕ್ಕೆ ನಾವು ಹೊರಪಟ್ಟದ್ದಾದರೆ ಈಗ ನಮ್ಮ ಪ್ರಯತ್ನಕ್ಕೆ ಅನುಕೂಲಿಗಳಾದ ಮುಸಲ್ಮಾನರೆಲ್ಲರೂ ನಮಗೆ ವಿರೋಧಿಗಳಾಗಿ ಏರ್ಪಡುವರು. ನಮ್ಮೊಬ್ಬರಿಂದಲೇ ಈ ಕಾರ್ಯವು ಕೊನೆಮುಟ್ಟುವದೆಂದು ಎಣಿಸಬಾರದು. ಅಪ್ರೀತಿಯುಳ್ಳವರಲ್ಲಿ ಪ್ರೀತಿಯನ್ನು ಹುಟ್ಟಿಸುವದರಿಂದ ನಡೆಯತಕ್ಕ ಕಾರ್ಯವು ಬಲಾತ್ಕಾರದಿಂದನಡೆಯಲಾರದು. ಇದಲ್ಲದೆ ಹಿಂದೂಜನರಾದ ನಾವು ಶಾಂತ ಸ್ವಭಾವವುಳ್ಳವರು. ಔದ್ಧತ್ಯವು ನಮಗೆ ಸುತರಾಂ ಸಲ್ಲದು.

ಕಳೆದತಿಂಗಳ ೧೪ನೇ ತಾರೀಖಿನಲ್ಲಿ ಕೋಣನೂರೆಂಬ ಪ್ರದೇಶದಿಂದ ಏ ಎಂಬವನು ಮುಂಬೈ ಹವ್ಯಕಸುಬೋಧವೆಂಬ ಪತ್ರಿಕೆ ಬರೆದಿರುತ್ತಾನೇನಂದರೆ,—ಈ ಜನವರಿ ತಿಂಗಳ ೩ನೇ ತಾರೀಖಿನ ಪತ್ರಿಕೆಯಲ್ಲಿ ನಮ್ಮ ಮಹಾರಾಜರವರನ್ನು ಕುರಿತು ನಮೂದಿಸಿರುವ ಅಂಶಗಳಲ್ಲಿ ಮೈಸೂರು ಪ್ರೋಗ್ರೆಸ್ಸನ್ನು ಹಳೆ ನೇಟಿವ್ ಸ್ಟೇಟ್ ಪ್ರೋಗ್ರೆಸ್ಸುಗಳಂತೆ ಇದುವಬಗ್ಗೆ ಚಕ್ರವರ್ತಿನೀಯವರಿಗೆ ಒಪ್ಪಿಸುವದಾಗಿರುವದನ್ನು ತಾವು ಬಹಳವಾಗಿ ದೂಷಿಸಿರುತ್ತೀರಿ, ಹಾಗೆಹೇಳಲಾಗದು. ನಮ್ಮ ಮಹಾರಾಜರವರು, ತಮ್ಮ ದಿವಾನರು ಮೊದಲಾದವರೊಡನೆ ತೀರ್ಥಯಾತ್ರೆಗಾಗಿ ದಯಮಾಡಿರುವದು ಸಕಲಜನರಿಗೂ ತಿಳದಿರುವ ವಿಷಯವಾಗಿರುತಿದೆಯಷ್ಟೆ. ನಮ್ಮಆಸ್ತಿಕಮತ ಸಂಪ್ರದಾಯವನ್ನನುಸರಿಸಿ ಕಾಶೀಕ್ಷೇತ್ರದಲ್ಲಿ ತಮಗೆ ಇಷ್ಟವಾದ ಪದಾರ್ಥವನ್ನು ಬಿಡಬೇಕೆಂಬುವದು ಆಕ್ಷೇತ್ರ ಮಹಿಮೆಇಂದ ಪ್ರಸಿದ್ಧಿಯಾಗಿರುತಿದೆ. ಪ್ರಸಕ್ತ ಅಂಚೇಇಲಾಖೆಯು ಜನಗಳಿಗೆ ಸಕಲವಿಷಯಗಳಲ್ಲಿಯು ತಿಳುವಳಿಕೆಯನ್ನೂ ಅನುಕೂಲವನ್ನೂ ಉಂಟುಮಾಡುವದಾಗಿರುತಿದೆಯಲ್ಲದೆ ಆಯಾ ರಾಜ್ಯದ ಸರಕಾರಕ್ಕೂ ಅಲ್ಲಿನ ಹುಟ್ಟುವಳಿಯ ಅಭಿವೃದ್ಧಿಗೂ, ಆವಶ್ಯಕವಾದ ಪದಾರ್ಥವು ಸದರೀ ಅಂಚೆಗಿಂತ ಪ್ರತ್ಯೇಕವಾದದ್ದು ಬೇರೊಂದಿರುವದೆಂದು ನಾನೆಣಿಸುವದಿಲ್ಲವು ನಮ್ಮ ದಿವಾನರವರ ಮಾತುಶ್ರೀಯವರು ಗತಿಸಿ ಈಗ್ಯೆ ೬—೭ ತಿಂಗಳಾಗಿರಬಹುದೆಂದು ತೋರುತಿದೆ. ಶ್ರೀಮನ್ಮಹಾರಾಜರವರು ಶ್ರೀ ಕಾಶೀಕ್ಷೇತ್ರದಲ್ಲಿ ದಿವಾನರ ಸಮೇತ ಸಸಾಕ್ಷಿಕವಾಗಿ ಈ ಇಂದ್ಯದೇಶಕ್ಕೆ ಶಕ್ತಿರೂಪವಾಗಿರುವಂತಾ ಮತ್ತು ದಾನಾರ್ಹವಾಗಿರುವಂತಾ, ಅಂಚೆ ಇಲಾಖೆಯನ್ನು ಶ್ರೀಮನ್ಮಹಾರಾಜ್ಞೀಯವರಿಗೆ ದಾರೆಯೆರೆದಲ್ಲಿ ಸ್ವರ್ಗಸ್ಥರಾಗಿರುವ ತಮ್ಮ ಪಿತೃಗಳು ದೇವೇಂದ್ರನ ಅರ್ಧಾಸನದಲ್ಲಿ ಆತನೊಡನೆ ಕುಳಿತು ಅವನ ಭೋಗಭಾಗ್ಯಗಳನ್ನೆಲ್ಲ ಅನುಭವಿಸುವದರೊಳೇನೂ ಸಂಶಯವಿಲ್ಲವೆಂದೆಣಿಸಿ ಈ ಇಲಾಖೆಯನ್ನು ಬ್ರಿಟಿಷ್ ಗವರ್ನಮೆಂಟಿನವರಿಗೆಕೊಟ್ಟಿರುತ್ತಾರೆಂದು ಭಾವಿಸುತ್ತೇನೆ. ಆದದರಿಂದ ತಾವುದಯವಿಟ್ಟು ಈವಿಷಯವನ್ನುತಮ್ಮಪತ್ರಿಕೆಯದ್ವಾರಾ ಪ್ರಚುರಪಡಿಸಿದಲ್ಲಿ ನಮ್ಮಮಹಾರಾಜರವರ ಔದಾರ್ಯವು ಜನಗಳಿಗೆ ವ್ಯಕ್ತವಾಗಿ ಸಂತೋಷವನ್ನುಂಟುಮಾಡುವದು, ಎಂಬದು.

ದಿವಾನರವರ ಹುಕುಂ—“ಕಳೆದ ಅಕ್ಟೋಬರ್ ತಿಂಗಳ “ಹಾರ್ವೆಸ್ಟ್‌ಫೀಲ್ಡ್” ಪತ್ರಿಕೆಯಲ್ಲಿ, ಚಿತ್ರದುರ್ಗದ ಡಿಸ್ಟ್ರಿಕ್ಟಿನಲ್ಲಿರುವ ಗೊಲ್ಲರು ತಮ್ಮಗರ್ಭಿಣೀಸ್ತ್ರೀಯರನ್ನು ಪ್ರಸವವೇದನೆ ಕಾಲದಲ್ಲಿ ಮನೆಗಳಲ್ಲಿರಗೊಡದೆ, ಅಲ್ಲಿಂದ ಹೊರಡಿಸಿ, ಊರಾಚೆ ಒಂದು ಸ್ಥಳದೊಳು ಕತ್ತಲಲ್ಲಿ ಅವರನ್ನುಇರಿಸಿ ಅನ್ನವೂ, ಜೊತೆಯೂಇಲ್ಲದಂತೆ, ಸಂಕಟಪಡಿಸುವ ಪದ್ಧತಿಯನ್ನು ಆಚರಿಸುತ್ತಾರೆ, ಎಂಬವಿಷಯವಾಗಿದ್ದ ಅದರಬರವಣಿಗೆಯ ಅಭಿಪ್ರಾಯವನ್ನು ಶ್ರೀಮನ್ಮಹಾರಾಜಾ ಸರ್ಕಾರದವರು ಗ್ರಹಿಸಿ, ಈ ಅಂಶದಲ್ಲಿ ಆವಶ್ಯಕವಾದ ವಿಚಾರಣೆಮಾಡಿ, ಅದರ ಫಲಿತಾರ್ಥವನ್ನು ತಿಳುಹಿಸಬೇಕೆಂದು, ಚಿತ್ರದುರ್ಗದ ಡೆಪ್ಯುಟಿಕಮಿಷನರವರಿಗೆ ಆ ಪತ್ರಿಕೆಯನ್ನು ರವಾನಿಸಿದರು. ಅದರಂತೆ ಮಿಸ್ಟರ್ ವೆಂಕಟವರದಯ್ಯಂಗಾರ್ರವರು ಬರೆದಿರುವ ಮೇಲ್ಕಂಡ ಅವರ ಬರವಣಿಗೆಯನ್ನುನೋಡಿದರೆ, “ಹಾರ್ವೆಸ್ಟ್ ಫೀಲ್ಡ್” ನಲ್ಲಿರುವ ವಿವರಣೆಯು ಮುಖ್ಯಾಂಶದಲ್ಲಿ ವ್ಯತ್ಯಾಸ ಉಂಟಾಗುವದಾಗಿ ಇದೆ. ಹ್ಯಾಗೆಂದರೆ, ಗೊಲ್ಲತಿಯು ಪ್ರಸವವೇದನೆ ಕಾಲದಲ್ಲಿ ಕೆಲವು ದಿನಗಳು ಮಾತ್ರ ಒಂದು ಪ್ರತ್ಯೇಕ ಸ್ಥಳಕ್ಕೆ ಹೊರಡಿಸಲ್ಪಡುವಳು. ಗೊಲ್ಲರ ಜಾತಿ ಪದ್ಧತಿಮೇರೆ ಬಾಣಂತಿತನದ ದಿನಗಳು ತೀರಿ, ವಾಡಿಕೆಯಾದ ಶುದ್ಧೀಕರಣದ ಆಚಾರಗಳು ನಡೆಯುವ ವರಿವಿಗೂ, ಅವಳ ಮನೆಯವರೂ, ಬಂಧುಗಳೂ ಸೂತಕವೆಂಬ ಅಭಿಪ್ರಾಯದಿಂದ ಅವರವರ ದೂರಗಿನಂತೆ, ಕ್ಲುಪ್ತವಾದ ದಿನಗಳು ಕಳೆಯುವ ತನಕ, ಅವಳ ಬಳಿಗೆ ಹೋಗದೆ ದೂರವಾಗಿರುತ್ತಾರೆ, ಎಂದು ತಿಳಿಯಬರುತ್ತೆ. ಆದರೆ ಅಂತಾ ಕಾಲದಲ್ಲ, ಆ ಸ್ತ್ರೀಯನ್ನು ಅವರು ಉಪಚರಿಸದೆ, ಸಂಪೂರ್ಣವಾಗಿ ಕೈಬಿಟ್ಟು ಅಲಕ್ಷ್ಯ ಮಾಡುತ್ತಾರೆಂಬ ವಿವರಣೆಗೆ ಯಾವ ಸಾಧನೆಯೂ ಕಾಣಬರುವದಿಲ್ಲ. ಆದರೂ, ಡೆಪ್ಯುಟಿ ಕಮಿಷನರು ಆ ಪದ್ಧತಿಯನ್ನು ವಿವರಿಸಿರುವದು ಟ್ಟಗೂ ಆಲೋಚಿಸಿದರೆ, ಅಸಹ್ಯಕ್ಕೆ ಅದು ನಿಸ್ಸಂದೇಹವಾಗಿ, ಅಸಾಧಾರಣವಾಗಿಯೂ, ಮತ್ತು ವಿದ್ಯಾವಂತರೂ, ಬುದ್ಧಿವಂತರೂ ಆಗಿ ಲೋಕೋಪಕಾರವನ್ನು ಬಯಸುವಂತಾವರು, ಸ್ವಾಭಾವಿಕವಾಗಿ ಇಂತಾ ವಿಷಯಗಳಲ್ಲಿ ಪಡಬೇಕಾದ ದುಃಖ ಮತ್ತು ವ್ಯಸನವನ್ನುಂಟುಮಾಡುವದಾಗಿಯೂ ಇದೆ. ಆದರೆ ಸರ್ಕಾರದವರು ಅದರಲ್ಲಿ ಯಾವರೀತಿಯಲ್ಲಾದರೂ ಪ್ರವೇಶಮಾಡಿ ನಿಲ್ಲಿಸುವಂತಾ ಪದ್ಧತಿಯಾಗಿಲ್ಲ. ಅಂತಾ ಪದ್ಧತಿಯಲ್ಲಿ ಕೈ ಹಾಕಿದರೆ ಪೂರ್ವದಿಂದಲೂ ಬಂದಿರುವ ಮತ ಭ್ರಾಂತಿಯಾದ ಅವರ ಮತಾಭಿಪ್ರಾಯಗಳಿಗೆ ತೊಂದರೆ ಬಂದಂತಾಗುತ್ತೆ. ಕಾಲಕ್ರಮೇಣ ವಿದ್ಯಾಭಿವೃದ್ಧಿಯೂ, ಪ್ರಜೆಗಳ ಸುಬುದ್ಧಿಯೂ ಅಧಿಕವಾದರೂ ಉಂಟಾದಹಾಗೆಲ್ಲ, ಈ ಪದ್ಧತಿಯು ತಾನೇ ನಿರ್ಮೂಲವಾಗುವದು. ಹೀಗಿರುವಲ್ಲಿ ಕಾಲಕ್ರಮೇಣ ವಿದ್ಯಾದಾನಗಳಿಂದ ಫಲಿಸುವ ಫಲವನ್ನು ಈಗಲೇ ಬಿಡಬೇಕೆಂದು ಬಯಸುವದು ನಿಷ್ಪ್ರಯೋಜನವಾಗಿದೆ. ಇತ್ಯಾದಿ ಕಾರಣಗಳಿಂದ ಈ ವಿಷಯದಲ್ಲಿ ಕಾಯಿದೆ ಪ್ರಕಾರವು ಅಥವಾ ಬೇರೆ ವಿಧವಾಗಿ ಪ್ರವೇಶ ಮಾಡುವದನುಚಿತವೆಂಬುವದು ಶ್ರೀಮಾನ್ ದಿವಾನರವರ ಅಭಿಪ್ರಾಯವಾಗಿದೆ. ಸಾಧ್ಯವಾದರೆ ಚಿತ್ರದುರ್ಗಕ್ಕೆ ಅನುಭವಶಾಲಿಯಾದ ಒಬ್ಬ ಸೂಲಗಿತ್ತಿಯನ್ನು, ಮುಖ್ಯವಾಗಿ ಗೊಲ್ಲಸ್ತ್ರೀಯರಿಗೋಸ್ಕರ ಹೆರಿಗೆ ಕಾಲದಲ್ಲಿ ಚಿಕಿತ್ಸೆಮಾಡುವಂತೆ ಕಳುಹಿಸುವದೆಂಬ, ಗೌರ್ನರ್‌ಜನರಲರವರ ಪತ್ನಿಯವರಾದ ಕೌಂಟೆಸ್ ಆಫ್ ಡಫ್ಫರಿನ್ಯವರ ವೈದ್ಯ ಸಹಾಯಾರ್ಥವಾದ ನಿಧಿಗೆ, ಮೈಸೂರು ಸಂಸ್ಥಾನದಲ್ಲಿ ಕಾರ್ಯದರ್ಶಿಗಳಾದ ಸರ್ಜನ್ ಮೇಜರ್‌ಬರ್ನ್ಸ್ ಸಾಹೇಬರವರ ತಾತ್ಪರ್ಯವನ್ನು ತಿಳಿದು ದಿವಾನರವರು ತೃಪ್ತಿಪಟ್ಟರು. ಕೊಂಡಾಡತಕ್ಕ ಇಂತಾ ವಿಷಯವನ್ನು ಅಭಿವೃದ್ಧಿ ಮಾಡುವ ವಿಷಯದಲ್ಲಿ, ಶ್ರೀಮನ್ಮಹಾರಾಜಾ ಸರ್ಕಾರದವರು, ಸಾಧ್ಯವಾದ ಎಲ್ಲಾ ಸಹಾಯಗಳನ್ನೂ ಮಾಡಲು ಬಹು ಸಂತೋಷಪೂರ್ವಕವಾಗಿದ್ದಾರೆ.”

ಉಪ್ಪಿನಮೇಲಿನ ತೆರಿಗೆಯನ್ನು ಜಾಸ್ತೀಮಾಡಿದ ವಿಷಯದಲ್ಲಿ ಬಂಗಾಳೀ ದೇಶದ ನೇಟಿವ್ ವೃತ್ತಾಂತಪತ್ರಿಕೆಗಳ ಅಭಿಪ್ರಾಯಗಳು.

ಚಂದ್ರನಗರದ ಪ್ರಜಾಬಂಧು ಎಂಬ ಪತ್ರಿಕೆ ತಿಳಿಸುವದೇನಂದರೆ:—ಬರ್ಮಾದೇಶದ ಯುದ್ಧಪ್ರಾರಂಭಕಾಲದಲ್ಲಿ ಅದರಿಂದ ಇಂಡಿಯಾದೇಶವು ನಾಶವನ್ನು ಹೊಂದುವದೆಂದು ನಾವು ತಿಳಿಸಿದ್ದೆವು. ಸದರೀದೇಶದ ರಾಜಮಕುಟಕ್ಕೆ ಸೇರಿದ ಒಬ್ಬಾತನನ್ನು ಸಿಹಾಸನದಮೇಲೆ ಕುಳ್ಳಿರಿಸಿ ಜೋರ ಬಂದೋಬಸ್ತು ಮಾಡುವದುಚಿತವೆಂದು ಆ ಕಾಲದಲ್ಲಿ ಬ್ರಿಟಿಷರವರಿಗೆ ನಾವು ಬುದ್ಧಿಹೇಳಿದೆವು. ಆದರೆ ಇಂಗ್ಲೀಷರವರು ನಮ್ಮ ಮಾತುಗಳಂ ಯಾತಕ್ಕೆ ಕೇಳದೆಹೋದರು? ಇಂಡಿಯಾದೇಶದ ನೇಟಿವ್‌ಗಳ ಕುತ್ತಿಗೆಯಮೇಲೆ ಕಾಲಿಟ್ಟು ತುಳಿದುಬಿಡಬೇಕೆಂಬದೇ ಅವರ ಉದ್ದೇಶವಾಗಿರುತಿದೆ. ಆ ಸಂವತ್ಸರದೊಳಗಾಗಿಯೇ ಇನ್‌ಕಂಟ್ಯಾಕ್ಸೆಂಬ ತೆರಿಗೆಯನ್ನು ಜಾರಿಮಾಡಿದರು. ಅದಾದಕೂಡಲೇ ಉಪ್ಪಿನಮೇಲಿನ ತೆರಿಗೆಯನ್ನು ಜಾಸ್ತೀಮಾಡಿದರು. ಇಂಡ್ಯಾದೇಶದ ಜನಗಳು ತೆರಿಗೆಗಳ ಮೂಲಕ ಸಂಕಟಕ್ಕೆ ಗುರಿಯಾಗಿರುತ್ತಾರೆ. ಇನ್ನು ಬೇರೇ ತೆರಿಗೆಗಳನ್ನು ಕೊಡುವದಕ್ಕೆ ಅವರಿಗೆ ಸುತರಾಂ ಅನುಕೂಲವಿಲ್ಲವು. ಉಪ್ಪಿನ ತೆರಿಗೆಯನ್ನು ಕಡಮೆ ಮಾಡುವದರ ಮೂಲಕ ಲಾರ್ಡ್‌ರಿಪ್ಪನ್ ಸಾಹೇಬರವರು ಜನಗಳ ಅನುಗ್ರಹಕ್ಕೆ ವಿಷಯರಾದರು. ಆದರೆ ಲಾರ್ಡ್‌ಡಫರಿನ್ ಸಾಹೇಬರವರಿಂದ ನಡೆಸಲ್ಪಟ್ಟ ಬರ್ಮಾದೇಶದ ಯುದ್ಧದಿಂದಲೂ ಸರಹದ್ದು ಪ್ರಾಂತದ ಬಂದೋಬಸ್ತಿನಿಂದಲೂ ಇಂಡ್ಯದೇಶಗಳಿಗುಂಟಾಗಿದ್ದ ಅಲ್ಪಪ್ರಯೋಜನ ಸಹ ತಪ್ಪಿಸಲ್ಪಟ್ಟಿತು.

ಅದೇವಿಷಯದಲ್ಲಿ ಕಲ್ಕತ್ತೆಯೊಳು ಪ್ರಕಟಿಸಲ್ಪಡುವ ಸುರಧಿ ಮತ್ತು ಪತಾಕವೆಂಬ ಪತ್ರಿಕೆ ಅಭಿಪ್ರಾಯಪಡುವದೇನಂದರೆ:—ಇದ್ದಕ್ಕಿದ್ದಂತೆ ಉಪ್ಪಿನ ತೆರಿಗೆಯು ಹೆಚ್ಚಿಸಲ್ಪಟ್ಟಿತು. ಇತರ ತೆರಿಗೆಗಳು ಸಹ ಹೆಚ್ಚಿಸಲ್ಪಡಬಹುದೆಂದು ಕಾಣುತಿದೆ. ಈ ಸಂವತ್ಸರದಲ್ಲಿ ಸರ್ಕಾರ್ ಹುಟ್ಟುವಳಿಯೊಳು ಎರಡು ಅಥವಾ ಮೂರುಕೋಟಿ ರೂಪಾಯಿಗಳು ಕಮ್ಮಿಯಾಗಬಹುದು. ಉಪ್ಪಿನ ತೆರಿಗೆಯನ್ನು ಜಾಸ್ತೀಮಾಡಿದ್ದರಿಂದ ಬರುವ ಮಾರ್ಚಿ ಆಖೈರ್‌ವರಿವಿಗೆ ಇಪ್ಪತ್ತೆರಡು ಲಕ್ಷರೂಪಾಯಿಗಳು ವಸೂಲಾಗುವವು. ಉಳಿದ ಮೊಬಲಗು ಬೇರೆ ಮಾರ್ಗಗಳಿಂದ ಭರ್ತಿಮಾಡಬೇಕಾಗಿದೆ. ಉಪ್ಪಿನ ತೆರಿಗೆಯನ್ನು ಮೆಲ್ಲಗೂ ಕೊಡಬೇಕು. ಆದರೆ ಅದರಿಂದ ಬಡಜನರಿಗೆ ಬಹಳ ಕಷ್ಟವುಂಟಾಗುವದು. ಗವರ್ನಮೆಂಟಿಗೆ ಈಗ ಸಂಕಟ ಪ್ರಾಪ್ತವಾಗಿದೆ. ಆದಾಗ್ಯೂ ಯಾವವಿಧ ಹೊಸತೆರಿಗೆಯೂ ನಮಗೆ ಇಷ್ಟವಿಲ್ಲವು. ಈ ಹೊಸತೆರಿಗೆಯನ್ನು ಮಾಕರಲ್ಪಡುವದಕ್ಕೆ ಪೂರ್ವಭಾವಿಯಾಗಿ ಅದುಕುರಿತು ಪ್ರಜೆಗಳಿಗೆ ತಿಳಿಸಬೇಕಾದ್ದು ಯುಕ್ತವಲ್ಲವೇ? ಇತರ ಪದಾರ್ಥಗಳ ಮೇಲೆ ತೆರಿಗೆ ಹೊಕರಲ್ಪಡುವವರ ಮೂಲಕ ಲಿವರ್‌ಪೂಲ್‌ನ್ನು ಬೆಳ್ಳಿಸುವದಕ್ಕೆ ಆಗದೆ ಹೋಯಿತೆ? ಬಟ್ಟೆಗಳ ಮೇಲೆ ತೆರಿಗೆಯನ್ನು ಹಾಕುವದಕ್ಕಾಗದೆ ಹೋಯಿತೆ? ಆದರೆ ಮ್ಯಾಂಚೆಸ್ಟರು ನಾಶವಾಗುವದರಿಂದ ಇಂಗ್ಲೀಷ್ ರಾಜ್ಯತಂತ್ರಜ್ಞರಿಗೆ ಬಾಧಕವಿಲ್ಲವು. ಖರ್ಚುಗಳ ಬಗ್ಗೆ ಯಾವದಾದರು ತೆರಿಗೆಯನ್ನು ವಸೂಲ್ಮಾಡಬೇಕಾದ ಆವಶ್ಯಕತೆ ಕಂಡುಬಂದರೆ ಆಗ ಅದಕ್ಕೆ ಬೇಕಾದ ಉಪಾಯಗಳ ಹುಡುಕಬೇಕೆಂದು ಮರಳಿ ಹೇಳುತ್ತೇವೆ. ಉಪ್ಪಿನ ತೆರಿಗೆಯನ್ನು ಜಾಸ್ತೀಮಾಡುವದಕ್ಕಾಗಿ ಅವಲಂಬಿಸಿದ ಕ್ರಮಮಾರ್ಗವನ್ನು ನಾವು ಯೆಷ್ಟುಮಟ್ಟಿಗೂ ಒಪ್ಪಲಾರೆವು.

ಕಲ್ಕತ್ತೆಯ ಸಹಚರ ವೆಂಬ ಪತ್ರಿಕೆ ಹೇಳುವದೇನಂದರೆ,—ಲಾರ್ಡ್ ಡಫರಿನ್ ಸಾಹೇಬರವರು ಇನ್‌ಕಂಟ್ಯಾಕ್ಸನ್ನು ಹೆಚ್ಚಿಸುವ ವಿಷಯದಲ್ಲಿ ನಮಗೆ ಬಹಳ ಸಂತೋಷವು. ಬಟ್ಟೆಗಳಮೇಲೆ ತೆರಿಗೆ ಹೊಕರಲ್ಪಡದಿ ಇನ್‌ಕಂಟ್ಯಾಕ್ಸನ್ನು ವಜಾಮಾಡುವವರಾದರೆ ನಮಗೆ ಮತ್ತಷ್ಟು ಸಂತೋಷವಾಗಿರುವದು. ಪರಂತು ಇಂಡ್ಯಗವರ್ನಮೆಂಟುಗಾಗಲಿ ವಿಲಾಯತಿ ಸರ್ಕಾರಕ್ಕಾಗಲಿ ಮ್ಯಾಂಚೆಸ್ಟರ್ ಜನಗಳಿಗೆ ಬಾಧಕಕರವಾದ ಕೆಲಸಗಳನ್ನು ಮಾಡುವ ಅಧಿಕಾರ ವಿರುವದಿಲ್ಲವು. ಬಡವರ ಪ್ರಯೋಜನಾಪೇಕ್ಷೆಯಿಂದ ಉಪ್ಪಿನಮೇಲಿನ ತೆರಿಗೆಯನ್ನು ಕಡಮೆ ಮಾಡಬೇಕೆಂದು ಅಪೇಕ್ಷಿಸುವವರ ವಿಷಯದಲ್ಲಿ ಅಂತವರಿಗೆ ಪ್ರಜೆಗಳ ಸ್ಥಿತಿಯನ್ನು ಕುರಿತ ಅನುಭವ ಸಾಲದೆಂದು ಹೇಳಬೇಕಾಗಿದೆ. ದಿನಕ್ಕೆ ಎರಡುವೇಳೆ ಆಹಾರಕ್ಕೆ ಉಪಪತ್ತಿಯುಳ್ಳವರು, ಉಪ್ಪಿನಮೇಲಿನ ಜಾಸ್ತೀ ತೆರಿಗೆ ಹೊಕರಲ್ಪಡದ ಬಗ್ಗೆ ಲಕ್ಷ್ಯಮಾಡಲಾರರು, ಎಂಬದು.

ಅಕ್‌ಬಾರಿ ಸೌದಾಗರ್ ಎಂಬ ಪತ್ರಿಕೆ ಹೇಳುವದೇನಂದರೆ:—ಉಪ್ಪಿನತೆರಿಗೆಯನ್ನು ಹೆಚ್ಚಿಸಿದ್ದರಿಂದ ದೇಶದಲ್ಲೆಲ್ಲ ಅಲ್ಲರಿಯುಂಟಾಗಿದೆ. ಈ ಜಾಸ್ತೀತೆರಿಗೆಯನ್ನು ಕುರಿತು ನೇಟಿವ್ ವೃತ್ತಾಂತಪತ್ರಿಕೆಗಳೆಲ್ಲವು ಬಹಳವಾಗಿ ಆಕ್ಷೇಪಿಸುತಿವೆ. ಇದು ಹೀಗಿರಲಿಕ್ಕಾಗಿ, ಇಂಗ್ಲೀಷ್ ಪತ್ರಿಕೆಗಳ ಪೈಕಿ ಕೆಲವು ಜಾಸ್ತೀ ಮಾಡಬೇಕೆನ್ನುತ್ತಿವೆ. ಇದಕ್ಕೆ ಕಾರಣ ನಮಗೆ ತಿಳಿದೇಇರಲಿಲ್ಲವು. ಮಧ್ಯಮ ಸ್ಥಿತಿಯಲ್ಲಿರತಕ್ಕವರಿಗೂ ಉತ್ತಮ ಸ್ಥಿತಿಯೊಳಿರತಕ್ಕವರಿಗೂ ಇನ್‌ಕಂಟ್ಯಾಕ್ಸ್ ಇನ್ನು ಹೆಚ್ಚಿಸಲ್ಪಡದೆ ಹೋದ ಬಗ್ಗೆ ಇಂಗ್ಲೀಷ್ ವೃತ್ತಾಂತ ಪತ್ರಿಕೆಗಳು ಸಂತೋಷಿಸುತಿವೆ, ಯಾತಕ್ಕೆಂದರೆ, ಸರ್ಕಾರ್ ಖಜಾನೆಯಲ್ಲಿ ಹಣ ಕಮ್ಮಿಯಾದದ್ದನ್ನು ಉಪ್ಪಿನಮೇಲಿನ ತೆರಿಗೆಯನ್ನು ಜಾಸ್ತೀ ಮಾಡುವದರ ಮೂಲಕ ಭರ್ತೀ ಮಾಡಿಕೊಳ್ಳುವ ಉಪಾಯ ಹುಡುಕಲ್ಪಟ್ಟಿತು. ಹೀಗೆ ಜಾಸ್ತೀ ಮಾಡಿದ್ದರಿಂದ ಉಪಪನ್ನರಾದವರಿಗೆ ಬಾಧಕವಿಲ್ಲವೆಂಬದು ದಿಟ, ಪರಂತು ಹಾಗೆ ಮಾಡುವದರಿಂದ ಬಡವರು ಉಪ್ಪನ್ನು ಉಪಯೋಗಿಸಿಕೊಳ್ಳಬೇಕಾದ್ದು ದು ಹೇಳದಂತಾಗುತಿದೆ. ಉಪ್ಪಿನಮೇಲಿನ ತೆರಿಗೆಯು ನ್ಯಾಯವಾದದ್ದೆಂದು ಯೆಣಿಸಲ್ಪಡದಿರದು, ಉಪಪನ್ನರೂ ದರಿದ್ರರೂ ಅದನ್ನು ಸಮನವಾಗಿ ಉಪಯೋಗಿಸಿಕೊಳ್ಳುತ್ತಾರೆ. ಉಪಪನ್ನರಮೇಲೇ ಅಧಿಕವಾದ ಸಹ ತೆರಿಗೆ ಹಾಕಬೇಕೆಂದು ಹೇಳುವದು ಉಚಿತವಾಗಿರಲಾರದು.

ರಾಸ್ತಗಾಸ್ತರ್‌ಎಂಬಪತ್ರಿಕೆ ಅಭಿಪ್ರಾಯಪಡುವದೇನಂದರೆ—ಉಪ್ಪಿನಮೇಲಿನ ತೆರಿಗೆಯನ್ನು ಹೆಚ್ಚಿಸಿದ ರೀತಿಯನ್ನುನೋಡಲಾಗಿ ನಾವು ರಂಜಿತ ಪ್ರಭುತ್ವಕ್ಕೆ ಗುರಿಯಾಗಿದ್ದೇವೆಂಬದು ವ್ಯಕ್ತವಾಗುತಲಿದೆ. ಗವರ್ನಮೆಂಟಿನವ “ಉಪ್ಪಿನಮೇಲಿನ ತೆರಿಗೆ ಹೆಚ್ಚಿಸಲ್ಪಡಲಿ” ಎಂದು ಹೇಳದಕೂಡಲೇ ಹೆಚ್ಚಿಸಲ್ಪಟ್ಟಿತು. ಇಂಡ್ಯದೇಶದ ಜನಗಳು ಒಂದುದಿನ ಬೆಳಗ್ಗೆ ಎದ್ದರವಾಜಹೊರಟರೆ, ಫಲಾನೇ ತಾರೀಖ್‌ಲಾಗಾಯ್ತು, ಮನುಷ್ಯರಿಗೆ ಮುಖ್ಯಾಧಾರವಾಗಿನ ಉಪ್ಪಿನಮೇಲಿನ ತೆರಿಗೆಯು ಮಣಕ್ಕೆ ರೂ ೨-೦-೦ ಇಂದ ರೂ|| ೨—೮—ಕ್ಕೆ ಹೆಚ್ಚಿಸಲ್ಪಟ್ಟಿರುವದೆಂದು ಗವರ್ನಮೆಂಟ್ ಗೆಜೆಟ್ ವಿಶೇಷ ಪತ್ರಿಕೆಯಲ್ಲಿ ಘೋಷಿಸಲ್ಪಟ್ಟಿದ್ದ ಇಸಿಹಾರನ್ನು ನೋಡಿದರು. ಆಮೇಲೆ ನೇಟಿವ್ ಪತ್ರಿಕೆಗಳೆಲ್ಲವು ಮೊರೆಯಿಡಲಾರಂಭಿಸಿರುತಿವೆ. ಸದರೀ ಪತ್ರಿಕೆಗಳ ಪೈಕಿ ಅನೇಕ ಸದರೀ ತೆರಿಗೆಯು ಬಹಳ ಕಷ್ಟವೆಂದು ಭಾವಿಸುತಿವೆ. ಅದರಿಂದ ಬಡವರು ಪೂರಾ ಮುಣಿಗಿಹೋಗುತ್ತಾರೆಂಬ ಗುಮಾನಿಯು ಅವುಗಳಲ್ಲಿ ಕೆಲವಕ್ಕುಂಟಾಗಿದೆ. ತಿಬಾಯುವರ ದೇಶವನ್ನು ಸ್ವಾಧೀನಪಡಿಸುವದರಲ್ಲಿ ಅತಿವ್ಯಯವಾಗಿ ಸರ್ಕಾರ್ ಖಜಾನೆಯಲ್ಲಿ ಹಣ ಕಮ್ಮಿಯಾಯಿತು. ಗವರ್ನಮೆಂಟು ಈ ಖರ್ಚುಗಳಿಗೆ ಉಪಯೋಗಿಸಿಕೊಳ್ಳದಿದ್ದರೆ, ದೇಶದಲ್ಲಿ ದುರ್ಭಿಕ್ಷತೆ ಯುಂಟಾದ ಕಾಲದಲ್ಲಿ ಜಾಸ್ತೀ ಹುಟ್ಟುವಳಿಯೂ ಆಗಿ ತನ್ನ ಸಾಲವನ್ನು ತೀರಿಸಿಕೊಳ್ಳಬಹುದಾಗಿತ್ತು. ಇಂತಾ ಅನುಕೂಲವಾದ ಕಾಲ ಪ್ರಾಪ್ತವಾಗದೆ ಹೋಗಲಾರದೆಂಬ ನಂಬಿಕೆ ಕೆಲವುಕಡೆ ತಲೆದೋರಿದೆ. ನಮ್ಮಕತೆರಿಗೆಯನ್ನು ಬರಾಯಿಸುವದಕ್ಕೆ ತಲೂ ಸಾಲವಿರುವದುಚಿತವೆಂದು ಗವರ್ನಮೆಂಟಿನವರು ಅಭಿಪ್ರಾಯಪಟ್ಟದಾಗೆಂದು ಈ ವಿಷಯದಲ್ಲಿನೇರಿದ ವ್ಯಾಪಾರಸಂಘದವರ ಸಮಾಜದ ಒಬ್ಬರಿಬ್ಬರು ಖುದಿತವಾಗಿ ತಿಳಿಸಿದರೆಂದು ಕೇಳಿ ನಾವು ಬಹಳ ಸಂತೋಷಿಸಿದೆವು, ಎಂಬದು.

BANGALORE:—Printed and publish for the Proprietor at the KARNAT Press.—1888

ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA.

ಪ್ರತಿ ಸೋಮವಾರ ಪ್ರಾತಃಕಾಲದಲ್ಲಿ ಪ್ರಕಟಿಸಲ್ಪಡುವದು.

Published every Monday Morning.

ಪ್ರಜಾಮವಿವಿಧಪ್ರವೃತ್ತ್ಯುಪಗಮಾರ್ಥಂ ಕರ್ನಾಟಕಪ್ರಕಾಶಿಕವರಾಭಿಧಾ ಪ್ರಥಿತಸಾಹಿತೀಶೋಭಿತಾ | ಮೃಗಾಂಕಹಿತವಾಸರೇನಿಹಿತಮುದ್ರಣಾ ಸದ್ಯನ್ಯ್ರಿ ...

Vol. XV.] BANGALORE:—MONDAY, FEBRUARY 20, 1888. [No. 7.

ಸಂಪುಟ ೧೫.] ಬೆಂಗಳೂರು:—ಸನ್ ೧೮೮೮ನೇ ಇಸವಿ ಫೆಬ್ರುವರಿ ೨೦ನೇ ತಾರೀಖ್ ಸೋಮವಾರ. [ಸಂಚಿಕೆ ೭.

ಕರ್ಣಾಟಕ ಪ್ರಕಾಶಿಕಾ

ಪತ್ರಿಕೆಯ ಚಂದಾ ದರಗಳು,
೧೮೮೮ನೇ ಇಸವಿ ಜನವರಿಯಿಂದ
ಕಡಮೆಮಾಡಲ್ಪಟ್ಟಿರುತಿವೆ.

ಈ ಪತ್ರಿಕೆಯ ಚಂದಾದಾರರಲ್ಲಿ ಅನೇಕರ ಅಪೇಕ್ಷೆಯನ್ನು ನೆರವೇರಿಸುವ ಉದ್ದೇಶದೊಡನೆಯೂ, ಪರಿಮಿತವಾದ ಆದಾಯವುಳ್ಳವರಿಗೆಲ್ಲ ಈ ಪತ್ರಿಕೆಯು ಸುಲಭವಾಗಿ ಲಭಿಸುವಂತೆ ಮಾಡಬೇಕೆಂಬ ಅಭಿಪ್ರಾಯದೊಡನೆಯೂ ಇದರ ಚಂದಾದರವನ್ನು ಇದರಡಿಯಲ್ಲಿ ಕಂಡಂತೆ ಕಡಮೆಮಾಡಿರುತ್ತೇವೆ:—

ಇಂಗ್ಲಿಷ್ ಮತ್ತು ಕನ್ನಡಭಾಗಗಳಿಗೆ.

	ಸ್ಥಳದವರಿಗೆ	ಪರಸ್ಥಳದವರಿಗೆ
12 ತಿಂಗಳಿಗೆ	8—0—0	9—0—0
6 „	4—0—0	4—8—0
3 „	2—8—0	2—8—0

ಇಂಗ್ಲಿಷ್ ಅಥವಾ ಕನ್ನಡಭಾಗಗಳಿಗೆ.

	ಸ್ಥಳದವರಿಗೆ	ಪರಸ್ಥಳದವರಿಗೆ
12 ತಿಂಗಳಿಗೆ	4—0—0	5—0—0
6 „	2—0—0	2—8—0
3 „	1—4—0	1—8—0

ಷರಾ—ಅಂಚೆ ಮುನ್ಷಿಗಳು, ಪೋಲೀಸ್ ಮತ್ತು ತಾಲ್ಲೂಕ್ ಕಚೇರಿಗಳ ಗುಮಾಸ್ತರುಗಳು, ಸ್ಕೂಲುಮಾಸ್ತರರು, ಪಟೇಲರು, ವಿದ್ಯಾರ್ಥಿಗಳು, ಇವರಿಗೆಲ್ಲ ಈ ಪತ್ರಿಕೆಯು ಮೇಲಿನ ಚಂದಾದರಕ್ಕೆ ಕೊಡಲ್ಪಡುವದು. ಆಪ್ರಕಾರಮೊಬಲಗನ್ನು ಮುಂಗಡವಾಗಿ ಕೊಡಬೇಕು. ಚಂದಾದಾರರು ಇಂಗ್ಲಿಷ್ ಭಾಗವನ್ನಾಗಲಿ ಕನ್ನಡಭಾಗವನ್ನಾಗಲಿ ಅಥವಾ ಎರಡನ್ನಾಗಲಿ ತೆಗದುಕೊಳ್ಳಬಹುದು. ಚಂದಾಹಣವನ್ನು ಮುಂಗಡವಾಗಿಯೇ ಕಳಿಸತಕ್ಕದ್ದು. ಮೂರುತಿಂಗಳಿಗಿಂತ ಕಡಮೆಯಾಗಿ ಚಂದಾ ಮೊಬಲಗು ಅಂಗೀಕರಿಸಲ್ಪಡಲಾರದು.

ನೋಟುಗಳು ರವಾನಿಸತಕ್ಕವರು ಮೊದಲು ಕಳುಹಿಸುವ ಅರ್ಧನೋಟು ತಲುಪಿದುದಕ್ಕೆ ನಮ್ಮಿಂದ ಉತ್ತರ ಕೊಟ್ಟಮೇಲೆ ಬಾಕೀ ಅರ್ಧ ನೋಟನ್ನು ರವಾನಿಸತಕ್ಕದ್ದು. ಸ್ಟಾಂಪುಗಳು ಕಳುಹಿಸತಕ್ಕವರು ರೂಪಾಯಿ ಒಂದಕ್ಕೆ ಒಂದಾಣೆಯಂತೆ ಡಿಸ್‌ಕೌಂಟ್ ಸಹ ಸೇರಿಸಿ ಕಳುಹಿಸತಕ್ಕದ್ದು. ಅರ್ಧಾಣೆಗಿಂತ ಜಾಸ್ತಿ ಕ್ರಯವುಳ್ಳ ಸ್ಟಾಂಪುಗಳನ್ನು ಕಳುಹಿಸಕೂಡದು. ಡಿಸ್‌ಕೌಂಟ್ ಇಲ್ಲದೆ ಕಳುಹಿಸಲ್ಪಡುವ ಮೊಬಲಗಿನಲ್ಲಿ ಅದು ಮುರಿಯಲ್ಪಟ್ಟು ಮಿಕ್ಕ ಮೊಬಲಗು ಲೆಕ್ಕಕ್ಕೆ ದಾಖಲುಮಾಡಿಕೊಳ್ಳಲ್ಪಡುವದು.

ಪ್ರಕಟನೆಯ ರಿವಾಜ್.

ಮೊದಲನೆಯದಕ್ಕೆ ಪಂಕ್ತಿ ಒಂದಕ್ಕೆ ೦—೩—೦

ಎರಡನೆಯದಕ್ಕೆ ಪಂಕ್ತಿ ಒಂದಕ್ಕೆ ೦—೨—೦

ಷರಾ—ಎರಡಾವರ್ತಿಗಿಂತ ಹೆಚ್ಚಾಗಿ ಎಷ್ಟು ತಡವೆ ಖಾಯಮ್ ಮಾಡಿದಾಗ್ಯೂ ಪಂಕ್ತಿ ಒಂದಕ್ಕೆ ೧ ಆಣೆಯಂತೆ ಲೆಕ್ಕ ಮಾಡಲ್ಪಡುವದು. ಈ ಪತ್ರಿಕೆಯಲ್ಲಿ ಖಾಯಮ್ ಮಾಡುವದಕ್ಕೆ ಪ್ರಕಟನೆಗಳು ಕಳುಹಿಸುವವರು ಅವುಗಳನ್ನು ಎಷ್ಟಾವರ್ತಿ ಖಾಯಮ್ ಮಾಡಬೇಕೆಂಬ ಅಂಶವನ್ನು ಸ್ಪಷ್ಟವಾಗಿ ತಿಳಿಸತಕ್ಕದ್ದು. ಇಲ್ಲದಿದ್ದರೆ ಅವರು ನಮಗೆ ನಿಲ್ಲಿಸುವಂತೆ ಬರೆಯುವತನಕ ಅವು ಪ್ರಕಟಿಸುತಲಿದ್ದು ಹಾಗೆ ಎಷ್ಟಾವರ್ತಿ ಪ್ರಕಟಿಸಲ್ಪಟ್ಟಿದ್ದಾಗ್ಯೂ ಮೇಲ್ಕಂಡ ದರದಂತೆ ಕಿಮ್ಮತ್ ವಸೂಲ್ಮಾಡಲ್ಪಡುವದು. ಪ್ರಕಟನೆಯ ಬಗ್ಗೆ ಕಳುಹಿಸಲ್ಪಡತಕ್ಕ ಪ್ರಕಟನೆಗಳನ್ನು ಆ ಪತ್ರಿಕೆಯು ಪ್ರಕಟವಾದ ಮುನ್ನಾದಿನ ೫ ಘಂಟೆಯೊಳಗಾಗಿ ಕಳುಹಿಸಬೇಕು. ಪ್ರಕಟನೆಯನ್ನು ಈ ಪತ್ರಿಕೆಗೆ ಕಳುಹಿಸಲ್ಪಡತಕ್ಕ ಕಾಗದಗಳಲ್ಲಿ ತಿಳಿಸಲ್ಪಡುವ ಅಭಿಪ್ರಾಯಗಳಿಗೆ ನಾವು ಜವಾಬ್ದಾರರಾಗಲಾರೆವು. ಕ್ರಮವಾಗಿ ರುಜುಮಾಡದೆ ಕಳುಹಿಸಲ್ಪಡುವ ಪತ್ರಗಳನ್ನು ಪ್ರಕಟಿಸಲಾರೆವು. ಹಿಂತಿರುಗಿ ಕಳುಹಿಸಲ್ಪಡಲಾರವು.

"IT RECOMENDS ITSELF"

ALL WHO SUFFER FIND SURE RELIEF.

LITTLE'S

ORIENTAL BALM

THE MOST EFFECTUAL MODERN REMEDY FOR PAIN.

ಲಿಟ್ಟಲ್ ಯೆಂಬವರಿಂದ ತಯಾರಿಸಲ್ಪಟ್ಟ "ಬಾಧಸಂಹಾರಿಣೀ" ಎಂಬ ಪೂರ್ವದೇಶ ಸಂಬಂಧವಾದ ಅಮೂಲ್ಯ ತೈಲವು ಸ್ವಹಸ್ತ ಪ್ರಯೋಗವಾದದ್ದು, ಮತ್ತು ಸಫಲವಾದ ನವೀನ ಪ್ರತಿಕ್ರಿಯಾರೂಪವಾದ ಔಷಧವು. ಇದರಿಂದ ಸಕಲ ವಾತರೋಗಗಳೂ, ವಾತಸಂಬಂಧಗಳಾದ ಸಂಧಿಬಂಧಗಳೂ ನಿವೃತ್ತಿಯಾಗುವವು. ಮುಖ್ಯವಾಗಿ ಚಿರಕಾಲಿಕವಾದ ವಾತರೋಗಗಳು, ಕಾಸ, ಗಂಟಲಿನಲ್ಲಿ ಉರಿ, ನಡುಮನೋವು, ಕೀಲುವಾಯು, ಕಟಿವಾಯು, ಉಳುಕು ನೋವು, ತಲೆನೋವು, ತಿಮಿರವಾಯು ಮುಂತಾದ ರೋಗಗಳಿಗೆಲ್ಲ ನಿಸ್ಸಂದೇಹವಾಗಿ ಬಹಳ ಪ್ರಯೋಜನವನ್ನುಂಟು ಮಾಡತಕ್ಕದ್ದು. ಈ ತೈಲವನ್ನು ನೋವಿನ ಸ್ಥಳಗಳಲ್ಲಿ ಕೆಲವಾವರ್ತಿ ಸವರಿ ಶಾಖವುಂಟಾಗುವಂತೆ ಚೆನ್ನಾಗಿ ತಿಕ್ಕಿದಲ್ಲಿ ನರಗಳಿಗಾದ ಬೆಳ್ಳಾನೋವುಗಳನ್ನು ನಿವೃತ್ತಿ ಮಾಡುವಂತಾ ಉತ್ತಮ ತೈಲವಾಗುತ್ತದೆ. ಸಕ್ಕರೆರೋಗದಿಂದಲೇ ಆರಂಭವಾದ ನೋವು ಮತ್ತು ಬೀಳುವ ಕುಷ್ಠಾಂಗ ನಿವೃತ್ತಿಯಾಗುವದು. ಗಂಟಿನ್ನಿಂದುಂಟಾಗುವ ಉರಿ ಅಥವಾ ವ್ರಣಗಳಿಗೆ ಈ ತೈಲವು ಅದ್ಭುತವಾದ ಮತ್ತು ಶೀಘ್ರವಾದ ಸಂಪೂರ್ಣ ಗುಣವನ್ನುಂಟುಮಾಡುವದು. ಅದ್ಭುತವಾದ ಈ ಔಷಧವನ್ನು ಉಪಯೋಗಿಸಿದಲ್ಲಿ ಅದರ ಪ್ರಯೋಜನವು ಸ್ವತಃವೆ ವ್ಯಕ್ತವಾಗುವದು. ಈ ತೈಲವು ಶೀತಗಾಳಿ ಮುಂತಾದವುಗಳಿಗೊಳಗಾಗಿ ಸಂಚರಿಸುವಂತಾ ಪ್ರಯಾಣಿಕರು, ಬೇಟೆಯಾಡುವವರು, ವ್ಯಾಯಾಮ ಮಾಡುವವರು, ಮುಂತಾದವರಿಗೆಲ್ಲ ಅಮೂಲ್ಯವಾದದ್ದು.

ಪರಿಶೀಲಕರ ಅಭಿಪ್ರಾಯವು.

ಇಂಗ್ಲೆಂಡ್ ದೇಶದ ಫಾರ್ಮಸ್ಯುಟಿಕಲ್ ಸೊಸೈಟಿಯೆಂಬ ಔಷಧಶಾಲೆಯ ಪ್ರಸಿದ್ಧರಾಗಿಯೂ, ಐರ್ಲೆಂಡ್ ದೇಶದ ಕೆಮಿಕಲ್ ಸೊಸೈಟಿ ಎಂಬ ಪ್ರತ್ಯಗಾಹಾತುವಿವೇಚಕ ಸಮಾಜದ ಮೆಂಬರರಾಗಿಯೂ, "ಮಿನರಲ್ ವಾಟರ್ಸ್ ಆಫ್ ಯುರೋಪ್" ಎಂಬ ಗ್ರಂಥಕರ್ತರಾಗಿಯೂ, ರಸಾಯನ ವಿದ್ಯಾ ವಿಷಯಕವಾದ ಅನೇಕ ಲೇಖನಾಧಿಕಾರಿಗಳಾಗಿಯೂ, ಇರುವ ಪ್ರೊಫೆಸರ್ ಟಿಚ್ ಬೋರ್ನ್ (C. R. Tichborne, L. L. D., F. C. S., M. R. I. A.) ಎಂಬವರು ಅಭಿಪ್ರಾಯಪಟ್ಟಿರುತ್ತಾರೇನೆಂದರೆ—ಲಿಟ್ಟಲ್ಲರವರ ಓರಿಯಂಟಲ್ ಬಾಮ್ ತೈಲವನ್ನು ಚಿಕಿತ್ಸೆಯಿಂದ ಪರೀಕ್ಷಿಸಿದ್ದರಲ್ಲಿ ಇದು ಬಹುವಿಧ ಮೂಲಿಕೆಗಳ ರಸಮಿಶ್ರಣವಾದ ತೈಲಪದಾರ್ಥವೆಂದು ತೋರುವದೆ. ಇದು ಹೊರಗೆ ಉಪಯೋಗಿಸಲ್ಪಡುವಾಗ ಕುಷ್ಠಾಂಗ ನಿರುಪದ್ರವಕರವಾದದ್ದಾಗಿದ್ದರೂ, ಸಮಾನ್ಯ ಪ್ರಬಲ ರೋಗ ನಿವಾರಕ ಶಕ್ತಿಯುಳ್ಳದ್ದಾಗಿರುತ್ತದೆ. ಈ ಮಿಶ್ರೌಷಧವು ನರಗಳನ್ನು ಸ್ವಾಧೀನಕ್ಕೆ ತರತಕ್ಕದ್ದಾಗಿರುವದರಿಂದ ಇದು ಯಾವ ತರದ ರೋಗಗಳಿಗೆ ಉಪಯುಕ್ತವೆಂದು ತಿಳಿಸಲ್ಪಟ್ಟಿದೆಯೋ ಆ ರೋಗಗಳಲ್ಲಿ ಅದರ ಪ್ರಯೋಜನವು ವ್ಯಕ್ತವಾಗುವದು. ಈ ತೈಲವು ಸಂಪೂರ್ಣ ಜಾಗರೂಕತೆಯೊಡನೆ ತಯಾರುಮಾಡಲ್ಪಟ್ಟಿರುತ್ತದೆ.

ಇದರ ಕ್ರಯ—ಸೀಸೆ ಒಂದಕ್ಕೆ ೧ ರೂಪಾಯಿ.

ಇದು ದೇಶದ ಔಷಧ ಶಾಪುಗಳಲ್ಲಿಯೂ, ಮದ್ರಾಸ್ ಸಂಬುದಾಸ್ ಬೀದಿಯಲ್ಲಿ ೨೦ನೇ ನಂಬರ್ ಮನೆಯೊಳಗಿನ, ಏ. ಸಿ. ಬೆರ್ರಿಮನ್ ಯವರಲ್ಲಿಯೂ, ಈ ಪ್ರಾಂತದಲ್ಲಿರುವ ಅವರ ಏಜಂಟುಗಳಾದ ಜೆ. ವೆಸ್ಟ್ ಯವರ ಕಂಪೆನಿಯಲ್ಲಿಯೂ, ಮೆ. ಕೆಪ್ಲಿನ್ ಅಂಡ್ ಕಂಪೆನಿಯವರಲ್ಲಿಯೂ, ರಿಗ್ಸ್ ಯವರ ಕಂಪೆನಿಯವರಲ್ಲಿಯೂ ದೊರೆಯುವದು.

AGENTS.— Messrs, J. West, Chemist, &c., Bangalore.
Caplin & Co. Chemists, Bangalore.
Riggs & Co., Chemists, Bangalore; and of
Mahomed Yousuff and Sons, The Cash Bazarr, Bagnlore
A. C. Berryman & Co.,
20 Sambodoss Street Madras.

NOTICE.

VAIDYASARA SANGRAHA

A TREATISE ON THE PRINCIPLES OF

HINDU MEDICINE.

☞ Price including Postage Rs.5 6-0

ವೈದ್ಯಸಾರ ಸಂಗ್ರಹ.

ಈಗ್ರಂಥಾಪೇಕ್ಷೆಯುಳ್ಳವರು ಮೊಬಲಗಿನೊಡನೆ ಈ ಕೆಳಗೆ ರುಜುಮಾಡಿರತಕ್ಕವರ ಹೆಸರಿಗೆ ಬರೆದುಕೊಂಡರೆ ಪುಸ್ತಕ ಕೂಡಲೇ ಕಳುಹಿಸಲ್ಪಡುವದು. ಮೊಬಲಗು ಇಲ್ಲದ ದರಖಾಸ್ತುಗಳಿಗೆ ಸುತರಾಂ ಅಂಗೀಕರಿಸಲ್ಪಡಲಾರವು.

ಬೆಲೆ ಕ್ರಯ ... ... ರೂ|| ೫—೦—೦

ಪ್ಯಾಕಿಂಗ್ ಮತ್ತು ಅಂಚೆಹಾಸಲ್, ೦—೬—೦

ಟಿ. ಬಿ. ವೆಂಕಟಾಚಾರ್,

ಆಸ್ಪತ್ರಿರೋಡ, ಬೆಂಗಳೂರು.

ನೋಟಿಸ್

ಹೈದರಾಬಾದ್ ನಿಜಾಂ ಸರಕಾರದ ಸರ್ವೇ ಸೆಟಲ್‌ಮೆಂಟ್ ಖಾತೆಯಲ್ಲಿ ನೂರುಮಂದಿ ಮೋಜಣಿದಾರರ ಅವಶ್ಯಕವಿದೆ. ಆದರೆ ಸರ್ವೇ ಸೆಟಲ್‌ಮೆಂಟ್ ಬಲ್ಲಂತಾವರು ತಮ್ಮ ಬಳಿಯಲಿರುವ ಸರ್ಟಿಫಿಕೇಟಿನ ನಕಲು ಸಹಿತವಾಗಿ ಇದರ ಕೆಳಗೆ ಸಹಿ ಮಾಡಿರುವವರಿಗೆ ದರಖಾಸ್ತು ಕಳುಹಿಸತಕ್ಕದ್ದು. ಅಂದರೆ, ಅವರವರ ಯೋಗ್ಯತಾನುಸಾರ ೧೫ ರೂಪಾಯಿಗಳು ಮೊದಲುಗೊಂಡು ೩೦ ರೂಪಾಯಿಗಳ (ಹಾಲಿಸಿಕ್ಕಾ) ವರಿಗೂ ಸಂಬಳ ಸಿಕ್ಕುವದು.

ಎ. ಜೆ. ಡನ್ಲಾಪ್,

ಇನ್ ಸ್ಪೆಕ್ಟರ್ ಜನರಲ್ ಮಾಲವಸೂಲು,

ಬಂದೋಬಸ್ತು ಮುಲ್ಕಿ,

ಸರಕಾರ್, ಆಲಿ ಹೈದರಾಬಾದ್.

ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA.

MONDAY, FEBRUARY 20 1888.

೧೮೮೮ನೇ ಫೆಬ್ರುವರಿ ೨೦ನೇ ತಾ|| ಸೋಮವಾರ.

THE LATE MR. P. KRISHNA ROW, R.B.

ಲೋಕದಲ್ಲಿ ಪ್ರಾಯೇಣ ಜನಗಳೆಲ್ಲರೂ ತಮಗೆ ಲಭಿಸಿರುವ ಅಧಿಕಾರ ಸಂಪತ್ಪ್ರಭವಗಳು ಸ್ಥಿರವಾದವೆಂದೆಣಿಸಿ, ಇತರಾಪೇಕ್ಷೆಯಾ ತಾವು ಸರ್ವೋತ್ಕೃಷ್ಟರೆಂಬ ಒಂದುಬಗೆ ದುರಭಿಮಾನದೊಡನೆ ಮನಸ್ಸಿಗೆ ಪತಿಸುತ ಮೆರೆಯುತಲಿರುತ್ತಾರೆಯಷ್ಟೆ. ಅಂತವರಿಗೆ ಬೇಕಾದಷ್ಟು ಲೋಕಾನುಭವವು ಇಲ್ಲದಿರುವದೇ ಇದಕ್ಕೆ ಕಾರಣವೆಂದು ಹೇಳಬಹುದಾಗಿದೆ. ಯಾಕೆಂದರೆ ಕಾಲಾನುಗುಣವಾಗಿ ಸ್ಥಿತಿ ವಿಪರ್ಯಯವನ್ನೈದತಕ್ಕವಾಗಿರುವದರಿಂದ ವಿವೇಕಿಗಳೀ ಪ್ರಪಂಚವನ್ನು ಕ್ಷಣ ಭಂಗುರವೆಂತಲೂ, ದುಃಖರೂಪವೆಂತಲೂ ಭಾವಿಸದೆ ಇರಲಾರರು. ಅತ್ಯಂತ ಸೂಕ್ಷ್ಮವಾದ ಕಾಲಗತಿಯ ಸ್ವರೂಪವನ್ನು ಯಾರೂ ತಿಳಿಯಲಾರರಾಗಿ ಉತ್ತರ ಕ್ಷಣದೊಳುಂಟಾಗುವ ಪ್ರಸಾದಗಳಂತಾವೆಂದೂಹಿಸಲಾಗದೆ ಇದೆ. ಇದರಿಂದ ಈ ಕ್ಷಣದಲ್ಲಿ ನಮ್ಮ ಮುಂದೆ ಇರತಕ್ಕವು ತರುವಾಯ ಕ್ಷಣದಲ್ಲಿ ಸ್ಮರಣೀಯಗಳಾಗಿರಲು, ಅವುಗಳ ನಾಶನಕ್ಕಾಗಿ ನಾವು ಖೇದಪಡಲಿಕ್ಕೆ ಕಾರಣವಾಗುತಿದೆ. ಗತವಾರದಲ್ಲಿ ಎಲ್ಲರ ದರ್ಶನ ಶ್ರವಣಗಳಿಗೆ ವಿಷಯವಾಗಿದ್ದ ಒಂದು ವ್ಯಕ್ತಿಯೂ ಅವರ ನಾಮವು ಸಹ ಈವಾರದಲ್ಲಿ ಅಗೋಚರವಾಗಿ ಮರೆಯುವಂತೆ ಪರಿಣಮಿಸಿದ್ದನ್ನು ನೋಡಲಾಗಿ ಕಾಲಗತಿಯು ಅಚಿಂತ್ಯವಾದದ್ದೆಂದು ಎಣಿಸಬೇಕಾಗಿರುತಿದೆ. ಶ್ರೀಮನ್ಮಹಾರಾಜರವರ ಮಂತ್ರಿಲೋಚಕ ಸಭಾಸದರೊಳೊಬ್ಬರಾಗಿದ್ದ ರಾಯ ಬಹದೂರ್ ಮ|| ರಾ|| ಪೂರ್ಣಂ ಕೃಷ್ಣರಾಯರವರು ಮಾಘ ಶುದ್ಧ ೧೩ನೇ ತಾರೀಖ್ ಸೋಮವಾರದದಿನ ಸಾಯಂಕಾಲ ೭ ಘಂಟೆಗೆ ಸರಿಯಾಗಿ ಮೈಸೂರಲ್ಲಿ ಮುಕ್ತಿನಿಮಿತ್ತವಾದ ತಮ್ಮ ಪ್ರಾಕೃತ ಶರೀರವ ತ್ಯಜಿಸಿ ಶ್ರೀಭಗವತ್ಪಾದಾರವಿಂದವನ್ನೈದಿದರೆಂಬ ವೃತ್ತಾಂತವು ಕೇಳಿ ನಾವು ಬಹಳ ವಿಷಾದಿಸುತ್ತೇವೆ. ಈ ದೊಡ್ಡ ಮನುಷ್ಯರೊಳಿದ್ದ ಶ್ಲಾಘ್ಯಗಳಾದ ಅನೇಕ ಸುಗುಣಗಳು ನಿರಾಶ್ರಯಗಳಾದಬಗ್ಗೆ ವಿಶೇಷ ಶೋಕಿಸಬೇಕಾಗಿದೆ. ಇವರ ಪೂರ್ವವೃತ್ತಾಂತವನ್ನೀಸಂದರ್ಭದಲ್ಲಿ ಈ ಪತ್ರಿಕೆಯನ್ನೋದುವವರ ಸ್ಮರಣೆಯೊಳು ತರುವೆವೆಂತೆನೆ— ಮ|| ಕೃಷ್ಣರಾಯರವರು ಪೂರ್ಣಯ್ಯರೆಂಬ ಹಿಟ್ಟೈಶಕರ ಪುತ್ರರಾಗಿದ್ದರು, ಪರಂತು ಇವರ ತಂದೆಗೆ ಜಾರ್ ಕಚ್ಚೇರಿಯಲ್ಲಿ ಶಿರಸ್ತೇದಾರನಾದವರೊಡಲು ಅವರು ಲೌಕಿಕವೃತ್ತಿಯು ಕೈಗೊಂಡು ಪೂರ್ಣ ವೀರಧರಾಯರೆಂಬ ಭಿನ್ನ ನಾಮದೊಡನೆ ಬಹುಕಾಲ ಉದ್ಯೋಗದೊಳಿರುತಲಿದ್ದರು. ಮ|| ಕೃಷ್ಣರಾಯರವರು ಪ್ರಥಮತಃ ಮಿಷನ್ ಸ್ಕೂಲಿನಲ್ಲಿ ಇಂಗ್ಲಿಷ್ ವಿದ್ಯಾಭ್ಯಾಸಮಾಡಿ ಕ್ರಮೇಣ ಅಲ್ಲಿಯೇ ಒಬ್ಬ ಉಪಾಧ್ಯಾಯರಾಗಿಯೂ, ಕೆಲವು ವರ್ಷಗಳಿರುವಾ

ಯು ಅಷ್ಟಗ್ರಾಮ ಡಿವಿಜನಕಚೇರಿಯಲ್ಲಿ ಒಬ್ಬ ಕ್ಲರ್ಕ್ಕರಾಗಿಯೂ ನೌಕರರಾಗಿ ಅಲ್ಲಿಂದ ಕ್ರಮೇಣ ನಾಯಬ್ ಶಿರಸ್ತೆಯದಾರನ ಅಭಿವೃದ್ಧಿಗೆ ಬಂದರು. ಬಳಿಕ ಮುನ್ಸಫರಾಗಿಯೂ, ಅನಂತರ ಸನ್ ೧೮೬೮ನೇ ಇಸವಿಯ ನವಂಬರ್ ತಿಂಗಳಲ್ಲಿ ನಡೆದ ಹೊಸ ಲವಾಜಮೆ ಏರ್ಪಾಡಿನೊಳು ಅಸಿಸ್ಟೆಂಟರಾಗಿಯೂ ನೌಕರರಾದರು. ಚಿತ್ರದುರ್ಗ, ಕಡೂರು, ಡಿಸ್ಟ್ರಿಕ್ಟುಗಳಲ್ಲಿ ಬಹುಕಾಲ ಡೆಪ್ಯುಟೀ ಕಮಿಷನರ್ ಕೆಲಸವನ್ನು ಅನುಸ್ಯೂತವಾಗಿ ನೋಡುತಲಿದ್ದು ಕಡೆಗೆ ಸರ್ ರಿಚರ್ಡ್ ಮೀಡರ ಕಾಲದಲ್ಲಿ ಸ್ವತಃ ಪೆನ್ಷನ್ ತೆಗೆದುಕೊಂಡರು. ಶ್ರೀಮನ್ಮಹಾರಾಜರವರಿಗೆ ರಾಜ್ಯ ಒಪ್ಪಿಸಲ್ಪಟ್ಟ ಕಾಲದಲ್ಲಿ ಅವರ ಸಹಾಯಾರ್ಥ ಒಂದು ಮಂತ್ರಾಲೋಚಕ ಸಭೆಯನ್ನೇರ್ಪಡಿಸಬೇಕಾದ ಆವಶ್ಯಕತೆ ಯುಂಟಾದದರಿಂದ ಅದಕ್ಕೆ ಬೇಕಾದ ಮೆಂಬರುಗಳನ್ನು ಚುನಾಯಿಸುವಾಗ್ಯೆ ಮೆ|| ಕೃಷ್ಣರಾಯರವರು ವಿದ್ಯಾ ಬುದ್ಧಿ ವಿನಯಾನುಭವಾದಿ ಗುಣಗಳಿಂದ ಸದರೀ ಸ್ಥಾನಕ್ಕೆ ಸಂಪೂರ್ಣ ಅರ್ಹರೆಂದು ಭಾವಿಸಿ ಅವರಿಗೆ ಕೌನ್ಸಿಲ್ ಕೆಲಸ ಇತರರೊಡನೆ ಕೊಡಲ್ಪಟ್ಟಿತು. ಅದು ಮೊದಲು ಇದುವರಿವಿಗೆ, ಅಂದರೆ, ಸುಮಾರ್ ೭ ವರುಷಗಳ ಕಾಲ ಮಹಾರಾಜರವರ ಕೌನ್ಸಿಲರೆಂಬ ಘನತರವಾದ ಪ್ರತಿಷ್ಟ್ಯವನ್ನು ಪಡೆದಿದ್ದರು. ಗತ ಏಳುವರುಷಗಳ ಕಾಲದಲ್ಲಿ ಈ ರಾಜ್ಯದ ಆಡಳಿತ ವಿಷಯಕ್ಕೆ ಸಂಬಂಧಿಸಿದಂತೆ ಸ್ವದೇಶಾನ್ಯದೇಶೀಯರುಗಳಾದ ಪ್ರಬಲ ವಿಷಯಗಳು ಪ್ರಾಪ್ತವಾಗಿ ಅವು ಮಂತ್ರಾಲೋಚಕ ಸಮಾಜದಲ್ಲಿ ವಿಮರ್ಶೆಯಾಗಿ ಅದರಂತೆ ಆಚರಣೆಯೊಳ್ ಬಂದುದೆಯಾಗಲಿ, ಹಿಂದೆ ಬ್ರಿಟಿಷ ಗವರ್ನಮೆಂಟಿನವರಿಂದ ಜಾರಿಯಲ್ಲಿ ಇರಲ್ಪಡದೇ ಇದ್ದ ಹೊಸನ್ಯಾಯ ನಿಬಂಧನೆಗಳು ಏರ್ಪಟ್ಟು ವಿಚಾರಪೂರ್ವಕ ಅವು ಜಾರಿಯೊಳು ಬಂದುದೆಯಾಗಲಿ ಯಾರೂ ಹೇಳಲಿದ್ದರೂ, ಕೌನ್ಸಿಲರ್‌ಗಳು ಮಾತ್ರ ತಮ್ಮ ಕರ್ತವ್ಯವನ್ನು ಒಂದು ದಿನವಾದರೂ ಸಡಿಲಮಾಡದೆ ಅಕ್ಕರೆಯೊಡನೆ ನಿರ್ವಹಿಸುತಲಿದ್ದವರಲ್ಲಿ ಈಗ ಮೃತಪಟ್ಟವರು ಅಗ್ರಿಮರಾಗಿದ್ದರೆಂದು ಮಾತ್ರ ನುಡಿಯದೆ ಹೋಗಲಾರೆವು. ಮೆ|| ಕೃಷ್ಣರಾಯರವರು ಸ್ವಭಾವತಃ ಒಳ್ಳೆ ಮನುಷ್ಯರಾಗಿಯೂ, ನಿಷ್ಕಪಟ ವಿನಯ ಗಾಂಭೀರ್ಯಾದಿ ಗುಣಾನ್ವಿತರಾಗಿಯೂ ಸ್ನೇಹಪರರಾಗಿಯೂ ಕೇವಲ ಮೃದು ಮಧುರ ವಾಕ್ಯಗಳಿಂದ ತಮ್ಮ ಬಳಿಗೆ ಬರತಕ್ಕವರನ್ನೆಲ್ಲ ಸಂತೋಷಗೊಳಿಸಿ ಕಳುಹಿಸುವಷ್ಟು ಬುದ್ಧಿ ಕೌಶಲ್ಯ ಪೂರ್ಣರಾಗಿಯೂ, ಆಂಧ್ರ, ಕರ್ಣಾಟ, ಗೀರ್ವಾಣಾದಿ ಪೂರ್ವದೇಶ ಭಾಷೆಗಳಲ್ಲಿಯೂ, ಗ್ರೀಕ್ ಲ್ಯಾಟಿನ್ ವಗೈರೆ ಕೆಲವು ಪಾಶ್ಚಿಮಾತ್ಯ ಭಾಷೆಗಳಲ್ಲಿಯೂ ಸಮಾನ ಪಾಂಡಿತ್ಯ ಉಳ್ಳವರಾಗಿಯೂ, ಪಂಡಿತ ಪ್ರಶಂಸಾರ್ಹರಾದ ಲೇಖಕರಾಗಿಯೂ, ಒಳ್ಳೆ ವಕ್ತಾರಾಗಿಯೂ ಇದ್ದರು. ಅವುಗಳೊಡನೆ ಸ್ವಮತಾಚಾರಗಳಲ್ಲಿ ಆಸಕ್ತಿಯೂ ಕರ್ಮಶ್ರದ್ಧೆಯೂ ಅವರಲ್ಲಿ ಸಂಪೂರ್ಣವಾಗಿ ನೆಲಗೊಂಡಿದ್ದದರಿಂದ ಅವು ಮತ್ತಷ್ಟು ಶೋಭಿಸಲಿಕ್ಕೆ ಕಾರಣವಾಗಿತ್ತು. ಮುಖ್ಯವಾಗಿ ಮೆ|| ಕೃಷ್ಣರಾಯರವರ ಸದ್ಗುಣಗಳನ್ನು ಪರಿಭಾವಿಸಿ ನೋಡಲಾಗಿ ಅನುಭವಶಾಲಿಯಾದ ಇಂತಾ ಮಂತ್ರಾಲೋಚಕರೊಬ್ಬರನ್ನು ಮಹಾರಾಜಾ ಸರ್ಕಾರದವರು ಕಳೆದುಕೊಂಡಬಗ್ಗೆ ಇಷ್ಟರ ವಿದ್ಯಾ ಸಂಪನ್ನರಾಗಿದ್ದ ದೊಡ್ಡಮನುಷ್ಯರು ಮಡಿದರೆಂಬ ಗೌರವವನ್ನು ಇಲ್ಲಿನ ಪ್ರಜೆಗಳು ತೋರಿಸಬೇಕಾದ ಕಾಲ ಪ್ರಾಪ್ತವಾದಬಗ್ಗೆ ನಮ್ಮಂತೆ ಯೆಲ್ಲರೂ ವಿಷಾದಿಸುವರೆಂದೆಣಿಸುತ್ತೇವೆ.

A PROPHESY.

ಈಚೆಗೆ ಪ್ರಾಪ್ತವಾದ ಚಂದ್ರಗ್ರಹಣದ ವಿಷಯದಲ್ಲಿ ಯೂರೋಪ್‌ಖಂಡದಲ್ಲಿರುವ ಪ್ರಸಿದ್ಧರಾದ ಕಾಲಜ್ಞರು ಕೆಲವರು ಇದರ ವಿಷಯದ ಆಶ್ಚರ್ಯಕರಗಳಾದ ವಿಷಯಗಳನ್ನು ತಿಳಿಸಿರುವದು ಅಲ್ಲಿನ ಪತ್ರಿಕೆಯೊಂದರಮೂಲಕ ವ್ಯಕ್ತವಾಗುತಿದೇನೆಂದರೆ :—"ಗತ ಮಾಘ ಶುಕ್ಲಪಕ್ಷ ಪೌರ್ಣಮಾ ಸ್ಥಿರವಾಸರದಲ್ಲಿ ಪುಷ್ಯಾಶ್ಲೇಷಾನಕ್ಷತ್ರ ಸಂಧಿಯೊಳು ಹಿಡಿದ ಚಂದ್ರೋಪರಾಗವು (ಆ ದಿನ ರಾತ್ರಿ ಸುಮಾರ್ ೧೧ ಅಥವಾ ೧೨ ಘಂಟೆಗೆ ಸ್ಪರ್ಶವಾಗಿ ೩|| ಘಂಟೆಗಳಕಾಲ ಗ್ರಸ್ತವಾಗಿದ್ದದರಿಂದ ತತ್ಪ್ರಯುಕ್ತವಾದ ಹಾನಿಯು ೩|| ತಿಂಗಳವರಿವಿಗೆ ಅನುಭವಕ್ಕೆ ಬರುವದರಲ್ಲಿ ಸಂಶಯವಿಲ್ಲವು. ಆಗ್ರಹಣವು ಸಿಂಹರಾಶಿಯಲ್ಲಿ ಉಂಟಾದದರಿಂದ ಪ್ರಬಲಯುದ್ಧಗಳೂ ಬಹು ಪ್ರಾಣನಾಶವೂ ಪ್ರಾಪ್ತವಾಗುವವು. ಇದು ಸಿಂಹರಾಶಿಯ ಮೊದಲುಭಾಗದಲ್ಲಿ ಸಂಬಂಧಿಸಿದ್ದದರಿಂದ ಜಾಗ್ರತೆಯಲ್ಲಿ ಯಾರಾದರೊಬ್ಬ ಚಕ್ರವರ್ತಿಯು ಕಾಲಗತಿಯನ್ನೈದಬೇಕಾಗಿರುತಿದೆ. ಈ ಸಿಂಹರಾಶಿಯಲ್ಲಿ ಫ್ರಾನ್ಸ್,ಇಟಲಿ, ಈ ಎರಡು ದೇಶಗಳು ಸೇರಿರುವದರಿಂದ ಆ ಪ್ರಾಂತಗಳಿಗೆ ಮುಖ್ಯವಾಗಿ ಅನೇಕಬಾಧಕಗಳುಂಟಾಗುವವು. ಜೂಲೈ ತಿಂಗಳ ೩೧ನೇತಾರೀಖಿನೊಳಾಗಲಿ ಅದರ ಮುಂದಿನದಿನದೊಳಾಗಲಿ ಜನಿಸಿದವರಿಗೆ ಜನನಕಾಲದಲ್ಲಿ ಗುರುವಾಗಲಿ, ಬುಧನಾಗಲಿ,ಶನಿಯೊಡನೆ ಸೇರಿದ್ದರೇ ನೆಪ್ಟೂನ್ ಅಂತವರಿಗೆ ಮೇಲೆ ಕಂಡ ಮೂರುತಿಂಗಳಕಾಲದೊಳಗಾಗಿ ಶರೀರಾಲಸ್ಯವೂ ದ್ರವ್ಯನಷ್ಟವು ಸಹ ಉಂಟಾಗುವವು. ಸನ್ ೧೮೪೯ ಅಥವಾ ೧೮೫೦ನೇ ಇಸವಿಗಳ ಆಗಸ್ಟು ೧೯ನೇತಾರೀಖಿನಮಧ್ಯದಲ್ಲಿ ಜನಿಸಿದವರಿಗೆ ಬಹು ಕ್ಲೇಶಗಳುಂಟಾದವು. ಶನಿಯು ಚಂದ್ರನಿಗೂ ಗುರುವಿನಿಗೂ ಊರ್ಧ್ವಭಾಗದಲ್ಲಿರುವದರಿಂದಲೂ, ಶುಕ್ರನಿಗೆ ಉದಯಕಾಲವಾಗಿರುವದರಿಂದಲೂ, ಬಹುಜನ ದೊಡ್ಡಮನುಷ್ಯರು ತಾಪಿಸಿ ಫ್ರಾನ್ಸ್‌ದೇಶದಲ್ಲಿ ಅನೇಕರು ಮೃತರಹುವರು. ಇದಲ್ಲದೆ ಇಂಗ್ಲಿಷರಿಗೆ ಅನ್ಯಸಂಸ್ಥಾನಾಧಿಪತಿಗಳೊಡನೆ ಯುದ್ಧವೂ, ಸ್ವದೇಶದಲ್ಲಿ ಕಳವಳವೂ ತಲದೋರುವವು. ಭೂಕಂಪದಿಂದ ಇನ್ನೂ ಕೆಲವು ನಷ್ಟಗಳುಂಟಾಗಬಹುದಲ್ಲದೆ ಫ್ರಾನ್ಸ್, ಇಟಲಿ, ಇಂಗ್ಲೆಂಡ್, ಈ ರಾಜ್ಯಗಳಿಗೆ ದಕ್ಷಿಣದಿಕ್ಕಿನ ಪ್ರದೇಶಗಳು ಭೂಕಂಪದಿಂದ ಹಾಳಾಗುವವು. ಈ ಸಂವತ್ಸರದೊಳಗಾಗಿ ಇನ್ನೊಂದು ಚಂದ್ರಗ್ರಹಣವೂ ೩ ಸೂರ್ಯಗ್ರಹಣಗಳೂ ಪ್ರಾಪ್ತವಾಗುವವು. ಆದರೆ ಅವು ಮದರಾಸುಪ್ರೆಸಿಡೆನ್ಸಿಯಲ್ಲಿ ದೃಶ್ಯಗಳಲ್ಲವು"ಎಂಬವು. ಯೂರೋಪಿಯನ್ ಜ್ಯೋತಿಷ್ಕರು ದೇಶ, ನಕ್ಷತ್ರ, ಗ್ರಹ, ಗ್ರಹಣ, ಪ್ರಜೆ, ಅರಸು, ಭೂಕಂಪನ ವ್ಯತ್ಯಾಸಗಳು ಮುಂತಾದವನ್ನಾಲೋಚಿಸಿ ತಮ್ಮ ಅಭಿಪ್ರಾಯವನ್ನು ಹೊರಪಡಿಸಿರುವಂತೆ ತೋರುತಿದೆ. ನಮ್ಮ ಹಿಂದೂ ಜ್ಯೋತಿಷ್ಕರಾದರೋ, ಮೇಲೆಕಂಡವುಗಳನ್ನು ಮಾತ್ರವಲ್ಲದೆ, ಸೂಕ್ಷ್ಮತರವಾದ ಕಾಲ ಪರಿಮಾಣವನ್ನೂ, ಗ್ರಹಗಳ ಸ್ಥಿತಿಗಳನ್ನೂ ಗಣಿಸಿ ಪ್ರಜೆಗಳಿಗೆ ಇಹಜನ್ಮದಲ್ಲಿ ಸಂಭವಿಸಬಹುದಾದ ಸ್ಥಿತಿ ಭೇದಗಳನ್ನು ತಿಳಿಸುವರಲ್ಲದೆ, ಪೂರ್ವಜನ್ಮದಲ್ಲಿ ಗತಿಸಿದ ವಿಷಯಗಳನ್ನೂ, ಭವಿಷ್ಯಜ್ಜನ್ಮದಲ್ಲಿ ನಡೆಯಬಹುದಾದವನ್ನು ಸಹ ಸೂಚಿಸುತ್ತಾರೆ. ಲೋಕೋಪಕಾರಿಗಳಲ್ಲಿ ಈಗ ಪರಿಗಣಿತರಾದ ದೊಡ್ಡಮನುಷ್ಯರೆಲ್ಲರಿಗಿಂತಲೂ ಕಾಲಜ್ಞರು ಬಹಳ ಶ್ರೇಷ್ಠರೆಂದು ಎಣಿಸಬೇಕಾಯಿತು. ಮನುಷ್ಯನಿಗೆ ಗೋಚರವಾಗದಂತೆ ಭಗವಂತನು ಭವಿಷ್ಯತ್ ಸ್ಥಿತಿಯನ್ನು ಸಂರಕ್ಷಿಸುವನೆಂದು ಕ್ರಿಶ್ಚಿಯನ್ನರು ಇದುವರಿವಿಗೆ ಘಂಟಾಘೋಷವಾಗಿ ನುಡಿಯುತಲಿದ್ದ ತಾತ್ಪರ್ಯವೂ, ಮುಂದಿನ ಸ್ಥಿತಿಯನ್ನು ಅರಿಯಬೇಕೆಂದೆತ್ನಿಸುವಣ ಭಗವದಾಜ್ಞೆಗೆ ವಿರುದ್ಧವೆಂದು ನುಡಿಯುವ ಮುಸಲ್ಮಾನ ಜನರ ಅಭಿಪ್ರಾಯವೂ, ಕಾಲವು ಅತಿ ಸೂಕ್ಷ್ಮರೂಪವಾದದ್ದಾದದರಿಂದ ಅದಂ ಕಂಡು ಹಿಡಿಯುವಣ ಪ್ರಾಯಶಃ ಮನುಷ್ಯರಿಗೆ ಅಸಾಧ್ಯವೆಂಬ ಹಿಂದೂಗಳ ಭಾವವೂ ಬರುತಬರುತ ಬದಲಾಯಿಸುತಿದೆ. ಮುಖ್ಯವಾಗಿ ಸದರೀ ವಿಷಯಗಳನ್ನೆಲ್ಲ ಮುಂಚಿತವಾಗಿ ಗಣಿಸಿ ತಿಳಿಸುವಷ್ಟು ಶಕ್ತರಾದ ಪ್ರಸಕ್ತ ಯೂರೋಪಿಯನ್ ಜ್ಯೋತಿಷ್ಕರು ಸರ್ ಟಿ. ಮಾಧವರಾಯರವರ ಜ್ಯೋತಿಶ್ಶಾಸ್ತ್ರ ಖಂಡನವನ್ನು ನೋಡಿರುವರಾದರೆ ಏನು ಅಭಿಪ್ರಾಯ ಪಟ್ಟಿರುವರೋ ನಾವರಿಯೆವು. ಮಾಹೇಮುಬಕೂರ್ ೧೦ನೇ ತಾರೀಖ್ ಭಾನುವಾರದದಿನ ಹಿಡಿದ ಸೂರ್ಯೋಪರಾಗವು ಈ ದೇಶದಲ್ಲಿ ಕಾಣಿಸಲಿಲ್ಲವು. ಮೇಲೆಕಂಡ ಫಲಗಳೆಲ್ಲವೂ ನಿಜವಾಗಿ ಅನುಭವಸಿದ್ಧಗಳಾಗುವ ಪಕ್ಷಕ್ಕೆ ಈ ಸಂವತ್ಸರವು ಪಾಲ್ಯಮಾಲಕರಿಗೆ ಬಹಳ ಕ್ಷೋಭಕರವಾದ ಕಂಟಕ ವರುಷವೆಂದು ನುಡಿಯಬಹುದಾಗಿರುತಿದೆ. ಇವುಗಳಿಗೆ ತಕ್ಕಂತೆಯೇ ಸ್ವದೇಶಾನ್ಯದೇಶಗಳ ಆಡಳಿತ ಕ್ರಮಗಳು ಚಿಂತನೀಯಗಳಾಗಿವೆ. ಕೆಲವರು ಸಂಸ್ಥಾನಾಧಿಪತಿಗಳು ಧೈರ್ಯದೊಡನೆ ಯುದ್ಧಕ್ಕೆ ಸನ್ನದ್ಧರಾಗದಿದ್ದರೂ ಅದಕ್ಕೆ ಬೇಕಾದ ಅನುಕೂಲ್ಯಗಳನ್ನೆಲ್ಲ ಅವರವರು ಬಹಿರಂಗವಾಗಿಯೂ ಕ್ವಚಿತ್ ಗೂಢವಾಗಿಯೂ ಮಾಡಿಕೊಳ್ಳುತಲಿದ್ದಾರೆ. ಏನುಚ ಯೂವಕಾಲದಲ್ಲಿ ಅಂತರ್ಗತವಾಗಿರುವ ಸೌಭಾಗ್ಯವು ಅಭಿಮುಖವಾಗಿ ದೇಶಗಳನ್ನು ಪಾಳುಮಾಡುವದೋ ತಿಳಿಯದು.

FRENCH INSULT TO THE GAEKWAR OF BARODA.

ಡೆಯಿಲೀ ಕ್ರಾನಿಕಲ್ ಎಂಬ ಒಂದು ಇಂಗ್ಲಿಷ್ ಪತ್ರಿಕೆಗೆ ಪೇರಿಸ್ ಪಟ್ಟಣದಿಂದ ಒಬ್ಬ ಬಾತಮೀದಾರನು ಬರೆದಿರುವ ವರದಿ ಕೆಳಕಂಡ ಒಂದು ವಿಷಯದಿಂದ ಯೂರೋಪ್ ದೇಶೀಯರು ಪ್ರಾಯಶಃ ನಂಬಿದವರೆಂದಲೂ, ಅತ್ಯಾಶ್ಚರ್ಯದವರೆಂದಲೂ ಯೆಲ್ಲರೂ ಭಾವಿಸಲಿಕ್ಕಿದ್ದು, ನ್ಯಾಯ್ಯಮಾದಾಗ್ಯೂ, ಒಂದು ಕಾಲದೊಳು ಹುಟ್ಟಿದವನು ಮರ್ತ್ಯತ್ವನಾದರೆ ಅವನಿಂದ ಆ ಕುಲಕ್ಕೆ ಹ್ಯಾಗೆ ಅಪಕೀರ್ತಿ ಯುಂಟಾಗುತಿದೆಯೋ ತದ್ವತ್ ಒಂದು ಜನಾಂಗದಲ್ಲಿ ಕೆಲವರು ನೀಚರ ದುಷ್ಕೃತ್ಯಗಳಿಂದ ಆ ದೇಶೀಯರಿಗೆಲ್ಲ ಶಾಶ್ವತವಾದ ಅಪಮಾನ ಪ್ರಾಪ್ತವಾಗುತಿದೆಯೆಂಬವನ್ನು ಸಹ ಸ್ವಲ್ಪ ಆಲೋಚಿಸಬೇಕಾಗಿರುತಿದೆ. ಸದರೀ ಬಾತಮೀದಾರನು ತಿಳಿಸಿರುವದೇನಂದರೆ.—ಬರೋಡೆ ಗಾಯಕವಾಡೀ ಮಹಾರಾಜರವರು ಶ್ರೀಮನ್ಮಹಾರಾಜ್ಞೀಯವರ ಜ್ಯೂಬಿಲೀ ಮಹೋತ್ಸವಕ್ಕೆ ದಯಮಾಡುವ ಸಂದರ್ಭದಲ್ಲಿ ಮಾರ್ಗವಶಾತ್ ಪೇರಿಸ್ ಪಟ್ಟಣಕ್ಕೆ ಬಂದು ತಮಗೆ ಅನುಕೂಲವಾದ ಒಂದು ಬಂಗ್ಲೆಯಲ್ಲಿ ಕೆಲವು ದಿನಗಳ ತನಕ ಮೊಕ್ಕಾಂ ಮಾಡಿದ್ದು ಮುಂದಕ್ಕೆ ದಯಮಾಡುವಾಗ್ಯೆ ಸದರೀ ಬಂಗ್ಲೆಯ ಯಜಮಾನನಿಗೆ ೩,೦೦೦ ರೂಪಾಯಿಗಳನ್ನು ಅದರ ಬಾಡಿಗೆಬಗ್ಗೆ ಕೊಟ್ಟರು. ಸದರಿ ಮನೆಯ ಯಜಮಾನನು ತನಗೆ ೧೧,೦೦೦ ರೂಪಾಯಿಗಳ ಬಾಡಿಗೆ ಬರಬೇಕೆಂದು ತಗಾದೆ ಮಾಡಲು ಮಹಾರಾಜರವರು ಕೊಡಲಾರರೆಂದು ನಿರಾಕರಿಸಿದರು. ಆತನು ಇವರು ಸಂಸ್ಥಾನಾಧಿಪತಿಯೆಂದು ತಿಳಿದುಕೊಂಡು ತಾನು ಬಗೆಬಗೆ ಮಾಡುವ ಮೊಬಲಗನ್ನೆಲ್ಲ ಕೊಡುವರೆಂದು ಭಾವಿಸಿ ಮೇಲೆ ಕಂಡ ೧೧,೦೦೦ ರೂಪಾಯಿಗಳನ್ನು ಕೊಟ್ಟ ಹೊರತು ಮುಂದಕ್ಕೆ ಪ್ರವಾಸ ಮಾಡಲಾಗದೆಂದು ಬಹಳವಾಗಿ ನಿರ್ಬಂಧಿಸಿದನು. ಅದಕ್ಕೆ ಮಹಾರಾಜರವರು ಸ್ವಲ್ಪವೂ ಅಂಜದೆ ತಮ್ಮ ಪರಿವಾರದೊಡನೆ ರೈಲ್ ಸ್ಟೇಶನಿಗೆ ಹೋಗಿ ತಲಪುವಷ್ಟರೊಳಗಾಗಿ ಮನೆಯವನು ಬಂದು ಮಹಾರಾಜರವರ ಸಾಮಾನುಗಳನ್ನೆಲ್ಲ ಜಪ್ತಿ ಮಾಡಲಿಕ್ಕೆ ಪ್ರಯತ್ನಿಸಿದನು. ಆದರೆ ರೆಯಿಲ್ವೇ ಅಧಿಕಾರಿಗಳು ಕೋರ್ಟಿನವರ ಕ್ರಮವಾದ ಅಪ್ಪಣೆ ಇಲ್ಲದೆ ಆ ರೀತಿ ಮಾಡಲಾಗದೆಂದು ಅಡ್ಡಿಗೈದರು. ಇಷ್ಟರಲ್ಲಿ ರೈಲ್ ಗಾಡಿಯು ಹೊರಟುಹೋಯಿತು. ಬಳಿಕ ಮನೆಯವನು ಕೋರ್ಟಿಗೆ ಹೋಗಿ ಅಲ್ಲಿನ ಮ್ಯಾಜಿಸ್ಟ್ರೇಟರ ಮುಂದೆ ಅಪ್ರಮಾಣಮಾಡಿ ಮಹಾರಾಜರವರಮೇಲೆ ೮,೦೦೦ ರೂಪಾಯಿಗಳಿಗೆ ಡಿಕ್ರೀ ಪಡೆದು ಅದನ್ನವರು ಕೊಡದಪಕ್ಷಕ್ಕೆ ಅವರ ಸಾಮಾನುಗಳನ್ನು ಜಪ್ತೀ ಮಾಡಲಿಕ್ಕೆ ವಾರಂಟ್ ತೆಗೆದುಕೊಂಡು ಕೂಡಲೇ ಮಹಾರಾಜರವರನ್ನು ಅವರ ಪರಿವಾರದೊಡನೆ ಚಿಪ್ ಘಾರ್ನ ಎಂಬ ಸ್ಟೇಶನಿನಲ್ಲಿ ತಡೆದುಬಿಡುವಂತೆ ತಂತಿಮೂಲಕ ತಿಳಿಯಪಡಿಸಿದನು. ಅದೇಪ್ರಕಾರ ರೈಲ್ವೇ ಇಲಾಖೆಯವರು ಮಹಾರಾಜರವರ ಗೌರವವು ಸಹ ಚಿಂತಿಸದೆ ಅವರನ್ನು ಪರಿಜನರೊಡನೆ ಮುಂದಕ್ಕೆ ಪ್ರಯಾಣವಾಗದಂತೆ ತಡೆಯಲಾದರು. ಆಗ ಗಾಯಕವಾಡಿಯವರು ಉಪಾಯಾಂತರವನ್ನರಿಯದೆ ಕೋರ್ಟಿನವರ ಡಿಕ್ರೀಪ್ರಕಾರ ೮,೦೦೦ ರೂಪಾಯಿಗಳನ್ನು ಕೊಟ್ಟು ಮುಂದಕ್ಕೆ ದಯಮಾಡಿದರು. ಬಳಿಕ ನಡೆದ ವಿಚಾರಣೆಯೊಳು ಮೇಲೆ ಕಂಡ ಮೊಬಲಗು ಅಕ್ರಮವಾಗಿ ವಸೂಲ್ಮಾಡಲ್ಪಟ್ಟಂತೆ ಏರ್ಪಟ್ಟಿತು. ಈಗ ಗಾಯಕವಾಡಿಯವರು ತಮ್ಮ ವಿಷಯದೊಳು ತೋರಿಸಲ್ಪಟ್ಟ ಅಗೌರವಕರಗಳಾದ ಜುಲ್ಮಿಯಂ ಕುರಿತು ಫ್ರೆಂಚ್ ಸರ್ಕಾರಕ್ಕೆ ಫಿರ್ಯಾದ್ ಮಾಡಿರುತ್ತಾರೆಂತಲೂ, ಅಲ್ಲಿರತಕ್ಕ ಬ್ರಿಟಿಷ್ ರಾಯಭಾರಿಯಾದ ಲಾರ್ಡ್ ಲಿಟ್ಟನ್‌ಯವರು ಉಭಯ ಪಕ್ಷಿಯವರನ್ನೂ ಸಮಾಧಾನ ಪಡಿಸಿ ಮಹಾರಾಜರವರಿಗೆ ಅನುಕೂಲವಾದ ರೀತಿಯಿಂದ ವ್ಯವಸ್ಥೆ ಮಾಡುವರೆಂತಲೂ ತಿಳಿಯಬರುತಿದೆಂಬದು. ಇದು ಓದುವವರು ಗಾಯಕವಾಡಿಯವರಿಗೆ ಪ್ರಬಲ ಅಪಮಾನ ಪ್ರಂಟಾದಂತೆ ಭಾವಿಸಬಹುದು. ಪರಂತು ನಾವು ಆರೀತಿ ಎಣಿಸಲಾರೆವು. ಯಾತಕ್ಕೆಂದರೆ, ಇದುವರಿವಿಗೆ ನಮ್ಮ ನೇಟಿವ್ ಅರಸರೆಲ್ಲರೂ ಕೂಪ ಕೂರ್ಮಗಳಂತೆ ಸ್ವಸ್ಥಾನಗಳಂ ಬಿಟ್ಟಗಲದೆ ಇದ್ದದರಿಂದ ಅವರಿಗೆ ಸ್ವದೇಶೀಯರ ಗುಣಗಳೇತೆರನಾದವೆಂದು ಅರಿಯಲಿಕ್ಕೆ ಅವಕಾಶ ಸಿಲಿಕಿತ್ತು. ಈ ಇಂವ್ಯದೇಶಕ್ಕೆ ಬರತಕ್ಕ ಯೂರೋಪಿಯನರೆಲ್ಲ ಬಹಳ ಪ್ರಾಮಾಣಿಕರೆಂದು ಮತ್ತು ನಿಷ್ಪಕ್ಷಪಾತಿಗಳೆಂಬ ನಂಬಿಕೆ ಇದ್ದದರಿಂದ ಅವರಲ್ಲಿ ಗೌರವವನ್ನೂ ಸ್ವೀಯರೊಳು ಅಗೌರವವನ್ನೂ ವ್ಯಕ್ತಪಡಿಸಲಿಕ್ಕೆ ಕಾರಣವಾಗಿತ್ತು. ಈಗ ಕ್ರಮೇಣ ನಮ್ಮ ಸಂಸ್ಥಾನಾಧಿಪತಿಗಳಿಗೆ ಅನ್ಯದೇಶೀಯರ ಗುಣಗಳು ಪ್ರಕಟವಾಗುತಬರುವದರಿಂದ ಸ್ವದೇಶೀಯರ ಗುಣಗಳು ಉಪಲಾಳನಾರ್ಹಗಳಾಗುವ ಸಮಯವಿನ್ನು ಪ್ರಾಪ್ತವಾದಂತೆ ಎಣಿಸಬೇಕಾಗಿದೆ. ಮುಖ್ಯವಾಗಿ ಲೋಕದಲ್ಲಿ ಗೌರವವೆಂಬದು ಸ್ಥಾನಬಲದಿಂದಲೂ, ಗುಣಾಧಿಕ್ಯದಿಂದಲೂ,ಅವಸ್ಥಾ ಬಲದಿಂದಲೂ ಉಂಟಾಗಬೇಕಾದದ್ದಾಗಿರುತಿದೆ. ಹ್ಯಾಗೆಂದರೆ "ಅವಸ್ಥಾಪೂಜ್ಯತೇರಾಜಾ ಶರೀರನ್ನೈವಪೂಜ್ಯತೆ" ಎಂಬದಾಗಿ ರಾಜನಾಮಕನೆಯು ರಾಜ್ಯವಾದದ್ದೇ ಹೊರತು ಅವರ ಶರೀರವು ಪೂಜಿಸಲ್ಪಡುವದಿಲ್ಲವೆಂದು ಪುರಾಣಪ್ರಸಿದ್ಧವಾದ ವಾಕ್ಯವೊಂದುಂಟು. ಅದರಂತೆ ಯಾರಿಗೆ ಯಾವ ಮೂಲಕ ಯಾವದಕ್ಕಾಗಿ ಯೆಲ್ಲಿ ಎಷ್ಟುಕಾಲ ಕೀರ್ತಿ ಪ್ರಾಶಸ್ತ್ಯಗಳುಂಟಾಗಬೇಕೋ ಅವರಿಗೆ ಅಂತವರ ಮೂಲಕ ಅದಕ್ಕಾಗಿ ಅಷ್ಟುಕಾಲ ಲಭಿಸಿರುವದೇ ಹೊರತು ಅನ್ಯತ್ರ ಮೇಲೆ ಕಂಡವಕ್ಕಿಂತ ವಿಶೇಷವುಂಟಾಗಲಾರದು.

ANOTHER INSTANCE OF FEMALE LIBERTY.

"ಲೋಕೋಭಿನ್ನರುಚಿಃ" ಎಂಬ ಒಂದು ಸಾಮಾನ್ಯ ನ್ಯಾಯದಂತೆ, ಈ ಲೋಕದಲ್ಲಿನ ಜನಗಳ ಅಭಿರುಚಿ ವರ್ತನಗಳು ಭಿನ್ನಭಿನ್ನಗಳಾಗಿಯೂ, ಸ್ವಲಕ್ಷಣಗಳುಳ್ಳವಾಗಿಯೂ,ಕದಾಚಿತ್ ಕ್ಷಣಿಕಗಳಾದವಾಗಿಯೂ ಭಾವಿಸಲ್ಪಡುತಲಿರುತಿವೆ. ಹೀಗೆ ಭಿನ್ನಗಳಾದ ಅಭಿರುಚಿ ವರ್ತನಗಳು ಸಂದರ್ಭಾನುಗುಣವಾಗಿ ತಕ್ಕ ಸಾಧನ ಸಂಪತ್ತಿಗಳೊಡನೆ ಹೊರಗಾಗುವಣವೂ, ಅವನ್ನನುಮೋದಿಸತಕ್ಕವರು ಕೆಲವರು ಪ್ರಶಂಸಾಪೂರ್ವಕ ಘೋಷಿಸುವಣವೂ, ಅವು ಅನುಮೋದಿಸದವರು ನಾನಾಪ್ರಕಾರವಾಗಿ ನಿಂದಿಸುವಣವೂ ಪ್ರಸಿದ್ಧ ವಿಷಯಗಳಾಗಿರುತಿವೆ. ಏಕದೇಶಗಳಾದ ಅಭಿಪ್ರಾಯಗಳು ಸಾರ್ವಜನೀನಗಳಾಗುವಣವು ಸರ್ವಥಾ ಅಸಾಧ್ಯವು, ಅಥವಾ ಕಾಲಾಧೀನವಾಗಿಯಾದರೂ ಇರುತಿವೆ. ಅಂತಾ ಕಾಲವು ಒಂದುವೇಳೆ ಅನುಕೂಲವಾಗಿಯಾದರೂ ಅಥವಾ ಪ್ರತಿಕೂಲವಾಗಿಯಾದರೂ ಇರಬಹುದು. ಅನುಕೂಲಕಾಲದಲ್ಲಿ ಯಾವ ಪ್ರಯತ್ನವೂ ಆವಶ್ಯಕವಿರುವದಿಲ್ಲವು. ಪ್ರತಿಕೂಲಕಾಲದಲ್ಲಿ ಒಬ್ಬರ ಪ್ರಯತ್ನವೂ ಸಫಲವಾಗುವದಿಲ್ಲವು. ಅತಯೇವ ಕಾಲಸ್ವರೂಪಿಯಾದ ಭಗವತ್ಸ್ವ

ಕಲ್ಪವು ಯಾವ ತೆರನಾಗಿರುವದೋ ಅದು ಯಾರಿಗೂ ಗೋಚರವಲ್ಲದಿರುವಾಗ ಲೋಕಹಿತಂಕರಣ ಪ್ರವೃತ್ತಕರೆಂಬ ಪ್ರತಿಷ್ಠಾಪರರಾದವರು ಕೆಲವರು ತಮಗೆ ಭಗವತ್ಕಟಾಕ್ಷದಿಂ ಲಬ್ಧಗಳಾದ ವಿದ್ಯಾ ಬುದ್ಧಿ ವಿವೇಕ ಸಂಪತ್ತುಗಳನ್ನು ನಿರರ್ಥಕ ವಿಷಯಗಳಲ್ಲಿ ನಿಷ್ಪ್ರಯೋಜನವಾಗಿ ವಿನಿಯೋಗಿಸಿ ಆಕಾಶವು ಗುದ್ದ ಕೈನೋಯಿಸಿಕೊಳ್ಳುವಂತೆ ಶ್ರಮಪಡಲಿಕ್ಕಾಗಿ ನಾವು ಬಹಳ ಅನುತಾಪಪಡಬೇಕಾಗಿರುತಿದೆ. ಪರಂತು ಸದರೀ ಪ್ರತಿಷ್ಠಾಪರರು ಯಾವದಾದರೊಂದು ವಿಷಯವು ಕುರಿತು ವಿಚಾರಮಾಡಿ ಲೋಕವ್ಯವಹಾರದೊಳು ತರಲಿಕ್ಕೆ ಸಾಧ್ಯಗಳಾದ ಪ್ರಯತ್ನಗಳಂ ನಡಿಸುತಲಿದ್ದಾಗ್ಯೂ ಅದು ತೀರ್ಮಾನಕ್ಕೆ ಬರುವದು ಪ್ರಯಾಸವಾಗಿರುತಿದೆ. ಅದಾಗ್ಯೂ ಆವಿಷಯಮಾತ್ರ ತನ್ನ ಸ್ವರೂಪಾನುಗುಣವಾದ ಮಾರ್ಗವನ್ನನುಸರಿಸಿ ಕೆಲವು ಕಡೆಗಳಲ್ಲಾದರೂ ನಡೆಯುತ ಬರುತಿದೆಂಬದಕ್ಕೆ ಹಿಂದೂ ಪ್ರವೃತ್ತಿಯಾದ ಬಾಲ್ಯ ವಿವಾಹಾದಿಗಳೇ ನಿದರ್ಶನಗಳಾಗಿರುತಿವೆ. ಪ್ರಕೃತ ವಿಷಯವಿಚಾರವು ಈದೇಶದಲ್ಲಿ ತಲೆದೋರಿ ಈಗ್ಯೆ ಐದತ್ತು ಅರವತ್ತು ವರುಷಗಳಾಗುತಬಂದವು. ಆದ್ಯಾಪಿ ಇದು ವಿಚಾರದೊಳಗಡೆಯೆ ಪೂರ್ತಿ ವ್ಯವಸ್ಥೆಯನ್ನೈದಲಿಲ್ಲವು. ಹೀಗೆಯೇ ಇದು ವಿಚಾರಯೋಗ್ಯವಾಗಿರುವದಲ್ಲದೆ ಯೆಂದಿಗೂ ಆಚರಣೆಯೊಳು ಬರಲಾರದೆಂದು ಅನೇಕರು ಅಭಿಪ್ರಾಯಪಟ್ಟದ್ದುಂಟು. ಪರಂತು ಸದರೀಯವರ ಅಭಿಪ್ರಾಯವು ಸರಿಯಾದದ್ದೆಂದು ಹೇಳಕೂಡದೆಯಿದೆ. ಹ್ಯಾಗಂದರೆ—ಬಾಲ್ಯ ವಿವಾಹವು ತಪ್ಪೆಂದು ನುಡಿಯುತಕ್ಕವರು ತಿಳಿಸುವ ವಯಸ್ಸಿನಲ್ಲಿ ವಿವಾಹಗಳು ವಿರಳವಾದದ್ದರೂ, ೮—೯ ವಯಸ್ಸಿನಲ್ಲಿ ವಿವಾಹಮಾಡುವ ಪದ್ಧತಿಯು ಕ್ರಮೇಣ ತಪ್ಪುತ ಈಗ ೯—೧೦—೧೧ ವರುಷಗಳಿಗೆ ವಿವಾಹಮಾಡುವ ವಾಡಿಕೆ ಪ್ರಚಾರದೊಳು ಬರುತಲಿದೆ. ಇದು ಸರ್ವರ ಯೆಲ್ಲರಿಂದಲೂ ನಿರಾಕ್ಷೇಪಣೀಯವಾಗಿ ಭಾವಿಸಲ್ಪಟ್ಟರುತಿದೆ. ಹುಡಿಗಿಯರು ತಮ್ಮ ಅಭಿಪ್ರಾಯಗಳನ್ನು ತಾಯಿತಂದೆಗಳಿಗೆ ತಿಳಿಸಿ ತಮಗೆ ಅನಭಿಮತಗಳಾದ ಅವರ ಏರ್ಪಾಟುಗಳನ್ನು ಕೆಡಿಸುವಷ್ಟು ಧೈರ್ಯ ಸಾಹಸಗಳುಳ್ಳವರಾಗುತಲಿದ್ದಾರೆ. ಕನ್ಯೆಯರು ತಮಗೆ ತಾಯಿತಂದೆಗಳು ತಮ್ಮ ಇಷ್ಟಾನುಸಾರ ವರ್ತಿಸದೆ ಹೋದರೆ ಕೋರ್ಟಿನ ಮೂಲಕ ತಮ್ಮ ಕೋರಿಕೆಯನ್ನು ನೆರವೇರಿಸಿಕೊಳ್ಳುವಷ್ಟು ಪ್ರತಿಷ್ಠೆಯುಳ್ಳವರಾಗುತ್ತಾರೆ. ವಿವಾಹಪದ್ಧತಿ ಪರಿತ್ಯಾಗದಿಂ ಜಗತ್ಪ್ರಖ್ಯಾತಳಾದ ರುಕ್ಮಾಬಾಯಿಯ ವಿಚಾರವು ತತ್ಕಾಲದಲ್ಲಿ ಉಪಶಮಿಸಿದ್ದಾಗ್ಯೂ ತನ್ನ ವರ್ತನದಿಂದಾಕೆ ಇದುವರಿವಿಗೆ ಮಾಡಿದ್ದ ಕೃತಿಯು ನಿಷ್ಫಲವಾಗಲಿಲ್ಲವೆಂಬ ವೃತ್ತಾಂತವು ಸ್ತ್ರೀ ಸ್ವಾತಂತ್ರ್ಯಮೂಲಕ ದೇಶೋದ್ಧಾರವಾಮವರರಿಗೆ ವಿಶೇಷ ಸಂತೋಷವನ್ನುಂಟುಮಾಡಿರುವದೆಂದೆಣಿಸುತ್ತೇವೆ. ಗೋಶಿಬಜಾರಿಯೆಂಬ ಪ್ರದೇಶದಲ್ಲಿರುವ ಶ್ರೀಮತಿ ದುಮುಖೀದೇವಿಯೆಂಬ ತರುಣಿಯೊಬ್ಬಳು ಅಲ್ಲಿನ ಮ್ಯಾಜಿಸ್ಟ್ರೇಟರಬಳಿಗೆ ಹೋಗಿ ಅನುರೂಪನಲ್ಲದ ಒಬ್ಬ ರಿಕ್ತನಿಗೆ ತನ್ನನ್ನಿತ್ತು ವಿವಾಹಮಾಡಿಸುವಂತೆ ತನ್ನ ತಂದೆಯು ಸಂಕಲ್ಪಿಸಿಕೊಂಡಿರುವದರಿಂದ ಆತನು ಅರೀತಿಮಾಡದೆ ನಿರೋಧಿಸಬೇಕೆಂದು ಪ್ರಾರ್ಥಿಸಿದಳು. ಇಂತಾ ಸುಧಾರಣೆಯು ವೃದ್ಧಿಯನ್ನೈದುತಬಂದರೆ ನಿಜವಾಗಿ ನಮ್ಮ ಭಾಗ್ಯಕ್ಕೆ ನೆರೆಯಿರಲಾರದು. ಈಯುವತಿಯು ಮೇಲೆಕಂಡಂತೆ ಸ್ವಬುದ್ಧಿಯಿಂದ ಪ್ರಾರ್ಥಿಸಿದಳೋ ಅಲ್ಲದೆ ಸುಧಾರಣಾಭಿಲಾಷಿಗಳಾದ ಅನ್ಯರಿಂದ ಪ್ರೇರಿತಳಾಗಿ ಆರೀತಿ ಮಾಡಿದಳೋ ಎಂದು ಅನುಮಾನಿಸಬೇಕಾಗಿರುವುದು ಮುಂಬೈ ಕನ್ನಡ ಸುವಾರ್ತಾಪತ್ರಿಕೆಯು ಅಭಿಪ್ರಾಯಪಡುತಿದೆ. ಪ್ರಾಯಶಃ ಇದು ನಿಜವಾಗಿರಬಹುದೆಂತಲೇ ಭಾವಿಸುವೆವು. ಬಾಲ್ಯದಲ್ಲಿ ತಂದೆಯಪಾಲನೆಯಲ್ಲಿಯೂ ಯೌವನಾವಸ್ಥೆಯೊಳು ಭರ್ತೃಪೋಷಣೆಯಲ್ಲಿಯೂ, ಮುಪ್ಪಿನೊಳು ಪುತ್ರರಕ್ಷಣೆಯಲ್ಲಿಯೂ, ಮುಗ್ಧರಾಗಿದ್ದು ಕಾಲಹರಣಮಾಡಿ, ಗತಿಸಿದಂತಾವರ ಸಂಶಜರಿಗೆ ಈಗ ಇಷ್ಟರ ವೈಲಕ್ಷಣ್ಯಗಳನ್ನುಂಟುಮಾಡಿದ ಕಾಲಗತಿಯು ಇನ್ನೆಷ್ಟರ ವಿನಿಮಯಗಳನ್ನುಂಟುಮಾಡಲಿಕ್ಕೆ ಶಕ್ತವಲ್ಲದೆ ಹೋಗುವದು? ಮುಖ್ಯವಾಗಿ ನಾವು ಮೇಲೆ ತಿಳಿಸಿದಂತೆ ಸಕಲವೂ ಕಾಲಾಧೀನವಾಗಿ ಜರುಗುವಲ್ಲಿ ಅದಕ್ಕೆ ಪುರುಷಪ್ರಯತ್ನವು ನಿಷ್ಪ್ರಯೋಜನವಾಗಿರುತಿದೆಂಬದಕ್ಕೆ ಇದಕ್ಕಿಂತ ಪ್ರತ್ಯೇಕ ದೃಷ್ಟಾಂತ ಬೇಕಾಗಿರುವದಿಲ್ಲವು.

——:o:——

PROVIDENCE vs HUMAN BEINGS.

ಮಾಯೇ ಮಜಕೂರ್ ೧೬ನೇ ತಾರೀಖಿನಲ್ಲಿ "ಯಥಾರ್ಥವಾದಿ" ಎಂಬ ಒಬ್ಬ ಬಾತಮಿದಾರನು ಈ ದೇಶದ ಪ್ರಕೃತ ಸ್ಥಿತಿಯಂ ಕುರಿತ ಬರೆಯುತ್ತಾನೇನಂದರೆ:—

"ಅಯ್ಯಾ,—ಈ ರಾಜ್ಯವು ಶ್ರೀಮನ್ಮಹಾರಾಜರವರಿಗೆ ಒಪ್ಪಿಸಲ್ಪಟ್ಟಮೇಲೆ ಇಲ್ಲಿನ ರಾಜ್ಯಧಾರಕರುಗಳು ಕೆಲವರು ತೃಪ್ತರಾಗಿಯೂ, ಮತ್ತು ಕೆಲವರು ಅತೃಪ್ತರಾಗಿಯೂ, ಇನ್ನೂ ಕೆಲವರು ಉದಾಸೀನರಾಗಿಯೂ ಇರುತಲಿದ್ದಾರೆಂಬ ಅಂಶವನ್ನು ಪ್ರತ್ಯೇಕವಾಗಿಲ್ಲಿ ವಿವರಿಸಬೇಕಾದ ಅವಶ್ಯಕತೆ ಇರುವದಿಲ್ಲವು. ಈ ಕ್ರಮವು ಈ ನೇಟಿವ್ ಸಂಸ್ಥಾನ ಒಂದರಲ್ಲಿಯೇ ನೆಲಗೊಂಡಿರುವಂತೆ ಹೇಳಲಾಗದು ಇದು ಯೆಲ್ಲ ರಾಜ್ಯಗಳಲ್ಲಿಯೂ ಇರುವ ನಿಯತ ಲೋಪವಾಗಿರುತಿದೆ. ಇನ್ನೂ ವಿಚಾರಿಸಿ ನೋಡಿದರೆ ಬ್ರಿಟಿಷ್ ರಾಜ್ಯಗಳಲ್ಲಿ ಸಹ ಇದು ಪ್ರಾಯಶಃ ದಪ್ಪದ್ದಲ್ಲಿ ನೋಡಬಹುದಾಗಿದೆ. ಮುಖ್ಯವಾಗಿ ಒಂದು ರಾಜ್ಯದ ಮಂತ್ರಿಯೇ ಆಗಲಿ, ಇನ್ನೂ ಇತರ ದೊಡ್ಡ ಅಧಿಕಾರಿಯೇ ಆಗಲಿ, ದಯಾಪರನಾಗಿಯೂ, ಕೀರ್ತಿ ಸಂಪಾದಕನಾಗಿಯೂ, ಜನರಿಗೆ ಪ್ರಯೋಜಕನಾಗಿಯೂ ಇರಬೇಕಾದದ್ದು ಅವಶ್ಯಕವಾಗಿರುತಿದೆ. ಈ ಕೋರಿಕೆ ಇಲ್ಲದಮೇಲೆ ಸ್ವಕುಟುಂಬ ಭರಣವು ಯಾರಿಗೆ ತಾನೆ ಸಾಧ್ಯವಲ್ಲವು! ತಕ್ಕ ಸಮಯವನು ನಿರೀಕ್ಷಿಸಿಕೊಂಡಿದ್ದು ತಮಗೆ ಬೇಕಾದವರಿಗೆ ನೌಕರಿಗಳನ್ನು ಮಾಡಿಕೊಡಲಿಕ್ಕೆ ಯಾರು ತಾನೆ ತಕ್ಕವರಲ್ಲವೆ ಹೋದಾರು? ಅನುಕೂಲವಾದ ಕಾಲವು ಯಾರಿಗೆ ತಾನೆ ಲಭಿಸಲೊಲ್ಲದು? ಅನೇಕರು ಉತ್ಕೃಷ್ಟಸ್ಥಿತಿಗೆ ಬರುವರೂ, ಕಾಲಾಧೀನವಾಗಿ ಅದು ತಪ್ಪಿಹೋಗುವದು ಸಹ ಸಹಜಗಳಾಗಿರುತಿವೆ ಪರಂತು ಮಾಡಿದ ಜನೋಪಕಾರಮಾತ್ರ ಗಣನೆಗೆ ಬರುವದು ಪ್ರಯಾಸವಾಗಿರುತಿದೆ. ಮೈಸೂರು ಸೀಮೆಯಲ್ಲಿ ದೊಡ್ಡ ಅಧಿಕಾರಗಳಿಗೆ ಅನೇಕ ಯೂರೋಪಿಯರ್ ಮತ್ತು ನೇಟಿವ್ ಆಫೀಸರ್ಗಳು ಬಂದು ಹೋದರಷ್ಟೆ. ಅವರಪೈಕಿ ಸರ್ ಮಾರ್ಕ ಕಬ್ಬನ್, ಮ|| ಬೌರಿಂಗ್, ಕರ್ನಲ್ ಹಾಬಸ್, ಮ|| ಗುಂಡೋಪಂತರು, ಬಲರಾಂಸಿಂಗರು, ಕೃಷ್ಣಪ್ಪನಾಯಕರು, ಅಪ್ಪಾವುಮೊದಲಿಯಾರ್ರವರು ವಗೈರೇರ ಹೆಸರುಗಳು ಅದ್ಯಾಪಿ ಜನಗಳ ಹೃದಯದಲ್ಲಿ ನಿರೂಢಗಳಾಗಿರುತಿವೆ. ಇವರು ಯೆಲ್ಲರುತೆ ಆಚಾರದಿಂ ಬದ್ಧರಾದವರಾಗಿಯೂ ಸ್ವಜನ ಸ್ವಮತಾಭಿಮಾನಿಗಳಾಗಿಯೂ ಇರದೆ ಹೋಗಲಿಲ್ಲವು. ಪರಂತು ಅವರಿಗೆ ಪ್ರಜೆಗಳಲ್ಲಿ ದಯೆಯೂ ಪ್ರತಿಷ್ಠೆಯೊಳಾಸಕ್ತಿಯೂ ಇದ್ದದರಿಂದ ಒಬ್ಬೊಬ್ಬರು ಕ್ರಮವಾಗಿ ಡಿವಿಜನ ವ ತಾಲ್ಲೂಕ್ ಲವಾಜಮೆಗಳನ್ನೂ, ಸಾಯರ್, ಪಂಚಬಾಬ್, ಮುಜರಾಯಿ, ಅಂಚೆ ವಗೈರೆ ಇಲಾಖೆಗಳನ್ನೂ ಬಹಾಯಿಸಿ ಸರ್ಕಾರಕ್ಕೆ ಆದಾಯವನ್ನೂ, ಬಡಜನರನೇಕರಿಗೆ ಜೀವನಗಳನ್ನೂ ಉಂಟುಮಾಡಿ ದೇಶವನ್ನು ಆಬಾದಿಗೆ ತಂದು ಕೀರ್ತಿಯಂ ಪಡೆದರು. ಇವರು ಗತಿಸಿ ಈಗ್ಯೆ ಅನೇಕ ವರುಷಗಳಾದಾಗ್ಯೂ ಇವರ ಹೆಸರುಗಳು ಮಾತ್ರ ಅದ್ಯಾಪಿ ಮೇಲೆ ಕಂಡಂತೆ ನೆಲಗೊಂಡಿವೆ. ಈ ರಾಜ್ಯವು ಮಹಾರಾಜರವರ ಪಾಲನೆಗೊಳಗಾದಮೇಲೆ ನೌಕರರಾದ ಅಧಿಕಾರಿಗಳಾದರೋ ಒಬ್ಬರಿಗಿಂತ ಒಬ್ಬರು ಸಮರ್ಥರೆನಿಸಿಕೊಂಡವರಾಗಿರುತ್ತಾರೆ. ಒಬ್ಬರನ್ನು ಕಂಡರೆ ಪೌತಿಗಳಲ್ಲಿ ಕಾಮ ಹಿಡಿದುಹೋಗುತಿದೆ. ಮತ್ತೊಬ್ಬರನ್ನು ನೋಡಿದರೆ ಬೇನಾ ಒಡೆದುಹೋಗುತಿದೆ. ಇನ್ನೊಬ್ಬರನ್ನು ಕಂಡರೆ ಕಾಗದಗಳು ಹಾರಿಹೋಗುತಿವೆ. ಬೇರೊಬ್ಬರ ದೃಷ್ಟಿಮಾತ್ರದಿಂದಲೇ ಧರ್ಮಶಾಸ್ತ್ರಗಳು ವೈಯರ್ಥ್ಯಗಳುಳ್ಳವಾಗುತಿವೆ. ಸರ್ಕಾರದವರು ಅವರ ಯೋಗ್ಯತೆಗಳನ್ನು ವಿವರಿಸಲಿಕ್ಕೆ ಶಬ್ದ ದಾರಿದ್ರ್ಯಗಳಿಂದ ಸಂಕಟಪಡುತಲಿದ್ದಾರೆ. ಇವರ ಮೆಹನತ್ತಿಗಾಗಿ ಎಷ್ಟು ಸಂಬಳವಿತ್ತರೂ ಅದು ಅವರ ಯೋಗ್ಯತೆಗೆ ಅನುಗುಣವಲ್ಲದ್ದಾಗಿಯೂ ಅವರಖರ್ಚಿಗೆ ಸಾಲದ್ದಾಗಿಯೂ ಇರುತಿದೆ. ಇವರು ಮಾಡಿದ ಕೆಲಸಮಾತ್ರ ಹುಡಿಕಿ ನೋಡಬೇಕಾಗಿದೆ. ಸಣ್ಣ ನೌಕರರಾದವರು ಹತ್ತು ಜನಗಳಿರುವದಕ್ಕಿಂತಲೂ ಭಾರೀ ಸಂಬಳದವನೊಬ್ಬನಿದ್ದರೆ ಸಾಕೆಂಬ ಒಂದು ನಿಯಮವನ್ನು ಕಲ್ಪಿಸಿಕೊಂಡು ಬಡವರಾದ ನೂರುಮಂದಿ ಚಿಕ್ಕ ಉದ್ಯೋಗಸ್ಥರನ್ನು ವಜಾಮಾಡಿ ಅವರ ತಲಬನ್ನೆಲ್ಲ ಒಟ್ಟುಮಾಡಿ ಒಬ್ಬನಿಗೆ ಕೊಡುವರು. ಮತ್ತು ಖರ್ಚುಬಾಬಿನಲ್ಲಿ ತಲಬ್‌ದಾರ್ ಖರ್ಚುಗಳನ್ನು ಮಾತ್ರ ಧಾರಾಳವಾಗಿ ಜಾಸ್ತೀ ಮಾಡುವರು. ಜಮಾಬಾಬಿನಲ್ಲಿ ರೈಲ್ವೇ ಇಲಾಖೆಯು ಅನುಪಯುಕ್ತ ಸಾಮಾನುಗಳ ಹರಾಜಿನಿಂದಲೂ, ಗೋರ್ಡ್ನ ಮೈನಿಂಗ್ ಕಂಪೆನಿಯವರು ಕೊಡುವ ರಾಯಲ್ಟಿ ಅಂದರೆ ಸ್ವಾಮಿತ್ವ ಶುಲ್ಕದಿಂದಲೂ, ಶೇಂಧಿ ಸರಾಪ ಅಂಗಡಿಗಳ ಫ್ಲೋಟಾಫ್ಲೋಟೀ ಮೊಬಲಗಿನಿಂದಲೂ, ಕೋರ್ಟ್ ಫೀ ಸ್ಟಾಂಪುಗಳಿಂದಲೂ, ಜಮಾಬಂದಿ ಘಟಾಯಿಸುತ್ತಾರೆ. ಒಬ್ಬೊಬ್ಬರು ಮಿತಿ ಇಲ್ಲದಂತೆ ಸರ್ಕಾರಿಹಣವನ್ನು ಅಡ್ವಾನ್ಸ್ ತೆಗೆದುಕೊಂಡು ಖರ್ಚು ಬರೆಯಲಿಕ್ಕೆ ಬಾಬುಗಳನ್ನು ಎದುರುನೋಡುತ್ತಾರೆ ನೌಕರಿಗಳು ಖಾಲೀಬಿದ್ದಾಗ ತಮಗೆ ಬೇಕಾದವರಿಗೆ ಕೊಡಲಿಕ್ಕೆ ಅನೇಕ ಆಭ್ಯಂತರಗಳುಂಟಾಗಬಹುದೆಂದಾಲೋಚಿಸಿ ಮುಂದಾಗಿಯೇ ತಮಗೆ ಇಷ್ಟರಾದವರನ್ನು ಸ್ಯೂಪರ್ ನ್ಯೂಮರರಿಯಾಗಿ ನೌಕರರ ಮಾಡಿ, "ಸ್ಯೂಪರ್ ನ್ಯೂಮರರಿಗಳಿರುವಾಗ್ಯೂ ಅನ್ಯರಿಗೆ ಅವಕಾಶ ಎಲ್ಲಿದೆಂದು" ನುಡಿಯುವರು. ಈ ಸ್ಥಿತಿ ಸಹ ದೀರ್ಘಕಾಲ ಇರಲಾರದು. ಪರಂತು ಅದರ ಸಮಗತಿಯಲ್ಲಿ ಮೌನವು ತಾಳಿ ವಿಷಮಗತಿಯನ್ನು ಸಹನೆಯೊಡನೆ ನಿರೀಕ್ಷಿಸುತಲಿರಬೇಕಾಗಿದೆ. ಮುಖ್ಯವಾಗಿ ಪ್ರಜೆಗಳು ನಿರೀಕ್ಷಿಸಿದ್ದದ್ದು ಇಂತಾ ರಾಜ್ಯಭಾರವಲ್ಲದಿದ್ದಾಗ್ಯೂ ದೈವವು ಈಗಿನ ಸ್ಥಿತಿಯನ್ನೇ ಸಂಕಲ್ಪಿಸಿರುವಾಗ ಚಿಂತಿಸಿ ಪ್ರಯೋಜನವಿಲ್ಲವು."

[ಮೇಲೆಕಂಡ ಬಾತಮಿದಾರನ ಬರವಣಿಗೆಯು ಯೆಷ್ಟರಮಟ್ಟಿಗೆ ಈ ದೇಶದ ತಾತ್ಕಾಲಿಕ ಸ್ಥಿತಿಯನ್ನು ವ್ಯಕ್ತಪಡಿಸತಕ್ಕದ್ದಾಗಿರುತಿದೆಂಬದು ಈ ಪತ್ರಿಕೆಯನ್ನೋದತಕ್ಕವರು ಸ್ವಾನುಭವದಿಂ ತಿಳಿದುಕೊಳ್ಳಬಹುದು.—ಎ. ಕ. ಪ್ರ]

Occasional Notes.
ನೈಮಿತ್ತಿಕ ವಿಷಯನ್ಯಾಸ.

Arrival of jewels.—ಹೋಲ್ಕರ್ ಮಹಾರಾಜರವರು ಈಚೆಗೆ ಇಂಗ್ಲಾಂಡಿಗೆ ಹೋಗಿದ್ದ ಸಂದರ್ಭದಲ್ಲಿ ಲೇಡಿ ಡಫ್ರಿಯೆಂಬಾಕೆಯವರಿಂದ ಮ್ಯೂಸಿಯಂ ಹೌಸಿಗೆ ಕೊಂಡುಕೊಂಡ ಜವಾಹಿರಗಗಳು ಇಂದೂರಿಗೆ ಬಂದುಸೇರಿದವಂತೆ.

The Gakewar of Baroda.—ಬರೋಡೆ ಗಾಯಕವಾಡ ಮಹಾರಾಜರವರು ಬರುವ ಮೆಯಿಲ್ ಸ್ಟೀಮರಿನಲ್ಲಿ ಹೊರಟು ಮುಂಬೈಗೆ ಬಂದು ಇಳಿದು ತಮ್ಮ ರಾಜಧಾನಿಗೆ ದಯಮಾಡಿ ಅಲ್ಲಿ ಹತ್ತು ದಿನಗಳಕಾಲವಿದ್ದು, ಮರಳಿ ಹೊರಟು ಬೇಸಿಗೆಯಬಗ್ಯೆ ನೀಲಗಿರಿಗೆ ಹೋಗುವರು.

Settlement of a state debt.—ಧೋಲ್‌ಪುರದ ಮಹಾರಾಜಾ ರಾಣಾಯವರಿಗೆ ಅಲ್ಲಿನವರ್ತಕರುಕೊಟ್ಟಿರುವ ಸಾಲದ ವಿಷಯದಲ್ಲಿ, ದೇಶೀಪಾರರು ಗವರ್ನಮೆಂಟಿನವರ ಸಹಾಯವನ್ನಪೇಕ್ಷಿಸುವರಾದರೆ ಕ್ರಾರಾಬದ್ಧ ಮತ್ತು ಅಸಲಿನಲ್ಲಿ ಸೇಕಡ ೩ ರೂಪಾಯಿಗಳಮೇರೆ ಬಿಟ್ಟುಬಿಡಬೇಕೆಂದು ಮುಕ್ಕರ ಹಿಡಿದಿರುವದಾಗಿ ಒಂದಾನೊಂದು ಲಾಹೋರ್ ಪತ್ರಿಕೆ ಹೇಳುತಿದೆ.

Dacoity with murder.—[illegible] ಸಂಸ್ಥಾನದೊಳಗಣ ಒಂದು ಗ್ರಾಮದಲ್ಲಿ ಒಂದು ಮನೆಯೊಳು ವಿವಾಹ ನಡೆಯುತ್ತಿರುವಲ್ಲಿ ಆರೋವೆ ಕಳ್ಳರು ಸದರೀ ಮನೆಯಲ್ಲಿ ನುಗ್ಗಿ, ಮದವಣಿಗನ ಕೈಯಲ್ಲಿ ಹಾಕಿಕೊಂಡಿದ್ದ ಚಿನ್ನದ ಬಳೆಗಾಗಿ ಆತನ ಕೈಗಳನ್ನು ಕತ್ತರಿಸಿಬಿಟ್ಟು ಮದವಣಿಗಿತ್ತಿಯ ಕುತ್ತಿಗೆಯನ್ನು ಕುಯಿದು, ಅಲ್ಲಿದ್ದವರನ್ನೆಲ್ಲ ಘಾಯಪಡಿಸಿ, ಸಿಕ್ಕಿದ್ದನ್ನೆಲ್ಲ ದೋಚಿಕೊಂಡು ಫರಾಯಿಯಾದರಂತೆ.

Death of a prince.—ಹೈದರಾಬಾದ ನಿಜಾಮರವರು, ತಮ್ಮ ಪುತ್ರರಿಬ್ಬರಪೈಕಿಯೊಬ್ಬರ ಮರಣದಿಂದಲೂ, ಉಳಿದವರು ಕಾಹಿಲೆಯಾಗಿರುವದರಿಂದಲೂ ಕೇವಲ ದುಃಖಿತರಾಗಿ ಈಚೆಗೆ ಯಾರನ್ನೂ ತಮ್ಮಬಳಿಗೆ ಬರಗೊಳಿಸದೆ ಯಾವಾಗ ನೋಡಿದಾಗ್ಯೂ ಒಬ್ಬರಾಗಿಯೇ ಇರುತಲಿದ್ದಾರೆ. ಆದದರಿಂದಲೇ ಸರ್ ಹೋರೇಸ್‌ವಾಲ್ ಪ್ಲೋರಿಯವರ ವಿಷಯದಲ್ಲಿ ಮಂತ್ರಿಯವರು ಮಾಡಿದ ಶಿಫಾರಸ್ಸಿನಂತೆ ಹುಕುಂ ಆಗುವದಕ್ಕೆ ಅವಕಾಶವಿಲ್ಲದೆ ಇರುತಿದೆಂದು ಒಂದಾನೊಂದು ಪತ್ರಿಕೆ ಹೇಳುತಿದೆ.

Robbery.—ಈಚೆಗೆ ಕಾಶೀ ಕ್ಷೇತ್ರದಲ್ಲಿ ಮರಳೆ ಯೊಂದು ಪ್ರಬಲ ಚೋರಿ ನಡೆಯಿತು. ಹ್ಯಾಗಂದರೆ—ಅಲ್ಲಿ ಒಂದು ಮನೆಯವನು ಮನೆಯಬಾಗಿಲು ಹಾಕಿಕೊಂಡು ಸ್ನಾನಾರ್ಥ ಗಂಗಾನದಿಗೆ ಹೋಗಿರುವಲ್ಲಿ ಕಳ್ಳನು ಮನೆಗೆ ಇಳಿದು ಅಲ್ಲಿ ಸಿಕ್ಕಿದ ಚಿನ್ನ, ಬೆಳ್ಳಿ, ಚಿನ್ನದ ನಾಣ್ಯಗಳು, ಮತ್ತು ಚಿನ್ನದ ಗಟ್ಟಿಗಳು, ಒಡವೆಗಳು ಯೆಲ್ಲವನ್ನು ದೋಚಿಕೊಂಡು ಹೋಗಿ, ಒಂದು ಬಟ್ಟೆಯಲ್ಲಿ ಕಟ್ಟಿ ಊರ ಹೊರಗೆ ನಾಲ್ಕು ಮೈಲಿಗಳ ಆಚೆ ಒಂದು ನದಿಯ ಕಟ್ಟೆಯಲ್ಲಿ ಹೂಳಿಟ್ಟಿದ್ದನು. ಸದರೀ ಕಳ್ಳನು ಪತ್ತೆಯಾಗಿ ದರ್ಯಾಪ್ತಿಯಲ್ಲಿ ತಾನು ನಡೆಸಿದ ಕೃತ್ಯವನ್ನು ಒಪ್ಪಿಕೊಂಡು ಕಳವು ಮಾಲುಗಳನ್ನು ಹೂಳಿಟ್ಟ ಸ್ಥಳವನ್ನು ಪೋಲೀಸಿನವರಿಗೆ ತೋರಿಸಿ ಯೆಲ್ಲವನ್ನು ತೆಗದುಕೊಟ್ಟನು.

An application for redress.—ಭೋಪಾಲಸಂಸ್ಥಾನದ ಬೇಗಂಯವರು ತಮ್ಮ ವಿಷಯದಲ್ಲಿ ಯಾರೋ ಒಬ್ಬರು ಕೇವಲ ಅಘೋರವಾಗಿ ನಡೆಸಿರುವದರಿಂದ ಆವಿಷಯದಲ್ಲಿ ದರ್ಯಾಪ್ತೀ ಮೂಲಕ ಬಂದೋಬಸ್ತು ಮಾಡಬೇಕೆಂದು ವೈಸರಾಯಿ ಸಾಹೇಬರವರಿಗೆ ಬರೆದುಕೊಂಡಿರುವಂತೆಯೂ, ಅದರಿಂದ ತಕ್ಕ ಪರಿಹಾರ ಅಲಭ್ಯವಾಗುವಪಕ್ಷಕ್ಕೆ ಬೇಗಂಯವರು ತಮ್ಮ ವಿಷಯವನ್ನು ಪಾರ್ಲಿಮೆಂಟ ಸಮಾಜದವರ ಪರ್ಯಾಲೋಚನೆಗೆ ತರುವದಕ್ಕಾಗಿ ಇಂಗ್ಲಾಂಡಿಗೆ ಹೋಗುವ ಆಲೋಚನೆಯುಳ್ಳವರೆಂಬ ಪ್ರವಾದ ಉಂಟಾಗಿದೆಯೆಂತಲೂ ಇಂಡಿಯನ್ ಡೆಯಿಲೀನ್ಯೂಸ್ ಪತ್ರಿಕೆಯ ಬಾತಮಿದಾರನೊಬ್ಬನು ಬರೆಯುತ್ತಾನೆ.

Sutti.—ಸುಮಾರು ಐದುತಿಂಗಳ ಹಿಂದೆ ನೇಪಾಲ ಸಂಸ್ಥಾನಕ್ಕೆ ಸೇರಿದ ಬಾಜರಾ ಎಂಬ ಪ್ರದೇಶದ ವಯೋವೃದ್ಧನಾದ ಅರಸು ಮೃತಪಡಲು ಆತನ ಭಾರ್ಯೆಯರಾದ ಅಕ್ಕತಂಗಿಯರಿಬ್ಬರು ತಮ್ಮ ಪತಿ ವಿಯೋಗಜನ್ಯವಾದ ದುಃಖದಿಂದ ತಾವಿಬ್ಬರೂ ಸಹಗಮನ ಮಾಡುವದಾಗಿ ಹೇಳಿದರು, ಪರಂತು ಆ ಕಾಲದಲ್ಲಿ ಪತಿಯ ಚಿತೆಯನ್ನೇರಿ ಹೆದರಿ ಹಿಂಜರದರು. ನೇಪಾಲದೇಶದ ಪ್ರಧಾನ ಮಂತ್ರಿಯವರಾದ ಭಿಯರ್ ಶಂಷೆಯರವರು ಸದರೀ ಇಬ್ಬರೂ ಸಹಗಮನ ಮಾಡೇ ತೀರಬೇಕೆಂದು ಮುಕ್ಕರ ಹಿಡಿದು ಅವರಿಂದ ಮಾಡಿಸಿದರೆಂದು ಇಂಡಿಯನ್ ಡೆಯಿಲೀನ್ಯೂಸ್ ಪತ್ರಿಕೆ ಹೇಳುತಿದೆ.

ನೋಟಿಸ್.

ಇದರಿಂದ ನಮ್ಮ ಚಂದಾದಾರರಿಗೆ ಕೃತಪಡಿಸುವದೇನಂದರೆ:—ಹಿಂದಿನವಾರದಲ್ಲಿ ನಾವು ಸೂಚಿಸಿದ್ದಂತೆ ಚಂದಾದಾರರೆಲ್ಲರು ಅವರವರ ಚಂದಾಮೊಬಲಗನ್ನು ಕೂಡಲೇ ಕಳುಹಿಸಬೇಕು. ಉಪೇಕ್ಷಿಸಿದವರಿಗೆ ಪತ್ರಿಕೆ ರವಾನಿಸಲ್ಪಡಲಾರದು. ಕಳೆದ ಜನವರಿ ಆಗುವದು ವಸೂ

ಉಪಾಧ್ಯಾಯರುಗಳೆಲ್ಲವು ಈ ತಿಂಗಳ ೨೩ನೇ ತಾರೀಖಿನ ಪತ್ರಿಕೆಯಲ್ಲಿ ಪ್ರಕಟಿಸಲ್ಪಡುವವು. ಅದುವರಿವಿಗೆ ಚಂದಾ ಕಳುಹಿಸಿದವರು ನಮ್ಮ ಜವಾಬನ್ನು ನಿರೀಕ್ಷಿಸಬೇಕಾದ್ದಿಲ್ಲವು. ಮುಂದೆಯೂ ಆಯಾತಿಂಗಳ ೧೫ನೇ ತಾರೀಖಿಲಾಗಾಯತು ವಸೂಲಾಗುವ ಮೊಬಲಗು ಆದ್ಯರ್ವಾರದ ಪತ್ರಿಕೆಯಲ್ಲಿ ಪ್ರಕಟಿಸಲ್ಪಡುತಬರುವದು.

ನೋಟೀಸ್.

ಬೆಂಗಳೂರು ಪಾಮೂರುಪೇಟೆಯಲ್ಲಿರುವ ನಮ್ಮ ಖುದ್ದ ಮನೆಯನ್ನು ನಮ್ಮ ತಾಯಿಯಾದ ರಂಗಮ್ಮನು ನನ್ನ ಅನುಮತಿ ಇಲ್ಲದೆ ಪರಭಾರೇ ಮಾಡುವದಾಗಿ ವರ್ತಮಾನ ಕೇಳುತ್ತೇನೆ. ಅದನ್ನು ತೆಗೆದುಕೊಳ್ಳುವದಕ್ಕೆ ಇಚ್ಛೆಯುಳ್ಳವರು ಖಂಡಿತವಾಗಿ ತೆಗೆದುಕೊಳ್ಳಕೂಡದೆಂತಲೂ ಅದು ಮುಂದೆ ರದ್ದಾಗುವದೆಂತಲೂ, ಇದರಿಂದ ತಿಳಿಸಿರುತ್ತೇನೆ.

ಪ್ರಿಮುಗ್ ತಾ|| ೮-೨-೮೮. } ವೆಂಕಟೇಶಯ್ಯ, ಹಿ|| ಮು|| ಚಿತ್ರದುರ್ಗ ಪಾ|| ಕೊ.

LOCAL AND PROVINCIAL NEWS.
ಒಳದೇಶ ಮತ್ತು ತಾಲ್ಲೂಕುಜಾತ ವೃತ್ತಾಂತವು

Nandidroog Criminal Sessions.—ಈದಿನ ಇಲ್ಲಿನ ಚೀಫ್ ಕೋರ್ಟಿನಲ್ಲಿ ನಂದಿದುರ್ಗ ಕ್ರಿಮಿನಲ್ ಸೆಷನ್ ವಿಚಾರಣೆಯು ಪ್ರಾರಂಭವಾಗುತ್ತದೆ.

Departure of the Resident.—ಈ ಸಂಸ್ಥಾನದ ಬ್ರಿಟಿಷ್ ರೆಸಿಡೆಂಟರಾದ ಸರ್. ಹಾರಿ ಪ್ರಿಡರ್ಗ್ಯಾಸ್ಟ್ ಸಾಹೇಬರವರು ಈ ತಿಂಗಳ ೧೪ನೇ ತಾರೀಖು ಮಂಗಳವಾರದದಿನ ಇಲ್ಲಿಂದ ಮೈಸೂರಿಗೆ ಪ್ರಯಾಣಮಾಡಿದರು. ಆಕಾಲದಲ್ಲಿ ತೋಫ್ ಮೊದಲಾದ ಮಾಮೂಲ್ ಮರ್ಯಾದೆಗಳೆಲ್ಲವು ನಡೆದವು

A new dispensary.—ಈ ಪೇಟೆಯ ಸ್ಪೋರ್ಡೆಬಲ್ ಇಲ್ಲಿನ ಮುನಿಸಿಪಾಲಿಟಿಯವರಿಂದ ಒಂದು ಆಸ್ಪತ್ರೆ ಇದುವರಿವಿಗೇನೇ ಸ್ಥಾಪಿಸಲ್ಪಟ್ಟಿರುತಿದೆಯಷ್ಟೆ. ದೂರವಾಸಿಗಳಾಗಿರತಕ್ಕವರ ಅನುಕೂಲ್ಯಕ್ಕಾಗಿ ಇಲ್ಲಿನ ಅರಳೇಪೇಟೆಯಲ್ಲಿ ಬೇರೆಯೊಂದು ಆಸ್ಪತ್ರೆಯನ್ನು ಏರ್ಪಡಿಸಬೇಕೆಂದು ಯೋಚಿಸುತಲಿರುವರೆ ಒಳದೇಶ ದಪತ್ರಿಕೆ ಯೊಂದರಮೂಲಕ ತಿಳಿಯಲಾದೆವು

Arrival and departure of His Highness the Maharaja.—ಗತವಾರದಲ್ಲಿ ನಾವು ತಿಳಿಸಿದ್ದ ಪ್ರಕಾರ ಶ್ರೀಮನ್ಮಹಾರಾಜರವರು ತಮ್ಮ ದಿವಾನರವರು ಮೊದಲಾದ ಪರಿವಾರದೊಡನೆ ಕಳೆದ ಗುರುವಾರದದಿನ ಬೆಳಗ್ಗೆ ೮|| ಘಂಟೆಗೆ ಸರಿಯಾಗಿ ಸ್ಪೆಷಿಯಲ್ ಟ್ರೇನಿನಲ್ಲಿ ದಯಮಾಡಿ ಹಾಗೆಯೇ ಮೈಸೂರಿಗೆ ಪ್ರಯಾಣವಾದರು. ಮಹಾರಾಜರವರ ಆಗಮನಕಾಲದಲ್ಲಿ ಮಾಮೂಲಿಮೇರೆ ನಡೆಯುವ ಮರ್ಯಾದೆಗಳ್ಯಾವವೂ ಅವರ ಆಜ್ಞಾನುಸಾರ ಜರಗಲಿಲ್ಲವು.

Portuguese coins.—ಪೋರ್ಚುಗೀಸ್ ಸಂಸ್ಥಾನಕ್ಕೂ ಬ್ರಿಟಿಷ್ ಸಂಸ್ಥಾನಕ್ಕೂ ನಡೆದ ಕರಾರನ್ನನುಸರಿಸಿ ಛಾಪಿಸಲ್ಪಟ್ಟು ಚಲಾವಣೆಯಲ್ಲಿ ತರಲ್ಪಟ್ಟಿರುವ ರೂಪಾಯಿಗಳನ್ನು ಬಾಜಾರಿನಲ್ಲಿ ಚಲಾವಣೆಯಲ್ಲಿ ತರುವದು ಬಹಳ ಕಷ್ಟವಾಗಿರುತಿದೆಯೆಂದು ಅಕೌಂಟೆಂಟ್ ಜನರಲ್ಲವರು ಗವರ್ನಮೆಂಟಿನವರ ಅವಧಾನಕ್ಕೆ ತರಲು, ಸದರೀ ನಾಣ್ಯಗಳು ತೂಕದಲ್ಲಾಗಲಿ ಕ್ರಯದಲ್ಲಾಗಲಿ ಬ್ರಿಟಿಷ್ ಇಂಡಿಯಾದೇಶದ ನಾಣ್ಯಗಳಿಗೆ ಸಮನಾಗಿರುತವೆಂತಲೂ, ಅದರ ಹಿಂದುಗಡೆ ಪೋರ್ಚುಗೀಸ್ ದೇಶದ ಅರಸರ ಪ್ರತಿಮೆಯೂ ಮತ್ತೊಂದುಕಡೆ ಅದರ ಕ್ರಯವೂ ಛಾಪಿಸಲ್ಪಟ್ಟಿರುತಿದೆಯೆಂತಲೂ, ಅವು ಪೋರ್ಚುಗೀಸ್ ಸರ್ಕಾರದವರ ಮುಖಾಂತರ ಜಾರೀಯಲ್ಲಿ ತರಲ್ಪಟ್ಟಿದೆ. ಮತ್ತು ಅವರಿಗಾಗಿ ಇಂಡ್ಯ ಗವರ್ನಮೆಂಟಿನವರಿಂದ ಛಾಪಿಸಲ್ಪಟ್ಟವೆಯೆಂತಲೂ, ಅವು ನ್ಯಾಯವಾದ ಚಲಾವಣೆ ನಾಣ್ಯಗಳೆಂತಲೂ ಇಂಡ್ಯ ಗವರ್ನಮೆಂಟಿನವರು ಗೆಜೆಟಿನಲ್ಲಿ ಘೋಷಿಸಿಮಾಡಿರುತ್ತಾರೆ.

SUMMARY OF NEWS.
ವೃತ್ತಾಂತ ಸಂಗ್ರಹ.

ಪ್ರತಿದಿನಬೆಳಗ್ಗೆ ಆರೂವರೆಘಂಟೆಗೆ ಹುಬ್ಬಳ್ಳಿಯಿಂದಹೊರಡು ಪ್ರೂನೆಗೆ ಹೋಗುತಲಿದ್ದ ರೈಲುಗಾಡಿಯು ಮಾರ್ಕೋಘಾಗಿ ಈ ಲಾಗಾಯತು ಮಧ್ಯಾಹ್ನ ೨ ಘಂಟೆ ೪೫ ನಿಮಿಷಗಳಿಗೆ ಹುಬ್ಬಳ್ಳಿ ಅಲ್ಲಿಂದಹೊರಟು ೩—೫೫ಕ್ಕೆ ಧಾರ್ವಾಡಕ್ಕೆಬಂದು ಮುಂದೆ ಬೆಳಗಾಂವಿವರಿವಿಗೆಹೋಗುತಿದೆ.

ಪಂಡಿತೆ ರಮಾಬಾಯಿ ಎಂಬಾಕೆಯು ವಿಧವೆಯರಿಗೋಸ್ಕರ ಒಂದು ಪಾಠಶಾಲೆಯಂ ಸ್ಥಾಪಿಸುವ ಆಲೋಚನೆಯೊಳವಾಳೆಂಬದಾಗಿ ಹಿಂದೆಯೇ ತಿಳಿಸಿದ್ದೆವಷ್ಟೆ. ಆಕೆ ಸದರೀ ಶಾಲೆಗಾಗಿ ಅನ್ಯದೇಶಗಳಲ್ಲಿ ಚಂದಾ ವಸೂಲ್ಮಾಡುತಲಿದ್ದಾಳೆ. ಇದೊಂದು ಶ್ಲಾಘ್ಯವಾದ ಕಾರ್ಯವಾಗಿರುತಿದೆ. ದೈವಾನುಗ್ರಹದಿಂದ ಈಶಾಲೆಯು ಊರ್ಜಿತವಾಗಿ ಜೀವಿಸಿರುವದಕ್ಕಷ್ಟೆ ಇವರೆಲ್ಲ ವಿಧವೆಯರೆಲ್ಲ ವಿದ್ಯಾಭ್ಯಾಸಮಾಡಿ ಪಂಡಿತರಾಗಿ ಕಡೆಗೆ ರಮಾಬಾಯಿಯಂತೆ ಅವರು ಲೋಕರಂಜಕರಾಗಬಹುದು.

ನಾಯಿ ಕುದುರೆ ಬೆಕ್ಕು ಮೊದಲಾದ ಕೆಲವು ಮೃಗಗಳು ಮನುಷ್ಯರನ್ನು ಕಚ್ಚೋಣದರಿಂದ ವಿಷಯೇರಿ ಕೆಲವುಕಾಲದಮೇಲೆ ಮೃತರಾಗುವದರಿಂದ ಇದಕ್ಕೆ ತಕ್ಕ ಔಷಧವನ್ನು ಕಂಡುಹಿಡಿಯುವದು ಆವಶ್ಯಕವೆಂದು ತಿಳಿದು ಒಂದು ಆಸ್ಪತ್ರೆಯಲ್ಲಿ ಕೆಲವರು ಸೇರಿ ಒಂದು ವಿಧವಾದ ಔಷಧವನ್ನು ತಯಾರುಮಾಡಿದಾರೆ. ಬೇಗದ ಕೈಗಳನ್ನು ಯಾವಾಗಲೂ ಸಮೀಪದಲ್ಲಿ ಇಟ್ಟುಕೊಂಡಿರುವಹಾಗೆ ಅವನ್ನು ಯಾವಾಗಲೂ ಇಟ್ಟುಕೊಂಡಿದ್ದು ಅಂತಾಕಾಲಗಳಲ್ಲಿ ಆಘಾತಗಳಲ್ಲಿಟ್ಟರೆ ವ್ಯಾಧಿಯುವ್ಯಾಪಿಸಿ ಕೂಡಲೇಗುಣವಾಗುವದು.

ಸರ್ಪದಂಶವಾದಕೂಡಲೇ ಅವನ ನಾಲಿಗೆಗೆ ಕ್ಲೋರಷಾರಂಎಂಬ ದ್ರಾವಕವನ್ನು ಸವರಿದೊಡೆ ತತ್ಕ್ಷಣದಲ್ಲಿ ಸರ್ಪವಿಷವು ನಿವೃತ್ತಿಯಾಗುತಿದೆಂಬದಂ ಒಬ್ಬ ಡಾಕ್ಟರ್ ಪರೀಕ್ಷಿಸಿ ಅಮೇರಿಕಾದೇಶದಲ್ಲಿ ಪ್ರಸಿದ್ಧಾಗುತಲಿರುವ ಒಂದು ವೃತ್ತಾಂತಪತ್ರಿಕೆಗೆ ಬರೆದಿರುತ್ತಾನೆ. ಈ ಕ್ಲೋರಷಾರಂ ಎಂಬದು ಅದರ ಆಘ್ರಾಣಮಾತ್ರದಿಂದ ಮನುಷ್ಯನಿಗೆ ಪ್ರಜ್ಞೆಯನ್ನು ಹೋಗಲಾಡಿಸುವ ಗುಣ ವುಳ್ಳದಾಗಿರುತಿದೆ. ಆಸ್ಪತ್ರೆಗಳಲ್ಲಿ ಚಿಕಿತ್ಸಕರಿದನ್ನು ಶಸ್ತ್ರಚಿಕಿತ್ಸಾಕಾಲದಲ್ಲಿ ಬಹಳವಾಗಿ ಉಪಯೋಗಿಸುವ ಪದ್ಧತಿಯುಂಟು. ಇದೆ ಕೆಲವು ಸಂದರ್ಭಗಳಲ್ಲಿ ಮನುಷ್ಯನಿಗೆ ಮರಣವನ್ನು ಸಹ ಉಂಟುಮಾಡುವದು.

ಭಯಂಕರವಾದ ಮತ್ತು ದುಃಖಕರವಾದ ಸಂಗತಿ—ನ್ಯಾರ್ಕ್ ಎಂಬ ಊರಿನಲ್ಲಿ ಲೈಷ್ಎಂಬ ಒಬ್ಬ ಕುಷ್ಟರೋಗಿಯು ಕೆಲವುವಾರಗಳಕೆಳಗೆ ಒಂದುರಾತ್ರಿ ತನ್ನ ಹೆಂಡತಿಯಸಂಗಡ ಜಗಳವಾಡಿ ಅವಳನ್ನುಕೊಂದು ಅಷ್ಟಕ್ಕೇ ತೃಪ್ತಿಹೊಂದದೆ, ನಿದ್ರೆಯಲ್ಲಿದ್ದ ೫ರಿಂದ ೧೨ ವರುಷಕ್ಕೆ ಒಳಪಟ್ಟ ತನ್ನ ೬ನೇ ಮಕ್ಕಳನ್ನು ಹತಮಾಡಿ ಮನೆಗೆ ಬೆಂಕಿಹಚ್ಚಿ ಆ ಬೆಂಕಿಯ ಜ್ವಾಲೆಯಿಂದ ಅದು ಶವಗಳೊಂದಿಗೆ ಸುಟ್ಟುಹೋದಮೇಲೆ ತಾನು ಒಂದುಬಾವಿನಿಂದ ಚೆತ್ತು ಕುಪ್ಪಿದುಕೊಂಡು ಭಾವಿಯಲ್ಲಿ ಬಿದ್ದು ಮೃತಪಟ್ಟನು.

ಸಾಧಾರಣವಾಗಿ ಬಂಗಾಳಾ ಬೊಂಬಾಯಿ ಮದ್ರಾಸ್ ಪ್ರಸಿಡೆನ್ಸಿಗಳಲ್ಲಿ ವಿದ್ಯಾರ್ಥಿಗಳಿಗೆ ವೇತನಗಳನ್ನು ಸರ್ಕಾರದವರು ಏರ್ಪಾಡು ಮಾಡಿರುತ್ತಾರೆ. ಈ ವೇತನವು ಬಡವರಿಗೆ ಅನುಕೂಲವಾಗಿಯೂ ಪ್ರೋತ್ಸಾಹವನ್ನು ಕಲ್ಪಿಸುವದಾಗಿಯೂ ಸರ್ಕಾರದ ಉದಾರಗುಣವನ್ನು ತೋರಿಸುವದಾಗಿಯೂ ಇರುತವೆ. ಹೀಗಿರುವಲ್ಲಿ ಬೊಂಬಾಯಿ ಸರ್ಕಾರದವರು ತಮ್ಮ ಪ್ರಿಸಿಡೆನ್ಸಿಯ ಯಾವ ಒಂದುಭಾಗದಲ್ಲಿಯೂ ಈ ವೇತನವನ್ನು ವಜಾಮಾಡುವದಾಗಿಯುಕುಂಟೊಟ್ಟದ್ದನ್ನು ವಿದ್ಯಾರ್ಥಿಗಳೆಲ್ಲರೂ ತಿಳಿದು, ಅತ್ಯಂತ ವಿಷಾದದಿಂದ ಒಂದು ದೊಡ್ಡಸಭೆಯನ್ನು ಸೇರಿಸಿ ಗವರ್ನರವರಿಗೆ ಇಂತಾ ಅಸಂಬದ್ಧವಾದ ಹುಕುಮನ್ನು ವಜಾಮಾಡಿಸಿ ಕೊಡಬೇಕೆಂದು ವಿಜ್ಞಾಪನಾಪತ್ರಿಕೆಯನ್ನು ಬರೆದುಕೊಂಡಿದಾರೆ.

ಪ್ರತಿವರ್ಷದಲ್ಲಿಯೂ ಕ್ರಿಸ್ತರ ಹಬ್ಬಕ್ಕೋಸ್ಕರವಾಗಿ ಡಿಸಂಬರ್ ೨೪ ರಲಾಗಾಯಿತು ಜನವರಿ ೩ರ ವರಿಗೆ ಎಲ್ಲಾ ಸರ್ಕಾರದವರೂ ರಜಾಕೊಡುತ್ತಾರಷ್ಟೆ. ಕಲ್ಕತ್ತೆಯ ಹೈಕೋರ್ಟಿನಲ್ಲಿ ಈ ಲಾಗಾಯಿತು ಮುಂದೆ ಡಿಸಂಬರ್ ೨೪ ರಲಾಗಾಯತು ಅದೇ ೨೬ ರವರಿಗೆ ಕೊಡಬೇಕೆಂದು ರಜಾದಿವಸಗಳನ್ನು ಕೋತಾ ಮಾಡಿರುತ್ತಾರೆ. ಇದು ಪ್ರತಿವರ್ಷದ ಡಿಸಂಬರ್ ತಿಂಗಳಲ್ಲಿ ನಡೆಯುವ ಸಾರ್ವಜನಿಕ ಸಭೆಗೆ ಸರ್ಕಾರದ ಉದ್ಯೋಗಸ್ಥರೂ ಬ್ಯಾರಿಸ್ಟರ್‌ಗಳೂ ಲಾಯರ್‌ಗಳೂ ಇನ್ನೂ ಅನೇಕ ದೊಡ್ಡಮನುಷ್ಯರುಗಳೂ ಹೋಗದಹಾಗೆ ಮಾಡುವದಕ್ಕೆ ಏರ್ಪಾಡುಮಾಡಿರುವಹಾಗೆ ಕಾಣಬರುತದೆಂದು ಕಲ್ಕತ್ತೆಯ ಪತ್ರಿಕೆ ಯೊಂದರಿಂದ ತಿಳಿಯಬರುತದೆ.

ಇಂದೂರ್ ಸಂಸ್ಥಾನದಲ್ಲೀಗ ಜಾರಿಯೊಳಿರತಕ್ಕ ಪೀನಲ್‌ಕೋಡಿನಲ್ಲಿ ನೂತನಗಳಾದ ಕೆಲವು ತಿದ್ದುಪಾಟುಗಳು ಮಾಡಲ್ಪಟ್ಟವೆಯೆಂತಲೂ, ಅವುಗಳಲ್ಲೊಂದು ಬಾಲ್ಯದಶೆಯೊಳು ವಿವಾಹಮಾಡಿದರೆ ಅದು ವಿವಾಹದ್ವೇನ ಪರಿಗಣಿಸಲ್ಪಡಲಾರದೆಂಬದೂ ಅದು ರದ್ದಾಗಬಹುದೆಂಬದು ಸಹ ಒಂದಾಗಿರುತಿದೆಯೆಂತಲೂ ತಿಳಿಯಬರುತಿದೆ. ಈಹೊಸಕಲಮನ್ನು ಸದರೀ ಆಕ್ಟಿನಲ್ಲಿ ಬಸುಕೆ ಅಲ್ಲಿನ ದಿವಾನರಾದ ದಿವಾನಬಹದೂರ್ ರಘುನಾಥರಾಯರೇನಾದರೂ ಸೇರಿಸಿರುವರೆ ಯೆಂಬದಾಗಿ ದ್ಯಾನಪತ್ರಿಕೆಯೊಂದು ತಿಳಿಸುತಿದೆ.

ಕೋತಿಯು ಒಂದು ಪಟ್ಟಣವನ್ನು ಸುಟ್ಟದ್ದು.—ಕೆಲವುದಿನಗಳಕೆಳಗೆ ಒಂದುಕೋತಿಯ ಕೆಡಕಿನಿಂದ, ವೇಕ್‌ಫೀಲ್ಡ್ ಎಂಬ ಊರು ಸುಟ್ಟುಹೋಯಿತು. ಹ್ಯಾಗಂದರೆ,—ಈ ಕೋತಿಯು ಅಲ್ಲಿನ ಒಂದು ನಾಟಕಶಾಲೆಯಲ್ಲಿ ಸ್ವತಂತ್ರವಾಗಿ ಬಿಡಲ್ಪಟ್ಟಿತ್ತು. ಆದದರಿಂದ ಅದು ಆಶಾಲೆಯೊಳು ಸ್ವೇಚ್ಛೆಯಾಗಿ ತಿರುಗುತಿತ್ತು. ಒಂದುದಿನ ಸಾಯಂಕಾಲ ಅದರೊಳು ಯಾರೂ ಇರಲಿಲ್ಲ ಆಗಲಾಕಪಿಯು ಅದರಲ್ಲಿದ್ದ ಒಂದುಶೀಮೆಯೆಣ್ಣೆಯ ಡಬ್ಬಿಯನ್ನು ಕಂಡು ಅದನ್ನುಬಗ್ಗಿಸಿ, ಅದರಿಂದ ಸುರಿಯುವ ಎಣ್ಣೆಯಿಂದ ತನ್ನನ್ನೆಲ್ಲಾ ನೆನಸಿಕೊಂಡು ಸಮೀಪದಲ್ಲಿ ಉರಿಯುತಿದ್ದ ದೀಪದಬಳಿ ಕೂತುಕೊಂಡಿತ್ತು. ಆಕಸ್ಮಿಕವಾಗಿ ಅದರ ಶರೀರದಮೇಲೆ ಒಂದುಕಿಡಿಯುಬೀಳಲು ರೋಮಗಳು ಸುಡಲಾರಂಭವಾದವು. ಕೋತಿಯು ಗಾಬರಿಯಾಗಿ ಓಡ್ಯಾಡಿ, ಹಾರಿ, ಧುಮುಕಿ ಕಿರಿಚಿಕೊಳ್ಳುತಿತ್ತು. ಎಷ್ಟಾದರೂ ಕೋತಿಬೇಕಷ್ಟೆ. ಇದರಿಂದ ಆನಾಟಕಶಾಲೆಯೊಳಿದ್ದ ಬಟ್ಟೆ ಪರೆ ಚಾಪೆ ಪರದೆ ಮೊದಲಾದವು ಬೆಂಕಿಗೆ ಈಡಾದವು. ನಾಟಕಶಾಲೆಯು ಸಂಪೂರ್ಣವಾಗಿಸುಟ್ಟು ಉರಿಯು ಬಲವಾದ್ದರಿಂದ ಅನೇಕರು ಗುಂಪುಗುಂಪಾಗಿ ಅಲ್ಲಿಗೆಬಂದು ವಿನೋದನೋಡುವ ನೋಟಕರಂತೆ ನಿಂತಿದ್ದರು ಇವರು ಅದನ್ನು ಆರಿಸುವ ಪ್ರಯತ್ನ ಮಾಡುವಷ್ಟರಲ್ಲಿ ಗಾಳಿಯು ಬಲವಾಗಿಬೀಸಿ ಅಗ್ನಿಜ್ವಾಲೆಯು ಪ್ರಬಲವಾಗಿ ಊರಲ್ಲಿರುವ ಮನೆಗಳಮೇಲೆ ಉರಿಯು ವ್ಯಾಪಿಸಿತು. ಜನರೆಲ್ಲರೂ ಅಲ್ಲಿಂದ ಮನೆಗಳಬಳಿಗೆ ಓಡಿಬಂದರು. ಆವ್ರೂರಿನೊಳಿದ್ದ ಕಟ್ಟಡಗಳೆಲ್ಲ ಮುದ್ದುಮರದಿಂದ ಕಟ್ಟಿದ್ದವುಗಳಾದ್ದರಿಂದ ಬೆಂಕಿಯು ಅವುಗಳನ್ನೆಲ್ಲ ಕ್ರಮೇಣ ಒಂದೊಂದಾಗಿ ಸ್ವಲ್ಪಹೊತ್ತಿನಲ್ಲೇ ತನ್ನವಶ ಪಡಿಸಿಕೊಂಡು ಜನಗಳ ಪ್ರಯತ್ನಗಳನ್ನು ಭಂಗಪಡಿಸಿ ಊರನ್ನೆಲ್ಲಾ ಸುಟ್ಟು ಬೂದಿಮಾಡಿತು. (ಹಾನುಕೆರುವ ಕೋತಿ ವನವೆಲ್ಲ ಸುಟ್ಟು ಬೂದಿಮಾಡಿತು.) ಎಂಬ ಗಾದೆಯನ್ನು ಇಲ್ಲಿ ಪ್ರಯೋಗಿಸಬಹುದಾಗಿರುತಿದೆ. ಈ ಕಾಲದಲ್ಲಿ ಸಾಮಾನ್ಯವಾದ ಒಂದುಕೋತಿಯು ಇಷ್ಟರ ಅನರ್ಥಗಳಿಗೆ ಕಾರಣವಾಗಿರುವಲ್ಲಿ ಯುಗಾಂತರದೊಳು ಇದೇ ವಾನರಕೋಟಿಗೆ ಸೇರಿದವುಗಳು ಅದ್ಭುತಕಾರ್ಯಗಳನ್ನು ಮಾಡಿದವೆಂದು ತಿಳಿಸುವ ಪುರಾಣವಾಕ್ಯಗಳನ್ನು ನಾವು ಯಥಾರ್ಥ ನೇ ಬಕೂಡದು.

THE MYSORE GAZETTE.
ಮೈಸೂರು ಗೆಜೆಟ್.

ಶ್ರೀಮನ್ಮಹಾರಾಜ ರಾಜಾಶ್ರಿತ ಬಹದೂರವರ ದಿವಾನರವರಿಂದ ಕೊಡಲ್ಪಡುವ ಇಷ್ತಿಹಾರ್‌ನಾಮೆಗಳು.

ನೊಕ್ಕಾಂ ನ. ೨೫೩-ತಾರೀಖ್ ೮ನೇ ಫೆಬ್ರುವರಿ ೧೮೮೮. ಮೆ|| ಕ್ರೆಸ್ಯವರು ಮೈಸೂರು ಡಿಸ್ಟ್ರಿಕ್ಟ್ ಡಿಸ್ಟ್ರಿಕ್ಟ್ ವ ಸೆಷನ್ಸ್ ಜಡ್ಜಿಯಾಗಿ ಆಕ್ಟಿಂಗ್ ನೌಕರಿಯೊಳಿರುವತನಕ ಮಿಸ್ಟರ್ ಸಿ. ಶ್ರೀನಿವಾಸಯ್ಯಂಗಾರ್ಯರವರು ೧ನೇ ಕ್ಲಾಸ ಸಬಾರ್ಡಿನೇಟ್ ಜಡ್ಜಿಯಾಗಿಯೂ, ಮಿಸ್ಟರ್ ಎಚ್. ಅನಂತಸ್ವಾಮಿರಾಯರವರು ೨ನೇ ಕ್ಲಾಸ ಸಬಾರ್ಡಿನೇಟ್ ಜಡ್ಜಿಯಾಗಿಯೂ, ಮೆ|| ರಾಮಸ್ವಾಮಿಅಯ್ಯರವರು ೩ನೇ ಕ್ಲಾಸ ಸಬಾರ್ಡಿನೇಟ್ ಜಡ್ಜಿಯಾಗಿಯೂ ಆಕ್ಟ್ಮಾಡುತಲಿರುವರು.

ನಂ. ೧೪೯, ತಾರೀಖ್೯ನೇ ಫೆಬ್ರುವರಿ ೧೮೮೮. ಮದ್ದಗಿರಿತಾಲ್ಲೂಕು ಅಮಲ್ದಾರ್ ವ ೩ನೇ ಕ್ಲಾಸ ಮ್ಯಾಜಿಸ್ಟ್ರೇಟ್ ಗೋಪಾಲಯ್ಯಂಗಾರ್ಯರಿಗೆ, ಫಿರ್ಯಾದಿಗಳ ಮತ್ತು ಸಾಕ್ಷಿಗಳ ಶೈಫಿಯತ್ತುಗಳನ್ನು ಕನ್ನಡಭಾಷೆಯಲ್ಲಿ ಸ್ವದಸ್ತೂರಿ ತೆಗೆದುಕೊಳ್ಳಲಿಕ್ಕೆ ಅಧಿಕಾರಕೊಡಲ್ಪಟ್ಟಿರುತಿದೆ.

ನಂ. ೧೯೧.—ಮಾಹೇಮಜಕೂರ್ ೬ನೇತಾರೀಖಿನ ಮಧ್ಯಾಹ್ನಾತ್ಪರ ಮೆ|| ಕ್ರೆಸ್ಯವರು ಮೈಸೂರು ಡಿಸ್ಟ್ರಿಕ್ಟ್ ಮತ್ತು ಸೆಷನ್ಸ್ ಕೋರ್ಟ್ ಚಾರ್ಜನ್ನು ವಹಿಸಿದರು.

ನಂ ೧೯೩—ತಾ|| ೧೪ನೇ ಫೆಬ್ರುವರಿ ೧೮೮೮. ಶಾರಿಸ್ಟ ಪ್ರೊಬೇಷನರ್ ಮೆ|| ವೈ. ಸೀತಾರಾಮಯ್ಯನವರು, ಕಡೂರು ಡಿ|| ನಲ್ಲಿರುವ ಪ್ರಾಂತ್ಯ ಪರ್ಗಣೆಗಳ ಚಾರ್ಜಿನಲ್ಲಿ ಸದರೀ ಡಿಸ್ಟ್ರಿಕ್ಟ್ ಡೆಪ್ಯುಟೀ ಕಮಿಷನರವರ ತಾಬೇಗೊಳಪಟ್ಟಿರುವಂತೆ ಅಲ್ಲಿಗೆ ನಿಯಮಿಸಲ್ಪಟ್ಟಿರುತ್ತಾರೆ.

ನಂ. ೧೪೯, ತಾ|| ೧೧ನೇ ಡಿಸಂಬರ್ ೧೮೮೭. ಸಿವಿಲ್ ಪ್ರೊಸಿಡ್ಯೂರ್‌ಕೋಡ್ ೬೪೧ನೇ ಸೆಕ್ಷನ್ ಅನುಸರಿಸಿ ಘನವ ನ್ನೈತ್ತಿದ ಶ್ರೀಮನ್ ಮಹಾರಾಜಾ ಸರ್ಕಾರದವರು, ಇದರಡಿಕಂಡ ಮಠಾಧಿಪತಿಗಳನ್ನು ಸಿವಿಲ್‌ಕೋರ್ಟುಗಳಿಗೆ ಖುದ್ದಾಗಿ ಹಾಜರಾಗುವದರಿಂದ ವಿನಾಯಿಸಿರುತ್ತಾರೆ. ನಂಜನಗೂಡು ರಾಘವೇಂದ್ರಸ್ವಾಮಿಮಠದ ಶ್ರೀ ಸುತ್ತುಪ್ರಸಮೀಂದ್ರ ಸ್ವಾಮಿಗಳವರು, ನೆಲಮಂಗಲ ತಾಲ್ಲೂಕು ಶಿವಗಂಗೆಮಠದ ಶ್ರೀ ಸುಬ್ರಹ್ಮಣ್ಯಾಭಿನವ ಸಚ್ಚಿದಾನಂದ ಭಾರತೀಸ್ವಾಮಿಗಳವರು. ಈಪೆಕಸ್ಸ ದಾರಿಯು ತಮ್ಮ ಜೀವಮಾನದವರಿವಿಗೆ ನಮಯಕಕ್ಕೆಪ್ಪಂದೆಣಿಸಲ್ಪಡಬೇಕಲ್ಲದೆ ಪಾರಂಪರ್ಯವಾದದ್ದೆಂದು ಭಾವಿಸಲಾಗದು.

ಕು. ಅವರು ಉಪಯೋಗಿಸಿಕೊಳ್ಳುವ ತಾರೀಖ್ ಮೊದಲು ೧೩ ದಿನಗಳ ಪ್ರಿವಿಲೀಜ್ ರಜಾ ಕೊಡಲ್ಪಟ್ಟಿರುತಿದೆ.

ನಂ. ೧೯೭. ತಾ ೧೭ನೇ ಫೆಬ್ರುವರಿ ೧೮೮೮—ಮಾಹೇ ಮಜಕೂರ್ ೧೭ನೇ ತಾರೀಖಿನ ಮಧ್ಯಾಹ್ನಾತ್ಪರ ಬೆಂಗಳೂರು ಡಿಸ್ಟ್ರಿಕ್ಟ್ ಆಫೀಸ್ ಮತ್ತು ಖಜಾನೆಯ ಚಾರ್ಜನ್ನು ಮೇಜರ್ ಎ. ಜೆಹೆಚ್. ಮ್ಯಾಕಿಂಟೈರ್ ರವರು ಮಿ. ಎಫ್. ಬಿ. ಕೃಷ್ಣಯವರಿಂದ ತೆಗೆದುಕೊಂಡಿರುತ್ತಾರೆ.

ನಂ. ೪೪೪—೭೩. ತಾ|| ೧೩ನೇ ಫೆಬ್ರುವರಿ ೧೮೮೮—ಅಷ್ಟಗ್ರಾಮದ ಚಾನಲ್ ಡಿವಿಜನ್ ಎಗ್ಜಿಕ್ಯೂಟಿವ್ ಇಂಜನಿಯರ್ ಮೆ|| ಎಫ್. ಜೆ. ಮ್ಯಾಕ್ಲಗ್ಲಿನ್ಯವರಿಗೆ ಮಾಹೇ ಮಜಕೂರ್ ೨೩ನೇ ತಾರೀಖ್ ಲಾಗಾಯತು ಅಥವಾ ಅವರು ಪ್ರಯಾಣವಾಗುವ ದಿವಸದ ಮೊದಲು ೨ ತಿಂಗಳು ೨೪ ದಿವಸಗಳ ಪ್ರಿವಿಲೀಜ ರಜಾಕೊಡಲ್ಪಟ್ಟಿರುತಿದೆ. ಮಿ. ಮ್ಯಾಕ್ಲಗ್ಲಿನ್ಯವರು ರಜಾದಮೇಲೆ ಗೈರುಹಾಜರಾಗಿರುವ ಕಾಲದಲ್ಲಿ ಅಸಿಸ್ಟೆಂಟ್ ಇಂಜನಿಯರ್ ಮೆ|| ಗೋಪಿನಾಥಾಚಾರ್ಯರವರು ಅಷ್ಟಗ್ರಾಮದ ಚಾನಲ್ ಡಿವಿಜನ್ ಎಗ್ಜಿಕ್ಯೂಟಿವ್ ಇಂಜನಿಯರಾಗಿ ಆಕ್ಟ ಮಾಡತಕ್ಕದ್ದು ಮೊಕರರ್.

Bangalore:—Printed and published for the Proprietor at the Karnatic Press.—1888.

ಕರ್ನಾಟಕ ಪ್ರಕಾಶಿಕಾ.

THE KARNATAKA PRAKASIKA.

ಪ್ರತಿ ಸೋಮವಾರ ಪ್ರಾತಃಕಾಲದಲ್ಲಿ ಪ್ರಕಟಿಸಲ್ಪಡುವದು.

Published every Monday Morning.

ಪ್ರಜಾನುವಿವಿಧವ್ಯವೃತ್ತ್ಯುವಗಮಾರ್ಥ ಕರ್ನಾಟಕಪ್ರಕಾಶಿಕನವರಾಭಿಧಾಪ್ರಶ್ರುತಸಾಹಿತೀಕೋವಿತಾ ॥ ವ್ಯಗ್ರಾಂಕಹಿತವಾಸರನಿಹಿತಮುದ್ರಣಾಸಜ್ಜಸ್ಸ್ವತ್ರಿ ಕಾಸು ಪರಿಶೋಧಿತಾ ಜಿತೆ ಜನಸಂತುಷ್ಟಿದಾ ॥

Vol. XV.] BANGALORE—MONDAY, FEBRUARY 27, 1888. [No. 8.

ಸಂಪುಟ ೧೫.] ಬೆಂಗಳೂರು:—ಸನ್ ೧೮೮೮ನೇ ಇಸವಿ ಫೆಬ್ರವರಿ ೨೭ನೇ ತಾರೀಖ್ ಸೋಮವಾರ. [ಸಂಚಿಕೆ ೮.

ಕರ್ನಾಟಕ ಪ್ರಕಾಶಿಕಾ

ಪತ್ರಿಕೆಯ ಚಂದಾ ದರಗಳು,
೧೮೮೮ನೇ ಇಸವಿ ಜನವರಿಯಿಂದಾಯಿತು
ಕಡಮೆಮಾಡಲ್ಪಟ್ಟಿರುತ್ತದೆ.

—:o:—

ಈ ಪತ್ರಿಕೆಯ ಚಂದಾದಾರರಪ್ಪಕಿ ಅನೇಕರ ಅಪೇಕ್ಷೆಯನ್ನು ನೆರವೇರಿಸುವ ಉದ್ದೇಶದೊಡನೆಯೂ, ಪರಿಮಿತವಾದ ಆದಾಯವುಳ್ಳವರಿಗೆಲ್ಲ ಈ ಪತ್ರಿಕೆಯು ಸುಲಭವಾಗಿ ಲಭಿಸುವಂತಿರಬೇಕೆಂಬ ಅಭಿಪ್ರಾಯದೊಡನೆಯೂ ಇದರ ಚಂದಾದರವನ್ನು ಇದರಡಿಕಂಡಂತೆ ಕಡಮೆಮಾಡಿರುತ್ತೇವೆಂತೆಂದರೆ:—

ಇಂಗ್ಲಿಷ್ ಮತ್ತು ಕನ್ನಡಭಾಗಗಳಿಗೆ.

	ಸ್ಥಳದವರಿಗೆ	ಪರಸ್ಥಳದವರಿಗೆ.
12 ತಿಂಗಳಿಗೆ	8—0—0	9—0—0
6 ,,	4—0—0	4—8—0
3 ,,	2—8—0	2—8—0

ಇಂಗ್ಲಿಷ್ ಅಥವಾ ಕನ್ನಡಭಾಗಗಳಿಗೆ.

	ಸ್ಥಳದವರಿಗೆ	ಪರಸ್ಥಳದವರಿಗೆ.
12 ತಿಂಗಳಿಗೆ	4—0—0	5—0—0
6 ,,	2—0—0	2—8—0
3 ,,	1—4—0	1—8—0

ಪರಾ—ಅಂಚೆ ಮುಸ್ಸೆಫಿಗಳು, ಹೆಡ್ಮಾಸ್ಟರುಗಳು ಮತ್ತು ತಾಲ್ಲೂಕ್ ಸ್ಕೂಲ್‌ಮಾಸ್ತರುಗಳು, ಶ್ಯಾನುಭೋಗರು, ಪಟೇಲರು, ವಿದ್ಯಾರ್ಥಿಗಳು, ಇವರಿಗೆಲ್ಲ ಈ ಪತ್ರಿಕೆಯು ಪರ್ಸಲ್ ಚಂದಾದರಕ್ಕೆ ಕೊಡಲ್ಪಡುವದು. ಅತ್ಯಾವಶ್ಯಕವಾದ ಸಂಗತಿ ಬಾರದ ದರಖಾಸ್ತುಗಳಿಗೆ ಸುತರಾಂ ನಿಗೆಕೊಡಲ್ಪಡಲಾರದು. ಚಂದಾದಾರರು ಇಂಗ್ಲಿಷ್ ಭಾಗವನ್ನಾಗಲಿ ಕನ್ನಡಭಾಗವನ್ನಾಗಲಿ ಅಥವಾ ಎರಡನ್ನಾಗಲಿ ತೀಸುಕೊಳ್ಳಬಹುದು. ಚಂದಾಹಣವನ್ನು ಮುಂಗಡವಾಗಿಯೇ ಸಲ್ಲಿಸತಕ್ಕದ್ದು. ಮೂರುತಿಂಗಳಿಗಿಂತ ಕಡಮೆಯಾಗಿ ಚಂದಾ ತೋಲಲು ಅಂಗೀಕರಿಸಲ್ಪಡಲಾರದು.

ನೋಟುಗಳು ರವಾನಿಸತಕ್ಕವರು ಮೊದಲು ಕಳಿಸುವ ಅರ್ಧನೋಟು ತಲುಪಿದ್ದಕ್ಕೆ ನಮ್ಮ ಕಾಗದವು ಬಂದ ಕೂಡಲೇ ಬಾಕೀ ಅರ್ಧ ನೋಟನ್ನು ರವಾನಿಸತಕ್ಕದ್ದು. ಬೇರೆಯವರ ಕಳುಹಿಸತಕ್ಕವರು ರೂಪಾಯಿ ಒಂದಕ್ಕೆ ಒಂದಾಣೆಯ ಮೇರೆ ಡಿಸ್ಕೌಂಟ್ ಸಹ ಕಳಿಸಿ ಕೊಡತಕ್ಕದ್ದು. ಅರ್ಜಿಗಳಿಗೆ ಜವಾಬು ಪಡೆಯುವುದಕ್ಕೆ ಬೇಕಾದ ಸ್ಟಾಂಪುಗಳನ್ನು ಕಳುಹಿಸಬೇಕು. ಡಿಸ್ಕೌಂಟ್ ಇಲ್ಲದೆ ಕಳುಹಿಸಲ್ಪಡುವ ಹಣವು ಜಮಾಮಾಡಲ್ಪಟ್ಟು ವಿಕ್ಕವನ್ನು ಲೆಕ್ಕಕ್ಕೆ ದಾಖಲಾಗಿಸಿಕೊಳ್ಳಲ್ಪಡುವದು.

ಪ್ರಕಟನೆಯ ರಿವಾಜ್.

ಮೊದಲನೆಯ ದಫಾ ಪಂಕ್ತಿ ಒಂದಕ್ಕೆ ೦—೨—೦

ಎರಡನೆಯ ದಫಾ ಪಂಕ್ತಿ ಒಂದಕ್ಕೆ ೦—೧—೦

ಪರಾ—ಎರಡಾವರ್ತಿಗಿಂತ ಜಾಸ್ತಿಯಾಗಿ ಮುದ್ರಿತವಾಗತಕ್ಕ ಜಾಹೀರ್ ಪಡಿಸಬೇಕಾದ ಪಂಕ್ತಿ ಒಂದಕ್ಕೆ ೧ಆಣೆಯ... ದರ ಲೆಕ್ಕ ಮಾಡಲ್ಪಡುವದು. ಈ ಪತ್ರಿಕೆಯಲ್ಲಿ ಜಾಹೀರಾತುಮಾಡುವುದಕ್ಕೆ ಪ್ರಕಟಿಸಲು ಕಳುಹಿಸುವವರು ಅವು ಎಷ್ಟಾವರ್ತಿ ಪ್ರಕಾಶ ಮಾಡಲ್ಪಡಬೇಕೆಂಬ ಆ ಅಂಶವನ್ನು ಸ್ಪಷ್ಟವಾಗಿ ತಿಳಿಸತಕ್ಕದ್ದು. ಇಲ್ಲದಿದ್ದರೆ ಅವರು ನಮಗೆ ನಿಲ್ಲಿಸುವಂತೆ ಬರೆಯುವವರೆಗೆ ಅವು ಪ್ರಕಟಿಸುತ್ತಿದ್ದು ಹಾಗೆ ಎಷ್ಟಾವರ್ತಿ ಪ್ರಕಟಿಸಲ್ಪಟ್ಟಿದ್ದಾವೋ ಅಷ್ಟಕ್ಕೆ ತಕ್ಕಂತೆ ಪಾವತಿ ಮಾಡಬೇಕಾದದ್ದು. ಪ್ರಕಟನೆಯು ಕಳುಹಿಸಲ್ಪಡತಕ್ಕದ್ದು ಪ್ರಕಟಿಸಬೇಕಾದದ್ದು ಆ ಪ್ರತಿಗಳ ಆ ಘಂಟೆಯೊಳಗಾಗಿ ಕಳುಹಿಸಬೇಕು. ಪ್ರಕಟನೆಯುಳ್ಳ ಈ ಪತ್ರಿಕೆಗೆ ಕಳುಹಿಸಲ್ಪಡತಕ್ಕ ಕಾಗದಗಳಲ್ಲಿ ತಿಳಿಸಲ್ಪಡುವ ಅಭಿಪ್ರಾಯಗಳಿಗೆ ನಾವು ಜವಾಬ್ದಾರರಾಗಲಾರೆವು. ಕ್ರಮವಾಗಿ ರವಾನಿಸದ ಕಾಗದಗಳು ಯಾವಕಾರಣದಿಂದಲೂ ಪ್ರಕಟಿಸಲಾರೆವು. ನಿರಾಕರಿಸಲ್ಪಟ್ಟ ಕಾಗದಗಳು ಮರಳಿಸಲ್ಪಡುವುದಿಲ್ಲ.

"IT RECOMENDS ITSELF"

ALL WHO SUFFER FIND SURE RELIEF.

LITTLE'S

ORIENTAL BALM

THE MOST EFFECTUAL MODERN REMEDY FOR PAIN.

ವಿಕ್ಟರ್ ಯೂನಿವರ್ಸಿಂದ ತಯಾರ್ಮಾಡಲ್ಪಟ್ಟ "ಓರಿಯಂಟಲ್ ಬಾಮ್" ಎಂಬ ಪೂರ್ವದೇಶ ಸಂಬಂಧವಾದ ಅಮೂಲ್ಯ ತೈಲವು ಸ್ವಶಕ್ತಿ ಪ್ರದರ್ಶಕವಾದದ್ದು, ಮತ್ತು ಸಫಲವಾದ ನವೀನ ಪ್ರತಿಕ್ರಿಯಾರೂಪವಾದ ಔಷಧವು. ಇದರಿಂದ ಸಕಲ ವಾಯುರೋಗಗಳೂ, ವಾತಸಂಬಂಧಗಳಾದ ಸಂಧಿಬಂಧಗಳೂ ನಿವೃತ್ತಿಯಾಗುವವು. ಮುಖ್ಯವಾಗಿ ಚಿರಕಾಲಿಕವಾದ ವಾತರೋಗಗಳು, ಕೀಲು, ಸಂಧ್ಯನ್ನಲ್ಲಿ ಉರಿ, ನರದೌರ್ಬಲ್ಯ, ಕೀಲುವಾಯು, ಕಟಿವಾಯು, ಉಳುಕು ನೋವು, ತಲೆನೋವು, ತಿಮಿರುವಾಯು ಮುಂತಾದ ರೋಗಗಳಿಗೆ ನಿಶ್ಚಯವಾದ ಚಿಕಿತ್ಸೆ ಪ್ರಯೋಜನವನ್ನುಂಟುಮಾಡತಕ್ಕದ್ದು. ಈ ತೈಲವನ್ನು ನೋವುಳ್ಳ ಸ್ಥಳಗಳಲ್ಲಿ ಲೇಪಿಸಿದ ಕೂಡಲೆ ರೋಗಾವರಣವಾಗುವಂತೆ ಬಿಸ್ಸಾಗಿ ತಿಕ್ಕಿದಲ್ಲಿ ಸಕಲ ನೋವುಗಳೂ ಮಾಯವಾಗುವವು. ನಿವೃತ್ತಿ ಮಾಡುವಂತಾ ಉತ್ತಮ ತೈಲವಾಗಿರುತ್ತದೆ. ಸಕ್ಕೆ ಶ್ವೇತವರ್ಣದಲ್ಲೇ ಅದರ ಲೇಪನವು ಮತ್ತು ಜೋಮು ಕೂಡ್ಲೆ ನಿವೃತ್ತಿಯಾಗುವದು. ಸಂಧಿಗಳ ಸೆಳೆತಕ್ಕೂ ಉರಿ ಅಥವಾ ವ್ರಣಗಳಿಗೆ ಈ ತೈಲವು ಅದ್ಭುತವಾದ ಮತ್ತು ಶೀಘ್ರವಾದ ಸಂಪೂರ್ಣ ಗುಣವನ್ನುಂಟುಮಾಡುವದು. ಅದ್ಭುತವಾದ ಈ ಔಷಧವನ್ನು ಉಪಯೋಗಿಸಿದಲ್ಲಿ ಅದರ ಪ್ರಯೋಜನವು ಸ್ಪಷ್ಟವಾಗಿ ವ್ಯಕ್ತವಾಗುವದು. ಈ ತೈಲವು ಶೀತಗಾಳಿ ಮುಂತಾದವುಗಳಿಗೆ ಸಂಚರಿಸುವಂತಾ ಪ್ರಯಾಣಿಕರು, ಬೇಟೆಯಾಡುವವರು, ದೇಶಾಟನ ಮಾಡುವವರು, ಮುಂತಾದವರಿಗೆಲ್ಲ ಅನುಕೂಲವಾದದ್ದು.

ಪರಿಶೀಲಕರ ಅಭಿಪ್ರಾಯವು.

ಐರ್ಲ್ಯಾಂಡ್ ದೇಶದ ಫಾರ್ಮಸ್ಯೂಟಿಕಲ್ ಸೊಸೈಟಿಯ ಔಷಧಾಲಯ ಪ್ರೊಫೆಸರರಾಗಿಯೂ, ಡಬ್ಲಿನ್ ದೇಶದ ಕೆಮಿಕಲ್ ಸೊಸೈಟಿ ಯಿಂದ ಮೈಕ್ರಾಸ್ಕೋಪಿಕ್ ಸಮಾಜದ ಮೆಂಬರರಾಗಿಯೂ, "ಮಿನರಲ್ ವಾಟರ್ಸ್ ಆಫ್ ಯೂರೋಪ್" ಎಂಬ ಗ್ರಂಥಕರ್ತರಾಗಿಯೂ, ರಸಾಯನ ಶಾಸ್ತ್ರ ವಿಷಯದಲ್ಲಿ ಅನೇಕ ಲೇಖನಗಳ ಕರ್ತರಾಗಿಯೂ, ಇರುವ ಪ್ರೊಫೆಸರ್ ಟಿಚ್ ಬೋರ್ನ್ (C. R. Tichborne, L. L. D., F. C. S., M. R. I. A.,) ಎಂಬುವರು ಅಭಿಪ್ರಾಯ ಪಟ್ಟಿರುತ್ತಾರೆನಂದರೆ—ಲಿಟಲ್‌ರವರ ಓರಿಯಂಟಲ್‌ಬಾಮ್‌ನ್ನು ಚಾಗರೂಕತೆಯೊಡನೆ ಪರೀಕ್ಷಿಸಿದ್ದರಿಂದ ಇದು ಬಹುವಿಧ ಮೂಲಿಕೆಗಳಿಂದ ರಚಿಸಲ್ಪಟ್ಟಿರುವದಾದ ತೈಲವೆಂದು ವ್ಯಕ್ತವಾಗಿ ತಿಳಿದುಬಂದಿತ್ತಿದೆ, ಇದು ತೋರಿದ ಉಪಯೋಗವನ್ನುಂಟುಮಾಡುವುದಕ್ಕೆ ನಿಂತ ನಿರುಪದ್ರವಕರವಾದದ್ದಾಗಿದ್ದರೂ, ಸೀಪಾಗಿ ಬೇರೆ ರೋಗ ನಿವಾರಕ ತೈಲಕ್ಕೂ ಸಹ ಮುಖ್ಯವಾಗಿರುತ್ತದೆ. ಈ ಮಿಶ್ರೀಕರಣವು ನರಗಳನ್ನು ಸ್ತಿಮಿತಕ್ಕೆ ತರತಕ್ಕದ್ದಾಗಿರುವದರಿಂದ ನೈರು ಯಾವ ತರಹ ರೋಗಗಳಿಗೆ ಉಪಯುಕ್ತವೆಂದು ಹೇಳಲ್ಪಟ್ಟಿದೆಯೋ ಆದ್ದರಿಂದ ರೋಗಗಳಲ್ಲಿ ಅದರ ಪ್ರಯೋಜನವು ಸ್ಪಷ್ಟವಾಗುವದು. ಈ ತೈಲವು ಸಂಪೂರ್ಣ ಜಾಗರೂಕತೆಯೊಡನೆ ತಯಾರ್ಮಾಡಲ್ಪಡುತ್ತದೆ.

ಇದರ ಕ್ರಯ—ಸೀಸೆ ಒಂದಕ್ಕೆ ೧ ರೂಪಾಯಿ.

ಇದು ಮಿಸ್ಟರ್ ಔಷಧ ಶಾಲೆಯಲ್ಲಿಯೂ, ಮದರಾಸ್ ಸಂಬುದಾಸ್ ಬೀದಿಯಲ್ಲಿ ೨೦ ನೇ ನಂಬರ್ ಮನೆಯೊಳಗೆ, ಎ. ಸಿ. ಬೆರ್ರಿಮನ್ ಯವರಲ್ಲಿಯೂ, ಈ ಪಟ್ಟಣದಲ್ಲಿರುವ ಅವರ ಏಜೆಂಟರಾದ ಜೆ. ವೆಸ್ಟ್ ಯವರ ಕಂಪನಿಯಲ್ಲಿಯೂ, ಮಿ. ಕ್ಯಾಪ್ಟನ್ ಅಂಡ್ ಕಂಪೆನಿಯವರಲ್ಲಿಯೂ, ರಿಗ್ಸ್ ನವರ ಕಂಪೆನಿಯಲ್ಲಿಯೂ ದೊರೆಯುವದು.

AGENTS.— Messrs, J. West, Chemist, &c., Bangalore.
Captain & Co. Chemists, Bangalore.
Riggs & Co., Chemists, Bangalore; and of
Mahomed Yousoff and Sons, The Cash Bazarr, Bangalore
A. C. Berryman & Co.,
20 Sambodoss Street Madras.

NOTICE.

VAIDYASARA SANGRAHA

A TREATISE ON THE PRINCIPLES OF

HINDU MEDICINE.

Price including Postage Rs. 5 6-0

ವೈದ್ಯಸಾರ ಸಂಗ್ರಹ.

ಈಗ್ರಂಥಾಪೇಕ್ಷೆಯುಳ್ಳವರು ಮೊಬಲಗಿನೊಡನೆ ಕೆಳಗೆ ರುಜುಮಾಡಿರತಕ್ಕವರ ಹೆಸರಿಗೆ ಬರೆದುಕೊಂಡರೆ ಪುಸ್ತಕ ಕೊಡಲ್ಪಡುವ ಕಳುಹಿಸಲ್ಪಡುವದು. ಮೊಬಲಗು ಇಲ್ಲದ ವರಖಾಸ್ತುಗಳಿಗೆ ಸುತರಾಂ ನಿಗೆಕೊಡಲ್ಪಡಲಾರದು.

ಇದರಕ್ರಯ ... ...ರೂ॥ ೫—೦—೦

ಪ್ಯಾಕಿಂಗ್ ಮತ್ತು ಅಂಚೆಹಾಸಲ್, ೦—೬—೦

ಟಿ. ವಿ. ವೆಂಕಟಾಚಾರ್,

ಆಸ್ಪತ್ರಿರೋಡ್, ಬೆಂಗಳೂರು.

ನೋಟೀಸ್.

ಇದರಿಂದ ಸಮಸ್ತ ಜನರಿಗೂ ತಿಳಿಯಪಡಿಸುವದೇನಂದರೆ,—

ಮ್ಯುನಿಸಿಪಲ್ ಬೈಲಾದ ೧೧ನೇ ಸೆಕ್ಷನಿನ ಪ್ರಕಾರದಿಂದ ೧೮೮೮ನೇ ಇಸವಿ ಫೆಬ್ರುವರಿ ೧೦ನೇ ತಾರೀಖಿನಲ್ಲಿ ಕೊಡಲ್ಪಟ್ಟ ೧೩೮೯ನೇ ನಂಬರ್ ಮ್ಯುನಿಸಿಪಲ್ ನೋಟಿಸ್ಸಿಗೆ ಪ್ರತಿಗಳು ನಿಗೆಕೊಡಬೇಕು. ಬೆಳತಿಂಗಳಲ್ಲಿ ಇ ಲ್ಲದೆಹೋದರೆ, ಸೂರ್ಯಾಸ್ತಮಯವಾದಮೇಲೆ ಲ್ಯಾಂಪು ಇಲ್ಲದೆ ಗಾಡಿಗಳಲ್ಲಿ ಹೋಗುವಂತಾವರು ತಪ್ಪಿತಕ್ಕೆ ಗುರಿಯಾಗುವರು.

ಡಿಸ್ಟ್ರಿಕ್ಟ್ ಸೂಪರಿಂಟೆಂಡೆಂಟ್ ಆಫಿಸ್, ಸಿವಿಲ್ ವ ಮಿಲಿಟರಿ ಸ್ಟೇಷನ್, ಬೆಂಗಳೂರು, ೨೫ನೇ ಫೆಬ್ರವರಿ ೧೮೮೮

F. Fawcett,
Offg. Distt. Supdt.
of Police
C. & M. Station

ವೆಬ್ ಎಂಬವರ ಮರಿಯಾನೆಟಸ್ ಎಂಬ ಆಟಗಳು.

ಈದಿನ ಮೊದಲು ಈ ವಾರದಲ್ಲಿ ಪ್ರತಿದಿನರಾತ್ರಿಯಲ್ಲೂ ಇಂಫೆಂಟ್ರಿ ಬೀದಿಯಲ್ಲಿನ ಹಾಲ್ ಶಾಲೆಯಲ್ಲಿ ಆಡಲ್ಪಡುವವು.

ಟರ್ಕಿಸ್ತಾನ್ ದೇಶದ ವಿನೋದಕರವಾದ ಗಾರಡಿ ಆಟ

ಮೂರು ತಲೆಯುಳ್ಳವನೊಬ್ಬನು ಮಾಡುವ ಆಶ್ಚರ್ಯಕರವಾದ ವಿನೋದಗಳು.

ಒಬ್ಬ ಹಾಸ್ಯಗಾರನು ಕಾಲ್ಗಳಿಗೆ ಮರಕಾಲುಗಳನ್ನು ಕಟ್ಟಿಕೊಂಡು ಕುಣಿದಾಡುವಿಕೆ.

ಮನುಷ್ಯ ದೇಹದಲ್ಲಿನ ಎಲುಬುಗಳೂ ಕೂಡ ಬೇರೆ ಬೇರೆಯಾಗಿ ಮನುಷ್ಯರಂತೆ ರೂಪವಂ ಪಡೆಯುವಿಕೆ.

ಟರ್ಕೀ ದೇಶದ ದುಸ್ತುಧಾರಿಗಳಿಂದ ಆಶ್ಚರ್ಯಕರವಾದ ನಾನಾವಿಧ ಆಟಗಳು.

ಗಡೆಯಮೇಲೆ ಆಶ್ಚರ್ಯಕರವಾದ ಆಟ.

ಚೀನಾ ದೇಶದವರಂತೆ ಘಂಟೆ ಹೊಡೆಯುವಿಕೆ.

ಆಫ್ರಿಕಾ ದೇಶದ ನೀಗ್ರೋ ಜನಗಳಂತೆ ಆರುಮಂದಿ ಗುಂಪಾಗಿ ಬಂದು ಕುಣಿದಾಡುವಿಕೆ.

ಒಬ್ಬ ಹುಡುಗನು ತನಗೆ ರೋಟಿ ಹಾಕುತ್ತದೆ ಬೇಕೆಂದು ತನ್ನ ತಂದೆಯಂ ಕೇಳಲು ಅತನು ಒಂದು ಕೋಟಿಗೆ ಹೋಗಿ ಹಾಸ್ಯ ಕೆತ್ತನು. ಆ ಕೋಟದ ಪಡುಪಣದ ಯಜಮಾನಿಯು ವ್ಯಾಘ್ರರೂಪವಂ ತಾಳ್ದು ಹುಡುಗನ ತಲೆ ಕತ್ತರಿಸಲು ಅತನ ತುಂಡುಗಳನ್ನು ತನಗೆ ಮದುವೆ ಮಾಡಿಕೊಡಬೇಕೆಂದು ಕೇಳಿದ್ದಕ್ಕೆ ಆತನ ಮಗಳು ಒಪ್ಪಿಕೊಳ್ಳದ್ದರಿಂದ ಕರುಣಾಯ ಆಯುಕ್ತಿಯು ತನ್ನ ನಿಜರೂಪವಂ ಪಡೆಯುವದು.

ನಾನಾವಿಧ ಬಣ್ಣಗಳುಳ್ಳ ನೋಟಗಳು—ಇದರಲ್ಲಿ ಬೆಳಗಾದಂತೆಯೂ, ಸಾಯಂಕಾಲದಂತೆಯೂ ವಿಧವಾಗಿ ಕಾಣುವದು. ಇದರ ನಾನಾವಿಧ ಬದಲಾವಣೆಗಳೊಡನೆ ನೋಡುವದಕ್ಕೆ ಆಶ್ಚರ್ಯಕರವಾಗಿರುವದು.

ಕುಟುಂಬಕ್ಕೆ ಅಲಂಕಾರವಾಗಿರುವ ಒಬ್ಬ ಸುಂದರಿಯು ತಲೆಗೆ ಹೂಮುಕುಟವನ್ನಿಟ್ಟುಕೊಂಡು ಬಂದು ಸಮಯೋಚಿತಗಳಾದ ಹಾಡುಗಳು ಮತ್ತು ವಾದ್ಯಗಳೊಡನೆ ಸೇರ್ಪಡಿಸಿ ನೋಡತಕ್ಕವರಿಗೆ ಆನಂದವನ್ನುಂಟುಮಾಡುವಳು.

ಮಕ್ಕಳಿಗೆ ಗ್ಯಾಲರಿಯಿನಾ ಇತರರಿಗೆಲ್ಲ ಈ ಪ್ರಕಾರ ಒಳ್ಳೆ ದಿನಗಳು ಕೊಡಲ್ಪಡುವದು. ಆಟದ ಚಪ್ಪರವು ರಾತ್ರಿ ೮½ ಘಂಟೆಗೆ ತೆರೆಯಲ್ಪಡುವದು.

೯ ಘಂಟೆಗೆ ಆಟಕ್ಕೆ ಪ್ರಾರಂಭವಾಗುವದು.

ಟಿಕೆಟ್ಟುಗಳದರಗಳು.

೧ನೇ ತರಗತಿ	...	೨—೦—೦
೨ನೇ ,,	...	೧—೦—೦
೩ನೇ ತರಗತಿ	...	೦—೮—೦
೪ನೇ ,,	...	೦—೪—೦

ಸ್ಕೂಲ್ ಹುಡುಗರಿಗಾಗಿಯೂ, ಕುಟುಂಬಗಳಿಗಾಗಿಯೂ, ಬುಧ ಮತ್ತು ಶನಿವಾರ ಮಧ್ಯಾಹ್ನ ೩½ ಘಂಟೆಗೆ ಆಡಲ್ಪಡುವದು. ಮಕ್ಕಳಿಗೆ ಎಲ್ಲ ತರಗತಿಯಲ್ಲೂ ಅರ್ಧಕ್ರಯಕ್ಕೆ ಟಿಕೆಟ್ಟುಗಳು ಕೊಡಲ್ಪಡುವವು.

H. ECCLES,
Manager.

Bangalore City Municipality.

ಸನ್ ೧೮೮೮ನೇ ಇಸವಿ ಫೆಬ್ರುವರಿ ೨೯ನೇ ತಾರೀಖ್ ಬುಧವಾರದ ಬೆಳಿಗ್ಗೆ ೭ ಘಂಟೆಗೆ ಸಿಟಿ ಮ್ಯೂನಿಸಿಪಲ್ ಕಮಿಷನರುಗಳು ತಮ್ಮ ಆಫೀಸಿನಲ್ಲಿ ಸಭೆ ಸೇರುವಾಗ ಅವರ ಆಲೋಚನೆಗೆ ತರಲ್ಪಡುವ ವಿಷಯಗಳು.

೧. ಸನ್ ೧೮೮೮ನೇ ಇಸವಿ ಜನವರಿ ಮಾಹೆ ಬಾಬತು ನಗದು ಜಮಾಖರ್ಚು ಲೆಕ್ಕ ಮತ್ತು ಮಾರಣೆಲೆಕ್ಕಗಳು.

೨. ಸನ್ ೧೮೮೮-೮೯ನೇ ಸರ್ಕಾರಿಸಾಲ್ ಜಮಾಖರ್ಚು ಬಜೆಟ್ಟಿನ ಅಂದಾಜುಪಟ್ಟಿ.

ತಾ|| ೨೪ನೇ ಫೆಬ್ರುವರಿ ೧೮೮೮.

A. SRINIVASACHARLU, B. A.,
Vice-President,
City Municipal Commission

ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA.

MONDAY, FEBRUARY 27 1888.
೧೮೮೮ನೇ ಫೆಬ್ರುವರಿ ೨೭ನೇ ತಾ|| ಸೋಮವಾರ.

INTRODUCTION OF NEW PENSION RULES.

ಈ ಮೈಸೂರು ದೇಶದಲ್ಲಿ ನವಾಬ್ ಮಹಾರಾಜರವರು ದೌಲತ್ ಮಾಡುತ ಬಂದ ಕಾಲದೊಳು ಎಷ್ಟು ದೊಡ್ಡ ಅಧಿಕಾರಿಗೇ ಯಾಗಲಿ, ಪೆನ್ಶನ್ ಕೊಡುವ ಪದ್ಧತಿ ಇರಲಿಲ್ಲವು. ಈ ರಾಜ್ಯವು ಬ್ರಿಟಿಷರವರ ಪಾಲನೆಗೆ ಒಳಗಾದಮೇಲೆ ೧೮೩೧ನೇ ಇಸವಿ ವರಿವಿಗೂ ಹಿಂದಿನ ಪದ್ಧತಿಯೇ ನೆಲಗೊಂಡಿತ್ತು. ಬಳಿಕ ಮಹಾರಾಜಶ್ರೀ ಗುಂಡೋಪಂತರು ಕೆಲಸವಂ ಬಿಟ್ಟ ಕಾಲದಲ್ಲಿ ದೊಡ್ಡ ಅಧಿಕಾರಿಗಳಿಗೆ ಪೆನ್ಶನ್ ಕೊಡುವ ವಾಡಿಕೆ ಈ ದೇಶದಲ್ಲಿ ಯೇರ್ಪಾಡಾಗಿ, ಸರ್ ಮಾರ್ಕ್ ಕಬ್ಬನ್ ಸಾಹೇಬರವರ ಆಡಳಿತದ ಆಖೈರವರಿವಿಗೆ ಅಮಲ್ದಾರೀ ಮೊದಲಾದ ಮೇಲ್ಪಟ್ಟ ದರ್ಜೆಯವರಿಗೆ ಪೆನ್ಶನ್ ಕೊಡುತಬಂದರು. ಮಿಸ್ಟರ್ ಬೌರಿಂಗ್ ಸಾಹೇಬರವರು ಇಲ್ಲಿನ ಚೀಫ್ ಕಮಿಷನರಾಗಿ ಬಂದಮೇಲೆ, ಹರ್ ಮ್ಯಾಜೆಸ್ಟೀ ದೇಶದಲ್ಲಿ ಜಾರಿಯೊಳಿರುವ ವಿಶಿಷ್ಟ ಕಾನೂನುಗಳೂ ಈ ದೇಶದಲ್ಲಿ ಜಾರಿಗೆ ತರಲ್ಪಟ್ಟಂತೆ ಪೆನ್ಶನ್ ರೂಲ್ಸಗಳೂ ಅಮಲಿನಲ್ಲಿ ಬಂದು ಸಾಮಾನ್ಯವಾಗಿ ಎಲ್ಲರಿಗೂ ಅವರವರ ನೌಕರಿಯ ಕಾಲ ಪರಿಮಾಣವನ್ನನುಸರಿಸಿ ಪೆನ್ಶನ್ ಕೊಡುವದಕ್ಕೆ ಪ್ರಾರಂಭವಾಯಿತು. ಈಚೆಗೆ ಶ್ರೀಮನ್ಮಹಾರಾಜರವರಿಗೆ ದೌಲತ್‌ಒಪ್ಪಿಸುವ ಕಾಲದಲ್ಲಿ ಬಹಳವಾಗಿ ಲವಾಜಮೆ ಕಡಿಮ್ಮೆ ಮಾಡಲ್ಪಟ್ಟದರಿಂದ ಆಗ್ಯೆ ರೆವಿನ್ಯೂ ಸೆಕ್ರೆಟರಿಯಾಗಿದ್ದ ಮಾ|| ರಂಗಾಚಾರ್ಯರವರು, ಮುಂದೆ ಧಾರಾಳವಾದ ಪೆನ್ಶನ್‌ಗಳು ಕೊಡಲ್ಪಡಲಾರದಾಗಿ ಈಗಲೇ ಜಾಗ್ರತೆಪಟ್ಟು ಪೆನ್ಶನ್‌ಮೇಲೆ ನಿವೃತ್ತರಾಗುವಂತವರು ಪುಣ್ಯವಂತರೆಂದು ಬಹಿರಂಗವಾಗಿ ಎಲ್ಲರಿಗೂ ಹೇಳುತಬಂದರು. ಪರಂತು ಅವರು ಹೇಳಿದ ಮಾತು ಸುಳ್ಳಾದಾಗ್ಯೂ ಆ ಕಾಲದಲ್ಲಿ ಅಂತಾ ಯೇರ್ಪಾಡು ಮಾಡಬೇಕೆಂಬ ಯೋಚನೆ ಅವರ ಹೃದಯದಲ್ಲಿತ್ತೆಂದು ಧಾರಾಳವಾಗಿ ಹೇಳಬಹುದು. ಮಾ|| ಶೇಷಾದ್ರಿ ಅಯ್ಯರವರಿಗೆ ದಿವಾನ್‌ಗಿರಿಯಾದಮೇಲೆ ಅವರು ಅಂತಾ ಯೋಚನೆಯಂ ಮಾಡಿದಂತೆ ತೋರಲಿಲ್ಲವು. ಸರ್ವಿಸ್ಸಾದ ಅನೇಕರನ್ನು ನೌಕರಿಯಲ್ಲಿಟ್ಟುಕೊಂಡು ನಡೆಸುತ ಬರುತಲಿದಾರೆ. ಆದರೆ ಈಚೆಗೆ ಪೆನ್ಶನ್‌ಮೇಲೆ ನಿವೃತ್ತಿ ಮಾಡಲ್ಪಟ್ಟ ಕೆಲವರು ಅಮಲ್ದಾರರ ವಿಷಯದಲ್ಲಿ ಬೇರೇ ಕಾರಣಗಳು ಕಾಣಬರುತಿದೆ.

ಕಳೆದ ಶನಿವಾರದ ಮೈಸೂರು ಗೆಜೆಟಿನಲ್ಲಿ ಫಾಯಿಷ್ ಮಾಡಲ್ಪಟ್ಟಿರುವ ಪೆನ್ಶನ್‌ಗಳನ್ನು ಕುರಿತ ಹೊಸ ನಿಬಂಧನೆಗಳನ್ನು ನೋಡಲಾಗಿ ಹತ್ತು ವರ್ಷಗಳ ಸರ್ವಿಸ್ ಮೊದಲು ಪೆನ್ಶನಿಗೆ ಲಾಯಖ್ ಆಗುವದಲ್ಲದೆ, ಪ್ರತಿ ವರ್ಷದ ನೌಕರಿಯೂ ವೃಥಾ ಆಗದೆ ಪೆನ್ಶನಿಗೆ ಸೇರಿ ಬರುತಿದೆ. ಲೆಕ್ಕಾಚಾರಮಾಡಿ ನೋಡಿದರೆ ೧೫ ವರ್ಷಗಳ ನೌಕರಿಗೆ ದೊರೆಯುವ ಪೂರಕೆಲ್ಲಾಂ ಮುಂಭಾಗದ ಪೆನ್ಶನು ಹೊಸ ನಿಬಂಧನೆಯ ಮೇರೆ ೨೦ ವರ್ಷಗಳ ನೌಕರಿಗೆ ಸಿಕ್ಕುತಿದೆ. ಇಪ್ಪತ್ತು ವರ್ಷಗಳಿಗೆ ಮೇಲ್ಪಟ್ಟ ಸರ್ವಿಸ್‌ಉಳ್ಳವರಿಗೆ ಮಾತ್ರ ಪೂರ್ವಾಪೇಕ್ಷೆಯಾ ಅನುಕೂಲವೆಂತಲೇ ಹೇಳಬಹುದಾಗಿದೆ. ಇದಲ್ಲದೆ, ಈಗಿನ ದಿವಾನರವರು ಸನ್ ೮೮ನೇ ಜೂಲೈ ಆಖೈರ್ ವರಿವಿಗೂ ಪೂರ್ವದ ರೂಲ್ಸ್ ಅನುಸರಿಸಿ ಪೆನ್ಶನ್ ಪಡೆಯುವ ಅಪೇಕ್ಷೆಯುಳ್ಳವರು ಬರುವ ಜೂಲೈ ಗುರ್ತೇ ತಾರೀಖಿನೊಳಗಾಗಿ ಪೆನ್ಶನ್ ಪಡೆಯಬಹುದೆಂದು ಹುಕುಂ ಕೊಟ್ಟಿರುತ್ತಾರೆ. ಈ ನಿರ್ಣಯಗಳೆಲ್ಲವು ಈಗ ನೌಕರಿಯಲ್ಲಿರತಕ್ಕವರಿಗೆಲ್ಲ ಲಾಭಕರವಾಗಿರುತಿದೆ. ಮಾ|| ರಂಗಾಚಾರ್ಯರವರ ಕಾಲದಲ್ಲಿ ಬಲವಂತವಾಗಿ ನೌಕರಿ ತಪ್ಪಿಸಲ್ಪಟ್ಟವರಿಗೆ ಮರಳಿ ನೌಕರಿ ಕೊಡಬೇಕೆಂದು ಹಿಂದೆ ಜನರಲ್ ಸೆಕ್ರೆಟರಿಯಾಗಿದ್ದ ಮಾ|| ಕನ್ನಿಂಗ್ಹಾಂ ಎಂಬುವರು ಕೊಟ್ಟ ಹುಕುಂ ಹ್ಯಾಗೆ ನಿಷ್ಪ್ರಯೋಜಕವಾಯಿತೋ, ಹೊಸದಾಗಿ ಡಿಸ್ಟ್ರಿಕ್ಟ್‌ಗಳೂ ತಾಲ್ಲೂಕುಗಳೂ ಏರ್ಪಾಡಾದವರಿಂದ ಕಂಪೆನ್ಸೇಷನ್ ಹೊಂದಿದವರು ಎಷ್ಟರಫಲವಂ ಹೊಂದಿದರೋ, ಈಗಿನ ಹೊಸ ರೂಲ್ಸಿನಿಂದಲೂ ಅಷ್ಟೇ ಫಲವನ್ನೇ ಹೊಂದುವವರಾಗಿರುತ್ತಾರೆ. ಪ್ರಪಂಚದಲ್ಲಿ ಅನ್ಯರಿಗೆ ಸಹಾಯ ಮಾಡುವದಕ್ಕೆ ಅನೇಕರು ಬಲ್ಲರು. ಪರಂತು ಈ ಕಾಲದಲ್ಲಿ ನಷ್ಟಪಟ್ಟವರನ್ನು ಉದ್ಧಾರ ಮಾಡುವದಕ್ಕೆ ಮಾತ್ರ ತಕ್ಕವರು ದೊರಕುವದು ದುರ್ಲಭ.

—:0:—

LORD DUFFERIN'S ADMINISTRATION.

ನೇಟಿವ್‌ಗಳ ಅಭಿಪ್ರಾಯಾನುಸಾರ ಲಾರ್ಡ್ ಡಫರಿನ್ ಸಾಹೇಬರವರ ಅಧಿಕಾರಕಾಲದಲ್ಲಿ ನಡೆಸಲ್ಪಟ್ಟ ಆಡಳಿತಕ್ರಮ.

(ನ್ಯಾಷನಲ್ ಗಾರ್ಡಿಯನ್)

ಲಾರ್ಡ್ ಡಫರಿನ್ ಸಾಹೇಬರವರು ತಮ್ಮ ಅಧಿಕಾರದ ಮಾಯಿದೆಯ ನಾಲ್ಕನೇ ವರ್ಷದ ಆಖೈರ್‌ನಲ್ಲಿ, ಅಂದರೆ ಈ ಸಂವತ್ಸರದ ಅಂತ್ಯದಲ್ಲಿ ತಮ್ಮ ಮಹೋನ್ನತ ಪದವಿಯಂ ಬಿಟ್ಟುಬಿಡುವದಾಗಿ ತಿಳಿಸಿದರು. ಸರಹದ್ದು ಪ್ರಾಂತದ ಕಲಹ ವ್ಯವಸ್ಥೆ ಹೊರತೆ ಈ ದೇಶದಲ್ಲಿ ಮುಖ್ಯವಾಗಿ ಅವರು ಮಾಡಬೇಕಾದ ಕಾರ್ಯಗಳೆಲ್ಲವು ಕೊನೆಮುಟ್ಟದವು, ಆದದರಿಂದ ಕೃತಜ್ಞತಾ ಶೂನ್ಯವಾದ ಈ ದೇಶವನು ಬಿಟ್ಟುಹೋಗಬೇಕೆಂದು ಅವರು ಅಪೇಕ್ಷಿಸುತ್ತಾರೆ. ಲಾರ್ಡ್ ಡಫರಿನ್ ಸಾಹೇಬರವರು ಈ ದೇಶಕ್ಕೆ ಯೇನು ಮಾಡಿದರೊ ಅದಂ ಕುರಿತು ಈಗ ವಿಚಾರ ಮಾಡುವಣ.

ಈ ಸಾಹೇಬರವರು, ಇವರ ಕೆಲಸದಲ್ಲಿ ಹಿಂದೆ ಇದ್ದ ಲಾರ್ಡ್ ರಿಪನ್ ಸಾಹೇಬರವರಿಂದ ಬಹಳವಾಗಿ ತಾರೀಫ್ ಮಾಡಲ್ಪಟ್ಟಿರು. ಅವರ ಬಾಯಿಂದ ಇಂಡ್ಯ ದೇಶದ ನೇಟಿವ್‌ಗಳು ಇವರ ಪ್ರಭುತ್ವವನ್ನಪೇಕ್ಷಿಸಿದರು. ಲಾರ್ಡ್ ಡಫರಿನ್‌ಯವರು ಅವರ ಹಿಂದೆ ಇದ್ದ ಲಾರ್ಡ್ ರಿಪನ್‌ಯವರ ಮಾರ್ಗವನ್ನನುಸರಿಸಿ ಅವರ ಕೆಲಸಕ್ಕೆ ಇವರೇ ಯೋಗ್ಯರೆಂಬ ಹೆಸರು ಪಡೆದು ಪ್ರಜೆಗಳ ಪ್ರೀತಿ ಗೌರವಗಳಿಗೆ ಸಂಪೂರ್ಣ ವಿಷಯರಾಗಿರುವರೆಂದು ನಿರೀಕ್ಷಿಸಲ್ಪಟ್ಟಿತ್ತು. ಪರಂತು ಅಂತಾ ಕೋರಿಕೆಗಳೆಲ್ಲವು ಭಂಗವನ್ನೈದಿದವು. ಲಾರ್ಡ್ ಡಫರಿನ್ ಸಾಹೇಬರವರು ಈ ದೇಶಕ್ಕೆ ಒಳ್ಳೆಯಕಾರ್ಯ ಯಾವದನ್ನೂ ಮಾಡಲಿಲ್ಲವು, ಪರಂತು ನಾನಾವಿಧ ಹಾನಿಯನ್ನುಂಟುಮಾಡಿದರು.

ಇಂಡ್ಯದೇಶದ ಪ್ರಜೆಗಳೆಲ್ಲರು ರಾಜಭಕ್ತಿ ಪೂರ್ವಕವಾಗಿಯೂ ಅತ್ಯುತ್ಸಾಹದೊಡನೆಯೂ ತಾವು ವಾಲಂಟಿಯರ್ ಸೇನೆಯಲ್ಲಿ ಸೇರುವದಕ್ಕೆ ಹುಕುಂ ಕೊಡಬೇಕೆಂದು ಪ್ರಾರ್ಥಿಸಿದರು. ಲಾರ್ಡ್ ಡಫರಿನ್‌ಯವರು ಅಂತಾ ಅವರ ಪ್ರಾರ್ಥನೆಗೆ ಕಿವಿಕೊಡಲಿಲ್ಲವು. ಆರಂಸ್ ಆಕ್ಟು, ಅಂದರೆ ಆಯುಧ ಧಾರಣ ವಿಷಯದಲ್ಲಿ ಹುಟ್ಟಿರುವ ಕಾನೂನಿನ ದೆಸೆಯಿಂದ ತಮ್ಮ ರಾಜಭಕ್ತಿ ವಿಷಯದಲ್ಲಿ ಒಂದು ಅಪಕೀರ್ತಿಗೆ ಅವಕಾಶ ವುಂಟಾಗುತಿದೆಯಾಗಿ ಅದನ್ನು ರದ್ದುಮಾಡಬೇಕೆಂಬ ಪ್ರಜೆಗಳ ಪ್ರಾರ್ಥನೆಗೆ ಸಹ ಲಾರ್ಡ್ ಡಫರಿನ್ ಸಾಹೇಬರು ಕಿವಿ ಕೊಡದೆ ಹೋದರು. ಲಾರ್ಡ್ ರಿಪನ್ ಸಾಹೇಬರವರು ಎಡ್ಯುಕೇಶನ್ ಕಮಿಷನ್, ಅಂದರೆ ವಿದ್ಯಾವಿಷಯಕವಾದ ವಿಮರ್ಶೆಯ ಬಗ್ಗೆ ಒಂದು ಕಮಿಟಿಯನ್ನೇರ್ಪಡಿಸಿದರು. ಸದರೀ ಕಮಿಟಿಯವರು ವಿಚಾರ ಮಾಡಿ ಮುಖ್ಯವಾದ ಕೆಲವು ವಿಷಯಗಳು ಮಾಡಬೇಕೆಂಬ ತಮ್ಮ ಅಭಿಪ್ರಾಯ ಪೂರ್ವಕ ವಿಸ್ತಾರವಾದ ಒಂದು ರಿಪೋರ್ಟನ್ನು ಕಳುಹಿಸಿದರು, ಪರಂತು ಅವರು ಮಾಡಿದ ಶಿಫಾರಸ್ಸುಗಳೆಲ್ಲವು ಈ ದಿನದ ವರಿವಿಗೆ ಕೇಳುವರಿಲ್ಲದೆ ಒಂದು ಮೂಲೆಯಲ್ಲಿ ಬಿದ್ದಿರುತಿವೆ. ತರುವಾಯ ಲಾರ್ಡ್ ಡಫರಿನ್ ಸಾಹೇಬರವರು, ನೇಟಿವ್‌ಗಳು ತಮಗೆ ದೊಡ್ಡ ಅಧಿಕಾರಗಳು ಕೊಡುವದಿಲ್ಲವೆಂದು ಹೇಳುವ ಫಿರ್ಯಾದಿಗಳು ಎಷ್ಟರಮಟ್ಟಿಗೆ ವಾಸ್ತವ್ಯವಾದವೆಂಬ ಅಂಶದ ವಿಮರ್ಶೆಯ ಬಗ್ಗೆ ಪಬ್ಲಿಕ್ ಸರ್ವಿಸ್ ಕಮಿಷನ್ ಯೆಂಬ ಹೆಸರಿನಿಂದ ಒಂದು ಕಮಿಟಿಯನ್ನೇರ್ಪಡಿಸಿದರು. ಸದರೀ ಕಮಿಟಿಯವರು ಆ ವಿಷಯದಲ್ಲಿ ಇನಿವರೆಗೆ ರಿಪೋರ್ಟ್ ಮಾಡಿದ್ದಾಗ್ಯೂ ಅದರಿಂದ ಸ್ವಲ್ಪವಾದರೂ ಯಾವವಿಧ ಪ್ರಯೋಜನವೂ ಉಂಟಾಗುವಂತೆ ತೋರಲಿಲ್ಲವು. ಇನ್‌ಕಂಟ್ಯಾಕ್ಸ್ ಎಂಬ ಆದಾಯದ ಮೇಲಿನ ತೆರಿಗೆಯನ್ನು ಹೊರಿಸಲ್ಪಡುವ ಕಾಲದಲ್ಲಿ, ಸರ್ಕಾರ್ ಆಡಳಿತ ಖರ್ಚುಗಳಲ್ಲಿ ಯಾವ ಭಾಗದಲ್ಲಿ ಕಡಿಮ್ಮೆ ಮಾಡುವದಕ್ಕೆ ಸಾಧ್ಯವಾಗಿ ಕಾಣುತಿದೆಯೋ ಅವುಗಳನ್ನೆಲ್ಲ ಮಾಡುವದಾಗಿ ಭರವಸೆ ಕೊಟ್ಟು ಆ ಬಗ್ಗೆ ಫೈನಾನ್ಸ್ ಕಮಿಟಿ ಯೆಂಬ ಒಂದು ಕಮಿಟಿಯನ್ನೇರ್ಪಡಿಸಿದರು. ಸದರೀ ಕಮಿಟಿಯವರು ವಿಮರ್ಶಾಪೂರ್ವಕ ತಮ್ಮ ರಿಪೋರ್ಟನ್ನು ಗವರ್ನ್‌ಮೆಂಟಿಗೆ ಕಳುಹಿಸಿ ಬಹುಕಾಲವಾದಾಗ್ಯೂ, ಕೇವಲ ಅಲ್ಪವಾದ ಕೆಲವು ಅಂಶಗಳು ವಿನಾ, ಅನಾವಶ್ಯಕಗಳಾದ ಪ್ರಬಲ ಖರ್ಚುಗಳನ್ನು ತಗ್ಗಿಸುವ ವಿಷಯದಲ್ಲಿ ಮುಖ್ಯವಾದ ಯಾವ ಪ್ರಯತ್ನವೂ ಮಾಡಲ್ಪಡಲಿಲ್ಲವು. ವಾಸ್ತವ್ಯವಾಗಿ ಲಾರ್ಡ್ ಡಫರಿನ್ ಸಾಹೇಬರವರು ಶಬ್ದತಃ ಅಪರಿಮಿತವಾಗಿ ಮಾತುಕೊಟ್ಟು ಕಾರ್ಯತಃ ಅತ್ಯಲ್ಪವಾಗಿ ಮಾಡಿದರು.

ಲಾರ್ಡ್ ಡಫರಿನ್ ಸಾಹೇಬರವರು ರಾಜ್ಯತಂತ್ರಜ್ಞರಲ್ಲಿ ಅಗ್ರ ತರಗತಿಗೆ ಸೇರಿದವರೆಂಬ ಪ್ರತೀತಿಯಂ ಪಡೆದಿರುತ್ತಾರೆ. ಪರಂತು ಇಂಡ್ಯದೇಶದಲ್ಲಿ ಅವರು ನಡೆಸಿದ ಕಾರ್ಯಗಳ ದೆಸೆಯಿಂದ ಆ ಭಾಗದಲ್ಲಿ ಸಹ ಅವರ ಶಕ್ತಿಯು ಅತಿಶಯೋಕ್ತಿಯೆಂದು ವ್ಯಕ್ತವಾಗುತಿದೆ. ಗೌರವ್ಯರಾದ ನೇಟಿವ್ ದೊಡ್ಡಮನುಷ್ಯರು ಕೆಲವರು ಸೇರಿ ಅವರ ಭೇಟಿಯಬಗ್ಯೆ ಹೋಗಿದ್ದ ಸಂದರ್ಭದಲ್ಲಿ ಲಾರ್ಡ್ ಡಫರಿನ್ ಸಾಹೇಬರವರು 'ಅವರು ಬರಮಾಡಿಕೊಳ್ಳುವಲ್ಲಿ ಮೊದಲು ಕೋಪಾವಿಷ್ಟರಾಗಿ ಕೆಲವು ಶಬ್ದಗಳನ್ನಾಡಿ ತರುವಾಯ ಅವರ ಮನಸ್ಸಿಗೆಯಂ ಜೇಡಿದಂತೆ, ಬೇರೆ ಯಾವ ರಾಜ್ಯತಂತ್ರಜ್ಞರೂ ಮಾಡಿರಲಾರರು. ತರುವಾಯ, ವಿದ್ಯಾವಂತರಾದ ನೇಟಿವ್‌ಗಳೆಲ್ಲರು ಸ್ವದೇಶದ, ಅಂದರೆ ಇಂಡ್ಯದೇಶದ ಉಡುಪುಗಳು ವಿನಾ ಬೇರೆ ಯಾವ ಉಡುಪುಗಳನ್ನೂ ಹಾಕಿಕೊಂಡು ಬರಕೂಡದೆಂದು ಪುರಸ್ಕಾರ ಮಾಡುವಣದಿಂದ ನೇಟಿವ್‌ಗಳ ವಿಷಯದಲ್ಲಿ ಅವರಿಗಿರುವ ಅಂತರವಾದ ವೈಮನಸ್ಯವಂ ವ್ಯಕ್ತಪಡಿಸಿದರು. ವಿದ್ಯಾವಂತರಾದ ನೇಟಿವ್‌ಗಳು ಯೂರೋಪಿಯನ್ ಉಡುಪುಗಳಂ ಹಾಕಿಕೊಂಡು ಅವರ ಮುಂದೆ ಹೋದರೆ ಅವರು ನೋಡಿ ಸಹಿಸಲಾರರು. ಇಂಗ್ಲಿಷ್ ವೇಷಭಾಷಾವಲಂಬಿಗಳಾದ ನೇಟಿವ್‌ಗಳ ವಿಷಯದಲ್ಲಿ ತಮಗಿರುವ ಅಪ್ರೀತಿಯನ್ನು ಹೊರಪಡಿಸದೆ ಇರುವದಕ್ಕೆ ಅವರು ಪ್ರಯತ್ನ ಸಹ ಪಡುವದಿಲ್ಲವು. ಹಿಂದಿನ ವೈಸ್‌ರಾಯ್‌ಯವರ ಕಾಲದೊಳು ಯೇರ್ಪಡಿಸಿದ ಲೋಕಲ್ ಸೆಲ್ಫ್ ಗವರ್ನ್‌ಮೆಂಟ್, ಅಂದರೆ ಸ್ವದೇಶ ಪಾಲನಾ ಪದ್ಧತಿಯ ವಿಷಯದಲ್ಲಿ ಲಾರ್ಡ್ ಡಫರಿನ್ ಸಾಹೇಬರವರು ತೋರಿಸಿದ ಔದಾಸೀನ್ಯತೆಯು, ರಾಜ್ಯಾಡಳಿತದೊಳು ಪ್ರಜೆಗಳ ಅಭಿವೃದ್ಧಿ ವಿಷಯದಲ್ಲಿ ಅವರು ಸಂಪೂರ್ಣ ಉದಾಸೀನಭಾವವುಳ್ಳವರೆಂಬದಕ್ಕೆ ಬೇರೆಯೊಂದು ನಿದರ್ಶನವಾಗಿರುತಿದೆ. ಆದದರಿಂದ ಇವರು ಕೆಲಸವಂ ಬಿಟ್ಟು ಈ ದೇಶದಿಂದ ಹೊರಟುಹೋದಮೇಲೆ ಕೃತಜ್ಞತೆಯೊಡನೆ ಅವರ ಜ್ಞಾಪಕವನ್ನಿಟ್ಟುಕೊಂಡಿರುವದಕ್ಕೆ ತಕ್ಕಷ್ಟು ಯಾವ ಉಪಕೃತಿಯನ್ನೂ ಅವರು ಮಾಡಿದವರಲ್ಲವು. ಪರಂತು ಲಾರ್ಡ್ ಡಫರಿನ್ ಸಾಹೇಬರವರು ಇಂಡ್ಯದೇಶೀಯರಿಗೆ ನಾನಾವಿಧ ಕೆಡುಕುಗಳಂ ಮಾಡಿದರು. ಹಿಂದೂಗಳಿಗೂ ಮಹಮ್ಮದೀಯರಿಗೂ ವಿದ್ವೇಷವನ್ನುಂಟುಮಾಡಿದ್ದಕ್ಕೆ ಅವರೇ ಜವಾಬ್ದಾರರಾಗಿರುತ್ತಾರೆ. ಸದರೀ ಎರಡುಬಗೆಯವರಿಗೂ ಉಂಟಾಗಿದ್ದ ಅಲ್ಪವಾದ ಮನಃಕಾಲುಷ್ಯವನ್ನು ವೃದ್ಧಿಮಾಡುವದೇ ಇವರ ಮುಖ್ಯ ಕಾರ್ಯವಾಗಿತ್ತು. ಲಾರ್ಡ್ ರಿಪನ್ ಸಾಹೇಬರವರು ತಮ್ಮ ಕೆಲಸವಂ ಬಿಟ್ಟು ಹೊರಟುಹೋಗುವ ಕಾಲದಲ್ಲಿ ಹಿಂದೂಗಳೂ ಮುಸಲ್ಮಾನರೂ ಅನ್ಯೋನ್ಯ ಭಾವದೊಡನೆ ಪರಸ್ಪರ ಹಿತಚಿಂತಕರಾಗಿರುತಲಿದ್ದರು. ಈಗಲಾದರೊ, ಸದರೀ ಎರಡುಬಗೆಯವರೂ ಬೇರೆಬೇರೆಯಾಗಿ, ಹಿಂದೆ ಇದ್ದ ಐಕಮತ್ಯಕ್ಕೆ ಬದಲು ವೈರಸ್ಯವೂ ಅಸೂಯೆಯೂ ತಲೆದೋರಿಯಿದೆ. ಇಂತಾ ನಡತೆಯನ್ನು ಆಕ್ಷೇಪಿಸುವದಕ್ಕೆ ಅನುಗುಣವಾದ ಶಬ್ದಗಳಿರುತವೆಯೆ ?

ಪರಂತು ಲಾರ್ಡ್ ಡಫರಿನ್ ಸಾಹೇಬರಗುಟ್ಟು ಈಗ ಹೊರಗಾಯಿತು. ಅವರಲ್ಲಿ ಯಾರಿಗೂ ನಂಬಿಕೆಯಿಲ್ಲವು. ಇವರು, ಮಧ್ಯ ಏಷ್ಯಾದೇಶದಲ್ಲಿ ರಷಿಯಾದೇಶದವರ ಭಯಂಕರವಾದ ಪ್ರವೇಶವನ್ನು ಅಡ್ಡಿಪಡಿಸುವದಕ್ಕಾಗಿ ಈ ದೇಶಕ್ಕೆ ಬಂದು ಆ ಕೆಲಸವನ್ನು ಇವರು ನೆರವೇರಿಸಿದರು, ಪರಂತು ಅದರಿಂದ ಉಂಟಾಗಬಹುದಾದ ಪ್ರಯೋಜನವು ಕಾಲಾಂತರದಲ್ಲಿ ತಿಳಿಯತಕ್ಕದ್ದಾಗಿರುತಿದೆ. ನೇಟಿವ್‌ಗಳ ಪ್ರಯೋಜನಾಭಿವೃದ್ಧಿಗಾಗಿ ಇವರು ಇಲ್ಲಿಗೆ ಬರಲಿಲ್ಲವು. ಇವರು ಅಂತಾ ಕಾರ್ಯಗಳ್ಯಾವದನ್ನೂ ಮಾಡಲಿಲ್ಲವೆಂದು ಹೇಳುವದು ಅನ್ಯಾಯವಾಗಿರಲಾರದು. ಇವರ ಕೆಲಸ ಪೂರ್ತಿಯಾಯಿತು, ಈಗ ಹೊರಟುಹೋಗಲಪೇಕ್ಷಿಸುತ್ತಾರೆ. ಇವರ ವಾಗ್ದಾನಗಳು ನೆರವೇರಬೇಕೆಂಬ ಉದ್ದೇಶದೊಡನೆ ಮಾಡಲ್ಪಟ್ಟವಲ್ಲವಾದದರಿಂದ ಅವು ನೆರವೇರಿಸಲ್ಪಡಲಿಲ್ಲವು. ಮುಂದೆಯೂ ಆಗಲಾರವು. ಪ್ರಜೆಗಳಿಗೆ ಇವರ ವಿಷಯದಲ್ಲಿ ನಂಬಿಕೆ ತಪ್ಪಿಹೋಯಿತೆಂಬದಕ್ಕೆ ಬೇರೇ ನಿದರ್ಶನಬೇಕಾಗಿರುವ ಪಕ್ಷಕ್ಕೆ, ಅನಿವಾರ್ಯವಾದ ಮತ್ತು ಬಲವತ್ತರವಾದ ಸ್ವಂತ ಕೆಲಸದ ನಿಮಿತ್ತ ತಾವು ತಮ್ಮ ಕೆಲಸವಂ ಬಿಟ್ಟುಹೋಗಬೇಕಾಗಿದೆ ಯೆಂದು ಮಂತ್ರಾಲೋಚಕ ಸಭೆಯಲ್ಲಿ ಹೇಳಿದಮಾತುಗಳನ್ನು ಎಲ್ಲಿಯೂ ಯಾರೂ ನಂಬದೆ ಹೋದದ್ದೇ ಸಾಕಾದದ್ದಾಗಿರುತಿದೆ.

ಇನ್ನು ಒಂದೇ ಸಂವತ್ಸರ ಉಳಿದಿದೆ, ಅದರೊಳಗಾಗಿ ಇವರು ಅದ್ಭುತಕಾರ್ಯಗಳಂ ಮಾಡುವರೆಂದು ಇಲ್ಲಿನವರಲ್ಲಿ ಕೆಲವರು ನಿರೀಕ್ಷಿಸುತ್ತಾರೆ, ಅಂತಾ ಅಮಿತವಾದ ಪ್ರತ್ಯಾಶೆಗಳಲ್ಲಿ ನಾವು ಭಾಗಭಾಕ್ಕುಗಳಾಗುವದಿಲ್ಲವು, ಎಂಬದು ಪಗ್ಯರೆ.

Occasional Notes.
ನೈಮಿತ್ತಿಕ ವಿಷಯನ್ಯಾಸ.

Ayub Khan.—ಅಯೂಬ್‌ಖಾನನೆಂಬ ಪ್ರಸಿದ್ಧ ಕಲಹಿಯು ಬರುವ ಏಪ್ರಿಲ್ ತಿಂಗಳಲ್ಲಿ ಇಂಡ್ಯದೇಶಕ್ಕೆ ತರಲ್ಪಟ್ಟು ಪಿಂಡಿಯೆಂಬ ಡಿಸ್ಟ್ರಿಕ್ಟಿನಲ್ಲಿವಾಸವಾಗಿರುವಂತೆ ನಿಯಮಿಸಲ್ಪಡುವನು.

An appointment gazetted.—ವಿಜಯನಗರದ ಮಹಾರಾಜರವರು, ಇಂಡ್ಯರಾಜ್ಯದ ವೈಸ್‌ರಾಯ್‌ಯವರ ಮಂತ್ರಾಲೋಚಕ ಸಮಾಜದಲ್ಲಿ ಒಬ್ಬ ಮೆಂಬರಾಗಿ ನಿಯಮಿಸಲ್ಪಟ್ಟರು ಎಂತೆ ಇಂಡ್ಯಗೆಜೆಟಿನಲ್ಲಿ ಪ್ರಕಟಿಸಲ್ಪಟ್ಟಿರುತಿದೆ.

H. H. the Gaekwar's return.—ಬರೋಡೆ ಗಾಯಕವಾಡ ಮಹಾರಾಜರವರು, ತಮ್ಮ ಭಾರ್ಯೆಯವರೊಡನೆಯೂ ಇತರ ಪರಿಜನ

ಶಿಟಾತಕತೂನಯಾ ಕಳೆದ ಸೋಮವಾರದದಿನ ಇಂಗ್ಲಾಂಡಿನಿಂದ ಬಂದು ಮುಂಬೈದಡದಲ್ಲಿ ಹಡಗು ಇಳಿದರು.

Giving berth to triplet.— ಇದೇ ಆದಿತ್ಯವಾರದದಿನ ಮದರಾಸ್ ಮುತ್ಯಾ ಮುದಲಿ ಬೀದಿಯಲ್ಲಿ ಒಬ್ಬ ಬ್ರಾಹ್ಮಣ ಹೆಂಗಸು ಮೂರು ಹೆಣ್ಣು ಮಕ್ಕಳನ್ನು ಹೆತ್ತು ಮೂರು ಮಕ್ಕಳೂ ತಾಯಿಯೂ ಕ್ಷೇಮವಾಗಿದಾರೆಂದು ಮದರಾಸ್ ಪತ್ರಿಕೆಯೊಂದರಮೂಲಕ ತಿಳಿಯಲಾಯಿತು.

Kerosine oil. ಈಚೆಗೆ ಕೆರೋಸಿನ್ ಎಣ್ಣೆಯು ಕಲ್ಕತ್ತೆಗೆ ಬಹಳವಾಗಿ ಬರುತಗುಲುವಂತೆ ಕಾಣುತಿದೆ, ಹ್ಯಾಗೆಂದರೆ, ಮೊದಲು ಬೇರೆ ಹಡಗುಗಳಲ್ಲಿ ೪೦,೦೦೦ ಪೆಟ್ಟಿಗೆಗಳು ಬಂದು ಅವನ್ನು ಇಳಿಸಿ ಯಾವಾಗಲು ಇಡುವ ಸ್ಥಳದಲ್ಲಿ ಇಟ್ಟಮೇಲೆ ಮರಳಿ ಬೇರೆ ಒಂದು ಹಡಗು ಬಂದು ಅದರಲ್ಲಿದ್ದವನ್ನು ಇಳಿಸಿ ಇಡುವದಕ್ಕೆ ಸ್ಥಳವಿಲ್ಲದೆ ಹಡಗಿನಲ್ಲೇ ಇನ್ನು ಇವೆಯೆಂದು ಒಂದು ಪತ್ರಿಕೆಯೊಂದು ತಿಳಿಸುತಿದೆ.

Loyalty of Natives.—ಸರದಾರ್ ಮುದೆಲಿಯಾರ್ ಬಸ್ತಿ ಯಾಬಗ್ಗೆ ನೇಟಿವ್ ಸಂಸ್ಥಾನಾಧಿಪತಿಗಳೆಲ್ಲರು ಅವರವರ ಯೋಗ್ಯತಾನುಸಾರ ನಾನಾ ರೂಪವಾಗಿ ತಾವು ಸಹಾಯ ಮಾಡುವದಾಗಿ ಇಂಡ್ಯಾ ಗವರ್ನಮೆಂಟಿಗೆ ತಿಳಿಸಿಯೂ ತಿಳಿಸುತಲೂ ಇರುತ್ತಾರೆಮುಸ್ಟ ಜಲಂದರ್‌ನಲ್ಲಿರುವ ಭಗತಿಸಿಂಗರಾವ್ ಯೆಂಬಾತನು ಮಹಾರಾಜ್ಞೀಯವರಲ್ಲಿ ತನಗಿರುವ ರಾಜಭಕ್ತಿ ಪ್ರದರ್ಶನವಾಗಿ ಮೇಲೆ ತಿಳಿಸಿದ ಪ್ರಜಾ ಕಾರ್ಯಕ್ಕೆ ೫ ರೂಪಾಯಿಗಳು ಕೊಡುವದಾಗಿ ಇಂಡ್ಯಾ ಗವರ್ನಮೆಂಟಿಗೆ ತಿಳಿಸಿದನೆಂದು ಮರಾಟಾ ಪತ್ರಿಕೆ ಹೇಳುತಿದೆ.

The Bengal-Nagpore Railway.—ಬಂಗಾಳಿಯಿಂದ ನಾಗಪ್ಪೂರ್‌ವರಿವಿಗೆ ರೈಲುರಸ್ತೆ ಹಾಕುವದಕ್ಕಾಗಿ ಏರ್ಪಟ್ಟಿರುವ ಕಂಪೆನಿಯ ಡೈರೆಕ್ಟರ್‌ಗಳು, ಅವರ ಖರ್ಚಿನಬಗ್ಗೆ ಬೇಕಾದ ಬಂಡವಾಳಕ್ಕಾಗಿ, ನಾಲ್ಕುಯಾನಾ ಶೇಕಡ ೩¼ ರೂಪಾಯಿಗಳ ಬಡ್ಡಿಯಲ್ಲಿ, ಅಸಲಿಗೂ ಬಡ್ಡಿಗೂ ಮುಂತ್ರಾಲೋಚಕ ಸಮಾಜದೊಳಗಣ ಸೆಕ್ರೆಟರಿ ಸೆಕ್ರೆಟರಿಯವರ ಜವಾಬ್ದಾರಿಯ ಮೇಲೆ, ಒಂದುಕೋಟಿರೂಪಾಯಿಗಳಿಗೆ ಡಿಬೆಂಚರಿಯೆಂಬ ಪತ್ರಗಳು ಕೊಡುತ್ತಾರಾಗಿ ಅದರ ಖರೀದಿಸ್ತಪ್ರವರು ದರಖಾಸ್ತುಗಳು ಕೊಡಬಹುದೆಂದು ಪ್ರಕಟಿಸಿರುತ್ತಾರೆ.

Export of rice.—ಸನ್ ೧೮೮೭ನೇ ಇಸವಿಯಲ್ಲಿ ಕಲ್ಕತ್ತೆಯಿಂದ ಯುನೈಟಡ ಕಿಂಗಡಂ ಯೆಂಬ ಸಂಯುಕ್ತರಾಜ್ಯಕ್ಕೆ ೬೬,೦೦೦ ಟನ್ನುಗಳ ಅಕ್ಕಿಮಾತ್ರವೇ ರಫ್ತಾಗಿರುತಿದೆ. ಅದಕ್ಕೆ ಹಿಂದೆ ಹನ್ನೆರಡುತಿಂಗಳ ಕಾಲದಲ್ಲಿ ೫೯,೦೦೦ ಟನ್ನುಗಳು ರಫ್ತಾಯಿತು ಸನ್ ೧೮೮೫ನೇ ಇಸವಿಯಲ್ಲಿ ೫೦,೦೦೦ ಟನ್ನುಗಳು ರಫ್ತಾಯಿತು ಹೀಗೆ ವಿಲಾಯತಿಗೆ ಅಕ್ಕಿಯರಫ್ತು ಕಡಮೆಯಾಗಿ ಹೋಗುವದಕ್ಕೆ, ಕಳೆದಕಾಲದಲ್ಲಿ ಉತ್ತರದೇಶಗಳ ಗಿರಾಕಿ ಜಾಸ್ತಿಯಾದದ್ದೂ ಇಂಗ್ಲಾಂಡಿಗೆ ಕಳುಹಿಸುವದರಲ್ಲಿ ದುಬಾರಿಖರ್ಚು ಕಾರಣವೆಂದು ಕಾಣುತಿದೆ

A question of Jain law.—ಕಲ್ಕತ್ತೆಯ ಜೈನ್ಯಜಾತಿ ವಿಕಂತು ಒಬ್ಬಾಕೆಯು, ಮೃತಪಟ್ಟ ತನ್ನಗಂಡನ ಉಯಿಲಿಮೂಲಕ ಆತನ ಜ್ಞಾತಿಗಳಿಗೆ ತನಗೆ ಇರುವ ಹಕ್ಕನ್ನು ತಪ್ಪಿಸುವದಕ್ಕೆ ಆತನಗೆ ಬಾಧ್ಯತೆ ಇರುವದಿಲ್ಲವೆಂದು ಅಲ್ಲಿನ ಹೈಕೋರ್ಟಿನಲ್ಲಿ ದಾವೇ ತಂದಿರುತ್ತಾಳೆ. ಈ ವಿಷಯದಲ್ಲಿ ಕೋರ್ಟಿನವರು ಇಂಡ್ಯಾದೇಶದ ಯೆಲ್ಲಕಡೆಯಲ್ಲೂ ಇರುವ ಜೈನ್ಯ ಪಂಡಿತರ ಮತ್ತು ಗುರುಗಳ ಅಭಿಪ್ರಾಯಗಳನ್ನರಿಯಬೇಕೆಂದು ಯೋಚಿಸಿ ಆಬಗ್ಗೆ ಪ್ರಯತ್ನಪಟ್ಟರು, ಖರುತು ಅವರಿಗೆಲ್ಲ ಕೊಡಬೇಕಾದ ಕಮಿಸಂಗಳು ೩೦,೦೦೦ ರೂಪಾಯಿಗಳವರಿವಿಗೆ ಆಗುತದೆಂದು ತಿಳಿದು ಆಪ್ರಯತ್ನವು ಕೈಬಿಟ್ಟದ್ದಾಗಿ ಕಾಣುತಿದೆ. ಈ ಮೊಕದ್ದಮೆಯು ಇನ್ನು ವ್ಯವಸ್ಥೆಗಾದುದಾಗಿ ತೋರಲಿಲ್ಲವು.

A liberal subscription.—ಮದರಾಸ್ ಅದಯಾರ್ ಯೆಂಬ ಪ್ರದೇಶದಲ್ಲಿ ಸ್ಥಾಪಿಸಲ್ಪಟ್ಟ ರುವ ಥಿಯಾಸಾಫಿಕಲ್ ಸೊಸೈಟಿಗೆ ಘನವಾದ ಪದವಿಯ ದರ್ಭಂಗಾ ಮಹಾರಾಜರವರು ಕಳೆದ ಮೂರು ವರ್ಷಗಳಿಗೆ ಸಾಲಿಯಾನಾ ೧೦೦೦ ರೂಪಾಯಿಗಳಮೇಲೆ ಚಂದಾ ಮಾಡಿದ್ದರು. ಈಚೆಗೆ ಸದರೀ ಮಹಾರಾಜರವರು ಮೇಲೆ ಹೇಳಿದಂತೆ ಸಾಲಿಯಾನಾ ಚಂದಾವಿಗೆ ಬದಲಾಗಿ, ನಗದ್ ೨೫,೦೦೦ ರೂಪಾಯಿಗಳು ಕೊಡುವದಾಗಿ ತಂತಿಮೂಲಕ್ ಕರ್ನಲ್ ಒಲ್ಕಾಟ್ ಸಾಹೆಬರಿಗೆ ತಿಳಿಸಿರುವಂತೆಯೂ, ಸದರೀ ಕರ್ನಲ್ ಯವರು ಮೇಲಿನ ಮೊತ್ತಕ್ಕೆ ಗವರ್ನಮೆಂಟ ಪತ್ರಗಳನ್ನು, ದರ್ಭಂಗಾ ಸಂಪತ್ತಿನ ಅದನ್ನು ಬೇಗ ಬಿಟ್ಟರಬೇಕೆಂದು ಹೇಳುವಂತೆಯೂ ಮದರಾಸ್ ಮೆಯಿಲ್ ಪತ್ರಿಕೆಯ ಮೂಲಕ ತಿಳಿಯಲಾಯಿತು. ಈ ಸಮಾಜಕ್ಕೆ ಈಗ ೧೩೮ ಉಪ ಸಮಾಜಗಳಿರುತಲಿವೆ.

Encouragement to local industries ಸ್ವದೇಶ ಜನಾಭಿವೃದ್ಧಿ ವಿಷಯದಲ್ಲಿ ಅಭಿಮಾನವಿಲ್ಲದವರು ಪ್ರಾಯಶಃ ಯೆಲ್ಲಿಯೂ ಇರುವದಿಲ್ಲವು. ಇಂಡಿಯಾ ಚಕ್ರವರ್ತಿನೀಯವರು ತಮ್ಮ ದೇಶದಲ್ಲಿ ತಯಾರಾಗುವ ಸಾಮಾನುಗಳನ್ನು ಬಿಟ್ಟು ಇತರದೇಶಗಳ ತಯಾರಿ ಯಾವ ಸಾಮಾನುಗಳನ್ನೇ ಆಗಲಿ ತಾವು ಉಪಯೋಗಿಸುವದಿಲ್ಲವೆಂದು ಪ್ರತಿಜ್ಞೆ ಮಾಡಿರುತ್ತಾರೆಂದು ತಿಳಿದು ಅಲ್ಲಿನ ಹುಜೂರು-ಖಜಾನಾ ಅಧಿಕಾರಿಗಳು, ಪ್ರಮುಖರು ಮೊದಲಾದವರು ಚಕ್ರವರ್ತಿನೀಯವರ ನಡತೆಯ ಮಾರ್ಗವನ್ನೇ ಅನುಸರಿಸುವದರಿಂದ ಸ್ವದೇಶದಲ್ಲಿ ವಿಸ್ತಾರವಾಗಿ ಸಾಮಾನುಗಳು ತಯಾರಾಗುವದಕ್ಕೂ ತಯಾರಾದ ಸಾಮಾನುಗಳಿಗೆ ಗಿರಾಕಿ ಯುಂಟಾಗಲಿಕ್ಕೂ ಕಾರಣವಾಯಿತು. ಇದುಕೇಳಿ ಸ್ವದೇಶಾಭಿವೃದ್ಧಿಯಬಗ್ಗೆ ಅಲ್ಲಿ ಮೇಲ್ಪಟ್ಟ ಅಗಿರುವ ಕಮಿಟಿಯವರು ಈ ಮಹೋಪಕಾರಕ್ಕಾಗಿ ಚಕ್ರವರ್ತಿನೀಯವರಿಗೆ ಬೆಳ್ಳಿಯಿಂದ ಮಾಡಲ್ಪಟ್ಟ ಒಂದು ಹೂಲಿಗೆಯನ್ನು ನವರತ್ನ ಖಚಿತವಾದ ಚಿನ್ನದ ಪೀಠದಮೇಲೆ ಬಿಗಿಸಿ ನಜರ್ ಮಾಡಿದರೆಂದು ಒಂದಾನೊಂದು ಇಂಗ್ಲಿಷ್ ಪತ್ರಿಕೆಯ ಮೂಲಕ ತಿಳಿಯಲಾಯಿತು. ಸ್ವದೇಶ ಸ್ವಜನಾಭಿಮಾನವೆಂಬವು ಮೊದಲುದೇಶವನ್ನಾಳುವವರಲ್ಲಿ ಅಂಕುರಿಸಿದ್ದರಿಂದ "ಯಥಾರಾಜಾತಥಾಪ್ರಜಾ" ಎಂಬಂತೆ ಅರಸನಂತೆ ಪ್ರಜೆಗಳಿಗೂ ಉಂಟಾಗುವದಕ್ಕೆ ಕಾರಣವಾಯಿತು. ಅಂತಾ ಅಭಿಮಾನವೆಂಬದು ಅರಸನಿಲ್ಲದ ಮೇಲೆ ಪ್ರಜೆಗಳಿಗಿದ್ದಾಗ್ಯೂ ಅದು ಕಾರ್ಯಕಾರಿಯಾಗದೆ ಹೋಗುವದು ನಮ್ಮ ಅನುಭವಕ್ಕೆ ದೂರವಾಗಿರಲಿಲ್ಲವು.

LOCAL AND PROVINCIAL NEWS.

ಒಳದೇಶ ಮತ್ತು ತಾಲ್ಲೂಕುವಾರ್ತೆ ವೃತ್ತಾಂತವು

Holiday.—ಈದಿನ ಕಾಮದಹನ ಪ್ರಯುಕ್ತವಾದ ಹಬ್ಬದ ಬಗ್ಗೆ ನಿಶ್ಚಿತ ಕಚೇರಿಗಳಿಗೂ ರಜಾ ಕೊಡಲ್ಪಟ್ಟಿರುತಿದೆ.

Extension of Furlough.—ಶಿವಮೊಗ್ಗ ಡಿಸ್ಟ್ರಿಕ್ಟ ಡೆಪ್ಯುಟಿ ಕಮಿಷನರಾದ ಮಿ|| ಮೈಕಿಪಿಜಾನ್ ಯವರು ಮೂರು ವರ್ಷ ಫರ್ಲೋ ರಜಾಮೇಲೆ ಈಗ ಸ್ವದೇಶಕ್ಕೆ ಹೋಗಿರುತ್ತಾರೆಯಷ್ಟೆ. ಸದರೀ ಯವರಿಗೆ ಜಾಸ್ತಿಯಾಗಿ ಆರುತಿಂಗಳ ರಜಾ ಮಂಜೂರಾಗಿದೆ.

House-breaking and attempt at theft ನೆಲಮಂಗಲ ತಾಲ್ಲೂಕು ಹೆಸರುಗಟ್ಟ ಗ್ರಾಮದಲ್ಲಿ ಒಬ್ಬ ರೈತನ ಮನೆಗೆ ಕನ್ನರು ಕನ್ನ ಕೊರೆದು ಒಳಗೆ ಪ್ರವೇಶ ಮಾಡುವಲ್ಲಿ ಮನೆಯವನು ಎಚ್ಚರಗೊಂಡು ಕಳ್ಳನನ್ನು ಮಚ್ಚುಕತ್ತಿಯಿಂದ ಕಡಿದು ಘಾಯ ಪಡಿಸಿದನೆಂದು ವಸ್ತೈಕಿ ಹಿಂದಿನವಾರದ ಪತ್ರಿಕೆಯ ಮೂಲಕ ತಿಳಿಸಿ ಇರುತ್ತೇವೆಯಷ್ಟೆ, ಸದರೀ ಮೊಕದ್ದಮೆಯು ಈ ತಿಂಗಳ ೨೩ನೇ ತಾರೀಖಿನಲ್ಲಿ ಇಲ್ಲಿನ ಟ್ರೌನ್ ಮ್ಯಾಜಿಸ್ಟ್ರೇಟರ ಕೋರ್ಟಿನಲ್ಲಿ ವಿಚಾರಣೆಯಾಗಿ ದಸ್ತಗಿರಿ ಮಾಡಲ್ಪಟ್ಟ ಇಬ್ಬರು ಅಪರಾಧಿಗಳಿಗೂ ಭೀಇಸು ಒಂದುವರ್ಷದ ಕಠಿಣ ಸಜಾ ವಿಧಿಸಲ್ಪಟ್ಟರು.

The Holy feast.—ಈ ಸಂವತ್ಸರದ ಕಾರ್ಯ ಹಬ್ಬವು ಯೆಂದಿನಂತೆ ಡಮಟದ್ವನಿ ವಾದ್ಯಾಡನಗಳೊಡನೆ ಪ್ರಾರಂಭವಾಯಿತು. ಖರುತು ಈಸಲ ವಾದ್ಯಾಡನ ಧ್ವನಿಯು ತಮಟದ್ವನಿಯನ್ನು ಸಂಪೂರ್ಣವಾಗಿ ಮೂಲೆಗೆತಗಿಸಿದ್ದು ಒಂದು ವಿಶೇಷವು. ಈ ಹಬ್ಬದಲ್ಲಿ ನಾನಾವಿಧ ವೇಷಗಳನ್ನು ಹಾಕಿಕೊಂಡು ಪುಂಡುಸಾಯುವ ಜನಗಳಿಗೆ ಲೈಸೆನ್ಸು ಕೊಡುವ ವಾಡಿಕೆ ಸ್ವಲ್ಪ ಮಟ್ಟಿಗೆ ಕನಿಷ್ಠವಾಗಿಲ್ಪಟ್ಟದರಿಂದ ಅಂತವರ ಪುಂಡಿಗೆ ಅವಕಾಶವೂ ಕಡಮೆಯಾಯಿತು. ಇದು ಶಿವಾಯಿ ಚರಣಿ, ಸೌದೆ, ಹುಲ್ಲು, ಮೊಸರು ಮೊದಲಾದವನ್ನು ಬೆಂದಿಕ್ಕೊಂಡು ಹಳ್ಳಿಗಳಿಂದ ಈ ಪೇಟೆಗೆ ಬರತಕ್ಕ ಜನಗಳಿಗೆ ಈಹಬ್ಬದಲ್ಲಿ ಉಂಟಾಗುತಲಿದ್ದ ಹಿಂಸೆಯು ಕೂಡಿದಮಟ್ಟಿಗೆ ತಪ್ಪಿತೆಂದು ಹೇಳಬಹುದು.

CORRESPONDENCE

ಮಾ|| ಕರ್ಣಾಟಕಪ್ರಕಾಶಿಕಾಪತ್ರಿಕಾಧಿಪರವರಿಗೆ

ಅಯ್ಯಾ,—

ಈ ತಿಂಗಳ ೨೦ನೇ ತಾರೀಖಿನ ತಮ್ಮ ಪತ್ರಿಕೆಯನ್ನು ನೋಡಿದೆನು. ಅದರಲ್ಲಿ ತಮ್ಮ ಬಾತಮೀದಾರನು ತಿಳಿಸಿರುವಂತೆ ಈ ಕಾಲದ ಅಧಿಕಾರಿಗಳ ದೃಷ್ಟಿಮಾತ್ರದಿಂದಲೇ ಧರ್ಮಶಾಸ್ತ್ರವಚನಗಳಿಗೆ ವೈಯರ್ಥ ಪ್ರಾಪ್ತಿಯಾಗುತಿದೆ ಯೆಂಬ ಅಂಶವು ಅದೇವಾರದ ಪತ್ರಿಕೆಯ ಮತ್ತೊಂದು ಭಾಗದಲ್ಲಿ ಪ್ರಕಟಿಸಿರುವ ಮೈಸೂರು ಗೆಜೆಟ್ ಎಕಸ್ಟ್ರಾಕ್ಟಿನ ಬೆಳೆಯಿಂದ ವ್ಯಕ್ತವಾಗುತಿದೆ

ನೆಲಮಂಗಲ ತಾಲ್ಲೂಕು ಶಿವಗಂಗೆ ಶ್ರೀ ಸ್ವಾಮಿಗಳವರಿಗೂ ನಂಜನಗೂಡು ಶ್ರೀ ರಾಘವೇಂದ್ರ ಸ್ವಾಮಿಗಳವರಿಗೂ ಯಾವನಾಯ್ಯವು ಸಿವಿಲ್ ಕೋರ್ಟಿಗೆ ಖುದ್ದು ಹಾಜರಾಗುವದರ ದಿಸೆಯಿಂದ ವಿನಾಯಿತಿಸಲ್ಪಟ್ಟಿರುವಂತೆಯೂ, ಈ ಹಕ್ಕುದಾರಿ ಇವರ ತರುವಾಯ ಇವರ ಸ್ಥಾನಕ್ಕೆ ಬರತಕ್ಕವರಿಗಿಲ್ಲವೆಂತಲೂ ನಮೂದಾಗಿದೆ.

ಮಠಾಧಿಪತಿಗಳು ಕಂಡ ಕಡೆಗೆ ಹೋಗುವದು ಅವರ ಗೌರವಕ್ಕೆ ಹಾನಿಯನ್ನುಂಟುಮಾಡುವದೆಂದು ಆಲೋಚಿಸಿ ಬ್ರಿಟಿಷ್ ಗವರ್ನಮೆಂಟನವರು ಶ್ರೀ ಶೃಂಗೇರಿ ಮೊದಲಾದ ಕೆಲವು ಮಠಾಧಿಪತಿಗಳಿಗೆ ಮೇಲಿನ ಹಕ್ಕುದಾರಿಯನ್ನುಂಟುಮಾಡಿದರು. ಈಗ ಶ್ರೀಮನ್ಮಹಾರಾಜರವರು ಮೇಲಿನ ಇಬ್ಬರು ಮಠಾಧಿಪತಿಗಳಿಗೂ ಅದೇ ಕ್ರಮವನ್ನನುಸರಿಸಿ ಮೇಲಿನ ಹಕ್ಕನ್ನುಂಟುಮಾಡಿರುವ ಪಕ್ಷಕ್ಕೆ ಇವರ ಜೀವಮಾನದವರಿವಿಗೆ ಕಡ್ಡಪಡಿಸುತಲಿರಲಿಲ್ಲವು. ಒಂದುವೇಳೆ ಆಗ್ಯ ಇಲ್ಲದ ಗೌರವವು ಈಗ ಈ ಮಠಗಳಿಗೆ ಉಂಟುಮಾಡುವದು ಅಸಾಧ್ಯವೆಂದು ಯೋಚಿಸಿ ಯಾವದೋ ಒಂದು ವಿಧವಾಗಿ ಸದರೀ ಮಠಗಳ ವಿಷಯದಲ್ಲಿ ತಮ್ಮ ದಯೆಯಂ ತೋರಿಸಿದಂತೆ ಕಾಣುತಿದೆ.

ಜಾತಿ ಮತ ಸಂಪ್ರದಾಯ ಪ್ರಕಾರ ಯತಿಗಳಲ್ಲಿ ತಾರತಮ್ಯವು ಕಲ್ಪಿಸಬೇಕಾದರೆ ಚಾತುರ್ವರ್ಣ್ಯ ದೀಕ್ಷೆಯ ಸಂಖ್ಯೆಯಿಂದಲ್ಲದೆ ಬೇರೆ ಮಾರ್ಗವಿರುವದಿಲ್ಲವು. ಮೇಲೆಕಂಡ ಮಠಾಧಿಪತಿಗಳಿಗೆ ಅಂತಾಚಾತುರ್ಯಗಳು ಸ್ವಲ್ಪವಾಗಿ ಆಗಿರುವಂತೆ ತೋರುತಿದೆ. ಇಂತಾ ವಿಷಯಗಳಲ್ಲಿ ಸರ್ಕಾರದವರು ಸ್ವತಂತ್ರರಾಗಿರುತ್ತಾರೆ.

ಬ್ರಿಟಿಷ್ ಅಡ್ಮಿನಿಸ್ಟ್ರೇಷನ್ ಕಾಲದಲ್ಲಿ, ಮಠಾಧಿಪತಿಗಳು ಮಠದ ಸ್ವತ್ತುಗಳನ್ನು ವಿನಿಯೋಗಿಸುವ ವಿಷಯದಲ್ಲೂ, ಸಂದರ್ಭ ಬಂದಾಗ ಬೇರೆಯೊಬ್ಬರಿಗೆ ಆಶ್ರಮ ಕೊಡುವ ವಿಷಯದಲ್ಲೂ, ಮಠದ ಯೇಜಂಟುಗಳನ್ನು ಚೊಕರದ್ಮಾಡುವ ವಿಷಯದಲ್ಲೂ, ಕಲಹಕ್ಕೆ ಆಸ್ಪದವಾದ ಬಿರುದು ಬಾವಲಿಗಳನ್ನು ಉಪಯೋಗಿಸಿಕೊಳ್ಳುವ ವಿಷಯದಲ್ಲೂ ಬಹಳ ತಡೆಯೇ ಇಟ್ಟಿದ್ದರು. ಈಗ ದೌಲತ್ ಬದಲಾಯಿಸಿ ಯೇಳು ವರ್ಷಗಳ ಕಾಲದಲ್ಲಿ ಮಠಗಳ ಸ್ಥಿತಿಯೂ ಬದಲಾವಣೆಗಳಿಗೆ ಒಳಪಟ್ಟಿರುತಿದೆ. ಖರುತು ಅಂತಾ ಬದಲಾವಣೆಗಳು ವಿಚಾರಕ್ಕೆ ಬಂದಂತೆ ಕಾಣಲಿಲ್ಲವು. ಈಮೈಸೂರು ಸರ್ಕಾರಕ್ಕೆ ಅಧಿಕ ಗೌರವ ಬರಬೇಕಾದರೆ ಈ ಮಠಾಧಿಪತಿಗಳಿಂದಲೇ ಬರಬೇಕಾಗಿದೆ ಈ ರಾಜ್ಯ ಶಿವಾಯಿ ಇನ್ನೆಲ್ಲೂ ಇರುವ ಪ್ರಭೇದಗಳುಳ್ಳ ಮತ್ತು ಪ್ರಸಿದ್ಧರಾದ ಮಠಾಧಿಪತಿಗಳಿರುವದಿಲ್ಲವು. ಇವರಿಗೆ ಮಹಾರಾಜರವರು ಒಂದು ಹುಕುಂ ಕೊಟ್ಟರೆ ಇಂಡ್ಯಾದೇಶದಲ್ಲಿರುವ ಇವರ ಸಂಬಂಧವಾದ ಜಹಗೀರ್‌ಗಳಿಗೂ ಅವುಗಳನ್ನು ಕಾಪಾಡುವ ಅರಸರುಗಳಿಗೆ ಸಹ ಸಂಬಂಧಿಸುತಿದೆ. ಆದದರಿಂದ ಮಹಾರಾಜಾ ಸರ್ಕಾರದವರು ಸತ್ರ, ದೇವಸ್ಥಾನ, ಮಠಗಳ ವಿಚಾರಣೆಗಾಗಿ ಬೇರೆಯೊಂದು ಇಲಾಖೆಯನ್ನು ಯೇರ್ಪಡಿಸಿ, ಅದಕ್ಕೆ ನಿಷ್ಪಕ್ಷಪಾತಿಯಾದ ಒಬ್ಬ ಅಧಿಸರನ್ನ ನೇಮಕರದ್ಮಾಡಿದರೆ ಧರ್ಮಸ್ಥಾಪನೆಗಳ ಕಾರ್ಯಗಳು ಯಾವವಿಧ ದೋಷಗಳಿಗೂ ಅವಕಾಶವಿಲ್ಲದಂತೆ ನಡೆಯುತ ಬರುವವು. ಸಭಾ ಮಧ್ಯದಲ್ಲಿ "ನಾವು ಆ ಮಠಕ್ಕೆ ಶಿಷ್ಯರಾಗಿದ್ದಾಗ್ಯೂ ಆ ಸ್ವಾಮಿಗಳ ಆಜ್ಞೆಗೆ ಒಳಪಡುವದಿಲ್ಲ" ಎಂಬ ಮಾತುಗಳಿಗೆ ಅವಕಾಶ ತಪ್ಪುವದು.

ಮೈಸೂರು, ತಮ್ಮ ವಿಧೇಯನಾದ,
೨೦ ೨ ೮೮ ಮತಾಭಿಮಾನಿ.

[ಮೇಲೆಕಂಡ ಲೇಖಕನ ಸಲಹೆಯು ನ್ಯಾಯ್ಯವಾಗಿ ತೋರುತಿದೆ ಈ ವಿಷಯಕ್ಕೆ ಮೈಸೂರು ಸರ್ಕಾರದವರು ಯೆಷ್ಟು ತ್ವರೆಯಲ್ಲಿ ಅವಧಾನ ಕೊಟ್ಟರೆ ಅಷ್ಟು ಪ್ರಯೋಜನ ವುಂಟಾಗುವದು.—ಎ, ಕ ಪ್ರ]

EXTRACTS.

Qualifications required for a Police Assistant Superintendent.—ಪೋಲೀಸ್ ಅಸಿಸ್ಟೆಂಟ ಸೂಪರಿಂಟೆಂಡೆಂಟೆಲಸಕ್ಕೆ ದರಖಾಸ್ತು ಮಾಡುವ ಉಮೇದವಾರರಿಗೆ ಅವಶ್ಯಕರ ಬೇಕಾದ ಲಾಯಖಿಯು ಪ್ರಜೆಗಳಿಗೆ ತಿಳಿಯುವದೆ? ಆಕೆಲಸಕ್ಕೆ ಬರತಕ್ಕವನು ಖಂಡಿತವಾಗಿ ಗೌರವ್ಯವಾದ ಮನೆತನದಲ್ಲಿ ಹುಟ್ಟಿದ ಯುರೋಪಿಯನಾಗಿರಬೇಕು, ಖರುತು ಸ್ಪೋರ್ಟು ಪೋಟು ಪರೀಕ್ಷೆಕೊಟ್ಟು ಬೇರೆ ಯಾವದಾದರೂ ಲೌಕಿಕರೀತಿಯಲ್ಲಿ ಪ್ರವೇಶ ಮಾಡುವದಕ್ಕೆ ಯೋಗ್ಯತೆಯಿರಬೇಕೆಂದು ನಿರ್ಬಂಧವಿಲ್ಲವು. ಈ ವಿಷಯದಲ್ಲಿ ನಮ್ಮ ಭಾವವನ್ನು ಯಥಾರ್ಥವಾದ ಸಂಗತಿಗಳಮೂಲಕವಾಗಿಯೂ ಲೆಕ್ಕದಿಂದಲೂ ಇಲ್ಲಿ ನಿರೂಪಿಸುತ್ತೇವೆ. ಪೋಲೀಸ್ ಅಸಿಸ್ಟೆಂಟ ಸೂಪರಿಂಟೆಂಡೆಂಟುಗಳಲ್ಲಿಕೆ ಅನೇಕರು ಗವರ್ನಮೆಂಟನವರ ಸ್ಥಳಗಳಿಗೆ ದೊಡ್ಡದೊಡ್ಡ ಅಧಿಕಾರಗಳು ನಡೆಸಿರುವ ಅಥವಾ ನಡೆಸಿದ್ದವರಿಗೆ ಅನುಬಂಧಿಗಳಾಗಿರುತ್ತಾರೆ, ಹ್ಯಾಗೆಂದರೆ, ಮೆಸ್ಸರ್ಸ್ ಫ್ಯಾಕ್, ಜೇಕ್, ಬಾಯಿಲೊ, ಪಾಲರ್, ಹಬರ್ಟ್ ಪರ್ಡ, ಟೇಲರ್, ರೈಲಿ, ಇವರೆಲ್ಲರು ಪೋಲೀಸಿನ ಖಾತೆಯಲ್ಲಿ ದೊಡ್ಡದೊಡ್ಡ ಅಧಿಕಾರಿಗಳ ಅನುಬಂಧಿಗಳಾಗಿರುತ್ತಾರೆ. ಈರೀತಿ ಅಸಿಸ್ಟೆಂಟ ಸೂಪರಿಂಟೆಂಡೆಂಟುಗಳ ಸಂಖ್ಯೆಯಲ್ಲಿಕೆ ಅರ್ಧಕ್ಕಿಂತಲು ಅಧಿಕವಾಗಿ ಗವರ್ನಮೆಂಟನಲ್ಲಿ ದೊಡ್ಡದೊಡ್ಡ ಅಧಿಕಾರಗಳಂ ಪಡೆದವರಿಗೆ ಯಾವದಾದರೊಂದುವಿಧ ಸಂಬಂಧ ಪ್ರಾಪ್ತರಾಗಿರುತ್ತಾರೆ. ಅವರ ಲಾಯಖಿಯ ವಿಷಯದಲ್ಲಿ, ಕಳೆದಸಂವತ್ಸರದೊಳು ನಡೆದ ಪರೀಕ್ಷೆಗೆ ದರಖಾಸ್ತು ಕೊಟ್ಟ ೭೬ಜನರಲ್ಲಿಕೆ, ೧೫ ಮಂದಿಮಾತ್ರವೇ ಪರೀಕ್ಷೆಗೆಬಂದು ಅವರಲ್ಲಿಕೆ ಕಾಲ್ವರೇ ತೇರ್ಗಡೆಯಾದರು. ತಪ್ಪಿಹೋದವರಲ್ಲಿಕೆ ಕೆಲವರಿಗೆ ಪರೀಕ್ಷೆಯೊಳು ಇಂಗ್ಲಿಷ್ ಭಾಷೆಯಲ್ಲಿ ಒಂದುಮಾರ್ಕವೂ ಬರಲಿಲ್ಲವು ಇಂತಾವರಿಗೆ ನೌಕರಿಯು ಪ್ರಾರಂಭದಲ್ಲೇ ಮಾಹೆಯಾನಾ ೨೦೦ ರೂಪಾಯಿಗಳ ಸಂಬಳ ಅನೇಕಸಂವತ್ಸರಗಳಕಾಲ ನೌಕರಿಯಲ್ಲಿರುತಲಿರುವ ನೇಟಿವ್ ಉದ್ಯೋಗಸ್ಥರಿಗೆ ಮೇಲ್ಪಟ್ಟ ನೌಕರಿಗಳೂ ಕೊಡಲ್ಪಡುತಿವೆ.—ಅಮೃತಬಜಾರ್‌ಪತ್ರಿಕೆ.

SUMMARY OF NEWS.
ವೃತ್ತಾಂತ ಸಂಗ್ರಹ.

ಚೀನಾದೇಶದ ಉತ್ತರ ಭಾಗದಲ್ಲಿರುವ ಫಾರ ಮೋಸಾದ್ವೀಪದ ನಿವಾಸಿಗಳು ತಮಗೆ ಸಿಕ್ಕಿದ ಜನರನ್ನು ಕೊಂದುಹಾಕುವ ಸಂಪ್ರದಾಯವಿತ್ತು. ಈ ಅನರ್ಥಗಳನ್ನು ನಿಲ್ಲಿಸುವಬಗ್ಗೆ ಚೀನಾ ಸರಕಾರದವರು ಅವರನ್ನು ಹಿಡತರಿಸಿ ವಿಚಾರಣೆ ಮಾಡಲು, ತಮ್ಮಲ್ಲಿ ಮದುವೆಮಾಡಿಕೊಳ್ಳುವದಕ್ಕೆ ಮೊದಲು ಒಬ್ಬರನ್ನು ಕೊಲ್ಲತಕ್ಕದ್ದೆಂದು ತಮ್ಮ ಶಾಸ್ತ್ರ ಸಿದ್ಧಾಂತವಿರುತ್ತದೆಂತ ತಿಳಿಸಿದರು. ಇದು ಎಂತಾ ಅನ್ಯಾಯದ ಶಾಸ್ತ್ರವೋ ನೋಡಿರಿ.—ಹ. ಸು.

ಸನ್ ೧೮೮೫ನೇ ಇಸವಿವರಿಗೆ ಆಫ್ರಿಕಾಖಂಡದಲ್ಲಿ ಗಣಿಗಳಿಂದ ಸುಮಾರು ೬೦೨ ಮಣತೂಕ ವಜ್ರಗಳನ್ನು ತೆಗದರು. ಅವುಗಳಬೆಲೆಯು ೧ಂಕೋಟಿ ರೂಪಾಯಿಗಳು. ಚವಡ್ರದ ಗಣಿಗಳು ಶಿಕ್ಷ್ಯವಶಾಲದಲ್ಲಿ ಲಂಡನಿನಲ್ಲಿ ವಜ್ರ ಕಡಿಯತಕ್ಕವನು ಒಬ್ಬನೇ ಇರುತಿದ್ದನು. ಆದ್ದರಿಂದ ಅದರ ಕೆಲಸವು ಬೇಗದಲ್ಲಿ ಆಗ ಬೇಕೆಂಬದಕ್ಕಾಗಿ ಆಮ್‌ಸ್ಟರ್ ಡಾಂ ಎಂಬಲ್ಲಿಯ ಡಚ್ ಎಂಬವನನ್ನು ಕರಿಸಿಕೊಂಡರು. ಆಕೆಲಸಗಾರರು ವಾರಕ್ಕೆ ೧೮ ಪೌಂಡು ಕೂಲಿಕೇಳಿದರು. ಆಗ ಅವರನ್ನು ಹಿಂದಕ್ಕೆ ಕಳುಹಿಸಿ ತಮ್ಮ ಕೆಲಸ ನಡಿಸುವಬಗ್ಗೆ ಇಂಗ್ಲಿಷ್ ಜನರನ್ನೇ ನೇಮಿಸಿದರು. ವಜ್ರ ಕಡಿಯುವದಕ್ಕೆ ಹೆಚ್ಚು ತಾಳ್ಮೆ ಇರಬೇಕು. ಈಗ ಅನೇಕಸ್ತ್ರೀಯರು ಈಕೆಲಸ ಮಾಡುತ್ತಾಇದ್ದಾರೆ.—ಹ. ಸು.

ಒಂದು ಪ್ರಾಣಿಯರಕ್ತ ಮತ್ತೊಂದರ ನರಕ್ಕೆ ಸೇರಿಸೋಣ.—ವೈದ್ಯರು ರೋಗಿಗಳಿಗೆ ಔಷಧಗಳುಕೊಡುವದೂ, ಉಪಚಾರಮಾಡುವದೂ ಸಾಧಾರಣವಾಗಿದೆ. ಇದರತಡ ಕಾಣಿಸುವ ಒಬ್ಬ ವೈದ್ಯನ ಚಿಕಿತ್ಸೆಯು ವಿಶೇಷವಾಗಿದೆ. ಏನುದರೆ ಇಂಗ್ಲಾಂಡರಾಜ್ಯದ ಹಾರ್ಡಿಸ್ ಎಂಬ ಸ್ಥಳದಲ್ಲಿ ಒಬ್ಬ ಹೆಂಗಸು ಬಹುಕಾಲದಿಂದಲೂ ಕಾಹಿಲೆಯಾಗಿ ಸವದು ತ್ರಾಣವಿಲ್ಲದವಳಾಗಿದ್ದಳು. ವೈದ್ಯನು ತನಗೆ ತಿಳಿದ ಔಷಧಗಳನ್ನೆಲ್ಲಾ ಕೊಟ್ಟು ಬೇಜಾರಾಗಿ ಅವಳು ಬದುಕಲಾರಳೆಂಬ ಅಭಿಪ್ರಾಯದಿಂದ ಕೂತಿದ್ದನು. ಹೀಗಿರುವಲ್ಲಿ ಒಂದು ದಿನರಾತ್ರಿ ೧೨ ಘಂಟೆವೇಳೆ, ಆಕೆಯು ಗಂಡನು ಬಂದು ವೈದ್ಯನನ್ನು ನಿದ್ರೆಯಿಂದೆಬ್ಬಿಸಿ, ಕರೆದುಕೊಂಡುಹೋಗಲು, ಅವನು ಆಲೋಚನೆಮಾಡಿ ತನ್ನ ಶರೀರದಿಂದ ೧೨ತೊಲೆ ರಕ್ತವನ್ನು ತೆಗದು ಅದನ್ನು ಪಿಚಕಾರಿಮೂಲಕ ರೋಗಿಯ ಶರೀರದ ಒಳಕ್ಕೆ ಸೇರಿಸಿದನು. ಇದರಿಂದ ಆಕೆಯ ರೋಗವು ಕ್ರಮೇಣ ಪರಿಹರವಾಯಿತು. ಈಗ ಸಂಪೂರ್ಣವಾದಆರೋಗ್ಯದಿಂದಿದ್ದಾಳೆ.—ವೃ.ಪ.

ತಲೇಬುರುಡೆಯಲ್ಲಿ ಲೇಖಣಿಸಿಕ್ಕಿದ ಸಂಗತಿ.—ಉತ್ತರ ಪಟ್ಟಣದಲ್ಲಿರುವ ಸೆಂಟಿಮಾರಿಸ್ ರೋಡೆಂಬುವ ಬೀದಿಯಲ್ಲಿ ವಾಸವಾಗಿದ್ದ ಮೋಸೆಸ್ ರಾಥ್ವೆಲ್ ಎಂಬ ಒಬ್ಬ ವರ್ತಕನು ಕೆಲವುದಿನಗಳ ಕೆಳಗೆ ಕಾಹಿಲೇ ಸಬಬು ಅಲ್ಲಿನ ಆಸ್ಪತ್ರಿಗೆ ದಾಖಲಾದನು. ಇವನ ಮರಣಾನಂತರ ಅದರ ಡಾಕ್ಟರವರು ಇವನ ತಲೆಯನ್ನು ಪರೀಕ್ಷಾರ್ಥವಾಗಿ ಕೊಯ್ಯಲು ಮೆದುಳಿನಲ್ಲಿ ೩ ಅಂಗುಲ ಉದ್ದವಾದ ಮುಳ್ಳನೊಂದಿಗಿದ್ದ ಒಂದು ಲೇಖಣಿಕಡ್ಡಿಯು ಸಿಕ್ಕಿತು. ಅದರಮೇಲೆ ಒಂದುಮೂಳೆಯು ಬೆಳದಿದ್ದಕಾರಣ ಬಹಳ ದಿನಗಳಿಂದಲೂ ಅದು ಇದ್ದಹಾಗೆ ಯೋಚಿಸಬೇಕಾಯಿತು. ಮೆದುಳಿನಲ್ಲಿ ಲೇಖಣಿ ಸೇರಿಸಬೇಕಾದರೆ ಮೂಗಿನ ಹೊಳ್ಳೆಗಳ ಅಥವಾ ಕಣ್ಣುಗಳಮೂಲಕ ತೂರಿಸಬೇಕು. ಅದುಹೊರ್ತು ಬೇರೆ ಉಪಾಯವಿಲ್ಲ. ಮೃತಪಟ್ಟವನಹೆಂಡತಿಯನ್ನು ವಿಚಾರಿಸುವಲ್ಲಿ ತನ್ನಗಂಡನು ಯಾವಾಗಲಾದರು ಅಪಾಯ ಸಂಭವಿಸಿದ್ದಾಗಿ ತನಗೆ ಹೇಳಲಿಲ್ಲವೆಂತಲೂ ಆದರೆ ಕೆಲವುದಿನಗಳಿಂದ ತಲೆಶೂಲೆಎಂದು ಸಂಕಟಪಡುತ್ತಿದ್ದನೆಂತಲೂ ತಿಳುಹಿಸಿದಳು. ಈ ಅಪರೂಪವಾದ ಸಂಗತಿಯನ್ನುಕುರಿತು ಲಂಡನ ಪಟ್ಟಣದ ಜನರೆಲ್ಲರೂ ಆಶ್ಚರ್ಯಪಡುತಿದ್ದಾರೆ.—ವೃತ್ತಾಂತಪತ್ರಿಕೆ.

ನಮ್ಮ ಡಿಸ್ಟ್ರಿಕ್ಟ್ ರಿಜಿಸ್ಟ್ರಾರ್ ಮೆಸ್ಟರ್ ಯಲ್ ರಾಮರಾಯರವರು ತಮ್ಮ ಸ್ವಂತ ಕೆಲಸದ ಉದ್ದಿಶ್ಯವಾಗಿ ಮಂಗುಳೂರಿಗೆ ಹೋಗಿರುತ್ತಾರೆ. ಇಂತಾ ಸಮಯದಲ್ಲಿ ಅವರಮನೆಗೆ ಒಬ್ಬನುಬಂದು ತಾನು ಮೆ॥ ರಾಮರಾಯರ ಭಾವಮೈದನೆಂದು ಹೇಳಿದ್ದರಿಂದ ಮನೆಯಲ್ಲಿದ್ದ ಮನುಷ್ಯರು ಅವನಿಗೆ ಸನ್ಮಾನವನ್ನುಮಾಡಿ ಇಳಿದುಕೊಳ್ಳುವದಕ್ಕೆಸ್ಥಳವನ್ನುಕೊಟ್ಟರು. ಸದರೀಯವನು ಮನೆಯಲ್ಲಿ ಯೆರಡುದಿನಗಳಿದ್ದು ಮೂರನೇದಿನ ಭೋಜನವನ್ನು ತೀರಿಸಿಕೊಂಡು ಮೆಸ್ಟರ್ ರಾಮರಾಯರವರ ಹೊಸ ರುಮಾಲನ್ನು ಸುತ್ತಿಕೊಂಡು ಒಂದು ಬೆಲೆಯುಳ್ಳ ಗಡಿಯಾರವನ್ನು ಮನೆಯಲ್ಲಿದ್ದದರಿಂದ ತೆಗದುಕೊಂಡು ಮತ್ತು ಇತರ ಅನುಕೂಲವಾದ ದುಸ್ತುಗಳೊಡನೆ ಪಟ್ಟಣವನ್ನುನೋಡಿ ಬರುವದಾಗಿಹೇಳಿಹೊರಟುಹೋದನು. ಯಜಮಾನರ ಭಾವಮೈದನಿಗೆ ಮಧ್ಯಾಹ್ನ ಫಲಹಾರಕ್ಕೆ ಮನೆಯಲ್ಲಿದ್ದವರು ಸಿದ್ಧಪಡಿಸಿಕೊಂಡಿದ್ದರು. ಯಜಮಾನರ ಭಾವಮೈದನು ಮಧ್ಯಾಹ್ನಕ್ಕೂ ಬರಲಿಲ್ಲ, ಸಾಯಂಕಾಲಕ್ಕೂಬರಲಿಲ್ಲ, ಮತ್ತೆ ಅವನಸೊಲ್ಲೇಯಿಲ್ಲ. ಮನೆಯಲ್ಲಿದ್ದವರು ವಿಸ್ಮಯಗೊಂಡು ಸದರೀಯವನನ್ನು ವಿಚಾರಿಸುತಿದ್ದಾರೆ ಇವರಕ್ಕೆಗೆ ಅವನು ಶಿಕ್ಕಿಲ್ಲವೆ.—ವಿಜಯಧ್ವಜ.

ಎಷ್ಟೋ ಸರಕಾರೀ ಉದ್ಯೋಗಸ್ಥರು ಒಂದುಖಾತೆಯೊಳಗೆ ಕೆಲಸ ಮಾಡುತ್ತಿರುವಾಗ ಸುಮ್ಮನೆ ರಜಾತೆಗದುಕೊಂಡುಹೋಗಿ,ಎರಡನೆಯವರಿಗೆ ತಿಳಿಯದಂತೆ ಇನ್ನೊಂದು ಖಾತೆಯೊಳಗೆಸೇರುತ್ತಾರೆ. ಹೀಗಿರುವ ಪದ್ಧತಿ ಸರಕಾರದ ಪಸುದಿಗೆ ಬಾರದಿರುವ ಕಾರಣ ಸರಕಾರದವರು ಈ ವಿಷಯವನ್ನು ವಿಚಾರಮಾಡಿ ಈ ಕೆಳಗೆ ಕಾಣಿಸಿದ ನಿಯಮಗಳನ್ನು ಮಾಡಿದರು. ಅದುಹೋದ ಗುರುವಾರದ ಮೈಸೂರು ಸರ್ಕಾರೀಗೆಜೆಟಿನಲ್ಲಿ ಪ್ರಸಿದ್ಧಿಯಾಗಿರುತದೆ.

೧. ಪ್ರತಿಒಂದು ಖಾತೆಯ ಮುಖ್ಯಾಧಿಕಾರಿಯು ಎರಡನೇ ಡಿಪಾರ್ಟಮೆಂಟಿನೊಳಗಿನ ಮನುಷ್ಯನನ್ನು ತನ್ನ ಖಾತೆಯಲ್ಲಿ ಇಟ್ಟುಕೊಳ್ಳುವ ಪಕ್ಷಕ್ಕೆ ಅದು ಕಾಯಂ ಇರಲಿ ಅಥವಾ ಹುಂಗಾಮಿಯಾಗಲಿ, ಅವನು ಯಾವ ಖಾತೆಯಿಂದಬಿಟ್ಟು ಬಂದಿರುವನೋ ಆ ಖಾತೆಯ ಮುಖ್ಯಾಧಿಕಾರಿಯ ಸಮ್ಮತಿಪಡೆಯದೆ ನೇಮಿಸಿಕೊಳ್ಳಕೂಡದು. ಯದ್ಯಪಿ ಯಾವದಾದರೊಂದು ಕಾರಣದ ದೆಸೆಯಿಂದ ಎರಡನೇಖಾತೆಯಲ್ಲಿ ಮಂಜೂರಾದಜಾಗೆ ಮೊದಲಿನಖಾತೆಯ ವರಿಷ್ಟರ ಪರವಾನಗಿ ಸಿಕ್ಕುವಹಾಗಿರದಿದ್ದರೆ ನಿಯಮಿತವೇಳೆಯಲ್ಲಿ ವರಿಷ್ಟರ ಸಮ್ಮತಿಯನ್ನು ತಂದುಕೊಡುವ ಕರಾರಿನಮೇಲಿಂದ ಕೆಲಸದಮೇಲೆ ನೇಮಿಸಿಕೊಳ್ಳಬಹುದು.

೨. ಯಾವನಾದರೊಬ್ಬ ಉದ್ಯೋಗಸ್ಥನಿಗೆ ತನ್ನಖಾತೆಯಿಂದ ಎರಡನೇಖಾತೆಗೆ ಹೋಗಬೇಕೆಂಬ ಅಪೇಕ್ಷೆಯಿದ್ದರೆ ಅವನು ಮೊದಲು ತನಗಿದ್ದ ಕೆಲಸವನ್ನು ಬಿಡಬೇಕು. ಅಥವಾ ತನ್ನ ವರಿಷ್ಟರಹುಕುಂ ಪಡೆದುಕೊಂಡಿರಬೇಕು. ಹೀಗೆಮಾಡದೆ ಯಾವನಾದರೊಬ್ಬ ಉದ್ಯೋಗಸ್ಥನು ಎರಡನೇಖಾತೆಗೆಹೋಗಿ ಸೇರಿದರೆ ಅವನಿಗೆ ಬಡತಿಮಾತ್ರ ಶಿಕ್ಕೀತು, ಶಿವಾಯಿ, ಮೊದಲಿನ ಖಾತೆಯಲ್ಲಿ ಕೆಲಸಮಾಡಿದಮುದ್ದತ್ ಪೆನ್ಷನಿಗೆ ಸೇರಲಾರದು.

೩. ಒಂದು ಖಾತೆಯೊಳಗಿಂದ ಇನ್ನೊಂದು ಖಾತೆಗೆ ಹೋಗಲೇ ಬಾರದು, ಹೀಗೆ ಸರಕಾರದವರ ಹೇಳಿಕೆಯಿಲ್ಲ. ಮತ್ತು ಮೊದಲಿನ ಖಾತೆಯಲ್ಲಿ ರಾಜೀನಾಮೆಕೊಟ್ಟ ಕೂಡಲೇ ಎರಡನೇಖಾತೆಯೊಳಗೆ ಬಂದುಸೇರಿದರೆ ಕೆಲಸದ ಮುದ್ದತಹೋಗುವದಿಲ್ಲ. ಪರಂತು ಹೇಳದೆಕೇಳದೆ ಕೆಲಸಬಿಟ್ಟು ಎರಡನೇ ಖಾತೆಯಲ್ಲಿ ತಿಳಿಯದಹಾಗೆಹೋಗಿ ಸೇರುವನಡತೆಯು ಸುತರಾಂ ಪ್ರಶಸ್ತವಾದದ್ದಲ್ಲ. ಇಷ್ಟೇ ಸರಕಾರದವರ ಮುಖ್ಯಹೇಳಿಕೆ ಇರುತದೆ.—ಹ ಸು.

ಪ್ರಸಿದ್ಧಪತ್ರಿಕೆ.

ಮೈಸೂರು

ರೆವಿನ್ಯೂಸರ್ಕ್ಯುಲರ್.

ಈ ಮೈಸೂರು ದೇಶದ ಪ್ರಜೆಗಳು ವಿದ್ಯಾನಾಗರಿಕಾದಿ ಗುಣಗಳಿಂದ ಸರ್ವ ವಿಷಯದಲ್ಲಿಯೂ ಅನ್ಯದೇಶೀಯರಿಗೆ ಸಮಾನರಾಗುತ್ತ, ತಮ್ಮ ಲಾಭನಷ್ಟಗಳನ್ನು ಸರಕಾರದವರಿಗೆ ತಿಳಿಯಪಡಿಸಿ, ಅಪೇಕ್ಷಿತಾಂಶಗಳನ್ನು ಪಡೆಯಲಿಕ್ಕೆ ಶಕ್ತರಾಗುತ ಬರುವವರಿಂದಲೂ, ಸರಕಾರದವರು ತಮ್ಮ ನ್ಯಾಯನಿಬಂಧನೆಗಳನ್ನು ಜನಗಳಿಗೆ ತಿಳಿಸಿ ಅವುಗಳಮೇಲೆ ಅವರುಗಳು ಕ್ರುತಪಡಿಸುವ ಸಾಧಕ ಬಾಧಕಗಳನ್ನು ಆಲೋಚಿಸಿ ವ್ಯವಸ್ಥೆಮಾಡುವ ಸಂಕಲ್ಪದೊಡನೆ ಪ್ರತಿಸಂವತ್ಸರ ನವರಾತ್ರಿ ಹಬ್ಬದಲ್ಲಿ ಡಿಸ್ಟ್ರಿಕ್ಟ್‌ಜಾತಿ ಜನರು ಕರೆಯಿಸಿ ಅವರೊಡನೆ ಆಯಾ ವಿಷಯಗಳು ವಿಚಾರಮಾಡುತ ಬರುವದರಿಂದಲೂ, ನನ್ನ ಪ್ರಕೃತ ಪ್ರಶ್ನೆಕ್ಕೆ ಇದು ಯೋಗ್ಯಕಾಲವೆಂದೆಣಿಸಿ ಅನೇಕರ ಪ್ರೇರಣೆಯಮೇಲೆ ಈಕೆಳಗೆ ನಮೂದಿಸುವ ಪ್ರಯತ್ನವು ಮಾಡಲಾರಂಭಿಸಿರುತ್ತೇನೆ.

ಗವರ್ನಮೆಂಟಿನವರು ಜ್ಯುಡಿಷಿಯಲ್ ಬಾಬುಗಳಲ್ಲಿ ಕೊಡುವ ಹುಕುಂಗಳನ್ನು ಪ್ರಜೆಗಳು ಅರಿಯಲಿಕ್ಕೆ ಲಾ ರಿಪೋರ್ಟು ವಗೈರೆ ಅನೇಕ ಸಾಧನಗಳಿರುತವೆ. ರೆವಿನ್ಯೂ ವಿಷಯಗಳಲ್ಲಿ ಆಗಿಂದಾಗ್ಯೆ ಗವರ್ನಮೆಂಟಿನವರು ಸಾದರ್ ಮಾಡುವ ಹುಕುಂಗಳನ್ನು ಪ್ರಜೆಗಳು ತಿಳಿದುಕೊಳ್ಳಲು ಅನುಕೂಲವಿಲ್ಲದೆ ಬಹಳ ತೊಂದರೆಪಡುತಿರುವದನ್ನುನೋಡಿ ಅನೇಕರ ಕೋರಿಕೆಪ್ರಕಾರ ನಮ್ಮ ಮಹಾರಾಜ ರಾಜಾಸಾಹೆಬಬಹದೂರವರ ಸರಕಾರದವರಿಂದ ರೆವಿನ್ಯೂ ಬಾಬಿನಲ್ಲಿ ಕೊಡಲ್ಪಡುವಹುಕುಂಗಳನ್ನು ಪ್ರಕಟಿಸಲುಹುಕುಂ ಕೊಡಿಸಬೇಕೆಂದು ಈ ಸಂಸ್ಥಾನದ ದಿವಾನರವರಾದ ಕೆ. ಶೇಷಾದ್ರಿ ಅಯ್ಯರ್ ಎಸ್ಕ್ವೈರ್, ಸಿ. ಎಸ್. ಐ. ಯವರ ಸನ್ನಿಧಾನದಲ್ಲಿ ಜನಗಳ ಕೋರಿಕೆಯನ್ನು ವಿಜ್ಞಾಪನೆಮಾಡಲಾಗಿ ಅವರು ಅಂತಾಹುಕುಂಗಳನ್ನು ಛಾಪಿಸಿ ಪ್ರಕಟಪಡಿಸಬಹುದೆಂದು ನನಗೆ ಲಿಖಿತಮೂಲಕವಾದ ಹುಕುಂ ಕೊಟ್ಟಿರುತ್ತಾರಾಗಿ ಯೆಲ್ಲರಿಗೂ ಶ್ರುತಪಡಿಸುವದೇನೆಂದರೆ:—

ಸನ್ ೧೮೮೮ನೇ ಇಸವಿ ಜನವರಿ ಗುರ್ರೇಲಾಗಾಯತು ಆಗಿರುವ ಮತ್ತು ಮುಂದೆ ಆಗುವ ಮೈಸೂರು ಮಹಾರಾಜಾ ಸರಕಾರದವರಿಂದ ಕೊಡಲ್ಪಡುವ ರೆವಿನ್ಯೂಸರ್ಕ್ಯುಲರ್‌ಗಳು ಮತ್ತು ಪ್ರೊಸೀಡಿಂಗ್ಸ್‌ಗಳನ್ನು ಸೇರಿಸಿ ಕನ್ನಡದಲ್ಲಿ ಸರಿಯಾದ ತರ್ಜುಮೆ ಮಾಡಿ ಬರುವ ಏಪ್ರಿಲ್ ಗುರ್ರೇಲಾಗಾಯತು ತಿಂಗಳಿಗೊಂದಾವರ್ತಿ, ಮೈಸೂರು ಗೆಜೆಟಿ ನಮೂನೆಯಲ್ಲಿ ಮಾಸಪತ್ರಿಕಾ ರೂಪವಾಗಿ "ಮೈಸೂರು ರೆವಿನ್ಯೂ ಸರ್ಕ್ಯುಲರ್" ಎಂಬ ಹೆಸರನ್ನು ಇಟ್ಟು ಪ್ರಕಟಿಸಬೇಕೆಂದು ಉದ್ದೇಶಿಸಿರುತ್ತೇನೆ. ಈ ರೆವಿನ್ಯೂ ಸರ್ಕ್ಯುಲರ್‌ನಲ್ಲಿ, ನಮ್ಮ ಮಹಾರಾಜಾ ಸರ್ಕಾರದವರಿಂದ ಇನಾಂ, ಜೋಡಿ, ಕಾಯಂಗುತ್ತಾ, ಸರ್ವಮಾನ್ಯ ಗ್ರಾಮಗಳ ಬಾಬಿನಲ್ಲಿಯೂ, ಕಾಫೀ ಸಾಗುವಳೀಬಾಬಿನಲ್ಲಿಯೂ, ಜಮೀನ್‌ಬಾಬಿನಲ್ಲಿಯೂ, ಪಟೇಲ್ ಶಾನುಭೋಗ ವಗೈರೆ ಹಕ್ಕುದಾರಿಮುಂತಾದ ವಿಷಯಗಳಲ್ಲಿಯೂ, ಮುಜರಾಯಿ ಬಾಬಿನಲ್ಲಿಯೂ, ಮತ್ತು ಜಿಲ್ಲರೆಅಂಶಗಳಲ್ಲಿಯೂ ಕೊಡುವ ಹುಕುಂಗಳು, ಗೆಜೆಟಿನಲ್ಲಿರುವ ಮುಖ್ಯಾಂಶಗಳು ಸಹ ಅಡಗಿರುವವು.

ಇದು ಇನಾಂದಾರರಿಗೂ, ಜಮೀನ್‌ದಾರರಿಗೂ, ಕಾಫಿಪ್ಲ್ಯಾಂಟರ್‌ಗಳಿಗೂ, ರೆವಿನ್ಯೂ ಅಧಿಕಾರಿಗಳಿಗೂ, ವಕೀಲರಿಗೂ, ಬಹಳ ಅನುಕೂಲವಾಗಿರುವದು. ಇದನ್ನು ಅಪೇಕ್ಷಿಸತಕ್ಕವರು ಏಪ್ರಿಲ್ ಗುರ್ರೇ ತಾ॥ನೊಳಗಾಗಿ ಇದರಡಿ ರಾಜಾಸಾಹೇಬರ ವರಬಳಿಗಾಗಲಿ, ಅಥವಾ ಈವೂರು ಬಳೇಬಾಗಿಲಬಳಿ ಇರುವ ಶಿಂಗಾಪುರ ಕೃಷ್ಣಮಾಚಾರ್ಯರ ಹೆಸರಿಗಾಗಲಿ, ತಮ್ಮ ಚಂದಾ ಮೊಬಲಗು ಸಹಿತ ದರಖಾಸ್ತುಗಳನ್ನು ಕಳುಹಿಸಿಕೊಡಬೇಕು. ಅಡ್ವಾನ್ಸ್‌ಮೊಬಲಗು ಕಳುಹಿಸದೆ ಖಾಲೀಯಾಗಿ ಬರೆದುಕೊಳ್ಳುವ ದರಖಾಸ್ತುಗಳಿಗೆ ನಿಗೇಕೊಡುವದಿಲ್ಲವು. ನಾನು ಪ್ರಯತ್ನಮಾಡಿರುವ ಈ ಪ್ರಬಲ ಕಾರ್ಯಕ್ಕೆ ತಕ್ಕಷ್ಟು ಚಂದಾದಾರರು ಸೇರಿದಹೊರ್ತು ಇದನ್ನು ಪ್ರಾರಂಭಿಸಲಿಕ್ಕೆ ಸಾಧ್ಯವಾಗಲಾರದಾಗಿ ಈ ದೇಶದ ದೊಡ್ಡಮನುಷ್ಯರೆಲ್ಲರೂ ದಯಮಾಡಿ ಚಂದಾದಾರರಾಗಿ ಸೇರಿ ಈ ನನ್ನ ಪ್ರಯತ್ನಕ್ಕೆ ಸರ್ವವಿಧದಲ್ಲೂ ಪ್ರೋತ್ಸಾಹವನ್ನುಂಟುಮಾಡಬೇಕೆಂದು ವಿನಯದಿಂ ಬೇಡುತ್ತೇನೆ.

ಚಂದಾ ನಿರ್ಣಯ.

ಪರಸ್ಥಳದವರಿಗೆ.

ಸಾಲ್ ಒಕ್ಕೆ ಪಾಸಲ್ ಸೇರಿ	...	೨—೮—೦

ಸ್ಥಳದವರಿಗೆ.

ಸಾಲ್ ಒಕ್ಕೆ	... ...	೨—೦—೦

ಚಿಂತಾಮಣಿ ಸುಬ್ಬರಾವ್,
ಹಲಸೂರುಪೇಟೆ ಬೆಂಗಳೂರು.

ACKNOWLEDGMENTS.

ಸನ್ ೧೮೮೮ನೇ ಜನವರಿ ಲಾಗಾಯತು ಫೆಬ್ರವರಿ ೨೦ನೇ ತಾರೀಖ್‌ವರಿವಿಗೆ ಹಿಂದಿನಸಾಲಿ ಬಾಕಿಬಗ್ಗೆ ಈ ಸಾಲಿಗೆ ಅಡ್ವಾನ್ಸಾಗಿಯೂ ನಮ್ಮ ಚಂದಾದಾರರಿಂದ ಬಂದ ಇದರಡಿ ಕಂಡ ಮೊಬಲಗನ್ನು ನಾವು ಕೃತಜ್ಞತೆಯೊಡನೆ ಬರಮಾಡಿಕೊಂಡಿರುತ್ತೇವೆ. ಪರಂತು ಬೇರೇ ರಸೀಪ ಕೊಟ್ಟ ಮೊಬಲಗುಗಳು ಇದರಲ್ಲಿ ಸೇರಿರುವದಿಲ್ಲವು.

ಮ॥ರಾ॥	ರೂ—ಆ—ಪೈ
ಮಡಿಕೆರೆ ರಾಯಬಹದೂರ್ ಶಾಮಣ್ಣನವರು	೬—೦—೦
ತೀರ್ಥಹಳ್ಳಿ ಸಾಹುಕಾರ ಶೇಷಣ್ಣನವರು	೬—೦—೦
ಚಿಕ್ಕಮಗಳೂರು ರೀಡಿಂಗರೂಂ	೬—೦—೦
ಜಾವಳಿ ಲಕ್ಷ್ಮಯ್ಯನವರು	೫—೦—೦
ನಗರ್ತಚೆನ್ನವೀರಪ್ಪನವರು	೫—೦—೦
ಯಳಂದೂರು ಅಮಲ್ದಾರ್ ಕೃಷ್ಣರಾಯರವರು	೬—೦—೦
ತಾವರೆಕೆರೆ ಹೈದರ್‌ಸಾಬಿ	೨—೦—೦
ಅತ್ತಿಕುಪ್ಪೆವೆಂಕಟಾಚಲಶೆಟ್ಟರು	೫—೦—೦
ನೆಲಮಂಗಲ ಪ್ಲೀಡರ್‌ಸುಬ್ಬರಾಯರು	೫—೦—೦
ಮೈಸೂರು ಲಿಟರರಿಯೂನಿಯನ್	೫—೦—೦
ಮೈಸೂರು ಪುಸ್ತಕಂತಿರುಮಲಾಚಾರ್ಯರವರ	೫—೦—೦
ಸ್ವಾಮಿಂದನಹಳ್ಳಿ ಮಲ್ಲೇಗೌಡರು	೪—೦—೧
ಸಾ॥ ಸಕ್ರೆ ಸಾಲಪ್ಪನವರು	೫—೦—೦
ಉಮಚಗಕಟ್ಟೆ ಕುಬೇರಪ್ಪನವರು	೫—೦—೦
ವಕೀಲ್ ಗುಂಡಪ್ಪನವರು	೧೦—೦—೦
ಸಾತನಹಳ್ಳಿ ಕಪ್ಪಣ್ಣನವರು	೫—೦—೦
ಚಗಂಬೆ ಗೂಳೀ ಶಂಕರಯ್ಯನವರು	೩—೦—೦
ಗುಬ್ಬಿ ಕೃಷ್ಣಮಾಚಾರ್ಯರು	೧೦—೦—೦
ಚೆನ್ನಗಿರಿ ರೀಡಿಂಗ್‌ರೂಂ	೨—೦—೦
ಶ್ರೀಧರ ಲಕ್ಷ್ಮೀನರಸಿಂಹಾಚಾರ್ರು	೫—೦—೦
ಕೋದಂಡ ಬೊಪ್ಪಣ್ಣನವರು	೩—೦—೦
ಸಾಗರ ರೀಡಿಂಗ್ ರೂಂ	೯—೦—೦
ಕೊಂಗುಂಡ್ರಿ ಮುದ್ದಯ್ಯನವರು	೫—೦—೦
ಬಣಕಲ್ಲು ಸುಬ್ಬೇಗೌಡರು	೬—೦—೦
ರೇವಂಗಿಪಟೆಲ್‌ವೆಂಕಟಯ್ಯಗೌಡರು	೫—೦—೦
ಕುಪ್ಪಳಿಪಟೇ ತಿಮ್ಮಯ್ಯಗೌಡರು	೪—೦—೦
ಮೊಳಲಿ ವೆಂಕಟಸುಬ್ಬಯ್ಯನವರು	೪—೦—೦
ಗುಬ್ಬಿಸ್ವರಲ್ಲಿ ಫಣಿಯಪ್ಪನವರು	೫—೦—೦
ಮಂಜೇಶ್ವರನರಸಯ್ಯಶಾನುಭೋಗರು	೫—೦—೦
ವೆಂಕಟಾಚಲಶೆಟ್ಟಿ ಶಿದ್ದೇಗೌಡರು	೯—೦—೦
ಹೈದರಾಬಾದ್‌ಮೂರ್ತಿರಾಯರವರು	೨—೮—೦
ವೆಂಕಟಾಚಲಯ್ಯಂಗಾರ್ರು ರಿ.ಡೆಪ್ಯೂ.	೫—೦—೦

BANGALORE:—Printed and published for the Proprietor at the KARNATIC Press.—1888.

ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA.

ಪ್ರತಿ ಸೋಮವಾರ ಪ್ರಾತಃಕಾಲದಲ್ಲಿ ಪ್ರಕಟಿಸಲ್ಪಡುವದು.

Published every Monday Morning.

[illegible]

Vol XV] BANGALORE—MONDAY, MARCH 5, 1888. [No. 9.

ಸಂಪುಟ ೧೫] ಬೆಂಗಳೂರು—ಸನ್ ೧೮೮೮ನೇ ಇಸವಿ ಮಾರ್ಚಿ ೫ನೇ ತಾರೀಖ್ ಸೋಮವಾರ. [ಸಂಖ್ಯೆ ೯

ಕರ್ಣಾಟಕ ಪ್ರಕಾಶಿಕಾ

ಪತ್ರಿಕೆಯ ಚಂದಾ ದರಗಳು,
೧೮೮೮ನೇ ಇಸವಿ ಜನವರಿ ೧ ನೇ ತಾರೀಖು ಮೊದಲ್ಗೊಂಡು
ಕಡಮೆಮಾಡಲ್ಪಟ್ಟಿರುತ್ತದೆ.

ಈ ಪತ್ರಿಕೆಯ ಚಂದಾದಾರರಲ್ಲಿ ಅನೇಕರ ಅಪೇಕ್ಷೆಯನ್ನನುಸರಿಸುವ ಉದ್ದೇಶದಿಂದಲೂ, ಪರಿಮಿತವಾದ ಆದಾಯವುಳ್ಳವರಿಗೆಲ್ಲ ಈ ಪತ್ರಿಕೆಯು ಸುಲಭವಾಗಿ ಲಭಿಸುವಂತಿರಬೇಕೆಂಬ ಅಭಿಪ್ರಾಯದಿಂದಲೂ ಇದರ ಚಂದಾದರವನ್ನು ಇದರಡಿಯಲ್ಲಿ ಕಂಡಂತೆ ಕಡಮೆಮಾಡಲಾಗಿದೆ:—

ಇಂಗ್ಲಿಷ್ ಮತ್ತು ಕನ್ನಡ ಭಾಗಗಳಿಗೆ

	ಸ್ಥಳದವರಿಗೆ	ಪರಸ್ಥಳದವರಿಗೆ
12 ತಿಂಗಳಿಗೆ	8—0—0	9—0—0
6 „	4—0—0	4—8—0
3 „	2—8—0	2—8—0

ಇಂಗ್ಲಿಷ್ ಅಥವಾ ಕನ್ನಡಭಾಗಗಳಿಗೆ.

	ಸ್ಥಳದವರಿಗೆ	ಪರಸ್ಥಳದವರಿಗೆ
12 ತಿಂಗಳಿಗೆ	4—0—0	5—0—0
6 „	2—0—0	2—8—0
3 „	1—4—0	1—8—0

ಷರಾ—[illegible]

[illegible]

ಪ್ರಕಟನೆಯ ದರಗಳು

[illegible]

"IT RECOMMENDS ITSELF"

ALL WHO SUFFER FIND SURE RELIEF

LITTLE'S

ORIENTAL BALM

THE MOST EFFECTUAL MODERN REMEDY FOR PAIN

ಲಿಟಲ್ ಯವರಿಂದ ತಯಾರಿಸಲ್ಪಟ್ಟ "ಓರಿಯಂಟಲ್ ಬಾಮ್" ಎಂಬ [illegible] ಅಮೂಲ್ಯ ತೈಲವು [illegible] ಮತ್ತು ಸಫಲವಾದ [illegible] ಔಷಧವು. ಇದರಿಂದ [illegible] ನಿವೃತ್ತಿಯಾಗುವವು. ಮುಖ್ಯವಾಗಿ [illegible] ತಲೆನೋವು, [illegible] ಕೀಲುವಾಯು, ಕಟಿವಾಯು, [illegible] ನಿಸ್ಸಂದೇಹವಾಗಿ [illegible] ಪ್ರಯೋಜನವನ್ನುಂಟು [illegible] ಈ ತೈಲವು [illegible] ಅನುಕೂಲವಾದದ್ದು.

ಪರೀಕ್ಷಕರ ಅಭಿಪ್ರಾಯವು.

[illegible] (C R Tichborne, LL.D., F.C.S., M.R.I.A.) [illegible]

ಪದಕ ಪ್ರಾಪ್ತಿ—[illegible]

[illegible]

AGENTS— Messrs, J. W. T., Chemist, &c., Bangalore.
Caleari & Co., Chemists, Bangalore.
Rigas & Co., Chemists, Bangalore, and of
Mahomed Yousoff and Sons, The Cash Bazaar, Bangalore
A. C. Bertyman & Co.,
20 Sunkolloss Street, Madras

NOTICE.

VAIDYASARA SANGRAHA

A TREATISE ON THE PRINCIPLES OF

HINDU MEDICINE

Price including Postage Rs 5 6 0

ವೈದ್ಯಸಾರ ಸಂಗ್ರಹ.

ಈಗ್ರಂಥಾಪೇಕ್ಷೆಯುಳ್ಳವರು [illegible] ಕಳುಹಿಸಲ್ಪಡುವದು. [illegible]

ಇದರ ಕ್ರಯ ... .ರೂ॥ ೫—೦—೦
ಪ್ಯಾಕಿಂಗ್ ಮತ್ತು ಅಂಚೆಹಾಸಲು, ೦—೬—೦

ಟಿ. ಬಿ. ವೆಂಕಟಾಚಾರ್,
ಆಸ್ಪತ್ರೆರೋಡು, ಬೆಂಗಳೂರು

ನೋಟಿಸ್

ಇದರಿಂದ ಸಮಸ್ತಜನಗಳಿಗೂ ತಿಳಿಯಪಡಿಸುವದೇನೆಂದರೆ,—

ಮ್ಯಾಜಿಸ್ಟ್ರೇಟ್ [illegible] ೧೮೮೮ನೇ ಇಸವಿ [illegible] ತಾರೀಖಿನಲ್ಲಿ ಕೊಡಲ್ಪಟ್ಟ [illegible] ನೋಟೀಸ್ಸಿಗೆ [illegible] ಹೋಗುವಂತಾದರೆ [illegible] ಗುರಿಯಾಗುವರು

[illegible] } F. Fawcett, Offg. Dist. Supt. of Police, C & M Station

ನೋಟಿಸ್.

ಬೆಂಗಳೂರಲ್ಲಿನ ಕಂಬ್ಳಿ, ಅರಳೆ, ಮತ್ತು [illegible] ೧೦೦೦ [illegible] ವರಿವಿಗೆ [illegible] ಅಥವಾ [illegible] ಕಾಗಿರುವದರಿಂದ ಅದರ ಸರಬರಾಯಿ [illegible] ಕೂಡಲ್ಪಡುವದು.

ದರಖಾಸ್ತು [illegible] ಕಚೇರಿಯಲ್ಲಿ ಪಡೆಯಬಹುದು.

ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA.

MONDAY, MARCH 5, 1888.

೧೮೮೮ನೇ ಮಾರ್ಚಿ ೫ನೇ ತಾ॥ ಸೋಮವಾರ.

H. H. THE MAHARAJA'S COUNCIL.

ಶ್ರೀಮನ್ ಮಹಾರಾಜರವರ ಮಂತ್ರಾಲೋಚನಾ ಸಭೆಯ ಮೆಂಬರುಗಳಲ್ಲೊಬ್ಬರಾದ [illegible] ಕೃಷ್ಣರಾಯರವರು [illegible] ಈ ಪತ್ರಿಕೆಯ [illegible]

[illegible]

ಬಂದಾಗ ಮಹಾರಾಜಾಸಭೆಯಲ್ಲಿ ಧೈರ್ಯದೊಡನೆ ವ್ಯಕ್ತಪಡಿಸಿ ವಾದಿಸಿ ವಿಚಾರಿಸಲಿಕ್ಕೆ ಸಹ ಶಕ್ತರಾದವರು ಹಲಾನೆಯವರೆಂದು ಸೂಕ್ಷ್ಮದೃಷ್ಟಿಯಿಂದಾಲೋಚಿಸಿ, ಶ್ರೀಮನ್ಮಹಾರಾಜ ಸನ್ನಿಧಿಯಲ್ಲಿ ವಿಜ್ಞಾಪಿಸಿಕೊಳ್ಳುವದು ಅವಶ್ಯಕವೆಂದು ಭಾವಿಸುವೆವು ಮಹಾರಾಜರವರ ಕೌನ್ಸಿಲ್ ಸ್ಥಿತಿಯಂ ಕುರಿತು ಹಿಂದೆ ಅನೇಕ ಸಂದರ್ಭಗಳಲ್ಲಿ ವಿಚಾರಮಾಡಿ, ಅದು ಬಲಪಡಿಸಿ ಸ್ವರೂಪತಃ ಸತ್ವವುಳ್ಳದ್ದಾಗಿರುವಂತೆ ಮಾಡಬೇಕೆಂಬದಾಗಿಯೂ, ಅದರ ಮೆಂಬರುಗಳ ಸಂಖ್ಯೆಯನ್ನು ವೃದ್ಧಿಗೊಳಿಸಬೇಕಾದದಲ್ಲದೆ ಸರ್ಕಾರ್ ನೌಕರರಲ್ಲದವರು ಸಹ ಮೆಂಬರುಗಳನ್ನಾಗಿ ಚುನಾಯಿಸಿ ನೇಮಕರನ್ನಾಗಿ ಮಾಡಬೇಕೆಂತಲೂ, ಅವರೆಲ್ಲರೂ ಪ್ರಜೆಗಳಿಂದನಿಯಮಿತರಾದವರಾಗಿರಬೇಕೆಂತಲೂ ಅಂತಾ ಮೆಂಬರುಗಳನ್ನು ಅರ್ಧಮೂಲಕವಾದ ಮುಖ್ಯ ಅಧಿಕಾರ ಪ್ರಯುಕ್ತವಾದ ದಾಕ್ಷಿಣ್ಯಾದಿಗಳಿಗೊಳಪಡಿಸುವದನುಚಿತವೆಂತಲೂ, ಈರೀತಿ ಮಾಡಿದ್ದಾದರೆ ಅದು ಕಾರ್ಯ ನಿರ್ವಾಹಕ ಸಭೆಯಾಗಿ ಮಹಾರಾಜರವರಿಗೆ ಆಡಳಿತ ವಿಷಯದಲ್ಲಿ ಸಹಾಯಕವಾಗಿರುವದೆಂತಲೂ, ಆಗ ಬ್ರಿಟಿಷ್ ಗವರ್ನಮೆಂಟಿನವರ ಉದ್ದೇಶ್ಯವು ಸಿದ್ಧಿಸಬಹುದೆಂತಲೂ, ತಿಳಿಸಿದ್ದೆವು. ಇದಕ್ಕೆ ಒಬ್ಬರೂ ನಿಗೇ ಕೊಡದೆ ಹೋದದರಿಂದ ಪ್ರಕೃತ ಕೌನ್ಸಿಲ್ ಕೇವಲ ಅನುಪಯುಕ್ತವಾದದ್ದೆಂತಲೂ, ಪ್ರತಿಷ್ಠಾ ಬೋಧಕವಾದ ಆಡಂಬರಗಳಲ್ಲಿಯೂ ಒಂದೆಂತಲೂ, ಸ್ವದೇ[illegible]ಪಡಿಸಲಿಕ್ಕೆ ಕಾರಣವಾಗಿದೆ. ಗತ ಏಳುವರುಷಗಳಕಾಲವಾಗಿ ನೆಲಗೊಂಡಿದ್ದ ಈ ಕೌನ್ಸಿಲಿನಿಂದ ಈರಾಜ್ಯಕ್ಕೇನು ಪ್ರಯೋಜನ ಉಂಟಾಯಿತೆಂದು ಯಾವನಾದರೊಬ್ಬನು ಕೇಳುವನಾದರೆ, ಅದಕ್ಕೆ ಸರ್ಕಾರದವರಾಗಲಿ, ಅವರ ಪ್ರಜೆಗಳಾಗಲಿ, ಏನು ಉತ್ತರಕೊಡುವಂತಿದಾರೆಯೊ ನಾವರಿಯೆವು. ಈ ವಿಷಯದಲ್ಲಿ ನಮಗೆ ತಿಳಿದ ಮಟ್ಟಿಗೆ ಸುಮಾರ್ ಲಕ್ಷರೂಪಾಯಿಗಳ ತನಕ ಸರ್ಕಾರಕ್ಕೆ ವ್ಯಯವಾದದ್ದು ವಿನಾ ಮತ್ತೊಂದೂ ಗೋಚರವಲ್ಲದೆ ಇದೆ. ಈ ಕೌನ್ಸಿಲಿಗಳು ಇದುವರಿವಿಗೆ ಯಾವ ವಿಷಯವನ್ನು ಕುರಿತು ವಿಚಾರಮಾಡಿದರೋ, ಯಾವರೀತಿ ನಿರ್ಣಯಿಸಿದರೋ ಅದು ಒಬ್ಬರಿಗೂ ತಿಳಿಯಲಸಾಧ್ಯವಾಗಿದೆ. ಮೆಂಬರುಗಳ ಪೈಕಿ ಯೊಬ್ಬರು ತಮ್ಮ ಕರ್ತವ್ಯವೆನ್ನನ್ನೆನಿಗರುಹವೆಯೋ ಗೂಢವಾಗಿದ್ದು ಇಹಲೋಕ ಸಂಬಂದವು ನಿವೃತ್ತಿಸಿಕೊಂಡರು. ಅನ್ಯರು ಔದಾಸೀನ್ಯದಿಂ ಕಾಲಹರಣ ಮಾಡುತಲಿದಾರೆ. ಇತರರು ಜೆಗುಪ್ಸೆಯಿಂದ ತಟಸ್ಥರಾಗಿ ನಿವೃತ್ತಿ ಸುಖಾಪೇಕ್ಷೆಯೊಡನೆ ಮುಂದಕ್ಕೆ ಪ್ರಯಾಣೋನ್ಮುಖರಾಗಿದಾರೆ ಏನಾಚ ಕೌನ್ಸಿಲ್‌ಸ್ಥಿತಿಯಂಪರ್ಯಾಲೋಚಿಸಲಾಗಿ, ಅದನ್ನಿರೀತಿ ಇಟ್ಟುಕೊಂಡಿರುವದಕ್ಕಿಂತಲೂ, ವಜಾ ಮಾಡುವದು ಒಂದು ಭಾಗದಲ್ಲಿ ಯೋಗ್ಯವೆಂದು ತೋರುತಿದೆ ಹಾಗಿಲ್ಲದೆ ವ್ಯವಸ್ಥಿತರಾಜ್ಯ ತಂತ್ರದಿಂದುಂಟಾದ ಸೌಭಾಗ್ಯಗಳೆಲ್ಲ ಈ ರಾಜ್ಯಕ್ಕೂ ಇರಬೇಕೆಂದು ಭಾವಿಸುವ ಪಕ್ಷಕ್ಕೆ ಅದು ಯಾವ ರೀತಿಯಲ್ಲಿಟ್ಟಿರಬೇಕೋ ಆ ರೀತಿ ಇಡಬೇಕಾದ್ದು ಆವಶ್ಯಕವಾಗಿರುತಿದೆ. ಪ್ರಸಕ್ತ ಕೌನ್ಸಿಲಿನಲ್ಲಿ ಮಹಾರಾಜರವರು ಸ್ವತಃ ಅಧ್ಯಕ್ಷರಾಗಿರಬೇಕೆಂಬ ಇಂಡ್ಯ ಗವರ್ನಮೆಂಟಿನವರ ಅಭಿಪ್ರಾಯವನ್ನೂ ಪ್ರಜೆಗಳ ಅಪೇಕ್ಷೆಯನ್ನೂ ಮದರಾಸ್ ಹಿಂದೂಪತ್ರಿಕೆಯು ಅನುಮೋದಿಸಲಿಲ್ಲವು. ಮಹಾರಾಜರವರು ಪ್ರೆಸಿಡೆಂಟರಾಗಿದ್ದರೆ ಮೀಟಿಂಗ್ ಕಾಲದಲ್ಲಿ ವಿಚಾರಣೀಯಗಳಾದ ವಿಷಯಗಳು ಮೆಂಬರುಗಳ ಬಹು ಸಂಖ್ಯಾಭಿಪ್ರಾಯಾನುಸಾರ ವಿಮರ್ಶೆಯಾಗಬೇಕಾಗುವದಾಗಿ, ಮಹಾರಾಜರಿಗೆ ಯಾವ ಪ್ರಾಶಸ್ತ್ಯವೂ ಇಲ್ಲದೆ ಹೋಗುವದು. ಮತ್ತು ಅವರು ಮೆಂಬರುಗಳ ಅಭಿಪ್ರಾಯಗಳಿಗೆ ಬದ್ಧರಾಗಬೇಕಾಗುವದು. ಆದದರಿಂದ ನಾವಾಗಿ ಅವರ ದರ್ಜೆಗೆ ಲೋಪವನ್ನುಂಟುಮಾಡಿದಂತೆಯಾಗುತಿದೆಯಾಗಿ ಆ ಸಲಹೆಯು ಸಮಂಜಸವಲ್ಲವೆಂದು ಸದರೀ ಪತ್ರಿಕೆ ಅಭಿಪ್ರಾಯ ಪಡುತಿದೆ ಮೇಲೆ ಕಂಡ ಪತ್ರಿಕೆಯು ಒಬ್ಬ ನೇಟಿವ್ ಅರಸರ ಪ್ರಾಶಸ್ತ್ಯವನ್ನು ಮಾತ್ರ ಆಲೋಚಿಸಿದ್ದಾಯಿತೇ ಹೊರತು ಪ್ರೆಸಿಡೆನ್ಸೀ ಗವರ್ನರುಗಳಿಗೂ, ವೈಸರಾಯಿಯವರಿಗೂ, ಸ್ಟೇಟ್ ಸೆಕ್ರೆಟರಿಯವರಿಗೂ, ಶ್ರೀಮನ್ಮಹಾರಾಜ್ಞೀಯವರಿಗೂ, ಅವರವರ ಮಂತ್ರಾಲೋಚಕ ಸಮಾಜಗಳಲ್ಲಿರುವ ಅಧಿಕಾರಸ್ವಾತಂತ್ರ್ಯ ಸ್ವರೂಪವನು ಕುರಿತು ಸ್ವಲ್ಪವೂ ಚಿಂತಿಸದೆ ಹೋಯಿತು. ವೈಸರಾಯಿಯವರಿಗೆ ವಿರುದ್ಧಗಳಾದ ಅನೇಕ ವಿಷಯಗಳು ಮೆಂಬರುಗಳ ಅಭಿಪ್ರಾಯಗಳ ಮೇಲೆ ಜಾರಿಗೆ ಬರುತಿವೆ. ತಾವನ್ಮಾತ್ರದಿಂ ವೈಸ್ ರಾಯಿಯವರ ಗೌರವಕ್ಕೆ ನ್ಯೂನತೆ ಯುಂಟಾದುತೆ ಹೇಳಬಹುದೆ? ಅಥವಾ ಅವರು ಅಗ್ರಾಸನಾಧಿಕರಾಗಿರಲಾಗದೆಂದು ನುಡಿಯುವದುಚಿತವೆ? ಮಹಾರಾಜ್ಞೀಯವರ ಮಂತ್ರಿ ಸಮಾಜದಲ್ಲಿ ಆಕೆಯವರಿಗೆ ಅನಭಿಮತವಾಗಿ ಎಷ್ಟು ವಿಷಯಗಳು ವಿಮರ್ಶೆಗಳಾಗುವದಿಲ್ಲವು ಇದರಿಂದ ಸಾರ್ವಭೌಮರಾದ ಅವರ ಅಧಿಕಾರ ಪ್ರಾಭವಗಳಿಗೆ ಚ್ಯುತಿ ಯುಂಟಾದುದಾಯಿತೆ? ಅಂತವದ ವಿಷಯವಲ್ಲೀ ಆರೀತಿ ಭಾವಿಸಲ್ಪಡುವ ಪಕ್ಷಕ್ಕೆ ಅವರಿಂದ ಕ್ಷೀಣತರಾದ ಸಂಸ್ಥಾನಾಧಿ ಪತಿಗಳಿಗಾಗಿ ನಾವು ಬಾಧೆ ಪಡಬೇಕಾದುದಿಲ್ಲವು. ಆದಕಾರಣ ಇದರಿಂದ ಮಹಾರಾಜರಿಗೊಂದು ನ್ಯೂನತೆಯೆಂದು ಅಭಿಪ್ರಾಯಪಡುವದು ಅಸಂಗತವಾಗಿರುತಿದೆ. ನಾವು ಹಿಂದೆ ತಿಳಿಸಿದ್ದಂತೆಯೂ ಗವರ್ನಮೆಂಟಿನವರ ಡೆಸ್ಪ್ಯಾಚ್‌ನಲ್ಲಿ ಕಂಡತೆ ತಿಳಿಸಿರುವಂತೆಯೂ, ನಿಜವಾಗಿರುವ ಪಕ್ಷಕ್ಕೆ ಈಗ ಹೈದರಾಬಾದ್ ಸಂಸ್ಥಾನದೊಳು ಆಚರಣೆಯೊಳಿರುವಂತೆಯೂ, ಮಹಾರಾಜರವರು ಸ್ವತಃ ಪ್ರೆಸಿಡೆಂಟರಾಗಿರುತ, ಆಯಾ ಇಲಾಖೆಗೆ ಸೇರಿದ ಮುಖ್ಯಾಧಿಕಾರಿಗಳನ್ನು ತಮ್ಮ ಕೌನ್ಸಿಲರುಗಳನ್ನಾಗಿ ನೇಮಕಮಾಡಿ, ಅವರ ತರ್ಕವ್ಯವನ್ನು ನಿಷ್ಕರ್ಷಿಸಿ ಅದರಂತೆ ನಡೆಸುತಬಂದರೆ, ಆಗ ಉದ್ದಿಷ್ಟ ಫಲವು ಒಂದುವೇಳೆ ಲಭಿಸದರೆ ಲಭಿಸಬಹುದೇ ಹೊರತು ಇಲ್ಲದ ಪಕ್ಷಕ್ಕೆ ಅದರಿಂದ ಒಬ್ಬರಿಗೂ ಪ್ರಯೋಜನ ಉಂಟಾಗಲಾರದು ಈ ಸಂಸ್ಥಾನಕ್ಕೆ ಇರಬೇಕಾದ ಅಂಗಗಳಲ್ಲೇನೂ ಕೊರತೆಯಿಲ್ಲವು. ಜ್ಯುಡಿಷಲ್ ಬಾಬಿನೊಳು, ಚೀಫ್‌ಕೋರ್ಟು ಮೂವರು ಜಡ್ಜಿಗಳು, ಪೋಲೀಸ್, ರಿಜಿಸ್ಟ್ರೇಷನ್, ಫಾರೆಸ್ಟ್, ಅಗ್ರಿಕಲ್ಚರ್ ವಿಷಯಗಳಲ್ಲಿ ಇನ್ಸ್ಪೆಕ್ಟರ್ ಜನರಲ್‌ಗಳು, ಪಬ್ಲಿಕ್ ವರ್ಕ್ಸ್, ಎಡ್ಯುಕೇಷನ್, ಲೆಜಿಸ್ ಲೆಟಿವ್, ಇವುಗಳಲ್ಲಿ ಆಯಾ ಸೆಕ್ರೆಟರಿಗಳು ಸಲಹೇದಾರರಾಗಿರುತ ಮಹಾರಾಜರವರಿಗೆ ಬೇಕಾದ ಅನುಭವವನ್ನುಂಟುಮಾಡಲಿಕ್ಕೆ ಸನ್ನದ್ಧರಾಗಿಯೂ ಸಮರ್ಥರಾಗಿಯೂ, ಕುತೂಹಲವುಳ್ಳವರಾಗಿಯೂ ಇರುತಲಿದಾರೆ. ಇವರನ್ನೆಲ್ಲ ಯಾತಕ್ಕೆ ಖಾಸ್ಗೀ ಮೆಂಬರುಗಳನ್ನಾಗಿ ಸೇರಿಸಿಕೊಳ್ಳಬಾರದೊ ನಾವರಿಯೆವು. ಇವರೇ ಮೆಂಬರುಗಳಾಗಿದ್ದರೆ ಪ್ರತ್ಯೇಕ ತಲಬ್ ಖರ್ಚು ಬೀಳಲಿಕ್ಕೂ, ತನ್ಮೂಲಕ ಬೇಕಾದವರಿಗೊಂದು ಪ್ರಯೋಜನ ಕಲ್ಪನಾಪೂರ್ವಕ ಅವರಂ ತೃಪ್ತಿಗೊಳಿಸಲಿಕ್ಕೂ ಅವಕಾಶವಿಲ್ಲದೆ ಹೋಗುತಿದೆಯಲ್ಲಾ ಎಂಬದೊಂದು ಪ್ರಬಲ ಕಾರಣ ವಿನಾ ಮತ್ಯಾವ ಭಾಗದಲ್ಲೂ ನಮಗೆ ಬಾಧಕ ಕಂಡುಬರುವದಿಲ್ಲವು. ಮುಖ್ಯವಾಗಿ ಪ್ರಸಕ್ತ ಕೌನ್ಸಿಲಿನ ಕ್ರಮವು ಈಗ ನೇಮಕರಾಗತಕ್ಕ ಮೆಂಬರಿನ ಯೋಗ್ಯತಾ ಧೀನವಾದದ್ದಾಗಿರುತಿದೆ. ಇದಕ್ಕೆ ಯಾರು ನೇಮಕರಾಗುವರೋ ಯೆಂದು ಜನಗಳು ಆತುರದೊಡನೆ ನಿರೀಕ್ಷಿಸುತಲಿರುವದರಿಂದ ಗವರ್ನಮೆಂಟಿನವರು ಸಾಧ್ಯವಾದಷ್ಟು ತ್ವರೆಯೊಳು ಅದಂ ಹೊರಪಡಿಸುವರಾದರೆ ಆಗ ಅವರು ನಿರ್ಭರರಾಗಿರುವರು.

THE BRITISH RESIDENTSHIP

ಪಂಜಾಬುದೇಶದ ಲೆಪ್ಟಿನೆಂಟ್ ಗವರ್ನರಾಗಿರುವ ಮೆ|| ಲೈಲ್‌ಯವರು ಇಲ್ಲಿನ ಬ್ರಿಟಿಷ್ ರೆಸಿಡೆಂಟ್ ಕೆಲಸದಿಂದ ನಿವೃತ್ತರಾದ ಕಾಲದಲ್ಲಿ ಅವರ ಕೆಲಸಕ್ಕೆ ಸರ್ ಚಾರ್ಲೆಸ್ ಬರ್ನಾರ್ಡ್ ಯವರು ನೇಮಕರಾಗಲ್ಪಟ್ಟದ್ದೂ, ಪರಂತು ಅವರು ಒಂದು ಸಂವತ್ಸರ ಫರ್ಲೋ ರಜಾ ಪಡೆದು ಇಂಗ್ಲಾಂಡಿಗೆ ಹೋದದರಿಂದ ಅವರ ಗೈರಹಾಜರೀಯಲ್ಲಿ ಇಲ್ಲಿನ ರೆಸಿಡೆಂಟಿ ಕೆಲಸವನ್ನು ಸರ್ ಹಾರಿ ಪ್ರೆಂಡರ್ ಗ್ಯಾಸ್ಟ್ ಯವರು ನಿರ್ವಹಿಸುತಲಿರುವಂತೆ ವ್ಯವಸ್ಥೆಯಾಗಿ ಅವರು ಬದಸ್ತೂರ್ ಇದುವರಿವಿಗೆ ಆಕ್ಟಿಂಗ್ ತರೀಕ್ ಕೆಲಸವ ನೋಡುತಲಿರುವದೂ, ಪ್ರಸಿದ್ಧವಾಗಿದೆಯಷ್ಟೆ. ಈಗ ಸರ್ ಬರ್ನಾರ್ಡ್‌ಯವರ ರಜಾ ಕಾಲವು ಪೂರೈಸುತಬಂದದರಿಂದ ಇವರ ವಿಷಯದೊಳುಂಟಾಗಿರುವ ಪ್ರವಾದಗಳು ಪ್ರತಿ ಕ್ಷಣದಲ್ಲಿಯೂ ವಿಜಾತೀಯಗಳಾಗಿಯೂ, ಅನಿಯತಗಳಾಗಿಯೂ ಇರುತಲಿದ್ದವು. ಇವರು ರಜಾ ಪೂರೈಸಿದಬಳಿಕ ಹೈದರಾಬಾದಿಗೆ ಹೋಗಿ, ಅಲ್ಲಿನ ರೆಸಿಡೆಂಟರಾದ ಮೆ|| ಕಾರ್ಡೆರೀಯವರಿಗೆ ಬದಲು ನೇಮಕರಾಗುವರೆಂಬದಾಗಿ ಈಗ್ಯೆ ಕೆಲವು ದಿವಸಗಳ ಹಿಂದೆ ಬಲವಾದ ಪ್ರವಾದ ಉಂಟಾಗಿತ್ತು. ತರುವಾಯ ಇಲ್ಲಿಗೆ ತಾವು ಬರುವದಾಗಿರುವಂತೆ ಇಲ್ಲಿನ ಒಬ್ಬ ದೊಡ್ಡ ಮನುಷ್ಯರಿಗೆ ಕಾಗದ ಬರೆದಿದ್ದರೆಂದು ಮತ್ತೊಂದು ವೃತ್ತಾಂತ ತಲೆದೋರಿ ಪ್ರಚಾರಗೊಂಡಿತ್ತು. ಸರ್ ಬರ್ನಾರ್ಡ್‌ಯವರು ಇಂಡ್ಯದೇಶಕ್ಕೆ ಪ್ರಯಾಣೋನ್ಮುಖರಾಗಿ ಸ್ಟೀಮರ್ ಸಹ ಗೊತ್ತುಮಾಡಿದಾರೆಂದು ಓವರ್ ಲ್ಯಾಂಡ್ ಮೆಯಿಲ್ ಮೂಲಕ ತಿಳಿಯಬಂದದರಿಂದಲೂ, ಕ್ರಮವಾಗಿ ಸ್ವದೇಶವಂ ಬಿಟ್ಟು ಪ್ರಯಾಣವಾದಂತೆ ಪಯೋನಿಯರ್ ಪತ್ರಿಕೆ ತಿಳಿಸಿದ್ದದರಿಂದಲೂ, ಮೇಲೆಕಂಡ ವೃತ್ತಾಂತವು ವೃಥಪಡಲಿಕ್ಕೆ ಕಾರಣವಾಯಿತು. ಗತವಾರದಲ್ಲಿ ಬಂದ ರೂಟರ್ ಯವರ ತಂತಿ ವೃತ್ತಾಂತವು ಮೇಲೆ ಕಂಡ ಅನುಮಾನ ಪ್ರತ್ಯಯಗಳನ್ನೆಲ್ಲ ನಿವೃತ್ತಿಗೊಳಿಸಿ, ಈಚೆಗೆ ಮೈಸೂರು ರೆಸಿಡೆಂಟರಾಗಿ ನೇಮಕರಾದ ಸರ್ ಬರ್ನಾರ್ಡ್‌ಯವರು ಕಡೆಗೆ ತಾವು ಇಂಡ್ಯದೇಶಕ್ಕೆ ಯೋಗದಿರುವಂತೆ ನಿಶ್ಚಯಿಸಿದರೆಂತಲೂ, ಸ್ಟೇಟ್ ಸೆಕ್ರೆಟರಿಯವರ ಸೆಕ್ರೆಟರಿಗಳಲ್ಲೊಬ್ಬರಾಗಿ ನೇಮಕರಾದರೆಂತಲೂ, ಈಚೆಗೆ ಕೆಲಸಕ್ಕೆ ರಾಜೀನಾಮೆ ಕೊಟ್ಟ ಮೆ|| ಪೀಲ್ ಯೆಂಬವರಿಗೆ ಬದಲು ನೇಮಕರಾಗುವರೆಂತಲೂ, ತಿಳಿಸುತಿದೆ. ಸರ್‌ಬರ್ನಾರ್ಡ್‌ಯವರ ಶೀಲಸ್ವಭಾವವನ್ನೂ ಅವರು ಬರ್ಮಾದೇಶವಂಬಿಟ್ಟು ಹೊರಟ ಸಂದರ್ಭವನ್ನೂ ಅರಿತವರೆಲ್ಲ ನಮ್ಮಂತೆ ಪ್ರಕೃತ ಪರ್ಯಾಯದ ಕೇಳಿ ಆಶ್ಚರ್ಯ ಪಡಲಾರರೆಂದೆಣಿಸುತ್ತೇವೆ. ಮೆ|| ಬರ್ನಾರ್ಡ್‌ಯವರು ಮೈಸೂರು ರೆಸಿಡೆಂಟ್ ಕೆಲಸವನ್ನು ಅಂಗೀಕರಿಸಿದ ಪಕ್ಷಕ್ಕೆ ತಾವಾಗಿ ಪ್ರಾಯಶ್ಚಿತ್ತಗೊಳ್ಳಗಾದಂತೆಯಾಗಿರುವದು, ಹ್ಯಾಗಂದರೆ,—ಅವರು ನಿರ್ವಹಿಸುತಲಿದ್ದ ಬರ್ಮಾ ಚೀಫ್‌ಕಮಿಷನರ್ ಕೆಲಸವು ಬಹಳ ಜವಾಬ್ದಾರೀಯುಳ್ಳದ್ದಾಗಿಯೂ, ಇತರಾಪೇಕ್ಷಯಾ ವಿಶೇಷಗೌರವವುಳ್ಳದ್ದಾಗಿಯೂ, ಪುರೋಭಿವೃದ್ಧಿಗೆ ಅವಕಾಶವುಳ್ಳದ್ದಾಗಿಯೂ, ಇದ್ದದರಿಂದ ಅಂತಾ ಅಧಿಕಾರ ಪದದೊಳು ಬರ್ಮಾ ರಾಜ್ಯಕ್ಕೆಲ್ಲ ಮುಖ್ಯಾಧಿಕಾರಿಯಾಗಿದ್ದವರು ಒಂದು ಸಂಸ್ಥಾನದ ರೆಸಿಡೆಂಟ್ ಕೆಲಸವನ್ನೂ, ಒಂದು ಸಣ್ಣ ರಾಜ್ಯದ ಚೀಫ್ ಕಮಿಷನರ್ ಕೆಲಸವನ್ನೂ ಆಶಿಸುವದು, ಒಂದು ಪ್ರೆಸಿಡೆನ್ಸೀ ಗವರ್ನರಿಗೆ ಒಂದು ಡಿಸ್ಟ್ರಿಕ್ಟ್ ಕಲೆಕ್ಟರಿಗೂ ಇರುವ ತಾರತಮ್ಯವುಳ್ಳದ್ದಾಗಿರುವದು. ಆದದರಿಂದ ಸರ್ ಬರ್ನಾರ್ಡ್‌ಯವರು ಇಲ್ಲಿನ ರೆಸಿಡೆಂಟ್‌ಕೆಲಸವನ್ನಂಗೀಕರಿಸದೆ ಹೋದದ್ದು ಅವರಿಗೆ ಬಹಳ ಗೌರವವೆಂತಲೇ ಎಣಿಸುವೆವು. ಆದರೆ ಒಳ್ಳೇ ರಾಜ್ಯತಂತ್ರಜ್ಞರಾಗಿಯೂ, ಸಮರ್ಥರಾದ ಕಾರ್ಯಕರ್ತರಾಗಿಯೂ ಪ್ರಜಾಭಿಮಾನಿಯಾದ ಪ್ರಭುವಾಗಿಯೂ, ಇಂಡ್ಯ ಗವರ್ನಮೆಂಟಿನವರ ಪ್ರೀತಿಗೌರವಗಳಿಗೆ ಪಾತ್ರರಾದವರಾಗಿಯೂ, ಇರುವವರಿಂದ ಇಂತವರ ಸಂಬಂಧವು ಈ ದೇಶಕ್ಕೆ ಲಭಿಸದೆ ಹೋದದಕ್ಕಾಗಿ ನಾವು ಸ್ವಲ್ಪ ಚಿಂತಿಸಬೇಕಾಗಿದೆ. ಸರ್ ಬರ್ನಾರ್ಡ್‌ಯವರು ತಮ್ಮ ಅನೇಕ ಸುಗುಣಗಳಿಂದ ಪ್ರಸಿದ್ಧರಾದ ಮದರಾಸ್ ಗವರ್ನರ್ ಸರ್ ಚಾರ್ಲೆಸ್ ಟ್ರವಿಲಿಯನ್ ಯವರ ಸ್ಮರಣೆಯಂ ಅನವರತ ಜನಗಳಿಗೆ ತರತಕ್ಕವರಾಗಿರುತ್ತಾರೆ. ಬರ್ಮಾರಾಜ್ಯವು ಬ್ರಿಟಿಷರವರ ಸ್ವಾಧೀನವಾದ ಮೇಲೆ ಅಲ್ಲಿನ ಪ್ರಜೆಗಳ ವಿಷಯದೊಳು, ಇಂಡ್ಯ ಗವರ್ನಮೆಂಟಿನವರು, ಸ್ಟೇಟ್‌ಸೆಕ್ರೆಟರಿಯವರ ಅಭಿಮತವೊಡನೆ ಅವಲಂಬಿಸಿದ ರಾಜ್ಯತಂತ್ರ ಕ್ರಮವನ್ನೂ, ಅವರಲ್ಲಿ ಜಾರಿಯೊಳು ತರಲಿಚ್ಛಿಸಿದ ಸೈನಿಕ ನ್ಯಾಯ ನಿಬಂಧನೆಗಳ ಕಾಠಿಣ್ಯವನ್ನೂ ಸರ್ ಬರ್ನಾರ್ಡ್‌ಯವರು ಅಂಗೀಕರಿಸದೆ ಬಹಳವಾಗಿ ಆಕ್ಷೇಪಿಸಿದರು. ಇದರಿಂದ ಇವರ ಹೃದಯವು ಬಹಳ ಅನುರಾಗ ಉಳ್ಳದ್ದೆಂದು ಊಹಿಸಬಹುದು. ಏತೇನ ಈ ಆಫೀಸರು ಇಲ್ಲಿಗೆ ಬರುವದಿಲ್ಲವೆಂದೇರ್ಪಟ್ಟದ್ದರಿಂದ ಮುಂದೆ ಅವರ ಸ್ಥಾನಕ್ಕೆ ಬರತಕ್ಕವರ್ಯಾರೆಂಬ ವಿಚಾರ ಉಂಟಾಗಬೇಕಾದದ್ದು ಸಹಜವಾಗಿರುತಿದೆ. ಸರ್‌ಹಾರಿ ಪ್ರೆಂಡರ್‌ಗ್ಯಾಸ್ಟ್‌ಯವರು, ಪ್ರಾಯಶಃ ಪ್ರಕೃತ ಕೆಲಸದಲ್ಲಿ ಕಾಯಂ ಮಾಡಲ್ಪಡಬಹುದೆಂಬ ನಂಬಿಕೆಯು ಇಲ್ಲಿನವರನೇಕರಿಗೆ ಉಂಟಾಗಿರುತದೆ. ಇವರಿಗೆ ಗವರ್ನಮೆಂಟಿನವರು ಅನ್ಯತ್ರ ಬೇರೊಂದು ಕೆಲಸವನ್ನಾದರು ನಿಯಮಿಸಬೇಕಾಗಿರುವದರಿಂದ ಇಲ್ಲಿಯೇ ಕಾಯಂ ಮಾಡಿದ್ದಾದರೆ ಬಹಳ ಯೋಗ್ಯವಾಗಿರುವದು.

Occasional Notes
ನೈಮಿತ್ತಿಕ ವಿಷಯನ್ಯಾಸ.

Floods —ಚೀನಾದೇಶದಲ್ಲಿನ ಹೊಯಾಂಗೊ ಎಂಬ ನದಿಯಲ್ಲಿ ಕೇವಲ ಭಯಂಕರವಾದ ಪ್ರವಾಹ ಹರಿದು ಅದರ ದೆಸೆಯಿಂದ ಇಪ್ಪತ್ತು ಲಕ್ಷ ಪ್ರಜೆಗಳು ತಮ್ಮ ಸರ್ವಸ್ವವನ್ನು ಹೋಗಲಾಡಿಸಿ ಕೊಂಡರೆಂದು ತಿಳಿಯಬರುತಿದೆ

An inconsiderate step —ಕ್ರೂರವಾದ ಕಾಡುಮೃಗಗಳನ್ನೂ ವಿಷಜಂತುಗಳನ್ನೂ ನಾಶಪಡಿಸುವವರಿಗೆ ಸರ್ಕಾರದವರು ಇನಾಂಗಳನ್ನು ಕೊಡುವವಾಡಿಕೆ ಇದುವರಿವಿಗೆ ನೆಲಗೊಂಡಿದ್ದಷ್ಟೆ ಅದನ್ನು ತಪ್ಪಿಸಬೇಕೆಂಬ ಆಲೋಚನೆಯಿಂದ ಗವರ್ನಮೆಂಟಿನವರು ಆಯಾ [illegible] ಇಲಾಖಾ ಅಧಿಕಾರಿಗಳ ಅಭಿಪ್ರಾಯಗಳನ್ನು ತಿಳಿಸುವಂತೆ ಅಪೇಕ್ಷಿಸಿರುವದಾಗಿ ಒಂದಾನೊಂದು ಪತ್ರಿಕೆ ಹೇಳುತಿದೆ.

The Hyderabad Residency —ಹೈದರಾಬಾದ್ ರೆಸಿಡೆಂಟರಾದ ಮೆ|| ಕಾರ್ಡೆರೀಯವರು, ತಮಗೆ ಕೊಡಲ್ಪಟ್ಟಿರುವ ನಾಲ್ಕು ತಿಂಗಳ ರಜಾವನ್ನು ಈ ತಿಂಗಳ ೧೦ನೇ ತಾರೀಖ್ ಮೊದಲು ಉಪಯೋಗಿಸಿಕೊಂಡು ಹೊರಟು ಹೋಗುವರೆಂತಲೂ, ಸದರೀ ರಜಾಕಾಲ ಕಳೆದ ಕೂಡಲೇ ಕೆಲಸವ ಬಿಟ್ಟು ನಿವೃತ್ತಿ ಸುಖವಂ ಪಡೆಯಬೇಕೆಂದು ಯೋಚಿಸಿರುವದಾಗಿಯೂ ಹೈದರಾಬಾದ್ ಪತ್ರಿಕೆಯೊಂದು ತಿಳಿಸುತಿದೆ

Production of diamonds —ಆಫ್ರಿಕಾ ಖಂಡದೊಳಗಣ ಕಿಂಬರ್ಲೀ ಯೆಂಬದೇಶದಲ್ಲಿನ ವಜ್ರದ ಗಣಿಗಳು ನಾಲ್ಕರಿಂದಲೂ ೧೮೮೬ನೇ ಸೆಪ್ಟಂಬರ್ ತಿಂಗಳ ಆಗಾಯತು ಡಿಸಂಬರ್ ೩೧ನೇ ತಾರೀಖ್ ವರಿವಿಗೆ ೭೬,೬೦,೬೩೮ ಕ್ಯಾರಟ್‌ತೂಕವಜ್ರದ ಹರಳುಗಳುಸಿಕ್ಕಿದವು. ಅದರಕ್ರಯ ೪೦,೯೯,೩೪೭ ಪೌಂಡುಗಳು. ೧೮೮೬ನೇ ಇಸವಿ ಒಂದಕ್ಕೆ ೩೦,೮೭,೮೦೦ ಕ್ಯಾರಟ್‌ಗಳುದೊರೆತು, ೩೦,೯೧,೩೮೪ ಪೌಂಡುಗಳಕ್ರಯವಾಯಿತು.

Charity.—೧೮೮೭ನೇ ಇಸವಿಯಲ್ಲಿ ಪಂಜಾಬ್ ದೇಶದಲ್ಲಿ ಸಾಮಾನ್ಯವಾಗಿ ಪ್ರಜೆಗಳ ಉಪಯೋಗಾರ್ಥ, ಒಂದೊಂದುಕೆಲಸಕ್ಕೆ ನೂರರಿಂದ ಅಯಿದುಸಾವಿರ ರೂಪಾಯಿಗಳ ತನಕ ಆಗವದು ತಗಲುವಂತಾ ತೋಟಗಳು, ಬಾವಿಗಳು, ಸತ್ರಗಳು, ಕೆರೆ ಕುಂಟೆಗಳು, ಸೇತುವೆಗಳು, ರಸ್ತೆಗಳ ಮೊದಲಾದವನ್ನು ಉಪಪನ್ನರಾದ ಅಲ್ಲಿನ ದೊಡ್ಡಮನುಷ್ಯರು ಸ್ವಂತ ಬಾಬತಿನಿಂದ ನಿರ್ಮಾಣಮಾಡಿಸಿರುತ್ತಾರೆ.

Madras High Court.—ದಕ್ಷಿಣ ಆರ್ಕಾಟು ಡಿಸ್ಟ್ರಿಕ್ಟ್ ಆಕ್ಟಿಂಗ್ ಸಬ್ ಕಲೆಕ್ಟರಾದ ಮೆ|| ಹಾರ್ನ್ಸ್ ಫಾಲೆಯೆಂಬವರು ಮದರಾಸ್ ಹೈಕೋರ್ಟು ಅಪೀಲ್ ಸೈಡ್ ರಿಜಿಸ್ಟ್ರಾರ್ ಕೆಲಸವನ್ನು ಬದಲೀ ನೋಡುವಂತೆ ಚುನಾಯಿಸಲ್ಪಟ್ಟು ಕಳೆದ ತಿಂಗಳ ೨೪ನೇ ತಾರೀಖಿನಲ್ಲಿ

ತಮ್ಮ ಹೊಸಕೆಲಸದ ಚಾರ್ಜ್‌ವಹಿಸಿದರು. ಇವರ ಹಿಂದೆ ರಿಜಿಷ್ಟ್ರರಾಗಿದ್ದ ಮೆ॥ ರಾಸಿಯವರು ಮಧುರಾ ಡಿಸ್ಟ್ರಿಕ್ಟ್ ಸೆರ್ಜ ಜಡ್ಜಿಯ ಕೆಲಸವನ್ನು ಬದಲೀ ನೋಡುವಂತೆ ನೇಮಕರ್ಮಾಡಲ್ಪಟ್ಟರು.

The Gaekwar of Baroda.—ಬರೋಡೆ ಗಾಯಕವಾಡಿ ಮಹಾರಾಜರವರು, ಬೇಸಿಗೆಯ ಬಗ್ಗೆ ನೀಲಗಿರಿಗೆ ದಯಮಾಡುವ ಉದ್ದೇಶದೊಡನೆ, ಕಳೆದ ವಾರದಲ್ಲಿ ತಮ್ಮ ರಾಣೀ ಸಾಹೇಬರವರು, ಯುವರಾಜರು, ತಮ್ಮಂದಿರು, ದಿವಾನರು, ಪ್ರೈವೆಟ್ ಸೆಕ್ರೆಟರಿ ಯೋಜುಬರು, ಮತ್ತು ೧೩೮ ಮಂದಿ ಪರಿಜನ ಪರಿಚಾರಕರೊಡನೆ ರಾಜಧಾನಿಯಿಂದ ಹೊರಟು ಸ್ಪೆಷಲ್ ಟ್ರೇನಿನಲ್ಲಿ ಮುಂಬೈಗೆ ದಯಮಾಡಿ ಅಲ್ಲಿ ಸ್ಟೀಮರ್ ಹತ್ತಿ ಕಳ್ಳಿಕೋಟೆಗೆ ಪ್ರಯಾಣವಾದರೆಂದು ಮುಂಬೈ ಪತ್ರಿಕೆಯೊಂದರ ಮೂಲಕ ತಿಳಿಯಲಾಯಿತು.

Production of silver.—ಆಸ್ಟ್ರೇಲಿಯಾ ಖಂಡದೊಳಗಣ ನ್ಯೂಸೌತ್ ವೇಲ್ಸ್ ಯೆಂಬ ತುಕಡಿಯಲ್ಲಿನ ಬೆಳ್ಳಿಯ ಗಣಿಗಳಿಂದ ಕಳೆದ ನವಂಬರ್ ಆಖೈರಿಗೆ ಪೂರೈಸಿದ ಆರುತಿಂಗಳ ಕಾಲಕ್ಕೆ ೧೬೦,೨೦೧ ಪೌಂಡುಗಳ ನಫೆ ಕಂಡು ಬಂದಿರುತ್ತೆ. ಇದಕ್ಕಾಗಿ ಹಾಕಲ್ಪಟ್ಟಿರುವ ಬಂಡವಾಳ ೩೦೬,೦೦೦ ಪೌಂಡುಗಳು. ಈ ಲಾಭದಲ್ಲದೆ, ಪ್ರತಿಯೊಬ್ಬ ಹಿಸ್ಸೇದಾರನಿಗೂ ತನ್ನ ಹಿಸ್ಸೆಯಷ್ಟಕ್ಕೆ ಒಂದೊಂದರಂತೆ, ಈಚೆಗೆ ಅದೇ ಪ್ರದೇಶದಲ್ಲಿ ಇಂಗ್ಲಿಷ್ ಕಂಪೆನಿಯವರಿಂದ ಸ್ಥಾಪಿಸಲ್ಪಟ್ಟ ಇನ್ನೊಂದು ಕಂಪೆನಿಯಲ್ಲಿ ಅಸಿದು ಹಿಸ್ಸೆಗಳು ಕೊಡಲ್ಪಡುತ್ತವೆ. ಪ್ರಾರಂಭದಲ್ಲಿ ಕಂಡು ಹಿಡಿಯಲ್ಪಟ್ಟ ಗಣಿಗಳಲ್ಲಿ ಕೆಲಸಕ್ಕೆ ಪ್ರಾರಂಭವಾದಂದು ಮೊದಲು ನಾಲ್ವತ್ತು ಲಕ್ಷ ಪೌಂಡುಗಳ, ಅಂದರೆ ಐದು ಕೋಟಿ ರೂಪಾಯಿಗಳ ಬೆಲೆ ಬೆಳ್ಳಿ ಸಿಕ್ಕಿರುತ್ತದೆ.

Imprisonment for debt.—ಸಾಲಗಾರರನ್ನು ಜೆಯಿಲ್ನಲ್ಲಿಡಿಸುವ ವಿಷಯದಲ್ಲಿ ಈಚೆಗೆ ಹುಟ್ಟಿರುವ ಮುಸವಿದಾ ಆಕ್ಟಿನಮೇಲೆ ಸೆಲೆಕ್ಟ್ ಕಮಿಟಿಯವರು ಕೊಟ್ಟ ರಿಪೋರ್ಟಿನಲ್ಲಿ, ಕಳೆದ ತಿಂಗಳ ೨೮ನೇ ತಾರೀಖಿನಲ್ಲಿ ಸೇರಿದ ವೈಸರಾಯ್‌ರವರ ಮಂತ್ರಾಲೋಚಕ ಸಮಾಜದಲ್ಲಿ ಅದರ ಮೆಂಬರ್‌ಗಳ ಪೈಕಿ ಯೊಬ್ಬರಾದ ಮೆ. ಸ್ಕೋಬಲ್ ಯೆಂಬವರು ಹಾಜರ್ಮಾಡಿದರು. ಈ ಮುಸವಿದಾ ಆಕ್ಟಿನಲ್ಲಿ ಸದರೀ ಕಮಿಟಿಯವರು ಬಹಳ ಬದಲಾವಣೆಗಳನ್ನು ಮಾಡಿರುತ್ತಾರೆ. ಅದರ ಪ್ರಕೃತ ಸ್ಥಿತಿಯನ್ನು ಯೋಚಿಸಲಾಗಿ, ದಿವಾಳಿ ಕೋರರನ್ನಾಗಲಿ, ಹೆಂಗಸರನ್ನಾಗಲಿ ಜೆಯಿಲಿನಲ್ಲಿಡಿಸುವದಕ್ಕೆ ಸಾಧ್ಯವಾಗಲಾರದು. ಮತ್ತು ಸಾಲಗಾರನ ಸ್ಥಿತಿಯನ್ನು ಯೋಚಿಸಲಾಗಿ ಅವನನ್ನು ಜಯಿಲ್ನಲ್ಲಿಡಿಸುವದು ನ್ಯಾಯವಾಗಿರುವದೇ ಯೆಂಬ ಅಂಶವು ನಿರ್ಧರಿಸುವ ಕೆಲಸ ಕೋರ್ಟಿನವರದಾಗಿರುವದು.

Enhancement of salt duty.—ಉಪ್ಪಿನ ಮೇಲಿನ ತೆರಿಗೆಯು ಈಚೆಗೆ ಜಾಸ್ತೀ ಮಾಡಲ್ಪಟ್ಟ ವಿಷಯದಲ್ಲಿ ಕಳೆದ ತಿಂಗಳ ೧೦ನೇ ತಾರೀಖಿನೊಳು ಹೌಸ್ ಆಫ್ ಕಾಮನ್ಸ್ ಸಮಾಜದಲ್ಲಿ, ಸರ್ ರಾಬರ್ಟ್ ಫೌಲರೆಂಬವರು ಮಾಡಿದ ಕೆಲವು ಪ್ರಶ್ನೆಗಳಿಗೆ ಸರ್ ಜಾರ್ಜ್‌ಗಾರ್ಸ್ಟ ಎಂಬವರು ತಿಳಿಸಿದ್ದೇನಂದರೆ:—ಕಳೆದ ಡಿಸೆಂಬರ್ ೪ನೇ ತಾರೀಖಿನಲ್ಲಿ ಇಂಡ್ಯಾದೇಶದ ವೈಸರಾಯ್‌ರವರು, ಉತ್ತರ ಬರ್ಮ್ಮ ಸರಹದ್ದು ಬಂದೋಬಸ್ತು ಮತ್ತು ಮುಂತಾದ ಹೆಡ್ಡಿನಲ್ಲಿ ಖರ್ಚುಗಳನ್ನು ಜಾಸ್ತೀಮಾಡುವ ಉದ್ದೇಶದಿಂದ ಇಂಡ್ಯಾದೇಶದ ಹುಟ್ಟುವಳಿಯನ್ನು ವೃದ್ಧಿಪಡಿಸಬೇಕಾದ್ದು ಅವಶ್ಯಕವೆಂದು ಸ್ಟೇಟ್ ಸೆಕ್ರೆಟರಿಯವರಿಗೆ ರಿಪೋರ್ಟ್ ಮಾಡಿದರು, ಆ ಬಗ್ಗೆ ಉಪ್ಪಿನ ಮೇಲಿನ ತೆರಿಗೆಯನ್ನು ಹೆಚ್ಚಿಸಬೇಕೆಂದು ಇಂಡ್ಯ ಗವರ್ನಮೆಂಟಿನವರು ಶಿಫಾರಸ್ ಮಾಡಿದರು. ಈ ಸೂಚನೆಯನ್ನು ಮಂತ್ರಾಲೋಚಕ ಸಮಾಜದೊಳಗಣ ಸ್ಟೇಟ್ ಸೆಕ್ರೆಟರಿಯವರು ಅಕ್ಕರೆಯೊಡನೆ ಆಲೋಚಿಸಿ, ಉಪ್ಪಿನ ತೆರಿಗೆಯನ್ನು ಹೆಚ್ಚಿಸುವದಕ್ಕಿಂತಲೂ ಉಪಾಯಾಂತರವನ್ನು ಹುಡುಕಬೇಕೆಂದು ಯೋಚಿಸಿದರು, ಪರಂತು ಸ್ಟೇಟ್ ಸೆಕ್ರೆಟರಿಯವರ ಮಂತ್ರಾಲೋಚಕಸಮಾಜದ ಮೆಂಬರ್‌ಗಳೆಲ್ಲರು ಏಕಕಂಠ್ಯದೊಡನೆ, ಉಪ್ಪಿನ ತೆರಿಗೆಯನ್ನೇ ಹೆಚ್ಚಿಸಬೇಕೆಂಬ ಇಂಡ್ಯ ಗವರ್ನಮೆಂಟಿನ ಅಭಿಪ್ರಾಯದೊಡನೆ ಕಲಿತು ಅದನ್ನು ಪೋಷಿಸಿದ್ದರಿಂದ ಸ್ಟೇಟ್ ಸೆಕ್ರೆಟರಿಯವರಿಗೆ ಸ್ವಯಂ ಇಷ್ಟವಿಲ್ಲದೆ ಹೋದಾಗ್ಯೂ ಇಂಡ್ಯ ಗವರ್ನಮೆಂಟಿನವರ ಇಷ್ಟಾನುಸಾರ ನಡೆಸಬೇಕಾದ ನಿರ್ಬಂಧದಿಂದ ಜನವರಿ ೭ನೇ ತಾರೀಖಿನಲ್ಲಿ ಅದಕ್ಕೆ ಸಮ್ಮತಿಸಿದರು, ಎಂಬದು.

LOCAL AND PROVINCIAL NEWS.
ಒಳದೇಶ ಮತ್ತು ತಾಲ್ಲೂಕ್‌ಜಾಪ ವೃತ್ತಾಂತವು

A successful Graduate.—ಇಲ್ಲಿನ ಸೆಂಟ್ರಲ್ ಕಾಲೇಜ್ ಬಿ. ಎ. ತರಗತಿಯಲ್ಲಿ ಓದುತಲಿದ್ದ ಮೆ. ನಾರಣಯ್ಯಂಗಾರ್ರೆಂಬವರು ಈಚೆಗೆ ನಡೆದ ಬಿ. ಎ. ಪರೀಕ್ಷೆಯೊಳು ಗಣಿತಶಾಸ್ತ್ರದಲ್ಲಿ ತೇರ್ಗಡೆಯಾದವರ ಪೈಕಿ ಪ್ರಥಮರಾದರೆಂದು ಕೇಳಲಿಕ್ಕೆ ಬಹಳ ಸಂತೋಷಿಸುತ್ತೇವೆ.

Mr. R. G. Hodson.—ಹಿಂದೆ ಈ ದೇಶದಲ್ಲಿ ವಿದ್ಯಾಭ್ಯಾಸ ಇಲಾಖೆಯ ಇನ್‌ಸ್ಪೆಕ್ಟರಾಗಿದ್ದ ಮೆ. ಹಾಡ್ಸನ್‌ಯವರು ಈಗ ಬರ್ಮಾದೇಶದಲ್ಲಿ ವಿದ್ಯಾಭ್ಯಾಸದ ಇಲಾಖಾ ಡೈರೆಕ್ಟರ್ ಜನರಲಾಗಿ ನೇಮಕರ್ಮಾಡಲ್ಪಟ್ಟಿರುತ್ತಾರೆ.

Col. Le Messurier.—ಕೆಲವು ವರ್ಷಗಳ ಹಿಂದೆ ಈ ದೇಶದೊಳು ಕನ್ಸಲ್ಟಿಂಗ್ ಇಂಜನಿಯರಾಗಿದ್ದ ಕರ್ನಲ್ ಲೀ ಮೆಸೂರಿಯರ್ ಯವರು ಈಗ ಇಂಡ್ಯ ಗವರ್ನಮೆಂಟಿನವರ ಕಡೆ ರೆಯಿಲ್ವೆ ಕನ್ಸಲ್ಟಿಂಗ್ ಇಂಜನಿಯರ್ ಕೆಲಸವನ್ನು ಬದಲೀನೋಡುವಂತೆ ನೇಮಕರ್ಮಾಡಲ್ಪಟ್ಟದಾರೆ.

The weather.—ಈಚೆಗೆ ಬಿಸಲಿನ ಝಳವು ದಿನೇದಿನೆ ದುಸ್ಸಹವಾಗುತಬಂದಹಾಗೆಲ್ಲ ನೊಳ್ಳೆಯು, ತಗಣೆಯು, ಮತ್ತು ಚೇಳಿನಕಾಟವು ವೃದ್ಧಿಯಾಗುತ ಬರುತಲಿವೆ. ಪದಾರ್ಥಗಳ ಧಾರಣೆಗಳು ಹೆಚ್ಚುತಲಿವೆ. ಕೃಣಜಲಗಳಲ್ಲಿ ಕೊರತೆ ಕಾಣಬರುತಿದೆ. ಈಕಾಲಕ್ಕೆ ತಕ್ಕಂತೆ ಸ್ಮಾಲ್‌ಪಾಕ್ಸ್ ಅಲ್ಲಿ ಯಿಲ್ಲಿ ತಲೆದೋರುತಿವೆ. ವಾಂತಿಭೇದಿ ರೋಗ ಬೆಂಗಳೂರು ಪಟ್ಟಣದಲ್ಲಿಲ್ಲವೆಂದು ಹೇಳಬಹುದಾದಾಗ್ಯೂ ಆಸ್ಪಾಸ್ ಪ್ರದೇಶಗಳೊಳು ವ್ಯಾಪಿಸಿರುವಂತೆ ತಿಳಿಯಬರುತಿದೆ. ಡಿಸ್ಟ್ರಿಕ್ಟ್ ಜಾತ್ನಲ್ಲೂ ಸದರೀ ರೋಗ ತಲೆದೋರಿರುವಂತೆ ಖಾತರಿದಾರರ ಕಾಗದಗಳ ಮೂಲಕ ತಿಳಿಯಬರುತಿದೆ. ಈ ಸಂವತ್ಸರ ಕ್ಷಾಮಸೂಚನೆಗಳು ಕಂಡು ಬರುವದಾಗಿ ಹೇಳಿಕೊಳ್ಳುತ್ತಾರೆ. ದೈವಯೋಗದಿಂದ ಅಂತಾ ದುಸ್ಥಿತಿ ಮರಳಿ ಈದೇಶಕ್ಕೆ ಪ್ರಾಪ್ತವಾಗದಿರಬೇಕೆಂದು ಕೋರುತೇವೆ.

Departure of the Dramatic Company.—ಶ್ರೀಮನ್ಮಹಾರಾಜಾ ಚಾಮರಾಜೇಂದ್ರ ಕರ್ಣಾಟಕ ನಾಟಕಸಭೆಯವರು ಈಗ್ಯೆ ಈಊರಿಗೆ ಬಂದುಕೆಲವು ವಾರಗಳ ಮೊದಲು ಇಲ್ಲಿ ಅನೇಕ ನಾಟಕಗಳನ್ನು ಆಡಿ ತದನುಮೋದಕರಾದವರನೇಕರಿಗೆ ಹೃದಯಾನಂದವನ್ನುಂಟುಮಾಡಿ, ಆಖೈರ್ ದಿನರಾತ್ರಿ ಈಊರು ಮಹಾಜನಗಳಂ ಕುರಿತು ತಿಳಿಸಿದರೇನಂದರೆ:—

ಈ ಕಂಪೆನಿ ಏರ್ಪಟ್ಟದ್ದು ಮೊದಲು ಇದುವರಿವಿಗೆ ನಾವು ಅಭ್ಯಸಿಸಿದ ನಾಟಕಗಳನ್ನೆಲ್ಲ ಪ್ರತಿಪದಿಸದಲ್ಲಿಯೂ ತಮ್ಮ ಮುಂದೆ ನಾವು ಆಡಿದ್ದನ್ನು ತಾವೆಲ್ಲರು ನೋಡಿ ಸಂತೋಷಿಸಿದ್ದಕ್ಕಾಗಿ ನಾವು ಬಹಳ ಕೃತಜ್ಞರಾಗಿರುವೆವು. ಈ ಕರ್ಣಾಟ ರಾಜ್ಯದಲ್ಲಿ ನಾಟಕ ಕಂಪೆನಿಗಳು ವಿಶೇಷವಾಗಿ ಏರ್ಪಟ್ಟು ಅಭಿವೃದ್ಧಿಗೆ ಬರುವದು ಎಂತವರಿಗೂ ಸಂತೋಷಕರವಾದಅಂಶವಾಗಿರುತಿದೆ. ಈಊರಿಗೆ ಎಷ್ಟು ನಾಟಕ ಕಂಪೆನಿಯವರು ಬಂದಾಗ್ಯೂ ಎಲ್ಲರಲ್ಲಿಯೂ ತಮಗೆ ಸಮಾನ ವಿಶ್ವಾಸ ಗೌರವಗಳಿರುವ ಅಂಶ ಪ್ರಸಿದ್ಧವಾಗಿಯೇ ಇದೆ. ಈ ವರುಷದಲ್ಲಿ, ಶೂರಸೇನ ಚರಿತ್ರೆ, ಜಯಸಿಂಹರಾಯನಚರಿತ್ರೆ, ಉತ್ತರರಾಮಚರಿತ್ರೆ, ಸಿರಿಯಾಳರಾಯನಚರಿತ್ರೆ, ರಾಮಾಯಣ (ಎರಡನೆಭಾಗ) ಮಾಲತೀಮಾಧವ, ವಿಕ್ರಮೋರ್ವಶೀಯ, ಹಿಂದುಸ್ಥಾನಿಯಲ್ಲೀಚೆಗೆ ತಯಾರ್ಮಾಡಲ್ಪಟ್ಟ, ಸುಲೇಮಾನ್ ನಾಟಕ, ಇವುಗಳನ್ನೆಲ್ಲ ನಾವು ಆಡಲಿಕ್ಕೆ ಇಲ್ಲಿ ಅನೇಕ ಅಡಚಣೆಗಳುಂಟಾದ ಬಗ್ಗೆ ನಾವು ಬಹಳ ವಿಷಾದಿಸುತ್ತೇವೆ. ಅಂತರಿಕ್ಷದಿಂದ ಗಂಧರ್ವ ಸ್ತ್ರೀಯರು ಗಾನ ಮಾಡಿಕೊಂಡು ಬರುವದನ್ನೂ, ದೇವೇಂದ್ರನು ಅಂತರಿಕ್ಷದಿಂದ ಭೂಲೋಕಕ್ಕೆ ಬರುವದನ್ನೂ, ಭೂಮಿಯಿಂದ ರಾಕ್ಷಸರು ಬರುವದನ್ನೂ, ನಿಂತಿದ್ದಂತೆ ಭೂಮಿಯೊಳಗೆ ಹೋಗುವದನ್ನೂ ಹೀಗೆ ನಾನಾವಿಧ ತಮಾಷೆಗಳನ್ನು ತೋರಿಸಬೇಕೆಂದು ಅವುಗಳಿಗೆ ಬೇಕಾದ ಸಾಧನಗಳನ್ನು ತೆಗೆದುಕೊಂಡ್ಡು ಬಂದೆವು, ಪರಂತು ಈ ನಾಟಕಶಾಲೆಯಲ್ಲಿ ಸುಖಾನುಕೂಲ್ಯ ವಿಲ್ಲದೆ ಹೋದದರಿಂದ ನಮ್ಮ ಪ್ರಯತ್ನೋತ್ಸಾಹಗಳಿಗೆಲ್ಲ ಭಂಗ ವುಂಟಾಯಿತು. ಮುಖ್ಯವಾಗಿ ಈ ವರುಷದೊಳೇ ನಾಟಕಶಾಲೆಯು ನಮ್ಮ ಪಾಲಿಗೆ ಸರ್ಪಶಾಲೆಯಾಯಿತು. ನಮ್ಮ ಅಭಿಪ್ರಾಯಾನುಸಾರವಾಗಿಯೂ, ನಾಟಕಗಳನ್ನು ಆಡಲಿಕ್ಕೆ ಅನುಕೂಲವಾಗಿರುವಂತೆಯೂ, ಮುಂದಿನ ವರುಷದಲ್ಲಿ ಒಂದು ನಾಟಕ ಶಾಲೆಯನ್ನು ಏರ್ಪಡಿಸುವ ಆಲೋಚನೆಯು ಇಲ್ಲಿನವರು ಕೆಲವರಿಗೆ ಉಂಟಾಗಿರುವಂತೆ ಕೇಳುತ್ತೇವೆ. ಹಾಗೆ ಏರ್ಪಡುವ ಪಕ್ಷಕ್ಕೆ ಅದು ನಮ್ಮ ಪುಣ್ಯ ವಿಶೇಷ ವೆಂತಲೇ ಭಾವಿಸುವೆವು. ಈ ನಾಟಕ ಶಾಲೆಯ ಹಿಂಭಾಗದಲ್ಲಿ ತ್ರಿಮೂರ್ತಿಗಳಿಗೆ ವಾಸಸ್ಥಾನವಾದ ಅಶ್ವತ್ಥ ವೃಕ್ಷವೂ, ಲಕ್ಷ್ಮೀ, ವಾಣೀ, ಸರಸ್ವತೀಯರಿಗೆ ನಿಯತಸ್ಥಾನವಾದ ತುಲಸೀ ಬೃಂದಾವನವೂ, ಅನೇಕ ಜನ್ಮಾರ್ಜಿತ ಪಾಪರಾಶಿಯನ್ನೆಲ್ಲ ನಿವೃತ್ತಿಸಿ ಸತ್ಸಂತಾನಾದಿ ಅಭೀಷ್ಟಗಳನ್ನೀಡೇರಿಸುವ ಸುಬ್ರಹ್ಮಣ್ಯೇಶ್ವರನೂ ಯಾವ ಪುಣ್ಯಾತ್ಮರಿಂದ ಪ್ರತಿಷ್ಠಿಸಲ್ಪಟ್ಟವೋ ಆ ಮಹನೀಯರಿಗೆ ನಾವು ವಂದಿಸುವೆವು. ಆದರೆ ಅಗಿಂದಾಗ್ಯೆ ಇಲ್ಲಿಗೆ ಬಂದು ಈ ನಾಟಕಶಾಲೆಯಲ್ಲಿ ಆಡುವ ನಾನಾಜಾತೀಯರಾದ ನಾಟಕ ಕಂಪೆನಿಯವರ ಮತ್ತು ಅವರ ನಾಟಕಗಳಂ ನೋಡಲಿಕ್ಕೆ ಬರತಕ್ಕ ಜನಗಳ ಮಲ ಮೂತ್ರಾದಿಗಳಿಂದ ಪಾವನವಾದ ಸದರೀ ಪ್ರದೇಶವು ದುರ್ಗಂಧ ಯುಕ್ತವಾಗಿ, ತಲೆ ಇಡಲಿಕ್ಕೆ ಸಹ ಅನರ್ಹವಾಗಿರುವದಕ್ಕಾಗಿ ನಾವು ಬಹಳ ವಿಷಾದಿಸುತ್ತೇವೆ. ಈ ಪುರದ ಮಹಾಜನರಿಗೆಲ್ಲ ದೇವಬ್ರಾಹ್ಮಣ ಭಕ್ತಿಯು ಅಧಿಕವಾಗಿರುವದರಿಂದ ಅವರು ಇದಕ್ಕೆ ತಕ್ಕ ಏರ್ಪಾಡುಗಳಂ ಶೀಘ್ರದಲ್ಲಿಯೇ ಮಾಡುವರೆಂದು ನಂಬುತ್ತೇವೆ. ಶ್ರೀಮನ್ಮಹಾರಾಜರವರ ಅಂಕಿತದೊಳೇರ್ಪಟ್ಟಿರುವ ಈ ನಾಟಕ ಕಂಪೆನಿಯು ಚಿರಕಾಲ ನೆಲಗೊಂಡು ಇದರಮೇಲೆ ತಮ್ಮ ವಿಶ್ವಾಸವು ಊರ್ಜಿತವಾಗಿರಬೇಕೆಂದು ಕೋರುವೆವಲ್ಲದೆ ಸ್ವಸ್ಥಾನವಾದ ಮೈಸೂರಿಗೆ ಪ್ರಯಾಣವಾಗುವದಕ್ಕೆ ತಾವೆಲ್ಲರೂ ಅನುಜ್ಞೆ ಕೊಡಬೇಕೆಂಬದಾಗಿ ಕೇಳಿಕೊಳ್ಳುತ್ತೇವೆ.

ಕ್ಯಾಂಪ ನಂ. ೨೫೦.—ಶ್ರೀಮನ್ ಮಹಾರಾಜಾ ಸರ್ಕಾರದವರು ಆಜ್ಞಾಪಿಸುವದೇನಂದರೆ, ೧೮೮೮ನೇ ಇಸವಿ ಜನವರೀ ೧ನೇ ತಾರೀಖಾರಭ್ಯ ಇದರಡಿ ಕಂಡ ಷೆಡ್ಯೂಲಿನಲ್ಲಿ ನಮೂದ್ ಮಾಡಲ್ಪಟ್ಟ ಇನ್‌ವೆಲೀಡ್ ಯಾನೆ (ಕಾಹಿಲ್) ಕಂಪೆನ್ಸೇಷನ್ ವ ಸೂಪರ್ ಆನ್ಯುಏಷನ್ (ವೃದ್ಧಿ) ಸಬಬುಗಳಮೇಲೆ ಕೊಡಲ್ಪಡತಕ್ಕಂಥಾ ಪೆನ್ಷನಿನ ದರಗಳು ಸಿವಿಲ್ ಪೆನ್ಷನ್ ಕೋಡಿನ ೧೦೩ನೇ ಸೆಕ್ಷನಿನಲ್ಲಿ ವಿವರಿಸಲ್ಪಟ್ಟಿರುವದಕ್ಕೆ ಬದಲಾಗಿ ಉಪಯೋಗಿಸಲ್ಪಡತಕ್ಕದ್ದು.

[illegible]	ಮೊದಲ ದರಗಳು	
	ಮಂಜೂರ್ಮಾಡಲ್ಪಡುವುದಾದ ಪೆನ್ಷನ್.	ಅವಧಿ
ವರ್ಷಗಳು		
10	[illegible]	
11		
12		
13		
14		
15	[illegible]	ಸಾಲ್ ಒಂದಕ್ಕೆ ರೂ|| 3,000, ಅಥವಾ ಸರಾಸರಿ ತಲಬು ಸಾಲ್‌ಒಂದಕ್ಕೆ 12,000 ರೂಪಾಯಿಗೆ ಮೀರದೆ ಇದ್ದಾಗ ಸಾಲ್ ಒಂದಕ್ಕೆ ರೂಪಾಯಿ 2,000.
16		
17		
18		
19		
20		
21		
22		
23		
24		
25	ಸರಾಸರಿ ತಲಬಿನ ಅರ್ಧ ಭಾಗ	ಸಾಲ್ ಒಂದಕ್ಕೆ ರೂ. 5,000, ಅಥವಾ ಸರಾಸರಿ ತಲಬು ಸಾಲ್ ಒಂದಕ್ಕೆ 12,000ರೂಪಾಯಿಗೆ ಮೀರದೆ ಇದ್ದಾಗ ಸಾಲ್ ಒಂದಕ್ಕೆ 4,000 ರೂಪಾಯಿಗಳು

ಮಂಜೂರ್ಮಾಡಲ್ಪಡುವುದಾದ ಪೆನ್ಷನ್			ಅವಧಿ.
ಸರಾಸರಿ ತಲಬಿನ 60ನೇ ಭಾಗದ.			ವರುಷ ಒಂದಕ್ಕೆ ರೂಪಾಯಿಗಳು
ಹತ್ತು	ಭಾಗ	...	2,000
ಹನ್ನೊಂದು	,,	...	2,200
ಹನ್ನೆರಡು	,,	...	2,400
ಹದಿಮೂರು	,,	...	2,600
ಹದಿನಾಲ್ಕು	,,	...	2,800
ಹದಿನೈದು	,,	...	3,000
ಹದಿನಾರು	,,	...	3,200
ಹದಿನೇಳು	,,	...	3,400
ಹದಿನೆಂಟು	,,	...	3,600
ಹತ್ತೊಂಭತ್ತು	,,	...	3,800
ಇಪ್ಪತ್ತು	,,	...	4,000
ಇಪ್ಪತ್ತೊಂದು	,,	...	4,200
ಇಪ್ಪತ್ತೆರಡು	,,	...	4,400
ಇಪ್ಪತ್ತಮೂರು	,,	...	4,600
ಇಪ್ಪತ್ನಾಲ್ಕು	,,	...	4,800
ಮೂವತ್ತು	,,	...	5,000

೨. ೧೫ ವರುಷದ ಮತ್ತು ೨೦ ವರುಷಕ್ಕೆ ಜಾಸ್ತೀ ಇಲ್ಲದ ನೌಕರರಿಗೋಸ್ಕರ ಪೆನ್ಷನ್ ಪಡೆಯುವದಕ್ಕೆ ಅರ್ಹರಾಗಿರುವ ಸಂದರ್ಭಗಳ ಮೇಲೆ ೧೮೮೮ನೇ ಇಸವಿ ಜುಲೈ ೧ನೇ ತಾರೀಖಿಗೆ ಮುಂಚಿತವಾಗಿ ಸರ್ಕಾರ್ ನೌಕರೀಯಿಂದ ನಿವೃತ್ತರಾಗುವ ಹಾಲೀ ನೌಕರಿಯಲ್ಲಿರುವ ತಮಾಂ ಆಫೀಸರರುಗಳ ೬ ಅವರಿಗೆ ಹಾಜೀ ದರಗಳು ಫಾಯಿದೆಯಾಗಿ ಇರುವ ಪಕ್ಷದಲ್ಲಿ ಅದೇ ಪ್ರಕಾರ ಲೆಕ್ಕಮಾಡೋಣಾದ ಪೆನ್ಷನ್ ಕೊಡಲ್ಪಡಬಹುದು; ಹಾಗಿಲ್ಲದ ಪಕ್ಷಕ್ಕೆ ಹೊಸ ದರಗಳು ೧೮೮೮ನೇ ಇಸವಿ ಜನವರಿ ೧ನೇ ತಾರೀಖಿನಲ್ಲಿಯೂ ಅದರ ತರುವಾಯ ನೌಕರಿಯಿಂದ ನಿವೃತ್ತರಾಗತಕ್ಕ ತಮಾಂ ಆಫಿಸರರುಗಳಿಗೂ ಲಗಾವ್ ಮಾಡಲ್ಪಡತಕ್ಕದ್ದು.

೩. ಹತ್ತುವರ್ಷಕ್ಕೆ ಕಮ್ಮಿಯಾದ ನೌಕರಿಬಗ್ಯೆ ಕೀಳ್‌ದರ್ಜೆಯ ನೌಕರಿಬಗ್ಯೆ ಕೊಡಲ್ಪಡಬೇಕಾದ ಇನ್‌ವೆಲೀಡ್, ಕಾಂಪೆನ್ಸೇಷನ್ ವ ಸೂಪರ್ ಆನ್ಯುಏಷನ್ ಗ್ರಾಚ್ಯುಯಿಟಿಗಳು ಈಗ ಜಾರೀ ಇರುವಂತೆಯೇ ಲೆಕ್ಕ ಮಾಡಲ್ಪಡತಕ್ಕದ್ದು.

೪. ಕವಿಸ್ಮಾ ಸರವಿಸನ್ನ ಕೂಡಿಸಿಕೊಡುವ ಬಗ್ಗ್ಯಾಗಿ ಸಿವಿಲ್ ಪೆನ್ಷನ್ ಕೋಡಿನ ೧೨೮ನೇ ಸೆಕ್ಷನಿನಲ್ಲಿ ಅಡಗಿರುವ ಅಂಶಗಳು ಹಾಲೀ ಮಂಜೂರ್ಮಾಡಲ್ಪಟ್ಟ ಜಾಸ್ತೀ ದರಗಳನುಸಾರವಾಗಿ ಕೊಡಲ್ಪಡುವ ಪೆನ್ಷನಿಗೆ ಲಾಗೂವಾಗುವದಿಲ್ಲವು.

EXTRACTS.

ಬರೋಡಾದೇಶದ ಗಾಯಕವಾಡ ಮಹಾರಾಜರವರು ತಮ್ಮ ಮಹಾರಾಣಿಯವರೊಡನೆ ವಿಲಾಯತಿಯಿಂದ ಬೊಂಬಾಯಿಪಟ್ಟಣಕ್ಕೆ ಬಂದು ಅಲ್ಲಿಂದ ಅತ್ಯಂತ ವೈಭವದೊಡನೆ ತಮ್ಮ ರಾಜ್ಯಕ್ಕೆ ಕಳೆದವಾರ ದಯಮಾಡಿಸಿದರು.

ರಷ್ಯಾ ಗವರ್ನ್ಮೆಂಟಿನವರು ಯುದ್ಧ ಕಾಲದಲ್ಲಿ ಕೆಲವು ಆಕಾಶಬುಟ್ಟಿಗಳು ಇರತಕ್ಕದ್ದು ಅವಶ್ಯಕವೆಂದು ತಿಳಿದು ಪ್ರತಿಯೊಂದು ಆಕಾಶಬುಟ್ಟಿಯಲ್ಲಿಯೂ ೬ ಜನರನ್ನೂ, ಒಂದು ದೊಡ್ಡ ಘಡಿಯನ್ನೂ ಇಡುವದಕ್ಕೆ ಅನುಕೂಲ ಮಾಡಿ ಬಹಳ ಬಂದೋಬಸ್ತಿನಿಂದ ಇರತಕ್ಕ ಬುಟ್ಟಿಗಳನ್ನು ತಯಾರು ಮಾಡುವಹಾಗೆ ಲಂಡನ್ ಪಟ್ಟಣದಲ್ಲಿರುವ ಒಂದು ಕಾರ್ಖಾನೆಗೆ ಬರೆದಿರುವದಲ್ಲದೆ ಮುಂಗಡವಾಗಿ ೭೫,೦೦೦ ರೂಪಾಯಿಗಳನ್ನು ಕಳುಹಿಸಿರುತ್ತಾರೆ.

ಹಿಂದು ರಾಜ್ಯದಲ್ಲಿ ರಾಜಕೀಯ ವಿಷಯಗಳನ್ನು ಆಡೀಸರದೊಳು ಪ್ರಚಾರದಲ್ಲಿರುವ ವೃತ್ತಾಂತ ಪತ್ರಿಕೆಗಳಲ್ಲಿ ಚರ್ಚಿಸ ಕೂಡದೆಂತಲೂ, ಹಾಗೆ ಚರ್ಚಿಸಿದರೆ ಶಿಕ್ಷೆಯುಂಟೆಂತಲೂ ಸರ್ಕ್ಯುಲರ್ ಇದ್ದರೆ, ಆ ವೃತ್ತಾಂತ ಪತ್ರಿಕೆಗಳೆಲ್ಲ ಆ ವಿಷಯದಲ್ಲಿ ಮೌನವಾಗುತ್ತವೆ. ಆಗ ದೇಶದ ಜನಗಳೆಲ್ಲ ತಮ್ಮ ರಾಜ್ಯದ ನಡವಳಿಕೆಯು ಸರಿಯಾಗಿರುವದೆಂದು ಭ್ರಾಂತಿಪಟ್ಟು ಇರುವರು. ದೇಶದ ದಿಕ್ಕು ದಿಕ್ಕಿನಲ್ಲಿ ನಡೆಯುವ ಕೇಡುಗಳು ತಿಳಿಯದೆ ಇರುವದರಿಂದ ಅಂಥಾ ಅನಿಷ್ಟ ನಿವಾರಣೆಯಲ್ಲಿ ಪ್ರವೃತ್ತಿಯು ಇರುವದಿಲ್ಲ. ಜನಗಳು ರಾಜ್ಯದ ವಿಷಯವಾಗಿ ತಮ್ಮ ಅಭಿಪ್ರಾಯವನ್ನು ನಿರ್ಭೀತರಾಗಿ ಪತ್ರಿಕೆಗಳಲ್ಲಿ ಬರೆದು ಗುಣ ದೋಷಗಳನ್ನು ಜನಗಳಿಗೆ ತಿಳಿಯಪಡಿಸಬಹುದೆಂದು ಇದ್ದರೆ ಜನಗಳೆಲ್ಲ ಪತ್ರಿಕಾ ದ್ವಾರಾ ರಾಜ್ಯದಲ್ಲಿ ನಡೆಯುವ ಕಷ್ಟಗಳನ್ನೂ, ಅನ್ಯಾಯಗಳನ್ನೂ ತಿಳಿಯುತ್ತಾರೆ. ಹಾಗೆ ತಿಳಿಯೋಣದರಿಂದ ಅಧಿಕಾರಿಗಳಲ್ಲಿ ಹೋಗಿ ತಮ್ಮ ಕಷ್ಟಗಳನ್ನು ಹೇಳಿಕೊಳ್ಳುವದಕ್ಕೆ ಯತ್ನಿಸುವರಾಗುತ್ತಾರೆ, ಮತ್ತು ಆಗಿನ ಸ್ಥಿತಿಯನ್ನು ಅಭಿವೃದ್ಧಿ ಮಾಡುವದಕ್ಕೆ ಸಮರ್ಥರಾಗುತ್ತಾರೆ. ಅಭಿಪ್ರಾಯ ಹೊರಪಡಿಸುವದರಲ್ಲಿ ಸ್ವಾತಂತ್ರ್ಯದಿಂದ ಉಂಟಾಗುವ ಗುಣವು ಹೇಳಲ್ಪಟ್ಟಿತು. ಹೀಗೆಯೇ ಕೃತ್ಯಗಳಲ್ಲಿಯೂ, ನಡೆನುಡಿಗಳಲ್ಲಿಯೂ, ಲೋಕ ವ್ಯವಹಾರದಲ್ಲಿಯೂ, ಸ್ವಾತಂತ್ರ್ಯವು ಇರೋಣದರಿಂದ ಅಭಿವೃದ್ಧಿಯುಂಟೆಂದು ಹೇಳಬಹುದು—ಹಿ. ಬೋ.

ನಮ್ಮ ಸರ್ಕಾರದವರಾದರೊ, ಹಿಂದುಸ್ಥಾನದ ನೇಟೀವ್ ಸಂಸ್ಥಾನಿಕರ ತಲೆಯ ಮೇಲೆ ಕೈಯ್ಯಾಡಿಸಿ, "ಸಣ್ಣ ಮಕ್ಕಳಿಗೆ ಅಪ್ಪಾ, ಗುಬ್ಬಿ, ಎಂದು ಕರೆದು ಅವರನ್ನು ಮರುಳು ಮಾಡುವಂತೆ" ಒಂದೊಂದು ವಿಧದಿಂದ ಸಂಸ್ಥಾನಿಕರನ್ನು ಮರಳು ಮಾಡಿ, ಹಣವನ್ನು ಎತ್ತಿ ಹಾಕಲಿಕ್ಕೇನೂ ಕಡಿಮೆ ಮಾಡುವದಿಲ್ಲ. ಪರಂತು ಅಂತಾ ಸಂಸ್ಥಾನಿಕರು ಸ್ವರಾಷ್ಟ್ರಕ್ಕೆ ಬಿಜಮಾಡಿಸಿದರೆ, ಅವರ ಆದರಾತಿಥ್ಯವನ್ನು ಯೋಗ್ಯರೀತಿಯಿಂದ ಮಾಡಬೇಕು ಎಂಬ, ಈ ಕಲ್ಪನೆ ಮಾತ್ರ ನಮ್ಮ ಸರ್ಕಾರದವರಲ್ಲಿ ವಿಶೇಷ ಉತ್ಪನ್ನವಾಗಿರುತದೆಂತ ಕಂಡು ಬರುವದಿಲ್ಲ. ಇಲ್ಲಿಯ ಸಂಸ್ಥಾನಿಕರಿಗಾದರೂ ಅಭಿಮಾನವೆಲ್ಲುಂಟು? ವಿಲಾಯತಿಗೆ ಹೋಗುವದಕ್ಕೆ ನಾಮೇಲು, ತಾಮೇಲು ಎನ್ನುವರು; ಹಣದ ಯೋಚನೆಯೇ ಇಲ್ಲ. ಖರ್ಚಾದರೆ, ಪ್ರಜೆಗಳ ತಲೆಯ ಮೇಲೆ! ಯಾರಾದರೂ ಒಂದು ಪದವಿಯನ್ನು ಕೊಡುತ್ತೇವೆಂದರೆ ತೀರಿತು! ಲಕ್ಷಗಟ್ಟಲೆ ರೂಪಾಯಿಗಳನ್ನು ಖರ್ಚು ಮಾಡಲಿಕ್ಕೂ ಸಿದ್ಧರಿರುತ್ತಾರೆ. ಇದೊಂದೇ ಅಲ್ಲ. ಹಲವು ವಿಧದಿಂದ ಅವರ ಮಾಯಕ್ಕೆ ಮರುಳಾಗುತ್ತಾರೆ. ಇದಕ್ಕೆ ಹೈದರಾಬಾದ ನಿಜಾಮ ಸಾಹೇಬರುತ ಸಾಕ್ಷಿಗಳು ಹಲವು ದೊರೆವಾವು. ಹಾಗೆ ಖರ್ಚುಮಾಡತಕ್ಕ ಹಣವನ್ನೇ ವೆಚ್ಚ ಮಾಡಿ, ತಮ್ಮ ಸಂಸ್ಥಾನದಲ್ಲಿ ಯಾವದಾದರೊಂದು ಕಾರಖಾನೆಯನ್ನು ಇಡಿಸಿದರೆ, ಅದರಿಂದ ಮುಂದೆ ಎಷ್ಟು ಫಾಯಿದೆಯಾದೀತು? ಅಥವಾ ಬಡ ಬಗ್ಗರಿಗಾಗಿ ಅನ್ನ ಛತ್ರವನ್ನು ಇಡಿಸಿದರೆ, ಅದರಿಂದ ಅನಂತಪುಣ್ಯ ಲಭಿಸಿ, ಇಹಕ್ಕೂ ಪರಕ್ಕೂ ಕೂಡಾ ಸಾಧಕವಾದೀತಲ್ಲವೇ?

ಈಗ ನಡೆದ ವಿಚಾರದಲ್ಲಿ ನಮ್ಮ ಗಾಯಕವಾಡಿ ಮಹಾರಾಜರವರು (ಪರದೇಶದಲ್ಲಿ ವಿಚಾರ ನಡೆದರೂ ಕೂಡಾ) ತಮ್ಮ ಹಟವನ್ನೇ ಸಿದ್ಧಿಗೆ ವೈದು, ಅನ್ಯಾಯವಾಗಿ ಕೊಟ್ಟ ಹಣವನ್ನು ತಿರಿಗಿ ಬರಿಸಿ ಕೊಂಡರೆ ಹೆಚ್ಚು ಭೂಷಣವಾಗುವದು. ಇಲ್ಲವಿದ್ದರೆ ವಿಲಾಯತಿಯ ಪ್ರಯಾಣದಿಂದ ಹೋಲ್ಕರ ಸರಕಾರಕ್ಕೆ ಆದ ಮರ್ಯಾದೆಯಾದೀತು. ಇನ್ನು ಮುಂದಾದರೂ ಸ್ವದೇಶಾಂತರ ವಾಸದಲ್ಲಿ ಹೆಚ್ಚು ಜಾಗ್ರತೆಯಿಂದಲೂ ಒಳ್ಳೇ ದಕ್ಷತೆಯಿಂದಲೂ ಬಹು ವಿಚಾರದಿಂದಲೂ ಕಾಲ ಹರಣ ಮಾಡಬೇಕೆಂದು ಸೂಚಿಸುತ್ತೇವೆ.

ಪೂರ್ವದ ಕಟ್ಟು ಕಥೆಗಳಲ್ಲಿ ಹೇಳಲ್ಪಟ್ಟ ನ್ಯಾಯ ಪದ್ಧತಿಯು ಆಫಘಾನಿಸ್ತಾನದಲ್ಲಿ ಈಗಲೂ ನಡೆಯುತ್ತದೆಂಬವಕ್ಕೆ ಅಲ್ಲಿದ್ದ ನೇಟೀವ್ ಗೃಹಸ್ಥರೊಬ್ಬರು ಇತ್ತಲಾಗಿ ಸಂಭವಿಸಿದ ಒಂದು ಉದಾಹರಣೆಯನ್ನು ಕೊಡುತ್ತಾರೆ: ಒಂದೆರಡು ವಾರಗಳ ಹಿಂದೆ ಒಬ್ಬ ಸಾಹುಕಾರನು ಇನ್ನೊಬ್ಬನಿಂದ ಬರತಕ್ಕ ೬೦ ರೂಪಾಯಿಯ ಬಗ್ಗೆ ಅಮೀರನ ಕಡೆಗೆ ಫಿರ್ಯಾದು ಮಾಡಿದನು. ಅಮೀರನು ಪ್ರತಿವಾದಿಯನ್ನು ತನ್ನ ಮುಂದೆ ಕರೆದು ವಾದಿಯ ರೂಪಾಯಿಗಳನ್ನು ಕೊಡು ಹೇಳಿದರು. ಆಗಲವನು ನಾನು ರೂಪಾಯಿಯನ್ನು ತೆಗೆದುಕೊಳ್ಳಲೇ ಇಲ್ಲವೆಂದು ಹೇಳಿದನು. ಆಗ ಅಮೀರನು ವಾದಿಯನ್ನು ಕರೆದು ನಿನ್ನ ಸಾಕ್ಷಿಗಳಿದ್ದರೆ ಕರಕೊಂಡು ಬಾ ಎಂದು ಅಪ್ಪಣೆ ಕೊಡಲು, ಆತನು—ಸ್ವಾಮಿ, ನಾನು ಒಂದು ಮರದ ಬುಡದಲ್ಲಿ ಈತನಿಗೆ ರೂಪಾಯಿಗಳನ್ನು ಕೊಟ್ಟಿದ್ದೆನು. ಆ ಮರ ಹೊರತು ನನ್ನ ಕಡೆ ಬೇರೆ ಸಾಕ್ಷಿಗಳೇ ಇಲ್ಲವೆಂದು ಹೇಳಿಕೊಂಡನು. ಇದನ್ನು ಕೇಳಿ ಅಮೀರನು—ಹಾಗಾದರೆ ಆ ಮರದ ಬಳಿಗೆ ಹೋಗಿ ನ್ಯಾಯ ಕೇಳೆಂದು ವಾದಿಯನ್ನು ಕಳುಹಿಸಿದನು. ಮತ್ತು ಕೆಲವು ಹೊತ್ತಿನ ಮೇಲೆ—ಇಷ್ಟರಲ್ಲಿ ವಾದಿಯು ಆ ಮರದ ಹತ್ತರ ಮುಟ್ಟಿರುವನೋ? ಎಂದು ಕೇಳಿದ್ದಕ್ಕೆ ಪ್ರತಿವಾದಿಯು—ಇಲ್ಲ ಸ್ವಾಮಿ, ಆ ಮರವು ಬಹಳ ದೂರ ಇರುವದು—ಎಂದು ಉತ್ತರ ಕೊಟ್ಟನು. ಈ ಉತ್ತರವನ್ನು ಕೇಳಿದ ಕೂಡಲೇ ಈತನ ಗುಟ್ಟು ತಿಳಿದು ಅಮೀರನು ವಾದಿಯನ್ನು ಬೇರೆ ಮಾರ್ಗದಿಂದ ಹಿಂದಕ್ಕೆ ಕರೆತರಲು ಅಂತರಂಗವಾಗಿ ಅಪ್ಪಣೆ ಕೊಟ್ಟು, ವಾದಿಯು ಆ ಮರಕ್ಕೆ ಮುಟ್ಟಿದನೋ ಪ್ರತಿವಾದಿಯನ್ನು ನೋಡೆಂದು ಕಳುಹಿಸಿದನು. ಮತ್ತು ವಾದಿಯನ್ನು ಕರೆದು ಪ್ರತಿವಾದಿಯು ನೀನು ಹಣ ಕೊಟ್ಟ ಮರದ ಬಳಿಗೆ ಹೋಗಿದ್ದಾನೋ ನೋಡೆಂದು ಕಳುಹಿಸಿದನು. ಇಬ್ಬರೂ ಒಂದೇ ಮರದ ಬಳಿಕ್ಕೆ ಹೋದರು. ಆಗ ಪ್ರತಿವಾದಿಯ ಕಡೆಯಿಂದ ವಾದಿಗೆ ೬೦ ರೂಪಾಯಿಗಳನ್ನು ಕೊಡಿಸಿದ್ದಲ್ಲದೆ, ಸುಳ್ಳು ಹೇಳಿದ ಬಗ್ಗೆ ಆತನನ್ನು ದಂಡಿಸಿದನು!

ಮುಂಬೈಯಲ್ಲಿರುವ ಕ್ಷತ್ರಿಯ ಜಾತಿಯವರು ಇದರಡಿ ಕಂಡ ಕೆಲವು ಸಾಮಾಜಿಕ ನಿಯಮಗಳನ್ನು ತಮ್ಮೊಳಗೆ ಮಾಡಿಕೊಂಡು ವ್ಯವಹಾರದೊಳು ನಡೆಯುವಂತೆ ನಿಶ್ಚಯಿಸಿದ್ದಾರೆ, ಅವುಗಳ್ಯಾವವೆಂದರೆ:—

೧. ವಿವಾಹಸಂಬಂಧ ನಿಶ್ಚಯಕಾಲದಲ್ಲಿ ಆಭರಣಪ್ರಯುಕ್ತವಾದ ವಿಚಾರವನ್ನೊಬ್ಬರೂ ಮಾಡಲಾಗದು.

೨. ಉಪನಯನ ಕಾಲದಲ್ಲಿ ವಟುವಿಗೆ ಬೆಳ್ಳಿ ತಂಬಿಗೆ ಪಂಚಪಾತ್ರೆ ತಪ್ಪ ಪನ್ಯರೆ ಬೆಳ್ಳಿ ಪಾತ್ರೆಗಳನ್ನೂ ಚಿನ್ನದ ಆಭರಣಗಳನ್ನೂ ಕೊಡಲಾಗದು.

೩. ಸಂಬಂಧ ನಿಶ್ಚಯಾನಂತರ ಲಗ್ನವಾಗುವದರೊಳಗಾಗಿ ಕನ್ಯೆಯ ತಾಯಿತಂದೆಗಳು ವರನ ಕಡೆಯವರಿಂದ, ಆಭರಣಗಳ ತಗಾದೆ ಮಾಡುವ ದುಸ್ಸಂಪ್ರದಾಯ ಒಂದು ಪ್ರಬಲಗೊಂಡಿದೆಯಷ್ಟೆ, ಮತ್ತು ಈ ಆಭರಣದ ವಿಷಯದಲ್ಲೇನಾದರು ತಕರಾರುಂಟಾದರೆ ಆ ವಿವಾಹವನ್ನೇ ತಡೆದುಬಿಡುವ ದುಷ್ಪದ್ಧತಿಯು ಬಹಳ ನಿಂದ್ಯವಾದದ್ದರಿಂದ ಆಭರಣಗಳು ಕುರಿತು ಕೇಳುವದಾಗಲಿ, ಅದಕ್ಕಾಗಿ ವಿವಾಹವನ್ನು ನಿಲ್ಲಿಸುವದಾಗಲಿ ಅಕ್ರಮವು.

೪. ಉಪನಯನ ಮತ್ತು ವಿವಾಹ ಕಾಲಗಳಲ್ಲಿ ನೃತ್ಯಗೀತ ವಾದ್ಯಗಳಿಗಾಗಿ ನಾಯಕಸಾನಿಯರಂ ಕರೆಯಿಸುವ ಪದ್ಧತಿ ಇದೆಯಷ್ಟೆ. ಅದಂ ಕುಡ್ಡಾಂಗ ನಿಲ್ಲಿಸತಕ್ಕದ್ದು.

೫. ಉಪನಯನ ಅಥವಾ ವಿವಾಹಗಳಿಗಾಗಿ ಕರೆಯಲ್ಪಟ್ಟರೆ ಭೋಜನಕ್ಕೆ ಸಹ ಎಂದು ಭಾವಿಸಕೂಡದು. ಭೋಜನಕ್ಕೆ ಬರಬೇಕಾದರೆ ಪ್ರತ್ಯೇಕ ಆಮಂತ್ರಣವಿರಬೇಕು.

೬. ಲಗ್ನವು ನಿಶ್ಚಯಿಸಲ್ಪಟ್ಟು ಬರುವ ವರನ ಅಭಿನಂದನಾರ್ಥವಾಗಿ ಔತನಗಳಂ ಮಾಡಿಸುವ ಪದ್ಧತಿಯು ನಿಲ್ಲಿಸತಕ್ಕದ್ದು.

೭. ಮೌಂಜೀಬಂಧನ ಕರ್ಮವು ೧೨ ವರುಷಗಳೊಳಗಾಗಿ ತಪ್ಪದೆ ಮಾಡಬೇಕು.

೮. ಋತುಶಾಂತಿಯ ಕಾಲದಲ್ಲಿ ಮಗಳಿಗೆ ಸ್ತ್ರೀಧನರೂಪವಾಗಿ, ಚಿನ್ನ, ಬೆಳ್ಳಿ, ನಗದು, ಪದಾರ್ಥಗಳು ಪಟ್ಟೆಗಳ್ಯಾವವನ್ನು ಕೊಡಲಾಗದು.

೯. ಮಗಳಿಗೆ ಪುಂಸವನ ಸೀಮಂತ ಕಾಲಗಳಲ್ಲಿ ವಸ್ತ್ರಾಭರಣಗಳನ್ನಾಗಲಿ, ದ್ರವ್ಯವನ್ನಾಗಲಿ, ಕೊಡಕೂಡದು, ಮತ್ತು ಕೇಳಲೂಕೂಡದು.

೧೦. ಮಗಳು ಗಂಡನ ಮನೆಗೆ ಹೋಗುವ ಸಮಯದಲ್ಲಿ ಬೆಳ್ಳಿ ಭಂಗಾರದ ಒಡವೆಗಳನ್ನೂ ಬೆಲೆಯುಳ್ಳ ವಸ್ತ್ರಗಳನ್ನೂ ಮಂಚ ವಗೈರೆ ಭೋಗಾರ್ಹಗಳಾದ ಇತರ ಪದಾರ್ಥಗಳನ್ನೂ ಕೊಡಲಾಗದು, ಎಂಬದು.

ಈ ನಿಯಮಗಳು ಮೇಲೆ ಕಂಡ ಕ್ಷತ್ರಿಯರ ಆಚಾರ ವ್ಯವಹಾರಗಳಿಗೆ ಅನುಗುಣವಾಗಿ ಮಾಡಲ್ಪಟ್ಟಂತೆ ತೋರುತಿವೆ, ಪರಂತು ಅವು ಈಗಿನ ಕಾಲದ ಮಿತವ್ಯಯಾಭಿಲಾಷಿಗಳಾದವರಿಗೆಲ್ಲ ಬಹಳ ಯೋಗ್ಯವಾದವೆಂದು ತೋರಬಹುದು. ಪರಂತು ನಡೆಸಬೇಕಾದ ಕ್ರಮಗಳಿಂತಾವೆಂದು ಇದುವರೆವಿಗೆ ಯಾರೂ ನಿಷ್ಕರ್ಷೆಯಾಗಿ ತಿಳಿಸಿದವರಲ್ಲವು. ಪುರುಷಸಂಪಾದಿತವಾದ ದ್ರವ್ಯಕ್ಕೆ ಮುಖ್ಯೋದ್ದೇಶವಾದ ಭೋಗವು ಯಾವ ತೆರನಾದದ್ದಾಗಿರಬೇಕೋ ತಿಳಿಯಬಲ್ಲವು. ಸಾಧಾರಣವಾಗಿ ಒಬ್ಬ ಮನುಷ್ಯನಿಗೆ ವಿಶೇಷ ದ್ರವ್ಯವು ಬೇಕಾಗಿರುವದಿಲ್ಲವು. ಮತ್ತೆ ಅದಕ್ಕಾಗಿ ಅವನು ಬಹಳ ಶ್ರಮ ಪಡಲ್ಯಾಕೆ? ಒಬ್ಬನ ದ್ರವ್ಯವು ಅವನ ಪ್ರೀತಿಗೆ ಉಪಯುಕ್ತವಾಗುವದಲ್ಲದೆ ಬೇರೆ ಉಪಯೋಗವುಂಟೋ? ಇತರರ ಸುಖೋಪಕ್ಕೆ ಸಹಕಾರಿಯಾಗದೆ ಹೋದ ದ್ರವ್ಯವು ಅವನಿಗೆಷ್ಟುಮಟ್ಟಿಗೆ ಸುಖೋಪಕಾರಿಯಾಗಿರವು? ಹೀಗಲ್ಲ ಕೂಡಿಟ್ಟ ಕಡೆಗೆ ಮರಣಕಾಲದಲ್ಲಿ ಪರಲೋಕದ ಅವನು ಅನುಭವಿಸುವ ಸುಖೋಪವೆಂತಾದ್ದು? ಏತೇನ ದ್ರವ್ಯವನ್ನಾರ್ಜಿಸಿದವನೂ ಆರ್ಜಿಸದವನೂ ಮರಿಯುವದಲ್ಲಿ ಸಮಾನರೆಂತಲೇ ನುಡಿಯಬೇಕಾಗಿದೆ. ಈಗ ವಿವಾಹ ಪ್ರಯುಕ್ತವಾದ ವ್ಯಯವು ಸಲ್ಲಿಸಿಬಿಡುವಂತೆ ವಾದಿಸತಕ್ಕವರು ಮಾಡುವ ದ್ರವ್ಯ ವ್ಯಯಸ್ವರೂಪವ ಮುಂದಿನವಾರದಲ್ಲಿ ವಿವರವಾಗಿ ತಿಳಿಸುವೆವು.

"ಸತ್ಯವಾದಿ" ಎಂಬವನೊಬ್ಬನು ಇದರಡಿ ಕಂಡ ಕೆಲವು ಪ್ರಶ್ನೆಗಳಂ ಕೇಳುತ್ತಾನೇನಂದರೆ—

೧. ವೇದೋತ್ಪತ್ತಿಯ ವಿಷಯದೊಳು ತಮ್ಮ ಅಭಿಪ್ರಾಯವೇನು?

೨. ಅದು ಯಾರಿಂದ ಯಾವ ಕಾರಣಕ್ಕಾಗಿ ಹ್ಯಾಗೆ ಈ ಪ್ರಪಂಚದಲ್ಲಿ ತರಲ್ಪಟ್ಟಿದು?

೩. ಅದರಲ್ಲಿ ತಿಳಿಸಲ್ಪಡುವ ಮುಖ್ಯ ಸಂಗತಿಗಳ್ಯಾವವು?

೪. ಅದರಲ್ಲಿ ಯಜ್ಞಾದಿ ಕರ್ಮಗಳು ಮಾಡುವ ವಿಧಾನಗಳು ಮಾತ್ರವೇ, ಅಥವಾ ಇತರ ವಿಷಯಗಳು ಸಹ ತಿಳಿಸಲ್ಪಟ್ಟಿರುತಿವೆಯೆ?

೫. ಈಗ ವ್ಯವಹರಿಸಲ್ಪಡುತಲಿರುವ ನಾಲ್ಕು ಮುಖ್ಯಜಾತಿಗಳು ಹಿಂದೆ ಇದ್ದಂತೆ ವೇದದೊಳಗೆಲ್ಲಿಯಾದರು ತಿಳಿಸಲ್ಪಟ್ಟದೆಯೆ?

೬. ಸಮುದ್ರಯಾನ ಸ್ತ್ರೀ ಪುನರ್ವಿವಾಹ ಮುಂತಾದ ವಿಷಯಗಳು ಕುರಿತು ಏನಾದರು ಬರೆಯಲ್ಪಟ್ಟಿರುತಿದೆಯೆ?

೭. ಇಲ್ಲದಿದ್ದರೆ ಇವು ಬ್ರಾಹ್ಮಣರಿಗೆ ನಿಷಿದ್ಧಗಳೆಂಬದಾಗಿ ಯಾವ ಗ್ರಂಥದಲ್ಲಿ ಯಾರು ತಿಳಿಸುತ್ತಾರೆ?

೮. ಹಾಗೆ ತಿಳಿಸಿದವರು ಸ್ವತಃ ತಿಳಿಸಿದಂತೆ ನಡಿಯುತ್ತಾರೆಯೋ, ದೈವಾಜ್ಞೆಯಿಂದ ಪ್ರೇರಿತರಾಗಿ ನುಡಿದಂತೆ ಹೇಳುತ್ತಾರೆಯೆ?

೯. ಇವುಗಳ ನಿಷೇಧಗಳಿಗೆ ಅವರೇನಾದರು ಕಾರಣಗಳನ್ನು ತಿಳಿಸಿದಾರೆಯೋ?

೧೦. ಹಿಂದೂ ಗ್ರಂಥಗಳ್ಯಾವದೊರಾಳಾಗಲಿ ಈಶ್ವರನ ಮಾತಿನ ಪ್ರಕಾರವೇ [ಈ ಪ್ರಪಂಚವು ಸೃಜಿಸಲ್ಪಟ್ಟಿತೆಂದು ಬರೆದಿದೆಯೆ?

೧೧. ಅಲ್ಲದೆ ಹಿಂದೆ ಅಮರರಿವಿಗಿದ್ದ ಮಹಸ್ತೋಂದರಿಂದ ಈ ಲೋಕವು ಸೃಜಿಸಲ್ಪಟ್ಟಿತೆಂದು ತಿಳಿಸಲ್ಪಟ್ಟದೆಯೆ?

೧೨. ವೇದದಲ್ಲಿ ಪುನರ್ಜನ್ಮ ವಿಷಯವಾಗಿ ಏನಾದರೂ ಬರೆಯಲ್ಪಟ್ಟದೆಯೆ?

೧೩. ಒಂದಾವರ್ತಿ ಮಾನುಷ ಜನ್ಮವನ್ನೆತ್ತಿದವನು ಮರಳಿ ಮನುಷ್ಯಜನ್ಮವನ್ನೆತ್ತಲಿಕ್ಕೆ ಸಾಧ್ಯವಹುದೆ?

೧೪. ವಿಷ್ಣುವಿನ ದಶಾವತಾರಗಳ ಪೈಕಿ ಬೌದ್ಧಾವತಾರವೂ ಒಂದೇ ಅಲ್ಲವೇ?

೧೫ ಈ ಅವತಾರ ವಿಷಯವು ಯಾವ ರೀತಿಯಿಂದ ತಿಳಿಸಲ್ಪಟ್ಟಿತ್ತು?

೧೬. ಈ ಬೌದ್ಧಾವತಾರಕ್ಕೂ, ಬೌದ್ಧರು ಗೌರವಿಸುವ ಬುದ್ಧನಿಗೂ ಏನಾದರೂ ಸಂಬಂಧ ವಿರುತಿದೆಯೆ?

೧೭. ಶ್ರೀ ಶಂಕರಾಚಾರ್ಯರವರಿಗೂ, ಬೌದ್ಧಮತಾವಲಂಬಿಗಳಾದ ಗುರುಗಳಿಗೂ ನಡೆದ ವಾದಗಳಲ್ಲಿ ಬೌದ್ಧರು, ಶಂಕರಾಚಾರ್ಯರವರು ತಿಳಿಸಿದ ಕಾರಣಗಳು ಚನ್ನಾಗಿರುವಂತೆ ಭಾವಿಸಿ ಮರಳಿ ಮತಾಂತರ ಪ್ರತ್ಯುತ್ತರಗಳಾದರೆಂದು ಎಲ್ಲಿಯಾದರು ಬರೆಯಲ್ಪಟ್ಟದೆಯೆ?

೧೮. ಶ್ರೀಶಂಕರಾಚಾರ್ಯರವರು ತಮಗೆ ಸಾಧ್ಯವಾದ ಮಟ್ಟಿಗೆ ಬೌದ್ಧರು ವಧಿಸಿದರೆಂಬ ವಿಷಯ ಸತ್ಯವಾದದ್ದೆ?

೧೯. ವೇದದಲ್ಲಿ ತಿಳಿಸಲ್ಪಟ್ಟಿರುವಂತೆ ನಡೆದುಕೊಳ್ಳಬೇಕಾದವರು ನಾಲ್ಕು ವರ್ಣವುಳ್ಳ ಈ ಇಂಡ್ಯ ದೇಶದವರು ಮಾತ್ರವೆ ಅಲ್ಲದೆ ಪ್ರಪಂಚದಲ್ಲಿರುವ ಇತರ ಅನ್ಯ ದೇಶಸ್ಥರು ಸಹ ತಪ್ಪದೆ ನಡಿಯಬೇಕೆ?

೨೦. ಹಾಗಿಲ್ಲದ ಪಕ್ಷಕ್ಕೆ ಈಶ್ವರನು ಆಯಾ ದೇಶಸ್ಥರಿಗೆ ಪ್ರತ್ಯೇಕ ಪ್ರತ್ಯೇಕ ಮತಗ್ರಂಥಗಳು ಕಲ್ಪಿಸಿದನೆ?

೨೧. ಕ್ರಿಸ್ತಪೂರ್ವರಿಗೆ ಉಪಯೋಗವಾಗಿರುವ ಬೈಬಿಲ್ ಎಂಬ ಗ್ರಂಥವು ಯೂರೋಪ್ ದೇಶಿಯರಿಂದೆಲ್ಲ ನಮ್ಮ ವೇದದಂತೆ ಭಾವಿಸಲ್ಪಟ್ಟದೆಯೆ?

೨೨. ಅದರಂತೆ ನಡಿಸುವವರಿಗೆಲ್ಲ ಮೋಕ್ಷವುಂಟೆ?

೨೩. ಉಂಟಾಗದಿರಲಿಕ್ಕೆ ಕಾರಣವೇನು?

೨೪. ಯೋಗವಿದ್ಯೆಯನ್ನಭ್ಯಸಿಸತಕ್ಕವರು ತಮ್ಮ ದೇಹವು ಶ್ವಾಸಧಾರಣದಿಂ ಅಂತರಾಳದಲ್ಲಿ ನಿಲ್ಲಿಸುವರಂತೆ, ಅಂತವರನ್ನೀಗ ಎಲ್ಲಿಯಾದರೂ ಕಾಣಬಹುದೆ?

೨೫. ಅಂತವರೀಗ ಇರುವ ಪಕ್ಷಕ್ಕೆ ನಮ್ಮಂತಾ ಅಜ್ಞಾನಿಗೆ ಆ ಯೋಗ ವಿದ್ಯೆಯಲ್ಲಿ ನಂಬಿಕೆಯನ್ನುಂಟುಮಾಡಿ, ತನ್ಮೂಲಕ ಅವರಂ ಈಶ್ವರಾನುಗ್ರಹಕ್ಕೆ ಪಾತ್ರರನ್ನಾಗಿ ಮಾಡಿಯಾತಕ್ಕೆ ಅವರು ಪುಣ್ಯವಂ ಸಂಪಾದಿಸಲಾಗದು?

BANGALORE:—Printed and published for the Proprietor at the KARNATAK Press.—1888.

ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA.

ಪ್ರತಿ ಸೋಮವಾರ ಪ್ರಾತಃಕಾಲದಲ್ಲಿ ಪ್ರಕಟಿಸಲ್ಪಡುವದು.

Published every Monday Morning.

[illegible]

Vol. XV.]	BANGALORE—MONDAY, MARCH 12, 1888.	[No. 10.
ಸಂಪುಟ ೧೫.]	ಬೆಂಗಳೂರು:—ಸನ್ ೧೮೮೮ನೇ ಇಸವಿ ಮಾರ್ಚ್ ೧೨ನೇ ತಾರೀಖ್ ಸೋಮವಾರ.	[ಸಂಖ್ಯೆ ೧೦.

ಕರ್ಣಾಟಕ ಪ್ರಕಾಶಿಕಾ

ಪತ್ರಿಕೆಯ ಚಂದಾ ದರಗಳು,
೧೮೮೮ನೇ ಇಸವಿ ಜನವರಿ ೧ನೇ ತಾರೀಖು ಮೊದಲು
ಕಡಮೆ ಮಾಡಲ್ಪಟ್ಟಿರುತ್ತದೆ.

ಈ ಪತ್ರಿಕೆಯ ಚಂದಾದಾರರನ್ನು ಅನೇಕರ ಅಪೇಕ್ಷೆಯನ್ನು ನೆರವೇರಿಸುವ ಉದ್ದೇಶದೊಡನೆಯೂ, ಪರಿಮಿತವಾದ ಆದಾಯವುಳ್ಳವರಿಗೆಲ್ಲ ಈ ಪತ್ರಿಕೆಯು ಸುಲಭವಾಗಿ ಲಭಿಸುವಂತಿರಬೇಕೆಂಬ ಅಭಿಪ್ರಾಯದೊಡನೆಯೂ ಇದರ ಚಂದಾದರವನ್ನು ಇದರಡಿಕಂಡಂತೆ ಕಡಮೆಮಾಡಿರುತ್ತೇವೆ:—

ಇಂಗ್ಲೀಷ್ ಮತ್ತು ಕನ್ನಡ ಭಾಗಗಳಿಗೆ.

	ಸ್ಥಳದವರಿಗೆ	ಪರಸ್ಥಳದವರಿಗೆ
12 ತಿಂಗಳಿಗೆ	8—0—0	9—0—0
6 „	4—0—0	4—8—0
3 „	2—8—0	2—8—0

ಇಂಗ್ಲೀಷ್ ಅಥವಾ ಕನ್ನಡ ಭಾಗಗಳಿಗೆ.

	ಸ್ಥಳದವರಿಗೆ	ಪರಸ್ಥಳದವರಿಗೆ
12 ತಿಂಗಳಿಗೆ	4—0—0	5—0—0
6 „	2—0—0	2—8—0
3 „	1—4—0	1—8—0

ಷರಾ—[illegible]

[illegible]

ಪ್ರಕಟನೆಯ ವಿಚಾರ.

[illegible] ೦—೬—೦

[illegible] ೦ ೧—೦

ಷರಾ—[illegible]

"IT RECOMENDS ITSELF"

ALL WHO SUFFER FIND SURE RELIEF.

LITTLE'S

[illegible] BALM

THE MOST EFFECTUAL MODERN REMEDY FOR PAIN.

[illegible]

ಇದರ ಕ್ರಯ—ಸೀಸೆ ಒಂದಕ್ಕೆ ೧ ರೂಪಾಯಿ.

[illegible]

Agents.—Messrs, J. West, *Chemist, &c., Bangalore.*
Cuppain & Co., *Chemists, Bangalore.*
Riggs & Co., *Chemists, Bangalore*; and of
Mahomed Yousoff and Sons, *The Cash Bazaar, Bangalore*
A. C. Bergyman & Co.,
20 *Sunkurlass Street Madras.*

NOTICE.

VAIDYASARA SANGRAHA

A TREATISE ON THE PRINCIPLES OF

HINDU MEDICINE.

Price including Postage Rs.5 6 0

ವೈದ್ಯಸಾರ ಸಂಗ್ರಹ.

ಈ ಗ್ರಂಥಾಪೇಕ್ಷೆಯುಳ್ಳವರು ಮೊಬಲಗಿನೊಡನೆ ಕೆಳಗೆ ರುಜುಮಾಡಿರತಕ್ಕವರ ಹೆಸರಿಗೆ ಬರೆದುಕೊಂಡರೆ ಪುಸ್ತಕ ಕೂಡಲೇ ಕಳುಹಿಸಲ್ಪಡುವದು. ಮೊಬಲಗು ಇಲ್ಲದ ದರಖಾಸ್ತುಗಳಿಗೆ ಸುತರಾಂ ನಿಗೇಕೊಡಲ್ಪಡಲಾರದು.

ಇದರ ಕ್ರಯ ... ...ರೂ ೫—೦—೦
ಪ್ಯಾಕಿಂಗ್ ಮತ್ತು ಅಂಚೆ ಖರ್ಚು, ೦—೬—೦

ಟಿ. ಬಿ. ವೆಂಕಟಾಚಾರ್,
ಆಸ್ಪತ್ರಿರೋಡ್, ಬೆಂಗಳೂರು.

ನೋಟಿಸ್.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವುದೇನೆಂದರೆ,—

ಮ್ಯುನಿಸಿಪಲ್ ಕೈಲಾದಿನ ೧೮ನೇ ಸೆಕ್ಷನಿನ ತಿದ್ದುಪಡಿಯಂತ ೧೮೮೮ನೇ ಇಸವಿ ಫೆಬ್ರವರಿ ೧೮ನೇ ತಾರೀಖಿನಲ್ಲಿ ಕೊಡಲ್ಪಟ್ಟ ೧೩೭೬ ನೇ ನಂಬರ್ ಮ್ಯುನಿಸಿಪಲ್ ನೋಟಿಸ್ಸಿಗೆ ಪ್ರಜೆಗಳು ನಿಗಾಕೊಡಬೇಕು. [illegible] ಸೂರ್ಯಾಸ್ತಮಯವಾದಮೇಲೆ ಲಾಂದ್ರವಿಲ್ಲದೆ ಗಾಡಿಗಳಲ್ಲಿ ಹೋಗುವಂತಾದರೆ ದಂಡಕ್ಕೆ ಗುರಿಯಾಗುವರು.

ಡಿಸ್ಟ್ರಿಕ್ಟ್ ಸೂಪರಿಂಟೆಂಡೆಂಟ್ ಆಫೀಸ್, ಸಿವಿಲ್ ಮತ್ತು ಮಿಲಿಟರಿ ಸ್ಟೇಷನ್, ಬೆಂಗಳೂರು, [illegible] ೧೮೮೮

F. Fawcett,
Offg. Distt. Supdt. of Police,
C. & M. Station.

ನೋಟಿಸ್.

ಬೆಂಗಳೂರಲ್ಲಿನ ಕಂಬ್ಳಿ, ಅರಳೆ, ಮತ್ತು ರೇಷ್ಮೆ ಕಾರ್ಖಾನೆಗೆ ೧೦೦ರಿಂದ ೧೦೦೦ವರೆಗೆ ನವರಿಗೆ ಕ್ಯಾಸರಿಕೆ ಅಥವಾ ಕಾಮಗಾರಿಕೆ ಬೇಕಾಗಿರುವದರಿಂದ ಅದರ ಸರಬರಾಯಿಬಗ್ಗೆ ದರಖಾಸ್ತುಗಳು ತೆಗದು ಕೊಳ್ಳಲ್ಪಡುವವು.

ದರಖಾಸ್ತು ನಮೂನೆ ಬೇಕಾದರೆ ಮೇಲಿನ ಕಾರ್ಖಾನೆಯಲ್ಲಿ ಪಡೆಯಬಹುದು.

ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA.

MONDAY, MARCH 12, 1888.

೧೮೮೮ನೇ ಮಾರ್ಚ್ ೧೨ನೇ ತಾ॥ ಸೋಮವಾರ.

HINDU NEW YEAR'S DAY.

ಕಲ್ಯಾದಿ ಗತಾಬ್ದಗಳಲ್ಲಿ ೪೯೮೮ನೆಯ ದಾದ ಈ ಸರ್ವಜಿನ್ನಾಮ ಸಂವತ್ಸರವು ಈ ದಿನದೊಡನೆ ಪೂರ್ತಿಯಾಗಿ ಚಾಂದ್ರಮಾನ ರೀತ್ಯಾ ನಾಳೆಯದಿನ ಸರ್ವಧಾರಿ ಸಂವತ್ಸರವು ಪ್ರಾರಂಭವಾಗುವದು. ಈ ದೇಶದಲ್ಲಿ ಸರ್ವತ್ರ ಲೌಕಿಕ ವ್ಯವಹಾರದೊಳು ಚಾಂದ್ರಮಾನಾಬ್ದವೇ ಗ್ರಾಹ್ಯವಾಗಿರುವದರಿಂದ ನವರೀ ದಿವಸವು ಇಲ್ಲಿನವರಿಗೆ ಶುಭದಿನವಾಗಿರುತ್ತದೆ. ಶೇಷಾಚಲಕ್ಕೆ (ತಿರುಪತಿಗೆ) ದಕ್ಷಿಣದಿಗ್ಭಾಗದಲ್ಲಿರುವ ಪ್ರದೇಶಗಳಲ್ಲೆಲ್ಲ ಸಾರಮಾನವು ಆಚರಣೆಯೊಳಗಿರುತ್ತದೆ. ಈ ಮಾನದರೀತ್ಯಾ ಯುಗಾದಿಯು, ಅಧಿಕ ಚೈತ್ರ ಬಹುಳ ಅಮಾವಾಸ್ಯೆಯ ಮೊದಲು ಉದಯವಾಗುವದು. ವಿಂಧ್ಯದಡಾಕ್ಕೆ ಉತ್ತರದಲ್ಲಿ ಬಾರ್ಹಸ್ಪತ್ಯ ಮಾನವು ನಡವಳಿಯಲ್ಲಿದೆ. ಜ್ಯೋತಿಸ್ಸ್ಮಾರ್ತ ಶಾಸ್ತ್ರ ಕರ್ಮಗಳು ಸ್ನಾನಾದಿ ಸಕಲ ವ್ಯವಹಾರಾದಿಗಳಿಗೂ [illegible] ಭೂತನಾದ ಸರ್ವಧಾರಿ ಸಂವತ್ಸರದಲ್ಲಿ ಶುಕ್ರನು ರಾಜನಲ್ಲದೆ ಅರ್ಘಾಧಿಪತಿ ಮತ್ತು ಮೇಘಾಧಿಪತಿ. ಬುಧನು ಮಂತ್ರಿ ಮತ್ತು ಸೇನಾಧಿಪತಿ. ಶನಿ ಸಸ್ಯಾಧಿಪತಿ ಮತ್ತು ನೀರಸಾಧಿಪತಿ. ಗುರು ಧಾನ್ಯಾಧಿಪತಿ. ಚಂದ್ರನು ರಸಾಧಿಪತಿ. ಇವರೀ ತ್ಯಾ ಅಧಿಕಾರಿಗಳು ಏರ್ಪಟ್ಟಿರುತ್ತಾರೆ. ಇದರ ಫಲವೇನೆಂದರೆ, ಈ ವರುಷದಲ್ಲಿ ನಿಜಚೈತ್ರದಲ್ಲಿಯೇ ಮುಂಗಾರಿಗೆ ಪ್ರಾರಂಭವಾಗಿ ವೈಶಾಖ ಜ್ಯೇಷ್ಠ ಮಾಸಗಳಲ್ಲಿ ಸುವೃಷ್ಟಿಯಾಗುವದು, ಪರಂತು ಅದು ವಿಶೇಷ ಘಾಳಿಯಿಂದೊಡಗೂಡಿದ್ದಾಗಿಯೇ ಇರುವದು. ಆಷಾಢ ಶ್ರಾವಣ ಭಾದ್ರಪದ ಮಾಸಗಳಲ್ಲಿ ವ್ಯಾಪಾರ ನಷ್ಟವೂ, ಆಶ್ವಯುಜ ಕಾರ್ತಿಕ ಮಾಸಗಳಲ್ಲಿ ಬಹಳ ಘಾಳೀ ಮಳೆಯೂ, ಸಿಡಿಲು ಪ್ರಯುಕ್ತ ಮಾದ ಭೀತಿಯೂ ಉಂಟಾಗುವವು. ಕೆಲವು ಋತ್ಯುಕ್ತ ಧಾನ್ಯಗಳು ಚನ್ನಾಗಿ ಫಲಿಸುವವು. ತಿಲ, ಮಾಷ, ಯವ, ಗೋಧುಮ ಇತ್ಯಾದಿ ನೀಲ ಶ್ವೇತ ಧಾನ್ಯಾದಿಗಳು ವಿಶೇಷ ಫಲಿಸುವದಲ್ಲದೆ ಪ್ರಾಯಶಃ ಫಸಲಗಳೆಲ್ಲ ಚನ್ನಾಗಿರುವವು. ವೀಳ್ಯ, ಎಣ್ಣೆ, ಬೆಲ್ಲ, ಗುಗ್ಗಳ, ಕರ್ಪೂರ, ಹಾಲು, ಮೊಸರು, ತುಪ್ಪ, ಮುತ್ತು ಬಟ್ಟೆ ಮುಂತಾದ ಪದಾರ್ಥಗಳ ಬಾಹುಳ್ಯದಿಂದ ಇವುಗಳ ಬೆಲೆಯು ಕಡಮೆಯಾಗಿರುವವು. ಬೆಳ್ಳಿ, ಭಂಗಾರ, ವಜ್ರ, ಅರಳೆ, ಚರ್ಮ, ಗಂಧ, ಉಪ್ಪು, ಮರ,

ಕುಶ, ಮೈಣ, ಇತ್ಯಾದಿ ವಸ್ತುಗಳಿಗೆ ಕ್ರಯವು ಹೆಚ್ಚುವದು. ಬ್ರಾಹ್ಮಣ, ಕ್ಷತ್ರಿಯ, ವೈಶ್ಯ ಜಾತಿಯ ಜನರಿಗೆ ವಿಶೇಷ ಸೌಖ್ಯವೂ, ಶೂದ್ರ ಹೂಣ ಮ್ಲೇಚ್ಛಾದಿಗಳಿಗೆ ಅಲ್ಪ ಸೌಖ್ಯವೂ ಅಲ್ಲಿಯಲ್ಲಿ ಅಗ್ನಿಭಯವೂ, ಆಯುಧಾದಿಗಳಿಂದಲೂ ಉಷ್ಣ ರೋಗಗಳ ಪ್ರಾಬಲ್ಯದಿಂದಲೂ ಜನರಿಗೆ ವಿಶೇಷ ಭೀತಿಯೂ ಉಂಟಾಗುವವು. ಗೋದಾವರೀ ಕೃಷ್ಣಾ ಕಾವೇರೀ ಮೊದಲಾದ ನದಿಗಳು ಪೂರ್ಣವಾಗಿ ಪ್ರವಹಿಸುವವು. ಫಲವು ಗತವರುಷಕ್ಕಿಂತ ಮುಂಬಾಗ ಅಧಿಕವಾಗಿರುವದು. ಈ ಸಂವತ್ಸರದಲ್ಲಿ ವರ್ಷವು ಎರಡು ಆಢಕ, ವಾಯು ಮೂರು ಆಢಕ ಪರಿಮಾಣ ಪ್ರಬಲವಾಗಿರುವದು. ಮಳೆಯು ಹತ್ತುಭಾಗ ಸಮುದ್ರದಲ್ಲಿಯೂ, ಆರುಭಾಗ ಪರ್ವತಗಳಲ್ಲಿಯೂ, ನಾಲ್ಕುಭಾಗ ಭೂಮಿಯಲ್ಲಿಯೂ ಬೀಳುವದು. ಈ ಸಲ ಭರತ ಖಂಡದಲ್ಲಿ ದೃಶ್ಯಗಳಾದ ಸೂರ್ಯಚಂದ್ರೋಪರಾಗಗಳೊಂದೂ ಇಲ್ಲವು. ಸರ್ವಧಾರಿ ಸಂವತ್ಸರವು ಪ್ರಜಾ ಪಾಲಕರಿಗೆ ಸಂತೋಷಪ್ರದವಾಗಿರಬೇಕೆಂಬ ಪ್ರಾರ್ಥನಾಪೂರ್ವಕ ಈವರುಷವು ಕಳೆದವರಾದೆವು.

LORD DUFFERIN'S RESIGNATION.

ಇಂಡ್ಯರಾಜ್ಯದ ವೈಸರಾಯ್‌ರವರಾದ ಲಾರ್ಡ ಡಫರಿನ ಸಾಹೇಬರವರು ಈ ಸಂವತ್ಸರಾಂತದಲ್ಲಿ ತಮ್ಮ ಕೆಲಸಕ್ಕೆ ರಾಜೀನಾಮೆ ಕೊಟ್ಟು ಸ್ವದೇಶಕ್ಕೆ ಹೊರಡುಹೋಗುವ ಸನ್ನಾಹದಲ್ಲಿರುವದರಿಂದ ಸದರೀ ಸಾಹೇಬರವರು ತಮ್ಮ ಆಡಳಿತ ಕಾಲದಲ್ಲಿ ನಡೆಸಿದ ಕಾರ್ಯಗಳನ್ನು ಕುರಿತು ಕೇಸರೀಹಿಂದ್ ಎಂಬ ಪತ್ರಿಕೆ ತಿಳಿಸುವದೇನೆಂದರೆ:—ಈ ಸಂವತ್ಸರಾಂತದಲ್ಲಿ ವೈಸರಾಯ್‌ರವರು ತಮ್ಮ ಕೆಲಸಕ್ಕೆ ರಾಜೀನಾಮೆ ಕೊಡುತ್ತಾರೆಂದು ತಿಳಿಯಬಂದ ಬಗ್ಗೆ ತಾವು ವ್ಯಸನಪಡಬೇಕಾದ್ದಕ್ಕೆ ಕಾರಣವಿಲ್ಲವು. ಇವರು, ಲಾರ್ಡ್ ರಿಪನ್ ಸಾಹೇಬರವರ ಕಾಲಾನಂತರ ಅವರ ಗುಣಾತಿಶಯಗಳುಳ್ಳವರಾಗಿರುವರೆಂಬ ನಮ್ಮ ಪ್ರತ್ಯಾಶೆಗಳು ಭಂಗವನ್ನೈದಿದವು. ಲಾರ್ಡ್ ರಿಪ್ಪನ್ ಪ್ರಭುಗಳ ಕಾಲದಲ್ಲಿ ಈ ದೇಶದೊಳು ಸುಖವೂ ಸರ್ವ ಸಮೃದ್ಧಿಯೂ ಉಂಟಾಗಿದ್ದವು. ಈಗಿನ ವೈಸರಾಯ್ ಯವರ ಅಧಿಕಾರ ಪ್ರಾರಂಭದಲ್ಲೇ ಬರ್ಮಾದೇಶದ ಯುದ್ಧಕ್ಕಾಗಿ ಇಂಡ್ಯಾದೇಶದ ಖಜಾನೆಯಲ್ಲಿದ್ದ ದ್ರವ್ಯವನ್ನೆಲ್ಲ ದುರ್ವಯ ಮಾಡಿ, ಅದರ ಭರ್ತಿಯ ಬಗ್ಗೆ ಇನ್‌ಕಂಟ್ಯಾಕ್ಸ್ ಎಂಬ ತೆರಿಗೆಯನ್ನು ಮೊಕರರ್ಮಾಡಿದ್ದಲ್ಲದೆ ಉಪ್ಪಿನಮೇಲಿನ ತೆರಿಗೆಯನ್ನು ಹೆಚ್ಚಿಸಿದರು. ಪ್ರಜೆಗಳ ಕ್ಷೇಮಕ್ಕೆ ಸಂಬಂಧಪಟ್ಟ ವಿಶಿಷ್ಟ ಕಾರ್ಯಗಳಲ್ಲೂ ಈ ದೇಶಿಯರ ಅಪ್ರೀತಿಗೆ ಇವರು ವಿಷಯರಾದರೆಂದು ನಾವು ಹೇಳದಿರುವದಕ್ಕಾಗುವದಿಲ್ಲವು. ಇವರ ಆಡಳಿತ ಕಾಲದಲ್ಲಿ ಇಂಡ್ಯದೇಶದ ಮತ್ತು ಅದರ ಪ್ರಜೆಗಳ ಅಪೇಕ್ಷಿತಾಂಶಗಳು ನಡೆಸಲ್ಪಡಲಿಲ್ಲವು, ಮತ್ತು ಅವುಗಳಗಿನಿಗೇ ಕೊಡಲ್ಪಡಲಿಲ್ಲವು.

ಈ ದೇಶದಲ್ಲಿ ಕಳೆದ ಮೂರು ಸಂವತ್ಸರಗಳ ಕಾಲ ನಡೆದ ಇವರ ಆಡಳಿತದಲ್ಲಿ ಇವರ ರಾಜ್ಯಾಕಾಂಕ್ಷೆಯು ಕಾಲಕ್ರಮೇಣ ತೀವ್ರತರವಾಗುತ ಬಂತು. ವಸ್ತುತಃ ಈಚೆಗೆ ಉಪ್ಪಿನ ತೆರಿಗೆಯನ್ನು ಹೆಚ್ಚಿಸಿದ್ದರಿಂದಬಹಳ ಕಷ್ಟ ಪ್ರಾಪ್ತವಾಯಿತು. ಈಗಿನ ವೈಸರಾಯ್ ಯವರ ಕಾಲದಲ್ಲಿ ಈ ದೇಶಿಯ್ಯರಿಗೆ ಯಾವ ಪ್ರಯೋಜನವಾದರೂ ಉಂಟಾಗುವದೆಂಬ ಪ್ರತ್ಯಾಶೆಯು ಸಂಪೂರ್ಣವಾಗಿ ತಪ್ಪಿಹೋಯಿತು. ಇವರು ನಡೆಸಿದ ಮೂರು ವರ್ಷಗಳ ಆಡಳಿತದಲ್ಲಿ ಫೈನಾನ್ಸ್ ಮತ್ತು ಪಬ್ಲಿಕ್ ಸರ್ವಿಸ್ ಕಮಿಷನ್ ಎಂಬ ಎರಡು ಕಮಿಟಿಗಳನ್ನುಮಾತ್ರ ಏರ್ಪಾಟು ಮಾಡಿದರು. ಪರಂತು ಪ್ರಜೆಗಳಿಗಿವರಲ್ಲಿ ಸಹ ಆಶಾಭಂಗ ಪ್ರಾಪ್ತವಾಯಿತು. ಫೈನಾನ್ಸ್‌ಕಮಿಟಿಯೆಂಬದು ಒಂದು ಹಾಸ್ಯನಾಟಕದಂತಾಯಿತು. ಇನ್ನು ಸದರೀ ಸಂಘದವರಪ್ರಯತ್ನಕ್ಕೆ ಫಲವನ್ನು ಮುಂದೆ ನಿರ್ಧರಿಸಬೇಕಾಗಿದೆ. ಈಗಿನ ವೈಸ ರಾಯ್‌ಯವರ ಆಡಳಿತದ ನಾಲ್ಕನೇ ವರ್ಷ ಪೂರ್ತಿಯಾಗುವದಕ್ಕೆ ಇನ್ನು ೧೦ ತಿಂಗಳು ಉಳಿದಿವೆ. ಈ ಕಾಲದೊಳಗಾಗಿ, ಈ ದೇಶದೊಳು ಸರ್ಕಾರಿನೌಕರೀ ವಿಷಯದಲ್ಲಿ ಇಲ್ಲಿನವರಿಗೆ ಶಾಶ್ವತವಾದ ಮತ್ತು ನೂತನವಾದ ಒಂದು ಹಕ್ಕನ್ನುಂಟುಮಾಡುವದಕ್ಕೆ ಅವಕಾಶವಿರುತಿದೆ. ಇಂಡ್ಯದೇಶಕ್ಕೆ ಈಗ ಪ್ರಾಪ್ತವಾಗಿರುವ ಅರ್ಥಾನುಪಪತ್ತಿಯೇ, ಈದೇಶದೊಳು ಇವರ ಆಡಳಿತ ಕ್ರಮವು ಸರಿಯಾಗಿಲ್ಲವೆಂಬದಕ್ಕೆ ಸಾಕ್ಷೀ ಭೂತವಾಗಿದೆ. ಪರಂತು ಲಾರ್ಡ ಡಫರಿನ ಸಾಹೇಬರವರ ಭಾರ್ಯೆಯವರು ಈ ದೇಶದ ಹೆಂಗಸರ ವಿಷಯದಲ್ಲಿ ಮಾಡಿದ ಅಪರಿಮಿತವಾದ ಮತ್ತು ಶಾಶ್ವತವಾದ ಸಹಾಯವನ್ನು ಈ ಸಂದರ್ಭದಲ್ಲಿ ನಾವು ಪ್ರಸ್ತಾಪಿಸದೆ ಹೋಗುವದಾದರೆ ಅದು ನಮ್ಮ ಕೃತಘ್ನತೆಯನ್ನು ತೋರಿಸುವದದು. ಆಕೆಯವರು ಈದೇಶದ ಹೆಂಗಸರ ಕ್ಷೇಮಾಭಿವೃದ್ಧಿಗಾಗಿ ಶ್ರಮಿಸಿದಂತೆ ಯಾವ ವೈಸ್ ರಾಯ್‌ಯವರ ಭಾರ್ಯೆಯೂ ಶ್ರಮಪಟ್ಟಂತೆ ನಮ್ಮ ಜ್ಞಾಪಕದಲ್ಲಿಲ್ಲವು, ಎಂಬದು.

Occasional Notes.
ನೈಮಿತ್ತಿಕ ವಿಷಯನ್ಯಾಸ.

A payment ordered.—ಸಿಕ್ಕಾಬಾನ್ ಎಂಬ ಪ್ರದೇಶದಲ್ಲಿ ನಿಜಾಮರವರ ಅರಮನೆ ಕಟ್ಟದ ಬಗ್ಗೆ ಕ್ರಯವಾದ ಎರಡು ಲಕ್ಷ ರೂಪಾಯಿಗಳನ್ನು ಸರ್ಕಾರದಿಂದ ಕೊಟ್ಟುಬಿಡುವಂತೆ ಹುಕುಂ ಆದದ್ದಾಗಿ ಅಲ್ಲಿನ ಒಂದು ಪತ್ರಿಕೆಯ ಮೂಲಕ ತಿಳಿಯಬರುತಿದೆ.

A title declared hereditary.—ಪ್ರತಾಪಘಡ ಸಂಸ್ಥಾನದ ಅಜಿತಸಿಂಗರವರಿಗೆ ಅವರ ಜೀವಮಾನದ ಪರಿಮಿತಿಗೆ ಅನುಭವಿಸುವಂತೆ ಕೊಡಲ್ಪಟ್ಟ ರಾಜಾಯೆಂಬ ಅಲ್ಕಾಬನ್ನು ಅವರ ವಂಶಪಾರಂಪರ್ಯವಾಗಿ ಅನುಭವಿಸಬಹುದೆಂದು ಪ್ರಕಟಿಸಲ್ಪಟ್ಟದೆ.

A royal wedding.—ಹೋಳ್ಕರ್ ಮಹಾರಾಜರವರಿಗೆ ಜ್ಯೇಷ್ಠಭಾರ್ಯೆಯಿಂದ ಒಂದು ಹೆಣ್ಣುಮಗು ಹುಟ್ಟ ಪುರುಷ ಸಂತತಿಯಿಲ್ಲದೆ ಇರುವದರಿಂದ ಈಚೆಗೆ ಸದರೀ ಮಹಾರಾಜರವರು ಹದಿನಾರು ವರ್ಷಗಳ ವಯಸ್ಸುಳ್ಳ ಒಂದು ಕನ್ಯೆಯನ್ನು ಮದುವೆ ಮಾಡಿಕೊಂಡದ್ದಾಗಿ ತಿಳಿದಿದೆವು.

The Resident of Hyderabad.—ಹೈದರಾಬಾದ್ ರೆಸಿಡೆಂಟರಾದ ಮಿ. ಕಾರ್ಡರೀಯವರು ಇನ್ನು ಹದಿನೈದು ದಿನಗಳೊಳಗಾಗಿ ನಾಲ್ಕು ತಿಂಗಳ ಫರ್ಲೋರಜಾಮೇಲೆ ಹೊರಡುವವರಾಗಿದಾರೆ. ಅವರ ಗೈರ್ಹಾಜರೀಯಲ್ಲಿ ಮಿ. ಪವಲ್ ಎಂಬವರು ಅವರ ಕೆಲಸವನ್ನು ಬದಲೀನೋಡುವರು.

Meetings of Mahomedans.—ಇಂಡ್ಯದೇಶದ ವೈಸರಾಯ್‌ರವರಾದ ಲಾರ್ಡ ಡಫರಿನ್ ಸಾಹೇಬರಲ್ಲಿ ತಮಗಿರುವ ನಂಬಿಕೆಯನ್ನೂ, ಅವರು ತ್ವರೆಯೊಳು ತಮ್ಮ ಅಧಿಕಾರಪದದಿಂದ ನಿವೃತ್ತರಾಗುವವಿಷಯದಲ್ಲಿ ತಮಗಿರುವ ಅಸಮಾಧಾನವನ್ನು ವ್ಯಕ್ತಪಡಿಸುವದಕ್ಕಾಗಿ ಪಂಜಾಬ್ ದೇಶದಲ್ಲಿನ ಮಹಮ್ಮದಿಯರ್ ಜನರು ಅನೇಕಸಂದರ್ಭಗಳಲ್ಲಿ ಸಭೆಸೇರಿರುತ್ತಾರೆ.

Remission of revenue.— ಈ ತಿಂಗಳ ೬ನೇ ತಾರೀಖಿನಲ್ಲಿ ರತ್ಲಾಂ ಸಂಸ್ಥಾನದ ಮಹಾರಾಜರವರಿಗೆ ಘನತರವಾದ ಒಂದು ಪ್ರಶಸ್ತಿ ಕೊಡಲ್ಪಟ್ಟದ್ದರಿಂದ ಅದರ ಗೌರವಾರ್ಥವಾಗಿಯೂ, ಆ ಬಗ್ಗೆ ತಮಗುಂಟಾದ ಸಂತೋಷ ಸೂಚಕವಾಗಿಯೂ, ಸದರೀ ಮಹಾರಾಜರವರು ತಮ್ಮ ರೈತರಿಂದ ಬರಬೇಕಾದ ಕಂದಾಯದ ಪೈಕಿ ೫೦,೦೦೦ ರೂಪಾಯಿಗಳು ಅವರಿಗೆ ಮುಜರೆ ಕೊಟ್ಟಿರುತ್ತಾರೆ.

A well deserved punishment.—ಬರ್ಮಾದೇಶದಲ್ಲಿ ಪೋಲೀಸ್ ಇನ್‌ಸ್ಪೆಕ್ಟರ್ ಮರ್ರೆ ಎಂಬಾತನು, ಸದರೀ ದೇಶದ ಹೆಂಗಸರಿಬ್ಬರು ಕೆಲವು ಆಯುಧಗಳನ್ನು ಬಚ್ಚಿಟ್ಟದ್ದ ಬಗ್ಗೆ ಅವರನ್ನು ಹೊಡಿಸಿದ್ದರಿಂದ ಅಂತವನು ಬ್ರಿಟಿಷ್ ಸರ್ಕಾರದವರ ನೌಕರಿಯಲ್ಲಿರುವದಕ್ಕೆ ಅನರ್ಹನೆಂದು ಯೋಚಿಸಿ ಸದರೀಯವನು ಕೂಡಲೇ ತನ್ನ ಕೆಲಸಕ್ಕೆ ರಾಜೀನಾಮೆ ಕೊಡಬೇಕೆಂದು ಹುಕುಂ ಮಾಡಿದರಂತೆ.

An example followed.—ಇಂಡ್ಯದೇಶದ ಇತರ ನೇಟಿವ್ ಸಂಸ್ಥಾನಾಧಿಪತಿಗಳಂತೆ, ಕಾಶ್ಮೀರ ಮಹಾರಾಜರವರು ಸಹ ಇಂಡ್ಯದೇಶದ ಸರಹದ್ದು ಪ್ರಾಂತದ ಬಂದೋಬಸ್ತಿಯಬಗ್ಗೆ ತಮ್ಮಸಂಸ್ಥಾನದ ಆಯತಿಯನ್ನೆಲ್ಲ ಇಂಡ್ಯ ಗವರ್ನಮೆಂಟನವರ ವಶಮಾಡಲಿಕ್ಕದಾಗಿ ಸದರೀ ಗವರ್ನಮೆಂಟಿಗೆ ತಿಳಿಸಿದಾಗ್ಯೂ, ಪರಂತು ವಿಲಕ್ಷಣವಾದ ಕೆಲವು ಷರತ್ತುಗಳ ಗೊಳಪಟ್ಟು ಹಾಗೆ ಮಾಡುವದಾಗಿ ತಿಳಿಸಲ್ಪಟ್ಟಿರುವದರಿಂದ ಅವಕ್ಕೆ ಇಂಡ್ಯಗವರ್ನಮೆಂಟನವರು ಇದುವರಿವಿಗೆ ಜವಾಬ ಬರೆಯಲಿಲ್ಲವೆಂತಲೂ ಅಲಹಾಬಾದ ಪತ್ರಿಕೆ ಯೊಂದು ತಿಳಿಸುತಿದೆ.

ನೋಟಿಸ್.

ಇದರಿಂದ ನಮ್ಮ ಚಂದಾದಾರರಿಗೆ ಮರಳಿ ನಾವು ಜ್ಞಾಪಕ ಕೊಡುವದೇನೆಂದರೆ:—ತಾವೆಲ್ಲರು ಚಂದಾ ಹಣವನ್ನು ಮುಂಗಡವಾಗಿ ಕೊಡುವದಕ್ಕೆ ಅನುಕೂಲವಾಗಿರುವಂತೆ ಈ ಸಾಲಿನಿಂದ ಚಂದಾ ದರವನ್ನು ಕಮ್ಮಿ ಮಾಡಿರುತ್ತೇವೆ. ಹಾಗೆ ತಾವೆಲ್ಲರು ಅಡ್ವಾನ್ಸ್ ಕೊಡದ ಪಕ್ಷಕ್ಕೆ ಹಿಂದಿನ ದರ ಪ್ರಕಾರ ಕೊಡಬೇಕಾಗುವದು. ಹೊಸ ಚಂದಾದಾರರಿಗೆಲ್ಲ ಪತ್ರಿಕೆಗಳು ನಿಲ್ಲಿಸಲ್ಪಡುವವು.

LOCAL AND PROVINCIAL NEWS.
ಒಳದೇಶ ಮತ್ತು ತಾಲ್ಲೂಕ್‌ಬಾತ್‌ಮಿವೃತ್ತಾಂತಗಳು

Suicide.—ಈ ತಿಂಗಳ ೧ನೇ ತಾರೀಖ್ ಶನಿವಾರದ ದಿನ ರಾಜಾಪಟಾಳ ಲೈನ್ನಲ್ಲಿ ಮುಸಲ್ಮಾನ ಜಾತಿ ಶಿಪಾಯಿ ಯೆಂಬುವನು ನೇಣುಹಾಕಿಕೊಂಡು ಆತ್ಮ ಹತ್ಯೆ ಮಾಡಿಕೊಂಡಂತೆ ತಿಳಿಯಲಾದೆವು, ಪರಂತು ಇಂತಾ ಕೃತ್ಯ ನಡೆಸುವದಕ್ಕೆ ಸರಿಯಾದ ಕಾರಣ ಮಾತ್ರ ಹೊರಗಾಗಲಿಲ್ಲವು.

The Southern Mahratta Railway.—ಗುಬ್ಬಿ ಹರಿಹರ ರೈಲ್ವೆ ದಸ್ತು ಕಾಮಗಾರಿಯು ಬಹಳ ತ್ವರಿತದೊಳು ನಡೆಸಲ್ಪಡುತಲಿರುವಂತೆ ತಿಳಿಯಬರುತಿದೆ. ಈ ರೈಲ್ವೆಗೆ ಬೇಕಾದ ಕಬ್ಬಿಣ ವಗೈರೆ, ಸಾಮಾನುಗಳು ರೈಲ್ವೆ ಮಾರ್ಗವಾಗಿ ಈ ನ್ನೂರಿಗೆ ಬಂದು ತುಮಕೂರಿ ಮಾರ್ಗವಾಗಿ ಕಳುಹಿಸಲ್ಪಡುತಲಿರುವಂತೆ ಕೇಳುತ್ತೇವೆ.

Successful Mysoreans.—ಈ ದೇಶದಿಂದ ಪುನೆಗೆಹೋಗಿ ಅಲ್ಲಿನ ಸಿವಿಲ್ ಇಂಜನಿಯರಿಂಗ್ ಕಾಲೀಜಿನಲ್ಲಿ ಓದಿ ಈ ಸಂವತ್ಸರ ಎಲ್. ಸಿ. ಇ. ಪರೀಕ್ಷೆಯೊಳು ತೇರ್ಗಡೆಯಾದ ಮೆ||ಸಿ. ಸುಬ್ಬರಾವ್ ಬಿ. ಎ. ಯೆಂಬವರಿಗೆ ಬೆಲಗಾಂ ಡಿಸ್ಟ್ರಿಕ್ಟಿನಲ್ಲಿಯೂ, ಮೆ|| ಹೆಚ್ ರಾಮಣ್ಣ ಬಿ. ಎ. ಎಂಬವರಿಗೆ ಗುಜರಾತ ದೇಶದಲ್ಲಿಯೂ ಅಸಿಸ್ಟೆಂಟಇಂಜನಿಯರ್ ಕೆಲಸಗಳಾದವೆಂದು ಕೇಳಲಿಕ್ಕೆ ನಾವು ಬಹಳ ಸಂತೋಷಿಸುತ್ತೇವೆ. ವರ್ಧಿಷ್ಣುಗಳಾದ ಸದರೀ ಈರ್ವರೂ ತಮ್ಮ ವಿದ್ಯಾವಿಷಯದಲ್ಲಿ ಅನುಭವಿಸಿದ ಶಾರೀರಕ ಮಾನಸಿಕ ಶ್ರಮಗಳಿಗೆ ತಕ್ಕಫಲವು ಸ್ವದೇಶದಲ್ಲಿ ಲಭಿಸದಿದ್ದಾಗ್ಯೂ ದೇಶಾಂತರಗಳಲ್ಲಾದರೂ ಪ್ರಾಪ್ತವಾದಬಗ್ಗೆ ಇಲ್ಲಿನವರೆಲ್ಲರೂ ಸಂತೋಷಿಸಬೇಕಾಗಿದೆ.

The Chief Judge.—ಇಲ್ಲಿನ ಚೀಫ್ ಕೋರ್ಟ್ ಚೀಫ್ ಜಡ್ಜಿಯರಾದ ಮಿ. ಸಿ. ಜೆ. ಪ್ಲಮ್ಮರ್ ಯವರು ಈ ತಿಂಗಳ ಆಖೈರಿನಲ್ಲಿ ೬ ತಿಂಗಳ ಫರ್ಲೋ ರಜಾ ಮೇಲೆ ಸ್ವದೇಶಕ್ಕೆ ಹೊರಟು ಹೋಗುವರೆಂತಲೂ ಅವರ ಗೈರ್‌ಹಾಜರೀಯಲ್ಲಿ, ಚೀಫ್ ಕೋರ್ಟ್ ಕೆಲಸಗಳೆಲ್ಲವೂ ದುಯ್ಯಾಮ್ ಜಡ್ಜಿಗಳಿಂದಲೇ ನಿರ್ವಹಿಸಲ್ಪಡುವವೆಂತಲೂ, ಮೂರನೆಯ ಜಡ್ಜಿಯ ಮೊಕರರೀಯು ಅನಾವಶ್ಯಕವೆಂದು ನೇಟಿವ್ ಜಡ್ಜಿಗಳಿಬ್ಬರೂ ಅಭಿಪ್ರಾಯ ಪಟ್ಟಿರುತ್ತಾರೆಂತಲೂ ತಿಳಿಯಬರುತಿದೆ. ಈ ಏರ್ಪಾಟು ನಿಜವಾಗಿ ನಡೆಸಲ್ಪಡುವಪಕ್ಷಕ್ಕೆ ಇಲ್ಲಿನ ಚೀಫ್‌ಕೋರ್ಟಿಗೆ ಮೂವರು ಜಡ್ಜಿಗಳು ಅನಾವಶ್ಯಕವೆಂದುಇಬ್ಬರಿಂದಲೇ ಕೆಲಸಗಳು ನಿರ್ವಹಿಸಲ್ಪಡಬಹುದಾಗಿದ್ದಾಗ್ಯೂ ಇದುವರಿವಿಗೆ ಮಾಹೆಯಾನಾ ೩೦೦೦ ರೂಪಾಯಿಗಳ ಪ್ರಕಾರ ಈ ಸಂಸ್ಥಾನಕ್ಕೆ ದುಬಾರೀ ಖರ್ಚಾಗುತಲಿತ್ತೆಂಬದೂ, ಜಡ್ಜಿಗಳಸಂಖ್ಯೆಯ ಆವಶ್ಯಕತೆಯು ಮೊಕರರೀಗತಕ್ಕವರ ಸ್ವರೂಪಾನುಗುಣವಾದದ್ದಾಗಿರುವದಲ್ಲದೆ ಅವರು ನಿರ್ವಹಿಸಬೇಕಾದ ಕೆಲಸದ ಗೌರವವನ್ನನುಸರಿಸಿರುವದಿಲ್ಲ ವೆಂಬದೂ, ಏತದರ್ಥ ಏರ್ಪಟ್ಟಿರುವ ರೆಗ್ಯುಲೇಷನ ಸಮಯೋಚಿತವಾದದ್ದೆಂಬದೂ ಸ್ಪಷ್ಟವಾಗುವದು. ಪ್ರಸಕ್ತ ಏರ್ಪಾಟಿನಿಂದ ಕಕ್ಷಿಗಾರರಿಗೆ ಉಂಟಾಗಬಹುದಾದ ಸಂಕಟಗಳು ಅನೇಕವಾಗಿರುವದರಿಂದ ಅವು ಮತ್ತೊಂದು ಸಂದರ್ಭದಲ್ಲಿ ತಿಳಿಸುವೆವು.

Robbery.—ಕೆಂಗೇರಿ ನಿವಾಸಸ್ಥಳಾದ ಚನ್ನವೀರಮ್ಮ ನೆಂಬಾಕೆಯು ಮಾಹೇ ಮಜಕೂರಿ ೫ ನೇ ತಾರೀಖಿನಲ್ಲಿ ಈ ಪೂರಿಗೆ ಬಂದು ಸುಮಾರು ೩೦೦ ರೂಪಾಯಿಗಳ ತನಕ ಇಂಗ್ಲಿಷ್ ಸವರನುಗಳು ತೆಗೆದುಕೊಂಡು ತನ್ನ ಊರಿಗೆ ೭ ನೇ ತಾರೀಖಿನಲ್ಲಿ ವಾಪಸ್ ಹೋಗುವಾಗ್ಯೆ ಮಾರ್ಗದಲ್ಲಿ ನಾಲ್ಕುಜನ ಕಳ್ಳರು ಅವಳಮೇಲೆ ಬಿದ್ದು ಅವಳು ಚೆನ್ನಾಗಿ ಹೊಡೆದು ಅವಳಲ್ಲಿದ್ದವನ್ನೆಲ್ಲ ಕಸುಗೊಂಡು ಅವಳು ಬತ್ತಲೆಯಾಗಿ ಗಾಡಿ ಮಾನರಕ್ಷಣಕ್ಕೆ ಸಹ ಸ್ವಲ್ಪ ಬಟ್ಟೆ ಕೊಡದೆ ಸರ್ವಸ್ವವು ಅಪಹರಿಸಿಕೊಂಡು ಹೋದರು. ಸದರೀ ಹೆಂಗಸು ನಿರ್ವಾಣವಾಗಿ ಮಾರ್ಗದಲ್ಲಿ ಕುಳಿತು ವ್ಯಸನ ಪಡುತಲಿರುವಲ್ಲಿ ಆ ಮಾರ್ಗದೊಳು ಹೋಗುತಲಿದ್ದವರು ಅವಳ ಸ್ಥಿತಿಯಂಕಂಡು ಅನುತಪಿಸಿ ವಸ್ತ್ರವನ್ನಿತ್ತು ಅವಳು ಊರಿಗೆ ಕಳುಹಿಸಿಕೊಟ್ಟರು. ಈ ಮೊಕದ್ದಮೆಯು ಸಬ್‌ಪೊಲೀಸಿನವರಿಗೆ ರಿಪೋರ್ಟು ಮಾಡಲ್ಪಟ್ಟದೆ. ಪರಂತು ಅವರು ಇದನ್ನುಸಹ, ಸ್ವಲ್ಪ ದಿವಸಗಳ ಹಿಂದೆ ಈ ಪೂರು ಸಮೀಪದೊಳು ನಡೆದು ಅದ್ಯಾಪಿ ಪತ್ತೆಯಾಗದೆ ಹಾಜವಾಗಿರುವ ನವಾಬ್‌ಟೋಪೀಮೊಕದ್ದಮೆಯೊಡನೆ ಸೇರಿಸಿಟ್ಟಿರುವದರಿಂದ ಇವುಗಳೆಲ್ಲ ಕಡೆಗೆ ಒಂದೇಯಾವರ್ತಿ ಪತ್ತೆಯಾಗುವದಾದರಿಂದ ಸದರೀನಷ್ಟವಾದ ಪದಾರ್ಥಗಳಿಗಾಗಿ ಚಿಂತಿಸದೆ ಧೈರ್ಯದೊಡನೆ ಇರಬಹುದೆಂದೆಣಿಸುತ್ತೇವೆ.

The *Karnataka Vanivilasa*.—ಈಗ್ಯೆ ಕೆಲವು ತಿಂಗಳ ಹಿಂದೆ ಘೋಷಿಸಲ್ಪಟ್ಟದ್ದ ಪ್ರಕಟನೆ ಪತ್ರಿಕೆಯಲ್ಲಿ ನಮೂದಾದ ಪ್ರಕಾರ "ಕರ್ಣಾಟಕ ವಾಣೀವಿಲಾಸ"ವೆಂಬ ಕನ್ನಡ ಪತ್ರಿಕೆಯ ಪ್ರಥಮ ಸಂಚಿಕೆಯು ಗತವಾರದಲ್ಲಿ ನಮಗೆ ಕಳುಹಿಸಲ್ಪಡಲು ಅದಂ ನಾವು ಬಹಳ ಉತ್ಸಾಹದೊಡನೆ ಪರಿಗ್ರಹಿಸಿದವರಾದೆವು. ಈ ಪತ್ರಿಕೆಯು ೪೦ ಪುಟಗಳುಳ್ಳದ್ದಾಗಿ ಉತ್ತಮ ಕಾಗದದಲ್ಲಿ ಸ್ಫುಟವಾದ ಮತ್ತು ಸುಂದರವಾದ ಅಕ್ಷರಗಳಿಂದ ಪ್ರಕಟಿಸಲ್ಪಟ್ಟಿರುವದಾಗಿಯೂ, ಪ್ರಕರಣಾನುಗುಣಗಳಾದ ಚಿತ್ರಪಟಗಳಿಂದ ಓದುವವರಿಗೆ ನೇತ್ರಾನಂದವನ್ನುಂಟುಮಾಡುವದಾಗಿಯೂ ಇರುತಿದೆ. ಇದು ೩ ತಿಂಗಳಿಗೊಂದಾವರ್ತಿ ಪ್ರಕಟಿಸಲ್ಪಡುತಿದೆಯಲ್ಲದೆ ಇದಕ್ಕೆ ಸಾಲೀಯಾನಾ ಚಂದಾ ದರವು ೩ ರೂಪಾಯಿಗಳು ಕ್ಲುಪ್ತವಾಗಿದೆ. ಪ್ರಸಕ್ತ ಪ್ರಥಮ ಸಂಚಿಕೆಯಲ್ಲಿ ಕರ್ಣಾಟಕ ಭಾಷಾಭ್ಯಾಸಿಗಳಾದ ತರುಣ ಕರುಣೆಯರಿಗೆ ಅತ್ಯುಪಯೋಗಕ್ಕಗಳಾದ ಮತ್ತು ಅವರ ಬುದ್ಧಿ ಕುಶಲತೆಯನ್ನಜವಾಯಿಸೀ ಮಾಡಲಿಕ್ಕೆ ಅನುಕೂಲವಾದ ಕೆಲವುವಿಷಯಗಳು ಚಿತ್ರಪಟಗಳೊಡನೆ ಬರೆಯಲ್ಪಟ್ಟಿರುತಿದೆ. ಈ ಸಂಚಿಕೆಯಲ್ಲಿ ಸೇರಿಸಲ್ಪಟ್ಟಿರುವ ಐದು ಚಿತ್ರಪಟಗಳಲ್ಲಿ ಒಂದು ದೇಶ ಸ್ವರೂಪವನ್ನರುಹತಕ್ಕದ್ದಾಗಿಯೂ, ಮತ್ತೊಂದು ಚರಿತ್ರಜ್ಞಾನ ವರ್ಧಕವಾದದ್ದು

ಗಿಯೂ, ಇನ್ನೊಂದು ದೇವತಾ ಸ್ವರೂಪಜ್ಞಾನವನ್ನುಂಟುಮಾಡತಕ್ಕದ್ದಾಗಿಯೂ, ಬೇರೊಂದು ಪುಣ್ಯಕ್ಷೇತ್ರದ ತಿಳುವಳಿಕೆಯನ್ನುಂಟುಮಾಡತಕ್ಕದ್ದಾಗಿಯೂ, ಪರತೊಂದು ಜಂತು ಕರೀಟಗುಣ ತತ್ವಬೋಧಕವಾದದ್ದಾಗಿಯೂ, ಇರುತ್ತವೆ. ಪ್ರಕೃತದೊಳಗೇ ಪತ್ರಿಕೆಯು ಹಿಂದೂಗಳ ಕಟ್ಟಾಸಿ ತಜ್ಜಾತಿಯರಾದ ಹೆಣ್ಣುಮಕ್ಕಳ ಪ್ರತೀವೃದ್ಧಿಯಂ ಬಯಸಿ ಅವರ ಅಭಿರುಚಿ ಉತ್ಸಾಹಗಳಿಗೆ ಅನುಗುಣವಾಗಿರುವಂತೆ ಮಾಡಲ್ಪಡತಕ್ಕೆಂಬ ಸಂಕಲ್ಪದೊಡನೆ ಬರೆಯಲ್ಪಡತಕ್ಕದ್ದಾಗಿದ್ದರೂ, ಅಂತಾ ಹೀನ ಭಾವಗಳಂ ವ್ಯಕ್ತಗೊಳಿಸತಕ್ಕ ಚಿತ್ರಗಳಲ್ಲಿ ಒಂದೆರಡು ಈ ದೇಶೀಯರಿಗೆ ವಿಜಾತೀಯಗಳಾಗಿಯೂ, ವಿರುದ್ಧಾಭಿಪ್ರಾಯಗಳನ್ನುಂಟುಮಾಡತಕ್ಕವಾಗಿಯೂ, ಇರುತ್ತವೆ. ಮಸಲಾ "ಸತ್ಯಂವದ" ಎಂಬ ನೀತಿಯಂ ಬೋಧಿಸುವಬಗ್ಗೆ ಒಂದು ಉಪೋದ್ಘಾತವು ಬರೆಯಲ್ಪಟ್ಟು ಅದರ ಭಾವ ಪ್ರಕಟನಾರ್ಥ ಸತ್ಯದೇವತೆಯೆಂಬವಳು ಸ್ತ್ರೀಯೊಬ್ಬಳು ತೋಪಿಯ ಸಂಗಡನ್ನು ಆಕೆಯು ಮತ ವೇಷಾಚಾರಗಳನ್ನು ಸರಿಸಿರುವಂತೆ ಬರೆದಿರುವ ಚಿತ್ರವೊಂದು ಸೇರಿಸಲ್ಪಟ್ಟಿದೆ. ಈ ಬಂಬದ ಶಿಖರದಲ್ಲಿಡಲ್ಪಟ್ಟಿರುವ ಕಿರೀಟದ ಮಧ್ಯದಲ್ಲಿ ಕ್ರಿಶ್ಚಿಯನ್ ಮತ ಸಂಜ್ಞೆಯಾದ ಕ್ರಾಸ್ ವೊಂದು ಬರೆಯಲ್ಪಟ್ಟಿದೆಯಲ್ಲದೆ ಪೂರ್ವ ದೇಶಾಚಾರಕ್ಕೆ ವಿರುದ್ಧವಾದ ಕ್ರಮದಲ್ಲಿ ವಸ್ತ್ರಾದಿಗಳು ಅದಕ್ಕೆ ಧರಿಸಲ್ಪಟ್ಟಿವೆ. ಇದರಿಂದ ನಮ್ಮ ದೇವತೆಗಳೆಲ್ಲ ಕ್ರಿಶ್ಚಿಯನ್ ಮತ ಸಂಬಂಧವಾದವೆಂಬ ಭಾವ ಬಾಲಕರಿಗೆ ತಲೆದೋರಲಿಕ್ಕೂ, ಅಂತಾ ದೇವತೆಗಳಿಗೇ ಉಚಿತವಾದವುಗಳಾದ ವಸ್ತ್ರಧಾರಣಾದಿ ಕ್ರಮಗಳು ನಮಗೂ ಪರಿಗ್ರಾಹ್ಯಗಳೆಂಬ ಭಾವ ಉಂಟಾಗಲಿಕ್ಕೂ, ಸಹಾಯಕಗಳಾಗಿರುತ್ತಿವೆ. ಹೀಗೆಕೆಲವು ಆಕ್ಷೇಪಣೀಯಗಳಾದ ಭಾಗಗಳನ್ನು ಮುಂದಿನ ಸಂಚಿಕೆಯಲ್ಲಿ ಪತ್ರಿಕಾಧಿಪರು ಕ್ರಮಪಡಿಸಿಕೊಳ್ಳುವರೆಂದು ನಂಬುತ್ತೇವೆ.

CORRESPONDENCE.

ಮಹಾ ಕರ್ಣಾಟಕಪ್ರಕಾಶಿಕಾಎಡಿಟರವರಸನ್ನಿಧಿಗೆ.

ಅಯ್ಯಾ—ಈಗ ಬೆಂಗಳೂರು ಡಿಸ್ಟ್ರಿಕ್ಟ್ ಮುನಸಫೆ ಕೋರ್ಟಿನಲ್ಲಿ ವಕೀಲರಾಗಿರುತ್ತ ಚಾಮರಾಜ ಪೇಟೆಯಲ್ಲಿ ವಾಸವಾಗಿರುವ ಮ॥ ಗುಂಡಿಬಂಡೆ ರಾಮಚಂದ್ರರಾಯರವರು ವಿಶೇಷತಃ ವೈದ್ಯಶಾಸ್ತ್ರದಲ್ಲಿ ಪರಿಚಯಮಾಡಿ ಶಾಸ್ತ್ರಾಧಾರಗಳಮೇಲೂ, ಸ್ವಾನುಭವದಿಂದಲೂ, ಅಮೂಲ್ಯಗಳಾದ ಉತ್ತಮೌಷಧಗಳನ್ನು ಸ್ವಂತ ಲಾಗವಡಿನಿಂದ ತಯಾರ್ಮಾಡಿ, ಪ್ರತಿಫಲವಂ ನಿರೀಕ್ಷಿಸದೆ ಧರ್ಮಾರ್ಥವಾಗಿ ಸಕಲರಿಗೂ ಕೊಡುತ್ತ, ಸಾಧಾರಣವಾಗಿ, ಇಂಗ್ಲಿಷ್ ಮತ್ತು ನೇಟಿವ್ ಚಿಕಿತ್ಸಕರಿಗೆಲ್ಲ ಅಸಾಧ್ಯವೆಂದು ತೋರಿ ಕೈಬಿಡಲ್ಪಟ್ಟ ರೋಗಗಳೆಲ್ಲ ಸದರೀ ರಾಯರವರ ಔಷಧಗಳಿಂದ ಗುಣವಾಗುತ್ತಿವೆ. ಇವರಿಗೆ ನಾಡೀಪರೀಕ್ಷೆಯಲ್ಲಿ ಉಂಟಾಗಿರುವ ಜ್ಞಾನವು ಬಹಳ ಪ್ರಶಂಸಿಸತಕ್ಕದ್ದಾಗಿರುತ್ತದೆ. ಈ ಊರಿಗೆ ಹೊಸದಾಗಿ ನಾನು ಬಂದಾಗ ನನ್ನ ಪುಣ್ಯೋದಯದಿಂದ ಅಕಸ್ಮಾತ್ತಾಗಿ ಮೇಲೆ ಕಂಡ ಪಂಡಿತರ ದರ್ಶನವು ನನಗೆ ಲಭಿಸಿದ್ದರಿಂದ ಅವರವರಿಗೆ ನನಗೂ ನನ್ನ ಕುಟುಂಬಕ್ಕೂ ಇದ್ದ ರೋಗವನ್ನು ವಾಸಿ ಮಾಡಿ, ಸ್ವಸ್ಥಳಕ್ಕೆ ಹೋಗುವಂತೆ ತಾಜಾಮಾಡಿ ಕಳುಹಿಸಿದ ಅವರ ಉಪಕೃತಿಗಾಗಿ ನಾನು ಬಹಳ ಕೃತಜ್ಞನಾಗಿದ್ದೇನೆ. ಅವರ ಸದ್ಗುಣಗಳು ಪ್ರಾಯಶಃ ಬಹುಜನಕ್ಕೆ ತಿಳಿಯದೆ ಇರುವದರಿಂದ ಅದಂ ತಿಳಿಯಪಡಿಸಿ ಈ ರಾಯರವರ ಯೋಗ್ಯತೆಯನ್ನು ಪ್ರಸಿದ್ಧಗೊಳಿಸಬೇಕೆಂಬ ಅಭಿಪ್ರಾಯದಿಂದ ಇದನ್ನು ತಮ್ಮ ಪತ್ರಿಕೆಗೆ ಬರೆದವನಾದೆನು.

ತಮ್ಮ ವಿಧೇಯನಾದ,
B. KONERI ROW,
Pleader,
Nundyal, Kurnool District.

ಅಯ್ಯಾ,—ಇದರಡಿಕಂಡ ವಿಷಯಕ್ಕೆ ಉದಾರವಾದ ತಮ್ಮ ಪತ್ರಿಕೆಯೊಳು ಸ್ವಲ್ಪ ಸ್ಥಳವನ್ನು ಕೇಳಿಕೊಳ್ಳುತ್ತೇನೆ, ಲಾಲಿಸಬೇಕು.

ಶ್ರೀಮದಖಿಲ ಮಹೀಮಂಡಲ ಮಂಡನಾಯಮಾನ ಶ್ರೀಕರ್ಣಾಟ ದೇಶಾವತಂಸವಾಗಿಯೂ, ಅಷ್ಟೋತ್ತರಶತಸ್ಥಾನ ಸಾರಭೂತ ಯಾದವಾದ್ರಿಯೆಂಬ ಪ್ರಸಿದ್ಧ ನಾಮವಂ ಪಡೆದಿರುವದಾಗಿಯೂ ಇರುವ ಈ ಮೇಲುಕೋಟೆ ಯೆಂಬ ದಿವ್ಯಕ್ಷೇತ್ರವನ್ನು ಸಕಲ ಆಸ್ತಿಕ ಮತಾವಲಂಬಿಗಳೂ ಕೊಂಡಾಡುತ ಲಿಡಾರಿಯಷ್ಟೆ.

ಇಂತಾ ದಿವ್ಯ ಕ್ಷೇತ್ರದಲ್ಲಿ ಶ್ರೀ ಯದುಕುಲಾರಾಧ್ಯನಾಗಿಯೂ, ಸಕಲ ಪುರುಷಾರ್ಥಪ್ರದನಾಗಿಯೂ ಇರುವ ಚೆಲುವರಾಯಸ್ವಾಮಿಯು ನೆಲೆಗೊಂಡಿರುತ್ತಾನೆ. ಈ ಸ್ವಾಮಿಯನ್ನು ಶ್ರೀಕೃಷ್ಣನು ಮೊದಲಾದ ಯದುವಂಶೋತ್ಪನ್ನರಾದ ಸಕಲ ಭೂಪರುಗಳೂ ಮತ ಪರಂಪರೆಯಾ ತಮ್ಮ ತಮ್ಮ ಶಕ್ತಿವಿಸಾರಿ ಸೇವಾರೂಪದಿಂ ಆರಾಧಿಸುತ ಬಂದವರಿಂದಲೇ ಈ ಕ್ಷೇತ್ರಕ್ಕೆ ಯಾದವಗಿರಿ ಯೆಂಬದಾಗಿಯೂ, ಶ್ರೀ ಚೆಲುವರಾಯಸ್ವಾಮಿಗೆ ಯಾದವಪ್ರಿಯನೆಂಬದಾಗಿಯೂ ನಾಮ ಪ್ರಂಟಾಗಿ ಜಗತ್ಪ್ರಸಿದ್ಧವಾಗಿರುವದಂ ಸರಿಯಷ್ಟೆ. ಪ್ರಸಿದ್ಧವಾದ ಯಾದವ ಕುಲದಲ್ಲಿ ಅವತರಿಸಿದ ಶ್ರೀಕೃಷ್ಣಸ್ವಾಮಿಯು, ಈ ಚೆಲುವರಾಯಸ್ವಾಮಿಗೆ ಪ್ರೀತಿ ಪೂರ್ವಕವಾಗಿಯೆಂದ ದಿವ್ಯವಾದ ಅನಿರುದ್ಧ ಕಿರೀಟವೆಂಬ ವೈರಮುಡಿಯನ್ನು ಸಮರ್ಪಿಸಿ ಸಂತೋಷಿಸಿದರು. ಅದೇ ವಂಶೋತ್ಪನ್ನರಾದ ರಾಜ ಒಡೆಯರವರು ಶ್ಲಾಘ್ಯತಮಗಳಾದ ಅನೇಕ ಸೇವೆಗಳನ್ನು ಮಾಡಿರುವದಲ್ಲದೆ ಅನರ್ಘ್ಯವಾದ ರಾಜ ಮುಡಿಯೆಂಬ ರತ್ನ ಕಿರೀಟವನ್ನು ಶ್ರೀಯವರ ಸರ್ವಾಂಗಗಳಿಗೂ ಅಮೂಲ್ಯವಾದ ಆಭರಣಗಳನ್ನೂ ಸಮರ್ಪಿಸಿ ತತೋಽತಿಶಯವಾಗಿ ಆರಾಧಿಸಿದರು. ಆಳದ ಮಹಾಸ್ವಾಮಿ ಎಂಬ ಬಿರುದಾಂಕಿತರಾದ ಶ್ರೀಕೃಷ್ಣರಾಜ ಒಡೆಯರ್ ಬಹದ್ದೂರವರು ಅನರ್ಘ್ಯವಾದ ಕೃಷ್ಣರಾಜಮುಡಿ ಎಂಬ ವಜ್ರಕಿರೀಟವನ್ನೂ, ಗಂಡಭೇರುಂಡ ಪದಕವೇ ಮೊದಲಾದ ಅನೇಕ ದಿವ್ಯಾಭರಣಗಳನ್ನೂ ಸಮರ್ಪಿಸಿದ್ದಲ್ಲದೆ ಶ್ರೀ ಕೃಷ್ಣರಾಜಮುಡಿ ಮಹೋತ್ಸವವೆಂಬ ಒಂದು ಬ್ರಹ್ಮೋತ್ಸವವು ಪ್ರತಿ ವರ್ಷವೂ ಶಾಶ್ವತವಾಗಿ ನಡೆಯುವಂತೆ ಭಾರೀ ತಸ್ದೀಕ ಸೊಡನೆ ಏರ್ಪಾಡು ಮಾಡಿ ೫೦೦೦ ರೂಪಾಯಿ ಬಾಳುವ ದೊಡ್ಡ ರಥವನ್ನು ಸಮರ್ಪಿಸಿದರು. ಸದರೀ ಉತ್ಸವವು ಅದ್ಯಾಪಿ ನಡೆದುಬರುತಲಿದೆ. ಮತ್ತು ಯಾದವಾದ್ರಿ ಎಂಬ ಪರ್ವತ ಶಿಖರದಲ್ಲಿ ಭಗವಂತನ ಸೇವಾಗೋಸ್ಕರ ನಿತ್ಯವಾಸ ಮಾಡತಕ್ಕ ಬ್ರಾಹ್ಮಣರು, ಜೀವನಕ್ಕೆ ಸಾಲದೆ ಸ್ಥಳಾಂತರಗಳಿಗೆ ಹೊರಟುಹೋಗಿ ಶ್ರೀಯವರ ಪೂಜಾದಿಗಳಿಗೆ ಲೋಪ ಬಂದೀತೆಂದು ದಿವ್ಯ ಚಿತ್ತದಲ್ಲಿ ಆಲೋಚಿಸಿ, ಈ ದಿವ್ಯಕ್ಷೇತ್ರದಲ್ಲಿ ವಾಸ ಮಾಡತಕ್ಕ ಯೆಲ್ಲಾ ಬ್ರಾಹ್ಮಣರಿಗೂ ಯಥಾಯೋಗ್ಯವಾಗಿ ಸ್ಥಳವಾಸದ ಅಕ್ಕಿಯೆಂತಲೂ, ನಿತ್ಯಗಟ್ಟಿ ಪ್ರಸಾದವೆಂತಲೂ, ಹಲಬು ಯೆಂತಲೂ ಅಭಿಮಾನ ಪ್ರಂಟಾಗುವದಕ್ಕೋಸ್ಕರ ತೀರ್ಥ ಮರ್ಯಾದೆಯೆಂತಲೂ, ನಾನಾವಿಧ ಶಾಶ್ವತ ಉಪಪತ್ತಿಯನ್ನು ಕಲ್ಪಿಸಿದ್ದರಿಂದ ಶ್ರೀರಂಗಾದಿ ದಿವ್ಯ ಸ್ಥಳಗಳಿಂದ ಅನೇಕ ಬ್ರಾಹ್ಮಣರು ಬಂದು ಈ ಸ್ಥಳದಲ್ಲಿ ವಾಸ ಮಾಡುತ ಶ್ರೀಯವರ ಸೇವೆಯನ್ನು ಮಾಡಿಕೊಂಡು, ಇತರ ಹಿಂಸೆಗಳೊಂದನ್ನೂ ಅರಿಯದೆ ನೆಲೆಸಿದ್ದರೆಂಬಅಂಶ ಶ್ರೀಮನ್ಮಹಾರಾಜರವರ ವಂಶ ರತ್ನಾಕರವೆಂಬ ಗ್ರಂಥದಲ್ಲಿ ಸ್ಪಷ್ಟವಾಗಿರುವಲ್ಲಿ ವಿಶೇಷ ಬರವಣಿಗೆಯಿಂದೇನು ಪ್ರಯೋಜನ. ಅಂತಾ ಸರ್ವೋತ್ತಮವಾದ ಯದುಕುಲದಲ್ಲಿ ಜನಿಸಿರುವ ನಮ್ಮ ಶ್ರೀಮನ್ಮಹಾರಾಜಾ ಚಾಮರಾಜೇಂದ್ರ ಒಡೆಯರ್ ಬಹದ್ದೂರವರು ಕೂಡಾ "ಸ್ವದತ್ತಾದ್ವಿಗುಣಂಪುಣ್ಯಂ ಪರದತ್ತಾನುಪಾಲನಂ" ಎಂಬಂತೆ ತಮ್ಮ ಪೂರ್ವಿಕರಾದ ಧಾರ್ಮಿಕರಿಂದ ಮಾಡಲ್ಪಟ್ಟ ಅಮೋಘವಾದ ಧರ್ಮವನ್ನು ಕಾಪಾಡುತಬರೋಣದರಿಂದ ಇನ್ನು ಸ್ವಲ್ಪಕಾಲದಲ್ಲಿಯೇ ಇಲ್ಲಿಗೆ ತಮ್ಮ ಕುಲಾರಾಧ್ಯನಾದ ಶ್ರೀಚೆಲುವರಾಯಸ್ವಾಮಿಯ ಸೇವೆಗೋಸ್ಕರ ದಯಮಾಡಿ ತತೋಽತಿಶಯವಾದ ಧರ್ಮಕಾರ್ಯಗಳನ್ನು ಮಾಡಿ ಧನ್ಯರಾಗಿ ಕೀರ್ತಿಯಂ ಸಂಪಾದಿಸುವರೆಂದು ನಂಬಿದ್ದೇವೆ.

ಈ ದಿವ್ಯಕ್ಷೇತ್ರವು ಈರೀತಿ ಶ್ರೀಮನ್ಮಹಾರಾಜರವರಿಗೆ ಅತ್ಯಂತ ಪ್ರಿಯಸ್ಥಾನವೆಂದು ತಿಳಿಯದೆ ಈಚೆಗೆ ಕೆಲವರು ಅಧಿಕಾರಿಗಳು ಈ ಸ್ಥಳದ ಮಹಿಮೆಯನ್ನು ಅಳಿಸಬೇಕೆಂಬ ಯೋಚನೆಯಿಂದ, ಅಕಸ್ಮಾತ್ಸಂಭವಿಸಿದ ಕೆಲವರ ಮರಣಕ್ಕಾಗಿ ಅನಾದಿಯಾದ ಬ್ರಹ್ಮೋತ್ಸವಕ್ಕೆ ಮುಖ್ಯ ಅಂಗಭೂತವಾದ ಸುಮಾರು ೫೦—೬೦ ಸಾವಿರರೂಪಾಯಿಗಳು ಬಾಳುವ ಶ್ರೀಕೃಷ್ಣದೇವರಿಂದ ಸಮರ್ಪಿತವಾದ ದೊಡ್ಡ ರಥೋತ್ಸವದೊಡನೆ, ಗತಿಸಿದಶ್ರೀಮನ್ಮಹಾರಾಜರವರಿಂದ ಕೃಷ್ಣರಾಜಮಹೋತ್ಸವಕ್ಕಾಗಿ ಸಮರ್ಪಿಸಲ್ಪಟ್ಟ ದೊಡ್ಡ ರಥೋತ್ಸವವನ್ನು ಸಹ ನಿಲ್ಲಿಸಿಬಿಟ್ಟರು. ಅವರೂ ಶ್ರೀಯವರ ಕೃಪೆಯಿಂದ ತಕ್ಕಮಟ್ಟಿಗೆ ಉತ್ಸವಗಳೆಲ್ಲವೂ ಕ್ರಮವಾಗಿ ನಡೆದುಬರುವದನ್ನು ನೋಡಿ ಇದನ್ನೂ ನಿಲ್ಲಿಸಬೇಕೆಂದು ಯೋಚಿಸಿ ಇಲ್ಲಿನ ನಿವಾಸಿಗಳಿಗೆ ನಾನಾವಿಧ ತೊಂದರೆಗಳನ್ನು ಕೊಡುತಲಿದ್ದಾರೆ. ಅಪ್ರಾಗ್ಯವಂದರೆ-ಬಹಳ ದಿವಸಗಳಿಂದ ನಡೆದುಬರುತಲಿರುವ ಸ್ಥಳವಾಸದ ಅಕ್ಕಿಯನ್ನು ಯಾವದೋ ಒಂದು ಕಾರಣದಿಂದ ನಿಲ್ಲಿಸಿದ್ದರು. ಅದು ಕೆಲವು ದಿವಸದಮೇಲೆ ಶ್ರೀಯವರ ಕೃಪೆಯಿಂದ ಪುನಃ ಕೊಡುವಂತೆ ಶ್ರೀಮನ್ಮಹಾರಾಜರವರು ಅಪ್ಪಣೆ ಕೊಟ್ಟರು. ಮತ್ತು ಈ ಸ್ಥಳದ ಉಸ್ತುವಾರಿಯು ಈಸ್ಥಳ ನಿವಾಸಿಗಳಾದ ಬ್ರಾಹ್ಮಣೇತರರಾದ ಜನರಿಗಿಂತಲೂ ಅಧಿಕಸಂಖ್ಯೆಯುಳ್ಳ ಪ್ರಜೆಗಳಿಂದಲೇ ಸಾಧ್ಯವಾಗುವದಾಗಿದ್ದಾಗ್ಯೂ, ಅಂತಾಗೌರವ ಒಂದನ್ನೂ ಲಕ್ಷ್ಯಕ್ಕೆ ತಾರದೆ ಈ ಸ್ಥಳನಿವಾಸಿಗಳಾದ ಬ್ರಾಹ್ಮಣರ ವಿಷಯದಲ್ಲಿ ನಡೆಸುವ ಕ್ರಮವನ್ನು ಇಲ್ಲಿ ಸ್ವಲ್ಪಮಟ್ಟಿಗೆ ತಿಳಿಸುತ್ತೇನೆ. ಕುಳವಾಡಿಗಳ ಮೂಲಕ ಮನೆ ಮನೆಗಳಿಗೂ ಆಳಾಳು ಉದ್ದದ ಬಿದುರು ದೊಣ್ಣೆಗಳನ್ನು ಹಾಕಿಸುತ್ತಾ, ಅಧಿಕಾರಿಗಳು ಈ ದೊಣ್ಣೆಗಳನ್ನು ತೆಗದುಕೊಂಡು ಈ ಕುಳವಾಡಿಗಳ ಜೊತೆಯಲ್ಲಿ ನೀವುಗಳೆಲ್ಲರೂ ರಾತ್ರಿ ಗ್ರಾಮ ಗಸ್ತು ಮಾಡಬೇಕು, ತಪ್ಪಿದಲ್ಲಿ ೫೦ ರೂಪಾಯಿ ಜುಲ್ಮಾನೆ ಕೊಡಬೇಕಾಗುತ್ತೆಂತಲೂ, ಕಳವುಬಂತಾದ್ದಕ್ಕೆ ಜವಾಬ್ ಮಾಡಬೇಕೆಂತಲೂ ಭಯಪಡಿಸುತ್ತಾರೆ. ಹಾಗೆ ಅವರ ಆಜ್ಞೆಗೆ ಹೆದರಿಕೊಂಡು ಗಸ್ತಿಗೆ ಕುಳವಾಡಿಗಳೊಡನೆ ಹೋದಾಗ ಅವರೆಲ್ಲರೂ ನಿರ್ಭೀಚ್ಛವಾಗಿ ಇವರುಗಳನ್ನು ನೋಡಿ ಹೇಳನ ಮಾಡುತ್ತಾರಲ್ಲದೆ ಈ ವರ್ತಮಾನವನ್ನು ಕೇಳಿದ ಇತರಗ್ರಾಮಸ್ಥರು ಇಲ್ಲಿನ ಬ್ರಾಹ್ಮಣರಿಗೆ ಈರೀತಿಪ್ರಾಪ್ತವಾದದ್ದಕ್ಕೆ ಕೆಲವರು ಹಾಸ್ಯಮಾಡುತಲೂ, ಕೆಲವರು ಪಶ್ಚಾತ್ತಾಪ ಪಡುತಲೂ ಇರುತ್ತಾರೆ. ಇದಲ್ಲದೆ ಚಂಡಾಲದೆಸೆ ಪರ್ಯ ಸರ್ವತ್ರ ವ್ಯಾಪಿಸಿ ಕೆಡುವಕಾಲವು ಪ್ರಾಪ್ತವಾಯಿತು. ಇದೊಂದನ್ನೂ ಅರಿಯದ ಕೆಲವರುಕ್ರಾವ್ನಿಕರು ಈಹಿಂಸೆಗಾಗಿ ದೇಶಾಂತರ ಹೋಗುವದಾಗಿ ನಿಶ್ಚಯಿಸಿರುತ್ತಾರೆ. "ಕಾಲಸ್ಯ ಕುಟಿಲಾಗತಿಃ" ಎಂಬಂತೆ ಇಂತಾ ಮಹಾರಾಜರವರ ಆಶ್ರಯವಿದ್ದರೂ ನಿರಾಶ್ರಯರಾಗಿಹೋರಬಹೋಗುವ ಕಾಲ ಪ್ರಾಪ್ತವಾದದ್ದಕ್ಕೆ ಪಶ್ಚಾತ್ತಾಪಿಸಿ ಫಲವೇನು. ಆದರೆ "ಸಹಸ್ರಶಿರಸೋಽಯಂ ಸಾಕ್ಷಾಚ್ಛೇಷಾತ್ಮಕೋಗಿರಿಃ" ಎಂಬಂತೆ ಪ್ರಸಿದ್ಧವಾದ ಆಶೇಷಾದ್ರಿವಾಸನಾಗಿರುವ, ಶ್ರೀರಾಮಪ್ರಿಯನಾದ ಶ್ರೀಯವರನ್ನು ತ್ರೇತಾಯುಗದಲ್ಲಿ ಶ್ರೀರಾಮನು ಆರಾಧಿಸುವಾಗ್ಯೆ ಶೇಷಾಂಶನಾದ ಲಕ್ಷ್ಮಣನು ನಾನಾವಿಧವಾಗಿ ಉಪಚರಿಸಿದನು. ದ್ವಾಪರದಲ್ಲಿ ಶ್ರೀಕೃಷ್ಣನು ಆರಾಧಿಸುವಾಗ್ಯೆ ಶೇಷಾಂಶನಾದ ಬಲರಾಮನು ನಾನಾವಿಧ ಸೇವೆಯನ್ನು ಮಾಡಿದನು. ಅನಂತರ ಶ್ರೀರಾಮಾನುಜಾಚಾರ್ಯರು ಶೇಷಾಂಶದಿಂದ ಅವತರಿಸಿ ಅನೇಕವಿಧ ಸೇವೆಗಳನ್ನು ಮಾಡಿದರು. ಅದೇ ಶೇಷಾಂಶೋತ್ಪನ್ನರಾದ ಶ್ರೀಮಂತರಾದ ಶೇಷಾದ್ರಿ ಎಂಬ ನಾಮಧೇಯವುಳ್ಳ ನಮ್ಮ ದಿವಾನರವರಿಗೆ ಮೇಲೆ ವಿವರಿಸಲ್ಪಟ್ಟವರುಗಳಿಲ್ಲಿ ತಮಗೆ ಅಭಿಮತನಾದ ಶ್ರೀ ಚೆಲುವರಾಯಸ್ವಾಮಿಯವರಸೇವಾದಿಗಳು ಕ್ರಮವಾಗಿ ಪ್ರಾಪ್ತವಾಗಿರುವ ಅಂಶವನ್ನು ಶ್ರೀಮನ್ಮಹಾರಾಜರವರಿಗೂ ಶ್ರೀ ದಿವಾನರವರಿಗೂ ತಿಳಿಸುವದಕ್ಕೆ ಇತರವಿಧ ಅನುಕೂಲ್ಯವಿಲ್ಲದ್ದರಿಂದ ಘನವಾದ ತಮ್ಮ ಪತ್ರಿಕಾಮುಖೇನ ತಿಳಿಯಪಡಿಸಬೇಕೆಂದು ಕೋರುತ್ತೇವೆ. ಈಗ ಪ್ರಾಪ್ತವಾಗಿರುವ ಸಂಕಟಗಳು ಸಾಮಾರ್ಥ್ಯರಾದ ನಮ್ಮ ಶ್ರೀಮನ್ಮಹಾರಾಜರವರ ಅವಧಾನಕ್ಕೆ ಬಂದ ಪಕ್ಷದಲ್ಲಿ ಅಂತವುಗಳನ್ನು ತತ್ಕ್ಷಣದಲ್ಲಿಯೇ ಪರಿಹರಿಸುವದಲ್ಲದೆ ಅನೇಕವಿಧ ಕ್ಷೇಮವನ್ನುಂಟುಮಾಡಿ ತಮ್ಮ ಪೂರ್ವಿಕರಿಗಿಂತಲೂ ಅಧಿಕವಾದ ಕೀರ್ತಿಯನ್ನು ಸಂಪಾದಿಸದೆ ಇರಲಾರರೆಂದು ನಂಬುವ,

ತಮ್ಮ ವಿಧೇಯ,
ದಿವ್ಯಸ್ಥಳಾಭಿಮಾನಿ.

[ಮೇಲೆ ಕಂಡ ಲೇಖಕನು ತನ್ನ ಕಾಗದದಲ್ಲಿ ತಿಳಿಸಿರುವಂತೆ ಗಸ್ತು ಹೋಗಬೇಕೆಂದು ಅಲ್ಲಿನ ಬ್ರಾಹ್ಮಣರಂ ನಿರ್ಬಂಧ ಪಡಿಸುವದು ಬಹಳ ಅಕ್ರಮವಾಗಿಯೂ, ಅಧಿಕಾರಿಗಳ ಔದ್ಧತ್ಯಕ್ಕೆ ಪ್ರದರ್ಶಕವಾಗಿಯೂ, ಪೂರ್ವಪದ್ಧತಿಗೆ ಬಹಳ ವಿರುದ್ಧವಾದದ್ದಾಗಿಯೂ, ನೇಟಿವ್ ಅರಸರ ಪ್ರಭುತ್ವಕ್ಕೆ ಅಪಪ್ರಥೆಯನ್ನುಂಟುಮಾಡತಕ್ಕದ್ದಾಗಿಯೂ ಇರುವದರಿಂದ ಈ ವಿಷಯದಲ್ಲಿ ಗವರ್ನಮೆಂಟನವರು ತಕ್ಕ ಏರ್ಪಾಡು ಮಾಡುವರೆಂದು ನಂಬುತ್ತೇವೆ. ಎಡಿ.]

SUMMARY OF NEWS.

ವೃತ್ತಾಂತ ಸಂಗ್ರಹ.

Railway rates and fares.—ರೈಲ್ವೇಗಳಲ್ಲಿನ ಟಿಕೆಟುಗಳ ಮತ್ತು ಸಾಮಾನುಗಳ ದರಗಳು ಈಗ ಗವರ್ನಮೆಂಟಿನವರ ಮುಖ್ಯಾಲೋಚನೆಗೆ ವಿಷಯವಾಗಿವೆ. ಮದರಾಸ್ ಪ್ರಸಿಡೆನ್ಸಿಯಲ್ಲಿ ಪ್ರಯಾಣಸ್ಥರ ಮತ್ತು ಸರಕುಗಳ ದರಗಳನ್ನು, ಕೆಲವು ಬಾಬುಗಳಲ್ಲಿ ಜಾಸ್ತೀಯಾಗಿಯೂ, ಕೆಲವು ಬಾಬುಗಳಲ್ಲಿ ಕಮ್ಮಿಯಾಗಿಯೂ, ಸರಕುಗಳಿಗೆ ಹೊಸದಾದ ತರಗತಿವಿಂಗಡವನ್ನೂ ಒಪ್ಪಿಕೊಳ್ಳಬೇಕೆಂದು ರೈಲ್ವೇ ಅಧಿಕಾರಿಗಳು ಅಪೇಕ್ಷಿಸಲ್ಪಟ್ಟಿರುತ್ತಾರೆ—ಸ್ಟ್ಯಾಂಡರ್ಡ್.

The late Thavashumuttu Nadar—ಮದರಾಸ್ ಸ್ಟ್ಯಾಂಡರ್ಡ್ ಪತ್ರಿಕೆಯ ತಂಜಾವೂರು ಬಾತಮಿದಾರನು ಬರೆಯುತ್ತಾನೇನಂದರೆ:—ಈ ದೇಶದಲ್ಲಿ ಪ್ರಸಿದ್ಧ ಕೇಂದ್ರೀ ಕಂಟ್ರಾಕ್ಟದಾರರಾದ ಮ. ತವಸುಮುತ್ತು ನಾಡಾರೆಂಬವರು ಈ ತಿಂಗಳ ೩ನೇ ತಾರೀಖ್ ಮಧ್ಯಾಹ್ನ ಮೃತಪಟ್ಟರು. ಇವರು ಬಹಳ ಧನಿಕರು. ಆರು ಡಿಸ್ಟ್ರಿಕ್ಟುಗಳ, ಅಂದರೆ, ತಂಜಾವೂರು, ತಿರುಚನಾಪಲ್ಲಿ, ಮಧುರೆ, ಕೋಯಂಬತ್ತೂರ್, ಮತ್ತು ಮಲಬಾರ್, ಈಡಿಸ್ಟ್ರಿಕ್ಟುಗಳ ಕೇಂದ್ರೀಕಂಟ್ರಾಕ್ಟದಾರರು. ಇವರಿಗೆ ತಂಜಾವೂರುಡಿಸ್ಟ್ರಿಕ್ಟನಲ್ಲಿ ಅಪಾರವಾದ ಭೂಸ್ಥಿತಿಗಳಿವೆ. ಇವರು ಕೇವಲ ಉದಾರಸ್ವಭಾವವುಳ್ಳವರು. ಕುಂಭಕೋಣದಲ್ಲಿ ಸ್ಥಾಪಿಸಲ್ಪಟ್ಟ ಪೋರ್ಟರ್‌ಮೆಮೋರಿಯಲ್ ಹಾಲ್ ಎಂಬ ಕಟ್ಟಡದ ನಿರ್ಮಾಣಕ್ಕೆ ೫,೦೦೦ರೂಪಾಯಿಗಳು ಕೊಟ್ಟರು. ತಂಜಾವೂರಲ್ಲಿ ಒಂದು ಆಸ್ಪತ್ರೆಗೆ ೭,೦೦೦ರೂಪಾಯಿಗಳು ಕೊಟ್ಟರು. ಹೀಗೆಯೇ ಅನೇಕಧರ್ಮಕಾರ್ಯಗಳಿಗೆ ಸುಪೂರ್ಣ ಸಹಾಯಕರಾಗಿದ್ದರು. ಇವರಿಗೆ ಇಬ್ಬರು ಗಂಡುಮಕ್ಕಳಿರುತಲಿದ್ದಾರೆ. ಇಂತವರ ಮರಣವು ದೇಶಕ್ಕೆ ನಷ್ಟರೂಪವಾದದ್ದು. ಎಂಬುವದು.

The late Rao Bahadur Jagannada Raju Saheb—ಕಳೆದ ತಿಂಗಳ ೨೬ನೇ ತಾರೀಖಿನಲ್ಲಿ, ವಿಜಯನಗರ ಸಂಸ್ಥಾನದ ದಿವಾನರಾದ ರಾವ್ ಬಹದ್ದೂರ್ ಜಗನ್ನಾಥರಾಜು ಸಾಹೇಬರವರು ಮೃತಪಟ್ಟರೆಂದು ಕೇಳಿ ಬಹಳ ವಿಷಾದಿಸುತ್ತೇವೆ. ಈ ದೊಡ್ಡಮನುಷ್ಯರಿಗೆ ಮರಣಕಾಲದಲ್ಲಿ

೪೮ ವರ್ಷಗಳ ವಯಸ್ಸಾಗಿತ್ತು. ಇವರು ಜಾತಿಯಲ್ಲಿ-ಕ್ಷತ್ರಿಯರು. ವಿಜಯ ನಗರದಲ್ಲಿ ಒಬ್ಬ ಬ್ರಾಹ್ಮಣನ ಮನೆಯೊಳು ವಿದ್ಯಾಭ್ಯಾಸ ಮಾಡಿದರು. ಇವರು ವಿಜಯನಗರ ಜಮೀನ್ದಾರರುಗಳ ಕೈಕೆಳಗೆ ತಮ್ಮ ಬಾಲ್ಯಾರಭ್ಯ ೨೦ ವರ್ಷಗಳ ನೌಕರಿ ಮಾಡಿದರು. ಇಷ್ಟು ದೀರ್ಘ ಕಾಲದಲ್ಲಿ ಯೆಲ್ಲಾ ಇಲಾಖೆಗಳಲ್ಲೂ ನೌಕರಿಮಾಡಿ, ಕಡೆಗೆ ಸಾಲೀಯಾನಾ ೧,೨೦೦ ರೂಪಾಯಿಗಳ ವೇತನದಮೇಲೆ ದಿವಾನಗಿರಿಗೆ ಮೊಕರರ್ಮಾಡಲ್ಪಟ್ಟರು. ಇವರಿಗೆ ಇಂಗ್ಲಿಷ್ ಭಾಷಾ ಪರಿಚಯವಿಲ್ಲದೆ ಹೋದಾಗ್ಯೂ ಉದಾರಸ್ವಭಾವವೂ ಗಂಭೀರವಾದ ನಡವಳಿಕೆಗಳೂ ಉಳ್ಳವರಾಗಿದ್ದರು. ಇವರು ಯಾವಾಗಲೂ ರೈತ ಪಕ್ಷಪಾತಿ, ಮತ್ತು ಅವರ ಅಭಿವೃದ್ಧಿ ವಿಷಯದಲ್ಲಿ ಅಂತರವಾದ ಅಕ್ಕರೆಯುಳ್ಳವರು. ಇವರು ದಿವಾನಗಿರಿ ಮಾಡಿದ ೨೫ ವರ್ಷಗಳ ಕಾಲದಲ್ಲಿ, ರೈತರು ಬಂದವೇಳೆಯೊಳು ಅವರಿಗೆ ಭೇಟಿಕೊಟ್ಟು, ಅವರು ಹೇಳುವದನ್ನೆಲ್ಲ ಸಹನೆಯಿಂದಲೆ ಕೇಳುತಲಿದ್ದರು. ವಿಜಯನಗರ ಸಂಸ್ಥಾನದ ಐಶ್ವರ್ಯಾಭಿವೃದ್ಧಿಗೆ ಇವರೇ ಮುಖ್ಯಕಾರಣರಾಗಿದ್ದರು. ಇಂತವರ ಮರಣವು ಸದರೀ ಸಂಸ್ಥಾನಾಧಿಪತಿಯವರಿಗೆ ಕೇವಲ ನಷ್ಟರೂಪವಾದದ್ದಾಗಿರುತಿದೆ—ಹಿಂದು.

EXTRACTS.

ಈ ಮೈಸೂರು ದೇಶಕ್ಕೆ ಯಾವಾಗ ರೆವಿನ್ಯೂ ಸರ್ವೇಯವರು ಬಂದರೋ ಆಲಾಗಾಯಿತು ರಯಿತಜನರಿಗೆ ದಿನೇದಿನೆ ಚಿತ್ರಹಿಂಸೆಗಳು ಹೆಚ್ಚುತಲೇ ಇವೆ. ಮೋಜಣೀದಾರರಿಗೂ ಶ್ಲಾಸರಿಗೂ ಪ್ಲೂಟ ಪಡೆಣಿಯವರಿಗೂ ಜಮಾಬಂದಿಯವರಿಗೂ ಪದೇಪದೆ ದಂಡಗಳು ಲಂಚಗಳು ತೆತ್ತು ತೆತ್ತು ಮನೆಗಳು ಹಾಳು ಮಾಡಿಕೊಂಡದ್ದಾಯಿತು. ಬಾಂದುಗಳು ೪ಮೊಳ ಉದ್ದ ೪ ಮೊಳ ಅಗಲ ೨॥ ಮೊಳ ಎತ್ತರ ಸರಿಯಾಗಿ ಇರಬೇಕೆಂದು ತನಿಖೀ ಮಾಡುವ ಪಡೇದಾರನಿಗೆ ಲಂಚಗಳು ತೆತ್ತು ಸರಬರಾಯಿ ಮಾಡಿ ಅವನಿಗೆ ತಾಹಿತ್ರಾಹಿ ಅಂತಾ ಇದ್ದದ್ದಾಯಿತು. ಆಲಾಗಾಯಿತು ಪ್ರತಿವರುಷವೂ ಬಾಂದು ಮರಮತ್ತು ಎಂಬ ಮೂಲವ್ಯಾಧಿ ರೋಗವು ನಮ್ಮನ್ನು ಪೀಡಿಸುತ್ತಾ ಇದೆ. ಇದಕ್ಕೆ ಔಷಧವೇ ಇಲ್ಲವಾಗಿ, ಥಟ್ಟನೆ ಗಾಯವಿಲ್ಲಾ, ತಣ್ಣಗೆ ಬಿಸಿಕಲಿಲ್ಲಾ' ಎಂಬಂತೆ ನಮ್ಮ ಗತಿ ಆಗಿರುತ್ತದೆ. ಯಾವ ಅಧಿಕಾರಿ ಬಂದಾಗ್ಯೂ ಬಾಂದುಗಳು ನಾದುರಸ್ತು ಇವೆ ಅಂತಾ ಬೈದು ಅವಮಾನಪಡಿಸುವರು. ಪ್ಯಾದೆ ರುಪೇಮುಕ್ಕಳಾದ ಗ್ರಾಮ ನೌಕರರನ್ನು ಬೈದು ಬಡಿದು ಜುಲುಮಾನೆವಿಧಿಸಿ ಫಜೀತಿ ಮಾಡಿಸುವರು. ಇಷ್ಟಾದಾಗ್ಯೂ ಈ ಬಾಂದುಗಳ ವಿಚಾರದಲ್ಲಿ ಒಂದು ಲೆಕ್ಕ ಇಲ್ಲಾ, ಲೋಲ್ಪ ಇಲ್ಲಾ, ಬಾಯಿ ಸತ್ತ ಬಡ ರಯತರು ವರುಷಕ್ಕೆ ೨-೩ಸಲಾ ಅಡವಿಯ ಬಾಂದುಗಳಿಗೆ ಮಣ್ಣು ಹೊತ್ತು ಹೊತ್ತು ಸಾಯುವದೂ, ಭಂಡುಗಾರರು ಸರಕಾರದ ನೌಕರರ ಕಡೆಯವರು ಸದಾ ಸ್ವಸ್ಥವಾಗಿ ಮನೆಯಲ್ಲಿಯೇ ಇರುವದೂ ಸಂಪ್ರದಾಯವೇ ಆಗಿ ಅದೆ. ಬಾಂದು ದುರಸ್ತೆಂಬ ಈ ಬಿಟ್ಟಿ ಕಾಮಗಾರಿಯು ಹ್ಯಾಗೂ ತಪ್ಪಿದ್ದಲ್ಲಾ ಎಂಬದಾಗಿ ಖಂಡಿತವಾಗಿ ತಿಳಕೊಂಡು ರೈತರಾದರೂ ಭದ್ರವಾಗಿ ಬಹಳ ದುರುಕ ಕಾಲವಿರುವಂತೆ ಮನಃ ಪೂರ್ವಕವಾಗಿ ಕೆಲಸ ಮಾಡದೆ ಯಾವಾಗ ಜೋರು ಬರಾತ ಬರುತ್ತದೋ ಆವಾಗ ಒಣಮಣ್ಣು ಬಾಂದುಗಳ ಮೇಲೆ ಮೆಲ್ಲಗೆ ಗೋಪುರದಂತೆ ಹಾಕಿ ಕಾಟ ಕಳಕೊಂಡು ಬರುವರು. ಮತ್ತು ಎಂಟುದಿನಗಳ ಒಳಗಾಗಿಯೇ ಘನಾಳ ಮಳೆ ದನಗಳು ವಗೈರೆಯಿಂದ ಕೆಡುಕಾಗಿ ಬಹು ನಾಲಾಯಿಖ್ ಆಗುವವು. ಆಗ ಮೇಲಧಿಕಾರಿಗಳು ಬಂದು ನೋಡಿ ಬಡಗ್ರಾಮ ನೌಕರರ ಮೇಲೆ ತಮ್ಮ ಆಗ್ರಹಾಗ್ನಿಯನ್ನು ಸುರಿಯುವರು. ಸರಕಾರದವರಾದಾಗ್ಯೂ ಈ ಬಾಂದುಗಳು ಶಾಶ್ವತವಾಗಿರತಕ್ಕವು, ಭದ್ರವಾಗಿ ಮಾಡಿಬಿಟ್ಟು ಸ್ವಸ್ಥವಾಗಿ ಇದ್ದೀ ಎಂತ ರೈತರಿಗೆ ತಿಳಿಯಪಡಿಸಿ ಮತ್ತು ಈಗ ಇರುವ ಬಹುದೊಡ್ಡದಾದ ಬಾಂದಿನ ಆಕಾರವನ್ನು ತಗ್ಗಿಸಿ ಆರು ಮೊಳ ಉದ್ದ ಎರಡು ಮೊಳ ಅಗಲ ಎರಡು ಮೊಳ ಎತ್ತರ ಈರೀತಿ ನಿರ್ಣಯಿಸಿ ಇದನ್ನು ಮಣ್ಣು ನೀರೂ ಸರಿ ಕಲಸಿ ಚೆನ್ನಾಗಿ ತುಳಿದು ಬಾಂದು ಕಟ್ಟಬೇಕೆಂದು ಸಖ್ತ ಹುಕುಮು ಮಾಡಿಸಿ ಒಂದು ವರುಷ ರೈತರಿಗೆ ಬಹಳ ಹಿಂಸೆಯನ್ನು ಕೊಟ್ಟಾಗ್ಯೂ ಚಿಂತೆ ಇಲ್ಲ. ಹತ್ತು ವರುಷಗಳ ಕಾಲ ಸುರಕ್ಷಿತರಾಗಿ ಇದ್ದಾರು. ಹಾಗೂ ಇಲ್ಲವಲ್ಲಾ. ಅಥವಾ ಯಾವ ರೈತನು ಬಾಂದು ದುರಸ್ತಾಗಿ ಕಟ್ಟಲಿಲ್ಲವೊ ಅವನಿಗೆ ಬಾಂದು ೧ಕ್ಕೆ ನಾಲ್ಕಾಣೆ ಪ್ರಕಾರ ದಂಡ ವಿಧಿಸುತ್ತಾ ಬಂದಲ್ಲಿ ಜನರಿಗೆಲ್ಲಾ ಭಯ ಉಂಟಾಗಿ ತಮ್ಮ ತಮ್ಮ ಬಾಂದುಗಳನ್ನೂ ಅವನಿಯ ಬಾಂದುಗಳನ್ನೂ ಸಹ ತಮ್ಮ ಮನೆಯ ಕೆಲಸದಂತೆ ಮನಃ ಪೂರ್ವಕವಾಗಿ ಮಾಡಿ ತೀರಿಸುವರು, ಹಾಗೂ ಇಲ್ಲವಲ್ಲಾ. ಈಗಿನ ಕಿರಿಕಿರಿಯ ಬಾಳನ್ನು ಯಾರು ಅನುಭವಿಸ್ಯಾರು? ಮೂಲವ್ಯಾಧಿಯವರು ಥಟ್ಟನೆ ಸಾಯದೆ ಘುಷ್ಕ್ಯವಾಗಿ ಬಾಳಬೇಕಾಗಿರುವರೊ ಆರೀತಿಯಾಗಿವೆ. ದೇವರಾದರೂ ಕಣ್ಣು ತೆರದು ನೋಡಬೇಕು. ದೊಡ್ಡದೊಡ್ಡ ಅಧಿಕಾರಿಗಳು ತಮ್ಮ ಸುಖಲೋಕ ಸುಖದಿಂದು ತಿಳಿದು ನಿತ್ಯೋತ್ಸವದಲ್ಲಿ ಮುಳಗಿರುತ್ತಾರೆ. ಅಯ್ಯೋ ಇದೇನು ಅನ್ಯಾಯವೋ, ಶಿವ ಶಿವ! ಹೀಗಿರಲಾಗಿ ಈ ಸುವನ್ನೂರ ಪ್ರತಿ ಸರ್ವೆ ನಂಬರಿನ ಬಾಂದಿನ ಮೇಲೆ ಒಂದು ಕಲ್ಲು ಹೂಣಿ ಅದರ ಮೇಲೆ ನಂಬರು ಬರಸಬೇಕೆಂದು ಹುಕುಂ ಆಗಿ ಬಹು ತರದೂದಿನಿಂದ ಕೆಲಸ ನಡೆಯುತ್ತಾ ಅದೆ. ಎರಡು ಮೂರದಿ ಉದ್ದ ಅನೇಕ ಕಲ್ಲುಗಳನ್ನು ರೈತರು ಸುಮಾರು ತಂದು ಅಥವಾ ಕೊಂಡುತಂದು ಹಾಕುತ್ತಾ ಇದ್ದಾರೆ. ಸರಕಾರದವರು ಒಂದು ಮಾತು ಸುಲಭವಾಗಿ ಅಪ್ಪಣೆ ಮಾಡಿಸಿದ್ದು ರೈತರಿಗೆ ಪ್ರಾಣ ಸಂಕಟಕ್ಕೆ ಕಾರಣವಾಯಿತು. ಇನ್ನು ಮುಂದೆ ಇನ್ನೇನು ವಿಚಿತ್ರ ಹುಕುಮುಗಳು ಹೊರಡುವವೊ? 'ಬೆಕ್ಕಿಗೆ ಚೆಲ್ಲಾಟ ಇಲಿಗೆ ಪ್ರಾಣ ಸಂಕಟ' ಎಂಬಂತೆ ಆಗಿರುವದೆ. ಪೂರ್ವಕಾಲದಲ್ಲಿ ಮೈಸೂರು ಪ್ರಜೆಗಳಿಗೆ ಬಹಳ ಹಿಂಸೆಗಳಿದ್ದವೆಂದು ಜನರು ಅನ್ನುತಿದ್ದರು, ಈಗ ಪ್ರತ್ಯಕ್ಷವಾಗಿ ಅನುಭವದಲ್ಲಿಯೇ ಬಂತು. ಎಂಥಾ ಹಿಂಸೆಗಳಾದರೂ ಬರಲೀ ಅದಕ್ಕೆ ೧ಕಟ್ಟ ಮಾಡಿಸಿ ಶಾಲೀಯಲ್ಲಿ ತಂದದ್ದೇ ಅದರ ಕೆಲಸವು ಬಹುಜಾಗ್ರತೆಯಿಂದ ನಡೆದು ಜನಗಳಿಗೆ ಸಂಕಟವಿಲ್ಲದೆ ಬೇಗ ಪೂರೈಸೀತು. ರೈತನಾಗಲೀ ಗ್ರಾಮನೌಕರನಾಗಲಿ ಶೇಕದಾರನಾಗಲೀ ಯಾರಿಂದ ತಪ್ಪು ನಡದರೆ ಅವರಿಗೆ ತಕ್ಕ ದಂಡ ವಿಧಿಸಿ ಶಿಕ್ಷಿಸುತ್ತಾ ಬಂದಲ್ಲಿ ಎಷ್ಟು ಹಿಂಸೆಗಳ ಕೆಲಸವಾದಾಗ್ಯೂ ನ್ಯಾಯವಾಗಿಯೇ ಇದ್ದೀತು, ಕಾಯಿದೆ ಇಲ್ಲದ ರಾಜ್ಯದಲ್ಲಿ ರೈತರು ಬಾಳುವದು ಕಠಿಣವು. ಸಾಧುಗಳಾದ ದೊಡ್ಡ ಸಂಸಾರಿ ರೈತರಿಗೆ ದುರ್ಗುಣೀ ಕಷ್ಟವೂ ಪೋಕರೀ ಭಂಡ ಜನರಿಗೆ ಸೌಖ್ಯವೂ, ವೇಧಿಸಿ ಸಂಪಿಗೊಂಡಿಗಳ ಕ್ಲಬವರನ್ನು ಸುಲುಕೊಳ್ಳಲು ಸಣ್ಣನೌಕರರಿಗೆ ಅತ್ಯುತ್ತಮ ಸಮಯವೂ ಆಗಿದೆ. ಇವನ್ನೆಲ್ಲ ದೇವರು ಶಾಸ್ತ್ರಮಾಡಿದ ಬೇಕೇಹೊರತು ಮನುಷ್ಯಯತ್ನವೇನುಂಟು? ಇನ್ನು ಓಡಿಬಿಗೆಸುಕಬಗಳುಂಟು. ಚೀರೆಶಿರಿಕೆಪೂದುವೆನುಸ್ವಾಮಿ-ಸು.

ಬಂಗಾಳೆ ಇಲಾಖೆಯ ದಕ್ಷಿಣ ಭಾಗದ ಪೋಲೀಸ್ ಖಾತೆಯ ಸೂಪರಿಂಡೆಂಟರುಗಳ ಬಳಿಗೆ ಅತಿಗುಪ್ತವಾದ ಒಂದು ಸರಕಿಲರ್ ಬಂದಿರುವಂತೆ ತಿಳಿಯಬರುತ್ತದೆ. ಅದರ ಮುಖ್ಯ ತಾತ್ಪರ್ಯವು ಇಲ್ಲಿನ ಪ್ರಜೆಯ ಹಿಂದೆ ಗೂಢಚಾರರನ್ನಿಟ್ಟು ಅವರ ಬಗ್ಯೆ ಸರಕಾರಕ್ಕೆ ಅಂತರಂಗದಲ್ಲಿ ವರ್ತಮಾನ ದೊರಕಿಸಿ ಕೊಡಬೇಕೆಂಬದಾಗಿರುತ್ತದೆ. ಗುಪ್ತವಾದ ಈ ಸರ್ಕಿಲರು ಇಂತಹರಿಂದಲೇ ಕೊಡಲ್ಪಟ್ಟಿತೆಂಬದು ನಮ್ಮಿಂದ ಭದವಸೆಯೊಡನೆ ಊಹಿಸಕೂಡದ್ದಾದರೂ, ಅದಕ್ಕೆ ಈಗಿನ ವೈಸ್‌ರಾಯಿಯವರಾದ ಲಾರ್ಡ ದಫರಿನ್ ಪ್ರಭುಗಳ ಅನುಮತಿ ಇಲ್ಲದೆ ಇರುತ್ತದೆಂತ ನಾವು ಎಣಿಸಲಾರೆವು. ವರ್ತಮಾನ ಪತ್ರಗಳ ಸ್ವಾತಂತ್ರ್ಯವು ಕಸುಕೊಳ್ಳುವ ಕಾಯಿದೆಯನ್ನು ಜಾರಿಯಲ್ಲಿ ತರಬೇಕೆಂತ ಆಲೋಚಿಸುತ್ತಿರುವಾಗ ಅದರ ಬದಲು ಈ ಯುಕ್ತಿಯನ್ನು ಹುಡುಕಿ ತೆಗೆದರೆಂತ ಜನರು ಹೇಳದೆ ಇರಲಾರರು.

“ಈ ಸರ್ಕಿಲರಿನ ಸಂಗತಿಯಾದರೋ ತಾನು ಕಲ್ಪನಾದ ಮೇಲೆ ಪರರನ್ನು ನಂಬದೆ ಇರುವದು ಸಹಜವಾದದ್ದೇ ಸರಿ, ಎಂಬುವ ಪ್ರಮಾಣ ವಿರುತ್ತದೆ. ಗೂಢಚಾರರನ್ನಿಟ್ಟು ನಮ್ಮಂತಾ ರಾಜನಿಷ್ಠರಾದ ಜನರ ಗುಟ್ಟನ್ನು ತಿಳಕೊಳ್ಳಲಿಕ್ಕೆ ಪ್ರಯತ್ನಿಸುವದು ಎಷ್ಟು ಹೀನವಾದ ಸಂಗತಿಯು! ನಾವೇನು ರಾಜದ್ರೋಹಿಗಳೋ, ವಿಶ್ವಾಸಘಾತುಕರೊ? ಅಥವಾ ಪೂರಾ ಮೂಢರಾದವರಂತೆ ಕಾಡು ಜನರೋ? ಯಾಕೋಸವಾಗಿ ಪರರಾಜ್ಯ ಸತ್ತೆಯನ್ನಿದ್ದು ಅದನ್ನು ತಾಳಲಾರದೆ ಒಂದೇ ಆವರ್ತಿ ದ್ರೋಹ ಮಾಡಲುದ್ಯುಕ್ತರಾಗುವಂಥ ವಿಚಾರ ಹೀನರಾದ ಕಾಡು ಜನರೋ? ಇವರೊಳಗಿನ ಒಂದು ವಿಶೇಷಣತ್ವಾದರೂ ನಾವು ಪಾತ್ರರಾದವರಲ್ಲವೆಂತ ಪೂರ್ಣವಾಗಿ ಗೊತ್ತಿರುತ್ತ ನಮ್ಮನ್ನು ಈರೀತಿ ಅನಮಾನದಿಂದ ನಡಿಸುವದು ಉಚಿತವೆ! ನಮ್ಮನ್ನು ಸುಮಾರು ನೂರುವರ್ಷಗಳಿಂದ ಈಗಿನ ರಾಜ್ಯಚಕ್ರಾಧಿಕಾರದ ಇಂಗ್ಲೀಷರು ಆಳುತ್ತಿರುವ ರಾಜ್ಯ ಆಡರು ನಮ್ಮನ್ನು ವಿಚಾರ ಮಾಡಿ ಪ್ರೆಬಾಗೆ ನಾವು ರಾಜದ್ರೋಹಿಗಳೆಂಬುದನ್ನೂ ತಿಳಿಸೋದು ನಮ್ಮ ಎಷ್ಟು ದುರಾದೃಷ್ಟವು. ನಾವೇನು ನಮ್ಮ ಈಗಿನ ರಾಜ್ಯಾವಳಿಯಲ್ಲಿ ಅತ್ಯಂತ ಸುಖವನ್ನನುಭವಿಸುತ್ತೇವೆಂತ ಬಡಿವಾರ ಮಾಡುವದಿಲ್ಲ. ಹಾಗೆಯೇ ಅತಿಕಷ್ಟವಾದ ದುಃಖವನ್ನನುಭವಿಸುತ್ತೇವೆಂತಲೂ ನಿಶ್ಚಯತರಾಗಿರುವದಿಲ್ಲ. ಈಗ ನಮಗೆ ಸರಿಯಾದ ರಾಜ್ಯಾವಳಿಯಲ್ಲಿ ದುರ್ಲಭವೆಂತ ಒಪ್ಪಿಕೊಳ್ಳುತ ನಮಗೆ ಅತ್ಯಾವಶ್ಯಕವಾಗಿರುವ ಸಂಗತಿಗಳಿಗಾಗಿ ಪದೇಪದೇ ಬೇಡಿಕೊಳ್ಳುತ್ತೇವಷ್ಟು, ಎಂಬದಾಗಿ ಸಾವಿರಸಾರಿ ಬಿನ್ನೈಸುತ್ತೇವೆ.

ಈ ಬಿನ್ನಹಗಳಿಗೆ ಕಿವಿಕೊಡುವದೆ ಇದ್ದದ್ದು ನಮ್ಮ ರಾಜ್ಯಕರ್ತರ ಧರ್ಮಕ್ಕೆ ಸರಿಯಾದದ್ದೋ ಇಲ್ಲವೊ ಅವರೇ ಬಲ್ಲರು. ಆದರೆ “ ತಮ್ಮಿಂದ ಕೊಡದು, ” “ತಾವು ಮಾಡಲು ಒಪ್ಪುವದಿಲ್ಲ ” ವೆಂತ ಸ್ಪಷ್ಟವಾಗಿ ಏಕವಾಕ್ಯವನ್ನು ನುಡಿಯುವ ಎದೆಯು, ಪರರನ್ನು ಕ್ರೂರವಾಗಿ ಮಾಡಿ ಅನನುಭವಿತೆಯಿಂದ ವರ್ತಿಸುವದು ಬ್ರಿಟಿಷ ರಾಜರ ಕೀರ್ತಿಗೆ ಅನಾದಾಕ್ಷಕರವಾದದ್ದು. ಇಷ್ಟಿದ್ದರೆ ನಮ್ಮ ಅರಿಕೆಗಳನ್ನು ತಳ್ಳಿ ಬಿಡಬಹುದು; ಆದರೆ ಅರಿಕೆ ಮಾಡಿಕೊಳ್ಳುವ ಹಾಗೆ ಬಾಯಿಬಿಗಿಯುವದು ಸರಿಯಲ್ಲವು. ಈಗಿನ ಈ ಸರ್ಕಿಲರನ್ನು ಕುರಿತು ವಿಚಾರಮಾಡಿದರೆ ಬಾಯಿ ಬಿಗಿಯುವದಾದರೂ ಒಂದುವೇಳೆ ನಮ್ಯವಾದೀತು. ಆದರೆ ರಾಜನಿಷ್ಠರಾದ ನಮ್ಮನ್ನು, ಬರೇ ಸುಳ್ಳು ದೂರುಗಳನ್ನು ಬಹಿರಂಗವಾಗಿ ಅದುಹಿಕೊಳ್ಳಲು ಪ್ರಯತ್ನಿಸುತ್ತೇವೆಂಬ ಒಂದು ಕಾರಣದಿಂದಲೇ ಕ್ರಮವಾಗಿ ಅನನುಭವಿಕೆ ನಮ್ಮದು ರಾಜನೀತಿಗೆ ಎಷ್ಟು ವಿರೋಧವಾದ ಸಂಗತಿಯಾಗಿದೆ. ಇದು ಕುರಿತು ನಮ್ಮ ದಫರಿನ ಪ್ರಭುಗಳ ರಾಜ್ಯಾವಳಿಯಲ್ಲಿ ಪ್ರಮುಖರಾದ ಪಂಡಿತರಾದರೂ ವಿಚಾರ ಮಾಡಿ ನೋಡಲಿ. ಇಷ್ಟೆಲ್ಲ ಬರೆಯಲಿಕ್ಕೆ ನಮಗಾಸ್ಪದ ಕೊಟ್ಟಂತಾ ಆ ಗುಪ್ತ ಸರ್ಕಿಲರ್ ಯಾವದು? ಪೋಲೀಸ ಖಾತೆಯವರ ಮುಖಾಂತರ ದೊರಕತಕ್ಕ ವರ್ತಮಾನವು ಸರಿಯಾಗಿಯೂ ಸಂಪೂರ್ಣವಾಗಿಯೂ ಇರುವದಿಲ್ಲವೆಂಬ ಅಭಿಪ್ರಾಯವನ್ನು ಸೂಚಿಸಿ, ಆ ಮೇಲೆ, ಪ್ರತಿಒಬ್ಬ ಪೋಲೀಸ ಸೂಪರಿಂಟೆಂಡೆಂಟನು ಸ್ವತಃ ತಾನೇ ಒಂದು ರಿಪೋರ್ಟ ಬರೆದಿಟ್ಟು ಅದನ್ನು ಪ್ರತಿ ಶನಿವಾರ ತಪ್ಪದೆ ಹುಜೂರಿಗೆ ರವಾನಿಸಬೇಕೆಂಬ ಹುಕುಂ ಈ ಸರಕಿಲರಿನಲ್ಲಿರುತ್ತದೆ. ಯಾವ ಯಾವ ವಿಷಯಗಳ ಮೇಲೆ ಮಾಹಿತಿಮಾಡಿ ಕೊಡತಕ್ಕದ್ದೋ ಆ ವಿಷಯಗಳು ಸಹಾ ಅದರಲ್ಲಿ ತೋರಿಸಲ್ಪಟ್ಟಿರುತ್ತವೆ—ಅವು ಯಾವವಂದರೆ.

(೧) ರಾಜಕೀಯ ಕ್ಷೋಭೆ, ಜನರ ಸಮಾಜಗಳ ಪ್ರಮುಖರು, ಮತ್ತು ರಾಜಕೀಯ ಸಂಗತಿಗಳ ಮೇಲೆ ಪ್ರಸಿದ್ಧಪಡಿಸಲ್ಪಡುವ ಲೇಖನಗಳು (೨) ಧರ್ಮಗಳು ಮತ್ತು ಬೇರೆ ಬೇರೆ ಪಂಥಗಳು, ರಾಜಕೀಯ ಕ್ಷೋಭೆಗೆ ಸಂಬಂಧ ಉಳ್ಳವುಗಳು ವಗೈರೆ (೩) ಗೂಢಚಾರರಾಗಿ ಸಂಚರಿಸುವಂಥ ಪರದೇಶಸ್ಥರು ಮತ್ತು ತುಂಟರು. (೪) ಜನರ ಮನಸ್ಸಿನ ಸಮಾಧಾನವನ್ನು ಕೆಡಿಸುವಂತಾ ಲೇಖನಗಳು, ಅಭಿಪ್ರಾಯಗಳು ಚರ್ಚೆಗಳು, (೫) ಧರ್ಮ ಸಂಬಂಧವಾಗಿ ಆಗುವ ಗಲಾಟೆಗಳು ಮತ್ತು ಸರಕಾರದವರು ನಡಿಸುವ ಕೃತ್ಯಗಳ ಮೇಲೆ ಆಕ್ಷೇಪಣೆ. (೬) ಶಸ್ತ್ರಾಸ್ತ್ರಗಳನ್ನು ಗುಪ್ತವಾಗಿ ಸಂಗ್ರಹಿಸಿಡುವದು ಮತ್ತು ಅವುಗಳನ್ನು ಗುಪ್ತವಾಗಿ ಉಪಯೋಗಿಸುವದು. (೭) ಸ್ವತಂತ್ರವಾದ ಮತ್ತು ಪರತಂತ್ರವಾದ ಸಂಸ್ಥಾನಗಳು, ಅಲ್ಲಿನ ಜನರ ವಿಚಾರಗಳು (೮) ರಾಜಕೀಯ ಕ್ಷೋಭೆಗಾಗಿ ಬಹಿರಂಗವಾಗಿಯೂ ಗುಪ್ತವಾಗಿಯೂ ಸ್ಥಾಪಿಸಲ್ಪಟ್ಟ ಸಭೆಗಳು, ಅವುಗಳ ರಚನೆ, ಉದ್ದೇಶ ಮತ್ತು ಅವುಗಳು ನಡಿಸುವ ಕೃತ್ಯಗಳು, (೯) ರಾಜಕೀಯ ಸಭೆಗಳನ್ನು ಅಥವಾ ಜನರ ಮಹಾ ಸಭೆಯನ್ನು ಕೂಡಿಸುವವರು, ಅಂತಾ ಸಭೆಗಳಿಂದುಂಟಾಗುವ ಪರಿಣಾಮ, ಅವುಗಳ ಕುರಿತು ಜನರ ಅಭಿಪ್ರಾಯ, ಮತ್ತು ದಂಗೆ ವಗೈರೆ ನಡೆಯುವ ಸಂಭವ-(೧೦) ಇಂಗ್ಲೀಷ ಸರಕಾರದವರಿಂದಯೇ ಏತದ್ದೇಶೀಯ ಸಂಸ್ಥಾನಿಕರ ಸೈನ್ಯಕ್ಕೆ ಸೇರಿಸಿಕೊಳ್ಳಬಹುದಾದ ಜನರು.

ಈ ಮೇಲಿನ ವಿಷಯಗಳ ಮೇಲೆ ಪ್ರತಿ ಏಳುದಿವಸಕ್ಕೊಂದುಸಲ ಅಂತರಂಗದಿಂದ ಪತ್ತೆಮಾಡಿ ತಿಳಿಸತಕ್ಕದ್ದೆಂತ ಬರೆದಿರುವ ಆ ಗೂಢ ಹುಕುಮಿನ ಅರ್ಥವೇನು? ನಮ್ಮ ರಾಜಕೀಯ ಸಭೆಗಳು ದೊಡ್ಡ ದೊಡ್ಡ ಪಟ್ಟಣಗಳಲ್ಲಿ ಬಹಿರಂಗವಾಗಿರತಕ್ಕವುಗಳು; ಅವಕ್ಕೆ ಸೇರಿದವರೆಲ್ಲರು ವಿದ್ಯಾವಂತರಾದ ವಿಚಾರವಂತರಾಗಿರುತ್ತಾರೆ. ಅವರು ನಡೆಸುವ ಕೆಲಸಗಳ ಸ್ವರೂಪವು ಬಹಿರಂಗದಿಂದ ಪ್ರಕಟಿಸಲ್ಪಡುತ್ತದೆ. ಹೀಗಿರುತ ಯಾತಕಾರಣ ಈ ಸರಕ್ಯುಲರ್ ಕೊಡಲಾಯಿತೆಂಬದನ್ನು ನಿಶ್ಚಯಿಸುವದು ಮಾತ್ರ ನಮ್ಮಿಂದ ಹೇಳಲಶಕ್ಯವು. ಚಿಕ್ಕ ಚಿಕ್ಕ ಊರುಗಳಲ್ಲಿ ಹಳ್ಳಿಗಳಲ್ಲಿ ಇಂತಾ ಸಭೆಗಳಿರುತ್ತವೆಂತ ಊಹಿಸಲಿಕ್ಕೂ ಕಾರಣವಿರುವದಿಲ್ಲ, ಬರೇ ನಿಷ್ಕಾರಣವಾದ ಸಂಶಯದಿಂದಲೇ ಈ ಸರ್ಕಲರ್ ಕೊಟ್ಟಿರುತ್ತದೆಂತ ಹೇಳಬೇಕಾಗಿದೆ. ಆದರೆ ಇದರಿಂದ ಜನರಿಗುಂಟಾಗ ಬಹುದಾದ ಕೇಡು ಲಕ್ಷಾಂತ ಇವುಗಳ ವಿಚಾರ ಆ ಸರ್ಕಲರನ್ನು ಕೊಟ್ಟವರು ಮಾಡಲಿಲ್ಲವಂತೆ ತೋರುತ್ತದೆ. ಈ ಸರ್ಕಲರನ್ನು ಜಾರಿಯಲ್ಲಿ ತರುವಂಥಾವರು ಪೋಲೀಸು ಖಾತೆಯವರೆ; ರಿಪೋರ್ಟ ಮಾಡುವವರು ಸುಪರಿಂಟೆಂಡೆಂಟರೂ, ಅವರಿಗೆ ವರ್ತಮಾನ ಹೇಳುವವರು ಅವರ ಕೈಕೆಳಗಿನ ಉದ್ಯೋಗಸ್ಥರೇ ಇಂಥವರಿಗೆ ಇಂತಾ ಅಧಿಕಾರ ಬಂದರೆ ಮತ್ತೇನು ಹೇಳಬೇಕು. ಪ್ರೋಲೀಸರವರೆಂದರೆ ಜನರು ಬೆದರುತ್ತಾರೆ. ಅವರು ಪರರ ಸ್ಥಿತಿಗತಿ ನುಡುರ್ಮವೆ ಇತ್ಯಾದಿಗಳನ್ನು ತಿಲಾಂಶವಾದರೂ ವಿಚಾರ ಮಾಡುವದಿಲ್ಲ. ತಮ್ಮ “ಮ್ಯಾಟ' ಯೋಗ್ಯ ಅಥವಾ ಅಯೋಗ್ಯವಾದ ಯಾವದಾದರೂ ಮರೀತಿಯಿಂದ ಬನಾಯಿಸಿ ಅದರಲ್ಲೇ ಆನಂದ ಮತ್ತು ಪ್ರಯೋಜನ ಪಡುವದೇ ತಮ್ಮ ಕರ್ತವ್ಯವೆಂತ ತಿಳುಕೊಳ್ಳುತ್ತಾರೆ. ಇಂತವರ ಕೈಯಲ್ಲಿ ಈ ಹೊಸಅಧಿಕಾರಸಿಕ್ಕಿದಮೇಲೆ ಅವರು ಅದನ್ನು ಮರುಪಡೋಗದಾದವೆ ಇರಲಾರರೆಂಬದಕ್ಕೇನು ಭರವಸೆಯುಂಟು? ಒಟ್ಟಿನ ಮೇಲೆ ನೋಡಲು, ಈಪ್ರಕಾರ ನಮ್ಮ ರಾಜ್ಯಕರ್ತರು ನಮ್ಮನ್ನು ಅನನುಭವಿಕೆಯಿಂದ ನೋಡುವದು ನಿರಾಧಾರವು, ಹಾಗಯೇ ಇದಲ್ಲ ವರುಷ ರಾಜ್ಯವನ್ನಾಳ ಈಗ ಏಕಾಏಕಿ ನಮ್ಮ ಮಾನವುಯರ್ ದೆಯನ್ನೆಲ್ಲ ಪೋಲೀಸ್ ಇಲಾಖೆಯವರ ವಶಮಾಡಿದ್ದುಉಚಿತವು. ಈ ಸಂಗತಿಗಳನ್ನೆಲ್ಲ ಗವರ್ನಮೆಂಟಿನವರು ವಿಚಾರಿಸಿ ಈ ಸರ್ಕಲರನ್ನು ರದ್ದು ಪಡಿಸ್ಯಾರೆಂತ ನಂಬುತ್ತೇವೆ.—ಕ. ಸು.

Bangalore:—Printed and published for the Proprietor at the Karnatic Press.—1888.

ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA.

ಪ್ರತಿ ಸೋಮವಾರ ಪ್ರಾತಃಕಾಲದಲ್ಲಿ ಪ್ರಕಟಿಸಲ್ಪಡುವದು.

Published every Monday Morning.

ಪ್ರಕಾಶಮವಿವಿಧಪ್ರವೃತ್ತ್ಯಪಗವಾರ್ತ್ತ ಕರ್ಣ್ಣಾಟಕಪ್ರಕಾಶನಪರಾಭಿದಾಪ್ರತಿತಸಾಹಿತೀಕೋಭಿತಾ ॥ನೃಗಾಂಕಹಿತವಾಸರನಿಹಿತಮುದ್ರಣಾಸಜ್ಜನ್ನರ್ದ್ಧಿಕಾಸುಪರಿಭೂಷಿತಾಶಿಕತಿಮಾನಸುಸಂಮುದಂ

Vol. XV.] BANGALORE—MONDAY, MARCH 19, 1888. [No. 11.

ಸಂಪುಟ ೧೫.] ಬೆಂಗಳೂರು:—ಸನ್ ೧೮೮೮ನೇ ಇಸವಿ ಮಾರ್ಚ ೧೯ನೇ ತಾರೀಖ್ ಸೋಮವಾರ. [ಸಂಖ್ಯೆ ೧೧

ಕರ್ಣಾಟಕ ಪ್ರಕಾಶಿಕಾ

ಪತ್ರಿಕೆಯ ಚಂದಾ ದರಗಳು,
೧೮೮೮ನೇ ಇಸವಿ ಜನವರಿಯಿಂದ ಮೊದಲಾಗಿ
ಕಡಮೆಮಾಡಲ್ಪಟ್ಟಿರುತ್ತವೆ.

ಈ ಪತ್ರಿಕೆಯ ಚಂದಾದಾರರನ್ನು ಹೆಚ್ಚಿಸಿ ಅನೇಕರ ಅಪೇಕ್ಷೆಯನ್ನು ನೆರವೇರಿಸುವ ಉದ್ದೇಶದೊಡನೆಯೂ, ಪರಿಮಿತವಾದ ಆದಾಯವುಳ್ಳವರಿಗೆಲ್ಲ ಈ ಪತ್ರಿಕೆಯು ಸುಲಭವಾಗಿ ಲಭಿಸುವಂತಿರಬೇಕೆಂಬ ಅಭಿಪ್ರಾಯದೊಡನೆಯೂ ಇದರ ಚಂದಾದರವನ್ನು ಇದರಡಿಕಂಡಂತೆ ಕಡಮೆಮಾಡಿರುತ್ತೇವೆ. ಅದೇನೆಂದರೆ:—

ಇಂಗ್ಲಿಷ್ ಮತ್ತು ಕನ್ನಡಭಾಗಗಳಿಗೆ.

		ಸ್ಥಳದವರಿಗೆ	ಪರಸ್ಥಳದವರಿಗೆ.
12	ತಿಂಗಳಿಗೆ	8—0—0	9—0—0
6	„	4—0—0	4—8—0
3	„	2—8—0	2—8—0

ಇಂಗ್ಲಿಷ್ ಅಥವಾ ಕನ್ನಡಭಾಗಗಳಿಗೆ.

		ಸ್ಥಳದವರಿಗೆ	ಪರಸ್ಥಳದವರಿಗೆ
12	ತಿಂಗಳಿಗೆ	4—0—0	5—0—0
6	„	2—0—0	2—8—0
3	„	1—4—0	1—8—0

ಷರಾ—ಇಂಥ ಮುನ್ಸಿಫರು, ಯೋಬಳ ಮತ್ತು ತಾಲ್ಲೂಕ್ ಸ್ಕೂಲ್‌ಮಾಸ್ಟರುಗಳು, ಶ್ಯಾನುಭೋಗರು, ಪಟೇಲರು, ವಿದ್ಯಾರ್ಥಿಗಳು, ಇವರಿಗೆಲ್ಲ ಈ ಪತ್ರಿಕೆಯು ಸಹಾಯ ಚಂದಾದರಕ್ಕೆ ಕೊಡಲ್ಪಡುವದು. ಆದ್ಯಾಗ್ಯೂ ಬಾಕಿಯಿರುವ ದರಖಾಸ್ತುಗಳಿಗೆ ಸುತರಾಂ ನಿಗೇಹ ಮಾಡಲ್ಪಡಲಾರದು. ಚಂದಾದಾರರು ಇಂಗ್ಲಿಷ್ ಭಾಗವನ್ನಾಗಲಿ ಕನ್ನಡಭಾಗವನ್ನಾಗಲಿ ಅಥವಾ ಎರಡನ್ನಾಗಲಿ ತೆಗೆದುಕೊಳ್ಳಬಹುದು. ಚಂದಾಹಣವನ್ನು ಮುಂಗಡವಾಗಿಯೇ ಸಲ್ಲಿಸತಕ್ಕದ್ದು. ಮೂರು ತಿಂಗಳಿಗಿಂತ ಕಡಮೆ ಅವಧಿಗೆ ಚಂದಾ ಮೊಬಲಗು ಅಂಗೀಕರಿಸಲ್ಪಡಲಾರದು.

ನೋಟುಗಳು ರವಾನಿಸತಕ್ಕವರು ಮೊದಲು ಕಳುಹಿಸುವ ಅರ್ಧನೋಟು ತಲುಪಿದ ಬಗ್ಗೆ ನಮ್ಮ ಕಾಗದವು ಬಂದ ಕೂಡಲೇ ಬಾಕಿ ಅರ್ಧ ನೋಟನ್ನು ರವಾನಿಸತಕ್ಕದ್ದು. ಲೋಕಲ್ ನೋಟು ಕಳುಹಿಸತಕ್ಕವರು ರೂಪಾಯಿ ಒಂದಕ್ಕೆ ಒಂದು ಆಣೆಯ ಮೇರೆ ಡಿಸ್ಕೌಂಟ್ ಸಹ ಸೇರಿಸಿ ಕಳುಹಿಸತಕ್ಕದ್ದು. ಅಂಚೆ ಟಿಕೇಟು ಕಳುಹಿಸುವವರು ಬಿಲ್‌ಗಳನ್ನು ಕಳುಹಿಸೋಣವು ಡಿಸ್ಕೌಂಟ್‌ನಲ್ಲಿ ಕಳುಹಿಸಲ್ಪಡುವ ಮೊಬಲಗಿನಲ್ಲಿ ಅದು ಮಜರಾಮಾಡಲ್ಪಟ್ಟು ಮಿಕ್ಕ ಮೊಬಲಗು ಲೆಕ್ಕಕ್ಕೆ ದಾಖಲ್ಮಾಡಿಕೊಳ್ಳಲ್ಪಡುವದು.

ಪ್ರಕಟನೆಯ ರಿವಾಜ.

ಮೊದಲನೆಸಾರಿ ಪಂಕ್ತಿ ಒಂದಕ್ಕೆ ೦—೨—೦
ಎರಡನೆಸಾರಿ ಪಂಕ್ತಿ ಒಂದಕ್ಕೆ ೦—೧—೦

ಷರಾ—ಎರಡಾವರ್ತಿಗಿಂತ ಜಾಸ್ತಿಯಾಗಿ ಎಷ್ಟು ತರಹ ಪ್ರಕಟಿಸಬೇಕೆಂಬುದು ಪಂಕ್ತಿ ಒಂದಕ್ಕೆ ೧ ಆಣೆ ಮೇರೆ ಲೆಕ್ಕ ಮಾಡಲ್ಪಡುವದು. ಈ ಪತ್ರಿಕೆಯಲ್ಲಿ ಪ್ರಕಟನೆ ಮಾಡುವ ಬಗ್ಗೆ ಪ್ರಕಟನೆಗಳು ಕಳುಹಿಸುವವರು ಅವು ಎಷ್ಟು ವರ್ತಿ ಪ್ರಕಟಿಸಲ್ಪಡಬೇಕೋ ಆ ಅಂಕವನ್ನು ಸ್ಪಷ್ಟವಾಗಿ ತಿಳಿಸತಕ್ಕದ್ದು. ಇಲ್ಲದಿದ್ದಲ್ಲಿ ಅವರು ನಮಗೆ ನಿಲ್ಲಿಸುವಂತೆ ಬರೆಯುವತನಕ ಅವು ಪ್ರಕಟಿಸುತಲಿದ್ದು ಹಾಗೆ ಎಷ್ಟಾವರ್ತಿ ಪ್ರಕಟಿಸಲ್ಪಟ್ಟಿದ್ದಾಗ್ಯೂ ಮೇಲೆ ಕಂಡ ದರದಂತೆ ಕಿಮ್ಮತ್ ವಸೂಲ್ಮಾಡಲ್ಪಡುವದು. ಪ್ರಕಟನೆಯ ಬಗ್ಗೆ ಕಳುಹಿಸಲ್ಪಡತಕ್ಕ ಪ್ರಕಟನೆಗಳನ್ನು ಆದಿವಾರದ ದಿವಸ ಮಧ್ಯಾಹ್ನ ೨ ಘಂಟೆಯೊಳಗಾಗಿ ಕಳುಹಿಸಬೇಕು. ಪ್ರಕಟನೆಯ ಬಗ್ಗೆ ಈ ಪತ್ರಿಕೆಗೆ ಕಳುಹಿಸಲ್ಪಡತಕ್ಕ ಕಾಗದಗಳಲ್ಲಿ ತಿಳಿಸಲ್ಪಡುವ ಅಭಿಪ್ರಾಯಗಳಿಗೆ ನಾವು ಜವಾಬ್ದಾರರಾಗಲಾರೆವು. ಕ್ರಮವಾಗಿ ರುಜುಮಾಡಿ ದಸ್ತಕತ್ತು ಹಾಕದ ಕಾಗದವನ್ನು ಪ್ರಕಟಿಸಲಾರೆವು. ಸಿರಾ ಹೆಸರು ಪತ್ರ ಕಾಗದಗಳು ಮರುಪಾವತಿ ಕಳುಹಿಸಲ್ಪಡಲಾರವು.

"IT RECOMENDS ITSELF"

ALL WHO SUFFER FIND SURE RELIEF.

LITTLE'S

ORIENTAL BALM

THE MOST EFFECTUAL MODERN REMEDY FOR PAIN.

ಲಿಟಲ್ ದೊರೆಯವರಿಂದ ತಯಾರ್ಮಾಡಲ್ಪಟ್ಟ "ಬಾಧೆಸಂಹಾರಿಣೀ" ಎಂಬ ಪೂರ್ವದೇಶ ಸಂಬಂಧವಾದ ಅಮೂಲ್ಯ ತೈಲವು ಸ್ವಚ್ಛ ಪ್ರಶಸ್ತವಾದದ್ದು, ಮತ್ತು ಸಕಲವಾದ ನವೀನ ಚಿಕಿತ್ಸೆಗಳಿಗೂ ಉಪಯೋಗವಾದ ಔಷಧವು. ಇದರಿಂದ ಸಕಲ ವಾತರೋಗಗಳೂ, ವಾತಸಂಬಂಧಗಳಾದ ಸಂಧಿಬಂಧನಗಳೂ ನಿವೃತ್ತಿಯಾಗುವವು. ಮುಖ್ಯವಾಗಿ ಬೆರಳಿನ ವಾದ ವಾತರೋಗಗಳು, ಕಾಸ, ಗಂಟಲಿನಲ್ಲಿ ಉರಿ, ನಡುನೋವು, ಕೀಲುವಾಯು, ಕಟಿವಾಯು, ಉಳುಕು ನೋವು, ತಲೆನೋವು, ತಿಮಿರು ಮುಂತಾದ ರೋಗಗಳಿಗೆಲ್ಲ ನಿಸ್ಸಂದೇಹವಾಗಿ ಬಹಳ ಪ್ರಯೋಜನವನ್ನುಂಟುಮಾಡತಕ್ಕದ್ದು. ಈ ತೈಲವನ್ನು ನೋವುಳ್ಳ ಸ್ಥಳಗಳಲ್ಲಿ ಕೆಲವಾವರ್ತಿ ಸವರಿ ಶಾಖವುಂಟಾಗುವಂತೆ ಚೆನ್ನಾಗಿ ತಿಕ್ಕಿದಲ್ಲಿ ಸಕಲವಾದ ನೋವುಗಳನ್ನು ನಿವೃತ್ತಿ ಮಾಡುವಂಥಾ ಉತ್ತಮ ತೈಲವಾಗಿರುತ್ತದೆ. ಸಕಲ ನೋವನ್ನೂ ದಲೇ ಅರೆತಲೆನೋವು ಮತ್ತು ಜೋಮು ಕೂಡಲೇ ನಿವೃತ್ತಿಯಾಗುವದು. ಗಾಯಗಳಲ್ಲುಂಟಾಗುವ ಉರಿ ಅಥವಾ ವ್ರಣಗಳಿಗೆ ಈ ತೈಲವು ಅದ್ಭುತವಾದ ಮತ್ತು ಶೀಘ್ರವಾದ ಸಂಪೂರ್ಣ ಗುಣವನ್ನುಂಟುಮಾಡುವದು. ಅದ್ಭುತವಾದ ಈ ಔಷಧವನ್ನು ಉಪಯೋಗಿಸಿದಲ್ಲಿ ಅದರ ಪ್ರಯೋಜನವು ಸ್ವತಃ ವ್ಯಕ್ತವಾಗುವದು. ಈ ತೈಲವು ಶೀತ ಗಾಳಿ ಮುಂತಾದವುಗಳಲ್ಲಿ ತಿರುಗಿ ಸಂಚರಿಸುವಂಥಾ ಪ್ರಯಾಣಸ್ಥರು, ಬೇಟೆಯಾಡುವವರು, ದೇಶಾಟನ ಮಾಡುವವರು, ಮುಂತಾದವರಿಗೆಲ್ಲ ಅಮೂಲ್ಯವಾದದ್ದು.

ಪರಿಶೀಲಕರ ಅಭಿಪ್ರಾಯವು.

ಐರ್ಲ್ಯಾಂಡ್ ದೇಶದ ಫಾರ್ಮಸ್ಯೂಟಿಕಲ್ ಸೊಸೈಟಿಯೆಂಬ ಔಷಧಶಾಲೆಯ ಪ್ರೆಸಿಡೆಂಟರಾಗಿಯೂ, ಸದರೀ ದೇಶದ ಜನಾಂಗಿಕಲ್ ಸೊಸೈಟಿ ಎಂಬ ವೃತ್ತಾಂತಪರಿಶೋಧಕ ಸಮಾಜದ ಮೆಂಬರಾಗಿಯೂ, "ಮಿನರಲ್ ವಾಟರ್ಸ್ ಆಫ್ ಯೂರೋಪ್" ಎಂಬ ಗ್ರಂಥಕರ್ತರಾಗಿಯೂ, ರಸಾಯನಶಾಸ್ತ್ರ ವಿಷಯಕವಾದ ಅನೇಕ ಲೇಖನಾಧಿಕಾರಿಗಳಾಗಿಯೂ, ಇರುವ ಪ್ರೊಫೆಸರ್ ಟಿಚ್ ಬೋರ್ನ್ (C. R. TICHBORNE, L. L. D., F. C. S., M. R. I. A.,) ಎಂಬುವರು ಅಭಿಪ್ರಾಯ ಪಟ್ಟಿರುತ್ತಾರೇನೆಂದರೆ—ಲಿಟಲ್ ಎಂಬುವರ ಓರಿಯಂಟಲ್ ತೈಲವನ್ನು ಜಾಗರೂಕತೆಯಿಂದ ಪರೀಕ್ಷಿಸಿ ನೋಡಲಾಗಿ ಇದು ಬಹುವಿಧ ಮೂಲಿಕೆಗಳ ಸಮ್ಮಿಶ್ರವಾದ ತೈಲವೆಂದೇ ಕಂಡುಬಂತಲ್ಲದೆ, ಇದು ಹೊರಗೆ ಉಪಯೋಗಿಸಲ್ಪಡುವಾಗ ಕೂಡಲೇ ನಿರುಪದ್ರವಕರವಾದದ್ದಾಗಿದ್ದರೂ, ನಿಜವಾಗಿ ಪ್ರಬಲ ರೋಗನಿವಾರಣಶಕ್ತಿಯುಳ್ಳದ್ದಾಗಿರುತ್ತದೆ. ಈ ಮಿಶ್ರೌಷಧವು ನರಗಳನ್ನು ಸ್ತಿಮಿತಕ್ಕೆ ತರತಕ್ಕದ್ದಾಗಿರುವದರಿಂದ ಇದು ಎಲ್ಲಾ ತರದ ರೋಗಗಳಿಗೆ ಉಪಯುಕ್ತವೆಂದು ತಿಳಿಸಲ್ಪಟ್ಟಿದೆಯೋ ಸದರೀ ರೋಗಗಳಲ್ಲಿ ಅದರ ಪ್ರಯೋಜನವು ವ್ಯಕ್ತವಾಗುವದು. ಈ ತೈಲವು ಸಂಪೂರ್ಣ ಜಾಗರೂಕತೆಯೊಡನೆ ತಯಾರ್ಮಾಡಲ್ಪಟ್ಟಿರುತ್ತದೆ.

ಇದರ ಕ್ರಯ—ಸೀಸೆ ಒಂದಕ್ಕೆ ೧ ರೂಪಾಯಿ.

ಇದು ವೆಸ್ಟ್ ಔಷಧ ಶಾಲೆಯಲ್ಲಿಯೂ, ಮದರಾಸ್ ಸಂಬುದಾಸ್ ಬೀದಿಯಲ್ಲಿ, ೨೦ನೇ ನಂಬರ್ ಮನೆಯೊಳಗಿರುವ, ಎ. ಸಿ. ಬೆರ್ರಿಮನ್ ಎಂಬುವರಲ್ಲಿಯೂ, ಈ ಪ್ರಾಂತ್ಯದ ಏಜಂಟರುಗಳಾದ ಜೆ. ವೆಸ್ಟ್ ಎಂಬುವರ ಕಂಪೆನಿಯಲ್ಲಿಯೂ, ಮೆ. ಕೇಪ್ಟನ್ ಅಂಡ್ ಕಂಪೆನಿಯವರಲ್ಲಿಯೂ, ರಿಗ್ಸ್ ಎಂಬುವರ ಕಂಪೆನಿಯಲ್ಲಿಯೂ ದೊರೆಯುವದು.

AGENTS.— Messrs, J. WEST, Chemist, &c., Bangalore.
CAPTAIN & Co. Chemists, Bangalore.
RIGGS & Co., Chemists, Bangalore; and of
MAHOMED YOUSOFF AND SONS, The Cash Bazarr, Bagalore
A. C. BERRYMAN & Co.,
20 Sambudoss Street Madras.

NOTICE.

VAIDYASARA SANGRAHA

A TREATISE ON THE PRINCIPLES OF

HINDU MEDICINE.

☞ Price including Postage Rs. 5 6 0

ವೈದ್ಯಸಾರ ಸಂಗ್ರಹ.

ಈಗ್ರಂಥಾಪೇಕ್ಷೆಯುಳ್ಳವರು ಮೊಬಲಗಿನೊಡನೆ ಕೆಳಗೆ ರುಜುಮಾಡಿರತಕ್ಕವರ ಹೆಸರಿಗೆ ಬರೆದುಕೊಂಡರೆ ಪುಸ್ತಕ ಕೂಡಲೇ ಕಳುಹಿಸಲ್ಪಡುವದು. ಮೊಬಲಗು ಇಲ್ಲದ ದರಖಾಸ್ತುಗಳಿಗೆ ಸುತರಾಂ ನಿಗೇಹ ಮಾಡಲ್ಪಡಲಾರದು.

ಇದರ ಕ್ರಯ ... ...ರೂ॥ ೫—೦—೦
ಪ್ಯಾಕಿಂಗ್ ಮತ್ತು ಅಂಚೇಹಾಸಲ್, ೦—೬—೦

ಟಿ. ಬಿ. ವೆಂಕಟಾಚಾರ್,
ಆಸ್ಪತ್ರಿರೋಡ್, ಬೆಂಗಳೂರು

ನೋಟಿಸ್.

ಬೆಂಗಳೂರಲ್ಲಿನ ಕಂಬ್ಳಿ, ಅವಲ, ಮತ್ತು ರೇಷ್ಮೆ ಕಾರ್ಖಾನೆಗೆ ೧೦೦ರಿಂದ ೧೦೦೦ವರೆಗಳ ವರಿವಿಗೆ ಕ್ಯಾಪಿಟಲ್ ಅಥವಾ ಶಾಡುಗಾಡೀ ಬೇಕಾಗಿರುವದರಿಂದ ಅದರ ಸರಬರಾಯಿಬಗ್ಗೆ ದರಖಾಸ್ತುಗಳು ಬೇಗನೆ ಕೊಡಲ್ಪಡುವದು.

ದರಖಾಸ್ತು ನಮೂನೆ ಬೇಕಾದರೆ ಮೇಲಿನ ಕಾರ್ಖಾನೆಯಲ್ಲಿ ಪಡೆಯಬಹುದು.

ನೋಟಿಸ್.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನೆಂದರೆ,—

ಹುಚ್ಚರ ಮತ್ತು ಕುಷ್ಠರೋಗಿಗಳ ಆಸ್ಪತ್ರಿಗಳಿಗೂ ಪ್ರಸವಾಸ್ಪತ್ರಿಗೂ ವೈದ್ಯಶಾಲೆಗೂ ಬೇಕಾದ ಆಹಾರ ಪದಾರ್ಥಗಳ ಮತ್ತು ಆಸ್ಪತ್ರಿಗೆ ಬೇಕಾದ ಇತರ ಪದಾರ್ಥಗಳ ಸರಬರಾಯಿ ಬಗ್ಗೆ ದರಖಾಸ್ತುಗಳು ಕೊಡಬಹುದು.

ಇದರ ತಪಸೀಲ್ ತಿಳಿಯಬೇಕಾದರೆ ಮೈಸೂರು ಗೆಜೆಟನ್ನು ನೋಡಬೇಕು.

ದರಖಾಸ್ತುಗಳು ಈ ತಿಂಗಳ ೩೧ನೇ ತಾರೀಖಿನ ಬೆಳಿಗ್ಗೆ ಹುಚ್ಚರ ಆಸ್ಪತ್ರೆಯಲ್ಲಿ ಖುಲ್ಲಾ ಮಾಡಲ್ಪಡುವವು.

ಕರ್ಣ್ಣಾಟಕ ಪ್ರಕಾಶಿಕಾ.

THE KARNATAKA PRAKASIKA.

MONDAY, MARCH 19, 1888.

೧೮೮೮ನೇ ಮಾರ್ಚ ೧೯ನೇ ತಾ॥ ಸೋಮವಾರ.

THE MYSORE GOVERNMENT AND ITS TANK POLICY.

ಮೈಸೂರು ದೇಶದಲ್ಲಿರತಕ್ಕ ಕೆರೆಗಳ ರಿಪೇರಿ ವಿಷಯದಲ್ಲಿ ಇಷ್ಟಿನ ಸರ್ಕಾರದವರು ಹೊಸದಾಗಿ ಅನುಸರಿಸಲಾದ ಕ್ರಮವು ರೈತರಿಗೆ ಬಹಳ ಹಿಂಸಾರೂಪವೆಂತಲೂ, ಅದು ಈಗಿನ ಕಾಲದೇಶ ಜನಗಳ ಸ್ಥಿತಿಗಳಿಗೆ ಬಹಳ ವಿರುದ್ಧವಾದದ್ದೆಂತಲೂ, ಅದು ಖಂಡಿತವಾಗಿ ಜಾರಿಯಲ್ಲಿ ತರಲ್ಪಟ್ಟಲ್ಲಿ ಎಲ್ಲರಿಗೂ ಬಹಳ ಅಸಮಾಧಾನಕರವಾಗಿರುವದೆಂತಲೂ ವಗೈರೆ ಅಭಿಪ್ರಾಯಗಳನ್ನು ಅನೇಕ ದೃಷ್ಟಾಂತಗಳೊಡನೆ ಈಗ್ಯೆ ಕೆಲವು ತಿಂಗಳ ಹಿಂದೆ ವ್ಯಕ್ತಪಡಿಸಿ ಅದಂ ಕುರಿತು ಅನೇಕ ವಾರಗಳ ತನಕ ಈ ಪತ್ರಿಕಾ ಮೂಲಕ ಬೇಕಾದ ಮಟ್ಟಿಗೆ ವಿಚಾರ ಮಾಡಿರುತ್ತೇವೆಯಷ್ಟೆ. ಈಚೆಗೆ ಸದರೀ ವಿಷಯವಂ ಕುರಿತು ಈ ಸಂಸ್ಥಾನದ ದಿವಾನರವರು ಕೋಲಾರ ಡಿಸ್ಟ್ರಿಕ್ಟ್ ರೈತರು ಕೆಲವರಿಗೆ ಕೊಟ್ಟ ಇದರಡಿ ಕಂಡ ಎಂಡಾರ್ಸ್‌ಮೆಂಟಿನ ನಕಲು ಈಗ ದೊರಗಾದದರಿಂದ ಅದರ ಮೇಲೆ ನಮ್ಮ ಅಭಿಪ್ರಾಯವನ್ನು ಇದರಡಿ ತಿಳಿಸುವೆವು:—

ನಂಬರ್‌ದಾರ್.

ಹುಜೂರು ದಿವಾನ್‌ಕಚೇರಿ ಇಂಡ.
ಅರ್ಜಿದಾರರು),

ಕೋಲಾರ ತಾಲ್ಲೂಕು ಕಲ್ಲಹಳ್ಳಿ ಸೂರನಾರಣಪ್ಪ, ಗಿಡ್ಡಗವಡ, ಗೋಪಾಲಗವಡ ವಗ್ಗೈರೆ ಮತ್ತು ಮುಳಬಾಗಲು ತಾಲ್ಲೂಕು ಕೆಂಪಣ್ಣ ವಗೈರೆರಿಗೆ ಸಹಾ ಇಂಡಾರಸು ಹುಕ್ಕುಂ.

ನೀವುಗಳು ಹುಜೂರಿಗೆ ಗುದರಾಯಿಸಿದ ದಿ ೩೦ಬರು ೧೬ನೇ ಮಾರ್ಚ್ ಅರ್ಜಿ ಮುಟ್ಟಿ ಹಾಜರಾಯಿತು.

ಅದರಲ್ಲಿ ಕಂಡಂತೆ ಕೆರೆಗಳಿಗೆ ಮಟ್ಟ ಕಾಮಗಾರಿ ರೈತರ ಮೂಲಕ ಮಾಡಿಸಬೇಕೆಂಬ ವಿಷಯದಲ್ಲಿ ತಾವಾಗಿ ತಮ್ಮ ತಮ್ಮ ಕೆರೆಗಳಿಗೆ ಕಾಮಗಾರಿ ದೊಡಲು ಒಪ್ಪಿ ರೈತರ ಪೈಕಿ ಜಾಸ್ತಿ ಸುಖ್ಯೆಯವರು ಜಾಹಿರ್ಮಾಡಿಕೊಂಡ ವಿನಾ ಅಂಥಾ ಕಾಮಗಾರಿ ಮಾಡುವಂತೆ ರೈತರುಗಳನ್ನು ಬಲವಂತಪಡಿಸಕೂಡದೆಂದು ವಗೈರೆ ಕೋಲಾರ ಡಿಸ್ಟ್ರಿಕ್ಟ್ ಡೆಪ್ಯುಟಿ ಕಮಿಷನರ್ ಸಾಹೇಬರವರಿಗೆ ಠರಾವ್ ಬರೆಸಿ ಇರುತ್ತೆ, ತಿಳಿಯುವದು.

ಶಿಬಿರ ಬೆಂಗಳೂರು,
ತಾ॥ ೧೯-೧೨-೮೭.
(Signed.)
C. MADIAH,
Under Secretary.

ಮೇಲೆ ಕಂಡ ಹುಕುಂ ದೆಸೆಯಿಂದ ಕೆರೇ ಕಾಮಗಾರಿಯ ವಿಷಯದಲ್ಲಿ ರೈತರು ಸ್ವತಃ ಒಪ್ಪಿ ರಿಪೇರ್ ಮಾಡಿದರೆ ಮಾಡಬಹುದಲ್ಲದೆ ಅವರಂ ಬಲಾತ್ಕರಿಸಕೂಡದೆಂದು ಸ್ಪಷ್ಟವಾಗುತ್ತದೆ.

[redacted]

[redacted]

[redacted]

[redacted]

[redacted]

[redacted]

[redacted]

[redacted]

[redacted]

[redacted]

[redacted]

FLASHNO-1

[redacted]

[redacted]

[redacted]

೪೫ ವರ್ಷಗಳ ವಯಸ್ಸಾಗಿತ್ತು. ಇವರು ಜಾತಿಯಲ್ಲಿ ಕ್ಷತ್ರಿಯರು. ವಿಜಯ ನಗರದಲ್ಲಿ ಒಬ್ಬ ಬ್ರಾಹ್ಮಣನ ಮನೆಯೊಳು ವಿದ್ಯಾಭ್ಯಾಸ ಮಾಡಿದರು. ಇವರು ವಿಜಯನಗರ ಜಮೀನ್ದಾರರುಗಳ ಶ್ರೇಣಿಗಳಿಗೆ ತಮ್ಮ ಬಾಲ್ಯಾರಭ್ಯ ೨೦ ವರ್ಷಗಳ ನೌಕರಿ ಮಾಡಿದರು. ಇಷ್ಟು ದೀರ್ಘಕಾಲದಲ್ಲಿ ಯೆಲ್ಲಾ ಇಲಾಖೆಗಳಲ್ಲೂ ನೌಕರಿಮಾಡಿ, ಕಡೆಗೆ ಸಾಲೀಯಾನಾ ೧,೦೦೦ ರೂಪಾಯಿಗಳ ಫಲಬಿನಮೇಲೆ ದಿವಾನಗಿರಿಗೆ ಮೊಕರರ್ರು ಮಾಡಲ್ಪಟ್ಟರು. ಇವರಿಗೆ ಇಂಗ್ಲಿಷ್ ಭಾಷಾ ಪರಿಚಯವಿಲ್ಲದೆ ಹೋದಾಗ್ಯೂ ಉದಾರಸ್ವಭಾವವೂ ಗಂಭೀರವಾದ ನಡವಳಿಕೆಗಳೂ ಉಳ್ಳವರಾಗಿದ್ದರು. ಇವರು ಯಾವಾಗಲೂ ರೈತ ದಕ್ಷಾತಿ, ಮತ್ತು ಅವರ ಅಭಿವೃದ್ಧಿ ವಿಷಯದಲ್ಲಿ ಆಂತರವಾದ ಅಕ್ಕರೆಯುಳ್ಳವರು. ಇವರು ದಿವಾನಗಿರಿ ಮಾಡಿದ ೨೪ ವರ್ಷಗಳ ಕಾಲದಲ್ಲಿ, ರೈತರು ಬಂದವೇಳೆಯೊಳು ಅವರಿಗೆ ಭೇಟಿಕೊಟ್ಟು, ಅವರು ಹೇಳುವದನ್ನೆಲ್ಲ ಸಮಾಧಾನವಾಗಿ ಕೇಳುತಲಿದ್ದರು. ವಿಜಯನಗರ ಸಂಸ್ಥಾನದ ಐಶ್ವರ್ಯಾಭಿವೃದ್ಧಿಗೆ ಇವರೇ ಮುಖ್ಯಕಾರಣರಾಗಿದ್ದರು. ಇಂತವರ ಮರಣವು ಸದರೀ ಸಂಸ್ಥಾನಾಧಿಪತಿಯವರಿಗೆ ಕೇವಲ ನಷ್ಟರೂಪವಾದದ್ದಾಗಿರುತಿದೆ—ಹಿಂದು.

EXTRACTS.

ಈ ಮೈಸೂರು ದೇಶಕ್ಕೆ ಯಾವಾಗ ರೆವಿನ್ಯೂ ಸರ್ವೇಯವರು ಬಂದರೋ ಆಲಾಗಾಯಿತು ರಯಿತಜನರಿಗೆ ದಿನೇದಿನೆ ಚಿತ್ರಹಿಂಸೆಗಳು ಹೆಚ್ಚುತ್ತಲೇ ಅವೆ. ಮೋಜಣೀದಾರರಿಗೂ ಕ್ಲಾಸರಿಗೂ ಫ್ರೂಫ ಪರೀಕ್ಷೆಯವರಿಗೂ ಜವಾಂಬಂದಿಯವರಿಗೂ ಪದೇಪದೆ ದಂಡಗಳು ಲಂಚಗಳು ತೆತ್ತು ತೆತ್ತು ಮನೆಗಳು ಹಾಳು ಮಾಡಿಕೊಂಡದ್ದಾಯಿತು. ಬಾಂದುಗಳು ೪ಮೊಳ ಉದ್ದ ೪ ಮೊಳ ಅಗಲ ೨|| ಮೊಳ ಎತ್ತರ ಸರಿಯಾಗಿ ಇರಬೇಕೆಂದು ತನಿಖೀ ಮಾಡುವ ದಫೇದಾರನಿಗೆ ಲಂಚಗಳು ತೆತ್ತು ಸರಬರಾಯಿ ಮಾಡಿ ಅವನಿಗೆ ತ್ರಾಹಿತ್ರಾಹಿ ಅಂತಾ ಇದ್ದದ್ದಾಯಿತು. ಆಲಾಗಾಯಿತು ಪ್ರತಿವರುಷವೂ ಬಾಂದು ದುರಸ್ತು ಎಂಬ ಮೂಲವ್ಯಾದಿ ರೋಗವು ನಮ್ಮನ್ನ ಪೀಡಿಸುತ್ತಾ ಇವೆ. ಇದಕ್ಕೆ ಔಷಧವೇ ಇಲ್ಲವಾಗಿ, ಥಟ್ಟನೆ ಗಾಯವಿಲ್ಲಾ, ಸುಣ್ಣಗೆ ಬವಿಕಲಿಲ್ಲಾ' ಎಂಬಂತೆ ನಮ್ಮ ಗತಿ ಆಗಿರುತ್ತದೆ. ಯಾವ ಅಧಿಕಾರಿ ಬಂದಾಗ್ಯೂ ಬಾಂದುಗಳು ನಾದುರಸ್ತು ಇವೆ ಅಂತಾ ಬೈದು ಅವಮಾನಪಡಿಸುವರು. ಪ್ಯಾದೆ ರಂಡೀಮಕ್ಕಳಾದ ಗ್ರಾಮನೌಕರರನ್ನ ಬೈದು ಬಡಿದು ಜುಲುಮಾನೆ ವಿಧಿಸಿ ಫಜೀತಿ ಮಾಡಿಸುವರು. ಇಷ್ಟಾದಾಗ್ಯೂ ಈ ಬಾಂದುಗಳ ವಿಚಾರವಲ್ಲಿ ಒಂದು ಆಕ್ಟ್ ಇಲ್ಲಾ ರೂಲ್ಸ್ ಇಲ್ಲಾ, ಬಾಯಿ ಸತ್ತ ಬಡ ರಯತರು ವರುಷಕ್ಕೆ ೨-೩ಸಲಾ ಅವನಿಯ ಬಾಂದುಗಳಿಗೆ ಮಣ್ಣು ಹೊತ್ತು ಹೊತ್ತು ಸಾಯುವದೂ, ಫ್ರುಂಡುಗಾರರು ಸರಕಾರದ ನೌಕರರ ಕಡೆಯವರು ಸಹಾ ಸ್ವಸ್ಥವಾಗಿ ಮನೆಯಲ್ಲಿಯೇ ಇರುವದೂ ಸಂಪ್ರದಾಯವೇ ಆಗಿ ಅದೆ. ಬಾಂದುದುರಸ್ತೆಂಬ ಈ ವಿಟ್ಟಿ ಕಾಮಗಾರಿಯು ಸ್ವಾಗೂ ತಪ್ಪಿದ್ದಲ್ಲಾ ಎಂಬದಾಗಿ ಖಂಡಿತವಾಗಿ ತಿಳಕೊಂಡು ರೈತರಾದರೂ ಭದ್ರವಾಗಿ ಹತ್ತು ವರುಷ ಕಾಲವಿರುವಂತೆ ಮನಃ ಪೂರ್ವಕವಾಗಿ ಕೆಲಸ ಮಾಡದೆ ಯಾವಾಗ ಜೋರು ಬರಾತ ಬರುತ್ತದೋ ಆವಾಗ ಒಣಮಣ್ಣು ಬಾಂದುಗಳ ಮೇಲೆ ಮೆಲ್ಲಗೆ ಗೋಪುರದಂತೆ ಹಾಕಿ ಕಾಟ ಕಳಕೊಂಡು ಬರುವರು. ಮತ್ತು ಎಂಟುದಿನಗಳ ಒಳಗಾಗಿಯೇ ಘಾಳ ಮಳೆ ದನಗಳು ವಗೈರೆಯಿಂದ ಕೆಡುಕಾಗಿ ಬಹು ನಾಲಾಯಿಕ್ ಆಗುವವು. ಆಗ ಮೇಲಧಿಕಾರಿಗಳು ಬಂದು ನೋಡಿ ಬಡಗ್ರಾಮ ನೌಕರರ ಮೇಲೆ ತಮ್ಮ ಆಗ್ರಹಾಗ್ನಿಯನ್ನು ಸುರಿಯುವರು. ಸರಕಾರದವರಾದಾಗ್ಯೂ ಈಬಾಂದುಗಳು ಶಾಶ್ವತವಾಗಿರತಕ್ಕವು, ಭದ್ರವಾಗಿ ಮಾಡಿಬಿಟ್ಟು ಸ್ವಸ್ಥವಾಗಿ ಇರ್ರೀ ಎಂತ ರೈತರಿಗೆ ತಿಳಿಯಪಡಿಸಿ ಮತ್ತು ಈಗ ಇರುವ ಬಹುದೊಡ್ಡದಾದ ಬಾಂಧಿನ ಆಕಾರವನ್ನು ತಗ್ಗಿಸಿ ಆರು ಮೊಳ ಉದ್ದ ಎರಡು ಮೊಳ ಅಗಲ ಎರಡು ಮೊಳ ಎತ್ತರ ಈರೀತಿ ನಿರ್ಣಯಿಸಿ ಇದನ್ನು ಮಣ್ಣೂ ನೀರೂ ಸಹ ಕಲೆಸಿ ಚೆನ್ನಾಗಿ ತುಳದು ಬಾಂದು ಕಟ್ಟಬೇಕೆಂದು ಸಖ್ತ ಹುಕುಮು ಮಾಡಿಸಿ ಒಂದು ವರುಷ ರೈತರಿಗೆ ಬಹಳ ಹಿಂಸೆಯನ್ನು ಕೊಟ್ಟಾಗ್ಯೂ ಚಿಂತೆ ಇಲ್ಲ. ಹತ್ತು ವರುಷಗಳ ಕಾಲ ಸುರಕ್ಷಿತರಾಗಿ ಇದ್ದಾರು. ಹಾಗೂ ಇಲ್ಲವಲ್ಲಾ. ಅಥವಾ ಯಾವ ರೈತನು ಬಾಂದು ದುರಸ್ತಾಗಿ ಕಟ್ಟಲಿಲ್ಲವೊ ಅವನಿಗೆ ಬಾಂದು ೧ಕ್ಕೆ ಸಾಲ್ಯಾಣೆ ಪ್ರಕಾರ ದಂಡ ವಿಧಿಸುತ್ತಾ ಬಂದಲ್ಲಿ ಜನರಿಗೆಲ್ಲಾ ಭಯ ಉಂಟಾಗಿ ತಮ್ಮ ತಮ್ಮ ಬಾಂದುಗಳನ್ನೂ ಅದನಿಯ ಬಾಂದುಗಳನ್ನೂ ಸಹ ತಮ್ಮ ಮನೆಯ ಕೆಲಸದಂತೆ ಮನಃ ಪೂರ್ವಕವಾಗಿ ಮಾಡಿ ತೀರಿಸುವರು, ಹಾಗೂ ಇಲ್ಲವಲ್ಲಾ. ಈಗಿನ ಕಿರಿಕಿರಿಯ ಬಾಳನ್ನು ಯಾರು ಅನುಭವಿಸ್ಯಾರು? ಮೂಲವ್ಯಾಧಿಯವರು ತಟ್ಟನೆ ಸಾಯದೆ ಘುಟ್ಟಿಯಾಗಿ ಬಾಳದೇಕ್ಯಾಗಿರುವರೋ ಆರೀತಿಯಾಗಿದೆ. ದೇವರಾದರೂ ಕಣ್ಣು ತೆರದು ನೋಡವನು. ದೊಡ್ಡ ದೊಡ್ಡ ಅಧಿಕಾರಿಗಳು ತಮ್ಮ ಸುಖಲೋಕ ಸುಖವೆಂದು ತಿಳದು ನಿತ್ಯೋತ್ಸವದಲ್ಲಿ ಮುಳಗಿರುತ್ತಾರೆ. ಅಯ್ಯೋ! ಇದೇನು ಅನ್ಯಾಯವೋ, ಶಿವ ಶಿವ! ಹೀಗಿರಲಾಗಿ ಈ ಸಂವತ್ಸರ ಪ್ರತಿ ಸರ್ವೆ ನಂಬರಿನ ಬಾಂದಿನ ಮೇಲೆ ಒಂದು ಕಲ್ಲು ಹೂಣಿ ಅದರ ಮೇಲೆ ನಂಬರು ಬರೆಯಬೇಕೆಂದು ಹುಕುಂ ಆಗಿ ಬಹು ತರದೂದಿನಿಂದ ಕೆಲಸ ನಡಿಯುತ್ತಾ ಅವೆ. ಎರಡರಿ ಮೂರಡಿ ಉದ್ದ ಅನೇಕ ಕಲ್ಲುಗಳನ್ನು ರೈತರು ಸಂಪಾದಿಸಿ ತಂದು ಅಥವಾ ಕೊಂಡುತಂದು ಹಾಕುತ್ತಾ ಇದ್ದಾರೆ. ಸರಕಾರದವರು ಒಂದು ಮಾತು ಸುಲಭವಾಗಿ ಅಪ್ಪಣೆ ಮಾಡಿಸಿದ್ದು ರೈತರಿಗೆ ಪ್ರಾಣ ಸಂಕಟಕ್ಕೆ ಕಾರಣವಾಯಿತು. ಇನ್ನು ಮುಂದೆ ಇನ್ನೇನು ವಿಚಿತ್ರ ಹುಕುಮುಗಳು ಹೊರಡುವವೊ? 'ಬೆಕ್ಕಿಗೆ ಚೆಲ್ಲಾಟ ಇಲಿಗೆ ಪ್ರಾಣ ಸಂಕಟ' ಎಂಬಂತೆ ಆಗಿರುತದೆ. ಪೂರ್ವಕಾಲದಲ್ಲಿ ಮೈಸೂರು ಪ್ರಜೆಗಳಿಗೆ ಬಹಳ ಹಿಂಸೆಗಳಿತ್ತೆಂದು ಜನರು ಅನ್ನುತ್ತಿದ್ದರು, ಈಗ ಪ್ರತ್ಯಕ್ಷವಾಗಿ ಅನುಭವದಲ್ಲಿಯೇ ಬಂತು ಎಂಥಾ ಹಿಂಸೆಗಳಾದರೂ ಬರಲೀ ಅದಕ್ಕೆ ಗೊತ್ತು ಮಾಡಿಸಿ ಜಾರೀಯಲ್ಲಿ ಇಂದದ್ದೇ ಆದರೆ ಕೆಲಸವು ಬಹುಜಾಗ್ರತೆಯಿಂದ ನಡೆದು ಜನಗಳಿಗೆ ಸಂಕಟವಿಲ್ಲದೆ ಬೇಗ ಪೂರೈಸೀತು. ರೈತನಾಗಲೀ ಗ್ರಾಮನೌಕರನಾಗಲಿ ಶೇಕದಾರನಾಗಲೀ ಯಾರಿಂದ ತಪ್ಪು ನಡದರೆ ಅದರಿಗೆ ತಕ್ಕ ದಂಡ ವಿಧಿಸಿ ಶಿಕ್ಷಿಸುತ್ತಾ ಬಂದಲ್ಲಿ ಎಷ್ಟು ಹಿಂಸೆಗಳ ಕೆಲಸವಾದಾಗ್ಯೂ ನ್ಯಾಯವಾಗಿಯೇ ಇದ್ದೀತು, ಕಾಯಿದೆ ಇಲ್ಲದ ರಾಜ್ಯದಲ್ಲಿ ರೈತರು ಬಾಳುವದು ಕಠಿಣವು. ಸಾಧುಗಳಾದ ದೊಡ್ಡ ಸಂಸಾರಿ ರೈತರಿಗೆ ದುಗುಣೀ ಕಷ್ಟವೂ ಪೋಕರೀ ಭೂತ ಜನರಿಗೆ ಸೌಖ್ಯವೂ, ಪೇಧಿಸಿ ಸಂಬಿಗೊಂವಿಗಳ ಸ್ಲಿಬವರನ್ನು ಸುಲುಕೊಳ್ಳಲು ಸಣ್ಣನೌಕರರಿಗೆ ಅತ್ಯುತ್ತಮ ಸಮಯವೂ ಆಗಿದೆ. ಇದನ್ನೆಲ್ಲ ದೇವರು ಪಾರುಮಾಡಿಸ ಬೇಕೇ ಹೊರತು ಮನುಷ್ಯ ಯತ್ನವೇನುಂಟು? ಇನ್ನು ಕೆಲಬಗೆಸುಕಟಗಳುಂಟು. ಜೀರೆಅರಿಕೆಮಾಡುವೆನುಸ್ವಾಮಿ—ಸು.

ಬಂಗಾಳಿ ಇಲಾಖೆಯ ದಕ್ಷಿಣ ಭಾಗದ ಪೋಲೀಸ್ ಖಾತೆಯ ಸೂಪರಿಂಟೆಂಡೆಂಟರುಗಳ ಬಳಿಗೆ ಅತಿಗುಪ್ತವಾದ ಒಂದು ಸರಕಿಲರ್ ಬಂದಿರುವಂತೆ ತಿಳಿಯಬರುತ್ತದೆ. ಅದರ ಮುಖ್ಯ ತಾತ್ಪರ್ಯವು ಇಲ್ಲಿನ ಪ್ರಜೆಯ ಹಿಂದೆ ಗೂಢಚಾರರನ್ನಿಟ್ಟು ಅವರ ಬಗ್ಗೆ ಸರಕಾರಕ್ಕೆ ಅಂತರಂಗದಲ್ಲಿ ವರ್ತಮಾನ ದೊರಕಿಸಿ ಕೊಡಬೇಕೆಂಬದಾಗಿರುತ್ತದೆ. ಗುಪ್ತವಾದ ಈ ಸರ್ಕಿಲರು ಇಂತವರಿಂದಲೇ ಕೊಡಲ್ಪಟ್ಟಿತೆಂಬದು ನಿಶ್ಚಯದ ಭರವಸೆಯೊಡನೆ ಊಹಿಸಕೂಡದಾದ್ದರೂ, ಅದಕ್ಕೆ ಈಗಿನ ವೈಸ್‌ರಾಯಿಯವರಾದ ಲಾರ್ಡ ದಫರಿನ್ ಪ್ರಭುಗಳ ಅನುಮತಿ ಇಲ್ಲದೆ ಇರುತ್ತದೆಂತ ನಾವು ಎಣಿಸಲಾರೆವು. ವರ್ತಮಾನ ಪತ್ರಗಳ ಸ್ವಾತಂತ್ರ್ಯವು ಕಸುಕೊಳ್ಳುವ ಕಾಯಿದೆಯನ್ನು ಜಾರಿಯಲ್ಲಿ ತರಬೇಕೆಂತ ಆಲೋಚಿಸುತ್ತಿರುವಾಗ ಅವರ ಬದಲು ಈ ಯುಕ್ತಿಯನ್ನು ಹುಡುಕಿ ತೆಗದರೆಂತ ಜನರು ಹೇಳದೆ ಇರಲಾಗದು.

"ಈ ಸರ್ಕಿಲರಿನ ಸಂಗತಿಯಾದರೋ ತಾನು ಕಳ್ಳನಾದ ಮೇಲೆ ಪರರನ್ನು ನಂಬದೆ ಇರುವದು ಸಹಜವಾದದ್ದೇ ಸರಿ, ಎಂಬುವ ಪ್ರಕಾರ ವಿರುತ್ತದೆ. ಗೂಢಚಾರರನ್ನಿಟ್ಟು ನಮ್ಮಂತಾ ರಾಜನಿಷ್ಠರಾದ ಜನರ ಗುಟ್ಟನ್ನು ತಿಳಕೊಳ್ಳಲಿಕ್ಕೆ ಪ್ರಯತ್ನಿಸುವದು ಎಷ್ಟು ಹೀನವಾದ ಸಂಗತಿಯು! ನಾವೇನು ರಾಜ ದ್ರೋಹಿಗಳೋ, ವಿಶ್ವಾಸ ಘಾತುಕರೋ? ಅಥವಾ ಮೊದಲಾದವರಂತೆ ಕಾಡು ಜನರೋ? ಯಾ ಹೊಸದಾಗಿ ಪರರಾಜ್ಯ ಸತ್ತೆಯಲ್ಲಿದ್ದು ಅದನ್ನ ತಾಳಲಾರದೆ ಒಂದೇ ಆವರ್ತ ದ್ರೋಹ ಮಾಡಬಯಸ್ಯಾರುತ್ತಾಗುವಂಥ ವಿಚಾರ ಹೀನರಾದ ತುಂಟ ಜನರೋ? ಇದರೊಳಗಿನ ಒಂದು ವಿಶೇಷಣಕ್ಕಾದರೂ ನಾವು ಪಾತ್ರರಾದವರಲ್ಲವೆಂತ ಪೂರ್ಣವಾಗಿ ಗೊತ್ತಿರುತ್ತ ನಮ್ಮನ್ನು ಈರೀತಿ ಅವಿಸಂಬಿಕೆಯಿಂದ ನಡಿಸುವದು ಉಚಿತವೆ! ನಮ್ಮನ್ನು ಸುಖಾವಸ್ಥೆಯಲ್ಲಿಡುವ ಬಾರವೆಲ್ಲ ಈಗಿನರಾಜ್ಯ ಚಕ್ರಚಾಲಕರಾದ ಇಂಗ್ಲಿಷನರಿಗೆ ಸೇರಿರುವಾಗ್ಯೆ ಅವರು ನಮ್ಮನ್ನು ವಿಚಾರ ಶೂನ್ಯರೆಂಬ ತೆಯೂ ರಾಜದ್ರೋಹಿಗಳೆಂಬುದೆಯೂ ತಿಳಕೊಳ್ಳುವದು ನಮ್ಮ ಎಷ್ಟು ದುರಾದೃಷ್ಟವು. ನಾವೇನು ನಮ್ಮ ಈಗಿನ ರಾಜ್ಯಾಡಳತೆಯಲ್ಲಿ ಅತ್ಯಂತ ಸುಖವನ್ನು ಪಡೋಗಿಸುತ್ತೇವೆಂತ ಬಡಿವಾರ ಮಾಡುವದಿಲ್ಲ. ಹಾಗೆಯೇ ಅತಿನಿಕೃಷ್ಟವಾದ ದುಃಖವನ್ನನುಭವಿಸುತ್ತೇವೆಂತಲೂ, ವಿಸ್ಮೃತರಾಗಿರುವದಿಲ್ಲ. ಈಗ ನಕಾಲಕ್ಕೆ ಸರಿಯಾದ ರಾಜ್ಯಾಡಳತೆಯಲ್ಲಿ ರುತ್ತೇವೆಂತ ಒಪ್ಪಿಕೊಳ್ಳುತ ನಮಗೆ ಅತ್ಯಾವಶ್ಯಕವಾಗಿರುವ ಸಂಗತಿಗಳಿಗಾಗಿ ಪದೇಪದೇ ಬೇಡಿಕೊಳ್ಳುತ್ತೇವಷ್ಟೆ, ಎಂಬದಾಗಿ ಸಾವಿರಸಾರಿ ಬಿನ್ನೈಸುತ್ತೇವೆ.

ಈ ಬಿನ್ನಹಗಳಿಗೆ ಕಿವಿಕೊಡದೆ ಇದ್ದದ್ದು ನಮ್ಮ ರಾಜ್ಯಕರ್ತರ ಧರ್ಮಕ್ಕೆ ಸರಿಯಾದದ್ದೋ ಇಲ್ಲವೊ ಅವರೇ ಬಲ್ಲರು. ಆದರೆ "ತನ್ನಿಂದ ಕೂಡದು," "ತಾವು ಮಾಡಬಿಡ್ಡುವದಿಲ್ಲ" ವಂತ ಸ್ಪಷ್ಟವಾಗಿ ಏಕವಾಕ್ಯವನ್ನುಸುರುವ ಬದಲು, ಪರರನ್ನು ಕಳ್ಳರಾಗಿ ಮಾಡಿ ಅವಿಸಂಬಿಕೆಯಿಂದ ವರ್ತಿಸುವದು ರಾಜ್ಯಕರ್ತರ ಕೀರ್ತಿಗೆ ಅಸಹ್ಯಕರವಾದದ್ದು. ಇಷ್ಟವಿದ್ದರೆ ನಮ್ಮ ಅರಿಕೆಗಳನ್ನು ತಳ್ಳಿ ಬಿಡಬಹುದು; ಆದರೆ ಅರಿಕೆ ಮಾಡಿಕೊಳ್ಳದ ಹಾಗೆ ಬಾಯಿಬಿಗಿಯುವದು ಸರಿಯಲ್ಲದ್ದು. ಈಗಿನ ಈ ಸರ್ಕಲರನ್ನು ಕುರಿತು ವಿಚಾರಮಾಡಿದರೆ ಬಾಯಿಬಿಗಿಯುವದಾದರೂ ಒಂದುವೇಳೆ ಸಮ್ಮತವಾದೀತು. ಆದರೆ ರಾಜನಿಷ್ಠರಾದ ನಮ್ಮನ್ನು, ಬರೇ ಸುಖ ದುಃಖಗಳನ್ನು ಬಹಿರಂಗವಾಗಿ ಅರುಹಿಕೊಳ್ಳಲು ಪ್ರಯತ್ನಿಸುತ್ತೇವೆಂಬ ಒಂದು ಕಾರಣದಿಂದಲೇ ಕಳ್ಳರಂತೆ ಅವಿಸಂಬಿಕೆ ನಡಸುವದು ರಾಜನೀತಿಗೆ ಎಷ್ಟು ವಿರೋಧವಾದ ಸಂಗತಿಯಾಗಿದೆ. ಇದು ಕುರಿತು ನಮ್ಮ ದಫರಿನ್ ಪ್ರಭುಗಳ ರಾಜ್ಯಾಡಳತೆಯಲ್ಲಿ ಪ್ರಮುಖರಾದ ಪಂಡಿತರಾದರೂ ವಿಚಾರ ಮಾಡಿ ನೋಡಲಿ. ಇಷ್ಟೆಲ್ಲ ಬರೆಯಲಿಕ್ಕೆ ನಮಗಾಸ್ಪದ ಕೊಟ್ಟಂತಾ ಆ ಗುಪ್ತ ಸರ್ಕಲರ್ ಯಾವದು? ಪೋಲೀಸ್ ಖಾತೆಯವರ ಮುಖಾಂತರ ದೊರಕತಕ್ಕ ವರ್ತಮಾನವು ಸರಿಯಾಗಿಯೂ ಸ್ವಪೂರ್ಣವಾಗಿಯೂ ಇರುವದಿಲ್ಲವೆಂಬ ಅಭಿಪ್ರಾಯವನ್ನು ಸೂಚಿಸಿ, ಆ ಮೇಲೆ, ಪ್ರತಿಒಬ್ಬ ಪೋಲೀಸ ಸೂಪರಿಂಟೆಂಡೆಂಟನು ಸ್ವತಃ ತಾನೇ ಒಂದು ಡೈರಿ ಬರೆದಿಟ್ಟು ಅದನ್ನು ಪ್ರತಿ ಶನಿವಾರ ತಪ್ಪದೆ ಹುಜೂರಿಗೆ ರವಾನಿಸಬೇಕೆಂಬ ಹುಕುಂ ಈ ಸರಕಿಲರಿನಲ್ಲಿರುತ್ತದೆ. ಯಾವ ಯಾವ ವಿಷಯಗಳ ಮೇಲ ನಮೂದಿತಿಮಾಡಿ ಕೊಳ್ಳತಕ್ಕದ್ದೋ ಆ ವಿಷಯಗಳು ಸಹಾ ಅದರಲ್ಲಿ ತೋರಿಸಲ್ಪಟ್ಟಿರುತ್ತವೆ —ಅವು ಯಾವವಂದರೆ:

(೧) ರಾಜಕೀಯ ಕ್ಷೋಭೆ, ಜನರ ಸಮಾಜಗಳ ಪ್ರಮುಖರು, ಮತ್ತು ರಾಜಕೀಯ ಸಂಗತಿಗಳ ಮೇಲೆ ಪ್ರಸಿದ್ಧಪಡಿಸಲ್ಪಡುವ ಲೇಖನಗಳು. (೨) ಧರ್ಮಗಳು ಮತ್ತು ಬೇರೆ ಬೇರೆ ಸಂಘಗಳು, ರಾಜಕೀಯ ಕ್ಷೋಭೆಗೆ ಸಂಬಂಧ ಉತ್ಸವಗಳು ವಗೈರೆ (೩) ಗೂಢಚಾರರಾಗಿ ಸಂಚರಿಸುವಂಥ ಪರದೇಶಸ್ಥರು ಮತ್ತು ತುಂಟರು. (೪) ಜನರ ಮನಸ್ಸಿನ ಸಮಾಧಾನವನ್ನು ಕೆಡಿಸುವಂತಾ ಲೇಖನಗಳು, ಅಭಿಪ್ರಾಯಗಳು ಚರ್ಚೆಗಳು,(೫) ಧರ್ಮ ಸಂಬಂಧವಾಗಿ ಆಗುವ, ಗಲಾಟೆಗಳು ಮತ್ತು ಸರಕಾರದವರು ನಡಿಸುವ, ಕೃತ್ಯಗಳ ಮೇಲೆ ಆಕ್ಷೇಪಣೆ. (೬) ಶಸ್ತ್ರಾಸ್ತ್ರಗಳನ್ನು ಗುಪ್ತವಾಗಿ ಸಂಗ್ರಹಿಸಿಡುವದು ಮತ್ತು ಅವುಗಳನ್ನು ಗುಪ್ತವಾಗಿ ಉಪಯೋಗಿಸುವದು. (೭)ಸ್ವತಂತ್ರವಾದ ಮತ್ತು ಪರತಂತ್ರವಾದ ಸಂಸ್ಥಾನಗಳು,ಅಲ್ಲಿನ ಜನರ ವಿಚಾರಗಳು(೮) ರಾಜಕೀಯ ಕ್ಷೋಭೆಗಾಗಿ ಬಹಿರಂಗವಾಗಿಯೂ ಗುಪ್ತವಾಗಿಯೂ ಸ್ಥಾಪಿಸಲ್ಪಟ್ಟ ಸಭೆಗಳು, ಅವುಗಳ ರಚನೆ, ಉದ್ದೇಶ ಮತ್ತು ಅವುಗಳು ನಡಿಸುವ ಕೃತ್ಯಗಳು, (೯) ರಾಜಕೀಯ ಸಭೆಗಳನ್ನು ಅಥವಾ ಜನರ ಮಹಾ ಸಭೆಯನ್ನು ಕೂಡಿಸುವವರು,ಅಂತಾ ಸಭೆಗಳಿಂದುಂಟಾಗುವ ಪರಿಣಾಮ, ಅವುಗಳ ಕುರಿತು ಜನರ ಅಭಿಪ್ರಾಯ, ಮತ್ತು ದಂಗೆ ವಗೈರೆ ನಡೆಯುವ ಸಂಭವ-(೧೦) ಇಂಗ್ಲಿಷ್ ಸರಕಾರದವರಂತೆಯೇ ಏತದ್ದೇಶಿಯ ಸಂಸ್ಥಾನಿಕರ ಸೈನ್ಯಕ್ಕೆ ಸೇರಿಸಿಕೊಳ್ಳಬಹುದಾದ ಜನರು.

ಈ ಮೇಲಿನ ವಿಷಯಗಳ ಮೇಲೆ ಪ್ರತಿ ವಾರ ದಿನಚರಿಕೆಯೊಂದು ಸಲ ಅಂತರಂಗದಿಂದ ಪತ್ರ ಮಾಡಿ ತಿಳಿಸತಕ್ಕದ್ದೆಂತ ಬರೆದಿರುವ ಆ ಗೂಢ ಹುಕುಮಿನ ಅರ್ಥವೇನು? ನಮ್ಮ ರಾಜಕೀಯ ಸಭೆಗಳು ದೊಡ್ಡ ದೊಡ್ಡ ಪಟ್ಟಣಗಳಲ್ಲಿ ಬಹಿರಂಗವಾಗಿರತಕ್ಕವುಗಳು; ಅವಕ್ಕೆ ಸೇರಿದವರೆಲ್ಲರು ವಿದ್ಯಾವಂತರಾದ ವಿಚಾರಪರರಾಗಿರುತ್ತಾರೆ. ಅವರು ನಡೆಸುವ ಕೆಲಸಗಳ ಸ್ವರೂಪವು ಬಹಿರಂಗದಿಂದ ಪ್ರಕಟಪಡಿಸಲ್ಪಡುತ್ತದೆ. ಹೀಗಿರುತ ಯಾವಕಾರಣ ಈ ಸರಿಕ್ಯುಲರ್ ಕೊಡಲಾಯಿತೆಂಬದನ್ನು ನಿಶ್ಚೈಸುವದು ಮಾನವರಾದವರಿಂದ ಹೇಳಲಸಾಧ್ಯವು. ಚಿಕ್ಕ ಚಿಕ್ಕ ಊರುಗಳಲ್ಲಿ ಹಳ್ಳಿಗಳಲ್ಲಿ ಇಂತಾ ಸಭೆಗಳಿರುತ್ತವೆಂತ ಊಹಿಸಲಿಕ್ಕೂ ಕಾರಣವಿರುವದಿಲ್ಲ, ಬರೇ ನಿಷ್ಕಾರಣವಾದ ಸಂಶಯದಿಂದಲೇ ಈ ಸರ್ಕಲರ್ ಕೊಟ್ಟಿರುತ್ತದೆಂತ ಹೇಳಬೇಕಾಗಿದೆ. ಆದರೆ ಇದರಿಂದ ಜನರಿಗುಂಟಾಗ ಬಹುದಾದ ಕೇಡು ಲಕ್ಷ್ಯಿಸಿ ಇವುಗಳ ವಿಚಾರ ಆ ಸರ್ಕಲರನ್ನು ಕೊಟ್ಟವರು ಮಾಡಲಿಲ್ಲವಂತೆ ತೋರುತ್ತದೆ. ಈ ಸರ್ಕಲರನ್ನು ಜಾರೀಯಲ್ಲಿ ತರುವಾತೂ ನರು ಪೋಲೀಸು ಖಾತೆಯವರೆ; ರಿಪೋರ್ಟ ಮಾಡುವವರು ಸು ಪರಿಂಟೆಂಡೆಂಟರಾದರೂ,ಅವರಿಗೆ ವರ್ದಿ ಹೇಳುವವರು ಅವರ ಕೈಕೆಳಗಿನ ಉದ್ಯೋಗಸ್ಥರೇ ಇಂಥವರಿಗೆ ಇಂತಾ ಅಧಿಕಾರ ಬಂದರೆ ಮತ್ತೇನು ಹೇಳಬೇಕು. ಪೋಲೀಸನವರೆಂದರೆ ಜನರು ಹೆದರುತ್ತಾರೆ. ಅವರು ಪರರ ಸ್ಥಿತಿಗತಿ ಮರ್ಯಾದೆ ಇತ್ಯಾದಿಗಳನ್ನು ತಿಲಾಂಶವಾದರೂ ವಿಚಾರ ಮಾಡುವದಿಲ್ಲ. ತಮ್ಮ "ವಿಶ್ವಾಸ" ಯೋಗ್ಯ ಅಥವಾ ಅಯೋಗ್ಯವಾದ ಯಾವದಾದರೊಂದು ರೀತಿಯಿಂದ ಬನಾಯಿಸಿ ಅದರಲ್ಲೇ ಆನಂದ ಮತ್ತು ಪ್ರಯೋಜನ ಪಡುವದೇ ತಮ್ಮ ಕರ್ತವ್ಯವೆಂತ ತಿಳುಕೊಳ್ಳುತ್ತಾರೆ. ಇಂತವರ ಕೈಯಲ್ಲಿ ಈ ಹೊಸಅಧಿಕಾರಸಿಕ್ಕದಮೇಲೆ ಅವರು ಅದನ್ನು ದುರುಪಯೋಗಪಡಿಸದೆ ಇರಲಾರರೆಂಬದಕ್ಕೇನು ಭರವಸೆಯುಂಟು? ಒಟ್ಟಿನ ಮೇಲೆ ನೋಡಲು, ಈಪ್ರಕಾರ ನಮ್ಮ ರಾಜ್ಯಕರ್ತರು ನಮ್ಮನ್ನು ಅವಿಸಂಬಿಕೆಯಿಂದ ನೋಡುವದು ನಿರಾಧಾರವು, ಹಾಗೆಯೇ ಇಷ್ಟು ವರುಷ ರಾಜ್ಯವನ್ನಾಳಿ ಈಗ ಏಕಾಏಕಿ ನಮ್ಮ ಮಾನಮರ್ಯಾದೆಯನ್ನೆಲ್ಲ ಪೋಲೀಸ್ ಇಲಾಖೆಯವರ ವಶಮಾಡಿದ್ದು ಅನುಚಿತವು. ಈ ಸಂಗತಿಗಳನ್ನೆಲ್ಲ ಗವರ್ನಮೆಂಟಿನವರು ವಿಚಾರಿಸಿ ಈ ಸರ್ಕಲರನ್ನು ರದ್ದು ಪಡಿಸ್ಯಾರೆಂತ ನಂಬುತ್ತೇವೆ—ಕ. ಸು.

Bangalore:—Printed and published for the Proprietor at the Karnatic Press.—1888.

ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA.

ಪ್ರತಿ ಸೋಮವಾರ ಪ್ರಾತಃಕಾಲದಲ್ಲಿ ಪ್ರಕಟಿಸಲ್ಪಡುವದು.

Published every Monday Morning.

ಪ್ರಶಾಮವಿವಿಧವೃತ್ತ್ಯನಗನಾರ್ಥ ಕರ್ಣಾಟಕಪ್ರಕಾಶನಪರಾಭಿಧಾವೃತ್ತಿತಸಾಹಿತೀಕಲಿತಾ ॥ ವ್ಯಗಾಂಕಹಿತವಾಸರನಿಹಿತಮುದ್ರಣಾಸಜ್ಜಸ್ವೈರ್ದ್ಧಿಕಾಸುಪರಿಕೃತಾಬಿಕತಿಮಾಸನುಸಂಚುರ್ಣ

Vol. XV.] BANGALORE.—MONDAY, MARCH 19, 1888. [No. 11.

[ಸಂಪುಟ ೧೫.] ಬೆಂಗಳೂರು:—ಸೆ ೧೮೮೮ನೇ ಇಸವಿ ಮಾರ್ಚಿ ೧೯ನೇ ತಾರೀಖ್ ಸೋಮವಾರ. [ಸಂಖ್ಯೆ ೧೧.

ಕರ್ಣಾಟಕ ಪ್ರಕಾಶಿಕಾ

ಪತ್ರಿಕೆಯ ಚಂದಾ ದರಗಳು,
೧೮೮೮ನೇ ಇಸವಿ ಜನವರಿಯಿಂದಾಯಿತು
ಕಡಮೆಮಾಡಲ್ಪಟ್ಟಿರುತ್ತದೆ.

—:o:—

ಈ ಪತ್ರಿಕೆಯ ಚಂದಾದಾರರಲ್ಲಿಕೆ ಅನೇಕರ ಅಪೇಕ್ಷೆಯನ್ನು ನೆರವೇರಿಸುವ ಉದ್ದೇಶದೊಡನೆಯೂ, ಪರಿಮಿತವಾದ ಆಯತಿಯುಳ್ಳವರಿಗೆಲ್ಲ ಈ ಪತ್ರಿಕೆಯು ಸುಲಭವಾಗಿ ಲಭಿಸುವಂತಿರಬೇಕೆಂಬ ಅಭಿಪ್ರಾಯದಿಂದಲೂ ಇದರ ಚಂದಾದರವನ್ನು ಇದರಡಿಕಂಡಂತೆ ಕಡಮೆಮಾಡಿರುತ್ತೇವೆಂತೆಂದರೆ:—

ಇಂಗ್ಲಿಷ್ ಮತ್ತು ಕನ್ನಡಭಾಗಗಳಿಗೆ.

	ಸ್ಥಳದವರಿಗೆ	ಪರಸ್ಥಳದವರಿಗೆ.
12 ತಿಂಗಳಿಗೆ	8—0—0	9—0—0
6 ,,	4—0—0	4—8—0
3 ,,	2—8—0	2—8—0

ಇಂಗ್ಲಿಷ್ ಅಥವಾ ಕನ್ನಡಭಾಗಗಳಿಗೆ.

	ಸ್ಥಳದವರಿಗೆ	ಪರಸ್ಥಳದವರಿಗೆ
12 ತಿಂಗಳಿಗೆ	4—0—0	5—0—0
6 ,,	2—0—0	2—8—0
3 ,,	1—4—0	1—8—0

ಷರಾ—ಅಂಚೆ ಮುತ್ಸದ್ದಿಗಳು, ಪೋಲೀಸ್ ಮತ್ತು ತಾಲೂಕ್ ಸ್ಕೂಲ್‌ಮಾಸ್ತರುಗಳು, ಶ್ಯಾನಭೋಗರು, ಪಟೇಲರು, ವಿದ್ಯಾರ್ಥಿಗಳು, ಇವರಿಗೆಲ್ಲ ಈ ಪತ್ರಿಕೆಯು ಮೇಲ್ಕಂಡ ಚಂದಾದರಕ್ಕೆ ಕೊಡಲ್ಪಡುವದು. ಅತ್ಯಾವಶ್ಯಕವೊಬ್ಬನಿಗೆ ಬಾರದ ದರಖಾಸ್ತುಗಳಿಗೆ ಸುತರಾಂ ನಿಗೆಯಿಡಲ್ಪಡಲಾರದು. ಚಂದಾದಾರರು ಇಂಗ್ಲಿಷ್ ಭಾಗವನ್ನಾಗಲಿ ಕನ್ನಡಭಾಗವನ್ನಾಗಲಿ ಅಥವಾ ಎರಡನ್ನಾಗಲಿ ತೆಗೆದುಕೊಳ್ಳಬಹುದು. ಚಂದಾಹಣವನ್ನು ಮುಂಗಡವಾಗಿಯೇ ಸಲ್ಲಿಸತಕ್ಕದ್ದು. ಮೂರುತಿಂಗಳಿಗಿಂತ ಕಡಮೆಯಾಗಿ ಚಂದಾ ಮೊಬಲಗು ಅಂಗೀಕರಿಸಲ್ಪಡಲಾರದು.

ನೋಟುಗಳು ರವಾನಿಸತಕ್ಕವರು ನೋಟಿನ ಅರ್ಧನೋಟು ಕಳುಹಿಸಿ ಅದು ತಲುಪಿದುದಕ್ಕೆ ನಮ್ಮ ಕಾಗದವು ಬಂದ ಕೂಡಲೇ ಬಾಕೀ ಅರ್ಧ ನೋಟನ್ನು ರವಾನಿಸತಕ್ಕದ್ದು. ಲೋಕಲ್‌ಗಳು ಕಳುಹಿಸತಕ್ಕವರು ರೂಪಾಯಿ ಒಂದಕ್ಕೆ ಒಂದಾಣೆಯಂತೆ ಡಿಸ್‌ಕೌಂಟ್ ಸಹ ಸೇರಿಸಿ ಕಳುಹಿಸತಕ್ಕದ್ದು. ಅರ್ಗೆನೋಟು ಬಾಕ್ಸ್ ಕ್ರಯದ ಲೋಕಲ್‌ಗಳನ್ನು ಕಳುಹಿಸಕೂಡದು. ಡಿಸ್‌ಕೌಂಟ್ ಇಲ್ಲದೆ ಕಳುಹಿಸಲ್ಪಡುವ ಮೊಬಲಗಿನಲ್ಲಿ ಅದು ಮಜಾಮಾಡಲ್ಪಟ್ಟು ಮಿಕ್ಕ ಹಣವು ಲೆಕ್ಕಕ್ಕೆ ದಾಖಲ್ಮಾಡಿಕೊಳ್ಳಲ್ಪಡುವದು

ಪ್ರಕಟನೆಯ ರಿವಾಜ್.

———

ಮೊದಲನೆಸಾರಿಗೆ ಪಂಕ್ತಿ ಒಂದಕ್ಕೆ ೦—೨—೦

ಎರಡನೆಯದಕ್ಕೆ ಪಂಕ್ತಿ ಒಂದಕ್ಕೆ ೦—೧—೦

ಷರಾ—ಎರಡಾವರ್ತಿಗಿಂತ ಹೆಚ್ಚಿಯಾಗಿ ಎಷ್ಟುತಡವೆ ಖಾಯಮ್ ಪ್ರಕಟಿಸಬೇಕಾದ್ದು ಹಚ್ಚಿ ಒಂದಕ್ಕೆ ಗೊತ್ತುಮಾಡಿ ಲೆಕ್ಕ ಮಾಡಲ್ಪಡುವದು. ಈ ಪತ್ರಿಕೆಯಲ್ಲಿ ಖಾಯಮ್ ಮಾಡುವದಕ್ಕೆ ಪ್ರಕಟನೆಗಳು ಕಳುಹಿಸುವವರು ಅವು ಎಷ್ಟಾವರ್ತಿ ಖಾಯಮ್ ಮಾಡಲ್ಪಡಬೇಕೋ ಆ ಅಂಕವನ್ನು ಸ್ಪಷ್ಟವಾಗಿ ತಿಳಿಸತಕ್ಕದ್ದು. ಇಲ್ಲದಿದ್ದಲ್ಲಿ ಅವರು ನಮಗೆ ನಿಲ್ಲಿಸುವಂತೆ ಬರೆಯುವವರೆಗೆ ಅವು ಪ್ರಕಟಿಸುತ್ತಿದ್ದು ಹಾಗೆ ಎಷ್ಟಾವರ್ತಿ ಪ್ರಕಟಿಸಲ್ಪಟ್ಟಿದ್ದಾವೋ ಮೇಲ್ಕಂಡ ದರದಂತೆ ಕಿಮ್ಮತ್ ವಸೂಲ್ಮಾಡಲ್ಪಡುವದು ಪ್ರಕಟನೆಯನ್ನು ಕಳುಹಿಸಲ್ಪಡತಕ್ಕ ಪ್ರಕಟನೆಗಳನ್ನು ಆಯಾದಿವಾರದ ಮಧ್ಯಾಹ್ನ ೨ ಘಂಟೆಯೊಳಗಾಗಿ ಕಳುಹಿಸಿರಿ. ಪ್ರಕಟನೆಯು ಈ ಪತ್ರಿಕೆಗೆ ಕೇವಲ ಅಯೋಗ್ಯ ಕಾಗದಗಳಲ್ಲಿ ತಿಳಿಸಲ್ಪಡುವ ಅಭಿಪ್ರಾಯಗಳಿಗೆ ನಾವು ಜವಾಬ್ದಾರರಾಗಲಾರೆವು. ಕ್ರಮವಾಗಿ ರುಜುಮಾಡಿ ಪತ್ರಕರ್ತರ ಯಾವತ್ತಾದರನ್ನು ಪ್ರಕಟಿಸಲಾರೆವು ನಿರಾಕರಿಸಲ್ಪಟ್ಟ ಕಾಗದಗಳು ಮರಳಿ ವಾಪಸು ಕಳುಹಿಸಲ್ಪಡಲಾರವು

"IT RECOMENDS ITS ELF"

ALL WHO SUFFER FIND SURE RELIEF.

LITTLE'S

ORIENTAL BALM

THE MOST EFFECTUAL MODERN REMEDY FOR PAIN.

———

ಲಿಟಲ್ ಯೆಂಬವರಿಂದ ತಯಾರ್ಮಾಡಲ್ಪಟ್ಟ "ಓರಿಯಂಟಲ್‌ಬಾಮ್" ಎಂಬ ಪೂರ್ವದೇಶ ಸಂಬಂಧವಾದ ಅಮೂಲ್ಯ ತೈಲವು ಪ್ರಕಾಶವಾದದ್ದು, ಮತ್ತು ಸಫಲವಾದ ನವೀನ ಪ್ರತಿಕ್ರಿಯಾರೂಪವಾದ ಔಷಧವು. ಇದರಿಂದ ಸಕಲ ವಾತರೋಗಗಳೂ, ವಾತಸಂಬಂಧಗಳಾದ ಸಂಧಿಬಂಧನಗಳೂ ನಿವೃತ್ತಿಯಾಗುವವು. ಮುಖ್ಯವಾಗಿ ಚಿರಕಾಲಿಕವಾದ ವಾತರೋಗಗಳು, ಕಾಸ, ಗಂಟಲಿನಲ್ಲಿ ಉರಿ, ನರದ ನೋವು, ಕೀಲುವಾಯು, ಕಟಿವಾಯು, ಉಳುಕು ನೋವು, ತಲೆನೋವು, ತಿಮಿರುವಾಯು ಮುಂತಾದ ರೋಗಗಳಿಗೆಲ್ಲ ನಿಸ್ಸಂದೇಹವಾಗಿ ಬಹಳ ಪ್ರಯೋಜನವನ್ನುಂಟುಮಾಡತಕ್ಕದ್ದು. ಈ ತೈಲವನ್ನು ನೋವುಳ್ಳ ಸ್ಥಳಗಳಲ್ಲಿ ಕೆಲವಾವರ್ತಿ ಸವರಿ ಕಾವು ಪುಟವಾಗುವಂತೆ ಚೆನ್ನಾಗಿ ತಿಕ್ಕಿದಲ್ಲಿ ಸಹಪಗಳಾದ ಯೆಲ್ಲಾ ನೋವುಗಳನ್ನು ನಿವೃತ್ತಿ ಮಾಡುವಂಥಾ ಉತ್ತಮ ತೈಲವಾಗಿರುತ್ತದೆ. ಸರ್ಪ್ಪಕ್ಷತವೆನ್ನುವದಲ್ಲೀ ಅರತೆಸನೋವು ಮತ್ತು ಜೋಮು ಉದ್ದಾಂಗ ನಿವೃತ್ತಿಯಾಗುವದು. ಗಂಟಲಿನಲ್ಲಿ ಉಂಟಾಗುವ ಉರಿ ಅಥವಾ ವ್ರಣಗಳಿಗೆ ಈ ತೈಲವು ಅದ್ಭುತವಾದ ಮತ್ತು ಶೀಘ್ರವಾದ ಸುಗುಣ ಗುಣವನ್ನುಂಟುಮಾಡುವದು. ಅದ್ಭುತವಾದ ಈ ಔಷಧವನ್ನು ಉಪಯೋಗಿಸಿದಲ್ಲಿ ಅದರ ಪ್ರಯೋಜನವು ಸ್ವಲ್ಪವೇ ವ್ಯಕ್ತವಾಗುವದು. ಈ ತೈಲವು ಶೀತಗಾಳಿ ಮುಂತಾದವುಗಳಿಗಾಗಿ ಸಂಚರಿಸುವಂಥಾ ಪ್ರಯಾಣಿಕರು, ಬೇಟೆಯಾಡುವವರು, ದೇಶಾಟನ ಮಾಡುವವರು, ಮುಂತಾದವರಿಗೆಲ್ಲ ಅನುಕೂಲ್ಯವಾದದ್ದು.

———

ಪರಿಶೀಲಕರ ಅಭಿಪ್ರಾಯವು.

ಐರ್‌ಲ್ಯಾಂಡ್ ದೇಶದ ಫಾರ್ಮಸ್ಯೂಟಿಕಲ್ ಸೊಸೈಟಿಯೆಂಬ ಔಷಧಶಾಲೆಯ ಪ್ರೆಸಿಡೆಂಟರಾಗಿಯೂ, ಸದರೀ ದೇಶದ ಪೆಥಾಲಜಿಕಲ್ ಸೊಸೈಟಿ ಯೆಂಬ ವ್ಯಾಧಿನಿದಾನವಿವೇಚಕ ಸಮಾಜದ ಮೆಂಬರಾಗಿಯೂ, "ಮಿನರಲ್ ವಾಟರ್ಸ್ ಆಫ್ ಯೂರೋಪ್" ಎಂಬ ಗ್ರಂಥಕರ್ತರಾಗಿಯೂ, ರಸಾಯನಶಾಸ್ತ್ರ ವಿಷಯಕವಾದ ಅನೇಕ ಲೇಖನಾಧಿಕಾರಿಯಾಗಿಯೂ, ಇರುವ ಪ್ರೊಫೆಸರ್ ಟಿಚ್‌ಬೋರ್ನ್ (C. R. TICHBORNE, L. L. D., F. C. S., M. R. I. A.,) ಯೆಂಬುವರು ಅಭಿಪ್ರಾಯ ಪಟ್ಟಿರುತ್ತಾರೆಂತೆಂದರೆ—ಲಿಟಲ್‌ಯವರ ಓರಿಯಂಟಲ್‌ತೈಲವನ್ನು ಜಾಗರೂಕತೆಯಿಂದ ಪರೀಕ್ಷಿಸಿದೆನು. ಇದು ಬಹುವಿಧ ಮೂಲಿಕೆಗಳ ರಸಮಿಶ್ರವಾದ ತೈಲವೇ ಹೊರ್ತು ಮತ್ತಲ್ಲವೆ, ಇದು ದೇಹದ ಉಪಯೋಗಿಸಲ್ಪಡುವಾಗ ಕುಡಿಯಂಗ ಸಿರುಪದ್ರವಕರವಾದದ್ದಾಗಿದ್ದರೂ, ನಿಜವಾಗಿ ಪ್ರಬಲ ರೋಗ ನಿವಾರಕ ಶಕ್ತಿಯುಳ್ಳದ್ದಾಗಿರುತ್ತದೆ. ಈ ಮಿಶ್ರೌಷಧವು ನರಗಳನ್ನು ಸ್ಥಿತಿಯಲ್ಲಿ ತರತಕ್ಕದ್ದಾಗಿರುವದರಿಂದ ಅನೇಕ ಬಗೆಯ ತರದ ರೋಗಗಳಿಗೆ ಉಪಯುಕ್ತವೆಂದು ತಿಳಿಸಲ್ಪಟ್ಟಿದೆಯೋ ಸದರೀ ರೋಗಗಳಲ್ಲಿ ಅದರ ಪ್ರಯೋಜನವು ವ್ಯಕ್ತವಾಗುವದು. ಈ ತೈಲವು ಸಂಪೂರ್ಣ ಜಾಗರೂಕತೆಯೊಡನೆ ತಯಾರ್ಮಾಡಲ್ಪಟ್ಟಿರುತ್ತದೆ.

ಇದರ ಕ್ರಯ—ಸೀಸೆ ಒಂದಕ್ಕೆ ೧ ರೂಪಾಯಿ.

ಇದು ಬೆಂಗಳೂರು ಔಷಧ ಶಾಲೆಯಲ್ಲಿಯೂ, ಮದರಾಸ್ ಶಂಬುದಾಸ್ ಬೀದಿಯಲ್ಲಿ ೨೦ನೇ ನಂಬರ್ ಮನೆಯೊಳಗಿರುವ, ಮಿ. ಎ. ಸಿ. ಬೆರ್ರಿಮನ್ ಯವರಲ್ಲಿಯೂ, ಈ ಪ್ರಾಂತ್ಯದಲ್ಲಿರುವ ಅವರ ಏಜಂಟ್‌ಗಳಾದ ಜೆ. ವೆಸ್ಟ್ ಯವರ ಕಂಪೆನಿಯಲ್ಲಿಯೂ, ಮಿ. ಕೆಲ್ಪಿನ್ ಅಂಡ್ ಕಂಪೆನಿಯವರಲ್ಲಿಯೂ, ರಿಗ್ಸ್‌ಯವರ ಕಂಪೆನಿಯಲ್ಲಿಯೂ ದೊರೆಯುವದು.

AGENTS.— Messrs, J. WEST, Chemist, &c., Bangalore.
CALPAIN & Co. Chemists, Bangalore.
RIGGS & Co., Chemists, Bangalore; and of
MAHOMED YOUSOFF AND SONS, The Cash Bazarr, Bagalore
A. C. BERRYMAN & Co.,
20 Sambodoss Street Madras.

NOTICE.

VAIDYASARA SANGRAHA

A TREATISE ON THE PRINCIPLES OF

HINDU MEDICINE.

☞ *Price including Postage Rs 5 6-0*

———

ವೈದ್ಯಸಾರ ಸಂಗ್ರಹ.

———

ಈಗ್ರಂಥಾಪೇಕ್ಷೆಯುಳ್ಳವರು ಮೊಬಲಗಿನೊಡನೆ ಕೆಳಗೆ ರುಜುಮಾಡಿರತಕ್ಕವರ ಹೆಸರಿಗೆ ಬರೆದುಕೊಂಡರೆ ಪುಸ್ತಕ ಕೂಡಲೇ ಕಳುಹಿಸಲ್ಪಡುವದು. ಮೊಬಲಗು ಇಲ್ಲದ ದರಖಾಸ್ತುಗಳಿಗೆ ಸುತರಾಂ ನಿಗೆಕೊಡಲ್ಪಡಲಾರದು.

ಇದರ ಕ್ರಯ ... ...ರೂ॥ ೫—೦—೦
ಪ್ಯಾಕಿಂಗ್ ಮತ್ತು ಅಂಚೇಹಾಸಲ್, ೦—೬—೦

ಟಿ. ಬಿ. ವೆಂಕಟಾಚಾರ್,
ಆಸ್ಪತ್ರಿರೋಡ್, ಬೆಂಗಳೂರು

ನೋಟೀಸ್.

———

ಬೆಂಗಳೂರಲ್ಲಿನ ಕಂಪ್ನಿ, ಅರಳೆ ಮತ್ತು ರೇಷ್ಮೆ ಕಾರ್ಖಾನೆಗೆ ೧೦೦ರಿಂದ ೧೦೦೦ ಬೇಲ್‌ಗಳವರಿವಿಗೆ ಕ್ಯಾಸರಿಕ ಅಥವಾ ಕಾಡುಸಾಲೀ ಬೇಕಾಗಿರುವದರಿಂದ ಅವರ ಸರಬರಾಯಿಬಗ್ಗೆ ದರಖಾಸ್ತುಗಳು ತೆಗೆದು ಕೊಳ್ಳಲ್ಪಡುವದು.

ದರಖಾಸ್ತು ನಮೂನೆ ಬೇಕಾದರೆ ಮೇಲಿನ ಕಾರ್ಖಾನೆಯಲ್ಲಿ ಪಡೆಯಬಹುದು.

———

ನೋಟೀಸ್.

———

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನೆಂದರೆ,—

ಜುಚ್ಚರ ಮತ್ತು ಕುಷ್ಟರೋಗಗಳ ಆಸ್ಪತ್ರೆಗಳಿಗೂ ಪ್ರಸವಾಸ್ಪತ್ರೆಗೂ ವೈದ್ಯಶಾಲೆಗೂ ಬೇಕಾದ ಆಹಾರ ಪದಾರ್ಥಗಳ ಮತ್ತು ಆಸ್ಪತ್ರೆಗೆ ಬೇಕಾದ ಇತರ ಪದಾರ್ಥಗಳ ಸರಬರಾಯಿ ಬಗ್ಗೆ ದರಖಾಸ್ತುಗಳು ಕೋರಬಹುದು.

ಇದರ ಕರಾರುಗಳ ತಿಳಿಯಬೇಕಾದರೆ ವೈದ್ಯಶಾಲೆಯ ಗುಮಾಸ್ತನನ್ನು ನೋಡಬೇಕು:

ದರಖಾಸ್ತುಗಳು ಈ ತಿಂಗಳ ೩೧ನೇ ತಾರೀಖಿನ ಬೆಳಗ್ಗೆ ಜುಚ್ಚರ ಆಸ್ಪತ್ರೆಯಲ್ಲಿ ಖುಲ್ಲಾ ಮಾಡಲ್ಪಡುವವು.

ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA.

MONDAY, MARCH 19, 1888.

೧೮೮೮ನೇ ಮಾರ್ಚಿ ೧೯ನೇ ತಾ॥ ಸೋಮವಾರ.

THE MYSORE GOVERNMENT AND ITS TANK POLICY.

———

ಮೈಸೂರು ದೇಶದಲ್ಲಿರತಕ್ಕ ಕೆರೆಗಳ ರಿಪೇರಿ ವಿಷಯದಲ್ಲಿ ಇಲ್ಲಿನ ಸರ್ಕಾರದವರು ಹೊಸದಾಗಿ ಅನುಸರಿಸಿರುವ ಕ್ರಮವು ರೈತರಿಗೆ ಬಹಳ ಹಿಂಸಾರೂಪವೆಂತಲೂ, ಅದು ಈಗಿನ ಕಾಲ ದೇಶ ಜನಗಳ ಸ್ಥಿತಿಗಳಿಗೆ ಬಹಳ ವಿರುದ್ಧವಾದದ್ದೆಂತಲೂ, ಅದು ಖಾಯಮಾಗಿ ಜಾರಿಯಲ್ಲಿ ತರಲ್ಪಟ್ಟಲ್ಲಿ ಎಲ್ಲರಿಗೂ ಬಹಳ ಅಸಮಾಧಾನಕರವಾಗಿರುವದೆಂತಲೂ ವಗ್ಯರೆ ಅಭಿಪ್ರಾಯಗಳನ್ನು ಅನೇಕ ದೃಷ್ಟಾಂತಗಳೊಡನೆ ಈಗ್ಯೆ ಕೆಲವು ತಿಂಗಳ ಹಿಂದೆ ವ್ಯಕ್ತಪಡಿಸಿ ಅದಂ ಕುರಿತು ಅನೇಕ ವಾರಗಳ ತನಕ ಈ ಪತ್ರಿಕಾ ಮೂಲಕ ಬೇಕಾದ ಮಟ್ಟಿಗೆ ವಿಚಾರ ಮಾಡಿರುತ್ತೇವೆಯಷ್ಟೆ. ಈಚೆಗೆ ಸದರೀ ವಿಷಯವಂ ಕುರಿತು ಈ ಸಂಸ್ಥಾನದ ದಿವಾನರವರು ಕೋಲಾರ ಡಿಸ್ಟ್ರಿಕ್ಟ್ ರೈತರು ಕೆಲವರಿಗೆ ಕೊಟ್ಟ ಇತರರ ಕಂಡ ಎಂಡಾರ್ಸ್‌ಮೆಂಟಿನ ನಕಲು ಈಗ ದೊರಕಿದುದರಿಂದ ಅದರ ಮೇಲೆ ನಮ್ಮ ಅಭಿಪ್ರಾಯವನ್ನಿದರಡಿ ತಿಳಿಸುವೆವು:—

ನಂಬರ್ದಾರ್.

ಹುಜೂರು ದಿವಾನಕಚೇರಿ ಖಾಸ.
ಅರ್ಜದಾರರು),

ಕೋಲಾರ ತಾಲ್ಲೂಕು ಕಲ್ಲಹಳ್ಳಿ ಸೂರನಾರಣಪ್ಪ, ಗಿಡ್ಡಗವಡ, ಗೋಪಾಲಗವಡ ವಗ್ಯರೆ ಮತ್ತು ಮಾಲೂರು ತಾಲ್ಲೂಕು ಕಂಬಿಹಳ್ಳಿ ವಗ್ಯರೆರಿಗೆ ಸಹಾ ಉಂಟಾರಸು ಹುಕುಂ.

ನೀವುಗಳು ಹುಜೂರಿಗೆ ಗುಜರಾಯಿಸಿದ ಡಿಸೆಂಬರು ೧೩ನೇ ಮರ್ಕುಂ ಅರ್ಜಿ ದಾಖಲೆಯು ಜಾಹಿರಾಯಿತು.

ಅದರಲ್ಲಿ ಕಂಡಂತೆ ಕೆರೆಗಳಿಗೆ ಮಟ್ಟಿ ಕಾಮಗಾರಿ ರೈತರ ಮೂಲಕ ನಡಾಯಿಸಬೇಕೆಂಬ ವಿಷಯದಲ್ಲಿ ತಾವಾಗಿ ತಮ್ಮ ತಮ್ಮ ಕೆರೆಗಳಿಗೆ ಕಾಮಗಾರಿ ಮಾಡಲು ಒಪ್ಪಿ ರೈತರ ವ್ಯಕ್ತಿ ಜಾಸ್ತೀ ಸಂಖ್ಯೆಯವರು ಜಾಹಿರ್ಮಾಡಿಕೊಂಡ ವಿನಾ ಅಂತಾ ಕಾಮಗಾರಿ ಮಾಡುವಂತೆ ರೈತರುಗಳನ್ನು ಬಲವಂತ ಪಡಿಸಕೂಡದೆಂದು ವಗ್ಯರೆ ಕೋಲಾರ ಡಿಸ್ಟ್ರಿಕ್ಟ್ ಡೆಪ್ಯುಟಿ ಕಮಿಷನರ್ ಸಾಹೇಬರವರಿಗೆ ಲೆಟರ್ ಬರೆಸಿ ಇರುತ್ತೆ, ತಿಳಿಯುವದು.

ಪೇಟಾ ಬೆಂಗಳೂರು, ತಾ॥ ೧೯—೨—೮೮.	(Signed) C. MADIAH, Under Secretary.

ಮೇಲೆ ಕಂಡ ಹುಕುಂ ದೆಸೆಯಿಂದ ಕೆರೇ ಕಾಮಗಾರಿಯ ವಿಷಯದಲ್ಲಿ ರೈತರು ಸ್ವತಃ ಒಪ್ಪಿ ರಿಪೇರಿ ಮಾಡಿದರೆ ಮಾಡಬಹುದಲ್ಲದೆ ಅವರಂ ಬಲಾತ್ಕರಿಸಕೂಡದೆಂದು ಸ್ಪಷ್ಟವಾಗುತ್ತದೆ.

ರೈತರು ತಮಗೆ ಸಂಬಂಧವಿಲ್ಲದ ಕಾಮಗಾರಿಯನ್ನು ಪುನಃ ಧರ್ಮಾರ್ಥವಾಗಿ ಮಾಡುವರೆಂದು ನಿರೀಕ್ಷಿಸುವದು ಅಸಂಗತವಾದವದರಿಂದ ಈ ವಿಷಯದಲ್ಲಿ ಗವರ್ನಮೆಂಟಿನವರ ಉದ್ದೇಶ್ಯ ಪ್ರಯತ್ನಗಳು ಸಂಪೂರ್ಣವಾಗಿ ವಿಫಲಗಳಾದಂತೆ ಸದರೀ ಇಂಡಾನ್ಸ್‌ಮೆಂಟಿನಿಂದ ಯಲ್ಲರೂ ಭಾವಿಸಬೇಕಾಗಿರುತ್ತದೆ. ಏತದ್ವಿಷಯದೊಳು ನಡೆಸಲ್ಪಟ್ಟ ಪ್ರಯತ್ನಗಳು ನಿಷ್ಪ್ರಯೋಜಕಗಳಾದವೆಂಬ್ಯಾಗಿ ಗವರ್ನಮೆಂಟಿನವರು ಚಿಂತಿಸಿದಿದ್ದಾಗ್ಯೂ, ಅವರ ಮಾನ ಸಂರಕ್ಷಣೆಯೊಳು ದೃಢ ಸಂಕಲ್ಪವುಳ್ಳವರಾಗಿರುವ ತಾಲ್ಲೂಕ್ ಜಾತ್ ಅಮಲ್ದಾರರುಗಳು ಕೆಲವರು ಪ್ರಕಾರಾಂತರದಿಂ ತಮ್ಮ ಅಧಿಕಾರ ಬಲವನ್ನು ಉಪಯೋಗಿಸುತಲೂ, ರೈತರನ್ನು ಕಾಮಗಾರಿಗಳಿಗೆ ಒಡಂಬಡಿಸುತಲೂ, ಹೊರಗಿನ ಜನರಿಲ್ಲರೂ ಅನ್ಯಥಾ ಭಾವಿಸದಿರುವಂತೆ ತಾವು ತಟಸ್ಥರಾಗಿರುತಲೂ, ಮೇಲ್ಪಟ್ಟ ಅಧಿಕಾರಿಗಳ ಪ್ರಶಂಸೆಯನ್ನು ಮಾತ್ರ ಅಂತಃ ನಿರೀಕ್ಷಿಸುತಲೂ, ಒಳಗೆ ರೈತರಂ ಬಲಾತ್ಕರಿಸುತಲೂ ಇರುವಂತೆ ಕೇಳುತ್ತೇವೆ. ಇದಲ್ಲದೆ ಪ್ರಸಕ್ತ ಕ್ರಮವಂ ಪ್ರೋಟಿಸಿ ಅಜ್ಞರಾದ ಬಡ ರೈತರು ದುಡುಕುಳ್ಳರಿಸುವ ಬಗ್ಯೆ ಅಮಲ್ದಾರರುಗಳು ತಮಗೆ ಬೇಕಾದವರ ಮೂಲಕ ಸಹಿ ಸೇರಿಸಿ, ಅವರ ಮೂಲಕ ಸಮ್ಮತಿ ರುಜುಗಳು ತೆಗದುಕೊಳ್ಳುತ್ತಾರೆಂದು ಸಹ ನಮ್ಮ ಕೇಳ್ವಿಕೆಗೆ ಬರುತಲಿದೆ. ಇದರಿಂದಲೇ ರೈತರಿಗೆ ಕೆರೇ ಕಾಮಗಾರಿ ಮಾಡುವದಕ್ಕೆ ಸುತರಾಂ ಇಷ್ಟವಿಲ್ಲವೆಂಬದು ಸ್ಪಷ್ಟವಾಗುತ್ತದೆ. ದೂರ ಪ್ರದೇಶಗಳಿಂದ, ಕುಂಕ್ರಿಗಳಲ್ಲಿ ಮಣ್ಣು ಹೊರಬೇಕಾದವರು ಕೃಷಿ ಜೀವಿಗಳಾದದರಿಂದ ಅದರ ಶ್ರಮವು ಅಮಲ್ದಾರರಿಗಾಗಲಿ, ಅವರ ಮೇಲ್ಪಟ್ಟವರಿಗಾಗಲಿ ತಿಳಿಯಬೇಕಾದ ಆವಶ್ಯಕತೆ ಏನೂ ಇರುವದಿಲ್ಲವು. ಸರ್ವ ಭೂತಗಳನ್ನು ಯಾವನು ತನ್ನಂತೆ ಭಾವಿಸುವನೋ ಅವನೇ ಉತ್ತಮನೆನಿಸಿಕೊಳ್ಳುವನಾದದರಿಂದ ಪರರದುಃಖವನ್ನರಿಯದವರು ಪಾಪಾತ್ಮರೆಂದು ಕರೆದಾಗ್ಯೂ ಕರೆಯಬಹುದು. ರೆವಿನ್ಯೂ ಆಡಳಿತದಲ್ಲಿ ಒಳ್ಳೆಯ ಅನುಭವವುಳ್ಳವರಾಗಿಯೂ ರೈತವಾರೀ ಪದ್ಧತಿಯನ್ನು ಚೆನ್ನಾಗಿ ಅರಿತವರಾಗಿಯೂ, ಹೊರಗೆ ಅತಿ ಕಠಿಣರೆಂದು ತೋರಿದರೂ ಅಂತಃ ಭೂತದಯೆಯುಳ್ಳವರಾಗಿಯೂ ಇದ್ದ ಸಾಬರ್ ದಿವಾನ್ ಮೆ॥ ರಂಗಾಚಾರ್ಲುರವರಿಗೆ ಕೆರೆಗಳನ್ನು ರೈತರ ಮೂಲಕ ರಿಪೇರ್ ಮಾಡಿಸುವ ಅಭಿಪ್ರಾಯ ಉದ್ಘಾಂಗ ಇರಲಿಲ್ಲವೆಂಬದು ೧೮೮೧ ಮತ್ತು ೮೨ನೇ ಇಸವಿಗಳ ದಸರಾ ದರ್ಬಾರ್‌ಗಳಲ್ಲಿ ಅವರು ಮಾಡಿದ ಪ್ರಸಂಗಗಳಿಂದ ಸ್ಪಷ್ಟವಾಗುತ್ತದೆ. ೧೮೮೧ನೇ ಇಸವಿಯ ದರ್ಬಾರ್ ಕಾಲದಲ್ಲಿ ಇವರು ಮಟ್ಟಿಗೆ ತಿಳಿಸಿದರೇನೆಂದರೆ "ಮರಮ್ಮತ್ ಇಲಾಖೆಯವರು ತ್ವರೆಯಾಗಿಯೂ, ಮಿತವ್ಯಯದಿಂದಲೂ, ಡಿಸ್ಟ್ರಿಕ್ಟ್ ಆಫೀಸರ್‌ಗಳಿಗೆ ಅನುಕೂಲರಾಗಿಯೂ, ಕೆಲಸ ನಡೆಸುವರೆಂಬ ಉದ್ದೇಶದಿಂದ ಮರಮ್ಮತಿ ಬಾಬಿನ ಕ್ರಮವನ್ನು ಕೆಲವು ಮಟ್ಟಿಗೆ ವಿಮರ್ಶೆ ಸಹ ಮಾಡಬೇಕಾಗಿರುವದರಿಂದ ಆ ಸಂಗತಿ ಈಗ ಚೆನ್ನಾಗಿ ಆಲೋಚನೆಗೆ ತೆಗದುಕೊಳ್ಳಲ್ಪಡುವದು" ಎಂಬದು. ೧೮೮೩ನೇ ಇಸವಿಯ ಪ್ರತಿನಿಧಿ ಸಭೆಯಲ್ಲಿ ಅದೇ ದಿವಾನರವರು ಸ್ವದೇಶ ಪರಿಪಾಲನಾಪದ್ಧತಿಯಂ ಕುರಿತು ಸೂಚಿಸಿ ವಿಚಾರ ಮಾಡುವಾಗ್ಯೆ "ಕೆರೆಗಳ ರಿಪೇರೀ ನೀರಾವರಿ ಕಾಮಗಾರಿಗಳು ಮತ್ತು ಸರ್ಕಾರಿ ಕಟ್ಟಡಗಳ ದುರಸ್ತಿ ಮುಂತಾದವನ್ನೆಲ್ಲ ಡಿಸ್ಟ್ರಿಕ್ಟ್ ಅಧಿಕಾರಿಗಳ ಮೂಲಕ ಗವರ್ನಮೆಂಟಿನವರೇ ಸ್ವತಃ ಈಗಿನಂತೆ ನಡಿಸುತ ಬರುವರು" ಬದಾಗಿ ತಿಳಿಯಪಡಿಸಿದರು. ಅಷ್ಟರಲ್ಲಿಯೇ ಆ ದಿವಾನರವರ ಆಯುರ್ದಾಯವು ಪೂರ್ತಿಯನ್ನೈದಿದರಿಂದ ಅವರ ವಾಕ್ಯಗಳ ಯಾಥಾರ್ಥ್ಯವನ್ನರಿಯಲಿಕ್ಕೆ ಜನಗಳಿಗೆ ಅವಕಾಶ ದುರ್ಲಭವಾಯಿತು. ತರುವಾಯ ಅವರ ಪ್ರತ್ಯಾಸನ್ನರಾಗಿ ಏರ್ಪಟ್ಟ ಪ್ರಕೃತ ದಿವಾನರವರು ಈ ಕೆರೇ ಕಾಮಗಾರಿಯ ವಿಷಯದಲ್ಲಿ ಮೊದಲಿನಿಂದ ತೋರುತ ಬಂದ ಮುಖಂಗಳನ್ನೂ, ಅವರು ಅವಲಂಬಿಸಬೇಕೆಂದುದ್ದೇಶಿಸಿದ್ದ ಮಾರ್ಗಗಳನ್ನೂ, ಆಗಿಂದಾಗ್ಯೆ ಹೊರಪಡಿಸುತಲಿದ್ದ ಅಭಿಪ್ರಾಯಗಳನ್ನೂ, ಇದುವರೆವಿಗೆನೇ ನಾವು ಈ ಪತ್ರಿಕಾಮೂಲಕ ಪ್ರಕಟಿಸಿ ಸಂದರ್ಭೋಚಿತಗಳಾದ ಕೆಲವು ಆಕ್ಷೇಪಣೆಗಳಂ ಮಾಡಿದ್ದೇವಾದಾಗ್ಯೂ ದಿವಾನರವರ ಆಬೈರ್ ಹುಕುಮುಗಳನ್ನು ನೋಡಿದ್ದಾದರೆ ಹಿಂದಿನವೆಲ್ಲ ಅನಿಶ್ಚಿತಗಳಾಗಿಯೂ ಪರಸ್ಪರ ವಿರುದ್ಧಗಳಾಗಿಯೂ, ಅನುಮಾನಾಸ್ಪದಗಳಾದವಾಗಿಯೂ ಇರುತಿವೆಂಬದಂ ಅವರ ಸ್ವಂತ ವಾಕ್ಯಗಳಿಂದಲೇ ಮುಂದೆ ಕ್ರಮವಾಗಿ ನಿರೂಪಿಸುತ ಬರುವೆವು. ೧೮೮೩ನೇ ಇಸವಿಯ ದಸರಾ ದರ್ಬಾರಿನಲ್ಲಿ ಈಗಿನ ದಿವಾನರವರು ತಿಳಿಸಿದ್ದೇನೆಂದರೆ— "ಕೆರೇ ರಿಪೇರಿ ಮೊದಲಾದ ನೀರಾವರಿ ಕಾಮಗಾರಿಗಳನ್ನು ಆಯಾ ಡಿಸ್ಟ್ರಿಕ್ಟ್ ಲೋಕಲ್ ಬೋರ್ಡಿನವರಿಗೇ ಒಪ್ಪಿಸಬೇಕೆಂದುದ್ದೇಶಿಸಿರುವದರಿಂದಲೂ, ಪ್ರಾಯಶಃ ಅದರ ಮೆಂಬರುಗಳ ಪೈಕಿ ಅನೇಕರು ಡಿಸ್ಟ್ರಿಕ್ಟಿನೊಳೆಲ್ಲ ಕಡೆಗಳಲ್ಲಿಯೂ, ವ್ಯವಸಾಯ ಪ್ರಯುಕ್ತವಾದ ವಿಶೇಷ ಪ್ರಯೋಜನಾ ಕಾಂಕ್ಷೆಯುಳ್ಳವರಿಗೆ ಸಂಬಂಧಿಸಿದವರಾಗಿರುವವರಿಂದಲೂ, ಆಯಾ ಡಿಸ್ಟ್ರಿಕ್ಟಿನಲ್ಲಿರತಕ್ಕ ಮುಖ್ಯ ಮುಖ್ಯ ಕೆರೆಗಳೆಲ್ಲವೂ ತಕ್ಕಮಟ್ಟಿಗೆ ಅವರ ಅವಧಾನಕ್ಕೆ ವಿಷಯಗಳಾಗುವವೆಂದು ನಿರೀಕ್ಷಿಸಲ್ಪಟ್ಟಿದೆ. ಇವೇ ಮೊದಲಾದ ಇತರ ಕಾರ್ಯ ನಿರ್ವಹಣೆಯ ವಿಷಯವಲ್ಲಾದರೋ, ಆಗಿಂದಾಗ್ಯೆ ಕೆಲಸಗಳನ್ನರುಹತಕ್ಕ ಅಧಿಕಾರವೂ, ಅವು ಸರಿಯಾಗಿ ನೆರವೇರಿಸಲ್ಪಡುತಲಿವೆಯೋ ಇಲ್ಲವೋ ಎಂಬದು ತನಿಖೀ ಮಾಡುವ ಸ್ವಾತಂತ್ರ್ಯವೂ ವಿಶೇಷತಃ ಗವರ್ನಮೆಂಟಿನವರಲ್ಲಿ ನೆಲೆಗೊಂಡಿದ್ದಾಗ್ಯೂ ಅವರು ತಮ್ಮ ಯಜಮಾನ್ಯರಿಯಲ್ಲಿರುವ ಶಿಕ್ಷಿತರಾದ ಮತ್ತು ಅನುಭವಶಾಲಿಗಳಾದ ಉದ್ಯೋಗಸ್ಥರು ಕೊಟ್ಟು ತತ್ಪ್ರಯುಕ್ತವಾದ ಪ್ರಯೋಜನವು ಬೋರ್ಡಿನವರಿಗೆ ಉಂಟುಮಾಡುತಲಿರುವರೆಂಬದು." ಅದೇ ಸಂವತ್ಸರದಲ್ಲಿ ಡಿಸ್ಟ್ರಿಕ್ಟ್ ಜಾತ್ ಪ್ರತಿನಿಧಿಗಳ ವಿಚಾರದೊಳು ದಿವಾನರವರು ಅವರಿಗೆ ಉತ್ತರವು ಕೊಡುವಾಗ್ಯೆ ಮರಳಿ ತಿಳಿಸಿದರೇನೆಂದರೆ—"ಸಣ್ಣ ಸಣ್ಣ ಕೆರೆಗಳನ್ನು ಗವರ್ನಮೆಂಟಿನವರು ರಿಪೇರ್ ಮಾಡದೆ ಹೋದ ಬಗ್ಯೆ ಸಾಮಾನ್ಯೇನ ಉಂಟಾಗಿರುವ ದುಃಖವನ್ನು ಕುರಿತೇ ಡಿಸ್ಟ್ರಿಕ್ಟ್ ಜಾತ್ ಪ್ರತಿನಿಧಿಗಳೆಲ್ಲರೂ ಈಗ ವ್ಯಕ್ತಪಡಿಸಿದಾರೆ. ಈಗ ಜಾರಿಯಲ್ಲಿರುವ ನಿಬಂಧನೆಯಲ್ಲಿ ೧೦೦ ರೂಪಾಯಿಗಳ ಮತ್ತು ಅದಕ್ಕೆ ಕಡಮೆಯಾದ ಅಚ್ಚುಕಟ್ಟುಳ್ಳ ಕೆರೆಗಳನ್ನೆಲ್ಲ ರಿಪೇರಿ ಬಗ್ಯೆ ರೈತರಿಗೇ ಒಪ್ಪಿಸಬೇಕೆಂತಲೂ, ಅವರು ಅವು ದುರಸ್ತಿನೊಳಿಟ್ಟಿರಬೇಕೆಂತಲೂ, ಅದಕ್ಕಾಗಿ ಸರ್ಕಾರದಿಂದ ಸಹಾಯದ್ರವ್ಯ ಕೊಡಲ್ಪಡಲಾರದೆಂತಲೂ ಖಂಡಿತವಾಗಿ ನಮೂದಿಸಲ್ಪಟ್ಟಿರುತ್ತದೆ.

ಈ ನಿಬಂಧನೆಯಿಂದುಂಟಾಗುವ ಶ್ರಮವಂ ಪರಿಭಾವಿಸಿ, ದಿವಾನರವರು ಆಪಿಯೊಂದ ಇಂತಾ ನಿರ್ಬಂಧಕ್ಕೆ ತಾವು ಬಹಳ ವಿರೋಧಿಯಾಗಿರುವದರಿಂದ ಅದಂ ಸಾಧ್ಯವಾದಷ್ಟು ತ್ವರೆಯಲ್ಲಿ ರದ್ದುಮಾಡಲು ಆಲೋಚಿಸುವಂತೆ ಹೇಳಿ ತತ್ಕಾಲದಲ್ಲಿ ಪ್ರತಿನಿಧಿಗಳಂ ಸಮಾಧಾನಗೊಳಿಸಿದರು. ಅದೇ ಕಾಲದಲ್ಲಿ ಮತ್ತೊಂದು ಪ್ರಕರಣದೊಳು ಸದರೀ ವಿಷಯವಂ ಕುರಿತು ಪ್ರತಿನಿಧಿಗಳು ತಿಳಿಸಿದರೇನೆಂದರೆ,—ಕೆರೆಗಳನ್ನು ಆಗಿಂದಾಗ್ಯೆ ರಿಪೇರ್ ಮಾಡಲಿಕ್ಕೂ, ಅವು ಬಂದೋಬಸ್ತಾಗಿಟ್ಟುಕೊಂಡಿರಲಿಕ್ಕೂ ಪಿಡುಪರ್ಯೇಣ ರೈತರಿಂದ ಕೆರಿಗೆ ವಸೂಲ್ಮಾಡಲ್ಪಡುತಲಿರುವದರಿಂದ ಕೆರೇ ರಿಪೇರಿಗೆಂತ ಪ್ರತ್ಯೇಕ ಸಹಾಯ ದ್ರವ್ಯವನ್ನು ಅವರಿಂದ ತಗಾದೆಮಾಡುವದು ರೈತರಿಗೆ ಬಹಳ ಶ್ರಮನಿಮಿತ್ತವೆಂಬದು. ದಿವಾನರವರು ಪ್ರತಿನಿಧಿಗಳ ಅಹವಾಲಿನ ಔಚಿತ್ಯವನ್ನಂಗೀಕರಿಸಿ ಕೂಡಲೇ ಸದರೀ ಹುಕುಂ ರದ್ದುಮಾಡಲ್ಪಡುವದೆಂದು ಕಂಠೋಕ್ತವಾಗಿ ಹೇಳಿದರು. ಮೇಲೆ ಉದಹರಿಸಲ್ಪಟ್ಟ ಸಂಗ್ರಹೀತಗಳಾದ ದಿವಾನರವರವಾಕ್ಯಗಳಿಂದರೇ ೮೩ನೇ ಇಸವಿಯಲ್ಲಿ ನೂರು ರೂಪಾಯಿಗಳ ಹುಟ್ಟುವಳಿಯಾಗುವ ಅಚ್ಚುಕಟ್ಟು ಜಮೀನ್ದಾರುಳ್ಳ ಕೆರೆಗಳನ್ನು ಕೂಡ ರೈತರಮೂಲಕ ಮುಫತ್ ಕಾಮಗಾರಿ ಮಾಡಿಸತಕ್ಕ ವಿಷಯದೊಳು ಪ್ರತಿಷೇಧಕರಾಗಿದ್ದರೆಂಬವೂ, ಕೆರೆಗಳ ರಿಪೇರೀಖರ್ಚಿನಬಗ್ಯೆ ರೈತರಿಂದ ಹಣ ವಸೂಲ್ಮಾಡುವ ಈಗಿನಪದ್ಧತಿಯನ್ನು ಉದ್ಘಾಂಗ ರದ್ದುಮಾಡುವಂತೆ ಪ್ರತಿಜ್ಞಾಪೂರ್ವಕ ಜನರಿಗೆ ಭರವಸೆಯನ್ನಿತ್ತರೆಂಬದು ಸಹ ಸ್ಪಷ್ಟವಾಗುತ್ತದೆ. ನೂರುರೂಪಾಯಿಗಳೊಳಗಾಗಿ ಹುಟ್ಟುವಳಿಯುಳ್ಳ ಕೆರೆಗಳನ್ನೆಲ್ಲ ರೈತರು ತಮ್ಮ ಸ್ವಂತ ಲಾಗವಡಿನಿಂದಲೇ ರಿಪೇರ್ಮಾಡಿಕೊಳ್ಳ ಬೇಕೆಂಬವಾಗಿ ವಿಧಿಸಲ್ಪಟ್ಟದೆಯೆಂತ ದಿವಾನರವರು ನಮೂದಿಸಿದ ರೂಲ್ಸ್, ಅಂತಾ ಬಹಳ ಸಣ್ಣ ಕೆರೆಗಳ ರಿಪೇರಿಗಳನ್ನು ಸರ್ಕಾರದವರೇ ಸ್ವತಃ ಮಾಡಲಿಕ್ಕೆ ಸಂಸ್ಥಾನದ ಅರ್ಥೋಪಪತ್ತಿಯು ಸಾಲದೆ ಇದ್ದಂತಾ ಕಾಲದಲ್ಲಿ ಹುಗಾಮಿನಾತರೀಕ್ ಕೊಡಲ್ಪಟ್ಟದ್ದಾಗಿರುತ್ತದೆ. ೧೮೮೩ನೇ ಇಸವಿಯ ಸಾಂವತ್ಸರಿಕ ರಿಪೋರ್ಟಿನಲ್ಲಿ ಗತ ಧಾತು ಈಶ್ವರ ಸಂವತ್ಸರಗಳ ಕ್ಷಾಮದ ಮೂಲಕ ಈ ಸಂಸ್ಥಾನಕ್ಕೆ ಉಂಟಾಗಿದ್ದ ಬಹುವಿಧ ನಷ್ಟಗಳೆಲ್ಲವೂ ನಿವೃತ್ತಿಯಾಗಿ ಅದು ಸಕಲಾಂಶದಿಂದಲೂ ತತ್ಪೂರ್ವಸ್ಥಿತಿಯನ್ನೈದಿತೆಂಬದಾಗಿ ತಿಳಿಸಿರುವಾಗ್ಯೆ ದಿವಾನರವರು ಮೇಲೆಕಂಡ ವಾಗ್ದಾನವಂತೆ ನಡೆಸಿರುವರಾದರೆ ಬಹಳ ನ್ಯಾಯವಾಗಿಯೂ ಅವರ ರಾಜ್ಯ ತಂತ್ರಜ್ಞತೆಗೆ ನಿದರ್ಶನವಾಗಿಯೂ ಇದ್ದಿರುವದು. ದಿವಾನರವರು ಮಾಡಿದ ಈ ಭರವಸೆಯಿಂದ ರೈತರೆಲ್ಲರೂ ಬಹಳ ಸಂತೃಪ್ತರಾಗಿ ತಮ್ಮ ಹೊಸ ದಿವಾನರವರ ಅಧಿಕಾರ ಕಾಲದಲ್ಲಿ ತಮಗೆ ಸುಖ ಸಂತೋಷಗಳು ವೃದ್ಧಿಯಾಗಬಹುದೆಂಬ ಪ್ರತ್ಯಾಶೆಯೊಡನೆ ಕಾಲಹರಣ ಮಾಡುತಲಿದ್ದರು. ಹೀಗಿರುವಲ್ಲಿ ೧೮೮೭ನೇ ಇಸವಿಯ ಏಪ್ರಿಲ್ನಲ್ಲಿ ದಿವಾನರವರು ನುಡಿದ ಇದರಡಿಕಂಡ ಕೆಲವು ಮಾತುಗಳು ರೈತರ ಸರ್ವ ಆಶೆಗಳನ್ನೂ ಹೋಗಲಾಡಿಸಿ, ಅವರ ಪ್ರಯತ್ನಗಳಂ ಭಂಗಪಡಿಸಿ, ಉತ್ಸಾಹವನ್ನು ವ್ಯರ್ಥಗೊಳಿಸಿ, ಧೈರ್ಯವನ್ನು ತೊಲಗಿಸಿ, ತಮ್ಮ ದೌರ್ಭಾಗ್ಯಕ್ಕಾಗಿ ಚಿಂತಿಸುತಲಿರುವಂತೆ ಮಾಡಿದ್ದೇನೂ ಆಶ್ಚರ್ಯವಲ್ಲವು. "ಐನೂರು ರೂಪಾಯಿಗಳಿಗಿಂತ ಹೆಚ್ಚಾದ ಹುಟ್ಟುವಳಿಯುಳ್ಳ ಕೆರೆಗಳನ್ನು ಮರಮ್ಮತ್ ಇಲಾಖೆಯವರ ಸಾಕ್ಷಾದ್ವಿಚಾರಣೆಗೊಳಪಡಿಸತಕ್ಕ ವಿಷಯವು ಮುಂದೆ ಆಲೋಚಿಸತಕ್ಕದ್ದಾಗಿರುತ್ತದೆ. ಅಂತಾ ಕೆರೆಗಳ ಸಂಖ್ಯೆಯು ಸುಮಾರ್ ೨೯೦ ರವರಿವಿಗೆ ಇರುವದರಿಂದಲೂ, ಅವುಗಳಮೂಲಕ ಸರ್ಕಾರಕ್ಕೆ ವಿಶೇಷ ಹುಟ್ಟುವಳಿಯಾಗುವದರಿಂದಲೂ, ಅವುಗಳ ರಿಪೇರೀಬಗ್ಯೆ ಲಾಗವತು ಬಹಳವಾಗಿ ಹಿಡಿಯುವದಾಗಿರುವದರಿಂದಲೂ, ಅವುಗಳು ಮಧ್ಯೆ ಒಡೆದುಹೋಗಿರುವದರಿಂದುಂಟಾಗಿರುವ ತೊಂದರೆಗಳಿಂದಲೂ, ಗವರ್ನಮೆಂಟಿನವರಿಗೊಳಪಟ್ಟು ಸಮರ್ಥರಾದ ಉದ್ಯೋಗಸ್ಥರ ವಿಚಾರಣೆಗೆ ಅವು ಒಳಪಡಿಸಬೇಕಾದ್ದು ಅಪೇಕ್ಷಿತಾಂಶವಾಗಿರುತ್ತದೆ. ೫೦೦ ರೂಪಾಯಿಗಳಿಗೆ ಕಡಮೆಯಾದ ಹುಟ್ಟುವಳಿಯುಳ್ಳ ಕೆರೆಗಳ ರಿಪೇರಿಯು ಜವಾಬ್ದಾರರಾದ ರೆವಿನ್ಯೂ ಅಧಿಕಾರಿಗಳ ಮೇಲ್ವಿಚಾರಣೆಗೊಳಪಡಿಸಿ ಆಯಾ ಗ್ರಾಮಸ್ಥರ ಸಂರಕ್ಷಣೆಗೆ ಕೊಡಲ್ಪಡುವವು. ಪರಂತು ಗ್ರಾಮಸ್ಥರಿಗೆ ವಿಶೇಷ ಜವಾಬ್ದಾರಿಯನ್ನುಂಟುಮಾಡುವಾಗ್ಯೆ ತ್ವರೆಪಟ್ಟು ಕಠಿಣಗಳಾದ ನಿಬಂಧನೆಗಳ್ಯಾವವೂ ಮಾಡಲ್ಪಡಲಾರವು. ಐನೂರುರೂಪಾಯಿಗಳಿಗೆ ಕಮ್ಮಿ ಹುಟ್ಟುವಳಿಯುಳ್ಳ ಕೆರೆಗಳ ರಿಪೇರಿಗಳನ್ನು ಸಾಲೆಸಾರ್ ಮಾಡಿಕೊಳ್ಳುವ ಮರತ್ತಿನಮೇಲೆ ರೈತರಿಗೆ, ಅವರು ಕೊಡುವ ಒಂದಾಣೆ ಇರ್ರಿಗೇಷನ್ ಸೆಸ್ಸನ್ನು ತಪ್ಪಿಸಬೇಕೆಂದು ಮೊದಲು ಸೂಚಿಸೋಣಾಗಿತ್ತು. ಕೆರೆಗಳ ಸಂರಕ್ಷಣೆವಿನಾ ಇತರ ತಮಾಂ ಕಾಮಗಾರಿಗಳವಿಷಯದಲ್ಲಿ ಆವಶ್ಯಕಗಳಾದ ಕೆಲಸಗಳನ್ನು ಕೂಡಲೇ ಮಾಡಲಿಕ್ಕೆ ರೈತರು ಶಕ್ತರಾಗುವಂತೆ ಒಂದು ಅಥವಾ ಜಾಸ್ತಿ ವರುಷಗಳ ತರೀ ಕಂದಾಯವು ಪೂರಾವಾಗಲಿ ಅಥವಾ ಕೆಲವುಮಟ್ಟಿಗಾಗಲಿ ಅವರಿಗೆ ಸೋಡೀ ಮಾಡಲ್ಪಡುವದು. ಅಂತಾ ಸೋಡೀ ಮೊಬಲಗು ಮಾಡಲ್ಪಟ್ಟ ಕಾಮಗಾರಿಗೆ ತಗಲಿರಬಹುದಾದ ಖರ್ಚು ಅಂದಾಜೇ ಮೊಬಲಗನ್ನನುಸರಿಸಿ ಪ್ರತಿ ಸಂದರ್ಭದಲ್ಲಿಯೂ ಠರಾಯಿಸಲ್ಪಡುವದು. ಮಸಲಾ ಮಟ್ಟೀ ಕಾಮಗಾರಿಗಳು ಮಾಡಬೇಕಾಗಿರುವ ಕೆರೆಗಳಿಗೆ, ಒಂದು ಸಾಲಿನಲ್ಲಿ ನ್ಯಾಯವಾಗಿ ನಡೆಸಬೇಕಾದದಕ್ಕಿಂತ ಕಾಮಗಾರೀ ಲಾಗವತು ಅಧಿಕವಾಗಿ ತಗಲುವದಾದರೆ ಆಗ ಒಂದೆರಡು ವರುಷಗಳ ತರೀ ಕಂದಾಯಗಳು ಸೋಡೀ ಮಾಡಲ್ಪಡುವವು. ಗಾರೆ ಮತ್ತು ಕಲ್ಲು ಕೆಲಸಗಳು ಮಾಡಬೇಕಾಗಿದ್ದರೆ ಮೂರು ನಾಲ್ಕು ವರ್ಷಗಳ ಕಂದಾಯವು ಬಹುಶಃ ಸೋಡೀ ಮಾಡಬೇಕಾಗಿರುವದಾದಪ್ಪರಿಂದ ಅವು ಸಂಪೂರ್ಣವಾಗಿ ಪೂರ್ವಸ್ಥಿತಿಗೆ ತರುವದಕ್ಕೆ ಐದು ಅಥವಾ ಏಳು ಸಂವತ್ಸರಗಳ ತನಕ ಅಂತಾ ರಿಯಾಯತಿಯು ಸಾಕಾದದ್ದಾಗಿರುತ್ತದೆ. ರಿಪೇರೀಬಗ್ಯೆ ಗ್ರಾಮಸ್ಥರಿಗೆ ಮೂಲಧನವಾಗಲಿ, ಪ್ರವೃತ್ತಿಯಾಗಲಿ, ಐಕಮತ್ಯವಾಗಲಿ ಇಲ್ಲವಾದರೆ ಅವರಮೂಲಕ ಕೆರೇ ಕಾಮಗಾರಿಗಳನ್ನು ಮಾಡಿಸುವದು ಅಸಾಧ್ಯವಾದದರಿಂದ ಡೆಪ್ಯುಟಿ ಕಮ್ಮಿಷನರರವರು ಅವು ತಮ್ಮ ಸುಪರ್ದು ಮಾಡಿಕೊಂಡು ಮರಮ್ಮತ್ ಇಲಾಖೆಯವರ ಸಲಹೆಯಮೇಲೆ ಗವರ್ನಮೆಂಟು ಲಾಗವಡಿನಲ್ಲ ಪೂರ್ತಿಯಾಗಿಯಾಗಲಿ, ಅಥವಾ ಯುಕ್ತ ಮತ್ತು ವಿಶೇಷ ಮೂಲಧನ ಬೇಕಾಗಿರುವ ಕೆಲಸಗಳ ಮಟ್ಟಿಗಾಗಲಿ, ಮಾಡಿಸಲಿಕ್ಕೂ ಮಿಕ್ಕ ಭಾಗವನ್ನು ಅಂದರೆ ಮಟ್ಟೀ ಕೆಲಸವನ್ನು ಮೇಲೆ ಕಂಡಂತಾ ರಿಯಾಯತಿಯಮೇಲೆ ಗ್ರಾಮಸ್ಥರ ಮೂಲಕ ಮಾಡಿಸಲಿಕ್ಕೂ ಅಧಿಕಾರವುಳ್ಳವರಾಗಿರುತ್ತಾರೆ. ಈ ರೀತಿ ೫೦೦ ರೂಪಾಯಿಗಳಿಗಿಂತ ಕಮ್ಮಿ ಹುಟ್ಟುವಳಿಯುಳ್ಳ ಪ್ರತಿ ಕೆರೆಗೆ ರಿಪೇರೀ ಯಾ ಬಂದೋಬಸ್ತಿಯೂ ಆವಶ್ಯಕವಾಗಿದ್ದರೆ ಅದರ ಭಾರವು ಅದಕ್ಕೆ ಸಂಬಂಧಪಟ್ಟ ರೈತರಿಗೆ ಸೇರಿದ್ದಾಗಿರುವದರಿಂದ ಮೇಲೆ ತಿಳಿಸಲ್ಪಟ್ಟ ರಿಯಾಯತಿಯು ತೋರಿಸಲ್ಪಟ್ಟರೆ ಅವರು ಸ್ವತಃ ಕಾಮಗಾರಿಯಾದರು ಮಾಡುವರು ಅಥವಾ ತಾಮಸವಾಗಿ ಗವರ್ನಮೆಂಟಿನವರು ಮಾಡಿಸುತ ಕಾಮಗಾರಿಯನ್ನಾದರೂ ನಿರೀಕ್ಷಿಸಿರುವರು".—ಹೀಗೆಯೇ ದಿವಾನರವರ ಕ್ಷಣಿಕ ಪ್ರತಿಜ್ಞೆಗಳನ್ನೂ ಮೋಹಕ ವಾಕ್ಯಗಳನ್ನೂ ಇನ್ನೂ ವಿವರವಾಗಿ ಇನ್ನೊಂದು ಸಂದರ್ಭದಲ್ಲಿ ತಿಳಿಸುವೆವು.

RIGHT TO FRUIT TREES.

ಯಾವದಾದರೊಂದು ವಿಷಯವು ಪುರಾತನವಾದದ್ದಾಗಿಯೂ ಜಗತ್ಪ್ರಸಿದ್ಧವಾದದ್ದಾಗಿಯೂ ಇದ್ದಾಗ್ಯೂ ಅದು ಗ್ರಹಿಸತಕ್ಕವರು ಹೊಸಬರಾದರೆ ಆಗ ಅದು ನೂತನವಾದದ್ದಾಗಿಯೂ ದುರೂಹವಾದದ್ದಾಗಿಯೂ ಆಗುವದು ಸಹಜವಾಗಿರುತ್ತದೆ. ಇದೇ ಪ್ರಕಾರ ೧೮೮೭–೮೮ನೇ ಸರ್ವಜಿತ್ ಸಂವತ್ಸರದ ಕೋಲಾರ್ ಡಿಸ್ಟ್ರಿಕ್ಟ್ ಜಮಾಬಂದಿಯ ಕಾಲದಲ್ಲಿ ಒಂದು ವಿಷಯವು ಪ್ರಕಟವಾಯಿತು. ಸದರೀ ಡಿಸ್ಟ್ರಿಕ್ಟಿಗೆ ಸೇರಿದ ತಾಲ್ಲೂಕುಗಳ ಪೈಕಿ ಕೆಲವು ಕಡಪಾ ಮತ್ತು ಉತ್ತರ ಆರ್ಕಾಟ್ ಡಿಸ್ಟ್ರಿಕ್ಟುಗಳಿಗೆ ಸರಹದ್ದು ಪ್ರಾಂತಗಳಾಗಿಯೂ ಆಂಧ್ರಭಾಷಾ ಪ್ರಾಚುರ್ಯವುಳ್ಳ ಪ್ರದೇಶಗಳಾಗಿಯೂ ಇರುವದರಿಂದ ಅಲ್ಲಿಯೊಂದು ಪದ್ಧತಿ ನಡೆದು ಬರುತಿದೇನೆಂದರೆ, ಗ್ರಾಮಾಂತರಗಳಲ್ಲಿ ಪ್ರಾಯಶಃ ಹುಣಸೇ, ಮಾವು, ಹೊಂಗೇ ತೋಪುಗಳು ಗ್ರಾಮ ಸಮುದಾಯಕ್ಕೆ ಸೇರಿ, ಪರಂಪೋಕ್ ಜಮೀನಿನಲ್ಲಿ ನೆಲಗೊಂಡಿರುತಿವೆಯಷ್ಟೇ. ಒಂದು ಗ್ರಾಮನತ್ತಾ, ನಾನಾಕಿಸಾಮ ಜಮೀನುಗಳಲ್ಲಿ ಸಹ ಫಲ ಗಿಡಗಳಿರುತಿವೆ. ಇವುಗಳಲ್ಲಿ ಕೆಲವು ಇಜಾರೆಗೆ ಒಳಪಟ್ಟವಾಗಿಯೂ, ಇನ್ನೂ ಕೆಲವು ಮುಸಾಫರರಿಗಾಗಿ ಧರ್ಮಾರ್ಥ ಬಿಡಲ್ಪಟ್ಟವಾಗಿಯೂ, ಬೇರೆ ಕೆಲವು ಆಯಾ ಗ್ರಾಮಸ್ಥರ ಉಪಯೋಗಾರ್ಥ ಪ್ರತ್ಯೇಕಿಸಿ ಇಡಲ್ಪಟ್ಟವಾಗಿಯೂ ಇರುತಿವೆ. ಈ ಗಿಡಗಳಪೈಕಿ ಕೆಲವನ್ನು ನಿರ್ದೇಶಿಸಿಯಾಗಲಿ, ಸಮುದಾಯದಲ್ಲಿ ಒಂದೆರಡೆಂಬ ಸುಜ್ಞಾರೂಪವಾಗಿಯಾಗಲಿ ಶಾನಭೋಗ ಪಟೇಲ್, ಕಟ್ಟು, ಯಜಮಾನ ಬ್ರಾಹ್ಮಣ, ಫಕೀರ್, ಜಂಗಮರು, ಮೊದಲಾ

ಶರು ಅನೇಕ ತಲಾಂತರಗಳಿಂದ ಯಾವ ವಿಧ ತರಿಗೆಗಳಿಗೂ ಒಳಪಡದೆ ಪೂರ್ಣಭೋಗವಾಗಿ ಅನುಭವಿಸುತಲಿರುತ್ತಾರೆ. ಸಾಲ್ ಬಸಾಲ್ ಜಮಾಬಂದಿ ಮಾಡತಕ್ಕ ಆಫೀಸರ್‌ಗಳಿಗೆ ಈ ಅಮಲ್ ನೂತನವಾದದ್ದಲ್ಲವು. ಪರಂತು ಗುಟಸ್ತೇ ಪೊಟಗಿಗೆ ಆವಿಸ್ತ್ರ ಜಾಸ್ತೀ ಇಲ್ಲವೆಂಬ ಸಬಾ ಮಾತ್ರದಿಂದಲೇ ಜಮಾಬಂದಿ ಪೂರೈಸಿಕೊಂಡು, ಬತ್ತಾ ಲೆಕ್ಕ ಮಾಡತಕ್ಕವರಿಗೆ ಅಪು ಕದಾಚಿತ್ ತಿಳಿಯದೆಯೂ ಇರುವದುಂಟು. ಪೂರ್ವದಲ್ಲಿ ಸಾಲ್ ಬಸಾಲ್ ದರಖ್ ಖುದಾರಿ ಅಥವಾ ಖಾನೇ ಖುಮಾರಿ ಲೆಕ್ಕಗಳಲ್ಲಿ ಮೇಲೆ ಕಂಡ ಪದ್ಧತಿಯು ಕಂಡು ಬರುತಲಿತ್ತು. ಸರ್ವೇ ಆಗಿ ಬಾರಾನಮಾಫಿ ಲೆಕ್ಕಗಳೇರ್ಪಟ್ಟ ಬಳಿಕಲೂ, ಅದಕ್ಕೆ ಪೂರ್ವವೇ ಅದರಂತೆ ಜಾರೀಯಲ್ಲಿ ತರಬೇಕೆಂಬದಾಗಿ ಹುಕುಂ ಕೊಟ್ಟ ತರುವಾಯಲೂ ಖಾನಾಸುಮಾರ್ ಲೆಕ್ಕಗಳೆಲ್ಲವೂ ನಾಶವಾದವು. ಹಣಿಗೆ ಗಿಡಗಳು ಮತ್ತು ಫಲ ವೃಕ್ಷಗಳು ಎಂಬ ತಾರತಮ್ಯವಿಲ್ಲದೆ ರೈತರು ತಮ್ಮ ಹಕ್ಕುದಾರಿಕೆಗೊಳಗಾದ ವೃಕ್ಷಗಳನ್ನೆಲ್ಲ ಬೇಕಾದಂತೆ ಕಡಿದುಕೊಳ್ಳಬಹುದೆಂಬ ನಿಯಮವೇರ್ಪಟ್ಟ ಬಳಿಕ ಅದರ ಪ್ರಸಕ್ತಿಯು ಹೊರಗಾಗಲಿಕ್ಕೆ ಕಾರಣವಿಲ್ಲವಾಯಿತು. ಆದರೆ ಈಗಿನಕಾಲದವರು ಇದನ್ನು ಅಕ್ರಮದಿಂ ಸ್ಥಳದಲ್ಲಿ ಅವಿಚಾರವಾಗಿ ನಡೆದುಕೆ ಯಾತಕ್ಕೆ ನುಡಿಯಲಾಗದೆಂದು ಕೇಳಬಹುದು, ಪರಂತು ಹಾಗೆ ಹೇಳಲಾಗದು. ಸರ್ ಮಾರ್ಕ್ ಕಬ್ಬನ್ ಸಾಹೇಬರವರ ಕಾಲದಲ್ಲಿ, ಖುಮಾರ್ ೧೮೪೫ನೇ ಇಸವಿಯು ಲಾಗಾಯಿತು ೫೬ನೇ ಇಸವಿಯ ವರಿಗಿನ ಸಾಲ್‌ಗಳಲ್ಲಿ ಜನರ ಲೆ ರಿಪೋರ್ಟೆಂಬ ಒಂದು ಲೆಕ್ಕವನ್ನು ತಾಲ್ಲೂಕಿನವರಿಂದ ತಯಾರ್ಮಾಡಿಸಿ, ಲೇಟ್ ಜೆಂಗಲೂರ್ ಡಿವಿಜನವರ ಮುಖಾಂತ್ರ ತರಿಸಿಕೊಂಡಿದ್ದಂತೆ ತಿಳಿಯ ಬರುತಿವೆ ಹೀಗಿದ್ದಾಗ್ಯೂ ಈಗಿನ ಜಮಾಬಂದಿ ಆಫೀಸರರು ಇದು ಹೊಸದಾಗಿ ಕಂಡು ಹಿಡಿದು ಕೋಲಾರ್ ಡಿಸ್ಟ್ರಿಕ್ಟ್ ಡೆಪ್ಯುಟೀ ಕಮಿಷನರವರ ಮೂಲಕ ದಿವಾನರವರಿಗೆ ತಿಳಿಯಪಡಿಸಿರುತ್ತಾರೆಂತಲೂ ಅವರು ಸರ್ಕಾರಕ್ಕೆ ಲಕ್ಸಾನ್ ಕರವಾದ ಸದರೀ ಪದ್ಧತಿಯನ್ನು ಏಕಾ ಏಕ್ ಮನ್ನಾ ಮಾಡಿಸುವಮುಚಿತವಾಗಿದ್ದಾಗ್ಯೂ ಹಕ್ಕುದಾರಿಯು ವ್ಯವಸ್ಥೆಯಾಗಬೇಕಾಗಿರುವದರಿಂದ ಅದನ್ನು ಇನಾಂ ಇಲಾಖೆಯವರು ವ್ಯವಸ್ಥೆ ಮಾಡಬೇಕೆಂತಲೂ, ಅದುವರಿವಿಗೆ, ಅಂದರೆ ಮತ್ತೊಂದು ಹುಕುಂ ಕೊಡಲ್ಪಡುವ ತನಕ ಪೂರ್ವ ಪದ್ಧತಿಯನ್ನೇ ಅನುಸರಿಸಬೇಕೆಂತಲೂ ಈಚೆಗೆ ಹುಕುಂ ಕೊಟ್ಟಿದ್ದಾರೆಂದು ತಿಳಿಯಬರುತಿದೆ. ಪ್ರಕೃತ ದಿವಾನರ ಹುಕುಂ ನಿರರ್ಥಕವಾಗಿಯೂ ನಿಷ್ಪ್ರಯೋಜಕವಾದದ್ದಾಗಿಯೂ ಇರುತಿದೆ ಹ್ಯಾಗಂದರೆ—ಇನಾಂ ಸೆಟಲ್‌ಮೆಂಟಿಗೆ ಮುಖ್ಯಾಧಾರವು ಐವತ್ತು ವರುಷಗಳ ಅನುಭವವನ್ನು ಸ್ಥಾಪಿಸತಕ್ಕದ್ದಾಗಿರುತಿದೆ. ಇದು ಸರ್ಕಾರದವರ ಅವಧಾನಕ್ಕೆ ವಿಷಯವಾಗಿಯೇ ಈಗ ಐವತ್ತು ಸಂವತ್ಸರಗಳಿಗ ಮೇಲ್ಪಟ್ಟಿತು. ಆದದರಿಂದ ಇದು ಪ್ರಯೋಜನಕರವಾಗದ್ದಲ್ಲವು. ಮಹಾರಾಜಾ ಸರ್ಕಾರದವರು ಬ್ರಿಟಿಷ್ ಗವರ್ನಮೆಂಟಿನವರಿಂದ ಕೊಡಲ್ಪಟ್ಟ ಹುಕುಂಗಳನ್ನೂ, ಅಂಗೀಕರಿಸಲ್ಪಟ್ಟದ್ದ ಪದ್ಧತಿಗಳನ್ನೂ, ನಡೆಸಲ್ಪಡುತಿದ್ದ ಆಡಳಿತ ಕ್ರಮವನ್ನೂ ಅನುಸರಿಸಿ ಪ್ರಭುತ್ವ ಮಾಡಲಿಕ್ಕೆ ಸ್ವತಂತ್ರರಾಗಿರುವಲ್ಲಿ ಮೇಲೆ ಕಂಡ ವಿಷಯವು ಬ್ರಿಟಿಷ್ ಕಮಿಷನರ್‌ಗಳಿಂದ ಅಂಗೀಕರಿಸಲ್ಪಟ್ಟದ್ದಾಗಿರುವಾಗ್ಯೆ ಅದರ ಮೇಲೆ ಇವರ ವಿಚಾರವು ಅನಾವಶ್ಯಕವಾಗಿರುತಿದೆ. ಅತಿಬಾಧೆನೊಳಗಾಗತಕ್ಕ ಹರ್ ಮ್ಯಾಜಿಸ್ಟೀಸ್ ಸೀಮೆಯಲ್ಲಿ ನಡೆಯುವ ಪದ್ಧತಿಯನ್ನು ತಿಳಿದುಕೊಳ್ಳುವದಕ್ಕೆ ಬದಲು ಮಾರ್ಗಾಂತರಗಳಂ ಹುಡುಕುವವರಿಂದ ಯಾವಪ್ರಯೋಜನವೂ ಕಾಣಿಸಲಿಲ್ಲವು. ಏಮಂತ ಸುಖವಾಗಿದ್ದ ಪ್ರಜೆಗಳನ್ನು ಚಿಂತೆಗೊಳಪಡಿಸುವದೇ ಇವರ ಮುಖ್ಯೋದ್ದೇಶ್ಯವೆಂದು ತೋರುತಿದೆ.

Occasional Notes.
ನೈಮಿತ್ತಿಕ ವಿಷಯನ್ಯಾಸ.

The National Congress.—ಮುಂದಿನ ಸಂವತ್ಸರದಲ್ಲಿ ನಾಲ್ಕನೇಆವರ್ತಿ ಅಲಹಾಬಾದ್‌ನೊಳು ಸೇರುವದಾಗಿರುವ ನ್ಯಾಷನಲ್ ಕಾಂಗ್ರೆಸ್ಸೆಂಬ ಸಭೆಯ ಖರ್ಚುಗಳಬಗ್ಯೆ ಇದುವರಿವಿಗೆ ಕಾಶೀಪ್ರಾಂತದಲ್ಲಿ ೬೫೦೦೦ ರೂಪಾಯಿಗಳು ಚಂದಾಆಗಿರುವಂತೆ ತಿಳಿಯಬರುತಿದೆ.

Appointment.—ಹಿಂದೆ ಕಲ್ಕತ್ತಾ ಹೈಕೋರ್ಟ್ ಚೀಫ್ ಜಡ್ಜಿಯರಾಗಿದ್ದ ಸರ್ ರಿಚ್ಚರ್ಡ್ ಗಾರ್ತ್‌ಯವರು ಕಳೆದ ತಿಂಗಳ ೮ನೇ ತಾರೀಖಿನಲ್ಲಿ ಮಹಾರಾಜ್ಞೀಯವರ ಮಂತ್ರಾಲೋಚಕ ಸಭೆಯಲ್ಲಿ ಒಬ್ಬ ಮೆಂಬರಾಗಿ ನಿಯಮಿಸಲ್ಪಟ್ಟು ವಿಂಡಸರ್ ಕ್ಯಾಸಿಲ್ ಎಂಬ ಅರಮನೆಯೊಳು ಆಕೆಯವರ ಸಮಕ್ಷಮದಲ್ಲಿ ಪ್ರಮಾಣ ಮಾಡಿಸಲ್ಪಟ್ಟರು.

An alligator shot.—ಷೋಲಾಪುರದ ಬಳಿ ಆಚೇ ನಾರದಲ್ಲಿ, ಅಲ್ಲಿನ ಜಾಯಿಂಟ್ ಮ್ಯಾಜಿಸ್ಟ್ರೇಟರು ಒಂದು ನದಿಯೊಳು ಒಂದು ಮೊಸಳೆಯನ್ನು ಗೋಲಿಯಿಂದ ಹೊಡೆದು ಕೊಂದು ಹಾಕಿ ಅದರ ಹೊಟ್ಟೆಯನ್ನು ಸೀಳ ನೋಡುವಲ್ಲಿ ಒಳಗೆ ಆರಡಿ ಉದ್ದವುಳ್ಳ ಬೇರೆಯೊಂದು ಮೊಸಳೆ ಕಂಡಬಂದದ್ದಲ್ಲದೆ ಅದರ ಉದರದಲ್ಲಿ ಒಂದು ಜೊತೆ ಬಳೆಗಳಿದ್ದವಂತೆ.

An application sanctioned.—ಹೈದರಾಬಾದಿನಿಂದ ಸಕಂದರಾಬಾದ್ ವರಿವಿಗೆ ಟ್ರಾಂವೆ ಎಂಬ ಒಂದು ಕಬ್ಬಿಣದ ರಸ್ತೆಯನ್ನು ಹಾಕುವದಕ್ಕಾಗಿ ಕೊಡಲ್ಪಟ್ಟ ದರಖಾಸ್ತು, ಅಲ್ಲಿನ ಕೌನ್ಸಿಲ್ಮೆಂಟಿನ ಕೆಲವು ಬೀಜಗಳನ್ನು ವಿಸ್ತರಿಸುವ ಷರತ್ತಿನ ಮೇಲೆ ಮಂಜೂರ್ಮಾಡಲ್ಪಟ್ಟಿತು. ಈ ಷರತ್ತನ್ನು ನೆರವೇರಿಸುವ ಕಾರ್ಯಕ್ಕೆ ಸಾಧ್ಯವಾಗಿ ಕಂಡುಬರುವ ಪಕ್ಷದಲ್ಲಿ ಕೂಡಲೇ ಅದರ ಕೆಲಸಕ್ಕೆ ಪ್ರಾರಂಭವಾಗುವದು.

Increase of revenue.—ಉಪ್ಪಿನಮೇಲಿನ ತೆರಿಗೆಯು ಈಚೆಗೆ ಜಾಸ್ತೀಮಾಡಲ್ಪಟ್ಟದ್ದಲ್ಲದೆ ಈ ಸಂವತ್ಸರದ ಅದರಬಾಬತು ಹುಟ್ಟುವಳಿಯು ಹಿಂದಿನ ಸಾಲಿಗಳಿಗಿಂತಲೂ ಬಹಳ ಅಧಿಕವಾಗಿರುತಿದೆ. ಕಳೆದ ಜನವರಿತಿಂಗಳ ಆಖೈರವರಿವಿಗೆ ೫,೮೫,೭೪,೦೦೦ ರೂಪಾಯಿಗಳು ಹುಟ್ಟುವಳಿಯಾದವು. ಇದು ಕಳೆದ ಸಾಲಿಗಿಂತಲೂ, ೫೨೧೪,೦೦೦ ರೂಪಾಯಿಗಳು ಅಧಿಕವೆನ್ನಿಸಿಕೊಳ್ಳುತಿದೆ.

The funeral of the late Emperor of Germany.—ಈಚೆಗೆ ಮೃತನಾದ ಜರ್ಮನೀ ದೇಶದ ಚಕ್ರವರ್ತಿಯವರ ಉತ್ತರ ಕ್ರಿಯೆಗಳು ಈ ತಿಂಗಳ ೧೬ನೇ ತಾರೀಖಿನಲ್ಲಿ ನಡೆಯುತಿದೆಯಾಗಿ, ಸದರೀ ಚಕ್ರವರ್ತಿಯವರ ಗೌರವಾರ್ಥ, ಇಂಡ್ಯಾದೇಶ ಎಲ್ಲ ಕೋಟೆಗಳ ಮತ್ತು ಮಿಲಿಟರಿ ಸ್ಟೇಷನ್‌ಗಳ ಬಾವುಟೆಗಳು ಸೂರ್ಯೋದಯ ಮೊದಲು ಸೂರ್ಯಾಸ್ತಮಯದ ವರಿವಿಗೆ ಅರ್ಧ ಇಳಿಸಿಡಲ್ಪಟ್ಟಿರಬೇಕಾದ್ದಲ್ಲದೆ, ಮೃತನಾದವರ ವಯಃಪರಿಮಾಣವನ್ನನುಸರಿಸಿ ವಿಶಿಷ್ಟ ಹೆಡ್‌ಕ್ವಾರ್ಟರ್ ಸ್ಟೇಷನ್‌ಗಳಲ್ಲೂ ೯೧ ತೋಪುಗಳು ಹಾಕಲ್ಪಡತಕ್ಕದ್ದು ಎಂದು ವೈಸರೆ ಇಂಡ್ಯಾಗೆಜೆಟಿನಲ್ಲಿ ಘಾಯಿಷ್ ಮಾಡಲ್ಪಟ್ಟ ಇಂಡ್ಯಾ ಗವರ್ನಮೆಂಟ್ ಹುಕುಂ ಅನುಸರಿಸಿ ವಿಶಿಷ್ಟ ಸ್ಟೇಷನ್‌ಗಳಲ್ಲೂ ನಡೆಸಲ್ಪಟ್ಟಿತು.

A royal order.—ಈಚೆಗೆ ಹೊಸದಾಗಿ ಕಲ್ಪಿಸಲ್ಪಟ್ಟ ಇಂಡ್ಯಾದೇಶ ಸಂಬಂಧವಾದ ಪ್ರಶಸ್ತಿಗಳಂ ಕೊಡುವ ಅಧಿಕಾರ ವೈಸರಾಯಿಯವರದಾಗಿರತಕ್ಕದ್ದೆಂತಲೂ, ಅವರು ಸ್ಟೇಟ್ ಸೆಕ್ರಿಟರಿಯವರಿಗೆ ತಿಳಿಸದೇನೇ ಸ್ವತಂತ್ರಿಸಿ ಅಂತಾ ಬಿರುದುಗಳಂ ಕೊಡಬಹುದೆಂತಲೂ, ಸಿ. ಎಸ್. ಐ. ಯೆಂಬ ಪ್ರಶಸ್ತಿಯಂ ಕೊಡುವ ಅಧಿಕಾರ ಸ್ಟೇಟ್ ಸೆಕ್ರಿಟರಿಯವರಿಗೆ ಸೇರಿರತಕ್ಕದ್ದೆಂತಲೂ, ಪರಂತು ಸದರೀ ಪ್ರಶಸ್ತಿಯಂ ಯಾರಿಗಾದರು ಕೊಡಬೇಕೆಂದು ವೈಸರಾಯಿಯವರು ಮಾಡುವ ಶಿಫಾರಸನ್ನು ಸ್ಟೇಟ್ ಸೆಕ್ರಿಟರಿಯವರು ತಿರಸ್ಕರಿಸಕೂಡದೆಂತಲೂ ಮಹಾರಾಜ್ಞೀಯವರು ಹುಕುಂ ಮಾಡಿರುತ್ತಾರೆ.

A protest.—ಇಂಡ್ಯಾದೇಶದ ವೈಸರಾಯಿಯವರಾದ ಲಾರ್ಡ್ ಡಫರಿನ್‌ಸಾಹೇಬರವರು ಈ ಸಂವತ್ಸರಾಂತದಲ್ಲಿ ತಮ್ಮ ಅಧಿಕಾರವಂಬಿಟ್ಟು ಸ್ವದೇಶಕ್ಕೆ ಹೊರಟುಹೋಗುತ್ತಾರಾಗಿ ಅವರನ್ನು ಗೌರವಿಸುವದಕ್ಕಾಗಿ ಬಂಗಾಳೇ ಪ್ರಜೆಗಳ ಹೆಸರಿನಲ್ಲಿ ಈ ತಿಂಗಳ ೬ನೇ ತಾರೀಖಿನಲ್ಲಿ ಕಲ್ಕತ್ತೆಯೊಳು ಸೇರ ಪಡ ಗಿರುವ ಸಭೆಯು ಸದರೀದೇಶದ ನೇಟಿವ್ ಪ್ರಜೆಗಳೆಲ್ಲರ ಅಭಿಪ್ರಾಯಾನುಸಾರವಾದದ್ದೆನ್ನಿಸಿಕೊಳ್ಳಲಾರದಾಗಿ ಅಂತಾ ಸಭೆ ಸೇರಕೂಡದೆಂದು ಕಲ್ಕತ್ತಾ ಇಂಡಿಯನ್ ಅಸೋಸಿಯೇಷನ್ ಯೆಂಬ ಸಾಮಾಜಿಕರು ಆಕ್ಷೇಪಿಸಿರುತ್ತಾರೆ.

Offer of pecuniary aid to the frontier defences.—ಇಂಡ್ಯಾದೇಶದ ಸರಹದ್ದು ಪ್ರಾಂತದ ಬಂದೋಬಸ್ತಿಯಬಗ್ಯೆ ಇಂಡ್ಯಾದೇಶದ ನೇಟಿವ್ ಸಂಸ್ಥಾನಾಧಿಪತಿಗಳನೇಕರು ಅರ್ಥರೂಪವಾಗಿಯೂ ಸೈನ್ಯರೂಪವಾಗಿಯೂ ಬ್ರಿಟಿಷ್ ಗವರ್ನಮೆಂಟಿನವರಿಗೆ ಸಹಾಯಮಾಡುವದಾಗಿ ತಿಳಿಸಿಯಿರುತ್ತಾರೆಯಷ್ಟೆ. ಅವರಲ್ಲೈಕಿ ಅರ್ಥಸಹಾಯಮಾಡುವದಾಗಿತಿಳಿಸಿದವರುಯಾರಂದರೆ.

ಹೈದರಾಬಾದ್‌ನಿಜಾಮರವರು	೬೦,೦೦,೦೦೦
ಕಾಶ್ಮೀರದ ಮಹಾರಾಜರವರು	೧೫,೦೦,೦೦೦
ಜೋಧಪುರದ ಮಹಾರಾಜರವರು	೧೫,೦೦,೦೦೦
ಭರತಪುರದ ಮಹಾರಾಜರವರು	೪,೦೦,೦೦೦
ಕೋಟಾಸಂಸ್ಥಾನಾಧಿಪತಿಯವರು	೪,೦೦,೦೦೦
ಕಪುರ್ತಲಾ ಅರಸರವರು	೫೦೦,೦೦೦
ನಭಾ ಅರಸರವರು	೬,೦೦,೦೦೦
ಮಾಲರ್‌ಕೋಟ್ಲಾ ನವಾಬರು	೪೦,೦೦೦
ಜುಮ್ಲಾ ರೂ'	೧,೦೩,೪೦,೦೦೦

A step in the right direction.—ಈಚೆಗೆ ಅಲಹಾಬಾದ್ ಹೈಕೋರ್ಟಿನಲ್ಲಿ ಮೆ|| ಜಸ್ಟಿಸ್ ಸ್ಟ್ರೈಟ್‌ಯವರ ಮುಂದೆ ಒಬ್ಬ ಕಕ್ಷಿಗಾರನು ತನ್ನ ವಕೀಲನ ಮೂಲಕ, ಅಲ್ಲಿನ ಮುನಸಫ್ ಕೋರ್ಟಿನಲ್ಲಿ ತನಗೆ ಒಂದು ಮೊಕದ್ದಮೆ ಇರುವಂತೆಯೂ, ಮುನಸಫರು ವಾದಿಗೆ ಅನುಕೂಲರಾಗಿರುವದರಿಂದ ಸದರೀ ಮೊಕದ್ದಮೆಯು ಅಲ್ಲಿ ದರ್ಯಾಫ್ತೀ ಆದರೆ ತನಗೆ ನ್ಯಾಯ ದೊರೆಯುವದಿಲ್ಲವೆಂತಲೂ ತಿಳಿಸಲಾಗಿ, ಜಡ್ಜಿಯವರು ಸದರೀ ಮೊಕದ್ದಮೆಗೆ ಸಂಬಂಧಪಟ್ಟ ಕಾಗದಗಳೊಡನೆ ತನ್ನ ಕೋರ್ಟಿಗೆ ಹಾಜರಾಗುವಂತೆ ಮುನಸಫರಿಗೆ ಹುಕುಂಮಾಡಿ ಅದೇರೀತಿ ಅವರು ಒಂದು ಮೊಕದ್ದಮೆಯನ್ನ ಕೂಲಂಕಷವಾಗಿ ದರ್ಯಾಫ್ತೀಮಾಡಿದ್ದರಲ್ಲಿ ಮುನಸಫರಮೇಲೆ ಹೇಳಿದದೋಷಗಳೆಲ್ಲವು ನಿರಾಧಾರವಾದವೆಂದು ಏರ್ಪಟ್ಟು ಫಿರ್ಯಾದಿಯ ಅರ್ಜಿಯು ತಳ್ಳಿಹಾಕಲ್ಪಟ್ಟದ್ದಲ್ಲದೆ ಖರ್ಚುಗಳುಕೊಡಬೇಕೆಂದು ಹುಕುಂಮಾಡಿ, ಒಬ್ಬ ಜಾಗಿಷತ್ ಆಫೀಸರನಮೇಲೆ ಇಂತಾ ತಪ್ಪು ಫಿರ್ಯಾದ್‌ಗಳು ತರುವದು ಅಸಂಗತವೆಂತಲೂ, ತಾವು ಜಡ್ಜಿಯಾಗಿರುವವರಿವಿಗೆ ಯಾವ ಅಧಿಕಾರಿಯಮೇಲಾಗಲಿ, ಅವನ ಪರೋಕ್ಷದಲ್ಲಿ ಅಂತಾ ಫಿರ್ಯಾದ್‌ಗಳು ತರಕೂಡದೆಂತಲೂ ಹುಕುಂ ಮಾಡಿದರಂತೆ.

Deprivation of administrative power.—ಮಧ್ಯ ಇಂಡಿಯಾದೇಶದ ಪೊಲಿಟಿಕಲ್ ಏಜಂಟರಾಗಿರುವ ಸರ್ ಲೆಪಲ್ ಗ್ರಿಫಿನ್‌ಯವರು ರತ್ಲಾಂ ಸಂಸ್ಥಾನದೊಳು ಈಚೆಗೆ ಒಂದು ಸಂದರ್ಭದಲ್ಲಿ ಮಾಡಿದ ಉಪನ್ಯಾಸ ಕಾಲದಲ್ಲಿ, ಮಧ್ಯ ಇಂಡಿಯಾ ದೇಶದೊಳಗಣ ಬೇರೆಯೊಂದು ಭಾಗದಲ್ಲಿ ಈಗ ರಾಜ್ಯವಾಳುತ್ತಿರುವ ಒಬ್ಬ ಅರಸರು ತಮ್ಮ ಕರ್ತವ್ಯವನ್ನು ನೆರವೇರಿಸುವ ವಿಷಯದಲ್ಲಿ ವ್ಯಕ್ತಪಡಿಸುವ ಅಶ್ರದ್ಧೆ, ಮತ್ತು ತಮ್ಮ ಅಧಿಕಾರವನ್ನು ದುರ್ವಿನಿಯೋಗ ಪಡಿಸುವದಕ್ಕಾಗಿ ಸುಪ್ರೀಂ ಗವರ್ನಮೆಂಟಿನಿಂದ ವಿಧಿಸಲ್ಪಟ್ಟ ದಂಡನೆಯನ್ನನುಸರಿಸಿ, ಸದರೀ ಅರಸರ ಅಧಿಕಾರವನ್ನು ಹೋಗಲಾಡಿಸಬೇಕಾದ ಸಂಕಟ ತಮಗೆ ಪ್ರಾಪ್ತವಾಗುವದಾಗಿದೆಯೆಂದು ಸೂಚಿಸಿದರು. ಈ ಅರಸರು ಯಾರಾಗಿರಬೇಕು ? ಈಚೆಗೆ ಇದ್ದುಬಿಟ್ಟ ಪ್ರಶಸ್ತ್ಯೆಕ್ಕೇಬಂದಿರತಕ್ಕವರು ಹೋಲ್ಕಾರ್ ಮಹಾರಾಜರಲ್ಲವೆ? ಇದಾದ ಮೇಲೆ ತಿರುವಾಂಕೂರಿಗೂ ತರೆನೋವು ಹತ್ತಬೇಕಾದ್ದು ಸಹಜವಲ್ಲವೆ? ಕರವತಿಗಳು ಸೇರಿದ ಸಂಸ್ಥಾನಗಳೆಲ್ಲವು ಯಾವಾಗಲಾದರು ಒಂದು ದಿನ ಇಂತಾ ದುಸ್ಥಿತಿಗೆ ವಿಷಯವಾಗುವದು ಖಚಿತ. ಸಂಸ್ಥಾನಾಧಿಪತಿಗಳ ಸಹವಾಸಕ್ಕೆ ಗೌರವ್ಯವಾದ ವಂಶದಲ್ಲಿ ಜನಿಸಿ ಗೌರವ್ಯವಾದ ವರ್ತನವುಳ್ಳವರುಸೇರಿದರೆ ಅರಸನಲ್ಲಿ ದುರ್ವರ್ತನವಿದ್ದಾಗೂ, ಅದನ್ನು ತಿದ್ದಿ ಸನ್ಮಾರ್ಗವು ತೋರಿಸುವರ್ಯ್ಯ ಹಾಗಲ್ಲದೆ ಪರಿಚಾರಕರ ಪ್ರಾಬಲ್ಯ ಹೆಚ್ಚಿದರೆ ಅದಕ್ಕೆ ತಕ್ಕಫಲ ವುಂಟಾಗದೆ ತಪ್ಪಲಾರದು.

LOCAL AND PROVINCIAL NEWS.
ಒಳದೇಶ ಮತ್ತು ತಾಲ್ಲೂಕುಜಾತಿವೃತ್ತಾಂತಗಳು

Rumoured changes.—ಇಲ್ಲಿನ ಸಿವಿಲ್ ವ ಮಿಲಿಟರಿಸ್ಟೇಷನಿನ ಸರ್ವಸ್ ಜಡ್ಜಿಯವರ ಸಕ್ಕೆ ಕೊಡಗು ಕಮಿಷನರಾದ ಕರ್ನಲ್ ಟ್ರೆವರ್ ಸಾಹೇಬರವರು ಬರುವರೆಂಬದಾಗಿಯೂ ತನ್ಮೂಲಕ ಇನ್ನೂ ಒಂದೆರಡು ವರ್ಗಾವರ್ಗಗಳು ನಡೆಯಬಹುದೆಂತಲೂ ಈಚೆಗೆ ಒಂದು ಪ್ರವಾದ ವುಂಟಾಗಿದೆ.

Appointment.—ಕೋಲಾರ್ ಡಿಸ್ಟ್ರಿಕ್ಟ್ ಬೌರಿಂಗ್ ಪೇಟೆ ತಾಲ್ಲೂಕ್ ಶಿರಸ್ತೇದಾರ ಮೆ|| ರಾ|| ನಾರಾಯಣರಾಯರವರು, ಮೆ|| ರಾಜಮಾಚರಿಯಾರ್ರವರ ಗೈರ್ಹಾಜರಿಯಲ್ಲಿ ಅಥವಾ ಮತ್ತೊಂದು ಹುಕುಂ ಕೊಡಲ್ಪಡುವ ತನಕ ಸದರೀ ತಾಲ್ಲೂಕು ಅಮಲ್ದಾರ್ ವ ೩ನೇ ಕ್ಲಾಸ್ ಮ್ಯಾಜಿಸ್ಟ್ರೇಟರಾಗಿ ಮೊಕರರ್ ಮಾಡಲ್ಪಟ್ಟಿರುತ್ತಾರೆಂದು ಕೇಳಲಾದೆವು.

Arrival of the Dewan.—ಈ ಸಂಸ್ಥಾನದ ದಿವಾನರಾದ ಮೆ. ಶೇಷಾದ್ರಿ ಅಯ್ಯರ್, ಸಿ ಎಸ್. ಐ ಯವರು ಗತ ಶುಕ್ರವಾರದ ದಿನ ಸಾಯಂಕಾಲ ಪ್ಯಾಸಂಜರ್ ಟ್ರೈನಿನಲ್ಲಿ ಮೈಸೂರಿಂದ ಈ ಪುರಿಗೆ ದಯಮಾಡಿದರು. ಇವರಿನ್ನು ಒಂದೆರಡು ದಿನಗಳೊಳಗಾಗಿಯೇ ಮೈಸೂರಿಗೆ ಪ್ರಯಾಣವಾಗುವರೆಂದು ಕೇಳುತ್ತೇವೆ. ಇವರ ಆಗ ಮನೋದ್ದೇಶ್ಯವಂ ಕುರಿತು ಕೆಲವರು ಗೋಲ್ಡ್ ಮೈನಿಂಗ್ ವಿಷಯಕವಾದ ಕೆಲವು ಏರ್ಪಾಟುಗಳಂ ಮಾಡುವ ಬಗ್ಯೆ ಬಂದವರೆಂತಲೂ, ಇನ್ನೂ ಕೆಲವರು ಈ ಪುರದಲ್ಲೀಗ ತಲೆ ಹಾಕುತಲಿರುವ ಜಲಮುರ್ಭಿಕ್ಷ ನಿವಾರಣೆಯಂ ಕುರಿತು ಆಲೋಚಿಸಿ ಇಲ್ಲಿನ ವಾಟರ್ ಪ್ರಾಜೆಕ್ಟಿಗೆ ಬೇಕಾದ ವ್ಯವಸ್ಥೆ ಮಾಡಲಿಕ್ಕೆ ಬಂದಿರುತ್ತಾರೆಂತಲೂ, ಹೇಳಿಕೊಳ್ಳುತ್ತಾರೆ.

Mr. Hemajee Row.—ಅಷ್ಟಗ್ರಾಮ ಡಿವಿಜನ್ ಸೆಷನ್ಸ್ ಜಡ್ಜಿಯರಾದ ಮೆ|| ಹೇಮಾಜಿ ರಾಯರವರು ಕಾಹಿಲೇ ಸಬಬ್ ರಜಾ ತೆಗದುಕೊಂಡು ಮದರಾಸ್ ಪ್ರಾಂತಕ್ಕೆ ಹೋಗಿರುತ್ತಾರೆಯಷ್ಟೆ. ಅವರಿಗೆ ಈಗ ಆರೋಗ್ಯಭಾಗ್ಯವು ಸಂಪೂರ್ಣವುಂಟಾಗಿ ದೃಢಾಂಗರಾಗಿದ್ದಾರೆಂತಲೂ ಕೆಲಸದಮೇಲೆ ಹಾಜರಾಗಲಿಕ್ಕೆ ಶಕ್ತರಾಗಿದಾರೆಂತಲೂ ಶೀಘ್ರದಲ್ಲಿಯೇ ಅಂದರೆ ಈಸ್ಟರ್ ರಜಾ ಪ್ರಾರಂಭವಾಗುವದರೊಳಗಾಗಿ ಮೈಸೂರಿಗೆಹೋಗಿ ನಾಮಮಾತ್ರಕ್ಕೆ ಛಾರ್ಜ್ ವಹಿಸಿ ಮರಳ ಬಿಸಿಲುಕಾಲದಪ್ರಯುಕ್ತವಾದ ಎರಡುತಿಂಗಳರಜಾವನ್ನು ಪರನ್ಥಳದಲ್ಲಿ ಅನುಭವಿಸುವವರಾಗಿದಾರೆಂತಲೂ ತಿಳಿಯಬರುತಿದೆ. ಮುಖ್ಯವಾಗಿ ಉನ್ನತಪದವಿಯೆಂಬದು ನಿರಾಯಾಸಕರವಾದದ್ದು. ಹಿಲ್ಲರೇ ನೌಕರರ ವಿಷಯದಲ್ಲಿ ಏತದ್ವಿಧ ಭಾವನೆಗಳುಂಟಾಗದೆ ಹೋಗಲಿಕ್ಕೆ ಕಾರಣವೇನು ? ಅವರು ಮಾನುಷಕೋಟಿಗೆ ಸೇರಿದವರಲ್ಲವೆಂಬ ನಂಬಿಕೆಯೊಂದುವಿನಾ ಬೇರೊಂದೂ ಕಾಣಿಸಲಿಲ್ಲವು.

CORRESPONDENCE.

ಶ್ರೀ|| ಕರ್ನಾಟಕಪ್ರಕಾಶಿಕಾಪತ್ರಿಕಾಧಿಪತಿಗಳವರ ಸನ್ನಿಧಿಗೆ

ಅಯ್ಯಾ,—

ಶ್ಲಾಘ್ಯವಾದ ತಮ್ಮ ಪತ್ರಿಕೆಯಲ್ಲಿ ಇದರಡಿ ತಿಳಿಸಲ್ಪಡುವ ವೃತ್ತಾಂತವು ಪ್ರಕಟಿಸಲ್ಪಡಬಹುದಾದರೆ ಪರಿಗ್ರಹಿಸೋಣವಾಗಲಿ.

ಈ ಎಡೆಹಳ್ಳಿಗೆ ೬ ಮೈಲಿದೂರದಲ್ಲಿ ಧಾನ್ಯವಾಸವೆಂಬ ಒಂದು ಗ್ರಾಮವಿದೆ. ಅಲ್ಲಿ ಗುಡ್ಡನೆಂಬ ಒಬ್ಬ ಕೊರಚನಿದ್ದಾನೆ. ಅವನ ಮನೆಯ ಅಡಿಗೇ ಒಲೆಯಮೇಲೆ ಒಂದು ವಲ್ಮೀಕವು ಪ್ರಾದುರ್ಭವಿಸಿದೆ. ಇದು ಮಧ್ಯದಲ್ಲಿ ೬ ಅಂಗುಲ ಉನ್ನತವಾಗಿ ಗೋಮುಖದಂತೆಯೂ, ಉಭಯಪಾರ್ಶ್ವಗಳಲ್ಲಿಯೂ ೧೦—೧೨ ಅಂಗುಲ ಉನ್ನತಳಾಗಿ ಶೃಂಗಗಳಂತೆ ಬೆಳದು ಬಹು ರಮಣೀಯವಾಗಿ ಅವಲೋಕಕರ ಚಿತ್ತಾಕರ್ಷಣ ಮಾಡುತ್ತಿದೆ. ಮಧ್ಯ ವಲ್ಮೀಕ ಮುಖ ರಂಧ್ರಗಳಿಂದ ಪ್ರಾತಃಕಾಲ ೪ಘಂಟೆಯಿಂದ ೯ ಘಂಟೆ, ಸಾಯಂಕಾಲ ೬ ಘಂಟೆಯಿಂದ ೭ ಘಂಟೆಯ ವರಿವಿಗೆ ೮—೧೫ ದಿವಸ ಅವಿಚ್ಛಿನ್ನವಾಗಿ ಕ್ಷೀರಧಾರೆಯು ಹೊರಟು ಸ್ವಲ್ಪದೂರದವರಿಗೆ ಪ್ರವಹಿಸಿ ನಿಮ್ನ ಭೂಮಿಯಲ್ಲಿನಿಂತು ಘನೀಭೂತವಾಗುತಿತ್ತು. ತದ್ಗ್ರಾಮವಾಸಿಗಳಾದ ಆಬಾಲವೃದ್ಧರು ಸರ್ವರೂ ನಾಯಂ ಪ್ರಾತಃ ನೋಡಿ ವಿಸ್ಮಯಾನ್ವಿತರಾಗುತಲಿದ್ದಾರೆ. ಅದ್ಯಾಪಿ ಕ್ಷೀರಪ್ರವಾಹ ಧಾವಳ್ಯವು ಅಂಕಿತವಾಗಿ ತೋರುತಿದೆ. ಆಗ್ರಾಮದಲ್ಲಿ ಅನಾದಿಯಾದ ದುರ್ಗಾಲಯವು ಶಿಥಿಲವಾಗಿ ೬—೭ ವರ್ಷಗಳಪೂರ್ವ ನವೀನವಾಗಿ ರಚಿಸಲ್ಪಟ್ಟಿತು. ಈ ಮಾಹೆಯಲ್ಲಿ ಪ್ರತಿವರ್ಷದಲ್ಲಿಯೂ ನಡೆಯತಕ್ಕ ದೇವೀಮಹೋತ್ಸವಾನಂತರ ಬ್ರಾಹ್ಮಣ ಶ್ರೇಷ್ಠರಿಂದ ವಾಸ್ತು ರಾಕ್ಷೋಘ್ನ ಪುರಸ್ಸರವಾದ ಶಾಂತಿಯಾಗಿ ಆಗಮೋಕ್ತ ತಂತ್ರಪ್ರಕಾರ ದೇವಿಗೆ ಕಳಾಧಿಕ್ಯವನ್ನುಂಟುಮಾಡಿ ಸನ್ ೧೮೮೮ನೇ ಮಾರ್ಚಿ ತಾರೀಖು ೯ನೇ ಭಾರ್ಗವವಾರ ಮಹಾ ಸಮಾರಾಧನೆ ನಡೆಯಿತು. ಸಾಯಂಕಾಲ ದೀಪೋತ್ಸವವಂಮಾಡಿಸಿ ಭಕ್ತರು ಭಕ್ತಿಭಾವದಿಂದ ದೇವಿಯನ್ನು ಪ್ರಾರ್ಥಿಸಿದರು. ದೇವಿಯು ಪ್ರಸನ್ನಳಾಗಿ ಮಾನವ ಮುಖದಿಂದ ಅಭಯವನ್ನು ಕೊಟ್ಟಳು. ಆ ಸಮಯದಲ್ಲಿ ಈ ವಲ್ಮೀಕದಿಂದ ಕ್ಷೀರಪ್ರವಾಹಾವಿರ್ಭಾವ ನಿದಾನವು ಪ್ರಶ್ನೆಮಾಡಲ್ಪಟ್ಟಿತು. ಇತಃ ಏಕವಿಂಶತಿ ಮಾಸಗಳಿಗೆ ಪೂರ್ವವೇ ಆ ವಲ್ಮೀಕದಲ್ಲಿ ದೇವರು ಅವತರಿಸಿ ಲೋಕಕ್ಕೆ ಕ್ಷೇಮಕರನಾಗುವನು, ತಾವತ್ಪರ್ಯಂತ ಭೌಮ ಭಾರ್ಗವ ವಾಸರಗಳಲ್ಲಿ ವಲ್ಮೀಕವು ಪೂಜಿಸಲ್ಪಡಬೇಕೆಂದು ಘಂಟಾಘೋಷವಾಗಿ ನುಡಿದಳು. (ದೈವತೀರ್ಥ ದ್ವಿಜಮಂತ್ರದೈವಜ್ಞ ಭೇಷಜಗುರೌ | ಯಾದೃಶೀಭಾವನಾಯಸ್ಯ ಸಿದ್ಧಿರ್ಭವತಿತಾದೃಶೀ) ಎಂಬ ನೀತಿವಾಕ್ಯಾನುಸಾರ ಜನಮನೋಭಾವವು ಫಲಜನಕವಾಗುವದೆಂಬದು ಸಿದ್ಧಾರ್ಥವಾಗಿದೆಯಷ್ಟೆ. ತದ್ವಿಷಯವಿಚಾರವು ಹ್ಯಾಗಾದರೂಯಿರಲಿ, ದೇವಿವಾಕ್ಯ ದ ಯಾಥಾರ್ಥ್ಯವು ನಿರೀಕ್ಷಣೀಯವಾಗಿರುತದೆ. ಪ್ರಕೃತ ವಲ್ಮೀಕದಿಂದ ಕ್ಷೀರಪ್ರವಾಹಾವಿರ್ಭಾವವು ಕೌತುಕಗಳಿಗೆ ಆಶ್ಚರ್ಯಾವಹವಾಗದಿರಲಾರದೆಂದು ಪ್ರಕಟಿಸುವೆನು.

ಎಡೆಹಳ್ಳಿ ತಾ||೧೦-೩-೮೮ — ವಿಧೇಯ, ದೇಶಾಭಿಮಾನಿ.

TELEGRAMS.

ತಂತಿ ವೃತ್ತಾಂತಗಳು.

ಸೆಂಟಪೀಟರಸ್‌ಬರ್ಗ, ೧೧ನೇ ಮಾರ್ಚಿ.— ಜರ್ಮನೀ ಚಕ್ರವರ್ತಿಯವರ ಮರಣದದೆಸೆಯಿಂದ ರಾಜ್ಯತಂತ್ರದಲ್ಲಿ ಏನಾದರೂ ತೊಂದರೆಗಳುಂಟಾಗುವದೆಂದು ರಷಿಯಾದೇಶದ ವೃತ್ತಾಂತಪತ್ರಿಕೆಗಳು ಹೆದರುತವೆ.

ಬರ್ಲಿನ್, ೯ನೇ ಮಾರ್ಚಿ—ಯುವರಾಜರು ಮೂರನೇ ಫ್ರೆಡರಿಕ್ ಯೆಂಬ ಹೆಸರಿನೊಡನೆ ಸಿಂಹಾಸನಾರೋಹಣ ಗೆಯ್ದವರು.

ಬಟಾರಾ, ೯ನೇ ಮಾರ್ಚಿ—ಬಟಾರಾವಿಗೆ ಕಟ್ಟಲ್ಪಡುತಲಿದ್ದ ರೆಯಿಲ್‌ರಸ್ತೆಯ ಕಾಮಗಾರಿ ಪೂರ್ತಿಯಾಗಿ ಕಾಸ್ಪಿಯನ್ ಸಮುದ್ರಮಾರ್ಗವಾಗಿ ಈದಿನ ಇಲ್ಲಿಗೆ ಮೊದಲನೇ ಆವರ್ತಿ ಗಾಡಿಬಂದು ಸೇರಿತು.

೧೨ನೇ ಮಾರ್ಚಿ.—ಲಾರ್ಡ ಡಫರೀನ್‌ರವರು ಐರ್ಲಾಂಡದ್ವೀಪದ ಲಾರ್ಡ ಲೆಫ್ಟಿನೆಂಟಾಗಿ ಪ್ರಾಯಶಃ ನಿಯಾಮಕ ರಾಗಬಹುದು.

ಸೆಂಟ್ ಪೀಟರ್ಸ್‌ಬರ್ಗ, ೧೨ನೇ ಮಾರ್ಚಿ— ಮೃತಪಟ್ಟ ಜರ್ಮನೀ ದೇಶದ ಚಕ್ರವರ್ತಿಯವರ ಗೌರವಾರ್ಥ ರಷಿಯಾದೇಶದ ಸೈನ್ಯವೆಲ್ಲವು ಒಂದುತಿಂಗಳಕಾಲದುಃಖಾಚರಣೆಯೊಳಿರುವದು.

ಜರ್ಮನೀದೇಶದ ಚಕ್ರವರ್ತಿಯವರ ಜ್ಯೇಷ್ಠಕುಮಾರರವರು ಮೂರನೇ ಫ್ರೆಡರಿಕ್ ಎಂಬ ಹೆಸರಿನಿಂದ ರಾಜ್ಯಧುರವು ಕೈಗೊಂಡು ಕೊಟ್ಟ ಇಷ್ತಿಹಾರ್‌ನಲ್ಲಿ ತಮ್ಮ ತಂದೆ ಮರಣದ ವಿಷಯದೊಳು ತಮಗೆ ವುಂಟಾದ ದುಃಖವನ್ನು ವ್ಯಕ್ತಪಡಿಸಿ, ಅವರ ಗುಣಾತಿಶಯಗಳಂ ಕೊಂಡಾಡಿ ವಮೇಲೆ, ತಮ್ಮ ತಂದೆಗಳವರು ಹೇಳದ ಕಾರ್ಯಗಳನ್ನೆಲ್ಲ ನೆರವೇರಿಸಿ, ತಮ್ಮದೇಶವನ್ನು ನೆಮ್ಮದಿಗೆ ಮುಖ್ಯಸ್ಥಾನವಾಗಿ ಮಾಡಿ ದೇಶದಲ್ಲಿ ಸುಖವನ್ನು ವೃದ್ಧಿಮಾಡಬೇಕೆಂಬ ಅಭಿಪ್ರಾಯ ತಮಗಿರುವದಾಗಿ ತಿಳಿಸಿದರು.

ಲಂಡನ್, ೧೪ನೇ ಮಾರ್ಚಿ—ಜರ್ಮನೀದೇಶದ ಚಕ್ರವರ್ತಿಯವರ ಉತ್ತರಕ್ರಿಯೆಗಾಗಿ ಪ್ರಿನ್ಸ್ ಆಫ್ ವೇಲ್ಸ್‌ರವರೂ ಅವರ ತಮ್ಮಂದಿರಿಬ್ಬರೂ ಬರ್ಲಿನ್ ಪಟ್ಟಣಕ್ಕೆ ಪ್ರಯಾಣವಾದರು.

ಜರ್ಮನೀ ದೇಶದ ಮೂರನೇ ಫ್ರೆಡರಿಕ್ ಚಕ್ರವರ್ತಿಯವರು ಕೊಟ್ಟ ಇಷ್ತಿಹಾರಿನಲ್ಲಿ ಕಂಡ ಮೃದುವಾದ ಶಬ್ದಗಳನ್ನು ಕುರಿತು ವಿಚಾರಮಾಡುವಲ್ಲಿ ರಷಿಯಾದೇಶದ ವೃತ್ತಾಂತಪತ್ರಿಕೆಗಳಲ್ಲವೂ ಸಾಮಾನ್ಯವಾಗಿ ಯೆಲ್ಲ ದೇಶದಲ್ಲೂ ಯುದ್ಧಮೂಲಕವಾದ ತೊಂದರೆಗಳ್ಯಾವವೂ ಇಲ್ಲದೆ ನೆಮ್ಮದಿ ನೆಲಗೊಂಡಿರುವದೆಂದು ಅಭಿಪ್ರಾಯಪಡುತಿವೆ.

ಲಂಡನ್, ೧೫ನೇ ಮಾರ್ಚಿ—ನಿನ್ನೆಯದಿನ ರಾತ್ರಿ ಹೌಸ್ ಆಫ್ ಕಾಮನ್ಸ್ ಸಮಾಜದಲ್ಲಿ, ಮಿ|| ಸ್ಲಾಗ್ ಎಂಬವರು, ಸರಹದ್ದು ಪ್ರಾಂತದ ವಿಷಯದಲ್ಲಿ ಇಂಡ್ಯ ಗವರ್ನಮೆಂಟಿನವರು ಆಚರಿಸುವ ರಾಜ್ಯತಂತ್ರ ಕ್ರಮವು ಅರ್ಥಾನುಪಪತ್ತಿಗೆ ಕಾರಣವಾಗಿ ತನ್ಮೂಲಕ ಜಾಸ್ತೀ ಕಂದಾಯವನ್ನು ಮೊಕರರ್ ಮಾಡಬೇಕಾದ್ದಕ್ಕೂ ನಿಷಾವವಾರ್ಥಗಳು ಅಧಿಕವಾಗಿ ಬಿಕರೀಯಾಗುವದಕ್ಕೂ ಕಾರಣವಾಗಿ ಅದರ ದೆಸೆಯಿಂದ ಜನಗಳು ಶಾಶ್ವತವಾದ ಕಷ್ಟಕ್ಕೆ ಗುರಿಯಾಗುವದಕ್ಕೂ ಅವಕಾಶ ಪ್ರಾಪ್ತಿಯಾಯಿತೆಂದು ಪ್ರಸ್ತಾವಿಸಲು ೧೧೦ ಮಂದಿ ಮೆಂಬರುಗಳು ಸೇರಿ ಅದನ್ನು ಹೊಡೆದು ಹಾಕಿದರು.

ಲಾರ್ಡ ರಾಂಡಾಲಫ್ ಚರ್ಚಿಲ್‌ಯವರು, ಸರಹದ್ದು ಪ್ರಾಂತದ ಬಂದೋಬಸ್ತಿಯನ್ನು ಕುರಿತ ಪ್ರಮಾಣವನ್ನು ಘೋಷಿಸಿ ವಿಸ್ತಾರವಾಗಿ ಮಾತನಾಡಿ, ಅಂತಾ ಬಂದೋಬಸ್ತಿಯ ಮೂಲಕ ಪ್ರಜೆಗಳ ಪ್ರಾಣ ಮಾನ ಧನಗಳ ವಿಷಯದಲ್ಲಿ ನಿರಪಾಯತೆ ವೃದ್ಧಿಯಾಗುತಿದೆಯೆಂತಲೂ, ಇಂಡ್ಯ ದೇಶದ ಅರ್ಥೋಪಪತ್ತಿಯು ಕೇವಲ ಮುಖ್ಯವಾದುದೆಂತಲೂ, ಅದಕ್ಕೆ ಕೇವಲ ಜಾಗರೂಕತೆಯೊಡನೆ ನಿಗಾ ಕೊಡಬೇಕೆಂತಲೂ ಅರ್ಥಾನುಪಪತ್ತಿಯ ನಿವಾರಣೆ ಬಗ್ಯೆ ಖಂಡಿತವಾದ ಮಿತವ್ಯಯ ಆವಶ್ಯಕವೆಂತಲೂ ತಮ್ಮ ಅಭಿಪ್ರಾಯವನ್ನು ತಿಳಿಸಿದರು.

ಸರ್ ಜಾರ್ಜ ಗಾರ್‌ಸ್ಟಿಯವರು ನಿಷಾವಾರ್ಥಗಳ ವ್ಯಾಪಾರ ವೃದ್ಧಿಯಾಗುತದೆಂಬ ಭೀತಿಗೆ ಅವಕಾಶವಿಲ್ಲವೆಂದು ತಿಳಿಸಿದರು. ಸರ್‌ಜೇಂಸ್ ಫರ್ಗಸನ್‌ಯವರು ಒಂದುತಕ್ಕೆ ಉತ್ತರ ಹೇಳುವಲ್ಲಿ, ಮಹಾರಾಜ್ಞೀ ಸರ್ಕಾರಕ್ಕೆ ಸರಹದ್ದು ಪ್ರಾಂತವನ್ನು ದಾಟ ಹೋಗಬೇಕೆಂಬ ಅಭಿಪ್ರಾಯವಿಲ್ಲವೆಂತಲೂ, ಸರಹದ್ದನ್ನು ಬಂದೋಬಸ್ತು ಮಾಡುವಣವು ಅನ್ಯ ಸಂಸ್ಥಾನಾಧಿಪತಿಗೆ ಒಂದು ಭಯವನ್ನುಂಟುಮಾಡುವದಕ್ಕೋಸ್ಕರವಲ್ಲವೆಂತಲೂ ಹೇಳಿದರು.

SUMMARY OF NEWS.

ವೃತ್ತಾಂತ ಸಂಗ್ರಹವು.

ಕ್ಯಾಲಿಫರ್ನಿಯಾದೇಶದಲ್ಲಿ ಗೇಬ್ರಿಯಲ್ ಎಂಬ ಒಬ್ಬ ಮನುಷ್ಯನು ೧೪೦ ವರುಷ ವಯಸ್ಸುಳ್ಳವನಿರುತ್ತಾನೆಂತ ತಿಳಿಯುತದೆ.—ಹ. ಸು.

ಹೆಣಸುಡುವದು—ಹೆಣಗಳನ್ನು ಸುದುವ ಅಭ್ಯಾಸವು ಒಳ್ಳೇದೆಂದು ಅಮೇರಿಕಾದೇಶದಲ್ಲಿ ಈಚೆಗೆ ಹೆಣಗಳನ್ನು ಸುದುವದಕ್ಕೆ ಪ್ರಾರಂಭಿಸಿದ್ದಾರೆ.—ವೃ. ಪ.

ಕೊಲ್ಹಾಪುರದಲ್ಲಿ ನಡೆದ ಪ್ರಸಿದ್ಧವೊಂದು ಹಾನಿಯ ಮೊಕದ್ದಮೆಯ ಸಂಬಂಧವಾಗಿ ರಾವ್‌ಬಹದೂರ್ ಮಾಧವರಾವ್ ಬರ್ವೆ ಇವರಿಗೆ ಕೊಲ್ಹಾಪುರದ ಖಜಾನೆಯಿಂದ ೩೫,೦೦೦ ರೂಪಾಯಿಗಳನ್ನು ಲುಕ್‌ಸಾನು ತುಂಬಿಕೊಡುವದರಲ್ಲಿ ಬಂತೆಂದು ಕೇಳುತ್ತೇವೆ.—ಹ. ಸು.

ಮದರಾಸಿಗೆ ಸೇರಿದ ಮೈಲಾಪೂರ್‌ನಲ್ಲಿ ವಾಂತಿಭೇದಿ ರೋಗ ವ್ಯಾಪಿಸಿರುವದರಿಂದ ಅಲ್ಲಿ ನಡೆಯುತಲಿರುವ ಕಪಾಲೀಶ್ವರರ ಉತ್ಸವಕ್ಕೆ ಹೋಗುವದರಿಂದ ಉಂಟಾಗಬಹುದಾದ ಅಪಾಯವನ್ನು ಕುರಿತು ಪ್ರಜೆಗಳು ಎಚ್ಚರಿಸಲ್ಪಟ್ಟದಾರೆ.—ಮೈಮು.

ಚಿನ್ನಮಾಡುವದು—ಇಂಗ್ಲೀಷಿನವರು ಕೆಲವು ರಸಾಯನ ಪದಾರ್ಥಗಳನ್ನು ಸೇರಿಸಿದರೆ ಅಪ್ಪಟ ಚಿನ್ನವಾಗುತ್ತದೆ ಎಂಬುವದನ್ನು ಕಂಡು ಹಿಡಿದರೆಂಬ ಸುದ್ದಿಯಿದೆ. ಹೀಗಾದರೆ, ಚಿನ್ನವು ಬಹಳ ಅಗ್ಗವಾಗುವದಲ್ಲವೇ?—ವೃ. ಪ.

ಈ ವರುಷ ಬಿ. ಎ. ಪರೀಕ್ಷೆಯಲ್ಲಿ ತೇರ್ಗಡೆ ಪಟ್ಟ ಮಿಸೆಸ ಸೋರಾಬ್‌ಜಿ ಎಂಬ ಫಾರ್ಸೀ ಜಾತಿಯ ತರುಣಿಯನ್ನು ಸರಕಾರದವರು ಗುಜರಾತಿ ಕಾಲೇಜಿನಲ್ಲಿ (ಫೆಲೋ) ಆಗಿ ನೇಮಿಸಿದರು. ಗಂಡುಹುಡುಗರಿಗೆ ಸ್ತ್ರೀಶಿಕ್ಷಕಳು ಶಿಕ್ಷೆಯಿದ್ದು ಇದೇ ಮೊದಲನೇದು.—ಕ. ಸು.

ನಾಯಿಗಳಸಹಾಯ.—ಅಮೇರಿಕಾ ದೇಶದಲ್ಲಿ ನಾಯಿಗಳನ್ನು ಯುದ್ಧಕಾಲಕ್ಕಾಗಿ ಸಹಾಯ ಮಾಡುವಂತೆ ಪಳಗಿಸುವ ತರದೂದಿನಲ್ಲಿದ್ದಾರೆ. ಡೆನ್ಮಾರ್ಕದೇಶದ ಒಂದುಜಾತಿ ನಾಯಿಗಳು, ಇಂತಾಕೆಲಸಕ್ಕೆ ದಕ್ಷನಾಗಿವೆಯಂತೆ. ಇವುಗಳಿಗೆ ಯುದ್ಧಕಾಲದಲ್ಲಿ, ಘಾಯವಾದವರನ್ನು ಕಂಡುಹಿಡಿಯುವದಕ್ಕೂ ಮತ್ತು ಮದ್ದುಗುಂಡುಗಳು ತೀರಿದಹಾಗೆಲ್ಲ ತಂದುಕೊಡುವದಕ್ಕೂ ಪಳಗಿಸುತಿದ್ದಾರಂತೆ.—ವೃ. ಪ.

ಒಬ್ಬ ಭಂಡಾರಿಯು ಲಾಹೋರ್‌ದ ಕಡೆಯ ಸುಮಾರು ೧೩—೧೪ ವರುಷ ಪ್ರಾಯದ ಕೇಣವೀಜಾತಿಯ ಇಬ್ಬರು ತರುಣ ಹುಡುಗಿಯರನ್ನು ಮೋಸಗೊಳಿಸಿ ಅವರನ್ನು ಕರಕೊಂಡು ಮುಂಬೈಗೆಬಂದು ಆಗ ಗಾಡಿಯಮೇಲಿಂದ ಓಡಿಸಿಕೊಂಡು ಹೋಗಬೇಕೆಂತ ಸ್ಟೇಷನಿಗೆ ಹೋಗುವದರೊಳಗೆ ಸಂಶಯಬಟ್ಟ ಪೋಲೀಸ್ ಶಿಪಾಯಿಯರು ಹಿಡಿದಿರುತ್ತಾರೆ. ಮುಂದಿನ ವ್ಯವಸ್ಥೆ ಏನಾಯಿತೆಂತ ತಿಳಿಯಲಿಲ್ಲ.—ಹ. ಸು.

ಗಾಯಕವಾಡಿ ಮಹಾರಾಜರು ವಿಲಾಯಿತಿಯಿಂದ ತಿರುಗಿ ಈ ದೇಶಕ್ಕೆ ಸುರಕ್ಷಿತವಾಗಿ ಬಂದದ್ದನ್ನು ನಾವು ತಿಳಿಸಿರುತ್ತೇವೆಯಷ್ಟೇ, ಆದರೆ ಅವರು ತಮ್ಮರಾಜ್ಯಕ್ಕೆ ಹೋಗಿ ಸ್ವಲ್ಪ ದಿವಸಗಳವರಿವಿಗೆ ಇದ್ದು ತಿರುಗಿ ನೀಲಗಿರಿಗೆ ಕಳೆದವಾರದಲ್ಲಿ ಹೋದರು. ಸುಮಾರು ಎಂಟುತಿಂಗಳುಗಳವರಿಗೆ ಪರಸ್ಥಳದಲ್ಲಿದ್ದು ಮತ್ತು ತಮ್ಮರಾಜ್ಯದಿಂದ ಹೊರಗಿರುಗಲಿಕ್ಕೆ ಏನುಕಾರಣವಿರುವದೋ ನಮಗೆ ತಿಳಿಯುವದಿಲ್ಲ. ದೇಹಿಕ ಅವಸ್ಥೆಯ ಸಲುವಾಗಿ ಪರಸ್ಥಳವಾಸವು ಇರಬಹುದೆಂತ ನಾವು ತಿಳುಕೊಳ್ಳುವದಿಲ್ಲ. ಯಾಕೆಂದರೆ, ವಿಲಾಯತಿಯ ಪ್ರಯಾಣದಿಂದ ಇವರ ಪ್ರಕೃತಿಯು ಸುಧಾರಿಸಿಬಿಟ್ಟು ಸೌಖ್ಯವನ್ನನುಭವಿಸುತಲಿದ್ದಾರೆಂದು ವಿಲಾಯತಿಯ ಪತ್ರಗಳಲ್ಲಿ ಬರೆಯುತ್ತಿದ್ದರು. ಅದೇಪ್ರಕಾರ ಈಗ ಅವರನ್ನು ಕಂಡವರಿಗೆ ಸಹ ಕಾಣುತಿತ್ತು. ಹೀಗಿರುತ ಈ ನೀಲಗಿರಿ ಪ್ರವಾಸ ಈ ಮಹಾರಾಜರಿಗೆ ಮಾಡಬೇಕಾದ ಕಾರ್ಯಯಾವದು? ಇದುವಿನಾ ಇವರಿಗೆ ತಮ್ಮ ಪ್ರಜೆಗಳ ಮತ್ತು ರಾಜ್ಯದ ಇಂತಿಷ್ಟಾದರೂ ಚಿಂತೆಯಿಲ್ಲವೋ ಹ್ಯಾಗೆ? ನಮ್ಮ ಸರಕಾರದವರು ಸಹ ಇದನ್ನು ಕುರಿತು ಹ್ಯಾಗೆ ಸುಮ್ಮನಿರುತ್ತಾರೆ. ಬಹುಶಃ ಇದಕ್ಕೆ ಸರಕಾರದವರ ಒಪ್ಪಿಗೆ ಇರಬಹುದು.

ಗಾಯಕವಾಡ ಮಹಾರಾಜರ ಗಣನೆಯು ಒಳ್ಳೇಜಾಣ ಮತ್ತು ರಾಜ್ಯಾಡಳಿತದಲ್ಲಿ ಪ್ರವೀಣರಾದ ಸಂಸ್ಥಾನಿಕರಲ್ಲಿಮಾಡುತದೆ. ಆದರೆ ಅವರಲ್ಲಿ ಈಗುಣಗಳಿದ್ದು ಅರ್ಥವೇನು? ವರ್ಷಾದಿವರೆಗೆ ಅತ್ತಿತ್ತ ಪ್ರಯಾಣ ಮಾಡುತಿದ್ದರೆ ರಾಜ್ಯಕಾರ್ಯಗಳು ಹ್ಯಾಗೆ ನಡದೀತು. ಆಳುಮಾಡಿದ್ದುಹಾಳು; ಎಂಬಂತೆ ತಮ್ಮ ಗೈರಹಾಜರಿಯಲ್ಲಿ ಚೆನ್ನಾಗಿ ವ್ಯವಸ್ಥೆನಡಿಯುವಂತೆ ಸಾಧನೆಗಳಿಟ್ಟರೂ ತಾವು ಸ್ವತಃ ಇದ್ದು ಮಾಡಿದಂತೆ ವ್ಯವಸ್ಥೆಯು ಎಂದಿಗೂ ಆಗಲಿಕ್ಕಿಲ್ಲ. ಆದಕಾರಣ ಇನ್ನಾದರೂ ನೀಲಗಿರಿಯವ್ರವಾಸದಿಂದ ಬೇಗನೆ ತಿರುಗಿಬಂದು ತಮ್ಮರಾಜ್ಯವಾಡಳಿತವನ್ನು ಯಥಾಪ್ರಕಾರ ನೋಡ್ಯಾರೆಂತ ನಾವು ನಂಬುತ್ತೇವೆ.—ಕ. ಸು.

ಹೈದರಾಬಾದಿನ ನಿಜಾಮರ ಸ್ಥಿತಿಯು ಇನ್ನೊಮ್ಮೆ ಮೊದಲಿನಂತೆ ವ್ಯಸನ ಗೊಳಿಸುವದಷ್ಟು ಕೆಟ್ಟು ಹೋಗಿರುವದೆಂತ ಕೇಳ ಬರಲಾರಂಭಿಸಿದೆ. ಅವರು ಪ್ರಾಯಸ್ಥರೂ ಜಾಣರೂ, ರಾಜಕಾರ್ಯ ಧುರೀಣರೂ ಇದ್ದು ತಮ್ಮ ರಾಜ್ಯಾಡಳಿತೆಯನ್ನು ತಾವೇ ಸ್ವತಃ ನಡಿಸಲು ಅತಿ ಔತ್ಸುಕ್ಯ ಉಳ್ಳವರಾಗಿದ್ದರೂ ಈಗ ಒಮ್ಮಿಗೇನೇ ಒಂದು ಕಾರ್ಯದಲ್ಲಾದರೂ ಮನಸ್ಸು ಕೊಡದೆ ಏಕಾಂತದಲ್ಲಿಯೇ ತಮ್ಮ ಕಾಲ ಕಳೆಯುತ್ತಾರೆಂಬ ವರ್ತಮಾನವನ್ನು ನಾವು ಕೇಳಲು ಅತಿ ವಿಷಾದ ಪಡುತ್ತೇವೆ. ಸರ್ ಸಾಲಾರ್ ಜಂಗರ ಪ್ರಧಾನತ್ವದಲ್ಲಿ ನಿಜಾಮರ ಸ್ಥಿತಿಯು ಇದೇ ಪ್ರಕಾರ ಒಂದಾವರ್ತಿ ವೈರಾಗ್ಯವನ್ನು ಅಂಗೀಕರಿಸಿತ್ತು ಎಂತ ನಾವು ಕೇಳಿದ್ದೆವು, ಆದರೆ ಅಂಥ ದುರಾವಸ್ಥೆಯು ಅಸ್ಮಾನಜಹಾ ಬಹದೂರರ ಮಂತ್ರಿತನದಲ್ಲಿ ಬಂದೀತೆಂತ ನಾವು ಕನಸಿನಲ್ಲಾದರೂ ಯೋಚಿಸಲಿಲ್ಲ. ಅಸ್ಮಾನಜಹಾ ಬಹದ್ದರರು ಹಳೇ ರೀತಿಯವರೂ, ರಾಜ್ಯಾಡಳಿತೆಯ ಕೆಲಸದಲ್ಲಿ ನ್ಯಾಯ ಮತ್ತು ಶಾಂತ ವೃತ್ತಿಯವರೂ ಇದ್ದು ತಮ್ಮ ರಾಜ್ಯದ ಕೀರ್ತಿಯನ್ನು ಕಾಪಾಡಿಕೊಳ್ಳಲು ಮನಃಪೂರ್ವಕ ಹವಣಿಸುವವರಾಗಿರುತ್ತಾರೆ. ಮತ್ತು ಸಾಲಾರ್ ಜಂಗರಂತೆ ನಿಜಾಮರೊಡನೆ ಭಿನ್ನ ಮತವವರಾಗಿಲ್ಲದೆ ಮೊದಲನೇ ವರುಷದೊಳಗೇನೇ ಅವರ ಪೂರ್ಣ ಪ್ರೀತಿಯನ್ನೂ ಸನ್ಮಾನವನ್ನೂ ಪಡಕೊಂಡಿರುತ್ತಾರೆ. ಹೀಗಿರುತ್ತ ನಿಜಾಮರು ತಮ್ಮ ನಿಜ ಸ್ವಭಾವಕ್ಕೂ ರಾಜ್ಯದ ಹೆಸರಿಗೂ ಅಪವಾದ ಬರುವಂತೆ ಏನು ಕಾರಣ ನಡಕೊಳ್ಳುತ್ತಾರೆಂತ ತಿಳಕೊಳ್ಳುವದು ಭಗೀರಥ ಪ್ರಯತ್ನಗಳಿನೇ ಸಾಧ್ಯವಾಗುವದು ಹೊರ್ತು ನಮ್ಮಂಥವರಿಗೆ ಅಸಾಧ್ಯವು. ನಿಜಾಮರವರು ನಮ್ಮ ರಾಜ್ಯ ಕರ್ತ ಇಂಗ್ಲಿಷ್ ಸರಕಾರಕ್ಕೆ ವಾಯುವ್ಯ ದಿಕ್ಕಿನ ಭದ್ರತೆಗಾಗಿ ೬೦ ಲಕ್ಷ ರೂಪಾಯಿ ಕೊಡಲು ಪ್ರವೃತ್ತರಾದದ್ದು ಸ್ವಸಂತೋಷದಿಂದಲೋ ಹ್ಯಾಗೋ ಎಂಬ ಬಗ್ಯೆ ಇತ್ತಲಾನೆ ಬಹಿರಂಗವಾಗಿ ಸರ್ವರೂ ಅನುಮಾನ ಪಡುತ್ತಾರೆ. ಹಾಗೆಯೇ ಅವರು "ಸ್ವಸಂತೋಷ" ಎಂಬ ಗುಣವನ್ನೇ ಮರತು ಹೋಗಬೇಕಾಗಿ, ತಮಗೆ ಒಪ್ಪಿತವಲ್ಲದ ಕೆಲಸಗಳಿಗೆ ಸಹ ಅನುಮೋದನೆ ಕೊಡುವಕಾಲ ಒಂದೊಂದಾಗಿರುತ್ತದಂತೆ. ಈಗಿನ ಸ್ಥಿತಿಯಲ್ಲಿ (ಪ್ರಸಂಗದಲ್ಲಿ) ಆ ನಿಜಾಮರಾದವರು ಏನು ಮಾಡ್ಯಾರು? ಅವರು ಏಕಾಂತವನ್ನೇ ಆದರಿಸಿಕೊಂಡಿರುವದು ಗುಣವು. ಈಗಿನ ಕಾಲದ ಹಿಂದುಸ್ಥಾನದೊಳಗಿನ ನಮ್ಮ ಅರಸರಿಗೆ ಏಕಾಂತವೇ ಭೂಷಣವು. ಮೌನವೇ ಗೌರವು. ಇಲ್ಲವೇ ಮರಳು ಹಿಡಿದು ನಾಯುವದು, ಅಥವಾ ಪೀಡೆ ಹಿಡಿದು ಊರು ಊರು ತಿರುಗುವದು ಹಣೆಯಲ್ಲಿ ಬರೆದಿಟ್ಟದ್ದುಂಟಷ್ಟೇ.—ಕ. ಸು.

BANGALORE:—Printed and published for the Proprietor at the KARNATIC Press.—1888.

ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA.

ಪ್ರತಿ ಸೋಮವಾರ ಪ್ರಾತಃಕಾಲದಲ್ಲಿ ಪ್ರಕಟಿಸಲ್ಪಡುವದು.

Published every Monday Morning.

[illegible]

Vol. XV.] BANGALORE—MONDAY, 26, MARCH 1888. [No. 12.

ಪುಸ್ತಕ ೧೫.] ಬೆಂಗಳೂರು:—ಸನ್ ೧೮೮೮ನೇ ಇಸವಿ ಮಾರ್ಚಿ ೨೬ನೇ ತಾರೀಖು ಸೋಮವಾರ. [ಸಂಚಿಕೆ ೧೨.

ಕರ್ಣಾಟಕ ಪ್ರಕಾಶಿಕಾ

ಪತ್ರಿಕೆಯ ಚಂದಾ ದರಗಳು,
೧೮೮೮ನೇ ಇಸವಿ ಜನವರಿ ೧ ಮೊದಲು
ಕಡಿಮೆ ಮಾಡಲ್ಪಟ್ಟಿರುತ್ತವೆ.

ಈ ಪತ್ರಿಕೆಯ ಚಂದಾದಾರರಿಗೆ ಅನೇಕ [illegible]

ಇಂಗ್ಲಿಷ್ ಮತ್ತು ಕನ್ನಡಭಾಗಗಳಿಗೆ.

	ಮುಂಗಡವಾಗಿ	ಹಿಂದುಗಡೆಯಾಗಿ
12 ತಿಂಗಳಿಗೆ	8—0—0	9—0—0
6 „	4—0—0	4—8—0
3 „	2—8—0	2—8—0

ಇಂಗ್ಲಿಷ್ ಅಥವಾ ಕನ್ನಡಭಾಗಗಳಿಗೆ.

	ಮುಂಗಡವಾಗಿ	ಹಿಂದುಗಡೆಯಾಗಿ
12 ತಿಂಗಳಿಗೆ	4—0—0	5—0—0
6 „	2—0—0	2—8—0
3 „	1—4—0	1—8—0

[illegible]

[illegible]

ಪ್ರಕಟನೆಯ ದರಗಳು.

[illegible]

"IT RECOMENDS ITSELF"

ALL WHO SUFFER FIND SURE RELIEF.

LITTLE'S

ORIENTAL BALM

THE MOST EFFECTUAL MODERN REMEDY FOR PAIN.

[illegible]

ಪರೀಕ್ಷಕರ ಅಭಿಪ್ರಾಯವು.

[illegible] (C. B. Tichborne, L. L. D., F. C. S., M. R. I. A.) [illegible]

ಇದರ ಕ್ರಯ—ಒಂದು ಬುದ್ದಿಗೆ ೧ ರೂಪಾಯಿ.

[illegible]

Agents.—} Messrs, J. West, Chemist, &c., Bangalore.
Captain & Co. Chemists, Bangalore.
Lion & Co., Chemists, Bangalore; and of
Mahomed Yousuf and Sons, The Cash Bazarr, Bangalore
A. C. Bergman & Co.,
20 Sambodoss Street Madras.

NOTICE.

VAIDYASARA SANGRAHA

A TREATISE ON THE PRINCIPLES OF

HINDU MEDICINE.

Price including Postage Rs 5 6—0

ವೈದ್ಯಸಾರ ಸಂಗ್ರಹ.

ರೋಗಿಂತ್ವಾಪೇಕ್ಷೆಯುಳ್ಳವರು [illegible] ಕಳಿಸಲ್ಪಡುವದು. [illegible]

ಇದರ ಕ್ರಯ ... ... ರೂ ೫—೦—೦

[illegible]

[illegible] ಬೆಂಗಳೂರು.

ವಿಶೇಷ ವರ್ತಮಾನ

[illegible]

[illegible]

ಚನ್ನರಾಯಪಟ್ಟಣದ ಕಲ್ಯಾಣ [illegible]
ಸಂಪನ್ನಿಧಿ ಇಂದು.

ಇಷ್ಟು ಹಾರನಾಮೆ.

ಸನ್ ೧೮೮೮ನೇ ಇಸವಿ ಫೆಬ್ರವರಿ [illegible] ಪ್ರೊಸೀಡಿಂಗ್ಸ್ ಅನುಸರಿಸಿ [illegible]

[illegible]

ನೋಟೀಸ್.

Bangalore City Municipality.
ಬೆಂಗಳೂರು ಸಿಟಿ ಮ್ಯುನಿಸಿಪಾಲಿಟಿ.

ಸನ್ ೧೮೮೮ನೇ ಇಸವಿ ಮಾರ್ಚಿ ೩೦ನೇ ತಾರೀಖು ಮಂಗಳವಾರ ಪ್ರಾತಃಕಾಲ ೭½ ಘಂಟೆಗೆ ಸಿಟಿ ಮ್ಯುನಿಸಿಪಲ್ ಸಂಘದವರು ತಮ್ಮ ಆಫೀಸ್ ಕಚೇರಿಯಲ್ಲಿ ಸಭೆ ಸೇರುವಾಗ ಅವರ ಮನಸ್ಸಿಗೆ ತರಲ್ಪಡತಕ್ಕ ವಿಷಯಗಳಯಾವವು.

೧. ಸನ್ ೧೮೮೮ನೇ ಇಸವಿ ಫೆಬ್ರವರಿ ತಿಂಗಳ ಪ್ರೊಸೀಡಿಂಗ್ಸ್ ಮತ್ತು ಜನನ ಮರಣ ಪಟ್ಟಿಗಳು ಮುಂತಾದ ಪತ್ರಗಳು.

೨. ಸನ್ ೧೮೮೮-೮೯ನೇ ಇಸವಿಗೆ ಮಾರ್ಕೆಟಿನಲ್ಲಿ ವಸೂಲಿ ಬಗ್ಗೆ ಬರತಕ್ಕ ಪದಾರ್ಥಗಳ ವ್ಯವಸ್ಥೆ.

೩. ಆಸ್ಪತ್ರೆಗಳಿಗೂ ಔಷಧ ಶಾಲೆಗಳಿಗೂ ಮೆಡಿಕಲ್ ಸ್ಟೋರಿನಿಂದ ಸರಬರಾಯಿ ಮಾಡಲ್ಪಟ್ಟ ಮದ್ದು ವಗೈರೆ ಪದಾರ್ಥಗಳ ಬಾಬತ್ತು ಬಾಬ್ತು ೧೮೮೫-೮೬-೮೭ ರವರೆಗೆ ೩ ಬಿಲ್ಲುಗಳು ಮೊಬಲಗು ಸರಿಯೇ ಮೆಡಿಕಲ್ ಸ್ಟೋರ್ ಇನ್‌ಛಾರ್ಜಿನಲ್ಲಿರುವ ಸೀನಿಯರ್ ಸರ್ಜನ್ ರವರು ಬರೆದ ಸನ್ ೧೮೮೮ನೇ ಇಸವಿ ಫೆಬ್ರವರಿ ೨೩ನೇ ಮುಕ್ಕಾಂ ೬೨ನೇ ನಂಬರ್ ಕಾಗದ.

೪. ಸುಬೇದಾರ್ ಛತ್ರದ ರಸ್ತೆಯಲ್ಲಿ ಈಗಿರುವ ಅರಳೇ ಯಂತ್ರದ ಕಟ್ಟಡವನ್ನು ಮ್ಯುನಿಸಿಪಲ್ ಸರಹದ್ದಿನೊಳಗೆ ಸೇರಿಸಿಕೊಳ್ಳಬೇಕೆಂದು ಸೂಚಿಸಿ ಸಿಟಿ ಮ್ಯುನಿಸಿಪಲ್ ಕಲೆಕ್ಟರವರು ಬರೆದ ಲೆಟರ್.

೫. ಕಸಾಯಿ ದೊಡ್ಡಿಯ ತೆರಿಗೆಯನ್ನು ಹೆಚ್ಚಿಸಬೇಕೆಂಬ ವಿಷಯ.

೬. ದನಗಳ ಮಾರಾಟದ ಬಗ್ಗೆ ಒಂದು ದೊಡ್ಡಿಯನ್ನು ಕಟ್ಟತಕ್ಕದ್ದು, ಅಥವಾ ಅದಕ್ಕೆ ಒಂದು ಸ್ಥಳವನ್ನು ಗೊತ್ತು ಮಾಡತಕ್ಕದ್ದು.

೭. ಈ ಮ್ಯುನಿಸಿಪಾಲಿಟಿಯ ಉಪಯೋಗಕ್ಕಾಗಿ ಹಾರ್ಬರಿಯವರಿಂದ ಮಾಡಲ್ಪಟ್ಟಿರುವ ಸಾಮಾನುಗಳು ಕೆಲವನ್ನು ಕೊಂಡುಕೊಳ್ಳಬೇಕೆಂಬ ವಿಷಯ.

೮. ಸಿದ್ದಿಕಟ್ಟೆಯಲ್ಲಿರುವ ವೆಸ್ಲಿಯನ್ ಮಿಷನ್ ಬಾಲಿಕಾ ಪಾಠಶಾಲೆಯ ಕಟ್ಟಡವನ್ನು ಇನ್ನು ದೊಡ್ಡದಾಗಿ ಕಟ್ಟುವದಕ್ಕೆ ಅರ್ಧ ಸಹಾಯ ಕೊಡಬೇಕೆಂದು ವೆಸ್ಲಿಯನ್ ಮಿಷನ್ ಜನರಲ್ ಸೂಪರಿಂಟೆಂಡೆಂಟ್ ರೆವರೆಂಡ್ ಹಡ್‌ಸನ್ ಎಂಬವರು ಬರೆದುಕೊಂಡ ಅರ್ಜಿಯನ್ನು ಕಳುಹಿಸಿ ಮೈಸೂರು ಗವರ್ನಮೆಂಟ್ ವಿದ್ಯಾಭ್ಯಾಸ ಇಲಾಖಾ ಸೆಕ್ರೆಟರಿಯವರು ಬರೆದ ಸನ್ ೧೮೮೮ನೇ ಇಸವಿ ಮಾರ್ಚಿ ೧೩ನೇ ಮುಕ್ಕಾಂ ೩೬೩೭ನೇ ನಂಬರ್ ಕಾಗದ.

ಜಾಸ್ತೀ ವಿಷಯ.

ಮುಂದಿನ ಸೆಪ್ಟೆಂಬರ್ ತಿಂಗಳ ಆಗಾಯ್ತು ಮ್ಯುನಿಸಿಪಲ್ ಕಮಿಷನರ್‌ಗಳನ್ನು ಪ್ರಜೆಗಳು ಚುನಾಯಿಸುವ ಪದ್ಧತಿಯನ್ನು ಜಾರಿಯಲ್ಲಿ ತರಬೇಕೆಂತಲೂ, ಆ ಕಾಲದವರಿವಿಗೆ ಮ್ಯುನಿಸಿಪಲ್ ಕಮಿಷನರ್‌ಗಳ ಪೈಕಿ ಕೆಲವರ ನೌಕರಿಯ ಮುದ್ದತ್ತನ್ನು ಹೆಚ್ಚಿಸುವದಕ್ಕೆ ಹುಕುಂ ಆಗಬೇಕೆಂತಲೂ ಸಮೂಹಿಸಿ ಪ್ರೆಸಿಡೆಂಟರವರು ಗವರ್ನಮೆಂಟಿಗೆ ಬರೆದ ಸನ್ ೧೮೮೮ನೇ ಇಸವಿ ಮಾರ್ಚಿ ೩೩ನೇ ಮುಕ್ಕಾಂ ೬೫೨ನೇ ನಂಬರ್ ಲೆಟರ್.

ಬೆಂಗಳೂರು ೨೪ನೇ ಮಾರ್ಚಿ ೧೮೮೮.

A. SRINIVASA CHARLU, R. B.,
Vice-President,
City Municipal Commission

ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA.
MONDAY, MARCH 26, 1888.
೧೮೮೮ನೇ ಮಾರ್ಚಿ ೨೬ನೇ ತಾ|| ಸೋಮವಾರ.

THE MYSORE CHIEF COURT.

ಮೈಸೂರು ಸೀಮೆಯ ಚೀಫ್‌ಕೋರ್ಟ್ ಚೀಫ್ ಜಡ್ಜಿಯರಾದ ಮ|| ಸಿ. ಜಿ. ಪ್ಲಾಮರ್‌ಯವರು ಫರ್ಲೋ ರಜಾ ಪಡೆದು ತಿಳಿಸಿ ಇದ್ದಂತೆ ಫರ್ಲೋ ರಜಾ ಮೇಲೆ ಈ ವಾರದಲ್ಲಿ ಇಂಗ್ಲಾಂಡಿಗೆ ಪ್ರಯಾಣವಾಗುವರು. ಇವರ ಗೈರ್‌ಹಾಜರಿಯಲ್ಲಿ ಸದರೀ ಕೋರ್ಟಿನ ಕೆಲಸಗಳು ನಡೆಯಬೇಕಾದ ಕ್ರಮವನ್ನೂ, ಆ ಕಾಲದಲ್ಲಿರಬೇಕಾದ ಜಡ್ಜಿಗಳ ಸಂಖ್ಯೆಯೂ ಇದ್ಯಾಪಿ ವ್ಯವಸ್ಥೆಯಾಗುತ್ತಿಲ್ಲವು. ಪರಂತು ಚೀಫ್‌ಜಡ್ಜಿಯವರ ರಜಾ ಕಾಲದಲ್ಲಿ ದುಯ್ಯಂ ಸಿಯ್ಯಂ ಜಡ್ಜಿಗಳೇ ಸಾಕಾಗಿರುವದೇ, ಅಲ್ಲದೆ ಕ್ರಮವಾಗಿ ಪ್ರತ್ಯೇಕ ಮೂವರಿರಬೇಕಾದದ್ದು ಅವಶ್ಯಕವೇ ಎಂದು ಆಲೋಚಿಸಿ ನೋಡಿದಾಗ ನಮಗೆ ತೋರಬರುವದೇನೆಂದರೆ—ಇದುವರೆವಿಗೆ ಯಾವ ಚೀಫ್ ಅಥವಾ ಹೈಕೋರ್ಟಿನಲ್ಲಿ ನೋಡಿದಾಗ್ಯೂ ಜಡ್ಜಿಗಳ ಸಂಖ್ಯೆಯು ವಿಷಮವಾಗಿರುವದೇ ಹೊರ್ತು ಸಮವಾಗಿರುವಂತೆ ಕಾಣಿಸಲಿಲ್ಲವು. ನ್ಯಾಯನಿರ್ಣಯಬಗ್ಗೆ ನ್ಯಾಯಾಧಿಪತಿಗಳಲ್ಲಿ ಭೇದಪಟ್ಟಾಗ್ಯೂ ಅವರ ತಾತ್ಪರ್ಯಾನುಗುಣವಾಗಿ ಅದು ಕಾಯವರತಕ್ಕದ್ದಾಗಿರುತ್ತದೆ. ಇಲ್ಲಿನ ಚೀಫ್ ಕೋರ್ಟ್ ಆಕ್ಟಿನ ಅಪೀಲ್ ಕೋರ್ಟಾಗಿ ಏರ್ಪಟ್ಟಿರುವದರಿಂದ ಇಲ್ಲಿ ಜಡ್ಜಿಗಳ ಸಂಖ್ಯೆಯು ಜಾಸ್ತಿಯಾಗಿರಬೇಕಾದದ್ದು ಅತ್ಯಾವಶ್ಯಕವಾಗಿರುತ್ತದೆ. ಈ ಕ್ರಮವನ್ನನುಸರಿಸಿ ಸೆಬಕ್‌ಟೀಪೂ ಸುಲ್ತಾನರ ಕಾಲ ಮೊದಲು ಮ|| ಬೌರಿಂಗ್‌ಯವರು ಚೀಫ್ ಕಮಿಷನರಾಗಿ ಏರ್ಪಟ್ಟ ಕಾಲದ ವರೆಗೆ ಹುಜೂರು ಅದಾಲತ್ ಕೋರ್ಟ್ ನಡೆಯುತ್ತಿದ್ದು ಅವರಲ್ಲಿ ಮೂವರು ಜಡ್ಜಿಗಳು ನಿಯಮಿತರಾಗಿರುತಲಿದ್ದರು. ಇದೇ ರೀತಿ ಆಯಾ ನೇಟಿವ್ ಸಂಸ್ಥಾನಗಳಲ್ಲೆಲ್ಲ ಮೂರು ಮಂದಿ ಜಡ್ಜಿಗಳು ಇರುತಲಿದ್ದಾರೆ. ಯಾವ ಕಾಲದಲ್ಲಿ ಈ ದೇಶವೊಳು ಆಯೋಧ್ಯೆಯ ಆಡಳಿತ ಕ್ರಮವು ಅನುಸರಿಸಲ್ಪಡಲಿಕ್ಕೆ ಉಪಕ್ರಮವಾಯಿತೋ ಆ ಕಾಲದಲ್ಲಿ ಜುಡಿಷಿಯಲ್ ಕಮಿಷನರ್ ಎಂಬ ಸರ್ವೋನ್ನತಾಧಿಕಾರವುಳ್ಳ ಒಬ್ಬ ಅಧಿಕಾರಿಯು ಚೀಫ್ ಕಮಿಷನರಿಗೆ ಸಮಾನರಾಗಿ ಮೊಕರರಾಗಿ, ಕೆಲಸ ಚಲಾಯಿಸುತ್ತ ಬಂದರು. ತರುವಾಯ ಮಹಾರಾಜರವರಿಗೆ ರಾಜ್ಯ ಒಪ್ಪಿಸುವ ಕಾಲದಲ್ಲಿ ನೇಟಿವ್ ಪ್ರಭುತ್ವಕ್ಕೆ ತಕ್ಕಂತೆ ಮೂವರು ಜಡ್ಜಿಗಳು ಮೊಕರರಾಗಬೇಕೆಂತ ತೀರ್ಮಾನವಾಯಿತು. ಇದನ್ನನುಸರಿಸಿ ಮಹಾರಾಜಾ ಸರ್ಕಾರದವರು ೧೮೭೮ನೇ ಇಸವಿಯ ೧ನೇ ನಂಬರ್ ರೆಗ್ಯುಲೇಷನಿನ ೪ನೇ ಸೆಕ್ಷನ್ ಮೂಲಕ ಚೀಫ್‌ಕೋರ್ಟಿಗೆ ಯಾವಾಗಲೂ ಮೂರು ಜನ ಜಡ್ಜಿಗಳು ಖಾಯಮಾಗಿರಬೇಕೆಂಬದಾಗಿ ನಿರ್ಣಯಿಸಿರುತ್ತಾರೆ. ಮ|| ತಂಬುಶೆಟ್ಟಿಯವರು ಅಫಿಷಿಯೇಟಿಂಗ್ ದಿವಾನರಾಗಿದ್ದು ಕೆಲಸ ನೋಡುತಲಿದ್ದ ಕಾಲದಲ್ಲಿ ಹ್ಯಾಗೆ ಅಷ್ಟರ ಸಿಯ್ಯಂ ಜಡ್ಜಿಗಳಬ್ಬರೇ ಕೆಲಸಗಳನ್ನು ನಿರ್ವಹಿಸುತ್ತಿದ್ದರೋ ಬದಸ್ತೂರ್ ಈಗಲೂ ಯಾತಕ್ಕೆ ನಡೆಸಬಾರದೆಂಬದಾಗಿ ಅನೇಕರು ಕೇಳಬಹುದು. ಮತ್ತು ಗವರ್ನಮೆಂಟಿನವರು ಸಹ ಅದು ಒಂದುವೇಳೆ ಯುಕ್ತವನ್ನಾಗಿ ಭಾವಿಸಿದಾಗ್ಯೂ ಭಾವಿಸಬಹುದು. ಪರಂತು ಮ|| ಶೆಟ್ಟಿಯವರ ಗೈರ್‌ಹಾಜರೀ ನಿಮಿತ್ತದಿಂದ ಯುಕ್ತ ಕಾಲಕ್ಕೆ ನಡೆಯಬೇಕಾದ ಸೆಷನ್ ವಿಚಾರಣೆಯು ಮುಂದಕ್ಕೆ ಅಡ್ಜರ್ನ್ ಮಾಡಿದುದಂತೆ ಏರ್ಪಟ್ಟದ್ದಲ್ಲದೆ ಕೆಲವು ಪ್ರೊಬೇಟ್ ಮೊಕದ್ದಮೆಗಳುಕೂಡ ಅವರು ಮರಳಿ ಬಾಜುಕಾಗೆ ಪುಕೊಳ್ಳುವತನಕ ಅವಾಂತರವಾಗಿ ಉಳಿಸಲ್ಪಟ್ಟಿದ್ದವು. ಇದರಿಂದ ಕಕ್ಷಿಗಾರರಿಗೂ, ಸಾಕ್ಷಿಗಳಿಗೂ ವರ್ಯಾಪ್ತಿಯಲ್ಲಿರುವ ಅಪರಾಧಿಗಳಿಗೂ ಪರಬಾರೆಯಾ ಆಯುಸಿಗಳಿಗೂ ಪ್ರಯಾಣದ ಸಂಕಟಗಳು ಹೇಳ ಅಶಕ್ಯವಾಗಿದ್ದವು. ಹೀಗಿರುವಲ್ಲಿ ಈಗಿರುವ ಇಬ್ಬರು ಜಡ್ಜಿಗಳಲ್ಲಿ ಒಬ್ಬರು ಸೆಷನ್ ವಿಚಾರಣೆಗೆ ಹೋದರೆ ಮತ್ತೊಬ್ಬರು ಒರಿಜನಲ್ ಮೊಕದ್ದಮೆಗಳನ್ನು ವಿಚಾರಿಸಬೇಕಾಗುವದು. ಇವರಿಬ್ಬರ ಫೈಸಲಿನಮೇಲೆ ಅಪೀಲಿಗೆ ಅವಕಾಶವಾಗುವದೆಯಾಗಿ ಮ|| ಪ್ಲಾಮರ್‌ಯವರು ಮರಳಿ ಇಲ್ಲಿಗೆ ಬರುವತನಕ ಅಪೀಲ್ ಮೊಕದ್ದಮೆಗಳಿಗೆ ಬಹಳ ಅಡಚಣೆ ಉಂಟುಮಾಡಿದಂತೆಯಾಗುವದು. ಆದರೆ ಜ್ಯುಡಿಷಿಯಲ್ ಕಮಿಷನರ ಗೈರ್‌ಹಾಜರಿಯಲ್ಲಿ ಅವರ ಕೆಲಸವನ್ನು ಡಿವಿಜನ್ ಕಮಿಷನರು ನೋಡುವ ಸಂದರ್ಭಗಳಲ್ಲೆಲ್ಲ ಅವರು ಡಿವಿಜನ್‌ನಲ್ಲಿ ಮಾಡಿದ್ದ ಫೈಸಲಿಗಳಮೇಲೆ ಬರುತಲಿದ್ದ ಅಪೀಲುಗಳನ್ನೆಲ್ಲ ಚೀಫ್ ಕಮಿಷನರೇ ಹಿಡಿದು ವಿಚಾರಣೆಮಾಡುತಲಿದ್ದರೇ ಹೊರ್ತು ಅದಂ ಮರಳಿ ಡಿವಿಜನ್ ಕಮಿಷನರವರು ಪರ್ಯಾಪ್ತಿ ಮಾಡುತಲಿರಲಿಲ್ಲವು. ಈ ಕ್ರಮವನ್ನನುಸರಿಸಿ ಚೀಫ್ ಕಮಿಷನರವರ ಸ್ಥಾನವನ್ನಾಗಿರುವ ದಿವಾನರವರೇ ಒಂದುವೇಳೆ ಆಕ್ಟಿಂಗ್ ಅಪೀಲನ್ನು ಅಂಗೀಕರಿಸಿ ಫೈಸಲ್ ಮಾಡಬಹುದು. ಈಗ ಖಾಲಿಯಾಗಿರುವ ಕೌನ್‌ಸಿಲರ್ ಕೆಲಸಕ್ಕೆ ಗವರ್ನಮೆಂಟಿನವರ ದೃಷ್ಟಿ ಅಲ್ಲಿಲಾಯಕ್ಕಾದವರು ದೊರೆಯದೆ ಇರುವದರಿಂದ ಅದು ಹ್ಯಾಗೆ ಇದ್ಯಾಪಿ ಖಾಲಿಯಾಗಿರುತಿದೆಯೋ ಬದಸ್ತೂರ್ ಚೀಫ್‌ಕೋರ್ಟ್ ಜಡ್ಜಿ ಕೆಲಸಕ್ಕೆ ಸಹ ಲಾಯಕ್ಕಾದವರೊಬ್ಬರು ಇಲ್ಲಿ ದೊರೆಯದ ಪಕ್ಷಕ್ಕೆ ಖಾಲಿಯಾಗಿರಬೇಕಾಗುವದು. ಆದದರಿಂದ ಈ ಸಂಸ್ಥಾನದ ಆಡಳಿತದಲ್ಲಿ ಆಗಿಂದಾಗ್ಯೆ ಖಾಲಿಯಾಗುವ ಭಾರೀ ಕೆಲಸಗಳಿಗೆ ಲಾಯಕ್ ಇರುವ ದೊರೆತು ಭರ್ತಿಯಾಗುವದು ಅತಿ ಪ್ರಯಾಸವಾಗಿರುವದರಿಂದ ಈಗ ನೌಕರಿಯಲ್ಲಿರತಕ್ಕವರಿಗೆ ಭಗವಂತನು ಚಿರಂಜೀವಿತ್ವವನ್ನು ಕೃಪೆಗೈಯಬೇಕೆಂದು ಕೋರುವೆವು.

THE ORIGIN OF SALT LAWS.

ಮದರಾಸ್ ಹಿಂದೂಪತ್ರಿಕೆಯ ಎಡಿಟರಾದ ಮ|| ಸುಬ್ರಹ್ಮಣ್ಯ ಅಯ್ಯರವರು ಈಚೆಗೊಂದು ಸಂದರ್ಭದಲ್ಲಿ "ನಮ್ಮ ಕಾನೂನುಗಳ ಉತ್ಪತ್ತಿ ಮತ್ತು ಅವುಗಳಿಂದ ನೇಟಿವ್ ಪ್ರಜೆಗಳಿಗುಂಟಾಗುವ ಕಷ್ಟ" ಇದು ಕುರಿತು ಮಾಡಿದ ಒಂದು ಉಪನ್ಯಾಸವನ್ನು ನಾವು ಬಹಳ ಅಕ್ಕರೆಯೊಡನೆ ಓದಿ ನೋಡಿದೆವು. ಈ ಇಂಡ್ಯದೇಶದಲ್ಲಿ ಆದಿಮೊದಲು, ಅಂದರೆ ನೇಟಿವ್ ಅರಸರ ಆಳ್ವಿಕೆಗಳಲ್ಲಿ ಸಹ ಉಪ್ಪಿನ ತೆರಿಗೆಯು ನೆಲೆಗೊಂಡದ್ದಾಗಿದ್ದಾಗ್ಯೂ ಅದರ ಅಮಾನೀ ಇಜಾರೆ ಕ್ರಮವು ಬ್ರಿಟಿಷ್ ಗವರ್ನಮೆಂಟಿನವರಿಂದಲೇ ಇಲ್ಲಿ ಪ್ರಥಮತಃ ನೆಲಗೊಳಿಸಲ್ಪಟ್ಟಂತೆ ಮ|| ಸುಬ್ರಹ್ಮಣ್ಯ ಅಯ್ಯರವರು ತಿಳಿಸುತ್ತಾರೆ. ನೇಟಿವ್ ಪ್ರಭುತ್ವದ ಮೊದಲು ನೆಲಗೊಂಡಿದ್ದಂತಾ ಹಿಂಸಕರಗಳಾದ ಬಹುವಿಧ ತೆರಿಗೆಗಳನ್ನೆಲ್ಲ ವಜಾ ಮಾಡಿದ್ದರಿಂದ ಉಂಟಾದ ನಷ್ಟ ಪರಿಹಾರದ ಬಗ್ಗೆ ಕಂಪೆನಿಯ ಸಿವಿಲ್ ಉದ್ಯೋಗಸ್ಥರಿಗೆ ಈ ಕ್ರಮವು ಮಾದನಕ್ಕೆ ಆಸ್ಪದವಿಲ್ಲವಂತೆ ಸಾಕಾದದ್ದು ಅವರ *ತೆಲಿಪ್ ಐಹಾಫೀಬಗ್ಯೂ ಲಾರ್ಡ್ ಕ್ಲೈವ್ ಯವರು* ಬಂಗಾಳೆಯಲ್ಲಿ ಸದರೀ ಪದ್ಧತಿಯನ್ನು ಮೊದಲು ಏರ್ಪಡಿಸಿದವರಾದರು. ತರುವಾಯ ಕ್ರಮೇಣ ಇತರ ರಾಜ್ಯಗಳೆಲ್ಲವೂ ಬ್ರಿಟಿಷರ ವಶವಾಗಲು ಅಲ್ಲೆಲ್ಲ ಆ ಕ್ರಮ ಜಾರಿಯಲ್ಲಿ ತರಲ್ಪಟ್ಟಿತು. ಇಂಡ್ಯದೇಶೀಯರ ಆಮದನಿಯು ಇತರ ದೇಶಸ್ಥರ ಆಮದನಿಗಿಂತಲೂ ಬಹಳ ಅಲ್ಪವಾಗಿರುವದರಿಂದಲೂ, ಸಾಧಾರಣವಾಗಿ ಮನುಷ್ಯನಿಗೆ ಭೋಗೋಪಭೋಗಗಳ ಸಾಮಗ್ರಿಗಳಲ್ಲೊಂದಾಗಿರದೆ ಅವಶ್ಯಕವಾದ ಆಹಾರ ವಸ್ತುಗಳಲ್ಲಿ ಅತ್ಯಂತಾಪೇಕ್ಷಿತವಾದದ್ದಾಗಿ ಏರ್ಪಟ್ಟಿರುವದರಿಂದಲೂ, ಈಗ ಅದಕ್ಕೆ ಹೇರಿಯಿಸಿರುವ ತೆರಿಗೆಯದರವು ರಿಕ್ತರ ಉಪಪತ್ತಿಗೆ ಬಹಳ ವಿರೋಧವಾಗಿರುತ್ತದೆ, ಅಥವಾ ಜನರು ಬಳಸಿಕೊಳ್ಳುವ ಉಪ್ಪಿನ ಪ್ರಮಾಣವನ್ನು ತಗ್ಗಿಸಲಿಕ್ಕೆ ಅವರಿಗೆ ಸಾಧ್ಯವಾಗಿರುವಂತೆ ಕಾಣಿಸಲಿಲ್ಲವು. ಕೇವಲ ನಿರ್ಗತಿಕರಾದ ರಿಕ್ತರೇನಾದರೊಂದುವೇಳೆ ಉಪ್ಪನ್ನು ಸ್ವಲ್ಪಮಟ್ಟಿಗೆ ಕಡಮೆ ಮಾಡಿಕೊಳ್ಳಲಿಕ್ಕೆ ಶಕ್ತರಾಗಬಹುದು, ಹ್ಯಾಗಂದರೆ, ಕ್ಷಾಮಕಾಲದಲ್ಲಿ ಅಕ್ಕಿಯದರವು ಬಹಳ ಚೆಡಾವಾಗಿದ್ದಾಗ್ಯೆ ಬಡವರು ಅದರ ಪರಿಮಾಣವಂ ಕಮ್ಮಿಪಡಿಸುವಂದದಿ ಇದು ಸಾಧ್ಯವಾಗಬಹುದು. ಪರಂತು ಹೊಟ್ಟೆ ತುಂಬ ಭುಜಿಸಲಾರದೆ ಅದು ಕಮ್ಮಿದರಿಂದ ಅವರು ಹ್ಯಾಗೆ ದುರ್ಬಲರೋಗಕ್ಕೆ ಗುರಿಯಾಗುವರೋ ಉಪ್ಪನ್ನು ತಗ್ಗಿಸುವದರಿಂದಲೂ ಅಷ್ಟರ ಅಸೌಖ್ಯಕ್ಕೆ ಪಾತ್ರರಾಗಬೇಕಾಗುವದರೊಳೆ ನೂ ಸಂಶಯ ವಿರಲಾರದು. ಮದರಾಸ್ ಪ್ರಸಿಡೆನ್ಸಿಯಲ್ಲಿ ಮತ್ತು ಅದರ ಆಸ್‌ಪಾಸ್ ಡಿಸ್ಟ್ರಿಕ್ಟುಗಳಲ್ಲಿ ಮದರಾಸಿನದರವು ಬಹಳ ಅಧಿಕವಾದದ್ದಾಗಿದ್ದಾಗ್ಯೂ ನಮ್ಮಕ್ ತೆರಿಗೆಯ ಭಾರವು ಯಾವ ಪ್ರಜೆಗಳಮೇಲೆ ಸಂಪೂರ್ಣವಾಗಿ ಹೊರಿಸಲ್ಪಡುತಿದೆಯೋ ಅಂತಾ ಜನರಿಗೆ ಸದರೀ ದರವು ಇದ್ಯಾಪಿ ವ್ಯಾಪಿಸಿದ್ದಾಗಿಲ್ಲವು. ಇಂಡ್ಯದೇಶದಲ್ಲಿ ಉಪ್ಪಿನ ದೌರ್ಲಭ್ಯದಿಂದ ಕಾಲ್ನಡೆಗಳಿಗೆ ಗೋಮಾರಿ ವಗೈರೆ ಪ್ರಪದ್ರವಗಳು ವೃದ್ಧಿಯನ್ನೈದುತ್ತ ತನ್ಮೂಲಕ ಬಹು ನಷ್ಟ ಸಂಭವಿಸುತಲಿರುತಿದೆ. ನಮ್ಮಕ್ ಪ್ರೊಟೆಕ್ಟ್ ತೆರಿಗೆಯು ವಜಾ ಮಾಡಲ್ಪಟ್ಟದ್ದಾದರೆ ಅದು ಮುಂದಿನ ಒಂದಕ್ಕೆ ಎರಡಾಣೆಗಳಿಗಿಂತ ಅಧಿಕವಾಗಿ ಮಾಡಲ್ಪಡಲಾರದು. ಗವರ್ನಮೆಂಟಿನವರ ಖರ್ಚು ವೆಚ್ಚಗಳ ಬಗ್ಗೆ ಧನವಂತರು ತಮ್ಮ ಆಮದನಿಗನುಗುಣವಾಗಿ ಸಹಾಯ ಮಾಡದಿರುವದು ಧನ ಸಂಬಂಧವಾದ ವ್ಯವಹಾರದಲ್ಲಿ ಒಂದು ಪ್ರಬಲ ದೋಷವಾಗಿರುತಿದೆ. ಈ ದೋಷವು ಅನ್ಯದೇಶಗಳಿಂದ ಇಲ್ಲಿಗೆ ಬರತಕ್ಕ ಸಾಮಾನುಗಳಮೇಲಿನ ತೆರಿಗೆಗಳನ್ನು ಮರಳಿ ನೆಲೆಗೊಳಿಸುವದರ ಮೂಲಕ ಸುಲಭವಾಗಿ ನಿವಾರಿಸಿಕೊಳ್ಳಬಹುದೆಂದೆಣಿಸುತ್ತೇವೆ. ಪರಂತು ಉಪಪನ್ನರಾದವರ ಮೂಲಕ ಬಹಳ ಖರ್ಚಾಗತಕ್ಕ ಅನ್ಯದೇಶೀಯಗಳಾದ ಪದಾರ್ಥಗಳಿಗೆ ಮಾತ್ರ ಮಿತಿವಲಿಸುತ್ತ ಶಿಂಕಾಯಿಗಳನ್ನು ಮೊಕರರ್ ಮಾಡಬಹುದು, ಎಂದು ವಗೈರೆ ಮ|| ಸುಬ್ರಹ್ಮಣ್ಯ ಅಯ್ಯರವರು ಅಭಿಪ್ರಾಯಪಟ್ಟಿರುತ್ತಾರೆ. ಇವರ ಅಭಿಪ್ರಾಯವನ್ನು ನಾವು ಕೊಂಡಾಡುವದಲ್ಲದೆ ಈ ವಿಷಯದಲ್ಲಿ ಗವರ್ನಮೆಂಟಿನವರ ಅವಧಾನವ ವಿಶೇಷತಃ ಪ್ರಾರ್ಥಿಸುವೆವು.

THE PUBLIC SERVICE COMMISSION.

ಈಚೆಗೆ ಸ್ಥಾಯಿಸಿ ಮಾಡಲ್ಪಟ್ಟ ಪಬ್ಲಿಕ್ ಸರ್ವಿಸ್ ಕಮಿಷನ್ ಸಂಘದವರ ಆಕ್ಟ್ರಿ ರಿಪೋರ್ಟಿನಮೇಲೆ ಕಲ್ಕತ್ತಾ ಇಂಗ್ಲಿಷ್‌ಮನ್ಯಾ ಪತ್ರಿಕೆಯು ಆಕ್ಷೇಪಿಸಿದ್ದಕ್ಕೆ ಅಮೃತಬಜಾರ್ ಪತ್ರಿಕೆಯು ತಕ್ಕ ದೃಷ್ಟಾಂತಗಳೊಡನೆ ಅದಕ್ಕೆ ಇದರ ಡಿಕೆಂತಂತೆ ಉತ್ತರ ಹೇಳುತಿದೆ ಯೆಂತೆಂದರೆ:—

"ಈಗ ಇಂಗ್ಲಿಷ್‌ಮನ್ಯಾ ಪತ್ರಿಕೆಯು ಸ್ವಲ್ಪವೂ ಘಾಬರಿ ಪಡಬೇಕಾದುದಿಲ್ಲವು. ಕಮಿಷನ್ನವರು ಈಗ ನಮಗೆ ನೂತನಗಳಾದ ಸ್ವಾತಂತ್ರ್ಯಗಳ್ಯಾವದನ್ನೂ ಉಂಟು ಮಾಡಿದವರಲ್ಲವು. ಇದಕ್ಕೆ ಬದಲಾಗಿ ನಾವು ಪೂರ್ವದೊಳು ಅನುಭವಿಸುತಲಿದ್ದಂತಾ ಕೆಲವು ಸ್ವಾತಂತ್ರ್ಯಗಳಿಗೆ ಸಹ *ಲೋಪ ಪ್ರಾಪ್ತಮಾಡಿರುತ್ತಾರೆ.* ಇದು ನಾವು ಮುಂದಿನ ಸಂಚಿಕೆಯಲ್ಲಿ ಕ್ರಮವಾಗಿ ನಿರೂಪಿಸಿ ತಿಳಿಸುವೆವು. ನಮ್ಮ ಸಹಚರರು ಒಂದು ಸಾಧಾರಣ ವಿಷಯವನ್ನು ಮಾತ್ರ ತಮ್ಮ ಹೃದಯದೊಳಿಟ್ಟಿರಬೇಕೆಂದು ಕೋರುತ್ತೇವೆ. ಅಂದರೆ—ಬ್ರಿಟಿಷ್ ಆಳ್ವಿಕೆಯು ಈ ದೇಶಕ್ಕೆ ಒಂದು ಅನುಗ್ರಹರೂಪವಾದದ್ದೆಂಬದರೊಳೆ ಸಂಶಯವಿಲ್ಲವು, ಹಾಗಿಲ್ಲವಾದರೆ ಅದು ಇಷ್ಟು ಕಾಲ ಇಲ್ಲಿ ಊರ್ಜಿತವಾಗಿರ್ಪರಲಾರದು. ಪರಂತು ಅದು ತಕ್ಕಷ್ಟರಮಟ್ಟಿಗೆ ದುಃಖಕರವಾದದ್ದಾಗಿ ಸಹ ಇರುತಿದೆ. ಬ್ರಿಟಿಷ್ ಪ್ರಭುತ್ವವು ಸಮಾಧಾನವನ್ನೂ ಶಾಂತಿಯನ್ನೂ ಉಂಟುಮಾಡುವದಲ್ಲದೆ ಅದು ವ್ಯಾಪಾರಸ್ಥರಿಗೆ ಬಹಳ ಅನುಕೂಲವಾದದ್ದಾಗಿರುತಿದೆ. ಆದರೆ ಅದು ಘನವಾದ ಕೋರಿಕೆಗಳನ್ನು ಪಕ್ಕಾಂತಗೊಳಿಸುವದು. ಪ್ರತಿ ಮನುಷ್ಯನಿಗೂ ಘನವಾದ ಕೋರಿಕೆಯೊಂದು ಇದ್ದೇ ಇರುವದು. ಅದು ಯಾವದೆಂದರೆ, ನನ್ನ ಜನ್ಮಸ್ಥಳದಲ್ಲಿ ಯಾವದಾದರೊಂದು ಘನತರವಾದ ಉದ್ಯೋಗದಲ್ಲಿ ಸೇರಿ, ನೌಕರಿ ಮಾಡಿ ಅದಕ್ಕೊಂದು ಪಕಾರವಂ ಸಾಧ್ಯವಾದಷ್ಟುಮಟ್ಟಿಗೆ ಮಾಡತಕ್ಕವನಾಗಬೇಕೆಂಬದು. ಸ್ವದೇಶದಲ್ಲಿ ಗೌರವವುಳ್ಳ ಭಾರೀ ನೌಕರಿಗಳನ್ನು ಸಂಪಾದಿಸುವೆನೆಂಬ ಕೋರಿಕೆಯು, ಸಿವಾಜಿಯು, ಮಹಮದ್ ರೇಜಾಖಾನ್, ಮತ್ತು ನಂದಕುಮಾರರಾಯ, ಇವರ ಕಾಲದ ಮತ್ತು ಅನಂತರದ ಮಹದೇಶೀಯರಿಗೆಲ್ಲ ಮುದ್ದಾಂಗ ನಿಷ್ಪತ್ತಿಯಾದಂತೆ ನುಡಿಯಬಹುದು. ಅದಕ್ಕೆ ಸ್ವಲ್ಪಕಾಲದ ಹಿಂದೆ ಬಂಗಾಳೀಗಳು ಮುಖ್ಯ ಮಂತ್ರಿಗಳಾಗಿರುತಲಿದ್ದರು. ಅದಕ್ಕೆ ಸ್ವಲ್ಪಕಾಲದ ತರುವಾಯ ಬಂಗಾಳೀಗಳು ಮಾತ್ರ

ಮಾಸಾ ೮೦ ರೂಪಾಯಿಗಳ ತಲಬಿನಲ್ಲಿ ಡಿಪ್ಯುಟಿಗಳು ವಾ ಕಲೆಕ್ಟರುಗಳಾಗಿಯೂ, ಮತ್ತು ೫೦ ರೂಪಾಯಿಗಳ ತಲಬಿನಲ್ಲಿ ದರೋಗಾಗಳಾಗಿಯೂ ಇರುತಲಿದ್ದರು. ಪಂಜಾಬ ರಾಜ್ಯವು ಬ್ರಿಟಿಷ ಸುಪರ್ದ ಮಾಡಿಕೊಳ್ಳಲ್ಪಟ್ಟದರೊಡನೆ ಆ ದೇಶದ ಜನವು ಸಂಪೂರ್ತಿಯನ್ನೈದಿತು. ಬ್ರಿಟಿಷ ಗವರ್ನಮೆಂಟಿನವರಿಗೂ ಪಂಜಾಬದೇಶೀಯರಿಗೂ ಪ್ರಾರಂಭವಾದ ಪ್ರಥಮ ಯುದ್ಧವು ಪೂರೈಸಿದ ಕೂಡಲೇ, ಇಂಗ್ಲಿಷಿನವರು, ಆಗ್ಯೆ ಅಪ್ರಾಪ್ತ ದಳಿಯೊಳಿದ್ದ ಮತ್ತು ಪ್ರಾಪ್ತವಾದ ಪಕ್ವದಾಭರಾಗಿದ್ದ ರಾಜಪುತ್ರರ ತರಫ ಸದರೀ ರಾಜ್ಯದ ಆಡಳಿತವನ್ನು ಸ್ವತಃ ವಹಿಸಿದವರಾದರು. ಅದಾಗ್ಯೂ ರಾಜ್ಯಭಾರ ಕ್ಕಾಗಿ ನಡೆಸಲ್ಪಡುತಿ ಬಂದಂತೆ, ಬ್ರಿಟಿಷನವರ ಮೇಲ್ವಿಚಾರಣಾಧಿಕಾರದಲ್ಲಿ ಲಾಹೋರ್ ದರ್ಬಾರಿಗೆ ಸೇರಿದ ಪ್ರತಿಯೊಬ್ಬ ಉದ್ಯೋಗಸ್ಥನೂ, ಕೌನ್ಸಿಲ್ ಮೆಂಬರಾಗಿ ಸಾಲೀಯಾನಾ ೧೨,೦೦೦ ರೂಪಾಯಿಗಳಂ ಪಡೆಯುತಲಿದ್ದನು. ಆಗ್ಯೆ ಮಂತ್ರಿ ಸನಾಪತ್ಯ ರಾಜಾ ತೇಜಸಿಂಗ ಎಂಬವರು ಪ್ರಸಿದ್ಧರಾಗಿದ್ದರು ಕೌನ್ಸಿಲ್ ಮೆಂಬರಾಗಿದ್ದುದಕ್ಕಾಗಿ ಸಲ್ಲುತಲಿದ್ದ ತಲಬ ಅಲ್ಲದೆ ಮೇಲಿನ ಅಧಿಕಾರಕ್ಕಾಗಿ ಸಾಲೀಯಾನಾ ೮,೦೦೦ ರೂಪಾಯಿಗಳು ಪ್ರತ್ಯೇಕ ಕೊಡಲ್ಪಡುತಲಿದ್ದವು. ಇದಲ್ಲದೆ ಆವರೇ ಅಲ್ಲಿನ ಸೇನಾಧಿಪತಿಯಾಗಿದ್ದುದರಿಂದ ಅದಕ್ಕಾಗಿ ಸಂವತ್ಸರಕ್ಕೆ ೮,೦೦೦ ರೂಪಾಯಿಗಳು ಕೊಡಲ್ಪಡುತಲಿದ್ದವು. ಏನೆಂದರೆ ತ್ಯಾಕ್ ಸಿಂಗರೆಂಬುವರೊಬ್ಬರೇ ತಾವು ನಿರ್ವಹಿಸುತಲಿದ್ದ ಬೇರೆ ಬೇರೆ ಕೆಲಸಗಳ ಬಗ್ಗೆ ಸಾಲೀಯಾನಾ ೫೮,೦೦೦ ರೂಪಾಯಿಗಳ ತನಖ ಪಡೆಯುತಲಿದ್ದರು. ಮತ್ತೊಬ್ಬ ಕೌನ್ಸಿಲರಾದ ದಿವಾನ್ ಸಿಂಗ ಎಂಬವರಿಗೆ ೮,೦೦೦ ರೂಪಾಯಿಗಳು ಸಲ್ಲುತಲಿದ್ದವು. ಹೀಗೆ ಐವತ್ತು ಅನೇಕರು ೮ರ ಮೊದಲು ೧೦ ಸಾವಿರ ರೂಪಾಯಿಗಳ ತನಕ ಧಾರಾಳವಾಗಿ ತಲಬ ಪಡೆಯುತಲಿದ್ದರು. ಸುಪ್ರೀಂ ಮ್ಯಾಜಿಸ್ಟ್ರೇಟಿಯಂತೆ ಅಧಿಕಾರವುಳ್ಳ ಜಿಲ್ಲಾ ನಾಜಿಂಗಳು, ಅಂದರೆ ಕಮ್ಮಿಷನರುಗಳು ಇರುತಲಿದ್ದರು. ಇವರಿಗೆ ಶಿವಿಲ್ಯ ಆಡಳಿತದಲ್ಲಿ ಸ್ವಲ್ಪವೂ ಸಂಬಂಧವಿರುತಲಿರಲಿಲ್ಲವು. ಇವರಿಗೆ ಕಲ್ಲಿ ಮಾಸೀಯಾನಾ ಒಂದುಸಾವಿರ ರೂಪಾಯಿಗಳಂತೆಯೂ, ಪೆಷಾವರ ಮತ್ತು ಹಜಾರಾ ಈ ಎರಡು ಪ್ರದೇಶಗಳಲ್ಲಿರುವವರಿಗೆ ಅವರ ಅಧಿಕಾರ ಮತ್ತು ಜವಾಬ್ದಾರಿಗಳು ಪರಿಭಾವಿಸಿ ೧,೫೦೦ ರೂಪಾಯಿಗಳ ಪ್ರಕಾರವೂ, ಡೆಪ್ಯುಟಿ ನಾಜಿಂ ವಾ ಕಮ್ಮಿಷನರುಗಳಿಗೆ ಸಾಲೀಯಾನಾ ಮೂರು ಸಾವಿರ ರೂಪಾಯಿಗಳ ಪ್ರಕಾರವೂ, ತಹಸೀಲ್ದಾರರು ಮತ್ತು ಪೋಲೀಸ್ ಸೂಪರಿಂಟೆಂಡೆಂಟ್ ಮೊದಲಾದ ಅಧಿಕಾರಿಗಳಿಗೆ ೬೦೦ ರಿಂದ ೩,೦೦೦ ರೂಪಾಯಿಗಳ ವರೆಗೂ ಸಂಬಳ ಕೊಡಲ್ಪಡುತಲಿತ್ತು. ಇವರೆಲ್ಲರೂ ನೇಟಿವ್‌ಗಳೇ ಹೊರತು ಇವರಲ್ಲಿ ಅನ್ಯರ್ಯಾರೂ ಇರಲಿಲ್ಲವು. ಸಾಲೀಯಾನಾ ೫೮,೦೦೦ ಮತ್ತು ೮,೦೦೦ ರೂಪಾಯಿಗಳ ಪ್ರಕಾರ ತಲಬ ಪಡೆಯುತಕ್ಕ ನೇಟಿವ್ ಉದ್ಯೋಗಸ್ಥರು ಈಗ ಪಂಜಾಬದೇಶದಲ್ಲಿ ಎಷ್ಟು ಜನ ಇದ್ದಾರೆ! ೧೮೪೮ ನೇ ಇಸವಿಯಲ್ಲಿ ಪಂಜಾಬ ದೇಶಸ್ಥರ ಮುಂದಾಳು ಇತ್ತರಾಗಿರುತಲಿದ್ದರು. ೧೮೪೯ ನೇ ಇಸವಿಯಲ್ಲಿ ರಾಜ್ಯವು ಬ್ರಿಟಿಷ ಸುಪರ್ದ ಆಯಿತು. ಅದು ನೋಡಲು ಅಲ್ಲಿನ ಜನರಿಗೆ ಒಂದು ಮ್ಯಾಜಿಸ್ಟ್ರೇಟಿನ ಅಧಿಕಾರಕ್ಕಿಂತ ಮೇಲ್ಪಟ್ಟದ್ದು ಲಭಿಸುವದು ಬಹಳ ಪ್ರಯಾಸವಾಗಿದೆ. ಇದನ್ನೇ ನೋಡು ನೋಡಿಯಬಹುದು," ಎಂಬದು.

Occasional Notes.
ನೈಮಿತ್ತಿಕ ವಿಷಯನ್ಯಾಸ.

Opening of relief works.—ಬಂಗಾಳೇ ದೇಶದ ಪೈಕಿ ಪರ್ಗ ಭೂಂ ಡಿಸ್ಟ್ರಿಕ್ಟಿನಲ್ಲಿ ಫಸಲುಗಳೆಲ್ಲವು ಕೆಟ್ಟುಹೋದದರಿಂದ ತತ್ಕಾಲಕ್ಕೆ ಅಲ್ಲಿನಪ್ರಜೆಗಳಿಗೆ ಜೀವನಾಧಾರವಿಲ್ಲದೆ ಕಷ್ಟಕ್ಕೆ ಗುರಿಯಾಗಬಹುದೆಂಬ ಆಲೋಚನೆಯು ಮೇಲೆ ಕಷ್ಟನಿವಾರಕ ಕಾಮಗಾರಿಗಳನ್ನು ಮಾಡಿಸುವದಕ್ಕೆ ತಕ್ಕ ಏರ್ಪಾಡುಗಳನ್ನು ಡಿಸ್ಟ್ರಿಕ್ಟ ಅಧಿಕಾರಿಗಳು ಮಾಡುತಲಿರುವರೆಂದು ತಿಳಿಯಬರುತಿದೆ.

Dismissal of a Dewan.—ಈ ತಿಂಗಳ ೧೫ನೇ ತಾರೀಖಿನಲ್ಲಿ ಜಮ್ಮೂ ಎಂಬ ಪಟ್ಟಣದಲ್ಲಿ ಒಂದು ದರ್ಬಾರ್ ನಡೆಸಲ್ಪಟ್ಟು ಆ ಕಾಲದಲ್ಲಿ ಕಾಶ್ಮೀರಸಂಸ್ಥಾನದ ದಿವಾನರೂ ಅಲ್ಲಿನ ಮಂತ್ರಾಲೋಚನಸಮಾಜದ ಪ್ರೆಸಿಡೆಂಟರೂ ಆದ ಲಕ್ಷ್ಮಣದಾಸರೆಂಬವರು ಅಧಿಕಾರದಿಂದ ಪದಚ್ಯುತರಾದರೆಂದು ಮಾತ್ರ ತಿಳಿಯಬರುತಿದೆಯೇ ಹೊರತು ಅದಕ್ಕೆ ಉಂಟಾದ ಕಾರಣ ಫಲಾನೇ ದೆಂದು ವ್ಯಕ್ತವಾಗಲಿಲ್ಲವು.

Dacoities.—ಸಿಂಧಿಯಾ ಯವರ ದೇಶದ ಪೈಕಿ ಭಂಡಾರ್ ಡಿಸ್ಟ್ರಿಕ್ಟಿನಲ್ಲಿ ದರೋಡೆಗಳು ಅಗುವುದಾಗ್ಯೆ ನಡೆಯುತಲಿವೆ. ದರೋಡೆ ಕಳ್ಳರು ತಮ್ಮ ಕೃತ್ಯಗಳನ್ನು ನೆರವೇರಿಸಿಕೊಂಡು ದುರ್ಗಮ ಪ್ರದೇಶಗಳಿಗೆ ಹೋಗಿ ಸೇರುತ್ತಾರಾಗಿ ಅವರನ್ನು ಹಿಡಿಯುವ ಬಗ್ಗೆ ಸರ್ಕಾರದವರು ಮಾಡುವ ಪ್ರಯತ್ನಗಳೆಲ್ಲವೂ ನಿಷ್ಫಲಗಳಾಗುತಿವೆ. ಅದಾಗ್ಯೂ ಅವರ ಪೈಕಿ ಮೂವತ್ತುಮಂದಿ ದಸ್ತಗಿರಿ ಮಾಡಲ್ಪಟ್ಟರು, ಕೆಲವರಲ್ಲಿ ಕೊಳ್ಳೆಯಲ್ಲಿ ದೊರೆತ ಒಡವೆಗಳು ಕೆಲವು ಸಿಕ್ಕಿದವು, ಎಂದು ಪಶ್ಚಿಮದ ಒಂದಾನೊಂದು ಪತ್ರಿಕೆಯ ಗ್ವಾಲಿಯರ ವಾರ್ತಾಹಾರನು ಬರೆಯುತ್ತಾನೆ.

A circular.—ಬೆಲ್ಜಿಯಂ ಸರ್ಕಾರದವರು ಬಾಸ್ಸಿ ವ್ಯಾಪಾರವಂ ಪ್ರೋತ್ಸಾಹಗೊಳಿಸಬೇಕೆಂಬ ಉದ್ದೇಶದೊಡನೆ ಸಾಲೀಯಾನಾ (೫೦,೦೦೦ ಫ್ರಾಂಕ್ಸ) ೧೨,೦೦೦ ರೂಪಾಯಿಗಳು ಇನಾಂ ಕೊಡುವಂತೆ ತಿಳಿಸಿ ಈಚೆಗೆ ಒಂದು ಸರ್ಕ್ಯುಲರ್ ಕೊಟ್ಟಿರುತ್ತಾರೆ. ದೊಡ್ಡದೊಡ್ಡ ಪಟ್ಟಣಗಳಿಗೆ, ಕೇವಲ ಮುಖ್ಯವಾಗಿ, ದುಂದಿನ ಪ್ರಜಾಭಿವೃದ್ಧಿಯ ಉದ್ದೇಶದೊಡನೆ, ಬ್ರಸ್ಸೆಲ್ಸ ಪಟ್ಟಣಕ್ಕೆ, ಜಲಪಸಕ್ತಿಯು ಕಲ್ಪಿಸುವ ಕಾರ್ಯವಿಷಯವಾಗಿ ಉತ್ತಮವಾದಗ್ರಂಥ ಬರೆಯುವವರಿಗೆ ೧೮೯೩ನೇ ಇಸವಿಯಲ್ಲಿ ಒಂದು ಇನಾಂ ಕೊಡಲ್ಪಡುವದು. ಸದರೀ ಗ್ರಂಥವು ಫ್ರೆಂಚ, ಫ್ಲೆಮಿಷ, ಇಂಗ್ಲಿಷ, ಜರ್ಮನ್, ಇಟಾಲಿಯನ್, ಅಥವಾ ಸ್ಪೇನಿಷ ಭಾಷೆಗಳಲ್ಲಿ ಯಾವದಾದರೊಂದರಲ್ಲಿ ಬರೆಯಲ್ಪಟ್ಟಿರಬೇಕಾಗಿರುವದಲ್ಲದೆ, ಜನವರಿ ಗುಪ್ತನಾಮದಿಂದ ಮುಂದಾಗಿಯೇ, ಅದು, ಅಗ್ರಿಕಲ್ಚರ್, ಕಾಮರ್ಸ್ ಮತ್ತು ಪಬ್ಲಿಕ್ ವರ್ಕ್ಸ್ ಇಲಾಖೆಗಳ ಮಂತ್ರಿಯವರ ಬಳಿಗೆ ಕಳುಹಿಸಲ್ಪಡತಕ್ಕದ್ದು. ಇದರ ಮೊಬಲಗು ೭ ಜನ ಪಂಚಾಯತರ ಮೂಲಕ ಕೊಡಲ್ಪಡುವದು. ಅವರ ಪೈಕಿ ಮೂವರನ್ನು ಬೆಲ್ಜಿಯಂದೇಶಸ್ಥರನ್ನಾಗಿಯೂ, ಮಿಕ್ಕವರನ್ನು ಅನ್ಯದೇಶಸ್ಥರನ್ನಾಗಿಯೂ, ಬೆಲ್ಜಿಯಂ ಅಲ್ಲಿನ ಅರಸರು ಏಕಪಕ್ಷ ಒಂದು ಕಮಿಟಿಯಂ ನೇಮಕ ಮಾಡುವರೆಂದು ತಿಳಿಯಬರುತಿದೆ.

Archaeological find.—ಅಜಾಘರ್ ಡಿಸ್ಟ್ರಿಕ್ಟಿನಲ್ಲಿ ಈಚೆಗೆ ನಡೆಸಲ್ಪಟ್ಟ ಆರ್ಕಿಯಲಾಜಿಕಲ್ ಸರ್ವೇಯಲ್ಲಿ, ಅಂದರೆ ಪುರಾತನಶಾಸನಾದಿಗಳ ಪರಿಶೋಧನೆಯಲ್ಲಿ ಅಮೂಲ್ಯವಾದ ಒಂದು ತಾಮ್ರಶಾಸನವು ದೊರೆಯಿತು. ಸದರೀ ಶಾಸನವು ಗುಪ್ತಾಕ್ಷರಗಳಿಂದ ಬರೆಯಲ್ಪಟ್ಟದ್ದಾಗಿಯೂ, ಹರ್ಷವರ್ಧನನೆಂಬ ಅರಸನಿಂದ ತನ್ನ ಮಾತಾಪಿತೃಗಳ ಮತ್ತು ಜ್ಯೇಷ್ಠಸೋದರನ ಉತ್ತಾರಣಾರ್ಥ ಅನೇಕ ಬ್ರಾಹ್ಮಣರಿಗೆ ಭೂದಾನರೂಪವಾಗಿ ಕೊಡಲ್ಪಟ್ಟದ್ದಾಗಿಯು ಇರುತಿದೆ. ಈ ಶಾಸನದಿಂದ, ಹರ್ಷವರ್ಧನರಾಜನ ವಂಶಾವಳಿಯೂ, ಆತನು ಕ್ರಿಸ್ತಶಕದ ೬೦೮ ನೇ ಇಸವಿಯು ಆಗಾಯಿತು ೬೪೮ನೇ ಇಸವಿಯ ತನಕ ೪೦ ವರುಷಗಳ ಕಾಲ, ಕಾಶ್ಮೀರ ಮತ್ತು ನೇಪಾಳರಾಜ್ಯಗಳು ಸೇರಿ ಉತ್ತರ ದೇಶಗಳ ಪೈಕಿ ಬಹು ಭಾಗವಂ ಪಾಲಿಸುತಲಿದ್ದನೆಂಬುದೂ,-ತಿಳಿಯಬರುತಿದೆ. ೬೩೭ನೇ ಇಸವಿಯಲ್ಲಿ, ಚೀನಾದೇಶೀಯನಾದ ಬೌದ್ಧದೇಶ ಸಂಚಾರಿಯೊಬ್ಬರು, ಕನೋಜಪಟ್ಟಣದೊಳಿದ್ದ ಸದರೀ ಅರಸರ ಭೇಟಿಯ ಬಗ್ಗೆ ಹೋಗಿದ್ದಂತೆ ವ್ಯಕ್ತವಾಗುತಿದೆ. ವಾಯವ್ಯ ಸೀಮೆಗಳ ಗವರ್ನಮೆಂಟಿನವರು ಸದರೀ ಶಾಸನವು ಕ್ರಯಕ್ಕೆ ಕೊಂಡುಕೊಂಡು ಲಕ್ನೋಪಟ್ಟಣದಲ್ಲಿರುವ ಪ್ರಾವಿನ್ಶಿಯಲ್ ಮ್ಯೂಜಿಯಂನೊಳಿಟ್ಟಿರುತ್ತಾರೆಂದು ಕೇಳುತ್ತೇವೆ. ಹೀಗೆಯೇ ಈ ದೇಶದಲ್ಲಿ ಸಹ ಅನೇಕ ಶಾಸನಗಳು ಅದ್ಯಾಪಿ ಹೊರಗಾಗದೆ ಇವೆ. ಅವುಗಳಂ ಕಂಡು ಹಿಡಿಯ ತಕ್ಕವಿಷಯದಲ್ಲಿ ಮಹಾರಾಜಾ ಸರ್ಕಾರದವರು ಬಹಳ ಆಸಕ್ತಿಯುಳ್ಳವರಾಗಿದಾರಲ್ಲದೆ, ಕೇವಲ ಶ್ರಮಸಾಧ್ಯವಾದ ಪ್ರಕೃತ ಕಾರ್ಯ ನಿರ್ವಹಣೆಯ ಬಗ್ಗೆ ಉಚಿತ ವೇತನ ಮತ್ತು ಶಿಬ್ಬಂದಿಗಳೊಡನೆ ಮಿಸ್ಟರ್ ರೈಸ್‌ಸಾಹೇಬರವರನ್ನು ಶಾಸನ ಪರಿಶೋಧಕರನ್ನಾಗಿ ನೇಮಿಸಿರುತ್ತಾರೆ. ವಿದ್ಯಾ ಪ್ರಾಚುರ್ಯಾಭಿವೃದ್ಧಿಯಲ್ಲಿಯೂ, ಪುರಾತನ ವಿಷಯ ಶೋಧನೆಯಲ್ಲಿಯೂ, ಅಪೂರ್ವ ವಿಷಯ ಸಂಗ್ರಹಣದಲ್ಲಿಯೂ, ಸ್ವಾಭಾವಿಕಗಳಾದ ಶ್ರದ್ಧೆ, ಉತ್ಸಾಹ, ಶ್ರಮಸಹಿಷ್ಣುತೆ ಮುಂತಾದ ಗುಣಗಳಿಂದ ಸುಪ್ರಸಿದ್ಧ ಅರ್ಹತೆಯನ್ನು ಸಂಪಾದಿಸಿಕೊಂಡಿರುವ ಮಿ|| ರೈಸ್ ಸಾಹೇಬರವರು ಈಗ ಶಾಸನಗಳಂ ಕಂಡು ಹಿಡಿದು ಅವುಗಳನ್ನು ಶೋಧಿಸಿ ಪ್ರಕಟಿಸುವದರಲ್ಲಿ ನಿರತರಾಗಿದ್ದಾರೆ. ಪುರಾತನ ಶಾಸನಗಳನ್ನು ಓದುವದರಿಂದ ಪೂರ್ವಿಕರ ಮತಗೋತ್ರ ಕಾಲ ಮುಂತಾದ ಚರಿತ್ರ ಸಂಬಂಧಗಳಾದ ವೃತ್ತಾಂತಗಳಂ ಬಹಳವಾಗಿ ತಿಳಿದು ಕೊಳ್ಳಲಿಕ್ಕೆ ಸಾಧ್ಯವಾಗುವದು.

LOCAL AND PROVINCIAL NEWS.
ಒಳದೇಶ ಮತ್ತು ತಾಲ್ಲೂಕು ಬಾಬತ್ ವೃತ್ತಾಂತಗಳು

Obituary.—ನಮ್ಮ ದೇಶೀಯರಾಗಿಯೂ, ಬಹುಕಾಲ ಮಿಲಿಟರಿ ಇಲಾಖೆಯಲ್ಲಿ ಕೆಲಸ ಮಾಡಿ ರಾಯಬಹದ್ದೂರೆಂಬ ಬಿರುದನ್ನು ಪಡೆದಿದ್ದ ರಿಜಮೆಂಟಿವಾರ್ ಲಕ್ಷ್ಮಣರಾಯರು ಅನಾಯಾಸ ಮರಣದಿಂದ ದೈವಾಧೀನರಾದರೆಂಬ ಅಂಶವನ್ನು ಕೇವಲ ವಿಷಾದದೊಡನೆ ತಿಳಿಯಪಡಿಸುವೆವು.

Entertainment of Hospital Assistants. ಮಾಸಲಾಮಣಿ ಪಿಳ್ಳೆ ಮತ್ತು ಮುತ್ತು ವೀರಪಿಳ್ಳೆ ಯೆಂಬ ಇಬ್ಬರು ಆಸ್ಪಿಟಲ ಅಸಿಸ್ಟೆಂಟರುಗಳು ಮಾರ್ಚ ತಿಂಗಳ ೧ನೇ ತಾರೀಖು ಲಾಗಾಯತು ಆರು ತಿಂಗಳ ಕಾಲ ಅಪ್ರೂವ್ಮೆಂಟಿನ ಮೇಲೆ ಥರ್ಡ್ ಗ್ರೇಡ್ ಆಸ್ಪಿಟಲ ಅಸಿಸ್ಟೆಂಟರುಗಳಾಗಿ ನೇಮಕ ಮಾಡಲ್ಪಟ್ಟಿರೆಂದು ತಿಳಿಯಲಾದೆವು.

Return to duty.—ಹೆಡ್ ಕ್ವಾರ್ಟರ್ ಪೋಲೀಸ್ ಅಸಿಸ್ಟೆಂಟ ಕಮ್ಮಿಷನರ್ ಮಿ|| ಕೃಷ್ಣಸ್ವಾಮಿ ಅಯ್ಯಂಗಾರ್ಯರವರಿಗೆ ೧೮೮೮ನೇ ಇಸವಿ ಮಾರ್ಚ ೧೬ನೇ ಮುಖ್ಯಂ ಲಾಗಾಯತು ಕೊಡಲ್ಪಟ್ಟಿದ್ದ ಎಂಟು ದಿವಸಗಳ ರಜಾ ತೀರ್ಮಾನಿಸಿ ಈ ದಿನ ಮರಳಿ ಕೆಲಸಮೇಲೆ ಹಾಜರಾಗುವರೆಂದು ತಿಳಿಯಲಾದೆವು.

Execution.—ಕೋಲಾರ ಡಿಸ್ಟ್ರಿಕ್ಟು ಬಾಗೇಪಲ್ಲಿ ತಾಲ್ಲೂಕು ಚೆನ್ನರಾಯಪಾಳ್ಯದಲ್ಲಿರುವ ಗುರಪ್ಪನೆಂಬವನ ಮಗನಾದ ಸುಬ್ಬನೆಂಬವನು ತನ್ನ ಹೆಂಡತಿಯ ಕುತ್ತಿಗೆಯನ್ನು ಮಚ್ಚಿನಿಂದ ಕಡಿದು ಖೂನ ಮಾಡಿದ ತಪ್ಪಿನ ಬಗ್ಗೆ ಸುಪೀರಿಯರ್ ದಿವಿಜನ ಸೆಷನ್ಸ್ ಜಡ್ಜಿಯವರು ಅವನನ್ನು ದಸ್ತಭ್ಯಸಿ ಮಾಡಿ ತಕ್ಸೀರ್ ರುಜುವಾತಾಗಲು ಅವನಿಗೆ ಕಳೆದ ತಿಂಗಳ ೨೦ನೇ ತಾರೀಖಿನಲ್ಲಿ ಮರಣದಂಡನೆ ವಿಧಿಸಿದ್ದರಿಂದ ಅವರ ಹುಕುಂ ಅನುಸರಿಸಿ ಮೊನ್ನೆಯ ದಿನ ಬೆಳಗ್ಗೆ ಅಪರಾಧಿಯು ಈ ಊರು ಸೆಂಟ್ರಲ ಜೈಲಿನಲ್ಲಿ ಗಲ್ಲಿಗೆ ಹಾಕಲ್ಪಟ್ಟನು.

Mr. Deveraje Urs.—ನಮ್ಮ ದಳವಾಯಿ ದೇವರಾಜ ಅರಸಿನವರ ತಮ್ಮಂದಿರಾದ ದೇವರಾಜೇ ಅರಸಿನವರು ಬ್ರಿಟಿಷ್ ಸೈನ್ಯದಲ್ಲಿ ಜಮೇದಾರ ಕೆಲಸವನ್ನು ಹೊಂದಿ ಬರ್ಮಾ ದೇಶಕ್ಕೆ ಹೋಗಿ ಅಲ್ಲಿ ನಡೆಯುತ್ತಿದ್ದ ದರೋಡೆ ದಂಗೆ ಮೊದಲಾದ ತೊಂದರೆಗಳನ್ನು ಸೈನ್ಯ ಸಮೇತರಾಗಿ ಕೈಲಾದ ಮಟ್ಟಿಗೂ ಅಡಗಿಸಿ ಬ್ರಿಟಿಷ ಸರ್ಕಾರದಲ್ಲಿ ಬಹುಮಾನವನ್ನು ಪಡೆದಿದ್ದಲ್ಲದೆ ನಮ್ಮ ಸೀಮೆಯ ರಾಜಮಂಡಲಿಗೆ ಗೌರವವನ್ನುಂಟುಮಾಡಿದರು. ಈಗ ನಮ್ಮ ಮಹಾರಾಜಾ ಸರ್ಕಾರದವರು ದೇವರಾಜೇ ಅರಸಿನವರನ್ನು ಬ್ರಿಟಿಷ ಸರ್ಕಾರದವರ ಅನುಮತಿಯನ್ನು ಪಡೆದು ಶ್ರೀಮನ್ಮಹಾರಾಜರಿಗೆ ಸಾವಿದ್ಯ ಸಹಾಯಕರನ್ನಾಗಿ ಏಡಿಕಾಂಗ್ ಮಾಡಿಕೊಂಡಿರುವದಲ್ಲದೆ ಮಾಹೆಯಾನಾ ೫೦ ರೂಪಾಯಿ ಸಂಬಳ ನಿಷ್ಕರ್ಷೆ ಮಾಡಿರುವದಾಗಿಯೂ ತಿಳಿಯಬರುತದೆ.

Privilege leave.—ಚಿತ್ರದುರ್ಗ ಡಿಸ್ಟ್ರಿಕ್ಟು ಪೋಲೀಸ್ ಅಸಿಸ್ಟೆಂಟ ಕಮ್ಮಿಷನರ್ ಮಿ|| ಸಂಪತ್ತಯ್ಯಂಗಾರ್ಯರವರಿಗೆ, ೧೮೮೮ನೇ ಇಸವಿ ಮಾರ್ಚ ೧೫ನೇ ಮುಖ್ಯಂ ಲಾಗಾಯತು ಅಥವಾ ಅವರು ಉಪಯೋಗಿಸಿಕೊಳ್ಳುವ ತಾರೀಖು ಮೊದಲು ೩೦ ದಿನಗಳ ಪ್ರಿವಿಲೇಜ ರಜಾ ಕೊಡಲ್ಪಟ್ಟಿರುವಂತೆಯೂ, ಅವರು ರಜಾ ಮೇಲಿರುವ ಕಾಲದಲ್ಲಿ ಅಥವಾ ಮತ್ತೊಂದು ಹುಕುಂ ಕೊಡಲ್ಪಡುವ ತನಕ ಚಿತ್ರದುರ್ಗ ಡಿಸ್ಟ್ರಿಕ್ಟು ಜನರಲ್ ಅಸಿಸ್ಟೆಂಟ ಕಮ್ಮಿಷನರ್ ಮಿ|| ರಘುನಾಥರಾಯರವರು ಪೋಲೀಸ್ ಕೆಲಸಗಳ ಚಾರ್ಜನೊಳಗೊಂಡಿರುವಂತೆಯೂ ತಿಳಿಯಬರುತಿದೆ. ಮೈಸೂರು ಡಿಸ್ಟ್ರಿಕ್ಟು ಪೋಲೀಸ್ ಸುಪರಿಂಟೆಂಡೆಂಟ್ ಮಿ|| ಸಿ. ರಾಘವಾಚಾರ್ಯರವರಿಗೆ ಮಾರ್ಚ ತಿಂಗಳ ೧೫ನೇ ತಾರೀಖು ಲಾಗಾಯತು ಅಥವಾ ಅವರು ಉಪಯೋಗಿಸಿಕೊಳ್ಳುವ ದಿನ ಮೊದಲು ಆರುದಿನಗಳ ಪ್ರಿವಿಲೇಜ ರಜಾ ಕೊಡಲ್ಪಟ್ಟಿರುತಿದೆ.

TELEGRAMS.
ತಂತಿ ವೃತ್ತಾಂತಗಳು.

ಕಾನ್ಸ್ಟಾಂಟಿನೋಪಲ್, ೧೮ನೇ ಮಾರ್ಚಿ.—ತುರ್ಕೀದೇಶದಲ್ಲಿರುವ ರಷಿಯಾಸಂಸ್ಥಾನದ ರಾಯಭಾರಿಯವರು, ಬಲ್ಗೇರಿಯಾದೇಶದ ಅರಸನಾದ ಪ್ರಿನ್ಸ ಫರ್ಡಿನಾಂಡ ಯವರು ಸದರೀ ದೇಶವು ಬಿಟ್ಟು ಹೊರಟುಹೋಗಬೇಕೆಂದು ಅವರಿಗೆ ಹುಕುಂ ಮಾಡಬೇಕೆಂದು ತುರ್ಕೀ ಸುಲ್ತಾನರನ್ನು ಕೇಳಿಕೊಂಡರು.

ಸನ್ ೧೮೮೯ನೇ ಇಸವಿ ಏಪ್ರಿಲ್ ತಿಂಗಳೊಳಗಾಗಿ ಬ್ರಿಟಿಷನವರು ಈಜಿಪ್ಟ ದೇಶವನ್ನು ಬಿಟ್ಟು ಹೋಗುವವಿಷಯದಲ್ಲೂ, ಡಾರ್ಡನೆಲ್ಸ ಎಂಬ ಸಂಧಿ ಮಾರ್ಗವಾಗಿ ಬ್ರಿಟಿಷನವರ ಯುದ್ಧನಾವೆಗಳು ತುರ್ಕಿಯವರ ಸಮ್ಮತಿಯಂ ಪಡೆಯದೇನೇ ಹೋಗಿ ಬರುವ ವಿಷಯದಲ್ಲೂ ಇಂಗ್ಲೆಂಡಿನವರಿಗೂ ತುರ್ಕಿಯವರಿಗೂ ಮಾತುಗಳು ನಡೆಯುತಲಿರುವಂತೆ ಒಂದು ಪ್ರಮಾದವುಂಟಾಗಿದೆ.

ಲಂಡನ್ ೧೯ನೇ ಮಾರ್ಚ.—ಹೌಸ್ ಆಫ್ ಕಾಮನ್ಸ್ ಸಮಾಜದಲ್ಲಿ ಸರ್ ಜಾನ್ ಗಾರ್ಸ್ಟಯವರು ಒಂದುಕಡೆ ಉತ್ತರ ಹೇಳುವಲ್ಲಿ, ನಿಜಾಮರು ಮೊದಲಾಗಿ, ಇಂಡ್ಯದೇಶದ ಅರಸುಗಳು ಮಾಡುವದಾಗಿ ತಿಳಿಸಿದ ಉದಾರವಾದ ಸಹಾಯಗಳನ್ನು ಕುರಿತು ಗವರ್ನಮೆಂಟಿನವರು ಇನ್ನೂ ಆಲೋಚಿಸುತಲಿದಾರೆಂದು ತಿಳಿಸಿದರು.

ಲಾರ್ಡ ರ್ಯಾಂಡಾಲ್ಫ ಚರ್ಚಿಲಿಯವರು ಸೈನ್ಯದ ಖರ್ಚುಗಳ ಅಂದಾಜ ವಿಷಯದಲ್ಲಿ ನಿರ್ಮಿತವಾದ ಕಮಿಟಿಯ ಅಗ್ರಸನಾಧಿಪತಿಯಾಗಿ ನಿಯಮಿಸಲ್ಪಟ್ಟಿದಾರೆ.

ಈಜಿಪ್ಟ ರಾಜ್ಯವನ್ನು ಬಿಟ್ಟು ಬಿಡುವ ವಿಷಯದಲ್ಲಿ ಇಂಗ್ಲೆಂಡಿನವರಿಗೂ ತುರ್ಕಿಯವರಿಗೂ ಮಾತುಗಳು ನಡೆಯುವದಾಗಿ ಹುಟ್ಟಿದ ಸಮಾಚಾರವು ನಿರಾಧಾರವಾದದ್ದು.

ಪಿಟರ್ಸ್‌ಬರ್ಗ, ೨೦ನೇ ಮಾರ್ಚ.—ಇಲ್ಲಿನ ನಾಟಕ ಶಾಲೆಗೆ ಬೆಂಕಿ ಹತ್ತಿಕೊಂಡು ಸುಟ್ಟು ಹೋಯಿತು. ಆ ಕಾಲದಲ್ಲಿ ಅದರೊಳು ಜನರು ತುಂಬಿದ್ದರು. ಬಹುಮಂದಿ ಪ್ರಾಣಗಳಂ ಕಳೆದುಕೊಂಡಿರುವರೆಂತಲೂ ಅನೇಕರಿಗೆ ಗಾಯಗಳು ತಗಲಿರುವದೆಂತಲೂ ಜನಗಳು ಭಯಪಡುತಲಿದ್ದರು.

ಬಳಿಕ ತಿಳಿಯಬಂದದ್ದು—೮ ಮಂದಿ ಜನರು ಬೆಂಕಿಯಲ್ಲಿ ಸುಟ್ಟುಬಿದ್ದಿದ್ದರು. ಅನೇಕರು ಕಿಟಕಿಗಳ ಮಾರ್ಗವಾಗಿ ಬೀದಿಗಳಲ್ಲಿ ದುಮುಕಿದ್ದರು.

THE MYSORE GOVERNMENT AND ITS TANK POLICY.

—

“ ಮೈಸೂರ ಮುಲಕಿ ಕೆರೆಗಳ ಕಾಮುಗಾರೀ ಮಾ ಡಿಸುವ ವಿಷಯದಲ್ಲಿ ಡಿಸ್ಟ್ರಿಕ್ಟು ಮತ್ತು ತಾ ಲ್ಲೂಕ ರೆವಿನ್ಯೂ ಅಧಿಕಾರಿಗಳು ನಡೆಸುವ ಬಾಧ ಕಗಳನ್ನೂ ತನ್ಮೂಲಕ ರೈತರು ಅನುಭವಿಸುವ ತೊಂದರೆಗಳನ್ನೂ ವೃತ್ತಾಂತ ಚಿಂತಾಮಣಿ ಪ ತ್ರಿಕೆಗೆ ತುಮಕೂರಿಂದ ಒಬ್ಬ ಬಾತ್ಮೀದಾರ ನು ಇದರ ಕೆಳಕಂಡಂತೆ ಬರೆದಿರುತ್ತಾನೇನೆಂದರೆ.-

“ತುಮಕೂರು ಡಿಸ್ಟ್ರಿಕ್ಟಿನ ಕೆಲವು ತಾಲ್ಲೂ ಕುಗಳಲ್ಲಿ ಕೆರೇ ಕಾಮುಗಾರಿಯು ರೈತರಿಂದ ಸ ರ್ಕಾರದವರು ಬಲಾತ್ಕಾರದಿಂದ ಮಾಡಿಸುತ್ತಾ ಇರುವುದನ್ನು ಸ್ವಲ್ಪ ಸವರಿಸುವೆವು. ಕೆರೆಗ ಳಿರುವ ಪ್ರತಿಗ್ರಾಮಕ್ಕೂ ಟ್ಯಾಂಕ್ ಇನ್ಸ್ಪೆಕ್ಟರವ ರು ಬರುವಷ್ಟರಲ್ಲಿ ಗೌಡ ಶ್ಯಾನುಭೋಗರನ್ನ ಕರೆ ಸಿ ನಿಮ್ಮೂರು ಕೆರೆ ಅಳತೆ ಆಗಬೇಕು. ಈಕ್ಷಣ ೧೦ ಗುದ್ದಲಿಗಳು, ೧೦ ಬುಟ್ಟಿಗಳು, ೫ ಕಲ್ಲು ಕುಟಿಗಗಳು, ೨ ಜನ ಆಳುಗಳು ಸಹ ಸಿದ್ಧಪ ಡಿಸಿಕೊಂಡು, ಎಂತ ಬಹಳ ಬೆಸರ ಪಡಿಸುವರು. ಆಗ ಗೌಡ ಶ್ಯಾನುಭೋಗರು ನಾನಾವಿಧ ಶ್ರಮಪ ಟ್ಟು ರೈತರನ್ನ ಜಮಾಯಿಸಿಕೊಂಡು ಕರೆಯಮೇ ಲೆ ಹೋಗುವರು. ಟ್ಯಾಂಕ್ ಇನ್ಸ್ಪೆಕ್ಟರವರು ಅಳತೆಮಾಡಿ ಗೂಟಗಳು ಮೊಳೆಗಳು ಕಲ್ಲುಗ ಳು ಹೊಡಿಸಿ ಗುರುತುಮಾಡಿ ಈ ಗುರುತುಗಳ ವರಿಗೂ ಮಣ್ಣುಹಾಕಿ ಕಾಮುಗಾರಿ ಪೂರೈಸ ಬೇಕೆಂದು ತಾಕೀತುಮಾಡುವರು. ಬಿಟ್ಟೀ ಕಾಮು ಗಾರಿ ಮಾಡುವುದಿಲ್ಲ ಯೆಂದು ತಕರಾರು ನಡಿಸಿದ ವರನ್ನ ಅಮಲ್ದಾರರು ಬಂದು ಜೋರಾಗಿ ಜಪ್ತಿ ಹುಕುಂ ಜಾರಿ ಮಾಡಿಸಿ ಕಾಮುಗಾರಿ ಮಾಡಿ ಸುತ್ತೇವೆಂದು ಜೋರ್ ಮಾಡುವರು. ಆಗ ಎ ಲ್ಲಾ ಜನರೂ ಇರುವ ವ್ಯವಸಾಯವನ್ನೆಲ್ಲಾ ಮಾಡಿ ಕೊಳ್ಳಬೇಕು, ಅಥವಾ ಕುಂಪಣೀಬೀಮೆಗೆ ಹೊರಟುಹೋಗಬೇಕು. ಬರೇ ತಕರಾರು ಮಾಡಿದ್ದ ರಿಂದ ಉಪಯೋಗವಿಲ್ಲವು, ಅಂತೆ ಅಂದು ಮಣ್ಣು ಹೊರಲು ಸಿದ್ಧರಾಗುವರು. ಈವೇಳೆ ಭಾರೀ ಕೆರೆಗಳುಳ್ಳ ಊರುಗಳವರಿಗಿಲ್ಲವಂತೆ. ೫೦೦ ರೂ ಪಾಯಿ ಹುಟ್ಟುವಳವುಳ್ಳ ಕೆರೆಗಳೆಂದು ಕೆ ಲವರು ಇದು ಸ್ಪಷ್ಟವೇ ಇಲ್ಲವು. ಹುಟ್ಟು ವಳಿಯಿಂದಲೆ ವಸೂಲಾಗುವ ಮೊಬಲಗು ಅಂತ ಕೆಲವರು, ಸಾಗು ಬಂಜರೀ ದೇಖರೇಖೆ ಕರೆಯಿಂ ದ ಅಚ್ಚುಕಟ್ಟು ಕಂದಾಯ ಅಂತ ಕೆಲವರು, ಇದು ಸ್ಪಷ್ಟವೇ ಇಲ್ಲವು. ಯಾವ ಪ್ರಸಿದ್ಧ ಪತ್ರಿಕೆಯಲ್ಲಿಯೂ ಇಲ್ಲದ ಕ್ರಮ ಮೈಸೂರು ದೇಶದ (ರಾಜ್ಯ)ದಲ್ಲಿ ಉಂಟಾಗಿದೆಯೆಂದು ರೈತಜನರು ಗೋ ಳಾಡುತ್ತಾರೆ. ಇದಕ್ಕೆ ಉಪಾಯವೇ ಇಲ್ಲವಾ ಗಿದೆ. ಆಳುವ ಮಹಾಸ್ವಾಮಿಗಳು ಉತ್ತರದೇಶ ಯಾತ್ರೆ ಹೊರಡುವ ಕಾಲದಲ್ಲಿ ಅನೇಕಜನ ರೈತ ರು ಹೋಗಿ ಅಡ್ಡಬಿದ್ದು ಎಂದಿಗೂ ಇಲ್ಲದ ಬಿಟ್ಟೀ ಕಾಮುಗಾರಿಯನ್ನು ನಾವು ಮಾಡಲಾರೆವು, ಮನ್ನಿ ಸಿ ಕಾಪಾಡಬೇಕೆಂದು ಅರ್ಜಿಕೊಟ್ಟು ಬೇಡಿ ಕೊಂಡರಂತೆ. ಅದಕ್ಕೆ ರೈತರು ಇಷ್ಟು ವಷ್ಟುರ ಕಾಮುಗಾರಿ ಖುದ್ದು ಮಾಡಿಸಬೇಕು. ಇಷ್ಟವ ಇಲ್ಲದಿದ್ದರೆ ಕಾಮುಗಾರಿಯನ್ನು ನಿಲ್ಲಿಸಿಬಿಡಬೇಕು ಯೆಂತ ಅಪ್ಪಣೆಆಯಿತು. ಇಂತಾದ್ದು ಹುಕುಂ ಆಗಿದೆಯೆಂತ ಕೆಲವರನ್ನುವರು. ಆದಾಗ್ಯೂ ಸರ್ಕಾ ರೀಯಾಗಿ ಏನೊಂದು ಹುಕುಮನ್ನು ಪ್ರಕಟವಾ ಗಲಿಲ್ಲವು. ಯಾವುದು ನಿಜವೋ ಯಾವುದು ಸು ಳ್ಳೋ ಸ್ವಲ್ಪವಾದರೂ ತಿಳಿಯದು. ಈಗ ಸದ್ಯಾ ಮಣ್ಣು ಹೊರತಕ್ಕವರು ತಮ್ಮ ಹೊಟ್ಟೆಗಳುಬ ಹೊರುವವರಾಲ ಬಂದಿಲ್ಲವು. ಶ್ರಮ ಪಡತಕ್ಕವರಿ ಗೆ ವಿಶ್ರಾಂತಿ ಉಂಟಾಗಲಿಲ್ಲವು. ಎಷ್ಟರೇಸು. ಕೆ ರೇಕಾಮುಗಾರಿ ಅಂದರೆ ಅಲ್ಪಸ್ವಲ್ಪ ೮೦—೫೦ ರೂಪಾಯಿಗಳವರಿಗೂ ಅಂದಾಜುಹಾಕಿ ಗುತ್ತಿಗ ಗಳು ಮಾಡುತ್ತಾರೆ. ಅದನ್ನು ನೋಡುತ್ತಲೇ ರೈತರು ಎದೆ ಒಡೆದುಹೋಗುತ್ತಾರೆ. ಒಂದೊಂ ದು ಗುಡ್ಡದಲ್ಲಿ ಆಳುದ್ದ ಎರಡಾಳುದ್ದ ಮಣ್ಣು ತುಂಬಬೇಕಾಗುತ್ತದೆ. ಪ್ರತಿರೈತನೂ ಈಗ ಅವನು ಕೊಡತಕ್ಕ ಕಂದಾಯದ ಇನ್ನುಮ್ಮಡಿ ಮೊ ಬಲು ಖರ್ಚಾಗಬೇಕು. ಅದಕ್ಕೆಲ್ಲಾ ಜಾಸ್ತೀ ಆಗಲಾರದು. ತಾವೇ ಮಣ್ಣುಹೊತ್ತು ಕಾಮು ಗಾರಿ ಮಾಡಬಹುದು. ಅಥವಾ ರೂಪಾಯಿಗಳಾ ದರೂ ಕೊಡಬಹುದು, ಅಂತ ಕೆಲವರು ಅಂದು ಕೊಳ್ಳುತ್ತಾರೆ. ಇದಾದನಂತರ ಹೆಪ್ಪು ಹಚ್ಚುತ ಕ್ಕ ದೊಡ್ಡಪೀಕಲಾಟವುಂಟು. ಏನುಚ್ ರೈ ತರಿಗೆ ಉಳುಬಾಳಿಲ್ಲ, ಅಂತಅಂಗಲಾಚುತ್ತಾರೆ. ಬಂಜರ್ ಬಿದ್ದಿದ್ದಾಗ್ಯೂ ಕಂದಾಯಗಳನ್ನು ಕ ಟ್ಟಬೇಕು. ರಾತ್ರಿವೇಳೆ ಕಾವಲು ಹೋಗಬೇ ಕು. ಉತ್ಸವಗಳಲ್ಲಿ ಕಾವಲು ಹೋಗಬೇಕು. ಅ ತವಿ ಬಾಂದುಗಳನ್ನು ಭದ್ರಪಡಿಸಬೇಕು. ಹು ಲ್ಲುಬನ್ನೀ ತರಬೇಕು. ಮನೆಯ ನಿವೇಶನಬೇ ಕಾದರೆ ಸರಿಗೆ ೧ಕ್ಕೆ ೧ ಆಣೆಯಂತೆ ಕ್ರಯ ಕೊಡಬೇಕು. ಹುಳಿ,ಬೇಲಿ,ನಾರು, ತೋಳ್ಪು,ಗುಂ ಡುತೋಪು, ಕೀಗೆ ಗಿಡಗಳನ್ನು ಕಾಪಾಡಬೇಕು. ಕೆರೆಗಳಿಗೆ ಮಣ್ಣು ಹೊರಬೇಕು. ಇಷ್ಟುಬಗೆ ಬೇಧೆಗಳವೆ. ರೈತಜನರು ನಿಭಾಯಿಸುವಬಗೆ ಹ್ಯಾಗೋ ದೇವರೇಬಲ್ಲನು. ಜಗತ್ಕರ್ತನಾದ ಭಗವಂತನ ಕಟಾಕ್ಷವೂ ನಮ್ಮ ಆಳುವ ಮಹಾ ಸ್ವಾಮಿಯವರ ದಯೆಯೂ ಉಂಟಾದಹೊರ್ತು ಬೇರೆ ಏನೇನೂ ಉಪಾಯವಿಲ್ಲವಾಗಿದೆ.”

ಈ ಸಂಗತಿಗಳಿಂ ತಾ “ಆರದೆ ಮೊರಲೂರು ತಾಲ್ಲೂಕಿನವರು ಅನೇಕರು, ಗತವಾರದಲ್ಲಿ ನಾ ವು ತಿಳಿಸಿದ್ದಂತೆ ದಿವಾನರವರಿಗೆ ಇದರಡಿಕಂಡಂ ತೆ ಅರ್ಜಿ ಬರೆದುಕೊಂಡಿರುತ್ತಾರೇನೆಂದರೆ:—

೧೧. ಹೋದಸಂವತ್ಸರದಾರಾವಧಿಯಲ್ಲಿ ಕಸ ಬಾಕೆರೆಯು ತುಂಬಿ ಸಾಗುವಳಿ ಮಾಡುವದಕ್ಕೆ ಉಪಕ್ರಮಿಸುವ ಕಾಲದಲ್ಲಿ ಸರಕಾರದವರು ಕಸ ಬಾಕೆರೆಗೆ ಭಾರೀಕಾಮುಗಾರಿಮಾಡಿಸುವಉದ್ದೇ ಶದಿಂದ ಕಟ್ಟೇ ಒಡೆದು ನೀರು ಬಿಟ್ಟುಬಿಟ್ಟರು.

೨. ಆಗಿನಕಾಲದಲ್ಲಿ ಒಂದುಬೆಳೆ ಅವನಂತರ ಬೇಸಿಗೆಕಾಲದಲ್ಲಿ ಕೆರೆ ಕಾಮುಗಾರಿ ಪ್ರಾರಂಭಿಸಿ ದರೆ ಹಿಡುವಳಿದಾರರಿಗೆ ಯಾವನಷ್ಟವೂ ಸರಕಾ ರಕ್ಕೆ ಲುಕ್ಸಾನೂ ಉಂಟಾಗಲಾರದೆಂದು ಎಷ್ಟು ವಿನಯವಾಗಿ ಹೇಳಿಕೊಂಡಾಗ್ಯೂ ಅಧಿಕಾರಿಗಳ ಚಿ ತ್ತಕ್ಕೆ ಬಾರದೆ ಕೆರೆ ಒಡೆಸಿ ನೀರು ಹೊರಡಿಸಿ ದ್ದರಿಂದ ವ್ಯಯಸಂವತ್ಸರ ಜಮಾಬಂದಿಕಾಲದಲ್ಲಿ ಡೆಪ್ಯುಟಿ ಕಮಿಷನರವರು ಕಂದಾಯದಲ್ಲಿ ಅ ರ್ಧಾಂಶ ಕೊಡಬೇಕೆಂತಲೂ, ಬಾಕಿ ಅರ್ಧಾಂಶ ಕ್ಕೆ ವಜಾ ಆಗುವಂತೆ ಶಿಫಾರಸ್ ಮಾಡುತ್ತೇವೆಂತ ಲೂ ರೂಬರೂ ಪಟ್ಟೇದಾರರಿಗೆ ಸಮಜಾಯಿಸಿ ಹೇಳಿದ್ದರಿಂದ ಕಂದಾಯದಾರರಲ್ಲಿ ಕೆಲವರು ಅ ವೇಪ್ರಕಾರ ಅರ್ಧಾಂಶ ಕಂದಾಯ ಸರಕಾರಕ್ಕೆ ಪಾವತೀ ಮಾಡಿಬಿಟ್ಟರು.

೩. ಮ|| ರಾ|| ರಂಗಸ್ವಾಮಿಪಿಳ್ಳೇಯವರವರು ಮಾಡಿಯಲ್ಲಿ ಈಕೆರೇ ಕಾಮುಗಾರಿಯಾದಾಗ ಖು ಷ್ಕೀಬಸ್ತ್ರೀ ಪ್ರಕಾರ ಆಗಿನ ಅಧಿಕಾರಿಗಳ ಹು ಕುಮಿನಂತೆ ಹಿಡುವಳೀದಾರರಿಂದ ಹಣ ವಸೂಲ್ ಮಾಡಿಕೊಂಡರು.

೪. ಈ ವ್ಯಯಸಂವತ್ಸರದಲ್ಲಿ ಅವರ ಅನು ಮತಿಯಿಲ್ಲದೆ ಸಾಗುವಳಿ ಆಯಾಕಾಲದಲ್ಲಿ ಸರಕಾ ರದವರು ಕೆರೆ ಒಡೆಸಿ ಕಾಮುಗಾರಿ ಶುರುಮಾಡಿ ಸಿದ್ದರಿಂದ ರೈತರಿಗೆ ನಷ್ಟವಾಗಿರುತ್ತದೆ. ಪ್ರಾ ರ್ಥದಲ್ಲಿ ನಡೆದಂತೆ ಖುಷ್ಕೀ ಬಸ್ತೀ ಪ್ರಕಾರ ಕಂ ದಾಯ ಮೊಕರರ್ ಮಾಡಿಸಿಕೊಡಬೇಕೆಂದು ಹಿಂ ದಿನ ದಾಖಲೆಗಳನುಸರಿಸಿ ಡೆಪ್ಯುಟಿ ಕಮಿಷನ ರವರಿಗೆ ೫—೬ ಅರ್ಜಿಗಳು ಬರೆದು ಕೊಟ್ಟಾ ಗ್ಯೂ ಜವಾಬೇ ಕೊಡಲಿಲ್ಲ.

೫. ಈ ವಿಷಯವಾಗಿ ೧೮೮೭ನೇ ಇಸವಿ ಮೆ ಹಾರಿಜ್ ೨೭ ರಲ್ಲು ದಿವಾನರವರಿಗೆ ಅರ್ಜಿ ಬ ರಕೊಳ್ಳುತಲು ತರೀ ಕಂದಾಯ ವಸೂಲೀವಿಷ ಯದಲ್ಲಿ ನಡೆದಿರುವ ಅಮಲಿಗೆ ತಪಶೀಲವಾರ್ ಇಂ ಡಾರ್ಸ ಕೊಡುವಂತೆ ಡೆಪ್ಯುಟಿ ಕಮಿಷನರವರಿಗೆ ದಿವಾನರವರ ಕಚ್ಚೇರಿಯಿಂದ ಲೆಟರು ಬರೆದಿರು ತ್ತಾರೆ. ಈಮೇಲೆ ತಿಳಿಸುವ ಇಂಡಾರ್ಸ ಕಂದಾ ಯದಾರರಿಗೆ ತೃಪ್ತಿಕರವಾಗಿಲ್ಲದಪಕ್ಷದಲ್ಲಿ ಪುನಃ ದಿವಾನರವರಿಗೆ ಅರ್ಜಿಬರೆದುಕೊಳ್ಳುವಂತೆ ೮೭ನೇ ಇಸವಿ ಜೂನ್ ೧ನೇ ತಾರೀಖು ೪೧೧ನೇ ನಂಬರ್ ಇಂಡಾರ್ಸ ಬಂದದ್ದನ್ನ ಕಂದಾಯದಾರರು ತಮ್ಮ ಅರ್ಜಿಯೊಡನೆ ರವಾನೆ ಮಾಡಿರುತ್ತಾರೆ.

೬. ದಿವಾನರವರ ಹುಕುಂ ಡೆಪ್ಯುಟಿಕಮಿಷ ನರ್ ಆಫೀಸಿಗೆ ತಲುಪಿದನಂತರ ಈ ವಿಷಯ ವಾಗಿ ವಿಶೇಷ ಸಂಗತಿಗಳನ್ನ ತಿಳಿಸಬೇಕೆಂದು ಮಾಲೂರು ಅಮಲ್ದಾರರಿಗೆ ಡೆಪ್ಯುಟಿ ಕಮಿಷ ನರವರಿಂದ ಹುಕುಂ ಸಾದರಾದಮೇಲೆ ರೈತರ ನ್ನ ಕರೆಕಳುಹಿಸಿ ಅವರವರ ಅಹವಾಲನ್ನ ಕೇ ಳಿದರು.

೭. ಸಾಗುವಳಿ ಆಯಾ ಕಾಲದಲ್ಲಿ ರೈತರ ಅ ನುಮತಿಇಲ್ಲದೆ ಸರಕಾರದವರು ಕೆರೆ ಒಡೆಸಿ,ಕಾ ಮುಗಾರಿಗೆ ಪ್ರಾರಂಭಮಾಡಿದ್ದರಿಂದ ಆಸಾಲಿನ ಕಂದಾಯವನ್ನ ವಜಾ ಮಾಡಿಸಬೇಕೆಂದು ಕಂದಾ ಯದಾರರು ಕೊಟ್ಟ ಕೈಫಿಯತ್ತಿನೊಡನೆ ತಾಲೂ ಕಿನ ಅಭಿಪ್ರಾಯ ಸಹಿತ ಡಿಸ್ಟ್ರಿಕ್ಟಿಗೆ ರಿಪೋ ರ್ಟು ಹೋಗಿರುತ್ತದೆ.

೮. ಈ ವಿಷಯವಾಗಿ ತಾಲ್ಲೂಕಿನವರು ಕೊ ಟ್ಟ ೧೮೮೭ನೇ ಇಸವಿ ಮೇ ೧೮ನೇ ತಾರೀಖು ೧೧ನೇ ನಂಬರ್ ಇಂಡಾರ್ಸ ನೋಡುವಲ್ಲಿ ಖುಷ್ಕಿ ರಿವಾಜ ಪ್ರಕಾರ ತರೀ ಜಮೀನು ಕೊಡಲಾಗದೆಂ ದು ಹುಕುಂ ಕೊಟ್ಟಿರುತ್ತಾರೆ. ಈಗಿನ ರೂಲ್ಸ ನುಸರಿಸಿ ಅರ್ಧಕಂದಾಯ ಸಂದರ್ಭಾನುಸಾರವಾ ಗಿ ಮಾಫಿ ಮಾಡಬಹುದೆಂದು ಹುಕುಂಯಿದ್ದಾ ಗ್ಯೂ ಆಪ್ರಕಾರ ಮಾಡಿರುವದಿಲ್ಲ. ಈ ೧೧ನೇ ನಂಬರ್ ಇಂಡಾರ್ಸ ದಿವಾನ್ ಕಚ್ಚೇರಿಗೆ ರವಾನ ಮಾಡಿರುತ್ತಾರೆ.

೯. ಈಸಂವತ್ಸರ ಜಮಾಬಂದಿಯಲ್ಲಿ ಮೊದ ಲುಕೊಟ್ಟ ಹುಕುಮಿಗನುಸಾರವಾಗಿ ಪೂರಾ ಕಂದಾಯ ವಸೂಲ್ಮಾಡಬೇಕೆಂದು ಡೆಪ್ಯುಟಿ ಕ ಮಿಷನರವರು ತಾಲ್ಲೂಕಿಗೆ ಹುಕುಂ ಕೊಟ್ಟ ರುವದರಿಂದ ತಾಲ್ಲೂಕಿನವರು ಆದ ಫಸಲುಗಳ ನ್ನು ಅಟಕಾಯಿಸಿ ಎರಡುಸಾಲಿನ ಕಂದಾಯದ ಹಣ ಏಕಾವಧಿಯಾಗಿ ಕೊಡಬೇಕೆಂದು ನಾನಾವಿಧ ವಾದ ತಿರುಕೋಳು ಪಡಿಸುತ್ತಿದ್ದಾರೆ. ಈಗ ಆಗಿ ರುವ ಫಸಲುಗಳನ್ನ ನೋಡಿದರೆ ಒಂದುಸಂವತ್ಸ ರಕಂದಾಯ ದೊರವುದೇ ದುಸ್ತರವಾಗಿರು ತ್ತದೆ. ಅಟಕಾಯಿಸಿರುವ ಫಸ್ಲುಗಳೂ ರಾಶಿಗ ಳೂ ಎಲ್ಲಿದ್ದಲ್ಲಿಯೇ ಕೆಡಿಲವಾಗಿರುತವೆ. ಗದ್ದೆ ಬೀಸಾಬ ನಿರ್ವಾಹವಿಲ್ಲ. ಪಟೇಲ, ಶಾನುಭೋಗ ನೀರಗಂಟಿ, ತಳವಾರರೇ ಕಾವಲಿದ್ದಾರೆ. ಇವರೇ ಮುಂದೆಗೆ ಹೋಳಸು ಕಾವಲಿದ್ದಂತಾಯಿತು. ಫ ಸಲ್ ಅಟಕಾಯಿಸಕೂಡದೆಂಬ ಒಂದು ಹುಕುಮಿ ಗೆ ವಿರೋಧವಾಗಿ ನಡಿಯುವದನ್ನ ನೋಡಿದರೆ ಸ ರಕಾರದವರ ನ್ಯಾಯವೇ ಕಂದಾಯದಾರರವರಿ ಗೆ ಇಲ್ಲದಂತಾಯಿತು.

೧೦. ಕೆರೆಗಳು ಅಡಾಯಪಟ್ಟು ಸಾಗುವಳಿ ಆಗದ ಸಂವತ್ಸರಗಳಲ್ಲಿ ಪೂರಾ ಕಂದಾಯ ವಜಾ ಆಗಲಾರದೆಂಬರ್ಥ ಸ್ಪಷ್ಟ ೧೮೮೬ನೇ ಇಸವಿ ಜೂನ್ ೫ನೇ ತಾರೀಖು ೯ನೇ ನಂಬರ್ ಇಸ್ತಿಹಾರನು ಸರಿಸಿ ಅರ್ಧಕಂದಾಯ ಮಾಫಿಯಾಗುವ ವಿಷಯದ ಲ್ಲಿ ದಿವಾನರವರ ಅನುಮತಿ ಪಡೆಯಬೇಕೆಂದು ಪ ರಿಷ್ಕಾರವಾಗಿ ಆ ಇಸ್ತಿಹಾರ್‌ನಲ್ಲಿ ನಮೂದಿಸಿ ದ್ದಾಗ್ಯೂ ಆ ಪ್ರಕಾರ ನಡೆಸದೆ ದೊರಕುವ ಚ ರಸೊತ್ತುಗಳಿಂದ ಎರಡುಸಂವತ್ಸರದ ಪೂರಾ ಕಂದಾಯ ಬಾಬೇಗುಂಟನ್ನ ವಸೂಲ್ಮಾಡಬೇಕೆಂ ದು ಡೆಪ್ಯುಟಿ ಕಮಿಷನರವರು ತಾಲ್ಲೂಕಿಗೆ ಹು ಕುಂ ಕೊಟ್ಟಿರುತ್ತಾರೆ. ಮೊದಲು ೫—೬ ಅರ್ಜಿ ಗಳು ಕೊಟ್ಟಿದ್ದಾಗ್ಯೂ ಜವಾಬೇ ಇಲ್ಲದಕಾರಣ ೯ ದಿವಾನರವರಿಗೆ ನವೆದ ಕಾಗದ ಪತ್ರಗಳನ್ನ ಅರ್ಜಿಯಲ್ಲಿಗರ್ಭೀಕರಿಸಿರವಾನೆಮಾಡಿರುತ್ತಾರೆ.

೧೧. ಬಂಜರ್ ತರೀಕಂದಾಯ ವಸೂಲ್ಮಾಡ ಬೇಕೆಂಬುವದು ಯಾವ ನ್ಯಾಯವೋ ದಿವಾನರ ವರೇ ಪರ್ಯಾಲೋಚಿಸಬೇಕು.

೧೨. ಮೇಲಿನ ಅಹವಾಲನ್ನ ದಿವಾನರವರು ಚಿತ್ತೈಸಿ ತಂದು ಹುಕುಂ ಕೊಡುವವರೆವಿಗೂ ಮಾ ರೆ ತಾಲ್ಲೂಕು ಅಮಲ್ದಾರರು ಶೇಕ್‌ದಾರ್, ಶಾನುಭೋಗ, ಪಟೇಲ, ನೀರಗಂಟಿ, ತೋಟಿ, ವಗೈರೇ ಫಸಲುಗಳನ್ನ ಅಟಕಾಯಿಸಿ ಜುಲುಂ ಜೋರಾವರಿ ತಿರುಕೋಳುಗಳನ್ನ ನಡೆಸದಂತೆ ಮೊದಲು ಹುಕುಂ ಮಾಡಿಸಿ, ಅನಂತರ ನಮ್ಮ ಅ ಹವಾಲಿಗೆ ನ್ಯಾಯವಾದ ಫೈಸಲು ಅಪ್ಪಣೆ ಕೊ ಡಿಸಬೇಕು” ಎಂಬದು.

SUMMARY OF NEWS.

ವೃತ್ತಾಂತ ಸಂಗ್ರಹವು.

—:o:—

ಮೆಣಸಿನಕಾಯಿಯನ್ನು ದಿನಕ್ಕೆ ಮೂರುಸ ಲ ತಿನ್ನುತ್ತಾ ಬರುವವರಿಂದ ಜ್ವರ ಬರುವ ದೇ ಶಗಳಲ್ಲಿ ಜ್ವರವನ್ನು ತಪ್ಪಿಸಿ ಕೊಳ್ಳಬಹುದೆಂದು ಬ್ರಿಟಿಷ್ ದೇಶದ ಒಬ್ಬ ಉದ್ಯೋಗಸ್ಥನು ಅನು ಭವ ಸಿದ್ಧನಾಗಿ ಹೇಳುತ್ತಾನೆ.—ಕ.ಸು.

‘ಜರ್ಮನ್ ಜನಾಂಗದವರು ವಿಲಾಯತಿಯ ಬ್ರಾಹ್ಮಣರೆಂತಲೂ ಫ್ರೆಂಚರು ಕ್ಷತ್ರಿಯರೆಂತ ಲೂ ಇಂಗ್ಲೀಷರು ವೈಶ್ಯರೆಂತಲೂ ರಷ್ಯಾದೇಶದ ವರು ಶೂದ್ರರೆಂತಲೂ ವಿಲಾಯತಿಗೆ ಹೋಗಿಬಂ ದ ಒಬ್ಬ ಹಿಂದು ವಿದ್ವಾಂಸನು ಹೇಳುತ್ತಾನೆ.

ರಷ್ಯಾ ಶಾಲೆಗಳಲ್ಲಿ ೧೮೮೬ನೇ ವರುಷ ದಲ್ಲಿ ೭೨೫ ಸ್ತ್ರೀಯರು ವಿದ್ಯಾಭ್ಯಾಸಮಾಡು ತ್ತಿದ್ದರು. ಅವರಲ್ಲಿ ೪೩ಜನ ತತ್ವಶಾಸ್ತ್ರದ ವನ್ನು, ೫೦೦ ಮಂದಿ ಭೌತಿಕ ಮತ್ತು ಗಣಿತ ಶಾ ಸ್ತ್ರಗಳನ್ನು,ಉಳಿದ ೩೬ಮಂದಿ ಮಿಶ್ರಗಣಿತಶಾ ಸ್ತ್ರವನ್ನುಮಾತ್ರ ಅಭ್ಯಾಸಮಾಡುತ್ತಿದ್ದರು. ಈಗ ಸಂಖ್ಯೆಯು ದ್ವಿಗುಣವಾಗಿ ಎಲ್ಲಾ ಶಾಸ್ತ್ರ ಗಳಲ್ಲಿಯು ಪಾಂಡಿತ್ಯವನ್ನು ಪಡೆಯುತ ಲಿದಾರೆ.—ವೃ.ಚಿಂ.

ಸರ್ಪದಂಶಕ್ಕೆ ಸುಲಭವಾದ ಒಂದು ಔಷಧವ ನ್ನು ಅಮೇರಿಕಾ (ನ್ಯೂಯಾರ್ಕ)ದ ಒಂದ ಪತ್ರವು ಪ್ರಕಟಿಸುತ್ತದೆ. ಅದೇನೆಂದರೆ—ಸ ರ್ಪದಷ್ಟವಾದ ಕೂಡಲೇ ಆಮನುಷ್ಯನ ನಾಲಿಗೆ ಯ ಮೇಲೆ ಕ್ಲೋರೊಫಾರ್ಮ (chloroform)ದ ಹನಿ ಹಾಕಿದರೆ ವಿಷವನ್ನು ಹಚ್ಚುವದರಿಂದ ಎ ಷ್ಟು ಕಠಿಣ ವಿಷವಾದರೂ ಕ್ಷಣಮಾತ್ರದಲ್ಲಿ ಇಳಿ ದು ಹೋಗುತ್ತದೆ.—ಕ.ಸು.

ವಿವಾಹಭಂಗ—ಫ್ರಾನ್ಸಿನಲ್ಲಿ ಒಬ್ಬ ಬ್ರಾಹ್ಮ ಣನ ಮನೆಯಲ್ಲಿ ಲಗ್ನ ಸಮಾರಂಭಕ್ಕೆ ಪ್ರಾರಂಭ ವಾಗಿ ಒಂದೆರಡು ಮಂಗಳಾಷ್ಟಕ ಹೇಳಿ ಆದನಂ ತರ ಮದಿ ಮಗನು ಲಗ್ನ ಮಂಟಪದಿಂದ ಓಡಿ ಹೋದನೆಂತಲೂ, ಅವನು ಕಾಲೇಜದೊಳಗಿನ ಒ ಬ್ಬ ವಿದ್ಯಾರ್ಥಿಯಾಗಿರುತ್ತಿದ್ದು ಮೊದಲಿನಿಂದ ಲೂ ಮದುವೆ ಮಾಡಿಕೊಳ್ಳುವದಕ್ಕೆ ಮನಸ್ಸಿಲ್ಲ ದವನಾಗಿಯೂ ಕೇವಲ ತಂದೆಯ ಆಗ್ರಹದ ಮೇ ಲಿಂದಲೇ ಲಗ್ನ ನಿಶ್ಚಯವಾಯಿತೆಂತಲೂ ತಿಳಿ ಯುತ್ತದೆ. ಓಡಿ ಹೋದವನನ್ನು ಹಿಡಿದು ತ ರಲು ಅವನು ಅಂದದ್ದೇನೆಂದರೆ: “ ೨೦ ವರುಷ ಪ್ರಾಯದವನಾಗುವವರೆಗೂ ವ ಬದಿಯಾಗುವ ದಿಲ್ಲವೆಂದು ನಾನು ಸ್ಪಷ್ಟವಾಗಿ ಹೇಳಿದಾಗ್ಯೂ ನನಗೆ ಬಲಾತ್ಕಾರದಿಂದ ನಡೆಸುವ ಈ ಲಗ್ನವು ನನಗೆ ಸಮ್ಮತವಾದದ್ದಲ್ಲ. ಈ ಹುಡುಗಿಯು (ಮದಿಮಗಳು) ನನಗೆ ತಾಯಿ ಹಾಗೂ ಅಕ್ಕ ತಂಗಿಯರಂತಿದ್ದಾಳೆ. ಇವಳನ್ನು ನಾನು ವರಿ ಸುವದಿಲ್ಲ. ಒಂದು ವೇಳೆ ನೀವು ಲಗ್ನ ಮಾಡಿ ದರೂ, ಧರ್ಮಪತ್ನಿಯ ಕರ್ತವ್ಯ ಕಾಮೇಚ ನಾತಿ ಚರಾಮಿ—ಎಂಬ ವಚನವನ್ನು ನಾನು ಎಂದಿಗೂ ಒಪ್ಪಲಿಕ್ಕಿಲ್ಲ; ಈ ಹುಡುಗಿಯನ್ನುಮಾತ್ರ ವೃಥಾ ಕೆಡಿಸಿದಂತಾದೀತು.” ಅವನ ಈ ತರದ ದೃಢ ನಿಶ್ಚಯವನ್ನು ಕೇಳಿ ಲಗ್ನ ಸಮಾರಂಭವನ್ನು ನೋಡಬಂದವರೆಲ್ಲರೂ ಅಲ್ಲಿಂದೆದ್ದು ತಮ್ಮ ತ ಮ್ಮ ಮನೆಗೆ ಹೋದರು. ನಮ್ಮ ಹಿಂದೂಜನ ರಲ್ಲಿ ಪ್ರಚಾರದಲ್ಲಿರುವ ಬಾಲವಿವಾಹ ಕ್ರಮವು ಒಳ್ಳೇದಿದ್ದ ಪಕ್ಷಕ್ಕೂ ಈಗಿನ ಕಾಲಮಾನಕ್ಕೆ ಸಂಗಡವಾಗಿ ಅದರಲ್ಲೇನಾದರೂ ಬದಲಾವಣೆಗ ಳಾಗುವದು ಅಗತ್ಯವಾಗಿದೆ. ತಂದೆತಾಯಿಗಳು ತಮ್ಮ ಜೀವಮಾನದಿರುವಾಗಲೇ ತಮ್ಮ ಮಕ್ಕ ಳ ವಿವಾಹವಾದದ್ದನ್ನು ನೋಡಿ ಸಂತೋಷಿಸು ವ ಆಶೆಯಿಂದ ಮುಂದಿನ ಪರಿಣಾಮವನ್ನು ಮನ ಸ್ಸಿನ ತಾರದೆ ಆತ್ಮಗೋಡಕೂ ಮಾಡಿ ವಿವಾಹ [illegible] ನೆರವೇರಿಸುವದು ತಮ್ಮ ಕರ್ತವ್ಯದಲ್ಲಿ ಒಂದಾದದ್ದೆಂದು ತಿಳಿಯುತ್ತಾರೆ. ಆದರೆ ಈ ಮಹತ್ಕಾರ್ಯದಲ್ಲಿ ಇಷ್ಟು ಏತಾಯವಾಡುವ ದು ಈಗಿನ ಕಾಲದಲ್ಲಿ ಸರಿಯಲ್ಲವು.—ಕ.ಸು.

Bangalore:—Printed and published for the Proprietor at the Karnatic Press—1888.

ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA.

ಪ್ರತಿ ಸೋಮವಾರ ಪ್ರಾತಃಕಾಲದಲ್ಲಿ ಪ್ರಕಟಿಸಲ್ಪಡುವದು.

Published every Monday Morning.

ಶ್ರೀಮನ್ಮಹಿಷಪುರ ಸ್ಥಿತ್ಯುಪಗಮಾರ್ಹ ಕರ್ಣಾಟಕಪ್ರಕಾಶಿಕಾನವರಾಭಿಧಾಪ್ರಥಿತಾ ಪತ್ರಿಕೇಯಂ ಭಾಷಿತಾ ... ಸುಮತಾಂ॥

Vol. XV.] BANGALORE:—MONDAY, 2, APRIL 1888. [No. 18.

ಸಂಪುಟ ೧೫.] ಬೆಂಗಳೂರು:—ಸನ್ ೧೮೮೮ನೇ ಇಸವಿ ಏಪ್ರೆಲ್ ೨ನೇ ತಾರೀಖ್ ಸೋಮವಾರ. [ಸಂಖ್ಯೆ ೧೩.

ಕರ್ಣಾಟಕ ಪ್ರಕಾಶಿಕಾ

ಪತ್ರಿಕೆಯ ಚಂದಾ ದರಗಳು,
೧೮೮೮ನೇ ಇಸವಿ ಜನವರಿ ೧ನೇ ತಾರೀಖು
ಕಡಮೆಮಾಡಲ್ಪಟ್ಟಿರುತ್ತದೆ.

ಈ ಪತ್ರಿಕೆಯ ಚಂದಾದಾರರಪ್ಪೆತಿ ಅನೇಕರ ಅಪೇಕ್ಷೆಯನ್ನನುಸರಿಸುವ ಉದ್ದೇಶದಿಂದಲೂ, ಪರಿಮಿತವಾದ ಆದಾಯವುಳ್ಳವರಿಗೆಲ್ಲ ಈ ಪತ್ರಿಕೆಯು ಸುಲಭವಾಗಿ ಲಭಿಸುವಂತಿರಬೇಕೆಂಬ ಅಭಿಪ್ರಾಯದಿಂದಲೂ ಇದರ ಚಂದಾದರವನ್ನು ಈ ವರತಿಕಂಡಂತೆ ಕಡಮೆಮಾಡಿರುತ್ತೇವೆಂತೆಂದರೆ:—

ಇಂಗ್ಲಿಷ್ ಮತ್ತು ಕನ್ನಡಭಾಗಗಳಿಗೆ.

	ಸ್ಥಳದವರಿಗೆ	ಪರಸ್ಥಳದವರಿಗೆ.
12 ತಿಂಗಳಿಗೆ	8—0—0	9—0—0
6 ,,	4—0—0	4—8—0
3 ,,	2—8—0	2—8—0

ಇಂಗ್ಲಿಷ್ ಅಥವಾ ಕನ್ನಡಭಾಗಗಳಿಗೆ.

	ಸ್ಥಳದವರಿಗೆ	ಪರಸ್ಥಳದವರಿಗೆ
12 ತಿಂಗಳಿಗೆ	4—0—0	5—0—0
6 ,,	2—0—0	2—8—0
3 ,,	1—4—0	1—8—0

ಷರಾ—ಹಿಂದೆ ಮುನ್ಸೀಫರುಗಳು, ಪೋಲೀಸ್ ಮತ್ತು ತಾಲ್ಲೂಕ್ ಸ್ಕೂಲ್‌ಮಾಸ್ತರುಗಳು, ಪ್ಯೆನಷನರುಗಳು, ವಕೀಲರು, ವಿದ್ಯಾರ್ಥಿಗಳು, ಇವರಿಗೆಲ್ಲ ಈ ಪತ್ರಿಕೆಯು ಕಡಿಮೆ ಚಂದಾದರಕ್ಕೆ ಕೊಡಲ್ಪಡುವದು. ಅಪ್ಯಾಗಸ್ಟರ ... ಬಾರದ ದರಖಾಸ್ತುಗಳಿಗೆ ಸುತರಾಂ ನಿಗೆಕೊಡಲ್ಪಡಲಾರದು. ಚಂದಾದಾರರು ಇಂಗ್ಲಿಷ್ ಭಾಗವನ್ನಾಗಲಿ ಕನ್ನಡಭಾಗವನ್ನಾಗಲಿ ಅಥವಾ ಎರಡನ್ನಾಗಲಿ ತೆಗೆದುಕೊಳ್ಳಬಹುದು. ಚಂದಾಹಣವನ್ನು ಮುಂಗಡವಾಗಿಯೇ ಸಲ್ಲಿಸತಕ್ಕದ್ದು. ಮೂರುತಿಂಗಳಿಗಿಂತ ಕಡಮೆಯಾಗಿ ಚಂದಾ ಕೊಡಲು ಅಂಗೀಕರಿಸಲ್ಪಡಲಾರದು.

ನೋಟುಗಳು ರವಾನಿಸತಕ್ಕವರು ನೋಟಿನ ಅರ್ಧಗಳನ್ನು ಬೇರೆಬೇರೆ ತಪಾಲಿನಲ್ಲಿ ಕಳುಹಿಸತಕ್ಕದ್ದು ಮತ್ತು ಒಂದು ಅರ್ಧ ಸೇರಿದ ಬಳಿಕ ಬಾಕಿ ಅರ್ಧ ನೋಟನ್ನು ರವಾನಿಸತಕ್ಕದ್ದು. ಸ್ಟಾಂಪುಗಳು ಕಳುಹಿಸತಕ್ಕವರು ರೂಪಾಯಿ ಒಂದಕ್ಕೆ ಒಂದು ಆಣೆಯಂತೆ ಡಿಸ್ಕೌಂಟ್ ಸಹ ಸೇರಿಸಿ ಕಳುಹಿಸತಕ್ಕದ್ದು. ಅರ್ಧನೋಟುಗಳು ಹಾಗೂ ಸ್ಟಾಂಪುಗಳುಳ್ಳ ಬಿಲ್‌ಗಳನ್ನು ಕಳುಹಿಸಕೂಡದು. ಡಿಸ್ಕೌಂಟಿಲ್ಲದೆ ಕಳುಹಿಸಲ್ಪಡುವ ಸ್ಟಾಂಪುಗಳು ಅದು ಬಜಾವಣೆ ... ಲೆಕ್ಕಕ್ಕೆ ದಾಖಲ್ಮಾಡಿಕೊಳ್ಳಲ್ಪಡುವದು.

ಪ್ರಕಟನೆಯ ರಿವಾಜ್.

ಮೊದಲನೆಯದಕ್ಕೆ ಪಂಕ್ತಿ ಒಂದಕ್ಕೆ ೦—೩—೦
ಎರಡನೆಯದಕ್ಕೆ ಪಂಕ್ತಿ ಒಂದಕ್ಕೆ ೦—೧—೦

ಷರಾ—ಎರಡಾವರ್ತಿಗಿಂತ ಹೆಚ್ಚಾಗಿ ಎಷ್ಟು ಸಲ ... ಪಂಕ್ತಿ ಒಂದಕ್ಕೆ ೧ ಆಣೆಯಂತೆ ಲೆಕ್ಕ ಮಾಡಲ್ಪಡುವದು. ಈ ಪತ್ರಿಕೆಯಲ್ಲಿ ಪ್ರಕಟನೆಗಳು ... ಪ್ರಕಟನೆಗಳು ಕಳುಹಿಸುವವರು ಅವುಗಳನ್ನು ಎಷ್ಟು ಸಲ ಪ್ರಕಟಿಸಬೇಕೆಂಬ ಅಂಶವನ್ನು ಸ್ಪಷ್ಟವಾಗಿ ತಿಳಿಸತಕ್ಕದ್ದು. ಇಲ್ಲದಪಕ್ಷಕ್ಕೆ ಅವರು ಮತ್ತೆ ನಿಲ್ಲಿಸುವಂತೆ ಬರೆಯುವತನಕ ಅವು ಪ್ರಕಟಿಸಲ್ಪಟ್ಟು ಹಣ ... ಪ್ರಕಟನೆಗಳಿಗೆ ದರಮೇರೆ ... ಪ್ರಕಟನೆಗಳನ್ನು ಕಳುಹಿಸುವವರು ... ಈ ಪತ್ರಿಕೆಗೆ ಕಳುಹಿಸುವ ಅಭಿಪ್ರಾಯಗಳಿಗೆ ... ನಾವು ಜವಾಬ್ದಾರರಾಗಲಾರೆವು. ... ಪ್ರಕಟಿಸಲ್ಪಡುವ ... ಕಾಗದಗಳು ...

"IT RECOMMENDS ITSELF"
ALL WHO SUFFER FIND SURE RELIEF.

LITTLE'S

ORIENTAL BALM

THE MOST EFFECTUAL MODERN REMEDY FOR PAIN.

ಲಿಟಲ್ ಎಂಬುವನಿಂದ ತಯಾರುಮಾಡಲ್ಪಟ್ಟ "ಓರಿಯಂಟಲ್‌ಬಾಮ್" ಎಂಬ ಪೂರ್ವದೇಶ ಸಂಬಂಧವಾದ ಅಮೃತದ ತೈಲವು ಸ್ವಶಕ್ತಿ ಪ್ರದರ್ಶಕವಾದದ್ದು, ಮತ್ತು ಸಫಲವಾದ ನವೀನ ಪ್ರತಿಕ್ರಿಯಾರೂಪವಾದ ಔಷಧವು. ಇದರಿಂದ ಸಕಲ ವಾತರೋಗಗಳೂ, ವಾತಸಂಬಂಧಗಳಾದ ಸಂಧಿವಾತಗಳೂ ನಿವೃತ್ತಿಯಾಗುವವು. ಮುಖ್ಯವಾಗಿ ಚಿರಕಾಲಿಕವಾದ ವಾತರೋಗಗಳು, ಕಾಸ, ಗಂಟಲುನೆಟ್ಟಿ ಉರಿ, ನರಮುನೋವು, ಕೀಲುವಾಯು, ಕಟಿವಾಯು, ಉಳುಕು ನೋವು, ತಲೆನೋವು, ತಿಮಿರವಾಯು ಮುಂತಾದ ರೋಗಗಳಿಗೆಲ್ಲ ನಿಸ್ಸಂದೇಹವಾಗಿ ಬಹಳ ಪ್ರಯೋಜನವನ್ನುಂಟುಮಾಡತಕ್ಕದ್ದು. ಈ ತೈಲವನ್ನು ನೋವುಳ್ಳ ಸ್ಥಳಗಳಲ್ಲಿ ಕೆಲವಾವರ್ತಿ ಸವರಿ ಕಾವು ಉಂಟಾಗುವಂತೆ ಚೆನ್ನಾಗಿ ತಿಕ್ಕಿದಲ್ಲಿ ಸಹಜಗಳಾದ ಎಲ್ಲಾ ನೋವುಗಳನ್ನು ನಿವೃತ್ತಿಮಾಡುವಂತಹ ಉತ್ತಮ ತೈಲವಾಗಿರುತ್ತದೆ. ಸರ್ಪಸುತ್ತು ... ದಲೇ ಅರತಲೆನೋವು ಮತ್ತು ಜೋಮು ಕೂಡಲೆ ನಿವೃತ್ತಿಯಾಗುವದು. ಗಂಟಲಿನಲ್ಲುಂಟಾಗುವ ಉರಿ ... ಗಳಿಗೆ ಈ ತೈಲವು ಅದ್ಭುತವಾದ ಮತ್ತು ಶೀಘ್ರವಾದ ಸಂಪೂರ್ಣ ಗುಣವನ್ನುಂಟುಮಾಡುವದು. ಅದ್ಭುತವಾದ ಈ ಔಷಧವನ್ನು ಉಪಯೋಗಿಸಿದಲ್ಲಿ ಅದರ ಪ್ರಯೋಜನವು ಸ್ವತಃ ವ್ಯಕ್ತವಾಗುವದು. ಈ ತೈಲವು ಶೀತಗಾಳಿ ಮಂಜು ಮುಂತಾದವುಗಳೊಳಗಾಗಿ ಸಂಚರಿಸುವಂತಹ ಪ್ರಯಾಣಿಕರು, ಬೇಟೆಯಾಡುವವರು, ದೋಣಿನಡೆಸುವವರು, ಮುಂತಾದವರಿಗೆಲ್ಲ ಅಮೂಲ್ಯವಾದದ್ದು.

ಪರಿಶೀಲಕರ ಅಭಿಪ್ರಾಯವು.

ಐರ್ಲ್ಯಾಂಡ್ ದೇಶದ ಫಾರ್ಮಾಸ್ಯೂಟಿಕಲ್ ಸೊಸೈಟಿಯಂಬ ಔಷಧಶಾಲೆಯ ಪ್ರೆಸಿಡೆಂಟರಾಗಿಯೂ, ಸದರೀ ದೇಶದ ಜಿಯಾಲಜಿಕಲ್ ಸೊಸೈಟಿ ಎಂಬ ಭೂತತ್ವಶಾಸ್ತ್ರವಿಮರ್ಶಕ ಸಮಾಜದ ಸಭಾಸದರಾಗಿಯೂ, "ಮಿನರಲ್ ವಾಟರ್ಸ್ ಆಫ್ ಯೂರೋಪ್" ಎಂಬ ಗ್ರಂಥಕರ್ತರಾಗಿಯೂ, ರಸಾಯನ ಶಾಸ್ತ್ರದ ವಿಷಯಕವಾದ ಅನೇಕ ಲೇಖನಾದಿಗಳನ್ನು ರಚಿಸಿದವರಾಗಿಯೂ, ಇರುವ ಪ್ರೊಫೆಸರ್ ಟಿಚ್‌ಬೋರ್ನ್ (C. R. TICHBORNE, L.L.D, F.C.S., M.R.I.A.) ಎಂಬವರು ಅಭಿಪ್ರಾಯ ಪಟ್ಟಿರುವದೇನಂದರೆ—ಲಿಟಲ್‌ರವರ ಓರಿಯಂಟಲ್‌ಬಾಮನ್ನು ಚೆನ್ನಾಗಿ ಶೋಧಿಸಿ ಪರೀಕ್ಷಿಸಿದ್ದೇನೆ. ಇದು ಬಹುವಿಧ ಮೂಲಿಕೆಗಳ ರಸಮಿಶ್ರವಾದ ತೈಲವೆಂದೇ ಪರಿಚ್ಛೇದಿಸಲ್ಪಟ್ಟಿದೆ, ಇದು ... ಉಪಯೋಗಿಸಲ್ಪಡುವಾಗ ಕೂಡಲೆ ನಿರುಪದ್ರವಕರವಾದದ್ದಾಗಿದ್ದರೂ, ನಿಜವಾಗಿ ಪ್ರಬಲ ರೋಗ ನಿವಾರಕ ಶಕ್ತಿಯುಳ್ಳದ್ದಾಗಿರುತ್ತದೆ. ಈ ಮಿಶ್ರೌಷಧವು ನರಗಳನ್ನು ಸ್ವಾಮಿತ್ವಕ್ಕೆ ತರತಕ್ಕದ್ದಾಗಿರುವದರಿಂದ ಇದು ಯಾವ ತರದ ರೋಗಗಳಿಗೆ ಉಪಯುಕ್ತವೆಂದು ತಿಳಿಸಲ್ಪಟ್ಟಿದೆಯೋ ಸದರೀ ರೋಗಗಳಲ್ಲಿ ಅದರ ಪ್ರಯೋಜನವು ವ್ಯಕ್ತವಾಗುವದು. ಈ ತೈಲವು ಸಂಪೂರ್ಣ ಜಾಗರೂಕತೆಯಿಂದ ತಯಾರುಮಾಡಲ್ಪಟ್ಟಿರುತ್ತದೆ.

ಇದರ ಕ್ರಯ—ಸೀಸೆ ಒಂದಕ್ಕೆ ೧ ರೂಪಾಯಿ.

ಇದು ವಿಸ್ತು ಔಷಧ ಶಾಲೆಯಲ್ಲಿಯೂ, "ಮದರಾಸ್ ಕೆಂಪಾನಿ" ಬಜಾರಿನಲ್ಲಿ, ೨೦ನೇ ನಂಬರ್ ಮನೆಯೊಳಗಿನ, ಎ. ಸಿ. ಬೆರ್ರಿಮನ್ ಯವರಲ್ಲಿಯೂ, ಈ ಪೇಟೆಯಲ್ಲಿರುವ ಅವರ ಏಜಂಟ್‌ಗಳಾದ ಜೆ. ವೆಸ್ಟ್ ಯವರ ಕಂಪೆನಿಯಲ್ಲಿಯೂ, ಮಿ. ಕೇಪ್ಟನ್ ಅಂಡ್ ಕಂಪೆನಿಯವರಲ್ಲಿಯೂ, ರಿಗ್ಸ್ ಯವರ ಕಂಪೆನಿಯಲ್ಲಿಯೂ ದೊರೆಯುವದು.

AGENTS.—Messrs, J. WEST, Chemist, &c., Bangalore.
CAPTAIN & Co. Chemists, Bangalore.
RIGGS & Co., Chemists, Bangalore; and of
MAHOMED YOUSOFF AND SONS, The Cash Bazarr, Bangalore
A. C. BERRYMAN & Co.,
20 Sambodoss Street Madras.

NOTICE.

VAIDYASARA SANGRAHA

A TREATISE ON THE PRINCIPLES OF

HINDU MEDICINE.

☞ Price including Postage Rs 5 6-0

ವೈದ್ಯಸಾರ ಸಂಗ್ರಹ.

ಈ ಗ್ರಂಥಾಪೇಕ್ಷೆಯುಳ್ಳವರು ಮೊಬಲಗಿನೊಡನೆ ಕೆಳಗೆ ರುಜುಮಾಡತಕ್ಕವರ ಹೆಸರಿಗೆ ಬರೆಯಲ್ಪಡುವ ... ಮೊಬಲಗು ಇಲ್ಲದ ದರಖಾಸ್ತುಗಳಿಗೆ ಸುತರಾಂ ನಿಗೆಕೊಡಲ್ಪಡಲಾರದು.

ಇದರ ಕ್ರಯ ... ... ರೂ ೫—೦—೦
ಪ್ಯಾಕಿಂಗ್ ಮತ್ತು ಅಂಚೇಹಾಸಲ್, ೦—೬—೦

ಟಿ. ಬಿ. ವೆಂಕಟಾಚಾರ್,
ಆಸ್ಪತ್ರೆರೋಡ್ ಬೆಂಗಳೂರು.

ಪಶೋದ ವರ್ತಮಾನ

ಫ್ರೆಂಚ್ ದೇಶದಲ್ಲಿ ಸ್ಥಾಪಿಸಲ್ಪಟ್ಟಿರುವ ... ಹಿಂದೂ ದೇವರುಗಳ, ಚರಿತ್ರೆಗಳ ಮೂಲಕ ಪ್ರಸಿದ್ಧರಾದವರ, ಸುಂದರಿಗಳಾದ ನೇಟಿವ್ ... ಚಿತ್ರಗಳು ತಯಾರಾಗುತ್ತವೆ ... ಕ್ರಯ ... ಕಳುಹಿಸಲ್ಪಡುವದು.

... ಚಿತ್ರ ... ಮ್ಯಾನೇಜರ್

ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA.
MONDAY, APRIL 2, 1888.
೧೮೮೮ನೇ ಏಪ್ರೆಲ್ ೨ನೇ ತಾ|| ಸೋಮವಾರ.

THE PUBLIC SERVICE COMMISSION.

ಈ ಕಾಲದಲ್ಲಿ ಪ್ರಾಯೇಣ ಜನಗಳಿಗೆ ಬುದ್ಧಿ ವಿಪರ್ಯಾಸ ಪ್ರಾಪ್ತವಾಗಿ, ವೇದ ವಿಹಿತಗಳಾದ ವರ್ಣಾಶ್ರಮ ಜಾತಿ ಕುಲ ಸಮಾಚಾರಗಳಲ್ಲಿ ಅಶ್ರದ್ಧೆಯು ಅಧಿಕವಾಗುತಬರುವಂತೆಲ್ಲ, ಧರ್ಮಜ್ಞಸಮಯ ವಿರುದ್ಧವಾಗಿಯೂ, ವೇದಶಾಸ್ತ್ರ ಗರ್ಹಿತವಾಗಿಯೂ, ಸಕಲಾಭಿಜ್ಞಜನ ದೂಷ್ಯವಾಗಿಯೂ, ಪರಂಪರೆಯಾ ಅನಿ... ಯಾಗಿಯೂ ಇರುವ ವಿಷಯಗಳಲ್ಲಿ ... ವೇಶವಿತನ, ಕಮ್ಮ ಹಿರಿಯರಿಗಿಂತವು, ಮಾತ ಗೌರವವಂ ಸದ್ಗಿಗೈಯದೆ, ಸಜ್ಜನರಿಗಳುಕದೆ, ಲೋಕನಿಂದೆಗೆ ಜರಿಯದೆ, ಪ್ರಾಪ್ತವ್ಯಾಪಕ ಭಾವಗಳಂತೊರೆದು ಅತಿಹೇಯಗಳಾದ ವ್ಯಾಪಾರಗಳಲ್ಲಿ ಪ್ರವರ್ತಿಸುತಲಿರತಕ್ಕವರನೇಕರು ನಾವು ಪ್ರತಿನಿತ್ಯವೂ ಸಂಧಿಸುತಲಿದೇವೆಯಷ್ಟೇ. ಇಂತಹವರ ಮನೋಭಾವಗಳನ್ನು ಅನೇಕರಭಿನಂದಿಸಲೆತ್ನಿಸಿ ಅನಿಯತಗಳಾಗಿಯೂ, ಅಮೂಲಕಗಳಾಗಿಯೂ, ಅಸಂಬದ್ಧಗಳಾಗಿಯೂ, ಇರುವ ಪ್ರಮಾಣಗಳಿಂದಲೂ, ದೃಷ್ಟಾಂತಗಳಿಂದಲೂ, ಅಂತಹವರ ಪ್ರೋತ್ಸಾಹಿಸುತಲೀ ತನ್ಮೂಲಕ ತಾವು ಪ್ರಾಭವವೈಭವಾಭಿವೃದ್ಧಿಯಂ ಪಡೆಯಬೇಕೆಂಬ ಅಪೇಕ್ಷೆಯುಳ್ಳವರಾಗಿದಾರೆ. ಇವ್ರುಗಳಿಗೆ ತಾವಾವ್ರ ವಿಶೇಷವಾದ ಬಹಿಕಪ್ರಯೋಜನಗಳಂ ಪಡೆಯಬೇಕೆಂಬ ಕುತೂಹಲವೊಂದು ವಿನಾ ಮತ್ತಾವುದೂ ಅವರ ಹೃದ್ಗತಗಳಾಗಿಲ್ಲವೆಂಬುದು ಅಭಿಜ್ಞರು ಯೋಚಿಸಿದಿರಲಾರರು. ಸದರೀ ಪ್ರಯೋಜನಗಳಾದರೋ ಕ್ಷಣಿಕಗಳಾಗಿಯೂ, ಪರ್ಯವಸಾನದಲ್ಲಿ ದುಃಖರೂಪಗಳಾಗಿಯೂ, ದಾಗಾವ ದುಃಖಗಳಂ ವೃದ್ಧಿಗೊಳಿಸಿ ಪ್ರಪಂಚ ಆತ್ಮನಂ ನಾಶಪಡಿಸತಕ್ಕವಾಗಿಯೂ ಇರುತಿಪೆಯಲ್ಲದೆ ಬೇರೆವಿಧವಾಗಿಲ್ಲವು. ಜನಗಳಿಗೆ ಸದ್ವಿದ್ಯಾ ಪ್ರವೃತ್ತಿ ನಿರೋಧಕಗಳೆನಿಪ ... ದುರ್ವಿದ್ಯಾಭಿಮಾನವಂ ವೃದ್ಧಿಗೊಳಿಸಲಿಕ್ಕೆ ಶಕ್ತಗಳಾದ ಪ್ರೇರಕ ಸಾಮಗ್ರಿಗಳು ಇದುವರೆಗೆ ಕಡಮೆಯಿಲ್ಲದಿದ್ದಾಗ್ಯೂ ... ಬಹಳ ದೂರದೊಳಿರುತಲಿದ್ದದರಿಂದ ಅದರಭಿವೃದ್ಧಿಗೆ ಭಂಗಕವಾಗಿತ್ತು. ಈಗ ಕಾಲಮಹಿಮೆಯಿಂದ ಅದು ಸಹ ತಪ್ಪಿಹೋಗುವ ಸಂಭವವು ಪ್ರಾಪ್ತವಾಗುತಿದೆ. ಇದರಿಂದ ಅನೇಕರ ಹೃದ್ಗತಗಳಾಗಿರುವ ಕೋರಿಕೆಗಳೆಲ್ಲ ಮುಂದೆ ಅಭಿವ್ಯಕ್ತವಾಗಬಹುದು. ಸಿವಿಲ್‌ಸರ್ವಿಸ್‌ಗೆ ಮುಂಚಿತವಾಗಿ ದಾಖಲಾಗಬೇಕೆಂಬ ಕೋರಿಕೆಯುಳ್ಳ ಹಿಂದೂಗಳೆಲ್ಲರೂ ಇಂಗ್ಲೆಂಡಿಗೆ ಹೋಗಿ ಅಲ್ಲಿ ಅವರು ಅಗತ್ಯ ಓದಿ ಕಲಿಯಬೇಕೆಂಬ ನಿರ್ಬಂಧವನ್ನು ತಪ್ಪಿಸಬೇಕೆಂಬದಾಗಿ ಪಬ್ಲಿಕ್ ಸರ್ವಿಸ್ ಕಮಿಷನರವರು ಗವರ್ನಮೆಂಟಿಗೆ ಶಿಫಾರಸು ಮಾಡಿರುತ್ತಾರೆ. ಇದನ್ನು ಕುರಿತು ಅವರು ಮುಂದೆ ತ್ಯಾಗ ನಿರ್ಣಯಿಸತಕ್ಕವರಾಗಿದಾರೆಯೋ ತಿಳಿಯಲಾರದು. ... ರುಕೆ ಸದರೀ ... ಜಾತಿ ...

ಯಾಮುಗಳಿಗೆ ಬಪ್ಪಂಗಿರುವ 'ನೋಟೀಸ್‌ಗಳ' ವಿಷಯದಲ್ಲಿ ಅಕ್ರಮವಾಗಿ ವರ್ತಿಸಿ ಅವರ ಮಾತಾಪಿತೃಗಳನ್ನು ಶಿಕ್ಷಿಸುತ್ತಾ ಕೂಡಿಸಿದ್ದು ಬಹಳ ತಪ್ಪೆಂದೆಣಿಸುವೆವು. ಆದರೆ ಯಾವಾಗಲೂ ನ್ಯಾಯಕ್ಕೂ ಸತ್ಯಕ್ಕೂ ಬಹಳ ದೂರವಿರುವದರಿಂದ ಇದು ಹೀಗೆಯೇ ಸಿದ್ಧಿಸುವದಾದರೆ, ಅಶ್ಲೀಲ ಯೆಂಬ ಭೂತವು ನಮ್ಮ ಬಾಲಕರೊಳಾವಿರ್ಭವಿಸಿ ಅವರ ಹೃದಯವು ವಿಭ್ರಮಗೊಳಿಸಿ ಚಿತ್ತವಾಕ್ಯಗಳನ್ನು ಉಚ್ಚರಿಸುವ ಮುಕ್ರಗಳಿಗೆ ಪ್ರಸರಿಸದೆ, ಗೃಹಾರಾಮ ಕ್ಷೇತ್ರಗಳ ಬಿಡುತ್ತಲ್ಲೆ ಕಟ್ಟುವದೆ, ಬಂಧು ಮಿತ್ರ ಪುತ್ರಗಳೆಂಬ ಸಹಾನುಭೂತಿ ಮಂತ್ರಕ್ಕೆ ಅಂಜದೆ ವಿಜಾತೀಯಗಳಾದ ಮೋಹಕ ಸಾಮಗ್ರಿಗಳೆಂಬವರು ಸ್ವಾಧೀನಪಡಿಸಿಕೊಂಡು ಅವರ ಸರ್ವಸ್ವವು ಹೋಗಲಾಡಿಸಿ ದೇಶಾನುಕೂಲಕ್ಕೆ ಚಿತ್ತಾನಕ್ಕ ಗುರಿಮಾಡಿಸುವದೆಂಬದರೊಳಗ್ಗೆ ಮಾತ್ರವೂ ಸಂಶಯಿಸಬೇಕಾದದ್ದಿಲ್ಲವು. ಇದೇ ಅಭಿಪ್ರಾಯವನ್ನು ಕಲಿಕತ್ತೆ ಹಿಂದೂ ಪೇಟ್ರಿಯಾಟ್ ಪತ್ರಿಕೆಯು ಶಬ್ದಾಂತರಗಳಿಂದ ವ್ಯಕ್ತಪಡಿಸುತ್ತದೆ. ಪರಂತು ನವೀನ ನಾಗರಿಕ ವೈಲಕ್ಷಣ್ಯಾಭಿಲಾಷೆಯಾದ ಮುಂಬೈ ಇಂಡುಪ್ರಕಾಶ ಪತ್ರಿಕೆಯು ಮೇಲೆ ಕಂಡ ಪತ್ರಿಕಾಭಿಪ್ರಾಯವನ್ನಾಕ್ಷೇಪಿಸಿ ಅದು ಕೇವಲ ಕುತ್ಸಿತವಾದದ್ದೆಂತಲೂ, ಅವಿವೇಕವಾದದ್ದೆಂತಲೂ ದೂಷಿಸುತ್ತದೆ. ಇಂದುಪ್ರಕಾಶವು ವಿಲಕ್ಷಣವಾಹ್ವಾನದ ಕಾರಿದವಾಗಿದ್ದರೂ ಜಲಧರ ಪಟಲಗಳಿಂದ ಮುಗ್ಧವಾದಾಗ ಅದು ಉಲ್ಲಾಸಕಾರಿಯಾಗುವದೆ? ಚಂದ್ರಕಾಂತಿಯು ನಿರ್ಮಲವಾಗಿದ್ದರೂ ಚಂದ್ರನು ಕಳಂಕಿಯೆನ್ನಿಸಿಕೊಳ್ಳದೇ ಇದ್ದಾನೆಯೆ? ಆದದರಿಂದ ಪಿತ್ತವಿದ್ದವರ ಕಣ್ಣುಗಳಿಗೆ ಕಾಣ್ಬದವೆಲ್ಲ ಭೂತಗಳಾಗಿ ಕಾಣಿಸುವಂತೆ ಕಳಂಕಿತ ದೃಷ್ಟಿಯುಳ್ಳವರೆಲ್ಲರೂ ದುಷ್ಟವಾಗಿ ಕಾಣಿಸುವದು ಸಹಜವಾದದರಿಂದ ಅದಕ್ಕಾಗಿ ನಾವು ಚಿಂತಿಸಬೇಕಾದುದಿಲ್ಲವು.

LATE SIR JEMSEIGEE NASURVANGEE PETIT.

ಮುಂಬೈಯಲ್ಲಿ ಪ್ರಸಿದ್ಧರಾಗಿರುವ ಒಂದು ದೊಡ್ಡ ವ್ಯಾಪಾರನೆಗೆ ಒಡೆಯರಾಗಿದ್ದ ಸರ್ ಜಮಸೆಟಜಿ ನಸರವಾಂಜಿ ಪೇಟಿಟ್ ಎಂಬವರು ಆಜೇ ಸೋಮವಾರದವಿನ ಕಾಲವಶರಾದರೆಂದು ತಿಳಿಯಬರುತ್ತದೆ. ಇವರು ಮೆ|| ನಸರವಾಂಜೀ ಮಾಣಿಕ್ಜೀ ಪೇಟಿಟ್ ಎಂಬವರ ಪುತ್ರರಾಗಿಯೂ, ಆದರೆ ಚಿನ್ ಸರ್ದಿನ್ಷಾ ಮಾಣಿಕ್ಜಿ ಪೇಟಿಟ್ ಎಂಬವರ ಜಾಮಾತರು ಮತ್ತು ಭಾತೃವ್ಯರಾಗಿಯೂ ಇದ್ದರು. ಇವರಿಗೆ ವಯಸ್ಸು ಈಗ ೩೦ ವರುಷಗಳಿಗಿಂತ ಅಧಿಕವಾಗಿಲ್ಲವು. ಇವರು ಇಂಗ್ಲಿಷ್ ವಿದ್ಯಾಭ್ಯಾಸವು ಮಾಡಿ ಮೆಟ್ರಿಕ್ಯುಲೇಷನ್ ಪರೀಕ್ಷೆಯನ್ನಿತ್ತು ಎಲ್ಫಿನ್ಸ್ಟನ್ ಕಾಲೇಜಿನಲ್ಲಿ ಕೆಲವು ಕಾಲ ಎಫ್. ಎ. ಪರೀಕ್ಷೆಗಾಗಿ ಓದುತಲಿದ್ದರು. ಇಷ್ಟರಲ್ಲಿ ತಮ್ಮ ತಂದೆಯವರ ವ್ಯಾಪಾರ ವಿಷಯಗಳಲ್ಲಿ ಸಹಾಯಕರಾಗಿರಬೇಕಾಗಿ ಬರಲು ಅದೇ ಅವರ ವಿದ್ಯಾಭಿವೃದ್ಧಿಗೂ ತತ್ಕಾಲಿಕವಾದ ಉತ್ಕರ್ಷತ್ತರ ಜ್ಞಾನ ಸಂಪಾದನಕ್ಕೂ ಅಡ್ಡಿಯಾಯಿತು. ಆದಾಗ್ಯೂ ಇವರು ತಮ್ಮ ಜ್ಞಾನಾಭಿವೃದ್ಧಿಗೆ ನಿಮಿತ್ತಕಗಳಾದ ಕಾರ್ಯಗಳಲ್ಲೆಲ್ಲ ಬಹಳ ಆಸಕ್ತರಾಗಿದ್ದರಲ್ಲದೆ ವಿದ್ಯಾಪ್ರಸಂಗವಿಷಯದೊಳು ಬಿಡದವರಾದವರಿಗೆ ವಿಶೇಷತಃ ಸಹಾಯ ಮಾಡುತಲಿದ್ದರು. ಅಲ್ಪವಯಸ್ಸಿನಲ್ಲಿಯೇ ಆದರಿಂಗತ ಮೂಲನತ್ತ್ವ ರುಷಗಳೊಳಗಾಗಿಯೇ ಈ ದೊಡ್ಡಮನುಷ್ಯರು ಸ್ವದೇಶೀಯರ ವಿದ್ಯಾಭಿವೃದ್ಧಿಯಬಗ್ಗೆ ಸ್ತ್ರೀಪುರುಷ ಭೇದವಿಲ್ಲದೆ ೩೦ ಸಾವಿರ ರೂಪಾಯಿಗಳ ತನಕ ಧನ ಸಹಾಯ ಮಾಡಿದರು. ಕಳೆದ ತಿಂಗಳ ೩ನೇ ತಾರೀಖಿನಲ್ಲಿ ಮೆ|| ನಸರವಾನ್ಜೀಯವರು ತಮ್ಮ ತಂದೆಯೊಡನೆ ಪಾಂಪ್ರೆ ಯೆಂಬ ಪ್ರದೇಶದಲ್ಲಿ ನೂತನವಾದ ಒಂದು ಬಂಗ್ಲೆಯು ಕೊಂಡುಕೊಳ್ಳುವದಕ್ಕಾಗಿ ಹೋಗಿದ್ದರು. ಅಲ್ಲಿಂದ ಮರಳಿ ಬರುವಾಗ ಇವರಿಗೆ ಜ್ವರ ಪ್ರಾಪ್ತವಾಗಲು ಕಡೆಗೆ ಅದೇ ಇವರ ಮರಣ ನಿಮಿತ್ತವಾಗಿ ಪರಿಣಮಿಸಿತು. ಇವರ ಚಿಕಿತ್ಸಾವಿಷಯದಲ್ಲಿ ಮಾಡಲ್ಪಟ್ಟ ಪ್ರಯತ್ನಗಳೆಲ್ಲವೂ ವಿಫಲಗಳಾಗಿ ಸಮರ್ಥರಾದ ಬಹುಜನ ಡಾಕ್ಟರಗಳ ಯುಕ್ತಿ ಸಾಮರ್ಥ್ಯಗಳು ವ್ಯರ್ಥಗಳಾದವು. ಇವರು ಮೃತಪಟ್ಟದಿನ ಇವರ ಗೌರವಾರ್ಥವಾಗಿಯೂ ದುಃಖಸೂಚಕವಾಗಿಯೂ ಇರುವಂತೆ ಮುಂಬೈಯಲ್ಲಿರುವ ಪ್ರಸಿದ್ಧಗಳಾದ ಕೋಟೆಗಳು ವ್ಯಾಪಾರನೆಗಳು, ಮತ್ತು ಇತರಅಂಗಡಿಗಳು ಮುಂತಾದವೆಲ್ಲ ಮುಚ್ಚಲ್ಪಟ್ಟಿದ್ದವು. ಇವರ ಅಪರ ಕ್ರಿಯೆಗಳು ನಡೆಯುವಾಗ್ಯೂ ಸುಮಾರು ೩,೦೦೦ ಜನ ಫಾರಿಸೀ ದೊಡ್ಡಮನುಷ್ಯರು ಹಾಜರಿದ್ದರು. ಈಗ ಮೃತಪಟ್ಟವರ ಸ್ವಂತ ಕಾರಖಾನೆಗೂ ಅವರ ತಂದೆಯವರ ಕಾರಖಾನೆಗೂ ಸೇರಿದ ೧೨,೦೦೦ ಜನ ನೌಕರಜನರು ಬಾಧಿಸಿದ್ದರು. ಮುಖ್ಯವಾಗಿ ಪ್ರೇತವು ಸ್ಮಶಾನಕ್ಕೆ ಸಾಗಿಸೋವಾಗ ಅವರ ಹಿಂದೆ ಅನುವರ್ತಿಸಿ ಹೋದವರ ಸಂಖ್ಯೆಯು ಅಪರಿಮಿತವಾಗಿತ್ತು. ಒಂದು ಪ್ರೇತಕೃತ್ಯಕ್ಕಾಗಿ ಹೀಗೆ ಬಹು ಸಹಸ್ರ ಪ್ರಜೆಗಳು ಏಕತ್ರ ಸೇರಿದ್ದದ್ದು ಅತ್ಯುತ್ಸೂರ್ಣವಾಗಿರುತ್ತದೆ. ಇದಲ್ಲದೆ, ಆದಿನವೆಲ್ಲವೂ ಮುಂಬೈ ಪಟ್ಟಣವು, ಅಸದೃಶಭೂಷಣೆಯಾಗಿಯೂ, ವಿಲಾಸ್ತನರ್ಪ ವೃತ್ತನ್ತಿಯೂ, ವಿಸ್ತಸ್ತ ಸುಮಮ್ಯಲ್ಲವಳಿಗಿಯೂ, ವಿವಸ್ತ್ರ ರೂಪ ಗುಣಶೀಲ ಸೌಂದರ್ಯ ಪೂರ್ತರಳಾಗಿಯೂ ಇರುವ ವಿಧವೆಯಂತೆ ಶೋಕ್ಯತಮವಾದಷ್ಟೊಯಲ್ಲಿ ಕಂಡುಬರುತಲಿದ್ದದೇನೂ ಆಶ್ಚರ್ಯವಲ್ಲವು ಇಂತಾ ಪ್ರಾಮುಖ್ಯತಲದಲ್ಲಿರುವ ಫಾರಿಸೀ ಜನಗಳು ಸ್ವಾಭಾವಿಕಗಳಾದ ತಮ್ಮ ಔದಾರ್ಯವನ್ನು ಧಾರಾಳವಾಗಿ ವ್ಯಕ್ತಪಡಿಸಿದ್ದು ಬಹಳ ಶ್ಲಾಘನಾರ್ಹವಾಗಿದೆ. ಮೆ|| ನಸರವಾನ್ಜೀಯವರು ಮೃತಪಟ್ಟ ೩ನೆಯ ದಿನದಲ್ಲಿ ಅವರ ಜಾತಿ ನಿಯಮಪ್ರಕಾರ ನಡೆಯಬೇಕಾದ ಕ್ರಿಯೆಗಳೆಲ್ಲವೂ ಸಾಂಗವಾಗಿ ನೆರವೇರಿದವು. ಆ ಕಾಲದಲ್ಲಿ ಮೃತಪಟ್ಟವರ ಸ್ಮರಣಾರ್ಥ ಅವರ ಬಂಧು ಮಿತ್ರರು ಮಾಡಿದ ಧರ್ಮವು ಬಹಳ ಕೊಂಡಾಡತಕ್ಕದ್ದಾಗಿರುತ್ತದೆ. ಆ ದಿನ ಪುತ್ರಶೋಕದಿಂ ಪೀಡಿತರಾದ ತಂದೆಯು ತಮ್ಮ ಪುತ್ರರ ಆಸ್ತಿಯ ಪೈಕಿ ಒಂದು ಲಕ್ಷ ರೂಪಾಯಿಗಳನ್ನು ದಾನ್ಯಾರ್ಥ ವಿನಿಯೋಗಿಸಿದರು. ಇದಲ್ಲದೆ ಕೋಟೆಯಲ್ಲಿರುವ ೧½ ಲಕ್ಷ ರೂಪಾಯಿಗಳ ಕ್ರಯಬಾಳುವ ವಿಶಾಲವಾದ ಒಂದು ಬಂಗ್ಲೆಯನ್ನೂ ಯೆರಡುಲಕ್ಷ ರೂಪಾಯಿಗಳ ನಗದು ಮೊಬಲಗನ್ನೂ ಧರ್ಮಾರ್ಥ ಕೊಟ್ಟವರಾದರು. ಹೀಗೆಯೇ ಮೃತಪಟ್ಟವರ ಜನನಿಯವರು ೫೦,೦೦೦ ; ಪತ್ನಿಯು ೫೫,೦೦೦ ; ಭಗಿನಿಯರು ೧೧,೦೦೦ ; ಸೋದರನು ೩,೦೦೦ ; ಭಾಗಿನೇಯರು ೭,೦೦೦ ರೂಪಾಯಿಗಳ ತನಕ ಅವರವರು ಪ್ರತ್ಯೇಕ ಪ್ರತ್ಯೇಕವಾಗಿ ದಾನ ಮಾಡಿದರು. ಮತ್ತು ಗತಿಸಿದವರ ಮಿತ್ರವೃಂದವೂ ಮಾತುಬರಲು ಸೇರಿ ೮೦ ಸಾವಿರ ರೂಪಾಯಿಗಳು ಧರ್ಮಾರ್ಥ ವಿನಿಯೋಗಿಸಿದರು. ಮೆ|| ನಸರವಾಂಜೆ ಯವರ ಪ್ರೇತ ಸಂಸ್ಕಾರಕಾಲದಲ್ಲಿ, ಒಟ್ಟು ೫ ಲಕ್ಷ ೭೫ ಸಾವಿರ ರೂಪಾಯಿಗಳು ನಾನಾರೀತಿಯಿಂ ಖರ್ಚಾದವು. ಈ ಮೊಬಲಗಿನಲ್ಲಿ, ಅನಾಥಗಳಾದ, ಅನಿಯತಗಳಾದ ಮತ್ತು ನಾಸ್ತಿಕ್ಯ ಪ್ರಯೋಜನಗಳನ್ನುಂಟುಮಾಡುವಂತಾ ಕಾರ್ಯಗಳಿಗಾಗಿ ಒಂದು ಕಾಸಾದರೂ ವ್ಯಯವಾಗಲಿಲ್ಲವು. ಇದಕ್ಕೆ ಬದಲು ೩ ಲಕ್ಷ ರೂಪಾಯಿಗಳು ಫಾರಿಸೀ ಜಾತಿಗೆ ಸೇರಿದ ಅನಾಥರಾದ ಬಾಲಕರ ಸಂರಕ್ಷಣಾರ್ಥ ಒಂದು ಅನಾಥರಕ್ಷಕ ಶಾಲೆಯನ್ನು ಮೃತಪಟ್ಟವರ ಹೆಸರಿನೊಳು ಸ್ಥಾಪಿಸುವದಕ್ಕಾಗಿ ವಿನಿಯೋಗಿಸಲ್ಪಟ್ಟವು. ಸ್ವಜಾತಿ ಮತಸನಾಭಿಮಾನಿಗಳಾದ ಮತ್ತು ಪ್ರಾಚೀನಾಚಾರರಾದ ಐದುಜನ ಫಾರಿಸೀ ದೊಡ್ಡ ಮನುಷ್ಯರನ್ನು ಧರ್ಮಕರ್ತರನ್ನಾಗಿ ಏರ್ಪಡಿಸಿ, ಅವರ ಸ್ವಾಧೀನದಲ್ಲಿ ಒಂದು ಲಕ್ಷ ರೂಪಾಯಿಗಳನ್ನಿಟ್ಟು ಅದರ ಬಡ್ಡಿಯಲ್ಲಿ ಬೇರೆಬೇರೆ ಧರ್ಮಕಾರ್ಯಗಳನ್ನು ಅವರನುಕೂಲಕರಮಾಡಿಸುವಂತೆಯೂ ಸೂರಾಪಿತಿಸ್ಟ್ರಿಕ್ಟಿಗೆ ಸೇರಿದ ವಾಡೀತಾಲ್ಲೂಕಿನಲ್ಲಿ ಮೆ|| ನಸರವಾಂಜೀಯವರಹೆಸರಿನಲ್ಲಿ ಒಂದು ವೈದ್ಯಶಾಲೆಯನ್ನು ಸ್ಥಾಪಿಸಬೇಕೆಂಬದಾಗಿಯೂ ಏರ್ಪಾಡಾಯಿತು. ಗತಿಯಾದವರವಿನ ನಡೆದ ಅಪರಕ್ರಿಯೆಯಲ್ಲಿ ಲೋಕಾಂತರ ಗತರಾದವರ ತಂದೆಯು ೪೧ ಸಾವಿರ ರೂಪಾಯಿಗಳು ಪ್ರತ್ಯೇಕವಾಗಿ ಕೊಟ್ಟು, ಯಾವ ಪ್ರದೇಶದಲ್ಲಿ ಪಾಪ್ರಷ್ಟವಾದ ವಿಷಮಶೀತಜ್ವರವು ತಮ್ಮ ಪುತ್ರರು ಮೃತ್ಯುಮುಖಕ್ಕೊಳಪಡಿಸಿತೋ ಅಂತಾ ಪಾಂಪ್ರೆ ಯೆಂಬ ಸ್ಥಳದಲ್ಲಿ ತಮಗೆ ಅತ್ಯಂತ ಪ್ರೀತಿಪಾತ್ರರಾಗಿದ್ದ ಕುಮಾರರ ಹೆಸರಿನಲ್ಲಿ ರೋಗಪೀಡಿತರಾದ ಫಾರಿಸೀಜನರು ಬೇಕಾದಾಗ ಹವಾ ಬದಲಾಯಿಸಲಿಕ್ಕೆ ಅನುಕೂಲವಾಗಿರುವಂತೆ ಒಂದು ಕಟ್ಟಡವು ಕಟ್ಟಿಸಬೇಕೆಂಬದಾಗಿ ತಿಳಿಸಿದರು. ಮುಖ್ಯವಾಗಿ ಮೆ|| ಜಮಸೆಟಜೀ ನಸರವಾಂಜೀ ಯವರ ಅಪರಕ್ರಿಯೆಗಳಿಗಾಗಿ ವ್ಯಯವಾದ ಒಟ್ಟು ಏಳೆಂಟು ಲಕ್ಷ ರೂಪಾಯಿಗಳಲ್ಲಿ ಸ್ವಲ್ಪವಾದರೂ ಅನ್ಯರಿಗೆ ಉಪಯುಕ್ತವಾಯಿತೆ? ಇದು ಸಾಮಾನ್ಯ ಧರ್ಮವೆಂದು ಹ್ಯಾಗೆ ನುಡಿಯಬಹುದು? ಇದರಿಂದ ಯಾರಿಗೇನು ಪ್ರಯೋಜನ? ಸ್ವಜನರ ಕ್ಷೇಮಾಭಿವೃದ್ಧಿಯ ಉದ್ದೇಶದೊಡನೆ ಇಷ್ಟರ ಮೊಬಲಗು ಖರ್ಚು ಮಾಡಲ್ಪಟ್ಟಿತಲ್ಲದೆ ಸಾಮಾನ್ಯವಾಗಿ ಜನರ ಕ್ಷೇಮಕ್ಕಾಗಿ ಏನಾದರೂ ಕೊಡಲ್ಪಟ್ಟಿತೆ? ಇದು ಹ್ಯಾಗೆ ಪ್ರಶಂಸಾರ್ಹವಾಗುವದೆಂದು ಯಾರೋದರು ಆಕ್ಷೇಪಿಸಬಹುದು, ಪರಂತು ಅದು ನಾವು ಅಂಗೀಕರಿಸಲಾರೆವು. ಯಾತಕ್ಕೆಂದರೆ, ಫಾರಿಸೀಜನರು ಸ್ವಜನಾಭಿವೃದ್ಧಿಗಾಗಿ ತಾವು ಮಾಡತಕ್ಕ ಪ್ರತಿ ಧರ್ಮವನ್ನು ವಿನಿಯೋಗಿಸುತ್ತ ಅದರಲ್ಲಿ ಬಹಳ ಆಸಕ್ತರಾಗಿರುವರೆಂದು ಮೇಲೆ ಕಂಡ ವೃತ್ತಾಂತದಿಂದಲೇ ನುಡಿಯಬಹುದಲ್ಲವೆ ಇದರಿಂದ ನಮ್ಮ ಜನರಿಗೆ ಇರುವ ಸ್ವೀಯಾಭಿಮಾನವು ಅನ್ಯಾದೃಶವಾಗಿರುತ್ತದೆಂದು ನುಡಿಯಬಹುದು. ಹೀಗೆಯೇ ಒಂದೊಂದು ಬಗೆಯವರು ತಮಗೆ ಸಂಬಂಧಪಟ್ಟ ಜನರ ಶ್ರೇಯೋಭಿವೃದ್ಧಿಗಾಗಿ ಸಹಾಯ ಮಾಡುವರಾದರೆ ಆಗ ಧರ್ಮವೆಂಬುದು ಸಾರ್ವತ್ರಿಕವಾದದ್ದಾಗಿ ಏರ್ಪಡುವದು. ಹಿಂದೂಗಳಲ್ಲಿ ಅನೇಕರ ಐಶ್ವರ್ಯವು ಒಬ್ಬರಿಗೂ ಪ್ರಯೋಜನವಿಲ್ಲದೆ ಹಾಳುಬಿದ್ದವೆ. ಈ ಪ್ರಕೃತಿಯೆ ಸದ್ವಿನಿಯೋಗ ಅಭಾವವಾದಮೇಲೆ ಬಳಿಕ ಅದು ಹೋಗಿ ಸೇರುವ ಪ್ರದೇಶಗಳು ಜಗತ್ಪ್ರಸಿದ್ಧಗಳಾಗಿಯೇ ಇರುತ್ತವೆ.

LORD DUFFERIN'S REPLY TO THE CALCUTTA ADDRESS.

ಇಂಡ್ಯಾದೇಶದ ವೈಸರಾಯಿ ವ ಗವರ್ನರ್ ಜನರಲ್ಲರಾದ ಲಾರ್ಡ್ ಡಫರಿನ್‌ಯವರು ತಮ್ಮ ಉದ್ಯೋಗಪದದಿಂ ನಿವೃತ್ತರಾಗುವ ಕಾಲವು ಸನ್ನಿಹಿತವಾಗುತ ಬರುವದು ಕಂಡು ಕಲ್ಕತ್ತೆಯ ನಿವಾಸಿಗಳೆಲ್ಲರೂ ಸೇರಿ ಒಂದು ವಿಜ್ಞಾಪನೆ ಪತ್ರಿಕೆಯನ್ನು, ಕಳೆದತಿಂಗಳ ೨೫ನೇ ತಾರೀಖಿನೊಳು ಕಲ್ಕತ್ತೆ ಟೌನಹಾಲ್ ಸಾಭದಲ್ಲಿ ವೈಸರಾಯಿಯವರಿಗೆ ಒಪ್ಪಿಸಿದರು. ಆ ಬಗ್ಗೆ ಪರಿಷ್ಕರಿಸಲ್ಪಟ್ಟದ್ದು ಅತಿ ವಿಸ್ತೃತವಾದ ಸಭೀ ಸಾಧನವು ಸಕಲಾಲಂಕಾರಗಳಿಂದ ಶೋಭಿಸುತ್ತ, ಅತ್ಯಂತ ರಮಣೀಯವಾಗಿ ಯೆಸೆದದು. ಅದರ ಅಲಂಕಾರ ವಿಶೇಷಗಳಿಂ ಪರಿಮಿತ ಶಬ್ದಗಳಿಂದಲ್ಲಿ ಅಭಿವರ್ಣಿಸುವದು ಅಸಾಧ್ಯವಾಗಿರುತ್ತದೆ. ಇತರ ವರ್ಗ ಬಹುಜನ ಯೂರೋಪಿಯರ್ ಮತ್ತು ಮುಸಲ್ಮಾನ್ ದೊಡ್ಡಮನುಷ್ಯರು ಆಹ್ವಾನ ಪೂರ್ವಕ ಅಲ್ಲಿಗೆ ಹೋಗಿದ್ದರು. ಅವರ ಸಂಖ್ಯೆಯಿಂ ನೋಡಲಾಗಿ ನೇಟಿವ್‌ದೊಡ್ಡಮನುಷ್ಯರ ಸಂಖ್ಯೆಯು ಬಹಳ ಅಲ್ಪವಾಗಿದ್ದಂತೆ ಹೇಳಬಹುದು. ಪ್ರಮುಖರಾದ ದೊಡ್ಡಮನುಷ್ಯರೊಬ್ಬರೂ ಅದಕ್ಕೆ ಹೋಗಿರಲಿಲ್ಲವು ಲಾರ್ಡ್ ಡಫರಿನ್‌ಯವರು ತಮ್ಮ ಭಾರ್ಯೆಯೊಡನೆ ಸಾಧ ಪ್ರವೇಶವು ಮಾಡಿದಾಗಲೂ ತಮ್ಮ ಆಸನವು ಪರಿಗ್ರಹಿಸಿದಾಗಲೂ ಸಂತೋಷ ಸೂಚಕಗಳಾದ ಕರತಾಡನಧ್ವನಿಯಿಂದಲೂ ಬಾಹ್ಯಾಂಗಣದಲ್ಲಿ ಸೈನಿಕರಿಂದ ಬಾರಿಸಲ್ಪಟ್ಟ ಬ್ಯಾಂಡ್ ಮುಂತಾದವುಗಳ ವಾದ್ಯಗಳಾದ ನಾದಘೋಷದಿಂದಲೂ, ಆ ಕಟ್ಟಡವು ಘುಮಘೋಷಕಾಲ ನಾದ ಮಯವಾದದ್ದಾಗಿತ್ತು. ತರುವಾಯ ಉದ್ದಿಷ್ಟವಾಗಿದ್ದ ವಿಜ್ಞಾಪನ ಪತ್ರಿಕೆಯನ್ನು ಸರ್. ಸ್ಟುವರ್ಟ್ ಬೇಲೀಯವರು ಓದಿ ಪ್ರೂಫ್ರಿಸಿದ ಕೂಡಲೇ ಅದಕ್ಕೆ ಉತ್ತರವಾಗಿ ಲಾರ್ಡ್ ಡಫರಿನ್ಯವರು ಹೇಳಿದ ಸಾಧನದ ಭಾಷಣದ ಕೆಲವು ಅಂಶಗಳು ಕೆಳಸಿದವರಾದವು. ವೈಸರಾಯಿಯವರ ಭಾಷಣ (ಇಂಗ್ಲೀಷ್) ಈ ಪತ್ರಿಕೆಯಲ್ಲಿ ಪ್ರಕಟಿಸಲಿಕ್ಕೆ ಇದರ ಅವಕಾಶವು ಕೇವಲ ಪರಿಮಿತವಾದದ್ದಾಗಿರುವದರಿಂದ ಅದರ ಸಾರಾಂಶವನ್ನು ಸಂಗ್ರಹಿಸಿ ಇದರಡಿ ತಿಳಿಸುವೆವು.—

ಮಹಾಶಯರೆ,—ತಾವೀಗ ಓದಿದ ವಿಜ್ಞಾಪನಪತ್ರಿಕೆಯಂತಾ ಒಂದು ಪತ್ರಿಕೆಯನ್ನು ಒಪ್ಪಿಸಿದ್ದರ ಮೂಲಕ ನನಗುಂಟುಮಾಡಿದ ಗೌರವಕ್ಕಾಗಿ ನಾನು ಪಡೆದಿರುವ ಭಾವಗಳನ್ನು ಬದ್ಧತಃ ತಿಳಿಸಲಿಕ್ಕೆ ನನಗೆ ಶುದ್ಧಾಂಗ ಸಾಧ್ಯವಿಲ್ಲವೆಂಬದು ತಾವು ಸುಲಭವಾಗಿ ಅರಿಯುವಿರಿ. ಮ ನಾನು ನಂಬುತ್ತೇನೆ. ಇಂಗ್ಲಿಷರವರಾಗಲಿ, ನೇಟಿವರಾಗಿರಲಿ, ಸ್ವದೇಶೀಯರ ಮತ್ತು ಸ್ವಪ್ರಜೆಗಳ ಸಹೃದಯವನ್ನು, ಸಾಹಕೆಯನ್ನೂ ಅಭಿಮತವನ್ನೂ ಊರ್ಜಿತಗೊಳಿಸುವದೇ ದೇಶೋತ್ಕೃಷ್ಟವಾದ ಮತ್ತು ನ್ಯಾಯ್ಯವಾಪ್ರತಿಫಲವಾಗಿರುವದರಿಂದ, ಅದು ನನ್ನ ಪದಹೋಳರುವಂತಾ ಪ್ರತಿ ಮನುಷ್ಯನೂ ಕೋರತಕ್ಕವನಾಗಿರುತ್ತಾನೆ. ಬಹು ಪ್ರದೇಶಗಳಿಂದ ನನಗೆ ಬಂದಿರುವ ಪ್ರಶಂಸಾರೂಪವಾದ ಚಿಹ್ನೆಗಳು ನಿಜವಾಗಿ ನನ್ನನ್ನು ಬಹಳ ಆಶ್ಚರ್ಯಗೊಳಿಸದಿರಲಿಲ್ಲವು. ವೈಸರಾಯಿಯಾದವರು, ತಮ್ಮ ಶಕ್ತಿ ಅವಧಾನವನ್ನು ಪೇಕ್ಷಿಸುವಂತಾಕಾರ್ಯಗಳು ಎಡೆಬಿಡದೆ ಅಹರ್ನಿಶವೂ ಪ್ರವರ್ತಕರಾಗಿರುವದರಿಂದಲೂ, ವಿಚಾರಾರ್ಹಗಳಾದ ವಿಷಯಗಳೊ ದರಿಸುತ್ತಿರುವದು ಅವಿಚ್ಛಿನ್ನವಾಗಿ ಅವರ ಅವಧಾನವು ಬಂಧಿಸ್ಕೊಳ್ಳುವದರಿಂದಲೂ, ನಮ್ಮ ಮಿತ್ರರ ಶೇಖರಿಕೆಗಳನ್ನು ಪಡೆಯುತ್ತವೆಯೇ ಇಲ್ಲವೇ ಯೆಂದು ನೋಡಲಿಕ್ಕೆ, ತಗೆ ಉಚ್ಛ್ವಾಸ ನಿಶ್ವಾಸಗಳಿಗೆ ಧಾರಾಳವಾಬೇಕಾದಷ್ಟು ವ್ಯವಧಾನ ಸಹ ಅವರಿಗೆ ದೊರೆಯದೆ, ಸಾಧ್ಯವಲ್ಲದೆ ಇದೆ. ಇದಲ್ಲದೆ ಅವರು ತೊಡಗಿರುವ ವಿಷಯಗಳು ಬಹುಮಹತ್ವಪೂರ್ಣಗಳಾಗಿಯೂ ಅನೇಕಕೋಟಿ ಪ್ರಜೆಗಳ ಸಂಬಂಧಕತಕ್ಕವಾಗಿಯೂ ಇರುವದರಿಂದ ಅವರು ಯಾವ ಪಕ್ಷಗಳಿಗೆ ಜವಾಬ್ದಾರರಾಗಿರುತ್ತಾರೆಯೋ ಅಂತಾಬಲವತ್ತರವಾದ ಪ್ರಜಸಮೂಹದ ಮುಂದೆ ಮಾರ್ಗಗಳಾದ ಅವರ ಕೃತ್ಯಗಳು, ಸ್ವಕೀಯಗಳಾದ ಪ್ರಯೋಜನಗಳು ನಿರರ್ಥಕಗಳಾಗುತ್ತವೆ. ಅವು ಆರೀತಿ ಯಾವದು ಅದ್ಭುತವೆನಿಸುವದರಿ ; ಯಾತಕ್ಕೆಂದರೆ ಘನವಾದ ಈ ಉದ್ಯೋಗ ಪದವನ್ನೆಯಿದತಕ್ಕವನು ಸ್ವಪ್ರಶಿಷ್ಟ ಅಥವಾ ಪ್ರಜಾಮಾನವಬ ಅಲ್ಪ ಪರಿಭಾವನೆಗಳಿಂದ ಮುಂದಾಗಿ ಪ್ರವರ್ತಿಸುವದಕ್ಕಿಂತಲೂ ಉದ್ದೇಶಕ್ಕೆ ಅನುಬಹುದಾದ ಬೇರೊಂದು ವಿಪತ್ತನ್ನು ನಾನರಿಯಲಾರೆನು. ತಮಗೆ ಒಪ್ಪಿಸಲ್ಪಟ್ಟಿರುವಂತ ಯಾವಶಕ್ತಿಯು ವಿನಿಯೋಗಿಸಬೇಕಾಗಿರುವ ಕಾರ್ಯ ಕ್ಷೇತ್ರದಲ್ಲಿ ತಮ್ಮ ಅನುಭವವನು ಮರೆಯತಕ್ಕದ್ದೂ, ತಮ್ಮ ಪ್ರಾಭವವು ಸಾಧ್ಯವಾದಮಟ್ಟಿಗೆ ಹೋಗಲಾಡಿಸತಕ್ಕದ್ದೂ ಆವಶ್ಯಕರ್ತವ್ಯವಾಗಿರುತ್ತದೆ. (ಸಶೇಷ)

MADRAS UNIVERSITY.

ಮದರಾಸ್ ಯೂನಿವರ್ಸಿಟೀ ಪರೀಕ್ಷೆಗಳು ನಡೆಯುವ ಕಾಲವು ಬದಲಾಯಿಸಬೇಕೆಂಬದಾಗಿ ಮೆ|| ಗ್ರಿಗ್ಸ್ ಎಂಬವರು ಈಚೆಗೆ ತಿಳಿಸಿದ್ದ ಅಭಿಪ್ರಾಯವನ್ನಾಲೋಚಿಸುವದಕ್ಕಾಗಿ ಯೂನಿವರ್ಸಿಟಿ ಸಿಂಡಿಕೇಟಿಗಳು ಗತ ಬುಧವಾರದ ದಿ ಸಾಯಂಕಾಲ ೫ ಘಂಟೆಗೆ ಸರಿಯಾಗಿ ಸೆನೆಟ್ ಹಾಸ್ ಎಂಬ ಕಟ್ಟಡದಲ್ಲಿ ಸಭೆ ಸೇರಿದ್ದರು. ದರೀ ಸಭೆಗೆ ಬಹುಜನ ದೊಡ್ಡ ಮನುಷ್ಯರು ಬಂದಿದ್ದರು. ಮೆ|| ರಂಗನಾಥ ಮೊದಲಿಯಾರವರು, ಬದಲಾಯಿಸಬೇಕಾದ ಭಾಗವನ್ನು ಮೊದಲು ಓದಲು ಅದರಮೇಲೂ ಮೊದಲಿನ ಸೂಚನೆಯಮೇಲೂ ಸಿಂಡಿಕೇಟಿಗಳು ವಿಚಾರ ಮಾಡ

ಅನುಭವಿಸಿದರು. ಎರಡು ಪಕ್ಷಗಳ ಕಾಲು ಅವರು ತಮಗೆ ತೋರಿದ ಸಾಧಕ ಬಾಧಕಗಳನ್ನೆಲ್ಲ ತಿಳಿಸಿದರು. ಅಲ್ಲಿನ್ನಾದರಲ್ಲಿ ಬಹುಜನ ಪ್ರಶಸ್ತ ಬಹಳವಾಗಿಯು ಆಕ್ಷೇಪವೆಂದೆಣಿಸಿ ಪ್ರೊಟೆಸ್ಟ್ ಸಿನ್ನರಿಂದ ಪ್ರತಿ ಪಕ್ಷದವರ ಅಭಿಪ್ರಾಯಕ್ಕೆ ಗಣ್ಯವಿಲ್ಲದೆ ಹೋಯಿತು. ಪ್ರೊಫೆಸರು ಹಿಂದೆ ಸೂಚಿಸಿದ್ದಂತೆ ಆರ್ಟ್ಸ್, ಅಂದರೆ ಎಂ. ಏ. ಬಿ. ಎ. ಎಫ್. ಎ. ಪರೀಕ್ಷೆಗಳು ನವಂಬರ್ ಡಿಸಂಬರ್ ಜನವರಿ ತಿಂಗಳಲ್ಲಿ ನಡೆಸಲಿಕ್ಕೆ ಬದಲು ಸಕಲ ವಿಷಯಗಳಲ್ಲಿಯೂ ಅನುಕೂಲಕರವಾದ ಮಾರ್ಚ್ ಏಪ್ರಿಲ್ ಮೇ ತಿಂಗಳಲ್ಲಿ ನಡೆಸುವದು ಯುಕ್ತವೆಂಬ ತಾತ್ಪರ್ಯವನ್ನು ಅಂಗೀಕರಿಸಿ ರದ್ದುಮಾಡಿ ನಿಶ್ಚಯಿಸಿದರು. ಬದಲಾವಣೆ ಆವಶ್ಯಕವೆನ್ನತಕ್ಕವರ ಸಂಖ್ಯೆಯು ಅಧಿಕವಾಗಿದ್ದದರಿಂದ ಎರಡನೆ ಮುಂದಿನವರುಷದ ಮೊದಲು ಪರೀಕ್ಷಾ ಕಾಲಗಳನ್ನು ಬದಲಾಯಿಸಿರುವಂತೆ ತೀರ್ಮಾನವಾಯಿತು. ಪ್ರಸಕ್ತ ಏಪ್ರಿಲ್ ಗಳು ಮಾತ್ರ ಎಂದಿನಂತೆ ಏಪ್ರಿಲ್‍ನಲ್ಲಿ, ಸ್ಕೂಲ್ ಫೈನಲ್ ಪರೀಕ್ಷೆ, ಎಂದು ನಡೆಯುವ ಮೆಟ್ರಿಕ್ಯುಲೇಷನ್ ಪರೀಕ್ಷೆ ಜನವರಿಯಿಂದ ಈ ಸೆಪ್ಟೆಂಬರು ತಿಂಗಳಲ್ಲಿಯೂ ಪ್ರತ್ಯೇಕವಾಗಿ ನಡೆಸುವ ಸಂಪ್ರದಾಯವು ಹೊಸ ನೂತನ ಸಂಬಂಧವು ಹೊಸದಾಗಿ ಗತಿಸಿ ಗತಿ ಮಾಡಿ ತೋರುತ್ತದೆ. ಈ ಬದಲಾವಣೆಯು ಇಂಗ್ಲಿಷ್ ಪ್ರೊಫೆಸರುಗಳ ಪ್ರಯೋಜನ ಸೌಕರ್ಯಗಳನ್ನು ನಿರೀಕ್ಷಿಸಿ ಉದ್ದೇಶಿಸಿ ಮಾಡಿರುವಂತೆ ಕಾಣುತ್ತದೆ. ಪ್ರಕೃತ ಕ್ರಮದಲ್ಲಿ ಅನೇಕ ಬಾಧಕಗಳಿದ್ದಾಗ್ಯೂ ಈಗ ಸೂಚಿಸಲ್ಪಟ್ಟಿರುವ ಕಾಲವು ಇದಕ್ಕಿಂತಲೂ ಅನಾನುಕೂಲವಾದದ್ದಾಗಿಯೂ, ವಿದ್ಯಾರ್ಥಿಗಳಿಗೆ ಹಿಂಸಕರವಾದದ್ದಾಗಿಯೂ ಇರುತ್ತದೆ. ಕೆಲವು ಪ್ರದೇಶಗಳಲ್ಲಿ ಬಿಸಿಲಿನ ತೀಕ್ಷ್ಣತೆಯು ಮಾರ್ಚ್ ತಿಂಗಳಲ್ಲಿ ದುಸ್ಸಹವಾಗಿರುವಾಗ್ಯೂ ಏಪ್ರಿಲ್‍ನಲ್ಲಿ ಬಾಲಕರ ಸ್ಥಿತಿಯು ಬಹಳ ಅನುತಾಪಕರವಾಗಿರುವದು. ಈ ನೂತನಕ್ರಮವು ಮುಂದೆ ಯೆಷ್ಟರಮಟ್ಟಿಗೆ ವಿದ್ಯಾರ್ಥಿಗಳಿಗೆ ಸಮರ್ಪಕವಾಗಿರುವದೋ ಅದು ಮುಂದೆ ನೋಡಬೇಕಾದ್ದಾಗಿರುತ್ತದೆ.

THE BANGALORE FORT.

ಈ ರಾಜ್ಯವು ಶ್ರೀಮನ್ಮಹಾರಾಜರವರಿಗೆ ಒಪ್ಪಿಸಲ್ಪಟ್ಟ ಕಾಲದಲ್ಲಿ ಈ ಕೋಟೆಯು ಸಂಪೂರ್ಣವಾಗಿ ಬ್ರಿಟಿಷ್ ಗವರ್ನಮೆಂಟಿನವರ ಸ್ವಾಧೀನದೊಳಗಿರತಕ್ಕದ್ದು. ಇಲ್ಲಿನ ಠೇವಣಿಯ ಬಿಲ್ಡಿಂಗುಗಳನ್ನು ಅವರ ಕಂಪೌಂಡು ಮತ್ತು ಅದರೊಳಗಿರತಕ್ಕ ಬೇಕಾದ ಪದಾರ್ಥಗಳನ್ನೂ ತೆಗೆದುಕೊಂಡು ಅದಕ್ಕೆ ಬದಲು ಕೋಟೆಯನ್ನು ಶ್ರೀಮನ್ಮಹಾರಾಜ ಸರ್ಕಾರದವರಿಗೆ ಬಿಟ್ಟುಕೊಡುವಂತೆ ಇಂಡ್ಯಾ ಗವರ್ನಮೆಂಟಿನಲ್ಲಿ ವ್ಯವಸ್ಥೆಯಾಗಿರುವುದೆಯೂ, ಪ್ರತ್ಯಕ್ಷದಲ್ಲಿಯೇ ಕೋಟೆಯು ವಿಚಾರಣಾಧಿಕಾರವನ್ನು ಈ ಸರ್ಕಾರದವರು ವಹಿಸುವರೆಂತಲೂ, ಇದರಿಂದ ಕೋಟೆಯಲ್ಲಿರತಕ್ಕದ್ದರಿಂದಲೂ ಅಕ್ಕಪಕ್ಕದ ಪೇಟೆಗೆ ಒದಗುವ ಪರಿಣಾಮಗಳನ್ನು ಮುನಿಸಿಪಾಲಿಟಿಯವರಿಗೆ ಅನುಕೂಲವಾಗುವದೆಂತಲೂ ಒಳದೇಶದ ಇಂಗ್ಲಿಷ್ ಪತ್ರಿಕೆ ಯೊಂದು ತಿಳಿಸುತ್ತದೆ. ಕೆಲವು ದಿನಗಳ ಹಿಂದೆ ವಿಷಯದಲ್ಲಿ ಆದ ಅನುಕೂಲ್ಯವು ಕಂಡು ಅಲ್ಲಿನ ಪ್ರಜೆಗಳು ಸಹ ನಿರ್ಬಂಧವಿಲ್ಲದೆ ಅಧಿಕಾರ ಪ್ರಾಪ್ತವಾದಬಳಿಕ ಸಂತೋಷಿಸುವದರೊಡನೆ ಸನ್ನಿಧಿಯ ಔದಾರ್ಯವನ್ನು ಸಹ ಅನವರತ ಸ್ಮರಿಸಿಕೊಳ್ಳುತ್ತಿರುವುದು ಆವಶ್ಯಕವಾಗಿರುತ್ತದೆ. ಸವರೀ ಏಳನೇ ಕಲಂ ಯಾವದೆಂದರೆ—"ಮಂತ್ರಾಲೋಚಕ ಸಭಾಸಹಿತರಾದ ಗವರ್ನರ್ ಜನರಲ್‌ರವರ ಮಂಜೂರಾತಿಯು ಪೂರ್ವಭಾವಿಯಾಗಿ ಪಡೆಯದೆ ಮೈಸೂರು ಮಹಾರಾಜರವರು, ಯಾವದಾದರು ನೂತನವಾದ ಕೋಟೆಗಳನ್ನು ಅಥವಾ ದುರ್ಗಗಳನ್ನು ಕಟ್ಟಿಸಕೂಡದು, ಮತ್ತು ಹಾಲೀ ಸದರೀ ದೇಶದಲ್ಲಿರತಕ್ಕ ಕೋಟೆಗಳ ಯಾ ದುರ್ಗಗಳ ಪ್ರಾಕಾರಗಳನ್ನು ದುರಸ್ತು ಮಾಡಿಸಕೂಡದು," ಎಂಬದು. ವಾಸ್ತವವಾದ ಈ ನಿರ್ಬಂಧನವನ್ನು ಲಕ್ಷಿಸದೆ ಕೋಟೆಯ ಭಾಗಗಳನ್ನೆಲ್ಲ ಸ್ವಂತ ಉಪಯೋಗಕ್ಕೆ ನೆಲಸರಿಮಾಡುತ್ತ ಬಂದಿರುವ ಕೋಟೆಗೆ ಮುನ್ಸಿಪಾಲಿಟಿಯವರು ಅನುಕೂಲ್ಯವನ್ನುಂಟುಮಾಡುತ್ತಿರಬಹುದು. ಇಲ್ಲಿನ ಸಕಲ ಕಾರ್ಯಗಳು ಸಹ ಇಂಗ್ಲಿಷ್ ಗವರ್ನಮೆಂಟಿನವರು ಅಪೇಕ್ಷಿಸುತ್ತಿದ್ದಾರೆಂತಲೂ ಪ್ರವೇಶ ಅವರ ಅಪೇಕ್ಷಾ ಪೂರ್ತಿಯಾಗುವದರೊಳಗೆ ಸಂಶಯವಿಲ್ಲವೆಂತಲೂ, ಪ್ರಬಲ ಸ್ಥಾನಗಳಲ್ಲಿ ಪ್ರಸ್ತಾಪವಿಲ್ಲದಿರುತ್ತದೆ. ಮುಖ್ಯವಾಗಿ ಬ್ರಿಟಿಷ್ ಗವರ್ನಮೆಂಟಿನವರಿಗಿರುವ ಆಕರ್ಷಕ ಶಕ್ತಿಯು ಪ್ರಸಿದ್ಧವಾದದ್ದಾಗಿರುವದು. ಅವರು ಕೋಟೆಭಾಗವನ್ನು ಹೀಗೆ ಮಾಡುವದರ ಹೊರತು ನಿಷ್ಪ್ರಯೋಜನಗಳನ್ನಪೇಕ್ಷಿಸರು. ಮುಖ್ಯವಾಗಿ ಬರಿಗ್ರಾಂಡವರ ಮನೋಭಾವಗಳು ಸ್ವತಃ ತಿಳಿದು ವರ್ತಿಸುವದೇ ಇಂಗ್ಲಿಷರ ಮುಖ್ಯಲಕ್ಷಣವಾದದರಿಂದ ತನ್ನಿಮಿತ್ತಕವಾಗಿ ಯಾವದೂ ಪ್ರತಿಕೂಲವಾಗಿರದು ಯೋಗ್ಯವಲ್ಲದೆ ಹೋಗಲಾರದು.

Occasional Notes.
ನೈಮಿತ್ತಿಕ ವಿಷಯ ನ್ಯಾಸ.

A ruling.—ಮಿಲಿಟರಿಗಳು ಇಂಕಂಟ್ಯಾಕ್ಸ್ ಎಂಬ ಆದಾಯಮೇಲಣ ತೆರಿಗೆಯಿಂದ ವಿಮುಕ್ತರೆಂದು ಇಂಡ್ಯಾ ಗವರ್ನಮೆಂಟಿನವರು ನಿರ್ಣಯಿಸಿರುತ್ತಾರೆ.

H. Highness the Nizam.—ನಿಜಾಮರವರಿಗೆ ಈಚೆಗೆ ಪ್ರಾಪ್ತವಾದ ಪುತ್ರರ ವಿಯೋಗದ ದುಃಖದಿಂದ ರಾಜ್ಯ ಕಾರ್ಯಗಳಲ್ಲಿ ಸಹ ಕೆಲವು ಬೇಸರವನ್ನು ವಹಿಸಿ, ಬಹಿಷ್ಕರಿಸಿರುವರೆಂದು ಇರುತ್ತದೆ. ಈಚೆಗೆ ಪ್ರತಿದಿನದಲ್ಲು ಹೊರಗೆ ಸವಾರಿ ಹೋಗುತ್ತಲೂ ಸಂಸ್ಥಾನದ ಕಾರ್ಯಗಳನ್ನು ಹಿಂದಿನಂತೆ ನೋಡುತ್ತಲೂ, ಅರಮನೆ ಗಳಿಂದ ಪದಗಳು ಬಂದು ನೋಡುವದಕ್ಕೆ ಅವಕಾಶಕೊಡುತ್ತಲೂ ಇರುವಂತೆ ಡೆಕ್ಕನ್ ಟೈಂಸ್ ಪತ್ರಿಕೆ ಹೇಳುತ್ತದೆ.

Publication of quarterly reports.—ಹೈದರಾಬಾದ್ ಸಂಸ್ಥಾನದ ಪ್ರಧಾನಮಂತ್ರಿಯವರಾದ ಸರ್ ಅಸ್ಮಾನ್‌ಜಾಯವರು, ತಮ್ಮ ಅಧಿಕಾರದಲ್ಲಿ ಸಂಸ್ಥಾನದ ವಿವರಗಳು ಯಾವ ರೀತಿಯಲ್ಲಿ ನಡೆಯುತ್ತವೆ ಎಂಬದನ್ನು ನಿಜಾಮರವರು, ಪ್ರಜೆಗಳು, ಇಂಡ್ಯಾ ಗವರ್ನಮೆಂಟಿನವರು ಸಹ ತಿಳಿದುಕೊಳ್ಳಲಿಕ್ಕೆ ಅನುಕೂಲವಾಗಿರುವಂತೆ ಮೂರು ತಿಂಗಳಿಗೊಂದಾವರ್ತಿ ಒಂದು ರಿಪೋರ್ಟನ್ನು ಪ್ರಕಟಿಸ ಮಾಡುವದಕ್ಕೆ ಏರ್ಪಾಡುಗಳು ಮಾಡಿರುತ್ತಾರೆಂದು ತಿಳಿಯಬರುತ್ತದೆ. ಇದು ಕೇವಲ ಶ್ಲಾಘ್ಯವಾದ ಏರ್ಪಾಡೆಂಬುದರಲ್ಲಿ ಸಂದೇಹವಿಲ್ಲವು.

LOCAL AND PROVINCIAL NEWS.
ಒಳದೇಶ ವಾರ್ತಾ ಪ್ರಾಂತ-ವೃತ್ತಾಂತಗಳು

The weather.—ಬಿಸಿಲಿನಝಳವು ದಿನೇದಿನೆ ಹೆಚ್ಚುತ್ತಾ ಬರುತ್ತ ರಾತ್ರಿಕಾಲದಲ್ಲಿ ಸೊಳ್ಳೆ ತಗಣೆಗಳಬಾಧೆಯು ಅಧಿಕವಾಗಿದೆ. ಕೆರೆ ಕುಂಟೆಗಳೆಲ್ಲ ನೀರು ಬತ್ತಿ ಜಲಾಭಾವವನ್ನು ಸೂಚಿಸುತ್ತವೆ. ಅಲ್ಲಿಯಲ್ಲಿ ಜ್ವರ ಕೆಮ್ಮು ಮುಂತಾದ ರೋಗಗಳು ವ್ಯಾಪಿಸಿ ಜನರು ಪೀಡಿಸುತ್ತಿದ್ದಾರೆ. ರಸ ಪದಾರ್ಥಗಳ ಕ್ರಯವು ಜಾಸ್ತಿಯಾಗುತ್ತ ಬಡ ಜನಗಳಿಗೆ ಹೆಚ್ಚಾದ ತೊಂದರೆ.

Undetected dacoity.—ಈಗ್ಗೆ ೧೦-೧೨ ದಿನಗಳ ಕೆಳಗೆ ಕೆಲವರು ಜನಕ್ಕಾಗಿ ಬಂದರು. ಬಡಿಗೆ ಹಿಡಿದುಕೊಂಡು ಸುಮಾರ್ ೩೦೦೦ರೂಪಾಯಿಗಳನ್ನು ತೆಗೆದುಕೊಂಡು ಕಾಣದಂತಾಗಿ ಹಿಡಿಯುವ ಈವರೆಗೆ ಏನೂ ಸಿಕ್ಕಿರುವಾಗ್ಯೆ ಕೆಲವರು ಪರಿಶೋಧನೆ ಮಾಡಿ ಅವರೆಲ್ಲರೂ ಜುಲುಮಿ ಮಾಡಿ ಅದರಬಳಿಯಿದ್ದ ರೂಪಾಯಿಗಳನ್ನು ಮಾತ್ರ ತೆಗೆದುಕೊಂಡುಹೋದರೆಂತಲೂ ವರ್ತ ಮಾನ ಪತ್ರಿಕೆಯಿಂದ ತಿಳಿಯುತ್ತದೆ. ಆ ಗಟ್ಟಿಯ ಕಳ್ಳರು ಮುಂದೆ ಸಿಕ್ಕಿದರೆ ಕೆಲವು ವಸ್ತುಗಳು ಪತ್ತೆಯಾಗಬಹುದು. ಆ ಮೊಕದ್ದಮೆಗೆ ಸೇರಿದ ಕಳ್ಳರ ಪತ್ತೆಯಾಗದಿರುವದಾಗಲಿ ತನ್ನಲ್ಲದೆ ಕೃತ್ಯನಡೆದ ಅಂಕ ಸಹ ಸರ್ಕಾರಕ್ಕೆ ರಿಪೋರ್ಟಾಗದಿದ್ದರೆಂದು ಒಬ್ಬ ಬಾತಮಿದಾರರು ಬರೆಯುತ್ತಾನೆ.

Obituary.—ದಿವಾನರವರ ಆಫೀಸ್ ಮ್ಯಾನೇಜರಾಗಿಯೂ ಶಂಕರಾಪುರಿ ಮ|| ರಂಗಸ್ವಾಮಿಅಯ್ಯಂಗಾರ್ಯರವರ ಜ್ಯೇಷ್ಠ ಸೋದರರಾಗಿಯೂ ಇದ್ದ ಮ|| ಕೃಷ್ಣಮಾಚಾರ್ಯರವರು ನಿನ್ನೆಯದಿನ ಪ್ರಾತಃಕಾಲ ಕಾಲಗತಿಯನ್ನೈದಿದರೆಂಬ ವೃತ್ತಾಂತವನ್ನು ಕೇಳಿ ನಾವು ಬಹಳವಿಷಾದಿಸುತ್ತೇವೆ. ಇವರು ಶ್ರೀಮನ್ಮಹಾರಾಜರವರ ಸವಾರಿ ಯೊಡನೆ ಉತ್ತರದೇಶಕ್ಕೆ ಹೋಗಿದ್ದ ಕಾಲದಲ್ಲಿ ಇವರಿಗೆ ಭಾರ್ಯಾವಿಯೋಗ ಪ್ರಾಪ್ತವಾಗಲು ಮುಂದಾಗಿಯೇ ಇಲ್ಲಿಗೆ ವಾಪಸ್ ಬಂದುಬಿಟ್ಟರು. ಅದುಮೊದಲು ಇವರಿಗೆ ಶರೀರಾಲಸ್ಯ ಪ್ರಾರಂಭವಾಗಿ ಅದು ದಿನೇದಿನೆ ವೃದ್ಧಿಯನ್ನೈದುತ್ತ ಅಪ್ರತೀಕಾರವಾಗಲು ಕಡೆಗೆ ಶರೀರ ಪರಿತ್ಯಾಗದಿಂದದು ನಿವೃತ್ತವಾಯಿತು. ಮ|| ಕೃಷ್ಣಮಾಚಾರ್ಯರವರ ವಿಯೋಗದಿಂದ ಅವರ ಬಾಲಕರು ಬಂಧುಗಳು ಪ್ರಬಲ ನಷ್ಟಕ್ಕೆ ಗುರಿಯಾಗಬೇಕಾಗಿ ಬಂದುದಕ್ಕೆ ನಾವು ಚಿಂತಿಸುತ್ತೇವೆ. ಈ ದೊಡ್ಡಮನುಷ್ಯರು ದಿವಾನರವರಬಳಿ ಬಾಸ್ ಹಾಜನಿಘಂಟು ಮುನಿಷಿಯಾಗಿದ್ದದ್ದು ಅದೇಸ್ಥಾನದಲ್ಲಿರುವ ಕೆಲವರಿಗೆ ಪಕ್ಷಪಾತವಾಗಿತ್ತು. ದೌರ್ಭಾಗ್ಯದ ಕಾತ ಅದೀಗ ನಿವೃತ್ತಿಯಾಗುವಕಾಲ ಪ್ರಾಪ್ತವಾಯಿತು.

A solution.—ಮೈಸೂರು ಗವರ್ನಮೆಂಟಿನವರ ಆಲೋಚನೆಗೆ ಪ್ರಬಲ ವಿಷಯ ಒಂದು ಪ್ರಾಪ್ತವಾಗಿರುವಂತೆ ಒಬ್ಬ ಬಾತಮಿದಾರನು ಬರೆಯುತ್ತಾನೇನೆಂದರೆ:—"ಗತ ಸಂವತ್ಸರದ ದಸರಾ ದರ್ಬಾರ್ ಕಾಲದಲ್ಲಿ ದಿವಾನರವರು ಈ ಸಂಸ್ಥಾನದ ಜಮಾಖರ್ಚು ಲೆಕ್ಕಾದಿಯನ್ನು ಪ್ರತಿನಿಧಿಗಳಿಗೆ ತಿಳಿಸುವಾಗ್ಯೆ ಸುಮಾರ್ ೧೫ ಲಕ್ಷ ರೂಪಾಯಿಗಳ ಕೊರತೆ ಜಾಸ್ತಿ ಖರ್ಚು ಆಗಿರುವಂತೆಯೂ, ಇಂತಾ ಆಯತಿಯು ಹಿಂದೆ ಯಾವ ಸಂವತ್ಸರದಲ್ಲಿಯೂ ಇದರಿಲ್ಲವೆಂತಲೂ ಹೇಳಿದ್ದರಷ್ಟೆ. ಮೈಸೂರು ದೇಶವು ಶ್ರೀಮನ್ಮಹಾರಾಜರವರಿಗೆ ಒಪ್ಪಿಸಲ್ಪಟ್ಟ ಐದಾರು ವರುಷಗಳ ಕಾಲದಲ್ಲಿ ಉತ್ತಮಸ್ಥಿತಿಗೆ ಬಂದ ಅಂಶವು ಜಮಾಬಂದ್ಯರಾದ ಕಾನ್ಫರೆನ್ಸ್ ಅಧಿಕಾರಿವರ್ಗ ಬ್ರಿಟಿಷ್ ಗವರ್ನಮೆಂಟಿನವರು ತಿಳಿದು ಸಂತೋಷಿಸಿ ತಾವು ೧೦ ವರುಷಗಳ ತನಕ ಮಾಫಿಮಾಡಿರುವಂತೆ ತಿಳಿಸಿದ್ದ ಜಾಸ್ತೀ ಸಬಸಿಡಿ ಮೊಬಲಗನ್ನು ಈಗ ಕೊಡಲಿಕ್ಕೇನು ಆತಂಕವೆಂದು ಮಹಾರಾಜಾ ಸರ್ಕಾರದವರಿಂದ ಕೇಳಬೇಕೆಂದು ಯೋಚಿಸುತ್ತಿರುವಂತೆ ತಿಳಿಯಬರುತ್ತದೆ. ಯಾವದೋ ಉದ್ದೇಶದಿಂದ ತೋರಿಸಲ್ಪಟ್ಟ ಜಾಸ್ತೀ ಖರ್ಚುವಿಷಯ ಬೇರೊಂದುವಿಧ ಸಂಕಲ್ಪಕ್ಕೆ ನಿಮಿತ್ತವಾಗುವದು. ಈಗ ಬ್ರಿಟಿಷ್ ಸರ್ಕಾರದವರ ಕಾಗದಕ್ಕೆ ದಿವಾನರವರು ಏನುಸಮಾಧಾನ ಹೇಳುವರೋ ನೋಡಬೇಕು" ಎಂಬದು.

Zulum.—ಕೊಪ್ಪದಹಳ್ಳಿ ಹೋಬಳಿ ಹರಿಹರಕ್ಕೆ ಸೇರಿದ ತುಂಗಾನದಿಗೆ ಸೇತುವೆಕಟ್ಟುವ ಕೆಲಸದ ವಿಷಯ ಹಿಂದೆ ತಿಳಿಸಿದ್ದೆವಷ್ಟೆ. ಈಗ ಕಂತ್ರಾಟುದಾರರಿಗೆ ಸೇರುವಂತೆ ಒಂದು ಅನ್ಯಾಯ ನಡೆದಿರುವುದು ದೂರದವರಿಗೆ ಗೊತ್ತಾಗುತ್ತಿರುವಂತೆಯೂ, ಅವನೈತನ ಹಿಡುವಳಿ ಜಮೀನುಗಳನ್ನೆಲ್ಲ ಬೇರೆಯವರಿಗೆ ಗುತ್ತಿಗೆ ಕೊಡುವ ಜಮೀನುಗಳ ಮೇಲೂ ಬೇರೆ ಕೆಲಸದವರು ಉದಾಹರಿಸಿ ಯಾರ ದೆವಸ್ಥಾನ ದೇವತೆಯನ್ನು ಜಮೀನುದಾರರ ಕಡೆಯಿಂದ ಅವರುಸುಮಾರು ಖರ್ಚಿನ ವರ್ತನೆಯ ಅನ್ಯಾಯವಾಗಿ ಸರ್ಕಾರದವರ ಕರ್ತವ್ಯ ಮೊಬಲಗನ್ನು ಕೊಡದೆಯೂ, ಅವರ ಪ್ರಕಾರಕ್ಕೆ ಕಿವಿಗೊಡದೆಯೂ ಕೆಲವರು ಪೀಡಿಸುವರೆಂದು ತಿಳಿಯುತ್ತದೆ. ದಿವಾನರವರಿಗೆ ಅವರು ಅರ್ಜಿ ಬರೆದುಕೊಂಡರೆ ಅವರು ಅದ್ಯಾಪಿ ಜವಾಬ್ ಕೊಡಲಿಲ್ಲವೆಂತಲೂ. ಡಿಸ್ಟ್ರಿಕ್ಟ್ ಅವರು ಇದಕ್ಕೆ ಯಾವ ಕ್ರಮವನ್ನು ಕೈಗೊಂಡರೋ ತಿಳಿಯದೆಂದು ಒಬ್ಬ ಬಾತಮಿದಾರನು ಕೇಳುವರು. ಈ ಸಂಸ್ಥಾನದಲ್ಲಿ ಹರಿಹರಕ್ಕೆ ಸೇರಿದ ಬಳಿಯಲ್ಲಿ ಜಮೀನುದಾರರಿಗೆ ಈ ಹಿಡುವಳಿ ಜಮೀನನ್ನು ತೆಗೆದುಕೊಳ್ಳುವ ರೈತರು ಕೋರಿಸುವ ಜಾಗದಲ್ಲಿ ರಸ್ತೆಹಾಕದೆ ವ್ಯರ್ಥವಾಗಿ ಮಾಡುತ್ತಾರೆಂದು ಸದರೀ ಕಾಗದದಿಂದ ಸ್ಪಷ್ಟವಾಗುತ್ತದೆ. ಇದಕ್ಕೆ ಪ್ರತೀಕಾರವು ಅವಶ್ಯ ನೋಡಬೇಕಾದದ್ದು.

SUMMARY OF NEWS.
ವೃತ್ತಾಂತ ಸಂಗ್ರಹ.

ಬರುವ ನಿಜಚೈತ್ರಮಾಸದಲ್ಲಿ ಕನಕಾಪುರ ತಾಲ್ಲೂಕಿನೊಳಗೆ ಹತ್ತುಲಕ್ಷ ರೂಪಾಯಿಗಳ ಖರ್ಚಿನಿಂದ ಒಂದು ಗರುಡಕೆರೆಯು ಮಾಗುವದಾಗಿದೆ ಎಂದು ಒಬ್ಬ ಬಾತ್ಮೀದಾರನು ಬರೆದಿರುತ್ತಾನೆ.

ಲಂಡನ್ ನಗರದಲ್ಲಿ ಫಸ್ಟ್ ಕ್ಲಾಸ್ ವರ್ತಮಾನಪತ್ರ ಎಂಬುವರಾಗಿರತಕ್ಕ ಉದರಭರಣ ಮಾಡತಕ್ಕವರು ಒಬ್ಬ ೧೪೦೦೦ ರೂಪಾಯಿ ಪಡೆಯುತ್ತಾರೆ. ಇ ದರಮೇಲೆ ಅಲ್ಲಿ ವರ್ತಮಾನ ಪತ್ರಿಕೆಯ ಪ್ರಾಬಲ್ಯವು ಎಷ್ಟಿರಬಹುದೆಂಬುದು ವಿಚಾರಿಸತಕ್ಕದ್ದು.

ಬರ್ಮಾದೇಶದ ಸ್ಯಾಕಿ ಪಟ್ಟಣದಲ್ಲಿ ಈಗ ಕೆಲವು ಬರ್ಮಾಜನರು ಒಂದು ಗುಂಪಾಗಿ ದಂಗೆ ಮಾಡುತ್ತಿರುತ್ತಾರೆ. ಇವರು ಅಲ್ಲಿನ ಪೊಲೀಸ್ ಠಾಣೆಯ ಬಳಿ ಇರುವ ಒಬ್ಬ ಗೃಹಸ್ಥನ ಮನೆಯಲ್ಲಿ ಹಠಾತ್ ಪ್ರವೇಶಿಸಿ ಸಾವಿರಾರು ರೂಪಾಯಿಗಳ ಬೆಲೆ ಬಾಳುವ ಒಡವೆಗಳನ್ನು ತೆಗೆದುಕೊಂಡು ಹೋದರು. ಹೀಗೆಯೇ ಬರ್ಮಾದೇಶದಲ್ಲಿ ಕಳವು ದರೋಡೆಗಳು ಆಗುತ್ತಲೇ ಇದ್ದವೆ.

ಅಬಿಸೀನಿಯಾದೇಶದ ರಾಜನು ತನ್ನ ದೇಶದಲ್ಲಿ ಒಂದು ಹುಕುಂ ಕೊಟ್ಟಿರುವದೇನೆಂದರೆ,—ಯಾರಾದರೂ ತನ್ನ ದೇಶದಲ್ಲಿ ತಂಬಾಕು ತಿಂದರೆ ಅಥವಾ ಸೇದಿದರೆ ಅಂತವರು ದೇಹಾಂತ ಶಿಕ್ಷೆಗೆ ಬಾಧ್ಯರೆಂತಲೂ, ಮತ್ತು ಯಾರಾದರೂ ಪುಡಿಸೇದಿದರೆ ಅವರ ಮೂಗು ಕತ್ತರಿಸಬೇಕೆಂತಲೂ ನಿಶ್ಚಯಿಸಿರುತ್ತಾರೆ. ಎಂಥಾ ಅವಿಚಾರದ ಹುಕುಂನೋಡಿರಿ! ತಂಬಾಕು ತಿನ್ನುವವರಾಗಲಿ ಪುಡಿಸೇದುವವರಾಗಲೀ ರಾಜನ ಈ ಹುಕುಂ ನಡೆಸೋಣವೇ ತಿನ್ನುತ್ತಾರೇನು.

ಅಜಮೀರ್ ಪಟ್ಟಣದ ಸಮೀಪದಲ್ಲಿ ಗತಫೆಬ್ರವರಿ ೧೩ನೆಯ ದಿನ ಆಕಸ್ಮಿಕ ಮಳೆಬಿದ್ದು ಬಹಳ ಅಪಾಯವಾಯಿತು. ಒಂದೊಂದು ಕಲ್ಲು ಸೇರು ತೂಕವುಳ್ಳ ಭಾರವುಳ್ಳದ್ದಾಗಿತ್ತು. ಕೆಲವು ಕಲ್ಲುಗಳು ೧೦-೧೨ ದಿನಗಳ ಪರಿಯಂತ ಕರಗದೆ ನೀರಾಗದೆ ಇದ್ದವು. ಈ ಮಳೆಯು ಬಿದ್ದದರಿಂದ ಹೊಲದೊಳಗಿನ ಪೈರುಗಳೆಲ್ಲವೂ ನಷ್ಟವಾಗಿ ಹೋದವು. ಮರಗಳ ಎಲೆಗಳೆಲ್ಲ ಉದುರಿಹೋದವು. ಇದೇ ಪ್ರಕಾರ ಪಂಜಾಬ ಪ್ರಾಂತದಲ್ಲಿ ಯೂ ಆಕಸ್ಮಿಕ ಮಳೆಬಿದ್ದು ಸುಮಾರು ೬-೭ ಗ್ರಾಮಗಳಲ್ಲಿ ಪೈರುಗಳು ನಷ್ಟವಾದವು. ಆಗ್ರಾ ಮುಗಳ ಜನರಿಗೆ ಈಗ ಜೀವನಕ್ಕೆ ಹೋಗದಿಲ್ಲದೆ ಸಿಕ್ಕಿದಕಡೆಗಳಲ್ಲೆಲ್ಲ ನೌಕರಿಮಾಡಲಿಕ್ಕೆ ಪ್ರಾರಂಭಿಸಿದ್ದಾರೆಂತ ತಿಳಿಯಬರುತ್ತದೆ.

EXTRACTS.

ಗತ ಭಾನುವಾರದದಿನ ರಾತ್ರಿ ಪ್ರಸಿದ್ಧವಾದ ಅಲ್ಲಿನ ಗೆಯಿಟೀ ಥಿಯೇಟರಿಯೆಂಬ ನಾಟಕಶಾಲೆಯಲ್ಲಿ ಆರ್ಯಗಾನ ಕಲಾವಿಲಾಸಿನೀ ಎಂಬ ನಾಟಕ ಕಂಪೆನಿಯವರು ಕೆಲವರೂ, ನಮ್ಮ ಮಿತ್ರಮಂಡಲಿಯಲ್ಲಿ ಕೆಲವರು ಸಹ ಸೇರಿ ಒಂದು ನಾಟಕವನ್ನು ಆಡಿದರು. ಈ ನಾಟಕಾವಲೋಕನಾರ್ಥ ಬಹುಜನ ಬಂದಿದ್ದರು. ಈನಾಟಕದ ಮುಖ್ಯೋದ್ದೇಶವು ಇಷ್ಟೇ ಇರಬಹುದೆಂದು ತೋರುತಿದೇನಂದರೆ— ಈ ಮುಂಬೈಯಲ್ಲಿರುವ ವಿದ್ಯಾರ್ಥಿಗಳು ಕೆಲವರುಸೇರಿ ಪ್ರಾರ್ಥನಾಸಮಾಜವೆಂಬ ಒಂದುಸಮಾಜವನ್ನೇರ್ಪಡಿಸಿಕೊಂಡು ಕ್ರಿಶ್ಚಿಯನ್ ಪಾದರಿಗಳಂತೆ ಜನರಿಗೆ ಉಪದೇಶ ಮಾಡಲಾರಂಭಿಸಿದಾರೆ. ಮತ್ತೊಂದು ಸಮಾಜದವರು, ಬಾಲವಿವಾಹ ಮತ್ತು ಬಲಾತ್ಕಾರಪೂರ್ವಕವಾದ ವೈಧವ್ಯವು ನಿಷಿದ್ಧಗಳಾದವೆಂತಲೂ, ಬಾಲವಿತಂತುಗಳಿಗೆ ಪುನರ್ವಿವಾಹ ಮಾಡಬೇಕೆಂತಲೂ ಸ್ತ್ರೀಯು ಪ್ರಾಪ್ತ ವಯಸ್ಕಳಾದಮೇಲೆ ಅವಳ ಅಭಿಮತವನ್ನನುಸರಿಸಿ ಅವಳಿಗೆ ವಿವಾಹಮಾಡಬೇಕೆಂತಲೂ, ಬೋಧಿಸಲಿತ್ತಿಸಿದಾರೆ. ಇದಲ್ಲದೆ ರಿಫಾರಂಡ್ ನೇಟಿವ್ ಸೊಸೈಟಿಯಲ್ಲಿ, ಅಂದರೆ ನವೀನ ನಾಗರಿಕ ವೈಲಕ್ಷಣ್ಯಾಭಿಲಾಷಿಗಳಾಗಿ ಹಿಂದೂ ಕುಟುಂಬಕ್ಕೆ ಸೇರಿದ, ಮತ್ತು ಸ್ವತಃ ಅತಿ ಪ್ರೌಢೆಯರಾದ ಕುಲಾಂಗನೆಯರು ಕೆಲವರು ತಮ್ಮ ಪತಿಗಳೊಡನೆ ಮದ್ಯಪಾನವಮಾಡಲಿಕ್ಕೂ, ಸ್ಟಾಕಿಂಗ್ಸ್ ಬೂಟ್ಸ್ ವಗೈರೆಗಳಂತೊಟ್ಟು ವಿಜಾತೀಯಗಳಾದ ಆಚಾರಗಳಂ ವ್ಯವಹಾರದೊಳು ತರಲಿಕ್ಕೂ ಉತ್ಸಾಹದೊಡನೆ ಪ್ರಯತ್ನಪಡುತಲಿದಾರೆ. ಶಾಸ್ತ್ರವಿರುದ್ಧಗಳಾದ ಮತ್ತು ದೂಷ್ಯಗಳಾದ ಮೇಲೆಕಂಡವೆಲ್ಲ ಸದರೀ ನಾಟಕ ಸಮೂಹದವರಿಗೆ ತ್ಯಾಜ್ಯಗಳೆಂದು ಕಂಡುಬಂದಕಾರಣ ಅವಂ ಖಂಡಿಸುವ ಅಭಿಪ್ರಾಯದೊಡನೆ ಅವಂ ಪ್ರಹಸನರೂಪವಾಗಿ ಆಡಲಾರಂಭಿಸಿರುವಂತೆ ತೋರುತಿದೆ. ಈ ನಾಟಕದವರು ಪ್ರಥಮತಃ ನಾಟ್ಯರಂಗದಲ್ಲಿ ಪ್ರಾರ್ಥನಾಸಮಾಜದವರಂತೆ ಪ್ರತ್ಯಕ್ಷವಾಗಿ ಉಪದೇಶ ಮಾಡಲಾದರು. ಅದಕ್ಕೆ ಪ್ರತಿಪಕ್ಷದವರು ಕೆಲವರು ಅದಂ ಖಂಡಿಸಿದರು. ೨ನೇ ಅಂಕದಲ್ಲಿ ಪತಿಹೀನೆಯಾದ ಒಬ್ಬ ಬಾಲ ವಿಧವೆಯನ್ನು ಸತಿಹೀನನಾದ ಒಬ್ಬ ವಿಧುರನಿಗೆ ವಿವಾಹಮಾಡಿಕೊಡುವದಕ್ಕೆ ಬೇಕಾದ ಸಂಭಾಷಣೆಗಳೂ ಕನ್ಯಾನಿಶ್ಚಿತಾರ್ಥವೂ ಚನ್ನಾಗಿದ್ದವು. ಮೂರನೆಯ ಅಂಕದಲ್ಲಿ ಮತ್ತೊಂದಸಭೆ, ೪ನೇಯ ಅಂಕದಲ್ಲಿ ಕ್ರಮವಾಗಿ ಒಂದುಸೆರ್ಷನ್ಸ್‌ಕೋರ್ಟ್, ಅದಕ್ಕೆ ಅಂಗಗಳಾದ ಜಡ್ಜಿಗಳು, ಬ್ಯಾರಿಸ್ಟರುಗಳು, ಅಸ್ಸೆಸರ್‌ಗಳು, ವಾದಿ ಪ್ರತಿವಾದಿಗಳು, ಸಾಕ್ಷಿಗಳು, ವಗೈರೆ ಪ್ರಕರಣಗಳು ಪ್ರೇಕ್ಷಕರಿಗೆ ಬಹಳ ಆಶ್ಚರ್ಯವನ್ನುಂಟುಮಾಡುವದಾಗಿದ್ದವು. ಇದು ಜನಗಳಿಗೆ ರಂಜಕವಾಗಿರಲಿ, ಇಲ್ಲದಿರಲಿ, ಇದರ ಉದ್ದೇಶವು ಬಹಳ ಒಳ್ಳೇದಾಗಿರುವಂತೆ ಹೇಳಬಹುದಾಗಿದೆ.—ಹ. ಸು.

ಕಾಶ್ಮೀರದೇ[illegible] ಸೋಮವಾರದದಿನ, ಕಾಶ್ಮೀರದೇಶದ ಮಹಾರಾಜರವರು ಒಂದು ದರ್ಬಾರ್ ಮಾಡಿ, ಆ ಕಾಲದೊಳು ಸಂಸ್ಥಾನದ ದಿವಾನರಾಗಿದ್ದ ಲಕ್ಷ್ಮಣದಾಸರೆಂಬವರನ್ನು ಕೆಲಸದಿಂದ ತೆಗೆದು ಹಾಕಿರುವಂತೆಯೂ, ತಮ್ಮ ಸಹೋದರರಾದ ರಾಜಾ ಅಮಿಯಾರ್ ಸಿಂಗರವರನ್ನು ತಮ್ಮ ದಿವಾನರಾಗಿ ಮೊಕರರ್ಮಾಡಿರುವಂತೆಯೂ ತಿಳಿಸಿದರು. ಸದರೀ ಲಕ್ಷ್ಮಣದಾಸರೆಂಬವರು ತಮ್ಮ ಆಡಳಿತ ಕಾಲದಲ್ಲಿ ಪ್ರಜೆಗಳನ್ನು ಹಿಂಸಿಸಿ ಅವರಿಗೆ ನಾನಾವಿಧ ಸಂಕಟಗಳನ್ನುಂಟುಮಾಡಿ ತನ್ಮೂಲಕ ಅವರ ಅಪ್ರೀತಿಗೆ ವಿಷಯರಾಗಿದ್ದದರಿಂದ ಈಗ ಅವರಿಗೆ ದಿವಾನಗಿರಿಯಂ ತಪ್ಪಿಸಿದ್ದೆಲ್ಲರಿಗೂ ಸಮ್ಮತವಾದದ್ದಾಗಿಯೂ, ಸಂತೋಷಜನಕವಾದದ್ದಾಗಿಯೂ, ಅಂಗೀಕರಿಸಲ್ಪಟ್ಟಿತೆಂದು ನಂಬತಕ್ಕ ಮೂಲಕ ನಮಗೆ ತಿಳಿಯಬರುತಿದೆ. ಈ ಲಕ್ಷ್ಮಣದಾಸರೆಂಬವರು ಅನೇಕಲಕ್ಷ ರೂಪಾಯಿಗಳ ಪಿತ್ರಾರ್ಜಿತ ಆಸ್ತಿಯುಳ್ಳವರು. ಇವರು ದಿವಾನಗಿರಿಗೆ ನಿಯಮಿಸಲ್ಪಟ್ಟ ಕಾಲದಲ್ಲಿ ಮಹಾರಾಜರವರ ಇಬ್ಬರು ಸಹೋದರರೂ ಇವರಿಗೆ ಸಹಾಯಕರಾಗಿದ್ದರು. ಈಚೆಗೆ ಇವರದುರ್ನಡತೆಯ ದೆಸೆಯಿಂದ ಸದರೀ ಇಬ್ಬರಿಗೆ ಸಹ ಇವರ ವಿಷಯದಲ್ಲಿ ಮನಸ್ಸಿಗೆ ಬಹಳ ಅಸಂತುಷ್ಟಿಯುಂಟಾಗಿ ಕಡೆಗೆ ಕೈಬಿಟ್ಟರು. ಕಾಶ್ಮೀರ ದೇಶವು ಬ್ರಿಟಿಷ್ ರಾಜ್ಯಕ್ಕೆ ಸೇರಿಸಿಕೊಳ್ಳಲ್ಪಡುವದಾಗಿದೆ ಯೆಂದು ವೃತ್ತಾಂತ ಪತ್ರಿಕೆಗಳು ಕೆಲವು ಒಂದು ಪ್ರವಾದವನ್ನು ಹುಟ್ಟಿಸಿ ಪ್ರಚುರಗೊಳಿಸುತಲಿವೆ. ಇಂತಾ ಪ್ರವಾದಕ್ಕೆ ಸುತರಾಂ ಅವಕಾಶವಿಲ್ಲವೆಂತಲೂ, ಸುಪ್ರೀಂ ಗವರ್ನಮೆಂಟಿಗೆ ಅಂತಾ ಯೋಚನೆಯು ಅಲ್ಪವಾದರು ಇಲ್ಲವೆಂತಲೂ ಹೇಳುವದಕ್ಕೆ ನಮ್ಮಲ್ಲಿ ಆಧಾರಗಳವೆ. ವೈಸ್‌ರಾಯ್‌ಯವರು ಸ್ವಲ್ಪ ದಿವಸಗಳಲ್ಲೇ ಕಾಶ್ಮೀರದೇಶಕ್ಕೆ ಹೋಗುವವರಾಗಿರುವದರಿಂದ ಇಂತಾ ಅಸಂಗತ ಪ್ರವಾದವು ನಿಜವೆಂದು ನಂಬುವದಕ್ಕೆ ಅವಕಾಶವುಂಟಾಯಿತು. ಮಧ್ಯ ಏಷ್ಯಾ ದೇಶಕ್ಕೆ ಮಾರ್ಗವಾಗಿರುವ ಗಿಲ್ಜಿತ್ ರಸ್ತೆಯ ಪ್ರಕೃತಸ್ಥಿತಿಯನ್ನು ನೋಡುವದೇ ಲಾರ್ಡ್ ಡಫರಿನ್ ಸಾಹೇಬರವರು ಕಾಶ್ಮೀರ ದೇಶಕ್ಕೆ ಹೋಗುವದಕ್ಕೆ ನಿಜವಾದ ಉದ್ದೇಶವೆಂದು ಹೇಳುವದರಲ್ಲಿ ಸರ್ಕಾರೀ ಅಂತರಂಗವನ್ನು ಹೊರಪಡಿಸಿದಂತೆ ಆಗಲಾರದೆಂದು ನಾವು ನಂಬುತ್ತೇವೆ. ಮೇಲೆ ತಿಳಿಸಿದ ಮಾರ್ಗವಾಗಿ ಪ್ರಬಲ ಸೇನೆಯೊಡನೆ ಇಂಡ್ಯಾದೇಶದೊಳಗೆ ಪ್ರವೇಶಿಸುವದಕ್ಕೆ ಸಾಧ್ಯವಾಗುವದು. ಲಾರ್ಡ್ ಡಫರಿನ್ ಸಾಹೇಬರವರು ಈಗ ಕಾಶ್ಮೀರಕ್ಕೆ ಹೋಗುವದು ಸದರೀ ರಸ್ತೆಯನ್ನು ತಮ್ಮ ಕಣ್ಣಿನಿಂದ ನೋಡಿ ಮುಂಜಾಗ್ರತೆ ಪಡಬೇಕೆಂಬದೇ ಅವರ ಉದ್ದೇಶವಾಗಿರುತಿದೆ. ಇದೇ ಉದ್ದೇಶದೊಡನೆ ಲಾರ್ಡ್ ರಿಪನ್ ಸಾಹೇಬರವರು ಹೊರಟರು, ಪರಂತು ಅವರು ಚಳಿ ಮತ್ತು ವರ್ಷಾಕಾಲ ಪ್ರಾರಂಭದಲ್ಲಿ ಅಲ್ಲಿಗೆ ಹೋದದರಿಂದ ಪ್ರಬಲ ಹಿಮದ ದೆಸೆಯಿಂದ ಮುಂದಕ್ಕೆ ಹೋಗುವದಕ್ಕೆ ಸಾಧ್ಯವಿಲ್ಲದೆ ಹೋಯಿತು. ಪರಂತು ಲಾರ್ಡ್ ಡಫರಿನ್ ಸಾಹೇಬರವರು ಬೇಸಿಗೆಯಲ್ಲಿ ಪ್ರಯಾಣವಾಗುವದರಿಂದ, ಲಾರ್ಡ್ ರಿಪನ್ ಸಾಹೇಬರವರು ಹೋದದಕ್ಕಿಂತಲೂ ಅಧಿಕವಾಗಿ ಕೆಲವುದೂರ ಹೋಗಿ ನೋಡುವದಕ್ಕೆ ಸಾಧ್ಯವಾಗುವದು. ವೈಸ್‌ರಾಯ್ ಯವರು ಕಾಶ್ಮೀರದೇಶಕ್ಕೆ ಹೋಗುವದಕ್ಕೆ ಉಂಟಾದ ಮುಖ್ಯಕಾರಣ ಸದರೀ ದೇಶವನ್ನು ಬ್ರಿಟಿಷ್ ಅಧಿಪತ್ಯಕ್ಕೆ ಸೇರಿಸಿಕೊಳ್ಳುವದಾಗಿ ಹುಟ್ಟಿದ ಪ್ರವಾದಕ್ಕೆ ಸುತರಾಂ ಅವಕಾಶವಿಲ್ಲವೆಂತಲೂ, ಇಂಡ್ಯಾದೇಶದ ಇಂಗ್ಲಿಷ್ ಪತ್ರಿಕೆಗಳು ಕೆಲವು ಹುಟ್ಟಿಸಿ ಪ್ರಚುರಪಡಿಸಿದ ಪ್ರವಾದವೆಂತಲೂ ಖಂಡಿತವಾಗಿ ನಮಗೆ ತಿಳಿಯಬರುತಲಿವೆ.—ನ್ಯಾಷನಲ್‌ಗಾರ್ಡಿಯನ್.

ಹೌಸಾಫ್ ಕಾಮನ್ಸ್ ಸಮಾಜದಲ್ಲಿ ಮೆಸ್ಟರ್ ಸ್ಮಿತ್ ಯವರು ಇಂಡ್ಯಾದೇಶದ ವಿಷಯವು ಕುರಿತು ವಿಚಾರಮಾಡುವಾಗ್ಯೆ ಸಾಮಾಜಿಕರ ಅವಧಾನಕ್ಕೆ ಇವರಡಿಕಂಡ ಕೆಲವು ವಿಷಯಗಳಂ ಪ್ರಾಧಾನ್ಯೇನ ತಂದವರಾದರೇನೆಂದರೆ—ಇಂಡ್ಯಾದೇಶದ ಖಜಾನೆಯಲ್ಲಿ ಅರ್ಥದಾರಿದ್ರ್ಯವು ಮರಳಿ ತಲೆದೋರಲಾರಂಭಿಸಿದ್ದರಿಂದ ನಮ್ಮಕ್ ತೆರಿಗೆಯನ್ನು ಜಾಸ್ತೀ ಮಾಡಬೇಕಾಯಿತು. ಇದಕ್ಕಾಗಿ ಈ ಸಭೆಯವರು ಬಹಳವಿಷಾದಿಸುತಾರೆ. ಇಂಡ್ಯಾದೇಶದ ಆಡಳಿತ ಖರ್ಚನ್ನು ಸಾಧ್ಯವಾದಮಟ್ಟಿಗೆ ಕಡಮೆ ಮಾಡಬೇಕಾದದ್ದು ಯೋಗ್ಯವಾಗಿಯೂ ಅವಶ್ಯಕವಾಗಿಯೂ ಇರುತಿದೆ. ಸಾಧ್ಯವಾದ ಈ ಕಾರ್ಯವಂ ನಡೆಸಲಿಕ್ಕೆ ನಾವೆಂದಿಗೂ ತಪ್ಪಲಾಗದು. ಮತ್ತು ಈ ವಿಷಯದಲ್ಲಿ ಅನುಭವಶಾಲಿಗಳಾದ ಇಂಡ್ಯಾದೇಶೀಯರ ಅಭಿಪ್ರಾಯಗಳಂ ಕೇಳಿ ಅವರಿಗೆ ಬೇಕಾದ ಭರವಸೆ ಕೊಡಲಿಕ್ಕೆ ನಾವು ಸ್ವಲ್ಪವೂ ಅನುಮಾನಿಸಬಾರದು. ಈಗ್ಯೆ ಯೆರಡುವರುಷಗಳ ಹಿಂದೆ ಶ್ರೀಮನ್ಮಹಾರಾಜ್ಞೀಯವರು ಆಜ್ಞಾಪಿಸಿದ್ದಂತೆ ಒಂದು ರಾಯಲ್ ಕಮ್ಮಿಷನನ್ನೇರ್ಪಡಿಸಿ ಅವರಮೂಲಕ ಇಂಡ್ಯಾದೇಶದಲ್ಲಿ ನಮ್ಮ (ಬ್ರಿಟಿಷ್) ಆಫಿಸರ್‌ಗಳು ನಡೆಸುವ ಆಡಳಿತ ಕ್ರಮವು ಕೂಲಂಕಷವಾಗಿ ತಿಳಿದುಕೊಳ್ಳುವ ಅಭಿಪ್ರಾಯವನ್ನು ಕಾರ್ಯತಃ ನೆರವೇರಿಸಬೇಕಾಗಿರುತಿದೆ. ಈ ಕಾರ್ಯವು ನಮ್ಮದೇಶಕ್ಕೂ ನಮ್ಮ ಪ್ರಜೆಗಳಿಗೂ ಬಹಳ ಉತ್ತಮವಾಗಿರುವದು. ಇಂಡ್ಯಾದೇಶದಲ್ಲಿ ಗತ ಹತ್ತು ವರುಷಗಳ ಒಟ್ಟು ಜಮಾಖರ್ಚನ್ನು ನೋಡಿದ್ದಲ್ಲಿ ೧೫ಕೋಟಿ ರೂಪಾಯಿಗಳು ಕಮ್ಮಿ ಕಂಡುಬಂದಿರುತಿದೆ. ಇದಲ್ಲದೆ ಈ ಹತ್ತು ವರುಷಗಳಲ್ಲಿ ವ್ಯಯವಾದ ರಿಜರ್ವ್ ಫಂಡಿಗೆ ಸೇರಿದ ಮತ್ತು ಕ್ಷಾಮ ಮುಂತಾದ ಕಾಲದಲ್ಲಿ ವಿಶೇಷ ವ್ಯಯದಬಗ್ಗೆ ಅಲಾಹಿದಾ ಎತ್ತಿ ಇಡಲ್ಪಟ್ಟದ್ದ ಫ್ಯಾಮಿನ್ ಇನ್ಶ್ಯೂರೆನ್ಸ್ ಫಂಡಿಗೆ ಸೇರಿದ ಮೊಬಲಗುಗಳಂ ವಜಾಮಾಡಲಾಗಿ ಒಂಭತ್ತುಕೋಟಿ ರೂಪಾಯಿಗಳನಷ್ಟವು ಪ್ರಾಪ್ತವಾದಂತೆ ಸ್ಪಷ್ಟವಾಗುತಿದೆ. ಕ್ಷಾಮನಿಮಿತ್ತಕವಾದ ದ್ರವ್ಯವೆಲ್ಲ ವ್ಯಯಮಾಡುವದರಿಂದ ದುರ್ಭಿಕ್ಷಕಾಲದಲ್ಲಿ ಗವರ್ನಮೆಂಟಿನವರಿಗೆ ಮಹತ್ತರವಾದ ಕಷ್ಟವು ಪ್ರಾಪ್ತವಾಗದಿರಲಾರದು. ಸರ್ ೧೮೭೭ನೇ ಇಸವಿಯುಂದೀಚೆಗೆ ಪರಿಗಣನೀಯವಾದ ದುರ್ಭಿಕ್ಷವು ಹಿಂದಿನಂತೆ ಮರಳಿ ಪ್ರಾಪ್ತವಾಗದಿದ್ದಾಗ್ಯೂ ಕ್ಷಿಪ್ರದಲ್ಲಿಯೇ ಭಯಂಕರವಾದ ಮತ್ತೊಂದು ದುಷ್ಕಾಲವು ಪ್ರಾಪ್ತವಾಗುವ ಸಂಭವಗಳುಂಟಾಗಿವೆ. ಹ್ಯಾಗಂದರೆ, ಪ್ರತಿ ಹನ್ನೆರಡುವರುಷಗಳಿಗೊಂದಾವರ್ತಿ ತಪ್ಪದೆ ಕ್ಷಾಮವು ಸಂಭವಿಸುತಿದೆಂದು ನಮ್ಮ ಪೂರ್ವಾನುಭವಗಳಿಂದ ವ್ಯಕ್ತವಾಗುತಿದೆ. ಅಂತಾಕಾಲವು ಮರಳಿ ಸಂಭವಿಸಿದಾಗ ಫ್ಯಾಮಿನ್ ಫಂಡನ್ನು ಹೋಗಲಾಡಿಸಿಕೊಂಡ ಅಚಾತುರ್ಯಕ್ಕಾಗಿ ಗವರ್ನಮೆಂಟಿನವರು ಅಂತೆ ಸಂಕಟಪಡಬೇಕಾಗುವದು. ಇಂತಾಧನಸಹಾಯವಿದ್ದಾಗ್ಯೂ ಅದು ಸಹ ಸಾಲದೆಹೋಗಿ ಅನೇಕಲಕ್ಷ ಪ್ರಜೆಗಳು ಆಹಾರ ಹೀನರಾಗಿ ಮಲಗಿದ ಸ್ಥಳಗಳಲ್ಲಿಯೇ ತಮ್ಮಪ್ರಾಣಗಳಂ ತೊರೆವದಂ ನಾವುನೋಡುತಲಿರಬೇಕಾದವರಾದೆವು. ಮರಳಿ ಅಂತಾ ಪ್ರಾಣನಾಶವು ನಾವು ನೋಡಿ ಸಹಿಸಲಾರೆವು. ಮತ್ತು ತಾದೃಶ ನಷ್ಟಕ್ಕೆ ನಾವು ಲೇಶವೂ ಒಡಂಬಡಲಾಗದು. ಈ ಸ್ಥಿತಿಯಲ್ಲಿ ತೆಪರ್ಫ ಏರ್ಪಟ್ಟದ್ದ ಫಂಡನ್ನು ಸಹ ನಾವು ಕಳೆದುಕೊಂಡಬಳಿಕ ತಿಳಿಸಬೇಕಾದ್ದೇನಿದೆ. ಖಜಾನೆಯಲ್ಲಿ ಇಷ್ಟರಮೊಬಲಗು ಕಡಮೆಯಾಗಲಿಕ್ಕೆ ಕಾರಣ ಮಕುರಿತು ಇಲ್ಲಿ ಸ್ವಲ್ಪ ವಿಚಾರ ಮಾಡಬೇಕಾದದ್ದು ಆವಶ್ಯಕವೆಂದು ತೋರುತಿದೆ. ಬರ್ಮಾದೇಶೀಯರೊಡನೆ ಪ್ರಾಪ್ತವಾದ ಯುದ್ಧಖರ್ಚಿನಬಗ್ಗೆ, ವಾಯವ್ಯದಿಕ್ಕಿನ ಸರಹದ್ದುಪ್ರಾಂತದ ಬಂದೋಬಸ್ತಿಗಾಗಿಯೂ, ಮಿಲಿಟರಿ ಖರ್ಚನ್ನು ಜಾಸ್ತೀಮಾಡಿದಬಗ್ಗೆ ಮೇಲೆಕಂಡ ದ್ರವ್ಯವೆಲ್ಲ ಛಿನ್ನಾಭಿನ್ನವಾದಂತೆ ತೋರುತಿದೆ. ಇದುವಿನಾ ಮತ್ತಾವಕಾರಣವೂ ಊಹಿಸಲು ಸಾಧ್ಯವಲ್ಲವು. ಸೈನಿಕ ಖರ್ಚಿನಬಗ್ಗೆ ವ್ಯಯವಾಗಬೇಕಾಗಿದ್ದ ೧೬ ಕೋಟಿ ರೂಪಾಯಿಗಳಿಗೆ ಬದಲು ಈಗ ೨೦ ಕೋಟಿರೂಪಾಯಿಗಳತನಕ ಖರ್ಚು ಜಾಸ್ತೀಯಾಯಿತು. ಬರ್ಮಾದೇಶವು ತಹಬಂದಿಯೊಳು ತರುವದಕ್ಕೆ ಮೂವತ್ತು ಲಕ್ಷರೂಪಾಯಿಗಳಿಗಿಂತ ಅಧಿಕವಾಗಿ ಬೇಕಾಗಿರಲಿಲ್ಲವು. ಹೀಗಿದ್ದಾಗ್ಯೂ ಅದಕ್ಕಾಗಿ ಎರಡು ಕೋಟಿ ರೂಪಾಯಿಗಳು ವ್ಯರ್ಥಗೊಳಿಸಲ್ಪಟ್ಟವು. ಈ ನಷ್ಟವು ಭರ್ತಿಮಾಡುವದಕ್ಕಾಗಿ ಇಂಡ್ಯಾಗವರ್ನಮೆಂಟಿನವರು ಫ್ಯಾಮಿನ್‌ಫಂಡನ್ನು ಪ್ರತ್ಯೇಕಿಸಿಡುತಿದ್ದ ಪದ್ಧತಿಯಂ ತಪ್ಪಿಸಿ ತತ್ಪ್ರಯುಕ್ತವಾದ ನ್ಯೂನತೆಯಂ ನಮ್ಮಕ್‌ತೆರಿಗೆಯಂ ವೃದ್ಧಿಗೊಳಿಸಿದ್ದರಮೂಲಕ ನಿವೃತ್ತಿಗೊಳಿಸಲುದ್ಯಮಿಸಿರುವಂತೆ ಕಾಣುತಿದೆ. ಗವರ್ನಮೆಂಟಿನವರ ಸದರೀ ಯೆರಡುಕಾರ್ಯಗಳೂ ಇಂಡ್ಯಾದೇಶೀಯರಿಗೆ ಮಿತಿಯಿಲ್ಲದ ಶ್ರಮವನ್ನುಂಟುಮಾಡತಕ್ಕವಾಗಿರುತಿವೆ. ಕ್ಷಾಮಪ್ರಯುಕ್ತಗಳಾದ ವಿಶೇಷ ಖರ್ಚುಗಳನ್ನೆಲ್ಲ ಪುರೋದೃಷ್ಟಿಯಿಲ್ಲದೆ ಸಾಮಾನ್ಯ ಖರ್ಚುಗಳೊಡನೆ ಸೇರಿಸುವದರಿಂದ ಒದಗುವ ಸಂಕಟಗಳು ಪ್ರಬಲಗಳಾಗಿರುವಂತೆ ಹಿಂದೆಯೇ ತಿಳಿಸಿರುತ್ತೇವೆ. ಇಂಡ್ಯಾದೇಶಕ್ಕೆ ರಫ್ತಾಗುವ ಬಾ ಎಲೆಮೇಲಿನ ತೆರಿಗೆಯನ್ನು ಸಹ ಜಾಸ್ತೀ ಮಾಡಿದ್ದಾದರೆ ಆಗ ಅಲ್ಲಿನ ಪ್ರಜೆಗಳ ದೌರ್ಭಾಗ್ಯವನ್ನೂ ಅವರ ದುಷ್ಪರಿಣಾಮವನ್ನೂ ನಾವೇ ಸಾಕ್ಷಾತ್ತಾಗಿ ವಿವರಿಸಿ ತಿಳಿಸಬೇಕಾಗಿರಲಾರದು. ಇವರಂತೆಯೇ ಉಪ್ಪಿನತೆರಿಗೆಯನ್ನು ಹೆಚ್ಚಿಸಿದ್ದರಿಂದ ಇಂಡ್ಯಾದೇಶೀಯರಲ್ಲಿ ಬಹಳ ರಿಕ್ತರಾದವರು ಅನುಭವಿಸಬಹುದಾದ ಶ್ರಮವೂ ಮನೋವ್ಯಥೆಯೂ [illegible]ಯಕೂಡದ್ದಾಗಿರುವವು. ಇಂಡ್ಯಾದೇಶದ ಪ್ರಭುತ್ವವು ಕೆಲವುಬಾಬಿಗಳಲ್ಲಾದರೂ, ಅಲ್ಲಿನ ಪ್ರಜೆಗಳ ಆಧೀನದೊಳಿರುತಲಿದ್ದರೆ ಅವರು, ಅನ್ಯದೇಶಗಳಿಂದ ತಮ್ಮದೇಶಕ್ಕೆ ಬರುವ ಹ[illegible]ಬಟ್ಟೆಗಳಿಗೆ ಸ್ವಲ್ಪಮಟ್ಟಿಗಾದರೂ ತೆರಿಗೆ [illegible]ಲ್ಲಾಮಡೆ ಇದ್ದಿರಲಾರರು. ಇದರಿಂದ ಬಡವರಾದವರಿಗೇನೂ ಬಾಧಕ ವುಂಟಾಗಲಾರದು. ಅವುಗಳ ಕ್ರಯದಮೇಲೆ ನೇಕಡಾ ೧೦ ರೂಪಾಯಿಗಳಪ್ರಕಾರ ಗವರ್ನಮೆಂಟಿನವರು ತೆರಿಗೆ ವಸೂಲ್ಮಾಡಿದ್ದಾಗ್ಯೂ ಇದುವರಿವಿಗೆ ಸರ್ಕಾರ್ ಖಜಾನೆಯಲ್ಲಿ ಅಥವಾ ಪಕ್ಷ ನಾಲ್ಕೈದುಕೋಟಿ ರೂಪಾಯಿಗಳಿಗೆ ಕಡಮೆಯಾಗಿದ್ದಲಾರದು. ಆದರೆ ಏನುಮಾಡುವದು. ಇದುಕಾರಣ ನಾವು ಪ್ರಸ್ತಾಪಿಸಿದಕೂಡಲೇ ಮ್ಯಾಂಚೆಸ್ಟರ್ ರಾಜ್ಯದ ವ್ಯಾಪಾರಸ್ಥರವರಿಗೆ ಕಣ್ಣುಗಳು ಕೆಂಪಗಾಗುತಿವೆ. ಅವರಿಗೆ ವಿರುದ್ಧವಾಗಿ ವರ್ತಿಸಲಿಕ್ಕೆ ಗವರ್ನಮೆಂಟಿನವರಿಗೆ ಧೈರ್ಯ ಸಾಲದೆಂದು ತೋರುತಿದೆ. ಆದರೆ ಈವಿಚಾರದ ಅವರಿಗೆ ಅಪಮರ್ಕವೆಂದು ಭಾವಿಸಿಯಾಗಲಿ, ನಷ್ಟಕರವೆಂದು ತಿಳಿದಾಗಲಿ ವರ್ತಿಸುವದು ನಮಗೆ ಸುತರಾಂ ಸರಿಯಲ್ಲವು. ಯಾತಕ್ಕೆಂದರೆ ನಾವು ಇಂಡ್ಯಾದೇಶವನ್ನು ತದ್ದೇಶೀಯರ ಸುಖ ಸಂತೋಷಾಭಿವೃದ್ಧಿಗಾಗಿ ಪಾಲಿಸುತ್ತೇವೆಯೇ ಹೊರತು ಮ್ಯಾಂಚೆಸ್ಟರ್ ತುಕಡಿಯ ಪ್ರಜೆಗಳ ಶ್ರೇಯೋಭಿವೃದ್ಧಿಯನ್ನುದ್ದೇಶಿಸಿ ಪ್ರಭುತ್ವ ಮಾಡತಕ್ಕವರಲ್ಲವು. ಒಂದುವೇಳೆ ಅಂತಾಭಾವ ನಮಗುಂಟಾಗಿದ್ದಾಗ್ಯೂ ಅದು ಸರಿಯಾದದ್ದೆಂದು ಭಾವಿಸಲಾಗದು. ಈ ಭಾಗದೊಳಾದರೂ ಇಂಡ್ಯಾದೇಶೀಯರಿಗೆ ಅಲ್ಲಿನ ರಾಜ್ಯಾಡಳಿತದಲ್ಲಿ ವಿಶೇಷ ಸ್ವಾತಂತ್ರ್ಯವೂ, ಜವಾಬ್ದಾರೀಯುಳ್ಳ ಅಧಿಕಾರವೂ ದೊರೆಯಬೇಕಾಗಿರುತಿವೆ. ಅಥವಾ ಪಾರ್ಲಿಮೆಂಟಿನವರಾದರೂ ಅವರ ಸುಖ ದುಃಖಗಳೇ ತಮ್ಮವೆಂದು ಭಾವಿಸಿ ಅವರ ಹಿತಾರ್ಥಯಾ[illegible]ಯುಕ್ತಗಳ ನ್ಯಾಲೋಚಿಸುತಲಿರಬೇಕು. ನಾನು ಈಚೆಗೆ ಇಂಡ್ಯಾದೇಶಕ್ಕೆ ಹೋಗಿದ್ದಕಾಲದೊಳು ಅಲ್ಲಿ ನನಗೆ ಕಂಡುಬಂದದ್ದೇನಂದರೆ— ಹಿಂದೂಗಳು ನಮ್ಮ ಪ್ರಭುತ್ವಕ್ಕಾಗಿ ಬಹಳಪೇಕ್ಷಿಸುತ್ತಾರೆ. ನಮ್ಮದೇಶವು ಬಹಳ ದಾರಿದ್ರ್ಯ ಸ್ಥಿತಿಯೊಳಿರುತಲಿದ್ದರೂ ಗವರ್ನಮೆಂಟಿನವರು [illegible] ಮನಸ್ಸೀ ದುಬಾರಿ ಖರ್ಚು ಮಾಡುತಲಿರುತಾರೆಂದು ಅಲ್ಲಿನವರು ಹೇಳುವಮಾತುಗಳಂ [illegible] ಸರಿಯಲ್ಲವು. ಪ್ರಜೆಗಳಿಗೆ ದ್ರವ್ಯಾರ್ಜನೆಯು ಬಹಳ ಅಲ್ಪವಾಗಿರುವದರಿಂ[illegible] ಮುಂತಾದ ಸಂಕಟಕಾಲಗಳಲ್ಲಿ ಅವರವರು ತಮ್ಮ ಆತ್ಮರಕ್ಷಣೆಮಾಡಿಕೊಳ್ಳುವದೇ ಬಹಳ ಶ್ರಮಸಾಧ್ಯವಾಗಿರುತಿದೆ. ಅಜಮಾಯಿಷಿ ಮಾಡಿ ನೋಡಿದ್ದರಲ್ಲಿ ಪ್ರತಿಮನುಷ್ಯನ ಒಂದು ವರುಷದ ಸಂಪಾದನೆಯು ೨೫ ರೂಪಾಯಿಗಳಿಗೆ ಮೇಲ್ಪಟ್ಟಿಲ್ಲವು. ಯೂರೋಪಿಯನ್ನವರಲ್ಲಿ ಅತ್ಯಂತ ರಿಕ್ತರೆಂದು ಭಾವಿಸಲ್ಪಟ್ಟಿರುವ ಐರ್ಲ್ಯಾಂಡ್ ಮತ್ತು ರಷ್ಯಾದೇಶೀಯರ ಸಾಲೀಯಾನಾ ಸಂಪಾದ್ಯಕ್ಕಿಂತ ಹಿಂದೂಜನರ ಆಮದಿಯು ಬಹಳ ಕಡಮೆಯಾದದ್ದಾಗಿರುತಿದೆ. ಇದರಿಂದಲೇ ಇಂಡ್ಯಾದೇಶವು ಎಷ್ಟು ರಿಕ್ತ ದಶೆಯೊಳಿರುವದೋ ಅದು ಇಲ್ಲಿ ನೆರದಿರುವ ದೊಡ್ಡಮನುಷ್ಯರೆಲ್ಲರೂ ಚನ್ನಾಗಿ ಆಲೋಚಿಸಬಹುದೆಂಬದು. ಹೀಗೆಯೇ ಮಿ|| ಸ್ಮಿತ್‌ಯವರು ಬ್ರಿಟಿಷ್ ಆಳ್ವಿಕೆಯಿಂದ ಇಂಡ್ಯಾದೇಶೀಯರಿಗೆ ಉಂಟಾಗುತಲಿರುವ ನಾನಾವಿಧ ಸಂಕಟಗಳನ್ನು ತಕ್ಕ ದೃಷ್ಟಾಂತಗಳೊಡನೆ ಉಪಪಾದಿಸಿ ತಿಳಿಸಿದರು.

BANGALORE:—Printed and published for the Proprietor at the KARNATIC Press – 1888.

ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA.

ಪ್ರತಿ ಸೋಮವಾರ ಪ್ರಾತಃಕಾಲದಲ್ಲಿ ಪ್ರಕಟಿಸಲ್ಪಡುವದು.

Published every Monday Morning.

[illegible]

Vol. XV.] BANGALORE—MONDAY, 9, APRIL 1888. [No. 14.

ಸಂಪುಟ ೧೫.] ಬೆಂಗಳೂರು:—ಸನ್ ೧೮೮೮ನೇ ಇಸವಿ ಏಪ್ರೈಲ್ ೯ನೇ ತಾರೀಖ್ ಸೋಮವಾರ. [ಸಂಚಿಕೆ ೧೪.

ಕರ್ಣಾಟಕ ಪ್ರಕಾಶಿಕಾ

ಪತ್ರಿಕೆಯ ಚಂದಾ ದರಗಳು,
೧೮೮೮ನೇ ಇಸವಿ ಜನವರಿಯಿಂದ
ಕಡಮೆಮಾಡಲ್ಪಟ್ಟಿರುತಿವೆ.

ಈ ಪತ್ರಿಕೆಯ ಚಂದಾದಾರರಲ್ಲಿ ಅನೇಕರ ಅಪೇಕ್ಷೆಯನ್ನು ನೆರವೇರಿಸುವ ಉದ್ದೇಶದಿಂದಲೂ, ಪರಿಮಿತವಾದ ಆದಾಯವುಳ್ಳವರಿಗೆಲ್ಲ ಈ ಪತ್ರಿಕೆಯು ಸುಲಭವಾಗಿ ಲಭಿಸುವಂತಿರಬೇಕೆಂಬ ಅಭಿಪ್ರಾಯದಿಂದಲೂ ಇದರ ಚಂದಾದರವನ್ನು ಇದರಡಿಯಂತೆ ಕಡಮೆಮಾಡಿರುತ್ತೇವೆಂತೆಂದರೆ —

ಇಂಗ್ಲಿಷ್ ಮತ್ತು ಕನ್ನಡಭಾಗಗಳಿಗೆ.

	ಮುಂಗಡವಾಗಿ	ಹಿಂದುಗಡೆಯಾಗಿ
12 ತಿಂಗಳಿಗೆ	5—0—0	9—0—0
6 ,,	4—0—0	4—8—0
3 ,,	2—5—0	2—8—0

ಇಂಗ್ಲಿಷ್ ಅಥವಾ ಕನ್ನಡಭಾಗಗಳಿಗೆ.

	ಮುಂಗಡವಾಗಿ	ಹಿಂದುಗಡೆಯಾಗಿ
12 ತಿಂಗಳಿಗೆ	4—0—0	5—0—0
6 ,,	2—0—0	2—8—0
3 ,,	1—4—0	1—8—0

ಷರಾ—ಅಂಚೆ ಮೊತ್ತನಿಗಳು, [illegible] ಸ್ಕೂಲುಮಾಸ್ಟರುಗಳು, [illegible], ವಿದ್ಯಾರ್ಥಿಗಳು, [illegible] ಈ ಪತ್ರಿಕೆಯು [illegible] ಕೊಡಲ್ಪಡುವದು [illegible]

ಪ್ರಕಟಣೆಯ ರಿವಾಜೆ.

ಮೊದಲನೆಸಾರಿ ಪಂಕ್ತಿ ಒಂದಕ್ಕೆ ೦—೩—೦
ಎರಡನೆಯದಾಗಾ ಪಂಕ್ತಿ ಒಂದಕ್ಕೆ ೦—೧—೦

ಷರಾ—[illegible]

"IT RECOMENDS ITS ELF"

ALL WHO SUFFER FIND SURE RELIEF

LITTLE'S

ORIENTAL BALM

THE MOST EFFECTUAL MODERN REMEDY FOR PAIN.

ಲಿಟಲ್ ಸಾಹೇಬರಿಂದ ತಯಾರಾದ [illegible] "ಓರಿಯಂಟಲ್ ಬಾಮ್" ಎಂಬ ಪೂರ್ವದೇಶ ಸಂಬಂಧವಾದ ಅಮೂಲ್ಯ ತೈಲವು ಸ್ವಶಕ್ತಿ ಪ್ರಕಾಶಕವಾದದ್ದು, ಮತ್ತು ಸಕಲವಾದ ನವೀನ ಪ್ರಸಿದ್ಧಿಗೆ ಪಾತ್ರವಾದ ಔಷಧವು. [illegible] ತೈಲವನ್ನು [illegible] ಈ ತೈಲವು ಅದ್ಭುತವಾದ ಮತ್ತು ಶೀಘ್ರವಾದ ಸಂಪೂರ್ಣ ಗುಣವನ್ನುಂಟುಮಾಡುವದು. ಅದ್ಭುತವಾದ ಈ ಔಷಧವನ್ನು [illegible] ಈ ತೈಲವು ಶೀತ [illegible] ಪ್ರಯಾಣಿಕರು, ಬೇಟೆಯಾಡುವವರು, [illegible] ಮುಂತಾದವರಿಗೆಲ್ಲ ಉಪಯುಕ್ತವಾದದ್ದು.

ಪರಿಶೀಲಕರ ಅಭಿಪ್ರಾಯವು.

[illegible] ದೇಶದ ಫಾರ್ಮಸ್ಯೂಟಿಕಲ್ ಸೊಸೈಟಿಯ [illegible] ಸಿ. ಆರ್. ಟಿಚ್‌ಬೋರ್ನ್ (C. R. TICHBORNE, L. L. D., F. C. S., M. R. I. A.,) [illegible]

ಇದರ ಕೈ ಸೀಸೆ ಒಂದಕ್ಕೆ ೧ ರೂಪಾಯಿ.

[illegible] ಮದರಾಸ್ [illegible] ನಂಬರ್ [illegible] ದೊರೆಯುವದು

AGENTS—Messrs, T. West, Chemist, &c, Bangalore.
Captain & Co. Chemists, Bangalore.
Binns & Co, Chemists, Bangalore, and of
Mahomed Yousuf and Sons, The Cash Bazar, Bangalore,
A. C. Barkyne & Co,
20 Sambodoss Street Madras

ನೋಟಿಸ್.

ದಕ್ಷಿಣ ಮಹರಾಷ್ಟ್ರ ರೆಯಿಲ್ವೆ ಕಂಪನಿ.
ಮೈಸೂರು ಶಾಖೆ.

ಇದರಿಂದ ಸಮಸ್ತಜನರಿಗೂ ತಿಳಿಸುವದೇನಂದರೆ:—

ಸನ್ ೧೮೮೮ನೇ ಇಸವಿ ಜನವರಿ ೧ನೇ ತಾರೀಖಿನಿಂದ ಮೊದಲು ಒಂದು ವರುಷ ಕಾಲದವರೆಗೆ, [illegible] ಈ ಕೆಳಗೆ ತಿಳಿಸುವ ಸ್ಟೇಷನುಗಳಲ್ಲಿ ಮತ್ತು [illegible] ದರಖಾಸ್ತುಗಳ ಮುಂದಿನ ತಿಂಗಳ ೧೫ನೇ ತಾರೀಖಿನವರೆಗೂ ಇದರಡಿ ರುಜು ಮಾಡುವವರಿಂದ ಬರಮಾಡಿಕೊಳ್ಳಲ್ಪಡುವದು.

ಮೈಸೂರು	150	ಖಂಡಗಳು, ತಿಂಗಳೊಂದಕ್ಕೆ	
ಮದ್ದೂರು	100	,,	,,
ಬಿಡದಿ	250	,,	,,
ಹಿರಿಸಾವೆ	200	,,	,,
ಸುಬ್ರಹ್ಮಣ್ಯ ಅಥವಾ ಕೆರೆಯೂ ಮಧ್ಯೆ	300	,,	,,

೨. ಸದರೀ ಸರಬರಾಯಿಯು, ಈಗ ಜಾರಿಯಲ್ಲಿರುವ ಷರತ್ತುಗಳ ತಪಸೀಲ್ ಪಟ್ಟಿಗೆ ಅನುಗುಣವಾಗಿರಬೇಕು. ಅದರ ಕಾಪಿ ಬೇಕಾದವರು ಇದರಡಿ ರುಜು ಮಾಡಿರುವವರ ಆಫೀಸಿನಿಂದ ಪಡೆಯಬಹುದು

೩. ಸೌದೆಯ ದರದಲ್ಲಿ ಸುಂಕ ಸೇರಿ ಅಥವಾ ಸೇರದೆ ಇರಬಹುದು

೪. ಪ್ರತಿಯೊಂದು ದರಖಾಸ್ತಿನ ಸಂಗಡಲೂ, ನಗದಾಗಲಿ ಕರೆನ್ಸಿ ನೋಟಾಗಲಿ, ೧೦೦ ರೂಪಾಯಿಗಳ ಡಿಪಾಜಿಟು ಹಾಜರಿರಬೇಕು.

೫. ಯಾರ ದರಖಾಸ್ತು ಮಂಜೂರಾಗಲ್ಪಡುತ್ತದೆಯೊ ಅಂತವನು ಮುಂದೆ ಗೊತ್ತುಮಾಡಲ್ಪಡುವ ಕಾಲದೊಳಗಾಗಿ ೨೦೦೦ ರೂಪಾಯಿಗಳಿಗೆ ಜಾಮೀನ್ ಕೊಟ್ಟು ಕಂಟ್ರಾಕ್ಟು ಮುಚ್ಚಳಿಕೆ ಬರೆದು ಕೊಡಬೇಕು. ಆತನು ಹಾಗೆಮಾಡುವದಕ್ಕೆ ತಪ್ಪಿದರೆ ಆತನ ಡಿಪಾಜಿಟ್ ಬಾಬತು ೧೦೦ ರೂಪಾಯಿಗಳು ಕಂಪೆನಿಗೆ ದಂಡವಾಗಿ ಸೇರಿಸಿಕೊಳ್ಳಲ್ಪಡುವದು. ಮಂಜೂರಾಗದ ದರಖಾಸ್ತುದಾರರ ಡಿಪಾಜಿಟ್ ರೂಪಾಯಿಗಳು ಅವರವರಿಗೆ ವಾಪಸ್ ಕೊಡಲ್ಪಡುವವು.

೬. ಯಾವದರಖಾಸ್ತು ತಿರಸ್ಕರಿಸಲ್ಪಟ್ಟಾಗ್ಯೂ ಅದಕ್ಕೆ ಕಾರಣ ತಿಳಿಸಲ್ಪಡಲಾರದು

೭. ದರಖಾಸ್ತುಗಳನ್ನು ಸೀಲ್ ಮಾಡಿ ಅದರ ಲಕೋಟೆಯಲ್ಲಿ (ದಕ್ಷಿಣ ಮಹಾರಾಷ್ಟ್ರ) ರೆಯಿಲ್ವೆ ಪೈಕಿ ಮೈಸೂರು ಸ್ಟೇಟ್ ರೆಯಿಲ್ವೆ [redacted] ಸೌದೆಯ ಸರಬರಾಯಿ ಬಗ್ಗೆ ದರಖಾಸ್ತು ಎಂದು ಬರೆಯತಕ್ಕದ್ದು.

Bangalore. 6—4—88.

A. G. MOLLOY,
Locomotive Supdt.,
Mysore Section

NOTICE.

VAIDYASARA SANGRAHA

A TREATISE ON THE PRINCIPLES OF

HINDU MEDICINE

Price including Postage Rs 5 6 0

ವೈದ್ಯಸಾರ ಸಂಗ್ರಹ.

ಈಗ್ರಂಥಾಪೇಕ್ಷೆಯುಳ್ಳವರು ಮೊಬಲಗಿನೊಡನೆ ಈ ಕೆಳಗೆ ರುಜುಮಾಡಿರತಕ್ಕವರ ಹೆಸರಿಗೆ ಬರೆದುಕೊಂಡರೆ ಪುಸ್ತಕ ಕೂಡಲೇ ಕಳುಹಿಸಲ್ಪಡುವದು. ಮೊಬಲಗು ಇಲ್ಲದ ದರಖಾಸ್ತುಗಳಿಗೆ ಸುತರಾಂ ನಿಗೆಕೊಡಲ್ಪಡಲಾರದು.

ಇದರಕ್ರಯ ... ...ರೂ॥ ೫—೦—೦
ಪ್ಯಾಕಿಂಗ್ ಮತ್ತು ಅಂಚೆಹಾಸಲ್, ೦—೬—೦

ಟಿ. ಬಿ. ವೆಂಕಟಾಚಾರ್,
ಆಸ್ಪತ್ರಿರೋಡ್ ಬೆಂಗಳೂರು.

ವಿಶೇಷ ಪತ್ರಕಾರ

ಪ್ರತಿ ಚಿತ್ರಶಾಲೆಯಲ್ಲಿ [illegible] ಹಿಂದೂ ದೇವರುಗಳು, [illegible] ಚಿತ್ರಗಳು [illegible] ಕಳುಹಿಸಲ್ಪಡುವದು.

ಪೂನೆ ಮಧ್ಯೆ ಚಿತ್ರಶಾಲೆಯ ಮ್ಯಾನೇಜರ್

ನೋಟಿಸ್.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ:—

ಸನ್ ೧೮೮೮ನೇ ಇಸವಿ ಏಪ್ರಿಲ್ ಗುರ್ರೀ ತಾರೀಖು ಮೊದಲು ಇದರಡಿ ತಿಳಿಸಲ್ಪಡುವ ಷರತ್ತುಗಳಿಗೆ ಒಳಪಟ್ಟು, ಬೆಂಗಳೂರು ಮಿಲಿಟರಿ ಸ್ಟೇಷನ್ ನಿವಾಸಿಗಳಿಗೆ, ಸರ್ಕಾರೀ ಬಾಬತು ಹೇರುವ ಎತ್ತುಗಳು ಬಾಡಿಗೆಗೆ ಸಿಕ್ಕುವವು.

೧. ಪ್ರೂರಾ ಒಂದು ಜತೆ ಎತ್ತುಗಳನ್ನು ಒಬ್ಬ ಎತ್ತಿನವನನ್ನೂ ಪಡೆಯಬೇಕು.

೨. ಹಾಗೆ ಪಡೆಕೊಳ್ಳುವ ಎತ್ತುಗಳನ್ನು ಪ್ರತಿ ತಿಂಗಳ ಆಖೈರ್ ತಾರೀಖಿನಲ್ಲಿ ಅಜಮಾಯಿಷೀ ಬಗ್ಗೆ ಬ್ಯಾರಕ್ಸ್ ಪ್ರೋಟೆಕ್ಟ್ ಇಲಾಖೆಗೆ ಕಳುಹಿಸಬೇಕು. ತಿಂಗಳ ಕಡೇಚಿನ ಆದಿತ್ಯವಾರ ವಾಗುವ ಪಕ್ಷದಲ್ಲಿ ಮಾರನೇ ತಿಂಗಳ ಗುರ್ರೀ ತಾರೀಖಿನಲ್ಲಿ ಅಜಮಾಯಿಷೀಮಾಡಲ್ಪಡುವದು. ಪ್ರತಿಯೊಂದು ಹೇರುವ ಎತ್ತಿಗೂ ಮಾಹೆಯಾ

೨ ರೂಪಾಯಿಗಳು ಅಥವಾ ನೆಟ್ಟಗೆ ೩೫ ರೂಪಾಯಿಗಳು.

೪. ಬಾಪಿಗೇ ಹಣ ಪೂರದನೇ ತಿಂಗಳ ೫ನೇ ತಾರೀಖಿನಲ್ಲಿ ಇದರಡಿ ರುಜು ಮಾಡಿರುವವರಿಗೆ ಈ ಆಫೀಸಿನಿಂದ ಬಿಲ್ಲು ಬಂದ ಕೂಡಲೇ ಪಾವತೀ ಮಾಡತಕ್ಕದ್ದು.

೫. ಬಾಡಿಗೆಗೆ ಕೊಡಲ್ಪಡುವ ಯೆತ್ತುಗಳನ್ನಾಗಲಿ ಅಥವಾ ಅವುಗಳ ಪೈಕಿ ಯಾವದನ್ನಾದರೂ ಗವರ್ನಮೆಂಟು ಕೆಲಸಕ್ಕೆ ಬೇಕಾದಾಗ ವಾಪಸ್ ತರಿಸಿಕೊಳ್ಳುವದಕ್ಕೆ ಇದರಡಿ ರುಜು ಮಾಡಿರುವವರು ಸ್ವಾತಂತ್ರ್ಯವುಳ್ಳವರಾಗಿರುತ್ತಾರೆ.

ಎಗ್ಸಿಕ್ಯುಟಿವ್ ಕಮ್ಮಿಸರಿಯಾಟ್ ಆಫೀಸ್,
ಟ್ರಾನ್ಸ್‌ಪೋರ್ಟ್ ಸೆಕ್ಷನ್,
ಬೆಂಗಳೂರು, ೭—೪—೮೮.

E. A. Bruce,
Colonel

ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA.

MONDAY, APRIL 9, 1888.

೧೮೮೮ನೇ ಏಪ್ರಿಲ್ ೯ನೇ ತಾ|| ಸೋಮವಾರ.

A STUDENTS' HOME.

ಅನ್ಯದೇಶಗಳಿಂದ ಈ ಊರಿಗೆ ಬಂದು ವಿದ್ಯಾಭ್ಯಾಸ ಮಾಡುತಲಿರತಕ್ಕ ಬಾಲಕರಿಗಿಲ್ಲಿ ಅನ್ನಪಾನಾದಿಗಳಿಗೆ ತಕ್ಕ ಅನುಕೂಲ್ಯವಿಲ್ಲದೆ ಇರುವದರಿಂದ ಅವರಪೈಕಿ ಅನೇಕರು ಹೋಟಲುಗಳಲ್ಲಿ ಕ್ರಯವಿತ್ತು ಭೋಜನ ಗೈಯುತ ಕಾಲವ ಕಳೆಯುತಲಿದಾರೆ. ಇಂತಾ ವಿಕ್ರೀತಾನ್ನವು ಸಹಸಕಾಲದಲ್ಲಿ ದೊರೆಯದೆಯೂ, ದೊರೆತವು ಅಪಕ್ವಾತಿ ಪಕ್ವಗಳಿಂದ ಕಾಲಾಂತರದಲ್ಲಿ ಪ್ರಾಪ್ತವಾಗಬಹುದಾದ ರೋಗೋಪದ್ರವಗಳಂ ಕೂಡಲೇ ತರಿಸಲಿಕ್ಕೆ ಶಕ್ತವಾದವಾಗಿಯೂ, ಇರುವದಂ ಕಂಡು ಇಲ್ಲಿನ ಸೆಂಟ್ರಲ್ ಕಾಲೇಜ್ ಪ್ರಿನ್ಸಿಪಲರಾದ ಮೆ|| ಕೂಕ್‌ಯವರು, ವಿದ್ಯಾರ್ಥಿಗಳ್ಗೆ ಭೋಜನ ವಿದ್ಯಾಭ್ಯಾಸಾದಿಗಳಿಗೆಲ್ಲ ನಿಯತವಾಗಿ ವಸತಿಯಂ ಕಲ್ಪಿಸಬೇಕೆಂಬ ಆಲೋಚನೆಯುಳ್ಳವರಾಗಿ ಒಂದು ಸ್ಟೂಡೆಂಟ್ಸ್ ಹೋಂ ಎಂಬ ವಿದ್ಯಾರ್ಥ್ಯಾಲಯವಂ ಸ್ಥಾಪಿಸಬೇಕೆಂದು ಜ್ಯೂಬಿಲೀ ಉತ್ಸವ ಕಾಲದಲ್ಲಿಯೇ ಸೂಚಿಸಿದ್ದರು. ಆಗ್ಯೆ ಅದಕ್ಕೆ ಅನೇಕರು ನಿಗೇಕೊಡದೆ ಹೋದರು. ವಿದ್ಯಾಭ್ಯಾಸದ ಇಲಾಖೆಯಲ್ಲಿ ಜ್ಯೂಬಿಲಿ ಫಂಡ ಬಾಬತು ಕೆಲವುವೊಬಲಗು ಅನುಪಯುಕ್ತವಾಗಿರುವದರಿಂದ ಅದಂ ಈಗ ಸಾರ್ಥಕಪಡಿಸಬೇಕೆಂದರೆ ಅದಕ್ಕೆ ಪ್ರಸಕ್ತ ಏರ್ಪಾಡು ಬಹಳ ಶ್ಲಾಘ್ಯವಾದದ್ದೆಂದು ಅನೇಕರು ಅಭಿಪ್ರಾಯಪಟ್ಟದರಮೇಲೆ ಇಲ್ಲಿನ ಡಿಸ್ಟ್ರಿಕ್ಟು ಆಫಿಸಿಗೆ ಸೇರಿದಂತಿರುವ ಡಿಸ್ಟ್ರಿಕ್ಟು ಛಾಕಟ ಈಗ ಖಾಲಿಯಾಗಿರುವದರಿಂದ ಸದರೀ ಭಾಗವನ್ನು ಏತದರ್ಥ ವಿನಿಯೋಗಿಸಿಕೊಳ್ಳಲಿಕ್ಕೆ ಹುಕುಂ ಕೊಡಬೇಕೆಂಬದಾಗಿಯೂ, ಇದಕ್ಕೆ ಬೇಕಾದ ದ್ರವ್ಯಸಹಾಯಮಾಡಬೇಕೆಂತಲೂ, ಗವರ್ನಮೆಂಟಿನವರನ್ನು ಕೇಳಿದವರಾದರು ಅವರು ಅದಕ್ಕೆ ಸಮ್ಮತಿಸಿ ಸದರೀ ಕಟ್ಟಡವನ್ನು ಕೊಟ್ಟದರಿಂದ ಮೆ|| ಕೂಕ್‌ಯವರೂ ರಾಯಬಹದೂರ್ ಮೈ|| ಶ್ರೀನಿವಾಸಾಚಾರ್ಯರವರೂ, ಅಲ್ಲಿಗೆ ಹೋಗಿ ಅಜಮಾಯಿಷೀ ಮಾಡಿಕೊಂಡು ಬಂದರೆಂದು ತಿಳಿಯಲಾದೆವು. ಈ ವಿದ್ಯಾರ್ಥ್ಯಾಲಯವು ಕ್ಷಿಪ್ರದಲ್ಲಿಯೇ ಏರ್ಪಾಡಾಗಿ ಬಾಲಕರಿಗೆ ಬೇಕಾದ ಅನುಕೂಲ್ಯಗಳುಂಟುಮಾಡಲ್ಪಡುವದೆಂದು ಕೇಳಲಿಕ್ಕೆ ನಾವು ಬಹಳ ಸಂತೋಷಿಸುತ್ತೇವೆ. ಇಷ್ಟುದೊಡ್ಡ ಪಟ್ಟಣದಲ್ಲಿ ಮೇಲೆಕಂಡಂತಾ ಗೃಹವೊಂದು ಇದುವರಿವಿಗೆ ಏರ್ಪಡದೇ ಇದ್ದದ್ದು ಬಹಳಲೋಪವಾಗಿತ್ತು. ಅಂತಾ ಲೋಪಪರಿಹಾರವಾಗುವ ಕಾಲವನ್ನು ಶ್ರೀಹರಿ ಈಗ ಘಟಯಿಸಿದ್ದಕ್ಕಾಗಿ ಆತನಲ್ಲೆಲ್ಲರೂ ಕೃತಜ್ಞರಾಗಿರಬೇಕು. ಈಗ ಏರ್ಪಡತಕ್ಕ ವಿದ್ಯಾರ್ಥ್ಯಾಲಯದಿಂದ ಬಾಲಕರಿಗೆ ಉದ್ದಿಷ್ಟ ಪ್ರಯೋಜನಗಳೇನಾದರು ಸಿದ್ಧಿಸಬೇಕಾಗಿದ್ದರೆ ಅವು ಅದರ ವಿಚಾರಣಾಧಿಕಾರಿಗಳಾಗಿ ಏರ್ಪಡತಕ್ಕವರ ಅಧೀನಗಳಾಗಿರುವವು. ಅದರಲ್ಲಿ ಫಲವು ನಿರೀಕ್ಷಿಸಿ ಹೊಂದುವವರೆಲ್ಲರೂ, ಪ್ರಾಯಶಃ ಪರಸ್ಪರ ವಿದೇಶೀಯರಾಗಿಯೂ, ವಿಜಾತೀಯರಾಗಿಯೂ, ವಿಮತಸ್ಥರಾಗಿಯೂ, ವಿಜನರಾಗಿಯೂ ಇರುವದರಿಂದ ಅವರ ಜಾತಿ ಮತನಿಯಮಗಳಿಗೆ, ಈಗಲೆ ತಲೆದೋರಿರುವ ಹ್ರಾಸಕ್ಕೆ ಮತ್ತಷ್ಟು ಸಹಕಾರಿಗಳಾಗಿರದೆ ಅವು ಆಂತರವಾದ ಶ್ರದ್ಧಾ ಭಕ್ತಿಯೊಡನೆ ಕಾಪಾಡಬೇಕೆಂಬ ಕೋರಿಕೆಯುಳ್ಳವರನ್ನು ವಿಚಾರಣಾಧಿಕಾರಿಯಾಗಿ ನೇಮಕಮಾಡಿದಪಕ್ಷಕ್ಕೆ ಅದಿಲ್ಲದ್ದರಿಂದ ಇದುವರಿವಿಗೆ ಲಭಿಸಿದಫಲವೇನುಂದೆಯೂ ಸಿದ್ಧಿಸಬಹುದು. ಮುಖ್ಯವಾಗಿ ಇದರವಿಚಾರಣೆ ಮಾಡತಕ್ಕವರು ನೇಟೀವಾಗಿಯೂ, ಇತರ ವಿಧಗಲಾಟೆಗಳಿಲ್ಲದವರಾಗಿಯೂ, ಬಾಲಕರ ಭಿನ್ನಸ್ವಭಾವಗಳಿಗೆ ತಕ್ಕಂತೆ ವರ್ತಿಸಿ ಅವರಿಗೆ ಸಂತೋಷವನ್ನುಂಟುಮಾಡತಕ್ಕವರಾಗಿಯೂ, ತಮಗೆ ನಿಯಮಿಸಲ್ಪಟ್ಟ ಕಾರ್ಯದಲ್ಲಿ ನಿರೂಢವಾದ ಶ್ರದ್ಧೆಯುಳ್ಳವರಾಗಿಯೂ, ಇರುವವರನ್ನೇರ್ಪಡಿಸಿ ಅವರ ಮೂಲಕ ತಕ್ಕಂತೆ ವಿಚಾರಿಸಿಕೊಳ್ಳುತಬಂದರೆ ಅದುಯೋಗ್ಯವಾಗಿ ನಡೆಯಬಹುದು.

Occasional Notes.
ನೈಮಿತ್ತಿಕ ವಿಷಯನ್ಯಾಸ.

Municipalities in Bengal.—ಬಂಗಾಳೇ ಗವರ್ನಮೆಂಟಗೆಸೇರಿದ ಆಫೀಸ ಸರ್‌ಗಳ ಮ್ಯೂನಿಸಿಪಲ್ ಕಮ್ಮಿಷನರ್‌ಗಳನ್ನು ನಿಯಾಮಕಮಾಡುವ ಪದ್ಧತಿಯನ್ನು ತಪ್ಪಿಸಿ, ಸದರೀಯವರನ್ನು ಪ್ರಜೆಗಳು ಚುನಾಯಿಸುವ ವಾಡಿಕೆಯನ್ನು ಜಾರೀಯೊಳು ತರಬೇಕೆಂದು ಸದರೀ ಗವರ್ನಮೆಂಟಿನವರು ಪ್ರಯತ್ನ ಪಡುತಲಿದಾರೆ.

The Dufferin Fund.—ಈಗ ಇಂಡ್ಯರಾಜ್ಯದ ವೈಸ್‌ರಾಯ್‌ಯವರಾಗಿರುವ ಲಾರ್ಡ ಡಫರಿನ್‌ಸಾಹೆಬರವರ ಜ್ಞಾಪಕಾರ್ಥ ಯಾವದಾದರೊಂದು ಶಾಶ್ವತಕಾರ್ಯವಂ ಮಾಡಬೇಕೆಂದು ಯೋಚಿಸಿ ಆಬಗ್ಯೆ ಸ್ಥಾಪಿಸಿರುವ ಫಂಡಿಗೆ ಇದುವರಿವಿಗೆ ೬೩,೩೦೦ ರೂಪಾಯಿಗಳು ಚಂದಾಮೂಲಕ ಜಮಾಬಂದಿರುತಿದೆ.

Furlough.—ಮಧ್ಯ ಇಂಡಿಯಾದೇಶದಲ್ಲಿ ಗವರ್ನರ್ ಜನರಲ್ಲವರಕಡೆ ಏಜಂಟರಾದ ಸರ್. ಲೆಪೆಲ್ ಗ್ರಿಫಿನ್‌ಯವರು ಒಂದುಸಂವತ್ಸರಕಾಲ ರಜಾ ಪಡಕೊಂಡಿರುತ್ತಾರಾಗಿ ಅವರ ಕೆಲಸವನ್ನು ಜಯಪುರ ಸಂಸ್ಥಾನದ ರೆಸಿಡೆಂಟರಾದ ಮೆ|| ಬ್ರಾಡ್‌ಫರ್ಡ್‌ಯೆಂಬವರು ಬದಲೀ ನೋಡುವಂತೆ ಏರ್ಪಾಡಾಗಿದೆ.

Offer of help.—ಇಂಡ್ಯದೇಶದ ಸರಹದ್ದು ಪ್ರಾಂತದ ಬಂದೋಬಸ್ತಿಯ ವಿಷಯದಲ್ಲಿ ನಡೆಯುತಲಿರುವ ಫಂಡಿಗೆ ೫೦,೦೦೦ ರೂಪಾಯಿಗಳ ನಗದೂ, ತಮ್ಮ ಸೈನ್ಯವನ್ನೂ ಕೊಡುವದಾಗಿ ಬಿಲಾಸ್‌ಪುರದ ಅರಸರು ಇಂಡ್ಯಗವರ್ನಮೆಂಟಗೆ ಬರೆಯಲು ಅವರು ಆವಿಷಯದಲ್ಲಿ ತಮ್ಮ ವಂದನೆಯನ್ನು ಅರಸರಿಗೆ ತಿಳಿಸಿರುತ್ತಾರೆ.

Recognition of service.—ಹೈದರಾಬಾದ ಷಹರ್ ಕೊತ್ವಾಲ್ ನವಾಬ ಅಕ್‌ಬರ್‌ಜಂಗ್, ಸಿ. ಎಸ್. ಐ. ಯವರು, ಸದರೀ ಷಹರ್‌ನಲ್ಲೂ ಹೊರಗಣಪ್ರದೇಶದಲ್ಲೂ ಉಂಟಾಗಿದ್ದ ಪುಂಡುಗಳನ್ನೆಲ್ಲ ಅಡಗಿಸುವ ವಿಷಯದಲ್ಲಿ ಅವರು ವಹಿಸಿದ ಮಹನ್ನತ್ತನ್ನು ಪರಿಭಾವಿಸಿ ನಿಜಾಮರವರು, ಮರಳಿ ಅವರಿಗೆಅನರ್ಘವಾದ ಒಂದುಕತ್ತಿಯನ್ನು ಗೌರವಾರ್ಥ ಇನಾಂಕೊಟ್ಟಿರುತ್ತಾರೆ.

Return of the Gaekwar to Europe.—ಬರೋಡೆ ಗಾಯಕವಾಡಿ ಮಹಾರಾಜರವರು ತಮ್ಮ ದೇಹಾರೋಗ್ಯಕ್ಕಾಗಿ ಕ್ಷಿಪ್ರದಲ್ಲಿ ಮರಳಿ ಯೂರೋಪ ದೇಶಕ್ಕೆ ಪ್ರಯಾಣವಾಗುವ ಸಂಭವ ಕಂಡುಬರುತಿದೆ. ಸದರೀ ಮಹಾರಾಜರವರಿಗೆಈಗ ನೀಲಗಿರಿ ವಾಸದ ಮೂಲಕ ವೈದ್ಯರ ನಿರೀಕ್ಷಿಸಿದಷ್ಟು ಪ್ರಯೋಜನ ಯಾವದೂ ಉಂಟಾಗಲಿಲ್ಲವೆಂದು ಹೇಳಿಕೊಳ್ಳುತ್ತಾರೆ,ಎಂದು ಪಗ್ಯೆರೆ ಒಂದಾನೊಂದು ಪತ್ರಿಕೆ ಹೇಳುತಿದೆ.

The doings of a Rajah.—ಛೋಟನಾಗ್‌ಪೂರ್ ಸಂಸ್ಥಾನದ ಅರಸರ ನಡವಳಿಕೆ ವಿಷಯದಲ್ಲಿ ನೇಟವ್‌ವೃತ್ತಾಂತ ಪತ್ರಿಕೆಗಳು ಪ್ರಕಟಿಸುವ ವರ್ತಮಾನಗಳು ಯಥಾರ್ಥವಾಗಿ ಕಾಣುತಿವೆ. ಸದರೀ ಅರಸರು ತಮ್ಮ ದಿವಾನರನ್ನೂ ಅವರ ಕುಟುಂಬಕ್ಕೆ ಸೇರಿದವರೆಲ್ಲರನ್ನೂ ಬೈದಿನಲ್ಲಿಟ್ಟು ಅವರ ಜಂದಗಿಯನ್ನೆಲ್ಲ ಜಪ್ತಿ ಮಾಡಿರುತ್ತಾರೆಂದು ಪಗ್ಯೆರೆ ಒಂದಾನೊಂದು ಪತ್ರಿಕೆ ಹೇಳುತಿದೆಯೇ ಹೊರ್ತು ಇಂತಾ ಕ್ರೂರಕೃತ್ಯಕ್ಕೆ ಉಂಟಾದ ಕಾರಣ ಫಲಾನೇದೆಂದು ಯಾವಪತ್ರಿಕೆಯೂ ಹೊರಡಿಸಲಿಲ್ಲವು.

A right conceded.—ಕಲೆಕ್ಟರ್‌ಗಳು ಅಥವಾ ಡಿಸ್ಟ್ರಿಕ್ಟು ಜಡ್ಜಿಗಳಿಗೆ ಕೀಳ್ ಪಡದ ಇಲಾಖಾ ಅಧಿಕಾರಿಗಳು ಗೆಜೆಟ ದಾಖಲೆ ಇಲ್ಲದ ತಮ್ಮ ತಾಬೇದಾರರ ಪೈಕಿ ಯಾರಾದರು ೫೫ ವರ್ಷಗಳ ವಯಸ್ಸುಳ್ಳವರಾಗಿದ್ದರೂ ನೌಕರಿಗೆ ಲಾಯಖಾಗಿದ್ದಾರೆಂದು ಕಂಡುಬಂದರೆ, ಅಂತವರನ್ನು ೬೦ ವರುಷಗಳ ವಯಸ್ಸಿಗೆ ಮೀರದೆ ಒಂದು ನಿಷ್ಕೃಷ್ಟವಾದ ಕಾಲದವರಿವಿಗೆ ನೌಕರಿಯಲ್ಲಿಟ್ಟುಕೊಳ್ಳುವ ಅಧಿಕಾರವನ್ನು ಇಲಾಖಾ ಮೊಖ್ತೇಸರರಿಗೆ ಕೊಡುವಬಾಧ್ಯತೆಯನ್ನು ಇಂಡ್ಯಗವರ್ನಮೆಂಟಿನವರು ಸ್ಥಳಿಕ ಗವರ್ನಮೆಂಟಗೆ ಉಂಟುಮಾಡಿರುತ್ತಾರೆ. ತನ್ನ ತಾಬೇದಾರನಪೈಕಿ ಯಾವನಾದರು ನೌಕರಿಗೆ ಲಾಯಖಿಲ್ಲವೆಂದು ತೋರಿದರೆ ಅಂತವನ ವಿಷಯವನ್ನು ಹುಕುಂಬಗ್ಯೆ ಸ್ಥಳಿಕ ಗವರ್ನಮೆಂಟಗೆ ತಿಳಿಸತಕ್ಕದ್ದುಯೆಂದು ಹುಕುಂ ಆಗಿರುತಿದೆ.

Affairs in Cashmere.—ಕಾಶ್ಮೀರ ದೇಶದ ದಿವಾನರಾದ ಲಕ್ಷ್ಮಣದಾಸ್ ಯೆಂಬವರು ಡಿಸ್‌ಮಿಸ್ ಮಾಡಲ್ಪಟ್ಟರೆಂದು ಹಿಂದಿನವಾರದ ಪತ್ರಿಕೆಯ ಮೂಲಕ ತಿಳಿಸಿ ಇರುತ್ತೇವೆಯಷ್ಟೆ. ಈಗ ಮಹಾರಾಜರವರ ತಮ್ಮಂದರಾದ ಪ್ರಿನ್ಸ್ ಅಮಾರ್ ಸಿಂಗರೆಂಬವರು ಸಂಸ್ಥಾನದ ಕಾರ್ಯಗಳನ್ನು ತಾವೇ ನಿರ್ವಹಿಸುತ್ತ, ಪಾಠಶಾಲೆಗಳು, ಆಸ್ಪತ್ರೆಗಳು ಮತ್ತು ಇತರ ಇಲಾಖೆಗಳಮೇಲೆ ಪೂರಾ ವಿಚಾರಣೆ ಮಾಡುತಲಿದಾರೆಂದು ತಿಳಿಯಬರುತಿದೆ. ಹಿಂದಿನ ದಿವಾನರಾದ ಲಕ್ಷ್ಮಣದಾಸ್ ಯೆಂಬವರು ಸಂಸ್ಥಾನದ ಆಯತಿಗಳನ್ನೆಲ್ಲದೇಶಕ್ಕೆ ಯಾವವಿಧದ ಉಪಯೋಗವೂ ಇಲ್ಲದೆ ದುರ್ವ್ಯಯಮಾಡುತಬಂದರೆಂದು ನೇಟವ್‌ವೃತ್ತಾಂತ ಪತ್ರಿಕೆಗಳಿಂದ ಅವರಮೇಲೆ ಹೊರಲ್ಪಟ್ಟದೋಷಾರೋಪಣೆಯು ಈಗ ಅರಸರಿಂದಲೇ ಬಾಹಾಟವಾಗಿ ಊರ್ಜಿತವಾಗುತ ಬರುತಲಿವೆ.

ನೋಟೀಸ್.

ಇದರಿಂದ ನಮ್ಮ ಚಂದಾದಾರರಿಗೆ ಮರಳಿ ನಾವು ಜ್ಞಾಪಕಕೊಡುವ ದೇನುದರೆ:—ತಾವೆಲ್ಲರು ಚಂದಾಹಣವನ್ನು ಮುಂಗಡವಾಗಿ ಕೊಡುವದಕ್ಕೆ ಅನುಕೂಲವಾಗಿರುವಂತೆ ಈ ಸಾಲಿನಿಂದ ಚಂದಾ ದರವನ್ನು ಕಮ್ಮಿ ಮಾಡಿರುತ್ತೇವೆ. ಹಾಗೆ ತಾವೆಲ್ಲರು ಅಡ್ವಾನ್ಸ್ ಕೊಡದಪಕ್ಷಕ್ಕೆ ಹಿಂದಿನ ದರದಪ್ರಕಾರ ಕೊಡಬೇಕಾಗುವದು. ಹೊಸ ಚಂದಾದಾರರಿಗೆಲ್ಲ ಪತ್ರಿಕೆಗಳು ನಿಲ್ಲಿಸಲ್ಪಡುವವು.

LOCAL AND PROVINCIAL NEWS.
ಒಳದೇಶ ಮತ್ತು ತಾಲ್ಲೂಕ್‌ವಾರ್ತಾವೃತ್ತಾಂತಗಳು

The Post Master General of Madras.—ಮದರಾಸ್ ಪೋಸ್ಟ್‌ಮ್ಯಾಸ್ಟರ್ ಜನರಲ್ಲವರು ಈಗ್ಯೆ ಕೆಲವುದಿನಗಳಿಂದ ಈವೂರಲ್ಲಿರುವ ಮೈಸೂರು ಅಂಚೆಯಿಲಾಖೆಗೆ ಸಂಬಂಧಪಟ್ಟಂತಾ ಲೆಕ್ಕಪತ್ರಗಳನ್ನೆಲ್ಲ ಅಜಮಾಯಿಷೀ ಮಾಡುತಲಿದಾರೆಂದು ತಿಳಿಯಬರುತಿದೆ. ಇದು ಮುಂದೆ ನಡೆಯಬೇಕಾದ ಏರ್ಪಾಡುಗಳಿಗೆ ಪೂರ್ವಾಂಗವೆಂದು ತೋರುತಿದೆ. ಇವರು ಇದರಪ್ರಯೋಜನಾಪ್ರಯೋಜನಾಂಶಗಳಂಕುರಿತು ಆಲೋಚಿಸುತಲಿದಾರಂತೆ.

Rev. Mr. Walton.—ಲಾರ್ಡ ಮಿರ್ಜ ಹೈಸ್ಕೂಲಿ ಪ್ರಿನ್ಸಿಪಾಲರಾದ ರೆವರೆಂಡ್ ಮೆ|| ವಾಲ್ಟನ್‌ಯವರು, ಈ ವಾರದಲ್ಲಿಯೇ ಇಂಗ್ಲಾಂಡಿಗೆ ಹೊರಡುತ್ತಾರೆಯಾಗಿ ಅವರಿಗೆ ಒಂದು ವಿಜ್ಞಾಪನಪತ್ರಿಕೆಯನ್ನು ಒಪ್ಪಿಸತಕ್ಕಬಗ್ಯೆ ಸದರೀ ಸ್ಕೂಲ್ ವಿದ್ಯಾರ್ಥಿಗಳೂ ಉಪಾಧ್ಯಾಯರೂಸೇರಿ ಪ್ರಯತ್ನಪಡುತಲಿದಾರೆಂದು ತಿಳಿಯಬರುತಿದೆ. ಮೆ|| ಅತಾಲ್‌ಫಲ್‌ಯವರು ಇಲ್ಲಿಗೆ ಬಂದಿರುವದರಿಂದ ಕ್ಷಿಪ್ರದಲ್ಲಿ ಸ್ಕೂಲ್‌ಚಾರ್ಜನ್ನು ವಹಿಸುವರು. ಪರೀಕ್ಷೆಯಲ್ಲಿ ತೇರ್ಗಡೆಯಾದ ಬಾಲಕರಿಗ ಇನಾಂ ಕೊಡಲ್ಪಟ್ಟಕೂಡಲೇ ಮೆ|| ವಾಲ್ಟರ್‌ಯವರು ಪ್ರಯಾಣವಾಗುವರು.

The weather.—ಕಾಲಸ್ಥಿತಿಯವಿಷಯವಾಗಿ ಜನಗಳಿಗೆ, ತತ್ರಾಪಿ ಕೃಷಿ ಜೀವಿಗಳಿಗೆ ಆಲೋಚನೆಯು ವೃದ್ಧಿಯನ್ನೈದುತಲಿವೆ. ಈಗ ಬಿಸಿಲಿನ ಝಳವು ದುಸ್ಸಹವಾಗಿರುತಿದೆ. ಜಲದೌರ್ಲಭ್ಯಕ್ಕೆ ಪ್ರಾರಂಭಿಸಿರುವದರಿಂದಲೂ, ಮುಂಗಾರಿನಮಳೆಯು ಆತುರದೊಡನೆ ನಿರೀಕ್ಷಿಸಲ್ಪಟ್ಟಿರುವದರಿಂದಲೂ ಈ ವಿಷಯದಲ್ಲಿ ಬ್ರಹ್ಮಶ್ರೀ ಮುಲಿಕಲ್ಲು ಸಿದ್ಧಾಂತಿಗಳು ಕಾಲಚಕ್ರವ ಪರಿಶೋಧಿಸಿ ಬರೆಯುತ್ತಾರೇನುದರೆ:—ವಾಹೇಮುಜಕೂರ್ ೬ನೇತಾರೀಖ್ ಶುಕ್ರವಾರದದಿನ ರಾತ್ರಿ ಬುಧಶುಕ್ರರು ಪಶ್ಚಾಂಶದೊಳು ಜಲರಾಶಿ ಪ್ರವೇಶವು ಮಾಡಿದ್ದರಿಂದ ಆ ಲಾಗಾಯಿತು ಆಗಿಂದಾಗ್ಯೆ ಸ್ವಲ್ಪಸ್ವಲ್ಪ ಮೇಘಾವರಣವಾಗುತ ಕೆಲವು ಪ್ರದೇಶಗಳಲ್ಲಕ್ವಚಿದ್ವೃಷ್ಟಿಯಾಗುವದು. ಪರಂತು ಕುಜವಕ್ರತೆಯಿಂದ ಪೂರ್ಣವೃಷ್ಟಿಗೆ ಲಘುವುಂಟಾಗಿದೆ. ರೇವತಿ ನಾಲ್ಕನೇ ಪಾದದ ಮೊದಲು, ಅಶ್ವಿನಿ ೩ನೇಪಾದದ ತನಕ ಮೇಘೋದಯವಾಗುತ ಮಳೆಬರುವದಲ್ಲದೆ ವ್ಯವಸಾಯ ಕೆಲಸಗಳಿಗೆ ಅನುಕೂಲಿಸಿ ಜನಗಳಿಗೆ ಮನಸ್ಸಂತೋಷವುಂಟಾಗುವದು.

The Govt. Girls' School.—ನಿನ್ನೆಯ ದಿನದಲ್ಲಿಗ್ಯೆ ಗವರ್ನಮೆಂಟು ಬಾಲಿಕಾ ಪಾಠಶಾಲೆಗೆ ಕೊಚ್ಚಿ ರಾಜವಂಶದರಾದ ಇಬ್ಬರು ರಾಜಪುತ್ರರು ಬಂದಿದ್ದು ಅಲ್ಲಿನ ಪ್ರತಿ ತರಗತಿಯ ಅಜಮಾಯಿಷೀ ಮಾಡಿ ವಿದ್ಯಾರ್ಥಿನೀಯರಿಗೆ ಕಿತ್ತಳೆ ಹಣ್ಣು ಮಿಠಾಯಿ ಮುಂತಾದ ಭೋಜ್ಯಪದಾರ್ಥಗಳಂ ತರಿಸಿ ಹಂಚಿಸಿದರೆಂದು ತಿಳಿಯಲಾದೆವು. ಸದರೀ ಸ್ಕೂಲ್ ಸೆಕ್ರೆಟರಿ ಮತ್ತು ಹೆಡ್‌ಮ್ಯಾಸ್ಟರ್‌ಗಳಿಬ್ಬರು ಕಾದಿದ್ದು ಉಚಿತ ಮರ್ಯಾದೆಗಳೊಡನೆ ರಾಜಪುತ್ರರುಂ ಬರಮಾಡಿಕೊಂಡು ಸತ್ಕರಿಸಿ ಕಳುಹಿಸಿದರೆಂತಲೂ, ಈ ಬಗ್ಯೆ ಮುಂದಾಗಿ ಸ್ಕೂಲ್ ಕಟ್ಟಡವು ಮನೋಜ್ಞವಾಗಿ ಅಲಂಕರಿಸಲ್ಪಟ್ಟಿತೆಂತಲೂ ತಿಳಿಯಬರುತಿದೆ. ಇಲ್ಲಿನ ವಿದ್ಯಾರ್ಥಿನೀಯರಅಭಿವೃದ್ಧಿಯಂ ಕಂಡು ರಾಜಪುತ್ರರು ಸಂತೋಷ ಪರವಶರಾದರಂತೆ. ಇಲ್ಲಿನ ಬಾಲೆಯರ ಸ್ಥಿತಿಯೇ ಇವರಿಗೆ ಇಷ್ಟರ ಆನಂದಸುದಾಯಕವಾದಮೇಲೆ ಇವರು ಮೈಸೂರಿಗೆ ದಯಮಾಡಿ ಅಲ್ಲಿನ ಪಾಠಶಾಲೆಯಂ ನೋಡಿದವರಾದರೆ ಮತ್ತೆಷ್ಟು ಸಂತೋಷಿಸುವರೋ ನಾವರಿಯೆವು. ಸದರೀ ರಾಜಕುಮಾರರು ಅಲ್ಲಿಗೆ ಹೋಗುವರಾದರೆ ಆಗ ಅವರ ಪ್ರಾಭವ ಗೌರವಗಳಿಗೆ ತಕ್ಕಂತೆ ಇನ್ನೂ ವಿಶೇಷ ಸತ್ಕಾರಗಳು ಅಲ್ಲಿನವರಿಂದ ನಡೆಸಲ್ಪಡಬಹುದೆಂದು ನಂಬುತ್ತೇವೆ.

The Melacota Pandithya Varthani Sabha.—ಆರ್ಯಮತ ಪ್ರಕಟನಾಭಿಲಾಷಿಗಳಾದ ಮೇಲಕೋಟೆ ಪಾಂಡಿತ್ಯವರ್ಧನೀ ಸಭೆಯವರು, ಗತ ೭ನೇತಾರೀಖ್ ಶನಿವಾರದದಿನ ಸಭೆಸೇರಿದ್ದರು. ಆ ದಿನದೊಡನೆ ಸದರೀ ಸಭೆ ನಿರ್ಮಾಣವಾಗಿ ೬ವರುಷಗಳು ಪೂರ್ತಿಯನ್ನೈದಿದರಿಂದ ಗತ ಸರ್ವಜಿನ್ನಾಮ ಸಂವತ್ಸರದಲ್ಲಿ ನಡೆದ ವಿಶೇಷಾಂಶಗಳನ್ನೂ, ಸಭೆಯ ಪುರೋಭಿವೃದ್ಧಿ ಸೂಚಕವಾದ ಸಾಂವತ್ಸರಿಕ ರಿಪೋರ್ಟನ್ನೂ ಅದರ ಸೆಕ್ರೆಟರಿಯು ಸಭೆಯಲ್ಲಿ ಓದಿದರೆಂತಲೂ ಆಕಾಲದಲ್ಲಿ ಅನೇಕರು ಹಾಜರಿದ್ದರೆಂತಲೂ, ಸ್ಥಳಾಭಿಮಾನಿಯೊಬ್ಬನು ಬರೆಯುತ್ತಾನೆ. ಈ ಸಭೆಗೆ ಆದಿಯಿಂದಲೂ ಉಂಟಾಗಿರುವ ಪ್ರತಿಕೂಲ ಸಾಮಗ್ರಿಗಳ ಪ್ರಾಬಲ್ಯದಲ್ಲಿ ಅದಂ ಕಾಪಾಡಿಕೊಂಡು ಬರುವ ಶ್ರೀಯದುಗಿರಿನಾಥನು ಅದಕ್ಕೆ ಆಯುರ್ಬಲವಂ ಕೃಪೆಗೈಯಬೇಕೆಂದು ಕೋರುವೆವು.

Accident.—ಆಚೇ ಭಾನುವಾರದದಿನ ನಂಜನಗೂಡಿನಲ್ಲಿ ರಥೋತ್ಸವವಾಯಿತಷ್ಟೆ. ಆಕಾಲದಲ್ಲಿ ರಥವು ಸ್ವಲ್ಪದೂರ ಬಂದನಂತರ ಅದರ ಚಕ್ರವು ಒಂದು ಮುರಿದುಹೋಯಿತು. ಅಷ್ಟರಲ್ಲಿ ದೇವರನ್ನು ಕೆಳಕ್ಕೆ ಬಿಜಯಮಾಡಿಸಿ ಹಾಗೆಯೇ ದೇವಸ್ಥಾನಕ್ಕೆ ಉತ್ಸವ ಮಾಡಿಕೊಂಡು ಹೋದರು ಎಂದು ವೃತ್ತಾಂತ ಚಿಂತಾಮಣಿ ತಿಳಿಸುತಿದೆ. ದೇವಸ್ಥಾನದ ವಿಚಾರಣಾಧಿಕಾರಿಗಳ ಅಜಾಗರೂಕತೆಯೇ ಇಂತಾ ಅಪಾಯಗಳಿಗೆ ಕಾರಣವಾಗುತಿದೆ.

Effect of travelling.—ಈಚೆಗೆ ಶ್ರೀಮನ್ಮಹಾರಾಜರವರು ಉತ್ತರದೇಶ ಪ್ರಯಾಣವನ್ನು ತೀರಿಸಿಕೊಂಡು ದಯಮಾಡಿದ ಮೇಲೆ ಇಲ್ಲಿರುವ ಮ॥ ಫ್ರಾಂಜಿಯುಪದ ಷಾಪಿಗೆ ದಯಮಾಡಿದ್ದರು. ಉತ್ತರದೇಶದ ಪ್ರಯಾಣಕ್ಕೆ ಇದೇ ಮೊದಲನೆಯ ಫಲವೆಂದು ಒಂದು ಇಂಗ್ಲಿಷ್ ಪತ್ರಿಕೆಯು ತಿಳಿಸುತಿದೆ. ಇದರ ತಾತ್ಪರ್ಯವನ್ನು ವಾಚಕರೇ ಊಹಿಸಕೊಳ್ಳಬಹುದೆಂಬದಾಗಿ ವೃತ್ತಾಂತ ಚಿಂತಾಮಣಿ ತಿಳಿಸುತಿದೆ. ಈವರೇ ಬಾಧಕವೇನು ?

Mischief.—ಸಿಶ್ನೇ ಶುಕ್ರವಾರದದಿವಸ ಶ್ರೀಮನ್ಮಹಾರಾಜರಿಗೆ ಐದನೇ ಸೀಮಂತ ಮಹೋತ್ಸವವು ಬೆಳೆಯಿತು, ಅದಕ್ಕಾಗಿ ಮೊದಲು ದಿನ ರಾತ್ರಿ ಶ್ರೀ ರಾಜ ಗುರುಗಳಾದ ಪರಕಾಲ ಸ್ವಾಮಿಗಳು ಪಾದಪೂಜೆಯು ಕೈಗೊಳ್ಳುವದಕ್ಕೆ ಬಿಜಮಾಡಿಸಿರ್ದರು. ಆಕಾಲದಲ್ಲಿ ಮಠದಿಂದ ಮಹಾರಾಜರವರಿಗೆ ಒಪ್ಪಿಸತಕ್ಕ ಕಿಲ್ಲತ್ತುಗಳು ಕಟ್ಟಿರಮೇಲೆ ಒಪ್ಪಿಸಲ್ಪಟ್ಟವು. ಅವುಗಳಲ್ಲಿಟ್ಟಿದ್ದ ಪಟ್ಟೇಬಿಳೆ ಮೊಂಪಕ್ಕೆ ಬದಲಾಗಿ ಉಟ್ಟಿದ್ದದ್ದೊಂದು ಇದ್ದಂತೆ ಈಚೆಗೆ ಗೊತ್ತಾಗಿ ಅದರ ವಿಷಯವಾದ ವಿಚಾರಣೆಗಳು ನಡೆಯುವಂತೆ ಒಂದು ಪ್ರಮಾದವು ಸಂಭವಿಸಿಕೊಂಡಿರುತಿದೆಂದು ತಿಳಿಯಬರುತ್ತೆ.—ವೃ.ಚಿಂ.

A huge serpent.—ಕೋಲಾರದಿ॥ ಚಿಕ್ಕಬಳ್ಳಾಪುರದ ಬಳಿ ನುಡಿಪೆಟ್ಟದ ಸರಹದ್ದಿನಲ್ಲಿ ಕಳೆದ ಮಾರ್ಚಿ ತಾ॥ ೨೮ನೆ ಬುಧವಾರ ಸಾಯಂಕಾಲ ಒಂದು ಅಜಗರ ಸರ್ಪವು ಸುಮಾರು ೧೨ ಅಡಿ ಉದ್ದವೂ ೩ಅಡಿ ಸುತ್ತಳತೆಯೂ ಇದ್ದು, ಆ ಕಾಲದಲ್ಲಿ ಮೇಯುತ್ತಿದ್ದ ಮೇಕೆಗಳಲ್ಲಿ ಒಂದುಮೇಕೆಯು ಸರ್ಪಕ್ಕೆ ಎದುರಾಗಿ ಕೂಗಿಕೊಂಡು ಬರುತ್ತಿರಲು ಪೆತ್ತಾಗಿ ದೊರೆತ ಮೇಕೆಯನ್ನು ನುಂಗಿದ ಕೂಡಲೇ ಮೇಕೆಯ ಕಾವಲುಗಾರನು ನೋಡಿ ಅಜುಬಾಜು ಗ್ರಾಮಗಳಿಂದ ಬರುತಲಿದ್ದ ಜನರಿಗೆ ತಿಳಿಸಲು ಆ ಜನಗಳು ಬಂದು ಮತ್ತಾಗಿ ಬಿದ್ದಿದ್ದ ಸರ್ಪವನ್ನು ೧೦ ಜನಗಳವರಿಗೂ ಎತ್ತಿಕೊಂಡು ಶಿಡ್ಲಘಟ್ಟದ ತಾ॥ ಮೇಲೂರು ಗ್ರಾಮದಲ್ಲಿ ನಡೆಯುವ ಜಾತ್ರೆಯಲ್ಲಿ ದುಡ್ಡು ಸಂಪಾದಿಸಲು ತೆಗದುಕೊಂಡು ಹೋಗಿರುತ್ತಾರೆ. ಈ ಸರ್ಪವನ್ನು ನೋಡಲು ಬಂದಿದ್ದ ಸಾವಿರಾರು ಜನರಿಗೆ ಅದು ಅತ್ಯಾಶ್ಚರ್ಯವನ್ನುಂಟುಮಾಡಿತು. ಈ ಸರ್ಪವು ಇನ್ನೂ ಜೀವಿಸಿರುತ್ತೆ. ಇದನ್ನು ಮುಂತಲವೆಂತಲೂ, ದಾಸರ ಹಾವೆಂತಲೂ, ಕೊಂಡರಿಲೆಯೆಂತಲೂ ನಾನಾ ವಿಧವಾಗಿ ಇಲ್ಲಿನ ಜನಗಳು ಹೇಳುತ್ತಾರೆ. ಮೇಲೆಕಂಡ ಜಾತ್ರೆಯು ಪ್ರಾರ್ಭಿಸಿದ ಕೂಡಲೇ ಬೆಂಗಳೂರಲ್ಲಿರುವ ಸರ್ವ ವಸ್ತು ಪ್ರದರ್ಶನ ಶಾಲೆಗೆ ಸಂದಿಪೊರಿಸ್ಟ್ ಮ॥ರಾ॥ ನರಸೈಯನವರು ಕಳುಹಿಸುವರೆಂದು ಅಲ್ಲಿನ ಬಾತಮೀದಾರರಿಂದ ತಿಳಿಯಬರುತಿದೆ.—ವೃ ಚಿಂ.

H. H. the Maharaja.—ಲೇಟಿರಿವರ್ಶರುಗಾಚಾರ್ಯರವರ ಮಕ್ಕಳಾದ ಪೋಲೀಸ್ ಸೂಪರಿಂಟೆಂಡೆಂಟ ಮ॥ ರಾ॥ ರಾಘವಾಚಾರ್ಯರಮನೆಯಲ್ಲಿ ಸೀಮಂತ ಪ್ರಸ್ತುತ ಬೆಳೆಯಿತಾದ್ದರಿಂದ ಆ ಮಹೋತ್ಸವಕ್ಕೆ ಶ್ರೀಮನ್ಮಹಾರಾಜರವರನ್ನು ದಯಮಾಡಬೇಕೆಂದು ಪೂರ್ವಭಾವಿಯಾಗಿಯೇ ಕೇಳಿಕೊಂಡಿದ್ದದರಿಂದ ಕಳೆದ ಶನಿವಾರದ ದಿನ ಶ್ರೀಮನ್ಮಹಾರಾಜರವರು ತಮ್ಮ ಪರಿವಾರ ಸಮೇತ ಅಲ್ಲಿಗೆ ದಯಮಾಡಿ ರಾಘವಾಚಾರ್ಯರು ಮಾಡಿದ ರಾಜೋಪಚಾರಗಳನ್ನು ಸ್ವೀಕರಿಸಿದರು. ಶ್ರೀಮನ್ಮಹಾರಾಜರವರು ದಯಮಾಡುವ ವರ್ತಮಾನವನ್ನು ತಿಳಿದು ಮನೆಯಮುಂಭಾಗದಲ್ಲಿ ಚಪ್ಪರವನ್ನು ಹಾಕಿಸಿ ತೋರಣ ದೀಪಾವಳಿಯಿಂದ ಅತಿ ವಿಜೃಂಭಣೆಯಾಗಿ ಅಲಂಕರಿಸಿದ್ದದ್ದಲ್ಲದೆ ಪೋಲೀಸಿನವರನ್ನು ಉಭಯ ಪಾರ್ಶ್ವದಲ್ಲಿಯೂ ಸಾಲಾಗಿ ನಿಲ್ಲಿಸಿದ್ದರು. ಆ ಕಾಲದಲ್ಲಿ ದಿವಾನರವರೇ ಆದಿಯಾಗಿ ಎಲ್ಲಾ ಶಿಷ್ಟಮನುಷ್ಯರುಗಳೂ ಬಂದು ಸಭೆಯನ್ನು ಅಲಂಕರಿಸಿದ್ದರು. ಇದಕ್ಕೋಸ್ಕರವಾಗಿ ತಿರುಚನಾಪಲ್ಲಿಯಿಂದ ಕರೆಸಲ್ಪಟ್ಟಿದ್ದ ಒಬ್ಬ ಸಂಗೀತಗಾರರು ವೀಣೆಯನ್ನು ಮಾಡಿದರು. ಶ್ರೀಮನ್ಮಹಾರಾಜರವರು ಅತ್ಯಂತ ಸಂತುಷ್ಟರಾಗಿ ಸ್ವಲ್ಪಕಾಲವಿದ್ದು ಅಲ್ಲಿಂದ ವಾಪಸ್ ದಯಮಾಡಿದರು.—ವೃ. ಚಿಂ.

NEWS LETTERS.

ವೃತ್ತಾಂತಖತ್.

ತಿಪಟೂರು ತಾಲ್ಲೂಕು ನೊಣವಿನಕೆರೆ, ತಾರೀಖ್ ೫—೪—೧೮೮೮.—ಈ ನೊಣವಿನಕೆರೆಯಲ್ಲಿ ಶ್ರೀ ಚೆಲುವರಾಯಸ್ವಾಮಿ ದೇವರ ರಥೋತ್ಸವವು ಪ್ರತಿ ಸಂವತ್ಸರಗಳಲ್ಲಿಯೂ ಚೈತ್ರಮಾಸದಲ್ಲಿ ಆಗುತ್ತಾಯಿತ್ತು. ಈ ಸಂವತ್ಸರದಲ್ಲಿ ಅಧಿಕ ಚೈತ್ರಮಾಸ ಬಂದಕಾರಣ ದೇವತಾಸೇವೆಗೆ ಬರತಕ್ಕ ಜನಗಳು ಅದುಅರಿಯದೆ ಇದೇಮಾಸದಲ್ಲಿ ರಥೋತ್ಸವವಾಗುವದಾಗಿ ಊಹಿಸಿ ಕೆಲವು ಭಕ್ತಾದಿಗಳು ಇಲ್ಲಿನವರಿಗೂಬಂದು ಘಟವಿಲ್ಲವೆ ಕೇಳದನ್ನಳಿದಲೇ ಹೊರಟುಹೋದರೆಂತಲೂ, ಮತ್ತು ಕೆಲವರು ಇಲ್ಲಿನವರಿಗೆಬಂದು ರಥೋತ್ಸವ ಇಲ್ಲವೆಂದಿದ್ದಾಗ್ಯು ದೇವರಸೇವೆ ಮಾಡಿಕೊಂಡು ಹೋದರೆಂತಲೂ, ಇನ್ನು ಕೆಲವರು ಈಸಂಶಯದಿಂದ ಬರುವದನ್ನೇ ಬಿಟ್ಟರೆಂತಲೂ ಕೇಳಿ ತುಂಬಾ ವ್ಯಸನಪಡುತ್ತೇನೆ. ಈಶ್ರೀ ಚೆಲುವರಾಯಸ್ವಾಮಿಯವರಿಗೆ ಇದೇ ಸರ್ವಧಾರಿ ನಾಮಸಂವತ್ಸರದ ನಿಜಚೈತ್ರ ಶುದ್ಧ ೧೪ ಬುಧವಾರ ಚಿತ್ತಾನಕ್ಷತ್ರದಲ್ಲಿ ಅಂಕುರಾರ್ಪಣ, ೧೫ ಗುರುವಾರ ಸ್ವಾತೀನಕ್ಷತ್ರದಲ್ಲಿ, ಧ್ವಜಾರೋಹಣ ಭೇರೀತಾಡನವೂ, ಬಹುಳ ೧ ಶುಕ್ರವಾರ ವಿಶಾಖಾನಕ್ಷತ್ರದಲ್ಲಿ ಯಾಗಶಾಲಾಪ್ರವೇಶ ಅನಂತರ ಪೀಠಾರೋಹಣವೂ, ಬಹುಳ ೨ ಶನಿವಾರ ಅನೂರಾಧಾನಕ್ಷತ್ರದಲ್ಲಿ ಪುಷ್ಪಮಂಟಪ ಮಹೋತ್ಸವವೂ, ಬಹುಳ ೪ ಭಾನುವಾರ ಜ್ಯೇಷ್ಠಾನಕ್ಷತ್ರದಲ್ಲಿ ಕಲ್ಯಾಣೋತ್ಸವ, ಗರುಡಾರೋಹಣವೂ, ಬಹುಳ ೫ ಸೋಮವಾರ ಮೂಲಾನಕ್ಷತ್ರದಲ್ಲಿ ಗಜೇಂದ್ರಮೋಕ್ಷ, ಗಜಾರೋಹಣವೂ, ಬಹುಳ ೬ ಮಂಗಳವಾರ ಪೂರ್ವಾಷಾಢಾನಕ್ಷತ್ರದಲ್ಲಿ ಬ್ರಹ್ಮೋತ್ಸವವೂ, ಬಹುಳ ೭ ಬುಧವಾರ ಉತ್ತರಾಷಾಢಾ ನಕ್ಷತ್ರದಲ್ಲಿ ನಾಗವಲ್ಲೀ ಮಹೋತ್ಸವ, ವಸಂತೋತ್ಸವ ಮತ್ತು ಕೀಲ್‌ಕುದುರೆಉತ್ಸವ, ತುರಗೋತ್ಸವ, ನಗರಶೋಧನವೂ, ಬಹುಳ ೮ ಗುರುವಾರ ಶ್ರವಣ ನಕ್ಷತ್ರದಲ್ಲಿ ಅವಭೃಥವೂ, ಈ ರೀತಿ ಅತಿ ಸಂಭ್ರಮದೊಡನೆ ಆಗಮೋಕ್ತಪ್ರಕಾರವಾಗಿ ಮೇಲುಕೋಟೆ ಶ್ರೀ ಚೆಲುವರಾಯಸ್ವಾಮಿಯವರ ಉತ್ಸವಕ್ಕೆ ಪ್ರತಿನಿಧಿಯಾಗಿ ಬೆಳೆಯುವದೆಂಬ ಸಂಗತಿ ತುಂಬಾಸಂತೋಷಕರವಾಗಿದೆ. ಆದರೆ ಈ ಸಂವತ್ಸರದಲ್ಲಿ ಜನಗಳಿಗೆ ಸಂಶಯಾಸ್ಪದವಾಗಿ ರಥೋತ್ಸವಕ್ಕೆ ಬರಲು ಅನುಕೂಲವಿಲ್ಲದೆಹೋಯಿತು. ಆಸಂಶಯ ನಿವೃತ್ತಿಯು ತಮ್ಮ ಪತ್ರಿಕಾದ್ವಾರಾ ಆಗುವದೆಂದು ನಂಬುತ್ತೇನೆ. ಅಲ್ಲದೆ ಶ್ರೀ ಗೋಪಾಲಕೃಷ್ಣದೇವರ ರಥೋತ್ಸವವು ನಿಜ ಚೈತ್ರಶುದ್ಧ ೫ ಆಗಾಯಿತು ಶುದ್ಧ ೧೨ ವರಿಗೆ ಆಗಮೋಕ್ತ ಪ್ರಕಾರವಾಗಿಯೇ ನಡಿಯುತ್ತೆ.

ಮೇಲುಕೋಟೆ ತಾ॥ ೩೦ನೇ ಮಾರ್ಚಿ ೧೮೮೮.

ಶ್ರೀಮದ್ಯದುಶೈಲ ಶಿಖಾಮಣಿಯಾದ ಶ್ರೀ ಚೆಲುವರಾಯಸ್ವಾಮಿಯವರಿಗೆ ಈ ಸಲದ ಬ್ರಹ್ಮೋತ್ಸವವು ಪೂರ್ವಕ್ಕಿಂತ ಮೇರೆ ಬಹು ವಿಜೃಂಭಣೆಯಾಗಿ ನಡೆಯಿತು. ಆ ವೈಭವಗಳನ್ನೆಲ್ಲ ವಿಸ್ತಾರವಾಗಿ ಬರೆದು ತಮ್ಮ ಪತ್ರಿಕೆಯಸ್ಥಳವನ್ನಾಕ್ರಮಿಸುವದಕ್ಕಿಂತ ಈ ವರುಷದ ವಿಶೇಷಾಂಶಗಳನ್ನುಮಾತ್ರ ವಿವರಿಸಿದರೆ ಸಾಕಾಗಿರುತ್ತೆಂದು ನಂಬುತ್ತೇನೆ.

೧೮೮೮ ನೇ ಮಾರ್ಚಿ ೧೯ ರಲಾಗಾಯತು ಉತ್ಸವಕ್ಕೆ ಪ್ರಾರಂಭವಾದಾಗ್ಯೂ ಆವೇಳೆಗೆ ಬರಬಹುದಾಗಿದ್ದ ಮದರಾಸ್ ಕೋಮಟಿಗರು ಪ್ರಾಯಶಃ ಅನೇಕರು ಬರಲಿಲ್ಲವು. ಪರಂತು ಜನಗಳು ಕಳೆದ ವರುಷದಂತೆ ಸುಮಾರು ಇಪ್ಪತ್ತುಸಾವಿರದವರಿವಿಗೂ ಸೇರಿದ್ದರು. ಉತ್ಸವ ನಿರ್ವಹಣಾರ್ಥ ಫ್ರಂಚ್‌ರಾಕ್ಸ್ ಸ॥ ಡಿ॥ ಆಫಿಸರಾದ ಮ॥ ರಾ॥ ಬಿ. ಕೆ ವೆಂಕಟವರದಯ್ಯಂಗಾರ್ರವರೂ, ಶ್ರೀರಂಗಪಟ್ಟಣತಾಲ್ಲೂಕ್ ಅಮಲ್ದಾರ ಮ॥ ರಾ॥ ಎ. ರಾಘವೇಂದ್ರರಾಯರವರೂ, ಮಹಾರಾಜಗ್ರಿ ಡೆಪ್ಟಿ ಅಮಲ್ದಾರ್ರವರೂ, ಶ್ರೀರಂಗಪಟ್ಣ, ನಾಗಮಂಗಲ, ಮುಂತಾದ ಕೆಲವುತಾಲ್ಲೂಕುಗಳಿಂದ ಪೋಲೀಸ್ ಇನ್ಸ್ಪೆಕ್ಟರ್‌ಗಳೂ, ಜಮೇದಾರ್ ಮತ್ತು ದಫೇದಾರ್ರುಗಳೂ, ಅನೇಕಜನ ಪೋಲೀಸ್‌ಕಾನ್ಸ್ಟೇಬಲ್‌ಗಳೂ ಬಂದಿದ್ದರು. ಎಲ್ಲಾ ಉತ್ಸವಗಳೂ ಕಾಲಾತೀತವಾಗದಂತೆ ಅತ್ಯಂತ ಪಿತರಣೆಯಾಗಿನಡೆಸಲ್ಪಟ್ಟವಲ್ಲದೆ, ರಥೋತ್ಸವದದಿನ ಪ್ರಾತಃಕಾಲ ೬ಘಂಟೆಗೆ ದೇವರಿಗೆ ರಥಾರೋಹಣವಾಗಿ ೧೧ಘಂಟೆಗೆ ರಥವನ್ನು ಎಳೆಯಲುಪಕ್ರಮಿಸಿ ೧॥ ಅಥವಾ ೨ಘಂಟೆಗೆ ಅದುಯಥಾಸ್ಥಾನಕ್ಕೆಬಂದು ಸೇರಿತು. ಅವಭೃತೋತ್ಸವವು ೧೨ ಘಂಟೆಯೊಳಗಾಗಿ ನಡೆದು ಮಹಾಭಿಷೇಕವು ೨ ಘಂಟೆಯೊಳಗೆ ಪೂರೈಸಿತು. ಹೀಗೆ ಉತ್ಸವಗಳು ಸಕಾಲದಲ್ಲಿ ಕ್ರಮವಾಗಿ ನಡೆದದ್ದನ್ನು ಇದುವರೆವಿಗೆ ಯಾರೂ ನೋಡಲಿಲ್ಲವೆಂದು ಅನೇಕ ವೃದ್ಧರು ಸಹ ಆಶ್ಚರ್ಯಗೊಳ್ಳುತ್ತಾರೆ. ಇಷ್ಟು ಜಾಗ್ರತೆಯಾಗಿ ಸ್ವಲ್ಪವೂ ಲೋಪವಾಗದಂತೆ ಉತ್ಸವಗಳನ್ನು ನಡೆಸುವ ಅನೇಕ ಪ್ರಜೆಗಳಿಗೆ ಬಹು ಸಂತೋಷವನ್ನೂ ಕೈಂಕರ್ಯ ಪರರಿಗೆ ಯಥೋಚಿತ ವ್ಯವಸ್ಥಾನವನ್ನೂ ಉಂಟುಮಾಡಿದ ಮ॥ ರಾ॥ ವೆಂಕಟವರದಯ್ಯಂಗಾರ್ರವರು ಉತ್ಸವಕ್ಕೆಬಂದಿದ್ದ ಸ್ವದೇಶಾನ್ಯದೇಶೀಯರಾದ ಸಮಸ್ತ ಜನಗಳಿಂ ಬಹಳ ಕೃತಜ್ಞತೆಯಿಂದ ಕೊಂಡಾಡುತ ಅವರಿಗಿರುವ ಅಂತರವಾದ ದೈವಭಕ್ತಿ ವಿಶ್ವಾಸಗಳಂಕಂಡು ಆಶ್ಚರ್ಯಪಡುತಿದ್ದರು. ಮ॥ ವೆಂಕಟವರದಯ್ಯಂಗಾರ್ರವರು ಶ್ರೀಮನ್ಮಹಾರಾಜರವರಲ್ಲಿ ತಮಗಿರುವ ನಿರೂಢವಾದ ರಾಜಭಕ್ತಿಯನ್ನು ಕಾರ್ಯತಃ ಬಹುಮುಖವಾಗಿ ತೋರ್ಪಡಿಸುತಲಿದ್ದರು. ಈ ತಾಲ್ಲೂಕು ಶಿರಸ್ತೇದಾರರಾಗಿರುವ ಮಹಾರಾಜಶ್ರೀ ನಂಜಪಾಚಾರ್ಯರವರೂ ಮ॥ ವೆಂಕಟವರದಯ್ಯಂಗಾರ್ರವರೂ ಈಸಲ ಈಸ್ಥಳದಲ್ಲಿ ೪ದಿವಸಗಳವರಿಗೂ ಮೊಕ್ಕಾಂಮಾಡಿ ಈ ದಿನ ಪ್ರಾತಃಕಾಲ ದಯಮಾಡಿದರು. ವಿಶೇಷ ಇವರು ಜನಗಳವಿಷಯದಲ್ಲಿ ತೋರಿಸಿದ ಅಪಾರವಾದದಯೆಯು ಬಹಳ ಶ್ಲಾಘನೀಯವಾದದ್ದು. ವೈರಮುಡಿ ದಿವಸ ಆಫೀಸರವರು ಒಬ್ಬ ಸಾಧಾರಣನಂತೆ ಮಹಾಜನ ಸಮೂಹದಲ್ಲಿ ಸ್ವತಃ ಬಂದು ನಿಂತುಕೊಂಡು ಒಬ್ಬರಿಗೂ ನಿರ್ಬಂಧವಿಲ್ಲದಂತೆಯೂ, ಎಲ್ಲರಿಗೂದೇವರದರ್ಶನವಾಗುವಂತೆಯೂ ಅಮಲ್ದಾರ್ ಮುಂತಾದವರೊಡನೆ ತಕ್ಕ ಏರ್ಪಾಡುಮಾಡಿ ಬಹಳಶ್ರಮವಹಿಸಿದರು. ತೀರ್ಥಪ್ರಸಾದ ಮುಂತಾದವುಗಳ ವಿನಿಯೋಗಕಾಲಗಳಲ್ಲಿಯೂ ದೇವರ ದರ್ಶನಕಾಲಗಳಲ್ಲಿಯೂ ಈ ವರುಷದಂತೆ ಯಾವಾಗಲೂ ಜನಗಳು ವಿಶೇಷ ತೃಪ್ತರಾಗಿರಲಿಲ್ಲವು.

CORRESPONDENCE

ಮೇಲುಕೋಟೆ ಗವರ್ನಮೆಂಟ್ ಕನ್ನಡ ಸ್ಕೂಲಿನಲ್ಲಿ ನಡೆದ ವಿದ್ಯಾರ್ಥಿಗಳ ಸನ್ಮಾನಸಭೆ.

ಎಡಿಟರವರ ಸಮುಕ್ಷಮಂಗಳಿಗೆ.

ಆರ್ಯ್ಯಾ,—ಪ್ರತಿಸಂವತ್ಸರದಲ್ಲಿದೇ ಫಾಲ್ಗುಣಶುದ್ಧ ದಶಮಿ ದಿನ ನಡೆಯುವ ವೈರಮುಡಿ ಉತ್ಸವಕ್ಕೆ ಎಲ್ಲರಂತೆ ನಾನೂ ಹೋಗಿದ್ದವನಾದರೂ, ಇತರಾಪೇಕ್ಷಯಾ ಒಂದು ವಿಶೇಷಾಂಶವನ್ನು ನೋಡಿ ಸಂತೋಷಿಸಿದವನಾದೆನು. ಈ ಪ್ರದೇಶವು ಪ್ರಾದೇಶಿಕ ಮಾತ್ರವಾದ ಪರ್ವತ ಪ್ರಾಂತವಾಗಿದ್ದರೂ ಇಲ್ಲಿ ದರ್ಶನೀಯಗಳಾದ ಮತ್ತು ಪುರಾಣ ಪ್ರಸಿದ್ಧಗಳಾದ ಬಹ್ವಂಶಗಳು ನನ್ನ ವೀಕ್ಷಣಕ್ಕೆ ವಿಷಯಗಳಾಗಿದ್ದದರಿಂದ ದೇವರ ಸಂದರ್ಶನ ಕಾಲದೊಳು ವಿನಾ ಮಿಕ್ಕ ಸಮಯದೊಳವು ನನಗೆ ಹೃದಯಾನಂದ ಪೂರ್ವಕವಾದ ವಿಶ್ರಾಂತಿಯನ್ನುಂಟುಮಾಡುತಲಿದ್ದವು. ಕಳೆದ ತಿಂಗಳ ೨೨ನೇ ತಾರೀಖಿನ ದಿನ ಸಾಯಂಕಾಲ ಈ ಯದುಗಿರಿಯಲ್ಲಿ ಅತ್ಯಂತ ರಮಣೀಯ ಪ್ರದೇಶವಾದ ಧನುಷ್ಕೋಟಿ ಎಂಬ ರೂಢನಾಮವುಳ್ಳ ಒಂದು ಪುಣ್ಯತೀರ್ಥವಂ ದರ್ಶಿಸಿ ಪಾವನನಾದ ಅವರ ಉದಕ ಪ್ರಾಶನದಿಂ ಪವಿತ್ರೀಕೃತಗಳಾದ ದೇಹಾಂತಃಕರಣಗಳಿಂದೊಡಗೂಡಿದವನಾಗಿ ರಾಮಪ್ರಿಯರ ಸಂದರ್ಶನಾಭಿಲಾಷೆಯೊಡನೆ ನನ್ನ ಆಸ್ಥಾನಕ್ಕೆ ಹಿಂದಿರಿಗಿ ಬರುವಾಗ್ಯೆ ಗ್ರಾಮದ ದಕ್ಷಿಣ ದಿಕ್ಕಿನಲ್ಲಿನ ಒಂದು ಕಲ್ಲಾದಿಣ್ಣೆಯ ಮೇಲೆ ಇರುವ ಒಂದು ಕುಟೀರಕ್ಕೆ ಅನೇಕರು ಗುಂಪುಗೂಡಿ ಹೋಗುತಲಿದ್ದದಂ ಕಂಡೆನು. ನನಿಗೂ ಅವರೊಡನೆ ಹೋಗಿ ವಿಶೇಷಾಂಶಗಳನ್ನರಿತು ಕೊಳ್ಳಬೇಕೆಂಬ ಅಪೇಕ್ಷೆಯು ವೃದ್ಧಿಯನ್ನೈದದರಿಂದ ಹತ್ತರಲ್ಲಿ ಹನ್ನೊಂದನೆಯವನಂತೆ ಅಲ್ಲಿಗೆ ನಾನೂ ಹೋದವನಾದೆನು. ಸದರೀ ಪ್ರದೇಶದ ರಾಮಣೀಯಕತೆಯು ನನಗೆ ಬಹಳ ಜುಗುಪ್ಸೆಯನ್ನುಂಟುಮಾಡತಕ್ಕದ್ದಾಗಿದ್ದಾಗ್ಯೂ ಮೇಲೆ ಕಂಡ ಕುಟೀರದೊಳಗೆ ಪ್ರವೇಶಿಸಿ ನೋಡಲಾಗಿ, ಅದು ತೋರಣ ಕದಳೀ ಸ್ತಂಭ ಪುಷ್ಪಮಾಲಿಕ ಮುಂತಾದವುಗಳಿಂದ ಸುಂದರೋಪಚಿತಗಳಾಗಿ ಅಲಂಕರಿಸಲ್ಪಟ್ಟಿದ್ದದ್ದೂ, ಅದರಲ್ಲಿ ಮಾನ್ಯರಾದ ಬಹುಮಂದಿ ದೊಡ್ಡಮನುಷ್ಯರು, ತಮ್ಮ ತಮ್ಮ ಗೌರವಾನುಗುಣಗಳಾದ ಆಸನಗಳನ್ನಂಗೀಕರಿಸಿದ್ದದ್ದೂ, ಪ್ರಯೋಜನ ನಿರೀಕ್ಷಣೆಯೊಡನೆ ಸಂತೋಷಭರಿತರಾದ ಬಾಲಕರ ಸಮೂಹದಿಂ ನಿಬಿಡಿತವಾಗಿದ್ದದ್ದೂ, ವೇದವೇದಾಂಗಾದಿ ತತ್ವ ರಹಸ್ಯ ವೇತ್ತರಾದ ಭೂಸುರಸ್ತೋಮದಿಂ ಮೊತಗೂಡಿದ್ದದ್ದೂ ನನ್ನ ದೃಷ್ಟಿಗೆ ವಿಷಯಗಳಾಗಲು, ಆಗ ನನಿಗೆ ಸ್ವಲ್ಪ ಗೌರವ ಪ್ರಾಪ್ತವಾದದರಿಂದ ಆಗ ಅಲ್ಲಿನಸಂದರ್ಭವಂ ಕುರಿತು ವಿಚಾರವಮಾಡಿದವನಾದೆನು. ಆಗ ಅದು ಗವರ್ನಮೆಂಟ್ ಹೋಬಳೀಸ್ಕೂಲೆಂತಲೂ, ಸನ್ ೧೮೮೮ನೇ ಇಸವಿಯ ಸಾಂವತ್ಸರಿಕ ಪರೀಕ್ಷೆಯಲ್ಲಿ ತೇರ್ಗಡೆಯಾದ ವಿದ್ಯಾರ್ಥಿಗಳಿಗೆ ಇನಾಂ ಕೊಡುವ ಉದ್ದಿಶ್ಯ ಸಭೆ ಸೇರಿರುವಂತೆಯೂ ತಿಳಿಯಬಂತು. ಬಳಿಕ ಒಳಗೆಹೋಗಿ ನೋಡಲಾಗಿ ಅಲ್ಲಿಗೆ ಫ್ರಂಚ್ ರಾಕ್ಸ್ ಸಬ್ ಡಿವಿಜನ್ ಮ॥ ಬಿ. ಕೆ. ವೆಂಕಟವರದಯ್ಯಂಗಾರ್ರವರು, ಜಾಯಿಂಟ್ ಅಸಿಸ್ಟೆಂಟ್ ಕಮಿಷನರ್ ಮ॥ ಎ. ಶ್ರೀನಿವಾಸಯ್ಯಂಗಾರ್ರವರು, ಸವಾರ್ ಕಚೇರಿ ಬಕ್ಷಿ ಬಿ. ವೆಂಕಟಾಚಾರ್ಯರವರು, ಶ್ರೀರಂಗಪಟ್ಣ ತಾ॥ ಅಮಲ್ದಾರ್ ರಾಘವೇಂದ್ರರಾಯರವರು, ಡೆಪ್ಯುಟೀ ಅಮಲ್ದಾರ್ ವಗೈರೆ ಬಹುಜನ ಬಂದಿದ್ದದ್ದು ನೋಡಲಾದೆನು. ಸಬ್ ಡಿವಿಜನ್ ಆಫೀಸರವರು ಸಭಿಕರ ಪ್ರಾರ್ಥನೆಯಂತೆ ಮ॥ ಶ್ರೀನಿವಾಸಯ್ಯಂಗಾರ್ರವರು ಸಭಾಧ್ಯಕ್ಷರಾಗಿರಬೇಕೆಂದು ಸೂಚಿಸಲು ಅವರು ಅಪೇಕ್ಷಾಪೂರ್ವಕ ಆಸನವನ್ನಂಗೀಕರಿಸಿದಮೇಲೆ ಸದರೀಸ್ಕೂಲ್ ಹೆ॥ ಮ್ಯಾಸ್ಟರ್ ರಾಮಯ್ಯಂಗಾರ್ರವರು ೧೮೮೭-೮೮ನೇ ಸಾಲಿನ ಸ್ಕೂಲಿನ ಅಭಿವೃದ್ಧಿಸೂಚಕವಾದರಿಪೋರ್ಟನ್ನೋದಿದರು. ಸದರೀ ರಿಪೋರ್ಟ್ ತಮ್ಮ ಪತ್ರಿಕೆಯ ಸ್ಥಳವಂ ಬಹಳ ಆಕ್ರಮಿಸುವದೆಂಬ ಭೀತಿಯೊಡನೆ ಮುಂದಿನವಾರದವರೆಗೆ ನಿಲ್ಲಿಸಿಟ್ಟು ಸಭೆಯ ವಿಷಯವಂ ಕುರಿತ ಕೆಲವಂಶಗಳಂ ತಿಳಿಸುವೆನು. ಸಾಕ್ಷಾತ್ತು ಡೇಸಿಪೋರ್ಟು ಓದಲ್ಪಟ್ಟಬಳಿಕ ಸಭಾಧ್ಯಕ್ಷರು ಕ್ಲಾಸವಾರಾಗಿಯೂ, ನಂಬರ್‌ವಾರಾಗಿಯೂ, ಬಾಲಕ ಬಾಲಕಿಯರಿಗೆ ಕ್ಲಪ್ತವಾಗಿದ್ದ ಪುಸ್ತಕ ಬೊಂಬೆಗಳು ಮುಂತಾದ ಪದಾರ್ಥಗಳನ್ನು ಬಹಳ ಉತ್ಸಾಹದೊಡನೆಕೊಟ್ಟು ಅವರವರಿಗೆ ಯೋಗ್ಯತಾನುಗುಣಗಳಾದ ಹಿತೋಕ್ತಿಗಳನ್ನು

ಳಿದರು. ಅನಂತರ ಶ್ರೀನಿವಾಸಯ್ಯಂಗಾರ್ರವರು ಸಭಿಕರನ್ನೂ ಬಾಲಕರನ್ನೂ ಅಧಿಕರಿಸಿ ತಿಳಿಸಿದ್ದೇನಂದರೆ,—ಈದೇಶದ ಕನ್ನಡ ಹೋಬಳೀ ಸ್ಕೂಲುಗಳಲ್ಲಿ ಇದು ಉತ್ಕೃಷ್ಟವಾದ ಸ್ಥಿತಿಯೊಳಿರುತ್ತೆಂದು ಹೇಳಬಹುದಲ್ಲದೆ ಬಾಲಕರ ಸಂಖ್ಯೆಯೂ ಇಲ್ಲಿನ ವಿದ್ಯಾಭಿವೃದ್ಧಿಯೂ ಬಹಳ ಕೊಂಡಾಡತಕ್ಕದ್ದಾಗಿರುತ್ತೆ. ಈಸ್ಕೂಲಿಗೆ ಲಾಯಖಾದ ಕಟ್ಟಡವೊಂದು ಇಲ್ಲದೆಯಿರುವದು ಬಹಳ ಕೊರತೆಯಾಗಿದೆ. ರಾಜಬೀದಿಯಲ್ಲಿ ದೇವಸ್ಥಾನಕ್ಕೆ ಸೇರಿದಂತೆ ಈ ಪಾಠಶಾಲೆ ಇದ್ದಿರುವದಕ್ಕಾಗಿ ಇದು ಅನೇಕರ ದೃಷ್ಟಿಗೆ ವಿಷಯವಾಗುತ್ತಲಿರುವದೆಂದು ಅಭಿಪ್ರಾಯಪಟ್ಟರು. ತರುವಾಯ ಮಹಾರಾಜಶ್ರೀ ಬಕ್ಷಿ ವೆಂಕಟಾಚಾರ್ಯರವರು, ಹೋಬಳೀ ಸ್ಕೂಲ್ ಇಷ್ಟು ಅಭಿವೃದ್ಧಿಯಲ್ಲಿರುವದನ್ನು ನಾನು ಈಗಲೇ ಮೊದಲನೇದಫಾ ನೋಡಿದೆನು. ಇಷ್ಟರ ಅಭಿವೃದ್ಧಿಯು ಮ್ಯಾಸ್ಟರುಗಳ ಶ್ರಮವನ್ನೂ ಬಾಲಕರ ಜಾಗರೂಕತೆಯನ್ನೂ ವ್ಯಕ್ತಪಡಿಸುತಲಿದೆ. ಇದಲ್ಲದೆ ಈ ಸ್ಕೂಲಿಗೊಂದು ಜವಾಬ್ ಇನಂಸ ಪ ಇಲ್ಲವೆಂದು ತೋರುತ್ತೆ. ಈ ವಿಷಯದಲ್ಲಿ ಮೆ|| ರೈಸ್ ಸಾಹೇಬರವರು ತಕ್ಕ ಏರ್ಪಾಡು ಮಾಡುವರೆಂದು ನಂಬುತ್ತೇನೆ ಎಂದು ನುಡಿದರು. ಸಬ್ ಡಿವಿಜನ್ ಆಫಿಸರವರು, ತಾವು ಹರಿಹರದಲ್ಲಿ ನೋಡಿದ ಸ್ಕೂಲ್ ಸಹ ಇದರಂತೆಯೇ ಇತ್ತೆಂತಲೂ, ಇದು ಇಷ್ಟರ ಒಳ್ಳೇಸ್ಥಿತಿಯಲ್ಲಿರುವದಕ್ಕಾಗಿ ಬಹಳಸಂತೋಷಿಸಬೇಕೆಂತಲೂ, ಇದಕ್ಕೊಂದು ಸರ್ಕಾರೀ ಕಟ್ಟಡವು ಆವಶ್ಯಕವಾದದರಿಂದ ಮ್ಯೂನಿಸಿಪಲ್‌ಫಂಡಿನಿಂದ ಸಹಾಯ ಮಾಡುವದಾಗಿಯೂ, ಹೊಸಕಟ್ಟಡದವಿಷಯದಲ್ಲಿ ಎಜ್ಯುಕೇಷನ್ ಸೆಕ್ರೆಟರಿಯವರಿಗೆ ಶಿಫಾರಸ್ಸುಮಾಡಿ ಬರೆಯುವದಾಗಿಯೂ ಅಪ್ಪಣೆಕೊಟ್ಟರು. ಹೀಗೆಯೇ ಅಲ್ಲಿದ್ದ ದೊಡ್ಡಮನುಷ್ಯರೆಲ್ಲರೂ ತಮ್ಮ ತಮ್ಮ ಸಂತೋಷವನ್ನು ಚತಶಬ್ದಗಳಮೂಲಕ ವ್ಯಕ್ತಪಡಿಸುತ, ಒಬ್ಬರು, ಸ್ಕೂಲಿಗೆ ಸ್ಥಳಾನುಕೂಲ್ಯವು ಕಲ್ಪಿಸಬೇಕೆಂತಲೂ, ಮತ್ತೊಬ್ಬರು ಮ್ಯಾಸ್ಟರುಗಳಿಗೆ ತಲಬ್‌ಸಾಲದೆಂತಲೂ, ಇನ್ನೊಬ್ಬರು ವಿದ್ಯಾರ್ಥಿಗಳ ಸಂಖ್ಯಾನುಗುಣವಾಗಿ ಉಪಾಧ್ಯಾಯರ ಸಂಖ್ಯೆಯನ್ನು ಜಾಸ್ತೀಪಡಿಸಿದರೆ ವಿಶೇಷ ವಿದ್ಯಾಭಿವೃದ್ಧಿಗೆ ಕಾರಣವಾಗಿರುವದೆಂತಲೂ, ತಾತ್ಪರ್ಯಗೊಂಡರು. ಅನಂತರ, ಸಬ್‌ಡ್ಯಷ್ಷರು ಮೊದಲಾದ ದೊಡ್ಡಮನುಷ್ಯರಿಗೆಲ್ಲ ಹೆಡ್‌ಮ್ಯಾಸ್ಟರ್ ಶಾಮಯ್ಯಂಗಾರ್ರವರು ಪುಷ್ಪ ತಾಂಬೂಲಾದಿಗಳಿಂದ ತಕ್ಕ ಮರ್ಯಾದೆ ಮಾಡಿ ತಮ್ಮ ಕೃತಜ್ಞತೆಯನ್ನರುಹಿ ಸಭಿಕರಿಗೆ ವಂದಿಸಲು ಕೋಲಾಹಲ ಧ್ವನಿಯೊಡನೆ ಸಭೆ ಬರಖಾಸ್ತಾಯಿತು. ವಿದ್ಯಾಭಿಮಾನಿಗಳಿಗೆ ಇದಕ್ಕಿಂತಲೂ ಬೇರೆ ಸಂತೋಷ ವುಂಟೆ.

ತಮ್ಮ ವಿಧೇಯನಾದ,
ಎಸ್. ನಾಗೇಶರಾವ್.

SUMMARY OF NEWS.
ವೃತ್ತಾಂತ ಸಂಗ್ರಹ.

:o:

ಸ್ಯಾನ್‌ಫ್ರ್ಯಾನ್ಸಿಸ್ಕೋ ಎಂಬಪಟ್ಟಣದಲ್ಲಿ ಚೀನಾಜನಗಳು ಒಂದು ಹಬ್ಬವನ್ನು ಮಾಡುತಿದ್ದ ಕಾಲದಲ್ಲಿ ಒಂದು ಭಯಂಕರವಾದ ರಾಕ್ಷಸಾಕಾರವನ್ನು ನಿರ್ಮಿಸಿ ಅದರ ಪ್ರತಿಒಂದು ಕೀಲಿಗೂ ವಿದ್ಯುಚ್ಛಕ್ತಿಯನಾಳವನ್ನು ಕಲ್ಪಿಸಿದ್ದರು. ಮೆರವಣಿಗೆಯ ಮುಂಭಾಗವನ್ನು ಅದನ್ನುಇಟ್ಟು ಅದರ ಕೋಟೆಗೆ ತಗಲಿಸಿದ್ದ ಗುಂಡಿಯನ್ನು ಅವ್ರು ತಾಕುತಲೆ ಕೀಲಿನಸಂಬಂಧದಿಂದ ಅಗಾಧವಾದಬಾಯನ್ನು ತೆಗದು ಕಿಡಿಕಿಡಿಯಂತೆ ಉಗುಳುವಬಾಣಗಳು ಹೊರಟವು. ಮೂಗಿನಿಂದ ಏಕಕಾಲದಲ್ಲಿ ಜ್ವಾಲೆಯು ಹೊರಟಿತು. ಅಲ್ಲಿದ್ದ ಜನಗಳೆಲ್ಲರೂ ಅತ್ಯಂತಆಶ್ಚರ್ಯಪಟ್ಟರು.—ವೃ. ಬೋ.

ಉಪ್ಪಿನ ಮೇಲಿನ ತೆರಿಗೆಯನ್ನು ಹೆಚ್ಚಿಸಿದ್ದು ಬಹಳ ಅನ್ಯಾಯವಾದದರಿಂದ ಸರಕಾರದವರು ಇದರ ವಿಷಯವಂ ಪುನಃ ವಿಚಾರಮಾಡಬೇಕು ಎಂಬದಾಗಿ ಪುನೆಯ ಸಾರ್ವಜನಿಕ ಸಭೆಯವರು ಸಹ ಸರಕಾರಕ್ಕೆ ಒಂದು ಅರ್ಜಿಬರೆದುಕೊಂಡಿರುತ್ತಾರೆ. ಇದರಲ್ಲಿ ತೆರಿಗೆಯನ್ನುಜಾಸ್ತಿ ಮಾಡಬಾರದೆಂಬದಕ್ಕೆ ಮುಖ್ಯಗಳಾದ ಮೂರು ಕಾರಣಗಳನ್ನು ನಮೂದಿಸಿರುತ್ತಾರೆ. ಅವು ಯಾವವೆಂದರೆ (೧) ಬಡ ರಯಿತರು ಸರಕಾರಕ್ಕೆ ಮೊದಲೇ ತಮ್ಮ ಯೋಗ್ಯತೆಗೆಮೀರಿ ತೆರಿಗೆಕೊಡುತ್ತಾ ಉದವರಿಂದ ಎಲ್ಲರಮೇಲೂ ಸಮಾನ ಭಾರ ಬೀಳಬೇಕೆಂಬ ತಾತ್ಪರ್ಯ ದೊಡನೆ ಉಪ್ಪಿನತೆರಿಗೆ ಹೆಚ್ಚಿಸಿದ್ದು ಅಂತಾ ಬಡರಯಿತರಿಗೆ ಬಹಳ ಅನ್ಯಾಯವಾದದ್ದು. (೨) ದೇಹ ಸಂರಕ್ಷಣೆಗೆ ಆವಶ್ಯಕವಾಗಿರುವ ಜನಸಿನವು ಯವು ಕಡಮೆ ಯಾದೀತಾದದರಿಂದ ತೆರಿಗೆ ಮೂಲಕ ಹೆಚ್ಚುಮುಟ್ಟುವಳಿಗೆ ಬದಲು ಲುಕ್ಸಾನಿಗೆ ಕಾರಣವಾದೀತು. (೩.) ಉಪ್ಪಿನಕ್ರಯವು ಸಹಜವಾಗಿ ಏರಿದ್ದರಿಂದ ಅದರಪ್ರಯವು ಕಡಿಮೆಯಾಗಿ ಬಡಜನರಿಗೆ ಈ ಅತ್ಯಾವಶ್ಯಕವಾದ ಜಿನಸು ಸಿಕ್ಕದೆ ಅವರಲ್ಲಿ ಕ್ಷಾಮವೂ ರೋಗವೂ ಉಂಟಾಗುವವು. ಎಂಬದು.—ಕ. ಸು.

ಹಿಂದುಸ್ಥಾನದೊಳಗಿನ ಈಕೆಳಗಿನ ಮುಖ್ಯ ಪಟ್ಟಣಗಳ ಜನಸಂಖ್ಯೆಯನ್ನು ಇಲ್ಲಿ ಕೊಟ್ಟದ್ದೇವೆ—

ಆಗ್ರಾ	1,60,203	ಅಹಮ್ಮದಾಬಾದ್	127621
ಅಲಹಾಬಾದ್	1,18,547	ಕಾಶೀ	1,99,700
ಅಮೃತಸರ	1,51,896	ಬರೇಲಿ	1,13,117
ಬೆಂಗಳೂರು	1,55,857	ಬರೋಡೆ	1,01,818
ಭಾಗಲಪುರ	68,238	ಮುಂಬಯಿ	7,73,196
ಕಲ್‌ಕತ್ತೆ	7,66,298	ಕಾನ್‌ಪೂರ್	1,51,444
ಢಾಕಾ	79,076	ಹೈದರಾಬಾದ್	3,54,962
ಡಿಲ್ಲೀ	1,73,393	ತಿರುವನಾಪಳ್ಳಿ	84,449
ಗಯೆ	76,414	ಶಹಾಜಹಾನಪೂರ್	74,830
ಹೌರಾ	1,05,206	ಇಂದೂರ್	75,401
ಜೈಪೂರ್	1,42,578	ಜಬ್ಬಲ್‌ಪೂರ್	75,705
ಲಾಹೋರ್	1,49,369	ಗ್ವಾಲಿಯರ್	88,066
ಲಕನೌ	2,61,303	ಮದರಾಸ್	4,05,848
ಮಥುರೆ	73,807	ಮೀರತ್	99,565
ಮುಲ್ತಾನ್	68,674	ನಾಗಪೂರ್	98,299
ಪಾಟ್ನಾ	1,70,654	ಪೇಷಾವರ	79,982
ಪುಣೆ	1,29,751	ರಾಮಪುರ	74,250
ರಂಗೂನ್	1,34,176	ಸೂರತ್	1,09,844
ಅಂಬಾಲಾ	67,463		ಕ. ಸು.

EXTRACTS.

ಪುನರ್ವಿವಾಹಕ್ಕೆ ಸನ್ನದ್ಧರಾಗಿರುವ ವಿಧವೆಯರು.

ಮದರಾಸಿನಲ್ಲಿ ವಿಧವಾ ಹಿತಂಕರಣ ಪ್ರವರ್ತಕ ಸಭೆಯೆಂಬ ಒಂದು ಸಮಾಜವು ನೆಲಗೊಳಿಸಲ್ಪಟ್ಟಿರುವದೂ ಅದಕ್ಕೆ ಇತರ ವ್ಯಾಪಾರವಿಲ್ಲದವರೊಬ್ಬರು ಸೆಕ್ರೆಟೇರಿಯಾಗಿ ನಿಯಮಿಸಿರುವದೂ ಅನೇಕ ವಿಷಯಗಳಿಗೆ ಸಾಧಕವಾಗಿರುವಂತೆ ತೋರುತಿದೆ. ಸುಂದರಿಯರಾದ ತರುಣೀ ವಿಧವೆಯರು, ತಮ್ಮ ವಯೋವಿಭ್ರಮಾದಿಗಳಂ ಸಾರ್ಥಕ ಪಡಿಸಿಕೊಳ್ಳುವಬಗ್ಯೆ ಅನುಕೂಲರಾದ ಪತಿಯಂ ಹುಡುಕುತ ತಮ್ಮನ್ಯಾರಾದರು ಕರುಣಿಸಿದೊಡೆ ತಾವು ವಿವಾಹಕ್ಕೆ ಹಾಂಗ್ಯೆನೊ ದನೆ ಸನ್ನದ್ಧರಾಗಿರುವಂತೆ ಆಗಿಂದಾಗ್ಯೆ ಸದರೀ ಸಮಾಜದ ಕಾರ್ಯದರ್ಶಿಗೆ ಕಾಗದಗಳು ಬರೆದುಕೊಳ್ಳಲಿಕ್ಕೆ ಈಗ ಬಹಳ ಅನುಕೂಲವಾಗಿದೆ. ತದ್ವತ್ ಆಧುನಿಕ ವಿದ್ಯಾ ನಾಗರಿಕತೆಯಿಂದ ಸವೀನ ವಿಷಯಾನುಭವದೊಳು ಆಸಕ್ತರಾಗಿ ತಾರತಮ್ಯ ವಿಚಾರವಂ ತೊರೆದು ವರ್ತಿಸಲೆತ್ನಿಸಿರುವವರು ಕೆಲವರು ವಿದ್ಯಾವತಿಯರಾಗಿಯೂ ಲಾವಣ್ಯವತಿಯರಾಗಿಯೂ, ಕದಾಚಿತ್ ದ್ರವ್ಯವಂತರಾಗಿಯೂ ಇದ್ದರೆ ಅಂತವರು ವಿಧವೆಯಾಗಿದ್ದರೂ, ಚಿಂತೆಯಿಲ್ಲವು, ವಿಜಾತೀಯರಾಗಿದ್ದರೂ ಬಾಧಕವಿಲ್ಲವು, ವಯೋಧಿಕರಾಗಿದ್ದರೂ ಹಂಕೆಯಿಲ್ಲವು. ವಿವಾಹಮಾಡಿಕೊಳ್ಳುವದಾದರೆ ತಾವು ಕರಗ್ರಹಣಕ್ಕೆ ಸನ್ನದ್ಧರಾಗಿರುವಂತೆ ಬಾರ್ ಬಾರ್ ವ್ಯಕ್ತಪಡಿಸುತಲಿರಲಿಕ್ಕೂ, ಸುಲಭವಾಗಿದೆ. ಈ ಬ್ರಾಹ್ಮಣ ವಿಧವೆಯರು ಸುಂದರರಾಗಿಯೂ ಯೌವನವಂತರಾಗಿಯೂ, ವಿದ್ಯಾವಂತರಾಗಿಯೂ, ಇರುವ ಪತಿಗಳನ್ನು ಹ್ಯಾಗೆ ಅಪೇಕ್ಷಿಸುತ್ತಾರೆಯೋ ಹಾಗೆಯೇ ತಮ್ಮ ಧನಾ ಕಾಂಕ್ಷೆಯನ್ನು ಸಹ ಲಜ್ಜೆಯಿಲ್ಲದೆ ವ್ಯಕ್ತಪಡಿಸುವರಿರುತ್ತಾರೆ. ಅರ್ಥ ಕಾಮಗಳೆಂಬವು ಪರಸ್ಪರ ಅನ್ಯೋನ್ಯಸಂಬಂಧವುಳ್ಳವಾದ್ದರಿಂದ ಸ್ತ್ರೀ ಪುರುಷರಿಗೆ ಅವು ಈಗ ಬಹಳಮಟ್ಟಿಗೆ ಸಹಕಾರಿಗಳಾಗಿ ಪರಿಣಮಿಸಿರುವಂತೆ ಎಣಿಸಬೇಕಾಗಿದೆ. ಈ ವಿಷಯದಲ್ಲಿ ಒಂದಾನೊಂದು ಇಂಗ್ಲಿಷ್ ಪತ್ರಿಕೆಯು, ಅಭಿಪ್ರಾಯಪಡುತಿದೇನಂದರೆ:—ತಾರುಣ್ಯ ಸೌಂದರ್ಯಾಕ್ಚರ್ಯಗಳಂ ಮೋಹಿಸಿ ವಿವಾಹ ಕೈಕೊಂಬಡತಕ್ಕವರನೇಕರು ಹಿಂದೂಜನರಲ್ಲಿ ಧಾರಾಳವಾಗಿ ದೊರೆಯಬಹುದು. ಪರಂತು, ಸದ್ಗುಣ, ಸೌಶೀಲ್ಯ ಆಚಾರವ್ಯವಹಾರಾದಿಗಳಂ ಲಕ್ಷ್ಯದೊಳಟ್ಟು ವಿವಾಹಮಾಡಿಕೊಳ್ಳತಕ್ಕವರು ಬಹಳದುರ್ಲಭರೆಂಬ ಸದರೀ ಪತ್ರಿಕಾಭಿಪ್ರಾಯವು ನಿರಾಕರಿಸತಕ್ಕದ್ದಲ್ಲವು, ಯಾತಕ್ಕೆಂದರೆ-ಪ್ರೀತಿ ಸ್ನೇಹಾನುರಾಗಗಳಂ ವೃದ್ಧಿಗೊಳಿಸಲಿಕ್ಕೆ ವಿವಾಹಾತ್ಪೂರ್ವದೊಳು ಸಾಧಕಗಳಾದ್ದಾನುಕೂಲ್ಯಗಳೂ ಅವಕಾಶಗಳೂ ಇಂಗ್ಲೀಷಿನವರಿಗೆ ದೊರೆಯುವಂತೆ ನಮಗೆ ದೊರೆಯುವದಿಲ್ಲವು. ಇಂಗ್ಲೀಷಿನವರು ತಮ್ಮ ಭರ್ತೃ ಭಾರ್ಯಾ ಸಂಬಂಧವನ್ನುಉಚಿತರೀತಿಯಿಂದ ಮುಂದಾಗಿ ನಿರ್ಧರಿಸಿಕೊಂಡು ಪರಸ್ಪರಾನುಕೂಲ್ಯವು ವ್ಯಕ್ತವಾದ ಬಳಿಕ ವಿವಾಹ ಮಾಡಿಕೊಳ್ಳುವರು. ಈ ಸಂಪ್ರದಾಯದಿಂದ ಆಜನ್ಮ ಬ್ರಹ್ಮಚಾರಿಗಳೂ ಬ್ರಹ್ಮಚಾರಿಣೀಯರೂ ಅವರಲ್ಲಿ ಬಹುಶ್ಯತಃ ಏರ್ಪಟ್ಟರಲಿಕ್ಕೆ ಈಗ ನೆಲಗೊಂಡಿರುವ ಕಾರ್ನಮೆಂಟುಗಳೇ ಸಾಕಾದ ದೃಷ್ಟಾಂತಗಳಾಗಿರುತಿವೆ. ನಮ್ಮಲ್ಲಾದರೋ ವಿವಾಹವಾದ ಬಳಿಕಲೂ ಬಹುಕಾಲಪರಿಯಂತರ ಭರ್ತೃ ಭಾರ್ಯೆಯರ ಪರಸ್ಪರ ಮನೋಭಾವಗಳು ವ್ಯಕ್ತಗಳಾಗದೆ ಒಬ್ಬರಿಗೊಬ್ಬರು ಹೊಸಬರಾಗಿಯೇ ಇರುತ್ತಾರೆ. ಇದು ದುಷ್ಟವೆಂದು ತೋರುವ ಪಕ್ಷಕ್ಕೆ ಇಂಗ್ಲೀಷಿನವರ ಪದ್ಧತಿಯೇನಮಗೆ ಈಗ ಪರಿಗ್ರಾಹ್ಯವಾಗಬೇಕಷ್ಟೆ. ಈಗ ವಿಧವಾ ಹಿತಂಕರಣ ಪ್ರವರ್ತಕ ಸಮಾಜದವರು ಸಾಧ್ಯವಾದಷ್ಟು ತ್ವರೆಯೊಳು ನಮಗೆ ನೂತನವಾಗಿರುವ ಮತ್ತು ಇಂಗ್ಲೀಷಿನವರಲ್ಲಿ ಬಳಕೆಯೊಳಿರುವ ಮೇಲೆ ಕಂಡ ಸಾಮಾಜಿಕ ಪದ್ಧತಿಯನ್ನು ವ್ಯವಹಾರದೊಳುತರಲೆತ್ನಿಸುವದು ಕೇವಲ ಆವಶ್ಯಕತೆಯೆಂದೆಣಿಸುವೆವು ವಿಧುರರು ಪುನರ್ವಿವಾಹದ ಪೂರ್ವದಿವಸದಲ್ಲಿ ವಿವಾಹವಾಗತಕ್ಕವಳ ರೂಪ ಗುಣ ಸಾಶೀಲ್ಯಾದಿಗಳಂ ಪರೀಕ್ಷಿಸಿ ತೃಪ್ತಿಗೊಳ್ಳಲಿಕ್ಕೂ ನೂತನವಾಗಿ ಮುಂದೆ ಏರ್ಪಡಬೇಕಾದ ಪ್ರೀತಿಯಂ ವೃದ್ಧಿಗೊಳಿಸಲಿಕ್ಕೂ ತಕ್ಕ ಅವಕಾಶವಂ ಕಲ್ಪಿಸಿ ಅವರು ಏಮ ಬಡಿಸಬೇಕಾದ್ದು ಪ್ರೊಫೆಸರ್ ಸಮಾಜದ ಸೆಕ್ರೆಟರಿಯವರ ಕರ್ತವ್ಯವೆಂದು ಭಾವಿಸುವೆವು.

THE MYSORE GAZETTE.
ಮೈಸೂರು ಗೆಜೆಟ್.

ಶ್ರೀಮನ್ಮಹಾರಾಜ ರಾಜಶ್ರೀ ಸಾಹೇಬ್ ಬಹದ್ದೂರವರ ದಿವಾನರವರಿಂದ ಕೊಡಲ್ಪಟ್ಟ ಆಜ್ಞಾಪನೆಗಳು.

ನಂ.೨೧೧. ತಾ|| ೨೯ನೇ ಮಾರ್ಚಿ೧೮೮೮.—ಮೈಸೂರು ಶೀಮೆಯ ಚೀಫ್ ಜಡ್ಜಿಯವರಾದ ಮೆ|| ಸಿ. ಜಿ ಪ್ಲ್ಯಾಮರ್‌ಯವರು ರಜಾ ಮೇಲೆ ಗೈರ್‌ಹಾಜರಾಗಿರುವವರಿಗೆ ಅಥವಾ ಮತ್ತೊಂದು ಹುಕುಂ ಕೊಡುವ ತನಕ ಘನವೆತ್ತ ಶ್ರೀಮನ್ಮಹಾರಾಜ ರಾಜಾಸಾಹೆಬ್ ಬಹದ್ದೂರವರು ಇದರಡಿ ಕಂಡ ಮೊಕರರಿಯಂ ಮಾಡಲು ಆಜ್ಞಾಪಿಸಿರುತ್ತಾರೆ. ಮೈಸೂರು ಚೀಫ್ ಕೋರ್ಟಿನ ಜಡ್ಜಿಯರಾದ ಮೆ|| ಟಿ. ಆರ್. ಎ. ತುಂಬುಚೆಟ್ಟಿರವರು ಮೈಸೂರು ಚೀಫ್ ಜಡ್ಜಿಯರಾಗಿ ಆಕ್ಟು ಮಾಡತಕ್ಕದ್ದು. ಗವರ್ನಮೆಂಟ ಅಡ್ವೋಕೇಟರಾದ ಬ್ಯಾರಿಸ್ಟರ್ ಮೆ|| ಸ್ಟರ್ ಪ್ಪಮಿನಾ ಅಯ್ಯರವರು ಮೈಸೂರು ಚೀಫ್ ಕೋರ್ಟಿನ ಜಡ್ಜಿಯರಾಗಿ ಆಕ್ಟು ಮಾಡುತಲಿರತಕ್ಕದ್ದು. ಪರುಷ ಕೊಡಾವರ್ತಿ ಕೊಡಲ್ಪಡುವ ರಜಾ ಪೂರೈಸಿ ಮರಳಿ ಚೀಫ್ ಕೋರ್ಟು ತೆರೆಯಲ್ಪಟ್ಟ ಕೂಡಲೇ ಅವರು ಕೆಲಸದ ಮೇಲೆ ಹೋಗಿ ಹಾಜರಾಗತಕ್ಕದ್ದು.

ಮೊಕ್ಕಾಂ ನಂ. ೨೯೬೮.—ತಾ|| ೨೫ನೇ ಮಾರ್ಚ್ ೮೮—ಗೌರಿಬಿದನೂರು ತಾಲ್ಲೂಕು ಅಮಲ್‌ದಾರ್ ರಘುನಾಥರಾಯರಿಗೆ, ೧೮೮೮ನೇಯ ಇಸವಿ ಏಪ್ರಿಲ್ ೧೦ನೇ ಮಕ್ಕಾಂ ಲಾಗಾಯಿತು ಅಥವಾ ಅವರು ಉಪಯೋಗಿಸಿಕೊಳ್ಳುವ ತಾರೀಖ್ ಮೊದಲು ಮೂರುವಾರಗಳ ಪ್ರಿವಿಲೀಜ ರಜಾಕೊಡಲ್ಪಟ್ಟರುತಿದೆ. ಶಿರಸ್ತೇದಾರ್ ಗಂಗಾಧರಪ್ಪನವರು, ರಘುನಾಥರಾಯರವರು ರಜಾಮೇಲಿರುವ ಕಾಲದಲ್ಲಿ ಅಥವಾ ಮತ್ತೊಂದು ಹುಕುಂ ಕೊಡುವ ತನಕ ಸದರೀ ತಾಲ್ಲೂಕ್‌ಚಾರ್ಜನ್ನಿರತಕ್ಕದ್ದು. ಅವರಿಗೆ ೩ನೇ ಕ್ಲಾಸ್ ಮ್ಯಾಜಿಸ್ಟ್ರೇಟ್ ಅಧಿಕಾರಿಗಳು ಸಹ ಇದರಿಂದ ಕೊಡಲ್ಪಟ್ಟರುತಿವೆ.

ಮೊಕ್ಕಾಂ ನಂ. ೨೯೯೨—ತಾ|| ೩೦ನೇ ಮಾರ್ಚಿ ೧೮೮೮.—ಫ್ರ್ಯಾನ್ಸಿಸ್ ಆರ್ಟ್ಲಿ ಎಂಬವರು ೧೮೮೮ನೇ ಇಸವಿ ಮಾರ್ಚಿ ೨೫ನೇ ತಾರೀಖ್ ಮೊದಲು, ಅಂಗೀಕಾರಾರ್ಹವಾದ ನೌಕರಿಯ ಮೇಲೆ ಬಾಯಂ ಮಾಡಲ್ಪಡತಕ್ಕಾದ ನಿಯಮಕ್ಕೊಳಪಟ್ಟು, ಅಜಮಾಯಿಷೀ ತರೀಕ್, ೬ತಿಂಗಳ ವರಿವಿಗೆ ಎರಡನೇ ಕ್ಲಾಸ್ ಆಸ್ಪಿಟಲ್ ಅಸಿಸ್ಟೆಂಟರಾಗಿ ಮೊಕರರ್ಮಾಡಲ್ಪಟ್ಟರುತ್ತಾರೆ.

ಮೊಕ್ಕಾಂ ನಂ. ೨೯೯೫—ಮೆ|| ಸಿ. ರಾಜಾರಾಮರಾಯರವರು, ೩ನೇಕ್ಲಾಸ್ ಸಬ್‌ಅಸಿಸ್ಟೆಂಟ ಸರ್ಜಿಯನ್‌ರಾಗಿ ಅಜಮಾಯಿಷೀ ತರೀಕ್, ಮೊಕರರ್ಮಾಡಲ್ಪಟ್ಟು, ಸಿವಿಲ್‌ಸರ್ಜಿಯನ್‌ರ ತಾಬೇಯಲ್ಲಿದ್ದು ಕೆಲಸನೋಡತಕ್ಕಬಗ್ಯೆ ಶಿವಮೊಗ್ಗ ಡಿಸ್ಟ್ರಿಕ್ಟಿಗೆ ಕಳುಹಿಸಲ್ಪಟ್ಟರುತ್ತಾರೆ.

ಮೊಕ್ಕಾಂ ನಂ. ೨೯೯೯—ಮೈಸೂರು ಡಿಸ್ಟ್ರಿಕ್ಟು ಫಾರೆಸ್ಟು ಸ್ಯೂಪರಿಂಟೆಂಡೆಂಟರಾದ ಮೆ||ರಸ್ಸೆಲ್‌ಯವರಿಗೆ ೧೮೮೮ನೇ ಇಸವಿ ಏಪ್ರಿಲ್ ೮ನೇ ಮಕ್ಕಾಂ ಲಾಗಾಯಿತು ಅಥವಾ ಅವರು ಉಪಯೋಗಿಸಿಕೊಳ್ಳುವ ತಾರೀಖ್ ಮೊದಲು, ೩ತಿಂಗಳ ಕಾಲ ಪರೀಕ್ಷೆ ರಜಾಕೊಡಲ್ಪಟ್ಟರುತಿದೆ. ಮೈಸೂರು ಡಿಸ್ಟ್ರಿಕ್ಟು ಫಾರೆಸ್ಟ್ ಪ್ರೊಬೇಷನರ್ ಮೆ|| ಬಿ. ರಾಮಸ್ವಾಮಯ್ಯನವರು, ಮೆ|| ರಸ್ಸೆಲ್‌ಯವರು ರಜಾ ಮೇಲೆ ಗೈರ್‌ಹಾಜರಾಗಿರುವ ಕಾಲದಲ್ಲಿ ಅಥವಾ ಮತ್ತೊಂದು ಹುಕುಂ ಕೊಡಲ್ಪಡುವ ತನಕ ಫಾರೆಸ್ಟುಗಳ ಸ್ಯೂಪರಿಂಟೆಂಡೆಂಟರಾಗಿ ಆಕ್ಟು ಮಾಡತಕ್ಕದ್ದು.

ಮೊಕ್ಕಾಂ ನಂ. ೭೧-೭೨—ತಾ||೧ನೇಏಪ್ರಿಲ್ ೧೮೮೮.—ಹಾಸನ ತಾಲ್ಲೂಕ್ ಅಮಲ್‌ದಾರ್ ಹೆಚ್. ಶ್ರೀನಿವಾಸರಾಯರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖ್ ಲಾಗಾಯಿತು ಒಂದು ತಿಂಗಳ ಪ್ರಿವಿಲೇಜ ರಜಾ ಕೊಡಲ್ಪಟ್ಟರುತಿದೆ ಗ್ರಾಮದ ಡೆಪ್ಯುಟಿ ಅಮಲ್‌ದಾರ್ ಸಿ. ಕೃಷ್ಣರಾಯರವರು ಶ್ರೀನಿವಾಸರಾಯರವರು ರಜಾಮೇಲೆ ಇರುವಕಾಲದಲ್ಲಿ ಅಥವಾ ಮತ್ತೊಂದು ಹುಕುಂ ಕೊಡಲ್ಪಡುವ ತನಕ ತಮ್ಮ ಸ್ವಂತ ಕೆಲಸದೊಡನೆ ಹಾಸನ ತಾಲ್ಲೂಕ್ ಚಾರ್ಜನ್ನಿರತಕ್ಕದ್ದು.

ಮೊಕ್ಕಾಂ ನಂ. ೭೪—ಹೊಳೇನರಸೀಪುರ ತಾಲ್ಲೂಕ್ ಅಮಲ್‌ದಾರ್ ಗೋಪಾಲ ಕೃಷ್ಣಯ್ಯಂಗಾರ್ರವರಿಗೆ ಅವರುಪಯೋಗಿಸಿಕೊಳ್ಳುವ ತಾರೀಖ್ ಮೊದಲು, ೧೫ದಿವಸಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟರುತಿದೆ. ಗೋಪಾಲಕೃಷ್ಣಯ್ಯಂಗಾರ್ರವರು ರಜಾಮೇಲೆ ಗೈರ್‌ಹಾಜರಾಗಿರುವ ಕಾಲದಲ್ಲಿ ಅಥವಾ ಮತ್ತೊಂದು ಹುಕುಂ ಕೊಡಲ್ಪಡುವ ತನಕ ಶಿರಸ್ತೇದಾರ್ ಶ್ರೀನಿವಾಸರಾಯರವರು, ಹೊಳೇನರಸೀಪುರ ತಾಲ್ಲೂಕ್ ಚಾರ್ಜನ್ನಿರತಕ್ಕದ್ದು. ಇವರಿಗೆ ೩ನೇ ಕ್ಲಾಸ್ ಮ್ಯಾಜಿಸ್ಟ್ರೇಟ್ ಅಧಿಕಾರವು ಸಹ ಕೊಡಲ್ಪಟ್ಟರುತಿವೆ.

ಮೊಕ್ಕಾಂ ನಂ. ೭೦—ತಾ|| ೨ನೇಏಪ್ರಿಲ್೮೮.—ಕಳೆದ ತಿಂಗಳ ೩೧ನೇತಾರೀಖಿನ ಪೂರ್ವಾಹ್ನದಲ್ಲಿ ಮೈಸೂರು ಡಿಸ್ಟ್ರಿಕ್ಟ ಪೊಲೀಸ್‌ಕೋರ್ಟ್ ಚಾರ್ಜನ್ನು ಮಾಸ್ಟರ್ ಸಿ ಕ್ರೆಗಿಯವರು ಮೆ|| ಎಸ್. ಹೇಮಾಜಿ ರಾಯರವರಿಗೆ ಒಪ್ಪಿಸಲು ಅವರದು ವಹಿಸಿರುತ್ತಾರೆ.

BANGALORE:—Printed and published for the Proprietor at the KARNATIC Press.—1888

ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA.

ಪ್ರತಿ ಸೋಮವಾರ ಪ್ರಾತಃಕಾಲದಲ್ಲಿ ಪ್ರಕಟಿಸಲ್ಪಡುವದು.

Published every Monday Morning.

ಪ್ರಕಾಶನುವಿವಿಧವೃತ್ತ್ಯವಗಮಾರ್ಥಂ ಕರ್ನಾಟಕಪ್ರಕಾಶನವರಾಭಿಧಾ ಪ್ರತಿಕಾ ಸಾಹಿತಿಕೋಭಿತಾ [illegible]

Vol. XV.] BANGALORE:—MONDAY, APRIL 16, 1888. [No. 15.

ಸಂಪುಟ ೧೫.] ಬೆಂಗಳೂರು:—ಸನ್ ೧೮೮೮ನೇ ಇಸವಿ ಏಪ್ರೆಲ್ ೧೬ನೇ ತಾರೀಖು ಸೋಮವಾರ. [ಸಂಖ್ಯೆ ೧೫.

ಕರ್ಣಾಟಕ ಪ್ರಕಾಶಿಕಾ

ಪತ್ರಿಕೆಯ ಚಂದಾ ದರಗಳು,
೧೮೮೮ನೇ ಇಸವಿ ಜನವರಿಯಿಂದಾಯಿತು
ಕಡಮೆಮಾಡಲ್ಪಟ್ಟಿರುತಿದೆ.

ಈ ಪತ್ರಿಕೆಯ ಚಂದಾದಾರರನ್ನಿಕೆ ಅನೇಕರ ಅಪೇಕ್ಷೆಯನ್ನಿ ನೆರವೇರಿಸುವ ಉದ್ದೇಶದೊಡನೆಯೂ, ಪರಿಮಿತವಾದ ಆಯುತಿಯುಳ್ಳವರಿಗೆಲ್ಲ ಈ ಪತ್ರಿಕೆಯು ಸುಲಭವಾಗಿ ಲಭಿಸುವಂತಿರಬೇಕೆಂಬ ಅಭಿಪ್ರಾಯದೊಡನೆಯೂ ಇವರ ಚಂದಾದರವನ್ನು ಇವರಡಿಕಂಡಂತೆ ಕಡಮೆಮಾಡಿರುತ್ತೇವೆಂದರೆ:—

ಇಂಗ್ಲಿಷ್ ಮತ್ತು ಕನ್ನಡಭಾಗಗಳಿಗೆ.

	ಸ್ಥಳದವರಿಗೆ	ಪರಸ್ಥಳದವರಿಗೆ
12 ತಿಂಗಳಿಗೆ	8—0—0	9—0—0
6 ,,	4—0—0	4—8—0
3 ,,	2—8—0	2—8—0

ಇಂಗ್ಲಿಷ್ ಅಥವಾ ಕನ್ನಡಭಾಗಗಳಿಗೆ.

	ಸ್ಥಳದವರಿಗೆ	ಪರಸ್ಥಳದವರಿಗೆ
12 ತಿಂಗಳಿಗೆ	4—0—0	5—0—0
6 ,,	2—0—0	2—8—0
3 ,,	1—4—0	1—8—0

ಷರಾ—ಅಂಚೆ ಮುಸ್ಸೂಲಿಗಳು, ಪೋಲೀಸ್ ಮತ್ತು ತಾಲ್ಲೂಕ್ ಸ್ಕೂಲ್‌ಮಾಸ್ಟರುಗಳು, ಶ್ಯಾನುಭೋಗರು, ಪಟೇಲರು, ವಿದ್ಯಾರ್ಥಿಗಳು, ಇವರಿಗೆಲ್ಲ ಈ ಪತ್ರಿಕೆಯು ಷರಾ ಚಂದಾದವರಿಕ್ಕೆ ಕೊಡಲ್ಪಡುವದು. ಅಡ್ವಾನ್ಸ್‌ಮೊಬಲಗುನಿಡ ಬಾರದ ದರಖಾಸ್ತುಗಳಿಗೆ ಸುತರಾಂ ನಿಗೆ(ಕೊಡ)ಲ್ಪಡಲಾರದು. ಚಂದಾದಾರರು ಇಂಗ್ಲಿಷ್ ಭಾಗವನ್ನಾಗಲಿ ಕನ್ನಡಭಾಗವನ್ನಾಗಲಿ ಅಥವಾ ಎರಡನ್ನಾಗಲಿ ತೆಗದುಕೊಳ್ಳಬಹುದು. ಚಂದಾಹಣವನ್ನು ಮುಂಗಡವಾಗಿಯೇ ಸಲ್ಲಿಸತಕ್ಕದ್ದು. ಮೂರುತಿಂಗಳಿಗಿಂತ ಕಡಮೆಯಾಗಿ ಚಂದಾ ಮೊಬಲಗು ಅಂಗೀಕರಿಸಲ್ಪಡಲಾರದು.

ನೋಟುಗಳು ರವಾನಿಸತಕ್ಕವರು ಮೊದಲು ಕಳುಹಿಸುವ ಅರ್ಧನೋಟು ತಲುಪಿದಬಗ್ಗೆ ನಮ್ಮಕಾಗದವು ಬಂದಕೂಡಲೇ ಬಾಕೀ ಅರ್ಧ ನೋಟನ್ನು ರವಾನಿಸತಕ್ಕದ್ದು. ಲೇಬಲ್‌ಗಳು ಕಳುಹಿಸತಕ್ಕವರು ರೂಪಾಯಿ ಒಂದಕ್ಕೆ ಒಂದುಆಣೆಮೇರೆಗೆ ಡಿಸ್ಕೌಂಟ್ ಸಹ ಸೇರಿಸಿ ಕಳುಹಿಸತಕ್ಕದ್ದು. ಅಧಿಕಾರಿಗಳಿಂದ ಜಾಸ್ತಿಕ್ರಯವುಳ್ಳ ಲೇಬಲ್‌ಗಳನ್ನು ಕಳುಹಿಸಿದರೆ ಡಿಸ್ಕೌಂಟ್‌ಯಿಲ್ಲದೆ ಕಳುಹಿಸಲ್ಪಡುವ ಮೊಬಲಗಿನಲ್ಲಿ ಅದು ಮಜರಾ ಮಾಡಲ್ಪಟ್ಟು ಮಿಕ್ಕಮೊಬಲಗು ಲೆಕ್ಕಕ್ಕೆ ದಾಖಲ್ಮಾಡಿಕೊಳ್ಳಲ್ಪಡುವದು.

ಪ್ರಕಟನೆಯ ರಿವಾಜ್.

ಮೊದಲನೆಯದಫಾ ಪಂಕ್ತಿ ಒಂದಕ್ಕೆ	೦—೨—೦
ಎರಡನೆಯದಫಾ ಪಂಕ್ತಿ ಒಂದಕ್ಕೆ	೦—೧—೦

ಷರಾ—ಎರಡಾವರ್ತಿಗಿಂತ ಜಾಸ್ತೀಯಾಗಿ ಎಷ್ಟುತಡವೆ ಖಾಯಮ್ ಮಾಡಿದಾಗ್ಯೂ ಪಂಕ್ತಿ ಒಂದಕ್ಕೆ ೧ಆಣೆಯಂತೆಯೇ ಲೆಕ್ಕ ಮಾಡಲ್ಪಡುವದು. ಈ ಪತ್ರಿಕೆಯಲ್ಲಿ ಖಾಯಮ್‌ಮಾಡುವಬಗ್ಗೆ ಪ್ರಕಟನೆಗಳು ಕಳುಹಿಸುವವರು ಅವು ಎಷ್ಟುಸರ್ತಿ ಖಾಯಮ್ ಮಾಡಲ್ಪಡಬೇಕೆಂಬ ಆ ಅಂಶವನ್ನು ಸ್ಪಷ್ಟವಾಗಿ ತಿಳಿಸತಕ್ಕದ್ದು. ಇಲ್ಲದಪಕ್ಷಕ್ಕೆ ಅವರು ನಮಗೆ ನಿಲ್ಲಿಸುವಂತೆ ಬರೆಯುವತನಕ ಅವು ಪ್ರಕಟಿಸುತಲಿದ್ದು ಹಾಗೆ ಎಷ್ಟಾವರ್ತಿ ಪ್ರಕಟಿಸಲ್ಪಟ್ಟಿದ್ದಾಗ್ಯೂ ಮೇಲೆಕಂಡ ದರದಂತೆ ಕಿಮ್ಮತ್ ವಸೂಲ್ಮಾಡಲ್ಪಡುವದು. ಪ್ರಕಟನೆಯಬಗ್ಗೆ ಕಳುಹಿಸಲ್ಪಡತಕ್ಕ ಪ್ರಕಟನೆಗಳನ್ನೆಲ್ಲಾ ಯಾಹವಾರದಮಿನ ಮಧ್ಯಾಹ್ನ ೨ ಘಂಟೆಯೊಳಗಾಗಿ ಕಳುಹಿಸಬೇಕು. ಪ್ರಕಟನೆಯಬಗ್ಗೆ ಈ ಪತ್ರಿಕೆಗೆ ಕಳುಹಿಸಲ್ಪಡತಕ್ಕ ಕಾಗದಗಳಲ್ಲಿ ತಿಳಿಸಲ್ಪಡುವ ಅಭಿಪ್ರಾಯಗಳಿಗೆ ನಾವು ಜವಾಬ್ದಾರರಾಗಲಾರೆವು. ಕ್ರಮವಾಗಿ ರುಜುಮಾಡಿದಹೊರತು ಯಾವಕಾಗದವನ್ನು ಪ್ರಕಟಿಸಲಾರೆವು. ಸಿಲಾಕಿಲ್ಪಟ್ಟಕಾಗದಗಳುಮರಳಿವಾಪಸ್ಸುಕಳುಹಿಸಲ್ಪಡಲಾರವು.

"IT RECOMENDS ITSELF"

ALL WHO SUFFER FIND SURE RELIEF.

LITTLE'S

ORIENTAL BALM

THE MOST EFFECTUAL MODERN REMEDY FOR PAIN.

ಲಿಟಿಲ್ ಯೆಂಬುವರಿಂದ ತಯಾರುಮಾಡಲ್ಪಟ್ಟ "ಬಾಧಸಂಹಾರಿಣೀ" ಎಂಬ ಪೂರ್ವದೇಶ ಸಂಬಂಧವಾದ ಅಮೂಲ್ಯ ತೈಲವು ಸ್ವಶಕ್ತಿ ಪ್ರದರ್ಶಕವಾದದ್ದೂ, ಮತ್ತು ಸಫಲವಾದ ನವೀನ ಪ್ರತಿಕ್ರಿಯಾರೂಪವಾದ ಔಷಧವು. ಇದರಿಂದ ಸಕಲ ವಾತರೋಗಗಳೂ, ವಾತಸಂಬಂಧಗಳಾದ ಸಂಧಿಬಂಧಗಳೂ ನಿವೃತ್ತಿಯಾಗುವವು. ಮುಖ್ಯವಾಗಿ ಬಹುಕಾಲಿಕವಾದ ವಾತರೋಗಗಳು, ಶೀತ, ಗಂಟಲಿನಲ್ಲಿ ಉರಿ, ನಡುವುನೋವು, ಕೀಲುವಾಯು, ಕಟಿವಾಯು, ಉಳುಕು ನೋವು, ತಲೆನೋವು, ತಿಮಿರ್ಭ್ರಮು ಮುಂತಾದ ರೋಗಗಳಿಗೆಲ್ಲ ನಿಸ್ಸಂದೇಹವಾಗಿ ಬಹಳ ಪ್ರಯೋಜನವನ್ನುಂಟುಮಾಡತಕ್ಕದ್ದು. ಈ ತೈಲವನ್ನು ನೋವುಳ್ಳ ಸ್ಥಳಗಳಲ್ಲಿ ಕೆಲವಾವರ್ತಿ ಸವರಿ ಶಾಖವುಂಟಾಗುವಂತೆ ಚೆನ್ನಾಗಿ ತಿಕ್ಕಿದಲ್ಲಿ ಸಹಜಗಳಾದ ಯಿಲ್ಲಾ ನೋವುಗಳನ್ನು ನಿವೃತ್ತಿ ಮಾಡುವಂತಾ ಉತ್ತಮ ತೈಲವಾಗಿರುತ್ತದೆ. ಸಕೃತ್ಸೇವನೆಯಿಂದಲೇ ಅರತಲೆನೋವು ಮತ್ತು ಜೋಮು ಕುಗ್ಗಾಂಗ ನಿವೃತ್ತಿಯಾಗುವದು. ಗಂಟಲಿನಲ್ಲಿಉಂಟಾಗುವ ಉರಿ ಅಥವಾ ವ್ರಣಗಳಿಗೆ ಈ ತೈಲವು ಅದ್ಭುತವಾದ ಮತ್ತು ಶೀಘ್ರವಾದ ಸಂಪೂರ್ಣ ಗುಣವನ್ನುಂಟುಮಾಡುವದು. ಅದ್ಭುತವಾದ ಈ ಔಷಧವನ್ನು ಅಜಮಾಯಿಷೀ ಮಾಡಿದಲ್ಲಿ ಅದರ ಪ್ರಯೋಜನವು ಸ್ವತಏವ ವ್ಯಕ್ತವಾಗುವದು. ಈ ತೈಲವು ಶೀತಗಾಳಿ ಮಂಜುಮುಂತಾದವುಗಳಿಗೊಳಗಾಗಿ ಸಂಚರಿಸುವಂತಾ ಪ್ರಯಾಣಿಕರು, ಬೇಟೆಯಾಡುವವರು, ವ್ಯಾಯಾಮ ಮಾಡುವವರು, ಮುಂತಾದವರಿಗೆಲ್ಲ ಅಮೂಲ್ಯವಾದದ್ದು.

ಪರಿಶೀಲಕರ ಅಭಿಪ್ರಾಯವು.

ಐರ್‌ಲ್ಯಾಂಡ್ ದೇಶದ ಫಾರ್ಮಸ್ಯೂಟಿಕಲ್ ಸೊಸೈಟಿಯಿಂದ ಔಷಧಶಾಲೆಯ ಪ್ರೆಸಿಡೆಂಟರಾಗಿಯೂ, ಸರ್ಜೇ ದೇಲದ ಜನಾಲಜಿಕಲ್ ಸೊಸೈಟಿ ಯೆಂಬ ಮೃತಪ್ರಾಣಿಧಾತುವಿವೇಚಕ ಸಮಾಜದ ಮೆಂಬರಾಗಿಯೂ, "ಮಿನರಲ್ ವಾಟರ್ಸ್ ಆಫ್ ಯೂರಪ್" ಎಂಬ ಗ್ರಂಥಕರ್ತರಾಗಿಯೂ, ರಸಾಯನ ವಿಧಿಜನ ವಿಷಯಕವಾದ ಅನೇಕ ಲೇಖನಾಧಿಕಾರಿಯಾಗಿಯೂ, ಇರುವ ಪ್ರೊಫೆಸರ್ ಟಿಚ್ ಬೋರ್ನ (C. R. Tichborne, L. L. D, F. C. S., M. R. I. A.,) ಯೆಂಬವರು ಅಭಿಪ್ರಾಯ ಪಟ್ಟಿರುತ್ತಾರೇನೆಂದರೆ—ಲಿಟಿಲ್‌ಯವರ ಓರಿಯಂಟಲ್‌ತೈಲವನ್ನು ಬಾಗಲೂಕೆ ಮೊದಲೆ ಪರೀಕ್ಷಿಸಿದ್ದರೊಳಗೆ ಇದು ಬಹುವಿಧ ಮೂಲಿಕೆಗಳ ರಸಮಿಶ್ರವಾದ ತೈಲಸಂಯೋಗಪಟ್ಟಿತಲ್ಲದೆ, ಇದು ಹೊರಗೆ ಉಪಯೋಗಿಸಲ್ಪಡುವಾಗ ಉದ್ವಾಂಗ ನಿರುಪದ್ರವಕರವಾದದ್ದಾಗಿದ್ದರೂ, ವಿಶಾಲ ಪ್ರಬಲ ರೋಗ ನಿವಾರಕ ಶಕ್ತಿಯುಳ್ಳದ್ದಾಗಿರುತ್ತದೆ. ಈ ಮಿಶ್ರಿತವು ಸರಗಳನ್ನು ಸ್ಥಿಮಿತಕ್ಕೆ ತರತಕ್ಕದ್ದಾಗಿರುವದರಿಂದ ಇದು ಅನೇಕ ತರದ ರೋಗಗಳಿಗೆ ಉಪಯುಕ್ತವೆಂದು ತಿಳಿಸಲ್ಪಟ್ಟಿದೆಯೋ ಸದರೀ ರೋಗಗಳಲ್ಲಿ ಅದರ ಪ್ರಯೋಜನವು ವ್ಯಕ್ತವಾಗುವದು. ಈ ತೈಲವು ಸಂಪೂರ್ಣ ಜಾಗರೂಕತೆಯೊಡನೆ ತಯಾರಿಸ್ಮಾಡಿದ್ದಾಗಿರುತದೆ.

ಇದರ ಕ್ರಯ—ಸೀಸೆ ಒಂದಕ್ಕೆ ೧ ರೂಪಾಯಿ.

ಇದು ವಿವಿಧ ಔಷಧ ಶಾಲೆಯಲ್ಲಿಯೂ, ಮದರಾಸ್ ಶಂಭುದಾಸ್ ಬೀದಿಯಲ್ಲಿ, ೨೦ನೇ ನಂಬರ್ ಮನೆಯೊಳಗಿರುವ, ಮೆ. ಎ. ಸಿ ಬೆರ್ರಿಮನ್ ಯವರಲ್ಲಿಯೂ, ಈ ಪೂರದಲ್ಲಿರುವ ಅವರ ಏಜಂಟ್‌ಗಳಾದ ಜೆ. ವೆಸ್ಟ್ ಯವರ ಕಂಪನಿಯಲ್ಲಿಯೂ, ಮೆ. ಕೆಪ್ಟನ್ ಅಂಡ್ ಕಂಪನಿಯವರಲ್ಲಿಯೂ, ರಿಗ್ಸ್‌ಯವರ ಕಂಪನಿಯಲ್ಲಿಯೂ ದೊರೆಯುವದು.

AGENTS.— Messrs, J. West, Chemist, &c., Bangalore.
Captain & Co. Chemists, Bangalore.
Riggs & Co, Chemists, Bangalore; and of
Mahomed Yousoff and Sons, The Cash Bazar, Bangalore.
A. C. Berryman & Co.,
20 Sambodoss Street Madras.

ನೋಟಿಸ್.

ದಕ್ಷಿಣ ಮಹಾರಾಷ್ಟ್ರ ರೈಲ್ವೆ ಕಂಪನಿ.
ಮೈಸೂರು ಶಾಖೆ.

ಇದರಿಂದ ಸಮಸ್ತಜನಗಳಿಗೂ ತಿಳಿಸುವದೇನೆಂದರೆ:—

ಸನ್ ೧೮೮೮ನೇ ಇಸವಿ ಜನವರಿ ೧ನೇತಾರೀಖು ಮೊದಲು ಒಂದು ವರುಷ ಕಾಲದವರೆಗೆ, ರ್ಯೆಲ್ವೆ ಗಾಡಿಗಳ ಉಪಯೋಗಕ್ಕಾಗಿ, ಇದರಡಿ ತಿಳಿಸುವ ಸ್ಟೇಷನ್‌ಗಳಲ್ಲಿ ಮತ್ತು ತೂಕದಷ್ಟು ಜಂಗ್ಲಿ ಸೌದೆಯ ಸರಬರಾಯಿ ಬಗ್ಗೆ ದರಖಾಸ್ತುಗಳು ಮುಂದಿನ ತಿಂಗಳ ೧೫ನೇ ತಾರೀಖುವರಿವಿಗೆ ಇದರಡಿ ರುಜು ಮಾಡುವವರಿಂದ ಬರಮಾಡಿಕೊಳ್ಳಲ್ಪಡುವದು.

ಮೈಸೂರು	150 ಟನ್‌ಗಳು,	ತಿಂಗಳೊಂದಕ್ಕೆ	
ಮದ್ದೂರು	100	,,	,,
ಬಿಡದಿ	250	,,	,,
ಹಿರಿಯೂರು	200	,,	,,
ಗುಬ್ಬಿಗೂ ಅರಸೀಕೆರೆಗೂ ಮಧ್ಯೆ	300	,,	,,

೨. ಸದರೀ ಸರಬರಾಯಿ, ಈಗ ಜಾರೀಯಲ್ಲಿರುವ ಷರತ್ತುಗಳ ಸ್ಪೆಸಿಫಿಕೇಷನ್ ಪಟ್ಟಿಗೆ ಅನುಗುಣವಾಗಿರಬೇಕು. ಅದರಲ್ಲಿ ಬೇಕಾದವರು ಇದರಡಿ ರುಜು ಮಾಡಿರುವವರ ಆಫೀಸಿನಿಂದ ಪಡೆಯಬಹುದು.

೩. ಸೌದೆಯುದರದಲ್ಲಿ ಸುಂಕ ಸೇರಿ ಅಥವಾ ಸೇರದೆ ಇರಬಹುದು.

೪. ಪ್ರತಿಯೊಂದು ದರಖಾಸ್ತಿನ ಸಂಗಡಲೂ, ನಗದಾಗಲಿ ಕರೆನ್ಸಿ ನೋಟಾಗಲಿ, ೧೦೦ ರೂಪಾಯಿಗಳ ಡಿಪಾಜಿಟ್ ಹಾಜರ್ಮಾಡಬೇಕು.

೫. ಯಾರ ದರಖಾಸ್ತು ಮಂಜೂರ್ಮಾಡಲ್ಪಡುತ್ತದೆಯೊ ಅಂತವನು ಮುಂದೆ ಗೊತ್ತುಮಾಡಲ್ಪಡುವ ಕಾಲದೊಳಗಾಗಿ ೨೦೦೦ರೂಪಾಯಿಗಳಿಗೆ ಜಾಮೀನ್ ಕೊಟ್ಟು ಕೆಂಟ್ರಾಕ್ಟ್ ಮುಚ್ಚಳಿಕೆ ಬರೆದು ಕೊಡತಕ್ಕದ್ದು. ಆತನು ಹಾಗೆಮಾಡುವದಕ್ಕೆ ತಪ್ಪಿದರೆ ಆತನ ಡಿಪಾಜಿಟ್ ಬಾಬತು ೧೦೦ರೂಪಾಯಿಗಳು ಕಂಪನಿಗೆ ದಂಡವಾಗಿ ಸೇರಿಸಿಕೊಳ್ಳಲ್ಪಡುವದು. ಮಂಜೂರಿಲ್ಲದ ದರಖಾಸ್ತುದಾರರ ಡಿಪಾಜಿಟ್ ಮೊಬಲಗುಗಳು ಅವರವರಿಗೆ ವಾಪಸ್ ಕೊಡಲ್ಪಡುವವು.

೬. ಯಾವದರಖಾಸ್ತು ತಿರಸ್ಕರಿಸಲ್ಪಟ್ಟಾಗ್ಯೂ ಅದಕ್ಕೆ ಕಾರಣ ತಿಳಿಸಲ್ಪಡಲಾರದು.

೭. ದರಖಾಸ್ತುಗಳನ್ನು ಸೀಲ್ ಮಾಡಿ ಅದರ ಲಿಫಾಪೆಯಲ್ಲಿ (ದಕ್ಷಿಣಮಹಾರಾಷ್ಟ್ರ) ರೈಲ್ ರಸ್ತೆಯ ಮೈಸೂರು ಸ್ಟೇಟ್ ರೈಲ್‌ವೆಗೆ) ಜಂಗ್ಲೀಸೌದೆಯ ಸರಬರಾಯಿ ಬಗ್ಗೆ ದರಖಾಸ್ತು ಎಂದು ಬರೆಯತಕ್ಕದ್ದು.

Bangalore. 6—4—88. } A. G. Molloy, Locomotive Supdt., Mysore Section.

NOTICE.

VAIDYASARA SANGRAHA

A TREATISE ON THE PRINCIPLES OF

HINDU MEDICINE

☞ Price including Postage Rs 5 6-0

ವೈದ್ಯಸಾರ ಸಂಗ್ರಹ.

ಈಗ್ರಂಥಾಪೇಕ್ಷೆಯುಳ್ಳವರು ಮೊಬಲಗಿನೊಡನೆ ಈ ಕೆಳಗೆ ರುಜುಮಾಡಿರತಕ್ಕವರ ಹೆಸರಿಗೆ ಬರೆದುಕೊಂಡರೆ ಪುಸ್ತಕ ಕೂಡಲೇ ಕಳುಹಿಸಲ್ಪಡುವದು. ಮೊಬಲಗು ಇಲ್ಲದ ದರಖಾಸ್ತುಗಳಿಗೆ ಸುತರಾಂ ನಿಗೇಕೊಡಲ್ಪಡಲಾರದು.

ಇದರಕ್ರಯ ... ...ರೂ॥ ೫—೦—೦
ಪ್ಯಾಕಿಂಗ್ ಮತ್ತು ಅಂಚೇಹಾಸಲ್, ೦—೬—೦

ಟಿ. ಬಿ. ವೆಂಕಟಾಚಾರ್,
ಆಸ್ಪತ್ರೆರೋಡ್ ಬೆಂಗಳೂರು.

ವಿಶೇಷ ವರ್ತಮಾನ.



ಧ್ರುವ ಚಿತ್ರಶಾಲೆಯಲ್ಲಿ ಸ್ಯಾಪಿಸಲ್ಪಟ್ಟಿರುವ ಹೊಸ ಫೋಟೋಯಂತ್ರದಲ್ಲಿ, ಹಿಂದೂ ದೇವರುಗಳ, ಚರಿತ್ರೆಗಳಮೂಲಕ ಪ್ರಸಿದ್ಧಿಯಾದವರ, ಸುಂದರಿಗಳಾದ ನೇಟಿವ್ ಹೆಂಗಸರು ಮಕ್ಕಳು ಇವರ ಬಣ್ಣದ ತಸ್ವೀರ್‌ಗಳು ತಯಾರಾಗುತಲಿವೆ. ಇವುಗಳ ಕೆಲಸಗಾರಿಕೆಯು ಸಾಧಾರಣವನ್ನು ಮೀರಿದರೂ ಕ್ರಯ ಬಹಳ ಅಲ್ಪವಾಗಿದೆ ಬೇಕಾದವರಿಗೆ ಕ್ರಯಪಟ್ಟಿ ಕಳುಹಿಸಲ್ಪಡುವದು.

ಧ್ರುವ ಪವರ್ ಚಿತ್ರಶಾಲೆಯ ಮ್ಯಾನೇಜರ್

ನೋಟಿಸ.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನೆಂದರೆ:—

ಸನ್ ೧೮೮೮ನೇ ಇಸವಿ ಏಪ್ರಿಲ್ ಗುರ್ರೇ ತಾರೀಖು ಮೊದಲು ಇದರಡಿ ತಿಳಿಸಲ್ಪಡುವ ಷರತ್ತುಗಳಿಗೆ ಒಳಪಟ್ಟು, ಬೆಂಗಳೂರು ಮಿಲಿಟರಿ ಸ್ಟೇಷನ್ ನಿವಾಸಿಗಳಿಗೆ, ಸರ್ಕಾರೀ ಬಾಬತು ಹೇರುವ ಯೆತ್ತುಗಳು ಬಾಡಿಗೆಗೆ ಸಿಕ್ಕುವದು.

೧. ಕ್ರಮಾ ಒಂದು ಜೊತೆ ೫ ಎತ್ತುಗಳನ್ನು ಒಬ್ಬ ಯೆತ್ತಿನವನನ್ನೂ ಪಡೆಯಬೇಕು.

೨. ಹಾಗೆ ಪಡಕೊಳ್ಳುವ ಯೆತ್ತುಗಳನ್ನು ಪ್ರತಿ ತಿಂಗಳ ಆಖೈರ ತಾರೀಖ್‌ನಲ್ಲಿ ಅಜಮಾಯಿಷಿ ಬಗ್ಗೆ ಟ್ರಾನ್ಸ್‌ಪೋರ್ಟ್ ಇಲಾಖೆಗೆ ಕಳುಹಿಸಬೇಕು. ತಿಂಗಳ ಕಡೇದಿನ ಆದಿತ್ಯವಾರ ವಾಗುವ ಪಕ್ಷದಲ್ಲಿ ಮಾರನೇ ತಿಂಗಳ ಗುರ್ರೇ ತಾರೀಖ್‌ನಲ್ಲಿ ಅಜಮಾಯಿಷೀಮಾಡಲ್ಪಡುವದು. ಪ್ರತಿಯೊಂದು ಹೇರುವ ಯೆತ್ತಿಗೂ ಮಾಹೆಯಾ

ಳಿದರು. ಅನಂತರ ಶ್ರೀನಿವಾಸಯ್ಯಂಗಾರ್ಯವರು ಸಭಿಕರನ್ನೂ ಬಾಲಕರನ್ನೂ ಅಧಿಕರಿಸಿ ತಿಳಿಸಿದರೇನೆಂದರೆ,—ಈದೇಶದ ಕನ್ನಡ ಹೋಬಳೀ ಸ್ಕೂಲುಗಳಲ್ಲಿ ಇದು ಉತ್ಕೃಷ್ಟವಾದ ಸ್ಥಿತಿಯೊಳಗಿರುತ್ತೆಂದು ಹೇಳಬಹುದಲ್ಲದೆ ಬಾಲಕರ ಸಂಖ್ಯೆಯೂ ಇಲ್ಲಿನ ವಿದ್ಯಾಭಿವೃದ್ಧಿಯೂ ಬಹಳ ಕೊಂಡಾಡತಕ್ಕದ್ದಾಗಿರುತ್ತೆ. ಈ ಸ್ಕೂಲಿಗೆ ಲಾಯಖಾದ ಕಟ್ಟಡದಿಂದು ಇಲ್ಲದೆಯಿರುವದು ಬಹಳ ಕೊರತೆಯಾಗಿದೆ. ರಾಜಬೀದಿಯಲ್ಲಿ ದೇವಸ್ಥಾನಕ್ಕೆ ಸೇರಿದಂತೆ ಈ ಪಾಠಶಾಲೆ ಇದ್ದಿರುವದಕ್ಷಕ್ಕೆ ಇದು ಅನೇಕರ ದೃಷ್ಟಿಗೆ ವಿಷಯವಾಗುತಲಿರುವದೆಂದು ಅಭಿಪ್ರಾಯಪಟ್ಟರು. ತರುವಾಯ ಮಹಾರಾಜಶ್ರೀ ಬಕ್ಷಿ ವೆಂಕಟಾಚಾರ್ಯರವರು, ಹೋಬಳೀ ಸ್ಕೂಲ್ ಇಷ್ಟು ಅಭಿವೃದ್ಧಿಯಲ್ಲಿರುವದನ್ನು ನಾನು ಈಗಲೇ ಮೊದಲನೇವಫೆ ನೋಡಿದೆನು. ಇಷ್ಟರ ಅಭಿವೃದ್ಧಿಯು ಮ್ಯಾಸ್ಟರ್‌ಗಳ ಶ್ರಮವನ್ನೂ ಬಾಲಕರ ಜಾಗರೂಕತೆಯನ್ನೂ ವ್ಯಕ್ತಪಡಿಸುತಲಿದೆ. ಇವಲ್ಲದೆ ಈ ಸ್ಕೂಲಿಗೊಂದು ಜವಾನ ಇರುಸರ ಇಲ್ಲವೆಂದು ತೋರುತ್ತೆ. ಈ ವಿಷಯದಲ್ಲಿ ಮೆ|| ಶ್ರೈಗಸಾಯೆಬರವರು ತಕ್ಕ ಏರ್ಪಾಡು ಮಾಡುವರೆಂದು ನಂಬುತ್ತೇನೆ ಎಂದು ನುಡಿದರು. ಸಬ್ ಡಿವಿಜನ್ ಆಫೀಸರವರು, ತಾವು ಹರಿಹರದಲ್ಲಿ ನೋಡಿದ ಸ್ಕೂಲ್ ಸಹ ಇದರಂತೆಯೇ ಇತ್ತೆಂತಲೂ, ಇದು ಇಷ್ಟರ ಒಳ್ಳೇಸ್ಥಿತಿಯಲ್ಲಿರುವದಕ್ಕಾಗಿ ಬಹಳಸಂತೋಷಿಸಬೇಕೆಂತಲೂ, ಇದಕ್ಕೊಂದು ಸರ್ಕಾರೀ ಕಟ್ಟಡವು ಅವಶ್ಯಕವಾದದರಿಂದ ಮ್ಯೂನಿಸಿಪಲ್‌ಫಂಡಿನಿಂದ ಸಹಾಯ ಮಾಡುವದಾಗಿಯೂ, ಹೊಸಕಟ್ಟಡದವಿಷಯದಲ್ಲಿ ಎಜ್ಯುಕೇಷನ್ ಸೆಕ್ರಟರಿಯವರಿಗೆ ಶಿಫಾರಸುಮಾಡಿ ಬರೆಯುವದಾಗಿಯೂ ಅಪ್ಪಣೆಕೊಟ್ಟರು. ಹೀಗೆಯೇ ಅಲ್ಲಿದ್ದ ದೊಡ್ಡಮನುಷ್ಯರೆಲ್ಲರೂ ತಮ್ಮ ತಮ್ಮ ಸಂತೋಷವನ್ನು ಚಿತಶಬ್ದಗಳಮೂಲಕ ವ್ಯಕ್ತಪಡಿಸುತ್ತ, ಒಬ್ಬರು, ಸ್ಕೂಲಿಗೆ ಸ್ಥಳಾನುಕೂಲ್ಯವು ಕಲ್ಪಿಸಬೇಕೆಂತಲೂ, ಮತ್ತೊಬ್ಬರು ಮ್ಯಾಸ್ಟರ್‌ಗಳಿಗೆ ತಲಬ್‌ಸಾಲದೆಂತಲೂ, ಇನ್ನೊಬ್ಬರು ವಿದ್ಯಾರ್ಥಿಗಳ ಸಂಖ್ಯಾನುಗುಣವಾಗಿ ಉಪಾಧ್ಯಾಯರ ಸಂಖ್ಯೆಯನ್ನು ಜಾಸ್ತೀಪಡಿಸಿದರೆ ವಿಶೇಷ ವಿದ್ಯಾಭಿವೃದ್ಧಿಗೆ ಕಾರಣವಾಗಿರುವದೆಂತಲೂ, ತಾತ್ಪರ್ಯಗೊಂದರು. ಅನಂತರ, ಸಬಾಧ್ಯಕ್ಷರು ಮೊದಲಾದ ದೊಡ್ಡಮನುಷ್ಯರಿಗೆಲ್ಲ ಹೆಡ್‌ಮ್ಯಾಸ್ಟರ್ ರಾಮಯ್ಯಂಗಾರ್ಯರು ಪುಷ್ಪತಾಂಬೂಲಾದಿಗಳಿಂದ ತಕ್ಕ ಮರ್ಯಾದೆ ಮಾಡಿ ತಮ್ಮ ಕೃತಜ್ಞತೆಯನ್ನರುಹಿ ಸಭಿಕರಿಗೆ ಹುದಿಸಲು ಕೋಲಾಹಲ ಧ್ವನಿಯೊಡನೆ ಸಭೆ ಬರಖಾಸ್ತಾಯಿತು. ವಿದ್ಯಾಭಿಮಾನಿಗಳಿಗೆ ಇದಕ್ಕಿಂತಲೂ ಬೇರೆ ಸಂತೋಷ ವುಂಟೆ.

ತಮ್ಮ ವಿಧೇಯನಾದ,
ಎಸ್. ನಾಗೇಶರಾವ್.

SUMMARY OF NEWS.
ವೃತ್ತಾಂತ ಸಂಗ್ರಹ.

ಸಾನ್‌ಫ್ರಾನ್ಸಿಸ್ಕೋ ಎಂಬಪಟ್ಟಣದಲ್ಲಿ ಚೀನಾಜನರುಗಳು ಒಂದು ಹಬ್ಬಗಸ್ತನ್ನು ಮಾಡುತಿದ್ದ ಕಾಲದಲ್ಲಿ ಒಂದು ಭಯಂಕರವಾದ ರಾಕ್ಷಸಾಕಾರವನ್ನು ನಿರ್ಮಿಸಿ ಅದರ ವ್ರತಿಒಂದು ಕೀಲಿಗೂ ವಿದ್ಯುಚ್ಛಕ್ತಿಯನಾಳವನ್ನು ಕಲ್ಪಿಸಿದ್ದರು. ಮೆರವಣಿಗೆಯ ಮುಂಭಾಗದಲ್ಲಿ ಅದನ್ನು ಇಟ್ಟು ಅದರ ಕೋಟೆಗೆ ತಗಲಿಸಿದ್ದ ಗುಂಡಿಯನ್ನು ಅವರು ತಾಕುತಲೆ ಕೀಲಿನಸಂಬಂಧದಿಂದ ಅಗಾಧವಾದ ಬಾಯನ್ನು ತೆಗೆದು ಕಿಡಿಕಿಡಿಯಂತೆ ಉಗಳುವ ಬಾಣಗಳು ಹೊರಟವು. ಮೂಗಿನಿಂದ ಏಕಕಾಲದಲ್ಲಿ ಜ್ವಾಲೆಯು ಹೊರಟಿತು. ಅಲ್ಲಿದ್ದ ಜನಗಳೆಲ್ಲರೂ ಅತ್ಯಂತಆಶ್ಚರ್ಯಪಟ್ಟರು.—ವೃ. ಚಂ.

ಉಪ್ಪಿನ ಮೇಲಿನ ತೆರಿಗೆಯನ್ನು ಹೆಚ್ಚಿಸಿದ್ದು ಬಹಳ ಅನ್ಯಾಯವಾದದರಿಂದ ಸರಕಾರದವರು ಇದರ ವಿಷಯವಂ ಪುನಃ ವಿಚಾರಮಾಡಬೇಕು ಎಂಬದಾಗಿ ಪುಣೆಯ ಸಾರ್ವಜನಿಕ ಸಭೆಯವರು ಸಹ ಸರಕಾರಕ್ಕೆ ಒಂದು ಅರ್ಜಿಬರೆದು ಕೊಂಡಿರುತ್ತಾರೆ. ಇದರಲ್ಲಿ ತೆರಿಗೆಯನ್ನುಜಾಸ್ತಿ ಮಾಡಬಾರದೆಂಬದಕ್ಕೆ ಮುಖ್ಯಗಳಾದ ಮೂರು ಕಾರಣಗಳನ್ನು ನಮೂದಿಸಿರುತ್ತಾರೆ. ಅವು ಯಾವವೆಂದರೆ (೧) ಬಡ ರಯಿತರು ಸರಕಾರಕ್ಕೆ ಮೊದಲೇ ತಮ್ಮ ಯೋಗ್ಯತೆಗೆಮೀರಿ ತೆರಿಗೆಕೊಡುತ್ತಾರಾದದರಿಂದ ಎಲ್ಲರಮೇಲೂ ಸಮಾನಭಾರ ಬೀಳಬೇಕೆಂಬ ತಾತ್ಪರ್ಯ ದೊಡನೆ ಉಪ್ಪಿನತೆರಿಗೆ ಹೆಚ್ಚಿಸಿದ್ದು ಅಂತಾ ಬಡರಯಿತರಿಗೆ ಬಹಳ ಅನ್ಯಾಯವಾದದ್ದು. (೨) ದೇಹ ಸಂರಕ್ಷಣೆಗೆ ಆವಶ್ಯಕವಾಗಿರುವ ಜಿನಸಿನಮೇಲೆ ಕ್ರಮ ಯಾದೀತಾವದರಿಂದ ತೆರಿಗೆ ಮೂಲಕ ಹೆಚ್ಚುಮಾಡುವದು ಬಡವರಿಗೆ ಬಹಳ ಲುಕ್ಸಾನಿಗೆ ಕಾರಣವಾದೀತು. (೩) ಉಪ್ಪಿನಕ್ರಯವು ಸಹಜವಾಗಿ ಏರಿದ್ದರಿಂದ ಅದರಕ್ರಯವು ಕಡಿಮೆಯಾಗಿ ಬಡಜನರಿಗೆ ಈ ಅತ್ಯಾವಶ್ಯಕವಾದ ಜಿನಸು ಸಿಕ್ಕದೆ ಅವರಲ್ಲಿ ಪ್ರಾಣವೋ ರೋಗವೋ ಉಂಟಾಗುವದು. ಎಂಬದು.—ಕ. ಸು.

ಹಿಂದುಸ್ಥಾನದೊಳಗಿನ ಈಕೆಳಗಿನ ಮುಖ್ಯಪಟ್ಟಣಗಳ ಜನಸಂಖ್ಯೆಯನ್ನು ಇಲ್ಲಿ ಕೊಟ್ಟದ್ದೇವೆ:—

ಆಗ್ರಾ	1,60,203	ಅಹಮ್ಮದಾಬಾದ್	127621
ಅಲಹಾಬಾದ್	1,48,547	ಕಾಶೀ	1,99,700
ಅಮೃತಸರ	1,51,896	ಬರೇಲಿ	1,13,417
ಬೆಂಗಳೂರು	1,55,857	ಬರೋಡೆ	1,01,818
ಭಾಗಲಪುರ	68,238	ಮುಂಬಯಿ	7,73,196
ಕಲ್ಕತ್ತಾ	7,66,298	ಕಾನ್‌ಪೂರ್	1,51,444
ಢಾಕಾ	79,076	ಹೈದರಾಬಾದ್	3,54,962
ಡಿಲ್ಲೀ	1,73,393	ತಿರುಚಿನಾಪಲ್ಲಿ	84,449
ಗಯಾ	76,414	ಮುಹಾಜನವರ್	74,830
ಹೌರಾ	1,05,206	ಇಂದೂರ್	75,401
ಜೈಪೂರ್	1,42,578	ಜಬ್ಬಲ್‌ಪೂರ್	75,705
ಲಾಹೂರ್	1,49,369	ಗ್ವಾಲಿಯರ್	88,066
ಲಕನೋ	2,61,303	ಮದರಾಸ್	4,05,848
ಮಥುರೆ	73,807	ಮೀರತ್	99,565
ಮುಲ್ತಾನ್	68,674	ನಾಗಪೂರ್	98,299
ಪಾಟ್ನಾ	1,70,654	ಪೇಷಾವರ	79,982
ಪುಣೆ	1,29,751	ರಾಮಪುರ	74,250
ರಂಗೂನ್	1,34,176	ಸೂರತ್	1,09,844
ಅಂಬಾಲಾ	67,463		ಕ. ಸು.

EXTRACTS.

ಪುನರ್ವಿವಾಹಕ್ಕೆ ಸನ್ನದ್ಧರಾಗಿರುವ ವಿಧವೆಯರು.

ಮದರಾಸಿನಲ್ಲಿ ವಿಧವಾ ಹಿತಕರಣ ಪ್ರವರ್ತಕ ಸಭೆಯೆಂಬ ಒಂದು ಸಮಾಜವು ನೆಲಗೊಳಿಸಲ್ಪಟ್ಟಿರುವದೂ ಅದಕ್ಕೆ ಇತರ ವ್ಯಾಪಾರವಿಲ್ಲದವರೊಬ್ಬರು ಸೆಕ್ರೆಟೇರಿಯಾಗಿ ನಿಯಮಿಸಿರುವದೂ ಅನೇಕ ವಿಷಯಗಳಿಗೆ ಸಾಧಕವಾಗಿರುವಂತೆ ತೋರುತಿದೆ. ಸುಂದರಿಯರಾದ ತರುಣೀ ವಿಧವೆಯರು, ತಮ್ಮ ಮನೋಭಿಪ್ರಾಯಗಳಂ ಸಾರ್ಥಕ ಪಡಿಸಿಕೊಳ್ಳುವಬಗ್ಗೆ ಅನುಕೂಲರಾದ ಪತಿಯಂ ಹುಡುಕುತ ತಮ್ಮ ಸ್ತ್ರೀವಾದರು ಕರುಣಿಸಿದೊಡೆ ತಾವು ವಿವಾಹಕ್ಕೆ ಸಹಾಂಗ್ಯೋಡನೆ ಸನ್ನದ್ಧರಾಗಿರುವಂತೆ ಆಗಿಂದಾಗ್ಯೆ ಸದರೀ ಸಮಾಜದ ಕಾರ್ಯದರ್ಶಿಗೆ ಕಾಗದಗಳು ಬರೆದುಕೊಳ್ಳಲಿಕ್ಕೆ ಈಗ ಬಹಳ ಅನುಕೂಲವಾಗಿದೆ. ತಪ್ಪತಿ ಆಧುನಿಕ ವಿದ್ಯಾ ನಾಗರಿಕತೆಯಿಂದ ನವೀನ ವಿಷಯಾನುಭವದೊಳು ಆಸಕ್ತರಾಗಿ ತಾರತಮ್ಯ ವಿಚಾರವಂ ತೊರೆದು ವರ್ತಿಸಲೆತ್ನಿಸಿರುವವರು ಕೆಲವರು ವಿದ್ಯಾವತಿಯರಾಗಿಯೂ ಲಾವಣ್ಯವತಿಯರಾಗಿಯೂ, ಕದಾಚಿತ್ ದ್ರವ್ಯವಂತರಾಗಿಯೂ ಇದ್ದರೆ ಅಂತವರು ವಿಧವೆಯಾಗಿದ್ದರೂ, ಚಿಂತೆಯಿಲ್ಲವು, ವಿಜಾತೀಯರಾಗಿದ್ದರೂ ಬಾಧಕವಿಲ್ಲವು, ವಯೋಧಿಕರಾಗಿದ್ದರೂ ಕುಂದಿಲ್ಲವು. ವಿವಾಹಮಾಡಿಕೊಳ್ಳುವದಾದರೆ ತಾವು ಕರಗ್ರಹಣಕ್ಕೆ ಸನ್ನದ್ಧರಾಗಿರುವಂತೆ ಬಾರ್ ಬಾರ್ ವ್ಯಕ್ತಪಡಿಸುತಲಿರಲಿಕ್ಕೂ, ಸುಲಭವಾಗಿದೆ. ಈ ಬ್ರಾಹ್ಮಣ ವಿಧವೆಯರು ಸುಂದರರಾಗಿಯೂ ಯೌವನವಂತರಾಗಿಯೂ, ವಿದ್ಯಾವಂತರಾಗಿಯೂ, ಇರುವ ಪತಿಗಳನ್ನು ಹ್ಯಾಗೆ ಅಪೇಕ್ಷಿಸುತ್ತಾರೆಯೋ ಹಾಗೆಯೇ ತಮ್ಮ ಧನಾ ಕಾಂಕ್ಷೆಯನ್ನು ಸಹ ಲಜ್ಜೆಯಿಲ್ಲದೆ ವ್ಯಕ್ತಪಡಿಸುತಲಿರುತ್ತಾರೆ. ಅರ್ಥ ಕಾಮಗಳೆಂಬವು ಪರಸ್ಪರ ಅನ್ಯೋನ್ಯಸಂಬಂಧವುಳ್ಳವಾದ್ದರಿಂದ ಸ್ತ್ರೀ ಪುರುಷರಿಗೆ ಅವು ಈಗ ಬಹಳಮಟ್ಟಿಗೆ ಸಹಕಾರಿಗಳಾಗಿ ಪರಿಣಮಿಸಿರುವಂತೆ ಎಣಿಸಬೇಕಾಗಿದೆ. ಈ ವಿಷಯದಲ್ಲಿ ಒಂದಾನೊಂದು ಇಂಗ್ಲಿಷ್ ಪತ್ರಿಕೆಯು, ಅಭಿಪ್ರಾಯಪಡುತಿದೇನೆಂದರೆ:—ಕಾರುಣ್ಯ ಸೌಂದರ್ಯಾಕ್ಷರ್ಯಗಳಂ ಪೋಷಿಸಿ ವಿವಾಹ ಕೈಕೊಂಬವರಕ್ಕ ವರನೇಕರು ಹಿಂದೂಜನರಲ್ಲಿ ಧಾರಾಳವಾಗಿ ದೊರೆಯಬಹುದು. ವಯಸ್ಸು, ಸದ್ಗುಣ, ಸಾಶೀಲ್ಯ, ಆಚಾರವ್ಯವಹಾರಾದಿಗಳಂ ಲಕ್ಷ್ಯದೊಳಿಟ್ಟು ವಿವಾಹಮಾಡಿಕೊಳ್ಳತಕ್ಕವರು ಬಹಳದುರ್ಲಭರೆಂಬ ಸದರೀ ಪತ್ರಿಕಾಭಿಪ್ರಾಯವು ನಿರಾಕರಿಸತಕ್ಕದ್ದಲ್ಲವು, ಯಾತಕ್ಕೆಂದರೆ-ಪ್ರೀತಿ ಸ್ನೇಹಾನುರಾಗಗಳಂ ವೃದ್ಧಿಗೊಳಿಸಲಿಕ್ಕೆ ವಿವಾಹಾತ್ಪೂರ್ವದೊಳು ಸಾಧಕಗಳಾದ್ದಾನುಕೂಲ್ಯಗಳೂ ಅವಕಾಶಗಳೂ ಇಂಗ್ಲಿಷಿನವರಿಗೆ ದೊರೆಯುವಂತೆ ನಮಗೆ ದೊರೆಯುವದಿಲ್ಲವು. ಇಂಗ್ಲಿಷಿನವರು ತಮ್ಮ ಭರ್ತೃ ಭಾರ್ಯಾ ಸಂಬಂಧವು ಉಚಿತವೇ ತಿಯಿಂದ ಮುಂದಾಗಿ ನಿಷ್ಕರಿಸಿಕೊಂಡು ಪರಸ್ಪರಾನುಕೂಲ್ಯವು ವ್ಯಕ್ತವಾದ ಬಳಿಕ ವಿವಾಹಮಾಡಿಕೊಳ್ಳುವರು. ಈ ಸಂಪ್ರದಾಯದಿಂದ ಅವನ್ನ ಬ್ರಹ್ಮಚಾರಿಗಳೂ ಬ್ರಹ್ಮಚಾರಿಣೀಯರೂ ಅವರಲ್ಲಿ ಬಾಹ್ಯಕೆ ಏರ್ಪಟ್ಟರಲಿಕ್ಕೆ ಈಗ ನೆಲಗೊಂಡಿರುವ ಕಾರ್ಯಮಂಡಗಳೇ ಸಾಕಾದ ದೃಷ್ಟಾಂತಗಳಾಗಿರುತಿವೆ. ನಮ್ಮಲ್ಲಾದರೋ ವಿವಾಹವಾದ ಬಳಿಕಲೂ ಬಹುಕಾಲದವರಿಗೆ ಭರ್ತೃ ಭಾರ್ಯೆಯರ ಪರಸ್ಪರ ಮನೋಭಾವಗಳು ವ್ಯಕ್ತಗಳಾಗದೆ ಒಬ್ಬರಿಗೊಬ್ಬರು ಹೊಸಬರಾಗಿಯೇ ಇರುತ್ತಾರೆ. ಇದು ಮುಖ್ಯವೆಂದು ತೋರುವ ಪಕ್ಷಕ್ಕೆ ಇಂಗ್ಲಿಷಿನವರ ಪದ್ಧತಿಯೇ ನಮಗೆ ಈಗ ಪರಿಗ್ರಹಾರ್ಹವಾಗಬೇಕಷ್ಟೆ. ಈಗ ವಿಧವಾ ಹಿತಂಕರಣ ಪ್ರವರ್ತಕ ಸಮಾಜದವರು ಸಾಧ್ಯವಾದಷ್ಟು ತ್ವರೆಯೊಳು ನಮಗೆ ನೂತನವಾಗಿರುವ ಮತ್ತು ಇಂಗ್ಲಿಷಿನವರಲ್ಲಿ ಬಳಕೆಯೊಳಿರುವ ಮೇಲೆ ಕಂಡ ಸಾಮಾಜಿಕ ಪದ್ಧತಿಯನ್ನು ವ್ಯವಹಾರದೊಳುತರರೆತ್ನಿಸುವದು ಕೇವಲ ಆವಶ್ಯಕವೆಂದೆಣಿಸುವೆವು. ವಿಧುರರು ಪುನರ್ವಿವಾಹದ ಪೂರ್ವದಿವಸದಲ್ಲಿ ವಿವಾಹವಾಗತಕ್ಕವಳ ರೂಪ ಗುಣ ಸಾಶೀಲ್ಯಾದಿಗಳಂ ಪರೀಕ್ಷಿಸಿ ತೃಪ್ತಿಗೊಳ್ಳಲಿಕ್ಕೂ ನೂತನವಾಗಿ ಮುಂದೆ ಏರ್ಪಡತಕ್ಕದ್ದಾದ ಪ್ರೀತಿಯಂ ವೃದ್ಧಿಗೊಳಿಸಲಿಕ್ಕೂ ತಕ್ಕ ಅವಕಾಶವನು ಕಲ್ಪಿಸಿ ಅವರು ಪಡಬಡಿಸುವೇಕಾದ್ದು ಪ್ರೋತ್ಸಾಹ ಸಮಾಜದ ಸೆಕ್ರೆಟರಿಯವರ ಕರ್ತವ್ಯವೆಂದು ಬಾವಿಸುವೆವು.

THE MYSORE GAZETTE.
ಮೈಸೂರು ಗೆಜೆಟ್.

ಶ್ರೀಮನ್ಮಹಾರಾಜ ರವರ ಸರ್ಕಾರದ ಗೆಜೆಟಿನಿಂದ ತೆಗೆದ [illegible]

ನಂ ೩೧೧. ತಾ|| ೬ನೇ ಮಾರ್ಚಿ೧೮೮೮.—ಮೈಸೂರು ಶೀಮೆಯ ಚೀಫ್ ಜಡ್ಜಿಯವರಾದ ಮೆ|| ಸಿ. ಜೆ ಪ್ಲಾಮರ್‌ಯವರು ರಜಾ ಮೇಲೆ ಗೈರ್‌ಹಾಜರಾಗಿರುವವರಿಗೆ ಅಥವಾ ಮತ್ತೊಂದು ಹುಕುಂ ಕೊಡುವ ತನಕ ಘನವನ್ನೈಶ್ರೀಮನ್ಮಹಾರಾಜ ರಾಜಾಸಾಹೆಬ್ ಬಹದೂರವರು ಇದರಡಿ ಕಂಡ ನೌಕರರಾತಿಯಂ ಮಾಡಲು ಅಪ್ಪಣೆಯಿಸಿರುತ್ತಾರೆ. ಮೈಸೂರು ಚೀಫ್ ಕೋರ್ಟಿನ ಜಡ್ಜಿಯವರಾದ ಮೆ|| ಟಿ. ಆರ್. ಎ. ತಂಬುಶೆಟ್ಟರವರು ಮೈಸೂರು ಚೀಫ್ ಜಡ್ಜಿಯರಾಗಿ ಆಕ್ಟು ಮಾಡತಕ್ಕದ್ದು. ಗವರ್ನಮೆಂಟ್ ಅಡ್ವೋಕೇಟರಾದ ಬ್ಯಾರಿಸ್ಟರ್ ಮೆ||ಸ್ಟೀಫನ್ ಅಯ್ಯರವರು ಮೈಸೂರು ಚೀಫ್ ಕೋರ್ಟಿನ ಜಡ್ಜಿಯರಾಗಿ ಆಕ್ಟು ಮಾಡುತಲಿರತಕ್ಕದ್ದು. ಪರುಷ ಕೊಂಡಾವರ್ತಿ ಕೊಡಲ್ಪಡುವ ರಜಾ ಪ್ರೂಸ್ಟಿ ಮರಳಿ ಚೀಫ್ ಕೋರ್ಟ್ ತೆಗೆಯಲ್ಪಟ್ಟ ಕೂಡಲೇ ಅವರು ಕೆಲಸದ ಮೇಲೆ ಹೋಗಿ ಹಾಜರಾಗತಕ್ಕದ್ದು.

ಮೊಕ್ಕಾಂ ನಂ. ೬೯೬೮.—ತಾ|| ೨೫ನೇ ಮಾರ್ಚಿ ೮೮—ಗೌರೀಬಿದನೂರು ತಾಲ್ಲೂಕು ಅಮಲ್ದಾರ್ ರಘುನಾಥರಾಯರಿಗೆ, ೧೮೮೮ನೇಯ ಸಿವಿ ಏಪ್ರೆಲ್ ೧೦ನೇ ಮುಕಾಂ ಲಾಗಾಯಿತು ಅಥವಾ ಅವರು ಉಪಯೋಗಿಸಿಕೊಳ್ಳುವ ತಾರೀಖ್ ಮೊದಲು ಮೂರುವಾರಗಳ ಪ್ರಿವಿಲೇಜ್ ರಜಾಕೊಡಲ್ಪಟ್ಟರುತಿದೆ. ಶಿರಸ್ತೇದಾರ್ ಗಂಗಾಧರಪ್ಪನವರು, ರಘುನಾಥರಾಯರವರು ರಜಾಮೇಲಿರುವ ಕಾಲದಲ್ಲಿ ಅಥವಾ ಮತ್ತೊಂದು ಹುಕುಂ ಕೊಡುವ ತನಕ ಸದರೀ ತಾಲ್ಲೂಕ್‌ಚಾರ್ಜಿನಲ್ಲಿರತಕ್ಕದ್ದು. ಇವರಿಗೆ ೩ನೇ ಕ್ಲಾಸ್ ಮ್ಯಾಜಿಸ್ಟ್ರೇಟ್ ಅಧಿಕಾರಿಗಳು ಸಹ ಇದರಿಂದ ಕೊಡಲ್ಪಟ್ಟರುತಿವೆ.

ಮೊಕ್ಕಾಂ ನಂ. ೬೯೯೦ —ತಾ|| ೩೦ನೇ ಮಾರ್ಚಿ ೧೮೮೮.—ಫ್ರಾನ್ಸಿಸ್ ಆರ್ಟೆನ್ ಎಂಬವರು ೧೮೮೮ನೇ ಇಸವಿ ಮಾರ್ಚಿ ೨೫ನೇ ತಾರೀಖ್ ಮೊದಲು, ಅಂಗೀಕಾರಾರ್ಹವಾದ ನೌಕರಿಯ ಮೇಲೆ ಪಾಯಂ ಮಾಡಲ್ಪಡಬೇಕಾದ ನಿಯಮಕ್ಕೊಳಪಟ್ಟು, ಅಜಮಾಯಿಷೀ ತರೀಕ್, ೬ತಿಂಗಳ ವರಿವಿಗೆ ಎರಡನೇ ಕ್ಲಾಸ ಆಸ್ಪಿಟಲ್ ಅಸಿಸ್ಟೆಂಟರಾಗಿ ನೌಕರರಾಗಿರಲ್ಪಟ್ಟರುತ್ತಾರೆ.

ಮೊಕ್ಕಾಂ ನಂ. ೬೯೯೩ —ಮೆ|| ಸಿ. ರಾಜಾರಾಮರಾಯರವರು, ೩ನೇಕ್ಲಾಸ್ ಸಬ್‌ಅಸಿಸ್ಟೆಂಟ್ ಸರ್ಜನ್‌ಯರಾಗಿ ಅಜಮಾಯಿಷೀ ತರೀಕ್, ನೌಕರರಾಗಿರಲ್ಪಟ್ಟು, ಸಿವಿಲ್‌ಸರ್ಜನ್‌ಯರ ತಾಬೇಯಲ್ಲಿದ್ದು ಕೆಲಸನೋಡತಕ್ಕಬಗ್ಗೆ ಶಿವಮೊಗ್ಗ ಡಿಸ್ಟ್ರಿಕ್ಟಿಗೆ ಕಳುಹಿಸಲ್ಪಟ್ಟರುತ್ತಾರೆ.

ಮೊಕ್ಕಾಂ ನಂ. ೬೯೯೯—ಮೈಸೂರು ಡಿಸ್ಟ್ರಿಕ್ಟು ಫಾರೆಸ್ಟು ಸ್ಯೂಪರಿಂಟೆಂಡೆಂಟರಾದ ಮೆ||ರಸ್ಸೆಲ್‌ಯವರಿಗೆ ೧೮೮೮ನೇ ಇಸವಿ ಏಪ್ರೆಲ್ ೪ನೇ ಮುಕ್ಕಾಂ ಲಾಗಾಯಿತು ಅಥವಾ ಅವರು ಉಪಯೋಗಿಸಿಕೊಳ್ಳುವ ತಾರೀಖ್ ಮೊದಲು, ೩ತಿಂಗಳ ಕಾಲ ಪರೀಕ್ಷೆ ರಜಾಕೊಡಲ್ಪಟ್ಟರುತಿದೆ. ಮೈಸೂರು ಡಿಸ್ಟ್ರಿಕ್ಟು ಫಾರೆಸ್ಟು ಪ್ರೊಬೇಷನರ್ ಮೆ|| ಬಿ. ರಾಮಸ್ವಾಮಯ್ಯನವರು, ಮೆ|| ರಸ್ಸೆಲ್‌ಯವರು ರಜಾ ಮೇಲೆ ಗೈರ್‌ಹಾಜರಾಗಿರುವ ಕಾಲದಲ್ಲಿ ಅಥವಾ ಮತ್ತೊಂದು ಹುಕುಂ ಕೊಡಲ್ಪಡುವ ತನಕ ಫಾರೆಸ್ಟುಗಳ ಸ್ಯೂಪರಿಂಟೆಂಡೆಂಟರಾಗಿ ಆಕ್ಟು ಮಾಡತಕ್ಕದ್ದು.

ಮೊಕ್ಕಾಂ ನಂ. ೬೧ ೨೨ — ತಾ||೧ನೇಏಪ್ರೆಲ್ ೧೮೮೮ —ಹಾಸನ ತಾಲ್ಲೂಕ್ ಅಮಲ್ದಾರ್ ಪಿಜ್. ಶ್ರೀನಿವಾಸರಾಯರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖ್ ಲಾಗಾಯಿತು ಒಂದು ತಿಂಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟರುತಿದೆ. ಗ್ರಾಮದ ಪಪ್ರೆ [illegible] ಅಮಲ್ದಾರ್ ಸಿ. ಕೃಷ್ಣರಾಯರವರು ಶ್ರೀನಿವಾಸರಾಯರವರು ರಜಾಮೇಲೆ ಇರುವ ಕಾಲದಲ್ಲಿ ಅಥವಾ ಮತ್ತೊಂದು ಹುಕುಂ ಕೊಡಲ್ಪಡುವ ತನಕ ತಮ್ಮ ಸ್ವಂತ ಕೆಲಸದೊಡನೆ ಹಾಸನ ತಾಲ್ಲೂಕ್ ಚಾರ್ಜಿನಲ್ಲಿರತಕ್ಕದ್ದು.

ಮೊಕ್ಕಾಂ ನಂ. ೬೨ —ಹೊಳೇನರಸೀಪುರ ತಾಲ್ಲೂಕ್ ಅಮಲ್ದಾರ್ ಗೋಪಾಲ ಕೃಷ್ಣಾಐಯಂಗಾರ್ಯರಿಗೆ ಅವರುಪಯೋಗಿಸಿಕೊಳ್ಳುವ ತಾರೀಖ್ ಮೊದಲು, ೧೫ದಿನಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟರುತಿದೆ. ಗೋಪಾಲಕೃಷ್ಣಾಐಯ್ಯಂಗಾರ್ಯರು ರಜಾಮೇಲೆ ಗೈರ್‌ಹಾಜರಾಗಿರುವ ಕಾಲದಲ್ಲಿ ಅಥವಾ ಮತ್ತೊಂದು ಹುಕುಂ ಕೊಡಲ್ಪಡುವ ತನಕ ಶಿರಸ್ತೇದಾರ್ ಶ್ರೀನಿವಾಸರಾಯರವರು, ಹೊಳೇನರಸೀಪುರ ತಾಲ್ಲೂಕ್ ಚಾರ್ಜಿನಲ್ಲಿರತಕ್ಕದ್ದು. ಇವರಿಗೆ ೩ನೇ ಕ್ಲಾಸ್ ಮೇಜಿಸ್ಟ್ರೇಟ್ ಅಧಿಕಾರವು ಸಹ ಕೊಡಲ್ಪಟ್ಟರುತಿವೆ.

ಮೊಕ್ಕಾಂ ನಂ ೬೦ —ತಾ|| ೩ನೇಏಪ್ರೆಲ್೮೮. ಕಳೆದ ತಿಂಗಳ ೩ನೇತಾರೀಖಿನ ಪ್ರೊಸೀಡಿಂಗ್ಸ್‌ದಲ್ಲಿ ಮೈಸೂರು ಡಿಸ್ಟ್ರಿಕ್ಟ ಪೊಲೀಸ್‌ಕೋರ್ಟಿನ ಚಾರ್ಜನ್ನು ಮಿಸ್ಟರ್ ಸಿ ಕ್ರೀಯವರು ಮೆ|| ಎಸ್. ಹೇಮಾದ್ರಿ ರಾಯರವರಿಗೆ ಒಪ್ಪಿಸಲು ಅಪ್ಪಣೆ ಮಾಡಿಸಿರುತ್ತಾರೆ.

BANGALORE. —Printed and published for the Proprietor at the KARNATIC Press.—1888

ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA.

ಪ್ರತಿ ಸೋಮವಾರ ಪ್ರಾತಃಕಾಲದಲ್ಲಿ ಪ್ರಕಟಿಸಲ್ಪಡುವದು.

Published every Monday Morning.

[illegible]

Vol. XV.] BANGALORE:—MONDAY, APRIL 16, 1888. [No. 16.

ಸಂಪುಟ ೧೫.] ಬೆಂಗಳೂರು:—ಸನ್ ೧೮೮೮ನೇ ಇಸವಿ ಏಪ್ರೆಲ್ ೧೬ನೇ ತಾರೀಖ ಸೋಮವಾರ. [ಸಂಚಿಕೆ ೧೬.

ಕರ್ಣಾಟಕ ಪ್ರಕಾಶಿಕಾ

ಪತ್ರಿಕೆಯ ಚಂದಾ ದರಗಳು,
೧೮೮೮ನೇ ಇಸವಿ ಜನವರಿಯಿಂದಾಗಾಯಿತು
ಕಡಿಮೆ ಮಾಡಲ್ಪಟ್ಟಿರುತ್ತದೆ.

ಈ ಪತ್ರಿಕೆಯ ಚಂದಾದಾರರಪೈಕಿ ಅನೇಕರ ಅಪೇಕ್ಷೆಯನ್ನು ನೆರವೇರಿಸುವ ಉದ್ದೇಶದೊಡನೆಯೂ, ಪರಿಮಿತವಾದ ಆಯತಿಯುಳ್ಳವರಿಗೆಲ್ಲ ಈ ಪತ್ರಿಕೆಯು ಸುಲಭವಾಗಿ ಲಭಿಸುವಂತಿರಬೇಕೆಂಬ ಅಭಿಪ್ರಾಯದೊಡನೆಯೂ ಇದರ ಚಂದಾದರವನ್ನು ಇದರಡಿಕಂಡಂತೆ ಕಡಮೆ ಮಾಡಿರುತ್ತೇವೆಂತೆಂದರೆ:—

ಇಂಗ್ಲಿಷ್ ಮತ್ತು ಕನ್ನಡಭಾಗಗಳಿಗೆ.

	ಸ್ಥಳದವರಿಗೆ	ಪರಸ್ಥಳದವರಿಗೆ
12 ತಿಂಗಳಿಗೆ	8—0—0	9—0—0
6 „	4—0—0	4—8—0
3 „	2—8—0	2—8—0

ಇಂಗ್ಲಿಷ್ ಅಥವಾ ಕನ್ನಡಭಾಗಗಳಿಗೆ.

	ಸ್ಥಳದವರಿಗೆ	ಪರಸ್ಥಳದವರಿಗೆ
12 ತಿಂಗಳಿಗೆ	4—0—0	5—0—0
6 „	2—0—0	2—8—0
3 „	1—4—0	1—8—0

[illegible]

ಪ್ರಕಟನೆಯ ದರಗಳು.

ಮೊದಲನೆಯದಕ್ಕೆ ಪಂಕ್ತಿ ಒಂದಕ್ಕೆ ೦—೨—೦
ಎರಡನೆಯದಕ್ಕೆ ಪಂಕ್ತಿ ಒಂದಕ್ಕೆ ೦—೧—೦

[illegible]

"IT RECOMENDS ITSELF"

ALL WHO SUFFER FIND SURE RELIEF.

LITTLE'S

ORIENTAL BALM

THE MOST EFFECTUAL MODERN REMEDY FOR PAIN.

[illegible]

ಪರೀಕ್ಷಕರ ಅಭಿಪ್ರಾಯವು.

[illegible] (C. R. TICHBORNE, L. L. D., F. C. S., M. R. I. A.) [illegible]

ಇದರ ಕ್ರಯ—ಸೀಸೆ ಒಂದಕ್ಕೆ ೧ ರೂಪಾಯಿ.

[illegible]

AGENTS — Messrs, J. WEST, Chemist, &c., Bangalore.
CAPTAIN & Co. Chemists, Bangalore.
RIGGS & Co., Chemists, Bangalore; and of
MAHOMED YOUSOFF AND SONS, The Cash Bazar, Bangalore.
A. C. BERRYMAN & Co.,
20 Sambodoss Street Madras.

ನೋಟಿಸ್.

ದಕ್ಷಿಣ ಮಹಾರಾಷ್ಟ್ರ ರೈಲ್ವೆ ಕಂಪನಿ.
ಮೈಸೂರು ಶಾಖೆ.

ಇದರಿಂದ ಸಮಸ್ತಜನಗಳಿಗೂ ತಿಳಿಸುವದೇನಂದರೆ:—

[illegible]

ಮೈಸೂರು	150	ಟನ್‌ಗಳು,	ತಿಂಗಳೊಂದಕ್ಕೆ
ಮದ್ದೂರು	100	„	„
ಬಿಡದಿ	250	„	„
ತಿಪಟೂರು	200	„	„
ಗುಬ್ಬಿಗೂ ಅರಸೀಕೆರೆಗೂ ಮಧ್ಯೆ.	300	„	„

[illegible]

A. G. MOLLOY,
Locomotive Supdt.,
Mysore Section.

Bangalore.
6—4—88.

NOTICE.

VAIDYASARA SANGRAHA

A TREATISE ON THE PRINCIPLES OF

HINDU MEDICINE.

Price including Postage Rs 5 6-0

ವೈದ್ಯಸಾರ ಸಂಗ್ರಹ.

[illegible]

ಇದರ ಕ್ರಯ ... ...ರೂ ೫—೦—೦
ಪ್ಯಾಕಿಂಗ್ ಮತ್ತು ಅಂಚೇಹಾಸಲ್, ೦—೬—೦

ಟಿ. ಪಿ. ವೆಂಕಟಾಚಾರ್,
ಆಸ್ಪತ್ರೇರೋಡ ಬೆಂಗಳೂರು.

ವಿಶೇಷ ವರ್ತಮಾನ.

[illegible]

ನೋಟಿಸ್.

ಇದರಿಂದ ಸಮಸ್ತ ಜನಗಳಿಗೂ ತಿಳಿಯ ಪಡಿಸುವದೇನಂದರೆ:—

ಸನ್ ೧೮೮೮ನೇ ಇಸವಿ ಏಪ್ರಿಲ್ ಸುಗ್ಗೀ [illegible]

[illegible]

೭ ರೂಪಾಯಿಗಳು ಅಥವಾ ಸೆಟ್ಟಿಗೆ ೩೫ ರೂಪಾಯಿಗಳು.

೪. ಬಾಪಿಗೇ ಹಣ ಮಾರನೇ ತಿಂಗಳ ೫ನೇ ತಾರೀಖಿನಲ್ಲಿ ಇದರಡಿ ರುಜು ಮಾಡಿರುವವರಿಗೆ ಈ ಆಫೀಸಿನಿಂದ ಬಿಲ್ಲು ಬಂದ ಕೂಡಲೇ ಪಾವತೀ ಮಾಡತಕ್ಕದ್ದು.

೫. ಬಾಡಿಗೆಗೆ ಕೊಡಲ್ಪಡುವ ಎತ್ತುಗಳನ್ನೆಲ್ಲ ಅಥವಾ ಅವುಗಳ ಪೈಕಿ ಯಾವದನ್ನಾದರೂ ಗವರ್ನ್‌ಮೆಂಟ್ ಕೆಲಸಕ್ಕೆ ಬೇಕಾದಾಗ ವಾಪಸು ತರಿಸಿಕೊಳ್ಳುವದಕ್ಕೆ ಇದರಡಿ ರುಜು ಮಾಡಿರುವವರು ಸ್ವಾತಂತ್ರ್ಯವುಳ್ಳವರಾಗಿರುತ್ತಾರೆ.

ಎಗ್ಜಿಕ್ಯುಟಿವ್ ಕಮ್ಮಿಸರಿಯಟ್ ಆಫೀಸ್,
ಟ್ರಾನ್ಸ್‌ಪೋರ್ಟ್ ಸೆಕ್ಷನ್.
ಬೆಂಗಳೂರು, ೭—೪—೮೮.
E. A. Bruce, Colonel.

ನೋಟಿಸ್.

ಇದರಿಂದ ನಮ್ಮ ಚಂದಾದಾರರಿಗೆ ಮರಳಿ ನಾವು ಜ್ಞಾಪಕಕೊಡುವದೇನೆಂದರೆ:—ತಾವೆಲ್ಲರು ಚಂದಾಹಣವನ್ನು ಮುಂಗಡವಾಗಿ ಕೊಡುವದಕ್ಕೆ ಅನುಕೂಲವಾಗಿರುವಂತೆ ಈ ಸಾಲಿನಿಂದ ಚಂದಾ ದರವನ್ನು ಕಮ್ಮಿ ಮಾಡಿರುತ್ತೇವೆ. ಹಾಗೆ ತಾವೆಲ್ಲರು ಅಡ್ವಾನ್ಸ್ ಕೊಡದಪಕ್ಷಕ್ಕೆ ಹಿಂದಿನ ದರದಪ್ರಕಾರ ಕೊಡಬೇಕಾಗುವದು. ಹೊಸ ಚಂದಾದಾರರಿಗೆಲ್ಲ ಪತ್ರಿಕೆಗಳು ನಿಲ್ಲಿಸಲ್ಪಡುವವು.

ಪ್ರಕಟನೆ.

ಇದರಿಂದ ಸಮಸ್ತರಿಗೂ ತಿಳಿಯಪಡಿಸುವದೇನಂದರೆ—ಈ ಕೆಳಗೆ ನಮೂದಿಸಿರುವ ನಿಬಂಧನೆಗಳನ್ನು ಇದೇ ಊರಿನಲ್ಲಿರುವ ಲಂಡನ್ ಮಿಷನ್ ಹೈ ಸ್ಕೂಲ್, ವೆಸಲಿಯನ್ ಮಿಷನ್ ಹೈಸ್ಕೂಲ್, ಮತ್ತು ಮ್ಯುನಿಸಿಪಲ್ ಸ್ಕೂಲ್‌ಗಳ ಅಧ್ಯಕ್ಷರು ಒಪ್ಪಿ ಜಾರಿಗೆ ತಂದಿರುತ್ತಾರೆ:—

೧. ಯಾವ ಹುಡುಗನೂ ಅದೇ ವರುಷದಲ್ಲಿ ಅಂದರೆ, ಜನವರಿಇಂದ ಡಿಸಂಬರ್ ತಿಂಗಳವರೆಗೆ ತಾನು ಓದುತ್ತಾ ಇದ್ದ ಸ್ಕೂಲಿನ ಹೆಡ್‌ಮ್ಯಾಸ್ಟರವರ ಅಪ್ಪಣೆ ಇಲ್ಲದೆ ಆ ಸ್ಕೂಲನ್ನು ಬಿಟ್ಟು ಮತ್ತೊಂದು ಸ್ಕೂಲಿಗೆ ಸೇರಿಸಲ್ಪಡಕೂಡದು. ಹಾಗೆ ಯಾವನಾದರೂ ಒಂದು ಸ್ಕೂಲನ್ನು ಬಿಟ್ಟು ಮತ್ತೊಂದು ಸ್ಕೂಲಿಗೆ ಸೇರಿದರೆ, ಮತ್ತು ಹಾಗೆ ಸೇರಿದ್ದು, ಸೇರಿಸಿಕೊಂಡಂತಾ ಹೆಡ್ ಮ್ಯಾಸ್ಟರಿಗೆ ತಿಳಿಯಬಂದರೆ ಆ ಹುಡುಗನು ತಕ್ಷಣವೇ ಸ್ಕೂಲಿನಿಂದ ಕಳುಹಿಸಲ್ಪಡತಕ್ಕದ್ದು. ಇದಲ್ಲದೆ ಅವನು ಸ್ಕೂಲಿಗೆ ಕೊಟ್ಟದ್ದಂತಾ ಸ್ಕೂಲ್ ಫೀ ವಾಪಸು ಬರುವದಿಲ್ಲ.

೨. (ವರುಷದಲ್ಲಿ) ಯಾವ ತಿಂಗಳಲ್ಲಾಗಲೀ ಸ್ಕೂಲಿಗೆ ಹುಡುಗನು ಸೇರಿಸಲ್ಪಟ್ಟಾಗ್ಯೂ ಆ ಹುಡುಗನು ಪೂರ್ವದಲ್ಲಿ ಓದುತ್ತಿದ್ದ ಸ್ಕೂಲಿನಲ್ಲಿಯೇ ಇದ್ದರೆ ಯಾವ ಕ್ಲಾಸಿನಲ್ಲಿ ಓದುತ್ತಿರುತ್ತಿದ್ದನೋ ಆ ಕ್ಲಾಸಿಗಿಂತ ಭಾರೀ ಕ್ಲಾಸಿಗೆ ಸೇರಿಸಲ್ಪಡಕೂಡದು.

೩. ಯಾವ ಹುಡುಗನೂ ಯಾವ ತಿಂಗಳಲ್ಲಾಗಲೀ ಅವನು ಪೂರ್ವದಲ್ಲಿ ಓದುತ್ತಿದ್ದ ಸ್ಕೂಲಿಗೆ ಕೊಡಬೇಕಾದ ಸ್ಕೂಲ್ ಫೀ ಬಾಕೀ ಇದ್ದಲ್ಲಿ ಸ್ಕೂಲಿಗೆ ಸೇರಿಸಲ್ಪಡುವದಿಲ್ಲವು.

(Signed) Albert E. Adolphus.
" J. A. Vanes.
" A. Mrityunjaya Iyer.
Bangalore, April 11th 1888.

ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA.

MONDAY, APRIL 16, 1888.

೧೮೮೮ನೇ ಏಪ್ರೈಲ್ ೧೬ನೇ ತಾ|| ಸೋಮವಾರ.

OFFICIAL CHANGES AND APPOINTMENTS.

ಪ್ರತಿ ಸಂವತ್ಸರಾದಿಯಲ್ಲೂ ಬ್ರಿಟಿಷ್‌ಗವರ್ನ್‌ಮೆಂಟಿನವರು ಪ್ರಸಿದ್ಧರಾದ ದೊಡ್ಡಮನುಷ್ಯರಿಗೆ ಬಿರುದುಗಳಂ ಕೊಡತಕ್ಕ ಪದ್ಧತಿಯು ಹ್ಯಾಗೆ ನೆಲೆಗೊಂಡು ನಡೆದು ಬರುತಿದೆಯೋ ಬದಸ್ತೂರ್ ಈ ಮೈಸೂರು ಗವರ್ನ್‌ಮೆಂಟಿನವರಿಗೆ ಪ್ರತಿ ಸರ್ಕಾರೀ ಸಾಲಿನ ಪ್ರಾರಂಭದಲ್ಲಿ ಹಿಂದೇ ಆವರ್ತಿ ಉದ್ದಿಷ್ಟಗಳಾದ ಬಡ್ತೀ, ರಜಾ, ನೌಕರಾತಿ ಮೊದಲಾದವುಗಳನ್ನೆಲ್ಲ ಸೇರಿಸಿಟ್ಟು ಘಾಯಿಷ್ ಮಾಡುವದು ವಾಡಿಕೆಯಾದದರಿಂದ ಅದರಂತೆ ಗತವಾರದ ಮೈಸೂರು ಗೆಜೆಟಿನಲ್ಲಿ ೬ ಪುಟಗಳಿಗೆ ಕಡಮೆಯಿಲ್ಲದಹಾಗೆ ಬಡ್ತೀ ಮತ್ತು ನೌಕರರಾತಿಗಳ ಇಸ್ತಿಹಾರ್‌ನಾಮೆಗಳು ಘಾಯಿಷ್ ಮಾಡಲ್ಪಟ್ಟಿರುತಿವೆ. ಈ ವಾರದಲ್ಲಿ ಅವುಗಳಿಗೆ ಬೇಕಾದ ಅವಕಾಶವು ಈ ಪತ್ರಿಕೆಯಲ್ಲಿ ವ್ಯಗ್ರವಾದದರಿಂದ ಅವು ಮುಂದಿನವಾರದತನಕ ನಿಲ್ಲಿಸಬೇಕಾಯಿತು. ಈಗಿನ ಏರ್ಪಾಡನ್ನನುಸರಿಸಿ ೧೪ ಜನ ಅಮಲ್ದಾರರುಗಳಿಗೆ ಒಂದು ಗ್ರೇಡ್ ಬಡ್ತೀಯಾಗಿರುತಿದೆಯಲ್ಲದೆ ಮೂವರು ಹೊಸದಾಗಿ ನೌಕರರಾಗ್ಯಲ್ಪಟ್ಟಿರುತ್ತಾರೆ. ಅಸಿಸ್ಟೆಂಟ್ ಕಮ್ಮಿಷನರ್‌ಗಳಪೈಕಿ ನಾಲ್ಕೈದು ಜನಗಳಿಗೆ ಬಡ್ತಿಯೂ ಮೂವರಿಗೆ ಹೊಸದಾಗಿ ನೌಕರಾತಿಸಹ ಮಾಡಲ್ಪಟ್ಟಿರುತಿವೆ. ಈ ದೊಡ್ಡ ಮನುಷ್ಯರಿಗೆಲ್ಲ ಅನಿರೀಕ್ಷಿತವಾದ ಫಲಪ್ರಾಪ್ತಿಯಬಗ್ಯೆ ನಾವು ಶುಭವಾದನಂ ಗೈಯುವೆವು. ಆದಾಗ್ಯೂ ಒಂದಂಶದಲ್ಲಿಮಾತ್ರ ಆಕಾಂಕ್ಷೆಗೆ ಅವಕಾಶ ಉಂಟಾಗದೆ ಹೋಗಲಿಲ್ಲವೇನೆಂದರೆ, ಈಗ ಇಷ್ಟುಮಂದಿ ಉದ್ಯೋಗಸ್ಥರಿಗೆ ಬಡ್ತೀಮಾಡಬೇಕಾದಷ್ಟು ಆವಶ್ಯಕತೆಯೇನುಂಟಾಯಿತೋ ಆ ರೀತಿ ಮಾಡದಿದ್ದರೆ ಎಷ್ಟರಮಟ್ಟಿಗೆ ಸರ್ಕಾರ್ ಕೆಲಸಕ್ಕೆ ಅಡಚಣೆಯುಂಟಾಗುವದಾಗಿತ್ತೋ, ಇಷ್ಟರ ಜಾಸ್ತೀ ಖರ್ಚಿಗೇನು ವಿತೀ ಮಾಡಲ್ಪಟ್ಟಿತೋ, ಇವೇಮಾದಿ ವಿಷಯಗಳನ್ನು ಅರಿಯಲಿಕ್ಕೆ ಮೈಸೂರು ದೇಶೀಯರಿಗೆ ಕುತೂಹಲವಿದ್ದಾಗ್ಯೂ, ಅದು ಅವರಿಗೆ ಅಸಾಧ್ಯವಾದದರಿಂದ ಸದರೀ ಅಂಶಗಳಂ ತಿಳಿದುಕೊಳ್ಳಲಿಕ್ಕೆ ಬ್ರಿಟಿಷ್ ಗವರ್ನ್‌ಮೆಂಟಿನವರಿಗೆ ಸಂಬಂಧವೂ ಆವಶ್ಯಕತೆಯೂ ಇರುವದರಿಂದ ಅವರಾದರೂ, ತಮ್ಮ ತರಫ್ ಏಜಂಟರಮೂಲಕ ತಿಳಿಯಲಪೇಕ್ಷಿಸದೆ ಇರಲಾರರೆಂದೆಣಿಸುತ್ತೇವೆ. ಈ ಸರ್ಕಾರದಲ್ಲಿ ಮುಂದೆ ನೌಕರಿಗಳಂ ಪಡೆಯತಕ್ಕ ವಿಷಯದಲ್ಲಿ ದಿವಾನರವರು ಕೆಲವು ನಿಬಂಧನೆಗಳಂ ಮಾಡಿ ಘಾಯಿಷ್ ಮಾಡಿಸಿರುತ್ತಾರೆ. ಅವುಗಳನ್ನನುಸರಿಸಿ ಮುಂದೆ ಇಲ್ಲಿ ಸರ್ಕಾರ್ ನೌಕರಿಯನ್ನಪೇಕ್ಷಿಸತಕ್ಕವರೆಲ್ಲರೂ ಪರೀಕ್ಷೆಗಳನ್ನು ಕೊಟ್ಟವರಾಗಿಯೇ ಇರಬೇಕೆಂಬ ನಿರ್ಬಂಧವುಂಟುಮಾಡಲ್ಪಟ್ಟಿದೆ. ಇವಲ್ಲದೆ ಈಗ ಪರೀಕ್ಷೆ ಕೊಡದೆ ನೌಕರಿಯಲ್ಲಿರತಕ್ಕವರು ತಮಗೆ ತಲಪಿ ಬಡ್ತೀಯಾಗಬೇಕಾಗಿದ್ದರೆ ಅಗತ್ಯ ಪರೀಕ್ಷೆ ಕೊಟ್ಟೇ ತೀರಬೇಕೆಂಬ ಮತ್ತೊಂದುಬಗೆ ನಿರ್ಬಂಧವುಂಟುಮಾಡೋಣಾಗಿದೆ. ಈ ನಿಬಂಧನೆಗಳನ್ನು ಈ ಪತ್ರಿಕೆಯನ್ನೋದತಕ್ಕವರ ತಿಳುವಳಿಕೆಯಬಗ್ಯೆ ಮುಂದಿನವಾರದಲ್ಲಿ ಪ್ರಕಟಿಸುವೆವು. ಈ ರೂಲ್ಸ್‌ಗಳಿಗೆ ಉಮೇದ್‌ವಾರರು ಬದ್ಧರಾಗಿ ನಡೆದುಕೊಳ್ಳಬೇಕೆಂದು ಗವರ್ನ್‌ಮೆಂಟಿನವರು ಹ್ಯಾಗೆ ಅಪೇಕ್ಷೆಯುಳ್ಳವರಾಗಿದಾರೆಯೋ ಅದು ಆಚರಣೆಯೊಳು ತರುವಾಗ್ಯೆ ಅವರು ಸಹ ಅವ್ವುಗಳಿಗೆ ಬದ್ಧರಾಗಿ ನಡೆದುಕೊಳ್ಳಬೇಕೆಂದು ಕೋರುವೆವು. ಈ ನಿಬಂಧನೆಗಳೊಡನೆ, ಪರೀಕ್ಷೆ ಕೊಟ್ಟಿರತಕ್ಕ ಮೈಸೂರುದೇಶದ ಉಮೇದ್‌ವಾರರು ಸುಲಭವಾಗಿ ದೊರೆತಾಗ್ಯೂ ಅವರ ಹಕ್ಕುದಾರಿಗಳನ್ನುಪೇಕ್ಷಿಸಿ ಅನ್ಯದೇಶಗಳಿಂದ ಕರೆಯಿಸುವದಿಲ್ಲವೆಂಬ ನಿಷೇಧರೂಪವಾದ ವಿಶೇಷ ವಿಧಿಯೊಂದು ಸೇರಿಸಲ್ಪಟ್ಟದ್ದರೆ ಪ್ರಸಕ್ತ ನಿಬಂಧನೆಗಳು ಸಾರ್ಥಕಗಳಾಗಿರುವವು.

LORD DUFFERIN'S REPLY TO THE CALCUTTA ADDRESS.

(ಗತವಾರದಶೇಷವು.)

ಅಮೂಲ್ಯವಾದ ಈ ನಿಬಂಧನೆಯನ್ನನುಸರಿಸಿಯೇ ಪ್ರಸಿದ್ಧರಾದ ನನ್ನ ಪೂರ್ವಿಕರು ನಿಯತವಾಗಿ ಶ್ರಮ ಪಡುತಲಿದ್ದರು. ಪರಿಗಣನೆ, ಪ್ರಯೋಜನಾನಪೇಕ್ಷೆ ಮಾತ್ರವಲ್ಲದೆ ಸ್ವಸುಖವಿಮುಖತೆಯೂ, ಕರ್ತವ್ಯದಲ್ಲಿ ಅಪ್ರತಿಷ್ಠಾರೂಪವಾದ ಶ್ರದ್ಧೆಯೂ ಪಾರಂಪರ್ಯೇಣ ಅನುವರ್ತಿಸಿ ಬಂದ ಸರ್ಕಾರ್ ಉದ್ಯೋಗಸ್ಥರನ್ನು ಪ್ರಸಿದ್ಧಿಗೆ ಗುರಿಮಾಡಿವವು. ಸದರೀ ಉದ್ಯೋಗಸ್ಥರು ತಮ್ಮ ಸುಖಾರೋಗ್ಯಾದಿಗಳಂ ಕಡೆಗೆ ಪ್ರಾಣದೊಡನೆ ತೊರೆದು, ರಾಜಭಕ್ತಿಯುಳ್ಳದ್ದಾಗಿಯೂ, ಸುತೃಪ್ತವಾದದ್ದಾಗಿಯೂ, ಪುರೋಭಿವೃದ್ಧಿಯುಳ್ಳದ್ದಾಗಿಯೂ ಇರುವ (ಶ್ರೀಮನ್ಮಹಾರಾಜ್ಞೀ ವಿಕ್ಟೋರಿಯವರ) ಇಂಡ್ಯ ದೇಶವನ್ನು ಪ್ರಕೃತಸ್ಥಿತಿಗೆ ತಂದವರಾದರು. ನನ್ನವಿಷಯವಾಗಿ ತಾವು ಉಪಯೋಗಿಸಿರುವ ವಿಶ್ವಾಸ ಸೂಚಕಗಳಾದ ಶಬ್ದಗಳಿಗಾಗಿ ನಾನು ಮರಳಿ ತಮಗೆ ವಂದಿಸುವಾಗ್ಯೆ ಬಹಳಮಟ್ಟಿಗೆ ನನ್ನಂಕುರಿತು ನುಡಿಯೋಣಾದ ವಿಶೇಷ ಅಂಗೀಕಾರ ಪ್ರದರ್ಶಕ ವಾಕ್ಯಗಳೆಲ್ಲವೂ ಇಂಡ್ಯ ಗವರ್ನ್‌ಮೆಂಟಿಗೂ, ನನ್ನಸಾನೀ ಉದ್ಯೋಗಸ್ಥರಿಗೂ ನ್ಯಾಯವಾಗಿ ಸಲ್ಲಬೇಕಾಗಿರುತಿದೆಂಬದಂ ತಮ್ಮ ಸ್ಮರಣೆಯೊಳು ತರಲಿಕ್ಕೆ ಮರೆತುಹೋಗಬಾರದು. ಈಚೆಗೆ ನಮ್ಮ ಪ್ರಭುತ್ವದೊಳು ಪ್ರಾಪ್ತಗಳಾದ ಸಂಕಟಕಾಲಗಳಲ್ಲಿ ತೃಪ್ತಿಕರವಾಗಿ ರಾಜ್ಯಪಾಲನೆಯಂ ಮಾಡಿರುವೆನಾದರೆ ಅದು, ಮಂತ್ರಾಲೋಚಕ ಸಾಮಾಜಿಕರ ವಿವೇಕಯುಕ್ತವಾದ ಸಹಾಯದಿಂದಲೂ, ತಮಗೆ ಸಂಬಂಧಿಸಿದ ಅನೇಕ ಇಲಾಖೆಗಳ ಆತಳತಗಳನ್ನೆಲ್ಲ ಜರಿಗಿಸಿದಂತವರ ಶಕ್ತಿಯುಕ್ತಿಗಳಿಂದಲೂ ನಡೆದದ್ದಾಗಿರುತಿದೆ. ಇಷ್ಟುಮಾತ್ರವೇ ಅಲ್ಲದೆ, ಒಬ್ಬರ ಆಧಿಪತ್ಯದಲ್ಲಿ ಲಭಿಸಿದ ಪ್ರಯೋಜನಗಳು, ಅದರ ಹಿಂದಿನ ಪ್ರಭುತ್ವದಲ್ಲಿ ಬೀಜಾವಾಪಮಾಡಿ ನಡೆಸಿದ ಕೃಷಿಯಿಂದುಂಟಾದ ಫಲಿತಾಂಶಗಳಾಗಿರುತಿವೆಂಬದಂ ಸಹ ಸ್ಮರಣೆಯೊಳಿಟ್ಟಿರಬೇಕಾಗಿರುತಿದೆ. ತತ್ಕಾಲದಲ್ಲಿ ನೆಲಗೊಂಡಿರುವ ಇಂಡ್ಯ ಗವರ್ನ್‌ಮೆಂಟಿನವರು ಅಂಗೀಕರಿಸಿರುವ ರಾಜ್ಯತಂತ್ರಕ್ರಮದಪೈಕಿ ಬಹುಭಾಗವು ನನ್ನ ಪೂರ್ವಿಕರಿಂದಲೇ ಪ್ರಾರಂಭಿಸಲ್ಪಟ್ಟು, ಅದು ಈ ದೇಶದಲ್ಲಿಯೂ ಇಂಗ್ಲಾಂಡಿನಲ್ಲಿಯೂ ಮನಃಪೂರ್ವಕವಾದ ಅಂಗೀಕಾರಕ್ಕೆ ವಿಷಯವಾಯಿತೆಂಬದನ್ನೂ, ಆಫ್ಘಾನಿಸ್ತಾನ್‌ರಾಜ್ಯದ ಉತ್ತರಸರಹದ್ದಿನ ಪೈಮಾಯಿಷಿಯನ್ನು ನನ್ನ ಪೂರ್ವಿಕರೇ ಪ್ರಾರಂಭಿಸಿದ್ದರೆಂದು ಪ್ರಸಿದ್ಧವಾಗಿರುವ ಅಂಶವನ್ನೂ ನಾನು ಸಂತೋಷದೊಡನೆ ಅಂಗೀಕರಿಸುತ್ತೇನೆ. ಈಗ ಸದರೀ ಸರಹದ್ದು ತೀರ್ಮಾನವು ಪೂರ್ತಿಯನ್ನೈದಿತು. ಕೆಲವರದು ಕೇವಲ ಅಲ್ಪವೆಂದು ಭಾವಿಸಿದರೂ ನಾನುಮಾತ್ರ ಅದನ್ನು ರಾಜಕೀಯವಾದ ಪ್ರಬಲ ಕಾರ್ಯವೆಂದೆಣಿಸದಿರಲಾರೆನು. ಮತ್ತು ಸದರೀಪ್ರಾಂತದಲ್ಲಿ ನಮ್ಮ ಉದ್ದೇಶ್ಯಗಳೆಲ್ಲವು ಸಂಪೂರ್ಣವಾಗಿ ಫಲಕಾರಿಗಳಾದವೆಂದು ಭಾವಿಸಿರುವೆನು. ಪಂಜ್‌ದೇ ಪ್ರಾಂತದ ವಿಷಯದಲ್ಲಿ ಇಂಗ್ಲಿಷರವರಿಗೂ, ರಷ್ಯಾದವರಿಗೂ ನಿಜವಾಗಿ ಸಂಭವಿಸುವಂತಿದ್ದ ಯುದ್ಧವನ್ನು, ನನಗೂ ಕಾಬೂಲ್ ಅಮೀರರಿಗೂ ಲಭಿಸಿದಸಮಾಗಮವೇ ಶಮನಗೊಳಿಸಿತೆಂದು ನುಡಿಯಬೇಕಾಗಿದೆ. ಅಂತಾ ದುಷ್ಕಾಲದಲ್ಲಿ ನಿಜವಾಗಿ ಅಮೀರರವರು ನನ್ನಸ್ಥಾನಕ್ಕೆ ಬಾರದಿರುವರಾದರೆ, ಆಗ ಅದರ ಪರ್ಯವಸಾನವು ಬೇರೇತೆರನವನ್ನೈದಿರುವದು. ಪರಂತು ನಮ್ಮ ಇಬ್ಬರ ಸಮಾಗಮದಿಂದ ಅಮೀರರವರ ನಡತೆಗಳೂ ಅಪೇಕ್ಷೆಗಳೂ ಉದ್ದೇಶ್ಯಕ್ರಮಗಳೂ ನನಗೆ ಚೆನ್ನಾಗಿ ವ್ಯಕ್ತವಾಗಲು, ಬಳಿಕ ನಮ್ಮಿಬ್ಬರಲ್ಲಿ ನೆಲಗೊಂಡ ಸದ್ಭಾವವು, ರಷ್ಯಾಮತ್ತು ಆಫ್ಘಾನಿಸ್ತಾನ್ ರಾಜ್ಯಗಳ ಸರಹದ್ದು ತೀರ್ಮಾನ ವಿಷಯದಲ್ಲಿ ಅವರ ಅಂಗೀಕಾರವಂ ಪಡೆಯಲಿಕ್ಕೂ, ಅದುಮೊದಲು ನಮ್ಮಿಬ್ಬರಿಗೆ ಉಂಟಾಗುತಲಿದ್ದ ಕೇವಲ ನಾಜೂಕಾದ ವಿಷಯಗಳನ್ನು ಬ್ರಿಟಿಷ್ ಗವರ್ನ್‌ಮೆಂಟಿನವರ ಮೇಲಣ ನಂಬಿಕೆಯನ್ನೂ ಸ್ನೇಹವನ್ನೂ ಸದ್ಭಾವವನ್ನೂ ವೃದ್ಧಿಮಾಡಿ ದೃಢಪಡಿಸಲಿಕ್ಕೆ ಅನುಗುಣವಾದ ರೀತಿಯಲ್ಲಿ ವ್ಯವಸ್ಥೆ ಮಾಡಿಕೊಳ್ಳಲಿಕ್ಕೂ ನನ್ನನ್ನು ಶಕ್ತನನ್ನಾಗಿಮಾಡಿತು. ಬರ್ಮಾ ರಾಜ್ಯವಂ ನಾವು ಸ್ವಾಧೀನ ಪಡಿಸಿಕೊಂಡದಂ ಕುರಿತು ನೀವುಪ್ರಸ್ತಾಪಿಸಿದರಷ್ಟೆ. ಈ ವಿಷಯದಲ್ಲಿ ನನ್ನ ರಾಜ್ಯತಂತ್ರಜ್ಞತೆಯು ನಿಮ್ಮ ಅಂಗೀಕಾರಾರ್ಹವಾದಬಗ್ಯೆ ನಾನು ಬಹಳ ಸಂತುಷ್ಟನಾದೆನೆಂಬದಂ ನಿಮಗೆ ನಾನು ಪ್ರತ್ಯೇಕ ತಿಳಿಸಬೇಕಾದ್ದಿಲ್ಲವು. ನಿಜವಾಗಿ ಯುದ್ಧವೆಂಬದು ಯಾವಾಗಲು ನಿಂದ್ಯವಾದ ತುಚ್ಛ ಕೃತ್ಯವಾಗಿರುತಿದೆ. ಅಂತಾ ಯುದ್ಧಾಭಿಪ್ರಾಯವನ್ನು ನನ್ನಂತೆ ಮನಃಪೂರ್ವಕವಾಗಿ ಅಸಹಿಸಿಕೊಳ್ಳತಕ್ಕವರು ಅನ್ಯರ್ಯಾರೂ ಇರಲಾರರು. ನಾವಾಗಿ ದಾಖಲ್ ಮಾಡಿಕೊಳ್ಳುವದರ ಮೂಲಕವಾದದೇಶಾಭಿವೃದ್ಧಿಯೂ, ತತ್ಪ್ರಯುಕ್ತವಾದ ನಮ್ಮ ಜವಾಬ್ದಾರಿಯು ಸಹ ಪ್ರಸಿದ್ಧವಾಗಿ ಅನಪೇಕ್ಷಿತಾಂಶಗಳಾಗಿರುತಿವೆ. ಆದಾಗ್ಯೂ, ಇರಾವತಿನದಿಯುಭಯಪಡದಲ್ಲಿಯೂ, ನಮ್ಮಅಧಿಕಾರವನ್ನು ಆಗ್ಯೆ ನೆಲಗೊಂಡಿದ್ದ ಸಂದರ್ಭವನ್ನನುಸರಿಸಿ ವೃದ್ಧಿಪಡಿಸಬೇಕಾದ್ದು ಆವಶ್ಯಕವೆಂಬದಕ್ಕಿಂತ ಬುದ್ಧವಾದ[?] ನಂಬಿಕೆಯನ್ನುಂಟುಮಾಡುವ ಮತ್ತೊಂದು ವಿಷಯವು ನನ್ನ ಜೀವಿತಕಾಲದಲ್ಲಿ ಪ್ರಾಪ್ತವಾಗಲಿಲ್ಲವು. ಬರ್ಮಾ ರಾಜ್ಯವೆಂಬದು ಹ್ಯಾಗಿತ್ತು? ಅದೊಂದು ಸರ್ಕಾರೆಂತಲಾಗಲೀ ರಾಜ್ಯವೆಂತಲಾಗಲಿ ನುಡಿಯುವಂತಿರಲಿಲ್ಲವು ಅಲ್ಲಿ ಮುಖ್ಯಾಧಿಕಾರವು ನೆಲಗೊಂಡಿರಲಿಲ್ಲವು ಸ್ವಬಂಧುಗಳಾಗಿಯೂ, ಸ್ವಜಾತೀಯರಾಗಿಯೂ, ಇದ್ದವರನೇಕರು ಖೂನ್‌ಮಾಡಲ್ಪಟ್ಟತರುವಾಯಲೂ, ಅಲ್ಲಿನ ಅರಸರು ತಮ್ಮ ಅರಮನೆಯನ್ನಗಲಿ ಹೊರಗೆಹೊರಡುವಷ್ಟು ಧೈರ್ಯವಿಲ್ಲದವರಾಗಿದ್ದರು. ಅವರ ರಾಜ್ಯವೆಲ್ಲವೂ ಅರಾಜಕತ್ವಕ್ಕೂ, ಅನ್ಯಾಯಕ್ಕೂ ರಂಗಭೂಮಿಯಾಗಿತ್ತು. ಒಳದೇಶದ ಪ್ರಮುಖರುಗಳೆನಿಸಿಕೊಂಡಿದ್ದವರೆಲ್ಲ ಕ್ರೂರರಾಗಿಯೂ, ಸರ್ವಸ್ವವನ್ನಪಹರಿಸುವಂತಾ ದರೋಡೆಯವರಾಗಿಯೂ ಇರುತ, ತಮ್ಮ ಆಯುಧಬಲದಿಂದ ಅನನ್ಯಗತಿಕರಾದ ಗ್ರಾಮಸ್ಥರಮೂಲಕ ಬೇಕಾದಹಣವನ್ನು ಸುಲಿಗೆ ಮಾಡುತಲಿದ್ದರು. ಸ್ವಲ್ಪಕಾಲಕ್ಕೆ ಹಿಂದೆ, ಬರ್ಮಾರಾಜ್ಯಕ್ಕೆಸೇರಿದ ಉತ್ತರಪಶ್ಚಿಮದ ಊರುಗಳಪೈಕಿ ಮುಖ್ಯವಾದದೊಂದನ್ನು ಚೀನಾದೇಶೀಯರು ಸ್ವಾಧೀನಪಡಿಸಿಕೊಳ್ಳಲು, ಆಗ ಮಾಂಡಲೇ ಸರ್ಕಾರದವರು ಅನುಸರಿಸಲೆತ್ನಿಸಿದ ರಾಜಕೀಯಮಾರ್ಗವು, ನಮಗೂ ಪ್ರಬಲರಾದ ಒಬ್ಬ ಯುರೋಪಿಯನ್ ಸಂಸ್ಥಾನಾಧಿಪತಿಗೂ, ವಿರುದ್ಧವಾದ ಸಂಘಟ್ಟನವನ್ನು ನಿಜವಾಗಿ ಉಂಟುಮಾಡತಕ್ಕದ್ದಾಗಿತ್ತು. ದೇಶದ ಹುಟ್ಟುವಳಿಯನ್ನು ಅಭಿವೃದ್ಧಿಗೊಳಿಸುವಬಗ್ಯೆ ಆ ಸರ್ಕಾರದವರು ಕಂಠೋಕ್ತವಾಗಿ ಕರೆಯಿಸಿದ್ದರಮೇಲೆ ಅಲ್ಲಿಗೆಹೋಗಿ ಬಹಳಮಟ್ಟಿಗೆ ತಮ್ಮ ಹಣವನ್ನು ವ್ಯಯಮಾಡಿರುವಂತಾ ಇಂಗ್ಲಿಷ್ ವರ್ತಕರ ವಿಷಯದಲ್ಲಿ ಬಹಳ ಅನ್ಯಾಯಗಳು ನಡೆಸಲ್ಪಟ್ಟವು, ಎಂಬವು ವಗೈರೆ.

Occasional Notes.
ನೈಮಿತ್ತಿಕ ವಿಷಯನ್ಯಾಸ.

A trip abandoned.—ಕಾಶ್ಮೀರದೇಶಕ್ಕೆ ಹೋಗುವಮಾರ್ಗದಲ್ಲಿ ವಾಂತಿಭೇದಿರೋಗ ವ್ಯಾಪಿಸಿರುವದರಿಂದ ವೈಸ್‌ರಾಯ್‌ಯವರು ಸದರೀದೇಶಕ್ಕೆ ಹೋಗುವಪ್ರಯತ್ನವು ಸದ್ಯಕ್ಕೆ ಬಿಡಲ್ಪಟ್ಟಿತೆಂದು ತಿಳಿಯಬರುತಿದೆ.

Coinage.—ಸನ್ ೧೮೮೬-೮೭ನೇ ಸಿಸಿನಿಯಲ್ಲಿ[?] ನಾಲ್ಕುಕೋಟಿ ಅರವತ್ತೆರಡು ಲಕ್ಷರೂಪಾಯಿಗಳು ಛಾಪಾ ಹಾಕಲ್ಪಟ್ಟವು. ಅವುಗಳ ಪೈಕಿ ಮುಂಬೈ ಟಂಕಸಾಲೆಯಲ್ಲಿ ಮೂರುಕೋಟಿ ಐವತ್ತುನಾಲ್ಕು ಲಕ್ಷರೂಪಾಯಿಗಳು ಛಾಪಾ ಆದವು.

A recommendation.—ದಮರ್‌ರೂ ದಿವಾನರಾದ ಜಯಪ್ರಕಾಶ ಬಹದೂರವರಿಗೆ ಕಾಶ್ಮೀರ ಸಂಸ್ಥಾನದಲ್ಲಿ ಒಂದು ದೊಡ್ಡ ಅಧಿಕಾರ ಕೊಡಬೇಕೆಂದು ಇಂಡ್ಯ ಗವರ್ನ್‌ಮೆಂಟಿನವರು ಶಿಫಾರಸ್ಸು ಮಾಡಿರುವಂತೆ ಪ್ರಸ್ತಾಪಿಸಲ್ಪಡುತಿದೆ.

The Ceylon Pearl Fishery.—ಕಳೆದ ಫೆಬ್ರವರಿ ೨೦ನೇ ತಾರೀಖ್ ಮೊದಲು, ಮಾರ್ಚ್ ೨೭ನೇ ತಾರೀಖ್ ವರೆವಿಗೆ ಸಿಲೋನ್‌ದ್ವೀಪದ ಮುತ್ತಿನ ಸಲಾಪದಲ್ಲಿ ಹನ್ನೆರಡು ವರೆ ಲಕ್ಷ ಮುತ್ತಿನ ನತ್ತುಗಳು ಸಿಕ್ಕಿ ಅವನ್ನು ಹರಾಜ್

ಮಾಡಿದ್ದರಲ್ಲಿ ಸರ್ಕಾರಕ್ಕೆ ೬,೭೫,೦೦೦ ರೂಪಾಯಿಗಳು ಮಿಚ್ಚುವಳಿಯಾದವು.

A proclamation.—ಜರ್ಮನೀ ದೇಶದ ಚಕ್ರವರ್ತಿಯವರಾದ ಫ್ರೆಡರಿಕ್‌ಯವರು, ಆಲ್‌ಸಾಸ್ ಲೋರೈನ್ ಎಂಬ ತುಕಡಿಗಳ ಮೇಲಿನ ತಮ್ಮ ಹಕ್ಕುಗಳನ್ನು ತಾವು ಕಾಪಾಡಿಕೊಳ್ಳಬೇಕೆಂಬ ದೃಢತರವಾದ ತಮ್ಮ ಸಂಕಲ್ಪವನ್ನು ಸದರೀ ದೇಶದ ಜನಗಳಿಗೆ ಇಸ್ತಿಹಾರ್ ಮೂಲಕ ಪ್ರಕಟಪಡಿಸಿರುತ್ತಾರೆ.

An appoiment.—ಹೈದರಾಬಾದ ಸಂಸ್ಥಾನದ ರೆವಿನ್ಯೂ ಇನ್ಸ್‌ಪೆಕ್ಟರ್ ಜನರಲವರಾದ ಮಿ. ಡರ್ಲಾಪ್ ಎಂಬವರು ಆರುತಿಂಗಳ ಫರ್ಲಾ ಪಡೆದುಕೊಂಡು ಯೂರೋಪ್ ದೇಶಕ್ಕೆ ಹೋಗುತ್ತಾರಾಗಿ, ಆ ಕಾಲದಲ್ಲಿ ಅವರ ಕೆಲಸವನ್ನು ನಿರ್ವಹಿಸತಕ್ಕ ಬಗ್ಗೆ, ಸದರೀ ಸಂಸ್ಥಾನದ ಪ್ರಧಾನಿಯವರ ಪ್ರೈವೇಟ ಸೆಕ್ರೆಟರಿಯಾದ ಮಿ. ಫರಿತಾರ್ಜಿ ಜೆಂಸಢಜಿಯವರನ್ನು ರೆವಿನ್ಯೂ ಇನ್ಸ್‌ಪೆಕ್ಟರ್ ಜನರಲ್ಲಾಗಿ ಮೊಕರರ್ಮಾಡಿರುತ್ತಾರೆ.

Arrest of dacoits.—ಇಂದೋರ್ ಸಂಸ್ಥಾನದ ದಿವಾನರವರು ಸದರೀ ಸಂಸ್ಥಾನಕ್ಕೇನೇ ಸೇರಿದ್ದಾಗಿರುವ ತಾಂತಿಯಾಭೀಲ್ ಎಂಬ ದರೋಡೆ ಜನಗಳು ವಾಸವಾಗಿರುವ ಪ್ರದೇಶಕ್ಕೆ ಬಂದು ವಿಚಾರಿಸುವಲ್ಲಿ ಸದರೀ ದರೋಡೆ ಜನಗಳ ಪೈಕಿ ಕೆಲವರ ಬಂಧುಗಳೂ ಪರಿಚಿತರೂ ಅಲ್ಲಿ ವಾಸ ಮಾಡುತ್ತ, ತಾಂತಿಯಾ ಎಂಬವನ ಸಂಗಡ ಕಾಗದ ಪತ್ರಗಳು ನಡೆಸುತ್ತ, ಅವನಿಂದ ಕಳುಹಿಸಲ್ಪಡುವ ಹಣಗಳನ್ನು ಬರಮಾಡಿಕೊಳ್ಳುತ್ತ, ಕೆಲವು ಸಂದರ್ಭಗಳಲ್ಲಿ ಅವನನ್ನು ತಮ್ಮ ಮನೆಗಳಲ್ಲಿ ಮರೆಯಾಗಿಟ್ಟುಕೊಳ್ಳುತಲಿರುವಂತೆ ತಿಳಿದುಬರಲು ಅವರನ್ನೆಲ್ಲ ದಸ್ತಗಿರಿಮಾಡಿಸಿದರೆಂದು ಒಂದಾನೊಂದು ಪತ್ರಿಕೆ ತಿಳಿಸುತ್ತದೆ.

Invention of a machine.—ಅಮೇರಿಕಾ ದೇಶೀಯರು ನವೀನಗಳಾದ ಯಂತ್ರನಿರ್ಮಾಣ ಕಾರ್ಯದಲ್ಲಿ ದಿನೇದಿನೆ ಅಭಿವೃದ್ಧಿಸ್ಥಿತಿಗೆ ಬರುತಲಿದ್ದಾರೆಂಬವಕ್ಕೆ ನಿದರ್ಶನರೂಪವಾಗಿ ಈಚೆಗೆ ಒಂದು ಯಂತ್ರವನ್ನು ನಿರ್ಮಿಸಿರುತ್ತಾರೆ. ಈ ಯಂತ್ರಕ್ಕೆ ೧೮ ಅಥವಾ ೨೦ ಕುದುರೆಗಳನ್ನು ಕಟ್ಟಿ, ಕಟಾವಿಗೆ ಲಾಯಖಾಗಿರುವ ಫಸಲಿರುವ ಒಂದು ಗದ್ದೆಯಮೇಲೆ ಒಂದು ದಫಾ ನಡೆದುಕೊಂಡು ಹೋಗುವಲ್ಲಿ ಫಸಲನ್ನು ಕುಯಿದು ಹೊರೆಗಳು ಕಟ್ಟಿ ಬಡಿದು ಧಾನ್ಯವನ್ನು ರಾಶಿಹಾಕಿಬಿಡುತ್ತದೆ.

A meeting.—ಕಳೆದ ತಿಂಗಳ ೨೫ನೇ ತಾರೀಖಿನಲ್ಲಿ ಷಹರ್ಜಾನ್ ಪುರದಲ್ಲಿ ಪ್ರಬಲರಾದ ಮಹಮ್ಮದೀಯರ ಜನಗಳು ಸಭೆಸೇರಿ, ತಾವು ನ್ಯಾಷನಲ್ ಕಾಂಗ್ರೆಸ್ ಎಂಬ ಸಾರ್ವಜನಿಕ ಸಭೆಗೆ ಸೇರಿದವರಲ್ಲವೆಂತಲೂ, ಅವರ ನಡವಳಿಕೆಗಳನ್ನೂ ಅಪೇಕ್ಷಿತಾಂಶಗಳನ್ನೂ ತಾವು ಒಪ್ಪುವದಿಲ್ಲವೆಂತಲೂ ಹೊರಪಡಿಸಿದರು. ಈ ಸಭೆಗೆ ಪ್ರಸಿದ್ಧರಾದವರು ಸುಮಾರು ೧೨೫ ಮಂದಿ ಬಂದಿದ್ದರು. ಮೇಲಿನ ನ್ಯಾಷನಲ್ ಕಾಂಗ್ರೆಸ್ ಸಭೆಗೂ ತಮಗೂ ಯಾವ ವಿಧವಾದ ಸಂಬಂಧವೂ ಇಲ್ಲವೆಂದು ಸೂಚಿಸಿ ಅನೇಕರು ಉಪನ್ಯಾಸ ಮಾಡಿದರು.

Layolty of Native Princes -ಜಯಪುರದ ಮಹಾರಾಜರವರು, ವಾಯವ್ಯದೇಶದ ಸರಹದ್ದು ಪ್ರಾಂತದ ಬಂದೋಬಸ್ತಿಯ ಬಗ್ಗೆ ತಾವು ಹದಿನೈದು ಲಕ್ಷರೂಪಾಯಿಗಳು ಕೊಡುವದಾಗಿಯೂ, ಸದರೀ ಮೊತ್ತವು ಉದ್ದಿಷ್ಟಕಾರ್ಯಕ್ಕೆ ಸಾಲದ್ದಲ್ಲವಾದರು ತಮ್ಮ ಶಕ್ತ್ಯನುಗುಣವಾದದ್ದೆಂತಲೂ, ನಮೂದ್‌ಮಾಡಿ ವೈಸರಾಯ್‌ಯವರಿಗೆ ಒಂದು ಕರೀತಾ ಬರೆದಿರುವದಲ್ಲದೆ, ಬ್ರಿಟಿಷ್ ಗವರ್ನಮೆಂಟಿನವರಲ್ಲಿ ತಮಗಿರುವ ರಾಜಭಕ್ತಿ ಮತ್ತು ಅನುರಾಗಪ್ರದರ್ಶನವಾಗಿ, ಆವಶ್ಯಕತೆಯುಂಟಾದ ಕಾಲದಲ್ಲಿ ತಮ್ಮ ಮತ್ತು ಸಂಸ್ಥಾನದ ಆಯುತಿಗಳನ್ನೆಲ್ಲ ವೈಸರಾಯ್‌ಯವರ ಅಧೀನದಲ್ಲಿಡುವದಾಗಿ ತಿಳಿಸಿರುತ್ತಾರೆ.

Introduction of administrative reforms.—ಗ್ವಾಲಿಯರ್ ಸಂಸ್ಥಾನದಲ್ಲಿ ಈಚೆಗೆ ಮುಖ್ಯಗಳಾದ ಹೊಸ ಏರ್ಪಾಡುಗಳು ಅಮಲಿನಲ್ಲಿ ತರಲ್ಪಡುತಲಿವೆ. ಅವುಗಳ ಪೈಕಿ ನೀರಾವರಿ ಕಾಮಗಾರಿ, ಜುಡಿಷಲ್ ಇಲಾಖೆಯನ್ನು ಪ್ರತ್ಯೇಕಿಸುವದು, ವಿದ್ಯಾಭಿವೃದ್ಧಿ, ದೇಶದ ಎಲ್ಲ ಕಡೆಗಳಲ್ಲೂ ಧರ್ಮ ವೈದ್ಯ ಶಾಲೆಗಳನ್ನು ಸ್ಥಾಪಿಸುವದು, ಇವು ಕೇವಲ ಮುಖ್ಯವಾದದ್ದಾಗಿರುತ್ತವೆ. ಈ ಕೆಲಸಗಳ ನಿರ್ವಹಣಾರ್ಥ ವಿದ್ಯಾವಂತರಾದವರನೇಕರು ನೌಕರಿಯಲ್ಲಿಡಲ್ಪಟ್ಟಿದ್ದಾರೆ, ಎಂದು ವಗೈರೆ ಒಂದಾನೊಂದು ಪತ್ರಿಕೆಯ ಮೂಲಕ ತಿಳಿಯಲಾದೆವು.

A decision of the Bombay High Court.—ಕಳೆದ ಫೆಬ್ರುವರಿ ತಿಂಗಳಲ್ಲಿ, ಮುಂಬೈಯೊಳು ಹಾಲುಮಾರುವಂಥಾವಳೊಬ್ಬಳು ಕೆಯು ಹಾಲಿನಲ್ಲಿ ನೀರುಬೆರೆಸಿ ಮಾರಿದಳಾಗಿ ಅದು ದೇಹಕ್ಕೆ ಅನಾರೋಗ್ಯಕಾರಿಯೆಂದು ಅವಳ ಮೇಲೆ ಕ್ರಿಮಿನಲ್ ಚಾರ್ಜ್ ಮಾಡಲ್ಪಟ್ಟು ಅವಳಿಗೆ ಎಂಟುಲಕ್ಷೆ ಜುಲ್ಮಾನೆ ಅಥವಾ [illegible] ದಾದನೆವಿಧಿಸಲ್ಪಟ್ಟಿತು. ಈ ಮೊಕದ್ದಮೆಯು ಅಲ್ಲಿನ ಹೈಕೋರ್ಟಿನವರ ವಿಮರ್ಶೆಗೆ ತರಲ್ಪಡಲು, ಹಾಲಿನಲ್ಲಿ ನೀರುಬೆರೆಸುವದರಿಂದ ಅನಾರೋಗ್ಯಕರವಾಗುವದಿಲ್ಲವಾಗಿ ಆ ಕೃತ್ಯವು ಪೀನಲ್ ಕೋಡಿನ ಪ್ರಕಾರ ತಕ್ಸೀರಾಗುವದಿಲ್ಲವೆಂದು ಅಭಿಪ್ರಾಯಪಟ್ಟು, ಅಪರಾಧಿಗೆ ವಿಧಿಸಲ್ಪಟ್ಟ ಸಜಾವನ್ನು ರದ್ದುಮಾಡಿರುತ್ತಾರೆ.

LOCAL AND PROVINCIAL NEWS.

ಒಳದೇಶ ಮತ್ತು ತಾಲ್ಲೂಕುಬಾತ್ಮೀವೃತ್ತಾಂತಗಳು

The Mysore Anche.—ಮದರಾಸ್ ಪೋಸ್ಟ್ ಮ್ಯಾಸ್ಟರ್ ಜನರಲ್ಲವರು ಈ ಊರಿಗೆ ಬಂದು ಇಲ್ಲಿನ ಅಂಚೇಇಲಾಖಾ ಕಾಗದಪತ್ರಗಳನ್ನೆಲ್ಲ ಅಜಮಾಯಿಷಿ ಮಾಡುತಲಿರುವಂತೆ ಹಿಂದಿನ ವಾರದಲ್ಲಿ ನಾವು ತಿಳಿಸಿದ್ದೆವಷ್ಟೆ. ಈಗ ಸದರೀ ಕಾಗದಪತ್ರಗಳ ತನಿಖೆಯೆಲ್ಲ ಪೂರೈಸಿತೆಂತಲೂ, ಇಲಾಖೆಯನ್ನು ದಾಖಲ್ಮಾಡಿಕೊಳ್ಳುವ ಬಗ್ಗೆ ಇನ್ನು ಬೇಕಾದ ಏರ್ಪಾಡುಗಳೆಲ್ಲ ಮಾಡಲಾಗುವದೆಂತಲೂ, ಒಳದೇಶದ ಇಂಗ್ಲಿಷ್‌ಪತ್ರಿಕೆಯೊಂದು ತಿಳಿಸುತ್ತದೆ.

Sree Rama Navami.—ಕಳೆದ ಸಂವತ್ಸರದೊಳದೇ ಚೈತ್ರಮಾಸದಲ್ಲಿ ತುಲಸೀರಾಮದಾಸರೆಂಬ ಒಬ್ಬ ಭಗವದ್ಭಕ್ತರು ಪ್ರತಿವರುಷದ ಶ್ರೀರಾಮನವಮಿ ಮೊದಲು ೧೧ ದಿನಗಳ ತನಕ ಈ ಊರಲ್ಲಿ ಶ್ರೀರಾಮೋತ್ಸವ ಮಾಡಿದ್ದು ಅನೇಕರ ಜ್ಞಾಪಕದಲ್ಲಿರಬಹುದಷ್ಟೆ. ಅದೇಪ್ರಕಾರ ಈವರುಷದಲ್ಲಿಯೂ ಬರುವ ನವಮಿ ಮೊದಲು ಬಹುಳ ಪಂಚಮಿಯವರಿವಿಗೆ ಈ ಊರು ಅಣ್ಣಮ್ಮನ ದೇವಸ್ಥಾನದ ಬಳಿಇರುವ ಮೇಕಲ ಪಾಪಣ್ಣನವರ ಛತ್ರದಲ್ಲಿ ೧೧ ದಿನಗಳು ಶ್ರೀರಾಮೋತ್ಸವವೂ ಆಯಾರಾತ್ರಿಗಳಲ್ಲಿ ಹರಿಭಜನೆಯೂ ಮಾಡುವದಾಗಿ ಅವರು ಪ್ರಕಟಿಸಿರುವ ಪ್ರಕಟನೆಯ ಮೂಲಕ ತಿಳಿಯಲಾದೆವು.

Coorg.—ಕೊಡಗುರಾಜ್ಯವು ಮದರಾಸ್ ಗವರ್ನಮೆಂಟಿಗೆ ದಾಖಿಲಾಗಿ ಅದೊಂದು ಸಬ್ ಕಲೆಕ್ಟರೇಟಾಗಿ ಮಾಡಲ್ಪಟ್ಟಿತೆಂತಲೂ, ಅಲ್ಲಿನ ಡಿಸ್ಟ್ರಿಕ್ಟ್ ವಗೈರೆ ಕೋರ್ಟುಗಳೆಲ್ಲವೂ ವಜಾ ಮಾಡಲ್ಪಡುವದೆಂತಲೂ, ಈ ವಾರದಲ್ಲಿ ಬಲವಾದ ಪ್ರವಾದ ಉಂಟಾಗಿದೆ. ಪರಂತು ಇದರ ಯಾಥಾರ್ಥ್ಯವು ಇನ್ನೂ ಗೊತ್ತಾಗಿ ತಿಳಿಯಬರಲಿಲ್ಲವು. ಏತನ್ಮಧ್ಯೆ ಕೊಡಗುದೇಶಸ್ಥರು ಸುಮಾರ್ ೫೦೦ ಜನಗಳ ತನಕ ಸೇರಿ ವೈಸರಾಯಿಯವರಿಗೆ ಒಂದು ಅರ್ಜಿ ಬರೆದುಕೊಂಡು ಅದರಲ್ಲಿ ಪ್ರಸಕ್ತ ಏರ್ಪಾಡನ್ನು ಬಹಳವಾಗಿ ಆಕ್ಷೇಪಿಸಿರುತ್ತಾರೆ. ಇವರ ಪ್ರಾರ್ಥನೆಯಂ ಗವರ್ನಮೆಂಟಿನವರು ಎಷ್ಟರಮಟ್ಟಿಗೆ ಗೌರವಿಸುವರೋ ನೋಡಬೇಕಾಗಿದೆ.

Mysore Local Service and Pleaders' Examinations.—ಸನ್ ೧೮೮೭ನೇ ಇಸವಿ ಜನವರಿ ೧೪ನೇ ಮಕ್ಕಾಂ ಮೈಸೂರು ಗೆಜೆಟಿನ ೨ನೇ ಭಾಗದ ೧೭ನೇ ಪುಟದಲ್ಲಿ ಪ್ರಕಟಿಸಲ್ಪಟ್ಟಿರುವ ೧೮೮೭ನೇ ಇಸವಿ ಡಿಸಂಬರ್ ೧೯ನೇ ತಾರೀಖಿನ ಇಸ್ತಿಹಾರ್‌ನಾಮೆಯ ೧ನೇ ಕಲಂ ಅನುಸರಿಸಿ ಮೈಸೂರು ಸರ್ವಿಸ್ ಮತ್ತು ಪ್ಲೀಡರ್ಸ್‌ಗಳ ಪರೀಕ್ಷೆಯು ಮೇಲೆಕಂಡ ಇಸ್ತಿಹಾರ್ ನಾಮೆಯಲ್ಲಿ ನಮೂದಾಗಿರುವ ಸ್ಥಳ ಮತ್ತು ಕಾಲಗಳಲ್ಲಿ ಈ ಸಂವತ್ಸರ ಬೆಂಗಳೂರಲ್ಲಿ ಮಾತ್ರವೇ ನಡೆಯುವದೆಂಬದಾಗಿ ಸದರೀ ಪರೀಕ್ಷೆಯ ಬೋರ್ಡ್ ಸೆಕ್ರೆಟರಿಯವರು ಸಕಲಜನಗಳ ತಿಳುವಳಿಕೆಯ ಬಗ್ಗೆ ಪ್ರಕಟಿಸಿರುತ್ತಾರೆ. ಇದರ ಕಾರಣವೇನೋ ಗೊತ್ತಾಗಲಿಲ್ಲವು. ಪರೀಕ್ಷಾರ್ಥ ಇಲ್ಲಿಗೆ ಬರತಕ್ಕವರಿಗೆ ದೇಹಶ್ರಮಕ್ಕೂ ಅರ್ಥವ್ಯಯಕ್ಕೂ ಈ ಏರ್ಪಾಡು ನಿಮಿತ್ತವಾಯಿತೇಹೊರತು ಬೇರಿಲ್ಲವು.

The Weather.—ಗತವಾರದ ಮೊದಲು, ಮೋಡ ಮುಸುಕುತಲೂ ಕದಾಚಿತ್ ವರ್ಷಬಿಂದುಗಳು ಪರಿಮಿತವಾಗಿ ಬೀಳುತಲೂ ಇದ್ದವೆ. ಪರಂತು ಅದರಿಂದ ಮತ್ತಷ್ಟು ಘರ್ಮ್ಯಕ್ಕೆ ಕಾರಣವಾಗಿದೆಯೇ ಹೊರತು ಸುಖವಿಲ್ಲವು. ರಾತ್ರಿಕಾಲದಲ್ಲಿ ವಾಯು ಸಂಚಾರ ಕಡಿಮೆಯಾಗುವಂತೆಲ್ಲ ಸೊಳ್ಳೆಗಳಿಗೆಸುಗ್ಗಿಯಾಗಿದೆ. ಬ್ರಹ್ಮಶ್ರೀ ಪುಲಿಕಲ್ ಲಕ್ಷ್ಮೀರಮಣ ಜ್ಯೋತಿಸರವರು ಮಳೆ ಪರಿಶೀಲನ ಮಾಡಿ ತಿಳಿಸಿರುತ್ತಾರೇನೆಂದರೆ:—ಈ ತಿಂಗಳ ೧೮ನೇ ತಾರೀಖ್ ಬುಧವಾರ ರಾತ್ರಿ ೧೨ಘಂಟೆಯು ಆಗಾಮಿತು ೨ನೇ ತಾರೀಖ್ ಶುಕ್ರವಾರದ ತನಕ ಅಶ್ವಿನೀ ೩ನೇ ಪಾದವಾದದ್ದರಿಂದ ವರ್ಷಯೋಗವು ಇದಕ್ಕಿಂತಲೂ, ಸ್ವಲ್ಪಮಟ್ಟಿಗೆ ಅಧಿಕವಾಗಿರುವದು. ಆಗಲೂ ಖಂಡವೃಷ್ಟಿಯಾಗಿರುವದೇ ಹೊರತು ಪೂರ್ಣವೃಷ್ಟಿಯಲ್ಲವು, ಎಂಬದು. ರೋಗಾದ್ಯುಪದ್ರವಗಳು ಅದ್ಯಾಪಿ ಉಪಶಮಿಸಲಿಲ್ಲವು. ಪರಸ್ಥಳಗಳಲ್ಲಿ ಪಶುಗಳಿಗೆ ಆರೋಗ್ಯ ಸಾಲದೆಂದು ಹೊರಗಿನಿಂದ ಬರುವ ಕಾಗದಮೂಲಕ ತಿಳಿಯಬರುತ್ತದೆ.

Current news in Mysore.—ಮಾಹೇಮಜಕೂರಿ ೧೦ನೇ ತಾರೀಖಿನಲ್ಲಿ ಮೈಸೂರಿಂದ ಒಬ್ಬ ಬಾತ್ಮಿದಾರರು ಒಳದೇಶದ ಸ್ಪೆಕ್ಟೇಟರ್ ಪತ್ರಿಕೆಗೆ ಇಷ್ಟರಿಕಂಡ ಕೆಲವು ವಿಷಯಗಳನ್ನು ತಿಳಿಸಿರುವದೇನೆಂದರೆ:—ಬಿಸಿಲಿನ ತೈಕ್ಷ್ಣ್ಯವು ದಿನೇ ದಿನೆ ಅಧಿಕವಾಗುತಲಿರುವದರಿಂದ ಗತವಾರದೊಳು ಈ ಊರಲ್ಲಿ ಅನೇಕಾವರ್ತಿ ಬೆಂಕಿ ತಗಲಿ ಅದರಿಂದ ವಿಶೇಷ ಲುಕ್ಸಾನ್ ಉಂಟಾಗಲಿಕ್ಕೆ ಮುಂಚಿತವಾಗಿಯೇ ಆರಿಸಲ್ಪಟ್ಟಿತು. ಈ ಊರಿನ ಪಳೇಮಾರ್ಕೆಟ್ಟಿನ ಬಳಿಯಿರುವ ಒಬ್ಬ ಮಹಮ್ಮದೀಯನಿಗೆ ಸೇರಿದ ಹುಲ್ಲುಮನೆಗೆ ಬೆಂಕಿ ತಗಲಿ ಸುದ್ದಾಂಗ ನಾಶವಾಯಿತು. ಆ ಕಾಲದಲ್ಲಿ ಆಮಾರ್ಗವಾಗಿ ಹೋಗುತಲಿದ್ದ ರೈಲ್ವೇ ಇಲಾಖಾ ನೌಕರರು ಕೆಲವರು ಅದಂ ಆರಿಸಿಬಿಟ್ಟರು. ಮಹಾರಾಜರವರ ಬಾಡೀಗಾರ್ಡ್ ಕುದುರೆಗಳ ಲಾಯದ ಪೈಕಿ ಕೆಲವು ಭಾಗಕ್ಕೆ ಬೆಂಕಿತಗಲಿ, ಲಾಯದಲ್ಲಿದ್ದವರು ಮುಂದೆ ಅದು ವ್ಯಾಪಿಸದಂತೆ ಕೂಡಲೇ ಆರಿಸಿಬಿಟ್ಟರು. ಮುಖ್ಯವಾಗಿ ಇಂಥಾ ಸಂದರ್ಭಗಳಲ್ಲಿ ಉಪಯೋಗಿಸುವಂತೆ ಜಲಯಂತ್ರವಂ ಪಡೆಯತಕ್ಕ ವಿಷಯದಲ್ಲಿ ಮ್ಯುನಿಸಿಪಾಲಿಟಿಯವರು ತಕ್ಕ ಪ್ರಯತ್ನಪಟ್ಟರೆ ಗುಡಿಸಲು ಮನೆಗಳು ವಿಶೇಷವಾಗಿರುವ ಪ್ರದೇಶಗಳಿಗೆ ಅನುಕೂಲವಾಗಿರುವದು. ಜಲವಸತಿಯ ವಿಷಯದಲ್ಲಿ ಬೆಂಗಳೂರಿನವರು ಅದ್ಯಾಪಿ ವಿಚಾರಮಾಡುತಲಿದ್ದಾಗ್ಯೂ ಇಲ್ಲಿ ಮಾತ್ರ ಮಿ॥ ಸ್ಟ್ಯಾಂಡಿಷ್ ಲೀಯವರ ಕ್ರಮವು ಕೂಡಲೇ ಜಾರೀಗೆ ಬಂದತೆ ಹೇಳಬಹುದಾಗಿದೆ. ಷಹರಿನ ಪೂರ್ವೋತ್ತರ ಪ್ರದೇಶಗಳಲ್ಲಿ ಜಲ ವಸತಿಯಂ ಕಲ್ಪಿಸುವ ಬಗ್ಗೆ ನಲ್ಲಿಗಳು ಜಾಗ್ರತೆಯಾಗಿಡಲ್ಪಡುತಲಿವೆ. ಕ್ಷಿಪ್ರದಲ್ಲಿಯೇ ಮದರಾಸ್ ವಗೈರೆ ಪ್ರಾಂತಗಳಂತೆ ವಾಟರ್‌ಟ್ಯಾಕ್ಸ್, ಅಂದರೆ, ನೀರಿನತೀರ್ವೆಯೆಂದು ಇಲ್ಲಿನ ಜನಗಳಮೇಲೆ ಹೊರಿಸಲ್ಪಡುವದೆಂದು ತಿಳಿಯಬರುತ್ತದೆ. ಆಗ ಜನಗಳ ಗೋಳಾಟವು ನಿಜವಾಗಿ ಜಾಸ್ತಿಯಾಗುವದು, ಯಾತಕ್ಕಂದರೆ, ಗವರ್ನಮೆಂಟಿನವರಾಗಲಿ, ಮ್ಯುನಿಸಿಪಾಲಿಟಿಯವರಾಗಲಿ ಕಂದಾಯವನ್ನು ಜನಗಳಿಂದ ಯಾತಕ್ಕಾಗಿ ನಿರೀಕ್ಷಿಸುತ್ತಾರೆಯೋ ಅದರ ಉದ್ದೇಶವನ್ನು ಅವರು ಅರಿಯುವಂತೆ ಕಾಣಿಸಲಿಲ್ಲವು. ಇಲ್ಲಿನ ರೇಟಪೇಯರ್ಸ್ ಅಸೋಸಿಯೇಷನವರು, ಸಮಾಧಾನಪಡಿಸಿರುವಂತಿಲ್ಲವು. ಪರಂತು ಪೂರ್ವಕ್ಕಿಂತ ಅವರಗದ್ದಲವು ಅಧಿಕವಾಗಿರುತದೆ. ಮ್ಯುನಿಸಿಪಲ್‌ಬೋರ್ಡ್ ಪ್ರೆಸಿಡೆಂಟರ ಮತ್ತು ವೈಸ್ ಪ್ರೆಸಿಡೆಂಟರ ನಡತೆಯು ಮೇಲೆಕಂಡ ರೇಟಪೇಯರಸ್ ಅಸೋಸಿಯೇಷನ್ ಮೆಂಬರ್‌ಗಳಿಗೆ ಸಮರ್ಪಕವಾಗಿಲ್ಲದೆ ಹೋಗಲು, ಅವರು, ಪ್ರೆಸಿಡೆಂಟ ಮತ್ತು ವೈಸ್ ಪ್ರೆಸಿಡೆಂಟರುಗಳ ಐಚ್ಛಿಕ ಪ್ರವೃತ್ತಿಯನ್ನು ಸಲ್ಪಮಟ್ಟಿಗೆ ಕಡೆಮಾಡಬೇಕೆಂದು ಪ್ರಾರ್ಥಿಸಿ, ದಿವಾನರಲ್ಲಿ ಅಪೇಕ್ಷೆ ಮಾಡಿಕೊಂಡರು. ಅದರ ಫಲ ಪರ್ಯವಸಾನವೆಂತಾಯಿತೋ ಅದುಮಾತ್ರ ಗೊತ್ತಿಲ್ಲವು. ಮನೆಗಳನ್ನು ಕೆಡಿಪಿಸತಕ್ಕ ವಿಷಯದಲ್ಲಿ ಖಂಡಿತವಾದ ಹುಕುಮನ್ನು ಜಾರೀಯಲ್ಲಿ ತಾರದ ಪಕ್ಷಕ್ಕೆ ಇಷ್ಟರತ್ವರೆಯೊಳು ಷಹರ್ ಪ್ರಕೃತ ಅಭಿವೃದ್ಧಿ ಸ್ಥಿತಿಗೆ ಬಂದಿರಲಾರದೆಂದು ಮಾತ್ರನಾನೆಣಿಸುತ್ತೇನೆ. ಶ್ರೀಮನ್ಮಹಾರಾಜರವರು ತಮ್ಮ ಪರಿವಾರದೊಡನೆ ನಾಳೇ ಸೋಮವಾರದದಿನ, ಅಂದರೆ ೧೬ನೇ ತಾರೀಖಿನಲ್ಲಿ ನೀಲಗಿರಿಗೆ ಮಾಮೂಲ್‌ಮೇರೆ ದಯಮಾಡುವರು. ಈಸಲ ಮಹಾರಾಜರವರು ಸದರೀ ಪರ್ವತಾಗ್ರದಲ್ಲಿ ಒಂದು ತಿಂಗಳ ಕಾಲಕ್ಕಿಂತ ಅಧಿಕವಾಗಿ ನಿಂತಿರಲಾರರೆಂದು ತೋರುತ್ತದೆ. ಯಾತಕ್ಕಂದರೆ, ಮಹಾರಾಜರವರ ಗೃಹಕೃತ್ಯಕ್ಕೆ ಸೇರಿದ ವಿಶೇಷಾಂಶವೊಂದು ಇಷ್ಟರಲ್ಲಿಯೇ ಪ್ರಾಪ್ತವಾಗಬಹುದಾಗಿರುವದರಿಂದ ಆ ಕಾಲದಲ್ಲಿ ಅವರು ಇಲ್ಲಿ ಹಾಜರಿರಬೇಕಾದದ್ದು ಅತ್ಯಾವಶ್ಯಕವಾಗಿರುತ್ತದೆ. ಮಹಾರಾಜರವರಿಗೆ ನೀಲಗಿರಿಯಲ್ಲಿ ಬರೋಡೆ ಗಾಯಕವಾಡಿ ಮಹಾರಾಜರ ಸಮಾಗಮ ಪ್ರಾಪ್ತವಾಗುವದೆಂತಲೂ, ಆ ಕಾಲದಲ್ಲಿ ಅವರನ್ನು ತಮ್ಮ ರಾಜಧಾನಿಗೆ ದಯಮಾಡಬೇಕೆಂದು ಅಪೇಕ್ಷಿಸುವರೆಂತಲೂ ಇಲ್ಲಿ ಪ್ರವಾದ ಉಂಟಾಗಿದೆ. ಇದಕ್ಕೆ ನಿದರ್ಶನವಾಗಿ ದಗನೆಸ್ಮೀಹಿನಿ ಬಂಗ್ಲೇಗೆ ಈಗ ಸುಣ್ಣಬಳಿಯುತಲಿದ್ದಾರೆ. ಇದು ಗಾಯಕವಾಡಿಯವರು ಇಲ್ಲಿಗೆ ದಯಮಾಡುವಕಾಲದಲ್ಲಿ ಅವರ ವಾಸದಬಗ್ಗೆ ಉದ್ದಿಷ್ಟವಾಗಿರುವಂತೆ ಕೇಳುತ್ತೇನೆ. ಗಾಯಕವಾಡಿಯವರನ್ನು ಉಚಿತರೀತಿಯಿಂದ ಬರಮಾಡಿಕೊಂಡು ಅವರಿಗೆ ಸಕಲವಿಧ ಅನುಕೂಲ್ಯಗಳು ಕಲ್ಪಿಸುವಬಗ್ಗೆ ಬೇಕಾದ ಏರ್ಪಾಡುಗಳೆಲ್ಲ ನಡೆಸಲ್ಪಡುತ್ತವೆ. ಈ ಸಂಸ್ಥಾನದ ಪ್ರಕೃತ ದಿವಾನರಾದ ಮೆ॥ ಶೇಷಾದ್ರಿ ಅಯ್ಯರ್ ಸಿ. ಎಸ್. ಐ. ಯವರು ಕ್ಷಿಪ್ರದಲ್ಲಿಯೇ ದಿವಾನ್‌ಗಿರಿಯಿಂದನಿವೃತ್ತರಾಗುವರೆಂಬದಾಗಿ ಮತ್ತೊಂದುಪ್ರವಾದವಿಲ್ಲಿ ಪ್ರಚುರಗೊಂಡಿದೆ. ದಿವಾನ್‌ಗಿರಿ ಇಷ್ಟು ವರುಷಗಳಕಾಲದತನಕಲೇ ಇರಬೇಕೆಂಬದಾಗಿ ಎಲ್ಲಿಯೂ ನಿಬಂಧಿಸಲ್ಪಟ್ಟಿರುವದಿಲ್ಲವೆಂದು ಸ್ಪಷ್ಟವಾಗಿ ಇದುವರಿವಿಗೆ ತಿಳಿಸಿ ಬರೆದಿದ್ದವಕ್ಕೆಲ್ಲ ವಿರುದ್ಧವಾಗಿ ಈ ಪ್ರವಾದವೀಗ ವ್ಯಾಪಿಸಿದೆ.

CORRESPONDENCE.

ಬೀಲಕೋಟೆ ಗವರ್ನಮೆಂಟ್ ಕನ್ನಡ ಸ್ಕೂಲಿನ ಗತವರುಷದ ರಿಪೋರ್ಟು.

ಈ ಹೋಬಳಸ್ಕೂಲ್ ೧೮೭೦ನೇ ಇಸವಿ ಜನವರಿ ೪ನೇ ತಾರೀಖಿನಲ್ಲಿ ಸ್ಥಾಪಿಸಲ್ಪಟ್ಟು ಅದು ಮೊದಲು ನಡೆದುಬರುತಲಿದೆ. ೧೮೮೬ನೇ ಇಸವಿ ಮಾರ್ಚ ಆಖೈರವರಿವಿಗೆ ಈ ಪಾಠಶಾಲೆಯಲ್ಲಿ ೧೦೦ ಜನ ಬಾಲಕರು ನಿಯತವಾಗಿ ಓದುತಲಿದ್ದರು. ಇದಲ್ಲದೆ, ಈ ಪಾಠಶಾಲೆಯಲ್ಲಿ ಪೂರ್ವದಿಂದ ವಿದ್ಯಾಭ್ಯಾಸಮಾಡಿ ಜ್ಞಾನವಂ ಸಂಪಾದಿಸಿ, ತತ್ಫಲವಂ ಪಡೆದಿರುವವರ ಸಂಖ್ಯೆಯು ಅನೇಕವಾಗಿರುತ್ತದೆಂಬದಕ್ಕೆ ಈ ಪಾಠಶಾಲಾ ವಿದ್ಯಾರ್ಥಿಗಳಾಗಿದ್ದು ಈಗ ಸರ್ಕಾರ್ ನೌಕರಿಯಲ್ಲಿರತಕ್ಕವರನ್ನೇ ನಿದರ್ಶನತ್ವೇನ ನುಡಿಯಬಹುದಾಗಿದೆ. ಈ ತಿಂಗಳ ಮೂವತ್ತೊಂದನೆಯ ತಾರೀಖಿಗೆ ಪೈದಾದ ೧೮೮೭—೮೮ನೇ ಚಾಲ್ತೀಸಾಲ್ ಆಖೈರಿನಲ್ಲಿ ೭೭ ಮಂದಿ ವಿದ್ಯಾರ್ಥಿಗಳು ರಿಜಿಸ್ಟರ್‌ನಲ್ಲಿ ದಾಖಲಾಗಿರುತ್ತಾರೆ. ಈ ವರುಷದಲ್ಲೆಲ್ಲ ಮಾಹೇಯಾನಾ ಸರಾಸರಿ [illegible]ರಂತೆಯೂ, ಪ್ರತಿದಿನದಲ್ಲಿಯೂ, ಸರಾಸರಿ ೧೮೭ ರಪ್ರಕಾರವೂ

ವಿದ್ಯಾರ್ಥಿಗಳು ಸ್ಕೂಲಿಗೆ ಹಾಜರಾಗಿರುತ್ತಾರೆ. ಕಳೆದಸಾಲಿನ ಇದೇತಿಂಗಳ ಇದೇಕಾಲದಲ್ಲಿ ರಿಜಿಸ್ಟರ್‌ನಲ್ಲಿದ್ದವರು ಒಟ್ಟು ೧೩೧ ಜನ; ಮಾಹೇಯಾನಾ ಸರಾಸರಿ ಹಾಜರಾದವರು ೧೨೫, ಪ್ರತಿನಿತ್ಯ ಸ್ಕೂಲಿಗೆ ಬರುತಲಿದ್ದವರು ಸರಾಸರಿ ೧೧೧. ಇದರಿಂದ ಗತವರುಷಕ್ಕಿಂತಲೂ ಈಸಂವತ್ಸರದಲ್ಲಿ ವಿದ್ಯಾರ್ಥಿಗಳ ಸಂಖ್ಯೆಯು ೧೪೬ ರ ವರಿವಿಗೆ ವೃದ್ಧಿಯಾದದಕ್ಕಾಗಿ ನಾನು ಬಹಳ ಸಂತೋಷಿಸುತ್ತೇನೆ. ಈಗಿರತಕ್ಕ ೨೭೭ ಮಂದಿಬಾಲಕರಪೈಕಿ ೨೭೬ ಜನ ಹಿಂದೂಗಳಾಗಿಯೂ ಮಿಕ್ಕವರು ಮುಸಲ್ಮಾನರಾಗಿಯೂ, ಇವರಪೈಕಿ ೨೩೬ ಜನ ಪ್ರಾತಃಕಾಲದಲ್ಲಿಯೂ, ೪೧ ಜನ ರಾತ್ರಿಕಾಲದಲ್ಲಿಯೂ ವಿದ್ಯಾಭ್ಯಾಸ ಮಾಡುವವರಾಗಿರುತ್ತಾರೆ. ಅಪ್ಪರ್ ಪ್ರೈಮೆರಿಕ್ಲಾಸಿನಲ್ಲಿ ೨೧, ಲೋವರ್ ಪ್ರೈಮೆರಿತರಗತಿಯಲ್ಲಿ ೨೫೬ ಜನ ಇದಾರೆಯಲ್ಲದೆ ಲೋವರ್ ಪ್ರೈಮೆರಿತರಗತಿಯಲ್ಲಿ ೧೪೦ ಜನರ ತನಕ ಛಾಪಿಸಿದ ಪುಸ್ತಕಗಳನ್ನು ಧಾರಾಳವಾಗಿ ಓದುವಷ್ಟು ಶಕ್ತರಾದವರಾಗಿದಾರೆ. ಹಿಂದಿನ ಸಂವತ್ಸರಕ್ಕಿಂತ ಈ ವರುಷದಲ್ಲಿ ಸಕಲಾಂಶದಲ್ಲಿಯೂ, ವಿದ್ಯಾಭಿವೃದ್ಧಿಯು ಬಹಳ ತೃಪ್ತಿಕರವಾಗಿರುವದೆಂದು ಧೈರ್ಯವಾಗಿಹೇಳಬಲ್ಲೆನು. ಈ ಸ್ಕೂಲ್ ವಿದ್ಯಾರ್ಥಿಗಳೆಲ್ಲರೂ ಕನ್ನಡವಿದ್ಯೆಯನ್ನು ಮಾತ್ರವೇ ಅಭ್ಯಸಿಸತಕ್ಕವರಾದಾಗ್ಯೂ ಮುಂದೆ ನಡೆಯುತಕ್ಕ ಲೋಕಲ್ ಎಗ್ಜಾಮಿನೇಷನ್ ಎಂಬ ಪರೀಕ್ಷೆಗೆ ಹೋಗುವದಕ್ಕಾಗಿ ಓದುತಲಿರುವ ಅಪ್ಪರ್ ಪ್ರೈಮೇರಿಯ ೪ನೇ ತರಗತಿಯಲ್ಲಿ ನಾಲ್ಕುಮಂದಿಗೆ ಸ್ವಲ್ಪಮಟ್ಟಿಗೆ ಸಂಸ್ಕೃತವೂ, ದೇವನಾಗರೀ ಅಕ್ಷರವೂ ಕಲಿಸಲ್ಪಡುತಿವೆ. ವಿದ್ಯಾಭ್ಯಾಸದ ಇಲಾಖಾ ಸಬ್ ಡೆಪ್ಯುಟಿ ಇನ್‌ಸ್ಪೆಕ್ಟರವರು ಈ ಸಲ ಸ್ಕೂಲನ್ನು ಪರೀಕ್ಷಿಸಿ ಅದರ ಸ್ಥಿತಿಯಂಕುರಿತು ರಿಪೋರ್ಟುಮಾಡುವಾಗ್ಯ, "ಈದಿನ ಸ್ಕೂಲನ್ನು ಪರೀಕ್ಷಿಸಿದೆನು, ಗತವರುಷದಪರೀಕ್ಷೆಗಿಂತಲೂ ಈ ಸಲದ ಪರೀಕ್ಷೆಯಲ್ಲಿ ಅಭಿವೃದ್ಧಿಯು ಬಹಳ ತೃಪ್ತಿಕರವಾಗಿರುತ್ತೆ. ನನಗೆ ತಿಳಿದಮಟ್ಟಿಗೆ ಈ ಮೈಸೂರು ಪ್ರಾವಿನ್ಸಿನೊಳಗಾಗಿ ಇಷ್ಟರ ಅಭಿವೃದ್ಧಿಯಲ್ಲಿ ಯಾವ ಹೋಬಳೀಸ್ಕೂಲೂ ಇರಲಾರದೆಂದೆಣಿಸುತ್ತೇನೆ," ಎಂಬದಾಗಿ ನಮೂದಿಸಿರುತ್ತಾರೆ. ಮೇಲಿನತರಗತಿಗೆ ಪ್ರವೇಶನಾಗಿರುವ ೪೯ ಮಂದಿಯ ಪೈಕಿ ೩೯ ಜನ ಈಗ ಬಹುಮಾನ ಪ್ರಾಪ್ತಿಗೆ ಅರ್ಹರಾಗಿದಾರೆ. ಈ ಪಾಠಶಾಲೆಯು ವಿದ್ಯಾಭಿವೃದ್ಧಿಗಾಗಿ ಕಳೆದವರುಷದ ತನಕ ಸರ್ಕಾರದವರು ಮಾಹೇಯಾನಾ ೩ ರೂಪಾಯಿಗಳಂತೆ ಸಹಾಯದ್ರವ್ಯ ದಯಪಾಲಿಸುತಿದ್ದರು. ಈಚೆಗೆ ಇದರ ಪುರೋಭಿವೃದ್ಧಿಯನ್ನು ನಾನಾಮಾರ್ಗದಿಂದರಿತು ಸಂತೃಪ್ತರಾಗಿ, ಸ್ಕೂಲಿನ ಮನೇಬಾಡಿಗೆಗಾಗಿ ಮಾಹೇಯಾನಾ ೬ ರೂಪಾಯಿಗಳು, ಒಬ್ಬೊಬ್ಬರಿಗೆ ತಲಾ ೫ ಇಹಾಕ್ಕ, ಇಬ್ಬರು ಅಸಿಸ್ಟೆಂಟ್ ಮ್ಯಾಸ್ಟರ್‌ಗಳು, ಈರೀತಿ ಮಂಜೂರ್ಮಾಡಿ ಈಗ ತಿಂಗಳೊಂದಕ್ಕೆ ೧೯ ರೂಪಾಯಿಗಳಂತೆ ಕೊಡುತಲಿದಾರೆಯಲ್ಲದೆ ಈಚೆಗೆ ಹೊಸದಾಗಿ ಕೆಲವು ಫರ್ನಿಚರ್‌ಗಳನ್ನು ಸಹ ಕೊಡಿಸಿದರು. ಇಲ್ಲಿ ನೈಟಿಸ್ಕೂಲ್ ಪದ್ಧತಿಯನ್ನು ಏರ್ಪಡಿಸಿದ್ದುಮೊದಲು ರಾತ್ರಿಕಾಲದಲ್ಲಿ ಓದುವ ವಿದ್ಯಾರ್ಥಿಗಳ ಸಂಖ್ಯೆ ವೃದ್ಧಿಯಾಗುತಬರುತಲಿದೆ. ಪರಂತು ಈವಿದ್ಯಾರ್ಥಿಗಳು ಇಲ್ಲಿನ ನೌಕರರಿಗೆ ಯಾವವಿಧಸಹಾಯ ಮಾಡಲಿಕ್ಕೂ ಅರ್ಹರಲ್ಲವೆಂತಲೂ, ಸ್ಥಳಿಯಾಯತಿಯನ್ನನುಸರಿಸಿ ತಮಗೆ ವಿದ್ಯಾಭ್ಯಾಸ ಮಾಡಿಸಬೇಕೆಂತಲೂ, ತಾವು ದರಿದ್ರರಾದದ್ದರಿಂದ ತಮ್ಮಿಂದ ಮ್ಯಾಸ್ಟರ್‌ಗಳು ಯಾವವಿಧ ಪ್ರತ್ಯಾಶೆಯನ್ನು ನಿರೀಕ್ಷಿಸಲಾಗದೆಂತಲೂ, ಹೇಳುತ್ತಾರೆ. ಇಂತವರಿಂದ ದೀಪದ ಎಣ್ಣೆಖರ್ಚಿಗಾಗಿ ಮಾಹೇಯಾನಾ ಫೀಯೆಸುಂ ಒಂದುಆಣೆ ವಸೂಲಾಗುವದು ಸಹ ಬಹಳ ಪ್ರಯಾಸವಾಗಿರುತಿದೆ. ಮ್ಯಾಸ್ಟರ್‌ಗಳು ವ್ಯರ್ಥವಾಗಿ ತೊಂದರೆಪಟ್ಟು ರಾತ್ರಿಕಾಲದಲ್ಲಿ ಬೋಧಿಸಬೇಕೆಂದು ಸರ್ಕಾರದವರು ನಿರ್ಬಂಧಿಸುವದಿಲ್ಲವೆಂಬದಾಗಿ ಡೆಪ್ಯುಟಿ ಇನ್‌ಸ್ಪೆಕ್ಟರವರು ತಿಳಿಸುತಲಿರುತ್ತಾರೆ. ಸ್ಥಳದವರ ದಾಕ್ಷಿಣ್ಯವೆಂಬದು ಒಂದುಕಡೆಯಲ್ಲಿಯೂ, ವೃಥಾ ದೇಹಶ್ರಮಪಡಬೇಕಾಗಿದೆಯಲ್ಲಾ ಎಂಬಚಿಂತೆ ಮತ್ತೊಂದುಕಡೆಯಲ್ಲಿಯೂ ಉಂಟಾಗಿ ಇಲ್ಲಿನ ಉಪಾಧ್ಯಾಯರುಗಳು, ಅಭಿವೃದ್ಧಿಯಲ್ಲಿರುವ ರಾತ್ರಿಕ್ಲಾಸನ್ನು ನಿಲ್ಲಿಸುವದಕ್ಕೂ, ಇಟ್ಟಿರುವದಕ್ಕೂ, ತೋರದೆ ಸಂಕಟಪಡುತಲಿದಾರೆ. ಈಸಂವತ್ಸರದಲ್ಲಿ ನಾನು ಸೂಚಿಸಿದಂತೆಲ್ಲಾ ಸ್ಕೂಲ್ ಅಭಿವೃದ್ಧಿಯ ವಿಷಯದಲ್ಲಿ ನನಗೆ ಸಕಲವಿಧದಲ್ಲೂ ಸಹಾಯಕರಾಗಿದ್ದ ನನ್ನ ಅಸಿಸ್ಟೆಂಟ್‌ಗಳಿಗೂ ಕೆಲವರು ಸ್ಥಳಾಭಿಮಾನಿಗಳಿಗೂ ಸಹ ನಾನುಬಹಳ ಕೃತಜ್ಞನಾಗಿರುವೆನು. ತಾವೆಲ್ಲರೂ ಈದಿನ ಕೃಪೆಯೊಡನೆ ಇಲ್ಲಿಗೆ ದಯಮಾಡಿ ಬಹುಮಾನಕಾಲದಲ್ಲಿ ಹಾಜರಿದ್ದು, ವಿದ್ಯಾರ್ಥಿಗಳೆಲ್ಲರಿಗೂ ವಿಶೇಷ ಪ್ರೋತ್ಸಾಹವನ್ನುಂಟುಮಾಡಿ, ತನ್ಮೂಲಕ ಉತ್ತರೋತ್ತರಾಭಿವೃದ್ಧಿಯಬಗ್ಗೆ ಅನುಗ್ರಹಿಸಿದ್ದಕ್ಕಾಗಿ ನಾನು ಬಹಳ ಕೃತಜ್ಞನಾಗಿರುವೆನು. ಈ ಸ್ಥಳನಿವಾಸಿಗಳಾರದವರಲ್ಲಿ ನೈಜವಾದ ಅಭಿಮಾನವನ್ನೂ ಬಾಲಕರ ವಿದ್ಯಾಭಿವೃದ್ಧಿಯಲ್ಲಿ ತಮಗಿರತಕ್ಕ ಆಸಕ್ತಿಯನ್ನೂ ವ್ಯಕ್ತಪಡಿಸಿ, ಬಾಲಕರಿಗೆ ಪ್ರೈಜ್‌ಕೊಟ್ಟದ್ದರ ಮೂಲಕ ಪ್ರೋತ್ಸಾಹವನ್ನುಂಟುಮಾಡಿದ್ದಕ್ಕೋಸ್ಕರ ನಾನೂ, ಇಲ್ಲಿನದೊಡ್ಡಮನುಷ್ಯರೂ, ಸ್ಕೂಲ್ ವಿದ್ಯಾರ್ಥಿಗಳು ಸಹ ಅಗ್ರಾಸನಾಧಿಪತಿಗೆ ವಂದನಮಾಡುವೆವು.

SUMMARY OF NEWS.

ವೃತ್ತಾಂತ ಸಂಗ್ರಹ.

—:o:—

Government Savings' Banks in India. ಕಳೆದ ಮಾರ್ಚಿತಿಂಗಳ ೩೧ನೇ ತಾರೀಖಿನಲ್ಲಿ ಇಂಡ್ಯಾದೇಶದಲ್ಲಿ ಸರ್ವತ್ರ ೬೦೩ ಗವರ್ನಮೆಂಟ್ ಸೇವಿಂಗ್ಸ್‌ಬ್ಯಾಂಕ್‌ಗಳು ಇದ್ದವು. ಇವುಗಳಲ್ಲಿ ೨,೪೯,೪೪೫ ಮಂದಿ ಡಿಪಾಜಿಟಿದಾರರ ಲೆಕ್ಕಗಳಿರುತಿವೆ. ಈ ಬ್ಯಾಂಕ್‌ಗಳಲ್ಲಿಡಲ್ಪಟ್ಟಿರುವ ಮೊಬಲಗುಗಳಿಗೆಗವರ್ನಮೆಂಟಿನವರು ೧೯,೬೨,೬೬೪ ರೂಪಾಯಿಗಳು ಫಕ್ತು ಬಡ್ಡಿಕೊಟ್ಟರು. ೩೯,೪೬,೯೪೩ ರೂಪಾಯಿಗಳುಸಿಲ್ಕು ಹಾಜರಿದ್ದಂತೆ ತಿಳಿಯಬರುತಿದೆ.

Charge of bribe-taking against a Sub Judge.—ತಲಚ್ಚೇರಿಸಬಾರ್ಡಿನೇಟ್ ಜಡ್ಜಿ ಮೆ|| ಕುಂಜರ್ಮೇನನ್ ಎಂಬವರಮೇಲೆ ರುಷವತ್ ಫಿರ್ಯಾದ್ ಬಂದಿರುತ್ತದೆ. ಈವಿಷಯದಲ್ಲಿ ಡಿಸ್ಟ್ರಿಕ್ಟ್ ಜಡ್ಜಿಯವರು ವಿಚಾರಣೆ ಜರಿಗಿಸಿದರು. ಆ ವಿಚಾರಣೆಯಲ್ಲಿ ಸುಮಾರು ೬೦ಮಂದಿ ಸಾಕ್ಷಿಗಳು ವಿಚಾರಿಸಲ್ಪಟ್ಟರು. ಇದುವರಿವಿಗೂ ಆಗಿರತಕ್ಕ ವಿಚಾರಣೆಯು ಸಬ್ ಜಡ್ಜೀರಿಗನನುಕೂಲವಾಗಿದೆ. ಮೆ|| ಕುಂಜರ್ಮೇನನ್‌ಯವರು ೧ನೇ ಕ್ಲಾಸು ಸಬಾರ್ಡಿನೇಟ್ ಜಡ್ಜಿ ಆಗಿ ಮಾಹೇಯಾನಾ ೪೦೦ರೂ ಸಂಬಳವುಳ್ಳವರಾಗಿದ್ದಾರೆ. ಇಂತಾವರಮೇಲೆ ಅಪರಾಧಬರುವದು ಬಹಳ ವಿಷಾದಕರವಾದ ವಿಷಯವಾಗಿದೆ. ಮೆ|| ಕುಂಜರ್ಮೇನನ್‌ಯವರಮೇಲೆ ಬಂದಿರುವದುಸುಳ್ಳಪವಾದವೆಂದು ನಾವು ಕೇಳುವದಕ್ಕೆ ಬಹಳ ಅಪೇಕ್ಷಿಸುವೆವು.—ವಿಜಯಧ್ವಜ.

Glasgow Exhibition.—ಸ್ಕಾಟ್ಲ್ಯಾಂಡ್‌ದೇಶಕ್ಕೆ ಸೇರಿದ ಗ್ಲಾಸ್‌ಗೋಪಟ್ಟಣದಲ್ಲಿ ವಿವಿಧವಸ್ತು ಪ್ರದರ್ಶನ ಸಭೆಯೊಂದು ನಡೆಯುವದಾಗಿದೆ. ಅದಕ್ಕಾಗಿ ಕಲ್ಕತ್ತೆಯಿಂದ ೯ ಜನ ಕೈವಾಡಗಾರರು ಅಲ್ಲಿಗೆ ಕಳುಹಿಸಲ್ಪಟ್ಟರು. ಇವರ ಪೈಕಿ ಇಬ್ಬರು, ಪಾಂಚಾಲದೇಶದವರಾಗಿಯೂ, ೭ ಜನ ವಂಗ ದೇಶಸ್ಥರಾಗಿಯೂ, ಇರುತ್ತಾರೆ. ಇವರಲ್ಲಿ ಇಬ್ಬರು ಮಧುರಭಕ್ಷ್ಯಗಳನ್ನು ಮಾಡತಕ್ಕವರಾಗಿಯೂ, ಒಬ್ಬನುಕ್ಷೌರಕನಾಗಿಯೂ ಇರುವಂತೆ ತಿಳಿಯಬರುತಿದೆ. ಮೇಲೆ ಕಂಡ ಇಬ್ಬರಿಗಿಂತಲೂ, ಮೂರನೆಯವನುಹೋದದ್ದು ಬಹಳ ಪ್ರಯೋಜನವೆಂದೆಣಿಸುವೆವು. ಯಾತಕ್ಕಂದರೆ, ಯಗ್ಜಿಬಿಷನಿಗೆದ್ರವ್ಯ ಸಹಾಯಮಾಡಿ ಪ್ರತಿಫಲವೊಂದೂಇಲ್ಲವೆಚಿಂತಿಸುವುದೊಡನೆ ಹಿಂದಿರಿಗಿ ಬರತಕ್ಕವರಿಗೆಲ್ಲ ಸದರೀ ಕ್ಷೌರಕನು ಬಹಳ ಸಹಾಯಕನಾಗಿರುವನೆಂದು ತೋರುತಿದೆ.

A discovery.—ಬಟೇವಿಯಾ ದೇಶದಲ್ಲಿ ರಿಕ್ತನೊಬ್ಬನು ಈಚೆಗೆ ಮೃತಪಟ್ಟಂತೆಯೂ, ಅವನು ಜೀವಿಸಿದ್ದಕಾಲದಲ್ಲಿ ಯಾವಾಗಲೂ ಒಂದು ಸಣ್ಣಪೆಟ್ಟಿಗೆಯನ್ನು ಸಮೀಪದಲ್ಲೇ ಇಟ್ಟುಕೊಂಡಿರುತಲಿದ್ದನೆಂತಲೂ, ಅದಂ ಕಂಡು ಅನೇಕರು ಅದರಲ್ಲೇನಾದರು ದ್ರವ್ಯವಿರಬಹುದೆಂದು ಭ್ರಾಂತಿಪಡುತಲಿದ್ದರೆಂತಲೂ, ಆತನಮರಣಾನಂತರ ಸದರೀಪೆಟ್ಟಿಗೆಯಂ ತೆಗೆಸಿನೋಡಲಾಗಿ, ಅದರೊಳು ಒಂದು ಪುಸ್ತಕವಿತ್ತಂತಲೂ, ಅದರಲ್ಲಿ ಕ್ಲ್ಯವಶ್ಯಗಳಾದ ನೀತಿಮುಂತಾದ ವಿಷಯಗಳು ಬರೆಯಲ್ಪಟ್ಟಿದ್ದವೆಂತಲೂ, ಇದಲ್ಲದೆ ಮಾನವನಾಗಿ ಜನಿಸಿದ ಬಳಿಕ ಅವನು ಈ ಲೋಕಯಾತ್ರೆಯಂ ಪೂರೈಸಬೇಕಾದ ಕ್ರಮಗಳು ವಿವರವಾಗಿ ತಿಳಿಸಲ್ಪಟ್ಟಿದ್ದವೆಂತಲೂ, ತಿಳಿಯಬರುತಿದೆ. ಈ ಗ್ರಂಥವನ್ನು ಇಷ್ಟುಭದ್ರವಾಗಿ ಸಂರಕ್ಷಿಸಿಟ್ಟುಕೊಂಡಿದ್ದ ಮೇಲೆಕಂಡವನ ಉದ್ದೇಶವೇನಿತ್ತೋ ತಿಳಿಯಲಿಲ್ಲವು. ಆಪುಸ್ತಕವನ್ನು ಯಾರಾದರು ಛಾಪಿಸಿದರೆ ಮಾಲೀಕನ ಹೆಸರಾದರೂ ಊರ್ಜಿತವಾಗಿರುವದು.

A cobra affair.—ಈಗ ಕೆಲವುದಿನಗಳ ಕೆಳಗೆ ದಾಲಘಾಟಿನಲ್ಲಿ ಒಬ್ಬ ಬ್ರಾಹ್ಮಣನು ತನ್ನ ಮನೆಗೆ ವಿಶೇಷವಾಗಿ ಬರುತ್ತಿದ್ದಂತಾ ಒಂದು ಸರ್ಪವನ್ನು ತೊಲಗಿಸುವ ಉದ್ದೇಶ್ಯ ಅದನ್ನು ಹಿಡಿದು ಒಂದುಮಡಿಕೆಯಲ್ಲಿ ಹಾಕಿ ಬಾಯಿಕಟ್ಟಿ ರೈಲ್ವೆಸ್ಟೇಷನಿಗೆ ತೆಗದುಕೊಂಡುಹೋಗಿ ಒಂದು ರೈಲ್ವೆ ಟಿಕೆಟುಪೊಂದಿ ಆಮಡಿಕೆ ಸಹಿತವಾಗಿ ಗಾಡಿಯಲ್ಲಿ ಕೂತುಕೊಂಡನು. ಅವನು ಯಾವಸ್ಟೇಷನಲ್ಲಿ ಇಳಿದನೋ ಅಲ್ಲಿ ಆಮಡಿಕೆಯನ್ನು ಮರೆತು ಹೊರಟುಹೋದನು. ಆ ಗಾಡಿಯಲ್ಲಿದ್ದ ಮತ್ತೊಬ್ಬನು ಆಮಡಿಕೆಯಲ್ಲಿ ತಿನ್ನುವ ಪದಾರ್ಥ ವಿರಬಹುದೆಂದು ಭಾವಿಸಿ ಅದನ್ನು ತೆಗದುಕೊಂಡು ಹೋದನು. ಅವನು ಇಳಿದ ಊರಿನ ಅಧಿಕಾರಿಗಳು ಅದನ್ನು ಕಂಡುಹಿಡಿದು ಆ ಇಬ್ಬರು ಪ್ರಯಾಣಿಕರ ಮೇಲೆ ರೈಲ್ವೇ ಆಕ್ಟಿನ ಪ್ರಕಾರ ಫಿರ್ಯಾದ್ ಮಾಡಿದ್ದಾರೆ. ಎರಡನೇ ಪ್ರಯಾಣಿಕನು ಪುಣ್ಯವಂತನಲ್ಲವೆ? ಗಡಿಗೆಯಲ್ಲಿ ಭಕ್ಷ್ಯವಿರಬಹುದೆಂದು ಭಾವಿಸಿಕೊಂಡು ಸುಮ್ಮನಿರದೆ ಅದನ್ನು ರೈಲ್ವೆಗಾಡಿಯಲ್ಲಿ ಬಿಚ್ಚಿ ಆಸರ್ಪವು ಹೊರಗೆಬಂದಿದ್ದರೆ ಅವನ ಅವಸ್ಥೆಯು ಹ್ಯಾಗಾಗುತ್ತಿತ್ತೋ.—ವಿಜಯಧ್ವಜ.

Disappointment.—ಸಾಲ ತೆಗದುಕೊಂಡು ಸಾಲದ ಮೊಬಲಗನ್ನು ಕರಾರಿನ ಪ್ರಕಾರ ಕೊಡದಿದ್ದರೆ ಕೊಟ್ಟವನು ತೆಗದುಕೊಂಡವನಮೇಲೆ ಸಿವಿಲ್‌ನಲ್ಲಿ ದಾವೆಮಾಡಿ ಡಿಕ್ರೀಪಡೆದು ಡಿಕ್ರೀ ಮೊಬಲಗನ್ನು ವಸೂಲ್ಮಾಡಿಕೊಳ್ಳುವಬಗ್ಗೆ ಅವನ ಚರಸ್ಥಿರ ಸ್ವತ್ತುಗಳಮೇಲಾಗಲಿ, ಆಸಾಮಿ ಮೇಲಾಗಲಿ ವಾರಂಟ್ ತೆಗದುಕೊಳ್ಳುವದೂ, ಸದರೀ ಸಾಲಗಾರನನ್ನು ಸಿವಿಲ್ ಜೆಯಿಲ್‌ನಲ್ಲಿಡಿಸುವದೂ ಇದುವರಿವಿಗೆ ವಾಡಿಕೆಯಾಗಿತ್ತಷ್ಟೆ. ಈಚೆಗೆ ಇಂಡ್ಯ ಗವರ್ನಮೆಂಟಿನ ನ್ಯಾಯವಿಧಾಯಕ ಸಭೆಯಲ್ಲಿ ಮಂಜೂರಾಗಿ ಜಾರೀಗೆಬಂದ ಆಕ್ಟನ್ನನುಸರಿಸಿ ಇನ್ನುಮೇಲೆ ಸಾಲಗಾರರಮೇಲೆ ವಾರಂಟ್‌ಪಡೆದು ಅವರನ್ನು ಜೆಯಿಲ್‌ನಲ್ಲಿಡಕೂಡದೆಂಬದಾಗಿ ಏರ್ಪಟ್ಟು ಆ ನಿಯಮ ಕೂಡಲೇ ಜಾರೀಯಲ್ಲಿ ತರಲ್ಪಟ್ಟಿತು. ಇದರಿಂದ ದಗಾಖೋರರಾದ ಸಾಲ ಪಡೆಯತಕ್ಕವರು ಸುಖಪಡುವಕಾಲ ಪ್ರಾಪ್ತವಾಯಿತು. ಇದಕ್ಕೆ ಪೋಷಕವಾಗಿ ಇನ್‌ಸಾಲ್‌ವೆಂಟ್ ಆಕ್ಟ್ ಜಾರೀಯಲ್ಲಿರುವದರಿಂದ ಕೊಟ್ಟದುಡ್ಡನ್ನು ಮರಳಿ ಕೊಟ್ಟವನು ನಿರೀಕ್ಷಿಸಬೇಕಾದುದಿಲ್ಲವು. ಸ್ಟ್ಯಾಂಪ್, ರಿಜಿಸ್ಟ್ರೇಷನ್ ಮೊದಲಾದ ಪೂರ್ವಾಂಗಗಳೆಲ್ಲಾ ಔಪಚಾರಿಕಗಳೆಂದು ಭಾವಿಸಬಹುದು.

Erection of Houses in Burma.—ಬರ್ಮ್ಮಾರಾಜ್ಯದಲ್ಲಿ ಸರ್ಕಾರಿ ಉದ್ಯೋಗಸ್ಥರು ಹೊಸದಾಗಿ ಮನೆಗಳು ಕಟ್ಟಿಕೊಳ್ಳಲಿಕ್ಕೆ ಸಹ ಅವರಿಗೆ ಸ್ವಾತಂತ್ರ್ಯಕೊಡಲ್ಪಡಲಿಲ್ಲವೆಂದು ತೋರುತಿದೆ. ಇದುಪ್ಯಾಗುವದೆ, ಮನೆಗಳಿಗೆ ಬೇಕಾಗಿರುವಜಾಗಿ ಲೀಜವಿರ್ಗಾ ಬೇಕಾಗಿದ್ದರೆ ಆಬಗ್ಗೆ ಚೀಫ್ ಕಮಿಷನರಿಗೆ ದರಖಾಸ್ತು ಮಾಡಿಕೊಳ್ಳಬೇಕಾಗಿದೆ. ದರಖಾಸ್ತುದಾರರು ಮೂರುನಾಲ್ಕು ವಿಧ ಷರತ್ತುಗಳಿಗೆ ಒಡಂಬಟ್ಟು ಕರಾರ್ ಬರೆದುಕೊಟ್ಟಹೊರ್ತು ಜಮೀನ್‌ದೊರೆಯುವದಿಲ್ಲವು. ೧ನೇದು— ದರಖಾಸ್ತುನೊಡನೆ ಕಟ್ಟತಕ್ಕ ಮನೆಯ ಅಂದಾಜ್‌ಮೊಬಲಗು, ಅದರ ನಮೂನೆ ಬರೆದುಕಳುಹಿಸಬೇಕು. ಚೀಫ್‌ಕಮಿಷನರವರು ಮಂಜೂರ್ಮಾಡಿದ ಬಳಿಕ ಮನೇಕಾಮಗಾರಿಗೆ ಉಪಕ್ರಮಿಸಬೇಕಾಗಿದೆ. ಕಟ್ಟಿದಮೇಲೆ ಆ ಮನೆಯನ್ನು ಚೀಫ್‌ಕಮಿಷನರ ಅನುಮತಿ ಶಿವಾಯಿ ಅನ್ಯರಿಗೆ ಕ್ರಯಭೋಗ್ಯಗಳಂ ಮಾಡಲಾಗದು. ಮನೆಯ ಯಜಮಾನನು ಸ್ಥಳಬಿಟ್ಟು ಪರಸ್ಥಳಕ್ಕೆ ಸರ್ಕಾರಿ ಕೆಲಸದಮೇಲೆ ವರ್ಗಮಾಡಲ್ಪಟ್ಟಾಗ ಆತನು ತನ್ನ ಮನೆಯನ್ನು ತನಗೆ ಬದಲಾಗಿ ಮೊಕದರಾಗಿ ಬರತಕ್ಕವರಿಗೇಕೊಟ್ಟುಹೋಗತಕ್ಕದ್ದು. ಇವಲ್ಲದೆ ಗವರ್ನಮೆಂಟಿನವರು ಗೊತ್ತುಮಾಡುವ ಮನೆಕಂದಾಯವನ್ನು ತಪ್ಪದೆ ಸಲ್ಲಿಸುತಬರತಕ್ಕದ್ದು. ಈ ನಿಬಂಧನೆಗಳಿಗೆ ಕಬೂಲಿಲ್ಲದವರು ಬರ್ಮಾರಾಜ್ಯದ ಸರಹದ್ದಿನೊಳಗಾಗಿ ಮನೆಕಟ್ಟಿಕೊಳ್ಳಲಾಗದೆಂತಲೂ ಹುಕುಮಿಲ್ಲದೆ ಕಟ್ಟಲ್ಪಟ್ಟ ಮನೆಗಳು ಯಾವ ಸಬಬೂ ತಿಳಿಸದೆ ಜಪ್ತೀ ಮಾಡಲ್ಪಡುವವೆಂತಲೂ, ಸರ್ಕಾರೀಯಾಗಿ ಘೋಷಿಸಲಾಗಿರುತಿದೆಂದು ತಿಳಿಯಬರುತಿದೆ. ತೀಭಾಯವರ ಪ್ರಭುತ್ವಕ್ಕೂ ಈಗಿನ ಪ್ರಭುತ್ವಕ್ಕೂ ನಮಗೆ ಯಾವವಿಧ ತಾರತಮ್ಯವೂ ಕಾಣಿಸಲಿಲ್ಲವು. ಹಿಂದಿನಂತೆಡಳಿತವು ಈಗಬೇರೇ ಅಧಿಕಾರಿಯಿಂದ ನಡೆಸಲ್ಪಡುವಂತೆ ಭಾವಿಸಬೇಕೇಹೊರ್ತು ಪೂರ್ವದ್ದು ಕಂಪನಿ ಪ್ರಭುತ್ವವೆಂದು ದೂಷಿಸಕೆಲಸವಿಲ್ಲವು.

Murder.—ಬ್ರಿಸ್ಟಲ್ ಪಟ್ಟಣದಲ್ಲಿರತಕ್ಕ ಪೈಪ್ ಎಂಬವನೊಬ್ಬನು ಈಗ್ಯೆ ಕೆಲವುಕಾಲದ ಮೊದಲು ತನಗೆ ಅನುರೂಪೆಯಾದವಳೆಂದು ಭಾವಿಸಿ ವರಿಸುತಲಿದ್ದು ವಿವಾಹಮಾಡಿಕೊಂಡಭಾರ್ಯೆಯನ್ನು ವಿವಾಹವಾದ ಒಂದುತಿಂಗಳೊಳಗಾಗಿಯೇ ಬಂದೂಖಿನಿಂದ ಹೊಡೆದು ಖೂನಿಮಾಡಿ ತಾನೂಹೊಡೆದುಕೊಂಡು ಮೃತಪಟ್ಟಂತೆ ತಿಳಿಯಬರುತಿದೆ. ನಮ್ಮವರಲ್ಲಿ ವಧೂವರರಿಬ್ಬರು ಮುಗ್ಧರಾಗಿರತಕ್ಕಕಾಲದಲ್ಲಿ ಅವರದೊಡ್ಡವರು ತಮ್ಮ ಕಾಟಗಳಂ ಕಳೆದುಕೊಳ್ಳುವ ಬಗ್ಗೆ ವಿವಾಹ ಮಾಡಿಸುವದರಿಂದ ಅವರಿಬ್ಬರೂ ದೊಡ್ಡವರಾದಮೇಲೆ ಪರಸ್ಪರಾನುರಾಗವಿಲ್ಲದವರಾಗಿ ಮನಸ್ವಿವರ್ತಿಸುವದರಿಂದಲೇ ಇಂತಾ ಪ್ರಮಾದಗಳು ಸಕೃತ್ ಉಂಟಾಗಲಿಕ್ಕೆ ಕಾರಣವೆಂದು ಆಧುನಿಕರು ಬಾಲ್ಯವಿವಾಹದ ಖಂಡನ ಪ್ರಕರಣಗಳಲ್ಲಿ ನುಡಿಯುತಲಿರುವದು ಪ್ರಸಿದ್ಧವಾಗಿಯೇ ಇದೆಯಷ್ಟೆ. ವಧೂವರರಿಬ್ಬರೂ ಪ್ರಾಪ್ತವಯಸ್ಕರಾದಮೇಲೆ ಪರಸ್ಪರ ವರಿಸಿಕೊಂಡು, ಒಬ್ಬರಶೀಲಸ್ವಭಾವಗಳನ್ನು ಮತ್ತೊಬ್ಬರು ಬಹುಕಾಲ ಅನುಭವ ಪೂರ್ವಕತಿಳಿದುಕೊಂಡು ಬಳಿಕ ವಿವಾಹಮಾಡಿಕೊಳ್ಳುವ ಪದ್ಧತಿಯುಳ್ಳ ಇಂಗ್ಲಿಷ್‌ನವರಲ್ಲಿ ಇಂತಾ ಘೋರಕೃತ್ಯಗಳು ಬಹಳವಾಗಿ ಜರಗಲಿಕ್ಕೆ ಕಾರಣವೇನೋ ನಾವರಿಯೆವು. ಸ್ತ್ರೀಯರನ್ನು ಕುಸುಮದಂತೆ ಭಾವಿಸಿ, ಪುಷ್ಪವನ್ನೆಷ್ಟುಮಂದಿ ಆಘ್ರಾಣಿಸಿದರೂ ಬಾಧಕವಿಲ್ಲವೆಂಬ ನ್ಯಾಯರೀತ್ಯಾ ಅವಳಂ ಬೇಕಾದವರು ಬೇಕಾದಂತೆ ಪರಿಗ್ರಹಿಸಬಹುದೆಂತಲೂ, ತಾವನ್ಮಾತ್ರದಿಂದಲೇ ಅವಳಮೇಲೆ ಸ್ವೈರಿಣಿ ಎಂಬದೋಷವನ್ನು ಆರೋಪಿಸಕೂಡದೆಂತಲೂ, ವ್ಯಭಿಚಾರವು ಕೊಲೆಮುಂತಾದವುಗಳಂತೆ ಒಂದು ಪ್ರಬಲ ತಪ್ಪಿತವೆನ್ನಿಸಿಕೊಳ್ಳಲಾರದೆಂತಲೂ ಭಾವಿಸಿ ವಾದಿಸುತಲಿರತಕ್ಕವರು ಕೆಲವರು ತಮ್ಮಭಾರ್ಯೆಯರಿಗೆಯಾವಾಗಲೂ ಅಂಗರಕ್ಷಕರಾಗಿರುತಲಿರಲಿಕ್ಕೇನು ಸಮಾಧಾನ ಹೇಳುವರೋ ನೋಡಬೇಕು. ಅನೇಕವಿಧ ಭ್ರಾಂತಿಗಳಲ್ಲಿದೂ ಒಂದಲ್ಲದೆ ಬೇರಲ್ಲವು.

BANGALORE:—Printed and published for the Proprietor at the KARNATIC Press.—1888.

ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA.

ಪ್ರತಿ ಸೋಮವಾರ ಪ್ರಾತಃಕಾಲದಲ್ಲಿ ಪ್ರಕಟಿಸಲ್ಪಡುವದು.

Published every Monday Morning.

ಪ್ರಕಾಮವಿವಿಧಪ್ರವೃತ್ತ್ಯನಗವಾರ್ತ್ತಾ ಕರ್ಣಾಟಕಪ್ರಕಾಶನವರಾಭಿಧಾ ಪ್ರಥಿತಸಾಹಿತೀಶೋಭಿತಾ ॥ ಮೃಗಾಂಕಹಿತನಾಸರಿನಿಹಿತಮುದ್ರಣಾಸದ್ಮನ್ಯರ್ದ್ಧಿತಾಸುಪರಿಪೋಷಿತಾ ವಿಕಶಿತಮಾನಸಾಸುಮುದಂ ॥

Vol. XV] BANGALORE—MONDAY, APRIL 23, 1888. [No. 16.

ಸಂಪುಟ ೧೫.] ಬೆಂಗಳೂರು:—ಸನ್ ೧೮೮೮ನೇ ಇಸವಿ ಏಪ್ರಿಲ್ ೨೩ನೇ ತಾರೀಖ್ ಸೋಮವಾರ. [ಸಂಖ್ಯೆ ೧೬.

ಕರ್ಣಾಟಕ ಪ್ರಕಾಶಿಕಾ

ಪತ್ರಿಕೆಯ ಚಂದಾ ದರಗಳು,
೧೮೮೮ನೇ ಇಸವಿ ಜನವರಿಯಿಂದಾಯಿತು
ಕಡಮೆಮಾಡಲ್ಪಟ್ಟಿರುತಿದೆ.

ಈ ಪತ್ರಿಕೆಯ ಚಂದಾದಾರರಲ್ಲಿ ಅನೇಕರ ಅಪೇಕ್ಷೆಯನ್ನನುಸರಿಸುವ ಉದ್ದೇಶದೊಡನೆಯೂ, ಪರಿಮಿತವಾದ ಆದಾಯವುಳ್ಳವರಿಗೆಲ್ಲ ಈ ಪತ್ರಿಕೆಯು ಸುಲಭವಾಗಿ ಲಭಿಸುವಂತಿರಬೇಕೆಂಬ ಅಭಿಪ್ರಾಯದೊಡನೆಯೂ ಇದರ ಚಂದಾದರವನ್ನು ಇದರ ಕೆಳಕಂಡಂತೆ ಕಡಮೆಮಾಡಿರುತ್ತೇವೆ. ಅದೇನೆಂದರೆ:—

ಇಂಗ್ಲಿಷ್ ಮತ್ತು ಕನ್ನಡಭಾಗಗಳಿಗೆ.

		ಮುಂಗಡವಾಗಿ	ಹಿಂದುಗಡೆ
12	ತಿಂಗಳಿಗೆ	8—0—0	9—0—0
6	,,	4—0—0	4—8—0
3	,,	2—8—0	2—3—0

ಇಂಗ್ಲಿಷ್ ಅಥವಾ ಕನ್ನಡಭಾಗಗಳಿಗೆ.

		ಮುಂಗಡವಾಗಿ	ಹಿಂದುಗಡೆ
12	ತಿಂಗಳಿಗೆ	4—0—0	5—0—0
6	,,	2—0—0	2—8—0
3	,,	1—4—0	1—8—0

ಷರಾ—ಅಂಚೆ ಮುನ್ಷಿಗಳು, ಪೋಲೀಸು ಮತ್ತು ತಾಲೂಕ್ ಸ್ಕೂಲ್‌ಮಾಸ್ತರುಗಳು, ಶ್ಯಾನಭೋಗರು, ಪಟೇಲರು, ವಿದ್ಯಾರ್ಥಿಗಳು, ಇವರಿಗೆಲ್ಲ ಈ ಪತ್ರಿಕೆಯು ಸರ್ಕಾರ್ ಚಂದಾದರಕ್ಕೆ ಕೊಡಲ್ಪಡುವದು. ಅಡ್ವರ್ಟೈಸ್‌ಮೆಂಟು ಗುರುತಿನ ಬಾರದ ದರಖಾಸ್ತುಗಳಿಗೆ ಸುತರಾಂ ನಿಗೆ ಕೊಡಲ್ಪಡಲಾರದು. ಚಂದಾದಾರರು ಇಂಗ್ಲಿಷ್ ಭಾಗವನ್ನಾಗಲಿ ಕನ್ನಡಭಾಗವನ್ನಾಗಲಿ ಅಥವಾ ಎರಡನ್ನಾಗಲಿ ತರಿಸಿಕೊಳ್ಳಬಹುದು. ಚಂದಾಹಣವನ್ನು ಮುಂಗಡವಾಗಿಯೇ ಸಲ್ಲಿಸತಕ್ಕದ್ದು. ಮೂರುತಿಂಗಳಿಗಿಂತ ಕಡಮೆಯಾಗಿ ಚಂದಾ ಮೊಬಲಗು ಅಂಗೀಕರಿಸಲ್ಪಡಲಾರದು.

ನೋಟುಗಳು ರವಾನಿಸತಕ್ಕವರು ಮೊದಲು ಕಳುಹಿಸುವ ಅರ್ಧನೋಟು ತಲುಪಿದಬಗ್ಗೆ ನಮ್ಮ ಕಾಗದವು ಬಂದ ಕೂಡಲೇ ಬಾಕೀ ಅರ್ಧ ನೋಟನ್ನು ರವಾನಿಸತಕ್ಕದ್ದು. ಸ್ಟಾಂಪುಗಳು ಕಳುಹಿಸತಕ್ಕವರು ರೂಪಾಯಿ ಒಂದಕ್ಕೆ ಒಂದು ಆಣೆಯಮೇರೆ ಡಿಸ್ಕೌಂಟು ಸಹ ಸೇರಿಸಿ ಕಳುಹಿಸತಕ್ಕದ್ದು. ಅರ್ಧಾಣೆಯ ಸ್ಟಾಂಪುಗಳನ್ನು ಬಿಲ್ಲುಗಳನ್ನು ಕಳುಹಿಸಕೂಡದು. ಡಿಸ್ಕೌಂಟುಯಿಲ್ಲದೆ ಕಳುಹಿಸಲ್ಪಡುವ ಮೊಬಲಗಿನಲ್ಲಿ ಅದು ವಜಾಮಾಡಲ್ಪಟ್ಟು ಮಿಕ್ಕ ಮೊಬಲಗು ಲೆಕ್ಕಕ್ಕೆ ದಾಖಲು ಮಾಡಿಕೊಳ್ಳಲ್ಪಡುವದು.

ಪ್ರಕಟನೆಯ ರಿವಾಜ್.

ಮೊದಲನೆಯದಫಾ ಪಂಕ್ತಿ ಒಂದಕ್ಕೆ ೦—೨—೦
ಎರಡನೆಯದಫಾ ಪಂಕ್ತಿ ಒಂದಕ್ಕೆ ೦—೧—೦

ಷರಾ—ಎರಡಾವರ್ತಿಗಿಂತ ಜಾಸ್ತಿಯಾಗಿ ಎಷ್ಟುತಡವೆ ಛಾಯಿಸ್ ಮಾಡಿದಾಗ್ಯೂ ಪಂಕ್ತಿ ಒಂದಕ್ಕೆ ೧ಆಣೆಯಂತೆಯೇ ಲೆಕ್ಕ ಮಾಡಲ್ಪಡುವದು. ಈ ಪತ್ರಿಕೆಯಲ್ಲಿ ಛಾಯಿಸ್ ಮಾಡುವಬಗ್ಗೆ ಪ್ರಕಟನೆಗಳು ಕಳುಹಿಸುವವರು ಅವು ಎಷ್ಟಾವರ್ತಿ ಛಾಯಿಸ್ ಮಾಡಲ್ಪಡಬೇಕೋ ಆ ಅಂಕವನ್ನು ಸ್ಪಷ್ಟವಾಗಿ ತಿಳಿಸತಕ್ಕದ್ದು. ಇಲ್ಲದಪಕ್ಷಕ್ಕೆ ಅವರು ನಮಗೆ ನಿಲ್ಲಿಸೆಂತ ಬರೆಯುವತನಕ ಅವು ಛಾಪಿಸುತಿದ್ದು ಹಾಗೆ ಎಷ್ಟಾವರ್ತಿ ಪ್ರಕಟಿಸಲ್ಪಟ್ಟವಾಗ್ಯೂ ಮೇಲ್ಕಂಡ ದರದಂತೆ ಕಿಮ್ಮತ್ತು ಕೊಡಲ್ಪಡತಕ್ಕದ್ದು. ಪ್ರಕಟನೆಯಬಗ್ಗೆ ಕಳುಹಿಸಲ್ಪಡತಕ್ಕ ಪ್ರಕಟನೆಗಳನ್ನು ಆ ಯಾತಾವತ್ತಾದದಿನ ಮಧ್ಯಾಹ್ನ ೨ ಘಂಟೆಯೊಳಗಾಗಿ ಕಳುಹಿಸಬೇಕು. ಪ್ರಕಟನೆ ಮಾಡಿ ಈ ಪತ್ರಿಕೆಗೆ ಕಳುಹಿಸಲ್ಪಡತಕ್ಕ ಕಾಗದಗಳಲ್ಲಿ ತಿಳಿಸಲ್ಪಡುವ ಅಭಿಪ್ರಾಯಗಳಿಗೆ ನಾವು ಜವಾಬ್ದಾರರಾಗಲಾರೆವು. ಕ್ರಮವಾಗಿ ರುಜುಮಾಡಿ ದಸ್ತೂರ್ ಯಾವ ಕಾಗದವನ್ನು ಪ್ರಕಟಿಸಲಾರೆವು. ಸಿರಾ ಕೊಡಲ್ಪಟ್ಟ ಕಾಗದಗಳು ಮರುಮಾಡಲ್ಪಡುವದಿಲ್ಲ.

"IT RECOMENDS ITSELF"

ALL WHO SUFFER FIND SURE RELIEF.

LITTLE'S ORIENTAL BALM

THE MOST EFFECTUAL MODERN REMEDY FOR PAIN

ಲಿಟ್ಲ್ ರವರಿಂದ ತಯಾರ್ಮಾಡಲ್ಪಟ್ಟ "ಬಾಧಕಂಟಕರಣ" ಎಂಬ ಪೂರ್ವದೇಶ ಸಂಬಂಧವಾದ ಅಮೋಲ ತೈಲವು ಸ್ವಶಕ್ತಿ ಪ್ರದರ್ಶಕವಾದದ್ದು, ಮತ್ತು ಸಫಲವಾದ ನವೀನ ಚಿಕಿತ್ಸಾಪ್ರಯೋಗವಾದ ಔಷಧವು. ಇದರಿಂದ ಸಕಲ ವಾತರೋಗಗಳೂ, ವಾತಸಂಬಂಧಗಳಾದ ಸಂಧಿಬಂಧಗಳೂ ನಿವೃತ್ತಿಯಾಗುವವು. ಮುಖ್ಯವಾಗಿ ಚಿರಕಾಲಿಕವಾದ ವಾತರೋಗಗಳು, ಕಾಸ, ಗಂಟಲಿನಲ್ಲಿ ಉರಿ, ನರದ ನೋವು, ಶೀತವಾಯು, ಕಟಿವಾಯು, ಉಳುಕು ನೋವು, ತಲೆನೋವು, ತಿನಿ ವಾಯು ಮುಂತಾದ ರೋಗಗಳಿಗೆಲ್ಲ ನಿಸ್ಸಂದೇಹವಾಗಿ ಬಹಳ ಪ್ರಯೋಜನವನ್ನುಂಟು ಮಾಡತಕ್ಕದ್ದು. ಈ ತೈಲವನ್ನು ನೋವುಳ್ಳ ಸ್ಥಳಗಳಲ್ಲಿ ಕೇವಲ ಸವರಿ ಶಾಖವುಂಟಾಗುವಂತೆ ಚನ್ನಾಗಿ ತಿಕ್ಕಿದಲ್ಲಿ ಸಹಜಗಳಾದ ಯಾವ ನೋವುಗಳನ್ನು ನಿವೃತ್ತಿ ಮಾಡುವಂತಾ ಉತ್ತಮ ತೈಲವಾಗಿರುತ್ತದೆ. ಸಕ್ಕೆ ನೋವು ಶಿರೋ ಅರ್ಧತಲೆನೋವು ಮತ್ತು ಜೋಮು ಶರೀರಾಂಗ ನಿವೃತ್ತಿಯಾಗುವದು. ಗಂಟಲಿನಲ್ಲುಂಟಾಗುವ ಉರಿ ಅಥವಾ ವ್ರಣಗಳಿಗೆ ಈ ತೈಲವು ಅದ್ಭುತವಾದ ಮತ್ತು ಶೀಘ್ರವಾದ ಸಂಪೂರ್ಣ ಗುಣವನ್ನುಂಟುಮಾಡುವದು. ಅದ್ಭುತವಾದ ಈ ಔಷಧವನ್ನು ಅಜಮಾಯಿಷಿ ಮಾಡಿದಲ್ಲಿ ಅದರ ಪ್ರಯೋಜನವು ಸ್ವತಃವೇ ವ್ಯಕ್ತವಾಗುವದು. ಈ ತೈಲವು ಶೀತಗಾಳಿ ಮಂಜು ಮುಂತಾದವುಗಳೊಳಗಾಗಿ ಸಂಚರಿಸುವಂತಾ ಪ್ರಯಾಣಸ್ಥರು, ಬೇಟೆಯಾಡುವವರು, ದೇಶಾಟನ ಮಾಡುವವರು, ಮುಂತಾದವರಿಗೆಲ್ಲ ಅಮೂಲ್ಯವಾದದ್ದು.

ಪರಿಶೀಲಕರ ಅಭಿಪ್ರಾಯವು.

ಐರ್ಲ್ಯಾಂಡ್ ದೇಶದ ಫಾರ್ಮಸ್ಯುಟಿಕಲ್ ಸೊಸೈಟಿಯೆಂಬ ಔಷಧಶಾಲೆಯ ಪ್ರೆಸಿಡೆಂಟರಾಗಿಯೂ, ಸದರೀ ದೇಶದ ಜಿಯಾಲಜಿಕಲ್ ಸೊಸೈಟಿ ಎಂಬ ಭೂತತ್ವಶಾಸ್ತ್ರ ವಿವೇಚಕ ಸಮಾಜದ ಮೆಂಬರರಾಗಿಯೂ, "ಮಿನರಲ್ ವಾಟರ್ಸ್ ಆಫ್ ಯೂರಪ್" ಎಂಬ ಗ್ರಂಥಕರ್ತರಾಗಿಯೂ, ರಸಾಯನ ವಿಷಯವಾದ ಅನೇಕ ಲೇಖನಾಧಿಕಾರಿಯಾಗಿಯೂ, ಇರುವ ಪ್ರೊಫೆಸರ್ ಟಿಚ್ ಬೋರ್ನ್ (C. R. TICHBORNE, L. L. D., F. C. S., M. R. I. A.,) ಎಂಬುವರು ಅಭಿಪ್ರಾಯ ಪಟ್ಟಿರುತ್ತಾರೇನೆಂದರೆ—ಲಿಟಲ್ ಯವರ ಓರಿಯಂಟಲ್ ತೈಲವನ್ನು ಜಾಗರೂಕತೆಯಿಂದ ಪರೀಕ್ಷಿಸಿದ್ದರೊಳಗೆ ಇದು ಬಹುವಿಧ ಮೂಲಿಕೆಗಳ ಮಿಶ್ರವಾದ ತೈಲವೆಂದೇ ಕಂಡುಬರುತ್ತದೆ, ಇದು ಮೈಗೆ ಉಪಯೋಗಿಸಲ್ಪಡುವಾಗ ಶರೀರಾಂಗ ನಿಯಮದ ಸಂಕೋಚದಿಂದಾಗಿದ್ದರೂ, ನಿಜವಾಗಿ ಪ್ರಬಲ ರೋಗ ನಿವಾರಕ ಶಕ್ತಿಯುಳ್ಳದ್ದಾಗಿರುತ್ತದೆ. ಈ ಮಿಶ್ರವಾದವು ನರಗಳನ್ನು ಸ್ಥಿತಿತತ್ತ್ವಕ್ಕೆ ತರತಕ್ಕದ್ದಾಗಿರುವದರಿಂದ ಇದು ಯಾವ ತರದ ರೋಗಗಳಿಗೆ ಉಪಯುಕ್ತವೆಂದು ತಿಳಿಸಲ್ಪಟ್ಟಿದೆಯೋ ಸದರೀ ರೋಗಗಳಲ್ಲಿ ಅದರ ಪ್ರಯೋಜನವು ವ್ಯಕ್ತವಾಗುವದು. ಈ ತೈಲವು ಸಂಪೂರ್ಣ ಜಾಗರೂಕತೆಯೊಡನೆ ತಯಾರ್ಮಾಡಲ್ಪಟ್ಟಿರುತ್ತದೆ.

ಇದರ ಕ್ರಯ—ಸೀಸೆ ಒಂದಕ್ಕೆ ೧ ರೂಪಾಯಿ.

ಇದು ವಿಲ್ಸ್ನ ಔಷಧ ಶಾಲೆಯಲ್ಲಿಯೂ, ಕಮರ್ಷಿಯಲ್ ಸ್ಟ್ರೀಟ್ ದಲ್ಲಿ ೨ನೇ ನಂಬರ್ ಮನೆಯೊಳಗಿನ, ಮಿ. ಎ ಸಿ ಬೆರ್ರಿಮನ್ ಯವರಲ್ಲಿಯೂ, ಈ ಪಟ್ಟಣದಲ್ಲಿರುವ ಅವರ ಏಜಂಟ್‌ಗಳಾದ ಜೆ. ವೆಸ್ಟ್ ಯವರ ಕಂಪನಿಯಲ್ಲಿಯೂ, ಮೆ. ಕೆಪ್ಟನ್ ಅಂಡ್ ಕಂಪೆನಿಯವರಲ್ಲಿಯೂ, ರಿಗ್ಸ್ ಯವರ ಕಂಪೆನಿಯವರಲ್ಲಿಯೂ ದೊರೆಯುವದು.

AGENTS.— Messrs, J. WEST, Chemist, &c., Bangalore.
CAPTAIN & Co. Chemists, Bangalore.
RIGGS & Co., Chemists, Bangalore; and of
MAHOMED YOUSOFF AND SONS, The Cash Bazar, Bangalore.
A. C. BERRYMAN & Co.,
20 Sambodoss Street Madras.

NOTICE.

VAIDYASARA SANGRAHA

A TREATISE ON THE PRINCIPLES OF

HINDU MEDICINE

Price including Postage Rs 5 6 0

ವೈದ್ಯಸಾರ ಸಂಗ್ರಹ.

ಈಗ್ರಂಥಾಪೇಕ್ಷೆಯುಳ್ಳವರು ಮೊಬಲಗಿನೊಡನೆ ಕೆಳಗೆ ರುಜುಮಾಡಿರತಕ್ಕವರ ಹೆಸರಿಗೆ ಬರೆದುಕೊಂಡರೆ ಪುಸ್ತಕ ಕೂಡಲೇ ಕಳುಹಿಸಲ್ಪಡುವದು. ಮೊಬಲಗು ಇಲ್ಲದ ದರಖಾಸ್ತುಗಳಿಗೆ ಸುತರಾಂ ನಿಗೆ ಕೊಡಲ್ಪಡಲಾರದು.

ಇದರ ಕ್ರಯ ... ... ರೂ॥ ೫—೦—೦
ಪ್ಯಾಕಿಂಗ ಮತ್ತು ಅಂಚೇ ಹಾಸಲ್, ೦—೬—೦

ಪಿ. ಬಿ. ವೆ. ಕಟಾಚಾರ್,
ಆಸ್ಪತ್ರಿ ರೋಡ ಬೆಂಗಳೂರು.

ಹೊಸ ವರ್ತಮಾನ



ಪೂನೆ ಚಿತ್ರಶಾಲೆಯಲ್ಲಿ ಸ್ಥಾಪಿಸಲ್ಪಟ್ಟಿರುವ ಹೊಸ ಶಿಲಾಮುದ್ರೆ, ಹಿಂದೂ ದೇವರುಗಳ, ಚರಿತ್ರೆಗಳ ಮೂಲಕ ಪ್ರಸಿದ್ಧರಾದ ಪುರುಷರ, ಸುಂದರಿಯಾದ ಸ್ತ್ರೀಯರ ಬಣ್ಣದ ಚಿತ್ರಪಟಗಳು ತಯಾರಾಗುತ್ತಲಿವೆ ... ಕ್ರಯ ಬಹಳ ಅಗ್ಗವಾಗಿದೆ ... ಕಳುಹಿಸಲ್ಪಡುವದು

ಪೂನೆ ಚಿತ್ರಶಾಳಾ ಪ್ರೆಸ್ ...

ನೋಟಿಸ್.

ದಕ್ಷಿಣ ಮಹಾರಾಷ್ಟ್ರ ರೈಲ್ವೆ ಕಂಪೆನಿ.
ಮೈಸೂರು ಶಾಖೆ.

ಇದರಿಂದ ಸಮಸ್ತ ಜನಗಳಿಗೂ ತಿಳಿಸುವದೇನೆಂದರೆ:—

ಸನ್ ೧೮೮೮ನೇ ಇಸವಿ ಜನವರಿ ೧ನೇ ತಾರೀಖ್ ಮೊದಲು ಒಂದು ವರುಷ ಕಾಲದವರಿವಿಗೆ, ರೈಲ್ವೆ ಗಾಡಿಗಳ ಉಪಯೋಗಕ್ಕಾಗಿ, ಇದರಡಿ ತಿಳಿಸುವ ಸ್ಟೇಷನ್‌ಗಳಲ್ಲಿ ಮತ್ತು ತೂಕದಷ್ಟು ಜಂಗ್ಲಿ ಸೌದೆಯ ಸರಬರಾಯಿ ಬಗ್ಗೆ ದರಖಾಸ್ತುಗಳು ಮುಂದಿನ ತಿಂಗಳ ೧ನೇ ತಾರೀಖಿನವರಿವಿಗೂ ಇದರ ರುಜು ಮಾಡುವವರಿಂದ ಬರಮಾಡಿಕೊಳ್ಳಲ್ಪಡುವವು.

ಮೈಸೂರು	150	ಟನ್‌ಗಳು,	ತಿಂಗಳೊಂದಕ್ಕೆ
ಮದ್ದೂರು	100	,,	,,
ಬಿಡದಿ	250	,,	,,
ಹಿರಿಸಾವೆ	200	,,	,,
ಗುಬ್ಬಿಗೂ ಅರಸೀಕೆರೆಗೂ ಮಧ್ಯೆ	300	,,	,,

೨. ಸದರೀ ಸರಬರಾಯಿ, ಈಗ ಜಾರಿಯಲ್ಲಿರುವ ಷರತ್ತುಗಳ ಡೆಪ್ಯೂಟಿ ಪಟ್ಟಿಗೆ ಅನುಗುಣವಾಗಿರಬೇಕು. ಅಗತ್ಯವಾಗಿ ಬೇಕಾದವರು ಇದರಡಿ ರುಜು ಮಾಡಿರುವವರ ಆಫೀಸಿನಿಂದ ಪಡೆಯಬಹುದು.

೩. ಸೌದೆಯದರದಲ್ಲಿ ಸುಂಕ ಸೇರಿ ಅಥವಾ ಸೇರದೆ ಇರಬಹುದು.

೪. ಪ್ರತಿಯೊಂದು ದರಖಾಸ್ತಿನ ಸಂಗಡಲೂ, ನಗದಾಗಲಿ ಕರೆನ್ಸಿ ನೋಟಾಗಲಿ, ೧೦೦ ರೂಪಾಯಿಗಳ ಡಿಪಾಸಿಟ ಹಾಜರ್ಮಾಡಬೇಕು.

೫. ಯಾರ ದರಖಾಸ್ತು ಮಂಜೂರ್ಮಾಡಲ್ಪಡುತ್ತದೆಯೋ ಅಂತವನು ಮುಂದೆ ಗೊತ್ತುಮಾಡಲ್ಪಡುವ ಕಾಲದೊಳಗಾಗಿ ೫೦೦ರೂಪಾಯಿಗಳಿಗೆ ಜಾಮೀನ್ ಕೊಟ್ಟು ಕಂಟ್ರಾಕ್ಟು ಮುಚ್ಚಳಿಕೆ ಬರೆದು ಕೊಡಬೇಕು. ಅತನು ಹಾಗೆಮಾಡುವದಕ್ಕೆ ತಪ್ಪಿದರೆ ಆತನ ಡಿಪಾಜಿಟ್ ಬಾಬತು ೧೦೦ರೂಪಾಯಿಗಳು ಕಂಪೆನಿಗೆ ದಂಡವಾಗಿ ಸೇರಿಸಿಕೊಳ್ಳಲ್ಪಡುವದು. ಮಂಜೂರಾಗದ ದರಖಾಸ್ತುದಾರರ ಡಿಪಾಜಿಟ್ಟು ಮೊಬಲಗುಗಳು ಅವರವರಿಗೆ ವಾಪಸ್ ಕೊಡಲ್ಪಡುವವು.

೬. ಯಾವದರಖಾಸ್ತು ತಿರಸ್ಕರಿಸಲ್ಪಟ್ಟಾಗ್ಯೂ ಅದಕ್ಕೆ ಕಾರಣ ತಿಳಿಸಲ್ಪಡಲಾರದು.

೭. ದರಖಾಸ್ತುಗಳನ್ನು ಸೀಲ್ ಮಾಡಿ ಅದರ ಲಿಫಾಫೆಯಲ್ಲಿ (ದಕ್ಷಿಣ ಮಹಾರಾಷ್ಟ್ರ) ರೈಲ್ವೆ ರಸ್ತೆಯ ಪೈಕಿ ಮೈಸೂರು ಸ್ಟೇಟ್ ರೈಲ್ವೆಗೆ) ಜಂಗ್ಲಿಸೌದೆಯ ಸರಬರಾಯಿ ಬಗ್ಗೆ ದರಖಾಸ್ತು ಎಂದು ಬರೆಯತಕ್ಕದ್ದು.

Bangalore. 6—4—88. } A. G. MOLLOY, Locomotive Supt., Mysore Section.

ನೋಟಿಸ.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನೆಂದರೆ:—

ಸನ್ ೧೮೮೮ನೇ ಇಸವಿ ಏಪ್ರಿಲ್ ಗುರ್ರೀ ತಾರೀಖ್ ಮೊದಲು ಇದರಡಿ ತಿಳಿಸಲ್ಪಡುವ ಷರತ್ತುಗಳಿಗೆ ಒಳಪಟ್ಟು, ಬೆಂಗಳೂರು ಮಿಲಿಟರಿ ಸ್ಟೇಷನ್ ನಿವಾಸಿಗಳಿಗೆ, ಸರ್ಕಾರೀ ಬಾಬತು ಹೇರುವ ಎತ್ತುಗಳು ಬಾಡಿಗೆಗೆ ಸಿಕ್ಕುವದು.

೧. ಪೂರಾ ಒಂದು ಸೆಟಿ ೫ ಎತ್ತುಗಳನ್ನು ಒಬ್ಬ ಯಜಮಾನನವನಿಂದ ಪಡೆಯಬೇಕು.

೨. ಹಾಗೆ ಪಡಕೊಳ್ಳುವ ಎತ್ತುಗಳನ್ನು ಪ್ರತಿ ತಿಂಗಳ ಆಖೈರ್ ತಾರೀಖಿನಲ್ಲಿ ಅಜಮಾಯಿಷಿ ಬಗ್ಗೆ ಟ್ರಾನ್ಸ್‌ಪೋರ್ಟ್ ಇಲಾಖೆಗೆ ಕಳುಹಿಸಬೇಕು. ತಿಂಗಳ ಕಡೇದಿನ ಆದಿತ್ಯವಾರ ವಾಗುವ ಪಕ್ಷದಲ್ಲಿ ಮಾರನೇ ತಿಂಗಳ ಗುರ್ರೀ ತಾರೀಖಿನಲ್ಲಿ ಅಜಮಾಯಿಷಿಮಾಡಲ್ಪಡುವದು. ಪ್ರತಿಯೊಂದು ಹೇರುವ ಎತ್ತಿಗೂ ಮಾಹೆಯಾ

೭೨ ರೂಪಾಯಿಗಳು ಅಥವಾ ನೆಟ್ಟಗೆ ೩೫ ರೂಪಾಯಿಗಳು.

೪. ಬಾಡಿಗೆ ಹಣ ಪ್ರಾರಂಭ ತಿಂಗಳ ೫ನೇ ತಾರೀಖಿನಲ್ಲಿ ಇದರಡಿ ರುಜು ಮಾಡಿರುವವರಿಗೆ ಈ ಆಫೀಸಿನಿಂದ ಬಿಲ್ಲು ಬಂದ ಕೂಡಲೇ ಪಾವತೀ ಮಾಡತಕ್ಕದ್ದು.

೫. ಬಾಡಿಗೆಗೆ ಕೊಡಲ್ಪಡುವ ಯೆತ್ತುಗಳನ್ನೆಲ್ಲ ಅಥವಾ ಅವುಗಳ ಪೈಕಿ ಯಾವದನ್ನಾದರೂ ಗವರ್ನಮೆಂಟು ಕೆಲಸಕ್ಕೆ ಬೇಕಾದಾಗ ವಾಪಸು ತರಿಸಿಕೊಳ್ಳುವದಕ್ಕೆ ಇದರಡಿ ರುಜು ಮಾಡಿರುವವರು ಸ್ವಾತಂತ್ರ್ಯಪೂರ್ವಕವಾಗಿರುತ್ತಾರೆ.

ಎಗ್ಸಿಕ್ಯುಟಿವ್ ಕಮ್ಮಿಸರಿಯಾಟ್ ಆಫೀಸ್,
ಟ್ರಾನ್ಸ್‌ಪೋರ್ಟ್ ಸರ್ಕಲ್.
ಬೆಂಗಳೂರು, ೬—೪—೮೮

E. A. Barce,
Colonel.

ಪ್ರಕಟನೆ.

Bangalore City Municipality.

ಬೆಂಗಳೂರುಸಿಟಿ ಮ್ಯೂನಿಸಿಪಾಲಿಟಿ.

ಸನ್ ೧೮೮೮ನೇ ಇಸವಿ ಏಪ್ರಿಲ್ ೨೩ನೇ ತಾರೀಖು ಸೋಮವಾರ ಪ್ರಾತಃಕಾಲ ೭ ½ ಘಂಟೆಗೆ ಸಿಟಿ ಮ್ಯೂನಿಸಿಪಲ್ ಕಮ್ಮಿಷನರ್‌ಗಳು ತಮ್ಮ ಆಫೀಸಿನಲ್ಲಿ ಸಭೆ ಸೇರುವಾಗ ಅವರ ವ್ಯವಸ್ಥೆಗೆ ತರಲ್ಪಡಬೇಕಾದ ವಿಷಯಗಳು ಯಾವಾವು.

೧. ಸನ್ ೧೮೮೮ನೇ ಇಸವಿ ಮಾರ್ಚಿ ತಿಂಗಳ ಬಾಬತು ನಗದು ಜಮಾಖರ್ಚು ಲೆಕ್ಕ ಮತ್ತು ಪುರಣ ಲೆಕ್ಕಗಳು.

೨. ಬೆಂಗಳೂರು ಪಟ್ಟಣಕ್ಕೆ ನೀರು ಸರಬರಾಯಿ ವಿಷಯದಲ್ಲಿ ಮೈಸೂರು ದಿವಾನರವರು ಹುಕುಂ ಮಾಡಿ ನಡೆಸಿದ ಸನ್ ೧೮೮೮ನೇ ಇಸವಿ ಮಾರ್ಚಿ ೨೩ನೇ ಮಿತಿ ೧೪ ಮೈಸೂರು ಪೊಲಿಟಿಕಲ್ ೭೫೨—೫೮ನೇ ನಂಬರ್ ಪ್ರೊಸೀಡಿಂಗ್ಸ್.

೩. ಬೆಂಗಳೂರು ಸಿಟಿಗೆ ಮ್ಯೂನಿಸಿಪಲ್ ಮೆಂಬರ್‌ಗಳ ಚುನಾವಣೆ ವಿಷಯದಲ್ಲಿ ಉದ್ದೇಶಿಸಲ್ಪಟ್ಟಿರುವ ನಿಬಂಧನೆಗಳನ್ನು ಕಳುಹಿಸಿಕೊಡುವಂತೆ ಮೈಸೂರು ದಿವಾನರವರ ಚೀಫ್ ಸೆಕ್ರೆಟರಿಯವರು ಬರೆದ ೧೮೮೮ನೇ ಇಸವಿ ಏಪ್ರಿಲ್ ೫ನೇ ಮಿತಿ ೩೪೧ನೇ ನಂಬರ್ ಯಾದಾಸ್ತು.

ತಾಬಸ್‌ಪೇಟೆಯಲ್ಲಿ ಅರವರ ಬಾಲಕರ ಪಾಠಶಾಲೆಗೆ ದ್ರವ್ಯಸಹಾಯ ಮಾಡಬೇಕೆಂದು ವೆಸ್ಲಿಯನ್ ಮಿಷನೆರಿ ರೆವರೆಂಡ್ ಎಚ್. ಡಬ್ಲ್ಯೂ. ಜಿ. ಪಿರ್ಕ್ಸ್‌ಯೆಂಬವರು ಬರೆದುಕೊಂಡ ಅರ್ಜಿಯನ್ನು ಈ ಇಲಾಖೆಗೆ ವರ್ಗಮಾಡಿ ವಿದ್ಯಾಭ್ಯಾಸದ ಇಲಾಖಾ ಡೈರೆಕ್ಟರವರು ಬರೆದ ೧೮೮೮ನೇ ಇಸವಿ ಮಾರ್ಚಿ ೨೩ನೇ ಮಿತಿ ೪೬೭೧ನೇ ನಂಬರ್ ಡಾಕೆಟ್.

೫ ಮಹಮ್ಮದನ್ ಬಾಲಿಕಾ ಪಾಠಶಾಲೆಯ ನಾಜರವರು ಈಗ ಕೊಡಲ್ಪಡುವ ಸಹಾಯದ್ರವ್ಯವನ್ನು ಜಾಸ್ತೀ ಮಾಡಬೇಕೆಂದು ಬರೆದುಕೊಂಡ ಅರ್ಜಿಯನ್ನು ಈ ಮ್ಯೂನಿಸಿಪಾಲಿಟಿಗೆ ವರ್ಗಮಾಡಿ ವಿದ್ಯಾಭ್ಯಾಸದ ಇಲಾಖಾ ಸೆಕ್ರೆಟರಿಯವರು ಬರೆದ ಸನ್ ೧೮೮೮ನೇ ಇಸವಿ ಏಪ್ರಿಲ್ ೪ನೇ ಮಿತಿ ೨೧ನೇ ನಂಬರ್ ಡಾಕೆಟ್.

೬. ಕಳೆದ ಸಂವತ್ಸರದಲ್ಲಿ ನಡೆಸಲ್ಪಟ್ಟ ಕೆಲವು ಕಾಮಗಾರಿಗಳಿಗೆ ಬಾಕೀಯಲ್ಲಿರುವ ಬಿಲ್ಲುಗಳ ಪಟ್ಟಿ.

೭. ಸಿಲ್ಲೇದಾರ್ ಛಾಯದ ಬಳಿಯಿರುವ ಜಮೀನಿನಲ್ಲಿ ಕಟ್ಟಡ ಕಟ್ಟುವದಕ್ಕೆ ಅಪ್ಪಣೆ ಕೊಡಬೇಕೆಂದು ಗಿರಿಯಪ್ಪ ಮತ್ತು ಸಂಜೀವಪ್ಪನೆಂಬವರು ಬರೆದುಕೊಂಡ ೨ ಅರ್ಜಿಗಳನ್ನು ಕಳುಹಿಸಿ ಬೆಂಗಳೂರು ಅಮಲ್ದಾರರವರು ಬರೆದ ೧೮೮೮ನೇ ಇಸವಿ ಏಪ್ರಿಲ್ ೧೬ನೇ ಮಿತಿ ೬ನೇ ನಂಬರ್ ಡಾಕೆಟ್.

೮. ಈ ಟಹರನ್ನು ಗವೀಪುರ ಗ್ರಾಮದ ಕಡೆ ಬಡಾಯಿಸುವದಕ್ಕಾಗಿ, ಈ ಪಟ್ಟಣದಿಂದ ಗವೀಪುರಕ್ಕೆ ಹೋಗುವ ರಸ್ತೆಯ ಎರಡು ಕಡೆಯಲ್ಲೂ ಇರುವ ಖುಷ್ಕೀ ಜಮೀನುಗಳನ್ನು ಕೊಂಡುಕೊಂಡು ಅದನ್ನು ಮನೆಗಳು ಕಟ್ಟುವದಕ್ಕೆ ಕೊಡುವ ವಿಷಯ.

೯. ಯಂತ್ರದ ಕಾರ್ಖಾನೆಯ ಬಳಿ ಇರುವ ಬ್ರಿಡ್ಜ್ ಮತ್ತು ಕೊರಕಲು ಬಿದ್ದ ಜಮೀನನ್ನು ತುಪ್ಪದ ಮತ್ತು ಅರಳೇ ನೂಲುವ ಕಂಪೆನಿಯವರಿಗೆ ಮಾರುವ ವಿಷಯ.

೧೦. ಮ್ಯೂನಿಸಿಪಲ್ ಸರಹದ್ದಿನೊಳಗಿರುವ ಬೀದಿಗಳ ಮತ್ತು ರಸ್ತೆಗಳ ಹೆಸರುಗಳನ್ನು ವಿಮರ್ಶೆ ಮಾಡಬೇಕೆಂದು ಸೂಚಿಸಿ, ೬ನೇ ನಂಬರ್ ಡಿವಿಜನ್ ಕಮ್ಮಿಷನರಾದ ಮಿ. ಜೆ ಕ್ಯಾಮಿರನ್‌ಯವರು ಬರೆದ ಲೆಟರ್.

A. Srinivasa Charlu, R. B.,
Vice-President,
City Municipal Commission.

ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA.

MONDAY, APRIL 23, 1888.

೧೮೮೮ನೇ ಏಪ್ರಿಲ್ ೨೩ನೇ ತಾ|| ಸೋಮವಾರ.

GROSS NEPOTISM.

ಈ ಪತ್ರಿಕೆಯ ಮತ್ತೊಂದು ಭಾಗದಲ್ಲಿ ಪ್ರಕಟಿಸಲ್ಪಟ್ಟಿರುವ ಮೈಸೂರು ಗೆಜೆಟಿನ ಸಾರಾಂಶದಿಂದ ಈಗ ಹೊಸದಾಗಿ ಮೂವರು ಅಸಿಸ್ಟೆಂಟು ಕಮ್ಮಿಷನರ್‌ಗಳು ನೇಮಕರಾದ ಅಂಶವು ಯೆಲ್ಲರಿಗೂ ತಿಳಿಯಬರಬಹುದು. ಇದರಿಂದ ಈ ಸರ್ಕಾರದಲ್ಲಿ ಅಸಿಸ್ಟೆಂಟು ಕಮ್ಮಿಷನರ್‌ಗಳ ಸಂಖ್ಯೆಯು ನೇಮಕರಾಗತಕ್ಕವರ ಆವಶ್ಯಕತೆಯ ಮೇಲೆ ಏರ್ಪಡುವದಾಗಿಯೇ ಹೊರ್ತು ಕೆಲಸದ ಜರೂರಿಯಾತ್ತನ್ನಾಗಲಿ, ಸಂಸ್ಥಾನದ ಉತ್ಪತ್ತಿಯನ್ನಾಗಲಿ ಅನುಸರಿಸಿದ್ದಾಗಿರುವದಿಲ್ಲವು. ಯಾವತ್ಪರ್ಯಂತ ಮಹಾರಾಜರವರ ಪ್ರಜಾರಾತಿಯಂ ಅವಲೀಲೆಯಾಗಿ ಪಡೆಯಬಹುದಾಗಿರುತ್ತಿದೆಯೋ ತಾವತ್ಪರ್ಯಂತ ಆಡಳತೆಗಳನ್ನು ಯಾವರೀತಿಯಾಗಿ ಯಾದರೂ ನಡೆಸಬಹುದು. ಅಪಾರವಾದ ಜಲರಾಶಿಯಲ್ಲಿ ಕರ್ಣಧಾರನಿಲ್ಲದೆ ತೇಲುತಲಿರುವ ನಾವೆಯಂತೆ ಈ ಸಂಸ್ಥಾನದ ಆಡಳತವು ನಡೆದು ಬರುವದರಿಂದ ಅದರ ಕ್ಷೇಮ ಚಿಂತನೆಯು ನಾಥನಿಗೆ ಅನಾವಶ್ಯಕವಾಗಿ ತೋರಿಹೋಗಿದೆ. ಈ ರಾಜ್ಯವು ತಮ್ಮ ಕೈತಪ್ಪಿ ಹೋದದರಿಂದ ಅದು ಪರಾಧೀನವಲ್ಲಿರುವ ತನಕ ಅದರ ವಿಚಾರವು ಬ್ರಿಟಿಷ್ ಗವರ್ನಮೆಂಟಿನವರಿಗೆ ಅನಾವಶ್ಯಕವಾಗಿ ಏರ್ಪಟ್ಟಿದೆ. ಏತೇನ ಇಲ್ಲಿನ ಆಡಳತವು ವಿಚಾರಿಸಲಿಕ್ಕೆ ನಾಥರಿರುವಂತೆ ಕಾಣಿಸಲಿಲ್ಲವೆಂಬದಾಗಿ ಹೊರಗಿನವರಾದರೂ ನುಡಿಯದೆ ಹೋಗಲಾರರು. ಈಗ ನೇಮಕರಾದ ಅಸಿಸ್ಟೆಂಟು ಕಮ್ಮಿಷನರ್‌ಗಳ ಪೈಕಿ ಮೆ|| ವೈದ್ಯನಾಥಅಯ್ಯರೆಂಬವರು ದಿವಾನಗವರರ ಸಾಕ್ಷಾತ್ ಭಾವಮೈದುನರಾಗಿಯೂ, ಅವರ ಅಂತರಂಗಕ್ಕೆ ಪಾತ್ರರಾದವರಾಗಿಯೂ ಇರುವದರಿಂದ ಇಷ್ಟರ ಸಂಬಂಧವು ಪ್ರಕೃತ ಅಧಿಕಾರ ಪ್ರಾಪ್ತಿಗೆ ನಿಮಿತ್ತಕವಾದದೊಂದೂ ಆಶ್ಚರ್ಯವಲ್ಲವು. ಆದರೆ ಯೆಲ್ಲಿಯೋ ಒಂದು ಅಭಾಕ್ತ ಮೂಲೆಯಲ್ಲಿ ಅಪ್ರಸಿದ್ಧರಾಗಿ ೨೫ ರೂಪಾಯಿಗಳ ತಲಬಿನಲ್ಲಿ ಪೋಲೀಸ್ ಇನ್ಸ್‌ಪೆಕ್ಟರಾಗಿದ್ದ ಮೇ|| ವೆದರಾಳ್ ಎಂಬವರಿಗೆ ಯೆಂದಿಗೂ ನಿರೀಕ್ಷಿಸಕೂಡದಂತಾ ಪದವಿಯೂ ವೇತನವೂ ಲಭಿಸಲಿಕ್ಕೆ ನಿಮಿತ್ತ ಸಂಬಂಧವನ್ನು ಎಷ್ಟು ಹುಡಿಕಿದಾಗ್ಯೂ ಅದು ದೂರವಾಗಿಡೆಯೇ ಹೊರತು ಮೊದಲನೆಯವರಂತೆ ಸನ್ನಿಹಿತವಾದದ್ದಾಗಿಲ್ಲವು. ಈ ದೇಶದಲ್ಲಿ ಬಹುಕಾಲ ಪೋಲೀಸ್ ಇಲಾಖೆಯಲ್ಲಿ ನೌಕರೀ ಮಾಡುತ ಅನುಯಾಯಿಕರಗಳಾದ ಪ್ರಬಲ ಸಂದರ್ಭಗಳೆಲ್ಲ ತಮ್ಮ ಪ್ರಾಣಗಳಂ ತೃಣವಾಗಿ ಭಾವಿಸಿ ಶ್ರಮಿಸಿದಂತಾ ಫಸ್ಟ್ ಕ್ಲಾಸ್ ಇನ್ಸ್‌ಪೆಕ್ಟರ್‌ಗಳು ಯೂರೋಪಿಯನ್‌ಗಳಲ್ಲಿಯೂ, ನೇಟಿವ್‌ಗಳಲ್ಲಿಯೂ ಅನೇಕರಿರುವಾಗ್ಯೂ ಅವರ ಯೋಗ್ಯತೆ, ಹಕ್ಕುದಾರಿ, ಸರ್ವಿಸ್ ಮುಂತಾದವೆಲ್ಲ ನಿಷ್ಪ್ರಯೋಜನಗಳಾಗಿ, ಚಿರಕಾಲಿಕವಾದ ಅಸಮಾಧಾನವನ್ನೂ ನೈರಾಶ್ಯವನ್ನೂ ಉಂಟುಮಾಡುವಂತೆ ಮೆ|| ವೆದರಾಳ್ ಯವರಿಗೆ ಏಕಾಏಕಿ ೨೫೦ ರೂಪಾಯಿಗಳುಳ್ಳ ಅಸಿಸ್ಟೆಂಟು ಗ್ರೇಡಿಗೆ ಬಡ್ತೀಯಾದಬಗ್ಗೆ ಅನೇಕರು ಆಶ್ಚರ್ಯಪಡದೆ ಹೋಗಲಾರರು. ಇಷ್ಟು ತೀವ್ರವಾದ ಅಭಿವೃದ್ಧಿಗೆ ಗುರಿಯಾಗಿದ ಮೆ|| ವೆದರಾಳ್‌ಯವರ ಅದೃಷ್ಟಕ್ಕಿಂತಲೂ, ಅವರ ಅಭಿಮಾನಿಸಿ ಮುಂದಕ್ಕೆ ತಂದಂತಾ ಮತ್ತು ದಿವಾನರವರಿಗೆ ಪರಮ ಆಪ್ತರಾಗಿರುವಂತಾ ಮೆ|| ರಿಕೆಟ್ಸ್‌ಯವರ ಅಳಿಯಂದ ರೆನಿಸಿಕೊಂಡದನ್ನು ವಿಶೇಷತಃ ಪ್ರಶಂಸಿಸಬೇಕಾಗಿರುತಿದೆ. ಇದು ವಿನಾ ಅವರ ಬಡ್ತಿಗೆ ಪ್ರತ್ಯಕಾರಣವನ್ನು ಊಹಿಸಲಾಗದು. ಮೂರನೆಯವರಾದ ಮೆ|| ನೈಡಿಯವರು ಈಗ್ಯೆ ಕೆಲವು ಕಾಲವಾಗಿ ಆಕ್ಟಿಂಗ್ ತರೀಕ್ ಅಸಿಸ್ಟೆಂಟು ಕಮ್ಮಿಷನರ್ ಕೆಲಸ ಮಾಡುತಲಿದ್ದದರಿಂದ ಅವರಿಗೆ ಈಗ ಕಾಯಮಾದದ್ದೇನೂ ವಿಶೇಷವಲ್ಲವು. ಮುಖ್ಯವಾಗಿ ಮೈಸೂರು ಗವರ್ನಮೆಂಟಿನಲ್ಲಿ ವಿದ್ಯಾ ಬುದ್ಧಿ ಪ್ರಾಮಾಣಿಕತಾದಿ ಗುಣಗಳೊಂದೂ ಕಾರ್ಯಕಾರಿಗಳಾಗುವದಿಲ್ಲವೆಂತಲೂ, ಕೇವಲ ಭೃತ್ಯಭಾವವೂ ರಂಡಾಪ್ರಸ್ತೋಷಣವೂ, ಮುಖಸ್ತುತಿಯೂ, ಫಲಪ್ರದಗಳೆಂತಲೂ ಧಾರಾಳವಾಗಿನುಡಿಯಲಿಕ್ಕೆ ತಕ್ಕ ಕಾರಣಗಳು ಆಗುದಾಗ್ಯೆ ಉಂಟಾಗದೆ ಹೋಗಲಿಲ್ಲವು.

Occasional Notes.

ನೈಮಿತ್ತಿಕ ವಿಷಯನ್ಯಾಸ.

A report contradicted.—ಗಾಯಕವಾಡಿ ಮಹಾರಾಜರವರು ಶೀಘ್ರದಲ್ಲಿಯೇ ನೀಲಗಿರಿಯಿಂದ ವಾಪಸು ಹೊರಟು ಹೋಗುವವರಾಗಿ ಹುಟ್ಟಿದ ಬಹುವಿಧ ಪ್ರವಾದಗಳು ನಿರಾಧಾರವಾದವೆಂತಲೂ, ಸದರೀ ಮಹಾರಾಜರವರು ಇನ್ನು ಕೆಲವು ಬಂಗ್ಲೆಗಳನ್ನು ಬಾಡಿಗೆಗೆ ತೆಗದುಕೊಂಡು, ತಮ್ಮ ಸಂಸ್ಥಾನದ ಇನ್ನು ಕೆಲವರು ನೌಕರರನ್ನೂ ಮನೆ ಜನಗಳನ್ನೂ ಕರೆಯಿಸುತಲಿದಾರೆಂತಲೂ ಬರೋಡ ಮುಂತಲವಲ್ಲಿ ಪ್ರಕಟಿಸಲ್ಪಡುತ ಒಂದಾನೊಂದು ಪತ್ರಿಕೆ ತಿಳಿಸುತಲಿದೆ.

The effect of a storm.—ಬಂಗಾಳದೇಶದ ಪೈಕಿ ಢಾಕಾ ಡಿಸ್ಟ್ರಿಕ್ಟಿನಲ್ಲಿ ಕಳೆದ ತಿಂಗಳ ೨೩ನೇ ತಾರೀಖಿನೊಳು ಹೊಡೆದ ಬಿರುಗಾಳಿಯ ದೆಸೆಯಿಂದ ಉಂಟಾದ ನಷ್ಟಗಳನ್ನು ಕುರಿತು ಕಲ್ಕತ್ತಾ ಇಂಗ್ಲಿಷ್ ಮ್ಯಾನ್ ಪತ್ರಿಕೆಯ ಬಾತಮೀದಾರನೊಬ್ಬನು ಬರೆಯುತ್ತಾನೇನಂದರೆ:—ಸದರೀ ಗಾಳಿಯ ದೆಸೆಯಿಂದ ೧೩ ಮಂದಿ ಮೃತಪಟ್ಟರು, ೧,೦೦೦ ಮಂದಿಗೆ ಘಾಯಗಳು ಪ್ರಾಪ್ತವಾದವು. ಅನೇಕ ಗ್ರಾಮಗಳು ನಾಶವಾಗಿ ಅವುಗಳ ಪ್ರಜೆಗಳು ಪ್ರಬಲ ಕಷ್ಟಕ್ಕೆ ಗುರಿಯಾಗಿರುತ್ತಾರೆ, ಎಂಬದು.

The Maharaja of Cooch Behar —ಘನವಂ ಪಡೆದ ಕೂಚ್ ಬಿಹಾರ್ ಸಂಸ್ಥಾನದ ಮಹಾರಾಜರವರು ಅನ್ಯದೇಶ ಸಂಚಾರಮಾಡಿಕೊಂಡು ಸ್ವದೇಶಕ್ಕೆ ವಾಪಸು ದಯಮಾಡುವಲ್ಲಿ ಅವರ ಪ್ರಜೆಗಳು ವಿಶೇಷರಾಜಭಕ್ತಿಯೊಡನೆ ತಮ್ಮ ಒಡೆಯರವರನ್ನು ಬರಮಾಡಿಕೊಂಡರು. ಕೂಡಲೇ ಮಹಾರಾಜರವರು ಒಂದು ದರ್ಬಾರ್ ಮಾಡಿ, ಆ ಕಾಲದಲ್ಲಿ ಪ್ರಜೆಗಳಿಂದ ಸಂಪ್ರಾಪ್ತವಕ್ಕೆ ಬರಬೇಕಾಗಿದ್ದ ಕಂದಾಯ ಬಾಕೀ ಪೈಕಿ ಒಂದು ಲಕ್ಷರೂಪಾಯಿಗಳು ಸೋಡೀ ಮಾಡಬೇಕೆಂಬ ತಮ್ಮ ಅಭಿಮತವನ್ನು ಪ್ರಕಟಪಡಿಸಿ, ೭೩ ಮಂದಿ ಬ್ರಾಹ್ಮಣರಿಗೆ ಸರ್ವಮಾನ್ಯ ಕೊಟ್ಟದ್ದಲ್ಲದೆ ಸಂಸ್ಕೃತ ವಿದ್ಯಾಭಿವೃದ್ಧಿಯನ್ನು ಪ್ರೋತ್ಸಾಹ ಪಡಿಸುವದಕ್ಕಾಗಿ ಎಂಟುಮಂದಿ ಬ್ರಾಹ್ಮಣ ವಿದ್ಯಾರ್ಥಿಗಳಿಗೆ ವೇತನವಂ ಕಲ್ಪಿಸಿದರು. ಇದು ಶಿವಾಯಿ ಸಂಸ್ಥಾನದ ನೌಕರರ ಪೈಕಿ ಕೆಲವರಿಗೆ ಪ್ರಶಸ್ತಿಗಳಂ ಕೊಟ್ಟರು, ಮತ್ತು ಒಂಭತ್ತುಮಂದಿ ಖೈದೀರನ್ನು ಖುಲಾಸೇ ಮಾಡುವಂತೆ ಆಜ್ಞಾಪಿಸಿದರು. ಇದು ಶಿವಾಯಿ ನಾನಾವಿಧ ಧರ್ಮಕಾರ್ಯಗಳಂ ಮಾಡಿದ್ದಲ್ಲದೆ ಪಟ್ಟಣಕ್ಕೆ ಉತ್ತಮವಾದ ಜಲಾಧಾರವಂ ಕಲ್ಪಿಸುವದಾಗಿ ವಾಗ್ದಾನಮಾಡಿದರಂತೆ. ಮಹಾರಾಜರವರು ಈಚೆಗೆ ಇಂಗ್ಲಾಂಡಿಗೆಹೋಗಿಬಂದದರಿಂದ ಅವರ ದೇಹಾರೋಗ್ಯದಲ್ಲಿ ಉಂಟಾಗಿದ್ದ ಕೊರತೆಯೆಲ್ಲ ತಪ್ಪಿ ಸುಖಸ್ಥಿತಿಯಲ್ಲಿರುವಂತೆ ತಿಳಿಯಬರುತಿದೆ.

LOCAL AND PROVINCIAL NEWS.

ಸ್ಥಳದೇಶ ಮತ್ತು ತಾಲ್ಲೂಕಜಾತವೃತ್ತಾಂತಗಳು.

Post office.—ಮದರಾಸ್ ಪೋಸ್ಟ್‌ಮಾಸ್ಟರ್ ಜನರಲ್ಲವರು ಈಚೆಗೆ ಈ ಊರಿಗೆ ಬಂದಿದ್ದ ಕಾಲದಲ್ಲಿ ಇಲ್ಲಿನ ಸಿಟಿ ರೈಲ್ವೆ ಸ್ಟೇಷನ್‌ಬಳಿ ಒಂದು ಟಪಾಲ್ ಆಫೀಸನ್ನು ಜನಗಳ ಸೌಕರ್ಯಾರ್ಥವಾಯಮಾಗಿ ಇಡಿಸಬೇಕೆಂದು ಅನೇಕರು ಕೇಳಿಕೊಂಡದ್ದರ ಮೇಲೆ ತಾವು ಅನುಕೂಲವಾದ ಹುಕುಂ ಕೊಡುವಂತೆ ಜವಾಬ್ ಕೊಟ್ಟರೆಂದು ಕೇಳಲಿಕ್ಕೆ ಸಂತೋಷಿಸುವೆವು.

On dit.—ಬೆಂಗಳೂರು ಡಿಸ್ಟ್ರಿಕ್ಟ್ ಕೋಲಾರ ನರಹಳ್ಳಿ ತಾಲ್ಲೂಕು ಪೋಲೀಸ್ ಇನ್ಸ್‌ಪೆಕ್ಟರ್ ಪ್ರಾತೀತದ್ದರಿಂದ ಸದರೀ ಕೆಲಸವು ಮೆ|| ಲಕ್ಷ್ಮಣಶಾಸ್ತ್ರಿಗಳೆಂಬವರಿಗೆ ಕೊಡಲ್ಪಟ್ಟಿತೆಂಬದು ಕೇಳಿ ನಾವು ಬಹಳ ಸಂತೋಷಿಸುವೆವು. ಇವರು ಇಲ್ಲಿನ ಸೆಂಟ್ರಲ್ ಕಾಲೇಜಿನಲ್ಲಿ ಓದಿ ಕಳೆದ ಬಿ. ಎ. ಪರೀಕ್ಷೆಯಲ್ಲಿ ತೇರ್ಗಡೆಯಾಗಿ ಕೇವಲ ಸ್ವಶಕ್ತಿಯಿಂದಲೇ ಪ್ರಸಕ್ತ ಲೌಕಿಕ ವೃತ್ತಿಯಲ್ಲಿ ಪ್ರವರ್ತಿಸಿರುವದರಿಂದ ಇವರಿಗೆ ಮುಂದೆ ತಕ್ಕ ಪ್ರಯೋಜನವು ಲಭಿಸಬೇಕೆಂದು ಕೋರುವೆವು.

Physical apparatus.—ಈ ಊರಲ್ಲಿ ಭೌತಿಕವರ್ಗಕ್ಕೆ ಶಾಸ್ತ್ರಗಳಿಗೆ ಸಂಬಂಧಪಟ್ಟ ಯಂತ್ರೋಪಕರಣಗಳನ್ನೆಲ್ಲ ತರಿಸಿ ಇದಕ್ಕಾಗಿ ಒಂದು ಕಟ್ಟಡ ಕಟ್ಟ ಅವನ್ನೊಳಿಡುವಂತೆ ಏರ್ಪಾಡಾಗಿರುವದಾಗಿಯೂ, ಇದಕ್ಕಾಗಿ ಇಂಡಿಯಾ ಗವರ್ನಮೆಂಟಿನವರು ೧,೦೦೦ ರೂಪಾಯಿಗಳು ಕೊಟ್ಟರೆಂತಲೂ, ಒಂದಾನೊಂದು ಕನ್ನಡ ಪತ್ರಿಕೆ ತಿಳಿಸುತಿದೆ. ಮದರಾಸ್ ಪ್ರೆಸಿಡೆನ್ಸಿಯಲ್ಲಿರುವಂತೆ ಈ ಗವರ್ನಮೆಂಟಿನಲ್ಲಿಯೂ, ಜ್ಯೋತಿಶ್ಶಾಸ್ತ್ರ ಶಾಲೆಯಂ ಸ್ಥಾಪಿಸಿದರೆ ಬಹಳ ಪ್ರಯೋಜನಕರವಾಗಿರಬಹುದು.

Ooty trip.—ಶ್ರೀಮನ್ಮಹಾರಾಜರವರು ಗತ ಸೋಮವಾರ ರಾತ್ರಿ ತಮ್ಮ ಪರಿವಾರದೊಡನೆ ನೀಲಗಿರಿಗೆ ದಯಮಾಡಿದರು. ಆ ಕಾಲದಲ್ಲಿ ಪದ್ಧತಿಮೀರಿ ೨೧ ತೋಪುಗಳು ಹಾಕಲ್ಪಟ್ಟವು. ಈ ಆವರ್ತಿ ತುರುಫ್ ಸಿಪಾಯಿಗಳು, ಸಾಧಾರಣ ಸಿಪಾಯಿಗಳು, ವಾಲೇಕಾರರು ಜಾಸ್ತಿಯಾಗಿ ಹೋಗಿರುವದಲ್ಲದೆ, ಕೆಲವು ಬಿರುದುಗಳನ್ನು ಕೂಡ ಇಲ್ಲಿಂದ ಜಾಸ್ತಿಯಾಗಿ ತೆಗದುಕೊಂಡು ಹೋಗಿರುತ್ತಾರೆಂದು ತಿಳಿಯಬರುತಿದೆ. ಪ್ರಾಯಶಃ ಗಾಯಕವಾಡಿ ಮಹಾರಾಜರವರು ಅಲ್ಲಿರುವವರಿಂದಲೇನೋ ಅಷ್ಟರ ಆವಶ್ಯಕತೆಯು ಕಂಡುಬಂದಿರಬಹುದು.

Initiation.—ಶ್ರೀಮನ್ಮಹಾರಾಜ ರಾಜಾಸಾಹೆಬ ಬಹದೂರವರದ್ವಿತೀಯಕುಮಾರ್ತಿಯರಾದ ಕೃಷ್ಣಾಜಮ್ಮಣ್ಣಿಯವರಿಗೆ ಗತ ಸೋಮವಾರ ದದಿನಬೆಳಿಗ್ಯೆ ಅಕ್ಷರಾಭ್ಯಾಸವು ಅತಿವಿಜೃಂಭಣೆಯಾಗಿ ನಡೆದಂತೆ ಕೇಳಲಿಕ್ಕೆ ನಾವು ಬಹಳ ಸಂತೋಷಿಸುತ್ತೇವೆ. ಶ್ರೀಮನ್ಮಹಾರಾಜರವರಿಗೂ ಮಹಾರಾಣಿಯವರಿಗೂ ತಮ್ಮ ಪ್ರಜೆಗಳಹೆಣ್ಣುಮಕ್ಕಳನ್ನೆಲ್ಲ ವಿದ್ಯಾವಂತರನ್ನಾಗಿ ಮಾಡಿ ನೋಡಬೇಕೆಂಬ ಅಭಿಲಾಷೆಯುಂಟಾಗಿ ಅವರು ಮಾಡುವ ಸಹಾಯಗಳಿಂದ ಮೈಸೂರು ಪಟ್ಟಣನಿವಾಸಿಗಳಾದ ಬಾಲೆಯರು ವಿಶೇಷ ಪ್ರಯೋಜನವಂ ಪಡೆದು ಪ್ರಸಿದ್ಧಿಗೆ ಬರುತಲಿರುವಾಗ್ಯೆ ಮಹಾರಾಜರ ಕ್ರಿಯ ವಿಷಯದಲ್ಲಿ ನುಡಿಯಬೇಕಾದ್ದೇನಿದೆ!

Dacoities.—ಕುಣಸೂರಿಂದ ಬರುವಾಗ ದಾರಿಯಲ್ಲಿ ಕಳ್ಳರ ಭಯವು ಅಪಾರವಾಗಿರುವದು. ಆಗಾಗ್ಯೆ ಕಳ್ಳರು ಸಾಯಂಕಾಲದಲ್ಲಿ ಜನಗಳ ಭಂಡಿಗಳು ಸಿಕ್ಕಿದರೆ ಹೊಡೆದು ಎಲ್ಲವನ್ನು ಕಿತ್ತುಕೊಳ್ಳುತ್ತಿದ್ದಾರೆ. ಕಳೆದ ತಿಂಗಳ ೨೦ನಲ್ಲಿ ಹುಣಸೂರಿಂದ ಪೋಲೀಸ್ ಇನ್ಸ್‌ಪೆಕ್ಟರು ಜಮಾದಾರರು ಮುಂತಾದವರು ಕೆಲವರು ಗಾಡಿಯಲ್ಲಿ ಬರುತ್ತಿರುವಾಗ ಕಲ್ಲುಗಳ ಏಟು ಬೀಳಗತೊಡಗಿತು. ಕೂಡಲೇ ಅವರನ್ನು ಹೆದರಿಸುವದಕ್ಕೆ ಬದಲಾಗಿ ಜಮಾದಾರರು ಬಂದೂಕವನ್ನು ಬಾರ್ ಮಾಡಿ ಹೊಡೆದರು. ಬೆಳಗಾದಾಗ ನೋಡ

ಲ್ಲು ಒಬ್ಬ ಕಳ್ಳನ ಹೆಣವು ಬಿದ್ದಿತ್ತು. ಹೀಗೆ ಕೊಲ್ಲುವದಕ್ಕೆ ಆವಶ್ಯಕತೆ ಇತ್ತೋ ಇರಲಿಲ್ಲವೋ ತಿಳಿಯದು.—ವ್ಯ. ಚಿ.

Sanskrit Lecture.—ಆಚೆ ಶನಿವಾರದದಿನ ಮೈಸೂರು ಗುಂಜಾ ನರಸಿಂಹಣ್ಣನವರ ಸಂಸ್ಕೃತ ಪಾಠಶಾಲಾಧ್ಯಕ್ಷರಾದ ಮ|| ರಾ|| ತಿರುಮಲಾಚಾರ್ಯರವರು ಸಂಸ್ಕೃತದಲ್ಲಿ ವಿಗ್ರಹಾರಾಧನೆಯನ್ನು ಕುರಿತು ಅತ್ಯಂತ ಶ್ಲಾಘನೀಯವಾದ ಒಂದು ಉಪನ್ಯಾಸವನ್ನು ಮಾಡಿದರು. ಅಲ್ಲಿಗೆ ಇಂಗ್ಲಿಷ್ ಮತ್ತು ಸಂಸ್ಕೃತವನ್ನು ತಿಳಿದಿರತಕ್ಕ ಬಹುಮಂದಿ ದೊಡ್ಡಮನುಷ್ಯರೂ ವೈದಿಕರೂ ವಿದ್ಯಾರ್ಥಿಗಳೂ ಹೋಗಿದ್ದರು. ಹಿಂದೂಶಾಸ್ತ್ರಗಳಲ್ಲಿ ಪರಿಚಿತಪ್ಪರಾದ ಒಬ್ಬ ವಿದ್ವಾಂಸರು ಅಗ್ರಾಸನವನ್ನು ವಹಿಸಿದ್ದರು. ಈ ಆಚಾರ್ಯರ ಪಾಂಡಿತ್ಯವು ಅದ್ವಿತೀಯವಾದ್ದರಿಂದ ಇವರು ಶಾಸ್ತ್ರೋಕ್ತವಾಗಿಯೂ ಸಭಿಕರ ಇಷ್ಟಾನುಸಾರವಾಗಿಯೂ ಲೋಕಸಮ್ಮತವಾಗಿಯೂ ತಮ್ಮ ಅಭಿಪ್ರಾಯಗಳನ್ನು ತೋರ್ಪಡಿಸಿದ್ದಲ್ಲದೆ ಶಾಸ್ತ್ರಪ್ರಮಾಣಗಳಿಂದ ಪ್ರತಿ ಮನುಷ್ಯನಿಗೂ ಈ ಆರಾಧನೆಯು ಅವಶ್ಯಕವಾದದ್ದೆಂದು ವಿಶದವಾಗಿ ತಿಳಿಯಪಡಿಸಿದರು. ಮದರಾಸಿನಿಂದ ಬಂದಿದ್ದ ಒಬ್ಬ ಸಾಹುಕಾರರು ಇವರ ಪಾಂಡಿತ್ಯವಂ ಮೆಚ್ಚಿ ಬಹಿರಂಗವಾಗಿ ಕೊಂಡಾಡಿ ಒಂದು ಕಲಾಬತ್ತು ಶಾಲುಜೋಡಿಯನ್ನು ಬಹುಮಾನವಾಗಿ ಕೊಟ್ಟರು.—ವ್ಯ. ಚಿ.

THE MYSORE GAZETTE.
ಮೈಸೂರು ಗಜೆಟು.

ಶ್ರೀಮನ್ಮಹಾರಾಜ ರಾಜಾಗ್ರೇಸರ ಬಹದೂರವರ ದಿವಾನರವರಿಂದ ಹೊರಡಿಸಲ್ಪಟ್ಟ ಇಷ್ತಿಹಾರ್‌ನಾಮೆಗಳು.

ಕ್ಯಾಂಪ್ ನಂ. ೧೪೦, ತಾರೀಖ್ ೯ನೇ ಏಪ್ರೆಲ್ ೧೮೮೮.—ಇದರಡಿಕಂಡ ಅಸಿಸ್ಟೆಂಟ್ ಕಮಿಷನರುಗಳ ಬಡ್ತಿ ವ ನೇಮಕರಾತಿಗಳು ಹುಕುಂ ಮಾಡಲ್ಪಟ್ಟಿರುತವೆ:—

ಬಡ್ತಿಗಳು ೧೮೮೮ನೇ ಇಸವಿ ೧ನೇ ಏಪ್ರೆಲ್ ಲಾಗಾಯತು ಜಾರಿ.

೩ನೇ ಕ್ಲಾಸಿನಿಂದ ೧ನೇ ಕ್ಲಾಸಿಗೆ.

ಮ|| ಅಬ್ದುಲ್ ರಹಿಮಾನ್‌ಯವರು.

೩ನೇ ಕ್ಲಾಸಿನಿಂದ ೨ನೇ ಕ್ಲಾಸಿಗೆ.

ಮ|| ಎ. ಕುಪ್ಪಸಾಮಿಮೊದಲಿಯಾರು),

ಮ|| ಪಿ. ವೆಂಕಟನರಾಯರು.

೪ನೇ ಕ್ಲಾಸಿನಿಂದ ೩ನೇ ಕ್ಲಾಸಿಗೆ.

ಮ|| ಕೇ. ನಾಗೇಶರಾಯರು.

ಮ|| ಎ. ಕೃಷ್ಣಸ್ವಾಮಯ್ಯಂಗಾರು.

ಮ|| ಕೆ. ಪಿ. ಪುಟ್ಟಣ್ಣಶೆಟ್ಟಿಯವರು ೩ನೇ ಕ್ಲಾಸ್ ಅಸಿಸ್ಟೆಂಟ್ ಕಮಿಷನರಾಗಿರತಕ್ಕದ್ದು. ಇವರಿಗೆ ಮಾಹೆಯಾನಾ ಸಲ್ಲುತಿದ್ದ ೫೦ ರೂಪಾಯಿಗಳ ಪರಸನಲ್ ಅಲೋವೆನ್ಸ್ ೧೮೮೮ನೇ ಏಪ್ರೆಲ್ ಗುರ್ರೇ ಲಾಗಾಯತು ಮೌಕೂಫ್ ಆಗತಕ್ಕದ್ದು.

ನೇಮಕರಾತಿಗಳು.—ದಿವಾನರವರ ಪ್ರೈವೇಟ್ ಸೆಕ್ರೆಟೆರಿಯಾದ ಮ|| ಎಸ್. ವೈದ್ಯನಾಥಯ್ಯನವರು ೪ನೇ ಕ್ಲಾಸ್ ಅಸಿಸ್ಟೆಂಟ್ ಕಮಿಷನರಾಗಿರತಕ್ಕದ್ದು. ಮ|| ಪಿ. ಆರ್. ದಬ್ಲಿಯು. ವೆಧರಾಲ್‌ಯವರು ಅಜಮಾಯಿಷೀ ತರೀಕ್ ೪ನೇ ಕ್ಲಾಸ್ ಅಸಿಸ್ಟೆಂಟ್ ಕಮಿಷನರಾಗಿರತಕ್ಕದ್ದು. ಇವರು ಇಲಾಖಾಮುಚಳಕೂರಿನ ಪರೀಕ್ಷೆಗಳನ್ನ ಕೊಡುವದಕ್ಕೆ ಗುರಿಯಾಗಿರತಕ್ಕದ್ದು. ಆಫಿಸಿಯೇಟಿಂಗ್ ಅಸಿಸ್ಟೆಂಟ್ ಕಮಿಷನರುಗಳಾದ ಮ ಜೆ. ಜಿ. ನಾರ್ಥ್ ಮತ್ತು ಮ|| ಜೆ. ದಬ್ಲಿಯು. ನೈಟ್ ಇವರುಗಳು ೪ನೇ ಕ್ಲಾಸ್ ಅಸಿಸ್ಟೆಂಟ್ ಕಮಿಷನರುಗಳಾಗಿ ಕಾಯಂ ಮಾಡಲ್ಪಟ್ಟಿರುತ್ತಾರೆ.

ಕ್ಯಾಂಪ್ ನಂ. ೫೬.—ಮ|| ಕೆ. ರಾಮಸ್ವಾಮಯ್ಯಂಗಾರು) ಮೈಸೂರು ರೆವಿನ್ಯೂ ಸರ್ವೆಯ ೩ನೇ ಗ್ರೇಡ ಅಸಿಸ್ಟೆಂಟ್ ಸೂಪರಿಂಟೆಂಡೆಂಟರಾಗಿ ನೇಮಕರಾತ್ಮಡಲ್ಪಟ್ಟಿರುತ್ತಾರೆ.

ಕ್ಯಾಂಪ್. ನಂ. ೮೦. ಮ ಬಿ. ಡಿ. ರಾಘವೇಂದ್ರರಾವ್ ಎಫ್. ಯಮ್. ಎಸ್. ಯವರು ೩ನೇ ಕ್ಲಾಸ್ ಸಬ್ ಅಸಿಸ್ಟೆಂಟ್ ಸರ್ಜನ್ನಾಗಿ ನೇಮಕರಾತ್ಮಡಲ್ಪಟ್ಟಿರುತ್ತಾರೆ, ಇವರು ಕೆಲಸಕ್ಕೆ ಹಾಜರಾದ ತಾರೀಖು ಲಾಗಾಯತು ಸಮಮುಲಾಜು.

ನಂ. ೧೫೦. ತಾ|| ೯ನೇ ಏಪ್ರೆಲ್ ೧೮೮೮—ಇದರಡಿಕಂಡ ಅಮಲ್‌ದಾರ್‌ಗಳ ಬಡ್ತಿ ವ ಬದಲ್‌ಗಳು ಹುಕುಂಮಾಡಲ್ಪಟ್ಟಿರುತವೆ:—

ಬಡ್ತೀಗಳು.—೧೮೮೮ನೇ ಇಸವಿ ಏಪ್ರೆಲ್ ಗುರ್ರೇ ತಾ|| ಮೊದಲು ಜಾರಿಯಲ್ಲಿ ಬರತಕ್ಕದ್ದು.

೨ನೇ ಗ್ರೇಡ್‌ನಿಂದ ೧ನೇ ಗ್ರೇಡಿಗೆ.

ಚನ್ನರಾಯಪಟ್ಣ ತಾಲ್ಲೂಕು ಅಮಲ್‌ದಾರ್ ಕೆ. ರಾಮಾನುಜೈಯ್ಯಂಗಾರ್

೩ನೇ ಗ್ರೇಡಿನಿಂದ ೨ನೇ ಗ್ರೇಡಿಗೆ.

ಮಂಡ್ಯ ತಾಲ್ಲೂಕ್ ಅಮಲ್‌ದಾರ್ ವೈ. ನರಸಣ್ಣನವರು

ನೆಲಮಂಗಲ ತಾ|| ವಿ. ಯನ್. ಗೋಪಾಲಯ್ಯಂಗಾರು)

೪ನೇ ಗ್ರೇಡಿನಿಂದ ೩ನೇ ಗ್ರೇಡಿಗೆ

ಚಳ್ಳಕೆರೆ ತಾಲ್ಲೂಕ್ ಅಮಲ್‌ದಾರ್ ವೆಂಕಟರಾಯರು

ಚಿಂತಾಮಣಿ ,, ಬಿ. ರಾಮಸ್ವಾಮಯ್ಯರವರು

ಚಿತ್ರದುರ್ಗ ,, ನಾರಣಯ್ಯಂಗಾರು)

ಚೆಲ್ಲಕುಟ್ಟ ,, ಹೆಚ್. ಗುಂಡಪ್ಪನವರು

ಹೊನ್ನಾಳಿ ,, ಲಾಜರಸ್. ಡುಮಿಂಗೋಯವರು

ಬೆಂಗಳೂರ್ ,, ಬಿ. ಸೀತಾರಾಮಯ್ಯನವರು

ಗುಬ್ಬಿ ,, ಎನ್. ವೆಂಕಟರಾಯರವರು

೫ನೇ ಗ್ರೇಡಿನಿಂದ ೪ನೇ ಗ್ರೇಡಿಗೆ

ಹೊಳಲ್ಕೆರೆ ತಾಲ್ಲೂಕು ಅಮಲ್‌ದಾರ್ ಬಿ. ಕೇಶವಯ್ಯಂಗಾರು)

ಅರಸೀಕೆರೆ ,, ಅಹಮದಲ್ಲಿಯವರು

ಅತ್ತಿಕುಪ್ಪೆ ,, ಕೃಷ್ಣಮೂರ್ತಿರಾಯರು

* ಕೊಪ್ಪ ,, ಬಿ. ಲಕ್ಷ್ಮೀನಾರಣಪ್ಪನವರು

* ಹುಣಸೂರು ,, ಮಿರ್‌ಕಮಲದೀನ್ ಅಲ್ಲಿಖಾನರು

ಆನೆಕಲ್ ,, ಸೈಫ್ ಅಮಿನ್‌ಸರ್ನಯವರು

* ಸಿರಾ ,, ವೆಂಕಟಾಚಲಯ್ಯನವರು

ಎಡತೊರೆ ,, ಎಂ. ಎ. ತಿರುಮಲಾಚಾರ್ರು

ಷರಾ—* ಈ ಗುರ್ತು ಮಾಡಲ್ಪಟ್ಟ ಅಮಲ್‌ದಾರರುಗಳ ಬಡ್ತಿಯು, ೧೮೮೭ನೇ ಇಸವಿ ಡಿಸೆಂಬರ್ ೧೩ನೇ ಮಧ್ಯಂ ೩೯೨, ನಂಬರ್ ೧೫೫ನೇ ನಂಬರ್ ಪ್ರೊಸಿಡಿಂಗ್ಸಿನಲ್ಲಿ ಕಂಡ ಅಪ್ಪಣೆ ಮೇರೆ ಮುಂದಿನ ಜೂನ್ ಮಾಹೆಯಲ್ಲಿ ಅವರುಗಳು ಡಿಪಾರ್ಟ್‌ಮೆಂಟಲ್ ಕ್ರಿಮಿನಲ್ ಪರೀಕ್ಷೆಯಲ್ಲಿ ತೇರ್ಗಡೆಯಾಗುವ ಷರತ್ತಿಗೆ ಒಳಪಟ್ಟಿರತಕ್ಕದ್ದು.

ಬದಲ್‌ಗಳು.—ಹಾಲಿ ಮದ್ದಿಗಿರಿ ಆಕ್ಟಿಂಗ್ ಅಮಲ್‌ದಾರರಾದ ಸೊರಬ ತಾಲ್ಲೂಕ್ ಅಮಲ್‌ದಾರ್ ಗೋಪಾಲಯ್ಯಂಗಾರ್ರು, ಮಳವಳ್ಳೀ ತಾಲ್ಲೂಕು ಅಮಲ್‌ದಾರ್ ವ ೩ನೇ ಕ್ಲಾಸ್ ಮಾಜಿಸ್ಟ್ರೇಟರಾಗಿರತಕ್ಕದ್ದು. ಹಾಲಿ ಹುಸಾಮಿಯಾಗಿ ಚಾರ್ಜ್ ವಹಿಸಿರುವ ಮದ್ದಗಿರಿ ತಾಲ್ಲೂಕು ಚಾರ್ಜ್ ಒಪ್ಪಿಸಿದಕೂಡಲೇ ಕೆಲಸದಮೇಲೆ ಹಾಜರಾಗತಕ್ಕದ್ದು.

* ಶಿವಮೊಗ್ಗಾ ಡಿಸ್ಟ್ರಿಕ್ಟು ರೆವಿನ್ಯೂ ಶಿರಸ್ತೇದಾರ್ ಎ. ವೀರಭದ್ರಪ್ಪ ನಾಯುಡರು, ಮತ್ತೊಂದು ಹುಕುಂ ಕೊಡುವ ವರಿಯಂತ ಸೊರಬತಾಲ್ಲೂಕು ಅಮಲ್‌ದಾರ್ ವ ಮೂರನೇ ಕ್ಲಾಸ್ ಮ್ಯಾಜಿಸ್ಟ್ರೇಟರಾಗಿ ಆಕ್ಟಿಂಗ್ ತರೀಕ್ ಕೆಲಸ ನೋಡುತ್ತಾ ಇರತಕ್ಕದ್ದು.

* ಚಿತ್ರದುರ್ಗದ ಡಿಸ್ಟ್ರಿಕ್ಟು ಆಫೀಸ್ ಹೆಡ್ ಎ. ಪಿ. ಎನ್. ಚೌಡಯ್ಯನವರಿಗೆ (ಹಿರಿಯೂರು ತಾಲ್ಲೂಕು ಹೆಡ್ ಅಮಲ್‌ದಾರ್) ಹಾಲೀ ಸಸ್ಪೆಂಡ್ ಮಾಡಲ್ಪಟ್ಟಿರುವ ಲಕ್ಷ್ಮಣರಾಯರ ಗೈರ್ ಹಾಜರಿಯಲ್ಲಿ ಯಾ ಮತ್ತೊಂದು ಹುಕುಂ ಕೊಡುವ ವರಿಯಂತೆ ಜಗಳೂರು ತಾಲ್ಲೂಕು ಅಮಲ್‌ದಾರ್ ವ ೩ನೇ ಕ್ಲಾಸ್ ಮಾಜಿಸ್ಟ್ರೇಟರಾಗಿ ಆಕ್ಟಿಂಗ್ ತರೀಕ್ ಕೆಲಸ ನೋಡುವಂತೆ ನೇಮಕರಾತ್ಮಡಲ್ಪಟ್ಟಿರುತ್ತಾರೆ.

* ಹಾಲೀ ಚಿತ್ರದುರ್ಗದ ಆಕ್ಟಿಂಗ್ ಅಮಲ್‌ದಾರರಾದ ಪ್ರೊಬೇಷನ್ ಹೆಡ್ ಕ್ವಾರ್ಟರ್ ಸಿ. ಶೇಷಾದ್ರಿಅಯ್ಯಂಗಾರ್ರಿಗೆ ಫೌತೀ ಪಟ್ಟ ಕುಮಾರಸಾಮಿ ಮೊದಲಿಯಾರ್ರಿಗೆ ಬದಲಾಗಿ ಮುಳಬಾಗಲ್ ತಾಲ್ಲೂಕು ಅಮಲ್‌ದಾರ್ ವ ೩ನೇ ಕ್ಲಾಸ್ ಮಾಜಿಸ್ಟ್ರೇಟರಾಗಿ ಆಕ್ಟಿಂಗ್ ತರೀಕ್ ಕೆಲಸ ನೋಡುವಂತೆ ನೇಮಕರಾತ್ಮಡಲ್ಪಟ್ಟಿರುತ್ತಾರೆ.

ಷರಾ...* ಈ ಗುರ್ತು ಮಾಡಲ್ಪಟ್ಟ ಆಫೀಸರ್‌ಗಳ ನೇಮಕರಾತಿಯು, ಪ್ರೊಬೇಷನರಿ ಡಿಪಾರ್ಟ್‌ಮೆಂಟಲ್ ಪರೀಕ್ಷೆಗೊಳ್ಳಪಟ್ಟು ತೇರ್ಗಡೆಯಾಗುವ ಷರತ್ತಿಗೆ ಒಳಪಟ್ಟಿರತಕ್ಕದ್ದು.

ನೇಕ್ಸಾಂ. ನಂ. ೧೮೦ ತಾ|| ೯ನೇ ಏಪ್ರೆಲ್ ೧೮೮೮—ಫ್ರೆಂಚ್‌ರಾಕ್ಸ್ ಸಬ್‌ಡಿವಿಜನ್ ಆಫೀಸರ್ ಮಿಸ್ಟರ್ ಬಿ. ಕೆ. ವೆಂಕಟವರದಯ್ಯಂಗಾರ್ರವರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖ್ ಲಾಗಾಯತು ೬ತಿಂಗಳು ೨೩ ದಿನಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿರುತಿದೆ. ಅಸಿಸ್ಟೆಂಟ್ ಕಮಿಷನರ್ ಮಿಸ್ಟರ್ ಡಿ. ದೇವರಾಜೇ ಅರಸಿನವರು ಮಿಸ್ಟರ್ ವೆಂಕಟವರದಯ್ಯಂಗಾರ್ರವರ ಗೈರ್‌ಹಾಜರಿಯಲ್ಲಿ ಅಥವಾ ಮತ್ತೊಂದು ಹುಕುಂ ಕೊಡಲ್ಪಡುವತನಕ ಫ್ರೆಂಚ್‌ರಾಕ್ಸ್ ಸಬ್‌ಡಿವಿಜನ್ ಇನ್‌ಚಾರ್ಜಿನಲ್ಲಿರುವರು.

ನೇಕ್ಸಾಂ ನಂ. ೧೮೦ ತಾ|| ೧೦ನೇ ಏಪ್ರೆಲ್ ೧೮೮೮.—ಬೆಂಗಳೂರು ಡಿಸ್ಟ್ರಿಕ್ಟು ಚೆನ್ನಪಟ್ಣದ ಡೆಪ್ಯುಟಿ ಅಮಲ್‌ದಾರ್ ನರಸಿಂಹಮೂರ್ತಿರಾಯರವರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖ್ ಲಾಗಾಯಿತು ೬ತಿಂಗಳ ಪ್ರಿವಿಲೇಜ್‌ರಜಾ ಕೊಡಲ್ಪಟ್ಟಿರುತಿದೆ. ಬೆಂಗಳೂರು ಡಿಸ್ಟ್ರಿಕ್ಟು ಆಫೀಸಿನಲ್ಲಿ ಸ್ಟೈಪಂಡ್ ನ್ಯೂಮರೆರಿಯಾಗಿರುವ ಶ್ರೀನಿವಾಸರಾಯರವರು ನರಸಿಂಹಮೂರ್ತಿರಾಯರವರ ಗೈರ್ ಹಾಜರಿಯಲ್ಲಿ ಅಥವಾ ಮತ್ತೊಂದುಹುಕುಂ ಕೊಡಲ್ಪಡುವತನಕ ಚೆನ್ನಪಟ್ಟಣದ ಡೆಪ್ಯುಟಿ ಅಮಲ್‌ದಾರ್ ವ ಮೂರನೇ ಕ್ಲಾಸ್ ಮ್ಯಾಜಿಸ್ಟ್ರೇಟರಾಗಿ ಆಕ್ಟುಮಾಡುವಂತೆ ನೇಮಕರಾತ್ಮಡಲ್ಪಟ್ಟಿರುತ್ತಾರೆ.

ನಂ. ೫ ತಾ|| ೧೫ನೇ ಏಪ್ರೆಲ್.೧೮೮೮—ಮಿಸ್ಟರ್ ಟಿ. ಆರ್. ಎ. ತಂಬುಶೆಟ್ಟರವರು, ಮಿಸ್ಟರ್ ಸಿ. ಜಿ. ಪ್ಲ್ಯಾಮರ್‌ಯವರು ರಜಾಮೇಲೆ ಗೈರ್ ಹಾಜರಾಗಿರುವ ಕಾಲದಲ್ಲಿ ಅಥವಾ ಮತ್ತೊಂದು ಹುಕುಂ ಕೊಡಲ್ಪಡುವತನಕ ಜೆಯಿಲ್‌ಗಳ ಇನ್‌ಸ್ಪೆಕ್ಟರ್ ಜನರಲಾಗಿ ಆಕ್ಟುಮಾಡುತಲಿರುವಂತೆ ನೇಮಕರಾತ್ಮಡಲ್ಪಟ್ಟಿರುತ್ತಾರೆ.

ನಂ. ೬. ಮ ಸಿ ಜಿ. ಪ್ಲ್ಯಾಮರ್‌ಯವರು ರಜಾಮೇಲೆ ಗೈರ್‌ಹಾಜರಾಗಿರುವ ಕಾಲದಲ್ಲಿ ಅಥವಾ ಮತ್ತೊಂದು ಹುಕುಂ ಕೊಡುವತನಕ ಮೈಸೂರು ಚೀಫ್ ಕೋರ್ಟಿನ ಆಕ್ಟಿಂಗ್ ಚೀಫ್ ಜೆಡ್ಜಿಯಾದ ಮ|| ಟಿ. ಆರ್ ಎ. ತಂಬುಶೆಟ್ಟರವರಿಗೆ ೧೮೮೪ನೇ ಇಸವಿ ಮೈಸೂರು ಜೇಲ್‌ಕೋಡ್ ರೆಗ್ಯುಲೇಷನಿನ ೧೮ನೇ ಸೆಕ್ಷನ್ನಿನಲ್ಲಿ ನಮೂದಿಸಿರುವ ತಮಾಂ ಅಧಿಕಾರಗಳೂ ಇದರಿಂದ ಕೊಡಲ್ಪಟ್ಟಿರುತಿವೆ.

ನಂ. ೭. ತಾ ೧೬ನೇ ಏಪ್ರೆಲ್ ೧೮೮೮.—ಬೆಂಗಳೂರು ಡಿಸ್ಟ್ರಿಕ್ಟು ಡೆಪ್ಯುಟಿಕಮಿಷನರ್ ಮೇಜರ್ ಏ. ಹೆಚ್. ಮ್ಯಾಕಿಂಟೈರ್‌ಯವರಿಗೆ ಮಾಹೇ ಮಜಕೂರ್ ೨೧ನೇ ತಾರೀಖ್ ಲಾಗಾಯತು ಅಥವಾ ಅವರು ಉಪಯೋಗಿಸಿಕೊಳ್ಳುವ ತಾರೀಖ್ ಮೊದಲು ಆರುವಾರಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿರುತಿದೆ.

ಬೆಂಗಳೂರು ಡಿಸ್ಟ್ರಿಕ್ಟು ಟ್ರೆಜರೀ ಇನ್‌ಚಾರ್ಜಿನಲ್ಲಿರುವ ಅಸಿಸ್ಟೆಂಟ್ ಕಮಿಷನರ್ ಮ. ಎಫ್. ಬಿ. ಕ್ಯರ್ಟಿಯವರು ಮೇಜರ್ ಮ್ಯಾಕಿಂಟೈರ್‌ಯವರ ಗೈರ್‌ಹಾಜರೀ ಕಾಲದಲ್ಲಿ ಅಥವಾ ಮತ್ತೊಂದು ಹುಕುಂ ಕೊಡಲ್ಪಡುವ ತನಕ ಬೆಂಗಳೂರು ಡಿಸ್ಟ್ರಿಕ್ಟು ಡೆಪ್ಯುಟಿ ಕಮಿಷನರ್ ಮತ್ತು ಡಿಸ್ಟ್ರಿಕ್ಟು ಮ್ಯಾಜಿಸ್ಟ್ರೇಟರಾಗಿ ಆಕ್ಟು ಮಾಡುವಂತೆ ನೇಮಕರಾತ್ಮಡಲ್ಪಟ್ಟಿರುತ್ತಾರೆ.

ನಂ. ೮, ತಾ|| ೧೮ನೇ ಏಪ್ರೆಲ್ ೧೮೮೮.—ಮಾಹೇ ಮಜಕೂರು ೪ನೇ ತಾರೀಖಿನ ಮಧ್ಯಾನ್ಹಾತ್ಪರ ಹಾಸನ ಡಿಸ್ಟ್ರಿಕ್ಟು ಟ್ರೆಜರೀ ಚಾರ್ಜನ್ನು ಮಂಗಪತಿ ನಾಯುಡರವರು ಮ|| ಚೆಲುವಯ್ಯಂಗಾರ್ರವರಿಗೆ ಒಪ್ಪಿಸಲು ಅವರವಂ ತೆಗೆದುಕೊಂಡಿರುತ್ತಾರೆ.

ನಂ. ೯. ಇದರಡಿ ಕಂಡ ಪೊಲೀಸ್ ಅಸಿಸ್ಟೆಂಟ್ ಕಮಿಷನರ್‌ಗಳ ವರ್ಗಾವರ್ಗಿಗಳು ಮಂಜೂರ್ರಾತ್ಮಡಲ್ಪಟ್ಟವೆ:—ಕೋಲಾರ ಡಿಸ್ಟ್ರಿಕ್ಟು ಪೊಲೀಸ್ ಅಸಿಸ್ಟೆಂಟ್ ಕಮಿಷನರ್ ಮ|| ಜೆ. ಜ. ನಾರ್ಥ್‌ಯವರು, ಮೈಸೂರು ಡಿಸ್ಟ್ರಿಕ್ಟು ಫ್ರೆಂಚ್ ರಾಕ್ಸ್ ಸಬ್‌ಡಿವಿಜನ್ ಪೊಲೀಸ್ ಅಸಿಸ್ಟೆಂಟ್ ಕಮಿಷನರಾಗಿರತಕ್ಕದ್ದು. ಶಿವಮೊಗ್ಗಾ ಡಿಸ್ಟ್ರಿಕ್ಟು ಪೊಲೀಸ್ ಅಸಿಸ್ಟೆಂಟ್ ಕಮಿಷನರ್ ಮ|| ಜೆ. ಡಬ್ಲ್ಯು ನೈಟ್‌ಯವರು, ಬೆಂಗಳೂರು ಡಿಸ್ಟ್ರಿಕ್ಟು ಪೊಲೀಸ್ ಅಸಿಸ್ಟೆಂಟ್ ಕಮಿಷನರಾಗಿರತಕ್ಕದ್ದು. ಬೆಂಗಳೂರು ಡಿಸ್ಟ್ರಿಕ್ಟು ಪೊಲೀಸ್ ಅಸಿಸ್ಟೆಂಟ್ ಕಮಿಷನರ್ ಮ|| ಕುಪ್ಪುಸಾಮಿ ಮೊದಲಿಯಾರ್ರವರು, ಕೋಲಾರ ಡಿಸ್ಟ್ರಿಕ್ಟು ಪೊಲೀಸ್ ಅಸಿಸ್ಟೆಂಟ್ ಕಮಿಷನರಾಗಿರತಕ್ಕದ್ದು. ಆಫಿಷಿಯೇಟಿಂಗ್ ಅಸಿಸ್ಟೆಂಟ್ ಕಮಿಷನರ್ ಮ|| ಪಿ. ಆರ್. ಡಬ್ಲ್ಯು ವೆದರಾಲ್‌ಯವರು ಶಿವಮೊಗ್ಗಾ ಡಿಸ್ಟ್ರಿಕ್ಟು ಪೊಲೀಸ್ ಅಸಿಸ್ಟೆಂಟ್ ಕಮಿಷನರಾಗಿರತಕ್ಕದ್ದು.

SUMMARY OF NEWS.
ವೃತ್ತಾಂತ ಸಂಗ್ರಹವು.

Poverty-striken people in London.—ಲಂಡನ್ ಪಟ್ಟಣದಲ್ಲಿ ಲಕ್ಷ ಅರವತ್ತೆರಡು ಸಾವಿರ ಮಂದಿ ಬಡವರು ಜೀವನವಿಲ್ಲದೆ ಸಂಕಟಪಡುತಲಿರುವರೆಂತ ಒಂದು ಇಂಗ್ಲಿಷ್ ಪತ್ರಿಕೆ ತಿಳಿಸುತಿದೆ.

Chinese emigration.—ಆಸ್ಟ್ರೇಲಿಯಾ ಖಂಡಕ್ಕೆ ಚೀನಾದೇಶದ ಕೂಲಿಯವರು ಹೊರಡಲು ಉದ್ಯುಕ್ತರಾಗಿದ್ದ ಸಮಾಚಾರವನ್ನು ತಿಳಿದು ಇಂಗ್ಲಿಷ್ ಸರ್ಕಾರದವರು ಕೈಲಾದಮಟ್ಟಿಗೂ, ಅದನ್ನು ಅಡ್ಡಿಮಾಡಬೇಕೆಂದು ಯೋಚಿಸಿದಾರೆ.

Preparations.—ಇಂಡಿಯಾ ಚಕ್ರವರ್ತಿನೀಯವರು ಇಟಲೀ ದೇಶಕ್ಕೆ ದಯಮಾಡುವರೆಂಬ ವರ್ತಮಾನವನ್ನು ಅಲ್ಲಿನ ಧೊರೆಯವರು ತಿಳಿದು ಪ್ಲಾರೆನ್ಸಿನಲ್ಲಿರುವ ತಮ್ಮ ಅರಮನೆಯಲ್ಲಿ ಅವರನ್ನು ಬಿಜಮಾಡಿಸುವದಕ್ಕೋಸ್ಕರ ಬೇಕಾದ ಸನ್ನಾಹಗಳನ್ನು ಮಾಡುತಲಿದಾರೆ.

An ingenious thief.—ಕೆಲವುದಿನಗಳ ಕೆಳಗೆ ಪಂಜಾಬ್‌ದೇಶದಲ್ಲಿ ಒಬ್ಬ ಸಾಹುಕಾರನು ೮೦ ತೊಲೆ ಚಿನ್ನವನ್ನು ಭಾಂಗೀಮಾಡಿ ಇನ್‌ಷ್ಯೂರ್ ಮಾಡಿ ಮತ್ತೊಂದು ಸ್ಥಳಕ್ಕೆ ಕಳುಹಿಸಿದನು. ಭಾಂಗೀಯನ್ನು ತೆಗೆದುಕೊಂಡ ಮನುಷ್ಯನು ಒಡೆದುನೋಡಲು ಚಿನ್ನಕ್ಕೆ ಬದಲಾಗಿ ಕಬ್ಬಿಣ ಒಳಗೆ ಇತ್ತು. ಕಳ್ಳನಪತ್ತೆಗಾಗಿ ಪೋಲೀಸಿನವರಿಗೆ ನೋಕದ್ದಮೆಯನ್ನು ಕೊಟ್ಟಿರುತ್ತಾರೆ.

Fire.—ಸೂರತ್‌ಪ್ರಾಂತಕ್ಕೆ ಸಮೀಪದಲ್ಲಿರುವ ಒಂದು ಊರಿಗೆ ಮಾಹೇಮಜಕೂರ್ ೩ನೇ ತಾರೀಖಿನ ದಿನ ಬೆಳಗ್ಗೆ ೧೦ ಘಂಟೆಯವೇಳೆಯಲ್ಲಿ ಬೆಂಕಿತಗಲಿ ೧೨೬ ಮನೆಗಳು ಮುಹೂರ್ತಕಾಲದಲ್ಲಿ ಭಸ್ಮವಾಗಿಹೋದವು. ಇದರಿಂದ ಸುಮಾರ್ ಏಳುಸಾವಿರ ಜನಗಳೂ ಪಶುಗಳೂ ಕೂಡಲಿಕ್ಕೆ ಸ್ಥಳವಿಲ್ಲದೆಯೂ, ತಿನ್ನಲಿಕ್ಕೆ ಆಹಾರವಿಲ್ಲದೆಯೂ, ಸಂಕಟಪಡುತಲಿರುವ ವೃತ್ತಾಂತವನ್ನು ಫರ್ದೋಜಿ ಕವಾಸಜಿ ಪಟೇಲ್ ಎಂಬವರು ಕೇಳಿದಕೂಡಲೇ ಬೇಕಾದಮಟ್ಟಿಗೆ ಧನಸಹಾಯಮಾಡಿ ಅವರೆಲ್ಲರಂ ಜೀವಪೊಡನೆ ಉಳಿಸಿದರೆಂದು ತಿಳಿಯಬರುತಿದೆ. ಅವರು ಆರ್ಜಿಸಿದದ್ರವ್ಯಕ್ಕೆ ಇದಕ್ಕಿಂತಲೂ ಸದ್ವ್ಯಯ ಬೇರುಂಟೆ?

Horse races.—ಬರುವಸಂವತ್ಸರದಲ್ಲಿ ಮದರಾಸ್ ಗಿಂಡಿತೋಟದಲ್ಲಿ ಕುದುರೇಪರತ್ ಬಹಳ ಚೆನ್ನಾಗಿನಡೆಯಬಹುದೆಂಬದಕ್ಕೆ ಈಗಲೇ ಅನೇಕಸೂಚನೆಗಳು ಕಂಡುಬರುತಿವೆ. ಈವರುಷದಲ್ಲಿ ನಡೆದಪರತ್ತಿನ ಜಮಾಖರ್ಚನ್ನು ನೋಡಿದರಾಗಿ ೧೧,೦೦೦ ರೂಪಾಯಿಗಳು ಸಿಲ್ಕು ನಿಂತಿರುವಂತೆ ವ್ಯಕ್ತವಾಗುತಿದೆ. ಇದಲ್ಲದೆ ಮುಂದಿನವರುಷದ ಪರತ್ತಿನ ಖರ್ಚುಬಗ್ಗೆ ವಿಜಯನಗರದ ಮಹಾರಾಜರವರು ೨,೦೦೦, ವೆಂಕಟಗಿರಿ ರಾಜರವರು ೧,೫೦೦, ರಾಜಾ ಗಜಪತಿ ರಾಯರವರು ೧,೨೦೦ ಬೊಬ್ಬಿಲಿ ಅರಸರವರು ೧,೦೦೦, ಈರೀತಿ ೫,೭೦೦ ರೂಪಾಯಿಗಳ ತನಕ ಧನಸಹಾಯ ಮಾಡಿದರೆಂದು ಕೇಳುತ್ತೇವೆ.

An emperror's aspirations.—ಜರ್ಮನೀ ದೇಶದಚಕ್ರವರ್ತಿಯವರು ತಮ್ಮ ರಾಜಧಾನಿಯಾದ ಬರ್ಲಿನ್ ಪಟ್ಟಣಕ್ಕೆ ವಾಪಸ್‌ಬರುವದಮೇಲೆ ತಮ್ಮ ಮಂತ್ರಿಯವರಾದ ಪ್ರಿನ್ಸ್ ಬಿಸ್ಮಾರ್ಕರವರಿಗೆ ಪಂಚುಕಾಗದವನ್ನು ಬರೆದರು, ಅದರ ಅಭಿಪ್ರಾಯವೇನೆಂದರೆ;—"ಯುದ್ಧಸಂಬಂಧವಾದ ದೊಡ್ಡಕೆಲಸಗಳನ್ನು ಮಾಡಿ ಪ್ರತಿಷ್ಠೆಯನ್ನು ಸಂಪಾದಿಸಬೇಕೆಂಬ ಅಪೇಕ್ಷೆಇಲ್ಲವು. ಪ್ರಜೆಗಳಸ್ತೋತ್ರಕ್ಕೆ ಪಾತ್ರನಾಗಬೇಕೆಂಬ ಅಪೇಕ್ಷೆಯೂ ಇಲ್ಲ. ಪ್ರಜೆಗಳೆಲ್ಲರೂ ನನ್ನ ರಾಜ್ಯಭಾರವು ಗೃಹಜೆಗಳಗೆಲ್ಲಾ ಇಂಪಾಗಿಯೂ, ದೇಶಕ್ಕೆ ಸುಭಿಕ್ಷಕರವಾಗಿಯೂ, ರಾಜ್ಯಕ್ಕೆ ಅತ್ಯಂತ ಅಭಿವೃದ್ಧಿಕರವಾಗಿಯೂ, ಇತ್ತೆಂಬದಾಗಿ ಹೇಳಿದರೆ ಅಂಥಾ ರಾಜ್ಯಭಾರವನ್ನು ನಾನುಮಾಡುದಿವಸ ಮಾಡಿದಾಗ್ಯೂ ತೃಪ್ತಿ ಯುಳ್ಳವನಾಗುತ್ತೇನೆ." ಎಂಬದು.

Death from poverty.—ಕೊಯಿಂಬತೂರಲ್ಲಿ ವೈಶ್ಯಜಾತಿಯವನೊಬ್ಬನು ಈಚೆಗೆ ಸಾಲಗಾರರಿಂದ ಸಿವಿಲ್ ಜೈಲಿನಲ್ಲಿಡಲ್ಪಡಲು ಕೆಲವು ದಿನಗಳೊಳಗಾಗಿಯೇ ಆತನು ಜೈಲಿನಲ್ಲಿಯೇ ಮೃತಪಟ್ಟನು. ಈವೃತ್ತಾಂತವಂ ಅವನ ಭಾರ್ಯೆಯು ಕೇಳಿ ದಾರಿದ್ರ್ಯವನ್ನನುಭವಿಸಲಾರದೆ ೩೪ ವರುಷಗಳ ವಯಸ್ಸುಳ್ಳ ತನ್ನ ಮಗುವನ್ನು ಒಂದು ಭಾವಿಯಲ್ಲಿ ಕೆಡಹಿ ತಾನೂ ಅದರಲ್ಲಿ ಬಿದ್ದುಬಿಟ್ಟಳು. ಆಕೆಗೆ ಪ್ರಾರಬ್ಧಕರ್ಮವು ಬಲವತ್ತರವಾಗಿದ್ದದರಿಂದ ಆಮಗು ಮಾತ್ರ ಮೃತಪಟ್ಟಿತೇಹೊರ್ತು ಅವಳ ಪ್ರಾಣಕ್ಕೇನೂ ಅಪಾಯ ಉಂಟಾಗಲಿಲ್ಲವು. ಆಕೆ ಭಾವಿಯಲ್ಲಿಬಿದ್ದ ಶಬ್ದವು ಕೇಳದ ಕೂಡಲೇ ನೆರೆಹೊರೆಯವರು ಅವಳಂ ಬಾವಿಯಿಂದ ತೆಗೆದು ಬದಿಕಿಸಿದರು. ಈಗ ಸದರೀ ಹೆಂಗಸು ಪೋಲೀಸ್ ಲಾಕಪಿನಲ್ಲಿ ದಸ್ತಾಪಿತ್ತಿಯೊಳಗಿರುತಲಿದಾಳೆಂದು ತಿಳಿಯಬರುತಿದೆ.

Burma news.—ಬರುವಸಂವತ್ಸರ ಜನವರಿ ಗುರ್ರೆ ತಾರೀಖಿನೊಳಗಾಗಿ ಬರ್ಮಾದೇಶದಲ್ಲಿ ಜನಗಳ ಆಮದುರಪ್ತುಬಗ್ಗೆ ಬೇಕಾದ ರೈಲ್ವೇ ಆನುಕೂಲ್ಯಗಳೆಲ್ಲ ಕಲ್ಪಿಸಲ್ಪಡುವವು. ತೀಬಾಅರಸರವರು ಕೊಡಬೇಕಾಗಿರುವವರೊಬ್ಬರಿಗೆ ಬ್ರಿಟಿಷ್ ಗವರ್ನಮೆಂಟಿನವರ ಮೇರೆ ದಾವಾತರಬಹುದೆಂಬದಾಗಿ ಅಲ್ಲಿನಸರ್ಕಾರದವರು ಪ್ರಕಟಿಸಿರುತ್ತಾರೆ. ತ್ವರೆಯೊಳೊಂದು ಸ್ಮಾಲ್‌ಕಾಜ್‌ಕೋರ್ಟು ಅಲ್ಲಿ ಸ್ಥಾಪಿಸಲ್ಪಡುವದು. ವ್ಯಾಪಾರಾಭಿವೃದ್ಧಿಯಾಗುತ ಬರುತಲಿದೆಂದು ತಿಳಿಯಬರುತಿದೆ.

Political assurances.—ವೈಸರಾಯ್‌ಯವರ ಕಡೆ ಪೊಲಿಟಿಕಲ್ ಏಜಂಟರಾದ ಸರ್‌ಲೆಪಲ್‌ಗ್ರಿಫ್ಫಿನ್‌ಯವರು ಭೂಪಾಲ್‌ದೇಶದಲ್ಲಿಮಾಡಿದ ಅನ್ಯಾಯವನ್ನು ಕುರಿತು ಆಬಾಲ ವೃದ್ಧರಿಗೂ ತಿಳಿಯುವಂತೆ ಅಮೃತಬಜಾರ್ ಪತ್ರಿಕಾ ಕರ್ತರು ಪ್ರಕಟಸಿರುವದು ಸರಿಯಷ್ಟೆ. ಇದರಿಂದ ತಮಗೆ ಬಹಳ ಅಪಮಾನವಾಗಿರುವದ್ದರಿಂದ ಆಪತ್ರಿಕಾ ಕರ್ತರನ್ನು ಕ್ರಿಮಿನಲ್ ವಿಚಾರಣೆಗೆ ಗುರಿಮಾಡಬೇಕೆಂದು ಇಂಡಿಯಾ ಗವರ್ನಮೆಂಟಿಗೆ ಬರೆದುಕೊಂಡರು. ಅವರು "ನೀವು ಮಾಡಬೇಕಾದ ಅವಶ್ಯಕವಿಲ್ಲವೆಂತಲೂ ನಿಮ್ಮ ನಡತೆಯು ನಮಗೆ ತೃಪ್ತಿಕರವಾಗಿರುವದೆಂತಲೂ ಪ್ರತ್ಯುತ್ತರದಿಂದ ತಿಳಿಸಿದರು.

Age of the European Emperors. ಈಗ ಯೂರೋಪಿದೇಶದಲ್ಲಿರತಕ್ಕ ಚಕ್ರವರ್ತಿಗಳೆಲ್ಲರ ಪೈಕಿ ಈಗ ಗತಿಸಿದ ಜರ್ಮನ್ ಚಕ್ರವರ್ತಿಯವರು ವಯೋವೃದ್ಧರಾಗಿದ್ದರು. ಈಗಿರತಕ್ಕವರಲ್ಲಿ ೧೩ನೇ ಲಿಯೋ ಯೆಂಬವರು ಹಿರಿಯರು. ಇವರಿಗೀಗ ೭೮ ವರುಷ ವಯಸ್ಸಾಗಿರುತಿದೆ. ಇವರಿಗಿಂತ ಚಿಕ್ಕವರು, ಹಾಲೆಂಡರಾಜ್ಯದ ಅರಸರು, ಅವರಿಗೀಗ ೭೧ ವರುಷಗಳಾಗಿರುತಿವೆ. ಇವರಿಗಿಂತ ವಯಸ್ಸಿನಲ್ಲಿ ಚಿಕ್ಕವರಾಗಿರತಕ್ಕವರು, ಶ್ರೀಮನ್ಮಹಾರಾಜ್ಞೀ ವಿಕ್ಟೋರಿಯ್ಯಾಯವರು, ಇವರವಯಸ್ಸೀಗ ೬೯. ಡೇನ್ಮಾರ್ಕ್‌ಅರಸರು ಸಹ ಇವರ ಸಮಾನ ವಯಸ್ಸಿನವರಾಗಿರುತ್ತಾರೆ. ಸ್ವೀಡನ್ ದೇಶದ ಅರಸರಿಗೆ ೫೯ ವರುಷಗಳೂ, ಮಹಾರಾಣಿಯವರ ಜ್ಯೇಷ್ಠ ಜಾಮಾತೃಗಳಾದ ಪ್ರಕೃತ ಜರ್ಮನೀ ಚಕ್ರವರ್ತಿಯವರಿಗೆ ೫೭ ವರುಷಗಳೂ ಆಗಿರುತಿವೆ. ಸ್ಪೈಯಿನ್‌ದೇಶದ ಅರಸರವರು ಈಗ ಎಲ್ಲರಿಗಿಂತಲೂ, ಚಿಕ್ಕವಯಸ್ಸಿನವರಾಗಿರುತ್ತಾರೆ.

English animosity.—ಮಾರ್ಚೀ ಮಹಕೊರ ೬ನೇ ತಾರೀಖಿನದಿನ ಒಬ್ಬ ನೇಟಿವ್ ದೊಡ್ಡ ಮನುಷ್ಯರು ಮುಂಬೈ ಗ್ರಾಂಟ್ ರೋಡ್ ರೈಲ್ವೇ ಸ್ಟೇಷನಿನಲ್ಲಿ ಟಿಕ್ಕೆಟ್ ತೆಗದುಕೊಂಡು ಒಂದನೇ ತರಗತಿ ಗಾಡಿಯಲ್ಲಿ ಹತ್ತಲಿಕ್ಕೆ ಹೋಗುವಾಗ್ಯೆ ಅದರಲ್ಲಿಕುಳಿತಿದ್ದ ಇಬ್ಬರು ಯೂರೋಪಿಯನ್‌ರು ಅವರನ್ನು ಗಾಡಿಯೊಳಕ್ಕೆ ಬಿಡದೆ ತಡೆದು ನಿರ್ಬಂಧಿಸಿದರು. ಆಗ ಸದರೀ ನೇಟಿವ್ ದೊಡ್ಡಮನುಷ್ಯರು ಸ್ಟೇಷನ್ ಮಾಸ್ಟರರೊಡನೆ ತಿಳಿಸಲು ಅವರು ಒಂದುಸ್ಥಳವಂ ಬಿಡಿಸಿಕೊಟ್ಟದ್ದರಿಂದ ಬಹಳ ಅಪಮಾನದೊಡನೆ ಅವರಿಬ್ಬರೂ ಸುಮ್ಮನಿರಬೇಕಾಯಿತು. ತರುವಾಯ ನೇಟಿವ್ ದೊಡ್ಡಮನುಷ್ಯರು ತಮ್ಮ ಕೊರಳೊಳಿದ್ದ ಪುಷ್ಪಹಾರಗಳಲ್ಲಿ ಎರಡು ತೆಗದು ಅವರಿಬ್ಬರಿಗೂ ಹಾಕಿದಮೇಲೆ ಅವರು ಪುಲಕಾಂಕಿತರಾಗಿ ಆ ದೊಡ್ಡಮನುಷ್ಯರ ಮನ್ನಣೆಯಂ ಬೇಡಿಕೊಂಡರು. ಇವ್ವರ ಅಸಹಿಷ್ಣುತೆಗೇನು ಕಾರಣ? ನಾವೂ ತಮಗೆ ಸಮಾನ ವಿದ್ಯಾಬಲ ಅಭಿವೃದ್ಧಿಗಳನ್ನೈದುತ ಬರುತ್ತೇವೆಂಬದೇನೋ, ಬೇರೇನಾದರುಂಟೊ?

The German Emperor.—ಈಚೆಗೆ ಕಾಲಗತಿಯನ್ನೈದಿದ ಜರ್ಮನೀ ಚಕ್ರವರ್ತಿಯವರ ಮನೆವಾರ್ತೆ ಖರ್ಚುಗಳೆಲ್ಲ ಕಳೆದು ಇಪ್ಪತ್ತೈದುಲಕ್ಷ ಪೌಂಡುಗಳು ಸ್ವಂತ ಆಸ್ತಿನಿಂತಿದ್ದಂತೆಯೂ ಅವುಗಳ ವಿನಿಯೋಗ ಕ್ರಮಗಳನ್ನೆಲ್ಲ ವಿವರವಾಗಿ ತಿಳಸಿ ಜೀವಿಸಿದ್ದಾಗಲೇ ಕ್ರಮವಾದ ಉಯಿಲ್ ಬರೆದಿಟ್ಟು ಹೋದರೆಂತಲೂ ತಿಳಿಯಬರುತಿದೆ. ಇದಲ್ಲದೆ ತಮ್ಮಭುಜಪರಾಕ್ರಮದಿಂ ತಾವು ಸಂಪಾದಿಸಿದ ಒಂದುಮಿಲಿಟರಿಟೋಪಿ, ಪ್ರತಿಷ್ಠಾಪಾದಕವಾಗಿ ಧರಿಸಿದ್ದ ತಮ್ಮಕ್ರಾಸ್, ಆಂದಷೆ, ಪದಕ, ಇವುಗಳೊಡನೆ ತಮ್ಮಕಳೇಬರವನ್ನು ವಿಶಿಷ್ಟ ರಾಜಮರ್ಯಾದೆಗಳೊಡನೆ ದಫನ ಮಾಡಬೇಕೆಂಬದಾಗಿ ಆಜ್ಞಾಪಿಸಿ ಬರೆದಿಟ್ಟುಹೋದರೆಂದು ತಿಳಿಯಬರುತಿದೆ ಪ್ರಾಣಹೋದಾಗ್ಯೂ ಕ್ಷಾತ್ರಧರ್ಮವಂ ಕಾಪಾಡಿಕೊಳ್ಳುವದರಲ್ಲಿ ಮೇಲೆಕಂಡಂತೆ ಕೆಲವರು ವಿಶೇಷ ಅಭಿಲಾಷೆಯುಳ್ಳವರಾಗಿರುತ್ತಾರೆ.

Female courage.—ಇಂಡ್ಯಾದೇಶದ ಮಧ್ಯಪ್ರಾಂತದಲ್ಲಿ ಒಬ್ಬಸ್ತ್ರೀಯು ಷಿಕಾರೀ ಅಭ್ಯಾಸವನ್ನು ಮಾಡಬೇಕೆಂದು ಸಣ್ಣ ಸಣ್ಣ ಮೃಗಗಳನ್ನು ಕೊಲ್ಲುತ್ತಿದ್ದು ಹೋದವರ್ಷ ಒಂದು ಗಂಡುಹುಲಿಯನ್ನು ಇತರರ ಸಹಾಯದಿಂದ ಕೊಂದಳು. ಆಲಾಗಾಯಿತು ಅತ್ಯಂತಪ್ರಸಿದ್ಧಿಯನ್ನು ಪಡೆಯುತ್ತಾಬಂದಳು. ಈವರ್ಷ ಬೈಲುಷಿಕಾರೀಗೆ ಹೋಗಿ ಉತ್ತಮವಾದ ಬಂದೂಖನ್ನು ಸಮೀಪದಲ್ಲಿಟ್ಟುಕೊಂಡು ದೂರದಲ್ಲಿ ಬರುತ್ತಿದ್ದ ಹುಲಿಗಳನ್ನು ಅತಿ ಚಮತ್ಕಾರದಿಂಬ ಕೊಂದಳು. ಮತ್ತೊಂದು ವೇಳೆಯಲ್ಲಿ ಒಂದು ಆನೆಯನ್ನು ಹಿಡಿಸಿಕೊಂಡು ಹೋಗುತ್ತಿದ್ದ ಹುಲಿಯನ್ನು ಕಂಡು ಅದನ್ನು ಕೊಂದಳು. ಮತ್ತೊಂದುಕಾಲದಲ್ಲಿ ಕಾಡಿನಲ್ಲಿ ಏಕಾಂಗಿಯಾಗಿ ಸಂಚರಿಸುತಿದ್ದು ಎದುರಿಗೆ ಬಂದ ಕಾಡುಕೋಣವನ್ನು ಕೊಂದಳು. ಆಹಾ? ಸ್ತ್ರೀಯರು ಯಾವವಿಷಯದಲ್ಲಿ ತಾನೆ ಪುರುಷರಿಗೆ ಕಮ್ಮಿಯಾಗಿದಾರೆ.—ಕ. ಸು.

Presents to peons.—ಮುಂಬೈಯಲ್ಲಿ ಹೈಕೋರ್ಟು ಜವಾನರು ಹೋಳಿ,ದಸರಾ, ಮೊಹರಂ ಮೊದಲಾದ ಹಬ್ಬಗಳಲ್ಲಿ ಹುದ್ದೇದಾರರಿಂದಲೂ, ಪ್ಲೀಡರುಗಳಿಂದಲೂ ಬಲವಂತವಾಗಿ ಇನಾಮುಗಳನ್ನು ಇದುವರಿವಿಗೂ ಹೊಂದುತಿದ್ದರು. ಇನ್ನು ಮುಂದೆ ಹಾಗೆಯಾರಾದರು ಇನಾಮುಗಳನ್ನು ಕೇಳದರೆ ಅವರ ಮೇಲೆ ಪ್ರಾಸಿಕ್ಯೂಷನ್ ನಡಿಸಬೇಕೆಂದು ಬೊಂಬಾಯಿ ಹೈಕೋರ್ಟನವರು ಹುಕುಂ ಮಾಡಿರುತ್ತಾರೆ. ಹೀಗೆಯೇ ಮೈಸೂರು ದೇಶದಲ್ಲಿ ಮೆ|| ಜೆ. ಡಿ. *ಸ್ಯಾಂಡ್‌ಫೋರ್ಡ್‌ಯವರು* ಜುಡಿಷಿಯಲ್ ಕಮ್ಮಿಷನರ್ ಆಗಿದ್ದಾಗ್ಯೆ ಹುಕುಂಮಾಡಿದ್ದರು. ಅದು ನೌಕರ್‌ಮಾನೇರಿಗೆ ಬಹುಬಾಧೆಯನ್ನು ಹೋಗಲಾಡಿಸಿತ್ತು. ಈ ವಿಷಯದಲ್ಲಿ ಮದರಾಸ್ ಪ್ರಸಿಡೆನ್ಸಿಯಲ್ಲಿ ಇನ್ನೂ ಯಾರೂ ಕಣ್ದೆರದುನೊಡದೆ ಇರುವದು ಪರಮಾಶ್ಚರ್ಯವು. ನಮಗೆ ತಿಳದಮಟ್ಟಿಗೆ ಈಗುಸ್ತಾವಾದ ತೆರಿಗೆಯು ಈ ಪ್ರಸಿಡೆಂಸಿಯಲ್ಲಿ ಬಹು ಪ್ರಬಲವಾಗಿರುತದೆ. ಎಂದಿಗೆ ಅಧಿಕಾರಿಗಳಿಗೆ ಕಣ್ಣು ಕಾಣುವದೋ ನಾವರಿಯೆವು.—ಕ. ಸು.

The Funeral Association of Bellary. ಬಳ್ಳಾರಿಯಲ್ಲಿ ಅನಾಥಪ್ರೇತ ಸಂಸ್ಕಾರ ಸಭೆಯೆಂಬ ಒಂದು ಸಮಾಜವು ಸ್ಥಾಪಿಸಲ್ಪಟ್ಟಿರುತಿದೆ. ಪ್ರಥಮತಃ ಸದರೀಸಭೆಗೆ ಕಾರ್ಯನಿರ್ವಾಹಕರಾಗಿರಲಿಕ್ಕೆ ಯಾರೂಒಡಂಬಡಲಿಲ್ಲವು. ಯಾತಕ್ಕಂದರೆ, ಪ್ರೇತಕಾರ್ಯನಿರ್ವಾಹಕರಾಗಿರಲಿಕ್ಕೆ ಅನೇಕರು ಲಜ್ಜಿಪಟ್ಟು ನಿರಾಕರಿಸಿದರು. ಕೆಲವರು ತಮಗೆ ಮಹದನಿಷ್ಟ ಪ್ರಾಪ್ತವಾಗುವದೆಂಬ ಭೀತಿಯೊಡನೆ ನಿಷೇಧಿಸಿದರು. ಈಗ ಪ್ರಸಕ್ತ ಸಭೆಯ ಪ್ರಯೋಜನವೂ ಅದರಿಂದುಂಟಾಗುವ ಸತ್ಫಲವೂ, ಅನೇಕರಿಗೆ ಸ್ಪಷ್ಟವಾಗಿ ತಿಳಿಯಬಂದ ಬಳಿಕ ಈಗ ಅದು ಸಕಲಾಂಗಗಳೊಡನೆ ಕ್ರಮೇಣ ಅಭಿವೃದ್ಧಿಸ್ಥಿತಿಗೆ ಬರುತಲಿದೆ. ಕೇವಲ ಈ ಸಭೆಯವರ ಸಹಾಯದಿಂದಲೇ ಯೆರಡು ಅನಾಥಪ್ರೇತಗಳು ಹೊಲಮಾದಿಗರ ವಾಹನವನ್ನಪೇಕ್ಷಿಸದೆ ಯಥಾವಿಧಿ ದಹನವಾದವು. ಕಾಶೀಕ್ಷೇತ್ರ ದರ್ಶನಾರ್ಥ ಹೋಗುತ್ತಿದ್ದ ವಿರಾಗಿಯೊಬ್ಬನು ವಾಂತಿಭೇದಿ ಉಪದ್ರವದಿಂ ಮಾರ್ಗದಲ್ಲಿಯೇ ಮೃತಪಟ್ಟನು. ಮೇಲೆಕಂಡ ಸಭೆಯವರ ಸಹಾಯದಿಂ ಆ ಪ್ರೇತ ಸಹ ಶಾಸ್ತ್ರೋಕ್ತವಾಗಿ ಸಂಸ್ಕಾರ ಮಾಡಲ್ಪಟ್ಟಿತು. ಈಸಭೆಯು ಚಿರಕಾಲ ನೆಲಗೊಂಡಿದ್ದರೆ ಅನೇಕರಿಗೆ ಬಹಳ ಉಪಯುಕ್ತವಾಗಿರುವದಲ್ಲದೆ ಅದರ ಪ್ರವರ್ತಕರಿಗೆ ಬಹಳ ಪುಣ್ಯಪ್ರಾಪ್ತವಾಗದೆ ಹೋಗಲಾರದು.

EXTRACTS

BURMESE AND AMERICAN WOMEN.

ಬರ್ಮಾದೇಶದಲ್ಲಿಯೂ ಅದರ ಆಸುಪಾಸು ಪ್ರದೇಶಗಳಲ್ಲಿಯೂ ಇರತಕ್ಕ ಸ್ತ್ರೀಯರು ಈದೇಶದ ಹೆಂಗಸರಂತೆ ಯಾವಜ್ಜೀವ ವೈಧವ್ಯ ದಶೆಯೊಳಿರುವದಿಲ್ಲವು. ಮತ್ತು ಆ ದೇಶಪದ್ಧತಿಯು ಪ್ರಕಾರ ದಾಯಬಾಗ ಮುಂತಾದ ವಿಷಯಗಳಲ್ಲೆಲ್ಲ ಪುರುಷರಂತೆ ಅವರು ಸಮಾನ ಹಕ್ಕುಳ್ಳವರಾಗಿರುತ್ತಾರೆ. ಸ್ತ್ರೀಯರಿಗೆ ಇಲ್ಲವಿರುವಂತಾ ವಿಶೇಷ ಸ್ವಾತಂತ್ರ್ಯಗಳ್ಯಾವದೂ ಇದೇಶದ ಪುರುಷರಿಗೆ ಇರುವದಿಲ್ಲವು. ಅನ್ಯದೇಶಗಳಲ್ಲಿ ಹೆಂಗಸರು ಪುರುಷರಪೋಷ್ಯವರ್ಗಕ್ಕೆ ಸೇರಿರುವಂತೆಯೇ ಬರ್ಮಾರಾಜ್ಯದಲ್ಲಿ ಪುರುಷರು ಸ್ತ್ರೀ ಸಂರಕ್ಷಣೆಯೊಳಿರುವದು ಅಲ್ಲಿ ಆಶ್ಚರ್ಯಕರವಲ್ಲವು. ಅಮೇರಿಕಾದೇಶದೊಳಾದರೋ, ಹೆಂಗಸರು ಗಂಡಸರ ಸ್ಥಾನಗಳನ್ನಾಕ್ರಮಿಸುತ ಬರುತಲಿದಾರೆ. ಆದೇಶದ ಪೈಕಿ ಕೆಲವು ದೇಶಗಳಲ್ಲಿ ಸ್ತ್ರೀಯರು ಪ್ಲೀಡರ್‌ಗಳಾಗಿರುತಲಿದಾರೆ. ದೊರಸಾನಿಯೊಬ್ಬಳು ಡಿಸ್ಟ್ರಿಕ್ಟ ಜಡ್ಜಿ ಕೆಲಸದೊಳು ಪೊಕರಮ್ಮಾಡಲ್ಪಟ್ಟದಾಳೆ, ಮತ್ತೊಬ್ಬಳು ಇನ್ನೊಂದುಕಡೆಯಲ್ಲಿ ಕ್ಲರ್ಕ್ ಆಫ್‌ದಿಪೀಸ್ ಯೆಂಬ ಉದ್ಯೋಗವಂ ಪಡೆದಿರುತ್ತಾಳೆ. ದೊಡ್ಡ ದೊಡ್ಡ ಹೊಗೇಜಹಜಗಳನ್ನು ಹೆಂಗಸರೇ ನಡೆಸುವಷ್ಟು ಶಕ್ತರಾಗಿದಾರಲ್ಲದೆ ಅನೇಕರು ನಾವಿಕರಾಗಿದಾರೆ. ಒಬ್ಬಹೆಂಗಸು ಮ್ಯುನಿಸಿಪಲ್ ಕಂಟ್ರಾಕ್ಟರಾಗಿರುತ ಕೆಲಸಗಳಂ ಬಹಳ ಜಾಗರೂಕತೆಯೊಡನೆ ಜರಿಗಿಸುತಲಿರುವಳು. ಆರಿಗೋನಿಯೊ ಯೆಂಬ ಪಟ್ಟಣದಲ್ಲಿ ದೊರಸಾನಿ ಯೊಬ್ಬಳು ಅಲ್ಲಿನ ಷರೀಫ್‌ಕೆಲಸವಂ ವಹಿಸಿರುವಳು. ಇದಲ್ಲದೆ ಸ್ಕೆರಕ್ಯೂಜ್ ಯೆಂಬಪಟ್ಟಣದಲ್ಲಿ ಮ್ಯುನಿಸಿಪಲ್ ಮೆಂಬರ್‌ಗಳೆಲ್ಲರೂ ಹೆಂಗಸರೇ ಯಾಗಿರುತ್ತಾರೆ. ಮತ್ತೊಂದು ಆಶ್ಚರ್ಯವೇನೆಂದರೆ,—ಅಮೇರಿಕಾದೇಶದ ಪ್ರೆಸಿಡೆಂಟ್‌ಕೆಲಸಕ್ಕೆ ಮಾನ್ಯಳಾದ ದೊರಸಾನಿಯೊಬ್ಬಳು ದರಖಾಸ್ತು ಕೊಟ್ಟದ್ದಾಳೆಂದು ತಿಳಿಯಬರುತಿದೆ. ಈ ದೇಶದಲ್ಲಿಯೂ, ಕೆಳಗಿನ ತರಗತಿ ಹೆಂಗಸರು ಬಹುಮಂದಿ ಕಸುಬುದಾರರಾಗಿರುತಲಿದಾರೆ. ಅನೇಕರು ಅಂಗಡಿಗಳನ್ನಿಟ್ಟುಕೊಂಡು ವ್ಯಾಪಾರ ನಡೆಸುತಲಿದಾರೆ. ಅನ್ಯದೇಶಗಳಿಗೆ ಹೋಗಿ ಪುರುಷರ ಸಹಾಯವಿಲ್ಲದೆಯೇ ಬಹುಜನ ಜವಳಿ ಮೊದಲಾದ ವ್ಯಾಪಾರಗಳಂ ಮಾಡುವರು. ಪುನೆ ಮೊದಲಾದ ಪ್ರಾಂತಗಳಲ್ಲಿ ಮಿಠಾಯಿವಗೈರೆ ಮಧುರ ಪದಾರ್ಥಗಳನ್ನು ಹೆಂಗಸರೇ ಮಾರುತ್ತಾರೆಂತಲೂ, ಇವರ ಅಂಗಡಿಗಳಲ್ಲಿ ಪದಾರ್ಥಗಳ ಕ್ರಯವು ಇತರಸ್ಥಳಗಳಗಿಂತ ಅಧಿಕವಾಗಿರುವದೆಂತಲೂ, ವ್ಯಾಪಾರಾಭಿವೃದ್ಧಿಗೆ ಅಲ್ಲಿನ ತರುಣಿಯರೇ ಮುಖ್ಯಾಧಾರ ಭೂತರಾಗಿರುವರೆಂತಲೂ ಕೇಳುತ್ತೇವೆ. ಸ್ತ್ರೀಯರೀರೀತಿ ಇರುವದು ಶ್ಲಾಘ್ಯವಾದದ್ದೆಂತಲೇ ನುಡಿಯಬೇಕು. ಆದರೆ ಬರ್ಮಾ ಮತ್ತು ಅಮೇರಿಕಾದೇಶಗಳಲ್ಲಿ ಸ್ತ್ರೀಯರೆಷ್ಟರ ಮಟ್ಟಿಗೆ ಮಾನಿಗಳಾಗಿರುವರೋ ಅದಂ ವಿವರಿಸಲಿಕ್ಕೆ ನಮಗೆ ಸಾಕಾದ ಆಧಾರಗಳು ದೊರೆಯಲಿಲ್ಲವು.

---

*ಪ್ರಕೃತ ಗವರ್ನರ್ ಜನರಲ್ಲವರಾದ ಲಾರ್ಡ್ ಡ*ಫರಿನ್ಯವರು ಈಚೆಗೆ ಒಂದುದಿನ, ಕಲ್ಕತ್ತೆ ಮ್ಯುನಿಸಿಪಲ್ ಕಮ್ಮಿಷನರ್‌ಗಳು ಸಭೆ ಸೇರಿದ್ದ ಕಾಲದಲ್ಲಿ ಅಲ್ಲಿಗೆಹೋಗಿ ಕುಳಿತುಕೊಂಡು ಆಸಭೆಯಲ್ಲಿ ಜರುಗುತಲಿದ್ದ ವಿಚಾರಗಳನ್ನೆಲ್ಲ ಬಹಳ ಶ್ರದ್ಧೆಯೊಡನೆ ಕೇಳುತಲಿದ್ದು ಕಡೆಗೆ ತಾವು ವಾಪಸ್ ದಯಮಾಡುವಾಗ್ಯೆ ಒಂದುಕಾಗದವನ್ನು ಪ್ರೆಸಿಡೆಂಟರ ಕೈಯೊಳು ಕೊಟ್ಟರು. ಸದರೀ ಕಾಗದದಲ್ಲಿ ಬರೆಯಲ್ಪಟ್ಟದ್ದೇನೆಂದರೆ—"ಈ ಸಭೆ ನಿಮಸ್ಪಾದ ತರುವಾಯ ನೀವು ನಡೆಸಿದ ವಿಚಾರಗಳನ್ನೆಲ್ಲ ನಾನು ಸಾಕ್ಷಾತ್ತಾಗಿ ನೋಡಿದ್ದರಿಂದ ನನಗುಂಟಾದ ಸಂತೋಷವನ್ನು ನನ್ನ ತರಫಿನಲ್ಲಿ ತಾವೇ ಕಮ್ಮಿಷನರ್‌ಗಳಿಗೆ ತಿಳಿಸಬೇಕೆಂದು ಕೋರುವೆನಲ್ಲದೆ, ಬುದ್ಧಿವಂತರಾದ ಇಷ್ಟುಜನ ದೊಡ್ಡ ಮನುಷ್ಯರು ಕಲ್ಕತ್ತಾ ಮ್ಯುನಿಸಿಪಾಲಿಟಿಯ ವಿಷಯದಲ್ಲಿ ಶ್ರದ್ಧೆಯುಳ್ಳವರಾಗಿ ಆಡಳಿತವು ನಡೆಸುವದು ನನಗೆ ಬಹಳ ತೃಪ್ತಿಕರವಾಗಿರುತಿದೆ. ನೀವು ನಡೆಸುವ ವ್ಯವಹಾರಕ್ರಮಗಳಂ ಕಂಡು ನಾನು ಬಹಳ ಆಶ್ಚರ್ಯಪಟ್ಟೆನು. ನಾನೆಲ್ಲಿದ್ದಾಗ್ಯೂ ಮ್ಯುನಿಸಿಪಲ್ ಕೌನ್ಸಿಲರ್‌ಗಳ ಶ್ರಮವನ್ನೂ ಅವರು ಯಾರನಿಮಿತ್ತ ಅಷ್ಟುಶ್ರಮವು ವಹಿಸುತ್ತಾರೆಯೋ ಅವರ ಕ್ಷೇಮಲಾಭಗಳನ್ನೂ ಮರೆಯಲಾರೆ" ನೆಂಬದು. ಮರಳಿ ಯೆರಡುದಿನಗಳ ತರುವಾಯ ವೈಸ್‌ರಾಯಿಯವರು ಮ್ಯುನಿಸಿಪಲ್ *ಪ್ರೆಸಿಡೆಂಟರೊಡನೆ ಕಲ್ಕತ್ತಾ ಪಟ್ಟಣವಾ*ದ್ಯಂತವು ಕಟಾಕ್ಷಿಸಿ ಬಡವರು ವಾಸವಾಗಿರತಕ್ಕ ವೀಧಿಗಳನ್ನೂ ಸಂದುಗಳನ್ನೂ ಅಜಮಾಯಷೀಮಾಡುತ ಅಲ್ಲಿ ಯಲ್ಲಿ ತಮ್ಮದೃಷ್ಟಿಗೆ ಬಿದ್ದ ನ್ಯೂನತೆಗಳನ್ನೆಲ್ಲ ಪ್ರೆಸಿಡೆಂಟರಿಗೆ ತೋರಿಸಿ ಅವುಗಳ ನಿವಾರಣದ ಬಗ್ಗೆ ತಕ್ಕ ಏರ್ಪಾಡುಗಳು ತತ್ಷಣವೇ ಮಾಡಬೇಕೆಂಬದಾಗಿ ಆಜ್ಞಾಪಿಸಿದರು. ಇಂತಾ ಕೆಲಸಗಳನು, ಲೆಫ್ಟಿನೆಂಟ್ ಗವರ್ನರವರೂ ಮ್ಯುನಿಸಿಪಲ್ ಪ್ರೆಸಿಡೆಂಟರೂ ಮಾಡಬೇಕಾಗಿದ್ದಾಗ್ಯೂ, ಗವರ್ನರ್ ಜನರಲ್ಲವರೇ ಸ್ವತಃ ಶ್ರಮವಹಿಸಿ, ನಗರಶೋಧನೆ ಮಾಡಿದ್ದು ಬಹಳ ಶ್ಲಾಘ್ಯವಾಗಿರುತಿದೆ. ಲಾರ್ಡ್ ಕಾನಿಮರಾಯರವರು ಈ ದೇಶಕ್ಕೆ ದಯಮಾಡಿದ ತರುಣದೊಳು ಅವರೂ ಇದೇರೀತಿ ಮಾಡುತಲಿದ್ದರು. ಆದರೆ ಅದರಿಂದ ತೃಣಮಾತ್ರವೂ ಪ್ರಯೋಜನ ವುಂಟಾಗದೆ ಹೋದದಂ ನೋಡಲಾಗಿ ಪಟ್ಟಣ ಪೈಶಾಲ್ಯವು ಅರಿಯುವದಕ್ಕಾಗಿ ಆರೀತಿ ಪ್ರಾರಂಭದೊಳು ಮಾಡುತಲಿದ್ದರೆಂದು ಭಾವಿಸಬೇಕಾಗಿದೆ. ಆಯಾಜಿಲ್ಲಾಗಳಲ್ಲಿರತಕ್ಕ ಪ್ರತಿ ಅಧಿಕಾರಿಯೂ, ಲಾರ್ಡ್ ಡಫರಿನ್ ಯವರಂತೆಯೂ, ಪೂರ್ವದೊಳಲ್ಲಿ ಗವರ್ನರಾಗಿದ್ದು ನಿವೃತ್ತರಾಗಿ ಹೋದ ಸರ್‌ಚಾರ್ಲೆಸ್ ಟ್ರೆವಿಲಿಯನ್ ಯವರಂತೆಯೂ, ನಗರ ಶೋಧನೆ ಮಾಡಲಿಕ್ಕುಪಕ್ರಮಿಸಿ, ಪ್ರಜೆಗಳ ಕ್ಷೇಮಲಾಭಗಳನ್ನು ಮನಃ ಪೂರ್ವಕವಾಗಿ ವಿಚಾರಿಸುತ್ತ, ಅವರ ಕೊರತೆಗಳನ್ನು ಸಹನೆಯೊಡನೆ ಆಲೈಸಿ ಅದಂ ಸಾಧ್ಯವಾದಷ್ಟು ತ್ವರೆಯೊಳು ನಿವಾರಿಸಲಿಕ್ಕೆ ಅಸಾಧ್ಯವಾಗಿದ್ದಾಗ್ಯೂ, ಅವುಗಳಗಾಗಿ ತಾವು ಅನುತಪಸುತೆಯಾದರೂ ವ್ಯಕ್ತಪಡಿಸುತಿದ್ದರೆ, ಕ್ಷುಧಾತುರನಿಗೆ ಅನ್ನದಾನ ಮಾಡಿದಂತೆ, ಆರ್ತರಾದವರಿಗೆ ದುಃಖನಿವಾರಣ ರೂಪವಾದ ಮೇಲನ್ನುಂಟುಮಾಡಿದಂತೆ ಯಾಗುವದೆಂಬದಂ ಅನವರತ ಸ್ಮರಣೆಯೊಳಿಟ್ಟಿರತಕ್ಕದ್ದಾಗಿರುತಿದೆ.

BANGALORE:—Printed and published for the Proprietor at the KARNATIC Press.—1888

ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA.

ಪ್ರತಿ ಸೋಮವಾರ ಪ್ರಾತಃಕಾಲದಲ್ಲಿ ಪ್ರಕಟಿಸಲ್ಪಡುವದು.

Published every Monday Morning.

ಪ್ರಾಮವಿವಿಧಪ್ರವೃತ್ತ್ಯುಪಗಮಾರ್ಹ್ಯ ಕರ್ಣಾಟಕಪ್ರಕಾಶನಪರಾಭಿಧಾ ಪ್ರಥಿತಸಾಹಿತೀಶೋಭಿತಾ । ವ್ಯಗಾಂಕಹಿತವಾಸರೇನಿಹಿತಮುದ್ರಣಾಸಜ್ಜಸ್ತ್ರೈರ್ದ್ವಿಕಾಸುಪರಿಪೋಷಿತಾದಿಶತಿಮಾನಸಂಸುಮುದಂ

Vol. XV.] BANGALORE—MONDAY, APRIL 30, 1888. [No. 17.

ಸಂಪುಟ ೧೫. | ಬೆಂಗಳೂರು:—ಸನ್ ೧೮೮೮ನೇ ಇಸವಿ ಏಪ್ರಿಲ್ ೩೦ನೇ ತಾರೀಖ್ ಸೋಮವಾರ. [ಸಂಚಿಕೆ ೧೭.

ಕರ್ಣಾಟಕ ಪ್ರಕಾಶಿಕಾ

ಪತ್ರಿಕೆಯ ಚಂದಾ ದರಗಳು,
೧೮೮೮ನೇ ಇಸವಿ ಜನವರಿಯಿಂದಾಯಿತು
ಕಡಮೆಮಾಡಲ್ಪಟ್ಟಿರುತ್ತದೆ.

ಈ ಪತ್ರಿಕೆಯ ಚಂದಾದಾರರಸ್ಸ್ಯ ಅನೇಕರ ಅಪೇಕ್ಷೆಯನ್ನು ನೆರವೇರಿಸುವ ಉದ್ದೇಶವೊಸತೆಯೂ, ಪರಿಮಿತವಾದ ಆದಾಯವುಳ್ಳವರಿಗೆಲ್ಲ ಈ ಪತ್ರಿಕೆಯು ಸುಲಭವಾಗಿ ಲಭಿಸುತ್ತಿರಬೇಕೆಂಬ ಅಭಿಪ್ರಾಯವೊದಗಿಯೂ ಇದರ ಚಂದಾದರವನ್ನು ಇದರಡಿಕಂಡಂತೆ ಕಡಮೆಮಾಡಿರುತ್ತೇವೆಂತೆಂದರೆ:—

ಇಂಗ್ಲಿಷ್ ಮತ್ತು ಕನ್ನಡಭಾಗಗಳಿಗೆ.

	ಸ್ಟೇಷನವರಿಗೆ	ಪರಸ್ಥಳದವರಿಗೆ
12 ತಿಂಗಳಿಗೆ	8—0—0	9—0—0
6 „	4—0—0	4—8—0
3 „	2—8—0	2—8—0

ಇಂಗ್ಲಿಷ್ ಅಥವಾ ಕನ್ನಡಭಾಗಗಳಿಗೆ.

	ಸ್ಟೇಷನವರಿಗೆ	ಪರಸ್ಥಳದವರಿಗೆ
12 ತಿಂಗಳಿಗೆ	4—0—0	5—0—0
6 „	2—0—0	2—8—0
3 „	1—4—0	1—8—0

ಷರಾ—ಅಂದರೆ ಪಂಡಿತರು, ದೊಬಳ ಮತ್ತು ತಾಲ್ಲೂಕ್ ಸ್ಕೂಲ್ ಮಾಸ್ಟರುಗಳು, ಕ್ಯಾನವೋಲರು, ಪಟೇಲರು, ವಿದ್ಯಾರ್ಥಿಗಳು, ಇವರಿಗೆಲ್ಲ ಈ ಪತ್ರಿಕೆಯು ಕಡಮೆ ಚಂದಾದರಕ್ಕೆ ಕೊಡಲ್ಪಡುವದು. ಆತ್ಸ್ವರ್ಗದೊಳು ಸುನೀ ಬಾರದ ದರಗಾಸ್ತುಗಳಿಗೆ ರುಕಂ ನಿಗದಿಮಾಡಲ್ಪಡಲಾರದು. ಚಂದಾದಾರರು ಇಂಗ್ಲಿಷ್ ಭಾಗವನ್ನಾಗಲಿ ಕನ್ನಡಭಾಗವನ್ನಾಗಲಿ ಅಥವಾ ಎರಡನ್ನಾಗಲಿ ತೆಗೆದುಕೊಳ್ಳಬಹುದು. ಚಂದಾಹಣವನ್ನು ಮುಂಗಡವಾಗಿ ಮೂರು ತಿಂಗಳಿಗಿಂತ ಕಡೆಯಾಗಿ ಚಂದಾ ಮೊಬಲಗು ಅಂಗೀಕರಿಸಲ್ಪಡಲಾರದು.

ನೋಟುಗಳು ರವಾನಿಸತಕ್ಕವರು ಮೊದಲು ಕಳುಹಿಸುವ ಅರ್ಧನೋಟು ತಲುಪಿದುದಕ್ಕೆ ನಮ್ಮ ಕಾಗದವು ಬಂದ ಕೂಡಲೇ ಬಾಕೀ ಅರ್ಧ ನೋಟನ್ನು ರವಾನಿಸತಕ್ಕದ್ದು. ಲೇಖಕರು ಕಳುಹಿಸತಕ್ಕವರು ರವಾನಿಸುವ ಒಂದಕ್ಕೆ ಒಂದಾಣೆ ಡಿಸ್ಕೌಂಟ್ ಸಹ ಸೇರಿಸಿ ಕಳುಹಿಸತಕ್ಕದ್ದು. ಅರ್ಧಾಣೆಯ ಸ್ಟ್ಯಾಂಪುಗಳುಳ್ಳ ವೀ ಬಿಲ್‌ಗಳನ್ನು ಕಳುಹಿಸಬೇಕು. ಡಿಸ್ಕೌಂಟ್ ಇಲ್ಲದೆ ಕಳುಹಿಸಲ್ಪಡುವ ಮೊಬಲಗಿನಲ್ಲಿ ಅದು ವಜಾಮಾಡಲ್ಪಟ್ಟು ಮಿಕ್ಕ ಮೊಬಲಗು ಲೆಕ್ಕಕ್ಕೆ ದಾಖಲು ಮಾಡಿಕೊಳ್ಳಲ್ಪಡುವದು.

ಪ್ರಕಟನೆಯ ರಿವಾಜ್.

ಮೊದಲನೆಯದಫಾ ಪಂಕ್ತಿ ಒಂದಕ್ಕೆ 0—2—0
ಎರಡನೆಯದಫಾ ಪಂಕ್ತಿ ಒಂದಕ್ಕೆ 0—1—0

ಷರಾ—ಎರಡಾವರ್ತಿಗಿಂತ ಜಾಸ್ತಿಯಾಗಿ ಪ್ರಕಟಿಸತಕ್ಕ ಫಾಯಿದ್ ವರಾಹಿಸಾಗ್ಯ ಪಂಕ್ತಿ ಒಂದಕ್ಕೆ ೧ಆಣೆಯಂತೆಯೇ ಲೆಕ್ಕ ಮಾಡಲ್ಪಡುವದು. ಈ ಪತ್ರಿಕೆಯಲ್ಲಿ ಫಾಯಿದ್ ಮಾಡುವುದಕ್ಕೆ ಪ್ರಕಟನೆಗಳು ಕಳುಹಿಸುವವರು ಅವು ಎಷ್ಟಾವರ್ತಿ ಫಾಯಿದ್ ಮಾಡಲ್ಪಡಬೇಕೋ ಆ ಅಂಕವನ್ನು ಸ್ಪಷ್ಟವಾಗಿ ತಿಳಿಸತಕ್ಕದ್ದು. ಇಲ್ಲದಿದ್ದಕ್ಕೆ ಅವರು ನಮಗೆ ನಿಲ್ಲಿಸುವಂತೆ ಬರೆಯುವವರೆಗೆ ಅವು ಪ್ರಕಟಿಸುತ್ತಿದ್ದು ಹಾಗೆ ಎಷ್ಟಾವರ್ತಿ ಪ್ರಕಟಿಸಲ್ಪಟ್ಟಿದ್ದಾಗ್ಯೂ ಮೇಲೆ ಕಂಡ ದರದಂತೆ ಕಿಮ್ಮತ್ತು ವಸೂಲ್ಮಾಡಲ್ಪಡುವದು. ಪ್ರಕಟನೆಯಬಗ್ಗೆ ಕಳುಹಿಸಲ್ಪಡತಕ್ಕ ಪ್ರಕಟನೆಗಳನ್ನು ಆಯಾ ಸೋಮವಾರದ ಮಧ್ಯಾಹ್ನ ೨ ಘಂಟೆ ಒಳಗಾಗಿ ಕಳುಹಿಸಬೇಕು. ಪ್ರಕಟನೆಯಬಗ್ಗೆ ಈ ಪತ್ರಿಕೆಗೆ ಕಳುಹಿಸಲ್ಪಡತಕ್ಕ ಕಾಗದಗಳಲ್ಲಿ ತಿಳಿಸಲ್ಪಡುವ ಅಭಿಪ್ರಾಯಗಳಿಗೆ ನಾವು ಜವಾಬ್ದಾರರಾಗಲಾರೆವು. ಕ್ರಮವಾಗಿ ರುಜುಮಾಡಿ ದಸ್ತೂರು ಜವಾಬ್ದಾರಿಯನ್ನು ಪ್ರಕಟಿಸಲಾರೆವು. ನಿರಾಕರಿಸಲ್ಪಟ್ಟ ಕಾಗದಗಳು ಮರಳಿ ವಾಪಸ್ ಕಳುಹಿಸಲ್ಪಡಲಾರವು.

"IT RECOMENDS ITSELF"

ALL WHO SUFFER FIND SURE RELIEF

LITTLE'S

ORIENTAL BALM

THE MOST EFFECTUAL MODERN REMEDY FOR PAIN.

ಲಿಟಿಲ್ ಎಂಬುವರಿಂದ ತಯಾರುಮಾಡಲ್ಪಟ್ಟ "ಓರಿಯಂಟಲ್ ಬಾಮ್" ಎಂಬ ಪೂರ್ವದೇಶ ಸಂಬಂಧವಾದ ಅಮೂಲ್ಯ ತೈಲವು ಸ್ವಶಕ್ತಿ ಪ್ರದರ್ಶಕವಾದದ್ದು, ಮತ್ತು ಸಫಲವಾದ ನವೀನ ಪ್ರತಿಕ್ರಿಯಾರೂಪವಾದ ಔಷಧವು. ಇದರಿಂದ ಸಕಲ ವಾತರೋಗಗಳೂ, ವಾತಸಂಬಂಧವಾದ ಸಂಧಿವಾತಗಳೂ ನಿವೃತ್ತಿಯಾಗುವವು. ಮುಖ್ಯವಾಗಿ ಚಿರಕಾಲಿಕ ವಾತ ವಾತರೋಗಗಳು, ಕಾಸ, ಗಂಟಲಿನಲ್ಲಿ ಊತ, ನರದುರ್ಬಲ, ತಲೆನೋವು, ಕಟಿವಾಯು, ಉಳುಕು, ನೋವು, ತಲೆನೋವು, ತಿಮಿರವಾಯು ಮುಂತಾದ ರೋಗಗಳಿಗೆಲ್ಲ ನಿಸ್ಸಂದೇಹವಾಗಿ ಬಹಳ ಪ್ರಯೋಜನವನ್ನುಂಟು ಮಾಡತಕ್ಕದ್ದು. ಈ ತೈಲವನ್ನು ನೋವಿರುವ ಸ್ಥಳಗಳಲ್ಲಿ ಕೆಲವಾವರ್ತಿ ಸವರಿ ಶಾಖವುಂಟಾಗುವಂತೆ ಚೆನ್ನಾಗಿ ತಿಕ್ಕಿದರೆ ಸಹಜವಾದ ಸೆಳೆತ, ನೋವುಗಳನ್ನು ನಿವೃತ್ತಿ ಮಾಡುವಂತಹ ಉತ್ತಮ ತೈಲವಾಗಿರುತ್ತದೆ. ರಕ್ತಸ್ರಾವವೂ ದಲ್ಲಿ ಅರತಲೆನೋವು ಮತ್ತು ಜೀರ್ಣ ಶುದ್ಧಾಗಿ ನಿವೃತ್ತಿಯಾಗುವದು. ಗಂಟಲಿನಲ್ಲುಂಟಾಗುವ ಊತ ಅಥವಾ ಪ್ರಣಗಳಿಗೆ ಈ ತೈಲವು ಅದ್ಭುತವಾದ ಮತ್ತು ಶೀಘ್ರವಾದ ಸಂಪೂರ್ಣ ಗುಣವನ್ನುಂಟುಮಾಡುವದು. ಅದ್ಭುತವಾದ ಈ ಔಷಧವನ್ನು ಉಪಯೋಗಿಸಿದಲ್ಲಿ ಅದರ ಪ್ರಯೋಜನವು ಸ್ವತಃ ವ್ಯಕ್ತವಾಗುವದು. ಈ ತೈಲವು ಶೀತಗಾಳಿ ಮುಂತಾದವುಗಳಿಗೊಳಗಾಗಿ ಸಂಚರಿಸುವಂತಾ ಪ್ರಯಾಣಿಕರು, ಬೇಟೆಯಾಡುವವರು, ದೇಹಾಯಾಸ ಮಾಡುವವರು, ಮುಂತಾದವರಿಗೆಲ್ಲ ಅನುಕೂಲ್ಯವಾದದ್ದು.

ಪರಿಶೀಲಕರ ಅಭಿಪ್ರಾಯವು.

ಐರ್ಲ್ಯಾಂಡ್ ದೇಶದ ಫಾರ್ಮಸ್ಯೂಟಿಕಲ್ ಸೊಸೈಟಿ ಎಂಬ ಔಷಧಶಾಲೆಯ ಪ್ರಸಿದ್ಧರಾಗಿಯೂ, ಡಬ್ಲಿನ್ ಕೆಮಿಕಲ್ ಸೊಸೈಟಿ ಎಂಬ ಪ್ರತ್ಯಕ್ಷಾನುಭವಾದಿಶಾಸ್ತ್ರ ವಿವೇಚಕ ಸಮಾಜದ ಮೆಂಬರಾಗಿಯೂ, "ಮಿನರಲ್ ವಾಟರ್ಸ್ ಆಫ್ ಯೂರಪ್" ಎಂಬ ಗ್ರಂಥಕರ್ತರಾಗಿಯೂ, ರಸಾದಿ ವಿದ್ಯಾ ವಿಷಯಕವಾದ ಅನೇಕ ಲೇಖನಾಧಿಕಾರಿಯಾಗಿಯೂ, ಇರುವ ಪ್ರೊಫೆಸರ್ ಟಿಚ್‌ಬೋರ್ನ್ (C. R. TICHBORNE, L. L. D., F. C. S., M. R. I. A.,) ಎಂಬುವರು ಅಭಿಪ್ರಾಯ ಪಟ್ಟಂತೆ—ಲಿಟಿಲ್‌ರವರ ಓರಿಯಂಟಲ್ ತೈಲವನ್ನು ಜಾಗರೂಕತೆ ಪೂರ್ವಕ ಪರೀಕ್ಷಿಸಿದ್ದರಿಂದ ಇದು ಬಹುನಿಜ ಮಾರಿಕೆಗೆ ಯೋಗ್ಯವಾದ ತೈಲವೆಂದೇ ಹೇಳಬಹುದು. ಇದು ಹೊರಗೆ ಉಪಯೋಗಿಸಲ್ಪಡುವಾಗ ಕುಡಿಯಂಗ ನಿರುಪದ್ರವಕರವಾದದ್ದಾಗಿದ್ದರೂ, ನಿಜವಾಗಿ ಪ್ರಬಲ ರೋಗ ನಿವಾರಕ ಶಾಶಕ್ತಿಯುಳ್ಳದ್ದಾಗಿರುತ್ತದೆ. ಈ ಮಿಶ್ರೌಷಧವು ನರಗಳನ್ನು ಸ್ಥಿಮಿತಕ್ಕೆ ತರತಕ್ಕದ್ದಾಗಿರುವದರಿಂದ ಇದು ಯಾವ ತರದ ರೋಗಗಳಿಗೆ ಉಪಯುಕ್ತವೆಂದು ತಿಳಿಸಲ್ಪಟ್ಟಿದೆಯೋ ಆದರೆ ರೋಗಗಳಲ್ಲಿ ಅದರ ಪ್ರಯೋಜನವು ವ್ಯಕ್ತವಾಗುವದು. ಈ ತೈಲವು ಸಂಪೂರ್ಣ ಜಾಗರೂಕತೆಯೊಡನೆ ತಯಾರ್ಮಾಡಲ್ಪಟ್ಟಿರುತ್ತದೆ.

ಇದರ ಕ್ರಯ—ಸೀಸೆ ಒಂದಕ್ಕೆ ೧ ರೂಪಾಯಿ.

ಇದು ವಿಲ್ಸನ್ ಔಷಧ ಶಾಲೆಯಲ್ಲಿಯೂ, ಮದ್ರಾಸ್ ಸಂಬುದಾಸ್ ಬೀದಿಯಲ್ಲಿ ೨೦ನೇ ನಂಬರ್ ಮನೆಯೊಳಗಿನ ಮ. ಎ. ಸಿ. ಬೆರ್ರಿಮನ್ ಯವರಲ್ಲಿಯೂ, ಈ ಪ್ರಾಂತ್ಯದಲ್ಲಿರುವ ಅವರ ಏಜಂಟುಗಳಾದ ಜೆ. ವೆಸ್ಟ್ ಯವರ ಕಂಪೆನಿಯಲ್ಲಿಯೂ, ಮ. ಕ್ಯಾಪ್ಟನ್ ಅಂಡ್ ಕಂಪೆನಿಯವರಲ್ಲಿಯೂ, ಬಿಗ್ಸ್‌ಯವರ ಕಂಪೆನಿಯಲ್ಲಿಯೂ ದೊರೆಯುವದು.

AGENTS.— Messrs, J. WEST, Chemist, &c., Bangalore.
CAPTAIN & Co. Chemists, Bangalore
BIGGS & Co., Chemists, Bangalore; and of
MAHOMED YOUSOFF AND SONS, The Cash Bazar, Bangalore.
A. C. BERRYMAN & Co.,
20 Sambodoss Street Madras.

NOTICE.

VAIDYASARA SANGRAHA

A TREATISE ON THE PRINCIPLES OF

HINDU MEDICINE

Price including Postage Rs 5 6 0

ವೈದ್ಯಸಾರ ಸಂಗ್ರಹ.

ಈಗ್ರಂಥಾಪೇಕ್ಷೆಯುಳ್ಳವರು ಮೊಬಲಗಿನೊಡನೆ ಈ ಕೆಳಗೆ ರುಜುಮಾಡಿರತಕ್ಕವರ ಹೆಸರಿಗೆ ಬರೆದುಕೊಂಡರೆ ಪುಸ್ತಕ ಕೂಡಲೇ ಕಳುಹಿಸಲ್ಪಡುವದು. ಮೊಬಲಗು ಇಲ್ಲದ ದರಖಾಸ್ತುಗಳಿಗೆ ಸುತರಾಂ ನಿಗಾ ಕೊಡಲ್ಪಡಲಾರದು.

ಇದರಕ್ರಯ ... ...ರೂ|| 5—0—0
ಪ್ಯಾಕಿಂಗ ಮತ್ತು ಅಂಚೆ ಖರ್ಚು, 0—6—0

ಟಿ. ಬಿ. ವೆಂಕಟಾಚಾರ್,
ಆಸ್ಪತ್ರೆರೋಡ ಬೆಂಗಳೂರು.

ವಿಶೇಷ ವರ್ತಮಾನ

ಪ್ರತಿ ಚಿತ್ರಶಾಲೆಯಲ್ಲಿ ಸ್ಥಾಪಿಸಲ್ಪಟ್ಟಿರುವ ತೊಗಟೆ ಶಿಲಾಯಂತ್ರದಲ್ಲಿ, ಹಿಂದೂ ದೇವರುಗಳ, ಚರಿತ್ರೆಗಳ ಮೂಲಕ ದೃಶ್ಯಗಳ ಪಠಿತದ, ಸುಂದರವಾದ ನೇಟಿವ್ ಶೈಲಿಯ ವರ್ಣದ ಬಣ್ಣದ ಚಿತ್ರಗಳು ತಯಾರಾಗುತ್ತಲಿವೆ. ಇತರ ಕೆಲಸಗಾರಿಕೆಯ ಸಾಮಾನನ್ನು ನೋಡಿದಲ್ಲಿ ಕ್ರಯ ಬಹಳ ಅಲ್ಪವಾಗಿದೆ. ಬೇಕಾದವರಿಗೆ ಕ್ರಯಪಟ್ಟಿ ಕಳುಹಿಸಲ್ಪಡುವದು.

ಪೂನಾ ಚಿತ್ರಶಾಲೆ ಪ್ರೆಸ್ ಮ್ಯಾನೇಜರ್

ಹರಾಜ್ ನೋಟೀಸ್.

[ಸ್ಥಿರಸ್ವತ್ತಿನ ವಿಕ್ರಯ.]

ಬೆಂಗಳೂರು "ಪಾರ್ಕ್‌ಪೇಟೆ" ಎಂಬ ಬೀದಿಯಲ್ಲಿರುವ ೧೧ನೇ ನಂಬರ್, ಮೆಸ್ಸರ್ಸ್ "ಹಾರ್ಡಿಂಜ್ ಅಂಡ್ ಕೊ" ಎಂಬುವವರ ಒಳ್ಳೇ ಜಾಗಾದಲ್ಲಿರುವ ಮತ್ತು ಬಹು ವಿಶೇಷವಾದ ೧ ಷಾಪು ಕಟ್ಟಡವು, ೧೮೮೮ನೇ ಇಸವಿ ಮೇ ೧೦ನೇ ತಾರೀಖು ಗುರುವಾರ ಮಧ್ಯಾಹ್ನ ೧೨ ಘಂಟೆಗೆ ಸರಿಯಾಗಿ, ಬಹಿರಂಗವಾದ ಹರಾಜಿನಮೂಲಕ ವಿಕ್ರಯಿಸಲ್ಪಡುವದು.

ಮುಖ್ಯವಾದ ಕಟ್ಟಡದ ಮುಂಭಾಗದ ಅಳತೆ ೧೩ ಅಡಿ. ಆಳ ೫೦ ಅಡಿ. ಮುಖ್ಯವಾದ ಕಟ್ಟಡದ ಆವರಣದಲ್ಲಿ ಇರುವ ಒಳಕಟ್ಟಡಗಳ ತಪಶೀಲು:—

ಉನ್ನತ ಮತ್ತು ವಿಶಾಲವಾದ ಹಾಲ್ ಎಂಬ ನಡುಮನೆ, ೧ ಪಕ್ಕದ ಕೊಠಡಿ ಮತ್ತು ಕಚೇರಿಮನೆ, ಹರಾಜು ಸ್ಥಳವಾಗಿ ಉಪಯೋಗಿಸಿಕೊಳ್ಳುವಂಥಾ, ತಿಂಗಳೊಂದಕ್ಕೆ ಹ್ಯಾರೂ ಪಾಯಿ ಬಾಡಿಗೆ ಬರುವಂಥಾ ೧ ದೊಡ್ಡ ಕೊಠಡಿ, ಇದಕ್ಕೆ ತಕ್ಕದ್ದಾಗಿ ತಿಂಗಳೊಂದಕ್ಕೆ ೩ ರೂಪಾಯಿ ಬಾಡಿಗೆ ಬರುವಂಥಾ ಕೊಠಡಿ ೧, ಈ ಕಟ್ಟಡಕ್ಕೆ ಜೊತೆಯಾಗಿ ಸೇರಿಸಿರುವ ೩ ಕೊಠಡಿಗಳು.

ಈ ಮುಖ್ಯವಾದ ಕಟ್ಟಡದ ಹಿಂದಿರುವ ಸಂಸಾರದ ಮನೆ ವಿವರ:—ಜನಗಳನ್ನು ಸಂದರ್ಶನಾರ್ಥ ಬರಮಾಡಿಕೊಳ್ಳುವ ೨ ದೊಡ್ಡ ಮಂದಿರಗಳು. ಊಟದ ೧ ದೊಡ್ಡ ಮನೆ, ಅಡುಗೆ ಮತ್ತು ಸ್ನಾನದ ಕೊಠಡಿಗಳಸಮೇತ ಶಯ್ಯಾಗೃಹಗಳು, ಇವು ಜೊತೆಯಾಗಿ ಸೇರಿಸಲ್ಪಟ್ಟ ತಿಂಗಳು ೧ಕ್ಕೆ ೩೦ ರೂಪಾಯಿ ಬಾಡಿಗೆ ಬರುವದು.

ತಿಂಗಳು ೧ಕ್ಕೆ ೧೫ ರೂಪಾಯಿ ಬಾಡಿಗೆ ಮೇಲೆ ಕೊಟ್ಟಿರುವ ಪ್ರತ್ಯೇಕ ಬಂಗಲೆ ೧,

೫. ಕುದುರೆಗಳು ಕಟ್ಟುವಷ್ಟು ಮತ್ತು ೨ ಗಾಡಿಗಳು ಬಿಡುವಷ್ಟು ಲಾಯ, ಅಡಿಗೆ ಮತ್ತು ಇತರ ಹೊರಗಿನ ಸ್ವಾಧೀನಗಳು. ಇಷ್ಟು ಕಟ್ಟಡವು ೨೮ ಅಡಿ ಅಗಲ, ಮತ್ತು ೨೪೦ ಅಡಿ ಉದ್ದವಾದ ಕಂಪೌಂಡ್ ಅಂದರೆ ಗೋಡೆಒಳಗಿದೆ.

ಮೊಳ್ಳಿಳಾಸದ ಮೃತಪಟ್ಟ ಮೆಸ್ಸರ್ಸ್ ಹಾರ್ಡಿಂಜ್‌ಯವರ ಮರಣ ಶಾಸನವನ್ನು ನೆರವೇರಿಸುವ ಕಾರ್ಯಕರ್ತರಾದ ಸಿ. ಎ. ಗ್ರೀವ್ಸ್ ಯುಕ್ತ್ಸಪರ್ ಯವರಿಗೆ ಬರೆದುಕೊಂಡು, ಈ ಸ್ಥಿರಸ್ವತ್ತನ್ನು ಕಣ್ಣಾರನೋಡಬಹುದು.

ನೋಟಿಸ.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ:—

ಸನ್ ೧೮೮೮ನೇ ಇಸವಿ ಏಪ್ರಿಲ್ ೧ನೇ ತಾರೀಖ್ ಮೊದಲು ಇದರಡಿ ತಿಳಿಸಲ್ಪಡುವ ಷರತ್ತುಗಳಿಗೆ ಒಳಪಟ್ಟು, ಬೆಂಗಳೂರು ಮಿಲಿಟರಿ ಸ್ಟೇಷನ್ ನಿವಾಸಿಗಳಿಗೆ, ಸರ್ಕಾರೀ ಬಾಬತು ಹೋರುವ ಎತ್ತುಗಳು ಬಾಡಿಗೆಗೆ ಸಿಕ್ಕುವದು.

೧. ಸ್ವಾರಾ ಒಂದು ಜೊತೆ ೫ ಎತ್ತುಗಳನ್ನು ಒಬ್ಬ ಎತ್ತಿನವನನ್ನೂ ಪಡೆಯಬೇಕು.

೨. ಹಾಗೆ ಪಡಕೊಳ್ಳುವ ಎತ್ತುಗಳನ್ನು ಪ್ರತಿ ತಿಂಗಳ ಆಖೈರ್ ತಾರೀಖ್‌ನಲ್ಲಿ ಅಜಮಾಯಿಷೀ ಬರ್ನ್ ಟ್ರಾನ್ಸ್‌ಪೋರ್ಟ್ ಆಫೀಸಿಗೆ ಕಳುಹಿಸಬೇಕು. ತಿಂಗಳ ಕಡೇದಿನ ಆದಿತ್ಯವಾರ ವಾಗುವ ಪಕ್ಷದಲ್ಲಿ ಮಾರನೇ ತಿಂಗಳ ಗುರ್ರೇ ತಾರೀಖ್‌ನಲ್ಲಿ ಅಜಮಾಯಿಷೀ ಮಾಡಲ್ಪಡುವದು. ಪ್ರತಿಯೊಂದು ಹೇರುವ ಎತ್ತಿಗೂ ಮಾಹೇಯಾನಾ ೭ ರೂಪಾಯಿಗಳು ಅಥವಾ ಜೊತೆಗೆ ೧೪ ರೂಪಾಯಿಗಳು.

೩. ಬಾಡಿಗೇ ಹಣ ಮಾರನೇ ತಿಂಗಳ ೫ನೇ ತಾರೀಖಿನಲ್ಲಿ ಇದರಡಿ ರುಜು ಮಾಡಿರುವವರಿಗೆ ಈ ಆಫೀಸಿನಿಂದ ಬಿಲ್ಲು ಬಂದ ಕೂಡಲೇ ಪಾವತಿ ಮಾಡತಕ್ಕದ್ದು.

೫. ಬಾಡಿಗೆಗೆ ಕೊಡಲ್ಪಡುವ ಎತ್ತುಗಳನ್ನೆಲ್ಲ ಅಥವಾ ಅವುಗಳ ಪೈಕಿ ಯಾವದನ್ನಾದರೂ ಗವರ್ನಮೆಂಟ ಕೆಲಸಕ್ಕೆ ಬೇಕಾದಾಗ ವಾಪಸ ತರಿಸಿಕೊಳ್ಳುವದಕ್ಕೆ ಇದರಡಿ ರುಜು ಮಾಡಿರುವವರು ಸ್ವಾತಂತ್ರ್ಯವುಳ್ಳವರಾಗಿರುತ್ತಾರೆ.

ಎಕ್ಸಿಕ್ಯುಟಿವ್ ಕಮ್ಮಿಸರಿಯಟ್ ಆಫಿಸ್,
ಟ್ರಾನ್ಸ್‌ಪೋರ್ಟ ಸರ್ಕಲ್,
ಬೆಂಗಳೂರು, ೭—೪—೮೮. — E. A. Bruce, Colonel.

ಪ್ರಕಟನೆ.

ಪುಣೆ ಚಿತ್ರಶಾಲೆಯಲ್ಲಿ ತಯಾರಾಗುವ ಪಟಗಳು ಬೆಂಗಳೂರು ಮಾಮೂಲಪೇಟೆ ಡೋರ ನಂ|| ೫೧ನೇ ಮನೆಯಲ್ಲಿ ಕ್ರಯಕ್ಕೆ ಸಿಕ್ಕುತವೆ. ಇಷ್ಟವುಳ್ಳವರು ತೆಗದುಕೊಳ್ಳಬಹುದು.

ನಾಡಿಗರ ಲಿಂಗಪ್ಪ.

ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA.

MONDAY, APRIL 30, 1888.

೧೮೮೮ನೇ ಏಪ್ರಿಲ್ ೩೦ನೇ ತಾ|| ಸೋಮವಾರ.

RESULTS OF HINDU FEMALE INDEPENDENCE.

ಹಿಂದೂ ಸ್ತ್ರೀವಿದ್ಯಾಭ್ಯಾಸ ವಿಷಯದಲ್ಲಿ ಈಚೆಗೆ ನಮ್ಮವರು ಪಡೆಯುತಲಿರುವ ಉತ್ತಮ ಫಲವನ್ನೂ, ಅದರಿಂದ ಅವರು ಮಾಡತಕ್ಕ ಪ್ರಯತ್ನಗಳನ್ನೂ, ತನ್ಮೂಲಕ ಹೆಂಗಸರು ವಿದ್ಯಾಭ್ಯಾಸ ಜನ್ಯವಾದ ಕೆಲವು ಪ್ರಯೋಜನಗಳಂ ಪಡೆದು ಸ್ವಚ್ಛಂದ ವೃತ್ತಿಯುಳ್ಳವರಾಗುತ ಬರುವದನ್ನೂ, ಕುಟುಂಬಿನಿಗೆ ಗೌರವಾಸ್ಪದವಾದ ಲಜ್ಜೆಯೆಂಬದು ಅವರನ್ನಗಲಿ ಹೋಗುವದರಿಂದ ಕದಾಚಿತ್ ಉಂಟಾಗತಕ್ಕ ಪ್ರಮಾದಗಳನ್ನೂ ಆಗಿಂದಾಗ್ಯೆ ತಕ್ಕ ನಿದರ್ಶನಗಳೊಡನೆ ಈ ಪತ್ರಿಕಾಮೂಲಕ ತಿಳಿಸಿರುತ್ತೇವೆಯಾಗಿ ಅದರಿಂದ ಅಭಿಜ್ಞರ ಹೃದಯವು ವಿಷಯಸ್ವರೂಪಾನುಗುಣವಾದ ಖೇದವನ್ನನುಭವಿಸದೆ ಹೋಗಲಾರದೆಂದೆಣಿಸುತ್ತೇವೆ. ಸ್ತ್ರೀಸ್ವಾತಂತ್ರ್ಯಕ್ಕೂ, ಅವರ ವಿದ್ಯಾಪ್ರಯುಕ್ತವಾದ ಜ್ಞಾನವಿಕಾಸಕ್ಕೂ, ಫಲರೂಪವಾದ ಮತ್ತೊಂದು ವಿಷಯವು ಈಚೆಗೆ ನಮ್ಮ ತಿಳುವಳಿಕೆಗೆ ಬಂದದರಿಂದ ಅದಂ ನಾವಿಲ್ಲಿ ನಿರ್ವೇದದೊಡನೆ ತಿಳಿಯಪಡಿಸುವೆವೇನಂದರೆ:—ಒಂದುತಾಲ್ಲೂಕು ಅಧಿಕಾರಿಯ ಮನೆಯಲ್ಲಿ ಈಚೆಗೆ ನಡೆದ ಒಂದು ಶುಭಕಾರ್ಯಕ್ಕಾಗಿ, ಸದರೀ ದೊಡ್ಡಮನುಷ್ಯರ ಕುಮಾರ್ತೆಯು ಅಜ್ಞಾನಿಯಾದ ತನ್ನ ಮಗನೊಡನೆ ಇತರ ಜನಸಹಾಯವನ್ನಪೇಕ್ಷಿಸದೆ, ಕ್ಲೋಸ್ ಪೇಟೆಯಿಂದ ರೆಯಿಲ್ ಗಾಡಿಯಲ್ಲಿ ಪ್ರಯಾಣಮಾಡಿದಳು. ಈಕೆಯು ೩ನೇ ಕ್ಲಾಸ ಟಿಕ್ಕೆಟ ತಗದುಕೊಂಡು ಕ್ರಮಪ್ರಕಾರ ತನ್ನ ಮಗನೊಡನೆ ಗಾಡಿಯಲ್ಲಿ ಕುಳಿತು ಕೊಂಡಳು. ಅಷ್ಟರಲ್ಲಿಯೇ ಆ ದಿನದ ಸರ್ವೀಸ್ ನೌಕರಿಯಲ್ಲಿ ಡ್ರೈವರನೊಡನೆ ಬರುತಲಿದ್ದ ಮುಸಲ್ಮಾನ ಅಂಡರಗಾರ್ಡ ಒಬ್ಬನು ಬಂದು ಪುರುಷಸಹಾಯ ರಹಿತಳಾಗಿದ್ದ ಆಕೆಯಂ ಕಂಡು ಈ ಗಾಡಿಯಲ್ಲಿ ಸ್ಥಳವಿಲ್ಲದ್ದರಿಂದಲೂ ಇನ್ನೂ ಬೇರೆಜನ ಬರುವವರಾಗಿರುವದರಿಂದಲೂ, ಸಮೀಪದಲ್ಲಿರುವ ಎರಡನೇಕ್ಲಾಸ್ ಗಾಡಿಯು ಖಾಲಿಯಾಗಿರುವದರಿಂದ ಅದರಲ್ಲಿಹೋಗಿ ಧಾರಾಳವಾಗಿ ಕುಳಿತುಕೊಳ್ಳಬಹುದೆಂತಲೂ ಹೇಳಿದನು. ಸದರೀ ಹೆಂಗಸು ಅದಂ ನಿಜವೆಂದೆಣಿಸಿ ಮೊದಲು ತಾನು ಕುಳಿತಿದ್ದ ಗಾಡಿಯಿಂದಿಳಿದು ಎರಡನೇಗಾಡಿಯಲ್ಲಿ ಹೋಗಿ ಕುಳಿತುಕೊಂಡಳು. ಇಷ್ಟರಲ್ಲಿ ಗಾಡಿಯು ಹೊರಡಲು ಮೇಲೆಕಂಡ ಅಂಡರ್ ಗಾರ್ಡನ ದುರಾಲೋಚನೆಯು ಹೊರಪಡತಕ್ಕ ಕಾಲವು ಪ್ರಾಪ್ತವಾಯಿತು. ಗಾಡಿ ಸ್ವಲ್ಪದೂರ ಹೋದಮೇಲೆ ಅವನು, ತಾನಿದ್ದಗಾಡಿಯಿಂದಿಳಿದು ಫುಟ್ ಬೋರ್ಡಿನ ಮೇಲೆ ನಡೆದುಬಂದು ಆಕೆ ಕುಳಿತಿದ್ದ ಎರಡನೇ ಕ್ಲಾಸ್ ಗಾಡಿಯಲ್ಲಿ ಹತ್ತಿ ತಾನೂ ಆಕೆಯ ಸಮವಾಗಿ ಕುಳಿತುಕೊಂಡು ಆಕೆಯ ಕ್ಷೇಮವಂ ಬಹಳ ಸನಿಕರದೊಡನೆ ಕೇಳುವನಂತೆ ನಟಿಸುತ ಅಸಂಬದ್ಧಗಳಾದ ಪ್ರಸ್ತಾಪಗಳಿಂದ ಆಕೆಯಂ ಮಾತನಾಡಿಸುತ ಕಡೆಗೆತನ್ನ ಮನೋಗತ ಭಾವವನ್ನು ಹೊರಪಡಿಸಿ ಜುಲುಂ ಮಾಡಲಿಕ್ಕೆ ಪ್ರಯತ್ನಪಟ್ಟನು. ಆ ಗಾಡಿಯಲ್ಲಿ ಅನ್ಯಾರ್ಯಾರೂ ಇಲ್ಲದಿದ್ದದರಿಂದಲೂ ಗಾಡಿಹೋಗುತಲಿದ್ದದರಿಂದಲೂ ಆಕೆಯ ರೋದನ ಮುಂತಾದವು ಒಂದೂ ಇತರರಿಗೆ ಕೇಳಿಸಲಿಕ್ಕೆ ಅವಕಾಶವಿಲ್ಲದೆಹೋಯಿತು. ಆದಾಗ್ಯೂ ಆ ತರುಣಿಯ ಮನೋದಾರ್ಢ್ಯವು ಪ್ರಬಲವಾಗಿದ್ದದರಿಂದ ಮುಸಲ್ಮಾನನ ದ್ರೋಹಚಿಂತೆಯು ಕಾರ್ಯಕಾರಿಯಾಗಲಿಲ್ಲವಂತೆ. ಹೀಗಿರುವಲ್ಲಿಗಾಡಿಯು ಎರಡನೇಸ್ಟೇಷನಿಗೆ ಬಂದು ಸೇರಲು ಆಕೆಯು ತನ್ನವೃತ್ತಾಂತವನ್ನೆಲ್ಲ ಸ್ಟೇಷನ್ ಮ್ಯಾಸ್ಟರಿಗೂ ಚೀಫ್ ಗಾರ್ಡಿಗೂ ತಿಳಿಯಪಡಿಸಿದಳೆಂತಲೂ ಬಳಿಕ ತಕ್ಕಬಂದೋಬಸ್ತಿನೊಡನೆ ಈ ಊರಿಗೆ ಬಂದು ಮುಂದಕ್ಕೆ ಪ್ರಯಾಣವಾದಳೆಂತಲೂ ಕೇಳಲಾದೆವು. ಸದರೀ ಅಂತರಗಾರ್ಡಿಗೆ ಬರತರಫೆ ಮತ್ತು ೫೦ ರೂಪಾಯಿಗಳ ಜುಲ್ಮಾನೆ ಸಹ ವಿಧಿಸಲ್ಪಟ್ಟಂತೆ ತಿಳಿಯಬರುತಿದೆ. ಪ್ರಕೃತ ಸಂದರ್ಭದಲ್ಲಿ ಸ್ತ್ರೀಪ್ರಯುಕ್ತವಾದ ದೋಷವೊಂದೂ ಇಲ್ಲವು. ದುರಾತ್ಮನಾದ ರೈಲ್ವೇ ನೌಕರನೊಬ್ಬನು ಮಾಡಿದ ದೌಷ್ಟ್ಯಕ್ಕಾಗಿ ಅವನನ್ನು ನಿಂದಿಸಬೇಕಾದದ್ದು ನ್ಯಾಯವೆಂದು ಅನೇಕರು ವಾದಿಸಬಹುದು. ಅದಂ ನಾವೂ ಅಂಗೀಕರಿಸುವೆವು. ಪ್ರಯಾಣಸ್ಥರ ವಿಷಯದಲ್ಲಿ ರೆಯಿಲ್ವೇ ನೌಕರರು ನಡೆಸತಕ್ಕ ಅಕ್ರಮಗಳನ್ನೂ ಅವರ ದಾಂಧಳೆಗಳಿಂದ ಪ್ರಯಾಣಸ್ಥರಿಗುಂಟಾಗುವ ಪ್ರಾಣಮಾನಗಳ ಭೀತಿಯನ್ನೂ ಕುರಿತು ವಿಶೇಷತಃ ಮುಂದೆ ವಿಚಾರಮಾಡುವೆವು. ಏತನ್ಮಧ್ಯೆ ಮೇಲೆ ಕಂಡ ಹೆಂಗಸು, ತಾನು ಪೂರ್ಣವಯಸ್ಕಳಾಗಿಯೂ, ಒಬ್ಬ ಅಧಿಕಾರಿಯ ಕುಮಾರ್ತೆಯಾಗಿಯೂ, ಸಹಾಯವಿಲ್ಲದೆ ಹೊರಗೆ ಹೊರಡುವದರಿಂದ ಪದೆಪದೆ ಉಂಟಾಗತಕ್ಕ ಅನರ್ಥಗಳನ್ನು ಕೇಳಿ ನೋಡಿ, ತಿಳಿದಿರತಕ್ಕವಳಾಗಿಯೂ ಇದ್ದರೂ ತನ್ನ ತಂದೆಯ ಅಧಿಕಾರ ಪ್ರಯುಕ್ತವಾದ ಬಲವು ತಾನು ಹೋದ ಕಡೆಗಳಲ್ಲೆಲ್ಲ ದೇಹ ರಕ್ಷಕವಾಗಿರುವದೆಂದು ಭಾವಿಸುವಷ್ಟು ಸಾಹಸವುಳ್ಳವಳಾದದಕ್ಕೋಸ್ಕರ ನಾವು ಬಹಳ ಚಿಂತಿಸುವೆವು. ಹೀಗೆಯೇ ಕೆಲವು ವರುಷಗಳ ಹಿಂದೆ ಕೋಲಾರ ಡಿಸ್ಟ್ರಿಕ್ಟಿಗೆ ಸೇರಿದ ಒಂದುತಾಲ್ಲೂಕಿನ ಅಮಲ್ದಾರರ ಭಾರ್ಯೆ, ಮಗಳು ಮುಂತಾದವರು ಪಾರಮಾರ್ಥಿಕ ಜ್ಞಾನದೊಡನೆ ತಕ್ಕ ಸಹಾಯವಿಲ್ಲದೆ ಪುರಾಣಶ್ರವಣಕ್ಕೆ ಹೋಗಿದ್ದಕಾಲದಲ್ಲಿ ತತ್ಕ್ಷಣವೇ ಅವರಿಗುಂಟಾದ ಪುರಾಣ ಫಲವು ಪ್ರಸಿದ್ಧವಾದದ್ದಾಗಿದೆಯಷ್ಟೆ. ಈಗ್ಯೆ ಒಂದುವಾರದಿಂದ ಈ ಊರಲ್ಲಿರತಕ್ಕ ವಿಶಿಷ್ಟಜಾತಿ ಹೆಂಗಸರನ್ನು ರಾತ್ರಿಕಾಲದಲ್ಲಿ ತಮ್ಮತಮ್ಮ ಮನೆಗಳಲ್ಲಿ ನಿಲ್ಲಗೊಳಿಸಿದಂತಾ ಅಚುಂಬಿತ ಪ್ರಕರಣವೊಂದು ತಲೆದೋರಿ ಅದು ನಿನ್ನೆಯೊಡನೆ ಪೂರೈಸಿದ ಬಗ್ಯೆ ನಾವು ಬಹಳ ಸಂತೋಷಿಸುವೆವು. ಈ ಏಳೆಂಟುದಿನಗಳಕಾಲವಾಗಿ ರಾತ್ರಿವೇಳೆಯಲ್ಲಿ ದೊಡ್ಡವರು ಚಿಕ್ಕವರು ಉಪಪನ್ನರನುಪಪನ್ನರು, ಎಂಬ ತಾರತಮ್ಯವಿಲ್ಲದೆಯೂ ಒಬ್ಬ ಪುರುಷ ಸಹಾಯವನ್ನಾದರೂ ಅಪೇಕ್ಷಿಸದೆಯೂ ತಂಡೋಪತಂಡವಾಗಿ ಅವೇಳೆಗಳಲ್ಲಿ ಹೋಗಿ ಬರುತಲಿದ್ದ ಸ್ತ್ರೀಸಮೂಹದ ಧೈರ್ಯ ಸಾಹಸಗಳು ನಮಗೆ ಮಿತಿಯಿಲ್ಲದ ಆಶ್ಚರ್ಯವೂ ಅವರಂ ನಿರ್ಬಂಧಿಸಲಿಕ್ಕೆ ಅಸಮರ್ಥರಾದ ಅವರ ಪುರುಷರ ಷಂಡತ್ವಕ್ಕಾಗಿ ದುಃಖವೂ, ಹಿಂದೂ ಕುಟುಂಬಿನಿಗಳಗುಂಟಾದ ನಿರ್ಲಜ್ಜಾಪ್ರಯುಕ್ತವಾದ ಧೈರ್ಯಸ್ವಾತಂತ್ರ್ಯಗಳಗಾಗಿ ಒಂದುಕಡೆ ಲಜ್ಜೆಯೂ ನಮ್ಮನ್ನು ಬಹಳವಾಗಿ ಬಾಧಿಸುತಲಿವೆ. ಈ ಹೆಂಗಸರಿಗೆ ರಾತ್ರಿವೇಳೆಯಲ್ಲಿ ಉಂಟಾಗುವ ಜ್ಞಾನ ಭಕ್ತಿ ವೈರಾಗ್ಯಗಳು ಮನೆ ಮಕ್ಕಳ ಸಹ ಉಪೇಕ್ಷಿಸುವಷ್ಟು ಮಹತ್ವವುಳ್ಳದ್ದಾಗಿರಬಹುದಾದರೂ, ಅವರ ಪುರುಷರಿಗವು ಸಂತೋಷಕಾರಿಯಾಗಿರುವದೆಂಬ ಅಂಶ ಮಾತ್ರ ಸಂದೇಹಿಸತಕ್ಕದ್ದಾಗಿದೆ. ಮುಖ್ಯವಾಗಿ ನಿದ್ದೆಯಿಂದ ವೈಲಕ್ಷಣ್ಯವೂ ವೈಲಕ್ಷಣ್ಯದಿಂದಸ್ವಾತಂತ್ರ್ಯವೂ, ಸ್ವಾತಂತ್ರ್ಯದಿಂದ ನಿರ್ಲಜ್ಜೆಯೂ, ನಿರ್ಲಜ್ಜೆಯಿಂದ ಗುಣದೋಷ ಅವಿಮರ್ಶಕತೆಯೂ ಉಂಟಾಗುವದು ಸಹಜವಾದದರಿಂದ ನಮ್ಮವರು ಈ ಗುಣಗಳನ್ನೇ ತಮ್ಮ ಹೆಂಗಸರಿಗೆ ಕಲ್ಪಿಸಿ ನೋಡಿ ಸಂತೋಷಿಸಬೇಕೆಂಬ ಸುಕಲ್ಪೋತ್ಸಾಹಗಳುಳ್ಳವರಾಗಿರುವಾಗ್ಯೆ ಇಂತಾಪ್ರಮಾದಗಳಗಾಗಿ ನಾವು ಚಿಂತಿಸಿ ಯೇನೂ ಪ್ರಯೋಜನವಿಲ್ಲವು.

Occasional Notes.
ನೈಮಿತ್ತಿಕ ವಿಷಯನ್ಯಾಸ.

Birth of a son.—ಈಚೆಗೆ ಪಾಲಿಟಾನಾಸಂಸ್ಥಾನದ ಠಾಕೂರ ಸಾಹೆಬರವರ ಜ್ಯೇಷ್ಠ ಭಾರ್ಯೆಯವರಿಗೆ ಪುತ್ರೋತ್ಸವವಾಗಲು ಅದರ ಗೌರವಾರ್ಥ ಕೆಲವರು ಖೈದೀರು ಖುಲಾಸೇ ಮಾಡಲ್ಪಟ್ಟರು.

Installation.—ಈ ತಿಂಗಳ ೧೮ನೇ ತಾರೀಖಿನಲ್ಲಿ ರಾಂಪುರದ ನವಾಬರವರಿಗೆ ಪಟ್ಟಾಭಿಷೇಕೋತ್ಸವ ನಡೆಯಿತು. ವಾಯವ್ಯದೇಶದ ಲೆಫ್ಟಿನೆಂಟ ಗವರ್ನರವರು ಆ ಕಾಲದಲ್ಲಿ ಹಾಜರಿದ್ದು ಸದರೀ ಉತ್ಸವವನ್ನು ನೆರವೇರಿಸಿದರು.

Lord Dufferin's stay in India.—ದೈವಿಕವಾದ ಕಾರ್ಯಗಳ್ಯಾವದೂ ಪ್ರಾಪ್ತವಾಗದಿರುವ ಪಕ್ಷಕ್ಕೆ ಲಾರ್ಡ ಡಫರಿನ ಸಾಹೆಬರವರು ಬರುವ ಡಿಸೆಂಬರ ವರಿವಿಗೆ ಇಂಡ್ಯದೇಶದಲ್ಲಿರುವರೆಂದು ಪಯೋನಿಯರ ಪತ್ರಿಕೆ ಹೇಳುತಿದೆ.

The Calcutta High court.—ಕಲ್ಕತ್ತಾ ಹೈಕೋರ್ಟಿಗೆ ಕಾಯಮಾಗಿ ಹನ್ನೆರಡು ಜಡ್ಜಿಗಳು ಇರಬೇಕಾಗಿದೆಯೆಂದು ಇಂಡ್ಯ ಗವರ್ನಮೆಂಟಿನವರು ಮಾಡಿದ ಶಿಫಾರಸ್ಸನ್ನು ಸ್ಟೇಟ ಸೆಕ್ರೆಟರಿಯವರು ಮಂಜೂರ್ಮಾಡಿರುತ್ತಾರೆ.

A report.—ಕಾಶ್ಮೀರ ದೇಶದ ಮಹಾರಾಜರವರು ತಮ್ಮ ದಿವಾನರಾಗಿದ್ದ ಲಚ್ಛಮಣದಾಸ ಎಂಬವರಮೇಲೆ ತರಲ್ಪಟ್ಟ ಬಹುವಿಧ ದೋಷಾರೋಪಣೆಗಳ ವಿಚಾರಣೆಯ ಬಗ್ಯೆ ಒಂದು ಕಮಿಟಿಯನ್ನು ಯೇರ್ಪಾಡು ಮಾಡಿರುವಂತೆ ಒಂದು ಪ್ರವಾದ ಪ್ರಂಟಾಗಿರುತಿದೆ.

The Empire of Germany.— ಜೆರ್ಮನೀ ಸಂಸ್ಥಾನವು ೬೬ ಚಿಕ್ಕಪಟ್ಟಿ ಸಂಸ್ಥಾನಗಳುಸೇರಿ ೩,೮೦,೦೦,೦೦೦ ಪ್ರಜೆಗಳುಳ್ಳದ್ದಾಗಿಯೂ, ಅರಿವರಪೈಕಿ ೩,೪೦,೦೦೦ ಮಂದಿ ಆಯುಧಗಳಂಹಿಡಿದು ಯುದ್ಧಕ್ಕೆ ಹೋಗಲು ಲಾಯಖಾಗಿವಾರೆಂತಲೂ ಒಂದಾನೊಂದುಪತ್ರಿಕೆ ಹೇಳುತಿದೆ.

A joyful news.—ಮುಂದೆ ಬ್ರಿಟಿಷ ಪಾರ್ಲಿಮೆಂಟ ಮೆಂಬರಗಳ ಚುನಾವಣೆಯಾಗುವ ಸಂದರ್ಭದಲ್ಲಿ ಮಿ. ದಾದಾಭಾಯ್‌ನೌರೋಜಿ ಎಂಬವರು ಸೆಂಟ್ರಲ್ ಫಿನ್ಸ್‌ಬರಿಎಂಬ ತುಕಡಿಯಲ್ಲಿನ ಲಿಬರಲ್ ಪಕ್ಷಿಯವರ ತರಫೆ ಪ್ರತಿನಿಧಿಯಾಗಿ ಚುನಾಯಿಸಲ್ಪಡಬಹುದೆಂದು ಒಂದಾನೊಂದುಪತ್ರಿಕೆ ಹೇಳುತಿದೆ.

The Indian sea and land customs revenue.—ಸನ್ ೧೮೮೬–೮೮ನೇ ಸರ್ಕಾರಸಾಲಿಗೆ ಇಂಡ್ಯದೇಶದಲ್ಲಿ ಜಮೀನ್‌ಮೇಲೂ ಸಮುದ್ರಮಾರ್ಗವಾಗಿಯೂ ಆಮದ ರಫ್ತಾಗತಕ್ಕ ಜಿನಿಸಿಗಳಮೇಲೆ ಶೀರ್ವೆಯಬಗ್ಯೆ, ನಮ್ಮಕೆ ಹುಟ್ಟುವಳಿಅಲ್ಲದೆ, ೧,೭೮,೯೩,೦೦೦ ರೂಪಾಯಿಗಳು ಹುಟ್ಟುವಳಿಯಾಗಿರುತಿದೆ.

A liberal subscription.—ಇಂಡ್ಯ ದೇಶದ ವೈಸರಾಯ್ ಯವರಾದ ಲಾರ್ಡ ಡಫರಿನ್ನಯವರ ಜ್ಞಾಪಕಾರ್ಥ ಅವರುಡೆ ಒಂದು ಪ್ರತಿಮೆಯನ್ನೂ ಚಿತ್ರಪಟವನ್ನೂ ಕಲ್ಕತ್ತೆಯಲ್ಲಿ ಸ್ಥಾಪಿಸುವದಕ್ಕಾಗಿ ಯೇರ್ಪಡಿಸಲ್ಪಟ್ಟಿರುವ ಫಂಡಿಗೆ ಕಪುರ್ತಲಾ ಮಹಾರಾಜರವರು ಒಂದು ಸಾವಿರ ರೂಪಾಯಿಗಳು ಚಂದಾ ಮಾಡಿರುತ್ತಾರೆ.

Amendment of a law.—ಈಸಂವತ್ಸರ ವೈಸರಾಯ್‌ಯವರು ಸಿಂಲಾದಿನಲ್ಲಿರುವ ಕಾಲದೊಳು, ಧರ್ಮಸ್ಥಾಪನೆಗಳನ್ನು ಕುರಿತ ಕಾನೂನನ್ನು ವಿಮರ್ಶೆ ಮಾಡಿ ಒಂದು ಮುಸವಿದಾ ಆಕ್ಟು ನ್ಯಾಯವಿಧಾಯಕ ಸಭೆಯ ವಿಚಾರಕ್ಕೆ ತರಲ್ಪಡಬಹುದಾಗಿದೆ. ಈ ಪ್ರಯತ್ನದ ದೆಸೆಯಿಂದ ದೇವಸ್ಥಾನಗಳು ಮೊದಲಾದ ಧರ್ಮಸ್ಥಾಪನೆಗಳ ಟ್ರಸ್ಟಿಗಳ, ಅಂದರೆ ವಿಚಾರಣಾಧಿಕಾರಿಗಳ ಅಧಿಕಾರಗೌರವಗಳು ಬಲವಾಗುವವೆಂದು ಕಾಣುತಿದೆ.

Liberality of a Native Prince.—ಅಲ್ವಾರಸಂಸ್ಥಾನದ ಮಹಾರಾಜರವರು, ಮಹಾಭಾರತವನ್ನು ಇಂಗ್ಲಿಷ್ ತರ್ಜುಮೆ ಮಾಡುವ ಮೆ|| ಪ್ರತಾಪಚಂದ್ರರಾಯ್ ಎಂಬವರಿಗೆ ಸದರೀ ಪ್ರಬಲ ಕಾರ್ಯಕ್ಕೆ ಸಹಾಯಾರ್ಥವಾಗಿ ಮರಳಿ ೫೦೦ ರೂಪಾಯಿಗಳು ಕೊಟ್ಟಿರುತ್ತಾರೆ. ಸದರೀಯವರು ಎರಡು ವರುಷಗಳಹಿಂದೆ ಕೊಟ್ಟ ೩೦೦ ರೂಪಾಯಿಗಳು ಸೇರಿ ಒಟ್ಟು ೮೦೦ರೂಪಾಯಿಗಳು ಕೊಟ್ಟಂತಾಯಿತು.

The greatest loser by the recent tornado at Dacca.—ಈಚೆಗೆ ಬಂಗಾಳೇದೇಶಕ್ಕೆ ಸೇರಿದ ಢಾಕಾಪ್ರಾಂತ್ಯದಲ್ಲಿ ಹೊಡೆದ ತುಫಾನಿನದೆಸೆಯಿಂದ ನವಾಬ ಅಬ್ದುಲಗನಿಯೆಂಬವರಿಗೆ ಸುಮಾರು ಹದಿನೈದುಲಕ್ಷ ರೂಪಾಯಿಗಳುನಷ್ಟವಾದವು. ಅವರ ಅರಮನೆ ನಾಶವಾಯಿತು. ಅವರ ಜಹಜುಗಳೆಲ್ಲವು ಒಡೆದುಹೋದವು. ಮುಖ್ಯವಾಗಿ ಸದರೀ ತುಫಾನಿನದೆಸೆಯಿಂದ ಸದರೀಯವರು ಪ್ರಬಲನಷ್ಟಕ್ಕೆ ಗುರಿಯಾದರು, ಎಂದು ವಗ್ಯೆರೆ ಒಂದಾನೊಂದು ಬಂಗಾಳೇಪತ್ರಿಕೆ ಹೇಳುತಿದೆ.

Resignation.—ಇಂದೂರ್ ಸಂಸ್ಥಾನದ ದಿವಾನರಾದ ದಿವಾನ್ ಬಹದೂರ ರಘುನಾಥ ರಾಯರವರು ಆಚೇವಾರದಲ್ಲಿ ತಮ್ಮ ಕೆಲಸಕ್ಕೆ ರಾಜೀನಾಮೆ ಕೊಟ್ಟು ಅಲ್ಲಿಂದ ಮದರಾಸಿಗೆ ಪ್ರಯಾಣವಾಗುವವರಾಗಿದ್ದಾರೆಂದು ಮದರಾಸ್ ಮೈಲ್ ಪತ್ರಿಕೆಯ ಮೂಲಕ ತಿಳಿಯಲಾದೆವು. ಸದರೀ ರಾಯರವರು ಯೆರಡು ವರ್ಷಗಳ ಕಾಲ ಸದರೀ ಸಂಸ್ಥಾನದ ದಿವಾನಗಿರಿಗೆ ಒಪ್ಪಿಕೊಂಡುಹೋದದ್ದಾಗಿ ಆಕಾಲವನ್ನೆ ಪ್ರಶಸ್ತಿವಿಸಲ್ಪಡುತಲಿದ್ದಾಗ್ಯೂ ಅಂತಾ ವಾಯಿದೆಯೊಳಗೆ ಅವರು ತಮ್ಮ ಕೆಲಸಕ್ಕೆ ರಾಜೀನಾಮೆ ಕೊಡುವದಕ್ಕೆ ಯಾವದೊ ಒಂದು ಪ್ರಬಲ ಕಾರಣವಿರಬೇಕೆಂದು ತೋರುತಿದೆ. ಇದನ್ನು ಕುರಿತ ನಮ್ಮ ವಿಚಾರವನ್ನು ಸದ್ಯೇ ನಿಲ್ಲಿಸಿರುತ್ತೇವೆ.

A statue unveiled.—ಮಹಾರಾಜ್ಞೀ ಇಂಡ್ಯ ಚಕ್ರವರ್ತಿನೀಯವರ ಜ್ಯೂಬಿಲೀ ಉತ್ಸವದ ಜ್ಞಾಪಕಾರ್ಥ ಅಮೃತಸರದ ಮ್ಯೂನಿಸಿಪಾಲಿಟಿಯವರು ಕಟ್ಟಿಸಿದ ಆಕೆಯವರ ಪ್ರತಿಮೆಯನ್ನು ಆಚೇ ಶನಿವಾರದ ದಿನ ಪಂಜಾಬ ಲೆಫ್ಟಿನೆಂಟ ಗವರ್ನರವರು ಒಂದು ಉತ್ಸವ ಪೂರ್ವಕ ಪ್ರಜೆಗಳ ವೀಕ್ಷಣಕ್ಕೆ ವಿಷಯವನ್ನಾಗಿ ಮಾಡಿದರು. ಸದರೀ ಪ್ರತಿಮೆಯು ಇಟಲೀದೇಶದ ಶ್ವೇತ ಶಿಲೆಯಲ್ಲಿ ಅಲ್ಲೇ ತಯಾರಾಗಿಬಂತು. ಇದಕ್ಕಾಗಿ ಅಮೃತ ಸರದ ಮ್ಯೂನಿಸಿಪಾಲಿಟಿಗೆ ಹದಿನಾರು ಸಾವಿರ ರೂಪಾಯಿಗಳು ಖರ್ಚಾದವು.

Raising a loan.—ಹೈದರಾಬಾದ ಸಂಸ್ಥಾನದ ಸಾಲಗಾರರ ಪೈಕಿ ಯಾರ್ಯಾರಿಗೆ ಕೊಡಬೇಕಾದ್ದು ನ್ಯಾಯವಾದದ್ದೆಂದು ಒಪ್ಪಿಕೊಳ್ಳಲ್ಪಟ್ಟು ಅವುಗಳಗೆಲ್ಲ ಸಾಲೀಯಾನಾ ಸೇಕಡ ೯ ರೂಪಾಯಿಗಳಂತೆ ಬಡ್ಡಿಕೊಡಲ್ಪಡುತ ಬರುತಲಿದೆಯೊ, ಅಂತಾವರಿಗೆಲ್ಲ ಅಸಲ ಮೊಬಲಗನ್ನು ಕೊಟ್ಟು ಫೈಸಲ್ಮಾಡಬೇಕೆಂಬ ಯೋಚನೆಯಿಂದ ಸಾಲೀಯಾನಾ ಸೇಕಡ ೫ ಅಥವಾ ಆರು ರೂಪಾಯಿಗಳ ಬಡ್ಡಿಗೆ ೭೫ಲಕ್ಷ ರೂಪಾಯಿಗಳು ಸಾಲ ಮಾಡಬೇಕೆಂದು ಯೋಚಿಸುತಲಿರುವಂತೆಯೂ ಸದರೀ ಸಾಲಕ್ಕೆ ೧೦ವರ್ಷಗಳ ವಾಯಿದೆ ಎಂತಲೂ ಒಂದಾನೊಂದು ಪತ್ರಿಕೆ ಹೇಳುತಿದೆ.

How Indias' wealth is wasted.—ಅಮೆರಿಕಾದೇಶದಲ್ಲಿ ಈಗ ವಾಸವಾಗಿರುವ ಒಬ್ಬ ಹಿಂದೂಬಾತಮಿದಾರನು ಪುನೆ ಮರಾಟಾ ಪತ್ರಿಕೆಗೆ

ಬರೆಯುತ್ತಾನೇನುದರೆ:—ಆಹಾ, ಹಿಂದೂಗಳಾದ ನಾವು ಯೆಂತಾ ವೋಸಕ್ಕೆ ಗುರಿಯಾಗುತ್ತೇವೆ. !!! ನಮ್ಮ ಅರಸರುಗಳು ಇಂಡ್ಯಾ ದೇಶದಲ್ಲಿ ಬಡತನದಿಂದ ತಿನ್ನುವದಕ್ಕಿಲ್ಲದೆ ಸಂಕಟ ಪಡುತಲಿರುವ ಅನೇಕಲಕ್ಷ ಪ್ರಜೆಗಳನ್ನು ಬಿಟ್ಟುಬಿಟ್ಟು ಇಂಗ್ಲಾಂಡಿಗೆ ಹೋಗಿ ಅಲ್ಲಿನ ದೊಡ್ಡ ಮನುಷ್ಯರಿಗೆ ಔತನ ಮಾಡಿಸಬೇಕೆಂಬ ಚಾಪಲ್ಯ ಪೀಡಿತರಾಗಿರುತ್ತಾರೆ. ಪ್ರತಿ ಸಂವತ್ಸರದಲ್ಲೂ ಕಂದಾಯ ರೂಪವಾಗಿಯೂ ತೆಲಬ್‌ಗಳ ರೂಪವಾಗಿಯೂ ಯೆಷ್ಟು ದ್ರವ್ಯ ಇಂಗ್ಲಾಂಡಿಗೆ ಹೋಗಿ ಸೇರುತಿದೆ? ಅನ್ಯದೇಶದಲ್ಲಿ ನಡೆಯುವ ಜ್ಯೂಬಿಲೀ ಉತ್ಸವಕ್ಕಾಗಿ ಇಂಡ್ಯಾದೇಶದಲ್ಲಿ ಯೆಷ್ಟು ಹಣ ವಸೂಲ್ಮಾಡಲ್ಪಟ್ಟು ಅಲ್ಲಿಗೆ ಕಳುಹಿಸಲ್ಪಡುತ್ತಿದೆ? ಇದುವರಿವಿಗೆ ಜಾರೀಯಲ್ಲಿ ಬಂದಿರುವ ಖರ್ಚುಗಳಿಗಿಂತ ಅತಿಶಯವಾಗಿ, ಹೈದರಾಬಾದ್ ನಿಜಾಮರವರು ಸರ್ವೋನ್ನತಾಧಿಕಾರಿಗಳಾದ ಬ್ರಿಟಿಷನವರ ಸಂಗಡ ಸೇರಿ ತಮ್ಮ ದೇಶ ಸಂರಕ್ಷಣೆಯಬಗ್ಯೆ ತಮ್ಮ ಸೈನ್ಯದೊಡನೆ ಮುಂದು ಬರುವದು ಬಿಟ್ಟು, ಭಾರೀಯಾಗಿ ಅರ್ಥಸಹಾಯ ಮಾಡುವದಾಗಿ ತಿಳಿಸಿರುತ್ತಾರೆ. ಇದು ವಿಧವೆಯರು ಮಾಡುವ ಕಾರ್ಯವೇ ಹೊರತು ಶೂರರ ಕೆಲಸವಲ್ಲವು. ಇಂತಾ ಅವಿವೇಕಿಗಳಾದವರ ಮತ್ತು ಬ್ರಿಟಿಷ್ ಅಧಿಕಾರಿಗಳ ಕೈಗೆ ಸಿಕ್ಕಿಕೊಂಡಿರತಕ್ಕವರ ಸಂಗಡ ಇತರ ಅರಸರುಗಳೂ ಒಬ್ಬೊಬ್ಬರಾಗಿ ಸೇರುತಬರುತ್ತಾರೆ. ಧೈರ್ಯಸಾಹಸ ಶೋಭಿತರಾದ ಸಿಂಧಿಯಾಯವರು ಯಾವಜ್ಜೀವ ಕಷ್ಟಪಟ್ಟು ಸಂಪಾದಿಸಿ ಸ್ವಾಧೀನ ಮಾಡಿದ್ದ ಅಪಾರದ್ರವ್ಯವು ಹೊರಗೆ ತೆಗೆಯಲ್ಪಟ್ಟು ಸಾಗಿಸಲ್ಪಟ್ಟಿತು. ಇತರ ಅರಸರ ಮತ್ತು ಪ್ರಮುಖರಲ್ಲಿ ಯೆಷ್ಟು ದ್ರವ್ಯ ವಿರುವದೆಂದು ಇಂಗ್ಲಿಷಜನರು ಮೂಗನ್ನು ಚಾಚಿಕೊಂಡು ವಾಸನೆ ನೋಡುತಲಿದಾರೆ, ಎಂಬದು.

ನೋಟಿಸ್.

ಈವಾರದ ಪತ್ರಿಕೆಯ ಸಂಗಡ ನಾವು ಕಳುಹಿಸಿರುವ ನೋಟಿಸಿನಲ್ಲಿ ಕಂಡ ಅಂಶಕ್ಕೆ ನಮ್ಮ ಚಂದಾದಾರರೆಲ್ಲರು ಸಂಪೂರ್ಣ ಅವಧಾನ ಕೊಟ್ಟು ಅದರಂತೆ ನಡೆಸಿ ಕೊಡುವರೆಂದು ದೃಢವಾಗಿ ನಂಬುತ್ತೇವೆ. ಉಪೇಕ್ಷಿಸುವಂತಾದರೆ ವಿಷಯದಲ್ಲಿ ನಮ್ಮ ಕರ್ತವ್ಯವನ್ನು ಮಾಡಿಸದೆ ನಾವು ಮಾಡಬೇಕಾದವರಾಗುವೆವು.

LOCAL AND PROVINCIAL NEWS.
ಒಳದೇಶ ಮತ್ತು ತಾಲ್ಲೂಕ್‌ಜಾತಿವೃತ್ತಾಂತಗಳು

Col. W. Hill.—ಇಲ್ಲಿನ ಸಿವಿಲ್ ವ ಮಿಲಿಟರಿ ಸ್ಟೇಷನ್ ಕಾಯಂ ಸರ್ಜನ್ ಜೆಷ್ಠಿಯರಾದ ಕರ್ನಲ್ ಹಿಲ್‌ಯವರು ಕಾಹಿಲೇ ರಜಾಮೇಲೆ ಇಂಗ್ಲಾಂಡಿಗೆ ಹೋಗಿರುವದು ಸರಿಯಷ್ಟೆ. ಸದರೀಯವರಿಗೆ ಇನ್ನೂ ಸಂಪೂರ್ಣಾರೋಗ್ಯ ಪ್ರಾಪ್ತವಾಗದೆ ಇರುವದರಿಂದ ಮರಳಿ ಆರು ತಿಂಗಳಿಗೆ ರಜಾ ಪಡೆಕೊಂಡಿರುವದಾಗಿ ತಿಳಿಯಬರುತಿದೆ.

Erection of a choultry.—ತುಮಕೂರಿನಲ್ಲಿರುವ ಲಕ್ಷ್ಮೀಕಾಂತದೇವಸ್ಥಾನದ ಬಳಿಯಲ್ಲಿ ಆಗಂತುಕ ಬ್ರಾಹ್ಮಣರಿಗೋಸ್ಕರವಾಗಿ ಅಲ್ಲಿನ ಡಿಸ್ಟ್ರಿಕ್ಟಕಮಿಷನರ್ ಮ|| ರಾ|| ಕೃಷ್ಣಮೂರ್ತಿಯವರು ಒಂದುಛತ್ರವನ್ನು ಕಟ್ಟಿಸಲು ಉದ್ಯೋಗಿಸಿದಾರೆಂದು ಕೇಳಿ ತುಂಬಾ ಸಂತೋಷಪಡುತ್ತೇವೆ.—ವೃ. ಚಿ.

Jamabandi procedure.—ಜಮಾಬಂದಿ ಕಾಲದಲ್ಲಿ ಅನೇಕ ಹೋಬಳಿಗಳು ಅಡಗಿರುವ ಒಂದುತಾಲೂಕಿನ ಜಮಾಬಂದಿಯನ್ನು ಬೇರೆಬೇರೆ ಆಫೀಸರುಗಳು ಮಾಡುವದರಿಂದ, ರಿಮಿಷನ್, ಕಂದಾಯ ಮೊದಲಾದ ಮುಖ್ಯಕಾರ್ಯಗಳು ಏಕರೂಪವಾಗಿಲ್ಲದೆ ಗಲಾಟೆಗೆ ಅವಕಾಶ ಪ್ರಾಪ್ತವಾಗುತಿದೆಯಾಗಿ ಖಂಡಿತವಾಗಿ ಹಾಗೆ ಮಾಡಕೂಡದೆಂದು ಮೈಸೂರು ಗವರ್ನಮೆಂಟನವರು ಹುಕುಂಮಾಡಿರುವಂತೆ ಒಳದೇಶದ ಪತ್ರಿಕೆಯಮೂಲಕ ತಿಳಿಯಲಾದೆವು.

A reply.—ಒಬ್ಬ ವಿದ್ಯಾರ್ಥಿಯು ದಿವಾನರವರಲ್ಲಿಹೋಗಿ ಕೆಲಸಕ್ಕೆ ಉಮೇದುಮಾಡಿದಹಾಗೂ ಅವರು ಮಾರ್ಚಿ ಮಾಹೆ ೧೬ನೇ ತಾರೀಖಿನ ಗೆಜೆಟಿನಲ್ಲಿ ಇರುವ ತಮ್ಮ ಪ್ರೊಸೀಡಿಂಗ್ಸ್ ಓದಿ ತಿಳಿದುಕೊಂಡನಂತರ ತಮ್ಮಲ್ಲಿಗೆ ಬರುವ ಹಾಗೂ ಹೇಳಿದ್ದಾಗಿ ತಿಳಿಯಲಾದೆವು. ದಿವಾನರವರು ಉಮೇದವಾರರಾಗಿ ಬಂದ ವಿದ್ಯಾರ್ಥಿಗಳೊಡನೆ ಇಷ್ಟುದೂರ ಮಾತನಾಡುವದಕ್ಕಿಂತಲು ಸದರೀ ತಮ್ಮ ಪ್ರೊಸೀಡಿಂಗ್ಸಿನ ನಕಲನ್ನು ದಪ್ಪ ಅಕ್ಷರದಲ್ಲಿ ಅಚ್ಚುಹಾಕಿಸಿ ತಮ್ಮ ಬಂಗಳೆಯ ಗೇಟಿಬಾಗಲಿನ ಉಭಯಪಾರ್ಶ್ವದ ಗೋಡೆಗಳಿಗೂ ಹಚ್ಚಿಸಿದಲ್ಲಿ ಮೇಲ್ಕಂಡ ಮೇರೆ ವಿದ್ಯಾರ್ಥಿಗಳಿಂದ ಉಂಟಾಗುವ ತೊಂದರೆಯು ಬಹಳ ಮಟ್ಟಿಗೆ ಕಡಮೆಯಾಗಬಹುದು.—ವೃ. ಚಿಂ.

Rumoured transfers.—ನಿರಂಕುಶ ಪ್ರವರ್ತನಾಧಿಕಾರ ಮಾಡುವವರಲ್ಲಿ ಅತ್ಯಂತ ಕುತೂಹಲವನ್ನುಳ್ಳ ನಮ್ಮ ವೈಸ್ ಪ್ರೆಸಿಡೆಂಟರವರಾದ ಮೆ. ಅಬ್ದುಲ್ ರಹಮಾನ್ ಸಾಹೆಬರವರಿಗೂ, ಸದರೀಸಾಹೆಬರ ನಿರಂಕುಶಪ್ರವರ್ತನೆಗೆ ಸಹಾಯಭೂತರಾಗಿರುವ ಡೆ|| ಕಮಿಷನರ್ ಮೆ. ಆನಂದರಾಯರವರಿಗೂ, ಇಲ್ಲಿಂದ ವರ್ಗವಾಗುವದೆಂದು ಕೇಳಬಹಳವಾಗಿ ವಿಷಾದಿಸುವೆವು. ಇವರು ಇನ್ನು ೧–೨ ವರುಷಗಳಕಾಲ ಇಲ್ಲೀಯಿದ್ದ ಪಕ್ಷದಲ್ಲಿ ಸಕಲವಿಷಯದಲ್ಲಿಯೂ ಕೇವಲ ತಾಟಸ್ಥ್ಯವ ವಹಿಸಿ ನಡೆದುಕೊಳ್ಳುತಲಿರುವ ಈಪೂರು ನಿವಾಸಿಗಳಲ್ಲಿ ಬಂದು ಐಕಮತ್ಯವು ನೆಲಗೊಳ್ಳುತಲಿತ್ತು. ಆದರೂ ಅತ್ಯಲ್ಪಕಾಲದಲ್ಲಿಯೇ ತಮ್ಮಗಳ ಸ್ವೇಚ್ಛಾಪ್ರವರ್ತನೆಯಿಂದ ಕೂಡಿದಮಟ್ಟಿಗೂ ಸಜ್ಜನಗಳಲ್ಲಿ ಉಂಟುಮಾಡುತಲಿರುವ ಐಕಮತ್ಯಕ್ಕಾಗಿ ನಾವು ಬಹಳವಾಗಿ ಸಂತೋಷಿಸುವೆವು.—ವೃ. ಚಿ.

The weather.—ಹವಾಪ್ರವಿಷಯದೊಳು ಕಳೆದವಾರದಲ್ಲಿ ಅಧಿಕಾಂಶವೇನೂ ಇಲ್ಲವು. ಬಿಸಿಲು ದಿನೇದಿನೆ ವೃದ್ಧಿಯಾಗುತ ರಾತ್ರಿ ೧೦ ಘಂಟೆಯವರಿವಿಗೆ ಸೆಕೆ ದುಸ್ಸಹವಾಗಿದೆ. ವರ್ಷಸೂಚನೆಗಳು ಮಾತ್ರ ಅಲ್ಪಸ್ವಲ್ಪ ಕಾಣಬರುತಲಿವೆಯೇಹೊರತು ಎಲ್ಲಿಯೂ ವರ್ಷಸುದ್ದಿಯೇ ಇಲ್ಲವು. ಬಾವಿಗಳಲ್ಲಿ ನೀರು ಬತ್ತುತಬರುತಲಿದೆ. ನೀರಿಗಾಗಿ ಒಂದುಪೇಟೆಯವರು ಮತ್ತೊಂದು ಪೇಟೆಗೆ ಹೋಗಬೇಕಾದ ಕಾಲ ಪ್ರಾಪ್ತವಾಗಿದೆ. ತೃಣ ಜಲ ಕಾಷ್ಠ ಸಮೃದ್ಧಿ ಇಲ್ಲವು ಇಲ್ಲಿನ ಧರ್ಮಾಂಬುಧಿ ಕೆರೆಗೆ ಹೊಸಕೆರೆ ನೀರು ಬರುವಂತೆ ಇಲ್ಲಿನ ಮ್ಯುನಿಸಿಪಾಲಿಟಿಯವರು ಏರ್ಪಾಡು ಮಾಡಿರುವದರಿಂದ ಸದರೀ ಕೆರೆಯ ಸಮೀಪದಲ್ಲಿ ಇರತಕ್ಕವರಿಗೆ ಸ್ವಲ್ಪ ಅನುಕೂಲ್ಯವುಂಟೆಂದು ಹೇಳಬಹುದಾಗಿದೆ. ಪದಾರ್ಥಗಳ ಧಾರಣೆಗಳು ಆಚೇವಾರದಲ್ಲಿದ್ದದಕಿಂತಲು ಕಳೆದ ವಾರದಲ್ಲಿ ಹೆಚ್ಚಾಗಿವೆ. ಹೀಗೆಯೇ ಇನ್ನು ಒಂದೆರಡುವಾರಗಳವರಿಗೆ ತಕ್ಕಷ್ಟು ಮಳೆಬಾರದೆ ಹೋಗುವ ಪಕ್ಷಕ್ಕೆ ಧಾರಣೆಗಳು ಇನ್ನು ಅಧಿಕವಾಗುವದರಲ್ಲಿ ಸಂದೇಹವಿಲ್ಲ. ಅದಕ್ಕೆ ಅನುಸಾರವಾಗಿ ಬಡವರಿಗೆ ಕಷ್ಟಪ್ರಾಪ್ತವಾಗುವದರಲ್ಲಿಯೂ ಸಂಶಯವಿಲ್ಲವು.

THE MYSORE GAZETTE.
ಮೈಸೂರು ಗೆಜೆಟ್.

ಶ್ರೀಮನ್ಮಹಾರಾಜ ರಾಜಾಸಾಹೆಬ್ ಬಹದೂರವರ ದಿವಾನರವರಿಂದ ಕೊಡೋಣಾದ ಇಷ್ತಿಹಾರ್‌ನಾಮೆಗಳು.

ಕ್ಯಾಂಪ್ ನಂ. ೧೬೧.—ತಾರೀಖು ೧೦ನೇ ಏಪ್ರೈಲ್ ೧೮೮೮. ಡೆಪ್ಯುಟಿ ಕಮಿಷನರುಗಳ, ಅಸಿಸ್ಟೆಂಟ್ ಕಮಿಷನರುಗಳ, ಅಮಲ್‌ದಾರ್ ವ ಡೆಪ್ಯುಟಿ ಅಮಲ್‌ದಾರರುಗಳ ಇಲಾಖೆಗಳಲ್ಲಿಯು, ಮತ್ತು ಇತರ ರೆವಿನ್ಯೂ ವ ಜನರಲ್ ಇಲಾಖೆಗಳಲ್ಲಿಯು ತಾಬೇದಾರೀ ನೌಕರರ ನೋಕರರಾತೀ ವಿಷಯದಲ್ಲಿ ಲೇಟ್ ಚೀಫ್ ಕಮಿಷನರವರಿಂದ ಕೊಡೋಣವಾದ ೧೮೭೫ನೇ ಇಸವಿ ನವಂಬರ್ ೨೧ನೇ ಮಕ್ಕಾಂ ೬೦೯೩—G ೬೭ನೇ ನಂಬರ್ ವ ೧೮೭೫ನೇ ಇಸವಿ ಡಿಸೆಂಬರ್ ೨೧ನೇ ಮುಕ್ಕಾಂ ೬೯೩೩—G ೭೯ನೇ ನಂಬರ್, ಈ ಪ್ರೊಸಿಡಿಂಗ್ಸ್ ಗಳಲ್ಲಿಕಂಡಹುಕುಮನ್ನು ರದ್ದುಪಡಿಸಿ ಈಕೆಳಗೆ ನಮೂದಾಗುವ ನಿಬಂಧನೆಗಳು ವಿಧಿಸಲ್ಪಟ್ಟವೆ.

೧. ಪ್ರತಿ ಡೆಪ್ಯುಟಿ ಕಮಿಷನರೂ ವ ಅಸಿಸ್ಟೆಂಟ್ ಕಮಿಷನರೂ ತಮ್ಮ ತಮ್ಮ ಇಲಾಖೆಯ ಮೊಹ್ತೆಸರಿ ಉದ್ಯೋಗಸ್ಥರುಗಳನ್ನ ನೋಕರರ್ ಸಸ್ಪೆಂಡ್ ಯಾ ತಗ್ಯೆರು ಮಾಡಬಹುದು. ಅಸಿಸ್ಟೆಂಟ್ ಕಮಿಷನರುಗಳು ಮಾಡುವಂಥಾ ಅಂಥಾ ಹುಕ್ಮುಂಗಳು ಡೆಪ್ಯುಟಿ ಕಮಿಷನರ ಮಂಜೂರಾತಿಗೆ ಗುರಿಯಾಗಿರತಕ್ಕದ್ದು. ೪೦ ರೂಪಾಯಿ ತಲಬಿಗೆ ಮೇಲ್ಪಟ್ಟ ಉದ್ಯೋಗಸ್ಥರುಗಳ ನೋಕರರಾತಿ, ಸಸ್ಪೆನ್ಷನ್ ವ ತಗ್ಯೆರುಗಳು ಗವರ್ನಮೆಂಟನವರ ಕಾಯಮಿ ಹುಕುಮಿಗೆ ಒಳಪಟ್ಟಿರತಕ್ಕದ್ದು.

೨. ಪ್ರತಿ ಅಮಲ್‌ದಾರ್ ವ ಡೆಪ್ಯುಟಿ ಅಮಲ್‌ದಾರು ತಮ್ಮ ತಮ್ಮ ಇಲಾಖೆಯಲ್ಲಿ ಮಾಹೆಯಾನಾ ೧೫ ರೂಪಾಯಿಗೆ ಕಮ್ಮಿ ತಲಬುಳ್ಳ ಉದ್ಯೋಗಸ್ಥರನ್ನ ಡೆಪ್ಯುಟಿ ಕಮಿಷನರವರ ಮಂಜೂರಾತಿಗೊಳಪಟ್ಟು ನೋಕರರ್, ಸಸ್ಪೆಂಡ್, ಯಾ ತಗ್ಯೆರ್ ಮಾಡಬಹುದು. ಅಮಲ್‌ದಾರ್ ಡೆಪ್ಯುಟಿ ಅಮಲ್‌ದಾರ್ ವ ತಾಲ್ಲೂಕು ಶಿರಸ್ತೇದಾರ್ ಇವರುಗಳುವಿನಾ ಮಾಹೇಯಾನಾ ೧೫ರೂಪಾಯಿಗಳು ಯಾ ಅದಕ್ಕೆ ಹೆಚ್ಚು ತಲಬುಳ್ಳ ತಾಲ್ಲೂಕಿಗೆ ಸೇರಿದ ಇತರ ಉದ್ಯೋಗಸ್ಥರುಗಳ ನೋಕರರಾತಿ, ಸಸ್ಪೆನ್ಷನ್ ಯಾ ತಗ್ಯೆರ್ ಇವುಗಳ ಡೆಪ್ಯುಟಿ ಕಮಿಷನರುಗಳಿಗೆ ಹೊಂದಿರುತ್ತಾರೆ.

೩. ತಾಲ್ಲೂಕು ಶಿರಸ್ತೇದಾರು ಮತ್ತು ಇತರ ರೆವಿನ್ಯೂ ವ ಜನರಲ್ ಇಲಾಖೆಗಳಲ್ಲಿ ಮಾಹೇಯಾನಾ ೪೦ ರೂಪಾಯಿಗಳ ತಲಬಿಗೆ ಮೇಲ್ಪಟ್ಟಂತಾ ಉದ್ಯೋಗಗಳ ನೋಕರರಾತಿಯು ಗವರ್ನಮೆಂಟನವರ ಕಾಯಮಿ ಹುಕುಮಿಗೆ ಒಳಪಟ್ಟಿರತಕ್ಕದ್ದು.

ನಂ. ೧೧. ತಾ|| ೨೧ನೇ ಏಪ್ರೈಲ್ ೧೮೮೮.—ಕ್ರಿಮಿನಲ್ ಪ್ರೊಸಿಡ್ಯೂರ್‌ಕೋಡ್ ೩೫೭ನೇ ಸೆಕ್ಷನ್ ಅನುಸರಿಸಿ ಬೌರಿಂಗಪೇಟೆ ತಾಲ್ಲೂಕು ಆಕ್ಟಿಂಗ್ ಅಮಲ್‌ದಾರ್ ನಾರಾಯಣರಾಯರವರು ಫರ್ಯಾದಿಗಳ ಮತ್ತು ಸಾಕ್ಷಿಗಳ ಸಾಕ್ಷ್ಯವನ್ನು ಕನ್ನಡ ಭಾಷೆಯಲ್ಲಿ ಸ್ವದಸ್ತೂರ್ ತೆಗೆದುಕೊಳ್ಳತಕ್ಕ ಅಧಿಕಾರ ಕೊಡಲ್ಪಟ್ಟಿರುತ್ತಾರೆ.

ನಂ. ೧೬. ಶ್ರೀರಂಗಪಟ್ಟಣತಾಲ್ಲೂಕು ಅಮಲ್‌ದಾರ್ ರಾಘವೇಂದ್ರರಾಯರವರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖ್‌ಲಾಗಾಯತು ಮೂರುತಿಂಗಳ ಪ್ರಿವಿಲೀಜ್‌ರಜಾ ಕೊಡಲ್ಪಟ್ಟಿರುತಿದೆ ರಾಘವೇಂದ್ರರಾಯರವರ ಗೈರ್‌ಹಾಜರಿಯಲ್ಲಿ ಅಥವಾ ಮತ್ತೊಂದುಹುಕುಂ ಕೊಡಲ್ಪಡುವತನಕ ಪೋಲೀಸ್ ಇನ್ಸ್ಪೆಕ್ಟರ್ ರಾಮಣ್ಣನವರು ಶ್ರೀರಂಗಪಟ್ಟಣತಾಲ್ಲೂಕು ಅಮಲ್‌ದಾರ್ ವ ಮೂರನೇಕ್ಲಾಸ್ ಮ್ಯಾಜಿಸ್ಟ್ರೇಟರಾಗಿ ಆಕ್ಟುಮಾಡುವಂತೆ ನೋಕರರ್ಮಾಡಲ್ಪಟ್ಟಿರುತ್ತಾರೆ.

ನಂ. ೧೭. ಗುಬ್ಬಿತಾಲ್ಲೂಕ್ ಅಮಲ್‌ದಾರ್ ವೆಂಕಟರಾಯರವರಿಗೆ ಸ್ವಂತಕೆಲಸದಬಗ್ಯೆ ಬಗಸ್ ತಲಬ್ ಒಂದುತಿಂಗಳರಜಾ ಕೊಡಲ್ಪಟ್ಟಿರುತಿದೆ ತುಮಕೂರು ಡಿಸ್ಟ್ರಿಕ್ಟ ಡೆಪ್ಯುಟಿಕಮಿಷನರವರ ಆಫೀಸ್ ಜ್ಯುಡಿಷಲ್ ಹೆಡ್‌ಮುನಿಷಿ ಕೃಷ್ಣರಾಯರವರು, ವೆಂಕಟರಾಯರವರ ಗೈರ್‌ಹಾಜರಿಯಲ್ಲಿ ಅಥವಾ ಮತ್ತೊಂದುಹುಕುಂ ಕೊಡಲ್ಪಡುವತನಕ ಗುಬ್ಬಿತಾಲ್ಲೂಕು ಅಮಲ್‌ದಾರ್ ವ ಮೂರನೇಕ್ಲಾಸ್ ಮ್ಯಾಜಿಸ್ಟ್ರೇಟರಾಗಿ ನೋಕರರ್ಮಾಡಲ್ಪಟ್ಟಿರುತ್ತಾರೆ.

ನಂ. ೧೩. ತಾ|| ೩೩ನೇ ಏಪ್ರೈಲ್ ೧೮೮೮—ಬೌರಿಂಗಪೇಟೆ ತಾಲ್ಲೂಕು ಅಮಲ್‌ದಾರ್ ವಿ. ರಾಜಗೋಪಾಲಯಾರ್ರವರಿಗೆ ಅವರುಪಯೋಗಿಸಿಕೊಳ್ಳುವ ತಾರೀಖ್‌ಲಾಗಾಯತು ಮೂರುತಿಂಗಳ ಪ್ರಿವಿಲೀಜ್‌ರಜಾ ಕೊಡಲ್ಪಟ್ಟಿರುತಿದೆ.

ನಂಬರ್ ೧೮. ತಾ|| ೨೮ನೇ ಏಪ್ರೈಲ್ ೧೮೮೮—೧೮೭೦ನೇ ಇಸವಿಯ ೨೬ನೇ ನಂಬರ್(ಪ್ರಿಸನ್ಸ್) ಜೆಯಿಲ್‌ಗಳ ಆಕ್ಟಿನ ೫೬ನೇ ಸೆಕ್ಷನಿನ ನಿಯಮಗಳನ್ನನುಸರಿಸಿ ಇದರಿಂದ ತಿಳಿಸಲ್ಪಡುವದೇನುದರೆ—ಶಿವಮೊಗ್ಗೆಯಲ್ಲಿ ಡಿಸ್ಟ್ರಿಕ್ಟ ಖಜಾನೆಯ ಚಾರ್ಜಿನಲ್ಲಿರತಕ್ಕ ಅಸಿಸ್ಟೆಂಟ್ ಕಮಿಷನರವರು ಸದರೀ ಸ್ಥಳದಲ್ಲಿರತಕ್ಕ ಜೆಯಿಲ್‌ಚಾರ್ಜಿನಲ್ಲಿ ಸಹ ಇರತಕ್ಕದ್ದಲ್ಲದೆ ಮೇಲೆ ಕಂಡ ಆಕ್ಟಿನ ದೆಸೆಯಿಂದ ಒಬ್ಬ ಸೂಪರಿಂಟೆಂಡೆಂಟರಿಗೆ ಕೊಡಲ್ಪಟ್ಟಿರುವ ಮತ್ತು ವಿಧಿಸಲ್ಪಟ್ಟಿರುವ ಅಧಿಕಾರಗಳನ್ನೂ ಕೆಲಸಗಳನ್ನೂ ಅವರು ಚಲಾಯಿಸುತ ಲಿರತಕ್ಕದ್ದು.

SUMMARY OF NEWS.
ವೃತ್ತಾಂತ ಸಂಗ್ರಹವು.

ಲಂಡನ್ ಪಟ್ಟಣದಲ್ಲಿ ಬೌದ್ಧಮತವು ಪ್ರಬಲಿಸಲಾರಂಭಿಸಿರುತ್ತದಂತೆ.—ಕ. ಸು.

ಬರುವ ಮೇ ತಿಂಗಳಲ್ಲಿ ಯುದ್ಧವೆಸಗುವದೆಂದು ರಷ್ಯಾದೇಶದ ಸೇನಾಧಿಪತಿಗಳು ಉದ್ಘಾಟಿಸಿ ಹೇಳುತ್ತಾರೆ.

ನಮ್ಮನ್ನಾಳುವ ಮಹಾರಾಣಿಯವರ ಪ್ರತಿನಿಧಿಗಳ ಹೆಸರನ್ನು ಇಲ್ಲಿಯ ನಾಣ್ಯಗಳ ಮೇಲೆ ಠಸ್ಸೇಹಾಕಬೇಕೆಂದು ಕೆಲವರು ಸೂಚಿಸುತ್ತಾರೆ.

ಕೇಂಬ್ರಿಡ್ಜ್ ಯುನಿವರ್ಸಿಟಿಯವರು ಹೆಂಗಸರಿಗೆ ಬಿರುದುಗಳನ್ನು ಕೊಡುವದಕ್ಕೆ ನಿರಾಕರಿಸಿದರು.—ಕ. ಸು.

ಇನ್ನು ಕೆಲವು ದಿನಗಳಲ್ಲಿಯೇ ಉಪ್ಪಿನಂತೆ ಹೊಗೆ ಸೊಪ್ಪಿನ ಮೇಲೂ ತೆರಿಗೆ ಹಾಕಲ್ಪಡುವದಂತೆ.—ಕ. ಸು.

ಫ್ರಾನ್ಸ್‌ದೇಶದಲ್ಲಿ ಒಬ್ಬ ಹೆಂಗಸಿಗೆ ಉದ್ದವಾದ ಗಡ್ಡ ವಿರುತ್ತದಂತೆ. ಸ್ತ್ರೀಯರಿಗೆ ಇಲ್ಲದೂ ಫ ಗಡ್ಡವನ್ನು ಸೃಷ್ಟಿಕರ್ತನು ಅವಳಿಗೆ ಮಾತ್ರ ಕೊಟ್ಟದ್ದರಿಂದ ಅವಳು ಅದನ್ನು ಜನರಿಗೆ ತೋರಿಸಿ ತನ್ನ ಉದರಪೋಷಣ ಮಾಡಿಕೊಂಡಿರುತ್ತಾಳಂತೆ.—ಕ. ಸು.

ರಾಜಾ ಸರ್ ಟಿ. ಮಾಧವರಾಯರವರು ಬರೋಡೆಯ ಗಾಯಕವಾಡ ಮಹಾರಾಜರವರ ಭೇಟಿಯಾಗುವದಕ್ಕಾಗಿ ಮದ್ರಾಸಿನಿಂದ ನೀಲಗಿರಿಗೆ ಹೊರಟುಹೋಗಿದ್ದರು. ಗಾಯಕವಾಡಿಯವರು ಸರ್. ಟಿ. ಮಾಧವರಾಯರವರನ್ನು ತಿರಿಗಿ ತಮ್ಮ ಮುಖ್ಯಪ್ರಧಾನರಾಗಿ ನೇಮಿಸಿಕೊಳ್ಳತಕ್ಕವರಾಗಿದಾರೆಂದು ಕೇಳುತ್ತೇವೆ.—ಕ. ಸು.

ಲೋಕದಲ್ಲಿ ಸಕಲ ಭಾಷೆಗಳಿಗಿಂತಲೂ ಹೆಚ್ಚಾದ ಜನಗಳಿಂದ ಆಡಲ್ಪಡುವ ಭಾಷೆಯು ಚೀನಾಭಾಷೆಯು. ಇದನ್ನು ಮಾತನಾಡತಕ್ಕವರು ೪೦ ಕೋಟಿ ಜನಗಳು. ಇದಕ್ಕೆ ಎರಡನೇದು ಹಿಂದುಸ್ಥಾನಿ. ಇದನ್ನು ನುಡಿಯತಕ್ಕವರ ಸಂಖ್ಯೆ ೧೦ ಕೋಟಿ. ಇಂಗ್ಲಿಷ್ ಮಾತನಾಡುವವರು ೧೦ಕೋಟಿ. ರಷ್ಯಾ ಭಾಷೆಯನ್ನಾಡತಕ್ಕವರು ೭ಕೋಟಿ. ಜರ್ಮನ್ ಭಾಷೆಯನ್ನಾಡತಕ್ಕವರು ೫ಕೋಟಿಯೂ ೭೦ ಲಕ್ಷ. ಸ್ಪಾನಿಷ್ ಮಾತನಾಡುವವರು ೪ಕೋಟಿಯೂ ೭೦ಲಕ್ಷ.

ಫ್ರಾನ್ಸ್ ದೇಶದ ಹೆರಾಲ್ಡ್ ಗಜೆಟ್ ಎಂಬ ಪತ್ರಿಕೆಯು ತಿಳಿಸುವದೇನುದರೆ.—ಇಲ್ಲಿ ಒಬ್ಬ ಸ್ತ್ರೀಯು ವಿಲಕ್ಷಣವಾದ ಮಗುವನ್ನು ಹೆತ್ತಿರುತ್ತಾಳೆ. ಅದರ ತಲೆಯ ಮೇಲೆ ಆನೇ ಸೊಂಡಿಲಂತೆ ಎರಡು ಕೋಡುಗಳಿವೆ. ಕಣ್ಣುಗಳಲ್ಲಿ ಒಂದು ಬರೀದಾಗಿದೆ, ಮತ್ತೊಂದು ಮುಂದಕ್ಕೆ ಚಾಚಿಕೊಂಡಿರುತ್ತದೆ. ಅದಕ್ಕೆ ಒಂದೇ ಒಂದು ಮೂಗಿನ ಸೊಳ್ಳೆಯು ಹಣೆಯಮೇಲಿದೆ. ಬಾಯಿಯಲ್ಲಿ ಹಲ್ಲುಗಳಿಲ್ಲ, ಅದಕ್ಕೆ ತುಟಿಗಳೂ ಇಲ್ಲ. ಅತ್ತರೆ ಗುಬ್ಬಚ್ಚಿಗಳು ಕೂಗುವಂತೆ ಕೇಳಬರುತದೆ.—ಕ. ಸು.

ಮದರಾಸ್ ಸ್ಟ್ಯಾಂಡರ್ಡ್ ಎಂಬ ಪತ್ರಿಕೆಗೆ ಪುದುಕೋಟೆಯ ಕರೆಸ್ಪಾಡೆಂಟನು ಬರೆದಿರುವದೇನುದರೆ.—ಈಪುದುಕೋಟೆಗೆಸೇರಿದ ಕೊಲ್ಲತ್ತೂರು ತಾಲ್ಲೂಕಿನಲ್ಲಿ ಒಂದು ಚಮತ್ಕಾರ ನಡೆಯಿತು. ಒಬ್ಬಕೂದ್ರಸ್ತ್ರೀಯು ಎರಡುತಲೆಗಳು ನಾಲ್ಕುಕೈಗಳೂ ಎರಡುಕಾಲುಗಳೂ ಉಳ್ಳ ಒಂದುಗಂಡು ಮಗುವನ್ನು ಹೆತ್ತಳು. ಯಾವಅಂಗವೂ ಭಿನ್ನವಾಗಿರಲಿಲ್ಲ. ಆಕಾರವೆಲ್ಲ ಮನುಷ್ಯ

ಕಾರವಾಗಿತ್ತು. ಏದೆಯಿಂದ ಅಂಗುಸ್ತ್ಯದವರಿಗೂ ಏನೂ ವಿಶೇಷವಿಲ್ಲ, ಎಂಬದು.

ಮುಂಬೈಯಲ್ಲಿ ಆಚೆ ಬುಧವಾರದ ದಿನ ಮಧ್ಯಾಹ್ನ ನಾಲ್ಕು ಘಂಟೆಯ ಸುಮಾರಿಗೆ ಖಾನ್ ಬಹದೂರ್ ಫ್ರಾಂಜಿ ಅರ್ದೆಸಿಯರೆಂಬವರ ಫೀಟನ್‌ಗಾಡಿಗೆ ಎರಡು ಕುದುರೆಗಳುಕಟ್ಟಿ ಪುರಂಧರ್‌ಯೆಂಬ ಸ್ಥಳದಿಂದ ವಾಪಸ ಬರುತ್ತಿರುವಲ್ಲಿ ಅದಕ್ಕೆ ಸಿಡಿಲುತಗಲಿ ಕೋಚ್‌ಮಾನನು ಕೂತುಕೊಂಡಿದ್ದ ಕಡೆಯಲ್ಲೇ ಪ್ರಾಣಬಿಟ್ಟನು. ಕುದುರೆಗಳೆರಡಕ್ಕೂ ಸಿಡಿಲುತಗಲಿ ಸತ್ತುಹೋದವು. ಕುದುರೆಯಾಳು ಗಾಡಿಯ ಹಿಂದುಗಡೆ ಕುಳಿತಿದ್ದದರಿಂದ ಆತನಿಗೆ ದೈವಾತ್ ತಗಲದೆ ತಪ್ಪಿಸಿಕೊಂಡನು.

ಈಚಿಗೆ ಕೆಲವುತಿಂಗಳ ಹಿಂದೆ ಅಯೋಧ್ಯಾನವಾಬರವರು ಕಲ್ಕತ್ತೆಯಲ್ಲಿ ಮೃತಪಟ್ಟರಷ್ಟೆ. ತರುವಾಯ ಗವರ್ನಮೆಂಟಿನವರು ಅವರ ಜೀವಿತಕಾಲದಲ್ಲಿದ್ದ ಅವರ ಪರಿಜನರು ಮತ್ತು ನೌಕರನ್ನೇರಪೈಕಿ ಕೆಲವರಿಗೆ ಪೆನ್ಷನ್, ಕೆಲವರಿಗೆ ಗ್ರಾಚ್ಯುಯಿಟಿ, ಕೆಲವರಿಗೆ ತಲಬಾಕಿ, ಈಮೇರೆ ಕೊಟ್ಟು ವ್ಯವಸ್ಥೆಮಾಡಿ, ಅವರೆಲ್ಲರಿಗೂ ರೈಲುಚಾರ್ಜು ಸಹ ಕೊಟ್ಟು ಕಳುಹಿಸಿಬಿಟ್ಟದ್ದಲ್ಲದೆ, ಅವರಮಕ್ಕಳೆಲ್ಲರಿಗೂ ಮಾಸೀಯಾನಾ ಶೀಜಸುಂ ೫೦೦ ರೂಪಾಯಿಗಳಮೇರೆಯೂ, ಮಗಳಿಗೆ ೧೫೦ ರೂಪಾಯಿನುತೆಯೂ, ಅವರತುದೆಯ ಮುಮಕ್ಕಳಿಗೆ ೩೦೦ ರೂಪಾಯಿಗಳುತೆಯೂ ಪೆನ್ಷನ್ ಸಲ್ಲತಕ್ಕದ್ದೆಂದು ವ್ಯವಸ್ಥೆ ಮಾಡಿರುತ್ತಾರೆ.

ಬೇಸಿಗೆಯಬಗ್ಗೆ ಪಾಠಿಕೆಯಮೇರೆ, ಮುದರಾಸ್ ಹೈಕೋರ್ಟ್, ಅದಕ್ಕೆಸೇರಿದ ಇತರ ಇಲಾಖೆಗಳೂ ಈತಿಂಗಳ ೩ನೇ ತಾರೀಖ್ ಲಾಗಾಯತು ಜೂಲೈಗುರ್ಲೇತಾರೀಖ್‌ವರಿವಿಗೆ ಉಭಯ ದಿನಗಳೂಸೇರಿ ಮುಚ್ಚಲ್ಪಡುವವು. ಈಮೋಕಳೇಕಾಲದಲ್ಲಿ ಜರೂರೀಯಾತಿಕೆಲಸಗಳ ನಿರ್ವಹಣೆಯ ಬಗ್ಗೆ ಮೇ ಗುರ್ಲೇತಾರೀಖಿನಿಂದ ಅದೇ ೩ನೇ ತಾರೀಖ್‌ವರಿವಿಗೆ ಮಿ. ಟಪ್‌ಪರ್ಡೆಯವರೂ, ಅದುಪೋದಲು ರಜಾದಿನಗಳು ಪೂರ್ತಿಯಾಗುವವರಿವಿಗೆ ಮಿ. ವಿಲ್ಕಿನ್‌ಸನ್‌ಯವರೂ ಆಗಿಂದಾಗ್ಯೆ ಕೋರ್ಟುಮಾಡುವರು.

ಹೈದರಾಬಾದ್ ಸಂಸ್ಥಾನಕ್ಕೆ ಸೇರಿದ ಸಿವಿಲಿಯನ್‌ಗಳು ಕೆಲವರು ಕೆಲಸದ ಮಾಹಿತೀಬಗ್ಗೆ ಮುದರಾಸಿಗೆ ಕಳುಹಿಸಲ್ಪಟ್ಟು ಅಲ್ಲಿ ವಾಸವಾಗಿರುತ್ತಾರಾಗಿ ಅವರಿಂದ ಇನ್‌ಕಂಟ್ಯಾಕ್ಸ್ ಯೆಂಬ ಆಮದಾನೀ ತೆರಿಗೆಯನ್ನು ವಸೂಲ್ಮಾಡತಕ್ಕದ್ದೆಂದು ಅಲ್ಲಿನ ಅಕೌಂಟೆಂಟ್‌ಜನರಲ್‌ವರು ಹುಕುಂಮಾಡಿದರು. ಹಾಗೆ ಮಾಡುವದು ಅಕ್ರಮವೆಂದು ಆಕ್ಷೇಪಿಸಿ ಹೈದರಾಬಾದ್ ಸರ್ಕಾರದವರು ಮುದರಾಸ್ ಗವರ್ನಮೆಂಟಿಗೆ ಬರೆಯಲು, ಅವರು ಅಕೌಂಟೆಂಟ್ ಜನರಲವರು ಮಾಡಿದ್ದು ಇನ್‌ಕಂಟ್ಯಾಕ್ಸ್ ಆಕ್ಟಿನ ನಿಬಂಧನೆಗಳಿಗೆ ಅನುಗುಣವಾಗಿರುತದೆಂದು ನಿರ್ಣಯಿಸಿ, ಸದರೀ ಸಿವಿಲಿಯನ್‌ಗಳಿಗೆ ಇನ್‌ಕಂಟ್ಯಾಕ್ಸನ್ನು ತಪ್ಪಿಸುವ ವಿಷಯವನ್ನು ಇಂಡ್ಯಗವರ್ನಮೆಂಟಿನವರು ವ್ಯವಸ್ಥೆಗೆ ಕಳುಹಿಸಿರುತ್ತಾರೆ.—ಸ್ಟ್ಯಾಂಡರ್ಡ್.

ಇಂದೂರು ಸಂಸ್ಥಾನದ ದಿವಾನರಾದ ದಿವಾನ್ ಬಹದೂರ್ ರಘುನಾಥರಾಯರವರು. ಈ ತಿಂಗಳ ೧ರನೇ ತಾರೀಖ್ ಶುಕ್ರವಾರ ಪ್ರಾತಃಕಾಲ ೭|| ಘಂಟೆಗೆ ತಮ್ಮ ಪ್ರೈವೇಟ್ ಸೆಕ್ರೆಟರಿ ಮೊದಲಾಗಿ ವಿಶಿಷ್ಟ ಕುಟುಂಬ ಪರಿವಾರದೊಡನೆ ಮುದರಾಸಿಗೆ ಬಂದು ಸೇರಿದರು. ಈ ದೊಡ್ಡಮನುಷ್ಯರನ್ನು ಬರಮಾಡಿಕೊಳ್ಳುವದಕ್ಕಾಗಿ ಮಿ. ರಂಗಯ್ಯನಾಯುಡುರವರು ಮೊದಲಾದ ಇಲ್ಲಿನ ದೊಡ್ಡಮನುಷ್ಯರು ಕೆಲವರು ಸೆಂಟ್ರಲ್ ಸ್ಟೇಷನ್ ಪ್ಲಾಟ್‌ಫಾರಂನಲ್ಲಿ ಕಾದಿದ್ದು ಸದರೀ ರಾಯರವರು ಗಾಡಿ ಇಳಿದ ಕೂಡಲೇ ಪರಸ್ಪರ ಹಸ್ತಚಾಲನ ಮೊದಲಾದ ಮರ್ಯಾದೆಗಳೆಲ್ಲವೂ ನಡೆದಮೇಲೆ, ಅಲ್ಲಿದ್ದ ದೊಡ್ಡ ಮನುಷ್ಯರು ಕೇಳಿದ ಪ್ರಶ್ನೆಗಳಿಗೆ ಉತ್ತರ ರೂಪವಾಗಿ ರಾಯರವರು ತಿಳಿಸಿದ್ದೇನಾದರೆ, "ನಾನು ನನ್ನ ಕೆಲಸಕ್ಕೆ ರಾಜೀನಾಮೆಯೂ ಕೊಡಲಿಲ್ಲವು, ಕೆಲಸದಿಂದ ನಿವೃತ್ತಿಯೂ ಮಾಡಲ್ಪಡಲಿಲ್ಲವು, ಇಂದೂರು ಬಿಟ್ಟು ಬರುವದಕ್ಕೆ ಅಪ್ಪಣೆಯಂ ಪಡೆಯಲೂ ಇಲ್ಲವು" ಎಂಬದು.—ಮೆಯಿಲ್.

EXTRACTS.

ಈ ತಿಂಗಳ ೧೮ನೇ ತಾರೀಖಿನ ಗೆಜೆಟಿನಿಂದ ಅನೇಕ ಅಧಿಕಾರಿಗಳಿಗೆ ಆಗಿರತಕ್ಕ ಬಡತಿಗಳು ವಿದಿತಪಡಿಸಲ್ಪಟ್ಟವಷ್ಟೆ ? ಆ ಸಂಗತಿಗಳನ್ನೆಲ್ಲ ಸಂಗ್ರಹಿಸಿ ನಮ್ಮ ಪತ್ರಿಕೆಯಲ್ಲಿ ನಾವು ಅವಕಾಶಕೊಟ್ಟದ್ದೆವು. ಹಿಂದೂಯೆಂಬ ಮದ್ರಾಸುಪತ್ರದ ೧೪ನೇ ತಾರೀಖಿನ ಸಂಚಿಕೆಯಲ್ಲಿ ಡಿಪ್ಯುಟಿಕಮ್ಮಿಷನರ್ ಸುಬ್ರಾಯರು ಮತ್ತು ಮಹಮುದಲ್ಲಿ ಸಾಹೇಬರು ಇವರಿಬ್ಬರೂ ಪೆನ್ಷನ್ ತೆಗದುಕೊಂಡು ನಿವೃತ್ತರಾಗುವರೆಂಬದಾಗಿಯೂ ಈ ಎರಡುಕೆಲಸಗಳಿಗೂ ಅರಮನೆ ದರ್ಬಾರ್ ಬಕ್ಷಿ ಮ|| ರಾ|| ಎ. ನರಸಿಂಹಯ್ಯಂಗಾರ್ಯರೂ, ಅರಮನೆ ಆದಾಲತಗಳನ್ನು ನೋಡತಕ್ಕ ಮ|| ರಾ|| ಚಿದಂಬರೈಯನವರೂ ಬದಲೀಮಾಡಲ್ಪಟ್ಟು ಅವರು ೨ ಗಿರತಕ್ಕ ಕೆಲಸವಲ್ಲಿಯೇ ಇರಲ್ಪಡುವರೆಂಬದಾಗಿಯೂ ಇವರುಗಳಿಗೆ ಈರೀತಿಯಲ್ಲಿ ಆಗತಕ್ಕ ಬದಲೀಗೋಸ್ಕರ ಮಾಸ್ಸೀಯಾಗತಕ್ಕ ೩೦೦ ರೂಪಾಯಿಗಳು ಮೈಸೂರು ಗವರ್ನಮೆಂಟಿನಿಂದ ಸಲ್ಲುವಂತೆ ಏರ್ಪಾಟಾಗಿದೆ ಎಂಬದಾಗಿಯೂ ಬಾಕಿ ೧೫೦ ರೂಪಾಯಿಗಳು ಶ್ರೀಮನ್ಮಹಾರಾಜರವರ ಸ್ವಂತ ಖರ್ಚಿನಿಂದ ಕೊಡಲ್ಪಡುತ್ತದೆ ಎಂಬದಾಗಿಯೂ ಈ ಇಬ್ಬರು ಮಹನೀಯರೂ ಈ ರಾಜ್ಯಕ್ಕೆ ಅತ್ಯಂತೋಪಕಾರ ಮಾಡಿದವರಾದ್ದರಿಂದ ಇವರನ್ನು ಬೇರೆಕಡೆ ಕಳುಹಿಸುವದಕ್ಕೆ ಶ್ರೀಮನ್ಮಹಾರಾಜರವರಿಗೆ ಇಷ್ಟವಿಲ್ಲದೆ ಇರುವದಕ್ಕಾಗಿ ಮೈಸೂರು ಗವರ್ನಮೆಂಟಿನವರು ಈರೀತಿಯಲ್ಲಿ ಏರ್ಪಾಡು ಮಾಡಿದಾರೆಂಬದಾಗಿಯೂ, ಸುಬ್ರಾಯರು ಮತ್ತು ಮಹಮುದಲ್ಲಿಯವರ ಕೆಲಸಕ್ಕೆ ಈಗತಾನೆ ೩ನೇಕ್ಲಾಸಿನಿಂದ ೧ನೇಕ್ಲಾಸಿಗೆ ಪ್ರಮೋಷನ್ ಆದ ಮತ್ತು ಮೈಸೂರು ಚೀಫ್‌ಮ್ಯಾಜಿಸ್ಟ್ರೇಟರಾಗಿದ್ದುಕೊಂಡು ಪ್ರಜೆಗಳಿಗೆ ಅನೇಕ ಹಿಂಸೆಗಳನ್ನು ಮಾಡಿ ಈ ದುಷ್ಕೀರ್ತಿಗೆ ಬಂದವರಲ್ಲೆಲ್ಲಾ ಬಹಳ ಕೆಟ್ಟವರೆಂದು ಹೆಸರು ಪಡೆದಿರತಕ್ಕ ಮೆ|| ಅಬ್ದುಲ್ ರಹಿಮಾನ್ ಸಾಹೇಬರವರನ್ನೂ ಮತ್ತು ಕೋಲಾರದ ಕೃಷ್ಣಯ್ಯಂಗಾರ್ಯರ ಮಕ್ಕಳಾದ ಮ|| ರಾ|| ವೆಂಕಟವರದಯ್ಯಂಗಾರ್ರವರನ್ನೂ ನೇಮಿಸುವಂತೆ ಏರ್ಪಾಟಾಗಿದೆ ಎಂಬದಾಗಿಯೂ ಬರೆದುಇದೆ. ಈ ಪತ್ರಿಕಾಲೇಖನವನ್ನು ನೋಡಿದರೆ ಆ ಪತ್ರಿಕಾ ಕರ್ತರು ಈ ವರ್ತಮಾನಗಳನ್ನೆಲ್ಲಾ ದಿವಾನರಿಂದಲೋ ಅಥವಾ ಅವರ ಪರಿವಾರದವರಿಂದಲೋ ಗೊತ್ತಾಗಿ ತಿಳಿದು ಬರೆದಂತೆ ಕಾಣುತ್ತದೆ. ಅದು ಹ್ಯಾಗಾದರೂ ಇರಲಿ. ಮಿ ಅಬ್ದುಲ್ ರಹಿಮಾನ್ ಸಾಹೇಬರವರು ಏಕಕಾಲದಲ್ಲಿ ೨ ಪ್ರಮೋಷನ್ ಹೊಂದುವದಕ್ಕೆ ಯಾವವಿಧವಾದ ಯೋಗ್ಯತೆಯನ್ನು ಪಡೆದಿದಾರೋ ಗೊತ್ತಾಗುವದಿಲ್ಲ. ನಿರಂಕುಶವಾಗಿ ಪ್ರವರ್ತಿಸುವದರಲ್ಲಿ ಬಹಳ ಸಮರ್ಥರು. ಈ ದಿವಾನರವರ ದವಲತ್ತಿನಲ್ಲಿ ಇಂಥಾವರಿಗೆ ಏಕಕಾಲದಲ್ಲಿ ೨ ಪ್ರಮೋಷನ್ ದೊರೆತಿರುವದನ್ನು ನೋಡಿದರೆ ಸಕಲ ವಿಧವಾದ ಅಧಿಕಾರಕ್ಕೂ ತಕ್ಕ ಯೋಗ್ಯತೆಗಳುಳ್ಳವರಾಗಿಯೂ ನಿರಂಕುಶಪ್ರವರ್ತಕರಾಗಿಯೂ ಇರತಕ್ಕ ಅಧಿಕಾರಿಗಳಿಗೆ ಮನಃಖೇದ ಉಂಟಾಗದೆ ಇರಲಾರದು. ಇದು ಪ್ರಜೆಗಳಿಗೂ ಕ್ಷೇಮಕಾರಿಯಾಗಲಾರದು. ಅನೇಕ ಅಧಿಕಾರಿಗಳು ಪ್ರಜೆಗಳಿಗೆ ಹಿಂಸೆ ಮಾಡುತ್ತಾಬಂದರೆ ದಿವಾನರ ವಿಶ್ವಾಸಕ್ಕೆ ಪಾತ್ರರಾಗಬಹುದೆಂಬದಾಗಿಯೂ ಅದರಿಂದ ತಾವು ಪುಷ್ಟಿಗೆ ಬರುತ್ತೇವೆಂಬದಾಗಿಯೂ ತಿಳಿದುಕೊಂಡು ಸ್ವೇಚ್ಛಾಪ್ರವರ್ತಕರಾಗುತಬರುತ್ತಾರೆ. + + + ನಮ್ಮ ದಿವಾನರು ಬಹಳ ನಿಸ್ಪೃಹರು. ಇವರ ಭಾವಮೈದುನರಾದ ಮ|| ರಾ|| ವೈದ್ಯನಾಥಯ್ಯನವರು ಕೆಲವು ವರ್ಷಗಳಿಗೆ ಮುಂಚೆ ಲಾಯರಾಗಿ ತ್ರಿಚೂರಿಗೆ ಬಂದಿದ್ದರು. ಅದರಲ್ಲಿ ಧಾರಾಳವಾದ ಜೀವನವು ದೊರಿಯದೆ ಇದ್ದದರಿಂದ ಟ್ರಾವನ್ಕೂರ್ ಸಂಸ್ಥಾನಕ್ಕೆ ಹೋಗಿ ಅಲ್ಲಿ ಒಂದು ಅಧಿಕಾರವನ್ನು ಸಂಪಾದಿಸಿಕೊಂಡಿದ್ದರು. ಅವರನ್ನು ದಿವಾನರವರುಕರೆಸಿಕೊಂಡು ಪ್ರೈವೇಟ್ ಸೆಕ್ರೆಟರಿ ಕೆಲಸವನ್ನು ಕೊಟ್ಟರು. ಹೊಸಮನೆ ಕಟ್ಟಡದ ವಿಚಾರಣೆಗೆ ಪಾಕಿ ಈಗ ಅವರಿಗೆ ಒಂದು ಅಸಿಸ್ಟೆಂಟ್ ಕಮಿಷನರ್‌ಕೆಲಸವನ್ನು ಮಾಡಿಕೊಟ್ಟದ್ದಾರೆ. ಕೂಡಲೇ ತಮ್ಮಮಕ್ಕಳಾದ ಮ|| ರಾ|| ಪೊರಸಾಮಯ್ಯರವರಿಗೂ ಪ್ರೈವೇಟ್‌ಸೆಕ್ರೆಟರಿಕೆಲಸದ ಬಹಾದರ್ದು ಮಾಡಿಸಬಹುದು. ಇನ್ನುಮೇಲೆ ದೇಶೀಯರಿಗೆ ಉಪಕಾರ ಮಾಡಬೇಕೆಂಬದಾಗಿ ದಿವಾನರವರು ಒಂದು ಸಂಕಲ್ಪವನ್ನು ಮಾಡಿದಾರೆ. ಈ ಸಂಕಲ್ಪವೂ ಎಲ್ಲರಿಗೂ ತಿಳಿಯಲೆಂದು ೩೦ ರೂಪಾಯಿಗಳೊಳಗೂ ೧೫ರಮೇಲೂ ತಲಬು ಇರತಕ್ಕ ಕೆಲಸಗಳನ್ನು ಪರೀಕ್ಷೆಕೊಟ್ಟವರಿಗೆ ಕೊಡಬೇಕೆಂದು ಗೆಜೆಟಿನಲ್ಲಿ ಪ್ರಾಮಿಸ್ ಮಾಡಿಸಿದಾರೆ. ಇದಕ್ಕಾಗಿ ನಮ್ಮ ದೇಶೀಯರು ಇವರಿಗೆಬಹಳ 'ಕೃತಜ್ಞ'ರಾಗಿರಬೇಕು. ಆದರೆ ಸಾವಿರರೂಪಾಯಿ ಖರ್ಚುಗಳನ್ನು ಮಾಡಿ ಪರೀಕ್ಷೆಗಳನ್ನು ಕೊಟ್ಟ ೩೦ರೂಪಾಯಿಯೊಳಗಿನ ಸಂಬಳಕ್ಕೆ ಎಷ್ಟು ಜನ ಸೇರುವರೋ ಹೇಳುವದಕ್ಕಾಗುವದಿಲ್ಲ. ಭಾರೀ ಪರೀಕ್ಷೆಗಳನ್ನು ಕೊಟ್ಟವರು ಅನೇಕರು ಪರದೇಶದಲ್ಲಿ ಪ್ರೋತ್ಸಾಹವು ಹೆಚ್ಚಾಗಿಯೆಂದು ಈ ದೇಶವನ್ನೇ ಬಿಟ್ಟು ಹೋಗುತಲಿದಾರೆ, ಆದಾಗ್ಯೂ ದೊಡ್ಡ ಪರೀಕ್ಷೆ ಕೊಡುವದಕ್ಕೆ ಅನುಕೂಲವಿಲ್ಲದೆ ಅಲ್ಪಪರೀಕ್ಷೆ ಕೊಟ್ಟವರಿಗಾದರೂ ಇದು ಸಾಧಕವಾದೀತೋ ಏನೋ! ಮ|| ರಾ|| ನಾರಣಶಾಸ್ತ್ರಿಗಳ ಅಳಿಯಂದಿರಾದ ಪರಮ ಶಿವೈಯ್ಯರವರಿಗೆ ಸುಮಾರು ೧೭೫ ರೂಪಾಯಿ ಸಂಬಳವನ್ನು ಮಾಡಿ ಸ್ಯೂಪರ್‌ನ್ಯೂಮರೆರಿಯಾಗಿ ದಿವಾನರ ಆಫೀಸಿನಲ್ಲಿ ಇಟ್ಟುಕೊಂಡಿದಾರೆಂದು ಕೇಳಿ ಬಹಳ ಸಂತೋಷವಾಯಿತು.—ವೃ. ಪ.

ಬರುವ ಡಿಸೆಂಬರ್ ತಿಂಗಳಿನಲ್ಲಿ ಅಲಹಾಬಾದ್‌ನಲ್ಲಿ ನೇಷನಲ್ ಕಾಂಗ್ರೆಸ್ಸೆಂಬ ಸಭೆಯು ಸೇರಬೇಕೆಂದು ಕಳೆದ ಡಿಸೆಂಬರ್‌ನಲ್ಲಿ ನಡೆದ ಮುದರಾಸ್ ಕಾಂಗ್ರೆಸ್ಸಿನವರಿಂದ ನಿರ್ಧರಿಸಲ್ಪಟ್ಟಿರುವದಷ್ಟೆ. ಅದಕ್ಕಾಗಿ ಅಲಹಾಬಾದಿನಲ್ಲಿ ಈಗಿನಿಂದಲೇ ಸರ್ವಪ್ರಯತ್ನವೂ ಮಾಡಲ್ಪಡುವವು. ಅಲ್ಲಿನ ಸ್ಟ್ಯಾಂಡಿಗ್ ಕಮ್ಮಿಟಿಯವರು ಒಂದು ಎಗ್ಜಿಕ್ಯೂಟಿವ್ ಕಮ್ಮಿಟಿಯನ್ನು ಏರ್ಪಾಡು ಮಾಡಿರುತ್ತಾರೆ. ಈ ಕಮ್ಮಿಟಿಗೆ ಆನರೇಬಲ್ ಪಂಡಿತ ಅಯೋಧ್ಯಾನಾತರು ಪ್ರೆಸಿಡೆಂಟರಾಗಿಯೂ, ರಾಜಾ ರಾಮಪಾಲಸಿಂಗರವರು ಆನರೆರಿ ಸೆಕ್ರೆಟರಿಯಾಗಿಯೂ, ಬ್ಯಾರಿಸ್ಟರ್ ಸಯ್ಯದ್ ಅಬ್ದುಲ್ ರಫ್, ವಕೀಲ್ ಮುನ್ಷಿ ಮಾಧವ ಪ್ರಸಾದ್ ಮತ್ತು ಹಿಂದುಸ್ತಾನ್ ಪತ್ರಿಕೆಯ ಎಡಿಟರಾದ ಪಂಡಿತ ಮದನಮೋಹನ ಮಾಳವ್ಯ ಎಂಬುವರು ಜಾಯಿಂಟ್ ಸೆಕ್ರೆಟರಿಗಳಾಗಿಯೂ, ಮತ್ತು ಮ್ಯುನಿಸಿಪಲ್ ಕಮಿಷನರ ಜೂನಿಯರ್ ವೈಸ್‌ಚೇರ್‌ಮನ್ ಮತ್ತು ಸ್ಪೆಷಲ್ ಮೇಜಿಸ್ಟ್ರೇಟರಾದ ಲಾಲಾ ರಾಮಚರಣದಾಸು ಎಂಬುವರು ಖಜಾಂಚಿಯಾಗಿಯೂ ನಿಯಮಿಸಲ್ಪಟ್ಟಿರುತ್ತಾರೆ. ಮೊದಲನೇ ವರುಷ ಬೊಂಬಾಯಿನಲ್ಲಿ ನ್ಯಾಷನಲ್ ಕಾಂಗ್ರೆಸ್ ನಡೆದಾಗ ಸುಮಾರ್ ೭೫ ಮಂದಿ ಡೆಲಿಗೇಟ್‌ಗಳು ಸೇರಿದ್ದರು. ಆದಕಾರಣ ಬೊಂಬಾಯಿ ಪಟ್ಟಣದಲ್ಲಿ ಅವರಿಗೆ ಇಳಿದುಕೊಳ್ಳುವದಕ್ಕೆ ತಕ್ಕಸ್ಥಳವನ್ನು ಸಂಪಾದಿಸುವದಕ್ಕೂ ಸಭೆಯನ್ನು ಮಾಡುವದಕ್ಕೂ ಈಪಡಿ ಅನನುಕೂಲವುಂಟಾಗಲಿಲ್ಲವು. ಆಗ ಅಲ್ಲಿಕಾಂಗ್ರೆಸಿನಗದ್ದಲವೇ ತೋರಲಿಲ್ಲವು. ಎರಡನೇ ವರುಷ ಕಲ್ಕತ್ತಾದಲ್ಲಿ ಕಾಂಗ್ರೆಸ್ ನಡೆದಾಗ ಸುಮಾರು ೪೦೦ ಮಂದಿ ಡೆಲಿಗೇಟುಗಳು ಸೇರಿದ್ದರು. ಆದಾಗ್ಯೂ ಕಲ್ಕತ್ತಾ ಮಹಾಪಟ್ಟಣದಲ್ಲಿ ಅಷ್ಟುಮಂದಿ ಇಳಿದುಕೊಳ್ಳುವದಕ್ಕೂ ಸಭೆಯನ್ನುಸೇರಿಸುವದಕ್ಕೂ ಅನುಕೂಲವಾದ ಸ್ಥಳಸಿಕ್ಕುವದಕ್ಕೆ ಸ್ವಲ್ಪವೂ ಕಷ್ಟವಾಗಲಿಲ್ಲವು. ಮೂರನೇವರುಷ ಮುದರಾಸ್‌ನಲ್ಲಿ ಕಾಂಗ್ರೆಸ್ ಜರಿಗಿದಾಗ ಸುಮಾರು ೬೦೦ ಮಂದಿ ಡೆಲಿಗೇಟುಗಳು ಕಲೆತಿದ್ದರು. ಮುದರಾಸ್ ಇಂಡಿಯಾ ರಾಜ್ಯದಲ್ಲಿ ಮೂರನೇ ಪಟ್ಟಣವಾದಾಗ್ಯೂ ಹಿಂದುಸ್ಥಳದಲ್ಲಿ ಬಂದ ಡೆಲಿಗೇಟುಗಳನ್ನು ಇಳಿಸುವದಕ್ಕೆ ಅವಕಾಶ ದೊರಕದೆ ಸಮೀಪಸ್ತವಾಗಿರುವ ಕೆಲವು ಬಂಗಲೆಗಳನ್ನು ಅವುಗಳಿಗೆ ಸೇರಿದ ತೋಟಗಳೊಡನೆ ಗೊತ್ತುಮಾಡಿದ್ದಲ್ಲದೆ ಅನೇಕ ಡೇರಾಗಳನ್ನು ಕೂಡ ಅಲ್ಲಿನ ರಿಸೆಪ್ಷನ್ ಕಮ್ಮಿಟಿಯವರು ಸಿದ್ಧಪಡಿಸಿದ್ದರು. ನಾಲ್ಕನೇ ಕಾಂಗ್ರೆಸ್ ಅಲಹಾಬಾದಿನಲ್ಲಿ ಜರಗಹೋಗುವದು. ಅದು ೧,೪೮,೩೧೨ ಪ್ರಜೆಯುಳ್ಳಂಥಾ ಪಟ್ಟಣವಾದಾಗ್ಯೂ ಡೆಲಿಗೇಟುಗಳಾಗಿ ಬರುವ ಸುಮಾರು ೧೦೦೦ ಮಂದಿಗೆ ವಸತಿಯಾದ ಸ್ಥಳವನ್ನುಂಟಾಗಿರುವದಿಲ್ಲವು ಮತ್ತು ಅಷ್ಟು ದೊಡ್ಡ ಸಭೆಗೆ ತಕ್ಕಸೌಧವೂ ಇರುವದಿಲ್ಲವು. ಈ ಅನನುಕೂಲವನ್ನು ಕಂಡು ಆಗಲೆ ಎಗ್ಜಿಕ್ಯೂಟಿವ್ ಕಮ್ಮಿಟಿಯವರು ಬರುವ ಕಾಂಗ್ರೆಸ್ ಮೀಟಿಂಗಿಗೋಸ್ಕರ ಖಾಸ್ರುಬಾಗಿ ಎಂಬ ಪ್ರದೇಶವನ್ನು ಸಂಪಾದಿಸಲು ಅಲ್ಲಿನ ಕಮ್ಮಿಷನರ್ ಮಿ|| ಪೋರ್ಟಿಯಸ್‌ಯವರಲ್ಲಿಗೆ ಆನರೇಬಲ್ ಪಂಡಿತ ಅಯೋಧ್ಯಾನಾತ, ರಾಜಾ ರಾಮಪಾಲಸಿಂಗ್ ಮ ಆಟಕಿನ್ಸ್, ಮ್ಯಾಕ್ರೋಲಿ, ಲಾಲಾರಾಮಚರಣ ಮೆ ಜ್ಹಿಲ್ಲಿ, ಮಿ ಮಹಮುದ್ ಪುರಕೆ, ಬಾಬು ಚಾರುಚಂದ್ರಮಿತ್ರ ಮೊದಲಾಗಿಯುಳ್ಳಂತಾ ಒಂದು ಡೆಪ್ಯುಟೇಷನನ್ನು ಕಳುಹಿಸಿಕೊಟ್ಟರು. ಜನಾನುರಾಗವುಳ್ಳ ಲೆಫ್ಟಿನೆಂಟ್ ಗವರ್ನರ್‌ಯವರ ಅಭಿಮತಾನುಸಾರವಾಗಿ ಕಮ್ಮಿಷನರವರು ಡೆಪ್ಯುಟೇಷನ್‌ಯವರ ಮನವೆಯಂತೆ ಅಪ್ಪಣೆಕೊಟ್ಟರು. ಅದ್ದರಿಂದ ಮುಂದಿನ ಕಾಂಗ್ರೆಸ್ಸಿಗೆ ಅಲಹಾಬಾದಿನಲ್ಲಿ ಎಲ್ಲಾ ಅನುಕೂಲವು ಉಂಟಾಗುವದಕ್ಕೇನು ಸಂಶಯವಿಲ್ಲವು. ಅಲ್ಲಿ ಒಂದೇಸ್ಥಳದಲ್ಲಿ ಡೆಲಿಗೇಟುಗಳಿಗೆಲ್ಲ ಡೇರಾಗಳು ಹಾಕಲ್ಪಡುತ್ತವೆಯಾಗಿ ನಾನಾದೇಶದಿಂದ ಬಂದು ಸೇರುವ ಡೆಲಿಗೇಟುಗಳು ಪರಸ್ಪರ ಪರಿಚಯಗಳನ್ನು ಸುಲಭವಾಗಿ ಮಾಡಿಕೊಂಡು ತಮ್ಮ ತಮ್ಮ ಮನೋಭಿಪ್ರಾಯವನ್ನು ಒಬ್ಬರೊಬ್ಬರಿಗೆ ಹೊರಪಡಿಸುವದಕ್ಕೆ ಅವಕಾಶ ಉಂಟಾಗುವದು. ಅಲ್ಲಿನ ಲೆಫ್ಟಿನೆಂಟ್ ಗವರ್ನರ್ ಸರ್ ಅಕ್ಲೆಂಡ್ ಕಾಲ್ವಿನ್‌ಯವರ ಉದಾರಗುಣದಿಂದಲೇ ಖಾಸ್ರುಬಾಗೆಂಬ ತೋಟವು ದೊರಕಿದ್ದಾಗಿರುತ್ತದೆ. ಈ ರಾಜ್ಯದ ಉನ್ನತಾಧಿಕಾರಿಗಳು ನ್ಯಾಷನಲ್‌ಕಾಂಗ್ರೆಸ್ಸಿನ ಶೀಲಸ್ವಭಾವವನ್ನರಿತು ಅದರಿಂದ ದೇಶಕ್ಕೆ ಉತ್ತರೋತ್ತರ ಉಂಟಾಗಬಹುದಾದ ಕ್ಷೇಮವನ್ನು [illegible] ಮಾಡಿಕೊಂಡು ಅದಕ್ಕೆ ತಕ್ಕ ಪ್ರೋತ್ಸಾಹವನ್ನು ಕೊಡುತ್ತಾರೆ. ಎಲ್ಲಿಯೂ ಹೊಟ್ಟೆಕಿಚ್ಚುಳ್ಳ ಸರ್ ಲೆಪಿಲ್ ಗ್ರಿಫಿನ್‌ಯವರಂತೆ ಕೆಲವು ಅಧಿಕಾರಿಗಳು ಮಾತ್ರ ಅದಕ್ಕೆ ವಿಮುಖರಾಗಿರುತ್ತಾರೆ. ಅದರಿಂದ ಕಾಂಗ್ರೆಸ್ಸಿಗೆ ಬಾಧಕವೇನೂ ತೋರುವದಿಲ್ಲವು. ಅವರು ಹೊಟ್ಟೆಕಿಚ್ಚು ಪಡುವದೊಂದೇ ಅವರಿಗೆ ಲಾಭವಾಗುತ್ತದೆ. ಕಳೆದ ಡಿಸೆಂಬರ್‌ನಲ್ಲಿ ಮುದರಾಸಿನ ರಿಸೆಪ್ಷನ್ ಕಮ್ಮಿಟಿಯವರು ಅತಿಥಿಗಳ ಸತ್ಕಾರವನ್ನು ಬಹುದ್ರವ್ಯ ವೆಚ್ಚದಿಂದ ಶ್ಲಾಘನೀಯವಾಗಿ ಮಾಡಿದರು. ಅದಕ್ಕಾಗಿ ಉತ್ತರ ದೇಶದಿಂದ ಬಂದಿದ್ದ ಡೆಲಿಗೇಟುಗಳೆಲ್ಲ ಸದರೀ ಕಮ್ಮಿಟಿಯವರನ್ನು ಕೊಂಡಾಡಿ ಹೊರಟುಹೋದರು. ಅಲಹಾಬಾದ್ ಸ್ಟ್ಯಾಂಡಿಂಗ್ ಕಮ್ಮಿಟಿಯವರು ಈಸಾರಿ ತತೋಽಪ್ಯತಿಶಯವಾಗಿ ಮಾಡಬೇಕೆಂಬ ಕುತೂಹಲವನ್ನು ಈಗಲೇ ಹೊರಪಡಿಸುತ್ತಾ ಇದ್ದಾರೆ. ಈ ಕಾಂಗ್ರೆಸ್ಸಿನಲ್ಲಿ ಹಿಂದಿನ ಕಾಂಗ್ರೆಸ್ಸುಗಳಿಗಿಂತ ಹೆಚ್ಚಾಗಿ ಮುಸಲ್ಮಾನರು, ಯೂರೋಪಿಯನ್ನರು, ಮೊದಲಾದ ಇತರ ಮತಸ್ಥರು ಕಲೆಯುವರೆಂದು ಈಗಲೇ ಎಗ್ಜಿಕ್ಯೂಟಿವ್ ಕಮ್ಮಿಟಿ ಡೆಪ್ಯುಟೇಷನ್‌ಗಳಿಂದ ತಿಳಿಯಬರುತ್ತದೆ. ಅಲಹಾಬಾದ್ ಸ್ಟ್ಯಾಂಡಿಂಗ್ ಕಮ್ಮಿಟಿಯವರಿಗೆ ದೇವರು ಕೃಪೆಮಾಡಿ ಶುಭವನ್ನುಂಟು ಮಾಡಲೆಂದು ನಾವು ಅಂತರವಾಗಿ ಪ್ರಾರ್ಥಿಸುತ್ತೇವೆ.—ವಿಜಯಧ್ವಜ.

BANGALORE:—Printed and published for the Proprietor at the KARNATIC Press.—1888

ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA.

ಪ್ರತಿ ಸೋಮವಾರ ಪ್ರಾತಃಕಾಲದಲ್ಲಿ ಪ್ರಕಟಿಸಲ್ಪಡುವದು.

Published every Monday Morning.

Vol. XV | BANGALORE—MONDAY, MAY 7, 1888. [N

ಸಂಪುಟ ೧೫. | ಬೆಂಗಳೂರು:—ಸನ ೧೮೮೮ನೇ ಇಸವಿ ಮೇ ೭ನೇ ತಾರೀಖು ಸೋಮವಾರ. [ಸಂ

ಕರ್ಣಾಟಕ ಪ್ರಕಾಶಿಕಾ

ಪತ್ರಿಕೆಯ ಚಂದಾ ದರಗಳು, ೧೮೮೮ನೇ ಇಸವಿ ಜನವರಿಯಿಂದ ಗೊತ್ತುಮಾಡಲ್ಪಟ್ಟಿರುತ್ತದೆ.

ಈ ಪತ್ರಿಕೆಯ ಚಂದಾದಾರರ್ವುಕೆ ಅನೇಕ ರ ಅಪೇಕ್ಷೆಯನ್ನು ನೆರೇರಿಸುವ ಉದ್ದೇಶವೊಡನೆ ಯೂ, ಪರಿಮಿತವಾದ ಆದಾಯವುಳ್ಳವರಿಗೆಲ್ಲ ಈ ಪತ್ರಿಕೆಯು ಸುಲಭವಾಗಿ ಲಭಿಸುವಂತೆ ಬೇಕೆಂಬ ಅಭಿಪ್ರಾಯದಿಂದಲೂ ಇದರ ಚಂದಾದರವನ್ನು ಇದರ ಕೆಳಗೆ ಕಾಣಿಸಿರುವಂತೆ ಕಡಿಮೆ ಮಾಡಿರುತ್ತೇವೆ:—

ಇಂಗ್ಲಿಷ್ ಮತ್ತು ಕನ್ನಡಭಾಗಗಳಿಗೆ.

		ಸ್ಥಳದವರಿಗೆ	ಪರಸ್ಥಳದವರಿಗೆ
12	ತಿಂಗಳಿಗೆ	8—0—0	9—0—0
6	„	4—0—0	4—8—0
3	„	2—8—0	2—8—0

ಇಂಗ್ಲಿಷ್ ಅಥವಾ ಕನ್ನಡಭಾಗಗಳಿಗೆ.

		ಸ್ಥಳದವರಿಗೆ	ಪರಸ್ಥಳದವರಿಗೆ
12	ತಿಂಗಳಿಗೆ	4—0—0	5—0—0
6	„	2—0—0	2—8—0
3	„	1—4—0	1—8—0

ಷರಾ—ಅಂದರೆ ಮುನ್ಸೀಫರು, ವಕೀಲರು ಮತ್ತು ದಿವಾನ್ ಸಾಹೇಬರವರುಗಳು, ಶ್ಯಾನುಭೋಗರು, ಪಟೇಲರು, ವಿದ್ಯಾರ್ಥಿಗಳು, ಇವರೆಲ್ಲರೂ ಈ ಪತ್ರಿಕೆಯ ಸಹಾಯ ಪಡೆಯಬೇಕಾಗಿ ಕೋರಲ್ಪಡುವರು. ... ಚಂದಾದಾರರು ಇಂಗ್ಲಿಷ್ ಭಾಗವನ್ನಾಗಲಿ ಕನ್ನಡಭಾಗವನ್ನಾಗಲಿ ಅಥವಾ ಎರಡನ್ನಾಗಲಿ ಬೇರೆಬೇರೆಯಾಗಿ ತೆಗೆದುಕೊಳ್ಳಬಹುದು. ಚಂದಾಹಣವನ್ನು ಮುಂಗಡವಾಗಿ ಕೊಡತಕ್ಕದ್ದು. ಮೂರು ತಿಂಗಳಿಗಿಂತ ಕಡಿಮೆ ಚಂದಾ ಕೊಡಲು ಅಂಗೀಕರಿಸಲ್ಪಡುವದಿಲ್ಲ.

ನೋಟೀಸುಗಳು ರವಾನಿಸತಕ್ಕವರು ... ಕಾಗದಕ್ಕೆ ಬಾಕಿ ಅರ್ಧ ... ವ್ಯವಹಾರಕ್ಕೆ ಸಂಬಂಧಿಸಿದ ... ವಿತ್ಯಾದಿಗಳು ... ಪ್ರಕಟನೆಯ ವಿವಾಹ್.

ಮೊದಲನೆಯದಾಗಿ ಪಂಕ್ತಿ ಒಂದಕ್ಕೆ	೦—೨—೦
ಎರಡನೆಯದಾಗಿ ಪಂಕ್ತಿ ಒಂದಕ್ಕೆ	೦—೧—೦

ಷರಾ—ಎರಡಾವರ್ತಿಗಿಂತ ಜಾಸ್ತಿಯಾಗಿ ... ಕಡಿಮೆ ಚಾರ್ಜ ಮಾಡಲ್ಪಡುವದು. ಈ ಪತ್ರಿಕೆಯಲ್ಲಿ ... ಪ್ರಕಟಣೆಗಳು ... ಹಣವನ್ನು ಮುಂಗಡವಾಗಿ ... ಈ ಪತ್ರಿಕೆಗೆ ... ಪ್ರಕಟಿಸಲ್ಪಡುವ ... ಕರ್ತೃ ...

"IT RECOMENDS ITSELF"

ALL WHO SUFFER FIND SURE RELIEF

LITTLE'S

THE MOST EFFECTUAL MODERN REMEDY FOR PAIN.

ಲಿಟಲ್ ಓರಿಯಂಟಲ್ ಬಾಮ್ ... ಈ ತೈಲವನ್ನು ... ಇದರಿಂದ ... ನೋವು, ... ಕಾಯಿಲೆಗಳು ... ಗುಣವಾಗುವದು. ... ಈ ತೈಲವು ... ಅಮೂಲ್ಯವಾದದ್ದು.

ಪರೀಕ್ಷಕರ ಅಭಿಪ್ರಾಯವು.

ಐರ್ಲ್ಯಾಂಡ್ ದೇಶದ ಫಾರ್ಮಾಸ್ಯೂಟಿಕಲ್ ಸೊಸೈಟಿಯ ... ಲಂಡನ್ ... (C. R. Tichborne, L. L. D., F. C. S., M. R. I. A.) ... ಈ ತೈಲವು ಸಂಪೂರ್ಣ ... ತೋರುತ್ತದೆ.

ಇದರ ಕ್ರಯ—ಸೀಸೆ ಒಂದಕ್ಕೆ ೧ ರೂಪಾಯಿ.

ಇದು ... ಮದರಾಸ್ ... ಕಂಪೆನಿ ... ದೊರೆಯುವದು.

AGENTS.— Messrs. J. West, *Chemist, &c., Bangalore.*
Cappan & Co. *Chemists, Bangalore.*
Riggs & Co., *Chemists, Bangalore;* and of
Mahomed Yousoff and Sons, *The Cash Bazar, Bangalore.*
A. C. Berryman & Co.,
20 *Sambodoss Street Madras.*

NOTICE.

VAIDYASARA SANGRAHA

A TREATISE ON THE PRINCIPLES OF

HINDU MEDICINE.

Price including Postage Rs 5 6-0

ವೈದ್ಯಸಾರ ಸಂಗ್ರಹ.

ಈ ಗ್ರಂಥವು ... ಬೇಕಾದವರು ... ನಿಗೆ ... ಕಳುಹಿಸಲ್ಪಡುವದು.

ಇದರ ಕ್ರಯ ... ... ರೂ ೫—೦—೦
ಪ್ಯಾಕಿಂಗ್ ಮತ್ತು ಅಂಚೆಯಾಸುಲ್ ೦—೬—೦

ಟಿ. ಬಿ. ವೆಂಕಟಾಚಾರ್,
ಆಸ್ಪತ್ರೆ ... ಬೆಂಗಳೂರು.

ಹಿಂದೂ ವರ್ತಮಾನ

ಇದು ... ಚಿತ್ರಶಾಲಾ ... ಕಳುಹಿಸಲ್ಪಡುವದು.

ಪುಣೆ ... ಚಿತ್ರಶಾಲಾ ಪ್ರೆಸ್ ...

ಹರಾಜ್ ನೋಟಿಸ್.

[ಸ್ಥಿರಸ್ವತ್ತಿನ ವಿಕ್ರಯ.]

ಬೆಂಗಳೂರು "ಕಂಟೋನ್ಮೆಂಟ್" ಎಂಬ ಪ್ರದೇಶದಲ್ಲಿರುವ ... ನಂಬರ್, ಮಿಸ್ಟರ್ "ಕಾರ್ಡಿಂಗ್ ..." ಎಂಬುವರ ... ವಿಕ್ರಯ ... ೧೮೮೮ನೇ ಇಸವಿ ಮೇ ೧೦ನೇ ತಾರೀಖು ಗುರುವಾರ ಮಧ್ಯಾಹ್ನ ... ಹರಾಜು ... ವಿಕ್ರಯಿಸಲ್ಪಡುವದು.

ಮುಖ್ಯವಾದ ... ಅತಿ ... ಕಟ್ಟಡಗಳ ... ತಿಳಿಯಬೇಕು:—

... ವಿಶಾಲವಾದ ಹಾಲ್ ಎಂಬ ... ಮತ್ತು ... ಕೋಣೆಗಳು ...

ಈ ಮುಖ್ಯವಾದ ಕಟ್ಟಡದ ಹಿಂಭಾಗದಲ್ಲಿ ... ಕೋಣೆಗಳು ...

... ರೂಪಾಯಿ ಬಾಡಿಗೆ ಬರುವ ...

೩. ... ಕೋಣೆಗಳು ... ಕಾಂಪೌಂಡ್ ...

ಮೇಲ್ಕಂಡ ... ಮೆಸ್ಸರ್ಸ್ ಕಾರ್ಡಿಂಗ್ ... ದ ಸಿ ಎ. ... ಎಸ್ಕ್ವೈರ್ ಅವರಿಗೆ ಬರೆದು ತಿಳಿದುಕೊಳ್ಳಬಹುದು.

ನೋಟೀಸು.

ಎಡೆಕಲ್ಲು ನೇಟಿವ್ ಧರ್ಮಾಭಿವೃದ್ಧಿ ಕಂಪೆನಿ ಲಿಮಿಟೆಡ್ ಆಫೀಸಿನಿಂದ.

ಇದರಿಂದ ಎಲ್ಲರಿಗೂ ತಿಳಿಯಪಡಿಸುವ ದೇನೆಂದರೆ,—ಈ ಕಂಪೆನಿಗೆ ಹೊಸದಾಗಿ ಮೆಂಬರ್‌ಗಳು ... ೧೮೮೭ನೇ ಇಸವಿ, ... ೧೮೮೮ನೇ ಇಸವಿ ಜನವರಿ ... ಷೇರ್ ... ಕಂಪೆನಿಯ ... ರಿಜಿಸ್ಟರ್‌ನಲ್ಲಿ ... ನೋಟೀಸ್ ಅನುಸರಿಸಿ ೧೮೮೮ನೇ ಇಸವಿ ಮೇ ತಾರೀಖು ... ಇಸವಿ ಸೆಪ್ಟೆಂಬರ್ ... ಹಾಜರಾಗಿ ... ಸಲ್ಲಬೇಕಾಗುವ ಬಾಬಲುಗಳು ...

ಟಾಂಕ ರಶೀದಿ ಕೊಡತಕ್ಕದ್ದು. ಮೇಲ್ಕಂಡ ತಾರೀಖುದೇ ಗತಿಸಿದನಂತರ ಕಂಪನಿಯವರು ಜವಾಬ್ದಾರರಾಗಿರುವದಿಲ್ಲವಾದ ಮಜಕೂರು ತಿಳಿಯಪಡಿಸಿದೆ.

ತಾ|| ೨೧—೪—೮೮ನೇ ಇಸವಿ. ಯುತಕಲ್ಲು. } ಸಂಕರ ಕೃಷ್ಣಪ್ಪ, ರಿಜಿಸ್ಟ್ರೇಟರ್

ಪ್ರಕಟನೆ.

ಪ್ರೆಸ್ ಚಿತ್ರಶಾಲೆಯಲ್ಲಿ ತಯಾರಾಗುವ ಪಟಗಳು ಬೆಂಗಳೂರು ಮಾಮೂಲ್‌ಪೇಟೆ ಡೋರ್ ನಂ|| ೫೧ನೇ ಮನೆಯಲ್ಲಿ ಕ್ರಯಕ್ಕೆ ಸಿಕ್ಕುತವೆ. ಇಷ್ಟಪಟ್ಟವರು ತೆಗದುಕೊಳ್ಳಬಹುದು.

ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA.

MONDAY, MAY 7, 1883.

೧೮೮೩ನೇ ಮೇ ೭ನೇ ತಾ|| ಸೋಮವಾರ

NATIVE STATES OF INDIA.

ಇಂಡ್ಯದೇಶದ ನೇಟಿವ್‌ಸಂಸ್ಥಾನಗಳಂ ಕುರಿತು.

ಸನ್ ೧೮೫೭ನೇ ಇಸವಿಯಲ್ಲಿ ಪ್ರಖ್ಯಾತವಾದ ಕಲಹಕ್ಕೆ ಪೂರ್ವದೊಳುಂಟಾದ ವಿರುದ್ಧ ಫಲವು ಬ್ರಿಟಿಷ್‌ರಾಜ್ಯದಲ್ಲಿ ಮಧ್ಯಮಧ್ಯೆ ಇರತಕ್ಕ ಸಣ್ಣ ಸಣ್ಣ ನೇಟಿವ್‌ಸಂಸ್ಥಾನಗಳುಂಟಾಗಿ, ಬ್ರಿಟಿಷ್‌ಗವರ್ನ್‌ಮೆಂಟಿನವರಿಗೆ ತೊಂದರೆಗಳಿಗೆ ಕಾರಣವಾದದರಿಂದ ಅವು ಬ್ರಿಟಿಷ್ ರಾಜ್ಯಕ್ಕೆ ಯಾವ ವಿಧದಿಂದಲೂ ಬಲಕರವಾಗಿರುವದಿಲ್ಲವೆಂದು ಲಾರ್ಡ್ ಡಲಹೌಸೀ ಸಾಹೇಬರವರು ಅಭಿಪ್ರಾಯಪಟ್ಟು ಕ್ರಮೇಣ ನೇಟಿವ್ ಸಂಸ್ಥಾನಗಳನ್ನೆಲ್ಲ ಬ್ರಿಟಿಷ್ ರಾಜ್ಯದೊಡನೆ ಪಾಲುಮಾಡಿಕೊಳ್ಳಲೆತ್ನಿಸಿದರು. ಪಾಶ್ಚಾತ್ಯ ದೇಶದಲ್ಲಿ ನಡೆದ ಕಲಹವನ್ನು ಪ್ರತ್ಯಕ್ಷವಾಗಿನೋಡಿದಬಳಿಕ ಲಾರ್ಡ್ ಕ್ಯಾನಿಂಗ್‌ರವರು, ಬ್ರಿಟಿಷ್ ಸೀಮೆಯಲ್ಲಿ ಮಧ್ಯೆಮಧ್ಯೆ ಇರುವ ಸಣ್ಣಸಂಸ್ಥಾನಗಳಿಂದ ಬ್ರಿಟಿಷ್‌ರಾಜ್ಯವು ಬಚಾವಾಯಿತೆಂತಲೂ, ಸದರೀ ಸಂಸ್ಥಾನಗಳ ಕುಮ್ಮಕ್ ಇಲ್ಲದೆಹೋದರೆ ನಮ್ಮ ರಾಜ್ಯಭಾರವು ಒಂದೇಸಲ ಮೂಲತೋ ಹಾನಿಯನ್ನೈದಿರುವದರೊಳೇನೂ ಸಂಶಯವಿರಲಾರದೆಂತಲೂ ವಿಶ್ವಾಸವುಳ್ಳ ನೇಟಿವ್ ಅರಸರನ್ನು ಕಾಪಾಡುವದರಿಂದ ಬ್ರಿಟಿಷ್‌ರಾಜ್ಯವು ಬಂದೋಬಸ್ತಾಗಲಿಕ್ಕೆ ಕಾರಣವಾಯಿತೆಂತಲೂ ತಿಳಸಿದರು. ನೇಟಿವ್ ಸಂಸ್ಥಾನಗಳ ವಿಷಯದೊಳು ಲಾರ್ಡ್ ಡೆಲ್‌ಹೌಸಿಯವರಿಗುಂಟಾಗಿದ್ದ ತಾತ್ಪರ್ಯವೇ ಆಕಾಲದಲ್ಲಿದ್ದ ಬ್ರಿಟಿಷ್ ದೊಡ್ಡಮನುಷ್ಯರಿಗೆ ಹುಟ್ಟಿದ್ದದರಿಂದ ಅದು ಮಹದನರ್ಥಕ್ಕೆಕಾರಣವಾಗಿ ಸನ್ ೧೮೫೮ನೇ ಇಸವಿಯಲ್ಲಿ ಇಂಗ್ಲೆಂಡಿನ ಅರಸರಿಗೂ, ಪ್ರಮುಖರಿಗೂ, ಪ್ರಜೆಗಳಿಗೂ ಶ್ರೀಮನ್ಮಹಾರಾಜ್ಞೀಯವರು ಒಂದು ಇಷ್ತಿಹಾರ್‌ನಾಮೆಯ ಮೂಲಕ ಅವರುಗಳ ಹಕ್ಕುದಾರಿಗಳೆಲ್ಲವೂ ಸುರಕ್ಷಿಸಲ್ಪಡುವವೆಂದು ಖುದ್ ಭರವಸೆ ಕೊಡಬೇಕಾಯಿತು. ಆದ್ಯೆಕಿ ಇಂಡ್ಯದೇಶದೊಳಗಿನ ನೇಟಿವ್ ಸಂಸ್ಥಾನಾಧಿಪತಿಗಳನ್ನು ಕುರಿತು ತಿಳಿಸುವಾಗ್ಯೆ, ಅವರುಗಳೊಡನೆ ಮಾಡಿಕೊಳ್ಳಲ್ಪಟ್ಟಿರುವ ತಹನಾಮೆ ಗಳೆಲ್ಲವೂ ಯಾವಾಗಲೂ ಪ್ರಮಾಣ ಪುರಸ್ಸರವಾಗಿ ನಡೆಸಲ್ಪಡುವವೆಂತಲೂ, ಅವರ ರಾಜ್ಯಗಳಲ್ಲಿ ಯಾವವಿಧ ಜುಲುಮನ್ನೂ ನಡೆಯಗೊಡಿಸುವದಿಲ್ಲವೆಂತಲೂ, ನೇಟಿವ್‌ಅರಸರ ಹಕ್ಕುದಾರಿಗಳು, ಘನತೆ, ಗೌರವ ಮುಂತಾದವುಗಳನ್ನು ಸ್ವೀಯಗಳೋಪಾದಿಯಲ್ಲಿ ಭಾವಿಸುವೆವೆಂತಲೂ ಭರವಸೆ ಕೊಟ್ಟಿರುತ್ತಾರೆ. ಇಂತಾ ಭರವಸೆಯನ್ನು ಕಾಪಾಡಬೇಕೆಂಬ ಸಂಕಲ್ಪದೊಡನೆಯೂ, ಸ್ವದೇಶ ಅರಸರ ರಾಜ್ಯಭಾರವು ಯೋಗ್ಯವಾಗಿರುವ ಪಕ್ಷಕ್ಕೆ ಅದು ಅನ್ಯದೇಶದವರ ಪಾಲನೆಗಿಂತ ಶ್ಲಾಘ್ಯವಾಗಿರುವದೆಂಬ ಭಾವನೆಯೊಡನೆಯೂ, ಅನ್ಯದೇಶೀಯರು ಸ್ವದೇಶೀಯರ ತಾತ್ಪರ್ಯವನ್ನು ಚನ್ನಾಗಿ ತಿಳದು ಕೆಲಸನಡೆಸಲಾರರಲ್ಲದೆ ಅವರು ತಮ್ಮ ಪಾಲನೆಗೊಳಗಾದ ಜನಗಳನ್ನು ಕೇವಲ ಅಸ್ವತಂತ್ರರನ್ನಾಗಿಮಾಡುವರೆಂಬ ಶಂಕೆಯೊಡನೆಯೂ ನೇಟಿವ್ ಸಂಸ್ಥಾನಗಳ ವಿಷಯದಲ್ಲಿ ಸ್ವಪ್ರಯೋಜನಕ್ಕೆ ಭಂಗ ಪ್ರಾಪ್ತವಾಗದಿರುವ ಮಟ್ಟಿಗೆ ಮೇಲ್ಕಂಡ ಭರವಸೆಗಳನ್ನು ಕಾಪಾಡುತ ಖಿಲವಾಗುತಬಂದ ರಾಜವಂಶಗಳನ್ನೆಲ್ಲ ಮರಳಿ ಊರ್ಜಿತ ಪಡಿಸಿ, ನ್ಯಾಯವಾದ ಹಕ್ಕುದಾರರಂ ಕಂಡು ಹಿಡಿದು, ತಮಗೆ ಸಾಧ್ಯವಾದ ಮಟ್ಟಿಗೆ ಅವರಂ ಅಭಿವೃದ್ಧಿಗೆ ತಂದು, ಅವರವರ ರಾಜ್ಯಗಳಂ ಅವರವರಿಗೆ ವಾಪಸುಕೊಟ್ಟು, ತಮ್ಮ ಜವಾಬ್ದಾರೀಯನ್ನು ನಿವೃತ್ತಿಸಿಕೊಂಡು ತಾಟಸ್ಥ್ಯಭಾವದೊಡನೆ ಹಿಂದೂಅರಸರ ಆಡಳಿತ ಕ್ರಮಗಳನ್ನು ನೋಡುತಲಿದಾರೆ. ನೇಟಿವ್ ಅರಸರ ರಾಜ್ಯಭಾರ ಕ್ರಮದಲ್ಲಿ ಬ್ರಿಟಿಷ್ ಗವರ್ನ್‌ಮೆಂಟಿನವರಿಗೆ ಪ್ರತಿಪತ್ತಿಯನ್ನುಂಟುಮಾಡಲಿಕ್ಕೆ ಹೈದರಾಬಾದಿನಲ್ಲಿ ಸರ್‌ಸಾಲಾರ್ ಜಂಗರವರ ಆಡಳಿತಕ್ರಮವೂ, ಗ್ವಾಲಿಯರ್ ಸಂಸ್ಥಾನದಲ್ಲಿ ಸರ್ ದಿನಕರರಾಯರವರ ಪ್ರಭುತ್ವಕ್ರಮವೂ, ಬರೋಡೆಯಲ್ಲಿ ಸರ್. ಟಿ. ಮಾಧವರಾಯರವರ ಕಾರ್ಕರ್ದಿಯೂ ನಿಮಿತ್ತಕಗಳಾಗಿದ್ದವು. ಇವಲ್ಲದೆ ಈ ಸಂಸ್ಥಾನಾಧಿಪತಿಗಳಲ್ಲೊಕಿ ಒಬ್ಬ ಇಬ್ಬರು ಬಾಲ್ಯದಶೆಯೊಳಿದ್ದಾಗ್ಯೂ ಆಗ್ಯೆ ಅವರು ವ್ಯಕ್ತಪಡಿಸಿದ ಕೆಲವು ಸುಗುಣಗಳು, ಮುಖ್ಯವಾಗಿ ಪಾರತಂತ್ರ್ಯವು, ಬ್ರಿಟಿಷ್ ಗವರ್ನ್‌ಮೆಂಟಿನವರನ್ನು ಮರುಳುಗೊಳಿಸಿ ಅವರಲ್ಲಿ ವಿಶೇಷ ನಂಬಿಕೆಯನ್ನಿಡುವಂತೆ ಮಾಡಿತು. ಕಾಲಗತಿಯಿಂದ ದೇಶಜನ ಕ್ಷೇಮಾಭಿಮಾನಿಗಳಾದ ಅರಸರೂ ಸ್ವಾಮಿಭಕ್ತಿಯುಳ್ಳ ಮಂತ್ರಿಗಳೂ ಗತಿಸಿದ್ದರಿಂದ ದೇಶ ಜನಾನುರಾಗ ವಿಲ್ಲದವರಾಗಿಯೂ, ಲೋಕಾನುಭವವಿಲ್ಲದವರಾಗಿಯೂ, ಸ್ವೇಚ್ಛಾಪ್ರವೃತ್ತಿಯುಳ್ಳವರಾಗಿಯೂ, ಉದಾಸೀನರಾಗಿಯೂ ಇರತಕ್ಕ ಬಾಲಕರ ವಿಚಾರಣೆಗೆ ವಿಶಾಲವಾದ ರಾಜ್ಯಗಳನ್ನೂ ಅನೇಕಲಕ್ಷಪ್ರಜೆಗಳನ್ನೂ ಒಳಪಡಿಸಿ, ಅವರಿಗೆ ಸಹಾಯಕ್ಕಾಗಿ, ಕೇವಲ ಸ್ವಪ್ರಯೋಜನ ಪರರಾದ ವಿದೇಶೀಯರನ್ನು ನೌಕರರನ್ನಿಡುವಂತೆ ಪರಿಣಮಿಸಿತು. ಇದರಿಂದ ಅರಸರಿಗೆ ಸ್ವೀಯಭಾವವೆಂಬದಿಲ್ಲದೆ ಹೋಗಿರುವದುಮಾತ್ರವಲ್ಲದೆ ಅವರ ಮಂತ್ರಿಗಳಾಗಿರುವವರು, ತಮ್ಮ ಪ್ರಯೋಜನಕ್ಕೆಲ್ಲಿ ಭಂಗ ಪ್ರಾಪ್ತವಾಗುವದೋ ಎಂಬ ಶಂಕೆಯೊಡನೆ, ತಮ್ಮ ಪ್ರಭುಗಳಿಗೆ ಪ್ರಾಯಕಾಲದಲ್ಲಿ ತಕ್ಕ ಆಲೋಚಕರಾಗಿರುತ ಅವರಂ ನಾನಾರೀತಿಯಿಂದತಿದ್ದಿ ಕ್ರಮಪಡಿಸದೆ ಹೋಗಲಿಕ್ಕೂ, ತಮ್ಮ ಅರಸರ ಪಾಲ್ಯ ಸುಖಾದನಾರ್ಥ ಅವರೊಡನೆ ತಾವೂ ಮಗ್ನ ಸ್ವೇಚ್ಛಾಚರಣೆಯಲಿಕ್ಕೂ ಆಸ್ಪದವಾಯಿತು. ಈಗ ಇಂಡ್ಯದೇಶದ ನೇಟಿವ್ ಸಂಸ್ಥಾನಗಳಲ್ಲೊಕಿ ವಿಸ್ತೀರ್ಣದಿಂದಲೂ ಐಶ್ವರ್ಯದಿಂದಲೂ ಗೌರವದಿಂದಲೂ, ವೈಲಕ್ಷಣ್ಯದಿಂದಲೂ ಜನಗಳ ಸ್ಮರಣೆಗೆ ವಿಷಯಗಳಾಗಿರತಕ್ಕವು, ಹೈದರಾಬಾದ್ ಮೈಸೂರು, ಬಡೋದೆ, ಇಂದೂರ್, ಗ್ವಾಲಿಯರ್, ತಿರುವಾಂಕೂರ್ ಈ ಸಂಸ್ಥಾನಗಳಾಗಿರುತಿವೆ. ಈಗ ಇವುಗಳಲ್ಲಿ ಪ್ರತಿ ಒಂದರಸ್ಥಿತಿಯೂ ಬ್ರಿಟಿಷ್ ಗವರ್ನ್‌ಮೆಂಟಿನವರ ಪೂರ್ವದ ಪ್ರತಿಪತ್ತಿಯನ್ನು ಮೂಲತಃ ನಾಶಗೊಳಿಸತಕ್ಕದ್ದಾಗಿರುವದಲ್ಲದೆ, ಅಲ್ಲಿನ ಪ್ರಜೆಗಳಿಗೆ ಸಹ ಬಹಳ ಅನಿಷ್ಟವಾಗಿ ಪರಿಣಮಿಸುತ ಬರುತಲಿವೆ. ಹೈದರಾಬಾದ್ ಸಂಸ್ಥಾನದ ಒಳ ಆಡಳಿತವಂ ವಿಚಾರಿಸುವೆವಾದರೆ ನಾಬಕ್ ನಿಜಾಮರವರ ಪ್ರಭುತ್ವದಲ್ಲಿಯೂ, ಸರ್ ಸಾಲಾರ್‌ಜಂಗರವರ ಮಂತ್ರಿತ್ವದಲ್ಲಿಯೂ ಆ ಸಂಸ್ಥಾನವು ಎಷ್ಟರ ಅಭಿವೃದ್ಧಿಯನ್ನೈದಿ ಶಹಬಂದಿಗೆಬಂದಿತ್ತೋ ಈಗ ಅಷ್ಟಕ್ಕಷ್ಟು ಬೇಬಂದಾಗಿ ನಿಜಾಮರವರ ಆಡಳಿತವು ಅವರ ತಾಬೇದಾರರಿಗೆ ತಿಳಿಯದೆಯೂ, ತಾಬೇದಾರೀ ಅಧಿಕಾರಿಗಳ ವರ್ತನೆವು ನಿಜಾಮರವರಿಗೆ ತಿಳಿಯದೆಯೂ, ಇವರಿಬ್ಬರ ನಡತೆಗಳು ಜನಗಳಿಗೆ ಗೋಚರವಾಗದೆಯೂ ಇದೆ. ಈಕ್ರಮದಿಂದ ಅನೇಕಕೋಟಿ ರೂಪಾಯಿಗಳ ನಷ್ಟವು ಸಂಸ್ಥಾನಕ್ಕೂ ಅಲ್ಲಿನ ಪ್ರಜೆಗಳಿಗೂ ಪ್ರಾಪ್ತವಾಗಲಿಕ್ಕೆ ನಿಮಿತ್ತವಾಗಿದೆ. ಈಚೆಗೆ ಸದರೀಸಂಸ್ಥಾನದಲ್ಲಿ ಪ್ರಸಿದ್ಧವಾಗಿ ಈಗ ಎಲ್ಲಾ ವೃತ್ತಾಂತ ಪತ್ರಿಕೆಗಳ ವಿಚಾರಕ್ಕೆ ವಿಷಯವಾಗಿರುವ ಹೈದರಾಬಾದ್ ಮೈನಿಂಗ್ ಕಂಪೆನಿಯ ಆಡಳಿತ ಕ್ರಮವನ್ನು ಮುಂದೆ ನಾವು ತಿಳಿಸುವಾಗ್ಯೆ ಇಷ್ಟರ ಘತೂರಿಯೂ ಮೋಸವೂ ನೇಟಿವ್ ಸಂಸ್ಥಾನಗಳಲ್ಲಿ ನಡೆಯುತಿವೆಯೋಯೆಂದು ಎಲ್ಲರೂ ಆಶ್ಚರ್ಯಪಡದೆ ಹೋಗಲಾರರು. ಮೈಸೂರು ಸಂಸ್ಥಾನದ ಅಪ್ರತೀಕಾರಸ್ಥಿತಿ ಜಗತ್ಪ್ರಸಿದ್ಧವಾಗಿರುವದರಿಂದ ಅದು ಕುರಿತು ನಾವು ಹಿಂದಿನ ಪ್ರಕರಣಗಳಲ್ಲಿ ತಿಳಸಿರುವದೇ ಸಾಕಾಗಿರುತಿದೆ. ಬರೋಡೆ ಸಂಸ್ಥಾನದ ಒಳಸ್ಥಿತಿ ಇನ್ನೂ ಸ್ಪಷ್ಟವಾಗಿ ಹೊರಗಾಗದಿರುವದರಿಂದ ಅದು ನಿರೀಕ್ಷಿಸಿ ನೋಡತಕ್ಕದ್ದಾಗಿರುತಿದೆ. ತತ್ಕಾಲದಲ್ಲಿ ಇಂದೂರ್ ಸಂಸ್ಥಾನದ ಅವ್ಯವಸ್ಥಿತ ಪ್ರಭುತ್ವಕ್ರಮವು ಕೇಳಿದರೆ ಅದು ನಮಗೆ ಮಿತಿಯಿಲ್ಲದ ಖೇದವನ್ನುಂಟುಮಾಡತಕ್ಕದ್ದಾಗಿರುತಿದೆ. ಮಹಾರಾಜಾ ತುಕ್ಕೋಜೀರಾವ್ ಹೋಳ್ಕರವರು ಪಟ್ಟಗತ್ತಿಯನ್ನೈದಿದಬಳಿಕ ಆಸಂಸ್ಥಾನದ ನೌಕರಿಯೊಳಿದ್ದ ಸಮರ್ಥರಾದ ಮತ್ತು ಅನುಭವಶಾಲಿಗಳಾದ ಉದ್ಯೋಗಸ್ಥರನೇಕರು ತಾವಾಗಿ ರಾಜೀನಾಮೆ ಕೊಟ್ಟುಹೋಗಬೇಕಾದಷ್ಟು ನಿರ್ಬಂಧವುಂಟಾಯಿತು. ಇದರಿಂದ ಅವರು ಸಂಸ್ಥಾನದಲ್ಲಿ ಪಡೆದಿರುವ ಜಹಗೀರ್ ಮತ್ತು ಇನಾಂ ಗ್ರಾಮಗಳನ್ನು ಸಹ ಉಪೇಕ್ಷಿಸಿ ತೊರೆಯಬೇಕಾಯಿತು. ಸರ್ಕಾರ್ ನೌಕರರ ಉದ್ಯೋಗ ಕಾಲವು ಸಾಪಾಯವಾದದ್ದಾಗಿ ಪರ್ಯವಸಿತು. ಯಾವ ಮನುಷ್ಯನೂ ತನ್ನ ಉದ್ಯೋಗದೊಳು ಭರವಸೆಯುಳ್ಳವನಾಗಿಲ್ಲದ್ದು ಮತ್ತು ಉತ್ತರಕ್ಷಣದಲ್ಲಿ ಏನುಪ್ರಾಪ್ತವಾಗುವದೋ ಎಂಬ ಭೀತಿಯುಳ್ಳವನಾಗಿರಬೇಕಾಯಿತು. ಸಂಸ್ಥಾನದ ಆಡಳಿತವು ನಡೆಸುವಲ್ಲಿ, ಶ್ಲಾಘ್ಯವಾದ ರಾಜ್ಯತಂತ್ರಜ್ಞತೆಗೂ, ವಿಲಕ್ಷಣವಾದ ಅನುಭವಕ್ಕೂ ಬದಲಾಗಿ, ವಿಷಯಾಸಕ್ತರಾದ ಅರಸರ ಇಚ್ಛಕ ಪ್ರವೃತ್ತಿಯೂ, ಕ್ರೂರವಾದ ನಿರಂಕುಶಾಭಿಪ್ರಾಯವೂ ರಾಜ್ಯಕಾರ್ಯ ನಿರ್ವಹಣೆಯಲ್ಲಿ ಪ್ರಧಾನಗುಣಗಳಾಗಿ ಏರ್ಪಟ್ಟಿವೆ. ಸಂಸ್ಥಾನದ ಮಂತ್ರಾಲೋಚಕ ಸಮಾಜವು ವ್ಯರ್ಥ ಆಡಂಬರವಾಗಿದೆಯಲ್ಲದೆ, ಅದರಿಂದ ಯಾವಪ್ರಯೋಜನವೂ ಯಿಲ್ಲವಾಯಿತು. ಮಹಾರಾಜರವರ ಮಂಜೂರಾತಿಯಬಗ್ಗೆ ಕಳುಹಿಸಲ್ಪಟ್ಟ ಅನೇಕಹುಕುಂಗಳೂ ಪ್ರೊಸಿಡಿಂಗ್ಸ್‌ಗಳೂ ಬಸ್ತಾಗಳು ಕಟ್ಟಲ್ಪಟ್ಟು ಹುಜೂರ್ ಸೆಕ್ರೆಟರಿಯವರ ಆಫೀಸಿನಲ್ಲಿ ರಾಶಿಹಾಕಲ್ಪಟ್ಟಿವೆ ಅನೇಕ ತಿಂಗಳಾದಾಗ್ಯೂ ಅವು ಬಿಚ್ಚಿ ನೋಡಿ ವಿಲೇ ನಿಸ್ತಾರುವ ಪ್ರಸಕ್ತಿ ಯೋಗತಕ್ಕವಿಲ್ಲವು. ಮಹಾರಾಜರಿಗಾದರೋ ಸಂಸ್ಥಾನದ ಆಡಳಿತದಲ್ಲಿ ಪ್ರವರ್ತಿಸಿ ರಾಜ್ಯಕಾರ್ಯವು ನಿರ್ವಹಿಸಲಿಕ್ಕೆ ಸಾಕಾದಷ್ಟು ವ್ಯವಧಾನವಿಲ್ಲವು. ಒಂದುವಾರದಲ್ಲಿ ಯೆರಡು ದಿನಗಳಾದರೂ ಅರಮನೆಗೆಹೋಗಲಿಕ್ಕೆ, ಬೇಕಾದವರು ಕೆಲವರಿಗೆವಿನಾ, ಅನ್ಯರ್ಯಾರಿಗೂ ಅವಕಾಶ ದೊರೆಯುವದಿಲ್ಲವು. ಸಂಸ್ಥಾನದಲ್ಲಿ ಜಮೀನ್ಕಂದಾಯವು ಅತ್ಯಧಿಕವಾಗಿರುವದರಿಂದಲೂ ರೈತರದು ಕೊಡುವದಕ್ಕೆ ಅಶಕ್ತರಾಗಿರುವದರಿಂದಲೂ ಪ್ರತಿಸಂವತ್ಸರದಲ್ಲಿಯೂ ವಸೂಲಾಗದೆ ಬಾಕೀನಿಲ್ಲತಕ್ಕ ಮೊಬಲಗುಗಳು ವ್ಯರ್ಥವಾಗಿ ಲೆಕ್ಕದಲ್ಲಿ ತೋರಿಸಲ್ಪಡುತಿವೆ. ಸೈನಿಕಖರ್ಚು ಬೇಕಾದದಕ್ಕಿಂತ ಅಧಿಕವಾಗಿದೆ. ಮಹಾರಾಜರವರಿಗೆ ಕೇವಲ ಪ್ರೇಮಪಾತ್ರರೆಂಬ ಒಂದು ಕಾರಣದಮೇಲೆ ಅನೇಕರಿಗೆ ದೊಡ್ಡ ಅಧಿಕಾರಗಳು ಕೊಡಲ್ಪಟ್ಟಿವೆ. ಸಂಸ್ಥಾನಕ್ಕೆ ಅಂಗಭೂತವಾದ ಮಾರಮ್ಮತಿ ಇಲಾಖೆಯು ಹೆಸರೇಯಿಲ್ಲವು. ಸಂಚಾರ ಯೋಗ್ಯವಾದ ರಸ್ತೆಗಳ್ಯಾವವೂ ಇಲ್ಲದ್ದರಿಂದ ವರ್ಷಾಕಾಲದಲ್ಲಿ ಜನರ ಸಂಚಾರಕ್ಕೂ, ಸರಕುಗಳ ಆಮದ್ ರಫ್ತಿಗೂ ಬಹಳ ಅಡಚಣೆಯುಂಟಾಗಿರುತಿದೆ. ಬ್ರಿಟಿಷ್ ಇಂಡ್ಯಾದೇಶದಲ್ಲಿ ವಸೂಲ್ಮಾಡಲ್ಪಡುವಂತೆ ರೋಡ್‌ಫಂಡ್ ಎಂಬದಾಗಿ ಪ್ರತ್ಯೇಕ ತೆರಿಗೆ ವಸೂಲಾದಾಗ್ಯೂ ಅದು ಹೊಸರಸ್ತೆಗಳಿಗಾಗಲಿ ಹಳೇರಸ್ತೆಗಳ ರಿಪೇರಿಗಾಗಲಿ ಉಪಯೋಗವಾಗದೆ ಯೆಲ್ಲವೂ ಖಜಾನೆಗೆ ಜಮಾ ದಾಖಲಾಗುತ್ತಿವೆ. ಬದಸ್ತೂರ್ ವಿದ್ಯಾಭ್ಯಾಸಕ್ಕಾಗಿ ವಸೂಲಾಗುವ ಮೊಬಲಗಿನಲ್ಲಿ ಸ್ವಲ್ಪಭಾಗ ಸಹ ಸ್ವದೇಶೀಯರ ವಿದ್ಯಾಭಿವೃದ್ಧಿಯ ಬಗ್ಗೆ ವ್ಯಯವಾಗುವದಿಲ್ಲವು. ಜ್ಯುಡಿಷಿಯಲ್ ಇಲಾಖೆಯಲ್ಲಿ ಅರಸರ ಸಂಬಂಧವು ಅಧಿಕವಾಗಿರುತ್ತೆ. ಸ್ವಪ್ರಯೋಜನ ಪರರಾದ ಸೆಕ್ರೆಟರಿಗಳ ಪ್ರೇರಣೆಯ ಮೇರೆ ನಾಗರಿಕರಿಂದ ಮಂತ್ರಿಯು ಮತ್ತು ಅನುಭವಶಾಲಿಗಳಾದ ಕೌನ್ಸಿಲರ್‌ಗಳ ವಿವೇಚನೆಗಳುಳ್ಳ ತೀರ್ಮಾನಗಳೆಲ್ಲವೂ ಅರಸರ ಇಷ್ಟಾನುಸಾರ ರದ್ದು ಮಾಡಲ್ಪಡುತಲಿರುವದೇನೂ ಅಪೂರ್ವವಲ್ಲವು. ಅಕ್ರಮವಾಗಿ ಜನರಿಂದ ಸುಲಿಗೆಮಾಡಿ ಸ್ವತಃ ಧನವಂತರಾಗತಕ್ಕ ಅಪ್ರಾಮಾಣಿಕರಾದ ಸರ್ಕಾರ್ ಉದ್ಯೋಗಸ್ಥರು ಸಾಮಾನ್ಯವಾಗಿ ದಂಡಿಸಲ್ಪಡುವದಿಲ್ಲವು. ಪರಂತು ಅಂತವರಿಂದ ನಜರಾಣಾ ತೆಗದುಕೊಂಡು ಅವರನ್ನು ಮನ್ನಿಸುತ್ತಾರೆ. ಈ ಸಂಸ್ಥಾನದೊಳಿಷ್ಟರ ರುಷುವತ್ತುಗಳಿಗೇನು ಕಾರಣವಾದರೆ, ಸರ್ಕಾರ್‌ನೌಕರರ ಸಂಬಳ ಬಹಳ ಕಡಮೆಯಾಗಿರುವದರಿಂದಲೂ, ಅಕ್ರಮವಾಗಿಬೇಕಾದಪ್ರಯೋಜನಗಳಂ ಪಡೆಯಲಿಕ್ಕೆ ಅನುಕೂಲಗಳಾದ ಅಧಿಕಾರ ಅವರಿಗೆ ಕೊಡಲ್ಪಟ್ಟಿರುವದರಿಂದಲೂ, ಸರ್ಕಾರ್ ಭೀತಿ ಯೆಂಬದು ಲೇಶವೂ ಇಲ್ಲದೆ ಹೋದದರಿಂದಲೂ, ನೌಕರರು ದುರ್ನೀತರಾಗಲಿಕ್ಕೆ ಕಾರಣವಾಯಿತು. ಆಸ್ಪತ್ರೆ ಮುಂತಾದವುಗಳಿಗಾಗಿ ಸಂಸ್ಥಾನದಿಂದ ಬಹಳ ಅಲ್ಪವಾಗಿ ವ್ಯಯವಾಗುತಿದೆ. ಇರತಕ್ಕ ಒಂದು ಮ್ಯುನಿಸಿಪಾಲಿಟಿಯಲ್ಲಿ ಸಹ ಫಂಡ್ ಇಲ್ಲದೆ ಅದು ಹಾಳು ಬಿದ್ದಿದೆ. ಲೆಕ್ಕಗಳ ವಿಚಾರಣೆಯ ಲಕ್ಷಣವಾದರೋ ಕೇಳಬೇಕಾದದ್ದೇ ಇಲ್ಲವು. ಸಾಲ್‌ಖಾದೆ ರಿಪೋರ್ಟಿನಲ್ಲಿ ನಮೂದಾಗಿರುವ ಅಂಕೆಗಳೆಲ್ಲವೂ ಸಮಯೋಚಿತವಾಗಿ ಸರಿಮಾಡಲ್ಪಟ್ಟವಾಗಿರುತಿವೆ ಈಗ್ಯೆ ೬ ವರುಷಗಳ ಲೆಕ್ಕಗಳು ಒಂದಕ್ಕೊಂದು ತಾಳೆ ಇಲ್ಲದೆ ಬಿದ್ದಿವೆ. ದೇಶದ ವ್ಯಾಪಾರ ವಿಷಯದಲ್ಲಿ ಸಹ ಅರಸರ ಹಿಂಸಕರವಾದ ಪ್ರವೇಶವು ಅಸ್ವಾಭಾವಿಕವಾಗಿದೆ. ಮಹಾರಾಜರವರಲ್ಲಿ ಅವರ ಪ್ರಜೆಗಳಿಗೆ ಸುತರಾಂ ಪ್ರೀತಿ ಗೌರವಗಳಿಲ್ಲವು. ಬದಸ್ತೂರ್ ಅರಸರಿಗೆ ಅವರಲ್ಲಿ ಸ್ನಿಗ್ಧತೆಯೆಂಬದು ಕುರುಹಿಂಗೆ ಇಲ್ಲದೆ ಹೋಯಿತು. ಪ್ರಜೆಗಳಿಗೆ ನಾಬಕ್ ಮಹಾರಾಜರವರಲ್ಲಿದ್ದಷ್ಟು ಸ್ವಾತಂತ್ರ್ಯವೂ ಸೌಖ್ಯವೂ ಸಾಮರಸ್ಯತೆಯೂ ಈಗಿನ ಮಹಾರಾಜರವರಲ್ಲಿ ಇರುವಂತೆ ತೋರಲಿಲ್ಲವು. ಬಂಧುವರ್ಗದವರಲ್ಲಿ ಅನ್ಯೋನ್ಯತೆಯು ಮೃಗ್ಯವು. ನಾಬಕ್ ಮಹಾರಾಜರವರ ಭಾರ್ಯೆಯರಿಗೆ, ಕಡೆಗೆ ತಮ್ಮ ತಾಯಿಯವರಿಗೆಸಹ ಸಂಸ್ಥಾನದಿಂದನ್ಯಾಯವಾಗಿ ಸಲ್ಲಬೇಕಾದ ಮಾನಮರ್ಯಾದೆಗಳನ್ನು ಮಹಾರಾಜರವರು ನಡೆಸುವದಿಲ್ಲವು. ಖಾಸಗೀ ವಿಚಾರಣೆಯ ವಿಷಯದಲ್ಲಿ ದೋಷಗನ್ ಮಹಾರಾಣಿಯವರಿಗೂ ಅವರ ಪುತ್ರರಿಗೂ ಮಧ್ಯೆ ಉಂಟಾದ ವಿವಾದವು ಪ್ರಸಿದ್ಧವಾದದ್ದಾಗಿಯೇ ಇದೆ. ಸದರೀ ರಾಜವಂಶಜರಾದ ಜಸವಂತರಾವ್ ಹೋಳ್ಕರವರು ಸ್ವಭಾವತಃ ದೊಡ್ಡಮನುಷ್ಯರಾಗಿಯೂ, ಉಪಶಾಂತರಾಗಿಯೂ, ತೇಜಸ್ವಿರಾಗಿಯೂ ಇದ್ದಾಗ್ಯೂ ಅಂತವರಿಗೆ ಮಹಾರಾಜರವರು ಇಲ್ಲದ ನಿರ್ಬಂಧಗಳನ್ನುಂಟುಮಾಡಿ ತಮ್ಮ ರಾಜಧಾನಿಯನ್ನಗಲಿ ಹೋಗುವಂತೆ ಬಲಾತ್ಕರಿಸಿದ್ದರಿಂದ ಅವರು ಈಗ ಕೇವಲ ಅಸಮಾಧಾನದೊಡನೆ ಪರಸ್ಥಳದಲ್ಲಿ ವಾಸವಾಗಿದಾರೆ. ಮಹಾರಾಜರವರ ಅನರ್ಗಳವಾದ ದುಂಗೋಪಕ್ಕಾಗಿ ಬಹುಜನ ಸಂಸ್ಥಾನದ ಅಧಿಕಾರಿಗಳು ಭಯಪಟ್ಟು ಅವರ ಮುಂದೆ ಹೋಗುವದಿಲ್ಲವು. ಅವರು ತಕ್ಕ ಅವಧಾನವನ್ನಿಯ್ಯದೆ ಹೋದದರಿಂದ ರಾಜಕಾರ್ಯವೆಲ್ಲ ಆತ್ಯಂತಿಕವಾಗಿ ನಿಂತುಹೋಗಿರುತಿದೆ. ಮಹಾರಾಜರವರ ಕಾಲವೆಲ್ಲವೂ ಚಿಕಾರಿಯಿಂದಲೂ, ಬುಧೂಬ್ ಹಾರಿಸುವದರಿಂದಲೂ, ಪಟಗಳನ್ನಾಡಿಸುವದರಿಂದಲೂ, ನೃತ್ಯಾನುಸಂಧಾನದಲ್ಲಿ ನಿಪುಣರಾದ ಆಪ್ತರಿಂದಲೂ ಕಳೆಯಲ್ಪಡುತಲಿದೆ. ಇದಕ್ಕಾಗಿ ಅವರು ಕಳೆಯತಕ್ಕ ಕಾಲದಲ್ಲಿ ಅಷ್ಟಮಾಂಶವನ್ನಾದರೂ ಆಡಳಿತದ ವಿಷಯದಲ್ಲಿ ಉಪಯೋಗಿಸುವರಾದರೆ ತಮಗೆ ಪ್ರಾಪ್ತವಾಗಿರುವ ಮಹಾರಾಜ ಪದವಿಗೆ ಸಾರ್ಥಕ್ಯವನ್ನುಂಟುಮಾಡಿದವರಾಗುತ್ತಾರೆ ಹಾಗಿಲ್ಲದ ಪಕ್ಷಕ್ಕೆ ತಾವು ವಹಿಸಿರುವ ಜವಾಬ್ದಾರಿಯನ್ನು ಅಥ

ಭಾರತವರ್ಷದ ದೇಶ ಜನಕ್ಷೇಮಾರ್ಥ ನಿವೃತ್ತಿಸಿ ಕೊಂಡರೆ ಪ್ರಜೆಗಳಿಗಾದರೂ ಸುಖ ವುಂಟಾಗಬಹುದು. ಮಹಾರಾಜರವರು ಸರ್ವಕಾಲದಲ್ಲಿಯೂ ಅಂತಃಪುರದಲ್ಲಿರುತ ಮಂತ್ರ ತಂತ್ರವಾದಿಗಳಿಂದಲೂ, ಜ್ಯೋತಿಷ್ಕರಿಂದಲೂ ಸದಾ ಪರಿವೇಷ್ಟಿತರಾಗಿ ಜನಾನಾ ಸುಖ ಸಂತೋಷಗಳಿಂ ಬಿಟ್ಟು ಬೇರೊಂದನ್ನಪೇಕ್ಷಿಸದೆ, ರಾಜಕಾರ್ಯನಿಮಿತ್ತದಿಂ ಮಂತ್ರಿಯವರು ರಾಜಸನ್ನಿಧಿಗೆ ಹೋದರೆ ಅವರಿಗೆ ಅವಕಾಶ ಕೊಡದೆ, ಆಡಳತವನ್ನು ಅವ್ಯವಸ್ಥಿತ ಸ್ಥಿತಿಗೆ ತಂದಿರುತ್ತಾರೆ. ಸನ್ ೧೮೭೫ನೇ ಇಸವಿಯು ಲಾಗಾಯತು ೮೦ನೇ ಇಸವಿಯುತನಕ ಮೂಳವೆ ದೇಶದ ಮಂತ್ರಿತ್ವವನ್ನು ವಹಿಸಿದ್ದ ದಿವಾನ್ ಬಹದೂರ್ ರಘುನಾಥರಾಯರವರು ಹೋಲ್ಕರ್ ಮಹಾರಾಜರವರ ವರ್ತನವನ್ನು ಅನುಭವ ಪೂರ್ವಕ ತಿಳಿದಿರತಕ್ಕವರಾದುದರಿಂದ ಎರಡನೆಯ ಆವರ್ತಿ ಅಲ್ಲಿಗೆ ಹೋಗಲಿಕ್ಕೆ ಮನಸ್ಸಿಲ್ಲದವರಾಗಿದ್ದರು. ಆದರೆ ಪ್ರಕೃತ ಮಹಾರಾಜರವರೂ ಇಂಡ್ಯ ಗವರ್ನಮೆಂಟನವರೂ ಬಹಳವಾಗಿ ಪ್ರಾರ್ಥಿಸಿದ್ದರಿಂದ ಇಂಡ್ಯದೇಶದಲ್ಲಿ ಪ್ರಸಿದ್ಧ ಸಂಸ್ಥಾನಗಳಲ್ಲೊಂದಾದ ಮಾಳವ ದೇಶಾಧಿಪತ್ಯವು ಕ್ರಮಪಡಿಸಿ ಅಭಿವೃದ್ಧಿಗೆ ತರಬೇಕೆಂಬ ಸಂಕಲ್ಪದೊಡನೆ ರಾಯರವರು ಅಲ್ಲಿನ ದಿವಾನ್‌ಗಿರಿಯನ್ನು ಅಂಗೀಕರಿಸಿದ್ದರು. ಮೊದಲು ಸ್ವಲ್ಪ ದಿನಗಳವರಿವಿಗೆ ಮಹಾರಾಜರವರು ತಮ್ಮ ದಿವಾನರಲ್ಲಿ ಪ್ರೀತಿ ಗೌರವ ಪ್ರಾಮಾಣಿಕ ಕಾದಿ ಭಾವನೆಗಳುಳ್ಳವರಾಗಿದ್ದುದರಿಂದ ರಾಜ್ಯಕಾರ್ಯವು ಒಂದು ಬಗೆಯಾಗಿ ಜರುಗುತಲಿತ್ತು. ಕ್ರಮೇಣ ಅರಸರ ನವಕರಗಳು ಅವರ ಮಂತ್ರಿಯವರಿಗೆ ಅಸಮಾಧಾನಕರಗಳೂ, ಮತ್ತು ಅಪರಿಹಾರ್ಯಗಳೂ ಆಗಿದ್ದು ಮಿತ ಮೀರಿದವಲ್ಲದೆ, ಹೋಲ್ಕರವರು ತಮ್ಮ ಐಶ್ವರ್ಯವನ್ನು ವೃದ್ಧಿಪಡಿಸಿಕೊಳ್ಳಬೇಕೆಂಬ ಆಶೆಯು ದಿವಾನರಿಗಿಲ್ಲವಾಗಿ ಎರಡಾವರ್ತಿ ತಮ್ಮ ಕೆಲಸಕ್ಕೆ ರಾಜೀನಾಮೆ ಕೊಟ್ಟರು. ಈ ವೃತ್ತಾಂತವು ರಾಜಾ ಸರ್. ಟಿ. ಮಾಧವರಾಯರವರಿಗೆ ತಿಳಿಯಬಹುದು ಅವರು, ಮಹಾರಾಜರವರಿಗೆ ಕೆಲವು ಹಿತೋಕ್ತಿಗಳಂ ಬರೆದು ಕಳುಹಿಸಿದರು ಈಗ ಯಾರದ್ರಿಯತ್ನಗಳೂ, ಹಿತ ವಾದಗಳೂ ಕಾರ್ಯಕಾರಿಗಳಾಗದೆ ಎಲ್ಲವೂ ವೈಪರೀತ್ಯವನ್ನೇ ಹೊಂದುತ ಬರುವದರಿಂದ ಇನ್ನು ನೌಕರಿಯಲ್ಲಿರುವಣವು ಗೌರವವಲ್ಲವೆಂದು ಭಾವಿಸಿ ದಿವಾನ್ ಬಹದೂರರವರು ಅರಸರ ಅನುಜ್ಞೆಯಂ ಪಡೆಯದೆಯೇ, ಅಥವಾ ಅದಂ ನಿರೀಕ್ಷಿಸದೆಯೇ ಕೆಲಸದಿಂದ ನಿವೃತ್ತರಾಗಿ ಆ ಜೇವಾರದಲ್ಲಿ ಮದರಾಸಿಗೆ ವಾಪಸ್ ಬಂದುಬಿಟ್ಟರು. ಮುಂದೆ ಸದರೀ ಸಂಸ್ಥಾನದ ಆಡಳತವು ಯಾವರೀತಿಯಾಗಿ ಪರಿಣಮಿಸುವದೋ ನೋಡಬೇಕಾಗಿರುತ್ತೆ. ಇದಕ್ಕಿಂತಲೂ ನೇಟಿವ್ ರಾಜ್ಯಕ್ಕೆ ಅಪಪ್ರಥೆಯನ್ನುಂಟು ಮಾಡುವುದಾವ ವಿಷಯಗಳು ಬೇರೊಂದೂ ಬೇಕಾದ್ದಿಲ್ಲವು ಇದುವರಿವಿಗೆ ನಾವು ಮೇಲೆ ತಿಳಿಸಿದ ವಿಷಯಗಳ ಪೈಕಿ ಪ್ರಾಯೇಣ ಯೆಲ್ಲವೂ ನಮಗಿಲ್ಲಿ ಅನುಭೂತಗಳಾಗಿರುವದರಿಂದ ಅವು ನಮಗೆ ಪ್ರತ್ಯೇಕ ಆಶ್ಚರ್ಯವನ್ನುಂಟುಮಾಡಲಿಲ್ಲವು. ಪರಂತು ನೇಟಿವ್ ಸಂಸ್ಥಾನಗಳು ಅಭಿವೃದ್ಧಿಯನ್ನೈದಿ ನಿರುಪಾಧಿಯಾಗಿರಕೂಡದೆಂಬ ಭಗವತ್ಸಂಕಲ್ಪವು ನಮಗೆ ವಿಶೇಷ ಅನುತಾಪವನ್ನುಂಟುಮಾಡದೆ ಹೋಗಲಿಲ್ಲವು. ನೇಟಿವ್ ಅರಸರ ಪ್ರಭುತ್ವವು ಫಲದಾಯಕಗಳಲ್ಲವೆಂದು ಅಲ್ಲಗಳೆಯುವ ಇಂಗ್ಲೀಷಿನವರ ಮಾತುಗಳಿಗೆ ವ್ಯಾಯಾರ್ಥ್ಯವನ್ನುಂಟುಮಾಡುವವು ತಮ್ಮ ರಾಜಭಕ್ತಿಗೆ ನ್ಯೂನತೆಯುಂಟಾಗದೆ ಕ್ರಮವಾಗಿ ನಮ್ಮ ಸಂಸ್ಥಾನಾಧಿಪತಿಗಳೆಲ್ಲರೂ ಸಾಧ್ಯವಾದಮಟ್ಟಿಗೆ ತಮ್ಮ ಪ್ರಭುತ್ವವನ್ನು ಅನ್ಯದೇಶೀಯರ ಹೇಳಿಕೆಯೂ, ಸ್ವದೇಶೀಯರ ಅಪ್ರೀತಿಗೂ ಗುರಿಮಾಡಕೊಡದಿರುವಂತೆ ತೋರುತಿದೆ. ಇನ್ನೂ ಕೆಲವು ನೇಟಿವ್ ಸಂಸ್ಥಾನಗಳ ತಾತ್ಕಾಲಿಕ ದಶೆಯನ್ನು ಮತ್ತೊಂದು ಸಂದರ್ಭದಲ್ಲಿ ತಿಳಿಸುವೆವು.

Occasional Notes.
ನೈಮಿತ್ತಿಕ ವಿಷಯನ್ಯಾಸ.

An estimate sanctioned.—ಮದರಾಸ್ ಹೈಕೋರ್ಟು ಹೊಸಕಟ್ಟಡಕ್ಕೆ ಬೇಕಾದ ನಾರ್ಗಗಳನ್ನು ತಯಾರ್ಮಾಡುವದಕ್ಕಾಗಿ ಇಂಡ್ಯ ಗವರ್ನಮೆಂಟಿನವರು ೧,೪೮,೧೩೦ ರೂಪಾಯಿಗಳು ಮಂಜೂರ್ಮಾಡಿರುತ್ತಾರೆ. ಸನ್ ೧೮೮೮-೮೯ನೇ ಇಸವಿಯ ಬಜೆಟಿನಲ್ಲಿ ಸದರೀ ಕಟ್ಟಡದ ಖರ್ಚಿಗಾಗಿ ೨,೧೫,೦೦೦ ರೂಪಾಯಿಗಳು ಸೇರಿಸಲ್ಪಟ್ಟಿರುತಿವೆ.

A reconciliation.—ತಿರುವಾಂಕೂರು ಮಹಾರಾಜರವರಿಗೂ ಅಲ್ಲಿನ ಯುವರಾಜರವರಿಗೂ ಈಚೆಗೆ ಕೆಲವು ದಿನಗಳಿಂದ ಉಂಟಾಗಿದ್ದ ಮನಸ್ತಾಪವು ತಪ್ಪಿ ಅನ್ಯೋನ್ಯ ಭಾವವುಂಟಾಗಿರುವುದೆಯೂ, ಇದಕ್ಕೆ ಮದರಾಸ್ ಗವರ್ನರಾದ ಲಾರ್ಡ್ ಕಾನಿಮಾರಾಯವರೂ ಸರ್ ಟಿ. ಮಾಧವರಾಯರವರೂ ಮುಖ್ಯಪ್ರೇರಕರೆಂತಲೂ ವೆಸ್ಟರ್ನ್ ಸ್ಟಾರ್ ಎಂಬ ಪತ್ರಿಕೆ ತಿಳಿಸುತಿದೆ.

Scarcity of water.—ಜೋಧಪುರದಲ್ಲಿ ಜಲಾಭಾವದಿಂದ ಅಲ್ಲಿ ವಾಸ ಮಾಡುವದಕ್ಕಾಗದೆ ಮಹಾರಾಜರವರೂ ಅವರ ಸಹೋದರರೂ ಬೇರೆಬೇರೆ ಸ್ಥಳಗಳಿಗೆ ಹೊರಟುಹೋಗಬೇಕಾಯಿತೆಂತಲೂ, ಸಂಸ್ಥಾನದ ವಿಶಿಷ್ಟ ನೌಕರರಿಗೂ ಮೂರುತಿಂಗಳ ರಜಾ ಕೊಡಲ್ಪಟ್ಟಿರುತಿವೆಯೆಂತಲೂ, ಮುಂಬೈ ಪತ್ರಿಕೆಯೊಂದರ ಮೂಲಕ ತಿಳಿಯಲಾದೆವು.

Appointment of a commission.—ಕಾಶ್ಮೀರ ದೇಶದ ದಿವಾನರವರ ಮೇಲೆ ತರಲ್ಪಟ್ಟ ಭಿರ್ಯಾದಿಗಳ ತನಿಖೆಯ ಬಗ್ಗೆ ಅಲ್ಲಿನ ಸರ್ಕಾರದವರು ಒಂದು ಕಮಿಟಿಯನ್ನು ಯೋಜಿಸುತ್ತಿದ್ದಾರೆ. ಸದರೀ ದಿವಾನರಮೇಲೆ ತರಲ್ಪಟ್ಟ ಆಪಾದನೆಗಳ ಪೈಕಿ—ಜೇಲಿರಾಂ ಎಂಬವರಲ್ಲಿನ ಸಂಸ್ಥಾನದ ಖಜಾನೆಯಿಂದ ೯,೦೦೦ ರೂಪಾಯಿಗಳನ್ನು ಪಡಕೊಂಡದ್ದೊಂದು, ಒಬ್ಬ ಹುಡುಗಿಯನ್ನು ಕ್ರಯಕ್ಕೆ ಕೊಂಡುಕೊಂಡದ್ದೊಂದು, ಸಂಸ್ಥಾನದ ಧರ್ಮ ಫಂಡಿನಿಂದ ಭಾರೀ ಮೊತ್ತವನ್ನು ತೆಗೆದುಕೊಂಡು ಅದು ವಿಚಾರಣೆಗೆ ಬಂದಮೇಲೆ ವಾಪಸ್ ಕೊಟ್ಟದ್ದೊಂದು, ಈ ಮೇರೆ ಮೂರುವಿಧ ಅಪರಾಧಗಳು ಯೋಗ್ಯವಾಗಿಟ್ಟಿರುತಿವೆ.

A curious accident.—ಬೆಂಕಿಪುರದ ಪೋಸ್ಟಾಫೀಸಿನ ಕಬ್ಬಿಣ ಪೆಟ್ಟಿಗೆಯ ಬೀಗದಕೈ ಹೋಗಿಬಿಡಲು ಸದರೀ ಪೆಟ್ಟಿಗೆಯನ್ನು ತೆರೆಯುವದಕ್ಕಾಗಿ ಒಬ್ಬ ಕಮ್ಮಾರನನ್ನು ಕರೆಯಿಸಿ ಅವನು ಬಂದು ತೆರೆದಮೇಲೆ ಅವನು ಪೆಟ್ಟಿಗೆಯಲ್ಲಿ ಜಾಯಾ ಆಡಕಡೆಯನ್ನು ರಿಪೇರಿಮಾಡುವದಕ್ಕಾಗಿ ಪೆಟ್ಟಿಗೆಯ ಒಳಕ್ಕೆ ಹೋಗಿರುವಲ್ಲಿ ಪೆಟ್ಟಿಗೆಯ ಕದ ಮುಚ್ಚಿಕೊಂಡು ತಾನಾಗಿಬಿದ್ದುಹೋಯಿತು. ಹೊರಗಡಿದ್ದವರು ಎಷ್ಟುವಿಧ ಪ್ರಯತ್ನಮಾಡಿದರೂ ಮರಳಿ ತೆರೆಯುವದಕ್ಕಾಗದೆ ಹೋಗಲು ಗೋಪಿಗೆ ಸೇರಿಸಿ ಕಟ್ಟಲ್ಪಟ್ಟಿದ್ದ ಪೆಟ್ಟಿಗೆಯನ್ನು ಹೊರಗೆ ತೆಗೆಯಿಸಿ ಒಡೆದು ಹಾಕಿದಮೇಲೆ ಒಳಗಿದ್ದ ಕಮ್ಮಾರನನ್ನು ಅರ್ಧಪ್ರಾಣದೊಂದಿಗೆ ಹೊರಗೆ ತೆಗೆದರೆಂದು ಒಂದಾನೊಂದು ಪತ್ರಿಕೆ ಹೇಳುತಿದೆ.

A silly attempt.—ಮದರಾಸ್ ಕ್ರಿಶ್ಚಿಯನ್ ಕಾಲೀಜಿನಲ್ಲಿ ಕಾಲೀಜ್ ತರಗತಿಯೊಳು ಓದುತಲಿದ್ದ ಮಿಸ್ಟರ್ ಸುಬ್ಬರಾಯ ಶಾಸ್ತ್ರಿಯೆಂಬಾತನು ಕ್ರಿಸ್ತುಮತಕ್ಕೆ ಸೇರಬೇಕೆಂಬ ಅಭಿಪ್ರಾಯದೊಡನೆ ಸದರೀ ಕಾಲೀಜಿಗೆ ಸೇರಿದ ಒಬ್ಬ ಮಿಷನರಿ ಪ್ರೊಫೆಸರರ ಮನೆಗೆ ಹೋಗಿ ಸೇರಿಕೊಳ್ಳಲು, ಸದರೀ ಕಾಲೀಜ್ ವಿದ್ಯಾರ್ಥಿಗಳ ಪೈಕಿ ಹದಿನಾರು ೪೦೦ ಮಂದಿ ಒಗ್ಗಟ್ಟಾಗಿ, ಕಾಲೀಜಿಗೆ ಹೋಗದೆ, ಅಲ್ಲಿಯಲ್ಲಿ ಮೀಟಿಂಗ್‌ಮಾಡಿ, ಸದರೀ ಸುಬ್ಬರಾಯಶಾಸ್ತ್ರಿಯನ್ನು ಬಿಟ್ಟುಬಿಡಬೇಕೆಂತಲೂ, ಹಾಗೆ ಮಾಡದೆ ಹೋದರೆ ತಾವೆಲ್ಲರು ಪಾಠಶಾಲೆಯನ್ನು ಬಿಟ್ಟುಬಿಡುವವಾಗಿಯೂ ಪ್ರಬಲ ಗದ್ದಲಮಾಡಿ, ಸದರೀ ವಿದ್ಯಾರ್ಥಿಯ ತಾಯಿತಂದೆಗಳಿರುವ ಮಚಲೀಬಂದರಿಗೆ ತಂತಿವರ್ತಮಾನ ಕೊಡಲು, ಅವರೆಲ್ಲರೂ ಬಂದು ಆತನ ಮಾತಾಪಿತೃಗಳೂ ಹುಡತಿಯೂ ಆತನಬಳಿಗೆ ಹೋಗಿ ಮೃದುವಾದ ಶಬ್ದಗಳಿಂದ ಆತನಿಗೆ ಬುದ್ಧಿಹೇಳಲು ಆತನ ಮನಸ್ಸು ತಿರುಗಿ ಅವರ ಸಂಗಡಮನೆಗೆ ಹೊರಟು ಹೋದನೆಂದು ಕೇಳುವದಕ್ಕೆ ಬಹಳಸಂತೋಷಿಸುತ್ತೇವೆ.

LOCAL AND PROVINCIAL NEWS.
ಒಳದೇಶ ಮತ್ತು ತಾಲ್ಲೂಕುಜಾತಿವೃತ್ತಾಂತಗಳು.

Re opening of courts.—ಈ ಸಂಸ್ಥಾನಕ್ಕೆ ಸೇರಿದ ವಿಶಿಷ್ಟ ಸಿವಿಲ್ ಕೋರ್ಟುಗಳೂ ನಾಳೇಮಜಕೂರ್ ೧೫ನೇ ತಾರೀಖ್ ಲಾಗಾಯತು ಮರಳಿ ತೆಗೆಯಲ್ಪಟ್ಟು ಕೆಲಸಕ್ಕೆ ಉಪಕ್ರಮವಾಗುವದು. ಚೀಫ್‌ಕೋರ್ಟು ಆಕ್ಟಿಂಗ್ ಮೂರನೇ ಜಡ್ಜಿಯಾದ ಬ್ಯಾರಿಸ್ಟರ್ ಮೆ|| ಮೀನಾಕ್ಷಿ ಅಯ್ಯರವರು ಸದರೀ ತಾರೀಖಿನಲ್ಲಿ ತಮ್ಮ ಕೆಲಸದ ಚಾರ್ಜನ್ನು ವಹಿಸುವರೆಂದು ತಿಳಿಯಬರುತಿದೆ.

The Bangalore Fort.—ಈ ಪೂರುಕೋಟೆಯನ್ನು ಶ್ರೀಮನ್ಮಹಾರಾಜರವರಿಗೆ ಒಪ್ಪಿಸಲಿಕ್ಕೆ ಇಂಡ್ಯಗವರ್ನಮೆಂಟನವರು ಮಂಜೂರ್ಮಾಡಿದ್ದರಿಂದ ಅದು ಕ್ಷಿಪ್ರದಲ್ಲಿಯೇ ಅವರ ಸುಪರ್ದ್ ಮಾಡಲ್ಪಡುವದು. ಕೋಟೆಯಲ್ಲಿ ಸಿಲ್ಲೀದಾರ್ ಕುದುರೆಗಳನ್ನಿಡುವ ಆಲೋಚನೆಯಿಂದ ಕರ್ನಲ್ ಹೀಯಮರು ಬೇಕಾದ ಏರ್ಪಾಡುಗಳಂ ಮಾಡುವ ಬಗ್ಗೆ ಅಲ್ಲಿಗೆಹೋಗಿ ನೋಡಿಕೊಂಡು ಬಂದರೆಂದು ತಿಳಿಯಲಾದೆವು.

Cutting of a nose.—ಬಿಡದಿಯಲ್ಲಿ ವಾಸವಾಗಿರತಕ್ಕವನೊಬ್ಬನು, ಈಚೆಗೆ ಒಂದುದಿನ, ಅಡಿಗೆಯಾಯಿತೆ ಊಟಕ್ಕೆ ಬರಬಹುದೇ ಸಿದ್ಧವಾಗಿದೆಯೇ ಯೆಂದು ಪತ್ನಿಯನ್ನು ಕೇಳಲು ಅದಕ್ಕವಳು ಸ್ವಲ್ಪ ಸವಕಾಶವಾಗುವದೆಂದು ನುಡಿದಳಂತೆ. ಗಂಡನು "ನಿನ್ನ ಅಹಂಕಾರವನ್ನಡಗಿಸುವೆ"ನೆಂದು ನುಡಿಯುತ ಅವಳ ಮೂಗಂ ಕೊಯಿದುಬಿಟ್ಟನು. ಈಗ ಸದರೀ ಹೆಂಗಸು ಆಸ್ಪತ್ರಿಯಲ್ಲಿ ಚಿಕಿತ್ಸೆಯಲ್ಲಿಯೂ ಅವಳಗಂಡನು ಪೈದಸ್ಥಳಿಯೂ ಇರುವಂತೆ ತಿಳಿಯಬರುತಿದೆ.

Retirement.—ಹುಜೂರ್ ಖಜಾನೆ ಚೀಫ್ ಅಕೌಂಟೆಂಟ್ ಮೆ|| ವಾಸುದೇವರಾಯರವರು ಮಾಹೇಮಜಕೂರ್ ಗುರ್ರೇತಾರೀಖ್ ಮೊದಲು ಕೆಲಸದಿಂದ ಪೆನ್ಷನ್‌ಮೇಲೆ ನಿವೃತ್ತರಾದರೆಂತಲೂ, ಅವರ ಕೆಲಸ ಕಂಟ್ರೋಲರ್ ಆಫೀಸಿನಲ್ಲಿರುವ ಮೆ|| ಅಪ್ಪುಕೆಟ್ಟರಿಗೆ ಕೊಡಲ್ಪಟ್ಟಿತೆಂತಲೂ, ಇನ್ನೂ ಒಬ್ಬರಿಬ್ಬರು ಕಂಟ್ರೋಲರ್ ಆಫೀಸಿಗೆ ಸೇರಿದವರು ನಿವೃತ್ತರಾದರೆಂತಲೂ ಅವರ ಕೆಲಸಗಳೆಲ್ಲ ಕ್ರಮವಾಗಿ ಅಲ್ಲಿಯೇ ಪಿರೇ ಮಾಡಲ್ಪಟ್ಟವೆಂತಲೂ ತಿಳಿಯಬರುತಿವೆ.

Obituary.—ಈವೂರು ಧನವಂತರಲ್ಲೊಬ್ಬರಾಗಿಯೂ ಅಬ್ಕಾರೀ ವಗೈರೆ ಕಂಟ್ರಾಕ್ಟುಗಳ ಮೂಲಕ ಪ್ರಸಿದ್ಧರಾದವರಾಗಿಯೂ ಇದ್ದ ಮಹಾರಾಜಶ್ರೀ ಅರುಣಾಚಲ ಮೊದಲಿಯಾರ್ರವರು ಗತವಾರದಲ್ಲಿ ಕಾಲಗತಿಯನ್ನೈದಿದರೆಂಬ ವೃತ್ತಾಂತವಂ ಕೇಳಿ ವಿಷಾದಿಸುತ್ತೇವೆ. ಇವರು ವಯಸ್ಸಂಪನ್ನರಾಗಿಯೂ, ಐಹಿಕಸುಖಸಂತೋಷಗಳನ್ನೆಲ್ಲ ಅನುಭವಿಸಿದವರಾಗಿಯೂ ಇದ್ದರೂ, ಮರಣಕಾಲದಲ್ಲಿ ತಮ್ಮ ವಿಯೋಗಕ್ಕಾಗಿ ಅನ್ಯರೊಡನೆ ತಾವೂ ಬಹಳ ದುಃಖಿಸಿದರಂತೆ.

ಇಲ್ಲಿನ ಸಿಟಿ ಮ್ಯೂನಿಸಿಪಲ್ ಕಮ್ಮಿಷನರಿಗಳಲ್ಲೊಬ್ಬರಾದ ಮೆ|| ದೊಡ್ಡೀ ವೆಂಕಟರಮಣಶೆಟ್ಟರವರ ಎರಡನೆಯ ಭಾರ್ಯೆಯೂ ಗತ ಶುಕ್ರವಾರದದಿನ ಮೃತಪಟ್ಟಂತೆ ತಿಳಿಯಲಾದೆವು. ಈ ಶೆಟ್ಟರವರಿಗೆ ಪೂರ್ವ ವಯಸ್ಸಿನಲ್ಲಿಯೇ ಕಳತ್ರ ವಿಯೋಗಗಳು ಮೇಲೆ ಮೇಲೆ ಉಂಟಾಗುತಬರುವದರಿಂದ ಇವರಿಗೆ ತಮ್ಮ ಐಶ್ವರ್ಯ ಪ್ರಯುಕ್ತವಾದ ಸಂತೋಷ ಸಹ ಶೋಭಿಸಲಾರದೆ ಹೋಗಿದೆ

SUMMARY OF NEWS.
ವೃತ್ತಾಂತ ಸಂಗ್ರಹ.

ಇಂಡಿಯಾ ದೇಶದ ವೈಸರಾಯ್ ಯವರಾದ ಲಾರ್ಡ್ ಡಫರಿನ್ ಸಾಹೇಬರವರು ಈ ತಿಂಗಳ ೨೨ನೇ ತಾರೀಖಿನಲ್ಲಿ ಸಿಂಲಾದಿನಲ್ಲಿ ಒಂದು ದೊಡ್ಡ ದರ್ಬಾರ್ ಮಾಡುವರು.

ಚೀನಾದೇಶದ ಚಕ್ರವರ್ತಿಯ ವಿವಾಹವು ಬರುವ ವರ್ಷದಲ್ಲಿ ಜರುಗುವದೆಂತಲೂ, ಈ ಮಹೋತ್ಸವಕ್ಕಾಗಿ ನಾನಾವಿಧವಾದ ೨೦,೦೦೦ ರೇಷ್ಮೆ ಥಾನುಗಳು ಬೇಕಾಗಿರುವದೆಂತಲೂ ತಿಳಿಯಬರುತಿದೆ.

ಜರ್ಮನೀ ಚಕ್ರವರ್ತಿಗಳ ದೇಹದಸ್ಥಿತಿಯು ಪ್ರಕೃತದಲ್ಲಿ ಬಹಳ ಭಯಂಕರಸ್ಥಿತಿಯಲ್ಲಿದ್ದರೂ ಅವರು ಇನ್ನೂ ೧೦ ವರುಷ ಬದುಕುವರೆಂದು ಜ್ಯೋತಿಶ್ಶಾಸ್ತ್ರ ಸಿದ್ಧಾಂತದಮೇಲೆ ತಿಳಿಯಬರುತದೆಂದು ಒಬ್ಬ ಹಿಂದೂಗೃಹಸ್ಥನು ಮದರಾಸ್ ಮೆಯಿಲ್‌ಪತ್ರಿಕೆಗೆ ಬರೆಯುತ್ತಾನೆ.

ಬರದ್ವಾನ್ ದೇಶದ ಮಹಾರಾಜರು ಇನ್ನೂ ಬಾಲ್ಯಾವಸ್ಥೆಯಲ್ಲಿರುವದ್ದರಿಂದ ಇವರಿಗೆ ವಿದ್ಯಾಭ್ಯಾಸವು ಆವಶ್ಯಕವಾದ್ದೆಂದು ತಿಳದು ಪಾಠವನ್ನು ಹೇಳುವದಕ್ಕಾಗಿ ಒಬ್ಬ ಯೂರೋಪಿಯನ್ ಸ್ತ್ರೀಯನ್ನು ನೇಮಕಮಾಡಿರುತ್ತಾರೆ. ಆದರೆ ಅಲ್ಲಿನದೇಶೀಯರಿಗೆ ಈ ಏರ್ಪಾಡುಬಹಳ ಅನಿಷ್ಟವಾಗಿರುತ್ತದೆ.

ಬರ್ಮಾ ಪಟ್ಟಣದ ತಂತಿ ವರ್ತಮಾನದಿಂದ ತಿಳಿಯಬರುವದೇನಂದರೆ.—ಅಮೀರರ ಮಂತ್ರಿಯವರನ್ನು ಅವರ ದ್ವೇಷಿಗಳಾದ ಕೆಲವರು ಸೇರಿಕೊಂಡು ಕೊಂದುಹಾಕಿಬಿಟ್ಟರು. ಅವರಲ್ಲೊಬ್ಬರು ಪತ್ತೆಯಾದದರಿಂದ ಅವರನ್ನು ೧೮೦ ಅಡಿ ಯೆತ್ತರವುಳ್ಳ ಒಂದು ಪರ್ವತಶಿಖರದಿಂದ ಕೆಳಗೆ ನೂಕಿಬಿಡಲು ಅವರದೇಹವು ಛಿದ್ರಾಛಿದ್ರವಾಯಿತು.

ರಂಗೂನ್ ಪಟ್ಟಣದಲ್ಲಿ ಬರ್ಮಾಜಾತಿಯ ಒಬ್ಬ ಹುಡುಗಿ ಇರುತ್ತಾಳೆ. ಅವಳ ನೇತ್ರದಿಂದ ಒಬ್ಬ ಹಿಂದೂಸನ್ಯಾಸಿಯು ಹುಟ್ಟಿದ್ದಾನೆಂತ ಅಲ್ಲಿನ ಜನರು ಹೇಳುತ್ತಾರೆ. ಈ ಅದ್ಭುತ ಚಮತ್ಕಾರವನ್ನು ನೋಡುವದಕ್ಕಾಗಿ ಬಹುಜನರು ಸೇರುತ್ತಾರೆ. ನೋಡತಕ್ಕ ಜನರಿಗೆ ಎಂಟು ಆಣೆಯಾಗಾಯಿತು ನೋಡುವವೇಳೆಯನುಸರಿಸಿ ಒಂದುರೂಪಾಯಿವರಿಗೆ ಟಿಕೆಟಿಟ್ಟಿರುತ್ತಾರಂತೆ.

ಹವ್ಯಕರಲ್ಲಿ ಸ್ತ್ರೀ ಪ್ರಜೆಯು ಕಡಿಮೆಯಾದಕಾರಣ ಎಷ್ಟೋಮಂದಿ ಹವ್ಯಕರು ಪುನರ್ವಿವಾಹವನ್ನಪೇಕ್ಷಿಸಿ, ಅಸಂಬಂಧವಾದ ಮಧ್ಯಸ್ಥವನ್ನು ಮಾಡಬೇಕೆಂತ ನಮಗೆ ಅನೇಕ ಕಾಗದಗಳನ್ನು ಬರೆದುಕೊಳ್ಳುತಲಿದ್ದಾರೆ. ಆದರೆ ಆವಿಧಯವು ಈಗಿನಕಾಲಕ್ಕೆ ವಿರೋಧವಾದದ್ದೆಂದೆಣಿಸಿ ನಾವು ಅದಕ್ಕೆ ಸಿಗಕೊಡಲಿಲ್ಲವೆಂದು ಹವ್ಯಕಸುಬೋಧಪತ್ರಿಕೆ ತಿಳಿಸುತಿದೆ.

೧೮೭೦ರಲ್ಲಿ ಒಬ್ಬ ಸ್ತ್ರೀಯನ್ನು ಅಮೆರಿಕಾ ದೇಶದಲ್ಲಿನ ಒಂದು ಪ್ರಾಂತದಲ್ಲಿ ನ್ಯಾಯಾಧಿಪತಿಯನ್ನಾಗಿ ನೇಮಿಸಿದರು. ಆಕೆಯು ಸುಮಾರು ೩೦ ಸಿವಿಲ್ ಮೊಕದ್ದಮೆಗಳನ್ನು ವ್ಯವಸ್ಥೆಮಾಡಿದ್ದರಲ್ಲಿ ಒಂದುಮಾತ್ರವೇ ಮೇಲ್ವಿಚಾರಣೆಗೆ ಹೋಯಿತು. ಆಕೆಯ ತೀರ್ಮಾನಗಳನ್ನು ಮೇಲುಕೋರ್ಟಿನ ನ್ಯಾಯಾಧಿಪತಿಗಳು ಬಹಳ ಶ್ಲಾಘನೀಯವಾದವುಗಳೆಂದು ಹೇಳಿದರು. ಇದಲ್ಲದೆ ಆಕೆಯು ಕ್ರಿಮಿನಲ್ ಮೊಕದ್ದಮೆಗಳಲ್ಲಿ ಪಂಚಾಯಿತರ ಸಹಾಯವನ್ನು ಬಯಸುತ್ತಿರಲಿಲ್ಲ. ಈ ಸ್ತ್ರೀಯು ಇಷ್ಟು ಭಾರಿಯಾದ ಮತ್ತು ಜವಾಬ್‌ದಾರೀಯುಳ್ಳ ಕೆಲಸವನ್ನು ನೋಡುತ್ತಿದ್ದಾಗ್ಯೂ, ಗೃಹಕೃತ್ಯವನ್ನು ಇತರರಂತೆಯೇ ಸರಿಯಾಗಿ ನೋಡಿಕೊಳ್ಳುತ್ತಿದ್ದಳೆಂದು ಒಂದು ಅಮೆರಿಕಾ ಪತ್ರಿಕೆಯಿಂದ ತಿಳಿಯಬರುತ್ತದೆ.

ಮುಂಬಯಿ ಪೋಸ್ಟ್‌ಮ್ಯಾಸ್ಟರ್ ಜನರಲ್ಲವರು ಕೆಲವು ದಿನಗಳಹಿಂದೆ ಒಂದು ಪ್ರಕಟಣೆಯನ್ನು ಪ್ರಸಿದ್ಧಪಡಿಸಿರುತ್ತಾರೇನಂದರೆ,—ಇಂಗ್ಲೀಷುಭಾಷೆಯನ್ನಾಗಲಿ ಅಕ್ಷರಗಳನ್ನಾಗಲಿ ತಿಳ

ಯದಂತಾವನ್ಯಾವದಾದರೂ ಯಾವ ಪೋಸ್ಟು ಆಫೀಸಿಗಾದರೂ ಹೋಗಿ ಇಂಗ್ಲೀಷಿನಲ್ಲಿ ತಂತಿಯನ್ನು ಬರಕೊಡಬೇಕೆಂತ ಹೇಳದವಕ್ಷಕ್ಕೆ ಆ ಪೋಸ್ಟು ಆಫೀಸಿನ ಯಾವ ಅಧಿಕಾರಿಯಾದರೂ ಹಣತೆಗೆದುಕೊಳ್ಳದೆ ಬರೆದುಕೊಡಬೇಕು. ಮತ್ತು ಯಾವದೊಂದು ವಿಷಯವನ್ನಾದರು ವಿನಯಪೂರ್ವಕ ಕೇಳಿಕೊಂಡರೆ ಹಣವಿಲ್ಲದೆ ಅವನಿಗೆ ಯೋಗ್ಯವಾದ ಉತ್ತರವನ್ನು ಅಥವಾ ಅವನು ಕೇಳದ ವಿಷಯವನ್ನು ಹೇಳಬೇಕು. ಅದೇ ಪ್ರಕಾರ ಯಾವ ಅಂಶವಾದರೂ ತಂತೀಮೂಲಕ ಬಂದಿದ್ದರೆ ಇಂಗ್ಲೀಷಿನಲ್ಲಿ ಅದರ ಭಾಷಾಂತರವನ್ನು ಮಾಡಿಕೊಡುವಂತೆ ಕೇಳದರೆ ಮೊಬಲಗಿಲ್ಲದೆ ಮಾಡಿಕೊಡಬೇಕು, ಎಂಬದು.

ಕಬ್ಬಿಣ ತತ್ತಿ—ವಿಲಾಯತಿಯಲ್ಲಿ ಕೆಲವು ವರುಷಗಳ ಮುಂಚೆ ಒಬ್ಬ ರಾಜಪುತ್ರನು ಒಬ್ಬ ರಾಜಕನ್ನಿಕೆಗೆ ಅತ್ಯುತ್ತಮವಾದ ನಜರಾಣೆ ಕಳುಹಿಸುವೆನೆಂದು ವಾಗ್ದಾನ ಮಾಡಿದ್ದನು. ಆ ಪ್ರಕಾರ ಕೆಲವು ದಿನಗಳ ನಂತರ ಒಬ್ಬ ದೂತನು ಆ ನಜರಾಣೆಯನ್ನು ತೆಗೆದುಕೊಂಡು ಆ ರಾಜಕನ್ನಿಕೆಯ ಬಳಿಗೆ ಹೋದನು. ಆ ನಜರಾಣೆಯು ಒಂದು ಕಬ್ಬಿಣದ ತತ್ತಿಯಾಗಿತ್ತು. ರಾಜಪುತ್ರನು ಇಂತಹ ಕ್ಷುಲ್ಲಕವಾದ ನಜರಾಣೆಯನ್ನು ಕಳುಹಿಸಿದನೆಂದು ರಾಜಕನ್ನಿಕೆಯು ಕೋಪಗೊಂಡು ಅದನ್ನು ನೆಲದಮೇಲೆ ಎಸೆದುಬಿಟ್ಟಳು. ಅದು ಕೂಡಲೇ ಒಡೆದು ಹೋಯಿತು. ಮತ್ತು ಅದರೊಳಗಿರುವ ಒಂದು ಬೆಳ್ಳಿಯ ವಸ್ತುವು ಅವಳ ದೃಷ್ಟಿಗೆ ಬಿತ್ತು. ಅದಕ್ಕೆ ಒಂದು ಮೊಳೆ ಇತ್ತು. ಅದನ್ನು ಒತ್ತಿನೋಡಲಾಗಿ ಅದರ ಬಾಯಿತೆರೆದು ಒಳಗಿರುವ ಭಂಗಾರದ ಒಂದು ಪದಾರ್ಥವು ಕಾಣಿಸಿತು. ಅದಕ್ಕೂ ಒಂದು ಮೊಳೆಯಿತ್ತು. ಅದನ್ನು ಒತ್ತಿನೋಡಲಾಗಿ ಅದರೊಳಗೊಂದು ರತ್ನದ ಮಕುಟವಿತ್ತು. ಅದಕ್ಕೂ ಒಂದು ಮೊಳೆಯಿತ್ತು ಅದನ್ನು ಒತ್ತಿನೋಡಲಾಗಿ ಅದರಲ್ಲಿ ವಜ್ರದ ಒಂದು ಉಂಗುರವಿತ್ತು. ಅದನ್ನು ನೋಡಿ ಆ ರಾಜಕನ್ನಿಕೆಯು ಬಹಳ ಸಂತೋಷಪಟ್ಟಳಂತೆ.

ಕಳೆದ ತಿಂಗಳ ೨೬ನೇ ತಾರೀಖು ಮಂಗಳವಾರದ ದಿನ ಗುಲಿಗಾಬಾಯಿ ಎಂಬವಳೊಬ್ಬ ಹಿಂದೂ ವಿಧವೆಯು ತನಗಭಿಮತನಾದ ಒಬ್ಬ ಗೃಹಸ್ಥನನ್ನು ಮದುವೆ ಮಾಡಿಕೊಳ್ಳುವದಕ್ಕೆ ತನಗೆ ಅಪ್ಪಣೆ ಕೊಡಿಸಬೇಕೆಂದು ಇಲ್ಲಿನ ಪ್ರೆಸಿಡೆನ್ಸಿ ಮ್ಯಾಜಿಸ್ಟ್ರೇಟರಾದ ಮಿಸ್ಟರ ಹ್ಯಾಮಿಲ್ಟನ್ ಯವರಿಗೆ ಅರ್ಜಿ ಬರೆದುಕೊಂಡಳು. ಅವಳು ಸುಮಾರು ೭ ತಿಂಗಳ ಹಿಂದೆ ತನ್ನ ಗಂಡನು ಮಾರವಾಡನಲ್ಲಿ ಮೃತಪಟ್ಟದ್ದರಿಂದ ತನ್ನ ಭಾವಮೈದುನರ ಹೇಳಿಕೆಯ ಮೇರಿಗೆ ತಾನು ಮುಂಬಯಿಗೆ ಬಂದೆನೆಂತಲೂ, ಇಲ್ಲಿಗೆ ಬಂದಮೇಲೆ ತಾವು ತೋರಿಸತಕ್ಕವನನ್ನು ಮದುವೆಮಾಡಿಕೊಳ್ಳದಿದ್ದರೆ ನಿನ್ನ ಆಭರಣಗಳೂ, ವಸ್ತ್ರಗಳೂ ಸಿಕ್ಕಲಾರವೆಂದು ಹೇಳಿ ತನ್ನನ್ನು ನಾನಾವಿಧದಿಂದ ತೊಂದರೆಗೆ ಒಳಪಡಿಸಿದ್ದಾರೆಂತಲೂ, ಅವರ ಇಚ್ಛೆಯನ್ನು ನೆರವೇರಿಸಲಿಕ್ಕೆ ತನಗೆ ಸಮ್ಮತಿ ಇಲ್ಲವಾದ್ದರಿಂದ ತನಗಿಷ್ಟವಾದ ಗೃಹಸ್ಥನನ್ನೇ ವರಿಸುವದಕ್ಕೆ ತನಗೆ ಅಪ್ಪಣೆ ಕೊಡಿಸಬೇಕೆಂದು ಹೇಳಿದಳು. ಮ್ಯಾಜಿಸ್ಟ್ರೇಟರು ಹಾಗೆ ಅಪ್ಪಣೆಕೊಡುವದಕ್ಕೆ ಆಗುವದಿಲ್ಲವಾದ್ದರಿಂದ ಅದಕ್ಕಾಗಿ ತಾವು ವ್ಯಸನಪಡುತ್ತೇವೆಂತಲೂ, ಈ ವಿಷಯದಲ್ಲಿ ಇಷ್ಟಮಿತ್ರರ ಸಂಗಡ ರಾಜೀ ಮಾಡಿಕೊಳ್ಳುವದು ಉತ್ತಮವೆಂತಲೂ ಹೇಳಿ ಅರ್ಜಿಯನ್ನು ವಾಪಸಮಾಡಿದರು—ಕ. ಸು.

"ಪಂಜಾಬ ಟೈಂಸ್" ಎಂಬ ಪತ್ರಿಕೆಯಲ್ಲಿ ಈ ಕೆಳಗೆ ಕಂಡಂತೆ ಬರೆಯಲ್ಪಟ್ಟಿದೆ. ಇತ್ತಲಾಗಿ ಲಾಹೋರಿನಲ್ಲಿ ಒಬ್ಬ ಜೋತಿಷ್ಯನು ಬಂದಿರುತ್ತಾನೆ. ಅವನು ಜನರ ಮನಸ್ಸಿನಲ್ಲಿರುವದನ್ನು ಹೇಳಿ ಬಹಳ ಪ್ರಸಿದ್ಧಿಗೆ ಬಂದಿರುವದರಿಂದ ಒಂದು ದಿನ ದೊಡ್ಡ ಉದ್ಯೋಗಸ್ಥನಾದ ಒಬ್ಬ ಮಂಗಾಲಿ ಗೃಹಸ್ಥನು ಅವನನ್ನು ಪರೀಕ್ಷಿಸಬೇಕೆಂದು ಅವನ ಬಳಿಗೆ ಹೋಗಿ ನಾನೇನು ಯೋಚಿಸುತ್ತೇನೆ ಎಂದು ಪ್ರಶ್ನೆ ಮಾಡಿದನು. ಅದಕ್ಕೆ ಅವನು ಕೂಡಲೇ "ರುಸ್ಸಿಯಮಂಗಹಿನಹಿ" ಎಂಬದಾಗಿ ಯೋಚಿಸುತ್ತೀರೆಂದು ಹೇಳಿದನು. ತನ್ನ ಮನಸ್ಸಿನಲ್ಲಿದ್ದದ್ದನ್ನು ಅವನು ಹೇಳಿದ್ದನ್ನು ಕೇಳಿ ಆ ಮಂಗಾಲಿಯು ಮುಗುಳುನಗೆನಕ್ಕನು. ಮತ್ತು ಇನ್ನೊಂದಾವರ್ತಿ ನೋಡಬೇಕೆಂದು ನನ್ನ ಮನಸ್ಸಿನಲ್ಲೇನಿದೆ ಯೆಂದು ಕೇಳಲು "ಕಪತವಿಂಗ" ಎಂದು ಆ ಜೋತಿಷ್ಯನು ಉತ್ತರ ಕೊಟ್ಟನು. ಆಗ ಅಲ್ಲಿದ್ದ ಒಬ್ಬ ಯೂರೋಪಿಯನು ಸಿ. ಅವರು ಯಾವಾಗ ಬರುವರೆಂಬದನ್ನು ನೀನು ಹೇಳುವಿಯಾ ಯೆಂದು ಕೇಳಲು ಅವನು ಕೆಲವು ಲೆಕ್ಕಮಾಡಿ ೧೩ ತಿಂಗಳಲ್ಲಿ ಬರುವರು ಯೆಂದು ಉತ್ತರಕೊಟ್ಟನು. ಅವನು ಇನ್ನು ಮುಂದೆ ಜನರಿಗೆ ಇಂತಾ ಪ್ರಶ್ನೆ ಹೇಳಬಾರದೆಂದು ದಿನ ೧೫ಕ್ಕೆ ೧ರೂಪಾಯಿ ಭತ್ಯ ಕೊಡುವ ಕರಾರು ಮಾಡಿ ಅವನನ್ನು ಜೈಲಿನಲ್ಲಿಟ್ಟದ್ದಾರೆಂದು ವರ್ತಮಾನವಿದೆ—ಕ. ಸು.

ಹಾವಿನವಿಷಕ್ಕೆ ಔಷಧ.—ಪೂರ್ವ ಬಂಗಾಳ ಸ್ಟೇಟರೈಲ್ವೆ ಇಲಾಖೆ ಡಾಕ್ಟರ ವಿನ್ಸೆಂಟ ರಿಚ್ಚರ್ಡ್ಸ ಎಂಬುವರು, ಈ ವಿಷಯದಲ್ಲಿ ತಮ್ಮ ಅನುಭವ ಪೂರ್ವಕವಾದ ಒಂದು ಪ್ರತಿಕ್ರಿಯೆಯನ್ನು ತಿಳುಹಿಸಿದ್ದಾರೆ. ಏಪ್ರಿಲ ೧೪ನೇ ತಾರೀಖು ಶನಿವಾರ ಕಲ್ಕತ್ತ ಪಟ್ಟಣದಲ್ಲಿ ಇವರ ಎಡಗೈ ಒಂದು ಬೆರಳಿಗೆ ನಾಗರಹಾವು ಕಚ್ಚಿತು. ಆದರು ಆಕ್ಷಣವೆ ಆ ಬೆರಳನ್ನು ಮುಳಿದು ದಾರಕಟ್ಟಿ ಕೊಯಿದು ಅದಕ್ಕೆ ಪರ್ಮಾಂಗನೇಟ ಆಫ್ ಪೊಟಾಷ್ (Permanganate of Potash) ಎಂಬ ಒಂದು ತರದ ಮರದ ಉಪ್ಪನ್ನು ಹಾಕಿ, ಬೆರಳನ್ನು ತೋಳನ್ನೂ ಸಹ ಹುರಿ ಯಿಂದ ಬಿಗಿಯಾಗಿ ಕಟ್ಟಿ ಬಿಗಿದು, ತರುವಾಯ ಡಾಕ್ಟರ್ ಮ್ಯಾಕೆಂಜಿಯವರು ಎಂಬುವವರ ಬಂಗಲಿಗೆ ಸಾರೋಟದಲ್ಲಿ ಹೋಗುತ್ತಾ ಸರ ಜೋಸೆಫ್ ಸಿಂಪ್ಸನ್ ಎಂಬ ವರನ್ನು ಸಂಧಿಸಿ, ಅವರನ್ನೂ ಕೂಡಿಸಿಕೊಂಡು ಆ ಬಂಗಲಿಯನ್ನು ಹೊಕ್ಕರು. ಅಲ್ಲಿ ಅವರಿಬ್ಬರೂ ಸೇರಿ ಇವರ ಬೆರಳನ್ನು ಪುನಃ ಬಿಚ್ಚಿನೋಡಿ ಅದಕ್ಕೆ ಪೆಟ್ಲುಪ್ಪಿನ ದ್ರಾವಕವನ್ನು (Nitric acid) ಹಾಕಿದರು. ಆದಿನ ಸಾಯಂಕಾಲಕ್ಕೆ ಡಾಕ್ಟರ್ ವಿನ್ಸೆಂಟ ರಿಚ್ಚರ್ಡ್ಸ ಸಾಹೇಬರಲ್ಲಿಂದ ಮನೆಗೆ ತಾವೇ ಧಾರಾಳವಾಗಿಬಂದರು. ವಾರವೇಳೆಗೆ ಇವರಿಗೆ ಸಂಪೂರ್ಣಗುಣವುಂಟಾಗಿ ಈಗ ಜೀವಂತರಾಗಿದ್ದಾರೆ. ವೃ. ಪ.

ಮದರಾಸಿನಲ್ಲಿ ಒಬ್ಬ ಸಾಹುಕಾರನು ರತ್ನಾಭರಣ ಮತ್ತು ನೋಟುಗಳನ್ನು ಸಹ ಒಂದು ಸಣ್ಣ ಚೀಲದಲ್ಲಿ ಹಾಕಿ ಕೈಯಲ್ಲಿ ಹಿಡಿದುಕೊಂಡು ಸಾಹುಕಾರ ಪೇಟೆಯ ಮಾರ್ಗವಾಗಿ ಹೋಗುತ್ತಿರುವಾಗ್ಯೆ, ದಾರಿಯಲ್ಲಿ ಥಕ್ಕನೆ ಒಂದು ಬಲವಾದ ರಣಹದ್ದು ಒಂದು ಗಂಟನುತಿದ್ದ ಚೀಲದಲ್ಲಿ ತನ್ನ ಆಹಾರಕ್ಕಾಗುವಂಥ ಪದಾರ್ಥವೇನಾದರೂ ಇರಬಹುದೆಂದು ಎಣಿಸಿ, ಆತುರದಿಂದ ಅದನ್ನು ತನ್ನ ಕ್ರೂರವಾದ ನಖಗಳಿಂದ ಎತ್ತಿಕೊಂಡು, ಮೇಲಕ್ಕೆ ಹಾರಿಹೋಯಿತು. ಸಾಹುಕಾರನಾದ ಮಾರವಾಡಿಯು ಗಗನಮಾರ್ಗದ ಕ್ಯೆನನ್ನು ಅಟ್ಟಿಕೊಂಡು ಹೋಗಲಾರದೆ, ಧೈರ್ಯ ಕುಂದಿ ವ್ಯಸನಾಕ್ರಾಂತನಾಗಿ ಬೊಬ್ಬೆಯಿಂದ ಮನೆಗೆ ಹೊರಟುಹೋದನು ಅವನಿಗಂಟು ಹೊಗಲಿಲ್ಲವು. ಕೆಲವು ಹುಡುಗರು ಈ ಆಶ್ಚರ್ಯವಾದ ಕೃತ್ಯ ನಡೆದ ಸ್ಥಳಕ್ಕೆ ಸ್ವಲ್ಪ ದೂರದಲ್ಲಿರುವ ಒಂದು ಸರ್ಕಾರೀ ಉಪವನದಲ್ಲಿ ಹುಲ್ಲು ಕೊಯುತ್ತಾ ಇರುವಾಗ, ಆಕಸ್ಮಾತಾಗಿ ಬಿದ್ದಿದ್ದ ಆಭರಣ ನೋಟುಗಳನ್ನು ಕಂಡು ಭಯಪಟ್ಟು, ಆ ವಿಷಯವನ್ನು ಪೋಲೀಸಿನವರಿಗೆ ತಿಳಿಸಿದರು. ಅವರು ಅಲ್ಲಿಗೆ ಹೋಗಿ ನೋಡಿದರು. ಸುಮಾರು ೫೦೦—೬೦೦ ರೂಪಾಯಿಗಳ ಮಾಲುದೊರಿಯಿತು. ಮತ್ತೊಂದು ದಿನ ಆ ಹುಡುಗರು ಇನ್ನೂ ಸ್ವಲ್ಪ ದೂರದಲ್ಲಿ ಕೆಲಸದಲ್ಲಿ ಮಾಡುತ್ತಿರುವಾಗ ಬೇರೆ ಕೆಲವು ಆಭರಣ ನೋಟುಗಳನ್ನು ನೋಡಿ ಪುನಃ ಪೋಲೀಸಿನವರಿಗೆ ವರ್ತಮಾನ ಕೊಟ್ಟರು, ಎಂದು ತಿಳಿಯಬರುತಿದೆ. ಪಕ್ಷಿಗಳಲ್ಲಾ ಪರರಸೊತ್ತನ್ನು ಅಪಹರಿಸುವದಾದರೆ, ಕಳ್ಳರನ್ನು ಹಿಡಿಯುವ ಪೋಲೀಸಿನವರಿಗೆ ರೆಕ್ಕೆಗಳನ್ನು ಕಲ್ಪಿಸಬೇಕಾಯಿತು.—ವೃ. ಪ.

THE MYSORE GAZETTE.

ಮೈಸೂರು ಗೆಜೆಟ್.

ಶ್ರೀಮನ್ಮಹಾರಾಜ ರಾಜಶ್ರೀ ಸಾಹೇಬ್ ಬಹದೂರವರ ದಿವಾನರವರಿಂದ ಕೊಡಲ್ಪಟ್ಟ ಸರ್ಕಾರಿ ನಿರೂಪಗಳು.

ತಾ|| ೧೭ನೇ ಏಪ್ರೀಲ್ ೧೮೮೮.

ನಂ. ೩—ಯಾವ ಉದ್ಯೋಗಗಳಿಗಾಗಿ ವಿಶೇಷತಃ ಡಿಪಾರ್ಟಮೆಂಟಲ್ ಪರೀಕ್ಷೆಗಳು ವಿಧಿಸಲ್ಪಟ್ಟಿರುವದಿಲ್ಲವೋ ಅಂತಾ ರೆವಿನ್ಯೂ ವ ಜನರಲ್ ಇಲಾಖೆಗಳಲ್ಲಿನ ಮೇಲ್ಪಟ್ಟ ದರ್ಜೆಯ ಸರ್ಕಾರ ಉದ್ಯೋಗಗಳಿಗೆ ಉಮೇದವಾರರನ್ನು ನೇಮಕ ಮಾಡುವ ವಿಷಯದಲ್ಲಿ ಇದರಡಿಕಂಡರೂಲ್ಸುಗಳು ನಿಬಂಧನೆಗಳು ಜಾರೀಮಾಡಲ್ಪಡತಕ್ಕದ್ದು.

೧. ನೌಕರಿ ಪಡೆಯುವ ಬಗ್ಗೆ ಉಮೇದವಾರರ ಪಕ್ಕಾ ದಾರಿಯು ನೌಕರಿ ಭರ್ತಿಮಾಡುವದರಲ್ಲಿ ಅಂತಾ ನೌಕರಿಯು ಮಾಹೆಯಾನಾ ೩೦ ರೂಪಾಯಿ ಯಾ ಅದಕ್ಕೆ ಕಮ್ಮಿಇರುವ ಸಂದರ್ಭಗಳಲ್ಲಿ ಇದರಡಿ ಕಂಡ ಕ್ರಮಪ್ರಕಾರ ಚುನಾಯಿಸಲ್ಪಡತಕ್ಕದ್ದು:—

(a) ಇಂಡಿಯಾದೇಶದ ಯಾವದಾದರೂ ಯೂನಿವರ್ಸಿಟಿ ಯಾನೆ ಸಕಲಕಲಾ ಪರೀಕ್ಷಾಶಾಲೆಯ ಬಿ. ಎ. ಪರೀಕ್ಷೆಯಲ್ಲಿ ತೇರ್ಗಡೆಯಾದವರು.

(b) ಮೈಸೂರುದೇಶದ ಯಾವದಾದರೂ ಸಕಲಕಲಾ ಪರೀಕ್ಷಾ ಶಾಲೆಯ ಎಫ್. ಎ. ಪರೀಕ್ಷೆಯನ್ನಾಗಲಿ ಸಿವಿಲ್ ಇಂಜನಿಯರಿಂಗ್ ಪರೀಕ್ಷೆಯನ್ನಾಗಲಿ ಅಥವಾ ಮದರಾಸಿನಲ್ಲಿಯ ವ್ಯವಸಾಯ ಸಂಬಂಧವಾದ ಸ್ಕೂಲಿನಲ್ಲಿ ಲೈಸೆನ್ಸ್ ಪರೀಕ್ಷೆಯನ್ನಾಗಲಿ ಕೊಟ್ಟು ತೇರ್ಗಡೆಯಾದ ಉಮೇದವಾರರು.

(c) ಮದರಾಸ ಸಕಲಕಲಾ ಪರೀಕ್ಷಾಶಾಲೆಯ ಮೆಟ್ರಿಕ್ಯುಲೇಷನ್ ಪರೀಕ್ಷೆಯಲ್ಲಿ ತೇರ್ಗಡೆಯಾದ ಉಮೇದವಾರರು.

(d) ಮೈಸೂರಲ್ಲಿನ ಸಂಸ್ಕೃತ ಸಂಸ್ಥಾಪಿತ ಶಾಲೆಯಿಂದ ಪಾಂಡಿತ್ಯದ ಬಹುಮಾನ ಪತ್ರವನ್ನು ಪಡೆದು ಮತ್ತು ಮೈಸೂರು ಸ್ಥಳಿಕ ದೇಶಭಾಷೆಯ ಪರೀಕ್ಷೆಯನ್ನಾಗಲಿ ಮಿಡಲ್ ಸ್ಕೂಲ್ ಪರೀಕ್ಷೆಯನ್ನಾಗಲಿ ಕನ್ನಡ ಭಾಷೆಯನ್ನೇ ಸ್ವಭಾಷೆಯಾಗಿ ಕೊಟ್ಟು ತೇರ್ಗಡೆಯಾದಂಥಾ ಉಮೇದವಾರರು.

(e) ಮೈಸೂರು ಸ್ಥಳಿಕ ದೇಶಭಾಷೆಯ ಪರೀಕ್ಷೆಯನ್ನಾಗಲಿ ಮದರಾಸಿನ ಮಿಡಲ್ ಸ್ಕೂಲ್ ಪರೀಕ್ಷೆಯನ್ನಾಗಲಿ ಕೊಟ್ಟು ತೇರ್ಗಡೆಯಾದ ಉಮೇದವಾರರು,

[ಷರಾ.—೧. ಮೇಲೆ ಉದಹರಿಸಲ್ಪಟ್ಟ ತಮ್ಮಾಂ ಉಮೇದವಾರರು ಕೈಬರಹ ಕಾಗದಗಳನ್ನು ಸಾಫಾಗಿ ಓದುವ ಬಗ್ಗೆ ಶಕ್ತರಾಗಿರಬೇಕು.

೨. (d) ಮತ್ತು (e) ಕಲಂಗಳಲ್ಲಿ ವಿವರಿಸಲ್ಪಟ್ಟ ಉಮೇದವಾರರು, ಇಂಗ್ಲೀಷ್ ಭಾಷೆಯನ್ನು ತಿಳಿದಿದ್ದ ಹೊರತು, ಹಾಗೆ ಇಂಗ್ಲೀಷ್ ಭಾಷೆಯ ಪರಿಶ್ರಮ ಅವಶ್ಯಕವಾಗಿರುವಂಥಾ ಉದ್ಯೋಗಗಳನ್ನು ಪಡೆಯುವ ಬಗ್ಗೆ ಅರ್ಹರಾಗಿರತಕ್ಕದ್ದಲ್ಲ.

೩. ೧೮೮೮ನೇ ಇಸವಿ ಏಪ್ರಿಲ್ ೧ನೇ ತಾರೀಖಿನ ತರುವಾಯದಲ್ಲಿ, ಮಾಹೇಯಾನಾ ೧೫ ರೂಪಾಯಿಗಳಿಗಿಂತ ಜಾಸ್ತಿಯಾಗಿ ಸಂಬಳ ಪಡೆಯುವ ಯಾವ ಉದ್ಯೋಗವಾಗಲಿ, ಈ ರೂಲಿನಲ್ಲಿ ವಿವರಿಸಲ್ಪಟ್ಟಂತೆ ಯಾವದಾದರೂ ಒಂದು ವಿಧವಾಗಿ ಅರ್ಹರಾಗಿದ್ದಹೊರತು, ಮತ್ತು ಹಾಗೆ ಅರ್ಹರಾದ ಉಮೇದವಾರರು ಕ್ರಮವಾಗಿ ಠಾಣೆಯ ನಾಜರ ತರ ವಾಯಿದೆಯಲ್ಲಿ ದೊರಿಯಲಿಲ್ಲವೆಂಬ ಬಗ್ಗಾಗಿ (ನೌಕರರ್ ಮಾಡುವ ಆಫೀಸರರಿಂದ ಬರೆಯುವ ರಿಪೋರ್ಟ್ ಮಾಡಲ್ಪಡುವ) ಕಂಡೀಕ್ತವಾದ ಸಬಬಿನ ಮೇಲೆ ವಿನಾ, ಅನ್ಯಥಾ ಕೊಡಲ್ಪಡುವದು.

II. ಒಂದನೇ ರೂಲಿನಲ್ಲಿ ಯೇನು ಅಡಗಿ ಇದ್ದಾಗ್ಯೂ ಸರಿಯೇ ೫ ವರುಷಗಳಿಗೆ ಕಮ್ಮಿಯಿಲ್ಲದ ಅಮಾನತ್‌ದಾರೀ ಸರ್ವೀಸ್ ಉಳ್ಳ ಖಾಯಂ ನೌಕರನ ಬಡ್ತೀ ಬಗ್ಗೆ ಹಕ್ಕುದಾರಿಯು, ಮಾಹೇಯಾನಾ ೩೦ ರೂಪಾಯಿ ತಳಗೆ ಪಗಾರದಂತಾ ನೌಕರಿಗಳು ಖಾಲೀಯಾದ ಕಾಲದಲ್ಲಿ ಪೂರಾ ಆಲೋಚಿಸಲ್ಪಡತಕ್ಕದ್ದು, ಪರಂತು ೫ ವರುಷಕ್ಕೆ ಜಾಸ್ತೀ ಸರ್ವೀಸ್ ಇಲ್ಲದಂತಾ ನೌಕರರ ವಿಷಯದಲ್ಲೂ ಅಥವಾ ಜಾಸ್ತೀ ಸರ್ವೀಸ್ ಉಳ್ಳ ನೌಕರನು ಪೂರಾ ಲಾಯಖಾಗಿಲ್ಲವೆಂಬ ಸಂದರ್ಭದಲ್ಲೂ ಸಹಾ Iನೇ ರೂಲಿನಲ್ಲಿ ವಿಧಿಸೋಣಾದ ದರ್ಜೆವಾರ್ ಚುನಾವಣೆಯು ಆಚರಿಸಲ್ಪಡತಕ್ಕದ್ದು.

III. ಮಾಹೇಯಾನಾ ೩೦ ರೂಪಾಯಿಗೆ ಮೇಲ್ಪಟ್ಟ ಉದ್ಯೋಗಗಳಿಗೆ ಬಡ್ತೀ ಮಾಡಬೇಕಾಗಿರುವ ಸಂಗತಿಗಳಲ್ಲಿ ಇದರಡೀ ಕಂಡ ದರ್ಜೇ ಪ್ರಕಾರ ಚುನಾವಣೇ ಮಾಡಲ್ಪಡತಕ್ಕದ್ದು:—

(a) ಬಿ. ಎ. ಪರೀಕ್ಷೆ ಕೊಟ್ಟು ತೇರ್ಗಡೆಯಾಗಿದ್ದರೂ ಸರಿಯೇ ಅಥವಾ ಇಲ್ಲದಿದ್ದರೂ ಸರಿಯೇ ೧೮೮೫ನೇ ಇಸವಿ ಜನವರಿ ೭ನೇ ಮತ್ತು ೭೦೫ನೇ ನಂಬರ್ ಇಸ್ತಿಹಾರನಾಮೆಯಿಂದ ವಿಧಿಸಲ್ಪಟ್ಟ ಡಿಪಾರ್ಟಮೆಂಟಲ್ ಯಾನೆ ಜುಡಿಷಲ್ ವ ರೆವಿನ್ಯೂ ಪರೀಕ್ಷೆಯನ್ನು ಕೊಟ್ಟು ತೇರ್ಗಡೆಯಾದವರಲ್ಲಿ ಅವರು ಪ್ಯಾಸುಮಾಡಿದ ತಾರೀಖುವಾರ್ ಕ್ರಮವನ್ನನುಸರಿಸಿ ಚುನಾಯಿಸಲ್ಪಡತಕ್ಕದ್ದು.

(b) ಒಂದನೇ ರೂಲಿನ (a) ಮತ್ತು (b) ಕ್ಲಾಜುಗಳಲ್ಲಿ ವಿವರಿಸಲ್ಪಟ್ಟು ಪರಂತು ಅವರು ಮೇಲ್ಕಂಡ ಡಿಪಾರ್ಟಮೆಂಟಲ್ ಪರೀಕ್ಷೆ ಕೊಟ್ಟು ತೇರ್ಗಡೆಯಾಗದಂತಾವರಲ್ಲಿ ಸದರೀ ರೂಲಿನಲ್ಲಿ ಉದಾಹರಿಸಲ್ಪಟ್ಟ ಚುನಾವಣೆಯ ದರ್ಜೆಪ್ರಕಾರ.

(c) ಇತರರು.

ಪರಂತು ಈ ರೂಲಿನ (b) ಕ್ಲಾಜಿನಲ್ಲಿ ನಮೂದಿಸಲ್ಪಟ್ಟಂತೆ ಡಿಪಾರ್ಟಮೆಂಟಲ್ ಪರೀಕ್ಷೆ ಕೊಟ್ಟು ತೇರ್ಗಡೆಯಾಗುವದರ ಮೂಲಕ ಲಾಯಖಾಗದಂತಾ ಉಮೇದವಾರರಿಗೆ ಬಡ್ತೀ ಬಗ್ಗಾಗಿ ಚುನಾವಣೆ ಅಂದರೆ ಡಿಪಾರ್ಟಮೆಂಟಲ್ ಪರೀಕ್ಷೆ ಕೊಡುವದರ ಮೂಲಕ ಲಾಯಖಾಗದಂತಾ ಬದಸ್ತೂರ್ ಸಮನಾದ ಯೋಗ್ಯತೆ ಉಂಟಾಗಿರುವ ಇತರ ಉಮೇದವಾರರಿಗೆ ಬದಲಾಗಿ ಬಡ್ತೀಯು ಅರ್ಹವಾಗತಕ್ಕದ್ದೇ ಹೊರತು ಕೆಳಗಿನವರ್ಗದವರನ್ನು ಪಕ್ಕಾದಾರಿಯೋಪಾದಿಯಲ್ಲಿ ಪ್ಯಾಸ್ ಮಾಡದೇ ಇರುವಂತಾ ಪರಂತು ಜಾಸ್ತೀ ಸರ್ವೀಸ್ ಪಡೆದು ಅಮಾನತ್‌ದಾರಿಯಿಂದ ನೌಕರೀ ಮಾಡಿದಂತಾವರಮೇಲೆ ವಿಶೇಷತಃ ಬಡ್ತಿ ಮಾಡುವದರ ಮೂಲಕ ತನತಕ್ಕಸ್ಥೆಂದು ಅರ್ಹವಾಗತಕ್ಕದ್ದಲ್ಲ, ಮತ್ತು ಹೀಗೆ ಚುನಾವಣೆ ಮೂಲಕ ಬಡ್ತೀ ಪಡೆಯುವ ಹಕ್ಕುದಾರಿಯು ಹಾಗೆ ಪಡೆಯುವಂತಾವನು ಅಂತಾ ಬಡ್ತಿಯನ್ನು ಹೊಂದುವ ಬಗ್ಗೆ ಲಾಯಖೀ ಮೂಲಕವಾಗಿಯೂ ಸಾಕಷ್ಟು ಮಾಡಿದ ಕಾಲದಲ್ಲಿ ಒಳ್ಳೇ ನಡತೆ ಉಂಟಾಗಿರುವದರಿಂದಲೂ ಅರ್ಹನಾಗಿರುತ್ತಾನೆಂಬ ಷರತ್ತಿಗೆ ಒಳಪಟ್ಟಿರತಕ್ಕದ್ದು.

IV. ಖಾಲೀಯಾದ ಯಾವ ಉದ್ಯೋಗವಾಗಲಿ, ಅದು ಖಾಲೀ ಇರುವದಾಗಿ ೧೫ ದಿವಸಗಳಿಗೆ ಮುಂಚಿತವಾಗಿ ಒಂದು ನೋಟೀಸ್ ಪ್ರಸಿದ್ಧ ಮಾಡಲ್ಪಟ್ಟ ಹೊರತು ಅನ್ಯಥಾ ಹೊಸ ಜನಗಳಿಂದ ಕಾಯಮಾಗಿ ಯಾವ ಸಂದರ್ಭದಲ್ಲೂ ಭರ್ತೀಮಾಡಲ್ಪಡಕೂಡದು.

V. ಸರ್ಕಾರ ನೌಕರಿಗೆ ಸೇರಿದ ಯಾವ ಉದ್ಯೋಗಕ್ಕಾಗಲಿ ನಮೂದಾಗುವ ಉಮೇದುವಾರರ ಬಗ್ಗೆ ಅಧಿಕಾರವುಳ್ಳ ಪ್ರತಿ ಆಫೀಸರೂ, ಈ ರೂಲ್ಸು ಅನುಸಾರವಾಗಿ ಅರ್ಹರಾದ ಉಮೇದವಾರರ ಒಂದು ರಿಜಿಸ್ಟರ್ ಇಡತಕ್ಕದ್ದು, ತಮ್ಮಾಂ ದರಖಾಸ್ತುಗಳೂ ಅದರಲ್ಲಿ ರಿಜಿಸ್ಟರ್ ಮಾಡಲ್ಪಟ್ಟು ಯಾವದಾದರೂ ನೇಮಕರಾತಿಯು ಬಹಳಗಳು ಮಾಡಲ್ಪಡಬೇಕಾದಾಗ ತಮ್ಮಾಂ ಹೊಸ ದರಖಾಸ್ತುಗಳೂ ಆಲೋಚಿಸಲ್ಪಡತಕ್ಕವು.

BANGALORE:—Printed and published for the Proprietor at the KARNATIC Press.—1888.

ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA.

ಪ್ರತಿ ಸೋಮವಾರ ಪ್ರಾತಃಕಾಲದಲ್ಲಿ ಪ್ರಕಟಿಸಲ್ಪಡುವದು.

Published every Monday Morning.

ಪ್ರಕಾಮವಿವಿಧಪ್ರವೃತ್ತ್ಯುಪಗವಾರ್ತ್ತಾ ಕರ್ಣಾಟಕಪ್ರಕಾಶನಪರಾಭಿಧಾ ಪ್ರಥಿತಸಾಹಿತೀಶೋಭಿತಾ ॥ ಪ್ರಗಾಂಕಹಿತವಾಸರೇನಿಹಿತಮುದ್ರಣಾಸದ್ಮನ್ಯೇರ್ಧ್ಧಿಕಾಸುಪರಿಪೋಷಿತಾದಿಶತಿಮಾನಸಂಸಂಮುದಂ ॥

Vol XV.] BANGALORE.—MONDAY, MAY 14, 1888. [No. 19.

ಸಂಪುಟ ೧೫.] ಬೆಂಗಳೂರು:—ಸನ್ ೧೮೮೮ನೇ ಇಸವಿ ಮೇ ೧೪ನೇ ತಾರೀಖ್ ಸೋಮವಾರ. [ಸಂಚಿಕೆ ೧೯.

ಕರ್ಣಾಟಕ ಪ್ರಕಾಶಿಕಾ

ಪತ್ರಿಕೆಯ ಚಂದಾ ದರಗಳು,
೧೮೮೮ನೇ ಇಸವಿ ಜನವರಿ ೧ನೇ ತಾರೀಖು
ಕಡಮೆ ಮಾಡಲ್ಪಟ್ಟಿರುತ್ತದೆ.

ಈ ಪತ್ರಿಕೆಯ ಚಂದಾದಾರರನ್ನು ಅನೇಕರ ಅಪೇಕ್ಷೆಯನ್ನು ನೆರವೇರಿಸುವ ಉದ್ದೇಶದೊಡನೆಯೂ, ಪರಿಮಿತವಾದ ಆದಾಯವುಳ್ಳವರಿಗೆಲ್ಲ ಈ ಪತ್ರಿಕೆಯು ಸುಲಭವಾಗಿ ಲಭಿಸುವಂತಿರಬೇಕೆಂಬ ಅಭಿಪ್ರಾಯದೊಡನೆಯೂ ಇದರ ಚಂದಾದರವನ್ನು ಇದರಡಿಕಂಡಂತೆ ಕಡಮೆ ಮಾಡಿರುತ್ತೇವೆಂತೆಂದರೆ:—

ಇಂಗ್ಲೀಷ್ ಮತ್ತು ಕನ್ನಡಭಾಗಗಳಿಗೆ.

	ಸ್ಥಳದವರಿಗೆ	ಪರಸ್ಥಳದವರಿಗೆ.
12 ತಿಂಗಳಿಗೆ	8—0—0	9—0—0
6 ,,	4—0—0	4—8—0
3 ,,	2—8—0	2—8—0

ಇಂಗ್ಲೀಷ್ ಅಥವಾ ಕನ್ನಡಭಾಗಗಳಿಗೆ.

	ಸ್ಥಳದವರಿಗೆ	ಪರಸ್ಥಳದವರಿಗೆ
12 ತಿಂಗಳಿಗೆ	4—0—0	5—0—0
6 ,,	2—0—0	2—8—0
3 ,,	1—4—0	1—8—0

ಷರಾ—ಅಂದರೆ ಮುತ್ಸದ್ದಿಗಳು, ಬೋಧಕ ಮತ್ತು ತಾಲ್ಲೂಕ್ ಸ್ಕೂಲ್‌ಮಾಸ್ಟರುಗಳು, ಪ್ಯಾನ್‌ಷನರು, ವಕೀಲರು, ವಿದ್ಯಾರ್ಥಿಗಳು, ಇವರಿಗೆಲ್ಲ ಈ ಪತ್ರಿಕೆಯು ಮಧ್ಯಮ ಚಂದಾದರದಕ್ಕೆ ಕೊಡಲ್ಪಡುವದು. ಅಡ್ವಾನ್ಸ್‌ ಹೊರತು ಬಾರದ ದರಖಾಸ್ತುಗಳಿಗೆ ಸುತರಾಂ ನಿಗೇ ಕೊಡಲ್ಪಡಲಾರದು. ಚಂದಾದಾರರು ಇಂಗ್ಲಿಷ್ ಭಾಗವನ್ನಾಗಲಿ ಕನ್ನಡಭಾಗವನ್ನಾಗಲಿ ಅಥವಾ ಎರಡನ್ನಾಗಲಿ ತೆಗೆದುಕೊಳ್ಳಬಹುದು. ಚಂದಾಹಣವನ್ನು ಮುಂಗಡವಾಗಿಯೇ ಸಲ್ಲಿಸತಕ್ಕದ್ದು. ಮೂರುತಿಂಗಳಿಗಿಂತ ಕಡಮೆಯಾಗಿ ಚಂದಾ ಮೊಬಲಗು ಅಂಗೀಕರಿಸಲ್ಪಡಲಾರದು.

ನೋಟುಗಳು ರವಾನಿಸತಕ್ಕವರು ಮೊದಲು ಕಳುಹಿಸುವ ಅರ್ಧನೋಟು ತಲುಪಿದಬಗ್ಗೆ ಸಮ್ಮತಿಪತ್ರವು ಬಂದ ಕೂಡಲೇ ಬಾಕೀ ಅರ್ಧ ನೋಟನ್ನು ರವಾನಿಸತಕ್ಕದ್ದು. ಬೇರೆಲ್ಲಗಳು ಕಳುಹಿಸತಕ್ಕವರು ರೂಪಾಯಿ ಒಂದಕ್ಕೆ ಒಂದು ಆಣೆ ಮೇರೆ ಡಿಸ್ಕೌಂಟ್ ಸಹ ಸೇರಿಸಿ ಕಳುಹಿಸತಕ್ಕದ್ದು. ಅಂಚೆಯ ಸ್ಟಾಂಪುಗಳು ಕಳುಹಿಸಿದರೆ ಡಿಸ್ಕೌಂಟಿಲ್ಲದೆ ಕಳುಹಿಸಲ್ಪಡುವ ಮೊಬಲಗಿನಲ್ಲಿ ಅದು ವಜಾ ಮಾಡಲ್ಪಟ್ಟು ಮಿಕ್ಕ ಮೊಬಲಗು ಲೆಕ್ಕಕ್ಕೆ ದಾಖಲ್ಮಾಡಿಕೊಳ್ಳಲ್ಪಡುವದು.

ಪ್ರಕಟನೆಯ ರಿವಾಜ್.

ಮೊದಲನೆಯದಕ್ಕೆ ಪಂಕ್ತಿ ಒಂದಕ್ಕೆ 0—2—0

ಎರಡನೆಯದಕ್ಕೆ ಪಂಕ್ತಿ ಒಂದಕ್ಕೆ 0—1—0

ಷರಾ—ಎರಡಾವರ್ತಿಗಿಂತ ಜಾಸ್ತಿಯಾಗಿ ಎಷ್ಟು ತಡವೆ ಹಾಕಿಸ ಬೇಕಾಗಿದ್ದಾಗ್ಯೂ ಪಂಕ್ತಿ ಒಂದಕ್ಕೆ ೧ ಆಣೆಯಂತೆಯೇ ಲೆಕ್ಕ ಮಾಡಲ್ಪಡುವದು. ಈ ಪತ್ರಿಕೆಯಲ್ಲಿ ಹಾಕಿಸ ಬೇಕಾದುದರಬಗ್ಗೆ ಪ್ರಕಟನೆಗಳು ಕಳುಹಿಸುವವರು ಅವು ಎಷ್ಟಾವರ್ತಿ ಹಾಕಿಸ್ ಮಾಡಲ್ಪಡಬೇಕೋ ಆ ಅಂಕವನ್ನು ಸ್ಪಷ್ಟವಾಗಿ ತಿಳಿಸತಕ್ಕದ್ದು. ಇಲ್ಲದಿದ್ದಲ್ಲಿ ಅವರು ನಮಗೆ ನಿಲ್ಲಿಸುವಂತೆ ಬರೆಯುವ ತನಕ ಅವು ಪ್ರಕಟಿಸುತ್ತಿದ್ದು ಹಾಗೆ ಎಷ್ಟಾವರ್ತಿ ಪ್ರಕಟಿಸಲ್ಪಟ್ಟಿದ್ದಾಗ್ಯೂ ಮೇಲ್ಕಂಡ ದರದಂತೆ ಚಿಮ್ಮತ್ ವಸೂಲ್ಮಾಡಲ್ಪಡುವದು. ಪ್ರಕಟನೆಯಬಗ್ಗೆ ಕಳುಹಿಸಲ್ಪಡತಕ್ಕ ಪ್ರಕಟನೆಗಳನ್ನು ಆಯಾ ಹಣವಾದರೂ ಮನಿಯಾರ್ಡರ್ ಅಥವಾ ಸ್ಟಾಂಪುಗಳ ಮೂಲಕ ಕಳುಹಿಸಬೇಕು. ಪ್ರಕಟನೆಯಬಗ್ಗೆ ಈ ಪತ್ರಿಕೆಗೆ ಕಳುಹಿಸಲ್ಪಡತಕ್ಕ ಕಾಗದಗಳಲ್ಲಿ ತಿಳಿಸಲ್ಪಡುವ ಅಭಿಪ್ರಾಯಗಳಿಗೆ ನಾವು ಜವಾಬ್ದಾರರಾಗಲಾರೆವು. ಕ್ರಮವಾಗಿ ರುಜುಮಾಡಿದ ಹೊರತು ಯಾವ ಕಾಗದವನ್ನೂ ಪ್ರಕಟಿಸಲಾರೆವು. ನಿರಾಕರಿಸಲ್ಪಟ್ಟ ಕಾಗದಗಳು ಹಿಂದಕ್ಕೆ ಕಳುಹಿಸಲ್ಪಡಲಾರವು.

"IT RECOMENDS ITSELF"

ALL WHO SUFFER FIND SURE RELIEF.

LITTLE'S

ORIENTAL BALM

THE MOST EFFECTUAL MODERN REMEDY FOR PAIN.

ಲಿಟಲ್ ಎಂಬವರಿಂದ ತಯಾರಿಸಲ್ಪಟ್ಟ "ಬಾಧಾಸಂಹಾರಿಣೀ" ಎಂಬ ಪೂರ್ವದೇಶ ಸಂಬಂಧವಾದ ಅಮೂಲ್ಯ ತೈಲವು ಸ್ವಶಕ್ತಿ ಪ್ರದರ್ಶಕವಾದದ್ದು, ಮತ್ತು ಸಫಲವಾದ ನವೀನ ಪ್ರತಿಕ್ರಿಯಾರೂಪವಾದ ಔಷಧವು. ಇದರಿಂದ ಸಕಲ ವಾತರೋಗಗಳೂ, ವಾತಸಂಬಂಧಗಳಾದ ಸಂಧಿಬಂಧಗಳೂ ನಿವೃತ್ತಿಯಾಗುವವು. ಮುಖ್ಯವಾಗಿ ಬೇರೆಬೇರೆ ವಾದ ವಾತರೋಗಗಳು, ಕಾಸ, ಗಂಟಲಿನಲ್ಲಿ ಉರಿ, ನಡುಮನೋವು, ಕೀಲುವಾಯು, ಕಟಿವಾಯು, ಉಳುಕು ನೋವು, ತಲೆನೋವು, ತಿಮಿರವಾಯು ಮುಂತಾದ ರೋಗಗಳಿಗೆಲ್ಲ ನಿಸ್ಸಂದೇಹವಾಗಿ ಬಹಳ ಪ್ರಯೋಜನವನ್ನುಂಟು ಮಾಡತಕ್ಕದ್ದು. ಈ ತೈಲವನ್ನು ನೋವುಳ್ಳ ಸ್ಥಳಗಳಲ್ಲಿ ಕೆಲವಾವರ್ತಿ ಸವರಿ ಕಾಯಿಸುವಂತೆ ಚನ್ನಾಗಿ ತಿಕ್ಕಿದಲ್ಲಿ ಸಹಜವಾಗುವ ಬೊಬ್ಬೆ ನೋವುಗಳನ್ನು ನಿವೃತ್ತಿ ಮಾಡುವಂತಾ ಉತ್ತಮ ತೈಲವಾಗಿರುತ್ತದೆ. ಸಕ್ಕೆಸೋವೆಯಿಂದಲೇ ಅರತಲೆನೋವು ಮತ್ತು ಜೋಮು ಕುವಾಂಗ ನಿವೃತ್ತಿಯಾಗುವದು. ಗಂಟಲಿನಲ್ಲುಂಟಾಗುವ ಉರಿ ಅಥವಾ ವ್ರಣಗಳಿಗೆ ಈ ತೈಲವು ಅದ್ಭುತವಾದ ಮತ್ತು ಶೀಘ್ರವಾದ ಸಂಪೂರ್ಣ ಗುಣವನ್ನುಂಟುಮಾಡುವದು. ಅದ್ಭುತವಾದ ಈ ಔಷಧವನ್ನು ಅಜೀರ್ಣದಲ್ಲಿ ಉಪಯೋಗಿಸಿದಲ್ಲಿ ಅದರ ಪ್ರಯೋಜನವು ಸ್ವತಃ ವ್ಯಕ್ತವಾಗುವದು. ಈ ತೈಲವು ಶೀತಗಾಳಿ ಮಂಜು ಮುಂತಾದವುಗಳಿಗೊಳಗಾಗಿ ಸಂಚರಿಸುವಂತಾ ಪ್ರಯಾಣಿಕರು, ಬೇಟೆಯಾಡುವವರು, ದೇಶಾಟನ ಮಾಡುವವರು, ಮುಂತಾದವರಿಗೆಲ್ಲ ಅಮೂಲ್ಯವಾದದ್ದು.

ಪರಿಶೀಲಕರ ಅಭಿಪ್ರಾಯವು.

ಐರ್ಲ್ಯಾಂಡ್ ದೇಶದ ಫಾರ್ಮಸ್ಯೂಟಿಕಲ್ ಸೊಸೈಟಿಯೆಂಬ ಔಷಧಶಾಲೆಯ ಪ್ರೆಸಿಡೆಂಟರಾಗಿಯೂ, ಸದರೀ ದೇಶದ ಜಿಯಾಲಜಿಕಲ್ ಸೊಸೈಟಿ ಎಂಬ ಭೂತತ್ವಜ್ಞಾನಾಭಿಧಾತುವಿವೇಚಕ ಸಮಾಜದ ಮೆಂಬರಾಗಿಯೂ, "ಮಿನರಲ್ ವಾಟರ್ಸ್ ಆಫ್ ಯೂರಪ್" ಎಂಬ ಗ್ರಂಥಕರ್ತರಾಗಿಯೂ, ರಸಾಯನ ವಿದ್ಯೆಯ ವಿಷಯಕವಾದ ಅನೇಕ ಲೇಖನಾಧಿಕಾರಿಯಾಗಿಯೂ, ಇರುವ ಪ್ರೊಫೆಸರ್ ಟಿಚ್ ಬೋರ್ನ್ (C. R. TICHBORNE, L. L. D., F. C. S., M. R. I. A.,) ಎಂಬುವರು ಅಭಿಪ್ರಾಯ ಪಟ್ಟಿರುತ್ತಾರೇನಂದರೆ—ಲಿಟಲ್‌ರವರ ಓರಿಯಂಟಲ್ ತೈಲವನ್ನು ಜಾಗರೂಕತೆಯೊಡನೆ ಪರೀಕ್ಷಿಸಿನೋಡಲು ಇದು ಬಹುವಿಧ ಮೂಲಿಕೆಗಳ ರಸಮಿಶ್ರವಾದ ತೈಲವೆಂದು ಸ್ಪಷ್ಟವಾಯಿತು, ಇದು ಹೊರಗೆ ಉಪಯೋಗಿಸಲ್ಪಡುವಾಗ ಶುದ್ಧಾಂಗ ನಿರುಪದ್ರವಕರವಾದದ್ದಾಗಿದ್ದರೂ, ನಿಜವಾಗಿ ಪ್ರಬಲ ರೋಗ ನಿವಾರಕ ಶಕ್ತಿಯುಳ್ಳದ್ದಾಗಿರುತ್ತದೆ. ಈ ಮಿಶ್ರೌಷಧವು ನರಗಳನ್ನು ಸ್ಥಿಮಿತಕ್ಕೆ ತರತಕ್ಕದ್ದಾಗಿರುವದರಿಂದ ಇದು ಯಾವ ತರದ ರೋಗಗಳಿಗೆ ಉಪಯುಕ್ತವೆಂದು ತಿಳಿಸಲ್ಪಟ್ಟಿದೆಯೋ ಸದರೀ ರೋಗಗಳಲ್ಲಿ ಅದರ ಪ್ರಯೋಜನವು ಸ್ಪಷ್ಟವಾಗುವದು. ಈ ತೈಲವು ಸಂಪೂರ್ಣ ಜಾಗರೂಕತೆಯೊಡನೆ ತಯಾರಿಸಲ್ಪಟ್ಟಿರುತ್ತದೆ.

ಇದರ ಕ್ರಯ—ಸೀಸೆ ಒಂದಕ್ಕೆ ೧ ರೂಪಾಯಿ.

ಇದು ವೆಸ್ಟ್ ಔಷಧ ಶಾಲೆಯಲ್ಲಿಯೂ, ಮದರಾಸ್ ಶಂಬುದಾಸ್ ಬೀದಿಯಲ್ಲಿ ೨೦ನೇ ನಂಬರ್ ಮನೆಯೊಳಗಿರುವ, ಎ. ಸಿ. ಬೆರ್ರಿಮನ್ ಎಂಬವರಲ್ಲಿಯೂ, ಈ ಪ್ರಾಂತ್ಯದಲ್ಲಿರುವ ಅವರ ಏಜಂಟರಾದ ಜೆ ವೆಸ್ಟ್ ರವರ ಕಂಪೆನಿಯಲ್ಲಿಯೂ, ಮೆ. ಕೆಪ್ಟನ್ ಅಂಡ್ ಕಂಪೆನಿಯವರಲ್ಲಿಯೂ, ರಿಗ್ಸ್ ರವರ ಕಂಪೆನಿಯವರಲ್ಲಿಯೂ ದೊರೆಯುವದು.

AGENTS.— Messrs, J. WEST, *Chemist, &c., Bangalore.*
CAPTAIN & Co. *Chemists, Bangalore.*
RIGGS & Co., *Chemists, Bangalore*; and of
MAHOMED YOUSOFF AND SONS, *The Cash Bazar, Bangalore.*
A. C. BERRYMAN & Co,
20 *Sambodoss Street Madras.*

ಹರಾಜ್ ನೋಟಿಸ್.

[ಸ್ಥಿರಸ್ವತ್ತಿನ ವಿಕ್ರಯ.]

ಬೆಂಗಳೂರು "ಸೌತ್‌ಪರೇಡ್" ಎಂಬ ಬೀದಿಯಲ್ಲಿರುವ ೧೧ನೇ ನಂಬರ್, ಮೆಸ್ಸರ್ಸ್ "ಹಾರ್ಡಿಂಜ್ ಅಂಡ್ ಕೊ" ಎಂಬುವವರ ಬಳಿಯ ಜಾಗಾದಲ್ಲಿರುವ ಮತ್ತು ಬಹು ವಿಶೇಷವಾದ ೧ ಪಾಳ್ಯ ಕಟ್ಟಡವು, ೧೮೮೮ನೇ ಇಸವಿ ಮೇ ೧೮ನೇ ತಾರೀಖು ಶುಕ್ರವಾರ ಮಧ್ಯಾಹ್ನ ೧೨ ಘಂಟೆಗೆ ಸರಿಯಾಗಿ, ಬಹಿರಂಗವಾದ ಹರಾಜಿನಮೂಲಕ ವಿಕ್ರಯಿಸಲ್ಪಡುವದು.

ಮುಖ್ಯವಾದ ಕಟ್ಟಡದ ಮುಂಭಾಗದ ಅಳತೆ ೧೩೪ ಅಡಿ, ಆಳ ೩೯ ಅಡಿ. ಮುಖ್ಯವಾದ ಕಟ್ಟಡದ ಆವರಣದಲ್ಲಿ ಇರುವ ಒಳಕಟ್ಟಡಗಳ ತಪಸೀಲು:—

ಉನ್ನತ ಮತ್ತು ವಿಶಾಲವಾದ ಹಾಲ್ ಎಂಬ ನಡುಮನೆ, ೧ ಪಕ್ಕದ ಕೊಠಡಿ ಮತ್ತು ಕಚೇರಿಮನೆ, ಹರಾಜ್ ಸ್ಥಳವಾಗಿ ಉಪಯೋಗಿಸಿಕೊಳ್ಳುವಂಥಾ, ತಿಂಗಳಿಗೆ ೫೦ ರೂಪಾಯಿ ಬಾಡಿಗೆ ಬರುವಂಥಾ ೧ ದೊಡ್ಡ ಕೊಠಡಿ, ಇದಕ್ಕೆ ತಕ್ಕದ್ದಾಗಿ ೩೦ ರೂಪಾಯಿ ಬಾಡಿಗೆ ಬರುವಂಥಾ ಕೊಠಡಿಗಳು, ಈ ಕಟ್ಟಡಕ್ಕೆ ಹೊಸದಾಗಿ ಸೇರಿಸಿದ ೩ ಕೊಠಡಿಗಳು.

ಈ ಮುಖ್ಯವಾದ ಕಟ್ಟಡದ ಹಿಂದಿರುವ ಸಣ್ಣಾರದ ಮನೆ ವಿವರ:—ಜನಗಳನ್ನು ಸಂದರ್ಶನಾರ್ಥ ಬರಮಾಡಿಕೊಳ್ಳುವ ೨ ದೊಡ್ಡ ಮಂದಿರಗಳು. ಊಟದ ೧ ದೊಡ್ಡ ಮನೆ, ಉಡುಪು ಮತ್ತು ಸ್ನಾನದ ಕೊಠಡಿಗಳನ್ನುಳ್ಳ ೪ ಮಲಗುವ ಗೃಹಗಳು, ಇವು ಹೊಸದಾಗಿ ಸೇರಿಸಲ್ಪಟ್ಟು ತಿಂಗಳು ೧ಕ್ಕೆ ೬೦ ರೂಪಾಯಿ ಬಾಡಿಗೆ ಬರುವುದು.

ತಿಂಗಳು ೧ಕ್ಕೆ ೩೫ ರೂಪಾಯಿ ಬಾಡಿಗೆ ಮೇಲೆ ಕೊಟ್ಟಿರುವ ಪ್ರತ್ಯೇಕ ಬಂಗಲೆ ೧.

೫. ಕುದುರೆಗಳು ಕಟ್ಟುವಷ್ಟು ಮತ್ತು ೨ ಗಾಡಿಗಳು ಬಿಡುವಷ್ಟು ಲಾಯ, ಅಡಿಗೆ ಮತ್ತು ಇತರ ಹೊರಮನೆ ಕೈವಾಲೆಗಳು. ಇಷ್ಟು ಕಟ್ಟಡವು ೨೮೦ ಅಡಿ ಅಗಲ, ಮತ್ತು ೩೪೫ ಅಡಿ ಉದ್ದವಾದ ಕಾಂಪೌಂಡ್ ಅಂದರೆ ಪ್ರಾಂಗಣದೊಳಗಿದೆ.

ಮೇಲ್ಕಂಡ ಮೃತರಾದ ಮೆಸ್ಸರ್ಸ್ ಹಾರ್ಡಿಂಜ್‌ರ ಮರಣ ಶಾಸನವನ್ನು ನೆರವೇರಿಸುವ ಕಾರ್ಯಕರ್ತರುಗಳಾದ ಸಿ. ಎ. ಗ್ರೇವ್ಸ್. ಯಕ್ಸಿಕ್ಯುಟರ್ ರವರಿಗೆ ಬರೆದುಕೊಂಡು, ಈ ಸ್ಥಿರಸೊತ್ತನ್ನು ಕಣ್ಣಾರನೋಡಬಹುದು.

ನೋಟಿಸ.

ಪುಣೆ ಚಿತ್ರಶಾಲೆಯಲ್ಲಿ ತಯಾರಾಗುವ ಪಟಗಳು ಬೆಂಗಳೂರು ಮಾಮೂಲ್‌ಪೇಟೆ ಡೋರ್ ನಂ. ೫೫ನೇ ಮನೆಯಲ್ಲಿ ಕ್ರಯಕ್ಕೆ ಸಿಕ್ಕುತವೆ. ಇಷ್ಟ ಪಟ್ಟವರು ತೆಗದುಕೊಳ್ಳಬಹುದು.

NOTICE.

VAIDYASARA SANGRAHA

A TREATISE ON THE PRINCIPLES OF

HINDU MEDICINE.

☞ *Price including Postage Rs 5 6 0*

ವೈದ್ಯಸಾರ ಸಂಗ್ರಹ.

ಈಗ್ರಂಥಾಪೇಕ್ಷೆಯುಳ್ಳವರು ಮೊಬಲಗಿನೊಡನೆ ಈ ಕೆಳಗೆ ರುಜುಮಾಡಿರತಕ್ಕವರ ಹೆಸರಿಗೆ ಬರೆದುಕೊಂಡರೆ ಪುಸ್ತಕ ಕೂಡಲೇ ಕಳುಹಿಸಲ್ಪಡುವದು. ಮೊಬಲಗು ಇಲ್ಲದ ದರಖಾಸ್ತುಗಳಿಗೆ ಸುತರಾಂ ನಿಗೇ ಕೊಡಲ್ಪಡಲಾರದು.

ಇದರ ಕ್ರಯ ... ... ರೂ॥ ೫—೦—೦
ಪ್ಯಾಕಿಂಗ್ ಮತ್ತು ಅಂಚೆಹಾಸಲ್, ೦—೬—೦

ಟಿ. ಬಿ. ವೆಂಕಟಾಚಾರ್,
ಆಸ್ಪತ್ರೆತೋಟ ಬೆಂಗಳೂರು.

ವಿಶೇಷ ವರ್ತಮಾನ

ಪುಣೆ ಚಿತ್ರಶಾಲೆಯಲ್ಲಿ ಸ್ಥಾಪಿಸಲ್ಪಟ್ಟಿರುವ ಹೊಸ ೭ ಲಾಯಿಂತ್ರದಲ್ಲಿ, ಹಿಂದೂ ದೇವರುಗಳ, ಚರಿತ್ರೆಗಳಮೂಲಕ ಪ್ರಸಿದ್ಧರಾದವರ, ಸುಂದರಿಗಳಾದ ಸ್ತ್ರೀಯರ ಬೆಂಗಳೂರು ಮತ್ತಿತರ ಬಣ್ಣದ ತಸ್ವೀರುಗಳು ತಯಾರಾಗುತಲಿವೆ. ಇವುಗಳ ಕೆಲಸಗಾರಿಕೆಯ ನಾಜೂಕನ್ನು ಯೋಚಿಸಲಾಗ ಕ್ರಯ ಬಹಳ ಅಲ್ಪವಾಗಿದೆ. ಬೇಕಾದವರಿಗೆ ಕ್ರಯಪಟ್ಟಿ ಕಳುಹಿಸಲ್ಪಡುವದು.

ಪುಣೇ ಪುಸ್ತಕ ಚಿತ್ರಶಾಲೆಯ ಮ್ಯಾನೇಜರ್.

ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA.

MONDAY, MAY 14, 1888.

೧೮೮೮ನೇ ಮೇ ೧೪ನೇ ತಾ॥ ಸೋಮವಾರ

THE MADRAS CHRISTIAN COLLEGE COMMOTION.

ಮದರಾಸ್ ಕ್ರಿಶ್ಚಿಯನ್ ಕಾಲೇಜಿನ ಕಲಹವು ಕುರಿತು.

ಮೇಲ್ಕಂಡ ವಿಷಯವೊಂದು ಈಚೆಗೆ ಮದರಾಸಿನಲ್ಲಿ ತಲೆದೋರಿ ಜನಗಳ ಕಳವಳಕ್ಕೆ ನಿಮಿತ್ತವಾಗಿದೇನಂದರೆ :—ಮದರಾಸ್ ಕ್ರಿಶ್ಚಿಯನ್ ಕಾಲೇಜಿನ ಬಿ. ಎ. ತರಗತಿಯಲ್ಲಿ ಓದುತಲಿದ್ದ ಮಚಲೀಬಂದರ್‌ನಿವಾಸಿಯಾದ ಸುಬ್ಬರಾಯರೆಂಬ ಸ್ಮಿತ್ರೆಂಬಾತನು, ಸ್ವಬುದ್ಧಿಯಿಂದಲೋ ಅಥವಾ ಗುಹ್ಯ ಜನೇಂದ್ರಿಯ ಪ್ರೇರಣಾಭಿಲಾಷೆಯಿಂದಲೋ, ಅಲ್ಲದೆ ಸದ್ಯಃ ಫಲರೂಪವಾದ ಜೀವನೋಪಾಯವನ್ನು ಸಾಧರಿಗಳಮೂಲಕ

ಪಡೆಯಬಹುದೆಂಬ ಭ್ರಾಂತಿಯಿಂದಲೋ (ಇವು ವಿನಾ ಬೇರೊಂದೂ ಇರಲಾರದು) ತನ್ನ ಕಾಲೇಜಿಗೆ ಸೇರಿದ ಒಬ್ಬ ಮಿಷನರಿಯು ವಶವಾದನು. ಈ ವೃತ್ತಾಂತವು ಆತನ ಸಹಪಾಠಿಗಳಿಗೆ ತಿಳಿಯಬರಲು ಅವರು ಕಳೆದ ತಿಂಗಳ ೨೮ನೇ ತಾರೀಖ್ ಶನಿವಾರದ ದಿನ ಸಾಯಂಕಾಲ ರೆವರೆಂಡ ರೇ ಎಂಬವರ ಮನೆಗೆ ಹೋಗಿ, ನಿಮ್ಮ ಸ್ವಾಧೀನದೊಳಿರುವ ಸುಬ್ಬರಾಯಶಾಸ್ತ್ರಿಯ ತಂದೆತಾಯಿಗಳಿಗೆ ತಂತಿವೃತ್ತಾಂತ ಕಳುಹಿಸಿರುವದರಿಂದ ಅವರು ಬರುವತನಕ ಆತನಿಗೆ ಜ್ಞಾನಸ್ನಾನಮಾಡಿಸಕೂಡದೆಂದು ವಿಜ್ಞಾಪನಮೂಲಕ ತಿಳಿಸಿಕೊಂಡರು. ಅದಕ್ಕೆ ರೆವರೆಂಡ ರೇ ಯವರು ಸಮ್ಮತಿಸಿ ಸದರೀಶಾಸ್ತ್ರಿಯ ಬಂಧುಮಿತ್ರರು ಬಂದು ಧಾರಾಳವಾಗಿ ಆತನೊಡನೆ ಮಾತನಾಡಬಹುದೆಂದು ಹೇಳಿದರು. ಆದಾಗ್ಯೂ ಆ ಶಾಸ್ತ್ರಿಯು ರೆವರೆಂಡ ರೇ ಯವರ ಮನೆಯಲ್ಲಿರುವತನಕ ತಾವು ಹೇಳತಕ್ಕ ಬುದ್ಧಿವಾದಗಳನ್ನು ಅವನು ಕೇಳಲಾರನೆಂಬ ಉದ್ದೇಶದೊಡನೆ ಅವರು ಮೆ|| ರೇಯವರ ಜವಾಬನ್ನು ನಿರ್ಲಕ್ಷ್ಯಮಾಡಿದರು. ಎಲ್ಲ ಮತಕ್ಕಿಂತಲೂ ಕ್ರಿಸ್ತುಮತವು ಉತ್ಕೃಷ್ಟವೆಂಬ ಭಾವನೆಯು ಶಾಸ್ತ್ರಿಗೆ ಉಂಟಾಗಿಲ್ಲವೆಂಬದಾಗಿ ಆತನ ಪೂರ್ವದ ನಡತೆಗಳಿಂದ ಚೆನ್ನಾಗಿ ತಿಳಿಯಬಹುದಿತ್ತು. ಇದು ಹೀಗಿರಲಾಗಿ ರೆವರೆಂಡ ರೆಮಿಡೆರಾಯೆಂಬವರು ಸ್ವಮತಾಭಿನಿವೇಶದಿಂದ ತರಗತಿಯಲ್ಲಿ ಪಾಠಹೇಳುತಿರುವಾಗ್ಯೆ "ನಿಮ್ಮ ವಿಗ್ರಹಗಳನ್ನು ಪೂಜಿಸುವದಕ್ಕಿಂತಲೂ, ನನ್ನ ಬೂಟ್ಸುಗಳನ್ನು ಆರಾಧಿಸಬಹುದು" ಎಂಬದು ಮುಂತಾದ ಪರಮತದೂಷಣೆಗಳಾದ ಪ್ರಸ್ತಾವಗಳಿಂದ ಬಹುಜನ ಹಿಂದೂ ಬಾಲಕರ ಮನವು ನೋಯಿಸುತಲಿದ್ದರು. ಸುಬ್ಬರಾಯಶಾಸ್ತ್ರಿಯ ವಿಚಾರವು ಉಪಾಧ್ಯಾಯರಲ್ಲಿ ಬಾಲಕರಿಗಿದ್ದ ಮನಸ್ತಾಪವು ಹೊರಪಡುವದಕ್ಕೆ ಅವಕಾಶವನ್ನುಂಟುಮಾಡಿತು. ಆಚೆ ಸೋಮವಾರದದಿನ ಬೆಳಗ್ಗೆ ೧೧ ಘಂಟೆಗೆ ಬೈಬಲ್ ಪಾಠ ಹೇಳಲಿಕ್ಕೆ ಉಪಾಧ್ಯಾಯರು ಆಯಾ ತರಗತಿಗಳಿಗೆ ಹೋದಾಗ ಎಫ್. ಎ. ತರಗತಿಯ ವಿದ್ಯಾರ್ಥಿಗಳು ಸುಮಾರ್ ೭೦ ಮಂದಿಯವರಿವರೆಗೆ ಪಾಠಗಳು ನಡೆಯಗೊಡಿಸದೆ ಗಲಭೆ ಮಾಡಲಾರಂಭಿಸಿದರು. ಮೆ|| ರಸ್ಸೆಲ್‌ಯವರು, ನಿಮಗೆ ಕೋಪವು ಬರುಗುವಂಥಾ ಕೃತ್ಯವೇನಾದರು ನನ್ನಿಂದ ಜರಗಿತೆಯೆಂದು ಕೇಳಿದ್ದಕ್ಕೆ ನಿಮ್ಮಿಂದಲ್ಲವು, ಪರಂತು ಅನ್ಯರಿಂದುಂಟಾಯಿತೆಂದು ತಿಳಿಸಿ ಗದ್ದಲಮಾಡಿದರು. ಕಾಲೇಜ್ ಪ್ರಿನ್ಸಿಪಲ್ ಮೆ|| ಕೂಪರ್‌ಯವರು ಬಂದು ಆಗ್ರಹದೊಡನೆ ನಿಮ್ಮನ್ನೆಲ್ಲ ಡಿಸ್ಮಿಸ್ ಮಾಡುವೆನೆಂದು ಬೆದರಿಸಿ ತಮ್ಮ ಅಧಿಕಾರಮತ್ತು ತೋರಿಸಲಾರಂಭಿಸಿದರು. ನಾಲ್ವರು ಐಕಮತ್ಯದೊಡನೆ ಸೇರಿದಾಗ ಒಬ್ಬರ ಪ್ರಾಬಲ್ಯವೇನು ಪ್ರಯೋಜನಕಾರಿಯಾಗುವದು ? ಅದಂ ಬಿದ್ದು ಯಾರೂ ಲಕ್ಷ್ಯವೂ ಇಡದೆಹೋದರು. ಉರಿಯುವ ಬೆಂಕಿಯಲ್ಲಿ ತುಪ್ಪವನ್ನು ಸುರಿದಂತೆ ಬಾಲಕರಕೋಪಕ್ಕೆ ಪ್ರಿನ್ಸಿಪಲರ ವಾಕ್ಯವು ಮತ್ತಷ್ಟು ಪ್ರೇರಕವಾಗಿತ್ತು. ಬಾಲಕರಂ ನೋಡಿ ನಿಮ್ಮ ನಡತೆಗಳು ಅವಮಾನಕರವಾಗಿದೆಯೆಂದು ಮೆ|| ಕೂಪರ್‌ಯವರು ತಿಳಿಸಿದ್ದಕ್ಕೆ ಹಾಗಲ್ಲವೆಂದು ಎಲ್ಲರೂ ಜವಾಬ್ ಕೊಟ್ಟರು. ಬಿ. ಎ. ತರಗತಿ ಬಾಲಕರು ಸಹ ನಿಜಿಸಿ ಯೆಲ್ಲರಿಗೂ ಒಂದೊಂದುರೂಪಾಯಿ ಜುರ್ಮಾನೆ ವಿಧಿಸಿರುವಂತೆ ಪ್ರಿನ್ಸಿಪಲರವರು ತಿಳಿಸಿದ್ದಕ್ಕೆ ಸುಮಾರ್ ೬೦ ಮಂದಿ ಏಕವಾಕ್ಯವಾಗಿ ತಾವು ಕೊಡುವದಿಲ್ಲವೆಂದು ನಿರಾಕರಿಸಿದರು. ಎಲ್ಲರನ್ನೂ ಸ್ಕೂಲಿಂದ ಓಡಿಸಿಬಿಡುವೆನೆಂದು ಪ್ರಿನ್ಸಿಪಲರು ಹೇಳಲು, ನಾವೆಲ್ಲರು ಸಿದ್ಧವಾಗಿದ್ದೇವೆಂದು ನುಡಿದು ಹೊರಡಲಿಕ್ಕೆ ಸನ್ನದ್ಧರಾದರು. ಮೆ|| ಪ್ಯಾಟರ್‌ಸನ್ ಎಂಬವರು, ಇಬ್ಬರುಮೂವರು ಬಾಲಕರಂ ಹಿಡಿದು ತಮ್ಮ ಕಾಠಿಯಿಂದ ಒಡೆದು ಚೆನ್ನಾಗಿ ಹೊಡೆದರು. ತರುವಾಯ ಬಾಲಕರೆಲ್ಲರು ಕಾಲೇಜಿನಿಂದ ಹೊರಟುಹೋಗಿ ಅದೇದಿನ ಸಭೆಸೇರಿ ಪ್ರಸಕ್ತ ವಿಷಯವನ್ನು ಕುರಿತು ಯೆಲ್ಲರೂ ಶಾಂತವಾಗಿ ವಿಚಾರಮಾಡಿ ಇದರಡಿಕಂಡ ಏಳುವಿಷಯಗಳನ್ನು ನಿಶ್ಚಯಿಸಿದರು. (೧) ವಿದ್ಯಾರ್ಥಿಗಳನ್ನು ಹೊಡೆದಬಗ್ಗೆ ಮೆ|| ಪ್ಯಾಟರ್‌ಸನ್ ಯವರು ಬಾಲಕರ ಕ್ಷಮಾಪಣೆಯಂ ಬೇಡಿಕೊಳ್ಳತಕ್ಕದ್ದು. (೨) ಮುಂದೆ ಯಾವಾಗಲೂ ಪರಮತ ದೂಷಣೆಮಾಡುವದಿಲ್ಲವೆಂದು ಕಾಲೇಜ್ ಪಂಡಿತರೆಲ್ಲರೂ ವಾಗ್ದಾನಮಾಡತಕ್ಕದ್ದು. (೩) ಬೈಬಲ್ ಪಾಠಹೇಳತಕ್ಕದ್ದು ವಿನಾ ಕ್ರಿಶ್ಚಿಯನ್ ಮತದಲ್ಲಿ ಸೇರಿಸಲಿಕ್ಕೆ ಬೇರೆವಿಧ ಮಾರ್ಗಗಳನ್ನವಲಂಬಿಸಕೂಡದು. (೪) ಈಗ ಸ್ಕೂಲಿನಿಂದ ವಜಾಮಾಡಲ್ಪಟ್ಟಿರುವ ಬಾಲಕರನ್ನು ಮರಳಿ ದಾಖಲ್ಮಾಡಿಕೊಳ್ಳುವಂತೆ ಪ್ರಿನ್ಸಿಪಲರವರನ್ನೂ ಇತರ ಪಂಡಿತರನ್ನು ಸಹ ಕೇಳಿಕೊಳ್ಳತಕ್ಕದ್ದು. ಪ್ರಿನ್ಸಿಪಲರವರು ಲಿಖಿತಮೂಲಕವಾದ ಸಂಜಾಯಿಷಿಯನ್ನು ಕಳುಹಿಸುವಪಕ್ಷಕ್ಕೆ ಮರಳಿ ನಾವೆಲ್ಲರೂ ವಿಧೇಯರಾಗಿ ಸ್ಕೂಲಿಗೆಹೋಗಿ ಹಾಜರಾಗತಕ್ಕದ್ದು. (೫) ವಿದ್ಯಾರ್ಥಿಗಳು ಗಲಭೆಮಾಡಲಿಕ್ಕೆ ಅವರ ಮನಸ್ತಾಪವು ಕಾರಣವಾಗಿದ್ದಾಗ್ಯೂ ಎಫ್. ಎ. ತರಗತಿಯ ವಿದ್ಯಾರ್ಥಿಗಳು ಮಿಸ್ಟರ್ ಪಿಟ್ಟರ್‌ಸನ್‌ಯವರ ಕ್ಷಮಾಪಣೆಯಂ ಕೇಳಿಕೊಳ್ಳಲಿಕ್ಕೆ ಸನ್ನದ್ಧರಾಗಿರುವದರಿಂದ ಅವರು ವಿಧಿಸಿದ ಅಪರಾಧಗಳನ್ನು ರದ್ದುಮಾಡಿಸತಕ್ಕದ್ದು. (೬) ನಮ್ಮ ಪ್ರಾರ್ಥನೆಗಳನ್ನಂಗೀಕರಿಸಿ ನಾವು ಕೇಳಿಕೊಂಡಪ್ರಕಾರ ನಡೆಸಲ್ಪಡುವಪಕ್ಷಕ್ಕೆ ಇಲ್ಲದಿರತಕ್ಕವರವ್ಯತಿ ಒಬ್ಬರೂ ಕಾಲೇಜಿಗೆ ಹೋಗಕೂಡದು, ಎಂಬದು. ಈ ನಿರ್ಣಯಗಳಿಗೆಲ್ಲರೂ ಸಮ್ಮತಿಸಿ ರುಜುಮಾಡಿದರು. ಸದರಿ ಸಭೆಯು ಮಾತನಾಡುವ ಸೇರಿದ್ದಕಾಲದಲ್ಲಿ ಮಹಾರಾಜಶ್ರೀ ಅನಂತಾಚಾರ್ಯರವರು, ತಾವು ಪ್ರವೇಶಿಸಿ ಕಾಲೇಜಿನವರಿಗೂ, ವಿದ್ಯಾರ್ಥಿಗಳಿಗೂ ಸಮಾಧಾನ ಮಾಡಿಸುವಂತೆ ಹೇಳಿ ಬಾಲಕರನ್ನೆಲ್ಲ ಮರಳಿ ಕಾಲೇಜಿಗೆ ಹೋಗುವಂತೆ ಪ್ರೇರಿಸಿದ್ದರ ಮೇಲೆ ಅವರಹಿತೋಕ್ತಿಗಳಂ ಗೌರವಿಸಿ ಯೆಲ್ಲರೂ ಹೋದರು. ಇದು ಹೀಗಿರುವಲ್ಲಿ, ಗತ ಬುಧವಾರದದಿನ ಮೆ|| ಕೂಪರ್‌ಯವರು ಬಾಲಕರಿಗೆ ಟಿಪ್ಪಣಿಬರೆದು ಮಧ್ಯಾಹ್ನಾನಂತರ ತಮ್ಮನ್ನೆಲ್ಲರೂ ಬಂದುನೋಡುವಂತೆ ತಿಳಿಸಿದರು. ಅದೇರೀತಿ ಕೆಲವರು ಮಿಕ್ಕವರೆಲ್ಲರ ತರಫ್ ಪ್ರತಿನಿಧಿಗಳಾಗಿ ಹೋಗಿ ಅವರಂಕಾಣಲು ಆಗ ಪ್ರಿನ್ಸಿಪಲರವರು ನೀವು ಮಾಡಿರುವ ಕಲಹರೂಪವಾದ ಪ್ರಸಕ್ತ ಸಂಕಲ್ಪವನ್ನು ತ್ಯಜಿಸಬೇಕೆಂದು ಪ್ರಾರ್ಥಿಸುವಿರಾದರೆ ಆಗ ನಿಮ್ಮ ಅಪೇಕ್ಷೆಯಂತೆ ನಡೆಸುವೆವೆಂದು ನುಡಿದರು. ಅದಕ್ಕೆ ಯೆಲ್ಲರೂ ಒಪ್ಪಿ ಕಾಲೇಜಿಗೆ ಹೋದ ವೇಳೆಯಲ್ಲಿ ಒಬ್ಬೊಬ್ಬರಿಗೆ ೬೫ ರೂಪಾಯಿಗಳ ಮೊದಲು ೧ ರೂಪಾಯಿಯ ವರಿವಿಗೆ ಜುಲ್ಮಾನೆವಿಧಿಸಿ, ಇದನ್ನು ಕೊಟ್ಟ ಕ್ರಮವಾಗಿ ತಾವು ತಿಳಿಸುವಂತೆ ಮನ್ನಣೆ ಪೀಠಬೇಕೆಂತಲೂ, ಹಾಗೆ ಮಾಡದವರನ್ನೆಲ್ಲ ಕಾಲೇಜಿನಿಂದ ಡಿಸ್ಮಿಸ್ ಮಾಡುವದಾಗಿಯೂ, ನೋಟಿಸ್ ಅಂಟಿಸಿದ್ದದು ಕಂಡು ಎಲ್ಲರೂ ವಾಪಸ್ ಹೊರಟುಹೋದರು. ಅದೇದಿನ ಮರಳಿ ವಿದ್ಯಾರ್ಥಿಗಳೆಲ್ಲ ಸಭೆ ಸೇರಿದಾಗ ಅನೇಕಜನ ನೇಟಿವ್ ದೊಡ್ಡಮನುಷ್ಯರೂ, ಸಾಹುಕಾರರೂ, ಇತರರು ಸಹ ಹೋಗಿದ್ದರು. ಇವರ ಪೈಕಿ ವರ್ತಕರೊಬ್ಬರು ವಿದ್ಯಾರ್ಥಿಗಳಂ ಕುರಿತು, ನಿಮ್ಮ ವಿದ್ಯಾಭಿವೃದ್ಧಿಗಾಗಿ ಐದುಸಾವಿರ ರೂಪಾಯಿಗಳನ್ನು ಕೊಡಲಿಕ್ಕೆ ತಾವು ಸನ್ನದ್ಧರಾಗಿರುವೆನೆಂತೆ ತಿಳಿಸಿದರು. ಮತ್ತೊಬ್ಬರು ನ್ಯಾಷನಲ್ ಕಾಂಗ್ರೆಸ್ಸಿಗೆ ೩೦,೦೦೦ ರೂಪಾಯಿಗಳ ಚಂದಕ ಚಂದಾಮಾಡಿದೆವು, ಪ್ರತ್ಯೇಕ ಕಾಲೇಜ್ ಬುದುಸ್ಥಾಪಿಸಲಿಕ್ಕೆ ಈಗ ಪ್ರಯತ್ನಪಡುವ ಪಕ್ಷಕ್ಕೆ ೬೦,೦೦೦ ರೂಪಾಯಿಗಳ ವರಿವಿಗೆ ತಾವು ಸಹಾಯ ಮಾಡಲಿಕ್ಕೆ ಸನ್ನದ್ಧರಾಗಿರುವಂತೆ ಬಾಲಕರಿಗೆ ಭರವಸೆಯನ್ನಿತ್ತರು. ಈಗ ಕಾಲೇಜ್ ಪಂಡಿತರು ಬಾಲಕರು ತಿಳಿಸುವ ನಿಯಮಗಳಿಗೆ ಬದ್ಧರಾಗತಕ್ಕದೆಂದು ಅವರ ಆಲೋಚಕ ಸಭೆಯಲ್ಲಿ ತೀರ್ಮಾನಿಸಿಕೊಂಡು ಮುಕ್ತರವಾಗಿದಾರೆ. ಬಾಲಕರ ಪೈಕಿ ಇದುವರಿವಿಗೆ ವಿಧೇಯರಾಗಿ ಕಾಲೇಜ್ ಪ್ರಿನ್ಸಿಪಲರವರ ದಂಡನೆಗಳಿಗೆಲ್ಲ ಬದ್ಧರಾಗಿ ಸೇರಿರತಕ್ಕವರು ಹೋಗಲಾಗಿ ಮಿಕ್ಕ ನೂರುಮಂದಿಗೆ ಮೇಲ್ಪಟ್ಟು ಕಾಲೇಜಿಗೆ ಹೋಗದೆ ನಿಂತಿದ್ದಾರೆ. ಕೆಲವರು ತಾವು ಮಾಡಿರುವ ತೀರ್ಮಾನಗಳಿಗೆ ಬದ್ಧರಾಗಿ, ಸ್ವದೇಶಗಳಿಗೆ ಹೊರಟುಹೋದರು. ಮಾಹೇಮದಕೂರ್ ೫ನೇ ತಾರೀಖಿನಲ್ಲಿ ಕಾಲೇಜ್ ಕೌನ್ಸಿಲರ್‌ಗಳು ಸೇರಿ ಮಾಡಿದ ಪ್ರೊಸೀಡಿಂಗ್ಸ್‌ನ ೪ನೇ ನಿರ್ಣಯವನ್ನನುಸರಿಸಿ ಹತ್ತುಹದಿನೈದು ಜನ ವಿದ್ಯಾರ್ಥಿಗಳನ್ನು ಕಾಲೇಜಿನಿಂದ ವಜಾಮಾಡಿರುವಂತೆ ನೋಟಿಸ್ ಕೊಟ್ಟಿರುತ್ತಾರೆ. ಇಷ್ಟರ ಗಲಭೆಗೆ ಕಾರಣ ಭೂತನಾದ ಸುಬ್ಬರಾಯಶಾಸ್ತ್ರಿಯು ತನ್ನ ತಾಯಿತಂದೆ ಇಷ್ಟಮಿತ್ರರ ಮಾತಿನಪ್ರಕಾರ ಅವರಸಂಗಡ ಹೊರಟುಹೋದನು. ಆದಾಗ್ಯೂ ಮಿಷನರಿಗಳ ದುರ್ವರ್ತನದಿಂದ ಜನರಿಗುಂಟಾಗಿರುವ ಅಸಮಾಧಾನವು ಇನ್ನೂ ಉಪಶಮನವಾಗಲಿಲ್ಲವು. ವಿದ್ಯಾರ್ಥಿಗಳ ಪ್ರಕೃತ ಸ್ಥಿತಿಗಾಗಿ ಅನ್ಯದೇಶೀಯರು ಸಹ ಬಹಳವಾಗಿ ಅನುತಾಪಿಸುತಲಿದಾರೆ.

ಮೇಲೆ ಪ್ರಕಟಿಸಿರುವ ಮದರಾಸ್ ಕ್ರಿಶ್ಚಿಯನ್ ಕಾಲೇಜಿನ ವಿದ್ಯಾರ್ಥಿಗಳ ಕಲಹವಿಷಯಕವಾದ ವಿಚಾರವು ಪ್ರಾಯೇಣ ಅನೇಕರಿಗೆ ಆಶ್ಚರ್ಯವನ್ನೂ ಅನುತಾಪವನ್ನೂ ಉಂಟುಮಾಡಬಹುದೆಂದೆಣಿಸುತ್ತೇವೆ. ಪ್ರಸಕ್ತಸಂದರ್ಭದಲ್ಲಿ ಮೊದಲು ಸದರೀ ಕಾಲೇಜಿನ ವಿದ್ಯಾರ್ಥಿಗಳನ್ನೂ ಅನಂತರ ಅದರ ಪ್ರಿನ್ಸಿಪಲ್ ಮೊದಲಾದ ಪಂಡಿತರನ್ನೂ, ಆಬಳಿಗೆ ಗವರ್ನಮೆಂಟಿನವರನ್ನೂ ನಿಂದಿಸಬೇಕಾಗಿರುತಿದೆ. ಬ್ರಿಟಿಷ್ ಅಧಿಪತ್ಯವು ಈ ದೇಶದಲ್ಲಿ ನೆಲಗೊಳ್ಳಲಿಕ್ಕೆ ಮಿಷನರಿಗಳು ಆದಿಪ್ರವರ್ತಕರೆಂಬದನ್ನೂ, ಇಂಗ್ಲಿಷರವರು ಯಾವದಾದರೊಂದು ದೇಶವನ್ನು ಸ್ವಾಧೀನಪಡಿಸಿಕೊಳ್ಳಬೇಕಾಗಿದ್ದರೆ ಮೊದಲು ಮಿಷನರಿಗಳಾಗಿಯೂ, ಬಳಿಕ ವರ್ತಕರಾಗಿಯೂ, ಅನಂತರ ಮಧ್ಯಸ್ಥಗಾರರಾಗಿಯೂ, ಕಡೆಗೆ ಪಾಲಕರಾಗಿಯೂ ವರ್ತಿಸಿ ಉದ್ದೇಶವಂ ಸಫಲಗೊಳಿಸಿಕೊಳ್ಳತಕ್ಕವರೆಂಬದನ್ನೂ, ಈ ದೇಶೀಯರು ಅನುಭವಪೂರ್ವಕ ಅರಿತವರಾಗಿದ್ದಾರೆ. ಇದಲ್ಲದೆ ಮಿಷನರಿಗಳಿಗೆ ಭಾರೀ ಸಂಬಳಗಳನ್ನೂ ಇತರವಿಧ ಖರ್ಚುಗಳನ್ನೂ ಕೊಟ್ಟು ಅವರನ್ನಿದೇಶಕ್ಕೆ ಕಳುಹಿಸುವವರ ಮುಖ್ಯೋದ್ದೇಶವೂ, ಅವರ ಕರ್ತವ್ಯವೊಳೇನಾದರೂ ಲೋಪ ಮಾಡಿದರೆ ಕಡೆಗೆ ಕ್ರಿಶ್ಚಿಯನ್ ಸಿದ್ಧಾಂತಕ್ಕೆ ವಂಚಕರಾಗುವರೆಂಬದೂ ಪ್ರಸಿದ್ಧ ವಿಷಯವಾಗಿರುತಿದೆ. ಮತ್ತು ಮಿಷನರಿಗಳು ನಾನಾವಿಧ ಉಪಾಯಗಳಿಂದ ಅಜ್ಞಾನಿಗಳಾದವರನ್ನೆಲ್ಲ ಮೋಹಗೊಳಿಸಿ, ಅವರಿಗಿಲ್ಲದ ಆಶೆಗಳನ್ನುಂಟುಮಾಡಿ ಕಡೆಗೆ ಮೋಸ ಮಾಡಿ ನಿರ್ಭಾಗ್ಯರನ್ನಾಗಿ ಮಾಡುವದನ್ನೂ, ಸ್ವರೂಪಜ್ಞಾನವಿಲ್ಲದ ದುರಾಶಾಬದ್ಧರಾದ ಜಡಮತಿಗಳನೇಕರು ಮತಭ್ರಷ್ಟರಾಗಿ ಕೆಟ್ಟು ದುಃಖಿಸುತಲಿರುವದನ್ನೂ ನಾವು ಪ್ರತಿನಿತ್ಯ ನೋಡದೆ ಇರಲಿಲ್ಲವು. ಇದನ್ನೆಲ್ಲ ನೋಡಿ ಅನುಭವಿಸುತಲಿರುವ ಹಿಂದೂ ವಿದ್ಯಾರ್ಥಿಗಳು, ಸ್ವಮತ ಪ್ರಶಂಸಾಪೂರ್ವಕವಾದ ಪರಮತ ದೂಷಣವೇ ಮುಖ್ಯೋದ್ದೇಶವುಳ್ಳವರಾದ ಮಿಷನರಿಗಳ ಕಾಲೇಜಿಗೆ ಹೋಗಲಿಕ್ಕೆ ತ್ಯಜಿಸಿದ್ದು ಪ್ರಬಲ ತಪ್ಪೆಂದು ನುಡಿಯುವೆವು. ರೆವರೆಂಡ ಮೆ|| ರೇಯವರು ಸುಬ್ಬರಾಯಶಾಸ್ತ್ರಿಯ ತಾಯಿತಂದೆಗಳು ಬರುವವರಿವಿಗೆ ಆತನಿಗೆ ಜ್ಞಾನಸ್ನಾನ ಮಾಡಿಸದೆ ತಡೆದಿಡುವಂತೆ ವಾಗ್ದಾನ ಮಾಡಿದಾಗ್ಯೂ ಶಾಶ್ವತವೃತ್ತ ನಿರೀಕ್ಷಿಸಿ ಅವರ ಪ್ರಾಮಾಣಿಕತೆಯನ್ನು ಪರೀಕ್ಷಿಸದೆ ಬಿಟ್ಟ ಸಹದ ಇಲ್ಲದೆ ಎಲ್ಲರೂ ಒಗ್ಗಟ್ಟಾಗಿ ಕಾಲೇಜಿನಲ್ಲಿ ಗದ್ದಲಮಾಡಿ ಪಂಡಿತರ ವಾಕ್ಯಗಳ ಲಕ್ಷ್ಯದೊಳಿಡದೆ ಬೇಸಾಗಿಸಿಗಾಗಿ ವರ್ತಿಸಿದ್ದಕ್ಕಾಗಿ ನಾವು ಬಹಳ ವಿಷಾದಿಸುತ್ತೇವೆ. ಇವರು ಪುರೋದೃಷ್ಟಿ ಇಲ್ಲದೆ ಆತುರದೊಡನೆ ವರ್ತಿಸಿ ಇಷ್ಟರ ಗದ್ದಲವನ್ನು ಮಾಡಿದ್ದಕ್ಕಾಗಿ ಕಾಲೇಜ್ ಪ್ರಿನ್ಸಿಪಲರವರು ಎಷ್ಟರ ದಂಡನೆಗೆ ಗುರಿಮಾಡಿದಾಗ್ಯೂ ಆತಕ್ಕೆಲ್ಲ ವಿದ್ಯಾರ್ಥಿಗಳು ಪ್ರತ್ಯುತ್ತರ ಹೇಳದೆ ಒಳಗಾಗಬೇಕಾದ್ದು ನ್ಯಾಯವಾಗಿರುತಿದೆ. ರೆವರೆಂಡ ಕೂಪರ್‌ಯವರು ಜುರ್ಮಾನೆ ವಿಧಿಸಿ ಕ್ಷಮಾಪಣೆಯಂ ಬೇಡಿಕೊಳ್ಳುವಂತೆ ಕೇಳಿದ್ದೇನೂ ಅಸಮಂಜಸವಲ್ಲವು. ಕಾಲೇಜ್ ಪಂಡಿತರ ವರ್ತನೆಗಳೊಂದುವೇಳೆ ತಮಗೆ ಅಸಮರ್ಪಕಗಳಾಗಿದ್ದು ಅವುಗಳಿಂದ ತಮಗೇನಾದರೂ ಮುಂದೆ ಬಾಧಕ ಪ್ರಾಪ್ತವಾಗುವದೆಂದು ತೋರುವ ಪಕ್ಷಕ್ಕೆ ಅದು ಕಾಲೇಜ್ ಪ್ರಿನ್ಸಿಪಲರಿಗೆ ತಿಳಿಸಿ ಅವರು ಅದಕ್ಕೆ ತಕ್ಕ ಪ್ರತಿ ಕ್ರಿಯೆಯು ಮಾಡದಿದ್ದರೆ ಬಳಿಕ ತಮ್ಮ ಸಂಕಲ್ಪವು ವ್ಯಕ್ತಪಡಿಸಿ ಅದರಂತೆ ನಡೆಸಿರುವದಾದರೆ ಇಷ್ಟರ ಆಕ್ಷೇಪಣೆಗೂ ಗದ್ದಲಕ್ಕೂ ಅವಕಾಶ ವಿದ್ದಿರಲಾರದು. ಇನ್ನು ಕಾಲೇಜ್ ಪ್ರೊಫೆಸರ್‌ಗಳು ಕ್ಲಾಸುಗಳಲ್ಲಿ ಪಾಠಹೇಳುವಾಗ್ಯೆ ನುಡಿದ ಉಚ್ಛೃಂಖಲಗಳಾದ ಮಾತುಗಳನ್ನೂ ಅಗೌರವಗಳಾದ ಅವರ ವರ್ತನಗಳನ್ನೂ ಪರಿಭಾವಿಸಿ ನೋಡಿದರೆ ಬಾಲಕರ ನಡವಳಿಕೆಯು ಅಕ್ರಮವೆಂದು ಭಾವಿಸಲಾಗದು. ಯಾತಕ್ಕೆಂದರೆ, ಸ್ವಮತವು ಸರ್ವೋತ್ಕೃಷ್ಟವಾದದ್ದೆಂದು ನಿರೂಪಿಸಬೇಕಾಗಿದ್ದರೆ, ಯಾವದಕ್ಕಿಂತ ಅದು ಶ್ರೇಷ್ಠವೆಂದು ಭಾವಿಸಲ್ಪಡುತಿದೆಯೋ ಅಂಥಾ ಅನ್ಯಮತ ಸ್ವರೂಪವಂ ಮೊದಲು ಚೆನ್ನಾಗಿ ತಿಳಿದುಕೊಂಡಿರಬೇಕಾದದ್ದು ಅವಶ್ಯಕವು. ಮತಪ್ರಚಾರಕನಿಗೆ ಶಾಂತಿ ಕರುಣಾದಿ ಸದ್ಗುಣಗಳು ಅತ್ಯಂತಾಪೇಕ್ಷಿತಗಳಾದವಾಗಿರುತಿವೆ. ಸದರೀ ಗುಣಾಢ್ಯನಿಗೆ ಐಹಿಕಗಳಾದ ಕೀರ್ತಿ ಪ್ರತಿಷ್ಠೆಗಳು ಅನಪೇಕ್ಷಿತಗಳು. ಯಾರು ತತ್ವದರ್ಶಿಯಾಗಿಯೂ ರಾಗದ್ವೇಷಾದಿ ಗುಣರಹಿತನಾಗಿಯೂ ಇರುವನೋ ಅಂತವನೇ ಮತಪ್ರಚಾರಕ್ಕೆ ಅರ್ಹನೆನ್ನಿಸಿಕೊಳ್ಳುವನು. ಮಿಷನರಿಗಳಿಗೆ ತಮ್ಮ ಮತ ಶ್ರೇಷ್ಠವೆಂಬ ಒಂದು ದುರಭಿಮಾನವು ಪ್ರಬಲವಾದ್ದಾಗಿದೆಯೇ ಹೊರ್ತು ಅನ್ಯಮತ ಸ್ವರೂಪವು ಅವರಿಗೆ ಸಮ್ಯಗ್ಗವಾಗಿ ತಿಳಿಯದೆಂದು ಸ್ಪಷ್ಟವಾಗಿ ನುಡಿಯಬಹುದು. ವೇದೋಕ್ತವಾದ ನಮ್ಮ ಆರ್ಯಮತ ಸಿದ್ಧಾಂತವನ್ನು [illegible] ಕ್ಷಣವಾಗಿ ಅವರು ತಿಳಿದುಕೊಂಡರಾದರೆ [illegible] ಮತವು ನಿಸ್ಸಾರವೆಂದು ನೀಚೋಪಮಾನಗಳಿಂದ ಕಂಠಶೋಷಣ ಮಾಡಲೆತ್ನಿಸಲಾರರು. ಕಾಲಕ್ರಮೇಣ ಪೂರ್ವದೇಶೀಯರ ಸಂಬಂಧವು ಪಾಶ್ಚಾತ್ಯರಿಗೆ ಅಧಿಕವಾಗುತಬರಲು ಅವರು ನಮ್ಮ ಗ್ರಂಥಗಳನ್ನೆಲ್ಲ ಅಭ್ಯಸಿಸಿ ಅವುಗಳ ಗುಣಗ್ರಾಹಕರಾಗುತ ಹಿಂದೂಮತವನ್ನು ಪ್ರಶಂಸಿಸಲೆತ್ನಿಸಿದಾರೆ. ಇದಕ್ಕೆ ದೃಷ್ಟಾಂತವು—ಕ್ರಿಶ್ಚಿಯನ್ ರಾಜ್ಯದಲ್ಲಿ ಜನಿಸಿ ಕ್ರಿಶ್ಚಿಯನ್ ಮತಾವಲಂಬಿಗಳಾಗಿರುವವರೆಲ್ಲರೂ, ಕ್ರಿಶ್ಚಿಯನ್ ಮತವು ಬುದ್ಧಿಸಿ ಜೀಸಸ್ ಕ್ರಿಸ್ತನಿಗೆ ದೈವತ್ವವು ನಿರಾಕರಿಸಿ ಆತನ ಅವತಾರ ಮಹಾತ್ಮೆಗಳನ್ನು ತಿರಸ್ಕರಿಸಿ, ಶಾಸ್ತ್ರಮುಕ್ತ ಇತರವಿಷಯ ಪರಿಶೋಧನೆಗಳಿಂದ ತಮ್ಮ ಬುದ್ಧಿಗೆ ಸ್ಫುರಿಸುವ ಒಂದು ನಿಯಮವನ್ನಂಗೀಕರಿಸತಕ್ಕವರಾಗುತಲೂ, ಅನೇಕರು ಬೌದ್ಧ ಪ್ರಶಂಸಾವಲಂಬಿಗಳಾಗುತಲೂ ಬರುತಲಿದಾರೆ. ಹೀಗೆ ಪ್ರತಿದೇಶದಲ್ಲೂ ಕ್ರಿಶ್ಚಿಯನ್ ಮತವು ಲಯಹೊಂದತಕ್ಕ ಕಾಲವು ಪ್ರಾಪ್ತವಾಗಿರುವಾಗ್ಯೂ ವಿವೇಕರಹಿತ ಮುಷ್ಟೀಕರು ಅಸಭ್ಯ ಪ್ರಯುಕ್ತವಾದ ದೂಷಣ ವಾಕ್ಯಗಳಿಂದ ಗುಣರಹಿತವಾದದಕ್ಕೆ ಗುಣವನ್ನಾರೋಪಿಸಲೆತ್ನಿಸುವ ಮಿಷನರಿಗಳಿಗೆ ಬೇರೇನು ಪ್ರಯೋಜನವುಂಟಾಗುವದು ? ಸದ್ವರ್ತನ ಬೋಧಕಾರ್ಥ ವ್ರತತೀರ್ಮಾನಸಿರುವ ಮೇಲಿನ ಕಂಡ ಮಿಷನರಿಗಳೇ ದುಷ್ಟರಾಗಿ ದ್ವೇಷಪ್ರತ್ಯಯಗಳಿಂದ ವರ್ತಿಸಿದ ಬಳಿಕ ಇವರ ಬೋಧನೆಯಲ್ಲಿ ಅನ್ಯರಿಗೇನು ಗೌರವ ಪ್ರಾಪ್ತವಾಗುವದು ? ಒಬ್ಬ ವಿದ್ಯಾರ್ಥಿಯನ್ನು ಬೂಟ್ಸಿನಿಂದ ಒದೆದಂತಾ ಮಿಷನರಿಗೆ ಜೀವೊಂದು ಅನ್ವರ್ಥನಾಮವಿರುವಾಗ್ಯೆ ಅವರು ಮತಪ್ರಚಾರಕರೆಂದು ಯಾತಕ್ಕೆ ಕರೆಯಬೇಕು ? "ನಿಮ್ಮ ವಿಗ್ರಹವನ್ನು ಪೂಜಿಸುವದಕ್ಕಿಂತಲೂ ನನ್ನ ಬೂಟ್ಸುಗಳನ್ನು ಆರಾಧಿಸಬಹುದೆಂದು ನುಡಿದ ತಾ ಮೆ|| ರೆಮಿಡೆ ರಾ ಎಂಬವರ ಮಾನುಷತ್ವ ವಿಷಯದಲ್ಲಿ ಸಂಶಯಿಸಲೇನು ಅಭ್ಯಂತರ. ಇಂತಾ ಅಸಹಜಗಳಾದ ದುಷ್ಕೃತ್ಯಗಳು ಒಂದು ವೇಳೆ ಕಾಲೇಜ್ ವಿದ್ಯಾರ್ಥಿಗಳಿಗೆ ಆಗ್ರಹವನ್ನುಂಟುಮಾಡಿದ್ದ ಪಕ್ಷಕ್ಕೆ ಅದಕ್ಕಾಗಿ ನಾವು ಆಶ್ಚರ್ಯಪಡಬೇಕಾದದ್ದಿಲ್ಲವು. ಮಿಷನರಿಗಳ ವರ್ತನಗಳು ಇದೇರೀತಿ ಇದ್ದ ಪಕ್ಷಕ್ಕೆ ವಿದ್ಯಾರ್ಥಿಗಳು ಸಂಕೇತ ಮಾಡಿಕೊಂಡು ಕಾಲೇಜನ್ನು ಬಿಟ್ಟುಹೋದದ್ದು ತಪ್ಪೆಂದು ಹೇಳಲಾಗದು. ವರ

ಘ ಆ ಮಿಷನರಿ ಪಂಡಿತರಿಗೆ ತಕ್ಕ ಪ್ರತಿಕ್ರಿಯೆಯನ್ನು ಬೇರೇವಿಧವಾಗಿ ಅವರು ಮಾಡಿಸಬಹುದಾಗಿತ್ತು. ಆದಾಗ್ಯೂ ಬಾಲಕರು ಒಂದು ವಿಧದಲ್ಲಿ ಕಾಲೇಜ್ ಪ್ರಿನ್ಸಿಪಾಲರ ದಂಡನೆಗೆ ಗುರಿಯಾಗಬೇಕಾದ್ದು ಹ್ಯಾಗೆ ಸಹಜವೋ ಅದೇಪ್ರಕಾರ ಅಲ್ಲಿನ ಪಂಡಿತರು ಕೂಡ ಗವರ್ನಮೆಂಟಿನವರ ಕಠಿಣವಾದ ನಿಂದೆಗೆ ಗುರಿಯಾಗಬೇಕಾದದ್ದು ಯುಕ್ತವಾಗಿರುತ್ತದೆ. ಏತಕ್ಕೆನ ಈ ಸಂದರ್ಭದಲ್ಲಿ ತಪ್ಪಿತಗಳು ಗುರುಶಿಷ್ಯರಿಬ್ಬರಲ್ಲಿಯೂ ಏರ್ಪಟ್ಟು ಅವರವರು ತಮ್ಮ ತಮ್ಮ ಅವಿವೇಕಗಳಿಂದಲೂ ದುರಾಗ್ರಹಗಳಿಂದಲೂ ಅವು ಬಲಪಡಿಸಿ ಇವ್ವರ ಅನರ್ಥಕ್ಕೆ ಕಾರಣರಾದರು. ಇವರಿಬ್ಬರ ಜಗಳ ಈರೀತಿ ಇದ್ದಾಗ್ಯೂ ಗವರ್ನಮೆಂಟಿನವರು ಮಧ್ಯೆ ಪ್ರವೇಶಿಸಿ ಅವಿಮರ್ಶಕತೆಯೊಡನೆ ಮಾಡಿದ ನಿರ್ಣಯವು ಮತ್ತಷ್ಟು ಆಕ್ಷೇಪಣೀಯವಾಗಿಯೂ, ಪ್ರಜೆಗಳಿಗೆ ಅಸಮಾಧಾನವನ್ನುಂಟುಮಾಡತಕ್ಕದ್ದಾಗಿಯೂ ಇರುತ್ತದೇನೆಂದರೆ,—ಮಾರ್ಚಿ ಮಾಹೆ ೧೦ನೇ ತಾರೀಖ್ ಗುರುವಾರದ ದಿವಸ ಮದರಾಸ್ ಪ್ರಸಿಡೆನ್ಸಿಯ ವಿದ್ಯಾಭ್ಯಾಸದ ಇಲಾಖಾ ಡೈರೆಕ್ಟರವರು ಉಪಕ್ರಮದಿಂದ ಕ್ರಿಶ್ಚಿಯನ್ ಕಾಲೇಜ್ ಆಕ್ಟಿಂಗ್ ಪ್ರಿನ್ಸಿಪಾಲರಾದ ರೆವರೆಂಡ್ ಮಿ ಕೂಪರಿಯವರಿಗೆ ಇದರ ಕಂಡ ಕುರಿತ ವೃತ್ತಾಂತವನ್ನು ಕಳುಹಿಸಿರುತ್ತಾರೇನೆಂದರೆ ಕಾಲೇಜ ಕೌನ್ಸಿಲ್‌ನವರು ವಿಶೇಷ ಸಭೆ ಸೇರಿ ಬರೆದ ಮಿನಿಟ್ಸ ಮತ್ತು ಸಿಂಡ್ಸನ ಯಾನೆ ಆಲೋಚನೆ ಸಭೆಯವರ ತೀರ್ಮಾನಗಳು, ಇವುಗಳ ಸುಲಭಕಾಗಿಸಿ ಮೇ ೫ನೇ ತಾರೀಖಿನಲ್ಲಿ ಮದರಾಸ ಕ್ರಿಶ್ಚಿಯನ್ ಕಾಲೇಜ ಪ್ರಿನ್ಸಿಪಾಲರವರು ಬರೆದ ಕಾಗದವು ಓದಲ್ಪಟ್ಟಿತು. ಕೇಸ ನಿಮಿತ್ತಕವಾದ ಅಥವಾ ಪ್ರತಿಭಾವ ಕಾರಣವಾದ ಸಂಗತಿಗಳಬಗ್ಯೆ ಕ್ರಿಶ್ಚಿಯನ್ ಕಾಲೇಜ ರಿಜಿಸ್ಟ್ರರಿನಿಂದ ಹಿಡಿಯಲ್ಪಟ್ಟ ಯಾವ ವಿದ್ಯಾರ್ಥಿಯೇ ಆಗಲಿ, ಗವರ್ನಮೆಂಟಿಯ ಕಸಬದಾರೀ ಕಾಲೇಜಗಳೊಂದರಲ್ಲಿಯೂ ಮರಳಿ ದಾಖಲ್ಮಾಡಿಕೊಳ್ಳಲ್ಪಡಲಾಗದು. ಗ್ರ್ಯಾಂಟ ಪಡೆಯುವ ಕಾಲೇಜಗಳಲ್ಲಿ ಸಹ ಅಂಥಾ ವಿದ್ಯಾರ್ಥಿಗಳ್ಯಾರಾದರು ದಾಖಲ್ಮಾಡಿಕೊಳ್ಳಲ್ಪಟ್ಟಲ್ಲಿ ಅಂಥಾ ಕಾಲೇಜಗಳು ಗವರ್ನಮೆಂಟಿನವರ ಪ್ರಬಲ ಅಪ್ರೀತಿಗೆ ಪಾತ್ರವಾಗುವವು" ಎಂಬದು. ಮೇಲೆಕಂಡ ನಿಯಮವು ವಿದ್ಯಾಭ್ಯಾಸದ ಇಲಾಖೆಗಳಿಗೆಲ್ಲ ಮುಖ್ಯಾಧಿಕಾರಿಯೆನಿಸಿಕೊಂಡಿರುವವರ ಮೂಲಕ ಪ್ರಕಟಿಸಲ್ಪಟ್ಟ ಹಾಗಾಗಿರುವದರಿಂದ ಇದು ಪ್ರಾಯಶಃ ಮದರಾಸ್ ಗವರ್ನಮೆಂಟಿನವರ ಅಭಿಪ್ರಾಯವೆಂತಲೇ ಭಾವಿಸಬೇಕಾಗಿದೆ. ಅಥವಾ ಅವರು ಯಾರ ಪ್ರತಿನಿಧಿಗಳಾಗಿರುತ ಇಲ್ಲಿ ಪ್ರಭುತ್ವ ಮಾಡುತ್ತಿದ್ದಾರೆಯೋ ಅಂಥಾ ಬ್ರಿಟಿಷ ಗವರ್ನಮೆಂಟಿನವರ ತಾತ್ಪರ್ಯವೆಂದಾಗಲಿ ನುಡಿಯಬಹುದು. ಹಿಂದೂಗಳ ಜಾತಿ ಮತ ಕುಲಾಚಾರಗಳಿಗೆ ಸಂಬಂಧಪಟ್ಟ ವಿಷಯಗಳಲ್ಲಿ ಗವರ್ನಮೆಂಟಿನವರು ಪ್ರವೇಶಿಸಲಾರರೆಂದು ೧೮೫೮ನೇ ಇಸವಿಯಲ್ಲಿ ಶ್ರೀಮನ್ಮಹಾರಾಜ್ಞೀಯವರು ಕೊಟ್ಟ ಅಭಯಗಳನ್ನೇ ಆಕೆಯವರು ೧೮೭೭ನೇ ಇಸವಿ ಜನವರಿ ಗುರ್ರೇ ತಾರೀಖಿನಲ್ಲಿ ಮರಳಿ ದೃಢಪಡಿಸಿ ಜನಗಳ ನಂಬಿಕೆಯಂ ವೃದ್ಧಿಗೊಳಿಸಿದರು. ಸರ್ವಜನೋಪಲಾಲನಾರ್ಹವಾದ ಮಹಾರಾಜ್ಞೀಯವರ ಪ್ರತಿಜ್ಞೆಯನ್ನು ಸಾರ್ಥಕಗೊಳಿಸಲಿಕ್ಕೆ ಅವರ ಪ್ರತಿನಿಧಿಗಳಾದ ಇಂಡ್ಯಾ ಗವರ್ನಮೆಂಟಿನವರಿಗೆ ಇಷ್ಟವಿಲ್ಲದಿದ್ದಾಗ್ಯೂ ಹೊರಕ್ಕೆ ತಮ್ಮ ನಿಸ್ಪೃಹತೆಯಂ ನಟಿಸುತ ಅಂತಃ ಹಿಂದೂಮತ ವಿರೋಧಿಗಳಿಗೆ ಸಹಾಯಕರಾಗಿ ಬೇಕಾದ ಪ್ರೋತ್ಸಾಹಗಳನ್ನುಂಟುಮಾಡುವ ಸಂಕಲ್ಪವುಳ್ಳವರಾಗಿರುವರೆಂಬದನ್ನು ಮೇಲೆಕಂಡ ವಿದ್ಯಾಭ್ಯಾಸದ ಇಲಾಖಾ ಡೈರೆಕ್ಟರ ಕಂತಿನವೃತ್ತಾಂತದಿಂದಲೇ ನಿರ್ಧರಿಸಿ ತಿಳಿದುಕೊಳ್ಳಬಹುದು. ಈ ಹುಕುಮನ್ನು ನೋಡಲಾಗಿ ಇದು ಕೇವಲ ಕ್ರಿಶ್ಚಿಯನ್ ಕಾಲೇಜ್ ಅಧಿಕಾರಿಗಳ ದಾಕ್ಷಿಣ್ಯಕ್ಕೆಬದ್ಧರಾಗಿ ಕೊಡಲ್ಪಟ್ಟಂತೆ ಭಾವಿಸಬೇಕಾಗಿದೆ. ಯಾತಕ್ಕೆಂದರೆ—ಕ್ರಿಶ್ಚಿಯನ್ ಕಾಲೇಜಿನ ಪ್ರಯೋಜನ ಹಾನಿಯ ನಿವಾರಣಕ್ಕಾಗಿಯೇ ಪ್ರಸಕ್ತ ವಿಶೇಷ ನಿಯಮವೇರ್ಪಟ್ಟಿತಲ್ಲದೆ ಸಾಮಾನ್ಯವಾಗಿ ವಿದ್ಯಾರ್ಥಿಗಳ ಅವಿಧೇಯತೆಯನ್ನು ಕ್ರಮಪಡಿಸಲಿಕ್ಕಾಗಿ ಉದ್ದಿಷ್ಟವಾದದ್ದಲ್ಲವು. ಇದನ್ನು ಮದರಾಸ್ ಗವರ್ನಮೆಂಟಿನವರು ಪುರೋದೃಷ್ಟಿಯೊಡನೆ ಪರಿಶೀಲನೆ ಮಾಡಿ ರದ್ದುಮಾಡದೆ ಹೋದರೆ ಮಹಾರಾಜ್ಞೀಯವರ ಇಸ್ತಿಹಾರಿಗೆ ಅಗೌರವ ಪಡಿಸಿದಂತಾಗುವದು. ಮುಂದೆಯೂ ಸರ್ಕಾರದವರ ಮಾತಿನಲ್ಲಿ ಜನಗಳಿಗೆ ನಂಬಿಕೆಯುಂಟಾಗಲಾರದು. ಈ ಹುಕುಮಿನ ದೆಸೆಯಿಂದ ಹಿಂದೂ ಬಾಲಕರನ್ನು ನಾನಾವಿಧ ಸಂಕಟಗಳಿಗೊಳಪಡಿಸಿದಂತಾಯಿತು. ಹ್ಯಾಗೆಂದರೆ, ಕ್ರಿಶ್ಚಿಯನ್ನರ ಪಾಠಶಾಲೆಗಳಲ್ಲಿರುವ ಸ್ಕೂಲ್‌ಮ್ಯಾಸ್ಟ'ಗಳು ವಿದ್ಯಾರ್ಥಿಗಳನ್ನೆಷ್ಟು ಅಗೌರವಪಡಿಸಿದಾಗ್ಯೂ, ಅವರ ಜಾತಿ ಮತ ನಿಯಮಗಳನ್ನು ಮನಸ್ವೀ ದೂಷಿಸುತ ಮನೋವ್ಯಥೆಯನ್ನುಂಟು ಮಾಡಿದಾಗ್ಯೂ ಅವರಿಗೆ ಜವಾಬ ಹೇಳದೆ ಶಿಷ್ಯಜಂತುಗಳಂತೆ ಅವರ ಮನಸ್ವೀವರ್ತನಗಳನ್ನು ಸಹಿಸಿ ಕೊಂಡಿರುವಂತೆ ಏರ್ಪಟ್ಟಿತು. ಇಂತಾ ಕ್ರಿಶ್ಚಿಯನ್ನರ ನಡತೆಯನ್ನು ಸಹಿಸದೆ ಗ್ರಹಚಾರವಶಾತ್ ಯಾವನಾದ ನೊಬ್ಬನು ಆತ್ಮಗೌರವದಿಂದ ಅವರು ನುಡಿಸುವನಾದರೆ ಅವನಿಗೆ ಕೂಡಲೇ ಸ್ಕೂಲಿನಿಂದ ನಿವೃತ್ತಿಯೂ, ತರುವಾಯ ಇತರ ಸ್ಕೂಲಗಳ ಪ್ರವೇಶಕ್ಕೆ ಅನವಕಾಶವೂ, ಬಳಿಕ ಯೂನಿವರ್ಸಿಟಿ ಗೌರವಗಳಿಗೆ ಅನರ್ಹತೆಯೂ, ಕಡೆಗೆ ಅದರ ಅಭಾವದಿಂದ ಸರ್ಕಾರಿ ನೌಕರಿಯ ದೌರ್ಲಭ್ಯವೂ ಮೇಲೆಕಂಡ ಸರ್ಕ್ಯುಲರಿನ ದೆಸೆಯಿಂದ ಪ್ರಾಪ್ತವಾಗಬೇಕಾಯಿತು. ಮುಖ್ಯವಾಗಿ ಇಂತಾ ವಿಷಯಗಳಲ್ಲಿ ಗವರ್ನಮೆಂಟಿನವರು ಪಕ್ಷಪಾತಿಗಳಾದರೆ ಅದರಿಂದುಂಟಾಗುವ ದುಷ್ಫಲಗಳು ಬಹಳ ಅನುಭವಿಸತಕ್ಕವಾಗಿರುವವು.

Occasional Notes.
ನೈಮಿತ್ತಿಕ ವಿಷಯನ್ಯಾಸ.

A prize.—ಈ ಇಂಡ್ಯಾ ದೇಶದಲ್ಲೀಗ ಆಚರಿಸಲ್ಪಡುತಲಿರುವ ವಿಗ್ರಹಾರಾಧನೆಯು ವೇದೋಕ್ತವಾದದ್ದೆಂದು ಯಾರಾದರು ನಿರೂಪಿಸುವರಾದರೆ ಅಂತವರಿಗೆ ೫,೦೦೦ ರೂಪಾಯಿಗಳು ಇನಾಂ ಕೊಡುವದಾಗಿ ಕಲ್ಕತ್ತೆಯ ಆರ್ಯಸಮಾಜದವರು ಪ್ರಕಟಿಸಿರುತ್ತಾರೆ. ಈ ದೇಶದ ನಮ್ಮ ಪಂಡಿತರ ಪ್ರತಿಷ್ಠಾಪ್ರದರ್ಶನಕ್ಕೆ ಇದೊಂದು ಒಳ್ಳೆಯ ಸಮಯವಾಗಿರುತ್ತದೆ.

Resignation of Sir Charles Bernard.—ಈ ಸಂಸ್ಥಾನದ ಕಾಯಂ ಬ್ರಿಟಿಷ ರೆಸಿಡೆಂಟರಾಗಿ ನೇಮಕಮಾಡಲ್ಪಟ್ಟಿರುವ ಸರ್ ಚಾರ್ಲ್ಸ್ ಬರ್ನಾರ್ಡ್ ಸಾಹೇಬರವರು ಇಂಡ್ಯಾದೇಶದ ಸಿವಿಲ್‌ಸರ್ವೀಸ್ ನೌಕರಿಯಿಂ ಬಿಟ್ಟುಬಿಟ್ಟ [illegible]ದಲ್ಲಿ ಸರ್ಕಾರೀಯಾಗಿ ಕೈಪ್ರಪ್ಪದಲ್ಲಿ ಥಾಯಿಷ ಮಾಡಲ್ಪಡುವರೆಂದು ನಿರೀಕ್ಷಿಸಲ್ಪಟ್ಟಿರುವದರಿಂದ ಅವರ ತರುವಾಯಲೇ ಇಲ್ಲಿನ ಕಾಯಂ ರೆಸಿಡೆಂಟ ಕೆಲಸ ಖಾಲಿಯಾಯಿತೆಂದು ಎಣಿಸಬೇಕಾಗಿದೆ.

Appointment of a committee.—ಹೈದರಾಬಾದ ಸಂಸ್ಥಾನದ ಚಿನ್ನದ ಗಣಿಗಳ ವಿಷಯದಲ್ಲಿ ನಡೆಸಲ್ಪಟ್ಟ ಮೋಸ ಕೃತ್ಯಗಳ ತನಿಖೆಯ ಬಗ್ಯೆ ಸರ್ ಹೆನ್ರಿ ಜೇಂಸ್, ಸರ್ ರಿಚ್ಚರ್ಡ ಟೆಂಪಲ್, ಮಿ. ಸ್ಲ್ಯಾಗ್, ಮಿ. ಮೆಕ್ಲಾಗನ್, ಮಿ. ರಾಬರ್ಟ್‌ಸನ್ ಮತ್ತು ಮಿ. ಲಿಯೋಕರ್, ಇವರೆಲ್ಲರು ಒಂದು ಕಮಿಟಿಯಾಗಿ ನೇಮಕರಮ್ಮಾಡಲ್ಪಟ್ಟರೆಂದು ಲಂಡನ್ ಪಟ್ಟಣದಿಂದ ಮುಂಬೈ ಟೈಂಸ್ ಪತ್ರಿಕೆಗೆ ತಂತಿ ವೃತ್ತಾಂತಬಂದಿರುತ್ತದೆ.

A terrific storm.—ಕಳೆದತಿಂಗಳ ೩೦ನೇ ತಾರೀಖ್ ಸೋಮವಾರದ ದಿನ ಮುರದಾಬಾದ ಪ್ರಾಂತದಲ್ಲಿ ಘೋರವಾದ ಬಿರುಗಾಳಿಯೊಡನೆ ಕೂಡಿ ಮಳೆ ಹೊಡೆದು ಆ ಪ್ರಾಂತವೆಲ್ಲ ನಾಶವಾದದ್ದಲ್ಲದೆ ಪ್ರಾಣಹಾನಿಗಳೂ ಬಹಳವಾಗಿ ಉಂಟಾಯಿತು. ಲಕ್ನೋನಲ್ಲಿನ ಮನೆಗಳೆಲ್ಲವು ನಿರ್ಮೂಲವಾದವು, ಅನೇಕಕಲ್ಲುಗಳ ದೆಸೆಯಿಂದ ಮನೆಗಳಿಗೂ ಮರಗಳಿಗೂ ಬಹಳ ನಷ್ಟವುಂಟಾಯಿತು, ಎಂದು ಹಿಂದೂನೊಂದು ಅಲಹಾಬಾದ ಪತ್ರಿಕೆ ಹೇಳುತ್ತದೆ.

Left for Europe.—ಮಧ್ಯೇ ಇಂಡಿಯಾರಾಷ್ಟ್ರದಲ್ಲಿ ಗವರ್ನಮೆಂಟಿನವರಕಡೆ ಏಜೆಂಟರಾಗಿದ್ದ ಸರ್ ಲೆಪೆಲ್ ಗ್ರಿಫಿನ್ನಯವರು ಈ ತಿಂಗಳ ನಾಲ್ಕನೇ ತಾರೀಖಿನಲ್ಲಿ ಯೂರೋಪಖಂಡಕ್ಕೆ ಪ್ರಯಾಣಮಾಡಿದರೆಂಬ ವೃತ್ತಾಂತವು ಅವರ ನಿರಂಕುಶಾಧಿಕಾರಕ್ಕೆ ಗುರಿಯಾಗಿದ್ದ ನೇಟಿವ್ ಸಂಸ್ಥಾನಾಧಿಪತಿಗಳೆಲ್ಲರಿಗೂ ಅಮಿತವಾದ ಸಂತೋಷವನ್ನುಂಟು ಮಾಡದೆ ಹೋಗಲಾರದೆಂದು ನಂಬುತ್ತೇವೆ. ಇವರು ಮರಳಿ ಇಂಡ್ಯಾದೇಶಕ್ಕೆ ವಾಪಸ್ ಬಾರದೆ ಕೆಲಸದಿಂದ ನಿವೃತ್ತರಾದರೆಂಬ ವೃತ್ತಾಂತವು ಅದಕ್ಕಿಂತಲೂ ಅತಿ ಅಮಿತವಾದ ಸುಖಸಂತೋಷಗಳನ್ನುಂಟು ಮಾಡುವದೆಂದು ನಂಬುತ್ತೇವೆ

Arrival of Ayubkhan.—ಅಯೂಬ್ ಖಾನನೂ ಹಸಿಂಖಾನನೂ ತಮ್ಮ ತಮ್ಮ ಕುಟುಂಬಗಳೊಡನೆಯೂ ೮೦೦ ಜನ ಪರಿವಾರದೊಡನೆಯೂ ಕಳೆದ ಸೋಮವಾರದ ದಿನ ಕರಾಚಿಗೆ ಬಂದು ಸೇರಿದರು. ಸದರೀ ಯವರನ್ನು ಬರಮಾಡಿಕೊಳ್ಳುವದಕ್ಕಾಗಿ ಅಲ್ಲಿನ ಕಮಿಷ್ನರನೂ ಬ್ರಿಗೇಡಿಯರ್ ಜನರಲರೂ ಅವರ ಕೈಕೆಳಗಣ ಉದ್ಯೋಗಸ್ಥರೊಡನೆ ಹಡಗಿಗೆ ಹೋಗಿ ಅವರೆಲ್ಲರನ್ನು ಕರೆದುಕೊಂಡು ಬಂದು ಅವರಿಗಾಗಿ ಸಿದ್ಧವಾಗಿದ್ದ ಪ್ರೀಡಿ ಕ್ಯಾಸಲ್ ಎಂಬ ಕೋಟೆಯಲ್ಲಿ ಇಳಿಸಿದರು. ಅವರ ಕುಟುಂಬಗಳಿಗೂ ಪರಿವಾರಕ್ಕೂ, ಬೇರೆ ಸ್ಥಳದಲ್ಲಿ ಡೇರೆಗಳು ಹಾಕಿ ಅವುಗಳಲ್ಲಿ ಇಳಿಸಿದರಂತೆ.

Sailed for England.—ಹೈದರಾಬಾದ ಸಂಸ್ಥಾನದ ಚಿನ್ನದ ಗಣಿಗಳ ವಿಷಯದಲ್ಲಿ ನಡೆಸಲ್ಪಟ್ಟ ಮೋಸಕೃತ್ಯಗಳ ವಿಚಾರಣೆಯ ಬಗ್ಯೆ ಪಾರ್ಲಿಮೆಂಟ ಸಭಾಸದರಿಂದ ನೇಮಕರಮ್ಮಾಡಲ್ಪಟ್ಟಿರುವ ಕಮಿಟಿಯ ಮುಂದೆ ನಿಜಾಮರವರ ಪರವಾಗಿ ಮೊಕದ್ದಮೆಯನ್ನು ನಡೆಸುವದಕ್ಕಾಗಿ, ಸದರೀ ಸಂಸ್ಥಾನದ ಪೊಲಿಟಿಕಲ್ ಮತ್ತು ಫೈನಾನ್ಶಿಯಲ್ ಸೆಕ್ರೆಟರಿಯವರಾದ ನವಾಬ ಮೊಹಸಿನ್ ಉಲ್ ಮುಲ್ಕರವರು, ಆಕ್ಟಿಂಗ್ ರೆವಿನ್ಯೂ ಇನ್ಸ್‌ಪೆಕ್ಟರ್ ಜನರಲಾದ ಮಿ. ಫರ್ದೂಂಜಿ ಜಾಮಸ್ಪಜಿಯವರು, ಮಿ. ಗಯಫ್ರಾಯ್ ಎಂಬವರು, ಇವರೆಲ್ಲರು ಇಂಗ್ಲೆಂಡಿಗೆ ಹೋಗುವದಕ್ಕಾಗಿ ಈ ತಿಂಗಳ ೪ನೇ ತಾರೀಖ್ ಶುಕ್ರವಾರದ ದಿನ ಮುಂಬೈಯಲ್ಲಿ ಹಡಗು ಹತ್ತಿದರೆಂದು ತಿಳಿಯಬರುತ್ತದೆ.

Legal advisers.—ಹಿಂದೂನೊಂದು ಪತ್ರಿಕೆಗೆ ಹೈದರಾಬಾದಿನಿಂದ ಒಬ್ಬ ಬಾತಮೀದಾರನು ತಂತಿ ವೃತ್ತಾಂತ ಕಳುಹಿಸಿರುವದೇನಂದರೆ:—ಮುಂಬೈ ಬಾರಿಗೆ ಸೇರಿದ ಮೆಸ್ಸರ್ಸ್ ಇನ್‌ವೆರಾರಿಟಿ, ಲ್ಯಾಂಗ್ ಮತ್ತು ಬ್ರಾನ್ಸನ್, ಇಬ್ಬರು ಸೋಲಿಸಿಟರ್‌ಗಳು, ಎಲ್ಲರೂ ಸೇರಿ ಅಬ್ದುಲ್‌ಹಕ್ಕ ಯೆಂಬವರಿಗೆ ನ್ಯಾಯ ಪರ್ಯಾಲೋಚಕರಾಗಿದ್ದಾರಲ್ಲದೆ ಇದಕ್ಕಾಗಿ ದಿನ ಒಂದಕ್ಕೆ ಸಾರ್ತೈದುಸಾವಿರ ರೂಪಾಯಿಗಳ ಪ್ರಕಾರ ಖರ್ಚಾಗುತಲಿದೆ, ಎಂಬದು. ಎರಡು ಬೆಕ್ಕುಗಳು ಬೆಣ್ಣೆ ಹಂಚಿಕೊಳ್ಳುವಾಗ್ಯೆ ಒಂದಕ್ಕೊಂದು ಜಗಳವಾಗುತ ಪಂಚಾಯಿತಿಗಾಗಿ ಒಂದು ಮರ್ಕಟದ ಬಳಿಗೆ ಹೋಗಲು ಆಗ ಅದು ಬೆಣ್ಣೆಯನ್ನು ಎರಡು ಭಾಗ ಮಾಡಿ ತನ್ನ ಕೈಯಲ್ಲಿಟ್ಟುಕೊಂಡು ಸರಿಮಾಡುತ ಹೆಚ್ಚಿದೆಂದು ಕಂಡುಬಂದ ಭಾಗವನ್ನೆಲ್ಲ ತಾನು ಭಕ್ಷಿಸಿ ಕಡೆಗೆ ತನ್ನ ಕೈಗಳೆರಡನ್ನು ಆ ಬೆಕ್ಕುಗಳ ತಲೆಮೇಲೆ ಒರಸಿ ಹೋಗೆಂದು ಕಳುಹಿಸಿತೆಂಬದಾಗಿ ಒಂದು ಕಥೆಯುಂಟು. ಅದರಂತೆ ನಿಜಾಮ ಸರ್ಕಾರದವರು [illegible] ಅಬ್ದುಲ್‌ಹಕ ಯವರ ಜಗಳದಲ್ಲಿ ಅನೇಕ ಬ್ಯಾರಿಸ್ಟರ್‌ಗಳ ದಾರಿದ್ರ್ಯವು ನಿವೃತ್ತಿಯಾಗಿ ಹೋಗುವದರೊಳಗೇನೂ ಸಂಶಯವಿರಲಾರದು.

A statement contradicted.—ಹೋಳ್ಕರ್ ಮಹಾರಾಜರವರು ತಮ್ಮ ಸಂಸ್ಥಾನದ ಆಡಳಿತವನ್ನು ತಮ್ಮ ಮಾತು ಕೇಳುವವರು, ತಮ್ಮ ಸೋದರ ಮಾವಂದರಾದ ಸರ್ ಕಾಶೀರಾವ್, ಭಕ್ಷಿ ಖೂಮಾನಸಿಂಗರವರು, ಇವರ ವಶಕ್ಕೆ ಒಪ್ಪಿಸಿಬಿಟ್ಟಿದ್ದಾಗಿ ಹುಟ್ಟಿದ ವರ್ತಮಾನವು ನಿರಾಧಾರವಾದದ್ದೆಂತಲೂ, ಸದರೀ ಮಹಾರಾಜರವರು ಹಿಂದೆ ಅನೇಕ ಸಂದರ್ಭಗಳಲ್ಲಿ ಮೇಲಿನಂತೆ ಮಾಡಬೇಕೆಂದು ಯೋಚಿಸಿ ಆ ಬಗ್ಯೆ ದಸ್ತೈವಜನ್ನು ಸಹ ಬರೆದಿಟ್ಟು ಪರಂತು ಅದಕ್ಕೆ ರುಜುಮಾಡಲಿಲ್ಲವೆಂಬ ಪ್ರವಾದ ಪ್ರುಂಟಾಯಿತೆಂತಲೂ, ಹೋಳ್ಕರ್ ಮಹಾರಾಜರವರು ಈಗ ಮುಂಬೈಯಲ್ಲಿ ತಮಗೆ ಒಬ್ಬ ದಿವಾನರನ್ನು ತಲಾಷ ಮಾಡುತಲಿದ್ದಾರೆಂತಲೂ, ಇಂಡ್ಯಾ ಟೈಂಸ್ ಪತ್ರಿಕೆ ಹೇಳುತ್ತದೆ. ಯೆಲ್ಲವಿಷಯದಲ್ಲೂ ಸಮರ್ಥರೆನಿಸಿರ್ದ ದಿವಾನ್ ಬಹದೂರ ರಘುನಾಥರಾಯರಂತವರ ಸಚಿವತ್ವವನ್ನು ಹೋಗಲಾಡಿಸಿಕೊಂಡ ಹೋಳ್ಕರ್ ಮಹಾರಾಜರವರ ಬುದ್ಧಿ ಹೀನತೆಗಾಗಿ ಯೆಷ್ಟು ಚಿಂತಿಸಿದರೂ ಅಲ್ಪವಾಗಿರುವದು.

LOCAL AND PROVINCIAL NEWS.
ಒಳದೇಶ ಮತ್ತು ತಾಲ್ಲೂಕ್‌ಜಾತೀ ವೃತ್ತಾಂತಗಳು

The Resident.—ಈದಿನ ೮ ಘುಂಟೆಗೆ ದಾಮೂಲಮೋರೆ ಹೊರಡತಕ್ಕ ಪ್ರಯಾಣಸ್ಥರ ಗಾಡಿಯಲ್ಲಿ ಸರ್ ಹಾರೀ ಪ್ರೆಂಡರಗ್ಯಾಸ್ಟ ಯವರು ಮೈಸೂರು ಮಾರ್ಗವಾಗಿ ಕೊಡಗಿಗೆ ದಯಮಾಡುವರು. ಇವರು ಪ್ರಾಯಶಃ ಬರುವತಿಂಗಳ ಆದಿಭಾಗದಲ್ಲಿ ವಾಪಸ್‌ಬರುವರೆಂದು ತಿಳಿಯಬರುತ್ತದೆ

An invitation accepted.—ಮೈಸೂರು ಮತ್ತು ಬರೋಡೆ ಮಹಾರಾಜರುಗಳು ಈಗ ನೀಲಗಿರಿಯಲ್ಲಿರುತಲಿದ್ದಾರೆಯಷ್ಟೆ. ತಮ್ಮ ರಾಜಧಾನಿಗೆ ದಯಮಾಡಬೇಕೆಂದು ಮೈಸೂರು ಮಹಾರಾಜರವರು ವ್ಯಕ್ತಪಡಿಸಿದ ಅಭಿಪ್ರಾಯವನ್ನು ಬರೋಡೆ ಮಹಾರಾಜರವರು ಅಂಗೀಕರಿಸಿದ್ದಲ್ಲದೆ ಬೆಂಗಳೂರನ್ನು ಸಹ ನೋಡಬೇಕೆಂಬ ಇಷ್ಟವಿರುವದಾಗಿ ತಿಳಿಸಿದರಂತೆ.

Undue restriction.—ಈ ಪ್ರಾಂತ ಧರ್ಮಾಂಬುಧಿ ಕೆರೆಯ ಉಸ್ತುವಾರೀ ಬಗ್ಯೆ ಮ್ಯೂನಿಸಿಪಾಲಿಟಿಯವರಿಂದ ಇಡಲ್ಪಟ್ಟಿರುವ ಪಹರೇ ಜವಾನನು, ಕೆರೆಯಿಂದ ನೀರು ತರುವ ಬಗ್ಯೆ ಹೋಗತಕ್ಕವರನ್ನೆಲ್ಲ ಮನಸ್ವೀ ಬಯ್ದು ಅಗೌರವಪಡಿಸುತ್ತಾನಲ್ಲದೆ ಜನಗಳಿಗೆ ವ್ಯರ್ಥವಾದ ತೊಂದರೆಗಳನ್ನೀಯುವನಾಗಿ ಇದಂ ಮ್ಯೂನಿಸಿಪಾಲಿಟಿಯವರು ವಿಚಾರಿಸಿ ತಕ್ಕ ಏರ್ಪಾಡು ಮಾಡುವರೆಂದು ನಂಬುತ್ತೇವೆ.

Daily Conservancy.—ಈ ಪೂರು ಪೇಟೆ ಝಾಡಮಾಲೀಗಳ ಅವ್ಯವಸ್ಥೆಯು ಜನಗಳಿಗೆ ಬಹಳ ದುಸ್ಸಹವಾಗಿದೆ. ಮ್ಯೂನಿಸಿಪಲ್ ನಿಬಂಧನೆಯ ಪ್ರಕಾರ ಇವರು ಆರು ಘುಂಟೆಗೆ ಮುಂಚಿತವಾಗಿ ರಸ್ತೆಗಳನ್ನು ಗುಡಿಸಬೇಕಾದವರಾಗಿದ್ದರೂ, ಸಾಧಾರಣವಾಗಿ ೭ ಅಥವಾ ೮ ಘುಂಟೆಯ ಮೇಲೆ ಬೀದಿಗಳನ್ನು ಗುಡಿಸಲಿಕ್ಕೆ ಬರುವರು. ಆಗ ಜನಗಳ ಸಂಚಾರವು ರಸ್ತೆಗಳಲ್ಲಿ ಅಧಿಕವಾಗಿರುವದರಿಂದ ರಸ್ತೇ ಧೂಳೆಲ್ಲಾ ಅವರ ಪಾಲಾಗುತ್ತದೆ. ಇದಲ್ಲದೆ ತಿಪ್ಪೆ ಗಾಡಿಗಳನ್ನು ಮಾರ್ಗದಲ್ಲಿ ನಿಲ್ಲಿಸಿಬಿಟ್ಟು ಕೊಂಚಕ್ಕೆ ಇತರ ಗಾಡಿಗಳಿಗೆ ಅವಕಾಶ ಕೊಡದೆ ನಿರ್ಬಂಧಪಡಿಸುತ್ತಾರೆ. ಸುದುಗಳ ಪೋಲೀಜ್ ವಿಷಯವನ್ನು ಕುರಿತು ಕೇಳತಕ್ಕವರೇ ಇಲ್ಲವು. ಪ್ರಾಯಶಃ ಇವುಗಳೊಂದೂ ವೈಸ್ ಪ್ರೆಸಿಡೆಂಟರವರ ಅವಧಾನಕ್ಕೆ ತರಲ್ಪಡುವಂತೆ ತೋರಲಿಲ್ಲವು.

The weather.—ಗತ ಶುಕ್ರವಾರದ ಮಧ್ಯಾಹ್ನದ ಮೊದಲು ಜಡಿ ಮಳೆಗೆ ಉಪಕ್ರಮವಾಗಿ ಆದಿನರಾತ್ರಿ ಯೆಲ್ಲವೂ ಮೊನ್ನೆಯದಿನ ೧ ಘುಂಟೆಯತನಕಲೂ ೨ ಅಂಗುಲದವರಿವಿಗೆ ಮಳೆ ಬಿತ್ತಲ್ಲದೆ ಸೂರ್ಯರಶ್ಮಿಯಿಲ್ಲದೇ ಇತ್ತು. ಈ ರಾಜ್ಯಕ್ಕೆ ಪೂರ್ವ ಪಶ್ಚಿಮ ದಿಕ್ಕುಗಳಲ್ಲಿರುವ ಮದರಾಸ್ ಮುಂಬೈ ಪ್ರೆಸಿಡೆನ್ಸೀ ಸಮುದ್ರಗಳಲ್ಲೇನಾದರು ಸ್ವಲ್ಪ ಪರ್ಜನ್ಯಸೂಚನೆ ಕಂಡರೆ ತತ್‌ಕ್ಷಣದಲ್ಲೇ ಮಧ್ಯೋನ್ನತ ಪ್ರದೇಶವಾದ ಇಲ್ಲಿ ಅದರ ಲಕ್ಷಣಗಳು ಕಾಣಬರುವದು ಸಹಜವಾದದರಿಂದ

ಈಗಿನ ಜಡಿಗೆ ಕಾರಣವನ್ನು ನಿರೀಕ್ಷಿಸುತಲಿದ್ದೆವು. ಹೀಗಿರುವಲ್ಲಿ ಗತ ಶುಕ್ರವಾರದ ಮದರಾಸ ಮೆಯಿಲ ಪತ್ರಿಕೆಯು ಮೂಲಕ ತಿಳಿಯಬಂದದೇನಂದರೆ—ಮದರಾಸಿನಲ್ಲಿ ಈಗ್ಯೆ ಕೆಲವು ದಿವಸಗಳ ಮೊದಲು ಕಾಲಸ್ಥಿತಿಯು ಕೇವಲ ಭಯಂಕರವಾಗಿತ್ತಲ್ಲದೆ ಅದಕ್ಕೆ ತಕ್ಕಂತೆ ಬಾರಾಮಿಟರ ಸಹ ನಿಲುಕಡೆಯಿಲ್ಲದೆ ಇತ್ತು. ೧೧ನೇ ತಾರೀಖಿನ ಬೆಳಗ್ಯೆ ೮ ಘಂಟೆಗೆ ಸರಿಯಾಗಿ ಮಳೆಗುವದಕ್ರಮವಾಗಿ ಆದಿನ ಮಧ್ಯಾಹ್ನದವರಿಗೆ ಒಳ್ಳೇಮಳೆಯಾಯಿತು. ಆದೇದಿನ ಬೆಳಗ್ಯೆ ಕಲ್ಕತ್ತೆಯಿಂದ ಮದರಾಸ ಪ್ರೋರ್ಟ ಆಫಿಸರರಿಗೆ ಬಂದರಿ ಕಂಡ ತಂತಿ ವೃತ್ತಾಂತ ಬಂತೇನಂದರೆ, ಮದರಾಸಿಗೂ ನಾಗಪಟ್ಟಣಕ್ಕೂ ಮಧ್ಯೆ ಸಮುದ್ರ ತೀರದಲ್ಲಿ ಸ್ವಲ್ಪ ಘಾಳಿ ಮಳೆಗುವ ಕ್ರಮವಾಗುವದು. ಘಾಳಿ ಸ್ವಲ್ಪವಾದದರಿಂದ ಬಹಳ ವೇಗವುಳ್ಳದ್ದಾಗಿರಲಾರದು, ಎಂಬದು ಮುಂಗಾರೆ ಮಳೆಗೆ ಈಗಲೇ ಕಾಲಾತೀತವಾಯಿತೆಂತಲೂ ಉಳಿದ ಪೇರಾವ ಕೆಲಸಗಳು ಇದರಿಂದ ತಡೆವಿರುವುತೆಯೂ ತಿಳಿಯಬರುತಿದೆ.

TELEGRAMS.
ತಂತಿ ವೃತ್ತಾಂತಗಳು.

ಲಕ್ನೋ, ತಾರೀಖ ೭ನೇ ಮೇ ೧೮೮೮—ಈ ದಿನಸಾಯಂಕಾಲ ಲಾಯಿಕ ಹಾಲ ಕಂಪೌಂಡಿನಲ್ಲಿ ಬಹುಜನ ಮಹಮ್ಮದಿಯರು ಅಭಿನಿವೇಶದೊಡನೆ ಸಭೆಸೇರಿದ್ದರು. ಸದರೀಸಭೆಯು ಪ್ರೆಸಿಡೆಂಟರಾದ ನವಾಬ ಇನಾನಿ ಅತಮಲ್ಲಾಖಾನ ಬಹದೂರ ಯವರೂ, ಪ್ರಮುಖರಾದ ಅನೇಕ ಮಹಮ್ಮದಿಯರ ಮೊತ್ತ ಮನುಷ್ಯರೂ ಆನರೆಬಲ ಅಯೋಧ್ಯಾನಾಥರವರು ಪ್ರೋಷಿಸಿ ಮಾತನಾಡಿ ಸ್ವಪ್ರಯೋಜನಪರರಾದ ಕೆಲವರು ವಿರೋಧಿಗಳು ಅವರಮೇಲೆ ಆರೋಪಿಸಿದ ದೋಷಗಳು ಶುದ್ಧಾಂಗ ಸುಳ್ಳಾದವೆಂದು ನುಡಿದು ಸಭಿಕರಿಗೆಲ್ಲ ಅವರಲ್ಲಿ ಭರವಸೆಯನ್ನುಂಟುಮಾಡಿದರು. ಸರ ಸೈಯದ ಅಹಮದಿಯವರ ಅಭಿಪ್ರಾಯವನ್ನು ಸಭಿಕರೆಲ್ಲರೂ ಬಲವಾಗಿ ಆಕ್ಷೇಪಿಸಿ ನ್ಯಾಶನಲ್‌ಕಾಂಗ್ರೆಸ ಸಭೆಯಲ್ಲಿ ತಮಗುಂಟಾಗಿರುವ ಅಭಿಮಾನವನ್ನು ಸೂಚಿಸಿದರು. ಆ ಕಾಲದಲ್ಲಿ ಸುಮಾರ ೫೦೦ ಜನಗಳ ತನಕ ಹಾಜರಿದ್ದರು.

ಘಾಜೆಪೂರ, ತಾ॥ ೧೦ನೇ ಮೇ ೧೮೮೮ ನಿನ್ನೆಯದಿನರಾತ್ರಿ ಇಲ್ಲಿನ ಟೌನಹಾಲನಲ್ಲಿ ೫೦೦ ಜನಗಳವರಿವಿಗೆ ಸಭೆ ಸೇರಿದ್ದರು. ಆಕಾಲದಲ್ಲಿ ತಾಲ್ಲೂಕದಾರ, ಆನರೆರಿ ಮ್ಯಾಜಿಸ್ಟ್ರೇಟ ಮತ್ತು ಮ್ಯೂನಿಸಿಪಲ ಬೋರ್ಡ ವೈಸಪ್ರೆಸಿಡೆಂಟರಾದ ಬಾಬೂಶಿವನಾಥ ಸಿಂಗರವರು, ಅಗ್ರಾಸನವಂ ವಹಿಸಿದ್ದರು. ರಾಜಾ ರಘುನಾಥ ಸಿಂಗರವರೂ, ಪಂಡಿತಮದನ ಮೋಹನ ಮಾಲವ್ಯರವರೂ, ನ್ಯಾಷನಲ್‌ಕಾಂಗ್ರೆಸ ಸಭೆಯ ಉದ್ದೇಶ ಪ್ರಯೋಜನಗಳಂ ಕುರಿತು ವಿಶೇಷವಾಗಿ ಪ್ರಸಂಗಿಸಿದರು. ಇಲ್ಲಿ ಪ್ರಮುಖರಾಗಿರುವ ಪ್ಲೀಡರ ಬಾಬೂ ಬೋಲಾನಾಥಯವರು ಪ್ರಾಸಂಗಿಕರನ್ನು ವಂದಿಸಿ ಅವರ ಪ್ರಸಂಗವಂ ಬಹಳ ಶ್ಲಾಘಿಸಿದರು. ಆಖೈರನಲ್ಲಿಶ್ರೀಮನ್ಮಹಾರಾಜ್ಞೀಚಕ್ರವರ್ತಿನೀಯವರಿಗೂ ಕಾಂಗ್ರೆಸ ಸಭೆಗೂ ಶುಭವಾದನ ಪೂರ್ವಕ ಸಭೆ ಬರಖಾಸ್ತಾಯಿತು.

SUMMARY OF NEWS
ವೃತ್ತಾಂತ ಸಂಗ್ರಹ.

ತುರ್ಕಿಸ್ತಾನ ದೇಶದ ರಾಜಧಾನಿಯಾದ ಕಾನಸ್ಟಾಂಟಿನೋಪಲ ಪಟ್ಟಣದಲ್ಲಿ ಸಾರಾಯಿ ಮುಂತಾದ ಮದ್ಯಪಾನಗಳ ವ್ಯಾಪಾರವು ಮಾಡಕೂಡದೆಂದು, ಟರ್ಕಿಸ್ಥಾನದ ಸುಲ್ತಾನರವರು ಆಜ್ಞೆಯನ್ನು ಮಾಡಿದ್ದಾರೆ.

ಯೂರೋಪ ಖಂಡದಲ್ಲಿರುವ ವಿದ್ಯಾಶಾಲೆಗಳ ಸಂಖ್ಯೆಯ ವಿವರ.—ರಷ್ಯಾದಲ್ಲಿ ೩೨೦೦೦ ಆಸ್ಟ್ರಿಯಾದಲ್ಲಿ ೨೯,೦೦೦. ಇಟಲಿಯಲ್ಲಿ ೪೭,೦೦೦ ಸ್ಪೇಯಿನ ದೇಶದಲ್ಲಿ ೨೯,೦೦೦. ಇಂಗ್ಲಾಂಡಿನಲ್ಲಿ ೫೮,೦೦೦. ಜರ್ಮನಿಯಲ್ಲಿ ೬೦,೦೦೦. ಫ್ರಾನ್ಸ ದೇಶದಲ್ಲಿ ೭೧,೦೦೦.

ಪೆನಸಿಲವೇನಿಯಾ ಬಳಿಯಲ್ಲಿರುವ ಮಿಡೆವೆಲ ಎಂಬ ಸ್ಥಳದಲ್ಲಿ ಮಿರಿಲ ಎಂಬ ದಂಪತಿಗಳು ಇರುವರು. ಗಂಡನಿಗೆ ೯೨ ವರ್ಷಗಳಾಗಿವೆ. ಹೆಂಡತಿಗೆ ೮೯ವರ್ಷಗಳು. ಇವರವಿವಾಹವು ೧೮-೧೨ರಲ್ಲಿ ಜರಗಿತು. ಆಗ ಹೆಂಡತಿಯು ೧೮ ವರ್ಷದವಳಾಗಿದ್ದಳು. ಈ ಪುಣ್ಯಶಾಲಿಗಳಿಗೆ ೧೫ ಮಕ್ಕಳೂ, ೯೪ ಮೊಮ್ಮಕ್ಕಳೂ, ೩೫ನುಂದಿ ಮರಿಮಕ್ಕಳೂ ಇದ್ದಾರೆ.

ನ್ಯೂಯಾರ್ಕ ಪಟ್ಟಣದಲ್ಲಿ ಒಬ್ಬನು, ಸ್ಟೀರಿಯೋಗ್ರಾಫ ಎಂಬ ಮಾನುಷರೂಪ ಗ್ರಾಫಿಕ ತಸಬೀರುಗಳನ್ನು ಲೋಹಗಳ ಮೇಲೆ ತೆಗಿಯುವ ಯುಕ್ತಿಯನ್ನು ಕಲ್ಪನೆಮಾಡಿ, ಅದರಂತೆ ಘಡಿಯಾರ, ಗುಂಡಿ ಮುಂತಾದವುಗಳ ಮೇಲೆ ತಸಬೀರು ಇಳಿಸುತ್ತಿದ್ದಾನೆ ಈ ಕಲ್ಪನಾಶಕ್ತಿಯ ರಹಸ್ಯವು ಗುಪ್ತವಾಗಿದೆ

ಅಮೇರಿಕಾ ಖಂಡದ ಛಿಕ್ಯಾಗೋ ಪಟ್ಟಣದಲ್ಲಿ ಒಬ್ಬನು ತನ್ನ ಯುಕ್ತಿ ಚಮತ್ಕಾರ ಕಲಾಕೌಶಲ್ಯಾದಿಗಳ-ದ ಕಲುಷುಳತೆಯಿಂದ ಹೋಗುವ ಒಂದು ಚಕ್ರದ ಗಾಡಿಯನ್ನು ಕಲ್ಪನೆ ಮಾಡಿದ್ದಾನೆ. ಇದನ್ನು ಒಂದುಸಾರಿ ಸ್ಪರ್ಶಮಾಡಿದರೆ ಇದು ೧ ಘಂಟೆಯುವರಿವಿಗೂ, ಮೇಲೆ ಕೂತಿರುವಂತಾವನು ಬಾರಿಬಾರಿಗೂ ತುಳಿಯಬೇಕಾದ ತೊಂದರೆ ಇಲ್ಲದೇಲೆ, ತಾನಾಗಿ ಬಹು ವೇಗವಾಗಿ ಹೋಗುತ್ತಾ ಇರುತ್ತದೆ.

ಅಮೇರಿಕಾದಲ್ಲಿ ನೀರಿನೊಳು ಮುಳುಗಿದ ಜನರ ಶವಗಳನ್ನು ಹುಡುಕುವದಕ್ಕೋಸ್ಕರವಾಗಿ, ಈಚೆಗೆ ಒಂದು ವಿದ್ಯುಚ್ಛಕ್ತಿಯ ದೀಪವನ್ನು ಕಲ್ಪನೆ ಮಾಡಿದ್ದಾರೆ. ಇದನ್ನು ಮೀನು ಹಿಡಿಯುವವರು ಸಹ ಉಪಯೋಗಿಸುತ್ತಾರೆ ಹ್ಯಾಗಂದರೆ, ಒಂದು ಬಲೆಯಲ್ಲಿ ಈ ದೀಪವನ್ನು ಇಟ್ಟು ನೀರಿನಲ್ಲಿ ತೇಲಬಿಟ್ಟರೆ, ಆ ಬೆಳಕಿನ ತ್ರಾಣ ಮತ್ತು ಶಕ್ತಿಯಿಂದ ಮೀನುಗಳು ಅದನ್ನು ಆಹಾರವಾಗಿ ಭಾವಿಸಿ ಬಲೆಯಲ್ಲಿ ಸಿಕ್ಕಿ ಬೀಳುತ್ತವೆ. ಬಲೆಯು ತುಂಬಿ ಭಾರವಾದ ಮೇಲೆ ಸಾವಿರಾರು ಮತ್ಸ್ಯಗಳನ್ನು ಬಲೆಯಿಂದ ದಡದ ಮೇಲಕ್ಕೆ ಸುರಿಯುತ್ತಾರೆ.—ವೃ. ಪ.

ಮೈಸೂರು ಸಂಸ್ಥಾನದ ಶ್ರೀಮನ್ಮಹಾರಾಜರವರು ರಾಷ್ಟ್ರೀಯ ಸಭೆಯ ಫಂಡಿಗೆ ಒಂದು ಸಾವಿರ ರೂಪಾಯಿಗಳನ್ನು ಕೊಟ್ಟದ್ದರಿಷ್ಟೆ. ಸದರೀ ಸಭೆಯ ಸಾಹಾಯಾರ್ಥವಾಗಿ ಮಹಾರಾಜರವರು ಇಷ್ಟು ಉದಾರರಾಗುವದಕ್ಕೆ ಕಾರಣವೇನಿರಬಹುದೆಂಬದಾಗಿ ವಿಚಾರಿಸಬೇಕೆಂದು ಹಿಂದುಸ್ತಾನ ಸರ್ಕಾರದ ಫಾರಿನಿಲಾಖೆಯವರು ಆ ಸಂಸ್ಥಾನದ ರೆಸಿಡೆಂಟರವರನ್ನು ಕೇಳಿದರೆಂತಲೂ ಅದಕ್ಕೆ ಮಹಾರಾಜರವರ ತಮ್ಮ ವಿದ್ಯೆಗೂ, ಮರ್ಯಾದೆಗೂ, ಗೌರವಕ್ಕೂ, ಯೋಗ್ಯವಾದ ಉತ್ತರ ಕೊಟ್ಟರೆಂತಲೂ ಕೇಳುತ್ತೇವೆ. ಮೈಸೂರುರಾಜ್ಯವು ಮಹಾರಾಜರವರ ಮತ್ತು ಅವರ ಮಂತ್ರಿಗಳ ಮನಸ್ಸುಗಳಿಗೆ ವಿರುದ್ಧವಾಗಿ ಜುಲುಮಿನಿಂದ ಕಸುಕೊಳ್ಳಲ್ಪಟ್ಟಿತು! ಈಪ್ರಕಾರ ಹಿಂದುಸ್ತಾನ ಸರ್ಕಾರದವರು ಮಹಾರಾಜರವರನ್ನು ನಿರ್ದಯೆಯೊಡನೆ ನಡಿಸುತ್ತಾರೆ. ನಮ್ಮಸರ್ಕಾರದವರು ನೇಟಿವ್‌ಅರಸರನ್ನುಯಾವ ವಿಧದಿಂದ ಸುಲಿದುಕೊಳ್ಳುವರೋ ತಿಳಿಯದು!

ಅನೇಕರು ಅಕ್ಷರಗಳನ್ನು ಸ್ಪಷ್ಟವಾಗಿಯೂ ವಿವರವಾಗಿಯೂಬರೆಯದೆಅಹಂಕಾರದಿಂದತಮ್ಮ ಮನಸ್ಸಿಗೆಬಂದಹಾಗೆ ಗೀಚುತ್ತಾರೆ, ರುಜುಗಳ ಹಾಕುತ್ತಾರೆ. ಇಂತಾ ಬರವಣಿಗೆಯನ್ನು ಓದಲಾಗುವದಿಲ್ಲ. ಈ ಅಂಶದಲ್ಲಿ ಪ್ರಷ್ಯಾದೇಶದ ಸರ್ಕಾರದವರು ಒಂದು ನಿಬಂಧನೆಯಂ ಮಾಡಿದ್ದಾರೆ. ಏನಂದರೆ; ಸಾಧಾರಣವಾಗಿ ಜನಗಳು ಧಾರಾಳವಾಗಿ ಓದದಂತೆ ಅಕ್ಷರಗಳನ್ನು ಬರಿಯುವ ಅಥವಾ ರುಜು ಹಾಕುವ ಯಾರಾಗಲಿ ಶಿಕ್ಷೆಗೆ ಒಳಪಡಬೇಕು ಎಂಬುವದು. ಇಂತಾ ಕಾನೂನು ಏರ್ಪಾಡಾದ ಲಾಗಾಯತು ಜನರು ಅಕ್ಷರಗಳನ್ನು ಎಲ್ಲರೂ ಸುಲಭವಾಗಿ ಓದುವಹಾಗೆ ಬರೆಯುತ್ತಿದ್ದಾರೆ. ಮೈಸೂರು ಸಂಸ್ಥಾನದ ಅನೇಕ ಕಚೇರಿಗಳಲ್ಲಿ ಬರೆಯುವ ಅನೇಕರ ಬರವಣಿಗೆಯು ಓದಲಾಗುವದೇ ಇಲ್ಲ. ಆದ್ದರಿಂದ ಪ್ರಷ್ಯಾದೇಶದಂತೆ ಬರವಣಿಗೆಯ ವಿಷಯದಲ್ಲಿ ಈ ಸಂಸ್ಥಾನದಲ್ಲಿಯೂ ಒಂದು ಶಿಕ್ಷೆಯು ಏರ್ಪಾಡಾದರೆ ಬಹಳಕ್ಷೇಮವಾದೀತು.—ವೃ. ಪ.

ಆಸ್ಟ್ರಿಯಾ ದೇಶದಲ್ಲಿರುವ ಡಾಕ್ಟರ ಜರ್ಮ್ಯಾನ ಎಂಬ ಒಬ್ಬ ರಸಾಯನ ಶಾಸ್ತ್ರಜ್ಞನು ನಾಶಕರವಾದ ವಸ್ತುಗಳುಳ್ಳಂತಾ, ಭಯಂಕರವಾದ ಸಂಹಾರಶಕ್ತಿಯನ್ನುಳ್ಳಂತಾ ಒಂದು ವಿಧವಾದ ತೈಲವನ್ನು ತಯಾರ್ಮಾಡಿದ್ದಾನೆ. ಈ ತೈಲವಿರುವಂತಾ ಬುರುಡೆಯನ್ನು ಘಾಳಿಯಲ್ಲಿ ಹಿಡಿದರೆ ಅದು ತತ್‌ಕ್ಷಣವೇ ಒಡೆದು ತೈಲವು ಗ್ಯಾಸ ಎಂಬ ವಾಯುರೂಪ ಪದಾರ್ಥವಾಗುತ್ತದೆ. ಅದು ಘಾಳಿಗಿಂತಲೂ ಬಹು ಲಘುವಾಗಿರುವದರಿಂದ ಭೂಮಿಗೆ ಇಳಿದು ತನ್ನ ವ್ಯಾಪಕತೆ ಇರುವಷ್ಟರ ಸ್ಥಳದಲ್ಲಿರುವ ಮನುಷ್ಯ, ಪಶು, ಪಕ್ಷಿ, ಮೃಗಾದಿಗಳನ್ನೆಲ್ಲಾ ಕೊಲ್ಲುವದಲ್ಲದೆ, ಕಬ್ಬಿಣ, ಕಂಚು ಮುಂತಾದ ಲೋಹಗಳನ್ನು ನಾಶಮಾಡಿ, ಭಗ್ಗಂತ ಉರಿಯುವ ಮದ್ದು ಮುಂತಾದ ಪದಾರ್ಥಗಳನ್ನು ಸುಟ್ಟು ಬಿಡುತ್ತದೆ. ಮೇಲ್ಕಂಡ ಶಾಸ್ತ್ರಜ್ಞನು ೧೮೭೮ನೇ ಇಸವಿಯಲ್ಲಿಯೇ ತನ್ನ ತೈಲದ ಶಕ್ತಿಯನ್ನು ಪರೀಕ್ಷಿಸಿ ಎಂದು ಆಸ್ಟ್ರಿಯಾ ದೇಶದ ಯುದ್ಧದ ಇಲಾಖೆಯವರಿಗೆ ಲಿಖಿತ ಮೂಲಕವಾದ ಒಂದು ಮನವಿಯನ್ನು ಮಾಡಿಕೊಂಡನು. ಅವರು ಆಗ್ಯೆ ಅವನ್ನು ಲಕ್ಷ್ಯಮಾಡಲಿಲ್ಲ. ಆತನು ಈವರಿವಿಗೂ ಸುಮ್ಮನಿದ್ದು ಈಗಲಾದರೂ ಅದನ್ನು ಪರೀಕ್ಷಿಸಬೇಕೆಂದೂ, ಪರಾಯಿದೇಶಸ್ಥರಿಗೆ ಅದನ್ನು ತಿಳಿಹಿಸುವದಕ್ಕೆ ತನಗೆ ಸಮಾಧಾನವಿಲ್ಲವೆಂದೂ ಆಸ್ಟ್ರಿಯಾದೇಶದ ಅರಸರಿಗೆ ಮತ್ತೊಂದು ಅರ್ಜಿಯನ್ನು ಬರೆದುಕೊಂಡಿದ್ದಾನೆ.—ವೃ. ಪ.

ಒಂದು ಕೋತಿಯೂ, ಒಂದು ಮಗೂ.—ಜಮೈಕಾ ದ್ವೀಪದಲ್ಲಿ ವಾಸವಾಗಿದ್ದ ಒಬ್ಬ ಇಂಗ್ಲಿಷ ಸ್ತ್ರೀಯು, ಕೆಲವು ದಿನಗಳ ಕೆಳಗೆ ತನ್ನ ೭ ತಿಂಗಳ ಕೂಸನ್ನು ಎತ್ತಿಕೊಂಡು, ಒಂದು ಹಡಗಿನಲ್ಲಿ ಇಂಗ್ಲಾಂಡ ದೇಶಕ್ಕೆ ಪ್ರಯಾಣ ಮಾಡುತ್ತಿದ್ದಳು. ಆ ಹಡಗಿನಲ್ಲಿದ್ದ ಬಲವಾದ, ದೊಡ್ಡದಾದ ಚುರುಕಾದ ಒಂದು ಕೋತಿಯು, ಈ ಮಗುವನ್ನು ನೋಡಿ, ಅಚ್ಚುಮೆಚ್ಚಾಗಿ ಪ್ರೀತಿಸುತ್ತಾ ತಾಯಿಯು ಮಗುವನ್ನು ತಟ್ಟಿ ಮಲಗಿಸಿ ಆಡಿಸುತ್ತಾ ಇದ್ದಂತೆ, ಅದು ಅದನ್ನೇ ನೋಡುತ್ತಾ ಹಗಲೂ ರಾತ್ರಿ ಅಲ್ಲೇ ಕಾದುಕೊಂಡು, ಕೆಲವು ವೇಳೆ ಶಿಶುವನ್ನು ಎತ್ತಿಕೊಂಡು ಹೋಗುವ ಪ್ರಯತ್ನಗಳನ್ನು ಮಾಡಿ ಕೊನೆಸಾಗದೆ ವ್ಯಸನಪಡುತ್ತಾ ಸಮಯವನ್ನೇ ನಿರೀಕ್ಷಿಸಿಕೊಂಡಿತ್ತು. ಹೀಗಿರುವಲ್ಲಿ ಒಂದು ದಿನ ಆ ಸ್ತ್ರೀಯು ಯಾವದೋ ಒಂದು ಸ್ಥಳದಲ್ಲಿ ಮರ್ಚಿನಿಂದ ಒಂದು ನೋಟವನ್ನು ನೋಡಲು ಹಡಗಿನ ಯಜಮಾನನ ಬಳಿಗೆ ಬೇರೊಂದು ಕೋಣೆಗೆ ಹೋದಾಗ, ಈ ಶಿಶು ಒಂದು ಸೋಫಾದಮೇಲೆ ಮಲಗಿತ್ತು. ಆಗಲಾ ಕೋತಿಯು ಸುತ್ತುಮುತ್ತೂ ನೋಡಿ, ಮಗುವನ್ನು ಎತ್ತಿಕೊಂಡು ಒಂದು ರೆಟ್ಟೆಯಿಂದ ಬಾಚಿ ತಬ್ಬಿ, ಬೇರೊಂದು ರೆಟ್ಟೆಯಿಂದ ಹಡಗಿನ ಧ್ವಜ ಸ್ತಂಭವನ್ನು ಏರಲಾರಂಭಿಸಿತು. ಆಗ ಮಗು ಗೋಳಾಡಿತು. ತಾಯಿಯು ಬಂದು ನೋಡಿ ಮಗುವಿನ ಅಪಾಯಸ್ಥಿತಿಯನ್ನು ಕಂಡು ಘಾಬರಿಯಾಗಿ ಕೂಗಿದಳು. ಹಡಗಿನ ಯಜಮಾನನೇ ಮುಂತಾದವರನೇಕರು ಬಂದರು. ಕೋತಿಯು ಮಗುವನ್ನು ಎತ್ತಿಕೊಂಡು ಒಂದು ಕಂಭದಿಂದ ಮತ್ತೊಂದು ಕಂಭಕ್ಕೆ ಹಾರುತ್ತಾ, ಆಗಾಗ್ಯೆ ಅಲ್ಲಲ್ಲಿ ಕೂತುಕೊಂಡು ಮಗುವನ್ನು ಮುದ್ದಿಸುತ್ತಾ, ತಬ್ಬುತ್ತಾ, ತೂಗುತ್ತಾ, ಯಾರಾದರು ಬೆದರಿಸಿದರೆ ಅಲ್ಲಿಂದ ಏಗರುತ್ತಾ ಈ ರೀತಿಯಾಗಿ ವಿನೋದಮಾಡುತ್ತಿತ್ತು. ಅದು ಬಹು ಎತ್ತರವಾಗಿರುವ ಧ್ವಜಸ್ತಂಭದಿಂದ ಮಗುವನ್ನು ಎಲ್ಲಿ ಕೆಳಕ್ಕೆ ಹಾಕಿಬಿಡುವದೋ ಎಂದು ಯೆಲ್ಲರೂ ಭಯಪಟ್ಟಿದ್ದರು. ತಾಯಿಯು ದುಃಖದಿಂದ ಮೂರ್ಛಿತಳಾದಳು. ಸ್ವಲ್ಪಹೊತ್ತಿನ ಮೇಲೆ ಕೋತಿಯು ಮಗುವನ್ನು ಎತ್ತಿಕೊಂಡು ಮೇಲಿನಿಂದ ನಿಧಾನವಾಗಿ ಇಳಿದುಬಂದು ಅದನ್ನು ಮುಂಚಿನಂತೆ ಸೋಫಾದಮೇಲೆ ಮಲಗಿಸಿ ಮಗ್ಗುಲಲ್ಲಿ ಕೂತುಕೊಂಡು ಮುದ್ದಿಡತೊಡಗಿತು, ಯೆಂದು ಒಂದು ಇಂಗ್ಲಿಷ ಪತ್ರಿಕೆಯು ತಿಳಿಸುತ್ತದೆ.—ವೃ. ಪ.

THE MYSORE GAZETTE.
ಮೈಸೂರು ಗೆಜೆಟು.

ಶ್ರೀಮನ್ಮಹಾರಾಜ ರಾಜಾಸಾಹೇಬ ಬಹದೂರವರ
ದಿವಾನರವರಿಂದ ಹೊರಟಿರುವಂಥಾ ಇಸ್ತಿಹಾರ್‌ನಾಮೆಗಳು

ಮೊಕ್ಕಾಂ ನಂ ೨೯೬ ತಾ॥ ೩ನೇ ಮೇ೮೮—ತುಮಕೂರುತಾಲ್ಲೂಕು ಅಮಲ್ದಾರ ಜೇಮಾ ಹನುಮಂತಯ್ಯನವರಿಗೆ ೧೮೮೮ನೇ ಇಸವಿ ಮೇ ಗುರ್ರೇತಾರೀಖ ಲಾಗಾಯತು ಅಥವಾ ಅವರು ಉಪಯೋಗಿಸಿಕೊಳ್ಳುವ ತಾರೀಖ ಮೊದಲು ಒಂದುತಿಂಗಳ ಪ್ರಿವಿಲೀಜರಜಾ ಕೊಡಲ್ಪಟ್ಟಿರುತಿದೆ. ಜೇಮಾ ಹನುಮಂತಯ್ಯನವರು ರಜಾದಮೇಲೆ ಗೈರಹಾಜರಿರುವಕಾಲದಲ್ಲಿ ಅಥವಾ ಮತ್ತೊಂದುಹುಕುಂ ಕೊಡಲ್ಪಡುವತನಕ ಶಿರಸ್ತೇದಾರ ಶೇಷಗಿರಿರಾಮಯ್ಯನವರು ತುಮಕೂರ ತಾಲ್ಲೂಕ ಅಮಲ್ದಾರರಾಗಿ ಆಕ್ಟುಮಾಡುವಂತೆ ನೇಮಕ ಮಾಡಲ್ಪಟ್ಟಿರುತ್ತಾರಲ್ಲದೆ ಅವರಿಗೆ ಮೂರನೇ ಕ್ಲಾಸ ಮ್ಯಾಜಿಸ್ಟ್ರೇಟ ಅಧಿಕಾರಗಳು ಸಹ ಕೊಡಲ್ಪಟ್ಟಿರುತಿವೆ.

ಮೊಕ್ಕಾಂ ನಂ. ೩೨೭—ಮಾಗಡಿ ತಾಲ್ಲೂಕ ಅಮಲ್ದಾರ ನಂಜುಂದಮೊದಲಿಯಾರ್ರವರಿಗೆ ೮೮ನೇಇಸವಿ ಮೇ ೫ನೇ ಮುಕ್ಕಾಂಲಾಗಾಯತು ಅಥವಾ ಅವರು ಉಪಯೋಗಿಸಿಕೊಳ್ಳುವ ತಾರೀಖ ಮೊದಲು ೨೪ ದಿನಗಳ ಪ್ರಿವಿಲೀಜರಜಾ ಕೊಡಲ್ಪಟ್ಟಿರುತಿದೆ ನಂಜುಂದಮೊದಲಿಯಾರ್ರವರು ರಜಾದಮೇಲೆ ಗೈರಹಾಜರಾಗಿರುವಕಾಲದಲ್ಲಿ ಅಥವಾ ಮತ್ತೊಂದುಹುಕುಂ ಕೊಡಲ್ಪಡುವತನಕ ಶಿರಸ್ತೇದಾರ ವೆಂಕೋಬರಾಯರವರು ಮಾಗಡಿತಾಲ್ಲೂಕ ಚಾರ್ಜನಲ್ಲಿರತಕ್ಕದ್ದು.

ಮೊಕ್ಕಾಂ ನಂ ೩೨೪—ಹೊಸಕೋಟೆ ಅಮಲ್ದಾರ ಡಿ. ವೆಂಕಟರಮಣಯ್ಯನವರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖ ಮೊದಲು ಒಂದುತಿಂಗಳ ಪ್ರಿವಿಲೀಜರಜಾ ಕೊಡಲ್ಪಟ್ಟಿರುತಿದೆ. ವೆಂಕಟರಮಣಯ್ಯನವರು ರಜಾದಮೇಲೆ ಗೈರಹಾಜರಾಗಿರತಕ್ಕ ಕಾಲದಲ್ಲಿ ಅಥವಾ ಮತ್ತೊಂದುಹುಕುಂ ಕೊಡಲ್ಪಡುವತನಕ ಶಿರಸ್ತೇದಾರ ಕೃಷ್ಣಪ್ಪನವರು ತಾಲ್ಲೂಕಚಾರ್ಜಿನೊಳಿರತಕ್ಕದ್ದು.

ಮೊಕ್ಕಾಂ ನಂ ೩೨೬—ಮೊಳಕಾಲ್ಮುರು ತಾಲ್ಲೂಕ ಅಮಲ್ದಾರ ಕಸ್ತೂರಿ ರಂಗಾಚಾರ್ಯರವರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖ ಲಾಗಾಯತು ಒಂದೂವರೆತಿಂಗಳ ಪ್ರಿವಿಲೀಜರಜಾ ಕೊಡಲ್ಪಟ್ಟಿರುತಿದೆ ಕಸ್ತೂರಿ ರಂಗಾಚಾರ್ಯರವರು ರಜಾದಮೇಲೆ ಗೈರಹಾಜರಾಗಿರುವ ಕಾಲದಲ್ಲಿ ಅಥವಾ ಮತ್ತೊಂದುಹುಕುಂ ಕೊಡಲ್ಪಡುವತನಕ ಶಿರಸ್ತೇದಾರರು ಸದರೀತಾಲ್ಲೂಕು ಚಾರ್ಜನಲ್ಲಿರತಕ್ಕದ್ದು

ನಂ. ೨೪, ತಾ॥ ೯ನೇ ಮೇ ೧೮೮೮-ಹೊಳಲುಕೆರೆ ಅಮಲ್ದಾರ ಪಿ. ಕೇಶವಯ್ಯಂಗಾರ್ರವರಿಗೆ ಅವರು ಉಪಯೋಗಿಸಿ ಕೊಳ್ಳುವ ತಾರೀಖ ಮೊದಲು, ಒಂದು ತಿಂಗಳ ಪ್ರಿವಿಲೀಜ ರಜಾ ಕೊಡಲ್ಪಟ್ಟಿರುತಿದೆ. ಹೊಸದುರ್ಗ ಡೆಪ್ಯುಟಿ ಅಮಲ್ದಾರ ವೆಂಕಟ್ರಾಯರವರು ಕೇಶವಯ್ಯಂಗಾರ್ರವರ ಗೈರಹಾಜರಿಯಲ್ಲಿ ಅಥವಾ ಮತ್ತೊಂದು ಹುಕುಂ ಕೊಡಲ್ಪಡುವತನಕ ತಮ್ಮ ಕೆಲಸದೊಡನೆ ಹೊಳಲುಕೆರೆ ತಾಲ್ಲೂಕು ಚಾರ್ಜನಲ್ಲಿರತಕ್ಕದ್ದು.

ಬೆಂಗಳೂರು ಡಿವಿಜನ ಎಗ್ಸಿಕ್ಯೂಟಿವ ಇಂಜಿನಿಯರ ಮಿ ಟಿ. ಇರ್ವಾಯವರಿಗೆ ೧೮೮೮ನೇ ಇಸವಿ ಜೂನ ಗುರ್ರೇ ತಾರೀಖ ಲಾಗಾಯತು ಅಥವಾ ಅವರ ಪ್ರಯಾಣ ತಾರೀಖ ಮೊದಲು ಮೂರುತಿಂಗಳ ಪ್ರಿವಿಲೀಜರಜಾ ಕೊಡಲ್ಪಟ್ಟಿರುತಿದೆ.

BANGALORE:—Printed and published for the Proprietor at the KARNATIC Press —1888

ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA.

ಪ್ರತಿ ಸೋಮವಾರ ಪ್ರಾತಃಕಾಲದಲ್ಲಿ ಪ್ರಕಟಿಸಲ್ಪಡುವದು.

Published every Monday Morning.

ಪ್ರಕಾಮವಿವಿಧಸ್ವವೃತ್ತ್ಯಪಗನಾರ್ಥ್ಯ ಕರ್ಣಾಟಕಪ್ರಕಾಶಿಕಾ ... ಸ್ಪರ್ಧಿ ... ಮಾನಸಂ ...

Vol. XV.] BANGALORE—MONDAY, MAY 21, 1888. [No. 20.

ಸಂಪುಟ ೧೫.] ಬೆಂಗಳೂರು:—ಸರ್ ೧೮೮೮ನೇ ಇಸವಿ ಮೇ ೨೧ನೇ ತಾರೀಖ್ ಸೋಮವಾರ. [ಸಂಚಿಕೆ ೨೦.

ಕರ್ಣಾಟಕ ಪ್ರಕಾಶಿಕಾ

ಪತ್ರಿಕೆಯ ಚಂದಾ ದರಗಳು,
೧೮೮೮ನೇ ಇಸವಿ ಜನವರಿಯಿಂದಾಯಕು
ಕಡಮೆ ಮಾಡಲ್ಪಟ್ಟಿರುತ್ತದೆ.

ಈ ಪತ್ರಿಕೆಯು ಚಂದಾದಾರರಸ್ಸಿಕ ಅನೇಕರ ಅಪೇಕ್ಷೆಯನ್ನನುಸರಿಸುವ ಉದ್ದೇಶವೊಂದನ್ನೂ, ಪರಿಮಿತವಾದ ಆದಾಯವುಳ್ಳವರಿಗೆಲ್ಲ ಈ ಪತ್ರಿಕೆಯು ಸುಲಭವಾಗಿ ಲಭಿಸುವಂತಿರಬೇಕೆಂಬ ಅಭಿಪ್ರಾಯವೊಂದನ್ನೂ ಇವರ ಚಂದಾದರವನ್ನು ಇವರಡಿಕಂಡಂತೆ ಕಡಮೆ ಮಾಡಿರುತ್ತೇವೆಂತುವದೆ:—

ಇಂಗ್ಲೀಷ್ ಮತ್ತು ಕನ್ನಡಭಾಗಗಳಿಗೆ.

	ಸ್ಥಳದವರಿಗೆ	ಪರಸ್ಥಳದವರಿಗೆ
12 ತಿಂಗಳಿಗೆ	8—0—0	9—0—0
6 ,,	4—0—0	4—8—0
3 ,,	2—8—0	2—8—0

ಇಂಗ್ಲೀಷ್ ಅಥವಾ ಕನ್ನಡಭಾಗಗಳಿಗೆ.

	ಸ್ಥಳದವರಿಗೆ	ಪರಸ್ಥಳದವರಿಗೆ
12 ತಿಂಗಳಿಗೆ	4—0—0	5—0—0
6 ,,	2—0—0	2—8—0
3 ,,	1—4—0	1—8—0

ಷರಾ—ಅಂಚೆ ಮುಸ್ತೂಲಿಗಳು, ಜೋಬಿಗೆ ಕಾಸ್ತು ... ನ್ಯೂಸ್ ಮಾಸ್ಟರುಗಳು, ಪ್ಯಾನ್ ... ಏಜೆಂಟರು, ಏಪ್ಯ ... ಇವರೆಲ್ಲ ಈ ಪತ್ರಿಕೆಯ ... ಚಂದಾದರವನ್ನು ಕೊಡಲ್ಪಡುವದು ... ಗುರಿತ ಬಾಕಿದರವಾಸ್ತು ... ದಲಾರದು. ಚಂದಾದಾರರು ಇಂಗ್ಲಿಷ್ ಭಾಗವನ್ನಾಗಲಿ ಕನ್ನಡಭಾಗವನ್ನಾಗಲಿ ಅಥವಾ ಎರಡನ್ನಾಗಲಿ ತರಿಸಿಕೊಳ್ಳಬಹುದು. ಚಂದಾಹಣವನ್ನು ಮುಂಗಡವಾಗಿ ಕೊಡತಕ್ಕದ್ದು. ಮೂರುತಿಂಗಳಿಗಿಂತ ಕಡಮೆ ... ಚಂದಾ ನೋಟಗಳನ್ನು ಅಂಗೀಕರಿಸಲ್ಪಡಲಾರದು.

ನೋಟುಗಳು ರವಾನಿಸತಕ್ಕವರು ... ವ ಅರ್ಧನೋಟು ... ಕೊಡುವ ಬಾಕಿ ಅರ್ಧ ನೋಟನ್ನು ರವಾನಿಸತಕ್ಕದ್ದು. ಲೇಬಲ್‌ಗಳು ಕಳುಹಿಸತಕ್ಕವರು ... ಒಂದಕ್ಕೆ ಒಂದು ... ಕಳುಹಿಸತಕ್ಕದ್ದು. ಅರ್ಧಾಣೆಗಿಂತ ಜಾಸ್ತಿ ... ಬಲ್‌ಗಳನ್ನು ಕಳುಹಿಸಕೂಡದು ... ಕಳುಹಿಸಲ್ಪಡುವ ಮೊಬಲಗಿನಲ್ಲಿ ... ವಿತ್ತಕ್ಕೆ ಲೆಕ್ಕಕ್ಕೆ ದಾಖಲು ...

ಪ್ರಕಟನೆಯ ರಿವಾಜ್.

ಮೊದಲನೆಯದಾ ಪಂಕ್ತಿ ಒಂದಕ್ಕೆ ೦—೨—೦
ಎರಡನೆಯದಾ ಪಂಕ್ತಿ ಒಂದಕ್ಕೆ ೦—೧—೦

ಷರಾ—ಎರಡಾವರ್ತಿಗಿಂತ ಜಾಸ್ತಿಯಾಗಿ ಎಷ್ಟುತರಸ ... ಫಾಯಿಸ್ ... ಪಂಕ್ತಿ ಒಂದಕ್ಕೆ ೧ ... ಲೆಕ್ಕ ಮಾಡಲ್ಪಡುವದು. ಈ ಪತ್ರಿಕೆಯಲ್ಲಿ ... ಪ್ರಕಟನೆಗಳು ಕಳುಹಿಸುವವರು ಅವು ಎಷ್ಟಾವರ್ತಿ ... ಮಾಡಲ್ಪಡಬೇಕೋ ಆ ... ಅನ್ನು ಸ್ಪಷ್ಟವಾಗಿ ತಿಳಿಸತಕ್ಕದ್ದು. ... ನಿಲ್ಲಿಸುವಂತೆ ಬರೆಯುವತನಕ ... ಪ್ರಕಟಿಸಲ್ಪಟ್ಟದ್ದಾಗ್ಯೂ ... ದರದಂತೆ ... ಪ್ರಕಟನೆಯ ಬಗ್ಗೆ ಕಳುಹಿಸಲ್ಪಡತಕ್ಕ ಪ್ರಕಟನೆಗಳನ್ನು ... ಮಧ್ಯಾಹ್ನ ೨ ಘಂಟೆಯೊಳಗಾಗಿ ಕಳುಹಿಸಬೇಕು. ಪ್ರಕಟನೆಯ ಬಗ್ಗೆ ಈ ಪತ್ರಿಕೆಗೆ ಕಳುಹಿಸಲ್ಪಡತಕ್ಕ ಕಾಗದಗಳಲ್ಲಿ ತಿಳಿಸಲ್ಪಡುವ ಅಭಿಪ್ರಾಯಗಳಿಗೆ ನಾವು ಜವಾಬ್ದಾರರಾಗಲಾರೆವು. ಕ್ರಮವಾಗಿ ... ಯಾವ ಕಾಗದವನ್ನು ಪ್ರಕಟಿಸಲಾರೆವು. ... ಕಾಗದಗಳು ... ಕಳುಹಿಸಲ್ಪಡಲಾರವು.

"IT RECOMENDS ITSELF"

ALL WHO SUFFER FIND SURE RELIEF.

LITTLE'S

ORIENTAL BALM

THE MOST EFFECTUAL MODERN REMEDY FOR PAIN.

ಲಿಟಲ್ ... "ಓರಿಯಂಟಲ್ ಬಾಮ್" ಎಂಬ ... ಅನುಕೂಲ ತೈಲವು ... ಮತ್ತು ಸಫಲವಾದ ನವೀನ ಪ್ರತಿಕ್ರಿಯಾರೂಪವಾದ ಔಷಧವು. ಇದರಿಂದ ... ವಾತಸಂಬಂಧಗಳಾದ ... ನಿವೃತ್ತಿಯಾಗುವವು. ಮುಖ್ಯವಾಗಿ ... ವಾತರೋಗಗಳು, ಕಾಲು, ... ಶೀಲಾಮಯು, ಕಟಿವಾಯು, ಉಳುಕು ನೋವು, ತಲೆನೋವು, ... ಮುಂತಾದ ರೋಗಗಳಲ್ಲೆಲ್ಲ ನಿಸ್ಸಂದೇಹವಾಗಿ ಬಹಳ ಪ್ರಯೋಜನವನ್ನುಂಟುಮಾಡತಕ್ಕದ್ದು. ಈ ತೈಲವನ್ನು ... ತೈಲವಾಗಿರುತ್ತದೆ. ... ಮತ್ತು ... ನಿವೃತ್ತಿಯಾಗುವದು. ಗಂಟ್ಲಲ್ಲಿ ... ಉರಿ ... ಈ ತೈಲವು ... ಮತ್ತು ... ಗುಣವನ್ನುಂಟುಮಾಡುವದು. ಅದ್ಭುತವಾದ ಈ ಔಷಧವನ್ನು ... ಅದರ ಪ್ರಯೋಜನವು ಸ್ವತಃ ... ವ್ಯಕ್ತವಾಗುವದು. ಈ ತೈಲವು ... ಸಂಚರಿಸುವಂಥಾ ಪ್ರಯಾಣಸ್ಥರು, ... ಮುಂತಾದವರಿಗೆಲ್ಲ ಅಮೂಲ್ಯವಾದದ್ದು.

ಪರಿಶೀಲಕರ ಅಭಿಪ್ರಾಯವು.

ಐರ್ಲ್ಯಾಂಡ್ ದೇಶದ ಫಾರ್ಮಸ್ಯುಟಿಕಲ್ ಸೊಸೈಟಿಯ ... ಕೆಮಿಕಲ್ ಸೊಸೈಟಿ ... "ಮಿನರಲ್ ವಾಟರ್ಸ್ ಆಫ್ ... ಅನೇಕ ... ಡಾಕ್ಟರ್ C. R. TICHBORNE, L. L. D., F. C. S., M. P. S. A.) ... ಅಭಿಪ್ರಾಯ ... ಲಿಟಲ್‌ರವರ ಓರಿಯಂಟಲ್ ... ತೈಲ ... ಇದು ... ನಿವಾರಕ ... ಈ ಮಿಶ್ರಣವು ... ಅದರ ಪ್ರಯೋಜನವು ಸ್ಪಷ್ಟವಾಗುವದು. ಈ ತೈಲವು ಸಂಪೂರ್ಣ ... ತಯಾರಾಗಿರುತ್ತದೆ.

ಇದರ ಕ್ರಯ—ಸೀಸೆ ಒಂದಕ್ಕೆ ೧ ರೂಪಾಯಿ.

ಇದು ... ಮದರಾಸ್ ... ನಂಬರ್ ಮನೆಯೊಳಗಿನ ... ಬೆಂಗಳೂರಿನ ... ಕಂಪೆನಿ ... ಕಂಪೆನಿಯವರಲ್ಲಿಯೂ ದೊರೆಯುವದು.

AGENCS.— } Messrs, J. WEST, Chemist, &c., Bangalore.
CAPTAIN & Co. Chemists, Bangalore.
RIGGS & Co., Chemists, Bangalore, and of
MAHOMED YOUSOFF AND SONS, The Cash Bazar, Bangalore.
A. C. BERRYMAN & Co.,
20 Sawcodoss Street Madras.

NOTICE.

VAIDYASARA SANGRAHA

A TREATISE ON THE PRINCIPLES OF

HINDU MEDICINE.

Price including Postage Rs 5 6 0

ವೈದ್ಯಸಾರ ಸಂಗ್ರಹ.

ಈ ಗ್ರಂಥಾಪೇಕ್ಷೆಯುಳ್ಳವರು ಮೊಬಲಗಿನೊಡನೆ ಈ ಕೆಳಗೆ ರುಜುಮಾಡಿರತಕ್ಕವರ ಹೆಸರಿಗೆ ಬರೆದುಕೊಂಡರೆ ಪುಸ್ತಕ ಕೂಡಲೇ ಕಳುಹಿಸಲ್ಪಡುವದು. ಮೊಬಲಗು ಇಲ್ಲದ ದರಖಾಸ್ತುಗಳಿಗೆ ಸುತರಾಂ ನಿಗೆಕೊಡಲ್ಪಡಲಾರದು.

ಇದರ ಕ್ರಯ ... ...ರೂ|| ೫—೦—೦
ಪ್ಯಾಕಿಂಗ್ ಮತ್ತು ಅಂಚೆಖರ್ಚು, ೦—೬—೦

ಟಿ. ಬಿ. ವೆಂಕಟಾಚಾರ್,
ಆಸ್ಪತ್ರಿರೋಡ ಬೆಂಗಳೂರು.

ವಿಶೇಷ ವರ್ತಮಾನ



ಪುನೆ ಚಿತ್ರಶಾಲೆಯಲ್ಲಿ ... ಲಾಮಂತ್ರದಲ್ಲಿ ... ಮುಂತಾದ ... ಚಿತ್ರಗಳ ... ಕ್ರಯ ಬಹಳ ಅಲ್ಪವಾಗಿದೆ ... ಕಳುಹಿಸಲ್ಪಡುವದು.

ಪುನೆ ಚಿತ್ರಶಾಲೆಯ ಮ್ಯಾನೇಜರ್.

Bangalore City Municipality.

ಬೆಂಗಳೂರುಸಿಟಿ ಮ್ಯುನಿಸಿಪಾಲಿಟಿ.

ಸರ್ ೧೮೮೮ನೇ ಇಸವಿ ಮೇ ೨೩ನೇ ತಾರೀಖ್ ಬುಧವಾರ ಪ್ರಾತಃಕಾಲ ೭½ ಘಂಟೆಗೆ ಸಿಟಿ ಮ್ಯುನಿಸಿಪಲ್ ಕಮ್ಮಿಷನರ್‌ಗಳು ತಮ್ಮ ಆಫೀಸಿನಲ್ಲಿ ಸಭೆ ಸೇರುವಾಗ ಅವರ ಆಲೋಚನೆಗೆ ತರಲ್ಪಡಬೇಕಾದ ವಿಷಯಗಳ ಯಾದಾಸ್ತು.

೧. ೧೮೮೮ನೇ ಇಸವಿ ಏಪ್ರಿಲ್ ತಿಂಗಳಬಾಬು ನಗದು ಜಮಾಖರ್ಚು ಲೆಕ್ಕ ಮತ್ತು ಪಾರಣ ಲೆಕ್ಕಗಳು.

೨. ಕೊಂಬರ ಶಾಲೆಯಲ್ಲಿರುವ ಪ್ರೈವೇಟ್ ಸ್ಕೂಲ್ ಮ್ಯಾಸ್ಟರ್ ಶೇಷಗಿರಿರಾವ್ ಎಂಬಾತನು ಗ್ರಾಂಟಿನ ಬಗ್ಗೆ ಬರೆದುಕೊಂಡಿದ್ದ ಅರ್ಜಿಯನ್ನೂ, ಅದರಮೇಲೆ ಡೆಪ್ಯೂಟೀ ಇನ್ಸ್‌ಪೆಕ್ಟರ್ ಆಫ್ ಸ್ಕೂಲ್ಸ್‌ರವರು ಕಳುಹಿಸಿ ಎಜ್ಯುಕೇಷನ್ ಸೆಕ್ರೆಟರಿಯವರು ಬರೆದ ೧೮೮೮ನೇ ಇಸವಿ ಏಪ್ರಿಲ್ ೨೫ನೇ ಮಾರ್ಕೆಂ ಉಳ್ಳ ೩೫೭ನೇ ನಂಬರ್ ಡಾಕೆಟ್.

೩. ತಿಗಳರಪೇಟೆಗೆ ದಕ್ಷಿಣದಿಕ್ಕಿನಲ್ಲಿರತಕ್ಕ ಕೆಲವು ಬಾಗಾಯತಿ ಜಮೀನುಗಳು ಕಟ್ಟಡಗಳಿಗೆ ಬೇಕಾಗಿರುವಂತೆ ಗೊಲ್ಲರಪೇಟೆ ಮತ್ತು ಹೊಸಪೇಟೆ ನಿವಾಸಿಗಳು ಬರೆದುಕೊಂಡ ಅರ್ಜಿ.

೪. ಬಾಜೀಮಿಯಾ ಸಾಹೇಬ್ ಎಂಬಾತನು ಕೆಂಗನಪಲದ ಕಂಟ್ರಾಕ್ಟನ್ನು ಇನ್ನೂ ೩ ವರುಷಗಳ ವರಿವಿಗೆ ತನಗೆ ಕೊಡಬೇಕೆಂಬದಾಗಿ ಅಪೇಕ್ಷಿಸಿ ಬರೆದುಕೊಂಡ ೧೮೮೮ನೇ ಇಸವಿ ಮೇ ೧೧ನೇ ತಾರೀಖುಳ್ಳ ಅರ್ಜಿ.

೫. ಅಕ್ಟ್ರಾಯಿ ಇಲಾಖಾ ಡೆಪ್ಯೂಟೀ ಇನ್ಸ್‌ಪೆಕ್ಟರ್ ಸುಬ್ಬರಾವ್ ಎಂಬಾತನು ತನಗೆ ಇಜಾಫೇಯಾಗಬೇಕೆಂಬದಾಗಿ ಬರೆದುಕೊಂಡ ಅರ್ಜೀ ಮತ್ತು ಅದರಮೇಲೆ ಮ|| ಛೇರ್ಮನ್‌ರವರ ರಿಪೋರ್ಟ್ ಸಹ.

೬. ಬೆಂಗಳೂರು ಪಟ್ಟಣಕ್ಕೆ ಮ್ಯುನಿಸಿಪಲ್ ಕಮ್ಮಿಷನರ್‌ಗಳನ್ನು ಚುನಾಯಿಸತಕ್ಕ ವಿಷಯದಲ್ಲಿ ಸೂಚಿಸಲ್ಪಟ್ಟಿರುವ ನಿಬಂಧನೆಗಳ ಮೇಲೆ ಸಬ್ ಕಮಿಟಿಯವರು ಮಾಡಿದ ರಿಪೋರ್ಟ್.

೭. ಕೆರೋಸಿನ್ ಎಣ್ಣೆಯ ಖರೀದಿಯು ಈಚೆಗೆ ಜಾಸ್ತಿಯಾಗಿರುವದರಿಂದ ಅದು ಲಾಂದ್ರ್ಯಲೋಟಿಗೆ ದರವನ್ನು ಜಾಸ್ತೀ ಮಾಡಬೇಕೆಂಬದಾಗಿ ಪ್ರಾರ್ಥಿಸಿ ಬರೆದುಕೊಂಡ ಲೈಟಿಂಗ್ ಕಂಟ್ರಾಕ್ಟರ ಅರ್ಜಿ.

೮. ೬ನೇ ಡಿವಿಜನ್‌ಗೆ ಸೇರಿದ ಕಾಶೀ ವಿಶ್ವೇಶ್ವರ ದೇವಸ್ಥಾನದ ಬೀದಿಯನ್ನು ಬದಲಾಯಿಸುವ ವಿಷಯ ಮತ್ತು ಅದರ ಲಾಗವಡು ಪಟ್ಟಿ.

೯. ಗುಂಡೋಪಂತರ ಬೀದಿಯಲ್ಲಿ ಇನ್ನೊಂದು ಜಾಸ್ತೀ ಕಾಲುವೆ ಭಾವಿಯುಂ ಕಟ್ಟಿಸತಕ್ಕ ವಿಷಯ ಮತ್ತು ಅದರ ಲಾಗವಡು ಪಟ್ಟಿ.

೧೦. ಹಳೇ ಖಸಾಯಿ ಅಂಗಡಿಗಳ ಬೀದಿಯಲ್ಲಿರುವ ಪ್ರದೇಶವು ಪಟ್ಟಣಕ್ಕೆ ಮಧ್ಯಭಾಗದಲ್ಲಿರುವದರಿಂದ, ಅದನ್ನು ಬಾರೂದು ತಯಾರೀ ಬಗ್ಗೆ ದಾಹಕಶಕ್ತಿಯುಳ್ಳ ಪದಾರ್ಥಗಳನ್ನು ಶೇಖರಿಸುವ ಬಗ್ಗೆ ಉಪಯೋಗಿಸದಂತೆ ನಿರೋಧಿಸಬೇಕೆಂಬದು.

೧೧. ಗವರ್ನಮೆಂಟ್ ಕಮಿಟಿಯವರ ೧೮೮೮ನೇ ಇಸವಿ ಏಪ್ರಿಲ್ ೨೮ನೇ ಮಾರ್ಕೆಂ ಉಳ್ಳ ಪ್ರೊಸೀಡಿಂಗ್ಸಿನ ಕಾಪಿ.

A. SRINIVASA CHARLU, R. B.,
Vice-President,
City Municipal Commission.

ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA.

MONDAY, MAY 21, 1888.

೧೮೮೮ನೇ ಮೇ ೨೧ನೇ ತಾ|| ಸೋಮವಾರ

MISER LEADING THE MISER.

ಸ್ವಭಾವತಃ ಕೃಪಣನಾದ ಧನವಂತನೆನಬಳ ಪಿಸುಣನೊಬ್ಬನು ಸೇರಿದರೆ ಆಧನಿಕನಲ್ಲಿರತಕ್ಕ ಔದಾರ್ಯವು ಸಹ ನಾಶಪಡಿಸಿ ಆತನಬಾಳ್ವೆಯಂ ಹೋಲಿಸುವಮಾಡುವನೆಂಬದರೊಳಗಿಷ್ಟುಮಾತ್ರವೂ ಸಂಶಯವಿಲ್ಲವು. ಇದು ಅನುಭೂತವಾದ ಪ್ರಸಿದ್ಧವಿಷಯವಾಗಿರುತಿದೆ. ಉಪವಸ್ಸರಾದವರ ದೆಸೆಯಿಂದ ವಿಶೇಷಫಲವು ಪಡೆಯಬಹುದೆಂಬ ಭ್ರಾಂತಿಯೊಡನೆ ಅವರ ಶೀಲಸ್ವಭಾವಗಳನ್ನೂ, ಅವರಬಳ ಪ್ರಬಲರಾಗಿರತಕ್ಕವರ ಸ್ವಭಾವಗಳನ್ನೂ ಪರ್ಯಾಲೋಚಿಸದೆ ಅವರೊಳಲ್ಲದಿರುವ ವಿವೇಕೌದಾರ್ಯಾದಿ ಗುಣಗಳನ್ನಾರೋಪಿಸಿ ಅವರ ಮನೆ ಬಾಗಿಲಿನಲ್ಲಿ ಸೂರ್ಯೋದಯವಮೊದಲು ಅಸ್ತಮಾನದವರೆಗೆಕಾದು ಅಭೀಷ್ಟವನ್ನೆದುರು ನೋಡುತ ಕಡೆಗೆ ಅದು ಲಭಿಸದೆಹೋದರೆ ಭಗ್ನೋತ್ಸಾಹಿಗಳಾಗಿ ವಾಪಸ್ ಹೋಗುವವರನೇಕರಿರುತ್ತಾರೆ. ಪ್ರಾಯಶಃ ಐಶ್ವರ್ಯ, ದಾತೃತ್ವ; ಸೌಂದರ್ಯ, ಪಾತಿವ್ರತ್ಯ; ಅಧಿಕಾರ, ಔಚಿತ್ಯ; ಪ್ರಾಭವ, ಸರ್ವಸಮತೆ; ಏವಮಾದಿ ಗುಣಗಳು ಯಾವಾಗಲು ಜ್ಯೋತಿಸ್ತಿಮಿರನ್ಯಾಯದಂತೆ ಪರಸ್ಪರ ವಿರುದ್ಧಗಳಾದದರಿಂದ ಇವು ಏಕತ್ರ ಸೇರಿರುವದು ಲೋಕದಲ್ಲಿ ಬಹಳ ಅಪೂರ್ವವೆಂದೆಣಿಸಬೇಕು. ಕದಾಚಿತ್ ಯಾರಲ್ಲಾದರೂ ಮೇಲ್ಕಂಡ ಯೆರಡುವಿಧ ಗುಣಗಳೂ ನೆರೆಗೊಂಡಿರುವಪಕ್ಷಕ್ಕೆ ಅಂತವರೇ ವಿಶೇಷ ಕೀರ್ತಿಪ್ರತಿಷ್ಠೆಗಳಂಪಡೆದು ಸರ್ವಕಾಲ ದೇಶಾವಸ್ಥೆಯಲ್ಲಿಯೂ ಯೆಲ್ಲರಿಂದ ಕೊಂಡಾಡಲ್ಪಡುತಲಿರುವರು. ಇಂತವರು ಅತಿವಿರಳರಾಗಿರುವದರಿಂದ ಅವರ ವಿಚಾರವಿಲ್ಲಿ ನಮಗೆ ಅನಾವಶ್ಯಕವಾಗಿರುತಿದೆ. ಪರಂತು ಯಾರ ಸಂಖ್ಯೆಯು ಈ ಪ್ರಪಂಚದಲ್ಲಿ ಅತ್ಯಧಿಕವಾಗಿರುವದೋ ಅಂತವರ ಗುಣವಿಚಾರ ಮಾಡಬೇಕಾದದ್ದು ಈ ಸಂದರ್ಭದಲ್ಲಿ ಆವಶ್ಯಕವಾಗಿರುತಿದೆ. ಧನಿಕರೊಳು ಕೆಲವರು ತಾವು ಗಳಿಸಿರುವ ಧನವನ್ನು ಸ್ವ ವಿಷಯದೊಳಾದರೂ ಸ್ವಲ್ಪಮಟ್ಟಿಗೆ ವ್ಯಯಮಾಡಬೇಕೆಂದು ಪ್ರಯತ್ನಪಟ್ಟರೆ, ಅದಂ ನಿರ್ಬಂಧಿಸಿ ವ್ಯಯವಂ ಮಿತಪಡಿಸುವಂತೆ ನುಡಿಯುವದರ ಮೂಲಕ ಸದರೀ ಧನಿಕರ ಪ್ರೀತಿಯಂ ಸಂಪಾದಿಸಬಹುದೆಂಬ ಕೋರಿಕೆಯೊಡನೆ ಅವರಲ್ಲಿ ಮಾವನೆಂತಲೂ, ಮೈದುನನೆಂತಲೂ ಭಾವನೆಂತಲೂ, ಅಳಿಯನೆಂತಲೂ, ಒಬ್ಬೊಬ್ಬರು ಸೇರಿಕೊಂಡು ಅವರ ವರ್ತನಗಳಗೆಲ್ಲ ವ್ಯಾಘಾತವನ್ನುಂಟು ಮಾಡುತಲಿರುವರು. ಆದರೆ ಇಂತವರಲ್ಲಿ ಸ್ತ್ರೀಮೂಲಕವಾದ ಸಂಬಂಧಿಗಳಗೆ ಅವಕಾಶದೊರೆಯುವಂತೆ ತಮ್ಮ ದೇಹಸಂಬಂಧಿಗಳಗೆ ಸಾಧಾರಣವಾಗಿ ದೊರೆಯುವದಿಲ್ಲವು. ಸ್ವಭಾವತಃ ಉದಾರಿಯಾದವನು ತಾನು ಮಾಡುವ ವ್ಯಯಕ್ಕೆ ಅನ್ಯನ ಸಲಹೆಯಂ ಕೇಳಲ್ಯಾಕೆಂದು ಯಾರಾದರು ಕೇಳಬಹುದು. ಔದಾರ್ಯವೆಂಬುದು ನೈಜವಾಗಿದ್ದ ಪಕ್ಷಕ್ಕೆ ಅಂತವರು ಅನ್ಯರಮಾತುಗಳಗೆ ಯಾವಾಗಲೂ ಕಿವಿಗೊಡಲಾರರು. ಹಾಗಿಲ್ಲದೆ ಸ್ವಭಾವತಃ ಕಾರ್ಪಣ್ಯದಿಂ ದೊಡಗೂಡ್ಡಿ ಕೇವಲ ಪರ ಪ್ರಶಂಸೆಗಾಗಿ ಅರ್ಧ ಅಸಮಾಧಾನದೊಡನೆ ಧನ ವ್ಯಯ ಮಾಡಲಿಕ್ಕೆ ಪ್ರಯತ್ನಪಡತಕ್ಕವರಿಗೆ ಸಂಭವಿಸುವದೆಲ್ಲಾ ಆತಂಕರೂಪವಾಗಿ ಪರಿಣಮಿಸುವದು. ಆಗ ಅಂತಾ ನಿರ್ಬಂಧಗಳಂ ತ್ರೆಕೆಯಲಿಕ್ಕೆ ಇಷ್ಟವಿಲ್ಲದೆಯೂ, ಪೂರ್ವದ ತಮ್ಮ ಸಂಕಲ್ಪದಂತೆ ನಡಿಸಲಿಕ್ಕೆ ಶಕ್ತರಾಗದೆಯೂ, ಅಪಶಕುನವುಳ್ಳ ಕಾರ್ಯವಂ ಕೈಗೊಳ್ಳುವದನುಚಿತವೆಂದು ನುಡಿಯತಕ್ಕ ಲುಬ್ಧಮಿತ್ರರಮಾತನ್ನು ತಿರಸ್ಕರಿಸಲಾರದೆಯೂ ವಿಶೇಷಸಂಕಟಕ್ಕೆ ಒಳಗಾಗುವರು. ಇವರಲ್ಲಿ ಸೇರುವಂತಾ ಲುಬ್ಧರೆಂತವರೆಂದರೆ :—ಇತರಾಪೇಕ್ಷಯಾ ತಮ್ಮಲ್ಲಿ ವಿಶೇಷ ಧನವಿದ್ದಾಗ್ಯೂ ಅದಂ ವ್ಯಯಮಾಡಲಿಕ್ಕೆ ಇಷ್ಟವಿಲ್ಲದೆ, ಯಾರಾದರು ವ್ಯಯ ಮಾಡಿದರೆ ಅಂತವರ ಮನಸ್ಸನ್ನು ತಮ್ಮ ದುರ್ಬೋಧನೆಗಳಿಂದ ಕೆಡಿಸಿ, ಪ್ರಪಂಚದಲ್ಲಿ ಯಾವ ಪ್ರಯೋಜನಕ್ಕಾಗಿ ಧನವು ಸಂಪಾದಿಸಲ್ಪಡುತಿದೆಯೋ, ಅದರಿಂದ ಯಾವಬಗೆ ಸುಖಸಂತೋಷಗಳನ್ನನುಭವಿಸ ಬಹುದೋ ಅವುಗಳನ್ನೆಲ್ಲ ಸರ್ವಾಂಗವಾಗಿ ತ್ಯಜಿಸಿ, ಅನ್ಯರನ್ನು ಅಪೇಕ್ಷಿಸದಂತೆ ಮಾಡಿ ಕೇವಲ ಬಡವರಂತೆ ನಾನಾವಿಧ ಕ್ಲೇಶಗಳನ್ನನುಭವಿಸುತ್ತ, ನೋಡುವವರೂ ಕೇಳತಕ್ಕವರು ಸಹ ಹೇಳನ ಮಾಡುವಂತಾ ವೇಷಗಳಂ ಧರಿಸಿಕೊಂಡು ಅನ್ಯರನ್ನು ಆ ಸ್ಥಿತಿಗೆ ತರುವದಕ್ಕೆ ಸಾಧ್ಯವಾದಷ್ಟುಮಟ್ಟಿಗೆ ಪ್ರಯತ್ನಪಡುತಲಿರುವರು. ಇವರು ತಮ್ಮನ್ನು ಅನ್ಯರು ಬಡವರೆಂದೆಣಿಸ ಬೇಕೆಂಬದಾಗಿ ಅಪೇಕ್ಷಿಸುವರು ಹಾಗಿಲ್ಲವೆ ತಮ್ಮನ್ನ್ಯಾರಾದರು ಭಾಗ್ಯವಂತರೆಂದೆಣಿಸಿದರೆ ಅವರು ತಮಗೆ ಯಾವ ಸಂಕಟವನ್ನಾದರುಂಟುಮಾಡಿ ಧನವ್ಯಯವಾಗುವ ಮಾರ್ಗವಂ ಹುಡುಕುವರೆಂಬದಾಗಿ ಭಯಪಡುವರು. ಇಂತಾ ತಾತ್ಪರ್ಯಗಳೊಡನೆ ಎಂತಾ ಮಾನಹಾನಿಗಳಪ್ಪಾದರೂ ಕೇವಲ ಸಂತೋಷದೊಡನೆ ಸಹಿಸುತಲಿರುವರು. ಇವರು ತಾವು ಅನ್ಯರೊಡನೆ ಮಾತನಾಡಿದರೆ ತಮ್ಮ ಹಣಕ್ಕೇನು ಚ್ಯುತಿಯುಂಟಾಗುವದೋ ಎಂದು ಶಂಕಿಸುತ ಅದನ್ನೇ ಸರ್ವಾಂಗವಾಗಿ ಬಿಡುವರು. ಮತ್ತು ಬಂಧುಜನ ಲಾಳನದಲ್ಲಿಯೂ ಅನ್ಯರ ಮನೆಗೆ ತಾವು ಹೋದರೆ ಅವರನ್ನು ತಮ್ಮ ಮನೆಗೆ ಕರೆಯಬೇಕಾಗುವದೆಂದು ಆಲೋಚಿಸಿ ಶುಭಾಶುಭಗಳಲ್ಲಿ ಸಹ ಅದರ ತಂಟೆಯನ್ನೇ ತಪ್ಪಿಸುವರು. ಇವರಿಗೆ ಸ್ನೇಹ ಬಾಂಧವ್ಯಗಳೇ ಇಲ್ಲವು. ಕೆಲವರಂ ಕೊಂಡಾಡಿದಾಗ್ಯೂ ತಮ್ಮಂತೆ ಲೋಭಿಗಳಾಗಿಯೂ, ಒಬ್ಬರ ದೆಸೆಯಿಂದ ಯಾವಪ್ರಯೋಜನವನ್ನಪೇಕ್ಷಿಸದವರಾಗಿಯೂ ಪರೋಪಕಾರ ವೆಂಬದಂ ಸ್ವಪ್ನದಲ್ಲಿಯೂ ಸ್ಮರಿಸದವರಾಗಿಯೂ, ಇರುವವರಂ ವಿಶೇಷವಾಗಿ ಗೌರವಿಸಿ ಅಂತವರನ್ನೇ ಪೂಜ್ಯರೆಂದೆಣಿಸುವರಲ್ಲದೆ ಇತರರಂ ನಿಂದಿಸುತಲಿರುವರು. ಹಾಗಿಲ್ಲದಿದ್ದರೆ ತಮಗೆ ಮಾತ್ರ ಒಂದು ಪ್ರಯೋಜನವನ್ನುಂಟುಮಾಡಿ, ಅದಕ್ಕೆ ತಕ್ಕ ಪ್ರತಿ ಫಲವಂ ನಿರೀಕ್ಷಿಸದವರನ್ನು ಪರದೇವತೆಗಳಂತೆ ಭಾವಿಸುವರು. ಇವರು ಧನವ್ಯಯವಂ ಮಾಡಬೇಕಾದ ಸಂದರ್ಭಗಳಲ್ಲಿ ಮಹಾವಿರಕ್ತಿಯಂ ನಟಿಸುತ ವೇದಾಂತ ವಾಕ್ಯಗಳಂ ನುಡಿಯುತಲಿರುವರು. ಮತ್ತು ಇಂತವರಿಗೆ ಅತಿಥಿಗಳು ಮೃತ್ಯುಗಳು, ದೀನರಾದಯಾಚಕರು ಶತ್ರುಸಮರು, ಉಂಡುಉಡಲಪೇಕ್ಷಿಸುವಭಾರ್ಯೆಯು ಹೆಬ್ಬುಲಿ ಸಮಾನಳು, ಮಕ್ಕಳು ಅನಿಷ್ಟಗಳು. ವಿಶೇಷ ತಿಳಸಲ್ಯಾಕೆ, ಈಲೋಕದಲ್ಲಿ ದ್ರವ್ಯ ವ್ಯಯವಾಗತಕ್ಕ ಎಲ್ಲಾ ವಿಷಯಗಳೂ ಅವರಿಗೆ ವಿಷಪ್ರಾಯಗಳಾಗಿರುವವು. ಇವರ ಅಭಿಪ್ರಾಯಗಳಂ ಕುರಿತು ಚಿಂತಿಸಿದರೆ—ಲೋಕದಲ್ಲಿ ಮಾನವನಾಗಿ ಜನಿಸಿದ್ದಕ್ಕೆ ದ್ರವ್ಯಾರ್ಜನೆ ಮಾಡುವದಾದರೂ ಹಿರಿಯರಿಂದ ಸಂಪಾದಿಸಲ್ಪಟ್ಟದು ರಕ್ಷಿಸುವದಾದರೂ ಪ್ರಯೋಜನವಲ್ಲದೆ ಬೇರೆಯಾವದೂ ಅಲ್ಲವೆಂದೆಣಿಸುವರು. ಇದಲ್ಲದೆ ಇವರು ಧನಾಭಿವೃದ್ಧಿಯಲ್ಲಿ ವಿಶೇಷಾಪೇಕ್ಷೆಗೊಂಡು ಯೋಗ್ಯಗಳಾದಉಪಾಯಗಳನ್ನೆಲ್ಲ ಬಿಟ್ಟು ಕುತ್ಸಿತಗಳಾಗಿಯೂ, ಅಪಹಾಸ್ಯಕರಗಳಾಗಿಯೂ ಪಾಪಹೇತುಗಳಾಗಿಯೂ, ಇರುವನಾನಾವಿಧ ಉಪಾಯಗಳನ್ನು ಲಜ್ಜೆಯಿಲ್ಲದೆ ಮಾಡುತಲಿರುವರು. ಇದಕ್ಕಾಗಿಯೇ ಪೂರ್ವ ಕವಿಗಳು (ಲೋಭಸ್ಸರ್ವಗುಣಾಪಹಂತಿ) ಅಂದರೆ ಲೋಭವೆಂಬದು ಮನುಷ್ಯನ ಸರ್ವ ಗುಣಗಳನ್ನೂ ಹರಿಸುವದೆಂಬದಾಗಿ ನುಡಿದಿರುತ್ತಾರೆ. ಆದದರಿಂದ ಶತ್ರುವನ್ನು ಮನೆಯಲ್ಲಿ ಸೇರಿಸಿಕೊಂಡವನು ಹ್ಯಾಗೆ ಸಂಕಟಗಳಗೂ ದುಃಖಗಳಗೂ ಗುರಿಯಾಗುವನೋ ಅದೇರೀತಿ ಸದರೀ ದುರ್ಗುಣಕ್ಕೆ ತಮ್ಮೊಳು ಅವಕಾಶವಂ ಕೊಟ್ಟಾಗ್ಯೂ ಅಥವಾಅದಕ್ಕೆ ಆಶ್ರಯಭೂತರಾದ ಲುಬ್ಧರಂ ತಮ್ಮ ಸಮೀಪದಲ್ಲಿ ಸೇರಿಸಿದಾಗ್ಯೂ ತಮ್ಮ ಮಹ ಗೌರವ ಪ್ರತಿಷ್ಠೆಗಳನ್ನೆಲ್ಲ ಕಳೆದುಕೊಂಡು ನಿರಂತರ ದುಃಖ ಭಾಜನರಾಗುವರು. ಮುಖ್ಯವಾಗಿ ಮನುಷ್ಯನ ನೈಸರ್ಗಿಕ ದೋಷಗಳನ್ನು ಯಾವರೀತಿಯಿಂದಲಾದರೂ ಬದಲಾಯಿಸಲಹುದು. ಪರಂತು ನಿರಂಥಗಳಾದ ಸಾಂಸರ್ಗಿಕ ದೋಷಗಳನ್ನು ಹೋಗಲಾಡಿಸಿ ಸನ್ಮಾರ್ಗದಲ್ಲಿ ಅವನಿಗೆಪ್ರವರ್ತಿಯನ್ನುಂಟುಮಾಡುವದು ಅಸಾಧ್ಯವಾದದರಿಂದ ಅಂತಾ ಸಾಂಸರ್ಗಿಕ ದೋಷಗಳಗೆಲ್ಲ ಉತ್ಪತ್ತಿಸ್ಥಾನವಾಗಿ ಇತಕ್ಕವರನ್ನು ತಮ್ಮರಕ್ತಸಂಬಂಧಿಗಳೆಂಬ ದುರಭಿಮಾನವು ತೊರೆವು ಸಾಧ್ಯವಾದಷ್ಟು ದೂರದೊಳಟ್ಟರೆ ಸಾಕ್ಷಾತ್ತಾಗಿ, ಪರುಷರೆಯಾಗಿ ಇತರರಿಗೂ ಸುಖ ವುಂಟಾಗುವದರೊಳೇನೂ ಸಂಶಯವಿರಲಾರದು.

Occasional Notes.
ನೈಮಿತ್ತಿಕ ವಿಷಯನ್ಯಾಸ.

Health of the Emperor.—ಜರ್ಮನಿ ಚಕ್ರವರ್ತಿಯವರಾದ ಫ್ರೆಡರಿಕ್‌ಯವರು ಈಗ ಸ್ವಲ್ಪ ಹೊರಗೆ ಸಂಚರಿಸುವಷ್ಟರ ವರಿಗೆ ಶಕ್ತರಾಗಿದಾರೆಂತಲೂ ಇನ್ನು ಅವರಿಗೆ ಪ್ರಾಣಭಯವಿಲ್ಲವೆಂತಲೂ, ಕ್ರಮೇಣ ರೋಗಶುದ್ಧಾಂಗ ನಿವೃತ್ತಿಯಾಗಿ ದಾರ್ಢ್ಯ ವುಂಟಾಗುವದೆಂತಲೂ ತಿಳಯಬರುತಿದೆ.

Defence of the N. W. Frontier.—ಭಾಜಿ ಸಂಸ್ಥಾನದರಾಣಿಯವರು, ವಾಯುವ್ಯದಿಕ್ಕಿನ ಸರಹದ್ದು ಪ್ರಾಂತದ ಬಂದೋಬಸ್ತಿಯ ಬಗ್ಗೆ ತಮ್ಮ ಸಂಸ್ಥಾನದಿಂದ ಸಾಧ್ಯವಾದಷ್ಟರ ಮಟ್ಟಿಗೆ ಮನುಷ್ಯರೂಪವಾಗಿಯೂ, ನಗದುರೂಪವಾಗಿಯು ಸಹ ಸಹಾಯಮಾಡಲಿಕ್ಕೆ ತಾವು ಸನ್ನದ್ಧರಾಗಿರುವಂತೆ ತಿಳಯಪಡಿಸಲು, ಸುಪ್ರೀಂ ಗವರ್ನಮೆಂಟನವರು ಅವರ ವಾಗ್ದಾನವನ್ನಂಗೀಕರಿಸಿದರೆಂದು ತಿಳಯಬರುತಿದೆ.

Postal system.—ತಿರುವಾಂಕೂರು ಮಹಾರಾಜರವರು ತಮಗೆ ಆಡಳಿತ ವಿಷಯಗಳಲ್ಲಿ ಯೋಗ್ಯವಾದ ಸಲಹೆಗಳನಿತ್ತು ಸಹಾಯ ಮಾಡಲಿಕ್ಕೆ ಶಕ್ತವಾಗಿರುವಂತೆ ಒಂದು ಆಲೋಚನೆ ಸಭೆಯನ್ನೇರ್ಪಡಿಸಿ, ಕ್ರಮವಾದ ಅದರ ಸಭ್ಯರ ಮತಗಳ ಬಗ್ಗೆ ಈಚೆಗೆ ಒಂದು ನಿಬಂಧನೆಯಂ ಮಾಡಿ ಪ್ರಕಟಿಸಿದ್ದರಷ್ಟೆ. ಈಗ ಸದರೀ ಸಂಸ್ಥಾನದಲ್ಲಿ ನೆಲಗೊಂಡಿರುವ ಪೋಸ್ಟ್ ಪದ್ಧತಿಯಂ ಬದಲಾಯಿಸಿ ಅಭಿವೃದ್ಧಿಯುಳ್ಳ ಹೊಸ ಕ್ರಮವು ಜಾರೀಯಲ್ಲಿತರಬೇಕೆಂಬದಾಗಿ ಮಹಾರಾಜಾ ಸರ್ಕಾರದವರು ಆಲೋಚಿಸುತಲಿರುವಂತೆ ತಿಳಯಬರುತಿದೆ.

Royal accouchment.—ಮಾಹೇ ಮಜಕೂರ್ ೧೨ನೇ ತಾರೀಖ್ ಶನಿವಾರದದಿನ ಬೆಳಗ್ಯೆ ಉದಕಮಂಡಲದಲ್ಲಿ ಬರೋಡೇ ಮಹಾರಾಣಿಯವರಿಗೆ ಪುತ್ರೋತ್ಸವವಾದ ವೃತ್ತಾಂತವು ಕೇಳಲಿಕ್ಕೆ ನಾವು ಬಹಳ ಸಂತೋಷಿಸುತ್ತೇವೆ. ಗಾಯಕವಾಡಿ ಮಹಾರಾಜರವರು ಇಲ್ಲಿಗೆಪಯಣಮಾಡುವರೆಂಬದಾಗಿ ಒಂದು ಪ್ರವಾದ ವುಂಟಾಗಿದೆ. ಪರಂತು ಪ್ರಕೃತ ಸಂದರ್ಭದಲ್ಲಿ ಮಹಾರಾಣಿಯವರನ್ನಗಲಿ ಬರುವ ವಿಷಯವು ಸಂದೇಹಿಸತಕ್ಕದ್ದಾಗಿದೆ.

Ruby mines in Burmah.—ಕಳೆದತಿಂಗಳ ೨೮ನೇತಾರೀಖಿನೊಳು ಹೌಸಾಫ್ ಕಾಮನ್ಸ್ ಸಮಾಜದಲ್ಲಿ ಪಾರ್ಲಿಮೆಂಟ್ ಮೆಂಬರ್‌ಗಳಲ್ಲೊಬ್ಬರಾದ ಮೆ|| ಹಾರ್ಬರ್ಟ್ ಎಂಬವನು ಬರ್ಮಾದೇಶದ ವಜ್ರದ ಗನಿಗಳ ಗುತ್ತಿಗೆ ವಿಷಯವಂ ಕುರಿತು ಪ್ರಸ್ತಾಪಿಸಿ ಕೇಳದ ಕೆಲವು ಪ್ರಶ್ನೆಗಳಗೆ ಸರ್ಜಾಗಾರ್ಸ್ಟಯವರು ಜವಾಬ್ ಕೊಡುವಾಗ್ಯೆ ಚೀಫ್ ಕಮ್ಮಿಷನರವರ ಹುಕುಂ ಶಿವಾಯಿ ಯೂರೋಪಿಯನ್ನರುಗಳ್ಯಾರೂ ವಜ್ರದ ಗನಿಗಳಂ ಹೋಗಿ ನೋಡುವದಕ್ಕೆ ಸಾಧ್ಯವಲ್ಲವೆಂತಲೂ, ಪ್ರಸಿದ್ಧ ಕೋಠಿಗಳ ತರಫೆ ಏಜಂಟುಗಳಗೆಲ್ಲ ಚೀಫ್ ಕಮ್ಮಿಷನರವರು ಹುಕುಂ ಕೊಟ್ಟಿರುತ್ತಾರೆಂತಲೂ, ಗಿಲಾಂಡರ್ ಮತ್ತು ಆರ್‌ಬತ್‌ನಾಟ್ ಕಂಪನಿಯವರು ಸಹ ಅವರ ಹುಕುಂವನ್ನಪೇಕ್ಷಿಸಿದ್ದ ಪಕ್ಷಕ್ಕೆ ನಿಜವಾಗಿ ಕೊಡಲ್ಪಟ್ಟಿರುವದೆಂತಲೂ, ತಿಳಸಿದರು.

The Hyderabad mining scandal.—ಈಚೆಗೆ ಹೈದರಾಬಾದಿನಿಂದ ಮುಂಬೈ ಗೆಜೆಟ್ ಪತ್ರಿಕೆಗೆಬಂದ ತಂತಿವೃತ್ತಾಂತದ ದೆಸೆಯಿಂದ, ನಿಜಾಮರವರು ಅಬ್ದುಲ್‌ಹಕ್ ಎಂಬವರಮೇಲೆಮಾಡಿರುವ ದೋಷಾರೋಪಣೆಗೆಲ್ಲ ಕ್ರಮವಾದಸಮಾಧಾನಹೇಳಲಿಕ್ಕೆ ಅವರು ಬಹಳಸಂಕಟಪಡುತಲಿದಾರೆಂತಲೂ, ನಿಜಾಮರವರಔದಾರ್ಯಕ್ಕೆ ಸ್ವತಃ ಒಳಗಾಗಿ ಅವರತ್ತಗಾದೆ ಮೊಬಲಗನ್ನೆಲ್ಲಕೊಟ್ಟುಬಿಡಬೇಕೆಂಬ ಸಂಕಲ್ಪವುಳ್ಳವರಾಗಿದಾರೆಂತಲೂ ವರ್ತಮಾನ ಬಂದಿರುವಂತೆ ತಿಳಯಬರುತಿದೆ. ಇದಲ್ಲದೆ ಅದೇಪ್ರದೇಶದಿಂದ ಟೈಂಸ್‌ಆಫ್ ಇಂಡ್ಯಾ ಪತ್ರಿಕೆಗೆ ಬಂದ ತಂತಿವೃತ್ತಾಂತದಿಂದ ನಿಜಾಮರವರು ತಮ್ಮ ಭಾಗಗಳಗಾಗಿ ಕೊಟ್ಟರತಕ್ಕ ಮೊಬಲಗನ್ನೆಲ್ಲ ವಾಪಸ್‌ಮಾಡುವಂತೆ ಅಬ್ದುಲ್‌ಹಕ್‌ಯವರು ತಿಳಸುತಲಿದಾರೆಂತಲೂ, ಪರಂತು ಗವರ್ನಮೆಂಟನವರು ಮುಂದೆ ತಗಾದೆ ಮಾಡದೆಯೂ ಗುತ್ತಿಗೆ ಕರಾರನ್ನು ರದ್ದುಮಾಡದೆಯೂ ಇರುವ ಪಕ್ಷಕ್ಕೆ ತಾವು ಆರೀತಿ ನಡಿಸುವಂತೆ ಹೇಳುತ್ತಾರೆಂತಲೂ, ಯಾವವಿಧ ಸಮಾಧಾನವನ್ನೂ ನಿಜಾಮರವರು ಅಂಗೀಕರಿಸುವದಿಲ್ಲವೆಂತಲೂ ವ್ಯಕ್ತವಾಗುತಿದೆ.

LOCAL AND PROVINCIAL NEWS.
ಸ್ಥಳದೇಶಮತ್ತು ತಾಲ್ಲೂಕುಜಾತ ವೃತ್ತಾಂತಗಳು

:o:

The Queen's Birthday.—ಮಾಹೇಮಜಕೂರ್ ೨೪ನೇ ತಾ||ಗುರುವಾರದದಿನ ಶ್ರೀಮನ್ಮಹಾರಾಜ್ಞೀಯವರಿಗೆ ವರ್ಷವರ್ಧಂತಿಯಾದದರಿಂದ ಆದಿನದೊಡನೆ ೬೯ವರ್ಷವು ಪೂರ್ತಿಯನ್ನೈದುವದು. ಹೀಗೆಯೇ ಅವರಿಗೆ ಆಯುರಾರೋಗ್ಯೈಶ್ವರ್ಯಗಳನ್ನನುಗ್ರಹಿಸುತಲಿರಬೇಕೆಂದು ಸರ್ವರಕ್ಷಕನಾದಭಗವಂತನಂಪ್ರಾರ್ಥಿಸುವೆವು.

Anche.—ಅಂಚೇ ಜವಾನರು ರಾತ್ರಿಕಾಲಗಳಲ್ಲಿ ತಪಾಲೆಗಳನ್ನು ತೆಗದುಕೊಂಡು ಹೋಗುವಾಗ್ಯೆ ಗೊರವೀ ಕಡ್ಡಿಯನ್ನು ಬೆಳಕಿಗಾಗಿ ಹಿಡಿದುಕೊಂಡು ಹೋಗುತ್ತಿದ್ದಾರಷ್ಟೆ. ಇದರಿಂದ ಖರ್ಚು ಹೆಚ್ಚಾಗುತ್ತದೆಂದು ಭಾವಿಸಿ ಖರ್ಚು ಕಮ್ಮಿಮಾಡುವದಕ್ಕಾಗಿ ಲಾಂದ್ರಗಳನ್ನು ಕೊಡಬೇಕೆಂಬ ತಜವೀಜು ನಡೆಯುತಲಿರುವಂತೆ ಒಂದಾನೊಂದು ಪತ್ರಿಕೆ ತಿಳಸುತಿದೆ.

Mysore State Railway.—ಗತ ವರ್ಷಕಾಲದೊಳು ಮೈಸೂರು ಮಾರ್ಗದಲ್ಲಿ ಒಡೆದುಹೋದ ರೈಲ್ವೆ ಸೇತುವೆಗಳ ಕಾಮಗಾರಿಯನ್ನು ಸದರ್ನ್ ಮಹಾರಾಷ್ಟ್ರ ರೈಲ್ವೇ ಕಂಪನಿಯ ಏಜಂಟ್ ಮತ್ತು ಚೀಫ್ ಇಂಜನಿಯರವರು ಪೂರೈಸಿ ಅವು ಭದ್ರವಾಗಿ ಕಾಪಾಡತಕ್ಕಬಗ್ಗೆ ಕೆಲ ಪ್ರಕ್ರಮಗಳನ್ನು ತಿಳಯಪಡಿಸಿರುತ್ತಾರೆ.

The price of sovereigns.—ಮಾಹೇಮಜಕೂರ್ ೧೯ನೇ ತಾರೀಖಿನಲ್ಲಿದ್ದ ಬಾಜಾರ್ ನಿರಖನ್ನು ನೋಡಲಾಗಿ ಸವರಿನ್‌ಗಳ ಕ್ರಯವು ೧೫ ರೂಪಾಯಿಗಳವರಿವಿಗೆ ಚಡಾವಾದಂತೆ ತಿಳಯಬರುತಿದೆ. ಕುಂದಾಪಣಿ ದರದಲ್ಲಿ ಸ್ವಲ್ಪಕಡಮೆಯಾಗಿರುತಿದೆ. ಸವರಿನ್‌ಗಳ ಕ್ರಯವು ದಿನೇದಿನೆ ಅಧಿಕವಾಗಲಿಕ್ಕೆ ಜನಗಳೇಮುಖ್ಯಕಾರಣಭೂತರಾದದರಿಂದ ಯಾವತನಕ ಅವರು ಅದಂ ಅಪೇಕ್ಷಿಸುತಲಿರುವರೋ ತಾವತ್ಪರ್ಯಂತ ಅದರ ಬೆಲೆ ಕಡಮೆಯಾಗಲಾರದಲ್ಲದೆ ಅವರ ದ್ರವ್ಯವೆಲ್ಲ ವ್ಯರ್ಥವಾಗುವದರಲ್ಲೇನೂ ಸಂಶಯವಿಲ್ಲವು.

Octroi.—ಈಚೆಗೆ ನೂತನವಾಗಿ ನೆಲೆಗೊಳಿಸಲ್ಪಟ್ಟಿರುವ ಅಜ್ಜಂಪುರದ ಮ್ಯೂನಿಸಿಪಾಲಿಟಿಯಲ್ಲಿ ಹೊಸಬಟ್ಟೆಗಳಮೇಲೂ ಎಣ್ಣೆಯಮೇಲೂ ಆಕ್ಟ್ರಾಯಿ ಶರಿಗೆ ವಸೂಲ್ಮಾಡಬೇಕಾದ್ದಿಲ್ಲವೆಂತಲೂ, ಇನ್ನೊಂದು ಸಂವತ್ಸರ ಕಳೆದ ಬಳಿಕ ಇದಂ ಕುರಿತು ಮರಳ ಆಲೋಚಿಸುವೆವೆಂತೆ

ಕೂ ಮೈಸೂರು ಗವರ್ನಮೆಂಟನವರು ಕಡೂರು ಡಿಸ್ಟ್ರಿಕ್ಟ್ ಡೆಪ್ಯುಟಿ ಕಮಿಷನರವರಿದ್ದ ಕಿಳಯಪಡಿಸಿರುತ್ತಾರೆ.

Treasury establishment.—ಎಂಟು ಡಿಸ್ಟ್ರಿಕ್ಟುಗಳ ಖಜಾನಾ ಶಿಬ್ಬಂದಿಗಳನ್ನೆಲ್ಲ ಒಂದುವಿಧ ನಿಯಮಕ್ಕೊಳಪಡಿಸಿ ಪುರನರ್ವ್ಯವಸ್ಥೆಮಾಡಬೇಕೆಂಬ ಅಭಿಪ್ರಾಯದೊಡನೆ ಮೈಸೂರು ಗವರ್ನಮೆಂಟನವರು ಸದರೀ ಖಜಾನಾ ಶಿಬ್ಬಂದಿಗಳ ಪಟ್ಟಿಯನ್ನು ತಯಾರ್ಮಾಡಿ ಕಳುಹಿಸಬೇಕೆಂಬದಾಗಿ ಕಂಟ್ರೋಲರವರನ್ನು ಕೇಳಿಕೊಂಡಿದಾರೆಂದು ಒಳದೇಶದ ಇಂಗ್ಲಿಷ್ ಪತ್ರಿಕೆಯೊಂದು ತಿಳಿಸುತಿದೆ.

Bangalore Rifle Volunteers.—ಬೆಂಗಳೂರು ರೈಫಲ್ ವಾಲಂಟಿಯರ್‌ಗಳ ಕಮಾಂಡೆಂಟರಾದ ಕರ್ನಲ್ ಸಿ. ಜೆ. ಪರ್ಸಿಯವರಿಗೆ ಮಾಹೇ ಮಜಕೂರ್ ೧೫ನೇ ತಾರೀಖ್ ಲಾಗಾಯಿತು ಅಥವಾ ಅವರು ಪ್ರಯಾಣ ಹೊರಡತಕ್ಕ ತಾರೀಖ್ ಮೊದಲು ಮೂರು ತಿಂಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿರುವಂತೆ ತಿಳಿಯ ಬರುತಿದೆ. ಹಿಂದೆ ಈ ಸಂಸ್ಥಾನದ ನೌಕರಿಯಲ್ಲಿದ್ದ ಸದರೀ ದೊಡ್ಡಮನುಷ್ಯರನ್ನು ಪ್ರಾಯಶಃ ಇಲ್ಲಿನವರೆಲ್ಲರೂ ಚೆನ್ನಾಗಿ ಅರಿತಿರುತ್ತಾರೆ.

Mr. A. C. Rudra.—ಬ್ಯಾರಿಸ್ಟರ್‌ಮಿಸ್ಟರ್ ರುದ್ರ ಎಂಬವರಿಗೂ ಇಲ್ಲಿನ ಚೀಫ್ ಕೋರ್ಟ್ ಚೀಫ್ ಜಡ್ಜಿಯರಾದ ಮಿ॥ ಕ್ಯಾಮರಾನ್‌ರವರಿಗೂ ಈಗ್ಯೆ ಕೆಲವುದಿವಸಗಳ ಹಿಂದೆ ಕೋರ್ಟಿನಲ್ಲಿ ನಡೆದ ವಾಗ್ವಾದವನ್ನೂ ಅದರಮೇಲೆ ಚೀಫ್‌ಜಡ್ಜಿಯವರು ಸದರೀ ಬ್ಯಾರಿಸ್ಟರನ್ನು ತಮ್ಮಕೋರ್ಟಿಗೆ ಬರಕೂಡದೆಂದು ನಿಷೇಧಿಸಿದ್ದದನ್ನೂ ಯೆಲ್ಲರೂ ಅರಿತಿದಾರೆಯಷ್ಟೆ. ಚೀಫ್ ಜಡ್ಜಿಯವರು ಮನಸ್ಸಿಗೆಕೊಟ್ಟ ಹುಕುಮಿನಮೇಲೆ ಬ್ಯಾರಿಸ್ಟರ್ ಕ್ರಮವಾಗಿ ಮಹಾರಾಜರಲ್ಲಿಅಪೀಲ್‌ಮಾಡಲುಅದಕ್ಕೆ ಅವರು ತಮ್ಮಸ್ಟೈಸಲನ್ನು ರಾಜಧಾನಿಗೆ ತಾವು ದಯಮಾಡಿದಬಳಿಕ ತಿಳಿಯಪಡಿಸುವಂತೆ ನೀಲಗಿರಿಯಲ್ಲಿ ಅಪ್ಪಣೆಪಿಸಿದರಂತೆಲೂ ಏತನ್ಮಧ್ಯೆ ಮಿ॥ ರುದ್ರರವರ ಅಪೀಲ್ ಅರ್ಜಿಯು ಚೀಫ್‌ಕೋರ್ಟು ಜಡ್ಜಿಗಳಿಗೆ ಅಭಿಪ್ರಾಯ ಕೊಡತಕ್ಕಬಗ್ಗೆ ಕಳುಹಿಸಲ್ಪಟ್ಟದೆಯೆಂತಲೂ ಕೇಳುತ್ತೇವೆ. ಇವರಮೇಲೆ ಜಡ್ಜಿಗಳೀಗ ಏನು ಅಭಿಪ್ರಾಯ ಕೊಡುವರೋ ನೋಡಬೇಕು.

Theft.—ಈಗ ೩—೪ ದಿವಸಗಳ ಕೆಳಗೆ ನಮ್ಮಮೈಸೂರು ಜೈಲಿನಲ್ಲಿ ಒಂದು ವಿಜಾತೀಯವಾದ ಕಳ್ಳತನವು ನಡೆಯಿತು. ಬಾಗಿಲಿನಲ್ಲಿ ಶಿಪಾಯಿಯು ಬಾದಶಿಬನ್ನು ಹೆಗಲಮೇಲೇರಿಸಿ ಉಸ್ತುವಾರಿ ನೋಡುತ್ತಲೇ ಇದ್ದಾನೆ. ಒಳಗೆ ಪೋಲೀಸ್‌ನವರ ಉಸ್ತುವಾರಿಯು ಅಪೇಮೇರಿಗೆ ಇದೆ. ನಿವರ್ಣಹವಿಲ್ಲ. ಹೀಗಿರುವಲ್ಲಿ ರಾತ್ರಿ ಒಬ್ಬಕಳ್ಳನು ಹ್ಯಾಗೋ ಒಳಗೆ ಹೋಗಿ ೧೩ ಬೀಗಗಳನ್ನು ಮುರಿದು ಹಾಕಿದನು. ೧೫ರೂಪಾಯಿನ ಸಾಮಾನ್ ಕಳವಾದದ್ದಲ್ಲದೆ ಖೈದಿಗಳಿಗೆ ಸೇರಿದ ಕೆಲವು ಒಡವೆಗಳು ಕಳವಾದವು. ದೈವಾನುಗ್ರಹದಿಂದ ಡಾಕ್ಟರ್ ಬೆರ್ನರ್ ಸಾಹೆಬರವರ ಸಂದೂಖ್ ಸದರೀ ಕಳ್ಳನ ದೃಷ್ಟಿಗೆ ಬೀಳದೆ ಹೋದದ್ದು ಬೆರ್ನರ್ ಸಾಹೆಬರವರ ಪುಣ್ಯವೆಂದು ಹೇಳಬೇಕು. ಈ ಒಂದು ಪೆಟ್ಟಿಗೆಯು ಕಳವಾಗಿದ್ದಪಕ್ಷದಲ್ಲಿ ಎಲ್ಲಾದರೂ ನಾಲ್ಕು ಐದುಸಾವಿರ ರೂಪಾಯಿಗಳ ಮಾಲ್ ದೊರೆಯುತಲಿತ್ತು. ಪದಾರ್ಥ ಯಾವದೂ ಹೆಚ್ಚಾಗಿ ದೊರೆಯಲಿಲ್ಲವೆಂಬ ರೋಷದಿಂದ ಕಳ್ಳನು ಜೈಲರವರ ಆಫೀಸಿನಲ್ಲಿದ್ದ ಕೆಲವು ಕಾಗದ ಪತ್ರಗಳನ್ನೂ ಲೆಕ್ಕಗಳನ್ನೂ ಹರಿದು ಚೂರುಚೂರು ಮಾಡಿ ಕೊಳಿಮೆಯಲ್ಲಿ ಹಾಕಿಹೋದನೆಂದು ಹೇಳುತ್ತಾರೆ. ಇದರ ನಿಜಸ್ಥಿತಿಯು ಹ್ಯಾಗಿರುವದೋ ಹೇಳುವದಕ್ಕಾಗಲಾರದು. ಕಳ್ಳರು ಅದ್ಯಾಪಿ ಪತ್ತೇ ಇಲ್ಲ.—ವೃ. ಚಂ.

The Madras University.—ಮದರಾಸ್ ಯೂನಿವರ್ಸಿಟಿ ಪರೀಕ್ಷೆಗಳೇರ್ಪಟ್ಟ ಲಾಗಾಯತು ಇದುವರಿವಿಗೆ ಆಯಾ ಪರೀಕ್ಷೆಗಳಲ್ಲಿ ತೇರ್ಗಡೆಯಾಗಿರತಕ್ಕವರ ಸಂಖ್ಯೆಗಳನ್ನು ಜಾತಿವಾರಾಗಿ ಮದರಾಸ್ ಪತ್ರಿಕೆಯೊಂದು ಪ್ರಕಟಿಸಿರುತಿದೆ. ೧೮೫೮ನೇ ಇಸವಿಯ ಮೊದಲು ಗತವರುಷದ ತನಕ ೨೦,೨೨ ಜನಗಳು ಡಿಗ್ರೀಗಳಂಪಡೆದಿರುತ್ತಾರೆ. ಅವರ ತಪ್‌ಸೀಲ್‌ಹ್ಯಾಗೆಂದರೆ:—

ಜಾತಿ ಭೇದಗಳು.	ಬಿ. ಎ. ಗಳು.	1870ರ ಲಾ. ಎಮ್. ಎ. ಗಳು	1860ರ ಲಾ. ಬಿ. ಎಲ್‌ಗಳು.	1869ರ ಲಾ. ಎಂ. ಎಲ್‌ಗಳು	ಎಲ್. ಎಂ. ಎಸ್. ಬಿ. ಡಿ. ಎಂ. ಗಳು.	1863ರ ಲಾ. ಬಿ. ಸಿ. ಇ ಗಳು.
	1647	45	236	8	46	40
ಬ್ರಾಹ್ಮಣರು ...	1099	23	173	5	6	26
ಬ್ರಾಹ್ಮಣೇತರರು ...	315	7	45	1	15	6
ಯೂರೋಪಿಯನ್ನರು ...	21	1	2	0	2	6
ಯೂರೇಷಿಯನ್ನರು ...	54	4	5	0	10	6
ನೇಟಿವ್ ಕ್ರಿಶ್ಚಿಯನ್ನರು ...	148	9	10	1	8	1
ಮಹಮದೀಯರು ...	10	0	0	0	1	0
ಪಾರ್ಸಿಗಳು ...	0	1	1	1	4	1

ಮೇಲೆ ಕಂಡ ೨೦೨೨ ಜನರಲ್ಲಿ ೧೩೬೧ ಮಂದಿ ಹಿಂದೂಗಳು. ಮದರಾಸ್‌ಪ್ರೆಸಿಡೆನ್ಸಿಯ ಪ್ರಜಾಸಂಖ್ಯೆಯು ೩೧೦ಲಕ್ಷ, ಇವರಲ್ಲಿ ಹಿಂದೂಜನರ ಸಂಖ್ಯೆ ೨೮೫ ಲಕ್ಷ, ಇವರಲ್ಲಿ ಬ್ರಾಹ್ಮಣರು ೧೧,೨೨,೦೩೦, ಮುಂಬೈಪ್ರೆಸಿಡೆನ್ಸಿಯಲ್ಲಿ ಇಲ್ಲಿಗಿಂತ ಬ್ರಾಹ್ಮಣರ ಸಂಖ್ಯೆಯು ಅಧಿಕವಾಗಿರುತಿದೆ. ಬಂಗಾಳೇ, ಪಂಜಾಬ್, ಅಯೋಧ್ಯೆ ಪಶ್ಚಿಮೋತ್ತರ ಪರ್ಗಣೆಗಳು ಈಪ್ರದೇಶಗಳಲ್ಲೆಲ್ಲಾ ಬ್ರಾಹ್ಮಣರು ಇಲ್ಲಿಗಿಂತ ಮೂರುಪಾಲು ಅಧಿಕವಾಗಿರುತ್ತಾರೆ. ಈಪ್ರೆಸಿಡೆನ್ಸಿಯಲ್ಲಿ೬,೭೯,೦೩೭ ಜನ ಕ್ರಿಶ್ಚಿಯರ್‌ರಿರುತ್ತಾರೆ. ಮೇಲ್ಕಂಡ ಸಂಖ್ಯೆಗಳಿಂದ ೧೬,೫೬೦ ಹಿಂದೂಗಳಲ್ಲಿ ಒಬ್ಬನೂ ತಿಯೂ ೩೮೯೭ ಜನ ಕ್ರಿಶ್ಚಿಯನ್‌ರಲ್ಲಿ ಒಬ್ಬನೂ ತೆಯೂ ಡಿಗ್ರೀ ಪಡೆದಿರುತ್ತಾರೆಂದು ಯೋಚನೆಷುತಿದೆ.

Dacoity.—ಈಗ ೭-೮ ದಿವಸದ ಕೆಳಗೆ ಅಹೋಬಲ ಸ್ವಾಮಿಗಳ ಮಠಕ್ಕೆ ಸೇರಿದಜಹಗೀರ್ ಗ್ರಾಮವಾದ ಬಿನಕನ ಹಳ್ಳಿಯಲ್ಲಿ ೧ ಕೋಳಿಯ ವ್ಯಾಜದಿಂದ ಅತ್ಯಾಶ್ಚರ್ಯಕರವಾದ ಮತ್ತು ಅತಿಸಾಹಸಕರವಾದ ದರೋಡೆಯು ನಡೆಯಿತು. ಒಬ್ಬ ಕುರುಬನು ಬಹು ಧನವಂತನಾಗಿದ್ದನು. ಈತನಿಗೂ ಒಬ್ಬ ಶಿವಾಚಾರದವನಿಗೂ ಈಗ್ಯೆ ಕೆಲವುಕಾಲದಿಂದದ್ವೇಷವುಂಟಾಗಿತ್ತು. ಈದ್ವೇಷಕ್ಕೆ ಕಾರಣವನ್ನು ಜನರು ನಾನಾವಿಧವಾಗಿ ಹೇಳುತ್ತಾರೆ. ಶಿವಾಚಾರದವನ ಮನೆಯಲ್ಲಿ ಮದುವೆ ನಡೆಯಿತು. ಆ ಮದುವೆ ಚಪ್ಪರಕ್ಕೆ ಸೇರಿದ ಚಪ್ಪರಕ್ಕೆ ಈಕುರುಬನಕೋಳಿಯುಹೋಗಿ ನೆಲವನ್ನು ಕೆದಕುತ್ತಾ ಕಾಳುಗಳನ್ನು ಆದುತಿನ್ನುತಲಿತ್ತು. ಆ ಕೋಳಿಯನ್ನು ಒಬ್ಬಶಿವಾಚಾರದವಳು ಸಾಯುವಹಾಗೆ ಹೊಡೆದಳು. ಕುರುಬನ ಕಡೆ ಜೀತಗಾರನೊಬ್ಬನು ಶಿವಾಚಾರದವಳನ್ನು ನೋಡಿ ಕೋಳಿಯನ್ನು ಸಾಯಬಡಿಯಬಹುದೆ ಎಂದು ಕೇಳಿದನು. ಇಷ್ಟು ಮಾತ್ರಕ್ಕೆ ಒಬ್ಬ ಶಿವಾಚಾರದವನು ಕಲಹಕ್ಕೆ ಆರಂಭಿಸಿದನು. ಸ್ವಲ್ಪ ಕಾಲವು ವೈಪರೀತ್ಯದಲ್ಲಿ ಪರ್ಯವಸಾನ ವನ್ನೈದಿತು. ಕಲಹವು ನಡೆದ ಕೂಡಲೇ ಸುಮಾರು ೪೦—೫೦ ಮಂದಿ ಶಿವಾಚಾರದವರು ಒಟ್ಟಾಗಿ ಸೇರಿ ಹಗಲು ೧೧ ಘಂಟೆಯ ಸಮಯದಲ್ಲಿ ಕುರುಬನ ಮನೆಯನ್ನು ಹೊಕ್ಕು ಆತನ ಹೆಂಗಸು ಮಕ್ಕಳುಗಳನ್ನು ಹೊಡೆದು ನೂಕಿ, ಒಳಗಿದ್ದ ಧಾನ್ಯಗಳನ್ನೆಲ್ಲಾ ಬೀದಿಗೆ ತಂದು ಚೆಲ್ಲಿ ಗುಂಪಾಗಿ ಸುರಿದರು. ಪಾತ್ರೆ ಪದಾರ್ಥಗಳನ್ನೆಲ್ಲಾ ಛಾವಿಗಳಲ್ಲಿ ಎತ್ತಿ ಹಾಕಿದರು. ಮನೆಯ ಮೇಲೆ ಹತ್ತಿ ಹೆಂಚುಗಳನ್ನೆಲ್ಲಾ ಒಡೆದು, ತೊಲೆ, ಸರ, ಹುಜರಗಳನ್ನು ಕಿತ್ತು ಹಾಕಿ ಗುದ್ದಲಿಯನ್ನು ತರಿಸಿಕೊಂಡು ಗೋಡೆಗಳನ್ನೆಲ್ಲಾ ಉರುಳಿಸಿ ೧೨ ಕಂಭದ ತೊಟ್ಟಿ ಮನೆಯನ್ನು ನೆಲ ಸಮ ಮಾಡ ತೊಡಗಿದರು. ಹೊಲದ ಕಡೆ ಹೋಗಿದ್ದ ಮನೆಯ ಯಜಮಾನನು ಅಲ್ಲಿ ಈ ವರ್ತಮಾನವನ್ನು ಕೇಳಿ ಓಡಿ ಬಂದನು. ಬಂದಕೂಡಲೆ ಆತನನ್ನು ಹಿಡಿದು ಪ್ರಹರಿಸಿ,ಮನೆಯ ಗೋಡೆಯನ್ನು ಒಡೆದು ನೆಲಸಮ ಮಾಡುವ ಸಂಭ್ರಮದಲ್ಲಿರುವಾಗ್ಯೆ, ಕುರುಬನಕಡೆ ಜೀತಗಾರನೊಬ್ಬನು ತಿರುಮಕೂಡ್ಲಿಗೆ ಹೋಗಿ ದರೋಡೆಯಾಗುತ್ತೆ ಖೂನಿಯಾಗುತ್ತೆ. ಈ ಕ್ಷಣ ಬರಬೇಕೆಂದು ಹೇಳಿ ಅಮಲ್ದಾರರನ್ನು ಕರೆದು ಕೊಂಡು ಬಂದನು. ಅವರು ಬಂದು ಇವರು ಮಾಡುತ್ತಿದ್ದ ಅವಾಂತರವನ್ನು ಜನರ ಸ್ತೋಮವನ್ನು ನೋಡಿ ಪೋಲೀಸ್‌ನವರ ಕುಮ್ಮಕ್ಕನ್ನು ಬರಮಾಡಿಕೊಂಡು ಸುಮಾರು ೩೨ ಜನಗಳವರಿಗೆ ಹಿಡಿದುಕೈಗೆಕೋಳ ಹಾಕಿ ತಿರುಮಕೂಡ್ಲಿಗೆ ರವಾನೆಮಾಡಿದರು. ೧೫—೨೦ ಜನಗಳವರಿಗೆ ತಪ್ಪಿಸಿಕೊಂಡುಹೋದರು ಕೂಡ್ಲೆ ಪೋಲೀಸ್ ಸೂಪ್ರಿಂಟೆಂಡೆಂಟ ಮಿ॥ ರಾಘವಾಚಾರ್ಯರಿಗೆ ವರ್ತಮಾನಕಳುಹಿಸಿದರು. ಅವರು ಬಂದು ತಮ್ಮ ಸಾಧನ ಬಲದಿಂದ ಇನ್ನು ೩—೪ಮಂದಿಯವರಿಗೆ ಪತ್ತೇಮಾಡಿದರು. ಡೆಪ್ಯುಟೀ ಕಮ್ಮಿಷನರವರ ಸವಾರಿಯು ಚಿತ್ತೈಸಿದೆ. ಮುಂದೆ ಮೊಕದ್ದಮೆಯು ಹ್ಯಾಗೆ ಪರ್ಯವಸಾನವಾಗುವದೋ ನೋಡಬೇಕು.—ವೃ. ಚಂ.

THE MYSORE GAZETTE.
ಮೈಸೂರು ಗಜೆಟಿ.

ಶ್ರೀಮನ್ಮಹಾರಾಜ ರಾಜಾಸಾಹೇಬ ಬಹದ್ದೂರವರ ದಿವಾನರವರಿಂದ ಕೊಡೋಣವಾದ ಇಸ್ತಿಹಾರನಾಮೆಗಳು.

ನೊಕ್ಸಾಂ ನಂ ೩೪೩. ತಾ॥ ೩ನೇ ಮೇ ೧೮೭೭. ಶ್ರೀನಿವಾಸಪುರದ ರೇಂಜ್ ಡೆಪ್ಯುಟೀ ಅಮಲ್ದಾರ್ ವಿ ಎನ್. ಗೋಪಾಲರಾಯರವರಿಗೆ ೭೭ನೇ ಇಸವಿ ಮೇ ಗುಲ್ಬೇಲಾಗಾಯತು ಅಥವಾ ಅವರು ಉಪಯೋಗಿಸಿಕೊಳ್ಳುವ ತಾರೀಖ್ ಮೊದಲು ಒಂದುತಿಂಗಳ ಪ್ರಿವಿಲೇಜ್‌ರಜಾ ಕೊಡಲ್ಪಟ್ಟಿರುತಿದೆ. ಗೋಪಾಲರಾಯರವರು ರಜಾದಮೇಲೆ ಗೈರಹಾಜರಾಗಿರತಕ್ಕ ಕಾಲದಲ್ಲಿಅಥವಾ ಮತ್ತೊಂದು ಹುಕುಂ ಕೊಡಲ್ಪಡುವತನಕ ಚಾಮರಾಜ ತಾಲ್ಲೂಕ್ ಅಮಲ್ದಾರರವರು ಶ್ರೀನಿವಾಸಪುರದ ರೇಂಜಿಗೆ ಸಂಬಂಧಪಟ್ಟ ಕೆಲಸಗಳನ್ನು ನಡೆಸುತಲಿರುವರು.

ನೊಕ್ಸಾಂ ನಂ॥ ೩೫೦.—ತಾ ೪ನೇ ಮೇ ೧೮೭೭—ಎಡತೊರೆತಾಲ್ಲೂಕ್ ಅಮಲ್ದಾರ್ ತಿರುಮಲಾಚಾರ್ಯರವರಿಗೆ ೭೭ನೇ ಇಸವಿ ಮೇ ಗುಲ್ಬೇತಾರೀಖ್ ಲಾಗಾಯತು ಅಥವಾ ಅವರುಪಯೋಗಿಸಿಕೊಳ್ಳುವ ತಾರೀಖ್‌ಮೊದಲು ೨೦ದಿನಗಳ ಪ್ರಿವಿಲೇಜ್‌ರಜಾ ಕೊಡಲ್ಪಟ್ಟಿರುತಿದೆ.

ನೊಕ್ಸಾಂ ನಂ. ೩೩೩—೧೮೭೫ನೇ ಇಸವಿ ಏಪ್ರಿಲ್ ೧೩ನೇ ಮರ್ಕುಂ ೧೩ನೇ ನಂಬರ್ ಇಸ್ತಿಹಾರ್ ನಾಮೆಯನ್ನನುಸರಿಸಿ ತಿದ್ದುಪಡಿಯಾದ, ೧೮೭೬ನೇ ಇಸವಿ ಜನವರಿ ೨೯ನೇ ಮರ್ಕುಂ ೫೫೫ನೇ ನಂಬರ್ ಇಸ್ತಿಹಾರ್ ನಾಮೆಯಲ್ಲಿ ಕಂಡಿರುವಂತೆ ಅಸಿಸ್ಟೆಂಟ್ ಕಮ್ಮಿಷನರ್‌ಗಳು, ಮುನ್ಸಫರುಗಳು, ಅಮಲ್ದಾರ್ ವ ಡೆಪ್ಯುಟೀ ಅಮಲ್ದಾರ್ಗಳು ಇವರುಗಳ ಮೊಕರರಾತಿಯ ಬಗ್ಗೆ ವಿಧಿಸಲ್ಪಟ್ಟಿರುವ ಪರೀಕ್ಷಾ ನಿಬಂಧನೆಗಳ ೧೦ನೇ ಕಲಂನಲ್ಲಿ ಐವತ್ತಿಕೆಂದುತಲಿದ್ದು ಪಡಿ ಮಾಡಲ್ಪಟ್ಟು ಸಕಲ ಜನಗಳ ತಿಳುವಳಿಕೆಯಬಗ್ಗೆ ಘಾಯಿದೆಮಾಡಲ್ಪಟ್ಟಿರುತಿದೆ.

ಕಲಂ. ೧೦ ಯಾವ ಮನುಷ್ಯನಾಗಲಿ ೫ ವರುಷಗಳಿಗೆ ಕಡಮೆ ಇಲ್ಲದಂತೆ ಗವರ್ನಮೆಂಟ್ ನ ನೌಕರಿಯಲ್ಲಿರುತ್ತಾನೆಯೋ ಅಥವಾ ಮಾಹೆಯಾನಾ ೩೦ ರೂಪಾಯಿಗಳಿಗೆ ಕಡಮೆ ಇಲ್ಲದ ಸಂಬಳದ ಸರ್ಕಾರ್ ನೌಕರಿಯನ್ನು ಪಡೆದಿರುತ್ತಾನೆಯೋ ಅಂತವನು ತನ್ನ ಕೆಲಸಗಳನ್ನು ತೃಪ್ತಿಕರವಾಗಿ ನಿರ್ವಹಿಸಿದಬಗ್ಗೆ ಮೇಲ್ಪಟ್ಟ ಅಧಿಕಾರಿಯ ಸರ್ಟಫಿಕೇಟನ್ನು ಹಾಜರ್ ಮಾಡಿದಲ್ಲಿ ಮೇಲ್ಕಂಡ ಯಾವದಾದರೂ ಪರೀಕ್ಷೆಗಳಿಗೆ ಸ್ವತಃ ಹಾಜರಾಗಲಿಕ್ಕೆ ಅರ್ಹನಾಗಿರತಕ್ಕದ್ದು.

ನೊಕ್ಸಾಂ ನಂಬರ್ ೩೩೬—ತಾ॥ ೧ನೇ ಮೇ ೧೮೭೭—ಕೊಪ್ಪತಾಲ್ಲೂಕು ಅಮಲ್ದಾರ್‌ಲಕ್ಷ್ಮೀನಾರಣಪ್ಪನವರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖ್ ಮೊದಲು ಒಂದುತಿಂಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿರುತಿದೆ. ಎಡಹಳ್ಳಿ ಸಬ್‌ತಾಲ್ಲೂಕು ಡೆಪ್ಯುಟೀ ಅಮಲ್ದಾರ್ ಅಳಿಸಿಂಗರಯ್ಯಂಗಾರ್ಯರವರು ಲಕ್ಷ್ಮೀನಾರಣಪ್ಪನವರು ರಜಾದಮೇಲೆ ಗೈರ್‌ಹಾಜರಾಗಿರತಕ್ಕ ಕಾಲದಲ್ಲಿ ಅಥವಾ ಮತ್ತೊಂದು ಹುಕುಂ ಕೊಡಲ್ಪಡುವ ತನಕ ಸ್ವಂತ ಕೆಲಸದೊಡನೆ ಕೊಪ್ಪತಾಲ್ಲೂಕು ಅಮಲ್ದಾರ್ ವ ಶಿಕೆಕ್ಯಾಷ್ ಮ್ಯಾಜಿಸ್ಟ್ರೇಟರಾಗಿ ಮೊಕರರ್ಮಾಡಲ್ಪಟ್ಟಿರುತ್ತಾರೆ.

ನೊಕ್ಸಾಂ ನಂ. ೩೪೯—ಮಂಡ್ಯ ತಾಲ್ಲೂಕು ಅಮಲ್ದಾರ್ ನರಸಣ್ಣನವರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖ್ ಲಾಗಾಯತು ಒಂದು ತಿಂಗಳ ಪ್ರಿವಿಲೇಜ್ ರಜಾಕೊಡಲ್ಪಟ್ಟಿರುತಿದೆ. ನರಸಣ್ಣನವರು ರಜಾದಮೇಲೆ ಗೈರಹಾಜರಾಗಿರುವ ಕಾಲದಲ್ಲಿ ಅಥವಾ ಮತ್ತೊಂದು ಹುಕುಂ ಕೊಡಲ್ಪಡುವ ತನಕ ಶಿರಸ್ತೇದಾರರು ತಾಲ್ಲೂಕ್ ಚಾರ್ಜಿನಲ್ಲಿರತಕ್ಕದ್ದು.

ನೊಕ್ಸಾಂ ನಂ. ೩೩೦—ಮಾಲೂರು ತಾಲ್ಲೂಕ್ ಅಮಲ್ದಾರ್ ಮಿಯರ್ ನಿಜಾಮುದ್ದೀನ್ ಅಲ್ಲಿ ಸಾಹೇಬರವರಿಗೆ ಅವರುಪಯೋಗಿಸಿಕೊಳ್ಳುವ ತಾರೀಖ್ ಲಾಗಾಯತು ೨೦ದಿನಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿರುತಿದೆ.

EXTRACTS.

Dewan Bahadur R. Raghunatha Row's Address to the Madras Christian College Students.

ಈಚೆಗೆ ಮದರಾಸ್ ಕ್ರಿಶ್ಚಿಯನ್ ಕಾಲೇಜಿನಲ್ಲಿ ನಡೆದ ಗದ್ದಲ ವಿಷಯದೊಳು ದಿವಾನ್ ಬಹದೂರ್ ಆರ್. ರಘುನಾಥರಾಯರವರ ಅಭಿಪ್ರಾಯವನ್ನರಿಯುವ ಕುತೂಹಲದೊಡನೆ ಮಾಹೇಮಜಕೂರ್ ೫ನೇ ತಾರೀಖ್ ಬುಧವಾರದ ದಿನ ಸಾಯಂಕಾಲ, ಮದರಾಸಿನಲ್ಲಿರತಕ್ಕ ವಿಶಿಷ್ಟ ಕಾಲೇಜ್ ವಿದ್ಯಾರ್ಥಿಗಳೂ, ಸರ್ಕಾರ್ ಉದ್ಯೋಗಸ್ಥರೂ ಇತರರು ಸಹ ತಿರುವಲ್ಲಿಕೇಣಿಯಲ್ಲಿರುವ ಗಂಗೆಕೊಂಡಾನ್ ಮಂಟಪದಲ್ಲಿ ಸಭೆ ಸೇರಿದ್ದರು. ಆದಿನ ಸಾಯಂಕಾಲ ೭ ಘಂಟೆಗೆ ಸರಿಯಾಗಿ ರಾಯರವರು ಸದರೀ ಮಂಟಪಕ್ಕೆ ಬರಲು ಅವರಂ ಅಲ್ಲಿ ನೆರೆದಿದ್ದವರೆಲ್ಲರೂ ಬಹಳ ಪ್ರೀತಿ ಗೌರವದೊಡನೆ ಬರಮಾಡಿಕೊಂಡ ತರುವಾಯ, ಅವರು ಶ್ರೀಭಾಗವತದಲ್ಲಿ ಸ್ವಲ್ಪ ಭಾಗವಂ ಸಭಿಕರಿಗೆ ವಿವರಿಸಿ ಬಳಿಕ ಅಲ್ಲಿದ್ದ ವಿದ್ಯಾರ್ಥಿಗಳಂ ಕುರಿತು ಇವರದಿಸಿಂದಂತೆ ತಿಳಿಸಿದನೆಂದರೆ.—

ಮತ್ತೊಹೋದರರೇ! ನಾನೀಗ ತಿಳಿಸುವ ವಿಷಯಕ್ಕೆ ತಾವೆಲ್ಲರೂ ಸ್ವಲ್ಪ ಅವಧಾನವಂ ಕೊಡಬೇಕೆಂದು ಕೋರುವೆನು. ಲೋಕದಲ್ಲಿ ಸ್ವಭಾವತಃ ಮನುಷ್ಯನು ಒಂದು ಮತವನ್ನವಲಂಬಿಸಿದವನಾಗಿಯೇ ಇರುತ್ತಾನೆ. ಒಂದು ದೇಶವೆಷ್ಟು ನಾಗರಿಕವಿಹೀನವಾದದ್ದಾಗಿದ್ದಾಗ್ಯೂ ಅದರ ಪ್ರಜೆಗಳು ಸರ್ವೋತ್ಕೃಷ್ಟವಾದ ಒಂದು ಚೈತನ್ಯ ವಿದುವದು ನಿರಾಕರಿಸುತ್ತಾರೆಂಬದಾಗಿ ಇದುವರೆವಿಗೆ ಯಾವ ಚರಿತ್ರಗ್ರಂಥಗಳಿಂದಲೂ ನಮಗೆ ವ್ಯಕ್ತವಾಗಲಿಲ್ಲವು. ಆದ್ದರಿಂದ ನಿಕೊಂಡಿರುವ ನಾಸ್ತಿ ಯಾವಾಗಲೂ ಒಂದು

ಕಾತುಲುಬಿಗಳಾಗಿಯೇ ಇದೇವೆ. ಅಂತಾ ಮತವು ನಾವು ತೋರದಿರಲಾರೆವು. ಆದದರಿಂದಲೇ ನಮ್ಮ ಪೂರ್ವಿಕರು ತಮ್ಮ ಮಕ್ಕಳಿಗೆ ವಿದ್ಯಾಭ್ಯಾಸಕ್ಕುಪಕ್ರಮಿಸುವಾಗಲೇ ತಮ್ಮ ಮತವಿಷಯಕ ಜ್ಞಾನವನ್ನವರಿಗುಂಟುಮಾಡುವಂತಾ ಪದ್ಧತಿಯನ್ನಂಗೀಕರಿಸಿದ್ದರು. ಈ ಕ್ರಮವು ಈಚೆಗೆ ಅನಾದರಣೀಯವಾಗಿ ವ್ಯವಹಾರದೊಳಿಲ್ಲದೆ ತಪ್ಪಿಹೋಯಿತು. ಇಂತಾ ಕರ್ತವ್ಯವನ್ನು, ತಿಳಿದೋ ತಿಳಿಯದೆಯೋ ಉದಾಸೀನಮಾಡಿದ್ದರಿಂದ ನಮ್ಮಂತೆ ಅನೇಕರು ನಷ್ಟಗಳನ್ನನುಭವಿಸುತಲಿದಾರೆ. ಈ ಔದಾಸೀನ್ಯದೊಡನೆ ನಿರರ್ಥಕಗಳಾದ ಮತ್ತು ಕೆಲವು ಸಂದರ್ಭಗಳಲ್ಲಿ ಹಾನಿಕರಗಳಾದ ಸಂಪ್ರದಾಯಗಳು ಆಚರಣೆಯಲ್ಲಿಬರುತಿವೆ. ಇಂತಾ ಸ್ಥಿತಿಯು ಆರ್ಯನಾದವನಿಗೆ, ಮುಖ್ಯವಾಗಿ ವಿದ್ಯಾರ್ಥಿಗಳಿಗೂ, ನಿಮ್ಮಂತೆ ಇತರವಿಧ ಜ್ಞಾನವು ಪಡೆದಿರತಕ್ಕವನಿಗೆ ಸಮಾಧಾನಕರವಾಗಿರಲಾರದು. ಇಂತಾ ಅಸಮಾಧಾನದಿಂ ಪೀಡಿತವಾದ ಹೃದಯಕ್ಕೆ ನೆಮ್ಮದಿಯನ್ನುಂಟುಮಾಡುವದಕ್ಕಾಗಿ ಇತರ ಮತ ಬೋಧಕರು ತಮ್ಮ ಮತಗಳಲ್ಲಿ ಶ್ಲಾಘ್ಯವಾದ ಭಾಗವನ್ನು, ಆರ್ಯಮತದಲ್ಲಿ ಬಹಳ ನಿಂದ್ಯವಾದಭಾಗದೊಡನೆ ತಾಳೆಹಾಕಿ ಬೋಧಿಸಲಿಕ್ಕೆ ಪ್ರಯತ್ನಪಡುತಲಿರುವದು ಸಹಜವಾದದ್ದಾಗಿಯೇ ಇರುತಿದೆ. ಇದಕ್ಕಾಗಿ ಅನ್ಯದೇಶೀಯರು ಕೇವಲ ಅನಿಕರದೊಡನೆ ಲಕ್ಷಾಂತರ ರೂಪಾಯಿಗಳನ್ನು ವ್ಯಯಮಾಡುತ ತಮ್ಮ ದೇಶೀಯರಲ್ಲಿ ಒಳ್ಳೇವಂತಿತರಾದವರನ್ನು ತಮ್ಮ ಮತಸಿದ್ಧಾಂತಗಳನ್ನು ಬೋಧಿಸತಕ್ಕ ಬಗ್ಗೆ ಏರ್ಪಡಿಸಿ, ಕೆಲವು ಸಂದರ್ಭಗಳಲ್ಲಿ ತಮ್ಮ ಉದ್ದೇಶಗಳು ಸಫಲಪಡಿಸಿಕೊಂಡಿರುತ್ತಾರೆ. ನಿಮಗೆ ಈಗನಾನು ತಿಳಿಸುತಲಿರುವದನ್ನು ಕ್ರಿಶ್ಚಿಯನ್ ಕಾಲೀಜ್ ವಿದ್ಯಾರ್ಥಿಗಳಲ್ಲಿ ಒಬ್ಬಾತನಿಗೆ ಈಚೆಗೆ ಪ್ರಾಪ್ತವಾದ ದುರ್ದಶೆಯೇ ನಿರೂಪಿಸುತಿದೆ. ಅವರ ಸಹ ಪಾಠಿಗಳಲ್ಲೊಬ್ಬನಿಗೆ ತನ್ನ ಮತವು ತೊರೆದು ಅನ್ಯಮತವು ಪ್ರವೇಶಿಸಬೇಕೆಂಬ ತಾತ್ಪರ್ಯ ಪ್ರಾಪ್ತವಾದ್ದು ಕಾಲೀಜ್ ವಿದ್ಯಾರ್ಥಿಗಳಿಗೆಲ್ಲ ಅತ್ಯಪ್ರಿಯಕರವಾಗಿತ್ತು. ಇದು ನಿರೋಧಿಸಬೇಕೆಂಬ ಅಪೇಕ್ಷೆಯೊಡನೆ ಅವರದಕ್ಕಾಗಿ ಪ್ರಯತ್ನಪಡುವಾಗ್ಯೆ ಅನುಭವ ಶೂನ್ಯರಾದ ವಿದ್ಯಾರ್ಥಿಗಳು ಕೆಲವು ತಪ್ಪಿತಗಳಿಗೊಳಗಾದರು. ಅದರಿಂದ ಅವರು ತೊಂದರೆಗೂ ನಷ್ಟಕ್ಕೂ ಗುರಿಯಾಗಬೇಕಾಯಿತಲ್ಲದೆ ಅವುಗಳೀಗ ಅನಿವಾರ್ಯಗಳಾಗಿ ಯೇರ್ಪಟ್ಟವು. ಆದಕಾರಣ ಅವರು ಸದರೀ ತೊಂದರೆಗಳನ್ನೂ ನಷ್ಟಗಳನ್ನೂ ಈಗ ಸಹನೆಯೊಡನೆ ಅನುಭವಿಸುತ ತಮ್ಮ ತಪ್ಪಿತಗಳನ್ನೊಪ್ಪಿಕೊಂಡು ಅವುಗಳಿಗಾಗಿ ಮನ್ನಣೆಯಂ ಕೇಳಿಕೊಳ್ಳಬೇಕಾದವರಾಗಿದಾರೆ. ತಾವು ಶಿಕ್ಷೆಗೆ ಗುರಿಯಾಗಬೇಕಾದ್ದು ನ್ಯಾಯವಲ್ಲವೆಂದು ಸದರೀ ವಿದ್ಯಾರ್ಥಿಗಳು ಅಭಿಪ್ರಾಯಪಟ್ಟಿರಬಹುದು. ಏರಂತು ಅವರು ಶಿಕ್ಷೆಗಳಿಗೆ ಸಹ ಪಾತ್ರರಾಗಬೇಕು. ಪಾಠಶಾಲೆಯ ನ್ಯಾಯನಿಬಂಧನೆಗಳಿಗೆಲ್ಲ ವಿನೀತರಾದ ಬಾಲಕರಂತೆ ಅವರು ಬದ್ಧರಾಗಿರತಕ್ಕದ್ದು. ಈ ಕ್ರಮಗಳೆಲ್ಲ ಅವರು ಅಂಗೀಕರಿಸಲಿಕ್ಕೆ ಯೋಗ್ಯವಾದವಾಗಿವೆ. ಸ್ವಪ್ರಯೋಜನವನ್ನು ಕುರಿತು ಆಲೋಚಿಸಬೇಕೆಂಬ ಅಪೇಕ್ಷೆ ಅವರಿಗಿರುವಪಕ್ಷಕ್ಕೆ, ಹಾಗೆ ತಮ್ಮ ಪ್ರಯೋಜನಗಳಂ ಕಾಪಾಡಿಕೊಳ್ಳುವದು ಜಾಗರೂಕತೆಯುಳ್ಳವರೆಲ್ಲರೂ ನಾನು ತಿಳಿಸಿದ ಮಾರ್ಗವನ್ನು ಅಂಗೀಕರಿಸಿದರೆ ಯೋಗ್ಯವಾಗಿರುವದೆಂದೆಣಿಸುತ್ತೇನೆ. ಇಂತಾ ಅನರ್ಥಗಳಿಗೆಲ್ಲ ನಿಜವಾದ ಪ್ರತಿಕ್ರಿಯೆ ಬೇರೊಂದಿದೆ, ಯೇನುದರೆ.—ಸ್ವಮತಸ್ವರೂಪವು ಚೆನ್ನಾಗಿ ತಿಳಿದುಕೊಂಡು ಅದಂ ದೃಢವಾಗಿ ಅವಲಂಬಿಸಿರುವದು. ಅರೀತಿಮಾಡಿದ್ದಾದರೆ ಯೂನಿವರ್ಸಿಟಿ ಪ್ರಾಶಸ್ತ್ಯಗಳಿಗಾಗಿ ಯಾರು ಯೆಲ್ಲಿ ಓದಿದಾಗ್ಯೂ ಬಾಧಕವಿರಲಾರದು. ಮತ್ತು ಅಲ್ಲಿ ಯಾವ ಮತಸಿದ್ಧಾಂತ ಅಪ್ರಗಳನಿಯಮವನ್ನನುಸರಿಸಿ ಬೋಧಿಸಲ್ಪಟ್ಟಾಗ್ಯೂ ಅಷ್ಟು ಮುಖ್ಯವಾಗಿ ತೋರಲಾರದು. ಸ್ವಮತವು ಅನ್ಯಮತಾಪೇಕ್ಷೆಯಾ ಉತ್ಕೃಷ್ಟವಾದದ್ದೆಂಬ ನಂಬಿಕೆ ಇದ್ದಾಗ್ಯೂ ಅಥವಾ ನಿಕೃಷ್ಟವಾದದ್ದೆಂಬ ತಿಳುವಳಿಕೆ ಪ್ರುಂಟಾಗಿದ್ದಾಗ್ಯೂ ತನ್ನ ಮತವನ್ನೇ ದೃಢವಾಗಿ ಅವಲಂಬಿಸಿರಬೇಕೆಂದು ನಾನು ಹೇಳುವದಿಲ್ಲವು. ಗುಣದೋಷ ಪರಿಶೀಲನಾ ಸ್ವಾತಂತ್ರ್ಯಕ್ಕೆ ಮನುಷ್ಯನು ಬಾಧ್ಯಪ್ರುಳ್ಳವನಾಗಿರುತ್ತಾನೆ. ಅಂತಾ ಬಾಧ್ಯತೆಗೆ ಯಾವಾಗಲೂ ಉಪಪತಿಯನ್ನುಂಟುಮಾಡಕೂಡದು. ತಾನು ಅವಲಂಬಿಸಿರುವ ಮತಕ್ಕಿಂತ ಅನ್ಯಮತವು ಶ್ರೇಷ್ಟವಾದದ್ದೆಂಬ ನಂಬಿಕೆಯು ಯಾವನಿಗಾದರು ಇರುವಪಕ್ಷಕ್ಕೆ ಹಾಗೆ ಶ್ರೇಷ್ಟವೆಂದು ತೋರುವ ಮತವನ್ನವಲಂಬಿಸತಕ್ಕದ್ದು ಅವನ ಕರ್ತವ್ಯವಾಗಿರುತಿದೆ. ಆದದರಿಂದ ಒಬ್ಬ ವಿದ್ಯಾರ್ಥಿಯು ತನ್ನ ಮತಸ್ವರೂಪವನ್ನು ತಿಳಿದುಕೊಂಡು ಅದುಕುರಿತು ಸರಿಯಾಗಿ ಸಹನೆಯೊಡನೆ ವಿಚಾರಮಾಡುವಾಗ್ಯೆ ಅದು ಇತರಮತಕ್ಕಿಂತ ನಿಕೃಷ್ಟವೆಂದು ಕಂಡುಬಂದಪಕ್ಷಕ್ಕೆ ಉತ್ತಮವಾದದನ್ನು ಪರಿಗ್ರಹಿಸಿ ನಿಕೃಷ್ಟವಾದದನ್ನು ತ್ಯಜಿಸಬೇಕಾದ್ದು ಆತನಿಗೆ ಧರ್ಮವಾಗಿರುತಿದೆ. ಹಿಂದೂ ಬಾಲಕರಿಗೆ ಆರ್ಯಮತದಲ್ಲಿ ದಾರ್ಢ್ಯ ಪ್ರುಂಟಾಗುವ ತನಕ, ಅನ್ಯಮತಸಿದ್ಧಾಂತಗಳನ್ನು ಬೋಧಿಸತಕ್ಕ ಪಾಠಶಾಲೆಗಳಲ್ಲಿ ವಿದ್ಯಾಭ್ಯಾಸಮಾಡಲಿಕ್ಕೆ ಅವರಿಗೆ ಅವಕಾಶಕೊಡಕೂಡದು. ಹಿಂದೂಗಳು ತಮ್ಮ ಮಕ್ಕಳಿಗೆ ಆರ್ಯಮತದ ಮುಖ್ಯಸಿದ್ಧಾಂತ ಜ್ಞಾನವನ್ನುಂಟುಮಾಡಲಿಕ್ಕೆ ತಕ್ಕ ಏರ್ಪಾಡುಗಳು ಮಾಡಬೇಕಾದ್ದು ಆವಶ್ಯಕವಾಗಿರುತಿದೆ. ಅಂತಾ ಏರ್ಪಾಡುಗಳನ್ನು ಮಾಡುವತನಕ ವಿದ್ಯಾರ್ಥಿಗಳಿಗೆ ಪರಮತ ಬೋಧಕಗಳಾದ ಪಾಠಶಾಲೆಗಳಲ್ಲಿ ವಿದ್ಯಾಭ್ಯಾಸ ಮಾಡಿಸಕೂಡದು. ಅಂತಾ ವಿದ್ಯಾರ್ಥಿಗಳಿಗೆಲ್ಲ ತಟಸ್ಥವಾದ ಅಥವಾ ಸ್ವಕೀಯವಾದ ಪಾಠಶಾಲೆಗಳಲ್ಲಿ ವಿದ್ಯಾಭ್ಯಾಸ ಮಾಡಿಸಲಿಕ್ಕೆ ಪ್ರಯತ್ನಗಳಂ ಮಾಡಬೇಕು. ದೌರ್ಭಾಗ್ಯವಶಾತ್ ಅಂತಾ ಪಾಠಶಾಲೆಗಳ್ಯಾವವೂ ತತ್ಕಾಲದಲ್ಲಿ ನಿಮಗಿರುವಂತೆ ಕಾಣಿಸಲಿಲ್ಲವು. ತಮಗೆ ಯೋಗ್ಯವೆಂದು ತೋರಿದ್ದನ್ನೆಲ್ಲ ಕೃಪಾಪೂರ್ವಕ ನಮಗೆ ತಿಳಿಸಲಿಕ್ಕೆ ಪ್ರಯತ್ನಪಟ್ಟ ಶ್ರಮಿಸತಕ್ಕಂತಾವರು ಆರ್ಯರಾದ ನಾವು ನಿಂದಿಸಬಾರದು. ಏರಂತು ನಮ್ಮ ಮತ ಸಿದ್ಧಾಂತಗಳನ್ನರುಹತಕ್ಕ ಅಥವಾ ಅನ್ಯಮತ ವಿಷಯವು ಬೋಧಿಸದಂತಾ ಪಾಠಶಾಲೆಗಳಂ ಕಲ್ಪಿಸಿಕೊಳ್ಳಲಿಕ್ಕೆ ನಾವು ಪ್ರಯತ್ನ ಪಡತಕ್ಕದ್ದು. ಈಗ ಮದರಾಸಿನಲ್ಲಿ ಅಂತಾ ಪಾಠಶಾಲೆಗಳೆರಡು ನೆಲೆಗೊಂಡಿವೆ. ಇವುಗಳಲ್ಲಿ ಮೊದಲನೆಯದಾದ ಪ್ರೆಸಿಡೆನ್ಸೀ ಕಾಲೀಜ್ ಎಂಬದು ಸರ್ಕಾರಿ ಪಾಠಶಾಲೆಯಾಗಿಯೂ ಮತ ವಿಷಯಕವಾದ ತಾಟಸ್ಥ್ಯವು ವಹಿಸಿರತಕ್ಕದ್ದಾಗಿಯೂ ಇರುತಿದೆ. ಯೆರಡನೆಯದಾದ ಪಚ್ಚೆಯಪ್ಪ ಮೊದಲಿಯಾರ್ರವರ ಕಾಲೀಜೆಂಬದು ಧರ್ಮ ಪಾಠಶಾಲೆ[illegible]ದು ಕೆಲವುಮಟ್ಟಿಗೆ ಮೇಲೆಕಂಡಂತಾ ತಾಟಸ್ಥ್ಯವುಳ್ಳದ್ದಾಗಿದ್ದಾಗ್ಯೂ ಅದಂ ಕಾಪಾಡಬೇಕೆಂಬ ನಿಯಮವೇನೂ ಅದಕ್ಕಿರುವಂತೆ ತೋರಲಿಲ್ಲವು. ಆದದರಿಂದ ಯಾವ ಪಾಠಶಾಲೆಗೆ ನಮ್ಮ ಬಾಲಕರು ನಾವು ಕಳುಹಿಸಿದರೆ ಅಲ್ಲಿ ಅವರಿಗೆ ಸ್ವಮತಸ್ವರೂಪವಿಂತಾದ್ದೆಂದು ತಿಳಿಯುವದಕ್ಕೆ ಮುಖ್ಯವಾಗಿ ನಮಗೆ ಅನಾವಶ್ಯಕಗಳಾಗಿರುವಂತಾ ವಿಷಯಗಳು ಕಲಿಸಲ್ಪಡುವದೆಂಬ ಭೀತಿ ಇಲ್ಲದಿರುವದೋ ಅಂತಾ ಪಾಠಶಾಲಾ ನಿರ್ಮಾಣವು ತಾತ್ಕಾಲಿಕ ಸ್ಥಿತಿಯಲ್ಲಿ ಕೇವಲ ಅಪೇಕ್ಷಿತವಾದದ್ದೆಂದು ಸ್ವಗೌರವವೂ ಸ್ವಮತಾಭಿಮಾನವೂ ಉಳ್ಳ ಆರ್ಯನೆನಿಸಿಕೊಂಡಿರತಕ್ಕವನಿಗೆಲ್ಲ ತೋರದಿರಲಾರದಾಗಿ ಜನಾಂಗದವರ ಸಾಮುದಾಯಕ ಪ್ರಯತ್ನದಮೇಲೆ ಅಂತಾ ಪಾಠಶಾಲೆಯೊಂದು ಸ್ಥಾಪಿಸಲ್ಪಡುವದಂ ನೋಡುವದು ಆತನ ಕರ್ತವ್ಯವಾಗಿರುತಿದೆ. ಮುಖ್ಯವಾಗಿ ನಾನು ತಿಳಿಸುವದೇನುಂದರೆ, ಹಿಂದೂಗಳಾದ ನೀವುಗಳೆಲ್ಲರೂ ಸೇರಿ ಪಚ್ಚೆಯಪ್ಪ ಮೊದಲಿಯಾರ್ರವರ ಕಾಲೀಜನ್ನು [illegible] ಕಾಲೀಜನ್ನಾಗಿ ಮಾಡಲಿಕ್ಕೆ ತಕ್ಕ ಸಹಾಯ ಮಾಡುವಿರಾದರೆ ಆಗ ಅದರಲ್ಲಿ ನಮ್ಮ ಬಾಲಕರು ವಿದ್ಯಾಭ್ಯಾಸ ಮಾಡಿ ಯೂನಿವರ್ಸಿಟಿ ಪ್ರಶಸ್ತಿಗಳಂ ಸಂಪಾದಿಸಲಿಕ್ಕೆ ಅರ್ಹರಾಗಬಹುದು. ಹೀಗೆ ಮಾಡಿದರೆ ಬಹಳ ಉತ್ತಮವೆಂದು ತೋರುತಿದೆ. ಹಾಗಿಲ್ಲದಿದ್ದರೆ ಪ್ರತ್ಯೇಕವಾಗಿ ಒಂದು ಕಾಲೀಜನ್ನು ಸ್ಥಾಪಿಸುವ ಪ್ರಯತ್ನವು ಮಾಡಬೇಕು. ಪಚ್ಚೆಯಪ್ಪ ಮೊದಲಿಯಾರ್ರವರ ಕಾಲೀಜ್‌ನಲ್ಲಿ ನಾನೀಗ ತಿಳಿಸುವ ಕೆಲಸವು ಮಾಡುವಂತೆ ನೋಡಿದರೆ ಬಹಳ ಅನುಕೂಲವಾಗಿರುವದು. ಈ ವಿಷಯದಲ್ಲಿ ನಮ್ಮ ದೇಶೀಯರು ಪ್ರಯತ್ನಪಟ್ಟರೆ ಅದು ನಿಷ್ಫಲವಾಗಲಾರದೆಂದೆಣಿಸುತ್ತೇನೆ. ನಾವು ವಿಶೇಷ ಧನಾಢ್ಯರಲ್ಲದಿದ್ದರೂ ಸಂಖ್ಯೆಯಲ್ಲಿ ಅಧಿಕರಾಗಿವೇನೆ. ಇಸ್‌ಪೇಟಿಗಳಾಡುವದರಲ್ಲಿ ನಾವೆಷ್ಟು ಹಣವು ಕಳೆಯುವದಿಲ್ಲವು? ವಿನೋದಾರ್ಥ ನಾವೆಷ್ಟು ದ್ರವ್ಯವು ಖರ್ಚುಮಾಡುವದಿಲ್ಲವು? ನಮ್ಮ ಸ್ತ್ರೀಯರಿಗೆ ಕೊಡುವ ಬಾರೀ ಸೀರೆಗಳಿಗಾಗಿ ಎಷ್ಟರವೊಬಲಗನ್ನು ನಾವು ವ್ಯರ್ಥಗೊಳಿಸುವದಿಲ್ಲವು. ಅವಸರದ ಉಪ್ಪಿಸ್ಟನ್ಯಾಸನಸ್ ಕಾಲೀಜನ್ನು ಸ್ಥಾಪಿಸುವದಕ್ಕಾಗಲಿ, ಪಚ್ಚೆಯಪ್ಪ ಮೊದಲಿಯಾರ್ರವರ ಕಾಲೀಜಿಗಾಗಿ ಏರ್ಪಟ್ಟಿರುವ ಮೂಲಧನವು ವೃದ್ಧಿಗೊಳಿಸುವದಕ್ಕಾಗಲಿ ಯಥೋಚಿತ ಸಹಾಯಮಾಡಲಿಕ್ಕೆ ಪ್ರತಿಮನುಷ್ಯನಿಗೂ ಸಂಪೂರ್ಣ ಸಾಧ್ಯವಾಗಿರುತಿದೆ. ಈ ಏರ್ಪಾಡಿನಿಂದ ನಮ್ಮ ಬಾಲಕರು ಅನ್ಯಮತ ಬೋಧನೆಗಳಿಗಾಗಿ ಭಯಪಡದೆ ಧಾರಾಳವಾಗಿ ವಿದ್ಯಾಭ್ಯಾಸ ಮಾಡಲಿಕ್ಕೆ ಅವಕಾಶವುಂಟಾಗಿರುವದು. ಈಗ ನಮಗೆ ಬೇಕಾಗಿರುವದೆಲ್ಲವೂ ಸ್ವಜನಾ[illegible]ವೊಂದೇಯಾಗಿರುತಿದೆ. ಅದು ಎಂತಾದ್ದೆಂದರೆ, ನಾವು ಐಕ್ಯಾಪೇಕ್ಷೆಯ ಆಗಿಂದಾಗ್ಯೆ ವ್ಯಕ್ತಪಡಿಸುತಲಿರುತಾದ್ದಲ್ಲವು. ಏರಂತು ಒಬ್ಬ ಮಿಷನರಿಯು ತನ್ನ ಮತಪ್ರಚಾರದೊಳು ತೋರಿಸುತಲಿರುವ ಶ್ರದ್ಧೆಯಲ್ಲಿ ನೂರರಲ್ಲೊಂದು ಭಾಗವಾದರೂ ಉಳ್ಳದ್ದಾಗಿರಬೇಕು. ಸದರೀ ಮಿಷನರಿಯು ತನ್ನ ಮನೋಗತವಾದ ಸಂಕಲ್ಪವನ್ನು ನೆರವೇರಿಸಬೇಕೆಂಬ ಭಾವದೊಡನೆ ತನ್ನ ಬಂಧುಮಿತ್ರರನ್ನೆಲ್ಲ ಬಿಟ್ಟು ಪ್ರಾಪಂಚಿಕಗಳಾದ ಪ್ರಯೋಜನಾಕಾಂಕ್ಷೆಯನ್ನೆಲ್ಲ ತ್ಯಜಿಸಿ, ಈ ದೇಶಕ್ಕೆ ಬಂದು ಸಕಲವಿಧ ನಿರ್ಬಂಧಗಳಿಗೂ ಒಳಪಡುತ್ತಾನೆ. ಆತನು ಜಮಿರಿಗೆ ಕಳುಹಿಸಲ್ಪಡಲಿ, ಆತನನ್ನೆದರಿಸಲಿ, ಅತನೊಡನೆ ಕಲಹಿಸಲಿ ಭಿಕ್ಷೂರಿನಾಡಲಿ, ಇಷ್ಟಾದರೂ, ಆತನು ತನ್ನ ಉದ್ದೇಶವು ಬಿಡಲಾರನು ಈ ವಿಷಯದಲ್ಲಿ ಮಿಷನರಿಗಳನ್ನು ನೀವು ಅನುಕರಿಸಿರಿ. ಸಹೋದರರಿರಾ! ಈಶ್ವರನ ನಿಮಿತ್ತವಾಗಿಯೂ, ಇಂಡ್ಯದೇಶಕ್ಕಾಗಿಯೂ, ನಿಮಗಾಗಿಯೂ ಮತ್ತು ನನಗಾಗಿಯೂ ಸಹ ಈ ಕೆಲಸವು ನೀವು ಮಾಡಬೇಕು. ನನ್ನಮಿತ್ರರು ಅಂತಾ ಪ್ರಯತ್ನವು ಮಾಡುವದಕ್ಕೆ ಆಲೋಚಿಸುವರಾದರೆ ಅದಕ್ಕೆ ನನಗೆ ಸಾಧ್ಯವಾದಷ್ಟು ಸಹಾಯಮಾಡಲಿಕ್ಕೆ ನಾನು ಸನ್ನದ್ಧನಾಗಿರುತ್ತೇನೆ. ಇತನ್ಮಧ್ಯೆ ನಾನುಮಾಡಬೇಕಾದ್ದೆಲ್ಲವೂ ನಿಮಗೆ ಆರ್ಯಮತಸ್ವರೂಪವಂ ಬೋಧಿಸುತಲಿರತಕ್ಕದ್ದು ಒಂದೇಯಾಗಿರುತಿದೆ. ಉಂತರವಾದ ನನ್ನ ಅಭಿಪ್ರಾಯವನ್ನು ನಿಮಗೆ ತಿಳಿಸಿದೆನು. ಅದರಮೇರೆ ಗುಣದೋಷ ವಿಮರ್ಶನಮಾಡುವ ಸ್ವಾತಂತ್ರ್ಯವು ನಿಮಗೆ ಸೇರಿದ್ದಾಗಿರುತಿದೆ. ಹಾಗೆ ನಿಶ್ಚಯಿಸಿದ ಬಳಿಕ ಪಚ್ಚೆಯಪ್ಪ ಮೊದಲಿಯಾರ್ರವರ ಕಾಲೀಜನ್ನು ಅಭಿವೃದ್ಧಿ ಪಡಿಸುವದಕ್ಕಾಗಲಿ, ಪ್ರತ್ಯೇಕವಾಗಿ ಒಂದು ಕಾಲೀಜನ್ನು ಸ್ಥಾಪಿಸುವ ವಿಷಯದಲ್ಲಾಗಲಿ ಯೆಲ್ಲರೂ ಪ್ರಯತ್ನಪಡಬೇಕಾದ್ದು ಸಹ ನಿಮಿಗೇ ಸಂಬಂಧಿಸಿದ್ದಾಗಿರುತದೆಂದು ನುಡಿದು ಅದರ ಹಿಂದಿನ ಸಾಯಂಕಾಲ ಮದರಾಸ್‌ನಲ್ಲೆಲ್ಲಾ ಘೋಷಿಸಲ್ಪಟ್ಟಿದ್ದ ಒಂದು ಪ್ರಕಟನ ಪತ್ರಿಕೆಯನ್ನೋದಿದರು. ಸದರೀ ಪ್ರಕಟನೆಯಲ್ಲಿ ನಮೂದಾಗಿದ್ದದೇನುಂದರೆ,

ಹಿಂದೂ ಥಿಯೋಲಾಜಿಕಲ್ ಕಾಲೀಜ್ ಫಂಡ್,

೧೮೮೮ನೇ ಇಸವಿ ಮೇ ಗು ೩ನೇ ತಾರೀಖಿನಲ್ಲಿ

ಮದರಾಸ್‌ನೊಳು ಸ್ಥಾಪಿಸಲ್ಪಟ್ಟಿತು.

ದೊಡ್ಡ ಮನುಷ್ಯದೇಃಕ್ರಿಶ್ಚಿಯನ್ ಮಿಷನರಿಗಳ ಮತ ಸಾಂಕರ್ಯ ಪ್ರಯುಕ್ತವಾದ ಪ್ರಾಬಲ್ಯದಿಂದ ಅನೇಕ ಹಿಂದೂಕುಟುಂಬಗಳು ಪ್ರಬಲ ದುರ್ದಶೆಗೆ ಗುರಿಯಾಗುವದರಿಂದಲೂ, ಹಿಂದೂಗಳು ತಮ್ಮ ಮಕ್ಕಳನ್ನು ಮಿಷನರಿ ಪಾಠಶಾಲೆಗಳಿಗೆ ಕಳುಹಿಸಲಿಕ್ಕೆ ಭಯಪಡುತಲಿರುವದರಿಂದಲೂ, ಮತವಿಷಯಕ ಜ್ಞಾನವನ್ನುಂಟುಮಾಡಲಿಕ್ಕೆ ತಕ್ಕವಾದ ಪಾಠಶಾಲಾ ಭಾವದಿಂದುಂಟಾಗಿರುವ ಕೊರತೆಯನ್ನು ಹಿಂದೂ ವಿದ್ಯಾರ್ಥಿಗಳು ಬಹಳ ಅನುಭವಿಸುತಲಿರುವದರಿಂದಲೂ, ಜನರಿಗೆ ಶಾಸ್ತ್ರಾಭ್ಯಾಸವನ್ನುಂಟುಮಾಡಬೇಕಾದ್ದು ಉಪಪನ್ನರಾಗಿಯೂ ಪ್ರಬಲರಾಗಿಯೂ ಇರುವ ನೇಟಿವ್ ದೊಡ್ಡಮನುಷ್ಯರಿಗೆ ಸೇರಿದ್ದಾಗಿರುತಿದೆಂಬ ನೆಪದಮೇಲೆ ಗವರ್ಮೆಂಟಿನವರು ಕ್ರಮಕ್ರಮವಾಗಿ ಇಂಡ್ಯದೇಶದಲ್ಲಿ ಶಾಸ್ತ್ರಾಭ್ಯಾಸಕ್ಕೆ ತಮ್ಮ ಪ್ರೋತ್ಸಾಹವನ್ನು ತಪ್ಪಿಸುತಬರುವದರಿಂದಲೂ, ದಕ್ಷಿಣಇಂಡ್ಯದೇಶಕ್ಕೆಲ್ಲ ಪ್ರಧಾನನಗರವೆನಿಸಿಕೊಂಡಿರುವ ಮದರಾಸ್‌ನಲ್ಲಿ ಒಂದು ನ್ಯಾಷನಲ್ ಕಾಲೀಜನ್ನು ಸ್ಥಾಪಿಸಿ ಅದರಲ್ಲಿ ಮತಸಂಬಂಧವಾದ ಮತ್ತು ಲೌಕಿಕ ಸಂಬಂಧವಾದ ವಿದ್ಯಾಭ್ಯಾಸವು ಬಾಲಕರಿಗೆ ಮಾಡಿಸಬೇಕೆಂಬದಾಗಿ ಪ್ರಮುಖರಾದ ಬಹುಜನ ನೇಟಿವ್ ದೊಡ್ಡಮನುಷ್ಯರು ಅಪ್ರೇರಿತರಾಗಿ ಅಭಿಪ್ರಾಯಪಟ್ಟಿರುವದರಿಂದಲೂ, ಶಾಸ್ತ್ರಾಭ್ಯಾಸಕ್ಕೆ ಉಂಟಾಗಿರುವ ತೀವ್ರವಾದ ಪ್ರಾಚುರ್ಯವು ಪರಿಭಾವಿಸುವಲ್ಲಿ ಅಂತಾ ಕಾಲೀಜನ್ನು ಸ್ಥಾಪಿಸಲಿಕ್ಕೆ ಬೇಕಾದ ಮಟ್ಟಿಗೆ ಈಗ ಅವಕಾಶ ವಿರುವದರಿಂದಲೂ, ಈಗಿರುವ ಸ್ಕೂಲುಗಳಲ್ಲಿಯೂ ಕಾಲೀಜ್‌ನಲ್ಲಿಯೂ ಐಕ್ಯಭಕವಾಗಿ ಸ್ಕೂಲ್ ಆಫ್ ಫಿಲಾಸಫಿ ನಡೆಸುವದರಿಂದಲೂ ಹಿಂದೂಥಿಯೋಲಾಜಿಕಲ್‌ಕಾಲೀಜ್‌ಎಂಬ ಒಂದು ಶಾಸ್ತ್ರಪಾಠಶಾಲೆಯನ್ನು ಪ್ರತ್ಯೇಕವಾಗಿ ನೆಲೆಗೊಳಿಸಿ, ಅದರಲ್ಲಿ ಯಾವದೊಂದು ಮತಕ್ಕೂ ಸಂಬಂಧಿಸದಂತೆ ಸಾಮಾನ್ಯವಾಗಿ ಹಿಂದೂಮತ ಸಿದ್ಧಾಂತಗಳನ್ನು ಕಲಿಸಲಿಕ್ಕೂ, ಮದರಾಸ್ ಯೂನಿವರ್ಸಿಟಿಗೆ ಸೇರಿದ ಬಿ. ಎ ಪರೀಕ್ಷೆಯ ಮಟ್ಟಿಗೆ ಲೌಕಿಕ ವಿದ್ಯಾಭ್ಯಾಸವು ಮಾಡಿಸಲಿಕ್ಕೂ ತಕ್ಕ ಏರ್ಪಾಡು ಮಾಡುವಂತೆ ಬೇಕೆಂಬ ಕಾರಣಗಳು ನಮ್ಮನ್ನು ಪ್ರೇರಿಸಲಾದವು. ಮಹತ್ತರವಾದ ಪ್ರಸಕ್ತ ನಮ್ಮ ಉದ್ದೇಶವು ಸಫಲವಾಗಬೇಕಾದರೆ ಹಿಂದೂ ಸಮುದಾಯದವರ ಮನಃಪೂರ್ವಕವಾದ ಸಹಾಯವೂ ಪ್ರವೃತ್ತಿಯೂ ಅಪೇಕ್ಷಿತಗಳಾಗಿರುತಿವೆ. ಬರುವ ಸಂವತ್ಸರದಮೊದಲು ಹಿಂದೂ ಥಿಯೋಲಾಜಿಕಲ್ ಹೈಸ್ಕೂಲೆಂಬ ಒಂದುಪಾಠಶಾಲೆಯನ್ನು ಪ್ರಥಮತಃ ಸ್ಥಾಪಿಸಬೇಕೆಂದುದ್ದೇಶಿಸಿರುವ ನಮ್ಮ ಪ್ರತಿಜ್ಞೆಯನ್ನು ಮದರಾಸ್‌ನಲ್ಲಿ ಸ್ವದೇಶಾಭಿಮಾನಿಗಳಾಗಿಯೂ ಉದಾರಿಗಳಾಗಿಯೂ ಇರತಕ್ಕ ಬಹುಜನ ಹಿಂದೂ ದೊಡ್ಡ ಮನುಷ್ಯರು ಅನುಮೋದಿಸಿ ತಮಗೆ ಸಾಧ್ಯವಾದಷ್ಟು ಸಹಾಯಮಾಡುವಂತೆ ನಮಗೆ ಭರವಸೆ ಕೊಟ್ಟಿರುತ್ತಾರೆ. ಅದಪರೀಪ ಈಗ ವಿಶಿಷ್ಟ ಮಹಾರಾಜರುಗಳು, ರಾಜರುಗಳು, ಜಮೀನ್ದಾರರುಗಳು, ಜಹಗೀರ್‌ದಾರ್‌ಗಳು, ಸಾಹುಕಾರ್‌ಗಳು, ವರ್ತಕರು, ಲಾಯರ್‌ಗಳು, ಉದಾರಿಗಳಾದ ಇತರ ದೊಡ್ಡಮನುಷ್ಯರು, ಇವರೆಲ್ಲರೂ ಸ್ವಾಭಾವಿಕವಾದ ತಮ್ಮ ದಾತೃತ್ವದೊಡನೆಯೂ ಧರ್ಮಬುದ್ಧಿಯೊಡನೆಯೂ, ಘನವಾದ ನಮ್ಮ ಉದ್ದೇಶವು ನೆರವೇರುವಂತೆ ಧನಸಹಾಯ ಮಾಡಬೇಕೆಂದು ಕೋರುವೆವಲ್ಲದೆ, ನಮ್ಮಿಂದ ಸ್ಥಾಪಿಸಲ್ಪಟ್ಟಿರುವ ಹಿಂದೂಥಿಯೋಲಾಜಿಕಲ್ ಕಾಲೀಜ್ ಫಂಡಿನ ಆನರರಿ ಸೆಕ್ರಿಟರಿಗಳಾದ ಮತ್ತು ಖಜಾಂಚಿಗಳಾದ ಇವರಡಿ ರುಜು ಮಾಡಿರತಕ್ಕವರ ಹೆಸರಿಗೆ ಸಹಾಯದ್ರವ್ಯವು ಕಳುಹಿಸಬೇಕೆಂದು ವಿನಯಪೂರ್ವಕ ಪ್ರಾರ್ಥಿಸುವೆವು.

ಆರ್. ಶಿವಶಂಕರಪಾಂಡಿಯಾ,
ಬಿ. ಎ. ಎಫ್. ಟಿ. ಎಸ್., ಆನರರಿ ಪ್ರೆಸಿಡೆಂಟ್.

ಟಿ. ಗೋಪೀನಾಥ ಠಾಕರ್, ಎಂ. ರಾಮಕೃಷ್ಣಪಂತುಲು, ಎ. ನಾನಾಭಾಯಿ ದೇವಿ, ಆನರರಿ ಸೆಕ್ರೆಟರಿಗಳು ಮತ್ತು ಖಜಾಂಚಿಯರು.

BANGALORE:—Printed and published for the Proprietor at the KARNATIC Press.—1888.

ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA.

ಪ್ರತಿ ಸೋಮವಾರ ಪ್ರಾತಃಕಾಲದಲ್ಲಿ ಪ್ರಕಟಿಸಲ್ಪಡುವದು.

Published every Monday Morning.

ಪ್ರಕಾಮುವಿವಿಧಪ್ರವೃತ್ತ್ಯುಪಗಮಾರ್ಥ ಕರ್ಣಾಟಕಪ್ರಕಾಶಿಕ [illegible]

Vol. XV.] ಸಂಪುಟ ೧೫.] BANGALORE—MONDAY, MAY 28, 1888. [No. 21.

ಬೆಂಗಳೂರು:—ಸಣ್ ೧೮೮೮ನೇ ಇಸವಿ ಮೇ ೨೮ನೇ ತಾರೀಖ್ ಸೋಮವಾರ. [ಸಂಖ್ಯೆ ೨೧.

ಕರ್ಣಾಟಕ ಪ್ರಕಾಶಿಕಾ

ಪತ್ರಿಕೆಯ ಚಂದಾ ದರಗಳು,
೧೮೮೮ನೇ ಇಸವಿ ಜನವರಿಯಾರಭ್ಯ
ಕಡಮೆಮಾಡಲ್ಪಟ್ಟಿರುತ್ತವೆ.

ಈ ಪತ್ರಿಕೆಯು ಚಂದಾದಾರರನ್ನೇಕ ಅನೇಕ ರ ಅಪೇಕ್ಷೆಯನ್ನೀಡೇರಿಸುವ ಉದ್ದೇಶದಿಂದಲೂ, ಪರಿಮಿತವಾದ ಆದಾಯವುಳ್ಳವರಿಗೆಲ್ಲ ಈ ಪತ್ರಿಕೆಯು ಸುಲಭವಾಗಿ ಲಭಿಸುವಂತಿರಬೇಕೆಂಬ ಅಭಿಪ್ರಾಯದಿಂದಲೂ ಇದರ ಚಂದಾದರವನ್ನು ಇದರಡಿಯಂತೆ ಕಡಮೆಮಾಡಿರುತ್ತೇವೆಂತೆಂದರೆ.—

ಇಂಗ್ಲಿಷ್ ಮತ್ತು ಕನ್ನಡಭಾಗಗಳಿಗೆ.

	ಸ್ಥಳದವರಿಗೆ	ಪರಸ್ಥಳದವರಿಗೆ.
12 ತಿಂಗಳಿಗೆ	8—0—0	9—0—0
6 ,,	4—0—0	4—8—0
3 ,,	2—5—0	2—5—0

ಇಂಗ್ಲಿಷ್ ಅಥವಾ ಕನ್ನಡಭಾಗಗಳಿಗೆ.

	ಸ್ಥಳದವರಿಗೆ	ಪರಸ್ಥಳದವರಿಗೆ
12 ತಿಂಗಳಿಗೆ	4—0—0	5—0—0
6 ,,	2—0—0	2—8—0
3 ,,	1—4—0	1—9—0

ಷರಾ—ಅಂಚೆ ಮುನ್ಸಫರುಗಳು, ಡಿಪ್ಯುಟಿ ಮತ್ತು ಸಬ್ ಕಲೆಕ್ಟರುಗಳು, ಶಾಲಾಮಾಸ್ತರುಗಳು, ವಿದ್ಯಾರ್ಥಿಗಳು, ಇವರೆಲ್ಲರಿಗೂ ಪತ್ರಿಕೆಯು ಮೇಲ್ಕಂಡ ದರದಲ್ಲಿ ಕೊಡಲ್ಪಡುವದು. [illegible] ಚಂದಾದಾರರು ಇಂಗ್ಲಿಷ್ ಭಾಗವನ್ನಾಗಲಿ ಕನ್ನಡಭಾಗವನ್ನಾಗಲಿ ಅಥವಾ ಎರಡನ್ನಾಗಲಿ ತೆಗೆದುಕೊಳ್ಳಬಹುದು. ಚಂದಾಹಣವನ್ನು ಮುಂಗಡವಾಗಿಯೇ ಕಳುಹಿಸತಕ್ಕದ್ದು. ಮೂರುತಿಂಗಳಿಗಿಂತ ಕಡಮೆಯಾಗಿ ಚಂದಾ ಯಾರಿಂದಲೂ ಅಂಗೀಕರಿಸಲ್ಪಡಲಾರದು.

[illegible] ಕಳುಹಿಸತಕ್ಕವರು ರೂಪಾಯಿ ಒಂದಕ್ಕೆ ಒಂದು ಆಣೆ ಮೇರೆ ಡಿಸ್ಕೌಂಟ್ ಸಹ ಸೇರಿಸಿ ಕಳುಹಿಸತಕ್ಕದ್ದು. [illegible] ಬಿಲ್ಲುಗಳನ್ನು ಕಳುಹಿಸುವವರು ಡಿಸ್ಕೌಂಟಿಲ್ಲದೆ ಕಳುಹಿಸಲ್ಪಡುವ ಮೊಬಲಗಿನಲ್ಲಿ ಅವು ಮಾರಾಟವಾಗುವಷ್ಟು ಮಿಕ್ಕ ಮೊಬಲಗು ಲೆಕ್ಕಕ್ಕೆ ಜಮಾ ಮಾಡಿಕೊಳ್ಳಲ್ಪಡುವದು.

ಪ್ರಕಟನೆಯ ರಿವಾಜ್.

ಮೊದಲನೆಯದಕ್ಕೆ ಪಂಕ್ತಿ ಒಂದಕ್ಕೆ ೦—೨—೦
ಎರಡನೆಯದಕ್ಕೆ ಪಂಕ್ತಿ ಒಂದಕ್ಕೆ ೦—೧—೦

ಷರಾ—ಎರಡಾವರ್ತಿಗಿಂತ ಜಾಸ್ತಿಯಾಗಿ ಪ್ರಕಟಿಸತಕ್ಕ [illegible] ಪಂಕ್ತಿ ಒಂದಕ್ಕೆ [illegible] ಲೆಕ್ಕ ಮಾಡಲ್ಪಡುವದು. ಈ ಪತ್ರಿಕೆಯಲ್ಲಿ [illegible] ಪ್ರಕಟನೆಗಳು ಕಳುಹಿಸುವವರು ಅವು ಎಷ್ಟಾವರ್ತಿ ಪ್ರಕಟ ಮಾಡಲ್ಪಡಬೇಕೋ ಅದನ್ನು ಸ್ಪಷ್ಟವಾಗಿ ತಿಳಿಸತಕ್ಕದ್ದು. ಇಲ್ಲದಿದ್ದರೆ ಅವರು [illegible] ನಿಲ್ಲಿಸುವಂತೆ ಬರೆಯುವತನಕ [illegible] ಎಷ್ಟಾವರ್ತಿ ಪ್ರಕಟಿಸಲ್ಪಟ್ಟಿದ್ದಾಗ್ಯೂ [illegible] ರೂಪಾಯಿ [illegible] ಪ್ರಕಟನೆಯ ಬಗ್ಗೆ ಕಳುಹಿಸಲ್ಪಡತಕ್ಕ ಪ್ರಕಟನೆಗಳನ್ನು [illegible] ಘಂಟೆಯೊಳಗಾಗಿ ಕಳುಹಿಸಬೇಕು. ಪ್ರಕಟನೆಯ [illegible] ಪತ್ರಿಕೆಗೆ ಕಳುಹಿಸಲ್ಪಡತಕ್ಕ ಕಾಗದಗಳಲ್ಲಿ ತಿಳಿಸಲ್ಪಡುವ ಅಭಿಪ್ರಾಯಗಳಿಗೆ ನಾವು ಜವಾಬ್ದಾರರಾಗಲಾರೆವು. ಕ್ರಮವಾಗಿ [illegible] ದಸ್ತೂರ್ ಅಂಚೆವಾಗದವನ್ನು ಪ್ರಕಟಿಸಲಾರೆವು. [illegible] ಕಳುಹಿಸಲ್ಪಟ್ಟ ಕಾಗದಗಳು [illegible]

"IT RECOMENDS ITSELF"

ALL WHO SUFFER FIND SURE RELIEF.

LITTLE'S

ORIENTAL BALM

THE MOST EFFECTUAL MODERN REMEDY FOR PAIN.

ಲಿಟಲ್ ಅವರಿಂದ ತಯಾರಿಸಲ್ಪಟ್ಟ "ಓರಿಯಂಟಲ್ ಬಾಮ್" ಎಂಬ ಪೂರ್ವದೇಶ [illegible] ತೈಲವು ಸ್ವಲ್ಪ [illegible] ಮತ್ತು [illegible] ಇದರಿಂದ ಸಕಲ ವಾತರೋಗಗಳೂ, ವಾತಸಂಬಂಧಗಳಾದ [illegible] ನಿವೃತ್ತಿಯಾಗುವವು. ಮುಖ್ಯವಾಗಿ [illegible] ವಾತರೋಗಗಳು, [illegible], ನಡುನೋವು, ಕೀಲುವಾಯು, ಕಟಿವಾಯು, [illegible] ನೋವು, ತಲೆನೋವು, ತಿಮಿರವಾಯು ಮೊದಲಾದ ರೋಗಗಳೆಲ್ಲ ನಿಸ್ಸಂದೇಹವಾಗಿ ಬಹಳ ಪ್ರಯೋಜನವನ್ನುಂಟು ಮಾಡತಕ್ಕದ್ದು. ಈ ತೈಲವನ್ನು [illegible] ಸ್ಥಳಗಳಲ್ಲಿ [illegible] ಚೆನ್ನಾಗಿ [illegible] ನೋವುಗಳನ್ನು ನಿವೃತ್ತಿ [illegible] ಅರತಕ್ಷಣವೆ ಮತ್ತು ಬೇಗನೆ [illegible] ನಿವೃತ್ತಿಯಾಗುವದು. [illegible] ಈ ತೈಲವು ಅದ್ಭುತವಾದ ಮತ್ತು [illegible] ಅದ್ಭುತವಾದ ಈ ವಿಷಯವನ್ನು [illegible] ಈ ತೈಲವು [illegible] ರೋಗದಿಂದ ನರಳುವವರು, [illegible] ಮೊದಲಾದವರಿಗೆಲ್ಲ ಅಮೂಲ್ಯವಾದದ್ದು.

ಪರಿಶೀಲಕರ ಅಭಿಪ್ರಾಯವು.

ಐರ್ಲ್ಯಾಂಡ್ ದೇಶದ ಫಾರ್ಮಸ್ಯುಟಿಕಲ್ ಸೊಸೈಟಿಯ [illegible] ಸೊಸೈಟಿ [illegible] ಆಫ್ ಯೂರೊಪ್ ಎಂಬ ಗ್ರಂಥಕರ್ತರಾಗಿಯೂ, [illegible] ಇರುವ ಪ್ರೊಫೆಸರ್ ಟಿಚ್ ಬೋರ್ನ್ (C. R. TICHBORNE, L. L. D., F. C. S., M. R. I. A.,) ಅವರು ಅಭಿಪ್ರಾಯ [illegible] ತೈಲವನ್ನು [illegible] ತೈಲವೇ [illegible] ಈ ಮಿಶ್ರಣವು [illegible] ಈ ತೈಲವು [illegible]

ಇದರ ಕ್ರಯ—ಸೀಸೆ ಒಂದಕ್ಕೆ ೧ ರೂಪಾಯಿ.

ಇದು ಮಿಸ್ಟರ್ ಔಷಧ ಶಾಲೆಯಲ್ಲಿಯೂ, ಮದರಾಸ್ [illegible] ಬೀದಿಯಲ್ಲಿ, ೨೦ನೇ ನಂಬರ್ ಮನೆಯೊಳಗಿರುವ, ಎ. ಸಿ. ಬೆರ್ರಿಮನ್ ಯವರಲ್ಲಿಯೂ, [illegible] ಜೆ. ವೆಸ್ಟ್ ಯವರ [illegible] ಯಲ್ಲಿಯೂ, ಸಿ. ಕಪ್ಲನ್ ಅಂಡ್ ಕಂಪೆನಿಯವರಲ್ಲಿಯೂ, [illegible] ದೊರೆಯುವದು.

AGENTS.—Messrs, J. WEST, *Chemist, &c., Bangalore.*
CAPLAIN & Co. *Chemists, Bangalore.*
RIGGS & Co., *Chemists, Bangalore*; and of
MAHOMED YOUSOFF AND SONS, *The Cash Bazar, Bangalore*
A. C. BERRYMAN & Co.,
20 Sambodass Street Madras.

NOTICE.

VAIDYASARA SANGRAHA

A TREATISE ON THE PRINCIPLES OF

HINDU MEDICINE.

Price including Postage Rs 5 6 0

ವೈದ್ಯಸಾರ ಸಂಗ್ರಹ.

ಈ ಗ್ರಂಥಾಪೇಕ್ಷೆಯುಳ್ಳವರು ಮೊಬಲಗಿನೊಡನೆ ಕೆಳಗೆ ರುಜುಮಾಡಿರತಕ್ಕವರ ಹೆಸರಿಗೆ ಬರೆದುಕೊಂಡರೆ ಪುಸ್ತಕ ಕೂಡಲೇ ಕಳುಹಿಸಲ್ಪಡುವದು. ಮೊಬಲಗು ಇಲ್ಲದ ದರಖಾಸ್ತುಗಳಿಗೆ ಸುತರಾಂ ನಿಗೇಕೊಡಲ್ಪಡಲಾರದು.

ಇದರ ಕ್ರಯ ... ...ರೂ॥ ೫—೦—೦
ಪ್ಯಾಕಿಂಗ್ ಮತ್ತು ಅಂಚೆಹಾಸಲ್, ೦—೬—೦

ಟಿ. ಬಿ. ವೆಂಕಟಾಚಾರ್,
ಆಸ್ಪತ್ರೆರೋಡ ಬೆಂಗಳೂರು.

ವಿಶೇಷ ವರ್ತಮಾನ.



ಪೂನ ಚಿತ್ರಶಾಲೆಯಲ್ಲಿ [illegible] ಸ್ವಾಮಿ ಮೊದಲಾದ ದೇವತೆಗಳು, ಚರಿತ್ರೆಗಳ [illegible] ಸುಂದರವಾದ [illegible] ಬಣ್ಣದ [illegible] ಇವುಗಳನ್ನು [illegible] ಕ್ರಯ ಬಹಳ ಅಲ್ಪವಾಗಿದೆ [illegible] ಕಳುಹಿಸಲ್ಪಡುವದು.

ಪೂನ [illegible] ಚಿತ್ರಶಾಲೆಯ ಮ್ಯಾನೇಜರ

ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA.

MONDAY, MAY 28, 1888.

೧೮೮೮ನೇ ಮೇ ೨೮ನೇ ತಾ॥ ಸೋಮವಾರ.

ORIGIN OF BRAHMINICAL SUB DIVISIONS.

ಬ್ರಾಹ್ಮಣರಲ್ಲಿ ಅನೇಕ ಪ್ರಭೇದಗಳೇರ್ಪಟ್ಟಿರುತಿವೆಯಷ್ಟೆ. ಅವರ ಸ್ಮೃತಿ [illegible] ಪಂಚಗೌಡರೆಂದಲೂ ಹತ್ತು ಬಗೆಯವರಾಗಿ ವಿಭಜಿಸಲ್ಪಟ್ಟಿರುತ್ತಾರೆ. ಆಂಧ್ರ, ಕರ್ಣಾಟ, ದ್ರಾವಿಡ, ಮಹಾರಾಷ್ಟ್ರ, ಗುರ್ಜರ ಎಂಬ ಐದು ತರದವರು ಪಂಚದ್ರಾವಿಡರೆಂತಲೂ, ಸಾರಸ್ವತ, ಕಾನ್ಯಕುಬ್ಜ, ಗೌಡ, ಮೈಥಿಲ, ಉತ್ಕಲರೆಂಬ ಐದು ಬಗೆಯವರು ಪಂಚಗೌಡರೆಂದಲೂ ವ್ಯವಹಾರ [illegible] ಆಂಧ್ರರಲ್ಲಿ ಐದು ಭೇದಗಳೇರ್ಪಟ್ಟು ಅವು ಏಲೇಶ್ವರೋಪಾಧ್ಯಾಯರೆಂಬ ಒಬ್ಬ ಆಂಧ್ರ ಪಂಡಿತರಿಂದ ನಿಬಂಧಿಸಲ್ಪಟ್ಟವೆಂತಲೂ, ಏಲೇಶ್ವರ ವಿಜಯವೆಂಬ ಗ್ರಂಥದಲ್ಲಿ ಅನೇಕ ವಿಷಯಗಳು ವಿವರಿಸಲ್ಪಟ್ಟಿವೆಯೆಂತಲೂ ತಿಳಿಯಬರುವ ಅನೇಕರು ಆ ಗ್ರಂಥವನ್ನು ಹುಡುಕುತಿರುವರು. ಆದರೆ ಅದು ಅದ್ಯಾಪಿ ಈ ದೇಶೀಯರಿಗೆ ಲಭಿಸಿದ್ದು ತಿಳಿಸಲಿಲ್ಲವು. ಆಂಧ್ರ ಬ್ರಾಹ್ಮಣರು [illegible] ಮಾಡೋ [illegible] ರನೇ [illegible] ಆಂಧ್ರ ಪ್ರಕಾಶಿಕಾ ಪತ್ರಿಕೆಯಲ್ಲಿ ಬರೆಯಲ್ಪಟ್ಟಿರುವ ಅಂಶವು ಸಮಂಜಸವಾಗಿರುವದರಿಂದ ಆ [illegible] ಆಂಧ್ರರ ತಿಳುವಳಿಕೆಯ [illegible] ದಂತೆ ಪ್ರಕಟಿಸುವೆವು:—

"ಪ್ರಾಚೀನಕಾಲದಲ್ಲಿ ಆಂಧ್ರದೇಶದೊಳು ಏಲೇಶ್ವರೋಪಾಧ್ಯಾಯರೆಂಬ ಒಬ್ಬ ದ್ವಿಜೋತ್ತಮರು ವಸಿಸುತಲಿದ್ದರು. ಅವರೊಂದಾನೊಂದು ದಿನ ಅನೇಕ ಜನ ಪಂಡಿತರನ್ನು ಸೇರಿಸಿ ಅವರಿಗೆ ತಿಳಿಸಿದರೇನೆಂದರೆ, ಬರಬರುತ್ತ ಯುಗಧರ್ಮದಿಂದ ಬ್ರಾಹ್ಮಣ ಕರ್ಮವು [illegible] ಬರುವದರಿಂದ [illegible] ನಾನು ಒಂದು ನಿಬಂಧನೆಯ ಮಾಡುವೆನಾಗಿ [illegible] ನೀವು ಅಂಗೀಕರಿಸುವ ಪಕ್ಷಕ್ಕೆ ಮುಂದೆ ಆಂಧ್ರರಿಗೆಲ್ಲ ಬಹಳ ಶ್ರೇಯಸ್ಕರವಾಗಿರುವದು, ಆಂಧ್ರ ಬ್ರಾಹ್ಮಣ್ಯ ಸಾಮಾನ್ಯಕ್ಕೆ [illegible] ಪ್ರತಿಭೋಜನಗಳಾಗಬಹುದು, ಪರಂತು ಸಂಬಂಧ ವಿಷಯಮಾತ್ರ ನಿರೋಧಿಸಲ್ಪಡತಕ್ಕದ್ದು. ಹೀಗೆ ಮಾಡುವದರಿಂದ ಗುಣದೋಷಗಳು [illegible] ಕಾಲಗಳಲ್ಲಿ ಆಯಾ ನಾಡಿನವರಿಂದಲೇ [illegible] ಆಗಲಿಕ್ಕೆ ಸಾಧಕವಾಗಿರುವದೆಂದು ಹೇಳಿ ಅವರು ಒಪ್ಪಂಬಡಿಸಿ ಸಮಸ್ತ ಸಮಾಜ್ಯವನ್ನು ಐದು ಭಾಗಗಳಾಗಿ ವಿಂಗಡಿಸಿದರು. ಅವುಗಳು ವೆಲನಾಡು, ಮುರಿಕಿನಾಡು, ಕಾಸಲನಾಡು, ತೆಲಗಾಣ್ಯವೆಂಬವು. ವೆಲನಾಟಿಸವರಿಗೆ ವೆಲನಾಟಿನವರೆಂಬ ಹೆಸರುಂಟಾಗಿದೆ, ಹೀಗಿರಲಾಗಿ ಕೆಲವು ದಿವಸಗಳಿಗೆ ಪೂನಾದು ಆಂಧ್ರದೇಶದ [illegible] ದಕ್ಷಿಣಕ್ಕೆ ನಿಜವಾಗಿ ಬಂದು ನೆಲೆಸಿದರು ಆದ್ದರಿಂದ ವರು [illegible]—(ಪ್ರಾಚೀನಕಾಲದಲ್ಲಿ ಆಂಧ್ರದೇಶದಲ್ಲಿ [illegible] ಸಂಪ್ರದಾಯ [illegible] ನೆಲಗೊಂಡಿತ್ತು. ಪ್ರಾಬಲ್ಯ [illegible] ಅಲ್ಲಿ ನೆಲಗೊಂಡವರಾದ್ದರಿಂದ [illegible] ಕೆಲವು ಮುಟ್ಟಿಗೆ ಹಾರಿಯಲ್ಲಿ [illegible]) ನಾವು ಸಾಗಿ ಬ್ರಾಹ್ಮಣರು

ಸನ್ಯಾಸಿಗಳಿ ಅವರಿಗೇನೇ ದಾನಧರ್ಮಗಳಂ ಮಾಡಲ್ಯಾತಕ್ಕೆ ? ದ್ವಿಜರಾದವರನೇಕರಿರಲಿಲ್ಲವೆ? ನಮಗೆ ವೇದಾಧಿಕಾರವಿರಲಿಲ್ಲವೆ? ಆದಕಾರಣ ಇನ್ನುಮೇಲೆ ನಾವು ಬ್ರಾಹ್ಮಣರಂ ತೊರೆದು ಸರ್ವ ಕರ್ಮಗಳನ್ನೂ ಸ್ವೀಯರ ಮೂಲಕವಾಗಿಯೇ ಮಾಡಿಕೊಳ್ಳಬೇಕು. ಮುಂದೆ ಬ್ರಾಹ್ಮಣರ ಮಾನ್ಯಕ್ಷೇತ್ರಾದಿಗಳನ್ನೆಲ್ಲ ಜಪ್ತೀಮಾಡಿಸಬೇಕು, ಎಂದಾಲೋಚಿಸಿ ಆರೀತಿ ನಡೆಸಿದರು. ಬ್ರಾಹ್ಮಣರಿಗೆ ಅರಮನೆಗಳಲ್ಲಿ ನಿಂತುಹೋದ ಮಾನ್ಯ ಮಿರಾಶಿಗಳೆಲ್ಲ ಅನ್ಯಾಕ್ರಾಂತವಾದುದರಿಂದ ಅವರಿಗೆ ತಿಂಡಿಗಿಲ್ಲದೆ ಯಾಚನಾ ವೃತ್ತಿಯಂ ಕೈಗೊಳ್ಳಲು, ಮೇಲೆಕಂಡ ಅರಸರಂತೆಯೇ ಇತರರು ಸಹ ಅವರಂ ಗೌರವಿಸದೆ ಹೋದರು. ಅನನ್ಯಗತಿಕರಾದ ಆ ಬ್ರಾಹ್ಮಣರು ಅರಣ್ಯ ವಾಸಮಾಡಿ ಕಂದ ಮೂಲಾದಿಗಳ ಮೂಲಕ ಕಾಲಕ್ಷೇಪಣ ಮಾಡುತಲಿದ್ದರು. ಅವರಲ್ಲಿ ಕೆಲವರು ಪುರೋದೃಷ್ಟ್ಯಯುಕ್ತರಾಗಿ ಮಿಕ್ಕವರಂ ಕುರಿತು ನುಡಿದರೆಂತೆಂದರೆ—ಸಹೋದರರಿರಾ, ನಾವು ದಾರಾಪುತ್ರಾದಿಗಳನ್ನು ಬಿಟ್ಟು ಈ ಅರಣ್ಯ ವಾಸವನ್ಯಾತಕ್ಕೆ ಮಾಡಬೇಕು ? ನಾವು ಯಾತಕ್ಕೆ ಪುರಮಧ್ಯದೊಳದ್ದು ಸುಖಜೀವನಮಾಡಕೂಡದು ? ಆಪತ್ಕಾಲದಲ್ಲಿ ಬ್ರಾಹ್ಮಣನು ಇತರ ಧರ್ಮವನ್ನಂಗೀಕರಿಸಬಹುದೆಂದು ಮನ್ವಾದಿಗಳು ಸಾರಿದಿರಲಿಲ್ಲವೆ? ಅದಕ್ಕೆ ದ್ರೋಣ ಪ್ರಭೃತಿಗಳು ನಿದರ್ಶಕರಾಗಿರಲಿಲ್ಲವೆ ? ಅತರ ಬ್ರಾಹ್ಮಣ್ಯಕ್ಕೇನು ಕೊರತೆಯುಂಟಾಯಿತು? ಇನ್ನುಮೇಲೆ ನಾವೆಲ್ಲರು ಶಸ್ತ್ರ ವಿದ್ಯಾಭ್ಯಾಸವಂಮಾಡಿ ಅದರೊಳು ಸಮರ್ಥರಾದ ಬಳಿಕ ಶತ್ರುರಾಜರನ್ನು ಜಯಿಸಿ ರಾಜ್ಯವು ಸಂಪಾದಿಸಿ ಅವರಿಗಿಂತಲೂ ಸುಖವಾಗಿರಬಹುದೆಂದು ನುಡಿದರು. ಅನೇಕರದಂ ಅಂಗೀಕರಿಸಿ ಶಸ್ತ್ರವಿದ್ಯೆಯ ನ್ನಭ್ಯಸಿಸಿ ಪ್ರವೀಣರಾದರು. ಬಳಿಕ ಯೆಲ್ಲರೂ ಯುದ್ಧಸನ್ನದ್ಧರಾಗುವಾಗ್ಯೆ ಅದರಲ್ಲಿ ಕೆಲವರು ರಣರಂಗವೊಳರುವಕ್ಷತ್ರಿಯರೆಲ್ಲಿ, ನಾವೆಲ್ಲಿ, ಯುದ್ಧವೆಲ್ಲೀವು, ಇವೆಲ್ಲ ನಮ್ಮ ಯೋಗ್ಯತೆಗೆ ಮಿಾರಿದ್ದುದರಿಂದ ನಾವು ವನವಾಸಮಾಡುತ ತಪವಂಗೈದು ಮೋಕ್ಷವಂ ಸಂಪಾದಿಸುವೆವೆಂದು ಹೇಳಿ ಹಿಂಜರಿದರು. ಇವರಲ್ಲಿ ಮುಂದಿಟ್ಟಕಾಲಂ ಹಿಂದಕ್ಕೆತ್ತದೆ ಯುದ್ಧಕ್ಕೆ ಆರುಸಾವಿರಜನ ಹೊರಟದರಿಂದ ಇವರಿಗೆ ಆರುವೇಲವಾರುಎಂಬ ಹೆಸರುಂಟಾಯಿತು. ಆದದರಿಂದಲೇ ವೆಲನಾಟ ನಿಯೋಗಿಗಳಿಗೆಲ್ಲ ಆರುವೇಲವಾರು ಎಂಬ ಹೆಸರುಂಟಾಗಲಿಕ್ಕೆ ಕಾರಣವಾಯಿತು. ಪ್ರಥಮತಃ ಈ ಜನರೇ ಲೌಕಿಕ ವೃತ್ತಿಯಲ್ಲಿ ಪ್ರವರ್ತಿಸಿದ್ದರಿಂದ ನಿಯೋಗಿಗಳೆಂಬ ಹೆಸರು ಸಹ ಉಂಟಾಯಿತು. ಈಗಲೂ ವೆಲನಾಟನಿಯೋಗಿಗಳೇ ಶ್ರೇಷ್ಠರೆನ್ನಿಸಿ ಕೊಂಡಿದಾರೆ. ಈ ಆರುಸಾವಿರ ಜನಗಳೂ ಒಗ್ಗಟ್ಟಾಗಿ ಜಮೀನ್ದಾರರಮೇಲೆ ತಿರಿಗಿಬಿದ್ದು ದೇಶವನ್ನೆಲ್ಲ ಖುಲ್ಲವಮಾಡಲು ಜಮೀನ್ದಾರರೆಲ್ಲರು ಭಯಪಟ್ಟು ಒಂದು ಸಭೆಸೇರಿ ಅದಕ್ಕೆ ಸದರೀ ಆರುಸಾವಿರ ಮುಂದಿಯಂ ಕರೆಯಿಸಿ ಅವರ ಉದ್ದೇಶವಂ ಕೇಳಿದರು. ಆಗ ಅವರು, ನೀವೆಲ್ಲರೂ ಪ್ರಭುತ್ವಮಾಡುತ, ರಾಜಾರ್ಹಗಳಾದ ಭೋಗಭಾಗ್ಯಗಳನ್ನೆಲ್ಲ ಅನುಭವಿಸುತಲಿರುವಣವ್ವೂ, ನಾವು ಕಂದಮೂಲಾದಿಗಳಂ ಭಕ್ಷಿಸಿ ಅರಣ್ಯವಾಸ ಮಾಡುತಲಿರುವಣವ್ವೂ ನಮ್ಮ ಪೂರ್ವರ ಜನ್ಮಾಂತರ ಕರ್ಮಫಲವ್ವೋ? ನಿಮಗೆಮಾತ್ರ ಪ್ರಥಮತಃ ಪ್ರಭುತ್ವವು ಹ್ಯಾಗೆ ಸಿದ್ಧಿಸಿತು ? ನೀವೀಗ ಅನುಭವಿಸುತಲಿರುವ ರಾಜ್ಯವು ನಿಮ್ಮ ಪೂರ್ವಿಕರು ಅನ್ಯರಿಂದಸಂಪಾದಿಸಿದ್ದಲ್ಲವ್ವೊ ? ಹಾಗೆಯೇ ನಾವು ನಿಮ್ಮನ್ನು ಜಯಿಸಿ ಪಡೆಯುವೆವೆಂದು ಬ್ರಾಹ್ಮಣರು ಹೇಳಲು, ಅವರದಕ್ಕೆ ಭಯಪಟ್ಟು ನಾವಿಬ್ಬರು ಸ್ನೇಹಭಾವದಲ್ಲಿರಬೇಕೆಂತಲೂ, ನಿಮ್ಮ ಅಪೇಕ್ಷೆಯಂತೆ ನಡೆಸುವೆವೆಂತಲೂ, ಜಮೀನ್ದಾರರೆಲ್ಲರೂ ಭರವಸೆಕೊಟ್ಟರು. ಆಗ ಬ್ರಾಹ್ಮಣರು, ಈ ಲಾಗಾಯತು ಪ್ರಭುತ್ವವು ನಿಮಗೆ ಸೇರಿರಬೇಕೆಂತಲೂ, ಮಂತ್ರಿತ್ವವು ನಮಗೆ ಸೇರಿದ್ದಾಗಿರಬೇಕೆಂತಲೂ, ನಮಗೂ ರಾಜ ಎಂಬ ಪ್ರಶಸ್ತಿ ಯುಂಟಾಗಿರಬೇಕೆಂತಲೂ, ನಮ್ಮಲ್ಲಿ ವೈದಿಕರಾಗಿರತಕ್ಕವರನ್ನು ನಾವಿಬ್ಬರೂ ಸನ್ಮಾನಿಸತಕ್ಕದ್ದೆಂತಲೂ ನಿಬಂಧಿಸುಪಪಕ್ಷಕ್ಕೆ ನಾವು ರಾಜರಾಗುತ್ತೇವೆಂದು ಹೇಳಿದರಾಗಿ ಆಗ ಅದೇರೀತಿ ಸವಾತ್ಯ(?) ಪತ್ರಿಕೆಗಳೇರ್ಪಟ್ಟವು. ಆ ಲಾಗಾಯತು ಲೌಕಿಕವೃತ್ತಿಯೊಳಿರತಕ್ಕವರೆಲ್ಲ ನಿಯೋಗಿಗಳೆನ್ನಿಸಿಕೊಂಡರು. ಅಮಾತ್ಯರೆಂಬ ಅಬಿಧಾನವು ಅದು ಮೊದಲು ಅವರನ್ನನುವರ್ತಿಸುತ ಬಂತು. ಇದಲ್ಲದೆ ರಾಜು ಶಬ್ದವನ್ನು ಸದರೀ ಜನಗಳು ಅದ್ಯಾಪಿ ಉಪಯೋಗಿಸಿಕೊಳ್ಳುತಲಿದಾರೆ. ವೆಲನಾಟನಿಯೋಗಿಗಳಿಗೂ ವೆಲನಾಟ ವೈದಿಕರಿಗೂ ಸಂಬಂಧವು ತಪ್ಪಿಹೋಗಲಿಕ್ಕೆ ಕಾರಣವೇನಂದರೆ, ಗೋಲಕೊಂಡ ನವಾಬರಲ್ಲಿ ಗೋಪರಾಜು ರಾಮನ್ನ ಎಂಬವರು ದಿವಾನರಾಗಿದ್ದಾಗ್ಯೆ ತಮ್ಮ ತಂಗಿಯನ್ನು ಏಲೇಶ್ವರೋಪಾಧ್ಯಾಯರ ನಿಯಮಕ್ಕೊಳಪಟ್ಟ ತಮ್ಮ ನಾಡಿನ ಒಬ್ಬ ವೈದಿಕನಿಗೆ ಕೊಟ್ಟಿದ್ದರು. ಆ ಬ್ರಾಹ್ಮಣನಿಗೆ ಗ್ರಾಮ ಪೌರೋಹಿತ್ಯ ವಿದ್ದದರಿಂದ ಆತನ ಭಾರ್ಯೆಯೊಂದುದಿನ ಬಾಯಿನ ತೆಗೆದುಕೊಂಡು ಬರುತವಿದ್ದದು ಅಕೆಯ ಅಣ್ಣನು ಕಂಡು ಪರಿತಪಿಸಿ ಇನ್ನುಮುಂದೆ ನಿಯೋಗಿ ಮನೆಯ ಹೆಣ್ಣನ್ನು ವೈದಿಕರಿಗೆ ಕೊಡಕೂಡದೆಂದು ನಿಬಂಧನೆ ಮಾಡಿದರು. ಈ ನಿಯಮವು ವೆಲನಾಟು ತೆಲಗ್ಯ ನಿಯೋಗಿಗಳಲ್ಲಿ ಈಗಲೂ ಆಚರಣೆಯೊಳಿರುತಲಿದೆ. ಕರಣಕಮ್ಮ, ಕನ್ನಡಿ, ನಂದವರೀಕ, ಪ್ರಥಮಶಾಖಿ, ಇವರೆಲ್ಲರು ಆಂಧ್ರದೇಶೀಯರೆನಿಸಿಕೊಂಡಾಗ್ಯೂ ಮೇಲೆಕಂಡ ನಿಯಮಕ್ಕೊಳಪಟ್ಟವರಲ್ಲವು. ಮೇಲೆಕಂಡ ರಾಮಣ್ಣನವರು ಒಂದುಕಾಲದಲ್ಲಿ ಗೋಲಕೊಂಡೆಯಿಂದ ಸ್ವದೇಶಕ್ಕೆ ಹೋಗುವಾಗ್ಯೆ ಮಧ್ಯೆ ಕೊಂಡವೀಟು ಸೀಮೆಗೆ ಬಂದು ಒಬ್ಬ ಬ್ರಾಹ್ಮಣನ ಮನೆಯಲ್ಲಿ ಇಳಿದು ಭೋಜನ ಮಜ್ಜನಾದಿಗಳಗೆತ್ನಿಸುತಲಿರುವಾಗ್ಯೆ ಆದಿನ ಆಮನೆಯಬ್ರಾಹ್ಮಣನ ಪಿತೃಶ್ರಾದ್ಧವೆಂದು ತಿಳಿಯಬಂದದರಿಂದ, ಯಾತಕ್ಕೆ ಶ್ರಾದ್ಧಕ್ಕುಪಕ್ರಮಿಸಲಿಲ್ಲ ವೆಂದು ಆತನ ಭಾರ್ಯೆಯಂ ಕೇಳಿದರು. ಆಗ ಆಕೆಯು ಮಹಾಪ್ರಭೊ,ನನ್ನಪತಿಯು ಸರ್ಕಾರ್ ಕಂದಾಯವನ್ನು ಕೊಡಲಾರದೆ ಸರ್ಕಾರದವರ ಕಠಿಣ ನಿರ್ಬಂಧಕ್ಕೊಳಗಾಗಿರುವದರಿಂದ ಶ್ರಾದ್ಧ ನಿಂತು ಹೋಗಬೇಕಾಗಿದೆ ಯೆಂದು ನುಡಿದಳು. ಬಳಿಕ ರಾಮಣ್ಣನವರದಂ ಕೇಳಿ ಅನುತಾಪದೊಡನೆ ಹೋಗಿ ತಾವೇ ಬಾಕೀ ಮೊಬಲಗನ್ನು ಕೊಟ್ಟು ಬ್ರಾಹ್ಮಣನನ್ನು ನಿರ್ಬಂಧದಿಂ ತಪ್ಪಿಸಿ ಕರೆತಂದರು. ಬ್ರಾಹ್ಮಣನೇ ಗ್ರಾಮಾಧಿಕಾರಿಯಾಗಿದ್ದರೆ ಬ್ರಾಹ್ಮಣರಿಗೆ ಇಷ್ಟರ ನಿರ್ಬಂಧಕ್ಕೆ ಅವಕಾಶವಿರಲಾರದೆಂದಾಲೋಚಿಸಿ ಹಿಂದಿರುಗಿ ಗೋಲಕೊಂಡೆಗೆಹೋಗಿ ನವಾಬರ ದಯೆಯಂ ಸಂಪಾದಿಸಿ ಅನೇಕ ಸನ್ನದುಗಳಗೆ ಅವರಿಂದ ದಸ್ಕತ್ ಮೊಹರ್ಮಾಡಿಸಿಕೊಂಡು ಗಂಜಾಂ, ವಿಶಾಖಪಟ್ಣ, ರಾಜಮಹೇಂದ್ರವರ, ಗುಂಟೂರು, ನೆಲ್ಲೂರು, ಕಡಪಾ, ಕರ್ನೂಲ್, ಬಳ್ಳಾರಿ, ತಿರುಪತಿ, ಈ ಡಿಸ್ಟ್ರಿಕ್ಟುಗಳಲ್ಲಿರತಕ್ಕ ಆರವೇಲಿನವರಿಗೂ, ಅವರಿಲ್ಲದ ಪ್ರದೇಶಗಳಲ್ಲಿ ನಂದವರೀಕರು, ಬಡಗನಾಡು ಕನ್ನಡಿಗರು, ಪ್ರಥಮಶಾಖೆಯವರು, ಕರ್ಣಕಮ್ಮರು, ಈ ಜನರಿಗೂ, ಗ್ರಾಮ ಕರಣೀಕವಂಕೊಟ್ಟರೆಂದು ಹಿಂದಿನ ದಾಖಲೆಗಳಿಂದ ತಿಳಿಯಬರುತಿದೆ." ದ್ರಾವಿಡದೇಶದಲ್ಲಿ ಪಿಳ್ಳೆಯೆಂಬ ಶೂದ್ರರು ಶಾನಭೋಗರಾಗಿದಾರೆ. ಕರ್ನಾಟಕದೇಶದಲ್ಲಿ ಅಕ್ಕಸಾಲಿಗರು, ಜೈನ್ಯರು ವಗ್ಯೆರೆ ಅನೇಕ ಜಾತಿಯವರು ಶಾನಭೋಗಿಕೆಯಂ ಪಡೆದಿರುತ್ತಾರೆ. ಇವರು ಈ ದೇಶದಲ್ಲಿ ಅದ್ಯಾಪಿ ನೆಲೆಗೊಂಡಿರಲಿಕ್ಕೆ ನಿಜಾಂ ಸರ್ಕಾರದವರ ಸಂಬಂಧವಿಲ್ಲದಿರುವಣವೇ ಕಾರಣವಾಗಿರಬಹುದು. ಕರ್ನಾಟಕ, ದ್ರಾವಿಡ, ಮಹಾರಾಷ್ಟ್ರ, ಘೂರ್ಜರ ಬ್ರಾಹ್ಮಣರ ವಿಷಯದಲ್ಲಿ ಮೇಲೆಕಂಡಂತಾ ದಾಖಲೆಗಳು ಬಹುಶಃ ಇಲ್ಲದಿರಲಾರವು. ಇವರಪ್ಯೈಕಿ ಕರ್ನಾಟಕರ ವೃತ್ತಾಂತವನ್ನು ಮಿ|| ರೈಸ್‌ಯವರು ಕೆಲವು ಮಟ್ಟಿಗೆ ಕ್ರೋಢಿಸಿ ಬರೆದಿರುತ್ತಾರೆ. ನಮಗೆ ಯಾರಾದರೂ ಇವರಪೂರ್ವ ವೃತ್ತಾಂತವು ಸಮಗ್ರವಾಗಿ ಬರೆದು ಕಳುಹಿಸುವರಾದರೆ ಅದಂ ನಾವು ಉತ್ಸಾಹದೊಡನೆ ಈ ಪತ್ರಿಕಾ ಮೂಲಕ ಪ್ರಕಟಿಸುವೆವು.

RESULTS OF EVIL ASSOCIATION.

ದುರ್ಜನ ಸಹವಾಸವು ಮನುಷ್ಯನಿಗೆ ಯಾವಾಗಲೂ ದುಸ್ಸಹವಾದ ಮನೋವ್ಯಥೆಯನ್ನುಂಟುಮಾಡತಕ್ಕದ್ದಾಗಿರುತಿದೆ. ದುರ್ಜನನು ಸರ್ವೋಪಾಯಗಳಿಂದಲೂ ಅನ್ಯರು ವಂಚನೆಮಾಡಿ ಅವರ ಸ್ವತ್ತನ್ನು ಅಪಹರಿಸಿಕೊಳ್ಳುವದರಲ್ಲಿಯೂ ಅನ್ಯರಲ್ಲಿಲ್ಲದ ದೋಷಗಳನ್ನಾರೋಪಿಸುವದರಲ್ಲಿಯೂ ಆಂತರವಾದ ಕೋರಿಕೆಯುಳ್ಳವನಾಗಿದ್ದಾಗ್ಯೂ ಹೊರಗೆ ಬಹಳ ವಿನೀತನಂತೆ ನಟಿಸುತಲಿರುವನು. ಅವನ ಮುಖವು, ಒಳಗೆ ನೊಸಳೆಇರತಕ್ಕ ನಿರ್ಮಲವಾದ ಸರೋವರದಂತೆ, ಮೇಲೆ ಪ್ರಸನ್ನವಾಗಿರುವದು. ಅವನ ದೃಷ್ಟಿಯು ಮೋಹಕವಾದ ಉರಗಾಕ್ಷಿಯಂತಿರುವದು. ಅವನ ಮಾತುಗಳಾದರೋ ಕೇಳುವವರ ಮನಸ್ಸಿಗೆ ಬಹಳ ಆಪ್ಯಾಯಕರವಾಗಿ ವಿಷಮಿಶ್ರವಾದ ಕ್ಷೀರವಂತೆ ಅತಿಮಧುರವಾಗಿರುವವು. ಮುಖ್ಯವಾಗಿ ಅವನ ಆಕಾರವೇ ಪರವಂಚನೆಗೆ ಸಾಧನ ರೂಪವಾಗಿರುವದು ಸಜ್ಜನನು ಸಾಧಾರಣವಾಗಿ ಮನುಷ್ಯರ ಮರ್ಮವಂ ಕಂಡು ಹಿಡಿಯಲಾರನೆ "ಆತ್ಮವತ್ಸರ್ವಭೂತಾನಿ" ಎಂಬಾ ಲೋಕೋಕ್ತಿ ಪ್ರಕಾರ ತನ್ನಂತೆಯೇ ಇತರರೂ ಶುದ್ಧವಾದ ಹೃದಯವುಳ್ಳವರಾಗಿರುವರೆಂದೆಣಿಸಿ ದುರ್ಜನರಲ್ಲಿಸ್ನೇಹವಂಬೆಳಸಿ ತನ್ನ ಮರ್ಮವನ್ನೆಲ್ಲ ಅವನಿಗೆ ತಿಳಿಸುವದಲ್ಲದೆ ತನ್ನ ಸ್ವತ್ತನ್ನುಅವನ ಸ್ವಾಧೀನದಲ್ಲಿಡುವನು. ಸದರೀ ದುಷ್ಟನಾದರೋ, ಅಂತಾ ಸಾಧು ತನ್ನವಶವಾದನೆ, ಕೊಬ್ಬಿದ ಕುರಿಯನ್ನು ಹಿಡಿದ ತೋಳನಂತೆ, ಅಂತೇ ಬಹಳ ಸಂತೋಷಪಡುವನು. ದುರ್ಜನ ಸಹವಾಸಕ್ಕೊಳಪಟ್ಟ ಸಾಧು ವಾದವನು, ಹಾವು ಸೇರಿರುವ ಹಾಸಿಗೆಯಲ್ಲಿ ಮಲಗಿರತಕ್ಕವನಂತೆಯೂ, ದುರ್ಜನನ ದ್ರೋಹವನ್ನರಿಯದೆ ವ್ಯಾಕುಲತೆತು(?) ಪ್ರಬಲ ಅಪಾಯಕ್ಕೆ ಗುರಿಯಾಗುತ್ತಾನೆ. ಆದರೆ ತನಗೆ ಬರುವ ವಿಪತ್ತನ್ನು ತಾನು ಶುದ್ಧಾಂಗವಾಗಿ ಅರಿಯದೆ ಪ್ರಜ್ಞಾಹೀನನಾಗಿ ಮೃತ್ಯುವಿಗೆರೆಯಾಗಿದ್ದರೂ ಸರ್ವಜ್ಞನಾದ ದೇವರ ಕಟಾಕ್ಷದಿಂದ ಸದರೀ ಸಾಧುವಾದವನಿಗೆ ದ್ರೋಹಿಯ ಮೂಲಕ ಪ್ರಾಪ್ತವಾಗುವ ಆಪತ್ತುಗಳೆಲ್ಲ ತತ್‌ಕ್ಷಣದಲ್ಲೇ ನಿವೃತ್ತಿಯಾಗಿ ನಿಷ್ಕಳಂಕವಾದ ಅವನ ಹೃದಯಕ್ಕೆ ತಕ್ಕಫಲ ಪ್ರಾಪ್ತವಾಗದೆಹೋಗಲಾರದು. ಮಿತ್ರದ್ರೋಹಕ್ಕೂ, ಅಪ್ರಾಮಾಣಿಕತೆಗೂ ನಿದರ್ಶನರೂಪವಾಗಿ ಗತವಾರದಲ್ಲಿ ಈಪುರದೊಳು ನಡೆದಂತೆ ನಮ್ಮ ಕೇಳ್ವಿಕೆಗೆ ಬಂದ ಒಂದು ವಿಚಿತ್ರವಾದ ವೃತ್ತಾಂತವನ್ನಿದರಡಿ ತಿಳಿಸುವೆವು ಹೇಗೆಂದರೆ .— ಪೂರ್ವದೊಳದೇಶದಲ್ಲಿ ಸರ್ಕಾರ್ ನೌಕರಿ ಮಾಡಿ ಯಥೋಚಿತ ಗೌರವವುಳ್ಳವನಾಗಿದ್ದವರ ಕುಮಾರನಾಗಿಯೂ, ಸ್ವತಃ ವಿದ್ಯಾವಂತನಾಗಿಯೂ, ನಾಲ್ವರ ಸ್ನೇಹಕ್ಕೆ ವಿಷಯನಾಗಿಯೂ, ಕೂಡಿದವಟ್ಟಿಗೆನುಜೀವನಕ್ಕೆ ಬೇಕಾದಷ್ಟು ದ್ರವ್ಯೋಪಪತ್ತಿಯುಳ್ಳವನಾಗಿಯೂ, ಮೈಸೂರು ಗವರ್ನಮೆಂಟಿಗೆ ಸೇರಿದ್ದೊಂದು ಇಲಾಖೆಯಲ್ಲಿ ತನ್ನ ಯೋಗ್ಯತಾನುಗುಣವಾಗಿ ಮಾಹೇಯಾನಾ ೨೦ ರೂಪಾಯಿಗಳ ಸಂಬಳ ಪಡೆಯುತಲಿರತಕ್ಕವನಾಗಿಯೂ, ಇರುವನೊಬ್ಬಾತನು ತನಗೆ ಈಶ್ವರಕೃಪಾಲಬ್ಧವಾದ ಪ್ರಕೃತ ಐಶ್ವರ್ಯದಿಂ ತೃಪ್ತನಾಗದೆ, ಅದಂ ವೃದ್ಧಿಗೊಳಿಸಬೇಕೆಂಬ ಅತ್ಯಾಶೆಯೊಡನೆ ತಾನು ಸರ್ಕಾರ್ ನೌಕರನಾಗಿರುವದಂ ಸಹ ಮರೆತು ಗೂಢವಾಗಿ ಜವಾಹಿರ್ ದಳ್ಳಾಳಿ ವ್ಯಾಪಾರಮಾಡಲಾರಂಭಿಸಿದನು. ಯೆಲ್ಲರಿಗೂ ಭ್ರಾಮಕವಾಗಿದ್ದ ಆತನ ನಡತೆಯಿಂದ ಆತನಲ್ಲಿ ಇತರ ವರ್ತಕರಿಗೆಲ್ಲ ವಿಶೇಷ ನಂಬಿಕೆ ಹುಟ್ಟಿದ್ದರಿಂದ ಅವರು ಭಾರೀ ಕ್ರಯಗಳುಳ್ಳ ಮಾಲಿಗಳನ್ನು ಕೊಡಲಿಕ್ಕೂ ತೆಗೆದುಕೊಳ್ಳಲಿಕ್ಕೂ ಅನುಮಾನಿಸದೆ ವ್ಯಾಪಾರ ನಡೆಸುತಲಿದ್ದರು. ಈಗ್ಗೆ ಏಳೆಂಟುದಿನಗಳ ಹಿಂದೆ ಈಊರು ವರ್ತಕರರೊಳ್ಳೊಬ್ಬನು ೫೦೦ ರೂಪಾಯಿಗಳ ಕ್ರಯವುಳ್ಳ ಒಂದು ವಜ್ರದ ಪದತ್ತು ಕಡಕವನ್ನು ಬಿಕರೀಗಾಗಿ ಮೇಲೆಕಂಡ ಸುಜನನ ಬಳಿ ಕೊಟ್ಟು ಹೋಗಿದ್ದನು. ಹೀಗಿರುವಲ್ಲಿ ಸದರೀ ಪದನವನ್ನು ಆತನ ತಮ್ಮನೇ ಅಪಹರಿಸಿಕೊಂಡು ಫರಾರೀಯಾದನು. ಆದರೆ ತಮ್ಮನ ಯೋಗ್ಯತೆಯೂ ಪ್ರಭಾವವೂ ಹಿಂದೆ ಅನೇಕ ಸಂದರ್ಭಗಳಲ್ಲಿ ವ್ಯಕ್ತಗಳಾಗಿದ್ದದರಿಂದ ಈಗಲೂ ಸದರೀ ಮಾಲನ್ನು ಅತನೇ ತೆಗೆದುಕೊಂಡುಹೋಗಿರುವನೆಂಬ ನಂಬಿಕೆಯು ಅಣ್ಣನಿಗೆಸಂಪೂರ್ಣವಾಗಿ ಉಂಟಾಗದೆಹೋಗಲಿಲ್ಲವು. ಹೀಗಿದ್ದಾಗ್ಯೂ ವರ್ತಕನು ಬಂದುತನ್ನ ಮಾಲನ್ನುಮರಳಿ ಕೇಳಿದ ಕಾಲದಲ್ಲಿ ಅದು ಕಳವಾದುದನ್ನು ಹೊರಪಡಿಸದೆಯೂ, ಅವರ ಕ್ರಯವನ್ನಾದರು ಕೊಡುವೆನೆಂದು ಹೇಳದೆಯೂ, ತನ್ನ ತಮ್ಮನ ಯೋಗ್ಯತೆಯನ್ನು ಪ್ರಕಟಿಸದೆಯೂ, ಉತಾಪೇ ಮಾತುಗಳನ್ನಾಡಿ ಒಡವೆಯನ್ನು ಆಗಲೇ ಕೊಟ್ಟದ್ದಾಗ್ಯೂ ಮರಳಿಬಂದು ಕೇಳುತ್ತೀರಾ ಎಂದು ಜಬರಿಸಿ ಅನೇಕ ಪ್ರಮಾಣಗಳಂಮಾಡಿ ಕಳುಹಿಸಿಬಿಟ್ಟನು. ಪರಂತು ವರ್ತಕನಿಗೆ ತಕ್ಕ ರುಜುವಾತು ಯಿಲ್ಲದ್ದರಿಂದ ಸುಮ್ಮನಿರಬೇಕಾಯಿತು. ಆದಾಗ್ಯೂ ವರ್ತಕನು ತನಗುಂಟಾದ ನಷ್ಟಕ್ಕಾಗಿಯೂ, ತಾನು ಸ್ನೇಹ ಮಾಡಿದವನ ಅಪ್ರಮಾಣತೆಗಾಗಿಯೂ ಬಹಳ ಸಂಕಟಪಡುತ ಪ್ರಸಿದ್ಧಗಳಾದ ಪ್ರದೇಶಗಳಲ್ಲೆಲ್ಲಾ ತಕ್ಕಜನರನ್ನಿಟ್ಟು ಮಾಲ್ ಪತ್ತೆಯಬಗ್ಯೆ ತರದೂದ್ ಮಾಡುತಲಿದ್ದನು. ಹೀಗಿರುವಲ್ಲಿ ಒಡವೆಯನ್ನಪಹರಿಸಿದ್ದವನು ಸಿಕ್ಕಿದ್ದರಿಂದ ಅವನನ್ನು ವರ್ತಕನೇ ಹಿಡಿಸಿ ಕ್ರಮವಾದ ಸ್ಥಾನಕ್ಕೆ ಕಳುಹಿಸಿ ಅಲ್ಲಿ ತಾತನ ಪ್ರಕರಣಗಳಂಮಾಡಿಸಲು ತನ್ನಲ್ಲಿದ್ದ ಮಾಲನ್ನು ಕೊಟ್ಟುಬಿಟ್ಟನು. ಕಡೆಗೆ ಸದರೀ ಹುಡುಗನನ್ನುಬಿಡಿಸಿಕೊಂಡು ಬರುವಬಗ್ಯೆ ವರ್ತಕನನ್ನು ಸಮಾಧಾನಪಡಿಸಲಿಕ್ಕೂ, ಮನುಮುವರಿಗೆ ವಿಶೇಷ ಧನ ವ್ಯಯ ಮಾಡಬೇಕಾಯಿತು. ತರುವಾಯ ಮೇಲೆಕಂಡ ದಳ್ಳಾಳಿ ವ್ಯಾಪಾರ ಮಾಡಲೆತ್ನಿಸಿದಾತನಿಗೆ ಹೊರಗೆ ಮುಖತೋರಿಸಲಿಕ್ಕೆ ಆಸ್ಪದವಿಲ್ಲದೆ ಹೋಯಿತಲ್ಲದೆ ಆತನ ಅಪ್ರಮಾಣಿಕತೆಯು ಸರ್ವತ್ರ ವ್ಯಾಪಿಸಲಾರಂಭಿಸಿತು. ವಿಷಬೆರಸಿ ಆಗಂತುಕನಿಗಾಗಿ ಪ್ರತ್ಯೇಕವಾಗಿಟ್ಟಿದ್ದ ಪದಾರ್ಥವನ್ನು ಮನೆಯ ಯಜಮಾನನೇ ಸ್ವತಃ ತಿಳಿಯದೆ ತಿಂದು ಪ್ರಾಣವಂ ಬಿಟ್ಟಂತೆ ವರ್ತಕನಿಗೆ ಮಾಡಲೆತ್ನಿಸಿದ ಮೋಸವು ಕಡೆಗೆ ತನ್ನ ಮಾನಹಾನಿಗೂ ಧನವ್ಯಯಕ್ಕೂ ಕಾರಣವಾಗಿ ಪರಿಣಮಿಸಿತು. ಹೀಗೆ ದುರ್ಜನನ ಕೈಗೆ ಸಿಕ್ಕಿದವರಿಗೆ ಪ್ರಾಣಮಾನದ ಪಗಳಿಗೆ ಅಪಾಯವು ನಿಜವಾಗಿದ್ದಾಗ್ಯೂ ಒಂದೊಂದುಕಡೆ ದೈವಸಂಕಲ್ಪದಿಂದ ಅವರು ತಪ್ಪಿ ಬದುಕುತ್ತಾರೆ. ಏವಂಚ ಮನುಷ್ಯನು ಗುಣದೋಷಗಳ ಪರೀಕ್ಷೆಮಾಡದೆ ಏಕಾಏಕಿ ಅನ್ಯನನ್ನು ನಂಬಕೂಡದೆಂಬದೇ ನಮ್ಮ ತಾತ್ಪರ್ಯವಾದದರಿಂದ ಅದಕ್ಕೆ ಮೇಲೆಕಂಡ ವಿಷಯವು ಸಾಕಾದ ದೃಷ್ಟಾಂತವಾಗಿರುತಿದೆ.

GOVERMENT INTERFERENCE IN RELIGIOUS MATTERS.

ಬ್ರಿಟಿಷ ಗವರ್ನಮೆಂಟಿನವರು ಸರ್ವಾಂಶದಿಂದಲೂ ತಮ್ಮ ಪಾಲನೆಗೊಳಗಾದ ಪ್ರಜೆಗಳಿಗೆ ಹಿತಂಕರರೆನಿಸಿಕೊಂಡಿದ್ದಾಗ್ಯೂ ತಮ್ಮ ಮತಕ್ಕೆ ವಿರುದ್ಧಗಳಾದ ಅನ್ಯಮತ ಧರ್ಮಗಳಂ ರಕ್ಷಿಸುವ ವಿಷಯದಲ್ಲಿ ತಾಟಸ್ಥ್ಯಭಾವವನ್ನಾದರೂ ವಹಿಸುತ್ತಾರೆ, ಅಥವಾ ತಾವು ನಮೂದಿಗೆ ಬಾರದೆ ತಮ್ಮದ್ವೇಷವನ್ನೂ ಕಾಪಟ್ಯವನ್ನೂ ಹೊರಪಡಿಸುತ್ತಾರೆ. ಗವರ್ನಮೆಂಟಿನವರು ತಾಟಸ್ಥ್ಯವಂ ವಹಿಸುವ ಪಕ್ಷಕ್ಕೆ ಅವರು ಅನ್ಯಮತಸ್ಥರಾದ ಪ್ರಜೆಗಳೆಲ್ಲರ ವಿಷಯದಲ್ಲಿಯೂ ನ್ಯಾಯವಾಗಿ ನಡೆಸಿಕೊಂಡು ಬರಬೇಕಲ್ಲದೆ ಅನ್ಯಮತದವರೊಬ್ಬರಿಗೂ ವಂಚನೆಮಾಡಲಾಗದು. ಒಂದು ಮತದ ವಿಷಯದಲ್ಲಿ ತಮ್ಮ ಸಂಬಂಧವಂ ನಿವೃತ್ತಿಸಿಕೊಂಡು ಮತ್ತೊಂದು ಮತವಂ ಪೋಷಿಸಿದರೆ, ಒಂದು ನಿಜವಾದದ್ದೆಂತಲೂ, ಮತ್ತೊಂದು ಸುಳ್ಳಾದ್ದೆಂತಲೂ, ಅವರು ಸ್ಪಷ್ಟವಾಗಿ ಒಪ್ಪಿಕೊಂಡಂತೆ ಯಾಗುತಿದೆ. ಸರ್ಕಾರದವರು ತಟಸ್ಥರಾಗಿರಬೇಕೆಂದಪೇಕ್ಷಿಸಿದರೆ ಅವರು ತಮ್ಮ ಗುಡಿಗಳನ್ನೂ ಮಸಜೀದ್‌ಗಳನ್ನೂ ಹಿಂದೂಮಹಮದಿಯರ್ ಮೊದಲಾದ ಇತರಜಾತಿ

ಯವರು ಕೊಡುವ ಶಿರಿಗೆಗಳಿಂದ ಕಾಪಾಡುವದಾಗಲಿ, ಸ್ವಮತ ಪ್ರಚಾರದಲ್ಲಿ ಸ್ವಜಾತೀಯರಿಗೆ ಬೇಕಾದ ಪ್ರೋತ್ಸಾಹಗಳನ್ನುಂಟುಮಾಡುವದಾಗಲಿ, ಮಿಷನೆರಿಗಳ ವರ್ತನೆಗಳನ್ನಾಕ್ಷೇಪಿಸಿ ಇತರ ಜಾತಿಯವರ್‍ಯಾರಾದರೂ ಫಿರ್ಯಾದಿ ಮಾಡಿಕೊಂಡರೆ ಅದಕ್ಕೆ ಕಿವಿ ಕೊಡದೆ ಯಿರುವದಾಗಲಿ, ಅನ್ಯಮತದವರ ತಪ್ಪು ಅಲ್ಪವಾಗಿದ್ದರೂ ಅದು ಪ್ರಬಲಪಡಿಸಿ ವಿರುದ್ಧವಾಗಿ ತೀರ್ಮಾನಿಸುವದಾಗಲಿ, ಯುಕ್ತವೆಂದು ಯಾರೂ ನುಡಿಯಲಾರರು. ಈಚೆಗೆ ಕ್ರಿಶ್ಚಿಯನ್ ಕಾಲೇಜ ವಿದ್ಯಾರ್ಥಿಗಳ ವಿಷಯದಲ್ಲಿ ವಿದ್ಯಾಭ್ಯಾಸದ ಇಲಾಖಾ ಡೈರೆಕ್ಟರವರು ಕೊಟ್ಟ ಹುಕುಂ ಕೇವಲ ಪಕ್ಷಪಾತರೂಪವಾದದ್ದೆಂಬ ಅಂಶ ಪ್ರಸಿದ್ಧವಾಗಿಯೇಯಿದೆ. ಬ್ರಿಟಿಷ ಗವರ್ನಮೆಂಟಿನವರು, ತಾವು, ಈ ಕಾಲದಲ್ಲಿ ಇಂಡ್ಯದೇಶದೊಳು ಸರ್ವತ್ರ ಅಖಂಡಾಧಿಪತ್ಯವುವಹಿಸಿ ಮಹಾಮಹಿಮೆಯುಳ್ಳವರಾಗಿವೇವೆಂದೆಣಿಸಿ, ತಮ್ಮ ಇಷ್ಟಾನುಸಾರ ಮಾಡತೊಡಗಿದರೆ, ಅದಕ್ಕೆ ವಿರುದ್ಧವಾಗಿ ಬುದ್ಧಿನಿರ್ಧರಿಸಿ ತಿಳಸುವಷ್ಟು ಶಕ್ತರಾದವರು ಕಾಲಗತಿಯಿಂದ ನಷ್ಟರಾಗಿ ಹೋದದ್ದರಿಂದ ಈಗ ಒಬ್ಬರೂ ಅವರಂಪ್ರತಿಭಟಿಸುವಂತಿಲ್ಲವು. ಹಾಗಿಲ್ಲದೆ ಲೋಕದಲ್ಲಿ ಪುರುಷಸಾಮಾನ್ಯವಾದ ನ್ಯಾಯಕ್ಕೂ, ನೀತಿಗೂ, ಧರ್ಮಕ್ಕೂ, ಒಳಪಡಬೇಕಾದದ್ದು ಯುಕ್ತವೆಂದು ಭಾವಿಸಿದರೆ, ಪಕ್ಷಪಾತಿಗಳಾಗಿ ಅನ್ಯರ ಹೃದಯವು ದುಃಖಿಸುವಂತೆ ಮಾಡುವದು ಸರಿಯಲ್ಲವೆಂದು ದೃಢವಾಗಿ ಹೇಳುತ್ತೇವೆ. ಈ ದೇಶದಲ್ಲಿ ಕ್ರಿಶ್ಚಿಯನ್ ಮಿಷನೆರಿಗಳ ಪ್ರಾಬಲ್ಯಕ್ಕೂ, ಅನ್ಯಮತಸ್ಥರ ವಿಷಯದಲ್ಲಿ ಅವರು ಮಾಡುವ ದೂಷಣ ತಿರಸ್ಕಾರಗಳಿಗೂ, ಸರ್ಕಾರದವರು ಅನುಮೋದಕರಾಗದಿರುವರಾದರೆ ಅವರಿಷ್ಟುಕಾಲ ಅನ್ಯರಾಜ್ಯದಲ್ಲಿ ನೆಲಸಿರಲಾರರು. ಮತ್ತು ಅವರ ಮತವಿಲ್ಲಿ ಇಷ್ಟರಮಟ್ಟಿಗೆ ಪ್ರಸಿದ್ಧಿಗೆ ಬಂದಿರಲಾರದು. ಯಾತಕ್ಕೆಂದರೆ, ಕ್ರಿಶ್ಚಿಯನ್ ಮತದೊಳಗಿನ ಶ್ರೇಷ್ಠ ಭಾಗಗಳನ್ನು ತನ್ಮತಾವಲಂಬಿಗಳೇ ಹೇಳನ ಮಾಡುತಲಿರುವಾಗ್ಯೆ ಅದರಗುಣವಂ ಮೆಚ್ಚಿ ವಿವೇಕಿಗಳೊಬ್ಬರೂ ಅದರಲ್ಲಿ ಹೋಗಿಸೇರುವದಿಲ್ಲವು ಪರಂತು ಒಬ್ಬನು ಸ್ವಮತವಂ ಬಿಟ್ಟು ಅನ್ಯಮತವನ್ನವಲಂಬಿಸಬೇಕಾದರೆ ಮುಖ್ಯ ಕಾರಣಗಳು ನಾಲ್ಕು ಇರುತಿವೆ, ಅವುಗಳ್ಯಾವವೆಂದರೆ,—೧. ಸ್ವಮತ ವಿಷಯಕವಾದ ತಿಳುವಳಿಕೆ ಸುತ್ತಾಂಗ ಇಲ್ಲದೆ ಮೃಗಗಳಂತೆ ಅಜ್ಞಾನಿಗಳಾಗಿರುವದು ೨—ಅಧಿಕವಾದ ಧನಾಪೇಕ್ಷೆ. ೩-ಅನ್ಯಜಾತಿ ಸ್ತ್ರೀಯರಲ್ಲಿ ವಿಶೇಷವ್ಯಾಮೋಹವುಂಟಾಗಿರುವದು, ೪—ಪ್ರಾಣಭೀತಿ. ಈನಾಲ್ಕರಲ್ಲಿ ಯಾವದಾದರೊಂದರಿಂದಲೇ ಸರ್ವದೇಶಗಳಲ್ಲಿಯೂ ಜನಗಳು ಪರಮತಗಳಲ್ಲಿ ಪ್ರವೇಶಿಸಿರುತ್ತಾರೆಯೇ ಹೊರ್ತು ಬೇರೆಕಾರಣಗಳಿಂದಲ್ಲವೆಂದು ದೃಢವಾಗಿ ಹೇಳುವೆವು. ಪೂರ್ವಕಾಲದಲ್ಲಿ ಇಂಡಿಯಾದೇಶವನ್ನು ಆಕ್ರಮಿಸಿ ಪಾಲಿಸುತಲಿದ್ದ ಸುಲ್ತಾನ್ ಮಹಮುದ್, ಔರಂಗಜೇಬ ಮೊದಲಾದ ಮುಸಲ್ಮಾನ್ ಅರಸರು ಕೆಲವರೂ, ಇರೋಪ ಖಂಡದಲ್ಲಿದ್ದ ಹಿಂದಿನ ಅರಸರು ಕೆಲವರೂ, ತಮ್ಮ ಮತಗಳನ್ನು ಪ್ರಚಾರದಲ್ಲಿ ತರುವ ಬಗ್ಗ್ಯೆ, ಅದಕ್ಕೆ ಜನರಂ ಸೇರಿಸುವ ಬಗ್ಗ್ಯೆ ಪ್ರಜೆಗಳನ್ನು ಬಹಳ ಕ್ರೂರವಾಗಿ ಬಲಾತ್ಕಾರ ಪಡಿಸಿದರೆಂತಲೂ, ಹಾಗೆ ಸೇರದೆ ಹೋದವರನ್ನೆಲ್ಲ ನಾಶಮಾಡಿದರೆಂಬದಾಗಿಯೂ ಪೂರ್ವಗ್ರಂಥಗಳಿಂದ ತಿಳಿಯಬರುತಿದೆ. ಅದರ ತರುವಾಯ ಕರ್ಣಾಟದೇಶವನ್ನಾಕ್ರಮಿಸಿದ ಟೀಪೂಸುಲ್ತಾನರು ಸಹ ಬಲಾತ್ಕಾರ ಪೂರ್ವಕ ಅನೇಕ ಜನರಂ ತಮ್ಮ ಮತದಲ್ಲಿ ಸೇರಿಸಿಕೊಂಡರೆಂದು ತಿಳಿಯಬರುತಿದೆ. ಬ್ರಿಟಿಷ್ ಗವರ್ನಮೆಂಟಿನವರು ಸ್ವಮತಾಭಿನಿವೇಶವುಳ್ಳವರಾಗಿದ್ದರೂ ಪೂರ್ವದ ಮೊಗಲೈ ಅರಸರಂತೆ ತಮ್ಮ ಶಸ್ತ್ರ ಬಲದಿಂದ ಅನ್ಯರು ಹಿಂಸಿಸಿ ಸ್ವಮತವಂ ವೃದ್ಧಿಗೊಳಿಸಬೇಕೆಂಬದುರಭಿಮಾನವುಳ್ಳವರಲ್ಲವಾದದರಿಂದ ಅಂತಾ ಗುಣ ಅವರಿಗುಂಟಾಗುವ ತನಕ (ದೈವಕೃಪೆಯಿಂದೆಂದಿಗೂ ಉಂಟಾಗಬೇಡವು) ನಾಲ್ಕನೇದಾದ ಪ್ರಾಣಭೀತಿ ಪ್ರಯುಕ್ತವಾದ ವರ್ಣಸಾಂಕರ್ಯಚಿಂತೆಗೆಲವಕಾಶವಿರಲಾರದು. ಪಂಡಿತನಾಗಿಯೂ ಶಾಸ್ತ್ರಜ್ಞನಾಗಿಯೂ, ಸಕಲವಿಷಯಗಳಲ್ಲಿಯೂ ಗುಣದೋಷವಿಮರ್ಶೆ ಮಾಡುವಷ್ಟರ ಯೋಗ್ಯತೆಯುಳ್ಳವನಾಗಿಯೂ ಇರತಕ್ಕವನ್ಯಾವಾಗಲೂ ಸ್ವಮತವಂ ತ್ಯಜಿಸಿ ಪರಮತದಲ್ಲಿ ಪ್ರವೇಶಿಸಲಾರನಾಗಿ ಕ್ರಿಸ್ತುಮತದಲ್ಲಿ ಸೇರುವವರೆಲ್ಲರೂ ಪ್ರಾಯೇಣ ಅಜ್ಞಾನವುಳ್ಳವರೆಂದು ಭಾವಿಸಲಾಗದು. ಆದದರಿಂದ ಮತಭ್ರಷ್ಟರಾದವರೆಲ್ಲರೂ ಸಾಧಾರಣವಾಗಿ ಒಂದೆರಡು ಮೂರನೇ ಕಾರಣಗಳಿಂದ ತಮ್ಮ ಮತವಂ ತೊರೆದು ಬಳಿಕ ಅನುತಾಪ ಪಡತಕ್ಕವರಾಗಿದಾರೆಯೇ ಹೊರ್ತು ಅವರು ದುರ್ಬಲಗಳಾದಸದರೀ ಕಾರಣಗಳಂಬಿಟ್ಟು ತತ್ವವಂ ಹಿಡಿದು ವಿಮರ್ಶಿಸಿ ನೋಡುವರಾದರೆ ಅವರಿಗೆ ಸರ್ವಮತಗಳೂ ಸಮಾನವೆಂದು ತೋರುವದಲ್ಲದೆ ಜಗತ್ಕಾರಣನಾದ ದೇವರನ್ನು ಭಜಿಸಬೇಕಾದದ್ದು ಆವಶ್ಯಕವೆಂಬ ಭಾವನೆಯೊಂದೇ ನೆಲಗೊಂಡಿರುವದು. ಮುಖ್ಯವಾಗಿ ಸ್ವಮತವಂ ಕಾಪಾಡಿಕೊಂಡಿರುವ ಅನ್ಯಮತಸ್ಥನಂ ನೋಡಿ ಸಹಿಸದೆ ಹೊಟ್ಟೆಕಿಚ್ಚುಪಡುತ, ತಮ್ಮ ಮತದೋಷಗಳನ್ನರಿಯದೆ, ಅಥವಾ ತಿಳಿದಾಗ್ಯೂ ಅವಂ ಮುಚ್ಚುತ, ಹುಚ್ಚನಂತೆ ತಮ್ಮ ಮತವಿಷಯಗಳನ್ನು ಅನ್ಯರಿಗೆ ಬೋಧಿಸುತ ಅವರಂ ತಮ್ಮ ಮತದಲ್ಲಿ ಸೇರಿಸಲೆತ್ನಿಸುವದೂ,ಯಾವನಾದರೊಬ್ಬ ಅಪ್ರಯೋಜಕನು ಶುದ್ಧ ಅವಿವೇಕಿಯಾಗಿ ಮೇಲೆ ತಿಳಿಸಲ್ಪಟ್ಟನಾಲ್ಕುವಿಧ ಕಾರಣಗಳಲ್ಲೊಂದನ್ನಾಶಿಸಿ ತಮ್ಮಮತದಲ್ಲಿ ಸೇರಿದರೆ ಅದಂ ಅನ್ಯರಿಗೆತಿಳಿಸಿಪ್ರಶಂಸಿಸುವದೂ ಪ್ರಬಲ ಅವಿವೇಕವಂದುಹೇಳುವೆವಲ್ಲದೆ ದುಷ್ಕೃತ್ಯವೆಂದು ಸಹ ಎಣಿಸುವೆವು ಹ್ಯಾಗಂದರೆ, ಅನ್ಯರ ಐಶ್ವರ್ಯವನ್ನೂ, ಸುಖಸಂತೋಷಗಳನ್ನೂ ನೋಡಿ ಸಹಿಸಲಾರದೆ ಅವುಗಳಂ ಅಪಹರಿಸಿ ಕೆಡಿಸಲೆತ್ನಿಸುವದು ಪ್ರಬಲ ದೋಷವಲ್ಲವೆ ? ಹಾಗೆಯೇ ಸಂಸಾರಿಯಾದವನೊಬ್ಬನಂ ಪ್ರೇರಿಸಿ ಅವನು ತನ್ನ ಬಂಧುಮಿತ್ರರನ್ನೆಲ್ಲ ತೊರೆಯುವಂತೆ ಮಾಡಿ, ಅವರ ಮೂಲಕ ಅನುಭವಿಸತಕ್ಕ ಸುಖ ಸಂತೋಷಗಳನ್ನೆಲ್ಲ ಹೋಗಲಾಡಿಸಿ, ತನ್ನ ಐಶ್ವರ್ಯಗಳನ್ನೆಲ್ಲ ಕಳೆದುಕೊಂಡು ಯಾವಜ್ಜೀವ ದುಃಖಿಸುತಲಿರುವಂತೆ ಮಾಡುವದು,ಮಹಾಪಾತಕಗಳಲ್ಲಿ ಒಂದೆಂದು ಧಾರಾಳವಾಗಿ ನುಡಿಯಬಹುದು. ಆಯಾಮತಗ್ರಂಥಗಳಲ್ಲಿ, ಅವಂ ಅನ್ಯಮತಸ್ಥರಿಗೆತಿಳಿಸಿ ಅವರನ್ನವುಗಳಲ್ಲಿ ಸೇರಿಸುವದೊಂದುದೊಡ್ಡ ಧರ್ಮವೆಂದು ಬರೆದಿರುವಪಕ್ಷಕ್ಕೆ ಅದರಿಂದಲೇ ಸದರೀ ಗ್ರಂಥಗಳು ಈರ್ಷ್ಯಾಸೂಯೆಗಳಿಂದಲೂ,ಪರವಂಚನೆಯಿಂದಲೂ ಮಾಡಲ್ಪಟ್ಟವೆಂದು ಚೆನ್ನಾಗಿ ನಿಶ್ಚೈಸಬಹುದು. ಇಂತಾ ಕೃತ್ರಿಮ ವಾಕ್ಯಗಳನ್ನೂ ನಡತೆಗಳನ್ನೂ ಗೌರವಿಸಿ ಅನೇಕರಿಗೆ ಅಸಮಾಧಾನವನ್ನೂ ಕಷ್ಟವನ್ನೂ ಉಂಟುಮಾಡುವದು ಸಮದರ್ಶಿಗಳಾದ ಪಾಲಕರಿಗೆ ಅನುಚಿತಧರ್ಮವಾಗಿರುತಿದೆ. ಆದದರಿಂದ ಈಗ ವಿದ್ಯಾಭ್ಯಾಸದ ಇಲಾಖಾ ಡೈರೆಕ್ಟರವರು ಕೊಟ್ಟಿರುವ ಹುಕುಮನ್ನು ಹಿಂದೂಜನಾಭಿಮಾನಿಯಾದ ಲಾರ್ಡ್ ಕಾನಿಮರಾಯವರು ಪರ್ಯಾಲೋಚಿಸಿ ರದ್ದುಮಾಡಿದರೆ ಇಂಡ್ಯದೇಶದಲ್ಲಿ ಮಿಷನೆರಿಗಳ ಪ್ರಾಬಲ್ಯದೊಳು ಇನ್ನೂ ಕೆಲವುಕಾಲ ಹಿಂದೂಜಾತಿ ಮತಸಂಪ್ರದಾಯಗಳೂರ್ಜಿತವಾಗಿರಲಿಕ್ಕೆ ಕಾರಣವಾಗಿರುವದು. ಪ್ರಸಕ್ತ ಹುಕುಮನ್ನು ಗವರ್ನರವರು ರದ್ದು ಮಾಡುವರೆಂಬ ನಂಬಿಕೆಯು ಅನೇಕರಿಗುಂಟಾಗಿರುವದರಿಂದ ಅವರದಂ ಕುರಿತು ಅರ್ಜಿ ಬರೆದುಕೊಳ್ಳಬೇಕೆಂಬ ಪ್ರಯತ್ನವುಳ್ಳವರಾಗಿದಾರೆಂದು ತಿಳಿಯಬರುತಿದೆ.

Occasional Notes.
ನೈಮಿತ್ತಿಕ ವಿಷಯನ್ಯಾಸ.

Birth of a daughter.—ಈತಿಂಗಳ ೨೧ನೇ ತಾರೀಖ್ ಸೋಮವಾರದದಿನ ಹೈದರಾಬಾದ ನಿಜಾಮರವರಿಗೆ ಪುತ್ರಿಕಾ ಜನನವಾಗಿ ತಾಯಿಯೂ ಮಗುವೂ ಕ್ಷೇಮವಾಗಿರುವಂತೆ ತಿಳಿದು ಸಂತೋಷಿಸುತ್ತೇವೆ.

A petition.—ಮುಂಬೈ ಮಾರ್ವಾಡಿ ಸಮೂಹದವರೆಲ್ಲರುಸೇರಿ, ಸಾಲಗಾರರನ್ನು ಜೈಯಿಲ್‌ನಲ್ಲಿಡಕೂಡದೆಂದು ರಚಿಸಲ್ಪಟ್ಟ ಆಕ್ಟು ಅಕ್ರಮವೆಂದು ಆಕ್ಷೇಪಿಸಿ ಮಂತ್ರಾಲೋಚಕ ಸಮಾಜದೊಳಗಣ ವೈಸ್‌ರಾಯ್‌ಯವರಿಗೆ ಅರ್ಜಿ ಬರೆದುಕೊಳ್ಳುವವರಾಗಿದಾರೆ.

A decision of the Government of India.—ಬರ್ಮಾದೇಶದ ಯುದ್ಧದಲ್ಲಿ ಮೃತಪಟ್ಟವರ ವಿತಂತುಗಳಿಗೆ ಇಂಡ್ಯದೇಶದಲ್ಲಿ ಕೊಡಲ್ಪಡುವ ಗ್ರಾಚ್ಯೂಯಿಟಿಗಳು ಇನ್‌ಕಂಟ್ಯಾಕ್ಸ ಯೆಂಬ ಆಮದಾನೀ ಶರಿಗೆಗೆ ಗುರಿಯಾಗಿರತಕ್ಕದ್ದೆಂದು ಇಂಡ್ಯ ಗವರ್ನಮೆಂಟಿನವರು ನಿರ್ಣಯಿಸಿರುತ್ತಾರೆ.

Import duty on silver goods for India.—ಇಂಡ್ಯದೇಶಕ್ಕಾಗಿ ತಯಾರಾಗಿ ಬರುವ ಬೆಳ್ಳಿಸಾಮಾನ್‌ಗಳ ಮೇಲಿನ ಆಮದ್‌ಶರಿಗೆಯನ್ನು ತಳ್ಳಿಹಾಕತಕ್ಕದ್ದು ಆವಶ್ಯಕವೆಂದು ಇಂಡ್ಯ ಗವರ್ನಮೆಂಟಿನವರು ಸ್ಟೇಟ ಸೆಕ್ರೆಟರಿಯವರಿಗೆ ಬರೆದಿರುತ್ತಾರೆ.

Cholera at Cashmere.—ಈತಿಂಗಳ ೧೯ನೇ ತಾರೀಖಿನಲ್ಲಿ ಶ್ರೀನಗರದಿಂದ ಒಂದಾನೊಂದು ಪತ್ರಿಕೆಗೆಬಂದ ವರ್ತಮಾನದ ದೆಸೆಯಿಂದ ಅಲ್ಲಿ ವಾಂತಿಭೇದಿರೋಗ ದಿನೇದಿನೆ ಹೆಚ್ಚುತಿರುವಂತೆಯೂ, ಸದರೀ ತಾರೀಖಿನಲ್ಲಿ ೧೩೬ಮಂದಿಗೆ ಸದರೀ ರೋಗ ತಗಲಿ ಅವರಪೈಕಿ ೬೮ಮಂದಿ ಮೃತಪಟ್ಟರೆಂತಲೂ ತಿಳಿಯಬರುತಿದೆ.

The next Prime Minister of Indore. ಹೈದರಾಬಾದ್ ದೇಶದ ಗನಿಗಳ ವಿಷಯದಲ್ಲಿ ಅಬ್ದುಲ್‌ಹಕ ಎಂಬಾತನು ನಡೆಸಿದ ಸಂಧಾನಗಳು ಹೊರಗಾಗುವದಕ್ಕೆ ಕಾರಣಭೂತರಾದ ಅಘೋರನಾಥ ಚಟ್ಟೋಪಾಧ್ಯಾಯರೆಂಬವರು ಇಂದೂರ ಸಂಸ್ಥಾನದ ಪ್ರಧಾನಮಂತ್ರಿಯಾಗಿ ನಿಯಮಿಸಲ್ಪಡುವರೆಂದು ಸಿಂಲಾನಲ್ಲಿ ಪ್ರಸ್ತಾಪಿಸಲ್ಪಡುತಲಿರುವಂತೆ ಒಂದಾನೊಂದು ಪತ್ರಿಕೆಹೇಳುತಿದೆ.

Loss by an overflow of a river.—ಉತ್ತರ ಅಮೆರಿಕಾ ದೇಶದೊಳಗಣ ಮಿಸಿಸಿಪಿ ಎಂಬ ನದಿಯ ಪ್ರವಾಹದ ದೆಸೆಯಿಂದ ಯುನೈಟೆಡ್ ಸ್ಟೇಟ್ಸ್‌ಎಂಬ ದೇಶದೊಳು ೫೦,೦೦೦ಎಕ್ರೆಗಳು ಗೋಧೀಸಾಗುವಳೀ ಜಮೀನ್‌ಗಳು ನೀರಿನಲ್ಲಿ ಮುಣಗಿಹೋದವು. ಸದರೀ ದೇಶದೊಳು ಒಟ್ಟು ಸುಮಾರು ೩,೫೦,೦೦೦ ಎಕ್ರೆಗಳ ಜಮೀನ್ ಗೋಧೀಸಾಗುವಳಿಯಾಗಿ ೭೩,೫೦,೦೦೦ ಬಾಲ್ಸಗಳು ಹುಟ್ಟುವಳಿಯಾಗುತಿವೆ.

Cholera.—ಅಹಮದಾಬಾದ‌ನಲ್ಲಿ ವಾಂತಿಭೇದಿರೋಗ ಪ್ರಬಲಗೊಂಡಿರುತಿದೆ. ಅದುಪ್ರಾರಂಭದಲ್ಲಿ ಸಾಧಾರಣವಾಗಿ ಕಾಣಿಸಿ, ಈತಿಂಗಳ ೧೩ನೇ ತಾರೀಖ ಮೊದಲು ದಿನೇದಿನೆ ವೃದ್ಧಿಯಾಗುತ ಬಂದದರಿಂದ ಜನಗಳು ಅತ್ಯಂತಭೀತರಾಗಿದಾರೆ. ೧೩ನೇ ತಾರೀಖಿನಲ್ಲಿ ೩೩ಮಂದಿಗೆ ಸದರೀ ರೋಗತಗಲಿ ಅವರಪೈಕಿ ೧೪ಮಂದಿಮೃತಪಟ್ಟರು. ೧೪ನೇ ತಾರೀಖಿನಲ್ಲಿ ರೋಗತಗಲಿದವರು ೬೬ ಮಂದಿ, ಮೃತಪಟ್ಟವರು ೩೪ ಮಂದಿ ; ೧೯ನೇ ತಾ|| ನಲ್ಲಿ ೭೫ಮಂದಿಗೆ ತಗಲಿ ೩೦ಮಂದಿ ಮೃತಪಟ್ಟರು. ಮ್ಯುನಿಸಿಪಾಲಿಟಿಯವರು ಎಚ್ಚರಗೊಂಡು ಚಿಕಿತ್ಸೆಯ ವಿಷಯದಲ್ಲಿ ಸರ್ವ ಪ್ರಯತ್ನವನ್ನೂ ಮಾಡುತಲಿದಾರೆ, ಎಂದು ವಗೈರೆ ಮುಂಬೈ ಪತ್ರಿಕೆಯೊಂದರ ಮೂಲಕ ತಿಳಿಯಲಾದೆವು.

The Hyderabad mining concession ಹೈದರಾಬಾದ ಗನಿಗಳ ವಿಷಯದಲ್ಲಿ ನಡೆಸಲ್ಪಟ್ಟ ಮೋಸದ ಮೊಕದ್ದಮೆಯು ಸಮಾಧಾನವಾಗುವಂತೆ ಕಾಣಲಿಲ್ಲವು. ಸದರೀ ಸರ್ಕಾರದವರು ಮುಂದಿನ ಕ್ರಮಗಳ ಫಲಿತಾಂಶದ ನಿರೀಕ್ಷಣೆಯಿಂದ ಈಗ ಅಬ್ದುಲ್‌ಹಕ ಎಂಬಾತನ ವಶದಲ್ಲಿರುವ ಸ್ವತ್ತುಗಳನ್ನು ಜಪ್ತೀ ಮಾಡಬೇಕೆಂದು ನಿರ್ಣಯಿಸಿರುತ್ತಾರೆ. ಇದು ಹೀಗಿರುವಲ್ಲಿ, ಸರ್ದಾರ್ ಅಬ್ದುಲ್‌ಹಕ ಎಂಬವರು ತಮ್ಮ ಪ್ರಾರ್ಥನೆಯನ್ನು ಆಲೋಚಿಸದೆ ನಿರಾಕರಿಸಿದ್ದರಿಂದ ವ್ಯಾಜ್ಯಮಾಡುವದೇ ಸರಿಯೆಂದುಯೋಚಿಸಿ ಮೊಕದ್ದಮೆಯನ್ನು ಲಾಯರ್‌ಗಳ ಕೈಗೆ ಒಪ್ಪಿಸಲು ನಿಶ್ಚಯಿಸಿರುತ್ತಾರೆ, ಎಂದು ವಗೈರೆ ಹೈದರಾಬಾದ್‌ನಿಂದ ಒಂದಾನೊಂದು ಪತ್ರಿಕೆಗೆ ತಂತಿವೃತ್ತಾಂತ ಬಂದಿರುತಿದೆ. ಇದೇ ವಿಷಯವನ್ನು ಕುರಿತು ಕಳೆದ ತಿಂಗಳ ೨೩ನೇ ತಾರೀಖಿನಲ್ಲಿ ಇಂಡ್ಯರಾಜ್ಯದ ವೈಸ್‌ರಾಯ್‌ಯವರಿಂದ ಇಂಡ್ಯಸ್ಟೇಟ ಸೆಕ್ರೆಟರಿಯವರಿಗೆ ಇದರಡಿಕಂಡಂತೆ ತಂತಿವೃತ್ತಾಂತ ಕಳುಹಿಸಲ್ಪಟ್ಟಿರುತಿದೇನೆಂದರೆ:—ಹೈದರಾಬಾದ ಗನಿಗಳ ವಿಷಯದಲ್ಲಿ ನನ್ನ ಮಂತ್ರಾಲೋಚಕ ಸಭಿಕರೊಡನೆ ನಾನುಆಲೋಚಿಸಿದೆನು. ಒಂದು ಕಮಿಟಿಯಮೂಲಕವಾಗಿಯಾಗಲಿ, ಅಥವಾ ತಮಗೆ ಯುಕ್ತತೋರಿದಂತೆ ಬೇರೆಯೊಂದು ನ್ಯಾಯಾಧಿಪತಿಯಿಂದಲಾಗಲಿ, ಸದರೀ ಮೊಕದ್ದಮೆಯು ಪೂರಾ ವಿಮರ್ಶಿಸಲ್ಪಡುವ ವಿಷಯದಲ್ಲಿ ನನ್ನ ಆಕ್ಷೇಪಣೆ ಯಾವದೂಇರುವದಿಲ್ಲವು. ಈ ವಿವಾದವು ಒಂದುಕಡೆ ಅಬ್ದುಲ್‌ಹಕ ಮತ್ತು ಹೈದರಾಬಾದ ಸರ್ಕಾರದವರಿಗೂ, ಮತ್ತೊಂದುಕಡೆ ಗನಿಗಳ ಹಕ್ಕನ್ನು ಪಡೆದವರಿಗೂ ಆಬಗ್ಯೆ ಏರ್ಪಟ್ಟಕಂಪೆನಿಯ ಹಿಸ್ಸೇದಾರರಿಗೂನಡೆಯುತಲಿದೆ. ಹಿಸ್ಸೆಗಳನ್ನು ಪಡೆದಯದಲ್ಲಿ ಇಂಡ್ಯಗವರ್ನಮೆಂಟಿನವರು ಯಾವವಿಧ ವಿಧದಲ್ಲೂಜವಾಬ್ದಾರರಾಗಿರುವದಿಲ್ಲವು,ಎಂಬದು

ನೋಟಿಸ.

ಈ ಪತ್ರಿಕೆಯ ಚಂದಾದಾರರಿಗೆ ನಾವು ತಿಳಿಸಬೇಕಾದ ಅಂಶಗಳನ್ನು, ಯಾವಭಾಗದಲ್ಲಿಯೂ ಕೊರತೆ ಇಲ್ಲದೆ ತಿಳಿಸಿಯಾಯಿತು. ಅದರಿಂದ ಉಂಟಾದ ಪ್ರಯೋಜನ ಮಾತ್ರ ಅತ್ಯಲ್ಪವಾಗಿರುತಿದೆ. ಮುಂದೆ ಬಾಕೀದಾರರಿಗೆಲ್ಲ ಪತ್ರಿಕೆಯನ್ನು ನಿಲ್ಲಿಸುವದು ವಿನಾ ಬೇರೇ ಉಪಾಯತೋರುವದಿಲ್ಲವಾಗಿ ಇದುವರಿವಿಗೆ ಚಂದಾ ಮೊಬಲಗನ್ನು ಕಳುಹಿಸದವರಿಗೆಲ್ಲ ಮುಂದಿನ ತಿಂಗಳಿಂದ ಪತ್ರಿಕೆ ರವಾನಿಸಲ್ಪಡಲಾರದು.

LOCAL AND PROVINCIAL NEWS.
ಒಳದೇಶಮತ್ತುತಾಲ್ಲೂಕ್‌ಜಾತ್ ವೃತ್ತಾಂತ

The British Resident.—ಈ ಸಂಸ್ಥಾನದ ಬ್ರಿಟಿಷ ರೆಸಿಡೆಂಟರಾದ ಸರ್ ಹಾರಿ ಪ್ರಿಂಡರ್‌ಗ್ಯಾಸ್ಟಿಯವರು ಕೊಡಗಿನಿಂದ ಈದಿನ ಬೆಂಗಳೂರಿಗೆ ವಾಪಸ್‌ಬಂದು ಸೇರುವರು.

The weather.—ಬಿಸಿಲೂ ತತ್ಪ್ರಯುಕ್ತವಾದ ಸೆಕೆಯೂ ಹೆಚ್ಚುತಲಿವೆ. ವರ್ಷಸೂಚನೆಗಳಲ್ಲಿ ಕೊರತೆಯಿಲ್ಲವು, ಪರಂತು ಅಲ್ಲಿಯಲ್ಲಿ ತುಂತುರುಮಳೆಬೀಳುವಂತೆಕಾಣುತಿದೆಯೇಹೊರತು ಬಲವಾಗಿ ಎಲ್ಲೂ ಬಿದ್ದಂತೆ ತೋರಲಿಲ್ಲವು.

The new debtors Act.—ಸಾಲಗಾರರನ್ನು ಸಿವಿಲ್ ಜೆಯಿಲ್‌ನಲ್ಲಿಡಕೂಡದೆಂದು ಈಚೆಗೆ ರಚಿಸಲ್ಪಟ್ಟ ಕಾನೂನು ಮದರಾಸ್‌ನಲ್ಲಿ ಜಾರೀಗೆ ತರಲ್ಪಟ್ಟಂತೆ ಕಾಣುತಿದೆ. ಕಳೆದ ಬುಧವಾರದ ದಿನ ಮದರಾಸ ಹೈಕೋರ್ಟನಲ್ಲಿ, ಇಬ್ಬರು ಸಾಲಗಾರರು ದಸ್ತಗಿರಿಯಿಂದ ಕೋರ್ಟಗೆ ತರಲ್ಪಟ್ಟು, ಸಾಲವನ್ನು ತೀರಿಸುವದಕ್ಕೆ ತಮಗೆ ಉತ್ಪತ್ತಿಯಿಲ್ಲವೆಂದು ಹೇಳದ ಅವರಿಬ್ಬರನ್ನೂ ಜಡ್ಜಿಯವರುಖುಲಾಸೇಮಾಡಿಬಿಟ್ಟಂತೆ ಮದರಾಸ್ ಪತ್ರಿಕೆ ಯೊಂದರಮೂಲಕ ತಿಳಿಯಬರುತಿದೆ.

A Judicial Goomasta in trouble.—ಬವರಿಂಗಪೇಟೆ ತಾಲ್ಲೂಕು ಜುಡಿಷಲ್ ಗುಮಾಸ್ತಾ ರಾಮಸ್ವಾಮಯ್ಯಂಗಾರ್ರೆಂಬವರು ನಂಬಿಕೆ ದ್ರೋಹನಡೆಸಿದರೆಂಬದಾಗಿ ಅವರಮೇಲೆ ತರಲ್ಪಟ್ಟ ಮೊಕದ್ದಮೆಯು ಇಲ್ಲಿನ ಚೀಫ್ ಕೋರ್ಟ ಸೆಷನ್ಸ್‌ವಿಚಾರಣೆಗೆ ಕಮ್ಮಿಟ್ ಮಾಡಲ್ಪಟ್ಟು ಈತಿಂಗಳ ಸೆಷನ್ಸ್‌ನಲ್ಲಿ ವಿಚಾರಣೆ ಆಗಿ ಜೂರಿಗಳು ಆತನಮೇಲೆ ಜಕ್ಸೀಸ್ ಸ್ಥಿರಪಡುವದಿಲ್ಲವೆಂದು ಅಭಿಪ್ರಾಯಪಟ್ಟರೂ ಜಡ್ಜಿಯವರು ಭಿನ್ನಾಭಿಪ್ರಾಯಗೊಂಡು ಫುಲ್‌ಬೆಂಚ್ ವ್ಯವಸ್ಥೆಗೆ ಮೊಕದ್ದಮೆಯನ್ನು ನಿಲ್ಲಿಸಿದುಬಿಟ್ಟು ಜಾಮೀನ್‌ಮೇಲೆ ಅಪರಾಧಿಯನ್ನು ಖುಲಾಸೇಮಾಡಿದರು.

Privilege leave.—ಶಾಸನಸಭೆವಿಭಾಗಕ್ಕೆ ಸೇರಿದ ಅಸಿಸ್ಟೆಂಟ್ ಇಂಜನಿಯರ್ ಮಿ| ಮಹಮದ್ ಪಾಸ್ಪ್ರಗಳಿಗೆ ಮಾಹೇ ಮಜಕೂರ್ ೧೫ನೇ ತಾರೀಖ್ ಲಾಗಾಯತು ಒಂದು ತಿಂಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿರುವಂತೆ ತಿಳಿಯಬರುತಿದೆ.

Promotions.—ಮೈಸೂರು ಗವರ್ನಮೆಂಟ್ ಮರಮ್ಮತ್ ಇಲಾಖೆಗೆ ಸೇರಿದ ಇಂಜನಿಯರ್‌ಗಳಿಗೆ ಕಳೆದ ಏಪ್ರಿಲ್ ಗುರ್ರೇ ಲಾಗಾಯತು ಇದರಡಿಕಂಡಂತೆ ತಲಬ್ ಇಜಾಫೆಯಾಗಿರುತಿದೆ ಹ್ಯಾಗಂದರೆ:—

ಮೊರ್ಟವ್ಯರ್ಯವರಿಗೆ	೬೦೦ರೂ, ರಿಂದ		೭೫೦.
,, ಸ್ಟಾರ್ಡವರ್ಯವರಿಗೆ	೫೦೦	,,	೬೦೦.
,, ಹರಿಕರ್ನಿಯವರಿಗೆ	೫೦೦	,,	೬೦೦.
,, ಸುಬ್ಬರಾಯರಿಗೆ	೪೦೦	,,	೫೦೦.
,, ಶೀತಾರಾಮರಾಯರಿಗೆ	೩೦೦	,,	೪೦೦.
,, ಪ್ರಹ್ಲಾದರಾಯರಿಗೆ	೨೦೦	,,	೨೫೦.
,, ಸುಬ್ಬರಾಯರಿಗೆ	೧೫೦	,,	೨೦೦.

SUMMARY OF NEWS.
ವೃತ್ತಾಂತ ಸಂಗ್ರಹ.

Sir Salar Jung.—ಹೈದರಾಬಾದಸಂಸ್ಥಾನದ ನಾಬಬ್ ದಿವಾನರಾದ ಸರ್ ಸಾಲಾರ್‌ಜಂಗರವರು ಅವರಿಗೆ ಉಂಟುಮಾಡಲ್ಪಟ್ಟ ಒಂದುವರ್ಷದ ನಿರ್ಬಂಧವು ಕಳೆದುಹೋದದರಿಂದ ಕ್ಷಿಪ್ರದಲ್ಲಿ ಹೈದರಾಬಾದಿಗೆ ವಾಪಸ್‌ಹೋಗುವರು.

An accident.—ಈಚೆಗೆ ಒಂದುದಿನ ಕೊಲ್ಲಾಪುರದ ಮಹಾರಾಜರವರು ಸವಾರೀ ಹೋಗುತ್ತಿರುವಲ್ಲಿ ಮಹಾಬಲೇಶ್ವರದಬಳಿ ಕುದುರೆಯಮೇಲಿಂದ ಬಿದ್ದು ಸ್ವಲ್ಪ ಘಾಯವಾದುದಕ್ಕೆ ಕೇಳಿ ಬಹಳ ವಿಷಾದಿಸುತ್ತೇವೆ.

A rumour.—ಸದಾರ್ ಅಬ್ದುಲ್‌ಹಕ್ ಎಂಬಾತನು ಗನಿಗಳವಿಷಯದಲ್ಲಿ ತನ್ನ ಗವರ್ನಮೆಂಟಿಗೆ ತಾನು ಮೋಸಮಾಡಿದ್ದಾಗಿ ಒಪ್ಪಿಕೊಂಡು ನಿಜಾಮರವರ ಮನ್ನಣೆಯಂ ಕೇಳಿಕೊಳ್ಳಬೇಕೆಂದು ನಿಶ್ಚಯಿಸಿರುವಾತ ಈಚೆಗೆ ಒಂದುವಿಧ ಪ್ರವಾದ ಪ್ರಬಲವಾಗಿದೆ.

A big fee.—ಹೈದರಾಬಾದ್ ಗನಿಗಳ ವಿಷಯದಲ್ಲಿ ನಡೆಸಲ್ಪಟ್ಟ ಮೋಸದ ಮೊಕದ್ದಮೆಯುಲ್ಲಿ ಅದಕ್ಕೆ ಕಾರಣಭೂತನಾದ ಸದಾರ್ ಅಬ್ದುಲ್‌ಹಕ್ ಎಂಬಾತನತರಫೆ ಮೊಕದ್ದಮೆಯನ್ನು ನಡೆಸುವದಕ್ಕಾಗಿ ಇಂಗ್ಲೆಂಡಿಗೆ ಪ್ರಯಾಣವಾದ ಬ್ಯಾರಿಸ್ಟರ್ ಇಣವಿರಾರಿಟ ಯೆಂಬವರಿಗೆ ಒಂದುಲಕ್ಷರೂಪಾಯಿಗಳು ರುಸುಂ ಗೊತ್ತುಮಾಡಲ್ಪಟ್ಟಂತೆ ಒಂದುಪ್ರವಾದವುಂಟಾಗಿದೆ.

A snake-charmer's fate.—ಈಚೆಗೆ ಕೋಯಂಬತ್ತೂರಿಂದ ಒಬ್ಬ ಹಾವಾಡಿಗನು ಉದಕಮಂಡಲಕ್ಕೆ ಬಂದು ಅಂಗಡಿ ಬೀದಿಯಲ್ಲಿ ಸ್ಥಳಮಾಡಿಕೊಂಡನು. ಅವನುತಂದಿದ್ದ ಹಾವುಗಳಲ್ಲಿ ಒಂದು ಕರೀನಾಗನಿತ್ತು. ಅದರ ಹಲ್ಲುಗಳು ತೆಗೆಯಲ್ಪಟ್ಟಿರಲಿಲ್ಲವು. ಆಬೀ ಆದಿತ್ಯವಾರದದಿನ ಸದರೀ ಯವನು ಬುಟ್ಟಿಯಿಂದ ಸದರೀ ಸರ್ಪವನ್ನು ಹೊರಗೆ ತೆಗೆದು ಬುಬ್ಬುನಾಗಸರವನ್ನು ಊದಿಸುತ ಅದನ್ನು ಆಡಿಸಿದನು. ಹಾವುಗಳ ಕಣ್ಣುಗಳಲ್ಲಿ ಸ್ವಭಾವವಾಗಿ ಆಕರ್ಷಕಶಕ್ತಿ ಇರುತಿದೆಯಾಗಿ ಅದರ ಬಳಿಯಿಂದ ಸದರೀಯವನು ಹಾವನ್ನು ಮುದ್ದಿಡಹೋಗಲು ಅದು ಕಚ್ಚಿ ವಿಷವತ್ತಿ ಚಿಕಿತ್ಸೆಯುಬಗ್ಗೆ ಆಸ್ಪತ್ರೆಗೆ ಸಾಗಿಸಲ್ಪಟ್ಟ ಕೂಡಲೇ ಸತ್ತು ಹೋದನು.

The value-payable system.—ಬರುವ ಜೂಲೈತಿಂಗಳ ಲಾಗಾಯತು ಪೋಸ್ಟಾಫೀಸಿನವರು ಲಕೋಟುಗಳು ಮತ್ತು ಭಾಂಗಿಗಳನ್ನು ವಿಲಾಸದಾರರಿಗೆ ಪಾವತೀಮಾಡುವ ಕಾಲದಲ್ಲಿ, ಯಾವಪದಾರ್ಥಗಳಮೇಲೆ ೧೦ ರೂಪಾಯಿಗಳು ಮತ್ತು ಅದಕ್ಕೆ ಒಳಪಟ್ಟ ಮೊಬಲಗನ್ನು ವಸೂಲ್ಮಾಡಬೇಕಾಗುತಿದೆಯೋ ಅಂತಾ ಸಾಮಾನುಗಳನ್ನು ವಿಲಾಸದಾರನ ಮನೆಗೆತಂದು ಒಪ್ಪಿಸುವರು. ಇದರಿಂದ ವಿಲಾಸದಾರರು ತಮ್ಮ ಕಡೆಯವರನ್ನು ಪೋಸ್ಟಾಫೀಸಿಗೆ ಕಳುಹಿಸಿ ಅದನ್ನು ತರಿಸಿಕೊಳ್ಳಬೇಕಾದ ಶ್ರಮ ತಪ್ಪುತಿದೆ. ಇಂಗ್ಲೆಂಡಿನಲ್ಲಿನ ಪೋಸ್ಟಾಫೀಸ್ ಅಧಿಕಾರಿಗಳು ಇಂಡ್ಯದೇಶದೊಳಗಿರುವ ಈ ಪದ್ಧತಿಯ ಪ್ರಯೋಜನವನ್ನರಿತು ಅಲ್ಲಿಯೂ ಅದನ್ನು ಜಾರೀಯೊಳು ತರಬೇಕೆಂಬ ಆಲೋಚನೆಯಿಂದ ಅದಕ್ಕೆ ಬೇಕಾದ ವರ್ತಮಾನಗಳನ್ನೆಲ್ಲ ಕೇಳಿಸುವಂತೆ ತಿಳಿಯಬಂದೆವು.

Obituary.—ಬರದ್ವಾನಸಂಸ್ಥಾನದ ಮಹಾರಾಣಿಯವರ ಮರಣವಿಷಯದಲ್ಲಿ ಇಂಡಿಯನ್ ಡೆಯಿಲೀನ್ಯೂಸ್ ಎಂಬಪತ್ರಿಕೆ ತಿಳಿಸುವದೇನಂದರೆ—ಮಹಾರಾಣಿಯವರು, ಆಕೆಯವರ ಪತಿಯಾದ ಮಹಾರಾಜಾ ಅಪ್‌ತಾಪ್ ಚಂದ್‌ಯವರ ಮರಣಾನಂತರ್ಯ, ಶ್ವಾಸ ರೋಗಪೀಡಿತರಾಗಿರುತಲಿದ್ದರು. ಆಕೆಯವರು ತಮಗೆ ಪ್ರಾಪ್ತವಾದ ಸಂಕಟವಿಷಯದಲ್ಲೂ ದೇಹಪೋಷಣೆಯ ವಿಷಯದಲ್ಲೂ ಔದಾಸೀನ್ಯವು ವಹಿಸಿದ್ದರು. ಆಕೆಯವರು ಹಿಂದೂ ವಿತಂತುಗಳವಿಷಯದಲ್ಲಿ ನಿಬಂಧಿಸಲ್ಪಟ್ಟಿರುವ ಕೇವಲ ಕಠಿಣಗಳಾದಆಚಾರಗಳನ್ನನುವರ್ತಿಸಬೇಕೆಂಬ ಸ್ವಭಾವವುಳ್ಳವರು. ಅದು ಆಕೆಯವರು ದೀರ್ಘಕಾಲ ಜೀವಿಸಿರುವದಕ್ಕೆ ಬಾಧಕವಾಗಿ ಪರಿಣಮಿಸಿತು. ತಮ್ಮ ಪತಿವಿಯೋಗಾನಂತರ್ಯ, ಆಕೆಯವರಿಗೆ ತಮ್ಮ ಜೀವನದಾನದಲ್ಲಿ ವೈರಾಗ್ಯಹುಟ್ಟಿಹೋಯಿತು. ಇದು ಉತ್ತಮಕುಲದಲ್ಲಿ ಜನಿಸುವ ಹಿಂದೂ ವಿತಂತುಗಳಿಗೆ ಸ್ವಾಭಾವಿಕವಾದ ಗುಣವಷ್ಟೆ. ಆಕೆಯವರ ಚಿಕಿತ್ಸೆಯವಿಷಯದಲ್ಲಿ ಎಷ್ಟುಮಾತ್ರವೂ ಲೋಪವಿಲ್ಲದೆ ಸರ್ವಪ್ರಯತ್ನಗಳೂ ಮಾಡಲ್ಪಟ್ಟವು, ಪರಂತು ಅವೆಲ್ಲವೂ ನಿಷ್ಫಲಗಳಾಗಿಹೋಗಿ, ಬಾಲಕರಾದ ಮಹಾರಾಜರವರಿಗೆ ಮಾತೃ ಕೈಂಕರ್ಯ ಪ್ರಾಪ್ತವಾಯಿತು, ಎಂಬದು.

Libel.—ಸತಾರಾಡಿಸ್ಟ್ರಿಕ್ಟಿಗೆಸೇರಿದ ಕರಾಡ್‌ಯೆಂಬ ಕಸಬೆನಲ್ಲಿ ಪ್ರಕಟಿಸಲ್ಪಡುವ ಚಿತ್ರಗುಪ್ತವೆಂಬ ಮಹಾರಾಷ್ಟ್ರಪತ್ರಿಕೆಯ ಎಡಿಟರಗಳಿಬ್ಬರು, ಸದರೀಸ್ಥಳದ ಸಬ್ ರಿಜಿಸ್ಟ್ರಾರವರು ಲಂಚ ತೆಗೆದುಕೊಳ್ಳುತ್ತಾರೆಂದು ಪತ್ರಿಕೆಯುಲ್ಲಿಪ್ರಾಯಿಷಿಮಾಡಲು,ಅವರಿಬ್ಬರಮೇಲೂ ಸಬ್ ರಿಜಿಸ್ಟ್ರಾರವರು ಊಡಿರುವ ಮಾನನಷ್ಟದಮೊಕದ್ದಮೆಯು ಈಗ ದರ್ಯಾಪ್ತಿಯಲ್ಲಿದೆ. ಹೀಗಿರಲು ಸದರೀ ಎಡಿಟರಗಳಿಬ್ಬರಲ್ಲೊಬ್ಬರು ಪರಾರಿಯಾದರು, ಮತ್ತೊಬ್ಬರು ಜಾಮೀನ್‌ಮೇಲೆ ಬಿಡುಗಡೆಯಾಗಿದಾರೆ. ಈಚೆಗೆ ಸತಾರಾ ಜಿಲ್ಲೆ ದೇಶಭಾಷಾ ವೃತ್ತಾಂತಪತ್ರಿಕೆಗಳು ಸರ್ಕಾರ್ ಜಿಲ್ಲೇ ನೌಕರರವಿಷಯದಲ್ಲಿ ಕೇವಲ ದೂಷ್ಯವಾದ ಬರವಣಿಗೆಗಳು ಪ್ರಕಟಿಸುತಲಿರುವದರಿಂದ ಇನ್ನೂ ಕೆಲವರು ಪತ್ರಿಕಾಲೇಖಕರಮೇಲೆ ಮಾನನಷ್ಟ ದಾವೆಗಳು ತರಲ್ಪಟ್ಟವೆಂದು ನಮ್ಮ ಕೇಳ್ವಿಕೆಗೆಬಂದರೆ ಅದಕ್ಕಾಗಿ ನಾವು ಆಶ್ಚರ್ಯಪಡಬೇಕಾದದ್ದಿಲ್ಲವು. ಈಚೆಗೆ ಸತಾರಾಡಿಸ್ಟ್ರಿಕ್ಟಿಗೆ ಸೇರಿದ ಇಸ್ಲಾಂಪುರದಲ್ಲಿ ಪ್ರಕಟಿಸಲ್ಪಡುವ ಪ್ರಕಾಶವೆಂಬ ಪತ್ರಿಕೆಯು ಅಲ್ಲಿನ ಪೋಲೀಸ್ ಚೀಫ್‌ಕಾನ್ಸ್ಟೇಬಲನ್ನು ದೂಷಿಸಿದಬಗ್ಗೆ ಆತನು ಸದರೀಪತ್ರಿಕೆಯಮೇಲೆ ಮಾನನಷ್ಟಕ್ಕೆ ದಾವೇ ತಂದಿರುವಂತೆ ತಿಳಿಯಲಾದೆವು.—ಮುಂಬೈ ಗೆಜೆಟ್.

EXTRACTS.

"ತನ್ನಿಚ್ಛೆಯಂತೆಪುತ್ರಂಬೆ ತಾಡಿಸುವನ್ನೆ ತೂಡಲನು."

ಅನೇಕ ಜನರು ಸಣ್ಣಮಕ್ಕಳನ್ನು ಗದರಿಸಬಾರದು, ಬಡಿಯಬಾರದು ಎಂತ ಅಭಿಪ್ರಾಯಪಡುತ್ತಾರೆ. ಇದು ಎಷ್ಟುಮಾತ್ರವೂ ಸರಿಯಲ್ಲವು. ಅನುಭವವೂ ತಿಳುವಳಿಕೆಯೂ ತಾರತಮ್ಯಜ್ಞಾನವವೂ ಇಲ್ಲದ ತಾಯಿತಂದೆಗಳು ಮಕ್ಕಳನ್ನು ಎಷ್ಟುಹೊಡದರೂ ನಿಷ್ಪ್ರಯೋಜನವೇ ಆಗುವದು. ಕೆಲವರು ಬಹು ಸ್ವಲ್ಪ ತಪ್ಪುಮಾಡಿದಮಕ್ಕಳನ್ನು ಕರುಣೆ ಇಲ್ಲದೆ ಅಮಿತವಾಗಿ ಹೊಡದು ತಮ್ಮ ದುರಾಗ್ರಹವನ್ನು ಶಾಂತಿಪಡಿಸಿಕೊಳ್ಳುವರು. ಕೆಲವರು ತಮ್ಮ ಮಕ್ಕಳು ಮಾಡಬಾರದ ತಪ್ಪುಗಳನ್ನು ಮಾಡಿದಾಗ್ಯೂ, ಕಾಣದವರಂತೆಯೇ ಇದ್ದು ಇತರರ ಮಕ್ಕಳು ಸ್ವಲ್ಪ ತಪ್ಪುಮಾಡಿದಾಗ್ಯೂ ಅಗ್ನಿಜ್ವಾಲೆಯಂತೆ ಉರಿದುಬಿದ್ದು ಕ್ರೂರವಾಗಿ ಶಿಕ್ಷಿಸುವರು. ಕೆಲವರು ತಮ್ಮ ಮಕ್ಕಳು ಮಾಡುವ ನೀಚಕೃತ್ಯಗಳನ್ನು ನೋಡಿ ಮಾದದಂತೆ ತಮಗದೆ ಆನಂದದಿಂದ ನಮ್ಮ ಮಗುವು ಬಹುಚೇಷ್ಟೆ, ಕ್ಷಣ ಸುಮ್ಮನೆ ಇರುವದಿಲ್ಲ, ಬಹು ತುಂಟನೆಂತ ಹೊಗಳಿ ಮತ್ತಷ್ಟು ಪ್ರೋತ್ಸಾಹಪಡಿಸುವರು. ಕೆಲವರು ನಾನಾ ದುರ್ಭಾಷಣೆಗಳಿಂದ ಬಯ್ಯಲು, ಕಾಲಲ್ಲಿ ಒದೆಯಲು,ಕೈಗೆ ೧ ಕಟ್ಟಿಗೆಯನ್ನು ಕೊಟ್ಟು ಬಡಿ ಬಡಿ ಎಂತ ಹೇಳಿಕೊಟ್ಟು ದುಷ್ಟನಿಷ್ಠೆಗಳನ್ನು ಬಹು ಪ್ರೀತಿಯಿಂದ ಕಲಿಸುವರು. ಪಾಠಶಾಲೆಗಳಿಗೂ ಮತ್ಯಾವದಾದರೂ ಗೃಹಕೃತ್ಯಗಳಿಗೂ ಹೋಗದ ಬ್ರಾಹ್ಮಣ ಹುಡುಗರು ಬೀದಿ ಬೀದಿಗಳಲ್ಲಿ ಕ್ಷತಬಿಡು ತಿರುಗುತ ಮನೆಯಲ್ಲಿ ಅಥವಾ ಇತರರ ಮನೆಗಳಲ್ಲಿ ಏನಾದರೂ ಸಿಕ್ಕಿದ್ದನ್ನು ಕದ್ದು ಅಂಗಡಿಗೆ ಹಾಕಿ ಬೇಕಾದದ್ದನ್ನು ಕೊಂಡು ತಿಂದು ಕೋಣಗಳ ಹಾಗೆ ಪ್ರವರ್ಧಮಾನರಾಗುತ್ತಾರೆ. ಕೆಲವುಜನ ತಾಯಿಗಳು ತಮ್ಮ ಮಕ್ಕಳು ಕದ್ದು ತಂದ ವಸ್ತುಗಳನ್ನೂ, ಪದಾರ್ಥಗಳನ್ನೂನೋಡಿ ಹಿಗ್ಗಿ ಬಹುಸಂತೋಷದಿಂದ ಬಚ್ಚಿಟ್ಟುಕೊಂಡು ಏನಾದರು ತಿನ್ನಲಿಕ್ಕೆ ಕೊಟ್ಟು ಒಳ್ಳೇ ಮಾತುಗಳನ್ನಾಡಿ ಪ್ರೋತ್ಸಾಹಪಡಿಸುವರು. ಕೆಲವು ಜನ ಯಾವಾಗಲೂ ಕೆಟ್ಟಬೈಗಳು ಮಕ್ಕಳು ಕೇಳುವಹಾಗೆ ಬೈಯ್ಯುತ್ತಾ ಇದ್ದು ಆ ಕೆಟ್ಟವಿದ್ಯವನ್ನು ಮಕ್ಕಳು ಚೆನ್ನಾಗಿ ಕಲಿತು ಕೊಳ್ಳುವದಕ್ಕೆ ಸಹಾಯ ಮಾಡುವರು. ಮಕ್ಕಳು ಪರಸ್ಪರ ಕಲಹಿಸಿ ಜಗಳವಾಡಿದರೆ ತಂದೆ ತಾಯಿಗಳು ಹೋಗಿ ಬೀದಿಯಲ್ಲಿ ದುರ್ಭಾಷಣೆಗಳಿಂದ ಉತ್ತರಿಸುತ್ತ ಕಾದುವರೇ ಹೊರತು ತಮ್ಮ ಮಕ್ಕಳತಪ್ಪುಗಳ ಕಡೆ ಲಕ್ಷ್ಯಕೊಟ್ಟು ಶಿಕ್ಷಿಸರು ಮತ್ತಷ್ಟು ಗಂಟು ಪ್ಯಾಚ್ಯವನ್ನು ಅವರಿಗೆ ಕಲಿಸುವರು. ಕೆಲವುಜನ ಅಧಿಕಾರಸ್ಥರ ಮಕ್ಕಳು ಬಡಮಕ್ಕಳನ್ನು ಬೈದು ಬಡಿದು ಪದಾರ್ಥಗಳನ್ನು ಚೆಲ್ಲಿ ಪಾತ್ರಗಳನ್ನು ಉರುಳಿಸಿ ಕೆಡಕು ಮಾಡುತಲಿದ್ದಾಗ್ಯೂ ಹಾಗೆ ಮಾಡಬಾರದೆಂದು ಹೇಳಿ ಶಿಕ್ಷಿಸದೇ ತಂದೆ ತಾಯಿಗಳು ನಗುತ ತಮ್ಮ ಮಕ್ಕಳ ಸಾಮರ್ಥ್ಯವನ್ನು ಹೊಗಳುತ ಆನಂದ ಪಡುವರು. ಕೆಲವು ಜನ ಮಕ್ಕಳು ಬಹಳಷ್ಟಾದರೂ ಒಂದು ವಸ್ತುವನ್ನು ಕಂಡ ಕ್ಷಣವೇ ಅದು ಬೇಕೆಂದು ಅತ್ತು ಗೋಳಾಟ ಬೀದಿಯಲ್ಲಿ ಬಿದ್ದು ಹೊರಳಾಡಿ ನೋಡುವ ಜನರಿಗೆಲ್ಲ ಅಸಹ್ಯಪಡಿಸುವದಾದಾಗ್ಯೂ, ತಂದೆತಾಯಿಗಳು ಆಹುಡುಗ ಬೇಡಿದ ವಸ್ತುವನ್ನು ಕಸುಕೊಡುವ ಪ್ರಯತ್ನ ಮಾಡುವರೇ ಹೊರತು ತಮ್ಮ ಮಕ್ಕಳ ಕೆಟ್ಟ ಮೂರ್ಖತೆಯನ್ನು ಬಿಡಿಸರು. ಕೆಲವುಜನ ಮಕ್ಕಳು ಬಾಲ್ಯದಿಂದಲೇ ಕಳ್ಳತನವಿಲ್ಲದೇ ಕಳ್ಳರಂತೆ ದಗಾಬಾಜಿ ಮಾಡುವ ಕೆಟ್ಟಗಳನ್ನು ಬೆಳೆಸಿ ನಾನಾಬಗೆ ಜಗಳಗಳಲ್ಲಿ ಎಳೆಯುವರು. ಆಗ ತಂದೆತಾಯಿಗಳು ಅದರ ಕಾರಣವನ್ನು ತಿಳಿಯದೆ ವೈದ್ಯಮಂತ್ರವಾದಿಗಳನ್ನು ಪ್ರಾರ್ಥಿಸಿ, ಕರೆತಂದು ನಾನಾಬಗೆ ಚಿಕಿತ್ಸೆಗಳನ್ನು ಮಾಡಿಸುವರು. ಇಂತಾ ತಂದೆತಾಯಿಗಳು ಮಕ್ಕಳಪಾಲಿಗೆ ಶತ್ರುಗಳೇ ಅಲ್ಲದೆ. ಎಳೆಯಹುಡುಗರಿಗೆ ನೀತಿವಾಕ್ಯ ಸ್ವಚ್ಛ ಹೇಳುವಂತೆ, ಕಥೆಯಂತೆ, ಕೆಟ್ಟಚೇಷ್ಟೆಗಳನ್ನು ಮಾಡದಂತೆ ಹೇಳಿಕೊಟ್ಟು ಕಲಿಸುವ ಮುಖ್ಯಭಾರವು ತಾಯಿತಂದೆಗಳದೇಹೊರತು ಅನ್ಯರದಲ್ಲವು. ಮುಖ್ಯವಾಗಿ ತಾಯಿ ವಿದ್ಯಾವಂತಳಾಗಿ, ಗ್ರಾಹ್ಯಾವಲೋಕನದಿಂದಲೂ ಅನುಭವದಿಂದಲೂ ಯುಕ್ತಾಯುಕ್ತಗಳನ್ನರಿತು ಬುದ್ಧಿಶಾಲಿನಿಯಾಗಿರಬೇಕು. ಇಂತಾ ತಾಯಿಗಳು ನಮ್ಮ ಭರತಖಂಡದಲ್ಲಿ ಇನ್ನೂ ಹತ್ತುವರುಷಗಳಲ್ಲಿಯೇ ಉಂಟಾದಾರೆಂದು ದೃಢವಾಗಿ ಹೇಳಬಹುದು. ಸದ್ಯಕ್ಕೆ ಈಗಿನ ತಂದೆತಾಯಿಗಳು ಚಿತ್ತಕ್ಕೆ ತಂದು ಇಷ್ಟಾದರೂ ಆವಶ್ಯಕವಾದ ಕಾರ್ಯವು ಮತ್ತೊಂದಿಲ್ಲವೆಂದು ತಿಳಿದು ಈಕೆಳಗಿನ ವಿಷಯಗಳನ್ನು ಮಕ್ಕಳಿಗೆ ಕಲಿಸುತ ಬರಬೇಕೆಂದು ಬೇಡುವೆವು.

೧. ಸುಳ್ಳಾಡದವರಾಗಿ,ಕೆಟ್ಟಬೈಗಳುಬೈಯ್ಯದವರಾಗಿ, ಹಿರಿಯವರಮಾತುಗಳನ್ನಾಡದವರಾಗಿ,ಕೆಟ್ಟ ಚೇಷ್ಟೆಗಳನ್ನು ಮಾಡದವರಾಗಿ, ಆಗಿಂದಾಗ್ಯೆ ಬುದ್ಧಿಹೇಳುತ, ಹಾಗೆಕೇಳದಿದ್ದರೆ ಹೊಡೆದು ಶಿಕ್ಷಿಸಿ ಬುದ್ಧಿ ಕಲಿಸಬೇಕು.

೨. ಕೂಗಿದಕ್ಷಣದಲ್ಲಿ ಮಾತಾಡಲೂ, ಹೇಳಿದ ಕೆಲಸವನ್ನು ಮಾಡಲೂ, ಆ ಕೆಲಸ ಮಾಡಬೇಕೆಂದು ಕ್ಷಣ ಬಿಡಲು ಸಹ ಕಲಿಸಬೇಕು. ಆದರೆ ಹುಡುಗರಿಗೆ ಕೂಗಿ ಹೇಳಿ ಶಕ್ತಿಗೆ ವಿರೋಧ ಕೆಲಸವನ್ನು ಹೇಳಿ ಬೇಜಾರು ಪಡಿಸಬಾರದು.

೩. ಪರರಬಳಿ ಇರುವ ವಸ್ತುಗಳನ್ನು ಕಂಡಕ್ಷಣ ಬೇಕೆಂದು ಹೋರಾಡುವ ಹುಡುಗನಿಗೆ ಅದನ್ನು ತೆಗೆದುಕೊಡಬಾರದು. ಇದಕ್ಕಾಗಿ ಕಾರಣಗಳನ್ನೂ ಸುಳ್ಳುಗಳನ್ನೂ ಹೇಳಬಾರದು. ಖಡಿತವಾಗಿ ಕೊಡುವದೇ ಇಲ್ಲವೆಂತ ಹೇಳಬೇಕು. ಅನುಮಾನದ ಮಾತುಗಳಾಡಬಾರದು. ಅಥವಾ ಆವಸ್ತುವನ್ನು ಕೊಟ್ಟಾಗ್ಯೂ ಆಕ್ಷಣ ಕೊಡದೆ ಕೆಲವು ಹೊತ್ತಿನಮೇಲೆ ಕೊಡಬೇಕು.

೪. ಊಟ ತಿಂಡಿ ವಿಷಯಗಳಲ್ಲಿ ಕ್ಲುಪ್ತವಿರಬೇಕು. ಪಾತ್ರೆಗಳು ಮುಟ್ಟಿರುವ ಪದಾರ್ಥಗಳನ್ನು ಕೊಡದೆ, ತೋರಿಸದೆ, ಮಕ್ಕಳು ನೋಡದಹಾಗೆ ದೊಡ್ಡವರು ಸಹ ತಿನ್ನದೆ ಇರಬೇಕು.

೫. ತುಂಟ ಹುಡುಗರ ಜೊತೆಯಲ್ಲಿ ಸೇರದಂತೆ,ಅವರು ಓದುವ,ಬರೆಯುವ ಅಥವಾ ಗೃಹಕೃತ್ಯಕಾರ್ಯಗಳಲ್ಲಿ ನಿಯಮಿಸಿ ಮನಃಪೂರ್ವಕವಾಗಿ ಮಾಡುವಂತೆ ಕಲಿಸಬೇಕು. ದುಷ್ಟರ ಸಹವಾಸ ಪ್ರಾಪ್ತವಾದನಂತರ ಮಗನಾಶವೇ ಇರಲಾರದು.

೬. ನೀರಲ್ಲಿ ಈಜಾಡುವದನ್ನೂ, ಶರೀರ ಸಾಧನೆ ಮಾಡುವದನ್ನೂ ಸ್ವಲ್ಪಸ್ವಲ್ಪ ಅವರಿಗೆ ಕಲಿಸುತಬರಬೇಕು.

೭. ಚಿನ್ನ ಬೆಳ್ಳಿ ವಸ್ತುಗಳನ್ನು ಮಕ್ಕಳಿಗಿಟ್ಟಲ್ಲಿ ಒಂದೊಂದು ವೇಳೆ ಅರ್ಥಹಾನಿ, ಪ್ರಾಣಹಾನಿ ಸಹ ಪ್ರಾಪ್ತವಾಗುವದು, ಆದದರಿಂದ ಬಹಳ ಜಾಗರೂಕರಾಗಿರಬೇಕು, ಈ ಕಾರ್ಯವೇ ಯೋಗ್ಯವಾದದ್ದಲ್ಲವು.

೮. ಅಂಗೀ,ಕಾಲಾವೀ ಮುಂತಾದ ಉಡುಪುಗಳಿಲ್ಲದೆ ಹುಡುಗರನ್ನು ಬೆತ್ತಲೆಯಾಗಿ ಬಿಡಬಾರದು. ಉಡುಪುಗಳನ್ನೂ,ತಲೆಯನ್ನೂ, ಮೈಯನ್ನೂ ನಿತ್ಯವೂ ಶುದ್ಧಪಡಿಸುತಲಿರಬೇಕು.

೯. ತಂದೆತಾಯಿ ಮಕ್ಕಳನ್ನು ಶಿಕ್ಷಿಸುವಾಗ ತಾಯಿ ತನ್ನಬಂದು ಅಡ್ಡೇ ಬರುವಂತೆ ಮರುಗಬಾರದು. ಅಜ್ಜೀಗಳೂ ಅವ್ವಂಗಳು ಸಹ ಅಡ್ಡ ಬಂದು ಹಾಳುಮಾಡಬಾರದು ೧ ಘಳಿಗೆಯ ಮೇಲೆ ಆದರಿಸತಕ್ಕದು. ಸೀನು ನಾನಾವಿಧ ತಪ್ಪುಗಳಿಗೆ ನಿನಗೆ ಪೆಟ್ಟುಗಳು ಬಿದ್ದವೆಂತ ಅನ್ನಬೇಕೇ ಹೊರತು ಅಪ್ಪಾಯವಾಗಿ ಹೊಡೆ ಹೊಡದ ಸೊಡು ಮಕ್ಕಳನ್ನು ನಡಿಯುಬಾರದು.

೧೦ ಮಕ್ಕಳ ವಯಸ್ಸನ್ನೂ ತಪ್ಪುಗಳನ್ನು ಸಹ ಸರಿನೋಡಿ ತಕ್ಕಷ್ಟು ಪೆಟ್ಟು ಕೊಡದು ಬುದ್ಧಿ ಹೇಳಬೇಕು. ಕೋಪದ ಮುಚ್ಚಾಕೊಂಡಂದ ಪೆಟ್ಟಾಗಿ ಹೊಡೆಯಬಾರದು ವಿಪರೀತ ಆಗ್ರಹವಾದ ತರ್ಜನ ಮಾಡಬಾರದು.

ಇನ್ನು ಬುದ್ಧಿ ಹೇಳಬೇಕಾದ ವಿಷಯಗಳನೇಕ ಪ್ರಾಯ: ಆದರೆ ತಾಯಿಯು ಓದು ಬರಹ ಬಾರದ ಪತಮೂರ್ಖಳಾಗಿದ್ದಲ್ಲಿ ತಂದೆಯ ಪ್ರಯತ್ನಗಳೆಲ್ಲ ವ್ಯರ್ಥಗಳಾಗುವವು. ಗಂಡ ಹೆಂದರು ಯಾವಾಗಲೂ ವ್ಯಾಜ್ಯಮಾಡುತ ಕಿರಿಕಿರಿಪಡುತಲಿರುವವರ ಮಕ್ಕಳಿಗೆ ಬುದ್ಧಿ ಕಲಿಸಲಿಕ್ಕಾದೀತೇ? ಮುಖ್ಯವಾಗಿ ಗಂಡ ಹೆಂಡರ ಶರೀರವೆರಡು, ಮನಸ್ಸು ಒಂದೇಯಾಗಿರುವ ಪುಣ್ಯಾತ್ಮರ್‍ಯಾರೋ ಅಂತವರ ಮಕ್ಕಳಿಗೆ ಸುಶಿಕ್ಷೆಗಳು ಬೇಕು. ಆದದರಿಂದ ಉತ್ತಮ ತಾಯಿಗಳೇ! ನಿಮ್ಮ ಮಕ್ಕಳಿಗುತ್ತಮ ಬುದ್ಧಿಗಳನ್ನು ಕಲಿಸಿ ಬವಣಪಾದಾಗ್ಯೂ, ಬಹುಕಾಲವಷ್ಟು ಕಾಲವಿದೇ ಸ್ವರ್ಗವೆಂದು ಭಾವಿಸಿ ಪ್ರಾಣಪ್ರಯತನದಿಂದಲೂ, ಮಕ್ಕಳೊಡನೆಯೂ ಕಾಲಮಕಳೆಯುವವಮ ಶ್ರೇಯಸ್ಕರವೆಂದುಅರಿಯಬೇಕಾದಾಗಿಮುಂಬೈ ಕನ್ನಡ ಸುವಾರ್ತಾಪತ್ರಿಕೆಯು ತಿಳಿಸುತಿದೆ.

BANGALORE.—Printed and published for the Proprietor at the KARNATIC PRESS.—1888

ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA.

ಪ್ರತಿ ಸೋಮವಾರ ಪ್ರಾತಃಕಾಲದಲ್ಲಿ ಪ್ರಕಟಿಸಲ್ಪಡುವದು.

Published every Monday Morning.

ಪ್ರಕಾಮವಿವಿಧಪ್ರವೃತ್ತ್ಯನಗಮಾರ್ಗ್ಗ ಕರ್ಣ್ಣಾಟಕಪ್ರಕಾಶನಪರಾಭಿದಾಪ್ರಥಿತಸಾಹಿತೀಶೋಭಿತಾ ॥ ಮೃಗಾಂಕಹಿತವಾಸರೇನಿಹಿತಮುದ್ರಣಾಸಜ್ಜನೈರ್ದ್ದಿ ಶಾನುಪರಿಪೂರ್ಣಚಾದಿಕತಿನಾನಸಂಸಂಮದಂ

Vol. XV.] BANGALORE:—MONDAY, JUNE 4, 1888. [No. 22.

ಸಂಪುಟ ೧೫.] ಬೆಂಗಳೂರು:—ಸನ್ ೧೮೮೮ನೇ ಇಸವಿ ಜೂನ್ ೪ನೇ ತಾರೀಖ್ ಸೋಮವಾರ. [ಸಂಚಿಕೆ ೨೨.

ಕರ್ಣಾಟಕ ಪ್ರಕಾಶಿಕಾ

ಪತ್ರಿಕೆಯ ಚಂದಾ ದರಗಳು,
೧೮೮೮ನೇ ಇಸವಿ ಜನವರಿಲಾಗಾಯತು
ಕಡಮೆಮಾಡಲ್ಪಟ್ಟಿರುತಿದೆ.

ಈ ಪತ್ರಿಕೆಯ ಚಂದಾದಾರರಪ್ಶೈಕಿ ಅನೇಕರ ಅಪೇಕ್ಷೆಯನ್ನೀಡೇರಿಸುವ ಉದ್ದೇಶದೊಡನೆಯೂ, ಪರಿಮಿತವಾದ ಆಯತಿಯುಳ್ಳವರಿಗೆಲ್ಲ ಈ ಪತ್ರಿಕೆಯು ಸುಲಭವಾಗಿ ಲಭಿಸುವಂತಿರಬೇಕೆಂಬ ಅಭಿಪ್ರಾಯದೊಡನೆಯೂ ಇದರ ಚಂದಾದರವನ್ನು ಇದರಡಿಕಂಡಂತೆ ಕಡಮೆಮಾಡಿರುತ್ತೇವೆಂತೆಂದರೆ:—

ಇಂಗ್ಲಿಷ್ ಮತ್ತು ಕನ್ನಡಭಾಗಗಳಿಗೆ.

	ಸ್ಥಳದವರಿಗೆ	ಪರಸ್ಥಳದವರಿಗೆ
12 ತಿಂಗಳಿಗೆ	8—0—0	9—0—0
6 ,,	4—0—0	4—8—0
3 ,,	2—8—0	2—8—0

ಇಂಗ್ಲಿಷ್ ಅಥವಾ ಕನ್ನಡಭಾಗಗಳಿಗೆ.

	ಸ್ಥಳದವರಿಗೆ	ಪರಸ್ಥಳದವರಿಗೆ
12 ತಿಂಗಳಿಗೆ	4—0—0	5—0—0
6 ,,	2—0—0	2—8—0
3 ,,	1—4—0	1—8—0

ಷರಾ—ತಿಂಡಿ ಮುತ್ಸದ್ದಿಗಳು, ಜೋಬಳ ಮತ್ತು ತಾಲ್ಲೂಕ್ ಸ್ಕೂಲ್‌ಮಾಸ್ಟರುಗಳು, ಸ್ಟ್ಯಾನಿಶೋದಾರು, ಪಟೇಲರು, ವಿದ್ಯಾರ್ಥಿಗಳು, ಇವರಿಗೆಲ್ಲ ಈ ಪತ್ರಿಕೆಯು ಪರ್ ಚಂದಾದರದಕ್ಕೆ ಕೊಡಲ್ಪಡುವದು. ಅಡ್ವಾನ್ಸ್‌ಮೊಬಲಗು ಬಾರದ ದರಖಾಸ್ತುಗಳಿಗೆ ಪುತರಾಂ ನಿಗೇಕೊಡಲ್ಪಡಲಾರದು. ಚಂದಾದಾರರು ಇಂಗ್ಲಿಷ್ ಭಾಗವನ್ನಾಗಲಿ ಕನ್ನಡಭಾಗವನ್ನಾಗಲಿ ಅಥವಾ ಎರಡನ್ನಾಗಲಿ ತೆಗೆದುಕೊಳ್ಳಬಹುದು. ಚಂದಾಹಣವನ್ನು ಮುಂಗಡವಾಗಿಯೇ ಸಲ್ಲಿಸತಕ್ಕದ್ದು. ಮೂರುತಿಂಗಳಿಗಿಂತ ಕಡಮೆಯಾಗಿ ಚಂದಾ ಮೊಬಲಗು ಅಂಗೀಕರಿಸಲ್ಪಡಲಾರದು.

ನೋಟುಗಳು ರವಾನಿಸತಕ್ಕವರು ಮೊದಲು ಕಳುಹಿಸುವ ಅರ್ಧನೋಟು ತಲುಪಿದುಬಗ್ಗೆ ನಮ್ಮಿಂದಾದವು ಬರೆದ ಕೊಡಲೇ ಬಾಕೀ ಅರ್ಧ ನೋಟನ್ನು ರವಾನಿಸತಕ್ಕದ್ದು. ಲೇಬಿಲ್‌ಗಳು ಕಳುಹಿಸತಕ್ಕವರು ರೂಪಾಯಿ ಒಂದಕ್ಕೆ ಒಂದಾಣೆಯಮೇರೆ ಡಿಸ್‌ಕೌಂಟ್ ಸಹ ಸೇರಿಸಿ ಕಳುಹಿಸತಕ್ಕದ್ದು. ಆರ್ಡರ್ ಜಾಸ್ತಿಯಾದ್ದುಳ್ಳ ಲೇಬಲ್‌ಗಳನ್ನು ಕಳುಹಿಸಕೂಡದು ಡಿಸ್‌ಕೌಂಟ್‌ಯಿಲ್ಲದೆ ಕಳುಹಿಸಲ್ಪಡುವ ಮೊಬಲಗಿನಲ್ಲಿ ಅದು ವಜಾವಾದಬಳಿಕ್ಕೆ ಮಿಕ್ಕಮೊಬಲಗು ಲೆಕ್ಕಕ್ಕೆ ದಾಖಲುಮಾಡಿಕೊಳ್ಳಲ್ಪಡುವದು.

ಪ್ರಕಟನೆಯ ರಿವಾಜ್.

ಮೊದಲನೆಯದಫಾ ಪಂಕ್ತಿ ಒಂದಕ್ಕೆ ೦—೨—೦
ಎರಡನೆಯದಫಾ ಪಂಕ್ತಿ ಒಂದಕ್ಕೆ ೦—೧—೦

ಷರಾ—ಎರಡಾವರ್ತಿಗಿಂತ ಜಾಸ್ತಿಯಾಗಿ ಎಷ್ಟು ತಡವೆ ಛಾಪಿಸ್ ಮಾಡಿದಾಗ್ಯೂ ಪಂಕ್ತಿ ಒಂದಕ್ಕೆ ೧ಅಣೆಯಂತೆಯೇ ಲೆಕ್ಕ ಮಾಡಲ್ಪಡುವದು. ಈ ಪತ್ರಿಕೆಯಲ್ಲಿ ಛಾಯಿಷುಮಾಡುವಬಗ್ಗೆ ಪ್ರಕಟನೆಗಳು ಕಳುಹಿಸುವವರು ಅವು ಎಷ್ಟಾವರ್ತಿ ಛಾಪಿಸ್ ಮಾಡಲ್ಪಡಬೇಕೋ ಆ ಅಂಕವನ್ನು ಸ್ಪಷ್ಟವಾಗಿ ತಿಳಿಸತಕ್ಕದ್ದು. ಇಲ್ಲದಪಕ್ಷಕ್ಕೆ ಅವರು ನಮಗೆ ನಿಲ್ಲಿಸುವಂತೆ ಬರೆಯುವತನಕ ಅವು ಪ್ರಕಟಿಸುತಲಿದ್ದು ಹಾಗೆ ಎಷ್ಟಾವರ್ತಿ ಪ್ರಕಟಿಸಲ್ಪಟ್ಟಿದ್ದಾಗ್ಯೂ ಮೇಲೆಕಂಡ ದರದಂತೆ ಕಿಮ್ಮತ್ ವಸೂಲ್ಮಾಡಲ್ಪಡುವದು ಪ್ರಕಟನೆಯಬಗ್ಗೆ ಕಳುಹಿಸಲ್ಪಡಬೇಕಾದ ಪ್ರಕಟನೆಗಳನ್ನು ಆಯಾವಾರದ ಮಧ್ಯಾಹ್ನ ೨ ಘಂಟೆಯೊಳಗಾಗಿ ಕಳುಹಿಸಬೇಕು. ಪ್ರಕಟನೆಯಬಗ್ಗೆ ಈ ಪತ್ರಿಕೆಗೆ ಕಳುಹಿಸಲ್ಪಡತಕ್ಕ ಕಾಗದಗಳಲ್ಲಿ ತಿಳಿಸಲ್ಪಡುವ ಅಭಿಪ್ರಾಯಗಳಿಗೆ ನಾವು ಜವಾಬ್ದಾರರಾಗಲಾರೆವು. ಕ್ರಮವಾಗಿ ರುಜುಮಾಡಿ ದಮೊತ್ತು ಯಾವಕಾಗದವನ್ನು ಪ್ರಕಟಿಸಲಾರೆವು ನಿರಾಕರಿಸಲ್ಪಟ್ಟಕಾಗದಗಳುಮರಳಾವಾಪಸ್ಸುಕಳುಹಿಸಲ್ಪಡಲಾರವು

"IT RECOMENDS ITSELF"

ALL WHO SUFFER FIND SURE RELIEF.

LITTLE'S

ORIENTAL BALM

THE MOST EFFECTUAL MODERN REMEDY FOR PAIN.

ಲಿಟಿಲ್ ಯೆಂಬವರಿಂದ ತಯಾರ್ಮಾಡಲ್ಪಟ್ಟ "ಬಾಧಸಂಹಾರಿಣೀ" ಎಂಬ ಪೂರ್ವದೇಶ ಸಂಬಂಧವಾದ ಅಮೂಲ್ಯ ತೈಲವು ಸ್ವಶಕ್ತಿ ಪ್ರದರ್ಶಕವಾದದ್ದು, ಮತ್ತು ಸಫಲವಾದ ನವೀನ ಚಿಕಿತ್ಸಾರೂಪವಾದ ಔಷಧವು. ಇದರಿಂದ ಸಕಲ ವಾತರೋಗಗಳೂ, ವಾತಸಂಬಂಧಗಳಾದ ಸಂಧಿಬಂಧಗಳೂ ನಿವೃತ್ತಿಯಾಗುವವು. ಮುಖ್ಯವಾಗಿ ಚಿರಕಾಲಿಕವಾದ ವಾತರೋಗಗಳು, ಕಾಸ, ಗಂಟಲಿನಲ್ಲಿ ಉರಿ, ನಡುವುನೋವು, ಕೀಲುವಾಯು, ಕಟಿವಾಯು, ಉಳುಕು ನೋವು, ತಲೆನೋವು, ತಿಮಿರುವಾಯು ಮುಂತಾದ ರೋಗಗಳಿಗೆಲ್ಲ ನಿಸ್ಸಂದೇಹವಾಗಿ ಬಹಳ ಪ್ರಯೋಜನವನ್ನುಂಟುಮಾಡತಕ್ಕದ್ದು. ಈ ತೈಲವನ್ನು ನೋವುಳ್ಳ ಸ್ಥಳಗಳಲ್ಲಿ ಕೆಲವಾವರ್ತಿ ಸವರಿ ಶಾಖವುಂಟಾಗುವಂತೆ ಚೆನ್ನಾಗಿ ತಿಕ್ಕಿದಲ್ಲಿ ಸಹಜಗಳಾದ ಯೆಲ್ಲಾ ನೋವುಗಳನ್ನು ನಿವೃತ್ತಿ ಮಾಡುವಂತಾ ಉತ್ತಮ ತೈಲವಾಗಿರುತಿದೆ. ಸಕ್ರೈಸ್ತೀನನೆಯಿಂದಲೇ ಅರತಲೆನೋವು ಮತ್ತು ಜೋಮು ಕುಡಾಂಗ ನಿವೃತ್ತಿಯಾಗುವದು. ಗಂಟಲಿನಲ್ಲುಂಟಾಗುವ ಉರಿ ಅಥವಾ ವ್ರಣಗಳಿಗೆ ಈ ತೈಲವು ಅದ್ಭುತವಾದ ಮತ್ತು ಶೀಘ್ರವಾದ ಸಂಪೂರ್ಣ ಗುಣವನ್ನುಂಟುಮಾಡುವದು. ಅದ್ಭುತವಾದ ಈ ಔಷಧವನ್ನು ಉಪಯೋಗಿಸಿದಲ್ಲಿ ಅದರ ಪ್ರಯೋಜನವು ಸ್ವತಃವಾಗಿ ವ್ಯಕ್ತವಾಗುವದು. ಈ ತೈಲವು ಶೀತಗಾಳಿ ಮಂಜುಮುಂತಾದವುಗಳಲ್ಲಿ ಸಂಚರಿಸುವಂತಾ ಪ್ರಯಾಣಿಕರು, ಬೇಟೆಯಾಡುವವರು, ದೇಶಾಟನ ಮಾಡುವವರು, ಮುಂತಾದವರಿಗೆಲ್ಲ ಅಮೂಲ್ಯವಾದದ್ದು.

ಪರಿಶೀಲಕರ ಅಭಿಪ್ರಾಯವು.

ಐರ್‌ಲ್ಯಾಂಡ್ ದೇಶದ ಫಾರ್ಮಸ್ಯೂಟಿಕಲ್ ಸೊಸೈಟಿಯೆಂಬ ಔಷಧಶಾಲೆಯ ಪ್ರೆಸಿಡೆಂಟರಾಗಿಯೂ, ಸದರೀ ದೇಶದ ಜಿಯಾಲಜಿಕಲ್ ಸೊಸೈಟಿ ಯೆಂಬ ಭೂತತ್ವಜ್ಞಾನವಿಷಯವಿವೇಚಕ ಸಮಾಜದ ಮೆಂಬರರಾಗಿಯೂ, "ಮಿನರಲ್ ವಾಟರ್ಸ್ ಆಫ್ ಯೂರಪ್ ಎಂಬ ಗ್ರಂಥಕರ್ತರಾಗಿಯೂ, ರಸಾಯನ ವಿಜ್ಞಾನ ವಿಷಯಕವಾದ ಅನೇಕ ಲೇಖನಾಧಿಕಾರಿಯಾಗಿಯೂ, ಇರುವ ಪ್ರೊಫೆಸರ್ ಟಿಚ್ ಬೋರ್ನ್ (C. R. Tichborne, L. L. D., F. C. S., M. R. I. A.,) ಯೆಂಬವರು ಅಭಿಪ್ರಾಯ ಪಟ್ಟಿರುತ್ತಾರೇನಂದರೆ—ಲಿಟಿಲ್‌ರವರ ಓರಿಯಂಟಲ್‌ತೈಲವನ್ನು ಜಾಗರೂಕತೆಯಿಂದ ಪರೀಕ್ಷಿಸಲಾಗಿ ಇದು ಬಹುವಿಧ ಮೂಲಿಕೆಗಳ ರಸಮಿಶ್ರವಾದ ತೈಲವೆಂದೇರ್ಪಟ್ಟಿತಲ್ಲದೆ, ಇದು ಯೆಂತಹ ಉಪಯೋಗಿಸಲ್ಪಡುವಾಗ ಕುಂಕ್ಕುಂ ನಿರುಪದ್ರವಕರವಾದದ್ದಾಗಿದ್ದರೂ, ನಿಜವಾಗಿ ಪ್ರಬಲ ರೋಗ ನಿವಾರಕ ಶಾಶಕ್ತಿಯುಳ್ಳದ್ದಾಗಿರುತಿದೆ. ಈ ಮಿಶ್ರೌಷಧವು ನರಗಳನ್ನು ಸ್ಥಿಮಿತಕ್ಕೆ ತರತಕ್ಕದ್ದಾಗಿರುವದರಿಂದ ಇದು ಯಾವ ತರದ ರೋಗಗಳಿಗೆ ಉಪಯುಕ್ತವೆಂದು ತಿಳಿಸಲ್ಪಟ್ಟಿದೆಯೋ ಸದರೀ ರೋಗಗಳಲ್ಲಿ ಅದರ ಪ್ರಯೋಜನವು ವ್ಯಕ್ತವಾಗುವದು. ಈ ತೈಲವು ಸಂಪೂರ್ಣ ಜಾಗರೂಕತೆಯೊಡನೆ ತಯಾರ್ಮಾಡಲ್ಪಟ್ಟಿದ್ದಾಗಿರುತದೆ.

ಇದರ ಕ್ರಯ—ಸೀಸೆ ಒಂದಕ್ಕೆ ೧ ರೂಪಾಯಿ.

ಇದು ಇಲ್ಲಿನ ಔಷಧ ಶಾಲೆಯಲ್ಲಿಯೂ, ಮದರಾಸ್ ಸಂಬುದಾಸ್ ಬೀದಿಯಲ್ಲಿ, ೨೦ನೇ ನಂಬರ್ ಮನೆಯೊಳಗಿರುವ, ಮೆ. ಏ. ಸಿ ಬೆರ್ರಿಮನ್ ಯವರಲ್ಲಿಯೂ, ಈ ಪ್ರಾಂತ್ಯದಲ್ಲಿರುವ ಅವರ ಏಜಂಟರುಗಳಾದ ಜೆ. ವೆಸ್ಟ್ ಯವರ ಕಂಪನಿಯಲ್ಲಿಯೂ, ಮೆ. ಕೆಪ್ಟನ್ ಅಂಡ್ ಕಂಪೆನಿಯವರಲ್ಲಿಯೂ, ರಿಗ್ಸ್‌ಯವರ ಕಂಪೆನಿಯಲ್ಲಿಯೂ ದೊರೆಯುವದು.

AGENTS.— Messrs, J. West, Chemist, &c., Bangalore.
Captain & Co. Chemists, Bangalore.
Riggs & Co., Chemists, Bangalore; and of
Mahomed Yousoff and Sons, The Cash Bazar, Bangalore
A. C. Berryman & Co.,
20 Sambodoss Street Madras.

NOTICE.

VAIDYASARA SANGRAHA

A TREATISE ON THE PRINCIPLES OF

HINDU MEDICINE.

☞ Price including Postage Rs. 5 6 0

ವೈದ್ಯಸಾರ ಸಂಗ್ರಹ.

ಈಗ್ರಂಥಾಪೇಕ್ಷೆಯುಳ್ಳವರು ಮೊಬಲಗಿನೊಡನೆ ಈ ಕೆಳಗೆ ರುಜುಮಾಡಿರತಕ್ಕವರ ಹೆಸರಿಗೆ ಬರೆದುಕೊಂಡರೆ ಪುಸ್ತಕ ಕೂಡಲೇ ಕಳುಹಿಸಲ್ಪಡುವದು. ಮೊಬಲಗು ಇಲ್ಲದ ದರಖಾಸ್ತುಗಳಿಗೆ ಸುತರಾಂ ನಿಗೇಕೊಡಲ್ಪಡಲಾರದು.

ಇದರಕ್ರಯ ... ...ರೂ॥ ೫—೦—೦
ಪ್ಯಾಕಿಂಗ ಮತ್ತು ಅಂಚೇಹಾಸಲ್, ೦—೬—೦

ಟಿ. ಬಿ. ವೆಂಕಟಾಚಾರ್,
ಆಸ್ಪತ್ರಿರೋಡ ಬೆಂಗಳೂರು.

ವಿಶೇಷ ವರ್ತಮಾನ



ಪೂನೆ ಚಿತ್ರಶಾಲೆಯಲ್ಲಿ ತಯಾರಿಸಲ್ಪಟ್ಟಿರುವ ಶ್ರೀರಾಮ ಪಂಚಾಯತನ, ಜಗನ್ಮೋಹಿನಿ, ಚರಿತ್ರೆಗಳಮೂಲಕ ಪ್ರಸಿದ್ಧರಾದ ಪುರುಷರ, ಸುಂದರಿಗಳಾದ ಸ್ತ್ರೀಯರ ಮೊದಲಾದವರ ಬಣ್ಣದ ತಸ್ವೀರ್‌ಗಳು ತಯಾರಾಗುತಲಿವೆ ಇವುಗಳ ಕೆಟಲಾಗು ನಮೂನೆಯನ್ನು ನೋಡಿದವರಿಗೆ ಕ್ರಯ ಬಹಳ ಅಲ್ಪವಾಗಿದೆ ಬೇಕಾದವರಿಗೆ ಕ್ರಯಪಟ್ಟಿ ಕಳುಹಿಸಲ್ಪಡುವದು.

ಪೂನೇ ಮರಾಠ್ ಚಿತ್ರಶಾಲಾ ಪ್ರೆಸ್ಸಿನವರ

ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA.

MONDAY, JUNE 4, 1888.

೧೮೮೮ನೇ ಜೂನ್ ೪ನೇ ತಾ॥ ಸೋಮವಾರ

CONJEVERAM FESTIVAL.

ಕಾಂಚೀಪುರದಿಂದ ನಿನ್ನೆಯದಿನ ಬೆಳಗ್ಗೆ ಈ ಪ್ಪೂರಿಗೆ ಬಂದ ಯಾತ್ರಾರ್ಥಿಯೊಬ್ಬನು ಈಸಲದ ಗರುಡೋತ್ಸವ ವಿಶೇಷವಂ ಕುರಿತು ಇದರಡಿ ಕಂಡಂತೆ ತಿಳಿಸಿರುತ್ತಾನೇನಂದರೆ.—

"ಶ್ರೀಹಸ್ತಿಗಿರಿ ನಾಥನಪುರವಾದ ಕಾಂಚೀನಗರವು ಉತ್ಸವಾರಂಭಕ್ಕೆ ಪೂರ್ವವೇ ವಿವಿಧಾಲಂಕಾರ ಶೋಭಿತವಾಗಿ ಮಾಡಲ್ಪಟ್ಟಿತ್ತು. ದೇವರ ಸೇವಾರ್ಥವಾಗಿ ಹೋಗಿದ್ದ ನಾನಾದೇಶೀಯರು ವಿಜಾತೀಯಗಳಾದ ವಸ್ತ್ರಭೂಷಣಗಳೊಡನೆ ದೇವಾಲಯಕ್ಕೆ ಹೋಗಿಬರುವದನ್ನೂ, ಉತ್ಸವಾರ್ಥ ಸಂಭಾರ ಸಂಭರಣ ನಿರತರಾದ ಧರ್ಮಕರ್ತರ ಕೆಲಸಗಳನ್ನೂ, ಸ್ಥಳ ಪರಸ್ಥಳದವರಾದ ಸೇವಾ ಕುತೂಹಲಿಗಳು ಭಕ್ತ್ಯುತ್ಸಾಹಗಳೊಡನೆಮಾಡುತಲಿದ್ದ ಪ್ರಯತ್ನಗಳನ್ನೂ, ಜನಗಳ ಆರೋಗ್ಯಮತ್ತು ನಿರಪಾಯತೆ ವಿಷಯದಲ್ಲಿ ಅಧಿಕಾರಿಗಳುಮಾಡಿದ್ದ ಏರ್ಪಾಡುಗಳನ್ನು ಸಹ ನೋಡಿ ಅತ್ಯಾನಂದ ಭರಿತನಾದೆನು. ಮುಖ್ಯವಾಗಿ ಆ ಪಟ್ಟಣದೊಳು ನಾನಿದ್ದ ೧೦ ದಿನಗಳಲ್ಲಿಯೂ ಅದರ ಸರ್ವವಸ್ತುಗಳೂ ಭಗವದರ್ಥಗಳೇಯೆಂತಲೂ, ಜನಗಳೆಲ್ಲರೂ ಭಗವತ್ಪರಾಯಣರೇ ಯೆಂತಲೂ, ಸರ್ವವ್ಯಾಪಾರಗಳೂತತ್ಸೇವೆಯೇ ಯೆಂತಲೂ ಕಾಣಬರುತಲಿದ್ದವು. ಈಉತ್ಸವಕಾಲದೊಳಗೆ ನನ್ನಕಿವಿಗೆ ಕೇಳಬಂದ ಶಬ್ದಗಳೆಲ್ಲವೂ ಭಗವನ್ನಾಮಗಳಾಗಿಯೂ ವೇದ ವಾಕ್ಯಗಳಾಗಿಯೂ ಇದ್ದವು. ನಾನು ಮುಖ್ಯವಾಗಿ ಉತ್ಸವ ದರ್ಶನಾಕಾಂಕ್ಷೆಯೊಡನೆ ಹೋಗಿದ್ದವನಾದದರಿಂದ ನಾನು ಹೋಗಿ ಬರುತಲಿದ್ದ ಸ್ಥಳವು ದೇವಾಲಯ ಮತ್ತು ಗಂಗಕೊಂಡಾನ ಮಂಟಪವೇ ಆದದರಿಂದ ಇತರ ವಿಷಯಗಳನ್ನು ತಿಳಿಯುಕೊಳ್ಳುವದಕ್ಕೆ ಅವಕಾಶವೂ ಆವಶ್ಯಕತೆಯೂ ಉಂಟಾಗಿರಲಿಲ್ಲವು. ಆದದರಿಂದ ನನ್ನ ಸರ್ವೇಂದ್ರಿಯಗಳೂ ಉತ್ಸವದಿಂದಲೇ ಕೃತಾರ್ಥವಾದವು. ಆ ಸಂದರ್ಭದಲ್ಲಿ ಯುಂಟಾದ ನನ್ನ ಮನೋಭಾವವನ್ನು ತಿಳಿಸಲಿಕ್ಕೆ ಶಬ್ದಗಳೂ ಅವಕಾಶವೂ ಸಾಲದ್ದಾಗಿರುತಿವೆ. ಕಳೆದ ದ್ವಾದಶೀ ದಿವಸ ಧ್ವಜಾರೋಹಣವಾಗಿ ಕ್ರಮಪ್ರಕಾರ ದಿನಕ್ಕೆ ಎರಡು ವಾಹನಗಳ ಮೇಲೆ ಸಿಂಹವಾಹನ, ಹಂಸವಾಹನ, ಸೂರ್ಯಪ್ರಭೆ, ಗರುಡವಾಹನ, ಹನುಮಂತವಾಹನ, ಶೇಷವಾಹನ, ಚಂದ್ರಪ್ರಭೆ, ಸುವರ್ಣಂದೋಳಿಕೆ, ಮೋಹಿನೀವೇಷ, ಯಾಳಿವಾಹನ, ಚಪ್ರ, ಆನೆವಾಹನ, ರಥೋತ್ಸವ, ಕುದುರೆವಾಹನ, ಚಿನ್ನದ ಕರ್ಣಾಟಕ ಪಾಲಕಿ, ಪ್ರ್ಯಕೋಟಿ ವಿಮಾನ, ಲಾವಂಚ ಚಪ್ರ ಈರೀತಿ ಸಮಗ್ರವಾಗಿ ಉತ್ಸವಗಳು ಅತಿ ವಿಭವದೊಡನೆ ಜರಿಗಿದವು. ಜಗತ್ಪ್ರಸಿದ್ಧವಾದ ಗರುಡೋತ್ಸವದ ದಿವಸ ಬಹು ಪ್ರಜೆಗಳು ಸೇರಿದ್ದರು. ರಥೋತ್ಸವಕಾಲದಲ್ಲಿ ರಥವು ಕ್ರಮಪ್ರಕಾರ ಸಕಾಲದಲ್ಲಿ ಸ್ವಸ್ಥಾನಕ್ಕೆ ಬಂದು ಸೇರದೆ ಯೆರಡು ಮೂರು ದಿನಗಳು ಮಾರ್ಗದಲ್ಲಿ ನಿಂತುಹೋ

ಯಿತು. ಗಂಗಕೊಂಡಾ ಮುಂತಾದಬಳಿ ರಥದ ಚಕ್ರಗಳು ನೆಲದಲ್ಲಿ ಹೂಳಿಹೋದದರಿಂದ ಅವು ಮುಂದೆ ಸಾಗಲಿಲ್ಲವು. ಪರಂತು ಪ್ರಜೆಗಳ ಶ್ರದ್ಧಾಭಕ್ತಿಪೂರ್ವಕವಾದ ಪ್ರಯತ್ನದಿಂದಲೂ ತಾಲ್ಲೂಕು ಮತ್ತು ಡಿಸ್ಟ್ರಿಕ್ಟು ಅಧಿಕಾರಿಗಳು ಜಾಗರೂಕತೆಯೊಡನೆ ಮಾಡಿದ ಸಹಾಯದಿಂದಲೂ ಸ್ವಲ್ಪ ಕಾಲ ವಿಳಂಬವಾದಾಗ್ಯೂ ರಥವು ಅಪಾಯಗಳೊಂದೂ ಇಲ್ಲದೆ ನೆರೆಗೆ ಬಂದು ಸೇರಿತು. ಈಗ ಬಿಸಲಿನ ಝಳವು ದುಸ್ಸಹವಾಗಿದೆ. ಉಪಾಲಿ ಜ್ವಾಲಾಚ ರೋಗವು ಅತರಾಫನಲ್ಲಿ ಸ್ವಲ್ಪ ಮಟ್ಟಿಗೆ ಇದ್ದಾಗ್ಯೂ ಬಹುಜನಗಳು ಸೇರಿದ್ದ ಕಾಲದಲ್ಲಿ ಕಸಬೆಯೊಳು ಅದರ ವ್ಯಾಪಕತೆ ಯೇನೂ ಕಂಡುಬರಲಿಲ್ಲವು. ಪರಂತು ಆಯುಃಪರಿಮಾಣವು ತೀರಿಯಾರಾದರೂ ಮೃತಪಟ್ಟರೆ ಅಂತವರಿಗೆಸಹ ಸದರೀ ರೋಗವನ್ನೇ ಕಾರಣತ್ವೇನ ನುಡಿಯುತ ಇತರರನ್ನು ಭೀತಿಯನ್ನುಂಟುಮಾಡುವದು ವಾಡಿಕೆಯಾಗಿದ್ದಾಗ್ಯೂ ನಿಜವಾಗಿ ಸದರೀರೋಗದಿಂದಲೇ ಮೃತಪಟ್ಟವರ್‍ಯಾರೋ ಅಂತವರಂ ಅಲ್ಲಿನ ಜನಸಮ್ಮರ್ದದಲ್ಲಿ ಕಂಡು ಹಿಡಿಯಲಿಕ್ಕೆ ನನಗೆ ಸಾಧ್ಯವಲ್ಲದೆ ಹೋಯಿತು. ಇತರ ರೋಗೋಪದ್ರವಗಳ್ಯಾವದೂ ನನ್ನ ತಿಳುವಳಿಕೆಗೆ ಬರಲಿಲ್ಲವು. ಪ್ರಾತಃಕಾಲಕ್ಕಿಂತಲೂ ರಾತ್ರಿ ಕಾಲದಲ್ಲಿ ಉತ್ಸವಗಳು ದರ್ಶನೀಯಗಳಾಗಿದ್ದವು. ಇದಕ್ಕೆ ಬಿಸಲಿನ ತೈಕ್ಷ್ಣ್ಯವೊಂದೇ ಪ್ರಬಲ ಕಾರಣವೆಂದು ನಂಬುತ್ತೇನೆ, ಎಂಬನು.

ADVICE TO THE NATIVE PRINCES

ಒಂದು ರಾಷ್ಟ್ರಕ್ಕೆ ಪಾಲಕನಾದ ಅರಸನು ಅವಿವೇಕಿಯಾಗಿ ದುರ್ಮಾರ್ಗದಲ್ಲಿ ಪ್ರವರ್ತಿಸಿದರೆ, ಅದು ಯಾವದೋ ಒಂದು ಅದೃಷ್ಟಕಾರಣದಿಂದ ತತ್ಕಾಲದಲ್ಲಿ ತನಗೆ ಅನುಕೂಲವಾಗಿಯೂ, ಲಾಭಕರವಾಗಿಯೂ, ಅತಏವ ತೃಪ್ತಿಕರವಾಗಿಯೂ ತೋರಿದಾಗ್ಯೂ, ಉತ್ತರೋತ್ತರ ಯಾವಜ್ಜೀವವೂ ದುಃಖಿಸತಕ್ಕ ಮಹಾನರ್ಥಗಳಿಗೆ ಕಾರಣಗಳಾಗುವದೆಂದು ಪ್ರಬಲಗಳಾದ ಲೋಕಾನುಭವಗಳಿಂದಲೂ, ದೃಷ್ಟಾಂತಗಳಿಂದಲೂ, ಆಪ್ತವಾಕ್ಯದಿಂದಲು ಸಹ ತಿಳಿಯದೆಹೋದರೆ ಅಂತವನು ತನ್ನ ಆಧಿಪತ್ಯಕ್ಕೊಳಗಾದ ಅನೇಕ ಪ್ರಜೆಗಳನ್ನು ಸ್ವಾಧೀನಪಡಿಸಿಕೊಂಡು ಏಕಮತ್ಯದೊಡನೆ ಪರಸ್ಪರ ಪ್ರಯೋಜನಗಳನ್ನುಂಟುಮಾಡಿಕೊಂಡು ಸುಖಾಭಿವೃದ್ಧಿಯಂ ಪಡೆಯಬೇಕಾದದ್ದು ರಾಜ ಧರ್ಮವೆಂಬದನ್ನು ಸಹ ತಿಳಿದುಕೊಳ್ಳುವದು ಅಸಾಧ್ಯವಾಗಿರುವದು. ಅರಸನಾದವನು ನ್ಯಾಯ ನೀತಿಗಳಿಂದ ಪ್ರಜಾಪಾಲನು ಗೈಯುವನಾದರೆ ಜನಗಳೆಲ್ಲರೂ ನ್ಯಾಯಪರರಾಗಿಯೇ ಇರುವರು. ಹಾಗಿದ್ದರೇನೇ ಪಾಲ್ಯಪಾಲಕ ಯೋಗಕ್ಷೇಮಗಳಿಗೆ ಚ್ಯುತಿ ಯುಂಟಾಗದಿರುವದು. ಆದದರಿಂದ ಅರಸನು ನ್ಯಾಯವೇತ್ತನಾಗಿಯೂ, ತದ್ವತ್ ನಡೆಯತಕ್ಕವನಾಗಿಯೂ, ತನ್ನಂತೆ ತನ್ನ ಪ್ರಜೆಗಳು ಕೂಡ ನಡೆಯುವಂತೆ ಸಾಮ ದಾನ ದಂಡೋಪಾಯಗಳಿಂದ ಅವರಂ ಪ್ರೇರಿಸತಕ್ಕವನಾಗಿಯೂ ಇರಬೇಕಾದದ್ದೇ ಮುಖ್ಯ ಧರ್ಮವಾಗಿರುತಿದೆ. ಅಂತಾ ನ್ಯಾಯವೆಂಬದ್ಯಾವದಂದರೆ,—ತನ್ನ ಹಕ್ಕನ್ನೂ ತಾನು ಸ್ವತಃ ನೆರವೇರಿಸಬೇಕಾದ ಕಾರ್ಯಗಳನ್ನೂ ಇತರರಿಗೆ ಒಪ್ಪಿಸಿ, ತಾನು ಭೋಗಾಮತನಾಗಿ ಅವರ ಅಕ್ರಮಗಳನ್ನೆಲ್ಲ ಬಹಳ ಭೋಗ್ಯವಾಗಿನೋಡುತಲಿರದೆಯೂ, ಇತರರ ಹಕ್ಕನ್ನು ಅಕ್ರಮವಾಗಿ ಪಡೆಯದೆಯೂ, ಲೋಕಾಪವಾದಕ್ಕೂ ಅಥವಾ ಉಪೇಕ್ಷೆಗೂ ಅವಕಾಶವು ಕೊಡದಂತೆ ವೃದ್ಧಿಯಂ ಹೊಂದಲಿಕ್ಕೆ ಪ್ರಯತ್ನಪಡತಕ್ಕದ್ದಾಗಿರುತಿದೆ. ಇನ್ನೂ ವಿವರವಾಗಿ ಹೇಳಬೇಕಾದರೆ-ಅರಸು ತನ್ನಂತೆ ತನಗೆ ಸೇರಿದ ಪ್ರಜೆಗಳನ್ನು ಕೂಡ ಪ್ರೇರಿಸಿ ಅವರನ್ನೂ ಕ್ರಮಪಡಿಸುತ ತಾನೀರ್ವರೂ ಕ್ರಮವಂತಪ್ಪ ನಡೆಯುವಂತೆ ತಮ್ಮ ತಮ್ಮ ಕರ್ತವ್ಯಗಳನ್ನು ನೆರವೇರಿಸುವದಕ್ಕಾಗಿ ಯೆಲ್ಲ ವಿಧ ನ್ಯಾಯಗಳನ್ನೂ ಬೋಧಿಸುವ ಗ್ರಂಥಗಳನ್ನು ಪ್ರಚಾರಗೊಳಿಸಿ ದುರ್ಗುಣಗಳಿಂದುಂಟಾಗುವ ಕೆಡುಕುಗಳನ್ನೂ ಸುಗುಣಗಳಿಂದುಂಟಾಗುವ ಮೇಲುಗಳನ್ನೂ ಚೆನ್ನಾಗಿ ತಿಳಿದು ಆಮೇಲೆ ಯೋಗ್ಯವಾದ ರೀತಿಯಿಂದ ನಡೆಯುವಂತೆ ಅಭ್ಯಾಸವನ್ನು ಪ್ರಬಲ ಪಡಿಸುತಲಿರುವದೇ ಯೆಂದು ನುಡಿಯಬಹುದು. ಹಾಗಲ್ಲದೆ ಅರಸನಾದವನು ನ್ಯಾಯವನ್ನುಪೇಕ್ಷಿಸಿ ದುರಾಶೆಗೊಳಪಟ್ಟು ಇತರರ ಹಕ್ಕುಗಳಿಗೂ ನ್ಯಾಯ ನಿಬಂಧನೆಗಳಿಗೂ ವಿರುದ್ಧವಾಗಿ ನಡೆಯುತಬಂದರೆ ಆಗ ಅಂತವನಿಂದ ಪಾಲಿಸಲ್ಪಡುವ ಪ್ರಜೆಗಳೂ ಅವನ ಸಮಾನರೇಯಾಗಿ ಅವನ ಗೌರವವನ್ನೂ, ಹಕ್ಕನ್ನೂ ಲಕ್ಷ್ಯಮಾಡದೆ ವಿರುದ್ಧ ಕಾರ್ಯಗಳನ್ನು ನಡೆಸುತಬರುವರಾಗಿಆಗ ಅರಸನಸ್ವರೂಪಯೋಗ್ಯತೆಗಳಿಗೆ ಮಾಲಿನ್ಯವುಂಟಾಗುವವು. ಅಂತಾ ಪ್ರಜೆಗಳನ್ನು ಕ್ರಮಪಡಿಸುವ ವಿಷಯದಲ್ಲಿ ಸ್ವತಃ ನ್ಯಾಯ ನೀತಿಗಳಿಂದ ಬದ್ಧನಾದ ಅರಸು ಬಹಳ ಸಮರ್ಥನೆಂದು ಗಣಿಸಲ್ಪಡುವನು. ಒಂದುವೇಳೆ ತನಗುಂಟಾದ ಸೈನ್ಯ ಧನ ಮೊದಲಾದ ಸಾಧನೋಪಪತ್ತಿಗಳಿಂದಲೇ ಪ್ರಜೆಗಳನ್ನು ನಿಗ್ರಹಿಸಿ ಅವರ ದೆಸೆಯಿಂದ ತನಗುಂಟಾಗುವ ತೊಂದರೆಗಳನ್ನು ನಿವೃತ್ತಿಸಿಕೊಳ್ಳಬಹುದೆಂದು ಅವಿವೇಕವೂ ಮತ್ತತೆಯೂ ಅವರಂ ಪ್ರೇರಿಸಬಹುದು. ಅರಸನಿಗೆ ಸೈನ್ಯವೆಂಬದು ಪ್ರಜೆಗಳೇ ಹೊರ್ತು ಬೇರಲ್ಲವು. ಧನ ಮಾನ ಮುಂತಾದವುಗಳಿಂದ, ಕ್ರಮವಾಗಿಯೂ ನಿತ್ಯವಾಗಿಯೂ, ಅವರಂ ಸ್ವಂತವಾಗಿ ಭಾವಿಸಿ ಕಾಪಾಡಿದರೇನೇ ಅವರು ಸ್ವಾಮಿ ಭೃತ್ಯನ್ಯಾಯಕ್ಕೊಳಪಟ್ಟು ಅರಸನಲ್ಲಿ ಕೃತಜ್ಞರಾಗಿ ಸಮಯ ಬಂದಾಗ ಪ್ರಯೋಜಕರಾಗಿರುವರು. ಧನವೆಂಬದೊಂದಿದ್ದರೆ ಅದರಿಂದ ಪ್ರಪಂಚವನ್ನೂ ತನ್ನಿಯಾಮಕನಾದ ಭಗವಂತನನ್ನು ಸಹ ಸ್ವಾಧೀನ ಪಡಿಸಿಕೊಳ್ಳಬಹುದಾಗಿರುವಲ್ಲಿ ಆಬಾಲವೃದ್ಧರಾದ ಸಾಮಾನ್ಯಜನರು ಸ್ವಾಧೀನರಾಗುವದೇನೂ ಆಶ್ಚರ್ಯವಲ್ಲವೆಂಬ ದುರಭಿಪ್ರಾಯವು ಕದಾಚಿತ್ ಉಂಟಾಗಬಹುದು. ಕೇವಲ ಧನದಿಂದಲೇ ಯಾವ ಕಾರ್ಯವೂ ನಡೆಯಲಾರದು. ಹಾಗಿದ್ದಾಗ್ಯೂ ಅದು ಎಲ್ಲಿಯದು? ಅದು ಪ್ರಜೆಗಳ ಮೂಲಕವಾಗಿಯೆ ಅಲ್ಲವೆ ಅರಸನಿಗೆ ಬರಬೇಕಾಗಿರುತಿದೆ. ಆದದರಿಂದ ಅದಕ್ಕಾಗಿಯಾದರೂ ಪ್ರಜೆಗಳ ಕ್ಷೇಮಲಾಭಗಳಲ್ಲಿ ಅರಸನು ಅಭಿಲಾಷೆ ಯುಳ್ಳವನಾಗಿರಬೇಕಾದದ್ದು ಆವಶ್ಯಕವಾಗಿರುತಿದೆ. ತನ್ನ ಅಭೀಷ್ಟಗಳನ್ನೆಲ್ಲ ಕೇವಲ ಸೈನ್ಯ ಬಲದಿಂದಲೇ ಸಾಧಿಸಿಕೊಳ್ಳಬಹುದೆಂದು ಎಣಿಸಿದರೆ, ಪ್ರಬಲನಾದವನಿಗಿಂತಲೂ ದುರ್ಬಲರಾದವರನೇಕರು ಸೇರಿದಾಗ್ಯೂ, ಅಥವಾ ತನಗಿಂತ ಪ್ರಬಲನೊಬ್ಬ ನೇರ್ಪಟ್ಟಾಗ್ಯೂ ಕಡೆಗೆ ಅವನು ನಿಷ್ಪ್ರಯೋಜಕನಾಗುತ್ತಾನೆ. ಲೋಕದಲ್ಲಿ ತಾನೊಬ್ಬನೇ ಪ್ರಬಲನಾಗಿರಬೇಕೆಂದಪೇಕ್ಷಿಸಿದರೆ ಅದು ಬಹಳ ಅಸಾಧ್ಯವು, ಮತ್ತು ದುರ್ಲಭವು. ಅದು ಒಂದುವೇಳೆ ಪ್ರಜೆಗಳಿಗೆ ತೃಪ್ತಿಕರವಾಗಿ ವರ್ತಿಸುವಂತಾ ನ್ಯಾಯೈಕ ಪರನಾದವನಿಗೆ ಲಭಿಸಬಹುದೇ ಹೊರ್ತು ಒಂದು ಕ್ರಮಕ್ಕೊಳಪಡದೆ ಮನಸ್ವೀ ಪ್ರವರ್ತಿಸುತ ಪ್ರಜೆಗಳ ವೈಮನಸ್ಯಕ್ಕೆ ಪಾತ್ರನಾಗುವವನಿಗೆ ಸರ್ವಾತ್ಮನಾ ಸಿದ್ಧಿಸಲಾರದು. ಪ್ರಜೆಗಳು ಅವಿವೇಕಿಗಳಾಗಿದ್ದರೆ ಅಂತವರ ತೃಪ್ತಿಯನ್ನೂ ಸಮ್ಮತಿಯನ್ನೂ ಪಡೆಯುವದು ಅಶಕ್ಯವಾಗಿರುವದಾಗಿ ಅವರನ್ನು ನಿಗ್ರಹಿಸಿಯೇ ತನಗೆ ಅನುಕೂಲರನ್ನಾಗಿ ಮಾಡಿಕೊಳ್ಳಬೇಕಾದರೆ ಅದು ಯೆಂದಿಗೂ ಸಾಧ್ಯವಾಗತಕ್ಕದ್ದಲ್ಲವು. ಕಡೆಗೆ ಅದರಿಂದ ಕೇವಲ ವೈರಸ್ಯವುಂಟಾಗಿ ಬಹಳ ಕಷ್ಟ ಪ್ರಾಪ್ತವಾಗಬಹುದಾದದರಿಂದ ಯಾವ ಉದ್ದೇಶ್ಯಕ್ಕೋಸ್ಕರ ನಿಗ್ರಹದಲ್ಲಿ ಪ್ರಯತ್ನಪಡುತ್ತಾನೋ ಅದು ಸ್ವರೂಪತಃ ನಾಶವಾಗುವದಲ್ಲದೆ ಅದಕ್ಕೆ ವಿರುದ್ಧವಾದದ್ದೇ ಲಭಿಸುವದು. ಇದಕ್ಕೆ ದೃಷ್ಟಾಂತವಾಗಿ ತನ್ನ ಕುಟುಂಬ ವರ್ತಿಗಳಾದ ಪುತ್ರಕಳತ್ರ ಭೃತ್ಯಾದಿಗಳು ಮೂರ್ಖರಾಗಿದ್ದರೆ ಅವರು ತಾನು ಹ್ಯಾಗೆ ನಿಗ್ರಹಿಸಬಹುದು ? ನೀತಿಯಿಂದಲೂ, ಅಭ್ಯಾಸದಿಂದಲೂ, ಸಂತೃಪ್ತಿಯಿಂದಲೂ ಅವರಿಗೆ ಅಭಿರುಚಿಯನ್ನುಂಟುಮಾಡುತ ಅವರಿಗಾಗಿ ಯಜಮಾನನಾದವನೇ ಸಲಿದುಕೊಂಡು ಕ್ರಮವಾಗಿ ತನ್ನ ಕುಟುಂಬದವರನ್ನು ತನ್ನ ಮಾರ್ಗಕ್ಕೆ ತಂದುಕೊಳ್ಳಬೇಕಾದದ್ದು ನ್ಯಾಯವಾಗಿದೆಯಷ್ಟೆ. ಹಾಗಿಲ್ಲದೆ ಅವರನ್ನು ಶುದ್ಧವಾಗಿ ನಿಗ್ರಹಿಸಿದರೆ ಬಳಿಕ ತನಗೆ ಸಂತೋಷವನ್ನುಂಟುಮಾಡುವರ್‍ಯಾರೂ ಇಲ್ಲದೆ ಹೋಗುತ್ತಾರೆ. ಯಾರು ತನ್ನ ಮಾರ್ಗವನ್ನವಲಂಬಿಸಿ ಬರುವರೋ ಅಂತವರೇ ತನ್ನ ಕುಟುಂಬದವರಾಗಿರಲೆಂದು ನುಡಿಯುವಪಕ್ಷಕ್ಕೆ ಅಂತಾ ಅವ್ಯವಸ್ಥಿತನಬಳಿ ಒಬ್ಬರೂ ಸೇರಿ ಸ್ಥಿರವಾಗಿರಲಾರರು. ಯಾತಕ್ಕಂದರೆ, ಕ್ರಮವಾದ ಅಭ್ಯಾಸವೂ ಸಹನೆಯೂ ಇಲ್ಲದವನಿಗೆ ಮನೋವೃತ್ತಿಯು ಕ್ಷಣೇ ಕ್ಷಣೇ ಭಿನ್ನಿಸುತಲಿರುವದಾಗಿಆಮೇಲೆ ಆಕುಟುಂಬದವರೆಲ್ಲರೂ ಭಿನ್ನಭಿನ್ನ ಜ್ಞಾನವುಳ್ಳವರಾದರೆ ಆಗ ಐಕಮತ್ಯವೂ ಸುಖವೂ ನಾಶವಾಗುವವು. ಈ ಮೇರೆ ಕುಟುಂಬಭರಣವನ್ನು ಮಾಡುವ ಸಂಸಾರಿಗೆ ಇಷ್ಟರ ಪರಿಪೋಷಣೆಯೆಂಬದು ಬೇಕಾಗಿರುವಲ್ಲಿ ರಾಷ್ಟ್ರ ಸಂಸಾರಿಯಾದ ಅರಸನಿಗಿನ್ನೆಷ್ಟರ ಸಹನೆಯೂ ಪ್ರಜಾರಂಜನೆಯೂ ಇರಬೇಕೋ ಅದು ಊಹಿಸಿ ನೋಡಬಹುದು. ಮುಖ್ಯವಾಗಿ ಪ್ರಜೆಗಳಲ್ಲಿ ಒಂದುಬಗೆಯಾದ ಮನುಷ್ಯನು ಯಾತಕ್ಕೆ ಇಷ್ಟು ಚಾತುರ್ಯಗಳನ್ನು ಪಡೆಯಬೇಕಾಗಿದೆಯಂದರೆ ಸುಖಕ್ಕಾಗಿಯೇ ಯೆಂದು ನುಡಿಯುವೆವು. ಅಂತಾ ಸುಖವು ಕೇವಲ ಬಾಹ್ಯೇಂದ್ರಿಯ ತೃಪ್ತಿರೂಪವಾದದ್ದಾಗುವಪಕ್ಷಕ್ಕೆ ಮಾನುಷತ್ವಕ್ಕೇ ಪ್ರಯೋಜನವಿಲ್ಲದೆ ಹೋಗಬೇಕಾಗುತಿದೆ. ಆದದರಿಂದ ಮನುಷ್ಯನು ಅಭಿಮಾನ, ಅನುರಾಗ, ವಾತ್ಸಲ್ಯ, ಗೌರವ, ಉಪಕಾರ ಮುಂತಾದ ಗುಣಗಳಿಂದಲೇ ಮುಖ್ಯಪ್ರಯೋಜನಗಳನ್ನು ಹೊಂದಬೇಕಾಗಿರುವದರಿಂದ ಅವುಗಳೆಲ್ಲಕ್ಕೂ ಮುಖ್ಯಕಾರಣವಾದ ಲೋಕಾನುಸರಣವನ್ನೇ ಅವಲಂಬಿಸಬೇಕು. ಹಾಗೆ ತಾನು ಸರ್ವಜನ ಸಮ್ಮತವಾದ ರೀತಿಯಂ ಪಡೆಯದೆ ಲೋಕವಿಲಕ್ಷಣನಾಗುವಲ್ಲಿ ಅವನಿಗೆ ಈ ಲೋಕವು, ಲೋಕಕ್ಕೆ ಅವನೂ ವಿರೋಧಿಗಳಾಗಿರುವದರಿಂದ ಯಾವ ಪ್ರಯೋಜನವೂ ಇಲ್ಲದೆ ಹೋಗುತಿದೆ. ಆದರೆ ಲೋಕದೊಳಗೆಲ್ಲ ಒಂದೇ ಬಗೆಯಾದ ರೀತಿಯನ್ನೇ ನೆಲೆಗೊಳಿಸಬೇಕಲ್ಲದೆ ಭಿನ್ನಭಿನ್ನ ನ್ಯಾಯಗಳೆಲ್ಲವೂ ನಿರಾಕರಿಸಲ್ಪಡಬೇಕೆಂದು ಹೇಳುವಪಕ್ಷಕ್ಕೆ ಅಂತಾ ತಾತ್ಪರ್ಯವೆಂದಿಗೂ ಸಿದ್ಧಿಸಲಾರದು. ಯಾತಕ್ಕಂದರೆ, ಮನುಷ್ಯನಿಗೆ ಸಹಜಗಳಾದ ಅನುಭವಗಳೂ ಅಭಿರುಚಿಗಳೂ ಬಗೆಬಗೆಯಾಗಿರುವದಲ್ಲದೆ ದೇಶಭೇದದಿಂದಲೂ, ಕಾಲಭೇದದಿಂದಲೂ, ಕ್ರಿಯಾಭೇದದಿಂದಲೂ, ಪ್ರಜೆಗಳು ಬೇರೆ ಬೇರೆಯಾಗಿರುವದೇ ಅದಕ್ಕೆ ನಿದರ್ಶನವಾಗಿರುತಿದೆ. ಹೀಗೆ ಭಿನ್ನ ಭಿನ್ನರಾಗಿರುವ ಪ್ರಜೆಗಳೆಲ್ಲರ ಯೋಗಕ್ಷೇಮಗಳನ್ನು ಒಬ್ಬ ಅರಸನು ನಿರ್ವಹಿಸಬೇಕಾದರೆ ಪ್ರತಿ ವಿಷಯದಲ್ಲಿಯೂ ಭಿನ್ನಭಿನ್ನ ವರ್ಗದವರಲ್ಲಿ ಜ್ಞಾನಾಧಿಕರಾಗಿಯೂ, ಅನುಭವಶಾಲಿಗಳಾಗಿಯೂ, ಆಯಾ ವರ್ಗಾನುಮತರಾಗಿಯೂ ಇರುವವರನೇಕರ ಪರ್ಯಾಲೋಚನೆಯೂ ಸಮ್ಮತಿಯೂ ಆವಶ್ಯಕವಾಗಿರುತಿದೆ. ಆದಕಾರಣ ಅರಸನಾದವನು ದುಷ್ಟರಲ್ಲಿ ಸ್ವಶಕ್ತಿಯನ್ನೂ, ಯೋಗ್ಯರಲ್ಲಿ ಪ್ರೀತಿ ಗೌರವಗಳನ್ನೂ, ದೀನರಲ್ಲಿ ಆದರಣೆಯನ್ನೂ ಸಾಮಾನ್ಯವಾಗಿ ಪ್ರಜೆಗಳಲ್ಲಿ ಅಭಿಮಾನವನ್ನೂ, ಜನರ ಹಕ್ಕುದಾರಿಗಳಂ ಪುರಸ್ಕರಿಸಿ ಕಾಪಾಡುವ ವಿಷಯದಲ್ಲಿಯೂ ಜನರು ಸಮಾಧಾನಪಡಿಸುವ ವಿಷಯದಲ್ಲಿಯೂ ಆವಶ್ಯಕತೆಯನ್ನೂ, ಕ್ಷುದ್ರರು ದುರಭಿಮಾನಿಗಳು, ದುರ್ಮಂತ್ರಿಗಳು, ಇಂತವರಲ್ಲಿ ಉಪೇಕ್ಷೆಯನ್ನೂ, ದುರ್ವಿಷಯಗಳಲ್ಲಿ ಪರಿತ್ಯಾಗವನ್ನೂ, ಈ ರೀತಿ ಆಯಾ ವಿಷಯ ತಾರತಮ್ಯಾನುಸಾರವಾದ ಸುಗುಣಗಳನ್ನು ಪಡೆದಿರಬೇಕಾದ್ದಲ್ಲದೆ, ಪೂರ್ವಸ್ಥಿತಿಯಂ ತಪ್ಪಿಸಿ ಯಾವದಾದರೊಂದು ನೂತನಮಾರ್ಗವನ್ನವಲಂಬಿಸಬೇಕಾದರೆ ಬಹಳ ಪರ್ಯಾಲೋಚನೆಯನ್ನೂ ದೂರದೃಷ್ಟಿಯನ್ನೂ ಹೊಂದಿ ಸಾಧಾರಣವಾಗಿ ಸ್ಥಿರಚಿತ್ತನಾಗಿರಬೇಕೆಂಬದೆ ಮುಖ್ಯ ರಾಜನೀತಿಯಾಗಿರುತಿದೆ. ಹೀಗಿದ್ದಾಗ್ಯೂ ಈಗಿರತಕ್ಕ ಬಾಲಕರಾದ ಹಿಂದೂ ಸಂಸ್ಥಾನಾಧಿಪತಿಗಳಲ್ಲಿ ಅನೇಕರು ವಿಜಾತೀಯಗಳಾದ ವೇಷಭಾಷಾಚಾರಗಳಿಂದಲೂ ಗುಣಗಳಿಂದಲೂ ತಮ್ಮ ಪ್ರಜೆಗಳಲ್ಲಿ ಕೇವಲ ಭಿನ್ನಭಾವದೊಡನೆ ಪ್ರತ್ಯೇಕವಾಗಿ ವರ್ತಿಸುವದರಿಂದ ಅವರಲ್ಲಿ ಜನಗಳಿಗೆ ಸ್ನೇಹವೂ ಅನುರಾಗವೂ, ಗೌರವವೂ ಇಲ್ಲದೆ ಹೋಗಿದೆ. ಬದಸ್ತೂರ್ ಪ್ರಜೆಗಳ ಯೋಗಕ್ಷೇಮದವಿಷಯದಲ್ಲಿಸದರೀ ಸಂಸ್ಥಾನಾಧಿಪತಿಗಳಿಗೆಸ್ವಲ್ಪವೂ ದೃಷ್ಟಿಯಿಲ್ಲವು. ಇದರಿಂದಸದರೀನೇಟಿವ್ ಅರಸರು ದುರ್ವಿಷಯಾಸಕ್ತರಾದರೆ ಅದಕ್ಕಾಗಿ ಪ್ರಜೆಗಳೆಲ್ಲರು ಮನಸ್ತಾಪಗೊಂಡು ಹೇಳಿದ ಮಾಡುವರೆಂಬ ಶಂಕೆಯು ಅವರಿಗೆ ಸ್ವಲ್ಪವೂ ಇಲ್ಲವಾಯಿತು.ಪ್ರಜೆಗಳಿಗಾದರೋ ಅರಸರಮೂಲಕವಾದ ಭೀತಿಗೆ ಸ್ವಲ್ಪವೂ ಅವಕಾಶವಿಲ್ಲದೆ ಹೋಯಿತು. ಇದರಿಂದ ಪೂರ್ವಕಾಲದಿಂದಲೂ ಆಯಾ ಸಂಸ್ಥಾನಗಳಪದ್ಧತಿಯನ್ನನುಸರಿಸಿ ನಡೆದುಬರುತಿದ್ದ ಆಸ್ಥಾನಮರ್ಯಾದೆ ಕ್ರಮಗಳೆಲ್ಲವೂ ಈಕಾಲದಲ್ಲಿ ಮರೆತು ಹೋಗಲಿಕ್ಕೆ, ಅವಂ ಅಭಿಮಾನಿಸಬೇಕಾದ ಅರಸನಿಗೆ ಅವುಗಳಲ್ಲಿ ಉಂಟಾಗಿರುವ ನಿರ್ಲಕ್ಷ್ಯತಾಜ್ಞಾನವೇ ಮುಖ್ಯಕಾರಣವಾಗಿ ಏರ್ಪಟ್ಟಿದೆ. ಮುಖ್ಯವಾಗಿಈಗಿನಸ್ಥಿತಿಯಲ್ಲಿ ಒಬ್ಬನು ಅರಸನೆಂತಲೂ ಮತ್ತೊಬ್ಬನು ಅವನಪ್ರಜೆಯೆಂತಲೂ, ಮೊದಲನೆಯವನ ಆಜ್ಞೆಗೆ ಎರಡನೆಯವನೊಳಗಾಗಿ ನಡೆಯಬೇಕೆಂತಲೂ, ಅವರಿಬ್ಬರೂ ಪರಸ್ಪರ ಸ್ನೇಹೈಕಮತ್ಯಗಳುಳ್ಳವರಾಗಿರಬೇಕೆಂತಲೂ ಏರ್ಪಟ್ಟಿರುವ ನಿಯಮವು ತಪ್ಪಿಹೋಗುತ ಬರುವದರಿಂದ ಅವರವರಹುಟ್ಟಿಗೆ ಅವರವರು ಅರಸರಾಗಿಯೂ ಪ್ರಜೆಗಳಾಗಿಯೂ ಏರ್ಪಡುತ, ಒಬ್ಬರು ಮತ್ತೊಬ್ಬರು ಲಕ್ಷ್ಯ ಮಾಡದಿರುವಂತೆ ಪರಿಣಮಿಸುತ ಬರುವದಕ್ಕಾಗಿ ನಾವು ಬಹಳ ವಿಷಾದಿಸುತ್ತೇವೆ.

Occasional Notes.
ನೈಮಿತ್ತಿಕ ವಿಷಯನ್ಯಾಸ.

Appointments.—ಬಾಬು ಉಮೇಶಚಂದ್ರ ಬಟಾಬಿಯಾಲ್ ಮತ್ತು ಕೇದಾರನಾಥರಾಯ್ ಯೆಂಬವರಿಬ್ಬರೂ ಬಂಗಾಳೀ ಗವರ್ನಮೆಂಟ್ ಸ್ಟ್ಯಾಚ್ಯೂಟರಿ ಸಿವಿಲ್ ಸರ್ವಿಸ್ ನೌಕರಿಗೆ ನಿಯಮಿಸಲ್ಪಟ್ಟಿರುತ್ತಾರೆ.

Appointment.—ಹೈದರಾಬಾದ್ ವಾಸಸ್ಥರಾದ ಮೌಲ್ವೀ ಮಹದೀ ಹಸನ್ ಯೆಂಬಾತನು ಸದರೀ ದೇಶದ ರೆವಿನ್ಯೂ ಮತ್ತು ಗನಿಗಳ ಡೈರೆಕ್ಟರಾಗಿ ನೇಮಕರಾಗ್ಯಪಟ್ಟಿರುವಂತೆ ಅಲ್ಲಿನ ಗೆಜೆಟಿನಲ್ಲಿ ಪ್ರಕಟಿಸಲಾಗಿರುತಿದೆ.

The Dowager Queen of Burmah.—ಬರ್ಮಾದೇಶದ ಸಾಬಕ್ ಅರಸರ ವೃದ್ಧರಾಣಿಯವರು, ತಮ್ಮ ಕುಮಾರ್ತೆ ಮತ್ತು ಪರಿಜನರೊಡನೆ ಟವಾಯಿ ಎಂಬಪ್ರದೇಶದಿಂದ ಬಂಗಾಳೀದೇಶಕ್ಕೆ ಶೀಘ್ರದಲ್ಲಿ ಪ್ರಯಾಣವಾಗುವವರಾಗಿದಾರೆ.

Removal of a department.-ಮುಂಬೈ ಮರಮ್ಮತ್‌ಇಲಾಖಾ ಹೆಡ್‌ಕ್ವಾರ್ಟರ್ ಈಗ ಇಜೂರಲ್ಲಿರುತಿದೆಯಷ್ಟೆ, ಅದನ್ನು ಮೌಂಟಅಬು ಯೆಂಬ ಸ್ಥಳಕ್ಕೆ ವರ್ಗ ಮಾಡತಕ್ಕದ್ದೆಂದು ಇಂಡ್ಯಾಗವರ್ನಮೆಂಟಿನವರು ಆಖೈರಾಗಿ ನಿರ್ಣಯಿಸಿರುತ್ತಾರೆ.

Effect of a flood.—ಚೀನಾದೇಶದಲ್ಲಿನ ಎಲ್ಲೋರಿವರ್ ಎಂಬ ನದಿಯ ಪ್ರವಾಹದದೆಸೆಯಿಂದ ೧೮,೦೦,೦೦೦ ಪ್ರಜೆ ಸರ್ವಸ್ವವನ್ನು ಹೋಗಲಾಡಿಸಿಕೊಂಡು ನಿರಾಧಾರಿಗಳಾಗಿ ಸಹಾಯಾಪೇಕ್ಷೆಗಳಾಗಿದಾರೆಂದು ಚೀನಾ ಗವರ್ನಮೆಂಟಿಗೆ ಕೊಡಲ್ಪಟ್ಟ ಅರ್ಜಿಯಲ್ಲಿ ನಮೂದಾಗಿರುತಿದೆ.

The successor of Lord Reay.—ಮುಂಬೈ ಗವರ್ನರಾದ ಲಾರ್ಡ್ ರೇ ಎಂಬವರು ತಮ್ಮ ಪ್ರಕೃತಪದವಿಯಿಂದ ನಿವೃತ್ತರಾದಮೇಲೆ ಅವರಸ್ಥಾನಕ್ಕೆ ಸರ್ ಸೆಸಿಲ್ ರೇಕ್ಸ್ ಎಂಬವರು ನಿಯಮಿಸಲ್ಪಡುವರೆಂದು ಟ್ರೂತ್ ಯೆಂಬ ಪತ್ರಿಕೆ ತಿಳಿಸುತಿದೆ.

An enquiry demanded.—ಮುಂಬೈ ಸೆಕ್ರಿಟೇರಿಯಟ್ ಇಲಾಖಾ ಕಟ್ಟಡಗಳನ್ನು ಅಲ್ಲಿನ ಕಲೆಕ್ಟರವರು, ಕ್ರಮಪ್ರಕಾರ ಇಸ್ತಿಹಾರಕೊಡದೆ ಬಹಳ ಕನಿಷ್ಠಕ್ರಯಕ್ಕೆ ಅಂದರೆ ನಾಲ್ಕು ಲಕ್ಷ

ರೂಪಾಯಿಗಳಿಗೆ ಅಬ್ದುಲ್‌ಹಕ್ ಎಂಬಾತನಿಗೆ ಕೊಡಬಿಟ್ಟರಾಗಿ ಆವಿಷಯದಲ್ಲಿ ಇಂಡ್ಯ ಗವರ್ನ್‌ಮೆಂಟಿನವರು ಕ್ರಮವಾಗಿ ದರ್ಯಾಪ್ತಿಮಾಡಬೇಕೆಂದು ಪಯೋನಿಯರ್‌ಪತ್ರಿಕೆ ಅಪೇಕ್ಷಿಸುತ್ತದೆ.

Transfer of Sind.—ಸಿಂಧುದೇಶವು ಈಗ ಮುಂಬೈ ಗವರ್ನ್‌ಮೆಂಟಿಗೆ ಸೇರಿರುತ್ತದೆಯಷ್ಟೆ. ಅದನ್ನು ಬೇರೆ ಗವರ್ನ್‌ಮೆಂಟಿಗೆ ವರ್ಗಮಾಡುವವಿಷಯದಲ್ಲಿ ಮುಂಬೈ ಗೆಜೆಟ್‌ಪತ್ರಿಕೆಯ ಲಂಡನ್ ವರ್ತಮಾನಿಗಾರರು ಬರೆಯುತ್ತಾನೇನೆಂದರೆ- ಸಿಂಧುದೇಶವನ್ನು ಪಂಜಾಬ್‌ದೇಶಕ್ಕೆ ಸರ್ಗಮಾಡುವದರಿಂದ ಅದರ ಪ್ರಯೋಜನಗಳಿಗೆ ಭಂಗವುಂಟಾಗುವದೆಂದು ಸದರೀಸ್ಥಳದ ಜನಗಳು ಪಡುವ ಅಭಿಪ್ರಾಯವು ಸಂಪೂರ್ಣ ಆದರವುಳ್ಳದ್ದೆಂಬ ಆಲೋಚನೆಯಿಂದ ಆವಿಷಯದಲ್ಲಿ ಇಂಗ್ಲೆಂಡಿನ ಪ್ರಮುಖರು ಔದಾಸೀನ್ಯಭಾವವಂ ವಹಿಸಿರುತ್ತಾರೆಂಬದು.

A national Hindu Institution.—ಈ ದೇಶದಲ್ಲಿರುವ ಸಾಮಾನ್ಯ ಪಾಠಶಾಲೆಗಳಲ್ಲೂ ಶಾಸ್ತ್ರ ಪಾಠಶಾಲೆಗಳಲ್ಲೂ ಕಲಿಸಲ್ಪಡುವ ಲೌಕಿಕ ಸಂಬಂಧವಾದ ಇಂಗ್ಲಿಷ್ ವಿದ್ಯಾಭ್ಯಾಸದೊಡನೆ ಹಿಂದೂ ಮತಸಿದ್ಧಾಂತ ಮತ್ತು ನೀತಿಬೋಧಕವಾದ ಗ್ರಂಥಗಳನ್ನು ಕಲಿಸುವದಕ್ಕಾಗಿ ಈತಿಂಗಳಲ್ಲಿ ಕಲ್ಕತ್ತೆಯೊಳು ಸಾರ್ವಜನಿಕ ಪಾಠಶಾಲೆಯೊಂದನ್ನು ಸ್ಥಾಪಿಸುವದಾಗಿ ಪ್ರಕಟಿಸಲ್ಪಟ್ಟಿರುತ್ತದೆ. ಸದರೀ ಪ್ರಕಟನಪತ್ರಿಕೆ ತಿಳಿಸುವದೇನಂದರೆ,—ಮತಗ್ರಂಥಗಳನ್ನು ಓದದವರಿಗೆ ನಿಜವಾದ ನೀತಿಜ್ಞಾನ ಪ್ರಾಪ್ತವಾಗುವದಿಲ್ಲವು. ಗವರ್ನ್‌ಮೆಂಟಿನವರು ತಟಸ್ಥರಾಗಿರುವದರಿಂದ ಮತವಿದ್ಯೆಯಂ ಕಲಿಸುವದಕ್ಕೆ ಅವರು ಪ್ರವರ್ತಿಸುವದಿಲ್ಲವು. ಆದದರಿಂದ ಹಿಂದೂಬಾಲಕರಿಗೆ ನೀತಿಬೋಧಕವಾದ ಮತ್ತು ಮತಸಂಬಂಧವಾದ ವಿದ್ಯೆಯಂ ಕಲಿಸುವ ಕಷ್ಟಸಾಧ್ಯವಾದ ಮತ್ತು ಪ್ರಬಲವಾದ ಕಾರ್ಯವನ್ನು ಹಿಂದೂಗಳೇ ಧರಿಸಬೇಕಾಗಿರುತ್ತದೆ. ಈ ಉದ್ದೇಶವನ್ನು ಕೊನೆಮುಟ್ಟಿಸುವದಕ್ಕೆ ಪಾಠಶಾಲೆಗಳನ್ನು ಸ್ಥಾಪಿಸಿ, ವಿದ್ಯಾರ್ಥಿಗಳನ್ನು ಯೂನಿವರ್ಸಿಟಿ ಪರೀಕ್ಷೆಗೆ ತಯಾರುಮಾಡುವಲ್ಲಿ, ನ್ಯಾಯಕ್ಕೂ ಶಾಸ್ತ್ರಕ್ಕೂ ಅನುಗುಣವಾಗಿ ಅವರಿಗೆ ಮತಸಂಬಂಧವಾದ ಮತ್ತು ನೀತಿಬೋಧಕವಾದ ಪಾಠಗಳನ್ನು ಹೇಳಿಸುತ ಬರಬೇಕಾದ್ದು ಆವಶ್ಯಕವಾಗಿರುತ್ತದೆ. ಈಬಗ್ಯೆ ನಿಯಾಮಕರಾಗತಕ್ಕ ಉಪಾಧ್ಯಾಯರುಗಳಲ್ಲಿ ಹದಿನಾರು ಮಂದಿ ಬಾಬೂಗಳೂ ಮೂವರು ಪಂಡಿತರೂ ಇರುತ್ತಾರೆ. ಸದರೀ ಪಂಡಿತರಲ್ಲೊಬ್ಬರು ಹಿಂದೂಮತ ಸಿದ್ಧಾಂತವನ್ನು ಕುರಿತು ಆಗಾಗ್ಯೆ ಉಪನ್ಯಾಸಮಾಡುವರು. ಈ ಪಾಠಶಾಲೆಯಲ್ಲಿ ಓದುವಂತಾ ವಿದ್ಯಾರ್ಥಿಗಳು ಮಾಹೆಯಾನಾ ಒಂದರಿಂದ ಮೂರುರೂಪಾಯಿಗಳವರಿಗೆ ಸ್ಕೂಲ್‌ಫೀಕೊಡಬೇಕಾಗುವದು. ಅನುಪನ್ನರಾದವರು ಫೀ ಕೊಡಬೇಕಾದ್ದಿಲ್ಲವು ವಿದ್ಯಾರ್ಥಿವೇತನ ಸಹ ಕೊಡಲ್ಪಡುವದು, ಎಂಬದು.

LOCAL AND PROVINCIAL NEWS
ಒಳದೇಶಮತ್ತು ತಾಲ್ಲೂಕುಜಾತಿ ವೃತ್ತಾಂತ

The Central College.—ಇಲ್ಲಿನ ಸೆಂಟ್ರಲ್ ಕಾಲೇಜಿಗೆ ಕೊಡಲ್ಪಟ್ಟಿದ್ದ ಬೇಸಿಗೆ ರಜಾ ಗತ ಗುರುವಾರದೊಡನೆ ಪೂರೈಸಿದ್ದರಿಂದ ಮಾಹೆ [illegible] ತಾರೀಖ್‌ಮೊದಲು ಅದು ಮರಳಿ ತೆರೆಯಲ್ಪಟ್ಟು ದಿನ ಪ್ರವಚನಗಳಿಗುವ ಕ್ರಮವಾಯಿತು.

The weather.—ಗತ ಶನಿವಾರದದಿನ ರಾತ್ರಿ ಸುಮಾರ್ ೧೦ ಘಂಟೆಗೆ ಉಪಕ್ರಮವಾಗಿ ಮೂರು ಘಂಟೆಯವರಿವಿಗೆ ಎಡಬಿಡದೆ ಒಳ್ಳೇ ಮಳೆಯಾಗಿ ಕೆರೆ ಕುಂಟೆಗಳಿಗೆ ಯಥೋಚಿತ ನೀರು ಬಂತು. ಈಗ್ಯೆ ಎರಡುಮೂರುದಿನಗಳಿಂದ ಬಿಸಿಲು ಬಹಳದುಸ್ಸಹವಾಗಿತ್ತು. ಪದಾರ್ಥಗಳಧಾರಣೆಗಳು ಏಕರೂಪವಾಗಿಯೇ ಇದೆ. ಜ್ವರಾದ್ಯುಪದ್ರವಗಳು ಅಲ್ಲಿಯಲ್ಲಿ ಸ್ವಲ್ಪಮಟ್ಟಿಗೆ ವ್ಯಾಪಿಸಿರುವಂತೆ ತಿಳಿಯಬರುತ್ತದೆ. ನಿನ್ನೆಯದಿನ ಹಗಲು ೧ ಘಂಟೆಗೆ ಈ ಶಹರ್ [illegible] ಪೇಟೆಯಲ್ಲಿ ಒಂದು ತೆಂಗಿನ ಮರಕ್ಕೆ ಸಿಡ್ಲುಹೊಡೆದು ಬಿದ್ದುಹೋಯಿತು. ಈ ಸಂದರ್ಭದಲ್ಲಿ ಮಳೆಯಿಲ್ಲವು.

The Mysore Traveling Allowance Code.—ಕಂಟ್ರೋಲರ್ ಮೆ|| ರಂಗಸ್ವಾಮಯ್ಯಂಗಾರ್ಯರವರಿಂದ ಸಂಗ್ರಹಿಸಿ ರಚಿಸಲ್ಪಟ್ಟಿರುವ ಮೈಸೂರು ಟ್ರಾವಿಲಿಂಗ್ ಅಲೋವೆನ್ಸ್ ಕೋಡಿನ ಮುಸವಿದೆಯು ಛಾಪಿಸಲ್ಪಾಗಿರುವಂತೆಯೂ, ಸದರೀ ಕೋಡು ಹತ್ತು ಪ್ರಕರಣಗಳಾಗಿ ವಿಭಜಿಸಲ್ಪಟ್ಟಿರುವಂತೆಯೂ ಕೇಳುತ್ತೇವೆ. ಈಗ್ರಂಥವು ಲೋಕಲ್ ಟೆಸ್ಟ್ ಪರೀಕ್ಷೆಗೆ ಹೋಗತಕ್ಕ ನೌಕರರಿಗೆ ಕೇವಲ ಅಪೇಕ್ಷಿತವಾದದ್ದಾಗಿರುತ್ತದೆ. ಇದೇರೀತಿ ರಿಜಿಸ್ಟ್ರೇಷನ್ ಇನ್‌ಸ್ಪೆಕ್ಟರ್ ಜನರಲವರು ಸಹ ತಮ್ಮ ಇಲಾಖೆಗೆ ಸಂಬಂಧಪಟ್ಟ ಸರ್ಕ್ಯುಲರ್‌ಗಳು ಆರ್ಡರ್‌ಗಳು ಮೊದಲಾದವು ಪರಿಶೋಧಿಸಿ ಪ್ರಕಟಿಸುತಲಿರುವಂತೆ ತಿಳಿಯಬರುತ್ತದೆ ಇದು ರೆವಿನ್ಯೂಪರೀಕ್ಷೆಯ ಗ್ರಂಥಗಳಲ್ಲೊಂದಾಗಿರುವದರಿಂದ ಬಹಳ ಆವಶ್ಯಕವೆಂದೆಣಿಸುವೆವು.

Acknowledgment.—ಗೋ ಜಾಡ್ಯಗಳಿಗೆ ತಕ್ಕಚಿಕಿತ್ಸೆಯು ಸಾಧಾರಣವಾಗಿ ಸಕಲರಿಗೂ ತಿಳಿಯದೆ ಇರುವದರಿಂದ ಯೆಲ್ಲರ ಸಾಕರ್ಯಾರ್ಥ ಶಿವಮೊಗ್ಗಾ ಡಿಸ್ಟ್ರಿಕ್ಟ ಅಗ್ರಿಕಲ್ಚ್ಯುರಲ್ ಇನ್‌ಸ್ಪೆಕ್ಟರ್ ಮೆ|| ರಾಮಯ್ಯಂಗಾರ್ಯರವರು ಸ್ವಾನುಭವಗಳಮೇಲೆ ಒಂದು ಸಣ್ಣ ಗ್ರಂಥವು ರಚಿಸಿ ಪ್ರಕಟಿಸಿರುತ್ತಾರೆ. ಈಗ್ರಂಥದಲ್ಲಿ ರೋಗದ ವ್ಯಾಪಕತೆಯನ್ನು ಅರ್ಥವಿಸಬೇಕಾದ ಕ್ರಮಗಳೂ, ಚಿಕಿತ್ಸಾ ಕ್ರಮಗಳೂ ಸುಲಭವಾಗಿ ತಿಳಿಸಲ್ಪಟ್ಟಿರುವದರಿಂದ ಇದುಎಲ್ಲರಿಗೂ ತತ್ರಾಪಿ ಕೃಷಿಜೀವಿಗಳಿಗೂ ಗೋಪಾಲಕರಿಗೂ ಬಹಳ ಉಪಯುಕ್ತವಾದದ್ದಾಗಿರುತ್ತದೆ.

Extension of leave.—ಕಂಟ್ರೋಲರವರ ಆಫೀಸ ವಸ್ಯಾಲೇಜರಾದ ಮೆ|| ಬ್ಯಾಪೋಯವರು ಈಗ್ಯೆ ಒಂದುವರುಷದಹಿಂದೆ ಮೈಸೂರು ಗವರ್ನ್‌ಮೆಂಟಿನವರ ಮಂಜೂರಾತಿಯಮೇಲೆ ಒಂದುವರುಷ ಫರ್ಲೋರಜಾಪಡೆದು ಮಹಾರಾಜರವರ ಕಾಟನ್‌ಸ್ಪಿನ್ನಿಂಗ್ ಕಂಪೆನಿಯ ಸೆಕ್ರಟರಿ ಕೆಲಸವನ್ನು ನೋಡುತಲಿದಾರೆಯಷ್ಟೆ. ಇವರಿಗೆ ಕೊಡಲ್ಪಟ್ಟಿದ್ದ ರಜಾ ಪೂರೈಸುತಬಂದದರಿಂದ ಇವರ ನೌಕರಿಯನ್ನು ಮರಳಿ ಕಂಪೆನಿಯವರ ಸುಪರ್ದ್ ಮಾಡಬೇಕಾದವಿಷಯವು [illegible] ವಿಚಾರವು ವ್ಯವಸ್ಥೆಯಾಗುವತನಕ [illegible]ಯಾಗಿ ಒಂದುತಿಂಗಳರಜಾ ಕೊಡಲ್ಪಟ್ಟಿರುವಂತ ಕೇಳುತ್ತೇವೆ.

Disfiguring a wife.—ಈಪ್ರಾಂತ ಸಮೀಪದಲ್ಲಿರುವ ದಕ್ಷಿಣತಿಮ್ಮನಹಳ್ಳಿಯಲ್ಲಿ ವಾಸವಾಗಿರತಕ್ಕ ಹನುಮನೆಂಬವನು, ತೌರುಮನೆಗೆ ಹೋಗಿದ್ದ ತನ್ನಭಾರ್ಯೆಯನ್ನು ಎಷ್ಟುಪರ್ತಿ ಕರೆದಾಗ್ಯೂ ಬಾರದೆ ತಕರಾರುಮಾಡುತಲಿದ್ದದರಿಂದ ಈ ದುಃಖವು ಈಗ್ಯೆ ಕೆಲವುಕಾಲದಿಂದ ಅವನಂ ಬಹಳವಾಗಿ ಬಾಧಿಸುತಲಿತ್ತು. ಹೀಗಿರುವಲ್ಲಿ ಈಚೆಗೆ ಒಂದುದಿವಸ ಸದರೀಹೆಂಗಸು ನೀರುತರುವದಕ್ಕಾಗಿ ಸೀನೀರುಭಾವಿಗೆ ಹೋಗಿದ್ದವೇಳೆಯಲ್ಲಿ ಅವಳಗಂಡನು ಸಮಯವನ್ನು ನಿರೀಕ್ಷಿಸುತಲಿದ್ದು ಅವಳಕಿವಿಯಂ ಕೊಯಿದು ಮೂಗನ್ನು ಬಲವಾಗಿ ಘಾಯಪಡಿಸಿದನು. ಆಹೆಂಗಸು ಈಗ ಬೌರಿಂಗ್ ಆಸ್ಪತ್ರಿಯಲ್ಲಿ ಚಿಕಿತ್ಸೆಯೊಳಿರುವಂತೆಯೂ ಅವಳಿಗೆ ಈಗ ಸ್ವಲ್ಪಗುಣವಾಗಿರುವಂತೆಯೂ ತಿಳಿಯಬಂದಿವೆ.

Obituary.—ಈ ಪತ್ರಿಕೆಯ ಇಂಗ್ಲಿಷ್‌ಭಾಗದ ಎಡಿಟರಾಗಿದ್ದ ಮೆ|| ಫ್ರೊಬಿರ್ ಸ್ಮಿತ್‌ಯವರು ಈಗ್ಯೆ ಕೆಲವುಕಾಲದವೊದಲು ಉಷ್ಣರೋಗದಿಂದ ಪೀಡಿತರಾಗಿದ್ದು ಮೊನ್ನೆದಿವಸ ಬೆಳಿಗ್ಯೆ ಮೃತಪಟ್ಟರೆಂಬ ವೃತ್ತಾಂತವಂ ತಿಳಿಸಲಿಕ್ಕೆ ನಾವು ಬಹಳವಿಷಾದಿಸುತ್ತೇವೆ. ಇವರ ಖನನಕ್ರಿಯೆಯು ಆದಿನಸಾಯಂಕಾಲವೇ ಯಥಾಕ್ರಮವಾಗಿ ನಡೆಯಿತು. ಇವರು ಈ ಪತ್ರಿಕಾಲೇಖಕೋದ್ಯೋಗವು ಕೈಗೊಂಡ ಒಂದುಸಂವತ್ಸರ ಕಾಲವಾಗಿ ತಮ್ಮಕೆಲಸವು ಬಹಳ ಶ್ರದ್ಧಾ ಜಾಗರೂಕತೆಯೊಡನೆ ನಿರ್ವಹಿಸುತಬಂದರು. ಮೆ|| ಸ್ಮಿತ್‌ಯವರು ಅಲಹಾಬಾದ್‌ಪಯೋನಿಯರ್, ಮುಂಬೈ ಟೈಂಸ್ ಆಫ್ ಇಂಡಿಯಾ ಮೊದಲಾದ ಕೆಲವು ಪ್ರಸಿದ್ಧ ಪತ್ರಿಕೆಗಳಿಗೆಲ್ಲ ವರ್ತಮಾನಿಗಾರರಾಗಿರುತಿದ್ದರು. ಬಾಲ್ಯವಯಸ್ಸಿನಲ್ಲಿಯೇ ಅಂದರೆ ೩೬ ವರುಷಗಳೊಳಗಾಗಿ ಇವರಿಗೆ ಇಂತಾ ಅಕಾಲಮೃತ್ಯು ಪ್ರಾಪ್ತವಾದದಕ್ಕಾಗಿ ಅವರ ಇಷ್ಟಮಿತ್ರರೊಡನೆ ನಾವೂ ಚಿಂತಿಸುತ್ತೇವೆ. ಇವರ ಮರಣಪ್ರಯುಕ್ತವಾದ ಕ್ಲೇಶವನ್ನು ವಿಶೇಷತಃ ಅನುಭವಿಸಲಿಕ್ಕೆ ಭಾರ್ಯಾಪುತ್ರರಿದಾರೆ. ಮುಖ್ಯವಾಗಿ ಸಕಲವೂ ದುಃಖರೂಪವಾದ ಈಪ್ರಪಂಚಿಕ ವ್ಯಾಪಾರಕ್ಕಾಗಿ ದುಃಖಿಸಿ ಪ್ರಯೋಜನವಿಲ್ಲವು.

Farewell to the Mysore Anche.—ಈಗ್ಯೆ ಒಂದೆರಡುವರುಷಗಳವೊದಲು ಜನಗಳ ಅನವರತ ಪ್ರಶಂಸೆಗೆ ವಿಷಯವಾಗಿ ಈದೇಶದಲ್ಲಿ ಬಹುಕಾಲದಿಂ ನೆಲಗೊಂಡಿರುವ ಅಂಚೆಯು ಪರಾಧೀನವಾಗತಕ್ಕ ಸಮಯವು ಈ ಕಾಲಕ್ಕೆ ಪ್ರಾಪ್ತವಾಯಿತು. ಕಡೆಗೆ ಒಂದುರಾಜ್ಯಕ್ಕೆ ಅಂಗಭೂತವಾಗಿದ್ದ ಸ್ವತಂತ್ರವಾದ ಅಂಚೆಸಹ ಅನಾವಶ್ಯಕವೆಂದು ಈ ಸರ್ಕಾರದವರ ದಿವ್ಯಚಿತ್ತದಲ್ಲಿ ತೋರಬಂದದರಿಂದ ಮುಂದಿನ ವಾರದಲ್ಲಿ ಅದು ಬ್ರಿಟಿಷ್‌ನವರ ಸುಪರ್ದ್ ಮಾಡಲ್ಪಡುವದೆಂತಲೂ, ಆಬಗ್ಯೆ ಹುಕುಂಸಹ ಕೊಡಲ್ಪಟ್ಟಿರುವಂತೆಯೂ ಪರುತು ಇಷ್ಟರಲ್ಲಿಯೇ ಅದು [illegible]ಗಬಹುದೆಂತಲೂ, ನಗರಶೋಧಕನು ತಿಳಿಸುತ್ತಾನೆ. ಪ್ರಾಯಶಃ ಇದು ನಿಜವಾಗಿಯೇ ಇರಬಹುದೆಂದೆಣಿಸುತ್ತೇವೆ. ಪ್ರಸಕ್ತ ವಿಷಯವು ಯಾವ ಷರತ್ತಿನಮೇಲೆ ಮಾಡಲ್ಪಟ್ಟಿತ್ತೋ ಅದು ಅದ್ಯಾಪಿ ಒಬ್ಬರಿಗೂ ಗೊತ್ತಿಲ್ಲದಯಿದೆ. ಇಂತಾ ಪ್ರಾಮುಖ್ಯವಿಷಯಗಳುಕೂಡ ಜನಗಳತಿಳುವಳಿಕೆಗೆ ತರಲ್ಪಡದಮೇಲೆ ಒಂದು ಸರ್ಕಾರದಲ್ಲಿ ಒಬ್ಬರಪಾಲನೆಗೆ ಅವರು ಒಳಪಟ್ಟಿರುವರೆಂದು ತಿಳಿದುಕೊಳ್ಳುವದುಕೂಡ ಅವರ ಐಚ್ಛಿಕವೆಂದೇ ಪರ್ಯವಸಾನವಾಯಿತು. ಮುಖ್ಯವಾಗಿ ಪ್ರಜಾಭಿಪ್ರಾಯಕ್ಕೆ ಗೌರವವಿಲ್ಲದಕಡೆಗಳಲ್ಲೆಲ್ಲ ಸುಖಸಂತೋಷಗಳಂ ನಿರೀಕ್ಷಿಸುವದು ಬಹಳ ಅನುಚಿತವು.

Marriage.—ಲೋಕದಲ್ಲಿ ಧನಾಢ್ಯನಾದವನಿಗೆ ಉಂಟಾಗುವ ಕ್ರಮ ದುಃಖಗಳು ಚಿರಕಾಲಿಕಗಳಾಗಿರುವದಿಲ್ಲವು. ಐಶ್ವರ್ಯವು ಆತನಿಗೆ ಸಕಲ ಸಂತೋಷಗಳನ್ನೂ ಉಂಟುಮಾಡಿ ಕಡೆತನಕ ಶರೀರವು ಸಹ ಮರೆಯುವಂತೆ ಮಾಡುವಾಗ್ಯೆ ಕ್ಷಣಿಕವಾದ ದುಃಖವಾಸನೆಯು ಯೋಗಗೊಳಿಸುವದೇನೂ ಆಶ್ಚರ್ಯವಲ್ಲವು. ಈಪ್ರಾಂತ ಹಜೂರ್ ಮ್ಯುನಿಸಿಪಲ್ ಕಮಿಷನರ್‌ಗಳಲ್ಲೊಬ್ಬರಾದ ಮೆ|| ರಾ| ದೊಡ್ಡೀ ವೆಂಕಟರಮಣಶೆಟ್ಟರವರಿಗೆ ಈಮಧ್ಯೆ ಪ್ರಾಪ್ತವಾಗಿದ್ದ ಭಾರ್ಯಾವಿಯೋಗಜನ್ಯವಾದ ಕ್ಲೇಶವು ಜಾಗ್ರತೆಯಾಗಿಯೇ ಪರಿಹಾರವಾಯಿತೆಂದು ಕೇಳಿ ಬಹಳ ಸಂತೋಷಿಸುತ್ತೇವೆ. ಇವರಿಗೆ ನಿನ್ನೆಯದಿನ ಪುನರ್ವಿವಾಹವಾಯಿತೆಂತಲೂ, ವಧೂ ಪ್ರಾಪ್ತವಯಸ್ಕಳಾಗಿರುವದರಿಂದ ನಾಕಬಲಿ ತೀರಿದ ಮಾರನೇದಿನವೇ ನಿಷೇಕಮುಹೂರ್ತ ನಡೆಯುವಂತೆ ನಿಶ್ಚಯವಾಗಿರುವದೆಂತಲೂ ತಿಳಿಯಬರುತ್ತದೆ. ವಿವಾಹಸಂಬಂಧಕ್ಕೆ ಈಗಿನ ಕಾಲದ ದೊಡ್ಡ ಮನುಷ್ಯರು ಕೆಲವರು ಮಾಡುವ ವ್ಯಾಖ್ಯಾನರೀತ್ಯಾ ಸದರೀ ಶಬ್ದಾರ್ಥವನ್ನು ಕಷ್ಟವಲಾದರೂ ಸಾರ್ಥಕಗೊಳಿಸಲಿಕ್ಕೆ ಸಂಕಲ್ಪಿಸಿದಬಗ್ಯೆ ನಾವು ಬಹಳ ಸಂತೋಷಿಸುವೆವು. ವಿವಾಹಿತರಾದ ವಧೂವರರಿಗೆ ವಿವಾಹಪ್ರಯುಕ್ತವಾದ ಸಂತೋಷವನ್ನು ಶ್ರೀಹರಿ ಉಂಟು ಮಾಡಬೇಕೆಂದು ಕೋರುತ್ತೇವೆ.

THE MYSORE GAZETTE.
ಮೈಸೂರು ಗಜೆಟ್.

ಶ್ರೀಮನ್ಮಹಾರಾಜ ರಾಜಶ್ರೀಪಣ್ ಬಹದೂರವರ ದಿವಾನರವರಿಂದ ಕೊಡಲ್ಪಟ್ಟ ಇಸ್ತಿಹಾರ್‌ನಾಮೆಗಳು

ಮೊಕ್ಕಾಂ ನಂಬರ್ ೭೬೦, ತಾರೀಖ್ ೨೧ನೇ ಮೇ ೮೮ —ಶಿವಮೊಗ್ಗಾ ತಾಲ್ಲೂಕ್ ಅಮಲ್ದಾರ್ ಶೀತಾರಾಮಯ್ಯನವರಿಗೆ ಅವರ ಉಪಯೋಗಿಸಿಕೊಳ್ಳುವ ತಾರೀಖ್ ಲಾಗಾಯತು ಆರುವಾರಗಳ ಪ್ರಿವಿಲೇಜ್‌ರಜಾ ಕೊಡಲ್ಪಟ್ಟಿರುತ್ತದೆ. ಶಿರಸ್ತೇದಾರ್ ನರಸಿಂಹಲುನಾಯುಡರವರು ಶೀತಾರಾಮಯ್ಯನವರು ರಜಾಮೇಲೆ ಗೈರ್‌ಹಾಜರಿರುವ ಕಾಲದಲ್ಲಿ ಅಥವಾ ಮತ್ತೊಂದು ಹುಕುಂ ಕೊಡಲ್ಪಡುವ ತನಕ ಶಿವಮೊಗ್ಗಾ ತಾಲ್ಲೂಕು ಅಮಲ್ದಾರಿಯನ್ನು ಬದಲೀನೋಡುವಂತೆ ಮೊಕರರ್ ಮಾಡಲ್ಪಟ್ಟಿರುತ್ತಾರಲ್ಲದೆ ಅವರಿಗೆ ೩ನೇಕ್ಲಾಸ್‌ಮ್ಯಾಜಿಸ್ಟ್ರೇಟಿಅಧಿಕಾರಗಳು ಸಹ ಕೊಡಲ್ಪಟ್ಟಿರುತ್ತವೆ.

ಮೊಕ್ಕಾಂ ನಂ. ೭೩೮, ತಾ||೧೭ನೇ ಮೇ೮೮ ಕಡೂರ್ ಡಿಸ್ಟ್ರಿಕ್ಟ ಆಫಿಷಿಯೇಟಿಂಗ್ ಡೆಪ್ಯುಟಿಕಮಿಷನರ್ ಕರ್ನಲ್ ಜೆ. ಎ. ಕ್ಯಾಂಬೆಲ್‌ಯವರಿಗೆ ೧೮೮೮ನೇ ಇಸವಿ ಮೇ ೩೦ನೇ ತಾರೀಖ್ ಲಾಗಾಯಿತು ಅಥವಾ ಅವರು ಉಪಯೋಗಿಸಿಕೊಳ್ಳುವ ತಾರೀಖ್‌ಮೊದಲು ೧೫ ದಿವಸಗಳ ಪ್ರಿವಿಲೇಜ್‌ರಜಾ ಕೊಡಲ್ಪಟ್ಟಿರುತ್ತದೆ. ಕರ್ನಲ್ ಕ್ಯಾಂಬೆಲ್‌ಯವರು ರಜಾಮೇಲೆ ಗೈರ್‌ಹಾಜರಾಗಿರುವಕಾಲದಲ್ಲಿ ಅಥವಾ ಮತ್ತೊಂದುಹುಕುಂ ಕೊಡಲ್ಪಡುವತನಕ ಅಸಿಸ್ಟೆಂಟ್ ಕಮಿಷನರ್ ಮೆ|| ಟಿ ರಾಘವೇಂದ್ರರಾಯರವರು ಕಡೂರ್‌ಡಿಸ್ಟ್ರಿಕ್ಟ ಚಾರ್ಜಿನಲ್ಲಿರುವರು.

ಮೊಕ್ಕಾಂ ನಂ. ೭೫೫—ಅಡ್ವೊಕೇಟ್ ಮಿಸ್ಟರ್ ಇ. ಸಿಡ್ನಿ ಸ್ಮಿತ್‌ಯವರು ಮೆ|| ವಿನಾಕ್ಷಯ್ಯರವರ ಗೈರ್‌ಹಾಜರೀಕಾಲದಲ್ಲಿ ಅಥವಾ ಮತ್ತೊಂದುಹುಕುಂ ಕೊಡಲ್ಪಡುವವರೆತನಕ ಗವರ್ನ್‌ಮೆಂಟ್ ಅಡ್ವೊಕೇಟ್ ಕೆಲಸವನ್ನು ಬದಲೀನೋಡುವಂತೆ ಮೊಕರರ್.

ಮೊಕ್ಕಾಂ. ನಂ. ೭೩೦—ಫಾರೆಸ್ಟ್ ಪ್ರೊಬೇಷನರ್‌ಗಳಾದ ಮೆಸರ್ಸ್ ಸೀತಾರಾಮಯ್ಯನವರು ರಾಮಸ್ವಾಮಯ್ಯನವರು, ವೆಂಕಟನಾರಣಪ್ಪನವರು, ಇವರು ೧೮೮೮ನೇ ಏಪ್ರಿಲ್ [illegible]ತಾರೀಖ್ ಲಾಗಾಯತು ಸಬ್ ಅಸಿಸ್ಟೆಂಟ್ ಕನ್ಸರ್ವೇಟರ್‌ಗಳಾಗಿ ಮೊಕರರ್ ಮಾಡಲ್ಪಟ್ಟಿರುತ್ತಾರೆ.

ಮೊಕ್ಕಾಂ ನಂ. ೭೮೬—ಕರ್ಣಬಾನದಹಳ್ಳಿ ತಾಲ್ಲೂಕ್ ಅಮಲ್ದಾರ್ ಕೃಷ್ಣರಾಯರಿಗೆ ೮೮ನೆ ಇಸವಿ ಮೇ ೧೬ನೇ ತಾರೀಖ್ ಲಾಗಾಯತು ಅಥವಾ ಅವರುಪಯೋಗಿಸಿಕೊಳ್ಳುವ ತಾರೀಖ್‌ಮೊದಲು ಮೂರುತಿಂಗಳ ಪ್ರಿವಿಲೇಜ್‌ರಜಾ ಕೊಡಲ್ಪಟ್ಟಿರುತ್ತದೆ. ಸದರೀ ತಾಲ್ಲೂಕ್ ಶಿರಸ್ತೇದಾರ್ ರಘುನಾಥರಾಯರವರು ಕೃಷ್ಣರಾಯರವರು ರಜಾಮೇಲೆ ಗೈರ್‌ಹಾಜರಿರುವಕಾಲದಲ್ಲಿ ಅಥವಾ ಮತ್ತೊಂದುಹುಕುಂ ಕೊಡಲ್ಪಡುವತನಕ ಕರ್ಣಬಾನಹಳ್ಳಿತಾಲ್ಲೂಕ್ ಅಮಲ್ದಾರಿಯನ್ನು ಬದಲೀನೋಡುವಂತೆ ಮೊಕರರ್ ಮಾಡಲ್ಪಟ್ಟಿರುತ್ತಾರಲ್ಲದೆ ಅವರಿಗೆ ಮೂರನೇಕ್ಲಾಸ್ ಮ್ಯಾಜಿಸ್ಟ್ರೇಟಿಅಧಿಕಾರಗಳು ಇದರಿಂದ ಕೊಡಲ್ಪಟ್ಟಿರುತ್ತವೆ.

ಮೊಕ್ಕಾಂ ನಂ. ೫೦೩. ತಾ||೨೫ನೇ ಮೇ೮೮. ಬೆಂಗಳೂರು ಸೆಂಟ್ರಲ್‌ಜೈಲಿನ ಸೂಪರಿಂಟೆಂಡೆಂಟರಾದ ಮೆ|| ಜೆ. ಜೆ. ಸ್ಪಾರ್ಕ್ಸ್‌ಯವರಿಗೆ ೮೮ನೇ ಇಸವಿ ಜೂನ್ ೧೫ನೇ ತಾ|| ಲಾಗಾಯತು ಅಥವಾ ಅವರು ಉಪಯೋಗಿಸಿಕೊಳ್ಳುವ ತಾರೀಖ್ ವೊದಲು ಆರುವಾರಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿರುತ್ತದೆ.

ಮೊಕ್ಕಾಂ ನಂ ೭೯೨. ತಾ ೨೬ನೇ ಮೇ೮೮ ಶಿವಮೊಗ್ಗಾ ಮುನ್ಸಿಫ್ ಇ. ಸಿ. ಶಿವಜ್ಞಾನಂಪಿಳ್ಳೆಯವರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖ್ ಲಾಗಾಯತು ಅರ್ಧ ತಲಬಿನಮೇಲೆ ೨ ತಿಂಗಳ ಪ್ರಿವಿಲೇಜ್‌ರಜಾ ಕೊಡಲ್ಪಟ್ಟಿರುತ್ತದೆ

ಶಿವಮೊಗ್ಗಾ ಡಿ|| ಪಬ್ಲಿಕ್ ಪ್ರಾಸಿಕ್ಯೂಟರ್ ರಾಮರಾಯರವರು ಶಿವಜ್ಞಾನಂಪಿಳ್ಳೆಯವರು ರಜಾಮೇಲೆ ಗೈರ್‌ಹಾಜರಾಗಿರುವ ಕಾಲದಲ್ಲಿ ಅಥವಾ ಮತ್ತೊಂದು ಹುಕುಂ ಕೊಡಲ್ಪಡುವತನಕ ಶಿವಮೊಗ್ಗಾ ಮುನ್ಸಿಫ್ ಕೆಲಸವನ್ನು ಬದಲೀನೋಡುವಂತೆ ಮೊಕರರ್ ಮಾಡಲ್ಪಟ್ಟಿರುತ್ತಾರೆ.

ನಂ. ೩೦ ತಾ|| ೨೯ನೇ ಮೇ ೧೮೮೮—[illegible]ಗಲ್‌ತಾಲ್ಲೂಕು ಅಮಲ್ದಾರ್ ಕೃಷ್ಣರಾಯರಿಗೆ ಅವರುಪಯೋಗಿಸಿಕೊಳ್ಳುವ ತಾರೀಖ್ ಲಾಗಾಯತು ೪೦ ದಿನಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿರುತ್ತದೆ. ಆ ತಾಲ್ಲೂಕಿನ ಶಿರಸ್ತೇದಾರ್ ಸ್ವಾಮಪ್ಪನವರು ಕೃಷ್ಣರಾಯರವರು ರಜಾಮೇಲೆ ಗೈರ್‌ಹಾಜರಾಗಿರುವಕಾಲದಲ್ಲಿ ಅಥವಾ ಮತ್ತೊಂದು ಹುಕುಂ ಕೊಡಲ್ಪಡುವ ತನಕ ಕುಣಿಗಲ್ ತಾಲ್ಲೂಕು ಅಮಲ್ದಾರ್ ವ ಮೂರನೇ ಕ್ಲಾಸ್ ಮ್ಯಾಜಿಸ್ಟ್ರೇಟರಾಗಿ ಬದಲೀ ನೋಡುವರು.

SUMMARY OF NEWS.
ವೃತ್ತಾಂತ ಸಂಗ್ರಹ.

ಲಾರ್ಡ್ ಡಫರಿನ್‌ಯವರು ತಮ್ಮ ಮಾತು ಶ್ರೀಯವರ ಚರಿತ್ರೆಯನ್ನು ಬರೆಯತಕ್ಕವರಿದ್ದಾರಂತೆ.

ಮೊದಲು ಬರೋಡೆಯ ನಾಯಬ್ ದಿವಾನರಾಗಿದ್ದು ಈಗ ಪೆನ್ಶನ್‌ಹೊಂದುತಲಿದ್ದ ಮೆಸ್ಟರ್ ವಿನಾಯಕ ಜನಾರ್ದನ ಕೀರ್ತನೆಯವರು ಇಂದೂರಸಂಸ್ಥಾನದ ದಿವಾನರಾಗಿ ನೇಮಿಸಲ್ಪಟ್ಟು ತಮ್ಮ ಕೆಲಸದ ಚಾರ್ಜ್ ತೆಗೆದುಕೊಂಡರು.

ಕೆರೋಸೀನು ಎಣ್ಣೆಯಲ್ಲಿ ಒಂದು ಪದದಿಂದ ಸಬ್ಬು ಮಿಶ್ರಮಾಡಿ ಅರ್ಧಘಂಟೆಹೊತ್ತು ಅದನ್ನು ಕಾಯಿಸಿ, ಘಟ್ಟಮಾಡಿ ಬಿರಣೆಯಂತೆ ಅಡಿಗೆ ಮುಂತಾದ ಕಾರ್ಯಗಳಿಗೆ ಉಪಯೋಗಿಸುವ ವಿಧಾನವನ್ನು ಡಾಕ್ಟರ್ ಕಾಫ್ ಮ್ಯಾನ್ ಎಂಬವರು ಕಂಡುಹಿಡಿದಿದ್ದಾರೆ. ಘಟ್ಟಿಯಾದ ಈಎಣ್ಣೆಯು ಕಲ್ಲಿದ್ದಲಿಗಿಂತಲೂ ನಿಧಾನವಾಗಿ ಉರಿಯುತ್ತದೆ. ಆದರೆ ಅದಕ್ಕಿಂತಲೂ ಹೆಚ್ಚಾದಕಾವನ್ನು ಉಂಟಾಗಿದೆ ಭಗ್ಗಂತ ಉರಿಯದೆ ಏಕಪ್ರಕಾರವಾಗಿಯೂ, ನಿಧಾನವಾಗಿಯೂ ಹೊಗೆಯಿಲ್ಲದೆಯೂ ಉರಿಯುತದೆ.

ದೊಡ್ಡಮಂಕದಲ್ಲಿಹುಟ್ಟಿ ೮—೫ ವಿದ್ಯೆಗಳಲ್ಲಿ ಪಾಂಡಿತ್ಯವನ್ನು ಪಡೆದಿರುವ ಒಬ್ಬಸ್ತ್ರೀಯು ಜೀವನಕ್ಕೆ ಮಾರ್ಗವಿಲ್ಲದೆ ಇರುವದ್ದರಿಂದ ತನಗೆ ಯಾವ ಕೆಲಸವನ್ನು ಕೊಟ್ಟಾಗ್ಯೂ ನೋಡಿಕೊಂಡು ಹೋಗುತ್ತೇನೆ. ಆದರೆ ಮಾನದಿಂದ ಕಾಪಾಡಬೇಕೆಂದು ಇಂಗ್ಲಿಷ್ ಪತ್ರಿಕೆಗಳಲ್ಲಿ ಜಾಹಿರಾತನ್ನು ಪ್ರಕಟಿಸಿರುತ್ತಾಳೆ.

ಫ್ರಾನ್ಸ್‌ದೇಶದ ರಾಜಧಾನಿಯಾದ ಪ್ಯಾರಿಸ್‌ಪಟ್ಟಣದಲ್ಲಿ ಒಬ್ಬ ಸಮರ್ಥನಾದ ವೈದ್ಯನು ಅವಸಾನಕಾಲದಲ್ಲಿ ತನ್ನ ಮಗನನ್ನುಕರೆದು ಹೇಳಿದ್ದೇನೆಂದರೆ,—ಇಹದಲ್ಲಿರುವವರಿಗೂ ನಿನ್ನ ಕೈಲಾದಮಟ್ಟಿಗೂ ಬೇಕಾದಹಾಗೆಲ್ಲ ಒಳ್ಳೇದನ್ನು ಮಾಡು ಆದರೆ ಮಾಡಿದಂತಾದ್ದೆಲ್ಲ ಪ್ರತಿಷ್ಠೆಪಡೆಯುವದಕ್ಕೋಸ್ಕರ ನೀನಾಗಿ ಬಹಿರಂಗಪಡಿಸಬೇಡ—ಎಂಬದು. ವೃ. ಚಿಂ.

ನೇಟಿವ್‌ಸಂಸ್ಥಾನೀಕರು ಯಾವಯಾವಕೃತ್ಯಗಳಿಗೆ ಸಹಾಯ ಮಾಡುತ್ತಾರೆಂಬದನ್ನು ತಿಳಿಯುವಬಗ್ಗೆ ಗುಪ್ತವಾದ ರೀತಿಯಿಂದ ಶೋಧನೆಮಾಡಲ್ಪಡುವದೆಂದು ಕೇಳುತ್ತೇವೆ. ಇದಕಕಾರಣವೇನಿರಬಹುದು, ಮೈಸೂರು ಮಹಾರಾಜರವರು ನ್ಯಾಷನಲ್ ಕಾಂಗ್ರೆಸ್ಸಿಗೆ ಸಹಾಯಮಾಡಿದಬಗ್ಗೆ ಹಿಂದುಸ್ಥಾನ ಸರ್ಕಾರದವರು ತಮ್ಮ ಸೆಕ್ರಿಟರಿಗಳದ್ವಾರ ಅವರನ್ನು ಕೇಳಿದ್ದರಂತೆ. ನೇಟಿವ್‌ಅರಸರು ಇಂತಾ ಕೃತ್ಯಗಳಿಗೆ ಸಹಾಯ ಮಾಡಬಾರದೆಂದು ಪರೀಕ್ಷೆಮಾಡುತ್ತಾರೊ, ಅಥವಾ ಕೆಲವರು ಊಹಿಸುವಂತೆ ನೇಟಿವ್ ಅರಸರು ಸಿಕ್ಕಿದ ಕೆಲಸಗಳಿಗೆಲ್ಲ ಸಹಾಯಮಾಡುವದಕ್ಕೆಹೋಗಿ ವಿಪರೀತ ಸಾಲಗಾರರಾಗುತ್ತಾರೆಂದು ತಿಳಿದು ಅದನ್ನು ತಪ್ಪಿಸುವದಕ್ಕಾಗಿಯೊ? ಹೇಗಾದರೆಮಾತ್ರ ನೇಟಿವ್‌ಗಳೆಲ್ಲರು ಡಫರಿನ್‌ಯವರ ಉಪಕಾರವನ್ನು ಸ್ಮರಿಸಬೇಕು.—ಕ.ಸು.

ಡಫರಿನ್‌ಪ್ರಭುಗಳು ಹಿಂದುಸ್ಥಾನ್‌ದೇಶವನ್ನು ಬಿಟ್ಟುಹೋಗುವಾಗಇಲ್ಲಿನ ಪ್ರಜೆಗಳ ಬಡಸ್ಥಿತಿಯನ್ನು ತಿಳಿದುಕೊಂಡು ಹೋಗುವವರಿದ್ದಾರೆ. ಆದಕಾರಣ ಈವಿಷಯದಲ್ಲಿ ವಿಚಾರ ನಡೆದಿರುತದೆ. ಆದರೆ ಈ ಶೋಧನೆಯು ಅಲ್ಲಲ್ಲಿನ ಸರಕಾರೀ ಉದ್ಯೋಗಸ್ಥರಮೂಲಕ ನಡೆಯುತಲಿರುವದರಿಂದ ಡಫರಿನ್‌ಪ್ರಭುಗಳಿಗೆ ಜನರ ನಿಜಸ್ಥಿತಿ ತಿಳಿಯುವದು ಸಂಶಯಕರವಾಗಿದೆ. ಯಾಕೆಂದರೆ, ಬಡತನವೆಂದರೇನು ಎಂಬದು ದೊಡ್ಡ ದೊಡ್ಡ ಸಂಬಳ ಪಡೆಯತಕ್ಕ ಸರಕಾರೀ ಉದ್ಯೋಗಸ್ಥರಿಗೆ ಗೊತ್ತಿರಲಾರದು. ಡಫರಿನ್‌ಪ್ರಭುಗಳು ಈರೀತಿ ಪರೀಕ್ಷಿಸುವದಕ್ಕಿಂತಲೂ ಒಂದುಕಮಿಶ್ಶನ್ ನೇಮಿಸಿ ಅದರಮುಖಾಂತರ ಒಳ್ಳೇ ಅನುಭವಸ್ಥರಾದ ಸರಕಾರಿ ಉದ್ಯೋಗಸ್ಥರ ಮತ್ತು ಇತರಜನರ ಸಾಕ್ಷಿಗಳನ್ನು ತೆಗೆದುಕೊಂಡರೆ ಇದ್ದ ನಿಜಸ್ಥಿತಿಯು ಬಹಿರಂಗಕ್ಕೆ ಬರುವದು.—ಕ. ಸು.

ಹೈದರಾಬಾದ್ ರಿಜಿಮೆಂಟ್ ಬಾಜಾರ್ ಯೆಂಬ ಬೀದಿಯಲ್ಲಿರುವ ವೆಂಕಣ್ಣನೆಂಬ ಒಬ್ಬ ಕುಂಬಾರನು, ಚಿಕ್ಕಪ್ರಾಯದ ತನ್ನ ಹೆಂಡತಿಯಮೇಲೆ ಕೋಪಗೊಂಡು, ಅವಳ ಕೈಕಾಲುಗಳನ್ನು ಕಟ್ಟಿ ಕೆಳಕ್ಕೆ ಕೆಡವಿ, ಮೊದಲು ಅವಳತಲೇಕೂದಲನ್ನು ಸಂಪೂರ್ಣವಾಗಿಕತ್ತರಿಸಿ ತರುವಾಯ ಅವಳ ಮುಖದಮೇಲೆಲ್ಲಾ ಗೇರುಬೀಜದಿಂದ ತನ್ನ ಮನಸ್ಸಿಗೆ ಬಂದಂತೆ ಚಿತ್ರಗಳು ಬರೆದನು. ಈಗ ಅವಳು ಆಸ್ಪತ್ರೆಯಲ್ಲಿದ್ದಾಳೆ. ಗಂಡಂದಿರು ತಮ್ಮ ಸಿಟ್ಟನ್ನು ಹೆಂಡತಿಯರ ವಿಷಯದಲ್ಲಿ ಈರೀತಿ ಉಪಯೋಗಿಸಿದರೆ, ಹೆಂಡತಿಯರು ಜೋಗಿಯರೂ ಮತ್ತು ವಿಕಾರವಾದ ಮುಖವುಳ್ಳವರೂ ಆಗುವರಲ್ಲದೆ, ಕೂದಲು ಕತ್ತರಿಸುವ ಕತ್ತರಿಗಳು, ಗೇರುಬೀಜಗಳು ಬಹು ಪ್ರಿಯವಾಗುವವು. ಬೀದಿಯಲ್ಲಿ ಒಬ್ಬನು ತನ್ನ ಹೆಂಡತಿಯ ಮೂಗನ್ನು ಕೊಯಿದುಹಾಕಿದ್ದಕ್ಕಿಂತಲೂ, ವೆಂಕಣ್ಣನು ಮಾಡಿದ ಕೃತ್ಯವು ಉತ್ತಮವಾಗಿದೆಯಲ್ಲವೊ!—ವೃ. ಚಿ.

ಸಿಮಿಯೆಂಬ ಹಿಮಾಲಯ ಪರ್ವತ ಪ್ರಾಂತದಲ್ಲಿ, ವರುಷಕ್ಕೆ ಒಂದುಸಾರಿ ಮೇ ೧೦ ಮತ್ತು ೧೩ನೇ ತಾರೀಖುಗಳಲ್ಲಿ ಎದಿನ, ಹೆಣ್ಣುಗಳ ಒಂದು ಸಂತೆಯು ನಡೆಯುತ್ತದೆ. ಈ ಸಂತೆಯನ್ನು ಅಲ್ಲಿನ ಸ್ತ್ರೀಪುರುಷರೆಲ್ಲರೂ ಎದುರುನೋಡುತ್ತಿರುವರು. ಯಾಕೆಂದರೆ, ಪರ್ವತ ಪ್ರಾಂತದ ನಿವಾಸಿಗಳಿಗೆ ಅದೇ ಲಗ್ನಕಾಲವಾಗಿರುತ್ತದೆ ಹ್ಯಾಗೆಂದರೆ—ಸಾವಿರಾರುಮಂದಿ ಕನ್ಯಾಸ್ತ್ರೀಯರು, ಉಡಿಗೆ ತೊಡಿಗೆಗಳಿಂದಅಲಂಕೃತರಾಗಿ, ಗುಂಪುಗುಂಪಾಗಿ ತಮ್ಮತಮ್ಮ ತಾಯಿ ಅಥವಾ ತಮ್ಮ ಬಂಧುವಾದ ಒಬ್ಬ ಮುದಿಕಿಯ ಸಂಗಡ ಅಲ್ಲಿಗೆಬಂದು, ಒಂದುಗುಟ್ಟೆಯಬಳಿ ನೆರಳಾಗಿರುವ ವೃಕ್ಷಗಳ ಕೆಳಗೆ ಸಾಲುಸಾಲಾಗಿ ಕೂತುಕೊಳ್ಳುತ್ತಾರೆ. ಇವರಂತೆ ಮದುವೆಯಾಗುವ ಅನೇಕ ಪುರುಷರು ಅಲ್ಲಿಗೆಬಂದು, ದನಕರುಗಳ ಸಂತೆಯಲ್ಲಿ ದನಗಳನ್ನು ಒಂದೊಂದಾಗಿ ನೋಡುವಂತೆ ಈ ಕನ್ಯಾಸ್ತ್ರೀಯರನ್ನು ನೋಡಿ, ತಾವು ಮೆಚ್ಚಿದವರನ್ನು ಖರೀದಿಮಾಡಿ ತೆಗೆದುಕೊಂಡು ಹೋಗಿ ಮದುವೆ ಮಾಡಿಕೊಳ್ಳುತ್ತಾರೆ.—ವೃ ಪ.

ತೆರಿಗೆಗಳ ವಿಷಯದಲ್ಲಿ "ಬಾಂಗಬಾಸಿ" ಎಂಬ ಒಂದು ವರ್ತಮಾನ ಪತ್ರಿಕಾಕರ್ತರು ಬರೆದಿರುತ್ತಾರೇನೆಂದರೆ —"ಎಲೈ ಇಂಗ್ಲಿಷಜನರೇ, ನೀವು ಇಂಗ್ಲಂಡ್‌ರಾಜ್ಯದ ಮೇಲಿನ ಅಭಿಮಾನದಿಂದ, ಆಮದಾಗಿ ಬರುವ ಸರಕುಗಳ ಮೇಲಿದ್ದ ತೆರಿಗೆಯನ್ನು ತೆಗೆದುಹಾಕಿ, ಉಪ್ಪಿನ ತೆರಿಗೆಯನ್ನು ಹೆಚ್ಚಿಸಿದ್ದೀರಿ. ಕೋರ್ಟುಗಳೆಂಬ ನ್ಯಾಯಸ್ಥಾನಗಳನ್ನು ಹಣಸಂಪಾದಿಸುವ ಸ್ಥಳಗಳನ್ನಾಗಿ ಮಾಡಿದ್ದೀರಿ. ಆದ್ದರಿಂದ ನೀವು ಹಣವನ್ನು ಕ್ರಮವಾದ ರೀತಿಯಲ್ಲಿ ಸಂಪಾದಿಸುತ್ತೀರಾ, ಹೇಳಿ? ನೀವು ಇದ್ದ ಹಣವನ್ನೆಲ್ಲಾ ಖರ್ಚುಮಾಡಿದ್ದೀರಾ, ಮಿಗಿಲಾಗಿ ಹೆಚ್ಚಿದ್ದನ್ನು ಉಳಿಸಿಕೊಂಡಿರುವದಿಲ್ಲ. ಪ್ರತಿವರುಷವೂ ಸಾಲವನ್ನು ಹೆಚ್ಚಿಸಿಕೊಳ್ಳುತ್ತಾ ಇದ್ದೀರ. ನೀವು ಪ್ರತಿ ಇಲಾಖೆಯಲ್ಲಿಯೂ ಹಣವನ್ನು ಹಾಳುಮಾಡುತ್ತಾ ಇದ್ದೀರ. ಹೀಗಿರುವದರಿಂದ, ನೀವು ಎಂದಾದರೂ ಕಷ್ಟದಲ್ಲಿ ಸಿಕ್ಕಿಬಿದ್ದರೆ, ನಿಮ್ಮನ್ನು ನೀವೇಕಾಪಾಡಿಕೊಳ್ಳಲಾರಿರಿ. ನಿಮ್ಮ ಹಿತಚಿಂತಕರಾಗಿ ನಾವು ನಿಮ್ಮನ್ನು ಈ ವಿಷಯದಲ್ಲಿ ಎಚ್ಚರಿಸಿದ್ದೇವೆ. ಮತ್ತು ನಮ್ಮಪತ್ರಿಕೆಯು ಪ್ರಕಟವಾಗುತ್ತಲಿರುವವರೆಗೂ ಎಚ್ಚರಿಸುತ್ತಿರುವೆವು.—ವೃ. ವ.

ಕಲಿಕತ್ತೆಯ ಹೈಕೋರ್ಟ್ ಜಡ್ಜಿಯರ ಮುಂದೆ ಒಬ್ಬ ಹಿಂದೂಸ್ತ್ರೀಯು ಒಂದು ಮೊಕದ್ದಮೆಯಲ್ಲಿ ಸಾಕ್ಷಿಹೇಳುವದಕ್ಕೆ ಬಂದಿದ್ದಳು ಈ ಕೃತ್ಯವು ಎಲ್ಲಿ ನಡೆಯಿತೆಂದು ಜಡ್ಜಿಯವರು ಅವಳನ್ನು ಕೇಳಲು ಫಲಾನೇಮನೆಯ ಜಗಲಿಯಮೇಲೆ ನಡೆಯಿತೆಂದು ಉತ್ತರಕೊಟ್ಟಳು. ಆಗ ಜಡ್ಜಿಯವರು ಆಜಗಲಿಯಮೇಲೆ ಎಷ್ಟು ಕಂಭಗಳಿದ್ದವು ಎಂದು ಕೇಳಿದರು. ಅದಕ್ಕವಳು ಬಹಳ ವಿಚಾರಮಾಡದೆ ನಾಲ್ಕು ಕಂಭಗಳಿದ್ದವೆಂದುಹೇಳಿದಳು. ಇದನ್ನುಕೇಳಿ ಎದುರುಕಕ್ಷಿಯ ವಕೀಲರು ೫ ಕಂಬಗಳಿರುವದರಿಂದ ಇವಳಸಾಕ್ಷಿಯಲ್ಲಿ ನಂಬಿಕೆ ಇಡಕೂಡದೆಂದುಹೇಳಿದರು. ಅಷ್ಟರಲ್ಲಿ ಆಸ್ತ್ರೀಯು ತನ್ನ ತಪ್ಪನ್ನು ತಿಳಿದವಳಾಗಿ ಜಡ್ಜಿಯರಿಗೆತಿಳಿಸಿದಳೇನು ದರೆ,—ದೊರೆಗಳೇ ತಾವು ಈಕೋರ್ಟಿನಲ್ಲಿ ಬಹಳವರುಷಗಳಿಂದಿದ್ದೀರಿ, ಮತ್ತು ಪ್ರತಿದಿನ ಇಲ್ಲಿ ನಿಚ್ಚಣಿಗೆಯನ್ನೇರುತ್ತೀರಿ ಆದರೆ ಆನಿಚ್ಚಣಿಗೆಗೆ ಎಷ್ಟುಮೆಟ್ಲುಗಳಿರುತವೆಂದು ಕೇಳಿದಳು. ಆಗ ಜಡ್ಜಿಯವರು ತಮಗೆಗೊತ್ತಿಲ್ಲವೆಂದು ಒಪ್ಪಿಕೊಂಡರು. ಆಗಲಾ ಹೆಂಗಸು ದಿನಂಪ್ರತಿ ತಾವು ನ್ಯಾಯಾಸನವನ್ನೇರುವ ಮೆಟ್ಲುಗಳಸಂಖ್ಯೆಯು ತಮ್ಮಿಂದ ಹೇಳಲಸಾಧ್ಯವಾದಮೇಲೆ ನಾನು ಈಜನ್ಮದಲ್ಲೊ ೫-೬ಸಾರಿ ಮಾತ್ರ ಹೋಗನೇಮಿದ್ದಂತಾ ಮನೆಯ ಜಗಲಿಯಮೇಲಿರುವ ಕಂಭಗಳಸಂಖ್ಯೆಯನ್ನು ಮರೆತದ್ದೇನೂ ಆಶ್ಚರ್ಯವಲ್ಲವು ಎಂದು ಹೇಳಿದಳು. ಇದನ್ನುಕೇಳಿ ಜಡ್ಜಿಯವರು ಮೊಕದ್ದಮೆಯನ್ನು ಅವಳಪಕ್ಷವಾಗಿಸ್ಥಿರಪಡಿಸಿದರು. ಕನ್ನಡ ಸುವಾರ್ತೆ.

ರಷ್ಯಾ ಮಹಾರಾಜರಾದ ಜಾರ್ ಎಂಬವರನ್ನು ರಹಸ್ಯವಾಗಿ ಕೊಲ್ಲಿಸುವ ಉದ್ದೇಶದಿಂದ ಅವರ ಶತ್ರುಪಕ್ಷದವರು ಅತ್ಯಂತ ಸುಂದರವಾದ ಒಬ್ಬ ಯೌವನಸ್ತ್ರೀಯನ್ನು ರಷ್ಯಾದೇಶದ ಪ್ರಧಾನಪಟ್ಟಣವಾದ ಮಾಸ್ಕೋನಿಗೆ ಕೆಲವುದಿನಗಳ ಕೆಳಗೆ ಕಳುಹಿಸಿಕೊಟ್ಟರು. ಈಕೆಯು ಅಲ್ಲಿನ ಒಬ್ಬ ವರ್ತಕನ ಮನೆಯನ್ನು ಬಾಡಿಗ್ಗೆ ತೆಗೆದುಕೊಂಡು ಅದರಲ್ಲಿ ಇಳಿದುಕೊಂಡಳು. ತರುವಾಯ ೪ ಗಂಟೆಯಮೇಲೆ ಈ ಅಂತರಂಗವನ್ನು ತಿಳಿದ ಕೆಲವುಜನ ಪೊಲೀಸ್‌ನವರು ಈ ಹೊಸಬಳಮನೆಗೆಬಂದು ಮುಚ್ಚಿರುವ ಕದವನ್ನುನೋಡಿ ಅದನ್ನು ಒಡೆದು ಬಲಾತ್ಕಾರದಿಂದ ಒಳಹೋಗುವಪ್ರಯತ್ನಗಳನ್ನುಮಾಡುತ್ತಿದ್ದರು. ಅಷ್ಟರಲ್ಲೇ ಈಕೆಯು ಎತ್ತರವಾದ ಮಹಡಿಮೇಲಿನ ಕಿಟಕಿಯಿಂದ ಹಿತ್ತಲಕಡೆ ಧುಮುಕಿ ತಪ್ಪಿಸಿಕೊಂಡು ಒಬ್ಬರಿಗೂ ತಿಳಿಯದಂತೆ ಹೊರಟುಹೋದಳು. ಪೊಲೀಸ್‌ನವರು ಬಾಗಲು ಒಡೆದು ಒಳಹೊಕ್ಕು ನೋಡಿ ಈಕೆಯನ್ನುಕಾಣದೆ ಅಲ್ಲಿದ್ದ ಪದಾರ್ಥಗಳನ್ನೂ ಗುಟುಗಳನ್ನೂ ಶೋಧನೆಮಾಡಿದರು. ಒಂದುಗಂಟನ್ನಲ್ಲಿ ಅಪಾಯಕರವಾದ ಬಹು ಚಮತ್ಕಾರವಾದ ಮಾಂದ ವಿಷಾ ತೀಯವಾದ ಓಗುಂಡುಗಳುಸಿಕ್ಕಿದವು ಸ್ತ್ರೀಯರು ಸಾಹಸವಂತರಾಗಿ ಪುರುಷರನ್ನು ಅದರಲ್ಲಿಯೂ ಮಹಾರಾಜರನ್ನು ರಹಸ್ಯವಾಗಿ ತಮ್ಮ ಲಾವಣ್ಯದ ಸೊಬಗಿನ ಅತಿಶಯದಿಂದ ಮೋಸಗೊಳಿಸಿ ಕೊಲ್ಲುವರಾದರೆ ಸಾಧಾರಣವಾದ ಪುರುಷರ ಮತ್ತು ಪುರುಷಶ್ರೇಷ್ಠರಾದ ಪ್ರಭುಗಳಗತಿಯೇನು.—ವೃ. ಪ.

EXTRACTS.

ಪ್ರಕೃತ ಕಾಫಿಬೀಜವು ಬಹಳವಾಗಿ ಎಲ್ಲಾ ದೇಶಗಳಲ್ಲಿಯೂ ಉಪಯೋಗಿಸಲ್ಪಡುವದು. ಕಾಫಿಗಿಡವು ಮೊದಲು ಅಬಸೀನಿಯಾದೇಶದಿಂದ ಅರೇಬಿಯಾದೇಶಕ್ಕೆ ೧೫ನೇ ಇಸವಿಯಲ್ಲಿ ತರಲ್ಪಟ್ಟಿತು. ಅರೇಬಿಯನ್ ಜನಗಳ ಖುರಾನಿನಲ್ಲಿ ಮದ್ಯವು (Wine) ನಿಷೇಧಿಸಲ್ಪಟ್ಟದ್ದಕಾರಣ ಅದಕ್ಕೆಬದಲಾಗಿ ಕಾಫಿಯು ಬಹಳ ಅನುಕೂಲವಾಗುತ್ತೆಂಬ ಸಂಗತಿಯನ್ನು ಕಂಡುಕೊಂಡು ಅದನ್ನು ಪರಿಗ್ರಹಿಸುವದಕ್ಕೆ ಆರಂಭಿಸಿದರು. ಅವರು ಅದಕ್ಕೆ "ಕಾಫಿ" (ಅಂದರೆಮದ್ಯ) ಎಂಬ ಹೆಸರನ್ನು ಕೊಟ್ಟುಕೊಂಡು ಪದಾರ್ಥಭೇದವಾದರೂ ನಾಮೈಕ್ಯದಿಂದ ಸಂತುಷ್ಟರಾಗಿದ್ದರು. ಈ ಹೆಸರಿನವಿಷಯವಾಗಿ ಆದೇಶದ ಮತಾಂತರರು ಕಲಹಮಾಡಿದರೂ ಕಾಫಿಯಗುಣವು ಅವರನ್ನು ಪರಾಜಿತರನ್ನಾಗಿಮಾಡಿತು. ಈ ಅರೇಬಿಯಾದೇಶದಲ್ಲಿ ಬಹಳವಾಗಿ ಉಪಯೋಗಿಸಲ್ಪಡುತ್ತದೆ. ಒಬ್ಬಮನುಷ್ಯನು ಮನಃಕ್ಲೇಶದಿಂದಲೂ ಶರೀರ ಆಯಾಸದಿಂದಲೂ ಬಹಳ ಬಳಲಿದಾಗ ಕಾಫಿಯಲ್ಲಿರುವ ಉತ್ಕೃಷ್ಟವಾದ ಗುಣದನ್ನರಿತವನಾದರೆ ಒಂದುಬಟ್ಲು ಕಾಫಿತೆಗೆದುಕೊಂಡಾನೆಹೊರತು (Gin) ಜಿನ್ ಎಂಬ ಅಮೌಲ್ಯವಾದ ಮದ್ಯವನ್ನು ಎಂದಿಗೂ ಸೇವಿಸಮಾತಾರನು. ಈ ಸುಮಾರು ೪೦೦ ವರುಷಗಳೊಳಗೆ ಕಾಫಿಯು ಅರೇಬಿಯಾದೇಶದಿಂದ ಈಜಿಪ್ಟ್ ದೇಶಕ್ಕೂ ಅಲ್ಲಿಂದ ಇತರ ತುರ್ಕೀ ಪ್ರದೇಶಗಳಿಗೂ ತರಲ್ಪಟ್ಟಿತು. ಒಬ್ಬತುರ್ಕೀವ್ಯಾಪಾರಿಯು ಮೊದಲು ೧೬೫೨ನೇ ಸಂವತ್ಸರದಲ್ಲಿ ಒಂದುಚೀಲ ಕಾಫೀಬೀಜವನ್ನು ಇಂಗ್ಲಾಂಡಿಗೆ ತೆಗದುಕೊಂಡುಹೋದನು. ಅವರು ಪವೇ ಅಲ್ಲಿಅವನಿಂದ ಕಾಫಿನೀರುಮಾಡಿ ಕುಡಿಯಲ್ಪಟ್ಟಿತು. ಆ ಕಾಲದಲ್ಲಿಯೇ ಅದು ಫ್ರಾನ್ಸ್‌ದೇಶಕ್ಕೂ ತೆಗದುಕೊಂಡುಹೋಗಲ್ಪಟ್ಟಿತು. ಅರವತ್ತುವರುಷಗಳ ತರುವಾಯ ಇಂಗ್ಲಾಂಡಿನಲ್ಲಿ ಎಲ್ಲಿ ನೋಡಿದರೂ ಕಾಫಿಮಯವಾಗಿ ಗ್ರಂಥಗಳಲ್ಲಿಯೂ ಕೂಡ ಕೊಂಡಾಡಲ್ಪಟ್ಟಿತು. ಸುಮಾರು ೬೦ ಸಂವತ್ಸರಗಳವರಿಗೂ ಅರೇಬಿಯಾದೇಶದಿಂದ ಹೋಗತಕ್ಕಕಾಫಿಯು ಇಂಗ್ಲಾಂಡಿನಲ್ಲಿ ಸಾಕಾಗಿತ್ತು. ೧೬೯೦ನೇ ಇಸವಿಯಲ್ಲಿ ಒಬ್ಬ ಡಚ್ ಗವರ್ನರ್‌ಜನರಲ್ ಅರೇಬಿಯಾದೇಶದಿಂದ ಒಂದು ಕಾಫೀಗಿಡವನ್ನು ಹಾಲೆಂಡಿಗೆ ಕಳುಹಿಸಿಕೊಟ್ಟನು. ಅಲ್ಲಿ ಅದು ಚೆನ್ನಾಗಿಸಂರಕ್ಷಿಸಲ್ಪಟ್ಟು ಫಲವನ್ನುಕೊಟ್ಟಿತು. ಆಬೀಜದವೈಕಿ ಕೆಲವು ಅಮೆರಿಕಾದೇಶದ ಸೂರಿನಾಮ್ ಎಂಬಸ್ಥಳಕ್ಕೆ ಕಳುಹಿಸಲ್ಪಟ್ಟವು. ಅವುಗಳೇ ಅಮೆರಿಕಾದೇಶದಲ್ಲಿಸ್ಟು ಪ್ರಬಲವಾಗಿರುವ ಕಾಫಿಗೆ ಕಾರಣಭೂತಗಳಾದವು. ಆದರೆ ಫ್ರಾನ್ಸ್‌ದೇಶದ ಮುಖ್ಯಪಟ್ಟಣವಾದ ಪ್ಯಾರಿಸ್‌ಪಟ್ಟಣದ ತೋಟದಿಂದ ಒಬ್ಬ ಫ್ರೆಂಚಿಯನು ವೆಸ್ಟ್ ಇಂಡೀಸ್‌ಗೆ ತೆಗದುಕೊಂಡು ಹೋದನೆಂದು ಮತ್ತೊಂದುವಿಧವಾಗಿ ಅಂದುಕೊಳ್ಳುತ್ತಾರೆ. ಆದರೆ ಕಾಫಿಬೀಜವುಯಾವಾಗಸಿಲೋನ್ (ಲಂಕಾ)ದ್ವೀಪಕ್ಕೆ ತೆಗದುಕೊಂಡು ಬರಲ್ಪಟ್ಟಿತೊ ಗೊತ್ತಾಗುವದಿಲ್ಲವು. ಆದ್ವೀಪವನ್ನು ಡಚ್ ಜನಗಳು ಸ್ವಾಧೀನಮಾಡಿಕೊಂಡಿದ್ದಾಗ್ಯೆ ಅವರು ಅದನ್ನು ಅರೇಬಿಯಾದೇಶದಿಂದ ಅಲ್ಲಿಗೆತಂದಿರಬಹುದೆಂದು ಊಹಿಸಲ್ಪಡುತವೆ. ಮೈಸೂರಿಗೆ ಅದು ಒಬ್ಬಮಹಮ್ಮದೀಯ ಯೋಗಿ ಬಾಬಾಬುಡನ್ ಎಂಬುವನಿಂದ ತರಲ್ಪಟ್ಟಿತು. ಸುಮಾರ್ ೨೦೦ ವರುಷಗಳಹಿಂದೆ ಅವನು ಮಕ್ಕಾಯಾತ್ರೆಗೆ ಹೋಗಿದ್ದಾಗ್ಯೆ ಕೆಲವು ಬೀಜಗಳನ್ನುತಂದು ಈಗ ಬಾಬಾಬುಡನ್ ಬೆಟ್ಟವೆಂದು ಅವರ ಹೆಸರಿನಿಂದ ಕರಿಯಲ್ಪಡುವ ಬೆಟ್ಟದಲ್ಲಿ ಹಾಕಿದನೆನ್ನುತ್ತಾರೆ. ಆದರೆ ಈ ಯೋಗಿಗೆ ತರುವಾಯಬಂದ ಇನ್ನೊಬ್ಬಯೋಗಿಯು ಅದನ್ನು ತಂದನೆಂದು ಕೂಡಾಹೇಳಿಕೊಳ್ಳುತ್ತಾರೆ. ಅನಂತರ ಅದು ಬಾಬಾಬುಡನ್‌ಗಿರಿಗೆ ಸಮೀಪದಲ್ಲಿರುವ ತೋಟಗಳಲ್ಲಿ ವ್ಯಾಪಿಸಿತು. ಇಂಗ್ಲಿಷನವರು ಮೈಸೂರು ದೇಶವನ್ನು ಪ್ರವೇಶಿಸಿದತರುವಾಯ ಅದನ್ನು ಅವರು ಬಹಳ ಪ್ರಬಲಕ್ಕೆ ತಂದರು. ಅದು ಬಹು ಎತ್ತರವಾದ ಪ್ರದೇಶದಲ್ಲಿ ಬೆಳಯುವದು. ಈಗ ಮೈಸೂರುದೇಶದ ಕಡೂರು ಮತ್ತು ಹಾಸನ ಡಿಸ್ಟ್ರಿಕ್ಟುಗಳಲ್ಲಿಯೂ ಕೊಡಗುದೇಶದಲ್ಲಿ ಈಬೀಜವು ಚನ್ನಾಗಿಬೆಳೆದು ಏರ್ಪಟ್ಟಣದಲ್ಲಿಯೂ ಕೂಡ ಬಹಳ ಹೆಸರನ್ನು ಸಂಪಾದಿಸಿಕೊಂಡಿರುತವೆ. ನಮ್ಮದೇಶದಲ್ಲಿಯೂ ಇತರದೇಶಗಳಲ್ಲಿಯು ಈ ಉತ್ಕೃಷ್ಟವಾದ ಪದಾರ್ಥವು ಈಗ ಬಹಳವಾಗಿ ಉಪಯೋಗಿಸಲ್ಪಡುವದು.—ವಿ.ಧ್ವಜ

BANGALORE:—Printed and published for the Proprietor at the KARNATIC Press —1888.

ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA.

ಪ್ರತಿ ಸೋಮವಾರ ಪ್ರಾತಃಕಾಲದಲ್ಲಿ ಪ್ರಕಟಿಸಲ್ಪಡುವದು.

Published every Monday Morning.

ಪ್ರಾಮವಿವಿಧಪ್ರವೃತ್ತ್ಯನಗವಾರ್ತ್ತ ಕರ್ಣ್ಣಾಟಕಪ್ರಕಾಶನಪರಾಭಿದಾಪ್ರಥಿತಸಾಹಿತೀಕೋಭಿತಾ ॥ ಮೃಗಾಂಕಹಿತಪಾಸರಿನಿಹಿತಮುದ್ರಣಾಸಜ್ಞನ್ಯೆರ್ದ್ವಿಕಾಸುಪರಿಪೂಜಿತಾದಿಕಶಿಮುನಸಂಮುದಂ

VOL. XV.] BANGALORE—MONDAY, JUNE 11, 1888. [No. 23.

ಸಂಪುಟ ೧೫.] ಬೆಂಗಳೂರು:—ಸನ ೧೮೮೮ನೇ ಇಸವಿ ಜೂನ ೧೧ನೇ ತಾರೀಖು ಸೋಮವಾರ. [ಸಂಚಿಕೆ ೨೩.

ಕರ್ಣಾಟಕ ಪ್ರಕಾಶಿಕಾ

ಪತ್ರಿಕೆಯು ಚಂದಾ ದರಗಳು,
೧೮೮೮ನೇ ಇಸವಿ ಜನವರಿಲಾಗಾಯತು
ಕಡಮೆಮಾಡಲ್ಪಟ್ಟಿರುತಿದೆ.

ಈ ಪತ್ರಿಕೆಯು ಚಂದಾದಾರರಲ್ಲಿ ಅನೇಕರ ಅಪೇಕ್ಷೆಯನ್ನಿನೆರವೇರಿಸುವ ಉದ್ದೇಶದಿಂದಲೂ, ಪರಿಮಿತವಾದ ಆಯತಿಯುಳ್ಳವರಿಗೆಲ್ಲ ಈ ಪತ್ರಿಕೆಯು ಸುಲಭವಾಗಿ ಲಭಿಸುವಂತಿರಬೇಕೆಂಬ ಅಭಿಪ್ರಾಯದಿಂದಲೂ ಇದರ ಚಂದಾದರವನ್ನು ಇವರಡಿಕಂಡಂತೆ ಕಡಮೆಮಾಡಿರುತ್ತೇವೆಂತೆಂದರೆ:—

ಇಂಗ್ಲಿಷ್ ಮತ್ತು ಕನ್ನಡಭಾಗಗಳಿಗೆ.

		ಸ್ಥಳದವರಿಗೆ	ಪರಸ್ಥಳದವರಿಗೆ.
12	ತಿಂಗಳಿಗೆ	8—0—0	9—0—0
6	,,	4—0—0	4—8—0
3	,,	2—8—0	2—8—0

ಇಂಗ್ಲಿಷ್ ಅಥವಾ ಕನ್ನಡಭಾಗಗಳಿಗೆ.

		ಸ್ಥಳದವರಿಗೆ	ಪರಸ್ಥಳದವರಿಗೆ
12	ತಿಂಗಳಿಗೆ	4—0—0	5—0—0
6	,,	2—0—0	2—8—0
3	,,	1—4—0	1—8—0

ಷರಾ—ಅಂಬೆ ಮುತ್ಸದ್ದಿಗಳು, ಜೋಬಳ ಮತ್ತು ತಾಲ್ಲೂಕ್ ಸ್ಕೂಲ್‌ಮಾಸ್ತರುಗಳು, ಶ್ಯಾನುಭೋಗರು, ಪಟೇಲರು, ವಿದ್ಯಾರ್ಥಿಗಳು, ಇವರಿಗೆಲ್ಲ ಈ ಪತ್ರಿಕೆಯು ಸದರಿ ಚಂದಾದರಕ್ಕೆ ಕೊಡಲ್ಪಡುವದು. ಆದ್ವಾನ್ಸ್‌ವೊಬಲಗಿನ ಬಾರದ ರವಾನಿಸ್ಬೇಕಗೆ ಸುಕರಾ ನಿಸಲೊತ್ತಲಾರದು. ಚಂದಾದಾರರು ಇಂಗ್ಲಿಷ್ ಭಾಗವನ್ನಾಗಲಿ ಕನ್ನಡಭಾಗವನ್ನಾಗಲಿ ಅಥವಾ ಎರಡನ್ನಾಗಲಿ ತರಿಸಿಕೊಳ್ಳಬಹುದು. ಚಂದಾಹಣವನ್ನು ಮುಂಗಡವಾಗಿಯೇ ಸಲ್ಲಿಸತಕ್ಕದ್ದು. ಮೂರುತಿಂಗಳಿಗಿಂತ ಕಡಮೆಯಾಗಿ ಚಂದಾ ಮೊಬಲಗು ಅಂಗೀಕರಿಸಲ್ಪಡಲಾರದು.

ನೋಟುಗಳು ರವಾನಿಸತಕ್ಕವರು ಮೊದಲು ಕಳುಹಿಸುವ ಅರ್ಧನೋಟು ತಲುಪಿದಬಗ್ಗೆ ನಮ್ಮಿಂದಾಗದವು ಬಂದಕೂಡಲೇ ಬಾಕೀ ಅರ್ಧ ನೋಟನ್ನು ರವಾನಿಸತಕ್ಕದ್ದು. ಲೇಬಲ್‌ಗಳು ಕಳುಹಿಸತಕ್ಕವರು ರೂಪಾಯಿ ಒಂದಕ್ಕೆ ಒಂದುಆಣೆಮೇರೆ ಡಿಸ್‌ಕೌಂಟ್ ಸಹ ಸೇರಿಸಿ ಕಳುಹಿಸತಕ್ಕದ್ದು. ಆರ್ಡಿನರೀ ಸ್ಟಾಂಪ್‌ಗಳನ್ನು ಕಳುಹಿಸಕೂಡದು. ಡಿಸ್‌ಕೌಂಟಿಲ್ಲದೆ ಕಳುಹಿಸಲ್ಪಡುವ ಮೊಬಲಗಿನಲ್ಲಿ ಅದು ಸಹಾವಣಾತ್ಪಷ್ಟು ಮಿಕ್ಕುವಬಲಗು ಲೆಕ್ಕಕ್ಕೆ ದಾಖಲ್ಮಾಡಿಕೊಳ್ಳಲ್ಪಡುವದು.

ಪ್ರಕಟನೆಯ ರಿವಾಜ್.

ಮೊದಲನೆಸಾರೆಗಾ ಪಂಕ್ತಿ ಒಂದಕ್ಕೆ ೦—೨—೦
ಎರಡನೆಯಸಾರೆಗಾ ಪಂಕ್ತಿ ಒಂದಕ್ಕೆ ೦—೧—೦

ಷರಾ—ಎರಡಾವರ್ತಿಗಿಂತ ಜಾಸ್ತಿಯಾಗಿ ಎಷ್ಟುಸಾರೆ ಪ್ರಕಟಿಸ ಬೇಕೆಂಬುದನ್ನು ಹಚ್ಚಿ ಒಂದಕ್ಕೆ ೧ಆಣೆಯಂತೆಯೇ ಲೆಕ್ಕ ಮಾಡಲ್ಪಡುವದು. ಈ ಪತ್ರಿಕೆಯಲ್ಲಿ ಘಾಮಿಷ್‌ಮಾಡುವಬಗ್ಗೆ ಪ್ರಕಟನೆಗಳು ಕಳುಹಿಸುವವರು ಅವು ಎಷ್ಟಾವರ್ತಿ ಘಾಯಿಷ್ ಮಾಡಲ್ಪಡಬೇಕೋ ಆ ಅಂಕವನ್ನು ಸ್ಪಷ್ಟವಾಗಿ ತಿಳಿಸತಕ್ಕದ್ದು. ಇಲ್ಲದಪಕ್ಷಕ್ಕೆ ಅವರು ನಮಗೆ ನಿಲ್ಲಿಸುವಂತೆ ಬರೆಯುವತನಕ ಅವು ಪ್ರಕಟಿಸುತಲಿದ್ದು ಹಾಗೆ ಎಷ್ಟಾವರ್ತಿ ಪ್ರಕಟಿಸಲ್ಪಟ್ಟಿವೆಯೋ ಮೇಲ್ಕಂಡ ದರದಂತೆ ಕಿಮ್ಮತ್ತ್ ವಸೂಲ್ಮಾಡಲ್ಪಡುವದು. ಪ್ರಕಟನೆಯಬಗ್ಗೆ ಕಳುಹಲ್ಪಡತಕ್ಕ ಪ್ರಕಟನೆಗಳನ್ನು ಆ ಯಾಣಿವಾರದಿನ ಮಧ್ಯಾಹ್ನ ೨ ಗಂಟೆಯೊಳಗಾಗಿ ಕಳುಹಿಸಬೇಕು. ಪ್ರಕಟನೆಯಬಗ್ಗೆ ಈ ಪತ್ರಿಕೆಗೆ ಕೊಡುವ ಪ್ರತಿಕಕ್ಕೆ ಕಾಣದಲ್ಲಿ ತೀರಲ್ಪಡುವ ಆಫೀಸಿನ ಯಾವಾಗಲಿ ನಾವು ಜಾವಾಬ್ದಾರರಾಗಲಾರೆವು. ಸ್ಥಿರವಾಗಿ ರುಜುವಾತು ದಸ್ತೋಖ ವಾನಗಳಾದವನ್ನು ಪ್ರಕಟಿಸಲಾರೆವು. ನಿರಾಕೊಳಲ್ಪಟ್ಟಕಾಗದಗಳು ವಾಪಸುಕಳುಹಿಸಲ್ಪಡಲಾರವು.

"IT RECOMENDS ITSELF"

ALL WHO SUFFER FIND SURE RELIEF.

LITTLE'S

ORIENTAL BALM

THE MOST EFFECTUAL MODERN REMEDY FOR PAIN.

ಲಿಟಲ್ ಎಂಬುವರಿಂದ ತಯಾರ್ಮಾಡಲ್ಪಟ್ಟ "ಬಾಧಸಂಹಾರಿಣೀ" ಎಂಬ ಪೂರ್ವದೇಶ ಸಂಬಂಧವಾದ ಅಮೂಲ ತೈಲವು ಸ್ವಶಕ್ತಿ ಪ್ರದರ್ಶಕವಾದದ್ದು, ಮತ್ತು ಸಫಲವಾದ ನವೀನ ಚಿಕಿತ್ಸಾರೂಪವಾದ ಔಷಧವು. ಇದರಿಂದ ಸಕಲ ವಾತರೋಗಗಳೂ, ವಾತಸಂಬಂಧಗಳಾದ ಸಂಧಿ(?)ಗಳೂ ನಿವೃತ್ತಿಯಾಗುವವು. ಮುಖ್ಯವಾಗಿ ಚಿರಕಾಲಿಕವಾದ ವಾತರೋಗಗಳು, ಕಾಸ, ಗಂಟಲಿನಲ್ಲಿ ಉರಿ, ಸಿಡುವುನೋವು, ಕೀಲುವಾಯು, ಕಟಿವಾಯು, ಉಳುಕು ನೋವು, ತಲೆನೋವು, ತಿಮಿರಿವಾಯು ಮುಂತಾದ ರೋಗಗಳಿಗೆಲ್ಲ ನಿಸ್ಸಂದೇಹವಾಗಿ ಬಹಳ ಪ್ರಯೋಜನವನ್ನುಂಟುಮಾಡತಕ್ಕದ್ದು. ಈ ತೈಲವನ್ನು ನೋವುಳ್ಳ ಸ್ಥಳಗಳಲ್ಲಿ ಕೆಲವಾವರ್ತಿ ಸವರಿ ಕಾವುಂಟಾಗುವಂತೆ ಚನ್ನಾಗಿ ತಿಕ್ಕಿದಲ್ಲಿ ಸಹಿಸಲಾಗದ ಯಾತನಾ ನೋವುಗಳನ್ನು ನಿವೃತ್ತಿ ಮಾಡುವಂತಾ ಉತ್ತಮ ತೈಲವಾಗಿರುತ್ತದೆ. ಸಕೃತ್ಪ್ರಯೋಗದಿಂದಲೇ ಅರೆತಲೆನೋವು ಮತ್ತು ಜೋಮು ಶುದ್ಧಾಂಗ ನಿವೃತ್ತಿಯಾಗುವದು. ಗಂಟಲಿನಲ್ಲಿಂಟಾಗುವ ಉರಿ ಅಥವಾ ವ್ರಣಗಳಿಗೆ ಈ ತೈಲವು ಅದ್ಭುತವಾದ ಮತ್ತು ಶೀಘ್ರವಾದ ಸಂಪೂರ್ಣ ಗುಣವನ್ನುಂಟುಮಾಡುವದು. ಅದ್ಭುತವಾದ ಈ ಔಷಧವನ್ನು ಉಪಯೋಗಿಸಿದಲ್ಲಿ ಇದರ ಪ್ರಯೋಜನವು ಸ್ವತಃವೆ ವ್ಯಕ್ತವಾಗುವದು. ಈ ತೈಲವು ಶೀತಗಾಳಿ ಮಂಜುಮುಂತಾದವುಗಳಿಗೊಳಗಾಗಿ ಸಂಚರಿಸುವಂತಾ ಪ್ರಯಾಣಿಕರು, ಬೇಟೆಯಾಡುವವರು, ದೇಶಾಟನ ಮಾಡುವವರು, ಮುಂತಾದವರಿಗೆಲ್ಲ ಅಮೂಲ್ಯವಾದದ್ದು.

ಪರಿಶೀಲಕರ ಅಭಿಪ್ರಾಯವು.

ಐರ್ಲ್ಯಾಂಡ್ ದೇಶದ ಫಾರ್ಮಸ್ಯೂಟಿಕಲ್ ಸೊಸೈಟಿಯೆಂಬ ಔಷಧಶಾಲೆಯ ಪ್ರೆಸಿಡೆಂಟರಾಗಿಯೂ, ಸದರೀ ದೇಶದ ಬಿಸಾಲಜಿಕಲ್ ಸೊಸೈಟಿ ಯೆಂಬ ವ್ಯಾಖ್ಯಾನಶಾಲೆಯ ಸಮಾಜದ ಮೆಂಬರಾಗಿಯು, "ಮೆಡಿಸಿನಲ್ ವಾಲ್ಯೂಸ್ ಆಫ್ ಯೂರೆನ್ ‌" ಎಂಬ ಗ್ರಂಥಕರ್ತರಾಗಿಯೂ, ರಸಾಯನ ವಿಷಯಕವಾದ ಅನೇಕ ಲೇಖನಾಧಿಕಾರಿಗಳಾಗಿಯೂ, ಇರುವ ಪ್ರೊಫೆಸರ್ ಟಿಚ್ ಬೋರ್ನ್ (C. R. TICHBORNE, L. L. D., F. C. S., M. R. I. A.) ಎಂಬುವರು ಅಭಿಪ್ರಾಯ ಪಟ್ಟಂತೆ... ಇವರ ಪರೀಕ್ಷೆಯಿಂದ ಇದು ಬಹುವಿಧ ಮಾದರಿಗಳ ರಸಮಿಶ್ರವಾದ ತೈಲಮಿಶ್ರಣವೆಂದು ತಿಳಿದುಬಂದಿದೆ... ಸಿದ್ಧವಾಗಿ ಕೊಡಲ್ಪಟ್ಟಿರುತ್ತದೆ. ಈ ಮಿಶ್ರಣವು ನರಗಳನ್ನು ಸ್ಥಿರಮಾಡಿ ತತಕ್ಷಣ ಗುಣವಾಗುವದರಿಂದ ಇದು ಯಾವ ತರಹ ರೋಗಗಳಿಗೆ ಉಪಯುಕ್ತವೆಂದು ತಿಳಿಸಲ್ಪಟ್ಟಿದೆಯೋ ಸದರೀ ರೋಗಗಳಲ್ಲಿ ಅದರ ಪ್ರಯೋಜನವು ಸ್ಪಷ್ಟವಾಗುವದು. ಈ ತೈಲವು ಸಂಪೂರ್ಣ ಜಾಗರೂಕತೆಯೊಡನೆ ತಯಾರ್ಮಾಡಲ್ಪಟ್ಟಿರುತ್ತದೆ.

ಇದರ ಕ್ರಯ—ಸೀಸೆ ಒಂದಕ್ಕೆ ೧ ರೂಪಾಯಿ.

ಇದು ವಿಶಿಷ್ಟ ಔಷಧ ಶಾಲೆಯಲ್ಲಿಯೂ, ಮದರಾಸ್ ಶಂಬುದಾಸ್ ಬೀದಿಯಲ್ಲಿ, ೨೦ನೇ ನಂಬರ್ ಮನೆಯೊಳಗಿರುವ, ಮೆ. ಎ. ಸಿ. ಬೆರ್ರಿಮನ್ ಯವರಲ್ಲಿಯೂ, ಈ ಪೂರಿನಲ್ಲಿರುವ ಅವರ ಏಜಂಟ್‌ಗಳಾದ ಜೆ. ವೆಸ್ಟ್ ಯವರ ಕಂಪೆನಿಯಲ್ಲಿಯೂ, ಮೆ. ಕೆಪ್ಲಿನ್ ಅಂಡ್ ಕಂಪೆನಿಯವರಲ್ಲಿಯೂ, ರಿಗ್ಸ್‌ಯವರ ಕಂಪೆನಿಯಲ್ಲಿಯೂ ದೊರೆಯುವದು.

AGENTS.— Messrs, J. WEST, *Chemist, &c., Bangalore.*
CAPLIN & Co. *Chemists, Bangalore.*
RIGGS & Co., *Chemists, Bangalore;* and of
MAHOMED YOUSOFF AND SONS, *The Cash Bazar, Bangalore.*
A. C. BERRYMAN & Co.,
20 *Sambodoss Street Madras.*

NOTICE.

VAIDYASARA SANGRAHA

A TREATISE ON THE PRINCIPLES OF

HINDU MEDICINE.

Price including Postage Rs 5 0 0

ವೈದ್ಯಸಾರ ಸಂಗ್ರಹ.

ಈಗ್ರಂಥಾಪೇಕ್ಷೆಯುಳ್ಳವರು ಮೊಬಲಗಿನೊಡನೆ ಕೆಳಗೆ ರುಜುಮಾಡಿರತಕ್ಕವರ ಹೆಸರಿಗೆ ಬರೆದುಕೊಂಡರೆ ಪುಸ್ತಕ ಕೂಡಲೇ ಕಳುಹಿಸಲ್ಪಡುವದು. ಮೊಬಲಗು ಇಲ್ಲದ ದರಖಾಸ್ತುಗಳಿಗೆ ಉತ್ತರ ಕೊಡಲ್ಪಡಲಾರದು.

ಇದರ ಕ್ರಯ ... ... ರೂ|| ೫—೦—೦
ಪ್ಯಾಕಿಂಗ್ ಮತ್ತು ಅಂಚೆಹಾಸಲ್, ೦—೬—೦

ಟಿ. ಬಿ. ಪಂಕಪಾಚಾರ್,
ಆಸ್ಪತ್ರಿರೋಡ್ ಬೆಂಗಳೂರು.

ವಿಶೇಷ ವರ್ತಮಾನ



ಪೂನ ಚಿತ್ರಶಾಲೆಯಲ್ಲಿ ಸಿದ್ಧಪಡಿಸಲ್ಪಟ್ಟಿರುವ ಹೊಸ ಚಿತ್ರಗಳು, ಹಿಂದೂ ದೇವತೆಗಳು, ಚರಿತ್ರೆಗಳಿಂದ ಆಯ್ದ ಚಿತ್ರಗಳು, ಸುಂದರವಾದ ಚಿತ್ರಗಳು ಹೊಸದಾಗಿ ತಯಾರಾಗಿವೆ. ... ಮಾದರಿಗಳನ್ನು ಕ್ರಯದ ಪಟ್ಟಿಯನ್ನು ಬೇಕಾದವರಿಗೆ ಕಳುಹಿಸಲ್ಪಡುವವು.

ಪೂನ ಚಿತ್ರಶಾಲಾ ಮ್ಯಾನೇಜರ್

Bangalore City Municipality

ಬೆಂಗಳೂರುಸಿಟಿ ಮ್ಯುನಿಸಿಪಾಲಿಟಿ.

ಮ್ಯುನಿಸಿಪಲ್ ಕಮಿಷನರ್‌ಗಳ ಚುನಾವಣೆಯ ವಿಷಯದಲ್ಲಿ ಮಾಡಲ್ಪಟ್ಟಿರುವ ಮಸವಿದಾ ನಿಬಂಧನೆಗಳನ್ನು ಕುರಿತು ಆಲೋಚಿಸುವದಕ್ಕಾಗಿ ಸಿಟಿ ಮ್ಯುನಿಸಿಪಲ್ ಕಮಿಷನರ್‌ಗಳು ತಮ್ಮ ಆಫೀಸ್ ಕಟ್ಟಡದಲ್ಲಿ ಈ ತಿಂಗಳ ೧೪ನೇತಾರೀಖ್ ಬುಧವಾರ ಸಾಯಂಕಾಲ ನಾಲ್ಕುಘಂಟೆಗೆ ವಿಶೇಷ ಸಭೆಸೇರುವರು.

ತಾ|| ೭ನೇ ಜೂನ್ ೧೮೮೮.

A. SRINIVASA CHARLU, R. B.,
Vice-President,
City Municipal Commission.

ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA.

MONDAY, JUNE 11, 1888.

೧೮೮೮ನೇ ಜೂನ್ ೧೧ನೇ ತಾ|| ಸೋಮವಾರ

BIRTH OF A PRINCE TO HIS HIGHNESS THE MAHARAJA OF MYSORE.

ಶ್ರೀಮತ್ಸಮಸ್ತ ಮಹೀಮಂಡಲ ಮಂಡನಾಯಮಾನ ಕರ್ಣಾಟದೇಶಾಧೀಶ ಶ್ರೀಮದ್ರಾಜಾಧಿರಾಜ ರಾಜಪರಮೇಶ್ವರ ಪ್ರೌಢಪ್ರತಾಪ ಅಪ್ರತಿಮ ವೀರನರಪತಿ ಬಿರುದೆಂತೆಂಬರ ಗಂಡ ಲೋಕೈಕವೀರ ಯದುಕುಲ ಪಯಃ ಪಾರಾವಾರ ಕಲಾನಿಧಿ ಶಂಖಚಕ್ರ ಮಕರ ಮತ್ಸ್ಯ ಗಂಡಭೇರುಂಡಾದ್ಯನೇಕ ಬಿರುದಾಂಕಿತ ಮಹೀಸೂರ ಪುರವರಾಧೀಶ್ವರ ದಕ್ಷಿಣಸಿಂಹಾಸನಾಧೀಶ್ವರರಾದ ಶ್ರೀಮನ್ಮಹಾರಾಜರಾಜಾ ಶ್ರೀ ಚಾಮರಾಜೇಂದ್ರಒಡೆಯರ್ ಬಹದೂರ್ ಜಿ. ಸಿ. ಎಸ್. ಐ. ಯವರಿಗೆ ಈ ಸರ್ವಧಾರಿಸಂವತ್ಸರ ವೈಶಾಖ ಕೃಷ್ಣ ಏಕಾದಶೀ ಮಂಗಳವಾರ ಅಶ್ವಿನೀನಕ್ಷತ್ರ ಮಿಥುನಲಗ್ನದಲ್ಲಿ ಬೆಳಗ್ಗೆ ೮ ಘಂಟೆಗೆ ಭಾಗ್ಯಸಂಪನ್ನರಾದ ದ್ವಿತೀಯಪುತ್ರರವತರಿಸಿದರೆಂಬ ಶುಭೋದರ್ಕವಾದ ವೃತ್ತಾಂತವು ತಿಳಿಸಲಿಕ್ಕೆ ನಾವು ಅತ್ಯಂತ ಸಂತೋಷಭರಿತರಾಗಿದ್ದೇವೆ. ಶ್ರೀಮನ್ಮಹಾರಾಜರವರ ನಿರತಿಶಯ ಸಂತೋಷಾಭಿವೃದ್ಧಿಗೆ ಕಾರಣವಾದ ಪುತ್ರೋತ್ಸವ ವೃತ್ತಾಂತವು ಆ ದಿನ ೧೨ ಘಂಟೆಗೆ ಸರಿಯಾಗಿ ದಿವಾನರವರಿಂದ ಕಳುಹಿಸಲ್ಪಟ್ಟ ತಂತಿ ವೃತ್ತಾಂತದಮೂಲಕ ಈ ಪೂರಲ್ಲಿ ಸರ್ವತ್ರ ವ್ಯಾಪಿಸಿ ಇಲ್ಲಿನ ಪ್ರಜೆಗಳೆಲ್ಲರಿಗೂ ಮಹದಾನಂದವನ್ನುಂಟುಮಾಡಿತು. ಇಂತಾ ಶುಭ ಸಮಯದ ಗೌರವಾರ್ಥ ಗತ ಮಂಗಳ ಬುಧವಾರಗಳೆರಡುದಿನಗಳೂ ಸರ್ಕಾರ್ ಇಲಾಖೆಗಳಿಗೆಲ್ಲ ರಜಾ ಕೊಡಲ್ಪಟ್ಟಿತಲ್ಲದೆ ಬುಧವಾರದಿನ, ಈ ಶಹರ್ ನಿವಾಸಿಗಳಿಗೆಲ್ಲ ಸಕ್ಕರೆ ಹಂಚಲ್ಪಟ್ಟಿತು. ಶ್ರೀಮನ್ಮಹಾರಾಜರವರಿಂದ ಪ್ರೋತ್ಸಾಹಿತವಾಗಿರುವ ಹಿಂದೂ ದೇವಸ್ಥಾನಗಳಲ್ಲೆಲ್ಲ ಅಭಿಷೇಕ ಪಿಡ್ಡೋತ್ಸವಾದಿಗಳು ಏತದರ್ಥವಾಗಿ ನಡೆದವು. ಇದೇರೀತಿ ಕ್ರಿಶ್ಚಿಯನ್ ಚರ್ಚ್‌ಗಳಲ್ಲಿಯೂ ಮುಸಲ್ಮಾನರ ಮಸೀದಿಗಳಲ್ಲಿಯು ಸಹ ಅವರವರ ಮತ ಸಂಪ್ರದಾಯವನ್ನನುಸರಿಸಿ ಇಷ್ಟದೇವತಾಪ್ರಾರ್ಥನೆಗಳು ಮಾಡಲ್ಪ

SUMMARY OF NEWS.

ವೃತ್ತಾಂತ ಸಂಗ್ರಹ.

ಲಾರ್ಡ್ ಡಫರಿನ್ಯವರು ತಮ್ಮ ಸಾಹೇಬ ಶ್ರೀಯವರ ಚರಿತ್ರೆಯನ್ನು ಬರೆಯತಕ್ಕವರಿರುತ್ತಾರೆ.

ಮೊದಲು ಬರೋಡೆಯ ನಾಯಬ್ ದಿವಾನರಾಗಿದ್ದು ಈಗ ಪೆನ್ಷನ್ ಹೊಂದುತಲಿದ್ದ ಮಿಸ್ಟರ್ ವಿನಾಯಕ ಜನಾರ್ದನ ಕೀರ್ತನೆಯವರು ಇಂದೂರಸಂಸ್ಥಾನದ ದಿವಾನರಾಗಿ ನೇಮಿಸಲ್ಪಟ್ಟು ತಮ್ಮ ಕೆಲಸದ ಚಾರ್ಜು ತೆಗೆದುಕೊಂಡರು.

ಕೆರೋಸೀನು ಎಣ್ಣೆಯಲ್ಲಿ ಒಂದು ಪಾಲು ಸಬ್ಬು ಮಿಶ್ರಮಾಡಿ ಅರ್ಧಘಂಟೆಹೊತ್ತು ಅದನ್ನು ಕಾಯಿಸಿ, ಘಟ್ಟಿಮಾಡಿ ಬೆರಣೆಯಂತೆ ಅಡಿಗೆ ಮುಂತಾದ ಕಾರ್ಯಗಳಿಗೆ ಉಪಯೋಗಿಸುವ ವಿಧಾನವನ್ನು ಡಾಕ್ಟರ್ ಕಾಫ್ಮನ್ ಎಂಬವರು ಕಂಡುಹಿಡಿದಿದ್ದಾರೆ. ಘಟ್ಟಿಯಾದ ಈ ಎಣ್ಣೆಯು ಕಲ್ಲಿದ್ದಲಿಗಿಂತಲೂ ನಿಧಾನವಾಗಿ ಉರಿಯುತ್ತದೆ. ಆದರೆ ಅದಕ್ಕಿಂತಲೂ ಹೆಚ್ಚಾದ ಕಾವನ್ನು ಉಂಟುಮಾಡುತ್ತದೆ. ಇದು ಬಗ್ಗಂತ ಉರಿಯದೆ ಏಕಪ್ರಕಾರವಾಗಿಯೂ, ಸಾವಕಾಶವಾಗಿಯೂ ಹೊಗೆಯಿಲ್ಲದೆಯೂ ಉರಿಯುತದೆ.

ದೊಡ್ಡವಂಶದಲ್ಲಿ ಹುಟ್ಟಿ ೮—೯ ವಿದ್ಯೆಗಳಲ್ಲಿ ಪಾಂಡಿತ್ಯವನ್ನು ಪಡೆದಿರುವ ಒಬ್ಬ ಸ್ತ್ರೀಯು ಜೀವನಕ್ಕೆ ಮಾರ್ಗವಿಲ್ಲದೆ ಇರುವದರಿಂದ ತನಗೆ ಯಾವ ಕೆಲಸವನ್ನು ಕೊಟ್ಟಾಗ್ಯೂ ನೋಡಿಕೊಂಡು ಹೋಗುತ್ತೇನೆ. ಆದರೆ ಮಾನದಿಂದ ಕಾಪಾಡಬೇಕೆಂದು ಇಂಗ್ಲಿಷ್ ಪತ್ರಿಕೆಗಳಲ್ಲಿ ಜಾಹಿರಾತನ್ನು ಪ್ರಕಟಿಸಿರುತ್ತಾಳೆ.

ಫ್ರಾನ್ಸದೇಶದ ರಾಜಧಾನಿಯಾದ ಪ್ಯಾರಿಸ್ ಪಟ್ಟಣದಲ್ಲಿ ಒಬ್ಬ ಸಮರ್ಥನಾದ ವೈದ್ಯನು ಅವಸಾನಕಾಲದಲ್ಲಿ ತನ್ನ ಮಗನನ್ನು ಕರೆದು ಹೇಳಿದ್ದೇನಂದರೆ,—ಇಹದಲ್ಲಿರುವವರಿಗೂ ನಿನ್ನ ಕೈಲಾದಮಟ್ಟಿಗೂ ಬೇಕಾದಹಾಗೆಲ್ಲ ಒಳ್ಳೇದನ್ನು ಮಾಡು ಆದರೆ ಮಾಡಿದಂತಾದ್ದೆಲ್ಲ ಪ್ರತಿಷ್ಠೆಪಡೆಯುವದಕ್ಕೋಸ್ಕರ ನೀನಾಗಿ ಬಹಿರಂಗಪಡಿಸಬೇಡ—ಎಂಬದು. ವೃ. ಚಿಂ.

ನೇಟಿವ್‌ಸಂಸ್ಥಾನಿಕರು ಯಾವಯಾವಕೃತ್ಯಗಳಿಗೆ ಸಹಾಯ ಮಾಡುತ್ತಾರೆಂಬದನ್ನು ತಿಳಿಯುವಬಗ್ಯೆ ಗುಪ್ತವಾದ ರೀತಿಯಿಂದ ಶೋಧನೆಮಾಡಲ್ಪಡುವದೆಂದು ಕೇಳುತ್ತೇವೆ. ಇದರಕಾರಣವೇನಿರಬಹುದು, ಮೈಸೂರು ಮಹಾರಾಜರವರು ನ್ಯಾಷನಲ್ ಕಾಂಗ್ರೆಸ್ಸಿಗೆ ಸಹಾಯಮಾಡಿದಬಗ್ಯೆ ಹಿಂದುಸ್ತಾನ್ ಸರ್ಕಾರದವರು ತಮ್ಮ ಸೆಕ್ರೆಟರಿಗಳದ್ವಾರ ಅವರನ್ನು ಕೇಳಿದ್ದರಂತೆ. ನೇಟಿವ್‌ಅರಸರು ಇಂತಾ ಕೃತ್ಯಗಳಿಗೆ ಸಹಾಯ ಮಾಡಬಾರದೆಂದು ಪರೀಕ್ಷೆಮಾಡುತ್ತಾರೊ, ಅಥವಾ ಕೆಲವರು ಊಹಿಸುವಂತೆ ನೇಟಿವ್ ಅರಸರು ಸಿಕ್ಕಿದ ಕೆಲಸಗಳಿಗೆಲ್ಲ ಸಹಾಯಮಾಡುವದಕ್ಕೆಹೋಗಿ ವಿಪರೀತ ಸಾಲಗಾರರಾಗುತ್ತಾರೆಂದು ತಿಳಿದು ಅದನ್ನು ತಪ್ಪಿಸುವದಕ್ಕಾಗಿಯೊ ? ಹೇಗಾದರೆಮಾತ್ರ ನೇಟಿವ್‌ಗಳೆಲ್ಲರು ಡಫರಿನ್ಯವರ ಉಪಕಾರವನ್ನು ಸ್ಮರಿಸಬೇಕು.—ಕ.ಸು.

ಡಫರಿನ್‌ಪ್ರಭುಗಳು ಹಿಂದುಸ್ತಾನ್‌ದೇಶವನ್ನು ಬಿಟ್ಟುಹೋಗುವಾಗಇಲ್ಲಿನ ಪ್ರಜೆಗಳ ಬಡಸ್ಥಿತಿಯನ್ನು ತಿಳಿದುಕೊಂಡು ಹೋಗುವವರಿದ್ದಾರೆ. ಆದಕಾರಣ ಈವಿಷಯದಲ್ಲಿ ವಿಚಾರ ನಡೆದಿರುತದೆ. ಆದರೆ ಈ ಶೋಧನೆಯು ಅಲ್ಲಲ್ಲಿನ ಸರಕಾರೀ ಉದ್ಯೋಗಸ್ಥರಮೂಲಕ ನಡೆಯುತಲಿರುವದರಿಂದ ಡಫರಿನ್‌ಪ್ರಭುಗಳಿಗೆ ಜನರ ನಿಜಸ್ಥಿತಿ ತಿಳಿಯುವದು ಸಂಶಯಕರವಾಗಿದೆ. ಯಾಕಂದರೆ, ಬಡತನವೆಂದರೇನು ಎಂಬದು ದೊಡ್ಡದೊಡ್ಡ ಸಂಬಳ ಪಡೆಯತಕ್ಕ ಸರಕಾರೀ ಉದ್ಯೋಗಸ್ಥರಿಗೆ ಗೊತ್ತಿರಲಾರದು. ಡಫರಿನ್‌ಪ್ರಭುಗಳು ಈರೀತಿ ಪರೀಕ್ಷಿಸುವದಕ್ಕಿಂತಲೂ ಒಂದುಕಮಿಷನ್ ನೇಮಿಸಿ ಅದರಮುಖಾಂತರ ಒಳ್ಳೇ ಅನುಭವಸ್ಥರಾದ ಸರಕಾರಿ ಉದ್ಯೋಗಸ್ಥರ ಮತ್ತು ಇತರಜನರ ಸಾಕ್ಷಿಗಳನ್ನು ತೆಗೆದುಕೊಂಡರೆ ಇದ್ದ ನಿಜಸ್ಥಿತಿಯು ಬಹಿರಂಗಕ್ಕೆ ಬರುವದು.—ಕ. ಸು.

ಹೈದರಾಬಾದ್ ರಿಜಮೆಂಟ್ ಬಾಜಾರ್ ಯೆಂಬ ಬೀದಿಯಲ್ಲಿರುವ ವೆಂಕಣ್ಣನೆಂಬ ಒಬ್ಬ ಕುಂಬಾರನು, ಚಿಕ್ಕಪ್ರಾಯದ ತನ್ನ ಹೆಂಡತಿಯಮೇಲೆ ಕೋಪಗೊಂಡು, ಅವಳ ಕೈಕಾಲುಗಳನ್ನು ಕಟ್ಟಿ ಕೆಳಕ್ಕೆ ಕೆಡವಿ, ಮೊದಲು ಅವಳತಲೇಕೂದಲನ್ನು ಸಂಪೂರ್ಣವಾಗಿಕತ್ತರಿಸಿ ತರುವಾಯ ಅವಳ ಮುಖದಮೇಲೆಲ್ಲಾ ಗೇರುಬೀಜದಿಂದ ತನ್ನ ಮನಸ್ಸಿಗೆ ಬಂದಂತೆ ಚಿತ್ರಗಳು ಬರೆದನು ಈಗ ಅವಳು ಆಸ್ಪತ್ರೆಯಲ್ಲಿದ್ದಾಳೆ. ಗಂಡಂದಿರು ತಮ್ಮ ಸಿಟ್ಟನ್ನು ಹೆಂಡತಿಯರ ವಿಷಯದಲ್ಲಿ ಈರೀತಿ ಉಪಯೋಗಿಸಿದರೆ, ಯುವತಿಯರು ಜೋಗಿಯರೂ ಮತ್ತು ವಿಕಾರವಾದ ಮುಖದವರೂ ಆಗುವದಲ್ಲದೆ, ಕೂದಲು ಕತ್ತರಿಸುವ ಕತ್ತರಿಗಳು, ಗೇರುಬೀಜಗಳು ಸಹ ಪ್ರಿಯವಾಗುವವು. ಬಿಡಿದಿಯಲ್ಲಿ ಒಬ್ಬನು ತನ್ನ ಹೆಂಡತಿಯ ಮೂಗನ್ನು ಕೊಯಿದುಹಾಕಿದ್ದಕ್ಕಿಂತಲೂ, ವೆಂಕಣ್ಣನು ಮಾಡಿದ ಕೃತ್ಯವು ಉತ್ತಮವಾಗಿದೆಯಲ್ಲವೊ !—ವೃ. ಚಿ.

ಸಿಮ್ಲಯೆಂಬ ಹಿಮಾಲಯ ಪರ್ವತ ಪ್ರಾಂತದಲ್ಲಿ, ವರುಷಕ್ಕೆ ಒಂದುಸಾರಿ ಮೇ ೧೯ ಮತ್ತು ೧೩ನೇ ತಾರೀಖುಗಳಲ್ಲಿ ಎದಿನ, ಹೆಣ್ಣುಗಳ ಒಂದು ಸಂತೆಯು ನಡೆಯುತ್ತದೆ. ಈ ಸಂತೆಯನ್ನು ಅಲ್ಲಿನ ಸ್ತ್ರೀಪುರುಷರೆಲ್ಲರೂ ಎದುರುನೋಡುತ್ತಿರುವರು. ಯಾಕಂದರೆ, ಪರ್ವತ ಪ್ರಾಂತದ ನಿವಾಸಿಗಳಿಗೆ ಅದೇ ಲಗ್ನಕಾಲವಾಗಿರುತ್ತದೆ ಹ್ಯಾಗಂದರೆ:—ಸಾವಿರಾರುಮಂದಿ ಕನ್ಯಾಸ್ತ್ರೀಯರು, ಉಡಿಗೆ ತೊಡಿಗೆಗಳಿಂದಲಂಕೃತರಾಗಿ, ಗುಂಪುಗುಂಪಾಗಿ ತಮ್ಮತಮ್ಮ ತಾಯಿ ಅಥವಾ ತಮ್ಮ ಬಂಧುವಾದ ಒಬ್ಬ ಮುದಿಕಿಯ ಸಂಗಡ ಅಲ್ಲಿಗೆಬಂದು, ಒಂದುಗುಟ್ಟೆಯಬಳಿ ನೆರಳಾಗಿರುವ ವೃಕ್ಷಗಳ ಕೆಳಗೆ ಸಾಲುಸಾಲಾಗಿ ಕೂತುಕೊಳ್ಳುತ್ತಾರೆ. ಇವರಂತೆ ಮದುವೆಯಾಗುವ ಅನೇಕ ಪುರುಷರು ಅಲ್ಲಿಗೆಬಂದು, ದನಕರುಗಳ ಸಂತೆಯಲ್ಲಿ ದನಗಳನ್ನು ಒಂದೊಂದಾಗಿ ನೋಡುವಂತೆ ಈ ಕನ್ಯಾಸ್ತ್ರೀಯರನ್ನು ನೋಡಿ, ತಾವು ಮೆಚ್ಚಿದವರನ್ನು ಖರೀದಿಮಾಡಿ ತೆಗದುಕೊಂಡು ಹೋಗಿ ಮದುವೆ ಮಾಡಿಕೊಳ್ಳುತ್ತಾರೆ.—ವೃ. ಪ.

ತೆರಿಗೆಗಳ ವಿಷಯದಲ್ಲಿ «ಬಾಂಗಬಾಸಿ" ಎಂಬ ಒಂದು ವರ್ತಮಾನ ಪತ್ರಿಕಾಕರ್ತರು ಬರೆದಿರುತ್ತಾರೇನಂದರೆ.—«ಎಲೈ ಇಂಗ್ಲಿಷಜನರೇ, ನೀವು ಇಂಗ್ಲಾಂಡ್‌ರಾಜ್ಯದ ಮೇಲಿನ ಅಭಿಮಾನದಿಂದ, ಆಮದಾಗಿ ಬರುವ ಸರಕುಗಳ ಮೇಲಿದ್ದ ತೆರಿಗೆಯನ್ನು ತೆಗದುಹಾಕಿ, ಉಪ್ಪಿನ ತೆರಿಗೆಯನ್ನು ಹೆಚ್ಚಿಸಿದ್ದೀರ. ಕೋರ್ಟುಗಳೆಂಬ ನ್ಯಾಯಸ್ಥಾನಗಳನ್ನು ಹಣಸಂಪಾದಿಸುವ ಸ್ಥಳಗಳನ್ನಾಗಿ ಮಾಡಿದ್ದೀರ. ಆದ್ದರಿಂದ ನೀವು ಹಣವನ್ನು ಕ್ರಮವಾದ ರೀತಿಯಲ್ಲಿ ಸಂಪಾದಿಸುತ್ತೀರಾ, ಹೇಳಿ ? ನೀವು ಇದ್ದ ಹಣವನ್ನೆಲ್ಲಾ ಖರ್ಚುಮಾಡಿದ್ದೀರಾ, ಮಿಗಿಲಾಗಿ ಹೆಚ್ಚಿದ್ದನ್ನು ಉಳಿಸಿಕೊಂಡಿರುವದಿಲ್ಲ. ಪ್ರತಿವರುಷವೂ ಸಾಲವನ್ನು ಹೆಚ್ಚಿಸಿಕೊಳ್ಳುತ್ತಾ ಇದ್ದೀರ. ನೀವು ಪ್ರತಿ ಇಲಾಖೆಯಲ್ಲಿಯೂ ಹಣವನ್ನು ಹಾಳುಮಾಡುತ್ತಾ ಇದ್ದೀರ. ಹೀಗಿರುವದರಿಂದ, ನೀವು ಎಂದಾದರೂ ಕಷ್ಟದಲ್ಲಿ ಸಿಕ್ಕಿಬಿದ್ದರೆ, ನಿಮ್ಮನ್ನು ನೀವೇ ಕಾಪಾಡಿಕೊಳ್ಳಲಾರಿರಿ. ನಿಮ್ಮ ಹಿತಚಿಂತಕರಾಗಿ ನಾವು ನಿಮ್ಮನ್ನು ಈ ವಿಷಯದಲ್ಲಿ ಎಚ್ಚರಿಸಿದ್ದೇವೆ. ಮತ್ತು ನಮ್ಮ ಪತ್ರಿಕೆಯು ಪ್ರಕಟವಾಗುತ್ತಲಿರುವವರೆಗೂ ಎಚ್ಚರಿಸುತ್ತಿರುವೆವು.—ವೃ. ಪ.

ಕಲ್‌ಕತ್ತೆಯ ಹೈಕೋರ್ಟು ಜಡ್ಜಿಯರ ಮುಂದೆ ಒಬ್ಬ ಹಿಂದೂಸ್ತ್ರೀಯು ಒಂದು ಮೊಕದ್ದಮೆಯಲ್ಲಿ ಸಾಕ್ಷಿಹೇಳುವದಕ್ಕೆ ಬಂದಿದ್ದಳು ಈ ಕೃತ್ಯವು ಎಲ್ಲಿ ನಡೆಯಿತೆಂದು ಜಡ್ಜಿಯವರು ಅವಳನ್ನು ಕೇಳಲು ಫಲಾನೇಮನೆಯ ಜಗಲಿಯಮೇಲೆ ನಡೆಯಿತೆಂದು ಉತ್ತರಕೊಟ್ಟಳು ಆಗ ಜಡ್ಜಿಯವರು ಆಜಗಲಿಯಮೇಲೆ ಎಷ್ಟು ಕಂಭಗಳಿದ್ದವು ಎಂದು ಕೇಳಿದರು. ಅದಕ್ಕವಳು ಬಹಳ ವಿಚಾರಮಾಡದೆ ನಾಲ್ಕು ಕಂಭಗಳಿದ್ದವೆಂದುಹೇಳಿದಳು. ಇದನ್ನು ಕೇಳಿ ಎದುರುಕಕ್ಷಿಯ ವಕೀಲರು ೫ ಕಂಭಗಳಿರುವದರಿಂದ ಇವಳಸಾಕ್ಷಿಯಲ್ಲಿ ನಂಬಿಕೆ ಇಡಕೂಡದೆಂದುಹೇಳಿದರು. ಅಷ್ಟರಲ್ಲಿ ಆಸ್ತ್ರೀಯು ತನ್ನ ತಪ್ಪನ್ನು ತಿಳಿದವಳಾಗಿ ಜಡ್ಜಿಯರಿಗೆತಿಳಿಸಿದಳೇನಂದರೆ,—ದೊರೆಗಳೇ ತಾವು ಈಕೋರ್ಟನಲ್ಲಿ ಬಹಳವರುಷಗಳಿಂದಿದ್ದೀರಿ, ಮತ್ತು ಪ್ರತಿದಿನ ಇಲ್ಲಿ ನಿಚ್ಚಣಿಗೆಯನ್ನೇರುತ್ತೀರಿ ಆದರೆ ಆನಿಚ್ಚಣಿಗೆಗೆ ಎಷ್ಟುಮೆಟ್ಟಿಲುಗಳಿರುತವೆಂದು ಕೇಳಿದಳು. ಆಗ ಜಡ್ಜಿಯವರು ತಮಗೆ ಗೊತ್ತಿಲ್ಲವೆಂದು ಒಪ್ಪಿಕೊಡರು. ಆಗಲಾ ಹೆಂಗಸು ಬಿನ್ನವತ್ತಿ ತಾವು ನ್ಯಾಯಾಸನವನ್ನೇರುವ ಮೆಟ್ಟಿಲುಗಳಸಂಖ್ಯೆಯು ತಮ್ಮಿಂದ ಹೇಳಲಸಾಧ್ಯವಾದಮೇಲೆ ನಾನು ಈಜನ್ಮದಲ್ಲೊ ೫-೬ ಸಾರಿ ಸಹ ಹೋಗದೇಯಿದ್ದಂತಾ ಮನೆಯ ಜಗಲಿಯಮೇಲಿರುವ ಕಂಭಗಳಸಂಖ್ಯೆಯನ್ನು ಮರೆತದ್ದೇನೂ ಆಶ್ಚರ್ಯವಲ್ಲವು. ಎಂದು ಹೇಳಿದಳು ಇದನ್ನು ಕೇಳಿ ಜಡ್ಜಿಯವರು ಮೊಕದ್ದಮೆಯನ್ನು ಅವಳಪಕ್ಷವಾಗಿ ಪೈಸಲ್‌ಮಾಡಿದರು. ಕನ್ನಡ ಸುವಾರ್ತೆ.

ರಷ್ಯಾ ಮಹಾರಾಜರಾದ ಜಾರ್ ಎಂಬವರನ್ನು ರಹಸ್ಯವಾಗಿ ಕೊಲ್ಲಿಸುವ ಉದ್ದೇಶದಿಂದ ಅವರ ಶತ್ರುಪಕ್ಷದವರು ಅತ್ಯಂತ ಸುಂದರವಾದ ಒಬ್ಬ ಯೌವನಸ್ತ್ರೀಯನ್ನು ರಷ್ಯಾದೇಶದ ಪ್ರಧಾನಪಟ್ಟಣವಾದ ಮಾಸ್ಕೋನಿಗೆ ಕೆಲವುದಿನಗಳ ಕೆಳಗೆ ಕಳುಹಿಸಿಕೊಟ್ಟರು. ಈಕೆಯು ಅಲ್ಲಿನ ಒಬ್ಬ ವರ್ತಕನ ಮನೆಯನ್ನು ಬಾಡಿಗ್ಗೆ ತೆಗದುಕೊಂಡು ಅದರಲ್ಲಿ ಇಳಿದುಕೊಂಡಳು. ತರುವಾಯ ೪ ಗಂಟೆಯಮೇಲೆ ಈ ಅಂತರಂಗವನ್ನು ತಿಳಿದ ಕೆಲವುಜನ ಪೊಲೀಸ್‌ನವರು ಈ ಹೆಂಗಸು ಬಳಿಮನೆಗೆಬಂದು ಮುಚ್ಚಿರುವ ಕದವನ್ನು ನೋಡಿ ಅದನ್ನು ಒಡೆದು ಬಲಾತ್ಕಾರದಿಂದ ಒಳಹೋಗುವದಕ್ಕೆಯತ್ನಗಳನ್ನುಮಾಡುತ್ತಿದ್ದರು. ಅಷ್ಟರಲ್ಲೇ ಈಕೆಯು ಎತ್ತರವಾದ ಮಹಡಿಮೇಲಿನ ಕಿಟಕಿಯಿಂದ ಹಿತ್ತಲಕಡೆ ಧುಮುಕಿ ತಪ್ಪಿಸಿಕೊಂಡು ಒಬ್ಬರಿಗೂ ತಿಳಿಯದಂತೆ ಹೊರಟುಹೋದಳು. ಪೊಲೀಸ್‌ನವರು ಬಾಗಲು ಒಡೆದು ಒಳಹೊಕ್ಕು ನೋಡಿ ಈಕೆಯನ್ನು ಕಾಣದೆ ಅಲ್ಲಿದ್ದ ಪದಾರ್ಥಗಳನ್ನೂ ಗಂಟುಗಳನ್ನೂ ಶೋಧನೆಮಾಡಿದರು. ಒಂದುಗಂಟಿನಲ್ಲಿ ಅಪಾಯಕರವಾದ ಬಹು ಚಮತ್ಕಾರವಾದ ಮಾಜದ ವಿಪರೀತಿಯವಾದ ಓಗುಂಡುಗಳು ಸಿಕ್ಕಿದವು. ಸ್ತ್ರೀಯರು ಸಾಹಸವಂತರಾಗಿ ಪುರುಷರನ್ನು ಅದರಲ್ಲಿಯೂ ಮಹಾರಾಜರನ್ನು ರಹಸ್ಯವಾಗಿ ತಮ್ಮ ಲಾವಣ್ಯದ ಸೊಬಗಿನ ಅತಿಶಯದಿಂದ ಮೋಸಗೊಳಿಸಿ ಕೊಲ್ಲುವದಾದರೆ ಸಾಧಾರಣವಾದ ಪುರುಷರ ಮತ್ತು ಪುರುಷಶ್ರೇಷ್ಠರಾದ ಪ್ರಭುಗಳಗತಿಯೇನು.—ವೃ. ಪ.

EXTRACTS.

ಪ್ರಕೃತ ಕಾಫಿಬೀಜವು ಬಹಳವಾಗಿ ಎಲ್ಲಾ ದೇಶಗಳಲ್ಲಿಯೂ ಉಪಯೋಗಿಸಲ್ಪಡುವದು. ಕಾಫಿಗಿಡವು ಮೊದಲು ಅಬಸೀನಿಯಾದೇಶದಿಂದ ಅರೇಬಿಯಾದೇಶಕ್ಕೆ ೧೪೫೪ನೇ ಇಸವಿಯಲ್ಲಿ ತರಲ್ಪಟ್ಟಿತು. ಅರೇಬಿಯರ್ಜನಗಳ ಖುರಾನಿನಲ್ಲಿ ಮದ್ಯವು (Wine) ನಿಷೇಧಿಸಲ್ಪಟ್ಟಿದ್ದಕಾರಣ ಅದಕ್ಕೆಬದಲಾಗಿ ಕಾಫಿಯು ಬಹಳ ಅನುಕೂಲವಾಗುತ್ತೆಂಬ ಸಂಗತಿಯನ್ನು ಕಂಡುಕೊಂಡು ಅದನ್ನು ಪರಿಗ್ರಹಿಸುವದಕ್ಕೆ ಆರಂಭಿಸಿದರು. ಅವರು ಅದಕ್ಕೆ «ಕಾಫ" (ಅಂದರೆಮದ್ಯ) ಎಂಬ ಹೆಸರನ್ನು ಕೊಟ್ಟುಕೊಂಡು ಪದಾರ್ಥಭೇದವಾದರೂ ನಾಮೈಕ್ಯದಿಂದ ಸಂತುಷ್ಟರಾಗಿದ್ದರು. ಈ ಹೆಸರಿನವಿಷಯವಾಗಿ ಆದೇಶದ ಮುಪ್ತಿ ತರು ಕಲಹಮಾಡಿದರೂ ಕಾಫಿಯಗುಣವು ಅವರನ್ನ ಪರಾಜಿತರನ್ನಾಗಿಮಾಡಿತು. ಈ ಅರೇಬಿಯಾದೇಶದಲ್ಲಿ ಬಹಳವಾಗಿ ಉಪಯೋಗಿಸಲ್ಪಡುತ್ತದೆ. ಒಬ್ಬ ಮನುಷ್ಯನು ಮನಃಕ್ಲೇಶದಿಂದಲೂ ಶರೀರ ಆಯಾಸದಿಂದಲೂ ಬಹಳ ಬಳಲಿದಾಗ ಕಾಫಿಯಲ್ಲಿರುವ ಉತ್ಕೃಷ್ಟವಾದ ಗುಣವನ್ನರಿತವನಾದರೆ ಒಂದುಬಟ್ಟಲು ಕಾಫಿತೆಗದುಕೊಂಡಾನೆಹೊರತು (Gin) ಜಿನ್ ಎಂಬ ಅಮೌಲ್ಯವಾದ ಮದ್ಯವನ್ನು ಎಂದಿಗೂ ಸೇವಿಸಲಾರನು. ಈ ಸುಮಾರು ೪೦೦ ವರುಷಗಳಿಗೆ ಕಾಫಿಯು ಅರೇಬಿಯಾದೇಶದಿಂದ ಈಜಿಪ್ಟ ದೇಶಕ್ಕೂ ಅಲ್ಲಿಂದ ಇತರ ತುರ್ಕಿ ಪ್ರದೇಶಗಳಿಗೂ ತರಲ್ಪಟ್ಟಿತು. ಒಬ್ಬ ತುರ್ಕಿವ್ಯಾಪಾರಿಯು ಮೊದಲು ೧೬೫೨ನೇ ಸಂವತ್ಸರದಲ್ಲಿ ಒಂದುಚೀಲ ಕಾಫಿಬೀಜವನ್ನು ಇಂಗ್ಲಾಂಡಿಗೆ ತೆಗದುಕೊಂಡುಹೋದನು. ಅವರು ಸಹ ಅಲ್ಲಿಅವನಿಂದ ಕಾಫಿನೀರುಮಾಡಿ ಕುಡಿಯಲ್ಪಟ್ಟಿತು. ಆ ಕಾಲದಲ್ಲಿಯೇ ಅದು ಫ್ರಾನ್ಸದೇಶಕ್ಕೂ ತೆಗದುಕೊಂಡುಹೋಗಲ್ಪಟ್ಟಿತು. ಅರವತ್ತುತರುವಗಳ ತರುವಾಯ ಇಂಗ್ಲಾಂಡಿನಲ್ಲಿ ಎಲ್ಲಿ ನೋಡಿದರೂ ಕಾಫಿಮಯವಾಗಿ ಗ್ರಂಥಗಳಲ್ಲಿಯೂ ಕೂಡ ಕೊಂಡಾಡಲ್ಪಟ್ಟಿತು. ಸುಮಾರು ೫೦ ಸಂವತ್ಸರಗಳವರೆಗೂ ಅರೇಬಿಯಾದೇಶದಿಂದ ಹೋಗತಕ್ಕಕಾಫಿಯು ಇಂಗ್ಲಾಂಡಿನಲ್ಲಿ ಸಾಕಾಗಿತ್ತು. ೧೬೯೦ನೇ ಇಸವಿಯಲ್ಲಿ ಒಬ್ಬ ಡಚ್ ಗವರ್ನರ್‌ಜನರಲ್ ಅರೇಬಿಯಾದೇಶದಿಂದ ಒಂದು ಕಾಫೀಗಿಡವನ್ನು ಹಾಲೆಂಡಿಗೆ ಕಳುಹಿಸಿಕೊಟ್ಟನು. ಅಲ್ಲಿ ಅದು ಚನ್ನಾಗಿಸಂರಕ್ಷಿಸಲ್ಪಟ್ಟು ಫಲವನ್ನುಕೊಟ್ಟಿತು. ಆಬೀಜದಪೈಕಿ ಕೆಲವು ಅಮೆರಿಕಾದೇಶದ ಸೂರಿನಾಮ್ ಎಂಬಸ್ಥಳಕ್ಕೆ ಕಳುಹಿಸಲ್ಪಟ್ಟವು. ಅವುಗಳೇ ಅಮೆರಿಕಾದೇಶದಲ್ಲಿಷ್ಟು ಪ್ರಬಲವಾಗಿರುವ ಕಾಫಿಗೆ ಕಾರಣಭೂತಗಳಾದವು ಆದರೆ ಫ್ರಾನ್ಸದೇಶದ ಮುಖ್ಯಪಟ್ಟಣವಾದ ಪ್ಯಾರಿಸ್‌ಪಟ್ಟಣದ ತೋಟದಿಂದ ಒಬ್ಬ ಫ್ರೆಂಚಿನವನು ವೆಸ್ಟ್ ಇಂಡೀಸ್‌ಗೆ ತೆಗದುಕೊಂಡು ಹೋದನೆಂದು ಮತೊಂದುವಿಧವಾಗಿ ಅಂದುಕೊಳ್ಳುತ್ತಾರೆ. ಆದರೆ ಕಾಫಿಬೀಜವು ಯಾವಾಗ ಸಿಲೋನ್ (ಲಂಕಾ)ದ್ವೀಪಕ್ಕೆ ತೆಗದುಕೊಂಡು ಬರಲ್ಪಟ್ಟಿತೊ ಗೊತ್ತಾಗುವದಿಲ್ಲವು. ಆದ್ವೀಪವನ್ನು ಡಚ್ ಜನಗಳು ಸ್ವಾಧೀನಮಾಡಿಕೊಂಡಿದ್ದಾಗ್ಯೆ ಅವರು ಅದನ್ನು ಅರೇಬಿಯಾದೇಶದಿಂದ ಅಲ್ಲಿಗೆತಂದಿರಬಹುದೆಂದು ಊಹಿಸಲ್ಪಡುತದೆ. ಮೈಸೂರಿಗೆ ಅದು ಒಬ್ಬ ಮಹಮ್ಮದೀಯ ಯೋಗಿ ಬಾಬಬುಡನ್ ಎಂಬುವನಿಂದ ತರಲ್ಪಟ್ಟಿತು. ಸುಮಾರು ೨೦೦ ವರುಷಗಳಹಿಂದೆ ಅವನು ಮಕ್ಕಾಯಾತ್ರೆಗೆ ಹೋಗಿದ್ದಾಗ್ಯೆ ಕೆಲವು ಬೀಜಗಳನ್ನುತಂದು ಈಗ ಬಾಬಾಬುಡನ್ ಬೆಟ್ಟವೆಂದು ಅವರ ಹೆಸರಿನಿಂದ ಕರೆಯಲ್ಪಡುವ ಬೆಟ್ಟದಲ್ಲಿ ಹಾಕಿದನೆನ್ನುತ್ತಾರೆ. ಆದರೆ ಈ ಯೋಗಿಗೆ ತರುವಾಯಬಂದ ಇನ್ನೊಬ್ಬಯೋಗಿಯು ಅದನ್ನು ತಂದನೆಂದು ಕೂಡಾ ಹೇಳಿಕೊಳ್ಳುತ್ತಾರೆ. ಅನಂತರ ಅದು ಬಾಬಾಬುಡನ್‌ಗಿರಿಗೆ ಸಮೀಪದಲ್ಲಿರುವ ತೋಟಗಳಲ್ಲಿ ವ್ಯಾಪಿಸಿತು. ಇಂಗ್ಲಿಷನವರು ಮೈಸೂರು ದೇಶವನ್ನು ಪ್ರವೇಶಿಸಿದತರುವಾಯ ಅದನ್ನು ಅವರು ಬಹಳ ಪ್ರಬಲಕ್ಕೆ ತಂದರು. ಅದು ಬಹು ಎತ್ತರವಾದ ಪ್ರದೇಶದಲ್ಲಿ ಬೆಳಯುವದು. ಈಗ ಮೈಸೂರುದೇಶದ ಕಡೂರು ಮತ್ತು ಹಾಸನ ಡಿಸ್ಟ್ರಿಕ್ಟುಗಳಲ್ಲಿಯೂ ಕೊಡಗುದೇಶದಲ್ಲಿ ಈಬೀಜವು ಚನ್ನಾಗಿಬೆಳೆದು ಏರ್ಕಾಡುಪಟ್ಟಣದಲ್ಲಿಯೂ ಕೂಡ ಬಹಳ ಹೆಸರನ್ನು ಸಂಪಾದಿಸಿಕೊಂಡಿರುತವೆ. ನಮ್ಮದೇಶದಲ್ಲಿಯೂ ಇತರದೇಶಗಳಲ್ಲಿಯು ಈ ಉತ್ಕೃಷ್ಟವಾದ ಪದಾರ್ಥವು ಈಗ ಬಹಳವಾಗಿ ಉಪಯೋಗಿಸಲ್ಪಡುವದು.—ವಿ.ಧ್ವಜ

BANGALORE:—Printed and publishe[d] for the Proprietor at the KARNAT[AKA] Press.—1888.

ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA.

ಪ್ರತಿ ಸೋಮವಾರ ಪ್ರಾತಃಕಾಲದಲ್ಲಿ ಪ್ರಕಟಿಸಲ್ಪಡುವದು.

Published every Monday Morning.

ಪ್ರಾಮವಿವಿಧಪ್ರವೃತ್ತ್ಯುಪಗವಾರ್ತ್ಥ ಕರ್ಣಾಟಕಪ್ರಕಾಶನಪರಾಭಿದಾಪ್ರಥಿತಸಾಹಿತಿಃ ಶೋಭಿತಾ ॥ ಪ್ರಗಾಂಕಹಿತಮಾಸರಿನಿಹಿತಮುದ್ರಣಾಸಜ್ಜನ ಸ್ಪರ್ದ್ಧಿತಾಸುಪರಿಪೂಜಿತಾದಿಕಶಿಮಾನಸಂಸುಮುದಂ

Vol. XV } ಸಂಪುಟ ೧೫.]

BANGALORE—MONDAY, JUNE 11, 1888.

ಬೆಂಗಳೂರು:—ಸನ್ ೧೮೮೮ನೇ ಇಸವಿ ಜೂನ್ ೧೧ನೇ ತಾರೀಖ್ ಸೋಮವಾರ.

[No. 23. [ಸಂಚಿಕೆ ೨೩.

ಕರ್ಣಾಟಕ ಪ್ರಕಾಶಿಕಾ

ಪತ್ರಿಕೆಯ ಚಂದಾ ದರಗಳು,
೧೮೮೮ನೇ ಇಸವಿ ಜನವರಿಯಿಂದಾರಭ್ಯ
ಕಡಮೆಮಾಡಲ್ಪಟ್ಟಿರುತಿದೆ.

ಈ ಪತ್ರಿಕೆಯ ಚಂದಾದಾರರಷ್ಟಕ್ಕೆ ಅನೇಕರ ಅಪೇಕ್ಷೆಯನ್ನು ನೆರವೇರಿಸುವ ಉದ್ದೇಶವೊಂದನ್ನೂ, ಪರಿಮಿತವಾದ ಆದಾಯವುಳ್ಳವರಿಗೆಲ್ಲ ಈ ಪತ್ರಿಕೆಯು ಸುಲಭವಾಗಿ ಲಭಿಸುವಂತಿರಬೇಕೆಂಬ ಅಭಿಪ್ರಾಯವೊಂದನ್ನೂ ಇವರ ಚಂದಾದರವನ್ನು ಇವರಡಿಕಂಡಂತೆ ಕಡಮೆಮಾಡಿರುತ್ತೇವೆಂತೆಂದರೆ—

ಇಂಗ್ಲಿಷ್ ಮತ್ತು ಕನ್ನಡಭಾಗಗಳಿಗೆ.

		ಸ್ಥಳದವರಿಗೆ	ಪರಸ್ಥಳದವರಿಗೆ
12	ತಿಂಗಳಿಗೆ	8—0—0	9—0—0
6	„	4—0—0	4—8—0
3	„	2—8—0	2—8—0

ಇಂಗ್ಲಿಷ್ ಅಥವಾ ಕನ್ನಡಭಾಗಗಳಿಗೆ.

		ಸ್ಥಳದವರಿಗೆ	ಪರಸ್ಥಳದವರಿಗೆ
12	ತಿಂಗಳಿಗೆ	4—0—0	5—0—0
6	„	2—0—0	2—8—0
3	„	1—4—0	1—5—0

ಷರಾ—ಅಂಬೆ ಮಠಾಧಿಪತಿಗಳು, ಪೋಬಳ ಮತ್ತು ತಾಲ್ಲೂಕ್ ಸ್ಕೂಲ್‌ಮಾಸ್ಟರುಗಳು, ಪ್ಯಾಟೇಲರು, ಶಾನುಭೋಗರು, ವಿದ್ಯಾರ್ಥಿಗಳು, ಇವರಿಗೆಲ್ಲ ಈ ಪತ್ರಿಕೆಯು ಸದರ ಚಂದಾದರದಲ್ಲಿ ಕೊಡಲ್ಪಡುವದು. ಅತ್ತ ... ಗುರುತು ಬಾರದ ... ಸುತರಾಂ ನಿಗೆ... ಲಾರದು. ಚಂದಾದಾರರು ಇಂಗ್ಲಿಷ್ ಭಾಗವನ್ನಾಗಲಿ ಕನ್ನಡಭಾಗವನ್ನಾಗಲಿ ಅಥವಾ ಎರಡನ್ನಾಗಲಿ ತರಿಸಿಕೊಳ್ಳಬಹುದು. ಚಂದಾಹಣವನ್ನು ಮುಂಗಡವಾಗಿಯೇ ಸಲ್ಲಿಸತಕ್ಕದ್ದು. ಮೂರುತಿಂಗಳಿಗಿಂತ ಕಡಮೆಯಾಗಿ ಚಂದಾ ಹಣಗಳು ಅಂಗೀಕರಿಸಲ್ಪಡಲಾರದು.

ನೋಟುಗಳು ರವಾನಿಸತಕ್ಕವರು ಮೊದಲು ಕಳುಹಿಸುವ ಅರ್ಧನೋಟು ತಲುಪಿದ್ದಕ್ಕೆ ಪತ್ರಿಕಾದ್ವಾರ ಬಂದ ಕೂಡಲೇ ಬಾಕೀ ಅರ್ಧ ನೋಟನ್ನು ರವಾನಿಸತಕ್ಕದ್ದು. ಲೇಬಲ್‌ಗಳು ಕಳುಹಿಸತಕ್ಕವರು ರೂಪಾಯಿ ಒಂದಕ್ಕೆ ಒಂದಾಣೆಮೇರೆ ಡಿಸ್ಕೌಂಟ್ ಸಹ ಸೇರಿಸಿ ಕಳುಹಿಸತಕ್ಕದ್ದು. ಅನಾಮಧೇಯ ... ಬಿಲ್‌ಗಳನ್ನು ಕಳುಹಿಸಕೂಡದು. ಡಿಸ್ಕೌಂಟಿಲ್ಲದೆ ಕಳುಹಿಸಲ್ಪಡುವ ಹಣಗಳಿಗೆ ಅದು ಮಾಡಿಸತಕ್ಕಷ್ಟು ಮಿಕ್ಕ ಹಣಗಳು ಲೆಕ್ಕಕ್ಕೆ ದಾಖಲು ಮಾಡಿಕೊಳ್ಳಲ್ಪಡುವದು.

ಪ್ರಕಟನೆಯ ರಿವಾಜ್.

ಮೊದಲನೆದಫಾ ಪಂಕ್ತಿ ಒಂದಕ್ಕೆ ೦—೨—೦
ಎರಡನೆಯದಫಾ ಪಂಕ್ತಿ ಒಂದಕ್ಕೆ ೦—೧—೦

ಷರಾ—ಎರಡಾವರ್ತಿಗಿಂತ ಜಾಸ್ತಿಯಾಗಿ ಎಷ್ಟುಸಾರೆ ಹಾಕಿಸ ಬೇಕೆಂಬದನ್ನು ಪಂಕ್ತಿ ಒಂದಕ್ಕೆ ೧ಅಣೆಯಂತೆ ಲೆಕ್ಕ ಮಾಡಲ್ಪಡುವದು. ಈ ಪತ್ರಿಕೆಯಲ್ಲಿ ಹಾಕಿಸಬೇಕೆಂದು ಪ್ರಕಟನೆಗಳು ಕಳುಹಿಸುವವರು ಅವು ಎಷ್ಟಾವರ್ತಿ ಹಾಕಿಸಲ್ಪಡಬೇಕೋ ಆ ಅಂಕವನ್ನು ಸ್ಪಷ್ಟವಾಗಿ ತಿಳಿಸತಕ್ಕದ್ದು. ಇಲ್ಲದಪಕ್ಷಕ್ಕೆ ಅವರು ನಮಗೆ ನಿಲ್ಲಿಸುವಂತೆ ಬರೆಯುವತನಕ ಅವು ಪ್ರಕಟಿಸುತ ಇದ್ದು ಹಾಗೆ ಎಷ್ಟಾವರ್ತಿ ಪ್ರಕಟಿಸಲ್ಪಟ್ಟವೋ ಅಷ್ಟಕ್ಕೂ ಮೇಲೆ ಹೇಳಿದ ದರದಂತೆ ಕಿಮ್ಮತ್ತು ವಸೂಲು ಮಾಡಲ್ಪಡುವದು. ಪ್ರಕಟನೆಯ ಬಗ್ಗೆ ಕಳುಹಿಸಲ್ಪಡತಕ್ಕ ಪ್ರಕಟನೆಗಳನ್ನು ಆಯಾ ಶನಿವಾರದವರ ಮಧ್ಯಾಹ್ನ ೨ ಗಂಟೆಯೊಳಗಾಗಿ ಕಳುಹಿಸಬೇಕು. ಪ್ರಕಟನೆಯ ಬಗ್ಗೆ ಈ ಪತ್ರಿಕೆಗೆ ಕಳುಹಿಸಲ್ಪಡತಕ್ಕ ಕಾಗದಗಳಲ್ಲಿ ತಿಳಿಸಲ್ಪಡುವ ಅಭಿಪ್ರಾಯಗಳಿಗೆ ನಾವು ಜವಾಬ್ದಾರರಾಗಲಾರೆವು. ಕೃಪೆಯಾಗಿ ರುಜುವಾತಿ ದಹೊರತು ಯಾವಕಾಗದವನ್ನು ಪ್ರಕಟಿಸಲಾರೆವು. ನಿರಾಕರಿಸಲ್ಪಟ್ಟ ಲೇಖನಗಳು ... ಕಳುಹಿಸಲ್ಪಡಲಾರವು.

"IT RECOMENDS ITSELF"

ALL WHO SUFFER FIND SURE RELIEF.

LITTLE'S

ORIENTAL BALM

THE MOST EFFECTUAL MODERN REMEDY FOR PAIN.

ಲಿಟಲ್ ಎಂಬುವರಿಂದ ತಯಾರು ಮಾಡಲ್ಪಟ್ಟ "ಓರಿಯಂಟಲ್ ಬಾಮ್" ಎಂಬ ಪೂರ್ವದೇಶ ಸಂಬಂಧವಾದ ಅಮೂಲ್ಯ ತೈಲವು ಸ್ವಶಕ್ತಿ ಪ್ರದರ್ಶಕವಾದದ್ದು, ಮತ್ತು ಸಫಲವಾದ ನವೀನ ಚಿಕಿತ್ಸಾರೂಪವಾದ ಔಷಧವು. ಇದರಿಂದ ಸಕಲ ವಾತರೋಗಗಳೂ, ನಾಡಿಸಂಬಂಧವಾದ ಸಂಧಿಶೂಲೆಗಳೂ ನಿವೃತ್ತಿಯಾಗುವವು. ಮುಖ್ಯವಾಗಿ ಬೆರಗಾದಿಕೆ ವಾತರೋಗಗಳು, ಕಾಸ, ಗಂಟಲಿನಲ್ಲಿ ಉರಿ, ನರೂಪಿನೋವು, ಶೀಲಾವಾಯು, ಕಟಿವಾಯು, ಉಳುಕು ನೋವು, ತಲೆನೋವು, ತಿಮಿರವಾಯು ಮುಂತಾದ ರೋಗಗಳಿಗೆಲ್ಲ ನಿಸ್ಸಂದೇಹವಾಗಿ ಬಳಸಿ ಪ್ರಯೋಜನವನ್ನುಂಟು ಮಾಡತಕ್ಕದ್ದು. ಈ ತೈಲವನ್ನು ನೋವುಳ್ಳ ಸ್ಥಳಗಳಲ್ಲಿ ಕೆಲವಾವರ್ತಿ ಸವರಿ ಕಾವು ಬೇಕಾಗುವಂತೆ ಚನ್ನಾಗಿ ತಿಕ್ಕಿದ್ದಲ್ಲಿ ಸಹಜವಾಗಿದ ಯಾವ ನೋವುಗಳನ್ನು ನಿವೃತ್ತಿ ಮಾಡುವಂಥಾ ಉತ್ತಮ ತೈಲವಾಗಿರುತ್ತದೆ. ಸಕೃತ್ಸ್ಪರ್ಶದಿಂದಲೇ ಅದರ ಗುಣವು ಮತ್ತು ಜೋಮು ಮುಂತಾದ ಸಿವೃತ್ತಿಯಾಗುವದು. ಗಂಟಲಿನಲ್ಲಿ ಉಂಟಾಗುವ ಉರಿ ಅಥವಾ ... ಈ ತೈಲವು ಅದ್ಭುತವಾದ ಮತ್ತು ಶೀಘ್ರವಾದ ಸಂಪೂರ್ಣ ಗುಣವನ್ನುಂಟುಮಾಡುವದು. ಅದ್ಭುತವಾದ ಈ ಔಷಧವನ್ನು ಅಜವೆ ... ಅದರ ಪ್ರಯೋಜನವು ಸ್ವತಃವೇ ವ್ಯಕ್ತವಾಗುವದು. ಈ ತೈಲವು ಶೀತಗಾಳಿ ಮಂಜು ಮುಂತಾದವುಗಳೊಳಗಾಗಿ ಸಂಚರಿಸುವಂಥಾ ಪ್ರಯಾಣಿಕರು, ಬೇಟೆಯಾಡುವವರು, ದೇಶಾಟನ ಮಾಡುವವರು, ಮುಂತಾದವರಿಗೆಲ್ಲ ಅನುಕೂಲ್ಯವಾದದ್ದು.

ಪರಿಶೀಲಕರ ಅಭಿಪ್ರಾಯವು.

ಐರ್ಲ್ಯಾಂಡ್ ದೇಶದ ಫಾರ್ಮಸ್ಯೂಟಿಕಲ್ ಸೊಸೈಟಿಯೆಂಬ ಔಷಧಶಾಲೆಯ ಪ್ರಸಿಡೆಂಟರಾಗಿಯೂ, ಸರ್ಕಾರದ ... ಸೊಸೈಟಿ ಯೆಂಬ ... ಮೆಂಬರಾಗಿಯೂ, "ಮ್ಯಾನುಯಲ್ ಆಫ್ ಯೂರಿನ್" ಎಂಬ ಗ್ರಂಥಕರ್ತರಾಗಿಯೂ, ರಸಾಯನ ಶಾಸ್ತ್ರ ವಿಷಯಕವಾದ ಅನೇಕ ಲೇಖನಾಧಿಕಾರಿಯಾಗಿಯೂ, ಇರುವ ಪ್ರೊಫೆಸರ್ ಟಿಚ್‌ಬೋರ್ನ್ (C R. Tichborne, L L D, F. C. S, M. R. I. A.) ಎಂಬುವರು ಅಭಿಪ್ರಾಯ ಪಟ್ಟಿರುತ್ತಾರೆಂದರೆ—ಲಿಟಲ್‌ರವರ ಓರಿಯಂಟಲ್ ತೈಲವನ್ನು ... ಇದು ... ಸಾಮಗ್ರಿಗಳ ಸಮ್ಮಿಶ್ರವಾದ ತೈಲವೆಂದೇ ... ಇದು ... ಸೂಕ್ಷ್ಮವಾದ ... ರೋಗ ನಿವಾರಕ ಶಕ್ತಿಯುಳ್ಳದ್ದಾಗಿರುತ್ತದೆ. ಈ ಮಿಶ್ರಣವು ... ಇದು ಯಾವ ತರದ ರೋಗಗಳಿಗೆ ಉಪಯುಕ್ತವೆಂದು ತಿಳಿಸಲ್ಪಟ್ಟಿದೆಯೋ ಆ ಸರ್ವ ರೋಗಗಳಲ್ಲಿ ಅದರ ಪ್ರಯೋಜನವು ವ್ಯಕ್ತವಾಗುವದು. ಈ ತೈಲವು ಸಂಪೂರ್ಣ ಜಾಗರೂಕತೆಯೊಡನೆ ತಯಾರು ಮಾಡಲ್ಪಟ್ಟಿರುತ್ತದೆ.

ಇದರ ಕ್ರಯ—ಸೀಸೆ ಒಂದಕ್ಕೆ ೧ ರೂಪಾಯಿ

ಇದು ಮಿಸ್ಟ್ ಔಷಧ ಶಾಲೆಯಲ್ಲಿಯೂ, ಮದರಾಸ್ ಸಂಬುಡಾಸ್ ಬೀದಿಯಲ್ಲಿ, ೨೦ನೇ ನಂಬರ್ ಮನೆಯೊಳಗಿನ, ಮ. ಎ ಸಿ ಬೆರ್ರಿಮನ್ ಯವರಲ್ಲಿಯೂ, ಈ ಪ್ರಾಂತ್ಯದಲ್ಲಿರುವ ಅವರ ಏಜಂಟರುಗಳಾದ ಜೆ ವೆಸ್ಟ್ ಯವರ ಕಂಪೆನಿಯಲ್ಲಿಯೂ, ಮ ಕ್ಯಾಪ್ಟನ್ ಅಂಡ್ ಕಂಪೆನಿಯವರಲ್ಲಿಯೂ, ರಿಗ್ಸ್‌ರವರ ಕಂಪೆನಿಯಲ್ಲಿಯೂ ದೊರೆಯುವದು.

AGENTS.— } Messrs, J West, Chemist, &c, Bangalore.
Captain & Co Chemists, Bangalore.
Riggs & Co, Chemists, Bangalore, and of
Mahomed Yousoff and Sons, The Cash Bazar, Bangalore
A C Berryman & Co.,
20 Sambodoss Street Madras

NOTICE.

VAIDYASARA SANGRAHA

A TREATISE ON THE PRINCIPLES OF

HINDU MEDICINE

Price including Postage Rs 5 0 0

ವೈದ್ಯಸಾರ ಸಂಗ್ರಹ.

ಈಗ್ರಂಥಾಪೇಕ್ಷೆಯುಳ್ಳವರು ಹಣಗಳನ್ನು ಕೆಳಗೆ ರುಜುಮಾಡಿರತಕ್ಕವರ ಹೆಸರಿಗೆ ಬರೆದುಕೊಂಡರೆ ಪುಸ್ತಕ ಕೂಡಲೇ ಕಳುಹಿಸಲ್ಪಡುವದು. ಹಣಗಳು ಇಲ್ಲದ ದರಖಾಸ್ತುಗಳಿಗೆ ಸುತರಾಂ ನಿಗೇಕೊಡಲ್ಪಡಲಾರದು.

ಇದರ ಕ್ರಯ ... ...ರೂ॥ ೫—೦—೦
ಪ್ಯಾಕಿಂಗ್ ಮತ್ತು ಅಂಚೆಖರ್ಚು, ೦—೬—೦
ಟಿ. ಬಿ. ವೆಂಕಟಾಚಾರ್,
ಆಸ್ಪತ್ರಿರೋಡ ಬೆಂಗಳೂರು.

ವಿಶೇಷ ವರ್ತಮಾನ



ಪೂನಾ ಚಿತ್ರಶಾಲೆಯಲ್ಲಿ ತಯಾರಿಸಲ್ಪಟ್ಟಿರುವ ಹೊಸ ಹೊಸ ... ಹಿಂದೂ ದೇವತೆಗಳು, ಚಿತ್ರಗಳ ಮೂಲಕ ... ಪತ್ರಗಳು, ಸುಂದರವಾದ ... ಬಣ್ಣದ ಚಿತ್ರಗಳು ತಯಾರಾಗುತ್ತಲಿವೆ. ... ನೋಡಿಸಲಾಗಿ ಕ್ರಯ ಬಹಳ ಅಲ್ಪವಾಗಿವೆ ಬೇಕಾದವರಿಗೆ ಕ್ರಯದಪಟ್ಟಿ ಕಳುಹಿಸಲ್ಪಡುವದು.

ಪೂನಾ ಸಿಟಿ ಚಿತ್ರಶಾಲೆಯ ಮ್ಯಾನೇಜರ್

Bangalore City Municipality
ಬೆಂಗಳೂರುಸಿಟಿ ಮ್ಯೂನಿಸಿಪಾಲಿಟಿ.

ಮ್ಯೂನಿಸಿಪಲ್ ಕಮಿಷನರ್‌ಗಳ ಚುನಾವಣೆಯ ವಿಷಯದಲ್ಲಿ ಮಾಡಲ್ಪಟ್ಟಿರುವ ಮುಸವಿದಾ ನಿಬಂಧನೆಗಳನ್ನು ಕುರಿತು ಆಲೋಚಿಸುವದಕ್ಕಾಗಿ ಸಿಟಿ ಮ್ಯೂನಿಸಿಪಲ್ ಕಮಿಷನರ್‌ಗಳು ತಮ್ಮ ಆಫೀಸ್ ಕಟ್ಟಡದಲ್ಲಿ ಈ ತಿಂಗಳ ೧೫ನೇ ತಾರೀಖ್ ಶುಕ್ರವಾರ ಸಾಯಂಕಾಲ ನಾಲ್ಕುಘಂಟೆಗೆ ವಿಶೇಷ ಸಭೆಸೇರುವರು.

ತಾ॥ ೭ನೇ ಜೂನ್ ೧೮೮೮.

A Srinivasa Charlu, B. B,
Vice-President,
City Municipal Commission.

ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA.

MONDAY, JUNE 11, 1888.

೧೮೮೮ನೇ ಜೂನ್ ೧೧ನೇ ತಾ॥ ಸೋಮವಾರ

BIRTH OF A PRINCE TO HIS HIGHNESS THE MAHARAJA OF MYSORE.

ಶ್ರೀಮತ್ಸಮಸ್ತ ಮಹೀಮಂಡಲ ಮಂಡನಾಯಮಾನ ಕರ್ಣಾಟದೇಶಾಧೀಶ ಶ್ರೀಮದ್ರಾಜಾಧಿರಾಜ ರಾಜಪರಮೇಶ್ವರ ಪ್ರೌಢಪ್ರತಾಪ ಅಪ್ರತಿಮ ವೀರನರಪತಿ ಬಿರುದೆಂತೆಂಬರ ಗಂಡ ಲೋಕೈಕವೀರ ಯದುಕುಲ ಪಯಃ ಪಾರಾವಾರ ಕಲಾನಿಧಿ, ಶಂಖ ಚಕ್ರ ಮಕರ ಸಾಳ್ವ ಗಂಡಭೇರುಂಡಾದ್ಯನೇಕ ಬಿರುದಾಂಕಿತ ಮಹೀಸೂರ ಪುರವರಾಧೀಶ್ವರ ರತ್ನಸಿಂಹಾಸನಾಧೀಶ್ವರರಾದ ಶ್ರೀಮನ್ಮಹಾರಾಜರಾಜಾ ಶ್ರೀ ಚಾಮರಾಜೇಂದ್ರ ಒಡೆಯರ್ ಬಹದೂರ್ ಜಿ. ಸಿ. ಎಸ್. ಐ. ಯವರಿಗೆ ಈ ಸರ್ವಧಾರಿ ಸಂವತ್ಸರ ವೈಶಾಖ ಕೃಷ್ಣ ಏಕಾದಶೀ ಮಂಗಳವಾರ ಅಶ್ವಿನೀನಕ್ಷತ್ರ ಮಿಥುನಲಗ್ನದಲ್ಲಿ ಬೆಳಗ್ಗೆ ೮ ಘಂಟೆಗೆ ಭಾಗ್ಯಸಂಪನ್ನರಾದ ದ್ವಿತೀಯಪುತ್ರರವತರಿಸಿದರೆಂಬ ಶುಭೋದರ್ಕವಾದ ವೃತ್ತಾಂತವ ತಿಳಿಸಲಿಕ್ಕೆ ನಾವು ಅತ್ಯಂತ ಹರ್ಷೋತ್ಸಾಹ ಭರಿತರಾಗಿದ್ದೇವೆ. ಶ್ರೀಮನ್ಮಹಾರಾಜರವರ ನಿರತಿಶಯ ಸಂತೋಷಾಭಿವೃದ್ಧಿಗೆ ಕಾರಣವಾದ ಪುತ್ರೋತ್ಸವ ವೃತ್ತಾಂತವು ಆ ದಿನ ೧೨ ಘಂಟೆಗೆ ಸರಿಯಾಗಿ ದಿವಾನರವರಿಂದ ಕಳುಹಿಸಲ್ಪಟ್ಟ ರೀತಿ ವೃತ್ತಾಂತದಮೂಲಕ ಈ ಪಟ್ಟಣದಲ್ಲಿ ಸರ್ವತ್ರ ವ್ಯಾಪಿಸಿ ಇಲ್ಲಿನ ಪ್ರಜೆಗಳೆಲ್ಲರಿಗೂ ಮಹದಾನಂದವನ್ನುಂಟುಮಾಡಿತು. ಇಂಥಾ ಶುಭ ಸಮಯದ ಗೌರವಾರ್ಥ ಗತ ಮಂಗಳ ಬುಧವಾರಗಳೆರಡುದಿನಗಳೂ ಸರಕಾರ್ ಇಲಾಖೆಗಳಿಗೆಲ್ಲ ರಜಾ ಕೊಡಲ್ಪಟ್ಟಿತಲ್ಲದೆ ಬುಧವಾರದಿನ, ಈ ಶಹರ್ ನಿವಾಸಿಗಳಿಗೆಲ್ಲ ಸಕ್ಕರೆ ಹಂಚಲ್ಪಟ್ಟಿತು. ಶ್ರೀಮನ್ಮಹಾರಾಜರವರಿಂದ ಪೋಷಿತವಾಗಿರುವ ಹಿಂದೂ ದೇವಸ್ಥಾನಗಳಲ್ಲೆಲ್ಲ ಅಭಿಷೇಕ ದೀಪೋತ್ಸವಾದಿಗಳು ವಿಶದವಾಗಿ ನಡೆದವು. ಇದೇರೀತಿ ಕ್ರಿಶ್ಚಿಯನ್ ಚರ್ಚ್‌ಗಳಲ್ಲಿಯೂ ಮುಸಲ್ಮಾನರ ಮಸೀದಿಗಳಲ್ಲಿಯೂ ಸಹ ಅವರವರ ಮತ ಸಂಪ್ರದಾಯವನ್ನನುಸರಿಸಿ ಇಷ್ಟದೇವತಾಪ್ರಾರ್ಥನೆಗಳು ಮಾಡಲ್ಪ

ಟ್ಟವು. ಕಳೆದ ಬುಧವಾರದದಿನ ಇಲ್ಲಿನ ತಾಲ್ಲೂಕ್ ಕಚ್ಚೇರಿಯಸಾಲು ಕದಳೀಸ್ತಂಭ ಪುಷ್ಪತೋರಣಾದಿಗಳಿಂದಲಂಕೃತವಾಗಿ ಫ್ರೆಂಚ್ ರಾಕ್ಸ್ ಸಬಡಿವಿಜನ್ ಆಫಿಸರ್ ಮೆಸ್ಟರ್ ವೆಂಕಟವರದಯ್ಯಂಗಾರ್, ಟೌನ್ ಮ್ಯಾಜಿಸ್ಟ್ರೇಟ್ ಮೆಸ್ಟರ್ ನಸರುದ್ದೀನ್ ಸಾಹೆಬರವರು, ಮ್ಯೂನಿಸಿಪಲ್ ವೈಸ್‌ಪ್ರೆಸಿಡೆಂಟರಾದ ರಾಯ ಬಹದೂರ್ ಶ್ರೀನಿವಾಸಾಚಾರ್ಯರವರು, ಮ್ಯೂನಿಸಿಪಲ್ ಕಮಿಷನರುಗಳು, ಪೆನ್ಷನ್ ಅಸಿಸ್ಟೆಂಟ್ ಕಮಿಷನರ್ ಮೆ॥ ಶ್ರೀನಿವಾಸಯ್ಯಂಗಾರ್ಯರವರು, ತಾ॥ ಅಮಲ್ದಾರ್ ಮೊದಲಾದ ಅಧಿಕಾರಿಗಳೂ, ವರ್ತಕರೂ, ಸಾಹುಕಾರರೂ, ಪುರನಿವಾಸಿಗಳಲ್ಲಿ ಪ್ರಸಿದ್ಧರಾದವರೂ ಸಭೆ ಸೇರಿದ್ದರು. ಈ ದೊಡ್ಡಮನುಷ್ಯರೆಲ್ಲರೂ, ಕರ್ಣಾಟಕ ಸಿಂಹಾಸನದಲ್ಲಿ ತಮಗುಂಟಾಗಿರುವ ರಾಜಭಕ್ತಿ ಕೃತಜ್ಞತಾದಿ ಭಾವಗಳಂ ವ್ಯಕ್ತಪಡಿಸುವ ಅಭಿಪ್ರಾಯದೊಡನೆ ಕರ್ಣಾಟಕ ಸಂಸ್ಥಾನದ ಮರ್ಯಾದೆಯಂ ಗೌರವಿಸಿ ಸಂದರ್ಭೋಚಿತವಾಗಿ ಜಮಖಾನಗಳಂ ಹಾಕಿಸಿ ಎಲ್ಲರೂ ಅದರಮೇಲೆ ಕುಳಿತುಕೊಂಡರಲ್ಲದೆ ಒಬ್ಬರಿಬ್ಬರು ವಿನಾ ಮಿಕ್ಕವರೆಲ್ಲರೂ ವಿಷಯ ಗೌರವಾರ್ಥ, ನೈಸರ್ಗಿಕಗಳೆಂದು ಭಾವಿಸಲ್ಪಟ್ಟಿರುವ ವಿಜಾತೀಯ ವಸ್ತ್ರಾಧಾರಣಾದಿ ಕ್ರಮಗಳನ್ನೆಲ್ಲ ತ್ಯಜಿಸಿ ಕೇವಲ ಹಿಂದೂ ಪೋಷಕನಲ್ಲೇ ಬಂದಿದ್ದದ್ದು ಸಭಾ ಗೌರವವನ್ನೂ ಮಹಾರಾಜರಲ್ಲಿರತಕ್ಕ ಗೌರವ ವಿಶ್ವಾಸಗಳನ್ನೂ ಅಭಿವೃದ್ಧಿಯನ್ನೈದಿಸುವದಾಗಿತ್ತು. ತರುವಾಯ ಸಭಿಕರೆಲ್ಲರೂ ಶ್ರೀಮನ್ಮಹಾರಾಜರವರಿಗೆ ಪುತ್ರೋತ್ಸವವಾದ ವೃತ್ತಾಂತ ಶ್ರವಣದಿಂದುಂಟಾದ ಸಂತೋಷವನ್ನು ಸಮುಚಿತ ಶಬ್ದಗಳಿಂದ ವ್ಯಕ್ತಪಡಿಸಿ ರಾಜಭಕ್ತಿ ಗೌರವ ಪುರಸ್ಸರವಾದ ತಮ್ಮ ಶುಭವಾದನವಂ ತಂತಿಮೂಲಕ ಮಹಾರಾಜ ಸನ್ನಿಧಿಯಲ್ಲಿ ಶ್ರುತಪಡಿಸತಕ್ಕದ್ದೆಂದು ತೀರ್ಮಾನಿಸಿದಮೇಲೆ ಬಂದಿದ್ದ ದೊಡ್ಡಮನುಷ್ಯರಿಗೆಲ್ಲ ಗಂಧ ಪುಷ್ಪ ತಾಂಬೂಲ ಶರ್ಕರೆಗಳು ಕೊಡಲ್ಪಟ್ಟವು. ಆದಿನರಾತ್ರಿ ದೇವಸ್ಥಾನಗಳಲ್ಲಿ ದೀಪೋತ್ಸವಗಳು ಸಹ ನಡೆದವು. ಹೀಗೆ ವಂಶ ಪರಂಪರಾಗತವಾದ ಈ ಮೈಸೂರು ರಾಜಸಂತತಿಯಂ ಕುರಿತ ಕೆಲವು ಅಂಶವು ಪ್ರಕೃತಸಂದರ್ಭದಲ್ಲಿ ಅನಾವಶ್ಯಕತ್ವೇನ ತೋರಲಾರದಾಗಿ ಅದನ್ನಿದರಡಿ ಸಂಗ್ರಹಿಸಿ ತಿಳಿಸುವೆವೆಂತೆನೆ:—ಆ ಯದುವಂಶದಲ್ಲಿ ಬೆಟ್ಟದ ಒಡೆಯರ್, ಚಾಮೇ ಒಡೆಯರ್ ಎಂದು ಇಬ್ಬರು ಜನಿಸಿದರು. ಚಾಮೇ ಒಡೆಯರವರು ೧೫೦೭ನೇ ಇಸವಿಯಲ್ಲಿ ರಾಜ್ಯಭಾರವಂವಹಿಸಿ ಕೆಲವು ಸಂವತ್ಸರಗಳ ಕಾಲ ಪ್ರಭುತ್ವಮಾಡುತಲಿದ್ದರು. ಇವರು ಪುತ್ರಹೀನರಾಗಿ ಗತಿಸಿದ್ದರಿಂದ ಇವರ ಕಾಲಾನುತರ ಆಧಿಪತ್ಯವು ಅವರ ಭ್ರಾತೃಜರಾದ ತಿಮ್ಮರಾಜ ಒಡೆಯರವರಿಗೆ ೧೫೪೮ನೇ ಇಸವಿಯಲ್ಲಿ ಕೊಡಲ್ಪಟ್ಟಿತು. ಇವರಿಗೆ ಚಾಮರಸರೆಂಬವರೊಬ್ಬ ಕುಮಾರರು ಜನಿಸಿದರು. ಇವರಿಗೆ ಆರು ಬೆರಳುಗಳಿದ್ದದರಿಂದ ಆರು ಬೆರಳರಸರೆಂಬ ಹೆಸರುಂಟಾಯಿತು. ಇವರಿಗೆ ತಿಮ್ಮರಾಜ, ಕೃಷ್ಣರಾಜ, ಬೋಳ ಚಾಮರಾಜರೆಂಬ ಮೂವರುಮಕ್ಕಳು ಹುಟ್ಟಿದರು. ಇವರೆಲ್ಲರೂ ಕ್ರಮವಾಗಿ ಬಹುಕಾಲ ರಾಜ್ಯಪಾಲನಂಗೈಯುತಲಿದ್ದರು. ಇವರಲ್ಲಿ ಕನಿಷ್ಠರಾದ ಬೋಳ ಚಾಮರಾಜರಿಗೆ ನಾಲ್ವರು ಮಕ್ಕಳು ಜನಿಸಿದರು. ಅವರ ಪೈಕಿ ಸರ್ವಜ್ಯೇಷ್ಠರಾದ ರಾಜ ಒಡೆಯರವರು ೧೫೭೮ನೇ ಇಸವಿಯಲ್ಲಿ ರಾಜ್ಯದೊಳ್ಪ್ರತಿಷ್ಠಿತರಾಗಿ ಕೆಲವುಕಾಲ ಪಾಲಿಸಿ ಗತಿಸಿದರು. ಅವರಬಳಿಕ ಅವರ ಜ್ಞಾತಿಯಾದ ಬೆಟ್ಟದ ಒಡೆಯರವರಿಗೆ ಪ್ರಭುತ್ವ ಕೊಡಲ್ಪಟ್ಟಿತು. ಅವರಕನಿಷ್ಠ ಸೋದರರಾದ ರಾಜ ಒಡೆಯರೆಂಬವರು ಅವರಂ ಪದಭ್ರಷ್ಟರನ್ನಾಗಿ ಮಾಡಿ ರಾಜ್ಯವನ್ನಪಹರಿಸಿಕೊಂಡರು. ಆಕಾಲದಲ್ಲಿ, ಅಂದರೆ ೧೬೧೦ನೇ ಇಸವಿಯಲ್ಲಿ ದಿನೇದಿನೆ ಕ್ಷೀಣಗತಿಯನ್ನೈದುತಬಂದ ಆನೆಗೊಂದಿ ಸಂಸ್ಥಾನದವರಿಂದ ಶ್ರೀರಂಗಪಟ್ಟಣವನ್ನು ತೆಗೆದುಕೊಂಡರು. ಇವರ ತಮ್ಮಂದಿರು ರಾಜ್ಯವಂ ಬಹಳ ವಿಸ್ತಾರಗೊಳಿಸಿ ೧೬೩೭ನೇ ಇಸವಿಯಲ್ಲಿ ಮೃತಪಟ್ಟರು. ಈ ರಾಜಒಡೆಯರವರಿಗೆ ತರುವಾಯ ಅವರ ಮಕ್ಕಳಾದ ಇಮ್ಮಡಿರಾಜ ಒಡೆಯರವರಿಗೆ ಪಟ್ಟವಾಯಿತು. ಈ ಅರಸರ ಹೆಸರೇ ಪ್ರಕೃತ ಮಹಾರಾಜರವರ ವಂಶ ನಾಮವಾಗಿ ಯೇರ್ಪಟ್ಟಿದೆ. ಸದರೀ ಇಮ್ಮಡಿ ರಾಜರವರ ಮರಣಾನಂತರ ಮೊದಲು ಪದಭ್ರಷ್ಟರಾದ ಬೆಟ್ಟದ ಒಡೆಯರ ಪೌತ್ರರಾದ ಕಂಠೀರವ ನರಸರಾಜ ಒಡೆಯರವರು ಪಟ್ಟಾಭಿಷಿಕ್ತರಾದರು. ಈ ಅರಸರು ಮಹಾ ಪರಾಕ್ರಮ ಶಾಲಿಯಾಗಿಯೂ, ಪ್ರಸಿದ್ಧರಾಗಿಯೂ ಇದ್ದು ೧೬೩೮ನೇ ಇಸವಿಯು ಲಾಗಾಯತು ೧೬೫೯ನೇ ಇಸವಿಯವರೆವಿಗೆ ರಾಜ್ಯವಂ ಪಾಲಿಸಿದರು. ಇವರು ನಿಸ್ಸಂತತಿಯಾಗಿ ಗತಿಸಿದ ಬಳಿಕ ಬೋಳ ಚಾಮರಾಜ ಒಡೆಯರವರ ಮೊಮ್ಮಕ್ಕಳಾದ ದೊಡ್ಡದೇವರಾಜ ಒಡೆಯರವರಿಗೆ ಪ್ರಭುತ್ವಕೊಡಲ್ಪಟ್ಟಿತು. ಇವರ ಕಾಲಾನಂತರ ಇವರ ಜ್ಞಾತಿಯಾದ ಚಿಕ್ಕದೇವರಾಜ ಒಡೆಯರವರು ಆಧಿಪತ್ಯವಂವಹಿಸಿ ಬಹಳ ಪ್ರಸಿದ್ಧಿಯೊಡನೆ ಪ್ರಜಾಪಾಲನಗೈದರು. ಮತ್ತು ಇವರಕಾಲದಲ್ಲಿ ಸರ್ಕಾರ್ ಆವಳಿತಗಳು ಬಹಳ ಕ್ರಮಪಡಿಸಲ್ಪಟ್ಟವಲ್ಲದೆ ಮಹಾರಾಷ್ಟ್ರರನ್ನುಜಯಿಸಿ, ದೆಹಲೀ ಅರಸರೊಡನೆ ಸ್ನೇಹವಂ ಬೆಳೆಸಿ ಜಗದ್ವಿಖ್ಯಾತಗಳಾದ ಅನೇಕ ಪ್ರಶಸ್ತಿಗಳಂ ಸಂಪಾದಿಸಿ, ತಿಂಮಾಳೀಪಟ್ಟಗಳನ್ನು ಸ್ವಾಧೀನಪಡಿಸಿಕೊಂಡು ಬೆಂಗಳೂರು ಮೊದಲಾದ ಕೆಲವು ಪ್ರದೇಶಗಳನ್ನು ಕ್ರಯಕ್ಕೆ ಪಡೆದು ೧೭೦೪ನೇ ಇಸವಿಯ ತನಕ ಪ್ರಭುತ್ವ ಮಾಡಿ ಗತಿಸಿದರು. ಬಳಿಕ ಅವರ ಮಕ್ಕಳಾದ ಮೂಗ ಕಂಠೀರವ ನರಸರಾಜ ಒಡೆಯರವರು ಕೆಲವು ಕಾಲ ರಾಜ್ಯವನ್ನಾಳುತಲಿದ್ದು ಸನ್ ೧೭೧೪ನೇ ಇಸವಿಯಲ್ಲಿ ಕಾಲಗತಿಯನ್ನೈದಿದಮೇಲೆ ಅವರ ಕುಮಾರರಾದ ದೊಡ್ಡ ಕೃಷ್ಣರಾಜ ಒಡೆಯರವರು ಪಟ್ಟಾಭಿಷಿಕ್ತರಾದರು. ಇವರು ಸಂತತಿ ವಿಹೀನರಾಗಿ ಗತಿಸಿದ್ದರಿಂದ ದಳವಾಯಿಗಳು ಈರಾಜವಂತಕ್ಕೆ ಸೇರಿದ ಚಿಕ್ಕ ಕೃಷ್ಣರಾಜ ಒಡೆಯರವರಿಗೆ ಸನ್ ೧೭೩೪ನೇ ಇಸವಿಯಲ್ಲಿ ಪಟ್ಟಾಭಿಷೇಕವಂ ಮಾಡಿದರು. ಆ ಮಧ್ಯಕಾಲದಲ್ಲಿ ರಾಜಕೀಯ ವಿಷಯಗಳಲ್ಲಿ ಕೆಲವು ಅಸಂಗತ ಕೃತ್ಯಗಳು ನಡೆದವು. ಪರಂತು ಅವುಗಳ ತಪಸೀಲ್ ಈ ಸಂದರ್ಭದಲ್ಲಿ ಅನಾವಶ್ಯಕವಾಗಿರುತಿದೆ. ಸದರೀ ಅರಸರ ಮಕ್ಕಳು ನಾಮಮಾತ್ರಕ್ಕೆ ಅರಸರೆನಿಸಿಕೊಂಡಿದ್ದಾಗ್ಯೂ ಅವರಗೌರವಾನುಗುಣಗಳಾದ ಮರ್ಯಾದೆಗಳಗೇನೂ ಕೊರತೆ ಯುಂಟಾಗಿರಲಿಲ್ಲವು. ಇವರು ಅಶಕ್ತರಾಗಿದ್ದದರಿಂದ ರಾಜ್ಯವನ್ನು ಹೈದರಲ್ಲಿ ಖಾನರವರು ತಮ್ಮ ವಿಚಾರಣೆಯಲ್ಲಿಟ್ಟುಕೊಂಡಿದ್ದರು. ಚಿಕ್ಕ ಕೃಷ್ಣರಾಜ ಒಡೆಯರವರಿಗೆ ನಂಜರಾಜ ಒಡೆಯರು, ಚಾಮರಾಜ ಒಡೆಯರೆಂಬ ಇಬ್ಬರು ಪುತ್ರರು ಜನಿಸಿದರು. ಇವರು ಸಿಂಹಾಸನಾರೂಢರಾಗಿ ಕಡೆಗೆ ಅಪುತ್ರವಂತರಾಗಿ ಗತಿಸಿದ್ದನ್ನು ಕಂಡು ಹೈದರಲ್ಲೀಖಾನರು ಸದರೀ ರಾಜವಂಶಕ್ಕೆ ಸೇರಿದ ಕಾರುಗಳ್ಳಿ ದೇವಯ್ಯನವರ ಮಕ್ಕಳಾದ ಚಾಮರಾಜ ಒಡೆಯರವರನ್ನು ಸಿಂಹಾಸನದಲ್ಲಿ ನೆಲಗೊಳಿಸಿದರು. ಹೀಗೆ ಕೆಲವು ಕಾಲವಾದ ಬಳಿಕ ಹೈದರಲ್ಲೀಖಾನರವರ ಮಕ್ಕಳಾದ ಟೀಪೂಸುಲ್ತಾನರವರೇ ಸ್ವತಃ ಈರಾಜ್ಯವಂ ಪಾಲಿಸಲಾರಂಭಿಸಿ ತಮ್ಮ ಭುಜಬಲ ಪರಾಕ್ರಮದಿಂ ಬಹುರಾಜ್ಯಗಳಂ ಜಯಿಸಿ ತಮ್ಮ ಪ್ರಭುತ್ವವಂ ಪ್ರಬಲಪಡಿಸಿದರು. ಭಗವದನುಗ್ರಹವು ಸಂಪೂರ್ಣವಾಗಿ ಅವರೊಳಿರುತಲಿದ್ದತನಕ ಅವರ ಹೆಸರು ಶತ್ರುರಾಜರಿಗೆ ಮಹತ್ಸಂತಾಪಕಾರಿಯಾಗಿತ್ತಲ್ಲದೆ ಅವರ ಪ್ರಭುತ್ವವು ಜಗದ್ವಿಖ್ಯಾತವಾಗಿತ್ತು. ದೈವಕಟಾಕ್ಷ ವೀಕ್ಷಣ ಕಡಮೆಯಾಗಲು ಬ್ರಿಟಿಷರವರ ಸಂಬಂಧವು ಇಲ್ಲಿ ತಲೆದೋರಲಾಯಿತು. ಆಗ ಬ್ರಿಟಿಷರವರು, ಈರಾಜ್ಯವಂ ಸ್ವಾಧೀನ ಪಡಿಸಿಕೊಂಡು, ೧೭೯೯ನೇ ಇಸವಿಯಲ್ಲಿ ಚಾಮರಾಜ ಒಡೆಯರವರ ಮಕ್ಕಳಾದ ಸಾಬಕ್ ಮಹಾರಾಜಾ ಶ್ರೀಕೃಷ್ಣರಾಜ ಒಡೆಯರವರನ್ನು ಮೈಸೂರು ಸಿಂಹಾಸನದಲ್ಲಿ ಸ್ಥಾಪಿಸಿ ಮಧ್ಯೆ ವಿಚ್ಛಿನ್ನವಾಗಿದ್ದ ಹಿಂದೂ ಪ್ರಭುತ್ವವನ್ನು ಮರಳಿ ಊರ್ಜಿತ ಪಡಿಸಿದರು. ಸಾಬಕ್ ಮಹಾರಾಜರವರು ಅತಿದೀರ್ಘವಾದ ಅರವತ್ತೈದು ಸಂವತ್ಸರಕಾಲ ರತ್ನಸಿಂಹಾಸನವನ್ನಲಂಕರಿಸಿದ್ದು ಮಹನೀಯರೆನಿಸಿ ಅನುಪಮೌದಾರ್ಯಾದಿ ಸುಗುಣ ಭೂಷಿತರೆಂದು ಯೆಲ್ಲರಿಂದಲೂ ಕೊಂಡಾಡಲ್ಪಡುತ ೧೮೬೮ನೇ ಇಸವಿ ಮಾರ್ಚಿ ೨೭ನೇ ತಾರೀಖಿನಲ್ಲಿ ಕಾಲಗತಿಯಂ ಹೊಂದಿದರು. ಇವರಿಗೂ, ಪೂರ್ವದ ಈಸ್ಟಿಂಡಿಯಾ ಕಂಪೆನಿಯವರಿಗೂ ನಡೆದ ತಹನಾಮೆಯ ಮೇರೆ ಸನ್ ೧೮೩೦ನೇ ಇಸವಿ ಅಕ್ಟೋಬರ್ ೧೯ನೇ ಮಕರ್ರಂ ಲಾಗಾಯತು ರಾಜ್ಯವು ಚೀಫ್ ಕಮಿಷನರವರಿಂದ ಮಹಾ ರಾಜರವರ ಹೆಸರಿನಲ್ಲಿ ಪಾಲಿಸಲ್ಪಡುತ ಸಕಲ ವಿಧದಿಂದಲೂ ಅಭಿವೃದ್ಧಿ ಸ್ಥಿತಿಗೆ ತರಲ್ಪಟ್ಟಿತು. ಸನ್ ೧೮೬೮ನೇ ಇಸವಿ ಮಾರ್ಚಿ ೩೦ನೇ ಮರ್ರುಂ ೩೦೫ನೇ ನಂಬರ್ ಇಂಡ್ಯ ಗವರ್ನಮೆಂಟನವರ ಇಸ್ತಿಹಾರ್ ನಾಮೆಯ ಪ್ರಕಾರ ಪ್ರಕೃತ ಶ್ರೀ ಚಾಮರಾಜೇಂದ್ರ ಒಡೆಯರ್ ಬಹದೂರರವರು ಮೈಸೂರು ಸಿಂಹಾಸನಕ್ಕೆ ಬಾಧ್ಯಸ್ಥರಾಗಿ ಅಂಗೀಕರಿಸಲ್ಪಟ್ಟು, ಅವರು ಪ್ರಾಪ್ತವಯಸ್ಕರಾದಮೇಲೆ, ಅಂದರೆ ೧೮೮೧ನೇ ಇಸವಿ ಮಾರ್ಚಿ ೨೫ನೇ ತಾರೀಖಿನಲ್ಲಿ ಸಕಲ ಸೌಭಾಗ್ಯ ಸಮೃದ್ಧಿಯುಳ್ಳ ಈ ರಾಜ್ಯವು ಮರಳಿ ಅವರಿಗೆ ಒಪ್ಪಿಸಲ್ಪಟ್ಟಿತು. ಅಮೊದಲು ಮಹಾರಾಜರವರು ಪರಂಪರಾಗತವಾದ ಈ ಆಧಿರಾಜ್ಯವಂ ಕೈಗೊಂಡು ಸಕಲ ಪ್ರಜಾರಂಜಕರಾಗಿ ಪ್ರಭುತ್ವ ಮಾಡುತಲಿದ್ದಾರೆ. ಹಿಂದೆ ಅನೇಕ ಸಂದರ್ಭಗಳಲ್ಲಿ ಈ ಮೈಸೂರು ರಾಜ ವಂಶಕ್ಕೆ ಅವಿಚ್ಛಿನ್ನವಾದ ಔರಸ ಸಂತತಿಯು ನಷ್ಟವಾದದರಿಂದ ಆಧಿಪತ್ಯವು ಅನ್ಯರ ಪಾಲಾಗಲಿಕ್ಕೆ ಕಾರಣವಾಯಿತು. ಮುಂದೆ ಅಂತಾ ನಷ್ಟಗಳಿಗೆ ಅವಕಾಶವಿಲ್ಲದಂತೆ ಸದರೀ ರಾಜವಂಶವು ಉತ್ತರೋತ್ತರಾಭಿವೃದ್ಧಿಯನ್ನೈದುತ ಲೋಕಾನಂದ ಕರವಾಗಿ ಕಣ್ಗೊಳಿಸುತಲಿರಬೇಕೆಂಬವೇ ಭಗವದೇಚ್ಛೆಯಾಗಿರುವದರಿಂದ ಅವಕ್ಕೆ ಉಂಟಾದ ಅಪವಾದವಂ ನಿವೃತ್ತಿಸಿ ಬಹು ಪುತ್ರಭಾಗ್ಯವು ದೇವರು ಕೃಪೆ ಗೈಯುವದಕ್ಕಾಗಿ ಅತ್ಯಾನಂದ ಭರಿತರಾಗಿದೇವೆ. ಹೀಗೆಯೇ ಶ್ರೀಮನ್ಮಹಾರಾಜರವರು ನಿಜಾಭಿಜನೋಚಿತಾತಿ ವಿಸ್ತೃತಾಯುರಾರೋಗ್ಯ ಬಲ ವಿಕ್ರಮ ಸಂತಾನ ಸಂಪತ್ಸಾರಸ್ವತ ವಿಜ್ಞಾನ ತೇಜಶ್ಶಕ್ತಿ ಧೈರ್ಯ ಚಾತುರ್ಯ ಗಾಂಭೀರ್ಯೌದಾರ್ಯಾದಿ ಸಕಲ ಸೌಭಾಗ್ಯ ಸಮಂಚಿತರಾಗಿ ಈ ಕರ್ಣಾಟಕ ರತ್ನ ಸಿಂಹಾಸನವು ಚಿರಕಾಲ ಅಲಂಕರಿಸುತ ಶಾಶ್ವತಗಳಾದ ಕೀರ್ತಿ ಪ್ರತಿಷ್ಠೆಗಳಂ ಪಡೆದು ನಿರವಧಿಕವಾದ ಆನಂದವನ್ನನುಭವಿಸುತ, ಪ್ರಕೃತಿಮಂಡಲಕ್ಕೆ ಸಂತೋಷವನ್ನುಂಟುಮಾಡುತಲಿರಬೇಕೆಂಬ ಪ್ರಾರ್ಥನಾಯುಕ್ತವಾದ ನಮ್ಮ ಶುಭವಾದನವಂ ಮಹಾರಾಜರವರ ದಿವ್ಯ ಸನ್ನಿಧಿಯಲ್ಲಿ ಈ ಪತ್ರಿಕಾಮೂಲಕ ಶ್ರುತಪಡಿಸುತ್ತೇವಲ್ಲದೆ ಈಗ ಅವತರಿಸಿದ ರಾಜಪುತ್ರರಿಗೆ ಸಕಲ ಸೌಭಾಗ್ಯ ಸಂಪತ್ಪರಂಪರೆಗಳಂ ಶ್ರೀಹರಿ ಅನುಗ್ರಹಿಸಬೇಕೆಂದು ಕೋರುವೆವು.

Occasional Notes.
ನೈಮಿತ್ತಿಕ ವಿಷಯನ್ಯಾಸ.

A liberal donation.—ತಿರುವಾಂಕೂರು ಮಹಾರಾಜರವರು ಮದರಾಸಿನಲ್ಲಿ ಮುಂದೆ ನಡೆಯುವ ಕುದುರೇಜೂಜಿನಸಂಬಂಧಿಗಾಗಿ ೧,೦೦೦ ರೂಪಾಯಿಗಳು ಕೊಟ್ಟರೆಂದು ತಿಳಿಯಲಾದೆವು.

A rumour.—ಲಂಡನ್ ಪಟ್ಟಣದಲ್ಲಿ ಪ್ರಬಲರಾದ ಕೆಲವರುಸೇರಿ, ಸರ್ ಸಾಲಾರ್‌ಜಂಗರವರಿಗೆ ಮರಳಿ ಮಂತ್ರಿತ್ವವಂ ಕೊಡಬೇಕೆಂದು ಅಪೇಕ್ಷಿಸುವದಾಗಿ ಡಕ್ಕನ್ ಟೈಂಸ್‌ಪತ್ರಿಕೆಹೇಳುತಿದೆ

A tour of inspection.—ಮದರಾಸ್ ಕಮಾಂಡರಿನ್ ಚೀಫರವರು ತಮ್ಮ ಪರಿವಾರ, ಅಡ್ಜುಟಂಟ್ ಮತ್ತು ಕ್ವಾರ್ಟರ್ ಮಾಸ್ಟರ್ ಜನರಲವರೊಡನೆ ಬರುವತಿಂಗಳಲ್ಲಿ ಸರ್ಕ್ಯೂಟ್ ಹೊರಡುವರೆಂದು ಒಂದಾನೊಂದು ಪತ್ರಿಕೆಹೇಳುತಿದೆ.

A reply.—ಹೈದರಾಬಾದ್ ಗನಿಗಳ ವಿಷಯದಲ್ಲಿ ಅಬ್ದುಲ್‌ಹಕ್ ಎಂಬಾತನು ನಡೆಸಿದ ಮೋಸ ಕೃತ್ಯಗಳ ವಿಷಯದಲ್ಲಿ ಸದರೀ ಸರ್ಕಾರದವರು ಆತನನ್ನು ಕೇಳಿದ ಕೆಲವು ಸವಾಲ್‌ಗಳಿಗೆ ಆತನು ಕೊಟ್ಟ ಉತ್ತರಗಳು ಆಚೇವಾರದಲ್ಲಿ ಮಂತ್ರಿಯವರಪರ್ಯಾಲೋಚನೆಗೆಕಳುಹಿಸಲ್ಪಟ್ಟವಂತೆ.

A meeting.—ಕಾಶೀಕ್ಷೇತ್ರದಲ್ಲಿನ ಹಿಂದೂ ಆಲಯಗಳ ಆಯತಿಗಳು ಕೆಲವು, ೧೮೫೭ನೇ ಇಸವಿಯ ಕಲಹದಲ್ಲಿ ಅಕ್ರಮವಾಗಿ ಜಪ್ತೀಮಾಡಲ್ಪಟ್ಟವಾಗಿ ಅವುಗಳನ್ನೆಲ್ಲ ವಾಪಸ್ ಕೊಡಿಸಬೇಕೆಂಬ ಪ್ರಾರ್ಥನಾರೂಪವಾಗಿ ವೈಸ್‌ರಾಯ್ ಯವರಿಗೆ ಒಂದು ಅರ್ಜಿಯನ್ನು ತಯಾರ್ಮಾಡುವದಕ್ಕಾಗಿ ಆಚೇಶನಿವಾರದದಿನ, ಕಲ್ಕತ್ತಾ ಟೌನ್ ಹಾಲಿನಲ್ಲಿ ಒಂದು ಸಮಾಜಸೇರುವದಾಗಿತ್ತು.

The mineral resources of Upper Burma.—ಉತ್ತರ ಬರ್ಮಾದೇಶದಲ್ಲಿನ ಗನಿಗಳ ಸ್ಥಿತಿಯಂ ಚನ್ನಾಗಿ ಪರಿಶೀಲನೆಮಾಡಿ ರಿಪೋರ್ಟ್ ಮಾಡತಕ್ಕಬಗ್ಗೆ, ಇಂಡ್ಯ ಗವರ್ನಮೆಂಟ್ ಜಿಯೋಲಾಜಿಕಲ್ ಸರ್ವೆಗೆಸೇರಿದ ಡಾಕ್ಟರ್ ನಾಟ್ಲಿಂಗ್ ಎಂಬವರು ಅಲ್ಲಿಗೆ ಕಳುಹಿಸಲ್ಪಟ್ಟಿರುತ್ತಾರೆ.

Permission granted.—ಅಬ್ದುಲ್‌ಹಕ್‌ಎಂಬಾತನು ಗನಿಗಳ ವಿಷಯದಲ್ಲಿ ತನಗೂ ಹೈದರಾಬಾದ್ ಸರ್ಕಾರಕ್ಕೂ ನಡೆದ ಕರಾರಿನ ಷರತ್ತುಗಳಂ ನೆರವೇರಿಸುವದಕ್ಕಾಗಿ, ಕರೆಯಿಸಿದಕೂಡಲೆ ಹಾಜರಾಗುವ ಷರತ್ತಿನಮೇಲೆ ಹೈದರಾಬಾದಿನ ಹೊರಗೆ ಹೋಗುವದಕ್ಕೆ ಹುಕುಂ ಕೊಡಲ್ಪಟ್ಟಿರುತ್ತಾನೆ

The Indian salt.—ಕಳೆದ ಏಪ್ರಿಲ್‌ತಿಂಗಳಲ್ಲಿ ಇಂಡ್ಯದೇಶದೊಳು ೩,೨೫,೦೦೦ ಮಣ ಉಪ್ಪುಸಾಗುವಳಿಯಾಗಿ ಅದರಮೇಲೆ ೬೪,೯೩,೦೦೦ ರೂಪಾಯಿಗಳಸುಂಕ ವಸೂಲಾಗಿದೆ. ಕಳೆದವರ್ಷದ ಇದೇತಿಂಗಳಲ್ಲಿ ೩೦,೭೨,೦೦೦ ಮಣ ಉಪ್ಪು ಸಾಗುವಳಿಯಾಗಿ ಸರ್ಕಾರಕ್ಕೆ ೫೯,೧೨,೦೦೦ ರೂಪಾಯಿಗಳು ಹುಟ್ಟುವಳಿಯಾದವು.

A question undecided.—ಇಂಡ್ಯರಾಜ್ಯದ ಸರಹದ್ದು ಪ್ರಾಂತದ ಬಂದೋಬಸ್ತಿಯಬಗ್ಗೆ ಪಂಜಾಬ್‌ದೇಶದ ಪ್ರಮುಖರು ಕೊಡುವದಾಗಿ ತಿಳಿಸಿದ ದ್ರವ್ಯಸಹಾಯದ ವಿಷಯದಲ್ಲಿ ಇಂಡ್ಯ ಗವರ್ನಮೆಂಟನವರು ಪ್ರವರ್ತಿಸುವದಕ್ಕೆ ಪೂರ್ವಭಾವಿಯಾಗಿಅದೇವಿಷಯದಲ್ಲಿಅಲ್ಲಿನಲೆಫ್ಟಿನೆಂಟ್‌ಗವರ್ನರವರ ಅಭಿಪ್ರಾಯವು ನಿರೀಕ್ಷಿಸಲ್ಪಟ್ಟಿದೆ.

The Gaekwar of Baroda.—ಬರೋಡೆ ಗಾಯಕವಾಡ ಮಹಾರಾಜರವರು, ಈಚೆಗೆ ಎರಡು ತಿಂಗಳ ಕಾಲವಾಗಿ ನೀಲಗಿರಿಯಲ್ಲಿ ವಾಸಮಾಡುತಲಿದ್ದರಷ್ಟೆ. ಇನ್ನುಮುಂದೆ ಈ ಬೇಸಿಗೆಯನ್ನು ಯೂರೋಪ್ ಖಂಡಕ್ಕೆ ಸೇರಿದ ಸ್ವಿಟ್ಜರ್ ಲ್ಯಾಂಡ್ ದೇಶದಲ್ಲಿ ಕಳೆಯಬೇಕೆಂದು ನಿಶ್ಚಯಿಸಿದ್ದಾರೆಯೂ, ಇದುವರಿವಿಗೇನೇ ಅವರು ಮುಂಬೈದವವಲ್ಲಿ ಹಡಗುಹತ್ತಿರಬೇಕೆಂತಲೂ ಮದರಾಸ್ ಪತ್ರಿಕೆಯೊಂದು ತಿಳಿಸುತಿದೆ.

A donation.—ಬರದ್ವಾನ್‌ಸಂಸ್ಥಾನದ ವೃದ್ಧರಾಣಿಯವರು ಸ್ತ್ರೀವಿದ್ಯಾಭ್ಯಾಸದಲ್ಲೂ ನೇಟಿವ್‌ಗಳ ಅಭಿವೃದ್ಧಿಯಲ್ಲೂ ದೃಢತರವಾದ ಅಭಿನಿವೇಶವುಳ್ಳವರಾಗಿ,ಬರದ್ವಾನ್‌ನಗರಿನಲ್ಲಿ, ಯೂರೋಪಿಯನ್ ಮತ್ತು ನೇಟಿವ್‌ಬಾಲೆಯರ ವಿದ್ಯಾಭ್ಯಾಸಕ್ಕಾಗಿ, ಲೇಡಿಡೆಪ್ರಿನ್‌ಯೆಂಬವರ ಹೆಸರಿನಲ್ಲಿ ಒಂದು ಪಾಠಶಾಲೆಯಂ ಸ್ಥಾಪಿಸುವದಕ್ಕಾಗಿ ೫,೦೦೦ ರೂಪಾಯಿಗಳು ಕೊಟ್ಟಿರುತ್ತಾರೆ.

A terrific storm.—ಆಚೆ ಬೃಹಸ್ಪತಿವಾರದದಿನ ಕಾಶೀಪ್ರಾಂತದಲ್ಲಿ ಭಯಂಕರವಾದ ಬಿರುಗಾಳಿಯೊಡೆದು ಬಹಳ ನಷ್ಟವುಂಟಾಯಿತು. ಸದರೀಗಾಳಿಯು ಸ್ವಲ್ಪಹೊತ್ತೇ ಹೊಡೆದಾಗ್ಯೂ ಬಹಳ ನಾಶಕರವಾದದ್ದು. ಅದರುದೆಸೆಯಿಂದ ಮೆಚೆ ಓರಿಯಟಲ್ ಗಾರ್ಡನ್ ಯೆಂಬತೋಟಕ್ಕೆ ಬಹಳ ಹಾನಿಯುಂಟಾಯಿತು. ಎತ್ತನೋಡಿದಾಗ್ಯೂ ಮರಗಳು ಮುರಿದುಬಿದ್ದಿವೆ. ಅನೇಕ ಮನೆಗಳು ನೆಲಸಮನಾಗಿ ಹೋದವು.

ಗುಡಿಸಲುಗಳ ಪಿಸರೇಯಿಲ್ಲವಾಯಿತು. ಸಹರದರೂ ಪ್ರಬಲಹಾನಿಗೆ ಗುರಿಯಾಯಿತು. ಅನೇಕ ವ್ಯಕ್ತಿಗಳ ಘಾಸಿಯು ವರಿಪಿಗೆ ರಸ್ತೆಗಳಲ್ಲಿ ಗಿಡಗಳು ಅಡ್ಡವಾಗಿ ಬಿದ್ದು ಸಂಚಾರಕ್ಕೆ ಅವಕಾಶ ತಪ್ಪಿಇದೆ. ಗುಡುಗುಗಳು ದೊಡ್ಡಭರುಗಿ ಹೊಡೆವಂತೆ ಕೇಳಿಸುತಲಿದ್ದವು, ಯೆಂದು ಅಲ್ಲಿನ ಪತ್ರಿಕೆ ಯೊಂದು ತಿಳಿಸುತಿದೆ.

Robbed.—ಮಧ್ಯ ಇಂಡಿಯಾದೇಶದಲ್ಲಿ ಗವರ್ನರ್ ಜನರಲವರಕಡೆ ಏಜಂಟರಾಗಿದ್ದ ಸರ್ ಲೆಪೆಲ್ ಗ್ರಿಫಿನ್‌ಯೆಂಬ ಪ್ರಸಿದ್ಧಪುರುಷರ ಚರಿತ್ರೆಯು ಸಾಮಾನ್ಯವಾಗಿ ಎಲ್ಲರಿಗೂ ತಿಳಿವಳಿಕೆಯು ವಾಗಿಯೆಯುಷ್ಟೆ. ಇವರು ಮಧ್ಯದೇಶದೊಳಗಣ ನೇಟಿವ್‌ಸಂಸ್ಥಾನಗಳ ಭಾಗ್ಯವಿಶೇಷದಿಂದ, ಒಂದು ವರ್ಷದ ಪತಿಶ್ರೀತಕಾಮೇರೆ ಸ್ವದೇಶ ಗಮನೋದ್ಯುಕ್ತರಾಗಿ ತಮ್ಮ ಸಾಮಾನುಗಳನ್ನು ಪೆಟ್ಟಿಗೆಗಳಲ್ಲಿ ಹಾಕಿ ಪ್ಯಾಕುಮಾಡಿಸಿದರು. ಈ ಸಂದರ್ಭದಲ್ಲಿ ಸವರೀಯುವರ ಭಾರಿ? ಬೆಲೆಯುಳ್ಳ ಒಂದು ವಜ್ರ, ಇವರಿಗೆ ಕೊಡಲ್ಪಟ್ಟಿದ್ದ ಸ್ಟಾರ್ ಆಫ್ ಇಂಡಿಯಾ, ಎಂಬ ಬಿರುದು ಪ್ರಶಸ್ತಿ ಸೂಚಕವಾದ ಆಭರಣ, ಆಫ್ಘನಿಸ್ಥಾನದೇಶದಲ್ಲಿ ಮಾಡಿದ ನೌಕರಿಯಬಗ್ಗೆ ಕೊಡಲ್ಪಟ್ಟಮೆಡಲ್, ಅನರ್ಘವಾದ ಒಂದು ಮುತ್ತಿನಹಾರ, ಇವೆಲ್ಲವು ಕಳವಾದವು. ಇವುಗಳಪತ್ತೆಯಬಗ್ಗೆ ಪೋಲೀಸ ಡಿಟೆಕ್ಟಿವ್ ಬಹದೂರರಿಬ್ಬರನ್ನು ನಿಯಮಿಸಿರುತ್ತಾರೆ. ಇವರ ಸಾಮಾನುಗಳನ್ನು ಪ್ಯಾಕಮಾಡಿದ ಮೂವರು ನೌಕರರಮೇಲೆ ಅನುಮಾನಬಂದಿತಿ ಅವರನ್ನೆಲ್ಲ ಇಂದೂರ್ ರೆಸಿಡೆನ್ಸಿ ಸರಹದ್ದಿನಿಂದ ಹೊರಡಿಸಿಬಿಟ್ಟರು. ಈ ದೊಡ್ಡಮನುಷ್ಯರು ನೌಕರಿಯಲ್ಲಿದ್ದ ಕಾಲದೊಳು ಜನಗಳಲ್ಲಿ ಸಂಪಾದಿಸಿ ದಪ್ರೀತಿ ಗೌರವಗಳನ್ನು ವ್ಯಕ್ತಪಡಿಸಲಿಕ್ಕೆ ಪ್ರಸಕ್ತ ಕಳವು ಒಂದೇ ಸಾಕಾಗಿರುತಿದೆ.

LOCAL AND PROVINCIAL NEWS.

ಒಳದೇಶ ಮತ್ತು ತಾಲ್ಲೂಕುಜಾತಿ ವೃತ್ತಾಂತ

Mysore Sanskrit College.—ಮೈಸೂರು ಸಾರಸ್ವತ ಪಾಠಶಾಲೆಗೆ ಮಹಾರಾಜಾ ೫೦ ರೂಪಾಯಿ ಗ್ರಾಂಟಿ ಕೊಡುತ್ತಾ ಇದ್ದದು ಕಳೆದ ಮೇ ತಿಂಗಳ ಲಾಗಾಯತು ೩೦ ರೂಪಾಯಿ ಕೊಡುವ ಹಾಗೆ ಸಾಂಕ್ಷನ್ ಮಾಡಿದರು.—ವೃ. ಚಿಂ.

Privilege leave.—ಸೀನಿಯರ್ ಸರ್ಜರ್ಯನ್‌ರ ಚೀಫ್ ಅಸಿಸ್ಟೆಂಟರಾದ ಅಸಿಸ್ಟೆಂಟ್ ಸರ್ಜನ್ ಎ. ಎಸ್. ಫರ್ನಾಂಡೀಸ್‌ಯವರು ಅವರು ಉಪಯೋಗಿಸಿಕೊಳ್ಳುವ ತಾರೀಖ್ ಲಾಗಾಯತು ಒಂದುತಿಂಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿರುತ್ತಾರೆ.

Privilege leave.—ಕೋಲಾರಡಿಸ್ಟ್ರಿಕ್ಟ್ ಡೆಪ್ಯುಟಿ ಕಮೀಷನರ್ ಪಿ. ಸಿ. ಸುಬ್ಬರಾಯರವರಿಗೆ ಬರುವ ಜುಲೈ ೧ನೇ ತಾರೀಖು ಮೊದಲು ಅಥವಾ ಅವರು ಉಪಯೋಗಿಸಿ ಕೊಳ್ಳುವ ತಾರೀಖ್ ಮೊದಲು ಮೂರು ತಿಂಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿರುತಿದೆ.

Donation.—ಮರಿಮಲ್ಲಪ್ಪನವರಸ್ಕೂಲ್ ಸೆಕ್ರೆಟರಿಯವರಾದ ಮ|| ರಾ|| ಸ ಜಸ್ಟಿಸ್ ಶ್ರೀನಿವಾಸಯ್ಯಂಗಾರ್ಯರವರು ಸದರೀ ಹೊಸಕಟ್ಟಡಕ್ಕೆ ೧,೦೦೦ ರೂಪಾಯಿಗಳನ್ನು ಗವರ್ನಮೆಂಟಿನಿಂದ ಕೊಡಿಸಿ ಕೊಡಬೇಕೆಂದು ದಿವಾನರಿಗೆ ಬರೆದುಕೊಂಡಮೇರೆಗೆ ಸಾಂಕ್ಷನ್ ಮಾಡಿದ್ದನ್ನು ಕೇಳಿ ಬಹಳ ಸಂತೋಷದಿಂದ ಸೂಚಿಸುತ್ತೇವೆ.—ವೃತ್ತಾಂತ ಚಿಂತಾಮಣಿ.

Heavy rain.—ಕಳೆದ ತಿಂಗಳ ೨೮ನೇ ತಾರೀಖ್ ಸೋಮವಾರದದಿನ ರಾತ್ರಿ ಹೊಳೇನರ

ಗ್ರಾಮಗಳ

ಗಳು ತುಂ

ಕೆರೆಗಳು

ಪುರವ ನ

ಉಳ ತಿಳ

A special holiday.—ಶ್ರೀಮನ್ಮಹಾರಾಜಾ ಚಾಮರಾಜೇಂದ್ರ ಒಡೆಯರ್ ಬಹದೂರ್, ಜಿ. ಸಿ. ಎಸ್. ಐ. ಯವರಿಗೆ ಪುತ್ರೋತ್ಸವವಾದ ಶುಭವೃತ್ತಾಂತವು ಕಳೆದ ಶನಿವಾರದ ಸರ್ಕಾರೀ ಗೆಜೆಟಿಮೂಲಕ ಪ್ರಕಟ ಪಡಿಸುವಲ್ಲಿ, ಈ ಶುಭ ಸಂದರ್ಭದ ಗೌರವಾರ್ಥ ಈ ತಿಂಗಳ ೧೬ನೇ ತಾರೀಖ್ ಶನಿವಾರದ ದಿನ ಈ ಸಂಸ್ಥಾನದ ಎಲ್ಲಾ ಇಲಾಖೆಗಳಿಗೂ ರಜಾ ಕೊಡತಕ್ಕದ್ದೆಂದು ಹುಕುಂಮಾಡಿರುತ್ತಾರೆ.

Agricultural and Industrial Exhibition.—ಬರುವ ಅಕ್ಟೋಬರ್ ತಿಂಗಳಲ್ಲಿ ಮೈಸೂರೊಳು ವ್ಯವಸಾಯ ಸಂಬಂಧವಾದ ಮತ್ತು ಕೈಗಾರಿಕೆ ಸಂಬಂಧವಾದ ಪ್ರದರ್ಶನ ಶಾಲೆಯು ಸ್ಥಾಪಿಸಲ್ಪಡುವದು. ಇದರ ಖರ್ಚಿಗಾಗಿ ನಮ್ಮ ಮಹಾರಾಜರವರು ೧೦ಸಾವಿರ ರೂಪಾಯಿಗಳನ್ನು ಮಂಜೂರ್ ಮಾಡಿದಾರೆ. ಈ ಮೊಬಲಗಿನಪೈಕಿ ೭,೦೦೦ ರೂಪಾಯಿಗಳು ಬಹುಮಾನಾರ್ಥವಾಗಿ ವಿನಿಯೋಗಿಸಲ್ಪಡುವದಲ್ಲದೆ ನಿಂತಮೊಬಲಗು ಸಾಧಾರಣವಾಗಿ ಉಪಯೋಗಿಸಿಕೊಳ್ಳುವಂತೆ ಹುಕುಂ ಆಗಿದೆ. ಮ|| ರಿಕೆಟ್ಸ್‌ಯವರು ಇದಕ್ಕೆ ಪ್ರಸಿಡೆಂಟರಾಗಿ ನೇಮಿಸಲ್ಪಟ್ಟಿರುವರು.—ವೃ. ಚಿ.

CORRESPONDENCE.

ಅಯ್ಯಾ,—ಈಚೆಗೆ ನಾಲ್ಕೈದು ದಿನಗಳ ಮೊದಲು ಒಂದು ಪ್ರಬಲ ವಿಷಯವು ನನ್ನಮನವನ್ನಾಕ್ರಮಿಸಿಕೊಂಡು ಅನವರತ ಬಾಧಿಸುತಲಿದೆ. ಅದರ ದೆಸೆಯಿಂದ ಒಂದೊಂದು ವೇಳೆ ನನ್ನ ಮನಸ್ಸು ವಿಕಲ್ಪವು ಹೊಂದುತಲೂ, ಅದರಿಂದ ಹುಟ್ಟಬಹುದಾದ ಅನರ್ಥಗಳಿಗಾಗಿ ಬೇರೊಂದು ಸಮಯದಲ್ಲಿ ಹೆದರುತಲೂ, ತನ್ಮೂಲಕ ಸಂಭವಿಸಬಹುದಾದ ಪ್ರಬಲ ಹಾನಿಗೋಸ್ಕರ ಮತ್ತೊಂದು ಕಾಲದಲ್ಲಿ ದುಃಖಿಸುತಲೂ ಇದೆ. ಸರ್ವಕಾಲದಲ್ಲಿಯೂ ನನ್ನ ಮನಸ್ಸಿಗೆ ಕಳವಳವನ್ನುಂಟುಮಾಡಿರುವ ಇದರ ತಿಳಿಸುವ ವಿಷಯ ನಿಮಿತ್ತವನ್ನು ತಾವು ದಯವಿಟ್ಟು ತಿಳಿಸಬೇಕೆಂದು ಪ್ರಾರ್ಥಿಸುತ್ತೇನೇನೆಂದರೆ—ಲೋಕದಲ್ಲಿ ಮನುಷ್ಯನಿಗೆ ಯಾವದಾದರೊಂದು ವಿಷಯದಲ್ಲಿ ಮಮತೆ, ಅಪೇಕ್ಷೆ, ಅಭಿಮಾನ, ಗೌರವ, ಇವೆಲ್ಲವೂ ಉಂಟಾಗಬೇಕಾದರೆ ಯಾವದೋ ಒಂದು ಪ್ರಬಲ ಕಾರಣವಿರಬೇಕೇ ಹೊರ್ತು ಸಾಮಾನ್ಯವಾಗಿ ಉಂಟಾಗಲಾರದೆಂದೆಣಿಸುತ್ತೇನೆ. ಸದರೀ ವಿಷಯವು ಸ್ವೀಯವೆಂತಲೂ ಪರಕೀಯವೆಂತಲೂ ಯರಡು ಬಗೆಯಾಗಿರುವದರಿಂದ ಸ್ವೀಯ ವಿಷಯಗಳಲ್ಲಿ ಉಂಟಾಗುವ ಅಭಿಮಾನಕ್ಕೆ ಸ್ವೀಯಾಭಿಮಾನವೆಂತಲೂ, ಅನ್ಯವಿಷಯಕವಾದ ಅಭಿಮಾನಕ್ಕೆ ಪರಕೀಯಾಭಿಮಾನವೆಂತಲೂ ವ್ಯವಹಾರ ವುಂಟಾಗಿದೆಯಷ್ಟೆ. ಇವುಗಳ ಪೈಕಿ ಸ್ವೀಯ ವಿಷಯಗಳಲ್ಲುಂಟಾಗುವ ಅಭಿಮಾನಕ್ಕೂ ಅಪೇಕ್ಷೆಗೂ ನಾವು ಕಾರಣ ಹುಡುಕಬೇಕಾಗಿರುವದಿಲ್ಲವು. ಯಾತಕ್ಕೆಂದರೆ, ಸ್ವೀಯವಸ್ತುಗಳಾಗಿರುವದೇ ಅಭಿಮಾನ ವುಂಟಾಗಲಿಕ್ಕೆ ಕಾರಣವಾಗಿರುವದರಿಂದ ಅಂತಾ ಸ್ವೀಯಾಭಿಮಾನವೆಂಬದು ಸಕಲ ಪ್ರಾಣಿನಿಯತವಾದ ಗುಣವಾಗಿರುತಿದೆ. ಇಂತಾ ಅಭಿಮಾನಕ್ಕೆ ಜೀವಾಧಿಷ್ಠಾನವಾದ ಶರೀರಾರಭ್ಯ ಪುತ್ರಮಿತ್ರ ಕಳತ್ರ, ಗೃಹಾರಾಮ, ಪಶು, ಕ್ಷೇತ್ರ, ದೇಶ, ಮುಂತಾದವೂ, ಸ್ವವಿದ್ಯೆ, ಸ್ವಮತಾಚಾರ, ಸ್ವವೇಷ, ಸ್ವಭಾಷೆ, ಇವೂ ಸಾಕ್ಷಾತ್ತಾಗಿಯೂ ಪರಂಪರೆಯಿಂದಲೂ ವಿಷಯಗಳಾಗಿರುತಿವೆ. ಹೀಗೆ ಸ್ವದೇಶ, ಸ್ವಜನ, ಸ್ವಮತ, ಆಚಾರ, ವೇಷ ಭಾಷಾದಿಗಳಲ್ಲಿರಬೇಕಾದ ಅಭಿಮಾನವು ನಮ್ಮ ಜನಗಳಿಗೆ, ತತ್ರಾಪಿ ಈ ದೇಶೀಯರಿಗೆ ವಿಶೇಷತಃ ಕ್ಷಯಿಸಿ ಹೋಗಲಿಕ್ಕೂ, ಅವರಿಗೆ ಅನ್ಯ ವಿಷಯಗಳಲ್ಲಿ ವಿಶೇಷ ವ್ಯಾಮೋಹ ವುಂಟಾಗಲಿಕ್ಕೂ, ಯಾವದೋ ಒಂದು ಪ್ರಬಲ ಕಾರಣವಿರಬೇಕೆಂದೆಣಿಸುತ್ತೇನೆ. ಮಸಲಾ ಒಂದು ದೇಶದಲ್ಲಿ ಬಹುಕಾಲದಿಂದನುಸರಿಸಿ ಬರುತಲಿರುವ ಆಚಾರ ವ್ಯವಹಾರಗಳು ಅಲ್ಲಿನ ದೇಶ, ಕಾಲ, ಜನ, ಸ್ಥಿತಿ, ಸಂಪ್ರದಾಯಗಳನ್ನನುಸರಿಸಿ ಏರ್ಪಡಿಸಲ್ಪಟ್ಟವಾಗಿರುತಿವೆಯೇ ಹೊರ್ತು ಬೇರಿಲ್ಲವು. ಅಂತಾ ಸಂಪ್ರದಾಯಗಳು ಸರ್ವಪ್ರಕಾರದಿಂದಲೂ ಆ ದೇಶೀಯನಿಗೆ ಒಪ್ಪಿತ ಆತನ ಆವಶ್ಯಕತೆಗೆ ಸಾಕಾದವಾಗಿರುತಿವೆ. ಹೀಗಿದ್ದಾಗ್ಯೂ ಅವು ಬದಲಾಯಿಸಲಿಕ್ಕೆತ್ನಿಸುವಾಗ್ಯೆ ಅವುಗಳಿಂದ ಇದುವರಿವಿಗೆ ಉಂಟಾಗದಿರುವ ತೊಂದರೆಗಳಾದರೂ ಪ್ರಾಪ್ತವಾಗಬೇಕು. ಅಥವಾ ನೂತನವಾಗಿ ಅಂಗೀಕರಿಸತಕ್ಕದ್ದು ಮೊದಲಿನೆಯದಕ್ಕಿಂತಲೂ ವಿಶೇಷ ಪ್ರಯೋಜನ ಕರವಾಗಿಯಾದರೂ ಇರಬೇಕು. ಇವರಡೂ ಇಲ್ಲದೆ ಒಬ್ಬನು ಕಂಡು ಮತ್ತೊಬ್ಬನು ತನ್ನ ಸ್ಥಿತಿ, ಗತಿ, ಆಚಾರ, ಆಹಾರ, ವ್ಯವಹಾರ, ವೇಷ, ಭಾಷೆಗಳನ್ನೆಲ್ಲ ಒಂದೊಂದು ಕಾಲದಲ್ಲಿ ಒಂದೊಂದು ಬಗೆಯಾಗಿ ಹಗಲು ವೇಷಗಾರನಂತೆ ಬದಲಾಯಿಸಿ ಕೊಳ್ಳುತಲಿರಲಿಕ್ಕೆ ಕಾರಣವೇನೋ ನನ್ನಬುದ್ಧಿಗೆ ಗೋಚರವಾಗಲಿಲ್ಲವು. ನಾವು ಲೌಕಿಕಪ್ರಯೋಜನಾಪೇಕ್ಷೆಯಿಂದ ಅನ್ಯದೇಶ ಭಾಷೆಯನ್ನು ಬಹಳ ಆಸಕ್ತಿಯೊಡನೆ ಕಲಿಯತಕ್ಕವರಾಗಿದೇವೆ. ಯಾವ ಪರ್ಯಂತ ಬ್ರಿಟಿಷ ಗವರ್ನಮೆಂಟಿನವರು ಈ ಇಂಡ್ಯಾದೇಶದಲ್ಲಿ ನೆಲೆಗೊಂಡು ಪ್ರಭುತ್ವಮಾಡುತಲಿರುವರೋ; ಯಾವತನಕ ಇಂಗ್ಲಿಷ್ ವಿದ್ಯೆಯನ್ನಭ್ಯಸಿಸಿದವರ ಜ್ಞಾನವು ಪುರಸ್ಕರಿಸಿ ಸನ್ಮಾನಿಸುತ ಲಿರುವರೋ ತಾವತ್ಪರ್ಯಂತ ನಮಗೆ ಇಂಗ್ಲಿಷ ಭಾಷಾಭ್ಯಾಸವೂ, ಯೂನಿವರ್ಸಿಟಿ ಪ್ರಶಸ್ತಿಗಳೂ, ಅವರ ಟೆಕ್ಸ್‌ಟಬುಕ್ಕುಗಳೂ ನಮಗೆ ಬೇಕಾಗಿರುತಿವೆ. ಇಂಗ್ಲಿಷಿನವರು ಈ ರಾಜ್ಯವು ನೀರಸವಾಯಿತೆಂದೆಣಿಸಿ ಇದು ಸ್ವತಃ ಬಿಟ್ಟುಹೋದಾಗ್ಯೂ ಅಥವಾ ಅವರಿಗಿಂತ ಬಲಿಷ್ಠರಾದ ಅರಸನೊಬ್ಬ ನೇರ್ಪಟ್ಟು ಅವನೀದೇಶವು ಸ್ವಾಧೀನಪಡಿಸಿಕೊಂಡಾಗ್ಯೂ ಆಗ ಇಂಗ್ಲಿಷಭಾಷಾ ಪ್ರಚಾರ್ಯವು ಅತಿ ಕ್ಷಿಪ್ರವಾಗಿ ನಶಿಸಿ, ಈಗ್ಯೆ ೫೦ ವರುಷಗಳಿಂದೀಚೆಗೆ ಅದು ಹ್ಯಾಗೆ ಅಭಿವೃದ್ಧಿಯನ್ನೈದುತಲಿದೆಯೋ ಬದಸ್ತೂರ್ ಮಾಲಿನ್ಯವನ್ನು ಹೊಂದುವದೆಂಬದರೊಳೇನೂ ಸಂಶಯವಿಲ್ಲವು. ನಾವು ಯಾವಾಗಲು ಕುಕ್ಷಿಭರಣಾರ್ಥ ಒಬ್ಬರನ್ನಾಶ್ರಯಿಸಿ ಅವರವ್ರ ನಾದವನ್ನಿರೀಕ್ಷಿಸುತ ಜೀವಿಸಬೇಕಾದವರಾಗಿಗಿರುವೆವಷ್ಟೆ. ಮುಸಲ್ಮಾನರ ದೌಲತ್ತಿನಲ್ಲಿ ಜನಗಳೆಲ್ಲರೂ ಫಾರಿಸಿ ದಖನೀಭಾಷೆಗಳನ್ನು ಅಭ್ಯಸಿಸಿ ಅವುಗಳಲ್ಲಿ ಪ್ರವೀಣರೆನಿಸಿಕೊಂಡು ಸರ್ಕಾರದ ನೌಕರಿಗಳನ್ನುಮಾಡಿ ಜೀವಿಸುತಲಿದ್ದರು. ಇದಲ್ಲದೆ ಆಳತಕ್ಕ ಅರಸರು ಮುಸಲ್ಮಾನರಾಗಿದ್ದದರಿಂದ ಅವರು ಅಂಗೀಕರಿಸಿದ್ದ ಪದ್ಧತಿಗಳನ್ನು ತಾವೂ ಅಂಗೀಕರಿಸಿದರೆ ತನ್ಮೂಲಕ ಅವರು ಗೌರವಿಸುವರೆಂಬ ಭ್ರಾಂತಿಯೊಂದು ಜನಗಳಿಗೆ ತಲೆದೋರಿ ಅವರ ಜನಾನಾಪದ್ಧತಿ ಮೊದಲಾದ ಕೆಲವು ಆಚಾರಗಳನ್ನೂ ಬಾಜೂಬಂದ್ ವಗೈರೆ ಕೆಲವು ಅವರಆಭರಣಗಳನ್ನೂ ಪರಿಗ್ರಹಿಸಲಾರದು. ಮುಸಲ್ಮಾನರ ಪ್ರಭುತ್ವವಿರುವ ಕಡೆಗಳಲ್ಲೆಲ್ಲ ಜನರ ಆಚಾರ ವ್ಯವಹಾರಗಳು ಸ್ವಲ್ಪಮಟ್ಟಿಗೆ ಮುಸಲ್ಮಾನ ಪದ್ಧತಿಗೆ ತಕ್ಕಂತಿದ್ದಾಗ್ಯೂ ಮಿಕ್ಕಕಡೆಗಳಲ್ಲೆಲ್ಲ ಸದರೀ ಪದ್ಧತಿಗಳೆಲ್ಲ ದೂಷ್ಯಗಳಾಗಿ ಭಾವಿಸಲ್ಪಡುತಿವೆ. ಮಸಲಾ ಈಮೈಸೂರುದೇಶವು ಕೆಲವುಕಾಲ ಮುಸಲ್ಮಾನರ ದೌಲತ್ತಿನೊಳಿದ್ದಾಗ್ಯೂ ಈಗ ಅದರ ಗುರ್ತುಗಳೇನಾದರೂ ಇವೆಯೆ ! ಫಾರಸಿ ದಖನಿಭಾಷೆಗಳಿಗೆ ಇಲ್ಲಿ ಪೂರ್ವದಪ್ರಚಾರ್ಯವಿದೆಯೆ? ಬಾಜೇಬಂದ್ ಜೋಮಾಲೆಮುಂತಾದಆಭರಣಗಳನ್ನು ಈಗಿನವರು ಪ್ರೀತಿಸುವಂತಿದಾರೆಯೆ? ಇಲ್ಲವು ಇವೆಲ್ಲ ಈಗಕುಂದಿದ್ದಾಂಗಬದಲಾಯಿಸುತಬಂತು. ಇದಕ್ಕೆ ಪ್ರಭುತ್ವಬದಲಾವಣೆಯೆ ಮುಖ್ಯಕಾರಣವೇಹೊರ್ತು ಮತ್ತೊಂದಿಲ್ಲವು. ಹೀಗೆಯೇ ನಾವು ಇಜ್ಜೊಬ್ಬರ ಪ್ರಭುತ್ವದಲ್ಲಿ ಒಂದೊಂದು ಬಗೆ ವೇಷಗಳನ್ನು ಹಾಕಿಕೊಂಡು ತದನುಗುಣಗಳಾದ ಆಚಾರವ್ಯವಹಾರಗಳನ್ನು ಕೈಗೊಂಡು ಜೀವಿಸುವದುನೋಡಿದರೆ ನಾಟಕಶಾಲೆಯಲ್ಲಿ ಸಂದರ್ಭೋಚಿತಗಳಾದ ವೇಷಭಾಷೆಗಳೊಡನೆ ಬಂದು ಆಡತಕ್ಕ ವಿದೂಷಕಾದಿ ವೇಷಗಾರರಿಗೂ ನಮಗೂ ಯಾವವಿಧ ತಾರತಮ್ಯವೂ ಕಂಡುಬರ್ರವದಿಲ್ಲವು. ಹಿಂದಿನಗವರ್ನಮೆಂಟಗಳಲ್ಲಾಗಲಿ ಜನಗಳನ್ನು ಆಚಾರ ವ್ಯವಹಾರಗಳವಿಷಯಗಳಲ್ಲಿ ಬಲಾತ್ಕರಿಸುತಲಿದ್ದಂತೆ ಯಾಗಲಿ, ಅಥವಾ ಅಂತಾ ವೇಷಧಾರಿಗಳನ್ನು ಅಭಿಮಾನಿಸುತಲಿದ್ದರೆಂತಲಾಗಲಿ, ಯಾವದಾಖಲೆಯೂ ಕಾಣಿಸಲಿಲ್ಲವು. ಆಯಾ ಪ್ರಭುತ್ವದಲ್ಲಿ ದರ್ಬಾರ್ ದುಸ್ತೆಂದುಕೆಲವು ನಿಯಮವೇರ್ಪಟ್ಟಿರಬಹುದು. ಪರಂತು ದರ್ಬಾರಿಗೆ ಹೋಗುವವರು ಆ ಉಡುಪಿನೊಡನೆ ಬರಬೇಕೆಂಬ ನಿಯಮವಿದ್ದಿರಬಹುದೇ ಹೊರ್ತು ಕಛೇರಿಗೆ ಬಾಯಿದಾನೆಗೆ ಹೋಗುವಾಗಲು ಸಹ ಅದನ್ನೇ ಧರಿಸಿಕೊಂಡಿರಬೇಕೆಂಬ ನಿರ್ಬಂಧವುಂಟಾಗಿರಲಾರದೆಂದೆಣಿಸುತ್ತೇನೆ. ಹಿಂದಿನ ಕಾಲದೊಳೊಂದುವೇಳೆಹಾಗಿದ್ದಾಗ್ಯೂ ಈಗಬ್ರಿಟಿಷ್ ಗವರ್ನಮೆಂಟಿನಲ್ಲಿ ಅಂತಾದ್ದೊಂದೂ ಇಲ್ಲವು ಹೀಗಿದ್ದಾಗ್ಯೂ ನಮ್ಮವರು ತಮ್ಮ ಜಾತಿ ಕುಲ ಮರ್ಯಾದೆಗಳಲ್ಲಿ ಅನಾಸ್ಥೆಯೂ, ಸ್ವದೇಶ ಭಾಷೆಯೊಳು ಅಶ್ರದ್ಧೆಯೂ, ತಮ್ಮ ಶಾಸ್ತ್ರಗಳಲ್ಲಿ ಅನಾದರವೂ ಹುಟ್ಟಿ ಅವುಗಳಿಂದ ಪರವಿದ್ಯೆಯಲ್ಲಿ ಅಕ್ಕರೆಯೂ, ಪರಸಮಯದೊಳಭಿನಿವೇಶವೂ ವಿಜಾತೀಯಗಳಾದ ಪರರ ವೇಷಾಚಾರಗಳಲ್ಲಿ ಅಭಿರುಚಿಯೂ ಅಭಿವೃದ್ಧಿಯಾಗುತಲಿದೆ. ಕಡೆಗೆ ನಾವು ನಮಸ್ಕಾರವೆಂದು ಹೇಳಿ ಕೈಮುಗಿದರೆ ಪ್ರತಿಯಾಗಿ ಕೈಮುಗಿಯುವದು ಅವಮಾನವೆಂದು ಭಾವಿಸಿ ಗುಡ್ ಮಾರ್ನಿಂಗ್ ಎಂದು ಶಿರಃಕಂಪನ ಮಾಡುವಂತೆಯೂ, ಶರೀರವನ್ನು ಘಳಿಗೆ ಗುರಿ ಮಾಡಕೂಡದೆಂಬ ಇಂಗ್ಲಿಷ್ ಸಿದ್ಧಾಂತವನ್ನನುಸರಿಸಿ ಸಂಧ್ಯಾವಂದನಾದಿ ಕಾಲಗಳಲ್ಲಿ ಕೂಡ (ಪ್ರಾಯೇಣ ಅದಂತೊಲೆದವರೆ ಅಧಿಕ) ಫ್ಲನಲ್ ಬನಿಯನ್‌ಗಳನ್ನು ತೆಗೆಯದೆ ಹಾಕಿಕೊಂಡಿರುವಂತೆಯೂ, ಬರೀ ನೆಲದಲ್ಲಿ ನಡೆದರೆ ಶೀತವು ತಲೆಗೆ ಹತ್ತುವದೆಂಬ ಭಾವನೆಯೊಡನೆ ಅಡಿಗೆ ಮನೆಯಲ್ಲಿ ಸ್ಲಿಪ್ಪರ್‌ಗಳನ್ನು ಹಾಕಿಕೊಂಡು ತಿರುಗಾಡುವಂತೆಯೂ, ವಿಶೇಷ ಹೇಳಲ್ಯಾತಕ್ಕೆ, ತಾವು ಯಾವ ಜಾತಿಯವರೋ ಅಂತಾ ಜಾತಿಯವರೆಂದು ಅನ್ಯರಿಂದ ಕರೆಯಲ್ಪಡುವದನ್ನು ಸಹ ಅತಿಹೇಯವಾಗಿ ಯೆಣಿಸುವಂತೆ ಪರಿಣಮಿಸಿದೆ. "ಚವಿಕಂತುಸದಾಕುಟಿ" ಎಂದು ತಿಳಿಸಲ್ಪಟ್ಟಿರುವದರಿಂದ ಕಂಬಳಿಗಳನ್ನು ಹೊದ್ದುಕೊಳ್ಳುವದಕ್ಕೆ ಬದಲು ಮಾರ್ಕೆಟ್ಟಿಗೆ ಸೇರಿದ ಲೀನ್ಸ್ ಮುಕಡಿಯಲ್ಲಿ ತಯಾರಾಗುವ ಸರ್ಜ ಯ್ಯಾಡ್ಲಿನಗಳನ್ನು ಕೊಂಡು ಹೊದ್ದುಕೊಂಡರೆ ಯೇನು ಬಾಧಕ? ಪೂರ್ವಿಕರಾದ ಮಹರ್ಷಿಗಳಿಂದ ಸಹ ಅಂಗೀಕರಿಸಲ್ಪಟ್ಟದ್ದ ಕೃಷ್ಣವ್ಯಾಘ್ರಾಜಿನಗಳಲ್ಲಿ ಸ್ಲಿಪ್ಪರ್‌ಗಳನ್ನು ಶುಚಿಯಾಗಿಮಾಡಿ ಹಾಕಿಕೊಂಡು ಮನೆಯಲ್ಲಿ ತಿರುಗಾಡಿದ್ದರಿಂದ ಬಾಧಕವೇನು ? ಪುಷ್ಪ ಫಲಗಳಿಂದ ಶೇಖರವಾದ ಮಧು ನಮಗೆ ಗ್ರಾಹ್ಯವಾಗಿರುವಾಗ್ಯೆ ವೈನನ್ನು ನಾವ್ಯಾಕೆ ಸ್ವೀಕರಿಸಬಾರದು. ಮಹಾಂಸಾದಿಗಳಿಂದಲೇ ನಮ್ಮ ಹಿರಿಯರು ಶ್ರಾದ್ಧಾದಿಗಳಂ ಮಾಡುತಲಿದ್ದರೆಂದು ಸ್ಪಷ್ಟವಾಗಿರುವಲ್ಲಿ ನಾವು ಯಾತಕ್ಕೆ ಈಗ ಮಾಂಸ ಭಕ್ಷಣ ಮಾಡಕೂಡದು ? ಎಂದು ಕೇಳಬಹುದು ? ಮದ್ಯ ನಿಷೇವಣದಿಂ ಅನ್ಯತವೂ, ಮಾಂಸಾಶನದಿಂ ಕ್ರೌರ್ಯವೂ, ಹೀಗೆ ಒಂದೊಂದರಿಂದೊಂದೊಂದು ದುರ್ಗುಣವುಂಟಾಗಿ ಮನುಷ್ಯನಂ ಭ್ರಷ್ಟನನ್ನಾಗಿ ಮಾಡುವದಾದದರಿಂದ ಇಹಲೋಕ ಚಿಂತೆಯೇಯಿಲ್ಲದ ಅರಣ್ಯವಾಸಿಗಳಾದ ತಾಪಸಿಗಳಿಗೆ ಆಗಿನಕಾಲ ದೇಶ ಬುದ್ಧಿ ಸ್ಥಿತಿಗತಿಗಳಿಗೆ ಅವು ಅನುಕೂಲಗಳಾಗಿ ಗ್ರಹಿಸಲ್ಪಟ್ಟಿದ್ದರೂ ಲೌಕಿಕ ಪ್ರಯೋಜನಾಪೇಕ್ಷೆಯಾದ ತತ್ರಾಪಿ ಸದ್ಯೋಜ್ಞಾನದರ್ಶನ ಚಾರಿತ್ರ್ಯಗಳಿಂಕೋರುವ ಪುರುಷನಿಗೆ ಅವು ಸರ್ವಾತ್ಮನಾ ಅನರ್ಹಗಳೆಂದು ಪೂರ್ವಿಕರು ಪುರೋಭಿವೃಷ್ಟಿಯಿಂದವಿಚಾರಮಾಡಿ ನಿರ್ಧರಿಸಿರುತ್ತಾರೆ. ಪಾರ್ಸಿ, ಚೀನಾ, ತುರ್ಕಿ, ಇಂಗ್ಲಿಷ್ ಜನರಿಗೆ ಇರುವಂತೆ ನಮ್ಮವರಿಗೂ ಅನಾದಿಯಾದ ಉಡಿಗೇ ಕ್ರಮ ವೊಂದು ನೆಲೆಗೊಂಡಿರುತಿದೆ. ಅದು ಯಾವದೆಂದರೆ, ಉಟ್ಟುಕೊಳವಂ ಪಂಚೆ ಪಕಡಿ, ಕಂಚುಕವೆಂದರೆ ಅಂಗಿ, ಪ್ರಾವಾರಣವೆಂದರೆ ಪರಾಡ್ಯಿ ಪರಿಕರವೆಂದರೆ ಕಮ್ಮರ

ಚುಪ್, ಉತ್ತರೀಯವೆಂಬ ಅಂಗವಸ್ತ್ರ ಮೊದಲಷ್ಟೆ ಇವು ರಾಜಾಸ್ಥಾನಕ್ಕೆ ದರ್ಬಾರ್ ಕಾಲದಲ್ಲಿ ಹೋಗಬೇಕಾದವರು ಆ ಕಾಲದೊಳು ಮಾತ್ರ ಧರಿಸತಕ್ಕ ಲಿಬಾಸಾಗಿಯೂ, ಉತ್ತರೀಯಾಂತರೀಯಗಳುಮಾತ್ರ ವೈದಿಕರು ಧರಿಸುವ ವಸ್ತ್ರಕ್ರಮುವಾಗಿಯೂ ಯಿರುತಿದೆ. ಔತ್ತರೀಯ ಬ್ರಾಹ್ಮಣರಲ್ಲಿ ಈ ಕ್ರಮುವು ಅದ್ಯಾಪಿ ಅನುಸರಿಸಲ್ಪಡುತಿದೆ. ಇಂತಾ ಇಂಡ್ಯ ದೇಶೀಯರ ಉಡಿಗೆಯು ದೇಶ ಭೇದವನ್ನನುಸರಿಸಿ ಸ್ವಲ್ಪ ಸ್ವಲ್ಪ ವ್ಯತ್ಯಾಸ ವುಳ್ಳದ್ದಾಗಿದ್ದಾಗ್ಯೂ ಸ್ಥೂಲ ದೃಷ್ಟಿಗೆ ಒಂದೇ ವಿಧವಾಗಿರುವದರಿಂದ ನಮ್ಮದರಿಗೆಲ್ಲ ಇದು ವ್ಯಾವರ್ತಕವಾಗಿ ನೋಡಿದ ಮಾತ್ರದಿಂ ಫಲಾನೆ ದೇಶದವರೆಂದು ತಿಳದುಕೊಳ್ಳಲಿಕ್ಕೆ ಸಾಧಕವಾಗಿರುತಿದೆ. ರುಮಾಲ್ ಕಟ್ಟುವದಿಂದಲೇ ಪುನೆ, ಧಾರವಾರ್, ಬಳ್ಳಾರಿ, ಮದರಾಸ್, ಗುಂಟೂರ್, ಮೈಸೂರು ದೇಶೀಯರನ್ನು ಸುಲಭವಾಗಿ ಗೊತ್ತು ಮಾಡಬಹುದು. ಪರಂತು ರುಮಾಲ್ ಮಾತ್ರ ಯೆಲ್ಲರಿಗೂ ಸಾಮಾನ್ಯವಾಗಿರುವದು. ಈಗ ಇಂತಾ ಲಿಬಾಸನ್ನು ಆಮೂಲವಾಗಿ ಬದಲಾಯಿಸಿ ಬಿಡುವಷ್ಟು ಅಭಿರುಚಿಯು ನಮ್ಮವರಿಗೆ ಅಧಿಕವಾಗಿದೆ. ಕಡೆಗೆ ಒಂದು ವಿಶೇಷ ಸಂದರ್ಭದಲ್ಲಿ ನೇಟವ್ ದುಸ್ತಿನೊಡನೆ ದಯಮಾಡಿ ಬರಬೇಕೆಂದು ಕೇಳಿಕೊಳ್ಳಲ್ಪಟ್ಟರೂ ಆ ರೀತಿ ಬರುವದು ತಮಗೆ ಮಾನಹಾನಿ ಯೆಂಬ ಭಾವನೆ ಯುಂಟಾಗಿದೆ. ದರ್ಬಾರಿಗೆ ಹೋಗುವವರು ಬರೀಕಾಲಿನಲ್ಲಿ ಹೋಗಬೇಕೆಂಬ ನಿಯಮುವು ನಾಬಕ್ ಮಹಾರಾಜಾ ಕೃಷ್ಣರಾಜ ಒಡೆಯರವರ ಕಾಲದ ವರಿವಿಗೆ ಈ ದೇಶದಲ್ಲಿ ನೆಲೆಗೊಂಡಿತ್ತು. ಈಗ ಒಬ್ಬ ತಾಲ್ಲೂಕು ಅಮಲ್‌ದಾರನು ಮೊದಲು ಮಹಾ ರಾಜಸನ್ನಿಧಿಯಲ್ಲಿ ಬೂಟ್ಸಿನೊಡನೆ ಸಂಚರಿಸುವಷ್ಟು ಸ್ವಾತಂತ್ರ್ಯ ವುಂಟಾಗಿದೆ. ಗಂಡುಸರಿಗೆ ತಮ್ಮ ದುಸ್ತನ್ನು ಬದಲಾಯಿಸಿಕೊಳ್ಳುವದರಲ್ಲಿ ಹ್ಯಾಗೆ ಅಭಿರುಚಿ ಅತ್ಯಧಿಕವಾಗಿದೆಯೋ ಹಾಗೆಯೇ ತಮ್ಮ ಹೆಂಗಸರ ವಸ್ತ್ರಧಾರಣ ಕ್ರಮವಂ ಬದಲಾಯಿಸುವ ಕೋರಿಕೆಯು ಅಧಿಕವಾಗಿದೆ. ಪರಂತು ಈ ಕೋರಿಕೆಯನ್ನು ಸ್ವವಿಷಯದಲ್ಲಿ ತೋರಪಡಿಸುವಂತೆ ಸ್ತ್ರೀವಿಷಯದಲ್ಲಿ ವ್ಯಕ್ತಪಡಿಸಲಿಕ್ಕೆ ಇನ್ನೂ ಸ್ವಲ್ಪ ಸಂಕೋಚಿಸುತಲಿದ್ದಾಗ್ಯೂ ತಮ್ಮ ತೃಪ್ತ್ಯರ್ಥ ರಾತ್ರಿ ಕಾಲದಲ್ಲಿ ಅವರಿಗೆ ಬೇಕಾದ ಕ್ರಮಗಳಿಂದ ವಸ್ತ್ರಗಳಂ ಉಡಿಸಿ ನೋಡಿ ಸಂತೋಷಪಡುತ್ತಾರೆ. ಮುಖ್ಯವಾಗಿ ಇದರಿಂದುಂಟಾಗುವ ಪ್ರಯೋಜನವೆಂತಾದ್ದೋ ನನಗೆ ತಿಳಿಯಲಿಲ್ಲವು. ಮುಸಲಾ ಒಬ್ಬ ಯೂರೋಪಿಯನಿಗೆ ಧೋತ್ರ ಉಡಿಸಿ ತಲೆಗೆ ರುಮಾಲ್ ಸುತ್ತಿ ಮುಖಕ್ಕೆ ನಾಮುಹಾಕಿ ಅವನಿಗೆ ನಿಲುವಂಗಿಯೊಂದು ಇಳಿಬಿಟ್ಟ ಸೊಂಟಕ್ಕೆ ಧೋತ್ರವನ್ನು ಸುತ್ತಿದರೆ ಹ್ಯಾಗೆ ಹೇಳನಾಸ್ಪದವಾಗಿರುವದೋ ಹಾಗೆಯೇ ನಮ್ಮವರು ತಮಗೆ ಅಸಹಜವಾದ ಇಂಗ್ಲಿಷ್ ಡ್ರೆಸ್ಸಿನಲ್ಲಿ ಕೆಲವು ಭಾಗವನ್ನು ಅಂಗೀಕರಿಸಿ ಕೆಲವು ಭಾಗಕ್ಕೆ ತಮ್ಮ ಸಂಪ್ರದಾಯ ಪ್ರಕಾರ ಬಟ್ಟೆಗಳಂ ಧರಿಸಿ ದೊಡ್ಡ ಸಭೆಗಳಿಗೂ ರಾಜಸನ್ನಿಧಿಗೂ, ಪೂಜಾಸ್ಥಾನಕ್ಕೂ, ಹೋಗಿಬರುವವಂ ನೋಡಿದರೆ, ಇವರು ಯಾರವಮಾರ್ಗವನ್ನನುಸರಿಸುತ್ತಾರೆಯೋ ಅಂತಾ ಯೂರೋಪಿಯನ್ನರು ಸಹ ಅಸಹಿಸಿಕೊಂಡು ತಮ್ಮನ್ನು ಅಣಗಿಸಲಿಕ್ಕೋಸ್ಕರ ಈ ರೀತಿ ಮಾಡುತ್ತಾರೆಂತಲಾಗಲಿ, ಸ್ವಸಂಪ್ರದಾಯದಲ್ಲಿ ಆದರವಿಲ್ಲದ ಗರ್ವಿಷ್ಠರೆಂತಲಾಗಲಿ ಭಾವಿಸುವಂತಿದೆ. ಮುಖ್ಯವಾಗಿ ಅವರವರು ತಮ್ಮ ತಮ್ಮ ಪದ್ಧತಿಯನ್ನನುಸರಿಸುವದೇ ಶ್ರೇಯಸ್ಕರವೆಂದೆಣಿಸುತ್ತೇನೆ. ಇದು ನಾಗರಿಕತೆಗೆ ಬಹಳ ಕೊರತೆಯೆಂದು ಈಗಿನವರು ಯಾತಕ್ಕೆ ಭಾವಿಸುತ್ತಾರೆಯೋ, ಸ್ವವಿಷಯಗಳಿಗಿಂತಲೂ ಅನ್ಯವಿಷಯಗಳನ್ನು ಯಾತಕ್ಕೆ ವಿಶೇಷ ಕೊಂಡಾಡುತ್ತಾರೆಯೋ ಅದರ ಕಾರಣಗಳಂ ತಿಳಿಸಿ ನನ್ನ ಸಂಶಯವಂ ಹೋಗಲಾಡಿಸಬೇಕೆಂದು ಕೋರುತ್ತೇನೆ.

೯-೬-೮೮ } ತಮ್ಮ ವಿಧೇಯನಾದ,
ಬೆಂಗಳೂರು. } ಸಂಶಯಾತ್ಮ.

SUMMARY OF NEWS.
ವೃತ್ತಾಂತ ಸಂಗ್ರಹ.

ನಮ್ಮ ಬಂಧುಗಳಾದ ಹವ್ಯಕ ಸುಬೋಧ ಕರ್ಣರಮೇಲೆ ಈಗ್ಯೆ ಎರಡು ಮೂರು ತಿಂಗಳಿಂದ ನಡೆಯುತಲಿದ್ದ ಮಾನನಷ್ಟ ಮೊಕದ್ದಮೆಯ ವಿಚಾರಣೆಯು ಪೂರ್ತಿಯಾಗಿ ಅವರಿಗೆ ೭೫ರೂಪಾಯಿಗಳು ಜುಲ್ಮಾನೆವಿಧಿಸಲ್ಪಟ್ಟಿತೆಂದು ಮುಂಬೈ ಗೆಜೆಟ್ ಪತ್ರಿಕೆಗೆ ಬಂದ ತಂತಿ ವೃತ್ತಾಂತದಿಂದ ತಿಳಿಯಬರುತಿದೆ. ಈ ಮೊಕದ್ದಮೆಗೆ ಸೇರಿದ ಕಾಗದ ಪತ್ರಗಳು ಇನ್ನು ನಮ್ಮ ಕೈಗೆ ಬರಲಿಲ್ಲವಾಗಿ ಈ ವಿಷಯದಲ್ಲಿ ನಮ್ಮ ಅಭಿಪ್ರಾಯವನ್ನು ಮುಂದಿನವಾರಕ್ಕೆ ಇಡಬೇಕಾಯಿತು.—

ಅಬ್ದುರ್‌ಹಕ್ ಎಂಬವನು ನಿಜಾಂ ಸರ್ಕಾರದವರನ್ನು ಮೋಸಗೊಳಿಸಿ ಅವರ ಹೆಸರಿನಲ್ಲಿ ದರ್ಖ ಮೈನಿಂಗ್ ಕಂಪೆನಿಯಲ್ಲಿ ಷೇರುಗಳನ್ನು ಕೊಂಡುಕೊಳ್ಳಲಿಕ್ಕೆ ತೆಗದುಕೊಂಡ ಹಣವನ್ನು ಮರಳಿ ಕೊಡುವದಕ್ಕೂ, ಆ ಷೇರುಗಳನ್ನು ತಾನು ತಿರಿಗಿ ಕೊಳ್ಳಲಿಕ್ಕೂ ಒಪ್ಪಿಕೊಂಡು, ನಿಜಾಂ ಸರ್ಕಾರಕ್ಕೆ ಶರಣಾಗತನಾದನು. ಮತ್ತು ಇವನ ಹಣದ ಬಂದೋಬಸ್ತಿಗಾಗಿ ಇವನು ಮುಂಬೈಯಲ್ಲಿ ಕೊಂಡುಕೊಂಡ ವಾಟ್ಸನ್ ಹೋಟಲನ್ನೂ, ಹಳೇ ಸೆಂಟ್ರಲ್ ಪ್ರೆಸ್ ಕಟ್ಟಡವನ್ನೂ, ಈಗ ಮಾಲವಾ ಬಂದರ್‌ಬಳಿ ತಯಾರಾಗುವ ಕಟ್ಟಡವನ್ನೂ ನಿಜಾಂ ಸರ್ಕಾರಕ್ಕೆ ಒಪ್ಪಿಸಿರುತ್ತಾನೆ. ಇಷ್ಟರಿಂದಲೇ ಆತನಿಗೆ ಉಂಟಾದ ಸಂಕಟಗಳು ನಿವೃತ್ತಿಯಾಗಲಿಲ್ಲವು. ವಿಲಾಯತಿಯಲ್ಲಿಯೂ, ಹೈದರಾಬಾದ್‌ನಲ್ಲೂ ನಡೆಯುವ ವಿಚಾರಣೆಗಳು ನಡೆಯುತಲೇ ಇವೆ.—ಕನ್ನಡಸುವಾರ್ತೆ.

ಬ್ರೋಚ್ ಪಟ್ಟಣಕ್ಕೆ ೧೦ ಮೈಲುಗಳ ಫಾಸಲೆಯಲ್ಲಿ ನರ್ಮದಾ ನದಿಯ ಜಡದೊಳು ಜಲಾವೃತವಾಗಿರುವ ಒಂದು ಸಣ್ಣ ದ್ವೀಪದಲ್ಲಿ ಬಹಳ ದೊಡ್ಡ ಆಲದ ಮರ ವೊಂದು ಈಗ್ಯೆ ಬಹು ಕಾಲವಾಗಿರುತಲಿದೆ. ಇದರ ರೆಂಬೆಗಳು ಸುಮಾರು ನಾಲ್ಕು ಎಕ್ರೇಗಳ ಭೂಮಿಯನ್ನು ಆವರಿಸಿಕೊಂಡಿದೆ. ಈ ವಟವೃಕ್ಷದ ಕೆಳಗೆ ಹತ್ತುಸಾವಿರಜನ್ ಧಾರಾಳವಾಗಿ ಕುಳತುಕೊಳ್ಳಬಹುದು. ಇದು ಕಬೀರ್‌ದಾಸರವರು ದಂತಧಾವನಮಾಡಿ ಎಸದಿದ್ದ ಒಂದು ಆಲದ ಕಡ್ಡಿಯಿಂದ ಹುಟ್ಟಿದ್ದೆಂದು ಹೇಳಿಕೊಳ್ಳುತ್ತಾರೆ. ಹದಿನೆಂಟನೆಯ ಶತಮಾನದಲ್ಲಿ ಈ ಮರವು ೩೫೦ ಕೆಳಗಿನ ಕಾಂಡಗಳೂ ಮೂರುಸಾವಿರ ಉಪಶಾಖೆಗಳೂ ವುಳ್ಳದ್ದಾಗಿತ್ತೆಂದು ತಿಳಿಯಬರುತಿದೆ. ಸದರೀ ಪ್ರದೇಶದವರಿದಂ ಮಾತಾದೇವಿಯೆಂದು ಕರೆಯುತ ಪ್ರತಿದಿನವೂ ಅದಂ ಪೂಜಿಸುತಲಿರುತ್ತಾರೆ

ಯೂರೋಪಿಯನ್ ಜನರಿಗೆ ಕ್ರಿಸ್ಚಿಯನ್‌ಮತದಲ್ಲಿ ಪ್ರಾಮಾಣಿಕತೆಯು ದಿನೇ ದಿನೆ ಕಡಮೆಯಾಗುತ ಬರುವಂತೆ ಅವರ ವರ್ತನೆಗಳಿಂದಲೇ ವ್ಯಕ್ತವಾಗುತಿದೆ. ಅನೇಕರು ಭಾನುವಾರದದಿನ ಚರ್ಚುಗಳಿಗೆ ಹೋಗುವ ವಾಡಿಕೆಯಂ ಮನ್ನಾ ಮಾಡಿಕೊಳ್ಳುವದಲ್ಲದೆ ಬಹಿರ್ಬಲ್ಲಿ ಸ್ವಮತವು ತ್ಯಜಿಸಿ ಅನ್ಯಮತವನ್ನವಲಂಬಿಸುತ ಬರುತಲಿದಾರೆ. ಈಚೆಗೆ ಫ್ರೆಡರಿಕ್ ಸ್ಟೀವರ್ಸ್ ಯೆಂಬ ಒಬ್ಬ ಯೂರೋಪಿಯನ್ ಕ್ರಿಸ್ತುಮತವಂ ತ್ಯಜಿಸಿ ಮಹಮ್ಮದೀಯನ್ ಮತವನ್ನಾಶ್ರಯಿಸಿದನೆಂತಲೂ, ಆತನಿಗೆ ಇನ್ನೂ ಆ ಮತರೀತ್ಯಾ ಸುನ್ನತ್ ವಗೈರೆ ಕ್ರಿಯೆಗಳ್ಯಾವದೂ ಜರಗಲಿಲ್ಲವೆಂತಲೂ, ಪೂರ್ವದಲ್ಲಿ ಸದರೀ ಮತಕ್ಕೆ ಸೇರಿ ಈಗ ಮೌಲ್ವೀಯಾಗಿರುವ ಇನ್ನೊಬ್ಬ ಯೂರೋಪಿಯನ್ ಆತನಿಗೆ ಖುರಾನ್‌ಪಾಠ ಹೇಳುತಲಿರುವಂತೆಯೂ ಆತನು ಸ್ಟೀವರ್ಸ್ ಎಂಬ ಹೆಸರಿಗೆ ಬದಲು ಅಬ್ದುರ್‌ಕರೀಂ ಎಂಬ ಹೆಸರಿಟ್ಟುಕೊಂಡಿದಾನೆಂತಲೂ, ಈತನು ವಹಬೀ ಸಿದ್ಧಾಂತವನ್ನನುಸರಿಸಿದಾನೆಂತಲೂ ತಿಳಿಯಬರುರುತಲಿದೆ. ಈಚೆಗೆ ಮತ್ತೊಬ್ಬ ಯೂರೋಪಿಯನ್ ಬೌದ್ಧಮತವನ್ನವಲಂಬಿಸಿ ಆಮುತರೀತ್ಯಾ ತನ್ನ ಆಚಾರ ವ್ಯವಹಾರಗಳನೆಲ್ಲ ನಡಿಸಿಕೊಂಡು ತಿಬೆಟ್‌ನಲ್ಲಿರುವ ಬುದ್ಧ ಯತಿಗಳಂತೆ ವಸ್ತ್ರ ಧರಿಸಿಕೊಂಡು ಬೌದ್ಧ ಸಿದ್ಧಾಂತವೇ ಸರ್ವೋತ್ಕೃಷ್ಟವಾದದ್ದೆಂದು ವಾದಿಸುತ ಜನಗಳಿಗೆ ಅದಂ ಬೋಧಿಸಲಾರಂಭಿಸಿದಾನೆಂದು ಉತ್ತರದೇಶಪತ್ರಿಕೆಯೊಂದು ತಿಳಿಸುತಿದೆ

ಬಿಹಾರ್ ಹೆರಲ್ಡ್‌ಯೆಂಬ ಪತ್ರಿಕೆ ತಿಳಿಸುವದೇನಂದರೆ—ಪರ್ಟಬ್ ಡಿಸ್ಟ್ರಿಕ್ಟು ಸರ್ಜನ್‌ಕೋರ್ಟ್ ಮುಂದೆ ದರ್ಖ್ಯಾಸ್ತುದ ಒಂದುಮೊಕದ್ದಮೆಯಲ್ಲಿ ಫಿರ್ಯಾದಿಯಾದ ಹನ್ನೆರಡು ವರ್ಷಗಳ ವಯಸ್ಸುಳ್ಳ ಒಬ್ಬ ಹುಡುಗಿಯು ತಾನು ಅವಿವಾಹಿತಳೆಂದು ಹೇಳಲು ಜಡ್ಜಿಯವರು ಅವಳನ್ನು ಅಜಮಾಯಿಷಿ ಮಾಡುವಂತೆ ಅಸಿಸ್ಟೆಂಟ್ ಸರ್ಜನ್‌ರವರಿಗೆ ಹುಕುಂ ಮಾಡಿದರು. ಸದರೀ ಡಾಕ್ಟರು ಆ ಕೆಲಸದ ಉದ್ದೇಶ್ಯ ತಾನು ಕೋರ್ಟಿಗೆ ಬರುವದಕ್ಕಾಗುವದಿಲ್ಲವೆಂದು ತಿಳಿಸಲು ಜಡ್ಜಿಯವರು ಸದರೀ ಹುಡುಗಿಯನ್ನು ತಮ್ಮ ಶಾಗವದೊವನೆ ಅವರ ಬಳಿಗೆ ಕಳುಹಿಸಿದರು. ಸದರೀ ಹುಡುಗಿಯು ಡಾಕ್ಟರ ಅಜಮಾಯಿಷಿಗೆ ತಾನು ಒಳಗಾಗುವದಿಲ್ಲವೆಂದು ಮುಸ್ಕರಹಿಡಿದು ಅಳುತ ಕೋರ್ಟಿಗೆ ವಾಪಸ್ ಹೊರಟುಹೋದಳು. ಜಡ್ಜಿಯವರು ಅಳುವದಕ್ಕೆ ಕಾರಣವೇನೆಂದು ಕೇಳಲಾಗಿ ಗವರ್ನಮೆಂಟ್ ವಕೀಲರು, ಕೋರ್ಟಿನವರು ಮಾಡಿದ ಹುಕುಮಿನ ದೆಸೆಯಿಂದ ಸದರೀ ಹುಡುಗಿಯು ಯಾವಜ್ಜೀವ ಅಗೌರವಕ್ಕೆ ಗುರಿಯಾದಾಳೆಂದು ತಿಳಿಸಿದರು, ಎಂಬದು. ಸರ್ಜನ್ಜಿಯಾದವನು ಯಾವಾಗಲೂ ದೇಶಮರ್ಯಾದೆಯನ್ನೂ, ನೇಟವ್‌ಗಳ ಮಾನಮರ್ಯಾದೆಗಳನ್ನು ತಿಳಿದವನಾಗಿರಬೇಕಾಗಿದೆ. ಈ ಜಡ್ಜಿಯಾದವರೊ ಅಪ್ರಬುದ್ಧನಾಗಿಯೂ ತಾನುವಹಿಸುವ ಕೃತ್ಯದ ಸ್ವರೂಪಜ್ಞಾನ ಶೂನ್ಯನಾಗಿಯೂ ಇರುತ್ತಾನೆ. ಈತನು ಪರ್ಟಬಪರಿಸಂತಾ ಪ್ರಬಲದಿಸ್ಟ್ರಿಕ್ಟಿನಲ್ಲಿ ಜವಾಬ್ದಾರೀಯುಳ್ಳ ಕೆಲಸದಲ್ಲಿರುವದಕ್ಕೆ ಕೇವಲ ಅನರ್ಹನಾದವನೆಂದು ಸ್ಪಷ್ಟವಾಗಿ ಕಾಣುತಿದೆ. ಈತನ ನಡತೆಯ ವಿಷಯದಲ್ಲಿ ಲೆಫ್ಟಿನೆಂಟ್ ಗವರ್ನರವರು ಸಂಪೂರ್ಣ ನಿಗೇ ಕೊಡಬೇಕೆಂದು ಕೋರುತ್ತೇವೆ.—ನ್ಯೂ ಗಾ.

ಇಂಡಿಯಾ ಚಕ್ರವರ್ತಿನೀಯವರು ಸುಮಂಗಲಿಯಾಗಿದ್ದಾಗ್ಯೆ ಪತಿಯೊಡನೆ ಯಾವದೊ ಒಂದು ಸಂದರ್ಭಕ್ಕಾಗಿ ಸ್ವಲ್ಪ ಮನಸ್ತಾಪ ವುಂಟಾಗಿ ಅವರಪತಿಯು ಘಟ್ಟನೆಯದ್ದು ತಮ್ಮ ಕೊಪಡಿಯನ್ನು ಪ್ರವೇಶಿಸಿ ಬಾಗಿಲನ್ನು ಹಾಕಿಕೊಂಡು ವ್ಯಸನದಿಂದ ಒಳಗೆ ಇರುತ್ತಿರುವಲ್ಲಿ ಒಂದು ಘಂಟೆಬಿಟ್ಟುಕೊಂಡು ಚಕ್ರವರ್ತಿನೀಯವರು ಪತಿಯ ಕೊಠಡಿಯ ಬಾಗಲ ಬಳಿಯಲ್ಲಿ ನಿಂತು "ಆಲ್ಬರ್ಟ್ ಹೊರಗೆ ದಯಮಾಡಿಸಬೇಕು" ಎಂದು ಕೂಗಿದರು. ನಾನು ಬರುವದಿಲ್ಲ. ನನ್ನ ತಂಟೆಗೆ ಬರಕೂಡದು ಎಂಬದಾಗಿ ಪ್ರಿನ್ಸ್‌ರವರು ಉತ್ತರಕೊಟ್ಟರು. ಚಕ್ರವರ್ತಿನಿಯವರು ಕೋಪೋದ್ರೇಕದಿಂದ ಇಂಗ್ಲೆಂಡಿನ ರಾಣಿಯು ಹೊರಗೆ ಬರಬೇಕೆಂದು ಆಜ್ಞೆ ಮಾಡುತದರಿಂದ ಪ್ರಜೆಯಾದ ನೀವು ತತ್ಕ್ಷಣ ಬರತಕ್ಕದ್ದು ಎಂದು ಹೇಳಿದರು. ಕೂಡಲೇ ಪ್ರಿನ್ಸ್‌ರವರು ಪ್ರತ್ಯುತ್ತರವನ್ನು ಹೇಳದೆ ಆಜ್ಞಾನುಸಾರ ಹೊರಗಬಂದರು ಅವರನ್ನು ಕರೆದುಕೊಂಡು ಚಕ್ರವರ್ತಿನೀಯವರು ತಮ್ಮ ಕೊಠಡಿಗೆ ಹೋಗಿ ಒಂದು ಆಸನದಲ್ಲಿ ಕುಳ್ಳರಿಸಿ ಆಲ್ಬರ್ಟ್ ನನ್ನನ್ನು ಸ್ವೀಕರಿಸಿ ಮುದ್ದಿಡಿ ಎಂದು ಹೇಳಿದರು. ಅದಕ್ಕೆ ಅವರು ಇದೂ ಕೂಡ ರಾಣಿಯವರ ಆಜ್ಞೆಯೊ ? ಎಂದು ಪ್ರಶ್ನೆ ಮಾಡಿದ್ದಕ್ಕೆ ಬಹಳ ಪಶ್ಚಾತ್ತಾಪದಿಂದ ಇಲ್ಲ ಎಂದು ಉತ್ತರ ಕೊಟ್ಟು ಪತಿಯನ್ನು ಗಾಢಾಲಿಂಗನ ಮಾಡಿಕೊಂಡು, ನಿಮ್ಮ ಧರ್ಮಪತ್ನಿಯು ಬೇಡಿಕೊಳ್ಳುತ್ತಾಳೆ, ಅದನ್ನು ನಡೆಸಿಕೊಡಬೇಕು, ಎಂದು ಹೇಳಿದರು—ನ್ಯ. ಚಿಂ.

EXTRACTS.

Dacoity in Kattywar.—ಕಾಟೀವಾಡಿಯಲ್ಲಿ ದರೋಡೆಗಳು ದಿನೇ ದಿನೆ ಹೆಚ್ಚುತಲಿವೆ. ಕಳೆದ ತಿಂಗಳ ೨೮ನೇ ತಾರೀಖಿನ ರಾತ್ರಿ ಜುನಾಘರ್ ಸಂಸ್ಥಾನದ ಬಹಾವ್ ಕಂಬಲಿಯಾ ಎಂಬ ಪ್ರದೇಶದಿಂದ ರಾವಲ್‌ಗಾಂ ಎಂಬ ಸ್ಥಳಕ್ಕೆ ಹೋಗುತ್ತಿರುವಲ್ಲಿ ದರೋಡೆ ಜನಗಳು ಮೇಲೆ ಬಿದ್ದು ಅವರ ಜೇಬುಗಳಲ್ಲಿದ್ದ ಕಾಗದ ಪತ್ರಗಳನ್ನೆಲ್ಲ ತೆಗದು ಹರದು ಮರಳಿ ಜೇಬದಲ್ಲಿ ಹಾಕಿ ನಿಮ್ಮ ದಿವಾನ್ ಸಾಹೆಬರವರಿಗೆ ತೆಗದುಕೊಂಡು ಹೋಗಿ ಕೊಡಿರಿ ಯೆಂದು ಹೇಳಿ ಕಳುಹಿಸಿದರಂತೆ ಅಲ್ಲಿನ ಪತ್ರಿಕೆ ತಿಳಸುತಿದೆ. ಮರುದಿನ ಸಾಯಂಕಾಲ ಪ್ರಯಾಣಸ್ಥರು ಕೆಲವರು ಟಪಾಲ್ ಗಾಡಿಯಲ್ಲಿ ಧ್ರೋಲ್ ಪುರದಿಂದ ರಾಜಕೋಟೆಗೆ ಹೋಗುತಿರುವಲ್ಲಿ ಇಬ್ಬರು ದರೋಡೆ ಕಳ್ಳರು ದೊಣ್ಣೆಗಳೊಡನೆ ಅವರಮೇಲೆ ಜುಲುಂ ನಡೆಸಿದರು. ಗಾಡಿಯವನು ಅತಿ ವೇಗದಿಂದ ಗಾಡಿಯನ್ನು ಹೊಡೆಕೊಂಡು ಹೋಗಲು ಕಳ್ಳರು ಗಾಡಿಯ ಹಿಂದುಕಡೆ ಬಂದು ಹಿಡಕೊಂಡು ಮೇಲಕ್ಕೆ ಹತ್ತುವದಕ್ಕೆ ಯತ್ನಿಸುವದನ್ನು ಗಾಡಿಯವನು ಕಂಡು ಅವರಿಬ್ಬರನ್ನು ಕೊರಡೆಯಿಂದ ಬಲವಾಗಿ ಹೊಡೆದು ಬಿಡಸಿಬಿಟ್ಟನು. ಗಾಡಿಯು ಪೊಲೀಸ್ ಸ್ಟೇಷನ್ ಸೇರಿದ ಕೂಡಲೇ ಪ್ರಯಾಣಸ್ಥರು ಸ್ಟೇಷನ್ ಮನೆಯ ಕಡ ತಟ್ಟಿ ಅವರನ್ನು ಕೂಗಿದರು, ಅವರು ಗಾಢನಿದ್ರೆ ಮಾಡುತಲಿದ್ದದರಿಂದ ಅವರು ಇವರ ಫಿರ್ಯಾದಿಗೆ ನಿಗೇ ಕೊಡದೆ ಹೋದರು.—ಗೆಜೆಟ್.

೧೮೮೫ನೇ ಇಸವಿಯ ಅಕ್ಟೋಬರ್‌ನಲ್ಲಿ, ಅಲಹಾಬಾದ್ ಮಹಾಜನಕ್ಕೆ ಸೇರಿದ ಮುರ್ಲಿಲಾಲ್ ಎಂಬಾತನು ಒಂದು ಪಟ್ಟಿಯಲ್ಲಿ ಭಾರೀ ಚಿನ್ನದ ಗಟ್ಟಿಯೊಂದನ್ನಿಟ್ಟು ಮೊಹರ್‌ಮಾಡಿ, ಕಾಶಿಯಲ್ಲಿ ಒಬ್ಬಾತನಿಗೆ ಇನ್ಷ್ಯೂರ್‌ಮಾಡಿ ಕಳುಹಿಸಿದನು. ಸದರೀ ಬಾಂಗಿಯ ಮೇಲ್ವಿಳಾಸದಲ್ಲಿ ಇಂಗ್ಲಿಷಿನೊಳು ಕಲ್ಕತ್ತೆಯಲ್ಲಿ ಪಾವತಿ ಆಗತಕ್ಕದ್ದೆಂತಲೂ ದೇಶಭಾಷೆಯಲ್ಲಿ ಕಾಶಿಯಲ್ಲಿ ಪಾವತಿಯಾಗತಕ್ಕದ್ದೆಂತಲೂ ಬರೆಯಲ್ಪಟ್ಟಿತ್ತು. ಇದುವಿನಾ ಮಿಕ್ಕಕ್ರಮಗಳೆಲ್ಲವು ಸರಿಯಾಗಿಯೇ ಇದ್ದವು. ಸದರೀ ಬಾಂಗಿ ಮೊದಲು ಕಲ್ಕತ್ತೆಗೆಹೋಗಿ ಅಲ್ಲಿ ಪಾವತಿ ಅವಕಾಶವಿಲ್ಲದೆ ಕೆಲವು ದಿನಗಳಮೇಲೆ ಮೈಲಾಗಿ ಕಾಗದಗಳೆಲ್ಲ ಹರದುಹೋಗಿ ಅಲಹಾಬಾದಿಗೆ ವಾಪಸ್ ಕಳುಹಿಸಲ್ಪಟ್ಟಿತು. ಅಲ್ಲಿ ಅದನ್ನು ಮಾರ್‌ವಾರನ ಸಮಕ್ಷಮದಲ್ಲಿ ಒಡೆದು ನೋಡುವಲ್ಲಿ ಅದರೊಳಗೆ ಚಿನ್ನಕ್ಕೆಬದಲು ತಗರ ತುಂಡು ಬಿದ್ದಿತ್ತು. ಮುರ್ಲಿಲಾಲ್ ಎಂಬಾತನು ಇನ್ಷ್ಯೂರ್ ಮಾಡಿದ ಮಾಲನ್ನು ಕೊಡಿಸಬೇಕೆಂದು ದಾವೇ ತಂದನು. ಪೋಸ್ಟಾಫೀಸ್ ಅಧಿಕಾರಿಗಳು ಮುರ್ಲಿಲಾಲ್ ಎಂಬಾತನು ಮೋಸಮಾಡಬೇಕೆಂಬ ಉದ್ದೇಶದೊಡನೆ ತಾನೇ ಬಾಂಗಿಯಲ್ಲಿ ತಗರದ ಸ್ಲಿಪ್ಟು ಕಳುಹಿಸಿದನೆಂದು ಆತನಮೇಲೆ ಕ್ರಿಮಿನಲ್ ದಾವೇ ತಂದರು. ಈ ಮೊಕದ್ದಮೆಯು ಬಹು ವಿಳಂಬವಾಗಿ ವಿಚಾರಣೆಯಾದಮೇಲೆ, ಬಾಂಗಿಯು ಅನೇಕ ದಿನಗಳವರಿವಿಗೆ ಪೋಸ್ಟಾಫೀಸ್ ಇಲಾಖೆಯವರ ವಶವಲ್ಲಿದ್ದದರಿಂದ ಪೋಸ್ಟಾಫೀಸ್ ನೌಕರರು ಅಪಹರಿಸುವದಕ್ಕೆ ಅವಕಾಶ ವುಂಟೆಂಬ ಕಾರಣದ ಮೇಲೆ ಅಲಹಾಬಾದ್ ಸೆಷನ್ ಜಡ್ಜಿಯವರು ಮುರ್ಲಿಲಾಲ್ ಎಂಬಾತನನ್ನು ಖುಲಾಸೇ ಮಾಡಿಬಿಟ್ಟರು. ಪರಂತು ಈತನು ತನ್ನ ಮಾಲಿಗಾಗಿ ಸ್ಟೇಟ್ ಸೆಕ್ರೆಟರಿಯ ಮೇಲೆ ತಂದದಾವೆಯು ರುಜುವಾತ್ ಆಗಲಿಲ್ಲವೆಂಬ ಕಾರಣದಮೇಲೆ ಅಸಲ್‌ಕೋರ್ಟಿನಲ್ಲಿ ವಜಾಮಾಡಲ್ಪಟ್ಟಿತು. ಉಭಯ ವಾದಿಗಳ ಅನುಮತಿಯ ಮೇಲೆ ಈ ಮೊಕದ್ದಮೆಯು ಅಪೀಲಾಗಿರುತಿದೆ ಜ್ಯಾಯಿಂಟ್ ಕೋರ್ಟಿಗೆ ವರ್ಗಮಾಡಲ್ಪಟ್ಟು ಈಚೆಗೆ ಅಲ್ಲಿ ದರ್ಯಾಪ್ತಿ ಪೂರ್ತಿಯಾಯಿತು. ಇನ್ನು ಫೈಸಲ್ ಆಗಲಿಲ್ಲವು. ಇದರ ಫಲಿತಾಂಶವು ಹ್ಯಾಗಾದರು ಇರಲಿ, ಪ್ರಕೃತ ಸಂಕಟಗಳನ್ನೂ ವ್ಯಾಜ್ಯಗಳನ್ನೂ ಯೋಚಿಸಲಾಗಿ, ಪೋಸ್ಟಾಫೀಸ್‌ನವರ ಮತ್ತು ಪ್ರಜೆಗಳ ಕ್ಷೇಮಾರ್ಥ ಇಂತಾ ಬಾಂಗಿಗಳ ಬಂದೋಬಸ್ತಿಯ ಬಗ್ಯೆ ಯಾವದಾದರೊಂದು ಯೋಗ್ಯವಾದ ಯೇರ್ಪಾಟನ್ನು ಕಲ್ಪಿಸ ಬೇಕಾದ್ದು, ಪೋಸ್ಟಾಫೀಸಿನವರಿಗೆ ಕರ್ತವ್ಯವಾಗಿ ಯೋರ್ಪಡುತಿದೆ.

BANGALORE:—Printed and published for the Proprietor at the KARNATIC Press.—1888.

ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA.

ಪ್ರತಿ ಸೋಮವಾರ ಪ್ರಾತಃಕಾಲದಲ್ಲಿ ಪ್ರಕಟಿಸಲ್ಪಡುವದು.

Published every Monday Morning.

ಪ್ರಕಾಶನವಿವಿಧವೃತ್ತಾಂತಗಳಾರ್ಥ ಕರ್ಣಾಟಕಪ್ರಕಾಶಿಕಾ [illegible]

Vol. XV.] BANGALORE—MONDAY, JUNE 18, 1888. [No. 24.

ಸಂಪುಟ ೧೫.] ಬೆಂಗಳೂರು:— ಸನ್ ೧೮೮೮ನೇ ಇಸವಿ ಜೂನ್ ೧೮ನೇ ತಾರೀಖ್ ಸೋಮವಾರ. [ಸಂಚಿಕೆ ೨೪.

ಕರ್ಣಾಟಕ ಪ್ರಕಾಶಿಕಾ

ಪತ್ರಿಕೆಯ ಚಂದಾ ದರಗಳು,
೧೮೮೮ನೇ ಇಸವಿ ಜನವರಿಯಿಂದ ಮೊದಲುಗೊಂಡು
ಕಡಮೆ ಮಾಡಲ್ಪಟ್ಟಿರುತ್ತವೆ.

ಈ ಪತ್ರಿಕೆಯು ಚಂದಾದಾರರಲ್ಲಿ ಅನೇಕರ ಅಪೇಕ್ಷೆಯನ್ನು ನೆರವೇರಿಸುವ ಉದ್ದೇಶದೊಡನೆಯೂ, ಪರಿಮಿತವಾದ ಆಯತಿಯುಳ್ಳವರಿಗೆಲ್ಲ ಈ ಪತ್ರಿಕೆಯು ಸುಲಭವಾಗಿ ಲಭಿಸುವಂತಿರಬೇಕೆಂಬ ಅಪೇಕ್ಷೆಯಿಂದಲೂ ಇದರ ಚಂದಾದರವನ್ನು ಇವರಡಿಕಂಡಂತೆ ಕಡಮೆ ಮಾಡಿರುತ್ತೇವೆ:—

ಇಂಗ್ಲಿಷ್ ಮತ್ತು ಕನ್ನಡಭಾಗಗಳಿಗೆ.

	ಸ್ಥಳದವರಿಗೆ	ಪರಸ್ಥಳದವರಿಗೆ.
12 ತಿಂಗಳಿಗೆ	8—0—0	9—0—0
6 „	4—0—0	4—8—0
3 „	2—8—0	2—8—0

ಇಂಗ್ಲಿಷ್ ಅಥವಾ ಕನ್ನಡಭಾಗಗಳಿಗೆ.

	ಸ್ಥಳದವರಿಗೆ	ಪರಸ್ಥಳದವರಿಗೆ.
12 ತಿಂಗಳಿಗೆ	4—0—0	5—0—0
6 „	2—0—0	2—8—0
3 „	1—4—0	1—8—0

ಷರಾ—ಅಂಚೆ ಮೊತ್ತವಿಗಳು, ದೊಡ್ಡ ಮತ್ತು ತಾಲ್ಲೂಕು [illegible]

[illegible]

ಪ್ರಕಟನೆಯ ರೀತಿ.

ಒಂದಾವೃತ್ತಿಗೆ ಪಂಕ್ತಿ ಒಂದಕ್ಕೆ ೦—೨—೦
ಎರಡಾವೃತ್ತಿಗೆ ಪಂಕ್ತಿ ಒಂದಕ್ಕೆ ೦—೧—೦

ಷರಾ—[illegible]

"IT RECOMENDS ITSELF"

ALL WHO SUFFER FIND SURE RELIEF.

LITTLE'S

ORIENTAL BALM

THE MOST EFFECTUAL MODERN REMEDY FOR PAIN.

ಲಿಟಿಲ್ ಸಾಹೇಬರಿಂದ ತಯಾರಾದ [illegible] ತೈಲವು [illegible] ವಾತರೋಗಗಳು, ಕಾಸ, ಗಂಟುನೋವು, [illegible] ಅಮೂಲ್ಯವಾದದ್ದು.

ಪರಿಶೀಲಕರ ಅಭಿಪ್ರಾಯವು.

[illegible] (C. R. Tichborne, L. L. D., F. C. S., M. R. I. A.) [illegible]

ಇದರ ಕ್ರಯ—ಸೀಸೆ ಒಂದಕ್ಕೆ ೧ ರೂಪಾಯಿ.

[illegible]

AGENTS.— Messrs. J. West, Chemist, &c., Bangalore.
Cairns & Co. Chemists, Bangalore.
Riggs & Co., Chemists, Bangalore; and of
Mahomed Yousoff and Sons, The Cash Bazar, Bangalore.
A. C. Barrman & Co.,
20 Sandodoss Street Madras.

NOTICE.

VAIDYASARA SANGRAHA

A TREATISE ON THE PRINCIPLES OF

HINDU MEDICINE.

Price including Postage Rs 5 6 0

ವೈದ್ಯಸಾರ ಸಂಗ್ರಹ.

ಈಗ್ರಂಥಾಪೇಕ್ಷೆಯುಳ್ಳವರು ಮೊಬಲಗಿನೊಡನೆ ಈ ಕೆಳಗೆ ರುಜುಮಾಡಿರತಕ್ಕವರ ಬಳಿಗೆ ಬರೆದುಕೊಂಡರೆ ಪುಸ್ತಕ ಕೂಡಲೇ ಕಳುಹಿಸಲ್ಪಡುವದು. ಮೊಬಲಗು ಇಲ್ಲದ ದರಖಾಸ್ತುಗಳಿಗೆ ಉತ್ತರವು ಬರೆಯಲ್ಪಡುವದಿಲ್ಲ.

ಬೆಲೆ [illegible] ರೂ ೫—೦—೦
ಪ್ಯಾಕಿಂಗ್ ಮತ್ತು ಅಂಚೆ [illegible] ೦—೬—೦

ಟಿ. ಪಿ. ವೆಂಕಟಾಚಾರ್,
ಆಸ್ಪತ್ರಿ [illegible] ಬೆಂಗಳೂರು.

ಚಿತ್ರ ಪತ್ರಕಾಸ



[illegible]

THE KARNATAKA PRAKASIKA.

MONDAY, JUNE 18, 1888.

DEATH OF THE EMPEROR OF GERMANY

ಈಚೆಗೆ ೩೦ ದಿನಗಳ ಮೊದಲು ಜರ್ಮನೀ ಚಕ್ರವರ್ತಿಯವರ ದೇಹಸ್ಥಿತಿಯಂ ಕುರಿತು ಪ್ರತಿ ನಿತ್ಯ ಬರುತಲಿದ್ದ ತಂತಿ ವೃತ್ತಾಂತಗಳು ನಮಗೆಲ್ಲ ಬಹಳಮಟ್ಟಿಗೆ ಧೈರ್ಯೋತ್ಪಾದಕಗಳಾಗಿದ್ದವು. ಹೀಗಿರುವಲ್ಲಿ ಗತ ಮಂಗಳವಾರದಿಂದಾರಭ್ಯ ಅವರ ಶರೀರಸ್ಥಿತಿಯು ಸುಧಾರಿಸದೆ ವಿರುದ್ಧಗತಿಯನ್ನೈದಿ ಚಿಕಿತ್ಸಕರಿಗೆಲ್ಲ ಪ್ರತ್ಯೇಕಿಯಂ ತೋರಗೊಡಿಸಿ ಪ್ರತಿ ಕ್ಷಣದಲ್ಲಿಯೂ ಅವರ ಪ್ರಾಣಾಪಾಯ ಶಂಕೆಯನ್ನೇ ಉಂಟು ಮಾಡುತಲಿತ್ತು. ಕಡೆಗೆ ಮೃತ್ಯುವೇ ರೋಗರೂಪದಿಂ ಚಕ್ರವರ್ತಿಯವರನ್ನಾಶ್ರಯಿಸಿದ್ದದರಿಂದ ಅವರ ವ್ಯಾಧಿಕತೆಯು ಮುಂದೆ ಚಕ್ರವರ್ತಿಯವರು ಪರಾಭವವನ್ನೈದಿ ಜೂನ್ ಮಾಹೆ ೧೫ನೇ ತಾರೀಖ್ ಶುಕ್ರವಾರ ರಾತ್ರಿ ೧೧ ಗಂಟೆಗೆ ಸರಿಯಾಗಿ ಸಕಲ ನರಪತಿ ಸಮ್ಮಾನಿತರಾದ ತಮ್ಮ ಶರೀರವಂ ಮೃತ್ಯುವಶ ಪಡಿಸಿ ಲೋಕಾಂತರ ಗತರಾದರೆಂಬ ವೃತ್ತಾಂತವಂ ರೂಟರ್ಸಿನವರ ತಂತಿಮೂಲಕ ಅರಿತು ಬಹಳ ವಿಷಾದಿಸುತ್ತೇವೆ. ಪ್ರಾಣಿಗಳಲ್ಲಿ ದೈವಸಂಕಲ್ಪವು ಯಾವ ಸಮಯದೊಳು ಹ್ಯಾಗೆ ಪರಿಣಮಿಸುವದೋ ಅದು ಮನುಷ್ಯ ಸಾಮಾನ್ಯದವರಿಂದ ಊಹಿಸ ಕೂಡದ್ದಾಗಿರುತ್ತದೆ. "ಜನ್ಮದುಃಖಂ ಜರಾದುಃಖಂ ಜಾಯಾದುಃಖಂ ಪುನಃಪುನಃ ಸಂಸಾರಸಾಗರಂದುಃಖಂ ತಸ್ಮಾಜ್ಜಾಗ್ರತಜಾಗ್ರತ" ಎಂಬದಾಗಿ ಜನನ ಮರಣಾತ್ಮಕವಾದ ಸಂಸಾರವು ಪ್ರಾಣಿಗಳಿಗೆ ನಿರಂತರ ದುಃಖರೂಪವಾದದ್ದರಿಂದ ಕೇವಲ ಜಾಗರೂಕರಾದವರಿಗೂ ಸಹ "ಕಸ್ಯಸೌಖ್ಯಂನಿರಂತರಂ" ಎಂಬದಾಗಿ ನಿರಂತರವಾದ ಸುಖ ಸಂತೋಷಗಳುಂಟಾಗುವದಿಲ್ಲವು. ಈಗ ಕಾಲವಶರಾದ ಚಕ್ರವರ್ತಿಯವರ ತಂದೆಗಳು ಗತಿಸಿ ಅತ್ಯಲ್ಪಕಾಲವಾಯಿತು. ಇವರು ಸಿಂಹಾಸನಾರೋಹಣಂ ಗೈದದು ಮೊದಲು ಒಂದು ದಿನವಾದರೂ ಸ್ವಾರ್ಥ್ಯದೊಡನೆ ಅಧಿಕಾರವು ನಡೆಸಿದವರಲ್ಲವು. ಮುಖ್ಯವಾಗಿ ಇವರಿಗೆ ಪಟ್ಟಾಭಿಷೇಕದೊಳಗ ಮಾತ್ರ ಪ್ರೊಂದಿತ್ತಲ್ಲದೆ ಪ್ರಭುತ್ವ ಯೋಗ ದೊರಲಿಲ್ಲವು. ಇವರ ಮರಣವು ಯೂರೋಪ್ ಖಂಡದ ತಾತ್ಕಾಲಿಕ ರಾಜಕೀಯಸ್ಥಿತಿಗೆ ಬಹಳ ಪ್ರತಿಕೂಲವೆಂದೆಣಿಸಬೇಕಾಗಿದೆ. ಶ್ರೀಮನ್ಮಹಾರಾಜ್ಞೀ ಚಕ್ರವರ್ತಿನೀಯವರಿಗೆ ಈ ವೃದ್ಧಾಪ್ಯದಲ್ಲಿ ಪುತ್ರಿಕಾವೈಧವ್ಯಪ್ರಯುಕ್ತವಾದ ಕ್ಲೇಶವು ಪ್ರಾಪ್ತವಾದ ಬಗ್ಗೆ ಜರ್ಮನೀದೇಶೀಯರಿಗೆ ಗುಣಾಢ್ಯರಾದ ಅರಸರು ನಷ್ಟವಾದದ್ದಾಗಿಯೂ ನಾವು ಅಂತಃ ದುಃಖಿಸುತ್ತೇವೆ. ದೈವವಿಲಾಸವು ಮರೂಪವಾದದರಿಂದ ಇನ್ನು ಇವರ ವಿಯೋಗದಿಂ ಜರ್ಮನೀ ದೇಶದ ತನ್ಮೂಲಕ ಯೂರೋಪ್ ಖಂಡದ ಮುಂದಿನ ಸ್ಥಿತಿಯು ಹ್ಯಾಗೆ ಪರಿಣಮಿಸುವದೋ ಎಂದು ಬಹಳವಾಗಿ ಚಿಂತಿಸಬೇಕಾಗಿರುತ್ತದೆ. ಆದರೆ ಸರ್ವೇಶ್ವರನು [illegible] ಕ್ಷೇಮವನ್ನು ಕೊಟ್ಟು ಮುಂದೆ ಅಭಿವೃದ್ಧಿಯಾಗುವಂತೆ ಪುತ್ರಭಾಗ್ಯ ಮತ್ತು ಅನುಗ್ರಹಿಸುವದೆಂದೇ ಜರ್ಮನೀ ದೇಶೀಯರಿಗೂ ಪ್ರಕೃತ ಜರ್ಮನೀ ಚಕ್ರವರ್ತಿನೀಯವರಿಗೂ ಶ್ರೀಮನ್ಮಹಾರಾಜ್ಞೀ ಚಕ್ರವರ್ತಿನೀಯವರಿಗೂ ಸಹ ಉಪಶಾಂತಿಯನ್ನುಂಟುಮಾಡಬೇಕಾದದ್ದಾಗಿರುತ್ತದೆ.

THE MYSORE LOCAL SERVICE AND PLEADERS' TEST EXAMINATIONS.

ಮೈಸೂರು ಸರ್ಕಾರದವರಿಂದ ನೂತನವಾಗಿ ವ್ಯವಸ್ಥಾಪಿತವಾಗಿ ಈಗ್ಯೆ ಮೂರುನಾಲ್ಕು ವರುಷಗಳಾಯಿತು ಪ್ರತಿಸಂವತ್ಸರ ಇದೇ ತಿಂಗಳಲ್ಲಿ ನಡೆಯತಕ್ಕ ಮೈಸೂರು ಲೋಕಲ್ ಸರವಿಸ್ ಮತ್ತು ಪ್ಲೀಡರ್ ಟೆಸ್ಟ್ ಪರೀಕ್ಷೆಗಳು ಮಾಹೇಮಜಕೂರ್ ೧೧ನೇ ತಾರೀಖ್ ಸೋಮವಾರದದಿನ ಪ್ರಾರಂಭವಾಗಿ ಮೊನ್ನೆಯತನಕ ಪ್ರತಿನಿತ್ಯ ೧೧ ಘಂಟೆಯಮೊದಲು ೫ ಘಂಟೆಯವರಿವಿಗೆ ಈ ಪ್ರಾಂತ ಪಬ್ಲಿಕ್ ಆಫೀಸಿನ ಸೆಂಟ್ರಲ್ ಹಾಲಿನಲ್ಲಿ ಜರಿಗಿದವು. ಇದೇಕಾಲದಲ್ಲಿ ಇತರ ಡಿಸ್ಟ್ರಿಕ್ಟ ಹೆಡ್‌ಕ್ವಾರ್ಟರ್‌ಗಳಲ್ಲಿಯೂ ಆಯಾ ಡಿಸ್ಟ್ರಿಕ್ಟ ಡೆಪ್ಯುಟಿ ಕಮಿಷನರ್‌ಗಳ ವಿಚಾರಣೆಯಲ್ಲಿ ನಡೆದವು. ಈ ಸಂವತ್ಸರ ಸದರೀ ಪರೀಕ್ಷೆಯು ಈ ಊರಲ್ಲಿಮಾತ್ರವೇ ನಡೆಯತಕ್ಕದ್ದೆಂದು ಮೊದಲು ಏರ್ಪಾಡಾಗಿ ಕಡೆಗೆ ಅದು ಯಾವ ಕಾರಣದಿಂದಲೊ ಮರಳಿ ಬದಲಾಯಿಸಲ್ಪಟ್ಟು ಪೂರ್ವದಂತೆಯೇ ಡಿಸ್ಟ್ರಿಕ್ಟ್‌ಗಳಲ್ಲಿಯೂ ನಡೆಯುವದೆಂದು ಘಾಯಿಷ್ ಮಾಡಲ್ಪಟ್ಟಿತು. ಈ ದಫಾ ಪರೀಕ್ಷೆಗೆ ಹೋಗಿದ್ದವರ ಸಂಖ್ಯೆಯು, ಕಳೆದ ವರುಷಕ್ಕಿಂತ ಜಾಸ್ತಿಯೆಂದು ತಿಳಿಯಬರುತಿದೆ. ಮೈಸೂರು ಗವರ್ನಮೆಂಟನವರು, ಸದರೀ ಪರೀಕ್ಷೆಗಳು ಕೇವಲ ಆವಶ್ಯಕವೆಂದು ನಿರ್ಧರಿಸಿ ಮುಂದೆ ಭಡ್ತೀಮೂಲಕವಾದ ಪ್ರಯೋಜನವನ್ನಪೇಕ್ಷಿಸತಕ್ಕವರೆಲ್ಲರೂ ಅವುಗಳಲ್ಲಿ ಅವಶ್ಯ ತೇರ್ಗಡೆಯಾಗಬೇಕೆಂಬ ನಿರ್ಬಂಧವು ಬಹಿರಂಗವಾಗಿ ಕಲ್ಪಿಸಿರುವಂತೆ ಈಚೆಗೆ ಘಾಯಿಷ್ ಮಾಡಲ್ಪಟ್ಟ ಇಸ್ತಿಹಾರ್ ಮೂಲಕ ತಿಳಿಯಬಂದಿರುವದರಿಂದ ಮುಂದೆ ಪರೀಕ್ಷೆಗೆ ಹೋಗುವವರ ಸಂಖ್ಯೆಯು ಪ್ರತಿವರುಷದಲ್ಲೂ ಕ್ರಮೇಣ ವೃದ್ಧಿಯಾಗುತ ಬರಬಹುದೆಂದೆಣಿಸುತ್ತೇವೆ. ನೌಕರರು ಕಷ್ಟಪಟ್ಟು ಓದಿದಾಗ್ಯೂ ಅವರಲ್ಲಿ ತೇರ್ಗಡೆಯಾಗಬೇಕಾದದ್ದೂ, ತತ್ಪ್ರಯುಕ್ತವಾದ ಪ್ರಯೋಜನವನ್ನನುಭವಿಸಬೇಕಾದದ್ದೂ, ಪರಾಧೀನವಾದವಾಗಿರುತಿವೆ. ಈ ಪರೀಕ್ಷೆಗೆ ಹೋಗುವವರಿಗೆಲ್ಲ, ತಮಗೂ ಅಮಲ್ದಾರಿ, ಅಸಿಸ್ಟೆಂಟ ಕಮಿಷನರ್ ಕೆಲಸವಾಗಬಹುದೆಂಬ ಪ್ರತ್ಯಾಶೆ ಮಿರಲೆ ಇರಲಾರದು. ಹರಂತು ಸದರೀ ಪ್ರತ್ಯಾಶೆಯೊಡನೆ ಅವರು ನಿರೀಕ್ಷಿಸಿ ಪಡೆಯಲಿಚ್ಛಿಸಬೇಕಾದದ್ದು ಬೇರೊಂದಿದೆ ಎಂಬದು ಅವರು ಮರೆತಿರಲಾರರೆಂದೆಣಿಸುತ್ತೇವೆ. ಅದೊಂದು ಪ್ರಸ್ತುತವಾದರೆ ಈ ಪರೀಕ್ಷೆಗಳಿಗಾಗಲಿ ತನ್ಮೂಲಕವಾದ ಪ್ರಯೋಜನಗಳಿಗಾಗಲಿ ವಿಶೇಷ ಶ್ರಮಪಡ ಬೇಕಾಗಿರಲಾರದು. ಹಿಂದಿನಸಂವತ್ಸರಗಳಿಗಿಂತಲೂ ಈ ವರುಷದಲ್ಲಿ ಕಂಡುಬಂದ ವಿಶೇಷಾಂಶವೇನೆಂದರೆ, ಪ್ರತಿ ಸಂವತ್ಸರದಲ್ಲಿಯೂ ಪ್ರಶ್ನೆಗಳನ್ನು ಸಹ ಉಮೇದ್ವಾರರೇ ಆಕಾಲದಲ್ಲಿ ಬರೆದುಕೊಂಡು ಬಳಿಕ ಜವಾಬ್‌ಗಳು ಬರೆಯಬೇಕಾದ ಪ್ರಯಾಸಕರವಾದ ಪ್ರಬಲ ನಿರ್ಬಂಧವೊಂದು ನೆಲಗೊಂಡಿತಷ್ಟೆ. ಈ ವರುಷ ಸದರೀ ಕ್ರಮ ತಪ್ಪಿ ಕ್ರಮವಾದ ಪ್ರಶ್ನೆಪತ್ರಿಕೆಗಳೇ ಎಲ್ಲರಿಗೂ ಪ್ರಾಪ್ತವಾದವಲ್ಲದೆ ಇದರಿಂದ ಕಾಲವೂ ಬಹಳಮಟ್ಟಿಗೆ ಉಳಿತುದರಿಂದಾಯಿತು. ಸದರೀ ಪ್ರಶ್ನೆ ಪತ್ರಿಕೆಗಳನ್ನು ಓದುವವರಿಗೂ, ಪೂರ್ಣ ವಯಸ್ಕರಾಗಿ, ನೇತ್ರ ದೋಷವಿದ್ದ ಕೆಲವರಿಗೆ ಸಾಧ್ಯವಾಗಿದ್ದರೂ, ಕೈಗಳ ದರುತ ಕಣ್ಣುಗಳು ತಿಳಿಯದೆ ವಾಕ್ಯಪದ್ಯಗಳಿಂದ ಸಂಕಟಪಡುತ್ತ, ತಮ್ಮ ಸರ್ವೀಸ್ ಪ್ರೂತಿಗೆ ಸಾಲದೆ ಇರುವ ಅಲ್ಪಸ್ವಲ್ಪ ಕಾಲವನ್ನು ಬಹಳ ಆತುರದೊಡನೆ ನಿರೀಕ್ಷಿಸುತ ಗವರ್ನಮೆಂಟನವರ ನಿರ್ಬಂಧವು ತಡೆಯಲಾರದೆ ಬಂದಿದ್ದವರಿಗೆಲ್ಲ ಅದು ಶುದ್ಧಾಂಗ ಓದ ಕೊರತೆಯಾಗಿಯೇ ಇದ್ದಿರಬಹುದು. ಈವರುಷದಲ್ಲಿ ಪ್ರಾಯೇಣ ಪ್ರಶ್ನೆಗಳೆಲ್ಲವೂ ಬಹಳ ಸುಲಭವಾಗಿದ್ದದರಿಂದ ಬಹುಜನ ತೇರ್ಗಡೆಯಾಗಬಹುದೆಂದು ತೋರುತಿವೆ. ಸದರೀ ಪರೀಕ್ಷೆಗಳ ಬೋರ್ಡ್ ಸೆಕ್ರೆಟರಿಯಾದ ಮೆ|| ಅನಂತಸ್ವಾಮಿರಾಯರವರೂ, ಚೀಫ್ ಕೋರ್ಟ ಅಸಿಸ್ಟೆಂಟ ರಿಜಿಸ್ಟ್ರಾರ್ ಮೆ|| ಕೃಷ್ಣಯ್ಯವರೂ, ಅಸಿಸ್ಟೆಂಟ ಕಮಿಷನರ್ ಮೆ|| ರಾಮಾನುಜಯ್ಯಂಗಾರ್ರವರೂ, ಬಹಳ ಜಾಗರೂಕತೆಯೊಡನೆ ಉಸ್ತುವಾರಿ ಇದ್ದು ಪರೀಕ್ಷಾಕಾಲದಲ್ಲಿ ಹಿಂದಿನ ವರುಷದಲ್ಲಿ ನಡೆದಂತಾ ಅಕ್ರಮಗಳಿಗೆ ಅವಕಾಶ ಕೊಡಲಿಲ್ಲವು. ಈ ಪರೀಕ್ಷೆಯಿಂದುಂಟಾಗಬೇಕಾದ ಫಲಪ್ರಾಪ್ತಿ ದೈವಾಧೀನವಾಗಿದ್ದರೂ ಅದಕ್ಕೆ ಹೋಗಬೇಕಾದ ನಿರ್ಬಂಧವು ಮಾತ್ರ ಸಾರ್ವತ್ರಿಕವಾದದ್ದಾಗಿ ಏರ್ಪಟ್ಟಿರುವದರಿಂದ ಇದರ ರುಸುಮನ್ನು ಯಥೋಚಿತ ತಗ್ಗಿಸಿದರೆ ಬಡವರಾದವರಿಗೆಲ್ಲ ಬಹಳ ಅನುಕೂಲವಾಗಿರುವದು. ಇದಕ್ಕೆ ಮದರಾಸ್ ಸ್ಪೆಷಲ್ ಟೆಸ್ಟ್ ಪರೀಕ್ಷೆಗೆ ಏರ್ಪಡಿಸಿರುವಷ್ಟು ಫೀ ಇಟ್ಟರೆ ಸಾಕಾಗಿರುತವೆಂದು ಅನೇಕರು ಅಭಿಪ್ರಾಯ ಪಟ್ಟಿರುವರು. ಮುಖ್ಯವಾಗಿ ನಮ್ಮ ಪ್ರಯೋಜನವೊಡನೆ ಅದಕ್ಕೆ ಕಾರಣಭೂತರಾದವರ ಸುಖದುಃಖಗಳನ್ನೂ ನಾವು ಪರ್ಯಾಲೋಚಿಸಬೇಕಾದ್ದು ಧರ್ಮವಾದ್ದರಿಂದ, ಗವರ್ನಮೆಂಟನವರು, ಅಲ್ಪ ಸಂಬಳಗಳುಳ್ಳ ನೌಕರರ ಶಕ್ತಿಯನ್ನಾಲೋಚಿಸಿ, ಪರೀಕ್ಷೆಗೆ ಕೊಡಬೇಕಾದ ಮೊಬಲಗನ್ನು ಕಡಮೆ ಮಾಡಬೇಕಾದದ್ದು ಆವಶ್ಯಕವೆಂದು ಬೋರ್ಡಿನವರು ಅವರಿಗೆ ಸಿಫಾರಸ್ ಮಾಡಿದರೆ ಬಹಳ ಜನಕ್ಕೆ ಸಂತೋಷಕರವಾಗಿರುವದೆಂದೆಣಿಸುತ್ತೇವೆ.

Occasional Notes.
ನೈಮಿತ್ತಿಕ ವಿಷಯನ್ಯಾಸ.

A liberal subscription.—ಮಧ್ಯ ರಾಷ್ಟ್ರಕ್ಕೆ ಸೇರಿದ ಭಂಡಾರಾಯೆಂಬ ಪ್ರದೇಶಸ್ಥರಾದ ರೆರಿಮ್ಯಾಜಿಸ್ಟ್ರೇಟರವರು ಇಂಡ್ಯರಾಜ್ಯದಪ್ರತಿರಾಯಿಯವರ ಭಾರ್ಯೆಯವರಾದ ಲೇಡಿ ಡಫರಿನ್ ಸಾಹೆಬರವರಿಂದ ಸ್ಥಾಪಿಸಲ್ಪಟ್ಟಿರುವ ಫಂಡಿಗೆ ೫೦೦ ರೂಪಾಯಿಗಳು ಚಂದಾಮಾಡಿರುತ್ತಾರೆ.

A journey postponed.—ಪರ್ಷಿಯಾದೇಶದ ಷಾ ಯವರು ಈ ಬೇಸಿಗೆಯಲ್ಲಿ ಫ್ರಾನ್ಸ್ ದೇಶಕ್ಕೆ ಪ್ರಯಾಣ ಮಾಡಬೇಕೆಂದು ಯೋಚಿಸುತಲಿದ್ದರಷ್ಟೆ. ಈಗ ಅಂತಾ ಯೋಚನೆಯನ್ನು ಸದ್ಯಃ ಮನ್ನಾ ಮಾಡಿ, ಮುಂದಿನ ಸಂವತ್ಸರದಲ್ಲಿ ಫ್ರಾನ್ಸ್ ದೇಶದೊಳು ವಿನೋದ ಸಭೆ ನಡೆಯುವ ಸಂದರ್ಭಕ್ಕೆ ಸರಿಯಾಗಿ ಅಲ್ಲಿಗೆಹೋಗಬೇಕೆಂದು ಯೋಚಿಸಿರುತ್ತಾರೆ.

A commission.—ಈಚೆಗೆ ಕೆಲವು ವರ್ಷಗಳ ಮೊದಲು ಚಿಳ್ಳಿಯದಾರಣೆಯಲ್ಲಿ ಕೊರತೆಯುಂಟಾಗುವದಕ್ಕೆ ಕಾರಣವನ್ನು ವಿಚಾರಿಸುವ ಉದ್ದೇಶದೊಡನೆ ಅಮೆರಿಕಾ ಖಂಡದ ಯುನೈಟೆಡ್ ಸ್ಟೇಟ್ಸ್ ಗವರ್ನಮೆಂಟನತರಫ್ ಒಂದು ಕಮಿಷನ್, ಅಂದರೆ ಏತದರ್ಥ ನಿಯಮಿಸಲ್ಪಟ್ಟ ಒಂದು ಸಮಾಜದವರು ಕೂಡಲೇ ಇಂಗ್ಲಾಂಡಿಗೆ ಕಳುಹಿಸಲ್ಪಡಬಹುದಾಗಿ ಕಾಣುತಿದೆ.

An honorary appointment.—ಹೈದರಾಬಾದ್ ನಿಜಾಮರವರ ಏಡೀಕಾಂಗರಾಗಿಯೂ, ಗೋಲಕೊಂಡೆಯಲ್ಲಿರುವ ಸೈನ್ಯದ ಕಮಾಂಡರಾಗಿಯೂ ಇರುವ ನವಾಬ್ ಅಫ್ಸರ್ ಜಂಗರವರನ್ನು, ವೈಸ್ರಾಯ್ ಯವರ ಮತ್ತು ಕಮಾಂಡರ್-ಇನ್-ಚೀಫರವರ ಶಿಫಾರಸ್ಸಿನಮೇಲೆ, ಮಹಾರಾಜ್ಞೀ ಇಂಡ್ಯ ಚಕ್ರವರ್ತಿನೀಯವರು ತಮ್ಮ ಸೇನೆಯಲ್ಲಿ ಆನರೆರಿಮೇಜರಾಗಿ ನಿಯಮಿಸಿದರು.

A decision of the Government of India.—ನೀಲಿಮದ್ದು ತಯಾರ್ಮಾಡುವಂತಾವರು, ಅದರ ಗಿಡಗಳನ್ನು ತಾವೇ ಬೆಳೆಯಿಡಲಿ ಇಲ್ಲದೆ ಹೋಗಲಿ, ಅಂತಾ ತಯಾರೀಯಿಂದ ಅವರಿಗೆ ಉಂಟಾಗ ಬಹುದಾದ ಲಾಭವು ಇನ್ಕಂಟ್ಯಾಕ್ಸ ಎಂಬ ಆಮದಾನೀ ತೆರಿಗೆಗೆ ಗುರಿಯಾಗತಕ್ಕದ್ದಲ್ಲವೆಂದು ಇಂಡ್ಯ ಗವರ್ನಮೆಂಟನವರು ನಿರ್ಣಯಿಸಿರುತ್ತಾರೆ.

Forgery of currency notes.—ಈಚೆಗೆ ಕಲ್ಕತ್ತೆಯಲ್ಲಿ ಹತ್ತು ಮತ್ತು ಐವತ್ತುರೂಪಾಯಿಗಳ ಬಾಬತು ಬನಾವಣಿ ನೋಟುಗಳು ಚಲಾವಣಿಗೆ ಬಂದು ಅದಂ ಕುರಿತು ನಡೆದ ವಿಚಾರಣೆಯಲ್ಲಿ, ಸಂಗೀತ ಶಾಸ್ತ್ರದೊಳು ಪ್ರಸಿದ್ಧ ಪಂಡಿತ ನೆನಿಸಿರ್ಪ ಮೋಹೇಂದ್ರನಾಥ್ ಚಟರ್ಜಿಎಂಬಾತನು ಸದರೀ ದುಷ್ಕೃತ್ಯವು ನಡೆಸಿದಂತೆ ತಿಳಿಯಬಂತು, ಹರಂತು ಆತನು ತಪ್ಪಿಸಿಕೊಂಡು ಪರಾರಿಯಾಗಿರುತ್ತಾನೆ ಆತನ ಅಣ್ಣತಮ್ಮಂದರು ಮಕ್ಕಳೆಲ್ಲರು ಪೊಲೀಸಿನವರ ವಶದಲ್ಲಿರುತ್ತಾರೆಂದು ವಗೈರೆ ಕಲ್ಕತ್ತಾ ಪತ್ರಿಕೆಯೊಂದರ ಮೂಲಕ ತಿಳಿಯಲಾದೆವು.

The Gaekwar's trip to Europe.—ಬರೋಡೆ ಗಾಯಕವಾಡಿ ಮಹಾರಾಜರವರು ಈ ತಿಂಗಳ ೧೦ನೇ ತಾರೀಖಿನಲ್ಲಿ ಮದರಾಸಿನೊಳು ಹಡಗುಹತ್ತಿ ಯೂರೋಪ್‌ಖಂಡಕ್ಕೆ ಪ್ರಯಾಣವಾಗುವವರಾಗಿದ್ದರಷ್ಟೆ. ಸದರೀ ಪ್ರಯಾಣವು ಈ ತಿಂಗಳ ೭ನೇ ತಾರೀಖಿನಲ್ಲಿ ಮುಂಬೈಯಿಂದ ಮೆಯಿಲ್ ಸ್ಟೀಮರ್ ಬರುವ ತನಕ ಮನ್ನಾ ಮಾಡಲ್ಪಟ್ಟಿರುತಿದೆ ಅವರ ಕುಟುಂಬವು ಅದುವರಿವಿಗೆ ಮಹಾರಾಜರವರ ಸಂಗಡ ಬಂದು ಅವರು ಯೂರೋಪ್ ದೇಶಕ್ಕೆ ಹಡಗುಹತ್ತಿದ ಮೇಲೆ ಅವರೆಲ್ಲರು ಬರೋಡೆಗೆ ಮರಳಿಹೋಗುವರು.

A much needed reform.—ಇಂಡ್ಯದೇಶದಲ್ಲಿನ ರೆಯಿಲ್ವೆ ಲಾಯಿನೆಗಳಲ್ಲಿ ಅವಶ್ಯ ಮಾಡಬೇಕಾಗಿರುವ ಹೊಸ ಏರ್ಪಾಡುಗಳನ್ನು ಕುರಿತು, ವಿಚಾರಮಾಡುವ ಸಂದರ್ಭದಲ್ಲಿ ರೆಯಿಲ್ ಗಾಡಿಗಳಲ್ಲಿ, ತತ್ರಾಪಿ ಮೂರನೇ ತರಗತಿ ಗಾಡಿಗಳಲ್ಲಿ ಅತ್ಯಧಿಕವಾಗಿ ಜನಗಳನ್ನು ನೂಕುವದರಿಂದ ಜನಗಳ ಆರೋಗ್ಯಕ್ಕೂ ಸುಖಕ್ಕೂ ಕೇವಲ ಲೋಪವುಂಟಾಗುತಿರುವಾಗಿ ಈಗಿನ ಅಂತಾ ಮರ್ಯಾದಿಕೆಯನ್ನು ತಪ್ಪಿಸಬೇಕಾದ ವಿಷಯದಲ್ಲಿ ಖಂಡಿತವಾಗಿಯೂ ಶಾಶ್ವತವಾಗಿಯೂ ಒಂದುಹುಕುಂ ಕೊಡಬೇಕೆಂದು ರೆಯಿಲ್ವೆ ಡೈರೆಕ್ಟರ್ ಜನರಲವರನ್ನು ಒಂದಾನೊಂದು ಪತ್ರಿಕೆ ಕೇಳುತಿದೆ. ಇದು ಇತರಾಪೇಕ್ಷೆಯಾ ಅತ್ಯಾವಶ್ಯಕವಾದ ಏರ್ಪಾಡಾಗಿರುವದರಿಂದ ಇಲಾಖಾ ಮಜಕೂರ್ ಅಧಿಕಾರಿಗಳು ಇದಕ್ಕೆ ಮುಖ್ಯ ಮನಸ ಕೊಡುವರೆಂದು ನಂಬುತ್ತೇವೆ.

A shocking tragedy.—ಈ ತಿಂಗಳ ೯ನೇ ತಾರೀಖ್ ಶನಿವಾರದದಿನ ರಾತ್ರಿ ಸಿಕಂದರಾಬಾದಿನಲ್ಲಿರುವ ೩ನೇ ನಂಬರ್ ಮದರಾಸ್ ಕ್ಯಾವಲ್ರಿಗೆ ಸೇರಿದ ಮಹಮ್ಮದೀಯ ಶಿಪಾಯಿಯೊಬ್ಬನು ತಾನು ಬೈಡ್ ಮಾಡಲ್ಪಟ್ಟಿದ್ದ ಕೊಠಡಿಯಿಂದ ತಪ್ಪಿಸಿಕೊಂಡು ಒಂದು ಬಂದೂಕನ್ನೂ ಹತ್ತು ತೋಟಾಗಳನ್ನೂ ತೆಗೆದುಕೊಂಡು ಬ್ಯಾರೆಕ್ ಕೋಸಿಗೆ ಹೋಗಿ, ತನ್ನ ರಿಜಿಮೆಂಟ ಸುಬೇದಾರನಾದ ಅಲೀಖಾನನನ್ನು ಗೋಲಿಯಿಂದ ಹೊಡೆದು ಕೊಂದುಹಾಕಿ, ಅಲ್ಲಿಂದ ಓಡಿಹೋಗುತ್ತಿರುವಲ್ಲಿ ಎದುರಾಗಿಬರುತಲಿದ್ದ ಸದರೀ ರಿಜಿಮೆಂಟಿ ನಾಯಕನನ್ನು ಹೊಡೆದು ಕೊಂದುಹಾಕಿ ಓಡಿಹೋದವನು ಇದುವರಿವಿಗೆ ಪತ್ತೆಯಾಗಲಿಲ್ಲವು. ಸದರೀ ಘಾತುಕನು ಹೈದರಾಬಾದ್ ಶಹರ್‌ನಲ್ಲಿ ಅವಿತುಕೊಂಡಿರುವಂತೆ ಕಾಣುತಿದೆಯೆಂದು ಅಲ್ಲಿನ ಪತ್ರಿಕೆ ಹೇಳುತಿದೆ.

LOCAL AND PROVINCIAL NEWS.
ಒಳದೇಶ ಮತ್ತು ತಾಲ್ಲೂಕ್‌ಜಾತ್ ವೃತ್ತಾಂತ

Temporary arrangement.—ಬೆಂಗಳೂರು ಡಿಸ್ಟ್ರಿಕ್ಟ ಟ್ರೆಜರಿ ಆಫಿಸರ್ ಮೆ|| ಎಫ್. ಬಿ. ಕ್ಯಾರ್ಕ್ಯವರು ಮೆ|| ಸ್ಪಾರ್ಕ್ಸ್ ಯವರು ರಜಾಮೇಲೆ ಗೈರ್‌ಹಾಜರಾಗಿರುವ ಕಾಲದಲ್ಲಿ ಅಥವಾ ಮತ್ತೊಂದು ಹುಕುಂ ಕೊಡಲ್ಪಡುವತನಕ ತಮ್ಮ ಸ್ವಂತ ಕೆಲಸದೊಡನೆ ಬೆಂಗಳೂರಲ್ಲಿರುವ ಸುಪ್ರೀಂ ಜೆಯಿಲ ಸೂಪರಿಂಟೆಂಡೆಂಟ ಕೆಲಸವನ್ನು ಆಕ್ಟಿಂಗ್ ತರೀಕ್ ನೋಡುವಂತೆ ಹುಕುಂ ಮಾಡಲ್ಪಟ್ಟಿರುತ್ತಾರೆ.

The Namakarana Ceremony.—ಗತ ಶನಿವಾರದ ದಿನ, ಶ್ರೀಮನ್ಮಹಾರಾಜ ಪುತ್ರರಿಗೆ ನಾಮಕರಣೋತ್ಸವ ವಾದದರಿಂದ ತತ್ಪ್ರಯುಕ್ತ ಈ ಸಂಸ್ಥಾನದ ವಿಶಿಷ್ಟ ಇಲಾಖೆಗಳಿಗೂ ಆದಿನ ರಜಾಕೊಡಲ್ಪಟ್ಟಿತು. ಆ ಮಹೋತ್ಸವ ಸಂದರ್ಭಾರ್ಥ ಇಲ್ಲಿಂದ ಚೀಫ್‌ಕೋರ್ಟ್ ಜಡ್ಜಿಗಳು, ಕಂಟ್ರೋಲರ್ ವಗೈರೆ ಅನೇಕ ದೊಡ್ಡ ಉದ್ಯೋಗಸ್ಥರು ಆಹ್ವಾನ ಪೂರ್ವಕ ರಾಜಧಾನಿಗೆ ಹೋಗಿರುತ್ತಾರೆ. ಅವರೆಲ್ಲರೂ ಪ್ರಾಯಶಃ ಈದಿನ ಸಾಯಂಕಾಲ ವಾಪಸ್ ಬರಬಹುದು. ಪ್ರಸಕ್ತ ವಿಶೇಷ ಸಂದರ್ಭದ ಗೌರವಾರ್ಥ ಈ ಊರು ದೇವಸ್ಥಾನಗಳಲ್ಲೆಲ್ಲ ಉತ್ಸವಾದಿಗಳು ನಡೆಸಲ್ಪಟ್ಟವಲ್ಲದೆ ಏತದರ್ಥ ಶಿರಸ್ಮಂದಿ ಕೈದಿಗಳು ಖುಲಾಸೆ ಮಾಡಲ್ಪಟ್ಟರು. ಈ ಕೈದಿಗಳ ಸಜಾಕಾಲವು ಪೂರೈಸಲಿಕ್ಕೆ ಇನ್ನೂ ಆರು ತಿಂಗಳು ಬಾಕೀ ಇರುವದರಿಂದ ಅಂತವರೇ ಚುನಾಯಿಸಿ ಸಿಫಾರಸ್ ಮಾಡಲ್ಪಟ್ಟರೆಂದು ಕೇಳುತ್ತೇವೆ. ಪ್ರಸಕ್ತ ಉತ್ಸವವು ಮೈಸೂರೊಳು ಬಹಳ ವಿಜೃಂಭಣೆಯೊಡನೆ ನಡೆದಿರಬಹುದೆಂದೆಣಿಸುತ್ತೇವೆ.

Flower car.—ಈ ಊರಲ್ಲಿರತಕ್ಕ ಹೂವಾಡಿಗರ ಗುಂಪಿಗೆ ಸೇರಿದ ನರಸಿಂಹಯ್ಯ ಮೊದಲಾದ ಅನೇಕ ಜನಸೇರಿ, ಶ್ರೀ ನೃಸಿಂಹಸ್ವಾಮಿಗೆ ಗತ ಗುರುವಾರದ ದಿನ ರಾತ್ರಿ ಪುಷ್ಪ ರಥೋತ್ಸವ ಮಾಡಿಸಿದರು. ರಥವು ಅಮೂಲ್ಯ ಮಲ್ಲಿಗೆಹೂವಿನಿಂದಲಂಕರಿಸಲ್ಪಟ್ಟಿತಲ್ಲದೆ, ಅದರ ಕೈಕೆಲಸವು ಬಹಳ ಶ್ಲಾಘ್ಯವಾಗಿಯೂ ಉತ್ತರವಾದ ವೈಚಿತ್ರಿ ಪ್ರಶಸ್ತಿಯನ್ನು ವ್ಯಕ್ತಪಡಿಸುವಂತಾದ್ದಾಗಿಯೂ ಅನತಿಗಂತ ದನಾಢ್ಯರಾದವರಿಗೆಲ್ಲ ಧರ್ಮಕಾರ್ಯದಲ್ಲಿ ಪ್ರವೃತ್ತಿಯನ್ನುಂಟುಮಾಡುವಂತಾದ್ದಾಗಿಯೂ ಇತ್ತು. ಇಂತಾ ಭಗವತ್ಕೈಂಕರ್ಯವು ಪರಸ್ಥಳಗಳಲ್ಲಿ ಅಸ್ಯರಿಗೆ ಸುತರಾಂ ಸಾಧ್ಯವಾಗಲಾರದು. ಒಂದುವೇಳೆ ಸಾಧ್ಯವಾದರೂ ಇಷ್ಟರ ಶ್ಲಾಘ್ಯವಾಗಿರಲಾರದು. ಉತ್ಸವವು ಆದಿನ ರಾತ್ರಿಯೆಲ್ಲಜರಿಗಿ ಮಾರನೆಯದಿನ ಬೆಳಗ್ಯೆ ಒಂದುಘಂಟೆಗೆ ನೆಲೆಗೆ ಬಂದು ಸೇರಿತು. ಈಕಾಲದಲ್ಲಿ ಹೂವಾಡಿಗರ ದೈವಭಕ್ತಿಯು ಇತರಾಪೇಕ್ಷೆಯಾ ಬಹಳ ಕೊಂಡಾಡತಕ್ಕದ್ದಾಗಿರುತಿದೆ.

A hasty measure.—ಸ್ವಪ್ರತಿಷ್ಠೆ ಪರರಿಗೆ ಯಾವಾಗಲು ಅಸಹಿಷ್ಣುತೆಯು ನೈಜಗುಣವಾಗಿರುತಿದೆ. ಪೋಲೀಸ್ ಇನ್ಸ್‌ಪೆಕ್ಟರ್ ಜನರಲರಾದ ಮೆ|| ರಿಕೆಟ್ಸ್‌ಯವರು ಈಚೆಗೆ ಡಿಸ್ಟ್ರಿಕ್ಟ ಜಾತಿಗೆ ಹೋಗಿದ್ದ ವೇಳೆಯಲ್ಲಿ ಕಡೂರ ಡಿಸ್ಟ್ರಿಕ್ಟ ಪೋಲೀಸ್ ಅಸಿಸ್ಟೆಂಟ ಕಮಿಷನರ ಡಿಸ್ಟ್ರಿಕ್ಟ ಸರಹದ್ದಿಗೆಬಂದು ತಮ್ಮನ್ನು ಎದುರುಗೊಂಡು ಗೌರವಿಸಲಿಲ್ಲವೆಂದು ಅವರ ಔದಾಸೀನ್ಯವು ಕುರಿತು ದಿವಾನರವರಿಗೆ ರಿಪೋರ್ಟ ಮಾಡಿದರೆಂತಲೂ, ಅದರಮೇಲೆ ಅವರು ಪೋಲೀಸ್ ಅಸಿಸ್ಟೆಂಟ ಕಮಿಷನರವರ ನಡತೆಯ ಕುರಿತು ಬಹಳ ಅತೃಪ್ತಿಕರವಾದ ಆಕ್ಷೇಪಣೆಗಳು ಮಾಡಿ ಪ್ರೊಸೀಡಿಂಗ್ಸ್ ಮಾಡಿದರೆಂತಲೂ, ಅದನ್ನರಿತು ಕಡೂರು ಡೆಪ್ಯುಟಿ ಕಮಿಷನರ್ ಕರ್ನಲ್ ಕ್ಯಾಂಬಲ್‌ಯವರು ಅಸಿಸ್ಟೆಂಟರು ಮೆ|| ಕೈಟ್ಸ್ ಬಂದಕಾಲದಲ್ಲಿ ಹೋಗಿ ನೋಡದೆ ಹೋದದಕ್ಕೆ ತೃಪ್ತಿಕರವಾದ ಕಾರಣಗಳನ್ನು ಬರೆದು ಅವರು ನಿರ್ದೋಷಿಯೆಂದು ಘೋಷಿಸಿಬರೆದದರ ಮೇಲೆ ದಿವಾನರವರು ತಮ್ಮ ಹುಕುಮನ್ನು ರದ್ದು ಮಾಡಿದರೆಂತಲೂ ಸ್ಪೆಕ್ಟೇಟರ್ ತಿಳಿಸುತಿದೆ. ಪ್ರಸ್ತುತವಾಕ್ಯಕ್ಕಾದರೂ ವಿಮರ್ಶಕತೆಯು ಅತ್ಯಾವಶ್ಯಕತಾಪೇಕ್ಷಿತವಾಗಿರುತಿದೆ.

Charity.—ಲೋಕದಲ್ಲಿ ಮನುಷ್ಯನಿಗೆ ಕೀರ್ತೈಶ್ವರ್ಯಾಧಿಕಾರಗಳು ಅನಿತ್ಯಗಳಾದದರಿಂದ ಅವುಗಳಿಗೆ ಯಾವ ಸಂದರ್ಭದಲ್ಲೇನು ಉಪಹತಿಯುಂಟಾಗುವದೋ ತಿಳಿಯಲಸಾಧ್ಯವಾದದರಿಂದ ಇಲ್ಲಿನ ದಿವಾನರಾದ ಮೆ|| ಶೇಷಾದ್ರಿಅಯ್ಯರವರು ತಾವು ಅಧಿಕಾರ ಪದದೊಳಿರುವಾಗಲೇ ತಮ್ಮ ಹೆಸರನ್ನಾರ್ಜಿತ ಪಡಿಸಿಕೊಳ್ಳಬೇಕೆಂಬ ಅಪೇಕ್ಷೆಯುಂಟಾಗಿ ಮೈಸೂರಲ್ಲೊಂದು ಧರ್ಮಸತ್ರವು ಕಟ್ಟಿಸಬೇಕೆಂಬ ಸಂಕಲ್ಪದೊಡನೆ ಜನಿರ್ಮಾ ಬಗ್ಯೆ ಮಹಾರಾಜಾ ಸರ್ಕಾರದವ

ಕೇಳಿಕೊಂಡದಕ್ಕೆ ಅವರು ಸತ್ರನಿರ್ಮಾಣಕ್ಕೂ ಅದಕ್ಕೆ ಬೇಕಾದ ಸ್ಥಳವಂ ವಿನಿಯೋಗಿಸಿಕೊಳ್ಳಲಿಕ್ಕೂ ಹುಕುಂಕೊಟ್ಟರೆಂದು ಬಳದೇಶದಸ್ಪೆಕ್ಟೇಟರ್ ಪತ್ರಿಕೆ ತಿಳಿಸುತಿದೆ. ಸೇಟ್ ದಿವಾನ್ ಪೂರ್ಣಯ್ಯನವರು ತಮ್ಮ ಕಾರ್ಯಕರ್ತೃತ್ವದಲ್ಲಿ ಅಧಿಕಾರಬಲದಿಂದ ಅನೇಕ ಸತ್ರಗಳಂ ನಿರ್ಮಿಸಿದ್ದರಿಂದ ಅವರು ಗತಿಸಿ ಬಹಳಕಾಲವಾದಾಗ್ಯೂ ಅವರ ಹೆಸರು ಮಾತ್ರ ಅದ್ಯಾಪಿ ನೆಲೆಗೊಂಡಿರಲಿಕ್ಕೆ ಕಾರಣವಾಗಿದೆ. ಹಾಗೆಯೇ ಮೋಕ್ಷಾದ್ರಿಅಯ್ಯರವರು ಮಾಡಲುದ್ದೇಶಿಸಿರುವ ಧರ್ಮಕಾರ್ಯದಿಂದ ಅವರ ಹೆಸರು ಸತ್ರರೂಪವಾಗಿ ಬಹುಕಾಲ ನೆಲೆಗೊಂಡಿರಲಿಕ್ಕೆ ಕಾರಣವಾಗುವದು. ಪರಂತು ಅನ್ನದಾನವೂ ಸತ್ರದೇವಾಲಯಾದಿಗಳ ಪ್ರತಿಷ್ಠೆಯೂ ನಿಷ್ಪ್ರಯೋಜನಗಳಾದ ಸೋಮಾರಿಗಳ ಕೃತ್ಯವೆಂಬ ಅಧುನಿಕಾಭಿಪ್ರಾಯವು ದಾನರವರಿಗೆ ಉಂಟಾಗದೆ ಹೋದದಕ್ಕಾಗಿ ನಾವು ಬಹಳ ಸಂತೋಷಿಸುವೆವು.

ಆತ್ಮನಿಗೆ ದುಃಖವು ಸ್ವಾಭಾವಿಕವೆ ಅಥವಾ ಆಗಂತುಕವೆ ?

ಲೋಕದಲ್ಲಿ ಪ್ರಾಣಿಗಣಗಳಿಗೆ ದುಃಖವು ಸ್ವಾಭಾವಿಕವಾದದ್ದೋ ಅಥವಾ ಆಗಂತುಕವೋ ಎಂದು ಆಲೋಚಿಸಿದ್ದಾದರೆ, ಅನೇಕಕಾರಣಗಳಿಂದ ಅದು ಆಗಂತುಕವೇ ಹೊರ್ತು ಸ್ವಾಭಾವಿಕವಲ್ಲವೆಂದು ತೋರುತಿದೆ. ದುಃಖವು ಸ್ವಾಭಾವಿಕವಾದದ್ದೆಂದು ನುಡಿಯುವೆವಾದರೆ, ಸ್ವಭಾವವಾದದ್ದು ಯೆಂದಿಗೂ ನಿವೃತ್ತಿಯಾಗಲಾರದಾದ್ದರಿಂದ ತನ್ನಿವೃತ್ತ್ಯುಪಾಯವನ್ನು ಯಾರೂ ಹುಡುಕಬೇಕಾಗಿರಲಾರದು. ದುಃಖನಿವೃತ್ತಿಯನ್ನು ತನ್ನಿವಾರಕೋಪಾಯವನ್ನೂ ತಿಳಿಯುವಬಗ್ಗೆ ಪ್ರತಿಮನುಷ್ಯನೂ ನಾನಾವಿಧವಾಗಿ ಪ್ರಯತ್ನಿಸುತಲಿರುವದಂ ನಾವು ನೋಡುತಲಿದೇವಾಗಿ ಅದು ಆಗಂತುಕವೆಂತಲೇ ಭಾವಿಸಬೇಕಾಗಿದೆ. ಇದಕ್ಕೆ ಕೆಲವು ದೃಷ್ಟಾಂತಗಳನ್ನು ತಿಳಿಸುವೆವು. ಅವು ಯಾವವೆಂದರೆ—ಬೇವಿನಮರವು ಸ್ವಾಭಾವಿಕವಾಗಿ ತಿಕ್ತಗುಣವುಳ್ಳದ್ದಾಗಿರುತಿದೆ. ಸದರೀಗುಣವು ಅದನ್ನಾವಾಗಲೂ ತೊರೆದಿರಲಾರದೆಂಬದು ಜಗತ್ಪ್ರಸಿದ್ಧವಾಗಿರುವಲ್ಲಿ ಅದರಗುಣವಂ ನಾವೆಷ್ಟುವಿಧವಾಗಿ ಹೋಗಲಾಡಿಸತೆತ್ನಿಸಿದಾಗ್ಯೂ ಅದು ನಿವೃತ್ತಿಯಾಗಲಾರದು. ಇದೇ ರೀತಿ ಪ್ರಾಣಿಕೋಟಿಗಳಿಗೆದುಃಖವು ಸ್ವಭಾವದ್ದಾಗಿರುವವಾದರೆ ಅದು ಯಾವಬಗೆಯಿಂದಲೂ ಅವುಗಳಂಬಿಟ್ಟು ಅಗಲಲಾರದು. ಹಾಗೆಯೇ ಅಗ್ನಿಗೆ ಔಷ್ಣ್ಯವೂ, ಜಲಕ್ಕೆ ಶೈತ್ಯವೂ ಸ್ವಾಭಾವಿಕಗುಣಗಳು ; ಅವುಗಳಿಗೆ ತತ್ತದ್ಗುಣಗಳು ಹ್ಯಾಗೆ ನಿವಾರಕಗಳಲ್ಲವೋ ಅದರಂತೆ ಪ್ರಾಣಿಗಳಿಗೆ ದುಃಖವು ಸ್ವಾಭಾವಿಕವಾದದ್ದಾಗಿದ್ದರೆ ಎಂದಿಗೂ ನಿವೃತ್ತಿಯಾಗಲಾರದು. ಆದದರಿಂದ ನಮಗೆ ದುಃಖವು ಆಗಂತುಕವೇಹೊರ್ತು ಸ್ವಾಭಾವಿಕವೆಂದು ನುಡಿಯತಕ್ಕದ್ದು. ಪ್ರಾಯಶಃ ಪ್ರಾಣಿಗಳಿಗೆ ಶರೀರ ಪರಿಗ್ರಹದಿಂದಲೇ ದುಃಖವುಂಟಾಗುತಿದೆಯೇಹೊರ್ತು ಬೇರೊಂದರಿಂದಲ್ಲವು. ಈಶರೀರವು ಕರ್ಮಯುಕ್ತವಾದ ಪಂಚೀಕೃತ ಪಂಚಮಹಾ ಭೂತಗಳಿಂದ ಉಂಟಾಗುವಂತೆ ತೋರುತಿದೆ ಕರ್ಮನಾಶನದೊಡನೆ ಶರೀರನಾಶವೂ, ಅದರುತ್ಪತ್ತಿಯೊಡನೆ ಶರೀರೋತ್ಪತ್ತಿಯೂ ಆಗುವಂತೆ ಶ್ರುತಿಗಳೆಲ್ಲ ಮೊರೆಯಿಡುತಲಿವೆ. ಆದದರಿಂದ ಕಾರ್ಯಕಾರಣರೂಪವಾದ ಕರ್ಮವೂ, ತನ್ನಿಮಿತ್ತಕವಾದ ಶರೀರವೂ ಪ್ರಥಮತಃ ನಮಗೆ ನಾಶವಾಗಬೇಕಾಗಿರುತಿದೆ. ಮೊದಲು ನಾವು ನಿವೃತ್ತಿಸಿಕೊಳ್ಳಬೇಕಾದ ಕರ್ಮವು ಮೂರುವಿಧವುಳ್ಳದ್ದಾಗಿರುತಿದೆ. ಅವುಗಳ್ಯಾವವೆಂದರೆ—ಪುಣ್ಯ ಕರ್ಮಗಳು, ಮಿಶ್ರಕರ್ಮಗಳು, ಪಾಪಕರ್ಮಗಳು. ಇವುಗಳೊಳ್ಳೊಂದಂದಕ್ಕೆ ಒಂದೊಂದುಬಗೆ ದೇಹಪ್ರಾಪ್ತವಾಗುವದು, ಹ್ಯಾಗೆಂದರೆ—ಪುಣ್ಯಕರ್ಮಗಳಿಗೆ ದೇವಾದಿಶರೀರಗಳೂ, ಮಿಶ್ರಕರ್ಮಗಳಿಗೆ ಮಾನವಶರೀರಗಳೂ, ಪಾಪಕರ್ಮಗಳಿಗೆ ತಿರ್ಯಗಾದಿ ಶರೀರಗಳೂ ಪ್ರಾಪ್ತವಾಗುತಿವೆ. ಇವು ಇನ್ನೂ ವಿಮರ್ಶಿಸಿ ನೋಡಿದರೆ, ಪುಣ್ಯೋತ್ಕರ್ಷಕ್ಕೆ, ಹಿರಣ್ಯಗರ್ಭಶರೀರಪ್ರಾಪ್ತಿ; ಪುಣ್ಯಮಧ್ಯಮಕ್ಕೆ, ಇಂದ್ರಾದಿ ಶರೀರಪ್ರಾಪ್ತಿ ; ಪುಣ್ಯಸಾಮಾನ್ಯಕ್ಕೆ, ಯಕ್ಷರಕ್ಷ ಪಿಶಾಚಾದಿಶರೀರಪ್ರಾಪ್ತಿ; ಮಿಶ್ರೋತ್ಕರ್ಷಕ್ಕೆ, ನಿಷ್ಕಾಮ್ಯಕರ್ಮಾನುಷ್ಠಾನದಿಂದ ಚಿತ್ತಶುದ್ಧಿಯೂ,ಅದರಿಂದ ಸಾಧನಚತುಷ್ಟಯ ಸಂಪತ್ತಿಯೂ, ತನ್ಮೂಲಕ ಸದ್ಗುರುಲಾಭವೂ, ಲಭಿಸಿ ಆಲಾಭದೊಡನೆ ಮಾದಪ್ಪಡುವ ಮನನನಿಧಿ ಧ್ಯಾನಾದಿಗಳಿಂದುಂಟಾಗುವ ಜ್ಞಾನದಿಂದ ಪಡೆಯಬೇಕಾದ ಜೀವನ್ಮುಕ್ತಿ ಸುಖವನ್ನನುಭವಿಸುವಂತಾ ಶರೀರಪ್ರಾಪ್ತಿ; ಮಿಶ್ರ ಮಧ್ಯಮಕ್ಕೆ, ಸ್ವವರ್ಣೋಚಿತ ಕಾಮ್ಯಕರ್ಮಾನುಷ್ಠಾನಕ್ಕೆ ಯೋಗ್ಯವಾದ ಶರೀರಪ್ರಾಪ್ತಿ; ಮಿಶ್ರಸಾಮಾನ್ಯಕ್ಕೆ, ಚಂಡಾಲ ವ್ಯಾಧಾದಿ ಶರೀರಪ್ರಾಪ್ತಿ, ಪಾಪೋತ್ಕರ್ಷಕ್ಕೆ, ಪರರಿಗೆ ಸಂತಾಪಕಾರಿಗಳಾದ ಗುಚ್ಛ, ಗುಲ್ಮ, ವೃಶ್ಚಿಕ, ಮತ್ಕುಣಾದಿ ಶರೀರಪ್ರಾಪ್ತಿ, ಪಾಪಮಧ್ಯಮಕ್ಕೆ, ಆಮ್ರ ಪನಸ ನಾರಿಕೇಳ,ಮಹಿಷಾಶ್ವ ಗರ್ದಭಾದಿ ಶರೀರಪ್ರಾಪ್ತಿ ; ಪಾಪಸಾಮಾನ್ಯಕ್ಕೆ, ಗೋಗಜಾಶ್ವತ್ಥವೃಕ್ಷಾದಿ ಶರೀರಪ್ರಾಪ್ತಿ ; ಏವಂ ರೀತ್ಯಾ ಉಂಟಾಗುವಂತೆ ತಿಳಿಯಬರುತಿದೆ. ಆದದರಿಂದ ವಿವೇಕಿಯಾದ ಪುರುಷನು ಕರ್ಮಫಲ ತಾರತಮ್ಯವಂ ವಿಚಾರಿಸಿ ಮಿಶ್ರೋತ್ಕರ್ಷಕ್ಕೆ ತಿಳಿಸಲ್ಪಟ್ಟ ಶರೀರವು ಹ್ಯಾಗೆ ಉಂಟಾಗುವದೋ? ಅದಕ್ಕೆ ಬೇಕಾದ ಪ್ರಯತ್ನಗಳಂ ಮಾಡಬೇಕು. ಹಾಗೆ ಲಭಿಸತಕ್ಕ ಶರೀರವು ಮೂರುಬಗೆಯಾಗಿರುವದರಿಂದ ಅವುಗಳ ಸ್ವರೂಪಗಳನ್ನಿದರಡಿ ವಿವರಿಸುವೆವು, ಹ್ಯಾಗೆಂದರೆ—ಈಶರೀರವು ಸ್ಥೂಲಸೂಕ್ಷ್ಮ ಕಾರಣಗಳೆಂದು ತ್ರಿವಿಧವಾಗಿರುತಿದೆ. ಅನ್ನಾಭಾವದಿಂದಲೂ, ರೋಗಾದ್ಯುಪದ್ರವಗಳಿಂದಲೂ ವಾರ್ಧಕದಿಂದಲೂ ಸ್ಥೂಲಶರೀರವು ಜೀರ್ಣವಾಗುವದು ಜಗತ್ಪ್ರಸಿದ್ಧವಾಗಿಯೇ ಇದೆ. ಸೂಕ್ಷ್ಮಶರೀರವು ವೃದ್ಧಿಯನ್ನೈದುತಬಂದರಾಗಲಿ ಜೀರ್ಣಿಸುತಬರುವದು. ವೃದ್ಧಿಯೆಂದರೆ, ರಾಗದ್ವೇಷಾದಿಗಳ ಆಕಾರವಾಗಿ ಪರಿಣಮಿಸುವಣ ; ಜೀರ್ಣವೆಂದರೆ ಅವುಗಳ ಸಂಕೋಚವೆಂದರಿಯುವದು. ಸೂಕ್ಷ್ಮಕಾರಣ ಶರೀರಗಳಿಗೆ ಅಜ್ಞಾನದಲ್ಲಿ, ವೃದ್ಧಿಯೂ ಮುಮುಕ್ಷುತ್ವದಲ್ಲಿ ಸಂಕೋಚವೂ ವ್ಯಕ್ತವಾಗುವವು. ಆದದರಿಂದಲೇ ಇವುಗಳಿಗೆ ಶರೀರವೆಂಬವ್ಯವಹಾರವುಂಟಾಯಿತು. ಈಶರೀರಗಳಿಗೆ ದೇಹವೆಂಬ ಹೆಸರು ಹ್ಯಾಗೆಬಂತೆಂದರೆ, ಸ್ಥೂಲದೇಹವಾವಾಗಲೂ ಅಗ್ನಿಯಿಂದಲೂ ತಾಪತ್ರಯಗಳಿಂದಲೂ ಭಸ್ಮೀಕೃತವಾಗಿ ದಹಿಸಲ್ಪಡುವದರಿಂದ ಅದಕ್ಕೆ ಸ್ಥೂಲದೇಹವೆಂತಲೂ, ಸೂಕ್ಷ್ಮಕಾರಣ ದೇಹಗಳು ಜ್ಞಾನವೆಂಬ ಅಗ್ನಿಯಿಂದ ತಪ್ತವಾಗುವದರಿಂದ ಅವುಗಳಿಗೆ ಸೂಕ್ಷ್ಮಕಾರಣ ದೇಹಗಳೆಂತಲೂ ಹೆಸರುಗಳುಂಟಾದವು. ಇನ್ನೂ ಶರೀರತ್ರಯವು ವಿವರಿಸುವೆವು ಹ್ಯಾಗುವರೆ,-ಸ್ಥೂಲಶರೀರವೆಂಬದು ಜ್ಞಾನೇಂದ್ರಿಯಗಳು ೫, ಕರ್ಮೇಂದ್ರಿಯಗಳು ೫, ಪ್ರಾಣಾದಿವಾಯುಗಳು ೫, ಶಬ್ದಾದಿವಿಷಯಗಳು ೫, ಅಂತಃಕರಣಗಳು ೪, ಇಷ್ಟು ಚತುರ್ವಿಂಶತಿ ತತ್ವಗಳಿಂದೊಡಗೂಡಿ ಸ್ಥಾಣುವಿನಂತೆ ಪ್ರತ್ಯಕ್ಷವಾಗಿ ಕಾಣುತಬರುತಲಿರುವದರಿಂದ ಅದು ಸ್ಥೂಲಶರೀರವೆನ್ನಿಸಿಕೊಂಡಿತು. ಜ್ಞಾನೇಂದ್ರಿಯಗಳು ೫, ಕರ್ಮೇಂದ್ರಿಯಗಳು ೫, ಪ್ರಾಣಾದಿವಾಯುಗಳು ೫, ಮನೋಬುದ್ಧಿ ೨, ಈ ೧೭ ತತ್ವಗಳೊಡನೆ ಸೇರಿರುವದಕ್ಕೆ ಸೂಕ್ಷ್ಮಶರೀರವೆಂಬ ಹೆಸರುಂಟಾಯಿತು. ಈ ಸೂಕ್ಷ್ಮಶರೀರವು ಲೀನವಾದರೂ, ಶಬ್ದಾದಿವಿಷಯಗಳನ್ನು ಅಂಗೀಕರಿಸುವದರಿಂದಲೂ, ಆತ್ಮನನ್ನು ಸಲಕ್ಷಣವಾಗಿ ತಿಳಿಯಪಡಿಸುವದರಿಂದಲೂ ಇದಕ್ಕೆ ಲಿಂಗಶರೀರವೆಂಬ ವ್ಯವಹಾರವುಂಟಾಯಿತು. ಮೇಲೆ ಕಂಡ ಸ್ಥೂಲ ಸೂಕ್ಷ್ಮ ಶರೀರಗಳನ್ನು ಅಜ್ಞಾನದಿಂ ಹುಟ್ಟಿಸುವದೇ ಕಾರಣ ಶರೀರವೆಂದೆನ್ನಿಸಿ ಕೊಳ್ಳುತಿದೆ ಆತ್ಮ ವಿಲಕ್ಷಣತ್ವವು ಶರೀರತ್ರಯದಲ್ಲಿಯೂ, ಶರೀರತ್ರಯ ವಿಲಕ್ಷಣತ್ವವು ಆತ್ಮನಲ್ಲಿಯೂ ಇಲ್ಲದಿರುವದನ್ನೇ ಶರೀರತ್ರಯ ವಿಲಕ್ಷಣತ್ವವೆಂದರಿಯುವದು. ಈ ಪ್ರಕಾರ ಶರೀರತ್ರಯಗಳನ್ನೂ, ಶರೀರತ್ರಯ ವಿಲಕ್ಷಣತ್ವವನ್ನೂ ಯಾರು ಅರಿಯುವರೋ ಅಂತವರೇ ಜೀವನ್ಮುಕ್ತರಾಗುವರು. ಈ ಶರೀರಕ್ಕೆ ಅನ್ನಮಯ, ಪ್ರಾಣಮಯ, ಮನೋಮಯ, ವಿಜ್ಞಾನಮಯ ಆನಂದಮಯವೆಂಬ ಪಂಚಕೋಶಗಳಿರುತಿವೆ. ಇವುಗಳಲ್ಲೈಕೆ ಅನ್ನದಿಂದುತ್ಪತ್ತಿಯಾಗಿಸ್ತಂಭದಂತೆಸ್ಥೂಲವಾಗಿಯೂ, ಕರಚರಣಾದ್ಯವಯವಾಕಾರವುಳ್ಳದ್ದಾಗಿಯೂ ಷಡ್ಭಾವ ವಿಕಾರವುಳ್ಳದ್ದಾಗಿಯೂ ಷಟ್ಕೋಶಾತ್ಮಕವಾದದ್ದಾಗಿಯೂ ತೋರಬರುವ ಸ್ಥೂಲಶರೀರವೇ ಅನ್ನಮಯ ಕೋಶವೆನ್ನಿಸಿಕೊಂಡಿರುತಿದೆ. ಕರ್ಮೇಂದ್ರಿಯಗಳೂ ಪಂಚಪ್ರಾಣಗಳೂ ಸೇರಿ ದಶಾವಯವಗಳುಳ್ಳದ್ದಾಗಿರುವದು ಪ್ರಾಣಮಯಕೋಶವು. ಮನೋಯುಕ್ತವಾದ ಜ್ಞಾನೇಂದ್ರಿಯಪಂಚಕವು ಮನೋಮಯಕೋಶವು. ಬುದ್ಧಿ ಜ್ಞಾನೇಂದ್ರಿಯಗಳು ಐದೂ ಸೇರಿರುವದು ವಿಜ್ಞಾನಮಯಕೋಶವು. ಪ್ರಿಯಾಮೋದ ಪ್ರಮೋದವೃತ್ತಿ ಮತ್ತಾದ ಮತ್ತು ಅಜ್ಞಾನ ಪ್ರಧಾನವಾದ ಅಂತಃಕರಣವು ಆನಂದಮಯಕೋಶವು ಎಂದು ವ್ಯವಹರಿಸಲ್ಪಡುತಿವೆ. ಪ್ರಿಯಾಮೋದ ಪ್ರಮೋದಗಳೆಂಬ ಪದಗಳಲ್ಲಿ, ಇಷ್ಟವಾದ ವಸ್ತುಗಳಂ ನೋಡಿದ ಮಾತ್ರದಿಂದಲೇ ಉಂಟಾಗತಕ್ಕ ಸಂತೋಷಕ್ಕೆ ಪ್ರಿಯವೆಂತಲೂ, ನೋಡಲ್ಪಟ್ಟವಸ್ತುಗಳು ಲಭಿಸಿದಬಳಿಕ ಉಂಟಾಗುವ ಸಂತೋಷಕ್ಕೆ ಮೋದವೆಂತಲೂ, ಲಭಿಸಿದ ವಸ್ತುಗಳನ್ನು ಅನುಭವಿಸಿದಬಳಿಕ ಉಂಟಾಗುವ ಸಂತೋಷಕ್ಕೆ ಪ್ರಮೋದವೆಂತಲೂ ತಿಳಿಯತಕ್ಕದ್ದು. ಆತ್ಮನಭಿವ್ಯಕ್ತನಾಗದಂತೆ ಅವನನ್ನಾವರಿಸಿರುವದರಿಂದ ಇವುಗಳಿಗೆ ಕೋಶವೆಂಬ ಹೆಸರುಂಟಾಯಿತು. ಆತ್ಮನೂ ಪಂಚಕೋಶಗಳೂ ಏಕವಾಗಿ ವ್ಯವಹರಿಸಲ್ಪಡುವಂತೆ ತೋರಿದಾಗ್ಯೂ ಆತ್ಮನು ಕಾಲತ್ರಯಗಳಲ್ಲಿಯೂ ಪಂಚಕೋಶಾತಿ ರಿಕ್ತನಾಗಿರುವನೆಂದು ವಿವೇಕಿಯಾದವನು ತಿಳಿದುಕೊಳ್ಳದಿರಲಾರನು. ಈ ಆತ್ಮನು ಶರೀರತ್ರಯ ವಿಲಕ್ಷಣನಾಗಿಯೂ ಅವಸ್ಥಾತ್ರಯ ಸಾಕ್ಷೀಭೂತನಾಗಿಯೂ ಪಂಚಕೋಶ ವ್ಯತಿರಿಕ್ತನಾಗಿಯೂ ಸಚ್ಚಿದಾನಂದಸ್ವರೂಪನಾಗಿಯೂ ಇರುವನು. ಸಮಷ್ಟಿ ವ್ಯಷ್ಟ್ಯಾತ್ಮಕವಾದ ಮೇಲೆಕಂಡಶರೀರತ್ರಯವು ಅನಾತ್ಮನೆಂದೆನ್ನಿಸಿಕೊಳ್ಳುತಿವೆ. ವ್ಯಷ್ಟಿಯೆಂದರೆ ಏಕಪ್ರಾಣಿಶರೀರವು, ಸಮಷ್ಟಿಯೆಂದರೆ ಸಮಸ್ತಪ್ರಾಣಿಗಳ ಶರೀರಗಳು. ಸ್ಥೂಲಸೂಕ್ಷ್ಮಗಳೊಡನೆ ವ್ಯಷ್ಟಿ ಸಮಷ್ಟಿ ಭೇದಗಳನ್ನು ಸೇರಿಸಿದರೆ ವ್ಯಷ್ಟಿಸ್ಥೂಲ, ವ್ಯಷ್ಟಿಸೂಕ್ಷ್ಮ, ವ್ಯಷ್ಟಿಕಾರಣ, ಸಮಷ್ಟಿಸ್ಥೂಲ, ಸಮಷ್ಟಿಸೂಕ್ಷ್ಮ, ಸಮಷ್ಟಿಕಾರಣ ಶರೀರಗಳಾಗಿ ಷಡ್ವಿಧವಾಗುತಿವೆ ಆತ್ಮನಿಗೆ ಅವಸ್ಥಾತ್ರಯ ಸಾಕ್ಷೀಭೂತತ್ವ ವುಂಟಾಗುವಂತೆ ಮೇಲೆ ತಿಳಿಸಿದೆವಷ್ಟೆ. ಆ ಅವಸ್ಥೆಗಳು ಜಾಗ್ರತ್ಸ್ವಪ್ನ ಸುಷುಪ್ತಿಗಳೆಂದು ತ್ರಿವಿಧಗಳಾಗಿರುತಿವೆ. ಸಕಲೇಂದ್ರಿಯಗಳಿಂದಲೂ ಬಾಹ್ಯಾರ್ಥಜ್ಞಾನವು ಯಾವತನಕ ಬರುತಲಿರುವದೋ ತಾವತ್ಪರ್ಯಂತ ಜಾಗ್ರದವಸ್ಥೆಯೆಂದೆನ್ನಿಸಿಕೊಳ್ಳುವದು. ಸಕಲೇಂದ್ರಿಯಗಳಿಂದಲೂ ಬಾಹ್ಯಾರ್ಥಜ್ಞಾನ ವುಂಟಾಗದೆ ಮನಸ್ಸೇ ವಿಷಯಾಕಾರವಾಗಿ ಪರಿಣಮಿಸಿ ಕರ್ತ್ರಾದ್ಯಾಕಾರವಾಗಿ ಯಾವವರಿಗೆ ತೋರುತಲಿರುವದೋ ಅದುವರಿನಿಗೆ ಸ್ವಪ್ನಾವಸ್ಥೆಯೆಂದು ಹೆಸರು. ಸಕಲೇಂದ್ರಿಯಗಳಿಂದಲೂ ಬಾಹ್ಯಾರ್ಥಜ್ಞಾನವು ಬಾರದೆಯೂ, ಮನಸ್ಸು ಕರ್ತ್ರಾದ್ಯಾಕಾರವಾಗಿ ಪರಿಣಮಿಸದೆಯೂ ವಿಷಯಾದ್ಯಾಕಾರವಾಗಿ ಯಾವತನಕ ಇರುತಲಿರುವದೋ ತಾವತ್ಪರ್ಯಂತ ಸುಷುಪ್ತಿಯೆಂದೆನ್ನಿಸಿಕೊಳ್ಳುವದು. ಆತ್ಮನು ಈ ಮೂರುವಿಧ ಅವಸ್ಥೆಗಳೊಳಗಾಗಿದ್ದರೂ, ಆ ಮೂರು ಅವಸ್ಥೆಗಳನ್ನೂ ಅವುಗಳ ವ್ಯಾಪಾರಗಳನ್ನೂ ವಾಸನೆಗಳನ್ನೂ ಅರಿಯುವದರಿಂದ ಅವಸ್ಥಾತ್ರಯ ಸಾಕ್ಷಿತ್ವವು ಆತನಿಗುಂಟಾಗಿರುವಂತೆ ಹೇಳಲ್ಪಡುತಿದೆ. ಹೀಗೆ ಅವಸ್ಥಾತ್ರಯವನ್ನೂ ಅವುಗಳ ಸಾಕ್ಷಿತ್ವವನ್ನೂ ಚನ್ನಾಗಿ ವಿಚಾರಿಸಿ ನಾನೇಸಾಕ್ಷಿ ಸ್ವರೂಪನೆಂದು ಯಾವನುತಿಳಿದುಕೊಳ್ಳುವದಕ್ಕೆ ಪ್ರಯತ್ನಿಸುವನೋ ಅವನೇ ಜೀವನ್ಮುಕ್ತನಲ್ಲದೆ, ಅವನು ಕರ್ಮವೂ, ತತ್ಪ್ರಯುಕ್ತಗಳಾದ ಶರೀರಗಳೂ, ತನ್ಮೂಲಕವಾದ ದುಃಖವೂ ಅನುವರ್ತಿಸಲಾರವೆಂದರಿಯಬೇಕು. ಹೀಗೆ ಜೀವನ್ಮುಕ್ತನಾಗಬೇಕಾದವನು ಮನೋದಾರ್ಢ್ಯದೊಡನೆ ಅರಣ್ಯಕ್ಕೆ ತೆರಳಿ ಅಲ್ಲಿ ವೃಕ್ಷಜಾತಕಗಳಾದ ಫಲಮೂಲಾದಿಗಳಂ ಪರಿಗ್ರಹಿಸಿ ಪ್ರತ್ಯೇಕ ಆಹಾರವ್ಯಾಪಾರಶೀಲದೊಡನೆ ತಲ್ಲೀನನಿಷ್ಠನಾಗಿ ಪರಬ್ರಹ್ಮನಂ ಕುರಿತು ಉಪಾಸನೆ ಮಾಡುವನಾದರೆ ಆಗ ಅವನಿಗೆ ಬ್ರಹ್ಮಸಾಕ್ಷಾತ್ಕಾರವುಂಟಾಗುವದರೊಳೆಷ್ಟುಮಾತ್ರವೂ ಸಂಶಯವಿಲ್ಲವು. ಇಂತವನೇ ಮಹರ್ಷಿಯಾಗುತ್ತಾನೆ. ಒಂದುವೇಳೆ ಇವನಿಗೆ ಪ್ರಾರಬ್ಧವಶದಿಂ ಪುನರ್ಜನ್ಮವು ಪ್ರಾಪ್ತವಾದರೆ ಆಗ ಅವನು ಮಂಡಲಾಧೀಶನಾಗಿಯಾಗಲಿ, ಚಕ್ರವರ್ತಿಯಾಗಿಯಾಗಲಿ, ಅಥವಾ ಜಗದ್ಗುರುವಾಗಿಯಾಗಲಿ ಜನಿಸುವನು. ಹೀಗೆ ತ್ರಿಮೂರ್ತಿ ಅಭೇದಜ್ಞಾನದಿಂ ಗುಣತ್ರಯಗಳೇಕವೆಂದು ಭಾವಿಸಿ ತ್ರಿಸಂಧ್ಯೋಪಾಸಕನಾಗಿ ಕರಣತ್ರಯಪರಿಶುದ್ಧ್ಯದೊಡನೆ ಬ್ರಹ್ಮಜ್ಞಾನವಂ ಸಂಪಾದಿಸಿ ಆಗಂತುಕವಾದದುಃಖವು ಹೋಗಲಾಡಿಸಿಕೊಳ್ಳಬೇಕಾದದ್ದು ಪ್ರತಿಮನುಷ್ಯನಿಗೂ ಮುಖ್ಯಕರ್ತವ್ಯವಾಗಿರುತಿದೆ.

CORRESPONDENCE.

ಶಿಡ್ಲಘಟ್ಟ, ತಾ. 16—6—98

ಅಯ್ಯಾ,—ಈ ಕೆಳಗೆ ನಾನು ಅರಿಕೆಮಾಡತಕ್ಕ ನಮ್ಮ ಆಳುವ ಮಹಾ ಪ್ರಭುಗಳಾದ ಶ್ರೀ ಚಾಮರಾಜೇಂದ್ರ ಒಡೆಯರ್ ಬಹದೂರ್ G. C. S. I. ಯವರಿಗೆ ಮಹಾ ಸೌಭಾಗ್ಯಶಾಲಿಗಳಾದ ದ್ವಿತೀಯಪುತ್ರರು ಜನಿಸಿದ ಶುಭವಾರ್ತೆಯು ಕೋಲಾರ ಡಿಸ್ಟ್ರಿಕ್ಟ್ ಡೆಪ್ಯುಟಿ ಕಮಿಷನರ್ ಮಿ' ಸುಬ್ಬರಾವ್ ಸಾಹೇಬರವರಿಂದ ತಿಳಿದು ಈದಿವಸ ನಡೆದ ಶ್ಲಾಘನೀಯವಾದ ಶುಭವಾದನಗಳಂ ತಮ್ಮ ಪತ್ರಿಕೆಯಲ್ಲಿ ಪ್ರಕಟಿಸಿ ಸಮಸ್ತ ಜನಕ್ಕೂ ಸಂತೋಷವನ್ನುಂಟುಮಾಡಬೇಕೆಂದು ಕೋರುತ್ತೇನೆ.

ಮಹಾರಾಜ ಪುತ್ರರ ನಾಮಕರಣೋತ್ಸವ ಈ ತಿಂಗಳ ೧೬ನೇ ತಾರೀಖಿನಲ್ಲಿ ಆಗುವದರಿಂದ ಆದಿವಸ ಸಮಸ್ತ ಆಫೀಸಗಳಿಗೂ ರಜಾ ಕೊಡಲ್ಪಟ್ಟಿರುವಂತೆಯೂ, ಆದಿನ ತಾಲ್ಲೂಕ್ ಹೆಡ್ ಕ್ವಾರ್ಟರ್ ಮೊದಲ್ಗೊಂಡು ತಾಲ್ಲೂಕ್ ಮುಜರೂರಿನಲ್ಲಿ ಇರತಕ್ಕ ಸಮಸ್ತ ದೇವಾಲಯಗಳಲ್ಲಿಯೂ, ಮಸಜೀದಗಳಲ್ಲು ಕ್ರಿಶ್ಚಿಯನರ ದೇವಸ್ಥಾನಗಳಲ್ಲೂ ಸಹ ದೇವತಾರಾಧನೆಗಳೂ ಆಶೀರ್ವಾದನಗಳೂ ರಾಜಪುತ್ರರ ಶ್ರೇಯೋಪ್ರಾರ್ಥನೆಗಳು ಸಹ ನಡಿಸಬೇಕೆಂತಲೂ, ಈಬಾಬತು ಖರ್ಚು ಮುಜರಾಯ್ ಇಲಾಖೆಯಿಂದ ನಡಿಸಿ ಬಿಲ್ ಕಳುಹಿಸಬೇಕೆಂತಲು ಸಹ ಡಿಸ್ಟ್ರಿಕ್ಟ್ ಹುಜೂರ್‌ನಿಂದ ೯—೬—೯೮ನೇ ಮರಕುಂ ೫೭ನೇ ನಂಬರ್ ಹುಕುಂ ಈದಿನ ಟಪಾಲ್‌ನಲ್ಲಿ ಬಂದಿದ್ದನ್ನು ಮಹಾ ಸಂತೋಷದೊಡನೆ, (ಇಲ್ಲಿ ಅಮಲ್ದಾರ್ ಮಹಾರಾಜಶ್ರೀ) ಗುಂಡಪ್ಪನವರು ಜಮಾಬಂದಿಗೆ ದಯಮಾಡಿರುವದರಿಂದ) ಅಸಿಸ್ಟೆಂಟ್ ಕಮಿಷನರ್ ಮೆಸ್ಟರ್ ರಾಮಚಂದ್ರರಾಯರವರಿಗೆ ತೋರಿಸಿದಕೂಡ್ಲೆ ಆದೊಡ್ಡಮನುಷ್ಯರಿಗೆ ಉಂಟಾದ ಸಂತೋಷವೂ ಉತ್ಸಾಹವೂ ಇಷ್ಟೆಂತ ಹೇಳಲಿಕ್ಕೆ ಸಾಧ್ಯವಿಲ್ಲವು. ಆ ಕೂಡ್ಲೆ ೧೬ನೇ ತಾರೀಖಿನಲ್ಲಿ ನಡೆಯತಕ್ಕ ಉತ್ಸವಗಳನ್ನೂ ರಾಜಪುತ್ರರ ಶುಭೋದಯವಾರ್ತೆಯನ್ನು ಸಹ ಸಮಸ್ತ ಜನಗಳಿಗೂ ಆ ದಿವಸವೇ ತಿಳಿಸಲು ಒಂದು ಮೀಟಿಂಗ್‌ಮಾಡಬೇಕೆಂತಲೂ, ಅದಕ್ಕಾಗಿ ಟೌನಿನಲ್ಲಿ ಇರತಕ್ಕ ದೊಡ್ಡಮನುಷ್ಯರೂ ಇತರೆ ಜನಗಳೂ ಸಹ ಬರಬೇಕೆಂತಲೂ ಅಪ್ಪಣೆಮಾಡಿದಪ್ರಕಾರ ತಾಲ್ಲೂಕ್ ಕಚೇರಿಯ ಸಾಧವಲ್ಲಿ ಕದಳೀಸ್ತಂಭ ತೋರಣಾದ್ಯಲಂಕಾರಗಳಿಂದ ಸಭೆ ಸೇರುವದಕ್ಕೆ ಯೋಗ್ಯವಾದ ಫರ್ನಿಚರ್‌ಗಳ ಸಹಿತ [illegible] ೪ ಘಂಟೆಗೆ ಸಮಸ್ತಜನಗಳನ್ನೂ ಬರಮಾಡಿ ಅಗ್ರಾಸನದಲ್ಲಿ ಮಹಾರಾಜಶ್ರೀ ಚಾಮರಾಜೇಂದ್ರಒಡೆಯರ್ ಬಹದೂರವರ ತಸ್ಬೀರನ್ನಿಟ್ಟು ಅದಕ್ಕೆ ಗಂಧಪುಷ್ಪಾದಿಗಳಿಂದ ಅಲಂಕರಿಸಿ ಅದರ ಮುಂಭಾಗದ

ಹಲ್ಲಿ ಪೋಲೀಸ್ ಇನ್ಸ್ಪೆಕ್ಟರ್‍ಸಹಿತ ಪೋಲೀಸ್‍ಫೌಜು ಶ್ರೇಣಿಯಾದ ಯೂನಿಫಾರಂ ಡ್ರೆಸ್ಸಿನೊಂದಿಗೆ ಸಾಲಿಗೊಂಡು ನಿಂತಿತ್ತು. ಅದರ ಬಾಜೂದಲ್ಲೇ ಟಾರ್ ಹವಲ್ದಾರರು ಅವರ ಶಿಪಾಯಿಗಳುಸಹಿತ ಸಾಲಾಗಿ ನಿಂತಿದ್ದರು. ಅವರಮುಂಭಾಗದಲ್ಲಿ ರೆವಿನ್ಯೂ ದಫೇದಾರ್ ಜವಾನರುಗಳು ಸಾಲಾಗಿ ನಿಂತಿದ್ದರು. ಅವರಿಂದಾಚೆ ಕರಿಲೆಯವರು ಕ್ಲಾರಿಕ್ ವಾದ್ಯದವರು ವಾಲಗದವರು ಸಹ ಅವರವರ ವಾದ್ಯಗಳ ಸಹಿತ ಹಾಜರಿದ್ದರು. ಇವೆಲ್ಲವು ಶೇರುವದಕ್ಕೆ ಅಸ್ತಮಾನವಾಯಿತು.

ಆಗ ಪುರಸಭಾಗಿ ಬಚ್ಚುತಕ್ಕ ಬೀನಿಗಗಳೂ ಉತ್ಸವಾರ್ಥ ಬಚ್ಚುತಕ್ಕ ಬೋಣನಾಮಿಗಳು ಸಹ ಏಕಕಾಲದಲ್ಲಿ ಬಚ್ಚಲ್ಪಟ್ಟದ್ದರಿಂದ ಕೂಡಿಯಿದ್ದ ಜನಗಳಿಗೆ ಮಧ್ಯಾನ್ಹವೋ ಎಂಬ ಭ್ರಮೆಗೊಳಿಸುವ ಹಾಗಿತ್ತು. ಆಗ ಮೆಸ್ಟರ್ ರಾಮಚಂದ್ರರಾಯರವರು ಸಭೆಗೆ ದಯಮಾಡಿ ಮಹಾರಾಜರವರಿಗೆ ಪ್ರತ್ಯಕ್ಷದಲ್ಲಿ ಸೇಚಿಸದಿ ಸುವಾದನಿ ಸನ್ನಿಹಿತವಾಗಿದ್ದ ಮಹಾರಾಜರವರ ಪಠಕ್ಕೆ ಗೌರವಿಸಿ ಈಕೆಳಗೆ ಕಾಣಿಸಿರುವ ಪತ್ರಿಕೆಯನ್ನು ಸಭೆಯಲ್ಲಿ ನಿಂತುಕೊಂಡು ಗಂಭೀರ ಧ್ವನಿಯಿಂದ ಓದಿದರು.

ಹೇ ದೊಡ್ಡಮನುಷ್ಯಗಳಿರಾ—ಈ ಸುಮುಹೂರ್ತದಲ್ಲಿ ಈ ಸ್ಥಳದಲ್ಲಿಯಾದ ಉದ್ದೇಶ್ಯದಿಂದ ಈ ಮಹಾ ಸಭೆಯುಕ್ಕೇಬರವಾಗಿರುತ್ತೋ ಆಉದ್ದೇಶ್ಯವು ಪರಮಾನಂದಜನಕವಾದದ್ದೆಂತ ಪತ್ರಿಕೆಯಲ್ಲೇ ನಾನುತಿಳಿಸುವದರಲ್ಲಿ ನನಗುಂಟಾಗಿರುವ ಸಂತೋಷವು ಅಪಾರವಾದದ್ದಾಗಿದೆ.

೧. ಯಾವ ನಳಮಾಂಧಾತ ಯುಧಿಷ್ಟರಾದಿ ಪೂರ್ವರಾಜರುಗಳ ಶೌರ್ಯ ವೀರ್ಯ ಧರ್ಮೌದಾರ್ಯಾದಿ ಸುಗುಣಗಳನ್ನು ಪುರಾಣ ಮುಖೇನ ನಾವು ಕೇಳುತ್ತಾ ಇದ್ದೇವೋ ಅಂತಾ ಸುಗುಣ ಸಮೂಹಗಳನ್ನು ಈಗ ನಾವು ಪ್ರತ್ಯಕ್ಷವಾಗಿ ನಮ್ಮ ಕಣ್ಣುಗಳಿಂದ ಯಾರಲ್ಲಿ ನೋಡುತ್ತಿದ್ದೇವೋ ಅಂತಾ ನಮ್ಮ ಆಳುವ ಮಹಾಸ್ವಾಮಿಗಳಾದ ಶ್ರೀ ಚಾಮರಾಜೇಂದ್ರ ಭೂಪಾಲ ಕಂಠೀರವರಿಗೆ ಈ ಸರ್ವಧಾರಿ ಸಂವತ್ಸರದ ಜ್ಯೈಷ್ಠ ಬಹುಳ ೧೧ ಮಂಗಳವಾರ ಅಶ್ವಿನೀ ನಕ್ಷತ್ರ ಮಿಥುನ ಲಗ್ನದಲ್ಲಿ ಪ್ರಾತಃಕಾಲ ೪ ಘಂಟೆಗೆ ದ್ವಿತೀಯಪುತ್ರರು ಅವತರಿಸಿದರೆಂಬ ಶುಭವೃತ್ತಾಂತ ಈಗ ಸರ್ಕಾರೀ ಹುಕುಂ ಮೂಲಕ ತಿಳಿದಿರುತ್ತದೆ. ಈ ಮುದದಾನಂದ ವಾರ್ತೆಯನ್ನು ನಾವೆಲ್ಲರೂ ಕೇಳಿ ಉಲ್ಲಾಸ ಪಡಬೇಕೆಂಬುವದೇ ಈ ಸಭೆ ಸೇರಿಸಲ್ಪಟ್ಟದ್ದಕ್ಕೆ ಉದ್ದೇಶವಾಗಿದೆ.

೨. ಈ ಶುಭ ಸಂದರ್ಭದಲ್ಲಿ ಈ ರಾಜಧಾನಿಯಾದ ಮಹಿಸೂರಲ್ಲಿ ನಡೆಯುತಕ್ಕ ಮಹೋತ್ಸವಗಳನ್ನ ಕಣ್ಣಿನಿಂದ ನೋಡುವದಕ್ಕೆ ಅವಕಾಶವುಳ್ಳಂತಾ ಆನಗರವಾಸಿಗಳ ಭಾಗ್ಯವು ಮಹತ್ತಾದದ್ದೇ ಸರಿ; ಪರಂತು ರಾಜಭಕ್ತಿ ವಿಶ್ವಾಸದಲ್ಲಿ ಅವರಿಗಿಂತ ಲೇಶವೂ ನ್ಯೂನವಿಲ್ಲದಂತ ಇಲ್ಲಿನ ಮಹಾ ಜನಗಳು ಅಲ್ಲಿನ ಉತ್ಸವಗಳನ್ನು ಶ್ರವಣೇಂದ್ರಿಯದಿಂದ ಗ್ರಹಿಸಿ ಆನಂದ ಪಡುವದ್ದರಿಂದ ಉಭಯತ್ರರ ಮನೋಲ್ಲಾಸವೂ ಬಹಳ ಮಟ್ಟಿಗೆ ಸಮಾನವಾದ್ದೆಂತಲೇ ಹೇಳಬೇಕಾಗಿದೆ.

೪. ಲೋಕೋಪಕಾರವಾಗಿ ಈಗ ಅವತರಿಸಿ ಇರುವ ರಾಜಕುಮಾರರ ನಾಮಕರಣ ಮಹೋತ್ಸವವನ್ನು ಈ ತಿಂಗಳ ತಾರೀಖು ೧೬ಕ್ಕೆ ಸರಿಯಾದ ಆಷಾಢ ಶುದ್ಧ ೭ ಸ್ಥಿರವಾರ ಪುಬ್ಬಾ ನಕ್ಷತ್ರದಿಂ ಯುಕ್ತವಾದ ಶುಭದಿನ್ನ ಶುಭಮುಹೂರ್ತದಲ್ಲಿ ನಡಿಸಲು ನಿಶ್ಚಿತವಾಗಿರುವುದಾಗಿ ಶ್ರೀಮನ್ ದಿವಾನ್ ಸಾಹೇಬ ಬಹದ್ದೂರವರು ಸರ್ಕಾರೀ ಹುಕುಂದ್ವಾರಾ ಸಮಸ್ತರಿಗೂ ತಿಳಿಸಿ ಇದಾರೆ. ಆದಿವಸ ಎಲ್ಲಾ ಸ್ಥಳಗಳಲ್ಲೂ ಇರತಕ್ಕ ದೇವಸ್ಥಾನ, ಮಸೀದಿ, ದರ್ಗಾ, ಚರ್ಚ್ ಮುಂತಾದ ಪೂಜಾಸ್ಥಾನಗಳಲ್ಲಿ ಉತ್ಸವಗಳನ್ನು ನಡೆಸಿ ಶ್ರೀ ರಾಜಕುಮಾರರಿಗೆ ದೀರ್ಘಾಯು ರೈಶ್ವರ್ಯಾದಿ ಸಮಸ್ತ ಸಾಮ್ರಾಜ್ಯಗಳುಂಟಾಗಬೇಕೆಂತ ಪ್ರಾರ್ಥನೆಗಳನ್ನು ಮಾಡಿಸತಕ್ಕ ಭಾಗದಲ್ಲಿ ಆಜ್ಞಾಪಿಸಿರುತ್ತಾರೆ.

೫ ಸದರೀ ಶುಭದಿನದಲ್ಲಿ ನೀವುಗಳೆಲ್ಲರು ರಾಜಭಕ್ತಿ ವಿಶ್ವಾಸದ್ಯೋತಕವಾದ ಈ ಉತ್ಸವಗಳಲ್ಲಿ ಸೇರಿ ಈ ಸಂತೋಷದಲ್ಲಿ ನೀವುಗಳು ಭಾಗಿಗಳಾಗಿರುತ್ತೀರೆಂಬುವದರಲ್ಲಿ ನಾನು ಸಂಪೂರ್ಣವಾಗಿ ನಂಬುತ್ತೇನೆ.

೬. ಜಗನ್ನಿಯಾಮಕನಾದ ದೇವರನ್ನು ನಾವು ನೋಡುವದಕ್ಕೂ, ನಮ್ಮ ಇಷ್ಟಾರ್ಥಗಳನ್ನು ಹೊಂದುವದಕ್ಕೂ ಅಸಾಧ್ಯವಾಗಿದೆ. ಆದ್ದರಿಂದ, ಶ್ಲೋಕ|| "ರಾಜಾ ಪ್ರತ್ಯಕ್ಷದೈವತಂ" ಎಂಬ ಸಿದ್ಧಾಂತ ವಚನವೇ ಇರುತ್ತದೆ. ಶ್ರೀಮದ್ರಾಮಾಯಣ ಅಯೋಧ್ಯಾ ಕಾಂಡದಲ್ಲಿ "ರಾಜಾಸತ್ಯಂಚಧರ್ಮಶ್ಚ ರಾಜಾಕುಲವತಾಂ ಕುಲಂ || ರಾಜಾಮಾತಾಪಿತಾಚೈವ ರಾಜಾಹಿತಕರೋನೃಣಾಂ" ಎಂಬದಾಗಿ ಮಹಾನುಭಾವರಾದ ಶ್ರೀವಸಿಷ್ಟ ಋಷಿಗಳಿಂದ ಹೇಳಲ್ಪಟ್ಟಿದೆ. ಆದ್ದರಿಂದ ನಮ್ಮಗಳಿಗೆ ಪ್ರತ್ಯಕ್ಷ ದೇವತಾಸ್ವರೂಪವಾಗಿರುವ ನಮ್ಮ ಆಳುವ ಮಹಾಸ್ವಾಮಿಗಳವರಲ್ಲಿ ನಮ್ಮ ರಾಜಭಕ್ತಿ ಕೃತಜ್ಞತಾ ಭಾವಗಳನ್ನು ಇಂತಾ ಸಂದರ್ಭಗಳಲ್ಲಿ ವ್ಯಕ್ತಪಡಿಸುವದು ಪರಮೋಲ್ಲಾಸಕರವಾಗಿರುತದೆ.

ಸಕಲಚೈತನ್ಯ ಸ್ವರೂಪನಾದ ಶ್ರೀಭಗವಂತನು ಪತ್ನೀ ಪುತ್ರ ಪುತ್ರೀ ಸಮೇತರಾದ ನಮ್ಮ ಆಳುವ ಮಹಾಸ್ವಾಮಿಗಳವರಿಗೂ, ಪಾಂಡವ ಪ್ರತಿಷ್ಠಾಪನಾಚಾರ್ಯನೆಂಬ ಬಿರುದಾಂಕಿತರಾದ ಶ್ರೀಕೃಷ್ಣದೇವರು ಪಡಿಸಿದ್ದಂತೆ ಅನಾದಿಯಾದ ಈ ಮಹಿತೂರ ಸುಸ್ಥಾನದ ಸಿಂಹಾಸನಾಧಿಪತ್ಯವನ್ನು ಪೋಷಿಸುತಿರುವ ಶ್ರೀಮನ್ಮಹಾರಾಜ್ಞೀ ಇಂಡಿಯಾ ಚಕ್ರವರ್ತಿನೀಯರಾದ ವಿಕ್ಟೋರಿಯ್ಯ ಮಹಾರಾಣಿಯವರಿಗು ಸಹ ದೀರ್ಘಾಯುರಾರೋಗ್ಯ ಐಶ್ವರ್ಯಾದಿ ಸಮಸ್ತ ಭಾಗ್ಯಗಳನ್ನು ಕರುಣಿಸಬೇಕೆಂಬ ನನ್ನ ಪ್ರಾರ್ಥನೆಯಲ್ಲಿ ನೀವೆಲ್ಲರೂ ಏಕೀಭವಿಸುತ್ತೀರೆಂದು ನಂಬುತ್ತೇನೆ.

ಈಮೇರೆ ಪತ್ರಿಕೆಯನ್ನು ಓದಿ ಮುಗಿಸಿದ ಕೂಡಲೆ ಪೋಲೀಸ್ ಇನ್ಸ್ಪೆಕ್ಟರಿಂದ ಕಮಾಂಡ್ ಹೇಳಲ್ಪಟ್ಟು ಪೋಲೀಸ್ ಪ್ಲಟೂನಿನಲ್ಲಿದ್ದವರೂ ಬಾರಿನವರೂ ರೆವಿನ್ಯೂ ನೌಕರರು ಸಹ ಏಕಕಾಲದಲ್ಲಿ ಮಹಾರಾಜರವರಿಗೆ ಸೆಲ್ಯೂಟ್ ಮಾಡಿದರಲ್ಲದೆ ಬಂದೂಖ್‍ಗಳು ಹಾರಿಸಲ್ಪಟ್ಟವು. ವಾದ್ಯಗಾರರೆಲ್ಲರು ಅವರವರ ವಾದ್ಯಗಳಂ ಬಾರಿಸಿದರು. ಸಭೆ ಸೇರಿದ್ದ ಅನೇಕಜನಗಳೂ ರಾಜ ಕುಮಾರರಿಗೆ ಆಯುರಾರೋಗ್ಯೈಶ್ವರ್ಯಾದಿಗಳು ವೃದ್ಧಿಯಾಗಬೇಕೆಂತ ಶುಭವಾದನ ಹಸ್ತಚಾಲನಗಳಂ ಮಾಡಿದರು. ಕವೀಶ್ವರ ವೆಂಕಟಾದ್ರಿಶಾಸ್ತ್ರಿ ಮುಂತಾದ ವಿದ್ವಾಂಸರುಗಳುಮುದ್ದು ನಿಂತುಕೊಂಡು ರಾಜಕುಮಾರರ ಶ್ರೇಯೋಭಿವೃದ್ಧಿಗಾಗಿ ಅನೇಕವಾದ ಶ್ಲೋಕರೂಪಗಳಾದ ಆಶೀರ್ವಾದಗಳಂ ಮಾಡಿದರು.

ಏಡಿಬೇ, ಏಕಕಾಲದಲ್ಲಿ ಘನಿಚಿದಮುಂತಾದ ರಾಜಕೀಯವಾದ ಸೆಲ್ಯೂಟ್‍ಗಳೂ, ವಾದ್ಯಗಳೂ ಶುಭವಾದನ ಶಬ್ದಗಳೂ ಒಂದಾಗಿಸೇರಿ ಅಂತರಿಕ್ಷದಲ್ಲಿ ಪ್ರತಿಧ್ವನಿ ಕೊಡುತ್ತಿರಲಾಗಿ ಈ ಪಟ್ಟಣವಾಸಿಗಳಿಗೆ ಉಂಟಾದ ಸಂತೋಷಾನಂದಗಳಂ ಇಷ್ಟೆಂತ ವರ್ಣಿಸಲಾರೆನು.

ಅನಂತರ ಪ್ರಜಾರಂಜನೆಯಾಗಿ ಮಹಾರಾಜ ಮಕವರಂದದೆಯುಂ ಸ್ತೋತ್ರರೂಪವಾಗಿ ಹೊಗಳಿ ಅತ್ಯಾನಂದಕರವಾದ ಕಬ್ಬಘೋಷಗಳಿಂದ ಸಂತೋಷಪಡಿಸಿದುತಾ ಸಭಾಧ್ಯಕ್ಷರಾದ ರಾಮಚಂದ್ರರಾವ್ ಎಸ್ಕ್ವೈರ್‍ರವರಿಗೆ ಸಭಾ ಪ್ರತಿನಿಧಿಗಳಾದ ಅಮಲ್ದಾರ್ ಮ| ಗುಂಡಪ್ಪನವರು ಸೂಚಿಸಿದ ಶ್ಲಾಘನಾರ್ಹವಾದ ಗೌರವ ವಂದನೆಯನ್ನು ಅವರು ಅಂಗೀಕರಿಸಿದರು. ತರುವಾಯ ಎಲ್ಲಾ ಜನಗಳಿಗೂ ಗಂಧ ಪುಷ್ಪ ತಾಂಬೂಲಾದಿಗಳು ಕೊಡಲ್ಪಟ್ಟದ್ದಲ್ಲದೆ ನಾಮಕರಣೋತ್ಸವದ ದಿವಸ ಬ್ರಾಹ್ಮಣರ ಸಂತರ್ಪಣೆಬಗ್ಯೆ ಇಷ್ಟವಿದ್ದರೆ, ಸಣ್ಣ ನೌಕರರಾದ ಖಮುಷೋಗ ಜವಾನ್ ವಗೈರೇರು ಶಿವಾಯಿ, ಪ್ರಮುಖರಾದ ಉದ್ಯೋಗಸ್ಥರುಮಾತ್ರ ಶೇರಿ ತಮ್ಮತಮ್ಮ ಸಂತೋಷಪೂರ್ವಕವಾದ ಚಂದಾ ಮೂಲಕ ತ್ರಿಮತಸ್ಥರಿಗೂ ಸಂತರ್ಪಣೆಮಾಡಿಸಿ ಭೋಜನಾನಂತರ ವೇದೋಕ್ತ ಆಶೀರ್ವಾದಗಳಂ ಬ್ರಾಹ್ಮಣರಿಂದ ಮಾಡಿಸಬೇಕೆಂತ ಮೆಸ್ಟರ್ ರಾಮಚಂದ್ರರಾಯರು ಸೂಚಿಸಿ ತಮ್ಮ ಸ್ವಂತದ್ದೆಂತ ತತ್ಕ್ಷಣವೇ ೧೦ ರೂಪಾಯಿಗಳು ತೆಗದಿಟ್ಟರು. ಹೀಗೆ ಹೇಳಿದಕೂಡ್ಲೆ ಬಾಕಿ ಉದ್ಯೋಗಸ್ಥರೆಲ್ಲ ಮುನಾಸಬ್ ಚಂದಾನಾಡಿ ಒಟ್ಟು ೬೫|| ರೂಪಾಯಿಗಳು ವಸೂಲಾಯಿತು. ಈ ಹಣದಲ್ಲಿ ಕೆಲವು ಮೊಬಲಗು ಮುಸಲ್ಮಾನರಿಗೂ ಕ್ರಿಶ್ಚಿಯನ್ನರಿಗೂ ಉತ್ಸವಕ್ಕಾಗಿ ಕೊಡಲ್ಪಟ್ಟಿತು. ಜಾತಿ ವರ್ತಕರೂ ಇತರರೂ ಸಹ ಅವರವರ ಜಾಗಗಳಲ್ಲಿ ಸಹ ವಿಸಾಟಿಂಗ್‍ಮಾಡಿ ಯಾರ್ಯ್ಕಾರು ಯಥಾವಾಯಾಸವಿಧವಾಗಿ ಉತ್ಸವಗಳು ನಡಿಯಬೇಕೆಂದು ಕುತೂಹಲಪಡುತ್ತಾರೆ ಆಬಗ್ಯೆ ಹಿಂದೂ ಮುಸಲ್ಮಾನ್ ವರ್ತಕರುಗಳೇ ಸರ್ಕಾರಿ ಉದ್ಯೋಗಸ್ಥರು ಸಂಬಂಧವಿಲ್ಲವೇನೇ ಪ್ರತ್ಯೇಕಪ್ರತ್ಯೇಕವಾಗಿ ಸಹ ಮೀಟಿಂಗ್‍ಗಳನ್ನು ಮಾಡಿ ಉದ್ದೇಶಿಸಲ್ಪಟ್ಟ ಸಂತೋಷಕಾರ್ಯವನ್ನು ನಡಿಸಬಹುದೆಂದು ಮೆ|| ರಾಮಚಂದ್ರರಾಯರವರು ಅಪ್ಪಣೆಕೊಟ್ಟರು. ಆದರಮೇಲೆ ಎಲ್ಲರೂ ಪ್ರಭುವಾದ ಶ್ರೀಮನ್ ಮಹಾರಾಜರವರಿಗೆ ವಿನೀತರೆಂದರಿಗೂ ಅನಂತರ ಸಭಾಧ್ಯಕ್ಷರಾದ ಮೆ|| ರಾಮಚಂದ್ರರಾಯರವರಿಗೂ ವಂದನೆಗಳಂಮಾಡಿ ಸಭೆ ಬರಖಾಸ್ತಾಯಿತು. ೧೬ನೇ ತಾರೀಖಿನಲ್ಲಿ ನಡಿಯುತಕ್ಕ ಉತ್ಸವವನ್ನು ಕುರಿತು ಮುಂದೆ ಅರಿಕೆಮಾಡುತ್ತೇನೆ. ಈ ಸಂತೋಷವನ್ನು ನೆರವೇರಿಸಲಿಕ್ಕೆ ಮುಖ್ಯ ಕಾರಣಭೂತರಾದ ಅಮಲ್ದಾರ್ ಮ|| ರಾ|| ಗುಂಡಪ್ಪನವರಿಗಿರುವ ಅತ್ಯಧಿಕವಾದ ರಾಜಭಕ್ತಿಯು ೧೬ನೇ ತಾರೀಖಿನಲ್ಲಿ ನಡೆಯುತಕ್ಕ ಉತ್ಸವ ಅತಿರಮಣೀಯವಾಗಿರುವದೆಂದು ನಂಬುತ್ತೇನೆ.

ಭವದ್ವಿಧೇಯ
ರಾಜಭಕ್ತಿಯುಳ್ಳವನು.

SUMMARY OF NEWS.
ವೃತ್ತಾಂತ ಸಂಗ್ರಹ.

ಧುಳಿಯಾ ಎಂಬ ಸ್ಥಳದಲ್ಲಿ ಒಬ್ಬ ಮುಸಲ್ಮಾನ್ ಫಕೀರನು ಬಂಜೆಯಾದ ಒಬ್ಬ ಸ್ತ್ರೀಗೆ ಮಕ್ಕಳನ್ನುಂಟುಮಾಡಿಕೊಡುತ್ತೇನೆಂದು ಅವಳಿಗೆ ಭರವಸೆಯನ್ನು ಹೇಳಿ ಮಂತ್ರ ತಂತ್ರ ಮಾಡುವ ಬಗ್ಯೆ ಅವಳ ಮನೆಯನ್ನು ಹೊಕ್ಕನು. ಈ ಆಶ್ಚರ್ಯದ ಸಂಗತಿಯನ್ನು ನೋಡುವ ಉದ್ದೇಶದಿಂದಲೆ ನೆರೆಹೊರೆಯವರಾದ ಕೆಲವುಸ್ತ್ರೀಯರು ಸಹ ಬಂದಿದ್ದರು. ಕೊನೆಗೆ ಆ ಫಕೀರನು ಮಂತ್ರ ತಂತ್ರಾದಿಗಳಿಂದ ಮಾಡಿದ್ದೇನೆಂದರೆ, ಆಬಂಜೆ ಹೆಂಗಸನ್ನು ಮತ್ತು ನೋಡುವದಕ್ಕೆ ಹೋಗಿದ್ದ ನಾಲ್ಕುಮಂದಿಸ್ತ್ರೀಯರನ್ನೂ ಜೊತೆಗೊಳಿಸಿ ಕರೆದುಕೊಂಡು ಓಡಿಹೋದನು.

ಕಳವು.—ಕಳೆದ ಮೇ ೨೨ನೇ ತಾರೀಖಿನ ದಿವಸ ಹುಬ್ಬಳ್ಳಿಯಿಂದ ಗದಗಕ್ಕೆ ಹೋಗತಕ್ಕ ಒಬ್ಬ ಗೃಹಸ್ಥನು ಎರಡುಸಾವಿರ ರೂಪಾಯಿಯ ಥೈಲಿಯನ್ನು ತೆಗದುಕೊಂಡು ಹೋಗುತ್ತಿರುವಾಗ್ಯೆ ಕೆಲವು ಮುದ್ರಾಶೀಜನರು ನೋಡಿಕೊಂಡಿದ್ದು ಗದಗ ಸ್ಟೇಷನಿನಲ್ಲಿ ಆ ಥೈಲಿಯನ್ನು ಅಪಹರಿಸಿದರು. ಇಷ್ಟರಲ್ಲಿ ಥೈಲಿ ಕಳವಾಯಿತೆಂದು ಘಾಬರಿಬಿದ್ದು ಸ್ಟೇಷನ್ನಿನವರಿಗೆ ತಿಳಿಸಲು ಜಮೇದಾರ್ ರಾ|| ವೆಂಕಟರಾವ್ ಶಾಳಿಯವರು ಸತ್ತೇವಸಹದಲಾರಂಭಿಸಿದರು. ಆಗ ಕೆಲವು ಮದರಾಸೀಜನರು ಮುಂದರಗಿ ಮಾರ್ಗವಾಗಿ ಹೋದರೆಂಬ ವರ್ತಮಾನ ತಿಳಿಯಬರಲು ಅವರೇ ಕಳವು ಮಾಡಿರಬಹುದೆಂಬ ಅನುಮಾನದಿಂದ ಕೆಲವು ಪೋಲೀಸ್ ಜವಾನರನ್ನು ಸಹಾಯಾರ್ಥ ಕರೆದುಕೊಂಡು ಹೋದರು. ಅವರು ಗದಗಕ್ಕೆ ೧೦ಮೈಲು ಅಂತರದಲ್ಲಿರುವ ಸಾಸನಾವಿ ಎಂಬ ಹೊಳೆಯ ಬಳಿ ಈ ಕಳ್ಳರನ್ನು ಹಿಡಿದರು. ಅಲ್ಲಿ ಪೋಲೀಸ್‍ನವರಿಗೂ ಕಳ್ಳರಿಗೂ ಜಗಳವಾಯಿತು. ಒಬ್ಬ ಪೋಲೀಸ್ ಜವಾನನ್ನ ಕಳ್ಳರು ಕತ್ತಿಯಿಂದ ಘಾಯವನ್ನು ಸಹಾ ಮಾಡಿದರು. ಆದರೂ ಇವರು ಜಿದ್ದಿನಿಂದ ೪ ಕಳ್ಳರ ಪೈಕಿ ೩ ಮಂದಿಯನ್ನು ಹಿಡಿದು ಅವರನ್ನು ಮಾಲು ಸಹಿತ ಹಿಡದುಕೊಂಡು ಬಂದು ಚಾರ್ಜ್‍ಮಾಡಿ ಇಬ್ಬರ ಪೈಕಿ ಪ್ರತಿಒಬ್ಬಮನುಷ್ಯನಿಗೆ ೧|| ವರುಷದಂತೆ ಕಠಿಣಕೈದ್ ಸಜಾ, ಮತ್ತು ೩ ನೇಯವನಾದ ಸಣ್ಣಹುಡುಗನಿಗೆ ೧೫ ಕೊರಡೆಏಟುಗಳ ಈರೀತಿ ಶಿಕ್ಷೆ ವಿಧಿಸಿದರು. ಪೋಲೀಸ್ ಜವಾನರು ಸದರೀ ಹೊಳೆಯಬಳಿ ಇವರನ್ನು ಹಿಡಿವಾಗ ಹೊಳೆಯೊಳಗೆ ಅಜಮಾಯಿಷೀ ಮಾಡುವಾಗ ಇನ್ನೂ ಕೆಲವು ಕಳವುಮಾಲ್‍ಗಳು ಸಿಕ್ಕಿದವು ಅವರೆ ಅವುಗಳ ಮಾಲೀಕರು ಯಾರೆಂಬುವರೆಂದು ಅದ್ಯಾಪಿ ತಿಳಿಯ ಬರಲಿಲ್ಲವು. ಕೆಲವು ಕಾಲದಿಂದೀಚೆಗೆ ರೈಲ್ವೆ ಗಾಡಿಯಲ್ಲಿ ಬಹಳ ಕಳವುಗಳು ನಡೆಯುವದು ನಮ್ಮ ತಿಳುವಳಿಕೆಯಲ್ಲಿ ಬಂದಿದೆಯಷ್ಟೆ. ಅವೆಲ್ಲವನ್ನು ಈ ಮದ್ರಾಸ್ ಜನರೇ ಮಾಡಿರಬಹುದೆಂದು ಅನುಮಾನಿಸಲಿಕ್ಕೆ ಕಾರಣವುಂಟಾಗಿದೆ. ಯಾಕೆಂದರೆ ಪತ್ತೇ ಕಾಲದಲ್ಲಿ ಈ ಜನರದೊಂದು ದೊಡ್ಡಗುಂಪು ಉಂಟಂತಲೂ, ಇವರ ಮುಖ್ಯನಾಯಕನು ಒಳ್ಳೊಳ್ಳೇ ಪೋಷಾಕುಗಳನ್ನು ಹಾಕಿಕೊಂಡು ಒಳ್ಳೇ ದೊಡ್ಡಮನುಷ್ಯನಂತೆ ಗದಗ, ಹುಬ್ಬಳ್ಳಿ, ಧಾರವಾಡ ವಗ್ಯೆರೆ ಸ್ಟೇಷನ್‍ಗಳ ಪರಿಯಂತ ತಿರುಗುತ್ತಾನೆಂತಲೂ, ಯಾರಾದರು ವಿಚಾರಿಸಿದರೆ ತಾನು ಕಂಟ್ರಾಕ್ಟರೆಂತ ಹೇಳುತ್ತಾನೆಂತಲೂ ತಿಳಿಯಬಂತು. ಈ ವಿಷಯದಲ್ಲಿ ಅಲ್ಲಿನ ಪೋಲೀಸ್ ಸೂಪರಿಂಟೆಂಡರವರು ಸ್ವಲ್ಪ ತಕ್ಕ ತರದೂದು ನಡೆಸಿದರೆ ಬಹಳ ಯೋಗ್ಯವಾಗಿರುವದು.—ಕ. ಸು.

THE MYSORE GAZETTE.
ಮೈಸೂರು ಗೆಜೆಟ್.

ಶ್ರೀಮನ್ಮಹಾರಾಜ ರವರ ಸರ್ಕಾರದ ಹುಕುಂನಿಂದ ಗೊತ್ತಾದ ಪ್ರಕಟನೆಗಳು.

ನೊಕ್ಕಾಂ ನಂ ೬೦೩, ತಾರೀಖ್ ೩೧ನೇ ಮೇ ೧೮೮೮—ಗುಬ್ಬಿ ತಾಲ್ಲೂಕು ಅಮಲ್ದಾರ್ ವೆಂಕಟರಾಮರವರಿಗೆ ೧೮೮೮ನೇ ಇಸವಿ ಏಪ್ರಿಲ್ ೩೦ನೇ ಹುಕುಂ ೧೨೩ನೇ ನಂಬರುಕ್ಕೆ ಈ ಆಫೀಸ್ ಇಸ್ತಿಹಾರ್‍ಮೂಲಕ ಕೊಡಲ್ಪಟ್ಟಿದ್ದ ಬಗೆಸ್ ತಲಬ್ ಒಂದು ತಿಂಗಳ ರಜಾ ಇದರಿಂದ ಮೂರು ತಿಂಗಳ ತನಕ ಜಾಸ್ತೀ ಮಾಡಲ್ಪಟ್ಟಿರುತ್ತದೆ. ತುಮಕೂರು ಡೆಪ್ಯುಟೀ ಕಮಿಷನರರವರ ಆಫೀಸ್ ಹೆಡ್ ಮುನ್ಷಿ ಬಿ. ಕೃಷ್ಣರಾಯರವರು ವೆಂಕಟರಾಮಯ್ಯನವರು ರಜಾಮೇಲೆ ಗೈರ್ ಹಾಜರಾಗಿರುವ ಕಾಲದಲ್ಲಿ ಅಥವಾ ಮತ್ತೊಂದು ಹುಕುಂ ಕೊಡಲ್ಪಡುವ ತನಕ ಗುಬ್ಬಿ ತಾಲ್ಲೂಕು ಅಮಲ್ದಾರ್ ದ ಕೆಲಸದೇ ಕ್ಯಾಷ್ ಮ್ಯಾಜಿಸ್ಟ್ರೇಟಿ ಕೆಲಸವನ್ನು ಆಕ್ಟಿಂಗ್ ತರೀಕ ನೋಡುತ್ತಿರುವರು.

ನೊಕ್ಕಾಂ ನಂ ೬೦೭, ತಾ ೬ನೇ ಜೂನ್ ೮೮—ಚಿಕ್ಕಮಗಳೂರು ತಾಲ್ಲೂಕು ಅಮಲ್ದಾರ್ ರಾಮಚಂದ್ರರಾಯರವರಿಗೆ ೧೮೮೮ನೇ ಇಸವಿ ಜೂನ್ ೧ನೇ ತಾ|| ರಿಂದ ಗಾಯದ ಅಥವಾ ಅವರು ಸಯೋಗಿಸಿಕೊಳ್ಳುವ ತಾರೀಖಿನಿಂದಾಗಾಯದು ಮೂರು ತಿಂಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿರುತ್ತದೆ. ರಾಮಚಂದ್ರರಾಯರವರು ರಜಾಮೇಲೆ ಗೈರ್ ಹಾಜರಾಗಿರುವ ಕಾಲದಲ್ಲಿ ಅಥವಾ ಮತ್ತೊಂದು ಹುಕುಂ ಕೊಡಲ್ಪಡುವತನಕ ಶಿರಸ್ತೇದಾರ್ ರಂಗಣ್ಣನವರು ಚಿಕ್ಕಮಗಳೂರು ತಾಲ್ಲೂಕು ಅಮಲ್ದಾರರಾಗಿ ಕೆಲಸ ಮಾಡುವುದು ಮೂರನೇ ಕ್ಲಾಸ್ ಮ್ಯಾಜಿಸ್ಟ್ರೇಟ್ ಅಧಿಕಾರಗಳು ಸಹ ಇದರಿಂದ ಕೊಡಲ್ಪಟ್ಟಿರುತ್ತದೆ.

ನಂ. ೩೯. ತಾ|| ೯ನೇ ಜೂನ್ ೧೮೮೮—ಕಡೂರು ಡಿಸ್ಟ್ರಿಕ್ಟ್ ಆಫೀಸ್ ಯೇಟಿಂಗ್ ಡೆಪ್ಯುಟೀ ಕಮಿಷನರ್ ಕರ್ನಲ್ ಜೆ. ಕ್ಯಾಂಬೆಲ್‍ಯವರು ಮಾರ್ಚ್ ಮಹಜರೂ ಗುರ್ತಿ ತಾರೀಖಿನ ಪೂರ್ವಾಹ್ನದಲ್ಲಿ ಕಡೂರು ಡಿಸ್ಟ್ರಿಕ್ಟ್ ಚಾರ್ಜನ್ನು ಅಸಿಸ್ಟೆಂಟ್ ಕಮಿಷನರ್ ಮೆಸ್ಟರ್ ಟಿ. ರಾಘವೇಂದ್ರರಾಯರವರಿಗೆ ಒಪ್ಪಿಸಲು ಅಪ್ಪಣೆ ಪಡಿಸಿರುತ್ತಾರೆ.

BANGALORE:—Printed and published at the KARNATIC PRESS, No. 11, Hospital Road, Petta.

ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA.

ಪ್ರತಿ ಸೋಮವಾರ ಪ್ರಾತಃಕಾಲದಲ್ಲಿ ಪ್ರಕಟಿಸಲ್ಪಡುವದು.

Published every Monday Morning.

Vol. XV.] ಸಂಪುಟ ೧೫.] BANGALORE—MONDAY, JUNE 25, 1888. ಬೆಂಗಳೂರು:—ಸನ್ ೧೮೮೮ನೇ ಇಸವಿ ಜೂನ್ ೨೫ನೇ ತಾರೀಖ್ ಸೋಮವಾರ. [No. 25. [ಸಂಖ್ಯೆ ೨೫.

ಕರ್ನಾಟಕ ಪ್ರಕಾಶಿಕಾ

ಪತ್ರಿಕೆಯ ಚಂದಾ ದರಗಳು,
೧೮೮೮ನೇ ಇಸವಿ ಜನವರಿಯಿಂದ
ಕಡಮೆಮಾಡಲ್ಪಟ್ಟಿರುತ್ತದೆ.

[illegible]

ಇಂಗ್ಲಿಷ್ ವ ಕನ್ನಡ ಕನ್ನಡ ಭಾಗಗಳಿಗೆ.

	ಸ್ಥಳೀಕರಿಗೆ	ಪರಸ್ಥಳದವರಿಗೆ
12 ತಿಂಗಳಿಗೆ	8—0—0	9—0—0
6 „	4—0—0	4—8—0
3 „	2—8—0	2—8—0

ಇಂಗ್ಲಿಷ್ ಅಥವಾ ಕನ್ನಡಭಾಗಗಳಿಗೆ.

	ಸ್ಥಳೀಕರಿಗೆ	ಪರಸ್ಥಳದವರಿಗೆ
2 ತಿಂಗಳಿಗೆ	4—0—0	5—0—0
6 „	2—0—0	2—8—0
3 „	1—4—0	1—8—0

[illegible]

ಪ್ರಕಟನೆಯ ವಿವರ.

[illegible]

"IT RECOMENDS ITSELF"

ALL WHO SUFFER FIND SURE RELIEF.

LITTLE'S

ORIENTAL BALM

THE MOST EFFECTUAL MODERN REMEDY FOR PAIN.

[illegible]

ಪರಿಶೀಲಕರ ಅಭಿಪ್ರಾಯವು.

[illegible] (C. R. TICHBORNE, L. L. D., F. C. S., M. R. I. A.) [illegible]

ಇದರ ಕ್ರಯ—ಸೀಸೆ ಒಂದಕ್ಕೆ ೧ ರೂಪಾಯಿ.

[illegible]

AGENTS.— Messrs. J. WEST, *Chemist, &c., Bangalore.*
CAPTAIN & Co. *Chemists, Bangalore.*
RIGGS & Co., *Chemists, Bangalore;* and of
MAHOMED YOUSOFF AND SONS, *The Cash Bazar, Bangalore*
A. C. BERRYMAN & Co.,
20 *Sambodoss Street Madras.*

ನೋಟಿಸ್.

ನೌಕರಿ.

ಮೈಸೂರು ಪ್ರಾಂತದ [illegible] ಕೋಲಾರ್ ಗೋಲ್ಡ್ ಫೀಲ್ಡ್ಸ್ ಮೈನಿಂಗ್ ಬೋರ್ಡ್ [illegible] ೧೮೮೮ನೇ ಇಸವಿ ಜೂಲೈ ೧ನೇ ತಾರೀಖ್ [illegible]

೧. [illegible]

೨. [illegible]

೩. [illegible]

೪. [illegible]

೫. [illegible]

೬. [illegible]

೭. [illegible]

೮. [illegible]

ಕೋಲಾರ ಗೋಲ್ಡ್ ಫೀಲ್ಡ್ಸ್ ಮೈನಿಂಗ್‌ಬೋರ್ಡ್,
[illegible] ೧೮೮೮ನೇ ಇಸವಿ.

J. W. GREY.
Honorary Secretary,
Kolar Gold Field's Mining Board.

ನೋಟೀಸ್.

ರವಾನೆ ಗುತ್ತಿಗೆ.

[illegible]

೧. [illegible]

೨. [illegible]

೩. [illegible]

೪. [illegible]

NOTICE.

VAIDYASARA SANGRAHA

A TREATISE ON THE PRINCIPLES OF

HINDU MEDICINE.

Price including Postage Rs 5 0 0

ವೈದ್ಯಸಾರ ಸಂಗ್ರಹ.

[illegible]

ಬಿ. ಬಿ. ವೆಂಕಟಾಚಾರ್,
ಆಸ್ಪತ್ರೆರೋಡ ಬೆಂಗಳೂರು.

ವಿಶೇಷ ವರ್ತಮಾನ



[illegible]

ಪುಣೇ ಶಹರ ಚಿತ್ರಶಾಲಾ ಪ್ರೆಸ್ಸಿನ [illegible]

೩. ಯಾವನ ದರಖಾಸ್ತು ಮಂಜೂರಾಗಲ್ಪಡುವದೊ ಅಂತವನು ಕರಾರ್ನಾಮೆಯೊಂದು ಬರಕೊಡು ಅದರಂತೆ ನಡೆಯುವದಕ್ಕೆ ಖಾತರಿಬಗ್ಗೆ ಬೋರ್ಡಿನವರಲ್ಲಿ ಆಯದುನೂರು ರೂಪಾಯಿ ಗಳು ರೇವಣಿ ಇಡಬೇಕು.

೪. ಯಾವನಾದರು ಒಂದು ದರಖಾಸ್ತು ಅಂಗೀಕರಿಸಲ್ಪಟ್ಟಮೇಲೆ ತ್ಯಾಗಮಾಡಲ್ಪಟ್ಟ ದರಖಾಸ್ತುಗಾರನಿಂದ ಕಾ ಪಾಡಲ್ಪಟ್ಟ ರೇವಣಿ ವೊಬಲಗು ವಾಪಸ್ ಮಾಡಲ್ಪಡುವದು.

ಕೋಲಾರ ಗೋಲ್ಡ್ ಫೀಲ್ಡ್ ಬೋರ್ಡ್,

೨೧ನೇ ಜೂನ್ ೧೮೮೮.

J. W. GREY,
Honorary Secretary,
Kolar Gold Field's Mining Board.

ನೋಟಿಸ್.

ಚೆನ್ನಪಟ್ಟಣದಲ್ಲಿ ಮೊಕ್ಕಾಂ ಮಾಡಿರುವ ಮರಮತ್ ಇಲಾಖಾ ಸೂಪರ್‌ವೈಜರ್ ಮ|| ಸಿ. ಮಾಧವರಾಯರವರ ಮನೆಯಲ್ಲಿ ಮಾರ್ಚಿ ಮಾಹೆ ೧೧ ನೇ ತಾರೀಖಿನ ದಿನ ರಾತ್ರಿ ಇದರಡಿಕಂಡ ಕರೆನ್ಸೀ ನೋಟುಗಳು ಕಳವಾಗಿರುವಂತೆ ತಿಳಿಸಲ್ಪಟ್ಟಿರುತ್ತದೆ:—

R. SCALDWELL,
Executive Engineer,
Bangalore Division.

B--92—80742	...	Rs. 50
B--92—79845	...	„ 50
B--92—79842	...	„ 50
B--98—13214	...	„ 10
I--14—28552	...	„ 10
B--97—20350	...	„ 10
B--98—04366	...	„ 10
B--97—94316	...	„ 10
B--81—03192	...	„ 10
B-96—07293	...	„ 10
B--97—07287	...	„ 10

ಜಮ್ಲಾ 230

Bangalore City Municipality
ಬೆಂಗಳೂರುಸಿಟಿ ಮ್ಯುನಿಸಿಪಾಲಿಟಿ.

ಸನ್ ೧೮೮೮ನೇ ಇಸವಿ ಜೂನ್ ೨೯ನೇ ತಾರೀಖು ಶುಕ್ರವಾರ ಮಧ್ಯಾಹ್ನ ೩ ಘಂಟೆಗೆ ಬೆಂಗಳೂರು ಸಿಟಿಮ್ಯುನಿಸಿಪಲ್ ಕಮ್ಮೀಷನರಗಳು ತಮ್ಮ ಆಫೀಸ್ ಕಟ್ಟಡದಲ್ಲಿ ಸಭೆ ಸೇರುವಾಗ ಅವರ ಆಲೋಚನೆಗೆ ತರಲ್ಪಡುವ ವಿಷಯಗಳ ಯಾದಾಸ್ತು.

೧. ಸನ್ ೧೮೮೮ನೇ ಇಸವಿ ಮೇ ತಿಂಗಳ ಬಾಬತು ಚಾಲತಿ ನಗದು ಜಮಾಖರ್ಚು ಲೆಕ್ಕಗಳು ಮತ್ತು ಮರಣ ಲೆಕ್ಕಗಳು.

೨. ಸನ್೧೮೮೭—೮೮ನೇಸಂವತ್ಸರಕ್ಕೋಸ್ಕರದಲ್ಲಿನ ಪೇಟೆ ಸಿಟಿಮ್ಯುನಿಸಿಪಾಲಿಟಿಯ ಸಾಲಿಯಾನಾ ಜಮಾಖರ್ಚು ಲೆಕ್ಕದ ತಖ್ತೆ.

೩. ಸನ್ ೧೮೮೭ನೇ ಇಸವಿ ಸೆಪ್ಟಂಬರ್ ೭ನೇ ಮಾರ್ಕ ೩೩೪೦—|—೩೦ನೇ ನಂಬರುಳ್ಳ ಬಿ ವಾಸರವರ ಪ್ರೊಸೀಡಿಂಗ್ಸನಲ್ಲಿ ವಿಧಿಸಲ್ಪಟ್ಟಿರುವಂತೆ, ಸೆರ್ವೆ ಕೋರ್ಟಿನ ನಿಯಮಗಳು ಮ್ಯುನಿಸಿಪಾಲಿಟಿಯ ಯಾವವಾವ ಇಲಾಖೆಗಳಿಗೆ ಉಪಯೋಗಿಸಬೇಕೊ ಅದು ತೋರಿಸುವ ತಖ್ತೆ.

೪. ಗವರ್ನಮೆಂಟ್ ಬಾಲಿಕಾ ಪಾಠಶಾಲೆಯ ಕಮಿಟಿಯ ಆನರರಿ ಸೆಕ್ರೆಟರಿಯವರು, ಸರ್ಕಾರದಿಂದ ಸಾಲಿಯಾನಾ ಕೊಡಲ್ಪಡುವ ಸಹಾಯ ದ್ರವ್ಯವು ಸಾಲದೆಂದು ಸದರೀ ಪಾಠಶಾಲೆಯ ವಿಚಾರಣೆ ಸಭೆಯವರ ಅನುಭವಕ್ಕೆ ತಂದು ಬರೆದಿರುವ ಸನ್ ೧೮೮೮ನೇ ಇಸವಿ ಏಪ್ರಿಲ್ ೨೩ನೇ ಮಾರ್ಕ ೬ನೇ ನಂಬರ್ ಲೆಟರ್.

೫. ಗವರ್ನಮೆಂಟಿನಿಂದ ಅರ್ಥ ಸಹಾಯವನ್ನಪೇಕ್ಷಿಸಿರುವ ಡಾಮಸಟೆ ಪಾಠಶಾಲೆಯ ಸ್ಥಿತಿಯನ್ನು ಕುರಿತು ಮೆಸ್ಸರ್ಸ್ ಕ್ಯಾಮಿರೆಕ್, ರಾಮಸ್ವಾಮಿಶೆಟ್ಟಿ, ಚೆಂಗಲ್ರಾಯನಾಯಿಡು ರವರುಗಳು ಬರೆದ ರಿಪೋರ್ಟು.

೬. ಸರ್ಕಾರಕೆಲಸಕ್ಕಾಗಿ ಮ್ಯುನಿಸಿಪಾಲಿಟಿಯವರಿಂದ ತೆಗೆದುಕೊಳ್ಳಲ್ಪಟ್ಟ ಕೊಟ್ಟಡಜಮೀನಿಗೆ ಬದಲು, ಧರ್ಮಾಧಿಕರಣದಿಂದ ಕೆಳಗೆಬಿಂದು ತಾಕು ಜಮೀನ್ ಕೊಡಿಸಬೇಕೆಂದು ಚಿತ್ರಸಾಗರ್ ಪುಟ್ಟಣ್ಣಶೆಟ್ಟರವರು ಬರೆದುಕೊಂಡಅರ್ಜಿ.

A. H. MACINTIRE,
President,
City Municipal Commission.

ಕರ್ಣಾಟಕ ಪ್ರಕಾಶಿಕಾ.
THE KARNATAKA PRAKASIKA.

MONDAY, JUNE 25, 1888.
೧೮೮೮ನೇ ಜೂನ್ ೨೫ನೇ ತಾ|| ಸೋಮವಾರ

DEALINGS IN VARIOUS POISONS

ಲೋಕದಲ್ಲಿ ಮಾನವಕೋಟಿಗೆಲ್ಲ ದುಃಖನಿವಾರಕವಾದಂತಾ ವಿಷಚಿಕಿತ್ಸೆ ಎಂಬದು ನಮ್ಮವರಲ್ಲಿ ಬಹಳ ದುರ್ಲಭವಾದದರಿಂದ, ಅದಕ್ಕೆ ತಕ್ಕ ಪ್ರತಿಕ್ರಿಯೆಯಿಲ್ಲದೆ ಅನೇಕರು ತಮ್ಮ ಪ್ರಾಣಗಳು ಕಳೆದುಕೊಳ್ಳುತಲಿರುವದು ನಾವು ಪ್ರತಿನಿತ್ಯವೂ ನೋಡುತ್ತಿದ್ದೇವೆ. ಕಡೆಗೆ ಒಂದು ಚೇಳು ಕಚ್ಚಿದಾಗ್ಯೂ ಕೂಡ ಸದ್ಯೋನಿವಾರಕವಾದ ಚಿಕಿತ್ಸೆ ಸಾಮಾನ್ಯವಾಗಿ ಈಗಿನವರಿಗೆ ತಿಳಿಯದೆಂದು ಹೇಳಬಹುದಾಗಿದೆ. ಇಂತಾ ಪ್ರಕರಣಗಳಲ್ಲಿ ಕೇವಲ ಮಂತ್ರಬಲದಿಂದಲೇ ವಾಸಿಮಾಡುವಂತಾ ಮಂತ್ರಸಿದ್ಧಿಯುಳ್ಳವರು ನೂರಿಗೊಬ್ಬರು ದೊರೆಯುವದಸಾಧ್ಯವು. ಅಂತಾವರ ಮಂತ್ರ ಚಿಕಿತ್ಸೆಗಳು ಸಹ ಒಂದೊಂದುಕಾಲದಲ್ಲಿ ಫಲಿಸಿಫಲಿಸದೆ ಹೋಗುತ್ತವೆ. ಈಕಾಲದಲ್ಲಿ ಮಂತ್ರಕ್ರಿಯೆಗಿಂತಲೂ ಜನಗಳಿಗೆ ಔಷಧಿ ಕ್ರಿಯೆಯಲ್ಲಿ ನಂಬಿಕೆ ಅಧಿಕವಾಗಿರುತ್ತದೆ. ಆದಾಗ್ಯೂ ಅದು ಸಹ ಸಮ್ಯಗಾಗಿ ಅಭ್ಯಸಿಸಿ ಜನರಿಗೆ ವಿಷ ಬಾಧೆಯು ಪರಿಹರಿಸುವಂತಹ ಅಭಿಪ್ರಾಯವುಳ್ಳವರು ದುರ್ಲಭರಾಗಿರುತ್ತಾರೆ. ವಿಷಚಿಕಿತ್ಸೆಯು ಬೋಧಿಸುವ ಗ್ರಂಥಗಳು ನಮ್ಮಲ್ಲಿ ಇಲ್ಲವೆ ಇಲ್ಲವು. ಈ ವಿಷಪ್ರಯೋಗವನ್ನು ಕುರಿತು ಆಯುರ್ವೇದದಲ್ಲಿಯೂ, ವಾಗ್ಭಟಾಚಾರ್ಯಪ್ರಣೀತವಾದ ಅಷ್ಟಾಂಗ ಹೃದಯ ಸಂಹಿತೆಯಲ್ಲಿಯೂ, ದುರ್ಲಭವಾದ ಹಸ್ತಲಿಖಿತವಾದ ಕಾಲಜ್ಞಾನದಲ್ಲಿಯೂ, ರೇವಣಸಿದ್ಧತಂತ್ರ ಮುಂತಾದ ಪ್ರಾಕೃತಗ್ರಂಥಗಳಲ್ಲಿಯೂ, ಚರಕದಲ್ಲಿಯೂ, ಕಲ್ಯಾಣಕಾರಕವೆಂಬ ಜೈನಗ್ರಂಥದಲ್ಲಿಯೂ ವಿಸ್ತಾರವಾಗಿ ತಿಳಿಸಲ್ಪಟ್ಟಿರುತ್ತದೆ. ಪರಂತು ಶುದ್ಧಗಳಾಗಿಯೂ ಸಮಗ್ರಗಳಾಗಿಯೂ ಇರುವ ಸದರೀ ಗ್ರಂಥಗಳ ಪ್ರತಿಗಳು ನಮಗೆ ದುರ್ಲಭಗಳಾಗಿರುವದರಿಂದ ಅವುಗಳ ವಿಸರಗಳು ಸಹ ನಮಗೆ ವಿಜಾತೀಯಗಳಾಗಿ ತೋರುತ್ತವೆ. ವಿಷ ವೈದ್ಯವನ್ನು ಪಲ್ಲಿ ಮನುಷ್ಯನು ತಿಳಿಯಬೇಕಾದ ವಿಷಯಗಳು ಅನೇಕಗಳಾಗಿರುತ್ತವೆ. ಅದರಲ್ಲಿ ಸಾಮಾನ್ಯವಾಗಿ ವಿಷವು ಸ್ಥಾವರ ವಿಷವೆಂತಲೂ, ಜಂಗಮವಿಷವೆಂತಲೂ, ಕೃತ್ರಿಮ ವಿಷವೆಂತಲೂ ಮೂರುಬಗೆಯಾಗಿರುವಂತೆ ತಿಳಿಸಲ್ಪಟ್ಟಿದೆ. ಇದು ಇನ್ನೂ ಹಲವುಗಳಾಗಿ ವಿಭಾಗಿಸಿದರೆ, ಹಿಂದುಸ್ಥಾನದ ವಿಷದಲ್ಲಿ ಬಲಾಹ, ವತ್ಸನಾಭಿ, ಮುಸ್ತಕ, ಧುತ್ತೂರಿ, ಕ್ರೌಂಚ, ಶವ, ಮರ್ಕಟ, ಹರಿದ್ರ, ಕಾಲಕೂಟ, ಐಂದ್ರವಜ್ರ, ಏಕವೀರ, ಹರಿತ, ಗಾಲವ, ಶೃಂಗಿ, ಕರ್ಕಟಶೃಂಗಿ, ಮೇಷಶೃಂಗಿ, ಹಾಲಾಹಲ, ಕುಕ್ಕುಕ, ರಕ್ತಶೃಂಗಿ, ಅಂಜ, ಪುಂಡರೀಕ, ಸಂಕೋಚ, ಮಾಧವಿಕ, ರೋಹಿಣಿ, ಮುದ್ಗರಗಳೆಂದು ಇಪ್ಪತ್ತೆಂಟು ಪ್ರಭೇದಗಳಿರುವಂತೆ ತಿಳಿಯಬರುತ್ತದೆ. ಇವುಗಳಲ್ಲಿ ಸಂಕೋಚ, ಕಾಲಕೂಟ, ಶೃಂಗಿ, ಮುಸ್ತಕ, ವತ್ಸನಾಭಿಗಳೆಂಬ ಐದುಬಗೆ ವಿಷಗಳು ಬಹಳ ಕ್ರೂರವಾದವೆಂತಲೂ, ಅಪರಿಹಾರ್ಯವೆಂತಲೂ, ಜನೆಯಲ್ಪಟ್ಟಿವೆ. ಇವು ದೇಹದಲ್ಲಿ ಅಣುಮಾತ್ರ ಸೇರಿದಾಗ್ಯೂ, ಭ್ರಮೆ, ಮೂರ್ಛೆ, ಅತಿಸಾರ, ವೈವರ್ಣ್ಯ, ಮೈನೋವು, ವಾಂತಿ, ಕಂಪ, ತಾಪ, ಶ್ವಾಸ, ತೀವ್ರವಾದ ಮಯ್ಯುರಿತ, ಚಿತ್ತವೈಕಲ್ಯ, ಗದ್ಗದಸ್ವರ, ಅಜ್ಞಾನ ಮೊದಲಾದವೆಲ್ಲ ತೋರಿ ಕಡೆಗೆ ಮರಣವನ್ನುಂಟುಮಾಡುವವು. ಪಾಶ್ಚಿಮಾತ್ಯರ ರೋಗವಿಜ್ಞಾನದಲ್ಲಿಯೂ ಪ್ರಾಯಶಃ ಮೇಲೆ ಕಂಡ ಲಕ್ಷಣಗಳಲ್ಲಿ ಅನೇಕ ಕಂಡುಬರುವದರಿಂದ ಸದರೀ ರೋಗವು, ಸ್ಥಾವರವಿಷಭೇದಗಳಲ್ಲಿ ಕೆಲವು ಅಜ್ಞಾನವನಾಶಕ ಶರೀರದಲ್ಲಿರುವ ತನ್ಮೂಲಕ ಜನಿಸುತ್ತದೆಂದು ಕೆಲವರು ಪದಾರ್ಥ ತತ್ವವಿವೇಚಕರೂ ರೋಗಲಕ್ಷಣ ಪರಿಶೋಧಕರೂ ಸಹ ಅಭಿಪ್ರಾಯಪಟ್ಟಿರುತ್ತಾರೆ. ಈಗಿನ ವೈದ್ಯಶಾಸ್ತ್ರಜ್ಞರು ಇವನ್ನೆಷ್ಟರಮಟ್ಟಿಗೆ ಅಂಗೀಕರಿಸುವರೋ ನಮಗೆ ತಿಳಿಯದು. ಹೀಗೆಯೇ ಜಂಗಮ ಕೃತ್ರಿಮ ವಿಷಭೇದಗಳನೇಕ ಇರುತ್ತವೆ. ಆದದರಿಂದ ವಿಷಸ್ವರೂಪ, ಅದರಲಕ್ಷಣ, ಅದರ ಶಕ್ತಿವೈಚಿತ್ರ್ಯ, ಅದರ ಸ್ಥೂಲಸೂಕ್ಷ್ಮ ಭೇದಗಳು, ಅವುಗಳ ಗುಣದೋಷಗಳು, ಅವುಗಳ ಉತ್ಪತ್ತಿ ಸ್ಥಿತಿಲಯಗಳು, ಮಹಾ ವಿಷಗಳು, ಸೂಕ್ಷ್ಮ ವಿಷಗಳು, ಅನಿವಾರ್ಯ ವಿಷಗಳು, ಜಂತು ವಿಷಗಳು, ತೆಪ್ಪಭೇದಗಳು, ಅವುಗಳ ಸಾಧ್ಯಾಸಾಧ್ಯಾಂಶಗಳು, ಮೂಲಿಕಾ ವಿಷಗಳು, ವನಸ್ಪತಿವಿಷಗಳು, ಕಲ್ಪಿತ ವಿಷಗಳು, ಆಕಸ್ಮಿಕ ವಿಷಗಳು, ದೈವಿಕ ವಿಷಗಳು, ಅವುಗಳ ಪ್ರಯೋಗಗಳು, ಅವುಗಳನ್ನು ಶುದ್ಧಿ ಮಾಡುವ ಕ್ರಮ, ಅದು ರದಬದಲ್ಪುವ ವಿಧಾನ, ಅವುಗಳನ್ನು ಮುರಿಯುವ ಬಗೆ, ಅದು ತೆಗೆಯುವ ರೀತಿ, ಮುಂದೆ ಅವುಗಳ ವ್ಯಾಪಕತೆಗೆ ಆಸ್ಪದವಿಲ್ಲದಂತೆ ರಕ್ಷಿಸುವಿಕೆ, ಮುಂತಾದವುಗಳನ್ನೆಲ್ಲನು ಸವಿಸ್ತಾರವಾಗಿಯೂ, ಸಾಧಾರಣವಾಗಿಯೂ ತಿಳಿಯಬಹುದು. ಗ್ರಂಥಗಳೂ, ಅನುಭವಶಾಲಿಗಳು ಸಹ ಈಗಿನ ಸ್ಥಿತಿಯಲ್ಲಿ ಅತ್ಯಂತಾಪೇಕ್ಷಿತವಾಗಿರುವದರಿಂದ ಸದರೀ ಗ್ರಂಥಗಳು ಯಾರಲ್ಲಾದರೂ ಇದ್ದರೆ ಅಂತವರು ಲೋಕೋಪಕಾರಾರ್ಥ ಅದು ದೇಶಭಾಷೆಯಲ್ಲಿ ಪ್ರಕಟಿಸಿ ಪ್ರಚುರ ಪಡಿಸಬೇಕಲ್ಲದೆ, ನಾನಾವಿಷನಿವಾರಕಗಳಾದ ಮೂಲ ಮಂತ್ರ ಔಷಧಗಳನ್ನು ಅನುಭವಶಾಲಿಗಳಾದ ವಿದ್ವಾಂಸರು ದಯಮಾಡಿ ಲೋಕೋಪಕಾರಾರ್ಥ ಉಪದೇಶಿಸಬೇಕು. ಲಕ್ಷದ ಒಳಗಿನ ಅನೇಕ ಪ್ರಾಣಗಳು ಕಾಪಾಡುವದರಿಂದುಂಟಾಗುವ ಪುಣ್ಯಕೀರ್ತಿಗಳಿಗೆ ಮಿತಿಯೆ ರಾಗುವದೆಂಬುದರೊಳು ಸಂಶಯವಿಲ್ಲವು. ಮೇಲೆ ಬರೆಯಲ್ಪಟ್ಟಂತವು ಯೋಗ್ಯವಾಗಿಯೂ, ಶರ್ವಸ್ವವಾಗಿಯೂ ತೋರಿ ಯಾರಾದರೂ ಮುಂದೆ ಪ್ರಯತ್ನಪಡುವರಾದರೆ ಅಂತವರಿಗೆ ಸರ್ಕಾರದವರಕೂಡ ಬಹಳ ಸಹಾಯ ಮಾಡುವರೆಂದು ನಂಬುತ್ತೇವೆ. ತತ್ಕಾಲದಲ್ಲಿ ಈಗಿನ ಚಿಕಿತ್ಸೆಯು ಬಹಳ ಕ್ಷಮಿಸಿಹೋಗಿರುವದರಿಂದ ಇದನ್ನು ನಾವು ಉಜ್ಜೀವಿಸುವಂತೆ ಮಾಡಿ ಕಾಪಾಡಿದರೆ ಬಹಳ ಪ್ರತಿಷ್ಠಾಸ್ಪದವಾಗಿರುವದು.

Occasional Notes.
ನೈಮಿತ್ತಿಕ ವಿಷಯನ್ಯಾಸ.

H. H. the Gaekwar of Baroda.—ಬರೋಡೆ ಗಾಯಿಕವಾಡಿ ಮಹಾರಾಜರವರು, ರಮ್ಯ ರೆಸಿಡೆಂಟರು ಮತ್ತು ಬಹುಜನ ಪರಿಜನ ರೊಡನೆ ಈ ತಿಂಗಳ ೨೦ನೇ ತಾರೀಖ್ ಬೃಹಸ್ಪತಿವಾರದದಿನ, ಊಟಕಮಂಡದಿಂದ ಸ್ಪೆಷಲ್ ಟ್ರೇನ್ ಮುಖಾಂತ್ರ ಆರ್ಕೋಣಂ ಸ್ಟೇಷನ್ ಮಾರ್ಗವಾಗಿ ಮುಂಬೈಗೆ ಪ್ರಯಾಣವಾದರೆಂದರಿಯಲಾದ್ದು.

Punishment for drinking.—ಮದ್ಯಪಾನದ ಮೂಲಕ ಉಂಟಾಗುವ ಕೆಡುಕುಗಳನ್ನಾಲೋಚಿಸಿ, ಪುನೇಯಲ್ಲಿನ ನಿಯೋಗಿಯವರೂ ಆ ಪಟ್ಟಣದ ಸಗರದಲ್ಲಿನ ತೋಟಗಾರರೂ ಸೇರಿ ತಮ್ಮತಮ್ಮ ಗುಂಪಿನವರ ಆಚಾರಕೆಯ ಬಗ್ಗೆ ಕೆಲವು ನಿಬಂಧನೆಗಳು ಮಾಡಿದರು. ಪುನೇ ನಿಯೋಗಿಯವರು ತಮ್ಮ ಗುಂಪಿಗೆ ಸೇರಿದವರ್‍ಯಾರೇ ಯಾಗಲಿ ಹೆಂಡ ಕುಡಿಯುವರಾದರೆ ಅಂತವರು ಶರೀರಾಪಾಯಿಗಳ ಜುಲ್ಮಾನೆಗೆ ಗುರಿಯಾಗತಕ್ಕದ್ದೆಂತಲೂ, ಅದನ್ನು ಕೊಡಲೊಪ್ಪದವರು ಬಹಿಷ್ಕಾರಹಾಕಲ್ಪಡತಕ್ಕದ್ದೆಂತಲೂ ಒಂದು ನಿರ್ಣಯ ಮಾಡಿಕೊಂಡರು. ಆಧಿಮದನಗರದ ತೋಟಗಾರರಾದರೋ ತಮ್ಮಗುಂಪಿಗೆ ಸೇರಿದವರ್‍ಯಾರು ಮದ್ಯಪಾನಮಾಡಿದರೆ ಅಂತವರ ಕೊರಳಿಗೆ ಒಂದು ಶೀಸೆಯನ್ನುಕಟ್ಟಿಸಿ ಊರಲ್ಲೆಲ್ಲ ಮೆರವಣಿಗೆಮಾಡಿಸುತ್ತಾರೆ. ಇಂತಾ ದಂಡನೆಯು ಕೇವಲ ಅವಶ್ಯಕವಾಗಿರುತ್ತದೆ, ಎಂದು ಒಂದುನೋಂದು ನೇಟಿವ್ ಪತ್ರಿಕೆ ಅಭಿಪ್ರಾಯಪಡುವದು ಅಯುಕ್ತವಲ್ಲವು. ಮದ್ಯಪಾನವು ಈಗ ಕ್ರಮವಾಗಿ ಸ್ತ್ರೀಯರಲ್ಲಿಯೂ ಬಹಳವಾಗಿ ಬಲಿಸುತ ಬರುತ್ತಿದೆ. ಇದರಲ್ಲಿ ಜನಗಳಿಗೆ ವ್ಯಂಗ್ಯವೆಂಬದು ಕಡ್ಡಾಂಗತಪ್ಪಿಹೋಯಿತು.

LOCAL AND PROVINCIAL NEWS.
ಸ್ಥಳದೇಶ ಮತ್ತು ತಾಲ್ಲೂಕಿನಾತಿ ವೃತ್ತಾಂತ

H. H. the Maharaja.—ಶ್ರೀಮನ್ಮಹಾರಾಜರವರು ಸಿವಾನರು ಮೊದಲಾದ ತಮ್ಮ ಪರಿಜನರೊಡನೆ ಈತಿಂಗಳ ೩೦ನೇ ತಾರೀಖ್ ಶನಿವಾರದದಿನ ಸಾಯಂಕಾಲ ಈಊರಿಗೆ ದಯಮಾಡುವರೆಂತಲೂ ಅವರ್‍ಗೆ ಸ್ವಾಗತ ಕ್ರಿಯೆಯನ್ನು ಸಿದ್ಧಪಡಿಸುವಂತೆ ರೆಯಿಲ್ ಇಲಾಖಾ ಅಧಿಕಾರಿಗಳಿಗೆ ಹುಕುಂ ಬಂದಿರುವದಾಗಿಯೂ ಕೇಳುತ್ತೇವೆ.

Ball.—ಇಲ್ಲಿನ ಬ್ರಿಟಿಷ್ ರೆಸಿಡೆಂಟರಾದ ಸರ್ ಹಾರಿ ಪ್ರೆಂಡರ್ ಗ್ಯಾಸ್ಟ್ರಿಯವರು ಈ ತಿಂಗಳ ೨೭ನೇ ತಾರೀಖಿನೊಳಗೆ ಯೂರೋಪಿಯನ್ ಆಫೀಸರುಗಳಿಗೆ ಬೆಂತನ ಮಾಡುವದಾಗಿ ಹಾರೆಂದು ತಿಳಿಯಬರುತ್ತದೆ. ಆ ಕಾಲಕ್ಕೆ ಸರಿಯಾಗಿ ಲಾರ್ಡ್ ಮತ್ತು ಲೇಡೀ ಕಾನಿಮರಾಯರು ಸಹ ಇಲ್ಲಿಗೆ ದಯಮಾಡುವರೆಂದು ನಿರೀಕ್ಷಿಸಲ್ಪಟ್ಟಿದೆ.

The Weather.—ಗತವಾರದ ಮೊದಲು ಕಾಲಸ್ಥಿತಿಯು ಬಹಳ ಭಿನ್ನಿಸಿದೆ. ಕಳೆದ ಗುರುವಾರದ ದಿನ ರಾತ್ರಿ ೦·೮೯ ಇಂಚಿನ ಮಳೆಯು ಬಿದ್ದು ಗುಡುಗು ಮಿಂಚಿನೊಡನೆ ಈ ಊರಲ್ಲಿ ಎಲ್ಲಿ? ಮಳೆಯಾಗಿ ಕೆರೆ ಕುಂಟೆಗಳಿಗೆ ಮೆರದು ಮೂರು ತಿಂಗಳ ನೀರು ಬಂದಿರುತ್ತದೆ. ಮಧ್ಯಾಹ್ನಕಾಲದಲ್ಲಿ ದುಸ್ಸಹವಾದ ಬಿಸಿಲೂ, ಸಾಯಂಕಾಲ ವೇಳೆಯಲ್ಲಿ ವರ್ಷಸೂಚನೆಗಳೂ ತಪ್ಪಲ್ಪಿಲ್ಲವು. ರೋಗಾದ್ಯುಪದ್ರವಗಳು ನಿಶ್ಶೇಷವಾಗಿ ನಿವೃತ್ತಿಯಾಗಲಿಲ್ಲವು.

Acknowledgments.—ಈ ವಾರದಲ್ಲಿ ನಮ್ಮ ಪರಾಮರಿಕೆಯ ಬಗ್ಗೆ ಬರತಕ್ಕಂತ ಗ್ರಂಥಗಳು ನಮಗೆ ಕಳುಹಿಸಲ್ಪಡಲಿದು ನಾವು ಸಂತಸದೊಡನೆ ಅಂಗೀಕರಿಸಿದೆವು:—ಮಹಾರಾಜಾ ಕಾಲೇಜಿನ ಕನ್ನಡ ಪಂಡಿತರಾದ ಬ್ರಹ್ಮಶ್ರೀ ವೆಲನಾಡು ಸಿದ್ಧಾಂತಿ ಸುಬ್ರಹ್ಮಣ್ಯಶಾಸ್ತ್ರಿಗಳಿಂದ ಟೀಕೆ ಬರೆಯಲ್ಪಟ್ಟ ಮಂಗಳೂರು ವಿಚಾರದರ್ಪಣ ಮುದ್ರಾಕ್ಷರ ಶಾಲಾಧಿಕಾರಿಗಳಾದ ವಿ॥ ರಾಮಕೃಷ್ಣರವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿರುವ ಜೈಮಿನಿ ಭಾರತದ ಪೂರ್ವೋತ್ತರಭಾಗಗಳು. ಮದರಾಸಿನಲ್ಲಿರತಕ್ಕ ಮ॥ ರಾ॥ ಶ್ರೀನಿವಾಸ ಬೋಡಿಯಾ ಬಿ. ಎ. ಯವರು ಹಿಂದೂಜನರ ಶ್ರೇಯೋಭಿಲಾಷೆಯೊಡನೆ ಈಗ ಕೆಲವು ವರುಷಗಳ ಮೊದಲು ಕ್ರಮವಾಗಿ ಪ್ರಕಟಿಸುತ ಬರುವ ನೀತಿ ಧರ್ಮಬೋಧಕಗಳಾದ ಗ್ರಂಥಗಳಲ್ಲಿ ೯ನೇ ಸಂಚಿಕೆಯಾದ ಮಹಾಭಾರತ ನೀತಿರತ್ನಾವಳಿ.

Lord Connemara's visit to Mysore.—ಪ್ರಕೃತ ಮದರಾಸ್ ಗವರ್ನರಾದ ಲಾರ್ಡ್ ಕಾನಿಮರಾ ಸಾಹೇಬರವರು ಮಹಾರಾಜರವರ ಸಂದರ್ಶನಾರ್ಥ ಪ್ರಸ್ತುತದಲ್ಲಿ ಮೈಸೂರಿಗೆ ದಯಮಾಡುವ ಅಭಿಪ್ರಾಯ ಪ್ರಬಲತರವಾಗಿದೆಯೆಂದು ತಿಳಿಯಬರುತ್ತದೆ. ಗವರ್ನರವರು ಈಗಳ ಪ್ರಕೃತಮಂದಲ್ಲಿರುತ್ತಿರುವದರಿಂದ ಅವರು ಬೆಂಗಳೂರು ಪ್ರಯಾಣವು ನೀಲಗಿರಿವಾಗಿ ಮೈಸೂರಿಗೆ ಬಂದು ಅಲ್ಲಿ ಮಹಾರಾಜರವರ ಆತಿಥ್ಯದಲ್ಲಿ ಐದಾರು ದಿನಗಳಿದ್ದು ಅಲ್ಲಿಂದ ರೆಯಿಲ್ ಮಾರ್ಗವಾಗಿ ಈಊರಿಗೆ ದಯಮಾಡಿ ಇಲ್ಲಿ ಆಕ್ಟಿಂಗ್ ಬ್ರಿಟಿಷ್ ರೆಸಿಡೆಂಟರ ಸತ್ಕಾರಗಳನ್ನಂಗೀಕರಿಸಿ ಮದರಾಸಿಗೆ ದಯಮಾಡುವರೆಂಬದಾಗಿ ತಿಳಿಯಲಾದೆವು. ಲೇಡೀ ಕಾನಿಮರಾಯವರು ಈಗ್ಯೆ ಬಹುಕಾಲದ ಹಿಂದೆ ತಮ್ಮ ತಂದೆಗಳಾದ ಲಾರ್ಡ್ ದಲ್‌ಹೌಸಿಯವರೊಡನೆ ಈರಾಜ್ಯಕ್ಕೆ ಬಂದಿದ್ದ ಕಾಲದೊಳು ಸಾಹುಕ್ ಮಹಾರಾಜರವರು ಪುತ್ರೀ ವಾತ್ಸಲ್ಯದೊಡನೆ ಬಹಳವಾಗಿ ಗೌರವಿಸಿ ಸತ್ಕರಿಸಿ ಕಳುಹಿಸಿದರು.

Sreenivasa Mandiram.—ಈ ಕರ್ನಾಟಕ ನಗರದಲ್ಲಿ ನೆಲಗೊಂಡಿರುವ ಪುರಾತನವಾದ ಶ್ರೀ ಶ್ರೀನಿವಾಸ ದೇವರ ಆಲಯವು ಶಿಥಿಲವಾಗಿ ಕೆಲವು ಸಂವತ್ಸರಗಳ ಕಾಲದ ಮೊದಲು ದೇವರ ಪೂಜಾದಿಗಳು ಅತ್ಯಂತಿಕವಾಗಿ ನಿಂತುಹೋಗಲು ಮ॥ ರಾ॥ ಎ. ಗೋಪಾಲಾಚಾರ್ಯರವರು ಭಗವದಾಜ್ಞೆಯಾ ಪ್ರೇರಿತರಾಗಿ ಅದು ಜೀರ್ಣೋದ್ಧಾ

ಕ ನೋಡಬೇಕೆಂಬ ಉತ್ಕಟೇಚ್ಛೆಯಿಂದ ಮೂರುನಾಲ್ಕು ವರ್ಷಗಳ ಕಾಲದ ಮೊದಲು ಬಹುದೂರದೇಶಗಳ ಸಂಚಾರ ಮಾಡಿ ಭಗವದ್ಭಕ್ತರಾದ ಸತ್ಪುರುಷರ ಸಹಾಯದಿಂದಲೂ ತನ್ನೊಳಗೆ ಸವರೀ ದೇವಸ್ಥಾನ ನಿರ್ಮಾಣಕಾರ್ಯವಂ ಪೂರ್ತಿಗೈದವರಾಗಿ, ಅವರಲ್ಲಿ, ಈ ಸರ್ವಧಾರಿ ನಾಮ ಸಂವತ್ಸರ ಜ್ಯೇಷ್ಠಬಹುಳ ಷಷ್ಠಿ ಭಾನುವಾರವಾದ ನಿನ್ನೆಯದಿನ ಮೊದಲು ಬೃಹಸ್ಪತಿವಾರದವರಿವಿಗೆ ಆಗಮರೀತ್ಯಾ ಶ್ರೀ ಶ್ರೀನಿವಾಸ ದೇವರಿಗೆ ಸಂಪ್ರೋಕ್ಷಣೆ ಮಾಡಿಸಬೇಕೆಂದು ಸಂಕಲ್ಪಿಸಿ, ಶ್ರೀಮತ್ಪರಮಹಂಸ ಪರಿವ್ರಾಜಕಾಚಾರ್ಯೋಭಯವೇದಾಂತ ಪ್ರವರ್ತಕರಾದ ಶ್ರೀವಾನಮಾಮಲೈ (ತೋತಾದ್ರಿ) ಶ್ರೀ ಶಠಕೋಪ ರಾಮಾನುಜ ಜೀಯ್ಯರವರ ಸಾನ್ನಿಧ್ಯದೊಳು ನಡೆಸುತಲಿದಾರೆ. ಅಂಕುರಾರ್ಪಣ ಕಲ್ಯಾಣೋತ್ಸವಾದಿಗಳಿಗೆಲ್ಲ ಭಗವದ್ಭಕ್ತರಾದವರೆಲ್ಲರೂ ಇಷ್ಟಮಿತ್ರರೊಡನೆ ಪ್ರತಿದಿನವೂ ದಯಮಾಡಿ ಶ್ರೀದೇವರ ಸೇವೆಯಂ ನೆರವೇರಿಸಬೇಕೆಂದು ಪ್ರಾರ್ಥಿಸಲ್ಪಟ್ಟಿದೆ. ಇವರ ತಪ್ಸೀಲನ್ನು ಮುಂದಿನವಾರದಲ್ಲಿ ತಿಳಿಸುವೆವು.

Rejoicings at District and Taluq Head quarters.—ಶ್ರೀಮನ್ ಮಹಾರಾಜರವರಿಗೆ ಪುತ್ರೋತ್ಸವ ಮತ್ತು ನಾಮಕರಣೋತ್ಸವ ಸಂದರ್ಭಗಳು ಅವಾ ಡಿಸ್ಟ್ರಿಕ್ಟು ಮತ್ತು ತಾಲ್ಲೂಕು ಅಧಿಕಾರಿಗಳಿಗೆಲ್ಲ ತಿಳಿಯಬಂದು ಅವರು ತಮ್ಮತಮ್ಮ ಪ್ರದೇಶಗಳಲ್ಲಿ ರಾಜಭಕ್ತಿ ಗೌರವ ಪ್ರದರ್ಶಕಗಳಾದ ಉತ್ಸವಾದಿ ವಿಧಗಳನ್ನು ಪ್ರಸಕ್ತ ಸುಸಂದರ್ಭೋಚಿತವಾಗಿ ಬಹಳ ಉತ್ಸಾಹದೊಡನೆ ನಡೆಸಿದರೆಂತಲೂ, ತಮ್ಮ ಹೃದಯಂಗಮಗಳಾದ ಸಂತೋಷಾದಿ ಭಾವಗಳನ್ನು ಸದ್ಯಃವ್ಯಾಪ್ತಕಗಳಾದ ವಿಜ್ಞಾಪನ ಪತ್ರಿಕೆಗಳ ಮೂಲಕ ವಿವಿಧ ಭಾಷೆಗಳಲ್ಲಿ ಶ್ರೀಮನ್ಮಹಾರಾಜಸನ್ನಿಧಿಯೊಳು ವ್ಯಕ್ತಪಡಿಸಿರುತ್ತಾರೆಂತಲೂ, ಅನೇಕರು ತಮ್ಮ ಶುಭಾಶಂಸನಗಳಂ ಕೂಡಲೇ ತಂತಿ ಮೂಲಕ ಮಹಾರಾಜರವರಿಗೆ ತಿಳಿಯಪಡಿಸಲು ಅವರು ಅವುಗಳಿಗೆಲ್ಲ ತಮ್ಮ ಸಂತೋಷ ಪ್ರದರ್ಶಕವಾದ ಅಂಗೀಕಾರಗಳಂ ಪ್ರತ್ಯುತ್ತರರೂಪವಾಗಿ ತಿಳಿಸಿದರೆಂತಲೂ, ಪಟ್ಟಣದ ಈಸಂದರ್ಭದಲ್ಲಿ ಅನೇಕರು ಸ್ವಪ್ರಯತ್ನದಿಂದಲೇ ಮಹಾರಾಜರವರ ಅರಮನೆಗೆ ಬಂದರೆಂತಲೂ, ಕೇಳಲಿಕ್ಕೆ ನಾವು ಬಹಳ ಸಂತೋಷಿಸುತ್ತೇವೆ.

Arrival of Sreeman Vaanamaale Swamy.—ಶ್ರೀಮತ್ಪರಮಹಂಸ ಪರಿವ್ರಾಜಕಾಚಾರ್ಯೋಭಯ ವೇದಾಂತ ಪ್ರತಿಷ್ಠಾಪನಾಚಾರ್ಯರಾದ ಶ್ರೀವಾನಮಾಮಲೈ ಶಠಕೋಪ ರಾಮಾನುಜಜೀಯ್ಯರವರು ತಿರುನವೇಲಿ ಡಿಸ್ಟ್ರಿಕ್ಟಿನಿಂದ ಪ್ರಯಾಣಮಾಡಿ ಮಾರ್ಗದಲ್ಲಿ ಪ್ರಸಿದ್ಧಗಳಾದ ದಿವ್ಯದೇಶಗಳಿಗೆಲ್ಲ ದಯಮಾಡಿ ಅಲ್ಲಲ್ಲಿ ದೇವರ ಸಂದರ್ಶನಮಂ ಮಾಡಿಕೊಂಡು ಶ್ರೀಯಃಪತಿಯಾದನ ಮಂಗಳಾಶಾಸನಾರ್ಥ ಮೇಲುಕೋಟೆಗೆ ದಯಮಾಡುವಸಂಕಲ್ಪದೊಡನೆ ಮಾರ್ಗವಶಾತ್ ಗತ ಭಕ್ತವತ್ಸಲ ಬುಧವಾರದವರ ಬೆಳಗ್ಗೆ ೪ಗಂಟೆಗೆ ಈ ಊರಿಗೆ ದಯಮಾಡಿದರು. ಈ ಪ್ರಾಂತ್ಯದಲ್ಲಿರುವ ಕೆಲವರು ಶ್ರೀವೈಷ್ಣವರು ಸಮೂಹವಾಗಿ ಸ್ಟೇಷನಿಗೆ ಹೋಗಿ, ಎದುರುಗೊಂಡು ಸವರೀ ಜೀಯ್ಯರವರನ್ನು ತಕ್ಕ ಸನ್ಮಾನಮರ್ಯಾದೆಗಳೊಡನೆ ಕರೆದುಕೊಂಡು ಬಂದು ರಿಟ್ಟೀಕಸ್ವಿಟ್ಟಿನಲ್ಲಿ ಪೆನ್ಷನ್ ಅಸಿಸ್ಟೆಂಟ್ ಶ್ರೀಮಾನ್ ವೆಂಕಟರಂಗಯ್ಯಂಗಾರ್ಯರವರ ಗೃಹದಲ್ಲ ಇಳಿಸಿ ಸತ್ಕರಿಸುತಲಿದಾರೆ. ಇವರನ್ನು ಕೆಲವುದಿನಗಳ ವರೆಗೆ ಇಲ್ಲಿ ದಯಮಾಡಿದ್ದು ದಮ್ಮ ಶಿಷ್ಯಮಂಡಲಿಯನ್ನನುಗ್ರಹಿಸಿ ಇಲ್ಲಿಂದ ಮೇಲುಕೋಟೆಗೆ ಸವಾರಿ ಚಿತ್ತೈಸುವರೆಂದು ತಿಳಿಯಬರುತಿದೆ. ಶ್ರೀ ವಾನಮಾಮಲೈ ಸ್ವಾಮಿಗಳವರಿಗೆ ಗತ ಶುಕ್ರವಾರದಂದು ಡೆಪ್ಯುಟಿ ಅಸಿಸ್ಟೆಂಟ್ ಕಮಿಷನರ್ ಮ|| ರಾ|| ಎಸ್. ಬಿ. ಕೃಷ್ಣಸ್ವಾಮಯ್ಯಂಗಾರ್ಯರವರು ಮಠದಲ್ಲಿ ಭಿಕ್ಷೆ ಮಾಡಿಸಿ ೫೦ ರೂಪಾಯಿಗಳು ಪಾದಕಾಣಿಕೆ ಸಮರ್ಪಿಸಿದರೆಂತಲೂ, ಹೀಗೆಯೇ ಇನ್ನು ಇಬ್ಬರಿಬ್ಬರುಕೂಡ ಭಿಕ್ಷೆಮಾಡಿಸುವ ಅಭಿಪ್ರಾಯ ವ್ಯಕ್ತಪಡಿಸಿದಾರೆಂತಲೂ ತಿಳಿಯಬರುತಿದೆ.

Railway to Goontacul.—ಈಊರಿಂದ ಗುಂತಕಲ್ ವರಿವಿಗೆ ರೈಲುರಸ್ತೆ ಹಾಕುವ ವಿಚಾರವು ಆಲೋಚನೆಯೊಳಿರುವುದಾಗಿ ನಂಬತಕ್ಕ ಮೂಲಕ ತಿಳಿಯಬರುತಿದೆ. ಈ ರಸ್ತೆಯು ಮದರಾಸ್ ರೈಲ್ವೆಯಂತೆ ದೊಡ್ಡದಾಗಿರುವದಲ್ಲದೆ ಇದರ ಆಡಳಿತವೆಲ್ಲ ಮದರಾಸ್ ರೈಲ್ವೇ ಅಧಿಕಾರಿಗಳ ಮೂಲಕವಾಗಿಯೇ ನಡೆಸಲ್ಪಡುವದೆಂದು ಕೇಳುತ್ತೇವೆ. ದಕ್ಷಿಣ ಮಹಾರಾಷ್ಟ್ರ ರೈಲ್ವೇ ಕಂಪನಿಯವರು ಇಲ್ಲಿಂದ ಹಿಂದೂಪುರದ ತನಕ ಸಣ್ಣದಾಗಿ ರೈಲುರಸ್ತೆ ಹಾಕಬೇಕೆಂದು ಆಲೋಚಿಸಿದ್ದರು. ಹಿಂದೂಪುರದ ರಸ್ತೆಯನ್ನು ಚಂಗಳೂರಲ್ಲಿ ಸಂಧಿಸುವಂತೆ ಹಾಕುವದಕ್ಕಿಂತಲೂ ಹುಮಕೂರಲ್ಲಿ ಸೇರುವಂತೆ ಏರ್ಪಾಡು ಮಾಡಿದರೆ ಪ್ರಯೋಜನಕರವಾಗಿರುವದೆಂದು ಕರ್ನಲ್ ಪಿಯರ್ಸನ್ ಇಂಜನಿಯರವರು ಅಭಿಪ್ರಾಯಪಟ್ಟಿರುತ್ತಾರಂತೆ. ಬೆಂಗಳೂರಿಂದ ಗುಂತಕಲ್ ತನಕ ಹಾಕಲುದ್ದೇಶಿಸಿರುವ ರಸ್ತೆಯು ಪ್ರತಿಷ್ಠಿಸಿದರೆ ಮುಂಬೈ ಮೊದಲಾದ ಉತ್ತರದೇಶಗಳಿಗೆ ಹೋಗತಕ್ಕ ಪ್ರಯಾಣಸ್ಥರಿಗೆ ಪ್ರಯಾಣವು ಬಹಳ ಹತ್ತಿರವಾಗುವದು. ಈ ರಸ್ತೆಯು ಚಿಕ್ಕಬಳ್ಳಾಪುರ, ಗೌರೀಬಿದನೂರು, ಹೇಮಾವತಿ ಮುಂತಾದ ಕೆಲವು ತಾಲ್ಲೂಕುಗಳಿಗೆ ಸಮೀಪದಲ್ಲಿ ಹಾಕಲ್ಪಡುವದರಿಂದ ಫಲಭರಿತವಾದ ಸವರೀ ತಾಲ್ಲೂಕುಗಳಲ್ಲಿ ವ್ಯಾಪಾರವು ವೃದ್ಧಿಯಾಗಲಿಕ್ಕೂ, ಅನುಪ ರಸ್ತೆ ಜಾಸ್ತಿಯಾಗಲಿಕ್ಕೂ ಕಾರಣವಾಗುವದೆಂದೆಣಿಸುತ್ತೇವೆ.

Official changes.—ಚಿತ್ರದುರ್ಗ ಡಿ ಡೆಪ್ಯುಟೀ ಕಮಿಷನರ್ ಮಿಸ್ಟರ್ ಮದಮ್ಮದ ಶರೀಫ್ ಬಹದ್ದೂರವರು ಬರುವತಿಂಗಳ ಗುರೈತಾರೀಖ್ ಮೊದಲು ತಮ್ಮ ಕೆಲಸದಿಂದ ಪೆನ್ಷನ್ ಮೇಲೆ ನಿವೃತ್ತರಾಗತಕ್ಕದ್ದೆಂದು ವ್ಯವಸ್ಥೆಯಾಗಿ ರುವದರಿಂದ ಅವರಕೆಲಸವನ್ನು ಪ್ರೋಬೇಷನರ್ ಅಸಿಸ್ಟಂಟ್ ಆಗಿರುವ ಮ|| ಬಿ. ಕೆ. ವೆಂಕಟವರದಯ್ಯಂಗಾರ್ಯರವರು ವಹಿಸಿಕೊಳ್ಳುವುದೆಂತಲೂ ಮ|| ಚಳವಾಡಿ ದೇವರಾಜೇಅರಸಿನವರು ಪ್ರೋಬೇಷನರ್ ಅಸಿಸ್ಟಂಟರಾಗಿ ಕಾಯಮಾಗಿಟ್ಟಿರುವಂತೆಯೂ ದಯಮಾಡಿರುವದಾಗಿ ನಮಗೆ ನಂಬತಕ್ಕ ಮೂಲಕ ತಿಳಿಯಬರುತಿದೆ. "ಕೋಲಾರ ಡಿಸ್ಟ್ರಿಕ್ಟ್ ಡೆಪ್ಯುಟೀ ಕಮಿಷನರ್ ಮ|| ಸಿ. ಸುಬ್ಬರಾಯರವರು ಬರುವತಿಂಗಳ ಗುರೈತಾರೀಖ್ ಮೊದಲು ಮೂರುತಿಂಗಳ ಪ್ರಿವಿಲೇಜ್ ರಜವನ್ನು ಉಪಯೋಗಿಸಿಕೊಳ್ಳುವದಾಗಿ ಅವರಕೆಲಸಕ್ಕೆ ಶಿವಮೊಗ್ಗಾ ಡಿಸ್ಟ್ರಿಕ್ಟ್ ಡೆಪ್ಯುಟಿ ಕಮಿಷನರ್ ಮ|| ವಿ. ಪಿ. ಮಾಧವರಾಯರವರು ಬರುವರೆಂತಲೂ ಅವರಕೆಲಸವು ಜಿಗಳೂರು ಟೌನ್ ಮ್ಯಾಜಿಸ್ಟ್ರೇಟರಾದ ಹಾಜಿನ ಸುರುವೀರಯ್ಯವರಿಗೆ ಕೊಡಲ್ಪಡುವದಾಗಿದೆಯೆಂತಲೂ, ಕೃಷ್ಣಸ್ವಾಮಿ ಪ್ರೊಬೇಷನರ್ ಅಸಿಸ್ಟಂಟ್ ಮ|| ನಾಮಕರಣರಾಯರವರು ಟೌನ್ ಮ್ಯಾಜಿಸ್ಟ್ರೇಟರಾಗಿ ನೇಮಕರಾಗುವರೆಂತಲೂ, ಅಸಿಸ್ಟೆಂಟ್ ಕಮಿಷನರು ಮ|| ವಾರ್ದಾಯರು ಪ್ರೊಬೇಷನರ್ ಅಸಿಸ್ಟಂಟರಾಗಿ ನಿಯಮಿಸಲ್ಪಡುವರೆಂತಲೂ, ಅಸಿಸ್ಟೆಂಟ್ ಕಮಿಷನರ್ ಮ|| ಅಣ್ಣಾಜಿರಾಯರವರು ಇಲ್ಲಿ ಜನರಲ್ ಅಸಿಸ್ಟೆಂಟರಾಗಿರುವರೆಂತಲೂ" ಗತ ಬುಧವಾರದ ಸ್ಪೆಕ್ಟೇಟರ್ ಪತ್ರಿಕಾ ಮೂಲಕ ತಿಳಿಯಬರುತಿದೆ.

An antidote for scorpion sting.—ಪ್ರಾಯಶಃ ಎಲ್ಲಕಡೆಯಲ್ಲಿಯೂ ಸರ್ವಕಾಲದಲ್ಲಿಯೂ ಚೇಳುಗಳ ಕಾಟವು ಜನಗಳಿಗೆ ತಪ್ಪದ್ದಾಗಿರುತಿದೆ. ತಪ್ಪಾದ ಬೇಸಿಗೆಕಾಲದಲ್ಲಿ ಚೌಳುಮಣ್ಣಾಗಿರುವ ಪ್ರಾಂತಗಳಲ್ಲಿ ಈ ವಿಷಜಂತುಗಳ ಬಾಧೆಯು ಬಹಳವಾಗಿರುತಿದೆ. ಅದರಲ್ಲಿಯೂ ಬೆಂಗಳೂರು ಅರಳೇಪೇಟೆ ಪಟ್ಟಿನ ಸ್ಥಳಗಳಲ್ಲಿಯೂ, ಕೋಲಾರ ಮುಂತಾದ ಪ್ರದೇಶಗಳಲ್ಲಿಯೂ ಚೇಳುಕಚ್ಚಿದರೆ ಬಹಳ ಉಪದ್ರವವುಂಟಾಗುತಿದೆ. ಕೆಲವರಿಗೆ ಇದರಿಂದ ವಾಂತಿ, ತಾಪ, ಮೂರ್ಛೆ, ಶೀತಳ, ಕವೆಗೆ ಮರಣಸಹ ಉಂಟಾಗುತಿದೆ. ಇಂತಾ ಚೇಳಿನ ಬಾಧೆಗೆ ಪರಿಹಾರಕವಾಗಿ ಅನೇಕರು ಅನೇಕವಿಧ ಔಷಧಗಳನ್ನು ವಸ್ತುಗಳನ್ನೂ, ಮಂತ್ರಗಳನ್ನೂ ಮೂಲಿಕೆಗಳನ್ನೂ, ಬೇರುಗಳನ್ನೂ ತಿಳಿದುಕೊಂಡು ಅವು ಶ್ರುತಿಪ್ರಧನವಂತೆ ಕೇವಲ ಗೋಪ್ಯವಾಗಿಟ್ಟುಕೊಂಡು, ಅವು ಹೊರಪಡಿಸಿದರೆ ತಮ್ಮ ಸರ್ವಸ್ವವೂ ನಷ್ಟವಾದಂತೆಸಂಕಟಪಡುತ್ತ, ಅವುಯಾರಾದರು ಕೇಳಿದರೆ ತಮ್ಮ ಗುರುವಾಜ್ಞೆ ಇಲ್ಲವೆಂತಲೂ, ಅನಂಪ್ರಕಟಪಡಿಸಿದರೆ ಅವುಗಳಶಕ್ತಿಹೋಗಿ ಬಳಿಕ ನಿಷ್ಫಲಗಳಾಗುವವೆಂತಲೂ ನಾನಾಕಾರಣಗಳಂ ತಿಳಿಸುತ, ತಾವುಕಲಿತದ್ದು ತಮ್ಮೊಡನೆ ನಷ್ಟವಾಗಬೇಕೆಂಬ ದುರಭಿಪ್ರಾಯದೊಡನೆ ರಹಸ್ಯವಾಗಿಟ್ಟುಕೊಂಡು ಯಾರಾದರು ಬಹಳ ಕೇಳಿಕೊಂಡರೆ ಆಗ ಬಹಳ ಭೂತದಯಾಪರರಂತೆ ಬಂದು ಗುಪ್ತಚಿಕಿತ್ಸೆಯಂ ಮಾಡುವರು. ಪರಂತು ಇವರ ಚಿಕಿತ್ಸೆಗಳೆಲ್ಲವೂ, ಕೆತ್ತಾತ್ಕಾಲಿಕವಾದ ಚೇಳುಕನ್ನು ಕಡಮೆಮಾಡುತಿ ವಿಷೋಪಶಮನ ಉರಿಯನ್ನೂ ಜೋಮನ್ನೂ ಅತ್ಯಂತಿಕವಾಗಿ ಹೋಗಲಾಡಿಸುವದಿಲ್ಲವು. ಚೇಳುಕಚ್ಚಿದ್ದಕ್ಕೆ ಕೆಲವರು ಗಜ್ಜುಗವಟೀಜವು ತೆಯುದುವರು. ನೀರಿಯನ್ನು ನೀರಲ್ಲಿತೆಯುದು ಕಚ್ಚಿದಸ್ಥಳದಲ್ಲಿ ಹಾಕಿ ಕಾಯಿಸುವದುಂಟು. ನಿಂಬೇಹಣ್ಣಿನ ರಸದಲ್ಲಿ ಸೀಮೆಪದಕಪ್ಪಿಗಳಂತೆಯು ಮ ಹಾಕುತ್ತಾರೆ. ಈರುಳ್ಳಿಯನ್ನು ಕುಯಿದು ಉಜ್ಜುವದುಂಟು. ಇನ್ನು ಎಷ್ಟೋಬಗೆ ಚಿಕಿತ್ಸೆಗಳನ್ನು ಮಾಡಿದಾಗ್ಯೂ ಉರಿನೋವು ಶುದ್ಧಾಂಗ ನಿಲ್ಲುವದಿಲ್ಲವು. ಇವರ ಚಿಕಿತ್ಸೆ ವಿಷಯವು ಕುರಿತು ನಾವು ಒಂದುದಿನ ನಮ್ಮ ಮಿತ್ರರೊಬ್ಬರೊಡನೆ ಮಾತನಾಡುವಶಿವುವಾಗ್ಯೆ ತಮಗೆ ಬಹಳ ಅನುಭವಿಸಿದ್ದವಾಗಿರುವ ಉತ್ತಮ ಔಷಧವೆಂದು ಒಂದು ವಿಧಾನವಂ ತಿಳಿಸಿದರೆಂತೆಂದರೆ.—ಸಿಂಬಿದಾಷ್ಟಾಣು, ಪಾದರಸ, ನವಾಸಾಗರ, ಪಟಿಕ ಈನಾಲ್ಕು ಪದಾರ್ಥಗಳನ್ನೂ ಒಂದೊಂದುತೊಲೆ ರೂಕ ನಿಂಬೇಹಣ್ಣಿನರಸದಲ್ಲಿ ಮೂರುತಿಂಗಳ ವರಿವಿಗೆ ಅರೆದು ಇಟ್ಟುಕೊಂಡಿದ್ದು ಅದನ್ನು ಚೇಳುಕಚ್ಚಿದಕೂಡಲೇ ಆಸ್ಥಳದಲ್ಲಿ ಒಂದು ಕಡಲೇಕಾಳಿನಷ್ಟು ಹಾಕಿ ಅದರ ಮೇಲೆ ಸ್ವಲ್ಪನೀರನ್ನುಬಿಟ್ಟು ಕೆಂಡದಲ್ಲಿ ಕಾಯಿಸಿದರೆ ಚೇಳುಕೂ ಉರಿಯೂ ಶುದ್ಧಾಂಗ ನಿಂದು ಹೋಗುವದೆಂಬದು. ಈಕ್ರಮವಂ ನಾವಿದುವರಿವಿಗೆ ಪರೀಕ್ಷಿಸಿದವರಲ್ಲವು. ಪ್ರಸಕ್ತ ಚಿಕಿತ್ಸಾಕ್ರಮವು ಬಹುಕೇ ಅನ್ಯರ್ಯಾರಿಗಾದರು ತಿಳಿದಿದ್ದರೂ ತಿಳಿಸಬಹುದು. ಇದು ಚೇಳುಕನ್ನು ಹೋಗಲಾಡಿಸಿದರೂ ಹೋಗಲಾಡಿಸಬಹುದು. ಪರಂತು ಉರಿಯನ್ನು ಶುದ್ಧಾಂಗ ಹೋಗಲಾಡಿಸುವದಂ ನೋಡಬೇಕಾದ್ದರಿಂದ ಇಷ್ಟರಲ್ಲಿಯೇ ಇದನ್ನು ಯಾರಾದರೂ ಅಜಮಾಯಿಷೀಮಾಡಿ ಅವರ ಫಲವನ್ನು ನಮಗೆ ತಿಳಿಸುವರಾದರೆ ಅವರ ಅನುಭವವು ಪ್ರಕಟವಾಗಿ ಈಪತ್ರಿಕಾಮೂಲಕ ಪ್ರಕಟಿಸಿ ಎಲ್ಲರಿಗೂ ಉಪಯೋಗವಾಗುವಂತೆ ಮಾಡುವೆವು.

CORRESPONDENCE.

ಮ ರಾ ಕರ್ಣಾಟಕಪ್ರಕಾಶಿಕಾ ಎಡಿಟರವರಿಗೆ.

ಅಯ್ಯಾ—ಈಗ್ಗೆ ಕೆಲವುಕಾಲದಮೊದಲು ನನ್ನ ಮನದೊಳುಂಟಾಗಿರುವ ಪ್ರಬಲವಾದ ಒಂದು ಸಂಶಯವನ್ನು ತಾವಾದರೂ, ತಮ್ಮಪತ್ರಿಕೆಯ ಸ್ನೇಹಿತರಲ್ಲಿ ಇತರರ್ಯಾರಾದರೂ ಹೋಗಲಾಡಿಸುವರೆಂಬ ನಂಬಿಕೆಯಿಂದ ನನ್ನ ಸಂಶಯ ನಿವೃತ್ತವಾದ ವಿಷಯವನ್ನು ತಮಗೆ ತಿಳಿಸುವೆನಾಗಿ ಅದಂ ಕೃಪೆಯೊಡನೆ ತಮ್ಮ ಪತ್ರಿಕಾ ಮೂಲಕ ಪ್ರಕಟಿಸಬೇಕೆಂದು ಕೋರುತ್ತೇನೇನೆಂದರೆ,— ಒಂದು ರಾಜ್ಯವಂ ಪಾಲಿಸತಕ್ಕ ಅರಸನು, ಆ ಯಾಕಾಲದಲ್ಲಿ ಒಂದೊಂದು ನಿಮಿತ್ತದಿಂ ತನ್ನ ಪ್ರಜೆಗಳ ಪ್ರೀತಿ ಶಿಕ್ಷಾಲಾಗಿಯೂ, ಯೋಗ್ಯರಾಗಿಯೂ ಇರುವವರಿಗೆ ತಾತ್ಕಾಲಿಕವಾದ ಜೀವನವು ಕಲ್ಪಿಸಬೇಕೆಂಬ ಅಭಿಪ್ರಾಯದೊಡನೆ ಅವರವರ ಯೋಗ್ಯತಾನುಸಾರ ಭೂಗ್ರಾಮಾದಿಗಳನ್ನು ಇನಾಮನಾಗಿ ಕೊಡುವಪದ್ಧತಿಯು ಮನುಮೊದಲಾದವರ ಕಾಲದವೊದಲು ಎಲ್ಲ ದೇಶಗಳಲ್ಲಿಯೂ ನಡೆಗೊಂಡು ನಡೆದುಬರುತಿದೆ. ಈಗ ಅಲ್ಲಿಯಲ್ಲಿ ದೊರೆಯುವ ಶಾಸನಗಳನ್ನು ಓದಿನೋಡಿದರೆ, ಪ್ರಾಚೀನ ಅರಸರು ತಮ್ಮ ಪ್ರಭುತ್ವ ಕಾಲದೊಳು ಒಂದೊಂದು ಪ್ರಬಲಸಂದರ್ಭದಲ್ಲಿ ತಮ್ಮಾಜ್ಞಾಪಕಾರ್ಯ ಫಲಾನೆಯಾವರಿಗೆ, ಫಲಾನೆ ಉದ್ದೇಶದೊಡನೆ ಭೂದಾನವಮಾಡಿರುವುದು ಅವುಗಳಿಂದ ಸ್ಪಷ್ಟವಾಗುತಿದೆ. ಹೀಗೆ ದಾನ ಮಾಡುವದರಿಂದುಂಟಾಗುವ ಪ್ರಯೋಜನವು ವಿಚಾರಿಸುವಲ್ಲಿ ಕೆಲವರು, ಪುಣ್ಯವೆಂಬದಾಗಿಯೂ, ಕೆಲವರು ತಮ್ಮಂತೆ ಇತರರೂ ಕ್ಷೇಮವಾಗಿರಬೇಕೆಂಬದಾಗಿಯೂ, ಅಥವಾ ತಾವು ಪಡೆದಿರುವ ಒಂದು ಬಗೆಯಾದ ಪ್ರಯೋಜನಕ್ಕೆ ಪ್ರತ್ಯುಪಕಾರ ರೂಪವೆಂತಲೂ, ನಾನಾವಿಧವಾಗಿ ಹೇಳುತ್ತಾರೆ. ಇದುವರಿವಿಗೆ ಮಾಡಲ್ಪಟ್ಟದಾನಗಳೆಲ್ಲವೂ ಸವರೀ ಉದ್ದೇಶ ಪ್ರಯೋಜನಗಳೊಡನೆ ಮಾಡಲ್ಪಟ್ಟವೆಂತಲೇ ಎಣಿಸಬೇಕಾಗಿದೆ. ಅಂತಾ ಮಹಾತ್ಮರಲ್ಲಿ ಅಗ್ರಗಣ್ಯರೆನಿಸಿದ ನಾಲ್ಕ್ ಮಹಾರಾಜಾ ಕೃಷ್ಣರಾಜು ಒಡೆಯರ್ ಬಹದೂರವರು. ತಾವು ಪ್ರಭುತ್ವಮಾಡುತಲಿದ್ದಕಾಲದೊಳು ಅನೇಕಪ್ರಕರಣಗಳಲ್ಲಿ ಅನೇಕ ಕಾರ್ಯಗಳಿಂದ ಭೂದಾನ, ಅಗ್ರಹಾರ ದೇವಾಲಯ ಪ್ರತಿಷ್ಠೆಗಳಂ ಮಾಡಿದರು. ಇವುಗಳೆಲ್ಲವು ಅವರ ಪ್ರಭುತ್ವಕಾಲದಲ್ಲಿ ನಿರಬಾಯವಾಗಿ ಭೋಗಿಸಲ್ಪಡುತಲಿದ್ದವಲ್ಲದೆ ಅವರ ಬಾಲ್ಯದಶೆಯಲ್ಲಿ ಅವರ ಪ್ರತ್ಯಾಮ್ನಾಯರಾಗಿ ಪ್ರಭುತ್ವ ಮಾಡುತಲಿದ್ದ ದಿವಾನ್ ಪೂರ್ಣಯ್ಯನವರು ಮಾಡಿದ್ದ ದಾನ ಧರ್ಮಗಳನ್ನು ಸಹ, ತಮಗಾಗಿಮಾಡಿದವೆಂದು ಭಾವಿಸಿ ಗೌರವದೊಡನೆ ಪೋಷಿಸುತಬಂದರು. ಮಹಾರಾಜರವರ ಪ್ರಭುತ್ವತಪ್ಪಿ ಬ್ರಿಟಿಷ್ ಗವರ್ನಮೆಂಟಿನವರ ಆಡಳಿತ ಈ ದೇಶದಲ್ಲಿ ಏರ್ಪಟ್ಟಾಗ ಮಹಾರಾಜರವರು ಮಾಡಿದ ದಾನಧರ್ಮಗಳನ್ನೆಲ್ಲ ಗೌರವಿಸಿ ನಡೆಸುತ ಬರಬೇಕೆಂಬದುಕೂಡ ಒಂದು ನಿಬಂಧನೆಯಾಗಿ ಅಂಗೀಕರಿಸಲ್ಪಟ್ಟಿತು. ಬಹಸ್ಸೂರ್ ಇಂಗ್ಲಿಷ್ ಸರ್ಕಾರದವರು ಈರಾಜ್ಯವನ್ನು ಪ್ರಸ್ತುತ ಮಹಾರಾಜರವರಿಗೆ ಕೊಡುವ ತನಕ ಹಿಂದಿನ ದಾನಧರ್ಮಗಳನ್ನೆಲ್ಲ ನಿರಬಾಯವಾಗಿ ಕಾಪಾಡುತಬಂದು ಇದುವರಿವಿಗೆ ಪ್ರಾರ್ಥಿಕರೂ ತಾವುಸಹ ಮಾಡಿರುವದಾನಗಳನ್ನು ಮುಂದೆಯೂ ಪೋಷಿಸಿ ಗೌರವಿಸಬೇಕೆಂಬದಾಗಿ ಮಹಾರಾಜರೊಡನೆ ಕರಾರ್ ಮಾಡಿಕೊಂಡಿರುತ್ತಾರೆ. ಯಾವತನಕಈಶರಸರತ್ಗಳಿಗೆ ಪ್ರಸ್ತುತಮಹಾರಾಜರವರುಬದ್ಧರಾಗಿ ಅವುಗಳಂ ರಕ್ಷಿಸಿಕೊಳ್ಳುತಲಿರುವರೋ ತಾವಪ್ಪರ್ಯಂತರ ಹಿಂದಿನದಾನ ಧರ್ಮಗಳಿಗೆಯುಸಹಿತೆಯುಂಟು ಮಾಡಲ್ಪಡುವವೆಂಬಭೀತಿಗೆ ಸ್ವಲ್ಪವೂ ಅವಕಾಶವಿರುವದಿಲ್ಲವು. ಕಡೆಗೆ ಇಲ್ಲಿನ ಚೀಫ್‌ಕಮಿಷನರ್‌ಗಳಲ್ಲಿ ಕೂಡ ಒಬ್ಬರು ಒಂದುಸಂದರ್ಭದಲ್ಲಿ ಭೂದಾನ ಮಾಡಿದರೆಂದು ನನ್ನ ಕೇಳ್ವಿಕೆಗೆ ಬಂದಿರುತಿದೆ. ಆದದರಿಂದ ಪ್ರಾರ್ಥಿಕರು ಮಾಡಿದ ದಾನಧರ್ಮಗಳು ಹ್ಯಾಗಾದರೂ ಊರ್ಜಿತವಾಗಿ ನಡೆದು ಬರಬಹುದೆಂದು ನಂಬುತ್ತೇನೆ. ಗತಿಸಿದ ವಿಷಯವು ಕುರಿತು ವಿಚಾರಮಾಡುವದರಿಂದ ಪ್ರಯೋಜನವಿಲ್ಲವಾಗಿ ಮುಂದಿನ ನನ್ನ ಆಶಯ ಸ್ವರೂಪವಂ ತಿಳಿಸುವೆನು. ಶ್ರೀಮನ್ಮಹಾರಾಜಾ ಚಾಮರಾಜೇಂದ್ರ ಒಡೆಯರ್ ಬಹದೂರವರು ಈ ಕರ್ಣಾಟರತ್ನ ಸಿಂಹಾಸನವನ್ನಧಿಷ್ಠಿಸಿ ಈಗ್ಯೆ ಏಳವರುಷಗಳಿಗಿಂತ ಅಧಿಕವಾಗುತಬಂತು. ಈ ಮಧ್ಯಕಾಲದಲ್ಲಿ ಮೈಸೂರು ರಾಜಮನೆತನದ ಶ್ರೇಯೋಭಿವೃದ್ಧಿ ಪ್ರದರ್ಶಕಗಳಾದ ಮತ್ತು ಮಹಾರಾಜರವರ ನಿರತಿಶಯ ಸಂತೋಷಕ್ಕೆ ಕಾರಣಭೂತಗಳಾದ ಅನೇಕ ಶುಭಪರಂಪರೆಗಳು ಜರಿಗಿದವು. ಅಂತಾ ಪ್ರತಿಶುಭವೂ ಸಕಲ ಜನಾನಂದಕರವಾಗಿ ನೆರವೇರಬೇಕೆಂಬ ಸಂಕಲ್ಪವುಳ್ಳದ್ದಾಗಿಯೇಇದ್ದಿತು. ಸವರೀ ಶುಭ ಪರಂಪರಾ ಪ್ರಯುಕ್ತಗಳಾದ ದಕ್ಷಿಣೆ, ಸಂತರ್ಪಣೆ, ಸನ್ಮಾನ ಪ್ರಯುಕ್ತ ಅನೇಕ ಲಕ್ಷರೂಪಾಯಿಗಳು ವ್ಯಯವಾಗದಿರಲಿಲ್ಲವು. ಮಹಾರಾಜರವರ ದಿವ್ಯ ಕಲ್ಯಾಣ ಗುಣಗಳನ್ನೂ, ಮಹೋತ್ಸವ ವೈಭವಗಳನ್ನೂ ಬಗೆಬಗೆಯಾಗಿ ಜನಗಳು ಕೊಂಡಾಡುತ

ಲಿಹಾರಿ. ಮಹಾರಾಜರವರ ಪಟ್ಟಾಭಿಷೇಕವೂ, ಬಳಿಕ ಅವರ ವಿವಾಹ ಮಹೋತ್ಸವವೂ, ಅನಂತರ ಸಂತಾನಾಭಿವೃದ್ಧಿಯೂ, ಒಂದಕ್ಕೊಂದು ಕಡಮೆಯಾದದ್ದೆಂದು ಹೇಳಲಾಗದು. ಸದರೀ ಸಂದರ್ಭಗಳಲ್ಲೆಲ್ಲ ಶಾಂತಿರೂಪವಾದ ದಾನಧರ್ಮಗಳು ಪ್ರಾಯಶಃ ಅನೇಕ ನಡೆದಿರಬಹುದು. ಪರಂತು ಒಂದುಸಂದರ್ಭದಲ್ಲಾದರೂ, ಮಹಾರಾಜರವರು ಒಂದು ಕೊಳಗ ಜವಿನಾನನ್ನು ದಾನರೂಪವಾಗಿ ಒಬ್ಬರಿಗೆ ಕೊಟ್ಟರೆಂಬ ವೃತ್ತಾಂತವು ಇದುವರಿವಿಗೆ ನನ್ನ ಕಿವಿಯಲ್ಲಿ ಬೀಳಲಿಲ್ಲವು. ಕೋಟಿರಾಜ್ಯವನ್ನಾಳುವಂತಾ ಮಹಾರಾಜರಿಗಿದೊಂದು ವಿಶೇಷವಲ್ಲವಾದದ್ದರಿಂದ ಒಂದುವೇಳೆ ಗೂಢವಾಗಿ ಭೂದಾನ ಮಾಡಿಯಿದ್ದು ಅದು ಎಲ್ಲರಿಂದ ಕ್ರಮವಾಗಿ ಪ್ರಶಂಸಿಸಲ್ಪಡುವಂತೆ ಹೊರಪಡದೆ ಇದೆಯೋ, ಅಥವಾ ಇವೆಲ್ಲ ವ್ಯರ್ಥವೆಂಬ ಭಾವನೆ ಅವರ ದಿವ್ಯ ಚಿತ್ತದಲ್ಲಿ ಅಂಕುರಿಸಿ ತಾದೃಶದಾನ ಕೊಡಲ್ಪಡದೇ ಇರುವುದೆಯೋ, ಅಲ್ಲದೆ, ಮಾಡಬೇಕೆಂಬ ಕೋರಿಕೆ ಇದ್ದಾಗ್ಯೂ ಅನ್ಯಕಾರಣ ನಿರ್ಬಂಧನದಿಂ ತಪ್ಪಿದೆಯೋ, ಅಲ್ಲದೆ ಅಂತಾ ದಾನದ ದಾರ್ಢ್ಯದ ವಿಷಯದಲ್ಲಿ ಅವರಿಗನುಮಾನವುಂಟಾಗಿ ಅದೇನಾದರೂ ತಡೆ ಮಾಡಿರುವದೋ, ಅಥವಾ ಅಂತಾ ದಾನಗಳ ವಿಷಯದಲ್ಲಿ ಪೂರ್ವರಾಜರಿಗುಂಟಾಗಿದ್ದ ಮೇರೆಕಂ ತಂತಾ ಅಭಿಪ್ರಾಯಗಳಿಗೇನಾದರೂ ವೈಯರ್ಥ್ಯ ಕಲ್ಪಿಸಲ್ಪಟ್ಟು ತನ್ಮೂಲಕ ಅಭ್ಯಂತರವಾಯಿತೋ ಎಂದು ನನ್ನಮನವು ಪರಿಪರಿ ಸಂಶಯದಿಂ ಬಾಧೆಪಡುತಲಿದೆ. ಮುಖ್ಯವಾಗಿ ಅನ್ಯರೀವಿಷಯದಲ್ಲಿ ಮಹಾರಾಜರವರ ಅನಭಿಮತವನ್ನಾಗಲಿ, ಅವರ ಅಸ್ವಾತಂತ್ರ್ಯವನ್ನಾಗಲಿ ಕಾರಣವೆನ್ನುವ ಹೇಳಿದಾಗ್ಯೂ ಅದು ಯುಕ್ತವೆಂದು ಅಂಗೀಕರಿಸುವಷ್ಟು ನಾನು ಸಾಹಸಿಗನಲ್ಲದಿದ್ದರೂ ಇದಕ್ಕೆ ನಿಜವಾದಕಾರಣವನ್ನು ಮಾತ್ರ ಊಹಿಸಿ ನಿರ್ಧರಿಸುವುಕ್ಕೆ ಬಹಳ ಅಶಕ್ತನಾಗಿದೇನೆ. ಆದದರಿಂದ ಅನ್ಯಸಂಸ್ಥಾನಗಳಲ್ಲೀಗಲೂ ನೆರೆಗೊಂಡು ನಡೆಯುತಲಿರುವ ಆಚಾರವಿಲ್ಲಿ ಮಾತ್ರ ಉಪೇಕ್ಷಿಸಲ್ಪಡಲಿಕ್ಕೆ ಕಾರಣವು ತಿಳಿಯಲಪೇಕ್ಷಿಸುವ,

ಬೆಂಗಳೂರು, } ತಮ್ಮ ವಿಧೇಯನಾದ
೨೨-೬-೮೮. } ಸಂತಪಾತ್ರ.

NEWS LETTERS.

ವೃತ್ತಾಂತಪತ್ರ.

ನೊಣವಿನಕೆರೆ, ತಾ. 18 6 88.

ಈ ಮೈಸೂರು ಸೀಮೆಯ ಶ್ರೀಮನ್ಮಹಾರಾಜ ರಾಜಾಸಾಹೆಬ ಬಹದೂರವರ ದ್ವಿತೀಯಪುತ್ರರಾದ ಯುವರಾಜರವರಿಗೆ ಈ ಸರ್ವಧಾರಿ ಸಂವತ್ಸರ ಜ್ಯೇಷ್ಠಶುದ್ಧ ೭ ಶನಿವಾರವೆಂಬ ೧೬ನೇ ಇಸವಿ ಜೂನ್ ಮಾಹೇಂ೧೬ನೇ ತಾರೀಖಿನ ಶುಭಲಗ್ನದಲ್ಲಿ ನಾಮಕರ್ಣ ಮಹೋತ್ಸವ ಜೆಳದದ್ದಕ್ಕೋಸ್ಕರ ಈ ನೊಣವಿನಕೆರೆ ಗ್ರಾಮದಲ್ಲಿ ಬಿಜಮಾಡಿರುವ ಶ್ರೀ ವೆಂಕಟಾಚಲಪತಿ ದೇವರಾದ ಶ್ರೀಪಟ್ಟರಾಯಸ್ವಾಮಿಯವರಿಗೂ ಶ್ರೀಗೋಪಾಲ ಕೃಷ್ಣಸ್ವಾಮಿಯವರಿಗು ಸಹ ಮೇಲೆ ಕಂಡ ಶುಭದಿನದಲ್ಲಿ ಮಧ್ಯಾಹ್ನ ಪಂಚಾಮೃತಾಭಿಷೇಕವೂ ಆದಿನ ರಾತ್ರಿ ೪ಘಂಟೆಯಲ್ಲಿ ಪ್ರಾರಂಭಿಸಿ ರಾತ್ರಿ ೩ ಘಂಟೆ ವರಿವಿಗೂ ಮಹತಾಪ, ಆಕಾಶಬಾಣ, ಬಿರುಸು ಮುಂತಾದ ಬಾಣಗಳಿಂದಲೂ, ನಾಟ್ಯ ಪದವೇ ಮೊದಲಾದ ತಾಳಮೇಳಗಳಿಂದಲೂ ಕೌಶಲ ವಾದ್ಯಾದಿ ರಚನೆಗಳಿಂದಲೂ, ಮತ್ತು ಸಮಸ್ತವಾದ ಬಿರುದುಗಳಿಂದೊಡಗೂಡಿಕೊಂಡು ಈ ಗ್ರಾಮ ನಿವಾಸಿಗಳು ಇತರ ಗ್ರಾಮದವರು ಸಹ ಸೇರಿ ಶ್ರೀಯವರುಗಳಿಗೆ ಅತ್ಯಾನಂದದಿಂ ಬಹು ಸಂಭ್ರಮವಾಗಿ ಸೇರಿದ್ದ ಪ್ರಜೆಗಳಿಗೆ ನೇತ್ರಾನಂದವೂ ಕರ್ಣಾನಂದವೂ ಉಂಟಾಗುವಂತೆ ಉಭಯದೇವರಿಗೂ ಮಹೋತ್ಸವ ನೆರವೇರಿತು. ಒಡನೆ ಶ್ರೀಯವರುಗಳನ್ನು ದೇವಸ್ಥಾನಕ್ಕೆ ಬಿಜಮಾಡಿಸಿ ಉಪಚಾರಗಳು ನಡೆದು ಮಂಗಳಾರತಿಸೇವೆಯು ಆಗಮಾಡಿ ಅನಂತರ ಶ್ರೀಮನ್ಮಹಾರಾಜರವರಿಗೆ ಕ್ರಮಪ್ರಕಾರ ಆಶೀರ್ವಾದಗಳಂ ಮಾಡಿಸಿ ಬಳಿಕ ತೀರ್ಥಪ್ರಸಾದ ಕಪ್ಪೇ ಮೇರೆ ರಾಜ ಮರ್ಯಾದೆಯು ನಡೆದು ಚಂದನ ಪುಷ್ಪ ತಾಂಬೂಲ ಶರ್ಕರೆ ಮೊದಲಾದ ವಿನಿಯೋಗಾದಿಗಳಿಂದಲೂ ರಮಣೀಯವಾಗಿ ನಡೆದು ಆದಿವಸ ಈ ಮಹೋತ್ಸವ ನೆರವೇರಿತು. ಈರೀತಿ ಬಹಳ ಸಂಭ್ರಮವಾಗಿ ಈ ನೊಣವಿನಕೆರೆಯಲ್ಲಿ ನಡೆದ ಮಹೋತ್ಸವವನ್ನು ತಮ್ಮ ಪತ್ರಿಕಾದ್ವಾರಾ ಪ್ರಕಟಿಸಬೇಕೆಂದು ಕೋರುತ್ತೇನೆ.

ಶಿದ್ಲಘಟ್ಟ, ತಾ. 16—6—88.

ಮಾಹೇಮಜಕೂರ್ ೧೬ನೇ ತಾರೀಖಿನಲ್ಲಿ ಅತಿರಮಣೀಯವಾಗಿ, ಸಾಕ್ಷಾತ್ ಮಹಾರಾಜರವರ ಸಾನ್ನಿಧ್ಯದಲ್ಲಿ ನಡೆಯುವಂದದಿ ನಡೆದ ರಾಜಕೀಯವಾದ ಪರಿಧವಣೆಗಳು, ದೇವತಾಪ್ರಾರ್ಥನೆಗಳು, ರಾಜಾಶೀರ್ವಾದಗಳು, ಬ್ರಾಹ್ಮಣರಭೋಜನಗಳು, ಬ್ರಾಹ್ಮಣೇತರರಲ್ಲಿ ನಡೆದ ಉತ್ಸವಾದಿಗಳು, ಮಹಾರಾಜರವರ ಪುಷ್ಪಪಾಲಕೀ ಉತ್ಸವ, ಈ ಮೊದಲಾದವುಗಳನ್ನು ಈಕೆಳಗೆ ವಿವರಿಸಿಲಾಗಿ ತಿಳಿಸುತ್ತೇನೆ ಹ್ಯಾಗೆಂದರೆ—

೧೫ನೇ ತಾರೀಖಿನಿಂದಲೇ ಈ ಪುರವಾಸಿಗಳೆಲ್ಲ ಅತ್ಯುತ್ಸಾಹದೊಡನೆ ಅವರವರ ಮನೆಗಳ ಬಳಿ ಅಲಂಕಾರ ಮಾಡಲಿಕ್ಕೆ ಪ್ರಾರಂಭಿಸಿ ೧೬ನೇ ತಾರೀಖ್ ಪ್ರಾತಃಕಾಲ ೭ ಘಂಟೆಗೆ ಯಾವ್ಯಾವ ಬೀದಿ ಮನೆಗಳನ್ನು ನೋಡಿದಾಗ್ಯೂ ತೋರಣ ಕದಳೀಸ್ತಂಭ ಪುಷ್ಪಮಾಲಿಕೆಗಳಿಂದ ಅಲಂಕರಿಸಲ್ಪಟ್ಟಿದ್ದವಲ್ಲದೆ ಮನೆಗಳ ಮುಂಭಾಗದಲ್ಲಿಯೂ ಬೀದಿಗಳಲ್ಲಿಯೂ ಚಳೆ ಕೊಟ್ಟು ಚಿತ್ರ ವಿಚಿತ್ರವಾದ ರಂಗೋಲೆಗಳು ಹಾಕಲ್ಪಟ್ಟಿದ್ದವು.

ವಿಶೇಷ ಬ್ರಾಹ್ಮಣರು ಶೇರಲಿಕ್ಕೆ ಅನುಕೂಲವಾಗಿರತಕ್ಕ ದೊಂತಿ ಸುಬ್ರಾಯ ಶೆಟ್ಟರ ಸತ್ರದಲ್ಲಿ ಬ್ರಾಹ್ಮಣರ ಸಮಾರಾಧನೆ, ಆಗತಕ್ಕದ್ದೆಂತ ಪೂರ್ವವೇ ನಿಶ್ಚಯವಾಗಿ ಸತ್ರದ ಮುಂಭಾಗದಲ್ಲಿ ಅತಿ ರಮಣೀಯವಾದ ಚಪ್ರ ಹಾಕಿ ಅದು ಬಹಳ ಚೆನ್ನಾಗಿ ಶೃಂಗರಿಸಲ್ಪಟ್ಟಿತ್ತು.

೧೫ನೇ ತಾರೀಖಿನ ರಾತ್ರಿಯೇ ಶುಭವಾದ್ಯಗಳೊಡನೆ ವಿಶೇಷ ಬ್ರಾಹ್ಮಣರೂ ಮುತ್ತೈದೆಯರು ಸಹ ಪುರೋಹಿತ ಸುವಾಸಿನಿಗಳ ಮೂಲಕ ೧೬ನೇ ತಾರೀಖಿನಲ್ಲಿ ಮಹಾರಾಜಪುತ್ರರ ನಾಮಕರಣೋತ್ಸವದ ಸಂತರ್ಪಣೆಗೆ ಕರೆಯಲ್ಪಟ್ಟರು. ಸಂತರ್ಪಣೆಗಾಗಿ ಮೆಸ್ಟರ್ ರಾಮಚಂದ್ರರಾಯರವರು ತೆಗೆದುಕೊಂಡ ದೇಹಶ್ರಮದಿಂದ ದಿವ ೧೧ ಘಂಟೆಗೇನೇ ಅಡಿಗೆಗಳೆಲ್ಲ ಸಿದ್ಧವಾಗಿದ್ದವು. ಅದಕ್ಕೆ ಪೂರ್ವವೇ ಅಲ್ಲಿ ದಿವ್ಯಸಿಂಹಾಸನದಲ್ಲಿ ಶ್ರೀ ಚಾಮುಂಡೇಶ್ವರಿಯ ಪ್ರತಿಮೆ ಅಲಂಕರಿಸಲ್ಪಟ್ಟಿತ್ತು. ಮೆ|| ರಾಮಚಂದ್ರರಾಯರವರು ಖುದ್ದಾಗಿಯೇ ಆ ಜಗನ್ಮಾತೆಯನ್ನು ವೇದೋಕ್ತ ಮಂತ್ರಗಳಿಂಪೂಜಿಸಿ ಅನುಕರ ಶ್ರೀಲಲಿತ ಸಹಸ್ರನಾಮಾರ್ಚನೆ ನಡೆಯಿತು. ದಿವ ೭ ಘಂಟೆಗೆ ಕಲ್ಯಾಣೋತ್ಸವಕ್ಕೆ ಪ್ರಾರಂಭವಾಗಿತಕಾಲದಲ್ಲಿ ಮಹಾರಾಣಿ ಪುತ್ರ ಪುತ್ರಿಯರ ಸಹಿತ ನಮ್ಮ ಮಹಾಸ್ವಾಮಿಗಳಾದ ಶ್ರೀ ಚಾಮರಾಜ ಒಡೆಯರವರಿಗೆ ಆಯುರಾರೋಗ್ಯೈಶ್ವರ್ಯಾದಿಗಳಂ ವೃದ್ಧಿಮಾಡಬೇಕೆಂತ ಅಶೇಷಬ್ರಾಹ್ಮಣರು ಆಶೀರ್ವದಿಸಿ ಮಂತ್ರಾಕ್ಷತೆಗಳನ್ನ ಭಗವತಿ ಸಮರ್ಪಣೆಮಾಡಿದರು. ಸುವಾಸಿನಿಯರು ಮಂಗಳಾರತಿಯನ್ನ ಮಾಡಿದರು. ಸಮಸ್ತವಾದ್ಯಗಳು ಬಾರಿಸಲ್ಪಟ್ಟವು. ದೇವತಾರಾಧನೆ ಪೂರೈಸಿದಬಳಿಕ ದಿವ ೩ ಘಂಟೆಗೆ ಸುಮಾರು ೫೦೦ ಜನ ಬ್ರಾಹ್ಮಣರಿಗೆ ದಿವ್ಯಭೋಜನವಾಯಿತು. ಭೋಜನದಿಂದ ಸಂತುಷ್ಟರಾಗಿದ್ದ ಬ್ರಾಹ್ಮಣರು ಸುವಾಸಿನಿಯರೆಲ್ಲರೂ ಚಪ್ರದಲ್ಲಿ ೪ಘಂಟೆಗೆ ಜಮಾಯಿಸಿದರು. ಆಗ ಆಭುವನೇಶ್ವರೀಮಧ್ಯದಲ್ಲಿ ಪುಷ್ಪಗಳಿಂದ ಅತಿ ರಮಣೀಯವಾಗಿ ಅಲಂಕರಿಸಲ್ಪಟ್ಟಿದ್ದ ಸಾಕ್ಷಾತ್ ಸಿಂಹಾಸನದೋಪಾದಿಯಲ್ಲಿ ಯಿದ್ದ ಕುರ್ಚಿಮೇಲೆ ಮಹಾರಾಜಶ್ರೀ ಚಾಮರಾಜೇಂದ್ರ ಒಡೆಯರವರ ದಿವ್ಯತಸ್ವೀರೊಂದು ಪ್ರತಿಷ್ಟಿಸಲ್ಪಟ್ಟಿತು. ಭೋಜನಾನಂತರ ತಾಂಬೂಲಪಡಕೊಂಡ ಅಶೇಷ ಬ್ರಾಹ್ಮಣರು ವೇದೋಕ್ತರೀತ್ಯಾ ಮಹಾರಾಜರವರಿಗೆ ಆಶೀರ್ವದಿಸಿದರು. ಇವೆಲ್ಲ ಪೂರೈಸುವಾಗ್ಯೆ ಸಾಯಂಕಾಲ ೫½ ಘಂಟೆ ಆಯಿತು. ಆಸ್ಥಾನಕ್ಕೆ ಮರ್ಯಾದೆಯುಂಟಾಗದಂತೆ ಸಲ್ಪಟ್ಟ ದೊಡ್ಡಮನುಷ್ಯರೂ ತಾವಾಗಿಯೇ ಬಂದ ಜನಗಳು ಸಹ ಶೇರಿ ಸಾಯಂಕಾಲ ೬½ ಘಂಟೆ ಸುಮಾರು ೨೦೦ ಮಂದಿಯವರೆಗೆ ರಾಜಸಭಾಪ್ರವೇಶಕ್ಕೆ ಯೋಗ್ಯವಾದ ಉಡುಪುಗಳೊಂದಿಗೆ ಬಂದು ಅವರವರಿಗೆ ಯೋಗ್ಯವಾದ ಸ್ಥಾನಗಳಲ್ಲಿ ಕುಳಿತುಕೊಂಡರು. ಮಹಾರಾಜರವರ ತಸ್ವೀರಿನಬಳಿ ಹಾಜರಿತ್ತು. ಇದುವರಿವಿಗೆ ನಡೆದ ಉತ್ಸವಾದಿಗಳನ್ನೂ ಅಗ್ರಾಸನದಲ್ಲಿ ಮಹಾರಾಜರ ದಿವ್ಯತಸ್ವೀರಿಗೆ ಸಾಕ್ಷಾತ್ ಮಹಾರಾಜರವರಿಗೆ ನಡಿಯುವದದಿ ನಡಿಯುತ್ತಿದ್ದ ಉಪಚಾರಗಳನ್ನೂ ನೋಡಿ ಆನಂದಾಂಬುಧಿಯಲ್ಲಿ ಮುಳುಗಿ ತೇಲುತಿದ್ದ ಮೆಸ್ಟರ್ ರಾಮಚಂದ್ರರಾಯರವರು ಸಭೆಯಲ್ಲಿ ಯೆದ್ದು ನಿಂತುಕೊಂಡು ಈಕೆಳಗಿನ ತಸ್ವೀರಿನಂತೆ ಶುಭಪತ್ರಿಕೆಯನ್ನ ಓದಿದರು. ಮಹಾಸಂತೋಷದಿಂದ ಮಹಾರಾಜಪುತ್ರರ ನಾಮೋಚ್ಚಾರಣೆಮಾಡುವಕಾಲದಲ್ಲಿ ಕಣ್ಣುಗಳಿಂದ ಪುಷ್ಪಗಳೋಪಾದಿಯಲ್ಲಿ ಆನಂದಭಾಷ್ಪಗಳು ಉದುರುತಿದ್ದವು. ಈಪತ್ರಿಕೆಯ ನ್ನೋದಿದಕಾಲದಲ್ಲಿ ಪುಷ್ಪವೃಷ್ಟಿಯೋಪಾದಿಯಲ್ಲಿ ಅಂತರಿಕ್ಷದಿಂದ ಒಂದೊಂದೇ ಪರ್ಣವು ಬೀಳುತಿತ್ತು.

ದೊಡ್ಡಮನುಷ್ಯರುಗಳಿರಾ ಈ ದಿವಸ ನಡೆದ ಮಹೋತ್ಸವಕ್ಕೆ ಕಾರಣಭೂತವಾದ ಶುಭವೃತ್ತಾಂತವನ್ನ ಪೂರ್ವಪತ್ರಿಕೆಯಲ್ಲಿ ನಾನು ತಿಳಿಸಿದ್ದನಷ್ಟೆ. ಆಪತ್ರಿಕೆಯಲ್ಲಿ ನಾವು ಈದಿವಸದ ಸಂತೋಷಕ್ಕಾಗಿ ಯಾವಯಾವ ಏರ್ಪಾಟುಗಳನ್ನ ಮಾಡಬೇಕೆಂದು ನಿಶ್ಚಯಿಸಿ ಕೊಂಡಿದ್ದೆವೊ ಅವು ಶ್ರೀಭಗವದನುಗ್ರಹದಿಂದ ಬಹು ವಿಜೃಂಭಣೆಯಾಗಿ ನೆರವೇರಿದಬಗ್ಯೆ ನಾನು ಬಹಳ ಸಂತೋಷಿಸುತ್ತೇನೆ. ಈದಿವಸ ಬೆಳಗಿನಿಂದ ಈ ಶಿದ್ಲಘಟ್ಟ ಕಸಬೆಯನ್ನು ನಾನು ನೋಡುವದರಲ್ಲಿ ಸಂತೋಷವೆಂಬ ಒಂದು ನದಿಯೋದದಿಂ ಸರ್ವತ್ರ ಪ್ರವಹಿಸುತಲಿರುವಂತೆ ಕಂಡುಬರುತಲಿದೆಯೇ ಹೊರ್ತು ಅನ್ಯಥಾಯಿಲ್ಲ. ಯಾವಬೀದಿಯಲ್ಲಿಯೂ ಯಾವ ಮನೆಮುಂದೆ ನೋಡಿದಾಗ್ಯೂ ರಾಜಪುತ್ರರ ನಾಮಕರಣ ಶುಭಸಂತೋಷ ಸೂಚಕವಾದ ಕದಳೀಸ್ತಂಭ ತೋರಣಾದ್ಯನೇಕಾಲಂಕಾರಗಳೇ ದೃಷ್ಟಿಯಲ್ಲಿ ಬೀಳುತಲಿವೆ. ದಿವಾನ್ ಸಾಹೇಬ ಬಹದ್ದೂರವರ ಆಜ್ಞಾನುಸಾರ ಸರ್ಕಾರೀ ವಿಚಾರಣೆಗೆ ಒಳಪಟ್ಟ ವಿಶಿಷ್ಟ ಪೂಜಾಸ್ಥಾನಗಳಲ್ಲೂ ಉತ್ಸವಗಳು ಸಾಂಗವಾಗಿ ನಡೆಸಲ್ಪಟ್ಟದ್ದು ಮಾತ್ರವಲ್ಲದೆ ಈ ಸಭೆಯಲ್ಲಿ ಈಗ ಸೇರಿರುವ ವರ್ತಕರೂ ಮತ್ತು ಮುಸಲ್ಮಾನ್ ದೊಡ್ಡಮನುಷ್ಯರೂ ಬಹಳ ಕುತೂಹಲದೊಡನೆ ತಮ್ಮತಮ್ಮ ಸಮುದಾಯಕ್ಕೆ ಸೇರಿದ ಪೂಜಾಸ್ಥಳಗಳಲ್ಲಿ ಬಹಳ ಶ್ಲಾಘ್ಯಕರವಾದ ಉತ್ಸವಗಳನ್ನ ನಡಿಸಿ ಬಡಜನಗಳನ್ನೆಲ್ಲ ಭೋಜನಮೂಲಕ ತೃಪ್ತಿಪಡಿಸಿರುತ್ತಾರೆ. ಸರ್ಕಾರ್ ಉದ್ಯೋಗಸ್ಥರು ಸಂಕಲ್ಪಿಸಿದ್ದ ಪ್ರಕಾರ ಈ ಸ್ಥಳದಲ್ಲಿ ಪ್ರಮುಖರಾದ ವರ್ತಕರಾಗಿಯೂ ದಸರಾ ದರ್ಬಾರ್ ಮೆಂಬರಾಗಿಯೂ ಇರುವ ಮಹಾರಾಜಶ್ರೀ ಸುಬ್ಬರಾಯಶೆಟ್ಟರವರು ಅತ್ಯೌದಾರ್ಯದಿಂದ ಬಹುಜನೋಪಯೋಗಾರ್ಥವಾಗಿ ನಿರ್ಮಿಸಿರುವ ಧರ್ಮಕಟ್ಟಡದಲ್ಲಿ ೫೦೦ ಜನಕ್ಕಿಂತ ಹೆಚ್ಚಾಗಿ ಪ್ರಾಯಶಃ ಈ ಪಟ್ಟಣಸ್ಥರಾದ ಬ್ರಾಹ್ಮಣರಿಗೆಲ್ಲ ಸಂತರ್ಪಣೆ ಮಾಡಿಸಿದರು. ಇತ್ಯಾದ್ಯನೇಕ ಸಂತೋಷಕಾರ್ಯಗಳು ಈದಿನ ನಡೆದಿರುವದು ಮಹಾರಾಜರವರ ಸನ್ನಿಧಿಯಲ್ಲಿ ನಮಗುಂಟಾಗಿರುವ ಮನಃಪೂರ್ವಕವಾದ ಭಕ್ತಿವಿಶ್ವಾಸಕ್ಕೆ ಸಾಕಾದ ನಿದರ್ಶನವಾಗಿರುತ್ತದೆ. ಶ್ರೀಮತ್ ಮಹಾರಾಜರವರ ಸಾಕ್ಷಾತ್ ಸನ್ನಿಧಿಯಲ್ಲಿ ನಾವು ಆಚರಿಸುವಂತೆ ಅನೇಕ ಕಾಸದರೂ ವರ್ತಕರು ಮೊದಲಾದವರುಗಳೂ ಭಕ್ತಿಪೂರ್ವಕವಾಗಿ ಈ ಚಿತ್ರಪಟಕ್ಕೆ ಮುಪ್ರಮಾಡಬೇಕೆಂತಲೂ ವೈದಿಕ ಮಂಡಲಿಯವರು ವೇದೋಕ್ತವಾಗಿಯೂ ಕವಿತಾರೂಪವಾಗಿಯೂ ಪತ್ನೀಪುತ್ರ ಸಮೇತರಾದ ಶ್ರೀ ಮಹಾರಾಜರವರಿಗೂ ನಮ್ಮ ಸಂಸ್ಥಾನಪ್ರತಿಷ್ಠಾಪಕರಾದ ಮಹಾರಾಜ್ಞೀ ಇಂಡಿಯಾಚಕ್ರವರ್ತಿನೀಯವರಿಗೂ ದೀರ್ಘಾಯುರಾರೋಗ್ಯ ಐಶ್ವರ್ಯಾಭಿವೃದ್ಧಿಯಂ ಪ್ರಾರ್ಥಿಸಿ ಆಶೀರ್ವದಿಸಬೇಕೆಂದು ಕೋರುತ್ತೇನೆ, ಎಂಬದು. ಆಗ ಪೋಲೀಸ್ ಇನ್ಸ್ಪೆಕ್ಟರಿಂದ ಕವಾಯಿತ ಹೇಳಲ್ಪಟ್ಟು ಸಮಸ್ತ ಪೋಲೀಸ್ ನೌಕರರು ಇತರನೌಕರರು ಸಹ ಫಯ್ರೀಡಿನ ಮಾಡಿದರು. ಸಮಸ್ತವಾದ್ಯಗಳು ಬಾರಿಸಲ್ಪಟ್ಟವು. ಜಿಕತದಗಳು ಅದುರುವುದದು ಬಾಂದೂಖ್‌ಗಳು ಉಡಾಯಿಸಲ್ಪಟ್ಟವು. ಅನಂತರ ಮೆ|| ರಾಮಚಂದ್ರರಾಯರವರು ಪ್ರಥಮತಃ ಅದಬ್ಬಿನಿಂದಬಂದು ಮಹಾರಾಜರವರ ದಿವ್ಯ ತಸ್ವೀರಿಗೆ ಮುಜ್ರೆಮಾಡಿದರು. ಆಗ ಪೋಲೀಸ್ ಇನ್ಸ್ಪೆಕ್ಟರು ಮಹಾರಾಜರ ಸನ್ನಿಧಾನದಲ್ಲಿ ಅದಬ್ಬಿನಿಂದ ನಿಂತುಕೊಂಡು ಮುಜ್ರೆಮಾಡಿದವರ ಹೆಸರುಗಳನ್ನ ಉಚ್ಚಾಟಿಸುತ್ತಾ "ಮಹಾಸ್ವಾಮಿ ಪರಾಕು" ಎಂತಲೂ, ವಂದನೆಗಾಗಿ ಬರತಕ್ಕವರಿಗೆ ಅದಬನಿಂದ ಬರತಕ್ಕದ್ದಕ್ಕಾಗಿ "ಅದಬನೇ" ಎಂತಲೂ, ಹೇಳುತಿದ್ದರು. ಬಳಿಕ ಸರ್ಕಾರ ಉದ್ಯೋಗಸ್ಥರೆಲ್ಲರು ಬಂದು ಮುಜ್ರೆಮಾಡಿದರು. ಅವರ ತರುವಾಯ ಸ್ವಾಹುಕಾರ್ ದೊಂತಿ ಸುಬ್ರಾಯಶೆಟ್ಟರೂ ಮುನಿರುದ್ರಪ್ಪನವರೇ ಮೊದಲಾದ ದೊಡ್ಡಮನುಷ್ಯರೆಲ್ಲರು ಕ್ರಮವಾಗಿ ಅದಬನಿಂದ ಬಂದು ಮುಜರೆ ಮಾಡಿದರು. ಬಳಿಕ ಸಂಸ್ಕೃತ ಪಾಠಶಾಲಾ ಮಾಸ್ಟರ್ ಪಂಡಿತ ಕೃಷ್ಣಶಾಸ್ತ್ರಿಗಳವರು ರಾಜಸಮುಖದಲ್ಲಿ ಬಂದು ನಿಂತುಕೊಂಡು ಆಗಲೇ ತಮ್ಮಿಂದ ರಚಿಸಲ್ಪಟ್ಟ ಈ ಕೆಳಗಿನ ಶ್ಲೋಕಗಳನ್ನು ಓದಿದರು.

ಶ್ಲೋಕ|| ಜಯತುಜಯತುಚಾಮಕ್ಷಿತ್ಯಧೀಶಾಗ್ರಗಣ್ಯ| ಜಯತುಜಯತುಶಕ್ಷಾಪ್ರೀತನೀತಿಪ್ರಸಂಗಃ|| ಜಯತುಜಯತುನಿತ್ಯಸ್ಸಂತತಿಸ್ತತ್ಪ್ರಭೋಸ್ಯಾ| ಜಯತುಜಯತುಲಕ್ಷ್ಮೀರ್ನಾಯಕಸ್ಯಪ್ರಸಾದಃ||

ಸದಸಚಿವಸುತಸ್ತ್ರೀಬಂಧುಮಿತ್ರಾಯುರಾಜ್ಞ್ಯೈ| ಸಪಗಜತುರಗಶ್ರೀರಾಜ್ಯಕೋಶಾಧಿಕಾಯುಃ| ನಿತರತುಕೃಪಯಾಶ್ರೀಚಾಮಭೂಪಾಲಕಾಯ| ಪ್ರಣತಸುರವರೇಣ್ಯಸ್ವಸ್ತಿಚಾಮುಂಡಿಕಾಂಬಾ||

ಯತೋಪ್ರೀತ್ಯಾಪಾಮತ್ಸಮಸತ್ಸಮುಹಃ| ಕೃತ್ವಾಧರಮ್ಯಂತೋಷಮಾಮಾಸಸರ್ವಾನ್||ತಸ್ಯಶ್ರೀಮದ್ರಾಮಚಂದ್ರಾಧಿಪಸ್ಯ| ಸ್ಯಮನಸ್ವತೋತ್ಸವಸಂತತಂಸ್ಯಾತ್||

ಈ ಸಂಸ್ಕೃತ ಕವಿತವನ್ನು ಕೃಷ್ಣಶಾಸ್ತ್ರಿಗಳು ಓದಿದನಂತರ ಶ್ರೀಮನ್ಮಹಾರಾಜರಲ್ಲಿ ರಾಜಭಕ್ತಿಯುಕ್ತ ಈತಾಲ್ಲೂಕ ಗಂಜಿಗುಂಟೆ ಸ್ಥಳ ನಿವಾಸಿಗಳಾದ ಆಂಧ್ರ ಕವಿತಾಪ್ರವೀಣರಾದ ಕವೀಶ್ವರ ವೆಂಕಟಪ್ರಮಶಾಸ್ತ್ರಿಗಳು ಪತ್ನೀಪುತ್ರ ಪುತ್ರೀಸಮೇತರಾದ ಮಹಾರಾಜರವರಿಗೆ ಆಶೀರ್ವಾದರೂಪವಾಗಿ ಎರಡು ಆಂಧ್ರ ಸೀಸಪದ್ಯಗಳನ್ನು ಓದಿ ಒಂದುಕೀರ್ತನೆಯನ್ನು ಮನೋಹರವಾಗಿ ಗಾನಮಾಡಿದರು. ಅದು ಓದಿ ಮುಗಿದಕೂಡಲೆ ಅಲ್ಲಿದ್ದ ಜನಗಳೆಲ್ಲ ಜಯ ಶಬ್ದವನ್ನು ಮಾಡಿದರು. ಆಗ್ಯೆ ರಾತ್ರಿ ಒಂಭತ್ತು ಘಂಟೆ ಸಮಯವಾಯಿತು. ಆಗ ಪುಷ್ಪಗಳಿಂದಲಂಕೃತವಾದ ಪಾಲಕ್ಕಿಯು ಸಿದ್ಧವಾಗಲು, ಅದರಲ್ಲಿ ಮಹಾರಾಜರವರ ದಿವ್ಯ ತಸ್ವೀರನ್ನಿಯಿಟ್ಟು ಊರಲ್ಲೆಲ್ಲ ಮೆರವಣಿಗೆ ನಡೆಯಿತು. ಉತ್ಸವದ ಮುಂಭಾಗದಲ್ಲಿ ಮೆಸ್ಟರ್ ರಾಮಚಂದ್ರರಾಯರವರು ಅಮಲ್ದಾರ್ ಮೆಸ್ಟರ್ ಗುಂಡಪ್ಪನವರ ಸಹಿತ ಹೊರಟರು. ಉಭಯಪಾರ್ಶ್ವಗಳಲ್ಲಿಯೂ ಪೋಲೀಸ್ ನೌಕರರು ಸಮಸ್ತ ಆಯುಧಗಳಸಹಿತ ಹೊರಟರು. ರೆವಿನ್ಯೂ ನೌಕರರೆಲ್ಲ ಉತ್ಸವದ ಹಿಂಭಾಗದಲ್ಲಿದ್ದರು. ಆಕಾಲದಲ್ಲಿ ರಾಜಸೇವಾಜನಗಳಿಂದಲೂ ಉತ್ಸವನೋಡಲಿಕ್ಕೆ ಬಂದಿದ್ದ ಜನಗಳಿಂದಲು ಸಹ ರಾಜಬೀದಿಗಳು ತುಂಬಿ ನಿಬಿಡೀಕೃತವಾಗಿದ್ದವು. ಅನಂತರ ಈ ನಗರದಲ್ಲಿರತಕ್ಕ ಸಮಸ್ತ ದೇವರುಗಳಿಗೂ ರಾತ್ರಿ ಮೆರವಣಿಗೆಯ ಉತ್ಸವಗಳಾಗಿ ದೇವರುಗಳೆಲ್ಲ ದೇವಸ್ಥಾನಕ್ಕೆ ಚಿತ್ತೈಸಿದನಂತರ ಪುನಃ ಮಂಗಳಾರತಿಗಳೂ ರಾಜಾಶೀರ್ವಾದಗಳೂ ಮಾಡಲ್ಪಟ್ಟು ಉತ್ಸವಸಮಾಪ್ತಿಯಾಯಿತು.

BANGALORE :—Printed and published at the KARNATIC PRESS, No. 14, Hospital Road, Petta.

ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA.

ಪ್ರತಿ ಸೋಮವಾರ ಪ್ರಾತಃಕಾಲದಲ್ಲಿ ಪ್ರಕಟಿಸಲ್ಪಡುವದು.

Published every Monday Morning.

Vol. XV.] BANGALORE:—MONDAY, JULY 2, 1888. [No. 26.

ಸಂಪುಟ ೧೫.] ಬೆಂಗಳೂರು:—ಸ ೧೮೮೮ನೇ ಇಸವಿ ಜುಲೈ ೨ನೇ ತಾರೀಖು ಸೋಮವಾರ. [ಸಂಖ್ಯೆ ೨೬.

ಕರ್ಣಾಟಕ ಪ್ರಕಾಶಿಕಾ

ಪತ್ರಿಕೆಯ ಚಂದಾ ದರಗಳು,
೧೮೮೮ನೇ ಇಸವಿ ಜನವರಿ ಒಂದನೇ ತಾರೀಖು ಮೊದಲುಗೊಂಡು
ಕಡಮೆಮಾಡಲ್ಪಟ್ಟಿರುತ್ತದೆ.

ಈ ಪತ್ರಿಕೆಯ ಚಂದಾದಾರರಲ್ಲಿ ಅನೇಕರ ಅಪೇಕ್ಷೆಯನ್ನು ನೆರವೇರಿಸುವ ಉದ್ದೇಶದಿಂದಲೂ, ಪರಿಮಿತವಾದ ಆದಾಯವುಳ್ಳವರಿಗೆಲ್ಲ ಈ ಪತ್ರಿಕೆಯು ಸುಲಭವಾಗಿ ಲಭಿಸುವಂತಿರಬೇಕೆಂಬ ಅಭಿಪ್ರಾಯದಿಂದಲೂ ಇದರ ಚಂದಾದರವನ್ನು ಇವರಡಿಕಂಡಂತೆ ಕಡಮೆ ಮಾಡಿರುತ್ತೇವೆ ಎಂದರೆ:—

ಇಂಗ್ಲಿಷ್ ಮತ್ತು ಕನ್ನಡ ಭಾಗಗಳಿಗೆ.

	ಸ್ಥಳದವರಿಗೆ	ಪರಸ್ಥಳದವರಿಗೆ
12 ತಿಂಗಳಿಗೆ	8—0—0	9—0—0
6 ,,	4—0—0	4—8—0
3 ,,	2—8—0	2—8—0

ಇಂಗ್ಲಿಷ್ ಅಥವಾ ಕನ್ನಡ ಭಾಗಗಳಿಗೆ.

	ಸ್ಥಳದವರಿಗೆ	ಪರಸ್ಥಳದವರಿಗೆ
12 ತಿಂಗಳಿಗೆ	4—0—0	5—0—0
6 ,,	2—0—0	2—8—0
3 ,,	1—4—0	1—8—0

ಷರಾ—ಇಂಥ ಮುಪ್ಪಾನಿಗಳು, ಜೋಯಿಸ ಮತ್ತು ಶಾಸ್ತ್ರಿಗಳ್ ಸ್ಕೂಲ್ ಮಾಸ್ಟರುಗಳು, ಶ್ಯಾನುಭೋಗರು, ಪಟೇಲರು, ವಿದ್ಯಾರ್ಥಿಗಳು, ಇವರಿಗೆಲ್ಲ ಈ ಪತ್ರಿಕೆಯು ಕಡಿಮೆ ಚಂದಾದರಕ್ಕೆ ಕೊಡಲ್ಪಡುವದು. ಅಡ್ವರ್ಟೈಸ್‌ಮೆಂಟುಗಳಿಗೆ ಬಾಬತ ದರವನ್ನು ನಮಗೆ ಬರೆದು ತಿಳಿದುಕೊಳ್ಳಬಹುದು. ಬೆಂಗಳೂರಿನವರು ಇಂಗ್ಲಿಷ್ ಭಾಗವನ್ನಾಗಲಿ ಕನ್ನಡ ಭಾಗವನ್ನಾಗಲಿ ಅಥವಾ ಎರಡನ್ನಾಗಲಿ ತೆಗೆದುಕೊಳ್ಳಬಹುದು. ಚಂದಾಹಣವನ್ನು ಮುಂಗಡವಾಗಿಯೇ ಕೊಡತಕ್ಕದ್ದು. ಮುದ್ರೆ ಸ್ಟಾಂಪುಗಳಂತೆ ಕಳುಹಿಸಿದರೂ ಚಂದಾ ಹಣವೆಂದು ಅಂಗೀಕರಿಸಲ್ಪಡುವದು.

ಸೋಮವಾರ ದಿನಾ ಪತ್ರಿಕೆಯು ಪೋಸ್ಟಿನಲ್ಲಿ ತಲುಪದಿದ್ದರೆ ಕೂಡಲೇ ತಿಳಿಸಬೇಕು. ಅರ್ಧ ಸೇರಿಸದ ಕಾಗದಗಳಿಗೆ ಉತ್ತರ ಕೊಡಲ್ಪಡುವದಿಲ್ಲ. ಲೇಖನಗಳು ಕಳುಹಿಸತಕ್ಕವರು ಕಾಗದದ ಒಂದೇ ಕಡೆ ಬರೆಯತಕ್ಕದ್ದು. ಅನಾಮಧೇಯ ಕಾಗದಗಳು ಪ್ರಕಟಿಸಲ್ಪಡುವದಿಲ್ಲ. ಅಡ್ರೆಸ್ ಬದಲಾಯಿಸಿದವರು ಕೂಡಲೆ ತಿಳಿಸಬೇಕು.

ಪ್ರಕಟನೆಯ ರಿವಾಜ್.

ಮೊದಲನೇಸಾರಿಗೆ ಪಂಕ್ತಿ ಒಂದಕ್ಕೆ ೦—೨—೦

ಎರಡನೇಸಾರಿಗೆ ಪಂಕ್ತಿ ಒಂದಕ್ಕೆ ೦—೧—೦

ಷರಾ—ಎರಡನೇಸಾರಿಗಿಂತ ಜಾಸ್ತಿಯಾಗಿ ಎಷ್ಟು ಸಾರಿ ಪ್ರಕಟಿಸಬೇಕೆಂಬುದನ್ನು ಮೊದಲೇ ತಿಳಿಸಿದರೆ ಕಡಮೆ ಮಾಡಲ್ಪಡುವದು. ಈ ಪತ್ರಿಕೆಯಲ್ಲಿ ಪ್ರಕಟಿಸಲಪೇಕ್ಷಿಸುವವರು ಅದನ್ನು ಇಂಗ್ಲಿಷ್ ಅಥವಾ ಕನ್ನಡದಲ್ಲಿ ಬರೆದು ಕಳುಹಿಸತಕ್ಕದ್ದು. ಇಲ್ಲದಿದ್ದರೆ ಅವರು ನಮಗೆ ತಿಳಿಸಿದಂತೆ ಬರೆಯುವದಕ್ಕೆ ಆಗಲೇ ಪ್ರಕಟಿಸುವುದು ಬಿಟ್ಟು ಜಾಗ ಎಷ್ಟು ಬೇಕೋ ಅಷ್ಟಕ್ಕೆ ಪ್ರಕಟಿಸಲ್ಪಡುವದು. ಪ್ರಕಟನೆಯ ಮೊಬಲಗನ್ನು ಮುಂಗಡವಾಗಿ ಕೊಡತಕ್ಕದ್ದು. ಪ್ರಕಟನೆಗಳನ್ನು ಮೊದಲೇ ಕಳುಹಿಸತಕ್ಕದ್ದು. ಕಾಗದಗಳನ್ನು ಮತ್ತು ಚಂದಾಹಣವನ್ನು ಎಡಿಟರಿಗೆ ಕಳುಹಿಸತಕ್ಕದ್ದು. ಪ್ರಕಟನೆಗಳು ಈ ಪತ್ರಿಕೆಗೆ ಕಳುಹಿಸಿದ್ದು ಅವುಗಳು ಬೇರೆ ಪತ್ರಿಕೆಗಳಲ್ಲಿ ಪ್ರಕಟವಾಗಿದ್ದರೆ ಅವುಗಳು ಪ್ರಕಟಿಸಲ್ಪಡುವದಿಲ್ಲ. ಕ್ರಮವಾಗಿ ಎಡಿಟರಿಗೆ ಬರೆದು ಚಂದಾಹಣವನ್ನು ಕಳುಹಿಸದಿರುವ ಸಿಬ್ಬಂದಿಯವರ ಹೆಸರುಗಳು ಪ್ರಕಟಿಸಲ್ಪಡುವವು.

"IT RECOMENDS ITSELF"

ALL WHO SUFFER FIND SURE RELIEF.

LITTLE'S

ORIENTAL BALM

THE MOST EFFECTUAL MODERN REMEDY FOR PAIN.

ಲಿಟಲ್ ಎಂಬುವರಿಂದ ತಯಾರುಮಾಡಲ್ಪಟ್ಟ "ಓರಿಯಂಟಲ್ ಬಾಮ್" ಎಂಬ ಔಷಧವು ಸಂಬಂಧವಾದ ಅನೇಕ ರೋಗಗಳಿಗೆ ಶೀಘ್ರವಾಗಿ ಗುಣಮಾಡುವ ನವೀನ ಪ್ರಶಸ್ತವಾದ ಔಷಧವು. ಇದರಿಂದ ಕರುಳು ವಾತರೋಗಗಳು, ವಾತಸಂಬಂಧವಾದ ನೋವುಗಳು ನಿವೃತ್ತಿಯಾಗುವವು. ಮುಖ್ಯವಾಗಿ ಶರೀರದ ವಾತರೋಗಗಳು, ಕಾಸ, ಗಂಟಲುನೋವು, ತಲೆನೋವು, ಹಲ್ಲುನೋವು, ಬೆನ್ನುನೋವು, ಕಿವಿನೋವು, ಉಳುಕು, ತರಚು ಗಾಯ, ಮುಂತಾದ ರೋಗಗಳೆಲ್ಲ ನಿಶ್ಶೇಷವಾಗಿ ಬಹಳ ಪ್ರಯೋಜನವನ್ನುಂಟುಮಾಡತಕ್ಕದ್ದು. ಈ ತೈಲವನ್ನು ನೋವಿರುವ ಸ್ಥಳಗಳಲ್ಲಿ ಸವರಿದರೆ ಶೀಘ್ರವಾಗಿ ನೋವು ತಗ್ಗುವುದು. ಗಂಟಲು ನೋವಿಗೆ ಇದು ಉತ್ತಮ ತೈಲವಾಗಿರುವುದು. ಗಂಟಲು ಹುಣ್ಣು ಮುಂತಾದವುಗಳಿಗೆ ಈ ತೈಲವು ಅದ್ಭುತವಾಗಿ ಗುಣಮಾಡುವದು. ಅದ್ಭುತವಾದ ಈ ಔಷಧವನ್ನು ಸರ್ವರೂ ಉಪಯೋಗಿಸಬಹುದು. ಈ ತೈಲವು ಶೀತಗಾಳಿ ಮುಂತಾದವುಗಳಿಂದ ಸಂಭವಿಸುವ ಎಲ್ಲಾ ರೋಗಗಳಿಗೂ ಪ್ರಯೋಜನಕಾರಿಯಾಗಿರುವುದು, ಮುಂತಾದವರಿಗೆಲ್ಲ ಅಮೂಲ್ಯವಾದದ್ದು.

ಪರಿಶೀಲಕರ ಅಭಿಪ್ರಾಯವು.

ಏರ್ಲ್ಯಾಂಡ್ ದೇಶದ ಫಾರ್ಮಸ್ಯೂಟಿಕಲ್ ಸೊಸೈಟಿಯವರ ಸಭೆಯಲ್ಲಿ ಪರೀಕ್ಷಕರಾಗಿಯೂ, ಮತ್ತು ಲಂಡನ್ ನಗರದ ಕೆಮಿಕಲ್ ಸೊಸೈಟಿ ಎಂಬ ವಿದ್ವತ್ಸಭೆಯ ಸಭಾಸದರಾಗಿಯೂ, ರಾಯಲ್ ಕಾಲೇಜ್ ಆಫ್ ಸರ್ಜನ್ಸ್ ಎಂಬ ವಿದ್ಯಾಸಂಸ್ಥೆಯಲ್ಲಿ ಅಧ್ಯಾಪಕರಾಗಿಯೂ ಇರುವ ಪ್ರೊಫೆಸರ್ ಟಿಚ್‌ಬೋರ್ನ್ (C. R. Tichborne, L. L. D., F. C. S., M. R. I. A.) ಎಂಬುವರು ಅಭಿಪ್ರಾಯ ಪಟ್ಟಿರುವ ರೀತಿ—ಲಿಟಲ್‌ರವರ ಓರಿಯಂಟಲ್ ತೈಲವನ್ನು ಪರೀಕ್ಷಿಸಿ ನೋಡಿ ಇದು ಬಹಳ ಉಪಯೋಗಕರವಾದ ತೈಲವೆಂದು ಕಂಡುಬಂದಿರುತ್ತದೆ. ಇದು ವಾತರೋಗಗಳಿಗೆ ಅತ್ಯುತ್ತಮವಾದ ಔಷಧವೆಂದು ನಿರ್ಧರಿಸಿರುತ್ತೇವೆ. ಈ ಔಷಧದ ಉಪಯೋಗವನ್ನು ಸ್ಪಷ್ಟವಾಗಿ ತಿಳಿಯಬೇಕಾದವರು ಇದರ ಪ್ರಯೋಜನವನ್ನು ಅನುಭವಿಸಿ ನೋಡಬಹುದು. ಈ ತೈಲವು ಸಂಬಂಧವಾದ ರೋಗಗಳಿಗೆ ತಕ್ಷಣ ಗುಣವನ್ನುಂಟುಮಾಡುತ್ತದೆ.

ಇದರ ಕ್ರಯ—ಸೀಸೆ ಒಂದಕ್ಕೆ ೧ ರೂಪಾಯಿ.

ಇದು ಬೆಂಗಳೂರಿನಲ್ಲಿ, ಮದ್ರಾಸ್ ಸಂಬಾಡೋಸ್ ಬೀದಿಯಲ್ಲಿ, ೨೦ನೇ ನಂಬರ್ ಮನೆಯಲ್ಲಿರುವ ಎ. ಸಿ. ಬಿರ್ಕ್ಮನ್ ಮುಂತಾದವರಲ್ಲಿಯೂ, ಈ ಕೆಳಗೆ ಬರೆದಿರುವ ಏಜಂಟರುಗಳ ಬಳಿಯಲ್ಲಿಯೂ ದೊರೆಯುವದು.

AGENTS.— Messrs, J. West, Chemist, &c., Bangalore.
Captain & Co. Chemists, Bangalore.
Riggs & Co., Chemists, Bangalore; and of
Mahomed Yousuff and Sons, The Cash Bazar, Bangalore.
A. C. Birkman & Co.,
20 Sambodoss Street Madras.

ನೋಟೀಸ್.

ನೌಕರಿ.

ಮೈಸೂರು ದೇಶದಲ್ಲಿನ ೧೮೮೦ ಡಿಸ್ಟ್ರಿಕ್ಟಿನಲ್ಲಿ ಸೇರಿರುವ ಕೋಲಾರ್ ಗೋಲ್ಡ್ ಫೀಲ್ಡ್ಸ್ ಮೈನಿಂಗ್ ಬೋರ್ಡು ಎಂಬ ಚಿನ್ನದ ಗಣಿಗಳ ಸಂಘದ ಆಡಳಿತಾಧಿಕಾರಿಯವರು, ಮಾಹೆಯಾನಾ ಒಂದು ಸಾವಿರದಿಂದ ಹದಿನೈದುಸಾವಿರ ವರೆಗಳವರೆಗೆ, ದರಖಾಸ್ತುದಾರರಿಗೆ ಇಷ್ಟವಿದ್ದಂತೆ, ನೌಕರಿ ಕರುಣಿಸುವದಕ್ಕೆ ಒಂದಕ್ಕೆ ದರಖಾಸ್ತುಗಳನ್ನು ಸನ ೧೮೮೮ನೇ ಇಸವಿ ಜುಲೈ ೧೫ನೇ ತಾರೀಖು ವರೆಗೆ ಬರಮಾಡಿಕೊಳ್ಳುವರು.

೧. ನೌಕರಿಯು ಒಳ್ಳೆಯದಾಗಿಯೂ ಹುಷಾರಾಗಿಯೂ, ೫|| ಅಡಿಗಳ ಎತ್ತರವೂ ಅದಕ್ಕೆ ತಕ್ಕಷ್ಟು ಎದೆಗಳ ಕವಚ ಇಲ್ಲದೆಯೂ ೧೦ ಅಂಗುಲಕ್ಕೆ ಜಾಸ್ತಿ ಇಲ್ಲದೆಯೂ ಇರಬೇಕು.

೨. ಯಾವ ತರಹೇ ನೌಕರಿ ನಡೆಯಿಸಲ್ಪಡುವದೋ ಅದನ್ನು ದರಖಾಸ್ತಿನಲ್ಲಿ ನಮೂದಿಸಬೇಕು.

೩. ನೌಕರಿಯನ್ನು ಕೋಲಾರ್ ರೋಡ್ ಸ್ಟೇಷನಲ್ಲಾದರೂ ಗಣಿಗಳ ಬಳಿಯಲ್ಲಾದರೂ ದರಖಾಸ್ತುದಾರರಿಗೆ ಇಷ್ಟವಿದ್ದಂತೆ ಒಪ್ಪಿಸಬಹುದು.

೪. ಸನ ೧೮೮೮ನೇ ಆಗಸ್ಟ್ ೧೫ನೇ ತಾರೀಖಿನಲ್ಲಿ ನೌಕರಿ ಸರಬರಾಯಿ ಪ್ರಾರಂಭ ಮಾಡಬೇಕು.

೫. ಪ್ರತಿ ಒಂದು ದರಖಾಸ್ತಿನ ಸಂಗಡಲೂ, ಕರೆನ್ಸಿ ನೋಟುಗಳ ಮೂಲಕ, ೫೦೦ ರೂಪಾಯಿಗಳ ಡಿಪಾಜಿಟ್ ಕೊಡತಕ್ಕದ್ದು; ಇಲ್ಲದಿದ್ದರೆ ದರಖಾಸ್ತು ತಳ್ಳಿಹಾಕಲ್ಪಡುವದು.

೬. ಯಾರ ದರಖಾಸ್ತು ಮಂಜೂರಾಗಲ್ಪಡುವದೋ ಅಂತವರು ಕರಾರುಮಾಡಿಕೊಳ್ಳಬೇಕು. ಅವರ ಡಿಪಾಜಿಟ್ ಹಣವು ಮಾಹೆಯಾನ ಸರಬರಾಯಿ ಮಾಡುವ ನೌಕರಿ ಬರುವ ಕ್ರಯಕ್ಕೆ ಸರಿಹೋಗುವವರೆಗೆ ಡಿಪಾಜಿಟ್ ಇಡಬೇಕು.

೭. ಬೋರ್ಡಿನವರು ಈ ದರಖಾಸ್ತುಗಳನ್ನಾಗಲಿ, ಯಾವ ದರಖಾಸ್ತನ್ನೇ ಆಗಲಿ, ಅಂಗೀಕರಿಸುವದಕ್ಕೆ ಬದ್ಧರಾಗಿರುವದಿಲ್ಲ.

೮. ಯಾವ ದರಖಾಸ್ತುಗಳಾಗಲಿ ಅಂಗೀಕರಿಸಿದಮೇಲೆ, ತಳ್ಳಿಹಾಕಲ್ಪಟ್ಟ ದರಖಾಸ್ತುಗಳ ಡಿಪಾಜಿಟ್ ಹಣವು ಆಯಾ ದರಖಾಸ್ತುದಾರರಿಗೆ ವಾಪಸ್ ಮಾಡಲ್ಪಡುವದು.

ಕೋಲಾರ ಗೋಲ್ಡ್ ಫೀಲ್ಡ್ಸ್ ಮೈನಿಂಗ್ ಬೋರ್ಡ್,
೨ನೇ ಜುಲೈ ೧೮೮೮ನೇ ಇಸವಿ.

F. W. GREY,
Honorary Secretary,
Kolar Gold Field's Mining Board.

NOTICE.

VAIDYASARA SANGRAHA

A TREATISE ON THE PRINCIPLES OF

HINDU MEDICINE.

Price including Postage Rs. 5 6—0

ವೈದ್ಯಸಾರ ಸಂಗ್ರಹ.

ಈಗ್ರಂಥ ಅಪೇಕ್ಷೆಯುಳ್ಳವರು ಮೊಬಲಗಿನೊಡನೆ ಈ ಕೆಳಗೆ ಬರೆದಿರುವವರ ಹೆಸರಿಗೆ ಬರೆದುಕೊಂಡರೆ ಪುಸ್ತಕ ಕೂಡಲೇ ಕಳುಹಿಸಲ್ಪಡುವದು. ಮೊಬಲಗು ಇಲ್ಲದ ದರಖಾಸ್ತುಗಳಿಗೆ ಉತ್ತರ ಕೊಡಲ್ಪಡುವದಿಲ್ಲ.

ಇದರ ಕ್ರಯ ... ...ರೂ|| ೬—೦—೦
ಪ್ಯಾಕಿಂಗ್ ಮತ್ತು ಅಂಚೆ ಕೂಲಿ, ೦—೬—೦

ಬಿ. ಬಿ. ವೆಂಕಟಾಚಾರ್,
ಆಸ್ಪತ್ರೆರೋಡ್ ಬೆಂಗಳೂರು.

ವಿಶೇಷ ವರ್ತಮಾನ



ಕೃಪೆ ಚಿತ್ರಶಾಲೆಯಲ್ಲಿ ತಯಾರಿಸಲ್ಪಟ್ಟಿರುವ ಈ ಚಿತ್ರವು ಲಕ್ಷ್ಮೀ ವೆಂಕಟೇಶ್ವರ ಮುಂತಾದ ದೇವತೆಗಳ ಚಿತ್ರಗಳಿಂದ ಕೂಡಿ ಸುಂದರವಾಗಿರುವದು. ಇವು ಪತ್ರಿಕೆಯ ಚಂದಾದಾರರುಗಳಿಗೆ ಕಡಿಮೆ ಕ್ರಯಕ್ಕೆ ಕೊಡಲ್ಪಡುವವು. ಬೇಕಾದವರು ಈ ವಿಳಾಸಕ್ಕೆ ಬರೆದು ತರಿಸಿಕೊಳ್ಳಬಹುದು.

ಪೂನಾ ಚಿತ್ರಶಾಲಾ ಪ್ರೆಸ್.

ನೋಟೀಸ್.

ರವಾನೆ ಗುತ್ತಿಗೆ.

ಕೋಲಾರ ಗೋಲ್ಡ್ ಫೀಲ್ಡ್ಸ್ ಮೈನಿಂಗ್ ಬೋರ್ಡಿನ ಆಡಳಿತಾಧಿಕಾರಿಯವರು, ಕೋಲಾರ ರೋಡ್ ಸ್ಟೇಷನಿನಿಂದ ಗಣಿಗಳ ಬಳಿಗೆ, ಮಾಹೆಯಾನಾ ಬಂದುಹೋಗುವ ಸಾಮಾನುಗಳನ್ನು ರವಾನೆ ಮಾಡುವ ಗುತ್ತಿಗೆ ಕೊಡುವದಕ್ಕೆ ದರಖಾಸ್ತುಗಳನ್ನು, ಸನ ೧೮೮೮ನೇ ಜುಲೈ ೧೫ನೇ ತಾರೀಖಿನವರೆಗೆ ಬರಮಾಡಿಕೊಳ್ಳುವರು.

೧. ಗುತ್ತಿಗೆ ಸರಕಾರಿ ರೈಲ್ವೆ ಸ್ಟೇಷನಿನಿಂದ ಆರಂಭವಾಗಿ ಗಣಿಗಳವರೆಗೆ ಇರತಕ್ಕದ್ದು.

೨. ಸನ ೧೮೮೮ನೇ ಇಸವಿ ಆಗಸ್ಟ್ ೧ನೇ ತಾರೀಖಿನಿಂದ ಗುತ್ತಿಗೆ ಪ್ರಾರಂಭವಾಗುವದು.

೩. ಪ್ರತಿ ಒಂದು ದರಖಾಸ್ತಿನ ಸಂಗಡಲೂ ಕರೆನ್ಸಿ ನೋಟುಗಳ ಮೂಲಕ ಡಿಪಾಜಿಟ್ ಕೊಡತಕ್ಕದ್ದು, ಇಲ್ಲವಾದರೆ ದರಖಾಸ್ತು ತಳ್ಳಿಹಾಕಲ್ಪಡುವದು.

೪. ಬೋರ್ಡಿನವರು ಕಡಿಮೆ ದರಖಾಸ್ತನ್ನಾಗಲಿ, ಯಾವ ದರಖಾಸ್ತನ್ನಾಗಲಿ ಅಂಗೀಕರಿಸುವದಕ್ಕೆ ಬದ್ಧರಾಗಿರುವದಿಲ್ಲ.

೬. ಯಾವನ ದರಖಾಸ್ತು ಮಂಜೂರ್ಮಾಡಲ್ಪಡುವದೊ ಅಂತವನು ಕರಾರ್ಮಾಡಿಕೊಂಡು ಅದರಂತೆ ನಡೆಯುವದಕ್ಕೆ ಖಾತರಿಗೋಸ್ಕರ ಬೋರ್ಡಿನವರಲ್ಲಿ ಅಯಿದುನೂರು ರೂಪಾಯಿಗಳು ಡೇವಣಿ ಇಡಬೇಕು.

೭. ಯಾವನಾದರು ಒಂದು ದರಖಾಸ್ತು ಅಂಗೀಕರಿಸಲ್ಪಟ್ಟಮೇಲೆ ತಳ್ಳಿಹಾಕಲ್ಪಟ್ಟ ದರಖಾಸ್ತುಗಳಸಂಗಡ ಡಿಪಾಜಿಟ್ಮಾಡಲ್ಪಟ್ಟ ಡೇವಣೀ ರೂಪಾಯಿಗಳು ವಾಪಸ್ ಕೊಡಲ್ಪಡುವವು.

ಕೋಲಾರ ಗೋಲ್ಡ್ ಫೀಲ್ಡ್ ಬೋರ್ಡ್,
೨೯ನೇ ಜೂನ್ ೧೮೮೮.

F. W. GREY,
Honorary Secretary,
Kolar Gold Field's Mining Board.

ನೋಟಿಸ್.

ಚೆನ್ನಪಟ್ಟಣದಲ್ಲಿ ಮೊಕ್ಕಾಂ ಮಾಡಿರುವ ಮರಮತ್ ಇಲಾಖಾ ಸ್ಯೂಪರ್‌ವೈಜರ್ ಮ|| ಸಿ. ಮಾಧವರಾಯರವರ ಮನೆಯಲ್ಲಿ ಮಾಹೇ ಮಜಕೂರ್ ೧೧ ನೇ ತಾರೀಖಿನ ದಿನ ರಾತ್ರಿ ಇವರದಿಕೆಂಡ ಕರೆನ್ಸೀ ನೋಟುಗಳು ಕಳುವಾಗಿರುವಂತೆ ತಿಳಿಸಲ್ಪಟ್ಟಿರುತದೆ:—

R. SCALDWELL,
Executive Engineer,
Bangalore Division.

B--92—80542	...	Rs. 50
B--92—79845	...	„ 50
B--92—79842	...	„ 50
B--98—13214	...	„ 10
I—14—28552	...	„ 10
B--97—20350	...	„ 10
B--98—04366	...	„ 10
B--97—94316	...	„ 10
B--81—03192	...	„ 10
B-96—07293	...	„ 10
B--97—07287	...	„ 10
	ಜಮ್ಲಾ	230

ಕರ್ನಾಟಕ ಪ್ರಕಾಶಿಕಾ.

THE KARNATAKA PRAKASIKA.

MONDAY, JULY 2, 1888.
೧೮೮೮ನೇ ಜೂಲೈ ೨ನೇ ತಾ|| ಸೋಮವಾರ

"JAIMINI BHARATA." *

ಪ್ರಾಚೀನಗಳಾದ ಕರ್ಣಾಟ ಗ್ರಂಥಗಳ ಪೈಕಿ ಒಂದಾದ ಜೈಮಿನಿ ಭಾರತವು ಈಗ್ಯೆ ಸುಮಾರು ಇಪ್ಪತ್ತೈದು ವರುಷಗಳ ಹಿಂದೆ ಪ್ರಥಮತಃ ಮುದ್ರಿಸಲ್ಪಟ್ಟಿತ್ತು. ಈ ಗ್ರಂಥವು ಸಕಲಕಾವ್ಯಲಕ್ಷಣ ಲಕ್ಷಿತವಾಗಿಯೂ, ಕರ್ಣಾಟ ಭಾಷಾಭ್ಯಾಸಿಗಳಿಗೆಲ್ಲ ವ್ಯುತ್ಪಾದಕವಾಗಿಯೂ ಕಂಡುಬರಲು ಅನೇಕರು ಅನೇಕಾವರ್ತಿ ಅದು ಪ್ರಕಟಿಸುತಬಂದರು. ಪರಂತು ಇದುವರಿವಿಗೆ ಇದಕ್ಕೊಬ್ಬರೂ ಟೀಕೆಬರೆಯಲುಪಕ್ರಮಿಸಿದವರಿಲ್ಲವು. ಈ ಗ್ರಂಥ ಸ್ವಾರಸ್ಯವನ್ನೂ ವಿದ್ಯಾರ್ಥಿಗಳು ಇದರಿಂದ ಪಡೆಯತಕ್ಕ ಪ್ರಯೋಜನವನ್ನೂ ಪರ್ಯಾಲೋಚಿಸಿ ಮದರಾಸಿಪ್ರೆಸಿಡೆನ್ಸೀ ಕಾಲೇಜ್ ಕನ್ನಡಪಂಡಿತರಾದ ಬ್ರಹ್ಮಶ್ರೀ ಸಿದ್ಧಾಂತಿ ಸುಬ್ರಹ್ಮಣ್ಯ ಶಾಸ್ತ್ರಿಗಳವರು ಇದಕ್ಕೆ ಪ್ರತಿಪದಾರ್ಥವನ್ನೂ ಸಕೃದ್ಭಾವಾರ್ಥಗಳನ್ನೂ ಬರೆಯಲಾರಂಭಿಸಿ ೭೩ನೇಇಸವಿಯಲ್ಲಿ ಮೊದಲನೇ ೧೭ ಸಂಧಿಗಳನ್ನು ಪ್ರಕಟಿಸಿದರು. ಮಧ್ಯೆ ಬಹುಕಾಲ ಸದರೀ ಪ್ರಯತ್ನವು ಕೊನೆಮುಟ್ಟದೆ ನಿಂತು ಹೋಗಿದ್ದದರಿಂದ ಅದನ್ನು ಈಗ ಪೂರೈಸಿ ಗ್ರಂಥವು ಪೂರ್ತಿಗಾಗೈದಿರುತ್ತಾರೆ. ಈ ಜೈಮಿನಿ ಭಾರತವು ಕನ್ನಡ ಪಾಠಶಾಲೆಗಳಲ್ಲಿಯೂ, ಯೂನಿವರ್ಸಿಟಿ ಪರೀಕ್ಷೆಗಳಲ್ಲಿಯೂ ಪಠನಗ್ರಂಥವಾಗಿ ಏರ್ಪಡಿಸಿರುವದರಿಂದ ಇದರ ಪ್ರಯೋಜನವು ಬಾಲಕರಿಗೆ ವಿಶೇಷತಃ ಸಿದ್ಧಿಸಬಹುದೆಂದೆಣಿಸುತ್ತೇವೆ. ಟೀಕೆಯುಸುಲಭವಾಗಿಯೂ,ಪ್ರಾಯಶಃ ಗುರು ಸಹಾಯವನ್ನಪೇಕ್ಷಿಸದೆ ಅಭ್ಯಸಿಸಲಿಕ್ಕೆ ಬಾಲಕರಿಗೆ ಸಹಾಯಕವಾಗಿಯೂ ಇರುತಿದಲ್ಲದೆ ಶಾಸ್ತ್ರಿಗಳವರ ಪರಿಶ್ರಮವನ್ನು ಬಹಳವಾಗಿ ತೋರಪಡಿಸುತಿದೆ. ಈಗ್ರಂಥವು ಸುಮಾರು ೯೦೦ ಪುಟಗಳುಳ್ಳದ್ದಾಗಿರುತಿದೆ. ಲೋಕೋಪಕಾರಕವಾದ ಇಂತಾ ಗ್ರಂಥವನ್ನು ಉಚಿತ ಸಹಾಯದಿಂದ ಪ್ರತಿಪದಾರ್ಥದೊಡನೆ ಪ್ರಕಟಿಸಿರುವ ಬೆಂಗಳೂರು ವಿಚಾರದರ್ಪಣ ಮುದ್ರಾಕ್ಷರಶಾಲೆಯ ಪ್ರೊಪ್ರೈಟರಾದ ಮ|| ರಾ ಕರೂರು ರಾಮಯ್ಯನವರ ಉಪಕಾರವು ಕೊಂಡಾಡಲ್ಪಡತಕ್ಕದ್ದಾಗಿರುತಿದೆ. ಸಕಲಾಂಶದಿಂದಲೂ ಶ್ಲಾಘ್ಯವಾದ ಈ ಗ್ರಂಥವನ್ನು ಬಾಲಕರೆಲ್ಲರೂ ಪರಿಗ್ರಹಿಸಿ ತನ್ಮೂಲಕವಾದಪ್ರಯೋಜನವನ್ನು ಪಡೆಯಬೇಕಾದದ್ದೇ ಗ್ರಂಥಪ್ರಚಾರಕರಿಗೂ ಅದಕ್ಕೆ ಟೀಕೆ ಬರೆದವರಿಗೂ ಮುಖ್ಯೋದ್ದೇಶವಾಗಿರುತಿದೆ.

* ಇದರಕ್ರಯ { ೧ರಿಂದ ೧೭ ಸಂಧಿಗಳಿಗೆ ...೨—೦—೦ ; ೧೮ರಿಂದ ೩೪ ಸಂಧಿಗಳಿಗೂ—೪—೦ }

Occasional Notes.
ನೈಮಿತ್ತಿಕ ವಿಷಯನ್ಯಾಸ.

Ill-health of a Maharani.—ಬಲರಾಮಪುರದ ನಾಬಕ್ ಮಹಾರಾಜರವರ ಜ್ಯೇಷ್ಠಭಾರ್ಯೆಯವರು ಕಾಹಿಲೆಯಿಂದ ಕೇವಲ ಅಪಾಯ ಸ್ಥಿತಿಯಲ್ಲಿರುವಂತೆ ಕೇಳಿ ವಿಷಾದಿಸುತ್ತೇವೆ.

The salaries, &c., of the India Office. ಇಂಡಿಯಾ ಸ್ಟೇಟ್ ಸೆಕ್ರೆಟರಿಯವರ ಆಫಿಸ್ ಉದ್ಯೋಗಸ್ಥರ ತಲಬ್ ಮೊದಲಾದ ಖರ್ಚುಗಳ ಬಗ್ಗೆ ಬಾಲತೀ ಸರ್ಕಾರ್ ಸಾಲಿಗೆ ೧,೯೧,೬೦೬ ಪೌಂಡುಗಳು ಬೇಕಾಗಿರುತಿದೆ.

An unfounded report.—ಮಹಾರಾಜ್ಞೀ ಇಂಡ್ಯಾ ಚಕ್ರವರ್ತಿನೀಯವರಿಗೆ ಹಿಂದುಸ್ತಾನೀ ಭಾಷೆಯನ್ನು ಕಲಿಸುವವರಿಕ್ಕಾಗಿ, ನವಾಬ್ ಜೈಫರ್ ಉಲ್ ದೌಲಾ ಎಂಬವನಾಗಲಿ, ಇಂಡ್ಯದೇಶದ ಪ್ರಮುಖರ ಪೈಕಿ ಯಾರಾಗಲಿ ಇಂಗ್ಲಾಂಡಿಗೆ ಹೋಗುವವಾಗಿ ಹುಟ್ಟಿದ ಪ್ರಸ್ತಾವವು ನಿರಾಧಾರವಾದದ್ದೆಂದು ಒಂದಾನೊಂದು ಪತ್ರಿಕೆ ತಿಳಿಸುತಿದೆ.

The Viceroy's departure from India. ಇಂಡ್ಯಾರಾಜ್ಯದ ವೈಸರಾಯಿಯವರಾದ ಲಾ|| ಡಫರಿನ್‌ಯವರಪ್ರಯಾಣವು ಬರುವ ಅಕ್ಟೋಬರ ತಿಂಗಳ ಮಧ್ಯಭಾಗದ ವರಿವಿಗೆ ಮನ್ನಾಮಾಡಲ್ಪಡುವದೆಂತಲೂ, ಅವರು ಇಲ್ಲಿಂದ ಯೂರೋಪ್ ದೇಶಕ್ಕೆ ಪ್ರಯಾಣ ಮಾಡುವಾಗ್ಯೆ ನೆಟ್ಟಗೆ ರೋಂ ಪಟ್ಟಣಕ್ಕೆ ಹೋಗುವರೆಂತಲೂ ಟ್ರುತ್ ಎಂಬ ಪತ್ರಿಕೆ ಹೇಳುತಿದೆ.

An appointment confirmed.—ನವಾಬ್ ಸರ್ ಅಸ್ಮಾನ್‌ಜಾ ಬಹದೂರವರನ್ನು ಹೈದರಾಬಾದ್ ಸಂಸ್ಥಾನದ ಪ್ರಧಾನ ಮಂತ್ರಿಯವರಾಗಿ ನಿಯಮಿಸಿ, ಅಂತಾ ತಮ್ಮಮೊಕರರಾತಿಯನ್ನು ಕಾಯಂ ಮಾಡಬೇಕೆಂದು ನಿಜಾಮರವರು ಇಂಡ್ಯ ಗವರ್ನಮೆಂಟಿಗೆ ಬರೆದುಕೊಂಡ ಮೇರೆ ಅವರು ಮಂಜೂರ್ಮಾಡಿ ಹುಕುಂ ಕೊಟ್ಟಿರುವಂತೆ ಅಲ್ಲಿನ ಪತ್ರಿಕೆಯೊಂದು ತಿಳಿಸುತಿದೆ.

H. H. the Nizam's private Secretary.—ನಿಜಾಮರವರ ಪ್ರೈವೇಟ್ ಸೆಕ್ರೆಟರಿಯಾದ ಕರ್ನಲ್ ಮಾರ್ಷಲ್‌ಯವರ ನೌಕರಿಯ ಮಿಯಾದೆ ಈ ಸಂವತ್ಸರದ ಆಕ್ಟೋಬರ್‌ನಲ್ಲಿ ಪೂರ್ತಿಯಾಗುತಿದೆಯಾಗಿ, ನಿಜಾಮರವರು ಮರಳಿ ಇಂಡ್ಯ ಗವರ್ನಮೆಂಟಿಗೆ ಬರೆದುಕೊಂಡು ಅವರ ಮಂಜೂರಾತಿಯಂ ಪಡೆಯದೆಹೋದರೆ ಕರ್ನಲ್ ಮಾರ್ಷಲ್‌ಯವರು ತಮ್ಮ ನೌಕರಿಯಂ ಬಿಟ್ಟು ಬಿಡುವರೆಂದು ಹೈದರಾಬಾದ್‌ಪತ್ರಿಕೆಯೊಂದು ತಿಳಿಸುತಿದೆ.

Left for Europe.—ಘನವುಳ್ಳ ಬರೋಡೆ ಸಂಸ್ಥಾನದ ಮಹಾರಾಜರವರಾದ ಸಯಾಜಿರಾವ್, ಗಾಯಕವಾಡಿಯವರು, ತಮ್ಮ ಸಹೋದರರಾದ ಘನವುಳ್ಳ ಸಂಪತರಾವ್, ತಮ್ಮ ಸಂಸ್ಥಾನದ ಸೆಟಲ್‌ಮೆಂಟ್ ಕಮಿಷನರಾದ ಮ|| ಎಲಿಯಟ್‌ಯವರು, ರಾಜಸ್ಥಾನದಲ್ಲಿ ಮುಖ್ಯಾಧಿಕಾರಿಯಾದ ಮ|| ಅಬ್ಬಾಸ್ ತಿಯಾಬಜೆ ಯವರು, ಶ್ರೀಮಂತ ಜೀನಾ ಸಾಹೇಬ, ಡಾಕ್ಟರ್ ಬಯಕ್ರಾಂ, ಇನ್ನು ಆರುಮಂದಿ ಪರಿಜನರೊಡನೆ ಕಳೆದ ಮಂಗಳವಾರದ ದಿನ ತಮ್ಮ ಆರೋಗ್ಯಕ್ಕಾಗಿ, ಕ್ಲೈಡ್ ಎಂಬ ಟಪಾಲ್ ಜಹಜಿನಲ್ಲಿ ಯೂರೋಪ್ ದೇಶಕ್ಕೆ ಪ್ರಯಾಣವಾದರು. ಮಹಾರಾಜರು ಯೂರೋಪ್ ದೇಶದಲ್ಲಿ ವಾಸವಾಗಿರುವತನಕ ಅವರ ರಾಣೀಸಾಹೇಬರವರು ತಮ್ಮ ಪುತ್ರರೊಡನೆ ಪೂನೇಯಲ್ಲಿ ವಾಸವಾಗಿರವರು.

A much needed reform.—ರತ್ಲಾಂ ಸಂಸ್ಥಾನದ ಆಡಳಿತದಲ್ಲಿ ಒಂದು ಹೊಸ ಏರ್ಪಾಡು ಮಾಡಲ್ಪಟ್ಟಿರುವಂತೆ ಮದರಾಸ್ ಮೆಯಿಲ್ ಪತ್ರಿಕೆಗೆ ಅಲ್ಲಿನ ಜಾಹಗೀರದಾರನೊಬ್ಬನು ಬರೆಯುತ್ತಾನೇನೆಂದರೆ—"ಈ ಸಂಸ್ಥಾನದಲ್ಲಿ ದಿವಾನ್‌ಗಿರಿಯನ್ನು ಮೌಕೂಫ್‌ಮಾಡಿ, ಅದಕ್ಕೆ ಬದಲಾಗಿ ಒಂದು ಕೌನ್ಸಿಲ್ ಏರ್ಪಡಿಸಿ, ಅದಕ್ಕೆ ಸಂಸ್ಥಾನ ಅಧಿಕಾರಿಗಳ ಪೈಕಿ ಇಬ್ಬರು, ಖುಷಬಾಷ್ ದೊಡ್ಡಮನುಷ್ಯರ ಪೈಕಿ ಇಬ್ಬರು ಮೆಂಬರ್‌ಗಳಾಗಿಯೂ, ಮಹಾರಾಜಾ ಸರ್ ರಂಜಿತ್‌ಸಿಂಗ್, ಕೆ. ಸಿ. ಐ. ಇ ಯವರು ಪ್ರೆಸಿಡೆಂಟರಾಗಿಯೂ ಏರ್ಪಾಡಾಯಿತು" ಎಂಬದು. ಈಪದ್ಧತಿಯು ಇತರ ನೇಟಿವ್ ಸಂಸ್ಥಾನಗಳಲ್ಲೆಲ್ಲ ನೆಲೆಗೊಳಿಸಲ್ಪಡುವದಾದರೆ ಬಹಳ ಚೆನ್ನಾಗಿರುವದು.

Oppressive heat at Calcutta.—ಈಚೆಗೆ ಕಲ್ಕತ್ತಾ ಪ್ರಾಂತದಲ್ಲಿ ಬಿಸಿಲಿನ ಝಳ ಕೇವಲ ದುಸ್ಸಹವಾಗಲು, ರಾತ್ರಿಕಾಲದಲ್ಲಿ ಅಲ್ಲಿನ ನೇಟಿವ್ ಜನರು ಗುಂಪುಗುಂಪಾಗಿ ನದೀತೀರಕ್ಕೆ ಹೋಗಿ ಅಲ್ಲಿ ಮರಳಿನಮೇಲೆ ಮಲಗುತ್ತಾರೆ. ಕೆಲವರು ನದಿಯಲ್ಲಿ ಸ್ನಾನಮಾಡಿ ಒದ್ದೆಬಟ್ಟೆಯೊಂದಿಗೆ ಮಲಗುತ್ತಾರಂತೆ. ಮಳೆಬಿದ್ದು ಹವಾದಲ್ಲಿ ತಂಪು ಹುಟ್ಟುವ ತನಕ ಕೋರ್ಟುಗಳನ್ನೂ ಇತರ ಸರ್ಕಾರ್ ಇಲಾಖೆಗಳನ್ನೂ ಮುಚ್ಚಬೇಕೆಂದು ಆಯಾಯ ಇಲಾಖೆಗಳ ಅಧಿಕಾರಿಗಳಿಗೆ ತಿಳಿಸಲು, ಬಿಸಿಲು ಕಡಮೆಯಾಗುವ ತನಕ ಕೋರ್ಟುಗಳನ್ನು ಎರಡುಘಂಟೆಗೆ ಮುಚ್ಚಬಹುದೆಂತೆ ಏರ್ಪಾಡಾಯಿತೆಂದು ಅಲ್ಲಿನ ಪತ್ರಿಕೆಯೊಂದು ತಿಳಿಸುತಿದೆ.

A rumour.—ಬೇಸಿಗೆಯಲ್ಲಿ ಆಯಾಯ ಪ್ರೆಸಿಡೆನ್ಸಿಯ ಗವರ್ನರುಗಳೂ ಇಂಡ್ಯಾರಾಜ್ಯದ ವೈಸ್‌ರಾಯ್‌ಯವರೂ, ಹವಾ ಬಗ್ಗೆ ಪರ್ವತ ಪ್ರಾಂತಗಳಿಗೆ ಹೋಗಿ ನಾಲ್ಕಾರು ತಿಂಗಳಕಾಲ ಅಲ್ಲಿ ವಾಸಮಾಡುವದಂತು ಪ್ರಸಿದ್ಧ ವಿಷಯವಾಗಿರುತಿದೆಯಷ್ಟೆ. ಇದರಿಂದ ಸರ್ಕಾರದ ಖರ್ಚುಗಳು ವ್ಯರ್ಥವಾಗಿಯೂ ಅನಾವಶ್ಯಕವಾಗಿಯೂ ಜಾಸ್ತಿಯಾಗುತಿದೆ, ಅದನ್ನು ಸಾಧ್ಯವಾದ ಮಟ್ಟಿಗೆ ಕಡಮೆ ಮಾಡಬೇಕೆಂದು ಇಂಗ್ಲಿಷ್ ಮತ್ತು ನೇಟಿವ್ ವೃತ್ತಾಂತ ಪತ್ರಿಕೆಗಳು ಬಹುಕಾಲದ ಮೊದಲು ಆಗಿಂದಾಗ್ಯೆ ಪ್ರಸ್ತಾವಿಸುತಬಂದದ್ದಲ್ಲದೆ, ಇಂಡ್ಯ ರಾಜ್ಯಾಡಳಿತದ ಖರ್ಚುಗಳನ್ನು ನಿಮರ್ಶಾಪೂರ್ವಕ ಕಡಮೆಮಾಡುವ ಉದ್ದೇಶದೊಡನೆ ಏರ್ಪಡಿಸಲ್ಪಟ್ಟ ಫಿನಾನ್ಸ್ ಕಮಿಟಿಯವರು ಸಹ ಮೇಲೆತಿಳಿಸಿದ ಖರ್ಚುಗಳನ್ನು ಕಡಮೆಮಾಡಬೇಕೆಂದು ಶಿಫಾರಸ್ಸುಮಾಡಲು, ಅದನ್ನನುಸರಿಸಿ, ಈಚೆಗೆ ಇಂಡ್ಯಾಸ್ಟೇಟ್ ಸೆಕ್ರೆಟರಿಯವರು ಸದರೀ ಖರ್ಚನ್ನು ಕಡಿಮ್ಮಾಮಾಡಬೇಕೆಂತಲೂ, ಕಲ್ಕತ್ತೆಯನ್ನು ಇಂಡ್ಯ ಗವರ್ನಮೆಂಟ್ ಹೆಡ್‌ಕ್ವಾರ್ಟರ್ ಮಾಡಬೇಕೆಂತಲೂ, ಬಲವಾದ ಖರ್ಚಿಗೆ ಅವಕಾಶವಿಲ್ಲದಂತೆ ಕೆಲವರನ್ನು ಮಾತ್ರ ಕರೆದುಕೊಂಡು ಹೋಗಬೇಕೆಂತಲೂ, ವೈಸ್‌ರಾಯ್‌ಯವರಿಗೆ ಖಂಡಿತವಾದ ಹುಕುಂ ಕಳುಹಿಸಿರುವಂತೆಯೂ, ಪರಂತು ವೈಸ್‌ರಾಯ್‌ಯವರು ಅದನ್ನು ತತ್ಕಾಲದಲ್ಲಿ ಮೂಲೆಗೆ ಹಾಕಿರುವಂತೆಯೂ ಒಂದು ಪ್ರವಾದ ಹುಟ್ಟಿರುವಂತೆ ಒಂದಾನೊಂದು ಪತ್ರಿಕೆಯ ಒಬ್ಬ ಬಾತಮೀದಾರನು ಬರೆಯುತ್ತಾನೆ. ಆ ರೀತಿ ನಡೆಸಲ್ಪಟ್ಟರೆ ಬಹಳಮಟ್ಟಿಗೆ ಖರ್ಚು ಕಡಮೆಯಾಗುವದರಲ್ಲಿ ಸಂಶಯವಿಲ್ಲವು.

LOCAL AND PROVINCIAL NEWS.
ಸ್ವದೇಶಮತ್ತು ಪ್ರಾಂತೀಯವೃತ್ತಾಂತಗಳು.

Arrival of H. H. the Maharaja.—ಈದಿನ ಸಾಯಂಕಾಲ ೫ ಘಂಟೆಗೆ ಸರಿಯಾಗಿ ಶ್ರೀಮನ್ಮಹಾರಾಜರು ತಮ್ಮ ಪರಿವಾರದೊಡನೆ ರಾಜಧಾನಿಯಿಂದ ಈಪುರಿಗೆ ದಯಮಾಡಿಸುವ ಕಾರಣದಿಂದ ತತ್ಪ್ರಯುಕ್ತ ನಡೆಯಬೇಕಾದ ಮರ್ಯಾದೆಗಳಲ್ಲಿ ಕೊರತೆಯಿಲ್ಲದೆ ಜರಿಗಿಸುವ ಬಗ್ಗೆ ತಕ್ಕ ಏರ್ಪಾಡುಗಳು ಮಾಡಲ್ಪಟ್ಟಿರುವಂತೆ ತಿಳಿಯಬರುತಿದೆ. ಮಹಾರಾಜರವರ ಸವಾರಿ ಬೆಂಗಳೂರು ಸಿಟಿ ಸ್ಟೇಷನಿಗೆ ಬಿಜಯಸಿದ ಕೂಡಲೇ ಮಾಮೂಲ್ ಪ್ರಕಾರ ಎಂಕೋಫೆಗಳು ಹಾಕಲ್ಪಡುವವು.

Lord Connemara.—ಮದರಾಸ್ ಗವರ್ನರಾದ ಲಾರ್ಡ್ ಕಾನಿಮಾರಾ ಯವರು ಮಾಹೇ ಮಜಕೂರ್ ೨೦ನೇ ತಾರೀಖಿಗೆ ಮೈಸೂರಿಗೂ, ೨೩ನೇ ತಾರೀಖಿಗೆ ಈಪುರಿಗೂ ದಯಮಾಡುವರೆಂದು ವ್ಯವಸ್ಥೆಯಾಗಿರುತಿದೆ. ಅವರು ಇಲ್ಲಿಗೆ ಬರುವ ಸಂದರ್ಭದಲ್ಲಿ ಅವರು ಬರಮಾಡಿಕೊಳ್ಳಬೇಕಾದ ವಿಧಾನಗಳನ್ನೂ ಅವರಿಗೆ ವಿಜ್ಞಾಪನೆ ಪತ್ರಿಕೆಯನ್ನೊಪ್ಪಿಸಬೇಕಾದ್ದರ ಆವಶ್ಯಕತೆಯನ್ನೂ ಕುರಿತು ಟವುನ್ ಮತ್ತು ಸಿವಿಲ್ ಮಿಲಿಟರಿಸ್ಟೇಷನ್ ಮ್ಯುನಿಸಿಪಾಲಿಟಿಯವರು ವಿಚಾರ ಮಾಡುತ ಅದ್ಯಾಪಿ ಯಾವವಿಧವಾದ ನಿರ್ಣಯವನ್ನೂ ಮಾಡಲಾರದೆ ತಳಮಳ ಗೊಂಡಿರಾರೆಂದು ಕೇಳುತ್ತೇವೆ.

The weather.—ಈಗ್ಯೆ ಮೂರುನಾಲ್ಕುದಿನಗಳ ಮೊದಲು ಸೂರ್ಯರಶ್ಮಿ ಇಲ್ಲದೆ ಮೇಘಾವರಣವೂ, ವಾತಪ್ರಚಾರವೂ ಅತ್ಯಧಿಕವಾಗಿರುತಿದೆ. - ಘಳಿಯ ದೆಸೆಯಿಂದ ಕೆರೆಕುಂಟೆಗಳಲ್ಲಿ ನೀರು ಕಳೆಯಲಿಕ್ಕೆ ಕಾರಣವಾಗಿದೆ. ವರ್ಷಸೂಚನೆಗಳು ಕಂಡುಬರುತಲಿದ್ದಾಗ್ಯೂ ಮಳೆ ಮಾತ್ರ ಸುದ್ದಾಂಗ ಯಿಲ್ಲವು. ಶಿವಮೊಗ್ಗೆಯಲ್ಲಿ ವಿನಾ ಮಿಕ್ಕ ಪ್ರದೇಶಗಳಲ್ಲೆಲ್ಲ ಮಳೆ ಸಾಧಾರಣವಾಗಿ ಬಿದ್ದಂತೆ ತಿಳಿಯಬರುತಿದೆ. ಸರ್ವತ್ರ ಕಾಲಸ್ಥಿತಿಯೂ ಫಸಲುಗಳೂ ಚೆನ್ನಾಗಿರುವಂತೆಯೂ, ಜಲ ತೃಣ ಕಾಷ್ಠ ಪದಾರ್ಥಗಳು ಸಮೃದ್ಧಿಯಾಗಿರುವಂತೆಯೂ ಪರಂತು ಜ್ವರ, ಆಮಶಂಕೆ, ಪಿಡುಬು ವಗೈರೆ ರೋಗಗಳು ನಿಯತಗಳಾಗಿವೆಯೆಂತಲೂ, ಡಿಸ್ಟ್ರಿಕ್ಟು ಜಾತಿ ರಿಪೋರ್ಟುಗಳ ಮೂಲಕ ತಿಳಿಯಬರುತಿದೆ.

Sreenivasa Mandiram.—ಗತವಾರದಲ್ಲಿ ನಾವುತಿಳಿಸಿದ್ದಂತೆ ಈಊರುಬಳೆಪೇಟೆಯಲ್ಲಿರುವ ಶ್ರೀಶ್ರೀನಿವಾಸಮಂದಿರವು ಗತ ಗುರುವಾರದ ದಿನ ಮಧ್ಯಾಹ್ನ ಪ್ರತಿಷ್ಠೆಮಾಡಲ್ಪಟ್ಟಿತು. ಆದಿನ ಸಾಯಂಕಾಲ ೫ ಘಂಟೆಗೆ ಶ್ರೀಮದ್ವಾನಮಾಮಲೆಸ್ವಾಮಿಗಳು ಸದರೀ ದೇವಸ್ಥಾನಕ್ಕೆ ದಯಮಾಡಿ ದೇವರ ದರ್ಶನ ತೀರ್ಥ ಪರಿಗ್ರಹ ಮುಂತಾದವನ್ನೆಲ್ಲ ಮಾಡಿಕೊಂಡು ೧ ಘಂಟೆಯ ಕಾಲ ಅಲ್ಲೇಯಿದ್ದು ಬಳಿಕ ತಾವು ಇಳಿದಿರುವ ಸ್ಥಾನಕ್ಕೆ ಬಿಜಯಮಾಡಿದರು. ಈಗ ಸದರೀ ದೇವಾಲಯವು ಒಂದು ದಿವ್ಯ ದೇಶವೆಂದಲೂ, ಶೀಘ್ರಪ್ರಸಾದ ಪರಿಗ್ರಹಾರ್ಹವಾದದ್ದೆಂತಲೂ, ಇಲ್ಲಿನ ಶ್ರೀ ವೈಷ್ಣವ ಸಮೂಹದವರಿಂದ ಭಾವಿಸಲ್ಪಟ್ಟಿದೆ. ಗತ ಶುಕ್ರವಾರದ ದಿನ ಶ್ರೀನಿವಾಸಮೂರ್ತಿಗೆ ಡೋಲೋತ್ಸವವೂ ನಿನ್ನೆಯದಿನ [illegible] ರೂಪವಾದ ಬ್ರಾಹ್ಮಣ ಭೋಜನವೂ ನಡೆದವು. ಮುಖ್ಯವಾಗಿ ಇದರಿಂದ ಐಹಿಕಾಮುಷ್ಮಿಕ ಫಲಗಳಿಗೇನೂ ಕೊರತೆಯಿಲ್ಲದಂತೆ ಸದರೀ ಮಂದಿರ ಪ್ರತಿಷ್ಠಾಪಕರಿಗೆ ಸಿದ್ಧಿಸಿದವೆಂದು ಧಾರಾಳವಾಗಿ ನುಡಿಯಬಹುದಾಗಿರುತಿದೆ.

THE MYSORE GAZETTE.
ಮೈಸೂರು ಗೆಜೆಟ್.

ಶ್ರೀಮನ್ಮಹಾರಾಜ ರಾಜಣಸಾಹೇಬ್ ಬಹದೂರವರ ದಿವಾನರವರಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

ಮೊಕ್ಕಾಂ ನಂ. ೭೩೪—ತಾ|| ೨೦ನೇ ಜೂ|| ೧೮೮೮.—೧೮೮೮ನೇ ಇಸವಿ ಜೂಲೈ ೧ನೇ ತಾರೀಖು ಗಾಯತು ಚಿತ್ರದುರ್ಗ ಡಿಸ್ಟ್ರಿಕ್ಟು ಡೆಪ್ಯುಟಿ ಕಮಿಷನರ್ ಮ|| ಮಹಮದ್‌ಅಲ್ಲೀ ಖಾನ್‌ಬಹದೂರವರಿಗೆ ಸ್ವಂತಕೆಲಸಗಳ ಉದ್ದಿಶ್ಯ ೬ ತಿಂಗಳ ರಜಾ ಕೊಡಲ್ಪಟ್ಟಿರುತಿದೆ. ೧ನೇ ಗ್ರೇಡ್ ಅಸಿಸ್ಟೆಂಟ್ ಕಮಿಷನರ್ ಮ. ಬಿ. ಕೆ. ವೆಂಕಟವರದಯ್ಯಂಗಾರ್ರವರು ಮ|| ಮಹಮದ್‌ಅಲ್ಲಿಯವರ ಗೈರುಹಾಜರೀಕಾಲದಲ್ಲಿ ಅಥವಾ ಮರೊಂದು ಹುಕುಂ ಕೊಡಲ್ಪಡುವತನಕ ಚಿತ್ರದುರ್ಗ ಡಿಸ್ಟ್ರಿಕ್ಟು ೪ನೇಗ್ರೇಡ್ ಡೆಪ್ಯುಟಿಕಮಿಷನರ್ ವ ಡಿಸ್ಟ್ರಿಕ್ಟು ಮೇಜಸ್ಟ್ರೇಟರಾಗಿ ಆಕ್ಟಿಂಗ್ ಕ್ರಿಯ ಮೊಕರರ್‌ಮಾಡಲ್ಪಟ್ಟಿರುತ್ತಾರೆ. ೧ನೇ

ಗ್ರೇಡ್ ಅಸಿಸ್ಟೆಂಟ್ ಕಮಿಷನರ್ ಮ|| ಅಬ್ದುರ್ ರಹಮಾನ್‌ಯವರು ಮ|| ಸಿ. ಸುಬ್ಬರಾಯರವರು ಪ್ರಿವಿಲೇಜ್ ರಜಾಮೇಲೆ ಗೈರ್‌ಹಾಜರಾಗಿರುವ ಕಾಲದಲ್ಲಿ ಕೋಲಾರ ಡಿಸ್ಟ್ರಿಕ್ಟ್ ೪ನೇ ಗ್ರೇಡ್ ಡೆಪ್ಯುಟಿಕಮಿಷನರ್ ವ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರಾಗಿ ಆಫೀಸಿಯೇಟಿಂಗ್ ಮೊಕರರ್ ಮಾಡಲ್ಪಟ್ಟಿರುತ್ತಾರೆ.

ನೋಟೀಸ್ ನಂ ೨೪೦—ಅಸಿಸ್ಟೆಂಟ್ ಕಮಿಷನರ್ ಮ|| ಎಸ್ ವೈದ್ಯನಾಥಯ್ಯರವರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖ್‌ಲಾಗಾಯತು ೩ ತಿಂಗಳ ಪ್ರಿವಿಲೇಜ್‌ರಜಾ ಕೊಡಲ್ಪಟ್ಟಿರುತ್ತದೆ.

ಕ್ಯಾಂಪ್ ನಂ. ೨೪೨—ಮ|| ಕೆ. ಡೊರಸಾಮಯ್ಯರವರು ಮೈಸೂರು ದಿವಾನರವರ ಪ್ರೈವೇಟ್ ಸೆಕ್ರೆಟರಿಯಾಗಿ ಮೊಕರರ್ ಮಾಡಲ್ಪಟ್ಟಿರುತ್ತಾರೆ.

ನೋಟೀಸ್ ನಂ. ೨೪೪—ಚೆನ್ನಪಟ್ಟಣ ಡೆಪ್ಯುಟಿ ಅಮಲ್ದಾರ್ ಟಿ. ಆರ್. ನರಸಿಂಹಮೂರ್ತಿರಾಯರವರು ಅಮಲ್ದಾರ್ ಸಿ. ಕೃಷ್ಣರಾಯರು ರಜಾಮೇಲೆ ಗೈರ್‌ಹಾಜರಾಗಿರುವ ಕಾಲದಲ್ಲಿ ಅಥವಾ ಮತ್ತೊಂದು ಹುಕುಂ ಕೊಡಲ್ಪಡುವವರೆಗೆ ಆ ಕಾರ್ಯಾನಪಟ್ಟಿ ತಾಲ್ಲೂಕು ೩ನೇ ಗ್ರೇಡ್ ಅಮಲ್ದಾರ್ ವ ಮೂರನೇ ಕ್ಲಾಸ್ ಮ್ಯಾಜಿಸ್ಟ್ರೇಟರಾಗಿ ಆಫೀಸಿಯೇಟಿಂಗ್ ಮೊಕರರ್ ಮಾಡಲ್ಪಟ್ಟಿರುತ್ತಾರೆ ೪೪ನೇ ನಂಬರಿನ ಶಿಲಾನೇ ನಂ| ಇನ್ಸ್‌ಪೆಕ್ಟರ್ ಮೂಲಕ ಫಾರೆಸ್ಟ್ ದಫಾವತ್ತು ಬಿಟ್ಟಿದ್ದ ಶಿರಸ್ತೇದಾರ್ ರಘುನಾಥರಾಯರವರ ಮೊಕರರಾತಿಯು ಇದರಿಂದ ರದ್ದು ಮಾಡಲ್ಪಟ್ಟಿರುತ್ತವೆ ಬೆಂಗಳೂರು ಡಿಸ್ಟ್ರಿಕ್ಟಿಗೆ ಸೇರಿದ ಸ್ಪೆಷಲ್ ಸಬ್‌ಡಿವಿಷನ್ ಎ. ಪ್ರೊಬೇಷನರ್ ಯರವರು ನರಸಿಂಹಮೂರ್ತಿರಾಯರವರ ಗೈರ್‌ಹಾಜರಿ ಕಾಲದಲ್ಲಿ ಅಥವಾ ಮತ್ತೊಂದು ಹುಕುಂ ಕೊಡಲ್ಪಡುವವರೆಗೆ ಚೆನ್ನಪಟ್ಟಣದ ಡೆಪ್ಯುಟಿ ಅಮಲ್ದಾರರಾಗಿ ಆಫೀಸಿಯೇಟಿಂಗ್ ಕೆಲಸ ನೋಡುತಲಿರುವರು.

ನೋಟೀಸ್ ನಂ| ೨೬೦—ತಿಪಟೂರು ತಾ|| ಅಮಲ್ದಾರ್ ರಾಮಸ್ವಾಮಯ್ಯನವರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖ್ ಲಾಗಾಯತು ೩೦ ದಿನಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿರುತ್ತದೆ. ತುರುವೇಕೆರೆ ಸಬ್‌ತಾ| ಅಮಲ್ದಾರ್ ವ ಮ್ಯಾಜಿಸ್ಟ್ರೇಟರಾದ ರಾಮಸ್ವಾಮಯ್ಯನವರು ರಜಾಮೇಲೆ ಗೈರ್‌ಹಾಜರಾಗಿರುವ ಕಾಲದಲ್ಲಿ ಅಥವಾ ಮತ್ತೊಂದು ಹುಕುಂ ಕೊಡಲ್ಪಡುವವರೆಗೆ ತಮ್ಮ ಸ್ವಂತ ಕೆಲಸವಲ್ಲದೆ ತಿಪಟೂರು ತಾ|| ಅಮಲ್ದಾರ್ ವ ಮೂರನೇ ಕ್ಲಾಸ್ ಮ್ಯಾಜಿಸ್ಟ್ರೇಟ್ ಕೆಲಸಗಳನ್ನು ಆಫೀಸಿಯೇಟ್ ನೋಡುವಂತೆ ಮೊಕರರ್ ಮಾಡಲ್ಪಟ್ಟಿರುತ್ತಾರೆ.

ನೋಟೀಸ್ ನಂ ೨೬೧ ತಾ ೨೭ನೇ ಜೂನ್ ೮೮.-ಶಿವಮೊಗ್ಗ ಡಿಸ್ಟ್ರಿಕ್ಟ್ ಜರ್ನಲ್ ಸಿ. ಗುಂಡಪ್ಪನವರು, ಮಹಬೂಬಖಾನರು ಸಸ್ಪೆಂಡಾಗಿರುವ ಕಾಲದಲ್ಲಿ ಅಥವಾ ಮತ್ತೊಂದು ಹುಕುಂ ಕೊಡಲ್ಪಡುವವರೆಗೆ ನಾಗರಹಳ್ಳಿ ೪ನೇ ಗ್ರೇಡ್ ಅಮಲ್ದಾರ್ ವ ೩ನೇ ಕ್ಲಾಸ್ ಮ್ಯಾಜಿಸ್ಟ್ರೇಟರಾಗಿ ಆಫೀಸಿಯೇಟಿಂಗ್ ಮೊಕರರ್ ಮಾಡಲ್ಪಟ್ಟಿರುತ್ತಾರೆ

CORRESPONDENCE.

ಅಯ್ಯ ಈಪುರದಲ್ಲಿ ಒಬ್ಬ ರೋಗಿಗೂ ಅವನ ಚಿಕಿತ್ಸಕನಿಗೂ ನಡೆದ ಸಂವಾದವಿತೆಂದರೆ.—

ವೈದ್ಯನು-ಅಯ್ಯಾ, ನಿನ್ನರೋಗವು ಪರಿಹರವಾಗದೆ ವೃದ್ಧಿಯನ್ನೈದಲಿಕ್ಕೆ ಕಾರಣವು ಮದ್ಯಪಾನವಾಗಿರುತ್ತದೆ ಆದದರಿಂದ ಅದು ನೀನು ತ್ಯಜಿಸಿ ಮುಂದೆ ಅತಿಸದಿರುವಿಯಾದರೆ ರೋಗವು ನಿವೃತ್ತಿಯಾಗುವದು. ಮದ್ಯಪಾನವು ಮನುಷ್ಯನಿಗೆ, ತತ್ರಾಪಿ ರೋಗಿಗೆ ಪ್ರಬಲ ಶತ್ರುರೂಪವಾಗಿರುತ್ತದೆ. ಆದಕಾರಣ ಶತ್ರುವನ್ನು ನಾಶಮಾಡುವದು ಆವಶ್ಯಕವು. ರೋಗಿ-ಅಯ್ಯಾ, ಎಂಥಾ ಮಾತು ನುಡಿದಿರಿ, ಛೀ, ಛೀ, ಮದ್ಯವನ್ನು ನಾನೆಂದಿಗೂ ಬಿಡಲಾರೆನು. ಮದ್ಯಪಾನವು ನೀವು ತಿಳಿಸುವಂತೆ ಮನುಷ್ಯನಿಗೆ ಶತ್ರುವಾಗಿರುವದು ನಿಜವಾಗಿರುವ ಪಕ್ಷಕ್ಕೆ ಅದು ನಾವು ಅವಶ್ಯವಾಗಿ ಅಂಗೀಕರಿಸಬೇಕಾಗಿರುತ್ತದೆ. ಯಾತಕ್ಕೆಂದರೆ, ನಮ್ಮ ಶಾಸ್ತ್ರದಲ್ಲಿ ಶತ್ರುವಾಗಿದ್ದರೂ ಅವನು ದ್ವೇಷಿಸಿ ಅವನಲ್ಲಿ ಮತ್ಸರವು ತೋರಿಸಕೂಡದೆಂದು ವಿಧಿಸಿರುವದರಿಂದ, ಸದ್ಧರ್ಮಬೋಧಕವಾದ ಆ ಶಾಸ್ತ್ರವನ್ನು ನಾನು ಉಲ್ಲಂಘಿಸಲಾರೆನಾಗಿ ಶತ್ರು ರೂಪವಾದ ಮದ್ಯವನ್ನು ನಾನು ದ್ವೇಷಿಸಲಿಕ್ಕೆ ಸಾಧ್ಯವಾಗುವದಿಲ್ಲವಾದದರಿಂದ ಅದು ನಾನು ವಿಶ್ವಾಸ ಪೂರ್ವಕ ಅಂಗೀಕರಿಸಿ ಗೌರವಿಸಬೇಕಾಗಿರುತ್ತದೆ. ನಿಮ್ಮ ಮಾತುಗಳಂ ಕೇಳಿದರೆ ಶಾಸ್ತ್ರೋಲ್ಲಂಘನ ಮಾಡಿದ ಪಾತಿತ್ಯಕ್ಕೂ, ಮತ್ಸರಿ ಎಂಬ ಲೋಕಾಪವಾದಕ್ಕೂ ಗುರಿಯಾಗಬೇಕಾಗಿರುವದು. ಇದಕ್ಕೆ ನನ್ನ ಮನಸ್ಸು ಒಂಬದುವುದಿಲ್ಲವು ಏನು ಮಾಡುವದು! ರೋಗಿಯು ಶಾಸ್ತ್ರೋಕ್ತಿಗಳಾದ ಮಾತುಗಳಂ ಕೇಳಿ ಚಿಕಿತ್ಸಕನು ತಿಳಿಸಿದನೇನೆಂದರೆ, ರೋಗ ಸದಾ ನಿನಗೆ ಶತ್ರುರೂಪವಾಗಿ ಬಾಧಿಸುವದರಿಂದ ಅದು ಚಿಕಿತ್ಸಾ ಮೂಲಕ ನಿವೃತ್ತಿಸಿ ಅದಕ್ಕೆ ಅಗೌರವವನ್ನುಂಟು ಮಾಡುವದು ಸಜ್ಜನ ಧರ್ಮವಲ್ಲವಾದದರಿಂದ ಅದರ ಅಭಿವೃದ್ಧಿಯಂ ಕೋರುತ ಅದರಿಂದುಂಟಾಗ ಬಹುದಾದ ಫಲಾನುಭವಕ್ಕೆ ನೀನು ಸನ್ನದ್ಧನಾಗಿರಬೇಕಾದ್ದು ಯುಕ್ತವಾಗಿರುತದೆಂದು ನುಡಿದು ಹೊರಟುಹೋದನು.

ಯಾತ್ರಾವಿನೋದ.

ಶ್ರೀ ಸೂರ್ಯನಾರಾಯಣರಾವ್, ಬಿ. ಎ. ರವರು ಬರೆದದ್ದು

ದೇಶಾಟನವು ಬಹಳ ಸುಖಕರವಾದದ್ದು, ದೇಹಾರೋಗ್ಯವನ್ನೂ, ಜ್ಞಾನಾಭಿವೃದ್ಧಿಯನ್ನೂ, ಕಾರ್ಯಸಾಧನವನ್ನೂ, ಮನಸ್ಸಿಗೆ ಆನಂದವನ್ನೂ, ಉಂಟುಮಾಡುವದು. ಆದುದರಿಂದಲೇ ಪ್ರಾಚೀನರೆಲ್ಲರು ಬೇರೆ ಸುಚಾರ ಮಾಡುವದಕ್ಕೆ ಅನೇಕ ವ್ಯಾಜಗಳನ್ನು ಶಾಸ್ತ್ರಗಳಲ್ಲಿ ಕಲ್ಪಿಸಿ ಆರೀತಿ ಮಾಡುವದರಿಂದ ಪುಣ್ಯವುಂಟೆಂದು ಹೇಳುತಿರುವರು. ಪ್ರಪಂಚದಲ್ಲಿ ಸಾಧಾರಣವಾಗಿ ನಾವು ಪ್ರತಿನಿತ್ಯವೂ ನಡಿಸುವ ಕಾರ್ಯಗಳಿಗೆ ಮತ ಸಂಬಂಧವಾದ ಯಾವದೊಂದು ತೊಂದರೆಯನ್ನು ಸೇರಿಸಿ ಹೇಳುವದು ಯುಕ್ತವಾಗಿತೋರುವದಿಲ್ಲ. ಅನೇಕವಾಗಿ ಆಚಾರ ವ್ಯವಹಾರಗಳು ಕಾಲ ದೇಶ ವರ್ತಮಾನಗಳನ್ನನುಸರಿಸಿ ಬದಲಿಸುವಲ್ಲದೆ ವೇದದಿಂದ ನಮ್ಮಗಳಿಗೆ ನಿಷೇಧಿಸಲ್ಪಟ್ಟವುಗಳಾಗಿ ತೋರುಬರುವದಿಲ್ಲ, ಇದು ಹ್ಯಾಗಾದರೂ ಇರಲಿ. ದೇಶಾಟನವು ಒಳ್ಳೆಯದೆಂದು ಎಲ್ಲರೂ ಅಂಗೀಕರಿಸಿದಾರೆ. ಆರೀತಿ ಎಲ್ಲರೂ ತಮ್ಮ ತಮ್ಮ ಕೆಲಸ ಕಾರ್ಯಗಳಿಗೆ ಕುಂದಕವಿಲ್ಲದೆ ಸಾಧ್ಯವಾದ ಮಟ್ಟಿಗೆ ಪ್ರಯಾಣವನ್ನು ಮಾಡಿ ಪರಸ್ಥಳದಲ್ಲಿರುವ ಸುಗುಣಗಳನ್ನು ಚನ್ನಾಗಿ ವಿಚಾರಿಸುತ ಯೋಗ್ಯವಾದ ಅಂಶಗಳನ್ನು ಗ್ರಹಿಸುತ ಬರುವದಕ್ಕಿಂತಲೂ ಶ್ರೇಷ್ಠವಾದ ಕಾರ್ಯವು ಮತ್ತಾವದೂ ಕಾಣಬರುವದಿಲ್ಲ. ನಾನು ಹಿಂದಿನ ವಾರ ಕಾಲದಲ್ಲಿ ಶೀಘ್ರವಾಗಿ ಭೋಜನವನ್ನು ತೀರಿಸಿಕೊಂಡು ರೈಲ್ ಸ್ಟೇಷನ್ ಬಳಿಗೆ ಹೋಗಿ ಹಣವನ್ನು ಕೊಟ್ಟು ಟಿಕೆಟ್ಟನ್ನು ತೆಗೆದುಕೊಂಡು ಕ್ರಮವಾದ ಕಾಲಕ್ಕೆ ಬಂಡಿಯನ್ನು ಹತ್ತಿ ಮೈಸೂರಿಗೆ ಪ್ರಯಾಣಮಾಡಿದೆನು. ನಮ್ಮ ಮೈಸೂರು ಕಬ್ಬಿಣ ದಾರಿಯು ಬಹಳ ಅದ್ಭುತವಾದದ್ದು. ಇದು ಅನಾನುಕೂಲಗಳಿಗೆ ಹೊತ್ತ ಸ್ಥಾನವಾಗಿರುವದು. ಪ್ರಯಾಣಸ್ಥನು ಟಿಕ್ಕೆಟ್ಟಾಗಿ ಹಣವನ್ನು ಕೊಟ್ಟು ರಸೀದಿಯಾಗಿ ಸುಚಿತ ಮಾಡಬೇಕಾಗಿದ್ದರೆ ಸಮ್ಮುಖದಲ್ಲಿಗೆ ಬರಬೇಕಲ್ಲದೆ ಇಂಡಿಯಾ ದೇಶದಲ್ಲಿ ಮತ್ತೆಲ್ಲಿ ಹುಡಿಕಿ ನೋಡಿದರೂ ಸಿಕ್ಕಲಾರದು. ಸ್ಟೇಷನ್ ಮನೆಗಳಂತು ಹೇಳಬೇಕಾದ್ದೇ ಇಲ್ಲ. ಸ್ಥಳ ಸೂಚಕ ಫಲಕವಾಗಿ ಕಟ್ಟಿರುವ ಹಲಿಗೆಗಳನ್ನು ತೆಗೆದು ಬಿಟ್ಟಲ್ಲಿ ಒಂದು ಸ್ಥಳಕ್ಕೂ ಮತ್ತೊಂದು ಸ್ಥಳಕ್ಕೂ ಭೇದ ಕಾಣಬಾರದಂತೆ ಶಿಲ್ಪಶಾಸ್ತ್ರಜ್ಞರು ಕಟ್ಟಡಗಳನ್ನು ತಯಾರುಮಾಡಿದರು. ಇವರನ್ನು ವಿನೋದ ವಸ್ತು ಪ್ರದರ್ಶನಶಾಲೆಯಲ್ಲಿ ಹುಡಿಬಿಟ್ಟ ಪ್ರದರ್ಶಿಸಿದಲ್ಲಿ ಜನರಿಗೆ ಬಹಳ ಆನಂದಕರವಾಗಿರುವದಲ್ಲದೆ ದಾರಿಯಲ್ಲಿ ಜಂಬಾಧ ತೊಂದರೆ ತೊಂದಲ್ಲದೆ ಮತ್ತಾವ ರೀತಿ ಬಾಧೆಗಳೂ ಕಾಣಸಲಿಲ್ಲ. ಪ್ರಾತಃಕಾಲ ಬೆಂಗಳೂರಲ್ಲಿ ಕೂತವರು ಸಾಯಂಕಾಲ ೪ ಘಂಟೆ ಸುಮಾರಿಗೆ ಶ್ರೀರಂಗಪಟ್ಟಣದ ಕೋಟೆ ಸ್ಟೇಷನ್‌ಗೆ ಬಂದೆವು. ಈ ಕೋಟೆಯು ನೋಡುವವರಿಗೆ ಭೀತಿಯನ್ನುಂಟುಮಾಡುತ ಬಹಳದೂರ ವ್ಯಾಪಿಸಿಕೊಂಡಿದೆ. ಕಾವೇರೀ ನದಿಯು ಇಲ್ಲಿ ಮೂರು ಭಾಗಗಳಾಗಿ ಪ್ರವಹಿಸಿ ಮಧ್ಯದಲ್ಲಿರುವ ಭೂಮಿಯನ್ನು ದ್ವೀಪವಾಗಿ ಮಾಡಿ ಹೊರಗಿನಿಂದ ಬರುವ ಶತ್ರುವಿಗೆ ತನ್ನನ್ನು ಧಾಟುವದು ಕಷ್ಟಕರವಾಗಿ ಮಾಡಿ ತಾನು ಗರ್ಭದಲ್ಲಿ ಧರಿಸಿರುವ ಶಿಶುವಿನಂತೆ ಕೋಟೆ ಕೋಟೆಯನ್ನು ದುರ್ಗಮವಾಗಿ ಮಾಡಿದೆ. ಅಲ್ಲಿಂದ ಹೊರಟು ಮುಕ್ಕಾಲು ಘಂಟೆಯಲ್ಲಿ ಮೈಸೂರು ನಗರವನ್ನು ಸೇರಿದೆವು. ಇಲ್ಲಿ ಕೆಲವರು ದೊಡ್ಡಮನುಷ್ಯರು ಜರ್ತಾರೀ ರುಮಾಲುಗಳನ್ನು ಸುತ್ತಿಕೊಂಡು ದಪ್ಪವಾಗಿರುವ ಗಿಲ್ಲೀಸೆಗಳನ್ನಿಟ್ಟುಕೊಂಡು ಉದ್ದವಾದ ಅಂಗರೇಖೆಗಳನ್ನು ತೊಟ್ಟುಕೊಂಡು ಜೋಡೀ ವಸ್ತ್ರಗಳನ್ನು ಹಿಡಿದುಕೊಂಡು ಬನಾತಿನ ಜೋಡುಗಳನ್ನು ಮೆಟ್ಟಿಕೊಂಡು ತಾಂಬೂಲವನ್ನು ಅಗಿಯುತ ಬಾಯಲ್ಲಿ ದೊಡ್ಡವಾದ ಗಂಧದ ಬೊಟ್ಟನಿಂದ ಶೋಭಿಸುವರಾಗಿ ಬಂದು ತಮ್ಮ ಬಂಧುಮಿತ್ರರಿಗಾಗಿ ಕಾದಿದ್ದರು. ಇವರನ್ನು ನೋಡುತಿರ ನನ್ನ ಪಕ್ಕದಲ್ಲಿದ್ದ ಒಬ್ಬ ದೊಡ್ಡ ಮನುಷ್ಯನು ಕೈಯಿಂದ ಸ್ವಗೆಯನ್ನು ಮಾಡಿ "ಇವರೇ ರಾಜಬಂಧುಗಳು ಇವರಿಗೆ ಭಾರೀಯಾಗಿ ಪಗಾರ ಬರುತದೆ. ಇವರನ್ನು ಬಿಟ್ಟರೆ ರಾಜ ಮಹಲಿನಲ್ಲಿ ಮತ್ಯಾರು ಇಲ್ಲವೆಂದು" ಕಿವಿಯಲ್ಲಿ ಮೆಲ್ಲಗೆ ಹೇಳಿದನು. ಅಲ್ಲಿಂದ ಹೊರಟು ಸ್ಟೇಷನ್ ಹೊರಗೆ ಬಂದು ನೋಡಲಾಗಿ ಎಲ್ಲಿನೋಡಿದರೂ ಬಯಲಾಗಿತ್ತು. ಕೆಲವು ಕುದುರೇಗಾಡಿಗಳು, ಕೆಲವು ಒಂಟೆತ್ತಿನ ಗಾಡಿಗಳು ಕಾದುಕೊಂಡಿರುವವನ್ನು ಕಂಡು ಹಣವಿರುವ ಥೈಲಿಯನ್ನು ಒಂದಾವರ್ತಿ ಅಲ್ಲಾಡಿಸಿ ಕುದುರೆಯವನನ್ನು ಕರೆದು ಅವನ ಕೈಯಲ್ಲಿ ಹಿರಣ್ಯ ಪುಷ್ಪವನ್ನಿಟ್ಟು ಬಂಡಿಯಲ್ಲಿ ಕುಳಿತುಕೊಂಡು ಹೊರಟೆವು ನಮ್ಮ ಹಿಂದೆ ಬಂದಿದ್ದ ಕೆಲಕಡಿಬ್ಬರು (ಇವರು ಅನೇಕಾವರ್ತಿ ಮೈಸೂರು ಪಟ್ಟಣದ ಸ್ಥಳಗಳನ್ನೂ ಅಲ್ಲಿರುವ ವಿಶೇಷಗಳನ್ನೂ ನೋಡಿದ ಮಹಾನುಭಾವರು) ನಮ್ಮನ್ನು ಕುರಿತು "ಸ್ವಾಮಿ, ನಮ್ಮ ಎಡಗಡೆಗೆ ಕಾಣುವದೇ ಸಿಲ್ಲೇದಾರರ ದೈಕುಗಳು, ಇಲ್ಲಿಯೇ ನಮ್ಮ ಚತುರಂಗದ ಮುಖ್ಯಾಂಗವಿರುವದು, ಇವರು ನಮ್ಮ ದೇಶದಲ್ಲಿ ಅನೇಕವಾಗಿ ಪೂರ್ವಕಾಲದಲ್ಲಿ ರಣರಂಗದಲ್ಲಿ ಕೀರ್ತಿಯನ್ನು ಸಂಪಾದಿಸಿದವರು. ಈಗಲೂ ಸಮಯಬಂದರೆ ಪಟ್ಟರಣೇ ಸ್ಟೇರ್ ಇದು ನದರಿಂದ ಅವರು ಬುದ್ಧಿಶಾಲಿಗಳಾದರೆ ಮಾಡುವ ಕೆಲಸ ತಮಗೆ ತಿಳಿದೇ ಇದೆ" ಎಂದುಹೇಳಿ ಅಲ್ಲಿಗೆ ಎದುರಾಗಿ ಕಾಣಬರುತಲಿದ್ದ ದಿವ್ಯವಾದ ಒಂದು ಛತ್ರವನ್ನು ನಮಗೆ ತೋರಿಸಿ ಗಾಡಿಯನ್ನು ಜಾಗ್ರತೆಯಲ್ಲಿ ಹೊಡಿಸಿಕೊಂಡು ಭುಜಂಗಸಿ ದಾರಿಯಲ್ಲಿರುವ ಸ್ಥಳ ಪುರಾಣಗಳನ್ನು ವಿಶದವಾಗಿ ತಿಳಿಸುತಬಂದರು.

—o—

ಮ ರಾ|| ಕರ್ನಾಟಕಪ್ರಕಾಶಿಕಾ ಎಡಿಟರವರ ಸನ್ನಿಧಿಗೆ

ಅಯ್ಯಾ,—ಹಾಜೀ ಮಜಕೂರ್ ೫ನೇ ತಾ|| ಮಂಗಳವಾರದ ಮೈಸೂರು ಬೆತಾಬೋಧಿನೀ ಎಂಬ ಪತ್ರಿಕೆಯು, ಶ್ರೀಮನ್ಮಹಾರಾಜರವರ ಸರಸ್ವತೀ ಪ್ರಾಸಾದವೆಂಬ ಸಂಸ್ಕೃತ ವಿದ್ಯಾಶಾಲೆಯ ವಿಷಯವಾದ ಕೆಲವು ಹೊಸಸಮಾಚಾರಗಳು ಪ್ರಕಟಿಸುವಾಗ, ಅನೇಕ ನಾಯಕಗಳಾದ ಕೆಲವೃತ ಬ್ರಹ್ಮ ಪ್ರಯೋಗಗಳಿಂದ ಮಹಾರಾಜಶ್ರೀ ದಿವಾನ್ ಕೆ. ಶೇಷಾದ್ರಿ ಅಯ್ಯರವರನ್ನೂ, ಮಹಾರಾಜಶ್ರೀ ಚಿದಂಬರಯ್ಯರವರನ್ನೂ ವಿಶೇಷವಾಗಿ ದೂಷಿಸಿರುವದಲ್ಲದೆ, ಆಸಂದರ್ಭದಲ್ಲಿ ದೇಶಾಂತರದಿಂದ ಬಂದಿರುವ ಶ್ರೀ. ಉ. ಪಂಡಿತ ಭಾಷ್ಯಾಚಾರ್ಯರು ಹಿಂದಿನ ಶುಕ್ರವಾರದ ದಿನ ಪುರಾಣ ವಿಷಯವಾಗಿ ಉಪನ್ಯಾಸ ಮಾಡಿದ್ದದನ್ನೂ, ಅವರಿಕ್ಕಾಗಿ, ಮೈಸೂರು ಸದ್ವಿದ್ಯಾಶಾಲಾಧ್ಯಕ್ಷರಾದ ಶ್ರೀ. ಉ. ವಿದ್ವಾನ್ ಪೆರಿಸ್ವಾಮಿ ತಿರುಮಲಾಚಾರ್ಯರವರು ಸಭಿಕರಿಗೆಲ್ಲ ಪ್ರತಿನಿಧಿಗಳಾಗಿ ಮಾಡಿದ ವಂದನೆಗಳನ್ನೂ ಪ್ರಕಟಿಸಿ, ಅದರಮೇಲೆ ಬರದಿರುವ ಸ್ವಾಭಿಪ್ರಾಯ ಪ್ರಕಟನಾ ವೈಚಿತ್ರ್ಯವು ಸಕಲಜನ ಶಿಷ್ಯನಾಗಿ ಲೇಖಕರ ಸ್ವರೂಪವಂ ಚನ್ನಾಗಿ ತಿಳಿಯಪಡಿಸುತ್ತದೆ. ಲೋಕದಲ್ಲಿ ಯಾವದಾದರೊಂದು ಅಭಿಪ್ರಾಯವಂ ನಿಶ್ಚೈಸುವದಕ್ಕೆ ಮುಖ್ಯವಾಗಿ, ವಕ್ತೃ ಸ್ವರೂಪ ವಚನಸ್ವರೂಪ, ವಿಷಯಸ್ವರೂಪ, ಶ್ರೋತೃ ಸ್ವರೂಪಗಳೆಂಬ ಈ ಸ್ವರೂಪ ಚತುಷ್ಟಯ ಪರಿಜ್ಞಾನವು ಅತ್ಯಾವಶ್ಯಕವಾದದ್ದೆಂದು ಸಕಲರೂಬಲ್ಲರು. ಈ ಪ್ರಕೃತ ವಿಷಯದಲ್ಲಿ ವಕ್ತೃ ಸ್ವರೂಪವಂ ವಿಚಾರಿಸಿದರೆ ಶ್ರೀಮದ್ ಭಾಷ್ಯಾಚಾರ್ಯರೆಂಬವರು ವೈದಿಕ ಲೌಕಿಕ ಉಭಯಮಾರ್ಗಗಳಲ್ಲಿಯೂ, ಒಳ್ಳೇ ವ್ಯುತ್ಪನ್ನರು, ತೆನುಗುದೇಶದವರು, ವಯೋವೃದ್ಧರು, ಇದುವರಿವಿಗೆ ಅನೇಕದೇಶಗಳಲ್ಲಿ ಸಂಚರಿಸಿ ಇರುವದರಿಂದಲೂ, ಸಾಧಾರಣವಾಗಿ ಲೋಕ ಮರ್ಯಾದೆಗಳನ್ನೆಲ್ಲ ಬಲ್ಲವರಲ್ಲೊಬ್ಬರಾಗಿರುವದರಿಂದಲೂ, ವಿಸ್ರಂಭಣೀಯವಚಸ್ಕರಾಗಿ ಯಶಸ್ಸಂಪಾದನೆಯಲ್ಲೇ ದತ್ತದೃಷ್ಟಿಯುಳ್ಳವರಾಗಿರುತ್ತಾರೆ. ಇವರು ಪ್ರಕೃತದಲ್ಲಿ ಕರ್ನಲ್ ಅಲ್ಕಾಟ್ ಯವರಿಂದ ಏರ್ಪಟ್ಟಿರುವ ಥಿಯೋಸಾಫಿಕಲ್ ಸೊಸೈಟಿ ಎಂಬ ಆರ್ಯ ಸಮಾಜದವರಲ್ಲಿ ಒಬ್ಬ ದೊಡ್ಡ ಪಂಡಿತರಾಗಿ ಏರ್ಪಟ್ಟಿದಾರೆ. ಇವರು ಸಂಸ್ಕೃತ ಭಾಷೆಯೊಳು ನಿರರ್ಗಳವಾದ ಒಳ್ಳೇ ಶಕ್ತಿಯೊಂದ "ಶ್ರುತಿಸ್ಮೃತಿಮಮೈವಾಜ್ಞಾ" ಎಂಬುತ ಭಗವದಾಜ್ಞಾ ರೂಪಗಳಾದ ಶ್ರುತಿ ಸ್ಮೃತಿಗಳನ್ನೇ "ಪ್ರವೃತ್ತ್ಯರ್ಥಂಭಯಾಯಚ" ಎಂಬಂತೆ ಸದಸತ್ಪ್ರವೃತ್ತಿನಿವೃತ್ತಿಪರಗಳಾಗಿ "ಇತಿಹಾಸಪುರಾಣಾಭ್ಯಾಂ ವೇದಂಸಮುಪಬೃಂಹಯೇತ್" ಎಂಬಂತೆ "ಸ್ಮೃತ್ಯರ್ಥವಾದಗಳಿಂದ ಉಪಬೃಂಹಣೀಯೈಃ" ವ್ಯಾಸಾದಿ ಮಹರ್ಷಿಗಳಿಂದ ಲೋಕಹಿತಾರ್ಥವಾಗಿ ಸಂಸ್ಕೃತ ಭಾಷೆಯಲ್ಲಿ ರಚಿಸಲ್ಪಟ್ಟ, "ವೇದಾಃ ಪ್ರಮಾಣಂ ಸ್ಮೃತಯಃ ಪ್ರಮಾಣಂ ಧರ್ಮಾರ್ಥಯುಕ್ತಂ ವಚನಂ ಪ್ರಮಾಣಮ್" ಎಂಬುದೆಯೂ, "ಧರ್ಮಜ್ಞಸಮಯಃ ಪ್ರಮಾಣಂ ವೇದಾಶ್ಚ" ಎಂಬುದೆಯೂ, ಇನ್ನೂ ಅನೇಕ ಶಾಸ್ತ್ರಗಳಿಗನುಗುಣವಾಗಿಯೂ ಲೋಕೋದ್ಧಾರ ಬದ್ಧಾದರರಾದ ಮಹಾಪುಣ್ಯಚರಿತರಾದ ಮಹರ್ಷಿಗಳಿಂದ ಉಪದೇಶಿಸಲ್ಪಟ್ಟ ಸಮಸ್ತ ಆಸ್ತಿಕಮಹಾ ಜನಗಳಿಂದಲೂ, ಪ್ರಾಮಾಣ್ಯೇನ ನಂಬಲ್ಪಟ್ಟಿರುವ ಪುರಾಣಗಳಲ್ಲಿ ಶ್ರುತಿ ಸ್ಮೃತಿ ವಿರುದ್ಧಾರ್ಥಗಳಾದ ಅನೇಕ ಭಾಗಗಳನ್ನು ಉದರಂಭರಿಗಳಾದ ಕೆಲವರು ಪೂರ್ವಿಕರು ಸ್ವೇಚ್ಛಾನುಗುಣವಾಗಿ ಶ್ಲೋಕಗಳನ್ನು ಮಾಡಿ ಸೇರಿಸಿರುವಂತೆ ತೋರುತಿದೆಯಾಗಿ, ಅಂಥಾ ವಚನಗಳನ್ನೆಲ್ಲ ತೆಗೆದುಹಾಕಿ, ಪ್ರಕೃತ ಜನಗಳಿಗುಪಯುಕ್ತಗಳಾಗಿಯೂ ಸುಲಭ ಸಾಧ್ಯಗಳಾಗಿಯೂ, ಇರುವ ಧರ್ಮಗಳನ್ನು ಪದೇಶಿಸುವವುಗಳನ್ನಾಗಿ ಏರ್ಪಡಿಸಬೇಕು, ಎಂಬದಾಗಿ ಉಪಪಾದಿಸಿದರು. ಶ್ರೀಮದ್ ಭಾಷ್ಯಾಚಾರ್ಯರು ಮಾಡಿದ ಉಪನ್ಯಾಸಕ್ಕಾಗಿ ಅಸಿಸ್ಟೆಂಟ್ ಇನ್ಸ್‌ಪೆಕ್ಟರ್ ಎಸ್. ರಂಗಾಚಾರ್ಯರ ಪ್ರೇರಣೆಯಿಂದ ಸಕಲಸಭಾ ಸದರಿಗೂ ಪ್ರತಿನಿಧಿಗಳಾಗಿ ಸದ್ವಿದ್ಯಾ ಶಾಲಾಧ್ಯಕ್ಷರಾದ ಪೆರಿಸ್ವಾಮಿ ತಿರುಮಲಾಚಾರ್ಯರು ಕೃತಜ್ಞತಾಸೂಚಕಗಳಾದ ವಂದನೆಗಳನ್ನು ಸಮರ್ಪಿಸುವಾಗ್ಯೆ, ಆವಂದಿತರ ಅಭಿಪ್ರಾಯವನ್ನು ಅನುವಾದಿಸಿ "ಪ್ರಬದ್ಧಂ ಸುಬದ್ಧಮ್" ಎಂಬಂತೆ ಅವರ ಉಪನ್ಯಾಸವನ್ನೇ ದೃಢಪಡಿಸಿದರು. ಆದರೆ ಇವರು ಪ್ರಾರಂಭಿಸುವಾಗ್ಯೆ, ಭಾಷ್ಯಾಚಾರ್ಯರು ಸ್ವಾಭಾವಿಕವಾಗಿ ಸ್ವಲ್ಪ ಚಪಲಮನಸ್ಕರಾದುದರಿಂದ "ಇವರು ನನ್ನನ್ನು ದೂಷಿಸಲೆತ್ನಿಸಿದಾರೆ, ಎಂದು ತಿಳದು ಇಂಗ್ಲಿಷ್ ಭಾಷೆಯಲ್ಲಿ ಹೇಳಿದ್ದನ್ನು ಕೇಳಿ ನಿಶ್ಚಯವೆಂದೆಣಿಸಿದ್ದಂತಾ ಮ|| ರಾ|| ಮರಿಹಲ್ಲಪ್ಪನವರ ಸ್ಕೂಲಿ ಹೆಡ್‌ಮಾಸ್ಟರ್ ವೆಂಕಟಕೃಷ್ಣಪ್ಪನವರು, ಇದು ಇಂಗ್ಲಿಷ್ ಸಭೆಯಾಗಿದ್ದು ಚೇರ್ ಮ್ಯಾನ್ ಅಪ್ಪಣೆ ಇಲ್ಲದೆ ಹೀಗೆ ಯಾರಾದರೂ ಚರ್ಚಿಸಿದ್ದೇ ಆದರೆ ತತ್ಕ್ಷಣ ಶಿಕ್ಷಿಸುತ್ತಿದ್ದರು" ಎಂದು ಹೇಳಿದರು. ಆದರೆ ಸಭೆಯು ಯಾವವಿಧದಲ್ಲಿಯೂ ಇಂಗ್ಲಿಷ್‌ಮರ್ಯಾದೆಯನ್ನು ಹೊಂದಿ

ಕಲಿಲ್ಲವು. ಇಲ್ಲಿ ಚೇರ್‌ಮ್ಯಾನ್, ಅಂದರೆ ಸಭಾನಾಯಕನನ್ನೇ ಏರ್ಪಡಿಸಿರಲಿಲ್ಲವು. ಮತ್ತು ತಿರುಮಲಾಚಾರ್ಯರು ಚರ್ಚೆಗಾಗಿಯೇನೂ ಉದ್ಯೋಗ ವಹಲಿಲ್ಲವು. ಸ್ಕೂಲು ಇನ್ಸ್‌ಪೆಕ್ಟರವರೂ ಮತ್ತು ಕೆಲವು ವಿದ್ವಾಂಸರುಗಳು ಸಹ ಈ ಭಾಷ್ಯಾಚಾರ್ಯರಿಗೆ ನಮ್ಮ ಕೃತಜ್ಞತಾ ಸೂಚಕಗಳಾದ ಕೆಲವು ಉಪಚಾರೋಕ್ತಿಗಳನ್ನು ಹೇಳಬೇಕೆಂದು ತಿರುಮಲಾಚಾರ್ಯರಿಗೆ ಹೇಳಿದ್ದರಿಂದ ಇವರು ಹೇಳಿದರೇ ಹೊರ್ತು ಸ್ವಾಭಿಪ್ರಾಯದಿಂದಲ್ಲ. ಆರಂಭದಲ್ಲಿ ಕೋಪಗೊಂಡ ಅದೇ ಭಾಷ್ಯಾಚಾರ್ಯರು ಅವರ ಉಪನ್ಯಾಸ ಪರ್ಯವಸಾನಕ್ಕೆ ಹೃದಯವು ವಿಕಾಸಗೊಳಸಿ, ಅವರೊಡನೆ ಅನೇಕ ವಿದ್ವಾಂಸರುಗಳನ್ನು ಉಪಚಾರೋಕ್ತಿಗಳಿಂದಭಿನಂದಿಸುತ ತಮ್ಮ ಮನೆಯವರಿಗೂ ಅವರೊಡನೆ ಸುಹೃತ್ಸಲ್ಲಾಪ ಮಾಡುತ ತೆರಳಿದರು. ಆದರೆ ಇವನ್ನು ಕೇಳುವದಕ್ಕೆ ಬಂದಿದ್ದ ಕೆಲವುಮಂದಿ ವಿದ್ಯಾರ್ಥಿಗಳೂ ವಿದ್ಯಾಭಿಮಾನಿಗಳು ಸಹ ದಾರಿಯಲ್ಲಿ ಮ|| ರಾ|| ವೆಂಕಟಕೃಷ್ಣಪ್ಪನವರು ಹೇಳಿದ ಮಾತನ್ನು ಕುರಿತು ಅಯುಕ್ತವೆಂದು ಜ್ಞಾಪಿಸಲಾಗಿ ಆ ದೊಡ್ಡಮನುಷ್ಯರು ನಾನು ದುಡಿಕಿಹೇಳಿದ್ದು ತಪ್ಪು, ಕ್ಷಮಿಸಿರಿ ಎಂದು ಮನ್ನಣೆ ಕೇಳಿಕೊಂಡು ಇನ್ನೂ ಕೆಲವು ಶಾಸ್ತ್ರಾರ್ಥ ವಿಷಯವಾಗಿ ಮಾತನಾಡುತ ಹೋಗುವಾಗ್ಯೆ ಭಾಷ್ಯಾಚಾರ್ಯರ ಮನೆಯಿಂದ ದಾರಿಯಲ್ಲಿ ಬರುತ್ತಿದ್ದ ತಿರುಮಲಾಚಾರ್ಯರು ಮಾತಾಡಿಸಲಾಗಿ, ಸ್ವಾಮಿ! ನಾನು ಈದಿನನಿಮ್ಮ ವಿಷಯದಲ್ಲಿ ಒಂದುಮಾತು ದುಡಿಕಿ ಹೇಳಿದ್ದೆನಾದದರಿಂದ ನನ್ನ ತಪ್ಪನ್ನು ಸ್ನೇಹದೃಷ್ಟಿಯಿಂದ ಮನ್ನಿಸಬೇಕೆಂದು ಕೇಳಿ ಉಭಯರೂ ಸಂತೋಷವಾಗಿಯೇ ಮನೆಗಳಿಗೆ ಹೋದರು. ಶ್ರೀಮಾನ್ ತಿರುಮಲಾಚಾರ್ಯರು ಮಿಷನೆರಿಗಳ ವಿಷಯದಲ್ಲಿ ಹೇಳಿದ್ದು ಅಯುಕ್ತವೆಂತಲೂ, ಮಿಷನೆರಿಗಳು ಬಾಲಕರನ್ನು ಎಂದಿಗೂ ಬಲಾತ್ಕರಿಸಿ ತಮ್ಮ ಕ್ರಿಸ್ತಮತಕ್ಕೆ ಸೇರಿಸುವದಿಲ್ಲ, ನ್ಯಾಯವಾಗಿಯೇ ಸೇರಿಸಿಕೊಳ್ಳುವರು, ಎಂದು ಹೇಳಿ, ಮಿಷನೆರಿಗಳಲ್ಲಿ ಮಮತೆಯಂ ತೋರಿಸಲಿಕ್ಕೆ ಸಹರೀ ಪತ್ರಿಕಾ ಲೇಖಕರಿಗೆ ಈ ಉಪನ್ಯಾಸಾಭಿಪ್ರಾಯವು ತಿಳಿಯಲುಪಯುಕ್ತವಾದ ಸಂಸ್ಕೃತ ಭಾಷಾ ಪರಿಚಯವಿಲ್ಲದೆ ಇದ್ದದ್ದೇ ಕಾರಣವೆಂದೆಣಿಸುತ್ತೇನೆ. ಮಿಷನೆರಿಗಳು ಜನಗಳನ್ನು ತಮ್ಮ ಮತಕ್ಕೆ ಸೇರಿಸುವವರಲ್ಲಿ ಎಂದಿಗೂ ಬಲಾತ್ಕಾರದಿಂ ಪ್ರಯತ್ನ ನಡುವದಿಲ್ಲ, ಎಂಬ ವಿಷಯದಲ್ಲಿ ಕೋಟ್ಯಂತರ ಉದಾಹರಣೆಗಳು ವಾಚಕರಿಗೆ ತಿಳಿಯದೇ ಇಲ್ಲ. ಸ್ವಲ್ಪ ದಿವಸಗಳ ಹಿಂದೆ ಈ ಮೈಸೂರು ನಿವಾಸಿಯಾಗಿ ಉಪಾದಾನದಿಂಜೀವಿಸುತಲಿರುವ ಒಬ್ಬ ಬಡಬ್ರಾಹ್ಮಣನಿಗೆ ಒಬ್ಬನೇ ಮಗನಿದ್ದನು. ಆಪ್ರಾಣಿಯು ಹುಟ್ಟಿದ್ದು ಮೊದಲು ಕ್ರಿಸ್ತರ ಸಹವಾಸವಿಲ್ಲದೆ ಕ್ರಿಸ್ತುಮತ ಬೋಧಕಗಳಾದ ಬೈಬಲ್‌ಗಳನ್ನು ಓದದೆ ಬ್ರಾಹ್ಮಣ್ಯದಲ್ಲಿದ್ದುಕೊಂಡು, ಉಪನೀತನಾಗಿ, ವಿವಾಹಿತನಾಗಿ ೧೬ವರ್ಷ ವಯಸ್ಸಿನಾದಮೇಲೆ ಈ ಹುಡುಗನನ್ನು ಅವರ ತಂದೆತಾಯಿಗಳಿಗೆ ತಿಳಿಯದಂತೆ ಮೋಸಗೊಳಿಸಿ ೮—೧೦ದಿನಗಳು ಹೊರಕ್ಕೆ ಬಿಡದೆ ಇಟ್ಟುಕೊಂಡಿದ್ದು ಅವನಿಗೆ ನಾನಾವಿಧವಾದ ದುರಾಶೆಗಳನ್ನು ತೋರಿಸಿ, ತಲೆಬೋಳಿಸಿ, ಮದ್ಯ ಮಾಂಸಗಳನ್ನು ನೋಡುವದಕ್ಕೆ ಸಹ ಹಿಂದೆಗೆಯುವ ಸ್ವಭಾವವುಳ್ಳವನಾದ್ದರಿಂದ ಆಹೊಲ ಹುಡುಗರೊಡನೆ ಊಟಮಾಡಲಸಹ್ಯಪಟ್ಟ ಈ ಹುಡುಗನನ್ನು ಬೇರೊಬ್ಬ ೧೦—೧೨ ವರ್ಷಗಳ ಸರ್ವಿಸ್‌ಉಳ್ಳ ಜಾತಿಭ್ರಷ್ಟನ ಮನೆಯಲ್ಲಿ ಕೆಲವು ದಿವಸ ಊಟಮಾಡಿಸುತಿದ್ದು ಕ್ರಮವಾಗಿ ಆ ಹೊಲಗುಂಪಿಗೆ ಅಟ್ಟಿದರು. ಈ ವರ್ತಮಾನವನ್ನು ಕೇಳಿದ ಅವರ ತಂದೆತಾಯಿಗಳು ಬಂದು ಕೇಳಿದರೂ ಬಿಡುವದಿಲ್ಲವೆಂದು ಹೇಳಿದರು. ಆ ಭ್ರಷ್ಟಹುಡುಗನು ತಮ್ಮ ತಂದೆತಾಯಿಗಳ ಗೋಳನ್ನೂ, ತನ್ನ ದುರವಸ್ಥೆಯನ್ನೂ ನೋಡಿ ಸಹನೆಗೊಳ್ಳದ ತನ್ನ ಕರುಳಿನ ಕರುಣೆಗಾಗಿ ಅವರಬಳಿ ಹೋಗುತಿದ್ದರೆ, ಬ್ಯಾಡ, ಹೋಗಕೂಡದು ಎಂದು ಯೆಳೆದುಕೊಂಡು ಅವನನ್ನು ನಿಶ್ಶಂಕೆಯಿಂದ ಅಟ್ಟ ಕಳುಹಿಸಿದರು. ಇಂತಾ ಕೆಲಸಗಳನ್ನು ಆಗಾಗ್ಯೆ ನಡೆಸುತಲಿರುವ, ರೆವರೆಂಡ್ ಹಾರ್ಕ್ ಸಾಹೇಬರು ಮಿಷನೆರಿಯಲ್ಲವೆ, ಇಂತಾ ಹುಡುಗರು ಬಾಲ್ಯ ವಯಸ್ಕರಲ್ಲವೆ, ಈಕೆಲಸ ಬಲಾತ್ಕಾರದಿಂದ ನಡೆದದ್ದಲ್ಲವೆ? ಇದೇರೀತಿಯಾಗಿ ನಡೆದ ಅನೇಕಗಳನ್ನು ನಾವುಗಳೇ ನೋಡಿರಲಿಲ್ಲವೆ, ನೋಡುತ್ತಾ ಇಲ್ಲವೆ. ಹೀಗೆಇದ್ದವಾದರೆ ಮುಂದೆ ಎಷ್ಟು ನೋಡಲಾರೆವು. ಆದರೆ ಈಹೊಸಹುಡುಗನವಿಷಯದಲ್ಲಿ ತುಂಬಾ ಕನಿಕರದಿಂದ ಮ|| ರಾ|| ಎಮ್. ಕಾಮರಾವ್. ಎಂ. ಎ. ಯವರು ಇವನನ್ನು ಬಿಡಿಸಿ ಪ್ರಾಯಶ್ಚಿತ್ತಾದಿಗಳಂ ಮಾಡಿಸಿ ಉದ್ಧಾರಮಾಡುವದಕ್ಕೆ ಪ್ರಯತ್ನಿಸಿರುವಂತೆ ಕೇಳುತ್ತೇನೆ. ಆದರೆ ಇದು ಈ ಊರಲ್ಲಿ ಮಾತ್ರವೇ ಅಲ್ಲ. ಕೆಲವು ತಿಂಗಳಹಿಂದೆ ಮದರಾಸ್ ಮಿಲ್ಲರ್‌ಸ್ಕೂಲ್, ಎಂಬ ಕ್ರಿಶ್ಚಿಯನ್ ಕಾಲೇಜ್‌ನಲ್ಲಿ ಓದುತ್ತಿದ್ದ ಸುಬ್ರಾಯಶಾಸ್ತ್ರಿಯ ಸಂಗತಿಯೂ, ಆಗ ನಡೆದ ಆ ಸ್ಕೂಲ್ ಬೆಂಕಿಗೆ ಮೂಲಭೂತವಾದ ದೂಷಣೆ ಮೊದಲಾದ ಎಲ್ಲಾ ಸಂಗತಿಗಳೂ ವಾಚಕರಿಗೆ ತಿಳಿದಿರುತ್ತೆ. ಆದದ್ದರಿಂದ ವಾಚಕರೇ! ಮುಖ್ಯವಾಗಿ ಈ ಮಿಷನೆರಿಗಳು ಈ ದೇಶಕ್ಕೆ ಬಂದಲಾಗಾಯತು ಯಾವವಿಧದಲ್ಲಿ ನಮ್ಮಗಳನ್ನು ತೊಂದರೆ ಪಡಿಸುತಲಿದಾರೋ ಅದು ಪ್ರಸಿದ್ಧವಾಗಿಯೇ ಇದೆ. ಹೀಗಿರುವಾಗ್ಯೆ ಮಿಷನೆರಿಗಳ ವರ್ತನವು ಚಿಂತಾಮಣಿಗೆ ಹಿತವಾಗಿರುವದಕ್ಕಾಗಿ ಬಹಳ ಆಶ್ಚರ್ಯಪಡಬೇಕಾಗಿರುತಿದೆ.

ಸರ್ವಧಾರಿ ಸಂವತ್ಸರ ಜ್ಯೇಷ್ಠ ಶುಕ್ಲ ೧೨ ಗುರುವಾರದಲ್ಲೂ } ತಮ್ಮ ವಿಧೇಯನಾದ ಸ ರಾಮಸ್ವಾಮಿಶಾಸ್ತ್ರಿ ಸ ವಿ ಮೈಸೂರು

SUMMARY OF NEWS.

ವೃತ್ತಾಂತ ಸಂಗ್ರಹ.

ಹೈದರಾಬಾದ್ ಸರಕಾರಕ್ಕೂ ಇಂಗ್ಲಿಷ್ ಸರಕಾರಕ್ಕೂ ತಂತೀ ಮೂಲಕ ಕರೆಸ್ಪಾಂಡೆನ್ಸ್ ನಡೆಯುತಿದ್ದದರಿಂದ ಅದನ್ನು ಅಬ್ದುಲ್‌ಹಕ್ಕನ ಕಡೆಯವರಿಬ್ಬರು ತಿಳಿದು ತಮ್ಮ ಯಜಮಾನನಿಗೆ ಸಹಾಯ ಮಾಡಬೇಕೆಂಬ ಆಲೋಚನೆಯಿಂದ ಮಧ್ಯಮಾರ್ಗದಲ್ಲಿ ಕರೆಸ್ಪಾಂಡೆನ್ಸ್ ನಡೆಯದಂತೆ ಆತಂಕ ಪಡಿಸಿದರು. ಅದಕ್ಕಾಗಿ ಅವರನ್ನು ಖೈದ್ ಮಾಡಿರುವಂತೆ ತಿಳಿಯಬರುತಿದೆ.

“ಮಹಾರಾಣಿ” ಎಂಬ ಒಂದು ಮಾಸಪತ್ರಿಕೆಯು ಮದರಾಸಿನಲ್ಲಿಪ್ರಕಟಿಸಲ್ಪಡುತ್ತಲಿದೆಯಷ್ಟೆ. ಅದರಗುಣಾವಗುಣಗಳನ್ನುಕುರಿತು ಯಾರೋಒಬ್ಬರುಬರೆದಿರಲು ಅವರ ವಿಷಯವಾಗಿ ಅಲ್ಲಿನ ಒಬ್ಬ ಪತ್ರಿಕಾಕರ್ತರು ಅಸಂಬದ್ಧ ಪ್ರಲಾಪಗಳನ್ನು ಮಾಡಿದ್ದಕ್ಕಾಗಿ ಜನಗಳೆಲ್ಲರೂ ಅವರವಿಷಯದಲ್ಲಿ ಅತ್ಯಂತ ಅಸೂಯೆಗೊಂಡು ಆ ಪತ್ರಿಕಾಕರ್ತರ ಹಾಗೆ ಒಂದು ಪ್ರತಿಮೆಯನ್ನು ಮಾಡಿ ಅದನ್ನು ಬಹಿರಂಗವಾಗಿ ಸುಟ್ಟರೆಂದು ಒಂದುಇಂಗ್ಲಿಷಪತ್ರಿಕೆಯಿಂದ ತಿಳಿಯಬರುತಿದೆ.

ಸ್ವಲ್ಪ ದಿನಗಳಕೆಳಗೆ ಕೊಲ್ಹಾಪುರದಲ್ಲಿ ಮೈನೆರದು ಗಂಡನೊಡನೆ ಸೇರಿ ಸಂಸಾರ ಮಾಡುತಿದ್ದ ತರುಣಿ ಯೊಬ್ಬಳು ತವರುಮನೆಯಲ್ಲಿದ್ದಾಗ್ಯೆ ವಿದ್ಯಾಭ್ಯಾಸ ಮಾಡುವದಕ್ಕೆ ಪಾಠಶಾಲೆಗೆ ಹೋಗುತಿದ್ದಳು. ಒಂದು ದಿವಸ ಅವಳು ಪುಸ್ತಕಗಳನ್ನು ತೆಗೆದುಕೊಂಡು ಪಾಠಶಾಲೆಗೆ ಹೋಗುತಿರುವದನ್ನು ನೋಡಿ ಅವಳ ಗಂಡನು ಅವಳನ್ನು ತನ್ನ ಮನೆಗೆ ಕರೆದುಕೊಂಡು ಹೋದನು. ಮಾರನೇ ದಿವಸ ಅವಳು ಶಾಲೆಗೆ ಬಾರದ ಕಾರಣವನ್ನು ತಿಳಿದುಕೊಂಡುಉಪಾಧ್ಯಾಯನು ಅವಳಗಂಡನನ್ನು ಪೋಲೀಸಿಗೆ ಕಳುಹಿಸಿ ಬಿಡಿಸಿದನು. ಹೆಂಡತಿಯನ್ನು ಪಾಠಶಾಲೆಗೆ ಕಳುಹಿಸದೆ ಮನೆಯಲ್ಲಿಟ್ಟುಕೊಂಡದ್ದು ಗಂಡನು ಮಹದನ್ಯಾಯ ಮಾಡಿದಂತಾಯಿತಷ್ಟೆ.

ಅಮೇರಿಕಾ ಖಂಡದ ನ್ಯೂಗಿನೀ ಪಟ್ಟಣದಲ್ಲಿ ಒಬ್ಬ ಹುಡುಗನು ಸಮುದ್ರದ ಬಳಿಯಲ್ಲಿ ಓಡ್ಯಾಡುತಿದ್ದನು. ಸಮೀಪದಲ್ಲಿ ಒಂದು ದೊಡ್ಡ ಮೊಸಳೆಯು ಬಂದು ಆ ಹುಡುಗನನ್ನು ಕೊಂದು ಅವನ ಅರ್ಧ ಶರೀರವನ್ನು ತಿಂದಿತು. ಅಷ್ಟರಲ್ಲಿಯೇ ಅವನ ತಂದೆ ತಾಯಿಗಳು ಆ ಸಮಾಚಾರವನ್ನು ಕೇಳಿ ಆಸ್ಥಳಕ್ಕೆ ಓಡಿಬಂದು ಆ ಮೊಸಳೆಯನ್ನು ಹಿಡಿದು ಅದು ಕೊಂದುತಿಂದಿದ್ದ ಅರ್ಧ ಶರೀರವನ್ನು ಈಚೆಗೆ ತೆಗೆದುಕೊಂದರು. ತಮ್ಮ ದುಃಖದಲ್ಲಿ ಯಾವವನ್ನೂ ಯೋಚಿಸದೆ ಉಳಿದಿದ್ದ ಮಗುವಿನ ಅರ್ಧಶರೀರವನ್ನು ತಾವೇ ತಿಂದುಹಾಕಿಬಿಟ್ಟರಂತೆ. ಮೊಸಳೆಗೂ ಇವರಿಗೂ ಭೇದವೇನು?

ಕಲ್ಕತ್ತೆಗೆ ಸಮೀಪದಲ್ಲಿರುವ ಒಂದು ಗ್ರಾಮದಲ್ಲಿ ಕೆಲವು ದಿವಸಗಳಹಿಂದೆ ಒಂದು ಕಳವು ನಡೆಯಿತು. ಆ ಕಳ್ಳತನಕ್ಕೆ ಒಬ್ಬ ಹುಡುಗನುಕೂಡ ಸೇರಿದ್ದನೆಂದು ಅವನನ್ನು ಹಿಡಿದುಕೊಂಡು ಬಂದು ಪೋಲೀಸ್ ಇನ್ಸ್‌ಪೆಕ್ಟರ್ ಬಾಯ್ಡ ಎಂಬುವನೂ ಇತರ ಪೋಲೀಸಿನವರು ಸಹ ಸೇರಿಕೊಂಡು, ಆಹುಡುಗನ ಬಾಯಲ್ಲಿ ಕಳವು ನಿಜವೆಂದು ಹೇಳಿಸಬೇಕೆಂದು ಬಲಾತ್ಕಾರದಿಂದ ದಂತಾನಿಗೆ ಕಟ್ಟಿದ್ದಹಗ್ಗದಿಂದ ಹುಡುಗನ ಹೆಬ್ಬೆಟ್ಟನ್ನು ಕಟ್ಟಿ ಅವನನ್ನು ನೇತಾಡುವಹಾಗೆ ಇಳೇಬಿಟ್ಟು ಹೊಡಿಯುತ್ತಿದ್ದರು. ಇದುಮೇಲಿನ ಅಧಿಕಾರಿಗಳಿಗೆ ತಿಳಿದು ಸದರಿ ಇನ್ಸ್‌ಪೆಕ್ಟರನ್ನೂ, ಆ ಮೂವರನ್ನೂ ದರ್ಖಾಸ್ತಿಬಗ್ಯೆ ಸೆಷನ್ ಕೋರ್ಟಿಗೆ ಕಮ್ಮಿಟ್ ಮಾಡಿದರೆಂದು ಕೇಳುತ್ತೇವೆ

ಹೈದರಾಬಾದ್ ನಿಜಾಮರವರಬಳಿ “ದಾಸ್ರುದ್ ಮಿರ್ಜಾ,” ಎಂಬ ಒಬ್ಬ ಮುಸಲ್ಮಾನ್ ಜ್ಯೋತಿಷ್ಯನುಬಂದು ಸೇರಿಕೊಂಡು ತನ್ನ ಮದುರವಾಕ್ಯಗಳಿಂದಲೂ, ಯುಕ್ತಿ ಸಾಮರ್ಥ್ಯದಿಂದಲೂ, ಅವನಿಗೆ ತನ್ನ ವಿದ್ಯೆಯಲ್ಲಿ ನಂಬಿಕೆಯನ್ನುಂಟುಮಾಡಿ ಅವರಿಂದ ಮಾಹೇಯಾನ ಸಾವಿರದ ನೂರುರೂಪಾಯಿ ಸಂಬಳವನ್ನು ಪಡೆಯುತಲಿದಾನೆ. ಇದೂ ಅಲ್ಲದೆ ಮತ್ತೊಂದು ಸಂದರ್ಭದಲ್ಲಿ ೧೦ಸಾವಿರ ರೂಪಾಯನ್ನು ನಿಜಾಮರವರಿಂದ ಬಹುಮಾನವಾಗಿ ಪಡೆದನೆಂಬದಾಗಿ ಹೈದರಾಬಾದ್ ರಿಕಾರ್ಡ್, ಎಂಬ ಪತ್ರಿಕೆಯಿಂದ ತಿಳಿಯಬರುತಿದೆ. ಹೋಲ್ಕರ್ ಮಹಾರಾಜರವರು ಜ್ಯೋತಿಷ್ಯರ ಮಾತನ್ನು ಕೇಳಿ ಬಹಳ ಸಮರ್ಥರಾದ ತಮ್ಮ ಮಂತ್ರಿಗಳಾಗಿದ್ದ ದಿವಾನ್ ಬಹದೂರ್ ರಘುನಾಥರಾಯರನ್ನು ಕಳೆದುಕೊಂಡರು. ನಿಜಾಮರವರಿಗೆ ಜ್ಯೋತಿಷ್ಯರಿಂದ ಮುಂದೆ ಯಾವ ಕ್ಷೇಮ ಸಂಭವಿಸುವದೋ ಯೋಚಿಸಬೇಕಾಗಿದೆ.

EXTRACTS.

ಮತ ವೈಷಮ್ಯ.

ಶ್ರೀ ಶೃಂಗೇರಿ ಜಗದ್ಗುರುಗಳನ್ನೂ, ಚಂದ್ರಮೌಳೀಶ್ವರನನ್ನೂ ಇನ್ನೂ ಇತರ ಅನೇಕ ಶಿವದೇವಸ್ಥಾನಗಳನ್ನು ಸಹ ಮಧ್ವರಾಮಾನುಜಮತಸ್ಥರು ನಿಂದಿಸುತಲಿರುತ್ತಾರೆ. ಮಾಧ್ವರ ಗುರುಗಳನ್ನೂ, ಮತ ಗ್ರಂಥಗಳನ್ನೂ, ಅಂಗಾರ ಮುದ್ರೆಗಳನ್ನು ಸಹ ಸ್ಮಾರ್ತ ರಾಮಾನುಜ ಮತಸ್ಥರು ದೂಷಿಸುತ ಕರ್ಮ ಭ್ರಷ್ಟರೆಂದು ದ್ವೇಷಿಸುತಲಿರುತ್ತಾರೆ. ಯಾದವಾದ್ರಿ, ಶ್ರೀರಂಗ, ತಿರುಪತಿ ಮುಂತಾದ ದಿವ್ಯ ಸ್ಥಳಗಳನ್ನೂ, ನಾಮಧಾರಿಗಳನ್ನು ಸಹ ಲಿಂಗಾಯತರೂ, ವೈಷ್ಣವರೂ, ಜೈನರೂ ನಿಂದಿಸದಿರುವದಿಲ್ಲವು. ಮಕ್ಕಾ, ಮದೀನಾ, ಖುರಾನ್, ಮಹಮದ್ ಇತ್ಯಾದಿಗಳಲ್ಲಿ ಹಿಂದೂಜನರು, ಕ್ರಿಶ್ಚಿಯನ್ನರು, ಜೈನರು,ಬೌದ್ಧಾದಿಗಳು ಸ್ವಲ್ಪವಾದರೂಭಕ್ತಿಯಂ ತೋರಿಸುವದಿಲ್ಲವು. ಕ್ರಿಶ್ಚಿಯನ್ನರು ಲೋಕರಕ್ಷಕನೆಂದು ಕರೆಯುವ ಏಸುಕ್ರಿಸ್ತನನ್ನೂ, ಸತ್ಯವೇದವೆಂಬ ಬೈಬಲನ್ನೂ ತನ್ಮತಾವಲಂಬಿಗಳಾದ ಗುರು ಜನಗಳನ್ನೂ ದೇವಸ್ಥಾನ ಮುಂತಾದವುಗಳನ್ನೂ ಹಿಂದೂ ಮಹಮದಿಯನ್, ಜೈನ, ಬೌದ್ಧಾದಿ ಮತಸ್ಥರು ಬಹಳ ನಿಕೃಷ್ಟವಾಗಿ ನೋಡುವರು. ಗೌತಮ ಬುದ್ಧನ ಉಪದೇಶವನ್ನೂ ಜ್ಞಾನವನ್ನೂ ಆರ್ಹತದರ್ಶನವನ್ನೂ ಆ ದೇವಾಲಯಗಳನ್ನು ಸಹ ಬ್ರಾಹ್ಮಣರೂ ಲಿಂಗಾಯತರೂ ಕ್ರಿಸ್ತರೂ ಮುಸಲ್ಮಾನರೂ ಅನವರತ ದೂಷಿಸುತ ನಾಸ್ತಿಕರೆಂದು ಅವರು ಬಹಳ ನಿಕೃಷ್ಟವಾಗಿ ನೋಡುವರು. ಶ್ರೀಗಿರಿ, ಕಲ್ಯಾಣ,ಬಸವ, ಚೆನ್ನಬಸವ, ಭಸ್ಮ,ರುದ್ರಾಕ್ಷಿ, ಲಿಂಗಾರ್ಚನೆ, ಲಿಂಗ ಧಾರಣೆ ಈ ಪುರಾಣಗಳು, ಆಚಾರಗಳು ಸಹ ಬ್ರಾಹ್ಮಣ ವೈಷ್ಣವ, ಕ್ರಿಶ್ಚಿಯನ್, ಜೈನ, ಬೌದ್ಧಾದಿ ಮತದವರಿಗೆ ಬಹಳ ಅಸಹ್ಯಕರವಾಗಿರುತಿವೆ. ಕ್ರಿಶ್ಚಿಯನ್ ಮತಸ್ಥರು ಬಹುಭಯ ಭಕ್ತಿಯಿಂದ ಕಾಣುವ ಬೈಬಲ್ ಎಂಬ ವೇದ ಪುಸ್ತಕವನ್ನು ಹರದು ನಮ್ಮವರು ಮಕ್ಕಳ ಹೇಲನ್ನು ಎತ್ತಿ ಬಿಸಾಡುವರು. ಬ್ರಾಹ್ಮಣರು ಮಡಿಯಿಂದ ಬಹು ಭಕ್ತಿಯೊಡನೆ ಪಾರಾಯಣ ಮಾಡತಕ್ಕಗ್ರಂಥಗಳನ್ನು ವೈಷ್ಣವರು ಹೊಲರು ಕಾಲ್ಗಳಿಂ ದೆಸೆದುಬಿಡುತ್ತಾರೆ. ಹಿಂದೂಮತಸ್ಥರ ವೇದಗಳು ಮತ್ತೊಂದು ಮತದವರಿಗೆ ಬಹಳ ಅಸಹ್ಯ ಮತ್ತು ನಿಕೃಷ್ಟವಾಗಿರುತಿವೆ. ಕ್ರಿಶ್ಚಿಯನ್ ಮತಸ್ಥರು ಮೂರು ಸಂಗಡವಾಗಿ ಏರ್ಪಟ್ಟ ಒಬ್ಬರನ್ನೊಬ್ಬರು ಮೆಚ್ಚದೆ ದೂಷಿಸಿ ವಿರೋಧಿಸುತ್ತಾರೆ. ಮಹಮ್ಮದಿಯರಲ್ಲಿ ಎರಡುವಿಧವಾಗಿ ಒಬ್ಬರಿಗೊಬ್ಬರು ಶತ್ರುಗಳಾಗಿದ್ದಾರೆ. ಜೈನರಿಗೂ ಬೌದ್ಧರಿಗೂ ಮಹಾದ್ವೇಷವು. ಬ್ರಾಹ್ಮಣರಲ್ಲಿ ಮೂರುಭಾಗವಾಗಿ ಒಬ್ಬರಮರಣಕ್ಕೆ ಮತ್ತೊಬ್ಬರ ಕೃತಕೃತ್ಯರಾಗಿರುತ್ತಾರೆ ಲಿಂಗಾಯತರಲ್ಲಿಯೂ ಶೈವರಲ್ಲಿಯೂ ಭೇದಗಳೂ ವೈರಗಳೂ ಅನೇಕವಾಗಿ ಇಲ್ಲದಿರಲಿಲ್ಲವು ಆಯಾ ಮತಸ್ಥರು ತಮಗೆ ಬೇಕಾದ ಮಹಾಸ್ಥಳಗಳನ್ನು ನಾನಾವಿಧವಾಗಿ ಹೇಳಿಕೊಂಡು ಅವುಗಳ ಮಾಹಾತ್ಮ್ಯವ ಇತರ ಜನರಿಗೂ ಬೋಧಿಸುವರು. ಇಷ್ಟುವಿಲ್ಲ ಸ್ಥಳಗಳನ್ನೂ ದೇವರುಗಳನ್ನೂ ವೇದಗಳನ್ನೂ ಗುರುಗಳನ್ನೂ ದೂಷಿಸಿ ಛೀ! ಛೀ! ಛೀ! ಅವುಗಳನ್ನು ನೋಡಬಾರದು, ಅಂಟಬಾರದು, ಮುಟ್ಟಬಾರದು, ಮಹಾ ಪಾಪವೆಂತ ತಿಳಿಸುತಲಿರುರು. ಜಯಿನರ ದೇವಸ್ಥಾನಗಳಲ್ಲಿ ಬ್ರಾಹ್ಮಣರು ಕಾಲೂರಲೇ ಕೂಡದೆಂದು ನುಡಿಯುವಷ್ಟರ ಬರ್ಂದವು ಮತದ್ವೇಷದಿಂದಲ್ಲದೆ ಮತ್ಯಾವಕಾರಣದಿಂದಿರುವದು? ಬುದ್ಧಿವಂತರದಂಚನ್ನಾಗಿ ಆಲೋಚಿಸಬಹುದು. ಸತ್ಯವನ್ನೂ ನಿಶ್ಚಯಜ್ಞಾನವನ್ನೂ ಉಳ್ಳ ಜಯಿನ ಪಂಡಿತರನ್ನು ಶಂಕರಾಚಾರ್ಯರೂ ರಾಮಾನುಜಾಚಾರ್ಯರು ಸಹ ಆಗಿನ ಅರಸರ ಸಹಾಯದಿಂದ ಹಿಂಸೆ ಪಡಿಸಿ ಕಲ್ಲಗಾಣಕೆಗೆ ಹಾಕಿಸಿ, ಅವರು ಪಡುತಿದ್ದ ಪ್ರಯಾಸವನ್ನು ನೋಡಿ ತಮ್ಮ ಜಯ ಈ ಪ್ರೀತಿಯೆಂದು ಆನಂದಪಟ್ಟರಂತೆ. ಇದು ಮತದ್ವೇಷವಲ್ಲೋ ಮತ್ತೇನು? ಕ್ರಿಶ್ಚಿಯನ್ನರು ತಮ್ಮ ಮತಪ್ರಚಾರಕ್ಕಾಗಿ ಗರ್ಭಿಣೀಸ್ತ್ರೀಯನ್ನು ಮರಕ್ಕೆ ಕಟ್ಟಿ ಅವಳಗುದ ಮುಂದೆ ಗರ್ಭವನ್ನು ಸೀಳಿದುದೆಯೂ, ಇನ್ನೂ ನಾನಾವಿಧ ಚಿತ್ರ ಹಿಂಸೆಗಳಿಂದ ಕೊಂದುದೆಯೂ ಅವರ ರಕ್ತಸಾಕ್ಷಿ ಎಂಬ ಪುಸ್ತಕದಿಂದ ತಿಳಿಯಬರುತ್ತೆ. ತಮ್ಮದೇವರು, ತಮ್ಮಗುರುವು, ತಮ್ಮವೇದ, ತಮ್ಮ ಆಚಾರವೆಂಬ ದುರಭಿಮಾನವು ಜನಗಳಿಗೆ ಮೌಢ್ಯದಿಂದುಂಟಾಗುತಿವೆಯೆ ಹೊರ್ತು ಬೇರಿಲ್ಲವು. ಇದುವರಿವಿಗೆ ಎಷ್ಟು ಮತಸ್ಥಾಪಕರು ಗತಿಸಿಹೋದರೋ, ಎಷ್ಟು ಜನರಾಜರು ಆಳಿದರೋ, ಎಷ್ಟು ದೇವಾಲಯಗಳು ಕಟ್ಟಲ್ಪಟ್ಟವೋ, ಎಷ್ಟು ದೇವಾಲಯಗಳ ನಾಶಗಳಾಗಿ ಗೋರಿಗಳಾಗಿಯೂ ಅರಮನೆಗಳಾಗಿಯೂ ಏರ್ಪಟ್ಟವೋ, ಎಷ್ಟು ಜನರು ತಮ್ಮ ಮತವನ್ನಗಲಿ ಅನ್ಯ ಮತಗಳನ್ನವಲಂಬಿಸಿರೋ, ಎಷ್ಟು ಜನರು ತಮ್ಮ ಮತವೇ ನಿಜವೆಂದು ದೃಢಭಕ್ತಿಯಿಂದನಂಬಿ ನಾನಾವಿಧ ಶ್ರಮಗಳನ್ನನುಭವಿಸಿ ಕಾಲವಶರಾದರೋ, ಎಷ್ಟು ಜನಗಳು ಅನ್ಯ ದೇಶಗಳಿಗೆ ಕರೆಯಾಗಿ ಒಯಲ್ಪಟ್ಟರೋ ಯಾರುಬಲ್ಲರು! ಮುಖ್ಯವಾಗಿ ಮತ ಪಕ್ಷಕ್ಕಾಗಿ ಅಭಿಮಾನವನ್ನೈದಿ ವ್ಯರ್ಥವಾಗಿ ರಾಗದ್ವೇಷಗಳಿಂದ ಅನ್ಯರು ಹಿಂಸಿಸುತ ಸ್ವತಃ ಸಂಕಟ ಪಡುತ ತಮ್ಮ ಕಾಲವುಕಳೆದು ಗತಿಸುವದಕ್ಕಿಂತ ಮೌಢ್ಯವು ಜನರಿಗೆ ಈ ಪ್ರಪಂಚದಲ್ಲಿ ಬೇರೊಂದೂ ಇರಲಾರದು. ನಿಜವಾದ ಜ್ಞಾನಿಗೆ ಮತವೇ ಅನಾವಶ್ಯಕವಾಗಿರುತಿದೆ—ಕ. ಸು

BANGALORE:—Printed and published at the KARNATIC PRESS, No. 44, Hospital Road Petta.

ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA.

ಪ್ರತಿ ಸೋಮವಾರ ಪ್ರಾತಃಕಾಲದಲ್ಲಿ ಪ್ರಕಟಿಸಲ್ಪಡುವದು.

Published every Monday Morning.

ಪ್ರಕಾಶ[illegible]ಕರ್ಣಾಟಕಪ್ರಕಾಶಿಕಾ[illegible]ಸನ್ಮತಿಮಾನಸ[illegible]ಮುದಂ।

Vol. XV] BANGALORE—MONDAY, JULY 9, 1888. [No. 27.

ಸಂಪುಟ ೧೫.] ಬೆಂಗಳೂರು:—ಸನ್ ೧೮೮೮ನೇ ಇಸವಿ ಜುಲೈ ೯ನೇ ತಾರೀಖು ಸೋಮವಾರ. [ಸಂಚಿಕೆ ೨೭.

ಕರ್ಣಾಟಕ ಪ್ರಕಾಶಿಕಾ

ಪತ್ರಿಕೆಯ ಚಂದಾ ದರಗಳು,
೧೮೮೮ನೇ ಇಸವಿ ಜನವರಿಯಿಂದ
ಕಡಿಮೆಮಾಡಲ್ಪಟ್ಟಿರುತ್ತದೆ.

ಈ ಪತ್ರಿಕೆಯ ಚಂದಾದಾರರನ್ನು ಅನೇಕರ ಅಪೇಕ್ಷೆಯನ್ನು ನೆರವೇರಿಸುವ ಉದ್ದೇಶದಿಂದಲೂ, ಪರಿಮಿತವಾದ ಆದಾಯವುಳ್ಳವರಿಗೆಲ್ಲ ಈ ಪತ್ರಿಕೆಯು ಸುಲಭವಾಗಿ ಲಭಿಸುವಂತಿರಬೇಕೆಂಬ ಅಭಿಪ್ರಾಯದಿಂದಲೂ ಇವರ ಚಂದಾದರವನ್ನು ಈ ಕೆಳಕಂಡಂತೆ ಕಡಿಮೆಮಾಡಿರುತ್ತೇವೆ.—

ಇಂಗ್ಲಿಷ್ ಮತ್ತು ಕನ್ನಡ ಭಾಗಗಳಿಗೆ.

	ಮುಂದವರಿಗೆ	ಹಿಂದ್ಕೊಡುವವರಿಗೆ
12 ತಿಂಗಳಿಗೆ	8—0—0	9—0—0
6 ,,	4—0—0	4—8—0
3 ,,	2—8—0	3—8—0

ಇಂಗ್ಲಿಷ್ ಅಥವಾ ಕನ್ನಡ ಭಾಗಗಳಿಗೆ.

	ಮುಂದವರಿಗೆ	ಹಿಂದ್ಕೊಡುವವರಿಗೆ
12 ತಿಂಗಳಿಗೆ	4—0—0	5—0—0
6 ,,	2—0—0	2—8—0
3 ,,	1—4—0	1—8—0

ಷರಾ—ಅಂದರೆ ಮುನ್ಸಿಪಾಲಿಟಿ, ಲೋಕಲ್ ಮತ್ತು ತಾಲ್ಲೂಕ್ ಸಭೆಗಳ ಮೆಂಬರುಗಳು, ಸ್ಕೂಲ್‌ಮಾಸ್ತರುಗಳು, ಪಟೇಲರು, ವಿದ್ಯಾರ್ಥಿಗಳು, [illegible] ಈ ಕಡಿಮೆ ದರ [illegible] ಚಂದಾದಾರರಿಗೆ ಕೊಡಲ್ಪಡುವದು. [illegible] ಭಾರತ ದೇಶದ [illegible] ಇಂಗ್ಲಿಷ್ ಭಾಗವನ್ನಾಗಲಿ ಕನ್ನಡ ಭಾಗವನ್ನಾಗಲಿ ಅಥವಾ ಎರಡನ್ನಾಗಲಿ ತೆಗೆದುಕೊಳ್ಳಬಹುದು. ಚಂದಾಹಣವನ್ನು ಮುಂಗಡವಾಗಿ [illegible] ತಕ್ಕದ್ದು. ಮೂರು ತಿಂಗಳಿಗಿಂತ ಕಡಿಮೆ [illegible] ಚಂದಾ ಕೊಡಲು ಅಂಗೀಕರಿಸಲ್ಪಡಲಾರದು.

[illegible] ರಜಾ [illegible] ಕಳುಹಿಸುವ ಅದಾಲತಿಯ [illegible] ಬಂದ ಕೂಡಲೆ ಬಾಕಿ ಇರುವ ಹಣವನ್ನು [illegible] ಲೇಖನಗಳು ಕಳುಹಿಸುವವರು ಯಾರೇ ಇದ್ದರೂ ಒಂದಕ್ಕೆ ಒಂದು ಆಣೆ ಸ್ಟಾಂಪು [illegible] ಕಳುಹಿಸತಕ್ಕದ್ದು. [illegible] ಬಿಲ್‌ಗಳನ್ನು ಕಳುಹಿಸುವದು [illegible] ಕಳುಹಿಸಲ್ಪಡುವ ಮೊಬಲಗಿನಲ್ಲಿ ಅದು ವಜಾ [illegible] ಲೆಕ್ಕಕ್ಕೆ ಜಮಾ [illegible] ಕೊಳ್ಳಲಾಗುವದು.

ಪ್ರಕಟನೆಯ ರಿವಾಜ್.

ಮೊದಲನೆಯದಕ್ಕೆ ಪಂಕ್ತಿ ಒಂದಕ್ಕೆ ೦—೨—೦
ಎರಡನೆಯದಕ್ಕೆ ಪಂಕ್ತಿ ಒಂದಕ್ಕೆ ೦—೧—೦

ಷರಾ—ಎರಡಾವರ್ತಿಗಿಂತ ಬಹಳ [illegible] ಎಷ್ಟು ಪ್ರಕಟನೆ ಬೇಕಾದವರಿಗೆ [illegible] ಪಂಕ್ತಿ ಒಂದಕ್ಕೆ [illegible] ಲೆಕ್ಕ ಮಾಡಲ್ಪಡುವದು. ಈ ಪತ್ರಿಕೆಯಲ್ಲಿ ಖಾಯಂ [illegible] ಪ್ರಕಟನೆಗಳು ಕಳುಹಿಸುವವರು ಅವು ಎಷ್ಟಾವರ್ತಿ ಖಾಯಂ ಮಾಡಲ್ಪಡಬೇಕೋ ಆ [illegible] ಸ್ಪಷ್ಟವಾಗಿ ತಿಳಿಸತಕ್ಕದ್ದು. ಇಲ್ಲದಿದ್ದರೆ ಅವರು ನಮಗೆ ನಿಲ್ಲಿಸುವಂತೆ ಬರೆಯುವವರೆಗೆ ಅವು [illegible] ವಿದ್ದು ಹಾಗೆ ಎಷ್ಟಾವರ್ತಿ ಪ್ರಕಟಿಸಲ್ಪಟ್ಟವೋ [illegible] ದರಹಾಕಿ [illegible] ಕಳುಹಿಸಲ್ಪಡತಕ್ಕ ಪ್ರಕಟನೆಗಳನ್ನು [illegible] ಕಳುಹಿಸಬೇಕು. ಪ್ರಕಟನೆಯನ್ನು ಈ ಪತ್ರಿಕೆ [illegible] ಲ್ಪಡತಕ್ಕ [illegible] ನಾವು ಜವಾಬ್ದಾರರಾಗಲಾರೆವು. [illegible] ಪ್ರಕಟಿಸಲಾರೆವು. [illegible] ಕಳುಹಿಸಲ್ಪಡಲಾರವು.

"IT RECOMMENDS ITSELF"

ALL WHO SUFFER FIND SURE RELIEF.

LITTLE'S

ORIENTAL BALM

THE MOST EFFECTUAL MODERN REMEDY FOR PAIN.

ಲಿಟಲ್ ಕಂಪನಿಯಿಂದ ತಯಾರಿಸಲ್ಪಡುವ "ಓರಿಯಂಟಲ್ ಬಾಲ್ಮ್" ಎಂಬ ಪೂರ್ವದೇಶ ಸಂಬಂಧವಾದ ಅಮೂಲ್ಯ ತೈಲವು ಸ್ವಶಕ್ತಿ ಪ್ರದರ್ಶಕವಾದದ್ದು, ಮತ್ತು ಸಫಲವಾದ ನೂತನ ಪ್ರತಿಕ್ರಿಯಾರೂಪವಾದ ಔಷಧವು. ಇದರಿಂದ ಸಕಲ ಶರೀರ [illegible] ವಾತಸಂಬಂಧವಾದ ಸರ್ವ ನೋವುಗಳೂ ನಿವೃತ್ತಿಯಾಗುವವು. ಮುಖ್ಯವಾಗಿ ಬೆನ್ನುನೋವು, [illegible] ವಾತರೋಗಗಳು, [illegible], ಸಂಧಿವಾತ, ಶೀತವಾಯು, ಕಟಿವಾಯು, [illegible] ತಲೆನೋವು, ಹಿಮ್ಮಡಿ [illegible] ಮೊದಲಾದ ರೋಗಗಳಿಗೆಲ್ಲ ನಿಸ್ಸಂದೇಹವಾಗಿ ಬಹಳ ಪ್ರಯೋಜನವನ್ನುಂಟು ಮಾಡತಕ್ಕದ್ದು. ಈ ತೈಲವನ್ನು ನೋವಿರುವ ಸ್ಥಳಗಳಲ್ಲಿ [illegible] ಹಚ್ಚಿ ತಿಕ್ಕಿದರೆ [illegible] ನೋವುಗಳೆಲ್ಲಾ ನಿವೃತ್ತಿಯಾಗುವವು [illegible] ತೈಲವಾಗಿರುತ್ತದೆ. [illegible] ಮತ್ತು [illegible] ನಿವೃತ್ತಿಯಾಗುವದು. [illegible] ಅದ್ಭುತವಾದ ಮತ್ತು ಶೀಘ್ರವಾದ ಸಂಪೂರ್ಣ ಗುಣವನ್ನುಂಟುಮಾಡುವದು. ಅದ್ಭುತವಾದ ಈ ಔಷಧವನ್ನು [illegible] ಅದರ ಪ್ರಯೋಜನವು ಸ್ವತಃ ವ್ಯಕ್ತವಾಗುವದು. ಈ ತೈಲವು ಶೀತ [illegible] ಪ್ರಯಾಣಸ್ಥರು, ಬೇಟೆಯಾಡುವವರು, ವ್ಯಾಯಾಮ ಮಾಡುವವರು, ಮೊದಲಾದವರಿಗೆಲ್ಲ ಅಮೂಲ್ಯವಾದದ್ದು.

ಪರಿಶೀಲಕರ ಅಭಿಪ್ರಾಯವು.

ಐರ್ಲ್ಯಾಂಡ್ ದೇಶದ ಫಾರ್ಮಸ್ಯೂಟಿಕಲ್ ಸೊಸೈಟಿಯಿಂದ [illegible] ಪ್ರೆಸಿಡೆಂಟರಾಗಿಯೂ, [illegible] ಲಜಿಕಲ್ ಸೊಸೈಟಿ ಎಂಬ [illegible] ಮೆಂಬರಾಗಿಯೂ, [illegible] ಲ್ ವಾಟರ್ಸ್ ಆಫ್ ಐರ್ಲೆಂಡ್ ಎಂಬ ಗ್ರಂಥಕರ್ತರಾಗಿಯೂ, [illegible] ವಿಷಯಕವಾದ ಅನೇಕ [illegible] ಇರುವ ಡಾಕ್ಟರ್ ಟಿಚ್ ಬೋರ್ನ್ (C. R. Tichborne, L. L. D., F. C. S., M. R. I. A.,) ಎಂಬುವರು ಅಭಿಪ್ರಾಯ ಪಟ್ಟಿರುತ್ತಾರೇನೆಂದರೆ—ಲಿಟಲ್ ರವರ [illegible] ತೈಲವನ್ನು [illegible] ಇದು ಬಹುವಿಧ ಮೂಲಿಕೆಗಳ [illegible] ತೈಲವೇ ಹೊರ್ತು ಅಲ್ಲದೆ, ಇದು [illegible] ನಿರುಪದ್ರವಕರವಾದದ್ದಾಗಿದ್ದರೂ, [illegible] ಈ ಮಿಶ್ರವನ್ನು [illegible] ತರತಮ್ಯವಾಗಿರುವದರಿಂದ [illegible] ರೋಗಗಳಲ್ಲಿ ಅದರ ಪ್ರಯೋಜನವು ವ್ಯಕ್ತವಾಗುವದು. ಈ ತೈಲವು ಸಂಪೂರ್ಣ [illegible] ತಯಾರಿಸಲ್ಪಟ್ಟಿರುತ್ತದೆ.

ಇದರ ಕ್ರಯ—ಸೀಸೆ ಒಂದಕ್ಕೆ ೧ ರೂಪಾಯಿ.

ಇದು ಮಿಷ್ಯ [illegible] ಬೆಂಗಳೂರು ದಂಡಿನ ಬೀದಿಯಲ್ಲಿ, ೨೦ನೇ ನಂಬರ್ ಮನೆಯೊಳಗಿರುವ, ಎ. ಸಿ. ಬೆರ್ರಿಮನ್ ರವರಲ್ಲಿಯೂ, ಈ ಕೆಳಗಿರುವ ಇವರ ಏಜೆಂಟರಾದ ಜೆ. ವೆಬ್ ರವರ ಕಂಪನಿಯಲ್ಲಿಯೂ, [illegible] ಕಂಪನಿಯವರಲ್ಲಿಯೂ [illegible] ಕಂಪನಿಯವರಲ್ಲಿಯೂ ದೊರೆಯುವದು.

AGENTS.—Messrs. J. WEBB, Chemist, &c., Bangalore.
CAPPER & Co. Chemists, Bangalore
BIGGS & Co., Chemists, Bangalore; and of
MAHOMED YOUSOOF AND SONS, The Cash Bazar, Bangalore
A. C. BERRYMAN & Co.,
20 Sambodoss Street Madras.

ನೋಟೀಸು.

ಕವಾನ ಗುತ್ತಿಗೆ.

ಕೋಲಾರ ಗೋಲ್ಡ್ ಫೀಲ್ಡ್ಸ್ ಮೈನಿಂಗ್ ಬೋರ್ಡ್ ಅಗ್ರಾಸನಾಧಿಪತಿಯವರಿಂದ, ಕೋಲಾರ ರೋಡ್ ಸ್ಟೇಷನ್ನಿಂದ ಗನಿಗಳ ಬಳಿಗೆ, [illegible] ಒಂದು [illegible] ರು [illegible] ಗಳ [illegible] ಟಕಗಳ ಸಾಗಣೆಯನ್ನು ಗುತ್ತಿಗೆಗೆ ಕೊಡುವದಕ್ಕೆ ದರಖಾಸ್ತುಗಳು, ಸನ್ ೧೮೮೮ನೇ ಜುಲೈ ೧೮ನೇ ತಾರೀಖು ವರಿವಿಗೆ ಬರಮಾಡಿಕೊಳ್ಳಲ್ಪಡುವವು.

೧. ಗನಿಗಳು ಗವರ್ನಮೆಂಟ್ ರೈಲ್ವೆಯ ಸ್ಟೇಷನ್ನಿಂದ ಆರರ ಮೊದಲು ಒಂಬತ್ತು ಮೈಲಿಗಳ ದೂರದಲ್ಲಿರುತ್ತವೆ.

೨. ಸನ್ ೧೮೮೮ನೇ ಇಸವಿ ಆಗಸ್ಟು [illegible] ತಾರೀಖಿನಲ್ಲಿ ಸಾಗಣೆಯನ್ನು ಸಾಗಿಸುವದಕ್ಕೆ ಪ್ರಾರಂಭ ಮಾಡಬೇಕು.

೩. ಪ್ರತಿಯೊಂದು ದರಖಾಸ್ತಿನ ಸಂಗಡಲೂ [illegible] ನೋಟುಗಳ ಮೂಲಕ ಒಂದುನೂರು ರೂಪಾಯಿಗಳ ಡಿಪಾಸಿಟ್ ಇರಬೇಕು, ಹಾಗೆ ಬಾರದವರ ದರಖಾಸ್ತುಗಳು ತಳ್ಳಿಹಾಕಲ್ಪಡುವವು.

೪. ಬೋರ್ಡಿನವರು ಕಡಮೆಯಾದ್ದನ್ನಾಗಲಿ, ಯಾವುದೇ ದರಖಾಸ್ತನ್ನಾಗಲಿ ಅಂಗೀಕರಿಸುವದಕ್ಕೆ ಬದ್ಧರಾಗಿರುವದಿಲ್ಲವು.

೫. ಯಾವನ ದರಖಾಸ್ತು ಮಂಜೂರ್ ಮಾಡಲ್ಪಡುವದೋ ಅಂತವನು ಕರಾರ್‌ನಾಮೆ ಬರಕೊಟ್ಟು ಅದರಂತೆ ನಡೆಯುವದಕ್ಕೆ ಜಾಮೀನಾಗಿ ಬೋರ್ಡಿನವರಲ್ಲಿ ಐನೂರು ರೂಪಾಯಿಗಳ ಡಿಪಾಸಿಟ್ ಇಡಬೇಕು.

೬. ಯಾವನಾದರು ಒಬ್ಬನ ದರಖಾಸ್ತು ಅಂಗೀಕರಿಸಲ್ಪಟ್ಟರೆ ತಳ್ಳಿಹಾಕಲ್ಪಟ್ಟ ದರಖಾಸ್ತುಗಳ ಸಂಗಡ ಬಂದ ಡಿಪಾಸಿಟ್ ಹಣವು [illegible] ವಾಪಸ್ ಕೊಡಲ್ಪಡುವದು.

ಕೋಲಾರ ಗೋಲ್ಡ್ ಫೀಲ್ಡ್ ಬೋರ್ಡ್,
೨ನೇ ಜುಲೈ ೧೮೮೮.

F. W. GREY,
Honorary Secretary,
Kolar Gold Field's Mining Board.

ನೋಟೀಸು.

ನಾಗಮಂಗಲ ತಾಲ್ಲೂಕು ಹೊನ್ನೇನಹಳ್ಳಿ ಕಸಬಾ ಸೇಟಪ್ ಉಪನಯನ, ವಿವಾಹ, ಋತುಮತಿ, ಚಾಲೋದಯಾದಿಗಳ ಪರಸ್ಪರ ದ್ರವ್ಯ ಸಹಾಯ ಸಮುಲ್ಲಾಸಿನಿ ಕಂಪನಿ (ಲಿಮಿಟೆಡ್) ಆಫೀಸಿನಿಂದ.

ಇದರಿಂದ ಯೆಲ್ಲರಿಗೂ ತಿಳಿಯಪಡಿಸುವದೇನೆಂದರೆ:—

ಅಬಸ ಮಜಕೂರಿನಲ್ಲಿ ಕೆಲಸ ಮಾಡತಕ್ಕ ಹಿಸ್ಸೇದಾರ್ರ ಸಂಖ್ಯೆ ಬೆಕ್ಕಿಂತ ಕಮ್ಮಿಯಾಗಿರುವದರಿಂದಲೂ, ಪೇಡ್‌ಜಮಾ ಹಣದ್ದಾಗೆ ತಪ್ಪಿಹೋದದರಿಂದಲೂ, ಸಹಾಯ ಹೊಂದತಕ್ಕ ಷೇರ್ ದಾರರಿಗೆ ಕೊಟ್ಟ ಮೊಬಲಗಿಗಿಂತ ಅರ್ಧ ಮೊಬಲಗು ಕಮ್ಮಿ ಮಾಡತಕ್ಕದಾಗುತ್ತೆಂಬವು ದೃಢವಪಟ್ಟದ್ದರಿಂದಲೂ, ಸನ್ ೧೮೮೮ನೇ ಇಸವಿ ಏಪ್ರಿಲ್ ೨೮ನೇ ತಾರೀಖಿನ ಜನರಲ್ ಮೀಟಿಂಗ್ ಪ್ರೊಸೀಡಿಂಗ್ಸ್ ಮತ್ತು ಅದರ ಕನ್ಫರ್ಮ್ ಬಗ್ಗೆ ೮೮ನೇ ಇಸವಿ ಮೇ ತಾರೀಖ್ ೨೬ರಲ್ಲು ಸೇರಿದ ಮೀಟಿಂಗಿನಲ್ಲಿ ಕಾಯಂ ಮಾಡಲ್ಪಟ್ಟ ಪ್ರೊಸೀಡಿಂಗ್ಸ್ ತಾತ್ಪರ್ಯದಂತೆ ಈ ಕಂಪೆನಿಯು ಬ್ರೇಕಪ್ ಮಾಡಲ್ಪಟ್ಟಿದೆ.

ಸದರೀ ಪ್ರೊಸೀಡಿಂಗ್ಸ್ ತಾತ್ಪರ್ಯದಂತೆ ಕಂಪನಿಗೆ ಬರಬೇಕಾಗುವ ಯೆಲ್ಲಾ ಬಾಕಿಗಳನ್ನು ವಸೂಲ್ಮಾಡಿಕೊಂಡು ಬಸ್ಯಪ್ತ ಷೇರ್‌ದಾರರಿಗೆ ಮೊಬಲಗು ಪಾವತೀ ಕ್ರಮ ಜರಿಗಿಸಲು ಈ ಕೆ

ನೋಟೀಸು.

ಸಾದೆ.

ಮೈಸೂರು ಜಿಲ್ಲೆಯಲ್ಲಿನ [illegible] ಕೋಲಾರ ಗೋಲ್ಡ್ ಫೀಲ್ಡ್ಸ್ ಮೈನಿಂಗ್ ಬೋರ್ಡು ಎಂಬ ಚಿನ್ನದ ಗನಿಗಳ ಸಭೆಯ ಅಗ್ರಾಸನಾಧಿಪತಿಯವರು, ಮಾರಿಕುಪ್ಪಕ್ಕೆ ಒಂದು ಸಾವಿರದಿಂದ [illegible] ಗಳವರೆವಿಗೆ, ದರಖಾಸ್ತುಗಳನ್ನು ಇಷ್ಟಪಡ್ತಾರೆ, ಸಾದೆ ಸರಬರಾಯಿ ಮಾಡುವದಕ್ಕೆ ದರಖಾಸ್ತುಗಳನ್ನು ಸನ್ ೧೮೮೮ನೇ ಇಸವಿ ಜುಲೈ ೧೮ನೇ ತಾರೀಖು ವರಿವಿಗೆ ಬರಮಾಡಿಕೊಳ್ಳುವರು.

೧. ಸಾದೆಯು ಒಳ್ಳೆಯದಾಗಿಯೂ ಸುಟ್ಟಿರತಕ್ಕದ್ದಾಗಿಯೂ, ೨॥ ಅಡಿಗಳ ಉದ್ದವೂ ಅದ್ದಕ್ಕೆ ತಕ್ಕಷ್ಟು [illegible] ಇಲ್ಲದೆಯೂ [illegible] ಇರಬೇಕು.

೨. ಯಾವ ತರಹ ಸಾದೆ ಸರಬರಾಯಿ ಮಾಡಲ್ಪಡುವದೋ ಅದನ್ನು ದರಖಾಸ್ತಿನಲ್ಲಿ ನಮೂದಿಸಬೇಕು.

೩. ಸಾದೆಯನ್ನು ಕೋಲಾರ ರೋಡ್ ಸ್ಟೇಷನಲ್ಲಾದರೂ ಗನಿಗಳ ಬಳಿಯಲ್ಲಾದರೂ ದರಖಾಸ್ತುದಾರನಿಗೆ ಇಷ್ಟವಿದ್ದಂತೆ ಒಪ್ಪಿಸಬಹುದು.

೪. ಸನ್ ೧೮೮೮ನೇ ಆಗಸ್ಟು ೧೫ನೇ ತಾರೀಖಿನಿಂದ ಸಾದೆ ಸರಬರಾಯಿಗೆ ಪ್ರಾರಂಭ ಮಾಡಬೇಕು.

೫. ಪ್ರತಿ ಯೊಂದು ದರಖಾಸ್ತಿನ ಸಂಗಡಲೂ, ಕರೆನ್ಸಿ ನೋಟುಗಳ ಮೂಲಕ, ೨೦೦ ರೂಪಾಯಿಗಳ ಡಿಪಾಜಿಟ್ ಮೊಬಲಗು ಹಾಜರಾಗಬೇಕು, ಹಾಗಿಲ್ಲದ ದರಖಾಸ್ತುಗಳು ತಳ್ಳಿ ಹಾಕಲ್ಪಡುವವು.

೬. ಯಾರ ದರಖಾಸ್ತು ಮಂಜೂರ್ ಮಾಡಲ್ಪಡುವದೋ ಅಂತವನು ಕರಾರ್‌ನಾಮೆ ಬರಕೊಟ್ಟು ಅದರಂತೆ ನಡೆಯುತಕ್ಕದ್ದಕ್ಕೆ, ಜಾಮೀನಾಗಿ ಸರಬರಾಯಿ ಮಾಡುವ ಸಾದೆಯು ೧೦೦೦ ಸೈಜಿಗೆ [illegible] ರೂಪಾಯಿಗಳ ಮೇರೆ ಬೋರ್ಡಿನವರಲ್ಲಿ ಡಿಪಾಜಿಟ್ ಇಡಬೇಕು.

೭. ಬೋರ್ಡಿನವರು ಕಡಮೆ ದರಖಾಸ್ತನ್ನಾಗಲಿ, ಯಾವ ದರಖಾಸ್ತನ್ನೇ ಆಗಲಿ, ಅಂಗೀಕರಿಸುವದಕ್ಕೆ ಬದ್ಧರಾಗಿರುವದಿಲ್ಲವು.

೮. ಯಾವ ದರಖಾಸ್ತನ್ನಾಗಲಿ ಅಂಗೀಕರಿಸಿದಮೇಲೆ, ತಳ್ಳಿಹಾಕಲ್ಪಟ್ಟ ದರಖಾಸ್ತುಗಳ ಸಂಗಡ ಹಾಜರಾದ್ದ ಡಿಪಾಜಿಟ್ ಮೊಬಲಗು ವಾಪಸ್ ಕೊಡಲ್ಪಡುವದು.

ಕೋಲಾರ ಗೋಲ್ಡ್ ಫೀಲ್ಡ್ಸ್ ಮೈನಿಂಗ್ ಬೋರ್ಡ್,
೩ನೇ ಜುಲೈ ೧೮೮೮ನೇ ಇಸವಿ

F. W. GREY,
Honorary Secretary,
Kolar Gold Field's Mining Board.

ಳಗೆ ರುಜು ಮಾಡಿರುವವರು ಲಿಕ್ವಿಡೇಟರಾಗಿ ನೇಮಕರಾಗ್ಮದಲ್ಪಟ್ಟಿರುತ್ತಾರೆ.

ಈ ಕಂಪೆನಿಯ ಷೇರ್‌ದಾರರೂ ಲೇಣೇದಾರರೂ ಇವರು ಕೊಡುವ ನೋಟಿಸ್ ಯಾ ನಿಬಂಧನೆಗಳಿಗೆ ಒಳಪಟ್ಟಿರತಕ್ಕದ್ದು.

ಹೊನ್ನೇನಹಳ್ಳಿ } ಡಿ. ನೃಸಿಂಹಯ್ಯ,
ತಾ|| ೬-೭-೮೮. } ಲಿಕ್ವಿಡೇಟರ್.

ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA.

MONDAY, JULY 9, 1888.

೧೮೮೮ನೇ ಜೂಲೈ ೯ನೇ ತಾ|| ಸೋಮವಾರ

A NOVEL MARRIAGE.

ವಿಚಿತ್ರ ವಿವಾಹವು

ಈಗಿನಕಾಲದಲ್ಲಿ ಅನ್ಯಜಾತಿಯವರು ಹಿಂದೂಗಳನ್ನೂ, ತತ್ರಾಪಿ ಬ್ರಾಹ್ಮಣರನ್ನೂ ಅವರ ವರ್ತನಗಳನ್ನೂ ನಾನಾಪ್ರಕಾರವಿಂ ಹೇಳನಮಾಡುತ ದೂಷಿಸುತಲಿರುವದಕ್ಕಾಗಿ ಒಂದಾನೊಂದು ಅನಿವಾರ್ಯವಾದ ಪರಿತಾಪಕಾರಣಗಳು ಮತ್ತು ವಿವಿಧವಿಂದಾಲೋಚಿಸಿ ನೋಡಿದರೆ ಅನ್ಯರಹೇಳನ, ದೂಷಣ, ತಿರಸ್ಕಾರಗಳಿಗೆ ನಮ್ಮವರು ಐದುವಪ್ರೇಣ ಪಾತ್ರರಾಗುತಲಿರುವಾಗ್ಯೆ ಅನ್ಯರು ನಿಂದಿಸಿ ಪ್ರಯೋಜನವಿಲ್ಲವೆಂದು ತೋರುತಿದೆ. ಲೋಕದಲ್ಲಿ ಒಂದುಕುಲದಲ್ಲಿ ಜನಿಸಿದವರು ದುಷ್ಕಾರ್ಗಪ್ರವೃತ್ತಕನಾದೊಡೆ ಆ ಕುಲಕ್ಕೆಲ್ಲಾ ಗೆ ಅಪಖ್ಯಾತಿ ಯುಂಟಾಗುವದೋ ತದ್ವತ್ ಒಂದು ಸಮುದಾಯದವರಲ್ಲಿಯೂ ಒಂದು ದೇಶೀಯರಲ್ಲಿಯೂ ಸ್ವಲ್ಪಜನ ದುರ್ಮಾರ್ಗ ಪ್ರವಿಷ್ಟರಾದಾಗ್ಯೂ ಕೂಡಲೇ ಆಸಮುದಾಯಕ್ಕೂ ಆ ದೇಶಕ್ಕೂ ಸಹ ಅಪಕೀರ್ತಿಯುಂಟಾಗುವದರೊಳಗೆ ನೂ ಸಂಶಯವಿಲ್ಲವು. ವರ್ಣಾಶ್ರಮ ಪರಿಪಾಲಕರಾದ ಗುರುಪೀಠವವರಿಗೂ ಅರಸರಿಗೂ ಅನ್ಯಗಳಲ್ಲಿ ಶ್ರದ್ಧೆಯೆಂಬುದು ಸ್ವಾಗೆ ದೂರವಾಗುತಬರುತಿದೆಯೂ ಹಾಗೆಯೆ ಜನಗಳಿಗೆ ಅವರಭೀತಿಯೆಂಬುದು ಹುದ್ದಾಂಗ ರಪ್ಪಲಿಕ್ಕೂ ಸ್ವಜಾತಿ ಮತಾಚಾರಗಳಿಗೆ ಸೂಕ್ಷ್ಮವಿರುದ್ಧವಾದುದುಕ್ತ್ಯಗಳನ್ನು ಮಾಡಲಿಕ್ಕೂ ಅವಕಾಶ ಪುಂಟಾಗುತಬರುತಿದೆ. ಈ ಸಂಸ್ಥಾನವು ವರ್ಣಾಶ್ರಮ ಪರಿಪಾಲನಾಸಕ್ತರಾದ ಹಿಂದೂ ರಾಜರಿಂದಾಳಿ ತವಾದದ್ದಾಗಿದೆಯೆಂಬು ಪ್ರತಿಷ್ಠೆಯೊಳಗೇನೂ ಕೊರತೆಯಿಲ್ಲದಿಯದೆ. ಶ್ರೀಮತಸ್ಥರ ಗುರುಪೀಠಗಳಿಗೆ ಈ ಮೈಸೂರುರಾಜ್ಯವು ಅಧಿವಾಸ್ತಸ್ಥಾನವಾಗಿದೆಯೆಂಬ ಪ್ರಾಶಸ್ತ್ಯ ದೊಳಗೇನೂ ನ್ಯೂನತೆಯಿಲ್ಲವು ಅವರೆಲ್ಲರೂ ತಮ್ಮತಮ್ಮ ಅಧಿಕಾರಗಳಂ ಅಪ್ರತಿಹತವಾಗಿ ನಡಿಸಬೇಕೆಂಬ ಕೋರಿಕೆಯುಳ್ಳವರಾಗಿರುವದರಲ್ಲಿಯೂ, ಸ್ವಪ್ರತಿಷ್ಠಾಭಿವಾದಕಗಳಾದ ಕೀರ್ತಿ ಗೌರವ ಪ್ರಾಶಸ್ತ್ಯಗಳಂ ಪಡೆಯಬೇಕೆಂಬ ಅತ್ಯಾಶೆಯೊಳು ಒಬ್ಬರನ್ನೊಬ್ಬರು ಮೀರಬೇಕೆಂಬುವದರಲ್ಲಿಯೂ ಕಡಮೆಯಾದವರಾಗಿಲ್ಲವು. ಈ ಮಠ ಸಂರಕ್ಷಣಾರ್ಥ ಸಾಲೀಯಾನಾ ವ್ಯಯವಾಗತಕ್ಕ ದ್ರವ್ಯವು ಅಲ್ಪವಾದದ್ದಲ್ಲವು. ಹೀಗಿದ್ದಾಗ್ಯೂ ತ್ರಿಮತಸ್ಥರನ್ನೂ ವಕರಾದ ಸ್ವಾಮಿಪ್ರಭುಗಳಲ್ಲೀ ಕೋಶ್ತುವಾದ ಯಾವ ಉದ್ದೇಶದೊಡನೆ ತಮ್ಮತಮ್ಮ ಮತಗಳಂ ಸ್ಥಾಪಿಸಿ ತಮ್ಮ ಅನುಗ್ರಹಕ್ಕೆ ಪಾತ್ರರಾದವರು ಧರ್ಮಸುರಕ್ಷಣಾರ್ಥ ಸದರೀ ಮತಗಳಲ್ಲಿ ನೆಲಗೊಳಸಿ ಅವರ ಪೋಷಣೆಗಾಗಿ ಸುಸ್ಥಾನಾಧಿಪತಿಗಳಂ ಶಿಷ್ಯರನ್ನಾಗಿಮಾಡಿದರೋ ಅಂತಾ ಅಭಿಪ್ರವರ್ತಕರ ಉದ್ದೇಶಗಳನ್ನು ಅವರಶಿಷ್ಯ ಪ್ರಶಿಷ್ಯಕೋಟಿಗೆ ಸೇರಿದ ಮಠಾಧಿಪರು ನೆರವೇರಿಸದೆ ಹೋಗುವದಕ್ಕಾಗಿಯೂ, ಅವಾ ಮಠದವರಿಂದ ಪೊಸರಿಟ್ಟುಕೊಂಡಿರುವ ಶಿಷ್ಯವರ್ಗದವರು ಉಚ್ಛೃಂಖಲವಾಗಿ ವರ್ತಿಸುವಂತೆ ತಾಟಸ್ಥ್ಯದೊಡನೆ ನೋಡುತ ಕೇವಲ ಸ್ವಪ್ರಯೋಜನೈಕ ಪರರಾಗಿರುವದಕ್ಕಾಗಿಯೂ ಯೆಷ್ಟು ಚಿಂತಿಸಿದಾಗ್ಯೂ ಸಾಲದ್ದಾಗಿರುತಿದೆ. ನಿಜವಾಗಿ ಜನಗಳಿಗೆ ರಾಜರ ಮತ್ತು ಗುರುಗಳ ಭಯವಿದ್ದಿರುವಪಕ್ಷಕ್ಕೆ ಇದರದಿ ಕುಡುಂತಾ ಕೇವಲ ಲಜ್ಜಾಸ್ಪದವಾದ ನು ತ್ತ್ಯ ನೀಚಜಾತಿಯವರೆಲ್ಲ ಹೇಳನಮಾಡುವಂತಾ ವಿಷಯವು ಪ್ರಾಪ್ತವಾಗಿರಲಾರದು. ಸದರಿ ವಿಷಯಸ್ವರೂಪವು ಈ ಪತ್ರಿಕಾಮೂಲಕ ಪ್ರಕಟಿಸುವದು ನಮಗೆ ಅನಿವಾರ್ಯಕಾರಕವಾಗಿದ್ದಾಗ್ಯೂ ಇವರಿಂದೀದೇಶದಲ್ಲಿ ವರ್ಣಾಶ್ರಮ ಧರ್ಮಾಚಾರಗಳ ಸಂರಕ್ಷಣೆಯಲ್ಲಿ ಜನರಿಗಿರುವ ಶ್ರದ್ಧಾಭಕ್ತಿಗಳೆಂತಾದದು ಸ್ಪಷ್ಟ ವಾಗುವದರಿಂದ ಅದು ಇದರದಿ ಪ್ರಕಟಿಸುವೇನೆಂದರೆ —ಈ ವ್ಯಾರು ಬಳಿಪೇಟೆಯಲ್ಲಿರುವ ಸುಗ್ರೀವನ ದೇವಸ್ಥಾನದ ಹಿಂಭಾಗದಲ್ಲಿ ಈಗ್ಯೆಬಹುಕಾಲವಾಗಿ, ಬೊನ್ನಮ್ಮನೆಂಬ ಬ್ರಾಹ್ಮಣಸ್ತ್ರೀಯೊಬ್ಬಳು ಕೇವಲ ನಿರ್ಲಜ್ಜರೂಪವಾದ ಸಾಂಸಾರಿಕ ವೃತ್ತಿಯನ್ನೂ ವಿವಾಹಿತ ಪತಿಯನ್ನು ಸಹ ಹುದ್ದಾಂಗವಾಗಿ ಪರಿತ್ಯಜಿಸಿ ವಿಲಕ್ಷಣವಾದ ನಾಗರಿಕತೆಯೊಡನೆ ತನ್ನಇಷ್ಟಾನುಸಾರ ವಾಸಮಾಡುತಲಿರುವದು ಬ್ರಾಯಃ ಅನೇಕರಿಗೆ ತಿಳದಿಂತ ವಾಗಿಯೇಯಿರುತಿದೆ. ಸದರೀ ಹೆಂಗಸಿನಗುಂಡನು ಈಗ ಎಲ್ಲಿ ಏನಾಗಿದಾನೆಯೋ ಅತನ ವೃತ್ತಾಂತವು ತಿಳಿಸತಕ್ಕದರು ಸಹ ಇಲ್ಲವು ಗಂಡನು ಕಾಣದೆಹೋದವರೂ, ಮೃತರಪ್ಪರೂ, ದೇಶಾಂತರಗತರಾಗಿ ಹೋದರೂ, ಜಡರಾಗಿದ್ದರೂ, ಜಾತಿಭ್ರಷ್ಟರಾದರೂ ಈ ಐದುಸ್ತರಣಗಳಲ್ಲಿಯೂ ಅನ್ಯಪತಿಯನ್ನು ಸ್ತ್ರೀ ಪರಿಗ್ರಹಿಸಬಹುದೆಂದು ಶಾಸ್ತ್ರವಚನವಿದೆಯೆಂಬದಾಗಿ ವಿತಂಡವಾದಪ್ರೋದಕರು ತಿಳಿಸುತಲಿರುವರಾತ್ರ ಆ ಹೆಂಗಸು ಕೇಳಲಬಹುದಾಗಿ ಅವಳ ತನ್ನನ್ನುಗಂಡನುಬಿಟ್ಟು ಹೋದರೇನು, ಗುಂಡನು ತಾನುಬಿಟ್ಟುಹೋದರೇನು, ಕಡೆಯಲ್ಲಿ ಎರಡೂ ಒಂದೆಯೆಂದು ತಿಳಿದುಕೊಂಡು ಅದೇಶಾಸ್ತ್ರಾಧಾರದಮೇರೆ ಈವ್ಯಾರಲ್ಲಿರುವ ಒಬ್ಬ ಕೋಮಟಿಗನನ್ನು ಸತಿಯಾಗಿ ವರಿಸಿದಳು. ಇವನಲ್ಲಿ ಅವಳನುರಕ್ತಳಾಗಿರುತಲಿರುವಾಗ್ಯೆ ಇವರಿಗೆಒಂದುಹೆಣ್ಣುಮಗು ಜನಿಸಿತು. ಕ್ರಮೇಣ ಅವಳಿಗೆ ಸದರೀ ಕೋಮಟಿಯಲ್ಲದೆ ಇಂಗಾಯಿತನೊಬ್ಬನೂ ಕುರುಬನೊಬ್ಬನೂ ಪೋಷಕರಾಗಿ ಇದ್ದೆನ್ನೂ. ಇವರೆಲ್ಲರುಗಳು ಈವ್ಯಾರು ಗವರ್ನಮೆಂಟ್ ಬಾಲಿಕಾಪಾಠಶಾಲೆಯಲ್ಲಿ ಗ್ರಾಸ್ಯಾಭ್ಯಾಸಮಾಡುತ ವಿದ್ಯಾ ಬುದ್ಧಿ ವಿವೇಕಾದಿಗಳಿಂಪಿದ್ದ ವಿವಾಹಕ್ಕೆ ಅರ್ಹಳಾಗಲು ಅವಳು ಕ್ರೀನ್ಯಸಾದ ಒಬ್ಬ ಸ್ತ್ರೀ ಜನಿಗೆ ವಿವಾಹಮಾಡಿಕೊಡಬೇಕೆಂಬ ಕೋರಿಕೆಯು ಅವಳತುದೆಯಾದ ಕೋಮಟಿಗನುಂಟಾಗಲು ಆತನು ತನ್ನ ಅಭಿಪ್ರಾಯವನ್ನು ಬೇಕಾದವರೊಡನೆ ತಿಳಿಯಪಡಿಸುತಲಿದ್ದನು. ಪರಂತು ಕಾಲವು ಅನುಕೂಲಿಸದೆಯಿದ್ದದರಿಂದ ಅವನ ಕೋರಿಕೆಯುಂ ಸಫಲಗೊಳಿಸತಕ್ಕಂತಾದದ್ದು ಸುಲಭವಾಗಿ ಕಿತ್ತದೆಯಿದ್ದರು. ಹೀಗಿರುವಾಗ್ಯೆ ಈವರು ಅರಳೇಪೇಟೆ ನಿವಾಸಿಯಾದ ಮುನಿಶಿನಾಮ ಬ್ರಾಹ್ಮಣನೊಬ್ಬನೂ ಅವನ ಸ್ನೇಹಿತನಾದ ಮತ್ತೊಬ್ಬಬ್ರಾಹ್ಮಣನೂ ಐಕಮತ್ಯದಿಂ ಸಂಕೇತ ಮಾಡಿಕೊಂಡು ವರಸಂಘಟನೆಯ ವಿಷಯದಲ್ಲಿ ಬೇಕಾದ ಸಹಾಯ ಮಾಡುವಂತೆ ಸದರೀ ಶೆಟ್ಟಿಗೆ ವಾಗ್ದಾನವನಾದಿ, ಕನ್ಯೆ ಮತ್ತು ಅವಳ ತಾಯಿಯೊಡನೆ ಇಲ್ಲಿಂದಹೊರಟು ಕಡಪಾಡಿಸ್ಟ್ರಿಕ್ಟ್ ವಾಯಲ್‌ಪಾಡ್ ತಾಲ್ಲೂಕಿಗೆಸೇರಿದ ಕಲಕತಾಯೆಂಬ ಗ್ರಾಮಕ್ಕೆಹೋಗಿ, ಅಲ್ಲಿದ್ದ ಅವಿವಾಹಿತನಾದ ಒಬ್ಬ ಮುನಿಶಿನಾಮ ಬ್ರಾಹ್ಮಣನೊಡನೆ ನಿಶ್ಚಯಮಾಡಿ, ಕೇವಲ ವಿವಾಹ ಆಕುರವೊಳದ್ದ ಅವನಿಂದ ಮೊದಲನೆಯದನು ೩೦೦ ರೂಪಾಯಿಗಳನ್ನೂ, ಎರಡನೆಯವನು ಕೇವಲ ಸಂಕ್ಷಿಪ್ತದಿರವಾಗಿಹೋದದನಾದದ್ದರಿಂದ, ಅವನು ೫೦ ರೂಪಾಯಿಗಳನ್ನೂ, ಕನ್ಯೆಯತಾಯಿಯು, ಕನ್ಯಾಶುಲ್ಕಾರ್ಥವೆಂದು ೨೦೦ ರೂಪಾಯಿಗಳನ್ನೂ, ಇದಲ್ಲದೆ ಹುಡಿಗಿಗೆ ಆಭರಣಗಳಿಗಾಗಿ ೩೦೦ ರೂಪಾಯಿಗಳನ್ನೂ ತೆಗೆದುಕೊಂಡು ಆತನಮನೆಯಲ್ಲಿಯೇ ಗತ ಜ್ಯೇಷ್ಠಕೃಷ್ಣ ಪಂಚಮಿದಿನ ವಿವಾಹವು ನಿರ್ಧಿಷ್ಟರಾಗಿ ಜರಿಗಿಸಿದರು. ಈವಿವಾಹಾರ್ಥ ಒಂದುಸಾವಿರ ರೂಪಾಯಿಗಳತನಕ ವರನಿಗೆ ವ್ಯಯವಾದಂತೆ ತಿಳಿಯಬರುತಿದೆ. ಕಳೆದತಿಂಗಳ ೭ನೇ ತಾರೀಖ್ ಶುಕ್ರವಾರದಿನ ತಿಂಗಳನಾಗಿದ್ದಲ್ಲಿ ಯಾವವಿಂದ ಅಧಿಕ್ಕಾಗಿ ವರನು ಈವ್ಯಾರಿಗೆಬಂದು, ಮುದ್ದೃಸ್ಥಗಾರರಪ್ಪಿಕೆ ಮುಖ್ಯಪತ್ತಿರ್ಕನಾದ ಮೊದಲನೆಯವನು ಅವನ ಅಣ್ಣನ ಮಾವನಾದದರಿಂದ ಆತನ ಮನೆಯಲ್ಲಿಯೇ ಮೇಲೆಕಂಡ ಶುಭವು ತನ್ನ ಅತ್ತೆಬಾಳ್ವೆ ಮುಂತಾದವರೊಡನೆ ನೆರವೇರಿಸಿದನು. ಆಕಾಲದಲ್ಲಿ ಭೋಜನಾರ್ಥ ಕರೆಯಲ್ಪಟ್ಟು ಹೋಗಿದ್ದ ಮತ್ತೊಬ್ಬ ಬ್ರಾಹ್ಮಣನು ಒಳಮರ್ಮಗಳನ್ನೆಲ್ಲ ತಿಳಿದುಕೊಂಡು ಅದು ಈವ್ಯಾರು ಮಹಾಜನರಿಗೆ ತಿಳಿಯಪಡಿಸಿದನು. ಅವರು ಆಟೀಭಾನುವಾರದದಿನ ಈವ್ಯಾರು ಕಾಶೀವಿಶ್ವೇಶ್ವರನ ದೇವಸ್ಥಾನದಲ್ಲಿ ಸುಮಾರ್ ೫೦—೬೦ ಸುಂತಿಯರ ಶಿವಿಗೆ ಸಭೆಸೇರಿ ವಿವಾಹವನಾಡಿಕೊಂಡವನನು ಮನೆಗೂ ಮುದ್ದೃಸ್ಥ ಮಾಡಿದುಂಟಾದಿಬ್ಬರ ಮನೆಗೂ ಸುಭಾಶುಭಗಳಿಗೆ ಒಬ್ಬರೂ ಹೋಗಕೂಡದೆಂಬದಾಗಿ ನಿರ್ಣಯಮಾಡಿ ಈ ವಿಷಯಗಳನ್ನೆಲ್ಲ ಶೃಂಗೇರಿ ಶ್ರೀಮಠಕ್ಕೆ ತಿಳಿಯಪಡಿಸಬೇಕೆಂದು ಪಾರೆಂತಲೂ, ಮುದ್ದೃಸ್ಥಗಾರರಿಬ್ಬರೂ ಮಹಾಜನರಿಗೆ ಬಹಿಷ್ಕಾರ ವಿಷಯವು ಕುರಿತು ಅರ್ಜಿ ಬರೆದುಕೊಂಡಿದಾರೆಂತಲೂ ತಿಳಿಯಬರುತಿದೆ. ಮುಖ್ಯವಾಗಿ ಈ ವಿಷಯದಲ್ಲಿಗೆ ಅದಿಗ ಪೋಗದ-ತ ಶೃಂಗೇರಿ ಶ್ರೀ ಸುನಿದವರು ವಿಚಾರಣೆಮಾಡಿ ತಕ್ಕ ಬಂದೋಬಸ್ತು ಮಾಡಬೇಕೆಂದು ಕೋರುತ್ತೇವೆ. ಕ್ರಿಮಿನಲ್ ಪ್ರಸೀಡ್ಯುರ್ ಕೋಡಿಗೆ ಮುದ್ದೃಸ್ಥಗಾರರಿಗೆ ವರನು ಸನ್ನಿಹಿತ ಬಂಧನಾಗಿರುವದರಿಂದ ಮುಂದೆ ಅವನಿಗಾಗಬಹುದಾದದು ವನೆಯುನ್ನಾಲೋಚಿಸಿ ಅವನೀಗ ಸಂಕಟಪಡುತಲಿದಾನಂತೆ. ವರಿಹೀತಳಾದ ಹುಡಿಗಿಯು ಅದೃಷ್ಟ ಇಲ್ಲಿನ ಸ್ಕೂಲಿನಲ್ಲಿ ಓದುತಲಿದಾಳಂತಲೂ, ಅವಳ ಜಾಗರೂಕತೆಯೂ ಬುದ್ಧಿ ಚಾತುರ್ಯವನ್ನೂ ಪಾಠಶಾಲೆಗೆ ವಿಶೇಷ ಪ್ರತಿಷ್ಠಾ ಸಂಪಾದಕಗಳಾಗಿವೆಯೆಂತಲೂ, ಅದರಿಂದಲೇ ಅವಳ ಜಾತಿ ಕುಲೋತ್ಪತ್ತಿ ಮುಂತಾದವು ಸಹ ವಿಚಾರಾರ್ಹಗಳಾಗದೆ ಹೋಗಿವೆಯೆಂತಲೂ ತಿಳಿಯಬರುವದು. ಹೀಗಿರುವ ಪಕ್ಷಕ್ಕೆ ಇಂತಾ ಸ್ತ್ರೀಶಿಕ್ಷಣಿಯ ರ ಹೆಣ್ಣುಮಕ್ಕಳು ದೊಡ್ಡ ಮನುಷ್ಯರ ಮಕ್ಕಳೊಡನೆ ಅನವರತ ಸೇರಿ ಪರಿಚಯಿಸುವುದಕ್ಕೆ ಗಳ್ ಮಾಡಲಿಕ್ಕೆ ಯೋಗ್ಯವೆಂದೆಣಿಸಲ್ಪಟ್ಟ ಬಳಿಕ ಇಂಮಪ್ರವೃತ್ತಿಯನ್ನವಲಂಬಿಸಿ ಅವನ್ನೆಲ್ಲಾ ನುಸಲೆ ಪರ್ತಿಸುವಂತಾ ನಾಜಿಸಕಾಸಿಯರ ನ ಕ್ಷೀಳನ್ನು ಮಾತ್ರ ಪಾಠಶಾಲೆಯಲ್ಲಿ ಯಾತಕ್ಕೆ ಸೇರಿಸಿಕೊಳ್ಳಕೂಡದೋ ನಾವರಿಯೆವು. ಅವಿದ್ಯಾಕ್ಷದ ವಿಷಯದಲ್ಲಿ ಮೇಲೆಕಂಡ ಹುಡಿಗಿಗಿಂತ ಲೂ ನಾಯಕಸಾನಿಯರ ಮಕ್ಕಳು ವಿಸಾದರಾ ಕಡಮೆಯಾದವರಾಗಿರಾರಯೇ ಅಂತೆ, ಅನೇಕಂಥಾ ಶಾಲೆ ಇಲ್ಲವು. ಇಂತಾ ಪ್ರಬಲವೊಂದಗಳಂ ಪರ್ಯಾಲೋಚಿಸಿ ನೋಡುವರ ಮಕ್ಕಳು ಸಹವಾಸಾನರ್ಹರೆಂದು ನಿಷೇಧಿಸಲ್ಪಟ್ಟರು ವರೋ ಅಂತಾ ದೋಷಗಳು ಮಾಪಿಸಿಗ್ವಾದ ಸಂಸಾರಿಗಳ ಮಕ್ಕಳಿಗೆ ಮೇಲೆಕಂಡ ಶುಲಭವಾ ತುಶೆಯಿಂದ ಸುಬುದ್ಧಿಯಿಂದ ಅನುವರ್ತಿಸದೆ ಹೋಗಲಾರವು. ಮುಖ್ಯವಾಗಿ ಈಗಿನ ವಿದ್ಯಾಭ್ಯಾಸಕ್ರಮದಿಂದಲೂ ಶಿಕ್ಷಾಕ್ರಮದಿಂದಲೂ ಹೆಣ್ಣು ಹುಡಿಗಿಯರು ತಮ್ಮ ಕುಟುಂಬಕ್ಕೆ ಕೀರ್ತಿಸಂಪಾದಕರಾಗುವರೆಂಬ ಪ್ರತ್ಯಾಶೆಯು ಕಡಮೆಯಾಗುತ ಬರುತಿರುವಲ್ಲಿ ಅಯೋಗ್ಯರಾಗಿಯೂ ನೀಚ ವೃತ್ತಿಯುಳ್ಳವರಾಗಿಯೂ ಇರತಕ್ಕವರ ಸ್ನೇಹಸಂಬಂಧವು ನಿಯಕವಾದರೆಂದರ ಫಲವು ಮುಂದೆ ವಿಷಾದಸತಕ್ಕದ್ದಾಗಿಯೇ ಇರ ಪದು.

THE FEMALE CONGRESS.

ಸ್ತ್ರೀ ಸಮಾಜವು.

ಬಹುಕಾಲದ ಮೊದಲು ಈ ದೇಶದೊಳಗಿಲ್ಲದೆ ಯಿದ್ದ ಪ್ರಜಾ ಪ್ರತಿನಿಧಿ ಸಭೆಯೊಂದು ಈಚೆಗೆ ಏರ್ಪಟ್ಟು ಈಗ್ಯೆ ಎರಡುಮೂರು ಸಂವತ್ಸರಗಳ ಕಾಲವಾಗಿ ನಡೆಯುತಲಿರುವದಕೆಂದು ಇಂಡ್ಯದೇಶೀಯರಿಗೆ ವಿಶೇಷ ಐಕಮತ್ಯ, ನಾಗರಿಕತೆ, ಸ್ವಾತಂತ್ರ್ಯಾದಿ ಗುಣಗಳುಂಟಾದವೆಂದು ಅನೇಕರು ಪ್ರತಿಷ್ಠೆಯನ್ನೆಣಿದಿರುತ್ತಾರೆಯಷ್ಟೆ. ಈಗ ಅನ್ಯದೇಶಗಳಲ್ಲಿ ಸ್ತ್ರೀಯರುಹೊಂದುತಲಿರುವ ಸ್ವಾತಂತ್ರ್ಯ ಐಕಮತ್ಯ ಧೈರ್ಯ ಸಾಹಸಾದಿ ಗುಣ ವಿಶೇಷಗಳಂ ಗುಡುಸರು, ತತ್ರಾಪಿ ಈದೇಶೀಯರು ನೋಡುವರಾದರೆ ಅವರು ಮರಳಿ ಜೀವ ದೊಡನೆ ಹಿತರಿಗೆ ಸುಚಿತರಿಶಳಾರರೆಂದೆಣಿಸುತ್ತೇವೆ ಅಮೆರಿಕಾದೇಶದ ರಾಜಧಾನಿಯಾದ ವಾಷಿಂಗ್ಟನ್ ಪಟ್ಟಣದಲ್ಲಿ ಕಳೆದವಾರ್ಚಿ ತಿಂಗಳ ೨೫ನೇ ತಾರೀಖ್ ಮೊದಲು ಏಪ್ರಿಲ್ ಗುರೇ ತಾರೀಖ್ ವರಿಗೆ "ಇಂಟರ್‌ನ್ಯಾಷನಲ್ ಕೌನ್ಸಿಲ್" ಎಂದರೆ ಸ್ತ್ರೀಸಮಾಜವು ನಡೆದಿರುತ್ತದೆಂದು ತಿಳಿಯಬರುತಿದೆ. ಇದು ಆಯಾ ಪ್ರದೇಶಗಳಲ್ಲಿ ಹೆಂಗಸರ ಕ್ಷೇಮಾರ್ಥ ಏರ್ಪಡಿಸಲ್ಪಟ್ಟಿರುವ ಸ್ತ್ರೀ ಸಮಾಜಗಳಿಗೆ ಸೇರಿದವರ ಮಹಾಸಭೆಯಾಗಿರುತಿದೆ. ಸದರೀ ಸಭೆಯಲ್ಲಿ ಫಕ್ತ ಸ್ತ್ರೀಯರ ಪುರೋಭಿವೃದ್ಧಿ ಸೂಚಕಗಳಾದ ವಿಷಯಗಳೇ ಮುಖ್ಯವಾಗಿ ವಿಚಾರಮಾಡಲ್ಪಟ್ಟವು. ಇಂತಾ ಕಾರ್ಯವನ್ನು ಮಾಡುವವಿಷಯದೊಳು ಗವರ್ನಮೆಂಟಿನವರ ಸಹಾಯ ಬಯಸುಕಡೆ ನಮಗೆ ನಿಯತವಾಗಿರದಿದ್ದಾಗ್ಯೂ ಸಾಮಾನ್ಯರ ನಮ್ಮ ದವರಲ್ಲನೆ.ಕರದಕ್ಕೆ ಇನ್ನೂ ಅನುಮಾನ್ಯರಾಗಿದಾರೆ ಪುರುಷರ ಅನುಮತಿ ಬೇಕು ಕೆಂದು ಇಲ್ಲಿನ ಹೆಂಗಸರು ಬಹಳ ಅನಾತದಿಂದೊಡನೆ ತಾವಿನ್ನು ನಿದ್ರೆಗೆಯುತಲಿರತೊಡನು, ಎಚ್ಚೆತ್ತುಕೊಂಡು ತಮ್ಮ ಯೋಗಕ್ಷೇಮಕ್ಕೆ ಏಕೈಕಗಳಾದ ವಿಷಯಗಳಂ ತಾವೇ ನೋಡಿಕೆ ಕ್ಷೇಮವಾಗಿ ಅವ್ಯಕ್ತ ನಡೆಸಿ ಸಕಲಾಂವನೆ ಅದುಲ್ಲಿಯೂ ಗೆಂದುಪರಿಗವಾಗರ್ವರ್ಕಕಂಗುರುತಿದಾರೆ. ನ್ಯಾಯಶಾಸ್ತ್ರ ನಿರ್ಣೀತವಾದ ೮೧ ಜನರು ಬಾಂಧಯರುತೆ ಅವೆ ಸೇರಿನ್ಯೂ ಕೆಲಸವನ್ನುವುದರಿಂಕಾನುವ ಪುರುಷರಿಗೆ ಅನವನಾಡರಕವಾಗಿರುತಿಡೆಯೆಂದು ಹೆಂಗಸರು ಸ್ವತಃ ತಿಳಿದುಕೊಂಡು ತಮ್ಮಕಾರ್ಯವು ಪುರುಷರೊಡನೆ ನಿರ್ವಹಿಸಿಕೊಳ್ಳುವುದಾರೆ ಪುನರ್ವಿವಾಹಕ್ಕೂ ಬಹು ವಿವಾಹಕ್ಕೂ ಗಂಡುಸರು ವಿರೋಧಿಸುತ ಇಲ್ಲದ ನಿರ್ಬಂಧಗಳನ್ನುಂಟುಮಾಡುತ, ಅದು ಶಾಸ್ತ್ರವಿರುದ್ಧಕಾರ್ಯವೆಂದು ವಾದಿಸುತಿರುವುದರಿಂದ ಸಮೀಸನೆ ಸ್ತ್ರೀಯರು ಪುರುಷಾಜ್ಞೆಯನ್ನುಮೀರಿ ನಡೆಸುವಸ್ತ್ರೀಯರ ಕೆಲವು ಸ್ವಾತಂತ್ರ್ಯವನ್ನುಂತಾಗಿಯೇ ಬೇಕಾದವರು ಬೇಕಾದಾಗ ವರಿಸುವ ಕರಗ್ರಹಣಕ್ಕೆ ಸಮ್ಮತರಾಗಿರುವಂತೆ ತಮ್ಮ ಪೆಸರುಗಳೊಡನೆ ಪ್ರಕಟಿಸಲಾಗಿಸಿದಾರೆ. ಹೆಂಗಸರು ಯುಕ್ತಾಯುಕ್ತ ವಿವೇಚನ ಸ್ವಾನವಿಲ್ಲದವರೆಂಬದಾಗಿ ಪುರುಷರು ನಿರ್ಲಕ್ಷ್ಯವಾಡುತ್ತಾರೆಂಬುದು ತಿಳಿದು ಸ್ತ್ರೀಯರು ದಮಗೆ ಸಂಬಂಧಿಸದವಿಷಯಗಳಲ್ಲಿ ಸಹ ಪ್ರವೇಶಿಸಿ ಪುರುಷರಿಗೆ ನಿಧಾಯಕರಾಗುತಿದಾರೆ ಈಗ ಅಗ್ರಗಣ್ಯರಿದು ಪ್ರಸಿದ್ಧಿಯನ್ನೈದಿರುವ ಈಗಿನ ಬ್ರಾಹ್ಮಣರುತೂ ವ ಸಂಧ್ಯಾವಂದನಾದ್ಯಯನಾದಿ ವೈದಿಕಕರ್ಮಗಳನ್ನೆಲ್ಲ ತೊರೆದು ಇಂಗ್ಲಿಷ್ ವಿದ್ಯೆಯನ್ನೇ ಮುಖ್ಯವಾಗಿ ಅಭ್ಯಸಿಸುವ ಶುಕ ಬಿಲ್ಲದೆ ಇಂಗ್ಲಿಷ್ ಹೋಟೆಲ್‌ಗಳಲ್ಲಿಯೂ, ರೆಯಿಲ್ವೇ ರಿಫ್ರೆಷ್‌ಮೆಂಟ್ ರೂಂಗಳಲ್ಲಿಯೂ, ಮಿತ್ರರಾದ ಅನ್ಯಜಾತಿಯವರ ಮನೆಯಲ್ಲಿಯೂ ಧಾರಾಳವಾಗಿ ಭೋಜನಾದಿಗಳಂ ಮಾಡುವಂತಲೂ, ಅಪೇಕ್ಷಿತಗಳಾದ ಅನ್ಯದೇಶದ ಭೋಜ್ಯ ಪದಾರ್ಥಗಳಂ ತಾವೇ ತರಿಸಿಕೊಂಡು ಉಪಯೋಗಿಸುತಲೂ ಸ್ವೇಚ್ಛೆಯಾಗಿ ವರ್ತಿಸುತಿರುವಾಗ್ಯೆ ನಾವ್ಯಾಗಳ್ಯಾಕೆ ಕೂಡ ಕೊಮರ್ಗಳಂತೆ ಮನೆಯೊಳಿಟ್ಟಂಗುಂದಿಯಿದ್ದು ಅಳುತ, ಈಶ್ವರ ಕೃಪೆಯಿಲ್ಲವಾದ ಇಂದ್ರಿಯಗಳನ್ನು ತೃಪ್ತಿಗೊಳಿಸದೆಯೂ, ಅನುಭವಿಸುತಕ್ಕದ್ದನ್ನು ಅನುಭವಿಸದೆಯೂ, ನೋಡಬೇಕಾದದ್ದನ್ನು ನೋಡದೆಯೂ ಕಾಲ ಕಳೆಯುತಿರಬೇಕೆಂದು ಹೆಂಗಸರು ಚೆನ್ನಾಗಿ ಯೋಚಿಸಿಕೊಂಡು ಪುರುಷರ ನಿರ್ಬಂಧವು ಸಹಿಸ್ಯೆಯದೆಯೂ ಅವರೇನಾದರು ಛರ್ಜಿಸಿದರೆ ಅವರನು ತ್ಯಜಿಸಿಬಿಟ್ಟು ಹೋಗುವರೆಂದು ಬೆದರಿಸುತಲೂ, ತಮ್ಮ ಇಷ್ಟಾನುಸಾರ ಬೇಕಾದ ಕಾಲದಲ್ಲಿ ಬೇಕಾದಾಗ ನಿರಿಷ್ಟಾಂತರವಾಗಿ ಹೋಗಿ ಬರುವಲೂ, ಪುರುಷಾಪೇಕ್ಷಯಾ ವಿಶೇಷ ಸುಖ ಸ್ವಾತಂತ್ರ್ಯಗಳನ್ನು ಕಲ್ಪಿಸಿಕೊಳ್ಳುವದರಲ್ಲಿ ಅಭಿಮುಖರಾಗಿದಾರೆ. ಗಂಡುಸರು ಧಾರಾಳವಾಗಿ ಅಮೆರಿಕಾ ಯೂರೋ

ಪ್ರವೀಣರಾದ ಅನ್ಯದೇಶಗಳಿಗೆ ಹೋಗಿ ಅಲ್ಲಿ ಬಹು ಕಾಲವಿದ್ದು ಬಳಿಕ ಹಿಂತಿರುಗಿದರೆ ಅವರಿಗೆ ಸ್ವಜನರಲ್ಲಿ ಸತ್ಕಾರವು ದೊರೆಯುತಲಿರುವದಂತೆಯೂ ಸ್ತ್ರೀಯರು ನಾವು ಮಾತ್ರ ಮಾಡಿದ ದೋಷವನ್ನು ಮಾಡಿಕೊಂಡು ಬಹಿಷ್ಕೃತರಾಗಿ ಅನ್ಯದೇಶಗಳಿಗೆ ಹೋಗುವ ಸಂಪ್ರದಾಯವನ್ನಂಗೀಕರಿಸಿದ್ದಾರೆ. ಪುರುಷರು ವಿದ್ಯಾಭ್ಯಾಸವಂ ಮಾಡುತ ತಮ್ಮ ಯುಕ್ತಗಳಾದ ಕೀರ್ತಿ ಪ್ರತಿಷ್ಠೆಗಳಂ ಪಡೆಯುವದಂ ನೋಡಿ ಸಹಿಸದೆ ಹೆಂಗಸರೂ ವಿಶ್ವವಿದ್ಯಾಲಯಗಳ ಯೂನಿವರ್ಸಿಟಿ ಪ್ರಶಸ್ತಿಗಳಂ ಪಡೆಯಲಾತುರಗೊಂಡಿದಾರೆ. ಗಂಡಸರು ಸಭಾಮುಖದಲ್ಲಿ ಪ್ರಸಂಗಿಸುವದನ್ನೂ, ತತ್ತ್ವಜ್ಞಸಭೆಗಳಿಗೆ ಅಗ್ರಾಸನವ ವಹಿಸುವದನ್ನೂ, ಆಲೋಚನೆಗಳ ಕುರಿತು ಅವರು ವಿಚಾರಪೂರ್ವಕ ಚರ್ಚಿಸುವದನ್ನೂ, ಹೆಂಗಸರು ಆನಂದಾಶ್ಚರ್ಯದಿಂದ ನೋಡುತ ಅವರು ವಿಚಾರಬೇಕೆಂಬ ಕೋರಿಕೆ ಹೊಂದಿ ತಾವು ಸಂಗಿಕರಾಗಿಯೂ ಅಗ್ರಾಸನಾಧಿಪತಿಗಳಾಗಿಯೂ ಲೌಕಿಕ ವಿಷಯ ವಿಮರ್ಶಕರಾಗಿಯೂ ಏರ್ಪಡುತಲಿದಾರೆ. ಮುಖ್ಯವಾಗಿ ಮದರಾಸ್ ಆಂಧ್ರಪ್ರಕಾಶಿಕಾ ಪತ್ರಿಕೆಯು ಚಿಂತಿಸುವಂತೆ ಸ್ಥಿತಿಯಲ್ಲಿ ನಮ್ಮ ಹಿಂದೂ ಸ್ತ್ರೀಯರು ಇರುವಂತೆ ಭಾವಿಸಲಾಗದು. ಅವರು ಸಕಲವಿಧದಲೂ ಪುರುಷರು ಮಾಡಿರಬೇಕೆಂಬ ಸಂಕಲ್ಪವುಳ್ಳವರಾಗಿ ತಮಗುಚಿತಗಳಾದ ಪ್ರಯತ್ನಗಳಂ ಮಾಡುತಲಿದಾರೆ. ಆಂಧ್ರಪ್ರಕಾಶಿಕಾ ಲೇಖಕನು ಸ್ತ್ರೀ ವೈಲಕ್ಷಣ್ಯಕ್ಕೆ ಉತ್ಪತ್ತಿಸ್ಥಾನವಾದ ಮೈಸೂರು ರಾಜಧಾನಿಯನ್ನು ಸಕೃತ್ ನೋಡಿದವರಾದರೆ ಅವರೆಂದಿಗೂ ಹೆಂಗಸರ ಪಾರತಂತ್ರ್ಯವ ಕುರಿತು ನಿಶ್ಚಯವಾಗಿ ಅನುಮಾನಿಸಲಾರರು. "ಇನ್ನು ಅತ್ಯಲ್ಪಕಾಲದಲ್ಲಿಯೇ ಹಿಂದೂ ಸ್ತ್ರೀಯರು ತಮ್ಮ ಪುರುಷರ ಸ್ಥಾನಗಳನ್ನು ಕ್ರಮಿಸಿಕೊಂಡು ಅವರು ದಾಸಾನುದಾಸರನ್ನಾಗಿ ಮಾಡಿಕೊಂಡು, ಸಕಲಕಾರ್ಯವಂ ನಿರ್ವಹಿಸುವಷ್ಟು ಸಮರ್ಥರಾಗುತ ಬರುವರಾಗಿ ಮುಂದೆ ಯಾರೂ ಅವರಿಗಾಗಿ ಚಿಂತಿಸಬೇಕಾಗಿರುವದಿಲ್ಲವು.

HOW TO ACCOUNT FOR?

"ವಿನಾಶಕಾಲೇ ವಿಪರೀತ ಬುದ್ಧಿಃ."

ಎಂಬುತಿ ಪ್ರಾಣಿಗಳ ಸುಖದುಃಖಗಳಿಗೆ ದೈವಬಲವೇ ಕಾರಣವಾದದೆಂಬುದಕ್ಕೆ ನಿದರ್ಶನವಾಗಿ ಈ ಕೆಳಗಿನ ಅತ್ಯಾಶ್ಚರ್ಯಕರವಾದ ವೃತ್ತಾಂತವನ್ನು ಮದರಾಸ್ ಆಂಧ್ರಪ್ರಕಾಶಿಕಾ ಎಂಬ ಪತ್ರಿಕೆಗೆ ಒಬ್ಬ ಬಾತಮಿದಾರನು ತಿಳಿಸಿ ಪಡಿಸುತ್ತಾನೇನೆಂದರೆ—" ಸಿದ್ಧಾದ್ರಿನಿವಾಸನಾದ ಶ್ರೀ ವರಾಹಲಕ್ಷ್ಮೀ ನೃಸಿಂಹಸ್ವಾಮಿಯವರಿಗೆ ಈಚೆಗೆ ನಡೆದ ಚಂದನೋತ್ಸವಕ್ಕೆ ಕೆಲವು ದಿವಸಗಳ ಮುಂಚೆ ವಿಜಯನಗರ ನಿವಾಸಿಗಳಾದ ಬ್ರಾಹ್ಮಣನೂ, ಒಬ್ಬ ಅಕ್ಕಸಾಲಿಗನು ಸಹ ಸೇರಿ ಉತ್ಸವದರ್ಶನಾರ್ಥ ನವರಿ ಕ್ಷೇತ್ರಕ್ಕೆ ಪ್ರಯಾಣವಾಗಿಹೋದರು. ತಾಳ್ಪಾಡನ ಎಂಬ ಪ್ರದೇಶಕ್ಕೂ ಸಿದ್ಧಾಚಲಕ್ಕೂ ಮಧ್ಯಮಾರ್ಗದಲ್ಲಿರುವ ನರ ಸಂಚಾರವಿಲ್ಲದ ಅರಣ್ಯದಲ್ಲಿ ಅವರಿಬ್ಬರೂ ಹೋಗುತಲಿರುವಾಗ್ಯೆ ಬ್ರಾಹ್ಮಣನನ್ನು ಕೊಲ್ಲಬೇಕೆಂಬ ತಾತ್ಪರ್ಯ ಅಕ್ಕಸಾಲಿಗನಿಗುಂಟಾಗಲು, ಅವನು ತನ್ನ ಅಭಿಪ್ರಾಯವ ಬ್ರಾಹ್ಮಣನಿಗೆ ತಿಳಿಯಪಡಿಸಿದನು. ಆ ಮಹತ್ತರಿವಿಗೆ ಅವರಿಬ್ಬರಿಗೂ ಯಾವವಿಧ ವೈಷಮ್ಯವೂ ಇಲ್ಲದೆ ಇದ್ದದರಿಂದ ವಿಪ್ರನು ಅಕ್ಕಸಾಲಿಗನ ಮಾತು ಸುಬದ್ಧ ಇಂತಾ ಹೇಳನಾಸ್ಪದ ಮಾತುಗಳ್ಯಾಕೆಕ್ಕೆಂದು ಹೇಳ ನಕ್ಕನಂತೆ. ಆಗ ಸ್ವರ್ಣಸ್ಥೇಯನು—ಇಲ್ಲ, ನಿನ್ನನ್ನು ಈಗ ನಿಜವಾಗಿ ಕೊಂದುಬಿಡುವೆನೆಂದು ಕಟುವಾಗಿ ನುಡಿಯಲು, ಬ್ರಾಹ್ಮಣನು ತನಗೆ ಆಸನ್ನವಾಗಿರುವ ಮರಣವಂ ಕುರಿತು ಬಹಳವಾಗಿ ಚಿಂತಿಸುತ ಮಿತ್ರನೇ, ನೀನು ನನ್ನಂ ಕೊಲ್ಲುವದೇನೋ ನಿಜ, ಅದರಲ್ಲೇನೂ ಸಂಶಯವಿಲ್ಲ, ಪರಂತು ಕೃಪೆಯಿಟ್ಟು ಒಂದೇ ಆವರ್ತಿ ನನ್ನ ಪ್ರಾಣ ಹೋಗುವಂತೆ ಕಡಿಯಬೇಕೆಂದು ಪ್ರಾರ್ಥಿಸಿ ತನ್ನ ತಲೆ ಕೆಳಗೆ ಒಂದು ಕಲ್ಲನ್ನಿಟ್ಟುಕೊಂಡು ವಿಪ್ರನು ಮಲಗಿಕೊಂಡನು. ಕೂಡಲೇ ಅಕ್ಕಸಾಲಿಗನು ತನ್ನ ಕೈಯಲ್ಲಿದ್ದ ಕತ್ತಿಯಿಂದ ಅವನ ಶಿರವಂ ಛೇದಿಸಲಿಕ್ಕೆ ಕೈಯನ್ನು ಮೇಲಕ್ಕೆ ಎತ್ತಲು ಅವನಿಗೆ ತಿಳಿಯದಂತೆ ಅವನ ಹಿಂಭಾಗದಿಂದ ೧೮ ಅಡಿಗಳ ಉದ್ದವುಳ್ಳ ಒಂದು ದೊಡ್ಡ ಪೆಬ್ಬೆಪುಲಿ ಅಕಸ್ಮಾತ್ತಾಗಿ ಬಂದು ಆ ದುರ್ಮಾರ್ಗನು ಕತ್ತಿ ಎತ್ತಿದೊಡನೆ ಅವನ ಬಾಯಲ್ಲಿ ಕಚ್ಚಿಕೊಂಡು ಸಿದ್ಧಾದ್ರಿಯ ಕಡೆ ತೆಗೆದುಕೊಂಡು ಹೋಯಿತು. ಅಷ್ಟರಲ್ಲಿ ಆ ಬ್ರಾಹ್ಮಣನು ಎದ್ದು ತನಗೆ ಪ್ರಾಪ್ತವಾಗುವದಾಗಿದ್ದ ಮರಣವು ತಪ್ಪಿದ ಬಗ್ಗೆ ಸಂತೋಷಿಸುತ ಸಿದ್ಧಾದ್ರಿಗೆ ಹೋಗಿ ಅಲ್ಲಿ ಶ್ರೀ ನೃಸಿಂಹದೇವರ ದರ್ಶನಮಾಡಿಕೊಂಡು ಮರಳಿ ತನ್ನ ಊರಿಗೆ ಹೋಗಿ ಸೇರಿದನು. "ಅನ್ಯಥಾ ಚಿಂತಿತಂ ಕಾರ್ಯಂ ದೈವಮನ್ಯತ್ರ ಚಿಂತಯೇತ್" ಎಂಬದಾಗಿ, ನಾವೊಬ್ಬರಿಗೊಂದು ಹಾನಿಯನ್ನುಂಟುಮಾಡಬೇಕೆಂದು ಪ್ರಯತ್ನಿಸುವದಾದರೆ ಸರ್ವ್ವಜ್ಞನಾದ ಶ್ರೀಹರಿಯು ಅಂತು ಮಾಡಲೀಯದು. ಮತ್ತು ನಾವೊಂದೆಣಿಸಿದರೆ ದೈವವೊಂದೆಣಿಸುವದೆಂಬುದು ಸಹಜವಾದದ್ದಾಗಿರುತಿದೆ. ಮುಖ್ಯವಾಗಿ ದೇವರಲ್ಲಿಯೂ ಶಾಸ್ತ್ರಗಳಲ್ಲಿಯೂ ಯಾರಿಗೆ ಆಂತರವಾದ ಭಕ್ತಿಯಿರುವದೋ ಅವರಿಗೆ ಅವು ಯೆಂದಿಗೂ ನಿಷ್ಫಲಗಳಾಗಲಾರವು.

LOCAL AND PROVINCIAL NEWS.

ಒಳದೇಶ ಮತ್ತು ತಾಲ್ಲೂಕ್ ಜಾತಿ ವೃತ್ತಾಂತಗಳು

Mr Chidambara Iyer.—ಈರಾಜ್ಯದ ಎಂಟು ಡಿಸ್ಟ್ರಿಕ್ಟುಗಳಾಗಿ ವಿಭಜಿಸಲ್ಪಟ್ಟು ಎಂಟುಜನ ಡೆಪ್ಯುಟಿ ಕಮಿಷನರುಗಳ ಅಧಿಕಾರದೊಳು ಇಡಲ್ಪಟ್ಟದೆಯಷ್ಟೇ. ಈಗಿರುವ ಎಂಟುಜನ ಡೆಪ್ಯುಟೀ ಕಮಿಷನರುಗಳಲ್ಲಿ ಇನ್ನಿಬ್ಬರು ಸಹ ಹೊಸದಾಗಿ ಹೊಕ್ಕರಾಗಲ್ಪಡುವರೆಂದು ಹಿಂದೆಯೇ ನಮ್ಮ ಕಿವಿಗೆ ಬಿದ್ದಿತ್ತು. ಆದ್ಯೆ ಅದು ನಮ್ಮ ನಂಬಿಕೆಗೆ ವಿಷಯವಾಗಿರಲಿಲ್ಲವು. ಈಚೆಗೆ ಕೇಳುವದರಲ್ಲಿ ಆ ಡಿಸ್ಟ್ರಿಕ್ಟ್ ಕಮಿಷನರ ಮೊದಲಿನಂತೆ ಅಯ್ಯರವರಿಗೆ ೭೦೦ ರೂಪಾಯಿಗಳ ಸಂಬಳದ ಅಸಿಸ್ಟೆಂಟ್ ಡೆಪ್ಯುಟೀ ಕಮಿಷನರ್ ಕೆಲಸ ಕೊಡಲ್ಪಡುವದೆಂತಲೂ, ಇವರು ಖಜಾನೆ ಮತ್ತು ಮುಜರಾಯಿ ಇಲಾಖೆಗಳಂ ವಿಚಾರಿಸಿಕೊಳ್ಳುವರೆಂತಲೂ ಈ ಬಗ್ಗೆ ಹುಕುಂ ಸಹ ಕೊಡಲ್ಪಟ್ಟಿರುತದೆಂತಲೂ ಕಳೆದವಾರದ ಮೈಸೂರು ಮಿತ್ರಾವಳಿ ಪತ್ರಿಕೆ ಹೇಳುತಿದೆ.

Vice-Presidentship, Mysore Municipality.—ಮೈಸೂರು ಮ್ಯುನಿಸಿಪಲ್ ವೈಸ್ ಪ್ರೆಸಿಡೆಂಟ್ ಕೆಲಸವು ಈಚೆಗೆ ಖಾಲಿಯಾದದರಿಂದ ಅದು ಮಿ ಪೇರಿ ಸಾಹೇಬರವರಿಗೆ ಕೊಡಲ್ಪಟ್ಟಿದೆ. ಅವರು ಊರಲ್ಲಿಲ್ಲವಾದಕಾರಣ ಅವರು ಬರುವವರಿವಿಗೂ ಮ॥ ರಾ॥ ನಂಜುಂಡರಾಜೇ ಅರಸಿನವರು ಕೆಲಸ ನಿರ್ವಹಿಸುತಲಿರುವಂತೆ ನೇಮಕ ರ್ಮಾಡಲ್ಪಟ್ಟಿರುವರು. ಮ॥ ರಾ॥ ನಂಜುಂಡರಾಜೇ ಅರಸಿನವರನ್ನೇ ಖಾಯಮಾಗಿ ಈ ಕೆಲಸಕ್ಕೆ ನಿಯಮಿಸಿದರೆ ಪುರನಿವಾಸಿಗಳಿಗೆಲ್ಲ ಬಹಳ ಸಂತೋಷಕರವಾಗಿರುವದು. ಇವರು ಸ್ವದೇಶೀಯರಾದದರಿಂದ ದೇಶಾಭಿಮಾನವೂ ಪ್ರಜಾಭಿಮಾನವೂ ಇವರನ್ನಗಲಿದಾದಕಾರಣ ಇವರು ಈ ಕೆಲಸಕ್ಕೆ ನಿಯಮಿಸಲ್ಪಟ್ಟರೆ ಪ್ರಜೆಗಳಿಗೆ ಸುಖವು ವಿಶೇಷವಾಗಿರುವದೆಂದು ಮೈಸೂರು ಚಿಂತಾಮಣಿ ಪತ್ರಿಕೆ ತಿಳಿಸುತಿದೆ.

Attacked by bear.—ಕಳೆದ ಜೂನ್ ೧೧ನೇ ತಾರೀಖಿನ ದಿನ, ಗೊರವನಹಳ್ಳಿಯಲ್ಲಿ ಒಂದು ಕರಡಿಯಿದೆ ಎಂದು ಅರಕಲಗೂಡು ತಾಲ್ಲೂಕು ಅಮಲ್ದಾರ್ ಮಿಸ್ಟರ್ ಲೈನ್ಸ್ ಯವರಿಗೆ ಸಮಾಚಾರವು ತಿಳಿದುಬಂತು. ಇವರು ಕೂಡಲೇ ಆ ಸ್ಥಳಕ್ಕೆ ಹೊರಟುಹೋಗಿ, ಕರಡಿಯನ್ನು ಕಂಡು ಅದನ್ನು ಗುಂಡಿನಿಂದ ಹೊಡೆದರು. ಗುಂಡಿನ ಪೆಟ್ಟಿನಿಂದ ಅದಕ್ಕೆ ಅಪಾಯವಾಯಿತೇ ಹೊರತು, ಮರಣವುಂಟಾಗಲಿಲ್ಲ. ಘಾಯಪಟ್ಟ ಕರಡಿಯು ಅಂತಾ ಹಿಂಸೆಯನ್ನು ಕೊಡತಕ್ಕವನಾದವನ, ಅಬ್ಬರಿಸಿಕೊಂಡು, ಅಮಲ್ದಾರರ ಮೇಲೆ ಬಿದ್ದು, ಅವರ ತಲೆಬುರಡೆಯ ತೊಗಲನ್ನು ಸುಲಿದು, ಬಲಗಡೆ ರೆಟ್ಟೆಯಂ ಕೀಳ, ಕೆನ್ನೆಯನ್ನು ಹರಿದುಹಾಕಿತು. ಅಮಲ್ದಾರರು ಅರಕಲಗೂಡಿನಲ್ಲಿರುವ ಆಸಪತ್ರೆಯ ವೈದ್ಯರಾದ ಮಿಸ್ಟರ್ ಜೀವರತ್ನಂ ಪಿಳ್ಳೆಯವರ ಚಿಕಿತ್ಸೆಯಲ್ಲಿದ್ದಾರೆ. ಇವರಿಗೆ ಜಾಗ್ರತೆಯಾಗಿ ಗುಣವಾಗಲಿ ಎಂದು ಕೇಳಿರುತ್ತೇವೆ. ರೈತರು ಹೆದರಿದಂತೆ ಕರಡಿಯು ಅಮಲ್ದಾರರಿಂದ ಭಯಪಟ್ಟಿತೆ.—ವೃ.

A protest.—ಆಚೇ ಶುಕ್ರವಾರದ ದಿನ ಒಂಭತ್ತು ಘಂಟೆ ಸಮಯದಲ್ಲಿ ಮೈಸೂರಲ್ಲಿರುವ ಸುಮಾರ್ ೫೦ ಜನಗಳ ತನಕ ವರ್ತಕರು ತಮ್ಮ ಅಂಗಡಿಗಳನ್ನೆಲ್ಲ ಮುಚ್ಚಿಬಿಟ್ಟು ಎಲ್ಲರೂ ಸೇರಿ ಮೊಹರ್ರಂ ಕಾರ್ಯದಲ್ಲಿ ಸಭೆಯನ್ನು ಮಾಡಿ ಪೊಲೀಸ್‌ನವರಿಂದಲೂ ಮ್ಯಾಜಿಸ್ಟ್ರೇಟರಿಂದಲೂ ಡಿ॥ ಕಮಿಷನರಿಂದಲೂ ತಮಗುಂಟಾಗುತಿರುವ ಹಿಂಸೆಗಳ ವಿಷಯದಲ್ಲಿ ಅರ್ಜಿಗಳನ್ನು ಬರೆದು ದಿವಾನರವರಿಗೆ ಒಪ್ಪಿಸಿ ಅವರು ಈ ಕಷ್ಟವನ್ನು ನಿವಾರಣೆಮಾಡದಿದ್ದರೆ ಶ್ರೀಮನ್ಮಹಾರಾಜರವರಿಗೆ ಅರಿಕೆಮಾಡಬೇಕೆಂದು ನಿಶ್ಚಯಮಾಡಿ ಅರ್ಜಿಗಳನ್ನು ಬರೆಸಿ ಅದನ್ನು ತೆಗೆದುಕೊಂಡು ಸುಮಾರು ೩ ಸಾವಿರ ಜನಗಳವರಿಗೆ ದಿವಾನರಬಳಿಗೆ ಹೋಗುತಿದ್ದರು. ಈ ಗುಂಪಿನಲ್ಲಿ ಭಾರೀಭಾರೀ ವ್ಯಾಪಾರಮಾಡತಕ್ಕ ಸಾಹುಕಾರರುಗಳೂ, ಮುಲ್ಲಾನಿಗಳೂ, ಶೆಟ್ಟಿ ವರ್ತಕರುಗಳೂ, ಸಕಲ ಜಾತಿಯವರೂ ಸೇರಿದ್ದರು. ಮಿಸ್ಟರ್ ಅಬ್ದುಲ್ ರಹಿಮಾನ್ ಸಾಹೇಬರವರು ಈ ಗುಂಪನ್ನು ನೋಡಿ ದುರಾಗ್ರಹವನ್ನಿಷ್ಟರಾಗಿ ಏ ಕ್ಯಾಬಕಲಾಕಾಯಿಬಾಲು, ಅಂದರೆ ಇದೇನು ಕುರಿಗುಂಪು, ಎಂಬದೇ ಮೊದಲಾದ ಕೆಲವು ನಿಕೃಷ್ಟವಾದ ವಚನಗಳನ್ನು ಬಹುಧೂರ್ತತೆಯಿಂದ ಆಡಿದರೆಂಬದಾಗಿಯೂ, ತಮ್ಮ ಕಾರ್ಯ ಗೌರವದ ಮೇಲೆ ದೃಷ್ಟಿಯಿಟ್ಟು ಈ ನಿಂದೆಗೆ ಪ್ರತೀಕಾರಮಾಡಲು ಇದು ಕಾಲವಲ್ಲವೆಂದು ತಿಳಿದುಕೊಂಡು ಇವರೆಲ್ಲರೂ ದಿವಾನರವರಬಳಿಗೆ ಭರ್ತಿಗಾರಿಗಳ ವಿಷಯದಲ್ಲಿ ತಕ್ಕ ಆದಾಯವನ್ನೂ, ಹೆಚ್ಚಾಗಿ ಕಂದಾಯ ಹಾಕಿರತಕ್ಕದ್ದನ್ನೂ ನಿವರ್ತಿಸಬೇಕೆಂಬದಾಗಿ ಬರೆದಿದ್ದ ಅರ್ಜಿಯನ್ನು ಅವರಿಗೆ ಕೊಟ್ಟರು. ದಿವಾನರವರು ಅರ್ಜಿಗಳನ್ನು ಓದಿ ಕೊಂಡು ರಸ್ತೆ ಮಧ್ಯಸ್ಥಗಳಲ್ಲಿ ಭರ್ತಿಗಾಡಿಗಳು ಹೋಗತಕ್ಕದ್ದಕ್ಕೂ ನಿಲ್ಲತಕ್ಕದ್ದಕ್ಕೂ ಅಡ್ಡಿ ಮಾಡಬೇಕೆಂಬುವ ಸರ್ಕಾರದವರ ತಾತ್ಪರ್ಯವಲ್ಲ. ಗಾಡಿಗಳು ಒಂದೊಂದು ಘಂಟೆಯೊಳಗಾಗಿ ಜಿನಸು ಇಳಿಸಿಕೊಂಡು ಅಥವಾ ತುಂಬಿಕೊಂಡು ರವಾನಿಸುತ್ತಾ ಬರತಕ್ಕದ್ದು. ಈ ನಿಯಮದಲ್ಲಿ ನಿಮಗೆ ಯಾವ ತೊಂದರೆಯೂ ಇಲ್ಲದಂತೆ ಆರ್ಡರ್ ಕಳುಹಿಸುತ್ತೇವೆ. ಕಂದಾಯದ ವಿಷಯದಲ್ಲಿ ನೀವು ಡಿಪ್ಯೂಟಿ ಕಮಿಷನರವರಲ್ಲಿ ಅರ್ಜಿಯನ್ನು ಕೊಡಿ, ಅವರು ಸರಿಯಾಗಿ ವ್ಯವಸ್ಥೆ ಮಾಡುತ್ತಾರೆ, ಅವರಿಂದ ನ್ಯಾಯದೊರೆಯದಿದ್ದ ಪಕ್ಷದಲ್ಲಿ ಆಗ್ಯೆ ನಾನು ಈ ವಿಷಯದಲ್ಲಿ ಪ್ರವರ್ತಿಸಿ ವ್ಯವಸ್ಥೆಮಾಡುತ್ತೇನೆ, ಎಂದು ಅಪ್ಪಣೆಕೊಟ್ಟರು.—ವೃ. ಚಿ.

Religious conversations between two Pandits.—ಈವೂರು ಬಳೇಪೇಟೆಯಲ್ಲಿರುವ ಶ್ರೀನಿವಾಸ ದೇವರಿಗೆ ಗತವಾರದಲ್ಲಿ ವೈಖಾನಸ ಆಗಮರೀತ್ಯಾ ಮಾಡಲ್ಪಟ್ಟ ಸಂಪ್ರೋಕ್ಷಣಾಕ್ರಮವ ಕುರಿತು ಈ ಊರಿನ ಬ್ರಾಹ್ಮಣರು ಕೆಲವರು ಆಕ್ಷೇಪಿಸುತ ವೈಖಾನಸಾರಾಧನವು ಗ್ರಾಹ್ಯವಲ್ಲವೆಂದು ಅಭಿಪ್ರಾಯಪಟ್ಟಿರುವಂತೆ ತಿಳಿಯ ಬರುತಿದೆ. ಪ್ರಾಯಶಃ ಅವರಿಗೆ ತಿರುಪತಿ ವಗ್ಯೆರೆ ಮಹಾಸ್ಥಳಗಳ ಸ್ಮರಣೆ ಬಂದಿರಲಾರದೆಂದೆಣಿಸುತ್ತೇವೆ. ಈಚೆಗೆ ಇದೇ ವಿಷಯವಂ ಕುರಿತು ಇಬ್ಬರು ಪಂಡಿತರಿಗೆ ನಡೆದ ಸಂವಾದವನ್ನು ವೈಖಾನಸ ಆಗಮರೀತ್ಯಾ ನಡೆಯುವ ಪ್ರೋಕ್ಷಣವನ್ನಾಕ್ಷೇಪಿಸತಕ್ಕವರ ತಿಳುವಳಿಕೆಯಬಗ್ಯೆ ಇದರಡಿ ಪ್ರಕಟಿಸುವೆವೆಂತೆಂದರೆ.—

ವೈಖಾನಸಾಭಿಮಾನಿ—ಪಾಂಚರಾತ್ರಾಗಮವು ಶ್ರುತಿ ವಿರುದ್ಧವಾಗಿರುವದರಿಂದ ಅದು ವೈದಿಕರಿಗೆ ಪ್ರಮಾಣವಾಗಲಾರದು.

ಪಾಂಚರಾತ್ರಾಗಮಾಭಿಮಾನಿ—ಪಾಂಚರಾತ್ರಶಾಸ್ತ್ರವು ಸ್ವಲ್ಪವಾದರೂ ಶ್ರುತಿಗೆ ವಿರುದ್ಧವಾದದ್ದಲ್ಲವು, ಹಾಗೆ ವಿರುದ್ಧವೆಂದು ಭಾವಿಸುವವರೆಲ್ಲರೂ ವೈದಿಕರೆನ್ನಿಸಿಕೊಳ್ಳಲಾರರು.

ವೈ—ಶ್ರುತಿ ವಿರುದ್ಧವಾದ ಜೀವೋತ್ಪತ್ತಿಯಂ ಪ್ರತಿಪಾದಿಸುವದರಿಂದ "ಉತ್ಪತ್ತ್ಯಸಂಭವಾತ್" ಎಂಬ ಸೂತ್ರಪ್ರಕಾರ ಪಾಂಚರಾತ್ರವು ಅಪ್ರಮಾಣವೆಂದು ಸೂತ್ರಕಾರರಾದ ಶ್ರೀ ವ್ಯಾಸರು ತಿಳಿಸಿರುತ್ತಾರೆ.

ಪಾಂ—ಶ್ರೀ ಮಹಾಭಾರತದಲ್ಲಿ ವ್ಯಾಸರ್ಯ ಪಾಂಚರಾತ್ರವನ್ನು ಪ್ರಮಾಣವನ್ನಾಗಿ ಹೇಳಿ ಪ್ರಶಂಸಿರುವದರಿಂದ ಅದಂ ಅದರು ಅಪ್ರಮಾಣವೆಂದು ಎಂದಿಗೂ ನುಡಿಯಿರಲಾರರು. ಇದರಿಂದ ಪಾಂಚರಾತ್ರವನ್ನವರು ಪ್ರಮಾಣಗ್ರಂಥವನ್ನಾಗಿ ಅಂಗೀಕರಿಸಿದರೇ ಹೊರತು ಬೇರಲ್ಲವು. ಇದಲ್ಲದೆ ಪಾಂಚರಾತ್ರಾಧಿಕರಣದಲ್ಲಿ ಪಾಂಚರಾತ್ರವು ಪ್ರಮಾಣವೆಂದು ವ್ಯಾಸರವರು ಸ್ಪಷ್ಟವಾಗಿ ಅಂಗೀಕರಿಸಿರುತ್ತಾರೆ.

ವೈ—ಶ್ರೀ ಶಂಕರಾಚಾರ್ಯರು ಸಹ ಅವರಭಾಷ್ಯದಲ್ಲಿ ಆರೀತಿ ಹೇಳಿರುವಂತೆ ಕಾಣಿಸುವದಿಲ್ಲವು.

ಪಾಂ—ಶ್ರೀ ರಾಮಾನುಜಾಚಾರ್ಯರು ತಮ್ಮ ಭಾಷ್ಯದಲ್ಲಿ ಪಾಂಚರಾತ್ರವು ಅಪ್ರಮಾಣವೆಂದು ಭಾವಪಟ್ಟಿರುವಂತೆ ತೋರುವದಿಲ್ಲವು. ಮತ್ತು ಶ್ರೀಶಂಕರಾಚಾರ್ಯರವರು ಕೂಡ ತಮಗೆ ಅನಭಿಮತವಾದ ಜೀವೋತ್ಪತ್ತಿವಾದವನ್ನು ಪಾಂಚರಾತ್ರಾಗಮವು ಪ್ರತಿಪಾದಿಸುತಿದೆ ಯೆಂದು ಭ್ರಮಿಸಿ ಅದಕ್ಕೆ ಮಾತ್ರ ಅವರು ಪಾಂಚರಾತ್ರವನ್ನು ಪ್ರಮಾಣವನ್ನಾಗಿ ಗ್ರಹಿಸದೆ ಮಿಕ್ಕ ಸಂದರ್ಭಗಳಲ್ಲೆಲ್ಲ ಅದಂ ಪ್ರಮಾಣವೆಂದೇ ಅಂಗೀಕರಿಸಿರುತ್ತಾರೆ.

ವೈ—ಭಾರತಾದಿ ಇತಿಹಾಸ ಪುರಾಣಗಳು ಸ್ತ್ರೀ ಶೂದ್ರಾದಿಗಳಿಗೆ ಉದ್ದಿಷ್ಟವಾದವಾಗಿರುವದರಿಂದ ಅವು ವೈದಿಕರಿಗೆ ಶ್ರುತಿಯಂತೆ ಪ್ರಮಾಣಗಳಾಗಲಾರವು. ಆದದರಿಂದ ಅವುಗಳಲ್ಲಿ ಪಾಂಚರಾತ್ರವಿಧಾನವು ಪ್ರತಿಪಾದಿಸಲ್ಪಟ್ಟಿರುವ ಮಾತ್ರಕ್ಕೆ ಅವು ಪ್ರಮಾಣಗಳಾಗಲಾರವು.

ಪಾಂ—ವೇದೋಪಬ್ರಾಹ್ಮಣವಾದ ಮಹಾಭಾರತವನ್ನು ಅಪ್ರಮಾಣವೆಂದು ನುಡಿಯತಕ್ಕವರು ವೈದಿಕರಾಗಲಾರರು. ಆದರೆ ಸ್ಕಾಂಧಪುರಾಣಾಂತರ್ಗತವಾದ ಸೂತಸಂಹಿತೆಯನ್ನು ಅಪ್ರಮಾಣವನ್ನಾಗಿ ಎಣಿಸಬೇಕಷ್ಟೆ?

ವೈ—ಸೂತಸಂಹಿತೆಯು ಉಪನಿಷತ್ಸ್ವರೂಪ ಪುರಾಣವೆನ್ನಿಸಿಕೊಳ್ಳಲಾರದು.

ಪಾಂ—ಹಾಗೆಯೇ ಭಾರತವೂ ಪಂಚಮವೇದವೆನ್ನಿಸಿಕೊಳ್ಳುವದರಿಂದ ಅದರಲ್ಲಿ ತಿಳಿಸಲ್ಪಟ್ಟಿರುವ ಪಾಂಚರಾತ್ರ ವೈಖಾನಸ ಆಗಮ ವಿಧಾನಗಳು ಸಮಾನ ಬಲಗಳುಳ್ಳವೇ ಹೊರತು ಅವುಗಳಿಗೆ ತಾರತಮ್ಯವಿರುವದಿಲ್ಲವು.

ಯಾತ್ರಾವಿಷಯ.

ಬಿ. ಸೂರ್ಯನಾರಾಯಣರಾವ್, ಬಿ. ಎ. ಯವರು ಬರೆದದ್ದು.

ವಿದ್ಯಾವಂತನಾಗಿ ಅನೇಕ ದೇಶ ಮರ್ಯಾದೆಗಳನ್ನು ತಿಳಿದುಕೊಂಡಿದ್ದಲ್ಲಿ ಈ ಸ್ಥಳ ಪುರಾಣಗಳಂ ಕೇಳುವದಕ್ಕೆ ಬಹಳ ಆನಂದವನ್ನುಂಟುಮಾಡುವವು. ಅದರಲ್ಲಿ ಹೇಳುವವನು ಕೇಳಕಬಲ್ಲವರಂತೆ ಯೋಗ್ಯನಾಗಿದ್ದಲ್ಲಿ ಅದರಿಂದುಂಟಾಗುವ ಆನಂದವನ್ನು ವರ್ಣಿಸಲಿಕ್ಕೆ ಸಹಸ್ರ ಶಿರಸ್ಸಿನಿಂದ ಕೂಡಿದವನಾದ ಆದಿಶೇಷನಿಗೆ ಸಾಧ್ಯವಲ್ಲದೆ ಮತ್ತಾರಿಗೂ ಸಾಧ್ಯವಾಗಲಾರದು. ನಾವು ಹೋಗುವ ಮಾರ್ಗದಲ್ಲಿ ನವೀನವಾಗಿ ಕಟ್ಟಲ್ಪಟ್ಟಿರುವ ಮಿ॥ ಚಿದಂಬರಯ್ಯರವರ ಧರ್ಮ ಸತ್ರವು ಇಳಿದುಕೊಳ್ಳುವವರಿಗೆ ತಕ್ಕಷ್ಟಿಗೆ ಅನುಕೂಲವನ್ನುಂಟುಮಾಡುತ ನೋಡುವವಕ್ಕೆ ಅಲಂಕಾರವಾಗಿದೆ. ಅನಂತರ ಹೊಸ ಅಗ್ರಹಾರವನ್ನು ಕೈಯಿಂದ ತೋರಿಸಿ "ಇದೇ ಈಗಿನ ಪ್ರಭುತ್ವ ಮಾಡುವವರ ವಾಸಸ್ಥಾನವು, ಇಲ್ಲಿರುವ ಮನೆಗಳೆಲ್ಲವು ಹೊಸದಾಗಿ ಕಟ್ಟಲ್ಪಟ್ಟವು" ಎಂದು ನಮಗೆ ಹೇಳಿ ಬಂಡಿಯನ್ನು ಕೋಟೆಯ ಕಡೆಗೆ ತಿರುಗಿಸಿಂದು ನಮ್ಮ ಪರಮ ಮಿತ್ರರಾದ ಕೋಳಕಭಟ್ಟರು ಆಜ್ಞೆಯಂ ಮಾಡಿ

ದರು. ನಮ್ಮವರು ಪೂರ್ವದಲ್ಲಿ ಅನೇಕ ಪಾಳ್ಯಪಟ್ಟುಗಳಿದ್ದುದರಿಂದ ಅವರವರ ಗ್ರಾಮಗಳಲ್ಲಿ ದೇಶ ಮತ್ತು ಸ್ವತ್ವ ಸುರಕ್ಷಣಾರ್ಥ ಅವರವರ ಅನುಕೂಲವಿದ್ದಂತೆ ಕೋಟೆಗಳನ್ನು ಕಟ್ಟಿ ಅವುಗಳಿಗೆ ಸುಸ್ಥಾನಗಳೆಂದು ಹೆಸರನ್ನಿಟ್ಟು ಜನಗಳನ್ನು ಕಾಪಾಡಿಕೊಂಡು ಬರುತಲಿದ್ದರು. ಈಚೆಗೆ ಇಂಗ್ಲಿಷ್ ಪ್ರಭುತ್ವವು ಪ್ರಬಲವಾದನಂತರ ಈ ಕೋಟೆಗಳಿಗೆ ಗ್ರಹಚಾರವು ತಗಲಿ ನಾಶವುಂಟಾಯಿತು. ನಮ್ಮ ಮೈಸೂರು ದೇಶವು ಪೂರ್ವದಲ್ಲಿ ಸಣ್ಣ ಪಾಳ್ಯಪಟ್ಟಾಗಿ ಹೈದರು ಟೀಪ್ಪೂಸುಲ್ತಾನರ ಕಾಲದಲ್ಲಿ ಬಹಳ ಪ್ರಾಬಲ್ಯವನ್ನು ಹೊಂದಿತು. ಶ್ರೀರಂಗ ಪಟ್ಟಣದ ಕೋಟೆಯನ್ನು ಇಂಗ್ಲಿಷಿನವರು ಸ್ವಾಧೀನ ಮಾಡಿಕೊಂಡ ನಂತರ ಈ ದೇಶಕ್ಕೆ ಸೇರಿದ್ದ ಕೆಲವು ಪ್ರದೇಶಗಳನ್ನು ಇತರ ಪ್ರಭುತ್ವದವರಿಗೆ ಕೊಟ್ಟು ಸ್ವಲ್ಪಮಟ್ಟಿಗೆ ಪೂರ್ವ ರಾಜಸಂತತಿಯಲ್ಲಿ ಜನಿಸಿದ ರಾಜಕುಮಾರರಿಗೆ ಆಳುವದಕ್ಕೆ ಅಧಿಕಾರವನ್ನುಂಟುಮಾಡಿದರು. ನಮ್ಮ ದೇಶದಲ್ಲಿ ಬಲವಾದ ಕೋಟೆಗಳು ಅನೇಕ ಇದ್ದುವು. ಈಚೆಗೆ ಅವುಗಳೆಲ್ಲವೂ ಶಿಲವನ್ನು ಹೊಂದಿ ನಾನು ಮಾತ್ರಕ್ಕೆ ರೂಪವನ್ನು ತೋರಿಸುತ, ಪಾದದ್ವಯಗಳಲ್ಲಿ ಒಂದು ಪರಲೋಕದಲ್ಲಿಯೂ ಮತ್ತೊಂದು ಭೂಲೋಕದಲ್ಲಿಯೂ ಇಟ್ಟುಕೊಂಡಿರುವ ವೃದ್ಧನಂತೆ ನೋಡುವವರಿಗೆ ಆನಂದವನ್ನುಂಟು ಮಾಡುತಲಿವೆ. ಮೈಸೂರು ಕೋಟೆಯು ಸಾಧಾರಣವಾದದ್ದು. ದಿವಾನ್ ಪೂರ್ಣಯ್ಯನವರು ಕಟ್ಟಿಸಿದರೆಂದು ಕೆಲವರು ತಿಳಿಸುತ್ತಾರೆ. ಇದ್ದರೂ ಇರಬಹುದು. ದುರ್ಘಟವಾದ ಕೋಟೆಗಳನ್ನು ಕಟ್ಟಿ, ಕಠಿನವಾದ ರಾಜ್ಯಗಳನ್ನು ಜಯಿಸಿ, ಅನಿತ್ಯವಾದ ಪ್ರಾಪಂಚಿಕ ಸುಖಗಳೇ ಶಾಶ್ವತವೆಂದು ತಿಳಿದು ಪ್ರವರ್ತಿಸುತಲಿದ್ದ ಮ್ಲೇಚ್ಛ ಪ್ರಭುಗಳಂತಲ್ಲದೆ "ಯನ್ಮಾತ್ಮಿಕಸ್ತ್ರೈವದ ಯಾಸ್ಥಿರತ್ವಂ ಸತ್ಯಾರ್ಜಿತೇಬ್ಯಾಸ್ಯ್ರಣ ದೇವಭಕ್ತಿಃ" ಎಂಬುತೆ ವಿಶೇಷ ತಂಟಗಳಿಗೆ ಹೋಗದೆ ತಮಗೆ ದೇವರು ಕೊಟ್ಟ ರಾಜ್ಯದಲ್ಲಿ ತೃಪ್ತರಾಗಿ ಮತೊಬ್ಬರಿಗೆ ಹಿಂಸೆಯನ್ನು ಮಾಡದೆ ತಾವೂ ಮನಸ್ಸಿಗೆ ವ್ಯಾಕುಲಗಳನ್ನು ಹಚ್ಚಿಕೊಳ್ಳದೆ ಹಿಂದೂ ಪ್ರಭುಗಳು ಸಾತ್ವಿಕ ಮಾರ್ಗಪ್ರವರ್ತನೆಯಲ್ಲಿ ಕಾಲವನ್ನು ಕಳೆಯುತಿದ್ದರಾದುದರಿಂದ ಇವರ ಐಶ್ವರ್ಯಸೂಚಕವಾಗಿ ನೋಡುವವರಿಗೆ ಈ ಕೋಟೆಯು ಆನಂದವನ್ನುಂಟುಮಾಡುತಲಿತ್ತು. ಕೋಟೆಯಲ್ಲಿ ಅರಮನೆಯನ್ನು ಮುಖ್ಯವಾಗಿ ನೋಡತಕ್ಕದ್ದು. ಇದು ಪೂರ್ವಕಾಲದ ಕಟ್ಟಡವಾಗಿದ್ದರೂ ರಾಜರು ವಾಸಮಾಡುವದಕ್ಕೆ ಯೋಗ್ಯವಾದದ್ದಾಗಿಯೂ ನೋಡುವವರಿಗೆ ಗುರುತ್ವವನ್ನುಂಟುಮಾಡುವದಾಗಿಯೂ ಇರುತಿದೆ. ಇದರ ಮುಂಭಾಗದಲ್ಲಿ ವಿಸ್ತಾರವಾದ ಬೈಲುಭೂಮಿ ಇರುವದರಿಂದ ಉತ್ಸವಕಾಲಗಳಲ್ಲಿ ಜನಗಳು ಬಂದು ಗುಂಪಾಗಿ ನಿಲ್ಲುವದಕ್ಕೂ, ಕುಸ್ತಿ ಮೊದಲಾದ ವಿನೋದಗಳಂನಡೆಸುವದಕ್ಕೂ, ಸಿಪಾಯಿಗಳುಬಂದು ರಾಜರಿಗೆ ಗೌರವ ಕೊಡುವದಕ್ಕೂ ಅನುಕೂಲವಾಗಿದೆ. ಎದುರಾಗಿ ನವಬತ್ತು ಖಾನೆ ಇದೆ. ಇಲ್ಲಿ ಪೂರ್ವ ಪದ್ಧತಿಯನ್ನನುಸರಿಸಿ ನಗಾರು ನೌಬತ್ತು ವಾದ್ಯಗಳು ಸಾಯಂಪ್ರಾತಃ ಕಾಲಗಳಲ್ಲಿ ಬಾರಿಸುವದರಿಂದ ರಾಜವಾಸಸ್ಥಾನವೆಂದು ಪೂರ್ವ ಪದ್ಧತಿಗಳನ್ನು ತಿಳಿದವರು ಊಹಿಸಿಕೊಳ್ಳಬಹುದು. ಅನೇಕ ಪೂರ್ವ ಸಂಪ್ರದಾಯಗಳು ಬದಲಾಯಿಸಿ ನವೀನ ಮರ್ಯಾದೆಗಳಿಗೆ ಮಾರ್ಗವನ್ನು ಕೊಡುತ ಬಂದಿವೆ. ಹಾಗೆಯೇ ಇವುಗಳಲ್ಲಿಯೂ ಕೆಲವು ಪದ್ಧತಿಗಳನ್ನು ಬಿಟ್ಟು ಮತ್ತು ಕೆಲವನ್ನು ಅಂಗೀಕರಿಸುವದರಲ್ಲಿ ಆನಂದವು ಹೆಚ್ಚಾಗಿರುವದು. ಅಲ್ಲಿಂದ ಹೊರಟು ಅತ್ತಕಡೆಗೆ ಹೋಗಿ ಅಲ್ಲಿರುವ ದಿವ್ಯಾಶ್ವಗಳನ್ನು ಮತ್ತು ಅಲ್ಲಿ ಮ್ಯಾನೇಜರು ಮಾಡಿರುವ ಅತ್ಯುತ್ತಮವಾದ ಏರ್ಪಾಡುಗಳನ್ನೂ ನೋಡಿ ಬಹಳ ಆನಂದಭರಿತರಾಗಿ ಅದರ ಸಮೀಪದಲ್ಲಿರುವ ಇಟ್ಟಿಗೆಗೂಡು ಬಂಗಲೆಯನ್ನೂ ಅದರಲ್ಲಿರುವ ಕಾಯಿಕ ಮಾನಸಿಕ ಸುಖವೃದ್ಧಿಕರಗಳಾದ ಪದಾರ್ಥಗಳನ್ನು ನೋಡಿ ಅನಂತರ ಕನ್ನಡ ಭಾಷಾಭಿವೃದ್ಧಿಯನ್ನು ಮಾಡುವದಕ್ಕಾಗಿ ಏರ್ಪಟಿಸಿರುವ ಪಾಠಶಾಲೆಯನ್ನು ಹೊಕ್ಕು ಅದರ ಸೆಕ್ರೆಟರಿಯವರ ಸಂಗಡ ಅಲ್ಲಿರುವ ವಿದ್ಯಾರ್ಥಿಗಳನ್ನು ಪರೀಕ್ಷೆಮಾಡಿ ತೃಪ್ತರಾಗಿ ಹೊರಟು ಹೋದೆವು. ನಮ್ಮ ಸಂಗಡ ಬಂದಿದ್ದ ಕೊಳಕಭಟ್ಟರನ್ನು ಮರೆಯಕೂಡದು. ಇವರ ನಾಮವೇ ಅನೇಕಾರ್ಥಗಳನ್ನು ಗರ್ಭೀಕರಿಸುವದರಿಂದ ಇವರನ್ನು ಮಹಾನುಭಾವರೆಂದೆಣಿಸಿ ಇವರ ಆಜ್ಞಾನುಸಾರ ಅಲ್ಲಿಂದ ಹೊರಟು ಮಹಾರಾಣಿಯವರ ಜಾತಿ ಬಾಲಿಕಾ ಪಾಠಶಾಲೆಗೆ ಬಂದೆವು. ಅಲ್ಲಿನ ಸೆಕ್ರೆಟರಿಯವರು ನಮ್ಮಗಳನ್ನು ಗೌರವಪೂರ್ವಕವಾದ ಅಂತಃಕರಣದಿಂದ ನಮ್ಮಗಳನ್ನು ಪಾಠಶಾಲೆಯೊಳಕ್ಕೆ ಕರೆದುಕೊಂಡು ಹೋಗಿ ಅಲ್ಲಿರುವ ತರಗತಿಗಳನ್ನೆಲ್ಲ ತೋರಿಸಿ ಅವರು ಓದಿರುವ ಪಾಠಗಳಲ್ಲಿ ಕೆಲವು ಪ್ರಶ್ನೋಚಿತ ಪ್ರಶ್ನೆಗಳನ್ನು ಹಾಕಿ ಅವರಿಂದ ಕೆಲವು ಹಾಡುಗಳನ್ನು ಹೇಳಿಸಿ ಕರ್ಣಾನಂದವನ್ನುಂಟುಮಾಡಿದರು. ಪೂರ್ವ ಚರಿತ್ರೆಗಳಿಂದ ಆಗಿನ ಕಾಲದಲ್ಲಿ ಸ್ತ್ರೀಯರಿಗೆ ಬೇಕಾದಷ್ಟು ಸ್ವಾತಂತ್ರ್ಯವಿತ್ತೆಂದು ಚೆನ್ನಾಗಿ ತಿಳಿಯಬರುತ್ತದೆ. ಈಚೆಗೆ ತುರುಷ್ಕರು ಪಾರಸಿ ಜನರು ಬಂದು ನಮ್ಮ ದೇಶಗಳನ್ನು ಸ್ವಾಧೀನ ಮಾಡಿಕೊಂಡು ನಮ್ಮಲ್ಲಿ ಅವರ ಸಂಪ್ರದಾಯಗಳನ್ನು ಬಹಳವಾಗಿ ವ್ಯಾಪಿಸುವಂತೆ ಮಾಡಿದರು. ಅವುಗಳಲ್ಲಿ ಮುಖ್ಯವಾದದ್ದು ನಮ್ಮ ಜನರಲ್ಲಿ ಘೋಷಾ ಪದ್ಧತಿಯು. ಪೂರ್ವರಾಜ್ಯದಲ್ಲಿಯಾಗಲಿ, ಜನರಲ್ಲಿಯಾಗಲಿ ಸ್ತ್ರೀಯರು ಧಾರಾಳವಾಗಿ ಹೊರಗೆ ಬಂದು ತಮ್ಮ ಗಂಡಂದಿರ ಬಳಿಯಲ್ಲಿ ಕುಳಿತುಕೊಂಡು ಬಂದ ಸಭಿಕರಿಗೆ ಬಹುಮಾನಾದಿ ಮರ್ಯಾದೆಗಳನ್ನು ತಾವೇ ಮಾಡುತಲಿದ್ದರು. ಈಚೆಗೆ ಈ ಸಂಪ್ರದಾಯವು ತಪ್ಪಿಹೋಗಿ ಘೋಷಾಪದ್ಧತಿಯು ಬಂತು. ೧೯ನೇ ಶತಮಾನದಲ್ಲಿ ಬಹಳಮಟ್ಟಿಗೆ ನಾಗರಿಕತೆ ಹೆಚ್ಚುತಬರುತಲಿದೆ. ಸ್ತ್ರೀ ವಿದ್ಯಾಭ್ಯಾಸವು ಅವಶ್ಯವಾಗಿ ಮಾಡಬೇಕಾದದ್ದು, ಆದರೆ ಯಾವಕಾರ್ಯ ಶೋಧನೆ ಮಾಡಬೇಕಾದರೂ ಕಾಲ ದೇಶ ಸಂಪ್ರದಾಯಗಳನ್ನು ಅನುಸರಿಸಿ ಅದಕ್ಕೆ ಅನುಕೂಲವಾಗಿ ಮಾಡಬೇಕಲ್ಲದೆ ಸಾಧಾರಣವಾಗಿ ಮಾಡಕೂಡದು. ಫಲಾದ್ಯಾಹಾರಗಳು ದೇಹಕ್ಕೆ ರಕ್ತವೃದ್ಧಿಯನ್ನುಂಟುಮಾಡಿ ಪುಷ್ಟಿಯನ್ನೂ ಸುಖವನ್ನೂ ಕೊಡುವದಾದರೂ ಕಾಲವನ್ನೂ ಶಕ್ತಿಯನ್ನೂ ಅರಿಯದೆ ಭಕ್ಷಿಸುವವನಿಗೆ ವಿಷಪ್ರಾಯವಾಗಿ ತೊಂದರೆಯನ್ನುಂಟುಮಾಡುವವು. ಅದರಂತೆಯೇ ಈಗ ನಮ್ಮ ಸಮೂಹಕ್ಕೆ ಎಷ್ಟು ಮಟ್ಟಿಗೆ ವಿದ್ಯಾಭಿವೃದ್ಧಿ ಬೇಕಾಗಿರುವದೋ ಅಷ್ಟುಮಟ್ಟಿಗೆ ನಾವು ಕೊಡಬೇಕು. ಹೆಚ್ಚಾಗಿ ಕೊಟ್ಟಲ್ಲಿ ಅನುಪಯೋಗವಾಗಿ ಹೋಗುವದು. ಸಾಧಾರಣವಾಗಿ ನಮ್ಮಗಳಿಗೆ ಜೀವನೋಪಾಯಗಳು ಬಹಳ ಲಘುವಾಗಿರುವದರಿಂದ ಸಾಂಸಾರಿಕ ಕರ್ಮಗಳಿಗೆ ಮುಖ್ಯೋಪಯೋಗಿಗಳಾದ ವಿದ್ಯೆಗಳನ್ನು ಅವಶ್ಯಕವಾಗಿ ಕಲಿಸುವದಕ್ಕಿಂತಲೂ ಮುಖ್ಯವಾದ ಕಾರ್ಯವು ಬೇರೊಂದೂ ಇಲ್ಲವು.

SUMMARY OF NEWS.

ವೃತ್ತಾಂತ ಸಂಗ್ರಹ.

ಬರ್ಮಾ ರಾಜಧಾನಿಯಾದ ಮಾಂಡಲೆಯಲ್ಲಿರುವ ಅರಮನೆಯನ್ನು ಸುಟ್ಟುಬಿಡುತ್ತಾರೆಂದು ಪ್ರಕಾರುಹುಟ್ಟಿತ್ತು, ನಿಜಸ್ಥಿತಿಯು ಗೊತ್ತಾಗಲಿಲ್ಲ.

ಜಪಾನ್ ದೇಶದ ಕಿಯಟೋ ಪಟ್ಟಣದಲ್ಲಿ, ಅಲ್ಲಿನ ಜನರು ೬೦,೦೦,೦೦೦ ರೂಪಾಯಿಗಳ ಖರ್ಚಿನಿಂದ ಒಂದು ಬೌದ್ಧ ದೇವಾಲಯವನ್ನು ಕಟ್ಟಿಸಿದ್ದಾರೆ.

ನೆಬ್ರಾಸ್ಕಾ ಪಟ್ಟಣದ ಸೂಪ್ರೀಂ ಕೋರ್ಟು ನ್ಯಾಯಾಧಿಪತಿಗಳು, ಸ್ತ್ರೀಯರು, ತಮ್ಮ ಗಂಡಂದಿರು ಸಾರಾಯಿ ಕೊಂಡುಕೊಳ್ಳುವದರ ಮೂಲಕ ಹಾಳುಮಾಡಿದ ಹಣವನ್ನು, ಸಾರಾಯಿ ಅಂಗಡಿಗಾರರ ಮೇಲೆ ದಾವಾಮಾಡಿ ವಸೂಲ್ ಮಾಡಿಕೊಳ್ಳಬಹುದು, ಎಂಬದಾಗಿ ಒಂದು ಹುಕುಂ ಕೊಟ್ಟಿದ್ದಾರೆ. ಈ ನಿಬಂಧನೆಯಿಂದ ಹೊದತೀಯರುಳ್ಳ ಪುರುಷರಿಗೆ, ಸಾರಾಯಿಯನ್ನು ಯಾರೂ ಕೊಡುವದಿಲ್ಲವು.

ಯೂರೋಪ್ ಖಂಡದ ನಾನಾ ದೇಶಗಳಲ್ಲಿರುವ ಹೊಗೇಗಾಡಿಗಳು ೧ ಘಂಟೆಯಲ್ಲಿ ಹೋಗುವವೇಗದ ವಿವರ:—ಲಂಡನ್ ಪಟ್ಟಣದಿಂದ ಮ್ಯಾಂಚೆಸ್ಟರ್ ಪಟ್ಟಣಕ್ಕೆ ಟಪಾಲಿಗಾಡಿ ೪೪ ಮೈಲಿ, ಇಟಲಿಯಲ್ಲಿ ೨೧½, ಫ್ರಾನ್ಸ್ ಮತ್ತು ಜರ್ಮನಿಯಲ್ಲಿ ೩೬, ಆಸ್ಟ್ರಿಯಾ ಹಂಗೇರಿಯಲ್ಲಿ ೩೩, ಸ್ಪೈನ್ ದೇಶದಲ್ಲಿ ೨೩ ಪೋರ್ಚುಗಲ್ ೧೪½, ಅಮೆರಿಕಾ ಖಂಡದೊಳು ೩೫—೪೦ ಮೈಲಿ, ಸ್ವಿಟ್ಜರ್ ಲ್ಯಾಂಡ್ ೨೨, ಹಾಲೆಂಡ್ ೩೩½ ಬೆಲ್ಜಿಯಂ ೩೩, ಸ್ಕ್ಯಾಂಡನೇವಿಯಾ ೨೧, ಇಂಡಿಯಾದಲ್ಲಿ ೩೩ ಮೈಲಿ, ರಷ್ಯಾದಲ್ಲಿ ೩೪ ಮೈಲಿ.

ಫ್ರಾನ್ಸ್ ದೇಶದ ಟವರ್ಸ್ ಪಟ್ಟಣದಲ್ಲಿ, ಒಂದು ಸಮಾಚಾರವು ಯಾವ ರೀತಿಯಲ್ಲಿ ಕಳುಹಿಸಿದರೆ, ಜಾಗ್ರತೆಯಾಗಿ ತಲಪುವದೆಂಬ ವಿಷಯವಾಗಿ ಅಪೂರ್ವವಾದ ಒಂದು ಪರೀಕ್ಷೆಯು ನಡೆಯಿತು. ಇದಕ್ಕಾಗಿ ಯುದ್ಧಕಾರ್ಯದಲ್ಲಿ ತಯಾರಾದ ಬೇಟೆನಾಯಿಗಳೂ, ಸವಾರರೂ, ಮತ್ತು ಕಾಲು ತುಳಿತದಿಂದ ಹೋಗುವ ೨ ಚಕ್ರದ ಗಾಡಿಯ ಸವಾರರೂ ಸಿದ್ಧವಾದರು. ವರ್ತಮಾನ ಚೀಟಿಯು ತೆಗೆದುಕೊಂಡು, ಕ್ಲುಪ್ತವಾದ ೪ ಮೈಲಿ ಫಾಸಲೆಯನ್ನು, ನಾಯಿಗಳು ೧೪ ನಿಮಿಷ, ಚಕ್ರಗಾಡಿಯ ಸವಾರರು ೧೫ ನಿಮಿಷ, ರಾವುತರು ೨೪ ನಿಮಿಷ, ಇಷ್ಟರ ವ್ಯತ್ಯಾಸವುಳ್ಳ ಕಾಲಗಳಲ್ಲಿ ಸೇರಿದರು.

ಕಾಶಿಯ ಮ್ಯಾಜಿಸ್ಟ್ರೇಟರಾದ ಮಿಸ್ಟರ್ ಸಿ. ಡಬ್ಲ್ಯು. ಹೋಪ್‌ರವರ ಮುಂದೆ ಬಂದ ವಿಲಕ್ಷಣವಾದ ಮೊಕದ್ದಮೆಯು ವಿಚಾರಣೆಗೆ ಬರ್ಯಾರಲ್ಪಟ್ಟಿತೇನೆಂದರೆ:—ಒಬ್ಬ ಗೃಹಸ್ಥನು ತನ್ನ ಹೆಂಡತಿಯನ್ನು ಕರೆತರುವದಕ್ಕಾಗಿ ತನ್ನ ಮಾವನ ಮನೆಗೆ ಹೋದಾಗ ನಿನ್ನ ಹೆಂಡತಿಯು ಸತ್ತುಹೋಗಿ ಕೆಲವು ತಿಂಗಳಾದವೆಂದು ಮಾವನು ಹೇಳಿದನೆಂತಲೂ, ಆದರೆ ವಿಚಾರ ಮಾಡುವಲ್ಲಿ ಇದು ಸುಳ್ಳಾಗಿ, ವರುಷಕ್ಕೆ ಒಂದುಲಕ್ಷ ರೂಪಾಯಿಗಳ ಆದಾಯವುಳ್ಳ ಒಬ್ಬ ಜಮೀನ್ದಾರನ ಮಗನಿಗೆ ತನ್ನ ಹೆಂಡತಿಯನ್ನು ವಿವಾಹಮಾಡಿಕೊಟ್ಟಿದ್ದಾನೆಂದು ತಿಳಿಯಬಂತೆಂತಲೂ, ಹೇಳಿದನು. ಜನರು ಹಣಕಾಗಿ ಏನೇನು ಮಾಡುತ್ತಾರೆ! ಆ ಹೆಣ್ಣುಮಗಳಿಗೆ ಏನ್ಯಾರುಗತಿ? ಈ ಹುಡುಗನ್ಯಾಯೋ ಅಥವಾ ಆ ಜಮೀನ್ದಾರನ ಮಗನೋ!

ಕಳೆದತಿಂಗಳ ೬ನೇ ತಾರೀಖಿನಲ್ಲಿ ಒಂದು ವಿನೋದವಾದ ಮೊಕದ್ದಮೆಯು ವಿಚಾರಣೆಗಾಗಿ ಬಂತು. ಈಜಿಪ್ಟ್ ದೇಶದ ಸೈನ್ಯದಲ್ಲಿ ಕಮಾಂಡರಾಗಿದ್ದ ರಿಚರ್ಡ್ ಕ್ರಾಫಬರು ತಮ್ಮ ಕ್ರಿಸ್ತಮತವನ್ನು ಬಿಟ್ಟು ಸ್ತ್ರೀ ವ್ಯಾಮೋಹದಿಂದ ಅಬ್ದುಲ್ಲಾ ಪಾಷಾಯೆಂಬ ಮಹಮ್ಮದೀಯ ನಾಮಧೇಯವನ್ನು ಪಡೆದು ಈಜಿಪ್ಟ್ ದೇಶದಲ್ಲಿದ್ದ ಮಹಮ್ಮದೀಯ ಸ್ತ್ರೀಯನ್ನು ಆಮತಾನುಸಾರ ಮದುವೆ ಮಾಡಿಕೊಂಡರು. ದಂಪತಿಗಳಿಬ್ಬರೂ ಕೆಲವುಕಾಲ ಅನ್ಯೋನ್ಯವಾಗಿದ್ದು ಪುತ್ರಸಂತಾನವನ್ನು ಪಡೆದು ಆಸ್ತ್ರೀ ಮೃತಳಾದಳು. ಅವರು ಪುನಃ ಕ್ರಿಸ್ತಮತವನ್ನವಲಂಬಿಸಿ ತಮ್ಮ ಅಕ್ಕನಮಗಳನ್ನ ಮದುವೆಮಾಡಿಕೊಂಡು ಅವಳಲ್ಲಿಯೂ ಕೆಲವುಮಕ್ಕಳನ್ನು ಪಡೆದು ಸಾಯುವಕಾಲದಲ್ಲಿ ಆಸ್ತಿಯನ್ನೆಲ್ಲ ಕಡೇಯವಳಿಗೂ ಅವಳಮಕ್ಕಳಿಗೂ ಬಿಟ್ಟು ಸ್ವರ್ಗಸ್ಥರಾದರು. ಈ ಸಮಾಚಾರ ಆ ಮಹಮ್ಮದೀಯ ಸ್ತ್ರೀಯ ಮಕ್ಕಳಿಗೆ ತಿಳಿದು ಅವರು ಮಹಮ್ಮದೀಯ ನ್ಯಾಯಪ್ರಕಾರ ತಮಗೆ ೩ ರಲ್ಲಿ ೨ಭಾಗ ಬರಬೇಕಾಗಿದೆಯೆಂದು ದಾವಾಮಾಡಿದರು.

ಬರ್ಲಿನ್ ಪಟ್ಟಣದ ಒಬ್ಬ ವರ್ತಕನು ತಾನು ಮದುವೆ ಮಾಡಿಕೊಳ್ಳತಕ್ಕವನಾಗಿದೇನೆಂದು ವರ್ತಮಾನ ಪತ್ರಿಕೆಯಲ್ಲಿ ನೋಟೀಸ್ ಕೊಟ್ಟನು. ಅವನಿಗೆ ೨೩೩ ಜನರ ಕಡೆಯಿಂದ ಉತ್ತರ ಬಂತು. ಅವರ ಪೈಕಿ ೪೩ ಜನರು ೨೫ರಿಂದ ೩೦ ವರುಷ ಪ್ರಾಯದ ವಿಧವೆಯರಾಗಿದ್ದರು; ಇವರಲ್ಲಿ ೮೭ ಜನರಿಗೆ ಮಕ್ಕಳಾಗಿರಲಿಲ್ಲ. ಮತ್ತು ೨೧ ಜನರು ೩,೦೦೦ದಿಂದ ೨೦,೦೦೦ ಮಾರ್ಕ್ಸ್‌ಗಳ ಆಸ್ತಿಯುಳ್ಳವರಾಗಿದ್ದರು. ತಮ್ಮ ಗಂಡಂದಿರಿಂದ ಬಿಡಲ್ಪಟ್ಟ ನಾಲ್ಕುಜನರು ಇವನನ್ನು ಪುನರ್ವಿವಾಹ ಮಾಡಿಕೊಳ್ಳುತ್ತೇವೆಂದು ಬರೆದರು. ಅವರಲ್ಲಿ ಒಬ್ಬಳು ಮೊದಲು ಇಬ್ಬರನ್ನು ಲಗ್ನವಾಗಿ ಬಿಟ್ಟುಬಿಟ್ಟಿದ್ದಳು. ಉಳಿದ ೧೪೬ರು ಕನ್ನಿಕೆಯರಲ್ಲಿ ಇಬ್ಬರುಮಾತ್ರ ತಮ್ಮ ಪ್ರಾಯವು ೩೦ ವರುಷವೆಂದು ಬರೆದಿದ್ದರು; ಅವರಲ್ಲಿ ೧೪ ಹುಡುಗಿಯರಿಗೆ ೧೬ ವರುಷಗಳು ತುಂಬಿದ್ದವು. ೨೧ ಜನರು ತಮ್ಮ ತಸ್ವೀರುಗಳನ್ನು ಕಳುಹಿಸಿದ್ದರು; ಅವುಗಳಲ್ಲಿ ೩೦ ತಸ್ವೀರುಗಳು ಅತಿ ರೂಪವತಿಯರಾದ ತರುಣಿಯರದಾಗಿದ್ದವಂತೆ.

ಕಳೆದತಿಂಗಳ ೯ನೇ ತಾರೀಖಿನಲ್ಲಿ ಗುತ್ತಿ ಸಂಸ್ಕೃತ ಪಾಠಶಾಲಾ ಮಂದಿರದೊಳು ಥಿಯಾಸಾಫಿಕಲ್ ಸೊಸೈಟಿಯವರು ಇದುವರೆವಿಗೆ ಆ ಸ್ಥಾನ ಸೊಸೈಟಿಗೆ ಪ್ರೆಸಿಡೆಂಟರಾಗಿದ್ದ ಮ॥ ಟಿ. ರಾಮಚಂದ್ರರಾಯರವರನ್ನು ಸನ್ಮಾನಿಸತಕ್ಕಬಗ್ಗೆ ಸಭೆ ಸೇರಿದ್ದಾಗ ಮ॥ ರಾ॥ ರತ್ನಕರಾವು ಲಕ್ಷ್ಮೀನೃಸಿಂಹ ಪಂತರವರು ಪಠಿಸಿದ ಉಪನ್ಯಾಸದೊಳು ಪ್ರಾಧಾನ್ಯೇನ ತಿಳಿಸಿದ್ದೇನೆಂದರೆ ಈಚೆಗೆ ರಜಾಕಾಲದಲ್ಲಿ ನಾನು ಥಿಯಾಸಾಫಿಕಲ್ ಸೊಸೈಟಿಯನ್ನು ನೋಡಬೇಕೆಂಬ ಕುತೂಹಲದಿಂದ ಅಡೆಯಾರಿಗೆ ಹೋಗಿದ್ದೆನು. ಸದರೀ ಸೊಸೈಟಿಯ ಮುಖ್ಯರಿಂದಿರ್ವ ಶ್ರೀನಿವಾಸ ಪಂಡಿತ ಭಾಷ್ಯಾಚಾರ್ಯರ ದರ್ಶನಾನಂತರ ಅವರೊಡನೆ ವೈದಿಕ ವಿಷಯಗಳನ್ನು ಕುರಿತು ಮಾತನಾಡುವಾಗ್ಗೆ ವೇದಕ್ಕೆ ಈ ಭಾಷ್ಯದಲ್ಲಿ ತಿಳಿಸಲ್ಪಟ್ಟಿರುವ ಅರ್ಥವಲ್ಲದೆ ಅರ್ಥಾಂತರಗಳೇನಾದರು ಇರುವದೋ ಎಂದು ಕೇಳಿದೆನು, ಅದಕ್ಕೆ ಅವರು ತಮಗೆ ಆ ಅರ್ಥವು ತಿಳಿಸುವಿಕೆಗೆ ಸಾಮರ್ಥ್ಯವಿಲ್ಲವೆಂತಲೂ, ಆ ವಿಷಯದಲ್ಲಿ ತಮಗೆ ಪೃಥಗ್ವಾದ ಜ್ಞಾನವಿಲ್ಲವೆಂತಲೂ ತಿಳಿಸಿದರು. ಅನಂತರ ಒಂದಾನೊಂದುರಾತ್ರಿ ಶ್ರೀನಿವಾಸ ಭಾಷ್ಯಾಚಾರ್ಯರವರು ಮಲಗಿಕೊಂಡಿರುವಾಗ್ಗೆ ನಿಶೀಥದಲ್ಲಿ ಯಾರೋಒಬ್ಬ ಮಹಾತ್ಮರು ಅವರಿಗೆ ಪ್ರತ್ಯಕ್ಷವಾಗಿ ಲಕ್ಷ್ಮೀನೃಸಿಂಹ ಪಂತರವರು ಬಂದಿರುವ ಉದ್ದೇಶ್ಯವು ನಿಮಗೆ ತಿಳಿಯುವದೇ ಎಂದು ಕೇಳಿದರಂತೆ. ಅದಕ್ಕೆ ಆಚಾರ್ಯರವರು, ವೇದದ ರಹಸ್ಯಾರ್ಥವು ತಿಳಿಯಬೇಕೆನ್ನುವ ಬಗ್ಗೆ ಬಂದಿದ್ದಾರೆಂದು ಹೇಳಿದರು. ಆಗ ಮಹಾತ್ಮರು ನೀವು ಅದಕ್ಕೆ ರಹಸ್ಯಾರ್ಥವು ತಿಳಿಸಲಿಲ್ಲವೆಂದು ಸರಳ ಪ್ರಶ್ನೆಮಾಡಿದರಂತೆ. ಅದಕ್ಕೆ ಪುನಃ ಆಚಾರ್ಯರವರು, ನನಗೆ ತಿಳಿಯದ್ದರಿಂದ ಹೇಳಲಿಲ್ಲವೆಂದು ನುಡಿದರು. ಕೂಡಲೇ ಅವರು, ವೇದಕ್ಕೆ ಎರಡರ್ಥಗಳಿರುವಂತೆ ಶ್ರೀರಾಮಾನುಜಾಚಾರ್ಯರವರೇ ಅವರ ಭಾಷ್ಯದಲ್ಲಿ ಬರೆದಿರುವಾಗ್ಗೆ ನೀವು ಯಾತಕ್ಕೆ ಹೇಳಬಾರದಾಗಿತ್ತೆಂದು ನುಡಿದು ಬಳಿಕ ಕೆಲವು ಗ್ರಂಥಗಳನ್ನು ಪಠಿಸಿ ಅದು ನೋಡಿದರೆ ಸ್ಪಷ್ಟವಾಗುವದೆಂದು ಹೇಳಿ ಅಂತರ್ಧಾನವಾದರೆಂಬದಾಗಿ ಭಾಷ್ಯಾಚಾರ್ಯರವರು ನನ್ನ ಸಂಗಡ ಪ್ರಸ್ತಾಪಿಸಿದ್ದರು. ಆಚಾರ್ಯರವರು, ಸದರೀ ಮಹಾತ್ಮರು ಉಪದೇಶಿಸಿದ ಕೆಲವುಗ್ರಂಥಗಳನ್ನು ಅಲ್ಲಿನ ಸರಸ್ವತೀ ಭಂಡಾರದಲ್ಲಿ ಹುಡುಕಿ ತೆಗೆದು ಓದಿನೋಡಲು ಗೂಢಾರ್ಥವು ಅದರಲ್ಲಿ ಬರೆಯಲ್ಪಟ್ಟದೆಯೆಂದು ತಿಳಿಸಿದರು. ಈ ಸೊಸೈಟಿಯು ಬಹುವಿಧದಲ್ಲಿ ದೇಶಕ್ಕೆ ಮೇಲನ್ನುಂಟುಮಾಡಿತೆಂತಲೂ, ಮುಂದೆಯೂ ಇದೇರೀತಿ ಮಾಡುವದೆಂತಲೂ, ದೇಶಾಭಿವೃದ್ಧಿಯಂ ಕೋರತಕ್ಕವರೆಲ್ಲರೂ ಇದರಲ್ಲಿ ಸೇರುವದು ಯುಕ್ತವೆಂತಲೂ ತಿಳಿಸಿದರು. ಶ್ರೀಭಾಷ್ಯಾಚಾರ್ಯರವರಿಗೆ ಪ್ರತ್ಯಕ್ಷವಾದ ಮಹಾತ್ಮರು ಶ್ರೀ ಶಂಕರಾಚಾರ್ಯರೋ, ಶ್ರೀರಾಮಾನುಜಾಚಾರ್ಯರೋ, ಶ್ರೀಮಧ್ವಾಚಾರ್ಯರೋ, ಅಥವಾ ವೇದವ್ಯಾಸರೋ ಅಥವಾ ಸಾಕ್ಷಾದ್ವೇದ ಪುರುಷನೋ ತಿಳಿಯಲಿಲ್ಲವು" ಎಂಬದು.

BANGALORE:—Printed and publised at the KARNATIC PRESS, No. 41, Hospital Road, Petta.

ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA.

ಪ್ರತಿ ಸೋಮವಾರ ಪ್ರಾತಃಕಾಲದಲ್ಲಿ ಪ್ರಕಟಿಸಲ್ಪಡುವದು.

Published every Monday Morning.

[illegible]

Vol. XV] BANGALORE—MONDAY, JULY 16, 1888 [No 28

ಸಂಪುಟ ೧೫] ಬೆಂಗಳೂರು—ಸಕ ೧೮೮೮ನೇ ಇಸವಿ ಜುಲೈ ೧೬ನೇ ತಾರೀಖು ಸೋಮವಾರ. [ಸಂಚಿಕೆ ೨೮.

ಕರ್ಣಾಟಕ ಪ್ರಕಾಶಿಕಾ

ಪತ್ರಿಕೆಯ ಚಂದಾ ದರಗಳು,
೧೮೮೮ನೇ ಇಸವಿ ಜನವರಿ ೧ನೇ ತಾರೀಖು
ಕಡಮೆಮಾಡಲ್ಪಟ್ಟಿರುತ್ತದೆ.

ಈ ಪತ್ರಿಕೆಯ ಚಂದಾದಾರರಿಗೆ [illegible] ಪರಿಮಿತವಾದ [illegible] ಈ ಪತ್ರಿಕೆಯು [illegible] ಕೆಳಕಂಡ ದರಗಳನ್ನು ನಿಗದಿಮಾಡಿದೆ —

ಇಂಗ್ಲಿಷ್ ಮತ್ತು ಕನ್ನಡಯುಗಳಿಗೆ

	ಮುಂಗಡವಾಗಿ	ಪಶ್ಚಾತ್ತಾಗಿ
12 ತಿಂಗಳಿಗೆ	6—0—0	9—0—0
6 „	4—0—0	5—8—0
3 „	2—8—0	3—8—0

ಇಂಗ್ಲಿಷ್ ಅಥವಾ ಕನ್ನಡದ ದರಗಳು.

	ಮುಂಗಡವಾಗಿ	ಪಶ್ಚಾತ್ತಾಗಿ
12 ತಿಂಗಳಿಗೆ	4—0—0	5—0—0
6 „	2—0—0	2—8—0
3 „	1—4—0	1—8—0

[illegible]

ಪ್ರಕಟನೆಯ ದರಗಳು.

ಮೊದಲನೆಸಲ ಪಂಕ್ತಿ ಒಂದಕ್ಕೆ 0—2—0
ಎರಡನೆಸಲದಿಂದ ಪಂಕ್ತಿ ಒಂದಕ್ಕೆ 0—1—0

[illegible]

"IT RECOMMENDS ITSELF"
ALL WHO SUFFER FIND SURE RELIEF
LITTLE'S
ORIENTAL BALM
THE MOST EFFECTUAL MODERN REMEDY FOR PAIN

[illegible]

ಪರಿಶೀಲಕರ ಅಭಿಪ್ರಾಯ.

[illegible] (C. R. [illegible] I. C. S., M. I. [illegible]) [illegible]

Agents—Messrs. [illegible] Bangalore
[illegible] & Co. [illegible] Bangalore
[illegible] & Co. [illegible] Bangalore, and of
MAHOMED YOUSUF AND SON, The Cash Bazar, Bangalore
A. F. Br[illegible] & Co,
20 [illegible] Street, Madras

NOTICE.

VAIDYASARA SANGRAHA

A TREATISE ON THE [illegible] OF
HINDU MEDICINE
Price including Postage Rs. 5 0 0

ವೈದ್ಯಸಾರ ಸಂಗ್ರಹ

[illegible]

ಬಿ. ಬಿ. ವಿ [illegible]
ಆಸ್ಪತ್ರಿ [illegible] ಬೆಂಗಳೂರು.

[illegible]

ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA.

MONDAY, JULY 16, 1888

೧೮೮೮ನೇ ಜುಲೈ ೧೬ನೇ ತಾ|| ಸೋಮವಾರ

THE LAST OF RUKMABAI CASE

ಈಗ್ಯೆ ಮೂರು ನಾಲ್ಕು ವರ್ಷಗಳ ಕಾಲದ ಹಿಂದೆ, ಮುಂಬೈ ಪ್ರಾಂತದಲ್ಲಿ ರುಕ್ಮಿಣಿಬಾಯಿ ಯೆಂಬಾಕೆಗೂ ಆಕೆಯ ಗಂಡನಾದ ದಾದಾಜೀ ಯೆಂಬಾತನಿಗೂ ನಡೆಯುತಲಿದ್ದ ಪ್ರಸಿದ್ಧವಾದ ಕಕ್ಷಿಯ ಸ್ವರೂಪವು ವೃತ್ತಾಂತ ಪತ್ರಿಕೆಗಳ ಮೂಲಕ ಪ್ರಾಯಶಃ ಯಲ್ಲರಿಗೂ ತಿಳಿದ ವಿಷಯವಾಗಿದೆಯಷ್ಟೆ. ಅದಾಗ್ಯೂ ಈ ಪ್ರಾಜ್ಯಕ್ಕೆ ಪ್ರಧಾನ ಕಾರಣವನ್ನು ಸಂಗ್ರಹವಾಗಿ ಇದರಲ್ಲಿ ತಿಳಿಸುವೆವು. ಹ್ಯಾಗೆಂದರೆ—ರುಕ್ಮಿಣಿಬಾಯಿಯ ತಂದೆಯಾದ ಜನಾರ್ದನ ಪಾಂಡುರಂಗ ಯೆಂಬಾತನು ಮೃತನಾದ್ಮೇಲೆ ಆತನ ಭಾರ್ಯೆಯಾದ ಜಯಂತೀಬಾಯಿ ಯೆಂಬಾಕೆಯು ಸಖಾರಾಂ ಅರ್ಜುನ್ ಯೆಂಬುವನನ್ನು ಮರುವಿವಾಹ ಮಾಡಿಕೊಂಡಳು. ಇದು ನಡೆದ ಕೆಲವು ಕಾಲದ ಮೇಲೆ ರುಕ್ಮಿಣಿಬಾಯಿ ಯೆಂಬವಳನ್ನು ದಾದಾಜೀ ಯೆಂಬಾತನಿಗೆ ವಿವಾಹ ಮಾಡಿಕೊಟ್ಟರು. ಕೆಲವು ತಿಂಗಳುಗಳ ತರುವಾಯ ಆಕೆಯು ಪ್ರೌಢೆಯಾಗಿ ಆಕೆಯ ಗಂಡನಾದ ದಾದಾಜೀ ಯೆಂಬಾತನು ಪ್ರಸ್ತ ಮಾಡಿಕೊಳ್ಳಬೇಕೆಂದು ಅಪೇಕ್ಷಿಸಲು ಆಕೆ ಯೆರಡನೇ ತಂದೆಯಾದ ಸಖಾರಾಂ ಯೆಂಬುವನು ಸ್ವಲ್ಪದಿವಸದ ಮೇಲೆ ಆಳಿಯನ ಇಷ್ಟಾರ್ಥ ಪೂರ್ತಿ ಮಾಡುವದಾಗಿ [illegible] ನಾದಲು ಅದಕ್ಕೆ ಅಳಿಯನೂ ಸಮ್ಮತಿಸಿದನು. ಆ ಮಾಮೆಯೊಳು ಕಳೆದಮೇಲೆ ಅಳಿಯನು ಮರಳಿ ರಗೌಡ್ಸಿ ಮಾಡಲು ಅದಕ್ಕೆ ಅಸಮಂಜಸವಾದ ಕೆಲವು ಕಾರಣಗಳನ್ನು ಹೇಳಿ ವ್ಯರ್ಥವಾದ ತಕರಾರುಗಳು ಮಾಡಿದರು. ಆದರ ಮೇಲೆ ದಾದಾಜೀ ಯೆಂಬುವನು ತನ್ನ ಹೆಂಡತಿಯನ್ನು ತನಗಿರುವ ವಿವಾಹ ಸಂಬಂಧವಾದ ಬಾಧ್ಯತೆಯನ್ನು ಸ್ಥಿರಪಡಿಸಿ ಕೊಳ್ಳುವದಕ್ಕೋಸ್ಕರ ಸಿವಿಲ್‌ದಾವೆ ತಂದು ಅನಂತರ ಕೋರ್ಟನಲ್ಲಿ ವಾದಿಗೆ ಪ್ರತಿಕೂಲವಾಗಿ ಸ್ಪಷ್ಟಗಳು ಅದರ ಮೇಲೆ ಆತನು ಮುಂಬೈ ಹೈಕೋರ್ಟನಲ್ಲಿ ಮಾಡಿದ ಅಪೀಲಿನಲ್ಲಿ ರುಕ್ಮಿಣಿಬಾಯಿಯು ಗಂಡನ ಮನೆ ಗೆ ಹೋಗಿ ಸಂಸಾರ ಮಾಡತಕ್ಕದ್ದು, ಇಲ್ಲವಾದರೆ ಆರುತಿಂಗಳ ಸಜಾ ಅನುಭವಿಸತಕ್ಕದ್ದೆಂದು ತೀರ್ಮಾನವಾಯಿತು. ರುಕ್ಮಿಣಿಬಾಯಿಯು ಪತಿಯ ಮನೆಗೆ ಹೋಗುವದಿಲ್ಲವೆಂದು ಮುಸ್ತರಿಸಿದಳು, ಗಂಡನಿಗೆ ದಗಲಿದ ಕೋರ್ಟಿನ ಖರ್ಚ್ ವಗ್ಯೆರೆಗಳ್ಗೆ ದೀವಣಾತಿಯಿಟ್ಟು ಪ್ರೀವಿ ಕೌನ್ಸಿಲ್ ಪ್ರುಸ್ ಕಚೇರಿಗೆ ಅಪೀಲುಮಾಡಿ ಅಲ್ಲಿನ ವಿವಾದವನ್ನು [illegible] ತೀರಿಸಲು [illegible] ರುಕ್ಮಿಣಿಬಾಯಿಯು [illegible] ರೂಪಾಯಿಗಳ [illegible]

ತಿತ್ತಾದ್ದು, ಕೆಳಗಿನಕೋರ್ಟಿನ ತೀರ್ಪನ್ನು ರಾಯಮಾಡತಕ್ಕದ್ದು, ಗಂಡನು ಯಾವವಿಧದಲ್ಲೂ ಅನುಭವಿಸಿರದ ಮತ್ತು ಅಸಾಧ್ಯವಾದದು, ಹೆಂಡತಿಯು ಈಗಲೇ ಉಳಿಯಬಹುದು ಆಕೆಯ ಪ್ರಕೃತ ಆಸ್ತಿಯಮೇಲಾಗಲಿ, ಮುಂದೆ ಬರಬಹುದಾದ ಆಸ್ತಿಯಮೇಲಾಗಲಿ ತನಗೆ ಬಾಧ್ಯತೆಯುಂಟೆಂದು ಯಾವವಿಧ ದಾವೆಯನ್ನು ತರಕೂಡದು, ಕೆಳಕೋರ್ಟಿನ ಡಿಕ್ರಿಯಮೇಲೆ ಜಾರಿಬಗ್ಗೆ ಅಪೀಲು ಖರ್ಚಿನಬಗ್ಗೆ ಜಾಮೀನು ತರೀಖ್ ಕೋರ್ಟಿನಲ್ಲಿ ಠೇವಣಿ ಇಟ್ಟಿರುವ ಮೊಬಲಗನ್ನು ಅಪೀಲನಾಯಿಯು ವಾಪಸು ತೆಗೆದುಕೊಳ್ಳುವದಕ್ಕೆ ಅಪ್ಪಣೆ ಕೊಡತಕ್ಕದ್ದಾಯೆಂಬದು. ಈ ಷರತ್ತುಗಳಿಗೆ ಅಪೀಲು ಪ್ರತಿವಾದಿಯ ಕಡೆ ವಕೀಲರು ಸಮ್ಮತಿಸಿದದರಿಂದ ಹೈಕೋರ್ಟಿನವರು ಮೇಲಿನ ಷರತ್ತುಗಳನ್ನನುಸರಿಸಿ ಡಿಕ್ರಿ ಕೊಟ್ಟರು. ಮುಖ್ಯವಾಗಿ, ಈ ಮೊಕದ್ದಮೆಯ ಮೂಲಕ, ಹಿಂದೂಜನರಲ್ಲಿ ಗಂಡನಿಗೆ ತನ್ನ ಹೆಂಡತಿಯ ಮೇಲೆ ವಿವಾಹ ಸಂಬಂಧವಾದ ಹಕ್ಕುಂಟೆಂಬ ಅಂಶವು ಸ್ಥಿರಪಟ್ಟದ್ದರಿಂದ ಈ ಕಾಲದ ಹೆಂಗಸರ ಸ್ಥಿತಿ ಕೆಲವರ ಮನಸ್ಸಿನ ವರ್ಣನಕ್ಕೆ ಅವಕಾಶ ತಪ್ಪಿತೆಂದು ಸ್ಪಷ್ಟವಾಗುತಿದೆ. ರುಕ್ಮಾಬಾಯಿಯು ಸ್ವೇಚ್ಛಾವಿಹಾರಾರ್ಥ ತಂದ ಈ ಮೊಕದ್ದಮೆಯು ಲೋಕೋಪಕಾರಕವಾದ ಬಗ್ಗೆ ಆಕೆಯು ವಿಷಯವಾಗಿ ಯೆಲ್ಲರು ಕೃತಜ್ಞರಾಗಿರಬೇಕಾದ್ದು ಕರ್ತವ್ಯವಾಗಿರುತಿದೆ.

MORAL GEMS FROM THE MAHABHARATA

ಮಹಾಭಾರತ ನೀತಿರತ್ನಾವಳಿ.

INTRODUCTION,

ಪೀಠಿಕೆ.

ಹಿಂದೂಜನರಿಂದ ವಿಶೇಷತಃ ಗೌರವಿಸಲ್ಪಡುತಲಿರುವ ಶ್ರೀ ಮಹಾಭಾರತದಲ್ಲಿ ಆಯಾ ಪ್ರಕರಣಗಳೊಳು ತಿಳಿಸಲ್ಪಟ್ಟಿರುವ ನೀತಿ ಬೋಧಕಗಳಾದ ಅನೇಕ ಶ್ಲೋಕಗಳು ನಮ್ಮ ಬಾಲಕರು ಅವಶ್ಯ ತಿಳಿಯತಕ್ಕವಾಗಿಯೂ ಅವರಿಗೆ ಒಳ್ಳೇ ಜ್ಞಾನವನ್ನೂ ವರ್ತನವನ್ನೂ ಉಂಟುಮಾಡತಕ್ಕವಾಗಿಯೂ ಇರುವದರಿಂದ ಅವುಗಳನ್ನಿ ವ್ಯಾಖ್ಯಾನವೆಂದು ಕೆಂಡು ಬುದನಲ್ಲ ಮದರಾಸನಲ್ಲಿ ಪ್ರಸಿದ್ಧರಾಗಿರುವ ಮೆ|| ಶಿವಶಂಕರ ಪಾಂಡಿಯಾ ಯವರು ಸಂಗ್ರಹಿಸಿ "ಮಹಾಭಾರತ ನೀತಿ ರತ್ನಾವಳಿ" ಎಂಬ ಹೆಸರುಳ್ಳ ಒಂದು ಸಣ್ಣ ಗ್ರಂಥವು ಪ್ರಕಟಿಸಿರಾಕಬದಾಗಿಯೂ, ಅದು ಬಾಲಕರಿಗೆ ನೀತಿ ಬೋಧಕವಾಗಿರುವಂತೆಯೂ, ಬಹಳ ಉಪಯುಕ್ತವಾಗಿರುವಂತೆಯೂ ಈಗ್ಯೆ ಎರಡು ವಾರಗಳ ಹಿಂದೆಯೇ ತಿಳಿಸಿದ್ದೆವಷ್ಟೆ. ಸದರೀ ಗ್ರಂಥವನ್ನು ಕನ್ನಡಭಾಷೆಯಲ್ಲಿ ಬರೆದು ಈ ಪತ್ರಿಕಾಮೂಲಕ ಪ್ರಕಟಿಸಿದರೆ ಯೆಲ್ಲರಿಗೂ ಬಹಳ ಉಪಯುಕ್ತವಾಗಿರುವದೆಂದು ನಮ್ಮ ಸ್ನೇಹಿತರಪೈಕಿ ಕೆಲವರು ತಿಳಿಸಿದ್ದರಿಂದ ಸದರೀ ಗ್ರಂಥವನ್ನು ಈ ವಾರದ ಮೊದಲು ಸ್ವಲ್ಪ ಸ್ವಲ್ಪವಾಗಿ ಈ ಪತ್ರಿಕೆಯಲ್ಲಿ ಪ್ರಕಟಿಸುತ ಬರುವೆವಾದದರಿಂದ ಅದು ಎಲ್ಲರೂ ಶ್ರದ್ಧೆಯೊಡನೆ ಓದಿ ತಕ್ಕ ಪ್ರಯೋಜನವು ಹೊಂದಬೇಕೆಂದು ಕೋರುವೆವು.

PRECEPTORS.

ಗುರುಗಳು.

ಶ್ಲೋ|| ಮಾತಾಗುರುತರಾಭೂಮೇಃ ಪಿತಾ
ಚೋಚ್ಚತರಸ್ತಥಾ ಮನಃಶೀಘ್ರತರಂ
ವಾತಾಚ್ಚಿಂತಾಬಹುತರೀತೃಣಾಂ ೧

ಅ||—ಭೂಮಿಗಿಂತಲೂ ತಾಯಿಯಾದವಳು ದೊಡ್ಡವಳು. ಆಕಾಶಕ್ಕಿಂತಲೂ ಮಹತ್ತಾದವನು ತಂದೆ. ವಾಯುವಿಗಿಂತಲೂ ತೀವ್ರವಾದದ್ದು ಮನಸ್ಸು, ಇವುಗಳೆಲ್ಲಕ್ಕೂ ದೊಡ್ಡದಾದದ್ದು ವ್ಯಾಕುಲವು. ಆದದರಿಂದ ಪ್ರಬಲತರವಾದ ವ್ಯಾಕುಲ ಹೀನನಾದ ಪುರುಷನಿಗೆ ಸಕಲ ಸಂತೋಷವೂ ಉಂಟಾಗುವದು.

ಶ್ಲೋ|| ನಾಸ್ತಿಮಾತೃಸಮಾಛಾಯಾನಾಸ್ತಿಮಾತೃಸಮಾಗತಿಃ । ನಾಸ್ತಿಮಾತೃಸಮಂತ್ರಾಣಂನಾಸ್ತಿಮಾತೃಸಮಾಪ್ರಿಯಾ ।

ಅ|| ಲೋಕದಲ್ಲಿ ತಾಯಿಗೆ ಸಮಾನವಾದ ಪೋಷಕರೆ ಬೇರೊಂದಿಲ್ಲವು. ಆಕೆಗೆ ಸಮಾನವಾದ ಗತಿಯೂ ಇಲ್ಲವು. ಅವಳಂತೆ ಹಿತಚಿಂತಕರಾದವರು ಬೇರೊಬ್ಬರೂ ಇರಲಾರರು. ಆದಕಾರಣ ತಾಯಿಗಿಂತ ಶ್ರೇಷ್ಠವಾದ ಬೇರೆಸಿಂದು ವಸ್ತು ಈ ಭೂಮಿಯಮೇಲಿರಲಾರದು.

ಶ್ಲೋ|| ಪಿತಾಧರ್ಮಃ ಪಿತಾಸ್ವರ್ಗಃ ಪಿತಾಹಿ
ಪರಮಂತಪಃ ॥ ಪಿತರಿಪ್ರೀತಿಮಾಪ
ನ್ನೇಸರ್ವಾಃಪ್ರೀಯಂತಿದೇವತಾಃ।

ಅ|| ತಂದೆಯೇ ಪುಣ್ಯವು, ಅವನೆ ಸ್ವರ್ಗವು, ಅವನೇ ಶ್ರೇಷ್ಠವಾದ ತಪಸ್ಸು, ತಂದೆಯೊಬ್ಬನು ಸಂತುಷ್ಟನಾದರೆ ಸಕಲ ದೇವತೆಗಳೂ ಸಂತೋಷಿಸುವರು. ಇದರಿಂದ ತಂದೆಗಿಂತ ಶ್ರೇಷ್ಠನು ಬೇರೊಬ್ಬನಿಲ್ಲವೆಂದು ಭಾವವು. ಆತನ ಇಷ್ಟಾನುಸರಣವು ತಪಸ್ಸಿಗಿಂತ ಹೆಚ್ಚಾಗಿಯೂ, ಸ್ವರ್ಗ ಸುಖ ಸಮಾನವಾಗಿಯೂ, ಪುಣ್ಯಪ್ರದವಾಗಿಯೂ ಇರುವದೆಂದರಿಯತಕ್ಕದ್ದು.

ಶ್ಲೋ|| ಗುರೂಣಾಂ ಚೈವ ಸರ್ವೇಷಾಂ ಮಾತಾ ಪರಮಕೋ ಗುರುಃ
ಧರ್ಮಜ್ಞಾಃ ಸತ್ತಮ ಗುರೂಣಾಂ ಚೈವ
ಸರ್ವೇಷಾಂ ಮಾತಾ ಪರಮಕೋ ಗುರುಃ॥

ಅ|| ಶ್ರೇಷ್ಠನಾದ ಧರ್ಮಜ್ಞನೆ! ಗುರುವಾಕ್ಯಗಳ್ಯಾವಾಗಲೂ ಧರ್ಮಬದ್ಧವಾಗಿರುವವೆಂದು ನುಡಿಯಲ್ಪಟ್ಟಿರುವದರಿಂದ ಗುರುಗಳೆಲ್ಲರಪೈಕಿ ತಾಯಿಯೇ ಉತ್ತಮ ಗುರುವಾಗಿರುತ್ತಾಳೆಯಾಗಿ ಆಕೆಯ ವಾಕ್ಯದರಿಪಾಲನೆಯಲ್ಲಿ ನೀನಾಸಕ್ತನಾಗಿರುವಿಯಾದರೆ ನಿನಗೆ ಸಕಲ ಸುಖಗಳೂ ದಕ್ಕಬೆ ಸಿದ್ಧಿಸುವವೆಂದು ಭಾವವು.

ಶ್ಲೋ|| ನಾತಃ ಪುತ್ರಃ ಪಿತೃವಚನಕೃತ್ತಿಃ
ಶುಶ್ರೂಷಯಾಸ್ಯತ ॥ ಸಪುತ್ರಃ ಪುತ್ರನ
ಧರ್ಮವರ್ಣವಿಪತುಃ ಸಾತೃನು

ಅ|| ತಾಯಿ ತಂದೆಗಳ ಆಜ್ಞಾನುಸಾರ ನಡೆಸುತ ಅವರಿಗೆ ಮೇಲನ್ನುಂಟುಮಾಡಿ ಸಂತೋಷನಡಿಸುವಾತನೇ ಪುತ್ರನೆಂಬ ವ್ಯವಹಾರಾರ್ಹನಾಗುವನು. ಆದಕಾರಣ ನಿಜವಾದ ಪುತ್ರನು ತನ್ನ ಮಾತಾಪಿತೃಗಳ ವಾಕ್ಯಗಳನ್ನೆಂದಿಗೂ ಉಪೇಕ್ಷಿಸಿ ವರ್ತಿಸಲಾರನೆಂದರಿಯುವನು.

ಶ್ಲೋ|| ಯಃ ಪುತ್ರೋ ಗುಣಸಂಪನ್ನೋ ಮಾ
ತಾಪಿತ್ರೋರ್ಹಿತಪ್ರದಃ॥ ನಸ್ಯತುಸರ್ವ
ತಿಕಲ್ಯಾಣಂ ಕನಿಯಾದಪಿ ಸತ್ತಮ ॥

ಅ|| ಸಕಲ ಸದ್ಗುಣ ಸಂಪನ್ನನಾಗಿಯೂ ತನ್ನ ತಾಯಿ ತಂದೆಗಳಿಗೆ ಸದಾ ಹಿತಕರನಾಗಿಯೂ ಇರುವ ಮಗನು ಬಾಲಕನಾಗಿದ್ದರೂ ಆತನು ಸಕಲವಿಧ ಶುಭಗಳಿಂ ಪಡೆಯಲಿಕ್ಕೆ ಯೋಗ್ಯನಾಗುವನು. ಆದದರಿಂದ ಉತ್ತಮನಾದ ಪುತ್ರನು ಅಲ್ಪವಯಸ್ಕನಾಗಿದ್ದರೂ ಶ್ಲಾಘ್ಯಗಳಾದ ತನ್ನ ನಡತೆಗಳಿಂದ ತನ್ನ ಗುರುಜನರಿಗೆ ಸಂತೋಷವನ್ನುಂಟುಮಾಡುತ ತಾನೂ ಸಂತೋಷವನ್ನನುಭವಿಸುವನೆಂದು ಪಂಡಿತರ ತಾತ್ಪರ್ಯವು.

(ಶೇಷ)

Occasional Notes.
ನೈಮಿತ್ತಿಕ ವಿಷಯನ್ಯಾಸ.

A congress postponed.—ಸಿಂಧಾದಲ್ಲಿ ನಡೆಯುವದಾಗಿರುವ ರಿಫಾರ್ಮನ್ನು ಕುರಿತ ಸಮಾಜವು ಬರುವ ಸೆಪ್ಟಂಬರ್ ೩ನೇ ತಾರೀಖಿಗೆ ನಿಲ್ಲಿಸಲ್ಪಟ್ಟಿರುತಿದೆ.

Importation of gold and silver.—ಕಳೆದ ಏಪ್ರಿಲ್ ಮತ್ತು ಮೇ ತಿಂಗಳಲ್ಲಿ ಇಂಡ್ಯಾ ದೇಶಕ್ಕೆ ಆಮದಾದ ಚಿನ್ನದ ಕ್ರಯ ರೂಪಾಯಿಗಳು ೨೮ಲಕ್ಷ, ಬೆಳ್ಳಿಯ ಕ್ರಯ ೧೭೩೪ ಲಕ್ಷ.

A private visit.—ಕಳೆದ ಸೋಮವಾರದ ದಿನ ತಿರುವಾಂಕೂರು ಸಂಸ್ಥಾನದ ಎಳೆಯರಾಜರವರನ್ನು, ಹೈದರಾಬಾದ್ ನಿಜಾಮರವರು ಅಂತರಂಗವಾದ ದರ್ಬಾರಿನಲ್ಲಿ ಬರಮಾಡಿಕೊಂಡು ಭೇಟಿಕೊಟ್ಟು ಗೌರವಿಸಿದರು.

Widow marriage.—ಬೊಂಬಾಯಿಯಲ್ಲಿ ಪ್ರಕಟಿಸಲ್ಪಡುವ ಭರತ ಬಂಧುಯೆಂಬ ದೇಶಭಾಷಾ ವೃತ್ತಾಂತ ಪತ್ರಿಕೆಯ ಯಜಮಾನರು ಮಾರ್ವಾಡಿದೇಶದಲ್ಲಿನ ಒಬ್ಬ ಬಾಲವಿಧವೆಯನ್ನು ಸಾಗಿ ವಿವಾಹಮಾಡಿಕೊಂಡರೆಂದು ಮದರಾಸ್ ಮೈಲ್ ಪತ್ರಿಕೆಯಮೂಲಕ ತಿಳಿಯಲಾದೆವು.

The Indian finance.—ಕಾಲತೀ ಇಸಿವಿಯಲ್ಲಿ ಇಂಡ್ಯಾ ಗವರ್ನಮೆಂಟು ಮಾಡಿದ್ದ ವೆಚ್ಚವು ಅಂದಾಜಿಗಿಂತಲೂ ಎಂಬತ್ತುಲಕ್ಷರೂಪಾಯಿಗಳು ಕಡಿಮ್ಯಾಗಿದೆವು. ಅದರ ಪೈಕಿ ಎಪ್ಪತ್ತುಲಕ್ಷ ರೂಪಾಯಿಗಳು ಬ್ರಹ್ಮದೇಶದ ಖರ್ಚಿನಿಂದ ಉಳಿದದ್ದಾದವು.

A terrible fire.—ಅಮೇರಿಕಾ ದೇಶದ ಕಿಂಬರ್ಲಿಯೆಂಬ ಪ್ರದೇಶದಲ್ಲಿನ ವಜ್ರದ ಗನಿಯಲ್ಲಿ ಸಾವಿರಾರುಮಂದಿ ಕೆಲಸಮಾಡುತ್ತಿರುವಲ್ಲಿ ಥಟ್ಟನೆ ಬೆಂಕಿಹತ್ತಲಾಗಿ ಅವರ ಪೈಕಿ ೫೦೦ ಮಂದಿ ನೇಟಿವರು ಮತ್ತು ನೂರುಮಂದಿಯು ದಗ್ಧವಾದರೆಂದು ಇಲ್ಲಿಂದ ಮದರಾಸ್ ಮೈಲ್ ಪತ್ರಿಕೆಗೆ ಬಂದ ತಂತಿ ವೃತ್ತಾಂತದ ಮೂಲಕ ತಿಳಿಯಬರುತಿದೆ.

The new Viceregal Lodge.—ಇಂಡ್ಯಾ ರಾಜ್ಯದ ವೈಸ್ರಾಯಿಯವರ ವಾಸಕ್ಕಾಗಿ ಹದಿನೈದುಲಕ್ಷರೂಪಾಯಿಗಳ ಖರ್ಚಿನಿಂದ ಸಿಂಲಾದಲ್ಲಿ ಈಗ ಹೊಸದಾಗಿ ಕಟ್ಟಲ್ಪಟ್ಟಿರುವ ಕಟ್ಟಡಕ್ಕೆ ವೈಸ್ರಾಯಿಯವರು ಈತಿಂಗಳ ಅಖೈರಿಗೆ ಹೋಗಲಾಗಿ ಅದರಲ್ಲಿ ಬರುವ ತಿಂಗಳ ೪ನೇ ತಾರೀಖಿನೊಳು ಬಹಳ ಉತ್ಸವಗಳು ನಡೆಸುವರು.

The High Court of Madras.—ಮದರಾಸ್ ಹೈಕೋರ್ಟಿನ ಚೀಫ್ ಜಸ್ಟಿಸ್‌ರವರಾದ ಸರ್ ಆರ್ಥರ್ ಕಾಲಿನ್ಸ್‌ರವರು ಈಗ ರಜಾತೀರಿ ಸ್ವದೇಶದಲ್ಲಿ, ಅಂದರೆ ಇಂಗ್ಲೆಂಡ್ ದೇಶದಲ್ಲಿರುವರಷ್ಟೆ, ಸದರೀಯವರು ಜಾಸ್ತಿಯಾಗಿ ಆರುತಿಂಗಳ ರಜಾ ಅಪೇಕ್ಷಿಸಿರುವರೆಂದು ಮದರಾಸ್ ಪತ್ರಿಕೆಯೊಂದರ ಮೂಲಕ ತಿಳಿಯಲಾದೆವು.

Theft.—ಈ ತಿಂಗಳ ೭ನೇ ತಾರೀಖ್ ಶನಿವಾರದದಿನ, ಕಲ್ಕತ್ತೆಯೊಳಗಿರುವ ಮ್ಯೂಜಿಯಂ, ಅಂದರೆ ವಿವಿಧವಸ್ತು ಪ್ರದರ್ಶನಶಾಲೆಯೊಳಗೆ ಒಬ್ಬ ಕಳ್ಳನು ಪ್ರವೇಶಿಸಿ, ಕೋಹಿನೂರೆಂಬ ಪ್ರಸಿದ್ಧವಜ್ರವನ್ನೂ, ಇನ್ನು ಈ ಪ್ರದರ್ಶನದಲ್ಲಿರುವ ಪ್ರಸಿದ್ಧಗಳಾದ ರತ್ನಗಳಿಗೆಯೂ ಸಮಾನ್ಯವಾದ ತಳುಕುಕಲ್ಲುಗಳನ್ನಿಡಮಾಡಿ ಇಡಲ್ಪಟ್ಟಿರುವವುಗಳನ್ನೆಲ್ಲ ನಿಜವಾದ ರತ್ನಗಳೆಂಬ ಭ್ರಾಂತಿಯಿಂದ ಕದ್ದುಕೊಂಡುಹೋದನಂತೆ.

Government servant.—ಸರ್ಕಾರಿ ನೌಕರರು ಬಡ್ಡಿ ನೋಡತಕ್ಕವರಾಗಿರಲಿ, ಹುಂಡಿಮಾಡಿರಲಿ, ಶಾಹುಕಾರರಾಗಿರಲಿ, ಅವರಮೇಲೆ ವರಲ್ಪನ ಆಪಾದನೆಗಳು ಲಿಖಿತ ಮೂಲಕವಾಗಿರತಕ್ಕದ್ದು, ಯಾತಕ್ಕೆಂದರೆ, ಅವರೆಲ್ಲರಿಗೂ ಸಾಮಾನ್ಯವಾಗಿ ಅಪೀಲ್ ಮಾಡಿಕೊಳ್ಳುವ ಅಧಿಕಾರವುಂಟಾಗಿರುತಿದೆ. ಆದದರಿಂದ ಅವರಮೇಲೆ ತಪ್ಪುಹುವ ಮೊಕದ್ದಮೆಗಳಲ್ಲಿ ಲಿಖಿತ ಮೂಲಕವಾದ ದಾಖಲೆಗಳಿರತಕ್ಕದ್ದೆಂದು ನಿರ್ಣಯವಾಗಿರುತಿದೆ.

Discovery of gold-bearing stones.—ಆಸ್ಟ್ರೇಲಿಯಾ ದೇಶದ ಪಶ್ಚಿಮಭಾಗದಲ್ಲಿ ಕೆಲವರು ಅಲ್ಲಿಅಲ್ಲಿ ಶೋಧನೆ ಮಾಡಿಕೊಂಡು ಹೋಗುತ್ತಿರುವಲ್ಲಿ ಅವಿಶಯವಾಗಿ ಸ್ವರ್ಣರೇಖೆಗಳುಳ್ಳ ವಿಸ್ತಾರವಾದ ಕಲ್ಲುಗಳಕಾಣ ಕಂಡುಬಂದು, ಅವರ ಪೈಕಿ ಒಂದು ಟನ್ ಕಲ್ಲುಗಳನ್ನು ಯಂತ್ರ ಸಹಾಯದಿಂದ ಪುಡಿಮಾಡಿ ಶೋಧಿಸುವಲ್ಲಿ ಸುಮಾರು ೬೪ತೊಲೆ ಚಿನ್ನ ಸಿಕ್ಕಿತು. ಅದರಮೇಲೆ ಅನೇಕ ಟನ್‌ಗಳ ತೂಕ ಸದರೀ ಕಲ್ಲುಗಳನ್ನು ಅನುಭವಶಾಲಿಗಳಾದವರ ಸಮಕ್ಷಮದಲ್ಲಿ ಅಜಮಾಯಿಷೀ ಬಗ್ಗೆ ಇಂಗ್ಲಾಂಡಿಗೆ ಕಳುಹಿಸಿರುತ್ತಾರೆ.

Offer of a reward.—ಕೊನಾರ್ ಸೇತು ನಿರ್ಮಾಣಕ್ಕಾಗಿ ಇಟ್ಟಿದ್ದ ಸಾಮಾನುಗಳಿಗೆ ಕಳೆದತಿಂಗಳಲ್ಲಿ ಯಾರೋ ಬೆಂಕಿಹಚ್ಚಿಬಿಡಲು ಅವೆಲ್ಲವು ಬೆಂದುಹೋಗಿ ಅದರಿಂದ ಮದರಾಸ್ ರೈಲ್ವೆ ಕಂಪೆನಿಯವರಿಗೆ ಮೂರುಲಕ್ಷ ರೂಪಾಯಿಗಳಿಗೆ ಜಾಸ್ತಿಯಾಗಿ ನಷ್ಟವುಂಟಾದದರಿಂದ ಸದರೀ ದುಷ್ಕೃತ್ಯ ನಡೆಸಿದವನ ಆಥವಾ ನಡೆಸಿದವರ ಪತ್ತೆಗೆ ಸಾಧಕವಾಗುವಂತೆ ವರ್ತಮಾನ ಕೊಡತಕ್ಕವರಿಗೆ ೫೦೦ ರೂಪಾಯಿಗಳು ಇನಾಂಕೊಡುವದಾಗಿ ಸದರೀ ರೈಲ್ವೆ ಕಂಪೆನಿಯವರು ಪ್ರಕಟಿಸುವಂತೆ ಪ್ರಸ್ತಾವವುಂಟಾಗಿದೆ.

H. H. the First Prince of Travancore.—ಮದರಾಸ್ ಸ್ಟ್ಯಾಂಡರ್ಡ್ ಪತ್ರಿಕೆಯ ತಿರುವಾಂಕೂರು ಬಾತಮೀದಾರನು ಬರೆಯುತ್ತಾನೇನೆಂದರೆ—ಘನತೆ ವಹಿಸಿದ ತಿರುವಾಂಕೂರು ಯುವರಾಜರವರು, ಕೆಲವಣಿ ಯೆಂಬಾತನು ತಿರುವಾಂಕೂರಿಂದ ಹೊರಟು ಹೋಗುವ ತನಕ ತಾವು ದೇಶಕ್ಕೆ ವಾಪಸು ಬರುವದಿಲ್ಲವೆಂಬ ದೃಢತರ ಸಂಕಲ್ಪದೊಡನೆ ಹೊರಟುಹೋದರು. ಘನತೆ ವಹಿಸಿದ ಎಳೆಯರಾಜರವರು ಇದಕ್ಕೆ ಪ್ರೂವರ್ನಾರೋ ಹೊರಟುಹೋಗಿರುತ್ತಾರೆ. ಉಳಿದಿರುವ ಹಿರಿಯ ಅರಸರನ್ನು ದೇಶದಿಂದ ಹೊರಡಿಸುವ ಪಕ್ಕೆ ದಿವಾನಜಿಗೆ ಎಷ್ಟು ಕಾಲ ಹಿಡಿಯುವದೋ ನೋಡಬೇಕು, ಎಂಬದು.

Sale of the High Court buildings.—ಮದರಾಸ್ ಹೈಕೋರ್ಟ್ ದರ್ಬಾರಕಟ್ಟಡದಲ್ಲಿ ಇನು ಕೋರ್ಟುಗಳ ಕೆಲಸವೆಲ್ಲ ನಡೆಯುವ ಬಗ್ಗೆ ಯೋಗ್ಯವಾದ ಸ್ಥಳವೊಂದು ಬೇರೆ ಬೇಕಾಗಿರುವದು ಕಟ್ಟಡವನ್ನು ಕೆಮ್ಮಡಿಸ್ಥಳದಲ್ಲಿ ಗವರ್ನಮೆಂಟಿಗೆ ಬರೆಯಲು ಅದು ಅದಕ್ಕೆ ಒಪ್ಪಿ ಆಬಗ್ಗೆ ಅವಶ್ಯಕಗಳಾದ ಪಾಟದಾರಿಗಳನ್ನೆಲ್ಲ ಮಾಡಿ ಕೆಲಸಕ್ಕೆ ಪ್ರಾರಂಭಿಸಿದರಷ್ಟೆಯಷ್ಟೆ. ಈಗ ಸ್ಮಾಲ್‌ಕಾಸ್ ಕೋರ್ಟ್ ಮತ್ತು ಸ್ಮಾಲ್‌ಕಾಸ್‌ಕೋರ್ಟುಗಳು ಮಾಡುವರುವ ಕಟ್ಟಡವು ಪಾಲಕ್ಕೆ ಪವಾಗಿ ಅವರಾಪೇಕ್ಷೆಯೂ ಸ್ಥಳವೆಲ್ಲವು ಪರಿಮಾಣವಾಗಿದು ಕೂಡಿಯಮಾಡುತಿಲ್ಲ, ದರಮಾಸ್ತಿನಲ್ಲಿ ಸದರೀ ಕಟ್ಟಡವನ್ನು ಸದರಿಗೆ ಅದು ೧೪೦೦೦ನೇ ಜಾಲ್ಸ ಗವರ್ನ್‌ಮೆಂಟು ಬಿಡುವನ್ನಿ ಒಪ್ಪಿಸಲ್ಪಡುವದೆಂದೂ, ಆಕಾಲದೊಳಗಾಗಿ ಹೊಸಕಟ್ಟಡದ ಕಾಮಗಾರಿಯು ಪೂರ್ತಿಯಾಗದ ಪಕ್ಷದಲ್ಲಿ ಹೈಕೋರ್ಟಿನ್ನು ಅಲ್ಲಿಗೆ ಸಾಗಿಸುವದಕ್ಕೆ ಸಾಧ್ಯವಾಗದ ಕಾರಣ ಪ್ರಸ್ತುತಕ್ಕೆ ಆಕಾರದ ತರುವಾಯ ಬಾಡಿಗೆ ತಿಂಗಳೊಂದರ ಪರಿಶೆ ಮೊತ್ತಕ್ಕೆ ಸಾಲಿಯವರಾ ಸೇಕರ ೨೪ ರೂಪಾಯಿಗಳ ಮೇರೆ ಬಿಟ್ಟುಕೊಡಿಸಲ್ಪಡುವ ಮೊತ್ತಲೂ ಗವರ್ನಮೆಂಟಿನವರು ಇಟ್ಟುಕೊಳ್ಳುತ್ತಾರೆ.

Disloyalty punished.—ಕೊಚ್ಚಿ ಸಂಸ್ಥಾನದ ಅರಸರವರು ಈಚೆಗೆ ಪ್ರೈವೇಟಾಗಿಯಷ್ಟೆ ಅಂತಾ ಪ್ರಬಲ ಸಂದರ್ಭದ ಗೌರವಾರ್ಥ ಅಲ್ಲಿನ ಅಂಗಡಿಗಳೆಲ್ಲವು ಕೆಲವುದಿನಗಳ ವರೆವಿಗೆ ಮುಚ್ಚಿರಲ್ಪಡತಕ್ಕದ್ದೆಂದು ಇಸ್ತಿಹಾರ್ ಮೂಲಕ ಪ್ರಕಟಿಸಿದ್ದಾಗ್ಯೂ ಅಲ್ಲಿನ ಅಂಗಡಿಯವರ ಪೈಕಿ ಒಬ್ಬನು ಸರ್ಕಾರ ಹುಕುಮನ್ನು ಲಕ್ಷ್ಯವಿಲ್ಲದವನಾಗಿ ಅಂಗಡಿಯನ್ನಿಡಲು ಸರ್ಕಾರದವರು ಕೂಡಲೇ ಅವನನ್ನು ದಸ್ತಗಿರಿ ಮಾಡಿಸಿ ಅವನಿಗೆ ಮೂರುನೂರುರೂಪಾಯಿಗಳ ಜುಲ್ಮಾನೆ ವಿಧಿಸಿದ್ದಲ್ಲದೆ ಅವನ ಬೆನ್ನಿನಮೇಲೆ ಕೊರಡೆಯಿಂದ ಮೂರುಪೆಟ್ಟು ಹೊಡೆಯತಕ್ಕದ್ದೆಂದು ಹುಕುಂಮಾಡಿದರು. ಸದರೀ ದೇಶಕ್ಕೆ ಸೇರಿದ ಯರ್ನಾಕೊಳಂ ಎಂಬ ಸ್ಥಳದಲ್ಲಿ ಬೇರೆಯೊಬ್ಬನು ನಿಷೇಧಿಸಲ್ಪಟ್ಟಕಾಲದಲ್ಲಿ ಅಂಗಡಿಯಿಟ್ಟ ತಪ್ಪಿನ ಬಗ್ಗೆ ಐವತ್ತು ರೂಪಾಯಿಗಳ ಜುಲ್ಮಾನೆ, ಮತ್ತು ಹದಿನೈದು ಕೊರಡೆ ಪೆಟ್ಟಿಯ ದಂಡನೆ ವಿಧಿಸಲ್ಪಟ್ಟಿತೆಂದು ಕೊಚ್ಚಿ ಆರ್ಗಸ್ ಎಂಬ ಪತ್ರಿಕೆ ಹೇಳುತ್ತದೆ. ರಾಜಾಜ್ಞೋಲ್ಲಂಘನಕ್ಕೆ ಕೊರಡೆಯಿಂದ ಹೊಡಿಸುವದು ಈಕಾಲದ ಕಾನೂನುಗಳಿಗೆ ಅನುಗುಣವಾಗಿ ತೋರದೆ ಹೋದಾಗ್ಯೂ ಜುಲ್ಮಾನೆ ಮೂಲಕವಾದ ದಂಡನೆಯು ಅಪರಾಧಿಯ ಜ್ಞಾಪಕದಲ್ಲಿದ್ದು ಮರಳಿ ಅಂತಾ ಅಪರಾಧವು ಮಾಡದಿರುವಂತೆ ನಿರೋಧಿಸಲಾರದು.

LOCAL AND PROVINCIAL NEWS.
ಒಳದೇಶದ ಮತ್ತು ತಾಲ್ಲೂಕಿನ ಜಾತಿವೃತ್ತಾಂತಗಳು

Sandalwood.—೧೮೮೭-೮೮ನೇ ಸಾಲಿನಲ್ಲಿ ಸುದರಿಬರತಕ್ಕ ೬,೬೬,೦೦೦ ರೂಪಾಯಿಗಳಿಗೆ ಕಡಿಮೆ ಇಲ್ಲದೆ ದುಡ್ಡು ವಸೂಲಾಗಬಹುದೆಂದು ಮೈಸೂರು ಗವರ್ನಮೆಂಟಿನವರು ಅಂದಾಜ್ ಮಾಡಿರುವಂತೆ ಒಳದೇಶದ ಸ್ಪೆಕ್ಟೇಟರ್ ಪತ್ರಿಕೆ ಹೇಳುತ್ತದೆ.

A ball.—ಮದರಾಸ್ ಗವರ್ನರಾದ ಲಾರ್ಡ್ ಕಾನಿಮಾರಾಯವರು ಸ್ವಲ್ಪ ದಿನಗಳಲ್ಲೇ ಮೈಸೂರು ಮಾರ್ಗವಾಗಿ ಇಲ್ಲಿಗೆ ಬರುತ್ತಾರೆಯಾದ್ದರಿಂದ ಸವರೀಯವರ ಗೌರವ ಮತ್ತು ಸಂತೋಷಾರ್ಥ ಇಲ್ಲಿನ ರೆಸಿಡೆಂಟರವರು ತಮ್ಮ ವಾಸಗೃಹದಲ್ಲಿ ಬಾಲ್ ಮೊದಲಾದ ಉತ್ಸವಗಳು ನಡಸುವ ಆಲೋಚನೆಯಲ್ಲಿರುವರೆಂದು ಕೇಳುತ್ತೇವೆ.

The City Municipal school.—ಈ ಊರಿನ ಇಲ್ಲಿನ ಮುನ್ಸಿಪಲ್ ಸ್ಕೂಲ್ ವಿದ್ಯಾರ್ಥಿಗಳಿಗೆ, ಗವರ್ನಮೆಂಟ್ ಬಂಗಲೆ ಆವರಣದ ತೋಟದಲ್ಲಿ, ಇವರುಗಳು ಕೊಡಲ್ಪಡುವ ಪ್ರತಿ ಬಹುಮಾನಗಳ ಪ್ರಶಸ್ತಿಯಾದ ಮ|| ವಿ. ನಾಣ್ಣಿ ಅಯ್ಯರವರು ಮೋಹಿನಿ ಸುಂದರವಾದ ಒಳ್ಳೆ ಸೇರುವ ಸಭೆಯಲ್ಲಿ ಅಗ್ರಾಸನಾಧಿಪತಿಯಾಗಿರುವರು.

A Durbar Hall in Mysore.—ಮೈಸೂರು ನಗರದಲ್ಲಿ ಪ್ರಜೆಗಳ ಉಪಯೋಗಕ್ಕೆ ಒಂದು ದರ್ಬಾರ್ ಹಾಲ್ ಎಂದು ಕರೆಯಲ್ಪಡುವ ಒಂದು ಕಟ್ಟಡವನ್ನು ಕಟ್ಟಿಸಬೇಕೆಂದು ಶ್ರೀಮನ್ಮಹಾರಾಜರವರು ಅಪ್ಪಣೆ ಕೊಡಿಸಿರುವರಾಗಿ ತಿಳಿಯಬರುತ್ತದೆ. ಈ ಕಟ್ಟಡವು ಸಾರ್ವಜನಿಕರಾದ ಕೂಟಗಳಿಗೆ ಕಲ್ಯಾಣದ ಕೆಲಸಕ್ಕೆ ಉಪಯೋಗವಾಗುವಂತೆ, ಇದು ಊರಿನಲ್ಲಿ ೧೫೦ ಅಡಿ ಉದ್ದವಾಗಿಯೂ ಈ ಸಂಸ್ಥಾನದ ಗೌರವಕ್ಕೆ ಅನುಗುಣವಾದ್ದಾಗಿಯೂ ಇರುವುದೆಂದೂ, ಒಳದೇಶದ ಪತ್ರಿಕೆಯ ಮೂಲಕ ತಿಳಿಯಬರುವದು.

An unfounded rumour.—ಈ ಸುತ್ತ ಕಡ ಫಾರೆಸ್ಟ್ ಆಫೀಸರವರು ಸರ್ಕಾರ್ ರವರ ಸಂಬಂಧ ಸೇವೆ ಕೊಡಬೇಕೆಂದು ಮಾಡಿದ ಸಭೆಯಲ್ಲಿ ನಂಬಿಕೆಯಾಗದ ಮಾತುಗಳನ್ನು ಹೇಳುತ್ತಿರುವಂತೆ ಈ ಪತ್ರಿಕೆಯಲ್ಲಿ ಪ್ರಕಟವಾದ ಸುದ್ದಿ ಸುಳ್ಳಾಗಿದೆ. ಪ್ರತಿಯೊಂದು ವಿಷಯದಲ್ಲಿ ಜಾಗ್ರತೆಯಿಲ್ಲದ ಅಧಿಕಾರಿಯಾದ ಮ|| ಶಿಕ್ಷೆಯ ಸಾಹೇಬರವರಿಗೆ ಅಷ್ಟು ಕೆಲಸ ಯೋಚನೆಯಿಂದ ಮಾಡುವರೆಂದು ಹೇಳುವದು ಸ್ಪಷ್ಟವಾಗಿರುತ್ತದೆ. ಇದಲ್ಲದೆ, ಯಾವ ವಿಷಯದಲ್ಲಾದರೂ ಸರ್ಕಾರಕ್ಕೆ ಒಂದು ಪ್ರಯೋಜನವನ್ನು ತೋರಿಸಿ, ತಮ್ಮ ಮೂಲಕ ಇನ್ನು ಬಹುಮಾನ ಈ ಸಂಸ್ಥಾನದಲ್ಲಿ ಕೆಲಸ ಮಾಡಿ ನಿಂತವರು ಸಿಕ್ಕೋಣವೆಂಬುದೇ ಅವರ ಮುಖ್ಯೋದ್ದೇಶವಾಗಿರುವಂತೆ ಅವರ ಚರ್ಯೆಗಳಿಂದ ಕಾಣಬರುತ್ತದೆ.

The weather.—ಈ ವಾರದಿಂದ ಬೇಸಗೆ ವಾರದೆಲ್ಲ ಸಮ ಮೋಡವಾಗುತ್ತಲೂ ಆಗಿಂದಾಗ್ಯೆ ಮಳೆಬರುವಂಥ ಬೀಳುವಂತೂ ಇದ್ದಿತು. ಏರುವ ಇದರಿಂದ ಕೆರೆ ಕುಂಟೆಗಳಿಗೆ ಅಲ್ಪಸ್ವಲ್ಪ ನೀರು ಬರಬಹುದೆಂದು ಹೇಳುವದಕ್ಕೆ ಸಹ ಅವಕಾಶವಾಯಿತು. ತಾಲ್ಲೂಕಿನ ಜಾತಿ ರಿಪೋರ್ಟುಗಳನ್ನು ನೋಡಲಾಗಿ, ಈ ತಿಂಗಳ ೩ನೇ ತಾರೀಖಿನ ವಾರದಲ್ಲಿ ಬೆಂಗಳೂರು, ಕೋಲಾರ, ತುಮಕೂರು, ಈ ಮೂರು ಡಿಸ್ಟ್ರಿಕ್ಟುಗಳಲ್ಲಿ ಸಮರ್ಪಕವಾದ ಮಳೆಬೀಳಲಿಲ್ಲವೆಂದು ಹೇಳಬೇಕಾಗಿದೆ. ಹಾಸನ ಡಿಸ್ಟ್ರಿಕ್ಟಿನ್ನಲ್ಲಿ ಅರಸೀಕೆರೆ ತಾಲ್ಲೂಕು ಒಂದರಲ್ಲಿ ಮಾತ್ರ, ಅರಕಲಗೂಡು, ಚನ್ನರಾಯಪಟ್ಟಣ ಈ ಎರಡು ತಾಲ್ಲೂಕುಗಳಲ್ಲಿ ಬೆಳೆಗಳೂ ಅಸಾರವೆನಿಸುತ್ತವೆ. ಶಿವಮೊಗ್ಗ ಡಿಸ್ಟ್ರಿಕ್ಟಿನಲ್ಲಿ ಕೆಲವು ತಾಲ್ಲೂಕುಗಳಲ್ಲಿ ಮಳೆ ಬಲವಾದದ್ದು ಬಿದ್ದಿರುತ್ತದೆ. ಚನ್ನಗಿರಿ, ಹೊನ್ನಾಳಿಯಲ್ಲಿ ಏನೂ ಬೀಳಲಿಲ್ಲ. ಕಡೂರು ಡಿಸ್ಟ್ರಿಕ್ಟಿನಲ್ಲಿ ಕೆಲವು ಮತ್ತು ಮೂಡಿಗೆರೆಯ

ಲ್ಲಿ ಪ್ರಬಲವಾಗಿಯಾಗಿರುತ್ತದೆ. ಇತರ ತಾಲ್ಲೂಕುಗಳಲ್ಲಿ ಅಲ್ಪವೃಷ್ಟಿ. ಮೈಸೂರು ಡಿಸ್ಟ್ರಿಕ್ಟಿನಲ್ಲಿ ಮಳೆಯಿಲ್ಲವೆಂತಲೇ ಹೇಳಬೇಕು. ಚಿತ್ರದುರ್ಗ ಡಿಸ್ಟ್ರಿಕ್ಟಿನಲ್ಲಿ ಕಸಬಾ ಚಿತ್ರದುರ್ಗದಲ್ಲಿ ಮಾತ್ರ ಎರಡುಗುಳಿಗಳು, ಅನ್ಯತ್ರ ಇಲ್ಲವು. ಆದಾಗ್ಯೂ ಬಿದ್ದ ಮಳೆಯ ಆಧಾರದಿಂದ ಅಲ್ಲಿಯಲ್ಲಿ ರಾಗಿ ಬಿತ್ತನೆಗೆ ಪ್ರಾರಂಭವಾಯಿತೆಂದು ನಿನ್ನೆಯ ದಿನ ಬಂದ ಜಾತಿವಿವಾದರ ರಿಪೋರ್ಟುಗಳ ದೆಸೆಯಿಂದ ತಿಳಿಯಬರುತ್ತದೆ.

ವಿವಾಹ ಮಹೋತ್ಸವ.

ಮೈಸೂರು ನಗರದಲ್ಲಿರುವ ಬಾಬೀನವರ ಮುದ್ದುಕೃಷ್ಣಯ್ಯ, ಬೆಳಗಾಮ್ ಸ್ಕೂಲ್ ಹೆಡ್ ಮಾಸ್ಟರ್ ರವರು ತಮ್ಮ ಕುಮಾರನಿಗೂ ಕುಮಾರಿಗೂ ವಿವಾಹ ಮಹೋತ್ಸವವನ್ನು ಬೆಳಸುವದಾಗಿ ನಿಶ್ಚಯಿಸಿ ಕಳೆದ ತಿಂಗಳ ೨೯ನೇ ತಾರೀಖಿನ ಲಗ್ನವು ಮತ್ತು ೧೯ ತಿಂಗಳ ನಡೆಯುವ ರೀತಿಯ ಇತ್ಯಾದಿಗಳಿಗಾಗಿ ವಿವಾಹ ಮಹೋತ್ಸವವನ್ನು ನಡಸುವ ಬಗ್ಗೆ ಪ್ರಾರಂಭಿಸಿದ್ದಾರೆ. ಈ ಮಾಸ ಕಾಲದಲ್ಲಿ ಸಮರ್ಥರಾಗಿ ೧೬—೧೭ರ ವರೆಗೆ ಅವರವರ ಯೋಗ್ಯತಾನುಸಾರವಾಗಿ ಬಂಧುಗಳೂ ಅನೇಕ ವಿವಾಹ ಸಂಭ್ರಮಗಳನ್ನೂ ಸ್ವೀಕರಿಸಿದ್ದಾರೆ. ಈ ಮಹೋತ್ಸವಕ್ಕಾಗಿ ಒಂದು ಶೃಂಗಾರ ಮಂಟಪವು ರಚಿಸಲ್ಪಟ್ಟಿತು. ಈ ಸಂದರ್ಭದಲ್ಲಿ ಬೇಕಾದ ಪರಸ್ಪರ ಉಡುಗೊರೆಗಳು ಈ ಸ್ಥಳದಲ್ಲಿಯೂ, ಬೆಂಗಳೂರಿನಲ್ಲಿಯೂ, ಬೇರೆ ಕಡೆ ಪಟ್ಟಣಗಳಿಂದ ಬಂದಿರುವ ಪ್ರಮುಖರು ಸ್ಥಳಗಳಿಂದ ಬೇಕಾದ ಪದಾರ್ಥಗಳು ತರಿಸಿ ಮಂಟಪವನ್ನು ಸಿಂಗರಿಸಿದ್ದರು. ಈ ವಿವಾಹಕ್ಕೆ ಬಂದ ಸ್ತ್ರೀಪುರುಷರಿಗೆ ಶೃಂಗಾರ ಮಂಟಪದಲ್ಲಿ ಭೋಜನಕ್ಕೆ ಸ್ಥಳ ಮಾಡಿದ್ದರು. ಗಾಯಕರೆಂದು ಕೀರ್ತಿಪಡೆದವರು ಬಂದಿದ್ದರು. ದೊಡ್ಡ ಮನುಷ್ಯರು ದೂರದೂರಗಳಿಂದ ಬಂದು ಮಹೋತ್ಸವವನ್ನು ನೋಡಿ ಸಂತೋಷಪಟ್ಟರು. ನೆರೆಹೊರೆಯವರಿಗೂ ಬಡವರಿಗೂ ಅನ್ನದಾನವು ಯಥೇಷ್ಟವಾಗಿ ನಡೆಯಿತು. ಇದರಿಂದ ವಿವಾಹ ಕಾರ್ಯಗಳನ್ನು ವರ್ಣಿಸಲು ಅಸಾಧ್ಯವಾಗಿರುವುದು. ವಿವಾಹದ ಮಹೋತ್ಸವ ಪ್ರಾರಂಭದಿಂದಲೂ ಇವರು ಶಾಸ್ತ್ರಾನುಸಾರ ಇಲ್ಲಿನ ಮತ್ತು ಪರಸ್ಥಳ ವೈದಿಕರು ಬಂದು ಶಾಸ್ತ್ರೋಕ್ತವಾಗಿ ನಡೆಸಿದರು. ಸತ್ಕಾರ, ವಸ್ತ್ರಗಳನ್ನು ಸುಮಾರು ೬೦ ಹೊಸಬಿನ ಜನಗಳ ವಿವಿಧಗಳು ಸೇರಿದ್ದರು. ಈ ವಿವಾಹ ಮಹೋತ್ಸವದ ಬ್ರಾಹ್ಮಣರಿಗೆ ಸಂತರ್ಪಣೆ ನಡಸಿದರು ಜನಗಳಿಗೆ ವಿವಿಧ ಭಕ್ಷ್ಯ ಭೋಜ್ಯಗಳಿಂದ ಕೂಡಿದ ಉತ್ತಮ ಭೋಜನವನ್ನು ಮಾಡಿಸಿದರು. ಇಷ್ಟು ವೈಭವದಿಂದ ವಿವಾಹ ಮಹೋತ್ಸವವು ಇತ್ತೀಚೆಗೆ ಈ ಕಾಲದಲ್ಲಿ ಇದರ ಮಟ್ಟಿಗೆ ಬಹಳ ಅಪೂರ್ವ.—ವ್ಯ. ಮು.

THE MYSORE GAZETTE.
ಮೈಸೂರು ಗೆಜೆಟು.

ಶ್ರೀಮನ್ಮಹಾರಾಜರವರ ಗವರ್ನಮೆಂಟಿನ ದಿನ ದಿನದ ಕೆಲಸ ವಿಚಾರಗಳು.

ನಂ. ೬೪—೯ನೇ ಜೂಲೈ.—ಅಸಿಸ್ಟೆಂಟು ತಾಲ್ಲೂಕು ಅಮಲ್ದಾರ್ ಗುಂಡಪ್ಪನವರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಆರು ತಿಂಗಳು ಪ್ರಿವಿಲೇಜ್ ರಜಾ ಕೊಡಲ್ಪಟ್ಟಿರುತ್ತದೆ.

ಶಿರಸ್ತೇದಾರರು ತಿರುಮಲಾಚಾರ್ಯರು ಸದರಿ ತಾಲ್ಲೂಕು ಅಮಲ್ದಾರರ ಸ್ಥಳದಲ್ಲಿ ಮುಂದಿನ ಹುಕುಂ ವರೆಗೂ ಆಕ್ಟಿಂಗ್ ಆಗಿ ಅಧಿಕಾರ ಕೊಡಲ್ಪಟ್ಟಿರುತ್ತದೆ.

ನಂ. ೬೬—೧೦ನೇ ಜೂಲೈ.—ಫ್ರೀಮೆಸಾನಿಕ್ ಡೆಪ್ಯೂಟಿ ಕಮಿಷನರ್ ಮ. ಬಿ. ಪಿ. ನಾರ್ಸಿನಯವರಿಗೆ, ೧೮೮೭ನೇ ಇಸವಿ ಡಿಸೆಂಬರ್ ೩೧ನೇ ತಾರೀಖು ೫೦೬೩—೧೦೫೬ನೇ ನಂಬರ್ ಪ್ರೊಸೀಡಿಂಗ್ಸಿನ ಪ್ರಕಾರ ಆ ಕಾರ್ಯಗಳಿಗೆ ಒಳಪಟ್ಟು ೩ ತಿಂಗಳ ಕಾಲ ಮುದ್ದತು ರಜಾ ಕೊಡಲ್ಪಟ್ಟಿದೆ.

ನಂ. ೬೭—ಕಳೆದ ತಿಂಗಳ ೩೦ನೇ ತಾರೀಖಿನ ಮಧ್ಯಾಹ್ನದ ಕಡೂರು ಡಿಸ್ಟ್ರಿಕ್ಟ್ ಫೋಲೀಸ್ ಆಫೀಸ್ ಚಾರ್ಜನ್ನು ಮ. ಬಿ. ಜಿ. ಕೃಷ್ಣಯ್ಯಂಗಾರ್ಯರವರು ಕೊಟ್ಟು ಮ. ವೆಂಕಟೇಶಯ್ಯವರು ತೆಗೆದುಕೊಂಡಿರುತ್ತಾರೆ.

ನಂ. ೭೦, ೧೨ನೇ ಜೂಲೈ.—೧೮೮೮ನೇ ಜೂನ್ ೩೦ನೇ ತಾರೀಖು ಮಧ್ಯಾಹ್ನಕ್ಕೆ ಪೂರ್ವ, ಕೋಲಾರ ಡಿಸ್ಟ್ರಿಕ್ಟ್ ಡೆಪ್ಯುಟಿ ಕಮಿಷನರ ಆಫೀಸ ಮತ್ತು ಡಿಸ್ಟ್ರಿಕ್ಟ್ ಟ್ರೆಜರಿ ಚಾರ್ಜನ್ನು ಮ. ಸಿ. ಸುಬ್ಬರಾಯರವರು ಕೊಟ್ಟು ಮ|| ಅಬ್ದುಲ್ ರಹಿಮಾನ್ ಸಾಹೇಬರವರು ತೆಗೆದುಕೊಂಡಿರುತ್ತಾರೆ.

ನಂ. ೭೧.—೧೧ನೇ ಗ್ರೇಡ್ ಅಸಿಸ್ಟೆಂಟ್ ಕಮಿಷನರ್ ಮ. ಚಿದಂಬರ ಅಯ್ಯರವರು ಕಡೆ ಕಾಲಗತಿ ಪಬ್ಲಿಕ್ ವರ್ಕ್ಸ್ ಇಲಾಖೆಯ ಕೆಲಸಕ್ಕೆ ಕಳುಹಿಸಲ್ಪಟ್ಟಿರುತ್ತಾರೆ. ಪರಂತು ಬೇರೆ ಆಜ್ಞೆಯಾಗುವವರೆಗೂ ಆಫೀಸಿನಲ್ಲಿ ಈಗಿನಂತೆ ಇರುವದಲ್ಲದೆ ಮೈಸೂರು ಡಿಸ್ಟ್ರಿಕ್ಟ್ ಟ್ರೆಜರಿ ಚಾರ್ಜ್ ಡೆಪ್ಯುಟಿ ಕಮಿಷನರಾಗಿರತಕ್ಕದ್ದು.

ನಂ. ೭೨ ೧೩ನೇ ಜೂಲೈ.—ಕೋಲಾರ ಡಿಸ್ಟ್ರಿಕ್ಟ್ ಡೆಪ್ಯುಟಿ ಕಮಿಷನರ್ ಮ|| ಸಿ. ಸುಬ್ಬರಾಯರವರು ಕಳೆದ ತಿಂಗಳ ೩೦ನೇ ತಾರೀಖು ೫೦೬ನೇ ನಂಬರ್ ಪ್ರೊಸೀಡಿಂಗ್ಸಿನ ಪ್ರಕಾರ ಕೊಡಲ್ಪಟ್ಟ ಮೂರು ತಿಂಗಳ ಪ್ರಿವಿಲೇಜ್ ರಜಾವನ್ನು ಈ ತಿಂಗಳ ೧ನೇ ತಾರೀಖಿನಿಂದ ಉಪಯೋಗಿಸಿಕೊಂಡಿರುತ್ತಾರೆ.

ಜ್ಯೋತಿಶ್ಶಾಸ್ತ್ರ.

ಬಿ. ಸುಬ್ಬನಾರಾಯಣರಾವ್ ಬಿ. ಎ. ಯವರು ಬರೆದದ್ದು.

III

ಅನೇಕ ಶಾಸ್ತ್ರ ಪದ್ಧತಿಗಳು ನಮ್ಮಲ್ಲಿ ಪ್ರಬಲ. ಇವುಗಳನ್ನೆಲ್ಲ ತಪ್ಪೆನಿಸಿ ಈಗಿನ ಪದ್ಧತಿಗಳನ್ನು ಅಂಗೀಕರಿಸುವದಾದರೆ ಇಂಗ್ಲೀಷಿನವರ ರೀತಿಯಲ್ಲ ವಿದ್ಯೆಗಳನ್ನು ಕಲಿತುಕೊಂಡು ಅನುಭವನ್ನು ನಡಸಬಹುದು. ಮೇಲೆ ಹೇಳಿದಂತೆ ಜೀವನೋಪಾಯವು ಅಧಿಕವಾಗಿರುವಾಗ ಅನವಶ್ಯಕವಾದ ವಿದ್ಯಾ ಪ್ರಯತ್ನದಲ್ಲಿದ್ದರೆ ನಮ್ಮ ನಿತ್ಯ ಕೆಲಸಗಳಿಗೆ ಕುಂದಕ ಬರುವದಲ್ಲದೆ ಅದರಿಂದ ಬಹಳ ಸಂಸಾರಕ್ಕೆ ನಷ್ಟ ಸಂಭವಿಸುವದು. ಈ ವಿಷಯಗಳನ್ನು ಚೆನ್ನಾಗಿ ಎಲ್ಲರೂ ಪರ್ಯಾಲೋಚಿಸತಕ್ಕದ್ದು. ಜಾತಿಭೇದಗಳು ನಮ್ಮಲ್ಲಿ ಬಹಳವಾಗಿರುವದರಿಂದ ಯಾವಾಗಲೂ ಸರಿಯಾದ ವರನನ್ನು ದೊರಕಿಸುವದು ಬಹಳ ಕಠಿಣವಾಗಿರುವದು, ಪುರವಾಸಿಗಳು ತಮ್ಮ ಬಾಲಿಕೆಯರಿಗೆ ವಿದ್ಯೆಯಾಗಿ ಸಂಗೀತ ಸಾಹಿತ್ಯಾದಿ ವಿದ್ಯೆಗಳನ್ನು ಕಲಿಸಿ ಅನಂತರ ಗ್ರಾಮದಲ್ಲಿ ವಾಸ ಮಾಡುವ ವರನಿಗೆ ಇಂತಾ ಕನ್ಯೆಯನ್ನು ಕೊಟ್ಟು ವಿವಾಹ ಮಾಡಿದ್ದೇ ಆದರೆ ಹೇಗಿಯು ಸರಿಯಾಗದೆ ಒಬ್ಬರಿಗೊಬ್ಬರಿಗೆ ಮನಸ್ಸು ಕಲಿಯದೆ ಸಂಸಾರದಲ್ಲಿ ಸುಖ ಕಮ್ಮಿಯಾಗುವದು. ಗುಣದ ಆನ್ವೇಷಣೆಯಲ್ಲಿರುವದು ಉತ್ತಮ ಸ್ತ್ರೀಧರ್ಮವೆಂದು ನಮ್ಮ ವೇದ ಶಾಸ್ತ್ರಗಳು ತಿಳಿಸುತ್ತವೆ. ಸುಖೋದಯ ಒಂದೇ ಜಾತಿಯಂತೆ ಇವೆ. ಇದಕ್ಕೆ ಕೊಟ್ಟನೆ ಎಷ್ಟುಗಳು ಯಾವದೂ ಒಂದೇ ಮಾರ್ಗದಲ್ಲಿ ಬರುವದಾದರೆ ಕೂಡಿರುವ ಮಕ್ಕಳಿಗೆ ಭಯವಿಲ್ಲವು. ಅತಿರಿಕ್ತವಾಗದೆ ಗುಣವೊಂದು ಮಾರ್ಗದಲ್ಲಿ ಮೊದಲೊಂದು ಮಾರ್ಗದಲ್ಲಿ ಬೊಧಿಸುವದಾದರೆ ಮಕ್ಕಳು ಮೂರನೇ ಮಾರ್ಗದಲ್ಲಿ ಹೋಗಿಯು ಲೋಪಕ ಪರದೇಶಿಯಾಗುವರು ಸ್ತ್ರೀ ಬಾಲ್ಯವು ನಿಂದಿತವಾದದ್ದು. ಆದರೆ ಪುರುಷರಂತೆ ಅವರನ್ನು ಹೊರಗೆ ತಾರದೆ ಮನೆಯಲ್ಲಿ ಗಿರವೇ ಕಾಯ್ದು ೧೯ನೇ ಶತಮಾನಕ್ಕೆ ರುಚಿಕರವಾಗಲಾರದು. ಪೂರ್ವದಲ್ಲಿ ಹಿಂದೂ ಜನರಲ್ಲಿ ಘೋಷಾ ಪದ್ಧತಿಯು ಇರಲಿಲ್ಲವು. ಈಗ ಯಾವ ಸ್ಥಳಗಳಲ್ಲಿದ್ದರೂ ಅದನ್ನು ತಪ್ಪಿಸಿ ಮನಸ್ಸಿನಲ್ಲಿ ಯಲ್ಲರೂ ಸಂಚಾರ ಮಾಡಿಸುವ ಬಹುಮಾನ ಆಗಲ್ಲ ಪ್ರೋತ್ಸಾಹವ ಪಡಸುತ್ತಾರೆ. ಅನೇಕ ಸಂದರ್ಭಗಳಲ್ಲಿ ಪುರುಷರಿಗೆ ಸಮರ್ಥತೆ ಯೂ ಕೆಲಸ ಮಾಡುವದು ಉತ್ತಮವಾಗಿರುವದು. ನಮ್ಮಲ್ಲಿ ಇಂಥ ಸಮಾಜವನ್ನು ಏರ್ಪಡಿಸಿ ಅದರಲ್ಲಿ ಅಸ್ತಿಕ ನಾಸ್ತಿಕರನ್ನು ಸೇರಿಸಿ ಪೂರ್ವ ಸಂಪ್ರದಾಯಗಳಲ್ಲಿ ನಮಗೆ ಯಾವದು ಕೆಟ್ಟದ್ದಾಗಿ ಕಾಣಬರುವದೋ ಅದನ್ನು ತ್ಯಜಿಸಿ ನೂತನ ಸಂಪ್ರದಾಯಗಳಲ್ಲಿ ಪುರುಷಪ್ರಾಮುಖ್ಯಗಳನ್ನು ಅಂಗೀಕರಿಸುವಂತೆ ಯಾವದಕ್ಕೆ ಮಾಡಬಾರದು. ಈ ರೀತಿ ಮಾಡಿದಲ್ಲಿ ಪೂರ್ವಿಕರಿಗೂ ಈಗಿನವರಿಗೂ ಇರುವ ಮನಸ್ತಾಪಗಳು ಬಹಳವಾಗಿ ತಪ್ಪಿಹೋಗುವವು. ಐಕಮತ್ಯವು ನಮ್ಮಲ್ಲಿಲ್ಲ, ಆರೀತಿ ಇದ್ದದ್ದಾದರೆ ನಮಗೆ ರಾಜ್ಯಭ್ರಷ್ಟತ್ವ ಪ್ರಾಯಾಗಿ ಎಂದಿಗೂ ಈ ದುರವಸ್ಥೆ ಬಂದಿರಲಾರದು. ಆ ಇಲ್ಲದ್ದರಿಂದಲೇ ಅನೇಕ ವಿಷಯಗಳಲ್ಲಿ ನಾವುಗಳು ನಷ್ಟವನ್ನು ಹೊಂದಿ ನೈಚ್ಯ ಜೀವನಗಳನ್ನಂಗೀಕರಿಸಿ ದೈನ್ಯಸ್ಥಿತಿಯಲ್ಲಿದ್ದೇವೆ. ಈ ಕಾರಣದಿಂದ ಪೂರ್ವದ ರಂಗಾಚಾರ್ಲು ಮೆಮೋರಿಯಲ್ ಹಾಲ್ ಎಂಬ ಕಟ್ಟಡಕ್ಕೆ ಬಂದೆವು. ನಮ್ಮ ಮಿತ್ರರಾದ ಶ್ರೀ ಭಟ್ಟರು ತಮ್ಮನ್ನು ಕುರಿತು ಹೀಗೆಂದು ಹೇಳಿದರು. ಅಯ್ಯಾ ನೀವು ಜ್ಯೋತಿಷವನ್ನು ಓದಿದಿರಿ. ಗುರು ಹಿರಿಯರಿಗೆ ವಿದ್ಯೆಯನ್ನು ಕಲಿಸಿದ್ದಲ್ಲಿ ನಿಮಗೆ ಪ್ರಯೋಜನ ಪ್ರಾಯಾಗುವಷ್ಟು ಪ್ರವೃತ್ತವಾಗಿ ಹೋಗಲಾರದು. ಆದದರಿಂದ ಆಗ್ನಿ ಈ ಸ್ಥಳದಲ್ಲಿ ಆವಿಷಯವನ್ನು ಕುರಿತು ಉಪನ್ಯಾಸ ಮಾಡಬೇಕು, ಎಂದು ಹೇಳಲು ನಮ್ಮೆಂದು ಅವರ ಅಭಿಪ್ರಾಯವನ್ನು ಅಂಗೀಕರಿಸಿ ಅಧಿಕಾರಿಯಲ್ಲಿ ಅವಕ್ಕೆ ತಕ್ಕ ವಿಚಾರವಾಗಿ ಅನ್ನ ಲಕ್ಷ್ಮಿನರಸಿಂಹಯ್ಯನವರ ಸಂಗಡ ಮಾಡಿಸಿ ಜ್ಯೋತಿಶ್ಶಾಸ್ತ್ರವನ್ನು ಕುರಿತು ಒಂದು ದಿನ ಸ್ವಾಯಂಕಾಲ ಎರಡು ಘಂಟೆ ವರೆಗೆ ಉಪನ್ಯಾಸವನ್ನು ಮಾಡಿದೆವು. ಅಲ್ಲಿ ಬಹುಜನ ಗುಂಪು ಕೂಡಿತ್ತು. ಅನೇಕ ವಿದ್ಯಾವಂತರು ಶಾಸ್ತ್ರವೇತ್ತರುಗಳು ಬಂದಿದ್ದರು. ನಾವು ಮುಖ್ಯವಾಗಿ ಅಲ್ಲಿ ಹೇಳಿದ ಅಂಶಗಳನ್ನು ಇಲ್ಲಿ ಸೂಕ್ಷ್ಮವಾಗಿ ತಿಳಿಸುವೆವು. ಜ್ಯೋತಿಶ್ಶಾಸ್ತ್ರವು ನಮ್ಮಲ್ಲಿ ಬಹು ಕಾಲದಿಂದ ಪ್ರಬಲಗೊಂಡಿದೆ. ಈ ಶಾಸ್ತ್ರವನ್ನು ಪೂರ್ವಿಕರು ಬಹಳ ಕಷ್ಟಪಟ್ಟು ಸಂಪಾದಿಸಿದರು. ಇವನ್ನು ಚೆನ್ನಾಗಿ ಯೋಚಿಸಿ ನೋಡಿದರೆ ದೈವಭಕ್ತನ ನಮಗೆ ಪ್ರತ್ಯಕ್ಷವಾಗಿ ಕಾಣುತ್ತಲಿ ಕಾಣಬರುವದಿಲ್ಲ. ಎಲ್ಲಾ ಶಾಸ್ತ್ರಗಳಂತೆ ಇದನ್ನೂ ಅನುಭವಸಿದ್ಧವಾಗಿ ಬಂದಂತೆ ಕಾಣಬರುತ್ತದೆ. ಪೂರ್ವಿಕರಲ್ಲಿ ಅನೇಕರು ರಸವಾದ ಭೌತಿಕ ಉಪದ್ರವ ಗಣಿತಶಾಸ್ತ್ರಗಳಲ್ಲಿ ಪ್ರವೀಣರಾಗಿ ಪದಾರ್ಥಗಳನ್ನೂ ಅವುಗಳ ರಚನಶಕ್ತಿಯನ್ನೂ ಕಂಡುಹಿಡಿದು ಅನೇಕ ವಿಧಗಳಲ್ಲಿ ಉಪಯೋಗಿಸುವ ಹೊಸದಾಗಿ ಅವುಗಳ ಸುಯೋಗದಿಂದುಂಟಾಗುವ ಫಲಗಳನ್ನು ತಿಳಿದು ಜನರಿಗೆ ಉಪಯೋಗವನ್ನುಂಟು ಮಾಡುತ್ತಿದ್ದರು. ಜ್ಯೋತಿಶ್ಶಾಸ್ತ್ರವು ನಮಗೆ ದೇವರಿಂದ ಪ್ರತ್ಯಕ್ಷವಾಗಿ ಕೊಡಲ್ಪಟ್ಟಿದ್ದಲ್ಲವೆಂಬುದಕ್ಕೆ ಅನೇಕ ದೃಷ್ಟಾಂತಗಳುಂಟು. ಗ್ರೀಕ್ ದೇಶದಲ್ಲಿಯೂ, ರೋಮನ್ ದೇಶದಲ್ಲಿಯೂ, ಚಾಲ್ಡಿಯಾ ದೇಶದಲ್ಲಿಯೂ, ಐಗುಪ್ತ ದೇಶದಲ್ಲಿಯೂ, ಚೀನಾದೇಶದಲ್ಲಿಯೂ, ಮತ್ತು ಇನ್ನೂ ಅನೇಕ ದೇಶಗಳಲ್ಲಿ ಆ ಶಾಸ್ತ್ರಗಳಲ್ಲಿ ಮುಂದರಿದಿದ್ದರು. ಪೂರ್ವ ಕಾಲದಲ್ಲಿ ಇವರೆಲ್ಲರೊಳಗೂ ನಮ್ಮಲ್ಲಿ ಈ ಶಾಸ್ತ್ರವನ್ನು ಕಲಿತುಕೊಂಡು ಅನಂತರ ಮುಂದರಿದರಾಗಿ ತಮ್ಮ ದೇಶಕ್ಕೆ ಹೋದರೆಂದು ಹೇಳುವದು ಸರಿಯಾಗಿ ಕಾಣಬರುವದಿಲ್ಲ. ಅನೇಕದಲ್ಲಿ ಆಳುತ್ತಿದ್ದ ಪ್ರಭುಗಳು ಜ್ಯೋತಿಷಕ್ಕಾಗಿ ಅನೇಕ ಕೋಟ್ಯವ್ಯಯಗಳನ್ನು ವೆಚ್ಚ ಮಾಡಿ ನಾನಾದೇಶಗಳಿಂದಲೂ ಪಂಡಿತರನ್ನು ಕರಿಸಿ ಈ ವಿದ್ಯೆಯನ್ನು ಬಹಳ ಮಟ್ಟಿಗೆ ವೃದ್ಧಿಮಾಡಿದರು. ಯವನರೆಂಬುವರು ಗ್ರೀಕ್ ದೇಶಕ್ಕೆ ಸೇರಿದವರು. ಇವರಲ್ಲಿ ಕೆಲವರು ಸಂಸ್ಕೃತವನ್ನು ಓದಿ ಆಭಾಷೆಯಲ್ಲಿ ಕೆಲವು ಉತ್ತಮವಾದ ಗ್ರಂಥಗಳನ್ನು ಬರೆದಿದ್ದಾರೆ. ಈ ತೆರ ಈ ಶಾಸ್ತ್ರಕ್ಕೆ ಬಹಳ ಶೋಧನೆ ಸಂಭವಿಸಿತು. ಇದು ಇನ್ನೂ ವೃದ್ಧಿಸ್ಥಿತಿಯಲ್ಲಿರುವಾಗಲೆ ತುರುಷ್ಕ ಪ್ರಭುತ್ವಗಳು ನಮ್ಮ ದೇಶಗಳನ್ನು ಜಯಿಸಿ ಇಲ್ಲಿರುವ ಉತ್ತಮವಾದ ಪುಸ್ತಕಗಳನ್ನು ಸುಟ್ಟುಹಾಕಿದರು. ನಾಶವಾದ ವಿವರವೆಂದು ಚರಿತ್ರೆಗಳಿಂದ ತಿಳಿಯಬರುತ್ತದೆ. ಇದು ಪ್ರಾಗಾವಸ್ಥೆಯಲ್ಲಿ, ಪೂರ್ವದಲ್ಲಿ ಯಾವ ಬಲದಿಂದ ಗ್ರಹಗಳ ಗತಿಗಳನ್ನು ಹಿಡಿದು ಅವುಗಳಿಂದುಂಟಾಗುವ ಫಲಾಫಲಗಳನ್ನು ತಿಳಿದು ಹೇಳುವರೋ ಆ ಶಾಸ್ತ್ರವು ನಮಗೆ ದೊರೆಯಲಿಲ್ಲ. ಗ್ರಹಚಾರಗಳಿಂದ ಮನುಷ್ಯನಿಗೆ ಶುಭಾಶುಭ ಫಲ ಪ್ರಾಪ್ತವಾಗುತ್ತದೆಂದು ಹೇಳುವದಕ್ಕೆ ಕಾರಣ ವೇನೆಂದು ಕೇಳಿದರೆ ತಕ್ಕ ಪ್ರತ್ಯುತ್ತರಗಳನ್ನು ಕೊಡುವ ಜ್ಯೋತಿಷ್ಯರು ಎಲ್ಲಿಯೂ ಕಾಣಬರುವ

ದಿಲ್ಲ. ಒಂದು ಮೂಲಿಕೆಯಿಂದ ರೋಗ ಪರಿಹಾರವಾಗುತ್ತದೆಂದು ಹೇಳಬೇಕಾದರೆ ಬುದ್ಧಿಶಾಲಿಯಾದವನು ಮೂಲಿಕೆಯ ಸ್ವರೂಪವನ್ನೂ ಅದರಲ್ಲಿರುವ ಪದಾರ್ಥಗಳನ್ನೂ ಗುಣಗಳನ್ನೂ ತಿಳಿಯುವದಲ್ಲದೆ ರೋಗವು ಹ್ಯಾಗೆಜನಿಸಿತು, ಯಾವಗುಣಾಧಿಕ್ಯವಾದರೆ ಅದರಪರಿಹಾರವಾಗುವದು. ಆಗುಣವು ಈಮೂಲಿಕೆಯಲ್ಲಿದೆಯೇ ಎಂದು ಯೋಚಿಸಿ ತನ್ನಮನಸ್ಸಿಗೆ ತೃಪ್ತಿಕರವಾದರೆ ಅದನ್ನು ಔಷಧವಾಗಿಕೊಟ್ಟು ರೋಗವನ್ನು ವಾಸಿ ಮಾಡಬೇಕು. ಅದೇರೀತಿಯಲ್ಲಿ ಜ್ಯೋತಿಷ್ಯನಾದವನು ಯಾವಯಾವ ಗ್ರಹಗಳಲ್ಲಿ ಯಾವಯಾವ ದೋಷಗಳುಂಟು. ಮನುಷ್ಯನಲ್ಲಿ ಯಾವದೋಷ ವೃದ್ಧಿಯಿಂದ ಯಾವ ಗುಣಾಧಿಕ್ಯವುಂಟಾಗುತ್ತದೆಂದು ಚೆನ್ನಾಗಿ ತಿಳದು ಹೇಳಬೇಕು.

ಮೈಸೂರಿನಲ್ಲಿ ನಡೆಯುವ ಕೃಷಿ ಮತ್ತು ಇತರ ವ್ಯವಸಾಯಸಂಬಂಧವಾದ ಪದಾರ್ಥಗಳ ಪ್ರದರ್ಶನ ೧೮೮೮ನೇ ಇಸವಿ.

ನಿಬಂಧನೆಗಳು.

೧. ಪ್ರದರ್ಶನವು ಮೈಸೂರಿನಲ್ಲಿ ದಸರಾಹಬ್ಬ ಆದಕೂಡಲೆ ೧೮೮೮ನೇ ಇಸವಿ ಅಕ್ಟೋಬರ್ ಮಾಹೆ ೧೫ನೇ ತಾರೀಖ್ ಪ್ರಾತಃಕಾಲ ೮ಘಂಟೆಗೆ ಶುರುಆಗಿ ನಾಲ್ಕುದಿವಸಗಳ ಪರಿಯಂತರವು ನಡಿಯುತ್ತಾಯಿರುವದು.

೨. ಪ್ರದರ್ಶನಸ್ಥಳಕ್ಕೆ ಪ್ರವೇಶಿಸಬೇಕಾದರೆ ಮೊದಲನೇದಿವಸ ದೊಡ್ಡವರಿಗೆ ೧ ರೂಪಾಯಿಯು ಹುಡುಗರಿಗೆ ೮ ಆಣೆಯು ಮಾರನೇ ದಿವಸಗಳಲ್ಲಿ ಸರ್ವರಿಗೂ ಇಸಂ ೧ಕ್ಕೆ ೨ ಆಣೆ ಫೀಜು ಕೊಡಬೇಕು. ಮತ್ತು ೪ನೇ ದಿವಸ ಪ್ಲೋರಾಸ್ಟ್ರಲ್ಲಿ ನೇಟಿವ್ ಸ್ತ್ರೀಯರನ್ನುಮಾತ್ರ ಬಿಡಲ್ಪಡುವದು.

೩. ಕಮಿಟಿ ಮೆಂಬರ್‌ಗಳಿಗೂ ಮತ್ತು ಪ್ರದರ್ಶನ ಸ್ಥಳದಲ್ಲಿ ಕಾರ್ಯದಮೇಲೆ ಇರುವ ಇತರಜನಗಳಿಗೂ ಮಾಫಿ ಪ್ಯಾಸ್‌ಗಳು ಕೊಡಲ್ಪಡುತ್ತವೆ.

೪. ಪ್ರದರ್ಶನದ ಏರ್ಪಾಡು ಜನರಲ್ ಕಮಿಟಿ ಮೆಂಬರ್‌ಗಳಪೈಕಿ ಚುನಾಯಿಸಲ್ಪಟ್ಟ ಪೊಯಾರ್ಡ್ ಕಮಿಟಿಯವರಿಂದ ನಡಿಸಲ್ಪಡುವದು ಈ ಪ್ರದರ್ಶನ ಸ್ಥಳಕ್ಕೆ ಪ್ರವೇಶಿಸತಕ್ಕಂತಾ ಎಲ್ಲಾಜನಗಳೂ ಈ ನಿಬಂಧನೆಗಳ ಪ್ರಕಾರವು ಮತ್ತು ಪೊಯಾರ್ಡ್ ಕಮಿಟಿಯವರಿಂದ ಮಾಡಲ್ಪಡುವ ನಿಬಂಧನೆಗಳಪ್ರಕಾರವು ನಡೆದುಕೊಳ್ಳಬೇಕು.

೫. ಬೆಲೆಯುಳ್ಳ ಪ್ರದರ್ಶನ ವಸ್ತುಗಳ ಪ್ರಸ್ತಾವಿ ಜನಗಳಿಗೆ ಕಮಿಟಿಯವರ ಅಭಿಪ್ರಾಯದಂತೆ ಪ್ರದರ್ಶನಸ್ಥಳಕ್ಕೆ ಮಾಫಿ ಪ್ಯಾಸ್‌ಗಳು ಕೊಡಲ್ಪಡುವವು.

೬. ಕೃಷಿ ಆಯುಧಗಳಹೊರ್ತು ಎಲ್ಲಾಪ್ರದರ್ಶನ ವಸ್ತುಗಳಿಗೂ ಛಾವಣಿಯಿರುವ ಸ್ಥಳ ಕೊಡಲ್ಪಡುತ್ತೆ. ಅವರವರು ಕಳುಹಿಸುವ ಪದಾರ್ಥಕ್ಕೆ ಎಷ್ಟು ವಿಸ್ತೀರ್ಣವಾದ ಸ್ಥಳ ಅವಶ್ಯಕವಿರುತ್ತೋ ಅಂತಾ ಸ್ಥಳಕ್ಕಾಗಿ ೮೮ನೇ ಇಸವಿ ಸೆಪ್ಟಂಬರ್ ಮಾಹೆ ೧೫ನೇ ತಾರೀಖಿನೊಳಗಾಗಿ ಸೆಕ್ರೆಟರಿಗಳಿಗೆ ದರಖಾಸ್ತು ಬರೆದುಕೊಳ್ಳಬೇಕು. ಇಂತಾ ದರಖಾಸ್ತಿಗಾಗಿ ಛಾಪಿಸಲ್ಪಟ್ಟ ನಮೂನೆಯನ್ನು ಸೆಕ್ರೆಟರಿಗಳಿಂದ ಪಡೆಯಬಹುದು.

೭. ಸೆಕ್ರೆಟರಿಗಳಿಂದ ಸ್ಪೈಟ್ ಮಾಡಲ್ಪಟ್ಟ ಅದೆಮಿಷನ್ ಆರ್ಡರ್‌ಇವಾಯಿ ಯಾವ ಪ್ರದರ್ಶನ ವಸ್ತುಗಳನ್ನು ದಾಖಲ್ಮಾಡಿಕೊಳ್ಳುವದಿಲ್ಲ.

೮. ಬೇರೆಬೇರೆ ತರಗತಿಗಳಲ್ಲಿ ಪ್ರದರ್ಶಿಸಲ್ಪಡುವ ಪದಾರ್ಥಕ್ಕಾಗಿ ಬೇಕಾಗುವ ಸ್ಥಳಗಳಿಗೆ ಅಲಾಹಿದಾ ಅಲಾಹಿದಾ ದರಖಾಸ್ತು ಕೊಡಬೇಕು, ಪ್ರತಿಒಂದು ಪ್ರದರ್ಶನ ವಸ್ತುವಿನಸಂಗಡ ನಮೂನೆಪ್ರಕಾರ ಬರೆದ (ಯಂಟ್ರಿನೋಟಿಸ್) ಚೀಟಿಗಳನ್ನು ಕಳುಹಿಸಬೇಕು, ಈ ಚೀಟಿಗಳ ನಮೂನೆಯನ್ನು ಸೆಕ್ರೆಟರಿಗಳಿಂದ ಪಡೆಯಬಹುದು.

೯. ಜಾನವರುಗಳು, ತರ್ಕಾರಿಗಳು, ಹಾಲು ಮೊಸರು ವಗೈರೆ ಇತರ ಕೆಟ್ಟುಹೋಗುವ ಪದಾರ್ಥಗಳು ಶಿವಾಯಿ ಬಾಕಿ ಯೆಲ್ಲಾ ಪ್ರದರ್ಶನ ವಸ್ತುಗಳು ಪ್ರದರ್ಶನವು ಪ್ರಾರಂಭ ವಾಗುವದಕ್ಕೆ ಸಂಪೂರ್ಣ ೬ ದಿವಸಗಳಮೊದಲೇ ಪ್ರದರ್ಶನಸ್ಥಳದಲ್ಲಿ ತರಲ್ಪಟ್ಟಿರಬೇಕು.

೧೦. ಜಾನವರುಗಳು ಪ್ರದರ್ಶನ ಪ್ರಾರಂಭವಾಗುವದಕ್ಕೆ ಸಂಪೂರ್ಣ ಇಪ್ಪತ್ತುನಾಲ್ಕುಗಂಟೆಗಳ ಮೊದಲೇ ಪ್ರದರ್ಶನಸ್ಥಳದಲ್ಲಿರಬೇಕು.

೧೧. ತರ್ಕಾರೀ, ಹಣ್ಣುಗಳು, ಹಾಲು ಮೊಸರು ವಗೈರೇ ಇತರ ಕೆಟ್ಟುಹೋಗುವ ಪದಾರ್ಥಗಳು ಪ್ರದರ್ಶನ ದಿವಸದ ಪ್ರಾತಃಕಾಲ ೭ಗಂಟೆಗೆಮೊದಲೇ ಪ್ರದರ್ಶನಸ್ಥಳದಲ್ಲಿತಂದಿರಬೇಕು

೧೨. ೯, ೧೦, ೧೧ನೇ ರೂಲ್ಸುಗಳಲ್ಲಿ ನಮೂದಾಗಿರುವಮೇರೆ ಪ್ರದರ್ಶನ ಸ್ಥಳಕ್ಕೆ ತರದೇಯಿದ್ದ ವಸ್ತುಗಳು ಇನಾಂಗಳಿಗೆ ಅರ್ಹವಾಗಲಾರವು, ಆದರೆ ಕಮಿಟಿಯವರ ಅಭಿಪ್ರಾಯಕ್ಕೆಒಳಪಟ್ಟು ಪ್ರದರ್ಶನಕ್ಕೆ ದಾಖಲ್ ಮಾಡಿಕೊಳ್ಳಲ್ಪಡಬಹುದು.

೧೩. ಪ್ರದರ್ಶನ ಮಾಡತಕ್ಕವರು ಅವರ ಪ್ರದರ್ಶನ ವಸ್ತುಗಳ ಛುಪಿಬಾಡಿಗೆ ವಗೈರೆ ಖರ್ಚನ್ನು ಸುರಕ್ಷಣೆ ಖರ್ಚನ್ನು ಮತ್ತು ಎತ್ತಿ ಇಳಿಸುವದರ ಖರ್ಚನ್ನು ಸಹ ವಹಿಸಬೇಕು. ಮತ್ತು ಅವರೇ ಖುದ್ದಾಗಲಿ ಅಥವಾ ಅವರ ತರಫ್ ಏಜಂಟರಾಗಲೀ ಆ ಪ್ರದರ್ಶನ ವಸ್ತುಗಳನ್ನು ಹಾಜರ್ಮಾಡುವದು ಮತ್ತು ವಾಪಸ್ ತೆಗದುಕೊಳ್ಳುವದನ್ನು ವ್ಯವಸ್ಥಾ ಮಾಡಬೇಕು, ತಪ್ಪಿದಲ್ಲಿ ಕಮಿಟಿಯವರಿಗೆ ಅವಶ್ಯಕ ತೋರುಬಂದದ್ದನ್ನು ಮಾಡುವದಕ್ಕೆ ಮೊಖ್ತ್ಯಾರಾಗಿ ಯಿರುತ್ತಾರೆ. ಮತ್ತು ಇದಕ್ಕಾಗಿ ತಗಲುವ ಆಗುವದು ಮಾಲೀಕರಿಂದ ವಸೂಲ್ ಮಾಡಲ್ಪಡುತ್ತೆ.

೧೪. ಪ್ರದರ್ಶನ ಸ್ಥಳದಲ್ಲಿ ಪ್ರದರ್ಶನ ವಸ್ತುಗಳ ವಿಷಯವಾಗಿ ಸಾಧ್ಯವಾದಷ್ಟು ವ್ಯವಸ್ಥಾವಾರೀ ಮಾಡಲ್ಪಡುತ್ತದೆ ಆದರೆ ಕಮಿಟಿಯವರಿಂದಜವಾಬ್‌ದಾರಿಯುವಹಿಸಲ್ಪಡುವದಿಲ್ಲ.

೧೫. ಎಲ್ಲಾ ಸರಕು ಮತ್ತು ಎಲ್ಲಾಜಾತಿ ಪ್ರದರ್ಶನ ವಸ್ತುಗಳನ್ನು ಪ್ರದರ್ಶನ ಮುಗಿದ ನಾಲ್ಕುದಿವಸಗಳೊಳಗಾಗಿ ವಾಪಸ್‌ತೆಗದುಕೊಂಡುಹೋಗಬೇಕು. ತದನಂತರ ನಿಲ್ಲುವ ಪ್ರದರ್ಶನ ವಸ್ತುಗಳು ಕಮಿಟಿಯವರ ಇರಾದೆಯಂತೆ ವಿಲೆ ಮಾಡಲ್ಪಡುತ್ತವೆ.

೧೬. ಕೊಳತು ಹೋಗುವ ಸಾಮಾನುಗಳ ಹೊರ್ತು ಬಾಕಿ ಯಾವವಿಧವಾದ ಪ್ರದರ್ಶನ ವಸ್ತುಗಳಾದರು ಪ್ರದರ್ಶನ ಮುಗಿಯುವದರಿಗೂ ಪ್ರದರ್ಶನಸ್ಥಾನದಿಂದ ಹೊರಗೆ ತೆಗಿಯಲ್ಪಡಕೂಡದು.

೧೭. ಪ್ರದರ್ಶನಪದಾರ್ಥಗಳಿಗೆ ನಮೂನೆಪ್ರಕಾರ ಕ್ರಮವಾಗಿ ಬರೆದ ಚೀಟಿಗಳನ್ನು ಚಿಕಟಾಯಿಸಿ ಇರಬೇಕು.

೧೮. ಎಲ್ಲಾಜಾನವರ್‌ಗಳ ವಯಸ್ಸು ವಯಸ್ಸಿನಪ್ರಕಾರ ನಿಂಗಡಿಸುವ ಸಂದರ್ಭದಲ್ಲಿ ಸರಿಯಾಗಿ ನಮೂದಿಸದೆ ಯಿದ್ದರೆ ಅಂತಾಜಾನವರ್ ಹುಟ್ಟಿದ ಸಂವತ್ಸರದ ಜೂಲೈ ಮಾಹೆ ಗುರ್ರೀತಾರೀಖ್‌ಆಗಾಯಿತು ಎಣಿಸಲ್ಪಡುವದು.

೧೯. ಪ್ರತಿಒಂದು ಜಾನವರು ಮೂಗುದಾರ ಅಥವಾ ಇತರ ಯಾವವಿಧದಿಂದಲಾದರು ಬಂದೋಬಸ್ತು ಮಾಡಲ್ಪಟ್ಟಿರಬೇಕು ಮತ್ತು ಅಪಾಯಕರವಾದ ಅಥವಾ ರೋಗಯುಕ್ತವಾದ ಜಾನವರ್‌ಗಳನ್ನು ಪೊಯಾರ್ಡ್ ಕಮಿಟಿಯವರ ಆರ್ಡರ್ ಮೇರಿಗೆ ಒಳಗೆಬಿಡದೇಯಿರಬಹುದು, ಅಥವಾ ಆಸ್ಥಳದಿಂದ ಹೊರಗೆ ಕಳುಹಿಸಬಹುದು.

೨೦. ಪ್ರತಿ ಜಾನವರ್‌ಆಗಲಿ ಅಥವಾ ಒಂದು ಮಂದೆಯಾಗಲಿ ಅಲಾಹಿದಾ ಪ್ರದರ್ಶಿಸಲ್ಪಡುವ ವಾಗ್ಯೆ ವ್ಯವಸ್ಥಾವಾರೀಬಗ್ಯೆ ಒಬ್ಬ ಇರುವ ಮನುಷ್ಯನ ಅಧೀನದಲ್ಲಿ ಯಿರಬೇಕು, ಅಂತಾವನು ಅವರ ನಿಗೇವಾನಿಯಲ್ಲಿ ಇದ್ದು ಕಮಿಟಿಯವರ ಅಪೇಕ್ಷೆಯಂತೆ ಅವಶ್ಯಕವಿದ್ದಾಗ ನಡಿಸಿ ತೋರಿಸುವದಕ್ಕೆ ಸಿದ್ಧವಾಗಿ ಇರಬೇಕು.

೨೧. ಕಮಿಟಿಯವರು ಜಾನವರ್‌ಗಳಿಗೆ ನೀರನ್ನು ನಡಗಿಸಿ ಕೊಡುತ್ತಾರೆ. ಮತ್ತು ಪ್ರದರ್ಶನಸ್ಥಳದಲ್ಲಿ ಕ್ರಯಕ್ಕೆ ಹುಲ್ಲುದೊರಿಯುವಂತೆ ಏರ್ಪಡಿಸುತ್ತಾರೆ, ಆದರೆ ಜಾನವರ್‌ಗಳ ಸುರಕ್ಷಣೆವಿಷಯದಲ್ಲೇಆಗಲೀ ಅಥವಾ ವ್ಯವಸ್ಥಾವಾರಿ ವಿಷಯದಲ್ಲೇಆಗಲಿ ಕಮಿಟಿಯವರು ಜವಾಬ್ದಾರರಾಗುವದಿಲ್ಲ.

೨೨. ವ್ಯವಸಾಯ ಸಂಬಂಧವಾದ ಆಯುಧಗಳ ಮತ್ತು ಯಂತ್ರಗಳ ಅಜಮಾಯಿಷಿಯು ಮತ್ತು ವ್ಯಳುವವರಲ್ಲಿ ಸ್ಪೈರ್ಧೆಯು ಪ್ರದರ್ಶನದ ಎರಡನೇದಿವಸ ನಡೆಯಲ್ಪಡುವವು.

೨೩. ಪ್ರತಿತರಗತಿ ಅಥವಾ ಗುಂಪಿನಲ್ಲಿ ಜಸ್ತಿಗಳು ೩ ಜನಕ್ಕೆ ಕಡಮೆಯಿಲ್ಲದೆ ಇರುತ್ತಾರೆ. ಆದರೆ ಅವರ ಅಭಿಪ್ರಾಯದಲ್ಲಿ ಪ್ರದರ್ಶನ ವಸ್ತುಗಳು ಯಾವ ಬಹುಮಾನಕ್ಕೂ ಲಾಯಖ್ ಅಲ್ಲವೆಂದು ತೋರಿದರೆ ಇನಾಂಪೈಕಿ ಯಾವದು ಪ್ರಧಾನವು ಕೊಡುವದಕ್ಕೆ ಬದ್ಧರಾಗಿರುವದಿಲ್ಲ

೨೪. ಇನಾಂಗಳು ಪ್ರದರ್ಶನವು ಮುಗಿದನಂತರ ಕೊಡಲ್ಪಡುವವು, ಇನಾಂ ಪಡೆದವನು ನಗದು ಮೊಬಲಗ್ಯೆ ಅಲ್ಲದೆ ಸರಟಿಫಿಕೇಟಿಗೂ ಸಹ ಅರ್ಹನಾಗುತ್ತಾನೆ, ಇನಾಂ ಪಡೆದವನ ಅಭಿಪ್ರಾಯದಂತೆ ಇನಾಂ ಮೊಬಲಗ್ಯೆ ಸಮವಾಗಿ ಅದಕ್ಕೆ ಬದಲಿ ಬಿರದುಬಿಲ್ಲೆಗಳು ಮೆಡಲ್‌ಗಳು ಕೊಡಲ್ಪಡುವವು.

೨೫. ಪ್ರದರ್ಶನ ಪದಾರ್ಥಗಳು ಇನಾಮಿಗೆ ಲಾಯಖಾಗುವಷ್ಟು ಉತ್ಕೃಷ್ಟವಾಗದೆಹೋದ್ದಾಗ್ಯೂ ಜಸ್ತೀಗಳ ಅಭಿಪ್ರಾಯದಲ್ಲಿ ಉತ್ತಮವಾದ್ದೆಂದು ತೋರಿದರೆ ಬಹುಮಾನ ಪತ್ರಿಕೆಯನ್ನು ಕೊಡಬಹುದು.

೨೬. ಗವರ್ನಮೆಂಟಿಗೆ ಸೇರಿದ್ದ ಇಲಾಖೆಯವರು ಅಥವಾ ಗವರ್ನಮೆಂಟಿನಸಹಾಯವನ್ನು ಹೊಂದುತ್ತಾಯಿರುವ ಇಲಾಖೆಯವರು ವಸ್ತುಗಳನ್ನು ಪ್ರದರ್ಶನಮಾಡಬಹುದು, ಆದರೆ ಅಂತಾ ವಸ್ತುಗಳಿಗೆ ಇನಾಂಕೊಡಲಾಗದು.

೨೭. ಯಾವದೇ ತರಗತಿಗಳಲ್ಲಿಯೇ ಆಗಲಿ ಅಥವಾ ಸೆಕ್ಷನ್‌ಗಳಲ್ಲಿಯೇ ಆಗಲಿ ತಾವು ಜಸ್ತಿಗಳಾಗಿ ಇದ್ದರೋ ಅಂತಾ ತರಗತಿ ಯಾ ಸೆಕ್ಷನ್‌ಗಳಲ್ಲಿ ಸದರೀಜಸ್ತಿಗಳು ಇನಾಮಿಗಾಗಿ ವಸ್ತುಗಳನ್ನು ಪ್ರದರ್ಶಿಸಕೂಡದು.

೨೮. ಮಾರತಕ್ಕ ಸರಕುಗಳಿಗೂ ಮತ್ತು ಮಾರಲ್ಪಟ್ಟ ಸರಕುಗಳಿಗೂ ದಿದಂತೆ ನಿರೂಪಕವಾದ ಚೀಟಿಗಳನ್ನು ಚಿಕಟಾಯಿಸಿರಬೇಕು. ಪೊಯಾರ್ಡ್ ಕಮಿಟಿಯವರು ಅಂತಾ ಬಿಕ್ರಿಗೆ ಅನುಕೂಲವಾಗಿ ಸಾಧ್ಯವಾದ ಸಹಾಯವನ್ನು ಮಾಡುವರು, ಆದರೆ ಅವರು ಜವಾಬ್ದಾರರಾಗುವದಿಲ್ಲ.

೨೯. ಈ ನಿಬಂಧನೆಗಳನ್ನನುಸರಿಸಿ ಪೊಯಾರ್ಡ್ ಕಮಿಟಿಯವರು ಪ್ರದರ್ಶನನಿರ್ವಾಹಕ್ಕಾಗಿ ರೂಲ್ಸುಗಳನ್ನುಏರ್ಪಡಿಸುವದಕ್ಕೆಸಂಪೂರ್ಣ ಅಧಿಕಾರವನ್ನುಹೊಂದಿರುತ್ತಾರೆ. ಮತ್ತು ಎಲ್ಲಾ ವಿಷಯಗಳಲ್ಲಿಯು ಅವರ ತೀರ್ಮಾನವು ಆಖೈರಾಗಿರುತ್ತೆ.

ತಾ॥ ೨೬ನೇ ಮಾರ್ಚಿ ೧೮೮೮.

ಪ್ರದರ್ಶನವಸ್ತುಗಳು ಪ್ರದರ್ಶನಸ್ಥಾನದಿಂದ ವಾಪಸ್ ತೆಗದುಕೊಂಡು ಹೋಗುವಕಾಲದಲ್ಲಿ ಸದರೀವಸ್ತುಗಳು ಪ್ರದರ್ಶಿಸಲ್ಪಟ್ಟಂತಾದ್ದೆಂತಲೂ ಬಿಕ್ರಿ ಮಾಡಲ್ಪಡಲಿಲ್ಲವೆಂತಲೂ ಪ್ರದರ್ಶಿಸಿದವನ ಸ್ವಂತ ಮಾಲುಗಳೆಂತಲೂ ಎಗ್ಜಿಬಿಟರ್ ಸೆಕ್ರೆಟರಿಗಳಿಂದ ರುಜು ಮಾಡಲ್ಪಟ್ಟ ಸರ್ಟಿಫಿಕೇಟ್ ಹಾಜರ್ಮಾಡಿದಲ್ಲಿ ಮೊದಲು ಯಾವ ಸ್ಟೇಷನ್‌ನಿಂದ ಬಂದಿರುತ್ತದೆಯೋ ಆಸ್ಟೇಷನ್‌ಗೆ ಮದ್ರಾಸ್ ಸೌತ್ ಇಂಡಿಯನ್, ಸದರ್ನ್‌ಮರಾಟಾ, ಮತ್ತು ಮೈಸೂರು ಸ್ಟೇಟ್ ರೈಲ್ವೇ ರೈಲ್‌ಗಳಮೇಲೆ ಮಾಲೀಕನ ಜವಾಬ್‌ದಾರೀಮೇಲೆ ಬಗರ್‌ಭಾಡಿಗೆ ರವಾನಿಸಲ್ಪಡುವವು.

ಜೆ. ಕ್ಯಾಮರನ್,
ಎಫ್. ಎ. ಬ್ರಾಂಡ್ರತ್,
ಜಾಯಿಂಟ್ ಸೆಕ್ರೆಟರಿಗಳು.
ಮೈಸೂರು ಅಗ್ರಿಕಲ್ಚರಲ್ ಮತ್ತು
ಇಂಡಸ್ಟ್ರಿಯಲ್ ಎಗ್ಜಿಬಿಷನ್.

SUMMARY OF NEWS.

ವೃತ್ತಾಂತ ಸಂಗ್ರಹ.

ಮ್ಯಾಜಿಸ್ಟ್ರೇಟರು ಮಾಡಿದ ಠರಾವ್‌ಗಳಮೇಲೆ ಡಿ. ಜಡ್ಜೀರವರಲ್ಲಿ ಅಪ್ಪೀಲ್ ಮಾಡಬೇಕಾಗಿದ್ದರೆ ಸ್ಟಾಂಪುಗಳನ್ನು ಹಚ್ಚಬೇಕಾಗುತಿತ್ತು. ಆದರೆ ಅಂತಾ ಕ್ರಿಮಿನಲ್ ಅಪ್ಪೀಲ್‌ಗಳಿಗೆ ಸ್ಟಾಂಪುಗಳನ್ನು ಹಚ್ಚತಕ್ಕದ್ದಗತ್ಯವಿಲ್ಲವೆಂದು ಹೈಕೋರ್ಟಿನವರು ಠರಾವ್ ಕೊಟ್ಟಿರುತ್ತಾರೆ.

ಈ ಮೊದಲು ಒಂದು ಮಣಿಯಾರ್ಡರಿನಲ್ಲಿ ೧೫೦ ರೂಪಾಯಿಗಳಿಗೆ, ಮೇಲ್ಪಟ್ಟ ಐವಜುಗಳನ್ನು ಕಳುಹಿಸುವದಕ್ಕೆ ಆಗುತ್ತಿರಲಿಲ್ಲ. ಆದರೆ ಈಗ ಒಂದು ಮಣಿಯಾರ್ಡರಿನಲ್ಲಿ ೬೦೦ ರೂಪಾಯಿಗಳವರಿಗೆ ಕಳುಹಿಸುವದಕ್ಕೆ ಅಡ್ಡಿ ಇಲ್ಲವೆಂದು ಠರಾವಾಗಿ ಈ ಜುಲೈ ೧ನೇತಾರೀಖಿನಿಂದ ಆ ನಿಯಮವು ಜಾರೀಯಲ್ಲಿ ಬಂದಿರುತದೆ.

ವಶೀಕರಣವಸ್ತು—ಅಜ್ಮೀರಾದ ನೇಟಿವ್‌ಜನರಿಗೆ ಸದರೀ ವಸ್ತುವಿನಲ್ಲಿ ನಂಬಿಕೆಯುಂಟೆಂಬದಕ್ಕೆ ನಿದರ್ಶನರೂಪವಾಗಿ ಒಂದು ಸಂದರ್ಭವುಂಟಾಯಿತೇನಂದರೆ—ಕರಾಚಿಯ ರೆಳ್ಳಿಬ್ಬನು ಯಾವನೋ ಒಂದು ವಿಷವನ್ನು ಒಬ್ಬ ಮುದುಕಿಯ ಕೈಗೆಕೊಟ್ಟು ಅದನ್ನು ಯಾವನಾದರು ತಿನ್ನುವವಸ್ತುವಿನಲ್ಲಿ ಬೆರಸಿಕೊಟ್ಟರೆ ಅವನ್ನುತಿಂದವರೆಲ್ಲರು ನಿಶಗೆ ವಶವಾಗಿಹೋಗುವರೆಂದು ಹೇಳಲು ಅವಳು ಅದೇಪ್ರಕಾರ ಸದರೀವಿಷವನ್ನು ಅನ್ನದಪಕ್ಷಕರವಿ ಹಬ್ಬದಮರುದಿನ ಊಟಕ್ಕೆ ಬಡಿಸ್ಸಳು. ಅವರೆಲ್ಲರಿಗೂ ಕೂಡಲೇ ಅನಾರೋಗ್ಯವುಂಟಾಗಿ ಆಸ್ಪತ್ರೆಗೆ ಸಾಗಿಸಲ್ಪಟ್ಟರು. ಆ ವರಪೈಕಿ ಯೊಬ್ಬನು ಸತ್ತುಹೋದನು, ಉಳದವರೆಲ್ಲರು ಇನ್ನು ಚಿಕಿತ್ಸೆಯಲ್ಲಿದ್ದಾರೆ.

ಒಕೊಸ್ಲೀರೆತ್ತದಲ್ಲಿ ಒಬ್ಬನು ಮಸ್ಜಿತ್ತಿನ ಪೀಠದಮುತ್ತಿಂದ ಅನೇಕವನ್ನು ಮಾಡಿಸಿದನು. ಪ್ರ್ಯಾಗುವದೆ—ಅವನು ಕೆಲವು ಪುಸ್ತಕಗಳನ್ನು ಮುದ್ರಿಸಿ ಅವುಗಳ ಕೆಲವು ಪ್ರತಿಗಳನ್ನು ಪ್ಯಾಲ್ಯ ಸೇಯಿಟ್ ಪೋಸ್ಟ್‌ಪ್ಯಾರಾ ರಜಪುತ್ರರಿಗೆ ಕಳುಹಿಸಿ, ನೀವು ಹಿಂದೂಮತದವರಾದರೆ ಇವನ್ನು ತೆಗದುಕೊಳ್ಳಬೇಕೆಂತಲೂ, ಚಮಾರರಾದರೆ ತೆಗದುಕೊಳ್ಳಬಾರದೆಂತಲೂ ಬರೆದನು. ಅಲ್ಲಿಯ ಹಿಂದೂವವರು ಅದನ್ನುನೋಡಿ ಆಪ್ರತಿಗಳನ್ನು ತೆಗದುಕೊಳ್ಳುವಭಯದಿಂದ ತೆಗದುಕೊಂಡರು ಈಪ್ರಕಾರ ಅವನು ಬಹಳಹಣ ಗಳಿಸಿದನು. ಈಗನಾತ್ರ ಅವನ ವ್ಯಾಪಾರವು ಬೈಲಿಗಬಂದಿದೆ. ಹಾವವು ಎಷ್ಟುದಿವಸಪರ್ಯಂತರ ಒಳಗೇ ಉಳದೀತು ?

ನಿಷ್ಪಕ್ಷಿ ಸ್ವಾಮಿಭಕ್ತಿಯು—ವಿರಮಗಾಪ್ ಎಂಬಲ್ಲಿಯ ಸ್ಟೇಷನಿನಲ್ಲಿ ನೀರು ತರುವವನೊಬ್ಬನು ಮರಣಾವಸ್ಥೆಯೊಂದಿದ್ದಾಗ ಅವನ ಇಷ್ಟಮಿತ್ರರು ಅವನನ್ನು ಸ್ನಾನಕ್ಕೆ ಕರೆತ್ತಯ್ಯುತಿದ್ದರು. ಆಗ ಅವನದೊಂದು ಎತ್ತು ಆ ಪ್ರೇತವನ್ನು ಹಿಂಬಾಲಿಸಿ ಓಡುತ್ತಾ ಓಡಿ ಬರುತ್ತಿತು. ಅದರ ಆರ್ತಸ್ವರವನ್ನು ಕೇಳದರೆ, ನನ್ನಪ್ರಿಯ ಧಣಿಯನ್ನು ಇಲ್ಲಿಂದ ಒಯ್ಯಬೇಡಿರೆಂದು ಹೇಳುತ್ತಿದೆಯೋ ಏನೋಯೆಂಬಂತೆ ತೋರುತ್ತಾಗುತಿತ್ತು. ಅವರ ಬರುವಿಕೆಯನ್ನುಕೇಳಿ ಪ್ರೇತವಾಹಕರಿಗೆ ಬಹಳ ಪಶ್ಚಾತ್ತಾಪವುಂಟಾಗಿ ಬೇರೆ ಉಪಾಯವನ್ನು ಕಾಣದೆ ಆ ಎತ್ತನ್ನು ಅಲ್ಲೇ ಒಂದು ಗಿಡಕ್ಕೆ ಕಟ್ಟಿಹಾಕಿ ಶವವನ್ನು ಮುಂದೆಒಯ್ದರು. ಆ ಎತ್ತು ತನ್ನಯ ಜಮಾನನು ತನ್ನಕಣ್ಣಿಗೆ ಕಾಣುವವರಿಗೂ ಅವನಕಡೆಗೆ ನೋಡುತ್ತಾ ಹಾಗೇ ಹಂಬಲಿಸುತಿತ್ತು. ಮತ್ತು ಆದಿನಸ ಅದು ಹುಲ್ಲು ನೀರನ್ನು ಸಹಾ ತೆಗದುಕೊಳ್ಳಲಿಲ್ಲ ! ಆಹಾ !! ಏನಾದರೂ ಅದರ ಸ್ವಾಮಿಭಕ್ತಿಯು !!!—ಪ. ಸು.

BANGALORE :—Printed and publised at the KARNATIC PRESS, No. 14, Hospital Road, Petta.

ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA.

ಪ್ರತಿ ಸೋಮವಾರ ಪ್ರಾತಃಕಾಲದಲ್ಲಿ ಪ್ರಕಟಿಸಲ್ಪಡುವದು.

Published every Monday Morning.

ಪ್ರಾಮುಖ್ಯವೃತ್ತ್ಯಂತಗನಾರ್ಥ್ಯ ಕರ್ಣಾಟಕಪ್ರಕಾಶನನರಾಧಿದಾಪ್ರಸತಾಪಿತೀಕೋಧಿತಾ ॥ ಮ್ಯಗಾಂಕಪಿತಪಾಸರೆನಿಪಿಪಮುದ್ರಾಣಾಸದ್ಯ್ಮಸ್ಪ್ರಿಪಾಸುವರಿದ್ಧಾಸ್ಸಾಸಿಕತಿಮಾನಸೂಸುಮದಾ ॥

Vol. XV.] BANGALORE:—MONDAY, JULY 23, 1888. [No. 29.

ಸಂಪುಟ ೧೫.] ಬೆಂಗಳೂರು:—ಸನ್ ೧೮೮೮ನೇ ಇಸವಿ ಜುಲೈ ೨೩ನೇ ತಾರೀಖ್ ಸೋಮವಾರ. [ಸಂಚಿಕೆ ೨೯.

ಕರ್ಣಾಟಕ ಪ್ರಕಾಶಿಕಾ

ಪತ್ರಿಕೆಯ ಚಂದಾ ದರಗಳು,
೧೮೮೮ನೇ ಇಸವಿ ಜನವರಿಯಿಂದ ಮೊದಲು ಗೊಂಡು
ಕಡಮೆಮಾಡಲ್ಪಟ್ಟಿರುತ್ತವೆ.

ಈ ಪತ್ರಿಕೆಯು ಚಂದಾದಾರರನ್ನೆಲ್ಲಾ ಅನೇಕ ರ ಅಪೇಕ್ಷೆಯನ್ನು ನೆರವೇರಿಸುವ ಉದ್ದೇಶದೊಡನೆ ಯೂ, ಪರಿಮಿತವಾದ ಆದಾಯವುಳ್ಳವರಿಗೆಲ್ಲ ಈ ಪತ್ರಿಕೆಯು ಸುಲಭವಾಗಿ ಲಭಿಸುವಂತಿರ ಬೇಕೆಂಬ ಅಭಿಪ್ರಾಯದಿಂದಲೂ ಇದರ ಚಂ ದಾದರವನ್ನು ಇದರಡಿಕಂಡಂತೆ ಕಡಮೆಮಾಡಿರು ತ್ತೇವೆಂತೆಂದರೆ:—

ಇಂಗ್ಲಿಷ್ ಮತ್ತು ಕನ್ನಡಭಾಗಗಳಿಗೆ.

	ಸ್ಥಳದವರಿಗೆ	ಪರಸ್ಥಳದವರಿಗೆ.
[illegible] ತಿಂಗಳಿಗೆ	8—0—0	9—0—0
6 „	4—0—0	4—8—0
3 „	2—8—0	2—8—0

ಇಂಗ್ಲಿಷ್ ಅಥವಾ ಕನ್ನಡಭಾಗಗಳಿಗೆ.

	ಸ್ಥಳದವರಿಗೆ	ಪರಸ್ಥಳದವರಿಗೆ
12 ತಿಂಗಳಿಗೆ	4—0—0	5—0—0
6 „	2—0—0	2—8—0
3 „	1—4—0	1—8—0

ಷರಾ—ಅಂಚೆ ಮಾಸ್ತರುಗಳು, ಡಿಪುಟಿ ಮತ್ತು ಅ [illegible] ನಗಳು, ಸ್ಕೂಲ್ ಮಾಸ್ತರುಗಳು, ಪಂಡಿತ ರು, ವಿದ್ಯಾರ್ಥಿಗಳು, ಇವರಿಗೆಲ್ಲ ಈ ಪತ್ರಿಕೆಯು ಮೇಲೆ ಕಂಡ ದರಕ್ಕೆ ಕೊಡಲ್ಪಡುವದು. [illegible]

[illegible] ಪ್ರಕಟನೆಯ ವಿವರ.

ಮೊದಲನೆಸಾರಿಗೆ ಪಂಕ್ತಿ ಒಂದಕ್ಕೆ	೦—೨—೦
ಎರಡನೆಸಾರಿಗೆ ಪಂಕ್ತಿ ಒಂದಕ್ಕೆ	೦—೧—೦

ಷರಾ—ಎರಡಾವರ್ತಿಗಿಂತ ಹೆಚ್ಚಾಗಿ ಪ್ರಕಟನೆ [illegible] ಪಂಕ್ತಿ ಒಂದಕ್ಕೆ [illegible] ಲೆಕ್ಕ ಮಾಡಲ್ಪಡುವದು. ಈ ಪತ್ರಿಕೆಯಲ್ಲಿ [illegible]

"IT RECOMENDS ITSELF"

ALL WHO SUFFER FIND SURE RELIEF.

LITTLE'S ORIENTAL BALM

THE MOST EFFECTUAL MODERN REMEDY FOR PAIN.

ಲಿಟಲ್ ರವರಿಂದ ತಯಾರಾಗುತ್ತಿರುವ "ಬಾಧಕಸಂಹಾರಿಣಿ" ಎಂಬ ಪೂರ್ವದೇಶ ಸಂಬಂಧವಾದ ಅಮೂಲ್ಯ ತೈಲವು ಸ್ವಶಕ್ತಿ ಪ್ರದರ್ಶಕವಾದದ್ದು, ಮತ್ತು ಸಫಲವಾದ ನವೀನ ಪ್ರತಿಕ್ರಿಯಾರೂಪವಾದ ಔಷಧವು. ಇದರಿಂದ ಸಕಲ ವಾತರೋಗಗಳೂ, ವಾತಸಂಬಂಧಗಳಾದ ನಮ್ಮಂಥಗಳೂ ನಿವೃತ್ತಿಯಾಗುವವು. ಮುಖ್ಯವಾಗಿ ಚಿರಕಾಲಿಕ ವಾದ ವಾತರೋಗಗಳು, ಶೂಲೆ, ಸಂಧ್ಯನ್ನಿನ ಉರಿ, ನಡುನೋವು, ಕೀಲುವಾಯು, ಕಟಿವಾಯು, ಉಳುಕು ನೋವು, ತಲೆನೋವು, [illegible] ಮುಂತಾದ ರೋಗಗಳಲ್ಲೆಲ್ಲ ನಿಸ್ಸಂದೇಹವಾಗಿ ಬಹಳ ಪ್ರಯೋಜನವನ್ನುಂಟು ಮಾಡತಕ್ಕದ್ದು. ಈ ತೈಲವನ್ನು ರೋಗವುಳ್ಳ ಸ್ಥಳಗಳಲ್ಲಿ ಕೆಲವಾವರ್ತಿ ಸವರಿ [illegible] ಚನ್ನಾಗಿ ತಿಕ್ಕಿ ದ್ದ [illegible] ನಿವೃತ್ತಿ ಮಾಡುವಂಥಾ ಉತ್ತಮ ತೈಲವಾಗಿರುತ್ತದೆ. [illegible] ಅಂತರ್ನೋವು ಮತ್ತು ಜೀರ್ಣ [illegible] ನಿವೃತ್ತಿಯಾಗುವದು. [illegible] ಉರಿ ಅಥವಾ ಪ್ರಾಣಿಗಳಿಗೆ ಈ ತೈಲವು ಅದ್ಭುತವಾದ ಮತ್ತು ಶೀಘ್ರವಾದ ಸಂಪೂರ್ಣ ಗುಣವನ್ನುಂಟುಮಾಡುವದು. ಆಶ್ಚರ್ಯವಾದ ಈ ಔಷಧವನ್ನು [illegible] ಅದರ ಪ್ರಯೋಜನವು ಸ್ವಾನುಭವ ವ್ಯಕ್ತವಾಗುವದು. ಈ ತೈಲವು [illegible] ಪ್ರಯಾಣಿಕರು, ಬೇಟೆಯಾಡುವವರು, ವ್ಯಾಯಾಮ ಮಾಡುವವರು, ಮುಂತಾದವರಿಗೆಲ್ಲ ಅಮೂಲ್ಯವಾದದ್ದು.

ಪರಿಶೀಲಕರ ಅಭಿಪ್ರಾಯವು.

ಐರ್ಲ್ಯಾಂಡ್ ದೇಶದ ಫಾರ್ಮಸ್ಯೂಟಿಕಲ್ ಸೊಸೈಟಿಯವರ ಔಷಧಶಾಲೆಯ ಪ್ರೆಸಿಡೆಂಟರಾಗಿಯೂ, ಸದರೀ ದೇ ಶದ [illegible] "ಮೆನ ಲಾ ವಾಟರ್ಸ್ ಅಫ್ ಯೂರೋಪ್" ಎಂಬ ಗ್ರಂಥಕರ್ತರಾಗಿಯೂ, [illegible] ಅನೇಕ ಲೇಖನಾ ಧಿಕಾರಿಯಾಗಿಯೂ, ಇರುವ ಪ್ರೊಫೆಸರ್ ಟಿಚ್ ಬೋರ್ನ್ (C. R. TICHBORNE, L. L. D., F. C. S., M. R. I. A.,) ರವರು ಅಭಿಪ್ರಾಯ ಪಟ್ಟಿರುವದೇನೆಂದರೆ—[illegible] ಈ ತೈಲವು ಸಂಪೂರ್ಣ ಪಾಕಶುದ್ಧತೆಯುಳ್ಳದ್ದಾಗಿ [illegible]

ಇದರ ಕ್ರಯ—ಸೀಸೆ ಒಂದಕ್ಕೆ ೧ ರೂಪಾಯಿ.

ಇದು ಮಿಸ್ಸು [illegible] ಮಹಮದ್ ಯೂಸುಫ್ [illegible] ಎ. ಸಿ. ಬರ್ಕ್ ಮನ್ [illegible] ಜೆ. ವೆಸ್ಟ್ ಯವರ ಕಂಪೆನಿ ಯಲ್ಲಿಯೂ, ರಿ. ಗ್ಸ್ ಅಂಡ್ ಕಂಪೆನಿಯವರಲ್ಲಿಯೂ, ರಿಗ್ಸ್ ರವರ ಕಂಪೆನಿಯವರಲ್ಲಿಯೂ ದೊರೆಯುವದು.

AGENTS.— Messrs, J. WEST, *Chemist, &c., Bangalore.*
CAPTAIN & Co *Chemists, Bangalore.*
RIGGS & Co., *Chemists, Bangalore*; and of
MAHOMED YOUSOFF AND SONS, *The Cash Bazar, Bangalore*
A. C. BERRYMAN & Co.,
20 *Sambodoss Street Madras.*

NOTICE.

VAIDYASARA SANGRAHA

A TREATISE ON THE PRINCIPLES OF HINDU MEDICINE.

☞ *Price including Postage Rs 5 6 0*

ವೈದ್ಯಸಾರ ಸಂಗ್ರಹ.

ಈಗ್ರಂಥಾಪೇಕ್ಷೆಯುಳ್ಳವರು ಮೊಬಲಗಿನೊ ಡನೇ ಈ ಕೆಳಗೆ ರುಜುಮಾಡಿರತಕ್ಕವರ ಹೆಸರಿಗೆ ಬರೆದುಕೊಂಡರೆ ಪುಸ್ತಕ ಕೂಡಲೇ ಕಳುಹಿ ಸಲ್ಪಡುವದು. ಮೊಬಲಗು ಇಲ್ಲದ ದರಖಾಸ್ತು ಗಳಿಗೆ ಉತ್ತರಾಂ ನಿಗೆ ಕೊಡಲ್ಪಡಲಾರದು.

ಇದರಕ್ರಯ ... ...ರೂ॥ ೫—೦—೦
ಪ್ಯಾಕಿಂಗ್ ಮತ್ತು ಅಂಚೆಹಾಸಲ್, ೦—೬—೦

ಟಿ. ವಿ. ವೆಂಕಟಾಚಾರ್,
ಆಸ್ಪತ್ರಿನೋಟ ಬೆಂಗಳೂರು.

ವಿಶೇಷ ಪ್ರಕಟನೆ

ಪುಣೆ ಚಿತ್ರಶಾಲೆಯಲ್ಲಿ ಸ್ಥಾಪಿಸಲ್ಪಟ್ಟಿರುವ ಮೊಗೆ ಶ [illegible] ದೇವತೆಗಳು, ಚರಿತ್ರೆಗಳ ಮೂಲಕ ಪ್ರಸಿದ್ಧರಾದ [illegible] ಸುಂದರವಾದ ನೇಟಿವ್ [illegible] ರು ಪತ್ರಿಕೆರ ಟ್ಯಾಗ್ [illegible] [illegible] ಕ್ರಯದ [illegible]

ಪುಣೆ ಸಹರ್ ಚಿತ್ರಶಾಲೆಯ ವ್ಯಾನೇಜರ್.

Bangalore City Municipality.

ಬೆಂಗಳೂರುಸಿಟಿ ಮ್ಯುನಿಸಿಪಾಲಿಟಿ.

ಸನ್ ೧೮೮೮ನೇ ಇಸವಿ ಜುಲೈ ೨೭ನೇ ತಾ ರೀಖ್ ಶುಕ್ರವಾರ ಪ್ರಾತಃಕಾಲ ೭½ ಘಂಟೆಗೆ ಸಿಟಿ ಮ್ಯುನಿಸಿಪಲ್ ಕಮಿಷನರುಗಳು ಕಚೇರಿ ಆ ಫೀಸ್ ಕಟ್ಟಡದೊಳು ಸಭೆ ಸೇರುವಾಗ ಅವರ ಆ ಲೋಚನೆಗೆ ತರಲ್ಪಡುವ ವಿಷಯಗಳಯಾದಾಸ್ತು.

ಸನ್ ೧೮೮೮ನೇ ಇಸವಿ ಜೂನ್ ತಿಂಗಳಬಾಬ ತು ನಗದು ಜಮಾಖರ್ಚು ಲೆಕ್ಕ ಮತ್ತು ಮರ [illegible] ಲೆಕ್ಕಗಳು.

೨. ಕಾಶೀ ವಿಶ್ವೇಶ್ವರ ದೇವಸ್ಥಾನದ ಸಂದು ಈಗ ಅನಾಯಕರವಾದ ದೊಂತಾಗಿರುವದರಿಂದ ಅದನ್ನು ತಪ್ಪಿಸತಕ್ಕಬಗ್ಗೆ ಸದರೀ ಸಂದನ್ನು ಸುಲ್ತಾನ್‌ಪೇಟೆ ಬೀದಿಗೆ ಸೇರುವತನಕ ನೆಟ್ಟಗೆ ತೆಗೆದುಕೊಂಡು ಹೋಗಬೇಕೆಂಬ ವಿಷಯ.

೩. ತಿನ್ನುವ ಮತ್ತು ಕುಡಿಯುವ ಪದಾರ್ಥ ಗಳಲ್ಲಿ ಕೆಟ್ಟಪದಾರ್ಥಗಳನ್ನು ಬೆರಸಿ ಮಾರುವ ವಾಡಿಕೆಯನ್ನು ತಪ್ಪಿಸುವದಕ್ಕಾಗಿ ಹುಟ್ಟಿದ ಸನ್ ೧೮೭೬ನೇ ಇಸವಿಯ ೩ನೇ ನಂಬರ್ ಬೆಂ ಗಾಲ್ ಆಕ್ಟಿನ ನಿಬಂಧನೆಗಳನ್ನು ಇಲ್ಲಿ ಜಾರೀಗೆ ತರುವ ವಿಷಯ.

೪. ಬೆಂಗಳೂರು ಪಟ್ಟಣದಲ್ಲಿಯ ಕೆಂಗಿನ ಫಸ ಲನ್ನು ಮೂರು ವರ್ಷಗಳ ಕಾಲದ ವರಿವಿಗೆ ಪತ್ತೆ ಯಾತಕ್ಕಬಗ್ಗೆ ಬಂದಿರುವ ದರಖಾಸ್ತುಗಳ ವ್ಯವಸ್ಥೆ.

ಸಿಟಿ ಮ್ಯುನಿಸಿಪಲ್ ಆಫೀಸ್
ಬೆಂಗಳೂರು.
೧೭ನೇ ಜುಲೈ ೧೮೮೮

A. SHINIVASA CHARLU, B. A.,
Vice-President,
City Municipal Commission.

ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA.

MONDAY, JULY 23, 1888.

೧೮೮೮ನೇ ಜುಲೈ ೨೩ನೇ ತಾ॥ ಸೋಮವಾರ.

HOW TO CONQUER THE DEATH?

ಮರಣವು ಜಯಿಸುವುದು ಹ್ಯಾಗೆ?

ಪ್ರಾಣಿ ಸಾಮಾನ್ಯಕ್ಕೆ ನಿಯತವಾಗೇರ್ಪಟ್ಟಿ ರುವ ಮರಣವೆಂಬುದು ಸ್ವಭಾವವಾದದ್ದೋ ಅಥವಾ ಯಾವದಾದರೊಂದು ಉಪಾಧಿವಶಾತ್ ಅವಾಂತರ ಫೇದವಿಂದುಂಟಾಗತಕ್ಕದ್ದೋ, ಇದು ಅಪ್ರತೀಕಾ ರವಾದದ್ದೋ ಅಥವಾ ಪ್ರತಿಕ್ರಿಯಾ ಯೋಗ್ಯವಾದ ದ್ದೋ ಎಂಬ ಪ್ರಬಲ ಅನುಮಾನ ಬಂದು ಈಚೆಗೆ ತತ್ವಶೋಧಿ ಪಂಡಿತರ ವಿಚಾರಕ್ಕೆ ವಿಷಯವಾಗಿ ರಲು ಅವರವರು ತಮ್ಮತಮ್ಮ ಸಾಮರ್ಥ್ಯಾನು ಗುಣವಾಗಿ ವಿಮರ್ಶಿಸಿ ಒಂದೊಂದುಬಗೆಅಭಿಪ್ರಾ ಯವು ಸ್ಥಾಪಿಸುತ್ತಲಿದ್ದಾರೆ. ಪರಂತು ಇ ವರ ಅಭಿಪ್ರಾಯಗಳೆಲ್ಲವೂ ಒಂದೊಂದು ಸಂದ ರ್ಭದಲ್ಲಿ ವಿರುದ್ಧಗಳಾಗಿ ಪರಿಣಮಿಸುವದರಿಂದ ಯಾವದನ್ನೂ ನಿಜವೆಂದು ನಂಬಿಯಾಗೊವದೆ ಇ ದೆ. ಮನುಷ್ಯನಿಗೆ ಆಯುಸ್ಸು ಬ್ರಹ್ಮನಿಂದ ಮೊದಲೇ ನಿರ್ಣಯವಾಗಿರುವದರಿಂದ ಅಕಾಲ ಪ್ರಾಪ್ತಿಸಿದ ಮೇಲೆ ಒಂದು ಕ್ಷಣವಾದರೂ ಅವ ನು ಉಳಿಯಲಾರನಾಗಿ ಮರಣವು ಸ್ವಭಾವವೆಂಬ ದಾಗಿ ಕೆಲವರ ಅಭಿಪ್ರಾಯವು. ಅವರ ತಪ್ಪವೆ ಪ್ರಾಪ್ತವಾಗತಕ್ಕ ವಿಷಯವು ಪ್ರತಿಕ್ರಿಯೆಯಿಂದ

ನಿವೃತ್ತಿಯಾಗಲಾರದಾಗಿ ಜೀವಿಸುವದಕ್ಕಾಗಿ ಮಾಡುವ ಪ್ರಯತ್ನಗಳೆಲ್ಲವೂ ನಿಷ್ಫಲಗಳಾಗಬೇಕಾಗುತಿವೆ. ಇದರಿಂದ ಚಿಕಿತ್ಸಾದಿಗಳಿಗೆ ಪ್ರಯೋಜನವಿಲ್ಲದೆ ಹೋಗುತಿದೆ. ವಯಃ ಪರಿಮಾಣವು ಮೊದಲೇ ನಿರ್ಣಯವಾಗಿರುವಂತೆ ನುಡಿಯುವ ಪಕ್ಷಕ್ಕೆ ಅನೇಕ ಸಹಸ್ರಸಂವತ್ಸರಗಳಕಾಲ ಜೀವಿಸಿದ್ದರೆಂದು ನುಡಿಯುವ ದಶರಥಾದಿ ಚಕ್ರವರ್ತಿಗಳೂ ಚಿರಂಜೀವಿಗಳಾಗಿರುವ ವಿಭೀಷಣಾದಿಗಳು ಸಹ ಸುಳ್ಳಾಗಿರಬೇಕಾಗಿರುತಿದೆ. ಮರಣಕ್ಕೆ ನಿಮಿತ್ತವು ನಮ್ಮ ಆಹಾರವ್ಯವಹಾರಾದಿಗಳೇ ಕಾರಣಗಳಾದದರಿಂದ ಅವು ಕ್ರಮಪಡಿಸಿಕೊಂಡು ಯಾವತನಕ ಶರೀರವಂ ಪರಿಶುದ್ಧವಾಗಿಟ್ಟುಕೊಂಡಿರುವೆವೊ ಅದುವರಿವಿಗೆ ಮರಣವೆಂಬದು ನಮ್ಮಬಳಿ ಸೇರಲಾರದೆಂತಲೂ, ಬದುಕಲಿಕ್ಕೂ ಸಾಯುವದಕ್ಕೂ ನಾವೇ ಕಾರಣಭೂತರೆಂತಲೂ, ಇದರಿಂದ ಮರಣವು ಉಪಾಧಿವಶಾತ್ ಪ್ರಾಪ್ತವಾಗತಕ್ಕದ್ದೇ ಹೊರ್ತು ಸ್ವತಸ್ಸಿದ್ಧವಾದದ್ದಲ್ಲವೆಂತಲೂ ವೈದ್ಯರನೇಕರು ತಾತ್ಪರ್ಯದಟ್ಟಿರುತ್ತಾರೆ. ಸರ್ವಾಂತರ್ಯಾಮಿಯಾದ ಈಶ್ವರನು ಸಕಲ ಶರೀರದಲ್ಲಿಯೂ ನೆಲಗೊಂಡಿರುತ್ತಾನೆಂಬದು ಪ್ರಸಿದ್ಧವಾಗಿರುತಿದೆಂತಲೂ, "ಯದ್ಭಾವಂತದ್ಭವತಿ" ಎಂಬದಾಗಿ ಭಾವನಾನುಗುಣವಾಗಿಯೇ ಸಿದ್ಧಿಸುವದೆಂತಲೂ, ಮನೋನಿಶ್ಚಯಕ್ಕೆ ಮೀರಿದಕಾರ್ಯ ವ್ಯಾಪದವಾಮಿಲ್ಲವಾದದರಿಂದ ಮನೋವಾಕ್ಕಾಯಗಳೆಂಬ ತ್ರಿಕರಣಶುದ್ಧಿಯೊಡನೆ ಅನವರತ ಅಭ್ಯಾಸ ಪೂರ್ವಕ "ನಾನು ಸಾಯಲಾರೆನು" ಎಂಬಮಾತುಗಳನ್ನು ಮನಸ್ಸಿನಲ್ಲಿ ದೃಢಪಡಿಸಿಕೊಂಡಿರುವಂತಾವರು ಚಿರಕಾಲ ಜೀವಿಸಿರುವರೆಂತಲೂ ಪಂಡಿತರನೇಕರು ತಾತ್ಪರ್ಯ ಪಟ್ಟಿರುತ್ತಾರೆ. ಮೇಲೆ ತಿಳಿಸಲ್ಪಟ್ಟ ವೈದ್ಯ ವಿಧಿಗಳನ್ನನುಸರಿಸಿ ಆಹಾರ ಪಥ್ಯಪಾನಾದಿಗಳ ಮೂಲಕವಾದ ಕ್ರಮಗಳನ್ನನುಭವಿಸುವದಕ್ಕಿಂತಲೂ ದೃಢತರವಾದ ಮನೋನಿಶ್ಚಯವೂ ಅಧ್ಯವಸಾಯವೂ ಉಳ್ಳವರು ಮೃತ್ಯುವು ಜಯಿಸಬಹುದೆಂತಲೂ, ವೈದ್ಯ ವಿಧಿಗಳಿಂದ ಒಂದು ಪ್ರಯೋಜನ ವುಂಟಾಗುವದೆಂದು ಭಾವಿಸುವದನುಚಿತವೆಂತಲೂ ಎಣಿಸಬೇಕಾಗಿದೆ. ಯಮಬಾಧೆ ಮೃತ್ಯುಭಯ ಮೊದಲಾದವುಗಳಿಂದ ತಪ್ಪಿಸಿಕೊಳ್ಳಲಿಕ್ಕೆ ಸುಲಭೋಪಾಯವು ಯೋಗವೆಂಬದಾಗಿ ಅನೇಕ ಮಹಾತ್ಮರು ತಿಳಿಸಿರುತ್ತಾರೆ. ಇದಕ್ಕೆ ದೃಷ್ಟಾಂತವಾಗಿ ನಮ್ಮ ಪೂರ್ವಿಕರಾದ ರಾಜರ್ಷಿ ದೇವರ್ಷಿಗಳನೇಕರು ಅನೇಕ ಸಹಸ್ರ ಸಂವತ್ಸರಗಳ ಕಾಲಸ್ವಾಸಧಾರಣದಿಂ ತಮ್ಮ ಆಯುರ್ದಾಯವಂ ವೃದ್ಧಿಪಡಿಸಿಕೊಂಡಿದ್ದರೆಂತಲೂ, ಅನೇಕರು ತಮ್ಮ ಇಚ್ಛಾನುಸಾರ ಶರೀರವಂ ಬಿಟ್ಟರೆಂತಲೂ ಪೂರ್ವ ಗ್ರಂಥಗಳಿಂದ ತಿಳಿಯಬರುತಿದೆ. ಇದರಿಂದ ಮರಣವೆಂಬದು ಪುರುಷಾಧೀನವಾದದ್ದೆಂದು ನುಡಿಯಬೇಕಾಗಿದೆಯೇಹೊರ್ತು ಅದಕ್ಕೆ ಅನ್ಯನೊಬ್ಬನು ವಿಧಾಯಕನೆಂತಲಾಗಲಿ, ಆಹಾರ ವ್ಯವಹಾರಗಳು ಕಾರಣಗಳೆಂತಲಾಗಲಿ, ನೈಜವಾದದ್ದೆಂತಲಾಗಲಿ ಹೇಳಕೂಡದವೆ ಇದೆ. ಚಿರಕಾಲ ಜೀವಿಸಿರಬೇಕೆಂಬ ಕೋರಿಕೆಯುಳ್ಳವರೆಲ್ಲರು ಅವಶ್ಯಉಪಾದೇಯಗಳಾದ ಕೆಲವು ಪದ್ಧತಿಗಳಂ ನಿರಂತರ ಅಭ್ಯಸಿಸಿದರೆ ಮೃತ್ಯುವು ಜಯಿಸಬಹುದೆಂಬದಾಗಿಯೂ, ಅಸಾಧಾರಣಗಳಾದ ಕೆಲವು ಮಹಿಮೆಗಳನ್ನು ಅನ್ಯರಿಗೆ ವ್ಯಕ್ತಪಡಿಸಲಿಕ್ಕೆ ಸಮರ್ಥರಾಗಬಹುದೆಂತಲೂ, ಇವರಿಂದ ಸಕಲವಿಧ ಶಾರೀರಕ ರೋಗಗಳೆಲ್ಲ ನಿವಾರಣವಾಗುವವೆಂತಲೂ ಈಚೆಗೆ ನಮ್ಮ ದೃಷ್ಟಿಯಲ್ಲಿ ಬಿದ್ದ ಒಂದು ಸಂಸ್ಕೃತ ಗ್ರಂಥದಿಂದ ಸ್ಪಷ್ಟವಾಗುತಿದೆ. ಈ ವಿಷಯವನ್ನು ಬಹುಕಾಲದ ಹಿಂದೆಯೇ ನಮ್ಮವರು ಅನುಭವಪೂರ್ವಕ ಕಂಡು ಹಿಡಿದು ನಿರ್ಧರಿಸಿರುವಂತೆ ಧಾರಾಳವಾಗಿ ಹೇಳಬಹುದು. ಯಾರಿಂದಲೂ ಜಯಿಸಕೂಡದ ಮೃತ್ಯುವನ್ನು ಗೆಲ್ಲಲಿಕ್ಕೆ ಪ್ರತಿನಿತ್ಯವೂ ಅಭ್ಯಸಿಸಬೇಕಾದ ಕ್ರಮಗಳು ಸುಲಭವಾಗಿಯೂ ಎಲ್ಲರಿಗೂ ಸಾಧ್ಯವಾಗಿಯೂ ಇರುತಿವೆ. ಪರಂತು ಈಗ ಕಾಲಗತಿಯಿಂದ ಜನಗಳ ದೇಹ ದೌರ್ಬಲ್ಯದಿಂದಲೂ, ಮನಶ್ಚಾಂಚಲ್ಯದಿಂದಲೂ, ನಾನಾ ಬಾಧೆಯಿಂದಲೂ ಅಸಮರ್ಥರಾಗಿ ತಮ್ಮ ದುಷ್ಕೃತ್ಯಗಳಿಂದಲೇ ತಮ್ಮ ಆಯುಸ್ಸು ಕ್ಷೀಣಿಸುವಂತೆ ಮಾಡಿ ನಿರಂತರ ದುಃಖಾನುಭವಕ್ಕೆ ಪಾತ್ರರಾಗುತ್ತಾರೆಯಾಗಿ ಮೃತ್ಯು ನಿವಾರಣಕ್ಕೆ ಸದರೀ ಗ್ರಂಥದಲ್ಲಿ ತಿಳಿಸಲ್ಪಟ್ಟಿರುವ ಉಪಾಯಗಳನ್ನು ಸಂಕ್ಷೇಪಿಸಿ ಮುಂದಿನವಾರದಲ್ಲಿ ತಿಳಿಸುವೆವಾಗಿ ಅದರ ಯಾಥಾರ್ಥ್ಯವನ್ನೂ ಸಾಧ್ಯಾ ಸಾಧ್ಯವನ್ನೂ ಪಂಡಿತರು ಆಲೋಚಿಸಿ ನಿರ್ಧರಿಸಬೇಕೆಂದು ಕೋರುತ್ತೇವೆ.

DUTIES OF THE EDUCATED NATIVES.

ವಿದ್ಯಾವಂತರಾದ ಇಂಡಿಯಾ ದೇಶಸ್ಥರು ತಮ್ಮನ್ನು ಪಾಲಿಸತಕ್ಕ ಅರಸರವಿಷಯದಲ್ಲಿಯೂ ದೇಶಾಭಿವೃದ್ಧಿಯ ವಿಷಯದಲ್ಲಿಯೂ ನಡೆದುಕೊಳ್ಳಬೇಕಾದ ಕೆಲವು ವಿಹಿತ ಧರ್ಮಗಳಂ ಕುರಿತು ಮೆ॥ ಶಿವಶಂಕರ ಪಾಂಡಿಯಾಯವರು ಮದರಾಸ್ ಕೋಮಲೇಶ್ವರನ ಪೇಟೆಯ ಲಿಟರೆರಿಸೊಸೈಟಿ ಸಾಧವಲ್ಲಿ ಈಚೆಗೆ ಸೇರಿದ್ದ ಸಭೆಯೊಳು ವಿಚಾರಪೂರ್ವಕವಾಗ್ಯ ತಿಳಿಸಿದ ಕೆಲವುಅಂಶಗಳು ಬಹಳ ಕೊಂಡಾಡತಕ್ಕವಾಗಿರುತ್ತವೆ, ಏನಂದರೆ– ನಮ್ಮಲ್ಲಿ ಪ್ರಸಿದ್ಧಗಳಾಗಿರುವ ಮಾನವ ಧರ್ಮಶಾಸ್ತ್ರ, ಕಾಮಂದಕ, ಶುಕ್ರನೀತಿ, ಮೊದಲಾದ ಗ್ರಂಥಗಳಲ್ಲಿಯೂ, ಖೊರಾನ್ ವಗೈರೆ ಮುಸಲ್ಮಾನರ ಗ್ರಂಥಗಳಲ್ಲಿಯೂ, ಎಲ್ಲಾ ಶಕ್ತಿಗಿಂತಲೂ ಪ್ರಭುಶಕ್ತಿಯು ಬಲಿಯಾದದ್ದೆಂಬದಾಗಿ ತಿಳಿಸಲ್ಪಟ್ಟಿರುತಿದೆ. ಹಿಂದೂ ಧರ್ಮಶಾಸ್ತ್ರಾನುಸಾರವಾಗಿ ಎಲ್ಲ ಪಾಪಕ್ಕಿಂತಲೂ ರಾಜದ್ರೋಹವು ಮಹತ್ತರವಾದದ್ದೆಂದು ಪರಿಗಣಿಸಲ್ಪಟ್ಟಿರುತಿದೆ. ರಾಜದ್ರೋಹಿಗಳು ಲಿಪಿಸರಗಳ ಕತರಲ್ಲಿಯೂ ಗರ್ಹಿತ ರಾದವರಾಗಿರುತ್ತಾರೆ. "ನಾವಿಷ್ಣುಃಪೃಥಿವೀಪತಿಃ" ಎಂಬ ಪ್ರಾಚೀನ ವಾಕ್ಯವಂ ಅವ್ಯಾಪಿ ಅನೇಕರು ಗೌರವಿಸುತ್ತಾರೆಯಾಗಿ ನಮ್ಮ ಪಾಲಕರು ಭಗವದಂಶಸಂಭೂತರೆಂದು ಭಾವಿಸಿ ಅವರು ಗೌರವಿಸಬೇಕಾದದ್ದು ಪ್ರಥಮ ಧರ್ಮವಾಗಿರುತಿದೆ. ವಿಪತ್ಕಾಲಗಳಲ್ಲಿ ತಮ್ಮ ಪ್ರಭುಗಳಿಗೆ ಧನ ಮೂಲಕವಾಗಿಯೂ ಆಯುಧ ಮೂಲಕವಾಗಿಯೂ ಸಹಾಯ ಮಾಡಬೇಕಾದ್ದು ಎರಡನೆಯ ಧರ್ಮವಾಗಿರುತಿದೆ. ಪಾಲಕರ ವಿಷಯದೊಳು ಪ್ರಜೆಗಳು ಅತ್ಯಂತ ಭಕ್ತಿ ವಿಶ್ವಾಸಗಳುಳ್ಳವರಾಗಿ ರಾಜಕೀಯೋಪದ್ರವ ಸಮಯದಲ್ಲಿ ಅವರಿಗೆ ಸಹಾಯಕರಾಗಿರುವದು ಮೂರನೆಯ ಧರ್ಮವಾಗಿರುತಿದೆ. ಈ ಧರ್ಮರಕ್ಷಕರಾದ ಪ್ರಜೆಗಳು ಯಾವದೇಶದಲ್ಲಿ [illegible] ಚಾರ್ಯದೊಡನೆ, ವಾಗ್ದೋಷಗಳಿಗೆ ದೂರರಾಗಿ ಕಾರ್ಯಗಳಂ ನಡೆಸುತ, ಸ್ಥೈರ್ಯಧೈರ್ಯಗಳುಳ್ಳವರಾಗಿಯೂ, ಮದ್ಯಪಾನಾದಿ ದುರ್ವ್ಯಸನಾಸಕ್ತರಲ್ಲದೆಯೂ, ಸತ್ಸ್ವಲತ್ತರಾಗಿಯೂ ಇರುವರೋ, ಯಾರು ಜ್ಞಾನಸಂಪತ್ತಿಗಿಂತಲೂ, ನೀತಿಯನ್ನೇ ಪ್ರಧಾನವಾಗಿ ಭಾವಿಸುವರೋ ಆ ದೇಶದ ಪ್ರಜೆಗಳೇ ಅಧಿಕ ಬಲವುಳ್ಳವರಾಗಿರುವರೆಂದು ಪ್ರೊಫೆಸರ್ ಫ್ರಾಸ್ಟ್ ಎಂಬವರು ತಿಳಿಸಿರುತ್ತಾರೆ. ಉದಾರ ಹೃದಯವುಳ್ಳವರಾಗಿಯೂ, ತಮ್ಮ ವಿಹಿತ ಕರ್ಮಗಳನ್ನು ನಿಷ್ಕಲ್ಮಷವಾಗಿ ತಿಳಿಯತಕ್ಕವರಾಗಿಯೂ, ತಮ್ಮ ಹಕ್ಕು ಸ್ವಾತಂತ್ರ್ಯಗಳ ಸ್ವರೂಪಗಳನ್ನರಿತು ಅವು ಚೆನ್ನಾಗಿ ಪೋಷಿಸಿಕೊಳ್ಳುವದಕ್ಕೆ ಶಕ್ತರಾಗಿಯೂ ಇರುವಂತಾ ಜನರು ಪಡೆದಿರುವ ರಾಜ್ಯವೇ ಘನತರವಾದ ರಾಜ್ಯವಾಗಿ ಶತ್ರುಗಳಿಗೆ ಜಯಿಸಕೂಡದ್ದಾಗಿರುವದೆಂದು ಸರ್ ವಿಲಿಯಂ ಜೋನ್ಸ್‌ಯವರು ವ್ಯಕ್ತಪಡಿಸಿರುತ್ತಾರೆ. ಒಂದು ದೇಶಾಭಿವೃದ್ಧಿಗೆ ಅದರ ಪ್ರಜೆಗಳ ಪರಿಶ್ರಮವು, ಪರಾಕ್ರಮವು, ಪ್ರಾಮಾಣಿಕತೆಯು, ಏಕಮತ್ಯವು, ಸ್ವೀಯಾಭಿಮಾನವು, ಇವುಗಳೇ ಅತ್ಯಂತಾಪೇಕ್ಷಿತವಾಗಿರುತಿದೆ. ಪ್ರಜೆಗಳ ಅಜಾಗರೂಕತೆ, ಸ್ವಾರ್ಥಪರತೆ, ದುಶ್ಶೀಲತೆ, ಇವುಗಳ ಸಮ್ಮೇಳನವೇ ದೇಶಕ್ಕೆ ಕಾರಣವಾದವೆಂಬದಾಗಿ ಡಾಕ್ಟರ್‌ಸ್ಮೈಲ್ ಎಂಬವರು ಅಭಿಪ್ರಾಯಪಟ್ಟಿರುತ್ತಾರೆ. ಆದದರಿಂದ ಇಂಡಿಯಾ ದೇಶೀಯರೆಲ್ಲರೂ ತಮ್ಮದೇಶಾಭಿವೃದ್ಧಿಗೆ ಕಾರಣಭೂತಗಳಾದ ವಿಷಯಗಳಂಕಂಡು ಹಿಡಿಯಬೇಕಾದ್ದು ಆವಶ್ಯಕವಾಗಿರುತಿದೆ. ನಿರ್ಮಲವಾದ ಭಾವನೆ, ಉತ್ತಮವಾದ ಉದ್ದೇಶ್ಯಗಳು, ಉದಾರವಾದ ಹೃದಯವು, ದೈವಭೀತಿಯುಳ್ಳ ಮತ್ತು ಪರಿಶುದ್ಧವಾದ ವರ್ತನಗಳುಳ್ಳವರಾಗಿ ಅನ್ಯರು ತಮ್ಮ ಮಾರ್ಗವನ್ನನುಸರಿಸಲಿಕ್ಕೆ ಗುರಿಯಾಗಿ ಇರತಕ್ಕದ್ದು. ನಿಶ್ಚಲವಾದ ನಿರ್ಣೀತಾಭಿಪ್ರಾಯದೊಡನೆ ಯಾರು ಧರ್ಮಬದ್ಧರಾಗಿರುವರೊ, ಅಂತರ್ಬಹಿಶ್ಶುದ್ಧಿಯೊಡನೆ ಯಾರು ದುರಾಶಾದಿದುರ್ಗುಣಗಳಂನಿರೋಧಿಸಲಿಕ್ಕೆ ಸಮರ್ಥರಾಗುವರೊ, ದುರ್ಧರಗಳಾದ ಎಂತಾಕಷ್ಟಗಳನ್ನಾದರೂ ಯಾರು ಸಂತೋಷದೊಡನೆ ಅನುಭವಿಸುವರೊ, ಎಂತಾ ವಿಪತ್ತಿನೊಳಾದರೂ ಯಾರು ಸ್ಥೈರ್ಯವಂ ಬಿಡದೆ ಉಪಶಾಂತರಾಗಿರುವರೊ, ಸತ್ಯ, ಧರ್ಮ, ದೈವ ಈಮೂರು ವಿಷಯಗಳಲ್ಲಿ ಯಾರಹೃದಯವು ನಿಶ್ಚಲವಾಗಿರುವದೊ ಅಂತವರೇ ಮಹಾಪುರುಷರೆಂದು ಮೆ॥ ಚಾನಿಂಗ್ ಎಂಬವರು ಬರೆದಿರುತ್ತಾರೆ ಆದದರಿಂದ ಹಿಂದೂವಾದವರೆಲ್ಲರು ಮೇಲೆ ಕಂಡ ಶ್ಲಾಘ್ಯಗಳಾದ ಉತ್ತಮಗುಣಗಳಂಪಡೆದು ದೇಶಕ್ಕೂ ಅದರ ಪಾಲಕರಿಗೂ ಪ್ರಯೋಜಕರಾಗಬೇಕಾದದ್ದೇ ಪ್ರಧಾನಧರ್ಮವಾಗಿರುತಿದೆ ಎಂಬದು.

MORAL GEMS FROM THE MAHABHARATA.
ಮಹಾಭಾರತ ನೀತಿರತ್ನಾವಳಿ.

The Hindu Excelsior Series No. IX

PRECEPTORS—I.

ಗುರುಗಳು—೧.

(ಜೂಲೈ ೧೩ನೇ ತಾರೀಖಿನ ಪತ್ರಿಕೆಯಿಂದ)

ಶ್ಲೊ॥ ಅತಸ್ಸ್ವಪ್ರತಿರುಚ್ಛ್ರಸ್ವೋಮಾತಾ
ಪಿತೃಭ್ಯೋಪಿ ಪೂಜನಃ । ಅತಃಪರನು
ಹಿತಧರ್ಮಂನಾನ್ಯಂಪಶ್ಯಾಮಿಕಶ್ಚನ V

ಅ॥ ಲೋಕದಲ್ಲಿ ಮಾತಾಪಿತೃಗಳ ಸೇವೆಗಿಂತ ಶ್ರೇಷ್ಠವಾದ ಧರ್ಮ ಬೇರೊಂದನ್ನು ಕಾಣೆವಾಗಿ ಅದುಮೋಸಹೋಗದೆ ಮಾಡಿದರೆ ಅದರಿಂದ ಸಕಲ ಧರ್ಮ ಫಲಗಳೂ ತಪ್ಪದೆ ಸಿದ್ಧಿಸುವದು.

ಶ್ಲೊ॥ ಮುಚ್ಯತೇಬಂಧನಾತ್ಪುಷ್ಪಂ ಫಲಂ
ವೃಕ್ಷಾತ್ಪ್ರಮುಚ್ಯತೆ ಕ್ಲಿಶ್ಯನ್ನಪಿಸು
ತಸ್ನೆಹೈಃಪಿತಾಪುತ್ರಂನಮುಂಚತಿ॥

ಅ॥ ಪುಷ್ಪಗಳು ಅವುಗಳ ತೊಟ್ಟುಗಳಿಂದ ಬಿದ್ದರೂ, ಫಲಗಳು ವೃಕ್ಷಗಳಿಂದುದುರಿದರೂ, ಮನನೊಂದವನಾದ ತಂದೆಯು ಪುತ್ರವಾತ್ಸಲ್ಯದಿಂ ಬದ್ಧನಾಗಿ ತನ್ನ ಮಗನಂ ತೊರೆಯಲಾರನು, ಅಂದರೆ ಪುತ್ರನೆಷ್ಟು ಗುಣವಿಹೀನನಾಗಿ ತನ್ನ ತಂದೆಗೆ ವಿಶ್ವಾಸವನ್ನುಂಟುಮಾಡತಕ್ಕವನಾಗಿದ್ದರೂ ಅವನಲ್ಲಿರುವ ವಾತ್ಸಲ್ಯವು ಪ್ರಬಲವಾದ್ದರಿಂದ ಅವನು ಯಾವ ಸಂದರ್ಭದಲ್ಲಿಯೂ ತಂದೆಯಾದವನು ಅಗಲಿರಲಿಕ್ಕೆ ಸಮ್ಮತಿಸಲಾರನೆಂದು ಭಾವವು.

ಶ್ಲೊ॥ ಗುರೂನಭ್ಯರ್ಚ್ಯಸರ್ವಂತೆತಯಾ
ಷಾಯುಶಕೀರ್ತಿಯೂ । ಗುರುಭ್ಯಆಸ
ನುದೆಯಮಭಿವಾದ್ಯಾಭಿಪೂಜ್ಯ[illegible]॥

ಅ॥ ಗುರುಗಳಂ ಪೂಜಿಸುವದರಿಂದ ಆಯುಸ್ಸೂ, ಕೀರ್ತಿಯೂ, ಸಂಪತ್ತೂ ವೃದ್ಧಿಯನ್ನೈದುವವು. ಆದದರಿಂದ ಗುರುಜನರು ಅರ್ಘ್ಯಪಾದ್ಯಾಸನಾದಿಗಳಂ ಸತ್ಕರಿಸಿ ನಮಸ್ಕರಿಸಿದರೆ ಸಕಲಾಭೀಷ್ಟಗಳೂ ಕೈಗೂಡುವವು.

ಶ್ಲೊ॥ ಲಭತೆಬಲುಪಾಪೀಯಾನ್ನರಸ್ಸಪಿ
ಯದಾಗಿಹ । ಅಪ್ರಿಯಸ್ಯಹಿಪಥ್ಯಸ್ಯ
ವಕ್ತಾಶ್ರೋತಾಹಿದುರ್ಲಭಃ॥೧॥

ಅ॥ ಮನುಷ್ಯನಿಗೆ ಪಾಪಾತ್ಮನಾದ ಪ್ರಿಯವಾದಿ ಯೊಂದುವೇಳೆ ದೊರಕಿದರೂ ದೊರಕಬಹುದು, ಪರಂತು ಅನಿಷ್ಟವಾಗಿದ್ದಾಗ್ಯೂ ಹಿತವಾದದ್ದನ್ನೇ ನುಡಿಯತಕ್ಕವನೂ ಕೇಳತಕ್ಕವನು ಸಹ ಬಹಳ ದುರ್ಲಭವೆಂದು ಭಾವವು.

ಶ್ಲೊ॥ ಶತ್ರೋರಪಿಗುಣಾವಾಚ್ಯಾದೋಷಾ
ವಾಚ್ಯಾಗುರೋರಪಿ । ಸರ್ವದಾಸರ್ವಯ
ತ್ನೇನಪುತ್ರೇಶಿಷ್ಯೇಹಿತಂವದೆತ್॥೧೧॥

ಅ॥ ನಮ್ಮ ಶತ್ರುವಾದವನಲ್ಲಿ ಶ್ಲಾಘ್ಯ ಗುಣಗಳು ಕಂಡುಬಂದಲ್ಲಿ ಅವು ನಾವು ಸರ್ವಪ್ರಕಾರದಿಂದಲೂ ಹೊರಪಡಿಸಿ ಪ್ರಶಂಸಿಸತಕ್ಕದ್ದು. ಹಾಗೆಯೇ ಪೂಜ್ಯನಾದ ಗುರುವಿನಲ್ಲಿ ದೋಷಗಳು ಕಂಡುಬಂದಾಗ್ಯೂ ಅವು ವ್ಯಕ್ತಪಡಿಸಿ ಕ್ರಮಪಡಿಸಬೇಕಾದ್ದು ಕರ್ತವ್ಯವಾಗಿರುತಿದೆ. ಆದದರಿಂದ ಯಾವಾಗಲೂ ಗುಣದೋಷ ವಿಮರ್ಶಕನಾದ ಪುರುಷನು ಪೂಜ್ಯಾಪೂಜ್ಯ ಮಿತ್ರಾಮಿತ್ರ ತಾರತಮ್ಯಗಳಂ ಗಣಿಸದೆ ಯೋಗ್ಯವಾದವಂ ಕೊಂಡಾಡುತ ನಿಂದ್ಯವಾದವಂ ತಿರಸ್ಕರಿಸುತ ಹಿತವನ್ನೇ ಅನವರತ ನುಡಿಯುತಲಿರುವನಾಗಿ ಯಾವಾಗಲೂ ಪುತ್ರರಿಗೂ ಶಿಷ್ಯರಿಗೂ ಹಿತವನ್ನೇ ನುಡಿಯುತಲಿರಬೇಕೆಂದು ಭಾವವು.

ಶ್ಲೊ॥ ಆಚಾರ್ಯಮೃತ್ವಿಜಬ್ಜ್ಞನಗುರೂ
ವೃದ್ಧಜನಂತಥಾ । ಪ್ರಾಣನೊಪಿವ
ಮನ್ಯಂತೆಭವಂತೀಹಚರಾಕ್ಷಸಾಃ॥

ಅ॥ ಪುರೋಹಿತರನ್ನೂ, ಯಾಜ್ಞಿಕರಾದವರನ್ನೂ, ಗುರುಗಳನ್ನೂ, ವೃದ್ಧರನ್ನೂ ಯಾರು ಅವಮಾನಪಡಿಸುವರೋ ಅವರೀಲೋಕದಲ್ಲಿ ರಾಕ್ಷಸಜನ್ಮವನ್ನೆತ್ತಿ ಪ್ರಾಣಿಹಿಂಸಕರಾಗುವರು. ಆದದರಿಂದ ಗುರುನಿಂದೆಯು ಯಾವಾಗಲು ಮಹಾದೋಷವಾದದ್ದೆಂದರಿಯತಕ್ಕದ್ದು.

ಶ್ಲೊ॥ ಸರ್ವೆಷಾಮೆವಭಾವಾನಾಂಪ್ರತಿ
ಮಾತೃಹಿವಿದ್ಯತೆ । ನಚಮಾತೃಪ್ರಭಿ
ಶಗ್ತಾನಾಂವೆಕ್ಷ್ಯಶ್ಚನವಿದ್ಯತೆ॥

ಅ॥ ಲೋಕದಲ್ಲಿ ಯಾರುಪಾಪಕ್ಕಾದರೂ ಪ್ರತೀಕಾರವುಂಟು. ತಾಯಿಯಾದವಳು ಸಂತಾಪದೊಡನೆ ಕೊಡುವಶಾಪಕ್ಕೆ ಯೆಂದಿಗೂ ಪ್ರತೀಕಾರವಿಲ್ಲವು. ಅಂದರೆ ಮಾತೃಕೋಪವು ಎಲ್ಲದಕ್ಕಿಂತಲೂ ಪ್ರಬಲತರ ವಾದದರಿಂದ ಶ್ರೇಯೋಭಿಲಾಷಿಯಾದ ಪುರುಷನು ಯಾವಾಗಲೂ ಮಾತೃದ್ವೇಷಕ್ಕೆ ಪಾತ್ರನಾಗಬಾರದು. (ಸಶೇಷ.)

Occasional Notes.
ನೈಮಿತ್ತಿಕ ವಿಷಯನ್ಯಾಸ.

Retirement.—ದಿವಾನ್ ಬಹದೂರ್ ರಘುನಾಥರಾಯರವರು ಮದರಾಸ್ ಗವರ್ನಮೆಂಟಿನ ಕರಿಯಿಂದ ನಿರ್ವೃತ್ತಿಸುಖವು ಪಡೆಯುವದಕ್ಕೆ ಸದರೀ ಸರ್ಕಾರದವರು ಸಮ್ಮತಿಸಿ ಹುಕುಂ ಕೊಟ್ಟಂತೆ ಅಲ್ಲಿನ ಪತ್ರಿಕೆಯೊಂದರ ಮೂಲಕ ತಿಳಿಯಲಾದೆವು.

A recommendation disallowed.—ತಿರುವಾಂಕೂರು ಸರ್ಕಾರದವರು ಅಲ್ಲಿನ ಚೀಫ್ ಕೋರ್ಟ್ ಜಡ್ಜಿಯವರ ತಲಬನ್ನು ೧,೫೦೦ ರೂಪಾಯಿಗಳಿಗೆ ಹೆಚ್ಚಿಸಬೇಕೆಂದು ಮದರಾಸ್ ಗವರ್ನಮೆಂಟಿಗೆ ಮಾಡಿದಶಿಫಾರಸ್ಸನ್ನು, ಹಾಗೆ ಮಾಡುವದಕ್ಕೆ ಆವಶ್ಯಕತೆ ಕಂಡುಬರುವದಿಲ್ಲವೆಂದು ಸಮೂಚಿಸಿ ಅವರು ನಿರಾಕರಿಸಿದರೆಂದು ತಿಳಿಯಬರುತಿದೆ.

Offer of a liberal subscription.—ಒಬ್ಬರು ಪಾರ್ಸಿ ಮತ್ತೊಬ್ಬರು ಹಿಂದು, ಈ ದೊಡ್ಡಮನುಷ್ಯರಿಬ್ಬರೂಸೇರಿ ಇದರಡಿ ತಿಳಿಸಲ್ಪಡುವ ಷರತ್ತುಗಳಮೇಲೆ, ಲೇಡೀ ಡಫರಿನ್‌ಯವರಿಂದ ಸ್ಥಾಪಿಸಲ್ಪಟ್ಟಿರುವ ಫಂಡಿಗೆ, ಮೊದಲನೇಯವರು ೩,೦೦೦, ಎರಡನೇ ಯವರು ೨,೦೦೦ ರೂಪಾಯಿಗಳು ಚಂದಾ ಮಾಡುವದಾಗಿ ತಿಳಿಸಿದರಂತೆ, ಸದರೀ ಷರತ್ತುಗಳು ಯಾವವಂದರೆ, ಫಾರ್ಸೀಯವರು ಹೇಳುವದು—ಹೆಂಗಸರಿಗೂ ಮಕ್ಕಳಿಗೂ ಉಪಯೋಗಿಸುವಂತೆ ಸೂರತಿನಲ್ಲಿ ಒಂದು ಆಸ್ಪತ್ರೆಯನ್ನು ಸ್ಥಾಪಿಸಿ, ಅದರಲ್ಲಿ ಮಾಹೆಯಾನಾ ೧೫೦ ರೂಪಾಯಿಗಳ ತಲಬಿನಮೇಲೆ ಡಾಕ್ಟರ್ ಪರೀಕ್ಷೆ ಕೊಟ್ಟಿರುವ ಒಬ್ಬ ಫಾರ್ಸೀಜಾತಿ ಹೆಂಗಸನ್ನು ಇಡತಕ್ಕದ್ದು ಮತ್ತು ಅದಕ್ಕೆ ತನ್ನ ಹೆಸರಿಡತಕ್ಕದ್ದೆಂಬದು.

The chief medical officer of Baroda.—ಲಂಡನ್ ಪಟ್ಟಣದಲ್ಲಿನ ವೈದ್ಯಶಾಸ್ತ್ರ ಪಾಠಶಾಲೆಯಲ್ಲಿ ವಿದ್ಯಾ ಸಂಗ್ರಹಮಾಡಿ ಡಾಕ್ಟರ್ ಪರೀಕ್ಷೆಯಂಕೊಟ್ಟು ಪ್ರಶಸ್ತಿಯಂ ಪಡೆದು ಬಂದ ಕೆ. ನಸರ್ವಾನ್‌ಜಿ ಬಹಮಾರಿಜಿ ಎಂಬವರನ್ನು ಬರೋಡೆ ಸಂಸ್ಥಾನದಲ್ಲಿ ಮುಖ್ಯವಾದ ಮೆಡಿಕಲ್ ಆಫೀಸರಾಗಿ ನೇಮಕಮಾಡಬೇಕೆಂದು ಯೋಚಿಸುತಲಿರುವಂತೆ ಗುಜರಾತಿ ದರ್ಪಣವೆಂಬ ಪತ್ರಿಕೆ ತಿಳಿಸುತಿದೆ. ಈಸಂಸ್ಥಾನದಲ್ಲಾದರೂ, ಸ್ವಜ್ಞಾನ

ಸ್ಥಾನಾಕರಿಗಳಿಗೆ ಯೂರೋಪಿಯರ್ನರೂ ಯೂರೇಶಿಯರ್ನರೂ ತರಲ್ಪಡುತಲಿದ್ದಾಗ್ಯೂ ಅಲ್ಲಿಗೂ ತೃಪ್ತಿಯಿಲ್ಲದೆ ಸದರೀ ಎರಡು ಬಗೆಯವರೂ ತಮ್ಮ ಅಭಿವೃದ್ಧಿ ವಿಷಯದಲ್ಲಿ ಈ ಸರ್ಕಾರದವರು ಔದಾಸೀನ್ಯಭಾವವು ವಹಿಸಿರುತ್ತಾರೆಂದು ದೂರಿಯಿಡುತಲಿದ್ದಾರೆ.

ನೋಟೀಸ್.

ಈ ಪತ್ರಿಕೆಯ ಚಂದಾದಾರರಾಗಿಯೂ ಬಾಕೀದಾರರಾಗಿಯೂ ಇರುವ ದೊಡ್ಡಮನುಷ್ಯರೆಲ್ಲರಿಗೂ ಇದರಿಂದ ನಾವುತ್ತುತಪಡಿಸುವದೇನೆಂದರೆ- ಸರ್ ೧೮೭೭ನೇ ಅಕ್ಟೋಬರ್ ತಿಂಗಳ ಮೊದಲು ೧೮೮೭ನೇ ಡಿಸೆಂಬರ್ ಆಖೈರ್ ವರಿವಿಗೆ ಸುಮಾರು ನಾಲ್ಕು ವರ್ಷಗಳಕಾಲ ಅವಿಚ್ಛಿನ್ನವಾಗಿ ವಸೂಲಾಗುತ ಬಂದ ಚಂದಾ ದರವನ್ನು ಈ ಸಾಲಿನಲ್ಲಿ ಕಡಿಮ್ಮೆ ಮಾಡುವವರಲ್ಲಿ ನಮಗುಂಟಾದ ಉದ್ದೇಶ್ಯಗಳನ್ನು ಸಂವತ್ಸರಾರಂಭದಲ್ಲೇ ನಾವು ತಿಳಿಸಿರುತ್ತೇವೆ. ಈ ಸಂವತ್ಸರದಲ್ಲಿ ೭ನೇ ತಿಂಗಳು ಕಳೆಯುತಬಂದಾಗ್ಯೂ ಇದುವರಿವಿಗೆ ಚಂದಾ ಮೊಬಲಗನ್ನು ಕಳುಹಿಸದೆ ಇರುವುದಾದರು ಸಂವತ್ಸರಾರಂಭದಲ್ಲಿ ನಾವು ತಿಳಿಸಿದ ಕರಾರಿನ್ನಾಗ ಳಗೆ ಸಿಗೇಕೊಟ್ಟಂತೆ ತೋರದಿಲ್ಲವಾಗಿ, ಚಂದಾ ಮೊಬಲಗನ್ನು ಅತ್ಯಾರ್ಕಸ್ ಕೊಟ್ಟವರು ಮಾತ್ರವೇ ಈ ಸಾಲಿನಲ್ಲಿ ಚೇಂಜ್ ಕು ದರಪ್ರಕಾರ ಪತ್ರಿಕೆಯು ಪಡೆಯಬಾಧ್ಯರಾಗುವ, ಮಿಕ್ಕವರೆಲ್ಲರೂ ಹಿಂದಿನಸಾಲಿನವರಿವಿಗೆ ನಡೆದು ಬಂದದರಪ್ರಕಾರ ಚಂದಾಮೊಬಲಗನ್ನು ಕೊಡಲುಬದ್ಧರಾಗಿರುತ್ತಾರೆಂದು ಖಂಡಿತವಾಗಿ ತಿಳಿಯತಕ್ಕದ್ದು. ಮತ್ತು ಈ ತಿಂ ೩೧ನೇ ತಾರೀಖಿನಲ್ಲಿ ಬಾಕೀ ನಮೂದಿನಿಂದ ಅಂಚೆದ್ವಾರಾ ನಾವು ಬರೆದ ಕಾಗದಗಳಿಗೆ ಇದುವರಿವಿಗೆ ಜವಾಬ ಕೊಡದೆಯೂ ಬಾಕೀಯನ್ನು ಕಳುಹಿಸದೆಯೂ ಇರುವಂತವರಿಗೆಲ್ಲ ಮುಂದಿನ ತಿಂಗಳಿಂದ ಈ ಪತ್ರಿಕೆಯು ರವಾನಿಸಲ್ಪಡಲಾರದು. ಮತ್ತು ಇದುವರಿವಿಗೆ ಬಾಕೀ ಇರತಕ್ಕವರೆಲ್ಲರು ಅವರ ವಸೂಲೀ ವಿಷಯದಲ್ಲಿ ನಮಗೆ ವ್ಯರ್ಥವಾದ ಅರ್ಥ ವ್ಯಯವನ್ನೂ ಶ್ರಮವನ್ನೂ ಉಂಟು ಮಾಡಲಾರರೆಂದು ನಂಬುತ್ತೇವೆ.

ತಾ ೨೩-೭-೮೮. ಪ್ರೊಪ್ರೈಟರ್.

LOCAL AND PROVINCIAL NEWS.
ಸ್ವದೇಶ ಮತ್ತು ತಾಲ್ಲೂಕುಜಾತಿವೃತ್ತಾಂತಗಳು

—:o:—

Departure of the British Resident. ಈಸಂಸ್ಥಾನದ ಬ್ರಿಟಿಷ್ ರೆಸಿಡೆಂಟರವರು ಮದರಾಸ್ ಗವರ್ನರವರನ್ನು ಎದುರ್ಗೊಳ್ಳುವದಕ್ಕಾಗಿ ಕಳೆದ ಶುಕ್ರವಾರದದಿನ ಮೈಸೂರಿಗೆ ಪ್ರಯಾಣವಾದರು.

The weather.—ಗತವಾರದಮೊದಲು ಮೋಡವಾಗುತ ಸೂರ್ಯರಶ್ಮಿಯಿಲ್ಲದೆ ಥಂಡಿ ಅಧಿಕವಾಗಿದೆ ಮಳೆಯ ಪ್ರಸ್ತಾವವೇಯಿಲ್ಲವು ಜನಗಳು ಕ್ಷಾಮಪ್ರಾಪ್ತವಾಗುವದೋಯೆಂಬ ಅನುಮಾನಪೀಡಿತರಾಗಿದ್ದಾರೆ. ಅನೇಕ ಕಡೆಗಳಲ್ಲಿ ವ್ಯವಸಾಯಕೆಲಸಗಳು ತಾಮಸವಾಗಿ ನಿಂತುಹೋಗಿವೆ ಪದಾರ್ಥಗಳನಿರಖ್ ಜಾಸ್ತಿಯಾಗುತಬರುತಿವೆ.

The Governor of Madras.—ಮದರಾಸ್ ಗವರ್ನರಾದ ಲಾರ್ಡ್ ಕನ್ನಿಮಾರಾಯವರು ನಾಳೆಯದಿನಮಧ್ಯಾಹ್ನಸುಮಾರು ಮೂರುಘಂಟೆಗೆ ಸ್ಪೆಷಲ್ ಟ್ರೈನಿನಲ್ಲಿ ಮೈಸೂರಿಂದ ಇಲ್ಲಿಗೆ ದಯಮಾಡುವರು. ಸದರೀಯವರನ್ನು ಉಚಿತ ಮರ್ಯಾದೆಗಳೊಡನೆ ಬರಮಾಡಿಕೊಳ್ಳುವದಕ್ಕೆ ತಕ್ಕ ಏರ್ಪಾಡುಗಳೆಲ್ಲವು ನಡೆಯುತಲಿವೆ.

NEWS LETTERS.
ವೃತ್ತಾಂತಕುತಿ.

ಮೇಲುಕೋಟೆ, ತಾ॥ ೧೯ನೇ ಜೂಲೈ ೧೮೮೮.

ಶ್ರೀಮಾನ್ ಪಂಡಿತ ಭಾಷ್ಯಾಚಾರ್ಯರವರು ಈ ತಿಂಗಳು ೧೬ನೇ ತಾರೀಖಿನಲ್ಲಿ ಶ್ರೀ ಯಾದವಾದ್ರಿಗೆ ಭಗವಾತ್ಸೇವಾರ್ಥವಾಗಿ ದಯಮಾಡಿ ಇಲ್ಲಿನವಿದ್ಯಾಶಾಲಾ ಪಂಡಿತರುಗಳಿಂದಲೂ, ದೇವಾಲಯಾಧಿಕಾರಿಗಳು ಮುಂತಾದವರಿಂದಲೂ, ತುಂಬಾ ಮರ್ಯಾದೆಯಿಂದ ಕಾಣಲ್ಪಟ್ಟರು. ಇವರು ೧೭ನೇ ತಾರೀಖು ಪ್ರಾತಃಕಾಲ ಶ್ರೀಯವರ ದೇವಸ್ಥಾನಕ್ಕೆ ದಯಮಾಡಿ ಭಗವತ್ಸೇವಾದಿಗಳನ್ನು ನೆರವೇರಿಸಿಕೊಂಡು ಆದಿವಸವೆಲ್ಲಾ ಇಲ್ಲಿನ ವಿಶೇಷ ವಿಷಯಗಳನ್ನು ಕೇಳಿ ತಿಳಿದುಕೊಳ್ಳುತ ಪಂಡಿತ ಸಲ್ಲಾಪಾದಿಗಳಿಂದ ಹರ್ಷಗೊಂಡಿರುತಿದ್ದರು. ಮಾರನೇ ದಿನ ಶ್ರೀಮಾನ್ ಪಂಡಿತರು ಇಲ್ಲಿನ ಸಂಸ್ಕೃತ ಪಾಠಶಾಲಾ ಸರಸ್ವತೀ ಭಂಡಾರಕ್ಕೆ ದಯಮಾಡಿ ಪಾಠಶಾಲಾ ವಿದ್ಯಾರ್ಥಿಗಳನ್ನು ಕಾವ್ಯನಾಟಕಾಲಂಕಾರಗಳಲ್ಲಿ ಪರೀಕ್ಷಿಸಿ ಸಂತುಷ್ಟರಾಗಿ ಪಾಠಶಾಲೆಗೆ ತೃಪ್ತಿಕರವಾದ ಬಹುಮಾನ ಪತ್ರಿಕೆಯನ್ನು ಕೊಟ್ಟರು. ತಾರೀಖು ೧೯ರಲ್ಲು ಇಲ್ಲಿನ ಬಾಲಿಕಾ ಪಾಠಶಾಲೆಯನ್ನು ಪರೀಕ್ಷಿಸಿ ಬಾಲೆಯರನ್ನು ಬಹುಮಾನದಿಂದಲೂ, ಹಿತೋಪದೇಶದಿಂದಲೂ, ಪ್ರೋತ್ಸಾಹಪಡಿಸಿದರು. ಅನಂತರ ಗವರ್ನಮೆಂಟ್ ಕನ್ನಡ ಪಾಠಶಾಲೆಗೆ ದಯಮಾಡಿ, ಅಲ್ಲಿನ ವಿದ್ಯಾರ್ಥಿಗಳಂ ಪರೀಕ್ಷಿಸಿ ಅವರ ವೈಲಕ್ಷಣ್ಯವನ್ನು ನೋಡಿ ಸಂತೋಷಿಸಿ ಅಲ್ಲಿ ಬಾಲಕರಿಗೆ ಲೌಕಿಕ ದೃಷ್ಟಾಂತಗಳೊಡನೆ ಸಮುಚಿತವಾದ ಕನ್ನಡ ಶಬ್ದಗಳಿಂದ ನೀತಿ ಬೋಧಕವಾದ ಉಪದೇಶವಂ ಮಾಡಿ ಸ್ಕೂಲಿನ ಅಭಿವೃದ್ಧಿಸ್ಥಿತಿಗೆ ಕಾರಣರಾದ ಹೆಡ್ಮಾಸ್ಟರ್ ರಾಮಯ್ಯಂಗಾರ್ರನ್ನು ಪ್ರಶಂಸಿಸಿದರು. ಅನೇಕ ಸ್ಥಳಿಕ ವೈದಿಕ ವಿದ್ವಾಂಸರುಗಳಿಂದಲೂ, ದೊಡ್ಡಮನುಷ್ಯರಿಂದಲೂ, ಭರಿತವಾಗಿದ್ದ ಸಂಸ್ಕೃತ ಪಾಠಶಾಲಾ ಸರಸ್ವತೀ ಭಂಡಾರದ ಸಭೆಗೆ ಮೂರುಘಂಟೆಗೆ ಭಾಷ್ಯಾಚಾರ್ಯರವರು ದಯಮಾಡಿದರು. ಅಲ್ಲಿ ಪಾಠಶಾಲಾಧ್ಯಕ್ಷರು ಶ್ರೀ ಉ॥ ಕುಪ್ಪಣ್ಣಯ್ಯಂಗಾರ್ಯರ ಪ್ರಾರ್ಥನೆಯಂತೆ ವಯೋವೃದ್ಧರಾಗಿಯೂ, ಜ್ಞಾನವೃದ್ಧರಾಗಿಯೂ ಇರುವ ಶ್ರೀ॥ ಉ॥ ನಾಲ್ಕನೇ ಸ್ವಾಮಿ ನರಸಿಂಹಾಚಾರ್ಯರವರು ಸಭಾಧ್ಯಕ್ಷತೆಯನ್ನು ವಹಿಸಿದರು. ಆಮೇಲೆ ಸಂಸ್ಕೃತಪಾಠಶಾಲೆಯ ಎರಡನೆಯ ಪಂಡಿತರಾದ ಅಕ್ಕಾರಕನ್ನಿ ರಾಮಾನುಜಾಚಾರ್ಯರು ಸಭಾಧ್ಯಕ್ಷರ ಆಜ್ಞಾನುಸಾರ ಸಮುಚಿತವಾದ ಸಂಸ್ಕೃತ ಶಬ್ದಗಳಿಂದ ಪ್ರಕೃತ ಸಭೆಯ ಉದ್ದೇಶವನ್ನು ಎಲ್ಲರಿಗೂ ಅರುಹಿದರು. ಕೂಡಲೇ ಶ್ರೀಮಾನ್ ಪಂಡಿತ ಭಾಷ್ಯಾಚಾರ್ಯರು ಸಂಸ್ಕೃತದಲ್ಲಿ ಅತಿ ಗಂಭೀರವಾಗಿ ಆರ್ಯಮತದ ಉತ್ಪತ್ತಿ ಮೊದಲ್ಗೊಂಡು ಇದುವರಿಗಿನ ಎಲ್ಲ ಸಂಗತಿಗಳನ್ನೂ ವಿಶದವಾಗಿ ೨ ಘಂಟೆಯ ವರಿವಿಗೆ ಉಪನ್ಯಾಸಿಸಿ ಇವರ ವಿಷಯದಲ್ಲಿ ಬೇರೆ ಅಭಿಪ್ರಾಯಗೊಂಡಿದ್ದ ಅನೇಕ ವೈದಿಕ ಪಂಡಿತರುಗಳಿಗೆ ಇವರು ಪರಮಾಸ್ತಿಕರೆಂಬ ಭಾವವನ್ನು ನೆಲೆಗೊಳಿಸಿ ಅನಂತರ ದ್ರಾವಿಡ ಭಾಷೆಯಿಂದ ಎಲ್ಲರಿಗೂ ತಿಳಿಯುವಂತೆ ಇನ್ನೂ ಕೆಲವು ಇತರ ವಿಷಯಗಳನ್ನು ತಿಳಿಸಿದರು. ಅನಂತರ ಪಂಡಿತ ರಾಮಾನುಜಾಚಾರ್ಯರು ಆನಂದ ಪರವಶರಾದ ಸಭಿಕರ ಪ್ರೇರಣೆಯಿಂದ ಎದ್ದು, ಈ ಪಂಡಿತವರ್ಯರ ಉಪನ್ಯಾಸದಿಂದ ಸಮಸ್ತರಿಗೂ ಉಂಟಾದ ಸಂತೋಷಕ್ಕೆ ಪಾರವಿಲ್ಲವೆಂತಲೂ, ಇನ್ನು ಅನೇಕಾವರ್ತಿ ಇವರ ಉಪನ್ಯಾಸವನ್ನು ಕೇಳಲು ಕುತೂಹಲ ವುಳ್ಳವರಾಗಿದ್ದಾರೆಂತಲೂ, ಪುನಃ ನಾಳೆಯದಿನ ವೇದಾಂತ ವಿಚಾರವಾದ ಉಪನ್ಯಾಸವನ್ನು ಇದೇ ರೀತಿಯಾಗಿ ನಡಿಸಿ ಎಲ್ಲರ ಮನಸ್ಸಂತೋಷ ಪಡಿಸಬೇಕೆಂತಲೂ ಪ್ರಾರ್ಥಿಸಿ ತಿಳಿಸಿದರು. ೧೩ನೇ ತಾರೀಖಿನಲ್ಲಿ ಇಲ್ಲಿನ ಪಾಂಡಿತ್ಯ ವರ್ಧನೀ ಸಭೆಯವರ ಪ್ರಾರ್ಥನೆಯ ಮೇರೆ ಶ್ರೀಮಾನ್ ಭಾಷ್ಯಾಚಾರ್ಯರವರು ದೀಪಾಲಂಕಾರಗಳಿಂದ ಪರಿಶೋಭಿತವಾಗಿದ್ದ ಸರಸ್ವತೀ ಭಂಡಾರಾಸ್ಥಾನಕ್ಕೆ ಸಾಯಂಕಾಲ ೮ ಘಂಟೆಗೆ ಸರಿಯಾಗಿ ಬಂದವರು ಈ ಸಭೆಯಲ್ಲಿ ಸಂಸ್ಕೃತ ಪಾಠಶಾಲಾಧ್ಯಕ್ಷರು ಶ್ರೀಮಾನ್ ಸ್ವಾನಿಕಂ ಕುಪ್ಪಣ್ಣಯ್ಯಂಗಾರ್ಯರವರು ಅಗ್ರಾಸನವನ್ನಲಂಕರಿಸಿದರು. ಒಡನೆ ಪಾಂಡಿತ್ಯವರ್ಧನೀ ಸಭಾ ವೈಸ್‌ಪ್ರಸಿಡೆಂಟರಾದ ಮ॥ರಾ॥ ಶ್ರೀ॥ ಕಂಭಂ ನರಸಿಂಹಾಚಾರ್ಯರವರ ಅಪ್ಪಣೆಮೇರೆ ಸದರೀ ಸಭಾಕಾರ್ಯದರ್ಶಿಯಾದ ಯಂ. ಜಿ. ಶಾಮಯ್ಯಂಗಾರ್ರವರು ಸಭೆಯ ಉದ್ದೇಶವನ್ನು ಎಲ್ಲರಿಗೂ ಕನ್ನಡಭಾಷೆಯಲ್ಲಿ ಉಪನ್ಯಾಸವಾಡಿ ಹೇಳಿದರು. ಬಳಿಕ ಶ್ರೀಮಾನ್ ಭಾಷ್ಯಾಚಾರ್ಯರವರು ನಿಂತು, ನೊಡಲೇ ಪಂಡಿತ ಶ್ರೀ॥ ಉ॥ ಪುರೋಹಿತ ತಿರುನಾರಣಯ್ಯಂಗಾರ್, ಶ್ರೀ॥ ಎಂಬೆರುಮಾನಾರ್, ಶ್ರೀ॥ ಶ್ರೀನಿವಾಸಯ್ಯಂಗಾರ್, ಇವರುಗಳಿಂದ ಚರ್ಚಿಸಲ್ಪಟ್ಟದ್ದ ಬಾಲ್ಯವಿವಾಹ, ಸಮುದ್ರಯಾನ, ಊರ್ಧ್ವೋದ್ಧ್ವಾಪ ಮೊದಲಾದ ವಿಷಯಗಳಿಗೆ ಸಾಧಕ ಬಾಧಕಗಳೊಡನೆ ತಮ್ಮ ಅಂತರವಾದ ಅಭಿಪ್ರಾಯಗಳಂ ತಿಳಿಸಿ ಪ್ರಸಕ್ತ ವೇದಾಂತ ವಿಚಾರವನ್ನು ಮಾಡತೊಡಗಿದರು. ಈ ಪಂಡಿತರು ಸಂಸ್ಕೃತದಲ್ಲಿಯೇ ಸುಮಾರು ೨॥ ಘಂಟೆಯ ವರಿವಿಗೆ ದ್ವೈತಾದ್ವೈತ ವಿಶಿಷ್ಟಾದ್ವೈತಮತ ಸಿದ್ಧಾಂತ ಸಾರಾಂಶಗಳನ್ನೂ, ಈ ವಿಷಯದಲ್ಲಿನ ಶ್ರೀಮಚ್ಛಂಕರ, ರಾಮಾನುಜ, ಮಧ್ವಾಚಾರ್ಯರುಗಳ ನಿಜಾಭಿಪ್ರಾಯಗಳನ್ನೂ, ಈ ಮತಗಳಿಗೆ ಪ್ರವರ್ತಕರಾದ ಪ್ರಾಚೀನ ಮಹಾತ್ಮರ ವಿಚಾರವನ್ನೂ, ಇವುಗಳಲ್ಲಿರುವ ಆಂತರಾಳಿಕ ಪ್ರಭೇದಗಳನ್ನೂ ಅನೇಕ ವೈದಿಕೋದಾಹರಣೆಗಳೊಡನೆ ಬಹಳ ಸುಲಭವಾಗಿಯೂ, ಅತಿ ಗಂಭೀರವಾದ ಸರಣಿಯಿಂದಲೂ ಉಪನ್ಯಸಿಸಿದ ಬಳಿಕ ತಮಿಳ್‌ಭಾಷೆಯಿಂದ ಅದರ ಭಾವವನ್ನು ಯೆಲ್ಲರಿಗೂ ತಿಳಿಯಪಡಿಸಿ ಸಂತೋಷವನ್ನುಂಟುಮಾಡಿದರು. ಅನಂತರ ಎಂ. ಜಿ. ಶಾಮಯ್ಯಂಗಾರ್ರು ಅಗ್ರಾಸನಾಧಿಪತಿಯ ಅನುಮತಿಯಂತೆ ಶ್ರೀ ಭಾಷ್ಯಾಚಾರ್ಯರವನ್ನುದ್ದೇಶಿಸಿ ಸಭಿಕರೆಲ್ಲರೂ ತಮ್ಮ ಉಪನ್ಯಾಸದಿಂದ ಬಹಳ ಸಂತುಷ್ಟರಾಗಿ ತಮ್ಮ ಉಪಕಾರಕಕ್ಕಾಗಿ ಕೃತಜ್ಞರಾಗಿರುವಂತೆ ವಿಜ್ಞಾಪಿಸಿದರು. ಆಮೇಲೆ ಪಾಂಡಿತ್ಯ ವರ್ಧನೀ ಸಭಿಕರ ತರಫ ಅಗ್ರಾಸನಾದಿ ಪತಿಗಳು ಪ್ರಾಸಂಗಿಕರನ್ನು ಪುಷ್ಪಹಾರಾದಿಗಳಿಂದ ಮರ್ಯಾದೆಮಾಡಿ ಗೌರವಿಸಿದರು. ಕಡೆಗೆ ಶ್ರೀ॥ ಅ॥ ರಾಮಾನುಜಾಚಾರ್ಯರು ಅಗ್ರಾಸನಾಧಿಪತಿಗೆ ಪುಷ್ಪಹಾರವನ್ನು ಹಾಕಿ, ಈದಿನ ಅಗ್ರಾಸನಾಧಿಪತ್ಯವನ್ನಂಗೀಕರಿಸಿದ್ದಕ್ಕಾಗಿ ಶ್ರೀ॥ ಉ॥ ಕುಪ್ಪಣ್ಣಯ್ಯಂಗಾರ್ರಿಗೂ ಈ ಕ್ಷೇತ್ರಕ್ಕೆ ದಯಮಾಡಿ ಈ ವಿಧವಾದ ಮಹೋಪಕಾರವನ್ನು ಮಾಡಿದ ಶ್ರೀಮಾನ್ ಪಂಡಿತ ಭಾಷ್ಯಾಚಾರ್ಯರವರಿಗೂ ಸಭಿಕರ ವಂದನವನ್ನರುಹಿದರು. ಅದಕ್ಕೆ ಭಾಷ್ಯಾಚಾರ್ಯರವರು ಇಲ್ಲಿನ ಸಮಸ್ತ ವಿದ್ಯಾರ್ಥಿಗಳಿಗೂ ಸಂಸ್ಕೃತ ಭಾಷೆಯಿಂದ ಅನೇಕ ನೀತಿ ವಿಷಯಗಳನ್ನುಪದೇಶಿಸಿ ಅವರ ವಿಷಯದಲ್ಲಿ ನೈಜವಾದ ತಮ್ಮ ಅಭಿಮಾನವನ್ನು ವ್ಯಕ್ತಗೊಳಿಸಿದರಲ್ಲದೆ ಈ ಊರೊಳು ಇರುವ ವಿದ್ಯಾ ಪ್ರಚಾರಕ್ಕೆ ಮುಖ್ಯ ಕಾರಣಭೂತರಾದ ಶ್ರೀ॥ ಅಕ್ಕಾರಕನ್ನಿ ನರಸಿಂಹಾಚಾರ್ಯರವರನ್ನು ತಾವು ನಾನಾವಿಧವಾಗಿ ಕೊಂಡಾಡುವಂತೆಯೂ, ಅಂತಾ ಮಹನೀಯರ ಸಂದರ್ಶನತಮಗೆ ಲಭಿಸದೆಹೋದದ್ದಕ್ಕಾಗಿ ತುಂಬಾ ವಿಷಾದಿಸುವಂತೆಯೂ, ಪ್ರಕೃತದಲ್ಲಿ ಶತಿಸ್ಥಾನಾಪನ್ನರಾದ ಶ್ರೀ॥ ಉ॥ ಕುಪ್ಪಣ್ಣಯ್ಯಂಗಾರ್ರವರು ಒಳ್ಳೇ ವೇದಾಂತ ಜ್ಞಾನಪ್ರಜ್ಞರಾಗಿಯೂ, ಈ ಊರು ವಿದ್ಯಾರ್ಥಿಗಳಿಗೆ ಮಹೋಪಕಾರಿಗಳಾಗಿಯೂ ಇರುವದು ಮೇಲಕಂಡವ್ಯಾನತೆಯಂ ಹೋಗಲಾಡಿಸತಕ್ಕದ್ದಾಗಿರುತ್ತೆಂತಲೂ, ಸಭೆಯಲ್ಲಿ ಈಗಮಾತನಾಡಿದ ಅಕ್ಕಾರಕನ್ನಿ ರಾಮಾನುಜಾಚಾರ್ಯರು ತರ್ಕಶಾಸ್ತ್ರದಲ್ಲಿ ಬಹಳಮಟ್ಟಿಗೆ ಜ್ಞಾನವುಳ್ಳವರಾಗಿ ವಿಷಯಗಳನ್ನು ಉಪನ್ಯಸಿಸುವದರಲ್ಲಿ ಸಮರ್ಥರಾಗಿರುತ್ತಾರೆಂದಲೂ, ಈ ಸಭಾ ಸೆಕ್ರಿಟರಿ ಎಂ. ಜಿ. ಶಾಮಯ್ಯಂಗಾರ್ಯರು ಸಹ ಬಹಳ ರಂಜನೆಯಾಗಿ ಉಪನ್ಯಸಿಸಿದರೆಂತಲೂ, ಈ ಪಾಂಡಿತ್ಯವರ್ಧನೀ ಸಭೆಯ ಅಭಿವೃದ್ಧಿ ವಿಷಯದಲ್ಲಿ ಸ್ಥಳದವರೆಲ್ಲರೂ ತುಂಬಾ ಸಹಾಯಕರಾಗಿರತಕ್ಕದ್ದು ಕರ್ತವ್ಯವೆಂತಲೂ ತಿಳಿಸಿದರು.

ತಾ॥ ೧೮ನೇ ಬುಧವಾರ ಶ್ರೀಮಾನ್ ಪಂಡಿತಭಾಷ್ಯಾಚಾರ್ಯರವರು ಇಲ್ಲಿನ ನಿವಾಸಿಗಳ ಅಭಿಮಾನವನ್ನೂ ವೈದುಷ್ಯಾದಿಗಳನ್ನೂ ನೋಡಿ ಅಗಲಲಾರದೆ ಪ್ರಯಾಣ ಮಾಡಿ ಶ್ರೀರಾಮಾನುಜಾಚಾರ್ಯರವರ ದಿಗ್ವಿಜಯಸ್ಥಾನವಾದ ತೊಂಡನೂರಿನ ಮಾರ್ಗವಾಗಿ ಮೈಸೂರಿಗೆ ಪ್ರಯಾಣವಾದರು.

SUMMARY OF NEWS.
ವೃತ್ತಾಂತ ಸಂಗ್ರಹ.

ಬರ್ಮಾದೇಶದಲ್ಲಿ ೩೭,೦೦೦ ಮಂದಿ ಮಿಲಿಟರಿ ಪೋಲೀಸಿನವರಿದ್ದಾರೆ. ವಿವರ—ಪಠಾಣರು ೫೦೦, ಪಂಜಾಬಿಗಳು ೫,೦೦೦, ಸಿಕ್ಕರು ೪,೦೦೦, ಹಿಂದೂಸ್ಥಾನದೇಶಸ್ಥರು ೧೨,೦೦೦, ಬೊಂಬಾಯಿಕರಾರಿನ ಹಿಂದೂ ಕ್ರಿಶ್ಚಿಯನ್ನರುಮತ್ತು ದೇಶೀಯರು ೧,೫೦೦, ಮದ್ರಾಸಿನವರು ೧,೫೦೦, ಘೂರ್ಖಾಜನಗಳು ೫೦೦ ಮಂದಿ. ಇವರು ಬಹಳ ಪರಾಕ್ರಮಶಾಲಿಗಳಾಗಿರಬಹುದು. ಆದ್ದರಿಂದಲೇ ಬರ್ಮಾದೇಶದಲ್ಲಿ ಸದಾ ಭಯಂಕರವಾದ ದರೋಡೆಗಳು ನಡೆಯುತ್ತಾ ಇವೆ.

ಫ್ರಾನ್ಸದೇಶದ ಪ್ರಧಾನಪಟ್ಟಣವಾದ ಪ್ಯಾರಿಸ್‌ನಲ್ಲಿರುವ ಆಸ್ಪತ್ರೆಗೆ, ಸೂತಿಕಾವಾಯುವಿನಿಂದ ಪ್ರಸವಮತ್ತಿರುವ ಒಬ್ಬ ಸ್ತ್ರೀರೋಗಿಯು ಬಂದಿದ್ದಾಳೆ. ಈಕೆಯು ಶರೀರಕ್ಕೆ ಭಂಗಾರವನ್ನು ಸ್ಪರ್ಶಮಾಡಿದರೆ ಉರಿಯುತ್ತದೆಂದು ಗೋಳಾಡುತ್ತಾಳೆ, ಮತ್ತು ಅಂತಾ ಸ್ಪರ್ಶದಿಂ ತನ್ನ ದೇಹದ ಮಾಂಸವು ಸುಟ್ಟುಹೋಯಿತೆಂದು ಸುಟ್ಟಭಾಗವನ್ನು ತೋರಿಸುತ್ತಾಳೆ. ಈ ಆಸ್ಪತ್ರೆಯವೈದ್ಯರು, ಈ ವಿಷಯದಲ್ಲಿ ದೃಷ್ಟಾಂತಗಳಿಂದ ಒಡಂಬಟ್ಟಿದ್ದಾದರೂ, ಅದರ ಕಾರಣವನ್ನು ಕಂಡು ಹಿಡಿಯಿಡುವದಿಲ್ಲ.

A warning to S. I. Railway subordinates.—ಸರ್ ೧೮೮೭ನೇ ಜೂಲೈ ತಿಂಗಳಲ್ಲಿ ಮದರಾಸ್ ಹೈಕೋರ್ಟ್ ಬೆಂಚ್ ಕ್ಲರ್ಕಗಳಲ್ಲೊಬ್ಬರಾದ ಮೆ॥ ರಾಮಕೃಷ್ಣಪಿಳ್ಳೆ, ಬಿ. ಎ. ಯವರು ಒಂದುದಿನ ಮದರಾಸಿನಿಂದ ಚೆಂಗಲ್‌ಪಟ್ಟಿಗೆ ದಕ್ಷಿಣ ಇಂಡಿಯಾ ರೈಲ್‌ಮಾರ್ಗವಾಗಿ ಹೋಗುತ್ತಿರುವಲ್ಲಿ ಮಧ್ಯ ಮಾರ್ಗದೊಳು ರೈಲ್‌ಗಾರ್ಡ್‌ಯವನು ಟಿಕೆಟ್ ಅಜಮಾಯಿಷೀ ಬಗ್ಗೆ ಬಂದ ಸಂದರ್ಭದಲ್ಲಿ ಸದರೀ ರಾಮಕೃಷ್ಣಪಿಳ್ಳೆಯವರ ವಿಷಯದಲ್ಲಿ ಕಠಿಣಗಳಾಗಿಯೂ ಮಾನಚ್ಯುತಿಕರಗಳಾಗಿಯೂ ಇರುವ ಕೆಲವು ಮಾತುಗಳನ್ನುಪಯೋಗಿಸಿದ ಬಗ್ಗೆ ಸದರೀ ಪಿಳ್ಳೆಯವರು ಚೆಂಗಲ್‌ಪಟ್ಟು ಮುನಸಫ್ ಕೋರ್ಟಿನಲ್ಲಿ ರೆಯಿಲ್ವೆ ಗಾರ್ಡಿನ ಮೇಲೆ ೫೦೦ ರೂಪಾಯಿಗಳಿಗೆ ದಾವೆ ದಾಖಲ್‌ ಮಾಡಿ, ವಾದಿಯ ಕಡೆ ಮೆ॥ ನಮ್ಮಾಳ್ವಾರ್ ಶೆಟ್ಟರು ಮತ್ತು ಮೆ॥ ರಾಜಗೋಪಾಲಾಚಾರ್ಯ ಎಂಬ ಇಬ್ಬರು ಹೈಕೋರ್ಟ್ ವಕೀಲರೂ, ರೆಯಿಲ್ವೆ ಕಂಪೆನಿಯವರ ಕಡೆ ಬ್ಯಾರಿಸ್ಟರ್ ಮೆ॥ ವೆಡರ್ಬರ್ನ್ ಎಂಬವರೂ ಹಾಜರಾಗಿ ಮೊಕದ್ದಮೆಯನ್ನು ನಡೆಸಿದರು. ಕಡೆಗೆ ಮುನಸಫರು ವಾದಿಗೆ ೧೦೦ ರೂಪಾಯಿ ಮಾನನಷ್ಟವೂ ಕೋರ್ಟುಖರ್ಚೂ ಕೊಡತಕ್ಕದ್ದೆಂದು ತೀರ್ಮಾನಿಸಿದರು.

Relinquishment of succession fees in Travancore.—ತಿರುವಾಂಕೂರಲ್ಲಿ, ಮರುಮಕ್ಕದಾಯಂ (ಅಂದರೆ ಅಕ್ಕತಂಗಿಯರ ಮಗನ ಸಂತತಿ) ಸಂಪ್ರದಾಯಾನುವರ್ತಿಗಳಾದ ಜನರು, ಸಂತತಿ ಶೂನ್ಯರಾಗಿ ಮೃತಪಡುವ ರಕ್ತಸಂಬಂಧಿಗಳಾದವರ ಜಮೀನುಗಳಂ ಪಡೆಯಲು ಅರ್ಹರಾಗುವದಕ್ಕಾಗಿ, ವಂಶ ಪರಂಪರೆಯಾಗಿ ತಾವು ಪಡೆಯುವ ಸ್ವತ್ತುಗಳ ಅಂದಾಜ್ ಮೊಬಲಗು ಪೈಕಿ ನಾಲ್ಕರಲ್ಲೊಂದುಭಾಗ ಸರ್ಕಾರಕ್ಕೆ ಕೊಡಬೇಕಾದವರಾಗಿರುತ್ತಾರೆ. ಸದರೀ ದೇಶದಲ್ಲಿ ಮೇಲೆ ಹೇಳಿದ ಮರುಮಕ್ಕದಾಯಂ ಪದ್ಧತಿಯನ್ನನುವರ್ತಿಸುತ ಬರುವ ಕಾಲಕಟ್ಟು ಪಗ್ಗೆರೆ ಕೆಲವು ಘಣವರು, ಸಂತತಿವಿಹೀನರಾಗಿ ಮೃತಪಡುವ ಸೋದರಮಾವನ ಜಮೀನಿಗೆ ಬಾಧ್ಯಸ್ಥರಾಗುವದಕ್ಕಾಗಿ ಸರ್ಕಾರಕ್ಕೆ ದಂಡಕೊಡಬೇಕಾದವರಾಗಿರುತ್ತಾರೆ. ಮಹಾರಾಜರವರ ಪ್ರಜೆಗಳ ಪೈಕಿ ಮೇಲೆ ನಮೂದಿಸಿದ ಜನಗಳು ವಿನಾ ಮಿಕ್ಕವರ್ಯಾರೂ ಕೊಡದ ರುಸುಮನ್ನು ಸದರೀ ಜನಗಳು ಮಾತ್ರ ಕೊಡಬೇಕಾಗಿರುವದು ಅವರಿಗೆ ಕೇವಲ ದುಃಖ ರೂಪವಾಗಿರುವದು ಮಹಾರಾಜರವರ ಅವಧಾನಕ್ಕೆ ತರಲ್ಪಡಲು ಕಳೆದ ತಿಂಗಳ ೩೦ನೇ ತಾರೀಖ್ ಮೊದಲು ಸದರೀ

ತುಸುಗಳ ವಸೂಲಿಯನ್ನು ಬಿಟ್ಟುಬಿಡತಕ್ಕದ್ದೆಂದು ಹುಕುಂ ಮಾಡಿರುತ್ತಾರೆ.

Polygamy.—ಸಿಂಧುದೇಶಕ್ಕೆ ಸೇರಿದ ಹೈದರಾಬಾದ ಶಹರಿನಲ್ಲಿನ ಸಬ್‌ಕೋರ್ಟಿನಲ್ಲಿ, ಒಬ್ಬ ಹೆಂಗಸು ತಾನು ಜೀವಿಸಿರುವಕಾಲದಲ್ಲೇ ತನ್ನ ಗಂಡನು ಬೇರೆಯೊಬ್ಬಳನ್ನು ಮದುವೆಮಾಡಿಕೊಳ್ಳಲು ಪ್ರಯತ್ನಪಡುತಲಿದ್ದಾನೆ, ಹಿಂದೂ ಧರ್ಮಶಾಸ್ತ್ರದಲ್ಲಿ ಕೆಲವು ವಿಶೇಷ ಕಾರಣಗಳಮೇಲೆ ಮಾತ್ರ ಒಬ್ಬ ಹೆಂಡತಿ ಜೀವಿಸಿರುವಲ್ಲಿ ಬೇರೆಯೊಬ್ಬಳನ್ನು ಮದುವೆಮಾಡಿಕೊಳ್ಳುವದಕ್ಕೆ ಅವಕಾಶ ವ್ರಂಬುಮಾಡಲ್ಪಟ್ಟಿರುತಿದೆ, ಪ್ರಕೃತ ಸಂದರ್ಭದಲ್ಲಂತಾದ್ದೇನೂ ಇಲ್ಲವು, ಆದದರಿಂದ ತಾನು ಜೀವಿಸಿರುವವರಿವಿಗೆ ತನ್ನ ಗಂಡನು ಎರಡನೇ ಮದುವೆಮಾಡಿಕೊಳ್ಳದೆ ಇರುವಂತೆ ಇಂಜಂಕ್ಷನ್ ಹುಕುಂ ಕೊಡಬೇಕೆಂದು ಅರ್ಜಿಕೊಟ್ಟಳು. ಅದರಮೇಲೆ ಕೋರ್ಟಿನವರು ಹಂಗಾಮಿಯಾಗಿ ಆಕೆಯ ಅಪೇಕ್ಷೆಯಂತೆ ಹುಕುಂ ಕೊಟ್ಟು ಈ ಮೊಕದ್ದಮೆಯ ವಿಚಾರಣೆಯು ಬಗ್ಗೆ ಬರುವ ಆಗಸ್ಟು ೨೭ನೇ ತಾರೀಖನ್ನು ನಿಶ್ಚಯಿಸಿರುತ್ತಾರೆ.

An elephant at large.—ಆಜೆ ಶನಿವಾರ ದಿವಸ, ಹಗಲು ೨ ಘಂಟೆಗೆ ಹೈದರಾಬಾದ ದೆಹಲೀ ದರ್ವಾಜಾ ಬಳಿಯಣ ನದಿಗೆ ಒಂದು ಆನೆಯನ್ನು ತರಲು, ಅದು ಏಕಾಏಕಿ ವೇಗಿಕೊಂಡು ನದಿಯಬಳಿ ಓಡುವದಕ್ಕೆ ಪ್ರಾರಂಭಿಸಿತು. ಅದರಮೇಲೆ ಕುಳಿತಿದ್ದ ಮಾವಟಿಗನು ಘಟ್ಟಿಯಾಗಿಕೂಗಿ ದಾರಿಯಲ್ಲಿ ಹೋಗುತಲಿದ್ದ ಜನಗಳನ್ನು ಎಚ್ಚರಿಸಿದಾಗ್ಯೂ ಅಲ್ಲಿ ಹೋಗುತಲಿದ್ದ ಅಗಸನೊಬ್ಬನು ಆನೆ ಓಡಿಬರುವದಂ ಕಂಡು ಓಡಿಹೋಗಿ ತಪ್ಪಿಸಿಕೊಳ್ಳಲು ಎತ್ನಪಟ್ಟನು, ಪರಂತು ಸವರೀ ಕ್ರೂರಮೃಗವು ಸೊಂಡ್ಲಿಂದ ಅವನನ್ನು ಹಿಡಿದುಕೊಂಡು ಮೇಲಕ್ಕೆ ಎತ್ತಿ ಹಾಕಲು ೧೫ ಅಡಿಗಳ ಎತ್ತರ ಮೇಲಕ್ಕೆ ಹೋಗಿ ೨೫ ಅಡಿಗಳ ಆಚೆ ಬಿದ್ದನು. ಆನೆಯು ಪಟ್ಟಣದೊಳಗೆ ಪ್ರವೇಶಿಸಿದಮೇಲೆ ಸವಾರಿಯವನನ್ನು ನೋಡುವಲ್ಲಿ ಪ್ರಾಣ ಹೋಗಿತ್ತು. ತರುವಾಯ ಆನೆಯು ಸೇತುವೆಯಬಳಿ ಬರುವಲ್ಲಿ ಒಬ್ಬನು ಓದುತಲಿದ್ದದು ಕಂಡು ಕೂಡಲೆ ಅವನನ್ನು ಹಿಡಿದುಕೊಂಡು ಒಂದು ಗೋಡೆಯಮೇಲೆ ಹೊಡೆಯಲು ಅವನ ಬಲಭುಜ ಮುರಿದುಹೋಗಿ ತಲೆಯಮೇಲೆ ಬಲವಾದ ಘಾಯಗಳು ತಗಲಿದವು. ಅವನಿಗೆ ಪ್ರಾಣ ಉಳಿದಿದ್ದದರಿಂದ ಆಸ್ಪತ್ರೆಗೆ ಕಳುಹಿಸಿದರು. ಇಷ್ಟು ಪ್ರಸಾದಗಳು ನಡೆಯುವ ತನಕ ಮಾವಟಿಗನು ಆನೆಯಮೇಲೆಯೇ ಕುಳಿತಿದ್ದನು. ಅವನನ್ನು ಹಿಡಿದು ಸೆಳೆದುಹಾಕುವದಕ್ಕೆ ಆನೆಯು ಸಾಧ್ಯವಾದ ಸಾಹಸಗಳನ್ನೆಲ್ಲ ಮಾಡಿತು, ಪರಂತು ಅವನು ಸಿಕ್ಕಲಿಲ್ಲವು. ಆನೆ ಹೋಗುವ ದಾರಿಯಲ್ಲಿ ಯಾವದಾದರು ಗಿಡ ಸಿಕ್ಕಿದರೆ ಅದರ ರೆಂಬೆಯನ್ನು ಹಿಡಕೊಂಡು ಮೇಲಕ್ಕೆ ಹತ್ತಿಹೋಗಿ ತಪ್ಪಿಸಿಕೊಳ್ಳುವಣವೆಂದು ಮಾವಟಿಗನು ಪ್ರಯತ್ನಪಟ್ಟರೂ ಹಾಗೆಸಿಕ್ಕ ರೆಂಬೆಗಳನ್ನೆಲ್ಲ ಆನೆಯು ಸೊಂಡ್ಲಿಂದ ಮುರಿದುಹಾಕುತ ಬಂತು. ಕಡೆಗೆ ಮಾವಟಿಗನು ಒಂದು ಮನೆಯಮೇಲೆ ಹತ್ತಿ ತಪ್ಪಿಸಿಕೊಂಡನು. ಆನೆಯು ಸ್ವತಂತ್ರವಾಗಿ ಹೊರಟುಹೋಗಿ ಪಟ್ಟಣದಲ್ಲಿ ಪ್ರವೇಶಿಸುವಾಗ ಬಹಳ ಅಪಾಯ ಶಂಕೆ ಯುಂಟಾಯಿತು. ದೈವಾತ್ ಅಪಾಯಗಳ್ಯಾವದೂ ಉಂಟಾಗಲಿಲ್ಲವು. ಒಂಟಿಯವರು ಬಂದು ಸಾಯಂಕಾಲ ಆರೂವರೆ ಘಂಟೆಗೆ ಪಟ್ಟಣದೊಳಗೆ ಆನೆಯನ್ನು ಹಿಡಿದು ಬಂದೋಬಸ್ತು ಮಾಡಿದರು.—ಡೆಕ್ಕನ್‌ಟೈಮ್ಸ್.

EXTRACTS.

—o—

ಈ ಸಂವತ್ಸರದ ಡಿಸಂಬರ್ ತಿಂಗಳಲ್ಲಿ ನಡೆಯುವ ನ್ಯಾಷನಲ್ ಕಾಂಗ್ರೆಸ್ ಸಭೆಯಲ್ಲಿ ಯಾರಾದರೊಬ್ಬ ಯೂರೋಪಿಯನನ್ನಾಗಲಿ, ಯೂರೇಷಿಯನನ್ನಾಗಲಿ ಅಧ್ಯಕ್ಷರನ್ನಾಗಿ ಮಾಡತಕ್ಕದ್ದೆಂಬ ಆಲೋಚನೆಯುಂಟಾಗಿ ಆ ವಿಷಯವು ಕುರಿತು ವಿಚಾರ ನಡೆಯುತಲಿದೆ. ಮದರಾಸ್‌ನಲ್ಲಿ ಪ್ರಸಿದ್ಧರಾಗಿರುವ ಮಿ|| ನಾರ್ಟನ್ ಎಂಬವರ ಹೆಸರು ವಿಶೇಷತಃ ಸಮೂದಿಸಲ್ಪಟ್ಟಿದೆ. ಇದಕ್ಕೆ ಸೇರಿದಂತೆ ದುಶ್ಶಾಸನದ ಆಲೋಚಿಸಲ್ಪಡುತಲಿರುವಂತೆ ತಿಳಿಯಬರುತಿದೇನೆಂದರೆ, ಈ ವರುಷದ ಸಭೆಯಲ್ಲಿ ಏತದ್ದೇಶೀಯರಾದ ಒಬ್ಬ ನೇಟಿವ್ ಸಂಸ್ಥಾನಾಧಿಪತಿಯನ್ನು ಸಭಾಧ್ಯಕ್ಷರನ್ನಾಗಿ ಮಾಡತಕ್ಕದ್ದೆಂಬದಾಗಿಯೂ, ಅದಕ್ಕೆ ಬರೋಡಾ ಸಂಸ್ಥಾನದ ಮಹಾರಾಜರವರು ಅರ್ಹರೆಂದು ಸೂಚಿಸಲ್ಪಟ್ಟದೆಯೆಂತಲೂ ತಿಳಿಯಬರುತಿದೆ. ದಕ್ಷಿಣದೇಶದ ಸಂಸ್ಥಾನಾಧಿಪತಿಗಳಲ್ಲಿ ಅನೇಕರಿರುವಾಗ್ಯೂ ಅವರುಗಳ ಸ್ಮರಣೆ ಯಾತಕ್ಕೆ ಜನರಿಗೆ ಬಾರದೆ ಹೋಯಿತೋ ತಿಳಿಯಲಿಲ್ಲವು.

ಮಧ್ಯ ಇಂಡಿಯಾದೇಶದ ಪೊಲಿಟಿಕಲ್ ಏಜಂಟರ ವಿಚಾರಣೆಗೆ ಒಳಪಟ್ಟ ಅರಸರಪೈಕಿ ಝಾಲವಾರ್ ರಾಣಾಯವರೂ ಒಬ್ಬರಾಗಿರುತ್ತಾರೆ. ಈಚೆಗೆ ಇವರ ಅಧಿಕಾರಗಳೆಲ್ಲ ಕಿತ್ತುಕೊಳ್ಳಲ್ಪಟ್ಟವು. ಈರೀತಿ ಮಾಡಲ್ಪಟ್ಟದ್ದಕ್ಕೆ ಕಾರಣವನ್ನು ವಿಚಾರಿಸಲಾಗಿ, ಸದರೀ ರಾಣಾಯವರು, ಮಹಾರಾಜ್ಞೀಯವರ ಜ್ಯೂಬಿಲೀ ಉತ್ಸವಕಾಲದಲ್ಲಿ ಕೇವಲ ಅಸಂಗತವಾದ ಒಂದು ಕೃತ್ಯವನ್ನು ನಡೆಸಿದರೆಂಬದು, ಅದೇನೆಂದರೆ, ಮಹಾರಾಜ್ಞೀಯವರ ಜ್ಯೂಬಿಲೀ ಪ್ರಯುಕ್ತವಾದ ಕಾರ್ಯಗಳಲ್ಲಿ, ಇಂಡ್ಯಾದೇಶದ ಚಿಕ್ಕಬಡ ಸಂಸ್ಥಾನಾಧಿಪತಿಗಳೆಲ್ಲರು ಆಕೆಯವರ ವಿಷಯದಲ್ಲಿ ವ್ಯಕ್ತಪಡಿಸುವ ರಾಜಭಕ್ತಿಗಾಗಿ ರಾಜ್ಞೀಯವರ ವಂದನವನ್ನು ಸಮರ್ಪಿಸಿ ವೈಸ್‌ರಾಯವರ ಕಡೆಯಿಂದ ಅವರೆಲ್ಲರಿಗೂ ಕಾಗದಗಳು ಬರೆಯಲ್ಪಟ್ಟವು. ಎಲ್ಲರಂತೆಯೇ ಝಾಲವಾರ್ ಅರಸರಿಗೂ ಕಳುಹಿಸಲ್ಪಟ್ಟಿತು. ಪರಂತು ಸದರೀ ರಾಣಾಯವರು ಸದರೀ ಕಾಗದವನ್ನು ವೈಸ್‌ರಾಯವರಿಗೆ ಅಥವಾ ಪೊಲಿಟಿಕಲ್ ಏಜಂಟರಿಗೆ ವಾಪಸ್ ಮಾಡಿದರು. ಇದುಪರ್ಯೇಣ ಮಾಡಿದ ಇಂತಾ ಅಗೌರವವು ಮನ್ನಿಸಲ್ಪಡಲಾರದವಾಗಿ ರಾಣಾಯವರ ಅಧಿಕಾರಗಳೆಲ್ಲ ಕಿತ್ತುಕೊಳ್ಳಲ್ಪಟ್ಟವು" ಎಂಬದು. ಹಾಗೆ ಅವರು ಮಾಡಿರುವದರೆ ಅದು ಕೆಟ್ಟದ್ದೆಂಬದರಲ್ಲಿ ಸಂಶಯವಿಲ್ಲವು. ಆದರೆ ಅವರು ಯಾತಕ್ಕೆ ಆರೀತಿ ಮಾಡಿದರೋ ಅದಕ್ಕೆ ಉಂಟಾದ ಕಾರಣವನ್ನು ಅರಿಯಬೇಕಾದ್ದಿಲ್ಲವೆ? ಮಧ್ಯ ಇಂಡಿಯಾದೇಶದಲ್ಲಿ ಗವರ್ನರ್‌ಜನರಲವರ ಕಡೆ ಏಜಂಟರು ನಡೆಸಿರುವ ಕೆಟ್ಟಹೆಸರಿನ ದೆಸೆಯಿಂದ, ಮೇಲೆ ತಿಳಿಸಲ್ಪಟ್ಟಂತೆ ಅಗೌರವಿಸುವದಕ್ಕೆ ಏನೊ ಕಾರಣವಿರಬೇಕೆಂದು ಜನಗಳು ಸಂಶಯಪಡದೆ ಹೋಗಲಾರರು.—ಹಿಂದೂ.

ವರ್ತಮಾನ ಪತ್ರಕರ್ತರು ತಮ್ಮ ಕರ್ತವ್ಯವೆಂಬ ಬೆಳದಿಂಗಳಿಂದ ದುಷ್ಕೃತ್ಯವನ್ನು ಮಾಡತಕ್ಕ ದುರಾಧಿಕಾರಿಗಳೆಂಬ ಕನ್ನಗಳ್ಳರಿಗೆ ವಿಷ್ಣುಕಾಂತಿಗಳಾಗಿರುತ್ತಾರೆ. ಯಾಕೆಂದರೆ ಪತ್ರವೆಂಬ ಬೆಳದಿಂಗಳಿಂದ ಇವರ ಕಳ್ಳ ಕೃತ್ಯಗಳಿಗೆ ತೊಂದರೆಯುಂಟಾಗುತ್ತದೆ. ಇದರಿಂದ ಇವರೆಲ್ಲರೂ ತಮ್ಮ ಕುಲದೇವರಾದ ರಾಹುಕೇತುಗಳನ್ನಾರಾಧಿಸಿ, ಅಪ್ರಕಾಶದ ಮುಖಲಸ್ಥಾನವಾದ ಚಂದ್ರಮಂಡಲಕ್ಕೆ ಗ್ರಹಣ ಹತ್ತುವಂತೆ ಮಾಡುತ್ತಾರೆ. ಇದರಿಂದ ಕೆಲವುವೇಳೆ ಯವರಿಗೆ ನಿಷ್ಕಲೆಯುಳ್ಳದ್ದಾಗಿ ಆದರೂ, ಅದನ್ನು ಸ್ವಲ್ಪಕಾಲದಲ್ಲಿಯೇ ಆ ಗ್ರಹಣಕ್ಕೆ ಮೋಕ್ಷಕಾಲ ಒದಗಿ ಅನಂತರ ಆ ಚಂದ್ರಮಂಡಲವು ಮತ್ತಿಷ್ಟು ಪ್ರಕಾಶಿಸುತ್ತದೆ. ಇದರಂತೆ ದುಷ್ಕೃತ್ಯವನ್ನು ಮಾಡುವ ಅಧಿಕಾರಿಗಳೆಂಬ ಕಳ್ಳರು, ವರ್ತಮಾನ ಪತ್ರವೆಂಬ ಬೆಳದಿಂಗಳ ಬೆಳಕಿನಿಂದ ಲಂಚವೆಂಬ ವಸ್ತುಗಳೆಂಬ ಕನ್ನಚೋರಿ ಮಾಡುವದಕ್ಕೆ ಅಡ್ಡಿಯುಳ್ಳವರಾಗಿರುತ್ತಾರೆ. ಅವರಿಗೆ ಕಪ್ಪು ಯೋಗ್ಯತೆಯುಳ್ಳ ಮ್ಯಾಜಸ್ಟ್ರೇಟೆಂಬವರು ಅವರ ಪರವು ಗುರುಗಳಾದ ರಾಹು ಕೇತುಗಳಾಗಿ, ಈ ಪತ್ರಕರ್ತರಿಗೆ ಒಮ್ಮೆಗೆ ಗ್ರಹಣವಾಗಿ ಸಲ್ಲುತ್ತಾರೆ. ಆದರೆ ಅದರ ಮೋಕ್ಷಕಾಲವು ಅವರಷ್ಟು ಬೇಗನೆ ಆಗದೆ ಇರುವದಿಲ್ಲ; ಪರಂತು ಹಿಂದೆಗೆ ತಿಗಬೇಕಾಗುತ್ತದೆ. ಇದು ಒಂದು ವರ್ಷದ ದುಃಖಕಾಲವಾಗಿದ್ದರೂ, ಜನರುಮಾತ್ರ ಇದೊಂದು ಅಪೂರ್ವ ಸಮಯವೆಂದು ಜಪತಪ ಹೋಮಹೇಮಗಳನ್ನು ಮಾಡಿ, ಆಗ್ರಹದೋಷವನ್ನು ಪರಿಹರಿಸಲು ಪ್ರಯತ್ನಪಡುತ್ತಾರೆ. ಇದಿಗೆ ಮೂರು ವರ್ತಮಾನ ಪತ್ರಕರ್ತರುಳ ಕಳ್ಳರ ಪರವು ಗುರುಗಳಾದ ಮ್ಯಾಜಿಸ್ಟ್ರೇಟರಿಂದ ಗ್ರಹಣಿಸಲ್ಪಟ್ಟರು.

೧ ನೇದು ಕನ್ನಡ "ಚಿತ್ರಗುಪ್ತ" ಪತ್ರಕರ್ತರು! ಇವರು ಒಬ್ಬ ಸಬ್ ರಿಜಿಸ್ಟ್ರಾರನ ಬಂಧವಾದಲೇಖನವನ್ನು ಬರೆದಿದ್ದದರಿಂದ ಆಚೆಲ್ಲೆಯ ಮ್ಯಾಜಿಸ್ಟ್ರೇಟರಿಂದ ವಿಚಾರಿಸಲ್ಪಟ್ಟು ೬ ತಿಂಗಳ ಕೈದನ್ನೂ, ೫೦೦ ರೂಪಾಯಿಗಳ ದಂಡವನ್ನು ಸಹ ವಿಧಕೊಂಡರು. ಇದರ ಬಗ್ಗೆ ಅಪೀಲಾಗಿ ಸೆಷನ್ಸ್‌ಕೋರ್ಟಿನವರು ಅವರಿಗಾದ ಸಜಾವನ್ನೂ ಹಾಗೂ ದಂಡವನ್ನು ರದ್ದುಪಡಿಸಿ, ಅವರನ್ನು ನಿರ್ದೋಷಿಗಳೆಂದು ಬಿಡುಗಡೆಮಾಡಿದರು.

೨ ನೇದು "ಹವ್ಯಕ ಸುಬೋಧ ಲೈಬಲ್ ಕೇಸ್." ಇದರಲ್ಲಿಯ ಸಂಗತಿಗಳು ನಮ್ಮ ವಾಚಕರಿಗೆ ತಿಳಿದದ್ದೇ ಅದೆ. ಇದರಬಗ್ಯೆ ಅಪೀಲ್ ನಡೆದಿದೆ. ಇದರಲ್ಲಿ ಮುಂದಾದರೂ ನಮಗೆ ಜಯ ಸಿಕ್ಕೀತೆಂಬ ನಂಬಿಕೆಯು ಸಂಪೂರ್ಣವಾಗಿ ಇರುತ್ತದೆ. ೩ನೇದು—ನಮ್ಮ ಬಂಧುಗಳಾದ "ಮೈಸೂರು ವೃತ್ತಾಂತ ಬೋಧಿನೀ" ಪತ್ರಕರ್ತರು! ಇವರು ಒಂದು ಮತದ ಸಂಬಂಧವಾದ ಪುಸ್ತಕವನ್ನು ಪ್ರಸಿದ್ಧಪಡಿಸಿದ್ದರಿಂದಾಗಿ ಮೆ|| ಶ್ರೀನಿವಾಸಾಚಾರ್ಯರೆಂಬವರಿಂದ ಫಿರ್ಯಾದಿ ಮಾಡಿಸಿಕೊಳ್ಳಲ್ಪಟ್ಟರು. ಈ ಫಿರ್ಯಾದಿಯ ವಿಚಾರವು, ಮೆ|| ಅಬ್ದುರ್ ರಹಿಮಾನ್ ಎಂಬ ಅಸಿಸ್ಟೆಂಟ್ ಮ್ಯಾಜಿಸ್ಟ್ರೇಟರಲ್ಲಿ ಆಗಿ, ಇವರಿಗೆ ೧೫೦ ರೂಪಾಯಿ ದಂಡವು ವಿಧಿಸಲ್ಪಟ್ಟಿತು. ಇದರಲ್ಲಿಯೂ ಅಪೀಲ್ ನಡೆದಿರುತ್ತದೆ. ಇದರಲ್ಲಿ ಇವರು ಸಹ ಜಯಪಡಲೆಂದು ಇಚ್ಛಿಸುತ್ತೇವೆ.

೪ ನೇದು—ನಮ್ಮ ಬಂಧುಗಳಾದ "ಕನ್ನಡಸುವಾರ್ತೆ" ಪತ್ರಕರ್ತರ ಮೇಲೆ ಒಂದು ಲೈಬಲ್ ಕೇಸ್ ನಡೆಯುವದಾಗಿ ಕೇಳುತ್ತೇವೆ.

ಅಂತೂ ಇಂತೂ ಚಂದ್ರನಿಗೆ ಗ್ರಹಣ ಸ್ಪರ್ಶವಾಗಿ, ವರ್ತಮಾನ ಪತ್ರಕರ್ತರಿಗೆ ಲೈಬಲ್ ಕೇಸನ್ನುವದು ಅಂಟಿಕೊಂಡದ್ದಾಗಿರುತ್ತದೆ.

ದೇಶಸಂಚಾರ ಮಾಡುತ ಬಿಹಾರ ಪ್ರದೇಶಗಳನ್ನೆಲ್ಲ ಕ್ರಮವಾಗಿ ಮುಂಬೈ ಬಸ್ತಕಸಮಾಚಾರ ಪತ್ರಿಕೆಗೆ ಬರೆಯುತಲಿರುವ ಲೇಖಕನೊಬ್ಬನು, ಇದುವರಿವಿಗೆ ತಾನು ಸಂಚಾರ ಮಾಡಿದ ಕನ್ನಡ ಜಿಲ್ಲೆಯ ಸ್ಥಿತಿಯನ್ನು ಸಂಗ್ರಹಿಸಿ ಬರೆಯುತ್ತಾನೇನೆಂದರೆ:—ಪ್ರಾಯಶಃ ಕನ್ನಡಜಿಲ್ಲೆಯಲ್ಲಿ ಪ್ರಜೆಗಳು ಚಿಕ್ಕರಾಗಿಯೇ ಇರುತ್ತಾರೆ. ಈ ವರುಷದ ಪ್ರಾರಂಭದಲ್ಲಿಯೇ ಮಳೆ ಅಧಿಕವಾಗಿ ಹೊಸಿಗಳೆಲ್ಲ ಕೊಳೆತು ಹಳೆನಾಶವಾದವು. ಇದರಿಂದ ಈ ಪ್ರಾಂತದ ಬೇಸಾಯಗಾರರೆಲ್ಲರೂ ಬಹಳ ವಿಷಾದಿಸುತಲಿದ್ದಾರೆ. ಇಲ್ಲಿ ಅನೇಕರು ಕೂಲಿಮಾಡಿ ಜೀವಿಸುವತವರಾಗಿಯೇ ಇರುತ್ತಾರೆ. ಈಗ ಕೆಲಸಗಳು ದೊರೆಯದೆ ಇರುವದರಿಂದ ಅನೇಕರು ಅನ್ನವಿಲ್ಲದೆ ಸಂಕಟ ಪಡುತಲಿದ್ದಾರೆ. ಅನೇಕರು ಒಂದುಹೊತ್ತು ಅಂಬಲಿ ಕುಡಿದು ಕಾಲಹರಣ ಮಾಡುತಲಿದ್ದಾರೆ. ದುಡ್ಡಿಗಾಗಿ ಜನಗಳು ತಮ್ಮ ಪ್ರಾಣಗಳನ್ನಾದರೂ ತೊರೆಯುವಿಕ್ಕೆ ಸಮ್ಮತಿಸುವರು. ಇಷ್ಟಾದಾಗ್ಯೂ ಇಲ್ಲಿ ಹೆಂಡದ ವ್ಯಾಪಾರ ಅಧಿಕವಾಗಿದೆ. ಒಬ್ಬನು ಪ್ರಾತಃಕಾಲದ ಮೊದಲು ಸಾಯಂಕಾಲದ ವರಿವಿಗೆ ಎಷ್ಟು ಜಿಪದೆ ಕಷ್ಟಪಟ್ಟು ಕ್ರಮ ಪಡುವನಾದರೆ ಆವನಿಗೆ ೨ ಆಣೆಗಳು ದೊರೆಯುವದು ಬಹಳ ಪ್ರಯಾಸಕರವಾಗಿರುತಿದೆ. ಈ ಪೈಕಿ ಒಂದಾಣೆಯನ್ನು ಅವನು ಹೆಂಡದ ಅಂಗಡಿಗೆ ಹತ್ತುಮಾಡಿ ಉಳಿದ ಒಂದಾಣೆಯಿಂದ ಒಂದುದಿವಸವೆಲ್ಲ ತನ್ನ ಸಂಸಾರವನ್ನು ಸಂರಕ್ಷಿಸಬೇಕಾದವನಾಗಿರುತ್ತಾನೆ. ಶೂದ್ರರುಗಳು ಮುಂಗಟ್ಟೆಗಳನ್ನು ಹಾಕಿಕೊಳ್ಳುತ್ತಾರೆ. ಇಲ್ಲಿ ಬರೀಮೈಯವನೆ ತಿರುಗುವವರ ಸಂಖ್ಯೆಯು ಅಧಿಕವಾಗಿರುತಿದೆ. ಕೂಪ್ರಸ್ತ್ರೀಯರು ತಮ್ಮ ಕೊರಳುತುಂಬ ಮಣ್ಣಿನ ಮಣಿಸರಗಳನ್ನು ಹಾಕಿಕೊಂಡಿರುತ್ತಾರೆ. ಕುಮದಲಕ್ಕಿ ತಿನ್ನುವ ಸಂಪ್ರದಾಯವಿಲ್ಲಿ ಬಹಳವಾಗಿರುತಿದೆ. ಕಾಸಿಪಲ್ಯ ಮತ್ತು ಗೋಧಿಹಿಟ್ಟು ಬಹಳ ಪ್ರಯಾಸದಿಂದ ದೊರೆಯತಕ್ಕ ಪದಾರ್ಥಗಳಾಗಿರುತಿವೆ. ಸಾಮಾನ್ಯೇನ ಇಲ್ಲಿ ವ್ಯಭಿಚಾರವು ಅಧಿಕವೆಂದು ನುಡಿಯಬಹುದು. ಇಲ್ಲಿ ವ್ಯಾಪಾರಮಾಡತಕ್ಕವರೆಲ್ಲರೂ ಪ್ರಾಯಶಃ ಕೊಂಕಣಸ್ಥರಾಗಿಯೇ ಇರುತ್ತಾರೆ. ಇವರೇ ಈದೇಶಕ್ಕೆ ಮಾರವಾಡಿ ಜನರಂತೆ ಇರುತ್ತಾರೆಂದು ನುಡಿಯಬಹುದು. ಶಹರ್ ನಿವಾಸಿಗಳಿಗೆ ಸ್ವಲ್ಪ ನಾಗರಿಕತೆಯುಂಟು. ಜನಗಳ ಒಳಸ್ಥಿತಿ ನೀಚವಾದದ್ದಾಗಿದ್ದರೂ, ಹೊರಗೆ ಬಹಳ ಆಡಂಬರವಾಗಿರುವದು. ಈ ಜಿಲ್ಲೆಯಲ್ಲಿ ಸರ್ಕಾರ್ ನೌಕರರೇ ಸುಖಗಳಾಗಿದಾರೆ. ಈಜನರಿಗೇ ಇಲ್ಲಿ ಹೆಚ್ಚು ಗೌರವವುಂಟು. ಸಾಧಾರಣವಾಗಿ ಬಳಿಕ ಸ್ತ್ರೀಯರನ್ನುವದಕ್ಕೆ ಜನರಿಗೆಲ್ಲ ಬರವಣಿಗೆ ಬಾರದೇ ಇಲ್ಲವು. ಕೊಂಕಣಭಾಷೆಯು ಮಾತಾಡುವದರಿ ಅಧಿಕವೆಂದು ತೋರುತಿದೆ. ಇವರಿಗೆ ಕನ್ನಡ ಸಹ ಬರುವದು. ಆದರೆ ಮಾತುಗಳು ವಿಜಾತೀಯವಾದ ಸ್ವರದಿಂ ಅಶುದ್ಧಗಳಾಗಿರುತಿವೆ ಎಂಬದು ಇದೇಲೇಖಕನು ಅಂಕೋಲೆ ಪ್ರಾಂತಕ್ಕೆ ಹೋದ್ದಕಾಲದಲ್ಲಿ, ಅಲ್ಲಿ ದಾದೇ ಮುಜಕೂರ್ ಎಂಟ ತಾರೀಖಿನಲ್ಲಿ ಅಲ್ಲಿನ ಸ್ಥಿತಿಯು ವಿವರಿಸುವಾಗ್ಯೆ ತಿಳಿಸುತ್ತಾನೇನೆಂದರೆ—ಈ ಅಂಕೋಲೆಯಲ್ಲಿ ಕೊಂಕಣಸ್ಥರೆ ಅಧಿಕವಾಗಿದಾರೆ. ಇವರು ಸ್ವರವಣಗರರೆಂದು ಕರೆಯಬಹುದು. ಇಲ್ಲಿನ ಪವಿಗನು ಬಹಳ ಸುಂದರರಾಗಿರುತ್ತಾರೆ. ಇಲ್ಲಿ ಹೆಂಗಸರ ಲಾವಣ್ಯವು ಬಹಳ ಮನೋಹರವಾದದ್ದು, ನಾನಿಲ್ಲಿ ಒಂದುದೇವಸ್ಥಾನದಲ್ಲಿ ಬಾಲೆಯ ಅವರ ವೃತ್ತಾಂತವು ವಿಚಾರಿಸಲಾಗಿ ಅವು ಇಲ್ಲಿನ ಸೂಳೆಯರಿಗೆಲ್ಲ ಕುಲದೇವರ ಆಲಯವೆಂದು ತಿಳಿಯಲಾದೆನು. ಸಾಯಂಕಾಲ ಇವರು ಮೈಮೇಲೆ ಸಕಲಾಭರಣ ಭೂಷಿತೆಯರಾದ ವಾರಾಂಗನೆಯರು ಗುಂಪುಗುಂಪಾಗಿ ಬಂದು ದೇವರ ದರ್ಶನ ಮಾಡಿಕೊಂಡು ಹೋಗುತ್ತಾರೆ. ಸೂಳೆಯರ ಸಂಖ್ಯೆಯೇ ಅಧಿಕವು. ಎಲ್ಲರೂ ಪ್ರಾಯಶಃ ಸುಂದರಿಯರಾಗಿಯೂ ಬುದ್ಧಿವಂತರಾಗಿಯೂ ಇರುತ್ತಾರೆ. ಈಜಿಲ್ಲೆಯಲ್ಲಿ ಗಟ್ಟದ ಕ್ರಿಶ್ಚನ್ ಅಧಿಪತಿರಿಗೂ ಇಲ್ಲಿ ಒಂದೊಂದು ಸ್ಥಾನವಿದ್ದರುತಿದೆ. ಕುಮಟಾ ೧೦ನೇ ಜನ ಯೂರೋಪಿಯನ್ ಅಧಿಪತಿರೂ ಅವರಿಂದ ಕಾಮವಶರಾಗಿ ಕೊಂಡಿರುವ ಸೂಳೆಯರ ಹೆಸರೂ ಇವರಿಗೆ ವಿಶೇಷ ಪತ್ನಿಯರಿನ್ನೂ ಮಾಡಿದ್ದಿಲ್ಲವು. ಕೆಲವು ಸೂಳೆಯರ ಮಕ್ಕಳು ಫಸ್ಟು ಯೂರೋಪಿಯರ ಮಕ್ಕಳಂತೆಯೇ ಇದಾರೆ. ಇದರ ಪ್ರತಿ ಅನೇಕರು ನಾನು ಸ್ವತಃ ನೋಡಿದ್ದರಿಂದ ಇದು ನಂಬಿಕೆಯಾಯಿತು. ಸರ್ಕಾರ್ ನೌಕರರೆಲ್ಲರೂ ತಮ್ಮ ಮೇಲ್ಪಟ್ಟ ಅಧಿಕಾರಿಯ ಪ್ರೀತಿಪಾತ್ರಗಳಿಗೆ ದಾಸರು ದಾಸರಾಗಿ ಭಯಭಕ್ತಿ ಹೊಂದಿ ನಡೆದುಕೊಳ್ಳುತಲಿರುತ್ತಾರೆ. ಇದು ನಾನು ಒಂದೆರಡು ದೃಷ್ಟಾಂತಗಳಿಂದ ತಿಳಿದುಕೊಂಡೆನು. ಇಲ್ಲಿ ೩—೪ ಸೂಳೆಯರ ಮನೆಗಳು ಬಹಳ ಪ್ರಬಲವಾಗಿರುತಿವೆ. ಇವರೆಲ್ಲರೂ ದೊಡ್ಡ ಅಧಿಕಾರಿಗಳನ್ನಿಟ್ಟುಕೊಂಡಿರುತ್ತಾರೆ. ಇವರೆಲ್ಲ ಈಪತ್ನಿಗೆ ಅಧಿಕಾರಾರ್ಥ ಬಂದುಹೋಗತಕ್ಕ ಅಧಿಪರಗಳ ಅನುಗ್ರಹದಿಂ ಲಭಿಸಿದವೆಂದು ತಿಳಿಯಬರುತಿದೆ. ಈ ಅಧಿಪರಗಳಿಂದ ಯಾರಿಗಾದರೂ ಯಾವದಾದರೊಂದು ಮಹತ್ಕಾರ್ಯವಾಗಬೇಕಾಗಿದ್ದ ಸಂದರ್ಭಗಳಲ್ಲಿ ಜನರು ಸದರೀ ಅಧಿಪರಗಳಿಟ್ಟುಕೊಂಡಿರುವ ನಾಯಕಸಾನಿಯರು ಉಪಸರ್ಪಣೆಮಾಡಿ ಅವರಪೇಕ್ಷಿಸುವ ಕಾಣಿಕೆಗಳನ್ನಿತ್ತು ಅವರ ಸಿಫಾರಸ್ಸಿನ ಮೇರೆ ತಮ್ಮ ಕಾರ್ಯಗಳನ್ನು ಅನುಕೂಲಪಡಿಸಿಕೊಳ್ಳುತ್ತಾರೆ. ಈಜಾತಿ ಸ್ತ್ರೀಯರಲ್ಲಿ ಅನರ್ಘ್ಯವಾದ ವಿಜಾತೀಯ ಮೋಹಕ ಶಕ್ತಿಯನ್ನು ಬ್ರಹ್ಮದೇವರು ಕಲ್ಪಿಸಿರುವದರಿಂದ ಇವರಿಗೆ ವಿಧೇಯರಾಗದ ಪುರುಷರೇ ಇಲ್ಲವೆಂದು ಕೇಳುತ್ತೇನೆ ಎಂಬದು.

BANGALORE:—Printed and publised at the KARNATIC PRESS, No. 11, Hospital Road, Petta.

ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA.

ಪ್ರತಿ ಸೋಮವಾರ ಪ್ರಾತಃಕಾಲದಲ್ಲಿ ಪ್ರಕಟಿಸಲ್ಪಡುವದು.

Published every Monday Morning.

ಪ್ರಜಾಮುವಿಧಿಸ್ವವೃತ್ಯುಪಗನಾರ್ಥ್ಯಕರ್ಣಾಟಕಪ್ರಕಾಶನವರಾಭಿವಾಪ್ರಕಾಶನಾಹಿತೀಕೋಫಿತಾ॥ವ್ಯಗಾಂಕಹಿತವಾಸರನಿಹಿತಮುವ್ರಣಾಸಜ್ಜನ್ಸ್ಸಿದ್ಧಿ ಹಾಸುವರಿಣೋಟಾಕಾದಿಕಿತಮಾನಸುಸಂತುಮ್ಯ

Vol. XV.] | BANGALORE—MONDAY, JULY 30, 1888. | [No. 30.

ಸಂಪುಟ ೧೫.] | ಬೆಂಗಳೂರು:—ಸ೯ ೧೮೮೮ನೇ ಇಸವಿ ಜುಲೈ ೩೦ನೇ ತಾರೀಖು ಸೋಮವಾರ. | [ಸಂಖ್ಯೆ ೩೦.

ಕರ್ಣಾಟಕ ಪ್ರಕಾಶಿಕಾ

ಪತ್ರಿಕೆಯ ಚಂದಾ ದರಗಳು,
೧೮೮೮ನೇ ಇಸವಿ ಜನವರಿಯಿಂದಾಯತು
ಕಡಿಮೆ ಮಾಡಲ್ಪಟ್ಟಿರುತ್ತವೆ.

ಈ ಪತ್ರಿಕೆಯ ಚಂದಾದಾರರಸ್ಥೈಕೆ ಅನೇಕರ ಅಪೇಕ್ಷೆಯನ್ನು ನೆರವೇರಿಸುವ ಉದ್ದೇಶದೊಡನೆಯೂ, ಪರಿಮಿತವಾದ ಆಯತಿಯುಳ್ಳವರಿಗೆಲ್ಲ ಈ ಪತ್ರಿಕೆಯು ಸುಲಭವಾಗಿ ಲಭಿಸುವಂತಿರಬೇಕೆಂಬ ಅಭಿಪ್ರಾಯದೊಡನೆಯೂ ಇದರ ಚಂದಾದರವನ್ನು ಕೆಳಗೆ ಬರೆದಿರುವಂತೆ ಕಡಿಮೆ ಮಾಡಿರುತ್ತೇವೆ:—

ಇಂಗ್ಲಿಷ್ ಮತ್ತು ಕನ್ನಡಭಾಗಗಳಿಗೆ.

	ಸ್ಥಳದವರಿಗೆ	ಪರಸ್ಥಳದವರಿಗೆ.
12 ತಿಂಗಳಿಗೆ	8—0—0	9—0—0
6 „	4—0—0	4—8—0
3 „	2—8—0	2—8—0

ಇಂಗ್ಲಿಷ್ ಅಥವಾ ಕನ್ನಡಭಾಗಗಳಿಗೆ.

	ಸ್ಥಳದವರಿಗೆ	ಪರಸ್ಥಳದವರಿಗೆ
12 ತಿಂಗಳಿಗೆ	4—0—0	5—0—0
6 „	2—0—0	2—8—0
3 „	1—4—0	1—8—0

ಷರಾ—ಅಂದರೆ ಮುನ್ಸೀಫರು, ಡೆಪ್ಯುಟಿ ಮತ್ತು ತಾಲ್ಲೂಕ್ ಸಬ್‌ಇನ್ಸ್‌ಪೆಕ್ಟರುಗಳು, ಸ್ಕೂಲ್ ಮಾಸ್ಟರುಗಳು, ವಕೀಲರು, ವಿದ್ಯಾರ್ಥಿಗಳು, ಇವರಿಗೆಲ್ಲ ಈ ಪತ್ರಿಕೆಯು ಸಹ ಈ ದರಕ್ಕೆ ಕೊಡಲ್ಪಡುವದು. ಅಡ್ವಾನ್ಸ್ ಕೊಡಲು ಗುರಿಗೆ ಬಾರದ ದಯಾಸ್ಥನಗಳಿಗೆ ಸುತರಾಂ ನಿಗೇಕೊಡಲ್ಪಡಲಾರದು. ಚಂದಾದಾರರು ಇಂಗ್ಲಿಷ್ ಭಾಗವನ್ನಾಗಲಿ ಕನ್ನಡಭಾಗವನ್ನಾಗಲಿ ಅಥವಾ ಎರಡನ್ನಾಗಲಿ ತಗೆದುಕೊಳ್ಳಬಹುದು. ಚಂದಾಹಣವನ್ನು ಮುಂಗಡವಾಗಿಯೇ ಕಳುಹಿಸತಕ್ಕದ್ದು. ಮೊದಲಿನವರಿಗಿಂತ ಕಡಿಮೆಯಾಗಿ ಚಂದಾ ಮೊಬಲಗು ಅಂಗೀಕರಿಸಲ್ಪಡಲಾರದು.

ನೋಟುಗಳು ರವಾನಿಸತಕ್ಕವರು ನೋಟಿನ ಕಳುಹಿಸುವ ಅರ್ಧಗಳನ್ನು ತಲುಪಿದ ಬಗ್ಗೆ ನಮ್ಮ ಕಾಗದವು ಬಂದ ಕೂಡಲೇ ಬಾಕೀ ಅರ್ಧ ನೋಟನ್ನು ರವಾನಿಸತಕ್ಕದ್ದು. ಟಿಕೆಟ್ಟುಗಳು ಕಳುಹಿಸತಕ್ಕವರು ರೂಪಾಯಿ ಒಂದಕ್ಕೆ ಒಂದು ಆಣೆಯಂತೆ ಡಿಸ್ಕೌಂಟು ಸಹ ಸೇರಿಸಿ ಕಳುಹಿಸತಕ್ಕದ್ದು. ಅರ್ಧಾಣೆ ಮತ್ತು ಕಾಲಾಣೆ ಟಿಕೆಟ್ಟುಗಳನ್ನು ಕಳುಹಿಸಬಾರದು. ಡಿಸ್ಕೌಂಟುಯಿಲ್ಲದೆ ಕಳುಹಿಸಲ್ಪಡುವ ಮೊಬಲಗಿನಲ್ಲಿ ಅದು ಮುರಿದುಕೊಳ್ಳಲ್ಪಟ್ಟು ಮಿಕ್ಕ ಮೊಬಲಗು ಲೆಕ್ಕಕ್ಕೆ ದಾಖಲು ಮಾಡಿಕೊಳ್ಳಲ್ಪಡುವದು.

ಪ್ರಕಟನೆಯ ರಿವಾಜ್.

ಮೊದಲನೆಯ ದಫಾ ಪಂಕ್ತಿ ಒಂದಕ್ಕೆ ೦—೨—೦
ಎರಡನೆಯ ದಫಾ ಪಂಕ್ತಿ ಒಂದಕ್ಕೆ ೦—೧—೦

ಷರಾ—ಎರಡಾವರ್ತಿಗಿಂತ ಜಾಸ್ತಿಯಾಗಿ ಎಷ್ಟು ತಡವೆ ಹಾಕಿಸ್ ಮಾಡಿದಾಗ್ಯೂ ಪಂಕ್ತಿ ಒಂದಕ್ಕೆ ೧ ಆಣೆಯಂತೆಯೇ ಲೆಕ್ಕ ಮಾಡಲ್ಪಡುವದು. ಈ ಪತ್ರಿಕೆಯಲ್ಲಿ ಘಾಯಿಶ್ ಮಾಡುವಬಗ್ಗೆ ಪ್ರಕಟನೆಗಳು ಕಳುಹಿಸುವವರು ಅವು ಎಷ್ಟುವರ್ತಿ ಘಾಯಿಶ್ ಮಾಡಲ್ಪಡಬೇಕೆಂಬ ಆ ಅಂಶವನ್ನು ಸ್ಪಷ್ಟವಾಗಿ ತಿಳಿಸತಕ್ಕದ್ದು. ಇಲ್ಲದಿದ್ದರೆ ಅವರು ನಮಗೆ ನಿಲ್ಲಿಸುವಂತೆ ಬರೆಯುವವರೆಗೆ ಅವು ಪ್ರಕಟಿಸುತ್ತಿದ್ದು ಹಾಗೆ ಎಷ್ಟುವರ್ತಿ ಪ್ರಕಟಿಸಲ್ಪಟ್ಟಿದ್ದಾಗ್ಯೂ ಮೇಲಿನಂತ ದರದಂತೆ ಕಿಮ್ಮತ್ತು ವಸೂಲ್ ಮಾಡಲ್ಪಡುವದು. ಪ್ರಕಟಿಸುವಬಗ್ಗೆ ಕಳುಹಿಸಲ್ಪಡತಕ್ಕ ಪ್ರಕಟನೆಗಳನ್ನು ಆಯಾ ಸೋಮವಾರದ ಪ್ರಾತಃಕಾಲ ೧ ಘಂಟೆಯೊಳಗಾಗಿ ಕಳುಹಿಸಬೇಕು. ಪ್ರಕಟನೆಯಬಗ್ಗೆ ಈ ಪತ್ರಿಕೆಗೆ ಕಳುಹಿಸಲ್ಪಡತಕ್ಕ ಕಾಗದಗಳಲ್ಲಿ ತಿಳಿಸಲ್ಪಡುವ ಅಭಿಪ್ರಾಯಗಳಿಗೆ ನಾವು ಜವಾಬ್ದಾರರಾಗಲಾರೆವು. ಕ್ರಮವಾಗಿ ರುಜುಮಾಡಿದ ಹೆಸರಿಲ್ಲದ ಪತ್ರಗಳನ್ನು ಪ್ರಕಟಿಸಲಾರೆವು. ಹಿಂದಿರುಗಿಸಲ್ಪಟ್ಟ ಕಾಗದಗಳು ವಾಪಸು ಕಳುಹಿಸಲ್ಪಡಲಾರವು.

"IT RECOMENDS ITSELF"

ALL WHO SUFFER FIND SURE RELIEF.

LITTLE'S

ORIENTAL BALM

THE MOST EFFECTUAL MODERN REMEDY FOR PAIN.

ಲಿಟಲ್ ಯೆಂಬವರಿಂದ ತಯಾರುಮಾಡಲ್ಪಟ್ಟ "ಓರಿಯಂಟಲ್‌ಬಾಮ್" ಎಂಬ ಪೂರ್ವದೇಶ ಸಂಬಂಧವಾದ ಅಮೂಲ್ಯ ತೈಲವು ಸ್ವಾಶ್ಚರ್ಯ ಪ್ರದರ್ಶಕವಾದದ್ದು, ಮತ್ತು ಸಫಲವಾದ ನವೀನ ಪ್ರತಿಕ್ರಿಯಾತ್ಮಕವಾದ ಔಷಧವು. ಇದರಿಂದ ಸಕಲ ವಾತರೋಗಗಳೂ, ವಾತಸಂಬಂಧಗಳಾದ ಸಂಧಿಬಂಧಗಳೂ ನಿವೃತ್ತಿಯಾಗುವವು. ಮುಖ್ಯವಾಗಿ ಚಿರಕಾಲಿಕ ವಾದ ವಾತರೋಗಗಳು, ಕಾಸ, ಗಂಟಲುನಲ್ಲಿ ಉರಿ, ನರೆಪುನೋವು, ಶೀಲಬಾಯು, ಕಟಿವಾಯು, ಉಳುಕು ನೋವು, ತಲೆನೋವು, ಕಿವಿನೋವು ಮುಂತಾದ ರೋಗಗಳಿಗೆಲ್ಲ ನಿಸ್ಸಂದೇಹವಾಗಿ ಬಹಳ ಪ್ರಯೋಜನವನ್ನುಂಟು ಮಾಡತಕ್ಕದ್ದು. ಈ ತೈಲವನ್ನು ನೋವಿರುವ ಸ್ಥಳಗಳಲ್ಲಿ ಕಲವಾವರ್ತಿ ಸವರಿ ಕಾವುಕೊಡುವಂತೆ ಚೆನ್ನಾಗಿ ತಿಕ್ಕಿದರೆ ಸಣ್ಣವಾದ ಯಾವ ನೋವುಗಳನ್ನು ನಿವೃತ್ತಿ ಮಾಡುವಂಥಾ ಉತ್ತಮ ತೈಲವಾಗಿರುತ್ತದೆ. ಸಕೃತ್ಪ್ರಯೋಗದಿಂದಲೇ ಶಿರಶ್ಶೂಲೆಯು ಮತ್ತು ಜ್ವರವು ಶೀಘ್ರವಾಗಿ ನಿವೃತ್ತಿಯಾಗುವವು. ಗಂಟಲು ನೆಲ್ಲಿಯಲ್ಲಿ ಆಗುವ ಉರಿ ಅಥವಾ ವ್ರಣಗಳಿಗೆ ಈ ತೈಲವು ಅದ್ಭುತವಾದ ಮತ್ತು ಶೀಘ್ರವಾದ ಸಂಪೂರ್ಣ ಗುಣವನ್ನುಂಟುಮಾಡುವದು. ಅದ್ಭುತವಾದ ಈ ಔಷಧವನ್ನು ಉಪಯೋಗಿಸಿದಲ್ಲಿ ಅದರ ಪ್ರಯೋಜನವು ಸ್ವತಃವೇ ವ್ಯಕ್ತವಾಗುವದು. ಈ ತೈಲವು ಶೀತ ಗಾಳಿ ಮುಂತಾದವುಗಳಿಗೊಳಗಾಗಿ ಸಂಚರಿಸುವಂಥಾ ಪ್ರಯಾಣಿಕರು, ಬೇಟೆಯಾಡುವವರು, ವ್ಯಾಯಾಮ ಮಾಡುವವರು, ಮುಂತಾದವರಿಗೆಲ್ಲ ಅಮೂಲ್ಯವಾದದ್ದು.

ಪರೀಕ್ಷಕರ ಅಭಿಪ್ರಾಯವು.

ಐರ್ಲ್ಯಾಂಡ್ ದೇಶದ ಫಾರ್ಮಸ್ಯೂಟಿಕಲ್ ಸೊಸೈಟಿಯೆಂಬ ಔಷಧಶಾಲೆಯ ಪ್ರಿನ್ಸಿಪಾಲರಾದವರೂ, ಸದರೀ ದೇಶದ ಜಿಯಾಲಜಿಕಲ್ ಸೊಸೈಟಿ ಯೆಂಬ ಭೂತತ್ವಶಾಸ್ತ್ರನಿವೇದಕ ಸಮಾಜದ ಮೆಂಬರರೂ, "ಮ್ಯಾನುಯಲ್ ಆಫ್ ಯೂರಿನ್" ಎಂಬ ಗ್ರಂಥಕರ್ತರೂ, ರಸಾಯನ ವಿದ್ಯಾವಿಷಯಕವಾದ ಅನೇಕ ಲೇಖನಾಧಿಕಾರಿಗಳೂ, ಇರುವ ಡಾಕ್ಟರ್ ಟಿಚ್ ಬೋರ್ನ್ (C. R. Tichborne, L. L. D., F. C. S., M. R. I. A.,) ಯೆಂಬವರು ಅಭಿಪ್ರಾಯ ಪಟ್ಟಿರುತ್ತಾರೇನೆಂದರೆ—ಲಿಟ್ಲ್‌ರವರ ಓರಿಯಂಟಲ್ ಬಾಮ್ ತೈಲವನ್ನು ಪರಿಶೋಧಿಸಿ ಪರೀಕ್ಷಿಸಿದ್ದರಲ್ಲಿ ಇದು ಬಹುವಿಧ ಮೂಲಿಕೆಗಳ ರಸದಿಂದ ಕೂಡಿದ ತೈಲವೆಂದೇ ಕಾಣುತ್ತಲಿದೆ, ಇದು ಬೇರೆ ಬೇರೆ ಉಪಯೋಗಿಸಲ್ಪಡುವಾಗ ಶೀಘ್ರವಾಗಿ ನಿರುಪದ್ರವಕರವಾದದ್ದಾಗಿದ್ದರೂ, ನಿಜವಾಗಿ ಪ್ರಬಲ ರೋಗ ನಿವಾರಕ ಶಕ್ತಿಯುಳ್ಳದ್ದಾಗಿರುತ್ತದೆ. ಈ ಮಿಶ್ರೌಷಧವು ನರಗಳನ್ನು ಸ್ಥಿಮಿತಕ್ಕೆ ತರತಕ್ಕದ್ದಾಗಿರುವದರಿಂದ ಇದು ಯಾವ ತರದ ರೋಗಗಳಿಗೆ ಉಪಯುಕ್ತವೆಂದು ತಿಳಿಸಲ್ಪಟ್ಟಿದೆಯೋ ಸದರೀ ರೋಗಗಳಲ್ಲಿ ಅದರ ಪ್ರಯೋಜನವು ವ್ಯಕ್ತವಾಗುವದು. ಈ ತೈಲವು ಸಂಪೂರ್ಣ ಬಾಹ್ಯಪ್ರಯೋಗಕ್ಕೋಸ್ಕರ ತಯಾರುಮಾಡಲ್ಪಟ್ಟಿರುತ್ತದೆ.

ಇದರ ಕ್ರಯ—ಸೀಸೆ ಒಂದಕ್ಕೆ ೧ ರೂಪಾಯಿ.

ಇದು ವಿಪ್ಪ ಔಷಧ ಶಾಪುಗಳಲ್ಲಿಯೂ, ಮಹಮ್ಮದ್ ಯೂಸೂಫ್ ಬೀದಿಯಲ್ಲಿ, ೨೦ನೇ ನಂಬರ್ ಮನೆಯೊಳಗಿರುವ, ಮ. ಎ. ಸಿ. ಬೆರ್ರಿಮನ್ ಯವರಲ್ಲಿಯೂ, ಈ ಕೆಳಗಿರುವ ಅವರ ಏಜಂಟರುಗಳಾದ ಜೆ. ವಸ್ಟ್ ಯವರ ಕಂಪೆನಿಯಲ್ಲಿಯೂ, ಮೆ. ಕೆಪ್ಟನ್ ಅಂಡ್ ಕಂಪೆನಿಯವರಲ್ಲಿಯೂ, ರಿಗ್ಸ್ ಯವರ ಕಂಪೆನಿಯಲ್ಲಿಯೂ ದೊರೆಯುವದು.

AGENTS.—Messrs, J. Wyst, Chemist, &c., Bangalore.
Captain & Co. Chemists, Bangalore.
Riggs & Co., Chemists, Bangalore; and of
Mahomed Yousoff and Sons, The Cash Bazar, Bangalore
A. C. Berryman & Co.,
20 Sambodoss Street Madras.

Bangalore City Municipality.

ಬೆಂಗಳೂರುಸಿಟಿ ಮ್ಯುನಿಸಿಪಾಲಿಟಿ.

ಸ೯ ೧೮೮೮ನೇ ಇಸವಿ ಆಗಸ್ಟು ೬ನೇ ತಾರೀಖು ಸೋಮವಾರ ಪ್ರಾತಃಕಾಲ ೭½ ಘಂಟೆಗೆ ಸಿಟಿ ಮ್ಯುನಿಸಿಪಲ್ ಕಮಿಷನರುಗಳು ಕಮ್ಯುನಿಟಿ ಹಾಲ್ ಕಟ್ಟಡದೊಳು ಸಭೆ ಸೇರುವಾಗ ಅವರ ಆಲೋಚನೆಗೆತರಲ್ಪಡುವವಿಷಯಗಳಯಾದಾಸ್ತು.

೧. ೧೮೮೮ನೇ ಇಸವಿ ಜೂನ್ ತಿಂಗಳಿಂದಾಗಿ ನಗದು ಜಮಾಖರ್ಚು ಲೆಕ್ಕ ಮತ್ತು ಮರಿ ಲೆಕ್ಕಗಳು.

೨. ಕಾಶೀ ವಿಶ್ವೇಶ್ವರ ದೇವಸ್ಥಾನದ ಸಂದಿ ಈಗ ಅನಾರೋಗ್ಯಕರವಾದ ಹೊಂಡವಾಗಿರುವದರಿಂದ ಅದನ್ನು ತಪ್ಪಿಸತಕ್ಕಬಗ್ಗೆ ಸದರೀ ಸಂದನ್ನು ಸುಬ್ರಹ್ಮಣ್ಯದೇವರ ಬೀದಿಗೆ ಸೇರುವವರೆಗೆ ಸಿಟ್ಟಿಗೆ ತೆಗೆದುಕೊಂಡು ಹೋಗಬೇಕೆಂಬವಿಷಯ.

೩. ತಿನ್ನುವ ಮತ್ತು ಕುಡಿಯುವ ಪದಾರ್ಥಗಳಲ್ಲಿ ಕೆಟ್ಟ ಪದಾರ್ಥಗಳನ್ನು ಬೆರಸಿ ಮಾರುವ ವಾಡಿಕೆಯನ್ನು ತಪ್ಪಿಸುವದಕ್ಕಾಗಿ ಹುಟ್ಟಿದ ೧೮೭೬ನೇ ಇಸವಿಯ ೩ನೇ ನಂಬರ್ ಚಿತಾಗಾಧಿಕ್ರಮದ ನಿಬಂಧನೆಗಳನ್ನು ಇಲ್ಲಿ ಜಾರೀಗೆ ತರುವ ವಿಷಯ.

೪. ಬೆಂಗಳೂರು ಪಟ್ಟಣದಲ್ಲಿಯ ಅಂಗಡಿಗಳನ್ನು ಮುಚ್ಚುವಕಾಲಗಳ ಕಾಲದವರೆಗಿನ ಗುತ್ತಿಗೆ ಪಡೆಯತಕ್ಕಬಗ್ಗೆ ಬಂದಿರುವ ದರಖಾಸ್ತುಗಳವ್ಯತಸ್ಥೆ.

೫. ಅಸಾಧ್ಯವಾದ ರೋಗಪೀಡಿತರಾದ ಅನಾಥರಿಗಾಗಿ ಸ್ಥಾಪಿಸಲ್ಪಟ್ಟಿರುವ ಗವರ್ನಮೆಂಟ್ ಮನೆಯೆಂಬ ಸಾಲೆಯ ವಿಷಯವಾಗಿ ಸದರಿ ಕಾಗದ ಪತ್ರಗಳ ಸಹಿತ ಮೈಸೂರು ಸರಕಾರದ ಚೀಫ್‌ಸೆಕ್ರೆಟರಿಯವರಿಂದ ಬಂದ ಸ೯ ೧೮೮೮ನೇ ಇಸವಿ ಜುಲೈ ೧೯ನೇ ತಾರೀಖು ೨೨೩೨—೩೫೮ನೇ ನಂಬರ್ ಯಾದಿ.

ಸಿಟಿ ಮ್ಯುನಿಸಿಪಲ್ ಆಫೀಸ್ }
ಬೆಂಗಳೂರು. }
೨೩ನೇ ಜುಲೈ ೧೮೮೮ }

A. Srinivasa Charlu, B. A.
Vice-President,
City Municipal Commission.

NOTICE.

VAIDYASARA SANGRAHA

A TREATISE ON THE PRINCIPLES OF
HINDU MEDICINE.

Price including Postage Rs.5 6-0

ವೈದ್ಯಸಾರ ಸಂಗ್ರಹ.

ಈಗ್ರಂಥಾಪೇಕ್ಷೆಯುಳ್ಳವರು ಮೊಬಲಗಿನೊಡನೆ ಕೆಳಗೆ ರುಜುಮಾಡಿರತಕ್ಕವರ ಹೆಸರಿಗೆ ಬರೆದುಕೊಂಡರೆ ಪುಸ್ತಕ ಕೂಡಲೇ ಕಳುಹಿಸಲ್ಪಡುವದು. ಮೊಬಲಗು ಇಲ್ಲದ ದರಖಾಸ್ತುಗಳಿಗೆ ಸುತರಾಂ ನಿಗೇಕೊಡಲ್ಪಡಲಾರದು.

ಇದರ ಕ್ರಯ ... ...ರೂ॥ ೫—೦—೦
ಪ್ಯಾಕಿಂಗ ಮತ್ತು ಅಂಚೇಹಾಸಲ್, ೦—೬—೦

ಟಿ. ಬಿ. ವೆಂಕಟಾಚಾರ್,
ಆಸ್ಪತ್ರೆರೋಡ್ ಬೆಂಗಳೂರು.

ವಿಕ್ಟೋರಿಯಾ ಮಹಾರಾಣಿ

ಪುನೆ ಚಿತ್ರಶಾಲೆಯಲ್ಲಿ ಸ್ಥಾಪಿಸಲ್ಪಟ್ಟಿರುವ ಜೋಡಿ 3 ಲಾಯಿತ್ರಿಯಲ್ಲಿ, ಹಿಂದೂ ದೇವರುಗಳ, ಚರಿತ್ರೆಗಳ ಮೂಲಕ ಪ್ರಸಿದ್ಧರಾದ ಪತಿವ್ರತೆಯರು, ಸುಂದರಿಗಳಾದ ನಾಟಕ್ ಹೆಂಗಸರ ಈ ವಸ್ತುಗಳ ಬಣ್ಣದ ಚಿತ್ರಗಳು ತಯಾರಾಗುತ್ತವೆ. ಇವುಗಳ ಕೆಲಸಗಾರಿಕೆಯು ನಾಜೂಕನ್ನು ನೋಡಿದರೆ ಕ್ರಯ ಬಹಳ ಅಲ್ಪವಾಗಿದೆ. ಬೇಕಾದವರಿಗೆ ಕ್ರಯಪಟ್ಟಿ ಕಳುಹಿಸಲ್ಪಡುವವು.

ಪ್ರೊ ಸಿಟಿ ಚಿತ್ರಶಾಲೆಯ ಮ್ಯಾನೇಜರ್.

ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA.

MONDAY, JULY 30, 1888.

೧೮೮೮ನೇ ಜುಲೈ ೩೦ನೇ ತಾ॥ ಸೋಮವಾರ.

HOW TO CONQUER DEATH?—No. II.

ಮರಣವ ಜಯಿಸುವದು ಹ್ಯಾಗೆ?

ಪ್ರಾಣಿ ನಿಯತವಾದ ಮೃತ್ಯುವು ಆಯುಸ್ಸಿನ ವಿಷಯದಲ್ಲಿ ಪಂಡಿತರನೇಕರು ನಡೆವಿಯುತ ವಿವಿಧಾಭಿಪ್ರಾಯ ಸ್ವರೂಪಗಳಂ ಬಹಳವಾಗಿ ವಿವರಿಸಿ, ಚಿರಂಜೀವಿಗಳಿಗೆ ಉಪಾದೇಯಗಳಾದ ಕೆಲವು ಮುಖ್ಯ ನಿಯಮಗಳನ್ನು ಈ ಸುಚಿಕೆಯಲ್ಲಿ ತಿಳಿಸುವದಾಗಿ ಗತವಾರದಲ್ಲಿಯೇ ಪ್ರತಿಜ್ಞೆ ಮಾಡಿದ್ದೆವಷ್ಟೆ. ಈಗ ಮನುಷ್ಯನು ಯಮಬಾಧೆ, ಮೃತ್ಯುಭಯ ಮೊದಲಾದವುಗಳಂ ತಪ್ಪಿಸಿಕೊಳ್ಳಲಿಕ್ಕೆ ಯೋಗವು ಸುಲಭ ಸಾಧನವೆಂಬದಾಗಿ ಮಹಾತ್ಮರನೇಕರು ಅಭಿಪ್ರಾಯಪಟ್ಟಿರುವದರಿಂದ ಅದರ ಸ್ವರೂಪವನ್ನರುಹಿ

ಕ್ಕೆಮುಂದಾಗಿ, ಮರಣವೆಂಬುದು ಶರೀರವಿನ್ನಾವಾದ ಆತ್ಮನಿಗುಂಟಾಗತಕ್ಕದ್ದೋ, ಅಥವಾ ಅವನಿಗೆ ಆವರಣ ರೂಪವಾದ ಶರೀರಕ್ಕೆ ಪ್ರಾಪ್ತವಾಗತಕ್ಕದ್ದೋಯೆಂದು ಆಲೋಚಿಸಿ ನೋಡಿದರೆ ತೋರುವದೇನಂದರೆ:—ಆತ್ಮವಾಚ್ಯನಾದವನು ದೇಹತ್ರಯ ವಿಲಕ್ಷಣನಾಗಿಯೂ, ಅವಸ್ಥಾತ್ರಯದಲ್ಲಿ ಸಾಕ್ಷಿಭೂತನಾಗಿಯೂ, ಪಂಚಕೋಶ ವ್ಯತಿರಿಕ್ತನಾಗಿಯೂ, ಚತುರ್ವಿಂಶತಿ ತತ್ವಾತಿರಿಕ್ತನಾಗಿಯೂ, ಸಚ್ಚಿದಾನಂದ ಸ್ವರೂಪನಾಗಿಯೂ ಇರುವನು. ಆತನು ಅನಾದಿಯಾದವನಾದದರಿಂದ ಅವನು ನಿತ್ಯನೆಂಬದಾಗಿಯೂ, ಏಕರೂಪಿಯಾದವನೆಂತಲೂ, ವಿಕಾರಶೂನ್ಯನೆಂತಲೂ, ಜನನ ಮರಣ ರಹಿತನೆಂತಲೂ ಹೇಳಬಹುದು. ಅವನು ಕೊಲ್ಲಲ್ಪಡದೆಯೂ ಸಾಯದೆಯೂ ಇರುವವನಾದದರಿಂದ ಅವನಿಗೆ ನಾಶವೆಂಬದೆಂದಿಗೂ ಉಂಟಾಗಲಾರದು. ಮನುಷ್ಯನು ಜೀರ್ಣವಸ್ತ್ರಗಳಂ ತ್ಯಜಿಸಿ ನೂತನವಸ್ತ್ರಗಳಂ ಪರಿಗ್ರಹಿಸುವಂತೆ, ಆತ್ಮನು, ಕಾಲಗತಿಯಿಂದ ಶೈಥಿಲ್ಯವಂ ಪೊಂದುವ ಪಾಂಚಭೌತಿಕವಾದ ಶರೀರವಂ ತ್ಯಜಿಸಿ ನೂತನಶರೀರವಂ ಪರಿಗ್ರಹಿಸುವನು. ಈ ಆತ್ಮನನ್ನು ಆಯುಧಗಳು ಛೇದಿಸಲಾರವು, ಅಗ್ನಿ ದಹಿಸಲಾಗದು, ಉದಕ ನೆನೆಸಲಾರದು, ವಾಯುವು ಶೋಷಿಸಲಾರದು. ಮತ್ತು ಅಗೋಚರನಾಗಿಯೂ, ಅಚಿಂತ್ಯನಾಗಿಯೂ, ಕರ್ಮೇಂದ್ರಿಯಗಳಿಗೆ ಅವಿಷಯನಾಗಿಯೂ ಇರುವನಾದದರಿಂದ ಅಂತವನಿಗೆ ಮರಣ ವುಂಟಾಗುವದೆಂದು ನುಡಿಯುವದು ಅಸಂಗತವಾಗಿರುತಿದೆ. ಆದರೆ ಅವನಿಗೆ ಆವರಣ ರೂಪವಾದ ಶರೀರಕ್ಕೆ ಮರಣವುಂಟಾಗುವದೆಂದು ಹೇಳಬೇಕಾಯಿತಷ್ಟೆ. ಜಡವಾದ ಶರೀರಕ್ಕೆ ಮರಣವು ನುಡಿಯುವದು ಸಹ ಅನುಚಿತವೆಂದು ತೋರುತಿದೆ. ಆದರೆ ಆತ್ಮನಿಗೆ ಉಪಾಧಿವಶಾತ್ ಉಂಟಾಗಿರುವ ಪ್ರಾರಬ್ಧವಶಾ ನಿವೃತ್ತಿಯನ್ನೇ ಮರಣವೆಂದು ನುಡಿಯಬಹುದು. ಆತ್ಮವಿಚಾರ ಮಾಡತಕ್ಕವನು ಉಪಾಧಿರೂಪವಾದ ಮೇಲೆ ಕಂಡ ಕರ್ಮಬಂಧವು ನಿವೃತ್ತಿಸಿಕೊಳ್ಳಲಿಕ್ಕೆ ಪ್ರಯತ್ನ ಪಡಬೇಕಾದದ್ದು ಪ್ರಥಮ ಕರ್ತವ್ಯವಾಗಿರುತಿದೆ. ಇದಕ್ಕೆ ಯೋಗವು ಮುಖ್ಯಸಾಧನವಾಗಿ ತಿಳಿಸಲ್ಪಟ್ಟಿರುವದರಿಂದ ಅಂತಾ ಸಾಧನವು ಕೈಗೊಳ್ಳಲಿಕ್ಕೆ ಯೋಗ್ಯನಾದ ಅಧಿಕಾರಿ ಲಕ್ಷಣವನ್ನಿದರಲಿ ಸ್ವಲ್ಪಮಟ್ಟಿಗೆ ವಿವರಿಸುವೆವು, ತ್ಯಾಗಂಪರೆ-ಲಭ್ಯಾಲಭ್ಯ ವಿಷಯಗಳೆದುರಲ್ಲಿಯೂ ಸಮದೃಷ್ಟಿಯುಂಟಾಗಿ ಕರ್ಮದಲ್ಲಿ ಫಲಾಪೇಕ್ಷೆಯನ್ನಿಟ್ಟವರಿರುವವೇಯೋಗದ ಮುಖ್ಯೋದ್ದೇಶ್ಯವಾದದರಿಂದ ಅದು ಸಿದ್ಧಿಸಿದಂತಾ ಪುರುಷನ ಬಳಿ ಜನನ ಮರಣಗಳೆರಡೂ ಸುಳಿಯಲಾರವು. ಈ ಯೋಗ ವಿದ್ಯೆಯನ್ನಭ್ಯಸಿಸಲಿಕ್ಕೆ ನಿಶ್ಚಯಾತ್ಮಕವಾದ ಬುದ್ಧಿಯು ಪ್ರಥಮತಃ ಅವಶ್ಯಕವಾದದ್ದಾಗಿರುತಿದೆ. ಇದು ಸಾಧಿಸತಕ್ಕವನು ತ್ರೈಗುಣ್ಯ ರಹಿತನಾಗಿಯೂ, ಶೀತೋಷ್ಣಾದಿ ಸುಖ ದುಃಖರಹಿತನಾಗಿಯೂ, ದೃಢನಾದ ಸತ್ವಗುಣ ಪೂರ್ಣನಾಗಿಯೂ, ಸ್ವಸುಖ ವಿಮುಖನಾಗಿಯೂ, ಆತ್ಮಜ್ಞಾನ ಪೂರ್ಣನಾಗಿಯೂ, ಫಲಾಕಾಂಕ್ಷೆ ಇಲ್ಲದೆ, ನಿತ್ಯನೈಮಿತ್ತಿಕಾದಿ ಕರ್ಮಗಳಂ ಶ್ರದ್ಧೆಯೊಡನೆ ಮಾಡತಕ್ಕವನಾಗಿಯೂ, ಲಾಭನಷ್ಟಗಳು, ಜಯಾಪಜಯಗಳು, ಸುಖ ದುಃಖಗಳು, ಲಭ್ಯಾಲಭ್ಯಗಳು, ಶೀತೋಷ್ಣಾದಿಗಳು, ಪ್ರಿಯಾಪ್ರಿಯಗಳು, ಇವುಗಳೆಲ್ಲಾ ಸಮಾನಭಾವನೆ ಯುಳ್ಳವನಾಗಿಯೂ, ಪ್ರತ್ಯಗಾತ್ಮಸ್ವರೂಪದಲ್ಲಿ ತನಗೆ ತಾನೇ ಆನಂದಿಸುತ ಮನೋಗತಗಳಾದ ಸಮಸ್ತಕೋರಿಕೆಗಳಂ ಬಿಡತಕ್ಕವನಾಗಿಯೂ, ಆಧ್ಯಾತ್ಮಿಕ, ಆಧಿಭೌತಿಕ, ಆಧಿದೈವಿಕಗಳೆಂಬ ತಾಪತ್ರಯಗಳಿಂದ ಪೀಡಿತನಾಗುವಾಗ್ಯೆ ಮನೋ ವಿಕಾರಾನ್ವಿತವದೆ ಸ್ಥೈರ್ಯದಿಂ ವಿರತಕ್ಕನನಾಗಿಯೂ, ಅದೃಷ್ಟವಶಾತ್ ಪ್ರಾಪ್ತಗಳಾದ ಶುಭಾಶುಭಗಳಿಗಾಗಿ ಮೋದ ಖೇದಗಳನ್ನನುಭವಿಸದವನಾಗಿಯೂ, ಕೂರ್ಮವು ತನ್ನ ಕರಚರಣಗಳಂ ಆಕರ್ಷಿಸಿಕೊಂಡು ಅವ್ಯಕ್ತನಾಗಿಟ್ಟುಕೊಳ್ಳುವಂತೆ, ಇಂದ್ರಿಯಗಳಂ ನಿಗ್ರಹಿಸಿ ಸ್ವಾಧೀನ ಪಡಿಸಿಕೊಳ್ಳಲಿಕ್ಕೆ ಶಕ್ತಿಯುಳ್ಳವನಾಗಿಯೂ ಇರಬೇಕು.

ಇಂತಾ ಸಕಲ ದೋಷರಹಿತನಾದ ಪುರುಷನನ್ನು ಸ್ಥಿತಪ್ರಜ್ಞನೆಂದರಿಯಬೇಕು. ಉಪವಾಸಾದಿಗಳಂ ಮಾಡುವ ಪುರುಷನಿಗೆ ತತ್ತದಿಂದ್ರಿಯಗಳಿಂದಲೇ ಆಯಾ ಇಂದ್ರಿಯ ಸಂಬಂಧವಾದ ವಿಷಯಗಳು ನಿವೃತ್ತಿಯಾಗುವವು. ಪರಂತು ಕೋರಿಕೆ ಎಂಬದು ಪೂರ್ತಿ ಎಂದಿಗೂ ಆತನನ್ನಗಲಲಾರದೆಂದು ಪಂಡಿತರು ಕೆಲವರು ಅಭಿಪ್ರಾಯಪಟ್ಟಿರುತ್ತಾರೆ. ಇದು ಕೆಲವು ಮಟ್ಟಿಗೆ ನಿಜವೆಂದು ಅಂಗೀಕರಿಸಬಹುದು. ಆದರೆ ಪರಮಾತ್ಮನು ಸಂಧಾನದಲ್ಲಿ ಮಗ್ನನಾಗಿರುವವನಿಗೆ ಆ ಕೋರಿಕೆ ಎಂಬದು ಸಹ ಪುಷ್ಟಾಂಗವಾಗಿ ನಶಿಸಿ ಹೋಗುವದರಲ್ಲಿ ಸಂಶಯವಿಲ್ಲವು. ಸ್ಥಿತಪ್ರಜ್ಞೆಯುಕ್ತ ಪುರುಷನಿಗೆ ಮೊದಲು ಇಂದ್ರಿಯಗಳ ನಿಗ್ರಹವು ಆವಶ್ಯಕವಾದದ್ದಾಗಿರುತಿದೆ. ಅದು ನಿಗ್ರಹಿಸಲಾರದವನಿಗೆ ತತ್ತ್ವಜ್ಞಾನವು ಸ್ಥಿರಪಡೆಯು ತಪ್ಪಲಾರದು. ತಾದೃಶ ಸ್ಥಿರತೆಯು ನಿಯತನಾದ ಬಳಿಕ ಅವುಗಳಲ್ಲಿ ಆಸಕ್ತಿಯು ಕದಲಿಯಾಗಲಾರದು. ಆಸಕ್ತಿ ಯಾವಾಗ ತಲೆದೋರುವದೋ ಆಗ ಭೋಗಪ್ರವೃತ್ತಿ ಯುಂಟಾಗುವದು. ಅಂತಾ ಭೋಗೇಚ್ಛಾ ಪ್ರವೃತ್ತಿಗಳಿಗೆ ಯಾವಾಗ ವ್ಯಾಘಾತ ವುಂಟಾಗುವದೋ ಆಗ ತತ್ಕ್ಷಣದಲ್ಲೇ ಕ್ರೋಧ ವುಂಟಾಗುವದು. ಬಳಿಕ ಅದರಿಂದ ಅವಿವೇಕವೂ, ತನ್ಮೂಲಕ ವಿಸ್ಮೃತಿಯೂ, ಅನಂತರ ಬುದ್ಧಿ ನಾಶವೂ, ತರುವಾಯ ಆತ್ಮನಾಶವೂ ತನ್ನಂತೆ ಪ್ರಾಪ್ತವಾಗುವವು. ಆದದರಿಂದ ಯಾವಪುರುಷನು ಪ್ರಿಯಾಪ್ರಿಯಗಳಂ ಭಾವಿಸದೆ ಇಂದ್ರಿಯಗಳಂ ಸ್ವವಶ ಪಡಿಸಿಕೊಳ್ಳುವನೋ ಅಂತವನು ಸ್ವ ಶರೀರ ಸಂರಕ್ಷಣಾರ್ಥ ಬೇಕಾದ ಮಟ್ಟಿಗೆ ಇಂದ್ರಿಯ ಪ್ರಯುಕ್ತ ವಿಷಯಗಳನ್ನನುಭವಿಸುವ ತಾವಸನಾಗಿದ್ದಾಗ್ಯೂ ಅವನ ಹೃದಯವು ನಿರ್ಮಲವಾಗಿಯೇ ಇರುವದು. ನಿರ್ಮಲ ಚಿತ್ತವುಳ್ಳ ಪುರುಷನನ್ನು ಯಾವ್ವಿಧ ದುಃಖವೂ ಸೋಂಕಲಾರದು. ಆದಕಾರಣ ಅಂತವನಿಗೇ ಬುದ್ಧಿಯು ತೀವ್ರವಾಗಿ ಸ್ಥೈರ್ಯವನ್ನೈದುವದು ಪ್ರಸಿದ್ಧವಾಗಿರುತಿದೆ. ಮತ್ತು ಇಂದ್ರಿಯ ನಿಗ್ರಹವಿಲ್ಲದವನಿಗೆ ಆತ್ಮನಿಷ್ಠೆಯುಕ್ತವಾದ ಬುದ್ಧಿಯೂ, ಆತ್ಮಸ್ವರೂಪ ಭಾವವೂ, ಚಿತ್ತೋಪರತಿಯೂ, ಬ್ರಹ್ಮಾನಂದ ಸುಖವೂ, ಉಂಟಾಗಲಾರದೆಂದು ದೃಢವಾಗಿ ತಿಳಿಯತಕ್ಕದ್ದು. ಯಾವನ ಇಂದ್ರಿಯಗಳು ಆತನ ಮನಸ್ಸಿಗೆ ಅಸ್ವಾಧೀನಗಳಾಗಿ ವಿಷಯಗಳಲ್ಲಿ ಸ್ವೇಚ್ಛೆಯ ಪ್ರವೃತ್ತಿಯುಳ್ಳದ್ದಾಗಿರುವವೋ ಅಂತವನ ಮನಸ್ಸು ಆತ್ಮಾನಾತ್ಮ ವಿವೇಕವನ್ನು, ಜಲರಾಶಿಯ ಮಧ್ಯದೊಳು ಚಲಿಸುವ ವಾಯುವು ಕರ್ಣಧಾರನಿಲ್ಲದ ನಾವೆಯನ್ನು ತಿರಿಗಿಸುವಂತೆ, ಅಲ್ಲಾಡಿಸಿ ಬಿಡುವದೆಂದು ತಿಳಿಯತಕ್ಕದ್ದು. ಸಾಧಾರಣವಾಗಿ ಆತ್ಮಾನಾತ್ಮಜ್ಞಾನವೆಂಬದು ಎಲ್ಲರಿಗೂ ಸಿದ್ಧಿಸುವದಿಲ್ಲವು. ಮತ್ತು ಅಂಧಕಾರದಂತೆ ಅದು ಅವ್ಯಕ್ತವಾದದ್ದಾಗಿರುತಿದೆ. ಸಮಸ್ತ ನದಿಗಳೂ ಸಮುದ್ರದಲ್ಲಿ ಹೋಗಿ ಸೇರಿದಾಗ್ಯೂ ಆ ಸಮುದ್ರೋದಕವು ಹ್ಯಾಗೆ ಹದ್ದನ್ನು ಮೀರದೆ ಸ್ಥಿರವಾಗಿರುವದೋ ಅದೇರೀತಿ ಇಂದ್ರಿಯ ಪ್ರಯುಕ್ತವಾದ ವಿಷಯಗಳು ಅಚಂಚಲ ಹೃದಯವುಳ್ಳ ಪುರುಷನಲ್ಲಿ ಪ್ರವೇಶಿಸಿದಾಗ್ಯೂ ಅವನು ನಿರ್ವಿಕಾರ ಚಿತ್ತನಾಗಿ ಶಾಂತ ಸ್ವಭಾವವುಳ್ಳವನಾಗಿರುವನು. ವಿಷಯಾಸಕ್ತನಾದ ನರನಿಗೆ ಉಪಶಾಂತಿ ಎಂಬದು, ಸುತರಾಂ ಉಂಟಾಗಲಾರದು. ಮುಖ್ಯವಾಗಿ ಇದರಿಂದ ಯೋಗಾಭ್ಯಾಸ ಮಾಡುವವನಿಗೆ ಇಂದ್ರಿಯ ನಿಗ್ರಹವೂ, ಮನೋದಾರ್ಢ್ಯವೂ, ಆಶಾನಿವೃತ್ತಿಯೂ, ಆವಶ್ಯಕಗಳೆಂದೇ ಸ್ಪಷ್ಟವು. ಮೃತ್ಯು ನಿವಾರಣಕ್ಕೆ ಯೋಗ ಒಂದು ಸಾಧನವೆಂದೇರ್ಪಟ್ಟ ಬಳಿಕ ಇಷ್ಟರ ಸುಲಭವಾದ ಉಪಾಯವನ್ನು ಎಲ್ಲರೂ ಯಾತಕ್ಕೆ ಪರಿಗ್ರಹಿಸಲಾಗದೆಂದು ಯಾರಾದರು ಕೇಳಬಹುದು. ಈ ವಿದ್ಯಾಭ್ಯಾಸದ ವಿಷಯದಲ್ಲಿ ತಿಳಿಸಲ್ಪಟ್ಟಿರುವ ಕಾಲ ದೇಶಾವಸ್ಥೆಗಳನ್ನೂ, ಅಧಿಕಾರಿ ಸ್ವರೂಪವನ್ನೂ, ಗುರುಲಕ್ಷಣವನ್ನೂ ಪರ್ಯಾಲೋಚಿಸಿ ನೋಡಿದರೆ, ಪುರನಿವಾಸಿಯಾದ ಸುಜನರಿಗೆ ಅಸಾಧ್ಯವೆಂದು ತೋರುತಿದೆ. ನಾವು ಯಾವ ತನಕ ಸಾಂಸಾರಿಕ ಬಂಧವು ಬಿಡಲಾರದೋ ಅದುವರಿವಿಗೆ ಇಂದ್ರಿಯಗಳು ನಮ್ಮ ಮನವು ಜಯಿಸುತಲಿರುವವು. ಆಶೆಯೆಂಬಾ ನವ್ಯನ್ನು ತೊರೆಯಲಾರದು. ನಾವು ವಾಸಮಾಡುವ ಪ್ರದೇಶವಾದರೋ ಮನೋನಿಗ್ರಹವನ್ನುಂಟುಮಾಡತಕ್ಕದ್ದಾಗಿರುವದಿಲ್ಲವು. ನಮಗೆ ಲಭಿಸತಕ್ಕ ಪದಾರ್ಥಗಳಾದರೋ ವಿಷಯ ವಿಮುಖತೆಯನ್ನುಂಟು ಮಾಡುವಂತಾ ವಾಗಿರಲಾರವು. ನಮ್ಮ ಸಂಸೃತಿ ಸಂಬಂಧವಾದರೋ ವ್ಯಾಮೋಹಕಾರಿಯಾಗಿಯೂ ನಿರ್ಬಂಧರೂಪವಾಗಿಯೂ ಇರುವದು. ಅಂತಾ ಸಂಬಂಧವು ನೆಲಗೊಂಡಿರುವವರಿವಿಗೆ ಧನಸಂಪ್ರಾಪ್ತಿಗಾಗಿ ಮೋಹವೂ, ಅಪ್ರಾಪ್ತಿಗಾಗಿ ಖೇದವೂ, ಸ್ವಜನ ಖೇದವೂ ತಪ್ಪಲಾರವು. ಇಷ್ಟು ನಿರ್ಬಂಧಗಳಿರುವದರಿಂದ ಇಂದ್ರಿಯ ನಿಗ್ರಹ ಪ್ರವರ್ತಕವಾದ ಮನೋದಾರ್ಢ್ಯವು ಸುಲಭವಾಗಿ ಸಿದ್ಧಿಸಲಾರದು. ವಿಷಯಗಳ ಅಸಾನ್ನಿಧ್ಯದಲ್ಲಿ ಶತ್ರುರೂಪಗಳಾದ ಇಂದ್ರಿಯನಿಗ್ರಹ ಮಾಡುವದೇನು ಆಶ್ಚರ್ಯವಲ್ಲವಾಗಿ ವಿಷಯಸಾನ್ನಿಧ್ಯದಲ್ಲಿ ಮಾಡುವ ನಿಗ್ರಹವೇ ಶ್ರೇಷ್ಠವಾದದ್ದೆಂತಲೂ, ಅದೇ ದೃಢವಾಗಿರುವದೆಂತಲೂ ಈಗಿನ ಪಂಡಿತರನೇಕರು ನುಡಿಯಬಹುದು. ಯದ್ಯಪಿ ಇದು ಪ್ರಾಚೀನರು ಅಂಗೀಕರಿಸಿರಲಿಲ್ಲವು. ಉತ್ತಮವಾದ ಅಶ್ವವು ಸಂಗುಣಗಳುಳ್ಳದ್ದಾಗಿದ್ದರೂ ಅದು ಶಿಕ್ಷಿಸಿ ಸ್ವಾಧೀನ ಪಡಿಸಿಕೊಳ್ಳಬೇಕಾದರೆ ಹ್ಯಾಗೆ ವಿಶಾಲವಾದ ನಿರ್ಜನ ಪ್ರದೇಶವು ಅದರ ಶಿಕ್ಷಕನಿಗೆ ಅಪೇಕ್ಷಿತವಾಗಿರುತಿದೆಯೋ ಅದೇರೀತಿ ಇಂದ್ರಿಯಗಳೆಂಬ ಪಂಚಾಶ್ವಗಳನ್ನು ದಂಡಿಸಿ ಸ್ವಾಧೀನಕ್ಕೆ ತಂದುಕೊಳ್ಳಬೇಕಾದರೆ ನಿರ್ಜನಪ್ರದೇಶವೂ, ವಿಷಯಾಭಾವವೂ ಯೋಗಾಭ್ಯಾಸಿಗೆ ಆವಶ್ಯಕಗಳಾಗಿರುತಿವೆ. ನರಸಂಚಾರವಿಲ್ಲದ ಪ್ರದೇಶದಲ್ಲಿ ಮನೋದಾರ್ಢ್ಯದೊಡನೆ ಸಾಧಿಸಬೇಕಾದ ಇಂದ್ರಿಯ ನಿಗ್ರಹವನ್ನೂ ಆಶಾನಿವೃತ್ತಿಯನ್ನೂ ಪುರ ಮಧ್ಯದೊಳು, ಜನ ಸಮೂಹದಲ್ಲಿ ವಿಷಯಾನುಭವಗಳೊಡನೆ ಪಡೆಯುವದಕ್ಕೆ ಸಾಧ್ಯವೆಂದು ನಮಗೆ ತೋರಲಿಲ್ಲವು. ಆದದರಿಂದಲೇ ಈವಿದ್ಯೆ ಸರ್ವಜನಗಳಿಗೂ ಅಭ್ಯಾಸ ಸಾಧ್ಯವಲ್ಲದೆ ಇದೆ. ಯಾವನಿಗೆ ವಿಷಯ ವಿಮುಖತೆಯೂ ವಿರಕ್ತಿಯೂ ಉಂಟಾಗುವದೋ ಅಂತವನು ದೇಹವ್ಯಾಮೋಹವು ಜಯಿಸುವವಿಷಯದಲ್ಲಿ, ಅವಲಂಬಿಸಬೇಕಾದ ಕೆಲವು ಕ್ರಮಗಳು ಮುಂದಿನವಾರದಲ್ಲಿ ತಿಳಿಸುವೆವಾಗಿ ಅವುಗಳಿಗೆ ಈ ಪತ್ರಿಕೆಯನ್ನೋದ ರಸಿಕರೆಲ್ಲರೂ ಮುಖ್ಯ ಅವಧಾನವು ಕೊಡಬೇಕೆಂದು ಕೋರುವದಲ್ಲದೆ ಈ ವಿಷಯವು ಅವರಿಗೆ ಬೇಸರಿಕೆಯನ್ನುಂಟುಮಾಡಲಾರದೆಂದು ನಂಬುತ್ತೇವೆ.

DUTIES OF THE EDUCATED NATIVES

ವಿದ್ಯಾವಂತರಾದ ನೇಟಿವರ ಕರ್ತವ್ಯಗಳು

ಸಾಮಾನ್ಯವಾಗಿ ಇಂಡ್ಯದೇಶಸ್ಥರಿಗೆ ಪ್ರಾಪ್ತವಾಗಿರುವ ದೌರ್ಭಾಗ್ಯ ಸ್ಥಿತಿಯಂ ತೊಲಗಿಸಿ ಅವರಿಗೆ ಮೇಲನ್ನುಂಟು ಮಾಡಬೇಕಾದ ವಿಷಯದಲ್ಲಿ ವಿದ್ಯಾವಂತರಾದವರು ನಡೆಯಕೊಳ್ಳಬೇಕಾದ ವಿಹಿತ ಧರ್ಮಗಳನ್ನು ಗತವಾರದಲ್ಲಿ ಸ್ವಲ್ಪಮಟ್ಟಿಗೆ ವಿವರಿಸಿದ್ದೆವಷ್ಟೆ. ಸದರೀವಿಷಯದಲ್ಲಿ ನಾವು ಮತ್ತೂ ತಿಳಿಸುವದೇನೆಂದರೆ,—ಈಗಿನ ವಿದ್ಯಾವಂತರನೇಕರು ತಮ್ಮ ವಿದ್ಯಾಶಕ್ತಿಯಿಂದಲೇ ಹಿಂದೂಸಮಾಜಿಕಸ್ಥಿತಿಯನ್ನು ಪುನರ್ವ್ಯವಸ್ಥೆ ಮಾಡುವದಕ್ಕೆ ಸಾಧ್ಯವಾಗುವದೆಂಬ ದುರಭಿಪ್ರಾಯವುಳ್ಳವರಾಗಿ, ಬಹುಕಾಲದಿಂದ ನಡೆಗೊಂಡು ನಡೆಯುತಿರುವ ಪದ್ಧತಿಗಳನ್ನು ಕೇವಲ ಉಪನ್ಯಾಸ ಲೇಖನಗಳ ಮೂಲಕ ಒಂದೇಯಾವರ್ತಿ ತರಕೆಳಗೆ ಮಾಡಲಿಕ್ಕೆ ಪ್ರಯತ್ನಪಡುತ್ತಾರೆ. ಇದು ಬಹಳ ಅಸಾಧ್ಯವಾದ ಪ್ರಯತ್ನವಾಗಿರುತಿದೆ. ಈ ವಿದ್ವಾಂಸರು ಪರೋಪದೇಶಕರಾಗಿ ಸಭಾಮುಖದಲ್ಲಿ ನಿಂತು ಉಪನ್ಯಾಸಮೂಲವಾಗ್ಯೆ ಅವರು ಬೋಧಿಸತಕ್ಕ ನೀತಿ ವಾಕ್ಯಗಳೂ, ಅವರು ಪತ್ರಕ್ಕೆ ಸಾಧಕ ಬಾಧಕಗಳೂ, ತೋರಿಸತಕ್ಕ ಉಪಮಾನೋಪಮೇಯಗಳೂ ಕೇವಲ ಪದಾರ್ಥಗಳಾದವಾಗಿರುತಿವೆಯೆ ಹೊರ್ತು ಅವರ ಮಾತುಗಳೊಂದೂ ಸ್ವವಿಷಯಗಳಲ್ಲಿ ಕಾರ್ಯಕಾರಿಯಾಗದೆ ಹೋಗುವದರಿಂದ ಅವು ಅಷ್ಟು ವಿಶೇಷವಾಗಿ ಗೌರವಿಸಲ್ಪಡದೆ ಹೋಗುತಿವೆ. ಸಭಾಜನದಲ್ಲಿ ನಿಂತು ಮಾತನಾಡುವಾಗ್ಯೆ ಅವರಿಗುಂಟಾಗುವಂತಾ ಆವೇಗವು ಅಲ್ಲಿಂದ ಹೊರಟ ಉತ್ತರಕ್ಷಣದಲ್ಲೇ ಲೀನವಾಗುತಿದೆ. ಕೆಲವರು ಕೇವಲ ತಮ್ಮ ಲೇಖನ ಕೌಶಲ್ಯವು ಪ್ರಕಟಿಸಲಿಕ್ಕೆ ಇವುಗಳನ್ನು ವಿಷಯಗಳನ್ನಾಗಿ ಇಟ್ಟುಕೊಂಡು ಪರೋಪದೇಶಮಾಡಲಿಕ್ಕೆ ಪ್ರವರ್ತಿಸುತ್ತಾರಲ್ಲದೆ ಅವರ ಲೇಖನವು ಅವರಿಗೆಸ್ವವಿಷಯಗಳಲ್ಲಿ ನಿರರ್ಥಕಗಳಾಗುತಿವೆ, ಹ್ಯಾಗಂದರೆ. ಒಬ್ಬ ನಾಗರಿಕನಾದ ಮುಸಲ್ಮಾನನು ತನ್ನ ಸಮಾಜದವರಲ್ಲಿ ನೆಲೆಗೊಂಡಿರುವ ಜನಾನಾಪದ್ಧತಿಯನ್ನು ಬಹುಪ್ರಕಾರವಾಗಿ ನಿಂದಿಸಿ ಅದು ತ್ಯಜಿಸಬೇಕೆಂದು ಸ್ವಜಾತೀಯರಿಗೆ ಸುಲಭವಾಗಿ ಬೋಧಿಸಲಿಕ್ಕೆ ಶಕ್ತನಾಗುವನು. ಮತ್ತು ಅನ್ಯರ ಸತಿಸುತೆಯರು ಘೋಷಾಮರೆಯಾಗಿದ್ದರೆ ಅವರು ಸಭೆಯಲ್ಲಿ ತರಲಿಕ್ಕೆ ಉತ್ಸಾಹಪಡುವ ಹಾಗೆ ಪ್ರವರ್ತಿಸುವನು. ಪರಂತು ತನ್ನಮನೆಯಲ್ಲಿ ಅನ್ಯಪುರುಷನ್ಯಾವನಾದರೂ ಪ್ರವೇಶಿಸುವದನ್ನು ನೋಡಿ ಸಹಿಸಲಾರನು. ಇದಲ್ಲದೆ ತನ್ನ ಮನೆಯ ಹೆಂಗಸರಿಗೆ ಇದನ್ನು ವಿಹಿತವಾದ ಬುರುಕೆಗಳನ್ನೂ ನಿರ್ಬಂಧಗಳನ್ನೂ ಉಂಟುಮಾಡಲಿಕ್ಕೆ ಒಪ್ಪುವನು. ಹೀಗೆಯೇ ಒಬ್ಬ ಹಿಂದೂವಾದವನು ವಿಧವಾ ವಿವಾಹವು ಪ್ರತಿಷೇಧಿಸುವದು ಅಕ್ರಮವೆಂತಲೂ ಅನ್ಯಾಯವೆಂತಲೂ ವಾದಿಸುವನು. ಮತ್ತು ನಿರ್ಭಾಗ್ಯರಾದ ವಿಧವೆಯರು ದೊರೆತರೆ ಅಂತವರಿಗೆ ವಿವಾಹವೇರ್ಪಡಿಸಬೇಕಾದವರನ್ನು ಗುರುತಿಸಿ ಪ್ರತಿಜ್ಞೆಯಂ ಪಡೆಯಲಿಕ್ಕೆ ಸನ್ನದ್ಧನಾಗುವನು. ಇಷ್ಟೇಹೊರ್ತು ತನ್ನ ಮನೆಯಲ್ಲಿ ಮತ್ತು ಜನ ಬಾಲವಿಧವೆಗಳಿದ್ದಾಗ್ಯೂ ಅವರಿಗೆಲ್ಲ ಪುನರ್ವಿವಾಹ ಉದ್ಯೋಗಗಳನ್ನು ಮಾಡಿಸುತಲಿರುವನು. ಬಹು ಭಾರ್ಯಾಪರಿಗ್ರಹವೂ ವೃದ್ಧವಿವಾಹವೂ ದೂಷ್ಯವೆಂದು ಸಾರುತಿರುವದೇಕೆಂದರೆ ಹಿಂದೆ ತನ್ನ ವಿವಾಹಗಳನ್ನು ೫೦-೬೦ ವರುಷಗಳ ಮೇಲೆ ಸ್ವತಃ ಮಾಡಿಕೊಳ್ಳುತಲೂ, ಅನ್ಯರಿಗೆ ಮಾಡಿಸುತಲೂ ಇರುತ್ತಾರೆ. ಇದಕ್ಕೆ ಕಾರಣವನ್ನು ಯಾರಾದರು ಕೇಳಿದರೆ ಅನಿರ್ವಾಹಕವಾದ ಪ್ರಬಲ ಅಸಂದರ್ಭದಿಂದಾ ರೀತಿ ಮಾಡಬೇಕಾಯಿತೆಂದು ಅನ್ಯರು ನಂಬುವಹಾಗೆ ನಟಿಸುವರು. ಬಾಲ್ಯವಿವಾಹವನ್ನು ನಿಂದಿಸುತಲೆ ತಮ್ಮ ಮಕ್ಕಳಿಗೆ ಅತಿ ಬಾಲ್ಯದಲ್ಲಿಯೇ ಪರಿಣಯಗಳಂ ಮಾಡಿಸುತಲಿರುತ್ತಾರೆ. ಸಮುದ್ರಯಾನವೂ, ದ್ವೀಪಾಂತರವಾಸವೂ ಶಾಸ್ತ್ರಸಿದ್ಧವಾದವೆಂದು ಬೋಧಿಸುತ ಅನ್ಯರಿಗೆ ಪ್ರಮಾಣ ಪತ್ರಗಳಂ ತೋರಿಸಿ ಕೆಲಸ ಯಾತ್ರಿಕನ್ನಾದರು ಉತ್ಸಾಹದೊಡನೆ ಮಾಡಿಸುವರು. ಪರಂತು ಅವರ ಮಕ್ಕಳ್ಯಾರಾದರೂ ಪರಸ್ಥಳಕ್ಕೆ ಹೋಗಬೇಕೆಂದು ಬಯಸಿದರೆ ಅವರಿಗೆ ಯಿಲ್ಲದದೋಷಗಳನ್ನು, ಕಷ್ಟಗಳನ್ನೂ ಮಿತವ್ಯಯಕ್ರಮವನ್ನೂ ಅಶಾಸ್ತ್ರೀಯಲಕ್ಷಣವನ್ನೂ ಬಹಳ ನಾಜೂಕಾಗಿ ತಿಳಿಸುವರು. ಆದದರಿಂದ ಇವರ ಪ್ರಸಂಗಪ್ರಯತ್ನಗಳು ಪರರವಿಷಯದಲ್ಲಿ ಪ್ರಯೋಜನಕರಗಳಾಗುವಂತೆ ಸ್ವವಿಷಯದೊಳಾಗುವದಿಲ್ಲವಾಗಿ ದೇಶ ಪರಿಸ್ಥಿತಿಯನ್ನು ಅಭಿವೃದ್ಧಿ ಗೊಳಿಸಬೇಕೆಂಬ ಅಪೇಕ್ಷೆಯಿರುವಂತಾವರೆಲ್ಲರೂ ಅನ್ಯರಿಗೆ ಮಾರ್ಗದರ್ಶಕರಾಗಿ ತಾವು ತಿಳಿಸುವದನ್ನೆಲ್ಲ ಆಚರಿಸಿ ತೋರಿಸಬೇಕಾದದ್ದು ವಿದ್ಯಾವಂತರಿಗೆ ಮುಖ್ಯಕಾರ್ಯವಾಗಿರುತಿದೆ. ಆರೀತಿ ಅವರು ಮಾಡುವದಾದರೆ ಅವರ ಮಾತುಗಳಂ ಅನ್ಯರು ಪುರಸ್ಕರಿಸಿ ಗೌರವಿಸುವರು. ನೀತಿಧರ್ಮಗಳನ್ನು ಕಾಪಾಡುವ ವಿಷಯದಲ್ಲಿ ಶಕ್ತ್ಯನುಸಾರ ಯತ್ನಮಾಡಬೇಕಾದದ್ದು ನಮ್ಮವರಲ್ಲಿ ಅಕ್ಷರಾಸ್ಯರಾದವರಿಗೆ ಅನಿವಾರ್ಯವಾದ ಕಾರ್ಯವಾಗಿರುತಿದೆ. ಪ್ರಜಾ ಕ್ಷೇಮವನ್ನೂ ದೇಶ ಪದ್ಧತಿಯನ್ನೂ ಕಾಪಾಡಿ ಅಭಿವೃದ್ಧಿಪಡಿಸತಕ್ಕದ್ದು ವಿಹಿತ ಧರ್ಮವಾಗಿದೆ. ತಮಗೂ ತಮ್ಮದೇಶಕ್ಕೂ ಸಂಬಂಧಿಸಿದ ಕ್ಷೇಮಲಾಭಗಳನ್ನೂ, ಅವುಗಳಿಗೆ ಕಾರಣಭೂತಗಳಾದ ರಾಜಕೀಯ ವಿಷಯಗಳನ್ನೂ, ಜನಸಾಮಾನ್ಯಕ್ಕೆ ವಿವರಿಸಿ ತಿಳಿಸಬೇಕಾದ್ದು ಮುಖ್ಯ ಕರ್ತವ್ಯವೆಂದೆನಿಸುವದು. ಇಂತಾ ವಿಷಯಗಳು ಕುರಿತು

ಆಗಿಂದಾಗ್ಯೆ ಉಪನ್ಯಾಸ ಮಾಡುವದೂ, ಸಭಾಮಂಟಪದಲ್ಲಿ ಚರ್ಚಿಸುತಲಿರುವದೂ, ದೇಶ ಭಾಷೆಗಳಲ್ಲಿ ಗ್ರಂಥರೂಪವಾಗಿ ರಚಿಸಿ ಪ್ರಕಟಿಸುವದೂ, ವಿದ್ಯಾವಂತರು ನಿರ್ವಹಿಸಬೇಕಾದ ಕಾರ್ಯಗಳಾಗಿರುತ್ತವೆ. ದೇಶದ ಮೂಲಧನಸ್ವರೂಪವಾದ ಸಂಪತ್ತನ್ನು ವೃದ್ಧಿಗೊಳಿಸಬೇಕಾದದ್ದು ಮುಖ್ಯಕಾರ್ಯವಾಗಿರುತ್ತದೆ. ಲೋಹಗಳು, ಆಗರವಸ್ತುದ್ರವ್ಯಗಳು, ಕೃಷಿಯೋಗ್ಯಗಳಾದ ಭೂಮಿಗಳು ಮುಂತಾದವು ಈ ಇಂಡಿಯಾದೇಶಕ್ಕೆ ಗುಪ್ತವಾದ ನಿಕ್ಷೇಪಗಳೆಂಬದಾಗಿ ಪ್ರಾಜ್ಞರಾದ ಭೂತತ್ವಶಾಸ್ತ್ರಜ್ಞರು ಅಂಗೀಕರಿಸಿದಾರೆ. ಆದದರಿಂದ ಬಾಲಕರಿಗೆ ಕೈಗಾರಿಕೆಯ ಕೆಲಸಗಳನ್ನು ಕಲಿಸಬೇಕಾದದ್ದೂ, ಅದಕ್ಕೆ ಸಾಧನವಾಗಿ ಸಕಲಕಲಾಶಾಲೆಗಳನ್ನು ಸ್ಥಾಪಿಸಬೇಕಾದದ್ದೂ, ನಾನಾವಿಧ ಯಂತ್ರಶಾಲೆಗಳನ್ನು ನಿರ್ಮಿಸಬೇಕಾದದ್ದೂ, ಕೃಷಿವೃತ್ತಿಯಲ್ಲಿ ಶ್ಲಾಘ್ಯಗಳಾದ ಭಾಗಗಳನ್ನು ಕಂಡು ಹಿಡಿದು ಜನಗಳಿಗೆ ತಿಳಿಯಪಡಿಸಬೇಕಾದದ್ದೂ, ಧನವಂತರಿಗೂ ವಿದ್ಯಾವಂತರಿಗೂ ವಿಹಿತವಾದ್ದೆಂದು ಹೇಳುವೆವು. ಈ ದೇಶಾಭಿವೃದ್ಧಿಯ ವಿಷಯದಲ್ಲಿ ಲೋಪವಿಲ್ಲದೆ ತಮ್ಮ ಶಕ್ತಿಯನ್ನೆಲ್ಲ ಪಾರ್ಸೀಜನರೂ ಭಟ್ಟಿಯಾ ಜಾತಿಯವರೂ ವಿನಿಯೋಗಿಸಲಾರಂಭಿಸಿದಾರೆ. ಶಾಸ್ತ್ರವಿಹಿತಗಳಾದ ಪದ್ಧತಿಗಳನ್ನು ಕೃಷಿ ವಾಣಿಜ್ಯ ಶಿಲ್ಪ ಮುಂತಾದ ಕಸಬುಗಾರೀ ವಿಷಯಗಳಲ್ಲಿ ಉಪಯೋಗಿಸುತ ಬಂದದರಿಂದಲೇ ಇಂಗ್ಲಾಂಡ ರಾಜ್ಯವು ಇಷ್ಟರ ಅಭ್ಯುದಯಸ್ಥಿತಿಗೆ ಬರಲಿಕ್ಕೆ ಕಾರಣವಾಯಿತು. ಜರ್ಮನೀ ಮೊದಲಾದ ಪಶ್ಚಿಮದೇಶಗಳು ಅಸಾಧಾರಣಗಳಾದ ಶ್ರೇಯೋಭಿವೃದ್ಧಿಯನ್ನೈದಲಿಕ್ಕೆ ಮೇಲೆ ಕಂಡ ಶಾಸ್ತ್ರವಿಹಿತವಾದ ಕಲಾವಿದ್ಯೆಯೇ ಕಾರಣವಾಗಿ ಯೋಚಿಸಲ್ಪಟ್ಟಿದೆ. ಮುಖ್ಯವಾಗಿ ದೇಶದ ಸ್ಥಿತಿ ಸುಧಾರಿಸಬೇಕಾಗಿದ್ದರೆ ಶ್ರದ್ಧೆಯೊಡನೆ ಶ್ರಮಿಸತಕ್ಕ ವಿದ್ಯಾವಂತರ ಮತ್ತು ಅವರಿಗೆ ಸಹಾಯಕರಾದ ಧನವಂತರ ಪ್ರಯತ್ನವು ಅಪೇಕ್ಷಿತವಾಗಿರುತ್ತದೆ. ಈಗ ನಮಗೆ ಬೇಕಾಗಿರುವದು ಕಾರ್ಯವೇ ಹೊರ್ತು ಅರ್ಥಕ್ಕಾಗಲಿ ಪ್ರಯೋಜನವಿಲ್ಲದ ಶುಷ್ಕ ಪ್ರಸಂಗಗಳಲ್ಲವು. ಆದದರಿಂದ ವಿದ್ಯಾವಂತರೆಲ್ಲರೂ ತಮ್ಮತಮ್ಮ ಕರ್ತವ್ಯಗಳನ್ನರಿತು ನೀಕ್ಷ್ಣ ದೃಷ್ಟಿಯಿಂದ ಉದ್ಯುಕ್ತರಾಗಬೇಕೆಂದು ಕೋರುತ್ತೇವೆ.

MORAL GEMS FROM THE MAHABHARATA.

ಮಹಾಭಾರತ ನೀತಿರತ್ನಗಳು.

II.—LEARNING.—ವಿದ್ಯೆ.

The Hindu Excelsior Series No. IX

([illegible] ಪತ್ರಿಕೆಯಿಂದ)

ಶ್ಲೋ|| ನಾಸ್ತಿ ವಿದ್ಯಾಸಮಂ ಚಕ್ಷುರ್ನಾಸ್ತಿ
ಸತ್ಯಸಮಂ ತಪಃ। ನಾಸ್ತಿ ರಾಗಸಮಂ
ದುಃಖಂ ನಾಸ್ತಿ ತ್ಯಾಗಸಮಂ ಸುಖಂ ||೧೨||

ಅ|| ಮನುಷ್ಯನಿಗೆ ಸಕಲೇಂದ್ರಿಯಗಳಲ್ಲಿ ನೇತ್ರವೇ ಪ್ರಧಾನವಾದದರಿಂದ ಜ್ಞಾನಪ್ರಕಾಶಕವಾದ ವಿದ್ಯೆಯು ಅವನಿಗೆ ನೇತ್ರರೂಪವಾಗಿರುತ್ತದೆ. ಸತ್ಯ ಪರಿಪಾಲನವು ಶ್ರೇಷ್ಠವಾದ ತಪವಾದದರಿಂದ ಅದಕ್ಕಿಂತ ಶ್ರೇಷ್ಠವಾದ ತಪಸ್ಸು ಬೇರೊಂದೂ ಇರುವದಿಲ್ಲವು. ಲೋಕದಲ್ಲಿ ಆಶೆಯೆಂಬದೇ ಸಕಲವಿಧ ದುಃಖಗಳಿಗೂ ಕಾರಣಭೂತವಾದದ್ದರಿಂದ ಅದು ತೊರೆಯುವದರಿಂದುಂಟಾಗುವ ಸುಖಕ್ಕೆ ಸಮಾನವಾದದ್ದು ಬೇರೊಂದೂ ಇರುವದಿಲ್ಲವು. ಅಂದರೆ ವಿದ್ಯಾವಂತನಾದ ಸತ್ಯವಾದಿಯು ದುಃಖನಿಮಿತ್ತವಾದ ಆಶೆಯನ್ನು ತೊರೆದು ಸುಖ ಸಂತೋಷಗಳನ್ನನುಭವಿಸುವನೆಂದು ಭಾವವು.

ಶ್ಲೋ|| ವೇದಾರ್ಥಂ ಯೋ ನ ಜಾನಾತಿ ವೇದ್ಯಂ
ಗಂಧರ್ವನಗರಂ ಯಥಾ। ವೇದವ್ಯಾಸೇನ ನಿಃ
ಕೇವಲಭಾರವಹೋ ಹಿ ಸಃ|| ೨೦||

ಅ|| ಎಲೈ ಗಂಧರ್ವಶ್ರೇಷ್ಠನೇ, ವೇದಾರ್ಥಗಳನ್ನು ಯಾವನು ತಿಳಿದುಕೊಳ್ಳಲಾರನೋ ಅವನು ಅಧ್ಯಯನಮಾಡಿದ್ದಾಗ್ಯೂ ಕೇವಲ ವೇದಪುಸ್ತಕಗಳ ಭಾರವನ್ನು ಹೊತ್ತವನಾಗುವನೇ ಹೊರ್ತು

ಅವರಿಂದೇನೂ ಪ್ರಯೋಜನವಿಲ್ಲವೆಂದು ನೀನು ತಿಳಿಯುವದು.

ಶ್ಲೋ|| ಧನಯುಕ್ತಾಸ್ತ್ವಕರ್ಮಸ್ಥಾ ದೃಶ್ಯಂತೇ
ಬಹವೋ ಜನಾಃ ॥ ಅಧೀತ್ಯ ನೀತಿಶಾಸ್ತ್ರಾ
ಣ್ಯನೀತಿಯುಕ್ತೋ ನ ದೃಶ್ಯತೇ ॥೧೬॥

ಅ|| ಪ್ರಪಂಚದಲ್ಲಿ ಧನಹೀನರಾದವರು ಸ್ವರೂಪ ಅನನುಭವರಾಗಿದ್ದಾಗ್ಯೂ ಪ್ರತಿಷ್ಠಾರ್ಥವಾಗಿಯಾದರೂ ಧನವಂತರೊಡನೆ ಕರ್ಮಾನುಷ್ಠಾನ ಪರರಂತೆ ವರ್ತಿಸತಕ್ಕವರನೇಕರಿರುತ್ತಾರೆ. ವರಂತು ನೀತಿಶಾಸ್ತ್ರಗಳನ್ನಭ್ಯಸಿಸಿ ನೀತಿಪ್ರವರ್ತಕರಾಗಿರತಕ್ಕವರು ಮಾತ್ರ ಬಹಳ ದುರ್ಲಭರು.

ಶ್ಲೋ|| ಅನಾರ್ಯಕೃತಮಭ್ಯೇತಿ ಶೀಘ್ರಂ ಶಠತೇಷು
ದಶ್ರೀಯಮಾನಃ ॥ ಅಭಿಜಾತ್ಯ
ರಾಜ್ಞಾ ಧನವಿದ್ಯಾಯಾ ಕೃತ್ಯಸ್ತ್ರಯಃ॥

ಅ|| ಮನುಷ್ಯನ ನಾಶನಕ್ಕೆ ಅಸಹಿಷ್ಣುತ್ವ, ಅಧಿಕಪ್ರಸಂಗ, ಧನಗರ್ವ, ಈ ಮೂರು ಗುಣಗಳೂ ಮುಖ್ಯಕಾರಣಗಳು. ಹಾಗೆಯೇ ಗುರುಗಳ ಸೇವೆ ಮಾಡದಿರುವದೂ, ಅಭ್ಯಾಸವಿಲ್ಲದಿರುವದೂ, ಅನಾದರವೂ ವಿದ್ಯಾನಾಶಕ್ಕೆ ಕಾರಣಗಳೆಂದರಿಯತಕ್ಕದ್ದು. ಯೋಗೇಶ್ವರೋಪೋಕ್ತವಾದ ಪುರುಷನು ಆತ್ಮನಾಶಕರಗಳಾದ ಮತ್ತು ವಿದ್ಯಾನಾಶಕರಗಳಾದ ಮೇಲೆ ಕಂಡ ಆರು ಅವಗುಣಗಳಿಗೆ ತನ್ನಲ್ಲಿ ಅವಕಾಶವನ್ನೀಯದೆ ವೃದ್ಧಿಯನ್ನೈದಬೇಕೆಂದು ಭಾವವು.

ಶ್ಲೋ|| ಸುಖಾರ್ಥಿನಃ ಕುತೋ ವಿದ್ಯಾ ನಾಸ್ತಿ
ವಿದ್ಯಾರ್ಥಿನಃ ಸುಖಂ॥ ಸುಖಾರ್ಥೀ ವಾ ತ್ಯ
ಜೇದ್ವಿದ್ಯಾಂ ವಿದ್ಯಾರ್ಥೀ ವಾ ತ್ಯಜೇತ್ಸುಖಂ॥

ಅ|| ಲೋಕದಲ್ಲಿ ವಿದ್ಯೆಯೂ ಸುಖವೂ ಪ್ರಾರಂಭದಲ್ಲಿ ಪರಸ್ಪರ ಶತ್ರುಗಳಾಗಿದ್ದು ಕಡೆಗೆ ಒಂದಕ್ಕೊಂದು ಪರಮಮೈತ್ರಿಯುಕ್ತವಾಗುತ್ತವೆ. ಆದದರಿಂದ ಅಭ್ಯಾಸಗಳಿಗೆ ಮೊದಲುಂಟಾಗುವ ವಿರೋಧವನ್ನು ನೋಡಿ ಕೇವಲ ಒಂದು ಪಕ್ಷವನ್ನವಲಂಬಿಸಿದರೆ ಅವನಿಗೆ ಕಡೆಯಲ್ಲಿ ಹಿಂದೂ ಸಿದ್ಧಿಸದೆ ಹೋಗುವದು, ಹ್ಯಾಗೆಂದರೆ—ಮೊದಲು ಸುಖಾಪೇಕ್ಷೆಗೆ ವಿದ್ಯೆಯು ದುರ್ಲಭವು, ವಿದ್ಯಾಭಿಲಾಷೆಗೆ ಸುಖವು ದುರ್ಲಭವು, ಆದದರಿಂದ ಆದಿಯಲ್ಲಿ ಸುಖವನ್ನು ಮಾರ್ಗ ಕೋರದಕ್ಕೆ ಜನರು ವಿದ್ಯೆಯನ್ನೈದಬೇಕು. ಅಥವಾ ಅದು ಬಯಸತಕ್ಕವನು ಸುಖವನ್ನಾದರೂ ತೊರೆಯಬೇಕು. ಅಂದರೆ ಕಷ್ಟಪಟ್ಟಲ್ಲದೇ ವಿದ್ಯೆಯು ಬರುವದಾದದರಿಂದ ಅದನ್ನು ಸಾಧಿಸಲಿಕ್ಕೆ ಬೇಕಾದಷ್ಟು ಕಷ್ಟಗಳನ್ನು ಸಹ ಅಂಗೀಕರಿಸಬೇಕೆಂದು ಅಭಿಪ್ರಾಯವು.

ಶ್ಲೋ|| ತುಲ್ಯದಾನಾನಿ ವೇದಾನಿ ಪ್ರೀತಾನಿ
ಚ ಫಲಾನಿ ಚ ॥ ಸ್ವರ್ಗ ಕಾಮಫಲಾನೀ
ದರ್ಶನಾನ್ಯತ್ಯನಿಶ್ಚಯಃ ೧೯

ಅ|| ಗೋಭೂವಿದ್ಯೆಗಳೆಂಬ ಮೂರು ದಾನಗಳು ಅದನ್ನು ಕೊಡುವವನಿಗೆ ಅಭೀಷ್ಟಗಳಾದ ಸ್ವರ್ಗಸುಖಗಳನ್ನು ಕೊಡತಕ್ಕವಾಗಿರುತ್ತವೆ. ಲೋಕದಲ್ಲಿ ಎಲ್ಲಾ ದಾನಗಳಿಗಿಂತಲೂ ಇವು ಶ್ರೇಷ್ಠವಾದವು. ಯಾತಕ್ಕೆಂದರೆ ಇವು ಉತ್ತರೋತ್ತರ ವೃದ್ಧಿಯಾಗುತ್ತಾ ಪರಂಪರೆಯಾ ಬಹುಜನರಿಗೆ ಉಪಯೋಗವಾಗಿರುವದರಿಂದ ಬೇರೆ ದಾನಗಳಂತೆ ಸ್ವಲ್ಪಕಾಲದಲ್ಲಿ ಕ್ಷಯವಾಗಿ ನಾಶವಾಗತಕ್ಕವಲ್ಲವು, ಅಥವಾ ಇದ್ದಂತೆ ಇರತಕ್ಕವೂ ಅಲ್ಲವಾಗಿ ಹಾಗೆ ಇವೇ ದಾನಾರ್ಹಗಳೆಂದರಿಯತಕ್ಕದ್ದು.

ಶ್ಲೋ|| ಯೋ ಬ್ರಾಹ್ಮಣಾಯ ವಿಶಿಷ್ಟಾಯ
ಧರ್ಮ್ಯಂ ಬ್ರಾಹ್ಮಂ ಸರಸ್ವತೀಂ॥ ಸ್ಥ
ಭಿನೀಗೋಪ್ರದಾನಾಭ್ಯಾಂ ತುಲ್ಯಂ ಸಫಲ
ಮಶ್ನುತೇ ।

ಅ|| ಯಾವನು ಸತ್ಪಾತ್ರವನ್ನರಿತು ಧರ್ಮಾರ್ಥವಾಗಿ ಪಾರಮಾರ್ಥಿಕ ವಿದ್ಯೆಗಳನ್ನು ಕಲಿಸಿ ಅಭಿವೃದ್ಧಿಗೊಳಿಸುವನೋ ಅವನು ಭೂದಾನ ಗೋದಾನಗಳಿಗೆ ಸಮಾನಗಳಾದ ಉತ್ತಮಪ್ರಯೋಜನವನ್ನು ಪಡೆಯುವನು ಹೋಗಲಾರನು. ಆದದರಿಂದ ತಾನು ಕಲಿತ ವಿದ್ಯೆಯು ನಾಲ್ವರಿಗೆ ಪ್ರಯೋಜನವಾಗುವಂತೆ ಮಾಡುವದು ಉತ್ತಮೋತ್ತಮಕಾರ್ಯವಾಗಿರುತ್ತದೆ. (ಕೆಲವರು ತಾವು ಕಲಿತ ವಿಷಯಗಳನ್ನು ಹೊರಪಡಿಸದೆ ಬಹಳ ಗೋಪ್ಯವಾಗಿಟ್ಟುಕೊಂಡಿರುತ್ತಾರೆ.

Occasional Notes.

ನೈಮಿತ್ತಿಕ ವಿಷಯನ್ಯಾಸ.

Subscriptions to the Bombay Zoological Garden.—ನಾನಾದೇಶಗಳಿಂದ ಬಹುವಿಧ ಪಶು ಪಕ್ಷಿ ಮೃಗಾದಿಗಳನ್ನು ಕಂಡಿತುವದಕ್ಕಾಗಿ ಮುಂಬೈಯಲ್ಲಿ ಸ್ಥಾಪಿಸಲುದ್ದೇಶಿಸಲ್ಪಟ್ಟಿರುವ ತೋಟದ ಏರ್ಪಾಟಿಗೋಸ್ಕರ ಇದುವರಿವಿಗೆ ೮೧,೯೦೦ ರೂಪಾಯಿಗಳು ಚಂದಾವಾಗಲ್ಪಟ್ಟಿರುತ್ತದೆ.

A donation.—ಜಾನ್ಸಿ ಡಿಸ್ಟ್ರಿಕ್ಟಿಗೆಸೇರಿದ ರಾಜ್ಪುರದ ಅರಸರವರು, ಮಹಾರಾಣೀಯವರ ಜ್ಯುಬಿಲೀ ಉತ್ಸವದಜ್ಞಾಪಕಾರ್ಥ ಒರಾರಿ ಎಂಬ ಪ್ರದೇಶದಲ್ಲಿ ಒಂದು ಕಾಲೇಜನ್ನು ಸ್ಥಾಪಿಸುವದಕ್ಕಾಗಿ ೪,೦೦೦ ರೂಪಾಯಿಗಳು ಕೊಡುವದಾಗಿ ತಿಳಿಸಿ ಇರುತ್ತಾರೆ.

Investiture.—ಬರುವ ನವಂಬರ್ ೧೧ನೇ ತಾರೀಖಿನಲ್ಲಿ ಮದರಾಸಿನೊಳು, ತಿರುವಾಂಕೂರು ಮಹಾರಾಜರವರಿಗೆ ಜಿ. ಸಿ. ಎಸ್. ಐ. ಎಂಬ ಘನತರ ಪ್ರಶಸ್ತಿಯು, ವೈಸ್‌ರಾಯ್‌ಯವರ ಪರವಾಗಿ ಮದರಾಸ್ ಗವರ್ನರವರಾದ ಲಾರ್ಡ್ ಕಾನಿಮರಾ ಅವರಿಂದ ಒಪ್ಪಿಸಲ್ಪಡುವದು. ಅದನ್ನು ಕೈಗೊಳ್ಳುವದಕ್ಕಾಗಿ ಮಹಾರಾಜರವರು ಆ ಕಾಲಕ್ಕೆ ಸರಿಯಾಗಿ ಮದರಾಸಿಗೆ ದಯಮಾಡುವರು.

The coming Viceroy.—ಮುಂದೆ ಇಂಡ್ಯಾ ರಾಜ್ಯದ ವೈಸ್‌ರಾಯ್‌ಯವರಾಗಿ ಒರತಕ್ಕ ಲಾರ್ಡ್ ಲ್ಯಾಂಡ್‌ಡೌನ್ ಎಂಬವರು ಬರುವ ನವಂಬರ್ ೪ನೇ ತಾರೀಖಿನಲ್ಲಿ ಇಂಗ್ಲಾಂಡಿನಿಂದ ಹೊರಟು ಡಿಸಂಬರ್ ೩ ಅಥವಾ ೩ನೇ ತಾರೀಖಿನಲ್ಲಿ ಕಲ್ಕತ್ತೆಯೊಳು ಲಾರ್ಡ್ ಡಫರಿನ್ ಸಾಹೇಬರವರಿಂದ ವೈಸ್‌ರಾಯ್ ಅಧಿಕಾರವನ್ನು ಕೈಗೊಳ್ಳುವರು.

Rukmabai's case in Parliament.—ಕಳೆದ ತಿಂಗಳ ೨೦ನೇ ತಾರೀಖು ಶುಕ್ರವಾರದದಿನ ಸೇರಿದ ಹೌಸ್‌ಆಫ್ ಲಾರ್ಡ್ಸ್ ಸಮಾಜದಲ್ಲಿ, ಕಾರ್ಲ್ಟನ್ ಎಂಬ ಹಸರಿನ ಬಿಷಪರವರು, ರುಕ್ಮಾಬಾಯಿ ಎಂಬ ಹಿಂದೂ ಹೆಂಗಸಿನ ವೊಕದ್ದಮೆಯು, ಆಕೆಯ ಜಾತಿ ಹೆಂಗಸರೆಲ್ಲರ ಕ್ಷೇಮಕ್ಕೆ ಸಂಬಂಧಪಟ್ಟದ್ದಾಗಿರುವದರಿಂದ ಆ ವಿಷಯದಲ್ಲಿ ರಾಜ್ಯ ಗವರ್ನಮೆಂಟಿನವರು ಯೇನಾದರು ಮಾಡುವದಕ್ಕೆ ಯೋಚಿಸಿದಾರೆಯೋ ಯೆಂದು ರಾಜ್ಯ ಸೆಕ್ರೆಟರಿಯವರನ್ನು ಕೇಳಲಾಗಿ, ಲಾರ್ಡ್ ಕ್ರಾಸ್‌ಯವರು ತಿಳಿಸಿದ್ದೇನೆಂದರೆ—ಇಂಡ್ಯಾ ಗವರ್ನಮೆಂಟಿನವರು ಕಳೆದ ಸಂವತ್ಸರದಲ್ಲಿ, ೧೮೮೭ನೇ ಇಸವಿಯ ಸಿವಿಲ್ ಪ್ರೊಸಿಡ್ಯೂರ್ ಕೋಡಿನಲ್ಲಿರುವ, ವಿವಾಹ ಸಂಬಂಧವಾದ ಬಾಧ್ಯತೆಯ ಬಗ್ಗೆ ಇರುವ ಡಿಕ್ರಿಗಳ ಅಮಲ್‌ಜಾರಿಯನ್ನು ಕುರಿತ ನಿಬಂಧನೆಗಳ ತಿದ್ದುಪಡಿ ವಿಷಯದಲ್ಲಿ ಆಯಾ ಸ್ಥಳಿಕ ಗವರ್ನಮೆಂಟುಗಳಿಗೆ ಬರೆದಿರುವದು ವಿನಾ ಇನ್ನೇನೂ ಮಾಡಲಿಲ್ಲವು, ಮತ್ತು ಕೇವಲ ನಾಜೂಕಾದ ಈ ವಿಷಯದಲ್ಲಿ ಪಾರ್ಲಿಮೆಂಟಿನವರು ಪ್ರವೇಶಿಸುವದು ಅಕ್ರಮವು, ಸ್ಥಳಾಧಿಕಾರಿಗಳಿಗೆ ಯುಕ್ತ ತೋರಿದಂತೆ ಮಾಡುವದೇ ಯೋಗ್ಯವಾಗಿರುವದು, ಎಂಬದು.

ನೋಟಿಸು.

ಈ ಪತ್ರಿಕೆಯ ಚಂದಾದರರಾಗಿಯೂ ಬಾಕೀದಾರರಾಗಿಯೂ ಇರುವ ದೊಡ್ಡಮನುಷ್ಯರೆಲ್ಲರಿಗೂ ಇದರಿಂದ ಸಾಪ್ರರ್ಶಿಸುವದೇನೆಂದರೆ—ಸನ್ ೧೮೮೩ನೇ ಅಕ್ಟೋಬರ್ ತಿಂಗಳ ಮೊದಲು ೧೮೮೭ನೇ ಡಿಸಂಬರ್ ಆಖೈರು ವರಿವಿಗೆ ಐದು ನಾಲ್ಕು ವರ್ಷಗಳಕಾಲ ಅವಿಚ್ಛಿನ್ನವಾಗಿ ಸಲ್ಲಬೇಕಾಗುವ ಬಾಕಿ ಚಂದಾ ಹಣವನ್ನು ಈ ಸಾಲಿನಲ್ಲಿ ಕಳುಹಿಸಿಕೊಡದವರಲ್ಲಿ ನಮಗುಂಟಾದ ಉದ್ವೇಗಗಳನ್ನು ಸಂವತ್ಸರಾರಂಭದಲ್ಲೇ ನಾವು ತಿಳಿಸಿರುತ್ತೇವೆ. ಈ ಸಂವತ್ಸರದಲ್ಲಿ ೭ನೇ ತಿಂಗಳು ಕಳೆಯುತಬಂದಾಗ್ಯೂ ಇದುವರಿವಿಗೆ ಚಂದಾ ಮೊಬಲಗನ್ನು ಕಳುಹಿಸದೆ ಇರುವುದಾದಂಗೆ ಸಂವತ್ಸರಾರಂಭದಲ್ಲಿ ನಾವು ತಿಳಿಸಿದ ಪರಿತ್ಯಾಗಳಿಗೆ ನಿಗೆಕೊಟ್ಟಂತೆ ತೋರಲಿಲ್ಲವಾಗಿ, ಚಂದಾ

ಮೊಬಲಗನ್ನು ಅತ್ಯಾಕರ್ಷಕ ಕೊಟ್ಟವರು ಹೊರ್ತಿ ವೇ ಈ ಸಾಲಿನಲ್ಲಿ ಯೇಪರ್ಟಿ ಕಡೆ ದರಪ್ರಕಾರ ಪತ್ರಿಕೆಯನ್ನು ಪಡೆಯಲು ಬಾಧ್ಯರಾಗುತ್ತ, ಮಿಕ್ಕವರೆಲ್ಲರೂ ಹಿಂದಿನಸಾಲ್‌ವರಿವಿಗೆ ನಡೆದು ಬಂದದರಪ್ರಕಾರ ಚಂದಾಮೊಬಲಗನ್ನು ಕೊಡಬೇಕಾದವರಾಗಿರುತ್ತಾರೆಂದು ಖುದ್ದವಾಗಿ ತಿಳಿಯತಕ್ಕದ್ದು. ಮತ್ತು ಈ ತಿಂಗಳ ೩೦ನೇ ತಾರೀಖುಗಳಲ್ಲಿ ಬಾಕೀ ಸಮೂದಿನಿಂದ ಅಂಚೆದ್ವಾರಾ ನಾವು ಬರೆದ ಕಾಗದಗಳಿಗೆ ಇದುವರಿವಿಗೆ ಜವಾಬ ಕೊಡದೆಯೂ ಬಾಕೀಯನ್ನು ಕಳುಹಿಸದೆಯೂ ಇರುವಂತವರಿಗೆಲ್ಲ ಮುಂದಿನ ತಿಂಗಳಿಂದ ಈ ಪತ್ರಿಕೆಯು ರವಾನಿಸಲ್ಪಡಲಾರದು. ಮತ್ತು ಇದುವರಿವಿಗೆ ಬಾಕೀ ಇರತಕ್ಕವರೆಲ್ಲರು ಅವರ ವಸೂಲೀ ವಿಷಯದಲ್ಲಿ ನಮಗೆ ವ್ಯರ್ಥವಾದ ಅರ್ಥ ವ್ಯಯವನ್ನೂ ಶ್ರಮವನ್ನೂ ಉಂಟುಮಾಡಲಾರರೆಂದು ನಂಬುತ್ತೇವೆ.

LOCAL AND PROVINCIAL NEWS.

ಒಳದೇಶ ಮತ್ತು ಪ್ರಾಂತದೇಶ ವೃತ್ತಾಂತಗಳು

Mr. Sparks.—ಇಲ್ಲಿನ ಸೆಂಟ್ರಲ್ ಜೈಲಿನ ಸೂಪರಿಂಟೆಂಡೆಂಟರಾದ ಮಿ|| ಸ್ಪಾರ್ಕ್ಸ್‌ಯವರಿಗೆ ಕೊಡಲ್ಪಟ್ಟಿದ್ದ ರಜಾ ಪೂರೈಸಿದ್ದರಿಂದ ಅವರು ಮಾಹೇಮಜಕೂರ್ ೨೪ನೇ ತಾರೀಖು ಮಂಗಳವಾರದದಿನ ತಮ್ಮ ಕೆಲಸದಚಾರ್ಜನ್ನು ಮಿ|| ಎಫ್ ಪೈಕರ್‌ಯವರಿಂದ ತೆಗದುಕೊಂಡರು.

The Maharaja's A. D. C.—ಶ್ರೀಮನ್ಮಹಾರಾಜರವರ ಏಡಿಕಾಂಗರಾಗಿ ಈಚೆಗೆ ನೇಮಕರಾದ ಮದರಾಸ್ ೩ನೇ ಲೈಟ್ ಕ್ಯಾವಲ್ರಿ ರಿಜಿಮೆಂಟಿಗೆಸೇರಿದ ಸುಬೇದಾರ್ ದೇವರಾಜೇಅರಸಿನವರು ಇನ್‌ಫೆಂಟ್ರಿ ಡ್ರಿಲ್ಲನ್ನು ಕಲಿಯತಕ್ಕಬಗ್ಗೆ ೧೨ನೇ ಮದರಾಸ್ ನೇಟಿವ್ ಇನ್‌ಫೆಂಟ್ರಿ ರಿಜಿಮೆಂಟಿನಲ್ಲಿ ದಾಖಲಾದರೆಂದು ಕೇಳುತ್ತೇವೆ.

The weather.—ಈಗ ಕೆಲವುದಿನ ಮಹಾರಾಜ್ಞೀ ಪ್ರತಿನಿಧಿಯಾದ ಗವರ್ನರವರ ವೀಕ್ಷಣೆಯೂ, ನಿಗ್ರಹಾನುಗ್ರಹ ಶಕ್ತರಾದ ಮಹಾಧಿಪತಿಗಳ ಪ್ರವೇಶವೂ ಉಂಟಾದದರಿಂದ ವರ್ಷಾಧಿದೇವತೆಯಾದ ವರುಣನು ಸಹ ಭೀತನಾಗಿ ತನ್ನ ಕರ್ತವ್ಯವು ಅನಿವಾರ್ಯವೆಂದು ಮಾಡುತಲಿದಾನೆಂದು ತೋರುತ್ತದೆ. ಗತ ಮಂಗಳವಾರದ ರಾತ್ರಿಯಿಂದ ಆಗಿಂದಾಗ್ಯೆ ಸ್ವಲ್ಪಸ್ವಲ್ಪವಾಗಿ ಮಳೆಯಾಗುತ್ತ ಮೋಡವಾದರೂ ದೊಡ್ಡ ವರ್ಷಸೂಚನೆಗಳು ಕಂಡುಬರುತಲಿವೆ. ರೋಗಾದ್ಯುಪದ್ರವಗಳಿಲ್ಲವು.

Garden party.—ಬರುವತಿಂಗಳ ೩ನೇ ತಾರೀಖಿನದಿನ ಜೇಫ್‌ಕೋರ್ಟ್ ಮೂರನೇ ಜಡ್ಜಿಯವರಾದ ಬ್ಯಾರಿಸ್ಟರ್ ಮಿ|| ವಿಶಾಲಾಕ್ಷಿ ಅಯ್ಯರವರು ರಾತ್ರಿವೇಳೆ ಪಾರ್ಕಿನಬಳಿ ತಮ್ಮ ತೋಟದಲ್ಲಿ ವನಭೋಜನ ಮಾಡಿಸಬೇಕೆಂದುದ್ದೇಶಿಸಿದಾರೆಂತಲೂ, ಅದಕ್ಕೆ ಶ್ರೀಮನ್ಮಹಾರಾಜರವರನ್ನೂ ಇತರ ಯೂರೋಪಿಯನ್ ಮತ್ತು ನೇಟಿವ್ ದೊಡ್ಡ ಮನುಷ್ಯರನ್ನೂ ಕರೆಯಬೇಕೆಂದಿದಾರೆಂತಲೂ ಒಳದೇಶದ ಇಂಗ್ಲಿಷ್ ಪತ್ರಿಕೆಯೊಂದು ತಿಳಿಸುತ್ತದೆ. ಸ್ನೇಹಾನುರಾಗಾಭಿವೃದ್ಧಿಗೆ ಇದು ಕರ್ತವ್ಯವೆ.

The Maharaja's ball to the Governor.—ಮದರಾಸ್ ಗವರ್ನರಾದ ಲಾರ್ಡ್ ಕಾನಿಮರಾಯವರಿಗೆ ಗತ ಶುಕ್ರವಾರದದಿನರಾತ್ರಿ ಇಲ್ಲಿನ ರಾಜಾಮಹಲ್‌ನಲ್ಲಿ ವಿಶೇಷ ಸಂಭ್ರಮದೊಡನೆ ಔತಣನಡೆಯಿತು. ಅದಕ್ಕೆ ರೆಸಿಡೆಂಟ್, ಸರ್ ಹಾರಿ ಪ್ರಿಡರ್ ಗ್ಯಾಸ್ಟ್‌ಯವರು, ಮೇಜರ್ ಜನರಲ್ ಲೋಲಾಂಡ್‌ಯವರು ವಗೈರೆ ಬಹುಮಂದಿ ಯೂರೋಪಿಯನ್ ದೊಡ್ಡಮನುಷ್ಯರು ತಮ್ಮತಮ್ಮ ಲೇಡಿಗಳೊಡನೆ ಹೋಗಿದ್ದರು. ಆದಿನರಾತ್ರಿ ೩ಘಂಟೆಯವರಿವಿಗೆ ಭೋಜನ ನರ್ತನ ಕೇಳಿಕಾವಿನೋದಗಳಿಂದ ಆನಂದ ಪರವಶರಾಗಿದ್ದಂತೆಯೂ, ಅಲ್ಲಿನವರ ಪ್ರತ್ಯೇಕವಾ ಮಹಾರಾಜರವರ ಶ್ರೀಯುಕ್ತ ಪ್ರಾರ್ಥನಾರೂಪವಾದವಾಗಿದ್ದಂತಲೂ, ಆ ತಿಥಿಗಳ ಆನಂದವೆಂಬದು ಪ್ರತಿಷ್ಠೆಯಲ್ಲಿಯೂ

ಅವರನ್ನು ಪ್ರಳಕಾಂಕಿತರನ್ನಾಗಿ ಮಾಡುತಲಿದ್ದಂತೆಯೂ ಕೇಳಲಾದೆವು.

A grant for apparatus.—ಮೈಸೂರು ಬಾಲಿಕಾ ಪಾಠಶಾಲಾ ವಿದ್ಯಾರ್ಥಿನೀಯರ ಉಪಯೋಗಾರ್ಥ ಸದರೀ ಪಾಠಶಾಲೆಗೆ ಈಗ ಕೇವಲ ಆವಶ್ಯಕವೆಂದು ಕೋರಿಬಂದಿರುವ ಭೌತಿಕ ಮತ್ತು ರಸಧಾತು ಪ್ರಕರಣಗಳಿಗೆ ಸಂಬಂಧಿಸಿದ ಯಂತ್ರೋಪಕರಣಗಳಂ ನೂತನವಾಗಿ ತರಿಸತಕ್ಕಬಗ್ಗೆ ಮೈಸೂರು ಗವರ್ನಮೆಂಟಿನವರು ಐನೂರು ರೂಪಾಯಿಗಳನ್ನು ಮಂಜೂರ್ಮಾಡಿದರೆಂದು ತಿಳಿಯಲಾದೆವು.

Honorary Magistrates.—ಸಿವಿಲ್ ವ ಮಿಲಿಟರಿ ಸ್ಟೇಷನಿನಲ್ಲಿ ಇದರಡಿ ಕಂಡ ದೊಡ್ಡ ಮನುಷ್ಯರು ಆನರರಿ ಮ್ಯಾಜಿಸ್ಟ್ರೇಟರುಗಳಾಗಿ ನೇಮಕರ್ಮಾಡಲ್ಪಟ್ಟಿರುತ್ತಾರೆ. ಮ|| ಆರ್. ಬಿ. ಕ್ಯಾಂಬೆಲ್, ಮೆ|| ಅಗಾರ್ಖಾ ಸಾಹೆಬ್, ಮತ್ತು ಮೆ|| ವೀರರಾಘವುಲು ನಾಯುಡರವರು. ಈ ಏರ್ಪಾಡಿನಿಂದ ಮ್ಯಾಜಿಸ್ಟ್ರೇಟರಿಗೆ ಬಹಳಮಟ್ಟಿಗೆ ಮೊಕದ್ದಮೆಗಳಗಲಾಪತೆಪ್ಪಿದ್ದರಿಂದಪ್ರಯುಕ್ತ ಚಿಲ್ಲರೆ ಮೊಕದ್ದಮೆಗಳೆಲ್ಲವೂ ಮೇಲೆಕಂಡವರಲ್ಲಿಯೇ ಫೈಸಲಾಗುವವು. ಇದೇಕ್ರಮವನ್ನು ಮೈಸೂರು ದರ್ಬಾರಿನವರು ಬೆಂಗಳೂರು ಮೈಸೂರು ವಗೈರೆ ಡಿಸ್ಟ್ರಿಕ್ಟು ಹೆಡ್‌ಕ್ವಾರ್ಟರ್ ಜಾಗಾಗಳಲ್ಲಿ ಜಾರೀಯಲ್ಲಿ ತರುವರಾದರೆ, ಜನರಿಗೆ ಅನುಕೂಲ್ಯವೂ ಟೌನ್ ಮ್ಯಾಜಿಸ್ಟ್ರೇಟರಿಗೆ ಶರೀರಶ್ರಮವೂ, ಕಾಲವಿಳಂಬವೂ ಬಹಳಮಟ್ಟಿಗೆ ಕಡಿಮೆಯಾಗುವವರಲ್ಲೀನೂಸಂಶಯವಿರಲಾರದು.

Matadhipatis.—ಇದು ಚಾತುರ್ಮಾಸ್ಯ ಸಂಕಲ್ಪ ಕಾಲವಾಗಿರುವದರಿಂದ ಮಠಾಧಿಪತಿಗಳೆಲ್ಲರೂ ಶಿಷ್ಯಾನುಗ್ರಹಾರ್ಥ ಸಂಚಾರ ಹೊರಟಿರುತ್ತಾರೆ. ಈಗ ಶೋತಾದ್ರಿ ಸ್ವಾಮಿಗಳಲ್ಲದೆ ಇನ್ನೂ ಇಬ್ಬರು ಯತಿಗಳು ಬಂದಿರುತ್ತಾರೆ. ಅವರ ಪೈಕಿ ಒಬ್ಬರು ಕಾಂಚೀಪುರ ನಿವಾಸಿಯಾದ ಶ್ರೀವಾದಿಕೇಸರಿ ಅಳಗಿಯ ಮಣವಾಳ ಜೆಯ್ಯರವರು. ಇವರು ಡಿಸ್ಟ್ರಿಕ್ಟು ರೆವಿನ್ಯೂ ಶಿರಸ್ತೇದಾರ್ ಮ|| ಎ. ಎಸ್ ರಾಘವಾಚಾರ್ಯರ ಮನೆಯಲ್ಲಿ ಬಿಡಮಾಡಿದಾರೆ. ಮತ್ತೊಬ್ಬರು ಸುಜನಗೂಡು ಶ್ರೀ ರಾಘವೇಂದ್ರ ಸ್ವಾಮಿಗಳವರು ಪೂರ್ಣಯ್ಯನವರ ಸತ್ರದಲ್ಲಿ ಬಿಡಮಾಡಿದಾರೆ. ಇವರೆಲ್ಲರೂ ತಮ್ಮ ಶಿಷ್ಯವರ್ಗದವರಿಂದ ಅಬಾಧಿತರಾಗುತ ಅವರವರು ಮಾಡುವ ಸತ್ಕಾರಗಳಂ ಕೈಗೊಳ್ಳುತಲಿದಾರೆ.

Sporting visitors.—ಈಗ ಕುದುರೇಪಂದತ್ತು ಕಾಲವಾದದರಿಂದ ವಿನೋದಾರ್ಥ ಸಂಸ್ಥಾನಾಧಿಪತಿಗಳೂ, ಜಹಗೀರ್ದಾರ್‌ಗಳೂ, ಪ್ರಮುಖರೂ ಇಲ್ಲಿಗೆ ಬಂದಿರುತ್ತಾರೆ. ಅವರುಗಳ್ಯಾರೆಂದರೆ—ಪಿಟ್ಟಾಪುರ ಮತ್ತು ಪತಿಯಾಲಾ ಸಂಸ್ಥಾನಗಳ ಮಹಾರಾಜರುಗಳು, ಆರಣಿ ಜಹಗೀರ್ದಾರರವರು, ಕರ್ಣಾಟಕ ರಾಜವಂಶಕ್ಕೆ ಸೇರಿದ ಬಹಾದುರ್ ನವಾಬ್ ಫಿರೋಜ್ ಹುಸೇನೀಯವರು, ಅವರಮಕ್ಕಳಿಬ್ಬರು, ಮತ್ತು ಅವರ ಪೊಲಿಟಿಕಲ್ ಆಫೀಸರ್ ಕರ್ನಲ್ ಅಂತರ್ವಣಿ ಯೆಂಬವರು. ಇಲ್ಲಿನ ಕುದುರೆ ಪಂದ್ಯಗಳು ಬರುತ ಬರುತ ಅನ್ಯದೇಶದ ದೊಡ್ಡಮನುಷ್ಯರಿಗೆಲ್ಲ ವಿಶೇಷ ಮೋಹಕವಾಗಿರುವಂತೆ ತೋರುತಿದೆ. ಮದರಾಸ್ ಗವರ್ನರವರ ಮತ್ತು ನೇಟಿವ್ ಸಂಸ್ಥಾನಾಧಿಪತಿಗಳಸಾನ್ನಿಧ್ಯದಿಂದೀವರುಷದ ಪಂದ್ಯ ಪ್ರಬಲವಾದದ್ದಾಗಿ ಪ್ರತಿಸಲದಲ್ಲೂ ಬಹುಜನ ಸೇರಲಿಕ್ಕೆ ಕಾರಣವಾಗಿರುತಿದೆ.

H Holiness Sree Vanamamalay Swamy—ಈಗ್ಯೆ ಒಂದು ತಿಂಗಳ ಕಾಲವಾಗಿ ಈವೂರಲ್ಲಿ ಬಿಡಮಾಡಿರುವ ಶ್ರೀ ವಾನಮಾಮಲೈ ಸ್ವಾಮಿಗಳವರು ಮಾಹೇ ಮುಜಕೂರ್ ೨೩ನೇ ತಾರೀಖ್ ಸೋಮವಾರದದಿನ ಶ್ರೀಮನ್ಮಹಾರಾಜರವರ ಅನುಗ್ರಹಾರ್ಥ ಅರಮನೆಗೆ ದಯಮಾಡಿದ್ದರು. ಮಹಾರಾಜರವರು, ಉಚಿತ ಮರ್ಯಾದೆಗಳೊಡನೆ ಅವರು ಬರಮಾಡಿಕೊಂಡು ಗೌರವಿಸಿಸತ್ಕಾರಗಳಂ ಮಾಡಿ ಸುಮಾರ್ ೧ ಘಂಟೆಯಕಾಲ ಸ್ವಾಮಿಗಳೊಡನೆ ಅನೇಕ ವಿಷಯಗಳಂ ಕುರಿತು ಮಾತನಾಡುತಲಿದ್ದು ಅವರು ತಿಳಿಸುತಬಂದವನ್ನೆಲ್ಲ ಉತ್ಸಾಹದೊಡನೆ ಆಲೈಸಿ ಅವರಿಂದನುಗ್ರಹೀತರಾಗಿ ೩೦೦ ರೂಪಾಯಿಗಳನ್ನೂ, ಒಂದು ಜತೆ ಶಾಲನ್ನೂ, ಭಾರೀ ಧೋತ್ರಜತೆ ಯೊಂದನ್ನೂ ಸಪಾದಕಾಣಿಕೆಯಾಗಿ ಸ್ವಾಮಿ ಸನ್ನಿಧಿಯಲ್ಲಿ ಅರ್ಪಿಸಿದರೆಂತಲೂ ಕ್ಷಿಪ್ರದಲ್ಲಿಯೇ ಶ್ರೀಮಠಕ್ಕೆ ಒಂದು ಗದವನ್ನು ಕಳುಹಿಸುವಂತೆ ವಾಗ್ದಾನ ಮಾಡಿದರೆಂತಲೂ ಕೇಳುತ್ತೇವೆ.

The Governor's arrival.—ಮದರಾಸ್ ಗವರ್ನರಾದ ಘನವನ್ನೈದಿದ ರೈಟ್‌ಆನರೆಬಲ್ ಲಾರ್ಡ್ ಕಾನಿಮರಾಯವರು ಗತ ಮಂಗಳವಾರದದಿನ ಮಧ್ಯಾಹ್ನ ೩½ ಘಂಟೆಗೆ ಸರಿಯಾಗಿ ಸ್ಪೆಷಲ್ ಟ್ರೈನಿನಲ್ಲಿ ಈ ಊರಿಗೆ ದಯಮಾಡಿದರು. ಗವರ್ನರವರನ್ನು ಬರಮಾಡಿಕೊಳ್ಳತಕ್ಕ ಬಗ್ಗೆ ಬಹುಜನ ಯೂರೋಪಿಯರ್ ಮತ್ತು ನೇಟಿವ್ ದೊಡ್ಡಮನುಷ್ಯರನೇಕರು ಸ್ಟೇಷನ್ ಪ್ಲಾಟ್‌ಫಾರಂನಲ್ಲಿ ಕಾದಿದ್ದರು. ಟ್ರೈನ್‌ಬಂದು ನಿಂತಕೂಡಲೇ ರೆಸಿಡೆಂಟರು ಗಾಡಿಯಬಳಿಗೆ ಹೋಗಿ ಗವರ್ನರವರನ್ನು ಬರಮಾಡಿಕೊಂಡರು. ತರುವಾಯ ಅಲ್ಲಿ ನಿರೀಕ್ಷಿಸುತಲಿದ್ದ ಕೆಲವರು ದೊಡ್ಡಮನುಷ್ಯರ ವಂದನಗಳಂ ಪ್ರತಿವಂದನ ಪೂರ್ವಕ ಅಂಗೀಕರಿಸಿ ರೆಸಿಡೆಂಟರು ಮತ್ತು ತಮ್ಮ ಪ್ರೈವೇಟ್ ಸೆಕ್ರಿಟೆರಿಯವರೊಡನೆ ಕೆಗೆಯ ಪಕ್ಷಿಣಕಟ್ಟೆಯ ಮಾರ್ಗವಾಗಿ ರೆಸಿಡೆನ್ಸೀ ಬಂಗ್ಲೆಗೆ ದಯಮಾಡಿದರು. ಗವರ್ನರವರ ಗೌರವಾರ್ಥ ಬಾರ್ಸವಾನ್ ಫೌಜ್ ಸ್ಟೇಷನ್ ಬಳಿ ಬಂದು ಕಾದಿದ್ದು ಸೆಲ್ಯೂಟ್ ಮಾಡಿದವು. ಗವರ್ನರವರ ಗಾಡಿಯು ಮಿಲಿಟರಿ ಸ್ಟೇಷನ್ ಸರಹದ್ದು ಪ್ರವೇಶಿಸಿದ ಕೂಡಲೇ ೧೭ ತೋಪ್‌ಗಳು ಹಾಕಲ್ಪಟ್ಟವು. ತರುವಾಯ ಆಯಾಸ ಪರಿಹಾರ ಮಾಡಿಕೊಂಡು ಕುದುರೆಪಂದ್ಯಕ್ಕೆ ದಯಮಾಡಿದರು. ಬುಧವಾರದ ದಿನ ಸಂಸ್ಥಾನದ ಮರ್ಯಾದಾನುಸಾರವಾಗಿ ಮಹಾರಾಜರವರ ಭೇಟಿ ಪ್ರತಿಭೇಟಿಗಳು ಮತ್ತು ದರ್ಬಾರ್ ನಡೆದವು. ಮಾರನೆಯದಿನ ಬೆಳಗ್ಯೆ ರಿವ್ಯೂ ನಡೆಯಿತು. ಮಿಲಿಟರಿ ಸ್ಟೇಷನಿಗೆ ಜಲವಸತಿಯಂ ಕಲ್ಪಿಸಬೇಕಾದ ವಿಷಯದಲ್ಲಿ ತಕ್ಕ ಯೋಚನೆಯು ಮಾಡಬೇಕಾದದ್ದು ಗವರ್ನರವರ ಆಗಮನಕ್ಕೆ ಒಂದು ಉದ್ದೇಶ್ಯವಾದದರಿಂದ ಆ ವಿಷಯದಲ್ಲಿ ನೋಡಬೇಕಾದ ಭಾಗಗಳನ್ನೆಲ್ಲ ರೆಸಿಡೆಂಟರು ಪಬ್ಲಿಕ್ ವರ್ಕ್ಸ್ ಸೆಕ್ರಿಟರಿ ಮುಂತಾದವರೊಡನೆ ದರ್ಶಿಸಿ ಕಳೆದ ಶನಿವಾರದ ದಿನ ಬೆಳಗ್ಯೆ ಹೊಸೂರಿಗೆ ರಿಮೌಂಟ್ ನೋಡುವದಕ್ಕಾಗಿ ಹೋದರು. ಗವರ್ನರವರ ಸವಾರಿ ಈದಿನ ೧೨ ಘಂಟೆಗೆ ಇಲ್ಲಿಗೆವಾಪಸ್ ಬರುವುದು ಏರ್ಪಾಡಾಗಿರುತಿದೆ. ಈದಿನ ರಾತ್ರಿ ಮತ್ತೊಂದುಬಾಲ್ ನಡೆಯುವದೆಂದು ಕೇಳುತ್ತೇವೆ.

The Governor's stay at Mysore—೨೧ನೇ ತಾರೀಖ್ ಶನಿವಾರ ಸಾಯಂಕಾಲ ೬½ ಘಂಟೆಯಲ್ಲಿ ಮದರಾಸ್ ಗವರ್ನರಾದ ಲಾರ್ಡ್ ಕಾನಿಮರಾಯವರು ಇಲ್ಲಿಗೆ ನೀಲಗಿರಿಯಿಂದ ದಯಮಾಡಿದರು. ಆ ಕಾಲದಲ್ಲಿ ಅವರನ್ನು ಎದುರುಗೊಳ್ಳುವದಕ್ಕಾಗಿ ಮ್ಯುನಿಸಿಪಲ್ ಮೆಂಬರುಗಳೂ ಇತರ ದೊಡ್ಡಮನುಷ್ಯರು ಸಹ ೧ ಮೈಲು ದೂರದಲ್ಲಿ ಹೋಗಿ ಕಾದಿದ್ದರು. ಬಕ್ಷಿ ಬಸಪ್ಪಾಜೆ ಅರಸಿನವರು ಗವರ್ನರವರನ್ನು ಸೆಕ್ರೆಟರಿ ಸಮೇತವಾಗಿ ರೆಸಿಡೆನ್ಸೀ ಬಂಗಳೆಗೆ ಕರೆದುಕೊಂಡು ಬಂದಕೂಡಲೇ ಅಲ್ಲಿ ರೆಸಿಡೆಂಟರು ದಿವಾನರವರು ಮೊದಲಾದ ದೊಡ್ಡಮನುಷ್ಯರು ಅವರನ್ನು ಬರಮಾಡಿಕೊಂಡರು. ಮಾರನೇ ದಿನ ಸಾಯಂಕಾಲ ೫ ಘಂಟೆ ಸಮಯದಲ್ಲಿ ಅರಮನೆಗೆ ದಯಮಾಡಿ ಕಚೇರಿಕಟ್ಟೋಣ, ಆಯುಧಶಾಲೆ, ಅಂಬಾವಿಲಾಸ ಮೊದಲಾದ ಪ್ರದೇಶಗಳನ್ನು ನೋಡಿ ಅಲ್ಲಿಂದ ಅಂತಃಪುರದಲ್ಲಿ ಮಹಾರಾಣಿಯವರಿಂದ ಸನ್ಮಾನಿತರಾಗಿ ಸ್ವಸ್ಥಾನಕ್ಕೆ ವಾಪಸ್ ಹೋದರು. ತಾ|| ೨೩ನೇ ಸೋಮವಾರದ ದಿನ ಬೆಳಗ್ಯೆ ಶ್ರೀರಂಗಪಟ್ಟಣಕ್ಕೆ ಹೋಗಿ, ಚರಿತ್ರಸಂಬಂಧವಾದ ಅಲ್ಲಿನ ವಿಶೇಷಗಳನ್ನು ನೋಡಿಕೊಂಡು ಸಾಯಂಕಾಲ ೫ ಘಂಟೆಗೆ ಸರಿಯಾಗಿ ಗವರ್ನರವರು ಶ್ರೀಮನ್ಮಹಾರಾಜ್ಞೀಯವರ ಬಾಲಿಕಾ ಪಾಠಶಾಲೆಗೆ ರೆಸಿಡೆಂಟರವರೊಡನೆ ದಯಮಾಡಿ ಅಲ್ಲಿ ಕಂಡುಬಂದ ಪರಮಾಶ್ಚರ್ಯಕರವಾದ ಸ್ತ್ರೀವಿದ್ಯಾಭ್ಯಾಸದ ಪ್ರೌಢಿಮೆಯನ್ನು ನೋಡಿ ತುಂಬಾ ಶ್ಲಾಘಿಸಿ ಪರಮಾನಂದ ಭರಿತರಾಗಿ ೬ ಘಂಟೆಗೆ ಸರಿಯಾಗಿ ವಾಪಸ್ ದಯಮಾಡಿದರು. ತಾ|| ೨೪ನೇ ಮಂಗಳವಾರದ ದಿನ ಸ್ಪೆಷಲ್ ಟ್ರೈನಿನಲ್ಲಿ ಬೆಂಗಳೂರಿಗೆ ಹೊರಟರೆಂದು ಮೈಸೂರ್ ವೃತ್ತಾಂತಚಿಂತಾಮಣಿಪತ್ರಿಕೆ ತಿಳಿಸುತಿದೆ.

Sri Sringeri Swami and the Lingayets of Bellary.—ಶ್ರೀ ಶೃಂಗೇರಿ ಸ್ವಾಮಿಗಳವರು ಅವರ ಪೂರ್ವಿಕರಿಗೂ ಅವರಿಗೂ ಸಂಸ್ಥಾನಾಧಿಪತಿಗಳು ಕೊಟ್ಟಂತಾ ಬಿರುದಾವಳಿಗಳನ್ನು ಹಿಡಿಸಿಕೊಂಡು ಈಪಟ್ಟಣದೊಳಗೆ ಪ್ರವೇಶ ಮಾಡಕೂಡದೆಂತಲೂ, ಹಾಗೆ ಅವರು ಬರಲು ಸರಕಾರದವರು ಅಪ್ಪಣೆ ಕೊಟ್ಟರೆ ತಮ್ಮ ಗುರುಗಳೂ ಕೂಡಾ ಅವರಿಗಿರುವ ಬಿರುದಾವಳಿ ಸಹಿತವಾಗಿ ಇಲ್ಲಿಗೆ ಬರುವದಕ್ಕೆ ಅಪ್ಪಣೆ ಕೊಡಬೇಕೆಂತಲೂ ಇಲ್ಲಿರುವ ಲಿಂಗಾಯತರು ಕಲೆಕ್ಟರವರಿಗೆ ಅರ್ಜಿ ಬರೆದುಕೊಂಡರು. ಆ ಅರ್ಜಿಯು ಈತಿಂಗಳು ೧೮ನೇ ತಾರೀಖಿನಲ್ಲಿ ವಿಚಾರಣೆಗೆ ಬಂದಾಗ್ಯೆ ಲಿಂಗಾಯತರು ಶೃಂಗೇರಿ ಗುರುಗಳವರ ಏಜಂಟರವರ ಕೂಡಾ ಸಂಧಿಸಿ ಒಬ್ಬರಿಗೊಬ್ಬರು ಸಖ್ಯದಿಂದ ಸ್ಮಾರ್ತ ಬ್ರಾಹ್ಮಣ ಗುರುಗಳೂ ಲಿಂಗಾಯತರ ಗುರುಗಳೂ ಸಮಾಧಾನ ಸ್ಥಿತಿಯಲ್ಲಿ ಮೆರವಣಿಗೆ ಬರಬೇಕೆಂದುನ್ನೂ, ನಂದಿಧ್ವಜ ಮತ್ತು ವ್ಯಾಸನಪಟ್ಟ ಎಂಬ ಬಿರುದುಗಳನ್ನು ಯಾವಮೆರವಣಿಗೆಯಲ್ಲಿಯೂ ತೆಗದುಕೊಂಡು ಹೋಗಕೂಡದೆಂತಲೂ, ಅಡ್ಡಪಾಲಕಿ, ಪಂಚಕಲಶ, ಧವಳಶಂಖ, ಎಂಬ ಬಿರುದುಗಳನ್ನ ಶೃಂಗೇರಿ ಗುರುಗಳು ಮಾತ್ರವೇ ಹಿಡಿಸಿಕೊಂಡು ಹೋಗಬೇಕೆಂತಲೂ, ಮತ್ತು ಮಕರತೋರಣ ಹಗಲಿ ದೀವಟಿಗೆ, ಶ್ವೇತಚ್ಛತ್ರ ಎಂಬ ಬಿರುದುಗಳನ್ನು ಲಿಂಗಾಯತ ಗುರುಗಳು ಹಿಡಿಸಿಕೊಂಡು ಹೋಗಬಹುದೆಂತಲೂ ಒಪ್ಪಿಕೊಂಡರು. ತರುವಾಯ ಮಾರನೇ ದಿನ ಶ್ರೀ ಶೃಂಗೇರಿ ಗುರುಗಳ ಏಜಂಟರು ಮತ್ತು ಕಲೆಕ್ಟರವರಲ್ಲಿಗೆ ಹೋಗಿ ಶ್ರೀ ಶೃಂಗೇರಿ ಗುರುಗಳು ಈ ಊರಿನಲ್ಲಿ ಸುಮಾರು ಎರಡು ತಿಂಗಳಕಾಲ ವಿರುತ್ತಾರಾಗಿ ಆ ಕಾಲದಲ್ಲಿ ಲಿಂಗಾಯತ ಗುರುಗಳು ಇಲ್ಲಿಗೆ ಬರಕೂಡದೆಂದು ಮನವಿ ಮಾಡಿಕೊಂಡದ್ದಕ್ಕೆ ಲಿಂಗಾಯತರು ಆಕಾಲದಲ್ಲಿ ತಮ್ಮ ಗುರುಗಳು ಇಲ್ಲಿಗೆ ಬರುವದಿಲ್ಲವೆಂದು ಭರವಸೆಕೊಟ್ಟರೆಂದು ಈಗಿನ ಕಲೆಕ್ಟರು ಮತ್ತು ಡಿಸ್ಟ್ರಿಕ್ಟು ಮ್ಯಾಜಿಸ್ಟ್ರೇಟವರು ಪ್ರೊಸೀಡಿಂಗ್ಸ್ ಮಾಡಿರುತ್ತಾರೆಂಬದಾಗಿ ಬಳ್ಳಾರಿವಿದ್ಯಮ್ನಜವೆಂಬ ಪತ್ರಿಕೆ ತಿಳಿಸುತಿದೆ.

NEWS LETTERS.
ವೃತ್ತಾಂತಪತ್ರ.

ಸಾಗರ, ತಾ|| ೨೨ನೇ ಜೂಲೈ, ೧೮೮೮.—ಕಳೆದ ಜೂನ್ ತಿಂಗಳ ೨೦ರಿಂದಾರಂಭವಾದ ಮಳೆಯು ಅದ್ಯಾಪಿ ಬಿಡಲೇ ಇಲ್ಲವು. ಕೆರೆಗಳು ಭರ್ತಿಯಾಗಿರುವದಲ್ಲದೆ ವರದಾನದಿಯು ದಡ ತುಂಬಿ ಪ್ರವಹಿಸುತಲಿದೆ. ಮನೆಗಳಲ್ಲಿ ಜಪ್ಪುಗುಹಿಡಿದು ನಿಲ್ಲುವದಕ್ಕೆ ಜಾಗಾ ಇಲ್ಲವು ಸೂರಿನ ಸಂಗೀತವಾದರೊ ಅವಕಾಶವಿಲ್ಲದೆ ನಡೆಯುತಲಿದೆ. ಗದ್ದೆಗಳು ಯೆಂದಿಗೂ ಇಲ್ಲದಷ್ಟು ಮೇಲು ಸ್ಥಿತಿಯಲ್ಲಿವೆ. ಪ್ರಜಾರೋಗ್ಯವು ಚೆನ್ನಾಗಿದೆ. ಘಟಸ್ಥಳದಿಂದ ಸರಕುಬರಲು ಹಳ್ಳಕೊಳ್ಳಗಳು ಅಡ್ಡವಾಗಿರುವ ಸಬಬ್ ದವಸವು ಪ್ರಿಯವಾಗಿದೆ. ಅಡಿಕೆ ತೋಟದವರ ಗೋಳು ಹೇಳಲಶಕ್ಯವು. ಕೊಳೆ ರೋಗದ ಪ್ರಾಬಲ್ಯವು ಪ್ರತಿ ಒಂದು ತೋಟದಲ್ಲಿಯೂ ವ್ಯಾಪಿಸಿದೆ. ಈಗಿನ ಸ್ಥಿತಿಯಂ ನೋಡಲಾಗಿ ರೈತರ ಮನೇಖರ್ಚಿಗೆ ಸಾಕಾಗುವಷ್ಟು ಅಡಿಕೆ ಸಹ ಉಳಿಯುವಹಾಗಿಲ್ಲವು. ಯಾಲಕ್ಕಿ ಪೈರು ಕೊಳೆಯುತಬಂದವು. ಮೆಣಸು ಬಳ್ಳಿಗಳು ಮೊರತಾಗಿ ನಿಂತಿವೆ.

ನಮ್ಮತಾಲ್ಲೂಕು ಅಮಲ್ದಾರ್ ಮೆ|| ವೆಂಕಟರಾಯರವರಮೇಲೆ ರುಜುವತ್ ಫಿರ್ಯಾದ್ ಬಂದು ಡಿಸ್ಟ್ರಿಕ್ಟು ಕೋರ್ಟಿನಲ್ಲಿ ದರ್ಯಾಫ್ತಿಯಾಗಿ ಛಾರ್ಜ್ ಮಾಡಿರುವರಂತೆ. ಅನೇಕವರ್ಷಗಳಿಂದಲೂ ನೌಕರಿ ಮಾಡಿದವರ ಅವಸ್ಥೆ ಹೀಗಾದ್ದಕ್ಕಾಗಿ ವಿಷಾದ ಪಡಬೇಕಾಗಿದೆ. ನಮ್ಮ ಪೊಲೀಸ್ ಅಸಿಸ್ಟೆಂಟ್ ಕಮಿಷನರ್ ಮೆ|| ಪುಟ್ಟಣ್ಣಶೆಟ್ಟರವರು ಸಂದುಗೊಂದುಗಳಲ್ಲಿ ಅಡಗಿದ್ದ ಕಳವುಗಳನ್ನೆಲ್ಲ ಹೊರಪಡಿಸಿದರು. ಮಳೆಯು ಕೊಂಚಮಟ್ಟಿಗೆ ಕಮನವಾದನಂತರ ಇನ್ನೂ ಕೆಲವು ಅಕ್ರಮಗಳನ್ನು ಬೈಲಿಗೆ ತರುವದರಲ್ಲಿ ಇದಾರೆ. ಈ ದೊಡ್ಡಮನುಷ್ಯರಿಗೆ ರೆವಿನ್ಯೂ ಮತ್ತು ಕ್ರಿಮಿನಲ್ ಇಲಾಖೆಗಳ ಅನುಭವ ಬಹಳ ಅಲ್ಪವಾಗಿದ್ದಾಗ್ಯೂ ಸ್ವಸಾಮರ್ಥ್ಯದಿಂದಲೇ ಜನರಲ್ಲಿ ಅನುರಾಗವು ಸಂಪಾದಿಸಿ ಪ್ರಜಾಪರಿಪಾಲನೆ ವಿಷಯದಲ್ಲಿ ತುಂಬಾ ನಿಗೇ ಕೊಡುತಲಿದಾರೆ. ನಮ್ಮ ಅಮಲ್ದಾರ್ ಕೇಸಿನಲ್ಲಿ ಇನ್ನೂ ಕೆಲವು ಚಿಲ್ಲರೆ ನೌಕರರು ಸೇರಿರುವಂತೆ ಪ್ರವಾದವಿದೆ, ಆದರೆ ಅವರಗತಿ ಯೇನಾಗುವದೊ ನೋಡಬೇಕು.

ಸೊರಬ, ತಾ|| ೨೮ನೇ ಜೂಲೈ ೧೮೮೮—ಸಾಗರಕ್ಕಿಂತಲೂ ಮಳೆ ಅಧಿಕವು, ಜೂಲೈ ಗುರ್ರೇಲಾಗಾಯತು ೨೩ರ ವರಿವಿಗೆ ೬೬ ಅಂಗುಲ ಮಳೆ ಆಗಿದೆ. ಅನೇಕ ಕೆರೆಗಳು ಕಿತ್ತುಹೋದವು, ರಸ್ತೆಯ ಮೊಹರಿಗಳೆಲ್ಲ ಕೆಡಿಗಳ ಪಾಲಾದವು. ನಮ್ಮ ಅಮಲ್ದಾರರವರು ಹಲ್ಲುಬನ್ನಿ ಜಮಾಬಂದಿಗೆ ಸಪ್ಕ್ಯಾಟ್ ಹೋದವರು ವಾಪಸ್‌ಬರಲು ಮಾರ್ಗವಿಲ್ಲದೆ ಅದ್ಯಾಪಿ ಗ್ರಾಮಾಂತರ ವಾಸ ಮಾಡುತಲಿದಾರೆ. ಲಿಂಗಾಯತ ಗುರುಗಳಾದ ಮುರಗೀ ಮಠದ ಸ್ವಾಮಿಗಳು ಇಲ್ಲಿಗೆ ಬಂದು ಒಂದು ತಿಂಗಳಾಯಿತು, ಮಳೆಯ ದೆಸೆಯಿಂದ ಇನ್ನೂ ಇಲ್ಲಿಯೇ ಇದಾರೆ.

TELEGRAMS.
ತಂತಿ ವೃತ್ತಾಂತಗಳು.

ಅಥೇನ್ಸ್ ತಾ|| ೨೦ನೇ ಜೂಲೈ—ಕಂದಾಯಗಳನ್ನು ಕೊಡುವದಕ್ಕೆ ನಿರಾಕರಿಸಿ ಕಲಹಕ್ಕೆ ಪ್ರೇರೇಪಿತರಾಗಿದ್ದಾರೆಂಬ ಕಾರಣದಮೇಲೆ ಮಸೋವಾಹ್.ಎಂಬ ಪ್ರದೇಶದಲ್ಲಿರುವ ಅನೇಕ ಗ್ರೀಕ್ ಜನರನ್ನು ಇಟಾಲಿಯನ್ ಅಧಿಕಾರಿಗಳು ಊರಿಂದ ಹೊರಗೆ ಓಡಿಸಿಬಿಟ್ಟವಿಷಯದಲ್ಲಿ ಗ್ರೀಕ್ ಸರ್ಕಾರದವರು ಬಹಳವಾಗಿ ಆಕ್ಷೇಪಿಸಿರುತ್ತಾರೆ.

ಕೈರೋ ತಾ|| ೨೨ನೇ ಜೂಲೈ.—ವಾದಿಹಾಲ್ಫಾ ಯೆಂಬ ಪ್ರದೇಶಕ್ಕೆ ಉತ್ತರದಲ್ಲಿರುವ ಒಂದುಗ್ರಾಮದಲ್ಲಿ ಕೆಲವುಜನ ಫಕೀರರು ಪ್ರವೇಶಿಸಿ ಗಸ್ತುಲಮಾಡಿ ಸುಮಾರ್ ೨೭ ಮಂದಿಗಳವರಿವಿಗೆ ಗ್ರಾಮಸ್ಥರಂ ಕೊಂದುಹಾಕಿದರು. ರಾಯಲ್ ಆರ್ಟಿಲ್ಲರಿಗೆಸೇರಿದ ಲೆಫ್ಟಿನೆಂಟ್ ಕರ್ನಲ್ ಓವೆಹಾಸಿಯೆಂಬವರು ಸದರೀ ಫಕೀರರನ್ನೆಲ್ಲ ಪ್ರಬಲಸಸ್ಯದೊಡನೆ ಪಶ್ಚಿಮಪ್ರಾಂತಗಳಿಗೆ ಓಡಿಸಿಬಿಟ್ಟರು.

ಸೆಂಟ್‌ಪೀಟರ್ಸ್‌ಬರ್ಗ್ ತಾ|| ೨೩ನೇ ಜೂಲೈ.—ಜರ್ಮನೀ ಚಕ್ರವರ್ತಿಯವರಾದ ವಿಲಿಯಂಯವರು ರಷ್ಯಾ ಚಕ್ರವರ್ತಿಯವರ ಸಂದರ್ಶನಾರ್ಥ ಹೋಗಿದ್ದದ್ದು ಕೆಲವು ವಿಷಯಗಳಿಗಾಗಿ ರಷ್ಯಾ ಮತ್ತು ಜರ್ಮನಿ ಈ ಉಭಯಸರ್ಕಾರದವರಿಗೂ ನೆರೆಗೊಂಡಿದ್ದ ಅಸಮಾಧಾನವು ನಿವೃತ್ತಿಯಾಗಲಿಕ್ಕೆ ಕಾರಣವಾಯಿತು. ಪರಂತು ಜರ್ಮನಿಯವರ ಸಹಾಯಗಳವಿಷಯದೊಳಾಗಲಿ, ಅಥವಾ ರಷ್ಯಾದವರ ಸ್ವತಂತ್ರವರ್ತನವಂ ಕುರಿತಾಗಲಿ ಚಕ್ರವರ್ತಿಯವರ ಸಮಾಗಮದಿಂದೇನೂ ಬದಲಾವಣೆ ಯುಂಟಾದಂತೆಕಾಣಿಸಲಿಲ್ಲವು.

ಮುಂಬೈ ತಾ|| ೨೫ನೇ ಜೂಲೈ—ವೈಸರಾಯಿಯವರಾದ ಲಾರ್ಡ್ ಡಫ್ರಿನ್‌ಯವರ ಸಂಚಾರ ಕ್ರಮವು ಈಗಲೇ ವ್ಯವಸ್ಥೆ ಮಾಡಲ್ಪಟ್ಟಿರುತಿದೆ. ಬರುವ ಡಿಸೆಂಬರ್ ತಿಂಗಳ ಮೊದಲನೇ ಅಥವಾ ಎರಡನೆಯವಾರದಲ್ಲಿ ಅವರು ಇಂಧ್ಯದೇಶದಿಂದ ಪ್ರಯಾಣವಾಗುವರು.

BANGALORE:—Printed and publised at the KARNATIC PRESS, No. 44, Hospital Road Petta.

ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA.

ಪ್ರತಿ ಸೋಮವಾರ ಪ್ರಾತಃಕಾಲದಲ್ಲಿ ಪ್ರಕಟಿಸಲ್ಪಡುವದು.

Published every Monday Morning.

Vol. XV.] BANGALORE—MONDAY, AUGUST 6, 1888. [No. 31.

[ಸಂಪುಟ ೧೫.] ಬೆಂಗಳೂರು:—ಸನ್ ೧೮೮೮ನೇ ಇಸವಿ ಆಗಸ್ಟ್ ೬ನೇ ತಾರೀಖ್ ಸೋಮವಾರ. [ಸಂಖ್ಯೆ ೩೧.]

ಕರ್ಣಾಟಕ ಪ್ರಕಾಶಿಕಾ

ಪತ್ರಿಕೆಯ ಚಂದಾ ದರಗಳು,
೧೮೮೮ನೇ ಇಸವಿ ಜನವರಿಯಿಂದಾರಭ್ಯ
ಕಡಮೆ ಮಾಡಲ್ಪಟ್ಟಿರುತ್ತದೆ.

ಈ ಪತ್ರಿಕೆಯ ಚಂದಾದಾರರಲ್ಲಿ ಅನೇಕರ ಅಪೇಕ್ಷೆಯನ್ನು ನೆರವೇರಿಸುವ ಉದ್ದೇಶದೊಡನೆಯೂ, ಪರಿಮಿತವಾದ ಆದಾಯವುಳ್ಳವರಿಗೆಲ್ಲ ಈ ಪತ್ರಿಕೆಯು ಸುಲಭವಾಗಿ ಲಭಿಸುವಂತಿರಬೇಕೆಂಬ ಅಭಿಪ್ರಾಯದೊಡನೆಯೂ ಇದರ ಚಂದಾದರವನ್ನು ಈ ಕೆಳಗೆ ಕಂಡಂತೆ ಕಡಮೆ ಮಾಡಿರುತ್ತೇವೆಂದರೆ:—

ಇಂಗ್ಲಿಷ್ ಮತ್ತು ಕನ್ನಡಭಾಗಗಳಿಗೆ.

	ಸ್ಥಳದವರಿಗೆ	ಪರಸ್ಥಳದವರಿಗೆ
12 ತಿಂಗಳಿಗೆ	8—0—0	9—0—0
6 "	4—0—0	4—8—0
3 "	2—8—0	2—8—0

ಇಂಗ್ಲಿಷ್ ಅಥವಾ ಕನ್ನಡಭಾಗಗಳಿಗೆ.

	ಸ್ಥಳದವರಿಗೆ	ಪರಸ್ಥಳದವರಿಗೆ
12 ತಿಂಗಳಿಗೆ	4—0—0	5—0—0
6 "	2—0—0	2—8—0
3 "	1—4—0	1—8—0

ಷರಾ—ಅಂದರೆ ಮುನ್ಸೀಫರು, ಪೋಲೀಸ್ ಮತ್ತು ತಾಲೂಕ್ ಸಬ್ಮಿನಿಸ್ಟ್ರೇಟರುಗಳು, ಶ್ಯಾನಭೋಗರು, ಪಟೇಲರು, ವಿದ್ಯಾರ್ಥಿಗಳು, ಇವರಿಗೆಲ್ಲ ಈ ಪತ್ರಿಕೆಯು ಮೇಲ್ಕಂಡ ದರಕ್ಕೆ ಕೊಡಲ್ಪಡುವದು. ಆದಾಗ್ಯೂ ಯಾವ ದರಕ್ಕೆ ಯಾವ ಪತ್ರಿಕೆಯನ್ನು ತೆಗೆದುಕೊಳ್ಳುವರು. ಚಂದಾದಾರರು ಇಂಗ್ಲಿಷ್ ಭಾಗವನ್ನಾಗಲಿ ಕನ್ನಡಭಾಗವನ್ನಾಗಲಿ ಅಥವಾ ಎರಡನ್ನಾಗಲಿ ತೆಗೆದುಕೊಳ್ಳಬಹುದು. ಚಂದಾಹಣವನ್ನು ಮುಂಗಡವಾಗಿಯೇ ಸಲ್ಲಿಸತಕ್ಕದ್ದು. ಮೂರು ತಿಂಗಳಿಗಿಂತ ಕಡಮೆಯಾಗಿ ಚಂದಾ ಬೇಡಿಕೆಯು ಅಂಗೀಕರಿಸಲ್ಪಡುವದಿಲ್ಲ.

ಸ್ಟ್ಯಾಂಪುಗಳು ರವಾನಿಸತಕ್ಕವರು ಅವುಗಳನ್ನು ಕಳುಹಿಸುವ ಅರ್ಥದೋಷವು ತಲುಪಿದಲ್ಲಿ ನಮ್ಮಿಂದಾದದ್ದು ಬಿಡದೆ ಕೊಡಲ್ಪಡುವದು. ಅರ್ಧ ಆಣೆಯ ಸ್ಟ್ಯಾಂಪುಗಳನ್ನು ರವಾನಿಸತಕ್ಕದ್ದು. ಬಿಲ್‌ಗಳು ಕಳುಹಿಸತಕ್ಕವರು ರೂಪಾಯಿ ಒಂದಕ್ಕೆ ಒಂದು ಆಣೆ ಮೇರೆ ಡಿಸ್ಕೌಂಟು ಸಹ ಸೇರಿಸಿ ಕಳುಹಿಸತಕ್ಕದ್ದು. ಆದ್ದರಿಂದ ಡಿಸ್ಕೌಂಟು ಇಲ್ಲದೆ ಬಿಲ್‌ಗಳನ್ನು ಕಳುಹಿಸಕೂಡದು. ಡಿಸ್ಕೌಂಟು ಇಲ್ಲದೆ ಕಳುಹಿಸಲ್ಪಡುವ ಹಣದಲ್ಲಿ ಅದು ಕಡಿಮೆಯಾದದ್ದನ್ನು ಚಂದಾದಾರರ ಲೆಕ್ಕಕ್ಕೆ ಖರ್ಚು ಹಾಕಿಕೊಳ್ಳಲ್ಪಡುವದು.

ಪ್ರಕಟನೆಯ ರಿವಾಜ್.

ಮೊದಲನೆಯದಫಾ ಪಂಕ್ತಿ ಒಂದಕ್ಕೆ ೦—೨—೦
ಎರಡನೆಯದಫಾ ಪಂಕ್ತಿ ಒಂದಕ್ಕೆ ೦—೧—೦

ಷರಾ—ಎರಡಾವರ್ತಿಗಿಂತ ಜಾಸ್ತಿಯಾಗಿ ಪ್ರಕಟಿಸಬೇಕಾದರೆ ಸ್ಪೆಷಲ್ ಕರಾರು ಮಾಡಿಕೊಳ್ಳಬೇಕು. ಈ ಪತ್ರಿಕೆಯಲ್ಲಿ ಖಾಯಂ ಆಗಿ ಪ್ರಕಟನೆಗಳನ್ನು ಹಾಕಿಸತಕ್ಕವರು ಅವು ಎಷ್ಟು ದಫಾ ಪ್ರಕಟವಾಗಬೇಕೋ ಆ ಅಂಶವನ್ನು ಸ್ಪಷ್ಟವಾಗಿ ತಿಳಿಸತಕ್ಕದ್ದು. ಇಲ್ಲದಿದ್ದರೆ ಅವರು ನಮಗೆ ನಿಲ್ಲಿಸುವಂತೆ ಬರೆಯುವವರೆಗೂ ಅವು ಪ್ರಕಟಿಸುತ್ತಿದ್ದು ಬಳಿಕ ಅವುಗಳ ಪ್ರಕಟನೆಗೆ ತಗಲಿದ ಹಣವನ್ನು ವಸೂಲು ಮಾಡಲಾಗುವದು. ಪ್ರಕಟನೆಯನ್ನು ಕಳುಹಿಸುವವರು ಪ್ರಕಟನೆಗಳನ್ನು ಯಾವ ಯಾವ ತಾರೀಖುಗಳಲ್ಲಿ ಪ್ರಕಟಿಸಬೇಕೆಂಬದನ್ನು ತಿಳಿಸಬೇಕು. ಪ್ರಕಟನೆಗಳಿಗೆ ಈ ಪತ್ರಿಕೆಯ ಕಚೇರಿಗೆ ಕಾಗದಗಳ ಮೂಲಕ ತಿಳಿಸಲ್ಪಡುವ ಅಭಿಪ್ರಾಯಗಳಿಗೆ ನಾವು ಜವಾಬ್ದಾರರಾಗಲಾರೆವು. ಕ್ರಮವಾಗಿ ರುಜುಮಾಡಿ ಕಳುಹದ ಯಾವ ಕಾಗದವನ್ನು ಪ್ರಕಟಿಸಲಾರೆವು. ಸಿರಾ ಕಳುಹಿಸಲ್ಪಟ್ಟ ಕಾಗದಗಳು ಮರಳಿ ಕಳುಹಿಸಲ್ಪಡಲಾರವು.

"IT RECOMENDS ITSELF"

ALL WHO SUFFER FIND SURE RELIEF

LITTLE'S

ORIENTAL BALM

THE MOST EFFECTUAL MODERN REMEDY FOR PAIN.

ಲಿಟಲ್ ಎಂಬವರಿಂದ ತಯಾರಿಸಲ್ಪಟ್ಟ "ಬಾಧಕಂಪಾಲಿಕೇ" ಎಂಬ ಪೂರ್ವದೇಶ ಸಂಬಂಧವಾದ ಅಮೂಲ್ಯ ತೈಲವು ಸ್ವಶಕ್ತಿ ಪ್ರಕಾಶಕವಾದದ್ದು, ಮತ್ತು ಸಫಲವಾದ ನವೀನ ಚಿಕಿತ್ಸಾಕಾರಕವಾದ ಔಷಧವು. ಇದರಿಂದ ಸಕಲ ವಾತರೋಗಗಳೂ, ವಾತಸಂಬಂಧಗಳಾದ ಸಂಧಿಬಂಧಗಳೂ ನಿವೃತ್ತಿಯಾಗುವವು. ಮುಖ್ಯವಾಗಿ ಬಹುಕಾಲಿಕವಾದ ವಾತರೋಗಗಳು, ಸೀಳು, ಗಂಟುಗಳಲ್ಲಿ ಉರಿ, ನರಮುರಿವು, ತಲೆನೋವು, ಚಳಿನೋವು, ಉಳುಕು ನೋವು, ಹಲ್ಲುನೋವು, ತಿನಿಸುಗಳು ಮುಂತಾದ ರೋಗಗಳಿಗೆಲ್ಲ ನಿಸ್ಸಂದೇಹವಾಗಿ ಬಹಳ ಪ್ರಯೋಜನವನ್ನುಂಟುಮಾಡುತ್ತದೆ. ಈ ತೈಲವನ್ನು ರೋಗವುಳ್ಳ ಸ್ಥಳಗಳಲ್ಲಿ ಹಚ್ಚಿದರೆ ಸಹ ಶರೀರದೊಳಕ್ಕೆ ವ್ಯಾಪಿಸುವಂತೆ ಚೆನ್ನಾಗಿ ತಿಕ್ಕಿದಲ್ಲಿ ನರಗಳಿಗಿರುವ ದುಷ್ಟ ವಾಯುಗಳನ್ನು ನಿವೃತ್ತಿ ಮಾಡುವಂಥಾ ಉತ್ತಮ ತೈಲವಾಗಿರುತ್ತದೆ. ಸರ್ವಶರೀರದಲ್ಲಿಯೂ ದಣಿವು ಅಂತರ್ವೇದನೆಯು ಮತ್ತು ಬೀಳುವ ಕುಡುಗಿನ ನಿವೃತ್ತಿಯಾಗುವದು. ಗಂಟುಗಳಲ್ಲುಂಟಾಗುವ ಉರಿ ಅಥವಾ ವ್ರಣಗಳಿಗೆ ಈ ತೈಲವು ಅದ್ಭುತವಾದ ಮತ್ತು ಶೀಘ್ರವಾದ ಗುಣವನ್ನು ಉಂಟುಮಾಡುವದು. ಅದ್ಭುತವಾದ ಈ ಔಷಧವನ್ನು ಉಪಯೋಗಿಸಿದಲ್ಲಿ ಅದರ ಪ್ರಯೋಜನವು ಸ್ವತಃ ವ್ಯಕ್ತವಾಗುವದು. ಈ ತೈಲವು ಶೀತಗಾಳಿ ಮಂಜು ಮುಂತಾದವುಗಳೊಳಗಾಗಿ ಸಂಚರಿಸುವಂಥಾ ಪ್ರಯಾಣಿಕರು, ಬೇಟೆಯಾಡುವವರು, ವ್ಯಾಯಾಮ ಮಾಡುವವರು, ಮುಂತಾದವರಿಗೆಲ್ಲ ಅಮೂಲ್ಯವಾದದ್ದು.

ಪರಿಶೀಲಕರ ಅಭಿಪ್ರಾಯವು.

ಐರ್‌ಲ್ಯಾಂಡ್ ದೇಶದ ಫಾರ್ಮಸ್ಯೂಟಿಕಲ್ ಸೊಸೈಟಿಯೆಂಬ ಔಷಧಶಾಲೆಯ ಪ್ರೊಫೆಸರರಾಗಿಯೂ, ಸರ್ಜನ್ ಹಾಲ ರಾಯಲ್ ಕಾಲೇಜಿನ ರಸಾಯನಶಾಸ್ತ್ರದ ಪರೀಕ್ಷಕರಾಗಿಯೂ, "ಮಿನರಲ್ ವಾಟರ್ಸ್ ಆಫ್ ಯೂರಪ್" ಎಂಬ ಗ್ರಂಥಕರ್ತರಾಗಿಯೂ, ರಸಾಯನ ಶಾಸ್ತ್ರ ವಿಷಯಕವಾದ ಅನೇಕ ಲೇಖನಾಧಿಕಾರಿಗಳಾಗಿಯೂ, ಇರುವ ಪ್ರೊಫೆಸರ್ ಟಿಚ್ ಬೋರ್ನ್ (C. R. TICHBORNE, L. L. D., F. C. S., M. R. I. A.) ಎಂಬವರು ಅಭಿಪ್ರಾಯ ಪಟ್ಟಿರುತ್ತಾರೇನೆಂದರೆ—ಲಿಟಲ್‌ರವರ ಓರಿಯಂಟಲ್ ಬಾಮನ್ನು ಜಾಗರೂಕತೆಯಿಂದ ಪರೀಕ್ಷಿಸಿದ್ದರಿಂದ ಇದು ಬಹುವಿಧ ಮೂಲಿಕೆಗಳ ರಸಯುಕ್ತವಾದ ತೈಲವೆಂದು ಗೊತ್ತಾಯಿತಲ್ಲದೆ, ಇದು ಬಹಳ ಉಪಯೋಗಕರವಾದ ಕುಡುಗಿನ ನಿವಾರಕವಾದದ್ದಾಗಿದ್ದರೂ, ಸಿಹಿಯಾಗಿ ಸ್ಥಳ ರೋಗ ನಿವಾರಕ ಶಕ್ತಿಯುಳ್ಳದ್ದಾಗಿರುತ್ತದೆ. ಈ ಮಿಶ್ರದ ಸರಕನ್ನು ಸ್ವಭಾವಕ್ಕೆ ತಕ್ಕದ್ದಾಗಿರುವದರಿಂದ ಇದು ಯಾವ ತರದ ರೋಗಗಳಿಗೆ ಉಪಯುಕ್ತವೆಂದು ತಿಳಿಸಲ್ಪಟ್ಟಿದೆಯೋ ಆ ರೋಗಗಳಲ್ಲಿ ಅದರ ಪ್ರಯೋಜನವು ವ್ಯಕ್ತವಾಗುವದು. ಈ ತೈಲವು ಸಂಪೂರ್ಣ ಜಾಗರೂಕತೆಯೊಡನೆ ತಯಾರಿಸಲ್ಪಟ್ಟಿರುತ್ತದೆ.

ಇದರ ಕ್ರಯ—ಸೀಸೆ ಒಂದಕ್ಕೆ ೧ ರೂಪಾಯಿ.

ಇದು ಪಿಸಿಸ್ಟ್ ಔಷಧ ಶಾಲೆಯಲ್ಲಿಯೂ, ಮದರಾಸ್ ಸೆಂಬುದಾಸ್ ಬೀದಿಯಲ್ಲಿ, ೨೦ನೇ ನಂಬರ್ ಮನೆಯೊಳಗಿರುವ, ಎ. ಸಿ. ಬೆರ್ರಿಮನ್ ಯವರಲ್ಲಿಯೂ, ಈ ಪ್ರಾಂತ್ಯದಲ್ಲಿರುವ ಅವರ ಏಜಂಟ್‌ಗಳಾದ ಜೆ. ವೆಸ್ಟ್ ಯವರ ಕಂಪೆನಿಯಲ್ಲಿಯೂ, ಮೆ. ಕೆಪ್ಟನ್ ಅಂಡ್ ಕಂಪೆನಿಯವರಲ್ಲಿಯೂ, ರಿಗ್ಸ್ ಯವರ ಕಂಪೆನಿಯಲ್ಲಿಯೂ ದೊರೆಯುವದು.

AGENTS.— Messrs, J. WEST, *Chemist, &c., Bangalore.*
CAPTAIN & Co. *Chemists, Bangalore.*
RIGGS & Co., *Chemists, Bangalore;* and of
MAHOMED YOUSOFF AND SONS, *The Cash Bazar, Bangalore*
A. C. BERRYMAN & Co.,
20 *Sambodoss Street Madras.*

NOTICE.

VAIDYASARA SANGRAHA

A TREATISE ON THE PRINCIPLES OF

HINDU MEDICINE.

Price including Postage Rs. 5 6-0

ವೈದ್ಯಸಾರ ಸಂಗ್ರಹ.

ಈ ಗ್ರಂಥಾಪೇಕ್ಷೆಯುಳ್ಳವರು ಮೊಬಲಗಿನೊಡನೆ ಈ ಕೆಳಗೆ ರುಜುಮಾಡಿರತಕ್ಕವರ ಹೆಸರಿಗೆ ಬರೆದುಕೊಂಡರೆ ಪುಸ್ತಕ ಕೂಡಲೇ ಕಳುಹಿಸಲ್ಪಡುವದು. ಮೊಬಲಗು ಇಲ್ಲದ ಫರಮಾಯಿಷುಗಳಿಗೆ ಸುತರಾಂ ನಿಗೆಕೊಡಲ್ಪಡಲಾರದು.

ಇದರ ಕ್ರಯ ... ... ರೂ ೫—೦—೦
ಪ್ಯಾಕಿಂಗ್ ಮತ್ತು ಅಂಚೆಹಾಸಲ್, ೦—೬—೦

ಟಿ. ವಿ. ವೆಂಕಟಾಚಾರ್,
ಆಸ್ಪತ್ರಿರೋಡ ಬೆಂಗಳೂರು.

ವಿಶೇಷ ವರ್ತಮಾನ.



ಪ್ರತಿ ಚಿತ್ರಶಾಲೆಯಲ್ಲಿ ಸಿದ್ಧಪಡಿಸಲ್ಪಟ್ಟಿರುವ ಪೂರ್ಣ ಶಿಲಾಮುದ್ರಿತ ಹಿಂದೂ ದೇವತೆಗಳ, ಚರಿತ್ರೆಗಳ ಮೂಲಕ ಪ್ರಸಿದ್ಧರಾದವರ, ಸುಂದರಿಗಳಾದ ನೇಟಿವ್ ಹೆಂಗಸರು ಮುಂತಾದವರ ಚಿತ್ರಗಳು ತಯಾರಾಗುತ್ತವೆ. ಇವುಗಳ ಕೆಲವುಗಳಿಗೆ ನಾನಾವರ್ಣ ಚೌಕಟ್ಟು ಅಳವಡಿಸಿದೆ. ಬೇಕಾದವರಿಗೆ ಕ್ರಯದಪಟ್ಟಿ ಕಳುಹಿಸಲ್ಪಡುವದು.

ಪೂನಾ ಸಿಟಿ ಚಿತ್ರಶಾಲೆಯ ಮ್ಯಾನೇಜರ್.

ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA.

MONDAY, AUGUST 6, 1888.

೧೮೮೮ನೇ ಆಗಸ್ಟ್ ೬ನೇ ತಾ|| ಸೋಮವಾರ.

SREE SRINGERI SWAMI'S ARRIVAL IN BELLARY.

ಶ್ರೀ ಶೃಂಗೇರಿ ಜಗದ್ಗುರುಗಳಾದ ಶ್ರೀ ಸಚ್ಚಿದಾನಂದ ಶಿವಾಭಿನವ ನೃಸಿಂಹ ಭಾರತಿ ಸ್ವಾಮಿಗಳವರು ಬಳ್ಳಾರಿ ಪಟ್ಟಣ ಪ್ರವೇಶ ಮಾಡಿದ ಕಾಲದಲ್ಲಿ ಅಲ್ಲಿನ ಜನಗಳು ಶ್ರೀಗಳಿಗೆ ವಿಶೇಷ ವಿಭವದೊಡನೆ ಬರಮಾಡಿಕೊಂಡು ಸತ್ಕರಿಸಿದ ಅಂಶವು ಬಳ್ಳಾರಿ ವಿಜಯಧ್ವಜ ಪತ್ರಿಕೆಯು ಇದರಡಿ ಕಂಡಂತೆ ತಿಳಿಸಿರುತ್ತದೇನೆಂದರೆ,—ಈ ಸರ್ವಧಾರಿನಾಮಸಂವತ್ಸರ ಆಷಾಢಶುದ್ಧ ಚತುರ್ದಶೀ ಭಾನುವಾರ ಸೂರ್ಯೋದಯಾನಂತರ ೮ ಘಳಿಗೆಯ ಮೇಲೆ ಶ್ರೀಮಚ್ಛೃಂಗಪುರಾಧೀಶ್ವರರಾದ ಶ್ರೀ ಸಚ್ಚಿದಾನಂದ ಶಿವಾಭಿನವ ನೃಸಿಂಹ ಭಾರತೀ ಸ್ವಾಮಿಗಳವರ ಸವಾರಿಯು ಈ ಬಳ್ಳಾರೀ ಪುರಕ್ಕೆ ಚಿತ್ತೈಸಿತು. ಪಟ್ಟಣಕ್ಕೆ ಪಶ್ಚಿಮಭಾಗದಲ್ಲಿರುವ ಒಂದು ಸಣ್ಣ ಗ್ರಾಮದಲ್ಲಿ ಅದರ ಹಿಂದಿನರಾತ್ರಿ ಬ್ರಹ್ಮಶ್ರೀ ರಾಮಚಂದ್ರ ಶಾಸ್ತ್ರಿಗಳೆಂಬವರ ಮನೆಯಲ್ಲಿ ಮುಕ್ಕಾಮುಮಾಡಿದ್ದು ಅವರಿಂ ಪೂಜಿತರಾಗಿ ಮಾರನೆಯದಿನ ಬೆಳಗ್ಗೆ, ಅಂದರೆ ಮೇಲೆ ಕಂಡ ದಿನ ಬೆಳಗ್ಗೆ ಆಮೋಳಿಕೆಯಲ್ಲಿ ಕೋಟೆಯ ಪೂರ್ವದ್ವಾರದ ಬಳಿಗೆ ದಯಮಾಡಿದರು. ಇದಕ್ಕೆ ಮುಂದಾಗಿಯೇ ಈ ಪಟ್ಟಣದೊಳಗಿರುವ ಶಿಷ್ಯವರ್ಗದವರೆಲ್ಲರೂ ಪ್ರಾಭಾತಿಕ ಕರ್ಮಗಳನ್ನೆಲ್ಲ ನೆರವೇರಿಸಿ ಫಲ ಮಂತ್ರಾಕ್ಷತೆಗಳಂ ತೆಗೆದುಕೊಂಡು ಮಂಗಳ ವಾದ್ಯದೊಡನೆ ಕೋಟೆಯ ಪೂರ್ವದ್ವಾರಕ್ಕೆ ಮುಂಭಾಗದೊಳಗಿರುವ ವಿಶಾಲವಾದ ಮೈದಾನದಲ್ಲಿ ಹೋಗಿ ಕಾದಿದ್ದರು. ಬಳಿಕ ಆ ಶ್ರೀಪಾದರು ಪಟ್ಟಣದ ರಾಜಮಾರ್ಗದಲ್ಲಿ ಸಕಲವಿಧ ಛತ್ರ ಚಾಮರಗಳೊಡನೆ ನಿರಭ್ರಸಂಚಾರಿಯಾಗಿ ದಯಮಾಡಿದ ಕ್ರಮವು ಸರ್ವಜನಗಳಿಗೂ ಅವರವರ ಜ್ಞಾನಾಭ್ಯಾಸಾನುಸಾರವಾಗಿ ಅಧಿಕಾನುಭವವನ್ನುಂಟುಮಾಡತಕ್ಕದ್ದಾಗಿತ್ತು. ಅದು ಹ್ಯಾಗೆಂದರೆ— ಶ್ರೀ ಸ್ವಾಮಿಗಳ ಸವಾರಿಗೆ ಪ್ರಥಮದಲ್ಲಿ ಮಕರತೋರಣವೂ, ಅದರ ಹಿಂಭಾಗದಲ್ಲಿ ಗಜದಮೇಲೆ ವಿಪ್ರಹಸ್ತದೊಳೊಂದು ಪತಾಕೆಯೂ, ಅದರ ಹಿಂದೆ ಅನುಛತ್ರಗಳೂ, ಅವುಗಳ ಹಿಂದೆ ಹೇಮಮಯವಾದ ಪಂಚಕಲಶಗಳೂ ಮಧ್ಯೆ ಒಂದು ಸುವರ್ಣ ವಿಮಾನವೂ, ಅದರ ಪುರೋಭಾಗದಲ್ಲಿ ಎರಡು ಧವಳ ಛತ್ರಗಳೂ, ಉಭಯ ಪಾರ್ಶ್ವದೊಳು ಕರದೀವಟಿಗೆಗಳೂ ಅನುವರ್ತಿಸಿ ಬರುತ್ತಿದ್ದವು. ಆ ಕಾಲದಲ್ಲಿ ಶ್ರೀ ಶಂಕರನು ತಾನು ತ್ರಿಗುಣಾತೀತನಾಗಿ 'ಪ್ರಕಾಶನಾಗಿರುವಂತೆ ಪ್ರಕೃತಿ ಮೊದಲಕ್ಕೆ ಬೋಧಿಸುವಂತೆ ಧವಳ ಛತ್ರ ಚಾಮರಗಳ ಛಾಯೆಯಲ್ಲಿ ಮೂರ್ತೀಭವಿಸಿ ಸತ್ಯಸ್ವರೂಪವನ್ನೂ, ತೇಜೋವಿಶೇಷವಾದ ಚಿತ್ಸ್ವರೂಪವನ್ನೂ, ಹಸನ್ಮುಖದಿಂ ಆನಂದಸ್ವರೂಪವನ್ನೂ ವಹಿಸಿ ತಾನು ಸಚ್ಚಿದಾನಂದಸ್ವರೂಪಜ್ಞಾನವನ್ನುಂಟುಮಾಡುತ ಆರಿಷ್ಟ ಭಯ ಮೊದಲಕ್ಕೆ ಬಿಟ್ಟಿರುತ್ತಾನೇನೋ ಎಂಬ

ಭಾವನೆ ಯುಂಟಾಗುತಲಿತ್ತು. ಇಂತಾ ಸ್ವರೂಪವನ್ನು ಶ್ರೀಗಳವರು ಅಖಿಲಜನ ಕ್ಷೇಮಾರ್ಥವಾಗಿ ಧರಿಸಿರುವರೆಂಬುದೂ, ಅವಯವ ಸೌಷ್ಟವವೂ, ವಿದ್ಯಾ ಪ್ರಾಗಲ್ಭ್ಯವೂ, ನಿರಂತರ ಪಾರಿಶುದ್ಧ್ಯವೂ, ಅವರಿಗಿರತಕ್ಕ ಶ್ರೀಸಚ್ಚಿದಾನಂದ ಶಿವಾಭಿನವ ನೃಸಿಂಹಭಾರತಿಗಳೆಂಬ ನಿಜನಾಮವೂ ದೃಢಪಡಿಸತಕ್ಕವಾಗಿಯೇ ಇರುತಿವೆ. ಶ್ರೀಸ್ವಾಮಿಗಳವರು ತಮ್ಮ ಕಟಾಕ್ಷ ವೀಕ್ಷಣದಿಂದಲೂ, ಅಭಯೋದಂತ ಸೂಚಕಗಳಾದ ಕುಶಲಪ್ರಶ್ನೆಗಳಿಂದಲೂ, ಶಿಷ್ಯಮಂಡಲಿಯನ್ನನುಗ್ರಹಿಸುತ ಅಸಮಾನ ವಿಭವಗಳೊಡನೆ ತಮಗೆ ಪರಿಕಲ್ಪಿತವಾಗಿದ್ದ ಪ್ರವೇಶಕ್ಕೆ ಸವಾರಿ ಚಿತ್ತೈಸಿ ತಮ್ಮ ಸುವರ್ಣ ಪಾಲಖಿಯಿಂದಿಳಿದು ಒಳಗೆ ಬಿಜಮಾಡಿ ಗೃಹಾಭ್ಯಂತರದಲ್ಲಿ ಭೂಸುರ ಮಧ್ಯದೊಳು ಸಿಂಹಾಸನಾಸೀನರಾಗಿ ಆಗ್ಯೆ ಇನ್ನೂ ಅನೇಕರಿಗೆ ಫಲಮಂತ್ರಾಕ್ಷತೆಗಳನ್ನೆಲ್ಲ ಅಭಿಮಾನ ಪೂರ್ವಕ ಕೃಪೆಗೈದರು. ತರುವಾಯ ಧರ್ಮವರು ಕೃಷ್ಣಮಾಚಾರ್ಯ ರೆಂಬವರು ತಮ್ಮಿಂದ ವಿರಚಿತವಾದ ನವಪದ್ಯ ರತ್ನಮಾಲಿಕೆಯನ್ನು ಶ್ರೀಸ್ವಾಮಿಗಳವರ ಸನ್ನಿಧಿಯಲ್ಲಿ ಹುತವಡಿಸಿ ಅರ್ಪಿಸಿದರು. ರಾಜವೀಧಿಯಲ್ಲಿ ಸ್ವಾಮಿಗಳವರ ಸವಾರಿ ಚಿತ್ತೈಸುವಾಗ್ಯೆ ಗಲಭೆಗೆ ಅವಕಾಶವಿಲ್ಲವಂತೆ ಬೇಕಾದಮಟ್ಟಿಗೆ ಪೋಲೀಸಿನವರ ಪಹರೆ ಇಡಲ್ಪಟ್ಟಿತ್ತು. ಪುರದ ರಾಜವೀಧಿಯು ತೋರಣ ಕದಳೀಸ್ತಂಭಾದಿಗಳಿಂದಲೂ, ಇತರಾಲಂಕಾರಾದಿಗಳಿಂದಲೂ, ನೋಡುವವರಿಗೆಲ್ಲ ಉತ್ಸಾಹವನ್ನುಂಟುಮಾಡುತಲಿತ್ತು. ಮುಖ್ಯವಾಗಿ ಶ್ರೀಸ್ವಾಮಿಗಳವರು ವಯಸ್ಸಿನಿಂದಲೂ, ಪಾಂಡಿತ್ಯದಿಂದಲೂ ಶಕ್ತಿಸಾಮರ್ಥ್ಯಾದಿಗಳಿಂದಲೂ, ಶಾಂತಶಮದಮಾದ್ಯನೇಕ ಗುಣಗಳಿಂದಲೂ, ತಪ್ರೋನಿಷ್ಠತೆಯಿಂದಲೂ, ಬಹಳ ಮಿದ್ಯರಾಗಿದಾರೆ. ಇವೆಲ್ಲವೂ ಯತಿವರ್ಯರಿಗೆ ಅತ್ಯಂತಾವಶ್ಯಕಗಳಾದ ಸುಗುಣಗಳಾಗಿರುತಿವೆ. ಇವು ಏಕತ್ರ ಸೇರಿರುವದು ಬಹಳ ದುರ್ಲಭವು. ಶ್ರೀ ಸ್ವಾಮಿಗಳವರು ಬಳ್ಳಾರಿ ನಿವಾಸಿಗಳ ಶ್ರದ್ಧಾಭಕ್ತಿ ಇಂಗಿತಜ್ಞತೆಗಳಿಂ ಬಹಳವಾಗಿ ಪ್ರಶಂಸಿಸಿ ಸಂತೋಷಿಸಿದರು. ಶ್ರೀ ಸ್ವಾಮಿಗಳ ಆಗಮನ ವಿಷಯದಲ್ಲಿ ಇಲ್ಲದ ದುರಾಕ್ಷೇಪಣೆಗಳಿಂ ಮಾಡಿ ಅಡ್ಡಿಪಡಿಸಬೇಕೆಂದೆತ್ನಿಸಿದ್ದವರೆಲ್ಲರಿಗೂ ತೇಜೋಭಂಗವುಂಟಾದುತೆ ನುಡಿಯಬಹುದಾಗಿವೆ. ಈಪಟ್ಟಣ ಹುಟ್ಟಿದಾರಭ್ಯ ಇಂತಾ ಸಂಭ್ರಮದೊಡನೆ ಯಾವ ಮಹನೀಯರೂ ಪ್ರವೇಶ ಮಾಡಿರಲಿಲ್ಲವೆಂದು ಹಳಬರಾದವರು ಅಂದುಕೊಳ್ಳುತ್ತಿದ್ದರು. ಆದಿತ್ಯವಾರ ಇಲ್ಲಿನ ಸ್ಮಾರ್ತ ವೈದಿಕ ಮಂಡಲಿಯವರು ಶ್ರೀಯವರಿಗೆ ಭಿಕ್ಷೆಯನ್ನು ಮಾಡಿಸಿದರು. ಬ್ರಾಹ್ಮಣ ಸಮಾರಾಧನೆಯಂತೂ "ಬ್ರಾಹ್ಮಣೋ ಭೋಜನಪ್ರಿಯಃ" ಎಂಬುತೆ ಭೋಜನದ ಸುಖವನ್ನರಿತ ಬ್ರಾಹ್ಮಣರೇ ಮಾಡಿಸಿದ್ದರಿಂದಾ ಕೊಂಡುಕೊರತೆಯೂ ಇಲ್ಲದಂತೆ ಕೊನೆಪಟ್ಟಿತು. ಮಾರನೇ ದಿನದಿಂದ ಲೌಕಿಕರು ಭಿಕ್ಷೆಯನ್ನು ಮಾಡಿಸುವದಕ್ಕೆ ಆರಂಭಿಸಿದರು. ಶ್ರೀಯವರು ಚಾತುರ್ಮಾಸ್ಯ ಸಂಕಲ್ಪವನ್ನು ಇಲ್ಲಿ ಜರಿಗಿಸುವಂತೆ ನಿಷ್ಕರ್ಷೆ ಮಾಡಿದರೆಂದು ನಾವು ಕೇಳುತ್ತೇವೆ. ಇದಕ್ಕಾಗಿ ಇಲ್ಲಿನ ವೈಶ್ಯರು ೧ ತಿಂಗಳ ಪರಿಯಂತ ಭಿಕ್ಷೆಯನ್ನು ಜರಿಗಿಸುವಂತೆ ಒಪ್ಪಿಕೊಂಡಿರುತ್ತಾರೆಂದು ಜನಗಳು ಹೇಳಿಕೊಳ್ಳುತ್ತಾರೆ.

MORAL GEMS FROM THE MAHABHARATA.

ಮಹಾಭಾರತ ನೀತಿರತ್ನಾವಳಿ.

III.—OF WORKS.—ಕರ್ಮಕಳಿ.

The Hindu Excelsior Series No. IX.

(ದಾಕ್ಷ್ಯ ಏರಿನೆ ತಾರೀಖಿನ ಪತ್ರಿಕಾಶೇಷವು)

ಶ್ಲೋ|| ದಾಕ್ಷ್ಯಮೇಕಪದಂಧರ್ಮ್ಯಂ ದಾನ
ಮೇಕಪದಂಯಶಃ | ಸತ್ಯಮೇಕಪದಂಸ್ವ
ರ್ಗ್ಯಂಶೀಲಮೇಕಪದಂಸುಖಂ ||೧೧||

ಅ|| ಮನುಷ್ಯನಿಗೆ ದಯಾಳುತ್ವವೇ ಮುಖ್ಯವಾದ ಧರ್ಮವಾಗಿರುತಿದೆ. ದಾತೃತ್ವವು ಕೀರ್ತಿಗೆ ಮುಖ್ಯವಾದ ಆಧಾರವು, ಸತ್ಯವು ಸ್ವರ್ಗಕ್ಕೆ ಮುಖ್ಯಸಾಧನವು, ಸದ್ವರ್ತನವು ಸುಖಕ್ಕೆ ಮುಖ್ಯಕಾರಣವು. ಆದವರಿಂದ ದಯಾಪರನಾಗಿಯೂ, ಉದಾರಿಯಾಗಿಯೂ, ಸತ್ಯವಂತನಾಗಿಯೂ, ಒಳ್ಳೆಯ ನಡತೆಯುಳ್ಳವನಾಗಿಯೂ ಇರುವ ಪುರುಷನು ಸಕಲ ಸುಖತೋತ್ತ ಅನವರತ ಅನುವರ್ತಿಸಿರುವವೆಂದರಿಯತಕ್ಕದ್ದು.

ಶ್ಲೋ|| ವೃತ್ತಂಯತ್ನೇನಸಂರಕ್ಷೇ ದ್ವಿತ್ತಮೇ
ತಿಚಯಾತಿಚ | ಅಕ್ಷೀಣೋವಿತ್ತತಃ
ಕ್ಷೀಣೋವೃತ್ತತಸ್ತು ಹತೋಹತಃ ||೧೨||

ಅ|| ಐಶ್ವರ್ಯವು ಕೇವಲ ಅನಿಯತವಾದದ್ದು ದವರಿಂದ ಅದು ಆಗಿಂದಾಗ್ಯೆ ಬರುತಲೂ ಹೋಗುತಲೂ ಇರುವದು. ದ್ರವ್ಯಹೀನನಾಗಿದ್ದರೂ ಸದ್ವರ್ತನವುಳ್ಳವನಾಗಿದ್ದರೆ ಸಂಪನ್ನನಾಗುವನು! ಧನವಿದ್ದು ಒಳ್ಳೆಯ ನಡವಳಿಕೆಯೆಂಬದೊಂದು ಇಲ್ಲದೆ ಹೋದಬಳಿಕ ಅವನು ಜನರಪಾಲಿಗೆ ಧನಹೀನನೇ ಯಾಗುತ್ತಾನೆ. ಆದಕಾರಣ ಸದ್ವರ್ತನವನ್ನು ಪ್ರಯತ್ನಪೂರ್ವಕ ಹ್ಯಾಗಾದರೂ ಕಾಪಾಡಿಕೊಳ್ಳಬೇಕಾದದ್ದು ವಿವೇಕಿಯ ಮುಖ್ಯ ಧರ್ಮವಾಗಿರುತಿದೆ.

ಶ್ಲೋ|| ತಿಸ್ರೋವೈಗತಯೋರಾಜನ್ ಪರಿದಿ
ಷ್ಟಾಃಸ್ವಕರ್ಮಭಿಃ | ಮಾನುಷ್ಯಂಸ್ವ
ರ್ಗವಾಸಶ್ಚತಿರ್ಯಗ್ಯೋನಿಶ್ಚತತ್ರಿಧಾ||

ಅ|| ಎಲೈ ರಾಜನೇ! ಕೇವಲ ಸ್ವಕರ್ಮದಿಂದಲೇ ಮಾನುಷ ಜನ್ಮವೂ, ಸ್ವರ್ಗವಾಸವೂ, ಪಶುಪಕ್ಷಿ ಕ್ರಿಮಿ ಕೀಟಾದಿ ಜನ್ಮವೂ ಉಂಟಾಗುತಿವೆ ಯಾಗಿ ಸದರೀ ಮೂರರಲ್ಲಿ ಉತ್ತಮವಾದ ಮಾನುಷ ಜನ್ಮವಂ ಪಡೆದು ಸ್ವರ್ಗ ಸುಖಗಳನ್ನನುಭವಿಸಲಿಕ್ಕೆ ಕಾರಣಗಳಾದ ಕರ್ಮಗಳಂ ಮಾಡಬೇಕಾದದ್ದು ವಿವೇಕಿಯ ಕೃತ್ಯವೆಂದು ತಿಳಿಸಲ್ಪಟ್ಟದೆ.

ಶ್ಲೋ|| ತತ್ರವೈಮಾನುಷಾಲ್ಲೋಕಾ ದ್ದಾ
ನಾದಿಭಿರತಂದ್ರಿತಃ | ಅಹಿಂಸಾರ್ಥ
ಸಮಾಯುಕ್ತೈಃ ಕಾರಣೈಃಸ್ವರ್ಗ
ಮಶ್ನುತೇ ||೧೩||

ಅ|| ಮನುಷ್ಯನು ದಾನ ಮೊದಲಾದ ಸತ್ಕರ್ಮಗಳ ಮೂಲಕ ಮಾನುಷ ಜನ್ಮವನ್ನೆತ್ತಿ ಭೂತದಯೆಯಿಂದ ಸ್ವರ್ಗ ಸುಖಗಳನ್ನನುಭವಿಸುವನು. ಅಹಿಂಸಾದಿ ಧರ್ಮಬದ್ಧನಾದ ಪುರುಷನಿಗೆ ಈ ಲೋಕದಲ್ಲೂ ಪರಲೋಕದಲ್ಲಿಯು ಸಹ ಸಕಲಸುಖತೋತ್ತ ಕೈಗೂಡುವವು.

ಶ್ಲೋ|| ವಿಪರೀತೈಶ್ಚರಾಜೇಂದ್ರ ಕಾರಣೈ
ರ್ಮಾನುಷೋಭವೇತ್ | ತಿರ್ಯಗ್ಯೋನಿಸ್ತ
ಥಾತಾತವಿಶೇಷಾಶ್ಚಾತ್ರವಕ್ಷ್ಯತೇ ||೧೪||

ಅ|| ಎಲೈ ರಾಜಶ್ರೇಷ್ಠನೆ! ದುಷ್ಕರ್ಮಗಳಿಂದ ಮನುಷ್ಯನು ಜನ್ಮವುಪಡೆದು ದುಃಖಭಾಜನನಾಗುವನು. ಮತ್ತು ತಿರ್ಯಗ್ಜನ್ಮಗಳನ್ನೆತ್ತಿ ಕ್ಲೇಶಗಳನ್ನನುಭವಿಸುವನು.

ಶ್ಲೋ|| ತಸ್ಮಾದ್ವಾಕ್ಕಾಯಮನಸಾನಾಚ
ರೇದಶುಭಂನರಃ|ಶುಭಾಶುಭಾನ್ಯಾಚರ
ನ್ಹಿತಸ್ಯತಸ್ಯಾಶ್ನುತೇಫಲಂ ||೧೫||

ಅ|| ಆದದರಿಂದ ಯಾವನು ಮನಸಾ ವಾಚಾ ಅನ್ಯರಿಗೆ ಹಾನಿಯನ್ನುಂಟುಮಾಡುವನೋ ಅವನು ಸ್ವತಃ ಶುಭಾಶುಭಗಳಿಗೆ ಗುರಿಯಾಗದೆ ಹೋಗಲಾರನು.

ಶ್ಲೋ|| ಅನಭಿಧ್ಯಾಪರಸ್ವೇಷು ಸರ್ವಸತ್ವ
ಷುಸೌಹೃದಂ | ಕರ್ಮಣಾಫಲಮಸ್ತೀತಿ
ತ್ರಿವಿಧಂಮನಸಾಚರೇತ್ ||೧೬||

ಅ|| ಪರದ್ರವ್ಯಾಪೇಕ್ಷೆ ಇಲ್ಲದೆ, ಸರ್ವ ಭೂತದಯಾಪರನಾಗಿ ಸತ್ಕರ್ಮವು ಸತ್ಫಲಪ್ರದವೆಂಬ ಜ್ಞಾನದೊಡನೆ ಸನ್ಮಾರ್ಗದಲ್ಲಿ ಪ್ರವರ್ತಿಸುವದೇ ಮಾನಸಿಕ ಕರ್ಮಗಳೆಂದು ತಿಳಿಯತಕ್ಕದ್ದು.

ಶ್ಲೋ|| ಅಸತ್ಪ್ರಲಾಪಂಪಾರುಷ್ಯಂ ಪೈಶು
ನ್ಯಮನೃತಂತಥಾ | ಚತ್ವಾರಿವಾಚಾ
ರಾಜೇಂದ್ರನಜಲ್ಪೇನ್ನಾನುಚಿಂತಯೇತ್ ||೧೭||

ಅ|| ಓ ರಾಜಶ್ರೇಷ್ಠನೆ! ಅಸತ್ಪ್ರಲಾಪವು, ವಾಕ್ಪಾರುಷ್ಯವು, ಪಿಶುನತ್ವವು, ಅನೃತವು, ಈ ನಾಲ್ಕು ವಾಗ್ದೋಷಗಳಾದದರಿಂದ ಇವು ಪುರುಷನಿಗೆ ಸರ್ವಥಾ ತ್ಯಾಜ್ಯಗಳು. ಸದರೀ ಗುಣಗಳುಳ್ಳವನಿಗೆ ಆತ್ಮನಾಶನಕ್ಕೆ ಪ್ರತ್ಯೇಕ ಶತ್ರುಗಳು ಬೇಕಾಗಿರುವದಿಲ್ಲವು. ಅಂದರೆ ಶತ್ರು ಬಾಹುಳ್ಯವನ್ನು ಅವನ ಗುಣಗಳೇ ಬೇಕಾದಂತೆ ಕಲ್ಪಿಸುವವೆಂದು ಭಾವವು.

ಶ್ಲೋ|| ಪ್ರಾಣಾತಿಪಾತಸ್ತೈನ್ಯಂಚಪರದಾ
ರಮಥಾಪಿವಾ | ತ್ರೀಣಿಪಾಪಾನಿಕಾಯೇ
ನಸರ್ವತಃಪರಿವರ್ಜಯೇತ್ ||೧೮||

ಅ|| ಪ್ರಾಣಘಾತ, ಚೌರ್ಯ, ಪರಸ್ತ್ರೀ ಗಮನ, ಈ ಮೂರೂ ಶಾರೀರ ದೋಷಗಳಾದದರಿಂದ ಇವಂ ವಿವೇಕಿಯು ತೊರೆಯತಕ್ಕದ್ದು. ಲೋಕದಲ್ಲಿ ಇವುಗಳಿಗಿಂತಲೂ ಪಾತಕಗಳು ಮತ್ಯಾವದೂ ಇರುವದಿಲ್ಲವು.

ಶ್ಲೋ|| ಶುಭೇನಕರ್ಮಣಾಸೌಖ್ಯಂ ದುಃಖಂ
ಪಾಪೇನಕರ್ಮಣಾ | ಕೃತಂಫಲತಿಸರ್ವ
ತ್ರನಾಕೃತಂಭುಜ್ಯತೇಕ್ವಚಿತ್ ||೧೯||

ಅ|| ಸತ್ಕರ್ಮಗಳಿಂದ ಸುಖವೂ, ದುಷ್ಕರ್ಮಗಳಿಂದ ಪಾಪವೂ ಪ್ರಾಪ್ತವಾಗುತಿವೆಯಾಗಿ ಮಾಡತಕ್ಕ ಕರ್ಮಸ್ವರೂಪಾನು ಗುಣವಾದ ಫಲವುಂಟಾಗುವದಲ್ಲದೆ ಮಾಡದ ಕರ್ಮಗಳಿಗಾಗಿ ಯಾವ ಫಲವೂ ಅನುಭವಿಸಲ್ಪಡಲಾರವು. ಆದದರಿಂದ ಮಾಡುವ ಕರ್ಮದಲ್ಲಿ ಔಚಿತ್ಯವು ಅಪೇಕ್ಷಿತವಾಗಿರುತಿದೆ.

ಶ್ಲೋ|| ವಿಪದ್ಯಮಾಂಚದಶಾಂಪ್ರಾಪ್ಯ ದೇ
ವಾನ್ಗರ್ಹತಿವೈಭೃಶಂ ಆತ್ಮನಃಕರ್ಮ
ದೋಷಾಣಿನವಿಜಾನಾತ್ಯಪಂಡಿತಃ ||೨೦||

ಅ|| ಜ್ಞಾನಹೀನನಾದ ಪುರುಷನು ತನ್ನ ಕಷ್ಟಕಾಲದಲ್ಲಿ ದೇವತೆಗಳನ್ನುಬಹಳ ನಿಂದಿಸುವನೇಹೊರ್ತು ತನ್ನ ದುಷ್ಕರ್ಮಗಳ ಫಲವೆಂದರಿಯುವದಿಲ್ಲವು. ಮನುಷ್ಯನಸದಸದ್ವ್ಯಾಪಾರಗಳಿಗೆ ದೇವತೆಗಳು ಹ್ಯಾಗೆ ಅಸುಬುಧಿಗಳೋ ಹಾಗೆಯೇ ಅವುಗಳಿಂದುಂಟಾಗ ಬಹುದಾದಫಲಾನುಭವಗಳಿಗೆ ಸಹ ಅವರು ಸಂಬಂಧಿಸಿದವರಲ್ಲವು. ಕರ್ಮಾನುಗುಣವಾದ ಫಲಾನುಭವವು ಸಿದ್ಧವಾಗಿರುವಲ್ಲಿ ಆ ಕಾಲದಲ್ಲಿ ಅಲಭ್ಯವಾದವು ಅಸಂಬಂಧಿಗಳ ಮೂಲಕ ಆಶಿಸಿ ಆಕಾಲದೊಳಿವರಿಂದ ಅದು ಪ್ರಾಪ್ತವಾಗದೆ ಹೋದರೆ ಅಂತವರು ದೂಷಿಸುವದರಿಂದೇನು ಪ್ರಯೋಜನ ; ಯುಕ್ತಾಯುಕ್ತವು ಪರ್ಯಾಲೋಚಿಸಿ ಸದಸದ್ವಿಷಯಗಳಲ್ಲಿ ಪ್ರವೇಶಿಸಿ ತದನುಗುಣವಾದ ಫಲವನ್ನನುಭವಿಸಲಿಕ್ಕೆ ತಕ್ಕಷ್ಟು ಸ್ವಾತಂತ್ರ್ಯವನ್ನು ಈಶ್ವರನು ಪ್ರಾಣಿಕೋಟಿಗಳಲ್ಲಿ ಉತ್ತಮನಾದ ಮನುಷ್ಯನಿಗೆ ಕೃಪೆಗೈದಿರುವಲ್ಲಿ ಅಂತಾ ಸ್ವಾತಂತ್ರ್ಯವು ದುರ್ವಿನಿಯೋಗ ಪಡಿಸಿ ತನ್ಮೂಲಕ ಉಂಟಾಗಬಹುದಾದ ನಷ್ಟಕ್ಕೆ ಕ್ಲೇಶ ಪಡುವದರಿಂದಲೇನೂ ಪ್ರಯೋಜನವಿಲ್ಲವು.

Occasional Notes.

ನೈಮಿತ್ತಿಕ ವಿಷಯನ್ಯಾಸ.

Return of Sir Arther Collins.—ಮದರಾಸ್ ಹೈಕೋರ್ಟ್ ಚೀಫ್ ಜಸ್ಟಿಸ್ ರವರಾದ ಸರ್ ಅರ್ಥರ್ ಕಾಲಿನ್ಸಯವರು ರಜಾಮೇಲೆ ಸ್ವದೇಶಕ್ಕೆ ಹೋಗಿದ್ದರಷ್ಟೆ. ಸದರೀಯವರು ಕಳೆದ ಬೃಹಸ್ಪತಿ ವಾರದ ದಿನ ಮದರಾಸಿಗೆ ವಾಪಸ್‌ಬಂದು ಸೇರಿದರು.

Mr. H. S. Cunningham.—ಕಲ್ಕತ್ತಾ ಹೈಕೋರ್ಟ್ ಜಡ್ಜಿಯರಲ್ಲಿ ಯೊಬ್ಬರಾದ ಮಿಸ್ಟರ್ ಕನ್ನಿಂಗ್ಹಾಂ ಸಾಹೇಬರವರು ಇಂಡ್ಯದೇಶದ ನೌಕರಿಯಂ ಬಿಟ್ಟು ಬಿಟ್ಟರೆಂದು ತಿಳಿಯಬಂದಿತ್ತಷ್ಟೆ. ಸದರೀಯವರಿಗೆ ಮರಳಿ ಈ ದೇಶಕ್ಕೆ ಬರಬೇಕೆಂಬ ಅಭಿಪ್ರಾಯವುಂಟಾಗಿರುವಂತೆ ಪ್ರಸ್ತಾವಿಸಲ್ಪಡುತಿದೆ.

A protest.—ಸರಕಾರ ನೌಕರಿಯ ವಿಷಯದ ಬಗ್ಗೆ ಯೇರ್ಪಟ್ಟ ಪಬ್ಲಿಕ್ ಸರ್ವಿಸ್ ಕಮಿಷನ್ ಎಂಬ ಸಭಿಕರು ಮಾಡಿದ ಶಿಫಾರಸನ್ನನುಸರಿಸಿ ಸ್ಟ್ಯಾಟ್ಯುಟೋರಿ ಸಿವಿಲ್ ಸರ್ವಿಸ್‌ನೌಕರಿಯಂ ವಜಾ ಮಾಡತಕ್ಕದೆಂದು ಬಂಗಾಳಿಮತ್ತು ಮದರಾಸಿನಲ್ಲಿರುವ ಮಹಮ್ಮದೀಯ ಜನಗಳು ಇಂಡ್ಯ ಗವರ್ನ ಮೆಂಟಿಗೆ ಅರ್ಜಿ ಬರೆದುಕೊಂಡಿರುತ್ತಾರೆ.

Recognition of services.—ಮುಂಬೈ ಪ್ರಸಿಡೆನ್ಸಿ ಸಾಬಕ್ ಮ್ಯಾಜಿಸ್ಟ್ರೇಟರಾದ ಮಿ| ದಾಸಭಾಯಿಫಾಂಜಿ, ಸಿ. ಎಸ್. ಐ. ಯವರಿಗೆ ಗವರ್ನಮೆಂಟಿನವರು ಪೆನ್ಶನ್ ಕೊಟ್ಟದ್ದಲ್ಲದೆ ಅವರುಮಾಡಿದ ಅನರ್ಘವಾದ ನೌಕರಿಯಂ ಪರಿಗಣಿಸಿ ಅವರಿಗೆ ೧೨,೦೦೦ ರೂಪಾಯಿಗಳ ಕ್ರಯ ಬಾಳುವ ಒಂದು ಜಮೀನನ್ನು ಜಹಗೀರಾಗಿಕೊಟ್ಟಿರುತ್ತಾರೆಂದು ರಾಸ್ತ ಗೋಫ್ತರ್ ಯೆಂಬ ಪತ್ರಿಕೆ ಹೇಳುತಿದೆ.

The National Congress.—ಈಗ್ಯೆ ಮೂರುವರ್ಷಗಳ ಕಾಲದಮೊದಲು ಇಂಡ್ಯದೇಶದೊಳು ನಡೆಯುತಲಿರುವ ನ್ಯಾಷನಲ್ ಕಾಂಗ್ರೆಸ್‌ಎಂಬ ಸಾರ್ವದೇಶಿಕ ಸಾರ್ವಜನಿಕ ಸಭೆಯವಿಷಯದಲ್ಲಿ ಇಂಗ್ಲಾಂಡಿನಲ್ಲಿನ ಪ್ರಜೆಗಳಿಗೆ ಬಹಳ ಅಕ್ಕರೆಯುಂಟಾಗಿ, ಬರುವ ಡಿಸೆಂಬರ್‌ತಿಂಗಳಲ್ಲಿ ಅಲಹಾಬಾದ್‌ನೊಳು ನಾಲ್ಕನೇದಫೆ ನಡೆಯುವದಾಗಿರುವ ಮೇಲೆಹೇಳಿದ ಸಭೆಗೆ ಪಾರ್ಲಿಮೆಂಟಿಸಭೆಯ ಮೆಂಬರಗಳಲ್ಲಿ ಕೆಲವರುಬಂದು ಇಂಡ್ಯದೇಶೀಯರವಿಷಯದಲ್ಲಿ ತಮಗಿರುವ ಅನುರಾಗವನ್ನು ವ್ಯಕ್ತಪಡಿಸುವದಲ್ಲದೆ ಇಲ್ಲಿನ ಪ್ರಜೆಗಳಿಗುಂಟಾಗಿರುವ ಸಂಕಟಗಳನ್ನೆಲ್ಲ ಖುದ್ದುನೋಡಿ ತಿಳಿದುಕೊಂಡು ಹೋಗಬೇಕೆಂದು ಯೋಚಿಸುತಿರುವಂತೆ ತಿಳಿಯಲಾದೆವು.

Committed to Sessions.—ಈಚೆಗೆ ಕೆಲವು ದಿನಗಳ ಹಿಂದೆ ತಲಚ್ಚೇರಿ ಫಸ್ಟ್‌ಕ್ಲಾಸ್ ಸಬಾರ್ಡಿನೇಟ್ ಜಡ್ಜಿಯಾದ ಕರ್ನಲ್ ಮೇನನ್ ಎಂಬವರ ಮೇಲೆ ರುಷವತ್ ಮೊಕದ್ದಮೆಗಳು ತರಲ್ಪಟ್ಟು ದರ್ಯಾಫ್ತು ನಡೆಯುತಲಿದ್ದದು ಸರಿಯಷ್ಟೆ. ಸದರೀ ಯವರು ಉತ್ತರ ಮಲಬಾರ್ ಡಿಸ್ಟ್ರಿಕ್ಟ್ ಸೆಷನ್ ದರ್ಯಾಫ್ತಿಯಬಗ್ಯೆ ಕಮ್ಮಿಟ್ ಮಾಡಲ್ಪಟ್ಟರು. ಇಗ ೧೦,೦೦೦ ರೂಪಾಯಿಗಳ ಜಾಮೀನ್ ಮೇಲೆ ಖುಲಾಸೆ ಮಾಡಲ್ಪಟ್ಟಿರುತ್ತಾರೆ. ಸದರೀ ಯವರ ಮೇಲೆ ಬೇರೆನೊಂದು ಮೊಕದ್ದಮೆ ತರಲ್ಪಟ್ಟು ಮ್ಯಾಜಿಸ್ಟ್ರೇಟರ ಕೋರ್ಟಿನಲ್ಲಿ ದರ್ಯಾಫ್ತೆ ಆಗುತಲಿದೆ. ಬ್ಯಾರಿಸ್ಟರಗಳ ಪುಣ್ಯ ಪರಿಪಾಕದಿಂದ ಇಂತಾ ಮೊಕದ್ದಮೆಗಳುಂಟಾಗಬೇಕು.

An offer accepted.—ಮುಂಬೈಯಲ್ಲಿಳ ಪಿಟಿಟ್ ಎಂಬ ಪ್ರಸಿದ್ಧವಾದ ಕುಟುಂಬದವರು ತಮ್ಮ ಕುಟುಂಬಕ್ಕೆಸೇರಿದ ಸಾಬಕ್ ಜೋಷಾಜಿಯವರ ಹೆಸರಿನಲ್ಲಿ ಒಂದು ಪ್ರಸವಾಸ್ಪತ್ರಿಯನ್ನು ಸ್ಥಾಪಿಸುವದಕ್ಕಾಗಿ ಕೆಲವು ಷರತ್ತುಗಳಮೇಲೆ ೬೫,೦೦೦ ರೂಪಾಯಿಗಳು ಕೊಡುವದಾಗಿ ಗವರ್ನಮೆಂಟಗೆತಿಳಿಸಿದ್ದರಷ್ಟೆ. ಸದರೀ ಮೊಬಲಗನ್ನು ಮುಂಬೈ ಗವರ್ನಮೆಂಟಿನವರು ಇದರಡಿ ತಿಳಿಸಲ್ಪಡುವ ಷರತ್ತುಗಳಿಗೆ ಒಪ್ಪಿ ಅಂಗೀಕರಿಸಿಯಿದಾರೆ, ಅವು ಯಾವವೆಂದರೆ, ಸದರೀ ಹೊಸಆಸ್ಪತ್ರಿಯಲ್ಲಿ ಪಾರಸೀಜಾತಿಹೆಂಗಸರಿಗೆ ಪ್ರತ್ಯೇಕವಾದಸ್ಥಳ ಮಾಡತಕ್ಕದ್ದು, ಅಲ್ಲಿನ ಕಾಮಾ ಆಸ್ಪಿಟಲಿನಲ್ಲಿನ ಲೇಡೀ ಡಾಕ್ಟರಗಳು ಸಹ ಇದರಲ್ಲಿ ಕೆಲಸಮಾಡುವದಕ್ಕೆ ಅವಕಾಶವಿರತಕ್ಕದ್ದು, ಎಂಬವು.

Mr. Norton and the National Congress.—ಮದರಾಸ್ ಹೈಕೋರ್ಟ್ ಬ್ಯಾರಿಸ್ಟರಾಗಿರುತಲಿದ್ದ ಮಿ| ನಾರ್ಟನ್‌ಯವರೂ, ಮಿ. ಬಾನರ್ಜೀಯವರೂ ಈಗಇಂಗ್ಲಾಂಡಿನಲ್ಲಿರುತ, ಲಂಡನ್ ಮೊದಲಾದ ಅನೇಕ ಪ್ರಸಿದ್ಧ ಸ್ಥಳಗಳಲ್ಲಿ ಇಂಡ್ಯದೇಶದಲ್ಲಿ ಸ್ಥಾಪಿಸಲ್ಪಟ್ಟು ಸುಮಾರು ೪ ವರ್ಷಗಳ ಕಾಲವಾಗಿ ನಡೆದು ಬರುವ ನ್ಯಾಷನಲ್ ಕಾಂಗ್ರೆಸ್ಸೆಂಬ ಸಾರ್ವಜನಿಕ ಸಭೆಯ ಉದ್ದೇಶ ಪ್ರಯತ್ನಗಳನ್ನು ಕುರಿತು ದೊಡ್ಡದೊಡ್ಡ ಸಭೆಗಳಲ್ಲಿಉಪನ್ಯಾಸ ಮಾಡುತ ಸಭಿಕರ ಶ್ಲಾಘನೆ ಬಾಲನೆಗಳಿಗೆ ವಿಷಯರಾಗಿರುವಂತೆ ತಿಳಿಯಬರುತಿದೆ.

The National Congress and the Mohamedans of Bombay.—ಮುಂಬೈ ಗೆಜೆಟ್ ಪತ್ರಿಕೆ ತಿಳಿಸುವದೇನೆಂದರೆ, ಬರುವ ಡಿಸೆಂಬರ್ ತಿಂಗಳಲ್ಲಿ ಅಲಹಾಬಾದಿನೊಳು ನಡೆಯುವ

ನ್ಯಾಷನಲ್ ಕಾಂಗ್ರೆಸ್ ಸಭೆಗೆ ಮುಂಬೈಯಲ್ಲಿನ ಮುಹಮ್ಮದೀಯ ಜನಗಳು ಹೋಗುವ ವಿಷಯದಲ್ಲಿ ಅವರಿಗೆ ಸ್ವಲ್ಪ ಅಸಮಾಧಾನ ವುಂಟಾಗಿರುವ ಹಾಗೆ ಕಾಣುತಿದೆ. ಸದರೀ ಸಭೆ ಮುಂಬೈಯಲ್ಲಿರುವ ಸೆಕ್ರಿಟರಿಗಳು ಪ್ರತಿನಿಧಿಗಳನ್ನು ಚುನಾಯಿಸಿ ಕಳುಹಿಸಬೇಕೆಂದು ಕೋರಿದರು. ಆವಿಷಯವನ್ನು ಕುರಿತು ಅಂಜುಮನಿ ಇಸ್ಲಾಂಕ್ ಮಿಟಿಯವರು ಎರಡುದಫಾ ಸಭೆಸೇರಿ ಯೋಚಿಸಿದರು ಅವರ ಪೈಕಿ ಕೆಲವರು ಕಾಂಗ್ರೆಸ್ ಸಭೆಗೆ ಪ್ರತ್ಯರ್ಥಿಗಳಾಗಿರುತ್ತಾರೆ. ಇದು ವರಿವಿಗೆ ಯಾವವಿಧ ನಿರ್ಣಯವೂ ಆಗಲಿಲ್ಲವು. ಇನ್ನು ಕೆಲವು ದಿನಗಳೊಳಗಾಗಿ ಸದರೀ ಜನಗಳು ದೊಡ್ಡಸಭೆ ಮಾಡಿ ಆಕಾಲದಲ್ಲಿ ವ್ಯವಸ್ಥೆ ಯಾಗತಕದ್ದೆಂದು ನಿರ್ಣಯಿಸಿದರು, ಎಂಬದು.

The Nizam's Private Secretary.—ಮದರಾಸ್ ಸ್ಟ್ಯಾಂಡರ್ಡ್ ಪತ್ರಿಕೆಯ ಒಬ್ಬ ಬಾತಮೀದಾರನು ಬರೆಯುತ್ತಾ ನೇನಂದರೆ,—ನಿಜಾಮರವರ ಪ್ರೈವೇಟ್ ಸೆಕ್ರಿಟರಿಯಾದ ಕರ್ನಲ್ ಮಾರ್ಷಲ್‌ಯವರು ನಿಜಾಮರವರ ಉದ್ಯೋಗಸ್ಥರೊಬ್ಬರಿಂದ ಕೆಲವು ಇನಾಂಗಳನ್ನು ಪಡಕೊಂಡರೆಂದು ಕಲ್ಕತ್ತಾ ಸ್ಟೇಟ್ಸ್ ಮ್ಯಾನ್ ಪತ್ರಿಕೆ ಅವರಮೇಲೆ ದೋಷಾರೋಪಣೆ ಮಾಡುತಿದೆ ಹಿಸ್ ಮ್ಯಾಜೆಸ್ಟೀ ಯವರ ನೌಕರನೊಬ್ಬನು ತನ್ನ ಅಬಿಮಾನ ಸಂಪಾದನಕ್ಕಾಗಿ ಒಬ್ಬನಿಂದ ಕೊಡಲ್ಪಡುವ ಇನಾಂಗಳನ್ನು ಅಂಗೀಕರಿಸುವದು ಸ್ಟೇಟ್ಸ್‌ಮ್ಯಾನ್ ಪತ್ರಿಕೆಗೆ ಏನೊ ಒಂದು ದೊಡ್ಡ ವಿಷಯವಾಗಿ ಕಂಡುಬರಬಹುದಾದಾಗ್ಯೂ ನೇಟಿವ್ ಸಂಸ್ಥಾನಗಳಲ್ಲಿರತಕ್ಕವರಿಗೆ ಇದು ನೂತನ ವಿಷಯವೂ ಅಲ್ಲವು, ಕೇವಲ ಆಶ್ಚರ್ಯಕರವಾದದ್ದೂ ಅಲ್ಲವು. ನೇಟಿವ್ ಸಂಸ್ಥಾನಗಳಲ್ಲಿರುವ ಯೂರೋಪಿಯನ್ನರು ಮಹಾರಾಜರುಗಳಿಂದಲೂ, ದೊಡ್ಡ ಅಧಿಕಾರಿಗಳಿಂದಲೂ ಕೊಡಲ್ಪಡುವ ಇನಾಂಗಳನ್ನು ನಿರ್ಭೀತರಾಗಿ ಅಂಗೀಕರಿಸುತ್ತಾರೆ. ಇಂತಾ ವಿಷಯಗಳು ಹೊರಗಾಗಿ ವಿಚಾರಣೆಗೆ ಬಂದಕಾಲದಲ್ಲಿ ತಾವು ಅಂತಾ ಇನಾಂಗಳನ್ನು ಪಡಕೊಂಡಿದ್ದಿಲ್ಲವೆಂದು ಖಂಡಿತವಾಗಿ ನಿರಾಕರಿಸ ಬಲ್ಲರು. ಈಗ ಇಂತಾಯೂರೋಪಿಯನ್ನರು ಎಷ್ಟುಮಂದಿ ನೇಟಿವ್ ಸಂಸ್ಥಾನಗಳ ನೌಕರಿಯಲ್ಲಿದ್ದಾರೆಂದು ವಿಚಾರಿಸುವದು ಕೇವಲ ಪ್ರಯೋಜನಕರವಾಗಿರುವದು, ಎಂಬದು.

A charge against Col. Marshall.—ಹೈದರಾಬಾದ್ ನಿಜಾಮರವರ ಪ್ರೈವೇಟ್ ಸೆಕ್ರಿಟರಿಯವರಾದ ಕರ್ನಲ್ ಮಾರ್ಷಲ್‌ಯವರಮೇಲೆ ಕಲ್ಕತ್ತಾ ಸ್ಟೇಟ್ಸ್‌ಮ್ಯಾನ್ ಪತ್ರಿಕೆಯು ಆಪಾದಿಸುವದೇನಂದರೆ—ಕರ್ನಲ್ ಮಾರ್ಷಲ್‌ಯವರು ಭಾರೀ ಇನಾಂಗಳನ್ನು ಪಡಕೊಂಡರುತ ಹೈದರಾಬಾದ್ ಷಹರಿನಲ್ಲಿ ಹೇಳಕೊಳ್ಳುತ್ತಾರೆ. ಇವರು ಬಾಲಕರಾದ ನಿಜಾಮರವರ ಪ್ರೈವೇಟ್ ಸೆಕ್ರಿಟರಿಯಾಗಿರುವದರಿಂದ ಇವರ ದಯೆಗೆ ಪಾತ್ರರಾಗಬೇಕೆಂಬ ಉದ್ದೇಶದೊಡನೆ ಕೊಡಲ್ಪಡುವ ಇನಾಂಗಳೆಂದು ಸದರೀಯವರಿಗೆ ತಿಳಿದಿರಬೇಕು. ಈಗ ನಮ್ಮಲ್ಲಿರುವ ಕಾಗದಪತ್ರಗಳ ದೆಸೆಯಿಂದ ಕರ್ನಲ್ ಮಾರ್ಷಲ್‌ಯವರು ನಿಜಾಂ ಸರ್ಕಾರದ ಅಧಿಕಾರಿ ಯೊಬ್ಬರಿಂದ ಭಾರೀ ಇನಾಂಗಳನ್ನು ಪಡಕೊಂಡಿರುವಂತೆ ತಿಳಿಯಬರುತಿದೆ. ಒಂದು ಸಂದರ್ಭದಲ್ಲಿ ೩೦೦೦ ರೂಪಾಯಿಗಳ ಕ್ರಯಬಾಳುವ ಒಂದು ರತ್ನಗಳು ಕೆತ್ತಲ್ಪಟ್ಟ ಗಡಿಯಾರವನ್ನು ಪಡಕೊಂಡಿರುತ್ತಾರೆ ಅವರು ಈರೀತಿ ಪಡಕೊಂಡಿರುವ ಇನಾಂಗಳೆಲ್ಲವನ್ನು ತಿಳಿಸುವದಕ್ಕೆ ಸಾಧ್ಯವಲ್ಲವೆಂದು ನಮ್ಮ ಬಾತಮೀದಾರನು ತಿಳಿಸುತ್ತಾನೆ. ಇಂತಾ ಆಪಾದನೆಯಿಂದ ವಿಮುಕ್ತರಾಗಬೇಕಾದ್ದು ಆವಶ್ಯಕವೆಂದು ಲಾರ್ಡ್ ಡಫರಿನ್‌ಸಾಹೇಬರವರು ಕರ್ನಲ್ ಮಾರ್ಷಲ್‌ಯವರಿಗೆ ತಿಳಿಸುವ ವಿಷಯದಲ್ಲಿ ನಾವು ಸಂಶಯಿಸುವದಿಲ್ಲವು. ಕರ್ನಲ್ ಮಾರ್ಷಲ್‌ಯವರಮೇಲೆ ಈ ದೋಷಾರೋಪಣೆಯನ್ನು ನಾವಾಗಿ ಮಾಡುವದಿಲ್ಲವು, ಪರಂತು ನಿಜಾಂ ಸರ್ಕಾರದ ಉದ್ಯೋಗಸ್ಥರ ಕೋರಿಕೆಯಮೇಲೆ ನಾವು ಹಾಗೆ ಮಾಡಬೇಕಾಗಿರುತಿದೆ, ಎಂಬದು.

Stabbed to death.—ಕಳೆದ ತಿಂಗಳ ೨೩ನೇ ತಾರೀಖಿನಲ್ಲಿ ರಾಜಪುಟಾಣಾವಿಗೂ ಮಾಲ್ವಾದೇಶಕ್ಕು ಹಾಕಲ್ಪಟ್ಟಿರುವ ರೈಲಿನಲ್ಲಿ ಪ್ರಾಣಹಾನಿಕರವಾದ ಒಂದು ಕೃತ್ಯ ನಡೆಯಿತು ಏನಂದರೆ, ಬರಾರಾದೇಶದವನೊಬ್ಬನು ಯಾತ್ರಾರ್ಥ ಮಕ್ಕಾಕಿಗೆ ಹೋಗಿದ್ದು ಸ್ವದೇಶಕ್ಕೆ ವಾಪಸ್ ಹೋಗುವಲ್ಲಿ ಪೋಲೆಸೇಳದ ರೈಲಿನ ಮೂರನೇ ತರಗತಿ ಗಾಡಿಯಲ್ಲಿ ಕುಳಿತುಹೋಗುತಲಿದ್ದನು. ಸದರೀ ಗಾಡಿಯು ಪಾಲಖೇರಾ ಎಂಬ ಸ್ಟೇಷನಿಗೆ ಬಂದು ಸೇರಲು ಅಲ್ಲಿ ರೈಲಿನ ಪೋರ್ಟರನೊಬ್ಬನು ಅದೇ ಕಂಪಾರ್ಟ್‌ಮೆಂಟಿನಲ್ಲಿ ಹೋಗಿ ಕುಳಿತನು. ಮೇಲೆ ತಿಳಿಸಿದ ಬರಾರಾದೇಶದ ಮುಸಲ್ಮಾನನು ಗಾಡಿಯಲ್ಲಿ ಸ್ಥಳವನ್ನು ಬಹಳವಾಗಿ ಆಕ್ರಮಿಸಿಕೊಂಡು ತೊಂದರೆ ಕೊಟ್ಟದರ ಮೇಲೆ ರೈಲಿನ ಪೋರ್ಟರಿಗೂ ಆತನಿಗೆ ಕಠಿಣವಾದ ಮಾತುಗಳು ನಡೆದವು. ಗಾಡಿಯು ಇನ್ನೊಂದು ಸ್ಟೇಷನಿಗೆ ಬಂದು ಸೇರಿದ ಮೇಲೆ ಸದರೀ ಮುಸಲ್ಮಾನನು ತನ್ನಲ್ಲಿದ್ದ ಚೂರಿಯಿಂದ ಸದರೀ ಪೋರ್ಟರನ ಕುತ್ತಿಗೆಯಲ್ಲಿ ತಿವಿದ ಬನ್ನು. ಪೋರ್ಟರು ಗಾಡಿಯಿಂದ ತಪ್ಪಿಸಿಕೊಂಡು ಹೋದನು, ಪರಂತು ಒಂದುಘಂಟೆಯೊಳಗಾಗಿ ಸತ್ತುಹೋದನು. ಸದರೀ ಘಾತುಕನು ಕೂಡಲೇ ಗಾಡಿಯಲ್ಲಿದ್ದ ಇತರ ನೇಟಿವ್ ಪ್ರಯಾಣಸ್ಥರಮೇಲೆ ತಿರುಗಿಬಿದ್ದು ಅವರ ಪೈಕಿ ಇಬ್ಬರನ್ನು ತಿವಿದನು. ಒಬ್ಬನಿಗೆ ಬಲವಾದ ಜಖಂ ಆಯಿತು. ಸ್ಟೇಷನ್ ಮ್ಯಾಸ್ಟರು ಇದನ್ನು ಕೇಳಿ ಅವನಿದ್ದ ಗಾಡಿಗೆ ಹೋಗಲು ಅವನನ್ನು ಕೈಮೇಲೆ ತಿವಿದನು. ತರುವಾಯ ಗಾಡಿಯ ಯೂರೋಪಿಯನ್ ಡ್ರೈವರ್, ಜೇವನೊಬ್ಬಯೂರೋಪಿಯನ್ ಪ್ರಯಾಣಸ್ಥನು, ಇವರಿಬ್ಬರು ಬಂದು ಉಪಾಯದಿಂದ ಅವನನ್ನು ವಸ್ತಗಿರಿ ಮಾಡಿ ಚೂರಿಯನ್ನು ಕಿತ್ತುಕೊಂಡು ಹಿಡಕೊಂಡುಹೋದರು. ಈಗ ಅವನು ಕೈದಿನಲ್ಲಿದಾನೆ.

LOCAL AND PROVINCIAL NEWS.

ಒಳದೇಶ ಮತ್ತು ತಾಲ್ಲೂಕ್‌ಜಾತಿವೃತ್ತಾಂತಗಳು

The Races.—ಈಸಲದ ಕುದುರೇ ಪರತ್ತು ಕಳೆದ ಬೃಹಸ್ಪತಿವಾರದೊಡನೆ ಪೂರ್ತಿಯಾಯಿತು. ಹಿಂದಿನ ಸಂವತ್ಸರಗಳಂತೆ ಪರತ್ತು ಕುದುರೆಗಳಿಗಾಗಲಿ ಸವಾರರಿಗಾಗಲಿ ಅಪಾಯಗಳ್ಯಾವವು ಸಂಭವಿಸಲಿಲ್ಲವು.

Furlough.—ಮೈಸೂರು ರೆವಿನ್ಯೂ ಸರ್ವೆ ಅಸಿಸ್ಟೆಂಟ್ ಸೂಪರಿಂಟೆಂಡೆಂಟರಾದ ಮಿ॥ ಬುಚ್ಚರ್‌ಯವರು ಬರುವ ನವಂಬರ್ ತಿಂಗಳಲ್ಲಿ ಒಂಬತ್ತು ತಿಂಗಳ ಫರ್ಲೋರಜಾ ಪಡಕೊಳ್ಳುವರು.

H. H. the Maharajah.—ಶ್ರೀಮನ್ಮಹಾರಾಜರವರು, ಈ ತಿಂಗಳ ೧೩ನೇ ತಾರೀಖಿನಲ್ಲಿ ಕೋಲಾರ ಪ್ರಾಂತದಲ್ಲಿನ ಚಿನ್ನದ ಗಣಿಗಳನ್ನು ನೋಡುವದಕ್ಕಾಗಿ ಅಲ್ಲಿಗೆ ದಯಮಾಡುವರೆಂದು ಕೇಳುತ್ತೇವೆ

The Middle School Examination.—ಮಿಡ್ಲಿಸ್ಕೂಲ್ ಪರೀಕ್ಷೆಯಬಗ್ಗೆ ದರಖಾಸ್ತುಗಳು ಕಳುಹಿಸುವದಕ್ಕೆ ಇದುವರಿವಿಗೆ ನಿಶ್ಚಯಿಸ್ಪಟ್ಟವಾಗಿದ್ದ ಕಾಲವು ಈ ತಿಂಗಳ ೨೦ನೇ ತಾರೀಖ್ ವರಿವಿಗೆ ಬಡಾಯಿಸಲ್ಪಟ್ಟಿರುತಿದೆ.

The *Spectator Case*.—ಇಲ್ಲಿನ ಸ್ಪೆಕ್ಟೇಟರ್ ಪತ್ರಿಕೆಯ ಮೇಲೆ ಡೆಯಿಲೀಪ್ರೋಸ್ಟಿ ಪತ್ರಿಕೆಯ ಪ್ರೊಪ್ರೈಟರವರು ತಂದಿದ್ದ ಮಾನನಷ್ಟಮೊಕದ್ದಮೆಯು ಮಿಲಿಟರಿ ಸ್ಟೇಷನ್ ಡಿಸ್ಟ್ರಿಕ್ಟ ಮ್ಯಾಜಿಸ್ಟ್ರೇಟ್ ಜಡ್ಜಿಯವರ ಕೋರ್ಟಿನಲ್ಲಿ ವಿಚಾರಣೆ ಆಗತಕ್ಕದ್ದೆಂದು ಮದರಾಸ್ ಹೈಕೋರ್ಟಿನವರಿಂದ ನಿರ್ಣಯವಾಗಿರುತಿದೆ.

The Governor of Madras.—ಮದರಾಸ್ ಗವರ್ನರಾದ ಲಾರ್ಡ್ ಕಾನಿಮಾರಾಯವರು ಕಳೆದ ಬುಧವಾರದ ದಿನ ಇಲ್ಲಿಂದ ತಮ್ಮ ಪರಿವಾರದೊಡನೆ ಹೊರಟು ಕೋಲಾರದ ಚಿನ್ನದ ಗಣಿಗಳಿಗೆ ಹೋಗಿ ಅಲ್ಲಿ ವೀಕ್ಷಣೀಯಗಳಾದವುಗಳನ್ನೆಲ್ಲ ನೋಡಿ ಸಂತೋಷಿಸಿ ಅದೇದಿನ ಸಾಯಂಕಾಲ ಕೋಲಾರ ರೋಡ್ ಸ್ಟೇಷನಿಗೆ ಹೋಗಿ ಅಲ್ಲಿ ಮೆಯಿಲ್ ಗಾಡಿ ಹತ್ತಿ ಮೆಟ್ಟುಪಾಳ್ಯಂ ಮಾರ್ಗವಾಗಿ ನೀಲಗಿರಿಗೆ ಹೋದರು.

The weather.—ಕಳೆದ ಸೋಮವಾರದದಿನ ರಾತ್ರಿ ಇಲ್ಲಿ ಒಂದಂಗುಳ ಇಪ್ಪತ್ತೈದು ಸೆಂಟ್ಸುಳ ಆಯಿತು. ಕಳೆದ ವಾರದೊಳು ಪ್ರತಿದಿವಸದಲ್ಲೂ ಯಾವಾಗ್ಯೂ ಮೋಡವಾಗುತ ಆಗಿಂದಾಗ್ಯೆ ತುಂತುರು ಮಳೆ ಬೀಳುತಲೇ ಇತ್ತು. ಪರಂತು ಮೇಲೆ ಹೇಳದ ಸೋಮವಾರದ ವರ್ಷವಿನಾ ಇತರ ಕಾಲಗಳಲ್ಲಿ ಆದದ್ದು ಗಣನೀಯವಾದವಲ್ಲವು ಪದಾರ್ಥಗಳ ಧಾರಣೆಗಳು ಹೆಚ್ಚಾಗಿಯೇ ಇರುತಿದೆ.

The Anche.—ಈ ದೇಶದಲ್ಲಿ ಅನಾದಿಯಾಗಿ ನೆಲಗೊಂಡಿದ್ದ ಅಂಚೇ ಇಲಾಖೆಯು ಬರುವ ಸೆಪ್ಟಂಬರ್ ತಿಂಗಳ ಗುರ್ರೇ ತಾರೀಖ್ ಮೊದಲು ತೆಗದು ಹಾಕಲ್ಪಟ್ಟು ಅದಕ್ಕೆ ಬದಲು ಮದರಾಸ್ ಪೋಸ್ಟುಮ್ಯಾಸ್ಟರವರಅಧಿಕಾರಕ್ಕೆ ಒಳಪಟ್ಟ ಇಂಪೀರಿಯಲ್ ಪೋಸ್ಟಾಫಿಸ್‌ಗಳು ಸ್ಥಾಪಿಸಲ್ಪಡುವವು. ಈಗಿರುವ ಅಂಚೆಯೇ ಅನುಕೂಲವಾಗಿರುತಿದೆಂದು ಕೆಲವರು, ಇಂಪೀರಿಯಲ್‌ಪೋಸ್ಟಾಫಿಸ್ ಇದಕ್ಕಿಂತಲೂ ವಿಶೇಷ ಪ್ರಯೋಜನಕಾರಿಯಾಗಿರುವದೆಂದು ಕೆಲವರು, ಹೀಗೆ ಅಭಿಪ್ರಾಯಗಳು ಭಿನ್ನಭಿನ್ನಗಳಾಗಿರುತಿವೆ

Elopement.—ಈಚೆಗೆ ಸುಮಾರು ಹತ್ತು ಹನ್ನೆರಡು ದಿನಗಳ ಹಿಂದೆ ಈ ಪಟ್ಟಣಕ್ಕೆ ಸೇರಿದ ಹೊಸೂರು ಪೇಟೆಯಲ್ಲಿರುವ ಸಣ್ಣವಯಸ್ಸಿನವಳಾದ ಸ್ಮಾರ್ತ ಬ್ರಾಹ್ಮಣ ಜಾತಿ ವಿಧವೆಯೊಬ್ಬಳನ್ನು, ಬಾಜೂಮನೆಯವನಾದ ರಜಪುತ್ರಜಾತಿಗನೊಬ್ಬನು ಎತ್ತಿಹಾಕಿಕೊಂಡು ಹೋಗಿ ಒಂದು ಹಳ್ಳಿಯಲ್ಲಿ ಇಟ್ಟುಕೊಂಡಿರುವಂತೆ ನಮ್ಮ ಸ್ಥಳದ ಬಾತಮೀದಾರನು ತಿಳಿಸುತ್ತಾನೆ. ಕೆಲವು ದಿನಗಳಿಂದ ಸದರೀ ಇಬ್ಬರೂ ವಯಃ ಪ್ರಯುಕ್ತವಾದ ಸುಖಸಂತೋಷಗಳನ್ನನುಭವಿಸುತಲಿದ್ದು, ಅದಕ್ಕೆ ಮನೆಯವರ ನಿರ್ಬಂಧವು ಭಂಗಕಾರಿಯೆಂದು ಯೋಚಿಸಿ, ಸ್ವೇಚ್ಛಾ ವಿಹಾರಕ್ಕೆ ಕಾಲನು ನಿರೀಕ್ಷಿಸುತಲಿದ್ದು ಅವಸ್ಥಾನಗೆ ಅನುಕೂಲ ಪಡಿಸಿಕೊಂಡಂತೆ ಕಾಣುತಿದೆ.

An Oil Mill.—ಈಚೆಗೆ ತುಮಕೂರಲ್ಲಿ ಕೆಲವರು ದೊಡ್ಡ ಮನುಷ್ಯರು ಸೇರಿ ಅವರವರ ಉಪಪತ್ತ್ಯನು ಗುಣವಾಗಿ ಭಾಗಗಳನ್ನಿಟ್ಟುಕೊಳ್ಳುವವರ ಮೂಲಕ ಕೆಲವು ಮೊಬಲಗನ್ನು ಜಮಾಮಾಡಿ ವಿಲಾಯತಿಯಿಂದ ಒಂದು ಎಣ್ಣೆಗಾಣವನ್ನು ತರಿಸಿ ಅದನ್ನು ತುಮಕೂರು ಷಹರಿನಲ್ಲಿ ಸ್ಥಾಪಿಸಿ ಈಗ್ಯೆ ಸುಮಾರು ಇಪ್ಪತ್ತು ದಿನಗಳಿಂದ ಅದರಲ್ಲಿ ಕೆಲಸ ನಡೆಸುತ ಬರುತಲಿದಾರೆಂತಲೂ, ಸದ್ಯಃ ಸದರೀ ಕೆಲಸವು ಕೇವಲ ಶ್ರಮ ಸಾಧ್ಯವಾಗಿಯೂ, ನಿರೀಕ್ಷಿಸುವಷ್ಟು ಲಾಭಕರವಲ್ಲದ್ದಾಗಿಯೂ ಕಂಡುಬಂದಿರುವಂತೆ ಅಲ್ಲಿನ ನಮ್ಮ ಬಾತಮೀದಾರನು ತಿಳಿಸುತ್ತಾನೆ. ಇಂತಾ ಕಾರ್ಯಗಳಲ್ಲಿ ಅದರ ಅನುಭವವುಳ್ಳವರು ಸೇರಿ ಸರ್ವಪ್ರಯತ್ನದಿಂದಲೂ ಅದನ್ನು ಲಾಭಕರವನ್ನಾಗಿ ಮಾಡಿಕೊಳ್ಳುವದುಚಿತವೇ ಹೊರತು ಪ್ರಾರಂಭದಲ್ಲೇ ವಿಶೇಷ ಲಾಭದ ಮೇಲೆ ದೃಷ್ಟಿ ಇಟ್ಟು ಅದಕ್ಕೆ ಅವಕಾಶ ಕಂಡು ಬರಲಿಲ್ಲವೆಂದು ಅನುತ್ಸಾಹ ಗೊಳ್ಳುವದುಚಿತವಲ್ಲವು.

NEWS LETTERS.

ವೃತ್ತಾಂತಪತ್ರ.

ಕಡಬ, ತಾ|| ೧—೮—೮೮.—ಈ ಗ್ರಾಮವು ತುಮಕೂರು ಡಿಸ್ಟ್ರಿಕ್ಟಿನಲ್ಲಿ ಶ್ರೀವೈಷ್ಣವರೇ ಮೊದಲಾದವರಿಗೆ ಅತ್ಯಂತ ಅನುಕೂಲವಾದ ಒಂದು ತಾಲ್ಲೂಕು ಹೆಡ್‌ಕ್ವಾರ್ಟರಾಗಿತ್ತು. ಮತ್ತು ಈ ಗ್ರಾಮದಲ್ಲಿ ಪುರಾಣಪ್ರಸಿದ್ಧವಾದ ಶ್ರೀರಾಮರ ದೇವಸ್ಥಾನವಿರುವದು ಯೆಲ್ಲರಿಗೂ ಗೊತ್ತಾಗಿಯೇ ಇರುತಿದೆ. ಈ ದೇವರಿಗೆ ಆಯಾ ಕಾಲಕ್ಕೆ ನಡೆಯತಕ್ಕ ರಥೋತ್ಸವ ಮೊದಲಾದವುಗಳನ್ನು ಹಿಂದೆ ಇದ್ದ ಅಮಲ್ದಾರರುಗಳು ಸದರೀ ದೇವರ ಉತ್ಸವಗಳು ಪೂರೈಸುವದರಿವಿಗೂ ಸರ್ಕಾರ ಸಂಬಂಧವಾದ ತಮ್ಮ ಆಫೀಸುಗಳನ್ನೆಲ್ಲ ಈ ದೇವಸ್ಥಾನದ ಕೈಸಾಲೆಯಲ್ಲಿಯೇ ನಡೆಸಿಕೊಂಡು ಈ ದೇವರಮೇಲೆ ಸಂಪೂರ್ಣ ಭಕ್ತಿಯುಳ್ಳವರಾಗಿರುತಲಿದ್ದರು. ಈ ವರಲ್ಲಿ ಬಹಳ ದಿನಗಳಿಂದಲೂ ಇದ್ದಂತಾ ತಾಲ್ಲೂಕು ಕಚ್ಚೇರಿಯು ಹಜರತ್ ಗೌಸ್ ಸಾಹೇಬರವರ ಯೆರಡನೇ ಪಾಮದಿಯಲ್ಲಿ (ಷಡ್ಭಿರ್ಮನುಷ್ಯೈಃ ತಾನಾಂಸಪ್ತಮಂಡ್ಯೈಪಠಿತನು) ಎಂಬರೀತ್ಯಾ ನಮ್ಮ ದೌರ್ಭಾಗ್ಯದಿಂದ ಇಲ್ಲಿಗೆ ಸುಮಾರು ೧೦ ಮೈಲು ಫಾಸಲೆಯೊಳಗಿರುವ ಗುಬ್ಬಿ ಎಂಬ ಗ್ರಾಮಕ್ಕೆ ವರ್ಗ ಮಾಡಲ್ಪಟ್ಟು ಸಾಧಾರಣವಾಗಿ ೨೦-೩೦ ವರುಷಗಳಾದವು. ತದಾರಭ್ಯ ಈ ಗ್ರಾಮವು ದೇವರಿಲ್ಲದ ದೇವಾಲಯದಂತೆ ಬಹಳ ಹೀನಸ್ಥಿತಿಯಲ್ಲಿ ಬಂತು. ಆದದರಿಂದ ಇಲ್ಲಿನ ನಿವಾಸಿಗಳಿಗೆ ಉಲ್ಲಾಸವೇ ಕಡಮೆಯಾಗಿದೆ. ಇದಕ್ಕಿಂತಲೂ ವಿಶೇಷವಾದದ್ದೊಂದಿದೆ ಅದೇನಂದರೆ, ತಾಲ್ಲೂಕು ಕಚ್ಚೇರಿಯು ಈ ಪೂರಿನಿಂದ ಪ್ರತ್ಯೇಕ ಸ್ಥಳವಾದ ಗುಬ್ಬಿಗೆ ವರ್ಗಮಾಡಲ್ಪಟ್ಟ ಲಾಗಾಯತು ಅಲ್ಪಸ್ವಲ್ಪವಾದರು ದೇವತಾಕಾರ್ಯಗಳು ಪ್ರಯಾಸದಿಂ ನಡೆಯುತಲಿತ್ತು. ಈಚೆಗೆ "ಶ್ರಮಾಂಸಿಬಹುವಿಘ್ನಾನಿ" ಎಂಬ ವಚನಕ್ಕನುಗುಣವಾಗಿ ಸದರೀ ದೇವಸ್ಥಾನದ ಪ್ರಾಮ ಶಿಥಿಲದ ವ್ಯಾಜ್ಯದಿಂದಲೂ, ನೂತನವಾದ ಅರ್ಚಕರು ಆರಾಧನೆ ಮಾಡುವದರಿಂದಲೂ ಗ್ರಾಮದಲ್ಲಿ ವೈಷಮ್ಯಗಳು ಹೆಚ್ಚಾಗಿ ೨—೩ ಕಕ್ಷಿಗಳಾಗಿ ಏರ್ಪಟ್ಟು ಯಾರ ಕಾಲು ಮುರಿದರೂ ಸೊಂಟಕ್ಕೆ ಊನ ಎಂಬುವಂತೆ ಯಾವಾಗ್ಯೂ ಅವಿಚ್ಛಿನ್ನವಾಗಿ ನಡೆಯುತಲಿದ್ದಂತಾ ಚೈತ್ರಮಾಸದ ರಥೋತ್ಸವ ಆದಿಯಾಗಿ ಯೆಲ್ಲಾ ನಿಂತುಹೋಯಿತು ಇದಕ್ಕಾಗಿ ಸರ್ಕಾರದಿಂದ ಕೊಡುತಲಿದ್ದ ತಸ್ತಿಕ್ ಇಬ್ಬರ ಜಗಳ ಮೂರನೆಯವನಿಗೆ ಲಾಭವೆನ್ನುವ ಹಾಗೆ ಸರ್ಕಾರಕ್ಕೆ ಕೂಡಲೆಯಾಗಿ ತಾಲ್ಲೂಕು ಟ್ರೆಜರಿಯಲ್ಲಿ ಈವರೂ ವ ಖರ್ಚು ಬರೆಯುವ ಶ್ರಮವು ಪುಷ್ಕಾಂಗವಾಗಿ ತಪ್ಪಿಹೋಯಿತು. ಪರಂತು ಯಾರಾದರೂ ಈಪೇಷವರ ಕೆಲರ ನಿಂತುಹೋದುತ್ತಲ್ಲ, ನಾವಾದರು ಕೈಲಾದಮಟ್ಟಿಗೆ ಪ್ರಯತ್ನ ಮಾಡಿ ನಡೆಸೋಣವೆಂದು ಉಪಕ್ರಮಿಸಿದರೆ ಆ ವರ್ಗವಾದವನನ್ನು ಅವರ ಎದುರು ಕಕ್ಷಿಯವರು ಕಂಡ್ಲೆ ತಿಳದುಕೊಂಡು ಅದನ್ನು ತಪ್ಪಿಸತಕ್ಕ ಏರ್ಪಾಡುಗಳನ್ನು ಮಾಡುತ್ತಾರೆ. ಇಷ್ಟೆಲ್ಲ ಹೇಳಬೇಕಾದ್ದು ಯಾತಕ್ಕೆ, ಮುಖ್ಯವಾಗಿ ಅಂತಾ ದುರ್ನೀತರಿಗೆ ಸನ್ಮಾರ್ಗದಲ್ಲಿ ನಡೆಯುವಂತೆ ಬುದ್ಧಿಯಂ ಕೊಡಬೇಕಾದ್ದು ಕರುಣಾಳುವಾದ ಶ್ರೀರಾಮಚಂದ್ರನ ಕೆಲಸವಾಗಿರುತಿದೆ. ತತ್ಕಾಲದಲ್ಲಿ ಲಭಿಸುವ ಆದಾಯದಮೇಲೆ ದೃಷ್ಟಿ ಇಟ್ಟು ಅನ್ಯಾಯವಾಗಿ ದುರಾಚಾರಗಳನ್ನೂ ದುಷ್ಕೃತ್ಯಗಳನ್ನೂ ನಡೆಸುತ್ತಾರಲ್ಲಾ "ಸಾಯುವಕನಕ ಕನಿ ಕಾಡಿದರೆ ಬಾಳುವದ್ಯಾವಾಗ" ಎಂಬುವಂತೆ ಇದೇಸಲ್ಲಾಪದಲ್ಲಿ ಇರುವೆಂತಾದರ ಮುಂದಿನ ಗತಿ ಯೇನೋ ತಿಳಿಯದು. ಈ ಕಡಬ ಪುರೀ ಮಹಾತ್ಮೆಯು ಅತಿ ವಿಸ್ತಾರವಾದದ್ದೇ ಇತ್ತು. ಆದರೆ ಒಂದೇಸಲ ಹೆಚ್ಚಾಗಿ ಬರೆದರೆ ಓದುವವರಿಗೆ ಬೇಸರವೂ ಪತ್ರಿಕೆಯಲ್ಲಿ ಸ್ಥಳಸಂಕೋಚವೂ ವುಂಟಾಗಲಿಕ್ಕೆ ಕಾರಣವಾಗುವದೆಂದು ಯೋಚಿಸಿ ಇಲ್ಲಿಗೆ ವಿರಮಿಸುತ್ತೇನೆ.

SUMMARY OF NEWS.

ವೃತ್ತಾಂತ ಸಂಗ್ರಹ.

ವ್ಯವಸಾಯಕ್ಕೆ ಸಂಬಂಧಪಟ್ಟ ಕೆಲಸಗಳಲ್ಲಿ ರುಜಕವಿಟ್ಟು ಕಲ್ಲುಗಳನ್ನು ಸುಟ್ಟು ಹಾಕುವದಕ್ಕಾಗಲಿ ಜನಗಳಿಗೆ ಪ್ರಯೋಜನಕರಗಳಾದ ಇತರ ಕೆಲಸಗಳಿಗಾಗಿಯಾಗಲಿ ತೋಫೆಮದ್ದಿನ ಬಗ್ಯೆ ಲೈಸೆನ್ಸ್ ಪಡೆಯತಕ್ಕವರು ಅಬಗ್ಯೆ ಫೀಕೊಡಬೇಕಾದ್ದಿಲ್ಲವೆಂದು ಪ್ರಕಟಿಸಲ್ಪಟ್ಟಿರುತಿದೆ.

ನ್ಯಾಷನಲ್ ಕಾಂಗ್ರೆಸ್ ಎಂಬ ಸಾರ್ವಜನಿಕ ಸಭೆಯ ಉದ್ದೇಶ ಪ್ರಯತ್ನಗಳನ್ನು ಕುರಿತು

ಹಸ್ವಾಂ ಯೆಂಬುವವರು ಈಚೆಗೆ ಅಲಹಾಬಾದಿನಲ್ಲಿ ಮಾಡಿದ ಉಪನ್ಯಾಸವು ಒಂದು ಗ್ರಂಥರೂಪವಾಗಿ ಮುದ್ರಿಸಲ್ಪಟ್ಟು ಅದರ ೩೨,೦೦೦ ಪ್ರತಿಗಳು ವಾಯುವ್ಯ ದೇಶದೊಳು ಪ್ರಜೆಗಳಿಗೆ ಕೊಡಲ್ಪಟ್ಟವು.

ಆಸ್ಟ್ರೇಲಿಯಾ ಖಂಡಕ್ಕೆ ಸೇರಿದ ನ್ಯೂಸೌತ್ ವೇಲ್ಸ್ ಯೆಂಬ ಪ್ರದೇಶದಲ್ಲಿ ಇಲಿಗಳಬಾಧೆಯು ಅತ್ಯಧಿಕವಾಗಿರುವದರಿಂದ ರೈತರು ಬಾಳುವದೇ ಕಷ್ಟವಾಗಿದೆ. ಅವುಗಳು ಫಲ ಪೈರುಗಳನ್ನು ನಷ್ಟ ಹಾಳುಮಾಡುತ್ತಾ ಸತ್ತ ಕುರಿಗಳನ್ನು ರುಷ್ಟಿಟಸಹಿತ ತಿನ್ನುತ್ತಾ ನಿದ್ರೆಮಾಡುವ ಮಕ್ಕಳ ಮತ್ತು ದೊಡ್ಡವರ ಮಾಂಸವನ್ನೂ ಕಿತ್ತು ಭಕ್ಷಿಸುತ್ತಾಯಿವೆ. ಆದದರಿಂದ ೧೦೦ ಇಲಿಗಳನ್ನು ಕೊಲ್ಲುವವರಿಗೆ ೧೪ ರೂಪಾಯಿ ರುಸುಂ ಕೊಡುತ್ತೇವೆಂದು ಅಲ್ಲಿನ ರೈತರು ತಿಳಿಯಪಡಿಸಿದ್ದಾರೆ.

ಆಫ್ರಿಕಾಖಂಡದೊಳ್ ಆಲ್ಜೀರಿಯಾದೇಶದ ಫಾತಿಮಾ ಬಿನ್ ಅಬ್ದುಲ್‌ಕಾದರ್ ಎಂಬ ೬೦ ವರುಷದ ಸೌಂದರ್ಯಶಾಲಿಯಾದ ಒಬ್ಬ ಸ್ತ್ರೀಯು, ಈವರಿವಿಗೆ ಒಬ್ಬನನ್ನು ಬಿಟ್ಟು, ಮತ್ತೊಬ್ಬನನ್ನು ಕೊಂದು, ಬೇರೊಬ್ಬನನ್ನು ವಿವಾಹವಾಗಿ ಅವನನ್ನು ಕೊಲ್ಲಿಸಿ, ೪ನೇಯವನನ್ನು ಮದುವೆಯಾಗಿ ಇವನು ತ್ಯಜಿಸಿ, ೫ನೇ ಪುರುಷನನ್ನು ವರಿಸಿ ಇವನನ್ನು ಬಿಟ್ಟು, ೬ನೇಯವನನ್ನು ವಿವಾಹವಾಗಿ ಇವನುಕೊಂದು, ಕಡೆಗೆ ೭ನೇ ಯುವನನ್ನು ಪತಿಯಾಗಿ ವರಿಸಿ, ಇವನಿಂತನ್ನಗರ್ಭದೊಳುದಿಸಿದ ಶಿಶುವನ್ನು ಕೊಂದು ಇದಕ್ಕಾಗಿ ವಿಧಿಸಲ್ಪಟ್ಟ ೨೦ ವರುಷಗಳ ಸಜಾ ಅನುಭವಿಸುತ್ತಿದ್ದಾಳೆ. ಇದಕ್ಕೆಮುಂಚೆ ಅನೇಕಸಾರಿ ೪-೫ ವರುಷಗಳ ಸಜಾಕ್ಕೆ ಒಳಪಟ್ಟಿದ್ದಳು.

ಒಂದು ರೆಯಿಲ್ವೆ ನೌಕರನು ಬೇರೆಯೊಂದು ರೈಯಿಲಿನಲ್ಲಿ ಪ್ರಯಾಣ ಮಾಡಬೇಕಾಗಿದ್ದರೆ ಅವನಿಗೆ ಫ್ರೀಪಾಸ್, ಅಂದರೆ ರುಸುಂಯಿಲ್ಲದೆ ರಹದಾರಿ ಕೊಡುವ ವಾಡಿಕೆ ಇದುವರಿವಿಗೆ ನೆಲಗೊಂಡು ನಡೆದು ಬರುತಲಿತ್ತು. ಹೀಗಿರುವಲ್ಲಿ ಈಚೆಗೆ ಈಸ್ಟಿಂಡಿಯಾ ರೆಯಿಲ್ವೆ ಕಂಪೆನಿಯವರು ಕೇವಲ ಅಸಮಾಧಾನಕರವಾದ ಒಂದು ಹುಕುಂ ಸಾದರ್ಮಾಡಿರುತ್ತಾರೆ ಏನಂದರೆ, ಮೇಲೆ ತಿಳಿಸಿದ ಫ್ರೀಪಾಸ್ ಯೂರೋಪಿಯನ್, ಯುರೇಷಿಯನ್, ಈಸ್ಟಿಂಡಿಯನ್, ಇವರುಗಳಿಗೆ ಮಾತ್ರ ಕೊಡತಕ್ಕದ್ದೆಂಬದು. ಇಂತಾ ಹುಕುಂ ಯಾವ ನ್ಯಾಯದಮೇಲೆ ಕೊಡಲ್ಪಟ್ಟಿತೋ ಅದನ್ನು ಊಹಿಸುವದಕ್ಕೆ ಸಾಧ್ಯವಿಲ್ಲದೆ ಇದೆ.. ರೆಯಿಲ್‌ವೇ ಹುಟ್ಟುವಳಿಯ ಪೈಕಿ ಬಹುಭಾಗ ನೇಟಿವ್‌ಗಳಿಂದ ಉಂಟಾಗತಕ್ಕದ್ದಾಗಿರುವದರಿಂದಲೆ? ರೆಯಿಲ್ ಕಂಪೆನಿಯವರು ಗವರ್ನಮೆಂಟಿನಿಂದ ಗುತ್ತಿಗೆ ಪಡೆದುಕೊಂಡವರಾಗಿದ್ದಾರೆ. ಹೀಗಿರುವಲ್ಲಿ ಕಂಪೆನಿಯ ಅನೇಕ ಸಹಸ್ರ ನೇಟಿವ್ ನೌಕರರಿಗೆ ಮಾನಹಾನಿಕರವಾಗಿರುವಂತಾ ಪೋಲಿಕೆಂದ ಅಸಮಾಧಾನಕರವಾದ ತಾರತಮ್ಯವನ್ನು ತೋರಿಸಕೂಡದೆಂದು ರೈಲ್‌ವೆ ಕಂಪೆನಿಯವರಿಗೆ ಉಚಿತವಾದ ಹುಕುಂ ಕೊಡಬೇಕೆಂದು ಗವರ್ನಮೆಂಟಿನವರನ್ನು ಕೇಳುವದು ಉಚಿತವಾದ ಕಾರ್ಯವಾಗಿರುವದೆ?.—ನ್ಯಾಷನಲ್ ಗಾರ್ಡಿಯನ್

ಬಿರುಘಾಳಿಯದೆಸೆಯಿಂದ ಸಮುದ್ರದ ಅಲೆಗಳು ಅಲ್ಲೋಲಕಲ್ಲೋಲವಾದರೆ, ಅದರಿಂದ ಹಡಗುಗಳು ನಾಶವಾಗಿ ಮುಳುಗಿಹೋಗುತವಷ್ಟೆ. ಬಿರುಘಾಳಿಯು ಬೀಸಿದರೂ ಅಲೆಗಳು ಸಮಾಧಾನಸ್ಥಿತಿಯಲ್ಲಿರುವಂತೆ ಸಮುದ್ರದಲ್ಲಿ ಎಣ್ಣೆಯನ್ನು ಸಾವಿರಾರು ಅಡಿಗಳಕೆಳಗೆ ಸುರಿದರೆ ಆ ತೈಲವು ಬಿದ್ದಷ್ಟುಭಾಗವು ಶಾಂತವಾಗಿರುತದೆಂದು ಕೆಲವು ವಿದ್ವಾಂಸರು ಕಂಡುಹಿಡಿದರು. ಆದರೆ ಎಣ್ಣೆಯನ್ನು ಸಮುದ್ರದಲ್ಲಿ ಬೇಕಾದಭಾಗಕ್ಕೆ ಒಳಕ್ಕೆ ಹೋಗುವಂತೆ ಸುರಿಯುವದು ಅಸಾಧ್ಯವಾಗಿದ್ದಿತು. ಕಡೆಗೆ ಜರ್ಮನೀ ದೇಶದಲ್ಲಿ ಒಬ್ಬನು ತನ್ನ ಯುಕ್ತಿ ಚಮತ್ಕಾರಗಳಿಂದ ಎಣ್ಣೆಯನ್ನು ಸಮುದ್ರದಒಳಕ್ಕೆ ಸೇರಿಸುವಂತಾ ಒಂದು ಉಪಾಯವನ್ನು ಕಂಡು ಹಿಡಿದಿದ್ದಾನೆ. ಏನಂದರೆ, ಆಕಾಶಬಾಣದಂತೆ ಬಾಣಗಳನ್ನುಮಾಡಿ ಅವುಗಳತುದಿಗೆ ಎಣ್ಣೆಯ ಗೋಳಸ್ತಂಭಗಳನ್ನುಕಟ್ಟಿ ಬಾಣವನ್ನು ಬೆಂಕಿಯಿಂದಹಚ್ಚಿ, ಹಡಗಿನಮೇಲಿಂದ ಸಮುದ್ರದ ಬೇಕಾದಭಾಗಕ್ಕೆ ಹಾಕಿದರೆ ಅವುಗಳು ನೀರನ್ನುಭೇದಿಸಿಕೊಂಡು ೩,೫೦೦-೪,೦೦೦ ಅಡಿಗಳ ಅಗಲಸಮುದ್ರವನ್ನು ಎಣ್ಣೆಯಿಂದ ವ್ಯಾಪಿಸಿಕೊಳ್ಳಮಾಡುತ್ತವೆ. ಈ ನೂತನ ಕಲ್ಪನೆಯು ಪರೀಕ್ಷಿಸಲಾಯಿತು. ಬಿರುಘಾಳಿಯು ಬೀಸುವಕಾಲದಲ್ಲಿ ಜಹಜು ನಡಿಸುವಂತಾವರು ಅಂತಾ ಬಾಣಗಳಿಂದ ಅದೇರೀತಿಮಾಡಿ ಅಲೆಗಳನ್ನು ಶಾಂತಪಡಿಸಿ ಅಪಾಯದಿಂದ ತಪ್ಪಿಸಿಕೊಳ್ಳುತ್ತಾರೆ.

EXTRACTS

Mr. Crawford.—ಮುಂಬೈ ಸಿವಿಲಿಯನಾಗಿದ್ದು ತಾನು ಮಾಡಿದ ತಪ್ಪಿತ ಹೊರಗಾಗಿ ಅದರ ಫಲದಿಂದ ತಪ್ಪಿಸಿಕೊಳ್ಳಬೇಕೆಂಬ ಉದ್ದೇಶವೊದನೆ ಪರಾರಿಯಾಗಿ ಕಡೆಗೆ ಪೋಲೀಸಿನವರಿಂದ ದಸ್ತಗಿರಿ ಮಾಡಲ್ಪಟ್ಟು ಬಂದ ಮೆ|| ಕ್ರಾಫೋರ್ಡ್ ಎಂಬ ಪ್ರಸಿದ್ಧ ದೊಡ್ಡ ಮನುಷ್ಯರು ಕಡೆಗೆ ಸಾವಿರಾರ್ಯರಿಂದ ಒಬ್ಬ ಮ್ಯಾಜಿಸ್ಟ್ರೇಟರಿಂದ ದರ್ಯಾಪ್ತೀ ಮಾಡಲ್ಪಡಬೇಕಾಗಿ ಪರಿಣಮಿಸಿತು. ಹಾಗೆ ವ್ಯವಸ್ಥೆ ಮಾಡಿದ ಮುಂಬೈ ಗವರ್ನರಾದ ಲಾರ್ಡ್ ರೇಯವರಿಗೆ ನಾವು ವಂದನೆಯನ್ನರ್ಪಿಸುತ್ತೇವೆ. ಈ ನಿರ್ಣಯದ ದೆಸೆಯಿಂದ ಗವರ್ನಮೆಂಟಿಗೆ ಅಪಕೀರ್ತಿಯುಂಟು ತರುವಂತಾವರನ್ನು ನಿವೃತ್ತಿ ಮಾಡಬೇಕೆಂಬ ಬದ್ಧಸಂಕಲ್ಪವು ಮುಂಬೈ ಗವರ್ನಮೆಂಟಿಗೆ ಉಂಟಾದಂತೆ ಕಾಣುತಿದೆ. ಯೆಂತಾ ದೊಡ್ಡ ಅಧಿಕಾರಿಯಾಗಿದ್ದರು ಅಪರಾಧ ಮಾಡಿದವನನ್ನು ಅದರ ದೆಸೆಯಿಂದ ತಪ್ಪಿಸಬೇಕೆಂಬ ಅಭಿಪ್ರಾಯ ಗವರ್ನರವರಿಗಿಲ್ಲವು. ಮುಂಬೈಯಿಂದ ಈಚೆಗೆ ಬಂದ ವರ್ತಮಾನದ ದೆಸೆಯಿಂದ ಮಿಸ್ಟರ್ ಕ್ರಾಫೋರ್ಡ್‌ಯವರಿಗೆ ಉಂಟಾಗಿದ್ದ ದ್ರವ್ಯಮೂಲಕವಾದ ಸಂಕಟಗಳು ಗವರ್ನಮೆಂಟಿನವರಿಗೆ ತಿಳಿಯದೆ ಇರಲಿಲ್ಲವೆಂದು ಕಾಣುತಿದೆ. ಆದಾಗ್ಯೂ ಇದುವರಿವಿಗೆ ಬಂದ ಬಹುಮಂದಿ ಗವರ್ನರ್‌ಗಳು ಮಿ|| ಕ್ರಾಫೋರ್ಡ್ ಯವರನ್ನು ಇದುವರಿವಿಗೆ ನೌಕರಿಯಲ್ಲಿಟ್ಟಿದ್ದದ್ದು ಕೇವಲ ಆಶ್ಚರ್ಯಕರವಾದ ಕಾರ್ಯವಾಗಿರುತಿದೆ. ಮೆ|| ಕ್ರಾಫೋರ್ಡ್‌ಯವರು ಇಂತಾವರೆಂದು ಗವರ್ನಮೆಂಟಿಗೆ ಚನ್ನಾಗಿ ತಿಳಿಯುವದು, ಆದಾಗ್ಯೂ ಅವರ ಹಿಂದಿನ ನಡತೆಗಳಿಗೆ ನಿಗೇ ಕೊಡದೆ ಅವರ ಮನಸ್ವೀ ವರ್ತನಕ್ಕೆ ಅವಕಾಶಕೊಡುತಬಂದರು. ಮುಂದೆ ಇವರ ದರ್ಯಾಪ್ತೀಕಾಲದಲ್ಲಿ ಹೊರಗಾಗಬಹುದೆಂದು ನಿರೀಕ್ಷಿಸಲ್ಪಡುವ ವಿಷಯಗಳು ಪ್ರಬಲತರಗಳಾಗಿಯೂ ಪ್ರಬಲರಾದ ಮತ್ತು ದುರ್ಬಲರಾದ ಬಹುಮಂದಿ ಯೂರೋಪಿಯನ್ ಮತ್ತು ನೇಟಿವ್ ಜನಗಳು ಇದರಲ್ಲಿ ಸಿಕ್ಕಿಕೊಳ್ಳಬಹುದಾಗಿಯೂ ಕಾಣುತಿದೆ—ನ್ಯಾ. ಗಾ

ತತ್ಕಾಲದ ದೇಶ ಜನಸ್ಥಿತಿಗೆ ಅನುಗುಣವಾಗಿ ಹಿಂದೂ ಧರ್ಮಶಾಸ್ತ್ರಗಳನ್ನು ಬದಲಾಯಿಸಿಕೊಳ್ಳಲಿಕ್ಕೆ ಉಂಟಾಗಿರುವ ಮುಖ್ಯಗಳಾದ ನಾಲ್ಕುವಿಧ ಪ್ರತಿಬಂಧಕಗಳನ್ನು ಬಹಳ ಆಲೋಚಿಸಿ ಮುಂಬ್ಯ ರಾಸ್ತಗೊಫ್ತಾರ ಪತ್ರಿಕೆಗೆ ಶಿವಮೊಗ್ಗಾ ಡಿಸ್ಟ್ರಿಕ್ಟ ಸಾಗರ ತಾಲ್ಲೂಕು ನಿವಾಸಿಯೊಬ್ಬನು ಈ ಕೆಳಕಂಡಂತೆ ಬರೆದಿರುತ್ತಾನೇನಂದರೆ:—“ ೧ನೇದು—ಮತಸಂಬಂಧವಾದ ವಿವಾದವು ಮಠಾಧಿಪತಿಗಳಿಂದಲೇ ನ್ಯಾಯಸ್ಥಿ ಆಗಬೇಕೇ ಶಿವಾಯಿ ಸರಕಾರದವರು ಇಂತಾ ವಿವಾದದಲ್ಲಿ ಪ್ರವೇಶಿಸುವದಿಲ್ಲವೆಂಬದು. ೨ನೇದು, ವೈದಿಕರಲ್ಲಿ ಅನೇಕರು ಭಿಕ್ಷಾಟನದಿಂದಲೇ ಜೀವಿಸುವ ಸಬಬು, ಅಶಾಸ್ತ್ರೀಯವೆನ್ನುವದಿಂದೂ ಸ್ತ್ರೀ ಪುನರ್ವಿವಾಹದ ಸಭೆಗೆ ತಾವುಸೇರಿದರೆ ಮಠಾಧಿಪತಿಗಳಿಗೆ ತಿಳಿಯಬಂದು, ತಮ್ಮ ವೃತ್ತಿಗೆ ಲೋಪ ಬರುವ ಹಾಗೆ ಮಾಡುವರೆಂಬ ಭಯದಿಂದ ಯಾವದೊಂದು ಸಭೆಗೂ ಸೇರದೆ ಏಕಾಂತದಲ್ಲಿ ಕೇಳಿದರೆ ಮಾತ್ರ ಅನೇಕ ಪ್ರಮಾಣಗಳ ಮೂಲಕ ಪುನರ್ವಿವಾಹವುಶಾಸ್ತ್ರ ಸಮ್ಮತವಾದದ್ದೆಂದು ಬೋಧಿಸುವರು. ೩ನೇದು—ಲೌಕಿಕರು, ವಿತಂತುಗಳ ವಿವಾಹವು ಸದ್ಯದಲ್ಲೇ ಜಾರಿಗೆ ತರುವ ತರದೂದ್ ಮಾಡುತ್ತೇವೆ; ಅದಕ್ಕೆ ಯಾವ ಸ್ವಾಮಿಗಳು ಅಡ್ಡಬಂದರೂ ನಾವು ಅಂಜುವದಿಲ್ಲ; ಎಷ್ಟು ದ್ರವ್ಯ ಖರ್ಚಾದರೂ ಚಿಂತೆ ಇಲ್ಲವೆಂದು ತಮ್ಮ ಮಿಶಾಳೆಯನ್ನು ಹುರಿಹಾಕುತ್ತಾರಲ್ಲದೆ, ಸಭೆ ಕರೆಯುವ ಸಂದರ್ಭ ಬಂದಾಗ ಸ್ವಾಮಿಗಳವರ ಭಯದಿಂದಲೋ, ಮತ್ಯಾವ ಕಾರಣದಿಂದಲೋ, ಎಂದಿಗೂ ಇಲ್ಲದಷ್ಟು ಕೆಲಸವನ್ನು ಕಚೇರಿಯಲ್ಲಿ ಇಟ್ಟುಕೊಂಡು ಪಲಾಯನಸೂಕ್ತವನ್ನು ಹೇಳುತ್ತಾರೆ. ಅಥವಾ ಬಹಳರಾದವರ್ಯಾರಾದರೂ ದೊರೆತರೆ ಅವರನ್ನು ಮುಂದೆ ತಳ್ಳಿ, ತಾವು ಹಿಂದೆನಿಲ್ಲುತ್ತಾರೆ. ತಮ್ಮ ಪ್ರತ್ಯವಸ್ವಾಮಿಗಳವರಿಗೆ ಶಿಕ್ಷೆಯಂತೆ ತಪ್ಪಿಸಿಕೊಳ್ಳುವದೇ ಲೌಕಿಕರ ಕೆಲಸವಾಗಿದೆ. ೪ನೇದು,—ಮಠಾಧಿಪತಿಗಳು, ಪಿತೃಗಳ ಕಷ್ಟವನ್ನು ಅರಿಯದೆ ಇಲ್ಲವು. ಆದರೆ ಪೂರ್ವಪದ್ಧತಿಗೆ ವಿರೋಧವಾದ ಧರ್ಮಜಿಜ್ಞಾಸವನ್ನು ಮಾಡಿ ತಾವು ತೀರ್ಪನ್ನು ಕೊಟ್ಟರೆ, ನಮ್ಮ ಸ್ವಾಮಿಗಳವರು ಇಂಗ್ಲಿಷ್ ಮತಕ್ಕೆ ಸೇರಿದರು, ನಮ್ಮ ಪುರಾತನ ಗ್ರಂಥಗಳಲ್ಲಿ ಇವರಿಗೆ ವಿಶ್ವಾಸವು ಎಳ್ಳಷ್ಟು ಇಲ್ಲವು. ಇವರ ಮತಾನುಸಾರ ನಾವು ನಡದರೆ ನಮ್ಮ ಜಾತಿಗೆ ಲೋಪಬರುವದೆಂದು ತಮ್ಮ ಶಿಷ್ಯರು ಅನ್ನುವರು. ಮತ್ತು ನಮ್ಮಲ್ಲಿ ವಿಶ್ವಾಸವು ನಿರರ್ಥಾ ಇವರು. ಬಹುಕಾಲದಿಂದ ನಡೆದುಬಂದ ಮಾನವು ನಮ್ಮ ಕಾಲದಲ್ಲಿ ನಾಶಹೊಂದಿಸಿದ ನಿಂದೆಗೆ ನಾವು ಗುರಿ ಆಗಬೇಕಾಗುತ್ತೆ, ಇದಲ್ಲದೆ “ ಅರಿತುಕೊಂಡು ತಿನ್ನುವ ಕೋಳಿಗೆ ಕಾಲುಮುರಿದಂತೆ ” ನಮಗೆ ಹುಟ್ಟುವ ಭಿಕ್ಷಕ್ಕೆ ಸೊನ್ನೆಬೀಳುವದಾದ್ದರಿಂದ, ನ್ಯಾಯವಾಗಲೀ ಅನ್ಯಾಯವಾಗಲೀ ಹತ್ತುಜನ ಹೋದದಾರಿಯಲ್ಲಿ ನಾವೂ ನಡಿಯುವದು ಒಳ್ಳೇದು; ನಮ್ಮ ತರುವಾಯ ಪ್ರಳಯವಾದರೂ ಆಗಲಿ ಎಂದು ಮೌನವನ್ನು ಧರಿಸಿರುವರು. ಹೀಗೆ ವಿಘ್ನಗಳು ಅನೇಕವಾಗಿರುವಲ್ಲಿ ಈಗಲಾದರೂ ಪ್ರತಿದಿವಸದಲ್ಲಿಯೂ ಜಾತಿಯಸಂಖ್ಯೆ ಬಹಳ ಹೆಚ್ಚುತಬಂತು ಜನಗಳ ನಾಗರಿಕತೆಯು ಉನ್ನತಸ್ಥಿತಿಯನ್ನೈದುತಲಿದೆ. ಎತ್ತನೋಡಿದರೂ ವೈದ್ಯಶಾಲೆಗಳು ಹೇರಳವಾಗಿಕಲ್ಪಿಸಲ್ಪಟ್ಟವೆ ಗ್ರಾಮಗಳ ಪಾಕೀಜ ಹೆಚ್ಚಿತು. ಸುಖಕರವಾದ ವಸ್ತುಗಳು ಸುಲಭವಾಗಿ ದೊರಿಯುವವು. ಆರೋಗ್ಯದದೆಸೆಯಿಂದ ಪ್ರಜಾ ಸಂಖ್ಯೆಯು ದಿನೇದಿನೆ ಹೆಚ್ಚಾಯಿತು. ಕ್ಷತ್ರರಾಜರ ವಂಶಗಳು ನಿರ್ದ್ರವ್ಯಯುತಲಿವೆ. ಲಡಾಯಿಗಳುಲಡಾಯಿಸಿಹೋದವು ಬ್ರಾಹ್ಮಣ ರಾಜರು ಲಯವಾದರು. ವಿಪ್ರರು ಅಪ್ರಯೋಜಕ ವೃತ್ತಿಗಳಿಂದಕೈಗೊಂಡರು. ಶಿಷ್ಯರಿಗೆ ಗುರುಗಳಲ್ಲಿ ವಿಶ್ವಾಸತಪ್ಪಿತು. ಗುರುಗಳಾದರೂ ದಂಡ ವಸೂಲಿಯ ವಿಷಯದಲ್ಲಿ ಕೋದಂಡದನ ಏರಿರುವರು. ಸಹ ಗಮನವು ನಿರೋಧಿಸಲ್ಪಟ್ಟವು. ವಿತಂತೂವಿವಾಹವು ಶಾಸ್ತ್ರನಿಷಿದ್ಧವೆಂದು ದೂರವಾಡಿದ್ದರಿಂದ, ಶಿಶುಹತ್ಯೆ, ಭ್ರೂಣಹತ್ಯಾದಿದುಷ್ಕೃತ್ಯಗಳು ಪ್ರಬಲಗೊಂಡು ಎತ್ತನೋಡಿದರೂ ಅಪಕೀರ್ತಿಗೆ ಮಾರ್ಗವಾಯಿತು. ಇಂತಾ ಸ್ಥಿತಿಯೊಳು ಅಜ್ಞಯಲ್ಲಿನಡೆಯುವ ದುಷ್ಕೃತ್ಯಗಳಾದರೋ ಭಯಂಕರವಾಗಿವೆ. ಇದಕ್ಕೆ ನಿದರ್ಶನವಾಗಿ ಈಚೆಗೆ ನಡೆದ ಒಂದು ಸಂಕಟಕರವಾದ ಕೃತ್ಯವನ್ನು ಈಕೆಳಗೆ ಬರೆಯುವೆನೇನಂದರೆ:—ಧಾರವಾಡ ಜಿಲ್ಲಾ ಹಾವೇರಿ ತಾಲ್ಲೂಕು ತಿಳವಳ್ಳಿ ಗ್ರಾಮದಲ್ಲಿ ವೈಶ್ಯನೊಬ್ಬನಿಗೆ ಒಬ್ಬ ಮುದಿಗಿಯು ಕೆಲವು ಗಂಡುಮಡುಗರು ಸಹ ಇದ್ದವರು. ಸದರೀಕೋಮಟಿಯು ಕೇವಲ ಬಡವನಾಗಿದ್ದದರಿಂದ ತನ್ನಮಗಳನ್ನು ಕೊಟ್ಟ ಹಣದಿಂದಲೇ, ಬದಲೀ ಹೆಣ್ಣನ್ನು ತಂದು ತನ್ನ ಮಗನಿಗೆ ಮದುವೆ ಮಾಡಲು ನಿಶ್ಚೈಸಿ ಇದ್ದನು. ಈತನು ಊರಿನಲ್ಲಿಲ್ಲದ ಕಾಲವನ್ನುನೋಡಿ, ಆತನ ಅನುಬಂಧಿಗಳಲ್ಲಿ ಕೆಲವರು ಹುಡಗಿಯನ್ನು ಧಮಗೆ ಮಿತ್ರನಾದವನೊಬ್ಬನಿಗೆ ಕೊಟ್ಟ ಮದುವೆಮಾಡಿದರು. ಮುದಿಗಿಯತಂದೆಯು ಮನೆಗೆಬಂದ ಬವನೆ ಕೋಪಾವಿಷ್ಟನಾಗಿ ಅದೇ ಕನ್ಯೆಯನ್ನೇ ನೌಲಗುಂದದಲ್ಲಿರುವ ಒಬ್ಬ ವೈಶ್ಯನಿಗೆ ಕೊಟ್ಟು ಮದುವೆ ಮಾಡಿದರು. ಈ ವೃತ್ತಾಂತವು ವೈಶ್ಯ ಗುರುಗಳಿಗೆ ತಿಳಿದು ಅವರು ತಿಳುವಳ್ಳಿಯಲ್ಲಿ ವಿಚಾರಿಸಲಾಗಿ ಅಲ್ಲಿನ ಜನರು ಹೇಳಿದ್ದೇನಂದರೆ:—ಮದುವೆ ಆಯಿತೆಂತ ನಾವು ಕೇಳದ್ದೇವು. ನಾವು ಹುಡುಗಿಯನ್ನು ನೋಡುವಾಗ ಬಲದ ಕಡೆ ಮೂಗಿನ ಸೊಳ್ಳೆ ಚುಚ್ಚಿ ಇತ್ತು. ಮತ್ತು ಕುತ್ತಿಗೆಯಲ್ಲಿ ಬೊಟ್ಟುಇತ್ತೆಂತಲೂ, ಮದುವೆಆದ ಕನ್ಯೆಯ ತಂದೆಯನ್ನು ಕೇಳಲಾಗಿ ನನ್ನ ಇಷ್ಟಕ್ಕೆ ವಿರೋಧವಾಗಿ ಕನ್ಯೆಯನ್ನು ಮದುವೆಮಾಡಿ ಕೊಡುವದಕ್ಕೆ ಕೆಲವರು ಸಿದ್ಧಪಟ್ಟು, ನಾಂದಿ ಸಹ ಮಾಡಿದ್ದರು. ಅಷ್ಟರಲ್ಲೀ ನಾನುಬಂದು ಹುಡುಗಿಯನ್ನು ನನ್ನ ಇಷ್ಟಬಂದ ಮತ್ತೊಬ್ಬನಿಗೆ ಮದುವೆಮಾಡಿ ಕೊಟ್ಟನೆ ಶಿವಾಯಿ, ಒಂದದಫೆ ಮದುವೆ ಆಗಿದ್ದ ಕನ್ಯೆಗೆ ಪುನಃ ಮದುವೆಮಾತಲಿಲ್ಲವೆಂತೆ ಹೇಳದನು ಲಗ್ನವಾದ ಗ್ರಾಮಸ್ಥರನ್ನು ಕೇಳಲಾಗಿ, ನಾಂದಿ ಪ್ರತಿಷ್ಠೆ ಆಗಿತ್ತೇ ಶಿವಾಯಿ ಲಗ್ನವಾಗಿರಲಿಲ್ಲ; ಕನ್ಯೆಯ ತಂದೆಯು ಜಗಳವಾದಿ ರನ್ನಮಗಳನ್ನುನೌಲಗುಂದದಲ್ಲಿ ಯಾರಿಗೋ, ಕೊಟ್ಟು ಮದುವೆಮಾಡಿದನೆಂದು ಹೇಳಿದರು. ತರುವಾಯ ಇದುಕುರಿತು ನೌಲಗುಂದದಲ್ಲಿ ವಿಚಾರಿಸಲಾಗಿ, ಕನ್ಯೆಗೆಮೂಗುಚುಚ್ಚಿದಿಲ್ಲವು ಮದುವೆಯಲ್ಲಿ ಮೋಚುಚ್ಚಿದ್ದು ನಿಜವೆಂತಲೂ, ಹಾಗೆಮದುವೆ ಆಗಿರುವವನ ಮನೆಯವರೂ ಮತ್ತು ಕೆಲವರೂ, ಮೊದಲು ಈ ಕನ್ಯೆಗೆ ಮದುವೆಯಾಗಿತ್ತೆಂತ ಕೇಳಿದ್ದೆವು. ಆದರೆ ಮೂಗು ಚುಚ್ಚಿದ್ದದ್ದು ಮಾತ್ರ ನಾವು ನೋಡಲಿಲ್ಲವೆಂತ ಕೆಲವರು ಹೇಳಿದರು. ಮೊದಲನೇ ಕನ್ಯೆಯನ್ನು ಮದುವೆ ಆಗಿದ್ದ ಹುಡುಗನು ದೈವಾಧೀನನಾದನು. ಆತನ ಮಾತಾಪಿತೃಗಳನ್ನು ಕೇಳಲಾಗಿ ತಮ್ಮ ಹುಡುಗನಿಗೆ ಈ ಕನ್ಯೆಯನ್ನು ಕೊಟ್ಟು ಲಗ್ನವಾಗಲಿಲ್ಲವು, ನಾಂದಿ ಮಾತ್ರ ಮಾಡಿದ್ದೇವು, ಅಷ್ಟರಲ್ಲಿ ಕನ್ಯೆಯತಂದೆ ಜಗಳವಾದಿ ಕರೆದುಕೊಂಡು ಹೋದನೆಂತೆ ಹೇಳಿದರು. ಇಷ್ಟು ವಿಚಾರಣೆಯಾದ ತರುವಾಯ ಯೆರಡನೆಯ ದಫೆ ಮದುವೆಯಾದನೆಂಬುವ ನೌಲಗುಂದದ ವರನಿಗೂ ಕನ್ಯೆಗೂ ವಿವಾಹ ಮಾಡಿಕೊಟ್ಟವನಿಗೂ ವೈಶ್ಯ ಗುರುಗಳು ಬಹಿಷ್ಕಾರವನ್ನು ಹಾಕಿದರು. ಹುಡಿಗೆಯು ಪ್ರಬುದ್ಧಳಾಗಿ ೪ ವರುಷಗಳಾದವು. ಆಕೆಯು ಗಂಡನ ಮನೆಯಲ್ಲಿಯೇ ಇದ್ದಾಳೆ. ಆದರೆ ಗುರು ಆಜ್ಞೆ ಇಲ್ಲವಾಗಿ ನಿಷೇಕಮಾತ್ರ ನಡೆಯಲಿಲ್ಲವು. ಕನ್ಯಾದಾನವನ್ನು ಮಾಡಿದ ವೃದ್ಧನಾದ ಕೋಮಟಿಯು ಗುರುಗಳನ್ನು ಕೇಳಲಾಗಿ “ನಿನ್ನ ಮಗಳನ್ನು ಮೊದಲು ಮದುವೆಯಾದ ಗಂಡನ ಹೆಂಡತಿಯೆಂತಲೇ ತಿಳಿದು, ಆಕೆಯ ತಲೆಯನ್ನು ಬೋಳಿಸಬೇಕು. ಮತ್ತು ಮಠಕ್ಕೆ ದಂಡವನ್ನು ಕೊಡಬೇಕು, ಇಲ್ಲವಾದರೆ ಕುಲಾಚಾರದವರಿಂದ ನಿನಗೆ ಬಾಧಕವಾದ ಮಹಜರು ತರಬೇಕು. ಈ ಎರಡರಲ್ಲಿ ಒಂದು ಮಾಡಿದಹೊರ್ತು ಬಹಿಷ್ಕಾರವನ್ನು ತೆಗೆಯುವದಕ್ಕೆ ಅವಕಾಶವಿಲ್ಲವೆಂತ ತಿಳಿಸಿದರು. ಕುಲಾಚಾರದವರನ್ನು ಕೇಳಿದರೆ ಮೊದಲು ನಾವು ಕೊಟ್ಟ ಹೇಳಿಕೆಗೆ ವಿರೋಧವಾಗಿ ಈಗ ಮಹಜರು ಬರೆದುಕೊಟ್ಟರೆ ಗುರುಗಳು ನಮಗೆದಂಡ ಹಾಕುತ್ತಾರೆ. ಯೇನು ಮಾಡಬೇಕೆಂತ ನುಡಿಯುತ್ತಾರೆ. ಸರ್ಕಾರದವರಂತೆ ಕೇಳಲಾಗಿ “ಇದು ಕುಲಾಚಾರದವ್ಯಾಜ್ಯವಾಗಿರುವಕಾರಣ ನಿಮ್ಮಗುರುಗಳಲ್ಲಿಹೋಗಿ” ಅಂದರು. ಅಯ್ಯೋ ವಾಚಕರೆ! ಈಬಡಕೋಮಟಿಯ ಸಂಕಟವನ್ನು ಕೇಳಲುಯಾರಿಂದಸಾನೆ ಶಕ್ಯವು, ವೃದ್ಧನಾದಕೋಮಟಿಯು ಸುಂದರಿಯಾದ ಮತ್ತು ಯೌವನಸ್ಥಳಾದ ತನ್ನಮಗಳನ್ನು ಎದುರಿಗೆ ಕೂಡಿಸಿಕೊಂಡು ಹಜಾಮತ್ ಮಾಡಿಸಬೇಕೆ? ಅಲ್ಲದೆ, ಬಂಧು ಬಳಗವನ್ನು ಬಿಟ್ಟು ಅಂತರ ಪಿಶಾಚವಾಗಿ ತಾನು ಕುಲಭ್ರಷ್ಟನಾಗಬೇಕೆ, ನೀವುಹೇಳಿ.

BANGALORE.—Printed and published at the KARNATIC PRESS, No. 44, Hospital Road, Pettah.

ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA.

ಪ್ರತಿ ಸೋಮವಾರ ಪ್ರಾತಃಕಾಲದಲ್ಲಿ ಪ್ರಕಟಿಸಲ್ಪಡುವದು.

Published every Monday Morning.

ಪ್ರಶಾಮವಿವಿಧಪ್ರವೃತ್ತ್ಯುದಗಮಾರ್ಗ ಕರ್ಣಾಟಕಪ್ರಕಾಶಕಪರಾಭಿಧಾಪ್ರಥಿತಸಾಹಿತೀಕೋಭಿತಾ । ಮ್ಯುಗಾಂಕಹಿತವಾಸರೇನಿಹಿತಮುದ್ರಣಾಸಜ್ಜನಸ್ಫೂರ್ತಿ ಕಾನುಪರಿವೀಕ್ಷಣಾದಿಕಶಿತಮಾನಸಂಸುಮುದಂ

Vol. XV.] BANGALORE—MONDAY, AUGUST 13, 1888. [No. 32.

ಸಂಪುಟ ೧೫.] ಬೆಂಗಳೂರು:—ಸನ್ ೧೮೮೮ನೇ ಇಸವಿ ಆಗಸ್ಟು ೧೩ನೇ ತಾರೀಖು ಸೋಮವಾರ. [ಸಂಚಿಕೆ ೩೨.

ಕರ್ಣಾಟಕ ಪ್ರಕಾಶಿಕಾ

ಪತ್ರಿಕೆಯ ಚಂದಾ ದರಗಳು,
೧೮೮೮ನೇ ಇಸವಿ ಜನವರಿಯಿಂದಾಯಿತು
ಕಡಮೆಮಾಡಲ್ಪಟ್ಟಿರುತಿದೆ.

ಈ ಪತ್ರಿಕೆಯ ಚಂದಾದಾರರನ್ನೇಕೆ ಅನೇಕರ ಅಪೇಕ್ಷೆಯನ್ನೀಡೇರಿಸುವ ಉದ್ದೇಶದೊಡನೆಯೂ, ಪರಿಮಿತವಾದ ಆಯತಿಯುಳ್ಳವರಿಗೆಲ್ಲ ಈ ಪತ್ರಿಕೆಯು ಸುಲಭವಾಗಿ ಲಭಿಸುವಂತಿರಬೇಕೆಂಬ ಅಭಿಪ್ರಾಯದೊಡನೆಯೂ ಇವರ ಚಂದಾದರವನ್ನು ಇದರಡಿಕಂಡಂತೆ ಕಡಮೆಮಾಡಿರುತ್ತೇವೆಂತಂದರೆ.—

ಇಂಗ್ಲಿಷ್ ಮತ್ತು ಕನ್ನಡಭಾಗಗಳಿಗೆ.

	ಸ್ಥಿರದವರಿಗೆ	ಪರಸ್ಥಳದವರಿಗೆ,
12 ತಿಂಗಳಿಗೆ	8—0—0	9—0—0
6 ,,	4—0—0	4—8—0
3 ,,	2—8—0	2—8—0

ಇಂಗ್ಲಿಷ್ ಅಥವಾ ಕನ್ನಡಭಾಗಗಳಿಗೆ.

	ಸ್ಥಿರದವರಿಗೆ	ಪರಸ್ಥಳದವರಿಗೆ.
12 ತಿಂಗಳಿಗೆ	4—0—0	5—0—0
6 ,,	2—0—0	2—8—0
3 ,,	1—4—0	1—8—0

ಸೂಚನಾ—ಅಂಚೆ ಮುತ್ಸದ್ದಿಗಳು, ಜೋಯಿಸ ಮತ್ತು ತಾಲ್ಲೂಕ್ ಸ್ಕೂಲ್‌ಮಾಸ್ತರುಗಳು, ಶ್ಯಾನಭೋಗರು, ಪಟೇಲರು, ವಿದ್ಯಾರ್ಥಿಗಳು, ಇವರಿಗೆಲ್ಲ ಈ ಪತ್ರಿಕೆಯು ಮೇಲ್ಕಂಡ ಚಂದಾದರಕ್ಕೆ ಕೊಡಲ್ಪಡುವದು. ಅತ್ಯಲ್ಪಸಂಬಳ ಹೊಂದಿ ಬಾರದ ದರುಬಾಸ್ತಾನುಗಳಿಗೆ ಮತ್ತೂ ರಿಯಾಯಿತಿ ಕೊಡಲ್ಪಡುವದು. ಚಂದಾದಾರರು ಇಂಗ್ಲಿಷ್ ಭಾಗವನ್ನಾಗಲಿ ಕನ್ನಡಭಾಗವನ್ನಾಗಲಿ ಅಥವಾ ಎರಡನ್ನಾಗಲಿ ತೆಗೆದುಕೊಳ್ಳಬಹುದು. ಚಂದಾಹಣವನ್ನು ಮುಂಗಡವಾಗಿಯೇ ಸಲ್ಲಿಸತಕ್ಕದ್ದು. ಮೂರುತಿಂಗಳಿಗಿಂತ ಕಡಮೆಯಾಗಿ ಚಂದಾ ಹಣವನ್ನು ಅಂಗೀಕರಿಸಲ್ಪಡಲಾರದು.

ನೋಟುಗಳು ರವಾನಿಸತಕ್ಕವರು ನೋಟಿನ ಕಳುಹಿಸುವ ಅರ್ಧವನ್ನು ತಲುಪಿದಬಗ್ಗೆ ನಮ್ಮ ಕಾಗದವು ಬಂದ ಕೂಡಲೇ ಬಾಕೀ ಅರ್ಧ ನೋಟನ್ನು ರವಾನಿಸತಕ್ಕದ್ದು. ಟಿಕೆಟ್‌ಗಳು ಕಳುಹಿಸತಕ್ಕವರು ರೂಪಾಯಿ ಒಂದಕ್ಕೆ ಒಂದುಬಿಲ್ಲೆಮೇಲೆ ಡಿಸ್ಕೌಂಟ್ ಸಹ ಸೇರಿಸಿ ಕಳುಹಿಸತಕ್ಕದ್ದು. ಅರ್ಥವೇತನ ಚಾಪ್ಟರಿಯವುಳ್ಳ ಲೇಬಲ್‌ಗಳನ್ನು ಕಳುಹಿಸಕೂಡದು. ಡಿಸ್ಕೌಂಟ್‌ಯಿಲ್ಲದೆ ಕಳುಹಿಸಲ್ಪಡುವ ಹಣದಲ್ಲಿ ಅದು ಮುರಿದುಕೊಳ್ಳಲ್ಪಟ್ಟು ಮಿಕ್ಕ ಹಣವು ಲೆಕ್ಕಕ್ಕೆ ದಾಖಲುಮಾಡಿಕೊಳ್ಳಲ್ಪಡುವದು.

ಪ್ರಕಟನೆಯ ರಿವಾಜ್.

ಮೊದಲನೆಯದಫಾ ಪಂಕ್ತಿ ಒಂದಕ್ಕೆ ೦—೨—೦
ಎರಡನೆಯದಫಾ ಪಂಕ್ತಿ ಒಂದಕ್ಕೆ ೦—೧—೦

ಸೂಚನಾ—ಎರಡಾವರ್ತಿಗಿಂತ ಜಾಸ್ತಿಯಾಗಿ ಎಷ್ಟುಸಾರೆ ಖಾಯಮ್ ಮಾಡಿದಾಗ್ಯೂ ಪಂಕ್ತಿ ಒಂದಕ್ಕೆ ೧ ಆಣೆಯಂತೆಯೇ ಲೆಕ್ಕ ಮಾಡಲ್ಪಡುವದು. ಈ ಪತ್ರಿಕೆಯಲ್ಲಿ ಖಾಯಮ್ ಆಗುವಬಗ್ಗೆ ಪ್ರಕಟನೆಗಳು ಕಳುಹಿಸುವವರು ಅವು ಎಷ್ಟಾವರ್ತಿ ಖಾಯಮ್ ಮಾಡಲ್ಪಡಬೇಕೋ ಆ ಅಂಶವನ್ನು ಸ್ಪಷ್ಟವಾಗಿ ತಿಳಿಸತಕ್ಕದ್ದು. ಇಲ್ಲದಪಕ್ಷಕ್ಕೆ ಅವರು ನಮಗೆ ನಿಲ್ಲಿಸುವಂತೆ ಬರೆಯುವತನಕ ಅವಂ ಪ್ರಕಟಿಸುತ್ತಿದ್ದು ಹಾಗೆ ಎಷ್ಟಾವರ್ತಿ ಪ್ರಕಟಿಸಲ್ಪಟ್ಟಿದ್ದಾಗ್ಯೂ ಮೇಲ್ಕಂಡ ದರದಂತೆ ಕಿಮ್ಮತ್ ವಸೂಲಿಮಾಡಲ್ಪಡುವದು. ಪ್ರಕಟನೆಯಬಗ್ಗೆ ಕಳುಹಿಸಲ್ಪಡತಕ್ಕ ಪ್ರಕಟನೆಗಳನ್ನು ಆ ಯಾ ಶನಿವಾರದ ಮಧ್ಯಾಹ್ನ ೨ ಘಂಟೆಯೊಳಗಾಗಿ ಕಳುಹಿಸಬೇಕು. ಪ್ರಕಟನೆಯಬಗ್ಗೆ ಈ ಪತ್ರಿಕೆಗೆ ಕಳುಹಿಸಲ್ಪಡತಕ್ಕ ಕಾಗದಗಳಲ್ಲಿ ತಿಳಿಸಲ್ಪಡುವ ಅಭಿಪ್ರಾಯಗಳಿಗೆ ನಾವು ಜವಾಬ್ದಾರರಾಗಲಾರೆವು. ಕ್ರಮವಾಗಿ ರುಜುಮಾಡಿ ಕಳುಹಿಸದ ಯಾವಕಾಗದವನ್ನು ಪ್ರಕಟಿಸಲಾರೆವು. ನಿರಾಕರಿಸಲ್ಪಟ್ಟ ಕಾಗದಗಳು ಮರಳಿ ಕಳುಹಿಸಲ್ಪಡಲಾರವು.

"IT RECOMENDS ITSELF"

ALL WHO SUFFER FIND SURE RELIEF.

LITTLE'S

ORIENTAL-BALM

THE MOST EFFECTUAL MODERN REMEDY FOR PAIN.

ಲಿಟಲ್ ಯೆಂಬವರಿಂದ ತಯಾರಿಸಲ್ಪಟ್ಟ "ಬಾಧಕಂಹಾರಿಣಿ" ಎಂಬ ಪೂರ್ವದೇಶ ಸಂಬಂಧವಾದ ಅಮೂಲ್ಯ ತೈಲವು ಸ್ವಶಕ್ತಿ ಪ್ರದರ್ಶಕವಾದದ್ದು, ಮತ್ತು ಸಫಲವಾದ ನವೀನ ಚಿಕಿತ್ಸೋಪಯುಕ್ತವಾದ ಔಷಧವು. ಇದರಿಂದ ಸಕಲ ವಾತರೋಗಗಳೂ, ವಾತಸಂಬಂಧಗಳಾದ ಸಂಧಿಬಂಧಗಳೂ ನಿವೃತ್ತಿಯಾಗುವವು. ಮುಖ್ಯವಾಗಿ ಬಹುಕಾಲಿಕ ನರದ ವಾತರೋಗಗಳು, ಕಾಸ, ಗಂಟಲಿನಲ್ಲಿ ಉರಿ, ನಡುವಿನನೋವು, ಕೀಲುವಾಯು, ಕಟಿವಾಯು, ಚಳುಕು ನೋವು, ತಲೆನೋವು, ತಿಮಿರುಬ್ಬರು ಮುಂತಾದ ರೋಗಗಳಿಗೆಲ್ಲ ನಿಸ್ಸಂದೇಹವಾಗಿ ಬಹಳ ಪ್ರಯೋಜನವನ್ನುಂಟುಮಾಡತಕ್ಕದ್ದು. ಈ ತೈಲವನ್ನು ನೋವುಳ್ಳ ಸ್ಥಳಗಳಲ್ಲಿ ಕೆಲಿದಾವರ್ತಿ ಸವರಿ ಶಾಖವುಂಟಾಗುವಂತೆ ಚೆನ್ನಾಗಿ ತಿಕ್ಕಿದ್ದ ಸಹಜವಾದ ಎಲ್ಲಾ ನೋವುಗಳನ್ನು ನಿವೃತ್ತಿ ಮಾಡುವಂತಾ ಉತ್ತಮ ತೈಲವಾಗಿರುತ್ತದೆ. ಸುಟ್ಟ ಗಾಯಗಳ ಉರಿ ನೋವು ಮತ್ತು ಬಾವು ಕೂಡಲೇ ನಿವೃತ್ತಿಯಾಗುವವು. ಗಂಟಲಿನಲ್ಲುಂಟಾಗುವ ಉರಿ ಅಥವಾ ವ್ರಣಗಳಿಗೆ ಈ ತೈಲವು ಅದ್ಭುತವಾದ ಮತ್ತು ಶೀಘ್ರವಾದ ಸಂಪೂರ್ಣ ಗುಣವನ್ನುಂಟುಮಾಡುವದು. ಅದ್ಭುತವಾದ ಈ ಔಷಧವನ್ನು ಉಪಯೋಗಿಸಿನೋಡಿದರಲ್ಲಿ ಅದರ ಪ್ರಯೋಜನವು ಸ್ವತಃವೇ ವ್ಯಕ್ತವಾಗುವದು. ಈ ತೈಲವು ಶೀತಗಾಳಿ ಮಂಜು ಮುಂತಾದವುಗಳಿಗೊಳಗಾಗಿ ಸಂಚರಿಸುವಂತಾ ಪ್ರಯಾಣಿಕರು, ಬೇಟೆಯಾಡುವವರು, ವ್ಯಾಯಾಮ ಮಾಡುವವರು, ಮುಂತಾದವರಿಗೆಲ್ಲ ಅಮೂಲ್ಯವಾದದ್ದು.

ಪರಿಶೀಲಕರ ಅಭಿಪ್ರಾಯವು.

ಐರ್ಲ್ಯಾಂಡ್ ದೇಶದ ಫಾರ್ಮಸ್ಯೂಟಿಕಲ್ ಸೊಸೈಟಿಯೆಂಬ ಔಷಧಶಾಲೆಯ ಪ್ರಸಿಡೆಂಟರಾಗಿಯೂ, ಸದರೀ ದೇಶದ ಜಿಯಾಲಜಿಕಲ್ ಸೊಸೈಟಿ ಯೆಂಬ ಪೃಥ್ವೀಶಾಸ್ತ್ರಾಭಿಜ್ಞ ಸಮಾಜದ ಮೆಂಬರಾಗಿಯೂ, "ಮಿನರಲ್ ವಾಟರ್ಸ್ ಆಫ್ ಯೂರೋಪ್" ಎಂಬ ಗ್ರಂಥಕರ್ತರಾಗಿಯೂ, ರಸಾಯನಶಾಸ್ತ್ರ ವಿಷಯಕವಾದ ಅನೇಕ ಲೇಖನಾಧಿಕಾರಿಯಾಗಿಯೂ, ಇರುವ ಪ್ರೊಫೆಸರ್ ಟಿಚ್‌ಬೋರ್ನ್ (C. R. TICHBORNE, L. L. D., F. C. S., M. R. I. A.,) ಯೆಂಬವರು ಅಭಿಪ್ರಾಯ ಪಟ್ಟಿರುತ್ತಾರೇನೆಂದರೆ—ಲಿಟಲ್‌ಯವರ ಓರಿಯಂಟಲ್‌ಬಾಮ್ ಎಂಬುದನ್ನು ಜಾಗರೂಕತೆಯೊಡನೆ ಪರೀಕ್ಷಿಸಿದ್ದರಲ್ಲಿ ಇದು ಬಹು ವಿಧ ಮೂಲಿಕೆಗಳ ರಸಮಿಶ್ರಣದ ತೈಲವೆಂದೇ ಕಂಡುಬಂದಿರುತ್ತದೆ, ಇದು ಮೇಲೆ ಉಪಯೋಗಿಸಲ್ಪಡುವಾಗ ಕೂಡಲೇ ನಿರುಪದ್ರವಕರವಾದದ್ದಾಗಿದ್ದರೂ, ನಿಜವಾಗಿ ಪ್ರಬಲ ರೋಗನಿವಾರಕ ಶಕ್ತಿಯುಳ್ಳದ್ದಾಗಿರುತ್ತದೆ. ಈ ಮಿಶ್ರೌಷಧವು ನರಗಳನ್ನು ಸ್ಥಿಮಿತಕ್ಕೆ ತರತಕ್ಕದ್ದಾಗಿರುವದರಿಂದ ಇದು ಯಾವ ತರದ ರೋಗಗಳಿಗೆ ಉಪಯುಕ್ತವೆಂದು ತಿಳಿಸಲ್ಪಟ್ಟಿದೆಯೋ ಸದರೀ ರೋಗಗಳಲ್ಲಿ ಅದರ ಪ್ರಯೋಜನವು ವ್ಯಕ್ತವಾಗುವದು. ಈ ತೈಲವು ಸಂಪೂರ್ಣ ಜಾಗರೂಕತೆಯೊಡನೆ ತಯಾರಾದ್ದಾಗಿರುತ್ತದೆ.

ಇದರ ಕ್ರಯ—ಸೀಸೆ ಒಂದಕ್ಕೆ ೧ ರೂಪಾಯಿ.

ಇದು ವಿಶಿಷ್ಟ ಔಷಧ ಶಾಲೆಯಲ್ಲಿಯೂ, ಮದರಾಸ್ ಸಂಬುದಾಸ್ ಬೀದಿಯಲ್ಲಿ, ೨೦ನೇ ನಂಬರ್ ಮನೆಯೊಳಗಿರುವ, ಮಿ. ಎ. ಸಿ ಬೆರ್ರಿಮನ್ ಯವರಲ್ಲಿಯೂ, ಈ ಪ್ರಾಂತ್ಯದಲ್ಲಿರುವ ಅವರ ಏಜಂಟರುಗಳಾದ ಜೆ. ವೆಸ್ಟ್ ಯವರ ಕಂಪೆನಿಯಲ್ಲಿಯೂ, ಮೆ. ಕೆಪ್ಟನ್ ಅಂಡ್ ಕಂಪೆನಿಯವರಲ್ಲಿಯೂ, ರಿಗ್ಸ್‌ಯವರ ಕಂಪೆನಿಯಲ್ಲಿಯೂ ದೊರೆಯುವದು.

AGENTS.— Messrs, J. WEST, *Chemist, &c, Bangalore.*
CAPTAIN & Co *Chemists, Bangalore.*
RIGGS & Co, *Chemists, Bangalore*, and of
MAHOMED YOUSOFF AND SONS, *The Cash Bazar, Bangalore*
A. C BERRYMAN & Co.,
20 *Sambodoss Street Madras.*

NOTICE.

VAIDYASARA SANGRAHA

A TREATISE ON THE PRINCIPLES OF

HINDU MEDICINE

Price including Postage Rs 5 6 0

ವೈದ್ಯಸಾರ ಸಂಗ್ರಹ.

ಈಗ್ರಂಥಾಪೇಕ್ಷೆಯುಳ್ಳವರು ಹಣಬಲಗಿನೊಡನೆ ಈ ಕೆಳಗೆ ರುಜುಮಾಡಿರತಕ್ಕವರ ಹೆಸರಿಗೆ ಬರೆದುಕೊಂಡರೆ ಪುಸ್ತಕ ಕೂಡಲೇ ಕಳುಹಿಸಲ್ಪಡುವದು. ಹಣಬಲಗು ಇಲ್ಲದ ದರಖಾಸ್ತುಗಳಿಗೆ ಸುತರಾಂ ನಿಗೇಕೊಡಲ್ಪಡಲಾರದು.

ಇದರಕ್ರಯ ... ...ರೂ॥ ೫—೦—೦
ಪ್ಯಾಕಿಂಗ್ ಮತ್ತು ಅಂಚೇಹಾಸಿಲ್, ೦—೬—೦

ಟಿ. ಬಿ. ವೆಂಕಟಾಚಾರ್,
ಆಸ್ಪತ್ರಿರೋಡ್ ಬೆಂಗಳೂರು.

ವಿಶೇಷ ವರ್ತಮಾನ



ಪುನೆ ಚಿತ್ರಶಾಲೆಯಲ್ಲಿ ಸ್ಥಾಪಿಸಲ್ಪಟ್ಟಿರುವ ಪೋಟೋಗ್ರಾಫ್‌ಗಳು, ಹಿಂದೂ ದೇವತೆಗಳು, ಚರಿತ್ರೆಗಳ ಮೂಲಕ ಪ್ರಸಿದ್ಧರಾದವರು, ಸುಂದರಿಗಳಾದ ನೇಟಿವ್ ರೆಂಗಳು ಪಕ್ಕೆ ರಂಗದ ಚಿತ್ರಪಟಗಳು ತಯಾರಾಗಿರುವವು. ಇವುಗಳ ಕೆಲಗಣಿಕೆಯ ನಮೂನೆಗಳನ್ನು ನೋಡಬೇಕಾಗಿ ಕ್ರಯ ಬಹಳ ಅಲ್ಪವಾಗಿದೆ. ಬೇಕಾದವರಿಗೆ ಕ್ರಯಪಟ್ಟಿ ಕಳುಹಿಸಲ್ಪಡುವದು.

ಪುನೇ ಪಟರ್ ಚಿತ್ರಶಾಲೆಯ ಮ್ಯಾನೇಜರ್.

ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA.

MONDAY, AUGUST 13, 1888.

೧೮೮೮ನೇ ಆಗಸ್ಟು ೧೩ನೇ ತಾ॥ ಸೋಮವಾರ.

THE TRIVELLORE AHOBALA MUTT.

ದಕ್ಷಿಣ ಇಂಡ್ಯಾದೇಶದಲ್ಲಿರತಕ್ಕ ಅನೇಕ ದಿವ್ಯದೇಶಗಳಲ್ಲೊಂದಾದ ತಿರುವಳ್ಳೂರೆಂಬದು ಈಗ್ಯೆ ಬಹುಕಾಲದಮೊದಲು ಹಿಂದೂಗಳಿಗೆ ಯಾತ್ರಾಸ್ಥಾನವಾಗಿರುತಲಿರುವದು ಪ್ರಸಿದ್ಧವಾಗಿದೆಯಷ್ಟೆ. ಈಗ ಇದೊಂದು ತಾಲ್ಲೂಕಾಗಿ ಚೆಂಗಲ್ಪಟ್ಟು ಡಿಸ್ಟ್ರಿಕ್ಟು ಕಲೆಕ್ಟರವರ ವಿಚಾರಣೆಗೆ ಒಳಪಟ್ಟಿರುತಿದೆ. ಇದಕ್ಕೆ ರೈಲ್ವೆ ಅನುಕೂಲ್ಯವಿರುವದರಿಂದ ತಾಲ್ಲೂಕ್ ಡಿಪ್ಯುಟಿಕಲೆಕ್ಟರ್ ಸದರೀ ಪ್ರದೇಶದಲ್ಲಿ ನೆಲಗೊಳಿಸಲ್ಪಟ್ಟಿರುವದರಿಂದಲೂ, ಅಲ್ಲಿ ಡಿಸ್ಟ್ರಿಕ್ಟು ಮುನಸೀಫ್‌ಕೋರ್ಟು ಇರುವದರಿಂದಲೂ ಜನಗಳ ಆಮದ್ ರಫ್ತು ಯಾವಾಗಲು ಅಧಿಕವಾಗಿಯೇಯಿರುತಿದೆ. ತಿರುವಳ್ಳೂರೆಂಬದು ಈಗ ಶ್ರೀ ಅಹೋಬಿಲಮಠಕ್ಕೆ ಮೂಲಸ್ಥಾನವಾಗಿರುತಲಿದೆ. ಈ ಮಠದವರು ಪೂರ್ವದಲ್ಲಿ ಶ್ರೀ ಅಹೋಬಿಲದಲ್ಲಿರುತಲಿದ್ದಂತೆಯೂ ಕಾಲಾಂತರಗಳಿಂದ ಅಲ್ಲಿಂದ ಈ ಪ್ರಾಂತಕ್ಕೆ ಬಂದು ತಿರುವಳ್ಳೂರಿನ ರಾಮತೀರ್ಥದ ಕೆರೆಯಕೊಂಡು ಅಲ್ಲಿ ನೆಲೆಸಿದರೆಂಬಲೂ ತಿಳಿಯಬರುತಿದೆ. ಶ್ರೀ ಅಹೋಬಿಲಮಠಕ್ಕೆ ಶಿಷ್ಯಬಾಹುಳ್ಯವು ಯಾವಾಗಲು ಅಧಿಕವಾಗಿರುತಿದೆ. ತತ್ಕಾಲದಲ್ಲದು ವಡಗಲೆ ಮತವಾಗಿರುವದರಿಂದ ಅವರ ಶಿಷ್ಯರೆಲ್ಲರೂ ವೈಷ್ಣವರಲ್ಲಿ ಒಂದು ಪ್ರಭೇದದವರಾದ ವಡಗಲೆಯವರಾಗಿಯೇ ಇರುತ್ತಾರೆ. ಪ್ರಸಕ್ತ ಮಠಕ್ಕೆ ಸಾಲೀಯಾನಾ ೫೦,೦೦೦ ರೂಪಾಯಿಗಳ ಆಯತಿಯೂ ಇದಲ್ಲದೆ ವಿಶೇಷ ಭೂಸ್ಥಿತಿಯೂ ಇರುವಂತೆ ಕೇಳುತ್ತೇವೆ. ಈ ಮಠಾಧಿಪತಿಯೇ ತಿರುವಳ್ಳೂರಲ್ಲಿ ಪ್ರಸಿದ್ಧವಾಗಿರುವ ಶ್ರೀ ವೀರರಾಘವಸ್ವಾಮಿಯ ದೇವಾಲಯಕ್ಕೂ ಇತರ ಕೆಲವುಸಣ್ಣದೇವಸ್ಥಾನಗಳಿಗೂ ಧರ್ಮಕರ್ತರಾಗಿರುತ್ತಾರೆ. ಇವುಗಳ ಆದಾಯವು ಸಾಲೀಯಾನಾ ೩೫,೦೦೦ ರೂಪಾಯಿಗಳಗೆ ಮಿಕ್ಕಿರದ್ದಾಗಿರುತಿದೆ. ಈ ದೇವಸ್ಥಾನಗಳ ಲೆಕ್ಕಗಳಲ್ಲಿ ಸದರೀ ಮಠಾಧಿಪತಿಗೆ ಇರುವ ಅಧಿಕಾರ ಸ್ವಾತಂತ್ರ್ಯಗಳು ಕಲೆಕ್ಟರಿಗೆ ಅವರಡಿಸ್ಟ್ರಿಕ್ಟಿನಲ್ಲಿಕೂಡ ಇರುವದಿಲ್ಲವೆಂದು ಧಾರಾಳವಾಗಿ ನುಡಿಯಬಹುದು. ಧರ್ಮಕರ್ತರಾದವಾಗಲು ಯತಿಗಳಾದವರಿಂದ ಅವರು ಅತ್ಯಂತ ವಾತ್ಸಲ್ಯವುಳ್ಳವರಾಗಿ ಸಕಲಕಾರ್ಯಗಳನ್ನೂ ನಿಜ ಚಿತ್ತಾಶ್ರಿತರ ಮೂಲಕ ಜರಿಗಿಸುತಲಿರುತ್ತಾರೆ. ಅವರಾವಾಗಲು ಸಾಂಸಾರಿಕ ಸುಖಾಭಿಲಾಷೆಗಳಿಲ್ಲದರಿಂದ ಅವರಿಗೆ ಈ ಪ್ರಯೋಗವು ಜೀವನೋಪಾಯವಾಗಿ ಕುದುರಿರುತಿದೆ. ಈಗ ಶ್ರೀ ಅಹೋಬಿಲ ಮಠ ಪೀಠಾಲಂಕೃತರಾಗಿರುವ ಶ್ರೀರಂಗನಾಥ ಜೀಯ್ಯರವರು ಕೇವಲ ವೃದ್ಧಾವಸ್ಥೆಯಲ್ಲಿರುತಲಿದಾರೆಂತಲೂ, ಅವರ ಪ್ರಾಕೃತಶರೀರ ವಿಯೋಗಕಾಲವು ಸನ್ನಿಹಿತವಾಗಿರುವದರಿಂದ ಅದು ಪ್ರತೀಕ್ಷಣದಲ್ಲಿಯೂ ನಿರೀಕ್ಷಿಸಲ್ಪಡುತಲಿರುವಂತೆಯೂ, ಈವಾರದಲ್ಲಿ ನಮಗೆ ತಿರುವಳ್ಳೂರುಬಾ

ತವಿಯಾದವರಿಂದಬಂದ ಕಂಗವೆನಮೂಲಕ ತಿಳಿಯಲಾದೆವು. ಸದರೀಸೀಸ್ಥಕ್ಕೆ ಕ್ರಿಶ್ಚನ್ನರೊಬ್ಬರು ನಿಯಮಿಸಬೇಕಾದ ಅವಶ್ಯಕತೆ ಯುಂಟಾದದರಿಂದ ಆಸನ್ನದಶೆಯಲ್ಲಿರುವ ಪ್ರಕೃತಸ್ವಾಮಿಗಳವರು ತಮ್ಮಭ್ರಾತೃಜರಾದ ಯಜ್ಞದೀಕ್ಷಿತರೆಂಬವರಿಗೆ ಆಶ್ರಮವುಕೊಡುವ ಉದ್ದೇಶವೊದನೆ ಗತಸೋಮವಾರದವಿನ ಬೇಕಾದಪ್ರಯತ್ನಗಳನ್ನೆಲ್ಲಮಾಡಿ [illegible] ಸಿದರು. ಈ ನಿರ್ಧಾರವು ಗುರುದ ಶಿಷ್ಯರುಗಳ [illegible] ಯಲ್ಲಿ ಅನೇಕರಿಗೆ ಅನಿಷ್ಟವಾಗಿದ್ದದರಿಂದ ಸುಮಾರು ೩೦೦ ಜನಗಳಿಗಿಂತ ಅಧಿಕವಾಗಿ ಶ್ರೀಮಠಕ್ಕೆ ಹೋದರು ಆದಿನವೇ ಮಠದಬಳಿ ಜನಸಮೂಹ ಮುಂದಿನ ವ್ಯಾಪಾರಗಳಂ ತಡೆಯಲಿಕ್ಕೆ ಪ್ರಯತ್ನಪಟ್ಟರು. ಇದಕ್ಕೆ ಕಾರಣವು ವಿಚಾರಿಸುವ [illegible] ಇವರ [illegible] [illegible] ಸ್ವೀಕರಿಸಿ [illegible] [illegible] ಅಲ್ಪಸ್ವಲ್ಪ [illegible] [illegible] [illegible] [illegible] ಗಳನ್ನು ರಕ್ಷಿಸದಿದ್ದರೆ [illegible] ಸ್ವತ್ತುಗಳನ್ನು ಕುರಿತ ದುರುಪಯೋಗಪಡಿಸಿ [illegible] ಅನ್ಯರಿಗೆ [illegible] [illegible] ನೆಲೆಯಿಲ್ಲದೆ [illegible] ಮುಂದೆ [illegible] [illegible] ಬಹಳಪರವೇಕಾಗಿರುವುದೋ ಯೆಂಬ ಭೀತಿಯಿಂದ ಯೆಲ್ಲರೂ ಏಕಕಂಠ್ಯದೊಡನೆ ಸ್ವಾಮಿಯವರ ಪ್ರಯತ್ನವು ವಿಫಲವಾಗಬೇಕೆಂದು [illegible] ತೋರುತ್ತಿದೆ. ಈ ವಿಷಯದಲ್ಲಿ ಸ್ಥಳೀಯರಿಗೆ ಳು ಸುತರಾಂ ಪ್ರವೇಶವಿಲ್ಲದುದರಿಂದ ಅವರಿಗೆ ಉಚಿತವಾದ ಹುಕುಂ ಕೊಡಬೇಕೆಂದು ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟವರಿಗೆ ಆದಿನವೇ ತಂತಿಮೂಲಕ ತಿಳಿಸಲ್ಪಟ್ಟಿರುತ್ತದೆ. ಮುಂದಾಗಿಯೇ ಮಠದಲ್ಲಿ ಶಿಷ್ಯರೆಲ್ಲ ಜನಸಮೂಹವಿದ್ದುದರಿಂದ ಅವರ ಮುಖ್ಯಾನ್ನ ೧೧ ಘಂಟೆಯವರೆಗೂ [illegible] ಅಲ್ಲಿಗೆಹೋಗಿದ್ದರು. ಆಕಾಲದಲ್ಲಿ ಜಿಲ್ಲೆಯವರು ರಮ್ಮ ಪ್ರಯತ್ನಕ್ಕೆ ವಿಘಾತವುಂಟುಮಾಡಲ್ಪಡದಿರುವಬಗ್ಗೆ ಪೋಲೀಸಿನವರ ಸಹಾಯವು ಅಪೇಕ್ಷಿಸಿ ಜನಗಳಿಗೆ ಈ ವಿಷಯದಲ್ಲಿ ತಮ್ಮಲಿಷ್ಟಾನಿಷ್ಟಗಳಂತಿಳಿಸುವಷ್ಟು ಸ್ವತಂತ್ರ್ಯವಿರುವುದಿಲ್ಲವೆಂದು ಹೇಳಿದರು. ಆಗ ತಿರುಮಕೂಡಲು ಆಚಾರ್ಯರೆಂಬವರು ಧೈರ್ಯದೊಡನೆ ಎದ್ದು ನಿಂತುಕೊಂಡು ಉಪಶಾಂತವಾಗಿ, ಮರ್ಯಾದೆಯೊಡನೆ ಮೃದುವಚನಗಳಿಂದ ಜಿಲ್ಲೆಯವರಕುರಿತು ಪ್ರಜಾಭಿಪ್ರಾಯವು ಸ್ವಾಮಿಗಳಿಗೆ ತೆರಬೇಕಾದ್ದು ಅವಶ್ಯಕವಾಗಿಯೂ ಉಚಿತವಾಗಿಯೂ ಇರುತ್ತದೆಂದು ವಿಜ್ಞಾಪಿಸಿದರು. ರೆವಿನ್ಯೂ ಸ್ವಾಮಿಗಳು ಕೆಲವುಹೊತ್ತು ಆಲೋಚನೆ ಮಾಡಿದ ಬಳಿಕ ರಮವಿಧ ಪರತ್ತುಗಳಿಂದ ಯಾವವಸ್ತುವಾದರೂ ಅಂಗೀಕರಿಸಿದರೆ ಆಗಾಗ್ಯ ಜನಗಳಿಗಿಷ್ಟವಾದ ವ್ಯಾವಹಾರಿಕಪ್ರಕಾರವಾಗುವುದೆಂದು [illegible] ಸಿದರು. [illegible] ಜನಗಳಿಗೆ, [illegible] ಕ್ಕೆ [illegible] ೩೦೦ ರೂಪಾಯಿ [illegible] ಕೊಟ್ಟರೆ ಅಲ್ಲಿ [illegible] ರದ್ದುಪಡಿಸಿ [illegible] ಎಂದೇ– ಬಾವು ಶಿಷ್ಯವರ್ಗದವರಿಗೆ ಈಗ ಮೊಕದ್ದಮೆಗಳನ್ನು ತಮ್ಮ [illegible] ತೆ ಅವರು ತಮ್ಮ ಇಷ್ಟಾನುಸಾರ ನಡೆಯುವರೆ ರಕ್ಷಿಸಿದ್ದು ಎಂಬುದು ಈ ಎರಡುವಿಧ ಪ್ರಶ್ನೆಗಳಲ್ಲಿ ಯಾವುದಾದರೂ ಜರುಗಿಸಲಿಕ್ಕೆ ಗತಿಸಿದ ಪರಿಷದ್‌ ಜಿಲ್ಲೆಯವರ ನೋಡಿದರಿಂದ ಮಠಕ್ಕೆ ಬಂದರು ರಂಗಾಚಾರ್ಯರವರು ಈ ಮರಾಮತ್ತಿಗೆ ಉಪೇಕ್ಷಿಸಬಾರದೆಂದು ಜಿಲ್ಲೆಯವರು ಅಧಿಕಾರವಾಗಿ ರದ್ದುಪಡಿಸಿದರು. ಸ್ವಾಮಿಗಳೊಡನೆ ಪ್ರಶ್ನಿಸಿದರು [illegible] ಸ್ವಾಮಿಗಳ ಸಂಬಂಧಿಗೆ ಆಶ್ರಮಕೊಡಿಸುವುದರಿಂದುಂಟಾಗುವ ಮುಂದಿನ ಅನರ್ಥಗಳ ಪರ್ಯಾಲೋಚಿಸಿ ರದ್ದುಪಡಿಸಿದರೆ ಸರ್ವರೂ ಅಂಗೀಕರಿಸಿದರು. ಈ ನೀತಿಕ್ಕೆ ಮತ್ತೊಬ್ಬರು

ನಿಯಮಿಸುವ(ವಿಷಯವು) ಸಾಧಾರಣವಲ್ಲವಾದದರಿಂದ ಇದು ಕುರಿತು ಪರಸ್ಥಳಗಳಲ್ಲಿರುವ ಶಿಷ್ಯಕೋಟಿಯ ಅಭಿಪ್ರಾಯವು ತಿಳಿದುಕೊಳ್ಳುವಬಗ್ಗೆ ರಮಗೆ ಹಿಂದುವಾರ ವಿರಾಮಬೇಕೆಂದು ಜನರೆಲ್ಲರೂ ಅಪೇಕ್ಷಿಸಿದ್ದರಿಂದ ಸ್ವಾಮಿಗಳು ಆದಿನದ ಕರ್ಮವನ್ನು ನಿಲ್ಲಿಸಿದುದುವಲ್ಲದೆ [illegible] ಗುರುಗಳಾದವರಲ್ಲಿ ಶಿಷ್ಯರಿಗೆ ಪ್ರತಿಪತ್ತಿ ಯುಂಟಾಗಲಿಕ್ಕೆ ಅನೇಕ ವಿಷಯಗಳು ಅಪೇಕ್ಷಿತಗಳಾಗಿರುತ್ತವೆ. ಬ್ರಹ್ಮಜನ್ಯಕ್ಕೆ ಆಮುಷ್ಮಿಕ ವಿಷಯಕ್ಕೆ ಸಂಬಂಧಿಸಿದ ಪ್ರಶ್ನೆ ವಿಚಾರವು ಕೇಳು ಆತುರದೊಡನೆ ವಿಮರ್ಶನ ನಿರ್ಣಯಿಸಲ್ಪಡತಕ್ಕದು. ಈ ಸಂಪಾದಿಸಲ್ಪಟ್ಟ ಕೆಲವು ಕಾಲದಲ್ಲಿ ವಿದ್ಯೆ [illegible] [illegible] [illegible] [illegible] [illegible] [illegible] [illegible] [illegible] [illegible] [illegible] [illegible] [illegible] ಲಭಿಸುವ [illegible] ಅವಕ್ಕೆ ಲಭಿಸಿದ್ದೆಲ್ಲೂ, [illegible] [illegible] ಗುಣಗಳೂ, ವಿನಯ ವಿಧೇಯತೆ ಯು, ವಿದ್ಯ ವೈರಾಗ್ಯವೂ, ಪ್ರಾಣಿಮಾತ್ರ ಯು, ಹೃದಯ ಪರಿಶುದ್ಧವು, ಆಸಕ್ತಿನಿವೃತ್ತಿ ಯೂ, ಪ್ರತಿಷ್ಠೆ ಇಲ್ಲದಿರುವುದು ಮುಂತಾದ ಸದ್ಗುಣಗಳೆಲ್ಲಾ ಇವರು ಸಂಪಾದಿಸಿರಬೇಕು. ಮಠಾಧಿಪತಿಗಳಲ್ಲಿ ಶಿಷ್ಯರಿಗೆ ಪ್ರತಿಪತ್ತಿ ಕಡಿಮೆಯಾಗಲಿಕ್ಕೂ, ಸ್ವಾಮಿ ಪದವಿಯಲ್ಲಿರುವ ಕುರುಹು [illegible] ಕ್ಕೆ ವಿಶೇಷವಾಗಿ [illegible] [illegible] [illegible] [illegible] ಪ್ರಭುತ್ವವೂ ಲೋಭಸ್ವಭಾವವು ಹೆಚ್ಚಾಗುವದು [illegible] ಈ ಕಾಲದಲ್ಲಿ ಕೆಲವು ನಾಶಗಾಗುವದೆಂದು ಹೇಳಬೇಕಾಗಿದೆ. ಪ್ರಾಚೀನ ಕಾಲದಲ್ಲಿ ಸನ್ಯಾಸವು ಜಾತಿಕುಲಾಚಾರಗಳಲ್ಲಿ ಜನಗಳಿಗೆ ಸ್ವಾಭಾವಿಕವಾಗಿ ಪ್ರೀತಿಗೌರವ ನುಡಿಗಳು ಉಂಟುಮಾಡುವುದಕ್ಕೆ ಅವಕ್ಕೆ [illegible] ಕವಾಗಿ [illegible] ಆದಾಯವೂ ದುರ್ಬಲರ ತಿಳಿಸಬೇಕಾದ್ದೇನಿಲ್ಲವು. ಅದರಿಂದ ಈಗ ಅಪೇಕ್ಷಿಸಲ್ಪಡುವ ಮತ್ತೊಬ್ಬರು ಸ್ವೀಕರಿಸುವ ವಿಷಯದಲ್ಲಿ ಸದರೀ ಮಠದ [illegible] ಜನ್ಮಾಗಿ ಎಲ್ಲಾ ವಿಷಯಗಳನ್ನು ನೋಡುತ್ತೇವೆಂದು ಕೋರುವೆವು. [illegible] ವಾಗಿ ಕಾಲ ವಿಳಂಬಕ್ಕಾಗಿ ಜನಗಳು ಸದ್ಯಃ ರದ್ದುಪಡಿಸಿದ ಸಲಹೆಯನ್ನು ಅಂಗೀಕರಿಸಿರುವುದು ರುಚಿಸದೆ. ಈ ಸಂದರ್ಭದಲ್ಲಿ ಪರಸ್ಥಳಗಳಲ್ಲಿರುವ ಸುದಪರು ಸಹ ಅಲ್ಲಿಗೆ ಹೋಗಿ ರಕ್ಷಿಸುವುದರ ನ್ಯಾಯ [illegible] ದಾರರ ಸೂಚನೆಯ [illegible] [illegible] [illegible] ಕೇಳಿಕೊಳ್ಳುತ್ತೇವೆ. ದೇಶದ ಸಮಸ್ತ ದರ್ಶನ [illegible] ಪಕ್ಷಗಳ ಸನ್ಯಾಸಿಗಳ [illegible] [illegible] ಆದರ [illegible] [illegible] [illegible] [illegible] [illegible] [illegible] [illegible] [illegible] [illegible] [illegible] [illegible] ದಿನಗಳಲ್ಲಿ ಅನೇಕ ಸನ್ನಿವೇಶಗಳು [illegible] ಸನ್ಯಾಸಿಗಳು ಈ ಮಠಾಧಿಪತಿ ನೀಚ [illegible] [illegible] [illegible] [illegible] ಕಲ್ಪಲಸಲ್ಲಿ ಜನರಲ್ಲಿ ರಮ್ಮ ಯಜಮಾನಿಕೆ [illegible] ನಾ [illegible] ಮಠಾಧಿಪತಿಗಳಲ್ಲಿ ಗೃಹ ಪ್ರಯುಕ್ತವಾದ ನಾನಾ ವ್ಯಸನವನ್ನು, ಸ್ವಪ್ರತಿಷ್ಠಾ ಪರರಾದ ಸನ್ಯಾಸಿಗಳ ಅಸಹಾಯ ಕಾರಣಗಳಾಗಿ ಉಂಟಾಗಿವೆ ನೀತಿಗಳಿಗೆ ರಾಜಕೀಯ ಸ್ಥಿತಿ ಪುನರ್ವ್ಯವಸ್ಥೆಯು ಜ್ಞಾಗ ಅಪೇಕ್ಷಿತವಾಗಿದೆಯೋ ಅದರೀತಿ ಮಠಾಚಾರ ಸಂಪ್ರದಾಯಾದಿಗಳ ಸ್ಥಿತಿ ಗತಿಗಳು ಕೂಡ ಪ್ರಮುಖವೇಕಾಗಿವೆ. ಪರಂತು ಇವುಗಳು ವರ್ತಮಾನದ ಕಾಲದವರು ಸುಧಾರಿಸುವ ಕುಂಠಿತೋಪಾಯಗಳಿಂದ ಸಾಧ್ಯವೆಂದು ನಾವೆಣಿಸಲಾರೆವು ಇದಕ್ಕೆ ವೈಸನ್ಯ ರಹಿತರಾದ ಮಠಾಧಿಪತಿಗಳೂ ಅಭಿಜಾತ್ಯರಾದ ಶಿಷ್ಯವರ್ಗ ರಕ್ಷಣೆಯನ್ನು ಮಾಡಿದ ಹೊರತು ಅದೆಂದಿಗೂ ಕೈಗೂಡಲಾರದೆಂದು ಯೆಲ್ಲರೂ ತಿಳಿಯತಕ್ಕದ್ದು.

MR. W. C. BONNERJEE ON INDIA.

ಈಗ್ಯೆ ಮೂರ ಸಂವತ್ಸರಗಳ ಹಿಂದೆ ಅಂದರೆ ೧೮೮೫ನೇ ಇಸವಿಯ ದಿಸೆಂಬರ್ ತಿಂಗಳ ಅಂತ್ಯಭಾಗದಲ್ಲಿ ಮುಂಬಯಿ ಪಟ್ಟಣದಲ್ಲಿ ಜರುಗಿದ ನ್ಯಾಷನಲ್ ಕಾಂಗ್ರೆಸ್ ಎಂಬ ಮಹಾಸಭೆಯ ಉದ್ದೇಶ ಪ್ರಯತ್ನಗಳು ಇಂಡ್ಯಾ ಗವರ್ನ್‌ಮೆಂಟವರು ಅವಿಸುವಿನ ಸ್ಥಿತಿಯಲ್ಲಿವೆ [illegible] ಭಾವವು ಅವರೆದುರಿನಲ್ಲೂ ಇಲ್ಲಿನ ಜನಗಳಿಗೆ ಪ್ರಕಟವಾಗಿ ವ್ಯಕ್ತವಾಗುದರಿಂದ ಇವರು ಇಂಗ್ಲೀಷ್ ಪ್ರಭುತ್ವಕ್ಕೆ ಮೂಲಭೂತವಾದ ಗ್ಲಾಡಸ್ಟನ್ ಇವರು ಪ್ರತಿನಿಧಿ [illegible] [illegible] [illegible] [illegible] [illegible] [illegible] [illegible] [illegible] [illegible] [illegible] [illegible] [illegible] [illegible] [illegible] [illegible] [illegible] [illegible] ಪ್ರಯತ್ನಪಡುತ್ತಿದ್ದಾರೆ. ಈ ದೇಶದ ಜನರ ಮಹತ್ವಕಾಂಕ್ಷೆಗಳ ಸ್ವರ [illegible] ನವು ಅಲ್ಲಿನವರಿಗೆ ಉಂಟುಮಾಡುವದಕ್ಕಾಗಿ ಕಳುಹಿಸಿರುತ್ತಾರೆ ಇವರಲ್ಲಿ [illegible] [illegible] [illegible] ಎಂಬುವರೂ ಒಬ್ಬರಾಗಿರುತ್ತಾರೆ [illegible] [illegible] [illegible] [illegible] [illegible] [illegible] [illegible] [illegible] [illegible] [illegible] [illegible] [illegible] [illegible] [illegible] [illegible] [illegible] ಪ್ರತಿನಿಧಿ ಮಹಾಸಭೆಯಿಂದ ಜರುಗಿದ್ದು [illegible] [illegible] ಇವರು ಈ ಕಾಂಗ್ರೆಸ್ ಸಭೆಯ ಅಧ್ಯಕ್ಷರಾಗಿದ್ದು ಬ್ರಿಟಿಷ್ ಪಾರ್ಲಿಮೆಂಟ ಸಭಾಸದರಾಗಲು [illegible] [illegible] [illegible] [illegible] ಗ್ಲೀಷಿನವರು ಹಿಂದೂ ಜನಗಳ ಅಭಿವೃದ್ಧಿಗೆ ಸಹಾಯಮಾಡುವ ರಾಷ್ಟ್ರೀಯತೆಯುಳ್ಳವರಾಗಿರುವವರಿಂದ ಈ ಉದ್ದೇಶದಲ್ಲಿ ಸಭೆಯವರ ಪ್ರಯತ್ನಗಳೆಲ್ಲವೂ ಸಫಲಗಳೆಂದು ನಿಶ್ಚಯಿಸಿಕೊಂಡು ಇಂಗ್ಲಂಡಿನಲ್ಲಿ ಈಗ ಅಲ್ಲಿರುತಿರುವ ಮಿ ಡಿ [illegible] ನೌರೋಜಿ ಬ್ಯಾರಿಸ್ಟರ್ ಮಿ॥ ನಾರ್ಟನ್ ಮುಂತಾದವರೊಡನೆ ಕಲೆತು ನಮ್ಮ ದೇಶ ಕ್ಷೇಮಕ್ಕೆ ಸಾಧ್ಯವಾದ ಪ್ರಯತ್ನಗಳನ್ನೆಲ್ಲ ಮಾಡುತ್ತಲಿರುವುದು ಇಂಗ್ಲೀಷ್ ಪತ್ರಿಕೆಗಳಮೂಲಕ ತಿಳಿಯುತ್ತದೆ ಮುಂದೆ ಇವರ ಪ್ರಯತ್ನದಿಂದ ನಮಗೇನಾದರೂ ಪ್ರಯೋಜನವಾಗುವುದಾಗಿದೆಯೋ ಹೊರತು ಕೇವಲ ಗವರ್ನ್‌ಮೆಂಟಿನವರು ಅಭಿಪ್ರಾಯರಾಗಿ ಸಹಾಯವಾಗುವರೆಂಬ ನಂಬಿಕೆಯು ನಮಗೆ ಸುತರಾಂ ಇರುವುದಿಲ್ಲ. ಮಿ॥ ಬಾನರ್ಜಿಯವರು ಈಗ ಇಂಗ್ಲೆಂಡಿನಲ್ಲಿ ನಾನಾ ಕಡೆ ಇರುವ ಪ್ರಯತ್ನಗಳ [illegible] ರಿಗೆ ಇದ್ದಸ್ಥಿತಿಯ ರಾಜಕೀಯ ಸ್ಥಿತಿಯ [illegible] ವ್ಯಾಪ್ತಪಡಿಸಿಕೊಂಡು ಈರೀತಿಯಾಗಿದೆ ಬ್ರಿಟಿಷ್ ವರ [illegible] ನ್ಯಾಯ ಪ್ರಾಮಾಣಿಕತೆಯ ವಿಷಯದಲ್ಲಿ ನಮಗೆ ಸಂಪೂರ್ಣ ವಿಶ್ವಾಸವುಂಟಾಗುವದರಿಂದ ಅವರಿಗೆ ನಿಜವಾದ ಪ್ರಸ್ತುತ ಸ್ಥಿತಿಯು ತಿಳಿಯಬಂದರೆ ಆರೀತಿ ನಾವು [illegible] [illegible] [illegible] [illegible] [illegible] [illegible] [illegible] ತಿಳಿಸಿಕೊಡುವ ನಾವು ಬಯಸಿದರೂ ಅವರಿಗಾಗಿ ನೆ ಈಚೆಗೆ ಡಾಕ್ಟರ್ ಕ್ರಾಸ್ ಎಂಬ ರುಕೆ [illegible] ಯಲ್ಲಿ ಜನಗಳ ಯಿಷ್ಟವಿಲ್ಲದ [illegible] ಯಲ್ಲಿ [illegible] ಯವರು ಮಾಡಿದ ಕಾರ್ಯವಾದ ಉಪನ್ಯಾಸವು ಆ ಸಭೆಯೊಳಗಿದ್ದವರಿಗೆಲ್ಲ ಬಹಳ ಸಂತೋಷವನ್ನುಂಟುಮಾಡಿದರು. ಅದು ಸೂಚಿಸಿದ ಅಭಿಪ್ರಾಯವಿಗೂ ಬ್ರಿಟಿಷ್ ಸರ್ಕಾರಕ್ಕೆ ಹಿಂದೆ ಪ್ರಾಪ್ತವಾಗಿದ್ದ ಕೆಲವ ನಿಬಂಧನೆಗಳು ಆಡಳಿತದಲ್ಲಿ ವೈಸ್‌ರಾಯಿಯಾಗಿದ್ದ ಲಾರ್ಡ್ ರಿಪ್ಪನ್ನವರು ಈದೇಶವನ್ನು ಆಡಳಿಕ್ಕೆ ಗನ ವಿಮಾಡಿದ ಅಂತವನ್ನು ಮಿಸ್ಟರ್ ಬಾನರ್ಜಿಯವರು ತಿಳಿಸುವಾಗ್ಯೆ ಸಭಿಕರಪ್ಪದಯವು ಬಹಳ ಕರಗಲಾದವು. ಇದೇವಿಷಯವು ಕುರಿತು ಅವರು ಇನ್ನೂ ತಿಳಿಸಿದ್ದೇನೆಂದರೆ, ಆವ ಘನಾನಿರ್ಣಾ ಅಧಿಕಾರಿಗಳಿದ್ದ ಓಯರಲ್ಲೀಯ ವರೆವಿಗೆ ಇಲ್ಲಿಗೆ ಕಳುಹಿಸ್ಯ ಕಾರ್ಯದರ್ಶಿಗಳೂ ಉಗ್ರವೇಷವುಳ್ಳವರಾಗಿದ್ದ ಲಾರ್ಡ್ ಸಾಲಿಸ್‌ಬರಿ ಯವರಿಗೆ ಲಾರ್ಡ್ ನಾರ್ಥ್‌ಬ್ರೂಕಿಯವರು

ಸಹಾಯಕರಾಗಿದ್ದ ಹೋದದರಿಂದಲೇ ಅವರು ವೈಸ್‌ರಾಯ್ ಕೆಲಸಕ್ಕೆ ರಾಜೀನಾಮೆ ಕೊಟ್ಟು ಇಂಗ್ಲೆಂಡಿಗೆ ಕಾಲಕ್ಕಿಂತ ಮುಂದಾಗಿಯೇ ಇಂಡ್ಯಾದೇಶವನ್ನು ಬಿಟ್ಟು ತೆರಳಬೇಕಾದವರಾದರು. ಆಗ ಯೆಲ್ಲಿಹೋ ಅಸ್ಥಾನವಾದ ರಾಯಬಾರಿಯಾ [illegible] ಲಿಟ್ಟನ್ ಮನ್ನಿಯವರು ಎಕಾಏಕಿ ಅನೇಕರಲ್ಲ ಪ್ರಜೆಗಳಿಗೆ ಸಾಲಕರಾಗಿ ಹೊಕರರಾ [illegible] ರಾಯ್ ಕೆಲಸಕ್ಕೆ ಕಳುಹಿಸಲ್ಪಟ್ಟ ಕೂಡಲೆ ಅವರು ಲಾರ್ಡ್ ಸಾಲಿಸ್‌ಬರಿಯವರ ಉದ್ದೇಶವು ಸಫಲಗೊಳಿಸಲಾರಂಭಿಸಿದರೆಂಬುದು ಮಾತ್ರವಲ್ಲದೆ ಪ್ರಕರಣದಲ್ಲಿ ಮೇಟ್ಕಾಫ ಶರ್ಮರವರು ಸ್ವದೇಶ ಪ್ರಜೆಗಳನ್ನಧಿಕರಿಸಿ ತಿಳಿಸಿದ್ದೇನೆಂದರೆ—ಇಂಡ್ಯಾದೇಶಕ್ಕೆ ಸಂಬಂಧಿಸಿದ ವಿಷಯಗಳು ಕುರಿತು ಪಾರ್ಲಿಮೆಂಟು ಸಭೆಯಲ್ಲಿ ವಿಚಾರ ನಡೆಯುವಾಗ್ಯೆ ಅದರ ಮೆಂಬರರುಗಳೆಲ್ಲರೂ ಅಲಕ್ಷ್ಯದ ಯೋಗಕ್ಷೇಮದ ವೃದ್ಧಿಯಲ್ಲಿ ಸ್ವಲ್ಪವೂ ಲಕ್ಷ್ಯವೇ ಇಲ್ಲದೆ ಹೊರಗೆ ಹೋಗುವುದು ನಿಯಮವಾಗಿದ್ದು ಅವರ ಆಯುಷ್ಯವಾಗಿರುತ್ತದೆ. ಇಂಡ್ಯಾದೇಶದವರಿಗೆ ಇಂಗ್ಲಿಷ್ ಅಧಿಕಾರಿಗಳ ಅಧಿಕಾರಿಗಳನ್ನು ಇಂಗ್ಲೀಷಿನವರು ಬಹಳ ಗೌರವಿಸಿ ನಾಡಿನಲ್ಲಿ ಇವರಾದರೋ ರಮ್ಮ ವಿಚಾರಣೆಗೊಳಗಾದ ಪ್ರಜೆಗಳ ಯೋಗಕ್ಷೇಮದಲ್ಲಿ ಸ್ವಲ್ಪವೂ ಶ್ರದ್ಧೆಪರರಾಗಿಲ್ಲವು. ಇವಕ್ಕೆ ನಿದರ್ಶನಗಳು ಇವುಗಳಗಿಂತ ಬೇರೆ ಮರುಕ ಬೇಕ ಮಿಲ್ಲವು ಕಾಲಕ್ಕೆ ಸುದಿನನಾನಾವಿಧಸುಂಕವಿಧ್ಯಾಯಗಳು ಸ್ವಪ್ನಜಿಸಲಿಸುತ ಅವುಗಳಂ ರೆರವಿಕ್ಕಿ ಅರತ್ಯಾದ ಪ್ರಜೆಗಳಂ ಪೀಡಿಸುತಲಿರುವದಕ್ಕಿಂತ ಮತ್ತೊಂದೇ ಬೇಕಾಗಿರುವದಿಲ್ಲವು ಆಕೃತವಾದ ಈಶ್ವರನೇ ಪ್ರಜೆಗಳಿಗೆ ಜೀವನವಾದ ಅನ್ನ ಬಳಿಸಲ್ಪಡುತ ಅವುಗಳು ಅವರಿಗೆ ಸುಲಭವಾಗಿ ಲಭಿಸದಂತೆ ಅದರಮೇಲೆ ಖಾಸ್ತಿಯತೆರಿಗೆಯು ವಿಧಿಸಿರುತ್ತಾರೆ. ಇದರಿಂದ ಬಡವರಾದವರಿಗೆ ಗಂಜಿಗೆ ಬೇಕಾದಷ್ಟು ಉಪ್ಪುಸಹ ದೊರೆಯುವದು ಪ್ರಯಾಸವಾಗಿದ್ದು ಇಂತಾ ನಿರ್ಬಂಧಕರವಾದ ಕಾನೂನುಗಳೆಲ್ಲದರ ಲಿಕ್ಕೆ ನ್ಯಾಯನಿರ್ಮಾಯಕ ಸಭೆಯ ಮೆಂಬರಗಳು ಪ್ರಜೆಗಳಿಂದ ಚುನಾಯಿಸಲ್ಪಡದೇ ಹೋಗಿರುವದೇ ಮುಖ್ಯಕಾರಣವಾಗಿದೆ. ಈಗ ನ್ಯಾಯನಿರ್ಮಾಯಕ ಸಭೆಯ ಮೆಂಬರರುಗಳನ್ನೆಲ್ಲ ಗವರ್ನ್‌ಮೆಂಟವರೇ ತಮಗೆ ಬೇಕಾದವರ ಚುನಾಯಿಸಿ ನಿಯಮಿಸುತ್ತಿರುವದರಿಂದ ಇವರಿಂದ ಸದರೀ ಮೆಂಬರಗಳು ತಮಗೆ ಲಭಿಸುವ ಪದವಿ ಗೌರವಕ್ಕಾಗಿ ಅವಕ್ಕೆಲ್ಲಿ ಲೋಪವುಂಟಾಗುವದೋ ಎಂಬ ಭೀತಿಯೊಡನೆ ಸಭೆಯ ಶ್ರೇಷ್ಠರೆನಿಸಿಗೊಳ್ಳುವ ಗವರ್ನರುಗಳು ಮತ್ತು ಗವರ್ನರ್ ಜನರಲ್ಲರವರು ಪ್ರಸ್ತಾಪಿಸಿದರೂ, ಅನ್ಯಾಯವಾಗಲಿ, ಅನರ್ಥವಾಗಲಿ, ಅಹಿತವಾಗಲಿ, ಅಹಿತವಾಗಿರಲಿ, ಹಿತವಾಗಿರಲಿ, ಅಹಿತವಾಗಿರಲಿ, ಅವರ ಕುಹಕರನಾಮಾದ ಅಂಗೀಕರಿಸುತ್ತಾರೆ ಇವರು ರಮ್ಮ ಸ್ವತಂತ್ರಾಭಿಪ್ರಾಯಗಳು ಬೀತಿಯಿಂದಲೋ ಅಥವಾ ದಾಕ್ಷಿಣ್ಯದಿಂದಲೋ ಅದಾ ಅದಕ್ಕೆ ಹಿಂದಿನಿಂದ ವ್ಯಕ್ತದೊಡನೆ ತಿಳಿಯಪಡಿಸುವದಿಲ್ಲವು ಮೆಂಬರಗಳನ್ನು ಚುನಾಯಿಸುವ ಸ್ವಾತಂತ್ರ್ಯವು ಪ್ರಜೆಗಳಿಗುಂಟಾಗಿರುವ ಪಕ್ಷಕ್ಕೆ ಇಂಡ್ಯಾ ದೇಶಕ್ಕೆ ಪ್ರಕೃತ ಸ್ಥಿತಿಯುಂಟಾಗಲಾರದೆಂದು ಆಗಿರಲಾರದೆಂದು ತಿಳಿಯುವದು. ಇಂಡ್ಯಾದೇಶಿಯರಲ್ಲಿ ಬಹುಮಂದಿ, ಅಂದರೆ ಸಾಮಾನ್ಯರಾದ ಅಕ್ಷರಾಭ್ಯಾಸವಿಲ್ಲದೆ ಹೋಗಿರುವದರಿಂದ ಲೂ, ನ್ಯಾಯನಿರ್ಮಾಯಕಸಭೆಯಮೆಂಬರಗಳನ್ನು ಚುನಾಯಿಸುವಷ್ಟು ಶಕ್ತರಲ್ಲವೆ ಇರುವದರಿಂದ ಲೂ, ಅಷ್ಟರ ಜವಾಬ್ದಾರಿಯಂ ವಹಿಸಲಿಕ್ಕೆ ಜನಗಳು ಅಸಮರ್ಥರಾಗಿರುವರೆಂದು ಅನೇಕರು ಅಭಿಪ್ರಾಯಪಟ್ಟಿರುತ್ತಾರೆ. ಇದು ಕುಚ್ಯೋದ್ಯ ನಿರಾಕರಿಸಲ್ಪಡತಕ್ಕದ್ದಲ್ಲವು. ನಮ್ಮ ದೇಶದಲ್ಲಿ ಅನೇಕರು ವಿದ್ಯಾಹೀನರಾಗಿಯೇ ಇದ್ದಾರೆ. ಪರಂತು ಯಾವದೇಶದಲ್ಲಿ ಒಬ್ಬರು ರಪ್ಪದೆ ಪ್ರಜೆಗಳೆಲ್ಲರೂ ವಿದ್ಯಾವಂತರಾಗಿರುವರೋ ಅಂತಾ ಭೂಭಾಗವು ಕಣ್ಣಿಂದ ನೋಡಬೇಕೆಂದು ಕೋರಿದಾಗ್ಯೂ ಗೋಚರ ವಾಗುವದಿಲ್ಲವು. ಯಾವದೇಶವನ್ನು ನೋಡಿದಾಗ್ಯೂ ವಿದ್ಯಾವಂತರ

ಗ್ರೇಯು ಜಿಲ್ಲೆಗಳಿಗೂ ತ ಬೆಳೆಯುತ್ತದೆ [illegible] ದಿಂದ ಜನಗಳಲ್ಲಿ ವಿದ್ಯಾಹೀನರಾಗಿರುವವರಿಂದ ಪ್ರಜಾ [illegible] ಪೂರ್ವಕವಾದ ಪ್ರಭುಭಕ್ತಿ ಇಂಡಿಯಾ [illegible] ಅರ್ಹವಾಗಲಿಲ್ಲವೆಂದು [illegible] ಉಚಿತವಾದ [illegible] ರಲ್ಲಿ [illegible] ಗವರ್ನರ್ [illegible] [illegible]

[illegible]

ರಾಜರ ದುರಭಿಮಾನಿಗಳಾಗಿ ಸುರಕ್ಷಿತರಾಗಿರುವವರು [illegible] ರು ಅವರು ಯಾವಾಗ ಅನುಗ್ರಹಿಸಿ [illegible] ಕೆ ಪಟ್ಟಸುವರೋ [illegible] ಮಾಡ [illegible] ರನ್ನು [illegible] ಸುರಕ್ಷಿತ [illegible] ಸಜ್ಜನ ಪುರುಷರು ತಮ್ಮ ಬುದ್ಧಿ ಬಲದಿಂದ [illegible] ತಮ್ಮ ಅನ್ಯರಿಂದ ಸುರಕ್ಷಿತ [illegible]

ಶ್ಲೋ|| [illegible] ॥೩೩॥

[illegible]

ಶ್ಲೋ|| [illegible]

[illegible]

ಶ್ಲೋ|| [illegible] ॥೩೪॥

[illegible]

ಶ್ಲೋ|| [illegible] ॥೩೫॥

[illegible]

ಶ್ಲೋ|| [illegible] ॥೩೬॥

[illegible]

MORAL GEMS FROM THE MAHABHARATA.

ಮಹಾಭಾರತದ ನೀತಿರತ್ನಗಳು.

IV.—On Friendship.—ಸ್ನೇಹ.

The Hindu Bard on Friendship IX

([illegible])

ಶ್ಲೋ|| [illegible]

[illegible]

ಸ್ವಾಭಿಮಾನ [illegible] ಎಂಬುದಾಗಿ ಉತ್ತರವನ್ನಿತ್ತನು [illegible]

ಶ್ಲೋ|| [illegible] ॥೩೭॥

[illegible]

Electioneering Notes

ನೈಮಿತ್ತಿಕ ವಿಷಯಗಳು.

Thanksgiving.—[illegible] ಮಹಾರಾಜರ [illegible] ಬಿಡಿಸಿದ [illegible] ದಿನದಲ್ಲಿ [illegible]

The Viceroy's visit to Cashmere.—ಲಾರ್ಡ್ ಲ್ಯಾನ್ಸ್‌ಡೌನ್ ಅವರು ತಮ್ಮ [illegible] ಮುಂದಿನ ಅಕ್ಟೋಬರ್ ತಿಂಗಳಲ್ಲಿ ಕಾಶ್ಮೀರದೇಶಕ್ಕೆ ಹೋಗುವರೆಂಬ ಪ್ರವಾರ [illegible] ಉತ್ತರದೇಶದ ಪತ್ರಿಕೆಯೊಂದು ತಿಳಿಸುತ್ತಿದೆ.

Human sacrifice.—[illegible] ಒಂದು [illegible]

The Indian Railway Conference.—[illegible]

The coming Viceroy.—ಮುಂದೆ [illegible] ಲಾರ್ಡ್ [illegible]

[illegible] ದೇಶದಲ್ಲಿ [illegible] ತ್ರಿಕೆಗೆ ರವಾನಿಸ್ಪತ್ತಾಂತ ಬಂದಿದ್ದಿತ್ತಿದೆ.

Female courage.—ಹೆಂಗಸರ ಸಾಹಸದ ರೆಂಬದಕ್ಕೆ ನಿದರ್ಶನರೂಪವಾಗಿ ಬರ್ಮಾ ದೇಶದೊಳು ನಡೆದ ಒಂದು ವಿಷಯವನ್ನು ಬಂದರ್ ನೊಂದು ಪತ್ರಿಕೆಯು ಅಲ್ಲಿನ [illegible] ಎನೆಯುತ್ತಾನೇನೆಂದರೆ:—ಬರ್ಮಾ ದೇಶೀಯನೊಬ್ಬನು ಒಂದು ಮನೆಯಲ್ಲಿ ಪ್ರವೇಶಿಸಿ ಅಲ್ಲಿದ್ದ ಒಬ್ಬ ಮುದುಕನನ್ನು ಕತ್ತಿಯಿಂದ ಕಡಿಯಲು ಅವನು ಗಟ್ಟಿಯಾಗಿ [illegible] ಅದನ್ನು ಕೇಳಿ ಅವನ ಮಗಳು [illegible] ವರ್ಷಗಳ ವಯಸ್ಸುಳ್ಳ [illegible] ಓಡಿಬಂದು, ಸದರೀ ಘಾತುಕನ ಮೇಲೆ ಬಿದ್ದು ತನ್ನ ಕೈಯಲ್ಲಿದ್ದ [illegible] ಅವನನ್ನು ಹಿಡಿದು ತಂದೆಯ [illegible] ಅವನನ್ನು ಹಿಡಿದು [illegible] ಅಧಿಕಾರಿಗಳ ವಶ ಮಾಡಿದರು, ಎಂಬುದು.

Invention of a Clock.—ಈಚೆಗೆ ಹೊಸ ನಮೂನೆ ಗಡಿಯಾರ ಒಂದು ತಯಾರಾಗಿದ್ದು ಕುತೂಹಲವೇನೆಂದರೆ—ಇದು ಹೊಡೆಯುವುದಕ್ಕೆ ಬದಲಾಗಿ ಇದು [illegible] ಈಗ ಹೊಡೆದುದು [illegible] ಗಂಟೆಗಳಿಂದ ಹೇಳುತ್ತದೆ. ಇದು [illegible] ಗಡಿಯಾರದ ಮುಂಭಾಗದಲ್ಲಿ ಒಂದು [illegible] ದವಡೆ ಇದ್ದು, ಅದರ ತುಟಿಗಳು ಆಡುತ್ತ, ಕಣ್ಣುಗಳು [illegible] ದೊಡ್ಡ ಮನುಷ್ಯರ ಗುಡುಗುಟ್ಟಿ ಮಲಗುವವರನ್ನು [illegible] ಹೇಳುವುದು, ಈ ಹೊಸತರದ ಗಡಿಯಾರವನ್ನು ಕಲ್ಪನೆ ಮಾಡಿದವನು, [illegible] ನ್ನು ಮಾಡುತಲಿದ್ದಾನಂತೆ.

LOCAL AND PROVINCIAL NEWS.

ಸ್ಥಳದೇಶ ಮತ್ತು ಪ್ರಾಂತ್ಯದೇಶ ವರ್ತಮಾನಗಳು.

H. H. the Maharaja.—ಈ ವಾರದಲ್ಲಿ ಶ್ರೀಮನ್ಮಹಾರಾಜರವರ ಸವಾರಿಯು ಚಿನ್ನದ ಗಣಿಗಳ ಸಂದರ್ಶನಾರ್ಥ ಕೋಲಾರ ಪ್ರಾಂತಕ್ಕೆ [illegible] ಚಿತ್ತೈಸುವರೆಂದು ಕೇಳುತ್ತೇವೆ.

Durbar.—ಗತ ಶುಕ್ರವಾರದ ದಿನ ದಿವಾನರವರು ಕೌನ್ಸಿಲರ್ ಮೆಂಬರುಗಳೊಡನೆ [illegible] ಸಾಯಂಕಾಲ [illegible] ದರ್ಬಾರ್ ಮಾಡಿ ಅನೇಕಜನ ಅರ್ಜಿದಾರರ ಅರ್ಜಿಗಳನ್ನೆಲ್ಲ ಕೇಳಿ ಆಯಾ ವಿಷಯಕ್ಕೆ ತಕ್ಕ [illegible] ನುಗುಣವಾಗಿ ಪ್ರೈಸೆಲ್ಮಾಡಿದರು.

Appointment.—ಶಿವಮೊಗ್ಗ ಡಿಸ್ಟ್ರಿಕ್ಟಿನ ಅಗ್ರಿಕಲ್ಚರಲ್ ಇನ್ಸ್‌ಪೆಕ್ಟರ್ ಮ|| ರಾ|| ಕೆ. [illegible] ಯ್ಯಂಗಾರ್ಯರವರು ಕಳೆದ ಏಪ್ರಿಲ್ ಮಾಹೇ [illegible] ಕಾಲೇಜ್ [illegible] ಕೆಲಸಕ್ಕೆ [illegible] ಗಿ ನೇಮಕ ಮಾಡಲ್ಪಟ್ಟಿರುತ್ತಾರೆ.

Doctor Dobson.—ಶ್ರೀಮಿಸಸ್ ಪ್ರಾಸಿ ದ್ಯೂರ್ ಕೋಡ್ [illegible] ಅನುಸರಿಸಿ ಮೈಸೂರು ಜೆಯಿಲ್‌ಸೂಪರಿಂಟೆಂಡೆಂಟ್ ಡಾಕ್ಟರ್ ಎ. ಎಸ್. ಡಾಬ್ಸನ್‌ಯವರಿಗೆ ಅವರು ಜೆಯಿಲ್ ಸೂಪರಿಂಟೆಂಡೆಂಟ್ ಕೆಲಸವಂ ನೋಡುತಲಿರುವ ಪರ್ಯಂತರ ಜೆಯಿಲ್ ಸರಹದ್ದಿನೊಳಗೆ ಚಲಾಯಿಸತಕ್ಕ ಫಸ್ಟ್‌ಕ್ಲಾಸ್ ಮ್ಯಾಜಿಸ್ಟ್ರೇಟ್ ಅಧಿಕಾರಗಳು ಕೊಡಲ್ಪಟ್ಟಿರುತ್ತವೆ.

Railway line from Harihar to Birur

ದಕ್ಷಿಣ ಮಹಾರಾಷ್ಟ್ರ ರೈಲ್ವೇ ಕಂಪೆನಿಯ ಏಜಂಟ್ [illegible] ಬರುವ ನವೆಂಬರ್ ತಿಂಗಳಲ್ಲಿ ಹರಿಹರದಿಂದ ಬೀರೂರು ವರೆಗೆ

ಗಾಡಿಗಳು ಬಿಡಲಿಕ್ಕೆ ಠರಾಯಿಸತಕ್ಕ ಕ್ರಮವಾಗಿ ಶ್ರೀಮಂತ ಮಹಾರಾಜಾ ಸರ್ಕಾರಕ್ಕೆ ತಿಳಿಯುವ ಹಾಗೆ ಮಾಡಿರುತ್ತಾರೆಂದು ಕೇಳುತ್ತೇವೆ. ಈ ರಸ್ತೆಯೂ ಈ ತಯಾರಾಗಿ ಗಾಡಿಗಳು ಬಿಡಲ್ಪಡುವ ತನಕ ಜನಗಳಿಗೆ ಅನುಕೂಲ್ಯವು ಸಾಲದೆಂದೆಣಿಸುತ್ತೇವೆ.

Extension of furlough.—ಸನ್ ೧೮೮೮ನೇ ಇಸವಿ ಫೆಬ್ರವರಿ ೧೮ನೇ ಮಕ್ಕಾಂ ೧೯೮ನೇ ನಂಬರುಳ್ಳ ದಿವಾನರವರ ಇಷ್ತಿಹಾರ್ನಾಮೆಯ ಮೂಲಕ ಕಡೂರು ಡಿಸ್ಟ್ರಿಕ್ಟ್ ಡೆಪ್ಯುಟಿ ಕಮಿಷನರ್ ಮ॥ ಜೆ. ಎಫ್. ಮ್ಯಾಕಿಂಟೈರ್ಯವರಿಗೆ ಕೊಡಲ್ಪಟ್ಟಿದ್ದ ಫರ್ಲೋ ರಜಾ ೪೯ನೇ ಇಸವಿ ಜನವರಿ ಗುರ್ತು ತಾರೀಖಿನ ವರಿವಿಗೆ ಜಾಸ್ತೀ ಮಾಡಲ್ಪಟ್ಟಿರುವಂತೆ ಈ ವಾರದ ಮೈಸೂರು ಗೆಜೆಟಿನ ಮೂಲಕ ತಿಳಿಯಬರುತ್ತದೆ.

Investiture of special powers.—ಅರಶೀಕೆರೆ ತಾಲ್ಲೂಕು ಅಮಲ್ದಾರ್ ಮ॥ ಅಹಮದಲ್ಲೀಯವರಿಗೆ, ಕ್ರಿಮಿನಲ್ ಪ್ರೊಸೀಜರ್ ಕೋಡಿನ ೧೦ನೇ ಸೆಕ್ಷನ್ ಅನುಸರಿಸಿ ವಿಶೇಷ ಪರಿಭಾಷೆಯೊಡನೆ ಯೆರಡನೇ ಕ್ಲಾಸ್ ಮ್ಯಾಜಿಸ್ಟ್ರೇಟಿ ಅಧಿಕಾರಗಳೂ, ೧೮೬೯ನೇ ಇಸವಿ ೧೩ನೇ ನಂಬರ್ ಆಕ್ಟಿನ್ನನುಸರಿಸಿ ಮೊಕದ್ದಮೆಗಳನ್ನು ಫೈಸಲ್ಮಾಡಲಿಕ್ಕೆ ಅಧಿಕಾರ ಸಹ ಮತ್ತೊಂದು ಹುಕುಂ ಕೊಡಲ್ಪಡುವ ತನಕ ಕೊಡಲ್ಪಟ್ಟಿರುತ್ತವೆ.

A due consideration.—ಮೈಸೂರು ಡಿಸ್ಟ್ರಿಕ್ಟ್ ಸಾಬ್‌ ಸರ್ವಿಸ್ ಜಡ್ಜಿಯಾದ ಮೆ. ವಿ. ಎನ್. ನರಸಿಹ್ಮಯ್ಯಂಗಾರ್ರವರ ಜ್ಯೇಷ್ಠ ಕುಮಾರರನ್ನು ಮೈಸೂರು ಗವರ್ನಮೆಂಟಿನವರು ಮಾಹೆಯಾನಾ ೫೦ ರೂಪಾಯಿಗಳ ಸಂಬಳದ ಸಿರಿಸ್ತೆದಾರ್ ಪ್ರೊಬೇಷನರಾಗಿ ನೇಮಿಸಿರುತ್ತಾರೆ. ಇದಕ್ಕೆ ಮೊದಲು ಆ ಕೆಲಸದ ಮಾಹೆತ್ತಂತಾದ ಕೂಡಲೆ ಅಮಲ್ದಾರಿ ವಿಲೇವಾರಿ ಮಾಡುವ ವಾಗ್ದಾನ ಮಾಡಿರುತ್ತಾರೆಂತಲೂ, ಇವರು ಮೈಸೂರು ಡಿಸ್ಟ್ರಿಕ್ಟ್ ಡೆಪ್ಯುಟಿ ಕಮಿಷನರವರ ತಾಬೆಯೊಳಗಿರುತ ಕೆಲಸ ಕಲಿತುಕೊಳ್ಳುವದಕ್ಕೆ ವ್ಯವಸ್ಥೆಯಾಗಿದೆಯೆಂತಲೂ ತಿಳಿಯಲಾದೆವು. ಶಿವಮೊಗ್ಗಾ ಕಾಲೀಜಿನಲ್ಲಿ ಅಸಿಸ್ಟೆಂಟ್ ಮ್ಯಾಸ್ಟರಾಗಿದ್ದ ಕೆ. ಸುಬ್ಬರಾವ್ ಎಂಬವರು ಸಹ ಅಲ್ಲಿನ ಡೆಪ್ಯುಟಿ ಕಮಿಷನರ ಸಿಫಾರಸ್ಸಿನಮೇಲೆ ರೆವಿನ್ಯು ಪ್ರೊಬೇಷನರಾಗಿ ನೇಮಿಸಲ್ಪಟ್ಟಿರುವಂತೆ ಕೇಳುತ್ತೇವೆ.

Cancelling a previous order.—ಸಾಬಕ್ ದಿವಾನ್ ಮೆ. ರಂಗಾಚಾರ್ಯರವರು ತಮ್ಮ ಆಡಳಿತ ಕಾಲದಲ್ಲಿ ಕೊಟ್ಟ ಒಂದು ಬಿಟ್ಟುಹುಕುಮಿನ ದೆಸೆಯಿಂದ ಬಹುಕಾಲದಮೊದಲು ಅನೇಕರಿಗೆ ನಡೆಯುತಲಿದ್ದ ಗೋಗ್ರಾಸದ ನಗದು ಇನಾಂ ವಜಾವಾಗಿ ನಿಂತುಹೋಗಿದ್ದದರಮೇಲೆ ಅನೇಕರು ಅರ್ಜಿ ಬರೆದುಕೊಂಡರು. ಪರಂತು ಸದರೀ ಅಂಶವು ಇದುವರಿವಿಗೂ ಫೈಸಲಾಗದೆಯಿತ್ತು. ಈ ಪಟ್ಟಣದ ನಿವಾಸಿಯೊಬ್ಬರು ಕಳೆದ ಐದಾರು ವರುಷಗಳ ಕಾಲವಾಗಿ ಸದರೀ ವಿಷಯವ ಕುರಿತು ಪದೇಪದೆ ಬರೆದುಕೊಳ್ಳುತಲಿದ್ದ ಅರ್ಜಿಯ ಬಾಹುಳ್ಯವು ಅಧಿಕವಾದದರಿಂದ ಈಚೆಗೆ ದಿವಾನರವರು ಮೇಲೆಕಂಡ ಗೋಗ್ರಾಸ ಇನಾಂ ವಿಷಯದಲ್ಲಿ ತಮ್ಮ ಪೂರ್ವಿಕರು ಕೊಟ್ಟಿದ್ದ ಹುಕುಮನ್ನು ರದ್ದುಮಾಡಿ ಹಿಂದಿನಬಾಕೀ ಮೊಬಲಗಿನೊಡನೆ ಅವರವರ ಇನಾಂ ಮೊಬಲಗನ್ನು ಕೊಟ್ಟು ಅವರ ಜೀವಮಾನದ ತನಕ ನಡೆಸುತಬರತಕ್ಕದ್ದೆಂದು ಹುಕುಂ ಮಾಡಿರುತ್ತಾರೆಂದು ಕೇಳಲಾದೆವು. ರಿಕ್ತರ ವಿಷಯದಲ್ಲಿ ದಿವಾನರವರು ಮಾಡಿದ ಉಪಕಾರವು ಬಹಳ ಶ್ಲಾಘನೀಯತಕ್ಕದ್ದಾಗಿರುತ್ತದೆ.

Lectures.—ಗತ ಶನಿವಾರದದಿನ ಸಾಯಂಕಾಲ ಕಂಟೋನ್ಮೆಂಟಿನಲ್ಲಿರುವ ಮೆ. ಆರ್ಕಾಟ್ ನಾರಾಯಣಸಾಮಿ ಮೊದಲಿಯಾರ್ರವರ ಸ್ಕೂಲ್ ಸಾಧನದಲ್ಲಿ ಶ್ರೀಮಾನ್ ಪಂಡಿತ ಭಾಷ್ಯಾಚಾರ್ಯರವರು ಮತವಿಷಯಕವಾದ ಜ್ಞಾನವಾವಶ್ಯಕವೆಂಬದಂ ಕುರಿತು ಉಪನ್ಯಾಸಮಾಡಿದರು. ಅದೇವಿಷಯದಲ್ಲಿ ಆದಿನ ಸಾಯಂಕಾಲ ಇಲ್ಲಿನ ಬಾಲಿಕಾಪಾಠಶಾಲೆಯಲ್ಲಿ ಉಪನ್ಯಾಸ ಮಾಡುವರು. ಈ ಪಂಡಿತವರ್ಯರ ಪಾಂಡಿತ್ಯವನ್ನು ಪ್ರಾಯೇಣ ಇಲ್ಲಿನವರೆಲ್ಲರೂ ಚೆನ್ನಾಗಿ ಅರಿತಿರುವದರಿಂದ ಇವರ ಪ್ರಸಂಗವೆಲ್ಲರಿಗೂ ಬಹಳ ಆಕರ್ಷಕವಾಗಿರುತಲಿದೆ. ನಿನ್ನೆಯದಿನ ಸಾಯಂಕಾಲಲಂಡರ್ ಮಿಷನ್ ಶಿಕ್ಷಾಶಾಲೆನಲ್ಲಿ ರೆವರೆಂಡ್ ಮ॥ ವೇಸ್ ಯವರು "ಜವಾಬ್ದಾರಿ"ಯಂಕುರಿತು ಉಪನ್ಯಾಸಮಾಡಿದರು. ಇದು ಕೇಳುವ ಉದ್ದೇಶದೊಡನೆ ಅನೇಕರು ಅಲ್ಲಿಗೆ ಹೋಗಿದ್ದರೆಂದು ತಿಳಿಯಲಾದೆವು.

Regulations of 1888.—ಇದರಡಿಕಂಡ ಎರಡು ನಿಬಂಧನೆಗಳು ೧೮೮೮ನೇಇಸವಿ ಆಗಸ್ಟು ೬ನೇ ತಾರೀಖಿನಲ್ಲಿ ಘನತನ್ನೆತ್ತಿದ ಶ್ರೀಮನ್ಮಹಾರಾಜರವರ ಮಂಜೂರಾತಿಯಂ ಪಡೆದು ಸಕಲ ಜನಗಳ ತಿಳುವಳಿಕೆಯಬಗ್ಯೆ ಗತ ಶನಿವಾರದ ಮೈಸೂರು ಗೆಜಟಿನ ಮೂರನೆಯಭಾಗದಲ್ಲಿ ಘೋಷಿಸಲಾಗಿರುತ್ತವೆ. ಅವುಗಳ್ಯಾವವೆಂದರೆ, ೧೮೮೮ನೇ ಇಸವಿಯ ೧ನೇ ನಂಬರ್ ರೆಗ್ಯುಲೇಷನ್, ೧೮೬೬ನೇಇಸವಿ ೧೦ನೇ ನಂಬರ್ ಆಕ್ಟಿನ ಕ್ರಿಮಿನಲ್ ಪ್ರೊಸಿಜ್ಯೂರ್ ಕೋಡನ್ನು ಮೈಸೂರು ಸೀಮೆಯಲ್ಲಿ ಜಾರಿಯಲ್ಲಿ ತಂದ ೧೮೮೬ನೇ ಇಸವಿ ೧ನೇ ನಂಬರ್ ರಿಗ್ಯುಲೇಷನನ್ನು ತಿದ್ದುಪಾಟು ಮಾಡತಕ್ಕದ್ದಾಗಿರುತ್ತದೆ. ೧೮೮೮ನೇ ಇಸವಿಯ ೨ನೇ ನಂಬರ್ ರಿಗ್ಯುಲೇಷನ್ ದಾಹಕಶಕ್ತಿಯುಳ್ಳ ಪದಾರ್ಥಗಳನ್ನು ತಯಾರ್ಮಾಡುವದು, ಸ್ವಾಧೀನದೊಳಿಟ್ಟುಕೊಂಡಿರುವದು, ಅವು ಉಪಯೋಗಿಸುವದು, ಆಮದ್ ರಫ್ತು ಮಾಡುವದು ಇವು ವ್ಯವಸ್ಥೆಪಡಿಸುವಬಗ್ಯೆ ಏರ್ಪಟ್ಟ ನಿಬಂಧನೆಯಾಗಿರುತ್ತದೆ. ಈ ಯೆರಡು ನಿಬಂಧನೆಗಳೂ ಗವರ್ನರ್ ಜನರಲ್ಲವರ ನ್ಯಾಯವಿಧಾಯಕ ಸಭೆಯವರಿಂದ ಪಾಸಿಯಲ್ಲಿ ತೆಗೆಲ್ಪಟ್ಟ ಇಂಪೀರಿಯಲ್ ಆಕ್ಟಿನ ನಕಲಾಗಿರುತ್ತವೆಯೇ ಹೊರ್ತು ಸ್ವತಂತ್ರವಾದ ಭಾಗಗಳ್ಯಾವದೂ ನಮ್ಮದೃಷ್ಟಿಗೆ ಬೀಳಲಿಲ್ಲವು.

The weather.—ಕಳೆದವಾರದಲ್ಲಿ ಆಗಿಂದಾಗ್ಯೆ ಅಲ್ಪಸ್ವಲ್ಪ ವರ್ಷ ಬೀಳುತಲಿತ್ತು. ಇದರಿಂದ ಕೆರೆ ಕುಂಟೆಗಳಿಗೆ ನೀರು ಬಂದಂತೆ ಕಾಣಲಿಲ್ಲವು. ಈ ಪಟ್ಟಣದ ನಗರ್ತರ ಪೇಟೆಯ ಮೊದಲು ಹಲಸೂರು ಬಾಗಿಲ ವರಿವಿಗೆ ಉತ್ತರಪಾರ್ಶ್ವದಲ್ಲಿರುವ ಮನೆಗಳ ಭಾವಿಗಳಲ್ಲಿ ನೀರಿಲ್ಲದೆ ಜನಗಳು ಬಹಳ ಬೇಚಾಡುತಲಿದಾರೆ. ಮ್ಯುನಿಸಿಪಾಲಿಟಿಯವರು ಪ್ರಜೆಗಳಿಂದ ವಸೂಲ್ಮಾಡುವ ದುಡ್ಡು ಉಪವನ್ನದವರ ನೇತ್ರಾನಂದಕ್ಕಾಗಿಯೂ ಸ್ಕೂಲ್ ಹುಡುಗರ ಆಟಕ್ಕಾಗಿಯೂ ಮಾಡಲ್ಪಡುವ ತೋಟಗಳು ಮೊದಲಾದ ಕೆಲಸಕ್ಕೆ ವ್ಯಯವಾಗುತ್ತದೆಯೇಹೊರತು ಸಾಮಾನ್ಯವಾಗಿ ಪ್ರಜೆಗಳ ಅನುಕೂಲ್ಯದಬಗ್ಯೆ ಒಂದು ಭಾಗವಾದರು ವ್ಯಯವಾಗುತಿಲ್ಲವೆಂದು ಆ ಪ್ರಾಂತದ ಜನಗಳು ಮೊರೆ ಇಡುತಲಿದಾರೆ. ಸದರೀ ಪೇಟೆಯ ಪರ್ತಕರವೈಕಿ ಪ್ರಬಲರಾದವರು ಇಬ್ಬರು ಮೂವರು ಮ್ಯುನಿಸಿಪಲ್ ಕಮಿಷನರ್‌ಗಳಾಗಿದ್ದು ತಮ್ಮ ಪೇಟೆಯಜನಗಳ ಸುಖಕ್ಕೆ ಅವರು ನಿಗೇಕೊಡದೆಯಿರುವದು ಬಹಳ ಆಶ್ಚರ್ಯವಾಗಿದೆ. ಮುಂದೆ ಆಗುವ ಕಮಿಷನರ್‌ಗಳ ಚುನಾವಣೆಯ ಕಾಲದಲ್ಲಿ ಸದರೀ ಕಮಿಷನರ್‌ಗಳನ್ನು ಮರಳಿ ಚುನಾಯಿಸುವ ವಿಷಯದಲ್ಲಿ ಆಪ್ರಾಂತದ ಜನರು ಬಹಳ ಜಾಗರೂಕತೆಯುಳ್ಳವರಾಗಿರಬೇಕಾಗಿರುತ್ತದೆ.

NEWS LETTERS.
ವೃತ್ತಾಂತಪತ್ರ.

ಸಾಗರ, ತಾ॥೧೦—೮—೮೮—ನಮ್ಮ ಅಮಲ್ದಾರ್ ಮ॥ ವೆಂಕಟರಾಯರವರಮೇಲೆ ಆಗಿದ್ದ ರುಷುವತ್ ಫಿರ್ಯಾದ್ ಪರ್ಯಾಪ್ತಾಗಿ ಮೊಕದ್ದಮೆ ಸಾಬೀತಾಗದೆ ಡಿಸ್ಮಿಸ್ ಆಯಿತೆಂದು ಕೇಳಿ ಬಹಳ ಸಂತೋಷವಾಯಿತು. ಆದರೆ ಈ ದೊಡ್ಡಮನುಷ್ಯರು ಪುನಃ ನೌಕರಿಯಮೇಲೆ ಬರಲಾರರೆಂದು ಜನವಾರ್ತೆ ಇದೆ. ದೇವರಕೃಪೆ ಹ್ಯಾಗಿರುವದೊ ನೋಡಬೇಕು. ಮಳೆಯು ಅದ್ಯಾಪಿ ವಿರಮಿಸಲಿಲ್ಲವು, ಅಧಿಕೆಗೆ ಕೊಳೆರೋಗವು ಮಟ್ಟಾಗಿದೆ, ಮಳೆಯು ದೆಸೆಯಿಂದ ರೈತರು ವ್ಯವಸಾಯದ ಕೆಲಸವನ್ನು ಚೆನ್ನಾಗಿ ಮಾಡದಿದ್ದಾಗ್ಯೂ ಕೋರ್ಟಿನಲ್ಲಿ ಸಾಕ್ಷಿ ಕೊಡುವದಕ್ಕಾಗಿ ಸುಮಾರು ೫೦೦ ಜನಗಳವರಿವಿಗೂ ಶಿವಮೊಗ್ಗಾ ಯಾತ್ರೆ ಮಾಡಬೇಕಾಯಿತು. ಫಿರ್ಯಾದಿಗಳಿಗೂ ಸಾಕ್ಷಿಗಳಿಗೂ ಗುಣವಿಲ್ಲವಾದಾಗ್ಯೂ ಅಪರಾಧಿಗಳಿಗೂ ಹೊಟೇಲಿನವರಿಗೂ ಆದಾಯವಾಯಿತು.

ಕನರಾಜಿಲ್ಲೆಯಲ್ಲಿ ಮಳೆಯು ವಿಶೇಷವಾದ್ದರಿಂದ ಪೈರು ಬಹಳಮಟ್ಟಿಗೆ ನಷ್ಟವಾಗಿ ಅಲ್ಲಿನ ರೈತರು ತಂಡತಂಡವಾಗಿ ಇಲ್ಲಿಗೆ ಕೂಲೀಕೆಲಸಕ್ಕೆ ಬರುತಲಿದಾರೆ. ಶಿವಿಶೆಟ್ಟಿಯರು ಬಹುಕಾಲ ಒಂದೇ ಜಾಗಾದಿನಲ್ಲಿದ್ದರೆ ನ್ಯಾಯ ಲೋಪವಾಗುವದೆಂತ ಜನರು ಗೊಣಗುಟ್ಟುತಲಿದಾರೆ. ಈ ವಾರ್ತೆಯು ಯಾಕೆ ಹುಟ್ಟಿತೆನ್ನುವದು ವ್ಯಕ್ತವಾಗುವದಿಲ್ಲವು. ಜೋಗ ನೋಡಲಪೇಕ್ಷೆಯುಳ್ಳವರಿಗೆ ಇದು ಒಳ್ಳೇ ಸಮಯವಾಗಿರುವದು, ಶರಾವತಿ ನದಿಯು ಪೂರ್ಣವಾಗಿ ಪ್ರವಹಿಸುತ ೯೫೦ ಅಡಿ ಘಾತವುಳ್ಳ ಗುಂಡಿಯಲ್ಲಿ ಪ್ರವೇಶಿಸುವಕಾರಣ ನೀರಿನ ಜೋರಿಗೆ ಅಕ್ಕಾ ಬಾಜುದಲ್ಲಿನ ಗುಡ್ಡಗಳೆಲ್ಲ ನಡಗುವಂತಿರುವವು. ನೀರಿನ ಕಣದಿಂದಅಂತರಿಕ್ಷವು ಮುಸುಕಿಕೊಂಡಿರುವವು.

EXTRACTS.

ಈಗ್ಯೆ ಕೆಲವುತಿಂಗಳ ಮೊದಲು ದೇಶಸಂಚಾರ ಮಾಡುತ ಅಲ್ಲಿಯಲ್ಲಿ ದೃಷ್ಟಿಗೆ ವಿಷಯಗಳಾದ ವಿಶೇಷಾಂಶಗಳನ್ನೆಲ್ಲ ಪ್ರತಿವಾರದಲ್ಲಿಯೂ ತಪ್ಪದೆ ತಿಳಿಯಪಡಿಸುತಲಿರುವ ಮುಂಬೈ ಹಸ್ಯಕ್ ಸುಬೋಧ ಪತ್ರಿಕೆಯ ಬಾತಮಿದಾರನು ಮಂಗಳೂರು ಪ್ರಾಂತದಲ್ಲಿ ಸಂಚಾರಮಾಡುತ ಮಾರ್ಗವಶಾತ್ ಪ್ರಸಿದ್ಧವಾದ ಉಡುಪಿ ಕ್ಷೇತ್ರಕ್ಕೆ ಹೋಗಿದ್ದಾಗ ಅಲ್ಲಿ ತನಗೆ ತಿಳಿಯಬಂದ ಕೆಲವು ಅಂಶಗಳನ್ನು ಕುರಿತು ಸದರೀ ಪತ್ರಿಕೆಗೆ ಬರೆದಿರುತ್ತಾನೇನೆಂದರೆ:—"ಕಳೆದ ತಿಂಗಳ ೨೫ನೇ ತಾರೀಖು ದಿನ ಪ್ರಯಾಣವಾಗಿ ಬ್ರಹ್ಮಾವರದ ಮಾರ್ಗವಾಗಿ ಉಡುಪಿ ಕ್ಷೇತ್ರಕ್ಕೆ ಬಂದು ಸೇರಿದೆನು ಈ ಪುರದಲ್ಲಿ ಪ್ರಸಿದ್ಧವಾದ ಒಂದು ಕೃಷ್ಣದೇವಸ್ಥಾನವಿದೆ. ಇದು ಒಂದು ಸಣ್ಣ ಸರೋವರದ ದಡದಮೇಲೆ ಕಟ್ಟಲ್ಪಟ್ಟಿರುತ್ತದೆ. ಈ ದೇವಸ್ಥಾನವು ಬಹಳ ರಮಣೀಯವಾಗಿರುತ್ತದೆಯಲ್ಲದೆ ಇಲ್ಲಿ ದೇವರಆರಾಧನೆಯು ಮಧ್ವಸನ್ಯಾಸಿಗಳಿಂದ ನಡೆಸಲ್ಪಡುತ್ತಿದೆ. ದೇವರ ಸೇವಾರ್ಥ ಇಲ್ಲಿ ೮ ಮಠಗಳೇರ್ಪಟ್ಟಿವೆ. ೨ ವರುಷಕ್ಕೊಂದಾವರ್ತಿ ಸರ್ದಿಪ್ರಕಾರ ಒಂದೊಂದು ಮಠದವರು ದೇವರ ಪೂಜೆಯಂ ಮಾಡುತಲಿರುತ್ತಾರೆ. ಎರಡುವರುಷಕ್ಕೊಂದಾವರ್ತಿ ಮಕರ ಸಂಕ್ರಮಣ ಕಾಲದಲ್ಲಿ ಈ ಸನ್ಯಾಸಿಗಳು ಸರ್ದಿಪ್ರಕಾರ ಬದಲಾಯಿಸಿಕೊಳ್ಳುವರೆಂತಲೂ, ಆ ಕಾಲದಲ್ಲಿ ದೇವರಿಗೆ ಪ್ರಬಲ ಉತ್ಸವನಡೆಯುವದೆಂತಲೂ ತಿಳಿಯಬರುತ್ತದೆ. ಇಲ್ಲಿನ ಅನ್ನಛತ್ರವು ಅನೇಕರಿಗೆ ಜೀವನಾಧಾರವಾಗಿ ಏರ್ಪಟ್ಟಿದೆ. ಸ್ವಾಮಿಗಳಿಗೆ ಭಿಕ್ಷೆನಡೆಯುವ ಸ್ಥಳಗಳಲ್ಲಿ ಸಹ ಮೃಷ್ಟಾನ್ನಭೋಜನ ದೊರೆಯುತ್ತದೆ. ಅನಾಯಾಸವಾಗಿ ಕಾಲಕ್ಷೇಪವಾಗುವದರಿಂದ ಬಹುಮಂದಿ ನಿರ್ಭರರಾಗಿ ಲೇಶವೂ ಚಿಂತೆಯಿಲ್ಲದೆ ಸಂತತಿ ಮಕ್ಕಳೊಡನೆ ಉದರಭರಣ ಮಾಡಿಕೊಂಡಿರುತ್ತಾರೆ. ಲಜ್ಜೆಎಂಬದು ತೊರೆದಮೇಲೆ ಇದುಯಾರಿಗೆ ತಾನೆ ಸಾಧ್ಯವಾಗಲಾರದು ? ಇಲ್ಲಿಸಾಧಾರಣವಾಗಿ ಜನರೆಲ್ಲರೂ ತುಳುವಭಾಷೆಯನ್ನೇ ಮಾತನಾಡುತ್ತಾರೆ. ಇದೊಂದು ಶುದ್ಧ ಅಪಭ್ರಂಶ ಭಾಷೆಯಾಗಿ ಕಂಡುಬರುತ್ತದೆ. ಶೂದ್ರರಿಗೆ ವಿನಾ ಮಿಕ್ಕವರಿಗೆ ಯಥೋಚಿತ ಕನ್ನಡಭಾಷೆ ಬರುವದು. ಸಮುದ್ರಕ್ಕೂ ಊರಿಗೂ ಸುಮಾರ್ ೩ ಮೈಲುಗಳ ಫಾಸಲೆ ಇರುತ್ತದೆ. ಉಡುಪಿ ಬಂದರನ್ನು ಇಲ್ಲಿನವರು ಮಲ್ಪೆಯೆಂದು ಕರೆಯುತ್ತಾರೆ. ಇಲ್ಲಿ ಶ್ರೀಕೃಷ್ಣದೇವರಿಗೆ ಪ್ರತಿನಿತ್ಯ ಒಂದೊಂದು ಬಗೆ ಅಲಂಕಾರಗಳಂ ಮಾಡುತ್ತಾರೆ. ನೋಡಲಿಕ್ಕೆ ಅದು ಬಹಳ ಸಂತೋಷಕರವಾಗಿರುತ್ತದೆ. ಗುಡಿಯ ಮಹಾದ್ವಾರವು ಉತ್ತರಾಭಿಮುಖವಾಗಿದ್ದರೂ ದೇವರು ಪಶ್ಚಿಮಾಭಿಮುಖವಾಗಿ ಬಿಜಮಾಡಿರುತ್ತಾನೆ. ಪಶ್ಚಿಮದಿಂದ ದರ್ಶನಮಾಡಲಿಕ್ಕೆ ಬಿಂಬಕ್ಕೆ ಸರಿಯಾಗಿ ಒಂದು ಕಿಟಕಿ ಇಡಲ್ಪಟ್ಟಿರುತ್ತದೆ. ಇದರ ಕಾರಣವಂ ವಿಚಾರಿಸಲಾಗಿ ಇಲ್ಲಿನವರು ತಿಳಿಸುವದೇನೆಂದರೆ:—ಕನಕದಾಸರಿಗೆ ಪ್ರತ್ಯಕ್ಷವಾದ ಕಾಲದಲ್ಲಿ ಈ ಮುಖವಾಗಿ ತಿರಿಗಿದಂತೆಯೂ ಆಕಾಲದಮೊದಲು ಹಾಗೆಯೇ ಇರುವಂತೆಯೂ ಸ್ಥಳ ಮಹಾತ್ಮದಿಂ ವ್ಯಕ್ತವಾಗುತ್ತಿದೆಂಬದು. ಈದೇವಸ್ಥಾನವು ಚತುರಶ್ರಾಕಾರವುಳ್ಳದ್ದಾಗಿರುತ್ತದೆ. ಇಲ್ಲಿರುವ ೮ ಮಠಗಳಲ್ಲಿಯೂ ಎಂಟು ಜನ ಸನ್ಯಾಸಿಗಳಿದಾರೆ. ಇವರ ವಿಷಯವಂ ಕುರಿತು ನಾನಿಲ್ಲಿ ಜನರ ಮೂಲಕ ಏನೇನು ಕೇಳಲಾದೆನೋ ಅವುಗಳನ್ನು ಲಿಖಿತ ಮೂಲಕ ತಿಳಿಸಲಿಕ್ಕೆ ನನ್ನ ಜೀವ ಅದುರುತ್ತದೆಯಾಗಿ ವ್ಯರ್ಥವಾದ ಪಾಪಕ್ಕೊಳಗಾಗಲಿಕ್ಕೆ ನನಿಗೆ ಇಷ್ಟವಿಲ್ಲವು. "ಕಾಷಾಯದಂಡಮಾತ್ರೇಣ ಯತಿಃ ಪೂಜ್ಯೋನಸಂಶಯಃ" ಎಂದಿರುವದರಿಂದ ಅವರ ದಂಡ ಕಾವಿ ಶಾಟಿಗಳಿಗೆ ನಮಸ್ಕರಿಸಿ ತಾಪಸ್ಮಾತ್ರಕ್ಕೆ ಅವರ ಪ್ರಸ್ತಾಪವಂ ಬಿಡುವದು ಗೌರವವಾಗಿರುತದೆ. ಈಊರಲ್ಲಿ ತಾಲ್ಲೂಕು ಕಚ್ಚೇರಿ ಮುನ್ಸಫ್ ಕೋರ್ಟುಗಳಿರುತ್ತವೆ. ಯಾರಲ್ಲಿ ಕೈಯೊಳು ನೋಡಿದಾಗ್ಯೂ ರೇಷ್ಮೇ ವಸ್ತ್ರ ಇಲ್ಲದೆಇಲ್ಲವು. ಸರ್ಕಾರಿ ನೌಕರರು ಕಚ್ಚೇರಿ ಕಾಲದಲ್ಲಿ ವಿನಾ ಅನ್ಯರ್ಯಾರೂ ತಲೆಗೆ ರುಮಾಲ್ ಹಾಕಿಕೊಳ್ಳುವದಿಲ್ಲವು. ಯಾರನ್ನು ನೋಡಿದಾಗ್ಯೂ ಊರ್ಧ್ವಪುಂಡ್ರ ಶ್ರೀ ಮುದ್ರೆಗಳಿಂದ ಸಾಕ್ಷಾತ್ ವಿಷ್ಣುದೂತರಿಂತಿರುತ್ತಾರೆ. ಪರಂತು ಇಲ್ಲಿನವರಲ್ಲಿರುವಷ್ಟು ವ್ಯಭಿಚಾರವು ಅನ್ಯತ್ರ ಎಲ್ಲಿಯೂ ಇರಲಾರದೆಂದೆಣಿಸುತ್ತೇನೆ. ಈ ಪ್ರಾಂತದವರು ಸಾಮಾನ್ಯವಾಗಿ ಸ್ತ್ರೀ ಪುರುಷರೆಲ್ಲರೂ ವ್ಯಭಿಚಾರವೆಂಬದನ್ನು ಒಂದು ಬಗೆ ಭೂಷಣದಂತೆ ಭಾವಿಸಿರುವಹಾಗೆ ಕಂಡುಬರುತ್ತದೆ. ಇದು ದುಷ್ಕೃತ್ಯವೆಂಬ ಭಾವನೆ ಅವರಿಗೆ ಉಂಟಾಗಿರುವಂತೆ ನನಿಗೆ ತೋರಲಿಲ್ಲವು. ಇಲ್ಲಿನ ಸರ್ಕಾರ್ ಉದ್ಯೋಗಸ್ಥರೆಲ್ಲರೂ ಕ್ರಿಶ್ಚಿಯನ್ನರಾಗಿಯೂ, ಸಾರಸ್ವತರಾಗಿಯೂ ಇರುತ್ತಾರೆ. ಈ ಸಾರಸ್ವತರಿಗೆ ಆಚಾರವ್ಯವಹಾರಗಳೆಂಬವು ಕುಪ್ಪಂಗ ಸಾಲದು. ಬ್ರಾಹ್ಮಣ ಅಧಿಕಾರಿಯಾದವನೊಬ್ಬನೂ ದೃಷ್ಟಿಗೆ ಬೀಳಲಿಲ್ಲವು. ರಸ್ತೆಗಳು ಚೆನ್ನಾಗಿಲ್ಲವು. ದೊಡ್ಡಮನೆ ಒಂದಾದರೂ ಇಲ್ಲವು. ಎಲ್ಲ ಚಿಕ್ಕವಾಗಿಯೂ ಗೊಂದಿಯಾಗಿಯೂ ನೋಡುವದಕ್ಕೆ ಅಸಹ್ಯಕರವಾಗಿಯೂ ಇರುತ್ತವೆ. ಮ್ಯುನಿಸಿಪಲ್ ಆಡಳಿತವೇನೂ ವಿಶೇಷ ಪ್ರಶಂಸಾರ್ಹವಾಗಿಲ್ಲವು. ಮುಖ್ಯವಾಗಿ ಈ ಕ್ಷೇತ್ರದ ವಿಷಯದಲ್ಲುಂಟಾಗಿರುವ ಖ್ಯಾತಿಯಂ ಪರಸ್ಥಳಗಳಲ್ಲಿರುವವರು ಕೇಳಿದಾಗ ಅವರಿಗೆ ಅಲ್ಲಿ ಉಂಟಾಗಬಹುದಾದಷ್ಟು ಗೌರವವು ಇಲ್ಲಿಗೆ ಬಂದು ನೋಡಿದ ಬಳಿಕ ಇರುವದೆಂಬ ಅಂಶ ಸಂದೇಹಿಸತಕ್ಕದ್ದಾಗಿಗೆ.

ಶ್ರೀಮದ್ರಾಮಚಂದ್ರಾಪುರದ ಸ್ವಾಮಿಗಳವರು ಕನ್ಯಾವಿಕ್ರಯವು ಶಾಸ್ತ್ರನಿಷಿದ್ಧವೆಂದು ಜನರಿಗೆ ನಿರೂಪಿಸುವಬಗ್ಯೆ ಅನೇಕ ಶ್ರುತಿವಚನಗಳನ್ನುದಹರಿಸಿ ಸಿದ್ಧಾಂತ ಮಾಡಿ ಈಚೆಗೆ ಒಂದು ಪತ್ರಿಕೆಯಂ ಪ್ರಕಟಿಸಿರುವಂತೆ ತಿಳಿಯಬರುತ್ತದೆ. ಇದು ತತ್ಕಾಲದಲ್ಲಿ ಕೇವಲ ಆವಶ್ಯಕವಾದ ವಿಷಯವಾಗಿರುತ್ತದೆ. ಪರಂತು ಸದರೀ ಪ್ರಮಾಣ ವಚನಗಳನ್ನು ಶುದ್ಧ ಸಂಸ್ಕೃತ ಭಾಷೆಯಲ್ಲಿ ಬರೆದಿರುವದಕ್ಕಿಂತಲೂ ಅವುಗಳ ಅರ್ಥವು ಸಕಲಜನರಿಗೂ ತಿಳಿಯುವಂತೆ ಭಾವಾರ್ಥದೊಡನೆ ಕನ್ನಡದಲ್ಲಿ ಪ್ರಕಟಿಸಿರುವರಾದರೆ ಅನೇಕರಿಗೆ ಪ್ರಯೋಜನಕರವಾಗಿರುವದೆಂದೆಣಿಸುತ್ತೇವೆ. ಮಠಾಧಿಪತಿಗಳು ಲೋಕಹಿತಗಳಾದ ವಿಷಯಗಳಲ್ಲಿ ಸ್ವತಃ ಪ್ರವರ್ತಿಸುವರಾದರೆ ಜನರಿಗೆ ಅದರಿಂದ ಬಹಳ ಅನುಕೂಲವಾಗುವದು.

BANGALORE :—Printed and published at the KARNATIC PRESS, No. 44, Hospital Road, Petta.

ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA.

ಪ್ರತಿ ಸೋಮವಾರ ಪ್ರಾತಃಕಾಲದಲ್ಲಿ ಪ್ರಕಟಿಸಲ್ಪಡುವದು.

Published every Monday Morning.

ಪ್ರಕಾಮವಿವಿಧಪ್ರವೃತ್ತ್ಯುಪಗವಾರ್ತಾ ಕರ್ಣಾಟಕಪ್ರಕಾಶನಪರಾಭಿದಾಪ್ರತ್ಯಹಸಾಹಿತೀಶೋಭಿತಾ । ಮೃಗಾಂಕಹಿತವಾಸರೇನಿಹಿತಮುದ್ರಣಾಸಜ್ಜ್ಯನೈರ್ನ್ವಿ ಕಾಸುಪರಿಪೋಷಿತಾದಿಶತಿಮಾನಸಂಸುಮುದಂ

Vol. XV] BANGALORE—MONDAY, AUGUST 20, 1888. [No. 37.

ಸಂಪುಟ ೧೫] ಬೆಂಗಳೂರು:—ಸನ್ ೧೮೮೮ನೇ ಇಸವಿ ಆಗಸ್ಟು ೨೦ನೇ ತಾರೀಖು ಸೋಮವಾರ. [ಸಂಚಿಕೆ ೩೭.

ಕರ್ಣಾಟಕ ಪ್ರಕಾಶಿಕಾ

ಪತ್ರಿಕೆಯ ಚಂದಾ ದರಗಳು,
೧೮೮೮ನೇ ಇಸವಿ ಜನವರಿಯಿಂದಾರಭ್ಯ
ಕಡಮೆಮಾಡಲ್ಪಟ್ಟಿರುತ್ತದೆ.

ಈ ಪತ್ರಿಕೆಯ ಚಂದಾದಾರರಪೈಕಿ ಅನೇಕರ ಅಪೇಕ್ಷೆಯನ್ನು ನೆರವೇರಿಸುವ ಉದ್ದೇಶದೊಡನೆಯೂ, ಪರಿಮಿತವಾದ ಆಯವುಳ್ಳವರಿಗೆಲ್ಲ ಈ ಪತ್ರಿಕೆಯು ಸುಲಭವಾಗಿ ಲಭಿಸುತ್ತಿರಬೇಕೆಂಬ ಅಭಿಪ್ರಾಯದೊಡನೆಯೂ ಇದರ ಚಂದಾದರವನ್ನು ಕೆಳಗೆ ಕಂಡಂತೆ ಕಡಮೆಮಾಡಿರುತ್ತೇವೆ:—

ಇಂಗ್ಲಿಷ್ ಮತ್ತು ಕನ್ನಡಭಾಗಗಳಿಗೆ.

	ಸ್ಥಳದವರಿಗೆ	ಪರಸ್ಥಳದವರಿಗೆ.
12 ತಿಂಗಳಿಗೆ	8—0—0	9—0—0
6 „	4—0—0	4—8—0
3 „	2—8—0	2—8—0

ಇಂಗ್ಲಿಷ್ ಅಥವಾ ಕನ್ನಡಭಾಗಗಳಿಗೆ.

	ಸ್ಥಳದವರಿಗೆ	ಪರಸ್ಥಳದವರಿಗೆ
12 ತಿಂಗಳಿಗೆ	4—0—0	5—0—0
6 „	2—0—0	2—8—0
3 „	1—4—0	1—8—0

ಷರಾ—ಅಂಬೆ ಮುನ್ಸೀಗಳು, ಸ್ಕೂಲ್ [illegible] ಮಾಸ್ಟರ್‌ಗಳು, [illegible] ವಿದ್ಯಾರ್ಥಿಗಳು, ಇವರಿಗೆಲ್ಲ ಈ ಪತ್ರಿಕೆಯು [illegible] ಚಂದಾದವರಿಗೆ ಕೊಡಲ್ಪಡುವದು. [illegible] ಅಂಗೀಕರಿಸಲ್ಪಡುವದು.

[illegible]

ಪ್ರಕಟನೆಯ ರಿವಾಜು.

ಮೊದಲನೆಯದಕ್ಕೆ ಪಂಕ್ತಿ ಒಂದಕ್ಕೆ ೦—೨—೦
ಎರಡನೆಯದಕ್ಕೆ ಪಂಕ್ತಿ ಒಂದಕ್ಕೆ ೦—೧—೦

ಷರಾ—[illegible]

"IT RECOMENDS ITSELF"

ALL WHO SUFFER FIND SURE RELIEF.

LITTLE'S

ORIENTAL BALM

THE MOST EFFECTUAL MODERN REMEDY FOR PAIN.

ಲಿಟಲ್ ರವರಿಂದ ತಯಾರಾಗಲ್ಪಟ್ಟ "ಓರಿಯೆಂಟಲ್ ಬಾಮ್" ಎಂಬ [illegible]

ಪರೀಕ್ಷಕರ ಅಭಿಪ್ರಾಯವು.

[illegible] (C. R. Tichborne, L. L. D., F. C. S., M. R. I. A.) [illegible]

ಇದರ ಕ್ರಯ—ಸೀಸೆ ಒಂದಕ್ಕೆ ೧ ರೂಪಾಯಿ.

[illegible]

AGENTS.— Messrs. J. West, Chemist, &c., Bangalore.
Cattain & Co. Chemists, Bangalore.
Riggs & Co., Chemists, Bangalore; and of
Mahomed Yousoff and Sons, The Cash Bazar, Bangalore
A. C. Berryman & Co.,
20 Sambodoss Street Madras.

NOTICE.

VAIDYASARA SANGRAHA

A TREATISE ON THE PRINCIPLES OF

HINDU MEDICINE.

Price including Postage Rs 5 6 0

ವೈದ್ಯಸಾರ ಸಂಗ್ರಹ.

ಈಗ್ರಂಥಾಪೇಕ್ಷೆಯುಳ್ಳವರು ಮೊಬಲಗಿನೊಡನೆ ಈ ಕೆಳಗೆ ರುಜುಮಾಡಿರತಕ್ಕವರ ಹೆಸರಿಗೆ ಬರೆದುಕೊಂಡರೆ ಪುಸ್ತಕ ಕೂಡಲೇ ಕಳುಹಿಸಲ್ಪಡುವದು. ಮೊಬಲಗು ಇಲ್ಲದ ಪತ್ರಗಳಿಗೆ ಸುತರಾಂ ಸಿಗೇಕೊಡಲ್ಪಡಲಾರದು.

ಇದರಕ್ರಯ ... ...ರೂ॥ ೫—೦—೦
ಪ್ಯಾಕಿಂಗ್ ಮತ್ತು ಅಂಚೆಕೂಲಿ, ೦—೬—೦

ಟಿ. ಬಿ. ವೆಂಕಟಾಚಾರ್,
ಆಸ್ಪತ್ರೆರೋಡ್ ಬೆಂಗಳೂರು.

ವಿಶೇಷ ವರ್ತಮಾನ



[illegible]

ಪೂನೆ ಚಿತ್ರಶಾಲೆಯ ಮ್ಯಾನೇಜರ್.

Bangalore City Municipality.

ಬೆಂಗಳೂರುಸಿಟಿ ಮ್ಯುನಿಸಿಪಾಲಿಟಿ.

ಸನ್ ೧೮೮೮ನೇ ಇಸವಿ ಆಗಸ್ಟು ೩೦ನೇ ತಾರೀಖು ಗುರುವಾರ ಪ್ರಾತಃಕಾಲ ೭½ ಘಂಟೆಗೆ ಸಿಟಿ ಮ್ಯುನಿಸಿಪಲ್ ಕಮಿಷನರುಗಳು ತಮ್ಮ ಆಫೀಸ್ ಕಟ್ಟಡದೊಳು ಸಭೆ ಸೇರುವಾಗ ಅವರ ಆಲೋಚನೆಗೆ ತರಲ್ಪಡುವ ವಿಷಯಗಳಿಯಾದಾಸ್ತು.

೧. ಸನ್ ೧೮೮೮ನೇ ಇಸವಿ ಜುಲೈತಿಂಗಳ ಬಾಬತ್ತು ನಗದು ಜಮಾಖರ್ಚು ಲೆಕ್ಕ ಮುಕ್ತಾಯ ಲೆಕ್ಕಗಳು.

೨. ಬೆಂಗಳೂರು ಪೋಲೀಸುಚಾರ್ಜಿಗಳಲ್ಲಿ ಕೆಲವುಮಂದಿಗೆ ಸಲ್ಲಬೇಕಾದ ಮೂರರಲ್ಲೊಂದು ಭಾಗದ ಪೇ ವೊಬಲಗನ್ನು ಮ್ಯುನಿಸಿಪಲ್ ಫಂಡಿಗೆ ಖರ್ಚು ಹಾಕತಕ್ಕ ವಿಷಯದಲ್ಲಿ, ಬೆಂಗಳೂರು ಡಿಸ್ಟ್ರಿಕ್ಟ್ ಟ್ರೆಜರೀ ಆಫೀಸರಿಂದ ಬಂದ ೧೮೮೮ನೇ ಇಸವಿ ಆಗಸ್ಟು ೬ನೇ ಮಕಾಂ ೨೪೭೬ನೇ ನಂಬರುಳ್ಳ ದಾಖಲೆ.

೩. ಸುಬ್ಬಂಗಿ ಕೆರೆಯಂ ಕುರಿತು ರಾಯಲ್ ಇಂಜನಿಯರ್ ಮೇಜರ್ ಕೆನ್ಸಿಂಗ್‌ಟನ್‌ ಯವರಿಂದ ಬರೆಯಲ್ಪಟ್ಟ ನೋಟ್ಸ್ ನಕಲ್ ಮುಲವೊಡನೆ ಮೈಸೂರು ಸೂಪರಿಂಟೆಂಡಿಂಗ್ ಇಂಜನಿಯರವರಿಂದ ಬಂದ ೧೮೮೮ನೇ ಇಸವಿ ಆಗಸ್ಟು ೧೦ನೇ ತಾರೀಖುಳ್ಳ ೩೮೩೧ನೇ ನಂಬರ್ ಲೆಟರ್.

೪. ಬೆಂಗಳೂರು ಷಹರ್ ಮ್ಯುನಿಸಿಪಾಲಿಟಿಯ ಸನ್ ೧೮೮೮—೮೯ನೇ ಸರ್ಕಾರಿ ಸಾಲ್ ಬಾಬತ್ತು ಜಮಾ ಖರ್ಚುಗಳ ಅಂದಾಜು ಬಜೆಟನ್ನು ಮಂಜೂರುಮಾಡಿದ, ೧೮೮೮ನೇಇಸವಿ ಜುಲೈ ೧೮ನೇ ಮಕಾಂ ೨೦೮೦—೮೨ನೇ ನಂಬರುಳ್ಳ ಮೈಸೂರು ದಿವಾನರವರ ಪ್ರೊಸೀಡಿಂಗ್ಸ್.

ಸಿಟಿ ಮ್ಯುನಿಸಿಪಲ್ ಆಫೀಸ್,
ಬೆಂಗಳೂರು.
೧೬ನೇ ಆಗಸ್ಟು ೧೮೮೮.

A. Shinivasa Charlu, B. A.,
Vice-President,
City Municipal Commission.

ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA.

MONDAY, AUGUST 20, 1888.

೧೮೮೮ನೇ ಆಗಸ್ಟು ೨೦ನೇ ತಾ॥ ಸೋಮವಾರ.

THE TRIVELLORE AHOBALA MUTT.

ತಿರುವಳ್ಳೂರು ಅಹೋಬಿಲಮಠದ ಶ್ರೀರಂಗನಾಥ ಜೀಯ್ಯರವರು ಕೇವಲವೃದ್ಧರಾಗಿರುವುದಲ್ಲದೆ ಅರುಶಕ್ತರಾಗಿಯೂ, ಅವರ ಪ್ರಾಕೃತ ಶರೀರವಿಯೋಗವು ಪ್ರತಿಕ್ಷಣದಲ್ಲಿ ನಿರೀಕ್ಷಿಸಲ್ಪಡುತ್ತಿರುವುದರಿಂದ [illegible] ಸ್ವಾಮಿಗಳು ಮಾಡಿದ ಏರ್ಪಾಡನ್ನು [illegible] ಅಂಗೀಕರಿಸದೆ [illegible]

ಹೋಲಿ ಶ್ರೀ ಸ್ವಾಮಿಗಳವರು ಮರಳಿ ಆಲೋಚಿಸಿ ತಮ್ಮ ಭ್ರಾತೃಜರಾದ ಯಜ್ಞದೀಕ್ಷಿತರನ್ನೇ ತಮ್ಮ ಸ್ಥಾನಾಪನ್ನರಾಗಿ ಮೊಕರರ್ಮಾಡುವಬಗ್ಗೆ ಮರಳಿ ಬೇಕಾದ ಸನ್ನಾಹಗಳಂ ಮಾಡಿಸಿದರು. ಈ ಉದ್ದೇಶದೊಡನೆ ಹೈಕೋರ್ಟು ವಕೀಲ್ ಮ|| ರಾ|| ಶಠಗೋಪಾಚಾರ್ಯರವರೂ, ಪ್ರಸಿದ್ಧರಾದ ಮ|| ಕೀಲಂ ವಿಜಯರಾಘವಾಚಾರ್ಯರವರೂ ಕರೆಯಿಸಲ್ಪಟ್ಟರು. ಆಶ್ರಮ ಸ್ವೀಕಾರ ಕಾಲದಲ್ಲಿ ಜನಗಳು ಪ್ರವರ್ತಿಸಿ ನಿರ್ಬಂಧಪಡಿಸದಿರುವದಕ್ಕಾಗಿ ಇನ್ಜಂಗ್ಷನ್ ತೆಗದುಕೊಳ್ಳುವ ಬಗ್ಗೆ ಮ|| ರಾ|| ವಕೀಲ್ ಶಠಗೋಪಾಚಾರ್ಯರವರು, ಸೈದಾಪೇಟ ಸಬ್‌ಡಿವಿಜನ್ ಮ್ಯಾಜಿಸ್ಟ್ರೇಟರಬಳಿಗೆ ಕಳುಹಿಸಲ್ಪಟ್ಟರು. ಮ್ಯಾಜಿಸ್ಟ್ರೇಟರು ಮ|| ಶಠಗೋಪಾಚಾರ್ಯರವರ ಅಪೇಕ್ಷೆಯಂತೆ ಇನ್ಜಂಗ್ಷನಿಗೆ ಹುಕುಂ ಕೊಟ್ಟರಲ್ಲದೆ, ತತ್ಕಾಲದಲ್ಲಿ ಗದ್ದಲನಡೆಯದಂತೆ ನೋಡಿಕೊಳ್ಳುವದಕ್ಕಾಗಿ ಒಬ್ಬ ಫಸ್ಟ್‌ಕ್ಲಾಸ್ ಇನ್ಸ್ಪೆಕ್ಟರನ್ನು ನಿಯಮಿಸಿ ಕಳುಹಿಸಿದರು. ಮಾಹೇಮಜಕೂರ ೧೦ನೇ ತಾರೀಖಿನದಿನ ಶ್ರೀಸ್ವಾಮಿಗಳ ಅಭೀಷ್ಟದಂತೆ ಜರಗಲಿಕ್ಕೆ ಬೇಕಾದ ಏರ್ಪಾಡುಗಳೆಲ್ಲವೂ ಲೋಪವಿಲ್ಲದೆ ನಡೆಯುತಲಿದ್ದವು. ಮ|| ಶಠಗೋಪಾಚಾರ್ಯರವರು ಯಜ್ಞದೀಕ್ಷಿತರಿಗೆ ಅನುಕೂಲವಾಗಿ ಒಂದು ಮರಣಶಾಸನವ ಬರೆದಿಡುವಂತೆ ಜೀಯ್ಯರವರಿಗೆ ತಿಳಿಸಿ, ರಾಜಾ ಟಿ. ರಾಮರಾಯರವರ ಸಮಕ್ಷಮದಲ್ಲಿ ಅದಂ ಬರೆಯುವದಕ್ಕಾಗಿ ಅವರು ಇಲ್ಲಿಗೆ ಕರೆದುಕೊಂಡು ಬಂದಿರುವಂತೆ ನುಡಿದರು. ೧೧ನೇ ತಾರೀಖಿನದಿನ ಅದೇ ರೀತಿ ಜೀಯ್ಯರವರು ನಡೆಸುವರೆಂದು ಎಲ್ಲರೂ ನಿರೀಕ್ಷಿಸಿದ್ದರು. ಮುಖ್ಯವಾಗಿ ಸ್ವಾಮಿಗಳ ದರಫ಼್ ವಕೀಲರಿಬ್ಬರೂ, ಅವರ ಅನುಬಂಧಿಗಳೂ ಸಂಪೂರ್ಣ ನಂಬಿಕೆಯುಳ್ಳವರಾಗಿದ್ದರು. ಭಗವತ್ಸಂಕಲ್ಪವೆಂಬದು ಪ್ರತ್ಯೇಕವಾದದ್ದರಿಂದ, ಪೂರ್ವಭಾವಿಯಾಗಿ ನಡೆದಿದ್ದ ಏರ್ಪಾಡುಗಳೆಲ್ಲವೂ ವ್ಯರ್ಥಗಳಾಗುವಂತೆಯೂ, ವಕೀಲರ ಉದ್ದೇಶ ಪ್ರಯತ್ನಗಳು ನಿಷ್ಫಲಗಳಾಗುವಂತೆಯೂ, ಪ್ರಯೋಜನಾಕಾಂಕ್ಷಿಗಳ ಕೋರಿಕೆಯು ಭಂಗವನ್ನೈದುವಂತೆಯೂ, ಬಹುಜನರ ಪ್ರಾರ್ಥನೆಗಳೇತೇರುವಂತೆಯೂ, ೧೦ನೇ ತಾರೀಖಿನ ರಾತ್ರಿ ೧೧ ಘಂಟೆಗೆ ಸರಿಯಾಗಿ ಶ್ರೀರಂಗನಾಥ ಜೀಯ್ಯರವರು ತಮ್ಮ ಪ್ರಾಕೃತಶರೀರವಂ ತ್ಯಜಿಸಿ ಪುನರಾವೃತ್ತಿ ರಹಿತವಾದ ಪರಮಪದವನ್ನೈದಿದರು. ಆಕಾಲದಲ್ಲಿ ಜೀಯ್ಯರವರ ಬಂಧುವರ್ಗದವರಿಗುಂಟಾಗಿರಬಹುದಾದ ದಿಗಿಲನ್ನೂ, ತತ್ಪ್ರಯುಕ್ತವಾದ ಕಂಪನವನ್ನೂ, ಅವರಿಗೆ ಪ್ರಾಪ್ತವಾಗುವದಾಗಿದ್ದ ಭೋಗಾನುಭವಕ್ಕುಂಟಾದ ವಿಚ್ಛಿತ್ತಿಗಾಗಿ ತಲೆದೋರಿದಭಗ್ನೋತ್ಸಾಹವನ್ನೂ, ಇನ್ನೂ ಚಿರಕಾಲ ಅನುಭವಿಸಬೇಕಾಗಿಬಂದ ರಿಕ್ತತಾಪ್ರಯುಕ್ತವಾದ ಕ್ಲೇಶವನ್ನೂ ಪತ್ರಿಕಾಮುಖದ ವಿವರಿಸಲಿಕ್ಕೆ ಯಾರಿಗೆ ತಾನೆ ಸಾಧ್ಯವಾಗಿರುವದು? ಕೇವಲ ದುಃಖಾಂಬುಧಿಯೊಳು ಮಗ್ನರಾಗಿದ್ದ ಶಿಷ್ಯಮಂಡಲಿಗೆ ಸದರೀ ಮರಣವೃತ್ತಾಂತ ಶ್ರವಣಮಾತ್ರದಿಂದುಂಟಾದ ಸಂಕ್ಷೋಭ ವಿನ್ನೆಷ್ಟರದಾಗಿರುವುದೋ ಅದು ಈ ಪತ್ರಿಕೆಯನ್ನೋದತಕ್ಕವರೇ ಊಹಿಸಿಕೊಳ್ಳಬಹುದು. ಶಾಶ್ವತವಾದ ಹಾನಿಯಿಂದ ಶ್ರೀ ಮಠವಂ ತಪ್ಪಿಸಿ ಕಾಪಾಡಿದುತಾ ಭಗವಂತನು ಕುರಿತು ಎಲ್ಲರೂ ಪ್ರಾರ್ಥಿಸಲಾರಂಭಿಸಿದರು. ಕಡೆಗೆ ಬೇರೊಬ್ಬರಂ ನಿಯಮಿಸಬೇಕಾದ ಕಾರ್ಯವು ಜನಗಳಿಗೆ ಸೇರಿದ್ದರಿಂದ ಅವರೆಲ್ಲರೂ ಮುಂದಿನ ಏರ್ಪಾಡುಗಳಂ ಕುರಿತು ಆಲೋಚಿಸತೊಡಗಿದರು. ಈಗ ಪರಮಪದ ಪ್ರವಿಷ್ಟರಾದ ಶ್ರೀಯವರ ಅಪರಕ್ರಿಯೆಗಳು ಕೇವಲ ಲೌಭ್ಯದೊಡನೆ ನಡೆಸಲ್ಪಡುತಲಿರುವಂತೆಯೂ, ಏತದರ್ಥ ೧೦|| ರೂಪಾಯಿಗಳು ವ್ಯಯ ಮಾಡಲ್ಪಟ್ಟಂತೆಯೂ ತಿಳಿಸಲಿಕ್ಕೆ ಲಜ್ಜೆಯಿಂದ ನಮ್ಮ ಲೇಖನಿಯು ತಡೆಪಡುತಿದೆ. ಈಚೆಗೆ ಶಿಷ್ಯಾರ್ಜನೆಗೆ ಯೋಗಿದ್ದ ಕಾಲದಲ್ಲಿ ಸ್ವಾಮಿಗಳಿಗೊಪ್ಪಿಸಲ್ಪಟ್ಟ ಪಾದಕಾಣಿಕೆಗಳೆಲ್ಲವು ಯಾರಿಂದ ಅಪಹರಿಸಲ್ಪಟ್ಟಿತು, ಕಡೆಗೆ ಜೀಯ್ಯರವರ ಅಪರಕ್ರಿಯೆಗೆ ಬೇಕಾದಷ್ಟು ಸಹ ಉಳಿಯದೆಹೋಯಿತ? ನಿಜವಾಗಿ ಇವೆಲ್ಲಬಹಳಮಾನಚ್ಯುತಿ ಕರವಾದ ವಿಷಯಗಳಾಗಿರುತಿವೆ. ಮಾಹೇ ಮಜಕೂರು ೧೮ನೇ ತಾರೀಖಿನ ದಿನ ಅಹೋಬಿಲ ಮಠದಲ್ಲಿ ಬಹುಮಂದಿ ಮಠದ ಶಿಷ್ಯರು ಸಭೆ ಸೇರಿ ಅವರ ಪೈಕಿ ಬಹುಜನಾಭಿಪ್ರಾಯಾನುಸಾರವಾಗಿ ವಂಗೀಪುರಂ ರಂಗಾಚಾರ್ಯರವರನ್ನು ಆಶ್ರಮ ಸ್ವೀಕಾರಾರ್ಥ ಚುನಾಯಿಸಿ ಮೊಕರರ್ಮಾಡಿದರು. ಏತದರ್ಥ ಜರಗಬೇಕಾದ ಕ್ರಿಯೆಗಳೆಲ್ಲವೂ ನಡೆಯುತಲಿರುವಂತೆ ತಿಳಿಯಬರುತಿದೆ. ಶ್ರೀಮಾನ್ ರಂಗಾಚಾರ್ಯರವರ ಶೀಲಸ್ವಭಾವಗಳೊಂದೂ ನಮಗೆ ತಿಳಿಯದಾದ್ದರಿಂದ ಇವರ ವಿಷಯದಲ್ಲಿ ಸದ್ಯಃ ನಮ್ಮ ಅಭಿಪ್ರಾಯವು ವ್ಯಕ್ತಪಡಿಸಲಿಕ್ಕೆ ಅಸಾಧ್ಯವು. ಪರಂತು ಯಾದ್ವಿಧ ಶಂಕೆಯಿಂದ ಯಜ್ಞದೀಕ್ಷಿತರ ಮೊಕರರಾತಿಯಂ ಜನರು ನಿಷೇಧಿಸಿದರೋ ಅಂತಾ ಶಂಕೆಗೂ ಭೀತಿಗೂ ಮುಂದೆ ಬರುವ ಸ್ವಾಮಿಗಳು ಅವಕಾಶ ಕೊಡದವರಾಗಿರಬೇಕೆಂಬದೇನಮ್ಮ ಹೃದಯಂಗಮವಾದ ಕೋರಿಕೆಯಾಗಿರುತಿದೆ

LOCAL AND PROVINCIAL NEWS.

ಒಳದೇಶಮತ್ತು ತಾಲ್ಲೂಕುಜಾತವೃತ್ತಾಂತಗಳು.

:o:

Sravany.—ಈದಿನ ಋಗ್ವೇದಿಗಳಿಗೂ, ನಾಳೆದಿನ ಯಜುರ್ವೇದಿಗಳಿಗೂ ಉಪಾಕರ್ಮವಾದದರಿಂದ ತತ್ಪ್ರಯುಕ್ತ ಇಲ್ಲಿನ ಸರ್ಕಾರ್ ಆಫೀಸುಗಳಗೆಲ್ಲ ಎರಡುದಿನಗಳರಜಾ ಕೊಡಲ್ಪಟ್ಟಿರುತಿದೆ

Professional taxes.—ಮ್ಯೂನಿಸಿಪಲ್ ದುಪ್ಪಟ್ಟಪಳಿಯನ್ನು ವೃದ್ಧಿಪಡಿಸುವಬಗ್ಗೆ ಸಹರ್ ಮ್ಯೂನಿಸಿಪಾಲಿಟಿಯವರು ಕಸಬ್‌ದಾರೀವಗೈರೆ ಕೆಲವು ಹೊಸ ತೆರಿಗೆಗಳನ್ನು ಏರ್ಪಾಡು ಮಾಡುವ ಆಲೋಚನೆ ಯುಳ್ಳವರಾಗಿರುವಂತೆಯೂ, ದಿವಾನರವರಿಗೆಮಾತ್ರ ಸದರೀ ಆಲೋಚನೆಯು ಅಭಿಮತವಾಗಿರುವದಿಲ್ಲವೆಂತಲೂ, ಪರಂತು ಅಲ್ಲಿಯಲ್ಲಿ ಈಗ ನಡೆಗೊಂಡಿರುವ ಜನಳ ತೀರ್ವೆಯನ್ನು ಸಹ ವಜಾಮಾಡಬೇಕೆಂಬ ತಾತ್ಪರ್ಯವುಳ್ಳವರಾಗಿದಾರೆಂತಲೂ ಕೇಳುತ್ತೇವೆ.

His Highness the Maharaja's return. ಶ್ರೀಮನ್ಮಹಾರಾಜರವರು ಮೊನ್ನೆಯದಿನ ರೆಸಿಡೆಂಟರು ವಗೈರೆಯೊಡನೆ ಕೋಲಾರರಿಂದ ಹೊಸಕೋಟೆಮಾರ್ಗವಾಗಿ ಈ ಪುರಿಗೆ ದಯಮಾಡಿದರು. ಊರಿಗಾಂವಲ್ಲಿ ಚಿನ್ನದಗನಿಗಳೂ, ಅವು ತಯಾರ್ಮಾಡತಕ್ಕ ಕ್ರಮಗಳೂ, ಅಲ್ಲಿನಯಂತ್ರಾದಿಗಳ ವ್ಯಾಪಾರಗಳೂ, ಮಹಾರಾಜರವರಿಗೆ ಬಹಳ ಉತ್ಸಾಹವನ್ನುಂಟುಮಾಡಿರಬಹುದೆಂದೆಣಿಸುತ್ತೇವೆ.

A lecture.—ಈದಿನಸಾಯಂಕಾಲ ೬ ಘಂಟೆಗೆ ಸರಿಯಾಗಿ ಡಿ ಆಫೀಸುಗಳ ಕಟ್ಟಡದಲ್ಲಿರುವ ಲಿಟರರಿ ಯೂನಿಯನ್ನಲ್ಲಿ, ಕಡಪೆ ಶ್ರೀಮಾನ್ ಭಾಷ್ಯಾಚಾರ್ಯರವರು ಅದ್ವೈತ ಸಿದ್ಧಾಂತವಂ ಕುರಿತು ಆಂಧ್ರಭಾಷೆಯಲ್ಲಿ ಉಪನ್ಯಾಸಮಾಡುವರೆಂಬದಾಗಿ ಸದರೀ ಯೂನಿಯನ್ ಸೆಕ್ರೆಟೆರಿಯವರು ತಿಳಿಯಪಡಿಸಿರುತ್ತಾರಲ್ಲದೆ, ಸದರೀಪಂಡಿತರ ಪ್ರಸಂಗವಂ ಕೇಳತಕ್ಕಬಗ್ಗೆ ಮತವಿಚಾರಾಸಕ್ತರಾದವರೆಲ್ಲ ಅಗತ್ಯವಾಗಿ ಬರಬೇಕೆಂದಪೇಕ್ಷೆಸಿರುತ್ತಾರೆ.

Revised scale of police establishment- ಪೋಲೀಸ್ ಇನ್ಸ್ಪೆಕ್ಟರ್ ಜನರಲ್ಲವರ ಸಿಫಾರಸ್ಸಿನಮೇಲೆ ಮೈಸೂರು ಶೀಮೆಯ ಚಿನ್ನದ ಗನಿಗಳಲ್ಲಿರುವ ಪೋಲೀಸಿನವರ ತಲಬ್ ಇದರಡಿ ಕಂಡಂತೆ ಪುನರ್ವ್ಯವಸ್ಥೆ ಮಾಡಿ ದಿವಾನರವರು ಮಂಜೂರ್ಮಾಡಿರುತ್ತಾರೆಂತೆಂದರೆ:—ಮಾಹೇಯಾನಾ ೧೧೫ ರೂಪಾಯಿಗಳಲ್ಲಿ ಒಬ್ಬ ಇನ್ಸ್ಪೆಕ್ಟರ್; ೪೫ ರೂಪಾಯಿಗಳಲ್ಲಿ ಒಬ್ಬ ಸಬ್‌ಇನ್ಸ್ಪೆಕ್ಟರ್; ೧೧ ರೂಪಾಯಿಗಳಲ್ಲಿ ಒಬ್ಬ ೧ನೇ ಕ್ಲಾಸ್ ದಫೇದಾರ್; ೭ ರೂಪಾಯಿಗಳಲ್ಲಿ ೧ನೇ ಕ್ಲಾಸ್ ಜವಾನರು ಇಬ್ಬರು; ೬ ರೂಪಾಯಿಗಳಲ್ಲಿ ೯ ಜನ ೨ನೇ ಕ್ಲಾಸ್ ಜವಾನರು; ಹೊರಗೆ, ೧೧ ರೂಪಾಯಿಗಳಲ್ಲಿ ಒಬ್ಬ ದಫೇದಾರನು, ೭ ರೂಪಾಯಿಗಳಲ್ಲಿ ೧ನೇ ಕ್ಲಾಸ್ ಜವಾನನೊಬ್ಬನು, ೬ ರೂಪಾಯಿಗಳಲ್ಲಿ ಎರಡನೇ ಕ್ಲಾಸ್ ಜವಾನರು ಮೂವರು. ದಫೇದಾರ್ ಕಾನಸ್ಟೆಬಲ್‌ಗಳು ಗನಿಗಳಲ್ಲಿ ನೌಕರಿಯೊಳಿರುವ ಕಾಲದಲ್ಲಿ ಮಾಹೇಯಾನಾ ೨ ರೂಪಾಯಿಗಳಂತೆ ಭತ್ತಾ ಪಡೆಯಬಹುದೆಂದು ಸಹ ದಿವಾನರವರು ಹುಕುಂಮಾಡಿರುತ್ತಾರೆ.

A guru on pilgrimage.—ಶ್ರೀ ತೋತಾದ್ರಿ ಸ್ವಾಮಿಗಳವರು ದೇವರ ಸಂದರ್ಶನಾರ್ಥ ಯಾದವಾದ್ರಿಯೆಂಬ ಮೇಲುಕೋಟೆಗೆ ಸವಾರಿ ಚಿತ್ತೈಸಿದರೆಂದು ಹಿಂದಿನವಾರದಲ್ಲಿ ತಿಳಿಸಿದ್ದೆವಷ್ಟೆ. ಈ ಸ್ವಾಮಿಗಳು ಶ್ರೀ ಸಂನತ್ಕುಮಾರ ಸನ್ನಿಧಿಯಲ್ಲಿ ಬಹಳ ಮರ್ಯಾದೆಗಳೊಡನೆ ಬರಮಾಡಿಕೊಳ್ಳಲ್ಪಟ್ಟರೆಂತಲೂ, ದೇವರ ದರ್ಶನಾನಂತರ, ಅಲ್ಲಿರುವ ಪರಕಾಲದ ಮಠದ ಮಾರ್ಗವಾಗಿ ತಮ್ಮ ಮರ್ಯಾದೆಗಳೊಡನೆ ನೃಸಿಂಹದೇವರ ದರ್ಶನಾರ್ಥ ಪರ್ವತಾರೋಹಣ ಮಾಡುವದಕ್ಕೆ ಯೋಗುತಲಿರುವಾಗ್ಯೆ ಪರಕಾಲ ಮಠಕ್ಕೆ ಸೇರಿದವರು ಕೆಲವರು ಸ್ವಾಮಿಗಳನ್ನು ತಡೆಗೈದು ಅವರ ಮರ್ಯಾದೆಗಳೊಡನೆ ಆಮಠವಮುಂದೆ ಹೋಗಕೂಡದೆಂದು ನಿರ್ಬಂಧಿಸಿದರೆಂತಲೂ, ಕಡೆಗೆ ಯತಿಗಳಂ ಪ್ರಹರಿಸಲಿಕ್ಕೆ ಸಹ ಸನ್ನದ್ಧರಾಗಿದ್ದರೆಂತಲೂ, ಅವರ ಶಿಷ್ಯರ ಪೈಕಿ ಕೆಲವರನ್ನು ಚನ್ನಾಗಿ ಮರ್ದಿಸಿದರೆಂತಲೂ, ಸ್ವಾಮಿಗಳು ಪ್ರಾಣಭೀತಿಯಿಂದಲೂ ನಮ್ಮವಿಗೆ ಲೋಪವುಂಟಾಗುವದೆಂಬ ಶಂಕೆಯಿಂದಲೂ ಮುಂದಕ್ಕೆ ಪಯಣಮಾಡದೆ ಹಿಂದಿರಿಗಿಬಿಟ್ಟರೆಂತಲೂ, ಸ್ವಾಮಿಗಳವಿಷಯದಲ್ಲಿ ಪರಕಾಲಮಠದವರು ನಡೆಸಿದ ದೌರ್ಜನ್ಯವಂ ಪೋಷಿಸಿಕೊಳ್ಳುವದಕ್ಕಾಗಿ ಸ್ವಾಮಿಗಳಮೇಲೆ ಫಿರ್ಯಾದು ಸಹ ಮಾಡಲೆತ್ನಿಸಿದಾರೆಂತಲೂ, ಯತಿಗಳು ಅಲ್ಲಿಂದ ಮುಂದಕ್ಕೆ ಉತ್ತರದೇಶಯಾತ್ರಾರ್ಥ ಸವಾರಿ ಚಿತ್ತೈಸಿದರೆಂತಲೂ ಈವಾರದಲ್ಲಿ ಬಂದ ಮೇಲುಕೋಟೆ ಬಾತಮೀದಾರನ ಲೇಖನದಿಂದ ತಿಳಿಯಬರುತಿದೆ.

CORRESPONDENCE.

ಈ ಊರಲ್ಲಿರತಕ್ಕ ಸ್ಮಾರ್ತರಲ್ಲಿ ಕೆಲವರು ಶಿವಗಂಗೆ ಮಠಕ್ಕೆ ಸೇರಿದವರಾಗಿಯೂ, ಕೆಲವರು ಶೃಂಗೇರಿ ಮಠಕ್ಕೆ ಸೇರಿದವರಾಗಿಯೂ ಇರುತ್ತಾರೆಯಷ್ಟೆ. ಬೆಂಗಳೂರು ಅರಳೇಪೇಟೆ ಋಗ್ವೇದಿ ನಾರಣಭಟ್ಟನು, ಜಾತಿಭ್ರಷ್ಟಳಾದ ಪುಟ್ಟಮ್ಮ ಉರಫ಼್ ಹೊನ್ನಮ್ಮನೆಂಬವಳ ಮಗಳು ಸುಬ್ಬಿ ಎಂಬ ಹುಡಿಗಿಯನ್ನು ಪಾಪುಲೇನಾಡು ತಾ|| ಕಲಕೆರೆ ಕಸಬೆಗೆ ಸೇರಿದ ಕೊತ್ತನಲ್ಲಿಯಲ್ಲಿರುವ ಮುರಿಕಿನಾಡು ಅವಧಾನಿ ಸುಬ್ಬರಾಮಯ್ಯನಿಗೆ ಕೊಡಿಸಿ ವಿವಾಹ ಮಾಡಿಸಿ, ವಿವಾಹ ಮತ್ತು ನಾಕಬಲಿ ಪ್ರಸ್ತುತಗಳಲ್ಲಿ ಸಹಪಙ್ತಿಯೊಳು ಭೋಜನಾದಿಗಳನ್ನು ಮಾಡಿದನೆಂಬ ಸಂಗತಿಯಲ್ಲಿ ಶಿವಗಂಗೆ ಕಕ್ಷಿಯವರು ಕಾಶೀವಿಶ್ವೇಶ್ವರ ದೇವಸ್ಥಾನದಲ್ಲಿ ಸಭೆ ಸೇರಿ ವಿಚಾರಣೆ ಮಾಡಿ, ಶಿವಗಂಗೆಗೆಬರೆದು ಆ ಮಠದಿಂದ ಕಳೆದ ಆಷಾಢ ಬಹುಳ ೭ಲ್ಲು ಹುಟ್ಟಿದ ಶ್ರೀಮುಖವನ್ನು ಅದೇಬಹುಳ ೯ ಬುಧವಾರದದಿನ ಕಾಶೀವಿಶ್ವೇಶ್ವರದೇವಸ್ಥಾನದಲ್ಲಿ ಪ್ರಕಟಪಡಿಸಿ ಅವನು ಬಹಿಷ್ಕೃತನನ್ನಾಗಿ ಮಾಡಿದರು. ಈಚೆಗೆ ಸದರೀ ಋಗ್ವೇದಿ ನಾರಣಭಟ್ಟನ ಹೆಂಡತಿ ಪ್ರಸವಿಸಿ ಕಾಲವಾದದರಿಂದ ಇವನ ಮಗನಿಗೆ ಶಾಸ್ತ್ರೋಕ್ತಪ್ರಕಾರ ಪ್ರಾಯಶ್ಚಿತ್ತ ಮಾಡಿಸಿ ಉತ್ತರ ಕ್ರಿಯೆಗಳನ್ನೆಲ್ಲ ನೆರವೇರಿಸಿ ಶಿವಗಂಗೆ ಕಕ್ಷಿಯವರುಸತ್ಯವಹಾರದಲ್ಲಿ ತೆಗದುಕೊಂಡಿರುವ ಸಂಗತಿ ಇಲ್ಲಿ ಸರ್ವರಿಗೂ ತಿಳಿಯದಿರಲಿಲ್ಲವು. ಶೃಂಗೇರಿ ಕಕ್ಷಿಯವರು ಶಿವಗಂಗೆ ಕಕ್ಷಿಯವರಿಂದ ತಿರಸ್ಕರಿಸಲ್ಪಟ್ಟು, ಲಕ್ಷ್ಮಮ್ಮನ ಗಂಡನಾದ ಜೇಡಿಹಳ್ಳಿ ನಂಜುಂಡಭಟ್ಟನು ಟೌನ್ ಮ್ಯಾಜಿಸ್ಟ್ರೇಟ್ ಕೋರ್ಟಿನಲ್ಲಿ ಫಿರ್ಯಾದ್ ಮಾಡಿದ್ದರಮೇಲೆ, ಫಿರ್ಯಾದಿಯನ್ನೂ ಇಬ್ಬರು ಸಾಕ್ಷಿಗಳನ್ನೂ ವಿಚಾರಣೆ ಮಾಡಿ, ಅನಂತರ ನಾರಣಭಟ್ಟನಿಗೆ, ಸಭೆಗೆ ಹಾಜರಾಗಿ ಕೈಫಿಯತು ಕೊಡಬೇಕೆಂದು ನೋಟೀಸ್ ಕೊಡಲ್ಪಟ್ಟದ್ದಕ್ಕೆ, ಸ್ಥಳದ ಸ್ಮಾರ್ತ ಸಭೆಯವರು ಪೂರ್ವಪದ್ಧತಿಪ್ರಕಾರ ದೇವಸ್ಥಾನದಲ್ಲಿ ಸೇರಿ ತನ್ನನ್ನು ಕರೆಸಿ ಕೇಳ ಪಿಶಿಷ್ಟ ವಾಜ್ಮೂಲವನ್ನು ತನ್ನಿಂದ ತೆಗಕೊಂಡಿದಾರೆ, ಆವಶ್ಯಕವಿದ್ದರೆ ಅದರಿಂದ ತೆಗದುಕೊಳ್ಳಬಹುದೆಂದು ಪಗ್ಗೆರೆ ಜವಾಬ್ ಕೊಟ್ಟನು. ಅದರಮೇಲೆ ಅವನಿಗೆ ಶೃಂಗೇರಿ ಮಠದಿಂದಲೂ ಬಹಿಷ್ಕಾರ ಪತ್ರಿಕೆಯಂ ತರಿಸಬೇಕೆಂದು ನಿಶ್ಚೈಸಿ ಮಹಜರ್ ಮಾಡಿ ಅದಕ್ಕೆ ಶೃಂಗೇರಿ ಮಠಕ್ಕೆ ಸೇರಿದ ವೆಲನಾಡು ಬ್ರಾಹ್ಮಣರು ಕೈಬರಹಗಳನ್ನು ಮಾಡಬೇಕೆಂದು ಕೇಳಲು ಮಹಜರ್ಮಾಡಿದ ಕಕ್ಷಿಗೆ ಅಧಿಪತಿಗಳಾದ ವೇ|| ಗೋಪಾಲಶಾಸ್ತ್ರಿಗಳವರಿಗೆ ವಿಧೇಯರಾಗಿ ನಡೆದುಕೊಳ್ಳತಕ್ಕದ್ದೆಂದು ತಮಗೆ ಶೃಂಗೇರೀ ಸ್ವಾಮಿಗಳವರಿಂದ ಶ್ರೀಮುಖ ಬರಲಿಲ್ಲವೆಂದು ನಮೂದಿಸಿ ಸದರೀ ಮಹಜರಿಗೆ ರುಜುಗಳನ್ನು ಹಾಕಲಿಲ್ಲವು. ಇನ್ನು ಕೆಲವರು ಒಬ್ಬನಿಗೆ ಒಂದು ತಪ್ಪಿತಕ್ಕಾಗಿ ಒಂದು ಮಠದಿಂದ ಬಹಿಷ್ಕಾರ ಬಂದಿರುವಲ್ಲಿ ಅದೇ ವಿಷಯಕ್ಕಾಗಿ ಮತ್ತೊಂದು ಮಠದಿಂದ ಬಹಿಷ್ಕಾರ ತರಿಸುವಂತಾದ್ದು ಯೆಷ್ಟು ಮಾತ್ರವೂ ನ್ಯಾಯವಲ್ಲವೆಂದು ಕೈ ಬರಹಗಳನ್ನು ಹಾಕಲಿಲ್ಲವು. ಬೇರೆ ಕೆಲವರು ಒಬ್ಬನಿಗೆ ಎರಡು ಮಠಗಳಿಂದಲೂ ಬಹಿಷ್ಕಾರಗಳಾದರೂ ಆಗಲಿ, ಮೊದಲು ಬಹಿಷ್ಕಾರ ಮಾಡಿದವರು ಕಾಲಾಂತರದಲ್ಲಿ ಪಶ್ಚಾತ್ತಾಪದಿಂದ ನಿಧೇಯನಾದ ನಾರಣಭಟ್ಟನನ್ನು ಕುರಿತು ತಮ್ಮ ಸ್ವಾಮಿಗಳಿಗೆ ಶಿಫಾರಸ್‌ಮಾಡಿ ಉಕ್ತ ಪ್ರಾಯಶ್ಚಿತ್ತಗಳಿಂದ ಬಹಿಷ್ಕಾರ ವಿಮೋಚನೆಯಂ ಮಾಡಿಸಿ ಸರ್ವವಹಾರದಲ್ಲಿ ಸೇರಿಸಿಕೊಂಡರೆ ಅಂತಾವರನ್ನೆಲ್ಲ ಬಹಿಷ್ಕೃತರನ್ನಾಗಿಯೆಣಿಸುತ್ತೇವೆಂದು ಮಾಸವೈಪತ್ರಿಕೆ ಫಿರ್ಯಾಸ್ಟ್ಯಕೋರ್ಟ ಮತ್ತೊಂದು ಮಠದಿಂದ ಬಹಿಷ್ಕಾರವನ್ನು ತರಿಸಕೂಡದೆಂದು ಆಕ್ಷೇಪಿಸಿ ಕೈಬರಹಗಳನ್ನುಮಾಡದೆಹೋದರು. ಈ ವಿಷಯವು ಯಾವಮೇರೆಗೆ ವ್ಯವಸ್ಥೆಯಾಗುವದೋ ಅದನ್ನು ಮುಂದೆ ತಿಳಿಸುತ್ತೇನೆ.

ಬೆಂಗಳೂರು, } ತಮ್ಮ ವಿಧೇಯನಾದ,
೧೫-೮-೮೮. } ನ್ಯಾಯಪಕ್ಷಪಾತಿ.

TELEGRAMS.

ತಂತಿ ವೃತ್ತಾಂತಗಳು.

ಲಂಡನ್, ತಾ|| ೧೭ನೇ ಆಗಸ್ಟು. ಪ್ರಾತಃಕಾಲ—ಮಿ|| ಪಾರ್ನೆಲ್ ಎಂಬವರು ಲಂಡನ್ ಟೈಂಸ್ ಪತ್ರಿಕಾಧಿಪರಮೇಲೆ ಮಾನನಷ್ಟ ಪಡಿಸಿದಬಗ್ಗೆ ಸ್ಕಾಟ್ಲ್ಯಾಂಡ್ ಕೋರ್ಟುಗಳಲ್ಲಿ ಐವತ್ತುಲಕ್ಷರೂಪಾಯಿಗಳಿಗೆ ದಾವೆ ಮಾಡಿರುತ್ತಾರೆ.

ಕಾನ್ಸ್ಟಾಂಟಿನೋಪಿಲ್ ೧೫ನೇ ಆಗಸ್ಟು—ಸೊಥಿಯಾ ಎಂಬ ಪ್ರದೇಶಕ್ಕೂ ಕಾನ್ಸ್ಟಾಂಟಿನೋಪಲಿಗೂ ಮಧ್ಯೆ ಹಾಕಲ್ಪಡುತಲಿದ್ದ ರೈಯಿಲ್‌ರಸ್ತೆ ಕೆಲಸ ಪೂರೈಸಿದ್ದರಿಂದ ಗಾಡಿಗಳು ಬಿಡಲ್ಪಡಲಿಕ್ಕೂಪಕ್ರಮವಾಯಿತು.

ಮುಂಬೈ, ತಾ|| ೧೮ನೇ ಆಗಸ್ಟು—ಕ್ರಿಮಿನಲ್ ಪ್ರೊಸಿಡ್ಯೂರ್‌ಕೋಡ ೪೩೭ ಯಾ ೪೩೮ನೇ ಸೆಕ್ಷನ್ ಅನುಸರಿಸಿ ಮುಂದಿನ ದರ್ಯಾಪ್ತಿಯಂ ನಡೆಸುವಂತೆ ಸೆಷನ್‌ಕೋರ್ಟಿನವರು ಹುಕುಂ ಕೊಡಕೂಡದೆಂಬದಕ್ಕೇನಾದರೂ ಕಾರಣವಿದ್ದರೆ, ಅದಂ ತೋರಿಸತಕ್ಕದ್ದೆಂದು ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರಿಗೆ ನೋಟೀಸ್‌ಕೊಡುವಂತೆ ಹುಕುಂಮಾಡಿದ್ದ ಸೆಷನ್‌ಜಡ್ಜಿಯವರಿಗೆ ಮಿ|| ಕ್ರಾಫರ್ಡಿಯವರ ತರಫ಼ೆ ಮಿ|| ಗಂಗಾರಾಂಭಾವ್‌ಎಂಬವರು ಒಂದು ಅರ್ಜಿ ಕೊಟ್ಟಿರುತ್ತಾರೆ.

ತಲಚೇರಿ, ತಾ|| ೧೭ನೇ ಆಗಸ್ಟು—ತಲಚೇರಿ ಸಬಾರ್ಡಿನೇಟ್ ಜಡ್ಜಿಯರಾದ ಮಿ|| ಕುಂಜನ್ ಮೇನನ್‌ಯವರಮೇಲೆ ತರಲ್ಪಟ್ಟಿರುವ ರುಷುವತ್ ಮೊಕದ್ದಮೆಯ ವಿಚಾರಣೆಯು ಏತದರ್ಥ ವಿಶೇಷತಃ ನಿಯಮಿಸಲ್ಪಟ್ಟಿರುವ ಅಡ್ಡಿಷನಲ್ ಸೆಷನ್ಸ್ ಜಡ್ಜಿಯವರಾದ ಮಿಸ್ಟರ್ ಇರ್ವಿಯವರಕೋರ್ಟಿನಲ್ಲಿ ಈದಿನ ಪ್ರಾರಂಭವಾಯಿತು. ಆಕ್ಟಿಂಗ್ ಅಡ್ವೋಕೇಟ್ ಜನರಲ್ಲವರಾದ ಆನರೆಬಲ್ ಮಿ|| ಸ್ಪ್ರಿಂಗ್ ಜೆ. ಬ್ರಾನ್ಸನ್‌ಯವರು ಗವರ್ನ್‌ಮೆಂಟ್ ತರಫ಼ೆ ಫಿರ್ಯಾದಿಯಾಗಿಯೂ, ಮಿಸ್ಟರ್ ವಿಲ್ಲೀ ಗ್ರಾಂಟೆಯವರು ಆಪರಾಧಿಯತರಫ಼ೆನಲ್ಲಿಯೂ ಹಾಜರಾಗಿದ್ದರು. ಈ ಮೊಕದ್ದ

ಷೆಯಲ್ಲಿ ಇಬ್ಬರು ವ್ಯಕ್ತಿಗಳಿರುತ್ತಾರೆ. ೪೬ನೇ ಇಸವಿಯ ಫೆಬ್ರವರಿ ತಿಂಗಳಲ್ಲಿ ಸಬ್ ಜಡ್ಜಿಯವರು, ತಮ್ಮ ಕೋರ್ಟಿನೊಳು ವಿಚಾರಣೆಯೊಳಿದ್ದ ಒಂದು ಸಿವಿಲ್ ಮೊಕದ್ದಮೆಯಲ್ಲಿ ವಾದಿಯ ತರಫೆ ತೀರ್ಮಾನ ಮಾಡುವದಕ್ಕಾಗಿ ವಾದಿ ಅಬ್ದುಲ್ ಲತೀ ಯೆಂಬಾತನಿಂದ ೪೦೦ ರೂಪಾಯಿಗಳು ರುಷುವತ್ತು ತೆಗದುಕೊಂಡರೆಂದು ಆಪಾದಿಸಲ್ಪಟ್ಟಿದಾರೆ. ಎರಡನೆಯ ಅಪರಾಧಿಯಾದ ಪಾಷ್ಯಜಾತಿಗೆ ಸೇರಿದ ವಕ್ಕೀಲ್ ಕೃಷ್ಣಯ್ಯನವನು ಮೇಲ್ಕಂಡ ರುಷುವತ್ತು ತೆಗದುಕೊಳ್ಳುವದಕ್ಕೆ ಮಧ್ಯಸ್ಥಗಾರನಾಗಿದ್ದು, ಒಬ್ಬ ಸರ್ಕಾರಿನೌಕರನನ್ನು ಪ್ರೇರಿಸುವದಕ್ಕಾಗಿ ಸದರೀ ಆಸಾಮಿಯಿಂದಲೇ ಪ್ರತ್ಯೇಕವಾಗಿ ಸ್ವಂತಕ್ಕೆ ೨೦೦ ರೂಪಾಯಿಗಳು ತೆಗದುಕೊಂಡಬಗ್ಗೆ ಆಪಾದಿಸಲ್ಪಟ್ಟಿರುತ್ತಾನೆ. ಇಬ್ಬರೂ ತಾವು ನಿರಪರಾಧಿಗಳೆಂದು ವಾದಿಸುತಲಿದಾರೆ. ಮೆ|| ಕುಂಜನ್ ಮೇನನ್ಯವರನ್ನು ಇತರರಂತೆ ಡಾಕ್ ಅಂದರೆ ವಿಚಾರಣೆಕಾಲದಲ್ಲಿ ಅಪರಾಧಿಗಳನ್ನು ನಿಲ್ಲಿಸುವ ಕಟಕಟೆಯಲ್ಲಿ ನಿಲ್ಲಿಸಿ ವಿಚಾರಣೆ ಮಾಡುತಲಿದಾರೆ. ಇಬ್ಬರು ಅಸ್ಸೆಸ್ಸರ್‌ಗಳಾಗಿ ಚುನಾಯಿಸಲ್ಪಟ್ಟಿರುತ್ತಾರೆ ಇವರಲ್ಲಿ ಒಬ್ಬರು ಹಿಂದು ಮತ್ತೊಬ್ಬರು ಮಾಪಿಳ್ಳೆ ಜಾತಿಗೆ ಸೇರಿದವರು. ಮೆ|| ಬ್ರಾನ್ಸನ್ಯವರು ಮೊಕದ್ದಮೆಯ ಪರ್ರ್ಯಾಸಿಕ್ಯೂಷನ್‌ಗೆ ಉಪಕ್ರಮಿಸುವಾಗ್ಯ ೪೦೦ ರೂಪಾಯಿಗಳ ಕಿಮ್ಮತ್ತುಳ್ಳ ಒಂದು ನೋಟನ್ನು ಮೊಕದ್ದಮೆಯ ನಂಬರಿನೊಡನೆ ವಾದಿಯತರಫ ಎಂಬದಾಗಿ ನಮೂದಿಸಿ ಒಂದು ಚೀಟಿಯನ್ನೂ ಒಂದು ಕವರಿನಲ್ಲಿಟ್ಟು ಸಬ್ ಜಡ್ಜಿಯವರ ಗಾಡಿಯಲ್ಲಿ ಎಸೆಯಲ್ಪಡಲು ಅದನ್ನು ತುರ್ತಾಗಿ ಅವರು ಅಂಗೀಕರಿಸಿದರೆಂದು ತಿಳಿಸಿದರು. ಇದುವರಿವಿಗೆ ಸಾಕ್ಷಿಗಳ ದರ್ಯಾಪ್ತುಮಾಡಿದರು. ಇವರಲ್ಲಿ ರುಷುವತ್ ಕೊಟ್ಟವನು, ಪ್ರವಾಸದ್ದರಿಂದ ಗಾಡಿಯಲ್ಲಿ ಕವರ್ ಹಾಕಲ್ಪಟ್ಟಿತೆಂದು ಹೇಳಿದವನು ಸಹ ಒಬ್ಬನಾಗಿರುತ್ತಾನೆ. ನಾಳೆಯ ದಿನವೇ ಬಹುಶಃ ಪ್ರಾಸಿಕ್ಯೂಷನ್ ಪೂರೈಸಬಹುದೆಂದು ತೋರುತಿದೆ. ಮೆ|| ಕುಂಜನ್ ಮೇನನ್ಯವರ ಮೇಲೆ ಎರಡು ಮೊಕದ್ದಮೆಗಳು ತರಲ್ಪಟ್ಟಿವೆ. ಈ ಮೊಕದ್ದಮೆಯು ಇಲ್ಲಿ ಎಲ್ಲರ ಅಪೇಕ್ಷಾನಕ್ಕೂ ವಿಷಯವಾಗಿರುವದರಿಂದ ವಿಚಾರಣೆಯ ಕಾಲದಲ್ಲಿ ಕೋರ್ಟಿನೊಳು ಜನಗಳು ಬಹಳವಾಗಿ ಜಮಾಯಿಸುತ್ತಾರೆ. ಮೊದಲನೆಯ ಮೊಕದ್ದಮೆ ಅಪರಾಧಿಗಳ ಮೇಲೆ ರುಜುವಾತ್ತಾಗಲಿಲ್ಲವು.

EXTRACTS·

ಪುಣೆಯಲ್ಲಿರುವ ಹಿಂದೂ ಮತದ ನೇಯಿಗೆಯವರೆಲ್ಲರೂ, ೨ ವಾರಗಳೊಳಗೆ ಒಂದು ಸ್ಥಳದಲ್ಲಿ ಸಭೆಸೇರಿ, ಮುಖ್ಯ ಪಟ್ಟಣದಿಂದಬರುವ ರೇಷ್ಮೆಯನ್ನು ತಮ್ಮಲ್ಲಿ ಒಬ್ಬರಾದರೂ ತೆಗದುಕೊಂಡು ತಾವು ನೇಯ್ಯುವ ಬಟ್ಟೆಗಳಿಗೆ ಉಪಯೋಗಿಸಕೂಡದೆಂದೂ, ಅದರೆ ಅದಕ್ಕೆ ಬದಲಾಗಿ ಒಳದೇಶದ ತೆಯಾರೀ ರೇಷ್ಮೆಯನ್ನೇ ಹಾಕಬೇಕೆಂದೂ, ಈ ನಿಬಂಧನೆಗೆ ತಮ್ಮಲ್ಲಿ ಯಾರು ತಪ್ಪಿದರೂ ಅಂತವರು ೫೦ ರೂಪಾಯಿಗಳನ್ನು ದಂಡವಾಗಿ ಕೊಡಬೇಕೆಂದೂ ತೀರ್ಮಾನ ಮಾಡಿಕೊಂಡರು.

ಮೈಸೂರು ದೇಶದ ಅಂಚೇ ಇಲಾಖೆಯು ಬರುವ ಸೆಪ್ಟಂಬರ್ ಮೊದಲನೇ ತಾರೀಖಿನ ಮೊದಲ್ಗೊಂಡು, ಮಹಾರಾಣೀ ಸರಕಾರಕ್ಕೆ ಒಪ್ಪಿಸಲ್ಪಟ್ಟು ಮದರಾಸ್ ಪೋಸ್ಟ್ ಮ್ಯಾಸ್ಟರ್ ಜನರಲ್ಲವರ ಅಧೀನದಲ್ಲಿಡಲ್ಪಡುವದೆಂದು ಗೊತ್ತಾಗಿರುವಂತೆ ತಿಳಿಯ ಬರುತದೆ. ಈ ವಿಷಯವಾಗಿ ಆಲೋಚಿಸಿ ನೋಡಿದರೆ, ೨ ಪ್ರಕಾರಗಳಾದ ಅನುಮಾನಗಳು ಮನಸ್ಸಿನಲ್ಲುಂಟಾಗುತಿವೆ. ೧ನೇದು—ಮೈಸೂರ ಸರಕಾರದವರ ಅನಾದಿಯಾದ ಹಕ್ಕೊಂದು ನಷ್ಟವಾಗಿ ಹೋಗುತಿದೆಯಲ್ಲಾ ಯೆನ್ನುವದು. ೨ನೇದು—ಮೈಸೂರ ಸರ್ಕಾರದವರೇ ಅದನ್ನಿಟ್ಟುಕೊಂಡರೆ ವ್ಯವಸ್ಥೆಯಿಂದ ಜನರಿಗೆ ದೊರೆಯತಕ್ಕ ಯೋಗ್ಯವಾದ ಅನುಕೂಲ್ಯಗಳು ಲಭಿಸದೇ ಸರ್ಕಾರಕ್ಕೆ ಲುಕ್ಸಾನ್ ಸಂಭವಿಸುತಿದೆಂಬದು. ಇವರೆಡ್ಲನ್ನು ವಿಚಾರಮಾಡಿ ನೋಡಿದರೆ ಮೈಸೂರು ಸರ್ಕಾರದವರು ತಮ್ಮ ಅಂಚೇ ಇಲಾಖೆಯನ್ನು ಇಂಪೀರಿಯಲ್ ಪೋಸ್ಟಾಫಿಸಿನೊಡನೆ ಸೇರಿಸಿಬಿಟ್ಟದ್ದು, ಈಗಿನ ಸ್ಥಿತಿಯಲ್ಲಿ ನ್ಯಾಯವೆನ್ನಬೇಕು. ಯಾಕೆಂದರೆ, ಈಗಿನ ದಿವಾನರು ತಮ್ಮ ಅಂಚೇ ಇಲಾಖೆಯನ್ನು ಇಂಪೀರಿಯಲ್ ಪೋಸ್ಟಾಫೀಸುಗಳಂತೆ ವ್ಯವಸ್ಥೆ ಪಡಿಸಲು ಅಸಮರ್ಥರಾಗಿರುವಂತೆ ತೋರುತಿದೆ. ಒಂದು ವೇಳೆ ಮೈಸೂರು ಸರ್ಕಾರದ ಆಡಳಿತವು ನಡಸತಕ್ಕರು ಇವರಲ್ಲದೆ ಬೇರೊಬ್ಬ ಒಳ್ಳೇ ಹುಷಾರುಳ್ಳ ದಿವಾನರು ಇರುತಿದ್ದರೆ, ಜಾಣ್ಮೆಯವರಿಂದ ಹೆಚ್ಚುಲಾಭ ಪಡೆದುಕೊಳ್ಳುವದಕ್ಕೆ ಸಾಧನವಾಗಿರುವ, ಇಂತಾ ಬಹು ದೊಡ್ಡದಾದ ಅಂಚೇ ಇಲಾಖೆಯನ್ನು ಪರರಿಗೊಪ್ಪಿಸುತಿರಲಿಲ್ಲವು. ಇದರಿಂದ ನೇಟಿವ್ ಸಂಸ್ಥಾನಾಧಿಪರಲ್ಲಿ ಯೋಗ್ಯವಾದ ವ್ಯವಸ್ಥೆಗಳೊಡನೆ ರಾಜ್ಯಭಾರವಮಾಡುವ ಶಕ್ತಿ ಇರುವವರಿಲ್ಲವೆಂದು, ಆಗಿಂದಾಗ್ಯೆ ಮೊರೆ ಇಡುತಲಿರುವ ಅಂಗ್ಲೋ ಇಂಡಿಯರ್ರ ಕೂಗುಗಳಿಗೆ ಮೈಸೂರಚೇ ಇಲಾಖೆಯು ಒಂದು ದೃಷ್ಟಾಂತವಾಗಿ ಪರಿಣಮಿಸುವದು. ಈಗ ಹಿಂದುಸ್ಥಾನದಲ್ಲಿರುವ ಇತರ ಎಲ್ಲಾ ಡಿಪಾರ್ಟ್‌ಮೆಂಟುಗಳಿಗಿಂತಲೂ ಪೋಸ್ಟ್ ಸಂಬಂಧವಾದ ಉತ್ಪತ್ತಿಯೇ ಅಧಿಕವೆಂದು ಕಂಡುಬರುತಿದೆ. ಹೀಗಿದ್ದರೂ ಮೈಸೂರ್ ಸರ್ಕಾರದ ರಾಜ್ಯಕಾರ್ಯ ಧುರಂಧರರಿಗೆ ಅಂಚೇ ಇಲಾಖೆಯು ನಷ್ಟಪ್ರದವಾಗಿದೆ. ಉತ್ಸಾಹವಿಲ್ಲದವರ ಕೈಯ್ಯಲ್ಲಿ ಚಂದ್ರಾಯುಧವಿದ್ದಾಗ್ಯೂ ತಾನೆ ಏನು ಪ್ರಯೋಜನ?—ದ. ಸು.

ಈಗ ದೇಶಾಟನ ಮಾಡುತಲಿರುವ ಹವ್ಯಕ ಸುಬೋಧಪತ್ರಿಕೆಯ ಬಾತಮಿದಾರರು ಉಡುಪಿಕ್ಷೇತ್ರದಲ್ಲಿ ತಮ್ಮ ದೃಷ್ಟಿಗೆ ಗೋಚರಗಳಾದ, ಮತ್ತು ಅಲ್ಲಿನವರ ಮೂಲಕ ತಾವು ಕೇಳಿದ ವೃತ್ತಾಂತಗಳನ್ನೆಲ್ಲ ಯಥಾವಸ್ಥಿತವಾಗಿ ಗತವಾರದಲ್ಲಿ ವಿಸ್ತರಿಸಿದ್ದರಷ್ಟೆ. ಅವರೀವಾರದೊಳು ಮಂಗಳೂರು, ಮಂಜೇಶ್ವರ, ಕಾಸರಗೋಡು, ಕನ್ನನೂರು ಮೊದಲಾದ ಪ್ರಾಂತಗಳಂ ನೋಡಿಕೊಂಡು ತಲಚೇರಿ ಮಾರ್ಗವಾಗಿ ಮಲಯಾಳದೇಶ ಪ್ರವೇಶವಂ ಮಾಡಿ, ಅಲ್ಲಿನ ಸ್ಥಿತಿಗತಿಗಳಂ ಕುರಿತು ಬರೆಯುತ್ತಾರೆಂತೆಂದಡೆ :—

ಇಲ್ಲಿ ಸಕಲಜಾತಿಯವರೂ ಹೆಂಗಸರು ಗಂಡುಸರು ಭೇದವಿಲ್ಲದೆ ೮ ಮೊಳವುದ್ದ ೨ ಮೊಳ ಅಗಲವಿರುವ ಒಂದೊಂದು ವಂಚೆ (ಮುಂಡು)ಯನ್ನು ಅರ್ಧವಾಗಿ ಸುತ್ತಿಕೊಂಡು ಎಲ್ಲರೂ ಒಳಗೆ ಒಂಗೋಟಗಳನ್ನು ಹಾಕಿಕೊಂಡಿರುತ್ತಾರೆ. ಇಲ್ಲಿನ ಹೆಂಗಸರ ನಡತೆಯು ಬಹು ಲಜ್ಜಾಸ್ಪದವಾಗಿರುವದು. ಇಲ್ಲಿನ ಬ್ರಾಹ್ಮಣರು ಮೂರುಬಗೆಯವರಾಗಿರುವರು. ೧ನೇಯವರು ನಂಬೂರಿ. ೨ನೇಯವರು ಯೆಂಬ್ರಾಂದಿ). ೩ನೇಯವರು ಪಟ್ಟರ್. ನಂಬೂರಿಗಳೆಲ್ಲರೂ ಈದೇಶ ವಾಸಿಗಳಾದ ಬ್ರಾಹ್ಮಣರಾಗಿರುತ್ತಾರೆ. ಇವರೆಲ್ಲರೂ ಮುಂಜುಟ್ಟುಗಳನ್ನಿಟ್ಟುಕೊಂಡು ಶುಭ್ರವಾದ ಮುಂಡುಗಳನ್ನು ಸುತ್ತಿಕೊಂಡು ಹಣೆಗೆ ಭಸ್ಮವಾರಣದೊಡನೆ ಬಿಳೇಗಂಧದಬೊಟ್ಟನ್ನು ಸಹ ಇಟ್ಟುಕೊಳ್ಳುತ್ತಾರೆ. ಯೆಂಬ್ರಾಂದ್ರಿಗಳೆಂಬವರು, ಕನ್ನಡದೇಶದಿಂದಬಂದು ದೇವಸ್ಥಾನಗಳ(ಶಾಂತಿ) ಅರ್ಚಕತನವನ್ನು ಮಾಡಿಕೊಂಡಿರುವವರು. ಇವರು ನಮ್ಮನ್ನೆಲ್ಲ ಯೆಂಬ್ರಾಂದ್ರಿಗಳೆಂದು ಕರೆಯುತ್ತಾರೆ. ಪಟ್ಟರ್ಯೆನ್ನತಕ್ಕವರು ಕಣುವೇಕೆಳಗಿನ ದ್ರಾವಿಡಬ್ರಾಹ್ಮಣರು. ಇವರಿಗೆ ನಮ್ಮಂತೆ ಜುಟ್ಟು ಹಿಂಭಾಗದೊಳಿರುತಿದೆ. ಇವರು ಈದೇಶಕ್ಕೆ ಉದರಭರಣಾರ್ಥಬಂದು ಇಲ್ಲೇ ನಿಂತುಬಿಟ್ಟಂತೆ ವ್ಯಕ್ತವಾಗುತಿದೆ. ಈ ಜನರಿಗೆ ಇಲ್ಲಿ ವಿಶೇಷ ಗೌರವವಿಲ್ಲವು. ಶೂದ್ರರಲ್ಲಿ ಸಭ್ಯರೆಂಬವರು ನಾಯಮಾರ್ ಎಂಬ ಜಾತಿಯವರಾಗಿರುತ್ತಾರೆ. ಈ ಜಾತಿಯವರೇ ಈ ಮಲಬಾರ್ ಪ್ರಾಂತದ ಸಂಸ್ಥಾನಗಳ ಅರಸರಾಗಿರುವರು. ಈ ಜಾತಿಯ ಹೆಂಗಸರಿಗಾಗಲೀ ಗಂಡುಸರಿಗಾಗಲಿ ಮದುವೆಯೇಯಿಲ್ಲ, ಇವರಲ್ಲಿ ಸ್ತ್ರೀ ಪರಂಪರೆಯೇ ಮುಖ್ಯವಾದದ್ದಾಗಿರುವದು. ಆಸ್ತಿಗಳಿಗೆಲ್ಲ ಹೆಂಗಸರೇ ಮುಖ್ಯ ಬಾಧ್ಯಸ್ಥರಾಗಿರುವರು. ಅಣ್ಣತಮ್ಮಂದಿರು ಎಷ್ಟು ಆಸ್ತಿಗಳನ್ನು ಸಂಪಾದಿಸಿದಾಗ್ಯೂ ಅಕ್ಕತಂಗಿಯರಿಗೂ ಅವರ ಹೆಣ್ಣುಮಕ್ಕಳಿಗೂ ಸೇರುವದೇಹೊರ್ತು ಸ್ವಾರ್ಜಿತದಲ್ಲಿ ಒಂದು ತೃಣಮಾತ್ರವಾದರೂ ಗಂಡುಸರಿಗೆ ಬಾಧ್ಯತೆ ಇರುವದಿಲ್ಲವು, ಗಂಡುಸರು ತಮಗೆ ಬೇಕಾದ ಹೆಂಗಸನ್ನು ಇಟ್ಟುಕೊಳ್ಳಬಹುದು, ಹೆಂಗಸರುಕೂಡ ಇದೇರೀತಿ ಮಾಡುತ್ತಾರೆ. ಭೂಮಿ ಮನೆ ವಗ್ಯೆರೆಗಳುಳ್ಳ ಹೆಂಗಸರೂ ಅರಸುಮನೆತನದ ಹೆಂಗಸರು ಸಹ ಈ ದೇಶದಲ್ಲಿ ಶ್ರೀಮದ್ಬ್ರಾಹ್ಮಣರಾದ ನಂಬೂರಿಗಳನ್ನು ಇಟ್ಟುಕೊಳ್ಳುತ್ತಾರೆ, ಇಲ್ಲಿಯೇ ನಂಬೂರಿಗಳ ಸ್ಥಿತಿಯನ್ನು ಸ್ವಲ್ಪ ವರ್ಣಿಸಿ ಅನಂತರ ಈ ಸಂಗತಿಯನ್ನು ವಿವರಿಸುವೆನು. ಹ್ಯಾಗಂದರೆ:—

ಈ ನಂಬೂರಿಗಳಲ್ಲಿ ಒಂದುಬಗೆ ಸಂಪ್ರದಾಯವಿರುತ್ತದೇನಂದರೆ—ಒಂದುಮನೆಯಲ್ಲಿ ೮—೯ ಜನರು ಅಣ್ಣ ತಮ್ಮಂದರಿದ್ದರೆ ಅವರಲ್ಲಿ ಹಿರಿಯವನು ಮಾತ್ರ ವಿವಾಹ ಮಾಡಿಕೊಳ್ಳುವನು. ಬಾಕೀಜನರು ನಾಯಮ್ಮಾರರ ಹೆಣ್ಣುಗಳನ್ನು ಇಟ್ಟುಕೊಂಡಿರುವರು. ಇವರು ವೇದಾಧ್ಯಯನವನ್ನು ಮಾಡುತ್ತಾರೆ. ವೇದವನ್ನು ಸ್ವರಸಹಿತವಾಗಿ ಹೇಳಿದರೂ ಹೇಳುವ ಧಾಟಿಯು ಪುರಾಣ ಓದುತಿರುವಂತೆ ಕಾಣುತಿದೆ. ಇವರು ಪ್ರತಿದಿನ ೩ ಸಲ ಸ್ನಾನ ಮಾಡುವರು. ಎಲ್ಲ ಜಾತಿಯವರೂ ದಿನಕ್ಕೆ ೨—೩ ಸರ್ತಿ ಸ್ನಾನ ಮಾಡುತ್ತಾರೆ. ಶೂದ್ರನವನು ಸಮೀಪಕ್ಕೆ ಬಂದುಬಿಟ್ಟರೆ ಅವನು ಪುನಃ ಸ್ನಾನ ಮಾಡಬೇಕಾಗುವದು. ಪೇಟೆಗೆ ಹೋಗಿ ಬಂದರೆ ವಸ್ತ್ರ ಸಹಿತ ಸ್ನಾನಮಾಡಬೇಕಾಗಿರುತಿದೆ. ಮನೆಯಲ್ಲಿ ಅಣ್ಣನ ಹೆಂಡತಿಯು ಮೈದುನನ ಎದುರಿಗೆ ಬರುವದಿಲ್ಲವು. ಒಳಗೆ ಅಡಿಗೆ ಮಾಡಿ ಅದನ್ನು ಊಟಮಾಡುವ ಮನೆಗೆ ತಂದು ಇಟ್ಟುಬಿಡುತ್ತಾರೆ, ಸ್ನಾನಮಾಡಿ ಬಂದವರು ಅದನ್ನು ಬಡಿಸಿಕೊಂಡು ಊಟ ಮಾಡಿ ಹೋಗುವರು. ಈ ಜನರ ಪೈಕಿ ಹಿರಿಯವನಿಗೆ ಮಕ್ಕಳಾದರೆ ಅವರು ತಮ್ಮ ಚಿಕ್ಕಪ್ಪಂದಿರ ಔರ್ಧ್ವದೇಹಿಕ ಕರ್ಮಗಳಂ ಮಾಡುವದಕ್ಕೆ ಸಮರ್ಥರಾಗಿರುತ್ತಾರೆ. ಈ ಜಾತಿ ಹೆಂಗಸರಿಗೆ ೨೦—೨೫ ವರುಷಗಳಾದನಂತರ ಸಹ ವಿವಾಹ ಮಾಡಿಕೊಳ್ಳುವದಕ್ಕೆ ಪ್ರತಿಬಂಧಕವಿಲ್ಲವು. ಒಬ್ಬ ಬ್ರಾಹ್ಮಣನು ಒಂದುದಿವಸ ಪೋಲೀಸ್ ಚಾವಡಿಯೊಳಿದ್ದರೂ ಅವನಿಗೆ ೨ ದಿವಸಗಳ ಸಹವಾಸವಾದರೂ, ಕೂಡಲೇ ಅವನನ್ನು ಘಟಶ್ರಾದ್ಧಮಾಡಿ ಜಾತಿಯಿಂದ ಹೊರಗೆ ತಳ್ಳಿಬಿಡುವರು. ನಾಯಮ್ಮಾರರ ಹೆಂಗಸರು “ಅಚ್ಚ” ಎಂದು ಕರೆಯುತ್ತಾರೆ. ಇವರನ್ನು ಇಟ್ಟುಕೊಳ್ಳಬೇಕಾದರೆ ಗಂಡುಸರಿಗೆ ವಿಶೇಷ ಖರ್ಚಿಲ್ಲವು. ವರುಷಕ್ಕೆ ಉಡಲಿಕ್ಕೆ ೪ ಮುಂಡುಗಳೂ ಅಭ್ಯಂಗಕ್ಕೆ ಎಣ್ಣೆಯ ಖರ್ಚೂ, ಕೊಟ್ಟರೆ ಸಾಕಾಗಿರುತಿದೆ. ವರುಷಕ್ಕೆ ೧೫—೨೦ ರೂಪಾಯಿಗಳ ಖರ್ಚುಮಾಡಿದರೆ, ದಿವ್ಯವಾದ ಹೆಣ್ಣು ಸಿಕ್ಕುವದು. ಅವಳು ಆ ವರುಷದ ಪರಿವಿಗೆ ಇವನ ಹೆಂಡತಿಗಿಂತಲೂ, ಹೆಚ್ಚಾಗಿ ನಡೆಸುಕೊಳ್ಳುತಲಿರುವಳು. ಇಲ್ಲಿ ಯಾವ ಜಾತಿಯ ಹೆಂಗಸರಾದರೂ, ಎದೆಯನ್ನು ಯಾವಾಗಲೂ, ಬಿಟ್ಟುಕೊಂಡಿರುತ್ತಾರೆ. ಕೈಗಾಗಲೀ, ಕಿವಿಗಾಗಲೀ, ಕೊರಳಿಗಾಗಲೀ, ಆಭರಣಗಳೊಂದೂ ಇರುವದಿಲ್ಲವು. ಕೊರಳಲ್ಲಿ ಒಂದು ಬಿಳೇದಾರದಲ್ಲಿ ಚಿಕ್ಕದಾದ ಒಂದು ಪದಕವನ್ನು ಮಾತ್ರ ತಮ್ಮ ತಮ್ಮ ಯೋಗ್ಯತಾನುಸಾರ ಧರಿಸಿಕೊಳ್ಳುತ್ತಾರೆ. ಕಿವಿಗಳಲ್ಲಿ ದೊಡ್ಡದಾದ ಎರಡು ರಂಧ್ರಗಳಿರುತಿವೆ. ಇಲ್ಲಿನ ಸ್ತ್ರೀಯರು ಶುಭ್ರವಾದ ಅರಗುಂಪು ಬಣ್ಣದವರೂ, ಕೃಶಕಟಿಯರೂ, ಪೀನಪಯೋಧರಿಗಳೂ, ಮೃದುಭಾಷಿಗಳೂ, ಶುಭ್ರವಾದ ವಸ್ತ್ರಯುಳ್ಳವರೂ, ಕೀರವಾಣಿಯರೂ, ಮಂದಸ್ಮಿತ ಮುಖಿಗಳೂ, ಶುಭ್ರವಸನಾಲಂಕೃತೆಯರೂ, ರಿಕ್ತಾಂಗಿಯರೂ, ಯಾವಾಗಲು ತಮ್ಮ ಉರೋಭಾಗದಲ್ಲಿ ಪುರುಷರನೇತ್ರ ಕಟಾಕ್ಷವನ್ನಾಕರ್ಷಿಸಿಕೊಳ್ಳಲಿಕ್ಕೆ ಸಮರ್ಥರಾದವರೂ, ಕೋಮಲಾಂಗಿಯರೂ, ವಿಸ್ತೀರ್ಣಕೇಶಪಾಶ ಭೂಷಿತೆಯರೂ, ಅಲ್ಪಸಂತೋಷಿಗಳೂ, ಕಲಾಶಾಸ್ತ್ರವೇತ್ತೆಯರೂ, ಯಾವಾಗಲು, ಪ್ರಮೋದವರೂ, ತ್ರಿಕಾಲ ಸ್ನಾನದಿಂದ ಶುಚಿರ್ಭೂತೆಯರಾದವರೂ, ಶುಭ್ರಚಂದನ ತಿಲಕರೂ, ಸೌವರ್ಣಮಯ ಶರೀರ ಕಾಂತಿಯುಳ್ಳವರೂ, ದೈವಬ್ರಾಹ್ಮಣ ಸೇವಕರೂ ಆಗಿರುತ್ತಾರೆಂಬದು.

ಆಧುನಿಕ ಶಿಕ್ಷಣ ಪದ್ಧತಿಯಿಂದ ವಿದ್ಯಾಭ್ಯಾಸಮಾಡಿದವಳೊಬ್ಬ ತರುಣಿಗುಂಟಾದ ಪಶ್ಚಾತ್ತಾಪ—ತಾಯಿಯು ಹೇಳುತ್ತಿರುವದನ್ನು ನಾನು ಕೇಳದೇ ಇದ್ದದರಿಂದ ಈಗ ಜನರಲ್ಲಿ ಬಹುಪ್ರಕಾರ ಅಪಮಾನವುಂಟಾಗುತಲಿದೆ. ಜ್ಞಾನ ಪ್ರಾಪ್ತಿಯುಂಟಾಗಬೇಕೆಂದು ಮಠಕ್ಕೆ ಹೋದೆನು; ಆದರೆ ಅದರಿಂದ ವಿರುದ್ಧಬುದ್ಧಿಯುಂಟಾಯಿತು. ಸ್ವಲ್ಪ ಓದಲಿಕ್ಕೆ ಬಂದಕೂಡಲೇ ಭೀಭತ್ಸವಾದ ಪುಸ್ತಕಗಳನ್ನೋದುವದರಲ್ಲಿಯೇ ನನ್ನ ಮನಸ್ಸು ಮಗ್ನವಾಗಿ ಹೋಯಿತು. ಸ್ತ್ರೀಧರ್ಮಗಳನ್ನು ಉಪದೇಶಿಸತಕ್ಕ ಎಲ್ಲಾ ಪುಸ್ತಕಗಳನ್ನು ತ್ಯಜಿಸಿಬಿಟ್ಟೆನು. ಆ ಭೀಭತ್ಸ ಪುಸ್ತಕಗಳೇ ವಿಶೇಷ ಪ್ರಿಯವಾದವು. ಪಿಯಾನೋ ಎಂಬ ರಾಗಮಾಲಿಕೆಯನ್ನು ಕೈಯಲ್ಲಿ ಹಿಡಿದು ಸಂಗೀತ ಪದಗಳನ್ನು ಹಾಡ ತೊಡಗಿದೆನು. ಹೀಗಾದಮೇಲೆ ಜ್ಞಾನಪ್ರಾಪ್ತಿಯಾಗಬೇಕೆಂದರೆ ಹ್ಯಾಗಾದೀತು? ಇತ್ತಕಡೆಯ ಪೋಷಾಕು ನನಗೆ ಪಸಂದಾಗಿರಲಿಲ್ಲವು. ಆಗ ಕುಪ್ಪಸದ ಮೇಲೆ ಕೆಂಪು ಜಾಕೆಟ ಹಾಕಿಕೊಳ್ಳ ತೊಡಗಿದೆನು. ಮರ್ಯಾದೆಯು ನನ್ನನ್ನು ಅಗಲಿತು. ನಾನು ಕಾಲಿಗೆ ಬೂಟ್ಸ್ ಸ್ಟಾಕಿಂಗ್ಸ್‌ಗಳನ್ನುಹಾಕಿಕೊಂಡು ಮರ್ಯಾದೆಯನ್ನು ತೊರೆದು ಕೆಳದಿಯರೊಡಗೆ ಸಂಚರಿಸ ತೊಡಗಿದೆನು. ಮನೆಗೆ ಮನೆತನಾಗಿದ್ದರೂ ನಾನು ಈ ವೈಭವಗಳಿಗೊಳಗಾಗಿ ಮಾವನ ಮನೆಯನ್ನು ಎಂದೂ ನೋಡಲೇ ಇಲ್ಲ. ದಾರಿಯಲ್ಲಿ ನನಗೆ ಪತಿಯ ಭೇಟಿಯಾಗುತ್ತಿದ್ದರೂ ಅವನನ್ನು ಕಂಡು ಒಂದುದಿನವಾದರೂ ಲಜ್ಜೆಯಿಂದ ನಾನೇನು ಹಿಂದಿರುಗಲಿಲ್ಲ. ತವರಮನೆಗೆ ಹೋಗಿ; ಪತಿಯ ಆಜ್ಞೆಯನ್ನು ಪಾಲಿಸುತ್ತಾ ಸುಖದಿಂದಿರಬೇಕೆಂಬದಷ್ಟೇ ತಾಯಿಯ ಇಚ್ಛೆಯಾಗಿರುತಿದೆ. ಈ ಉಪದೇಶವನ್ನು ನಾನುಗಣನೆಗೆ ತಾರದೆ ಮುಂದಿನ ಪರಿಣಾಮದಲ್ಲಿಸ್ವಲ್ಪವೂ ದೃಷ್ಟಿ ಇಡದೆ ಮನಸ್ಸಿಗೆ ಬಂದಂತೆ ನಿರ್ಭೀತಿಯಿಂದ ನಡೆಯಲಾರಂಭಿಸಿದೆನು. ತಾಯಿಯು ಜನಾಪವಾದವನ್ನು ಕೇಳಿ ಬಾಯಿ ತೆರೆಯಲಿಲ್ಲ, ಕಡೆಗೂ ನನ್ನನ್ನು ಅಗಲಿ ಹೋದಳು. ನಿಂದಾಸ್ಪದವಾದ ನನ್ನ ಈ ಬೆಡಗು ಒಯ್ಯಾರಗಳನ್ನು ನೋಡಿ ನನ್ನ ಪ್ರಾಣಕಾಂತನು ನನ್ನನ್ನು ಬಿಟ್ಟು ಇನ್ನೊಬ್ಬಳ ಕೈಹಿಡಿದನು. ಈ ಕೃತಕಸುಖವೇ ನಿಜವೆಂದು ತಿಳಿದು ಸಂಸಾರದ ನಿಜಸುಖವನ್ನು ನಾನೇ ಬಿಟ್ಟುಬಿಟ್ಟೆನು. ಸುಶೀಲೆಯರಾದ ಕಾಮಿನಿಯರು ನನ್ನನ್ನು ನೋಡಿ—ಛೀ—ಥೂ—ಎಂದುಗಿಯುತ್ತಾರೆ. ಭಗಿನಿಯರೇ, ಇದನ್ನು ಕೇಳಿ ಜಾಗರೂಕರಾಗಿರಿ ಈ ಸುಧಾರಣೆಯ ಮಾರ್ಗವನ್ನೇ ಬಿಟ್ಟುಬಿಡಿರಿ. ಇದಕ್ಕಿಂತಲೂ ವಿಶೇಷ ಸುಖಕರವಾದ ಸುಶೀಲೆಯರ ಮಾರ್ಗವನ್ನು ನಿಮಗೆ ಹೇಳುತ್ತೇನೆ. ದಯವಿಟ್ಟು ಕೇಳಿರಿ, ಅದೇನಂದರೆ:—ಗಂಡನೇ ದೇವರೆಂದು ತಿಳಿದು ಅವನನ್ನು ನೀವು ಪ್ರತಿದಿನವೂ ಭಜಿಸುತ್ತಿರಬೇಕು, ಇದಕ್ಕಿಂತಲೂ ಉತ್ತಮ ಮಾರ್ಗವು ಬೇರೆ ಯಾವದೂ ಇಲ್ಲವು.

ನೀಲಗಿರಿಯಲ್ಲಿ “ಬಡಗ” ರೆಂಬ ಜನರು ಇದ್ದಾರೆ. ಅವರೊಳಗೆ ಯಾರಾದರೂ ಮೃತಪಟ್ಟರೆ ಒಂದು ಉನ್ನತವಾದ ಚಪ್ಪರವನ್ನು ಕಟ್ಟಿ ಅದರಲ್ಲಿ ಅವನ ಶರೀರವನ್ನಿಟ್ಟು ಆ ಶರೀರದಲ್ಲಿ ಪಿಶಾಚಗಳ ಪ್ರವೇಶವಾಗದಂತೆ ಜನರು ಬಹಳ ಭಯಂಕರ ಧ್ವನಿಯುಳ್ಳ ವಾದ್ಯಗಳ ಸಮೇತರಾಗಿ ಕುಣಿಯುತ್ತಾರೆ. ಆ ಮೃತಪಟ್ಟವನ ಸದ್ಗುಣಗಳನ್ನು ಕೆಲವರು ಹೊಗಳುತ್ತಾರೆ. ಅವನು ಮಾಡಿರಬಹುದಾದ ಅಪರಾಧಗಳನ್ನು ಒಂದು ಎತ್ತಿನಮೇಲೆ ಆಪಾದನೆಮಾಡುತ್ತಾರೆ. ಆಗ ಅವರು ಹೇಳುವ ಪದ್ಯದ ಅರ್ಥವೇನಂದರೆ:—“ಈತನು ಸತ್ತಿದ್ದಾನೆ. ಬಂಗಿ ಎಂಬ ದಿನದಲ್ಲಿ ಹುಟ್ಟಿದ ಬಸವನು ಇಲ್ಲಿದ್ದಾನೆ, ಮೃತನಾದವನು ೧೩೦೦ ಪಾಪಗಳನ್ನು ಮಾಡಿರಬಹುದು. ಅವುಗಳೆಲ್ಲಾ ಬಸವನ ಅಡಿಗೆ ಹೋಗಲಿ. ಅವನು ಸರ್ಪವನ್ನು ಕೊಂದಿದ್ದಾನೆ, ಇದು ಒಂದುಪಾಪ. ಅವನು ಹಲ್ಲಿಯನ್ನು ಕೊಂದಿದ್ದಾನೆ, ಇದೊಂದು ಪಾಪ.

ಅವನು ಸಹೋದರರೊಳಗೆ ವಿವಾದಗಳನ್ನು ಹುಟ್ಟಿಸಿದ್ದಾನೆ, ಇದೊಂದು ಪಾಪ. ಅವನು ಗದ್ದೆಯ ಗಡಿ-ಅಂಚನ್ನು ನಾಶಮಾಡಿದ್ದಾನೆ, ಇದು ಒಂದು ಪಾಪ. ಅವನು ಅನ್ಯರ ಅನ್ನದಲ್ಲಿ ವಿಷ ಹಾಕಿದ್ದಾನೆ, ಇದೊಂದು ಪಾಪ. ಅವನು ತನ್ನ ಊರಿನಲ್ಲಿ ಅನ್ಯರಿಗೆ ತಪ್ಪುದಾರಿಯಂ ತೋರಿಸಿದ್ದಾನೆ, ದೊಂದು ಪಾಪ. ಇವನು ಶುದ್ಧಿಮಾಡಲ್ಪಟ್ಟ ದನದ ಹಾಲನ್ನು ತೆಗದುಕೊಂಡಿದ್ದಾನೆ, ಇದು ಒಂದು ಪಾಪ. ಛಳಿಯಿಂದ ನಡುಗುವವರಿಗೆ ಅವನು ಚಿಂದಿ ಒದಗಿಸಿ ಕೊಡಲಿಲ್ಲ, ಹಸಿದವರಿಗೆ ಆಹಾರಕೊಡಲಿಲ್ಲ, ಇದೊಂದು ಪಾಪ. ಅವನು ಮಂಚದಮೇಲೆ ಕುಳಿತು ಅವನ ಮಾವನನ್ನು ನೆಲದಲ್ಲಿ ಕುಳ್ಳಿರಿಸಿದ್ದಾನೆ, ಇದೊಂದು ಪಾಪ. ಅವನು ತನ್ನ ನೆರೆಯವನ ಎಳ್ಳೆ ಎಮ್ಮೆಯಂ ಕಂಡು ಆಶೆಪಟ್ಟನು ಇದೊಂದು ಪಾಪ. ಅವನ ಮತ್ತು ಅವನ ತಂದೆಯ ಪಾಪಗಳು ೧೩೦ ಆಗಿರುವದಾದರೂ ಅವುಗಳು ಬಸವನ ಅಡಿಗೆ ಹೋಗಲಿ. ಮರಣದ ಕೋಣೆಯು ತೆರೆಯಲ್ಪಡಲಿ. ಸಮುದ್ರವು ಹತ್ತಿರ ಬರಲಿ. ನೂಲಿನಂತಾ ಸಂಕವು ಘಟ್ಟಿಯಾಗಿ ನಿಲ್ಲಲಿ. ಶರಭದಬಾಯಿಯು ಮುಚ್ಚಿಕೊಂಡಿರಲಿ ನರಕದಬಾಗಿಲು ಹಾಕಿರಲಿ. ಸ್ವರ್ಗದ ದ್ವಾರವು ತೆಗದಿರಲಿ. ದಾರಿಯು ಮುಳ್ಳುಗಳುಳ್ಳದ್ದಾದರೂ ಅವನು ಸುರಕ್ಷಿತವಾಗಿ ಹೋಗುವನು. ಬೆಳ್ಳಿಯ ಕಂಭವು ಹತ್ತಿರವಿರುವದು ಚಿನ್ನದ ಗೋಡೆಯು ಸಮೀಪ ಅವನು ಮುಟ್ಟುವನು. ಉರಿಯುವ ಕಂಭವು ಅವನಿಗೆ ತಣ್ಣಗಾಗಿ ಕಾಣುವದು. ಭಲಾ! ಅವನ ಪಾಪಗಳೆಲ್ಲಾ ಕ್ಷಮಿಸಲ್ಪಡಲಿ. "ಅವನಿಗೆ, ಸುಖವಾಗಲಿ ಸುಖವಾಗಲಿ." ಬಡಗರು ಮರಣಾನಂತರ ಜೀವನಿಗೆ ಸುಖದುಃಖಗಳುಂಟೆಂದು ನಂಬುತ್ತಾರೆಂತ ಇದರಿಂದ ಸ್ಪಷ್ಟವಾಗುತದೆ. ಈ ವಿಷಯವು ಕುರಿತು ಒಂದೊಂದು ಮತದಲ್ಲಿ ಒಂದೊಂದು ವಿಧವಾಗಿ ತಿಳಿಸಲ್ಪಟ್ಟಿರುವಾಗ್ಯೆ ಹೆಡ್ಡರು ಏನು ಮಾಡಬೇಕು?

ಈಗ ಕ್ರಿಶ್ಚಿಯನ್ನರೆಲ್ಲರೂ ತಮ್ಮ ವೇದಕ್ಕೆ ಸತ್ಯವೇದ ವೆಂಬದಾಗಿ ಹೆಸರಿಟ್ಟುಕೊಂಡಿದಾರೆಯಷ್ಟೆ. ಇದರಲ್ಲಿ ಎಷ್ಟರಮಟ್ಟಿಗೆ ಸತ್ಯವಿಷಯಗಳು ತಿಳಿಸಲ್ಪಟ್ಟಿರುತಿವೆಯೋ ಅದು ಅಗೋಚರವಾಗಿಯೇ ಇದೆ. ಬೈಬಲ್ ಎಂಬದು ನಮ್ಮ ವೇದದಂತೆ ಅನೇಕನಿತಾ ಚಮತ್ಕೃತಿಯಂ ವ್ಯಕ್ತಗೊಳಿಸತಕ್ಕಂತಾ ಕಾವ್ಯಲಕ್ಷಣವುಳ್ಳದ್ದಾಗಿರುವದಿಲ್ಲವು. ಇದಲ್ಲದೆ ವರ್ಣಸ್ವರ ನಿಯಮವುಳ್ಳ ಛಂದೋರೂಪವಾಗಿರುವಂತೆ ನುಡಿಯುವದಕ್ಕಾಗುವದಿಲ್ಲವು. ಸದರೀ ಬೈಬಲ್, ಮೊದಲಿನಿಂದ ಕೊನೆಗೂ ಸಮಯೋಚಿತತೆಗಳುಳ್ಳ ಲೌಕಿಕ ಶಬ್ದಗಳಿಂದ ಬೇಕಾದಾಗ ಬದಲಾಯಿಸಿಕೊಳ್ಳಲಿಕ್ಕೆ ಅನುಕೂಲವಾಗಿರುವ ಶೈಲಿಯಲ್ಲಿ ಬರೆಯಲ್ಪಟ್ಟದ್ದಾಗಿರುತ್ತಿದೆ. ಇದು ವೇದವೆಂದು ನುಡಿಯಲಿಕ್ಕೆ, ಹಿಂದೂಗಳ ವೇದದಂತೆ ಜೀವಾತ್ಮ ಪರಮಾತ್ಮ ಲಕ್ಷಣಗಳಂ ಬೋಧಿಸುವ ಪ್ರಕರಣಗಳ್ಯಾವವೂ ಇದರಲ್ಲಿ ಗೋಚರಗಳಾಗುವದಿಲ್ಲವು ಮಂತ್ರ ತಂತ್ರ ಪ್ರಕ್ರಿಯೆಗಳು ಸದರೀ ಗ್ರಂಥದಲ್ಲಿ ಅಡಗಿರುವಂತೆ ಕಾಣಿಸುವದಿಲ್ಲವು. ಪೂರ್ವೋತ್ತರಾನ್ವಯಗಳುಳ್ಳ ವಚನಗಳ್ಯಾವದಾದರೂ ಅಡಗಿವೆಯೇ, ಅಥವಾ ಉಪಾಸನಾಕ್ರಮವೇನಾದರೂ ಬೋಧಿಸಲ್ಪಡುತಿದೆಯೆ, ಅಲ್ಲದೆ ದ್ವೈತಾದ್ವೈತ ವಿಶಿಷ್ಟಾದ್ವೈತ ಭಾವಗಳೇನಾದರೂ ವ್ಯಕ್ತಗೊಳಿಸಲ್ಪಡುತಿವೆಯೇ ಅಂದರೆ ಅವುಗಳೊಂದೂ ಬೈಬಲ್‌ನಲ್ಲಿ ಕಾಣಿಸುವದಿಲ್ಲವು ಕೆಲವು ದೈವಿಕ ವಿಷಯಗಳೂ ಕೆಲವು ಪುರಾಣವೃತ್ತಾಂತಗಳೂ ಅಡಗಿರುವಂತಾ ಗ್ರಂಥವಂ ಸತ್ಯವೇದವೆಂಬದಾಗಿ ಹ್ಯಾಗೆ ಅಂಗೀಕರಿಸ ಬಹುದೋ ನಾವರಿಯೆವು. ಬೈಬಲ್‌ನಲ್ಲಿ ಓಲ್ಡ್ ಟೆಸ್ಟಮೆಂಟ್ ಎಂತಲೂ ನ್ಯೂಟೆಸ್ಟಮೆಂಟ್ ಎಂತಲೂ ಎರಡು ಭಾಗಗಳೇರ್ಪಟ್ಟಿರುತಿವೆ. ಹಳೇ ಏರ್ಪಾಡು ಅನುಪಯುಕ್ತವೆಂದು ನೂತನ ಏರ್ಪಾಡು ಸಹ ಒಂದು ಕಲ್ಪಿಸಲ್ಪಟ್ಟಿತು. ಇನ್ನುಮೇಲೆ ನವಿನವ ಏರ್ಪಾಡುಗಳು ಕೂಡ ಬರುತಬರುತ ನಾಗರಿಕತೆ ವೃದ್ಧಿಯಾಗುತ ಬರುವಮಟ್ಟಿಗೆ ಉಂಟಾಗುತ ಬರಬಹುದೆಂದೆಣಿಸುತ್ತೇವೆ. ಹೀಗಿರುವಲ್ಲಿ ವೇದಸಿಕ್ಕೆಯಿಲ್ಲದ್ದನ್ನು ವೇದವೆಂದು ಹ್ಯಾಗೆನುಡಿಯಬಹುದು? ಅದು ಈಶ್ವರ ಪ್ರೋಕ್ತವೆಂಬದಕ್ಕೇನು ಆಧಾರ? ಹಿಂದೂವೇದಗಳು ಅಪೌರುಷೇಯಗಳೆಂಬದಕ್ಕೆ ಅದರೊಳು ಒಂದೊಂದು ಪ್ರಕರಣದಲ್ಲಿ ತಿಳಿಸಲ್ಪಟ್ಟಿರುವ ಕೆಲವು ಮಂತ್ರ ಪ್ರಶ್ನೆಗಳೇ ಸಾಕಾದ ನಿದರ್ಶನಗಳಾಗಿರುತಿವೆ ಸದರೀ ಮಂತ್ರಗಳು ಸಕಲ ಪ್ರಯೋಗಗಳಿಗೂ, ವಿಷಚಿಕಿತ್ಸೆಗಳಿಗೂ, ಬಹುವಿಧವ್ಯಾಧಿಗಳಿಗೂ, ಉಪಯುಕ್ತಗಳಾಗಿ ತನ್ನಿವಾರಕಗಳಾಗುವ ವಿಷಯ ಜಗತ್ಪ್ರಸಿದ್ಧವಾಗಿರುತಿದೆ ಕೇವಲ ಮಂತ್ರಗಳಿಂದಲೇ ಮೋಹನ ಮಾರಣಸ್ತಂಭನ ಉಚ್ಚಾಟನಾದಿ ಕ್ರಿಯೆಗಳಂ ಮಾಡಲಿಕ್ಕೆ ಸಾಧ್ಯವಾಗುತಿವೆ ಮಂತ್ರದಿಂದಲೇ ಘೋರವಾದ ವಿಷವು ಹೋಗಲಾಡಿಸಿ ಮನುಷ್ಯನಂ ಬದುಕಿಸಬಹುದು. ಮಂತ್ರಪ್ರಯೋಗದಿಂದಲೇ ಶತ್ರುನಿಗ್ರಹವಂ ಮಾಡಿಕೊಳ್ಳಬಹುದು. ಮಂತ್ರ ಬಲದಿಂದಲೇ ದೇವತಾ ಪ್ರಸಾದವಂ ಪಡೆಯಬಹುದು ಮುಖ್ಯವಾಗಿ ಮಂತ್ರಬಲದಿಂದ ಅಘಟನ ಘಟನಾ ಸಾಮರ್ಥ್ಯವಂ ಸಂಪಾದಿಸಿಕೊಳ್ಳಬಹುದಾಗಿರುತಿದೆ. ಇಂತಾ ಮಂತ್ರಾತ್ಮಕವಾದ ವೇದವನ್ನು ಅಪೌರುಷೇಯ ವೆಂದು ನುಡಿಯಬಹುದೇ ಹೊರ್ತು ಅಂದೊಂದೂ ಇಲ್ಲದಂತಾ ಸಂಸ್ಕೃತಶಬ್ದ ವಾಕ್ಯಗಳುಳ್ಳ ಬೈಬಲ್ ಎಂದಿಗೂ ಭಗವತ್ಪ್ರೋಕ್ತವಾದದ್ದೆಂದು ನುಡಿಯಲಾಗದು. ಇಂತಾ ಗ್ರಂಥವನ್ನೊಂದು ಪ್ರಮಾಣವಾಗಿ ಅಂಗೀಕರಿಸಿ ಕ್ರಿಶ್ಚಿಯನ್ನರುಗಳು ಈ ಜಗತ್ಸೃಷ್ಟಿಯ ವಿಷಯವು ಕುರಿತು ತಿಳಿಸುವದೇನೆಂದರೆ, ಆದಿಯಲ್ಲಿ ಭಗವಂತನು ಕೆಂಪು ಮಣ್ಣಿನಿಂದ ಒಂದು ಪ್ರತಿಮೆಯಂ ಮಾಡಿ ಅದರ ನಾಸಿಕ ಮೂಲಕ ಪ್ರಾಣವಾಯುವಂ ಬಿಟ್ಟು ಅದಕ್ಕೆ ಆಡಂ ಎಂದು ಹೆಸರಿಟ್ಟು ಅದರ ಪಕ್ಕೆ ಎಲುಬನ್ನು ತೆಗದು ಅದರಿಂದ ಈವ್ ಎಂಬ ಸ್ತ್ರೀ ಪ್ರತಿಮೆಯಂ ಮಾಡಿ ಅದಕ್ಕೂ ಮೇಲೆ ಕಂಡಂತೆ ಜೀವಕಳೆಯಂ ಕಲ್ಪಿಸಿ ಅವರಿಬ್ಬರ ಸಂಬಂಧಪೂರ್ವಕ ಈ ಭೂಲೋಕದ ಪ್ರಜೆಗಳೆಲ್ಲರೂ ಜನಿಸುವಂತೆ ಆಜ್ಞಾಪಿಸಿದನೆಂದು ನುಡಿಯುತ್ತಾರೆ. ಇದಕ್ಕಿಂತಲೂ ಹಾಸ್ಯಾಸ್ಪದವಾದದ್ದು ಬೇರೊಂದೂ ಇರುವದಿಲ್ಲವು ಜಗತ್ಪತಿಯಾದ ಈಶ್ವರನು ಮನೋಸಂಕಲ್ಪಮಾತ್ರದಿಂ ಭೂಲೋಕ ಭುವರ್ಲೋಕ ಸುವರ್ಲೋಕಗಳೆಂಬ ತ್ರಿಭುವನಗಳಂ ಸೃಜಿಸಿದನೆಂದು ಹಿಂದೂಗಳು ಅಭಿಪ್ರಾಯಪಡುತ್ತಾರೆ. ಇವರ ಅಭಿಪ್ರಾಯಾನುಸಾರ ಈಶ್ವರನು ಇಚ್ಛಾಮಾತ್ರ ನಿರ್ಮಾಣ ಚಾತುರ್ಯಧುರೀಣ ನೆಂಬದಾಗಿ ಅಂಗೀಕರಿಸಿದಾಗ್ಯೂ, ಪ್ರಕೃತ ನಿರ್ಮಾಣಕ್ಕೆ ಪೂರ್ವ ಭಗವಂತನು ಎಲ್ಲಿ ಯಾವ ರೂಪವಾಗಿದ್ದ ಸಂಕಲ್ಪಿಸಿದನೆಂಬ ಅಂಶಸ್ಪಷ್ಟವಾಗುವದಿಲ್ಲವು. ಶುದ್ಧ ಶೂನ್ಯದೊಳು ಶೂನ್ಯರೂಪದಿಂ ಅವಾಙ್ಮನಸಗೋಚರನಾಗಿ ಪ್ರಪಂಚ ಸೃಷ್ಟಿಯಂ ಮಾಡಿದನೆಂದು ನುಡಿಯುವ ಪಕ್ಷಕ್ಕೆ ಕಡೆಗೆ ಕರ್ತೃಕ್ರಿಯಾ ಸ್ಥಾನಗಳೆಲ್ಲವೂ ಮರಳಿ ಶೂನ್ಯದಲ್ಲಿಯೇ ಪರ್ಯವಸಾನವನ್ನೈದಬೇಕಾಗುತದರಿಂದ ಬಳಿಕ ಯಾವ ಮಾತವನ್ನೂ ಕ್ರಮ ಪಡಲೇಕಾಗಿರಲಾರದು. ಇದು ಆಸ್ತಿಕರು ಒಪ್ಪುವದು ಪ್ರಯಾಸವು. ಇದು ಹಾಗಿರಲಿ, ಈಶ್ವರನು ಇಚ್ಛಾಮಾತ್ರದಿಂದಲೇ ಸಕಲ ಭುವನಗಳನ್ನೂ ಸೃಜಿಸಿದನೆಂಬದು ಲೌಕಿಕ ದೃಷ್ಟಾಂತದಿಂ ಕಂಡು ಕೊಳ್ಳಬಹುದು. ಅದು ಹ್ಯಾಗಂದರೆ—ನಿದ್ರಾವಸಾನ ಸಮಯದಲ್ಲಿ ಮನೋಸಂಕಲ್ಪಗಳಾದ ಮಹಿಮೆಯಿಂದ ಗಿರಿಗಹನ ನಗರಾರಾಮ ಹಂಸ್ತ್ಯಾದಿಗಳುಳ್ಳ ಭಾವನಾ ಜಗತ್ತನ್ನು ಭಾವಿಸಿದ ಮಾತ್ರದಲ್ಲಿ ಸ್ವಪ್ನಾವಸ್ಥೆಯೊಳು ಅದುಂಟಾಗುವಂತೆ ಈಶ್ವರನು ಗಾಯತ್ರೀ ಉಚ್ಚಾರಣಮಾತ್ರದಿಂ ಏಕಕಾಲದಲ್ಲಿ ಭೂರ್ಭುವಸ್ಸುವರ್ಲೋಕಗಳು ಉತ್ಪತ್ತಿಯಾದವೆಂದು ನಮ್ಮವರು ತಾತ್ಪರ್ಯಪಡುತ್ತಾರೆ. ಈ ವಿಷಯದಲ್ಲಿ ಸದಸದ್ವಿವೇಚಕರಾದ ಪ್ರಾಜ್ಞರಂ ನಾವು ಕೇಳುವದೇನೆಂದರೆ, ಸತ್ಯಸಂಕಲ್ಪನಾದ ಈಶ್ವರನು ಇಚ್ಛಾಮಾತ್ರದಿಂ ನಿರ್ಮಾಣ ಮಾಡುವ ಶಕ್ತಿಯುಳ್ಳವನಾದದರಿಂದ ಅವನು ಶ್ರೇಷ್ಠನೇ ಅಲ್ಲದೆ ಮಣ್ಣುಮಣ್ಣು ಪುತ್ಥಳಿಕೆಯಂ ಮಾಡಿ ಅದಕ್ಕೆ ಪ್ರಾಣಪ್ರತಿಷ್ಠೆಯಂಗೈದು ಅದರ ಮೂಲಕ ಸರ್ವಲೋಕಗಳನ್ನೂ ಲೋಕಾಂತರ್ಗತಗಳಾದ ಪದಾರ್ಥಗಳನ್ನೂ ದಿನಕ್ರಮದಿಂ ೭ದಿನಗಳ ಪರಿಯಂತ ನಿರ್ಮಿಸಿದಾತನು ಶ್ರೇಷ್ಠನೆ? ಕಾರಣರೂಪವಾದ ಸ್ವಮಹಿಮೆಯಿಂದ ಸಕಲವಂ ಸೃಜಿಸಿದ ಈಶ್ವರನುತ್ತಮನೋ ಅಲ್ಲದೆ ಸ್ತ್ರೀ ಪುರುಷರಿಬ್ಬರಂ ನಿರ್ಮಿಸಿ ಅವರ ಮತ್ತು ಅವರ ಸಂತತಿಯವರ ಸಂಗಮದಿಂ ಪ್ರಪಂಚದೊಳಿರುವ ಮನುಷ್ಯರನ್ನೆಲ್ಲ ನಿರ್ಮಿಸಿದ ಈಶ್ವರನು ವ್ಯಾಪಕನೋ? ಇದಲ್ಲದೆ ಈಗಲೂ ಜಹಜ್ ಸಂಚಾರಕ್ಕೆ ಅವಕಾಶವಿಲ್ಲದಿರುವ ದ್ವೀಪಗಳನೇಕ ಇರುತಿವೆ. ಅವುಗಳಲ್ಲೆಲ್ಲ ಭೂಚರ ಖೇಚರಗಳಾದ ಪ್ರಾಣಿಕೋಟಿಗಳೊಡನೆ ಮನುಷ್ಯರು ಅನೇಕರಿರುತಿರುವರಷ್ಟೆ. ಆ ದ್ವೀಪಗಳಿಗೆಲ್ಲಾ ಆಡಂ ಪುತ್ರರಾದ ಅವರೆಲ್ಲರೂ ಯಾವ ಯೋಗಜ ಪಗಳನ್ನು ಕೇಳಿರಿಸಿಕೊಂಡು ಹೋಗಿ ಅಲ್ಲಿಯಲ್ಲಿ ನೆಲೆಸಿದರೋ ನಾವರಿಯೆವು. ಅಥವಾ ಆದಂ ಗರ್ಭದಾನಕ್ಕಾಗಿ ಆ ಪ್ರದೇಶಗಳಲ್ಲೆಲ್ಲಾ ಸಂಚರಿಸಿ ಬಂದಂತೆಯಾದರೂ ಸ್ಪಷ್ಟವಾಗುವದಿಲ್ಲವು ಆದ. ಎಂಬ ಶಬ್ದವು ಸಾಮಾನ್ಯವಾಗಿ ಮನುಷ್ಯರೆಲ್ಲರಿಗೂ ಅನ್ವಯಿಸತಕ್ಕ ಶಬ್ದವಾಗಿರುತಿದೆ. ಆದಮಿ ಎಂಬ ತುರುಕ್ಕ ಶಬ್ದದಿಂ ಆದಂ ಎಂಬ ರೂಪನಿಷ್ಪತ್ತಿಯಾದಂತೆ ತೋರುತಿದೆ. ಆದಂ ಎಂಬ ಶಬ್ದಾಂತರದ ಭಾವವು ವಿಮರ್ಶಿಸಿ ನೋಡಲಾಗಿ "ದಂ" ಅಂದರೆ ಶ್ವಾಸ, ಇದಕ್ಕೆ "ಅ" ಎಂಬ ಅವ್ಯಯಾಕ್ಷರಸಂಯೋಗದಿಂ ಆತ್ಮೀ ಎಂದೇರ್ಪಟ್ಟಂತೆ ಕಾಣುತಿದೆ. ಇದರಿಂದ ಉಚ್ಛ್ವಾಸ ನಿಶ್ವಾಸಗಳುಳ್ಳ ಪ್ರಾಣಿ ವರ್ಗಗಳಿಗೆಲ್ಲ ಆದಂ ಎಂಬ ಪದವ್ಯವಹಾರ ಯೋಗ್ಯವಾದದ್ದಾದರೂ, ಸಂಕೇತಾನಿ ಶಬ್ದವಶಾತ್ ಆದ್ಮಿ ಎಂಬ ಪದವು ಮನುಷ್ಯ ಪರವಾಗಿಯೇ ರೂಢಿಯಾಗಿ ಉಪಯೋಗಿಸಲ್ಪಡುತಬರುತಿದೆ. ಆದಕಾರಣ ಈಶ್ವರನಿರ್ಮಿತರಾದ ಪ್ರಜೆಗಳೆಲ್ಲರೂ ಆದಂ ಎನ್ನಿಸಿಕೊಳ್ಳತಕ್ಕವರಾಗಿರುತ್ತಾರೆ ಇನ್ನು ಕ್ರಿಶ್ಚಿಯನ್ನರು ತಮ್ಮ ಬೈಬಲಿನ ಆಧಾರದಮೇಲೆ ತಿಳಿಸುವ ಜಲಪ್ರಳಯವು ಕುರಿತು ಸ್ವಲ್ಪವಿಚಾರ ಮಾಡುವೆವು ಈಶ್ವರನು ಆರ್ಕ್ ಎಂಬ ನಾವೆಯನ್ನೇರ್ಪಡಿಸಿ, ನಿಮಿತ್ತಕಾರಣಗಳಾದ ೮೪ ಕೋಟಿ ಜೀವರಾಶಿಗಳಲ್ಲಿ ಒಂದೊಂದು ರಾಶಿಗೆ ಒಂದೊಂದು ಜೋಡಿಯಂತೆ ವಿಭಜಿಸಿ ಸಂಸಾರಯುಕ್ತನಾದ ನೋವಾ ಎಂಬವನನ್ನು ಸದರೀ ನಾವೆಯಲ್ಲಿ ಕುಳ್ಳಿರಿಸಿ ಆ ಜಹಜ್ ವಿನಾ ಮಿಕ್ಕ ಪ್ರಪಂಚವೆಲ್ಲಾ ನಾಶವಾಗುವಂತೆ ದೇವರು ಆಜ್ಞಾಪಿಸಿದನೆಂತಲೂ, ಆದದರಿಂದ ಜಲಪ್ರಳಯವಾಗಲಿಕ್ಕೆ ಕಾರಣವಾಯಿತೆಂತಲೂ ಕ್ರಿಶ್ಚಿಯನ್ನರು ಹೇಳುತಲಿರುತ್ತಾರೆ. ಸರ್ವಶಕ್ತನಾದ ಈಶ್ವರನಿಗೆ ಪುನಸ್ಸೃಷ್ಟಿಯ ಬಗ್ಯೆ ಪ್ರತಿಯೊಂದು ರಾಶಿಯಲ್ಲಿಯೂ ಒಂದು ಜತೆ ಬೇಕಾಗಿರುವದು ಎಷ್ಟರ ಹಾಸ್ಯಾಸ್ಪದವಾದ ಮಾತಾಗಿರುತಿದೆ.? ಹಾಗಿದ್ದಾಗ್ಯೂ ಸ್ವಭಾವದಲ್ಲಿ ಒಂದುರಾಶಿಯು ಮತ್ತೊಂದುರಾಶಿಗೆ ಶತ್ರುಮಿತ್ರ ಭಾವಗಳುಳ್ಳದ್ದಾಗಿರಲಿಕ್ಕೇನು ಕಾರಣವೋ ನಮಗೆ ತಿಳಿಯದು. ಈ ನ್ಯಾಯದಿಂ ಜೀವೋಜೀವಸ್ಯ ಭಕ್ಷ್ಯತೆ ಎಂಬಂತೆ ಎಲ್ಲವೂ ಒಂದಕ್ಕೊಂದು ಶತ್ರುಗಳಾಗಿ ಏರ್ಪಟ್ಟ ಪರಸ್ಪರ ನಾಶವಾಗಬೇಕಾಗುತಿವೆ ಮುಖ್ಯವಾಗಿ ೮೪ ಕೋಟಿ ಜೀವಜಂತುಗಳು ಪ್ರಳಯಕಾಲದಲ್ಲಿ ನಿದ್ರಾಹಾರಗಳಂ ತೊರೆದು ಭೂ ದರ್ಶನವಾಗುವ ತನಕ ಜಲಮಧ್ಯದಲ್ಲಿ ಒಂದು ನಾವೆಯಲ್ಲಿ ನೆಲೆಸಿದ್ದವೆಂದು ನುಡಿಯುವ ಮಾತು, ವಂಧ್ಯಾಪುತ್ರನ ರೂಪಗುಣವರ್ಣನೆಗಳಂ ತಿಳಿಯುವದೇ ಹೊರ್ತು ಈಗಿನಕಾಲದಲ್ಲಿ ಕ್ರಿಶ್ಚಿಯನ್ನರುಕೂಡ ನಂಬುವರೆಂದು ನಾವು ಭಾವಿಸುವದಿಲ್ಲವು ಏತೇನ ಮಿಷನರಿಗಳು ತಮ್ಮಮತಪ್ರಚಾರಕ್ಕೆ ಸಾಧಕವಾಗಿ ಬೋಧಿಸುತಬಂದ ಸ್ವಮತ ಗ್ರಂಥ ಪಠನದಿಂ ಸಮ್ಮವರಿಗೆ ತಮ್ಮತದಲ್ಲಿ ಪ್ರೀತಿಗೌರವಗಳುಂಟಾಗಲಿಕ್ಕೆ ಬದಲು ಅದರಲ್ಲಿ ಅಪನಂಬಿಕೆಯೂ, ಅಪ್ರಮಾಣಿಕತಾಜ್ಞಾನವೂ ಪರಿಸ್ಫುರಿತವಿರುವ ಬಾಷಗಳೂ ತಲೆದೋರಿ ಅವು ಓದತಕ್ಕವರಲ್ಲರೂ ಖಂಡನ ಮಾಡುವಂತೆ ಪರಿಣಮಿಸಿದ್ದಕ್ಕಾಗಿ ನಾವು ಬಹಳ ಆಶ್ಚರ್ಯಪಡುತ್ತೇವೆ.

THE MYSORE GAZETTE.

ಮೈಸೂರು ಗೆಜೆಟಿ.

ಶ್ರೀಮನ್ಮಹಾರಾಜ ರಾಜಾಸಾಹೆಬ್ ಬಹದೂರವರ ದಿವಾನರವರಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು

ನಂ ೧೨೫, ತಾ|| ೬ನೇ ಆಗಸ್ಟು ೧೮೮೮— ಇದರಡಿಕಂಡ ಅಸಿಸ್ಟೆಂಟ್ ಕಮಿಷನರ್‌ಗಳ ವರ್ಗಾವರ್ಗಿಗಳು ಮಂಜೂರ್‍ಮಾಡಲ್ಪಟ್ಟಿರುತಿವೆ.

ಮೆ|| ಜೆ ಡಬ್ಲ್ಯೂ ಸ್ಮೈಥಿಯವರು ಮೈಸೂರು ಹುಜೂರ್‌ಛಾರ್ಜಿನಲ್ಲಿರತಕ್ಕಬಗ್ಯೆ ಬೆಂಗಳೂರು ಡಿಸ್ಟ್ರಿಕ್ಟಿನಿಂದ ಮೈಸೂರು ಡಿಸ್ಟ್ರಿಕ್ಟಿಗೆ.

ಮೆ|| ಬಿ. ತಿರುಮಲಾಚಾರ್ಯರವರು ಫ್ರೆಂಚ್‌ರಾಕ್ಸ್ ಸಬ್‌ಡಿವಿಜನ್ ಛಾರ್ಜಿನಲ್ಲಿರತಕ್ಕಬಗ್ಯೆ ಶಿವಮೊಗ್ಗೆಯಿಂದ ಮೈಸೂರುಡಿಸ್ಟ್ರಿಕ್ಟಿಗೆ; ಇವರು ಮೆ|| ನಂಜುಂಡಯ್ಯನವರಿಂದಲಾಗಲಿ, ಅಥವಾ ಇತರ ಯಾವ ಅಸಿಸ್ಟೆಂಟ್ ಕಮಿಷನರ್‌ಗಳಿಂದಲಾಗಲಿ ಬಿಡುಗಡೆಯಾದಕೂಡ್ಲೇ ಕೆಲಸದ ಮೇಲೆ ಹಾಜರಾಗತಕ್ಕದ್ದು.

ಮೆ|| ಮಹಮದಲ್ಲೀಯವರು ತುಮಕೂರು ಡಿಸ್ಟ್ರಿಕ್ಟಿನಿಂದ ಬೆಂಗಳೂರು ಡಿಸ್ಟ್ರಿಕ್ಟಿಗೆಕೂಡಲೇಹೋಗಿ ಹಾಜರಾಗತಕ್ಕದ್ದು. ಮೆ|| ದೇವರಾಜೇ ಅರಸಿನವರು ಬರುವತನಕ ತುಮಕೂರು ಡಿಸ್ಟ್ರಿಕ್ಟ್ ಪೊಲೀಸ್‌ಛಾರ್ಜನ್ನು ಹುಗಾಮಿಯಾಗಿ ಮೆ|| ಪಂಚನದರಾಯರವರು ವಹಿಸತಕ್ಕದ್ದು.

ಮೆ|| ಡಿ. ದೇವರಾಜೇ ಅರಸಿನವರು ತುಮಕೂರು ಪೊಲೀಸ್‌ಛಾರ್ಜಿನಲ್ಲಿರತಕ್ಕಬಗ್ಯೆ ಮೈಸೂರಿಂದ ತುಮಕೂರುಡಿಸ್ಟ್ರಿಕ್ಟಿಗೆ; ಇವರು ತಿರುಮಲಾಚಾರ್ಯರವರಿಂದ ಬಿಡುಗಡೆಯಾದಕೂಡ್ಲೇ ಕೆಲಸದಮೇಲೆಹಾಜರಾಗತಕ್ಕದ್ದು.

ಮೆ|| ಹೆಚ್ ವಿ. ನಂಜುಂಡಯ್ಯನವರು ಜನರಲ್ ಡ್ಯೂಟೀಬಗ್ಯೆ ಮೈಸೂರಿಂದ ಶಿವಮೊಗ್ಗಾ ಡಿಸ್ಟ್ರಿಕ್ಟಿಗೆ, ಇವರು ಎನ್|| ಕೃಷ್ಣರಾಯರವರಿಂದ ಬಿಡುಗಡೆಯಾದಕೂಡ್ಲೇ ಕೆಲಸದಮೇಲೆಹಾಜರಾಗತಕ್ಕದ್ದು. ಮೆ|| ಎನ್ ಕೃಷ್ಣರಾಯರವರು ಜನರಲ್‌ಡ್ಯೂಟೀಬಗ್ಯೆ ತುಮಕೂರಿಂದಮೈಸೂರು ಡಿಸ್ಟ್ರಿಕ್ಟಿಗೆಹೋಗಿ ಕೂಡ್ಲೇಹಾಜರಾಗತಕ್ಕದ್ದು.

ಮೆ|| ಅಣ್ಣಾಜಿರಾಯರವರು ತುಮಕೂರು ಡಿ|| ಟ್ರೆಜರೀಛಾರ್ಜಿನಲ್ಲಿರತಕ್ಕಬಗ್ಯೆ ಬೆಂಗಳೂರು ಡಿಸ್ಟ್ರಿಕ್ಟಿನಿಂದ ತುಮಕೂರು ಡಿಸ್ಟ್ರಿಕ್ಟಿಗೆ ಕೂಡ್ಲೇಹೋಗಿ ಹಾಜರಾಗತಕ್ಕದ್ದು.

ನಂ ೧೦೬ —೮೮ನೇಇಸವಿ ಜಾರ್ಜಿ ಗುರ್ರೀಲಾಗಾಯತು ಇದರಡಿ ಕಂಡ ಅಸಿಸ್ಟೆಂಟ್ ಕಮಿಷನರ್‌ಗಳ ಆಕ್ಟಿಂಗ್ ತರೀಕ್ ಬಡ್ತಿಗಳು ಹುಕುಂ ಮಾಡಲ್ಪಟ್ಟಿರುತಿವೆ.—

ಮೆ|| ಬಿ. ತಿರುಮಲಾಚಾರ್ಯರವರು ೨ನೇ ಗ್ರೇಡಿನಿಂದ ೧ನೇ ಗ್ರೇಡಿಗೆ, ಮೆ|| ಹೆಚ್ ಎಸ್ ವಾರ್ಡ್ರಾಯವರು ೩ನೇ ಗ್ರೇಡಿನಿಂದ ೨ನೇಗ್ರೇಡಿಗೆ; ಮೆ||ಡಿ ದೇವರಾಜೇ ಅರಸಿನವರು ೪ನೇ ಗ್ರೇಡಿನಿಂದ ೩ನೇಗ್ರೇಡಿಗೆ ವಿಧಿಸಲ್ಪಟ್ಟಿರುವ ಇಲಾಖಾ ಸಂಬಂಧವಾದ ಪರೀಕ್ಷೆಗಳನ್ನು ಬರುವ ಜನವರಿ ತಿಂಗಳಲ್ಲಿ ಕೊಟ್ಟು ತೇರ್ಗಡೆ ಯಾಗಬೇಕಾದ ನಿಯಮಕ್ಕೆ ಇವರ ಬಡ್ತಿಗಳು ಒಳಪಟ್ಟದ್ದಾಗಿರುತಿವೆ.

ನಂ. ೧೦೭ ತಾ|| ೧೩ನೇ ಆಗಸ್ಟು ೧೮೮೮–ಆರನೇ ಚಾಪ್ಟರ್ ಸಿವಿಲ್ ರೂಲ್ ಕೋಡಿನ ೧೩೨ನೇ ಸೆಕ್ಷನ್ ಅನುಸರಿಸಿ ಮೈಸೂರು ರೆವಿನ್ಯೂ ಸರ್ವೇಗೆಸೇರಿದ ಅಸಿಸ್ಟೆಂಟ್ ಸೆಟಲ್‌ಮೆಂಟ್ ಆಫೀಸರ್ ಮಿ ಇ. ಹೆಚ್ ಬುಚ್ಚರ್ ಸಾಹೆಬರವರಿಗೆ, ಅವರು ಉಪಯೋಗಿಸಿಕೊಳ್ಳುವ ತಾರೀಖ್ ಲಾಗಾಯತು ೯ ತಿಂಗಳ ಇಂಡಿಯನ್ ಫರ್ಲೋರಜಾ ಕೊಡಲ್ಪಟ್ಟಿರುತಿದೆ.

ನಂ ೧೦೮ ತಾ|| ೧೫ನೇ ಆಗಸ್ಟು ೧೮೮೮–ಹುಣಸೂರುತಾ|| ಅಮಲ್‌ದಾರ್ ಮಿಯಾಕಮಾಲು ಸ್ಟ್ರೀಟ್ ಅಲ್ಲೀಖಾನರವರಿಗೆ ಮಾಹೇ ಮುಜಕೂರ್ ೩೦ನೇ ತಾರೀಖ್ ಲಾಗಾಯತು ಅಥವಾ ಅವರು ಉಪಯೋಗಿಸಿಕೊಳ್ಳುವ ತಾರೀಖ್ ಮೊದಲು ೨ ತಿಂಗಳು ೧೩ದಿನಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿರುತಿದೆ.

BANGALORE.—Printed and published at the KARNATIC PRESS, No 14, Hospital Road, Petta

ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA.

ಪ್ರತಿ ಸೋಮವಾರ ಪ್ರಾತಃಕಾಲದಲ್ಲಿ ಪ್ರಕಟಿಸಲ್ಪಡುವದು.

Published Every Monday Morning.

[illegible]

Vol. XVI.] BANGALORE.—MONDAY, AUGUST 27, 1888. [No. 34.

ಸಂಪುಟ ೧೬] ಬೆಂಗಳೂರು — ಸರ್ ೧೮೮೮ನೇ ಇಸವಿ ಆಗಸ್ಟು ೨೭ನೇ ತಾರೀಖ್ ಸೋಮವಾರ. [ಸಂಖ್ಯೆ ೩೪.

ಕರ್ಣಾಟಕ ಪ್ರಕಾಶಿಕಾ

ಪತ್ರಿಕೆಯ ಚಂದಾ ದರಗಳು,

೧೮೮೮ನೇ ಇಸವಿ ಜನವರಿಯಿಂದ

ಕಡಮೆ ಮಾಡಲ್ಪಟ್ಟಿರುತ್ತವೆ.

ಈ ಪತ್ರಿಕೆಯ ಚಂದಾದಾರರಲ್ಲಿ ಅನೇಕರ ಅಪೇಕ್ಷೆಯನ್ನು ನೆರವೇರಿಸುವ ಉದ್ದೇಶದಿಂದಲೂ, ಪರಿಮಿತವಾದ ಆದಾಯವುಳ್ಳವರಿಗೆಲ್ಲ ಈ ಪತ್ರಿಕೆಯು ಸುಲಭವಾಗಿ ಲಭಿಸುವಂತಿರಬೇಕೆಂಬ ಅಭಿಪ್ರಾಯದಿಂದಲೂ ಇದರ ಚಂದಾ ದರವನ್ನು ಇದರಡಿಯಂತೆ ಕಡಮೆ ಮಾಡಿರುತ್ತೇವೆಂತೆಂದರೆ.—

ಇಂಗ್ಲೀಷ್ ಮತ್ತು ಕನ್ನಡಭಾಗಗಳಿಗೆ.

	ಸ್ಥಳೀಕರಿಗೆ	ಪರಸ್ಥಳದವರಿಗೆ.
12 ತಿಂಗಳಿಗೆ	3—0—0	9—0—0
6 „	1—0—0	1—8—0
3 „	2—9—0	2—8—0

ಇಂಗ್ಲೀಷ್ ಅಥವಾ ಕನ್ನಡಭಾಗಗಳಿಗೆ.

	ಸ್ಥಳೀಕರಿಗೆ	ಪರಸ್ಥಳದವರಿಗೆ
12 ತಿಂಗಳಿಗೆ	4—0—0	6—0—0
6 „	2—0—0	2—8—0
3 „	1—4—0	1—9—0

ಸೂಚನೆ.—[illegible]

[illegible]

ಪ್ರಕಟನೆಯ ದರಗಳು

ಮೊದಲನೆಯ ಸಾರಿ ... ಒಂದಕ್ಕೆ ೦—೨—೦

ಎರಡನೆಯ ಸಾರಿ ... ಒಂದಕ್ಕೆ ೦—೧—೦

ಸೂಚನೆ.—[illegible]

"IT RECOMMENDS ITSELF"

ALL WHO SUFFER FIND SURE RELIEF.

LITTLE'S.

ORIENTAL BALM

THE MOST EFFECTUAL MODERN REMEDY FOR PAIN.

ಲಿಟಲ್ ಸಾಹೇಬರಿಂದ ತಯಾರಿಸಲ್ಪಟ್ಟ "ಓರಿಯಂಟಲ್ ಬಾಮ್" ಎಂಬ [illegible] ಅಮೂಲ್ಯ ತೈಲವು [illegible] ಮತ್ತು [illegible] ಔಷಧವು. ಇದರಿಂದ [illegible] ನಿವೃತ್ತಿಯಾಗುವವು. ಮುಖ್ಯವಾಗಿ ಚಿರಕಾಲಿಕ [illegible]

[illegible]

ಪರೀಕ್ಷೆಯ ಅಭಿಪ್ರಾಯವು.

[illegible]

ಇದರ ಕ್ರಯ—ಸೀಸೆ ಒಂದಕ್ಕೆ ೧ ರೂಪಾಯಿ

[illegible]

AGENTS — Messrs, J. [illegible], Chemist, &c., Bangalore
CAPTAIN & Co. Chemists, Bangalore
RIGGS & Co., Chemists, Bangalore, and of
MAHOMED YOUSOFF AND SONS, The Cash Bazar, Bangalore
A. C. [illegible] & Co.,
20 [illegible] Street Madras

NOTICE.

VAIDYASARA SANGRAHA

A TREATISE ON THE PRINCIPLES OF

HINDU MEDICINE

Price including Postage Rs. 5 0 0

ವೈದ್ಯಸಾರ ಸಂಗ್ರಹ.

ಈಗ ಬಾಕಿ ಉಳಿದಿರುವ [illegible] ಪುಸ್ತಕ [illegible] ಕಳುಹಿಸಲ್ಪಡುವದು. [illegible] ಗಳಿಗೆ ಸುತರಾಂ ನಿಗೇಕೊಡಲ್ಪಡಲಾರದು

ಇದರ ಕ್ರಯ ... ... ರೂ॥ ೫—೦—೦

ಪೋಸ್ಟೇಜ್ ಮತ್ತು [illegible] ೦—೬—೦

ಟಿ. ಬಿ. ವೆಂಕಟಾಚಾರ್,

ಆಸ್ಪತ್ರೆ [illegible] ಬೆಂಗಳೂರು.

ವಿಶೇಷ ವರ್ತಮಾನ

[illegible]

ಪುಣೇ ಶಹರ್ ಚಿತ್ರಶಾಲಾ ಮ್ಯಾನೇಜರ್

ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA.

MONDAY, AUGUST 27, 1888.

೧೮೮೮ನೇ ಆಗಸ್ಟು ೨೭ನೇ ತಾ॥ ಸೋಮವಾರ.

THE TRIVELLORE AHOBALA MUTT.

ಶ್ರೀ ಅಹೋಬಿಲ ಮಠದ ಸ್ವಾಮಿಗಳವರು ಪರಂಧಾಮವನ್ನು ಹೊಂದಿದರೆಂಬ ವೃತ್ತಾಂತವು ಗತವಾರದಲ್ಲಿಯೇ ತಿಳಿಸಿದ್ದೆವಷ್ಟೆ. ಮಾಸೇ ಕೂರು ೧೨ನೇ ತಾರೀಖ್ ಭಾನುವಾರದದಿನ ಶ್ರೀ ವೀರರಾಘವ ಸ್ವಾಮಿಯವರ ದೇವಾಲಯದಲ್ಲಿ ಸುಮಾರ್ ಮುನ್ನೂರು ಜನಗಳವರೆವಿಗೆ [illegible] ದ ಶಿಷ್ಯರು ಸಭೆ ಸೇರಿದ್ದರು. ಆ ಕಾಲದಲ್ಲಿ ತಿರುವಳ್ಳೂರು ಡಿಸ್ಟ್ರಿಕ್ಟ್ ಮುನಸಫ್ [illegible] ಚಾರ್ಯರವರು ಸಭಾಧ್ಯಕ್ಷರಾಗಿ ಅಗ್ರಾಸನವನ್ನು ವಹಿಸಿದ್ದರು. ಇಂಗ್ಲೀಷ್ ಕ್ರಮವನ್ನನುಸರಿಸಿ [illegible] ಟಂಗಿನ ಸ್ವರೂಪವೂ, ಅದು [illegible] ಮವೂ, ಆಕಾಲದಲ್ಲಿ ನಡೆಸಬೇಕಾದ [illegible] ವೂ, ಅಲ್ಲಿದ್ದ ಮಹನೀಯರಿಗೆ ಶುದ್ಧ ವಿಜಾತೀಯಗಳಾಗಿ ಕಂಡು ಬಂದದರಿಂದ ತಾವು ಕರೆಯಿಸಲ್ಪಟ್ಟದ್ದರ ಸ್ವರೂಪೋದ್ದೇಶಗಳನ್ನೂ, ತಮ್ಮ [illegible]

[illegible]

ಕುರ್ಚಿ ರಂಗಾಚಾರ್ಯರವರು ತಮ್ಮ ಮಠ ಗೌರವಮುತಿರಸ್ಕರಿಸಿ ತಮ್ಮ ಅಣ್ಣಂದರಲ್ಲಿ ಭರನ್ಯಾಸ ಮಾಡಿಕೊಂಡದ್ದರಿಂದಲೂ, ಈಗ ಗತಿಸಿದ ಮೂವರು ಜೀಯರುಗಳವರು ತಮ್ಮ ಚರಣಾಶ್ರಿತರನ್ನಾಗಿ ಎಣಿಸದೆಬಿಟ್ಟಿರುವದರಿಂದಲೂ ಅಂತವರು ಗುರುವಾಗಿ ನಿಯಮಿಸಲ್ಪಡಕೂಡದೆಂದು ಕೆಲವರು ಆಕ್ಷೇಪಿಸಿದರು. ಸಬ್ ಕಮ್ಮಿಟಿಯವರ ಅವ್ಯವಸ್ಥೆಗಳು ಯಾವಾಗ ಹೊರಗಾದವೋ ಆಗ ಇರತಕ್ಕವರೆಲ್ಲರೂ ಮತ್ತೊಂದು ಮೀಟಿಂಗ್ ಮಾಡಬೇಕೆಂಬದಾಗಿ ತೀರ್ಮಾನಮಾಡಿದರು. ಆಗ ಮಠಳ ಸಭೆಸೇರಿ ಪೂರ್ವದಂತೆ ಕುರ್ಚಿ ರಂಗಾಚಾರ್ಯರ ಹೆಸರನ್ನು ಪುನಃ ಸೂಚಿಸಲು ಆರ್ವರಿಗಿಂತ ಅಧಿಕವಾಗಿ ಅವರಪಕ್ಷವನ್ನವಲಂಬಿಸಿ ಪೋಟು ಬೆಹೋದರು. ಆಮಾರನೆಯದಿನ ಅಂದರೆ ೧೩ನೇ ತಾರೀಖು ಸೋಮವಾರದದಿನ ಬೆಳಗ್ಯೆ ಮತ್ತೊಬ್ಬ ಗುರುವಂ ಏರ್ಪಡಿಸುವಬಗ್ಯೆ ಬಹುಜನ ಮಠದಲ್ಲಿ ಸಭೆಸೇರಿದರು. ಏತನ್ಮಧ್ಯೆ ಗವರ್ನ್‍ಮೆಂಟಿನವರೇ ಮಠದ ಮತ್ತು ದೇವಸ್ಥಾನದ ವಿಚಾರಣಾಧಿಕಾರವಂವಹಿಸಿ ಅವುಗಳ ಆಸ್ತಿಗಳನ್ನೆಲ್ಲ ತಮ್ಮ ಸುಫರ್ದು ಮಾಡಿಕೊಳ್ಳುವವರಾಗಿ ದಾರೆಂಬದಾಗಿ ಒಂದು ಪ್ರವಾದ ಪ್ರಬಲಗೊಂಡು ಅದು ಸರ್ವತ್ರ ಪ್ರಚಾರವಾಗಲು ಆಗ ಚುನಾವಣೆವಿಷಯದಲ್ಲಿ ಜನರಿಗೆ ಮತ್ತಷ್ಟು ಆತುರವು ವೃದ್ಧಿಗೊಳಿಸಿತಂತೆ. ಬಹುಮಂದಿ ವೈದಿಕರು ಮೀಟಿಂಗ್ ಮುಂತಾದವನ್ನೆಲ್ಲ ದೂಷಿಸಿ ಪ್ರತಿಷೇಧಿಸಿದ್ದರಮೇಲೆ ಅವೆಲ್ಲ ನಿಂತುಹೋದವಲ್ಲದೆ ಪೂರ್ವ ಸಂಪ್ರದಾಯವನ್ನನುಸರಿಸಿ ಯಾರು ಗುರುವಾಗಿ ವರಿಸಬೇಕೆಂದು ಜನಗಳಿಗೆ ತಾತ್ಪರ್ಯವಿರುತಿದೆಯೋ ಅಂತವರು ಕೂತರೆ ಸಭಿಕರು ನಮಸ್ಕಾರಮಾಡುವದೇ ಶ್ರೇಷ್ಠವಾದದ್ದೆಂದು ಹಠವಿಡಿಯಲಾರಂಭಿಸಿದರು. ತರುವಾಯ ಬಹುಮಂದಿ ಶಿಷ್ಯರು ಹಿಂದೆ ತಹಸಿಲ್‍ದಾರರಿಂದ ಸೂಚಿಸಲ್ಪಟ್ಟಿದ್ದ ಮಂಗೀಪುರಂ ರಂಗಾಚಾರ್ಯರವರಿಗೆ ಪ್ರಣಾಮವಂಗೈದು ಜೀಯ್ಯರಾಗಿ ವರಿಸಿದರು. ಆಗ ಸದರೀ ಏರ್ಪಾಟನ್ನು ವಿಶೇಷವಾಗಿ ಯಾರೂ ಆಕ್ಷೇಪಿಸಿದಂತೆ ತೋರಲಿಲ್ಲವು. ಇವರನ್ನೇ ತಮ್ಮ ಸ್ಥಾನಾಪನ್ನರಾಗಿ ನಿಯಮಿಸಬೇಕೆಂದು ಗತಿಸಿದ ಸ್ವಾಮಿಗಳವರು ೩ನೇ ತಾರೀಖಿನಲ್ಲಿ ಸೇರಿದ್ದ ಸಭೆಯೊಳು ಆಜ್ಞಾಪಿಸಿದರು. ಆಗಲೂ ಜನಗಳವರನ್ನೇ ಉದ್ದೇಶಿಸಿದ್ದರು. ರಂಗಾಚಾರ್ಯರವರ ಆಶ್ರಮಸ್ವೀಕಾರವು ಶಿಷ್ಯವರ್ಗದವರಿಗೆಲ್ಲ ಬಹಳಸಂತೋಷಕಾರಿಯಾಗಿದೆ. ಗತ ಮಂಗಳವಾರದದಿನ ಹೊಸ ಜೀಯ್ಯರಿಗೆ ಸಕಲ ವೈಭವಗಳೊಡನೆ ಮೆರವಣಿಗೆಯು ಜರಿಗಿತು. ಆಗ ಸಾವಿರಮಂದಿಯುವರಿಗೆ ಶಿಷ್ಯರೆಲ್ಲರೂ ಸೇರಿ ಸ್ವಾಮಿಗಳಿಗೆ ಮರ್ಯಾದೆಗಳಂಮಾಡಿದರು. ಇವರಿಗೆ ಆಶ್ರಮ ಸ್ವೀಕಾರವಾದ ಬಳಿಕ ಇವರ ಆಚಾರ್ಯರಿಂದ ರುಜುಮಾಡಲ್ಪಟ್ಟಿದ್ದ [illegible]ಂಧುದನ್ನೆ [illegible]ವಜಾಮಠದಲ್ಲಿ ಕಂಡುಹಿಡಿಯಲ್ಪಟ್ಟಿತು. ಅದು ನೋಡಲಾಗಿ ಅವರು ಮಂಗೀಪುರಂ ರಂಗಾಚಾರ್ಯರೇ ತಮ್ಮ ಸ್ಥಾನಕ್ಕೆ ಅರ್ಹರಾಗಿರುವದರಿಂದ ಅವರನ್ನೇ ನಿಯಮಿಸಬೇಕೆಂದು ಬರೆದಿಟ್ಟು ಹೋದಂತೆ ವ್ಯಕ್ತವಾಗುತಿದೆ. ಅದಲ್ಲದೆ ಇವರ ಮೊಕರರಾತಿಯಂ ಮಂಜೂರ್ಮಾಡಲು ಶ್ರೀರಂಗಂ ತಿರುಚನಾಪಳ್ಳಿ ವಗೈರೆ ಪ್ರಾಂತಗಳ ಸುಮಾರ್ ಐನೂರು ಆರುನೂರು ಜನಗಳ ರುಜುನಿಕಿ ಮಹಜರೊಂದು ಮಠಕ್ಕೆ ಬಂದಿರುತಿದೆ. ಕಡೆಗೂ ಗದ್ದಲವೊಂದೂ ನಡೆಯದಂತೆ ಶಾಂತವಾಗಿ ನಡೆಯುವದಕ್ಕೆ ಬೇಕಾದ ಪೋಲೀಸ್ ಬಂದೋಬಸ್ತು ಮಾಡಲ್ಪಟ್ಟಿತ್ತು. ಶ್ರೀಮಾನ್ ರಂಗಾಚಾರ್ಯರವರು ಗೃಹಸ್ಥರಾಗಿಯೂ, ಸಂಪತ್ಸಂತಾನಭಾಗ್ಯವುಳ್ಳವರಾಗಿಯೂ ಇರುತ್ತಾರೆ. ಇಂತಾಸ್ಥಿತಿಯಲ್ಲಿ ಲಭಿಸಿದ್ದ ಸುಖಸಂತೋಷಗಳಂ, ಕೇವಲ ನಿರ್ಬಂಧರೂಪವಾಗಿರುವ ಸನ್ಯಾಸಾಶ್ರಮದೊಳೆಷ್ಟರ ಮಟ್ಟಿಗೆ ಅನುಭವಿಸುವರೋ ನಾವರಿಯೆವು. ದೇವಸ್ಥಾನಗಳ ವಿಚಾರಣಾಧಿಕಾರವನ್ನು ಮಠಾಧಿಪತಿಗಳಿಗೆ ಒಪ್ಪಿಸುವದು ಬಹು ಅನುಚಿತವೆಂಬದಾಗಿ ಹಿಂದಿನಪತ್ರಿಕೆಗಳಲ್ಲಿ ತಿಳಿಸಿರುವವಾಗಿ, ಅದರಂತೆ ತಿರುವಳ್ಳೂರು ದೇವಸ್ಥಾನಕ್ಕು ಅಹೋಬಿಲಮಠಕ್ಕು ನೆಲಗೊಂಡಿರುವಸಂಬಂಧವನ್ನು ದೂರಪಡಿಸುವಪಕ್ಷಕ್ಕೆ ದೇವಸ್ಥಾನದ ಹೆಸರಾದರೂ ಇನ್ನು ಕೆಲವುಕಾಲ ನೆಲಗೊಂಡಿರಲಿಕ್ಕೆ ಅವಕಾಶ ವುಂಟಾಗಬಹುದೆಂದು ಎಣಿಸುತ್ತೇವೆ.

RESUMPTION OF EXCESS IN INAM LANDS.

ಇನಾಂ ಜಮೀನುಗಳಲ್ಲಿ ಸೇರಿರತಕ್ಕ ಜಾಸ್ತೀ ಭಾಗವನ್ನು ಕಂಡುಹಿಡಿದು ಅದನ್ನು ಸರ್ಕಾರಕ್ಕೆ ಸೇರಿಸಿಕೊಳ್ಳುವ ವಿಷಯದಲ್ಲಿ ಬಹುದಿನಗಳ ಮೊದಲು ಚರ್ಚೆ ನಡೆಯುತ್ತ, ಅದರಮೇಲೆ ಈಸಂಸ್ಥಾನದ ದಿವಾನರವರು ಕೊಟ್ಟಸ್ಪೆಸಲ್ ಹುಕುಂ ಅನುಸರಿಸಿ ಸರ್ವೇ ಸೂಪರಿಂಟೆಂಡೆಂಟರವರು ಬೆಂಗಳೂರು ತಾಲೂಕಿಗೆ ಸೇರಿದ ಗಾಂಗಾನಹಳ್ಳಿರ ಇನಾಂದಾರರ ಜಮೀನ್‍ಪೈಕಿ ಕೆಲವು ಭಾಗಗಳನ್ನು ಖಾಲಸಾತಿ, ಅಂದರೆ, ಸರ್ಕಾರ್ ದಾಖಲ್ ಮಾಡಿಕೊಳ್ಳುವಾಡಿ ಹುಕುಂ ಕೊಟ್ಟಿರುತ್ತಾರೆ. ಸದರೀ ಹುಕುಂ ಈ ಸರ್ವಧಾರಿ ಸಂವತ್ಸರದ ಮೊದಲು ಜಾರೀಯೊಳು ಬರುತಲಿದೆ. ಈಗ ಬೆಂಗಳೂರು ತಾಲ್ಲೂಕುಕಚ್ಚೇರಿಯಿಂದ ಪ್ರತಿ ಇನಾಂದಾರರಿಗೂ ನೋಟಿಸ್ ಕೊಡಲ್ಪಟ್ಟಿದೆ.

ಈ ಸಂವತ್ಸರದ ಜಮಾಬಂದೀಕಾಲದಲ್ಲಿ ಇನಾಂಗಳು ಬಹಳವಾಗಿ ಸರ್ಕಾರ್ ದಾಖಲಾಗುವಂತಿವೆ. ಇದು ಜನಗಳು ಬೇಬಿರಿಗುವ ಒಂದು ದೊಡ್ಡ ಸಂದರ್ಭವಾಗಿ ಕಾಣುತಿದೆ. ಈ ವಿಷಯವನ್ನು ಕುರಿತು ೧೮೬೭ನೇ ಇಸವಿ ಯಾಗಾಯತು ೮೭ನೇ ಇಸವಿ ವರಿವಿಗೂ ಬಹಳ ಚರ್ಚೆ ನಡೆದು ಆಖೈರಿಗೆ ಇದು ಇಲ್ಲಿಗೆ ಪರ್ಯವಸಾನವು ಹೊಂದಿರುತಿದೆ. ಒಂದು ಇನಾಂ ಕ್ರಮವಾಗಿ ಸಂಪಾದಿಸಲ್ಪಟ್ಟಿದ್ದೆ, ಹಾಲಿ ಅನುಭವದಾರ ನ್ಯಾಯ್ಯವಾಗಿ ಅನುಭವಿಸುತಲಿದಾನೆಯೆ, ಸರ್ಕಾರದವರು ಕೇಳದ ಸುಜಾಯಿಷಿಯನ್ನುಕೊಟ್ಟನೆ, ಎಂಬ ಮೂರುಕಾರಣಗಳಮೇಲೆ, ಇನಾಮುನಿಖಿಲ್‍ರ್ಮ ಫೀ ಎಂಬ ಪರಿವರ್ತನರೂಪವಾದ ಕ್ವಿಟರೆಂಟನ್ನು ಮದರಾಸ್ ಗವರನ್ಮೆಂಟಿನವರು ಯಾವರೀತಿ ದಾಖಲ್ ಮಾಡಿದರೋ ಅದನ್ನನುಸರಿಸಿ ಮೈಸೂರು ಗವರ್ನಮೆಂಟಿನವರು ರೂಲ್ಸ್‍ಮಾಡಿ ಇನಾಂ ಸೆಟಲ್‍ಮೆಂಟ್ ಮಾಡಿರುತ್ತಾರೆ. ಜಾಸ್ತೀ ಜಮೀನ್ ಕಂಡುಹಿಡಿದು ಅದನ್ನು ಸರ್ಕಾರಕ್ಕೆ ಸೇರಿಸಿಕೊಳ್ಳುವದು ಮೇಲ್ಕಂಡ ಮೂರು ಕಾರಣಗಳಿಗೆ ಸೇರಿರಲಿಲ್ಲವಾಗಿ ಈಗ ಅದಕ್ಕೆ ಬೇರೆನಿಯಮ ಏರ್ಪಾಡಾಗಿರುತಿದೆ. ಇಂತಾ ಜಾಸ್ತೀ ಜಮೀನ್ ಕಂಡುಹಿಡಿಯುವ ಪ್ರಕರಣವು ಇನಾಮನ್ನು ವಿಚಾರಪೂರ್ವಕ ಊರ್ಜಿತ ಪಡಿಸುವಣದರಲ್ಲೇ ಸೇರಿರುತಿದೆಯೆಂದು ಮುಂಬೈಗವರ್ನಮೆಂಟಿನವರು ಅಭಿಪ್ರಾಯಪಟ್ಟು, ಸರ್ವೇ ಸೆಟಲ್‍ಮೆಂಟಾಗಿ ಆಕಾರ ಠರಾವಾದ ಇನಾಂಗಳಿಗೆ ರೂಪಾಯಿಗೆ ನಾಲ್ಕಾಣೆಜೋಡಿ, ಒಂದಾಣೆ ಸದರಾಣಾ, ಜುಮ್ಲಾರೂಪಾಯಿ ಒಂದಕ್ಕೆ ಐದಾಣೆಮೇರೆ ಸರ್ಕಾರಕ್ಕೆ ತೆಗದುಕೊಂಡು ಯಾವವಿಧ ಶಂಕೆಗೂ ಅವಕಾಶ ವಿಲ್ಲದಂತೆ ಇನಾಂಗಳನ್ನು ಊರ್ಜಿತಪಡಿಸಿರುತ್ತಾರೆ. ಸರ್ವೆ ಮತ್ತು ಇನಾಂ ಕಮಿಷನರಾಗಿದ್ದ ಕರ್ನಲ್ ಆಂಡರ್ಸನ್‍ಸಾಹೆಬರವರು ಮದರಾಸ್ ಪದ್ಧತಿಗಿಂತಲೂ ಮುಂಬೈಪದ್ಧತಿಯು ಪ್ರಜೆಗಳ ವಿಷಯದಲ್ಲಾಗಲಿ ಗವರ್ನಮೆಂಟಿನವರ ವಿಷಯದಲ್ಲಾಗಲಿ ಪಕ್ಷಪಾತವಿಲ್ಲದೆ ಅನುಸರಿಸುವದಕ್ಕೆ ಅನುಕೂಲವಾದದ್ದೆಂದು ಭಾವಿಸಿ ಅದನ್ನು ಮೈಸೂರು ಸರ್ಕಾರಕ್ಕೆ ತಿಳಿಸಿದಾಗ್ಯೂ ಆಕಾಲದೊಳು ಇಲ್ಲಿ ಚೀಫ್ ಕಮಿಷನರಾಗಿದ್ದ ಸರ್ ರಿಚ್ಚರ್ಡ್ ಮೀಡ್‍ಸಾಹೆಬರವರು ಇಲ್ಲಿನ ಕೆಲವರ ಸಲಹೆಯಮೇಲೆ ಮದರಾಸ್ ಪದ್ಧತಿಯನ್ನೇ ಅವಲಂಬಿಸಬೇಕೆಂದು ಹುಕುಂಮಾಡಿದರು. ಈ ರಾಜ್ಯವು ಶ್ರೀಮನ್ಮಹಾರಾಜರವರಿಗೆ ಒಪ್ಪಿಸಲ್ಪಟ್ಟಮೇಲೆ ಪ್ರಕೃತದಿವಾನರವರು ಹಿಂದಿನ ನಿಬಂಧನೆಯ ಕ್ರಮವನ್ನು ಅನುಸರಿಸಿದಾಗ್ಯೂ ಬಹುಭಾಗದಲ್ಲಿ ಪ್ರಜೆಗಳಿಗೆ ಅನುಕೂಲವಾಗಿರುವಂತೆ ಅದನ್ನುತಿದ್ದಿ ಕ್ರಮಪಡಿಸಿರುತ್ತಾರೆ. ಆದಾಗ್ಯೂ ಜನಗಳಿಗೆ ಸುಕಟುಮಾತ್ರ ತಪ್ಪುವಂತೆ ಕಾಣಲಿಲ್ಲವು. ಪ್ರಯತ್ನ ಪೂರ್ವಕ ಪಕ್ಷಪಾತ ನಡಿಸದೆ ಹೋದಾಗ್ಯೂ ಹಿಂದಿನ ರೂಲ್ಸು ಅಕ್ರಮವಾಗಿದ್ದದರಿಂದ ಅದು ಪಕ್ಷಪಾತಕ್ಕೆ ಅವಕಾಶವನ್ನುಂಟುಮಾಡದೆ ಹೋಗುವದಿಲ್ಲವು. ಇನಾಂ ಸೆಟಲ್‍ಮೆಂಟಿಗೆ ಪೂರ್ವದಲ್ಲೇ ಸರ್ವೇ ಜಮಾಬಂದಿ ಆದ ಹರಿಹರ ದಾವಣಗೆರೆ ಮೊದಲಾದ ಕೆಲವು ತಾಲ್ಲೂಕುಗಳಿಗೆ ಎಕ್ಸಸ್ ಛಾರ್ಜ್ ಮಾಡಿದಕ್ರಮವೇ ಒಂದುವಿಧವಾಯಿತು. ಮಲನಾಡು ತಾಲ್ಲೂಕುಗಳ ಇನಾಂಗಳವಿಷಯದಲ್ಲಿ ನಡೆಸಿದ ಕ್ರಮವೇ ಬೇರೆಯಾಯಿತು. ರಾಯಬಹದೂರು ಸಭಾಪತಿಮೊದಲಿಯಾರ್ರವರ ಸತ್ರದ ಅಮರಾಯಿ ಪೋಷಣೆಯಬಗ್ಯೆ ಕೊಟ್ಟ ಇನಾಮನ್ನು ಕುರಿತ ಎಕ್ಸಸ್‍ಕ್ರಮವೆಂಬದು ಬೇರೆಯೊಂದು ವಿಧವಾಯಿತು. ತುಮುಕೂರು ಡಿಸ್ಟ್ರಿಕ್ಟಿನಲ್ಲಿ ಅದೇ ಜಾತೀಯವಾದ ಇನಾಂಗಳವಿಷಯದಲ್ಲಿ ಅನುವರ್ತಿಸಲ್ಪಟ್ಟ ಕ್ರಮವು ಮತ್ತೊಂದುವಿಧವಾಯಿತು. ದೇಶವೂ ಗವರ್ನ್‍ಮೆಂಟೂ ಒಂದೇ ಆದಾಗ್ಯೂ ಇನಾಂಗಳವಿಷಯದಲ್ಲಿ ಸಂದರ್ಭಾನುಸಾರ ಕ್ರಮಜರಿಗಿಸಲ್ಪಟ್ಟಿರುತಿದೆ. ಇನಾಂ ಎಕ್ಸಸ್‍ವಿಷಯದಲ್ಲಿ ಒಂದು ನಿಬಂಧನೆಯಂಮಾಡಿ ಅದನ್ನು ಆಚರಣೆಯೊಳು ತರುವಕಾಲದಲ್ಲಿ ಅಡಚಣೆಗಳುಂಟಾಗಿ, ನಾನಾವಿಧವಾಗಿ ಏರ್ಪಡುವದಕ್ಕಿಂತಲೂ ದಿವಾನ್ ಪೂರ್ಣಯ್ಯನವರ ಕಾಲದಲ್ಲಿ ನಡೆದಂತೆ, ಲಾಯಖಾದ ಒಬ್ಬ ಆಫಸರನ್ನು ನಿಯಮಿಸಿ, ಆಯಾಸ್ಥಳ ಪದ್ಧತಿಯನ್ನನುಸರಿಸಿ, ಪ್ರಜಾಸಮ್ಮತವಾದ ಫೈಸಲ್ಮಾಡಿಸಿದರೆ ಸರ್ಕಾರಕ್ಕೆ ಫಾಯಿದೆಯಾಗಿರುತ್ತ, ಪ್ರಜೆಗಳ ಪುಕಾರಿಗೆ ಅವಕಾಶವಿಲ್ಲದೆ ಇರುವದು.

MORAL GEMS FROM THE MAHABHARATA.

ಮಹಾಭಾರತ ನೀತಿರತ್ನಾವಳಿ.

V.—Of Truth.—ಸತ್ಯಕಳೆ.

The Hindu Excelsior Series No. IX.

(ಆಗಸ್ಟು ೧೩ನೇ ತಾರೀಖಿನ ಪತ್ರಿಕಾ ಶೇಷವು)

ಶ್ಲೋ|| ಸರ್ವವೇದಾಧಿಗಮನಂಸರ್ವತೀರ್ಥಾವಗಾಹನಂ | ಸತ್ಯಂಚವಚನಂರಾಜನ್ ಸಮಂವಾಸ್ಯಾನ್ನವಾಸಮಂ || ||೩೯||

ಅ|| ಎಲೈ ರಾಜಶ್ರೇಷ್ಠನೇ, ಲೋಕದಲ್ಲಿ ಸಕಲ ವೇದಾಧ್ಯಯನವೂ, ಸರ್ವತೀರ್ಥಾವಗಾಹನವೂ, ಸತ್ಯವಾಕ್ಕಿಗೆ ಸಮಾನವಾಗಲಾರವು, ಅಂದರೆ ವಾಕ್ಶುದ್ಧಿಯೆಂಬದು ಸಕಲ ಸತ್ಕಾರ್ಯಗಳಿಗೂ ಅತಿಶಯವಾದದ್ದೆಂದರಿಯತಕ್ಕದ್ದು.

ಶ್ಲೋ|| ವರಂಕೂಪಶತಾದ್ವಾಪೀವರಂವಾಪೀಶತಾತ್ಕ್ರತುಃ | ವರಂಕ್ರತುಶತಾತ್ಪುತ್ರಃಸತ್ಯಂಪುತ್ರಶತಾದ್ವರಂ || ೪೦ ||

ಅ|| ನೂರುಕೂಪಗಳಿಗಿಂತ ಒಂದುಭಾವಿಶ್ರೇಷ್ಠವು, ನೂರುಭಾವಿಗಳಿಗಿಂತ ಒಂದುಕ್ರತು ಉತ್ಕೃಷ್ಟವಾದದ್ದು, ಅಂತಾ ಶತಕ್ರತುಗಳಿಗಿಂತ ಒಬ್ಬಪುತ್ರನು ಅಧಿಕನು, ನೂರುಮಂದಿ ಪುತ್ರರಿಗಿಂತಲು ಸತ್ಯವೆಂಬದೊಂದು ಪ್ರಬಲತರವಾದದ್ದು.

ಶ್ಲೋ|| ಅಶ್ವಮೇಧಸಹಸ್ರಂಚಸತ್ಯಂಚ ತುಲಯಾಧೃತಂ | ಅಶ್ವಮೇಧಸಹಸ್ರಾದ್ಧಿಸತ್ಯಮೇವವಿಶಿಷ್ಯತೇ || ೪೧ ||

ಅ|| ಸಹಸ್ರ ಅಶ್ವಮೇಧಫಲವನ್ನೂ ಸತ್ಯಪರಿಪಾಲನದಿಂ ದುಂಟಾಗುವ ಫಲವನ್ನೂ ತೂಕಮಾಡಿ ನೋಡುವವಾದರೆ ಮೊದಲನೆಯದರಫಲಕ್ಕಿಂತಲೂ ಎರಡನೆಯದರಫಲವೇ ಅಧಿಕವಾದದ್ದಾಗಿರುವದು.

ಶ್ಲೋ|| ನಾಸ್ತಿಸತ್ಯಸಮೋಧರ್ಮೋನಸತ್ಯಾದ್ವಿದ್ಯತೇಪರಂ | ನಹಿತೀವ್ರತರಂಕಿಂಚಿದನೃತಾದಿಹವಿದ್ಯತೇ|| ||೪೨||

ಅ|| ಲೋಕದಲ್ಲಿ ಸತ್ಯಕ್ಕೆ ಸಮಾನವಾದ ಧರ್ಮವಿಲ್ಲವು, ಅದಕ್ಕಿಂತ ಶ್ರೇಷ್ಠತರವಾದದ್ದು ಬೇರೊಂದೂಯಿರಲಾರದು. ಅಸತ್ಯಕ್ಕಿಂತ ಅಧಿಕವಾದ ಪಾತಕವು ಬೇರೊಂದಿಲ್ಲವು.

ಶ್ಲೋ|| ಸತ್ಯಂಸತ್ಸುಸದಾಧರ್ಮಸ್ಸತ್ಯಂಧರ್ಮಸ್ಸನಾತನಃ | ಸತ್ಯಮೇವನಮಸ್ಯೇತ ಸತ್ಯಂಹಿಪರಮಾಗತಿಃ || ||೪೩||

ಅ|| ಸತ್ಪುರುಷರಾದವರಾಗಲು ಸತ್ಯ ಪರಿಪಾಲಕರಾಗಿರುವರು. ಸತ್ಯ ಸಂರಕ್ಷಣೆಯೇ ಶಾಶ್ವತವಾದ ಸದ್ಧರ್ಮವೆಂದು ಭಾವಿಸಲ್ಪಡತಕ್ಕದ್ದು. ಅದೇ ಪೂಜ್ಯವಾದ ಉತ್ಕೃಷ್ಟಮಾರ್ಗವಾಗಿರುವದರಿಂದ ಅದನ್ನೇ ಯೆಲ್ಲರೂ ಅನುವರ್ತಿಸಬೇಕು.

ಶ್ಲೋ|| ಸಮಕ್ಷದರ್ಶನಾತ್ಸಾಕ್ಷ್ಯಂಶ್ರವಣಾಚ್ಚೈವಧಾರಣಾತ್ | ತಸ್ಮಾತ್ಸತ್ಯಂಬ್ರುವನ್ಸಾಕ್ಷೀಧರ್ಮಾರ್ಥಾಭ್ಯಾಂನಹೀಯತೇ ||

ಅ|| ಪ್ರತ್ಯಕ್ಷ ಶ್ರವಣ ದರ್ಶನಾದಿಗಳೆರಡೂ ಸಾಕ್ಷೀರೂಪಗಳಾಗಿರುವದರಿಂದ ಸತ್ಯವಾದಿಯಾದ ಸಾಕ್ಷಿಯು ಧರ್ಮಾರ್ಥಗಳಲ್ಲಿ ಹಾನಿಯನ್ನೈದಲಾರನು.

ಶ್ಲೋ|| ಯಃಪುನರ್ವಿಷಮಂಬ್ರೂಯಾತ್ಸ್ವರ್ಧರ್ಮೇಸಭಾಗತಃ | ಅನ್ಯತಸ್ಯಫಲಂ ಕೃತ್ಸ್ನಂಸಮ್ಪ್ರಾಪ್ನೋತಿಹಿನಿಶ್ಚಯಃ||೪೫||

ಅ|| ಧರ್ಮಸ್ವರೂಪವನ್ನರಿತಂತಾ ಸಭ್ಯನು ಕಾರಣಾಂತರಗಳಿಂದ ಅಸತ್ಯವಂ ನುಡಿಯುವನಾದರೆ ಆತನು ಕೂಡಲೇ ಆದರಫಲವಂ ಪಡೆಯದೆ ಹೋಗಲಾರನು. ಆದದರಿಂದ ವಾಕ್ಶುದ್ಧಿಯುಳ್ಳ ಸತ್ಯಸಂಕಲ್ಪನಿಗೆ ಸಕಲವೂ ವಶ್ಯವಾಗುವದೆಂದರಿಯುವದು.

A NIROOPAM.

ಈ ಪೂರು ಸ್ಮಾರ್ತ ಬ್ರಾಹ್ಮಣರಲ್ಲಿ ಕೆಲವು ದಿನಗಳ ಹಿಂದೆ ಜರಿಗಿದ ಒಂದು ಅಕ್ರಮ ವಿವಾಹಕ್ಕೆ ಸಂಬಂಧಪಟ್ಟವರಿಗೆ ಶಿವಗಂಗೆ ಶ್ರೀಮಠದವರು ಕೊಟ್ಟ ಬಹಿಷ್ಕಾರ ಪತ್ರಿಕೆಯ ಮೇಲೆ ಆಕ್ಷೇಪಿಸಿ ಇಲ್ಲಿಂದ ಸುಬ್ರಹ್ಮಣ್ಯ ಶಾಸ್ತ್ರಿಯೆಂಬಾತನು ಶ್ರೀ ಶೃಂಗೇರಿ ಮಠಕ್ಕೆ ಒಂದು ಅರ್ಜಿ ಬರೆದುಕೊಂಡಿರಲು ಅದಕ್ಕೆ ಶ್ರೀ ಸ್ವಾಮಿಯವರ ಸನ್ನಿಧಿಯಿಂದ ಕೊಡಲ್ಪಟ್ಟ ನಿರೂಪವನ್ನು ಆತನಿಗೆ ಪರಿವರ್ತೀ ಮಾಡಲಿಕ್ಕೆ ಆಸಾಮಿ ಫಲಾನೆಯವನೆಂದು ಗೊತ್ತಾಗದೆ ಇರುವದರಿಂದ ಅದಂ ಶ್ರೀಮಠದವರ ಅಪೇಕ್ಷಾನುಸಾರ ಸಕಲಜನರ ತಿಳುವಳಿಕೆಯಬಗ್ಯೆ ಇದರಡಿ ಪ್ರಕಟಿಸಿರುವವಾಗಿ ಅರ್ಜಿದಾರ ನ್ಯಾವನೋ ಆತನು ಸಹ ಈ ಪತ್ರಿಕಾಮೂಲಕ ತಿಳಿದುಕೊಳ್ಳತಕ್ಕದ್ದು.

ಮೊಹರ್.

ನಂಬರ್೧೧೮೭.

ಶ್ರೀ ಜಗದ್ಗುರು ಸಂಸ್ಥಾನ ಶೃಂಗೇರೀ ಮಠದ ಅಧಿಕಾರಸ್ಥಾನದಿಂದ.

ಬೆಂಗಳೂರಲ್ಲಿರುವ ಸುಬ್ರಹ್ಮಣ್ಯಶಾಸ್ತ್ರಿಗಳಿಗೆ ಇಂತಾರ್ಸ್ ಉತ್ತರ ಎನಂದರೆ, ಅವಾಗಿ—ಶ್ರಾವಣಶುದ್ಧ ೫ ತಾರೀಖಿನಲ್ಲಿ ಶ್ರೀಜಗದ್ಗುರು ಮಹಾಸ್ವಾಮಿಗಳವರ ಸನ್ನಿಧಾನಕ್ಕೆ ಬರೆದುಕೊಂಡ ವಿಜ್ಞಾಪನಪತ್ರಿಕೆ ತಲಿಪಿ ಅಭಿಪ್ರಾಯವಾಯಿತು. ಶ್ರೀ ಶಂಕರಾಚಾರ್ಯರವರು ಶೃಂಗೇರಿ, ದ್ವಾರಕಾ, ಜಗನ್ನಾಥ, ಬದರಿಕಾ, ಈ ನಾಲ್ಕು ಸ್ಥಳಗಳಲ್ಲಿ ಮಾತ್ರ ಅದ್ವೈತಸ್ಥಾಪನಾರ್ಥ ನಾಲ್ಕು ಮಠಗಳನ್ನೇರ್ಪಡಿಸಿ ಅದರಲ್ಲಿ ಶೃಂಗೇರೀ ಪೀಠಸ್ಥರು ಆಸೇತು ಹಿಮಾಚಲ ಪರ್ಯಂತ ವರ್ಣಾಶ್ರಮ ಧರ್ಮವನ್ನು ವಿಚಾರ ಮಾಡತಕ್ಕದ್ದೆಂದು ನಿಬಂಧನೆ ಮಾಡಿರುತ್ತದೆಂಬದು ಶಂಕರವಿಜಯ ಗ್ರಂಥಗಳಲ್ಲಿ ಹೇಳಿರುವದು ಆಸ್ತಿಕರಾದ ಸರ್ವರಿಗೂ ತಿಳಿದೇ ಇದೆಯಷ್ಟೆ. ಆ ಪದ್ಧತಿಯನ್ನು ಅನುಸರಿಸಿ ವರ್ಣಾಶ್ರಮ ಸಂಬಂಧವಾಗಿ ಇಲ್ಲಿಗೆ ಬರುವ ಅಂಶಕ್ಕೆ ನಿಗ್ರಹಾನುಗ್ರಹ ಮಾಡುವದು ನಮ್ಮ ಕರ್ತವ್ಯವಾಗಿರುತ್ತೆ. ಈ ಭಾಗದಲ್ಲಿ ಶ್ರೀಮದಾಚಾರ್ಯರವರಿಂದ ನಿರ್ಮಿಸಲ್ಪಡದೆ ಕಾರಣಾಂತರದಮೇಲೆ ಈಚೆಗೆ ಏರ್ಪಟ್ಟಿರುವ ಮಠೀಯರೆಂಬವರು, ಪೂರ್ವ ನಿಬಂಧನೆಗೆ ವಿರುದ್ಧವಾಗಿದ್ದಾಗ್ಯೂ ಕಾಲ ಮಹಿಮೆಯಿಂದ ಪ್ರಸಿದ್ಧಿಯನ್ನು ಪಡೆಯಬೇಕೆಂಬ ಕೋರಿಕೆಯೊಡನೆ ಕೊಡುವ ನಿಗ್ರಹಾನುಗ್ರಹಗಳನ್ನು ಗಣನೆಯಲ್ಲಿ ತಂದು ನಮ್ಮ ಸಂಸ್ಥಾನದಲ್ಲಿ ನಡೆಸುವ ಪದ್ಧತಿಗೆ ಅದೊಂದು ಪ್ರತಿಬಂಧಕವೆಂದು ಯೆಣಿಸಬೇಕಾದ ಆವಶ್ಯಕ ತೋರಲಿಲ್ಲ. ಶಿವಗಂಗಾ ಮಠದಲ್ಲಿ ಪೂರ್ವಕ್ಕೆ ಇದ್ದವರು ವರ್ಣಾಶ್ರಮಕ್ಕೆ ಅತ್ಯಂತ ವಿರುದ್ಧಾಚರಣೆ ಮಾಡಿದ ತಪ್ಪಿತಕ್ಕೋಸ್ಕರ ಶ್ರೀ ಜಗದ್ಗುರು ಮಹಾಸ್ವಾಮಿಗಳವರ ಕಡೆಯಿಂದ ಬಹಿಷ್ಕರಿಸಲ್ಪಟ್ಟು ಅದು ನಿವೃತ್ತಿಯಾಗದೆ ಮತ್ತೊಬ್ಬರಿಗೆ ಆಶ್ರಮ ಕೊಟ್ಟು ಅದೇ ಪರಂ

ಪರೆಯೇ ಅವ್ಯಾಪಿ ನಡೆದುಬರುತಲಿರುವದುನ್ನೂ ಲೋಕಪ್ರಸಿದ್ಧವಾಗಿಯೇ ಇರುವದರಿಂದ ಇಂತಾ ಪರಂಪರಾದನರು ಅನುಭವಿಸುವ ಕೊಡುವ ನಿಗ್ರಹಾನುಗ್ರಹಗಳನ್ನು ಆಸ್ತಿಕರಾಗಿಯೂ ಶಾಸ್ತ್ರಾಭಿಮಾನಿಗಳಾಗಿಯೂ ಇರತಕ್ಕವರ್ಯಾರು ನ್ನೂ ಅಂಗೀಕರಿಸಲಿಂದಮ, ತಿಳಿಯುವದು.

ತಾ|| ೧೭-೮-೮೮. } ಸುಬ್ರಹ್ಮಣ್ಯಶಾಸ್ತ್ರಿ,
ಮೊಕ್ಕಾಂ ಬಳ್ಳಾರಿ. } ಏಡುಟಿ.

REVIEW.

THE KARNATAKA VYAVASAYA DARPANA OR A KANARESE JOURNAL OF AGRICULTURE.

"ಕರ್ಣಾಟಕ ವ್ಯವಸಾಯದರ್ಪಣ" ವೆಂಬ ಒಂದು ಕನ್ನಡ ಪತ್ರಿಕೆಯು ಕೃಷಿಜೀವಿಗಳಿಗುಪಯುಕ್ತವಾಗಿರುವಂತೆ ಕಳೆದ ಜೂನ್ ತಿಂಗಳ ಮೊದಲು, ತಿಂಗಳಿಗೊಂದಾವರ್ತಿ ಡಿಮ್ಮಿ ಎಂಟು ಪುಟಗಳು ಯಾ ೧೬ ಪುಟಗಳುಳ್ಳ ಒಂದು ಸಂಚಿಕೆಯಂತೆ ಮೈಸೂರಲ್ಲಿ ಮ|| ರಾ|| ಮಿರ್ಜ ಕೃಷ್ಣಪ್ಪನೆಂಬವರಿಂದ ಪ್ರಕಟಿಸಲ್ಪಡುವದೆಂಬವಿಷಯ ಅವರು ಪೂರ್ವದಲ್ಲೇ ಪ್ರಕಟಿಸಿದ್ದ ಪ್ರಕಟನೆಪತ್ರಿಕೆಯಮೂಲಕ ಪ್ರಾಯಶಃ ಎಲ್ಲರಿಗೂ ತಿಳಿದಿರಬಹುದಷ್ಟೆ. ಸದರೀಪತ್ರಿಕೆಯ ಜೂನ್ ತಿಂಗಳಬಾಬತು ೨ ನೇಯ ಸಂಚಿಕೆಯ ಪ್ರತಿಗಳೆರಡು ನಮಗೆ ಕಳುಹಿಸಲ್ಪಟ್ಟವು. ಪ್ರಸಕ್ತ ಸಂಚಿಕೆಯಲ್ಲಿ ವ್ಯವಸಾಯ, ಸಾಗುವಳಿ, ವಾಯುಗತಿಸ್ಥಿತಿ, ಶೀತೋಷ್ಣ ಪರಿಮಾಪಕಯಂತ್ರ ಸ್ವರೂಪನಿರೂಪಣ, ಉದ್ಯೋಗಲಕ್ಷಣ, ಪ್ರದರ್ಶನ, ಈ ಐದುವಿಷಯಗಳಂಶುರಿತು ವಿಚಾರಮಾಡಲ್ಪಟ್ಟಿರುತವೆ. ಸಾಧಾರಣವಾಗಿ ಇವುಗಳೆಲ್ಲವೂ ಅವಶ್ಯ ತಿಳಿಯತಕ್ಕ ವಿಷಯಗಳಾಗಿಯೇ ಇರುತವೆ. ಈ ಪತ್ರಿಕೆಯು ಶ್ಲಾಘ್ಯವಾದ ಕಾಗದದಲ್ಲಿ ಉತ್ತಮರೀತಿಯಿಂದ ಪ್ರಕಟಿಸಲ್ಪಟ್ಟಿರುವದಲ್ಲದೆ, ಉಪಯುಕ್ತಾಂಶಗಳಿಂದೊಡಗೂಡಿ ಜನಗಳ ಪರಿಗ್ರಹಕ್ಕೆ ಯೋಗ್ಯವಾಗಿರುತಿದೆ. ಇದರ ಚಂದಾ ಅಂಚೆ ಹಾಸಲ್ ಪೇಯಿಶಿ ಸಾಲೀಯಾನಾ ೩ ರೂಪಾಯಿಗಳಿಡಲ್ಪಟ್ಟಿರುತಿವೆ. ಇದನ್ನೆಲ್ಲರೂ ಅಂಗೀಕರಿಸಿ ಇದರಮುಖ್ಯಪ್ರವರ್ತಕರಿಗೆ ಪ್ರೋತ್ಸಾಹವನ್ನುಂಟುಮಾಡಿ ಇದು ಚಿರಕಾಲ ಜೀವಿಸಿರುವಂತೆ ಮಾಡಬೇಕೆಂದು ಕೋರುತ್ತೇವೆ.

AROGYA PRAVESADAYINI.

ಆರೋಗ್ಯವಿಷಯದಲ್ಲಿ ಮ ಬೆನ್ನರ ಯೆಂಬವರು ಬರೆದಿರುವ ಇಂಗ್ಲಿಷ್ ಗ್ರಂಥವು ಲಲಿತವಾಗಿಯೂ ಉಪಯುಕ್ತವಾಗಿಯೂ ಬಾಲಿಕರು ತಿಳಿಯಬೇಕಾದ ಬಹ್ವಂಶಗಳಿಂ ದೆಸದಗೂಡಿದ್ದಾಗಿಯೂ ಇರುವದರಿಂದ ಅದು ಕನ್ನಡಭಾಷೆಯಲ್ಲಿ ತರ್ಜುಮೆಮಾಡಿ ಪ್ರಕಟಿಸಿದರೆ ಕನ್ನಡಭಾಷಾಭ್ಯಾಸಿಗಳಾದ ವಿದ್ಯಾರ್ಥಿಗಳಿಗೆ ಪ್ರಯೋಜನಕರವಾಗಿರುವದೆಂಬ ತಾತ್ಪರ್ಯವು ಮೈಸೂರಲ್ಲಿರುವ ಮ||ವೆಂಕಟಸಾಮಿಅಯ್ಯರ್, (ಬಿ. ಎ.) ಯವರಿಗುಂಟಾಗಲು, ಅವರು ಸದರೀ ಗ್ರಂಥವಂ ಭಾಷಾಂತರ ಪಡಿಸುವ ಸ್ವಾತಂತ್ರ್ಯವಂ ಮ್ಯಾಕ್ಮಿಲ್ಲನ್ ಕಂಪೆನಿಯವರಿಂದ ಪಡೆದು ಅದರೊಡನೆ ಆವಶ್ಯಕಗಳಾದ ಕೆಲವು ಹೊಸವಿಷಯಗಳನ್ನೂ ಸೇರಿಸಿ ಯುಕ್ತಗಳಾದ ಕೆಲವುಬದಲಾವಣೆಗಳಂ ಮಾಡಿ ಆರೋಗ್ಯ ಪ್ರವೇಶದಾಯಿನೀಯೆಂಬ ಸುಮಾರ್ ೭೫ ಪುಟಗಳುಳ್ಳ ಒಂದು ಸಣ್ಣ ಕನ್ನಡವಾಕ್ಯ ಗ್ರಂಥವಂ ಬರೆದು ಪ್ರಕಟಿಸಿ ಉತ್ತಾರಲ್ಲದೆ ಅದಂ ಲೇಡೀ ಡಫ್ರಿನ್ಯವರಿಗೆ ಗೌರವ ಪುರಸ್ಸರವಾಗಿ ಅರ್ಪಿಸಿರುತ್ತಾರೆ. ಈ ಗ್ರಂಥಕರ್ತರು ವಿಶ್ವಾಸಪೂರ್ವಕ ನಮಗೆ ಕಳುಹಿಸಿದ ಎರಡು ಪ್ರತಿಗಳನ್ನು ಉತ್ಸಾಹದೊಡನೆ ಪರಿಗ್ರಹಿಸಿದೆವು. ಈ ಗ್ರಂಥದಲ್ಲಿ ನಿವಾರಣವಿಲ್ಲದೆ ಉಪಯೋಗಿಸಲ್ಪಟ್ಟಿರುವ ಕೆಲವುಇಂಗ್ಲಿಷ್‌ಸಾಂಕೇತಿಕಶಬ್ದಗಳಿಗೆ ಅನುಗುಣವಾಗಿ ಕನ್ನಡಪದಗಳನ್ನುಕಲ್ಪಿಸಿ ಅವುಗಳು ಸುಲಭವಾಗಿ ತಿಳಿಯುವಬಗ್ಗೆ ಪ್ರತ್ಯೇಕವಾಗಿ ಒಂದುಪಟ್ಟಿಯು ಪ್ರಕಟಿಸಲ್ಪಟ್ಟಗುತಿವೆ. ಇದು ವಿದ್ಯಾರ್ಥಿಗಳಿಗೆ ಬಹಳ ಉಪಯುಕ್ತವಾಗಿರುವದರಿಂದ ಕನ್ನಡ ಪಾಠಶಾಲೆಗಳಲ್ಲೆಲ್ಲ ಪಠನ ಗ್ರಂಥವಾಗಿ ಅಂಗೀಕರಿಸಲ್ಪಡಲಿಕ್ಕೆ ಸಕಲಾಂಶದಿಂದಲೂ ಯೋಗ್ಯವಾಗಿರುತಿದೆ.

Occasional Notes.
ನೈಮಿತ್ತಿಕ ವಿಷಯನ್ಯಾಸ.

Longevity.—ರಷಿಯಾ ದೇಶದಲ್ಲಿ ಒಬ್ಬ ಹೆಂಗಸಿಗೆ ಈಚೆಗೆ ಕೆಲವುವಾರಗಳಹಿಂದೆ ೧೫೦ ನೇ ವರ್ಷ ವರ್ಧಂತಿ ನಡೆಯಿತಂತೆ. ಈಕೆಯು ದೃಢಗಾತ್ರಳಾಗಿಯೂ, ಚಟುವಟಿಕೆಯುಳ್ಳವಳಾಗಿಯೂ, ಓದುವದಕ್ಕೆ ನೇತ್ರಸಹಾಯವುಳ್ಳವಳಾಗಿಯೂ, ಇರುತ, ಬಾದು ಏಕಾಂತ ಸ್ಥಳದಲ್ಲಿರುತಲಿದಾಳೆ. ಈಕೆಗೆ ಆಹಾರ ಪದಾರ್ಥಗಳು ಆಲೂಗಡ್ಡೆ ಮತ್ತು ಹಾಲು ಇವುಹೊರತು ಬೇರೆಯಾವದೂ ಇಲ್ಲವು.

Appointment of a Commission.—ಮುಂಬೈ ಸಿವಿಲ್ ಸರ್ವಿಸನೌಕರಿಗೆ ಸೇರಿದ ಮೆ|| ಆರ್ಥರ್ ಕ್ರಾಫ್ರೋರ್ಡಯವರ ಮೇಲೆ ತರಲ್ಪಟ್ಟಿರುವ ಲಂಚವತ್ತು ಮೊಕದ್ದಮೆಯ ವಿಚಾರಣೆಯ ಬಗ್ಗೆ ಏರ್ಪಡುವ ಸುಭಾವಲ್ಲಿ ಇಂಡ್ಯಗವರ್ನಮೆಂಟ್ ವಾರ್ ಡಿಪಾರ್ಟ್ಮೆಂಟ್ ಸೆಕ್ರೆಟರಿಯವರಾದ ಮೆ|| ಚೆಸ್ನಿಯವರು ಒಬ್ಬ ಮೆಂಬರಾಗಿ ನಿಯಮಿಸಲ್ಪಡುವರೆಂದು ಮುಂಬೈ ಸಮಾಚಾರವೆಂಬ ಪತ್ರಿಕೆ ತಿಳಿಸುತಿದೆ.

The Public Service Commission Report.—ಸರ್ಕಾರ್ ನೌಕರಿಯ ವಿಮರ್ಶೆಯಬಗ್ಗೆ ಏರ್ಪಡಿಸಿದ್ದ ಸುಭಾದವರ ರಿಪೋರ್ಟನೆ ವಿಷಯದಲ್ಲಿ ಲೋಕಲ್ ಗವರ್ನಮೆಂಟನವರು ತಿಳಿಸಿದ ಅಭಿಪ್ರಾಯಗಳೆಲ್ಲವು ಸಂಪೂರ್ಣವಾಗಿ ಆಲೋಚಿಸಲ್ಪಟ್ಟವಾಗಿ ಈ ತಿಂಗಳ ಆಖ್ಯರೊಳಗಾಗಿ ಇಂಡ್ಯಗವರ್ನಮೆಂಟನವರು ಆವಿಷಯದಲ್ಲಿ ತಮ್ಮನಿರ್ಣಯವನ್ನು ಹೊರಪಡಿಸುವರೆಂದು ನಿರೀಕ್ಷಿಸಲ್ಪಟ್ಟಿದೆ.

The Dufferin memorial.—ಈಗ ಇಂಡ್ಯದೇಶದ ವೈಸ್‌ರಾಯ್‌ಯವರಾಗಿರುವ ಲಾರ್ಡ್ ಡಫರಿನ್‌ಯವರ ಜ್ಞಾಪಕಾರ್ಥ ಈದೇಶದಲ್ಲಿನೆಲಗೊಳಿಸಬೇಕೆಂದು ಯೋಚಿಸಲ್ಪಟ್ಟಿರುವ ಕಾರ್ಯವು ಏತದ್ರೂಪವಾಗಿರತಕ್ಕದ್ದೆಂದು ನಿರ್ಣಯಿಸುವದಕ್ಕೆ, ಆ ಬಗ್ಗೆ ಏರ್ಪಡಿಸಿರುವ ಕಮಿಟಿಯವರು, ಲಾರ್ಡ್ ಡಫರಿನ್ ಸಾಹೇಬರವರು ತಮ್ಮಭಾರ್ಯೆಯವರೊಡನೆ ಕಲ್ಕತ್ತೆಗೆ ಬಂದಮೇಲೆ ಅವರನ್ನುನೋಡಿ ಅವರ ಅಭಿಪ್ರಾಯವನ್ನು ಅರಿತ ಹೊರತು ಸಾಧ್ಯವಾಗುವದಿಲ್ಲವೆಂದು ಕಲ್ಕತ್ತೆಯ ಪತ್ರಿಕೆಯೊಂದು ತಿಳಿಸುತಿದೆ.

False personation.—ಈಚೆಗೆ ಒಂದೆರಡು ವಾರಗಳಹಿಂದೆ, ಕಲ್ಕತ್ತೆಯೊಳಿರುವ ಒಂದು ನೇಟಿವ್ ಕೋಠೀದಾರನಕಡೆ ಜವಾನನೊಬ್ಬನು ಅಲ್ಲಿನ ಆಗ್ರಾ ಬ್ಯಾಂಕಿನ ಮೇಲೆ ಕೊಡಲ್ಪಟ್ಟ ೧೫,೦೦೦ ರೂಪಾಯಿಗಳ ಚೆಕ್ಕು ಬಿಲನ್ನು ತೆಗದುಕೊಂಡು ಹೋಗಿ ಸದರೀ ಬ್ಯಾಂಕಿನಲ್ಲಿ ಕೊಟ್ಟನು. ಹಣಕ್ಕೆಗೆ ಬರುವದಕ್ಕೆ ಸಾವಕಾಶವಾದದರಿಂದ ಸದರೀಜವಾನನು ಸ್ವಲ್ಪ ಹೊರಗೆಹೋದನು. ಇದನ್ನು ನೋಡುತಲಿದ್ದವನೊಬ್ಬನು ತಾನೇ ಸದರೀ ಜವಾನನೆಂದು ಹೇಳಿ ಹಣವನ್ನು ಪಡಕೊಂಡು ಪರಾರಿಯಾದನಂತೆ.

The Tellicherry bribery case.—ತಲಚ್ಚೇರಿ ಸಬಾರ್ಡಿನೇಟ್ ಜಡ್ಜಿಯವರಾದ ಕುಂಜನ್‌ಮೇನನ್‌ಯವರ ಮೇಲೆ ತರಲ್ಪಟ್ಟ ಲಂಚವತ್ತು ಮೊಕದ್ದಮೆಯು ಈಚೆಗೆ ಕೆಲವುದಿನಗಳ ಮೊದಲು ವಿಚಾರಣೆಯಾಗುತಲಿತ್ತಷ್ಟೆ. ಈಚೆಗೆ ಅದು ಪೂರ್ತಿಯಾಗಿ ಈತಿಂಗಳ ೨೪ನೇ ತಾರೀಖ್‌ನಲ್ಲಿ ಸೆಷನ್ಸ್ ಜಡ್ಜಿಯವರು ತೀರ್ಪು ಹೇಳಿದರು. ೧ನೇ ನಂಬರ್ ಮೊಕದ್ದಮೆಯಲ್ಲಿ ೧ ನೇ ಅಪರಾಧಿಯಾದ ಸಬ್‌ಜಡ್ಜಿ ಕುಂಜನ್ ಮೇನನ್‌ಯವರಮೇಲೆ ಅಪರಾಧ ಸಾಬೀತಾಗಿ ಅವರು ೨ ವರ್ಷಗಳ ಕಠಿಣಸಜಾ, ೧೦,೦೦೦ ರೂಪಾಯಿಗಳ ಜುಲ್ಮಾನೆ ವಿಧಿಸಲ್ಪಟ್ಟರು. ೨ನೇ ಅಪರಾಧಿಯಾದ ಕುಂಹಿಪಕ್ಕಿ ಎಂಬವನು ಒಂದು ವರ್ಷದ ಕಠಿಣ ಸಜಾ ವಿಧಿಸಲ್ಪಟ್ಟನು. ೨ನೇ ಮೊಕದ್ದಮೆಯಲ್ಲಿ ೧ನೇ ಅಪರಾಧಿ ಕುಂಜನ್ ಮೇನನ್‌ಯವರಮೇಲೆ ತಕ್ಸೀರ್ ರುಜುವಾತ್ತಾಗಿ ೨ವರ್ಷಗಳ ಕಠಿಣ ಸಜಾ, ೧೦,೦೦೦ ರೂಪಾಯಿಗಳ ಜುಲ್ಮಾನೆ ವಿಧಿಸಲ್ಪಟ್ಟರು. ಈ ಎರಡು ಮೊಕದ್ದಮೆಗಳಲ್ಲೂ ಜುಲ್ಮಾನೆಯನ್ನು ತೆರದಹೋದರೆ ೧೮ ತಿಂಗಳ ಕಠಿಣ ಸಜಾ ವಿಧಿಸಲ್ಪಟ್ಟರು. ೩ನೇಅಪರಾಧಿಯಾದ ಸುಕುನ್ನಿನಾಯರ್ ಎಂಬಾತನು ೧ ವರ್ಷದ ಕಠಿಣಸಜಾ, ೧,೦೦೦ ರೂಪಾಯಿಗಳ ಜುಲ್ಮಾನೆ, ಅದನ್ನು ಕೊಡಲು ತಪ್ಪಿದರೆ ೬ತಿಂಗಳ ಕಠಿಣ ಸಜಾ ವಿಧಿಸಲ್ಪಟ್ಟನು. ೩ನೇ ಅಪರಾಧಿ ಖುಲಾಸೇ ಮಾಡಲ್ಪಟ್ಟನು. ಈ ಮೊಕದ್ದಮೆಯು ಮದರಾಸ್ ಹೈಕೋರ್ಟನಲ್ಲಿ ಅಪೀಲಾಗ ಬಹುದಾದದರಿಂದ ಅಲ್ಲಿ ಪ್ರಬಲರಾಗಿರುವ ಬ್ಯಾರಿಸ್ಟರ್‌ಗಳಿಗೆ ಒಳ್ಳೆಯಕಾಲವೆಂದು ಹೇಳಬೇಕಾಗಿರುತಿದೆ.

LOCAL AND PROVINCIAL NEWS.
ಒಳದೇಶದಮತ್ತು ತಾಲ್ಲೂಕ್‌ಜಾತಿವೃತ್ತಾಂತಗಳು.

The Maharaja.—ಶ್ರೀಮನ್ಮಹಾರಾಜರವರು ತಮ್ಮ ದಿವಾನರು ಮತ್ತು ಪರಿಜನರೊಡನೆ ಬರುವತಿಂಗಳ ಗುರ್ದ್ರೇತಾರೀಖುದಿನ ಇಲ್ಲಿಂದ ರಾಜಧಾನಿಗೆದಯಮಾಡುವರೆಂದುಕೇಳುತ್ತೇವೆ.

The Dewan.—ಈ ಸುಸ್ಥಾನದ ದಿವಾನರಾದ ಮೆ|| ಕೆ. ಶೇಷಾದ್ರಿಅಯ್ಯರ್ ಸಿ. ಎಸ್. ಐ. ಯವರು ಶ್ರೀ ಶೃಂಗೇರಿ ಸ್ವಾಮಿಗಳವರ ಸಂದರ್ಶನಾರ್ಥ ಕಳೆದ ಶನಿವಾರದದಿನ ಬಳ್ಳಾರಿಗೆ ಪ್ರಯಾಣ ಮಾಡಿದರೆಂತಲೂ, ಅಲ್ಲಿಂದ ಬರುವ ಬುಧ ಅಥವಾ ಬೃಹಸ್ಪತಿ ವಾರದದಿನ ಇಲ್ಲಿಗೆ ವಾಪಸ್ ಬರುವರೆಂತಲೂ, ತಿಳಿಯಲಾದೆವು.

The Commander in Chief.—ಮದರಾಸ್ ಕಮಾಂಡರ್ ಇನ್‌ಚೀಫ್‌ರವರು ಕಳೆದ ಶುಕ್ರವಾರದದಿನ ಪ್ರಾತಃಕಾಲ ಇಲ್ಲಿಗೆಬಂದು ಅದೇದಿನ ಸಾಯಂಕಾಲ ಇಲ್ಲಿಂದ ನೀಲಗಿರಿಗೆಹೊರಟುಹೋದರು. ಈಸಲ ಸದರೀಯವರು ಇಲ್ಲಿಗೆ ಬಂದಕಾಲದಲ್ಲಾಗಲಿ ಇಲ್ಲಿಂದ ಹೊರಟುಹೋದ ಸಂದರ್ಭದಲ್ಲಾಗಲಿ ತೋಪುಗಳು ಹಾಕಲ್ಪಡಲಿಲ್ಲವು.

The weather.—ಈಚೆಗೆ ಒಂದೆರಡು ವಾರಗಳಮೊದಲು ಮೋಡವಾದುತ ಆಗಿಂದಾಗ್ಯೆ ಕೆಲವುನಿಮಿಷಗಳಕಾಲ ತುಂತುರುಮಳೆ ಬೀಳುತಿದೆ ಯೇಹೊರತು ಬಲವಾದ ಮಳೆಹೊಡೆದು ಕೆರೆಗಳಿಗೆ ನೀರುಬರಲಿಲ್ಲವು. ಫಸಲಿಗಳು ಒಣಗಿಹೋಗುತಿವೆಯೆಂದು ರೈತರು ಮೊರೆಯಿಡುತ ಬಹಳ ದಿಗಿಲ್ ಹೊಂದಿರುತ್ತಾರೆ. ಜಿನಿಸಿಗಳದಾರಣೆಗಳು ದಿನೇದಿನೆ ಹೆಚ್ಚುತಲಿವೆ.

Criminal Sessions.—ಈಸಲದ ನುವಿಂದುಗರ್ ಕ್ರಿಮಿನಲ್ ಸೆಷನ್ ವಿಚಾರಣೆಯು ಬರುವ ಸೋಮವಾರದ ದಿನ ಪ್ರಾರಂಭವಾಗಿ ಜಸ್ಟಿಸ್ ಮೆ|| ರಾಮಚಂದ್ರಯ್ಯರವರಿಂದ ನಡೆಸಲ್ಪಡುವದು. ಈ ಬಗ್ಗೆ ಖೂನೀ ಮೊಕದ್ದಮೆಗಳು ಮೂರೂ ದರೋಡೆ ಮೊಕದ್ದಮೆಗಳು ಮೂರೂ ಕಮಿಟಿಮಾಡಲ್ಪಟ್ಟಿರುತವೆ. ಈ ವಿಚಾರಣೆ ಪೂರ್ತಿಯಾಗುವದಕ್ಕೆ ಪ್ರಾಯಶಃ ಒಂದುವಾರ ಹಿಡಿಯಬಹುದೆಂದು ಕಾಣುತಿದೆ.

Distribution of prizes.—ಇಲ್ಲಿನ ಗವರ್ನಮೆಂಟಿಬಾಲಿಕಾ ಪಾಠಶಾಲಾ ವಿದ್ಯಾರ್ಥಿನಿಯರಿಗೆ ಇನಾಂಗಳು ಕೊಡುವ ಉದ್ದೇಶದೊಡನೆ ಕಳೆದ ಶನಿವಾರದದಿನ ಸಾಯಂಕಾಲ ನಾಲ್ಕೂವರೆ ಘಂಟೆಗೆ ಸದರೀ ಪಾಠಶಾಲಾ ಸೌಧದಲ್ಲಿ ಸಭೆಸೇರಿತ್ತು. ಅದರಲ್ಲಿ, ಈ ಸಂಸ್ಥಾನದ ಬ್ರಿಟಿಷ್ ರೆಸಿಡೆಂಟರಾದ ಸರ್ ಹಾರಿ ಪ್ರಿಡೆರ್‌ಗ್ಯಾಸ್ಟ್‌ಯವರ ಭಾರ್ಯೆಯವರು ಅಗ್ರಾಸನವಂ ವಹಿಸಿದ್ದರು. ಮೇಜರ್ ಮ್ಯಾಕಿಂಟೈರ್, ಮೆ|| ರೈಸ್, ಮೆ|| ರಿಕ್ಕೆಟ್ಸ್ ಮೊದಲಾದ ಯೂರೋಪಿಯನ್ ಅಧಿಕಾರಿಗಳೂ, ಅವರ ಲೇಡಿಗಳೂ, ಬಹುಮಂದಿ ನೇಟಿವರೊಕ್ಕ ಮನುಷ್ಯರೂ ಬಂದಿದ್ದರು. ಬಾಲೆಯರ ವಿದ್ಯಾಭಿವೃದ್ಧಿಯಂನೋಡಿ ಎಲ್ಲರೂ ಸಂತೋಷಿಸಿದರು. ವಿದ್ಯಾರ್ಥಿನೀಯರ ಯೋಗ್ಯತಾನುಸಾರವಾಗಿ ಬಹುವಿಧ ಇನಾಂಗಳು ಕೊಡಲ್ಪಟ್ಟವು. ಸಭಾಸ್ಥಾನವು ವಿವಿಧಾಲಂಕಾರಗಳಿಂದ ಪರಿಶೋಭಿತವಾಗಿ ಸಭಿಕರಿಗೆ ನೇತ್ರಾನಂದವನ್ನುಂಟುಮಾಡುತಲಿತ್ತು. ಸ್ಥಳಸಂಕೋಚದಿಂದ ಈಗ ನಡೆದದಕ್ಕಿಂತಲೂ ಉಚಿತವಾದ ಏರ್ಪಾಡುಗಳಿಗೆ ಅವಕಾಶವಿಲ್ಲದೆಯಿತ್ತು. ಮುಂದಿನ ವರ್ಷದಲ್ಲಿ ಈ ಲೋಪ ಪರಿಹರಿಸಲ್ಪಡುವದೆಂದು ನಂಬುತ್ತೇವೆ.

NEWS LETTERS.
ವೃತ್ತಾಂತಲೇಖ.

ಮೇಲಕೋಟೆ, ತಾ|| ೨೩, ೮, ೮೮.

ಶ್ರೀ ಯಾದವಾದ್ರಿಯೆಂಬ ಮೇಲಕೋಟೆಯಲ್ಲಿ ಈ ಸಂವತ್ಸರದ ಶ್ರೀಕೃಷ್ಣ ರಾಜಮುಡಿ ಉತ್ಸವವು ಬಹಳ ಸಂಭ್ರಮವಾಗಿ ನಡೆಯಿತು. ಸದರೀ ಉತ್ಸವವು ವೈಖರಿಯಿಂದ ನಡೆಸಲ್ಪಟ್ಟ ವಿಷಯದಲ್ಲಿ ಇಲ್ಲಿನ ಅಧಿಕಾರಿಗಳಿಗೆ, ತತ್ಸಾಪಿನಮ್ಮ ಶ್ರೀಯವರ ದೇವಸ್ಥಾನದ ಸುಬೇದಾರ್ ಮ|| ರಾ|| ವೆಂಕಟರಂಗಯ್ಯನವರ ವಿಷಯದಲ್ಲಿ ಬಹಳ ಕೃತಜ್ಞರಾಗಿರುವೆವು.

ಮತ್ತು ಇಲ್ಲಿನ ವಿದ್ಯಾಶಾಲೆಗಳ ಪರೀಕ್ಷಾರ್ಥ ಮ|| ರಾ|| ಸ್ಕೂಲುಗಳ ಡೆಪ್ಯುಟಿ ಇನ್ಸ್‌ಪೆಕ್ಟರ್ ಕೇಶವಯ್ಯರವರು ದಯಮಾಡಿ ಎಲ್ಲಾ ಶಾಲೆಗಳನ್ನೂ ಪರಿಕ್ಷಿಸಿ ಸಂತೋಷಿಸಿದರಲ್ಲದೆ, ಬಾಲಿಕಾ ಪಾಠಶಾಲೆಗೆ ೨೦ ರೂಪಾಯಿ ಗ್ರಾಂಟ್ ಮಂಜೂರ್ಮಾಡಿಸಿದರು. ಇಲ್ಲಿನ ಸಂಸ್ಕೃತ ಪಾಠಶಾಲೆಗೆ ಕೆಲವು ಹೆಚ್ಚು ಗ್ರಾಂಟನಬಗ್ಗೆಯೂ, ಇಲ್ಲಿನಗವರ್ನಮೆಂಟ್ ಕನ್ನಡಸ್ಕೂಲಿಗೆ, ಕೆಲವು ಹೆಚ್ಚು ಉಪಾಧ್ಯಾಯರುಗಳಿಗಾಗಿಯು ಸಹ ಶಿಫಾರಸು ಮಾಡಿರುವರಾಗಿ ತಿಳಿಯಬರುತ್ತೆ. ಪರಂತು ಈಸ್ಥಳದ ವಿದ್ಯಾಭಿವೃದ್ಧಿ ವಿಷಯದೊಳು ತುಂಬಾ ಸಂತೋಷಗೊಂಡು ಶ್ಲಾಘನೆಯೊಡನೆ ತೆರಳಿದರು. ಇದು ಮೊದಲಾದ ಇನ್ನೂ ಸ್ಥಳವಿಶೇಷ ಸಂಗತಿಗಳನ್ನೂ ಮತ್ತು ಇಲ್ಲಿಗೆ ಶ್ರೀವಾನಮಾಮಲೈ ಶ್ರೀ ಸ್ವಾಮಿಗಳವರು ದಯಮಾಡಿದ ಸಂಭ್ರಮವನ್ನೂ ಆಮೂಲಾಗ್ರ ತಮಗೆ ಶ್ರುತಪಡಿಸಬೇಕೆಂದಿರುವಷ್ಟರಲ್ಲೇ ತಮ್ಮ ಈವಾರದ ಪತ್ರಿಕೆಯೊಳು ಈ ಮಠದ ವಿಷಯದಲ್ಲಿ ಯಾರ ಪ್ರೇರಣೆಯಿಂದಲೋ ಬೇರೆ ವಿಧವಾಗಿ ಪ್ರಸಿದ್ಧಪಟ್ಟಿರುವದನ್ನು ನೋಡಿ ತುಂಬಾ ಆಶ್ಚರ್ಯವಾಗುತ್ತೆ.

ಶ್ರೀಮತ್ಪರಮಹಂಸೇತ್ಯಾದಿ ಶ್ರೀ ತೋತಾದ್ರಿಸ್ವಾಮಿಗಳವರು ಈ ದಕ್ಷಿಣದೇಶಾಲಂಕಾರವಾದ ಶ್ರೀ ಯಾದವಾದ್ರಿಯಲ್ಲಿ ಶ್ರೀ ಸಂಪತ್ಕುಮಾರನ ಸೇವಾರ್ಥ ಪ್ರಯಾಣಮಾಡಿ ಮಧ್ಯೆ ಮಾರ್ಗವಶಾತ್ ಬೆಂಗಳೂರಲ್ಲಿ ಕರ್ಣಾಟ ರಾಜ್ಯಧುರಂಧರರಾದ ಶ್ರೀ ಚಾಮರಾಜೇಂದ್ರ ಸಾರ್ವಭೌಮರಿಂದ ಬಹಳವಾಗಿ ಸತ್ಕರಿಸಲ್ಪಟ್ಟು ಕಳೆದ ಆಷಾಢ ಬಹುಳ ೧೪ ಯಲ್ಲು ಈ ಪುರಿಗೆದಯಮಾಡಿದರು. ಇವರು ಈ ದೇಶಕ್ಕೆ ದಯಮಾಡಿ ಮೂವತ್ತುವರುಷಗಳಗಿಂತಲೂ ಹೆಚ್ಚಾದ್ದರಿಂದ ಇಲ್ಲಿನವರೆಲ್ಲರೂ ಶ್ರೀ ಸ್ವಾಮಿಗಳ ಸಂದರ್ಶನದಲ್ಲಿ ಅತ್ಯಧಿಕ ಸಂಭ್ರಮವುಳ್ಳವರಾಗಿದ್ದರು ಇವರಿಗೆ ಲಾಗಾಯತುನಿಂದ ಮೈಸೂರ್‌ಸಂಸ್ಥಾನಾಧಿಪತಿಗಳು ಕ್ಲೃಪ್ತಪಡಿಸಿರುವ ಅಗ್ರಮರ್ಯಾದಾಸ್ಥಾನವಾದ "ಚಿಕ್ಕಯ್ಯನ ಕೊಳ"ವೆಂಬ ಸರಸ್ಸಿನವರಿವಿಗೂ ಶ್ರೀ ಶಠಕೋಪಾದಿ ಸಕಲ ಮರ್ಯಾದೆಗಳೂ ಲೇಶವೂ ವ್ಯತ್ಯಾಸವಿಲ್ಲದಂತೆ ನಡೆದವು. ಅನಂತರ ಶಿಷ್ಯಪ್ರಾರ್ಥನಾನುಸಾರ ಸುವರ್ಣಾಂದೋಳಿಕಾರೋಹಣಗ್ಗೈದು ಶ್ರೀಯವರು ಸಮಸ್ತ ಬಿರುದಾವಳಿಗಳಿಂದಲೂ, ವಾದ್ಯಘೋಷ ಜಯಘೋಷಗಳಿಂದಲೂ ಹೊರಟು ನಗರಪ್ರದಕ್ಷಿಣವಾಗಿ, ಕದಳೀ ಸ್ತಂಭ ತೋರಣಾದಿಗಳಿಂದಲಂಕೃತವಾಗಿದ್ದ ತಿರುವೀಧಿಗಳಲ್ಲಿ ದಯಮಾಡಿ, ೧ ಘಂಟೆಗೆ ಸರಿಯಾಗಿ ಶ್ರೀಯವರ ದೇವಸ್ಥಾನಕ್ಕೆ ಶ್ರೀಮನ್ನಾರಾಯಣ ಶ್ರೀ ಸಂಪತ್ಕು

ಪಾರಣೆಯನ್ನು ನೆರವೇರಿಸಿ ಮರ್ಯಾದೆಯೊಡನೆ ತೀರ್ಥ ಪ್ರಸಾದಗಳನ್ನು ಸ್ವೀಕರಿಸಿ ಅನ್ನದ ಪ್ರಸಾದಾಂತರ ರಾಗಿ ಶ್ರೀ ಸ್ವಾಮಿಗಳು ಶ್ರೀ ಜಗನ್ನಾಥಸ್ವಾಮಿ ಯವರ ಸನ್ನಿಧಾನವಾದ ಈ ಪುಣ್ಯ ಕ್ಷೇತ್ರವು ಯಾವ ಮಹಾರಾಜರ ಪಾಲಿಗೆ ವಿಷ ಯವಾಗಿರುತ್ತೋ ಅಂತಾ ನಮ್ಮ ಶ್ರೀಮನ್ಮಹೀ ಶೂರ ಮಹಾರಾಜರವರ ದಯೆಯನ್ನು ವರ್ಣಿಸ ಲಳವಲ್ಲವೆಂದು ಅಪ್ಪಣೆಕೊಟ್ಟು ದೇವರಿಗೆ ಅನ ರ್ಘ್ಯವಾದ ಪೀತಾಂಬರವನ್ನು ಸಮರ್ಪಿಸಿದರು. ಹಾಗೆಯೇ ಎಲ್ಲ ದೇವಸ್ಥಾನಗಳಲ್ಲಿಯೂ, ದೇವರ ಸಂದರ್ಶನೆ ಮಾಡಿಕೊಂಡು ಶ್ರೀಯವರ ದೇವಸ್ಥಾ ನದ ದಕ್ಷಿಣಭಾಗದಲ್ಲಿ ಪರಿಶೋಭಿತವಾಗಿರುವ ಸ್ವಂತ ಮಠವನ್ನಲಂಕರಿಸಿದರು. ಇದೇರೀತಿಯಲ್ಲಿ ಪ್ರತಿದಿನವೂ, ದೇವರ ಸಂದರ್ಶನ ಮಾಡಿಕೊಂಡು ತಿರುವಾಡಿಪ್ಪೂರದ ದಿನ ಶ್ರೀ ಸ್ವಾಮಿಗಳವರು ಶ್ರೀಯೋಗಾ ನರಸಿಂಹಸ್ವಾಮಿಯವರ ಸಂದರ್ಶ ನಾರ್ಥ ಬೆಟ್ಟಕ್ಕೆ ದಯಮಾಡಿ ಮರ್ಯಾದೆಯೊಡನೆ ತೀರ್ಥ ಪ್ರಸಾದಗಳಂ ಸ್ವೀಕರಿಸಿ ಅಲ್ಲಿಂದ ಶ್ರೀ ಮಠಕ್ಕೆ ಚಿತ್ತೈಸಿದರು. ಈದಿನ ಶ್ರೀಪದ್ಮಭಗ ಸ್ವಾಮಿಗಳವರ ತಿರುನಕ್ಷತ್ರವಾದ್ದರಿಂದ ಮಾ ಮೂಲಿನಂತೆ ಶ್ರೀ ಸಂಪತ್ಕುಮಾರನು ಮಠಕ್ಕೆ ಬಿಜಯಂಗೈದು ನಡೆಯತಕ್ಕ ಸುಭ್ರಮಗಳೆಲ್ಲ ವೂ, ಶ್ರೀ ಸ್ವಾಮಿಗಳವರ ಸಾಕ್ಷಾತ್ಕಾರದಿಂದ ಪ್ರ ತಿ ಸಂವತ್ಸರಕ್ಕಿಂತಲೂ ಅತಿಶಯವಾದ ಸಂತೋ ಷವನ್ನುಂಟುಮಾಡುತಿತ್ತು. ಈ ಸಮಯದ ಲ್ಲಿ ಶ್ರೀಮಾನ್ ಕರ್ನಲ್ ಸುಬೇದಾರು ಕೇ ಟಿಸ್ಟ್ಲೂರು ವೆಂಕಟರಂಗಯ್ಯಂಗಾರ್ಯರವರು ತಮ್ಮ ತಂದೆಯವರಾದ ಕೇಟ್ಲೂರು ಬಕ್ಷಿ ಶಿಂಗಯ್ಯಂ ಗಾರ್ಯರಿಂದ ಈದಿವ್ಯ ದೇಶದಲ್ಲಿ ಬಹುವ್ಯಯ ದಿಂದ ಕಟ್ಟಲ್ಪಟ್ಟು ಶ್ರೀವಾನಮಾಮಲೈ ಸ್ವಾ ಮಿಗಳವರಿಗೆ ಸಮರ್ಪಿಸಲ್ಪಟ್ಟಿದ್ದ ಶ್ರೀಮಠದ ಲ್ಲಿ ಶ್ರೀ ಸ್ವಾಮಿಗಳವರು ದಯಮಾಡಿ ಅಲಂಕರಿ ಸಿದ್ದನ್ನು ಸಾಕ್ಷಾತ್ ನೋಡಿ ಆನಂದಿಸುತ್ತ, ತ ಮ್ಮ ಹಿರಿಯರ ಸಂಕಲ್ಪವು ನೆರವೇರಿದ ದ್ವಾರಾ ಈ ಭಾಗ್ಯವು ತಮಗೆ ಲಭಿಸಿದಕ್ಕಾಗಿ ಶ್ರೀ ಸ್ವಾ ಮಿಗಳವರಲ್ಲಿ ತಮ್ಮ ಕೃತಜ್ಞತೆಯನ್ನು ವ್ಯಕ್ತ ಗೊಳಿಸಿದರು.

೭ ಶ್ರೀಸ್ವಾಮಿಗಳವರು ಬ್ಯಾಕ್ ಉತ್ತರದೇಶ ಯಾತ್ರಾರ್ಥ ದಯಮಾಡುವ ಸಂದರ್ಭದಲ್ಲಿ ಈ ಪ್ರಾಂತದ ವಿದ್ವಾಂಸರು ಮೊದಲಾದ ಎಲ್ಲರನ್ನೂ ಕರೆಯಿಸಿ ಅಪ್ಪಣೆ ಇಲ್ಲಿನ ಸಂಸ್ಕೃತ ಪಾಠಶಾ ಲಾ ವಿದ್ವಾಂಸರುಗಳಾದ ಶ್ರೀ ಕುಪ್ಪಯ್ಯಯ್ಯಂ ಗಾರ್ಯರವರಿಗೆ ಅನರ್ಘವಾದ ಬನಾರಸ್ ಕಲಾಬತ್ ಪೀತಾಂಬರವನ್ನೂ ಅಕ್ಕಾರಕನ್ನಿ ರಾಮಾನುಜಾ ಚಾರ್ಯರಿಗೆ ಕಲಾಬತ್ ಶಾಲುವೆಯನ್ನೂ ಅನುಗ್ರ ಹಪೂರ್ವಕ ಬಹುಮಾನಮಾಡಿದ್ದಲ್ಲದೆ ಇಲ್ಲಿನ ಪ್ರಾಂದಿತ್ಯ ವರ್ಧನೀ ಸಭಾ ಕಾರ್ಯದರ್ಶಿಯರಾದ ಗವರ್ನಮೆಂಟ್ ಸ್ಕೂಲ್ ಹೆಡ್ ಮಾಸ್ಟರ್ ಶ್ರೀ ಎಂ. ಜಿ ಶಾಮೈಯ್ಯಂಗಾರ್ರಿಗೆ ಕಲಾಬತ್ ಶಾಫ್ ಬಹುಮಾ ನಮಾಡಿದರು. ಮತ್ತು ಸ್ಥಳದ ಅನೇಕ ವೈದಿಕ ಲೌಕಿಕರುಗಳಿಗೆಲ್ಲ ಶಾಲು ಧೋತ್ರ, ರೇಷ್ಮೆನೀ ಮುಕುಟ ರೂಪವಾಗಿಯೂ, ಕೆಲವರಿಗೆ ದ್ರವ್ಯರೂ ಪವಾಗಿಯೂ, ಶ್ರೀ ಗಳವರು ಅನುಗ್ರಹಿಸಿದರು. ಪರ್ವಭಾ ಶ್ರೀಪಂಡಿತ ಪುರೋಹಿತ ತಿರುನಾರಣ ಯ್ಯಂಗಾರ್ ಮುಂತಾದ ಪಾಠಶಾಲಾ ಪಂಡಿತರುಗ ಳೆಲ್ಲರು ವಿಶೇಷತಃ ಗೌರವಿಸಲ್ಪಟ್ಟರು.

೭ ಶ್ರೀಸ್ವಾಮಿ ಶ್ರೀಯವರು ಪರ್ವತರ್ತಿ ಸಂಸ್ಥಾನಕ್ಕೆ ದಯಮಾಡುವದಕ್ಕಾಗಿ ಕಳೆದ ೧೩ನೇ ತಾರೀಖಿ ನಲ್ಲಿ ಇಲ್ಲಿಂದ ಪ್ರಯಾಣ ಬೆಳಸಿದರು. ನಾಗಮಂ ಗಲದಲ್ಲಿ ಮ|| ರಾ|| ಅಲ್ಲಿನ ಅಮಲ್ದಾರ್ ಮತ್ತು ಶಿರಸ್ತೇದಾರರವರು ಶ್ರೀಯವರನ್ನು ಬಹಳ ಗೌ ರವವಾಗಿ ಬರಮಾಡಿಕೊಂಡು ಆ ಮೊತ್ತಾಂತದಲ್ಲಿ ವಿಶೇಷವಾಗಿ ಸತ್ಕರಿಸಿ ಮುಂದಕ್ಕೆ ಕಳುಹಿಸಿ ಕೊಟ್ಟರೆಂದು ತಿಳಿದು ಸಂತೋಷಿಸುತ್ತೇವೆ.

ನಿನ್ನೆ ದ್ವಾದಶಿ ಭಾನುವಾರ ಶ್ರೀ ಕೃಷ್ಣರಾಜ ಪುಡ್ಡಿ ಮಹೋತ್ಸವ ಪ್ರಯುಕ್ತವಾದ ಲಾಮ ಸಮಾರಾಧನೆಯು ಇಲ್ಲಿನ ಶ್ರೀಮಠದಲ್ಲಿ ಬ್ರಾಹ್ಮಣ ರಿಗೂ ಅತ್ಯಾನಂದವನ್ನುಂಟುಮಾಡಿರುತ್ತೆ.

ಅ|| ರಾಮಾನುಜಾಚಾರ್,
ಶ್ರೀ ವಾನಮಾಮಲೈ ಮಠದ ಕಾರ್ಯಕರ್ತ.

ಪಳೇಪೈಕದವರ ವೃತ್ತಾಂತ.

ತಿನ್ನೆ ಮಲ್ನಾಡಿನಲ್ಲಿ ಪಳೇ ಪೈಕದವರೆನ್ನುವ ಒಂ ದು ಬಗೆಯ ಜನಗಳು ವಿಶೇಷವಾಗಿರುವದಂ ಪ್ರಾ ಯಶಃ ಎಲ್ಲರೂ ಕೇಳಿರಬಹುದು. ಈ ಜನರಲ್ಲಿ ಪಶ್ಚಿಮಘಾಟಯಿಂದ ಸಮುದ್ರದ ವರಿಗಿನ ದೇ ಶದಲ್ಲಿ ವಾಸವಾಗಿರುವವರಿಗೆ, ತೆಂಗಿನಮರದವರೆನ್ನು ತಲೂ, ಘಾಟಯಿಂದ ಪೂರ್ವದಿಕ್ಕಿನಲ್ಲಿರುವವರಿ ಗೆ, ಬಗನೇ ದೇವರೆಂತಲೂ, ಅನ್ನುವರು. ಇವ ರ ಕಸುಬು ಹೆಂಡವನ್ನು ತೆಗಿಯುವದೂ, ಮತ್ತು ಶೇದ್ಯವನ್ನು ಮಾಡುವದೂ ಆಗಿರುವದು. ಬ್ರಾ ಹ್ಮಣರು ಮತ್ತು ವೈಶ್ಯರೂ ಸಹ ಇವರನ್ನು ಮ ನೆಗೆ ಬರಗೊಳಿಸುವದಿಲ್ಲವು.

ಪಳೇಪೈಕದವನು—ಅಯ್ಯಾ, ಬ್ರಾಹ್ಮಣರೇ ಕೇಳಿರಿ—ನಾವು ಕ್ಷತ್ರಿಯಮತದವರು, ಮತ್ತು ವೈಷ್ಣವಾಗ್ರೇಸರರಾದ ತಾತಾಚಾರ್ಯರವರ ಶಿ ಷ್ಯರು. ಸಾವಿರತಲೆಹೋದರೂ ದೀವರುಹೋಗ ಲಿಲ್ಲವೆನ್ನುವ ಗಾದೆಯನ್ನು ನೀವು ಕೇಳಿ ಇರಬ ಹುದು. ಇದರಿಂದಲೇ ನಾವು ಶೂರರೆಂದು ನೀ ವು ನಿಜವಾಗಿ ಗ್ರಹಿಸಬಹುದು. ದೀವರು ಎಂದು ನಮ್ಮನ್ನು ಕರೆಯೋ ಕಾರಣವೇನೆಂದು ಕೇಳು ವಿರಿ. ಮಹಾಭಾರತ ಯುದ್ಧದಲ್ಲಿ ಶ್ರೀ ಕೃಷ್ಣ ನ ಆಜ್ಞೆಯಪ್ರಕಾರ, ನಮ್ಮ ಹಿರಿಯರು ಕುರು ಸೈನ್ಯವನ್ನು ಗೆದ್ದು ಶ್ರೀಕೃಷ್ಣನ ಬಳಿಗೆ ಹೋ ಗಿ, ಸ್ವಾಮಿ ! ನಿನ್ನ ಆಜ್ಞೆಯಪ್ರಕಾರ ಶತ್ರು ನಾಶನಮಾಡಿ ಎದ್ದೇವೆ. ನಮ್ಮ ಮಕ್ಕಳು ಈ ಪ್ರಪಂಚದಲ್ಲಿ, ಯಶೋವಂತರಾಗಿ ರುಷಿಗ ಳಿಗೆ ಸುಂಮಾನವನ್ನು ಒದಗಿಸಿಕೊಂಡು ಅ ವರ ಅನುಗ್ರಹವನ್ನು ಕೈಗೊಂಡು, ಕಡೆಗೆ ನಿ ನ್ನ ಪಾದಾರವಿಂದವನು ಪಡೆಯುವಹಾಗೆ ವರವ ನ್ನು ಕೊಡಬೇಕೆಂದು ಕೇಳಿಕೊಂಡರು. ಆ ಪ್ರ ಕಾರ ದೇವರು ನಮ್ಮಲ್ಲಿ ಕೃಪೆಗೊಂಡು ಇದ್ದಾನೆ ದೇವರು ಯೆನ್ನುವ ದೀವರು ಶಬ್ದವೇ, ಕಾಲದೇ ಶಾನುಗುಣವಾಗಿ ಭಾಷೆಗಳು ಕೆಟ್ಟು, ದೇವರು ಎನ್ನುವದು ದೀವರು ಎಂದು ಪರಿಣಮಿಸಿರುತ್ತ ದೆ. ಹೀಗೆ ಇರಲಾಗಿ ಬ್ರಾಹ್ಮಣರಾದ ನೀವು ವಿ ಷ್ಣುಭಕ್ತರಾದ ನಮ್ಮನ್ನು ಚಂಡಾಲರಂತೆ ಭಾವಿ ಸಿಕೊಂಡು ಮನೆಗೆ ಬರಗೊಳಿಸದಿರುವಿಕ್ಕೆ ಕಾರ ಣವೇನು ? ಬ್ರಾಹ್ಮಣರು—ಅಯ್ಯಾ ದೀವರನೇ, ನೀನು ಹೇಳಿದ ಕಥೆಯನ್ನು ಸಂತೋಷದಿಂದ ಕೇಳಿದೆನು. ಕಥೆಯಲ್ಲಿ ಮುಖ್ಯವಾದ ಭಾಗದಲ್ಲಿ ಕೊಂಚಭಾಗವನ್ನು ಕಪಿಯು ಬಿಟ್ಟು ಇರುವದ ಕ್ಕಾಗಿ ವ್ಯಸನಪಡುತ್ತೇನೆ. ಮಹಾಭಾರತ ಯು ದ್ಧದಲ್ಲಿ ನೀವು ಸಹಾಯ ಮಾಡುವದಾಗಿ ಶ್ರೀ ಕೃಷ್ಣನಿಗೆ ವಚನವನ್ನು ಕೊಟ್ಟು ಶತ್ರುಗಳನ್ನು ನೋಡಿದ ಮಾತ್ರಕ್ಕೆ ಭಯಪಟ್ಟು ಯುದ್ಧ ಪ್ರಾ ರಂಭಿಸುವ ವರಿವಿಗೂ ಅಡಗಿಕೊಂಡಿದ್ದಿರಿ. ಆ ತ ರುವಾಯ ನೀವುಗಳು ಕೃಷ್ಣನ ಬಳಿಗೆ ಬಂದು ಅವನನ್ನು ಮೋಸಗೊಳಿಸಿ ವರವನ್ನು ಪಡೆಯ ಬೇಕೆಂದು ಯತ್ನಪಟ್ಟದ್ದನ್ನು ನೋಡಿ ಕುಪಿ ತನು ಜನರು ಸಾವಿರತಲೆ ಹೋದರೂ ದೀವರತ ಲೆ ಹೋಗಲಿಲ್ಲವೆಂದು ಹೇಳುವದು ಶ್ರೀ ಕೃಷ್ಣ ನ ಆಜ್ಞೆಯಾಗಿರುತ್ತದೆ. ಅದಕ್ಕೆ ಅರ್ಥವೇನಂ ದರೆ—ಶೂರನಾದವನು ರಣರಂಗದಲ್ಲಿ ಹೊಕ್ಕು ಲ ಡಾಯಿ ಮಾಡುವನು. ಯುದ್ಧಮಾಡುವವರಲ್ಲಿ ಎಲ್ಲರೂ ಬದುಕುವದಿಲ್ಲ. ಕೆಲವರು ಸಾಯುತ್ತಾ ರೆ. ನೀವು ಯುದ್ಧರಂಗಕ್ಕೆ ಬರಲಿಲ್ಲವಾದ್ದರಿಂದ ಲೇ ಸಾವಿರತಲೆ ಹೋದರೂ ನಿಮ್ಮವರಲ್ಲೊಂದು ತಲೆಯೂ ಹೋಗಲಿಲ್ಲ. ಆದಕಾರಣ ನೀವು ಹೆಂ ಗಸರಿಗಿಂತಲೂ ಬಲಹೀನರು ಮತ್ತು ಅಬದ್ಧ ವಾಡಿದ ಸಬಬು ಪರಮನೀಚರು ಎಂದು ಶ್ರೀ ಕೃ ಷ್ಣನು ನಿಮ್ಮನ್ನು ಶಪಿಸಿದನು. ಆದ್ದರಿಂದ ಅಕಾ ಲದಾರಭ್ಯ ಭೂಮಿಯಮೂಲೆಯಲ್ಲಿಯೂ ನೀವಿರ ಲು ಜಾಗವಿಲ್ಲದೆ ಅರಣ್ಯವಾಸ ಮಾಡಬೇಕಾಗಿಬಂ ತು. ನೀವು ಅರ್ಪಿಸುವ ಸುಂಮಾನವನ್ನು ಮಾ ಡುವದಕ್ಕೆ, ಋಷಿಗಳಂತೆ ಗಡ್ಡವನ್ನು ಬಿಟ್ಟಿರು ವ ಅನೇಕರು ಈಗಿನ ಕಾಲದಲ್ಲಿ ಎಲ್ಲಿನೋಡಿದ ರೂ ಶಿಕ್ಕುವರು. ಅವರ ಅನುಗ್ರಹದಿಂದ ನಿಮ ಗಾಗುವ ಸುಖವನ್ನು ನೀವು ಊಹಿಸಬಹುದು. ಪಳೇ ಪೈಕದವರೆನ್ನುವ ಹೆಸರೇ ನಿಮ್ಮಸ್ಥಿತಿಯ ನ್ನು ತೋರಿಸುತ್ತದೆ. ಪಳೇ ಪೈಕದವರು ಅಂ ಅಂದರೆ, ಮನೆಯಿಂದ ನಿಂತು ಅಡಿಕೆ ಹಾಳೆಯಲ್ಲಿಟ್ಟ ಅನ್ನವನ್ನು ಇಸುಕೊಂಡು ತಿನ್ನುವ ಜವಾಂಗದಲ್ಲಿ ನೀವು ಒಬ್ಬರಾಗಿರುತ್ತೀರಿ ಎನ್ನುವದು ನಿಮ ಗೆ ತಿಳಿಯದೆ ಇರಲಿಕ್ಕಿಲ್ಲ. ಆ ಪಳೇ ಪೈಕದವರು ಎನ್ನುವ ಶಬ್ದವು, ಪಳೇ ಪೈಕ ಯೆಂತಾಗಿರುತ್ತ ದೆ. ತಾತಾಚಾರ್ಯರ ಶಿಷ್ಯರೆಂದು ಹೇಳಿಕೊಳ್ಳುವದ ರಿಂದಲೇ ನೀವು ವೈಷ್ಣವರೆಂತೆ ಹೇಳಬೇಕೇಕೆ ಪ್ಯಾಗೆ ? ಮದ್ದುಕೊಡುವವನೊಬ್ಬನಿದ್ದರೆ, ಗು ರುಗಳು ಶಿಕ್ಕುವದೇನು ಆಶ್ಚರ್ಯವು. ನಿಮ್ಮ ಗುರುಗಳೆನ್ನುವ ತಾತಾಚಾರ್ಯರೇ ಸ್ನಾನವನ್ನು ಮಾಡಿದಾಗ, ನಿಮ್ಮಸಂಗಡ ಭಾಷಣೆ ಮಾಡುವದಿ ಲ್ಲ. ಇದರಿಂದಲೇ ದುಡ್ಡು ಸುಲಿಯುವದಕ್ಕೋ ಸ್ಕರವೇ ಅವರು ನಿಮ್ಮಗುರುಗಳಾಗಿರುತ್ತಾರೆ ಯೇ ಶಿವಾಯಿ ಮತ್ಯಾವದಕ್ಕೂ, ನಿಮ್ಮ ಗುರುಗ ಳು ಅವರಲ್ಲವು. ಇನ್ನುಮೇಲಾದರೂ ನಿಮ್ಮಸ್ವ ರೂಪವನ್ನು ತಿಳಿದುಕೊಂಡು, ಅದರಂತೆ ಇರುವ ದು ಒಳ್ಳೇದು.

ಪಳೇಪೈಕದವನು—ಒಳ್ಳೇದು, ನಾಳೇದಿವಸ ತಾತಾಚಾರ್ಯರನ್ನು ಕೇಳಿಕೊಂಡು ಬರುತ್ತೇನೆ. ನಮ್ಮನ್ನು ಬ್ರಾಹ್ಮಣರ ಮನೆಗೆ ಬರಕೂಡದೆಂದು ಅವರ ಎಸಪ ನಿಷೇಧಿಸುವದಾದರೆ, ಬೇರೆ ಗುರು ಗಳನ್ನು ಸೇರಿಸಿಕೊಳ್ಳುವದೇ ಸರಿ. ಬ್ರಾಹ್ಮಣರ ಕುಲವನ್ನು ವಿಚಾರಿಸಿ ನೋಡಿದರೆ ನಮಗಿಂತ ಲೂ ಕೇಡಾಗಿದೆ. ಅದು ಹ್ಯಾಗಾದರೂ ಇರಲಿ, ಈಗ ನಮಗೆಬಂದ ಪೀಕಲಾಟ ಸ್ಥಿರಿಸುವದು ಕಷ್ಟವಾಗಿದೆ. ನಮ್ಮ ಹೆಂಗಸರಿಗೂ ಸಹವಾ ಸವನ್ನು ಮಾಡುತ್ತಿರುವ ಬ್ರಾಹ್ಮಣರೇ ನಮ್ಮ ನ್ನು ಮನೆಯಲ್ಲಿ ಬರಗೊಡಿಸುವದಿಲ್ಲ. ಇದೆಂ ತ ಕರ್ಮವೋ ನಾಕಾಣೆ. ಈಗ ಹೊತ್ತಾಯಿತು, ನಾಳೆಬರುತ್ತೇನೆ. ಈರೀತಿ ಭಾಷಣ ನಡೆದು, ಪಳೇಪೈಕದವನು ಹೊರಟುಹೋದತರುವಾಯ: ಬ್ರಾಹ್ಮಣನು ಕೊಂಚಹೊತ್ತು ಚಿಂತೆಯಿಂದಕು ಳಿತಿದ್ದು, ನಾಳೆನಾನು ಇಲ್ಲಿಗೆ ಬಂದರೆ ತಾನೇ ಪಳೇಪೈಕದವನು ಬರುತ್ತಾನೆ; ನಾನೇ ಪರಾರಿಬ ದರೆ, ನನ್ನನ್ನೇನು ಮಾಡ್ಯಾನು ; ಹಾಳು ಕಾ ಸ್ತ್ರಕ್ಕೆ ಪದ್ದು ಗೋಡೆಯೇ ಇಲ್ಲ. ನಾನೇನುಮಾ ಡಲಿ, ಎಂದು ಹೊರಟು ಹೋದನು.

ಸಾಗರ ತಾ. ೯—೮—೮೮	ದವ್ಯ ವಿಷೇಯ. ಜಾತಿನಿರಾಮರ

SUMMARY OF NEWS.

ವೃತ್ತಾಂತ ಸಂಗ್ರಹ.

ಮ. ದಾದಾಬಾಯಿ ನೌರೋಜಿಯವರು, ಈ ವರುಷದಲ್ಲಿ ಬಹುಶಃ ಪಾರ್ಲಮೆಂಟ ಸಭಾಸದರಾ ಗುವರೆಂಬ ಅಂದಾಜು ಕಾಣುತದೆ ನೋಡಬೇಕು.

ಬಂಗಾಲದಲ್ಲಿ ಕೆಲವು ಪ್ರೋಕ್ರಿ ಜನಗಳು ಕೇ ರಿ, ಅಲ್ಲಲ್ಲಿ ಪುಂಡುಗಾರಿಕೆಯನ್ನು ಮಾಡಲಿಕ್ಕೆ ಶುರು ಮಾಡಿರುತ್ತಾರೆ, ಏನಂದರೆ,—ಒಳ್ಳೊಳ್ಳೆ ಕುಲೀನ ಗೃಹಸ್ಥರ ಮನೆಯ ಸುಂದರ ತರುಣಿ ಯರನ್ನು ಹೊತ್ತುಕೊಂಡು ಹೋಗುವದು, ಮೂ ರನೇ ದಿವಸ ಪುನಃ ಅಲ್ಲಿಯೇ ತಂದು ಬಿಡುವದು, ಹೀಗೆ ಮಾಡುತ್ತಾರೆ ಪೋಲೀಸಿನವರು ಶುರು ವಾಗಿದೆ.—ಪ. ಸು.

ಸರಕಾರದ ನೌಕರರನ್ನು ಈವರಿನಿಗೂ ೫೫ ನೇ ವರುಷದ ವಯಸ್ಸಿನ ತರುವಾಯ ಗೌರ್ನ ಮೆಂಟನವರು ಕೆಲಸದಿಂದ ನಿವೃತ್ತಿಮಾಡುತ್ತಿದ್ದ ರಷ್ಟೆ. ಇನ್ನುಮೇಲೆ ೬೦ ವರುಷಗಳವಯಸ್ಸಿನ ವರಿವಿಗೂ ಅವರನ್ನು ಉದ್ಯೋಗದಲ್ಲಿಟ್ಟುಕೊಂ ಡಿರಬೇಕೆಂದು ಸ್ಟೇಟ ಸೆಕ್ರೆಟರಿಯವರು ತೀ ರ್ಮಾನಮಾಡಿರುವದಾಗಿ ತಿಳಿಯಬಂದಿದೆ.

ಸ್ಯಾಂದು ಮಿಂಗೋ ಎಂಬ ದ್ವೀಪದಲ್ಲಿ ವಿಶೇ ಷವಾದ ಒಂದು ಉಪ್ಪಿನ ಪರ್ವತವಿದೆ. ಪ್ರಕೃ ತಿ ಒಂದುಭಾಗದಲ್ಲಿ ೪ ಮೈಲುಗಳ ಉದ್ದವಾದು ತಾ ಬಹು ಸ್ವಚ್ಛವಾಗಿರುವುತಾ ಏಕವಾಧ ಸ್ಫ ಟಿಕದ ಮಯುಪ್ಪಿಯು ಇರುತ್ತಿದೆ. ಇದರಲ್ಲಿಯೇ ಕೋ ಟ್ಯಾಂತರಮಣಗಳ ಉಪ್ಪು ದೊರೆಯುವದೆಂದು ಅಂದಾಜಾಗಿರುತ್ತೆ. ಈ ಉಪ್ಪಿನಸ್ವಚ್ಛತೆಯ ನ್ನು ಎಷ್ಟೆಂದುಹೇಳೋಣ! ಒಂದುಅಡಿದಪ್ಪದ ಒಂದು ಸಣ್ಣ ಮುದ್ದೆಯನ್ನು ಸಾಧಾರಣ ಅಳತೆ ಯ ಅಚ್ಚಿನ ಅಕ್ಷರಗಳಮೇಲಿಟ್ಟು ಆ ಅಕ್ಷರಗ ಳನ್ನು ಅದರಮೂಲಕ ಸ್ಪಷ್ಟವಾಗಿ ಓದಬಹುದು.

ಜರ್ಮನಿಯಲ್ಲಿ ಒಂದು ಹೊಸತಾದ ಕಾಯಿದೆ ಯನ್ನು ಮಾಡಿರುತ್ತಾರೇನಂದರೆ—ಪ್ರತಿ ಒಬ್ಬ ನಲ್ಲಿ ಎಷ್ಟುಜನ ಚಾಕರರಿರುತ್ತಾರೊ ? ಪ್ರತ್ಯೇ ಕ ಪುರುಷ ಚಾಕರನ ಸಂಬಳದಲ್ಲಿ ಒಂದೊಂದು ಪಣಕ್ಕೆ ೧| ಪೆನಿಯಂತೆಯೂ, ಸ್ತ್ರೀ ಚಾಕರ ಳ ಸಂಬಳದಲ್ಲಿ ೧|| ಪೆನಿಯಂತೆಯೂ ತೆಗದಿಟ್ಟು ಅದನ್ನು ಮುಂದೆ ಅವರ ಪೆನ್ಷನ್ ಬಗ್ಗ್ಯಾಗಿಕೊಡ ಬೇಕೆಂದು ವಿಧಿಸಿರುತ್ತಾರೆ. ಈ ನಿಯಮವು ಬಹಳ ಒಳ್ಳೇದೆಂದು ನಾವು ತಿಳಿಯುತ್ತೇವೆ.

ಹೌರಾವಿಗೆ ಸೇರಿದ ಒಂದು ಗ್ರಾಮದಲ್ಲಿ ನೇ ಟಿವ್ ಹೆಂಗಸೊಬ್ಬಳು, ಈಚೆಗೆ ಒಂದು ಶನಿವಾ ರದ ದಿನ ರಾತ್ರಿ ದೀಪ ಹಚ್ಚುವದಕ್ಕಾಗಿ ಅಡಿ ಗೆ ಮನೆಗೆ ಹೋಗಿ ಬರುವದರೊಳಗಾಗಿ ಅವಳ ಮಗು ಕಾಣದೆ ಹೋಗಿ ಹುಡುಕುವಲ್ಲಿ ನರಿಯ ಕಾಲು ಹೆಜ್ಜೆಯ ಗುರುತು ಕಂಡು ಬಂದದರಿಂದ ಅದು ಮಗುವನ್ನು ಯೆತ್ತಿಕೊಂಡು ಹೋದಂತೆ ಕಂಡುಬಂತು. ಅದರಮೇಲೆ ಹುಡುಕಿ ವಾಗ್ಯೂ ಮಗು ಸಿಕ್ಕದೆ ಹೋಯಿತು.

ಬ್ರಿಟಿಷನವರು ಆಚರಿಸುವ ನ್ಯಾಯ ವಿಮ ರ್ಶೆ—ತಲಚ್ಚೇರಿ ಸಬ್ ಜಡ್ಜಿಯವರಮೇ ಲೆ ಲಂಚದ ಮೊಕದ್ದಮೆಗಳು ತರಲ್ಪಟ್ಟು ಈಗ ವಿಚಾರಣೆ ನಡೆಯುತಲಿದೆಯಷ್ಟೆ ಈದರ್ಯಾಪ್ತಿ ಯಲ್ಲಿ ಸದರೀಯವರನ್ನು ಪ್ರೈಡಿಯರನ್ನು ನಿಲ್ಲಿ ಸುವ ಕಟಕಟೆಯೊಳಗೆ ನಿಲ್ಲಿಸಿದ್ದರು ಈಚೆಗೆ ಕೆಲವು ತಿಂಗಳ ಹಿಂದೆ ಮದರಾಸ್ ಹೈಕೋರ್ಟು ರಿಜಿಸ್ಟ್ರಾರಾದ ಮ. ರಾಸ್ ಎಂಬವರಮೇಲೆ ತರ ಲ್ಪಟ್ಟ ವ್ಯಭಿಚಾರ ಮೊಕದ್ದಮೆಯಲ್ಲಿ ಅಪರಾಧಿ ಯಾದವರೆ ಬ್ಯಾರಿಸ್ಟರಾಗಿ ಬಂದು ಚೀಫ್ ಜಸ್ಟಿಸ್ ಯವರ ಅನುಮತಿಯಂ ಪಡೆದು ಅಪರಾಧಿಯ ನ್ನುರಮ್ಮ ಪಕ್ಕದಲ್ಲಿ ಕುಳ್ಳಿರಿಸಿಕೊಂಡವರೇ ಈಮೊಕದ್ದಮೆಯೊಳು ಪ್ರೈದೀದಲ್ಲಿ ತಾರತಮ್ಯ ತೋರಿಸಲಾಗದೆಂದು ತಲಚ್ಚೇರಿ ಜಡ್ಜಿಯವರು ವ್ಯಕ್ತಪಡಿಸಿದ ಅಭಿಪ್ರಾಯವನ್ನು ಒಪ್ಪಿಕೊಂ ಡರು—ಸ್ಟೇಟ್ಸ್‌ಮನ್.

ಕಲ್ಲಿಕೋಟೆ ಜಾಮೊರಿನ್ ಯವರ ಭ್ರಾತೃಜ ರಾದ ಮಾ|| ಮನವಾದನ್ ರಾಜಾ, ಬಿ. ಎ. ಎಂಬವ ರು, ಮದರಾಸ್ ಗವರ್ನಮೆಂಟ ಸ್ಟ್ಯಾಟ್ಯೂಟರಿ ಸಿವಿಲ್ ಸರ್ವಿಸ್ ನೌಕರಿಯಲ್ಲಿ ಪ್ರಥಮತಃ ಸೇರಿ ಸಲ್ಪಟ್ಟು ಈಗ್ಯೆ ಎಂಟು ವರ್ಷಗಳ ಕಾಲವಾಗಿ ನೌಕರಿಯಲ್ಲಿರುವಲಿದಾರೆ. ಸದರೀಯವರು ಕೆಲ ವು ದಿನಗಳ ಹಿಂದೆ, ತಂಜಾವೂರು ಜಾಯಿಂಟ್ ಮ್ಯಾಜಿಸ್ಟ್ರೇಟರಾಗಿದ್ದ ಕಾಲದಲ್ಲಿ ಒಂದು ಕ್ರಿಮಿ ನಲ್ ಮೊಕದ್ದಮೆಯನ್ನು ಫೈಸಲ್ಮಾಡಿದರು. ಸ ದರೀ ಮೊಕದ್ದಮೆಯು ಮದರಾಸ್ ಹೈಕೋರ್ಟಿ ನಲ್ಲಿ ಅಪೀಲಾಗಿ, ಈಗ ಕೋಯಂಬತ್ತೂರ್ ಕಲೆ ಕ್ಟರವರಿಗೆ ಹೆಡ ಅಸಿಸ್ಟೆಂಟರಾಗಿರುವ ಸದರೀ ಮನವಾದನ್ ರಾಜರನ್ನು, ಹಿಂದೆ ಅವರು ಫೈಸ ಲ್ಮಾಡಿದ ಕ್ರಿಮಿನಲ್ ಮೊಕದ್ದಮೆಯಲ್ಲಿ ಕೆಲವು ಅಂಶಗಳಂಕುರಿತು ಹೈಕೋರ್ಟಿನವರು ಪ್ರಶ್ನೆ ಮಾಡಿದರು. ಮ ಮನವಾದರಾಜರು ಸದರೀಮೊ ಕದ್ದಮೆನಡೆದು ಬಹುಕಾಲವಾದದರಿಂದ ಅದರವಿ ಷಯತಮಗೆಜ್ಞಾಪಕವಿಲ್ಲವೆಂತಲೂ, ತಮಗೆಬೇ ರೇಕೆಲಸಗಳಿಂದ ಅವಕಾಶವಿಲ್ಲವೆಂತಲೂ ಜವಾಬ್ ಕೊಟ್ಟರು ಈ ಜವಾಬ್ ತಂಜಾವೂರು ಡಿಸ್ಟ್ರಿ ಕ್ಟ ಮ್ಯಾಜಿಸ್ಟ್ರೇಟರ ಮುಖಾಂತರ ಹೈಕೋ ರ್ಟಿಗೆ ಕಳುಹಿಸಲ್ಪಡಲು ಅಲ್ಲಿನ ಜಡ್ಜಿಗಳವರು ಅದುನೋಡಿ ಬಹಳ ಕೋಪಗೊಂಡು, ಮ|| ಮ ನವಾದರಾಜರು ತೋರಿಸಿದ ಅಮರ್ಯಾದೆಯನ್ನು ಗವರ್ನಮೆಂಟಿಗೆ ತಿಳಿಸಿ ಅವರಿಗೆ ವಾಗ್ದಂಡನೆ ಮಾಡಬೇಕೆಂದು ಶಿಫಾರಸ್ ಮಾಡಿರುವದಾಗಿ ತಿಳಿ ಯಬರುತದೆ.

Bangalore:—Printed and pudlished at the Karnatic Press, No. 44, Hospital Road, Petta.—1888.

ಕರ್ನಾಟಕ ಪ್ರಕಾಶಿಕಾ.

THE KARNATAKA PRAKASIKA.

ಪ್ರತಿ ಸೋಮವಾರ ಪ್ರಾತಃಕಾಲದಲ್ಲಿ ಪ್ರಕಟಿಸಲ್ಪಡುವದು.

Published every Monday Morning.

ಪ್ರಕಾಶಮಿವಿಧಸ್ಸೃತ್ಯುಪಗಮಾರ್ಥ ಕರ್ನಾಟಕಪ್ರಕಾಶನದಾರಾಭಿದಾಪ್ರತಿಶಾಹಿತಿಶೋಭಿತಾ ॥ ವ್ಯಗ್ರಾಂಕಹಿತವಾಸರೆನಿಹಿತಮುದ್ರಣಾಸಜ್ಜಸ್ಸೈರಿದ್ಧಿಕಾಸುವರಿಪ್ರೊಟುತಾದಿಕಟಿಕಾ॥

Vol. XV.] BANGALORE:—MONDAY, SEPTEMBER 3, 1888. [No. 35.

ಸಂಪುಟ ೧೫.] ಬೆಂಗಳೂರು:—ಸಕ ೧೮೮೮ನೇ ಇಸವಿ ಸೆಪ್ಟೆಂಬರ್ ೩ನೇ ತಾರೀಖ್ ಸೋಮವಾರ. [ಸಂಚಿಕೆ ೩೫.

ಕರ್ನಾಟಕ ಪ್ರಕಾಶಿಕಾ

ಪತ್ರಿಕೆಯ ಚಂದಾ ದರಗಳು,
೧೮೮೮ನೇ ಇಸವಿ ಜನವರಿಯಿಂದ
ಕಡಮೆಮಾಡಲ್ಪಟ್ಟಿರುತ್ತದೆ.

ಈ ಪತ್ರಿಕೆಯ ಚಂದಾದಾರರನ್ನೆಣಿಕೆ ಅನೇಕ ರ ಅಪೇಕ್ಷೆಯನ್ನೀಡೇರಿಸುವ ಉದ್ದೇಶದೊವನೆ ಯೂ, ಪರಿಮಿತವಾದ ಆಯತಿಯುಳ್ಳವರಿಗೆಲ್ಲ ಈ ಪತ್ರಿಕೆಯು ಸುಲಭವಾಗಿ ಲಭಿಸುವಂತಿರ ಬೇಕೆಂಬ ಅಭಿಪ್ರಾಯದೊಡನೆಯೂ ಇದರ ಚಂ ದಾದರನ್ನು ಇದರಡಿಕಂಡಂತೆ ಕಡಮೆಮಾಡಿರು ತ್ತೇವೆಂತಿಂಪದೆ:—

ಇಂಗ್ಲಿಷ್ ಮತ್ತು ಕನ್ನಡಭಾಗಗಳಿಗೆ.

	ಸ್ಥಳದವರಿಗೆ	ಪರಸ್ಥಳದವರಿಗೆ.
12 ತಿಂಗಳಿಗೆ	8—0—0	9—0—0
6 „	4—0—0	4—8—0
3 „	2—8—0	2—8—0

ಇಂಗ್ಲಿಷ್ ಅಥವಾ ಕನ್ನಡಭಾಗಗಳಿಗೆ.

	ಸ್ಥಳದವರಿಗೆ	ಪರಸ್ಥಳದವರಿಗೆ
12 ತಿಂಗಳಿಗೆ	4—0—0	5—0—0
6 „	2—0—0	2—8—0
3 „	1—4—0	1—8—0

ಷರಾ—ಅಂದೆ ಮುತ್ಸದ್ದಿಗಳು, ಬೋಟ್ ಮತ್ತು ತಾ ಲ್ಲೂಕ್ ಸಬ್ಬಾರ್ಡಿನೇಟ್ಗಳು, ಸ್ಕೂಲ್ ಮಾಸ್ಟರು, ವಿದ್ಯಾರ್ಥಿಗಳು, ಇವರಿಗೆ ಈ ಪತ್ರಿಕೆಯು ಮರಾ ಚಂದಾದರದಲ್ಲಿ ಕೊಡಲ್ಪಡುವದು. ಆತ್ತ್ಯವಶ್ಯವಾಗಿ ಬಾರದ ದರವಾಸ್ತಗಳಿಗೆ ಸುತರಾಂ ನಿಗೆಕೊಡಲ್ಪ ಡುವದು. ಚಂದಾದಾರರು ಇಂಗ್ಲಿಷ್ ಭಾಗವನ್ನಾಗಲಿ ಕನ್ನಡಭಾಗವನ್ನಾಗಲಿ ಅಥವಾ ಎರಡನ್ನಾಗಲಿ ತೆಗೆದುಕೊ ಳ್ಳಬಹುದು. ಚಂದಾದ ಹಣವನ್ನು ಮುಂಗಡವಾಗಿಯೇ ಸಲ್ಲಿಸ ತಕ್ಕದ್ದು. ಮೂರುತಿಂಗಳಿಗಿಂತ ಕಡಮೆಯಾಗಿ ಚಂದಾ ಕೊಡಲಾಗು ಅಂಗೀಕರಿಸಲ್ಪಡುವದಿಲ್ಲ.

ನೋಟಿಸುಗಳು ರವಾನಿಸತಕ್ಕವರು ಮೊದಲು ಕಳುಹಿಸು ವ ಅರ್ಜಿಯೊಡನೆ ತಮ್ಮ ಸಮ್ಮತಿಯಿರುವ ಬಗ್ಗೆ ಕೂಡ ಅರ್ಥ ನೋಟಿಸನ್ನು ರವಾನಿಸತಕ್ಕದ್ದು. ... ಒಂದಕ್ಕೆ ಒಂದಾಣೆಯಂತೆ ... ಕಳುಹಿಸತಕ್ಕದ್ದು. ... ಕಳುಹಿಸಲ್ಪಡುವ ಮೊಬಲಗಿನಲ್ಲಿ ಅದು ... ವಿತ್ತ ಕೊಡಬೇಕು ಲೆಕ್ಕಕ್ಕೆ ದಾಖಲಾಗಿಕೊಳ್ಳಲ್ಪಡುವದು
ಪ್ರಕಟನೆಯ ರಿವಾಜ್.

ಮೊದಲನೆಯದಾ ಪಂಕ್ತಿ ಒಂದಕ್ಕೆ ೦—೨—೦
ಎರಡನೆಯ ಪ್ರಾ ಪಂಕ್ತಿ ಒಂದಕ್ಕೆ ೦—೧—೦

ಷರಾ—ಎರಡಾವರ್ತಿಗಿಂತ ಜಾಸ್ತಿಯಾಗಿ ಎಷ್ಟು ತಡವೆ ಛಾಯಿಸ್ ಮಾಡಿಸಾಗಲ್ಯ ಪಂಕ್ತಿ ಒಂದಕ್ಕೆ ... ಲೆಕ್ಕ ಮಾಡಲ್ಪಡುವದು. ಈ ಪತ್ರಿಕೆಯಲ್ಲಿ ಛಾಯಿ ಸ್ ಮಾಡುವುದಕ್ಕೆ ಪ್ರಕಟನೆಗಳು ಕಳುಹಿಸುವವರು ಅವು ಎ ಷ್ಟಾವರ್ತಿ ಛಾಯಿಸ್ ಮಾಡಲ್ಪಡಬೇಕೋ ಆ ಅಂಶವನ್ನು ಸ್ಪಷ್ಟವಾಗಿ ತಿಳಿಸತಕ್ಕದ್ದು. ಇಲ್ಲದಪಕ್ಷಕ್ಕೆ ಅವರು ಮ ನೆಗೆ ನಿಲ್ಲಿಸುವಂತೆ ಬರೆಯುವತನಕ ಅದು ಪ್ರಕಟಿಸುತ ಲಿದ್ದು ದರಕೆ ಎಡ್ವಾನ್ಸ್ ಪ್ರಕಟಿಸಲ್ಪಡುವದಾಗ ... ಮರಡಗಿ ... ಪ್ರಕಟನೆಯುಬಗ್ಗೆ ಕಳುಹಿಸಲ್ಪಡತಕ್ಕ ಪ್ರಕಟನೆಗಳನ್ನು ಆ ಯಾ ಚಿವಾದರವ ಮುದ್ದಾಂ ... ಕಳುಹಿಸಬೇಕು. ಪ್ರಕಟನೆಯುಬಗ್ಗೆ ಈ ಪತ್ರಿಕೆಗೆ ಕಳುಹಿಸ ಲ್ಪಡತಕ್ಕ ಕಾಗದಗಳಲ್ಲಿ ತಿಳಿಸಲ್ಪಡುವ ಅಭಿಪ್ರಾಯಗಳಿಗೆ ನಾವು ಜವಾಬ್ದಾರರಾಗಲಾರೆವು. ಕ್ರಮವಾಗಿ ರುಜುಮಾಡಿ ದ ಹೊರತು ಬಾಬತ್ತಾದವನ್ನು ಪ್ರಕಟಿಸಲಾರೆವು. ನಿರಾ ಕರಿಸಲ್ಪಟ್ಟ ಕಾಗದಗಳು ... ಕಳುಹಿಸಲ್ಪಡಲಾರವು

"IT RECOMMENDS ITSELF"

ALL WHO SUFFER FIND SURE RELIEF.

LITTLE'S

ORIENTAL BALM

THE MOST EFFECTUAL MODERN REMEDY FOR PAIN.

ಲಿಟಲ್ ಯವರಿಂದ ತಯಾರಾದಲ್ಪಟ್ಟ "ಬಾಧಶಂಶಾಮಿನೀ" ಎಂಬ ಪೂರ್ವದೇಶ ಸಂಬಂಧವಾದ ಅಮೂಲ್ಯ ತೈಲವು ಸ್ವಶಕ್ತಿ ಪ್ರದರ್ಶಕವಾದದ್ದು, ಮತ್ತು ಸಫಲವಾದ ನವೀನ ಚಿಕಿತ್ಸಾಸಾಧನವಾದ ಔಷಧವು. ಇದರಿಂದ ಸಕಲ ವಾತರೋಗಗಳೂ, ವಾತಸಂಬಂಧಗಳಾದ ಸಂಧಿರೋಗಗಳೂ ನಿವೃತ್ತಿಯಾಗುವವು. ಮುಖ್ಯವಾಗಿ ಚಿರಕಾಲಿಕ ವಾದ ವಾತರೋಗಗಳು, ಕಾಲ, ಗಂಟುಗಳಲ್ಲಿ ಊರಿ, ನರದಬ್ಬನೋವು, ತಲೆನೋವು, ಕಟಿನೋವು, ಉಳುಕು ನೋವು, ಪಕ್ಕೆನೋವು, ಧಿಮಿರಾಟ್ಟವು ಮುಂತಾದ ರೋಗಗಳಿಗೆಲ್ಲ ನಿಸ್ಸಂದೇಹವಾಗಿ ಬಹಳ ಪ್ರಯೋಜನವನ್ನುಂಟು ಮಾಡತಕ್ಕದ್ದು. ಈ ತೈಲವನ್ನು ನೋವಿರುವ ಸ್ಥಳಗಳಲ್ಲಿ ಕೆಂಪಾಗುವ ಹಾಗೆ ... ಚೆನ್ನಾಗಿ ತಿಕ್ಕಿ ದಲ್ಲಿ ಸಹಜಗಳಾದ ಎಲ್ಲಾ ನೋವುಗಳನ್ನು ನಿವೃತ್ತಿ ಮಾಡುವಂತಾ ಉತ್ತಮ ತೈಲವಾಗಿರುತ್ತದೆ. ಸರ್ವೇಸ್ವಾಭಾವಿಕ ದೇ ಆರತಡೆಗಳು ಮತ್ತು ಜೋಮು ಕೂಡಲೇ ನಿವೃತ್ತಿಯಾಗುವದು. ಗಂಟಿನಲ್ಲಿ ಉಂಟಾಗುವ ಊರಿ ಅಥವಾ ವ್ರಣಗಳಿಗೆ ಈ ತೈಲವು ಅದ್ಭುತವಾದ ಮತ್ತು ಶೀಘ್ರವಾದ ಸಂಪೂರ್ಣ ಗುಣವನ್ನುಂಟುಮಾಡುವದು. ಅದ್ಭುತವಾದ ಈ ಔಷಧವನ್ನು ಉಪಯೋಗಿಸಿದಲ್ಲಿ ಅದರ ಪ್ರಯೋಜನವು ಸ್ವತಃ ವ್ಯಕ್ತವಾಗುವದು. ಈ ತೈಲವು ಶೀತ ಗಾಳಿ ಮಳೆ ಮುಂತಾದವುಗಳಿಗೊಳಗಾಗಿ ಸಂಚರಿಸುವಂತಾ ಪ್ರಯಾಣಿಕರು, ಬೇಟೆಯಾಡುವವರು, ವ್ಯಾಯಾಮ ಮಾಡುವವರು, ಮುಂತಾದವರಿಗೆಲ್ಲ ಅಮೂಲ್ಯವಾದದ್ದು.

ಪರಿಶೀಲಕರ ಅಭಿಪ್ರಾಯವು.

ಇಂಗ್ಲೆಂಡ್ ದೇಶದ ಫಾರ್ಮಸ್ಯೂಟಿಕಲ್ ಸೊಸೈಟಿ[illegible]ಪರೀಕ್ಷಕರಾಗಿಯೂ, ಸಾರ್ವಜನಿಕ ... ವಿಶ್ಲೇಷಕರಾಗಿಯೂ, ... ಲ್ ವಾಟರ್ಸ್ ಆಫ್ ಯೂರಪ್ ಎಂಬ ಗ್ರಂಥಕರ್ತರಾಗಿಯೂ, ರಸಾಯನಶಾಸ್ತ್ರ ವಿಷಯಕವಾದ ಅನೇಕ ... ಧಿಕಾರಿಯಾಗಿಯೂ, ಇರುವ ಪ್ರೊಫೆಸರ್ ಟಿಚ್ ಬೋರ್ನ್ (C. R. TICHBORNE, L. L. D., F. C. S., M. P. I. A.,) ಯವರು ಅಭಿಪ್ರಾಯ ಪಟ್ಟಿರುತ್ತಾರೇನಂದರೆ—ಲಿಟಲ್‌ರವರ ಓರಿಯಂಟಲ್‌ಬಾಮನ್ನು ... ತ ... ಇದು ಬಹುವಿಧ ಮೂಲಿಕೆಗಳ ... ರಣೆ ಉಪಯೋಗಿಸಲ್ಪಡುವಾಗ ... ನಿರುಪದ್ರವಕರವಾದದ್ದಾಗಿದ್ದರೂ, ... ಗುಣಕಾರಿಯಾಗಿರುತ್ತದೆ. ಈ ಮಿಶ್ರೌಷಧವು ನರಗಳನ್ನು ಸ್ಥಿ... ತರದ ರೋಗಗಳಿಗೆ ಉಪಯುಕ್ತವೆಂದು ತಿಳಿಸಲ್ಪಟ್ಟಿದೆಯೋ ಸದರೀ ರೋಗಗಳಲ್ಲಿ ಅದರ ಪ್ರಯೋಜನವು ವ್ಯಕ್ತ ವಾಗುವದು. ಈ ತೈಲವು ಸಂಪೂರ್ಣ ಬಾಣಲೆ... ತೆಗೆದಾದ್ಯಂತವಾಗಿರುತ್ತದೆ.

ಇದರ ಕ್ರಯ—ಸೀಸೆ ಒಂದಕ್ಕೆ ೧ ರೂಪಾಯಿ.

ಇದು ವಿಕ್ಟ್ರಿ ಬಿಸನ್ ಕಾರಿಯಲ್ಲಿಯೂ, ಮದರಾಸ್ ಸಂಭುದಾಸ್ ಬೀದಿಯಲ್ಲಿ ೨೦ನೇ ನಂಬರ್ ಮನೆಯೊಳಗ ವ, ಮ. ಎ. ಸಿ ಬೆಗ್ರಿಮರ್ ಯವರಲ್ಲಿಯೂ, ಈ ವೂರಲ್ಲಿರುವ ಅವರ ಏಜಂಟುಗಳಾದ ಜೆ. ವೆಸ್ಟ್ ಯವರ ಕಂಪೆನಿ ಯಲ್ಲಿಯೂ, ಮಿ, ರಿಗ್ಸ್ ಅಂಡ್ ಕಂಪೆನಿಯವರಲ್ಲಿಯೂ,ರಿಗ್ಸ್‌ರವರ ಕಂಪೆನಿಯಲ್ಲಿಯೂ ದೊರೆಯುವದು.

AGENTS.— Messrs, J. WISE, Chemist, &c., Bangalore.
CALLUM & Co. Chemists, Bangalore.
RIGGS & Co. Chemists, Bangalore; and of

MAHOMED YOUSOFF AND SONS, The Cash Bazar, Bangalore.
A. C. BEGGIMAN & Co.,
20 Sambodass Street Madras.

NOTICE.

VAIDYASARA SANGRAHA

A TREATISE ON THE PRINCIPLES OF

HINDU MEDICINE.

☞ Price including Postage Rs. 5 6-0

ವೈದ್ಯಸಾರ ಸಂಗ್ರಹ.

ರೋಗೋಪಶಮನಾಪೇಕ್ಷೆಯುಳ್ಳವರು ಮೊಬಲಗಿನೊ ದನೆಈ ಕೆಳಗೆ ರುಜುಮಾಡಿರತಕ್ಕವರ ಹೆಸರಿಗೆ ಬರೆದುಕೊಂಡರೆ ಪುಸ್ತಕ ಕೂಡಲೇ ಕಳುಹಿ ಸಲ್ಪಡುವದು. ಮೊಬಲಗು ಇಲ್ಲದ ದರಖಾಸ್ತು ಗಳಿಗೆ ಸುತರಾಂ ನಿಗೆಕೊಡಲ್ಪಡಲಾರದು.

ಇದರ ಕ್ರಯ ... ...ರೂ॥ ೫—೦—೦
ಪ್ಯಾಕಿಂಗ್ ಮತ್ತು ಅಂಚೆಹಾಸಲ್, ೦—೬—೦
ಟಿ. ಬಿ. ವೆಂಕಟಾಚಾರ್,
ಆಸ್ಪತ್ರಿರೋಡ ಬೆಂಗಳೂರು.

ವಿಶೇಷ ವರ್ತಮಾನ



ಪೂನೆ ಚಿತ್ರಶಾಲೆಯಲ್ಲಿ ನಾಲ್ಕು ಬಣ್ಣಗಳಲ್ಲಿ ತಯಾರಾಗಿರುವ ದೊಡ್ಡ ... ಗಣಪತಿ, ಹಿಂದೂ ದೇವತೆಗಳು, ಚರಿತ್ರೆಯ ಮೂಲಕ ಪ್ರಸಿದ್ಧರಾದ ಪುರುಷರು, ಸುಂದರಿಯರ ... ನೋಟುಗಳು ... ಪಟ್ಟಗಳು ... ತಯಾರಾಗಿರುವವು. ... ಪಟಗಳನ್ನು ... ಕ್ರಯ ... ಕಡಿಮೆಯಾಗಿ ... ಕೊಡಲ್ಪಡುವವು.

ಪೂನೆ ಚಿತ್ರಶಾಲಾ ಪ್ರೆಸ್ಸಿನವರು.

ಕರ್ನಾಟಕ ಪ್ರಕಾಶಿಕಾ.

THE KARNATAKA PRAKASIKA.

MONDAY, SEPTEMBER 3, 1888.

೧೮೮೮ನೇ ಸೆಪ್ಟೆಂಬರ್ ೩ನೇ ತಾ॥ ಸೋಮವಾರ.

FINAL QUIT-RENT ON INÂM VILLAGES.

ಕಳೆದವಾರದ ಈ ಪತ್ರಿಕೆಯ ಮೂಲಕ, ಈ ದೇಶದಲ್ಲಿರತಕ್ಕ ಚಿಲ್ಲರೆ ಇನಾಂಗಳಲ್ಲಿ ಸೇರಿರುವ ದಾಗಿ ಕಂಡುಬರುವ ಜಾಸ್ತೀ ಭಾಗವನ್ನು ಸರ್ಕಾರಕ್ಕೆ ಸೇರಿಸಿಕೊಳ್ಳತಕ್ಕ ವಿಷಯದಲ್ಲಿ ಆಗಿರುವ ಹುಕುಮನ್ನು ಕುರಿತು ಸ್ವಲ್ಪಮಟ್ಟಿಗೆ ವಿಚಾರ ಮಾಡಿರುತ್ತೇವೆಯಷ್ಟೆ. ಈಗ ಪೂರಾ ಇನಾಂ ಗ್ರಾಮಗಳ ಕ್ವಿಟರೆಂಟ ವಿಷಯವನ್ನು ಕುರಿತು ವಿಚಾರಮಾಡಬೇಕಾಗಿರುತ್ತದೆ. ಚಿಲ್ಲರೆ ಇನಾಂಗಳ ವಿಷಯದಲ್ಲಿ, ಕರಾರ್ಖಾಸಾ ಇರಲಿ ಅಥವಾ ಅಂದಾಜಾಗಿರಲಿ, ಯಾವದೋ ಒಂದು ವಿಧವಾಗಿ ಜಮೀನಿನ ಪರಿಮಾಣ ಸರ್ಕಾರ್ ಲೆಕ್ಕದಲ್ಲಿ ನಮೂದಾಗಿರುತ್ತದೆ. ಜೋಡಿ ಸರ್ವಮಾನ್ಯವೆಂಬ ಪೂರಾ ಗ್ರಾಮಗಳ ಬೀಜವರಿಯು ಒಟ್ಟು ತಾಲ್ಲೂಕಾಮುಲ್ ಲೆಕ್ಕದಲ್ಲಿ ದಾಖಲೇ ಇಲ್ಲವು, ಮತ್ತು ಅಬಗ್ಗೆ ಕೊಡಲ್ಪಟ್ಟಿರುವ ಸನ್ನದುಗಳಲ್ಲಿ ನಮೂದಾಗಲಿ ಇರುವದಿಲ್ಲವು. ಇದಕ್ಕಾಗಿ ಪ್ರತಿಒಂದು ಇನಾಂ ಗ್ರಾಮವಲ್ಲೂ ಇನಾಂ ವಿಚಾರಣೆ ಕಾಲದಲ್ಲಿ, ಪ್ರಕೃತ ಸ್ಥಿತಿಯನ್ನನುಸರಿಸಿ, ಸಾಗು ಬೀಳಗೆ ಸಹ ಕಂದಾಯ ಕಟ್ಟು ಜೇರಿಜು ಕರಾಯಿಸಿ, ಜೋಡೀ ವಜಾಮಾಡಿ, ನಿಂತ ಇನಾಂ ಭಾಗಕ್ಕೆ ಅಷ್ಟಮಾಂಶ ಕ್ವಿಟರೆಂಟ ಹಾಕಿ, ಸಾಬಕ್ ಜೋಡೀ ಮತ್ತು ಕ್ವಿಟರೆಂಟುಗಳೇರಿಸಿ, ಕಂಬೈಂಡ್‌ಕ್ವಿಟ ರೆಂಟೆಂಬ ಒಟ್ಟು ಜೋಡಿಯನ್ನು ವಸೂಲ್ ಮಾಡುವ ಪದ್ಧತಿ ನೆಲಗೊಂಡು, ೧೮೬೮ನೇ ಇಸವಿ ಅಕ್ಟೋಬರ್ ತಿಂಗಳ ವರಿವಿಗೂ ದೇಶದಲ್ಲಿ ನಡೆದುಬಂತು. ಇನಾಂ ಇಲಾಖೆಯವರು ಜೇರೋಜ್‌ದಾರರಾಬದರಿಂದ, ಇನಾಂ ಗ್ರಾಮಗಳಿಗೆ ಅವರು ಜೇರೀಜ್‌ಕರಾಪ್‌ಮಾಡುವ ಪದ್ಧತಿಯು ಆಕ್ಷೇಪಣೀಯವಾದದ್ದೆಂತಲೂ, ಅದನ್ನನುಸರಿಸಿ ಟೋಟಲ್‌ಫಂಡ್ ವಸೂಲ್ ಮಾಡುವಣವು ಇತರ ಸರ್ಕಾರೀ ರೈತರ ಮೊಕಾಬಿಲೆ ರೀತ್ಯಾ ಪಕ್ಷಪಾತವನ್ನಿಸಿಕೊಳ್ಳುವದೆಂತಲೂ, ಟೋಟಲ್‌ಫಂಡಿಗೆ ಒಂದು ವಿಧವಾದ ಜೇರೀಜನ್ನೂ, ಕ್ವಿಟರೆಂಟಿಗೆ ಮತ್ತೊಂದು ವಿಧವಾದ ಜೇರೀಜನ್ನೂ ಅಂಗೀಕರಿಸುವಣವು ಅಸಂಗತವೆಂತಲೂ, ಸರ್ವೆ ಮತ್ತು ಸೆಟಲ್‌ಮೆಂಟ್ ಇಲಾಖೆಯವರು ಆಕ್ಷೇಪಿಸಿದರು. ಅದಕ್ಕೆ ಲೇಟ ಚೀಫ್‌ಕಮೀಷನರಾದ ಸರ್ ರಿಚರ್ಡ್ ಮೀಡರವರು, ಇನಾಂ ಇಲಾಖೆಯವರು ರಿಕಾರ್ಡೆಡ್ ವ್ಯಾಲ್ಯೂ, ಅಂದರೆ, ಸರ್ಕಾರ್ ಲೆಕ್ಕದಲ್ಲಿರುವ ಜೇರೀಜು ಅನುಸರಿಸಿ ಕ್ವಿಟರೆಂಟ ವಸೂಲ್ ಮಾಡ ಬೇಕೆಂತಲೂ, ಅಂತಾ ಕ್ವಿಟರೆಂಟ ಸರ್ವೆ ಸೆಟಲ್ ಮೆಂಟ ಜೇರೀಜು ಅನುಸರಿಸಿ ಬದಲಾಯಿಸಲ್ಪಡ ತಕ್ಕದ್ದಲ್ಲವದರಿಂದ ಅದು ಅಚಲವು, ಅಂದರೆ ಫೈನಲ್ ಕ್ವಿಟರೆಂಟ ಎಂದು ಕರೆಯಲ್ಪಡತಕ್ಕದ್ದೆಂತಲೂ ಹುಕುಂ ಕೊಟ್ಟದ್ದಲ್ಲದೆ ಆ ತಾರೀಖ್ ವರಿವಿಗೆ ಫೈಸಲಾದಷ್ಟು ನಿಶ್ಚಿತವಾದ ಫೈಸಲಾತಿ ಮೊದಲ್ಗೊಂಡು ಇಂದ ಅಮಲುಮಾಡಿ ಬದಲಾಯಿಸಲ್ಪ

ಕಳೂತವೆಂದು ಸಹನಿರ್ಣಯಿಸಿದರು. ಈಚೆಗೆ ಸನ್ನಿವೇಶವೆಂಬಾಗಿ ಸ್ಟೈನಪ್ ಆಂದರೆ, ಕಾಯಂ ಕ್ವಿಟರೆಂಟ ಮೊಕರರ್ರಾಮ್ಮತಲ್ಪಡುವಕಾಲ ಬಂದದರಿಂದ ಎರಡುವಿಧ ಆಕ್ಷೇಪಣೆಗಳಿಗೆ ಅವಕಾಶವುಂಟಾಯಿತು.—

೧ನೇದು—ಸರ್ವೆ ಇಲಾಖೆಯವರು ಬಂಜರಿಜಮೀನಿಗೆ ಸಾಗುವಳೀ ಜಮೀನಿನ ದರದಂತೆಯೇ ಬೇರೀಜು ಠರಾಯಿಸುತ್ತಾರೆ. ಈಮೇರೆ ಸರ್ಕಾರ್ ಗ್ರಾಮಗಳಿಗೆ ಠರಾಯಿಸಿದರೆ ರೈತರಿಗೆ ಯಾವವಿಧ ನಷ್ಟವೂ ಇರುವದಿಲ್ಲವು. ಅದರಂತೆ ಇನಾಂಗ್ರಾಮಗಳಿಗೆ ಠರಾಯಿಸುವದರಿಂದ, ಬಂಜರ್ ಜಮೀನಿನ್ನಿಂದ ಯಾವ ಪ್ರಯೋಜನವೂ ಇಲ್ಲದೆ ವೃಥಾ ಲೋಕಲ್‌ಫಂಡು ಮತ್ತು ಕ್ವಿಟರೆಂಟ ಸಹ ತೆರಬೇಕಾಗುತಿದೆ. ಇದನ್ನು ತಡಿಯಬಾರದೆಂದು ಇನಾಂದಾರರು ಫಿರ್ಯಾದ ಮಾಡಿದ್ದಕ್ಕೆ ಸರ್ಕಾರ್ ಗ್ರಾಮದ ರಿವಾಜು ಪೈಕಿ ನಾಲ್ಕರಲ್ಲೊಂದು ಭಾಗಮಾತ್ರ ಇನಾಂ ಗ್ರಾಮದ ಬಂಜರಿಗೆ ಹಾಕಬ್ಯಾಡತಕ್ಕದ್ದೆಂದು ದಿವಾನ್ ಕಚ್ಚೇರಿಯಿಂದ ಹುಕುಂ ಸಾದರಾಯಿತು.

೨ನೇದು ೧೮೭೫ನೇ ಇಸವಿ ಅಕ್ಟೋಬರ್‌ವರಿವಿಗೇನೇ ಅನೇಕಗ್ರಾಮಗಳ ಇನಾಂಗಳು ಲೇಟ ಇನಾಂಕಮಿಷನರ್ ಕರ್ನಲ್ ಟಿ. ಕ್ಲಾರ್ಕ್‌ಸಾಹೇಬರವರಿಂದ ಕಾಯಂ ಮಾಡಲ್ಪಟ್ಟಿದ್ದಾಗ್ಯೂ ಇನಾಂ ಪಟ್ಟೆಗಳಿಗೆ ಸ್ಟ್ಯಾಂಪ್ ಮತ್ತು ರಿಜಿಸ್ಟರ್ ಮಾಡಿಸಬೇಕಾದ್ದಾವಶ್ಯಕವೇ ಎಂಬ ಜಿಜ್ಞಾಸೆಯುಂಟಾಗಿ, ಅದು ಮಹಾರಾಜರವರಿಗೆ ದೌಲತ್ತು ಬಿಟ್ಟುಕೊಡಲ್ಪಡುವ ಕಾಲದವರಿವಿಗೂ ಫೈಸಲಾಗದೆ ಇದ್ದು, ಈಚೆಗೆ ಹಾಗೆ ಮಾಡಬೇಕಾದ ಅವಶ್ಯಕತೆ ಇಲ್ಲವೆಂದು ವ್ಯವಸ್ಥೆಯಾಯಿತು. ಸನ್ನದ ಅಥವಾ ಪಟ್ಟೆ ಕೊಡುವ ವಾಡಿಕೆಯು ೭೫ನೇ ಇಸವಿಯಿಂದೀಚೆಗೆ ಉಂಟಾದದರಿಂದ ಹೊಸಗಾಮಿ ಪಟ್ಟೆಯೆಂದು ನಮೂದ ಮಾಡಬೇಕಾಯಿತು. ಇದರಿಂದ ಅನೇಕಮಂದಿ ಇನಾಂದಾರರು, ನಾವು ಶಾಶ್ವತವಾದ ಫೈಸಲಾತಿಗೆ ಒಳಪಟ್ಟು, ಸರ್ಕಾರದ ಕಸೂರಿಯಿಂದ ಈಚೆಗೆ ಪಟ್ಟೆ ಪಡಕೊಳ್ಳಬೇಕಾಗಿಬಂದದರಿಂದಲೇ ಕಾಯಂ ಕ್ವಿಟರೆಂಟಗೆ ತಮ್ಮ ಗ್ರಾಮಗಳನ್ನೂ ಗುರಿಮಾಡುವಣವು ಅಕ್ರಮವೆಂದು ಫಿರ್ಯಾದ ಮಾಡಲು ಅವರ ಫಿರ್ಯಾದ ಸರಿಯಾದದ್ದೆಂದು ತಿಳಿಯಬಂದು, ೭೫ನೇ ಇಸವಿ ಅಕ್ಟೋಬರ್ ವರಿವಿಗೆ ಪಟ್ಟೆ ಕೊಟ್ಟದ್ದರೆ ಯಾವ ಕ್ರಮವನ್ನನುಸರಿಸಬೇಕೊ ಇವರ ವಿಷಯದಲ್ಲೂ ಅದೇ ಕ್ರಮವನ್ನನುಸರಿಸಬೇಕೆಂದು ದಿವಾನರವರು ಹುಕುಂ ಮಾಡಿದರು.

ಈರೀತಿಯಾಗಿ ಇನಾಂದಾರರಿಗೆ ಮೈಸೂರು ಸರ್ಕಾರದಿಂದರಿಯಾಯತಿ ತೋರಿಸಲ್ಪಟ್ಟತೆಂಬ ವಿಷಯದಲ್ಲಿನಾವು ಬಹಳಸಂತೋಷಿಸುತ್ತೇವೆ, ಪರಂತು ಈಹುಕುಂಗಳು ಇನಾಂ ಗ್ರಾಮಗಳಿಗೆ ಪ್ರಸ್ತುವಾದ ಸಂಕಟಗಳನ್ನು ನಿವೃತ್ತಿಮಾಡುವ ವಿಷಯದಲ್ಲಿ ಸಹಾಯಕಗಳಾದವೇ ಹೊರತು ಹೊಸತಾಗಿ ಇನಾಂದಾರರಿಗೆ ಒಂದು ಉಪತ್ಕೃತಿಯುಂಟುಮಾಡಿದಂತೆ ಆಗುವದಿಲ್ಲವು. ಇದು ನೇಟಿವ್ ಸಂಸ್ಥಾನವಾದದರಿಂದ ಇನಾಂದಾರರ ವಿಷಯದಲ್ಲಿಬೇರೇವಿಧವಾದ ಉಪಕಾರ ಮಾಡುವ ಶಕ್ತಿಯುಈ ಸರ್ಕಾರಕ್ಕೆ ಉಂಟಾಗಿದ್ದರೆ ಅದನ್ನು ಸಾರ್ಥಕ ಪಡಿಸುವದಕ್ಕೆ ಇದು ಸಕಾಲವಾಗಿದೆಯೆಂದು ದೃಢವಾಗಿ ಹೇಳುವೆವು.

OPENING OF THE ORIENTAL AND MIXED LIBRARY.

ಈ ಪೂರು ಬಳೇಬಾಗಿಲಬಳಿ ಇರುವ ವೇಂಕಟರಾಯಸ್ವಾಮಿ ದೇವಾಲಯವೆಂಬ ನಾಮಾಂತರವುಳ್ಳ ಶ್ರೀ ಶ್ರೀನಿವಾಸಮಂದಿರವು ಜೀರ್ಣೋದ್ಧಾರ ಮಾಡಲ್ಪಟ್ಟು ಸಂಪ್ರೋಕ್ಷಣೆ ಮೊದಲಾದ ಕ್ರಿಯೆಗಳೆಲ್ಲವೂ ಜರಿಗಿ ಪ್ರಸಿದ್ಧರಾದ ಇಬ್ಬರು ಮಠಾಧಿಪರಿಂದ ಗೌರವಿಸಲ್ಪಟ್ಟ ಅಂಶವು ಕಳೆದ ಜೂನ್ ತಿಂಗಳಲ್ಲಿ ಈಪತ್ರಿಕಾಮೂಲಕ ಪ್ರಕಟಿಸಿರುತ್ತೇವೆಯಷ್ಟೆ. ಈ ಮಂದಿರ ವ್ಯವಸ್ಥಾಪಕರಾದ ಮೆ|| ಅಟ್ಟಿಕೊಂಡವಲ್ಲಿ ಗೋಪಾಲಾಚಾರ್ಯರವರಿಗೆ ಉಂಟಾಗಿದ್ದ ಎರಡನೆಯ ವೃದ್ಧೇಶವಾದ ಸರಸ್ವತೀಭಂಡಾರ ವ್ಯವಸ್ಥಾಪನೆಯು ಇದುವರಿವಿಗೆ ಅಪರಿಪೂರ್ಣವಾಗಿದ್ದು ಅದು ಮೊನ್ನೆಯದಿನ ಸಾಫಲ್ಯವನ್ನೈದಿತೆಂಬದಂ ತಿಳಿಸಲಿಕ್ಕೆ ನಾವು ಬಹಳ ಸಂತೋಷಿಸುತ್ತೇವೆ ಪ್ರಸಕ್ತ ಸರಸ್ವತೀಭಂಡಾರ ವ್ಯವಸ್ಥಾಪನೋದ್ದೇಶದಿಂದ ಮೊನ್ನೆಯದಿನಸಾಯಂಕಾಲ ೬ ಘಂಟೆಯವೇಳೆಯೊಳು ಸದರೀ ಮಂದಿರದ ಕಕ್ಷ್ಯಾಂತರದಲ್ಲಿ ಬಹುದಿನ ವ್ಯಯದಿಂ ನೂತನವಾಗಿ ನಿರ್ಮಿಸಲ್ಪಟ್ಟಿರುವ ವಿಶಾಲ ರಮಣೀಯವಾದ ಹರ್ಮ್ಯಾಟ್ಟಲ್ಲಿ ಬಹುಜನ ದೊಡ್ಡಮನುಷ್ಯರ ಸಭೆಯೊಂದು ಸೇರಿತ್ತು. ಸದರೀ ಸೌಧವು ನವೀನ ನಾಗರಿಕ ವೈಲಕ್ಷಣ್ಯಾಭಿರುಚಿಗಳಿಗನುರೂಪವಾದ ಅಲಂಕಾರಗಳಿಂದಲೂ,ಬ್ರಿಟಿಷ್ ಕೌಶಲ್ಯ ಪ್ರದರ್ಶಕಗಳಾದ ವಿಚಿತ್ರತರ ದೀಪಪಙ್ಕ್ತಿಗಳಿಂದಲೂ ವೀಕ್ಷಕರಿಗೆ ಹೃದಯಾಹ್ಲಾದಕರವಾಗಿ ಕಣ್ಗೊಳಿಸುತಲಿತ್ತು. ಮತ್ತು ಆಮಂತ್ರಿತರಾದವರಿಗೆಲ್ಲ ಕರ್ಣತೃಪ್ತಿಯುನ್ನುತ್ತ ಪ್ರಿತ್ಯೈಯುವಂತೆ ನೇಟಿವ್ ವಾಲಂಟಿಯರ್ ಕೋರಿಗೆ ಸೇರಿದವರಿಂದ ಬ್ಯಾಂಡವಾದ್ಯವು ಹೊರಭಾಗದಲ್ಲಿ ಬಾರಿಸಲ್ಪಡುತಲಿತ್ತು. ಕ್ಲುಪ್ತಕಾಲಕ್ಕೆ ಪೂರ್ವಭಾವಿಯಾಗಿಯೇ ಕೆಲವುಜನ ನೇಟಿವ್ ದೊಡ್ಡಮನುಷ್ಯರು ಬಂದು ಜಮಾಯಿಸಿದ್ದರು. ತರುವಾಯ ಅಸಿಸ್ಟೆಂಟ ರೆಸಿಡೆಂಟ ಮೆ|| ವೆದ್ದರ್ಬರ್ನ್‌ಯವರು, ಎಡ್ಯುಕೇಷನ್ ಸೆಕ್ರೆಟರಿಯವರಾದ, ಮೆ|| ರೈಸ್‌ಯವರು, ಸೆಂಟ್ರಲ್ ಕಾಲೇಜ್ ಅಸಿಸ್ಟೆಂಟ ಪ್ರೊಫೆಸರ್ ಮೆ|| ಪಿಗಟ್‌ಯವರು, ಮಾರ್ಕ್ವಿಸ್ ವೆನಾನಿಯವರು,ಜನರಲ್ ಫಿಷಿಚರ್, ರೆವರೆಂಡ್ ವೇಕ್‌ಸ್, ರೆವರೆಂಡ ಇ. ಪಿ. ರೈಸ್, ಮೆ||ಅಡ್ವೋಕೇಟ ಜೇಜ್. ಮ ಕಾರ್ನರ್ ಮೆ|| ಗುಡಾರ್ಡ ಮೊದಲಾದ ಯೂರೋಪಿಯರ್ನ ದೊಡ್ಡಮನುಷ್ಯರೂ, ಕೌನ್ಸಿಲರ್ ರಾಯಬಹದೂರ್ ಮೆ||ಸಭಾಪತಿ ಮೊದಲಿಯಾರ್ರವರು, ಆಕ್ಟಿಂಗ್ ಚೀಫ್ ಜಡ್ಜ್ ಮತ್ತು ಕೌನ್ಸಿಲರ್ ಮೆ|| ತುಂಬುಚೆಟ್ಟಿರವರು, ಕಂಟ್ರೋಲರ್ ಮೆ|| ರಂಗಸ್ವಾಮಯ್ಯಂಗಾರ್ರವರು, ವೈಸ್ ಪ್ರೆಸಿಡೆಂಟ ರಾಯಬಹದೂರ್ ಮ ಶ್ರೀನಿವಾಸಾ ಚಾರ್ಯರವರು, ಸರ್ವೆ ಅಸಿಸ್ಟೆಂಟ ಕಮ್ಮಿಷನರ್ ಮೆ|| ಬಿ. ಶಾಮರಾಯರವರು ವಗೈರೆ ನೇಟಿವ್ ದೊಡ್ಡ ಮನುಷ್ಯರೂ ಬಂದಿದ್ದರು. ಮೆ|| ವೆದ್ದರ್ಬರ್ನ್ ಯವರು ಅಗ್ರಾಸನವು ಸ್ವೀಕರಿಸಿದ ಕೂಡಲೇ, ಮಂದಿರ ವ್ಯವಸ್ಥಾಪಕರಾದ ಮೆ|| ಗೋಪಾಲಾಚಾರ್ಯರವರು ತಮ್ಮ ಉದ್ದೇಶ ಪ್ರಯತ್ನಗಳನ್ನೂ, ಏತದರ್ಥ ತಾವು ಮಾಡಿದ ಸಾಹಸಗಳನ್ನೂ, ದ್ರವ್ಯಾರ್ಜನೆಗಾಗಿ ತಾವು ದೇಶ ಸಂಚಾರ ಮಾಡಿದ ಕಾಲದಲ್ಲಿ ತಮಗೆ ಅಭಿಮಾತ್ಯಗಳಾಗಿಯೂ, ಮುಖ್ಯಸಹಾಯಕರಾಗಿಯೂ ಇದ್ದ ಸಂಸ್ಥಾನಾಧಿಪತಿಗಳು ಮಾಡಿದಸಹಾಯವನ್ನೂ, ಫಲಾಕಾಂಕ್ಷೆಯಿಲ್ಲದೆ ಕೇವಲ ಜನರ ಪ್ರಯೋಜನೋದ್ದೇಶದೊಡನೆ ತಾವು ಮಾಡಿದ ಪ್ರಯತ್ನವು ಸಕಲಜನ ಸನ್ಮಾನಿತವಾಗಿ ಚಿರಕಾಲ ನೆಲಗೊಂಡಿರುವಂತೆ ಭಗವದನುಗ್ರಹವೂ ಜನಸಹಾಯವೂ ಉಂಟಾಗಬೇಕೆಂಬ ಕೋರಿಕೆಯನ್ನೂ ವ್ಯಕ್ತಪಡಿಸುವಂತಾ ಒಂದು ರಿಪೋರ್ಟನ್ನು ಇಂಗ್ಲಿಷ್ ಭಾಷೆಯಲ್ಲಿ ಓದಿದರು. ಈ ರಿಪೋರ್ಟನ್ನು ಆಮೂಲಾಗ್ರವಾಗಿ ಪ್ರಕಟಿಸಲಿಕ್ಕೆ ಈ ವಾರದಲ್ಲಿ ಅವಕಾಶ ಸಾಲದೆ ಹೋದದಕ್ಕಾಗಿ ನಾವು ಬಹಳ ಅತೃಪ್ತರಾಗಿರುವೆವು. ಪರಂತು ಅದರ ಸಾರಾಂಶವನ್ನು ಸಂಗ್ರಹವಾಗಿ ಪರಿಮಿತ ಶಬ್ದಗಳಿಂದಿದರಡಿ ತಿಳಿಸುವೆವೆಂತೆಂದರೆ— ಹಿಂದೂ ಮತಾಭಿವೃದ್ಧಿಗೆ ಕಾಲ ವೈಪರೀತ್ಯದಿಂ ಈಗ ಉಂಟಾಗುತಬರುವ ಹ್ರಾಸವು ಪರ್ಯಾಲೋಚಿಸಿ ನೋಡಲಾಗಿ ಅದಂ ಕಾಪಾಡಿಕೊಳ್ಳಬೇಕಾದ್ದು ಹಿಂದುವೆನಿಸಿಕೊಂಡವನಿಗೆ ಮುಖ್ಯ ಕರ್ತವ್ಯವೆಂಬ ಭಾವನೆಯು ಯೆನಗೆ ದೃಢತರವಾಗಿ ಉಂಟಾದದರಿಂದ ಈ ಪ್ರದೇಶದಲ್ಲಿ ಬಹುಜನ ಯಾತ್ರಾರ್ಥಿಗಳಿಗೆ ಉಪಾದೇಯವಾಗಿದ್ದ ಈ ಮಂದಿರವು ಬಿಲವನ್ನೈದಿ ನಾಮಮಾತ್ರಾವಶಿಷ್ಟವಾಗಿದ್ದದಂ ನನ್ನ ಕನಿಷ್ಠಪಿತೃವಾದ ಲಕ್ಷ್ಮಣಾಚಾರ್ಯರವರು ಜೀರ್ಣೋದ್ಧಾರ ಮಾಡುವದಕ್ಕೆ ಪ್ರಯತ್ನಪಡಲು ಬಹುವಿಧ ಅನುಪಪತ್ತಿಗಳಿಂದದು ಪೂರ್ತಿಯನ್ನೈದದೆ ನಿಂತಿದ್ದ ಯಥೋಚಿತ ಕೆಲಸಗಳು ಸಹ ನಿಷ್ಫಲಗಳಾಗಿ ಹೋದವಂತೆಂದು ನನ್ನ ಉಪಪತ್ತಿಯನ್ನೂ ನನಗಿರುವ ಸಹಾಯ ಸಂಪತ್ತಿಯನ್ನೂ, ನನ್ನ ಶಕ್ತಿಯನ್ನೂ, ಪರ್ಯಾಲೋಚಿಸದೆ ಕೇವಲ ಸ್ವದೇಶೀಯರ ಸಹಾಯಾಭಿಮಾನಗಳ ಮೇಲಣ ನಂಬಿಕೆಯೊಡನೆ ಈ ಮಹತ್ಪ್ರಯತ್ನವು ಕೈಗೊಂಡು ಅದು ಕೊನೆ ಮುಟ್ಟುವದೇ ಎಂಬ ಅನುಮಾನದಿಂದಲೂ, ಹೇಳನಾಸ್ಪದವಾಗುವದೋ ಎಂಬ ಭೀತಿಯಿಂದಲೂ, ಬಹುವಿಧಕ್ಲೇಶಗಳನ್ನನುಭವಿಸುತ ೧೮೮೩ನೇ ಇಸವಿ ಜುಲೈ ತಿಂಗಳ ಮೊದಲು ಆಸೇತು ಹಿಮಾಚಲ ಪರ್ಯಂತ ಸಂಚರಿಸಿ ಪ್ರಧಾನ ಸಂಸ್ಥಾನಗಳನ್ನೆಲ್ಲ ಹೊಕ್ಕು ತತ್ತತ್ಸಂಸ್ಥಾನಾಧಿಪರಿಂದ ಉಪಕರಿಸಲ್ಪಟ್ಟವನಾಗಿ ನನ್ನ ಉದ್ದೇಶವಂ ಇದುವರಿವಿಗೆ ಕೊನೆಮುಟ್ಟಿಸಿದೆನು. ಮೂರುವಿಧ ಉದ್ದೇಶಗಳಲ್ಲಿ ಮೊದಲನೆಯದಾದ ಮಂದಿರ ನಿರ್ಮಾಣಕಾರ್ಯವು ಪೂರ್ತಿಯನ್ನೈದಿತು. ಎರಡನೆಯದಾದ ಅನಾಥರಕ್ಷಕ ಶಾಲೆಯುಂಸ್ಥಾಪಿಸಬೇಕೆಂಬ ಅಭಿಪ್ರಾಯವು ಕೈತವದೊಳಗಿನವರಿಂದ ಅದು ಪ್ರಜೆಗಳ ಔದಾರ್ಯದಿಂದಲೂ, ಮಹಾರಾಜಾ ಸರ್ಕಾರದವರ ಪೋಷಣೆಯಿಂದಲೂ ವೃದ್ಧಿಯನ್ನೈದಿ ಸಫಲವಾಗಬೇಕಾಗಿರುತ್ತದೆ. ಮೂರನೆಯದಾದ ಸರಸ್ವತೀ ಭಂಡಾರವು ಈದಿನ ಪೂರ್ವ ದೇಶಭಾಷಾಭಿಮಾನಿಯಾದ ಮೆಸ್ಟರ್ ವೆದರ್ಬರ್ನ್‌ಯವರಿಂದ ವ್ಯವಸ್ಥಾಪಿತವಾಗಿರುತದೆ. ಈಸಂದರ್ಭದಲ್ಲಿ, ನನಗೆ ಸಹಾಯಕರಾಗಿದ್ದ ಸಂಸ್ಥಾನಾಧಿಪತಿಗಳ ಹೆಸರುಗಳಂ ನಮೂದಿಸದಿರುವದು ನನಗೆ ಧರ್ಮವಲ್ಲವಾಗಿ ಅವರುಗಳ ಹೆಸರುಗಳನ್ನಿದರಡಿ ತಿಳಿಸುವೆನು. ಅವರ್ಯಾರೆಂದರೆ,—ಹೈದರಾಬಾದ ನಿಜಾಮರವರು, ಬರೋಡಾ, ತಿರುವಾಂಕೂರ್, ಇಂದೂರ್, ಗ್ವಾಲಿಯರ್, ಧಾರ್, ಪಟ್ಟಿಯಾಲಾ, ದರ್ಭಂಗಾ, ದುಮುರೋನ್, ಭಾವನಗರ್, ಈ ಸಂಸ್ಥಾನಾಧಿಪತಿಗಳೂ, ನೇಪಾಳ ಸಂಸ್ಥಾನದ ಮಂತ್ರಿ ಮತ್ತು ಸೇನಾಧಿಪತಿಯವರೂ, ವಢ್ವಾನ್, ಪಾಲಿಟಾನಾ, ಗೊಂಡಲ್, ಸಂಸ್ಥಾನಗಳ ಠಾಕೂರಿಯವರೂ, ಜುನಾಘಡ್ ನವಾಬರವರು, ಕೊಚ್ಚಿ ಅರಸರು, ನಗರದ ಜಮೀಂದಾರವರು, ಕಚ್ ಸಂಸ್ಥಾನದ ರಾವ್‌ಯವರು, ಉದಯಪುರ ಮತ್ತು ಭೋಪಾಲ್ಪುರದ ಮಹಾರಾಣಾ ಮತ್ತು ರಾಣಿಯವರು, ಜೋಧಪುರ, ಜಯಪುರ ಮತ್ತು ಕೃಷ್ಣಘರ್ ಸಂಸ್ಥಾನಗಳ ಮಹಾರಾಜರುಗಳು ವಗೈರೆ ಅನೇಕ ಸಂಸ್ಥಾನಾಧಿಪತಿಗಳೂ, ದಿವಾನ್ ಬಹದೂರ್ ರಘುನಾಥರಾಯರವರು, ಗ್ವಾಲಿಯರ್‌ಸಂಸ್ಥಾನದ ಮೆ|| ಶ್ರೀನಿವಾಸರಾಯರವರು ವಗೈರೆ ನೇಟಿವ್ ಪ್ರಮುಖರೂ, ಮೈಸೂರುರಾಯಿಯವರು, ಮುಂಬೈ ಪ್ರೆಸಿಡೆನ್ಸೀ ಗವರ್ನರವರು, ಮೆ| ಗರ್ಡಿಲೆಸ್ಟೋನ್ ವಗೈರೆ ಕೆಲವರು ಪೊಲಿಟಿಕಲ್ ಆಫೀಸರುಗಳೂ ಮುಖ್ಯ ಸಹಾಯಕರಾಗಿದ್ದರೆಂದು ತಿಳಿಸಿ ಚೇರ್ಮೆನ್‌ಯವರಿಗೆ ವಂದನ ಪೂರ್ವಕ ರಿಪೋರ್ಟನ್ನು ಓದಿ ಪೂರೈಸಿದರು. ಬಳಿಕ ಮೆ| ವೆದ್ದರ್ಬರ್ನ್‌ಯವರು ಸಂದರ್ಭೋಚಿತಗಳಾದ ಮತ್ತು ಸಂತೋಷ ಪ್ರೋತ್ಸಾಹ ಸೂಚಕಗಳಾದ ಕೆಲವು ಮಾತುಗಳನ್ನು ಹೇಳಿದರು. ತರುವಾಯ ಪಿರೆಂಕೆ ಮೆ|| ರೈಸ್‌ಯವರು ಮೆ|| ಗೋಪಾಲಾಚಾರ್ಯರವರ ಸ್ವದೇಶಾಭಿಮಾನದಿಂದೊಡಗೂಡಿದ ಸಾಹಸಪ್ರಯತ್ನಗಳಂ ಪ್ರಶಂಸಿಸಿ ಇಂತಾ ವಿಷಯಗಳಲ್ಲಿ ಹಿಂದುವರುಗಳು ನಿರಭಿಮಾನಿಗಳೆಂಬ ಆಕ್ಷೇಪಣೆಯಂ ಖಂಡಿಸಿ ಇದು ಸರ್ವಜನೋಪಲಾಳನಾರ್ಹವೆಂದು ನುಡಿದರು. ಅನಂತರ ಪಂಡಿತ ಶ್ರೀಮಾನ್ ಭಾಷ್ಯಾಚಾರ್ಯರವರು ಪೂರ್ವ ದೇಶ ಭಾಷೆಗಳಿಗೂ, ಪೂರ್ವ ಗ್ರಂಥಗಳಿಗೂ, ಪೂರ್ವದೇಶದ ಪಂಡಿತರಿಗೂ ಕಾಲಗತಿಯಿಂದುಂಟಾದ ಬಹುವಿಧ ನಷ್ಟಗಳನ್ನೂ, ಇಂಗ್ಲಿಷ್‌ನವರ ಸಂಬಂಧದಿಂದ ಈಗ ವಿದ್ಯಾ ವಿಷಯದಲ್ಲಿ ಉಂಟಾಗುತಲಿರುವ ಪ್ರೋತ್ಸಾಹವನ್ನೂ ವಿಶದ ವಿಶೇಷವಾಗಿ ವರ್ಣಿಸಿ ಸಂಸ್ಕೃತಭಾಷೆಯಲ್ಲೇ ಪ್ರಸಿಡೆಂಟರಿಗೆವಂದನವಮಾಡಿದರು. ಮೆ|ಹೇಜ್‌ಯವರು ಗೋಪಾಲಾಚಾರ್ಯರವರು ತಮ್ಮ ಪತ್ರಿಕಾರೇಖಕರಾಗಿದ್ದದ್ದು ಮೊದಲು ಅವರ ಪರೋಪಕಾರಬುದ್ಧಿಯನ್ನು ತಾವು ಚೆನ್ನಾಗಿ ಅರಿತಿರುವಂತೆ ಹೇಳಿ ಮೆ|| ವೆದ್ದರ್ ಬರ್ನ್‌ಯವರಿಗೆ ವಂದನೆಮಾಡಿದರು. ಕಡೆಗೆ ಎಲ್ಲರಿಗೂ ಗಂಧಪುಷ್ಪಗಳು ಕೊಡಲ್ಪಟ್ಟಮೇಲೆ ಸಭಿಕರಕರತಾಳಧ್ವನಿಯೊಡನೆ ಸಭೆ ಬರಖಾಸ್ತಾಯಿತು.

Occasional Notes.
ನೈಮಿತ್ತಿಕ ವಿಷಯನ್ಯಾಸ.

Death.—ತಿರುವಾಂಕೂರ್ ಚೀಫ್‌ಕೋರ್ಟಿನ ಎರಡನೇ ಜಡ್ಜಿಯವರಾದ ಮೆ|| ಶ್ರೀನಿವಾಸಯ್ಯಂಗಾರ್ರಂಬವರು, ಕಳೆದತಿಂಗಳ ೨೫ನೇ ತಾರೀಖ್ ಶನಿವಾರದದಿನ ಬೆಸ್ತುವಣಿಯಿಂದ ಮೃತಪಟ್ಟರೆಂದು ತಿಳಿಯಲಾದೆವು.

An editor convicted.—ದರ್ಬಾ ಟೈಂಸ್ ಪತ್ರಿಕೆಯ ಎಡಿಟರವರು ದರ್ಬಾ ಹೆರಲ್ಡ್‌ಪತ್ರಿಕೆಯ ಎಡಿಟರಮೇಲೆ ಮಾನನಷ್ಟ ಮೊಕದ್ದಮೆ ತಂದು ಅದು ಮ್ಯಾಜಿಸ್ಟ್ರೇಟರಕೋರ್ಟನಲ್ಲಿ ವಿಚಾರಣೆಯಾಗಿ ಹೆರಲ್ಡ್‌ಪತ್ರಿಕೆಯ ಎಡಿಟರಮೇಲೆ ತಕ್ಸೀರ್ ಸಾಬೀತಾಗಿ ಅವರಿಗೆ ಆರುತಿಂಗಳ ಸಾಮಾನ್ಯ ಖೈದ್ ಸಜಾ ವಿಧಿಸಲ್ಪಟ್ಟಿತು.

A native Sub-Registrar convicted.—ಬಜಮೂರು ಸಬ್ ರಿಜಿಸ್ಟ್ರಾರವರು, ಯಾವನೋ ಒಬ್ಬನು ಕಳವುಮಾಡಿಕೊಂಡುಬಂದು ಕೊಟ್ಟ ೨,೦೦೦ ರೂಪಾಯಿಗಳ ಕರೆನ್ಸೀನೋಟುಗಳನ್ನು, ಅವು ಕಳವುಮಾಲೆಂದು ತಿಳಿದು, ಅಥವಾ ಕಳವುಮಾಲೆಂದು ನಂಬುವದಕ್ಕೆ ಕಾರಣವುಂಟಾಗಿದ್ದಾಗ್ಯೂ ಅವನ್ನು ತಮ್ಮಲ್ಲಿಟ್ಟುಕೊಂಡಿದ್ದ ತಪ್ಪಿತದಬಗ್ಗೆ ಒಂದುವರ್ಷದ ಸಜಾ ಮತ್ತು ೧,೦೦೦ರೂಪಾಯಿಗಳುಜುರ್ಮಾನೆವಿಧಿಸಲ್ಪಟ್ಟರು.

A liberal contribution.—ಬಂಗಾಳದೇಶದಲ್ಲಿನ ಧನಿಕರಾದ ಜಮೀನ್ದಾರರಪೈಕಿ ಯೊಬ್ಬರಾಗಿದ್ದ ಬಾಬು ಜಯಕಿಸನ್ ಮುಕರ್ಜೀಯವರು ಸಾಮಾನ್ಯವಾಗಿ ಪ್ರಜೆಗಳಿಗುಪಯುಕ್ತವಾಗಿರುವ ಧರ್ಮಕಾರ್ಯಗಳಿಗಾಗಿ ಐದುಲಕ್ಷರೂಪಾಯಿಗಳುಕೊಟ್ಟರು, ಪರಂತು ಸದರೀ ಮೊತ್ತದಪೈಕಿ ಬಹುಭಾಗವು ಸದರೀಯವರ ಗ್ರಾಮದಲ್ಲಿನ ಧರ್ಮಸ್ಥಾಪನೆಗಳ ಪೋಷಣೆಯಬಗ್ಗೆ ಉಪಯೋಗಿಸಲ್ಪಟ್ಟವು.

Bequest.—ಹೈದರಾಬಾದ ನಿಜಾಮರವರ ಅಜ್ಜಿಯವರಾದ ಮೃತಪಟ್ಟ ದಿಲವಾರ್ ನಿಸ್ಸಾಬೇಗಂಯವರು ತಮ್ಮ ಜಾಘೀರೂ ವಿಸ್ತಾರವಾದ ಇತರ ಸ್ವಂತಜಿಂದಗಿಗಳೂ ನಿಜಾಮರವರ ತಾಯಿಯವರಿಗೂ, ಸುಮಾರು ಒಟ್ಟು ಆರುಲಕ್ಷ ರೂಪಾಯಿಗಳ ನಗದು ಮತ್ತು ಜವಾಹಿರ್‌ಗಳು ನಿಜಾಮರವರ ಸೋದರಿಯವರಾದ ನವಾಬ್ ಮೈಕಾಗುಲ್ ಉಮರಾಯವರ ಭಾರ್ಯೆಯವರಿಗೂ ಸೇರತಕ್ಕದ್ದೆಂದು ಉಯಿಲ್ ಬರೆದಿಟ್ಟಿರುತ್ತಾರೆ.

Want of funds.—ಲೇಡೀ ಡಫರಿನ್‌ಯವರ ಫಂಡಿನ ಆಧಾರದಮೇಲೆ ಜನಾನಾಹೆಂಗಸರಿಗಾಗಿ ಕಲ್ಕತ್ತೆಯೊಳು ಸ್ಥಾಪಿಸಲುದ್ದೇಶಿಸಲ್ಪಟ್ಟಿರುವ ಆಸ್ಪತ್ರೆಗೆ ಒಂದುಲಕ್ಷ ರೂಪಾಯಿಗಳು ಬೇಕಾಗಿರುತಿದೆ. ಅದಕ್ಕಾಗಿ ಆರುಮಂದಿ ದೊಡ್ಡಮನುಷ್ಯರಿಂದ ೪೩,೦೦೦ ರೂಪಾಯಿಗಳು ಚಂದಾಮಾಡಲ್ಪಟ್ಟವು ಲೇಡೀ ಡಫರಿನ್‌ಸಾಹೆಬರವರು ಬರುವ ಡಿಸಂಬರ್‌ತಿಂಗಳಲ್ಲಿ ಕಲ್ಕತ್ತೆಗೆ ಬರುವ ಕಾಲದೊಳು ಅದರ ಅಸ್ತಿಭಾರವು ಹಾಕಬೇಕೆಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿರುತ್ತಾರೆ.

A memorial.—ಮುಂಬೈ ಸಿವಿಲ್‌ಸರ್ವಿಸ್ಸಿಗೆಸೇರಿದ ಮೆ| ಅರ್ಥರ್ ಕ್ರಾಫೋರ್ಡ್‌ಯೆಂಬವರ ಮೇಲೆ ರುಷವತ್‌ಮೊಕದ್ದಮೆಗಳು ತರಲ್ಪಟ್ಟು ಅದು ಈಗ ದರ್ಯಾಪ್ತಿಯಲ್ಲಿದೆಯಷ್ಟೆ ಸದರೀಯವರು ತಮ್ಮಮೇಲೆ ತರಲ್ಪಟ್ಟಿರುವಮೊಕದ್ದಮೆಯನ್ನು ದರ್ಯಾಪ್ತೀಮಾಡುವದಕ್ಕೆ ಅದು ಹೈಕೋರ್ಟನಲ್ಲಿನಡೆಯಬೇಕೆಂತಲೂ, ಒಂದುವೇಳೆ ಕಮಿಷನರ್‌ಗಳಿಂದ ದರ್ಯಾಪ್ತೀಮಾಡಿಸುವದಕ್ಕೆ,ಅದಕ್ಕೆ ಮುಂಬೈ ಗವರ್ನಮೆಂಟಿಗೆ ಸೇರಿದ ಆಫೀಸರಗಳು ಸೇರಿಸಲ್ಪಡದೆ ಇರಬೇಕೆಂತಲೂ

ಮುಂಬೈ ಗವರ್ನಮೆಂಟು ಮೂಲಕವತ್ತು ಇಂಡ್ಯ ಗವರ್ನಮೆಂಟಿಗೆ ಅರ್ಜಿ ಬರೆದುಕೊಂಡಿರುತ್ತಾರೆ.

A rumour.—ಜೋಬೂರ್ ಅನಿಸಾರರನರಾವ ಅಬ್ದುಲ್‌ರಹಿಮಖಾನ್‌ಯವರು ಮೃತನಸ್ಸಲು, ಪರಂತು ಅವರ ಆಫೀಸರ್‌ಗಳು ಅವನ್ನು ಹೊರಗಿಡದೆ ಅವರ ಮಗನನ್ನು ಸಿಂಹಾಸನದಲ್ಲಿ ಕುಳ್ಳಿರಿಸಬೇಕೆಂದು ಸಂಧಾನವಮಾಡುತಲಿದಾರೆಂಬದಾಗಿ ಜಲಾಲಾಬಾದ್‌ನಲ್ಲಿಯೊಂದು ಪ್ರವಾದವುಂಟಾಗಿರುತಿದೆಯೆಂದು ಅಲಹಾಬಾದಿಗೆ ವರ್ತಮಾನ ಬಂದಿರುತಿದೆ. ಇದನ್ನು ಅವರ ಕಮಾಂಡರ್ ಚೀಫರವರಾದ ಗುಲಾಂ ಹೈದರ್‌ಖಾನರವರು ಒಪ್ಪಿಕೊಳ್ಳದೆ ಹೋಗುವದಕ್ಕೆ ಸಾಧ್ಯವಾಗಲಿಲ್ಲವು, ಪರಂತು ಈ ಪ್ರವಾದವು ಸುತರಾಂ ಸುಳ್ಳೆಂದು ಬಹಿರಂಗವಾದ ದರ್ಬಾರಿನಲ್ಲಿ ಕೋರ್ಟ್‌ಮಾರ್ಷಲ್ ಇಟ್ಟು ಕ್ಕೊಂಡು ಪ್ರಮಾಣ ಮಾಡಿದಮೇಲೆ ಸದರೀ ಸುಳ್ಳು ವರ್ತಮಾನವನ್ನು ಹುಟ್ಟಿಸಿದವರನ್ನು ದಂಡಿಸಬೇಕೆಂದು ಯೋಚಿಸಿ ಅಂತವರನ್ನೈಕಿ ಇಬ್ಬರನ್ನು ದಸ್ತಗಿರಿಮಾಡಿ, ಸೈನ್ಯಗಳ ಮತ್ತು ಬಹುಜನರಸಮಕ್ಷಮದಲ್ಲಿ ಸದರೀ ಇಬ್ಬರನ್ನು ತೋಫೆಬಾಯಿಗೆಕೊಟ್ಟರಂತೆ. ಇದು ಎಂತಾ ಘಾತುಕಕೃತ್ಯವೆಂದೆಣಿಸಬೇಕು! ಇದಕ್ಕಿಂತಲೂ ಉಚಿತವಾದದಂಡನೆ ಇಲ್ಲದೆ ಹೋಯಿತೆ?

Retirement of Government servants.—ತಂಜಾವೂರು ಡಿಸ್ಟ್ರಿಕ್ಟು ಕಲೆಕ್ಟರವರು ತಮ್ಮ ಖಾತೆಗೆ ಸೇರಿದ ೫೫ ವರ್ಷಗಳಿಗೆ ಮೇಲ್ಪಟ್ಟ ಇಬ್ಬರು ನೌಕರರನ್ನು ಗವರ್ನಮೆಂಟಿನವರ ಮಂಜೂರಾತಿಯಂ ಪಡೆಯದೆ, ಪೆನ್ಶನ್‌ಮೇಲೆ ನೌಕರಿಯಂ ಬಿಡುವಂತೆ ಬಲಾತ್ಕರಿಸಿದ ಅಂಶ ಗವರ್ನಮೆಂಟಿನವರತಿಳುವಳಿಕೆಗೆ ಬರಲು ಅವರು ಅದರಮೇಲೆ ಮಾಡಿದಹುಕುಂ ಏನೆಂದರೆ—ಸದರೀ ಇಬ್ಬರು ನೌಕರರನ್ನೂ ಒಂದು ವರ್ಷಕಾಲದ ವರಿವಿಗೆ ನೌಕರಿಯಲ್ಲಿಟ್ಟುಕೊಳ್ಳುವಂತೆ ಮಂಜೂರ್ಮಾಡಿದ್ದರಿಂದ ಆಕಾಲ ಕಳೆದ ಒಡನೆ ಬಲಾತ್ಕಾರ ಪೂರ್ವಕ ಅವರನ್ನು ನೌಕರಿಯಿಂದ ಬಿಡುಗಡೆ ಮಾಡಬೇಕೆಂಬ ಅಭಿಪ್ರಾಯವಲ್ಲವು, ಪರಂತು ಮುಂದಕ್ಕೂ ಅವರನ್ನು ನೌಕರಿಯಲ್ಲಿಟ್ಟುಕೊಳ್ಳುವದಕ್ಕೆ ಅವರ ಯೋಗ್ಯತೆಯನ್ನು ಕುರಿತು ಯೋಚಿಸುವದಕ್ಕಾಗಿ ಮಾಡಿದ ಏರ್ಪಾಟಾಗಿರುತಿದೆಂಬದು.

TO OUR SUBSCRIBERS.

ಇದರಿಂದ ನಮ್ಮ ಚಂದಾದಾರರಿಗೆ ಮುಖ್ಯವಾಗಿ ನಾವು ತಿಳಿಸುವದೇನೆಂದರೆ,—ಈ ಸಂವತ್ಸರದಲ್ಲಿ ಕಳೆದ ತಿಂಗಳೊಳಗೆ ೮ ತಿಂಗಳು ಕಳೆದುಹೋದವು. ಇದುವರಿವಿಗೆ ಅನೇಕರು ಚಂದಾ ಹಣವನ್ನು ಕಳುಹಿಸದೆ ಇರುತ್ತಾರಾಗಿ ಅವರೆಲ್ಲರು ದಯಮಾಡಿ ಕೂಡಲೆ ಕಳುಹಿಸಬೇಕೆಂದು ಕೋರುತ್ತೇವೆ. ಉಪೇಕ್ಷಿಸುವಂತಾವರ ಪತ್ರಿಕೆಗಳನ್ನು ನಿಲ್ಲಿಸುವದು ವಿನಾ ಬೇರೆ ಕರ್ತವ್ಯವಿಲ್ಲವು.

LOCAL AND PROVINCIAL NEWS.
ಒಳದೇಶಮತ್ತುತಾಲ್ಲೂಕಜಾತವೃತ್ತಾಂತಗಳು.

A correction.—ಗತವಾರದಪತ್ರಿಕೆಯಲ್ಲಿನಾವು ಪ್ರಕಟಿಸಿದ್ದ ಶ್ರೀ ಶೃಂಗೇರಿ ಜಗದ್ಗುರುಗಳವರ ನಿರೂಪದಲ್ಲಿ ಎರಡನೇಪುಟದ ಕಡೇಪಙ್ಕ್ತಿಗೆ ಸೇರಿದ್ದ ಬೇರೆವಿಷಯಕ್ಕೆ ಸಂಬಂಧಪಟ್ಟ ಪಙ್ಕ್ತಿಯೊಂದು ಪ್ರಮಾದವಶಾತ್ ಮಧ್ಯೆ ಸೇರಿರುತಿದೆಯಾಗಿ ಈ ಪತ್ರಿಕೆಯನ್ನೋದತಕ್ಕವರು,ಮೂರನೇಪುಟದ ಮೊದಲನೇಪಙ್ಕ್ತಿಯಾದ, "ರು ೬ನವರ್ಷಗಳ ಕಳಿಣಸಹಾ, ೧೨,೦೦೦ ರೂಪಾ" ಎಂಬ ಮಾತುಗಳನ್ನುಬಿಟ್ಟು ಓದತಕ್ಕದ್ದು.

The Treasury.—ಇಲ್ಲಿನ ರೆಸಿಡೆಂಟಿ ಟ್ರಜರಿ ಆಫೀಸರ್ ವಿಷಯದಲ್ಲಿ ಇದುವರಿವಿಗೆ ಕೊಡಲ್ಪಟ್ಟಿದ್ದ ಹುಕುಂ ಅನುಸರಿಸಿ ಸದರೀಉದ್ಯೋಗವು ಮಾಹೇ ಮಜಕೂರ್ ೧೮ನೇ ತಾರೀಖ್ ಮೊದಲು ವಜಾ ಮಾಡಲ್ಪಡುವದು. ಇದುವರಿವಿಗೂ ಮೆ॥ ಪೆಯಸ್ಲೆಯವರಿಗೆ ಯಾವವಿಧವಿಲಿಯೂ ಮಾಡಲ್ಪಟ್ಟಂತೆ ಕಾಣಿಸಲಿಲ್ಲವು. ಮುಂದೆ ಇವರಿಗೆ ರೆಸಿಡೆಂಟರವರು ಹ್ಯಾಗೆ ನಿರೀಮಾಡುವರೋ ನೋಡಬೇಕು.

Transfer of Audit.—ಮಾಹೇ ಮಜಕೂರ್ ಗುರ್ರೇತಾರೀಖ್ ಲಾಗಾಯಿತು ಮೈಸೂರು ಶೀಮೆಯ ಅಂಚೆ ಇಲಾಖೆಯು ಇಂಪೀರಿಯಲ್ ಪೋಸ್ಟಾಫೀಸಿನೊಡನೆ ಸೇರಿಸಲ್ಪಡುವದೆಂಬದಾಗಿ ಕಳೆದ ತಿಂಗಳಲ್ಲಿ ಪ್ರಬಲವಾದ ಪ್ರವಾದ ಒಂದು ತಲೆದೋರಿತ್ತಷ್ಟೆ. ಅದರ ಸೂಚನೆಗಳೊಂದೂ ಅದ್ಯಾಪಿಕಂಡುಬಂದಿರಲಿಲ್ಲವಾಗಿ ಅದನ್ನು ಳಸಕೆ ಇಳುವದಕ್ಕೂ ಅಥವಾ ನಿವೃತ್ತಿಸಿಕೊಳ್ಳಲಿಕ್ಕೂ ಮಹಾರಾಜರ ಸರ್ಕಾರದವರಿಗೆ ಧೈರ್ಯವಿಲ್ಲದೆ ಕಳವಳ ವುಂಟಾಗಿರುವಂತೆ ಭಾವಿಸ ವೇಕಾಗಿದೆ. ಯಾವದಾದರೊಂದುಬಗೆ ನಿರ್ಣಯವು ಎಲ್ಲರಿಗೂ ಕ್ಷೇಮಕರವು.

Assault.—ಈನ್ನೂರು ರಲಸೂರುಪೇಟೆಯಲ್ಲಿಯಿರುವ ಬ್ರಹ್ಮಶ್ರೀ ಪಟ್ಟಾಭಿರಾಮಶಾಸ್ತ್ರಿಗಳೆಂಬ ಒಬ್ಬ ವನೋವೃದ್ಧರನ್ನು ಅವರ ದೂರಬಂಧುವಾದ ಸುಬ್ಬಯ್ಯನೆಂಬವನು ಇನ್ನೂಕೆಲವರು ದುರಾತ್ಮರ ಪ್ರೇರಣೆಯಮೇಲೆ ಕಳೆದ ಗುರುವಾರದದಿನಬೆಳಿಗ್ಗೆ ಪಬ್ಲಿಕ್ ಗೋಪನಲ್ಲಿ ಎಲ್ಲರೂ ನೋಡುತಲಿರುವಂತೆ ಪಾದರಕ್ಷೆಯಿಂದ ಪ್ರಹರಿಸಲು, ಅಘಾತುಕನ ದುಷ್ಕೃತ್ಯಕ್ಕೆ ಸಿಕ್ಕಿ ಬಹಳ ಖಿನ್ನರಾದ ಸದರೀ ಶಾಸ್ತ್ರಿಗಳವರು ಟೌನ್ ಮ್ಯಾಜಿಸ್ಟ್ರೇಟಕೋರ್ಟಿನಲ್ಲಿ ಫಿರ್ಯಾದ್ ಮಾಡಲು ಅದೇದಿನ ಮೊಕದ್ದಮೆ ವಿಚಾರಣೆಯಾಗಿ ಮ್ಯಾಜಿಸ್ಟ್ರೇಟರು ಅವನಿಗೆ ೩ ತಿಂಗಳ ಕಠಿಣಸಜಾ ವಿಧಿಸಿದರೆಂದು ತಿಳಿಯಲಾದೆವು. ಇಂತಾದುಷ್ಟರನ್ನು ಜೈಲಿನಿಂದ ಬಿಡುಗಡೆಮಾಡುವಕಾಲದಲ್ಲಿ ಸಹ ತಕ್ಕ ಜಾಮೀನಿನಮೇಲೆ ಬಿಟ್ಟರೆ ಅವರಿಂದ ಅನ್ಯರಿಗೊಂದುಪದ್ರವ ವುಂಟಾಗದಿರುವದು.

The weather.—ಕಾಲಸ್ಥಿತಿಯು ದಿನೆದಿನೇ ಕೃಷಿಜೀವಿಗಳಿಗೂ ಪರಿಮಿತ ಆದಾಯವುಳ್ಳವರಿಗೂ ಅಂತಃಭೀತಿಯನ್ನುಂಟುಮಾಡುತಬರುತಿದೆ. ಆಹಾರಾರ್ಥವಾದ ಪದಾರ್ಥಗಳನ್ನು, ಪ್ರತಿಕ್ಷಣದಲ್ಲಿಯೂ ಅನ್ಯವೇಶಗಳ ನಿರಖ್‌ಗಳನ್ನು ಸೂಚಿಸ ತಕ್ಕ ತಂತಿಸ್ತಂತಾಂತಗಳನ್ನು ನಿರೀಕ್ಷಿಸುವದೆ ಪ್ರೀತಿಕರತಕ್ಕದ್ದಾಗಿದೆ. ಗವರ್ನಮೆಂಟಿನವರನ್ನು ಬಿಂತೆಗೊಳಪಡಿಸಿ ಕರ್ತವ್ಯಾಕರ್ತವ್ಯ ಪರಿಜ್ಞಾನ ರಹಿತರನ್ನಾಗಿ ಮಾಡತಕ್ಕದ್ದಾಗಿದೆ. ಇದು ವರ್ಷಋತುವಾಗಿದ್ದರೂ, ವಸಂತವನ್ನು ಸೋಲಿಸತಕ್ಕದ್ದಾಗಿದೆ. ಕ್ಷಿಪ್ರದಲ್ಲಿಯೇ ಪದಾರ್ಥ ದೌರ್ಲಭ್ಯವೂ ಜಲಾಭಾವವೂ ವುಂಟಾಗುವದೆಂಬದರಲ್ಲೇನೂ ಸಂಶಯವಿಲ್ಲವು. ಕಾರ್ತಿಕ ಫಸಲನ್ನು ಕುರಿತು ಸ್ಮರಿಸಬೇಕಾದುದೇಯಿಲ್ಲವು ರಾಗಿಯಧಾರಣೆಯು ಗಾಡಿ ೧ಕ್ಕೆ ಈಗಲೇ ೨೦ರಿಂದ ೨೨ ರೂಪಾಯಿಗಳ ವರಿವಿಗೆ ನಿರಖ್ ಚಡಾವಾಗಿರುತಿದೆ. ಮುಂದೆ ಪ್ರತ್ಯೇಕರ ಪಡರಾದವರ್ತಕರೂ ವಿಶೇಷಬಿಯತಿಯುಳ್ಳ ದೊಡ್ಡ ಉದ್ಯೋಗಸ್ಥರೂ ಸಂತೃಪ್ತರಾಗಿದ್ದಾಗ್ಯೂ ಚಿಲ್ಲರೆಜನಗಳು ಬಹಳ ಸಂಕಟಪಡತಕ್ಕವರಾಗಿರುವರೆಂದು ಭಯಪಡುತ್ತೇವೆ.

The Bangalore City Rate-payers' Association.—ಬರುವ ದಸರಾ ದರ್ಬಾರಿಗೆ ಕಳುಹಿಸಲಿಕ್ಕೆ ಯೋಗ್ಯವಾದ ಒಬ್ಬ ಪ್ರತಿನಿಧಿಯನ್ನು ಇಲ್ಲಿ ಚುನಾಯಿಸತಕ್ಕಬಗ್ಗೆ ಈ ಊರು ರೇಟ್ ಪೇಯರ್ಸ್ ಅಸೋಸಿಯೇಷನ್ ಸಂಘದವರು ಈದಿನ ಸಾಯಂಕಾಲ ೫ ಘಂಟೆಗೆ ತಾಲ್ಲೂಕು ಕಚ್ಚೇರಿ ಬಳಿ ಇರುವ ದಿವಾನಖಾನೆಯಲ್ಲಿ ಸಭೆ ಸೇರುವರು. ಪ್ರತಿನಿಧಿಯನ್ನು ಚುನಾಯಿಸುವದಕ್ಕೆ ಮುಂಚಿತವಾಗಿ ಅವರು ಸಭೆಯಲ್ಲಿ ಸೂಚಿಸಿ ಚರ್ಚಿಸಬೇಕಾದ ಅಂಶಗಳಂ ನಿರ್ಧಾರ ಪಡಿಸಿಕೊಂಡು ಅದು ಸರಿಯಾಗಿ ಉಪಪಾದಿಸಿ ನಿಷ್ಪಕ್ಷಪಾತವಾದ ಅಭಿಪ್ರಾಯ ಕೊಟ್ಟು ಪ್ರಜಾಭಿಪ್ರಾಯದಂತೆ ವರ್ತಿಸಲಿಕ್ಕೆ ಶಕ್ತರಾಗಿರುವವರ್ಯಾರೆಂದು ಮುದಿಶಿ ನೋಡಿದರೆ ಚೆನ್ನಾಗಿರುವದೇ ಹೊರ್ತು ಯಾರನ್ನಾದರು ಚುನಾಯಿಸಿ ಅವರಿಗೆ ಪ್ರಜೆಗಳು ತಿಳಿಸಬೇಕೆಂಬ ವಿಷಯವು ಅನಭಿಮತವಾಗಿದ್ದು ಕೇವಲ ದಾಕ್ಷಿಣ್ಯಕ್ಕಾಗಿ ಹೋಗಿ ಬರಲಿಕ್ಕೆ ಒಡಂಬಟ್ಟರೆ ಆಗ ರೇಟ್ ಪೇಯರ್ಸ್‌ಗಳ ಉದ್ದೇಶಗಳೆಷ್ಟುಮಟ್ಟಿಗೆ ಸಫಲವಾಗಬಹುದೊ ಅದು ಅವರೇ ಆಲೋಚಿಸಬಹುದು. ಹೊಸದಾಗಿ ಚುನಾಯಿಸತಕ್ಕ ವಿಷಯದಲ್ಲಿಯೂ ಹಿಂದಿನ ಸಂವತ್ಸರಗಳಲ್ಲಿ ಕಳುಹಿಸಿದವರನ್ನೇ ಮರಳಿ ಕಳುಹಿಸಿದರೆ ಇದೊಂದು ಕೃತ ಸಂಕೇತವೆಂಬ ಭಾವನೆಯು ಅಧಿಕಾರಿಗಳಿಗೆ ತೋರಲಿಕ್ಕೂ ಅವರ ಮಾತುಗಳನ್ನುಪೇಕ್ಷಿಸಲಿಕ್ಕೂ ಕಾರಣವಾಗುವದಾಗಿ ಈ ವಿಷಯದ ಯುಕ್ತಾಯುಕ್ತವನ್ನು ಕಂದಾಯದಾರರೆಲ್ಲರೂ ಚೆನ್ನಾಗಿ ಪರಿಭಾವಿಸುವರೆಂದು ನಂಬುತ್ತೇವೆ.

The Government Boys' school.—ಇಲ್ಲಿನ ಗವರ್ನಮೆಂಟ್ ಕನ್ನಡ ಸ್ಕೂಲ್‌ವಿದ್ಯಾರ್ಥಿಗಳಿಗೆ ಮೊನ್ನೆಯದಿನ ಬೆಳಿಗ್ಗೆ ಇನಾಂಗಳು ಕೊಡಲ್ಪಟ್ಟವು. ಆಕಾಲದಲ್ಲಿ ಇನ್‌ಸ್ಪೆಕ್ಟರ್ ಮೆ॥ಗ್ರಿಯರ್ಸನ್‌ಯವರು ಹಾಜರಿದ್ದರು. ಇವಲ್ಲದೆ ಕೆಲವು ಜನ ನೇಟಿವ್ ದೊಡ್ಡ ಮನುಷ್ಯರು ಸಹ ಬಂದಿದ್ದರು. ಹೆಡ್ ಮ್ಯಾಸ್ಟರ್ ಮ॥ರಾ॥ ವೆಂಕಟ್ರಾಮಯ್ಯನವರು ಪಾಠಶಾಲಾಭಿವೃದ್ಧಿ ಸೂಚಕವಾದ ಸಾಂವತ್ಸರಿಕ ರಿಪೋರ್ಟನ್ನು ಓದಿದ ಬಳಿಕ ಕ್ರಮವಾಗಿ ಬಾಲಕರಿಗೆ ಇನಾಂಗಳು ಕೊಡಲ್ಪಟ್ಟವು. ಈಸಲದ ದೇಶೀಯ ಪರೀಕ್ಷೆಗೆ ಈ ಪಾಠಶಾಲೆಯಿಂದ ಸುಮಾರ್ ಹತ್ತು ಹನ್ನೆರಡು ಮಂದಿ ವಿದ್ಯಾರ್ಥಿಗಳು ಹಾಜರಾಗುವ ವೃದ್ಧೇಶದೊಡನೆ ಅವರೆಲ್ಲರೂ ದೃಢತರ ವ್ಯಾಸಂಗವಮಾಡುತಲಿರುವಂತೆಯೂ, ಅವರನ್ನೈಕಿ ಯಾರು ಮೊದಲನೆಯವರಾಗುವರೋ ಅವರಿಗೆ ಮೆ॥ ಗ್ರಿಯರ್ಸನ್‌ಯವರು ಇಪ್ಪತ್ತು ರೂಪಾಯಿಗಳ ಇನಾಂ ಕೊಡುವಂತೆ ವಾಗ್ದಾನ ಮಾಡಿರುತ್ತಾರೆಂತಲೂ, ಹೀಗೆಯೇ ಇನ್ನೂ ಅನೇಕರು ಪುಸ್ತಕರೂಪವಾಗಿಯೂ ಪದಾರ್ಥರೂಪವಾಗಿಯೂ ನಗದ್‌ರೂಪವಾಗಿಯೂ ಇನಾಂಗಳಂ ಕೊಡುವಂತೆವು ಕಟಪಡಿಸುತ ಪ್ರೋತ್ಸಾಹವನ್ನುಂಟುಮಾಡುತಿರುತ್ತಾರೆಯಾಗಿ ಕರ್ಣಾಟಭಾಷಾಭ್ಯಾಸದವಿಷಯದಲ್ಲಿ ಬಾಲಕರು ತಕ್ಕ ಅವಧಾನವನ್ನಿತ್ತು ಕೃಷಿಮಾಡಲಿಕ್ಕೆ ಇದೊಂದು ಒಳ್ಳೆಯಸಂದರ್ಭವೆಂದು ಹೇಳುವೆವು.

H. H. the Maharaja's departure.—ಶ್ರೀಮನ್ಮಹಾರಾಜರವರು ತಮ್ಮ ಪರಿವಾರದೊಡನೆ ಮೊನ್ನೆಯದಿನ ಬೆಳಿಗ್ಗೆ ೧೧॥ ಘಂಟೆಗೆ ಸ್ಪೆಷಿಯಲ್ ಟ್ರೈನಿನಲ್ಲಿ ರಾಜಧಾನಿಗೆ ಸವಾರಿ ಚಿತ್ತೈಸಿದರು. ಮಹಾರಾಜರವರ ನಿಷ್ಕ್ರಮಣಕಾಲದಲ್ಲಿ ಅವರ ಸಂದರ್ಶನ ಸಂಭಾಷಣಾಕಾಂಕ್ಷೆಯೊಡನೆ, ಪೂರ್ವಾಹ್ನಮೇಲೆ ಬ್ರಿಟಿಷ್ ರೆಸಿಡೆಂಟರಾದ ಜನರಲ್ ಸರ್‌ಹಾರಿ ಪ್ರೆಂಡರ್ ಗ್ಯಾಸ್ಟ್‌ಯವರು, ಅಸಿಸ್ಟೆಂಟ್ ರೆಸಿಡೆಂಟ್ ಮೆಸ್ಟರ್ ವೆದ್ದರ್‌ಬರ್ನ್‌ಯವರು, ಡಿವಿಜನ್ ಕಮಾಂಡಿಂಗ್ ಆಫೀಸರಾದ ಜನರಲ್ ರೌಲಾಂಡ್‌ಯವರು, ಚೀಫ್‌ಕೋರ್ಟ್ ಜಡ್ಜಿಗಳು, ಸೆಕ್ರೆಟರಿಗಳು, ಮ್ಯೂನಿಸಿಪಲ್ ವೈಸ್ ಪ್ರೆಸಿಡೆಂಟ್, ಮತ್ತು ಕಮಿಷನರ್‌ಗಳು ವಗೈರೆ ಬಹುಮಂದಿ ಯೂರೋಪಿಯನ್ ಮತ್ತು ನೇಟಿವ್ ದೊಡ್ಡಮನುಷ್ಯರು ಮಹಾರಾಜರವರ ಅನುಜ್ಞೆಯಂ ಪಡೆಯುವದಕ್ಕಾಗಿ ಸ್ಟೇಷನ್ ಪ್ಲಾಟ್‌ಫಾರಂನಲ್ಲಿ ಹಾಜರಿದ್ದರು. ಕ್ರಮಪ್ರಕಾರ ಗೌರವಾರ್ಥ ಸವಾರ್ಥಿಯ ಅರಮನೆಯಿಂದ ಸ್ಟೇಷನ್ ವರಿವಿಗೆ ಮಹಾರಾಜರವರನ್ನನುವರ್ತಿಸಿಹೋಯಿತು ಬ್ಯಾನ್ ಫೌಜಿನವರು ಸ್ಟೇಷನ್ ಹೊರಭಾಗದಲ್ಲಿ ಕಾದಿದ್ದು ಮಹಾರಾಜರವರ ಸವಾರಿ ಚಿತ್ತೈಸಿದ ಕಾಲದಲ್ಲಿ ಸೆಲ್ಯೂಟ್ ಮಾಡಿದರಲ್ಲದೆ ಮರ್ಯಾದಾರ್ಥ ೨೧ ತೋಪುಗಳು ಹಾಕಲ್ಪಟ್ಟವು. ಸ್ಟೇಷನಿನ ಹೊರ ಒಳಪಾರ್ಶ್ವಗಳಲ್ಲಿ ಸಂದರ್ಭೋಚಿತವಾಗಿ ಅಲಂಕರಿಸಲ್ಪಟ್ಟಿತ್ತು. ಪೋಲೀಸ್‌ನವರು ಇಂತಾಸಮಯಗಳಲ್ಲಿ ವಹಿಸಬೇಕಾದ ವಿಶೇಷ ಜಾಗರೂಕತೆಯೊಡನೆ ಬಂದೋಬಸ್ತಿಯಂ ಕಾಪಾಡಿದರು.

THE MYSORE GAZETTE.
ಮೈಸೂರು ಗೆಜೆಟ್.

ಶ್ರೀಮನ್ಮಹಾರಾಜ ರಾಜಶ್ರೀಸಾಹೇಬ್ ಬಹದೂರವರ ದಿವಾನರವರಿಂದ ಕೊಡಲ್ಪಟ್ಟ ಇಸ್ತಿಹಾರ್‌ನಾಮೆಗಳು.

ನಂ. ೧೧೩ ತಾ ೨೮ನೇ ಆಗಸ್ಟು ೧೮೮೮—ಕಡೂರು ಡಿಸ್ಟ್ರಿಕ್ಟು ಅಸಿಸ್ಟೆಂಟ್ ಕಮಿಷನರ್ ಮೆ॥ ಬಿ. ಜಿ. ಕೃಷ್ಣಯ್ಯಂಗಾರ್ರವರಿಗೆ ಬರುವ ತಿಂಗಳ ೧೧ನೇ ತಾರೀಖ್‌ಲಾಗಾಯಿತು ಅಥವಾ ಅವರುಪಯೋಗಿಸಿಕೊಳ್ಳುವ ತಾರೀಖ್‌ಮೊದಲು ಎರಡುತಿಂಗಳ ಪ್ರಿವಿಲೇಜ್‌ರಜಾ ಕೊಡಲ್ಪಟ್ಟಿರುತಿದೆ.

ನಂ. ೧೨೦, ತಾ॥ ೩೧ನೇ ಆಗಸ್ಟು ೧೮೮೮—ಇದರಡಿಕಂಡ ಬೆಂಗಳೂರು ಷಹರ್ ಮ್ಯೂನಿಸಿಪಲ್ ಕಮಿಷನರ್‌ಗಳ ಉದ್ಯೋಗ ಕಾಲವನ್ನು ಚಾಲ್ತೀ ಸರ್ಕಾರ್ ಸಾಲಿನ ಆಖೈರ್‌ವರಿವಿಗೆ ಇನ್ನೂ ಜಾಸ್ತೀ ಮಾಡಲಿಕ್ಕೆ ದಿವಾನರವರು ಮಂಜೂರ್ಮಾಡಿರುತ್ತಾರೆ.

೧. ಬಳೇಪೇಟೆ ಡಿವಿಜನ್	ಮೆ॥ಮರಿಲಿಂಗಯ್ಯನವರು.	
	ಮೈಎಸ್ ರಾಘವಾಚಾರ್ಯರವರು.	
೨. ಮನವಾರ್ತೆಪೇಟೆ	,, ಮೆ॥ಖಾಜಿಬಿದ್‌ಷಾ ಸಾ॥ರು	
	ಮೆ॥ಮಂಡಿ ಮರಿಯಣ್ಣನವರು.	
೩. ಹಲಸೂರುಪೇಟೆ	,, ಮೆ॥ಅಣ್ಣಯ್ಯಪ್ಪಶೆಟ್ಟರವರು.	
	ಮೆ॥ಬೆಂಗಳಾಪ್ರಮುದಲಿಯಾರ್	
೪. ನಗರ್ತಪೇಟೆ	,, ಮೆ॥ಬಿ. ನಾರಾಯಣಶೆಟ್ಟರವರು.	
	ಮೆ॥ಮೊ॥ವೆಂಕಟರಮಣಶೆಟ್ಟರು.	
೫. ಕಲಾಸಿಪಾಳ್ಯ	,, ಮೆ॥ರಾಮಸ್ವಾಮಿಶೆಟ್ಟರವರು.	
೬. ಫೋರ್ಟ್	,, ಮೆ॥ಜಿ. ಕ್ಯಾಮರಾಯವರು.	

ನಂ.—೧೨೧—ಚಿಕ್ಕನಾಯಕನಹಳ್ಳಿ ತಾಲ್ಲೂಕು ಅಮಲ್‌ದಾರ್ ಶ್ರೀಕಂಠಯ್ಯನವರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖ್ ಲಾಗಾಯಿತು ಇಪ್ಪತ್ತು ದಿನಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿರುತಿದೆ. ಹುಳಿಯಾರದ ಡೆಪ್ಯುಟಿ ಅಮಲ್‌ದಾರ್ ಶೀತಾರಾಮಯ್ಯನವರು ಶ್ರೀಕಂಠಯ್ಯನವರ ಗೈರ್‌ಹಾಜರಿಯಲ್ಲಿ ಅಥವಾ ಮತ್ತೊಂದು ಹುಕುಂ ಕೊಡಲ್ಪಡುವ ತನಕ ಸದರೀ ತಾಲ್ಲೂಕ್‌ಚಾರ್ಜಿನಲ್ಲಿರತಕ್ಕದ್ದು.

ನಂ. ೧೨೪—ತಾ॥ ೨೩ನೇ ಆಗಸ್ಟು ೧೮೮೮ ತುಮಕೂರ್ ಡಿಸ್ಟ್ರಿಕ್ಟು ಫಸ್ಟ್‌ಕ್ಲಾಸ್ ಪೋಲೀಸ್ ಇನ್ಸ್‌ಪೆಕ್ಟರ್ ನಾಗೇಶ್ವರಯ್ಯನವರು, ತಿರುನಾರಾಯಣ್ಯಂಗಾರ್ರವರ ವಗೈರೆ ಹಾಜರಿಯಲ್ಲಿ ಅಥವಾ ಮತ್ತೊಂದು ಹುಕುಂ ಕೊಡಲ್ಪಡುವ ತನಕ ಕೊರಟಗೆರೆ ಸಬ್ ತಾಲ್ಲೂಕ್ ಡೆಪ್ಯುಟಿ ಅಮಲ್‌ದಾರ್ ವ ಮೂರನೇಕ್ಲಾಸ್ ಮ್ಯಾಜಿಸ್ಟ್ರೇಟರಾಗಿ ಆಕ್ಟಿಂಗ್ ತರೀಕ್ ಮೊಕರರ್ಮಾಡಲ್ಪಟ್ಟಿರುತ್ತಾರೆ.

ನಂ. ೧೧೬—ಪೋಲೀಸ್ ಅಸಿಸ್ಟೆಂಟ್ ಕಮಿಷನರ್ ಮೆ॥ ಮಹಮುದಲ್ಲೀಯವರು ಮಾಹೇ ಮಜಕೂರ್ ೨೦ನೇ ತಾರೀಖಿನ ದಿನ ಬೆಳಗ್ಗೆ ತುಮಕೂರ್ ಡಿಸ್ಟ್ರಿಕ್ಟು ಪೋಲೀಸ್ ಆಫೀಸ್ ಚಾರ್ಜನ್ನು ಜನರಲ್ ಅಸಿಸ್ಟೆಂಟ್ ಕಮಿಷನರ್ ಮೆ॥ ಪುಟ್ಟಣ್ಣ ರಾಯರವರಿಗೆ ಒಪ್ಪಿಸಿರುತ್ತಾರೆ.

ನಂ. ೧೧೮,—ತಾ॥ ೩೦ನೇ ಆಗಸ್ಟು ೮೮. ಶ್ರೀರಂಗಪಟ್ಟಣದ ಡೆಪ್ಯುಟಿ ಅಮಲ್‌ದಾರ್ ಮಾಧವರಾಯರವರು ರಜಾಮೇಲಿರುವ ಮಿಯರ್ ಕಮಾಲುದ್ದೀನ್ ಅಲ್ಲೀಖಾನರ ಗೈರ್‌ಹಾಜರಿಯಲ್ಲಿ ಅಥವಾ ಮತ್ತೊಂದು ಹುಕುಂ ಕೊಡಲ್ಪಡುವ ತನಕ ಹುಣಸೂರು ಅಮಲ್‌ದಾರ್ ವ ೩ನೇಕ್ಲಾಸ್ ಮ್ಯಾಜಿಸ್ಟ್ರೇಟರಾಗಿ ಆಕ್ಟಿಂಗ್ ತರೀಕ್ ಮೊಕರರ್ಮಾಡಲ್ಪಟ್ಟಿರುತ್ತಾರೆ. ರೆವಿನ್ಯೂ ಪ್ರೊಬೇಷನರ್ ಕೃಷ್ಣೇ ಅರಸಿನವರು ಮಾಧವರಾಯರವರ ಗೈರ್‌ಹಾಜರಿಯಲ್ಲಿ ಅಥವಾ ಮತ್ತೊಂದು ಹುಕುಂ ಕೊಡಲ್ಪಡುವ ತನಕ ಶ್ರೀರಂಗಪಟ್ಟಣದ ಡೆಪ್ಯುಟಿ ಅಮಲ್‌ದಾರ್ ವ ಮೂರನೇಕ್ಲಾಸ್ ಮ್ಯಾಜಿಸ್ಟ್ರೇಟರಾಗಿ ಆಕ್ಟಿಂಗ್ ತರೀಕ್ ಮೊಕರರ್ಮಾಡಲ್ಪಟ್ಟಿರುತ್ತಾರೆ.

ನಂ. ೧೧೯—ತಾ॥ ೩೦ನೇ ಆಗಸ್ಟು ೧೮೮೮. ಸನ್೧೮೮೮ನೇ ಇಸವಿ ಜೂನ್‌ತಿಂಗಳಲ್ಲಿ ನಡೆದ ಲೋಕಲ್ ಸರ್ವಿಸ್ ಪರೀಕ್ಷೆಗಳಲ್ಲಿ ಕ್ರಿಮಿನಲ್ ಮತ್ತು ರೆವಿನ್ಯೂ ಭಾಗಗಳೆರಡರಲ್ಲಿಯೂ ಸೇರಿ ಒಟ್ಟು ೨೫ಜನಗಳು ತೇರ್ಗಡೆಯಾಗಿರುತ್ತಾರೆ.

SUMMARY OF NEWS.
ವೃತ್ತಾಂತ ಸಂಗ್ರಹ.

ಕಳೆದವಾರದಲ್ಲಿ ಕಲ್ಕತ್ತೆಯ ಸಮೀಪದಲ್ಲಿ ಒಬ್ಬ ಮ್ಯಾಜಿಸ್ಟ್ರೇಟರು ಒಂದು ಮೊಕದ್ದಮೆಯಲ್ಲಿ ಒಬ್ಬ ಘೋಷಾ ಹೆಂಗಸು ಸಾಕ್ಷಿಹೇಳಬೇಕಾಗಿದ್ದದರಿಂದ ಆಕೆಯು ಕೋರ್ಟಿಗೆ ತಾನು ಬರುವದಕ್ಕೆ ಆಗುವದಿಲ್ಲವೆಂದು ಎಷ್ಟುಹೇಳಿದಾಗ್ಯೂ ಕೇಳದೆ ಮ್ಯಾಜಿಸ್ಟ್ರೇಟರು ಆಕೆಗೆ ತುಂಬಾ ಅವಮಾನ ಮಾಡಿದ್ದರಿಂದ ಇದು ಹೈಕೋರ್ಟ್ ಜಡ್ಜಿಯವರಿಗೂ ತಿಳಿದು ಅವರು, ಮ್ಯಾಜಿಸ್ಟ್ರೇಟರವರು ಘೋಷಾ ಪದ್ಧತಿಗೆ ವಿರೋಧವಾಗಿ ನಡೆದದ್ದು ಅಕ್ರಮವಾಗಿರುತ್ತೆ. ಮುಂದೆ ಇಂಥಾ ಅಕ್ರಮವನ್ನು ನಡೆಸದೆ ಪೂರ್ವದ ಪದ್ಧತಿಗೆ ನಿಗಾಕೊಡತಕ್ಕದ್ದು ಪ್ರತಿಯೊಬ್ಬ ಮ್ಯಾಜಿಸ್ಟ್ರೇಟರಿಗೂ ಅವಶ್ಯಕವೆಂದು ಸರ್ಕ್ಯುಲರ್ ಕೊಡಿಸಿದರು.

ಇಂಡಿಯಾದೇಶದಿಂದ ಒಬ್ಬ ದೊಡ್ಡಮನುಷ್ಯನು ಬ್ಯಾರಿಸ್ಟರ್‌ಪರೀಕ್ಷೆಕೊಡುವದಕ್ಕಾಗಿ ತಂದೆ ತಾಯಿಗಳ ಸಮ್ಮತಿಯಿಂದ ವಿಲಾಯತಿಗೆಹೋದನು. ದಯಾಳುವಾದ ತಂದೆಯು ಪ್ರತಿ ತಿಂಗಳಲ್ಲಿಯೂ ಮಗನಿಗೆ ಖರ್ಚಿಗೆ ಸಾಕಾದಷ್ಟು ಹಣವನ್ನು ಕಳುಹಿಸಿಕೊಡುತ್ತಿದ್ದನು. ಮಗನು ತನ್ನ ಕೊನೇಕಾಗದದಲ್ಲಿ ತಂದೆ ಕಳುಹಿಸಿಕೊಟ್ಟ ಹಣವೆಲ್ಲವು ತಲಪಿದವೆಂತಲೂ ಅದರಿಂದ ಎಲ್ಲಾ ಪರೀಕ್ಷೆಯಲ್ಲಿಯೂ ತೇರ್ಗಡೆಯಾದೆನೆಂತಲೂ ಮತ್ತು ಅಲ್ಲಿನ ಇಂಗ್ಲಿಷ್ ಹೆಂಗಸರುಗಳ ಸ್ನೇಹವನ್ನು ಸಂಪಾದಿಸಬೇಕಾಗಿರುವದ್ದರಿಂದ ಅವರ ಮನಸ್ಸಿನಂತೆ ತನ್ನ ಉದಾರಭಾವವನ್ನು ತೋರಿಸಿ ಅವರ ಮನಸ್ಸನ್ನು ತಾನುಸೆಳೆಯಬೇಕಾಗಿರುವದ್ದರಿಂದ ೫ ಸಾವಿರರೂಪಾಯಿಗಳನ್ನು ಕಳುಹಿಸಬೇಕೆಂತಲೂ ಬರೆದಿದ್ದನೆಂಬದಾಗಿ ಒಂದು ಇಂಗ್ಲಿಷ್‌ಪತ್ರಿಕೆಯಿಂದ ತಿಳಿಯಬರುತ್ತದೆ.

ಬಾಂಕೂರ್‌ಪಟ್ಟಣದಲ್ಲಿ ಈಚೆಗೆ ಒಂದು ಕ್ರೂರವಾದ ಕೊಲೆಯು ನಡೆದಿತೆಂಬದಾಗಿ ಒಬ್ಬ ಬಾತಮಿದಾರನಿಂದ ತಿಳಿಯಬರುವದೇನಂದರೆ,— ಅಲ್ಲಿನ ಸಬ್‌ಜಡ್ಜಿ ಕೋರ್ಟಿನಲ್ಲಿ ರೈಟರ್‌ಕೆಲಸವನ್ನು ನೋಡುತಿದ್ದ ಬಲಭದ್ರ ಎಂಬವನು ವೃಸನ್ನಯೆಂಬ ಒಬ್ಬ ವೇಶ್ಯೆಯೊಡನೆ ಸ್ನೇಹಮಾಡಿಕೊಂಡಿದ್ದನು. ಈವಿಷಯವು ಸಬ್‌ಜಡ್ಜಿಯವರಿಗೆ ತಿಳಿಯಬಂದದ್ದರಿಂದ ವ್ಯಾಜಾಂತರದಿಂದ ಆತನನ್ನು ತಮ್ಮ ಆಫೀಸಿನಿಂದ ಡಿಸ್ಮಿಸ್‌ಮಾಡಿದ್ದರು. ಇದನ್ನು ತಿಳಿದು ಇವನಪ್ರಿಯಳು ಇವನನ್ನು ವಜಾಮಾಡಿದ್ದಳು. ಈತನಿಗೆ ಈ ಎರಡುವಿಷಯಗಳೂ ಏಕಕಾಲದಲ್ಲಿ ಸಂಭವಿಸಿದ್ದರಿಂದ ಅತ್ಯಂತ ಕುಪಿತನಾಗಿ ಕಾಲವನ್ನು ನಿರೀಕ್ಷಿಸಿಕೊಂಡಿದ್ದು ಒಂದುದಿವಸ ಪ್ರಾತಃಕಾಲ ಒಂದುಕೊಳದಲ್ಲಿ ತನ್ನ ಪೂರ್ವದಸ್ನೇಹಿತೆಯು ತಪಲೇ ಚೆಂಬುಗಳನ್ನು ತೊಳೆಯುತ್ತಿರುವದನ್ನುನೋಡಿ ತತ್‌ಕ್ಷಣವೇ ಒಂದುಕೊಡ್ಲಿಯನ್ನು ತೆಗದುಕೊಂಡು ಬಂದು ಆಕೆಗೆ ತಿಳಿಯದಂತೆ ಬಲಭುಜದಮೇಲೆ ಹೊಡೆದನು. ಕೂಡಲೆ ಅವಳು ಘಟ್ಟಿಯಾಗಿ ರೋದನಮಾಡಿದ್ದರಿಂದ ತನ್ನಮನೋರಥವನ್ನು ಭಂಗಮಾಡುವದಕ್ಕೆ ಯಾರಾದರೂಬಂದಾರೆಂದು ಜಾಗ್ರತೆಯಾಗಿ ಆಕೆಯಕತ್ತನ್ನುಕತ್ತರಿಸಿ ತಲೆಯನ್ನು ತೆಗದುಕೊಂಡು ಸಬ್ ಜಡ್ಜಿಯವರಕೋರ್ಟಿಗೆಹೋಗಿ ಆತಲೆಯನ್ನು ಸರ್ಕಾರದಮುಂದೆ ಇಟ್ಟು ನನ್ನನ್ನೇನುಬೇಕಾದರೂ ಮಾಡಬಹುದೆಂದು ಮನಃಪೂರ್ವಕವಾಗಿ ತನ್ನ ದೇಹವನ್ನುಸರ್ಕಾರದವರಿಗೆ ಒಪ್ಪಿಸಿದನು.

ಮದರಾಸ್ ಪ್ರೆಸಿಡೆನ್ಸಿಗೆ ಸೇರಿದ ತಾಲ್ಲೂಕುಗಳ ತಹಸಿಲ್‌ದಾರ್‌ಗಳ ಸಂಬಳಗಳನ್ನು ಈಗಿನ ಪರಿಮಾಣಕ್ಕಿಂತಲೂ, ಸಾಲೀಯಾನಾ ೧೨,೬೦೦ ರೂಪಾಯಿಗಳ ಖರ್ಚಿನಿಂದ ಜಾಸ್ತೀ ಮಾಡಬೇಕೆಂದು ಮದರಾಸ್ ಗವರ್ನ್‌ಮೆಂಟಿನವರು ಮಾಡಿದ ಶಿಫಾರಸ್ಸನ್ನು ಇಂಡ್ಯ ಗವರ್ನ್‌ಮೆಂಟಿನವರು ಇಂಡ್ಯ ಸ್ಟೇಟ್ ಸೆಕ್ರೆಟರಿಯವರಿಗೆ ಕಳುಹಿಸಲು ಈಗಿನ ಅರ್ಥಾನುಪಪತ್ತಿಯನ್ನು ಯೋಚಿಸಲಾಗಿ, ಸುತರಾಂ ತಪ್ಪಿಸಬಹುದಾದ ಅಥವಾ ಮುಂದಕ್ಕೆ ನಿಲ್ಲಿಸಬಹುದಾದ ಯಾವಜಾಸ್ತೀ ಖರ್ಚನ್ನಾಗಲಿ ಮಂಜೂರ್ಮಾಡುವದಕ್ಕೆ ಆಗುವದಿಲ್ಲವು, ಮತ್ತು ಮದರಾಸ್ ಗವರ್ನ್‌ಮೆಂಟಿಗೆ ಸೇರಿದ ತಹಸಿಲ್‌ದಾರ್‌ಗಳಸಂಬಳಗಳನ್ನು ಸದ್ಯಃ ಜಾಸ್ತೀ ಮಾಡಬೇಕಾದ ಯಾವ ಆವಶ್ಯಕತೆಯೂ ತೋರಲಿಲ್ಲವು, ಎಂದು ಸ್ಟೇಟ್ ಸೆಕ್ರೆಟರಿಯವರು ಜವಾಬ್ ಕೊಟ್ಟಿರುತ್ತಾರೆ.

ಪುನೇಯಲ್ಲಿ ನಡೆಯುವದಾಗಿರುವ ವಿವಿಧವಸ್ತುಪ್ರದರ್ಶನಕ್ಕೆ ಬರಬೇಕಾದ ವಸ್ತುಗಳೆಲ್ಲ ಕಳೆದತಿಂಗಳ ೩೧ನೇ ತಾರೀಖಿನೊಳಗಾಗಿ ಬಂದು ಸೇರಬೇಕೆಂದು ಅದಕ್ಕೆ ಏರ್ಪಟ್ಟಿರುವ ಕಮಿಟಿಯವರು ನಿರ್ಣಯಿಸಿದ್ದರು. ಪರಂತು ಅಷ್ಟು ಕಾಲಾವಕಾಶವು ಸಾಲದೆಂದು ಸದರೀ ಕಮಿಟಿಯವರಿಗೆ ತಿಳಿಸಲ್ಪಡಲು ಅವರು ಅದನ್ನು ಈ ತಿಂಗಳ ೧೫ನೇ ತಾರೀಖ್‌ವರಿವಿಗೆ ಬಢಾಯಿಸಿರುತ್ತಾರೆ. ಈ ಪ್ರದರ್ಶನವನ್ನು ಬರುವ ಅಕ್ಟೋಬರ್ ತಿಂಗಳ ಗುರ್ರೇತಾರೀಖಿನಲ್ಲಿ ಪ್ರಾರಂಭಿಸಬೇಕೆಂದು ಏರ್ಪಾಟಾಗಿರುತಿದೆ.

ಮದ್ರಾಸ್ ಕೋಟೆಗೆ ಸೇರಿದ ಮಾಯಾವರಂ ಎಂಬ ಊರಿನಲ್ಲಿ, ಕೆಲವು ದಿನಗಳಕೆಳಗೆ ಒಬ್ಬ ಉಪಾಧ್ಯಾಯನು, ಪೇಟೆಯಲ್ಲಿರುವ ಅಂಗಡಿಕಾರರ ಸಂಗಡ ಸಂಭಾಷಣೆಯು ನಡೆದು, ತನ್ನ ಜಠರಾಗ್ನಿಯ ಶಕ್ತಿಯು (ಜೀರ್ಣಶಕ್ತಿ) ವಿಶೇಷವಾದದ್ದೆಂತಲೂ, ಪರೀಕ್ಷಕರು ತನಗೆ ೫ ರೂಪಾಯಿ ಕೊಟ್ಟರೆ ಒಂದು ಹಲಸಿನ ಹಣ್ಣನ್ನು ಪೂರಾ ತಿಂದುಹಾಕಿ ದೃಷ್ಟಾಂತವನ್ನು ತೋರಿಸುವೆನೆಂತಲೂ ತನ್ನ ಅಭಿಪ್ರಾಯವನ್ನು ಸೂಚಿಸಿದನು. ಪರೀಕ್ಷಕರು ಅಂತಾ ಬಹುಸಂತೋಷಪೂರ್ವಕವಾಗಿ ಒಪ್ಪಿಕೊಂಡು, ೧ ರೂಪಾಯಿಗೆ ಒಂದು ದೊಡ್ಡ ಹಣ್ಣನ್ನ ಕೊಂಡುತಂದು ಅದನ್ನು ಉಪಾಧ್ಯಾಯನ ಮುಂದಿಟ್ಟರು. ಆತನು ಅದು ಸ್ವಲ್ಪ ಹೊತ್ತಿನಲ್ಲೇ ಭುಂಜಿಸಿ, ೫ರೂಪಾಯಿ ತೆಗದುಕೊಂಡು ಸಂತೋಷವಾಗಿ ಮನೆಗೆ ಹೋದನು. ಒಂದು ಘಂಟೆಯ ತರುವಾಯ ಹೊಟ್ಟೇನೋವು ಪ್ರಾರಂಭವಾಗಿ ಇದರ ಸಂಕಟದಿಂದ ಆತನು ತತ್‌ಕ್ಷಣ ಮೃತಪಟ್ಟನು. ಹೊಟ್ಟೇಬಾಕತನಕ್ಕೆ ತಕ್ಕ ಫಲವಲ್ಲವೇ?

ಕಾಶ್ಮೀರನಗರ ಸಂಸ್ಥಾನದವರು ಬಹುಕಾಲವಾಗಿ ಸಾಲ ಮಾಡುತ ಬಂದು ಅದು ಈಗ ೨೭ ಲಕ್ಷರೂಪಾಯಿಗಳವರಿವಿಗೆ ವೃದ್ಧಿಯಾಗಿಬಿಟ್ಟಿರುತಬರುವದರಿಂದ ಸದರೀ ಜಮೀನ್ದಾರರವರು, ಸದರೀ ಸಾಲ ತೀರುವವರೆಗೆ ತಮ್ಮ ಜಹಗೀರ್ ವಿಚಾರಣೆಯನ್ನು ಕೈಗೊಳ್ಳಬೇಕೆಂದು ಉತ್ತರ ಆರ್ಕಾಟು ಕಲೆಕ್ಟರವರ ಮೂಲಕ ಕಳೆದ ಏಪ್ರಿಲ್ ತಿಂಗಳಲ್ಲಿ ಮದರಾಸ್ ಗವರ್ನ್‌ಮೆಂಟಿಗೆ ಬರೆದುಕೊಂಡರು. ಸದರೀ ಅರ್ಜಿಗೆ ಪೋಷಕವಾಗಿ ಕಲೆಕ್ಟರವರು ಗವರ್ನ್‌ಮೆಂಟಿಗೆ ತಿಳಿಸುವದೇನಂದರೆ,—ಮದರಾಸ್ ಪ್ರೆಸಿಡೆನ್ಸಿಗೆ ಸೇರಿದ ಉತ್ತಮವಾದ ಜಮೀನ್ದಾರಿಗಳಲ್ಲೊಂದಾಗಿರುವ ಇದರ ವಿಚಾರಣೆಯನ್ನು ಕ್ರಮವಾಗಿ ನಡೆಸಿದರೆ ಅದು ಸಾಲಗಾರರಿಂದ ತುಂಡುತುಂಡಾಗಿ ಹರಾಜ್ ಹಾಕಿಸಲ್ಪಡದೆ, ಈಸ್ಥಿತಿಯಲ್ಲೂ ಉಳಿಸಲ್ಪಡಬಹುದು. ಈ ಜಮೀನ್ದಾರರಾದರೋ ಪುರಾತನವಾದ ರಾಜವಂಶಕ್ಕೆ ಸೇರಿದವರು, ಅಂಥವರನ್ನು ಉದ್ಧಾರಮಾಡಿದಂತೆ ಆಗುವದು. ಪ್ರಕೃತ ಜಮೀನ್ದಾರರು ಯೆಚ್ಚರಮಟ್ಟಿಗೂ ಸಾಲಮಾಡಿದವರಲ್ಲವು. ತಮ್ಮ ತಂದೆಯ ಕಾಲಾನಂತರ ಅಧಿಕಾರವಿಗೆ ಬಂದವರು, ಎಂಬದು. ಮೇಲೆ ನಮೂದಿಸಲ್ಪಟ್ಟ ಕಲೆಕ್ಟರವರ ಸಲಹೆಯನ್ನು ಅಂಗೀಕರಿಸುವದಕ್ಕೆ ಸಾಧ್ಯವಾಗುವದಿಲ್ಲವೆಂದು ಗವರ್ನ್‌ಮೆಂಟಿನವರು ಕಲೆಕ್ಟರವರಿಗೆ ತಿಳಿಸಿಯಿರುತ್ತಾರೆ.

ರುಕ್ಮಾಬಾಯಿ ಎಂಬ ಬಂಗಾಳಾದೇಶದ ಒಬ್ಬ ಸ್ತ್ರೀಯು, ಮದ್ರಾಸಿನೊಳ್ ಪ್ರಕಟವಾಗುತ್ತಲಿರುವ ಒಂದು ಇಂಗ್ಲಿಷ್ ವರ್ತಮಾನ ಪತ್ರಿಕೆಗೆ ಬಾಲ್ಯ ವಿವಾಹವನ್ನು ಕುರಿತು ಇದರಡಿ ಕಂಡಂತೆ ತನ್ನ ಅನುಭವಪೂರ್ವಕವಾದ ಅಭಿಪ್ರಾಯವನ್ನು ಬರೆದಿದ್ದಾಳೆ. ವಿವರ:—"ಅಯ್ಯಾ ಪತ್ರಿಕಾಕರ್ತರೇ, ನೀವು ಹಿಂದೂ ಕುಟುಂಬಗಳಲ್ಲಿ ಹುಡುಕಿ ನೋಡಿದರೆ, ನನ್ನಂತಾ ಸ್ಥಿತಿಯಲ್ಲಿರುವ ಸಾವಿರಾರು ಹುಡಿಗಿಯರನ್ನು ಕಾಣುವಿರಿ. ತಾಯಿ ತಂದೆಗಳೇ ಹಿಂದೂಗಳಲ್ಲಿ ತಮ್ಮ ಇಷ್ಟಾನುಸಾರ ವಧೂವರರನ್ನು ಆರಿಸಿ, ವಿವಾಹದ ಏರ್ಪಾಡುಗಳನ್ನು ಮಾಡುತ್ತಾರೆಂಬುವದು, ನಿಮಗೂ ವಾಚಕರಿಗೂ ತಿಳಿದೇ ಇದೆ. ವಿವಾಹವಿಷಯದೊಳ್ ವಧೂವರರು ಒಂದು ಮಾತನ್ನಾದರೂ ಆಡುವ ಸ್ವಾತಂತ್ರ್ಯವನ್ನು ಉಳ್ಳವರಾಗಿರುವದಿಲ್ಲ. ಹೆಣ್ಣು ಗಂಡಿನ ಈಡು, ಜೋತೆ ಈ ಮೊದಲಾದವುಗಳು ಸಮಾನವಲ್ಲದವುಗಳಾಗಿ ಹಿಮಕಾಲ ವಸಂತಕಾಲಗಳು, ಅಜ್ಞಾನಜ್ಞಾನಗಳು, ಸರಸತೆ ವಿರಸತೆಗಳು ಒಂದಾಗಿಸೇರಿಕೊಳಿಸಿದಂತಾಗುವವು. ತಾಯಿತಂದೆಗಳಕೈಯಲ್ಲಿರುವ ವಿವಾಹದ ಅಧಿಕಾರವನ್ನು ಅವರು ದುರುಪಯೋಗ ಪಡಿಸುತ್ತಾರೆ. ಅವರು ವ್ಯಸನ,ದುಃಖ, ಕಷ್ಟ ಈ ಮೊದಲಾದವುಗಳಿಂದಕೂಡಿರುವ ಭೂಲೋಕದಲ್ಲಿ, ತಮ್ಮ ಮಕ್ಕಳಿಗೆ ಅಧಿಕವಾದ ಸುಖ ಸಂತೋಷಗಳನ್ನುಂಟು ಮಾಡಬೇಕೆಂದು ಈ ರೀತಿ ಮಾಡಿದರೂ, ತಮ್ಮ ತಿಳಿಗೇಡಿತನದಿಂದ ವಧೂವರರಿಗೆ ಸಂಭವಿಸುವ ಕಷ್ಟಗಳನ್ನು ಕುರಿತು ಯೋಚಿಸುವದಿಲ್ಲ. ಮದುವೆಗಳಲ್ಲಿ ಅತ್ಯಧಿಕವಾದ ಧನಾಪೇಕ್ಷೆಯೇ ವಿವಾಹಜನ್ಯವಾದ ಸೌಖ್ಯಕ್ಕೆ ವಿಘ್ನಪ್ರಾಯವಾಗಿದೆ. ನನ್ನ ವಿಷಯವನ್ನು ನಾನು ತಿಳುಹಿಸುತ್ತೇನೆ, ಮಂದಮತಿಗಳಾದ ನನ್ನ ತಾಯಿ ತಂದೆಗಳು, ನಿರಕ್ಷರ ಕುಕ್ಷಿಗಳಾದ ಸಹೋದರರು ಸಹ ನನ್ನನ್ನು, ಅಸಹ್ಯಕರವಾದಂತಾ ರೋಗಪೀಡಿತನಾದ ಒಬ್ಬ ನಿರ್ಭಾಗ್ಯನಿಗೆ ೧೦೦ ರೂಪಾಯಿಗಳ ಕನ್ಯಾಶುಲ್ಕಕ್ಕೆ ಮಾರಿಬಿಟ್ಟರು. ಇವನಮುಖ ದರ್ಶನ ಮಾಡುವದೇ ನನಗೆ ಅಸಹ್ಯವಾಗಿದೆ. ಇವನನ್ನು ನೋಡಲಾರದ ಸಂಕಟದಿಂದ, ನಾನು ಆತ್ಮಹತ್ಯವು ಮಾಡಿಕೊಳ್ಳಬೇಕೆಂದು ಅನೇಕಸಾರಿ ಪ್ರಯತ್ನಪಟ್ಟೆನು."

ಇಂಡಿಯಾ ದೇಶದ ವೃತ್ತಾಂತಪತ್ರಿಕಾಧಿಪರಂ ಕುರಿತು «ಅಮೃತಬಜಾರ್" ಪತ್ರಿಕೆಯು ತಿಳುಹಿಸುತ್ತದೇನಂದರೆ:—

ವರ್ತಮಾನ ಪತ್ರಿಕಾಕರ್ತರ ಕೆಲಸವು ಲೋಕೋಪಕಾರವಾಗಿಯೂ, ತಿದ್ದುಪಾಟುಗಳನ್ನುಂಟು ಮಾಡತಕ್ಕದ್ದಾಗಿಯೂ ಇದೆ. ಇಂಡಿಯಾದಲ್ಲಿರುವ ೨೫ ಕೋಟಿ ಪ್ರಜೆಗಳು ತಮ್ಮ ಪಾಲಕರ ಅವಶ್ಯತೆಗಳನ್ನು ಕುರಿತು ವಿಚಾರಮಾಡುವದಿಲ್ಲ. ಆದರೆ ಸ್ವದೇಶ ಪತ್ರಿಕೆಗಳು ಅಂತಾ ಕರ್ತವ್ಯವು ಕೈಗೊಂಡು ಪಾಲ್ಯಪಾಲಕರಿಬ್ಬರ ಕಾರ್ಯ ಭಾಗಗಳನ್ನೂ ಕುರಿತು ಗುಣದೋಷ ವಿಚಾರಗಳಂ ಮಾಡುತ್ತವೆ. ಲಕ್ಷಾಂತರ ಜನರು ಪರಾಯಿ ದೇಶಸ್ಥರ ಕಾನೂನುಗಳಿಗೂ ಆಜ್ಞೆಗೂ ಒಳಪಟ್ಟಿದ್ದಾರೆ. ವರ್ತಮಾನ ಪತ್ರಿಕಾಧ್ಯಕ್ಷರು ಮಾತ್ರವೇ ಪ್ರಜೆಗಳ ದುಃಖ ಸಂಕಟಗಳನ್ನು, ಪಾಲಕರ ಗಮನಕ್ಕೆ ಬರುವಹಾಗೆ ಪ್ರಕಟಿಸುವರು. ಇತರ ದೇಶಗಳಲ್ಲಿ ಪ್ರಜೆಗಳ ಸ್ವಾತಂತ್ರ್ಯವು ಸ್ಥಾಪಿಸಲು ಜನರು ಹೇಳತೀರದ ಕಷ್ಟಗಳನ್ನು ಅನುಭವಿಸುತಿದ್ದಾರೆ. ಇಂಗ್ಲಾಂಡ್ ರಾಜ್ಯದಲ್ಲಿ ಈ ವಿಷಯಕ್ಕಾಗಿ ರಕ್ತದಕೋಡಿಗಳು ಹರಿದವು. ರಷ್ಯಾದೇಶದಲ್ಲಿ «ನಿಹಿಲಿಸ್ಟ್" ಎಂಬ ಜನರು ಒಬ್ಬೊಬ್ಬರಾಗಿ ತಮ್ಮ ಪ್ರಾಣಗಳಂ ಕೊಡುತಿದ್ದಾರೆ, ಐರ್‌ಲ್ಯಾಂಡ್ ದೇಶದಲ್ಲಿ 'ಡಿಲಿಯರ್ಸ್ ಮತ್ತು ಓಬ್ರಿಯರ್ಸ್ "ಎಂಬ ಸಂಘದ ಜನರು ತಮ್ಮ ದೇಶದ ಕ್ಷೇಮಕ್ಕಾಗಿ ನಿರ್ವಚನೀಯವಾದ ಶ್ರಮಗಳನ್ನು ಅನುಭವಿಸುತಿದ್ದಾರೆ. ಆದರೆ ಇಂಡಿಯಾದಲ್ಲಿ ಪ್ರಜೆಗಳ ದುಃಖಗಳನ್ನು ಪ್ರಚುರಗೊಳಿಸಿ, ಅವರಿಗೋಸ್ಕರ ಲಿಖಿತಮೂಲಕವಾಗಿ ಹೊಡೆದಾಡುವ ಭಾರವು ಪತ್ರಿಕಾಕರ್ತರಮೇಲಿದೆ. ಆದ್ದರಿಂದ ಅವರು ಪ್ರಜೆಗಳಿಗೆಸೌಖ್ಯವನ್ನುಂಟುಮಾಡುವ ವಿಷಯದಲ್ಲಿ ತಾವು ಶ್ರಮತೆಗದುಕೊಳ್ಳಬೇಕು, ಮರೆಯಲ್ಲಿಯು ಧರ್ಮವಾಗಿರಬೇಕು, ಈ ಅಂಶದಲ್ಲಿನ ತಮ್ಮ ಮೆಹನತಿಗಾಗಿ ಅವರು ಬಹುಮಾನವನ್ನು ಆಶಿಸಕೂಡದು, ಮತ್ತು ಬಯಸಲಾಗದು. ಯಾವಸಭೆಯಲ್ಲಿಯೂ ಶ್ರೇಷ್ಠತ್ವವು ಹೊಂದಕೂಡದು, ದರ್ಬಾರ್‌ಗಳಲ್ಲಿಯೂ ರಾಜಾಸ್ಥಾನಗಳಲ್ಲಿಯೂ ಪ್ರಖ್ಯಾತಿಗೆಬರಕೂಡದು. ಇಂತಾವರ್ತಮಾನಪತ್ರಿಕಕರ್ತರು ಒವಾಂಬದೊರೆತರೆಸಾಕು, ಪ್ರಜೆಗಳಿಗೆಲ್ಲಾ ಕೋಸಮನಸ್ಸನ್ನುಂಟುಮಾಡಬಹುದು.

ಈಗ ಮಲಯಾಳಪ್ರಾಂತದಲ್ಲಿ ಸಂಚರಿಸುತಲಿರುವ ಮುಂಬೈ ಹವ್ಯಕಸುಬೋಧ ಪತ್ರಿಕೆಯ ಬಾತಮಿದಾರರು ಕಳೆದತಿಂಗಳ ೧೭ನೇ ತಾರೀಖಿನಲ್ಲಿ ಪೋರನೂರ್‌ಮಾರ್ಗವಾಗಿ ತಿರುಚೂರಿಗೆ ಹೋಗಿ ಅಲ್ಲಿನಸ್ಥಿತಿಯಂಕುರಿತು ಇದರಡಿ ಕಂಡಂತೆ ಬರೆದಿರುತ್ತಾರೇನಂದರೆ—ಈ ತಿಂಗಳ ಹದಿನಾರನೇ ತಾರೀಖಾದ ಶನಿಯದಿನವೇ ತಿರುಚೂರು ಎಂಬ ಸ್ಥಳಕ್ಕೆ ಬಂದುಸೇರಿದನು. ಇದನ್ನೇ ಜನರು ಸ್ತ್ರೀ ಮಲಯಾಳವೆಂದು ವ್ಯವಹರಿಸುತ್ತಾರೆ. ಸದರೀಹೆಸರು ಈ ಪ್ರೂರಿಗೆ ನಿಜವಾಗಿ ಸಲ್ಲುವದೆಂದೆಣಿಸುತ್ತೇನೆ. ಇಲ್ಲಿ ಸ್ತ್ರೀಪ್ರಜೆಯೇ ಅಧಿಕವಾಗಿರುವಂತೆ ತೋರುತಿದೆ. ಕಡೆಗೆ ಇಲ್ಲಿ ಶ್ಯಾಮಲ ವರ್ಣವುಳ್ಳ ಹೆಂಗಸೇ ನನ್ನ ದೃಷ್ಟಿಗೆ ಬೀಳಲಿಲ್ಲವು. ಈ ಪ್ರಾಂತದ ಸ್ತ್ರೀಯರೆಲ್ಲರೂ ಯೂರೋಪಿಯನ್ ಹೆಂಗಸರ ಪೋಷಾಕನ್ನೇ ಅಂಗೀಕರಿಸುವಪಕ್ಷಕ್ಕೆ ಅವರು ಅಭಿನ್ನರಾಗಿ ತೋರಲಿಕ್ಕೇನೂ ಸಂಶಯವಿಲ್ಲವು. ಪ್ರಾಯೇಣ ಇಲ್ಲಿನ ಹೆಂಗಸರೆಲ್ಲರೂ ಕೃಶಾಂಗಿಗಳಾಗಿಯೂ, ಯೂರೋಪಿಯನ್‌ರಂತೆ ದೀರ್ಘಮುಖವುಳ್ಳವರಾಗಿಯೂ, ಚಂಚಲನೇತ್ರ ಹೃದಯವುಳ್ಳವರಾಗಿಯೂ ಇರುತ್ತಾರೆ. ಮತ್ತು ಇವರು ಇಟಾಲಿಯನ್ ಜ್ಯೂಸ್ ಮುಂತಾದ ಹೆಂಗಸರಿಗೆ ಸಮಾನರೆಂದು ನುಡಿದಾಗ್ಯೂ ಸೌಂದರ್ಯ ಪಾರಿಶುದ್ಧ್ಯ ಪ್ರಾಗಲ್ಭತೆ ಮರ್ಯಾದೆ ಮೊದಲಾದ ವಿಷಯಗಳಲ್ಲೆಲ್ಲಾ ಕೇರಳ ಸ್ತ್ರೀಯರೇ ಶ್ರೇಷ್ಠರೆಂದು ಯಾರೂ ಹೇಳದಿರಲಾರರು. ಈದೇಶದಅರಸರು ತಮ್ಮ ಸ್ತ್ರೀಯರ ಸೌಂದರ್ಯಾತಿಶಯಕ್ಕೆ ಮೆಚ್ಚಿ ಲಕ್ಷಗಟ್ಟಲೆ ದ್ರವ್ಯವ್ಯಯಮಾಡಿ ವರಿಸಿ ವಿವಾಹ ಮಾಡಿಕೊಳ್ಳುತ್ತಾರೆ. ಈ ಹೆಂಗಸರು ತಲೆಕೂದಲನ್ನು ಬಹಳ ಶ್ರದ್ಧೆಯೊಡನೆ ಕಾಪಾಡುವದರಿಂದ ಸ್ವಾಭಾವಿಕವಾದ ಇವರ ದೀರ್ಘಕೇಶ ಕಲಾಪವು ನೀರಳೇಹಣ್ಣಿನ ಬಣ್ಣವುಳ್ಳದ್ದಾಗಿಯೂ ಕಾಂತಿಯುಕ್ತವಾಗಿಯೂ ಇರುತಿವೆ. ಮುಖ್ಯವಾಗಿ ಈದೇಶದಲ್ಲಿ ಪ್ರಾಯೇಣ ಸ್ತ್ರೀಯರೆಲ್ಲರು ಅತಿ ಸೌಂದರ್ಯಶಾಲಿಗಳಾಗಿರುವದರಿಂದ, ಸಮರ್ಥನಾದ ಕವಿಗೆ ವರ್ಣನೀಯರಾಗಿಯೂ, ಕಾಮುಕರಿಗೆ ವ್ಯಾಮೋಹಕರಾಗಿಯೂ, ಶಿಲ್ಪಕಲಾಪ್ರವೀಣರಾದವರಿಗೆ ಭಾವಪ್ರವರ್ತಕರಾಗಿಯೂ, ವಿನೂತನ ನಿರ್ಮಾಣ ಚಾತುರ್ಯ ನಿರೂಪಕರಾಗಿಯೂ, ಸಾಹಿತ್ಯ ಸಂಗೀತ ವಿಷಯಗಳಲ್ಲಿ ಪ್ರವೀಣರಾಗಿಯೂ ಇರುತ್ತಾರೆ. ಇಲ್ಲಿ ಕುಲಾಂಗನೆಯರು ಕೂಡ ಸಂಗೀತ ಅಭಿನಯಾದಿ ವಿದ್ಯಾಭ್ಯಾಸ ಮಾಡುತ ತಮ್ಮ ಪುರುಷರ ಮನೋರಂಜಕರಾಗಿರುತಿದ್ದಾರೆ. ಪ್ರಾಯಶಃ ಇವರು ನೋಡಿಯೇ ಅನ್ಯ ದೇಶಗಳಲ್ಲಿರುವ ಹೆಣ್ಣುಮಕ್ಕಳು ಸಂಗೀತ ವಿದ್ಯಾಭ್ಯಾಸಕ್ಕೆ ಪ್ರಾರಂಭಿಸಿರಬಹುದೆಂದು ತೋರುತಿದೆ. ಇವರು ಯಾವಾಗಲು ಪರಸ್ಥಳದವರನ್ನು ಬಹಳ ಗೌರವಿಸಿ ಸತ್ಕರಿಸುವ ಸ್ವಭಾವವುಳ್ಳವರಾಗಿಯೂ, ಮೃದುಮಧುರವಾಕ್ಯಗಳಿಂದ ಪರರಂ ಸಂತೋಷಗೊಳಿಸತಕ್ಕವರಾಗಿಯೂ, ದೇವಬ್ರಾಹ್ಮಣ ಭಕ್ತಿಯುಳ್ಳವರಾಗಿಯೂ,ಪರಿಶುದ್ಧಾಂತಃಕರಣವುಳ್ಳವರಾಗಿಯೂ ಇರುತ್ತಾರೆ. ಇಲ್ಲಿನ ಎಂಬ್ರಾಂದ್ರಿಗಳನ್ನು ಪೋತಿಮಾರ್ ಎಂದು ಕರೆಯುತ್ತಾರೆ. ಇವರು ಸ್ವಭಾವತಃ ಸಭ್ಯರಾಗಿಯೂ, ಮೃದುಭಾಷಿಗಳಾಗಿಯೂ, ಪರೋಪಕಾರಿಗಳಾಗಿಯೂ ಇರುತ್ತಾರೆ. ಇವರಲ್ಲಿ ಎಲೆಯಡಿಕೆ ತಂಬಾಕನ್ನು ಬಳಸುವ ಸಂಪ್ರದಾಯವು ಅತ್ಯಧಿಕವಾಗಿರುತಿದೆ. ಪ್ರತಿಮನುಷ್ಯನಲ್ಲಿಯೂ, ಎಲೆ ಅಡಿಕೆಚೀಲ ಒಂದು ಅನವರತ ಹಾಜರಿರುತಿದೆ. ನಾಳೇದಿನ ನಾನು ಇಲ್ಲಿಂದ ಅನಂತಶಯನಕ್ಕೆ ಪ್ರಯಾಣವಾಗುವೆನಾಗಿ ಅಲ್ಲಿನ ಸ್ಥಿತಿಗಳನ್ನು ಮುಂದಿನವಾರದಲ್ಲಿ ಬರೆದು ಕಳುಹಿಸುವೆನು, ಎಂಬದು.

BANGALORE.—Printed and pudlished at the KARNATIC PRESS, No. 44, Hospital Road, Petta.—1888.

ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA.

ಪ್ರತಿ ಸೋಮವಾರ ಪ್ರಾತಃಕಾಲದಲ್ಲಿ ಪ್ರಕಟಿಸಲ್ಪಡುವದು.

Published every Monday Morning.

ಶ್ರೀಮದ್ವಿವಿಧಪ್ರವೃತ್ತ್ಯುಪಗಮಾರ್ದ್ರ ಕರ್ಣಾಟಕಪ್ರಕಾಶನವರಾಭಿದಾ ಪ್ರಥಿತ ಹಿತೈಷಿಣೀ ಶೋಭಿತಾ ॥ ...

Vol. XV.] BANGALORE—MONDAY, SEPTEMBER 10, 1888. [No. 36.

ಸಂಪುಟ ೧೫.] ಬೆಂಗಳೂರು:—ಸನ್ ೧೮೮೮ನೇ ಇಸವಿ ಸೆಪ್ಟೆಂಬರ್ ೧೦ನೇ ತಾರೀಖ್ ಸೋಮವಾರ. [ನಂಬರ್ ೩೬.

ಕರ್ಣಾಟಕ ಪ್ರಕಾಶಿಕಾ

ಪತ್ರಿಕೆಯ ಚಂದಾ ದರಗಳು,
೧೮೮೮ನೇ ಇಸವಿ ಜನವರಿಯಿಂದಾರಭ್ಯ
ಕಡಮೆ ಮಾಡಲ್ಪಟ್ಟಿರುತ್ತದೆ.

ಈ ಪತ್ರಿಕೆಯ ಚಂದಾದಾರರಲ್ಲಿ ಅನೇಕರ ಅಪೇಕ್ಷೆಯನ್ನು ನೆರವೇರಿಸುವ ಉದ್ದೇಶದಿಂದಲೂ, ಪರಿಮಿತವಾದ ಆದಾಯವುಳ್ಳವರಿಗೆಲ್ಲ ಈ ಪತ್ರಿಕೆಯು ಸುಲಭವಾಗಿ ಲಭಿಸುವಂತಿರಬೇಕೆಂಬ ಅಭಿಪ್ರಾಯದಿಂದಲೂ ಇದರ ಚಂದಾದರವನ್ನು ಇದರಡಿಯಲ್ಲಿ ಕಂಡಂತೆ ಕಡಮೆ ಮಾಡಿರುತ್ತೇವೆ. ಹೇಗೆಂದರೆ:—

ಇಂಗ್ಲಿಷ್ ಮತ್ತು ಕನ್ನಡ ಭಾಗಗಳಿಗೆ.

	ಸ್ಥಳದವರಿಗೆ	ಪರಸ್ಥಳದವರಿಗೆ.
12 ತಿಂಗಳಿಗೆ	8—0—0	9—0—0
6 ,,	4—0—0	4—8—0
3 ,,	2—8—0	2—8—0

ಇಂಗ್ಲಿಷ್ ಅಥವಾ ಕನ್ನಡ ಭಾಗಗಳಿಗೆ.

	ಸ್ಥಳದವರಿಗೆ	ಪರಸ್ಥಳದವರಿಗೆ
12 ತಿಂಗಳಿಗೆ	4—0—0	5—0—0
6 ,,	2—0—0	2—8—0
3 ,,	1—4—0	1—8—0

ಷರಾ—ಅಂದರೆ ಪುಸ್ತಕಗಳು, ಲೋಕಲ್ ಮತ್ತು ತಾಲ್ಲೂಕ್ ಸ್ಕೂಲ್ ಮಾಸ್ತರುಗಳು, ಗ್ರಾಮಸ್ಥರುಗಳು, ಪಟೇಲರು, ವಿದ್ಯಾರ್ಥಿಗಳು, ಇವರಿಗೆಲ್ಲ ಈ ಪತ್ರಿಕೆಯು ಮೇಲ್ಕಂಡ ದರಕ್ಕೆ ಕೊಡಲ್ಪಡುವದು. ಅಡ್ವಾನ್ಸ್ ಮಾಡಬಲ್ಲವರಿಗೆ ಬಾಕಿ ದರವನ್ನು ನಂತರ ಕೊಡಲು ಅವಕಾಶವುಂಟು. ಚಂದಾದಾರರು ಇಂಗ್ಲಿಷ್ ಭಾಗವನ್ನಾಗಲಿ ಕನ್ನಡ ಭಾಗವನ್ನಾಗಲಿ ಅಥವಾ ಎರಡನ್ನಾಗಲಿ ತೆಗೆದುಕೊಳ್ಳಬಹುದು. ಚಂದಾ ಹಣವನ್ನು ಮುಂಗಡವಾಗಿಯೇ ಕಳುಹಿಸತಕ್ಕದ್ದು. ಮೂರು ತಿಂಗಳಿಗಿಂತ ಕಡಮೆಯಾಗಿ ಚಂದಾ ಮೊಬಲಗು ಅಂಗೀಕರಿಸಲ್ಪಡುವದಿಲ್ಲ.

ನೋಟುಗಳು ರವಾನಿಸತಕ್ಕವರು ಮೊದಲು ಕಳುಹಿಸುವ ಅರ್ಧ ನೋಟು ಬಂದಿರುವ ವಿಷಯ ತಿಳಿದ ಬಳಿಕ ಬಾಕಿ ಅರ್ಧ ನೋಟನ್ನು ರವಾನಿಸತಕ್ಕದ್ದು. ಸ್ಟ್ಯಾಂಪ್‌ಗಳು ಕಳುಹಿಸತಕ್ಕವರು ರೂಪಾಯಿ ಒಂದಕ್ಕೆ ಒಂದು ಆಣೆಯ ಮೇರೆ ಡಿಸ್ಕೌಂಟ್ ಸಹ ಸೇರಿಸಿ ಕಳುಹಿಸತಕ್ಕದ್ದು. ಅರ್ಧಾಣೆ ಸ್ಟ್ಯಾಂಪ್‌ಗಳನ್ನು ಕಳುಹಿಸತಕ್ಕದ್ದು. ಡಿಸ್ಕೌಂಟಿಲ್ಲದೆ ಕಳುಹಿಸಲ್ಪಡುವ ಮೊಬಲಗಿನಲ್ಲಿ ಅದು ಕಮಿಯಾದ್ದನ್ನು ಚಂದಾ ಲೆಕ್ಕಕ್ಕೆ ಖರ್ಚು ಹಾಕಿಕೊಳ್ಳಲ್ಪಡುವದು.

ಪ್ರಕಟನೆಯ ರಿವಾಜ್.

ಮೊದಲನೆಯ ದಫಾ ಪಂಕ್ತಿ ಒಂದಕ್ಕೆ ೦—೨—೦
ಎರಡನೆಯ ದಫಾ ಪಂಕ್ತಿ ಒಂದಕ್ಕೆ ೦—೧—೦

ಷರಾ—ಎರಡಾವರ್ತಿಗಿಂತ ಹೆಚ್ಚಾಗಿ ಎಷ್ಟು ಸಾರಿ ಪ್ರಕಟವಾದಾಗ್ಯೂ ಪಂಕ್ತಿ ಒಂದಕ್ಕೆ ೧ ಆಣೆಯಂತೆಯೇ ಲೆಕ್ಕ ಮಾಡಲ್ಪಡುವದು. ಈ ಪತ್ರಿಕೆಯಲ್ಲಿ ಪ್ರಕಟಿಸುವ ಬಗ್ಗೆ ಪ್ರಕಟನೆಗಳು ಕಳುಹಿಸುವವರು ಅವು ಎಷ್ಟಾವರ್ತಿ ಪ್ರಕಟಿಸಲ್ಪಡಬೇಕೋ ಆ ಅಂಶವನ್ನು ಸ್ಪಷ್ಟವಾಗಿ ತಿಳಿಸತಕ್ಕದ್ದು. ಇಲ್ಲದಿದ್ದಲ್ಲಿ ಅವರು ನಮಗೆ ನಿಲ್ಲಿಸುವಂತೆ ಬರೆಯುವ ತನಕ ಅವು ಪ್ರಕಟಿಸಲ್ಪಡುತ್ತಿದ್ದು ಹಾಗೆ ಎಷ್ಟಾವರ್ತಿ ಪ್ರಕಟಿಸಲ್ಪಟ್ಟಿದ್ದಾಗ್ಯೂ ಮೇಲ್ಕಂಡ ದರದಂತೆ ಚಾರ್ಜ್ ಮಾಡಲ್ಪಡುವದು. ಪ್ರಕಟನೆಯ ಬಗ್ಗೆ ಕಳುಹಿಸಲ್ಪಡತಕ್ಕ ಪ್ರಕಟನೆಗಳನ್ನು ಆ ಪತ್ರಿಕೆ ಪ್ರಕಟವಾಗುವ ದಿನದ ಹಿಂದಿನ ದಿವಸ ೩ ಘಂಟೆಯೊಳಗಾಗಿ ಕಳುಹಿಸಬೇಕು. ಪ್ರಕಟನೆಯು ಈ ಪತ್ರಿಕೆಗೆ ಕಳುಹಿಸಲ್ಪಡತಕ್ಕ ಕಾಗದಗಳಲ್ಲಿ ತಿಳಿಸಲ್ಪಡುವ ಅಭಿಪ್ರಾಯಗಳಿಗೆ ನಾವು ಜವಾಬ್ದಾರರಾಗಲಾರೆವು. ಶ್ರಮವಾಗಿ ರುಜುಮಾಡಿ ಲೆಕೊಟರ್ ಯಾವ ಕಾಗದವನ್ನು ಪ್ರಕಟಿಸಲಾರೆವು. ಸಿರಾಕೆಲ್ಪಟ್ಟ ಕಾಗದಗಳು ಮರಳಿ ವಾಪಸ್ ಕಳುಹಿಸಲ್ಪಡಲಾರವು.

"IT RECOMENDS ITSELF"

ALL WHO SUFFER FIND SURE RELIEF.

LITTLE'S

ORIENTAL BALM

THE MOST EFFECTUAL MODERN REMEDY FOR PAIN.

ಲಿಟಲ್ ಕಂಪನಿಯಿಂದ ತಯಾರಾಗಲ್ಪಟ್ಟ "ಓರಿಯಂಟಲ್ ಬಾಮ್" ಎಂಬ ಪೂರ್ವದೇಶ ಸಂಬಂಧವಾದ ಲೇಪನ ತೈಲವು ಸ್ವಶಕ್ತಿ ಪ್ರದರ್ಶಕವಾದದ್ದು, ಮತ್ತು ಸಫಲವಾದ ನವೀನ ಚಿಕಿತ್ಸಾಧಾರವಾದ ಔಷಧವು. ಇದರಿಂದ ಸಕಲ ವಾತರೋಗಗಳೂ, ವಾತಸಂಬಂಧಗಳಾದ ಸಂಧಿಬಂಧನಗಳೂ ನಿವೃತ್ತಿಯಾಗುವವು. ಮುಖ್ಯವಾಗಿ ಚಳಿಗಾಲಿಕವಾದ ವಾತರೋಗಗಳು, ಕೆಮ್ಮು, ಗಂಟಲಿನಲ್ಲಿ ಉರಿ, ನಡುಮನೋವು, ಕೀಲುವಾಯು, ಕಟಿವಾಯು, ಉಳುಕು ನೋವು, ತಲೆನೋವು, ಚಿಮಿಟವಾಯು ಮುಂತಾದ ರೋಗಗಳಿಗೆಲ್ಲ ನಿಸ್ಸಂದೇಹವಾಗಿ ಬಹಳ ಪ್ರಯೋಜನವನ್ನುಂಟುಮಾಡತಕ್ಕದ್ದು. ಈ ತೈಲವನ್ನು ನೋವುಳ್ಳ ಸ್ಥಳಗಳಲ್ಲಿ ಕೆಲವಾವರ್ತಿ ಲವಲವಿಕೆಯುಂಟಾಗುವಂತೆ ಚೆನ್ನಾಗಿ ತಿಕ್ಕಿದರೆ ಸಕಲಗಳಾದ ಮೊಳ್ಳು ನೋವುಗಳನ್ನು ನಿವೃತ್ತಿ ಮಾಡುವಂತಾ ಉತ್ತಮ ತೈಲವಾಗಿರುತ್ತದೆ. ಸರ್ಪಸ್ಪರ್ಶಮುಂತಾದ ವಿಷ ಜಂತುಗಳ ಕಡಿತ ಮತ್ತು ಜೇನುಹುಳ ಕುಟುಕಿದರೆ ನಿವೃತ್ತಿಯಾಗುವದು. ಗಂಟಲಿನಲ್ಲುಂಟಾಗುವ ಉರಿ ಅಥವಾ ವ್ರಣಗಳಿಗೆ ಈ ತೈಲವು ಅದ್ಭುತವಾದ ಮತ್ತು ಶೀಘ್ರವಾದ ಸಂಪೂರ್ಣ ಗುಣವನ್ನುಂಟುಮಾಡುವದು. ಅದ್ಭುತವಾದ ಈ ಔಷಧವನ್ನು ಉಪಯೋಗಿಸಿದಲ್ಲಿ ಇದರ ಪ್ರಯೋಜನವು ಸ್ವತಃ ವ್ಯಕ್ತವಾಗುವದು. ಈ ತೈಲವು ಶೀತಗಾಳಿ ಮುಂತಾದವುಗಳಿಗೊಳಗಾಗಿ ಸಂಚರಿಸುವಂತಾ ಪ್ರಯಾಣಿಕರು, ಬೇಟೆಯಾಡುವವರು, ದೋಣಿಯನ್ನು ನಡೆಸುವವರು, ಮುಂತಾದವರಿಗೆಲ್ಲ ಅಮೂಲ್ಯವಾದದ್ದು.

ಪರಿಶೀಲಕರ ಅಭಿಪ್ರಾಯವು.

ಐರ್ಲ್ಯಾಂಡ್ ದೇಶದ ಫಾರ್ಮಸ್ಯುಟಿಕಲ್ ಸೊಸೈಟಿಯ ಔಷಧಶಾಲೆಯ ಪ್ರೊಫೆಸರರಾಗಿಯೂ, ಸರೋದೇಶದ ಜಿಯಾಲಜಿಕಲ್ ಸೊಸೈಟಿ ಎಂಬ ಭೂತತ್ವಶಾಸ್ತ್ರವಿಷಯವಿವೇಚಕ ಸಮಾಜದ ಮೆಂಬರರಾಗಿಯೂ, "ಮಿನರಲ್ ವಾಟರ್ಸ್ ಆಫ್ ಯೂರಪ್" ಎಂಬ ಗ್ರಂಥಕರ್ತರಾಗಿಯೂ, ರಸಾಯನ ವಿದ್ಯಾ ವಿಷಯಕವಾದ ಅನೇಕ ಲೇಖನಾಧಿಕಾರಿಗಳಾಗಿಯೂ, ಇರುವ ಪ್ರೊಫೆಸರ್ ಟಿಚ್ ಬೋರ್ನ್ (C. R. TICHBORNE, L. L. D., F. C. S., M. R. I. A.,) ಎಂಬವರು ಅಭಿಪ್ರಾಯ ಪಟ್ಟಿರುತ್ತಾರೇನೆಂದರೆ—ಲಿಟಲ್ಸ್ ಓರಿಯಂಟಲ್ ಬಾಮ್ ಎಂಬ ತೈಲವನ್ನು ಬಹಳ ಕಾಲ ಪರೀಕ್ಷಿಸಿದ್ದೇನೆ; ಇದು ಬಹುವಿಧ ಮೂಲಿಕೆಗಳ ರಸಮಿಶ್ರವಾದ ತೈಲವೇ ಹೊರತು ಬೇರೆಯಲ್ಲವೆ, ಇದು ಯಾವ ರೀತಿ ಉಪಯೋಗಿಸಲ್ಪಡುವದೋ ಆ ಪ್ರಕಾರ ನಿರುಪದ್ರವಕರವಾದದ್ದಾಗಿದ್ದರೂ, ನಿಜವಾಗಿ ದ್ರವ್ಯ ರೋಗನಿವಾರಕ ಶಕ್ತಿಯುಳ್ಳದ್ದಾಗಿರುತ್ತದೆ. ಈ ಮಿಶ್ರೌಷಧವು ನರಗಳನ್ನು ಸ್ಥಿರಮಾಡತಕ್ಕ ತರತಕ್ಕದ್ದಾಗಿರುವದರಿಂದ ಇದು ಯಾವ ತರದ ರೋಗಗಳಿಗೆ ಉಪಯುಕ್ತವೆಂದು ತಿಳಿಸಲ್ಪಟ್ಟಿದೆಯೋ ಸದರೀ ರೋಗಗಳಲ್ಲಿ ಅದರ ಪ್ರಯೋಜನವು ವ್ಯಕ್ತವಾಗುವದು. ಈ ತೈಲವು ಸಂಪೂರ್ಣ ಜಾಗರೂಕತೆಯೊಡನೆ ತಯಾರಾದ್ದಾಗಿರುತ್ತದೆ.

ಇದರ ಕ್ರಯ—ಸೀಸೆ ಒಂದಕ್ಕೆ ೧ ರೂಪಾಯಿ.

ಇದು ಔಷಧ ಶಾಲೆಯಲ್ಲಿಯೂ, ಮದರಾಸ್ ಕಂಟೋನ್ಮೆಂಟ್ ಬ್ರಾಡ್‌ವೇಯಲ್ಲಿ, ೨೦ನೇ ನಂಬರ್ ಮನೆಯೊಳಗಿರುವ, ಎ. ಸಿ. ಬೆರ್ರಿಮನ್ ಯವರಲ್ಲಿಯೂ, ಈ ಪುರದಲ್ಲಿರುವ ಅವರ ಏಜಂಟುಗಳಾದ ಜೆ. ವೆಸ್ಟ್ ಯವರ ಕಂಪೆನಿಯಲ್ಲಿಯೂ, ಮ್ಯಾಕ್‌ಫರ್ಸನ್ ಅಂಡ್ ಕಂಪೆನಿಯವರಲ್ಲಿಯೂ, ರಿಗ್ಸ್ ಯವರ ಕಂಪೆನಿಯಲ್ಲಿಯೂ ದೊರೆಯುವದು.

AGENTS.—} Messrs, J. WEST, Chemist, &c., Bangalore.
CAPPAIN & Co. Chemists, Bangalore.
RIGGS & Co, Chemists, Bangalore; and of
MAHOMED YOUSOFF AND SONS, The Cash Bazar, Bangalore
A. C. BERRIMAN & Co.,
20 Sambodoss Street Madras.

NOTICE.

VAIDYASARA SANGRAHA

A TREATISE ON THE PRINCIPLES OF

HINDU MEDICINE.

☞ Price including Postage Rs 5 6 0

ವೈದ್ಯಸಾರ ಸಂಗ್ರಹ.

ಈ ಗ್ರಂಥಾಪೇಕ್ಷೆಯುಳ್ಳವರು ಮೊಬಲಗಿನೊಡನೆ ಈ ಕೆಳಗೆ ರುಜುಮಾಡಿರತಕ್ಕವರ ಹೆಸರಿಗೆ ಬರೆದುಕೊಂಡರೆ ಪುಸ್ತಕ ಕೂಡಲೇ ಕಳುಹಿಸಲ್ಪಡುವದು. ಮೊಬಲಗು ಇಲ್ಲದ ದರಖಾಸ್ತುಗಳಿಗೆ ಸುತರಾಂ ನಿಗೇ ಕೊಡಲ್ಪಡಲಾರದು.

ಇದರ ಕ್ರಯ ... ...ರೂ॥ ೫—೦—೦
ಪ್ಯಾಕಿಂಗ ಮತ್ತು ಅಂಚೇಹಾಸಲ್, ೦—೬—೦

ಟಿ. ಬಿ. ವೆಂಕಟಾಚಾರ್,
ಆಸ್ಪತ್ರಿ ರೋಡ್ ಬೆಂಗಳೂರು.

ವಿಶೇಷ ವರ್ತಮಾನ

ಪುನೆ ಚಿತ್ರಶಾಲೆಯಲ್ಲಿ ಸ್ಥಾಪಿಸಲ್ಪಟ್ಟಿರುವ ಹೊಸ ಶಿಲಾಯಂತ್ರದಲ್ಲಿ, ಹಿಂದೂ ದೇವತೆಗಳ, ಚರಿತ್ರೆಗಳ ಮೂಲಿಕ ಪ್ರಸಿದ್ಧರಾದ ಪತಿವ್ರತೆಯರ, ಮುಂತಾದವರ ಚಿತ್ರಗಳು ಬಹಳ ಬಣ್ಣದ ತಸ್ವೀರುಗಳು ತಯಾರಾಗುತ್ತಲಿವೆ. ಇವುಗಳ ಕೆಲಸಗಾರಿಕೆಯು ನಾಜೂಕಿನದ್ದು. ಗೋಚರವಾಗಿ ಕ್ರಯ ಬಹಳ ಅಲ್ಪವಾಗಿದೆ. ಬೇಕಾದವರಿಗೆ ಕ್ರಯದ ಪಟ್ಟಿ ಕಳುಹಿಸಲ್ಪಡುವವು.

ಪೂನಾ ಷಹರ್ ಚಿತ್ರಶಾಲೆಯ ಮ್ಯಾನೇಜರ್.

ನೋಟಿಸ್.

ಮಾಯಸಮುದ್ರ ನೇಟಿವ್ ಬಾಲೋದಯ, ಉಪನಯನ, ವಿವಾಹ, ಋತುಮತಿ, ಲೈಫ್ ಇನ್ಷ್ಯೂರೆನ್ಸ್, ಇವುಗಳ ಪರಸ್ಪರ ದ್ರವ್ಯಸಹಾಯ ಸಮುಲ್ಲಾಸಿನೀ ಕಂಪನಿ (ಲಿಮಿಟೆಡ್) ಆಫೀಸ್ ನಿಂದ.

ಇದರಿಂದ ಸಮಸ್ತರಿಗೂ ತಿಳಿಯಪಡಿಸುವದೇನೆಂದರೆ,—ಸನ್ ೧೮೮೮ನೇ ಇಸವಿ ಆಗಸ್ಟ್ ತಾರೀಖ್ ೬ನೇ ಸೋಮವಾರ ಕಂಪನಿ ಹೌಸಿನಲ್ಲಿ ನಡೆದ ಎಕಸ್ಟ್ರಾರ್ಡಿನೇರಿ ಮೀಟಿಂಗ್ ಪ್ರೊಸೀಡಿಂಗ್ಸ್ ಪ್ರಕಾರ ಈ ಕಂಪೆನಿಯನ್ನು ವೈಂಡಪ್ ಮಾಡಿರುತ್ತೆ.

ಕೊಡಗು ರಾಮಣ್ಣ,
ಲಿಕ್ವಿಡೇಟರ್.

TELEGRAMS.

ತಂತಿ ವೃತ್ತಾಂತಗಳು.

ವಾಷಿಂಗ್ಟನ್ ತಾ॥ ೧ನೇ ಸೆಪ್ಟೆಂಬರ್—ಈ ದಿನ ನ್ಯೂಫೌಂಡ್ ಎಂಬ ಪ್ರದೇಶದಲ್ಲಿ ಸರ್ವತ್ರ ಐದಾವರ್ತಿ ಬಲವಾದ ಭೂಕಂಪವುಂಟಾಗಿ ಕ್ರಿಸ್ತ ಚರ್ಚುಗಳೆಲ್ಲವೂ ನಾಶವಾಯಿತು.

ಜಯಪುರ, ತಾ॥ ೭ನೇ ಸೆಪ್ಟೆಂಬರ್—ಜಯಪುರದ ಮಹಾರಾಜರವರ ವರ್ಷವರ್ಧಂತಿಯ ದಿನ ಅವರಿಗೆ ಜಿ. ಸಿ. ಎಸ್. ಐ. ಎಂಬ ಅಲ್ಕಾಬ್ ಇಡಲ್ಪಟ್ಟ ವಿಶೇಷ ಸಂದರ್ಭಕ್ಕಾಗಿ ಇಲ್ಲಿ ವಿಶೇಷ ಉತ್ಸವಗಳು ಜರಿಗಿದವು. ಪ್ರತಿವರ್ಷ ಆಲ್ಬರ್ಟ್ ಹಾಲಿನಲ್ಲಿ ದರ್ಬಾರ್ ನಡೆಯಿತು. ಆಕಾಲದಲ್ಲಿ ಪೊಲಿಟಿಕಲ್ ಏಜೆಂಟರಾದ ಕರ್ನಲ್ ವಾಲ್ಟರ್‌ಯವರಿಂದ ಮನೋಜ್ಞವಾಗಿ ಭಾಷಣ ಮಾಡಲ್ಪಟ್ಟಿತು. ಆ ಸಾಯಂಕಾಲ ವಿಜೃಂಭಣೆಯೊಡನೆ ಅನೇಕ ಜನ ಮೆರವಣಿಗೆಯೂ ರೆಸಿಡೆನ್ಸಿಯಲ್ಲಿ ದೀಪಸ್ತಂಭವೂ ಜರಿಗಿದವು.

ವೇಲೂರು, ೩ನೇ ಸೆಪ್ಟೆಂಬರ್—ನಾಬಕ್ ತಾಲೂಕಿನ ಜಹಗೀರ್‌ದಾರರವರು ಈ ದಿನ ಕಾಲವಾದರು, ಮೃತಪಡುವಕ್ಕೆ ಕೆಲವು ಕ್ಷಣಗಳ ಪ್ರಥಮದಲ್ಲಿ ತಮ್ಮ ಸ್ವೀಕೃತ ಪುತ್ರನೂ ರಾಜಯುತನ, ಹಾಳುಕೊಂಡ ಜಹಗೀರ್‌ದಾರಿಯನ್ನು ವಾಪಸ್ ಕೊಡಿಸಬೇಕೆಂತಲಾಗಲಿ, ಅಥವಾ ತಮ್ಮ ಸ್ವೀಕೃತ ಪುತ್ರನಿಗೆ ಪ್ರತ್ಯೇಕ ಜಹಗೀರ್‌ದಾರಿಯನ್ನು ಕಲ್ಪಿಸಿಕೊಡುವಂತೆಯಾಗಲಿ, ಪ್ರಾರ್ಥಿಸಬೇಕೆಂದಿರುವ ಅರ್ಜಿಯನ್ನು ಸ್ಟೇಟ್ ಸೆಕ್ರೆಟರಿಯವರು ವ್ಯವಸ್ಥೆ ಮಾಡುವವರೆವಿಗೆ ಈಗಿನ ಪೆನ್ಷನನ್ನು ತಮಗೂ ಜರಿಗಿಸುತಲಿರಬೇಕೆಂದು ಗವರ್ನಮೆಂಟಿನವರನ್ನು ಪ್ರಾರ್ಥಿಸಿ ಅರ್ಜಿ ಬರೆದುಕೊಳ್ಳಬೇಕೆಂಬದಾಗಿ ವ್ಯಕ್ತಪಡಿಸಿ ತಮ್ಮ ಅಪರಕ್ರಿಯೆಗಳನ್ನು ತಮ್ಮ ಗೌರವಾನುಗುಣವಾಗಿ ಜರಿಗಿಸಬೇಕೆಂಬ ಅಪೇಕ್ಷೆಯಂ ಸೂಚಿಸಿ ಕೂಡಲೇ ಪ್ರಾಣಬಿಟ್ಟರು.

ಬರ್ಲಿನ್ ೩ನೇ ಸೆಪ್ಟೆಂಬರ್.—ಜರ್ಮನೀ ಚಕ್ರವರ್ತಿಯವರಿಂದ ವಿಲ್ಹೆಲ್ಮರಸೋದರಿಯಾದ ಪ್ರಿನ್ಸೆಸ್ ಸೋಫಿಯೆಂಬಾಕೆಯಂ ಗ್ರೀಸ್ ಸಂಸ್ಥಾನದ ಯುವರಾಜರಿಗೆ ಕೊಟ್ಟು ವಿವಾಹ ಜರಿಗಿಸುವಂತೆ ನಿಷ್ಕರ್ಷೆಯಾಗಿರುತ್ತದೆ.

ಸೆಂಟ್‌ಪೀಟರ್ಸ್‌ಬರ್ಗ್, ತಾ॥ ೫ನೇ ಸೆಪ್ಟೆಂಬರ್. ರಷ್ಯಾ ಚಕ್ರವರ್ತಿಯವರು ತಮ್ಮ ಭಾರ್ಯೆಯೊಡನೆ ಕಾಕಸಸ ಪರ್ವತಪ್ರಾಂತದ ತನಕ ದೇಶಸಂಚಾರಾರ್ಥ ಪ್ರಯಾಣ ಹೊರಡುತ್ತಾರೆ.

ADVERTISEMENT.

ದಕ್ಷಿಣ ಮಹರಾಷ್ಟ್ರ ರೆಯಿಲ್‌ವೆ.
ಮೈಸೂರು ಸ್ಟೇಟ್‌ರೆಯಿಲ್‌ವೆ.

ಎಂಜಿನ್‌ಗಾಡಿಗಳ ಉಪಯೋಗಕ್ಕಾಗಿ ಇದರಡಿ ನಮೂದಿಸಲ್ಪಡುವ ಸ್ಟೇಷನ್‌ಗಳಲ್ಲೂ, ಮತ್ತು ತಾರೀಖ್‌ಗಳೊಳಗಾಗಿಯೂ ಕಾಡುಸಾದೆ ಸರಬರಾಯಿಬಗ್ಗೆ ದರಖಾಸ್ತುಗಳ ಬರಮಾಡಿಕೊಳ್ಳಲ್ಪಡುವವು.

ಸ್ಟೇಷನ್‌ಗಳು.	ಸರಬರಾಯ್ ಪ್ರಾರಂಭಿಸತಕ್ಕ ತಿಂಗಳು.	ಪರಿಮಾಣ.
ತುಮಕೂರು	ಸನ್ ೮೮ನೇ ಇಸವಿ ಡಿಸೆಂಬರ್ ೩೧.	೧,೫೦೦ ಟನ್‌ಗಳು.
ಅರಸೀಕೆರೆ	,, ೮೭ನೇ ಮಾರ್ಚ್ ೩೧	೧,೫೦೦ ಟನ್‌ಗಳು.
ಶಿವನಿ	,, ೮೮ನೇ ಅಕ್ಟೋಬರ್ ೩೧	೧,೦೦೦ ಟನ್‌ಗಳು.
ಹರಿಹರ	,, ೮೮ನೇ ಅಕ್ಟೋಬರ್ ೩೧	೧,೦೦೦ ಟನ್‌ಗಳು.

೨. ಇದರಡಿ ಕಾಣಿಸುವಂತೆ ಸನ್ ೧೮೮೯ನೇ ಇಸವಿ ಆಖೈರ್ ವರಿವಿಗೆ ತಿಂಗಳಕಟ್ಲೆ ಸರಬರಾಯ್ ಬಗ್ಗೆ ದರಖಾಸ್ತುಗಳು ಬರಮಾಡಿಕೊಳ್ಳಲ್ಪಡುವವು.

ಸ್ಟೇಷನ್‌ಗಳು.	ಸರಬರಾಯಿಗೆ ಪ್ರಾರಂಭಿಸಬೇಕಾದ ತಿಂಗಳು.	ಮಾಹೇಯಾನಾ ಬೇಕಾದ ಪರಿಮಾಣ.	೮೯ನೇ ಇಸವಿ ಆಖೈರ್ ವರಿವಿಗೆ ಬೇಕಾದ ಒಟ್ಟು ಪರಿಮಾಣ.
ತುಮಕೂರು	೧೮೮೯ನೇ ಜನವರಿ.	೫೦೦ ಟನ್‌ಗಳು.	೬,೦೦೦ ಟನ್‌ಗಳು.
ಅರಸೀಕೆರೆ.	೧೮೮೯ನೇ ಏಪ್ರಿಲ್.	೩೦೦ ಡಿಟೋ	೨,೭೦೦ ,,
ಶಿವನಿ.	೧೮೮೮ನೇ ನವಂಬರ್.	೪೦೦ ಡಿಟೋ	೫,೬೦೦ ,,
ಹರಿಹರ.	೧೮೮೮ನೇ ನವಂಬರ್.	೪೦೦ ಡಿಟೋ	೫,೬೦೦ ,,

೩. ದರಖಾಸ್ತುಗಳ ನಮೂನೆಗಳನ್ನೂ ಮತ್ತು ಇತರ ತಪ್ಸೀಲ್ ಪಟ್ಟಿಯುಸಕಲನ್ನೂ ಒಂದು ರೂಪಾಯಿ ರುಸುಂ ಕೊಟ್ಟು ಇದರಡಿ ರುಜು ಮಾಡಿರುವವರ ಆಫೀಸಿನಿಂದ ಪಡೆಯಬಹುದು.

೪. ಇದರಡಿ ರುಜು ಮಾಡಿರುವವರಿಗೆ ಈ ತಿಂಗಳ ೧೫ನೇ ತಾರೀಖಿನೊಳಗಾಗಿ ತಲಪುವಂತೆ, ದರಖಾಸ್ತುಗಳನ್ನು ಲಿಫಾಫೆಯಲ್ಲಿ ಹಾಕಿ ಮೊಹರ್‌ಮಾಡಿ “ಕಾಡು ಸೌದೇ ಸರಬರಾಯಿ ಬಗ್ಗೆ ದರಖಾಸ್ತೆಂದು” ಮೇಲ್ಗಡೆ ಬರೆದು ರವಾನಿಸತಕ್ಕದ್ದು.

೫. ಪ್ರತಿ ದರಖಾಸ್ತಿನ್ನ ಸಂಗಡಲೂ ನಗದಾಗಿ ಯಾಗಲಿ, ಕರೆನ್ಸೀ ನೋಟಿನ ಮೂಲಕವಾಗಿ ಯಾಗಲಿ ೧೦೦ ರೂಪಾಯಿಗಳ ಠೇವಣಾತಿ ಹಾಜರ್ಮಾಡಬೇಕು.

೬. ಮಂಜೂರಾದ ದರಖಾಸ್ತುದಾರನು, ತನ್ನ ದರಖಾಸ್ತು ಮಂಜೂರಾದ ೭ ದಿನಗಳೊಳಗಾಗಿ ೧,೦೦೦ ರೂಪಾಯಿಗಳ ನಗದ್ ಜಾಮೀನ್ ಕೊಡುವದಲ್ಲದೆ ಕಂಟ್ರಾಕ್ಟ್ ಮುಚ್ಚಳಿಕೆ ಬರೆದು ಕೊಡಬೇಕು, ಅದಕ್ಕೆ ತಪ್ಪಿದರೆ ಅವನು ಠೇವಣೀ ಇಟ್ಟ ೧೦೦ ರೂಪಾಯಿಗಳು ಕಂಪೆನಿಗೆ ದಂಡವಾಗಿಸೇರಿಸಿಕೊಳ್ಳಲ್ಪಡುವದು.

೭. ಮಂಜೂರಾಗದ ದರಖಾಸ್ತುದಾರರ ಠೇವಣಿಗಳು ವಾಪಸ್ ಮಾಡಲ್ಪಡುವವು.

೮. ಕಡಮೆ ದರಖಾಸ್ತನ್ನಾಗಲಿ ಯಾವ ದರಖಾಸ್ತನ್ನಾಗಲಿ ಮಂಜೂರ್ಮಾಡುವದಕ್ಕೆ ಕಂಪೆನಿಯವರುಬದ್ಧರಾಗಿರುವದಿಲ್ಲವು.

ಬೆಂಗಳೂರು,
೩ನೇಸೆಪ್ಟಂಬರ್ ೧೮೮೮.

A. J. Morloy,
Locomotive Supdt.,
Mysore Section.

ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA.

MONDAY, SEPTEMBER 10, 1888.
೧೮೮೮ನೇ ಸೆಪ್ಟಂಬರ್ ೧೦ನೇ ತಾ|| ಸೋಮವಾರ.

RIGHT OF SERVICE.

ಸಮಸ್ತ ದೇಶಗಳಲ್ಲೂ ಸರ್ಕಾರ್ ನೌಕರಿಗಳ ಪೈಕಿ ಕೆಲವಕ್ಕೆ ಹಕ್ಕುಗಳುಂಟುಮಾಡಲ್ಪಟ್ಟಿರುತಿವೆ. ಹಕ್ಕೆಂದರೆ ಮಿರಾಸ್ ಅಥವಾ ವಂಶಪಾರಂಪರ್ಯವಾಗಿ ನಡೆಯುತಕ್ಕದ್ದು. ಈ ಪದ್ಧತಿಯಿಂದ ಸರ್ಕಾರ್ ಕೆಲಸಗಳು ಅಲ್ಪ ಖರ್ಚಿನಲ್ಲಿ ನಡೆಯುವದಲ್ಲದೆ, ಯಾವವಿಧ ಮೋಸಕ್ಕೂ ಅವಕಾಶವಿಲ್ಲದೆ ಕ್ರಮವಾಗಿ ನಡೆಯುತ ಬರುತಿವೆ. ಈ ಕಾರಣದಮೇಲೆ ಸ್ವದೇಶ ಅರಸರ ಪ್ರಭುತ್ವದಲ್ಲಿ ಮೇಲಿನ ಏರ್ಪಾಟು ನೆಲೆಗೊಳಿಸಲ್ಪಟ್ಟದ್ದಾಗಿದೆ. ಗ್ರಾಮ ನೌಕರಿಗಳೂ, ತಾಲ್ಲೂಕು ನೌಕರಿಗಳೂ, ಹಕ್ಕಿಗೆ ಒಳಪಟ್ಟವೆಂದು ಬ್ರಿಟಿಷ್ ಆಡಳಿತದಲ್ಲಿ ಸಹ ಅಂಗೀಕರಿಸಲ್ಪಟ್ಟಿದೆ. ಮೊಗಲ್ಲೈ ಪ್ರಭುತ್ವದಲ್ಲಿ ಹುಜೂರ್ ನೌಕರಿಗಳು, ಕೆಲವುಕಡೆ ದಿವಾನ್‌ಗಿರಿ ಸಹ ಹಕ್ಕಿಗೆ ಒಳಪಟ್ಟದ್ದಾಗಿ ಕಾಣುತಿದೆ. ಮುಖ್ಯವಾಗಿ ಮುಲ್ಕೀ ಇಲಾಖಾ ನೌಕರಿಗಳೂ, ಮಿಲಿಟರಿ ನೌಕರಿಗಳೂ ಮೇಲಿನ ಕ್ರಮಕ್ಕೆ ಯೋಗ್ಯವಾದವೆಂಬದಕ್ಕೆ ಸಂದೇಹವಿಲ್ಲವು. ಜುಡಿಷಲ್ ಇಲಾಖಾ ನೌಕರಿಗಳನ್ನು ಹಕ್ಕುದಾರರಿಗೆ ಕೊಡದೆ ಹೋಗುವದರಿಂದ ಬಾಧಕ ಕಾಣಿಸುವದಿಲ್ಲವು. ಇದು ಪೂರ್ವ್ಯಕಾಲದಲ್ಲಿ ಪಂಚಾಯತರಿಂದ ನಡೆಸಲ್ಪಡುತಬಂದ ಕಾರ್ಯವಾಗಿರುತಿದೆ. ಪೋಲೀಸ್ ಯೆಂಬ ಕಂದಾಚಾರ ನೌಕರಿಯು ಪೂರ್ವ್ಯಕಾಲದಲ್ಲಿ ಹಕ್ಕುದಾರರಿಗೆ ಒಳಪಟ್ಟಿತ್ತು. ಈಗ ಸಮಸ್ತ ದೇಶಗಳಲ್ಲೂ ಅದು ಹಕ್ಕಿನಿಂದ ವಿನಾಯಿಸಲ್ಪಟ್ಟದ್ದಾಗಿದೆ. ಈ ಕೆಲಸಕ್ಕೆ ಹಕ್ಕುದಾರರು ಮೊಕರರಾಗುವದರಿಂದ ಚೋರಿಗಳು ನಡೆಯದಿರುವದಕ್ಕೂ ಅಯೋಗ್ಯರ ಪುಂಡಾಟಗಳಿಗೆ ಅವಕಾಶ ವಿಲ್ಲದಿರುವದಕ್ಕೂ ಕಾರಣವಾಗುವದು. ಆದರೆ, ಬರವಣಿಗೆ, ಖವಾಯತ್, ಡ್ರೆಸ್ ಈ ವಿಷಯಗಳಲ್ಲಿ ಪೂರ್ವ್ಯಕ್ಕಿಂತಲೂ ಈ ಕಾಲದ ಯೇರ್ಪಾಡುಗಳು ಬಹಳ ಯೋಗ್ಯವಾದವೆಂದು ಹೇಳಬೇಕಾಗಿದೆ. ಇವರ ಸಂಬಳಗಳ ವಿಷಯವಾದರೊ ಅವರು ಧರಿಸತಕ್ಕ ಸರ್ಕಾರದವರೇ ಬಲ್ಲರು. ಗ್ರಾಮ ನೌಕರರು, ಬಾರಾಬಲೂತಿ, ಅಂದರೆ ಹನ್ನೆರಡುಬಗೆಆಯಗಾರರಾಗಿರುತ್ತಾರೆ. ಇವರಪೈಕಿ ಪಟೇಲ್, ಶಾನುಭೋಗ, ತೋಟಿ, ತಳವಾರ, ನೀರಗಂಟಿ, ಸರಾಫ್, ಈ ಆರುಮಂದಿಯೂ ಸರ್ಕಾರ್ ಅನುಕೂಲ್ಯಕ್ಕಾಗಿ ಯೇರ್ಪಟ್ಟವರು. ಉಳಿದ ದೋಭಿ, ಹಜಾಂ, ಕುಂಬಾರ, ಚಂಬಾರ ಮೊದಲಾದವರು ರೈತರ ಅನುಕೂಲ್ಯಕ್ಕಾಗಿ ಯೇರ್ಪಟ್ಟವರು. ಸರ್ಕಾರದ ಅನುಕೂಲ್ಯಕ್ಕಾಗಿ ಯೇರ್ಪಟ್ಟವರ ಪೈಕಿ ಶಾನುಭೋಗ ಪಟೇಲರ ವಿಷಯದಲ್ಲಿ ಒಂದುವಿಧ ಕ್ರಮವೂ, ತೋಟಿ ತಳವಾರ ವಗೈರೇರ ವಿಷಯದಲ್ಲಿ ಬೇರೆ ಯೊಂದು ಕ್ರಮವೂ ಸರ್ವೇ ಜಮಾಬಂದಿ ಆದ ತಾಲ್ಲೂಕುಗಳಲ್ಲಿ ಯೇರ್ಪಟ್ಟವೆ, ಪರಂತು ಅವರ ಹಕ್ಕು ಮಾತ್ರ ಅಭ್ಯಾಸಿ ಆದರಿಸಲ್ಪಡುತಿದೆ. ತಾಲ್ಲೂಕು ನೌಕರರ ಹಕ್ಕು ಸ್ವಲ್ಪಸ್ವಲ್ಪವಾಗಿ ತಪ್ಪಿಸಲ್ಪಡುತ ಬಂದು ಈಗ ಸುದ್ಧಾಂಗ ತಪ್ಪಿ ಹೋಗುತಲಿದೆ. ತಾಲ್ಲೂಕು ನೌಕರಿಗಳಿಗೆ ಮುಖ್ಯ ವಿಷಯರಾದವರು ತಾಲ್ಲೂಕು ಗುಮಾಸ್ತೇರೂ ಶೇಕೆದಾರರೂ ಆಗಿರುತ್ತಾರೆ. ಇವರಿಗೆ ಪೂರ್ವದ ಮಹಾರಾಜರವರ ಕಾಲದಲ್ಲಿ ೩೦ ಗಳಿಗೆ ಅಯಿದಾರು ರೂಪಾಯಿಗಳ ತಲಬ್ ಸಲ್ಲುತಲಿದ್ದವು. ಸರ್ ಮಾರ್ಕ್ ಕಬ್ಬನ್ ಸಾಹೆಬರವರ ಕಾಲದಲ್ಲಿ ಅವರ ತಲಬ್‌ಗಳು ಸರಾಸರಿ ಯೆಂಟು ರೂಪಾಯಿಗಳಿಗೆ ಹೆಚ್ಚಿಸಲ್ಪಟ್ಟವು. ಯಾವ ಪ್ರದೇಶದಲ್ಲೂ ಈ ನೌಕರರಿಗೆ ಭೂರೂಪವಾದ ಇನಾಂಗಳಾಗಲಿ, ಮಹಸೂಲ್‌ನಲ್ಲಿ ಆಯವಾಗಲಿ ಸಲ್ಲುತಲಿದ್ದಂತೆ ಕಾಣಲಿಲ್ಲವು. ಈ ದೇಶದಲ್ಲಿ ಬೇರೆ ಯೊಂದುವಿಧ ಕ್ರಮ ನಡೆಯುತಬಂತು, ಅದು ಯಾವದೆಂದರೆ, ಒಂದು ತಾಲ್ಲೂಕಿಗೆ ಇಬ್ಬರು ಶಿರಸ್ತೇದಾರರು ಇರುತಲಿದ್ದರು. ಇವರಿಬ್ಬರೂ ಮೊಕಾಬಿಲೆಯಾಗಿ ಮಹಾರಾಷ್ಟ್ರ ಕನ್ನಡ ಲೆಕ್ಕಗಳನ್ನಿಡುತಲಿದ್ದರು. ಇವರ ಮತ್ತು ಇವರ ಗುಮಾಸ್ತೇರ ಸಂಬಳ ಇಷ್ಟೆಂದು ಗೊತ್ತಾಗಿ ಇವರ ಜೀವನಕ್ಕೆ ಸಲ್ಲುತಲಿತ್ತು. ಈ ಶಿರಸ್ತೇದಾರರು ಹ್ಯಾಗೆ ವಂಶಪಾರಂಪರ್ಯವಾಗಿ ಹಕ್ಕುದಾರರೊ ಹಾಗೆಯೇ ಅವರ ಗುಮಾಸ್ತೇರೂ ಅವರಲ್ಲಿ ಹಕ್ಕುದಾರರಾಗಿರುತಲಿದ್ದರು. ಈ ಕ್ರಮವು ತಾಲ್ಲೂಕುಗಳಲ್ಲಿ ಮಾತ್ರವಲ್ಲದೆ ಫೌಜು ಕಚೇರಿಯಲ್ಲೂ ದಿವಾನ್ ಕಚೇರಿಯಲ್ಲೂ ನಡೆಯುತಲಿತ್ತು. ಸರ್‌ಮಾರ್ಕ್ ಕಬ್ಬನ್ ಸಾಹೆಬರವರು ಮೇಲೆ ಹೇಳಿದ ಸಾನೀ ದಫ್ತರ್‌ಗಳು ಅನುಪಯುಕ್ತವಾದವೆಂದು ಯೋಚಿಸಿ, ಅವನ್ನು ಹುಜೂರ್ ಕಚೇರಿಗಳಲ್ಲಿ ಮೌಕೂಫ್ ಮಾಡಿಸಿದ್ದಲ್ಲದೆ, ತಾಲ್ಲೂಕಿನಲ್ಲಿದ್ದ ಇಬ್ಬರು ಶಿರಸ್ತೇದಾರರ ಪೈಕಿ ಒಬ್ಬರನ್ನು ಶಿರಸ್ತೇದಾರರನ್ನಾಗಿಯೂ ಮತ್ತೊಬ್ಬರನ್ನು ಪೇಷ್ಕಾರರನ್ನಾಗಿಯೂ ಮೊಕರರ್ಮಾಡಿ ಅವರ ಗುಮಾಸ್ತೇರು ಬರಾವರ್ದಿಗೆ ಸೇರಿಸಲ್ಪಟ್ಟರು. ಬಳಿಕ ಶಾನುಭೋಗರ ಹಕ್ಕುದಾರಿಯಂತೆ ತಾಲ್ಲೂಕು ಗುಮಾಸ್ತೇರ ಹಕ್ಕುದಾರಿಯು ಹೆಂಗಸರ ಹೆಸರಿನಲ್ಲಿ ಬರಾವರ್ದ್ ಆಗುವದಕ್ಕೂ, ಜ್ಞಾತಿಗಳಿಗೆ ಹಿಸ್ಸೆ ಸಲ್ಲುವದಕ್ಕೂ ಯೋಗ್ಯವಾದದ್ದೆಂದು ಯೆಣಿಸಲ್ಪಡದೆ ಹೋದಾಗ್ಯೂ, ಪುರುಷ ಸಂತತಿ ಇದ್ದರೆ ಅವರ ಹೆಸರನ್ನು ಬರಾವರ್ದಿನಲ್ಲಿ ಸೇರಿಸಿ, ಅವರು ನೌಕರಿಗೆ ಲಾಯಖ್ ಆಗುವವರಿವಿಗೂ ಬದಲೀ ಇಸಂನಿಂದ ಕೆಲಸ ತೆಗೆದುಕೊಳ್ಳುವ ಪದ್ಧತಿ ಸರ್‌ಮಾರ್ಕ್ ಕಬ್ಬನ್ ಸಾಹೆಬರವರ ಆಖೈರ್ ಕಾಲದ ವರಿವಿಗೆ ನಡೆದು ಬಂದು. ತಾಲ್ಲೂಕು ನೌಕರರ ಪೈಕಿ ಅಮಲ್‌ದಾರರೊಬ್ಬರು ವಿನಾ ಮಿಕ್ಕವರ್ಯಾರಿಗೂ ಪೆನ್ಷನ್ ಕೊಡುವ ಪದ್ಧತಿ ಇರಲಿಲ್ಲವಾದದರಿಂದ ಹಕ್ಕು ಮತ್ತು ವಾರಿಸುದಾರಿ ಪದ್ಧತಿಯು ಊರ್ಜಿತವಾಗಿ ನಡೆದು ಬಂತು. ಹುಜೂರು ಗುಮಾಸ್ತೇರ ವಿಷಯದಲ್ಲಿ ಖಂಡಿತವಾದ ನಿಯಮವಿಲ್ಲದಿದ್ದಾಗ್ಯೂ ಮೈನಾರಿಟಿ ಕಳೆದ ವಾರಿಸುದಾರರಿರುವ ಪಕ್ಷಕ್ಕೆ ಅವರಿಗೆ ಅಲ್ಪ ನೌಕರಿಯನ್ನಾದರು ತಪ್ಪದೆ ಕೊಡುತಬಂದರು. ಮೆ|| ಬೌರಿಂಗ್ ಸಾಹೆಬರವರ ಆಡಳಿತದಲ್ಲಿ ತಾಲ್ಲೂಕು ನೌಕರರಿಗೆ ಇಜಾಫೆಯೂ ೧೦ ರೂಪಾಯಿಗಳಿಗೆ ಮೇಲ್ಪಟ್ಟ ತಲಬುಳ್ಳ ನೌಕರರಿಗೆ ಪೆನ್ಷನೂ ಯೇರ್ಪಟ್ಟದರಿಂದ ಹಕ್ಕುದಾರಿ ಎಂಬವು ಕೇವಲ ಅನಾದರಣೀಯವಾಯಿತು. ಆದಾಗ್ಯೂ ಈ ದೇಶವನ್ನು ಬ್ರಿಟಿಷ್ ಆಡಳಿತ ತಪ್ಪುವ ವರಿವಿಗೂ, ತಾಲ್ಲೂಕು ಗುಮಾಸ್ತೇರಿಗೆ ಲಾಯಖಾದ ವಾರಸುದಾರರಿದ್ದು ಅವರು ನೌಕರಿಯಂ ಬಿಡುತ ತಮಗೆ ಪೆನ್ಷನ್ ಅಗತ್ಯವಿಲ್ಲವೆಂದು ಹೇಳುವ ಪಕ್ಷದಲ್ಲಿ ಅವರ ವಾರಸುದಾರರಿಗೆ ನೌಕರಿಯಂ ತಪ್ಪದೆ ಕೊಡುತಬಂದರು. ಈ ರಾಜ್ಯವು ಶ್ರೀಮನ್ಮಹಾರಾಜರವರಿಗೆ ಒಪ್ಪಿಸಲ್ಪಟ್ಟ ಮೇಲೆ ಪುರಾತನಗಳಾದ ಅನೇಕ ಪದ್ಧತಿಗಳು ಹ್ಯಾಗೆ ಬದಲಾಯಿಸಲ್ಪಟ್ಟವೊ ತದ್ವತ್ ಈ ಹಕ್ಕುದಾರಿಗಳು ಪೂರಾ ತಪ್ಪಿಸಲ್ಪಟ್ಟವು. ಇದಕ್ಕೆ ಲವಾಜಮಾ ಕಮ್ಮಿ ಎಂಬದು ಮುಖ್ಯ ಕಾರಣವಾಗಿ ಯೇರ್ಪಟ್ಟಿತು. ಇಲ್ಲಿನ ಮಿಲಿಟರಿ ಇಲಾಖೆಯವರೂ ಇದೇಸದೃಶಕ್ಕೆ ಗುರಿಯಾದರು. ಮೆ|| ರಂಗಾಚಾರ್ಯರ ದಿವಾನ್‌ಗಿರಿಯಲ್ಲಿ ಮಾಹೇಯಾನಾ ೧೦ ರೂಪಾಯಿಗಳ ತಲಬುಳ್ಳ ನೌಕರಿಗೆ ವಾರಸ್ ಅನುಸರಿಸಿ ನೌಕರಿಗಳು ಕೊಡಲ್ಪಡುವವೆಂತಲೂ, ಅಂತವರಿಗೆ ಗ್ರಾಜ್ಯುಯೆಟ್ ಕೊಡಬೇಕಾದ ಆವಶ್ಯಕವಿಲ್ಲವೆಂತಲೂ ಹುಕುಂಮಾಡಿದರು. ತಾಲ್ಲೂಕು ಮುತ್ಸದಿಗಳು ೧೫ರೂಪಾಯಿಗಳ ತಲಬ್ ಪಡೆಯತಕ್ಕವರಾದವರಿಂದ ಸದರೀ ಹುಕುಂ ಮುತ್ಸದ್ದಿ ಪೇಷಾದಾರಗಳ ವಿಷಯದಲ್ಲಿ ಅನ್ವಯಿಸದೆ ಜವಾನ್ ಪೇಷಾದಾರಗಳಿಗೆ ಮಾತ್ರ ಅನ್ವಯಿಸಿತು. ಪ್ರಕೃತ ದಿವಾನರವರು ೧೫ ರೂಪಾಯಿಗಳ ತಲಬುಳ್ಳ ನೌಕರರೆಲ್ಲರು ಕ್ರಮವಾಗಿ ಪರೀಕ್ಷೆ ಕೊಟ್ಟವರಾಗಿರಬೇಕೆಂದು ಹುಕುಂ ಕೊಟ್ಟಮೇಲೆ ವಾರಸುದಾರರಿಗೆ ನೌಕರಿಸಿಕ್ಕುವದೆಂಬ ಪ್ರತ್ಯಾಶೆ ಸ್ವದೇಶೀಯರಿಗೆ ಸುದ್ಧಾಂಗ ತಪ್ಪಿಹೋಗಿದೆ. ಪರೀಕ್ಷೆಕೊಟ್ಟವಾರಸುದಾರರಿರುವ ನೌಕರರಿಗೆ ಅಂತಾ ಪ್ರತ್ಯಾಶೆ ಯಾತಕ್ಕೆ ತಪ್ಪಿಹೋಗುವದೆಂದು ಯಾರಾದರು ಆಕ್ಷೇಪಿಸಬಹುದು. ಪರೀಕ್ಷೆಕೊಟ್ಟಉಮೇದವಾರರಲ್ಲಿ ಆಪೇಂ, ಜಸೀದ್ ಒಂದು ಪ್ರಾಸ್ತವಾಗುವದರಿಂದ ಅಂತಾ ನಿರೀಕ್ಷಣೆಗೆ ಅವಕಾಶವಿಲ್ಲವಾಯಿತು. ಮುಖ್ಯವಾಗಿ ದೊಡ್ಡ ಅಧಿಕಾರಗಳು ಯಾರಿಗೆ ಕೊಡಲ್ಪಟ್ಟರೂ ಕೇಳಿಕೆ ಇಲ್ಲದ್ದು ತಾಲ್ಲೂಕು ಗುಮಾಸ್ತಗಿರಿ ಮೊದಲಾದ ಚಿಲ್ಲರೆ ನೌಕರಿಗಳು ಸ್ಥಳಮಂದಿಗೆ ದುರ್ಲಭವಾದರೆ ಅವರಿಗೆ ಈ ದೇಶದ ಆಸೆ ಸುತರಾಂ ತಪ್ಪಿಹೋಗುತವೆ, ಆದದರಿಂದ ೨೫ ರೂಪಾಯಿಗಳಿಗೆ ಒಳಪಟ್ಟ ತಾಲ್ಲೂಕು ನೌಕರರಿಗೆ ಪಾಸ್ ಇಲ್ಲದೆ ಹೋದಾಗ್ಯೂ ಬಾಧಕವಿಲ್ಲವು, ಆಯಾಯ ನೌಕರಿಗೆ ತಕ್ಕ ಲಾಯಖೀಮೇಲೆ ವಾರಸುದಾರರಿಗೆ ನೌಕರಿ ಕೊಡುವಂತೆ ಹುಕುಂ ಕೊಟ್ಟರೆ, ಬಡವರಾದ ಇತರ ಕಸಬುದಾರರಂತೆ, ಅವರೂ ಸ್ವದೇಶದಲ್ಲಿ ಜೀವನ ಮಾಡಿಕೊಂಡಿರುವರು. ಹಾಗೆ ಮಾಡುವದರಿಂದ ಸರ್ಕಾರಕ್ಕೆ ಯಾವವಿಧ ನಷ್ಟವೂ ಇರಲಾರದು. ಪರೀಕ್ಷೆ ಕೊಟ್ಟವರು ೧೫ ರೂಪಾಯಿಗಳ ತಲಬಿಗೆ ತಾಲ್ಲೂಕು ಜಾಗೆಗಳಿಗೆ ಹೋಗಲು ಬಹುತರ ಇಷ್ಟ ಪಡಲಾರರಾಗಿ ಅವರ ಪ್ರಕಾರಗೂ ಆಸ್ಪದವಿಲ್ಲವು. ಪರೀಕ್ಷೆಕೊಟ್ಟವರೇ ವಾರಸುದಾರರಾಗಿ ಬಂದರೆ ಮತ್ತು ವಿಶೇಷವಾಯಿತು. ಈ ವಿಷಯದಲ್ಲಿ ಮೈಸೂರು ಸರ್ಕಾರದವರು ನಜರ್ ಕೊಡಬೇಕೆಂದು ಕೋರುವೆವು.

A MISCONCEPTION.

ಲೋಕದಲ್ಲಿ ಸಾಮಾನ್ಯರ ಮನುಷ್ಯನಿಗೆ, ತತ್ವ ವಸ್ತುಸ್ಥಿತಿ ವಿವೇಚಕನಿಗೆ ಸತ್ಯ ನಿಷ್ಠಾನ್ಯಾಯಗಳೆಂಬ ಎರಡು ಪ್ರಧಾನ ಗುಣಗಳು ಕೇವಲ ಅಪೇಕ್ಷಿತಗಳಾದವಾಗಿರುತಿವೆ. ಎಂತಾ ಮನುಷ್ಯನಿಗಾದರೂ, ಯಾವಸ್ಥಿತಿಯೊಳಿರತಕ್ಕವನಿಗಾದರೂ ಅವೆರಡು ಕಾಮ್ಯಗಳಿಗಿಂತ ಅಗ್ರಗಣ್ಯವಾದವು ಬೇರೊಂದೂ ಇರಲಾರದು. ಪ್ರಪಂಚದಲ್ಲಿ ಬಹುತರ ಸರ್ವವಿಷಯಗಳಿಗೂ ಕೀರ್ತಿಯೇ ಆಧಾರವಾದದ್ದಾಗಿರುವದರಿಂದಲೂ, ಅದಂ ಕಾಪಾಡಿಕೊಳ್ಳಬೇಕೆಂದು ಪ್ರತಿ ಮನುಷ್ಯನೂ ಕೋರುವದು ಸಹಜವಾಗಿರುವದರಿಂದಲೂ ಅದಂ ಕಾಪಾಡಿಕೊಳ್ಳಬೇಕಾದರೆ ಸತ್ಯಾಭಿರತಿಗಿಂತ ಶ್ರೇಷ್ಠವಾದ ಉಪಾಯ ಬೇರೊಂದಿಲ್ಲವು. ಅಸತ್ಯದಿಂದೊಂದುವೇಳೆ ಒಬ್ಬನಕೀರ್ತಿಗೆ ಮಾಲಿನ್ಯವುಂಟಾದರೆ ಅದಂ ನಿವೃತ್ತಿಸುವದು ಬಳಿಕ ಬಹಳ ಪ್ರಯಾಸಕರವಾಗಿರುವದು. ಒಬ್ಬ ಗ್ರೀಕ್ ಪಂಡಿತನನ್ನು, “ಸುಳ್ಳುಹೇಳುವದರಿಂದ ಮನುಷ್ಯನಿಗೇನು ಪ್ರಯೋಜನ ಉಂಟಾಗುವದೆಂದು” ಅನ್ಯನೊಬ್ಬನು ಪ್ರಶ್ನೆಮಾಡಿದ್ದಕ್ಕೆ ಆತನು, ನಿಜಹೇಳುವಾಗಲೂ ಅವನಮಾತು ಅನ್ಯರು ನಂಬದೆಹೋಗುವದೇ ಪ್ರಯೋಜನವೆಂಬದಾಗಿ ಜವಾಬ್ ಹೇಳಿದನಂತೆ. ಆದದರಿಂದ ಸತ್ಯವೆಂಬದು ಮುಖ್ಯವಿಷಯವಾದದರಿಂದ ಮನುಷ್ಯನು ತನ್ನ ಸರ್ವ ವ್ಯಾಪಾರಗಳಲ್ಲಿಯೂ ಅದಂ ಕಾಪಾಡಿಕೊಂ

ಕರೆ ಅವನುಕ್ರಮ ದುಃಖಾದಿನಗಳಿಗೆ ಸ್ವಲ್ಪ ಪ್ರಕಾಶನಾಗಲಾರನೆಂಬಅಂಶವು ಸಾಮಾನ್ಯವಾಗಿ ವೃತ್ತಾಂತ ಪತ್ರಿಕಾಲೇಖಕರೆಲ್ಲರೂ ಮನದೊಳಪ್ಪ ರಬೇಕಾದವಿಷಯವಾಗಿರುತ್ತಿದೆ. ಯಾವದಾದರೊಂದು ವಿಷಯವನ್ನು ಹೊರಪಡಿಸತಕ್ಕ ಕಾಲದಲ್ಲಿ ಅದರಯಾಥಾರ್ಥ್ಯವನ್ನು ಕುರಿತ ತಮ್ಮ ಜವಾಬ್ದಾರಿಯು ಪತಿಸಲಿಕ್ಕೆ ಇಷ್ಟವಿಲ್ಲದಿದ್ದರೆ ಅದು ತಮಗೆ ತಿಳಿಯಬಂದ ಮಾರ್ಗವನ್ನುರುಯೆನದೊಂದು ಕೃಮವು, ಅಥವಾ ಅದರ ಸ್ವರೂಪವನ್ನು ಚೆನ್ನಾಗಿವಿಚಾರಿಸಿ ಹೊರಪಡಿಸುವದು ಮತ್ತೊಂದು ಕ್ರಮವು. ಈಪ್ರಕಾರವುಳ್ಳವೆ ಅವಿಚಾರ, ಪೂರ್ವಕವಾದ ಪ್ರಕಟನೆಗಳು ಗೌರವ ಹಾನಿಗೂ, ಜೇಳತಕ್ಕ ಕಾರಣವಾಗುವವಕ್ಕಾಗಿ ನಿಷಾದಿಸಬೇಕಾಗಿದೆ. ಗತವಾರದ ಮೈಸೂರು ಚಿತ್ರಾವಳೀ ಪತ್ರಿಕೆಯು, "ಶ್ರೀ ಶೃಂಗೇರಿ ಶ್ರೀ ಸ್ವಾಮಿ ಅಯ್ಯರವರು ಬಳ್ಳಾರಿಗೆ ಬಂದ ಶೃಂಗೇರಿಗುರುಗಳವರ ಹೊಳಗಾರಿಗೆ ಮನವಮಾಡಿಸಿದರು" ಎಂಬದಾಗಿ ತಿಳಿಸಿರುವದಲ್ಲದೆ ಈ ಉದ್ದೇಶಕ್ಕೆ ಮತಸ್ಥರೂ ಮಾಡಿದರೂ ಎಂದು ... ಈಗ ಶ್ರೀಸುಬ್ರಹ್ಮಣ್ಯರವರಿಗೆ ವರಾದರಿಂದ ಶ್ರೀಶಾಸ್ತ್ರಿವ್ಯಾಸರ ಸಂಗಡ ಶೃಂಗೇರಿಸ್ವಾಮಿಗಳು ಬರಲಿಲ್ಲವೆಂಬದು ಜಗತ್ಪ್ರಸಿದ್ಧವಾಗಿದ್ದರೂ ವೃತ್ತಾಂತಚಿಂತಾಮಣಿಗೆ ಮಾತ್ರ ಅದೇಅಭಿಪ್ರಾಯವು ಜೇರೊಬ್ಬ ಹಿಂದಿನವರೇ ಅದನ್ನು ಜತೆಯ ಜೇರೊಬ್ಬ ಶೃಂಗೇರಿಗುರುಗಳು ಇಲ್ಲಿಗೆ ಬಂದ ಅಂತ ವರ್ಣಿಸಲಾಗಿದ್ದ ... ಆದುದರಿಂದ ಅವಕಾಶವಾಗಿ ಎಷ್ಟು ವಿಷಾದಪಡಬೇಕಾಗಿದೆ. ದಿವಾನರವರು ಶ್ರೀ ಸ್ವಾಮಿಗಳೊಡನೆ ಈ ಸ್ಥಳದಲ್ಲಿ ಒಬ್ಬರಲ್ಲಷ್ಟೇ ಬೇಳದೆ ಮೈಸೂರಲ್ಲಿರುವ ಚಿಂತಾಮಣಿಗೆ ಮಾತ್ರ ಗೋಚರವಾದದ್ದು ಮತ್ತು ಆಶ್ಚರ್ಯವಾದದ್ದಾಗಿದೆ. ಇಂತಾ ವಿಷಯಗಳಲ್ಲಿ ನಿಜಸ್ಥಿತಿಯು ತಿಳಿದುಕೊಳ್ಳಲಿಕ್ಕೆ ಸ್ವಲ್ಪ ಪ್ರಯತ್ನಪಡದೆ ತೋರಿದಂತೆ ಬರೆಯುವದಕ್ಕಾಗಿ ಅನ್ಯಾಯವಾದ ನಗದರಲಾರರು. ಇಂತಾ ಪ್ರಕಟನೆಗಳಿಂದ ವೃತ್ತಾಂತಪತ್ರಿಕೆಗಳ ಮಾತುಗಳೆಲ್ಲವೂ ಸಾಮಾನ್ಯವಾಗಿ ಅನ್ಯಕಗಳೇ ಮುಂದಾಗಿ ಭಾವಿಸಲ್ಪಡುವಂತೆ ಪರಿಣಮಿಸಿದ್ದಕ್ಕಾಗಿ ವಿಷಾದಪಡಬೇಕಾಗಿದೆ. ಮುಖ್ಯವಾಗಿ ಬಳ್ಳಾರಿ ಪದನ್ನಲ್ಲಿ ಪ್ರಕಟಿಸತಕ್ಕ ನಿಜವನ್ನು ಪತ್ರಿಕೆಯು ತಿಳಿಯಲಿಕ್ಕೆ ಬಾರದವೇ ... ಇನ್ನೂ ಮುಖ್ಯಗಳ ಆಚೆ ಐರಕ್ಷ್ಕ ಮೈಸೂರ್ ವೃತ್ತಾಂತಚಿಂತಾಮಣಿಗೆ ಮಾತ್ರ ಹ್ಯಾಗೆ ತಿಳಿಯಬಂತೋ ನಾವರಿಯೆವು. ಇದೇವಿಷಯದಲ್ಲಿ ಸದರೀ ಬಳ್ಳಾರಿ ಪತ್ರಿಕೆ ತಿಳಿಸುತ್ತದೆ ... ಸುಸ್ವಾಗತ ದಿವಾನರಾದ ಸಿ.ಕೆ. ರಂಗಾಚಾರ್ಲು ನವರು ಪ್ರಸಿದ್ಧ ಸತ್ಕಾರಗಳಿಂದ ಅವರ ಮಕ್ಕಳು ಇಲ್ಲಿ ಈಗ ನಿಜವಾದ ಶ್ರೀ ಶೃಂಗೇರಿ ಜಗದ್ಗುರುಗಳ ಸಂದರ್ಶನ ಕ್ಷಣವಾಗಿ ಕಳೆದ ಆದಿತ್ಯವಾರ ಪ್ರಾತಃಕಾಲದಲ್ಲಿ ಇಲ್ಲಿಗೆ ಬಂದುಸೇರಿದರು. ಅವಿದಲ್ಲದೆ ಸ್ನಾನಾನಂತರ ಶ್ರೀ ಗುರುಗಳಲ್ಲಿ ಭಾಷ್ಯಶಾಂತಿಯನ್ನು ಅವರು ಮಾಡಿದರು. ಮಾರನೆಯದಿನ ಗುರುಗಳ ಸಾವಕ್ಷಾಂತಿಯನ್ನು, ಬ್ರಾಹ್ಮಣ ಭೋಜನವನ್ನೂ ಅತಿ ಸಂಭ್ರಮದಿಂದ ನೆರವೇರಿಸಬೇಕೆಂದು ಸನ್ನಾಹಗಳೂ ಮಾಡಲ್ಪಟ್ಟವು. ಅನಂತರ ಅವರ ತಮ್ಮ ಹೊಂದಿದ ಯಶಸ್ಸರಲೋಕವನ್ನು ಹೊಂದಿದವಿಷಯವಾದ ಚಾರಿತ್ರಪು ತಂತಿಮೂಲಕ ಅವರಿಗೆ ತಿಳಿದ ಬಳಿಕ ಅತ್ಯಂತ ದುಃಖಭಗ್ನರಾಗಿ ತಮ್ಮ ಅವರಮಕ್ಕಳೊಡನೆ ಮರಳಿಸಿಕ್ತ ದೃಷ್ಟಕಾಲಕ್ಕೆ ಮೊದಲೇ ಬೆಂಗಳೂರಿಗೆ ಪ್ರಯಾಣವಾಡಿದರು. ಅವರ ಉದ್ದೇಶದಂತೆ ಬ್ರಾಹ್ಮಣಭೋಜನವೂ ಗುರುಗಳ ಪಾದಪ್ರಾಜಿಯೂ ಜರಿಗಿದವು." ಇದರಿಂದ ದಿವಾನರವರಿಗೆ ಮತೊಂದಾವತರ್ ಶ್ರೀ ಸ್ವಾಮಿಗಳವರ ದರ್ಶನ ಸಮೀಪದಲ್ಲಿ ಮಾಡಿಕೊಳ್ಳಲಿಕ್ಕೆ ಅವಕಾಶವು ಕಡಮೆಯಾಗಿ ಏಕಾಏಕಿ ಹೊರಟುಬಂದಂತೆ ವ್ಯಕ್ತವಾಗುತ್ತಿದೆ. ಹೀಗಿರಲಾಗಿ "ಶ್ರೀ ಸ್ವಾಮಿಗಳೊಡನೆ" ಹ್ಯಾಗೆ ಬಂದರೋ ನಾವರಿಯೆವು. ವಿಶೇಷವಾಗಿ ಇಂತಾ ವಿಷಯಗಳಲ್ಲೆಲ್ಲಾ ತಕ್ಕವಿವೇಚನೆಯು ಪತ್ರಿಕಾಲೇಖಕರಿಗೆ ಆವಶ್ಯಕವಾದದ್ದಾದ ದರಿಂದ ಅವೊಂದಿಲ್ಲದಿದ್ದರೆ ಅಪ್ರತ್ತಿಗೇ ಲೋಕನಿಂದೆಯುಂಟಾಗುವದೆಂಬ ಅಂಶ ಜಗತ್ಪ್ರಸಿದ್ಧವಾಗಿರುವಲ್ಲಿ ವಿಶೇಷ ಪರಿಭಾವಿತಶಕ್ತಿಯುಳ್ಳ ಚಿಂತಾಮಣಿಗೆ ನಾವು ಪ್ರತ್ಯೇಕತಿಳಿಸಬೇಕಾಗಿರುವದಿಲ್ಲವು.

MORAL GEMS FROM THE MAHABHARATA.

ಮಹಾಭಾರತ ನೀತಿರತ್ನಾವಳಿ.

VI.—Of Righteousness.—ಧರ್ಮಕಲೆ.

The Hindu Excelsior Series No. IX

(ಆಗಸ್ಟ ೨೮ನೇ ತಾರೀಖಿನ ಪತ್ರಿಕಾ ಶೇಷವು.)

ಶ್ಲೋ || ಧರ್ಮಂಪೂರ್ವಂಧನಂಮಧ್ಯೇಜಘನ್ಯೇಕಾಮಮಾಚರೇತ್ ಅಹನ್ಯನುಚರೇದೇವಮೇಷಶಾಸ್ತ್ರಕೃತೋವಿಧಿಃ ||೨೭||

ಅ|| ಧರ್ಮಾರ್ಥ ಕಾಮ ಮೋಕ್ಷಗಳೆಂಬ ಪುರುಷಾರ್ಥ ಚತುಷ್ಟಯಗಳಲ್ಲಿ ವಿವೇಕಿಯಾದ ಪುರುಷನು ಮೊದಲು ಧರ್ಮವನ್ನೂ ಬಳಿಕ ಅರ್ಥವನ್ನೂ ತರುವಾಯ ಕಾಮವನ್ನೂ ಕಡೆಗೆ ಮೋಕ್ಷವನ್ನೂ ಸಂಪಾದಿಸಲಿಚ್ಛಿಸುವನು. ಹೀಗೆ ಪ್ರತಿದಿನದಲ್ಲೂ ನಾವು ನಡೆಯಬೇಕೆಂಬದಾಗಿ ಶಾಸ್ತ್ರದೊಳೇರ್ಪಟ್ಟಿರುವ ನಿಬಂಧನೆಯೆಂದರಿಯುವದು. ಈನಾಲ್ಕು ಪುರುಷಾರ್ಥಗಳಲ್ಲಿ ಒಂದು ಮತ್ತೊಂದಕ್ಕೆ ಕಾರಣರೂಪವಾಗಿಯೂ ಸಹಕಾರಿಯಾಗಿಯೂ ಇರುತಿದೆ. ಆದದರಿಂದ ಧರ್ಮದಿಂ ಮಿಕ್ಕ ಮೂರು ಪುರುಷಾರ್ಥಗಳನ್ನೂ ಕ್ರಮೇಣ ನಾವು ಸುಲಭವಾಗಿ ಪಡೆಯಬಹುದು.

ಶ್ಲೋ | ಆಪತ್ಸ್ವಪಿಹಿಕಷ್ಟಾಸು ಯೋಧರ್ಮಂಧರ್ಮವಿದುತ್ತಮಃ | ಪ್ರಾಣಾನ್ಪ್ರಾಣಾರ್ಥಾರಿಪುಣ್ಯಂಸತ್ರಾಣದಮುಚ್ಯತೇ ||೨೭||

ಅ|| ಯಾವನು ತನ್ನ ಆಪತ್ಕಾಲದಲ್ಲಿ ಧರ್ಮವನ್ನುಲ್ಲಂಘಿಸದೆ ಅದಂ ಅನುಸರಿಸುವನೋ ಅವನು ಧರ್ಮಜ್ಞರಲ್ಲುತ್ತಮನೆನ್ನಿಸಿಕೊಳ್ಳುವನು. ಯಾವಾಗಲು ಪುಣ್ಯವೆಂಬದು ಪ್ರಾಣರಕ್ಷಕವಾದದ್ದಾಗಿಯೂ ಪ್ರಾಣವನ್ನಿಯುವದಾಗಿಯೂ ಇರುವದರಿಂದ ಪ್ರಾಣರೂಪವಾದ ಧರ್ಮವನ್ನು ತೊರೆವರೆ ಪ್ರಾಣವನ್ನೇ ತ್ಯಜಿಸಿದಂತೆಯಾಗುವದರಿಂದ ಎಂತಾ ಆಪತ್ಕಾಲದಲ್ಲಿಯೂ ಧರ್ಮವಂಬಿಟ್ಟು ವರ್ತಿಸಲಾಗದೆಂದು ಭಾವವು.

ಶ್ಲೋ || ಇಜ್ಯಾಧ್ಯಯನದಾನಾನಿ ತಪಸ್ಸತ್ಯಂಕ್ಷಮಾದಮಃ | ಅಲೋಭಇತಿ ಮಾರ್ಗೋಯಂಧರ್ಮಸ್ಯಾಷ್ಟವಿಧಸ್ಮೃತಃ ||

ಅ|| ಯಾಗ, ವೇದಾಧ್ಯಯನ, ದಾನ, ತಪಸ್ಸು, ಸತ್ಯ, ಸಹನೆ, ಇಂದ್ರಿಯನಿಗ್ರಹ, ನಿರಾಶೆ ಎಂಬ ಈ ಎಂಟೂ ಧರ್ಮಗಳೆಂದರಿಯುವದು. ಇವುಗಳಲ್ಲೊಂದ ಯಾವದನ್ನಾಚರಿಸಿದಾಗ್ಯೂ ಧರ್ಮವೆನ್ನಿಸಿಕೊಳ್ಳುವದು. ಸದರೀ ಅಷ್ಟಧರ್ಮಗಳನ್ನೂ ತೊರೆಯದೆ ಕಾಪಾಡತಕ್ಕವನೇ ಧರ್ಮಪುರುಷನೆಂದು ತಿಳಿಯತಕ್ಕದ್ದು.

ಶ್ಲೋ || ಸತಾಂಧರ್ಮಮಧರ್ಮಮಾಹುಃಸರಧರ್ಮವಿದೋಜನಾಃ | ಶ್ರುತಿಪ್ರಮಾಣೋಧರ್ಮಸ್ಯಾದಿತಿವೃದ್ಧಾನುಶಾಸನಂ ೪೪

ಅ|| ಧರ್ಮಜ್ಞರು, ಸತ್ಯವನ್ನೂ ಋಜುತ್ವವನ್ನೂ ಶ್ರೇಷ್ಠಗಳಾದ ಧರ್ಮಗಳೆಂದು ನುಡಿಯುವರು, ಇವು ವೇದಸಮ್ಮತವಾದವೆಂದು ವೃದ್ಧರು ವಿಧಿಸಿರುತ್ತಾರೆ.

ಶ್ಲೋ || ಯತ್ಸ್ಯಾದಹಿಂಸಾ ಸಂಯುಕ್ತಂಸಧರ್ಮಇತಿನಿಶ್ಚಯಃ | ಅಹಿಂಸಾರ್ಥಾಯಹಿಂಸ್ರಾಣಾಂಧರ್ಮಪ್ರವಚನಂಕೃತಂ ||

ಅ|| ಅಹಿಂಸೆಯೇ ಪರಮಧರ್ಮವೆನ್ನಿಸಿಕೊಂಡಿರುವದರಿಂದ ಪ್ರಾಣಿಹಿಂಸಕನಾಗದಿರುವದು ಶ್ರೇಷ್ಠ ಧರ್ಮವಾಗಿರುತ್ತಿದೆ. ಅಂದರೆ ಯಾವನೊಬ್ಬ ನಾದರೂ ಪ್ರಾಣಿವರ್ಗಕ್ಕೆ ಹಿಂಸಕನಾಗಿ ವರ್ತಿಸದಿರುವದೇ ಧರ್ಮಪ್ರವಚನವಾಗಿರುತಿದೆ.

ಶ್ಲೋ || ಧರ್ಮಜ್ಞಃಪಂಡಿತೋಜ್ಞೇಯೋನಾಸ್ತಿಕೋಮೂರ್ಖಉಚ್ಯತೇ | ಕಾಮಸ್ಸಂಸಾರಹೇತುಶ್ಚಹೃತ್ತಾಪೋಮತ್ಸರಸ್ಸ್ಮೃತಃ || || ೩೧ ||

ಅ|| ಲೋಕದಲ್ಲಿ ಧರ್ಮಸ್ವರೂಪವನ್ನರಿತಿರುವನೇ ಪಂಡಿತಶ್ರೇಷ್ಠನೆನ್ನಿಸಿಕೊಳ್ಳುವನು; ನಾಸ್ತಿಕತ್ವವೇ ಮೂರ್ಖನಾಗಲಿಕ್ಕೆ ಕಾರಣವಾಗುವದು; ದುರಾಶೆಯೇ ಸಂಸಾರ ಹೇತುಭೂತವಾದದ್ದು, ಅಸಹಿಷ್ಣುತೆಯೇ ಮಾತ್ಸರ್ಯಕ್ಕೆ ನಿಮಿತ್ತವಾಗಿರುವದು; ಆದದರಿಂದ ಧರ್ಮಸೂಕ್ಷ್ಮವನ್ನರಿತು ನಾಸ್ತಿಕನೆನ್ನಿಸಿಕೊಳ್ಳದೆ, ದುರಾಶೆಯಂ ಬಿಟ್ಟು ಅಸಹಿಷ್ಣುತೆ ಇಲ್ಲದೆ ಸರ್ವಸಮನಾಗಿ ವರ್ತಿಸಿದರೆ ಅಂತವನಿಗೆ ಯಾವ ದೋಷವೂ ಉಂಟಾಗಲಾರದೆಂದು ತಿಳಿಯುವದು.

ಶ್ಲೋ || ದೇಯಮಾರ್ತಸ್ಯಶಯನಂಸ್ಥಿತಶ್ರಾಂತಸ್ಯಚಾಸನಂ | ತೃಷಿತಸ್ಯಚಪಾನೀಯಂಕ್ಷುಧಿತಸ್ಯಚಭೋಜನಂ ೩೦

ಅ|| ಬಳಲಿಕೆಯುಳ್ಳವನಿಗೆ ಶಯನವನ್ನೂ, ಶ್ರಮಿಸಿ ಆಯಾಸದೊಡನೆ ಬಂದು ಕುಳಿತುಕೊಳ್ಳುವವನಿಗೆ ಆಸನವನ್ನೂ, ಬಾಯಾರಿಕೆಯೊಡನೆ ಬರುವವನಿಗೆ ಶುದ್ಧೋದಕವನ್ನೂ, ಕ್ಷುತ್ಪೀಡಿತನಾದವನಿಗೆ ಭೋಜನವನ್ನೂ ಕೊಟ್ಟರೆ ಬಹಳ ಪುಣ್ಯ ವುಂಟಾಗುವದು.

ಶ್ಲೋ || ಅನಾರ್ಯಚರಿತಂತಾತಪರಸ್ವಸ್ಪೃಹಣಂಭೃಶಂ | ಸ್ವಸಂತುಷ್ಟಸ್ಸ್ವಧರ್ಮಸ್ಥೋಯಸ್ಸವೈಸುಖಮೇಧತೇ ||೫೩||

ಅ|| ಎಲೈ ಅರ್ಜುನನೇ! ಪರದ್ರವ್ಯಾಪೇಕ್ಷೆ ಯಾವಾಗಲು ಬಹಳ ನೀಚವಾದದ್ದು, ಯಾವನು ತನಗೆ ಲಭಿಸಿರುವಷ್ಟು ಮಾತ್ರದಿಂ ತೃಪ್ತನಾಗಿ ಧರ್ಮವಂ ಕಾಪಾಡುವನೋ ಆತನು ಸಕಲಸುಖವನ್ನೂ ಅನುಭವಿಸುವನು.

ಶ್ಲೋ || ಮೋಹೋಹಿಧರ್ಮಮೂಢತ್ವಂ ಮಾನಸ್ಸ್ವಾತ್ಮಾಭಿಮಾನಿತಾ (ಧರ್ಮನಿಷ್ಕ್ರಿ) ಯತ್ತಾಂಶ್ಚಾಂಗೋಕಸ್ತುಜ್ಞಾನಮುಚ್ಯತೇ||

ಅ|| ಧರ್ಮಸ್ವರೂಪಾನಭಿಜ್ಞತೆಯೇ ಮೋಹವು, ಸ್ವೋತ್ಕೃಷ್ಟಭಾವವೇ ಗರ್ವವು, ಧರ್ಮಪರಿತ್ಯಾಗವೇ ಆಲಸ್ಯವು, ಶೋಕವೇ ಅಜ್ಞಾನವು, ಇವುಗಳಿಗೆ ಅವಕಾಶವನ್ನೀಯದೆ ಪುರುಷನು ಜೀವಿಸಬೇಕು.

ಶ್ಲೋ || ಸ್ವಧರ್ಮೇಸ್ಥಿರತಾಸ್ಥೈರ್ಯಂಧೈರ್ಯಮಿಂದ್ರಿಯನಿಗ್ರಹಃ | ಸ್ನಾನಂಮನೋಮಲತ್ಯಾಗೋದಾನಂವೈಭೂತರಕ್ಷಣಂ ||

ಅ|| ಸ್ವಧರ್ಮ ನಿಯತಸಂರಕ್ಷಣೆಯೇ ನಿಜವಾದ ಸ್ಥಿರತ್ವಲಕ್ಷಣವೆಂದರಿಯುವದು. ಇಂದ್ರಿಯ ನಿಗ್ರಹವು ನಿಜವಾದ ಧೀರತ್ವವನ್ನೂ, ಮನೋಮಾಲಿನ್ಯ ನಿವೃತ್ತಿಯು ಹೃದಯ ಪಾರಿಶುದ್ಧ್ಯವನ್ನೂ, ಪ್ರಾಣಿರಕ್ಷಣೆಯು ದಾನತ್ವವನ್ನೂ ಸೂಚಿಸುವವು. ಆದದರಿಂದ ಮೇಲ್ಕಂಡ ಗುಣಗಳ್ಯಾವಾಗಲು ಸತ್ಪುರುಷರನ್ನಗಲಿರಲಾರವು.

ಶ್ಲೋ || ಪ್ರಿಯವಚನವಾದೀಪ್ರಿಯೋಭವತಿವಿನ್ಯತಿತಶ್ಯಕರೋಧಿಕಂಜಯತಿ ಬಹುಮಿತ್ರಕರೋಪಸತಿಸುಖಂಯಕ್ತ ಧರ್ಮರತಸ್ಸಗತಿಂಲಭತೇ || ||೫೭||

ಅ|| ಯಾವಾಗಲು ಪ್ರಿಯವನ್ನೇ ನುಡಿಯತಕ್ಕವನು ಐಶ್ವರ್ಯನಾಗುತ್ತಾನೆ. ಪುರೋದೃಷ್ಟಿಯೊಡನೆ ಗುಣಾಗುಣ ವಿಮರ್ಶೆಮಾಡಿ ಒಂದುಕಾರ್ಯವಂ ಮಾಡತಕ್ಕವನು ವಿಶೇಷ ಪ್ರಯೋಜನಗಳನ್ನೈದುವನು. ಬಹುಜನ ಸ್ನೇಹವುಳ್ಳವನಿಗೆ ಸೌಖ್ಯವೆಂಬದು ನಿರಂತರ ಮಾಡದ್ದಾಗಿರುವದು. ಧರ್ಮಪರನಾದವನಿಗೆ ಸದ್ಗತಿಯು ತಪ್ಪಲಾರದೆಂದರಿಯುವದು.

ಶ್ಲೋ || ಕೋಪಾಗ್ನಿರ್ಯಥಾಕಡುಸೇಪಾಪಂ ಪಾದಪಂದಹತೇ ಧರ್ಮಾರ್ಥೌತಥಾ ಲೋಭಹಿತಾಗದೋಷಾವಿನಾಶಯತಿ ||೫೭||

ಅ|| ವೃಕ್ಷಾಂತರ್ಗತವಾದ ಅಗ್ನಿಯು ಪರಿಮಾಣವಾಗಿದ್ದರೂ ಅದು ಕಡೆಗೆ ಸದರೀವೃಕ್ಷವನ್ನು ಸಮೂಲವಾಗಿ ಹ್ಯಾಗೆ ದಹಿಸಿಬಿಡುವದೋ ಅದೇರೀತಿ ಅತ್ಯಾಶೆಯೆಂಬ ದೋಷವು ಮನುಷ್ಯನಿಗೆ ಸ್ವಲ್ಪ ಉಂಟಾದರೂ ಅದು ಅವನ ಧರ್ಮಾರ್ಥನಾಶಗಳಿಗೆ ಕಾರಣವಾಗುವದರಿಂದ ಅತ್ಯಾಶೆ ಅಥವಾ ದುರಾಶೆ ಎಂಬದು ಮನುಷ್ಯನಿಗೆ ಇತರ ಪ್ರಬಲ ದೋಷಗಳನ್ನುಂಟುಮಾಡತಕ್ಕದ್ದಾಗಿರುತಿದೆ.

ಶ್ಲೋ || ಅನ್ಯತುಸ್ಯಾಂತಪ್ಪೋದಾನಂಶೌಚಮಾಂ ಸತ್ಯಂಚಪಾಂಡವ | ನೈವಸ್ವಪರಮಪ್ರೀತೋಯತೋಧರ್ಮಸ್ತತೋಜಯಃ ||೫೮||

ಅ|| ಎಲೈ ಪಾಂಡುಪುತ್ರನೆ! ಅಹಿಂಸೆ, ತಪಸ್ಸು, ದಾನ, ಶಾಂತಿ, ಸತ್ಯವೆಂಬ ಈ ಗುಣಗಳಂ ನೀನು ಕೇವಲ ಅಭಿಮಾನದೊಡನೆ ಪುರಸ್ಕರಿಸುವೆಯಾದರೆ, ಎಲ್ಲಿ ಧರ್ಮವಿರುವದೋ ಅಲ್ಲಿ ಜಯವು ತಪ್ಪಲಾರದು ಆದದರಿಂದ ಜಯಾಕಾಂಕ್ಷಿಯಾದವನು ಮೇಲ್ಕಂಡ ಗುಣಗಳೊಡನೆ ಧರ್ಮರಕ್ಷಣೆ ಮಾಡಿದರೆ ಅವನಿಗೆ ಜಯವು ತಪ್ಪದೆ ಸಿದ್ಧಿಸುವದು.

ಶ್ಲೋ || ಕೀರ್ತಿರಕ್ಷಣಮಾತಿಷ್ಠ ಕೀರ್ತಿರ್ಹಿ ಪರಮಂಬಲಂ | ನಷ್ಟಕೀರ್ತೇರ್ಮನುಷ್ಯಸ್ಯ ಜೀವಿತಂಹ್ಯಫಲಂಸ್ಮೃತಂ || ೫೯ ||

ಅ|| ಮನುಷ್ಯನು ಸರ್ವಪ್ರಕಾರದಿಂದಲೂ ಕೀರ್ತಿಯಂ ಕಾಪಾಡಿಕೊಳ್ಳಬೇಕಾದದ್ದು ಆವಶ್ಯಕವಾಗಿರುತ್ತಿದೆ. ಆಯಶಸ್ಸೇ ಅವನಿಗೆ ಶ್ರೇಷ್ಠವಾದ ಶಕ್ತಿಯಾದದರಿಂದ ಅದಂ ಕಳೆದುಕೊಂಡ ಪುರುಷನಬಾಳ್ವಿಕೆಯು ಈಲೋಕದಲ್ಲಿ ಕೇವಲನಿಷ್ಪ್ರಯೋಜನವಾದದ್ದೆಂದು ತಿಳಿಯುವದು.

ಶ್ಲೋ || ಯಾವಜ್ಜೀವಂದಯಾವಾಂಶ್ಚಸರ್ವಪಾಪೈಃಪ್ರಮುಚ್ಯತೇ | ನಹಿಪಾಪಾನಿಕರ್ಮಾಣಿಶುದ್ಧ್ಯಂತ್ಯನಶನಾದಿಭಿಃ||

ಅ ಜೀವಿಸಿದ್ದ ಕಾಲದವರಿವಿಗೆ ಯಾವನು ಭೂತದಯೆ ಪಶ್ಚಾತ್ತಾಪಗಳುಳ್ಳವನಾಗಿರುವನೋ ಅವನು ಸಕಲಪಾಪಗಳಿಂದ ನಿವೃತ್ತನಾಗುವನೇ ಹೊರತು ಉಪವಾಸಾದಿಗಳಿಂದ ಎಂದಿಗೂ ಪುನೀತ ನಾಗಲಾರನು.

ಶ್ಲೋ || ತ್ರಿದಂಡಧಾರಣಂಮೌನಂಜಟಾಭಾರೋಥಮುಂಡನಂ | ವಲ್ಕಲಾಜಿನಸಂವೇಷ್ಟನಂವ್ರತಚರ್ಯಾಭಿಷೇಚನಂ || ಅಗ್ನಿಹೋತ್ರಂವನೇವಾಸಃಶರೀರಪರಿಶೋಷಣಂ | ಸರ್ವಾಣ್ಯೇತಾನಿಮಿಥ್ಯಾಸ್ಯುರ್ಯದಿಭಾವೋನನಿರ್ಮಲಃ || || ೬೧ ||

ಅ|| ಹೃದಯನೈರ್ಮಲ್ಯದೊಡನೆ ಧರ್ಮವಂ ಕಾಪಾಡದಿದ್ದರೆ ತ್ರಿದಂಡವನು ಧರಿಸುವದರಿಂದಾಗಲಿ, ಮೌನವನ್ನವಲಂಬಿಸುವದರಿಂದಾಗಲಿ, ತಲೆಯಂ ಬೋಳಿಸಿಕೊಳ್ಳುವದರಿಂದಾಗಲಿ, ವ್ರತಾಚರಣೆಯಿಂದಾಗಲಿ, ತ್ರಿಕಾಲ ಸ್ನಾನಗಳಿಂದಾಗಲಿ, ಅಗ್ನಿ ಸತ್ಕಾರದಿಂದಾಗಲಿ, ಕಾಯ ಶೋಷಣೆಯಿಂದಾಗಲಿ ಪ್ರಯೋಜನವಿಲ್ಲವು. ಮೇಲ್ಕಂಡ ಗುಣ ಒಂದು ಇಲ್ಲದಿದ್ದರೆ ಇವುಗಳೆಲ್ಲವೂ ಡಾಂಭಿಕಗಳಾಗಿಯೂ ವಂಚಕಗಳಾಗಿಯೂ ಪರಿಣಮಿಸುತಿವೆ. ಅದು ಇವುಗಳೊಡನೆ ಸೇರಿದರೆ ಆಗ ನಿಜವಾದಗೌರವವನ್ನೂ, ಜ್ಞಾನವನ್ನೂ, ಮೋಕ್ಷವನ್ನೂ, ಉಂಟುಮಾಡುವವು. ಅಂದರೆ, ಚಿತ್ತಶುದ್ಧಿಯಿಲ್ಲದ ಪುರುಷನಿಗೆ ಮೇಲ್ಕಂಡವುಗಳೆಲ್ಲವೂ ವೇಷರೂಪವಾಗಿರುವವು. ಆದಕಾರಣ ಚಿತ್ತಶುದ್ಧಿಮಾಡಿಕೊಂಡು ಧರ್ಮವಂ ಕಾಪಾಡುವದೇ ಪುರುಷನಿಗೆ ಮುಖ್ಯ ಕರ್ತವ್ಯವಾಗಿರುತಿದೆ.

The state of the early Aryans.

ಆರ್ಯರ ಪೂರ್ವ ಸ್ಥಿತಿಯಂ ಕುರಿತು ಮೆ|| ಸುಬ್ರಹ್ಮಣ್ಯಯ್ಯರ್ ಎಂಬವರಿಂದ ದ್ರಾವಿಡ ಭಾಷೆಯಲ್ಲಿ ವಾಕ್ಯರೂಪವಾಗಿ ಬರೆಯಲ್ಪಟ್ಟಿರುವ ಆರ್ಯ ಸನಾತನವೆಂಬ ಗ್ರಂಥದ ಪ್ರತಿಯೊಂದು ನಮಗೆ ಕಳುಹಿಸಲ್ಪಟ್ಟಿರುತಿದೆ. ಇದರಲ್ಲಿ ಆರ್ಯರ ಪೂರ್ವಸ್ಥಿತಿಯನ್ನೂ, ಕ್ರಮೇಣ ಅವರಿಗುಂಟಾಗಿದ್ದ ಕೀರ್ತಿ ಪ್ರತಿಷ್ಠೆಗಳು ನಶಿಸಿ ಹೋದದ್ದನ್ನೂ, ತರುವಾಯ ನಷ್ಟಗಳಾದಸದರೀ ಕೀರ್ತಿ ಪ್ರತಿಷ್ಠೆಗಳು ಮರಳಿ ಅವರಿಗೆ ಇಂಗ್ಲೀಷರ ದ್ವಾರ ಮೂಲಕ ಲಭಿಸಿದ್ದನ್ನೂ, ಈಗ ಅವರಿಗುಂಟಾಗಿರುವ ಅನ್ಯೋನ್ಯೈಕಮತ್ಯಾದಿ ಭಾವಗಳನ್ನೂ, ಸ್ವದೇಶ ಪರಿಪಾಲನಾಕ್ರಮದಿಂ ಸ್ವದೇಶೀಯರಿಗುಂಟಾಗ ಬಹುದಾದ ಪ್ರಯೋಜನಾ ಪ್ರಯೋಜನಗಳನ್ನೂ, ಇಂಡ್ಯದೇಶೀಯರು ಪಾರತಂತ್ರ್ಯ ಸ್ಥಿತಿಯಿಂದನುಭವಿಸುವ ಬಹುವಿಧಕ್ಲೇಶಗಳನ್ನೂ, ಅನ್ಯರಾಜ್ಯಗಳ ತಾತ್ಕಾಲಿಕ ಸ್ಥಿತಿಯನ್ನೂ ದೇಶಾಭಿಮಾನಕ್ಕೆ ಬೇಕಾದ ಲಕ್ಷಣಗಳನ್ನೂ ಕುರಿತು ಗ್ರಂಥಕರ್ತರು ಬಹಳ ಮಟ್ಟಿಗೆ ವಿವರಿಸಿ ಬರೆದಿರುತ್ತಾರೆ. ಇದರಲ್ಲಿ ಬರೆಯಲ್ಪಟ್ಟಿರುವ ಪ್ರತ್ಯೇಕವೂ ಜನಗಳಿಂದ ಅವಶ್ಯ

...ಮುಖ್ಯಕ್ಕಾಗಿರುತ್ತವೆ. ಪ್ರಜೆಗಳಿಗೆ ಲೌಕಿಕ ವಿಷಯಗಳಲ್ಲಿ ಪ್ರವೃತ್ತಿಜ್ಞಾನವನ್ನುಂಟುಮಾಡುವ ವಿಷಯದಲ್ಲಿ ಮದರಾಸ್ ಪ್ರೆಸಿಡೆನ್ಸೀ ಜನಗಳಿಗೆ ಈಚೆಗುಂಟಾಗಿರುವ ಶ್ರದ್ಧಾ ಜಾಗರೂಕತೆಯು ಬಹಳ ಕೊಂಡಾಡತಕ್ಕದ್ದಾಗಿರುತ್ತದೆ. ಅಲ್ಲಿನವರಿಗೆ ಈಶ್ವರಕೃಪಾಲಬ್ಧವಾದ ತಮ್ಮ ಜ್ಞಾನವನ್ನು ಸಾಮಾನ್ಯವಾಗಿ ಉಪಯೋಗಿಸಿ ತನ್ಮೂಲಕ ಉಂಟಾಗುವ ಲಾಭನಷ್ಟಗಳನ್ನು ಸಮಾನವಾಗಿ ಎಲ್ಲರೂ ಅನುಭವಿಸಬೇಕೆಂಬ ಕೋರಿಕೆಯುಳ್ಳವರಾಗಿದ್ದಾರೆಂಬುದಕ್ಕೆ ಅವರು ಮಾಡುತಲಿರುವ ಪ್ರಯತ್ನಗಳೇ ಸಾಕಾದ ನಿದರ್ಶನಗಳಾಗಿರುತ್ತವೆ. ಪ್ರಸಕ್ತ ಗ್ರಂಥದ ಪೌರುಷ್ಯವು ಅಂಚೆ ಹಾಸಿಲ್ ಸೇರಿ ೩|| ಆಣೆಗಿಂತ ಅಧಿಕವಿರುವದಿಲ್ಲವಾಗಿ ಇದು ಎಲ್ಲರೂ ಒಂದೊಂದು ಪ್ರತಿ ತರಿಸಿಕೊಂಡು ಮ|| ಸುಬ್ರಮಣ್ಯಯ್ಯರವರ ಲೇಖನೋದ್ದೇಶವಂ ಕಂಡು ಕೊಳ್ಳುವರೆಂದು ನಂಬುತ್ತೇವೆ.

Occasional Notes.
ನೈಮಿತ್ತಿಕ ವಿಷಯನ್ಯಾಸ.

Emigration to Burma.—ಬರ್ಮಾದೇಶದಲ್ಲಿ ಕಾಯಂವಾಗಿ ವಾಸಮಾಡುವ ಇಷ್ಟವುಳ್ಳ ಬಂಗಾಳಾ ದೇಶದ ಜನಗಳು ೩,೦೦೦ಮಂದಿಯನ್ನು ಅವರವರ ಕುಟುಂಬಗಳೊಡನೆ ಅಲ್ಲಿಗೆ ಕಳುಹಿಸಬೇಕೆಂದು ಇಂಡ್ಯಾಗವರ್ನಮೆಂಟಿನವರು ನಿರ್ಣಯಿಸಿರುವಂತೆ ತಿಳಿಯಬರುತ್ತದೆ.

Selection of a candidate for Parliament.—ಮಿ|| ದಾದಾಬಾಯಿ ನೌರೋಜಿಯವರು, ಪಾರ್ಲಿಮೆಂಟ್ ಮೆಂಬರ್‌ಗಳ ಮುಂದಿನ ಚುನಾವಣೆಯಲ್ಲಿ ಸೆಂಟ್ರಲ್ ಫಿನ್ಸ್‌ಬರಿ ಡಿವಿಜನಿಗೆ ಉಮೇದ್ವಾರರಾಗಿ ಲಿಬರಲ್ ಮತ್ತು ರಾಡಿಕಲ್ ಕಕ್ಷಿಯವರಿಂದ ಚುನಾಯಿಸಲ್ಪಟ್ಟಿರುತ್ತಾರೆಂದು ಕೇಳುವದಕ್ಕೆ ಬಹಳ ಸಂತೋಷಿಸುತ್ತೇವೆ.

Claimes against the late Burmese Government.—ಬರ್ಮಾ ದೇಶದ ಅರಸರಾದ ಥೀಬಾಯವರ ಆಳಿಕೆ ಕಾಲದಲ್ಲಿ ಅವರು ಮಾಡಿದ್ದ ಸಾಲಗಳೆಂದು ಸದರೀ ಸರ್ಕಾರದ ಮೇಲೆ ಒಟ್ಟು ೯೮ಲಕ್ಷ ರೂಪಾಯಿಗಳಿಗೆ ದಾವೇ ತರಲ್ಪಟ್ಟು, ಅದರ ಪೈಕಿ ನ್ಯಾಯತಃ ಯೆಲ್ಲವೂ ವಜಾಮಾಡಲ್ಪಟ್ಟು ಎಂಟೂವರೆ ಲಕ್ಷರೂಪಾಯಿಗಳುಮಾತ್ರ ಕೊಡಲ್ಪಟ್ಟವು.

Education in Ceylon.—ಸಿಲೋನ್ ದ್ವೀಪದಲ್ಲಿ ವಿದ್ಯಾಭ್ಯಾಸವು ನಿರ್ಬಂಧರೂಪವಾಗಿ ಯೇರ್ಪಟ್ಟಿರುವಂತೆ ಕಾಣುತ್ತದೆ, ಹ್ಯಾಗಂದರೆ, ತಂದೆಯೇ ಆಗಲಿ ಪೋಷಕನೇ ಆಗಲಿ, ಏಳರ ಮೊದಲು ಹದಿಮೂರು ವರ್ಷಗಳವರೆಗಿನ ವಯಸ್ಸುಳ್ಳ ತನ್ನ ಮಕ್ಕಳನ್ನು, ತಕ್ಕಕಾರಣವಿಲ್ಲದೆ, ತನ್ನ ಡಿವಿಜನೊಳಗಿನ ಸ್ಕೂಲಿಗೆ ಕಳುಹಿಸುವದಿಲ್ಲವೆಂದು ಹೇಳಿದರೆ, ಅಂತವನ ಪ್ರತಿಯೊಬ್ಬ ಮಗನಿಗೂ ಪ್ರತಿಯೊಂದು ತಿಂಗಳಿಗೂ ೫ ರೂಪಾಯಿಗಳ ಜುರ್ಮಾನೆ ವಿಧಿಸಲ್ಪಡತಕ್ಕದ್ದೆಂದು ನಿರ್ಣಯವಾಗಿರುತ್ತದೆ.

Duelling for love.—ಫ್ರಾನ್ಸ್ ದೇಶದಲ್ಲಿ ಗೌರವ್ಯವಾದ ಕುಟುಂಬಗಳಿಗೆ ಸೇರಿದ ಸುಂದರಿಗಳಿಬ್ಬರು ಒಬ್ಬ ಬಾಲಕನನ್ನು ನೋಡಿ ಮೋಹಿಸಿ ಅವನನ್ನು ಮದುವೆ ಮಾಡಿಕೊಳ್ಳಬೇಕೆಂದು ಪ್ರಯತ್ನಪಟ್ಟರು. ಒಬ್ಬನನ್ನು ಇಬ್ಬರೂ ಮದುವೆ ಮಾಡಿಕೊಳ್ಳುವದಕ್ಕಾಗುವದಿಲ್ಲವಾಗಿ ಅವರಿಬ್ಬರ ಪೈಕಿ ಒಬ್ಬರು ಸಾಯುವತನಕ ಅಥವಾ ಪ್ರಾಣಹಾನಿಕರವಾದ ಜಖಂ ಪಡುವ ತನಕ ದ್ವಂದ್ವಯುದ್ಧ ಮಾಡಿ ತರುವಾಯ ಅವನಿಗೆ ಯಾರು ಹೆಂಡತಿಯಾಗತಕ್ಕದ್ದೆಂಬ ಅಂಶವನ್ನು ನಿರ್ಧರಿಸತಕ್ಕದ್ದೆಂದು ನಿರ್ಣಯಿಸಿಕೊಂಡು ಇಬ್ಬರೂ ಪಿಸ್ತೂಲ್ ಎಂಬ ಸಣ್ಣ ಬಂದೂಕುಗಳನ್ನು ಹಿಡಿದು ಒಬ್ಬರಿಗೊಬ್ಬರು ಹೊಡೆದುಕೊಳ್ಳಲು ೧೦ ವರ್ಷಗಳ ವಯಸ್ಸುಳ್ಳವಳಿಗೆ ಎಡ ಭುಜದಮೇಲೆ ಗೋಲಿ ತಗಲಿ ಎಲುವು ಮುರಿದುಹೋಯಿತು. ಇವಳಿಗೆ ನಾಲ್ಕು ವರ್ಷಗಳು ಹಿರಿಯಳಾದ ಮತ್ತೊಬ್ಬಳಿಗೆ ಎದೆಯಮೇಲೆ ಪ್ರಾಣಹಾನಿಕರವಾದ ಘಾಯ ತಗಲಿತು, ಎಂದು ಫ್ರಾನ್ಸ್ ದೇಶದ ಪತ್ರಿಕೆಯೊಂದು ಹೇಳುತ್ತದೆ.

LOCAL AND PROVINCIAL NEWS.
ಒಳದೇಶ ಮತ್ತು ತಾಲ್ಲೂಕಿನ ಜಾತಿ ವೃತ್ತಾಂತಗಳು.

Commencement of Moharum.—ಮೊನ್ನೆಯದಿನ ಮೊಹರಂ ಹಬ್ಬ ಪ್ರಾರಂಭವಾದದರಿಂದಲೂ ಹಿಂದೂಗಳಿಗೆ ಗೌರೀ ಹಬ್ಬವಾದದರಿಂದಲೂ ಇಲ್ಲಿನ ಸರ್ಕಾರ್ ಇಲಾಖೆಗಳಿಗೆಲ್ಲ ರಜಾ ಕೊಡಲ್ಪಟ್ಟಿತು.

The Middle School Examination.—ಬರುವ ಡಿಸೆಂಬರ್ ತಿಂಗಳಲ್ಲಿ ನಡೆಯುವ ಮಿಡಲ್ ಸ್ಕೂಲ್ ಪರೀಕ್ಷೆಗೆ ಈ ಪ್ರಾಂತ ಲೋಯರ್ ಮಿಡ್ಲ್ ಹೈಸ್ಕೂಲಿನಿಂದ ೫೦ ಮಂದಿಯೂ ವೆಸ್ಲಿಯನ್ ಮಿಡಲ್ ಹೈಸ್ಕೂಲಿನಿಂದ ೨೦ ಮಂದಿಯೂ ದರಖಾಸ್ತು ಕಳುಹಿಸಿದಾರೆಂದು ತಿಳಿಯಬರುತ್ತದೆ.

Remuneration to village-headmen.—ಗ್ರಾಮ ನೌಕರರ ರುಸುಂಬಗ್ಗೆ ತುಮಕೂರು ಡಿಸ್ಟ್ರಿಕ್ಟು ಕುಣಿಗಲ್ ತಾಲ್ಲೂಕಿಗೆ ಸೇರಿದ ೬೯ ಗ್ರಾಮಗಳಿಗಾಗಿ ೮,೮೩೬ ರೂಪಾಯಿಗಳೂ, ಮೈಸೂರು ಡಿಸ್ಟ್ರಿಕ್ಟು ಹುಂಡ್ಯತಾಲ್ಲೂಕಿಗೆ ೫೭೦೯ ರೂಪಾಯಿಗಳೂ ದಿವಾನರಿಂದ ಮಂಜೂರ್ ಮಾಡಲ್ಪಟ್ಟಿರುವಂತೆ ಕೇಳುತ್ತೇವೆ.

The weather.—ಗತವಾರದಿಂದೀಚೆಗೆ ವರ್ಷಸೂಚನೆಗಳು ಕಂಡುಬರುತ್ತ ಅಲ್ಲಲ್ಲಿ ಯಥೋಚಿತ ಮಳೆಯಾಗುತಲಿದೆಯೆಂತ ತಿಳಿಯಬರುತ್ತದೆ. ಪರಂತು ಕೆಲವುಕಡೆಗಳಲ್ಲಿ ಕಾಲಾತೀತವಾದದರಿಂದ ಅದರ ಪ್ರಯೋಜನವು ಬಹಳ ಅಲ್ಪವಾಗಿರುವದೆಂದೆಣಿಸುತ್ತೇವೆ. ಕೆಲವು ತಾಲ್ಲೂಕುಗಳಲ್ಲಿ ವರ್ಷಾಪೇಕ್ಷೆಯು ಅತ್ಯಧಿಕವಾಗಿರುವಂತೆ ಕೇಳುತ್ತೇವೆ.

Chief Judge.—ಇಲ್ಲಿನ ಚೀಫ್‌ಕೋರ್ಟ್ ಚೀಫ್ ಜಡ್ಜಿಯವರಾದ ಮಿ|| ಸಿ. ಜಿ. ಪ್ಲೌಮರ್‌ಯವರು ಆರುತಿಂಗಳ ರಜಾ ಮೇಲೆ ಕಳೆದ ಮಾರ್ಚಿ ತಿಂಗಳಲ್ಲಿ ಇಂಗ್ಲಾಂಡಿಗೆ ಹೋಗಿದಾರೆಯಷ್ಟೆ. ಇವರಿಗೆ ಈ ತಿಂಗಳೊಡನೇ ರಜಾಕಾಲ ಪೂರೈಸುವದರಿಂದ ಅವರು ಈ ತಿಂಗಳ ೩ನೇ ತಾರೀಖಿನಲ್ಲಿ ಇಂಗ್ಲಾಂಡಿನಿಂದ ಪ್ರಯಾಣವಾಗಿ ಬರುವತಿಂಗಳ ಆದಿಭಾಗದೊಳಗೆ ಬಂದು ತಮ್ಮ ಕೆಲಸದ ಚಾರ್ಜನ್ನು ವಹಿಸುವರೆಂದು ತಿಳಿಯಬರುತ್ತದೆ.

University Examinations.—ಬರುವ ನವಂಬರ್ ತಿಂಗಳಲ್ಲಿ ನಡೆಯುವ ಬಿ.ಎ. ಪರೀಕ್ಷೆಗೂ ಬರುವ ಡಿಸೆಂಬರ್ ತಿಂಗಳ ೧೫ನೇ ತಾರೀಖಿನಲ್ಲಿ ಜರಗತಕ್ಕ ಮೆಟ್ರಿಕ್ಯುಲೇಷನ್, ಎಫ್. ಎ. ಪರೀಕ್ಷೆಗಳಿಗೂ ಹೋಗತಕ್ಕವರು ದರಖಾಸ್ತುಗಳನ್ನು ಈ ತಿಂಗಳ ಆಖೈರೊಳಗಾಗಿ ಕಳುಹಿಸಬೇಕಾಗಿರುವದರಿಂದ ಹಾಗೆ ಕಳುಹಿಸಲಿಕ್ಕೆ ಆಯಾದವರ ಚುನಾವಣೆಯಬಗ್ಗೆ ಆಯಾ ಸ್ಕೂಲುಗಳಲ್ಲಿ ಟರ್ಮಿನಲ್ ಎಗ್ಸಾಮಿನೇಷನ್ ಪ್ರಾರಂಭವಾಗಿ ಪೂರೈಸಿತು. ಸೆಂಟ್ ಜೋಸಫ್ಸ ಕಾಲೇಜಿನಲ್ಲಿಮಾತ್ರ ಈ ದಿನ ಪ್ರಾರಂಭವಾಗುವದು.

Under contemplation.—ಚೀಫ್‌ಕೋರ್ಟಿಗೆ ಈಗ ಮೂವರು ಜಡ್ಜಿಗಳಿದ್ದಾರೆಯಷ್ಟೆ. ನಾಲ್ಕನೆಯವರೊಬ್ಬರನ್ನು ನೇಮಕಮಾಡಬೇಕೆಂಬ ಅಭಿಪ್ರಾಯ ಗವರ್ನಮೆಂಟಿನವರಿಗುಂಟಾಗಿದೆಯೆಂತಲೂ, ಅದಿಲ್ಲದಿರುವ ಪಕ್ಷಕ್ಕೆ ಪೂರ್ವದಂತೆ ನಂದೀದುರ್ಗ ಡಿವಿಜನಿಗೆ ಪ್ರತ್ಯೇಕ ಡಿಸ್ಟ್ರಿಕ್ಟು ಮತ್ತು ಸೆಷನ್ಸ್ ಕೋರ್ಟು ಮರಳಿ ನೆಲಗೊಳಿಸಲ್ಪಟ್ಟು ಈಗಿನ ಸಬ್‌ಜಡ್ಜಿ ಕೋರ್ಟನ್ನು ವಜಾಮಾಡಬೇಕೆಂಬ ತಾತ್ಪರ್ಯವುಂಟಾಗಿದೆಯೆಂತಲೂ ಈ ಎರಡರ ಪೈಕಿ ಯಾವದಾದರೊಂದು ವಿಧವಾಗಿ ಮಿ|| ಪ್ಲೌಮರ್‌ಯವರು ಬಂದು ಚಾರ್ಜ್ ತೆಗೆದುಕೊಂಡ ಕೂಡಲೇ ಜರುಗುವದೆಂತಲೂ, ಮಿ|| ಮೀನಾಕ್ಷಿಅಯ್ಯರವರು ಮರಳಿ ಲೀಗಲ್ ಅಡ್ವೈಜರಾಗಿ ಹೋಗಲಾರರೆಂತಲೂ, ಅವರ ಕೆಲಸವು ಮಿ|| ಸ್ಮಿತ್‌ಯವರಿಗೇ ಕಾಯಮಾಗಿ ಕೊಡಲ್ಪಡುವದೆಂತಲೂ, ಈ ಏರ್ಪಾಟಿನಲ್ಲಿ ಮಿ|| ಮೀನಾಕ್ಷಿಅಯ್ಯರವರಿಗೆ ವಿಶೇಷಮಾಡಲ್ಪಡುವದೆಂತಲೂ ತಿಳಿಯಬರುತ್ತದೆ. ಕೆಲವು ಕಾರ್ಯಕಾರಣಗಳಿಂದ ಇವು ಕೆಲವು ಮಟ್ಟಿಗೆ ನಿಜವಾಗಿಯೇ ಇರಬಹುದೆಂದೆಣಿಸುತ್ತೇವೆ.

CORRESPONDENCE.

ಈಗ ನಮ್ಮ ಆಚಾರಗಳಲ್ಲಿ ನೆಲಗೊಂಡಿರುವ ಬಹುವಿಧ ಕೆಡಕುಗಳ ನಿವೃತ್ತಿಯಬಗ್ಗೆ ಶ್ರೀಮಾನ್ ಪಂಡಿತ ಭಾಷ್ಯಾಚಾರ್ಯರವರು ಸ್ವಪ್ರಯೋಜನ ದೃಷ್ಟಿ ಇಲ್ಲದವರಾಗಿ ಮಾಡುತಲಿರುವ ಪ್ರಯತ್ನಗಳ ಬಗ್ಗೆ ಇಲ್ಲಿನ ಪ್ರಜೆಗಳು ಅವರ ವಿಷಯದಲ್ಲಿ ಆಂತರವಾದ ಭಕ್ತಿವಿಶ್ವಾಸಗಳುಳ್ಳವರಾಗಿರಬೇಕು. ಆದರೆ ಹಿಂದೂಗಳ ಆಚಾರಗಳೆಲ್ಲವು ಮತ ಸಂಬಂಧವಾಗಿರುವದರಿಂದ ಅವುಗಳಲ್ಲಿ ಯತ್ಕಿಂಚಿತ್ ಬದಲಾವಣೆಯನ್ನು ಮಾಡಬೇಕಾಗಿದ್ದಾಗ್ಯೂ ಅದಕ್ಕೆ ಗುರುಪೀಠದವರ ಸಹಾಯಸಮ್ಮತಿಗಳು ಅತ್ಯಾವಶ್ಯಕವಾದವೆಂಬ ಅಂಶವನ್ನು ಯೆಲ್ಲರು ಒಪ್ಪಿಕೊಳ್ಳಬೇಕಾಗಿರುತ್ತದೆ. ಈ ಹತ್ತೊಂಬತ್ತನೇ ಶತಮಾನದ ನಾಲ್ಕನೇಭಾಗದಲ್ಲಿ ವಿದ್ಯಾವಂತರೆನಿಸಿಕೊಂಡಿರುವವರ ಪೈಕಿ ಅನೇಕರು ಸಂಸ್ಕೃತ ಭಾಷಾಜ್ಞಾನ ಶೂನ್ಯರಾಗಿರುವದು ಪ್ರಸಿದ್ಧವಾದ ಅಂಶವಾಗಿರುತ್ತದೆ, ಆದದರಿಂದ ಬಾಲವಿವಾಹ ಮುಂತಾದ ವಿಷಯಗಳನ್ನು ವಿಮರ್ಶಪೂರ್ವಕ ನಿರ್ಧರಿಸುವದಕ್ಕೆ ಆಧಾರಭೂತವಾಗಿರುವ ಶ್ರುತಿಸ್ಮೃತ್ಯರ್ಥಗಳನ್ನು ತಿಳಿದುಕೊಳ್ಳುವದಕ್ಕೆ ಅವರು ಅಶಕ್ತರಾಗಿರುತ್ತಾರೆ. ಆದದರಿಂದ ಅವರು, ಆಚಾರಗಳಲ್ಲಿ ಬದಲಾವಣೆಗಳನ್ನು ಮಾಡಕೂಡದೆಂದು ಹೇಳುವಂತವರ ಅಭಿಪ್ರಾಯಗಳಂ ಕೇಳಬೇಕೇ ಶ್ರೀಮಾನ್ ಭಾಷ್ಯಾಚಾರ್ಯರವರು ಶ್ರುತಿ ಸ್ಮೃತಿಗಳಿಗೆ ಹೇಳುವ ಅರ್ಥವೇ ಸರಿಯಾದದ್ದೆಂದು ಅಂಗೀಕರಿಸುವದಕ್ಕೆ ಅಧಿಕಾರಿಗಳಲ್ಲವೆಂದು ಖಂಡಿತವಾಗಿ ಹೇಳಬೇಕಾಗಿದೆ. ಆದದರಿಂದ ನಮ್ಮ ಮತಾಚಾರಗಳಲ್ಲುಂಟಾಗಿರುವ ಕೆಡಕುಗಳನ್ನು ಪರಿಹರಿಸಬೇಕೆಂಬ ಅಕ್ಕರೆಯುಳ್ಳವರೆಲ್ಲರು, ಈ ವಿಷಯವನ್ನು ಕುರಿತು ಆಗಿಂದಾಗ್ಯೆ ಸಭಾ ಮುಖದಲ್ಲಿ ಉಪನ್ಯಾಸಮಾಡಬೇಕೆಂದು ಅವರು ಪ್ರಾರ್ಥಿಸುವದಕ್ಕಿಂತಲೂ, ಅವರು ಮಾಡುವ ಬಹುವಿಧ ಆಕ್ಷೇಪಣೆಗಳನ್ನು ಕುರಿತು ಅವರೊಡನೆ ವಿಚಾರಮಾಡುವದಕ್ಕಾಗಿ ತಮ್ಮ ಪ್ರತಿನಿಧಿಗಳಾಗಿ ಪಂಡಿತರುಗಳನ್ನು ಇಲ್ಲಿಗೆ ಕಳುಹಿಸುವಂತೆ ಮಠಾಧಿಪತಿಗಳನ್ನು ಪ್ರಾರ್ಥಿಸುವರಾದರೆ ತಮ್ಮ ಜನರಿಗೆ ಬಹಳ ಮೇಲನ್ನುಂಟು ಮಾಡಿದವರಾಗುವರು.

A. M.

SUMMARY OF NEWS.
ವೃತ್ತಾಂತ ಸಂಗ್ರಹ.

ಬೊಂಬಾಯಿ ಪಟ್ಟಣದೊಳು ಸೈನ್ಯಾಧಿಪತಿಗಳಾಗಿರುವ, ಶ್ರೀಮನ್ ಮಹಾರಾಜ್ಞೀ ಇಂಡಿಯಾ ಚಕ್ರವರ್ತಿನೀಯವರ ದ್ವಿತೀಯ ಪುತ್ರರಾದ ಶ್ರೀಮಾನ್ ಡ್ಯೂಕ್ ಆಫ್ ಕನಾಟಿಯವರು, ಆ ಪಟ್ಟಣದೊಳ್ ನಡೆದ ಹಿಂದೂ ವಿವಾಹ ಮಹೋತ್ಸವ ಮಂಟಪಕ್ಕೆ ತಮ್ಮ ಧರ್ಮಪತ್ನಿಯವರ ಸಹಿತ ದಯಮಾಡಿಸಿದ್ದರು. ಮದುವೆಮನೆಯ ಯಜಮಾನನು, ಮಹಾರಾಜ್ಞೀಯವರ ಸೊಸೆಯಂದಿರಾದ ಡಚೆಸ್ ಆಫ್ ಕನಾಟ್ ಯವರಿಗೆ, ಭಂಗಾರದ ಒಂದು ತೆಂಗಿನಕಾಯನ್ನೂ, ಒಂದು ಅತ್ತರ್ ಶೀಸೆಯನ್ನೂ ಸಭಾ ತಾಂಬೂಲವಾಗಿ ಕೊಟ್ಟು ಅವರಂ ಆನಂದಗೊಳಿಸಿದನು, ಎಂದು ತಿಳಿಯಲಾದೆವು.—ವೃ. ಬೊಂ.

ಸಮೀಪದಲ್ಲಿ ಒಂದು ನವಿಲು ಇದ್ದರೆ, ಹಾವುಗಳು ತಮ್ಮಹತ್ತಿರ ಅಥವಾ ಬಿಲದಿಂದೀಚೆಗೆ ಬರುವದಿಲ್ಲ, ಭಯಪಡುತ್ತವೆ. ಮೆಣಸನ್ನು ನವಿಲಿನ ಹೊಟ್ಟೆಯಲ್ಲಿ ಹಾಕಿ ಅದನ್ನು ಕೆಲವು ದಿನಗಳ ವರೆವಿಗೆ ಪರಳೇಗಿಡದ ಮೇಲಿಟ್ಟದ್ದು ತೆಗೆದುಕೊಂಡು, ಹೊಟ್ಟೆಯನ್ನು ಬಿಸಾಡಿ ಮೆಣಸಿನ ಕಾಳುಗಳನ್ನು ಭದ್ರವಾಗಿ ಮಡಗಿಕೊಂಡಿರುವದು. ಯಾರನ್ನಾದರೂ ಹಾವು ಕಚ್ಚಿದರೆ, ಆಗ ಒಂದು ಕಾಳನ್ನು ತೇದು ನೀರಿನಲ್ಲಿ ಹಾಕಿ ಕುಡಿಸುವದು. ಇದರಿಂದ ವಿಷಬಾಧೆಯು ಪರಿಹಾರವಾಗುತ್ತದೆ. ಇನ್ನೊಂದು ಚಿಕಿತ್ಸೆ ಏನೆಂದರೆ, ನವಿಲುಗರಿಯನ್ನು ಹೊಗೆಸೊಪ್ಪಿನಲ್ಲಿ ಮಿಶ್ರಮಾಡಿ ಅದರ ಬತ್ತಿಯನ್ನು ಸೇದುವದೆಂದು ಅಲ್ ಮೋರಾ ಅಕ್ಬರ್ ಎಂಬ ಪತ್ರಿಕೆ ತಿಳಿಸುತ್ತದೆ.

THE MYSORE GAZETTE.
ಮೈಸೂರು ಗೆಜೆಟ್.

ಶ್ರೀಮನ್ಮಹಾರಾಜ ರಾಜಾಸಾಹೇಬ್ ಬಹದೂರವರ ದಿವಾನರವರಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

ನಂ. ೧೨೩ ತಾ|| ೧ನೇ ಸೆಪ್ಟಂಬರ್ ೧೮೮೮—ಅಸಿಸ್ಟೆಂಟ್ ಕಮಿಷನರ್ ಮಿ|| ವೈದ್ಯನಾಥ ಅಯ್ಯರವರಿಗೆ ೧೮೮೮ನೇ ಇಸವಿ ಜೂನ್ ೨೧ನೇ ಮುಕಾಂ ೩೪೪ನೇ ನಂಬರ್ ಇಸ್ತಿಹಾರ್ ಮೂಲಕ ಕೊಡಲ್ಪಟ್ಟಿದ್ದ ಮೂರುತಿಂಗಳ ಪ್ರಿವಿಲೇಜ್ ರಜಾವನ್ನು ೧೮೮೮ನೇ ಇಸವಿ ಮೇ ೨೬ನೇ ತಾರೀಖ್ ಲಾಗಾಯಿತು ಅವರು ಉಪಯೋಗಿಸಿಕೊಂಡದ್ದರಿಂದ ಕಳೆದ ತಿಂಗಳ ೨೯ನೇ ತಾರೀಖಿನ ಪೂರ್ವಾಹ್ನದಲ್ಲಿ ಕೆಲಸದಮೇಲೆ ಹಾಜರಾಗಿರುತಾರೆ.

ಮೊಕ್ಕಾಂ ನಂ. ೯೦೩ ತಾ|| ೩ನೇ ಸೆಪ್ಟಂಬರ್ ೧೮೮೮—ಅಸಿಸ್ಟೆಂಟ್ ಕಮಿಷನರ್ ಮಿ|| ವೈದ್ಯನಾಥ ಅಯ್ಯರವರಿಗೆ, ೧೮೮೮ನೇ ಇಸವಿ ಸೆಪ್ಟಂಬರ್ ೩ನೇ ತಾರೀಖ್ ಲಾಗಾಯಿತು ಅಥವಾ ಅವರು ಉಪಯೋಗಿಸಿಕೊಳ್ಳುವ ತಾರೀಖ್ ಮೊದಲು ಹತ್ತು ದಿನಗಳ ಕ್ಯಾಜ್ಯುಯಲ್ ಲೀವ್ ಕೊಡಲ್ಪಟ್ಟಿರುತ್ತದೆ.

ನಂ. ೧೨೩ ತಾ|| ೬ನೇ ಸೆಪ್ಟಂಬರ್ ೧೮೮೮—೧೮೮೪ನೇ ಇಸವಿ ಡಿಸಂಬರ್ ೬ನೇ ಮುಕಾಂ ೫೦೬೩—೧೦೩ನೇ ನಂಬರುಳ್ಳ ದಿವಾನರವರ ಪ್ರೊಸೀಡಿಂಗ್ಸಿನ ಪ್ರಕಾರ ನೆಲಗೊಳಿಸಲ್ಪಟ್ಟ ಮಾಲೂರು ತಾಲ್ಲೂಕ್ ಅಮಲ್‌ದಾರ್ ಮಿಯಾನ್ ಕಮಾಲುದ್ದೀನ್ ಅಲ್ಲೀಖಾನರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖ್ ಮೊದಲು ಹದಿನೈದು ದಿವಸಗಳ ಕ್ಯಾಜ್ಯುಯಲ್ ಲೀವ್ ಕೊಡಲ್ಪಟ್ಟಿರುತ್ತದೆ.

ನಂ. ೧೨೫—ತಾ|| ೭ನೇ ಸೆಪ್ಟಂಬರ್ ೧೮೮೮—೧೮೮೮ನೇ ಇಸವಿ ಆಗಸ್ಟ್ ೨೯ನೇ ತಾರೀಖಿನ ಅಪರಾಹ್ನದಲ್ಲಿ ಮೈಸೂರು ಡಿಸ್ಟ್ರಿಕ್ಟ್ ಸೆಕೆಂಡ್ ಜನರಲ್ ಅಸಿಸ್ಟೆಂಟ್ ಕಮಿಷನರವರ ಕೋರ್ಟ್ ಚಾರ್ಜನ್ನು ಮಿ|| ಟಿ. ಎ. ನಂಜುಂಡಯ್ಯನವರು ಮಿ|| ಅಣ್ಣಾಜಿರಾಯರವರಿಗೆ ಒಪ್ಪಿಸಲು ಅವರು ಅದಂ ವಹಿಸಿರುತ್ತಾರೆ.

ನಂ. ೧೨೬—ಕಳೆದ ಜೂನ್ ತಿಂಗಳಲ್ಲಿ ಜರಗಿದ ಮೈಸೂರು ಲೋಕಲ್ ಸರ್ವಿಸ್ ಸಿವಿಲ್ ಎಗ್ಸಾಮಿನೇಷನಿನಲ್ಲಿ ಇವರಡಿಕಂಡ ಉಮೇದವಾರರು ತೇರ್ಗಡೆಯಾಗಿರುತ್ತಾರೆ. ೧ ಮೈಸೂರು ಡಿಸ್ಟ್ರಿಕ್ಟ್ ಕೋರ್ಟ್ ರಿಕಾರ್ಡ್ ಕೀಪರ್ ಸಿ. ಸುಬ್ಬರಾಯರವರು ಇಂಗ್ಲೀಷಿನಲ್ಲಿ.

ತಾ ೫ನೇ ಸೆಪ್ಟಂಬರ್ ೧೮೮೮—ಮೈಸೂರು ಸೀಮೆಯಲ್ಲಿ ಒಂದನೇ ಗ್ರೇಡ್ ಪ್ಲೀಡರ್‌ಗಳಿಗಾಗಿ ಕ್ಲುಪ್ತಮಾಡಿರುವ ಪರೀಕ್ಷೆಯಲ್ಲಿ ಇವರಡಿಕಂಡ ಇಬ್ಬರು ಉಮೇದ್ವಾರರು ತೇರ್ಗಡೆಯಾಗಿರುತ್ತಾರೆ. ಇಂಗ್ಲಿಷ್ ಭಾಷೆಯಲ್ಲಿ—೧ ಮದರಾಸ್ ನಿವಾಸಸ್ಥರಾದ ಪಿ. ರಾಘವಾಚಾರ್ಯರವರು, ೨, ಹಾಸನ ನಿವಾಸಿಯಾದ ಕೆ. ಸುಬ್ಬರಾಯರವರು.

೨. ೧೮೮೫ನೇ ಇಸವಿ ಮೇ ೨೭ನೇ ಮುಕಾಂ ಮೊಕ್ಕಾಂ ೨೭೪ನೇ ನಂಬರ್ ದಿವಾನರವರ ಇಸ್ತಿಹಾರಿನ ನಿಯಮಗಳನ್ನನುಸರಿಸಿ ಎರಡನೇ ಗ್ರೇಡ್ ಪ್ಲೀಡರ್ ಪರೀಕ್ಷೆಗೆ ಹೋಗಿದ್ದ ಇವರಡಿಕಂಡ ಉಮೇದವಾರರು, ೧ನೇ ಗ್ರೇಡ್ ಪ್ಲೀಡರ್ ಪರೀಕ್ಷೆಗೆ ವಿಧಿಸಲ್ಪಟ್ಟಿರುವ ಪೂರ್ಣಾಂಕೆಗೆ ಬೇಕಾದ ಜಾಸ್ತಿ ಭಾಗವನ್ನು ಕೊಡುವ ಪಕ್ಷಕ್ಕೆ ೧ನೇ ಗ್ರೇಡ್ ಪ್ಲೀಡರಾಗಿ ಎನ್‌ರೋಲ್‌ಮಾಡಲಿಕ್ಕೆ ಅರ್ಹರಾಗಿರುತ್ತಾರೆ. ೧ ಬೆಂಗಳೂರು ರೆಸಿಡೆನ್ಸೀ ಪ್ರೆಸ್ ಎಗ್ಸಾಮಿನರ್ ಸಿ. ಸುಬ್ಬರಾಯರವರು.

೩. ಮೈಸೂರು ಸೀಮೆಯಲ್ಲಿ ಎರಡನೇ ಗ್ರೇಡ್ ಪ್ಲೀಡರ್‌ಗಳಿಗಾಗಿ ಗೊತ್ತುಮಾಡಲ್ಪಟ್ಟಿರುವ ಪರೀಕ್ಷೆಯಲ್ಲಿ ಇವರಡಿಕಂಡ ಉಮೇದ್ವಾರರು ತೇರ್ಗಡೆಯಾಗಿರುತ್ತಾರೆ. ಇಂಗ್ಲಿಷ್ ಭಾಷೆಯಲ್ಲಿ—ಶ್ರೀರಂಗಪಟ್ಟಣ ನಿವಾಸಿಗಳಾದ ೧. ಬಿ. ನರಸಿಂಗರಾಯರವರು, ೨ ಜಿ. ಶ್ರೀನಿವಾಸೈಯಂಗಾರ್.

BANGALORE:—Printed and published at the KARNATIC PRESS, No. 44, HOSPITAL ROAD, PETTA.—1888.

ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA.

ಪ್ರತಿ ಸೋಮವಾರ ಪ್ರಾತಃಕಾಲದಲ್ಲಿ ಪ್ರಕಟಿಸಲ್ಪಡುವದು.

Published every Monday Morning.

ಪ್ರಕಾಶವಿಧಿದ್ವೃತ್ತ್ಯಸಗಮಾರ್ಗ ಕರ್ನಾಟಕಪ್ರಕಾಶನಸರಾಭಿದಾ ಪ್ರತಿಸಾಹಿತೀಶೋಭಿತಾ ॥ ವ್ಯಗ್ರಾಕಹಿತವಾಸರನಿಹಿತಮುದ್ರಣಾಸದ್ವೃತ್ತಿರ್ವಿಕಾಸುಧರಿಸೋಚಿತಾದಿಶತಿಮಾನಸಂಸುಮುದಂ ॥

Vol. XV.] BANGALORE:—MONDAY, SEPTEMBER 17, 1888. [No. 37.

ಸಂಪುಟ ೧೫.] ಬೆಂಗಳೂರು:—ಸನ್ ೧೮೮೮ನೇ ಇಸವಿ ಸೆಪ್ಟೆಂಬರ್ ೧೭ನೇ ತಾರೀಖ್ ಸೋಮವಾರ. [ಸಂಖ್ಯೆ ೩೭.

ಕರ್ಣಾಟಕ ಪ್ರಕಾಶಿಕಾ

ಪತ್ರಿಕೆಯ ಚಂದಾ ದರಗಳು,
೧೮೮೮ನೇ ಇಸವಿ ಜನವರಿಲಾಗಾಯತು
ಕಡಮೆಮಾಡಲ್ಪಟ್ಟಿರುತಿದೆ.

ಈ ಪತ್ರಿಕೆಯ ಚಂದಾದಾರರಪ್ಪತಿ ಅನೇಕರ ಅಪೇಕ್ಷೆಯನ್ನೀಡೇರಿಸುವ ಉದ್ದೇಶದೊಡನೆಯೂ, ಪರಿಮಿತವಾದ ಆಯತಿಯುಳ್ಳವರಿಗೆಲ್ಲ ಈ ಪತ್ರಿಕೆಯು ಸುಲಭವಾಗಿ ಲಭಿಸುವಂತಿರಬೇಕೆಂಬ ಅಭಿಪ್ರಾಯದೊಡನೆಯೂ ಇವರ ಚಂದಾದರವನ್ನು ಇವರದಿಕೆಂಮತೆ ಕಡಮೆಮಾಡಿರುತ್ತೇವೆಂತೆಂದರೆ:—

ಇಂಗ್ಲಿಷ್ ಮತ್ತು ಕನ್ನಡಭಾಗಗಳಿಗೆ.

	ಸ್ಥಳದವರಿಗೆ	ಪರಸ್ಥಳದವರಿಗೆ
12 ತಿಂಗಳಿಗೆ	8—0—0	9—0—0
6 „	4—0—0	4—8—0
3 „	2—8—0	2—8—0

ಇಂಗ್ಲಿಷ್ ಅಥವಾ ಕನ್ನಡಭಾಗಗಳಿಗೆ.

	ಸ್ಥಳದವರಿಗೆ	ಪರಸ್ಥಳದವರಿಗೆ
12 ತಿಂಗಳಿಗೆ	4—0—0	5—0—0
6 „	2—0—0	2—8—0
3 „	1—4—0	1—8—0

ಷರಾ—ಅಂಪೆ ಮತ್ತಿನಗಳು, ಪೋಬಳ ಮತ್ತು ತಾಲೂಕ್ ಸರ್ಕಾರ್ ನೌಕರರುಗಳು, ಶ್ಯಾನಭೋಗರು, ಪಟೇಲರು, ವಿದ್ಯಾರ್ಥಿಗಳು, ಇವರಿಗೆಲ್ಲ ಈ ಪತ್ರಿಕೆಯು ಮಹಾ ಚಂದಾದವರಿಗೆ ಕೊಡಲ್ಪಡುವದು. ಅಡ್ವಾನ್ಸ್ ಹಣವಿಲ್ಲದೆ ಬರುವ ದರಖಾಸ್ತುಗಳಿಗೆ ಯಾವ ನಿಗೆ ಕೊಡಲ್ಪಡಲಾರದು. ಚಂದಾದಾರರು ಇಂಗ್ಲಿಷ್ ಭಾಗವನ್ನಾಗಲಿ ಕನ್ನಡ ಭಾಗವನ್ನಾಗಲಿ ಅಥವಾ ಎರಡನ್ನಾಗಲಿ ಪಡೆದುಕೊಳ್ಳಬಹುದು. ಚಂದಾಹಣವನ್ನು ಮುಂಗಡವಾಗಿಯೇ ಕಳುಹಿಸತಕ್ಕದ್ದು. ಮೂರುತಿಂಗಳಿಗಿಂತ ಕಡಮೆಯಾಗಿ ಚಂದಾ ಮೊಬಲಗು ಅಂಗೀಕರಿಸಲ್ಪಡಲಾರದು.

ನೋಟುಗಳು ರವಾನಿಸತಕ್ಕವರು ಮೊದಲು ಕಳುಹಿಸುವ ಅರ್ಧನೋಟು ತಲುಪಿದುದಕ್ಕೆ ಸಮ್ಮತಿಪತ್ರವು ಬಂದ ಕೂಡಲೇ ಬಾಕೀ ಅರ್ಧ ನೋಟನ್ನು ರವಾನಿಸತಕ್ಕದ್ದು. ಲೇಬಲ್‌ಗಳು ಕಳುಹಿಸತಕ್ಕವರು ರೂಪಾಯಿ ಒಂದಕ್ಕೆ ಒಂದು ಆಣೆ ಡಿಸ್ಕೌಂಟ್ ಸಹ ಸೇರಿಸಿ ಕಳುಹಿಸತಕ್ಕದ್ದು. ಅಂಚೆಯ ಮೂಲಕ ಬರುವ ವಿ.ಪೀ. ಬಿಲ್‌ಗಳನ್ನು ಕಳುಹಿಸುವಾಗ ಡಿಸ್ಕೌಂಟ್ ಇಲ್ಲದೆ ಕಳುಹಿಸಲ್ಪಡುವ ಮೊಬಲಗಿನಲ್ಲಿ ಅದು ವಜಾಮಾಡಲ್ಪಟ್ಟು ಮಿಕ್ಕ ಮೊಬಲಗು ಲೆಕ್ಕಕ್ಕೆ ದಾಖಲ್ಮಾಡಿಕೊಳ್ಳಲ್ಪಡುವದು.

ಪ್ರಕಟನೆಯ ರಿವಾಜ್.

ಮೊದಲನೆಸಾರಿಗೆ ಪಂಕ್ತಿ ಒಂದಕ್ಕೆ ೦—೨—೦
ಎರಡನೆಯಸಾರಿಗೆ ಪಂಕ್ತಿ ಒಂದಕ್ಕೆ ೦—೧—೦

ಷರಾ—ಎರಡಾವರ್ತಿಗಿಂತ ಜಾಸ್ತಿಯಾಗಿ ಎಷ್ಟುತರವೆ ಘಾಯಿಸ್ ಮಾಡಿಸಾಗ್ಯೂ ಪಂಕ್ತಿ ಒಂದಕ್ಕೆ ೧ಆಣೆಯಂತೆಯೇ ಲೆಕ್ಕ ಮಾಡಲ್ಪಡುವದು. ಈ ಪತ್ರಿಕೆಯಲ್ಲಿ ಘಾಯಿಸ್ ಮಾಡುವಬಗ್ಗೆ ಪ್ರಕಟನೆಗಳು ಕಳುಹಿಸುವವರು ಅವು ಎಷ್ಟಾವರ್ತಿ ಘಾಯಿಸ್ ಮಾಡಲ್ಪಡಬೇಕೋ ಆ ಅಂಶವನ್ನು ಸ್ಪಷ್ಟವಾಗಿ ತಿಳಿಸತಕ್ಕದ್ದು. ಇಲ್ಲದಿದ್ದರೆ ಅವರು ಸಮಗೆ ನಿಲ್ಲಿಸುವಂತೆ ಬರೆಯುವತನಕ ಅವು ಪ್ರಕಟಿಸುತಿರುವು ಹಾಗೆ ಎಷ್ಟಾವರ್ತಿ ಪ್ರಕಟಿಸಲ್ಪಟ್ಟದ್ದಾಗ್ಯೂ ಮೇಲ್ಕಂಡ ದರದಂತೆ ಕಿಮ್ಮತ್ ವಸೂಲ್ಮಾಡಲ್ಪಡುವದು. ಪ್ರಕಟನೆಯಬಗ್ಗೆ ಕಳುಹಿಸಲ್ಪಡತಕ್ಕ ಪ್ರಕಟನೆಗಳನ್ನು ಆಯಾ ಸೋಮವಾರದಿನ ಮಧ್ಯಾಹ್ನ ೨ ಘಂಟೆಯೊಳಗಾಗಿ ಕಳುಹಿಸಬೇಕು. ಪ್ರಕಟನೆಯಬಗ್ಗೆ ಈ ಪತ್ರಿಕೆಗೆ ಕಳುಹಿಸಲ್ಪಡತಕ್ಕ ಕಾಗದಗಳಲ್ಲಿ ತಿಳಿಸಲ್ಪಡುವ ಅಭಿಪ್ರಾಯಗಳಿಗೆ ನಾವು ಜವಾಬ್ದಾರರಾಗಲಾರೆವು. ಕ್ರಮವಾಗಿ ರುಜುಮಾಡಿ ದಸ್ತೈತ್ ಮಾಡಿದವರ ಹೆಸರನ್ನು ಪ್ರಕಟಿಸಬಾರದೆಂದು ನಿರೂಪಿಸಲ್ಪಟ್ಟ ಕಾಗದಗಳು ಮರಳಿ ವಾಪಸ್ ಕಳುಹಿಸಲ್ಪಡಲಾರವು.

"IT RECOMENDS ITSELF"

ALL WHO SUFFER FIND SURE RELIEF.

LITTLE'S

ORIENTAL BALM.

THE MOST EFFECTUAL MODERN REMEDY FOR PAIN.

ಲಿಟಲ್ ಎಂಬುವರಿಂದ ತಯಾರ್ಮಾಡಲ್ಪಟ್ಟ "ಬಾಧಸಂಹಾರಿಣೀ" ಎಂಬ ಪೂರ್ವದೇಶ ಸಂಬಂಧವಾದ ಅಮೂಲ್ಯ ತೈಲವು ಸ್ವಶಕ್ತಿ ಪ್ರದರ್ಶಕವಾದದ್ದು, ಮತ್ತು ಸಫಲವಾದ ನವೀನ ಪ್ರತಿಕ್ರಿಯಾರೂಪವಾದ ಔಷಧವು. ಇದರಿಂದ ಸಕಲ ವಾತರೋಗಗಳೂ, ವಾತಸಂಬಂಧಗಳಾದ ಸಂಧಿಬಂಧಗಳೂ ನಿವೃತ್ತಿಯಾಗುವವು. ಮುಖ್ಯವಾಗಿ ಬೆರಕಾರಿಕವಾದ ವಾತರೋಗಗಳು, ಕಾಸ, ಗಂಟಲಿನಲ್ಲಿ ಉರಿ, ತಲೆನೋವು, ಶೀತವಾಯು, ಕಟಿವಾಯು, ಉಳುಕು ನೋವು, ಹಲ್ಲುನೋವು, ತಿಮಿರುವಾಯು ಮುಂತಾದ ರೋಗಗಳಿಗೆಲ್ಲ ನಿಸ್ಸಂದೇಹವಾಗಿ ಬಹಳ ಪ್ರಯೋಜನವನ್ನುಂಟು ಮಾಡತಕ್ಕದ್ದು. ಈ ತೈಲವನ್ನು ನೋವುಳ್ಳ ಸ್ಥಳಗಳಲ್ಲಿ ಕೆಂಪಾವರ್ಣ ಸವರಿ ಶಾಖವುಂಟಾಗುವಂತೆ ಚನ್ನಾಗಿ ತಿಕ್ಕಿದಲ್ಲಿ ಸಹಜಗಳಾದ ಎಲ್ಲಾ ನೋವುಗಳನ್ನು ನಿವೃತ್ತಿ ಮಾಡುವಂತಾ ಉತ್ತಮ ತೈಲವಾಗಿರುತ್ತದೆ. ಸಕ್ತ್ರೋಪನೆಯಿಂದಲೇ ಅರೆತಲೆನೋವು ಮತ್ತು ಜೋಮು ಕುವ್ವಾಂಗ ನಿವೃತ್ತಿಯಾಗುವದು. ಗಂಟಲಿನಲ್ಲುಂಟಾಗುವ ಉರಿ ಅಥವಾ ವ್ರಣಗಳಿಗೆ ಈ ತೈಲವು ಅದ್ಭುತವಾದ ಮತ್ತು ಶೀಘ್ರವಾದ ಸಂಪೂರ್ಣ ಗುಣವನ್ನುಂಟುಮಾಡುವದು. ಅದ್ಭುತವಾದ ಈ ಔಷಧವನ್ನು ಅಜನಾ ಉಪಯೋಗಿಸಿದಲ್ಲಿ ಅದರ ಪ್ರಯೋಜನವು ಸ್ವತಃ ವ್ಯಕ್ತವಾಗುವದು. ಈ ತೈಲವು ಶೀತಗಾಳಿ ಮಂಜು ಮುಂತಾದವುಗಳಿಗೊಳಗಾಗಿ ಸಂಚರಿಸುವಂತಾ ಪ್ರಯಾಣಿಕರು, ಬೇಟೆಗಾರರು, ದೇಶಾಟನ ಮಾಡುವವರು, ಮುಂತಾದವರಿಗೆಲ್ಲ ಅಮೂಲ್ಯವಾದದ್ದು.

ಪರಿಶೀಲಕರ ಅಭಿಪ್ರಾಯವು.

ಐರ್ಲ್ಯಾಂಡ್ ದೇಶದ ಫಾರ್ಮಸ್ಯೂಟಿಕಲ್ ಸೊಸೈಟಿಯೆಂಬ ಔಷಧಶಾಲೆಯ ಪ್ರೆಸಿಡೆಂಟರಾಗಿಯೂ, ಸದರೀ ದೇಶದ ಜಿಯಾಲಜಿಕಲ್ ಸೊಸೈಟಿ ಎಂಬ ಭೂತತ್ವಶಾಸ್ತ್ರವಿಚಾರಕ ಸಮಾಜದ ಮೆಂಬರರಾಗಿಯೂ, "ಮಿನರಲ್ ವಾಟರ್ಸ್ ಆಫ್ ಯೂರಪ್" ಎಂಬ ಗ್ರಂಥಕರ್ತರಾಗಿಯೂ, ರಸಾಯನಶಾಸ್ತ್ರ ವಿಷಯಕವಾದ ಅನೇಕ ಲೇಖನಾಧಿಕಾರಿಗಳಾಗಿಯೂ, ಇರುವ ಪ್ರೊಫೆಸರ್ ಟಿಚ್ ಬೋರ್ನ (C. R. TICHBORNE, L. L. D., F. C. S., M. R. I. A.,) ಎಂಬುವರು ಅಭಿಪ್ರಾಯ ಪಟ್ಟಿರುತ್ತಾರೇನಂದರೆ—ಲಿಟಲ್‌ರವರ ಓರಿಯಂಟಲ್ ತೈಲವನ್ನು ನಾನು ರೂಪತಿಳಿಯಲು ಪರೀಕ್ಷಿಸಿದ್ದರೊಳು ಇದು ಬಹುವಿಧ ಮೂಲಿಕೆಗಳ ಸಮ್ಮಿಶ್ರವಾದ ತೈಲವೆಂದೇ ಪೆಟ್ಟುತ್ತಲ್ಲದೆ, ಇದು ಹೊರಗೆ ಉಪಯೋಗಿಸಲ್ಪಡುವಾಗ ಕುವ್ವಾಂಗ ನಿರುಪದ್ರವಕರವಾದದ್ದಾಗಿದ್ದರೂ, ನಿಜವಾಗಿ ಪ್ರಬಲ ರೋಗ ನಿವಾರಕ ಶಾಕಿತ್ವಯುಳ್ಳದ್ದಾಗಿರುತ್ತದೆ. ಈ ಮಿಶ್ರೌಷಧವು ಸಾಗಗಳನ್ನು ಸ್ಥಿಮಿತಕ್ಕೆ ತರತಕ್ಕದ್ದಾಗಿರುವದರಿಂದ ಇದು ಯಾವ ತರದ ರೋಗಗಳಿಗೆ ಉಪಯುಕ್ತವೆಂದು ತಿಳಿಸಲ್ಪಟ್ಟಿದೆಯೋ ಸದರೀ ರೋಗಗಳಲ್ಲಿ ಅದರ ಪ್ರಯೋಜನವು ವ್ಯಕ್ತವಾಗುವದು. ಈ ತೈಲವು ಸಂಪೂರ್ಣ ಜಾಗರೂಕತೆಯೊಡನೆ ತಯಾರ್ಮಾಡಲ್ಪಟ್ಟಿರುತ್ತದೆ.

ಇದರ ಕ್ರಯ—ಸೀಸೆ ಒಂದಕ್ಕೆ ೧ ರೂಪಾಯಿ.

ಇದು ಪಿಸ್ತ ಔಷಧ ಶಾಲೆಯಲ್ಲಿಯೂ, ಮದರಾಸ್ ಶಂಬುದಾಸ್ ಬೀದಿಯಲ್ಲಿ, ೨೦ನೇ ನಂಬರ್ ಮನೆಯೊಳಗಿರುವ, ದು. ಎ. ಸಿ. ಬೆರ್ರಿಮನ್ ಯವರಲ್ಲಿಯೂ, ಈ ಪಟ್ಟಣದಲ್ಲಿರುವ ಇವರ ಏಜಂಟರಾದ ಜೆ. ವೆಸ್ಟ್ ಯವರ ಕಂಪೆನಿಯಲ್ಲಿಯೂ, ಮೆ. ಕೆಪ್ಟೈನ್ ಅಂಡ್ ಕಂಪೆನಿಯವರಲ್ಲಿಯೂ, ರಿಗ್ಸ್ ಎಂಬುವರ ಕಂಪೆನಿಯಲ್ಲಿಯೂ ದೊರೆಯುವದು.

AGENTS.— Messrs. J. WEST, Chemist, &c, Bangalore.
CAPTAIN & Co. Chemists, Bangalore.
RIGGS & Co, Chemists, Bangalore; and of
MAHOMED YOUSOFF AND SONS, The Cash Bazar, Bangalore
A. C. BERRYMAN & Co.,
20 Sambodoss Street Madras.

NOTICE.

VAIDYASARA SANGRAHA

A TREATISE ON THE PRINCIPLES OF

HINDU MEDICINE.

☞ Price including Postage Rs 5 6 0

ವೈದ್ಯಸಾರ ಸಂಗ್ರಹ.

ಈಗ್ರಂಥಾಪೇಕ್ಷೆಯುಳ್ಳವರು ಮೊಬಲಗಿನೊಡನೆ ಈ ಕೆಳಗೆ ರುಜುಮಾಡಿರತಕ್ಕವರ ಹೆಸರಿಗೆ ಬರೆದುಕೊಂಡರೆ ಪುಸ್ತಕ ಕೂಡಲೇ ಕಳುಹಿಸಲ್ಪಡುವದು. ಮೊಬಲಗು ಇಲ್ಲದ ದರಖಾಸ್ತುಗಳಿಗೆ ಸುತರಾಂ ನಿಗೇಕೊಡಲ್ಪಡಲಾರದು.

ಇದರ ಕ್ರಯ ... ...ರೂ॥ ೫—೦—೦
ಪ್ಯಾಕಿಂಗ್ ಮತ್ತು ಅಂಚೇಹಾಸಲ್, ೦—೬—೦

ಟಿ. ವಿ. ವೆಂಕಟಾಚಾರ್,
ಆಸ್ಪತ್ರಿರೋಡ್ ಬೆಂಗಳೂರು.

ವಿಶೇಷ ವರ್ತಮಾನ

ಪುನೆ ಚಿತ್ರಶಾಲೆಯಲ್ಲಿ ಸಿದ್ಧಪಡಿಸಲ್ಪಟ್ಟಿರುವ ಹೊಸ ಚಿತ್ರಗಳಲ್ಲಿ, ಹಿಂದೂ ದೇವರುಗಳ, ಚರಿತ್ರೆಗಳ ಮೂಲಕ ಪ್ರಸಿದ್ಧರಾದ ಪುರುಷರ, ಸುಂದರಿಗಳಾದ ನೇಟಿವ್ ಹೆಂಗಸರ ಮತ್ತು ರಂಗಿನ ಚಿತ್ರಗಳು ತಯಾರಾಗುತಲಿವೆ. ಇವುಗಳ ಕೆಲವನ್ನು ಕೆಲವರಿಗೆ ನಮೂನೆಗೆ ಕ್ರಯ ಬಹಳ ಅಲ್ಪವಾಗಿದೆ. ದೇಶಾದವರಿಗೆ ಕ್ರಯದಪಟ್ಟಿ ಕಳುಹಿಸಲ್ಪಡುವವು.

ಪುನೇ ಮಹರ್ ಚಿತ್ರಶಾಲೆಯ ಮ್ಯಾನೇಜರ್.

Bangalore City Municipality.

ಬೆಂಗಳೂರು ಸಿಟಿ ಮ್ಯುನಿಸಿಪಾಲಿಟಿ.

ಸನ್ ೧೮೮೮ನೇ ಇಸವಿ ಸೆಪ್ಟೆಂಬರ್ ೨೨ನೇ ತಾರೀಖ್ ಶನಿವಾರ ಪ್ರಾತಃಕಾಲ ೭½ ಘಂಟೆಗೆ ಸಿಟಿ ಮ್ಯುನಿಸಿಪಲ್ ಕಮಿಷನರ್‌ಗಳು ತಮ್ಮ ಆಫೀಸ್ ಕಟ್ಟಡದಲ್ಲಿ ಸಭೆ ಸೇರುವಾಗ ಅವರ ಆಲೋಚನೆಗೆ ತರಲ್ಪಡುವ ವಿಷಯಗಳೆಂತೆಂದರೆ:—

೧. ಸನ್ ೧೮೮೮ನೇ ಇಸವಿ ಆಗಸ್ಟ್ ಮಾಹೆಯ ನಗದು ಜಮಾಖರ್ಚು ಲೆಕ್ಕಗಳು ಮತ್ತು ಮರಣ ಲೆಕ್ಕಗಳು.

೨. ಬಾರ್ ಲೈನ್ ಬಳಿ ಇರುವ ಗುಡಿಸಲುಗಳಿಗೆ ಕೆಂದಾಯ ಹಾಕುವ ವಿಷಯದಲ್ಲಿ, ಬೆಂಗಳೂರಲ್ಲಿನ ಮಿಲಿಟರಿ ಸೆಕ್ರಿಟರಿಯವರು ಬರೆದ ಸನ್ ೧೮೮೮ನೇ ಇಸವಿ ಸೆಪ್ಟೆಂಬರ್ ೩ನೇ ಮಾರ್ಕ್ ೧೦೬ನೇ ನಂಬರ್ ಲೆಟರ್.

೩. ಸಿ. ಕೃಷ್ಣಶೆಟ್ಟರು ಗೋವರ್ಧನ ಪೇಟೆಯ ಭಾವಿಯಬಳಿ ಇರುವ ಒಂದು ನಿವೇಶನವನ್ನು ಅಪೇಕ್ಷಿಸಿ ಬರೆದುಕೊಂಡ ಅರ್ಜಿ ಮತ್ತು ಅದರಮೇಲೆ ಕಮಿಷನರ್‌ಗಳು ಮಾಡಿದ ರಿಪೋರ್ಟುಗಳು.

೪. ಬಾರ್‌ಲೈನ್ ಬಳಿ ಒಂದು ಹುಲ್ಲುಗಾವಲಿಬಗ್ಗೆ ಮೆ. ಸಿ. ಸುಬ್ಬರಾಯರವರು ಬರೆದುಕೊಂಡ ಅರ್ಜಿ.

೫. ಗಳುವಂಗಡಿಯನ್ನು ಈಗಿನ ಸ್ಥಳದಿಂದ ತಪ್ಪಿಸಬೇಕೆಂದು ಮ್ಯುನಿಸಿಪಲ್ ಕಮಿಷನರೊಬ್ಬರಾದ ಮಿಸ್ಟರ್ ಅಣ್ಣಯ್ಯಶೆಟ್ಟರು ಬರೆದ ಸನ್ ೧೮೮೮ನೇ ಇಸವಿ ಸೆಪ್ಟೆಂಬರ್ ೧೨ನೇ ಮಹೆಯ ರಿನ ಲೆಟರ್.

೬. ಮಾರ್ಕೆಟಿನಬಳಿ ಗರಿಯಾರದ ಗೋಪುರವೊಂದನ್ನು ಕಟ್ಟಿಸಬೇಕೆಂದು ಸದರೀ ಮ್ಯುನಿಸಿಪಲ್ ಕಮಿಷನರು ಕೊಟ್ಟ ಸಲಹೆ.

A. SRINIVASA CHARLU, R. B.,
Vice-President,
City Municipal Commission.

ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA.

MONDAY, SEPTEMBER 17, 1888.

೧೮೮೮ನೇ ಸೆಪ್ಟೆಂಬರ್ ೧೭ನೇ ತಾ॥ ಸೋಮವಾರ.

GOD'S GIFTS AND THEIR ABUSE.

ಈಶ್ವರ ಕೃಪಾಲಬ್ಧಗಳಾದ ವಿಷಯಗಳು ಸತ್ಕಾರ್ಯಗಳಲ್ಲಿಯೂ ಅಪಾತ್ರಗಳಲ್ಲಿಯೂ, ಮನುಷ್ಯನು ವಿನಿಯೋಗಿಸುವನಾದರೆ ಅದರಿಂದ ಸ್ವಾತ್ಮಾಗಿ ತಕ್ಕನಾಶವೂ, ಪರುಷರೆಯೂ ಅನ್ಯರಿಗೆ ಹಾನಿಯೂ ಉಂಟಾಗದೆ ಹೋಗಲಾರದು. ಮನುಷ್ಯನ ಸ್ವರೂಪ ನಿರ್ಧಾರಣಾರ್ಥವಾಗಿಯೇ ಭಗವಂತನು ಕೆಲವರಿಗೆ, ವಿಶೇಷ ಪರಿಭಾವನೆಯೊಡನೆ ಉತ್ತಮ ವಿಷಯಗಳು ಕೃಪೆಗೈಯುತ್ತಾನೆ. ಅವುಗಳಲ್ಲಿ ಐಶ್ವರ್ಯ, ವಿದ್ಯೆಯೆಂಬ ಎರಡು ವಿಷಯಗಳು ಪ್ರಧಾನಗಳಾಗಿಯೂ, ಅವು, ಅಧಿಕಾರ, ಕೀರ್ತಿ, ಬಲ, ಬುದ್ಧಿ, ಚಾತುರ್ಯಾದಿ ಅನೇಕ ವಿಷಯಗಳಿಗೆ ಸಾಧಕಗಳಾಗಿಯೂ ಇರುತ್ತವೆ. ಐಶ್ವರ್ಯವನ್ನು ಅನುಚಿತವಾಗಿಯೂ,ಅಕ್ರಮವಾಗಿಯೂ ಇರುವ ವಿಷಯಗಳಲ್ಲಿ ವಿನಿಯೋಗಿಸು

ವವನ ಧನವು ಅಲ್ಪಕಾಲದಲ್ಲಿಯೇ ಮೂಲತಃತ್ಪ್ರಯವನ್ನೈದಿ ತನ್ಮೂಲಕ ಅವನು ದಾರಿದ್ರ್ಯಮೂಲಕವಾದ ನಾನಾವಿಧದುಃಖಗಳಿಗೂ, ಅಗೌರವಕ್ಕೂ ಅನ್ಯರು ದೂಷಣ ತಿರಸ್ಕಾರಗಳಿಗೂ, ಈಶ್ವರನ ನಿಗ್ರಹ ಮೂಲಕವಾದ ಪರಲೋಕ ದುಃಖಗಳಿಗೂ ಪಾತ್ರನಾಗದೆ ಹೋಗಲಾರನು. ಹೀಗೆಯೇ ದೇವರಿಂದ ಕೊಡಲ್ಪಟ್ಟ ವಿದ್ಯಾಬುದ್ಧಿಯನ್ನು ಯಾವನು ಅಸಹಜ ಅಥವಾ ಅಸಾಧ್ಯವಾದ ವಿಷಯದಲ್ಲಿ ಸ್ವಪ್ರಯೋಜನಾರ್ಥ ಉಪಯೋಗಿಸಲೆತ್ನಿಸುವನೋ ಅವನು ಸ್ವತಃ ವಿಶೇಷಾನಿಷ್ಟಗಳಿಗೆ ಗುರಿಯಾಗುವನಲ್ಲದೆ, ಅವನ ವಿದ್ಯಾಬುದ್ಧಿಯಮೇಲೆ ಯಾವದೋ ಒಂದುಬಗೆ ನಂಬಿಕೆಯನ್ನಿಟ್ಟಿರುವವರ ಸಹ ಗುರಿಮಾಡುವನು. ದೇವರಿಂದ ಕೊಡಲ್ಪಟ್ಟಿರುವ ಬುದ್ಧಿಯಿಂದ ತಾನು ಮಾಡತಕ್ಕ ಕೆಲಸಗಳಲ್ಲಿ ಪ್ರಯೋಜನಾಪ್ರಯೋಜನಗಳನ್ನು ಮುಂದಾಗಿ ವಿಮರ್ಶಿಸಿ ತರುವಾಯ ಪ್ರವರ್ತಿಸತಕ್ಕದ್ದು ವಿವೇಕಿಯ ಕಾರ್ಯವಾಗಿರುತಿದೆ. ಹಾಗಿಲ್ಲದೆ ಆತ್ಮಪ್ರಗಲ್ಭ್ಯದಿಂ ಮೈಮರೆತು ನಶ್ವರಗಳಾದ ಮತ್ತು ಸಾಧ್ಯಸ್ಯಗಳಾದ ಅನುಕೂಲ್ಯಗಳಂ ಕಂಡುಮರೆಯುತ್ತ ಕೀರ್ತಿಸಂಪಾದಕರಾಗಬೇಕೆಂಬವರ ವೃತ್ತಿಯನ್ನನುಸರಿಸತಕ್ಕವರು ಕಾಲಾಂತರದಲ್ಲಿ ದುಸ್ಸಹವಾದ ದುಃಖಕ್ಕೂ ಸಂಕಟಕ್ಕೂ ಗುರಿಯಾಗುವರೆಂಬದಂ ಇದರಡಿ ಕಂಡಬಂದು ವಿಷಯದಿಂದಲೇ ನಿರ್ಧರಿಸಿ ತಿಳಿದುಕೊಳ್ಳಬಹುದೇನುವರೆ,— ೧೮೮೫ನೇ ಇಸವಿಯಲ್ಲಿ ಪುರುಷಸಂಪರ್ಕರಹಿತರಾದ ಕೆಲವರು ಬಾಲವಿತಂತುಗಳಿಗೆ ಬಳ್ಳಾರಿಯಲ್ಲಿ ವಿವಾಹಪಡಿಸಿದ್ದವಷ್ಟೆ. ಸದರೀ ವಿವಾಹಿತೆಯರ ಪೈಕಿ ಒಬ್ಬಾಕೆಯ ತಂದೆಯು ಕಳೆದತಿಂಗಳ ೨೮ನೇ ತಾರೀಖಿನಲ್ಲಿ ಬಳ್ಳಾರಿ ಸತ್ರದಲ್ಲಿ ಕಾಲಗತಿಯಿಂದ ಮೃತಿಪಟ್ಟನು. ಬಳಿಕ ಆತನ ಪ್ರೇತವನ್ನು ದಹನ ಭೂಮಿಗೆ ಸಾಗಿಸುವದು ಬಹಳ ಅಸಾಧ್ಯವಾಗಿ ಏರ್ಪಟ್ಟಿತು. ಬಹಿಷ್ಕೃತನಾದವನ ಕಳೇಬರವನ್ನೊಬ್ಬರೂ ಮುಟ್ಟುವದಿಲ್ಲವೆಂದು ಸ್ಥಳದ ಬ್ರಾಹ್ಮಣರೆಲ್ಲರೂ ನಿರಾಕರಿಸಿಬಿಟ್ಟರು. ತರುವಾಯ ಅರ್ಥಾತ್ ಆ ಮಾರ್ಗವಾಗಿ ಹೋಗುತಲಿದ್ದ ಕೆಲವರು ಗೋಸಾಯಿಗಳನ್ನೂ ಮುಂಬೈಯಿಂದ ಬಂದಿದ್ದ ಬೇರೆಯೊಬ್ಬ ಬ್ರಾಹ್ಮಣನನ್ನೂ ಪ್ರಾರ್ಥಿಸಲು ಅವರಿಗೆದಯೆಯುಂಟಾಗಿ ಪ್ರೇತವಂ ದಹನಭೂಮಿಗೆ ಸಾಗಿಸಿಕೊಂಡು ಹೋದರು. ಮೃತಪಟ್ಟಾತನ ಅಪರಕ್ರಿಯೆಗಳು ಅವನಳಿಯನೊಬ್ಬನಿಂದ ನೆರವೇರಿಸಲ್ಪಟ್ಟವಂತೆ. ಈಗ ಬಳ್ಳಾರಿಯಲ್ಲಿ ಬಿಜಮಾಡಿರುವ ಶ್ರೀ ಶೃಂಗೇರಿಸ್ವಾಮಿಗಳವರ ಸನ್ನಿಧಿಯಲ್ಲಿ ಪ್ರೇತ ದಹನಕ್ಕುಂಟಾಗಿರುವ ಅಡಚಣೆಯಂ ವಿಜ್ಞಾಪಿಸಿ ಸಹಾಯ ಮಾಡಿಸಬೇಕೆಂದು ಕೇಳಿಕೊಂಡದಕ್ಕೆ ಸ್ವಾಮಿಗಳವರು ಸದರೀ ವಿಷಯದೊಳು ತಾವು ಹಸ್ತಾಂಗ ಪ್ರವೇಶಿಸುವದಿಲ್ಲವೆಂತಲೂ, ಹಾಗೆ ಪ್ರವೇಶಿಸಿದರೆ ಪ್ರತ್ಯಕ್ಷತಃ ತಾವುವಿಧವಾವಿವಾಹಕ್ಕೆ ಅನುಜ್ಞೆಯಂ ಕೊಟ್ಟಂತೆಯಾಗುವದೆಂತಲೂ, ಆಜ್ಞಾಪಿಸಿ ನಿರಾಕರಿಸಿದರೆಂಬದಾಗಿ ಮದರಾಸ್ ಟೈಂಸ್ ಪತ್ರಿಕೆಯ ಮೂಲಕ ತಿಳಿಯಲಾದೆವು.

ಈಗ ಮೃತಪಟ್ಟ ಬ್ರಾಹ್ಮಣನಿಗೆ ಅಂತ್ಯಕಾಲದಲ್ಲುಂಟಾದ ದುರ್ದಶೆಯು ನಮಗೆ ಮಿತಿಯಿಲ್ಲದ ಸಂಕಟವನ್ನುಂಟುಮಾಡತಕ್ಕದ್ದಾಗಿದೆ. ಆತನು ದೃಢಗಾತ್ರನಾಗಿರುವಾಗ್ಯೆ ಅವನಿಗೆ ಪ್ರೋತ್ಸಾಹಕರಾಗಿದ್ದವರೂ ಕಡೆಗೂ, ಸಹಾಯಕರಾಗಿರುವಂತೆ ವಾಗ್ದಾನಮಾಡಿದ್ದವರೂ, ಮಾಡಿದಕಾರ್ಯಕ್ಕಾಗಿ ಅವನು ಚಿಂತಿಸಿದಾಗ ಅಂಜಬೇಡವೆಂದು ಅಭಯಮಂ ಕೊಟ್ಟಿದ್ದವರೂ, ಶಾಸ್ತ್ರಸಮ್ಮತವಾದ ಕೆಲಸವು ಕುರಿತು ಆಲೋಚಿಸಲ್ಯಾತಕ್ಕೆಂದು ಹಿಲಾಸೆಕೊಟ್ಟಿದ್ದವರೂ ಈ ಸಂದರ್ಭದಲ್ಲಿ ಎತ್ತ ಹೋದರೋ, ಅವರೇನಾದರೋ ಎಂದು ನಮ್ಮ ಮನವು ಬಹಳ ತಲ್ಲಣಿಸುತಲಿದೆ. ಅನ್ಯರಮಗುವಂತಳ್ಳ ಭಾವಿಯು ಆಳನೋಡಿಸಿದವನಂತೆ, ಸದರೀ ದೊಡ್ಡ ಮನುಷ್ಯರು ತಮ್ಮ ಕೀರ್ತಿ ಪ್ರಾಶಸ್ತ್ಯಗಳಿಗಾಗಿ ಆಬದಬ್ರಾಹ್ಮಣನಂ ಇಂತಹದುರ್ದಶೆಗೆ ಗುರಿಪಡಿಸಿ ಸಂತೃಪ್ತರಾಗಿ ಕೊನೆಗೆ ತಪಸ್ವಿಗಳಾದಂತೆ ತೋರುತಿದೆ. ಪೂರ್ವಸ್ಥಿತಿಪರಿಷ್ಕಾರಣದಲ್ಲಿಬದ್ಧಾದರಪ್ರಜ್ಞರಾಗಿರುವ ಇಂತಹದೊಡ್ಡಮನುಷ್ಯರ ಪ್ರತಿಜ್ಞಾ ಪ್ರಯತ್ನಗಳೆಲ್ಲವೂ ಪರ್ಯವಸಾನದಲ್ಲೀರೀತಿಯಾಗುವದೆಂಬ ಭಾವನೆಯು ಅನೇಕರಿಗುಂಟಾಗದಿರಲಿಲ್ಲವು.

ಮುಖ್ಯವಾಗಿ ಸವತಿ ಮತ್ಸರದಲ್ಲಿ ಮಗು ನಾಶವಾದಂತೆ ಅವಸಾನಕಾಲದಲ್ಲಿ ಉಭಯಪಕ್ಷದವರಿಂದಲೂ ತಿರಸ್ಕೃತನಾದ ಮೇಲೆಕಂಡ ಬ್ರಾಹ್ಮಣನ ದೆಸೆಯು ಬಹಳ ಚಿಂತಿಸತಕ್ಕದ್ದಾಗಿರುತಿದೆಯಲ್ಲದೆ ಇತರರಿಗೆ ಇವನಸ್ಥಿತಿಯೊಂದು ಉದಾಹರಣರೂಪವಾಗಿರುವದು.

MORAL GEMS FROM THE MAHABHARATA.

ಮಹಾಭಾರತ ನೀತಿರತ್ನಾವಳಿ.

VII.—Of Goodmen.—ಸಜ್ಜನರಕಳೆ.
The Hindu Excelsior Series No. IX
(ಸೆಪ್ಟಂಬರ್ ೧೦ನೇ ತಾರೀಖಿನ ಪತ್ರಿಕಾ ಶೇಷವು.)

ಶ್ಲೋ||ತಪಶ್ಚದಾನಂಚಶಮೋದಮಶ್ಚಹ್ರೀ
ರಾರ್ಜವಂಸರ್ವಭೂತಾನುಕಂಪಾ|ಸ್ವ
ರ್ಗಸ್ಯಲೋಕಸ್ಯವದಂತಿಸಂತೋದ್ವಾರಾ
ಣಿಸಪ್ತೈವಮಹಾಂತಿಪುಂಸಾಂ||೬೦||

ಅ|| ತಪಸ್ಸು, ದಾತೃತ್ವ, ಶಾಂತಿ, ದಾಂತಿ, ಲಜ್ಜೆ, ಋಜುತ್ವ, ಭೂತದಯೆಗಳೆಂಬ ಈಸದ್ಗುಣಗಳು ಸ್ವರ್ಗಕ್ಕೆ ಮಹದ್ವಾರಗಳಂ ತಿಳುವವೆಂದು ಮಹಾತ್ಮರು ಹೇಳುತ್ತಾರೆ, ಅಂದರೆ, ಈಸದ್ಗುಣಗಳಮೂಲಕವೇ ಸ್ವರ್ಗಸುಖವನ್ನು ಅನುಭವಿಸಬೇಕಾಗಿರುತಿದೆಂದು ಭಾವವು.

ಶ್ಲೋ || ನಜಾತುಹ್ಯಸ್ಯೈನ್ನಹತಾಧನೇನ
ವೇದಾನಧೀಯೀತಾಪಹೃತಸ್ಸ್ಯಾತ್ |
ದುಃಖೈರ್ನತಪ್ಯೇನ್ನಸುಖೈಃಪ್ರಹೃಷ್ಯೇ
ತ್ಸಮೇನವರ್ತೇತಸದೈವಧೀರಃ ||೬೧||

ಅ|| ಮನುಷ್ಯನು ಅಧಿಕವಾದ ಧನವಂ ಪಡೆದಿರುವದಕ್ಕಾಗಿ ಬಹಳ ಸಂತೋಷಿಸಲಾಗದು. ವೇದಶಾಸ್ತ್ರಾದಿ ಸಕಲ ವಿದ್ಯಾ ಪ್ರವೀಣನೆಂದು ಅಹಂಕಾರ ಪಡಕೂಡದು. ದುಃಖಪ್ರಾಪ್ತವಾದಾಗ ಮನಸ್ಸಂಕಟವನ್ನೈದಬಾರದು. ಸುಖಪ್ರಾಪ್ತವಾದಾಗ ಅತ್ಯಧಿಕವಾದ ಆನಂದವಂ ಪಡೆಯಲಾಗದು. ಹೀಗೆ ಸರ್ವಕಾಲ ಸರ್ವಾವಸ್ಥೆಗಳಲ್ಲಿಯೂ ಯಾವನು ಮನೋವಿಕಾರವನ್ನೈದದೆ ಸಮವಾಗಿ ವರ್ತಿಸುವನೋ ಅವನನ್ನೇ ಪ್ರಾಜ್ಞರು ನಿಜವಾದ ಧೀರನೆಂದು ಕೊಂಡಾಡುವರು.

ಶ್ಲೋ||ಯೇಷ್ವೇವಮಭಿಜಾನಂತಿವೃತ್ತಂಸಾಧು
ಜನೇನವಾ | ಕೇಮುಸಾಧುಮುಪಶ್ಯಂ
ಸಮಾಸಾಶ್ರುಸ್ಮಉಚ್ಯತೆ ||೬೨||

ಅ|| ಅನ್ಯನನ್ನೇಹವು ಬಯಸುವದಕ್ಕೆ ಮುಂಚಿತವಾಗಿ ಯಾರು ವರ್ತನದಿಂದಲೂ, ಅಭಿಜಾತ್ಯದಿಂದಲೂ, ಸದ್ಗುಣಗಳಿಂದಲೂ, ನಿರ್ದೋಷಿಯೆಂದು ತೋರುತಿದೆಯೋ ಅಂತವರಂ ಹುಡಿಕಿ ಅವರ ಸ್ನೇಹವು ಮಾಡಬೇಕು. ಅಂತಾ ಮೈತ್ರಿಯು ಉತ್ತಮ ವೆನಿಸಿಕೊಳ್ಳುವದಲ್ಲದೆ ಅದುಂ ಪಡೆಯುವವನಿಗೆಸುಖ ಸಂತೋಷಗಳು ತಪ್ಪದೆ ಉಂಟಾಗುವವು.

ಶ್ಲೋ || ಯದಿರಾಜಾನಸಂರಕ್ಷೆತ್ಪ್ರೀಚಾನಾಪ
ರನಾಭವೇತ್ | ಅರಾಜಕೇಜನಪದೇದೋ
ಷಾಹಾಯಾಂತಿವೈಸದಾ || ೬೩||

ಅ|| ಅರಸನು ಯೋಗ್ಯನಾಗಿ ಧರ್ಮದಿಂ ಪ್ರಜಾಪಾಲನೆಯಂ ಮಾಡತಕ್ಕವನಲ್ಲದೆಹೋದರೆ ಅವನ ಪ್ರಭುತ್ವದಲ್ಲಿ ಪ್ರಜೆಗಳಿಗೆ ವಿಪತ್ತುಗಳು ಹೇರಳವಾಗಿ ಪ್ರಾಪ್ತವಾಗುವವು. ಅರಸನಿಲ್ಲದ ದೇಶದಲ್ಲಿಯೂ ಅವನು ದುರ್ವೃತ್ತನಾಗಿರುವಕಡೆಯಲ್ಲಿಯೂ ಸಂಕಟಗಳು ಸ್ವತಯೇವ ತಲೆದೋರುತಲಿರುವವು. ಅಂದರೆ ಪ್ರಜಾಪಾಲನವು ರಾಜಧರ್ಮವಾಗಿಯೂ, ಆತನಲ್ಲಿ ಭಕ್ತಿ ಗೌರವಗಳಂ ಪಡೆದಿರುವದು ಪ್ರಜೆಗಳ ಧರ್ಮವಾಗಿಯೂ ಇರುತಿದೆ.

ಶ್ಲೋ|| ಮೋಹಜಾಲಸ್ಯಯೋನಿರ್ಹಿಮೂಢೈ
ರೇವಸಮಾಗಮಃ | ಅಹನ್ಯಹನಿಧರ್ಮ
ಸ್ಯಯೋನಿಸ್ಸಾಧುಸಮಾಗಮಃ ||೬೪||

ಅ|| ಮೂಢರ ಸಹವಾಸವು ಬಹುವಿಧ ಹಾನಿಗಳಿಗೆ ಕಾರಣವಾಗುವದು. ಸತ್ಪುರುಷರ ಸಹವಾಸವು ಪ್ರತಿದಿನವಲ್ಲೂ ಪುಣ್ಯಹೇತು ಭೂತವಾದದ್ದಾಗಿರುವದು. ಆದದರಿಂದ ಸರ್ವಪ್ರಕಾರದಿಂದಲೂ ಸಜ್ಜನ ಸಂಗವನ್ನೇ ವಿವೇಕಿಯಾದವನು ಅಪೇಕ್ಷಿಸಿ ಪಡೆಯಲೆತ್ನಿಸಬೇಕು.

ಶ್ಲೋ|| ಕಾಮಕ್ರೋಧಾವಶೀಕೃತ್ಯ ದಂಭ
ಲೋಭಮನಾರ್ಜವಂ|| ಧರ್ಮಮಿತ್ಯೇವಸಂ
ತುಷ್ಟಾಸ್ತೇಶಿಷ್ಟಾಃಶಿಷ್ಟಸಮ್ಮತಾಃ||

ಅ|| ಯಾರು ಕಾಮ ಕ್ರೋಧ ಲೋಭ ಮೋಹ ಮದ ಮಾತ್ಸರ್ಯಗಳೆಂಬ ಅರಿಷಡ್ವರ್ಗಗಳಂ ದಮಿಸಿ ಸನ್ಮಾರ್ಗದಲ್ಲಿ ಪ್ರವರ್ತಿಸುವರೊ ಅವರೇ ಶಿಷ್ಟಜನಾಭಿಮತರೆನಿಸಿಕೊಂಡವರು, ಅವರನ್ನೇ ಜನಗಳೆಲ್ಲರೂ ಪ್ರಶಂಸಿಸುವರು. ಆವ ಕಾರಣ ಶತ್ರುರೂಪಗಳಾದವನ್ನೆಲ್ಲಮೊದಲು ನಿವೃತ್ತಿಸಿಕೊಳ್ಳಬೇಕಾದದ್ದು ಮುಖ್ಯ ಕಾರ್ಯವಾಗಿರುತಿದೆ.

ಶ್ಲೋ||ನವೈರಾಣ್ಯಭಿಜಾನಂತಿಗುಣಾನ್ಪಶ್ಯಂ
ತಿನಾಗುಣಾನ್ | ವಿರೋಧಂನಾಧಿಗಚ್ಛಂ
ತಿಯೇತಉತ್ತಮಪೂರುಷಾಃ ||೬೬||

ಅ|| ಶ್ರೇಷ್ಠನಾದ ಪುರುಷನು ಯಾತಲ್ಲಿಯೂ ಶತ್ರುತ್ವವಂ ಬೆಳೆಸಲಾರನು. ಮತ್ತು ಕಲಹನಿಮಿತ್ತಗಳಾದ ವಿಷಯಗಳಲ್ಲಿ ಪ್ರವೇಶಿಸಲಾರನು ಸಾಧ್ಯವಾದನುಟ್ಟಿಗೆ ಸದ್ಗುಣಗಳನ್ನು ಪರಿಗ್ರಹಿಸಿ ದುರ್ಗುಣಗಳಂ ತೊರೆಯಲಿಕ್ಕೆತ್ನಿಸುವನು

ಶ್ಲೋ|| ಸ್ಮರಂತಿಸುಕೃತಾನ್ಯೇವ ನವೈರಾಣಿ
ಕೃತಾನ್ಯಪಿ| ಸಂತಃಪರಾರ್ಥಂಕುರ್ವಾ
ಣಾನಾಪೇಕ್ಷಂತಿಪ್ರತಿಕ್ರಿಯಾಂ ||೬೭||

ಅ|| ಸತ್ಪುರುಷರು ಅನ್ಯರು ತನುಗೆ ಮಾಡಿದ ಮೇಲನ್ನು ಮಾತ್ರ ಸ್ಮರಿಸುವರಲ್ಲದೆ ಮಾಡಿದ ಅಪಕಾರವು ಸ್ಮರಿಸಲಾರರು. ಮತ್ತು ತಾವು ಹೊಂದಿದ ಪ್ರಯೋಜನಕ್ಕೆ ತಕ್ಕ ಪ್ರತ್ಯುಪಕಾರವು ಮಾಡಲಪೇಕ್ಷಿಸುವರೇ ಹೊರ್ತು ಅಪಕಾರಕ್ಕೆ ಪ್ರತ್ಯಪಕಾರವು ಯೆಂದಿಗೂ ಮಾಡಲೆತ್ನಿಸಲಾರರು.

ಶ್ಲೋ|| ಅದ್ರೋಹಸ್ಸರ್ವಭೂತೇಷುಕರ್ಮಣಾ
ಮನಸಾಗಿರಾ || ಅನುಗ್ರಹಶ್ಚದಾನಂ
ಚಸತಾಂಧರ್ಮಸ್ಸನಾತನಃ ||೬೮||

ಅ|| ಮನೋವಾಕ್ಕಾಯ ಕರ್ಮಗಳಿಂದ ಪರರಿಗೆ ಮೋಸ ಮಾಡದೆ ದಯೆ ದಾತೃತ್ವ ದಾಕ್ಷಿಣ್ಯಾದಿ ಗುಣಗಳಂ ಪಡೆದವನಿಗೆ ಅವುಗಳಿಗಿಂತ ಶಾಶ್ವತಗಳಾದ ಧರ್ಮಗಳು ಬೇರಿರಲಾರವು. ಅಂದರೆ, ಪರವಂಚನೆಯು ಸಕಲ ದೋಷಗಳಿಗೆ ಅವಕಾಶ ಕೊಡತಕ್ಕದ್ದಾದದರಿಂದ ಅದಕ್ಕೆ ಆಸ್ಪದ ಕೊಡದಿರುವಣವೇ ಪರಮ ಧರ್ಮವಾಗಿರುತಿದೆ.

Occasional Notes.

ನೈಮಿತ್ತಿಕ ವಿಷಯನ್ಯಾಸ.

Exportation of tea.—ಈಸಂವತ್ಸರದಲ್ಲಿ ಈತಿಂಗಳ ಸುರ್ರೇತಾರೀಖ್ವರಿವಿಗೆ ಇಂಡ್ಯದೇಶದ ಹುಟ್ಟುವಳಿಬಾಬತು ಮೂವತ್ತುಕೋಟಿ ಪೌಂಡುಗಳತೂಕ ಟೀ, ಅಂದರೆ ಚಾ, ಯುನೈಟೆಡ್ ಕಿಂಗಡಂ ಯೆಂಬ ಸಂಯುಕ್ತರಾಜ್ಯಕ್ಕೂ, ಇತರ ದೇಶಗಳಿಗೆಇಪ್ಪತ್ತುಲಕ್ಷಪೌಂಡುಗಳೂರಫ್ತಾಗಿವೆ.

Sanction accorded.—ನಾಗಪೂರ್ ಡಿವಿಜನ್ ಮಿಲಿಟರಿ ಡಿವಿಜನ್ ಅಧಿಕಾರವನ್ನು ಮದರಾಸ್ ಪ್ರೆಸಿಡೆನ್ಸಿಯಿಂದ ಮುಂಬೈ ಪ್ರೆಸಿಡೆನ್ಸಿಗೆ ವರ್ಗಮಾಡುವವಿಷಯವು ಮಂಜೂರ್ಮಾಡಲ್ಪಟ್ಟು ಬರುವ ಅಕ್ಟೋಬರ್‌ತಿಂಗಳ ಸುರ್ರೇತಾರೀಖಿನಲ್ಲಿ ಜಾರಿಗೆಬರುವದು.

A meeting.—ಕಾನ್ಪುರದಲ್ಲಿ ವ್ಯಾಪಾರ ಸಂಘ ವೊಂದನ್ನು ಏರ್ಪಾಡು ಮಾಡಬೇಕೆಂದು ಇದುವರಿವಿಗೇನೇ ಯೋಚಿಸಲ್ಪಟ್ಟು ಅದನ್ನು ಕಾರ್ಯತಃ ಆಚರಣೆಯಲ್ಲಿ ತರುವದಕ್ಕಾಗಿ ಅಲ್ಲಿನ ಪ್ರಬಲರಾದ ಕೋಠೀದಾರರ ಪ್ರತಿನಿಧಿಗಳು ಶೀಘ್ರದಲ್ಲಿ ಸಭೆ ಸೇರುವವರಾಗಿದಾರಂತೆ.

An objection.—ಮುಂಬೈ ಪಟ್ಟಣದಲ್ಲಿ ಆನರೆರಿ ಮ್ಯಾಜಿಸ್ಟ್ರೇಟುಗಳನ್ನು ನಿಯಮಿಸಬೇಕೆಂದು ಸದರೀ ಗವರ್ನಮೆಂಟಿನವರು ಈಚೆಗೆ ಒಂದುಪ್ರಯತ್ನಮಾಡುತಲಿರುವದುಸರಿಯಷ್ಟೆ. ಆಕೆಲಸಕ್ಕೆ ಲಾಯಖಾದ ಜನಗಳು ಗವರ್ನಮೆಂಟಿಗೆ ಸಿಕ್ಕಲಾರರಾಗಿ ಸದರೀಪ್ರಯತ್ನವು ಕೈಗೂಡಲಾರದೆಂದು ಕೈಸರೀ ಹಿಂದ್‌ಯೆಂಬಪತ್ರಿಕೆ ಆಕ್ಷೇಪಿಸುತಿದೆ.

The Guekwar of Baroda.—ಬರೋಡೆ ಗಾಯಕವಾಡ ಮಹಾರಾಜರವರು ತಮ್ಮ ಶರೀರಾರೋಗ್ಯ ಸಂಪಾದನಾರ್ಥ ಯೂರೋಪುಖಂಡದಲ್ಲಿನ ಸ್ವೀಜ್ಜರ್ಲಾಂಡ್ ಯೆಂಬ ದೇಶಕ್ಕೆಹೋಗಿರುತ್ತಾರೆಯಷ್ಟೆ. ಈಗ ಸದರೀ ಮಹಾರಾಜರವರು ಬಹಳ ಆರೋಗ್ಯಸ್ಥಿತಿಯಲ್ಲಿದಾರೆಂತಲೂ ಬರುವತಿಂಗಳಲ್ಲಿ ಸ್ವದೇಶಕ್ಕೆ ವಾಪಸ್ ಬರುವರೆಂತಲೂ ಒಂದಾನೊಂದುಪತ್ರಿಕೆ ಹೇಳುತಿದೆ.

The surplus revenue of Berar.—ಹೈದರಾಬಾದ್ ರೆಸಿಡೆಂಟರವರು, ಬಿರಾರ್‌ದೇಶದ ಹುಟ್ಟುವಳಿಯಪೈಕಿ ಆರುಲಕ್ಷರೂಪಾಯಿಗಳು ಮುಜರೆಕೊಟ್ಟದ್ದು ಹೋಗಲಾಗಿ ಎಂಟುಲಕ್ಷ ರೂಪಾಯಿಗಳು ನಿಜಾಂ ಸರ್ಕಾರ್ ಖಜಾನೆಗೆ ರವಾನಿಸಿರುತ್ತಾರೆ. ಇದರಪೆಸೆಯಿಂದ ಸದರೀ ದೇಶದ ಒಟ್ಟು ನಿವಳನಫೆ ಹದಿನಾಲ್ಕುಲಕ್ಷರೂಪಾಯಿಗಳೆಂದು ಗೊತ್ತಾಗುತಿದೆ.

Purchase of jewels.—ಫ್ರೆಂಚ್ ಸಂಸ್ಥಾನದ ಅರಮನೆಗೆ ಸೇರಿದ ಜವಾಹಿರ್‌ಗಳೆಲ್ಲವು ಈಚೆಗೆ ಕೆಲವು ಕಾಲದ ಮೊದಲು ಹರಾಜಾಗುತಲಿರುವದು ಸರಿಯಷ್ಟೆ. ಹೈದರಾಬಾದ್ ನಿಜಾಮರವರು ಹಿಂದೆ ಆದ ಹರಾಜ್‌ನಲ್ಲಿ ಅವುಗಳ ಪೈಕಿ ೬೨,೦೦೦ ರೂಪಾಯಿಗಳ ಜವಾಹಿರ್‌ಗಳು ತೆಗೆದುಕೊಂಡದ್ದಲ್ಲದೆ ಮರಳಿ ೪೦,೦೦೦ ರೂಪಾಯಿಗಳಿಗೆ ಕೊಂಡುಕೊಂಡರೆಂದು ದರ್ಬ ಪತ್ರಿಕೆಯೊಂದು ತಿಳಿಸುತಿದೆ.

A case of suttee.—ಈಚೆಗೆ ಕಾನ್ಪುರ ಡಿಸ್ಟ್ರಿಕ್ಟಿಗೆ ಸೇರಿದ ರೂರಾಯೆಂಬ ಸ್ಥಳದ ಬಳಿಯೊಂದು ಸಹಗಮನ ನಡೆಯಿತು, ಹ್ಯಾಗಂದರೆ, ಒಂದು ಗ್ರಾಮದಲ್ಲೊಬ್ಬ ಬ್ರಾಹ್ಮಣನು ಮೃತಪಟ್ಟು ಅವನ ಕಳೇಬರವನ್ನು ಅವನ ಅನುಬಂಧಿಗಳು ತೆಗೆದುಕೊಂಡು ಹೋಗಿ ಚಿತೆಯಲ್ಲಿಟ್ಟು ಬೆಂಕಿ ಹಚ್ಚಿಬಿಟ್ಟು ಬಂದಮೇಲೆ ಆತನ ಹೆಂಡತಿ ಯಾರಿಗೂ ತಿಳಿಯದೆ ಅಲ್ಲಿಗೆ ಹೋಗಿ ಉರಿಯುತಲಿದ್ದ ತನ್ನ ಗಂಡನ ಪಕ್ಕದಲ್ಲಿ ಚಿತೆಯಮೇಲೆ ಮಲಗಿಕೊಂಡುಬಿಟ್ಟಳು. ಈ ಸಂಗತಿ ತಿಳಿಯಬಂದು ಅಲ್ಲಿಗೆ ಹೋಗಿ ನೋಡುವದರೊಳಗಾಗಿ ಅವಳು ಮೃತಪಟ್ಟಿದ್ದಳು. ಯಾರಾದರು ಇದಕ್ಕೆ ಪ್ರೇರಕರಾಗಿರುವರೊ ಯೆಂಬವಕ್ಕೆ ಅವಕಾಶವಿಲ್ಲದೆ ಹೋಯಿತು.

Finding of a gem.—ಸಿಲೋನ್ ದ್ವೀಪದೊಳಗಣ ಕಂಡಿಯಲ್ಲಿ ಈಚೆಗೆ ಯೊಂದು ದಿನ ಒಬ್ಬ ನೇಟಿವ್ ಹುಡುಗನಿಗೆ ಬಂದುಕಡೆ ಯೊಂದು ಸಣ್ಣ ಕಲ್ಲು ಸಿಕ್ಕಿತು. ಅವನಿಗೆ ಅದರ ಯೋಗ್ಯತೆ ಇಂತಾದ್ದೆಂದು ತಿಳಿಯದು. ಅದನ್ನು ತಿಳಿದ ಬೇರೆಯೊಬ್ಬನು ಆಹುಡುಗನಿಗೆ ಅಲ್ಪವಾಗಿ ಯೇನೋ ಕೊಟ್ಟು ಅದನ್ನ ತೆಗೆದುಕೊಂಡು ನೋಡುವಲ್ಲಿ ಅದು ಉತ್ತಮವಾದ ವೈಡೂರ್ಯವೆಂದು ಗೊತ್ತಾಯಿತು. ಅದನ್ನು ಬೇರೆಯೊಬ್ಬನಿಗೆ ೨೫೦ ರೂಪಾಯಿಗಳಿಗೆ ಮಾರಿಬಿಟ್ಟನು. ಅವನಿಂದ ಬೇರೆ ಯೊಬ್ಬ ಸಿಮ್ಹಳ ದೇಶೀಯನು ೪೫೦೦ ರೂಪಾಯಿಗಳಿಗೆ ಕೊಂಡುಕೊಂಡನು. ಇವನಿಗೆ ತಾನು ಕೊಟ್ಟಹಣಕ್ಕಿಂತಲೂ ಎರಡರಷ್ಟು ಬರುವದಾಗಿದೆಯಂತೆ.

The High Court buildings.—ಮದರಾಸ್ ಹೈಕೋರ್ಟಿಗಾಗಿ ಈಗ ಕಟ್ಟಲುದ್ದೇಶಿಸಲ್ಪಟ್ಟಿರುವ ಕಟ್ಟಡ ನಮೂನೆ ಮತ್ತು ಅಬ್ಬ್ಯ

ಆಗುವ ಖರ್ಚಿನ ಅಂದಾಜ್ ಪಟ್ಟಿಯನ್ನು ಗವರ್ನಮೆಂಟಿನವರು ಒಪ್ಪಿ ಕೂಡಲೇ ಕೆಲಸಕ್ಕೆ ಪ್ರಾರಂಭಿಸಬೇಕೆಂದು ಹುಕುಂ ಮಾಡಿರುತ್ತಾರೆ. ಈಗ ತಯಾರಾಗಿರುವ ಅಂದಾಜ್ ಪಟ್ಟೀಮೇರೆ ಒಂಭತ್ತೂವರೆಲಕ್ಷ ರೂಪಾಯಿಗಳು ಖರ್ಚಾಗುವಂತಿದೆ.

The Craford Commission.—ಮಿ॥ ಕ್ರಾಫೋರ್ಡಯವರ ಮೇಲೆ ತರಲ್ಪಟ್ಟಿರುವ ಗುಪ್ತವತ್ತು ಮೊಕದ್ದಮೆಯ ವಿಚಾರಣೆಯಬಗ್ಗೆ ಏರ್ಪಡುವ ಕಮಿಟಿಯವರು ಪುನೇಯಲ್ಲಿ ಕೋರ್ಟುಮಾಡುವರು. ಮತ್ತು ಈ ಸಂದರ್ಭದಲ್ಲಿ ಯಾವವಿಧ ನಿರ್ಬಂಧವೂ ಇಲ್ಲದೆ ನೋಡಲಪೇಕ್ಷೆಯುಳ್ಳವರಿಗೆಲ್ಲ ಅವಕಾಶ ಕೊಡಲ್ಪಡುವದು.

A proposal.—ಸನ್ ೧೮೯೦ನೇ ಇಸವಿ ಏಪ್ರಿಲ್ ತಿಂಗಳಲ್ಲಿ ಮದರಾಸಿನೊಳು, ವ್ಯವಸಾಯಸಂಬಂಧವಾದ ಪದಾರ್ಥಗಳ ಪ್ರದರ್ಶನಕ್ಕಾಗಿ ಏರ್ಪಾಡು ಮಾಡಬೇಕೆಂದು ಮದರಾಸ್ ರೆವಿನ್ಯೂಬೋರ್ಡಿನವರು ಗವರ್ನಮೆಂಟಿಗೆ ಒಂದು ಸಲಹೆ ಕೊಟ್ಟಿರುತ್ತಾರೆ. ಈಬಗ್ಗೆ ೨೫,೦೦೦ ರೂಪಾಯಿಗಳ ಖರ್ಚು ಅಂದಾಜು ಮಾಡಲ್ಪಟ್ಟಿರುತಿದೆ.

LOCAL AND PROVINCIAL NEWS
ಒಳದೇಶ ಮತ್ತು ತಾಲ್ಲೂಕ್‌ಜಾತಿವೃತ್ತಾಂತಗಳು.

Holiday.—ಮೊಹರಂ ಹಬ್ಬದ ಕಡೇದಿನ ರಜಾದಿನಗಳಲ್ಲಿ ಸೇರಿರುವಪರಿಂದ ಪದ್ಧತಿಮೇರೆ ಈ ಸಂಸ್ಥಾನದ ಪಿಪ್ಟ್ ಇಲಾಖೆಗಳಿಗೂ ರಜಾ ಕೊಡಲ್ಪಟ್ಟಿರುತಿದೆ. ಪರಂತು ಸಿವಿಲ್ ಕೋರ್ಟುಗಳ ಅಧಿಕಾರಿಗಳು ಈ ರಜಾವನ್ನು ಉಪಯೋಗಿಸಿಕೊಳ್ಳುವದಕ್ಕೂ ಬಿಟ್ಟುಬಿಡುವದಕ್ಕೂ ಸ್ವತಂತ್ರರಾಗಿರುವಂತೆ ಕಾಣುತಿದೆ.

A reward.—ಶ್ಯಾನುಭೋಗ ಲಿಂಗಪ್ಪನೆಂಬವನು, ಅಲ್ಲಿ ಬರುಕಾಲವಮೊದಲು ಬಹುಮಂದಿಗೆ ಪ್ರಾಣಭೀತಿಯನ್ನುಂಟುಮಾಡುತಲಿದ್ದ ಒಂದು ಚಿರುತೆ ಹುಲಿಯನ್ನು ಹೊಡೆದುಹಾಕಿ ಅದರ ಚರ್ಮವನ್ನು ತಂದು ಚೆಂಗಳೂರು ಡಿಸ್ಟ್ರಿಕ್ಟ್ ಡೆಪ್ಯೂಟಿಕಮಿಷ್ನರವರಲ್ಲಿ ಹಾಜರ್ಪಡಿಸಲು ಅವರು ಆತನಿಗೆ ೧೫ ರೂಪಾಯಿಗಳ ಇನಾಂ ಕೊಡುವಂತೆ ಹುಕುಂ ಮಾಡಿದರಂತೆ.

Distribution of prizes.—ಈಪೂರು ಶಿಪ್ಪೀಕಟ್ಟೆಯಲ್ಲಿರುವ ವೆಸ್ಲಿಯನ್‌ಮಿಷನ್ ಪಾಠಶಾಲೆಯ ವಿದ್ಯಾರ್ಥಿಗಳಿಗೆ ಇನಾಂಗಳು ಕೊಡುವ ಉದ್ದೇಶದಿಂದ ಕಳೆದ ಬೃಹಸ್ಪತಿವಾರದದಿನ ಸಾಯಂಕಾಲ ೫ ಘಂಟೆಗೆ ಸದರೀ ಪಾಠಶಾಲೆಯಲ್ಲಿ ಸಭೆಸೇರಿ, ಅದರಲ್ಲಿ ಲೇಡಿಪ್ರಿಂಡರ್‌ಗ್ಯಾಸ್ಟಿಯವರು ಅಗ್ರಾಸನವಹಿಸಿ ವಿದ್ಯಾರ್ಥಿಗಳಿಗೆ ಇನಾಂಗಳನ್ನು ಕೊಟ್ಟರು. ಈ ಸಂದರ್ಭದ ಬಗ್ಗೆ ಬಹುಮಂದಿ ಯೂರೋಪಿಯನ್ ದೊಡ್ಡಮನುಷ್ಯರೂ ಲೇಡಿಗಳೂ ಮತ್ತು ನೇಟಿವ್ ದೊಡ್ಡಮನುಷ್ಯರೂ ಬಂದಿದ್ದರು.

The Closepett Murder Case.—ಈ ಸಲದ ನಂದೀದುರ್ಗ ಕ್ರಿಮಿನಲ್ ಸೆಷನ್ ವಿಚಾರಣೆಯು ಕಳೆದ ವಾರದಲ್ಲೇ ಪೂರೈಸಿದಿತು, ಪರಂತು ಕ್ಲೋಸ್‌ಪೇಟೆಯಲ್ಲಿ ಅನ್ನಿಬೀ ಎಂಬ ಮುಸಲ್ಮಾನ್ ಹೆಂಗಸು ಮೆಕಟಿಯೆಂಬವಳಿಗೆ ವಿಷಹಾಕಿ ಕೊಂದುಹಾಕಿದಳೆಂದು ಅವಳ ಮೇಲೆ ತರಲ್ಪಟ್ಟ ಖೂನೀ ಮೊಕದ್ದಮೆಯಲ್ಲಿ ಸೆಷನ್ಸ್ ಜಡ್ಜಿಯವರು ತಮ್ಮ ಫೈಸಲನ್ನು ನಾಳೆಯದಿನ ಹೇಳುವದಾಗಿ ತಿಳಿಸಿ ಇರುತ್ತಾರೆ. ಈ ಮೊಕದ್ದಮೆಯು ಪರ್ಯವಸಾನ ಹ್ಯಾಗಾಗುವದೊ ತಿಳಿಯಲಾರೆವು.

The Moharum.—ಈದಿನದೊಂದಿಗೆ ಈಸಲ ಮೊಹರಂ ಹಬ್ಬವು ಪೂರೈಯಾಗುತಿದೆ. ಪ್ರತಿ ಕರ್ನಕಠೋರವಾಗಿರುವ ತಮ್ಮಟಧ್ವನಿ ಉಪಶಾಂತವಾಗುವದಕ್ಕೆ ಎಷ್ಟುದಿನಗಳು ಹಿಡಿಯುವವೋ ಯೆಂದು ಹೆದರುತ್ತೇವೆ. ಈ ಹಬ್ಬದಲ್ಲಿ ನಾನಾವಿಧ ವೇಷಗಳಂ ಹಾಕಿಕೊಂಡು ಮನಸ್ವಿ ಕುಣಿದಾಡುವದರಲ್ಲಿ ಉತ್ಕಟೇಚ್ಛೆಯುಳ್ಳ ಜನಗಳ ಉಲ್ಲಾಸಕ್ಕೆ ಭಂಜಕವಾಗಿಅಗಿಂದಾಗ್ಯೆ ವರ್ಷದ ಬಾಧೆಯುಂಟಾಗುತಲಿತ್ತು. ಈದಿನ ಸಾಯಂಕಾಲ ನಡೆಯಬೇಕಾಗಿರುವ ಪ್ರಬಲೋತ್ಸವವು ಯಾವರೀತಿ ನೆರವೇರುವದೊಯೆಂದು ಹೆದರುತ್ತೇವೆ.

The weather.—ಕಳೆದ ಬುಧವಾರದವೊಟಲು ಪ್ರಾಯಶಃ ಪ್ರತಿದಿನದಲ್ಲೂ ಹಗಲುರಾತ್ರಿ ಮೋಡವಾಡುತ, ಆಗಿಂದಾಗ್ಯೆ ತುಂತುರುಮಳೆ ಬೀಳುತಲೂ ಕದಾಚಿತ್ ಗಟ್ಟಿಯಾಗಿ ಬೀಳುತಲೂಯಿದೆ. ಈಮಳೆಯಿಂದ ಕೆರೆ ಕುಂಟೆಗಳಿಗೆ ವಿಶೇಷವಾಗಿ ನೀರುಬರುವದಕ್ಕೆ ಅವಕಾಶ ಕಡಮೆಯಾದಾಗ್ಯೂ ಜಲಾಭಾವದಿಂ ಒಣಗುತಲಿದ್ದ ರಾಗಿ ಮೊದಲಾದ ಫಸಲಿಗಳಿಗೆ ಸದ್ಯಃ ಬದಕಲುಟ್ಟಿಗೆ ಅನುಕೂಲವಾಯಿತು. ಕೃಷಿಜೀವಿಗಳ ಚಿಂತೆಯು ಸದ್ಯಃ ಶಮನವಾಯಿತೆಂದು ಹೇಳಬಹುದು. ಹೀಗೆಯೇ ಮುಂದೆಯ [illegible] ಮಳೆಯಾದರೆ ರಾಗಿ ಫಸಲ್ ಪೂರೈಯಾಗಿ, ಅರ್ಧಫಲವಾದರೂ ಕೈಗೆ ಬರಬಹುದು. ಆಹಾರ ಪದಾರ್ಥಗಳ ದಾರಣೆಗಳು ದಿನೇದಿನೆ ಅಧಿಕವಾಗುತಲಿದೆ.

CORRESPONDENCE.

ಮಹಾರಾಜಶ್ರೀ ಕರ್ನಾಟಕಪ್ರಕಾಶಿಕಾ ಎಡಿಟರವರ ಸಮುಖಕ್ಕೆ.

ಅಯ್ಯಾ,—ಈತಿಂಗಳ ೧೦ನೇ ತಾರೀಖಿನ ತಮ್ಮ ಪತ್ರಿಕೆಯಲ್ಲಿ A. M. ಎಂದು ಕೈಬರಹಹಾಕಿರುವ ಪತ್ರಕ್ಕೆ ತಮ್ಮ ಪತ್ರಿಕೆಮೂಲಕ ಅವರಿಗೂ ಇತರ ಯೆಲ್ಲರಿಗೂ ತಿಳಿಯಪಡಿಸುವದೇನಂದರೆ, ಟೆಕ್ಚರುಗಳಲ್ಲಿಯೂ ಇತರ ಕಾಲಗಳಲ್ಲಿಯೂ ಪಬ್ಲಿಕ್ಕಾಗಿ ನಾನು ಉಪನ್ಯಾಸಮಾಡಿ ಅವಶ್ಯಕವೆಂದು ಹೇಳಿರುವ ಹಿಂದೂಜನಗಳ ಪ್ರಕೃತದ ಆಚಾರಪದ್ಧತಿಗಳಲ್ಲಿ, ಕೆಲವು ಬದಲಾವಣೆಗಳನ್ನು ಕುರಿತು, ಮಠಾಧಿಪತಿಗಳಕಡೆಯವರಾಗಲೀ, ಇತರ ಪಂಡಿತರಾಗಲಿ ಇತರರಾಗಲಿ ಇಷ್ಟಪಿದ್ದಲ್ಲಿ ನನಗೆ ಮುಂದಾಗಿ ನೋಟೀಸ್‌ಕೊಟ್ಟರೆ ನಿಷ್ಪಕ್ಷಪಾತಿಗಳಾದ ಮಧ್ಯಸ್ಥರ ಸಮಕ್ಷಮ ಸಭ್ಯಪ್ರಮಾಣವಾಗಿ ಅಂತಃಪರಸಂಗತ ಚರ್ಚಿಸಲಿಕ್ಕೆ ನಾನು ಸಿದ್ಧನಾಗಿದೇನೆ. ಹ್ಯಾಗಾದರೂ ನಮ್ಮದೇಶದ ನಮ್ಮಜನಗಳು ಅಭಿವೃದ್ಧಿಗೆ ಬರಬೇಕೆಂಬುವದೇ ನನ್ನ ಮುಖ್ಯಾಪೇಕ್ಷೆಯಾಗಿರುತಿದೆ.

ಬೆಂಗಳೂರು, ೧೫ನೇ ಸೆಪ್ಟಂಬರ್ ೮೮.	ತಮ್ಮ ವಿಧೇಯ, ನ॥ ಭಾಷ್ಯಾಚಾರ್ಯ.

TELEGRAMS.
ತಂತಿ ವೃತ್ತಾಂತಗಳು.

ಬರ್ಲಿನ್, ತಾ॥ ೭ನೇ ಸೆಪ್ಟಂಬರ್—ಜರ್ಮನ್ ಗವರ್ನಮೆಂಟಿನವರು, ತಮ್ಮ ನಾವಿಕಬಲವಂ ಬಲಪಡಿಸಬೇಕೆಂಬ ಅಭಿಪ್ರಾಯ ವುಳ್ಳವರಾಗಿರುವಂತೆ ಪ್ರಕಟಪಡಿಸಿರುತ್ತಾರೆ.

ಲಂಡನ್, ತಾ॥ ೯ನೇ ಸೆಪ್ಟಂಬರ್—ಈವಾರದೊಳು ಲಂಡನ್ ಪಟ್ಟಣದಲ್ಲಿ ವೈಟಚೇಪಲ್‌ಬಳಿ ನಡೆದ ನಾಲ್ಕಾರು ಗುಡಿಕಟ್ಟೆಯರ ಖೂನಿಯು ಪಟ್ಟಣನಿವಾಸಿಗಳಿಗೆಲ್ಲ ಬಹಳ ಭೀತಿಯನ್ನುಂಟುಮಾಡಿರುತಿದೆ. ಕರುಳುಗಳು ಕಿತ್ತುಹಾಕಲ್ಪಟ್ಟ ತಲೆಯಿಲ್ಲದ ಮುಂಡಗಳೆರಡು ಬೀದಿಗಳಲ್ಲಿ ದೊರೆತವು. ಯಾರೋ ದ್ವೇಷಿಗಳಿಂತಾಕೃತ್ಯ ನಡೆಸಿರಬಹುದೆಂದು ತೋರುತಿದೆ. ತಕ್ಸೀರ್‌ಮಾಡಿದವರು ಅದ್ಯಾಪಿ ಪತ್ತೆಯಾಗಲಿಲ್ಲವು.

ಟೆಹಿರಾನ್, ತಾ॥೧೦ನೇ ಸೆಪ್ಟಂಬರ್.—ಮೆಷಡ್ ಯೆಂಬ ಪ್ರದೇಶದಲ್ಲಿರುವ ಬ್ರಿಟಿಷ್ ಏಜಂಟರು, ಇಷಾಕ್‌ಖಾನನು ಕಾಬೂಲಿಮೇಲೆ ದಂಡೆತ್ತಿ ಬರುತಲಿದಾನೆಂತಲೂ, ಈ ಸಂದರ್ಭದಲ್ಲಿ ಅಮೀರ್ ಅಬ್ದುಲ್‌ರಹಿಮಾನರವರು ಸಖ್ತಾಕಾಹಿಲೇಯಾಗಿ ದಾರೆಂತಲೂ ತಿಳಿಯಪಡಿಸಿರುತ್ತಾರೆ.

ದರ್ಬ್ಯಾನ್, ತಾ॥೧೧ನೇ ಸೆಪ್ಟಂಬರ್.—ದಿನಜಾಲು ಯೆಂಬಾತನು, ತನ್ನನ್ನು ಬ್ರಿಟಿಷರವರ ಸುಪರ್ದಿಗೊಪ್ಪಿಸದಿರುವ ಹರತ್ತಿನಮೇಲೆ ಟ್ರಾನ್ಸವಾಲ್ ಅಧಿಕಾರಿಗಳಿಗೆ ತಾನಾಗಿಯೇ ಒಳಗಾದನೆಂದು ತಿಳಿಯಬರುತಿದೆ. ಜಲ್ಯಲೂಲ್ಯಾಂಡಿನ ಲ್ಲಿ ಗದ್ದಲವೆಲ್ಲ ಅಡಗಿ ಉಪಶಾಂತವಾಗಿದೆ.

ಪ್ರಿನ್ಸಿಫೆ ವೆಲ್ಸರವರು ಆಸ್ಟ್ರಿಯಾ ರಾಜಧಾನಿಯಾದ ವೈಯನಾ ಪಟ್ಟಣಕ್ಕೆ ಹೋಗಿ ಅಲ್ಲಿಂದ ಫ್ರಾನ್ಸಿಸ್ ಜೋಸಫೆಯವರೊಡನೆ ಬಿಲ್‌ಮಾಯರ್ ಯೆಂಬ ಪ್ರದೇಶದಲ್ಲಿ ಜರಗತಕ್ಕ ಸೇನಾವಿನೋದಗಳ ದರ್ಶನಾರ್ಥ ಅಲ್ಲಿಗೆ ದಯಮಾಡುವರು.

ಹೊಂ, ತಾ॥ ೧೧ನೇ ಸೆಪ್ಟಂಬರ್–ಸಿವಿಲ್ ಪ ಕ್ರಿಮಿನಲ್ ಕೋರ್ಟುಗಳಿಗೆ ಸ್ಥಳಾನುಕೂಲ್ಯವಂ ಕಲ್ಪಿಸುವ ಬಗ್ಗೆ ಹೊಸಕಟ್ಟಡಗಳಂ ಕಟ್ಟುವದಕ್ಕಾಗಿ ಹೋಲ್ಕರ್ ಮಹಾರಾಜರವರು ೫೦,೦೦೦ ರೂಪಾಯಿಗಳು ಕ್ಲುಪ್ತಮಾಡಿರುತ್ತಾರೆ. ಬರುವ ನವರಾತ್ರಿ ಹಬ್ಬದಲ್ಲಿ ಸದರೀ ಕಟ್ಟಡಗಳ ಕಾಮಗಾರಿಯು ಉಪಕ್ರಮಿಸಲ್ಪಡುವದಲ್ಲದೆ, [illegible] ಗುದ್ದಲಿಪೂಜೆ ಸಹ ಜರುಗುವದು.

ರಾಂಪುರ ಮತ್ತು ಸಿರಸಾದ ಡಿಸ್ಟ್ರಿಕ್ಟ್‌ಗಳಲ್ಲಿ ರಸ್ತೆಗಳು ಹಾಕತಕ್ಕ ಬಗ್ಯೆ ಭಾರೀ ಮೊಬಲಗು ಮಂಜೂರ್ಮಾಡಲ್ಪಟ್ಟಿದೆ. ಆಕಾಮಗಾರಿ ಕೂಡಿದಷ್ಟುತ್ವರೆಯಲ್ಲೇ ಪ್ರಾರಂಭವಾಗಬಹುದೆಂದು ತೋರುತಿದೆ.

ಸಿಂಲಾ, ತಾ॥೧೦ನೇ ಸೆಪ್ಟಂಬರ್—ನಿನ್ನೆಯ ದಿನ ರಾತ್ರಿ ನ್ಯಾಯ್ಯದ ಕಟ್ಟಡಕ್ಕೆ ಅಗ್ನಿಪ್ರವೇಶವಾಗಿ ಅದರವೈಕಿ ಬಹುಭಾಗ ಸುಟ್ಟುಹೋಯಿತು. ವಾಸಸ್ಥಾನಗಳೂ ಕುರ್ಚಿಮೇಜು ವಗೈರೆ ಗೃಹೋಪಕರಣಗಳುಮಾತ್ರ ಉಳದವು. ಹುಮಾರ್ ೫೦,೦೦೦ ರೂಪಾಯಿಗಳ ತನಕ ನಷ್ಟವಾಗಿರಬಹುದೆಂದು ಅಂದಾಜಾಗಿರುತಿದೆ.

ಗತವಾರದಲ್ಲಿ ಒಂದುದಿನರಾತ್ರಿ ದಿವಾನ್ ಬಹಾದೂರ್ ಸಿಂಗರವರು, ಮಣಿಪುರದ ಅರಸರವರ ಅರಮನೆಯಲ್ಲಿರುವಾಗ್ಯೆ ಆಗ ಅವರ ಸಮೀಪದವೊಳಿದ್ದ ಒಬ್ಬ ಹೊಗಸಿನೊಡನೆ ಖೂನಿಮಾಡಲ್ಪಟ್ಟರು. ಈಕೃತ್ಯವು ನಡೆಸುವಾಗ್ಯೆ ಕತ್ತಿಗಳು ಉಪಯೋಗಿಸಲ್ಪಟ್ಟದ್ದಂತೆ ವ್ಯಕ್ತವಾಗುತಿದೆ ದಿವಾನರವರು ಅರಮನೆಗೆಸೇರಿದ ಬಹುಮಂದಿಯ ಅಪ್ರೀತಿಗೆ ಪಾತ್ರರಾಗಿದ್ದದರಿಂದ ಅವರವೈಕಿ ಯಾರೋ ಕೆಲವರು ಖೂನಿ ಮಾಡಿರಬಹುದೆಂಬ ಅನುಮಾನವುಂಟಾಗಿದೆ.

ಘನವನ್ನು ಹೊಂದಿದ ವೈಸ್‌ರಾಯಿಯವರು ನವೆಂಬರ್ ತಿಂಗಳ ೨ನೇ ತಾರೀಖಿಗೆ ಸರಿಯಾಗಿ ಕಲ್ಕತ್ತೆಗೆ ದಯಮಾಡುವರು.

SOCIAL RELATIONS AMONGST BRAHMINS.

ಪಂಡಿತ ಶ್ರೀಮಾನ್ ಕವಿ ಭಾಷ್ಯಾಚಾರ್ಯರವರು, ಈಗ್ಯೆ ಒಂದುತಿಂಗಳಕಾಲವಾಗಿ ಈಪುರದಲ್ಲಿರುತ, ಇಲ್ಲಿನವರ ಅಪೇಕ್ಷಾನುಗುಣವಾಗಿ ಒಂದೊಂದು ವಿಷಯವಂಕುರಿತು, ಸುದರ್ಶನೋಚಿತವಾಗಿಯೂ ಸಭಿಕರಿಗೆ ಶ್ರಾವ್ಯವಾಗಿಯೂ, ತತ್ತದ್ಭಾಷಾ ಪಾಂಡಿತ್ಯೋಪಪಾದನ ಕೌಶಲ್ಯಪ್ರದರ್ಶಕವಾಗಿಯೂ, ಆಯಾ ವಿಷಯಾನುಗುಣಗಳಾದ ಪ್ರಮಾಣಗಳಿಂದ ಕೇಳುವವರಿಗೆ ಪ್ರಾಮಾಣ್ಯಜ್ಞಾನವನ್ನುಂಟುಮಾಡತಕ್ಕವಾಗಿಯೂ ಇರುವ ಅನೇಕ ವಿಷಯಗಳನ್ನು ಸಂಸ್ಕೃತಾಂಧ್ರ ದ್ರಾವಿಡ ಭಾಷೆಗಳಿಂದ ವಿಚಾರಮಾಡಿ ಅನೇಕರು ತೃಪ್ತಿಗೊಳಿಸುತಲಿರುವ ಅಂಶವು ಎಲ್ಲರಿಗೂ ತಿಳಿದಿದೆಯಷ್ಟೆ. ಈಪಂಡಿತರು ಇದುವರಿವಿಗೆ ಮತತ್ರಯಗಳ ಸ್ವರೂಪಗಳನ್ನೂ, ಉಪನಿಷತ್ತುಗಳ ಪ್ರಾಮಾಣಿಕತೆಯನ್ನೂ, ವೇದ ಅಪೌರುಷೇಯವೆಂಬದನ್ನೂ, ಬಾಲ್ಯ ವಿವಾಹ ಶಾಸ್ತ್ರ ನಿಷಿದ್ಧವೆಂಬವನ್ನೂ, ದ್ವಿಜನಿಗೆ ಸಮುದ್ರಯಾನ ದ್ವೀಪಾಂತರವಾಸ ಗ್ರಾಹ್ಯವೆಂಬದನ್ನೂ, ಬ್ರಾಹ್ಮಣ ಸಾಮಾನ್ಯೇನ ಮತ ತಾರತಮ್ಯವಿಲ್ಲದೆ ಭೋಜನ ಪ್ರತಿಭೋಜನ ದಾನ ಪ್ರತಿಗ್ರಹಗಳಂ ಮಾಡುವದು ಆಕ್ಷೇಪಣೀಯವಲ್ಲವೆಂಬದನ್ನೂ ಕುರಿತು ಬಹಳಷ್ಟುಗೆ ಉಪಪಾದಿಸಿ ತತ್ತತ್ಪ್ರಸಂಗ ಕಾಲದಲ್ಲಿದ್ದವರನ್ನೆಲ್ಲ ಒಡಂಬಡಿಸಿರುತ್ತಾರೆ. ಇದುವರಿವಿಗೆ ಅನೇಕಪ್ರಮಾಣ ಉದಾಹರಣಗಳೊಡನೆ ತಿಳಿಸಲ್ಪಟ್ಟಶ್ರೀ ಮಾನ್‌ಭಾಷ್ಯಾಚಾರ್ಯರವರ ವಾಕ್ಯಾರ್ಥವು ಇಲ್ಲಿನವರನೇಕರ ಹೃದಯವಂ ವಿಕಾಸ ಗೊಳಿಸದೆ ಹೋಗಿರಲಾರದೆಂದು ನಂಬುತ್ತೇವೆ. ಮತ್ತು ಉತ್ಸರ್ಜಿತವಾದ ಹಿತೋಪದೇಶಗಳು ಉತ್ಪನ್ನವಾಗದೆ ತಕ್ಕ ಪ್ರಯೋಜನವನ್ನುಂಟುಮಾಡುವವೆಂದೆಣಿಸುತ್ತೇವೆ. ಆಚೇ ಶುಕ್ರವಾರದದಿನ ಸಾಯಂಕಾಲ ಈ ಪೂರು ಬಾಲಿಕಾಪಾಠಶಾಲೆಯಲ್ಲಿ, ಬ್ರಾಹ್ಮಣರ ಸಾಮಾಜಿಕ ಸಂಬಂಧವಂಕುರಿತು ಆಂಧ್ರಭಾಷೆಯಲ್ಲಿ ಪ್ರಸಂಗಿಸಿದರು. ಅದಂ ಕೇಳತಕ್ಕಬಗ್ಯೆ ಮಾಮೂಲಿಮೇಗೆ ತದ್ವಿಷಯಾಸಕ್ತರನೇಕರು ಅಲ್ಲಿಗೆ ಬಂದಿದ್ದರು. ಶ್ರೀಮಾನ್ ಭಾಷ್ಯಾಚಾರ್ಯರವರು ಬ್ರಾಹ್ಮಣ್ಯದಲ್ಲಿ ನೆಲಗೊಂಡಿರುವ ಆಂತರಾಳಿಕ ಪ್ರಭೇದಗಳು ಕೇವಲ ಪರಸ್ಪರ ಈರ್ಷ್ಯಾಸೂಯೆಗಳಿಂದ ಆತ್ಮೋತ್ಕರ್ಷಣ್ಯಕ್ಕಾಗಿ ಕಲ್ಪಿಸಿಕೊಳ್ಳಲ್ಪಟ್ಟವೆಂದು ಕಂಡುಬರುತಿವೆಯೇಹೊರ್ತು ಶಾಶ್ವತವಾಗಿ ಸದರೀಪ್ರಭೇದಗಳಿಗೆ ಯಾವ ಶಾಸ್ತ್ರಾಧಾರಗಳೂ ಕಂಡುಬರುವದಿಲ್ಲವೆಂದು ತಿಳಿಸಿ ಇದರಿಂದ ಪ್ರಜೆಗಳಲ್ಲಿ ಐಕಮತ್ಯವು ನಾಶವನ್ನೈದಿ, ತನ್ಮೂಲಕ ದೇಶಾಭಿವೃದ್ಧಿಗೆ ಭಂಜಕ ವುಂಟಾಗಲಿಕ್ಕೂ, ರಾಗದ್ವೇಷಾದಿಗಳಭಿವೃದ್ಧಿಯಾಗಲಿಕ್ಕೂ ಕಾರಣವೆಂದು ನುಡಿದು ಅದಕ್ಕೆ ಸಂಬಂಧಿಸಿದಂತೆ ಕೆಲವು ಇತರವಿಷಯಗಳಂ ತಿಳಿಸಿದರೇನಂದರೆ,—

ಈಗ ಬ್ರಾಹ್ಮಣರೆನಿಸಿಕೊಂಡಿರತಕ್ಕವರೆಲ್ಲರೂ ಭೃಗು, ಅಂಗೀರಸ, ವಿಶ್ವಾಮಿತ್ರ, ಕಾಶ್ಯಪ, ಅತ್ರಿ, ವಸಿಷ್ಠ, ಮತ್ತು ಅಗಸ್ತ್ಯರೆಂಬ ಪ್ರಧಾನರಾದ ಏಳುಜನ ಋಷಿಗಳ ವಂಶ ಪರಂಪರೆಗೆ ಸೇರಿದವರೆನಿಸಿಕೊಂಡಿರುತ್ತಾರೆ. ಅವರ ವಂಶಜರೆಲ್ಲರೂ ೪೯ ಗೋತ್ರಗಳ ಸಮಾಷ್ಟಿಯುಳ್ಳವರಾಗಿರುತ್ತಾರೆ. ಆಯಾ ಋಷಿ ಪರಂಪರೆಯನ್ನು ಬೋಧಿಸುವದಕ್ಕಾಗಿ ಏಕಾರ್ಥಪ್ರವೃತ್ತಿ ಗೋತ್ರ, ವಂಶ, ವರ್ಗ, ಪಕ್ಷ, ಗಣ ಮತ್ತು ಕೂಟಗಳೆಂಬ ಸಮಾನ ಪದಗಳು ಉಪಯೋಗಿಸಲ್ಪಡುತಿವೆ. ಈ ಗೋತ್ರ ವಿವರಣೆಯು ಪ್ರವರಾಧ್ಯಾಯದಲ್ಲಿಯೂ, ಕಲ್ಪಸೂತ್ರಗಳಲ್ಲಿಯೂ ಆಶ್ವಲಾಯನ (೧೭), ಆಪಸ್ತಂಭ (೧೬), ಕಾತ್ಯಾಯನ (೧), ನಾದಿ ಇತರ ಸೂತ್ರಗಳಲ್ಲಿಯೂ ವಿಶೇಷತಃ ತಿಳಿಸಲ್ಪಟ್ಟಿರುತಿದೆ. ಪ್ರಾಯೋಣ ವಿವಾಹಕಾಲಗಳಲ್ಲಿಯೂ ಯಾಗಾದಿ ಕ್ರತು ಕಾಲಗಳಲ್ಲಿಯೂ ಗೋತ್ರವು ಬಹಳವಾಗಿ ಪರಿಭಾವಿಸಲ್ಪಡತಕ್ಕದ್ದಾಗಿರುತಿದೆ ಹ್ಯಾಗಂದರೆ—ಒಬ್ಬ ಬ್ರಾಹ್ಮಣನು ಸ್ವಗೋತ್ರೋದ್ಭವಳಾದ, ಅಂದರೆ ತನ್ನ ಋಷಿ ಪರಂಪರೆಗೆ ಸೇರಿದವಳನ್ನು ವಿವಾಹ ಮಾಡಿಕೊಳ್ಳಕೂಡದೆಂಬದಾಗಿ ಮನುಸ್ಮೃತಿಯ ೩ನೇ ಅಧ್ಯಾಯದಲ್ಲಿ "ಅಸಪಿಂಡಾಚಯಾ ಮಾತುರಸಗೋತ್ರಾಚಯಾಪಿತುಃ । ಸಾಪ್ರಶಸ್ತಾದ್ವಿಜಾತೀನಾಂ ದಾರಕರ್ಮಣಿಮೈಥುನೇ॥" ಎಂಬದಾಗಿ ತಿಳಿಸಲ್ಪಟ್ಟಿರುತಿತ. ಇದೇ ಭಾವವನ್ನು ಯಾಜ್ಞವಲ್ಕ್ಯಾದಿ ಸ್ಮೃತಿಗಳೂ, ಆಶ್ವಲಾಯನಾದಿ ಸೂತ್ರಗಳೂ ಬೋಧಿಸುತಿವೆ. ಈ ಸಾಮಾನ್ಯ ನಿಷೇಧಗಳೆಲ್ಲವೂ ನಿರ್ದೇಶಗಳಾದ ಕೆಲವುವಿನಾಯತಿಗಳಿಗೆ ಒಳಪಟ್ಟವಾಗಿರುವವು. ಮೇಲೆ ತಿಳಿಸಲ್ಪಟ್ಟಿರುವ ನಿಬಂಧನೆಯೊಂದು ವಿನಾ, ಬ್ರಾಹ್ಮಣರಲ್ಲಿ ನೆಲೆಗೊಂಡಿರುವ ಒಂದುಪ್ರಭೇದದವರು ಮತ್ತೊಂದು ಪ್ರಭೇದದವರೊಡನೆ ಪರಸ್ಪರ ದಾನಪ್ರತಿಗ್ರಹಗಳಂ ಮಾಡಕೂಡದೆಂದು ವೇದಗಳಲ್ಲಿಯಾಗಲಿ, ಸ್ಮೃತಿಗಳಲ್ಲಿಯಾಗಲಿ ಕಂಠತಃ ನಿಷೇಧಿಸಲ್ಪಟ್ಟಿರುವದಿಲ್ಲವು. ಜಾತಿಭ್ರಷ್ಟನಾದ ಅಥವಾ ಬಹಿಷ್ಕೃತನಾದವನ ಸಂಗತ ವಿನಾ, ಒಬ್ಬ ಬ್ರಾಹ್ಮಣನು ಮತ್ತೊಬ್ಬ ಬ್ರಾಹ್ಮಣನೊಡನೆ ಭೋಜನ ಮಾಡಕೂಡದೆಂಬ ವಿಧಿ ಯೆಲ್ಲಿಯೂ ಕಾಣಿಸಲಿಲ್ಲವು. ಮನುಸ್ಮೃತಿಯ ೩ನೇ ಅಧ್ಯಾಯದಲ್ಲಿ ೧೪೦ನೇ ಶ್ಲೋಕದ ಮೊದಲು ೧೮೬ನೇಶ್ಲೋಕದ ವರಿವಿಗೆ, ಶ್ರಾದ್ಧಾದಿ ಕರ್ಮಗಳಲ್ಲಿ ನಿಯಮಿಸಬೇಕಾದ ಬ್ರಾಹ್ಮಣ ಲಕ್ಷಣಗಳು ೩೬ಶ್ಲೋಕಗಳಿಂದ ತಿಳಿಸಲ್ಪಟ್ಟದು

ತಿವೆಯೇ ಹೊರ್ತು ಬ್ರಾಹ್ಮಣರು ಸಾಮಾಜಿಕ ಸ್ಥಿತಿಯಲ್ಲಿ ಒಬ್ಬರೊಡನೊಬ್ಬರು ಭೋಜನಾದಿಗಳಂ ಮಾಡಕೂಡದೆಂಬ ವಿಷಯದಲ್ಲಿ ಅದು ಅನ್ವಯಿಸುವದಿಲ್ಲವು. ಮನುಸ್ಮೃತಿಯ ೩ನೇ ಅಧ್ಯಾಯದಲ್ಲಿ ೧೦೯ ಮತ್ತು ೧೮೯ನೇ ಶ್ಲೋಕಗಳಲ್ಲಿ—

ಶ್ಲೋ|| ನಭೋಜನಾರ್ಥಂಸ್ವೇವಿಪ್ರಃಕುಲಗೋತ್ರೇ ನಿವೇದಯೇತ್ | ಭೋಜನಾರ್ಥಂಹಿತೇಶಂಸನ್ ವಾಂತಾಶೀತ್ಯುಚ್ಯತೇಬುಧೈಃ|| ನಬ್ರಾಹ್ಮಣಂಪರೀಕ್ಷೇತದೈವೇಕರ್ಮಣಿಧರ್ಮವಿತ್|ಪಿತ್ರ್ಯೇಕರ್ಮಣಿತುಪ್ರಾಪ್ತೇ ಪರೀಕ್ಷೇತಪ್ರಯತ್ನತಃ||

ಎಂದು ಬರೆದಿರುವದರಿಂದ ಅಶನಾರ್ಥಿಯಾಗಿಬರುವ ವಿಪ್ರನ ಕುಲ ಗೋತ್ರಗಳನ್ನು ವಿಚಾರಿಸಲೂ ಕೂಡದು. ಮತ್ತು ಅವನು ತಾನಾಗಿಯೂ ತಿಳಿಸಕೂಡದು, ಯಾತಕ್ಕೆಂದರೆ—ಈ ಎರಡು ಸಂದರ್ಭಗಳಲ್ಲಿಯೂ ಅಭಿಜಾತ್ಯಾದಿ ವಿಚಾರಕ್ಕಾಗಿ ಮನೋವ್ಯಸನ ಹುಟ್ಟಾಗಲಿಕ್ಕೆ ಕಾರಣವಾಗುವದು. ಪಂಚದ್ರಾವಿಡ ಪಂಚಗೌಡ ಪ್ರಭೇದವು ವೇದೋಕ್ತಗಳಲ್ಲವು. ಶ್ರುತಿಗಳಲ್ಲಿಯೂ ಇದುಕುರಿತು ಪ್ರಸ್ತಾವಿಸಲ್ಪಟ್ಟಿರುವಂತೆ ತೋರಲಿಲ್ಲವು. ಪೂರ್ವದ ಆರ್ಯ ಸಂತತಿಯವರೆನಿಸಿಕೊಂಡಿರುವವರೆಲ್ಲರೂ ಬಂದು ಕಾಲವಿಶೇಷವಲ್ಲಿ ತಮ್ಮ ಸ್ವಸ್ಥಾನದಿಂ ಬಂದು ಇಲ್ಲಿ ನೆಲಸಿದವರಾಗಿರುತ್ತಾರೆ. ಯಾವ ಕಾಲದಲ್ಲಿ ದರ್ಶನ ಭಾಷಣ ಲೇಖನ ಸಂಬಂಧಗಳಿಗೆ ಅನುಕೂಲ್ಯಗಳು ಪರಿಮಿತವಾಗಿ ಶ್ರಮಸಾಧ್ಯಗಳಾಗಿದ್ದವೋ ಅಂತಾ ಕಾಲದಲ್ಲಿ ಪ್ರತಿ ಸಂತತಿಯಲ್ಲಿಯೂ ಬಹು ಪ್ರಭೇದಗಳೇರ್ಪಟ್ಟು, ಅದೀಗ ಅಸಂಖ್ಯಾತಗಳಾದ ವಿವಿಧ ಸಮಾಜ್ಯಗಳೊಡನೆ ಬಹುಗುಂಪು ಯಾ ಜಾತಿಗಳಾಗಿ ಚದರಿಹೋಗಬೇಕಾಯಿತು. ಬ್ರಾಹ್ಮಣರ ದಾರಶುದ್ಧ್ಯ ಸಂರಕ್ಷಣಾರ್ಥ ಕೃತಕಗಳಾದ ಕೆಲವು ನಿರ್ಬಂಧಗಳನ್ನು ಕಲ್ಪಿಸಿಕೊಳ್ಳಬೇಕಾದದ್ದು ಆವಶ್ಯಕವಾಗಿ ಕಂಡುಬಂತು. ಈ ಕಾರಣಗಳನ್ನುಮೇಲೆ ನೆಲಗೊಂಡಿರಲಾರವು. ಇದ್ದಾಗ್ಯೂ ಸರ್ವಜನಾಂಗೀಕಾರಾರ್ಹವಾಗಲಾರವು. ಔತ್ತರೇಯರಾದ ಗೌಡ ಬ್ರಾಹ್ಮಣರಿಗೂ ದಾಕ್ಷಿಣಾತ್ಯರಾದ ದ್ರಾವಿಡರಿಗೂ ಸಂಬಂಧವಿಲ್ಲದೆ ಹೋಗಲಿಕ್ಕೆ ಅವರಿಬ್ಬರಿಗೂ ಹುಟ್ಟಾದ ದೂರ ದೇಶವಾಸವೇ ಕಾರಣವಾಗಿರುತಿದೆ. ಇದರಿಂದ ಬಹುಕಾಲದಮೊದಲು ಭೋಜನ ಪ್ರತಿಭೋಜನಗಳೂ ವಿವಾಹಗಳೂ ನಿಂತುಹೋದವು. ದ್ರಾವಿಡರು ಒಂದೇಜಾತಿ ಮತಾಚಾರಗಳಗೊಳಪಟ್ಟದ್ದರೂ ಅವರಲ್ಲಿ ಪರಿಮಿತ ಸಂಖ್ಯೆಯುಳ್ಳವರಿಂದ ಒಂದೊಂದು ಸಣ್ಣಗುಂಪುಗಳಾಗಿ ವಿಂಗಡಿಸಿಕೊಳ್ಳಲ್ಪಟ್ಟಿರುವದರಿಂದ ಅವರಲ್ಲಿ ವಿನಾ ಅನ್ಯತ್ರ ಧಾರಾಳವಾಗಿ ವಿವಾಹಗಳು ಜರಗಲಿಕ್ಕೆ ಅಭ್ಯಂತರವಾಗಿರುತಿದೆ. ಮತ ಸಂಬಂಧಗಳಾದ ತಾರತಮ್ಯಗಳಿಂದ ಆಚಾರ ಭೇದ ವಿರಹೇಕೆಂಬ ಆವಶ್ಯಕತೆಯೇನೂ ಇರುವದಿಲ್ಲವು. ಭಿನ್ನ ಮತಾವಲಂಬಿಗಳೆಲ್ಲರೂ ಗೃಹ್ಯ ಸೂತ್ರ ವಗೈರೆ ಒಂದೇವಿಧಾಯಕ ಗ್ರಂಥಕ್ಕೆ ಬದ್ಧರಾಗಿರುವೆವೆಂದು ಕೊಳ್ಳುತ್ತಾರೆಂಬದು ಸಾಧಾರಣವಾದದ್ದಾಗಿಯೇ ಇರುತಿದೆ. ಬ್ರಾಹ್ಮಣರಲ್ಲಿಯೇ ಪರಸ್ಪರ ಭೋಜನ ಪ್ರತಿಭೋಜನಾದಿಗಳಂ ಮಾಡಕೂಡದೆಂಬದಾಗಿ ಈಗ ನೆಲಗೊಂಡಿರುವ ನಿರ್ಬಂಧರೂಪವಾದ ನಿಬಂಧನೆಗಳು, ಅನೇಕ ಸಮುದಾಯದವರಲ್ಲಿ ಪ್ರಮುಖರಾಗಿದ್ದ ಪೂರ್ವಿಕರಿಂದ ಆವಶ್ಯಕತೆಯೆಂಬ ಕಾರಣದಮೇಲೆ ಕಲ್ಪಿಸಲ್ಪಟ್ಟವೇ ಹೊರ್ತುಬೇರೊಂದಲ್ಲವು, ಇವುಗಳನ್ನೆಲ್ಲ ನಾವು ಶಾಸ್ತ್ರೀಯಗಳಾದವೆಂದು ಭಾವಿಸುವದು ಯುಕ್ತವಲ್ಲವು. ಇವುಗಳ ಆವಶ್ಯಕತೆಯು ತಪ್ಪಿ ಬಹುಕಾಲವಾಗುತ ಬಂತೆಂದು ಈಗ ಯೆಲ್ಲರೂ ಅಂಗೀಕರಿಸಿರುತ್ತಾರೆ. ಇವುಗಳ ಸ್ವಭಾವಗಳಂ ನೋಡಲಾಗಿ ಕಾಲವು ಬದಲಾಯಿಸುತಲಿರುವಂತೆಲ್ಲ ನಮ್ಮ ಸ್ಥಿತಿಗತಿಗಳಗನುಗುಣವಾಗಿ ಅವುಗಳೂ ಮಾರ್ಪಾಟವಂ ಹೊಂದುತ ಬರಬೇಕಾದವಾಗಿರುತಿವೆ. ಪ್ರಸಿದ್ಧರಾದ ಶ್ರೀಭಟ್ಟ ಕುಮಾರಿಲ ಸ್ವಾಮಿಯವರೂ ವೇದಭಾಷ್ಯಕಾರರಾದ ಶ್ರೀ ಮಾಧವಾಚಾರ್ಯರವರೂ ಈ ವಿಷಯವು ನಿಸ್ಸಂದೇಹವಾಗಿ ಸ್ಪಷ್ಟಪಡಿಸಿರುತ್ತಾರೆ. ವೈದಿಕ ಲೌಕಿಕ ಭೇದಗಳು ಕೇವಲ ವ್ಯವಹಾರದೊಳಿರುವ ತಪ್ಪು ಹೆಸರುಗಳಾಗಿರುತಿವೆ. ಅವುಗಳಿಗೆ ಗ್ರಾಹ್ಯಗಳಾಗಿರುವ ವಿಶೇಷಣಗಳು ಪರಸ್ಪರ ಮಾರಿಸಿಕೊಳ್ಳತಕ್ಕವಾಗಿಯೇ ಇರುತಿವೆ. ಬ್ರಾಹ್ಮಣೇತರರಲ್ಲಿ ವಿವಾಹ ಭೋಜನಾದಿಗಳ ವಿಷಯಗಳಲ್ಲಿ ಏರ್ಪಟ್ಟಿರುವ ನಿರ್ಬಂಧಗಳಿಗಿಂತಲೂ, ಶ್ರೀ ವೈಷ್ಣವರಲ್ಲಿ ಅವು ಅತ್ಯಧಿಕವಾಗಿ ಮಾಡಲ್ಪಟ್ಟವಾಗಿರುತಿವೆ. ಇವರು ತಮ್ಮರಲ್ಲಿ ಅಸಂಖ್ಯಾತಗಳಾದ ಪ್ರಭೇದಗಳೇರ್ಪಟ್ಟು ವೈದಿಕರೆನ್ನಿಸಿಕೊಳ್ಳುವರು ಮತ್ತೊಂದು ಸಮಾಜ್ಯಗೆ ಸೇರಿದ ವೈದಿಕರಮನೆಯಲ್ಲಿ ಭೋಜನಮಾಡುವದಿಲ್ಲವು. ಕಡೆಗೆ ತಮ್ಮ ಸಮಾಜ್ಯೆಯಲ್ಲಿಯೇ ಅಂತರಾಳಿಕ ಪ್ರಭೇದವಿದ್ದರೆ ಅಂತವರು ನೋಡಿ ಸಹ ಭೋಜನ ಮಾಡಲಾರರು. ಈ ಆಚಾರಕ್ಕೆ ತೃಪ್ತಿಕರವಾದ ಆಧಾರಗಳನ್ನೆಷ್ಟುವಿಧವಾಗಿ ಹುಡಿಕಿ ವಿಚಾರಮಾಡಿ ನೋಡಿದರೂ ಅವು ಅಲಭ್ಯವಾಗಿದೆ. ಋಗ್ವೇದ ಬ್ರಾಹ್ಮಣದಲ್ಲಿರುವ ಒಂದು ಋಕ್ಕು ಇದಕ್ಕೆ ಆಧಾರವಾಗಿ ಉಪಹರಿಸಲ್ಪಡುತಿದೆ. ಪರಂತು ಅದರ ಪ್ರಮಾಣಿಕತೆಯೂ, ಉಪಯೋಗವೂ ಸಂದೇಹಿಸತಕ್ಕವರಾಗಿರುತಿದೆ. ನಮ್ಮ ದೇಶವು ವೈಲಕ್ಷಣ್ಯಗಳ ಬದಲು ಪುರೋಭಿವೃದ್ಧಿಯನ್ನೈದಬೇಕಾದರೆ ಸಾಮಾಜಕೈಕಮತ್ಯವು ಆವಶ್ಯಕವು, ಅದರಿಂದ ಸಾರ್ವಜನೀನವಾದ ಉತ್ಸಾಹ ಪ್ರವೃತ್ತಿಗಳುಂಟಾಗಲಿಕ್ಕೆ ಕಾರಣವಾಗಬಹುದು. ಮುಖ್ಯವಾಗಿ ಬ್ರಾಹ್ಮಣರ ಸ್ಥಿತಿಯು ಕೇವಲ ಶೋಚನೀಯವಾದದ್ದಾಗಿರುತಿದೆ. ಮತ್ತು ಅವರು ತೀವ್ರವಾಗಿ ಅನನ್ಯಗತಿಕರಾಗಿ ಭಿಕ್ಷುಕವೃತ್ತಿಯು ಕೈಗೊಳ್ಳಲಾವು ಸ್ವದೇಶಾಭಿಮಾನಿಗಳಾದ ಹಿಂದೂಗಳ ಹೃದಯದಲ್ಲಿ ಸರಿಯಾದ ಭಾವವನ್ನುಂಟು ಮಾಡತಕ್ಕದ್ದಾಗಿರುತಿದೆ. ಆದದರಿಂದ ವೇದೋಕ್ತಗಳಲ್ಲದ ಈಗ ನಮ್ಮಲ್ಲಿ ನೆರೆಗೊಂಡಿರುವ ಅಂತರಾಳಿಕ ಪ್ರಭೇದಗಳ ದೆಸೆಯಿಂದ ಹುಟ್ಟಾಗುತ ಬರುವ ಕೇಡುಗಳನ್ನು ಕಡಮೆಮಾಡಬೇಕಾದದ್ದು ಆವಶ್ಯಕವಾಗಿರುತಿದೆ. ಹೀಗೆ ಪ್ರಧಾನ ಸಮಾಜಗಳೆಲ್ಲವು ಒಂದಾಗಿ ದೃಢಪಡಿಸಲ್ಪಟ್ಟರೆ ಆಗ ಇತರ ವರ್ಣದವರು ಸೇರಿ ತಮ್ಮ ಪ್ರಯೋಜನಾಭಿವೃದ್ಧಿಗಾಗಿ ಐಕಮತ್ಯದೊಡನೆ ಎಲ್ಲರೂ ಶ್ರಮಿಸುವ ಕಾಲವು ಸ್ವತಃವ ಕ್ಷಿಪ್ರವಾಗಿಯೇ ಪ್ರಾಪ್ತವಾಗುವದಂ ನಾವು ನೋಡಬಹುದೆಂದು ತಿಳಿಸಿ ತಮ್ಮ ಉಪನ್ಯಾಸವಂ ಪೂರೈಸಿದರು.

ಶ್ರೀಮಾನ್ ಭಾಷ್ಯಾಚಾರ್ಯರವರು ಗತ ಮಂಗಳವಾರದ ದಿನ ಸಾಯಂಕಾಲ ಈ ಪೇಟೆಯಲ್ಲಿ ಈಚೆಗೆ ಹೊಸದಾಗಿ ಕಟ್ಟಲ್ಪಟ್ಟ ಲೈಬ್ರರಿ ಹಾಲ್‌ನಲ್ಲಿ "ದೇವಾಲಯಗಳ ಸ್ವರೂಪ ಮತ್ತು ಅವುಗಳಿಂದುಂಟಾಗುವ ಪ್ರಯೋಜನವಂ ಕುರಿತು ಆಂಧ್ರಭಾಷೆಯಲ್ಲಿ ಉಪನ್ಯಾಸ ಮಾಡಿದರು. ಆ ಕಾಲದಲ್ಲಿ ಅಸಿಸ್ಟೆಂಟ ರೆಸಿಡೆಂಟರು ವಗೈರೆ ಬಹುಜನ ದೊಡ್ಡಮನುಷ್ಯರು ಬಂದಿದ್ದರಲ್ಲದೆ ಅನೇಕರಿಗೆ ಸ್ಥಳವಿಲ್ಲದೆ ನಿಂತಿರುವಂತೆ ಪರಿಣಮಿಸಿತು. ೬½ ಘಂಟೆಗೆ ಸರಿಯಾಗಿ ಶ್ರೀಮಾನ್ ಭಾಷ್ಯಾಚಾರ್ಯರವರು ಉಪನ್ಯಾಸಕ್ಕೆ ಪ್ರಾರಂಭಿಸಿ ೧|| ಘಂಟೆಯಕಾಲ ಅವಿಚ್ಛಿನ್ನವಾಗಿ ಏಕೋಚ್ಛ್ವಾಸದಿಂ ಉಪಪಾದನ ಮಾಡಿ ಅನೇಕರಿಗೆಅನೇಕವಿಧಭಾವಗಳನ್ನುಂಟು ಮಾಡಿದರು. ಆಚಾರ್ಯರವರು ದೇವಾಲಯ ಶಬ್ದಾರ್ಥವನ್ನೂ, ಅದರ ಪ್ರಯೋಜನವನ್ನೂ, ಅದಂ ಆರ್ಯರು ಉಪಯೋಗಿಸುತಲಿದ್ದ ಕ್ರಮವನ್ನೂ, ಅನಂತರ ವಿಗ್ರಹಾರಾಧನೆಗೆ ಅಲ್ಲಿ ಅವಕಾಶ ಹುಟ್ಟಾಗಿ ಕ್ರಮೇಣ ಕಳ್ಳರಿಗೆ ಆವಾಸಸ್ಥಾನವಾಗಿಯೂ, ಸೂಳೆಯರಿಗೆ ವಿಹಾರಸ್ಥಾನವಾಗಿಯೂ, ಸೋಮಾರಿಗಳಿಗೆ ಸುಖಾಶ್ರಯಸ್ಥಾನವಾಗಿಯೂ ಏರ್ಪಡುತ ಬಂದದನ್ನೂ, ದೇವರಿಗೆ ನಡೆಯುತ್ತಿರುವ ಉತ್ಸವಾದಿಗಳ ನಿಷ್ಪ್ರಯೋಜಕತೆಯನ್ನೂ ಅಲ್ಲಿ ಜರಗುವ ನೈವೇದ್ಯ ವಿನಿಯೋಗಾದಿ ಕ್ರಮಗಳನ್ನೂ, ಬಹಳವಾಗಿ ಆಕ್ಷೇಪಿಸುವಾಗ್ಯೆ ಪ್ರಾಸಂಗಿಕರ ಆವೇಗವೂ, ಮುಖಭಾವವೂ, ತತ್ತದ್ರಸ ಪ್ರದರ್ಶಕಗಳಾದ ಭಾವಾನುಭಾವಗಳೂ, ಕರಚರಣಾದಿ ವಿನ್ಯಾಸಗಳೂ, ಭ್ರೂನಿಕ್ಷೇಪಾದಿಗಳೂ ಅಲ್ಲಿದ್ದವರನೇಕರಿಗೆ ಸಂತೋಷವನ್ನೂ ಪ್ರತಿಪತ್ತಿಯನ್ನೂ ಉಂಟು ಮಾಡತಕ್ಕವಾಗಿದ್ದವು. ಇದಲ್ಲದೆ ಆಚಾರ್ಯರು ಸ್ವಮತಾಚಾರಗಳನ್ನು ಮತ್ತೂ ಆಕ್ಷೇಪಿಸಿ ತಿಳಿಸಿದರೇನಂದರೆ—ಅನೇಕರು ತಮ್ಮ ಆಭಿಜಾತ್ಯ ಕುಲ ಜನ್ಮ ಮುಂತಾದವು ಕಂಡು ದುರಭಿಮಾನ ಪಡುತ ತಮಗೆ ಪ್ರಥಮ ತೀರ್ಥ ಕೊಡಬೇಕೆಂತಲೂ, ತಾವೇ ಅಗ್ರ ಮರ್ಯಾದೆಗೆ ಪಾತ್ರರೆಂತಲೂ, ತಮ್ಮ ಹಕ್ಕುದಾರಿಯೇ ಊರ್ಜಿತವಾಗಿರಬೇಕೆಂತಲೂ ವಿವಾದಿಸುತ ಅದಕ್ಕೆ ಯಾವಾಗಲಾದರೂ ವಿಘಾತ ಹುಟ್ಟಾದರೆ ಕೋರ್ಟುಗಳಿಗೆ ಹೋಗಿ ವ್ಯರ್ಥವಾಗಿ ದ್ರವ್ಯ ವ್ಯಯ ಮಾಡುತ್ತಾರೆಂತಲೂ, ಇದಕ್ಕೆ ಬೆಂಗಳೂರು ಡಿಸ್ಟ್ರಿಕ್ಟುಕೋರ್ಟು ಸಾಕ್ಷಿಯಾಗಿದೆಯೆಂತಲೂ, ನುಡಿದರು. ದೇವದಾಸಿಶಬ್ದಕ್ಕೆ ಅರ್ಥ ನಿಷ್ಪತ್ತಿಯಂಮಾಡಿ ಅದಂ ಕುಟುಂಬಿನೀಯರ ಪರವಾಗಿ ಅನ್ವಯಿಸಿ, ಈಗ ನೆಲಗೊಂಡಿರುವ, ಅಂಗಡಿಸೂಳೆಯರನ್ನು ದೇವಸ್ಥಾನಗಳಲ್ಲಿ ಸೇರಿಸುವದದ್ದು ಬಹಳ ಅನರ್ಥಗಳಿಗೆ ಕಾರಣವೆಂಬದಾಗಿಯೂ, ಇದರಿಂದ ಪ್ರಮುಖರಾದ ಉತ್ತಮರನೇಕರುಕೆಡಲಿಕ್ಕೆ ನಿಮಿತ್ತವಾಗುವದೆಂತಲೂ, ಇಂತಾ ನಮ್ಮ ನಡತೆಗಳೆಲ್ಲವೂ ನಾಗರಿಕ ವೈಲಕ್ಷಣ್ಯಾದಿಗಳಲ್ಲಿ ಸರ್ವೋತ್ತಮರೆನಿಸಿರುವ ಪಾಶ್ಚಿಮಾತ್ಯರವಹೇಳನದೂಷಣಗಳಿಗೆ ಕಾರಣಗಳಾಗುವವೆಂತಲೂ ದೇವಾಲಯಗಳ ಪ್ರಯೋಜನಗಳನ್ನು ಈಗ ಜನಗಳೆಷ್ಟರಮಟ್ಟಿಗೆ ಹ್ಯಾಗೆ ಅನುಭವಿಸುತಲಿದ್ದಾರೆಯೋ ಅದಕ್ಕಿಂತ ಅಧಿಕವಾಗಿ ಉತ್ತಮರೀತಿಯಿಂದ ಅನುಭವಿಸಬೇಕೆಂದು ಅಪೇಕ್ಷಿಸುವುದಕ್ಕೆ ಹೇಳಿ ಅದಕ್ಕೆ ಪ್ರೋತ್ಸಾಹಕಗಳಾದ ಅನೇಕದೃಷ್ಟಾಂತಗಳನ್ನ ಆಧಾರಗಳನ್ನೂ ಉಪಹರಿಸಿದರು. ಅನಂತರ ಶ್ರೀಗೋವಿಂದಾಚಾರ್ಯರವರು ತಾವು ಪಡುತಿರುವ ಮಹತ್ಕಾರ್ಯವನ್ನೂ, ಅದರಲ್ಲಿ ರವಗಿರುವ ನಿಸ್ಪೃಹತೆಯನ್ನೂ, ಬಹುವಿಧವಾಗಿ ತಿಳಿಸಿ ಈ ಪ್ರಾಂತ ನಿವಾಸಿಗಳ ಉದ್ಧಾರಣಾರ್ಥವಾಗಿಯೇ ತಮ್ಮ ಕರ್ತವ್ಯವಂ ನೆರವೇರಿಸುವಂತೆ ಹೇಳಿ ಪ್ರಾಸಂಗಿಕರಿಗೆ ವಂದನಮಾಡಿದರು. ಶ್ರೀಮಾನ್ ಭಾಷ್ಯಾಚಾರ್ಯರವರ ಸ್ವಮತಾಚಾರಖಂಡನಪೂರ್ವಕವಾದ ಪ್ರಸಂಗವು ಅನೇಕರಿಗೆ ಗ್ರಾಹ್ಯವಾಗಿದ್ದಿರುವದೆಂಬ ಅಂಶಬಹಳಸಂದೇಹಾಸ್ಪದವಾಗಿದೆ. ಪರಂತು ಆಚಾರ್ಯರವರ ವಾಕ್ಯಾರ್ಥವು, ಕೆಲವು ತಿಂಗಳಹಿಂದೆ ಮದರಾಸ ಕ್ರಿಶ್ಚಿಯನ್ ಕಾಲೇಜ ಪ್ರೊಫೆಸರ್ ಸ್ಮಿತ್ ಒಬ್ಬರು "ವಿಗ್ರಹಾರಾಧನ ಮಾಡುವದಕ್ಕಿಂತ ನನ್ನ ಬೂಟ್ಸನ್ನು ಪೂಜೆ ಮಾಡಿರೆಂದು" ತಮ್ಮ ವಿದ್ಯಾರ್ಥಿಗಳಿಗೆ ತಿಳಿಸಿದ ಅಂಶವು ಕೇಳಿದ್ದರಿಂದುಂಟಾದ ನಮ್ಮ ಮನೋಖೇದವನ್ನು ಶುದ್ಧಾಂಗವಾಗಿಹೋಗಲಾಡಿಸಿದ ಬಗ್ಗೆ ಅವರ ವಿಷಯದಲ್ಲಿ ಹಿಂದೂವೆನಿಸಿರುವವರೆಲ್ಲರೂ ಬಹಳ ಕೃತಜ್ಞರಾಗಿರಬೇಕೆಂದು ಕೋರುವೆವು.

EXTRACTS.

ಅನಂತಶಯನವೆಂಬ ನಾಮಾಂತರವುಳ್ಳ ತಿರುವನಂತಪುರದ ಮೊಕ್ಕಾಮಿನಿಂದ ಕಳೆದತಿಂಗಳ ೨೩ನೇ ತಾರೀಖಿನಲ್ಲಿ ದೇಶಸಂಚಾರಿಯಾದ ಹಿಂದೂಸುಬೋಧಪತ್ರಿಕೆಯ ಬಾತ್ಮೀದಾರರು ಬರೆದಿರುತ್ತಾರೇನಂದರೆ:—ನಾನು ೨೮ನೇ ತಾರೀಖಿನೊಳಲ್ಲಿಗೆ ಬಂದುಸೇರಿದೆನು. ಇದು ತಿರುವಾಂಕೂರು ಸಂಸ್ಥಾನದ ಮುಖ್ಯ ರಾಜಧಾನಿಯಾಗಿರುತಿದೆ. ಇದು ಅನ್ಯದೇಶೀಯರು ಅನಂತಶಯನವೆಂತಲೂ, ಇಲ್ಲಿನವರು ತಿರುವನ್ನೂರ್ ಅಥವಾ ತಿರುವನಂತಪುರವೆಂತಲೂ ಕರೆಯುತ್ತಾರೆ. ಈಸ್ಥಳದಲ್ಲಿ ಪ್ರಸಿದ್ಧವಾದ ಒಂದು ವಿಶಾಲ ದೇವಾಲಯವೂ ಅದರಪುರೋಭಾಗವಲ್ಲಿ ದಿವ್ಯವಾದ ಒಂದು ಪದ್ಮ ಸರೋವರವೂಯಿರುತಿದೆ. ಈ ದೇವಾಲಯವು ಯೆರಡು ಪ್ರಾಕಾರಗಳುಳ್ಳದ್ದಾಗಿದೆಯಲ್ಲದೆ ಇದರಲ್ಲಿ ದೇವರಿಗೆ ತ್ರಿಕಾಲಗಳಲ್ಲಿಯೂ ಆರಾಧನೆ ನಡೆಯುತಿದೆ. ದೇವರ ದರ್ಶನಾರ್ಥ ಪ್ರತಿನಿತ್ಯವೂ ಅನೇಕಸಹಸ್ರ ಪ್ರಜೆಗಳು ಸ್ಥಳ ಪರಸ್ಥಳಗಳಿಂದ ದೇವಸ್ಥಾನಕ್ಕೆ ಬಂದು ಹೋಗುತಲಿರುತ್ತಾರೆ. ಈ ಸಂಸ್ಥಾನದ ಮಹಾರಾಜರವರುಕೂಡ ಪ್ರತಿದಿನವಲ್ಲೂ ಯೆರಡು ವೇಳೆಯಲ್ಲೂ ದೇವರ ಸಂದರ್ಶನಕ್ಕಾಗಿ ದೇವಸ್ಥಾನಕ್ಕೆ ಬರುತ್ತಾರೆ. ನಿನ್ನೆಯದಿನ ಸಾಯಂಕಾಲ ೭ಘಂಟೆಯಸಮಯದಲ್ಲಿ ಮಹಾರಾಜರವರ ಸವಾರಿಯು ದೇವಸ್ಥಾನಕ್ಕೆ ಬಂದಾಗ ನಾನು ಅಲ್ಲಿಯೇ ಹಾಜರಾಗಿದ್ದೆನು. ಮಹಾರಾಜರವರಿಗೆ ಮುಂಭಾಗದಲ್ಲಿ ಇಬ್ಬರು ಕರದೀಪಗಳನ್ನು ಹಿಡಿದುಕೊಂಡು ಬಂದರು, ಅವರಹಿಂದೆ ಇನ್ನಿಬ್ಬರುವೇತ್ರಧಾರಿಗಳೂ, ತರುವಾಯ ಮಹಾರಾಜರವರೂ, ಅವರಹಿಂದೆ ಮೂರುನಾಲ್ಕುಜನ ಮುಖ್ಯ ಸಾಮಾಜಿಕರೂ ಕ್ರಮವಾಗಿ ಅನುವರ್ತಿಸಿ ಬಂದರು. ಮಹಾರಾಜರವರು ಅತಿ ಶುಭ್ರವಾದ ಒಂದು ಮುಂಡನ್ನು ಪಾದದವರಿವಿಗೆ ಉಟ್ಟುಕೊಂಡು ವಿಶೇಷ ಕ್ರಯವುಳ್ಳ ದುಪ್ಪಟಾವನ್ನು ಅಂಗವಸ್ತ್ರವಾಗಿ ಮೇಲೆ ಧರಿಸಿದ್ದರು. ಅವರ ಅಂಗುಳಿಯಲ್ಲಿ ಅತ್ಯುತ್ತಮವಾದ ಒಂದು ವಜ್ರದ ಉಂಗುರವೂ ಕಂಠದಲ್ಲಿ ನವರತ್ನಮಯವಾದ ಮುತ್ತಿನಹಾರವೂ ಕಂಡುಬಂದವು. ಅವರು ಸ್ನಾನಮಾಡಿಕೇವಲ ಶುಚಿರ್ಭೂತರಾಗಿದ್ದರೆಂದು ಅವರ ಭಸ್ಮಲೇಪನದಿಂದಲೂ, ತಮ್ಮ ಮುಂಜುಟ್ಟನ್ನು ಉದ್ದವಾಗಿ ಮುಡಾಕಿ ಪಾರ್ಶ್ವದಲ್ಲಿ ಇಳಿಬಿಟ್ಟದ್ದರಿಂದಲೂ ತಿಳಿಯಲಿಕ್ಕೆ ಕಾರಣವಾಯಿತು. ಇವರು, ಶರೀರರೂಪಕಾಂತಿಮೊದಲಾದವುಗಳಿಂದ ನೋಡುವವರಿಗೆ ಹೃದಯಾಕರ್ಷಕರಾಗಿರುತ್ತಾರೆ. ಇವರ ಸವಾರಿ ಬರುವದಂಕಂಡು ಎಲ್ಲರೂ ತಾವು ಇದ್ದಸ್ಥಳಗಳಲ್ಲಿ ಸ್ತಬ್ಧರಾಗಿ ನಿಂತಿದ್ದು, ಅವರಸವಾರಿ ವಾಪಸುಹೋದ ಬಳಿಕ ಮರಳಿ ಎಲ್ಲರೂ ದೇವರ ದರ್ಶನಕ್ಕೆ ಬರುವರು. ಈ ಊರಲ್ಲಿ ಸಂಸ್ಥಾನದ ಪ್ರಯುಕ್ತ ಅನೇಕ ಧರ್ಮಕಾರ್ಯಗಳು ನಿಯಮವಾಗಿ ನಡೆಯುತಲಿರುತಿವೆ. ಪ್ರತಿದಿನ ಬೆಳಗ್ಗೆ ೪ ಘಂಟೆಗೆ ಸರಿಯಾಗಿ ನೂರುಮಂದಿಗೆ ಶಾಕಸೂಪ ಪಾಯಸಾದಿಗಳೊಡನೆ ಸಂತರ್ಪಣೆ ನಡೆಯುತಿದೆ. ಈ ಭಾಗ್ಯವು ಪಟ್ಟಮಾರರಿಗೆ ಮಾತ್ರ ಅಲಭ್ಯವಾಗಿರುತಿದೆ. ಪ್ರತಿನಿತ್ಯ ಎರಡು ವೇಳೆಯಲ್ಲಿಯೂ ಸಂತರ್ಪಣೆ ನಡೆಯುವ ಅನ್ನಛತ್ರವಿರುತಿದೆ. ಇದನ್ನಾಶ್ರಯಿಸಿಕೊಂಡು ಸಾವಿರಾರು ಕುಟುಂಬಿಗಳು ಜೀವನ ಮಾಡುತಲಿದ್ದಾರೆ. ಇದರಲ್ಲಿ ಯಾರು ಎಷ್ಟು ದಿನಗಳಿದ್ದರೂ ಕೇಳುವದಿಲ್ಲವು. ಮಹಾರಾಜರವರ ಜನ್ಮನಕ್ಷತ್ರ, ಪರ್ವಸಂಧಾಂತಿ, ಅಮಾವಾಸ್ಯೆ, ಸಂಕ್ರಮಣ, ವರ್ಷತಿಥಿಗಳು ವಗೈರೆ ವಿಶೇಷ ದಿನಗಳಲ್ಲಿ ಸಂತರ್ಪಣೆಯು ಪ್ರಬಲವಾಗಿ ಭಕ್ಷ್ಯ ಭೋಜ್ಯಾದಿಗಳೊಡನೆ ನಡೆಯುವದು. ಇದಲ್ಲದೆ, ಪ್ರತಿನಿತ್ಯ ೧೦೪ ಮಂದಿಗೆ ಮೃಷ್ಟಾನ್ನ ಭೋಜನ ಮತ್ತೊಂದುಕಡೆ ನಿರ್ವಿಚಾರವಾಗಿ ನಡೆಯುತಿದೆ. ಸಂಧ್ಯಾಕಾಲವಲ್ಲಿ ಅಮಲಮೆಟ ಒಂದುಬಗೆ ಫಲಾಹಾರವು ಪರಸ್ಥಳದವರಿಗೆ ಕೊಡಲ್ಪಡುತಿದೆ. ಈ ಸಂಸ್ಥಾನವಲ್ಲಿ ದಿನ ಒಂದಕ್ಕೆ ೫ ಸಾವಿರ ರೂಪಾಯಿಗಳ ವರಿವಿಗೆ ಬ್ರಾಹ್ಮಣಸಂತರ್ಪಣೆಗಳಿಗಾಗಿಯೂ, ದೇವರ ಕೈಂಕರ್ಯಗಳಿಗಾಗಿಯೂ ವ್ಯಯವಾಗುತಿದೆ. ಇಲ್ಲಿ ಹನ್ನೆರಡು ವರುಷಗಳಿಗೊಂದಾವರ್ತಿ "ಮುರಿಜಪ" ವೆಂಬದೊಂದು ಕಾರ್ಯವು ದೇವರ ಸನ್ನಿಧಿಯಲ್ಲಿ ನಡೆಯುವದು. ಈವೇದ ಪಾರಾಯಣಕ್ಕಾಗಿ ವೇದಾಧ್ಯಯನ ಸಂಪನ್ನರಾದ ಶ್ರೋತ್ರಿಯರನೇಕರು ಬರುವರು. ಆ ಕಾಲದಲ್ಲಿ ಅವರ ಯೋಗ್ಯತಾನುಸಾರವಾಗಿ ವಸ್ತ್ರಧನರೂಪವಾದ ಸನ್ಮಾನಗಳು ಮಾಡಲ್ಪಡುವವು. ಇಲ್ಲಿಯೂ ಅಟ್ಟಮಾರರ ಸಂಖ್ಯೆಯು ಅಧಿಕವಾಗಿಯೇ ಇರುತಿದೆ. ಇತರ ಸ್ಥಳಗಳಲ್ಲಿರುವವರಿಗಿಂತ ಇಲ್ಲಿನವರು ಲಜ್ಜಾಹೀನರಾಗಿಯೂ, ಅಲ್ಪ ಸೌಂದರ್ಯ ವುಳ್ಳವರಾಗಿಯೂ, ಅನೇಕರು ಅನನ್ಯಗತಿಕರಾಗಿಯೂ, ಛತ್ರಕಬಳವನ್ನೇ ನಿರೀಕ್ಷಿಸುತಲಿರತಕ್ಕವರಾಗಿಯೂ ಇರುತ್ತಾರೆ. ಇಲ್ಲಿನ ಛತ್ರ ಜೀವಿಗಳೆಲ್ಲರೂ ಶುದ್ಧಮೂಢರಾಗಿಯೂ, ದುರ್ವೃತ್ತರಾಗಿಯೂ ಇರುತಲಿರುವದಕ್ಕಾಗಿ ನಾನು ಬಹಳ ವಿಷಾದಿಸುತ್ತೇನೆ, ಎಂಬದು.

BANGALORE:—Printed and published at the KARNATIC PRESS, No. 44, Hospital Road, Petta.—1888.

ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA.

ಪ್ರತಿ ಸೋಮವಾರ ಪ್ರಾತಃಕಾಲದಲ್ಲಿ ಪ್ರಕಟಿಸಲ್ಪಡುವದು.

Published every Monday Morning.

ಪ್ರಕಾಮವಿವಿಧವೃತ್ತ್ಯುಪಗಮಾರ್ಥ್ಯ ಕರ್ಣಾಟಕಪ್ರಕಾಶನಸಂಭಿದಾಪ್ರಥಿತಸಾಹಿತಿಶೋಭಿತಾ ॥ ಮ್ರ್ಯಗಾಂಕಹಿತವಾಸರನಿಹಿತಮುದ್ರಣಾಸಜ್ಜನೈರ್ದ್ದಿಶಾಸುವರಿದೋಷತಾದಿಕತಿವಾನಸಂಸಂಮುದಾ॥

Vol. XV.] | BANGALORE:—MONDAY, SEPTEMBER 24, 1888. | [No. 38.

ಸಂಪುಟ ೧೫.] | ಬೆಂಗಳೂರು:—ಸನ್ ೧೮೮೮ನೇ ಇಸವಿ ಸೆಪ್ಟೆಂಬರ್ ೨೪ನೇ ತಾರೀಖು ಸೋಮವಾರ. | [ಸಂಖ್ಯೆ ೩೮.

ಕರ್ಣಾಟಕ ಪ್ರಕಾಶಿಕಾ

ಪತ್ರಿಕೆಯ ಚಂದಾ ದರಗಳು,
೧೮೮೮ನೇ ಇಸವಿ ಜನವರಿಯಿಂದಾಯಿತು
ಕಡಮೆ ಮಾಡಲ್ಪಟ್ಟಿರುತ್ತದೆ.

ಈ ಪತ್ರಿಕೆಯ ಚಂದಾದಾರರನ್ನು ಕುರಿತು ಅನೇಕರ ಅಪೇಕ್ಷೆಯನ್ನು ನೆರವೇರಿಸುವ ಉದ್ದೇಶದೊಡನೆಯೂ, ಪರಿಮಿತವಾದ ಆಯುತಿಯುಳ್ಳವರಿಗೆಲ್ಲ ಈ ಪತ್ರಿಕೆಯು ಸುಲಭವಾಗಿ ಲಭಿಸುವಂತಿರಬೇಕೆಂಬ ಅಭಿಪ್ರಾಯದಿಂದಲೂ ಇದರ ಚಂದಾದರವನ್ನು ಇದರಡಿಯಲ್ಲಿ ಕಂಡಂತೆ ಕಡಮೆ ಮಾಡಿರುತ್ತೇವೆ:—

ಇಂಗ್ಲಿಷ್ ಮತ್ತು ಕನ್ನಡಭಾಗಗಳಿಗೆ.

	ಸ್ಥಳೀ ವರ್ಗಕ್ಕೆ	ಪರಸ್ಥಳದವರಿಗೆ
12 ತಿಂಗಳಿಗೆ	8—0—0	9—0—0
6 „	4—0—0	4—8—0
3 „	2—8—0	2—8—0

ಇಂಗ್ಲಿಷ್ ಅಥವಾ ಕನ್ನಡಭಾಗಗಳಿಗೆ.

	ಸ್ಥಳದವರಿಗೆ	ಪರಸ್ಥಳದವರಿಗೆ
12 ತಿಂಗಳಿಗೆ	4—0—0	5—0—0
6 „	2—0—0	2—8—0
3 „	1—4—0	1—8—0

ಷರಾ—ಅಂಚೆ ಮಾಸ್ತರುಗಳು, ಹೋಬಳಿ ಮತ್ತು ತಾಲ್ಲೂಕು ಸ್ಕೂಲ್ ಮಾಸ್ತರುಗಳು, ಶ್ಯಾನುಭೋಗರು, ಪಟೇಲರು, ವಿದ್ಯಾರ್ಥಿಗಳು, ಇವರೆಲ್ಲ ಈ ಪತ್ರಿಕೆಯ ಮೇರೆಗೆ ಚಂದಾದಾರರಿಗೆ ಕೊಡಲ್ಪಡುವರು. ಮುಂಗಡವಾಗಿ ಹಣವು ಬಾರದ ದರಖಾಸ್ತುಗಳಿಗೆ ಸುತರಾಂ ನಿಗೇಕೊಡಲ್ಪಡಲಾರದು. ಚಂದಾದಾರರು ಇಂಗ್ಲಿಷ್ ಭಾಗವನ್ನಾಗಲಿ ಕನ್ನಡಭಾಗವನ್ನಾಗಲಿ ಅಥವಾ ಎರಡನ್ನಾಗಲಿ ತೆಗೆದುಕೊಳ್ಳಬಹುದು. ಚಂದಾಹಣವನ್ನು ಮುಂಗಡವಾಗಿಯೇ ಕಳುಹಿಸತಕ್ಕದ್ದು. ಮೂರು ತಿಂಗಳಿಗಿಂತ ಕಡಮೆಯಾಗಿ ಚಂದಾ ಮೊಬಲಗು ಅಂಗೀಕರಿಸಲ್ಪಡಲಾರದು.

ನೋಟುಗಳು ರವಾನಿಸತಕ್ಕವರು ಮೊದಲು ಕಳುಹಿಸುವ ಅರ್ಧನೋಟು ತಲುಪಿದ ಬಗ್ಗೆ ನಮ್ಮ ರಶೀದಿ ಬಂದ ಮೇಲೆ ಬಾಕೀ ಅರ್ಧ ನೋಟನ್ನು ರವಾನಿಸತಕ್ಕದ್ದು. ಸ್ಟಾಂಪುಗಳು ಕಳುಹಿಸತಕ್ಕವರು ರೂಪಾಯಿ ಒಂದಕ್ಕೆ ಒಂದಾಣೆಯ ಮೇರೆ ಡಿಸ್ಕೌಂಟ್ ಸಹ ಸೇರಿಸಿ ಕಳುಹಿಸತಕ್ಕದ್ದು. ಅರ್ಧಾಣೆಗಿಂತ ಜಾಸ್ತಿ ಕ್ರಯವುಳ್ಳ ಟಿಕೀಟುಗಳನ್ನು ಕಳುಹಿಸಕೂಡದು. ಡಿಸ್ಕೌಂಟ್ ಇಲ್ಲದೆ ಕಳುಹಿಸಲ್ಪಡುವ ಮೊಬಲಗಿನಲ್ಲಿ ಅದು ವಜಾ ಮಾಡಲ್ಪಟ್ಟು ಮಿಕ್ಕ ಮೊಬಲಗು ಲೆಕ್ಕಕ್ಕೆ ದಾಖಲ್ಮಾಡಿಕೊಳ್ಳಲ್ಪಡುವದು.

ಪ್ರಕಟನೆಯ ರಿವಾಜ್.

ಮೊದಲನೆಯದಫಾ ಪಂಕ್ತಿ ಒಂದಕ್ಕೆ	೦—೨—೦
ಎರಡನೆಯದಫಾ ಪಂಕ್ತಿ ಒಂದಕ್ಕೆ	೦—೧—೦

ಷರಾ—ಎರಡಾವರ್ತಿಗಿಂತ ಜಾಸ್ತಿಯಾಗಿ ಎಷ್ಟು ದಫೆ ಇನ್ಸರ್ಟ್ ಮಾಡಿದಾಗ್ಯೂ ಪಂಕ್ತಿ ಒಂದಕ್ಕೆ ೧ ಆಣೆಯಂತೆಯೇ ಲೆಕ್ಕ ಮಾಡಲ್ಪಡುವದು. ಈ ಪತ್ರಿಕೆಯಲ್ಲಿ ಖಾಯಮ್ಮಾಗಿ ಪ್ರಕಟನೆಗಳು ಕಳುಹಿಸುವವರು ಅವು ಎಷ್ಟಾವರ್ತಿ ಇನ್ಸರ್ಟ್ ಮಾಡಲ್ಪಡಬೇಕೆಂಬ ಅಂಶವನ್ನು ಸ್ಪಷ್ಟವಾಗಿ ತಿಳಿಸತಕ್ಕದ್ದು. ಇಲ್ಲದಿದ್ದಲ್ಲಿ ಅವು ನಮಗೆ ನಿಲ್ಲಿಸುವಂತೆ ತಿಳಿಯುವತನಕ ಅವು ಪ್ರಕಟಿಸುತ್ತಿದ್ದು ಹಾಗೆ ಎಷ್ಟಾವರ್ತಿ ಪ್ರಕಟಿಸಲ್ಪಟ್ಟಿದ್ದಾಗ್ಯೂ ಮೇಲ್ಕಂಡ ದರದಂತೆ ಕಿಮ್ಮತ್ತು ವಸೂಲ್ಮಾಡಲ್ಪಡುವದು. ಪ್ರಕಟನೆಯ ಬಗ್ಗೆ ಕಳುಹಿಸಲ್ಪಡತಕ್ಕ ಪ್ರಕಟನೆಗಳನ್ನು ಆ ಯಾ ಸೋಮವಾರದ ಮಧ್ಯಾಹ್ನ ೨ ಘಂಟೆಯೊಳಗಾಗಿ ಕಳುಹಿಸಬೇಕು. ಪ್ರಕಟನೆಯ ಬಗ್ಗೆ ಈ ಪತ್ರಿಕೆಗೆ ಕಳುಹಿಸಲ್ಪಡತಕ್ಕ ಕಾಗದಗಳಲ್ಲಿ ತಿಳಿಸಲ್ಪಡುವ ಅಭಿಪ್ರಾಯಗಳಿಗೆ ನಾವು ಜವಾಬ್ದಾರರಾಗಲಾರೆವು. ಕ್ರಮವಾಗಿ ರುಜು ಮಾಡಿ ಕಳುಹಿಸದ ಯಾವ ಕಾಗದವನ್ನೂ ಪ್ರಕಟಿಸಲಾರೆವು. ನಿರಾಕ್ಷೇಪಣೆಯಾಗಿ ಬರಲ್ಪಡುವ ಕಾಗದಗಳು ಮರಳಿ ಕಳುಹಿಸಲ್ಪಡಲಾರವು.

"IT RECOMENDS ITSELF"

ALL WHO SUFFER FIND SURE RELIEF.

LITTLE'S

ORIENTAL BALM

THE MOST EFFECTUAL MODERN REMEDY FOR PAIN.

ಲಿಟಲ್ ಯೆಂಬುವನಿಂದ ತಯಾರ್ಮಾಡಲ್ಪಟ್ಟ "ಬಾಧಕಂಹಾರಿಣೀ" ಎಂಬ ಪೂರ್ವದೇಶ ಸಂಬಂಧವಾದ ಅಮೂಲ್ಯ ತೈಲವು ಸ್ವಶಕ್ತಿ ಪ್ರಕಾಶಕವಾದದ್ದು, ಮತ್ತು ಸಫಲವಾದ ನವೀನ ಪ್ರತಿಕ್ರಿಯಾರೂಪವಾದ ಔಷಧವು. ಇದರಿಂದ ಸಕಲ ವಾತರೋಗಗಳೂ, ವಾತಸಂಬಂಧಗಳಾದ ಸಂಧಿಬಂಧಗಳೂ ನಿವೃತ್ತಿಯಾಗುವವು. ಮುಖ್ಯವಾಗಿ ಚಿರಕಾಲಿಕವಾದ ವಾತರೋಗಗಳು, ಕಾಸ, ಗಂಟಲಿನಲ್ಲಿ ಉರಿ, ನಡುವುನೋವು, ಶೀಲಾವಾಯು, ಕಟಿವಾಯು, ಉಳುಕು ನೋವು, ತಲೆನೋವು, ತಿಮಿರ್ವಾಯು ಮುಂತಾದ ರೋಗಗಳಿಗೆಲ್ಲ ನಿಸ್ಸಂದೇಹವಾಗಿ ಬಹಳ ಪ್ರಯೋಜನವನ್ನುಂಟುಮಾಡತಕ್ಕದ್ದು. ಈ ತೈಲವನ್ನು ನೋವುಳ್ಳ ಸ್ಥಳಗಳಲ್ಲಿ ಕೆಲವಾವರ್ತಿ ಸವರಿ ಶಾಖವುಂಟಾಗುವಂತೆ ಚನ್ನಾಗಿ ತಿಕ್ಕಿದಲ್ಲಿ ಸಹಜಗಳಾದ ಯೆಲ್ಲಾ ನೋವುಗಳನ್ನು ನಿವೃತ್ತಿ ಮಾಡುವಂತಾ ಉತ್ತಮ ತೈಲವಾಗಿರುತ್ತದೆ. ಸಕ್ರೈಸ್ಪೇನದಿಂದಲೇ ಅರತರಶೋಥವು ಮತ್ತು ಜೋಮು ಮುಂತಾದ್ದು ನಿವೃತ್ತಿಯಾಗುವದು. ಗಂಟಲಿನಲ್ಲುಂಟಾಗುವ ಉರಿ ಅಥವಾ ವ್ರಣಗಳಿಗೆ ಈ ತೈಲವು ಅದ್ಭುತವಾದ ಮತ್ತು ಶೀಘ್ರವಾದ ಸಂಪೂರ್ಣ ಗುಣವನ್ನುಂಟುಮಾಡುವದು. ಅದ್ಭುತವಾದ ಈ ಔಷಧವನ್ನು ಅನುಭವಿಸಿನೋಡಿದಲ್ಲಿ ಅದರ ಪ್ರಯೋಜನವು ಸ್ವತಃ ವ್ಯಕ್ತವಾಗುವದು. ಈ ತೈಲವು ಶೀತಗಾಳಿ ಮುಂತಾದವುಗಳೊಳಗಾಗಿ ಸಂಚರಿಸುವಂತಾ ಪ್ರಯಾಣಿಕರು, ಬೇಟೆಯಾಡುವವರು, ದೇಶಾಟನ ಮಾಡುವವರು, ಮುಂತಾದವರಿಗೆಲ್ಲ ಅಮೂಲ್ಯವಾದದ್ದು.

ಪರಿಶೀಲಕರ ಅಭಿಪ್ರಾಯವು.

ಐರ್ಲ್ಯಾಂಡ್ ದೇಶದ ಫಾರ್ಮಸ್ಯೂಟಿಕಲ್ ಸೊಸೈಟಿಯೆಂಬ ಔಷಧಶಾಲೆಯ ಪ್ರೆಸಿಡೆಂಟರಾಗಿಯೂ, ಹರೀ ದೇಶದ ಜಿಯಾಲಜಿಕಲ್ ಸೊಸೈಟಿ ಯೆಂಬ ಮೃತ್ಪಾಷಾಣವಿಭಾಗವಿದ್ಯೆಯ ಸಮಾಜದ ಮೆಂಬರಾಗಿಯೂ, "ಮಿನರಲ್ ವಾಟರ್ಸ್ ಆಫ್ ಯೂರಪ್" ಎಂಬ ಗ್ರಂಥಕರ್ತರಾಗಿಯೂ, ರಸಾಯನ ವಿಜ್ಞಾನ ವಿಷಯಕವಾದ ಅನೇಕ ಬೋಧನಾಧಿಕಾರಿಯಾಗಿಯೂ, ಇರುವ ಪ್ರೊಫೆಸರ್ ಟಿಚ್ ಬೋರ್ನ್ (C. R. Tichborne, L. L. D., F. C. S., M. R. I. A.) ಯೆಂಬುವರು ಅಭಿಪ್ರಾಯಪಟ್ಟಿರುತ್ತಾರೇನೆಂದರೆ—ಲಿಟಿಲ್‌ಯವರ ಓರಿಯಂಟಲ್ ತೈಲವನ್ನು ಜಾಗರೂಕತೆಯಿಂದ ಪರೀಕ್ಷಿಸಿದ್ದರೊಳಗೆ ಇದು ಬಹುವಿಧ ಮೂಲಿಕೆಗಳ ರಸಮಿಶ್ರವಾದ ತೈಲವೆಂದು ಏರ್ಪಟ್ಟಿತಲ್ಲದೆ, ಇದು ಹೊರಗೆ ಉಪಯೋಗಿಸಲ್ಪಡುವಾಗ ಶುದ್ಧಾಂಗ ನಿರುಪದ್ರವಕರವಾದದ್ದಾಗಿದ್ದರೂ, ನಿಜವಾಗಿ ಪ್ರಬಲ ರೋಗ ನಿವಾರಕ ಶಾಕ್ತಿಯುಳ್ಳದ್ದಾಗಿರುತ್ತದೆ. ಈ ಮಿಶ್ರೌಷಧವು ನರಗಳನ್ನು ಸ್ಥಿಮಿತಕ್ಕೆ ತರತಕ್ಕದ್ದಾಗಿರುವದರಿಂದ ಇದು ನಾನಾ ತರದ ರೋಗಗಳಿಗೆ ಉಪಯುಕ್ತವೆಂದು ತಿಳಿಸಲ್ಪಟ್ಟಿದೆಯೋ ಆದೇ ರೋಗಗಳಲ್ಲಿ ಅದರ ಪ್ರಯೋಜನವು ವ್ಯಕ್ತವಾಗುವದು. ಈ ತೈಲವು ಸಂಪೂರ್ಣ ಜಾಗರೂಕತೆಯೊಡನೆ ತಯಾರ್ಮಾಡಲ್ಪಡುತ್ತದೆ.

ಇದರ ಕ್ರಯ—ಸೀಸೆ ಒಂದಕ್ಕೆ ೧ ರೂಪಾಯಿ.

ಇದು ಮಿಸ್ಟರ್ ಔಷಧ ಶಾಲೆಯಲ್ಲಿಯೂ, ಮದರಾಸ್ ಶಂಭುದಾಸ್ ಬೀದಿಯಲ್ಲಿ, ೨೦ನೇ ನಂಬರ್ ಮನೆಯೊಳಗಿರುವ, ಮೆ. ಎ. ಸಿ ಬೆರ್ರಿಮನ್ ಯವರಲ್ಲಿಯೂ, ಈ ಊರಲ್ಲಿರುವ ಅವರ ಏಜಂಟ್‌ಗಳಾದ ಜೆ. ವೆಸ್ಟ್ ಯವರ ಕಂಪೆನಿಯಲ್ಲಿಯೂ, ಮೆ. ಕೆಪ್ಟನ್ ಅಂಡ್ ಕಂಪೆನಿಯವರಲ್ಲಿಯೂ, ರಿಗ್ಸ್‌ಯವರ ಕಂಪೆನಿಯಲ್ಲಿಯೂ ದೊರೆಯುವದು.

AGENTS.—Messrs, J. West, *Chemist, &c, Bangalore.*
Captain & Co. *Chemists, Bangalore.*
Higgs & Co., *Chemists, Bangalore*; and of
Mahomed Yousoff and Sons, *The Cash Bazar, Bangalore*
A. C. Berryman & Co.,
20 *Sambodass Street Madras.*

NOTICE.

VAIDYASARA SANGRAHA

A TREATISE ON THE PRINCIPLES OF

HINDU MEDICINE.

☞ *Price including Postage Rs* 5 6-0

ವೈದ್ಯಸಾರ ಸಂಗ್ರಹ.

ಈ ಗ್ರಂಥಾಪೇಕ್ಷೆಯುಳ್ಳವರು ಮೊಬಲಗಿನೊಡನೆ ಈ ಕೆಳಗೆ ರುಜುಮಾಡಿರತಕ್ಕವರ ಹೆಸರಿಗೆ ಬರೆದುಕೊಂಡರೆ ಪುಸ್ತಕ ಕೂಡಲೇ ಕಳುಹಿಸಲ್ಪಡುವದು. ಮೊಬಲಗು ಇಲ್ಲದ ದರಖಾಸ್ತುಗಳಿಗೆ ಸುತರಾಂ ನಿಗೇಕೊಡಲ್ಪಡಲಾರದು.

ಇದರ ಕ್ರಯ ... ...ರೂ॥ ೫—೦—೦
ಪ್ಯಾಕಿಂಗ್ ಮತ್ತು ಅಂಚೆ ಹಾಸಲ್, ೦—೬—೦

ಟಿ. ಬಿ. ಮೆಕಟಾಚಾರ್,
ಆಸ್ಪತ್ರೆರೋಡ್ ಬೆಂಗಳೂರು.

ವಿಶೇಷ ವರ್ತಮಾನ

ಪುನೆ ಚಿತ್ರಶಾಲೆಯಲ್ಲಿ ಸ್ಥಾಪಿಸಲ್ಪಟ್ಟಿರುವ ಲಿಥೋ ಶಿಲಾಮುದ್ರೆಯಲ್ಲಿ, ಹಿಂದೂ ದೇವರುಗಳ, ಚರಿತ್ರೆಗಳ ಮೂಲಕ ಪ್ರಸಿದ್ಧರಾದ ಮಹಾಪುರುಷರ, ಸುಂದರಿಯರ ನೇಟಿವ್ ಹೆಂಗಸರ ವಸ್ತ್ರಾಭರಣ ಬಣ್ಣದ ತಸ್ವೀರುಗಳು ತಯಾರಾಗುತ್ತಲಿವೆ. ಇವುಗಳ ಕೆಲಸಗಾರಿಕೆಯು ನಾಜೂಕನ್ನು ನೋಡಿದರೆ ಕ್ರಯ ಬಹಳ ಅಲ್ಪವಾಗಿದೆ. ಬೇಕಾದವರಿಗೆ ಕ್ರಯದ ಪಟ್ಟಿ ಕಳುಹಿಸಲ್ಪಡುವದು.

ಪುನೇ ಪೇಟ್ ಚಿತ್ರಶಾಲೆಯ ಮ್ಯಾನೇಜರ್.

Bangalore City Municipality.

ಬೆಂಗಳೂರು ಸಿಟಿ ಮ್ಯುನಿಸಿಪಾಲಿಟಿ.

ಸನ್ ೧೮೮೮ನೇ ಇಸವಿ ಸೆಪ್ಟೆಂಬರ್ ೨೯ನೇ ತಾರೀಖ್ ಶನಿವಾರದದಿನ ಸೇರಿರುವ ಮೀಟಿಂಗಿನಲ್ಲಿ ಕಮಿಷನರ್‌ಗಳ ಆಲೋಚನೆಗೆ ತರಲ್ಪಡಬೇಕಾದ ಜಾಸ್ತಿ ಅಂಶ.

ಬಾಲಿಕಾ ಪಾಠಶಾಲೆಯ ಕಮಿಟಿಯಲ್ಲಿ ಒಬ್ಬ ಮೆಂಬರಾಗಿದ್ದು ತಮ್ಮ ಕೆಲಸಕ್ಕೆ ರಾಜೀನಾಮೆ ಕೊಟ್ಟ ಮೆ॥ ಎಂ. ಎಸ್. ಕೃಷ್ಣಣ್ಣನವರಸ್ಥಾನದಲ್ಲಿ ಬೇರೆಯೊಬ್ಬರನ್ನು ನಿಯಮಿಸುವದು.

೨೦ನೇ ಸೆಪ್ಟೆಂಬರ್ ೧೮೮೮.

A. Srinivasa Charlu, R. B.,
Vice-President,
City Municipal Commission.

ದಕ್ಷಿಣ ಮಹರಾಷ್ಟ್ರ ರೆಯಿಲ್ವೆ ಕಂಪನಿ.
(ಮೈಸೂರು ಸ್ಟೇಟ್ ರೆಯಿಲ್ವೆ.)
ನೋಟಿಸ್.

ದಕ್ಷಿಣ ಮಹರಾಷ್ಟ್ರ ರೆಯಿಲ್ವೆ ಮೈಸೂರು ಹರಿಹರಕ್ಕೂ ಮಧ್ಯೆ, ಸಾದೆಯ ಸರಬರಾಯಿ ವಿಷಯದಲ್ಲಿ ಈ ತಿಂಗಳ ೩ನೇ ತಾರೀಖಿನ ಆ ಪತ್ರಿಕೆಯಲ್ಲಿ ಘೋಷಿಸ್ಮಾಡಲ್ಪಟ್ಟ ಇಸ್ತಿಹಾರನ್ನನುಸರಿಸಿ, ಅಬ್ಬೆಗ್ಗೆ ಬರುವ ದರಖಾಸ್ತುಗಳನ್ನು ಬರಮಾಡಿಕೊಳ್ಳುವದಕ್ಕೆ ಗೊತ್ತುಮಾಡಿದ್ದ ಕಾಲವು ಬರುವ ತಿಂಗಳ ೫ನೇ ತಾರೀಖ್ ವರಿವಿಗೆ ಬದಲಾಯಿಸಲ್ಪಟ್ಟಿರುತ್ತದೆಯೆಂದು ಇದರಿಂದ ಸರ್ವರಿಗೂ ತಿಳಿಯುವಂತೆ ಪ್ರಕಟಿಸಲ್ಪಟ್ಟಿರುತ್ತದೆ.

ಬೆಂಗಳೂರು, ೧೯ನೇ ಸೆಪ್ಟಂಬರ್ ೮೮. } A. J. Mollot, *Locomotive Supdt, Mysore Section.*

ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA.

MONDAY, SEPTEMBER 24, 1888.

೧೮೮೮ನೇ ಸೆಪ್ಟೆಂಬರ್ ೨೪ನೇ ತಾ॥ ಸೋಮವಾರ.

THE MYSORE POLICE PRESENT—AND PAST.

ಈ ದೇಶದ ಪೋಲೀಸ್ ಇಲಾಖೆಯಿಂದ ಪ್ರಜೆಗಳಿಗೆ ಉಂಟಾಗುವ ಪ್ರಯೋಜನವು ಕುರಿತು ಈ ಪತ್ರಿಕೆಯಲ್ಲಿ ಸ್ವಲ್ಪ ವಿಚಾರಮಾಡುವೆವು.

ಪೋಲೀಸ್ ಬಂದೋಬಸ್ತು ಎಂದರೆ, ಪ್ರಜೆಗಳ ಮತ್ತು ಸರ್ಕಾರದ ಪ್ರಾಣಮಾನ ಧನಗಳಂಶಾ ಕಾಯುವಿಕೆಯಾಗಿರುತ್ತದೆ. ಇದು ಗ್ರಾಮ ಪೋಲೀಸ್ ಮತ್ತು ಮೊಫಸಿಲ್ ಪೋಲೀಸೆಂದು ಎರಡುವಿಧವಾಗಿ ಏರ್ಪಟ್ಟಿರುತ್ತದೆ. ಈ ಎರಡರಿಂದಲೂ ಸಾಧ್ಯವಾಗದ ಕೆಲಸವು ಮಿಲಿಟರಿ ಫೌಜಿನಿಂದ ಸಾಧಿಸಿಕೊಳ್ಳಬೇಕಾಗಿರುತ್ತದೆ. ಈ ದೇಶದ ವಿಷಯದಲ್ಲಾದರೋ, ಸದರೀ ಮಿಲಿಟರಿ ಫೌಜು ನಮ್ಮ ಮೈಸೂರು ಸರ್ಕಾರದ ಫೌಜು ಮತ್ತು ಬ್ರಿಟಿಷ್ ಸರ್ಕಾರದ ಫೌಜೆಂದು ಎರಡುವಿಧವಾಗಿ ಏರ್ಪಟ್ಟಿದೆ. ಈ ರಾಜ್ಯವು ಟೀಪೂಸುಲ್ತಾನನ ಆಳಿಕೆಯ ಆಖೈರ್ ವರಿವಿಗೂ ಸ್ವತಂತ್ರ ರಾಜ್ಯವಾಗಿ ನಡೆಯುತ್ತ ಬಂತು. ಆ ಕಾಲದಲ್ಲಿ ಕಂದಾಚಾರವೆಂಬ ಹೆಸರಿನಿಂದ ಒಂದು ಶಿಬ್ಬಂದಿ ಏರ್ಪಾಟಾಗಿ ಅದರಿಂದಲೇ ಪೋಲೀಸ್ ಕೆಲಸಗಳೂ

ಇತರ ಯುದ್ಧ ಕೆಲಸಗಳೂ ನಡೆಯುತಬಂದವು. ರೆವಿನ್ಯೂ ಅಧಿಕಾರಿಗಳ ತಾಬೆಯಲ್ಲಿ ಕಂದಾಚಾರ ಫೌಜು ದೀರ್ಘಕಾಲ ಇರುತಿರಲಿಲ್ಲವು, ಅಂದರೆ, ಬ್ರಿಟಿಷ್ ಆಳ್ವಿಕೆಯು ಈ ದೇಶದಲ್ಲಿ ನೆಲಗೊಂಡ ನಾಲ್ಕು ವರುಷಗಳ ವರಿವಿಗೇನೆ ಇರುತಲಿತ್ತು. ಈಗಿನ ಪೋಲೀಸ್ ಇನ್ಸ್ಪೆಕ್ಟರಗಳಿಗೆ ಆ ಕಾಲದಲ್ಲಿ ಕಿಲ್ಲೇದಾರ್ ಎಂಬ ಹೆಸರೂ, ಪೊಲೀಸ್ ಇನ್ಸ್ಪೆಕ್ಟರ್ ಜನರಲ್ ಯೆಂಬವಕ್ಕೆ ಬದಲಾಗಿ ಕಂದಾಚಾರದ ಬಕ್ಷಿ ಯೆಂಬ ಹೆಸರೂ ಇದ್ದವು. ಆಗ ತಾಲ್ಲೂಕುಗಳ ಅಮಲದಾರರ ಅಧಿಕಾರದಲ್ಲಿ ಕಂದಾಚಾರದವರಿಲ್ಲದಿದ್ದಾಗ್ಯೂ ಬಕ್ಷಿಯವರಹುಕುಂ ಅನುಸರಿಸಿ ವಸೂಲೀಕಾಲದಲ್ಲಿ ಕಂದಾಚಾರದವರಿಷ್ಟುಮಂದಿ ಅಮಲ್ದಾರರಿಗೆ ಕುಮ್ಮಕ್ಕ್ ಮಾಡಬೇಕೆಂಬ ನಿಯಮವಿತ್ತು. ಗ್ರಾಮಗಳಲ್ಲಿ ತಳವಾರರು ಸ್ಥಳಕರಾಗಿ, ಗ್ರಾಮವಾಸಿಗಳ ತಾರತಮ್ಯವನ್ನರಿತು ವಿನಯ ವಿಧೇಯತೆಯಿಂದ ಹ್ಯಾಗೆ ನಡೆದುಕೊಂಡುಬರುತಲಿದ್ದರೊ ಹಾಗೆಯೇ ತಾಲ್ಲೂಕು ಕಂದಾಚಾರದವರೂ ಕಸಬಾಗಳಲ್ಲಿಯೂ ಶಹರಗಳಲ್ಲಿಯೂ ಜನಗಳ ತಾರತಮ್ಯವನ್ನರಿತು ನಡೆಯುತಲಿದ್ದರು. ಸಾಧಾರಣವಾಗಿ ಜನಗಳು ಗುಂಪುಗೂಡುವಣ, ಮನಸ್ವೀ ವಾಕ್ಕಲಹಗಳು ಮಾಡುವಣ, ಇಂತಾ ಕೃತ್ಯಗಳು ಕಂದಾಚಾರದವರ ಆವಶ್ಯಕತೆ ಯಿಲ್ಲದೇನೇ ಸ್ಥಳನಿವಾಸಿಗಳಾದ ದೊಡ್ಡಮನುಷ್ಯರಮಾತಿನ ಮೇರೆಯೇ ನಿಂತುಹೋಗುತಲಿದ್ದವು. ಕಂದಾಚಾರದವರನ್ನು ದೊಡ್ಡಮನುಷ್ಯರು ಯಾರಾದರು ಕರೆಯಿಸಿದರೆ ಅವರುಹೋಗಿ ದುಷ್ಟಜನಗಳನ್ನು ದಬಾಯಿಸುತಲಿದ್ದರು. ಈಚೆಗೆ ಪೋಲೀಸಿಬ್ಬಂದಿ ಏರ್ಪಡಾಗಿ, ಮನಸ್ವಿ ಜನಗಳನ್ನು ಕೆಣಕಿಸಿರುವದರಿಂದಲೂ, ಅವರಿಗೆ ಹುದುಬಗೆದುಸ್ತು ಕೊಟ್ಟಿರುವದರಿಂದಲೂ, ಅವರು ಚಿಲ್ಲರೆಜನಗಳನ್ನು ಬೆದರಿಸುವದಕ್ಕೂ ದೊಡ್ಡಮನುಷ್ಯರನ್ನು ಉದಾಸೀನಮಾಡುವದಕ್ಕೂ ಅವಕಾಶವುಂಟಾಯಿತು. ಪೂರ್ವದಕಂದಾಚಾರದವರಿಗೆ ಓದು ಬರಹವೆಂಬದು ಶುದ್ಧಾಂಗ ತಿಳಿಯದೆ, ಗರಡಿಗಳಲ್ಲಿ ಸಾಧಕಮಾಡಿದವರಾಗಿದ್ದರು. ಈಗಿನ ಪೋಲೀಸಿನವರು ಅಕ್ಷರಾಭ್ಯಾಸ ಪ್ರವೀಣರಾಗಿಯೂ, ಕವಾಯತ್ತಿನಪ್ರಕಾರ ಕೈಕಾಲುಗಳಂತಿರುಗಿಸುವದಕ್ಕೆ ಕಲಿತವರಾಗಿಯೂ ಇರುತ್ತಾರೆ. ಪೂರ್ವಕಾಲದವರಲ್ಲಿದ್ದಂತೆವಿನಯವೂಧೀರತ್ವವೂ ಇವರಲ್ಲಿಲ್ಲವೆ ಹೋದಾಗ್ಯೂ ಅವಕ್ಕೆಬದಲುಗರ್ವ, ಹಲ್ಕಾಜನಗಳನ್ನುಪ್ರೇರಿಸಿ ದೊಡ್ಡಮನುಷ್ಯರುಗಳನ್ನುಅಗೌರವಿಸುವಣ, ಈ ಎರಡು ಗುಣಗಳೇರ್ಪಟ್ಟವೆ. ಪೂರ್ವದ ಕಂದಾಚಾರದವರು, ದಸರಾ ಮತ್ತು ಮೊಹರಂ ಹಬ್ಬಗಳಲ್ಲಿ ಇನಾಂಕೇಳುವಣ, ವಿನಾಯಕನ ಚೌತೀದಿನ ತೆಂಗಿನಕಾಯಿಕೇಳುವಣ, ಈವಾಡಿಕೆ ಸಾಧಾರಣವಾಗಿ ನಡೆಯುತ ಬಂತು. ಇದನ್ನು ಆಕಾಲದ ಜನಗಳು ತಮಗೆ ಒಂದು ಭಾರವಾಗಿ ಎಣಿಸುತ್ತಿರಲಿಲ್ಲವು. ಈಗ ಅಂತಾ ಹಬ್ಬಗಳ ಕಾಲದೊಳು ಆ ಪ್ರಕಾರ ಕೇಳದೆ, ಯಾವದೊ ಒಂದುನೆವಮಾಡಿಕೊಂಡು, ಬೀದಿ ಜನಗಳೆಲ್ಲರು ಕೇಳುವಂತೆ, ಏಕವಚನದಿಂದ ಮಾತನಾಡುವದು, ಒಳ್ಳೆಯದು, ಸಮಯಬರುತಿದೆ, ನಿನಗೆ ತಕ್ಕ ಕೆಲಸಕೊಡುತ್ತೇನೆಂದು ಹೇಳುವದು, ಯಾರಾದರೂ ಸ್ನೇಹಿತರು, ಬಂಧುಗಳು ದೊಡ್ಡಮನುಷ್ಯರ ಮನೆಗಳಿಗೆ ಬಂದರೆ ಅಂತವರು ತಮ್ಮಉದ್ದಿಷ್ಟ ಸ್ಥಳಕ್ಕೆಹೋಗಿ ಗಾಡಿ ಇಳಿದು ಸಾಮಾನುಗಳನ್ನು ಒಳಕ್ಕೆ ತೆಗೆದುಕೊಂಡು ಹೋಗುವದರೊಳಗಾಗಿ ಗಾಡಿಯವನನ್ನು ಬೆದರಿಸಿ ಅದನ್ನಾಚೆಗೆ ಸಾಗಿಸಿಬಿಡುವದು, ರೈಲಿಗೆ ಹೋಗುವ ಪ್ರಯಾಣಸ್ಥರ ಗಾಡಿಗಳನ್ನು ಈ ಮಾರ್ಗದಲ್ಲಿ ಬಿಡುವದಿಲ್ಲವೆಂದು ಬೇರೆ ಬೇರೇಮಾರ್ಗವ ತೋರಿಸುವದು, ಇವು ಇವರ ಮುಖ್ಯ ಕೆಲಸಗಳಾಗಿರುತಿವೆ. ಈ ನಡತೆಗಳಲ್ಲದೆ ರಾತ್ರಿಕಾಲದಲ್ಲಿ ಮಾಳಿಗೆಗಳ ಮೇಲೆ ಹತ್ತಿ, ಲಾಂದರಗಳನ್ನು ಹಿಡಕೊಂಡು ಹೆಂಗಸರು ಮಕ್ಕಳು ತಮ್ಮ ಅಂಗಳದೊಳಗೆ ನಿಂತಿದ್ದಾಗ್ಯೂ, ಅವರನ್ನು ಮನಸ್ವೀ ಪ್ರಶ್ನೆಗಳು ಮಾಡುವದು, ಮಾಳಿಗೆಗಳಮೇಲೆ ಹಾಕಿದ್ದ ಸಾಮಾನುಗಳು ಯಾವದಾದರೂ ಕಾಣದೆ ಹೋದರೆ ಅದು ಪೋಲೀಸಿನವರಿಗೆ ತಿಳಿದೇಹೋಗಿದೆ ಎಂಬ ಸಂಶಯವನ್ನುಂಟುಮಾಡಿ, ಹಾಲನ್ನುಹೋಗಲಾಡಿಸಿಕೊಂಡವರುಆಸಂಗತಿಯನ್ನುಪೋಲೀಸಿನವರಿಗೆರಿಪೋರ್ಟಮಾಡಲು ಅವಕಾಶವಿಲ್ಲದಂತೆ ಮಾಡುವದು, ರಾತ್ರಿಹೊತ್ತು ಗಸ್ತು ತಿರುಗುವ[illegible]ಷ್ಟ್ಯಯಾಗಿಕೂಗಿ ಮನೇಜನಗಳಿಗೆ ಹುಷಾರಿಕೊಡುವದಕ್ಕೆ ಬದಲಾಗಿ ಕಂಬಳಿ ಹೊದ್ದುಕೊಂಡು, ಮಾತನಾಡದೆ ಯಾವದಾದರೊಂದು ಮನೆಯ ಬೀದಿಯ ಜಗಲಿಯ ಮೇಲೆ ಕೂತುಕೊಂಡು ತೂಗಡಿಸುತಲಿರುತ್ತ, ಹೊರಗೆಬರುವಮನೇಜನಗಳಿಗೆ ಕಳ್ಳನೋ ಅಥವಾ ಪಿಶಾಚವೊ ಎಂಬ ಭೀತಿಯನ್ನುಂಟು ಮಾಡುವದು, ಇದು ಮೊದಲಾದ ಅನೇಕ ದುಶ್ಚೇಷ್ಟೆಗಳು ಈಕಾಲದ ಪೋಲೀಸಿನವರಲ್ಲಿ ಮುಖ್ಯಗುಣಗಳಾಗಿರುತಿವೆ.

ಪೋಲೀಸ್ ಇಲಾಖಾ ಅಧಿಕಾರಿಗಳು ತಮ್ಮ ತಾಬೇದಾರಿ ನೌಕರರಾದ ಇಂತಾ ಜನಗಳ ವಿಷಯದಲ್ಲಿ ಅವಶ್ಯ ಇಡಬೇಕಾದ ನಿಗೇವಾನಿಯನ್ನಿಡುವರಿವಿಗೇನೇ ಇಟ್ಟಿರುತ್ತಾರೆಂಬವಕ್ಕೆ ಯಾವ ನಿದರ್ಶನವೂ ಕಾಣಬರಲಿಲ್ಲವು. ಈ ಜನಗಳು ಯಾವ ಯಾವ ಪ್ರದೇಶಗಳಲ್ಲಿ ನೌಕರಿ ಮಾಡುತ್ತಾರೊ ಅಂತಾ ಸ್ಥಳಗಳಿಗೆ ಮೇಲ್ಪಟ್ಟ ಅಧಿಕಾರಿಗಳು ಆಗಿಂದಾಗ್ಯೆಹೋಗಿ ಅವರ ನಡತೆಯ ವಿಷಯದಲ್ಲ ಅಲ್ಲಿನ ಜನಗಳ ಅಭಿಪ್ರಾಯವ ಕೇಳಿ ತಿಳದುಕೊಳ್ಳಬೇಕಾದ್ದು ಅವರ ಕರ್ತವ್ಯವಾಗಿರುತಿದೆ, ಮತ್ತು ಅದರಿಂದ ಬಹಳ ಪ್ರಯೋಜನವೂ ಉಂಟು. ಪೋಲೀಸಿನವರಿಗೂ ಅವರು ನೌಕರಿ ಮಾಡುವ ಪ್ರದೇಶದ ಜನಗಳಿಗೂ ಸಖ್ಯತೆಯು ವುಂಟಾಗಿರುವ ಪಕ್ಷಕ್ಕೆ ಅಲ್ಲಿ ಯಾವವಿಧ ಅಕ್ರಮಕ್ಕೂ ಅವಕಾಶ ವುಂಟಾಗುವದಿಲ್ಲವು. ಆದದರಿಂದ ಈ ವಿಷಯಕ್ಕೆ ಇಲಾಖಾ ಮಜಕೂರು ಮುಖ್ಯಾಧಿಕಾರಿಗಳು ಸಂಪೂರ್ಣ ಅವಧಾನ ಕೊಡುವರೆಂದು ನಂಬುತ್ತೇವೆ.

A WARNING TO INDIAN PRINCES.

ಮ್ಯಾಂಚೆಸ್ಟರ್ ಪಟ್ಟಣದಿಂದ ಮಿ. ಆರ್. ಡಿ ರಸ್ಸಲ್ ಎಂಬಾತನು ಪೂನೇ ಮರಾಠಾ ಪತ್ರಿಕೆಗೆ ಬರೆಯುತ್ತಾನೇನಂದರೆ.—

ಇದರಡಿ ಕಂಡಂತೆ ಇಲ್ಲಿನ ಪತ್ರಿಕೆಗಳಲ್ಲಿ ಆಗಿಂದಾಗ್ಯೆ ಪ್ರಕಟಿಸಲ್ಪಡುತಿವೆ.

“ಧರ್ಮಕೆಲಸಗಳೆಂಬ ವ್ಯಾಜದಮೇಲೆಒಬ್ಬಾತನು ಪ್ರಜೆಗಳಿಂದ ಹಣ ವಸೂಲ್ಮಾಡುತ ಬರುತ್ತಾನಾಗಿ ಆ ವಿಷಯದಲ್ಲಿ ಜನಗಳು ಎಚ್ಚರಗೊಂಡಿರ ಬೇಕಾಗಿದೆ. ಈವಂಚಕನು ನೋಡುವದಕ್ಕೆ ಗಂಭೀರವಾಗಿ ಕರೀಬಣ್ಣದ ಉಡುಪುಗಳನ್ನು ಧರಿಸಿಕೊಂಡು, ಮಿಷನರಿಗಳಂತೆ ಕುತ್ತಿಗೆಯಲ್ಲಿ ಒಂದು ಬಿಳೀಬಟ್ಟೆಯ ಪಟ್ಟಿಯಂ ಕಟ್ಟಿಕೊಂಡಿರುತ್ತಾನೆ. ಈತನನ್ನು ಪೋಲೀಸ್ನವರುಬಲ್ಲರು,” ಎಂಬದು.

ಸರ್ ಸಾಮರ್ಸೆಟ್ವೈರ್ ಎಂಬವರ ಸಂಚಾರ ವಿಷಯದಲ್ಲಿ ಇಂಡ್ಯದೇಶದೊಳು ಇಂತಾ ಪ್ರಕಟನೆಗಳು ವಿಸ್ತಾರವಾಗಿ ಪ್ರಕಟಿಸಲ್ಪಡಬೇಕಾದ್ದು ಆವಶ್ಯಕವಾಗಿರುತಿದೆ. ಇದರಡಿ ಬರುವ ವಿಷಯವು ಮಿ. ಟಿ. ಪಿ. ಒಕಾನರ್ಯೆಂಬವರಿಂದ ಲಂಡನ್ ಶಹರನೊಳು ಪ್ರಸಿದ್ಧವಾಗಿ ಪ್ರಾಯಿಷ್ಠಮಾಡಲ್ಪಡುವ “ಸ್ಟಾರ್” ಎಂಬ ಪತ್ರಿಕೆಯಿಂದ ಸಂಗ್ರಹಿಸಲ್ಪಟ್ಟಿರುತಿದೆ:—

“ಸರ್‌ಸಾಮರ್ಸೆ ವೈರ್ ಎಂಬವರು ಜನಗಳನ್ನು ಪೀಡಿಸುವದಕ್ಕಾಗಿ ಸಂಚಾರಮಾಡುತಲಿರುವ ಅಂಶವನ್ನು ಕುರಿತು ಈಚೆಗೆ ಪ್ರಸ್ತಾವಿಸಿರುತ್ತೇವೆಯಷ್ಟೆ. ಅವರು ಮಹಾರಾಜ್ಞೀಯವರ ಜ್ಯೂಬಿಲೀ ಉತ್ಸವದ ಜ್ಞಾಪಕಾರ್ಥ ಲಂಡನ್ ಶಹರನಲ್ಲಿ ಸ್ಥಾಪಿಸಲ್ಪಡುವದಾಗಿರುವ ಸಕಲ ಕಲಾ ಕೌಶಲ್ಯ ಪ್ರದರ್ಶಕಶಾಲೆಗಾಗಿ ಕಾಲೊನೀಸ್ ಅಂದರೆ, ನೂತನವಾಗಿ ಸಂಪಾದಿಸಲ್ಪಟ್ಟಿರುವ ದೇಶಗಳ ಪ್ರಜೆಗಳಿಂದ ಮರಳಿ ಚಂದಾಹಣ ವಸೂಲ್ಮಾಡುವದಲ್ಲದೆ ಇಂಡ್ಯದೇಶಕ್ಕೆ ಹೋಗುವಂತೆ ಸಹ ಕಾಣುತಿದೆ. ಈ ವಿಷಯಕ್ಕೆ ಪಾರ್ಲಿಮೆಂಟ ಸಭೆಯವರು ನಿಗೇ ಕೊಡಬೇಕಾಗಿದೆ. ಕಾಲೊನೀ ಪ್ರಜೆಗಳು ತಮ್ಮಷ್ಟಕ್ಕೆತಾವೇ ಹುಷಾರಾಗುವದಕ್ಕೆ ಸಂಪೂರ್ಣ ಶಕ್ತರಾಗಿರುತ್ತಾರೆ. ಪರಂತು ಸರ್ ಸಾಮರ್ಸೆ ವೈರ್ಯವರ ಕಾರ್ಯಗಳು ಇಂಡ್ಯದೇಶದಲ್ಲಿ ಸುಲಭವಾಗಿ ಕೈಗೂಡುವದು. ಪ್ರಿನ್ಸಾಫ್‌ವೇಲ್ಸ್‌ರವರಕಡೆಯಿಂದ ಹೊರಟಿರುವ ಮೇಲಿನವರಿಗೆ ಅಧಿಕಾರಿಗಳು ಅಕ್ಕರೆಯೊಡನೆ ಸಹಾಯಮಾಡುವರು, ಅಂದರೆ ಮೇಲೆಹೇಳಿದ ಪ್ರದರ್ಶಕಶಾಲೆಗೆ ಮರಳಿ ದ್ರವ್ಯಸಹಾಯ ಮಾಡುವಂತೆ ಇಂಡ್ಯದೇಶದ ನೇಟಿವ್ ಅರಸರುಗಳನ್ನು ಬಲಾತ್ಕರಿಸುವರು. ಅಧಿಕಾರ ಬಲದಿಂದ ಇಂಡ್ಯದೇಶದ ಅರಸರುಗಳಿಂದ ಈರೀತಿ ಸುಲಿಗೆ ಮಾಡುವ ವಾಡಿಕೆಯನ್ನು ತಪ್ಪಿಸುವದಕ್ಕೆ ಇದು ಸಕಾಲವಾಗಿರುತಿದೆ. ಕಂಪೆನಿಯವರ ಆಳಿತದಲ್ಲಿ ಇಂತಾ ಕೃತ್ಯಗಳಿಗೆ ಅವಕಾಶವುಂಟುಮಾಡಲ್ಪಟ್ಟಿರಲಾರದು, ಮತ್ತುಹಾಗೆಮಾಡಲೂ ಕೂಡದು,” ಎಂಬದು.

ಇದರಿಂದ ಈ ಪತ್ರಿಕೆಯನ್ನೋದತಕ್ಕವರೆಲ್ಲರು ಎಲ್ಲ ವಿಷಯವನ್ನು ತಿಳದುಕೊಳ್ಳಬಹುದು. ಇಂಪೀರಿಯಲ್ ಇನ್ಸ್ಟಿಟ್ಯೂಟ್ ಎಂಬ ಮೇಲೆ ತಿಳಿಸಿದ ಶಾಲಾಸ್ಥಾಪನೆಗೆ ಬೇಕಾದ ದ್ರವ್ಯಸಂಪಾದನಾರ್ಥ, ಪ್ರಿನ್ಸಾಫ್‌ವೇಲ್ಸರವರೂ ಸ್ವಪ್ರಯೋಜನಾರ್ಥ ಅವರನ್ನು ಯಾವಾಗಲೂ ಸುತ್ತಿಕೊಂಡಿರುವಂತಾ ಅಲ್ಪಜನಗಳೂ ಕೇವಲ ಹೇಯವಾಗಿ ಜನಗಳನ್ನು ಈರೀತಿ ಪೀಡಿಸುವ ವಿಷಯದಲ್ಲಿ, ಈ ದೇಶದ ಪ್ರಜೆಗಳ್ಯಾಕೆ, ರಾಜರನ್ನಾಶ್ರಯಿಸಿಕೊಂಡು ಸ್ವಪ್ರಯೋಜನಪರರಾದ ಅಥವಾ ಸಂತೋಷಕಾರ್ಯಗಳೆಂದು ಯೆಣಿಸುವ ಕೆಲವರು ವಿನಾ ಮಿಕ್ಕವರ್ಯಾರೂ ಅದಕ್ಕಾಗಿ ಅನುಮೋದಿಸುವದಿಲ್ಲವು. ಹಣ ವಸೂಲ್ಮಾಡುವದರಲ್ಲಿ ಯುಂಟಾಗುವ ಕಷ್ಟವೇ ಇದಕ್ಕೆ ನಿದರ್ಶನವಾಗಿರುತಿದೆ. ಯೋಗ್ಯವಾಗಿಯೂ ಪ್ರಜೆಗಳಿಗೆ ಉಪಯುಕ್ತವಾಗಿಯೂ ಇರುವ ಕಾರ್ಯಗಳಿಗೆ ಇಂಗ್ಲಂಡಿನಲ್ಲಿ ಯೆಷ್ಟುದ್ರವ್ಯ ಬೇಕಾಗಿದ್ದಾಗ್ಯೂ ಸಿಕ್ಕುವದು. ಇದುವರಿವಿಗೆ ಉಂಟುಮಾಡಲ್ಪಟ್ಟ ಮತ್ತು ಈಗ ಉಂಟುಮಾಡಲ್ಪಡುವ ನಿರ್ಬಂಧಗಳಿಗೆ ಇಂಡ್ಯದೇಶದ ಅರಸರುಗಳೂ ಉಪಟನ್ನರೂ ಒಳಗಾಗದಿರುವಂತೆ ಅವರನ್ನು ಪ್ರೋತ್ಸಾಹ ಗೊಳಿಸಬೇಕಾದ್ದು ಆವಶ್ಯಕವಾಗಿರುತಿದೆ.

ಗೌರವ ಪುರಸ್ಕಾರಗಳು ತೋರಿಸಬೇಕಾದ ಸಂದರ್ಭಗಳಲ್ಲಿ ಮಹಾರಾಜ್ಞೀಯವರ ಅನುಬಂಧಿಗಳೆಂಬ ಕಾರಣದಮೇಲೆ, ಜರ್ಮನೀ ದೇಶದ ಅರಸುಮಕ್ಕಳು ಎಷ್ಟು ಸಾಮಾನ್ಯರಾಗಿದ್ದಾಗ್ಯೂ, ಕೇವಲ ಪ್ರಬಲರಾಗಿಯೂ ರಾಜಭಕ್ತಿಯುಕ್ತರಾಗಿಯೂ ಇರುವ ಇಂಡ್ಯದೇಶದ ಅರಸರುಗಳನ್ನಪೇಕ್ಷಿಸಿ ಮೇಲಿನವರಿಗೆ ವಿಶೇಷ ಗೌರವಪುರಸ್ಕಾರಗಳು ತೋರಿಸಲ್ಪಡುತಿವೆ. ಅರ್ಥಾಪೇಕ್ಷೆಯುಳ್ಳ ಸಂದರ್ಭಗಳಲ್ಲಿ ಇಂಡ್ಯದೇಶದ ಅರಸರುಗಳೇ ಶ್ರೇಷ್ಠರುಗಳಾಗಿ ಭಾವಿಸಲ್ಪಡುತ್ತಾರೆ.

ಜ್ಯೂಬಿಲೀ ಉತ್ಸವ ವಿಶೇಷ ಸಂದರ್ಭದಲ್ಲಿ ತಮ್ಮನ್ನಪೇಕ್ಷಿಸಿ ವಿಶೇಷವಾಗಿ ಗೌರವಿಸಲ್ಪಟ್ಟ ಜರ್ಮನೀದೇಶದ ಅರಸುಮಕ್ಕಳು ಎಷ್ಟು ಚಂದಾಮಾಡಿದರೆಂದುಕೇಳಿ ಅದಕ್ಕೆರಡರಷ್ಟು ಕೊಡುವದಾಗಿ ಹೋಲ್ಕರ್ ಮಹಾರಾಜರವರು ಸರ್ ಸಾಮರ್ಸೆ ವೈರ್ ಎಂಬವರನ್ನು ಕೇಳುವದರಿಂದ ಅವರಿಗೆ ಏನೂಬಾಧಕವಾಗುವದಿಲ್ಲವೆಂದು ಖಂಡಿತವಾಗಿತಿಳಿಯಬಹುದು, ಎಂಬದು.

Occasional Notes.
ನೈಮಿತ್ತಿಕ ವಿಷಯನ್ಯಾಸ.

Resigned.—ಕಲ್ಕತ್ತಾ ಹೈಕೋರ್ಟಿನ ಜಡ್ಜಿಯರ ಪೈಕಿ ಯೊಬ್ಬರಾದ ಮಿ. ಕನ್ನಿಂಗ್ಹಾಂ ಯವರು ತಮ್ಮಕೆಲಸಕ್ಕ ರಾಜೀನಾಮೆ ಕೊಟ್ಟರೆಂದು ತಿಳಿಯಬರುತಿದೆ.

The Viceroy's departure to Europe.—ಈಗ ನಡೆದಿರುವ ಏರ್ಪಾಡನ್ನನುಸರಿಸಿ ವೈಸ್‌ರಾಯಿಯವರು ತಮ್ಮ ಕುಟುಂಬದೊಡನೆ, ಬರುವ ಡಿಸೆಂಬರ್ ೮ನೇತಾರೀಖಿನೊಳು, ಯೂರೋಪ ದೇಶಕ್ಕಾಗಿ ಮುಂಬೈಯಲ್ಲಿ ಹಡಗುಹತ್ತುವರು.

The Crawford Commision.—ಮಿ. ಕ್ರಾಫೋರ್ಡ್ಯವರಮೇಲೆತರಲ್ಪಟ್ಟಿರುವ ರುಜುವತ್ ಮೊಕದ್ದಮೆಯ ವಿಚಾರಣೆಯು ಬರುವ ಆಕ್ಟೋಬರ್ತಿಂಗಳ ೧೭ನೇತಾರೀಖಿನಲ್ಲಿ ಪುನಹ ಪ್ರಾರಂಭವಾಗುವದು.

The pleadership examination.—ಬರುವ ಜನವರಿ ಮತ್ತು ಫೆಬ್ರವರಿತಿಂಗಳಲ್ಲಿ ನಡೆಯುವ ಪ್ಲೀಡರ್‌ಪರೀಕ್ಷೆಗೆ ಹೋಗಲಪೇಕ್ಷೆಯುಳ್ಳವರೆಲ್ಲರು ಬರುವ ನವಂಬರ್ ತಿಂಗಳ ೧೫ನೇ ತಾರೀಖಿನೊಳಗಾಗಿ ದರಖಾಸ್ತುಗಳನ್ನು ಕಳುಹಿಸಬೇಕೆಂದು ಯಚ್ಚರಿಸಲ್ಪಟ್ಟಿರುತ್ತಾರೆ.

Confirmation.—ಮಿ. ಜೆ. ಎಫ್. ಪ್ರೈಸ್ ಯವರು ಈಗ ಮದರಾಸ್ ಗವರ್ನಮೆಂಟ್ ಚೀಫ್ ಸೆಕ್ರೆಟರಿ ಕೆಲಸವನ್ನು ಬದಲೀ ನೋಡುತಲಿದ್ದಾರೆಯಷ್ಟೆ. ಸದರೀಯವರು ಅದೇಕೆಲಸದಲ್ಲಿ ಕಾಯಂಮಾಡಲ್ಪಡುವರೆಂದು ಅಲ್ಲಿನ ಪತ್ರಿಕೆಗಳು ಹೇಳುತಿವೆ.

An enquiry.—ಸಿಂಲಾನಲ್ಲಿನ ನ್ಯಾಕ್ಸ್ಟಡ ಯೆಂಬ ಕಟ್ಟಡಕ್ಕೆ ಬೆಂಕಿತಗಲಿ ಸುಟ್ಟುಹೋದ ವಿಷಯವನ್ನು ಹಿಂದಿನ ಪತ್ರಿಕೆಯಮೂಲಕ ತಿಳಿಸಿಯಿರುತ್ತೇವೆಯಷ್ಟೆ. ಅದಕ್ಕೆ ಉಂಟಾದ ಕಾರಣವನ್ನು ಕಂಡುಹಿಡಿಯಬೇಕೆಂದು ಮಾಡಿದ ವಿಚಾರಣೆಯಲ್ಲಿ ಅದು ದೈವಾತ್ ಸಂಭವಿಸಿದ್ದೆಂದು ಏರ್ಪಟ್ಟಿತು. ಪರಂತು ಅದಕ್ಕೆ ಕಾರಣಮಾತ್ರ ಕಂಡುಬರಲಿಲ್ಲವು.

The Ameer's health.—ಕಾಬೂಲ್ ಅಮೀರರವರ ದೇಹಾರೋಗ್ಯವಿಷಯದಲ್ಲಿ, ಸದರೀಯವರು ಈಚೆಗೆ ವಾಯುರೋಗದಿಂದ ಕಷ್ಟಪಡುತಲಿದ್ದರು, ಪರಂತು ಅದು ಅಷ್ಟೇನೂ ಪ್ರಬಲವಾದದ್ದಲ್ಲವೆಂದು ಸದರೀಯವರು ಬರೆದಿರುತ್ತಾರೆಂದು ವಗೈರೆ ಸಿಂಲಾದಿಂದ ಮುಂಬೈಪತ್ರಿಕೆಯೊಂದಕ್ಕೆ ತಂತಿವೃತ್ತಾಂತಬಂದಿರುತಿದೆ.

Cabul news.—ಕಾಬೂಲಿನಿಂದ ಈಚೆಗೆ ತಿಳಿಯಬರುವದೇನಂದರೆ,—ಇಷಾಕಖಾನನು ಪೈಬಾಕ್ ಎಂಬ ಪ್ರದೇಶದಿಂದ ಕಳುಹಿಸಿದ ಸೇನೆಯು, ಅಂದರೆ, ಎರಡು ರಿಜಮೆಂಟ್ ಇನ್ಫೆಂಟ್ರಿ ಕೆಲವು ಸವಾರರು ಮತ್ತು ನಾಲ್ಕುತೋಫುಗಳು, ಕಮಾರ್ದ ಕೋಟೆಯು ಶತ್ರುಗಳಿಂದ ಆಕ್ರಮಿಸಲ್ಪಟ್ಟಿರುವದು ನೋಡಿಹಿಂದಕ್ಕೆ ಹೊರಟುಹೋದವು, ಮರಳಿಯುದ್ಧವಾಗಲಿಲ್ಲವು, ಎಂಬದು.

The president of the Crawford Commission.—ಮಿ. ಕ್ರಾಫೋರ್ಡ್ ಯೆಂಬವರಮೇಲೆ ತರಲ್ಪಟ್ಟಿರುವ ರುಜುವತ್ತು ಮೊಕದ್ದಮೆಯ ದರ್ಯಾಪ್ತಿಬಗ್ಗೆ ಏರ್ಪಾಡಾದ ಕಮಿಟಿಯ ಪ್ರೆಸಿಡೆಂಟಾಗಿ ಮುಕರರ್ಮಾಡಲ್ಪಟ್ಟ ಕಲ್ಕತ್ತಾಹೈಕೋರ್ಟ್ ಜಡ್ಜಿಗಳಪೈಕಿ ಯೊಬ್ಬರಾದ ಆನರೇಬಲ್ ಮಿ. ಜಸ್ಟಿಸ್ ವಿಲ್ಸನ್ಯವರು ಆಚೆ ಶನಿವಾರದದಿನ ಪುನೆಗೆಬಂದು ಸೇರಿದರು. ಪ್ರಾಯಶಃ ಬರುವತಿಂಗಳ ಮಧ್ಯಭಾಗದಲ್ಲಿ ವಿಚಾರಣೆಗೆ ಪ್ರಾರಂಭವಾಗಬಹುದಾಗಿ ತೋರುತಿದೆ.

Invention of electrical carriages.—ಈಚೆಗೆ ಇಂಗ್ಲಿಷಿನವರ ಕಲ್ಪನಾಶಕ್ತಿಯು ದಿನೇದಿನೆ ಅಭಿವೃದ್ಧಿಯಾಗುತ ಬರುತಲಿದೆಯೆಂದು ಕಾಣುತಿದೆ. ವಿದ್ಯುಚ್ಛಕ್ತಿಯಿಂದ ನಡೆಯುವ ಒಂದುಗಾಡಿಯು ತಯಾರ್ಮಾಡಲ್ಪಟ್ಟು ಅದಮಾಯಿಷೀಬಗ್ಗೆ ಅದನ್ನು ಈಚೆಗೆ ಲಂಡನ್ಪಟ್ಟಣದ ಒಂದುಬೀದಿಯಲ್ಲಿ ನಡೆಸಲು, ಅದು ಕುದುರೆಗಳು ಕಟ್ಟಿದ್ದಗಾಡಿ ಯಷ್ಟುವೇಗದೊಡನೆ ಅದನ್ನು ನಡೆಸುವವನ ಹತೋಟಿಗೆ ಒಳಪಟ್ಟು ನಡೆಯಿತೆಂದು ಒಂದಾನೊಂದುಪತ್ರಿಕೆ ಹೇಳುತಿದೆ.

The Ameer of Cabul.—ಕಾಬೂಲ್ ಅಮೀರರವರಾದ ಅಬ್ದುಲ್ ರಹಮಾನ್ಯವರು ಅಕಸ್ಮಾತ್ ಮೃತಪಟ್ಟರೆಂದು ಲಂಡನ್ ಪಟ್ಟಣಕ್ಕೆ ವರ್ತಮಾನ ಹೋಗಿ ಅಲ್ಲಿಂದ ಇಂಡ್ಯ ದೇಶಕ್ಕೆ ತಂತಿ ವೃತ್ತಾಂತ ಬಂದಿರುತಿದೆ. ಈ ವರ್ತಮಾನವು ಅವರ ವಿರೋಧಿಗಳಾದ ಯಾರಿಂದಲೊ

...ಪ್ಪಿಸಲ್ಪಟ್ಟದ್ದೆಂತಲೂ, ಇಂಡ್ಯ ಗವರ್ನಮೆಂಟಿನವರು ಈಗ ಏಳು ದಿನಗಳ ಪ್ರಯಾಣದಲ್ಲಿ ಇರುವದರಿಂದ ಹಾಗೆಯೇನಾದರು ಪ್ರಸ್ತಾಪವಾಗಿದ್ದರೆ ಅವರಿಗೆ ಇದುವರಿವಿಗೆ ತಿಳಿಯದೆ ಹೋಗುವದಕ್ಕೆ ಕಾರಣವಿಲ್ಲವೆಂತಲೂ ಕೆಲವು ಇಂಗ್ಲಿಷ್ ಪತ್ರಿಕೆಗಳು ಅಭಿಪ್ರಾಯ ಪಡುತಿವೆ.

Parsee charities.—ಮುಂಬಯಿಯಲ್ಲಿನ ಪಾರ್ಸೀ ಸಾಹುಕಾರರಿಗೆ ಸ್ವಭಾವಿಕವಾಗಿ ಧರ್ಮಕಾರ್ಯಗಳಲ್ಲುಂಟಾಗಿರುವ ಶ್ರದ್ಧಾಭಕ್ತಿಗಳು ಕೇವಲ ಶ್ಲಾಘನೀಯ್ಯಗಳಾಗಿರುತಿವೆ. ಕಳೆದ ವರ್ಷದಲ್ಲಿ ೧೬ಲಕ್ಷ ರೂಪಾಯಿಗಳು ಧರ್ಮಕಾರ್ಯಗಳಿಗಾಗಿ ವ್ಯಯಮಾಡಿರುತ್ತಾರೆ. ಇದರ ಪೈಕಿ ಬಹುಭಾಗ ಪ್ರಖ್ಯಾತಶರಾದ ಮಿ. ನಸರ್ವಾಂಜಿ ಮೊದಲಾದವರಿಂದ ಕೊಡಲ್ಪಟ್ಟಿರುತಿದೆ. ಅದಕ್ಕೆ ಹಿಂದಿನ ನಾಲ್ಕುವರ್ಷಗಳ ಕಾಲದಲ್ಲಿ ಪಾರ್ಸೀ ದೊಡ್ಡಮನುಷ್ಯರು ಹದಿನೂರೂವರೆ ಲಕ್ಷರೂಪಾಯಿಗಳು ಧರ್ಮಾರ್ಥ ವ್ಯಯಮಾಡಿದರು. ಆದದರಿಂದ ಮೇಲಿನ ಎರಡು ಮೊಬಲಗೂ ಸೇರಿ ಕಳೆದ ಐದುವರ್ಷಗಳ ಕಾಲದಲ್ಲಿ ಒಟ್ಟು ಮೂವತ್ತು ಲಕ್ಷ ರೂಪಾಯಿಗಳು ಧರ್ಮ ಖರ್ಚುಮಾಡಿದಂತೆಯಾಗುತಿದೆ.

A question decided.—ಗವರ್ನಮೆಂಟಿನ ನೌಕರನು ಫರ್ಲೋ ರಜಾ ಪಡಕೊಂಡು ಬೇರೆಯೊಬ್ಬರ ನೌಕರಿಯುಳ್ಳಿರಬಹುದೆ ಯೆಂಬ ಅಂಕ ಬಹುಕಾಲದ ಮೊದಲು ವಿಚಾರದಲ್ಲಿದ್ದು ಅದು ಈಚೆಗೆ ಇಂಡ್ಯ ಗವರ್ನಮೆಂಟಿನವರಿಂದ ವ್ಯವಸ್ಥೆ ಯಾಯಿತೆಂದು ಮುಂಬಯಿ ಗೆಜಟಿ ಪತ್ರಿಕೆ ಹೇಳುತಿದೆ. ಹ್ಯಾಗೆಂದರೆ—ಹಾಗೆ ನೌಕರನೇ ಕಾದಗೆ ಅಂತಾ ಪ್ರತಿ ಯೊಂದು ಸಂದರ್ಭದ ಇಂಡ್ಯ ಗವರ್ನಮೆಂಟಿನವರ ಮಂಜೂರಾತಿಯು ಮುಂದಾಗಿ ಪಡೆಯಬೇಕು, ಹಾಗೆ ... ಕಾರಣವಮೇಲೆ ಮಂಜೂರ್ಮಾಡಿದಾಗ್ಯೂ ... ಫರ್ಲೋ ರಜಾ ಪಡಕೊಂಡು ಅನ್ಯರ ನೌಕರಿಯಲ್ಲಿ ಪ್ರವೇಶಿಸುವ ಆಫೀಸರನು ಆ ಕಾಲದ ವರೆಗೆ ಲೀವ್ ಅಥವಾ ಫರ್ಲೋ ರಜಾ ಕಾಲದಲ್ಲಿ ಪಡೆಯಬೇಕಾದ ರುಸುಮಿನ ಬಾಧ್ಯತೆಯನ್ನು ಬಿಟ್ಟು ಬಿಡಬೇಕಾಗುವದು, ಎಂಬದು.

A royal candidate for university honours.—ತಿರುವಾಂಕೂರು ಸಂಸ್ಥಾನದ ಯುವರಾಜರುಗಳ ಪೈಕಿ ಯೆರಡನೇಯವರು, ಕಾಲೇಜಿನಲ್ಲಿ ಓದಿದರೆಂಬ ಸರ್ಟಿಫಿಕೇಟು ಪಡೆಯಬೇಕೆಂಬ ನಿರ್ಬಂಧನನ್ನು ತಮ್ಮ ವಿಷಯದಲ್ಲಿ ತಪ್ಪಿಸಿ ಮುಂದಿನ ಬಿ. ಎ. ಪರೀಕ್ಷೆಗೆ ಹೋಗುವದಕ್ಕೆ ತಮಗೆ ಅವಕಾಶವನ್ನುಂಟುಮಾಡಬೇಕೆಂದು ಮದರಾಸ್ ಯೂನಿವರ್ಸಿಟಿ ಸಿಂಡಿಕೇಟ್ ಸಭೆಯವರಿಗೆ ಬರೆದುಕೊಂಡಿರುವದಾಗಿ ಅಲ್ಲಿನ ಪತ್ರಿಕೆಯೊಂದರಿಂದ ತಿಳಿಯಬರುತಿದೆ ಈ ರಾಜಪುತ್ರರ ವಿಷಯದಲ್ಲಿ ಅವರಪೇಕ್ಷಿಸುವ ವಿನಾಯತಿಯನ್ನು ತೋರಿಸುವದು ಅಕ್ರಮವೆಂದು ಯಾರಿಂದಲೂ ಯೆಣಿಸಲ್ಪಡಲಾರದು, ಯಾತಕ್ಕೆಂದರೆ, ಸದರೀಯವರು ಇಂಗ್ಲಿಷ್ ಭಾಷೆಯಲ್ಲಿ ಪರೀಕ್ಷೆ ಕೊಡುವದು ತಮ್ಮ ಗೌರವಾರ್ಥವೇ ಹೊರತು ತಮ್ಮ ಜೀವನಕ್ಕಾಗಿ ಅಲ್ಲವು.

The Tellicherry bribery case—ತಲಚ್ಚೇರಿ ಸಬಾರ್ಡಿನೇಟ ಜಡ್ಜಿಯವರಾಗಿದ್ದ ರಾಯಬಹದೂರ್ ಕುಂಜನ್ ಮೇನನ್ ಪಸ್ಯರೇ ಇಬ್ಬರಮೇಲೆ ತರಲ್ಪಟ್ಟ ರುಷುವತ್ ಮೊಕದ್ದಮೆಗಳೆರಡರಲ್ಲೂ ಅವರಿಬ್ಬರಿಗೂ ಖಿಣಿಶ್ಯಿಕ್ಷೆ ವಿಧಿಸಲ್ಪಟ್ಟ ಅಂಶವನ್ನು ಹಿಂದಿನ ಪತ್ರಿಕೆಯ ಮೂಲಕ ತಿಳಿಸಿಯಿರುತ್ತೇವೆಯಷ್ಟೆ. ಸದರೀ ಅಪರಾಧಿಗಳಿಬ್ಬರೂ ಮದರಾಸ್ ಹೈಕೋರ್ಟಿನಲ್ಲಿ ಅಪೀಲ್ ಮಾಡಿ, ಅಲ್ಲಿನ ಜಡ್ಜಿಗಳ ಮುಂದೆ ಉಭಯ ಕಕ್ಷಿಯವರಕಡೆ ಲಾಯರ್‌ಗಳು ವಿಸ್ತಾರವಾಗಿ ವಾದಿಸಿದರು. ಸದರೀ ಇಬ್ಬರು ಅಪರಾಧಿಗಳಮೇಲೂ ತರಲ್ಪಟ್ಟ ಯೆರಡು ಮೊಕದ್ದಮೆಗಳ ಪೈಕಿ ಒಂದರಲ್ಲಿ ರುಜುವಾತು ತೃಪ್ತಿಕರವಾಗಿಲ್ಲವೆಂದು ಅಲ್ಲಿನ ಜಡ್ಜಿಗಳು ಅ...

...ಭಿಪ್ರಾಯಪಟ್ಟು ಕೆಳ ಕೋರ್ಟಿನವರು ವಿಧಿಸಿದ ದಂಡನೆಯನ್ನು ರದ್ದುಮಾಡಿದರು. ತರುವಾಯ ಯೆರಡನೇ ಮೊಕದ್ದಮೆಯಲ್ಲಿ ಉಭಯ ವಾದಿಗಳ ಕಡೆ ವಾದವನ್ನೂ ಮೊಕದ್ದಮೆಗೆ ಸಂಬಂಧಪಟ್ಟ ಕಾಗದಗಳನ್ನೂ ಪರಿಶೀಲನೆ ಮಾಡಿ ಕೆಳಕೋರ್ಟಿನವರು ವಿಧಿಸಿದ ದಂಡನೆಯನ್ನು ಕಾಯಂಮಾಡಿ ಕಳೆದ ಬೃಹಸ್ಪತಿ ವಾರದದಿನ ಫೈಸಲ್ ಹೇಳಿದರು.

Offer of a reward.—ಗೋವಧೆ ಮಾಡುವದರಿಂದ ವ್ಯವಸಾಯ, ವ್ಯಾಪಾರ, ಆದಾಯವ್ರಯ, ಮತ್ತು ರಾಜಕೀಯ, ಈ ವಿಷಯಗಳಿಗೆ ಉಂಟಾಗುವ ಹಾನಿಯು ವಿವರಪೂರ್ವಕ, ಇಂಗ್ಲಿಷ್‌ಭಾಷೆಯಲ್ಲಿ ಒಂದು ಉಪನ್ಯಾಸವನ್ನುಬರೆದು ಕಳುಹಿಸುವುತವರಿಗೆ, ಪ್ರಯಾಗೆಯಲ್ಲಿ ಸ್ಥಾಪಿಸಲ್ಪಟ್ಟಿರುವ ಕಾಮಿಟಿಯೋರಿಯವರ್ಫಂಡ್ ಕಮಿಟಿಯವರು ೫೦೦ ರೂಪಾಯಿಗಳು ಇನಾಂಕೊಡುವದಾಗಿ ಘೋಷಿಷಮಾಡಿರುತ್ತಾರೆ. ಈ ಉಪನ್ಯಾಸವನ್ನು ಜಾತಿ ಮತ ತಾರತಮ್ಯವಿಲ್ಲದೆ ಯಾರು ಬೇಕಾಗಿದ್ದಾಗ್ಯೂ ಬರೆದು ಕಳುಹಿಸಬಹುದು, ಪರಂತು ಕಮಿಟಿಯವರು ಅವುಗಳನ್ನೆಲ್ಲ ಪರಿಶೀಲನೆಮಾಡಿ ಅವುಗಳಪೈಕಿ ಉತ್ತಮವಾದ ಲೇಖನಕ್ಕೆ ಮೇಲ್ಕಂಡಂತೆ ಇನಾಂಕೊಡುವರು. ಇದೇವಿಷಯವನ್ನು ಕುರಿತು ಇಂಗ್ಲಿಷ್ ಭಾಷೆಯಲ್ಲಿ ಮುಸಲ್ಮಾನರು ಯಾರಾದರು ಬರೆದಲ್ಲಿ ೧೫೦ರೂಪಾಯಿಗಳ ಇನಾಂಕೊಡಲ್ಪಡುವದು.

LOCAL AND PROVINCIAL NEWS.

ಒಳದೇಶಮತ್ತು ತಾಲ್ಲೂಕುಜಾತಿವೃತ್ತಾಂತಗಳು.

Fire.—ಕಳೆದ ಸೋಮವಾರ ಸುಮಾರು ಮಧ್ಯಾಹ್ನ ೪ ಘಂಟೆ ಸಮಯದಲ್ಲಿ ನವರಾತ್ರಿಯ ಉತ್ಸವಕ್ಕಾಗಿ ತಯಾರೀ ಮಾಡುತ್ತಿದ್ದ ಮದ್ದು ಯಾನವೋ ಒಂದು ಕಾರಣದಿಂದ ಹೊತ್ತಿ ಬಿದ್ದು ತಯಾರಾಗಿದ್ದ ಸಮಸ್ತ ಸಾಮಾನುಗಳೂ ಸುಟ್ಟುಹೋಯಿತು.—ವೈ. ಟಿ.

Col. W. Hill.—ಇಲ್ಲಿನ ಮಿಲಿಟರಿ ಸ್ಟೇಷನ್ ಸಿವಿಲ್ ಪ ಸೆಷನ್ಸ್ ಜಡ್ಜಿಯವರಾದ ಕರ್ನಲ್ ಹಿಲ್ ಸಾಹೆಬರವರು ಇಂಡ್ಯದೇಶಕ್ಕೆ ವಾಪಸು ಬಂದು ತಮ್ಮ ಅಧಿಕಾರವು ಕೈಗೊಳ್ಳುವದಕ್ಕೆ ಇಂಡ್ಯ ಸ್ಟೇಟ್ ಸೆಕ್ರೆಟರಿಯವರು ಅಪ್ಪಣೆ ಕೊಟ್ಟಿರುವಂತೆ ಈಚೆಗೆ ಬಂದ ವಿಲಾಯತಿ ಪತ್ರಿಕೆಗಳ ಮೂಲಕ ತಿಳಿಯಬರುತಿದೆ.

A clock tower for the Petta Market.—ಕಳೆದವಾರದ ಈಪತ್ರಿಕೆಯಲ್ಲಿ ಪ್ರಕಟಿಸಲ್ಪಟ್ಟದ್ದ ಸಿಟಿ ಮ್ಯೂನಿಸಿಪಾಲಿಟಿಯ ಪ್ರಕಟನೆಯ ಬಿಸಿಯಿಂದ, ಇಲ್ಲಿನ ತರ್ಕಾರೀ ಮಾರ್ಕೆಟಿನಲ್ಲಿ ಸರ್ವದನೋಪಯೋಗಿಯಾಗಿರುವಂತೆ ಒಂದು ಗೋಪುರವು ಕಟ್ಟಿಸಿ ಅದರಲ್ಲಿ ಗಡಿಯಾರವನ್ನಿಟ್ಟರೆ ಚೆನ್ನಾಗಿರುವದೆಂದು ಮ್ಯೂನಿಸಿಪಲ್ ಕಮಿಷನರ್‌ಗಳ ಪೈಕಿ ಯೊಬ್ಬರು ಸಲಹೆಕೊಟ್ಟ ಅದು ಮುಂದಿನ ಮೀಟಿಂಗಿನಲ್ಲಿ ವ್ಯವಸ್ಥೆಯ ಬಗ್ಗೆ ಇಡಲ್ಪಟ್ಟಿರುತಿದೆ.

The *Spectator* Libel case.—ಇಲ್ಲಿನ ಸ್ಪೆಕ್ಟೇಟರ್ ಪತ್ರಿಕೆಯ ಎಡಿಟರವರ ಮೇಲೆ ಡೆಯಿಲೀಪೋಸ್ಟು ಪತ್ರಿಕೆಯಪ್ರೊಪ್ರೈಟರಾದ ಮಿ. ಹೇಸ್‌ಯವರು ತಂದ ಮಾನನಷ್ಟ ಮೊಕದ್ದಮೆಯು ಕಡೆಗೆ ಇಲ್ಲಿನ ಅಸಿಸ್ಟೆಂಟ್ ರೆಸಿಡೆಂಟರಾದ ಮೆಸ್ಟರ್ ವೆದರ್‌ಬರ್ನ್ ಯವರಿಂದ ದರ್ಯಾಪ್ತೀ ಮಾಡಲ್ಪಡತಕ್ಕದ್ದೆಂದು ಮದರಾಸ್ ಹೈಕೋರ್ಟಿನಲ್ಲಿ ವ್ಯವಸ್ಥೆಯಾಗಿರುತಿದೆ.

Cholera at Mysore.—ಈಚೆಗೆ ಮೈಸೂರು ಪ್ರಾಂತದಲ್ಲಿ ವಾಂತಿ ಭೇದಿ ರೋಗ ತಲೆದೋರಿ ಕೆಲವರಿಗೆ ಪ್ರಾಣ ಹಾನಿ ಸಹ ಉಂಟಾದಂತೆಯೂ, ಮಳೆ ಇಲ್ಲದೆ ಹೋದದರಿಂದ ಅಲ್ಲಿನ ಜನರು ಭಗ್ನ ಮನಸ್ಕರಾಗಿರುವಂತೆಯೂ, ಇದರದೆಸೆಯಿಂದ ಬರುವ ಅಕ್ಟೋಬರ್ ತಿಂಗಳಲ್ಲಿ ನಡೆಯುವದಾಗಿರುವ ವ್ಯವಸಾಯ ಪ್ರದರ್ಶನ ಸಭೆ ಸಹ ಸದ್ಯಃ ನಿಲ್ಲಿಸಿ ಇಡಲ್ಪಡಬಹುದಾಗಿ ತೋರುವಂತೆಯೂ ತಿಳಿಯಬರುವದಾಗಿ ಒಳದೇಶದ ಡೈಲೀಪೋಸ್ಟು ಪತ್ರಿಕೆ ಹೇಳುತಿದೆ.

The weather.—ಕಳೆದ ವಾರದಪೈಕಿ ಶುಕ್ರ ಮತ್ತು ಶನಿವಾರಗಳೆರಡು ದಿನಗಳಲ್ಲಿ ಮಾತ್ರ ಕೆಲವು ನಿಮಿಷಗಳ ಕಾಲ ತುಂತುರು ಮಳೆ ಬಿತ್ತು. ತಾಲ್ಲೂಕುಜಾತನಲ್ಲಿ ಸಹ ಕೆರೆ ಕುಂಟೆಗಳಿಗೆ ನೀರು ಬರುವಷ್ಟು ಮಳೆಯಾದಂತೆ ತೋರಲಿಲ್ಲವು. ಪದಾರ್ಥಗಳ ಧಾರಣೆಗಳು ಬೇಕರೂಪವಾಗಿ ಚಡಾವಾಗಿಯೇ ಇರುತಿವೆ. ಇಲ್ಲಿನ ಲಶ್ಕರನಲ್ಲಿ ವಾಂತಿ ಭೇದಿ ರೋಗ ತಗಲಿರುವಂತೆ ಸಹ ತಿಳಿಯಬರುತಿದೆ. ತಾತ್ಕಾಲಿಕ ಸ್ಥಿತಿಯು ಕೇವಲ ಚಿಂತನೀಯವಾಗಿದೆ.

Keddah operations.—ಕೆಲವು ದಿನಗಳ ಹಿಂದೆ ಚಾಮರಾಜನಗರ ಅಮಲ್ದಾರರಾಗಿದ್ದು ಪೆನ್ಶನ್‌ಮೇಲೆ ನಿರ್ವೃತಿ ಸುಖವು ಪಡೆದ ಮಿ. ಮಹಾಲಿಂಗಾಯರವರು, ಈ ದೇಶದಲ್ಲಿ ಆನೆ ಹಿಡಿಯುವ ಇಲಾಖಾ ಅಸಿಸ್ಟೆಂಟ್ ಸೂಪರಿಂಟೆಂಡೆಂಟರಾಗಿ ನಿಯಮಿಸಲ್ಪಟ್ಟಂತೆಯೂ, ಇವರಿಗೆ ಮಾಹೆಯಾನಾ ೧೫೦ ರೂಪಾಯಿಗಳ ಸಂಬಳ, ೫೦ರೂಪಾಯಿಗಳ ಕಾಯಂ ಭತ್ಯೆ ಸಹ ಸಲ್ಲುವದೆಂತಲೂ ಕೇಳುತ್ತೇವೆ.

The weather.—ಮೈಸೂರು ಶೀಮೆಯ ಅನೇಕ ಡಿಸ್ಟ್ರಿಕ್ಟುಗಳಲ್ಲಿ ಮಳೆಯು ಇಲ್ಲದೆ ಬೆಳೆಗಳೆಲ್ಲಾ ಒಣಗುತ್ತಿವೆ. ಧಾರಣವಾಸಿಯೆಲ್ಲಾ ದಿನೆ ದಿನೇ ಹೆಚ್ಚುತ್ತಿದೆ. ಕೆರೆಭಾವಿಗಳೆಲ್ಲಾ ಒಣಗುತ್ತಲಿವೆ. ಇದನ್ನು ನೋಡಿದರೆ ಮಹಾರಾಜರವರು ತುಂಬಾ ವ್ಯಸನದಿಂ ಪ್ರೇರಿತರಾಗಿ "ಪ್ರಜಾಸಾಖ್ಯಕ್ಕಾಗಿ ಈ ಕಾಲದಲ್ಲಿ ಏನು ಮಾಡಲವು" ಎಂದು ಕೆಲವು ಅಧಿಕಾರಿಗಳೊಡನೆ ಪ್ರಶ್ನೆಮಾಡಿದಂತೆತಿಳಿಯಲಾದಿವು. ಆಹಾ! ಪ್ರಜೆಗಳಸಂತೋಷವನ್ನುಏನು ಹೇಳೋಣ. ವೈ. ಟಿ.

Cholera camps.—ಈಚೆಗೆ ಇಲ್ಲಿನ ಮಿಲಿಟರಿ ಸ್ಟೇಷನ್ ಪೈಕಿ ಕೆಲವು ಪ್ರದೇಶಗಳೊಳು ವಾಂತಿಭೇದಿರೋಗ ವ್ಯಾಪಿಸಿ ಅದರಿಂದ ಕೆಲವರು ಮೃತಪಟ್ಟದ್ದಾಗಿ ಸದರೀ ಸ್ಟೇಷನ್ ಪತ್ರಿಕೆಗಳಮೂಲಕ ತಿಳಿಯಬರುತಿದೆ. ತಿರುಪತಿ ಯಾತ್ರೆ ಹೋಗಿ ಬರುವ ಜನಗಳನ್ನುಂಟಕ್ಕೊಂಡು ಬಂದು ಇಲ್ಲಿಯೂ ವ್ಯಾಪಿಸಿರಬಹುದೆಂಬಯೋಚನೆಯಿಂದ ರೈಲ್‌ಗಾಡಿಯು ಕೃಷ್ಣರಾಜಪುರ ಸ್ಟೇಷನ್‌ಬರುವಲ್ಲಿ ಗಾಡಿಯಲ್ಲಿರುವ ಜನಗಳನ್ನು ನೋಡಿ, ಸದರೀ ರೋಗಪೀಡಿತರಾದವರ್‍ಯಾರಾದರಿದ್ದರೆ ಅಂತವರು ಕೂಡಲೇ ಗಾಡಿಯಿಂದ ಇಳಿಸಿ, ಆಯುರ್ಬಲವಿದ್ದರೆ ರೋಗನಿವೃತ್ತಿಯಾಗುವತನಕ ಇಲ್ಲವಾದರೆ ದಫನ್ ಅಥವಾ ದಹನವಾಗುವತನಕ, ಅಲ್ಲೇ ತಡದಿಟ್ಟುಕೊಂಡಿರುವದಕ್ಕಾಗಿ ಇಲ್ಲಿಂದ ಕೆಲವರು ಪೋಲೀಸಿನವರು ಸಹ ಕೃಷ್ಣರಾಜಪುರಕ್ಕೆ ಕಳುಹಿಸಲ್ಪಟ್ಟಿರುವಂತೆ ತಿಳಿಯಬರುತಿದೆ. ಬಹುದೂರಪ್ರಯಾಸಲೆಯಿಂದ ಪ್ರಯಾಣಮಾಡಿಕೊಂಡು ಬರುವ ಜನಗಳಿಗೆ ಜೀಸರನ್ನುಂಟಾಗುವಂತೆ, ಕೃಷ್ಣರಾಜಪುರದಲ್ಲಿ ಬಹಳಹೊತ್ತು ಗಾಡಿಯು ನಿಲ್ಲಿಸುವದಕ್ಕಿಂತಲೂ ಅರಕುನ್ನಂಸ್ಟೇಷನ್ನಲ್ಲಿ ಗಾಡಿ ಹತ್ತುವ ಜನಗಳನ್ನು ಅಜಮಾಯಿಷೀಯಿಂದ ಗಾಡಿಯಲ್ಲಿಕುಳ್ಳಿರಿಸಿದರೆ ಇಂತಾತೊಂದರೆಗೆಅವಕಾಶವಿರಲಾರದು.

ಮೈಸೂರು ಚೀಫ್‌ಕೋರ್ಟ್. ಜುಡಿಷಲ್ ಇಲಾಖಾ.

೭ನೇ ಸೆಪ್ಟಂಬರ್ ಸನ್ ೧೮೮೮.

ಸನ್ ೧೮೮೪ನೇ ಇಸವಿಯ ಚೀಫ್‌ಕೋರ್ಟ್ ರೆಗ್ಯುಲೇಷನಿನ ೯ನೇ ಸೆಕ್ಷನ್ ಅನುಸರಿಸಿ, ಚೀಫ್‌ಕೋರ್ಟ್ ನಡವಳಿಕೆಗಳನ್ನು ಕ್ರಮಪಡಿಸುವದಕ್ಕಾಗಿ ಇದರಡಿ ಬರುವ ನಿಬಂಧನೆಗಳು ಮಾಡಲ್ಪಟ್ಟು, ಮೇಲಿನ ರೆಗ್ಯುಲೇಷನಿನ ೨೦ನೇ ಸೆಕ್ಷನ್ ಅನುಸರಿಸಿ ಮೈಸೂರು ಗವರ್ನಮೆಂಟಿನಿಂದ ಮಂಜೂರ್ಮಾಡಲ್ಪಟ್ಟಿರುತಿದೆ:—

೧. ಚೀಫ್‌ಕೋರ್ಟಿಗೆ ಉಂಟುಮಾಡಲ್ಪಟ್ಟಿರುವ ಅಧಿಕಾರಗಳು, ಸದರೀ ಕೋರ್ಟಿನ ಜಡ್ಜಿಗಳ ಪೈಕಿ ಯೊಬ್ಬರಿಂದ, ಇದರಡಿ ಬರುವ ಸಂದರ್ಭಗಳಲ್ಲಿ ಚಲಾಯಿಸಲ್ಪಡಬಹುದು.

(1.) ೪೪ ಮತ್ತು ೪೮ನೇ ನಂಬರ್‌ಗಳುಳ್ಳರೂಲ್ಸ್ ಆಫ್ ಪ್ರಾಕ್ಟೀಸ್ಸಿನಿಂದ ತಿದ್ದುಪಡಿ ಮಾಡಲ್ಪಟ್ಟ ೩೦ ಮತ್ತು ೩೮ನೇ ನಂಬರ್‌ಗಳುಳ್ಳ ರೂಲ್ಸ್ ಆಫ್ ಪ್ರಾಕ್ಟೀಸ್ ಅನುಸರಿಸಿ ಚೀಫ್‌ಕೋರ್ಟಿಗೆ ಕಳುಹಿಸಲ್ಪಡುವ ಕ್ರಿಮಿನಲ್ ಕೋರ್ಟ್‌ಗಳ ಕ್ಯಾಲೆಂಡರ್‌ಗಳು ಮತ್ತು ಪ್ರೊಸೀಡಿಂಗ್ಸ್‌ಗಳು, ಇವುಗಳ ವಿಮರ್ಶೆ.

(2.) ಅಪೀಲ್ ಅಥವಾ ಪುನರ್ವಿಮರ್ಶೆಯ ಬಗ್ಗೆ ಕೊಡಲ್ಪಡುವ ಅರ್ಜಿಗಳು ವ್ಯವಸ್ಥೆಯಾಗುವ ತನಕ ಸಜಾವನ್ನು ನಿಲ್ಲಿಸಿಡುವಣ, ಅಥವಾ ಜಾಮೀನ್‌ಮೇಲೆ ಅಪರಾಧಿಯನ್ನು ಖುಲಾಸೆ ಮಾಡುವಣ.

(3.) ಕ್ರಿಮಿನಲ್ ಪ್ರೊಸಿಡ್ಯೂರ್ ಕೋಡ್ ೧೫೩ ಮತ್ತು ೧೬೪ನೇ ಸೆಕ್ಷನ್ ಅನುಸರಿಸಿ ಹುಕುಂಬಗ್ಗೆ ಕಳುಹಿಸಲ್ಪಡುವ ಪ್ರೊಸೀಡಿಂಗ್ಸ್ ಮತ್ತು ರಿಪೋರ್ಟ್‌ಗಳು.

(4.) ಕ್ರಿಮಿನಲ್ ಪ್ರೊಸಿಡ್ಯೂರ್ ಕೋಡ್ ೧೮೫ನೇ ಸೆಕ್ಷನ್ ಅನುಸರಿಸಿ ರಿಫರ್‌ಮಾಡಲ್ಪಡುವ ವಿಷಯಗಳವ್ಯವಸ್ಥೆ.

(5.) ಕ್ರಿಮಿನಲ್ ಪ್ರೊಸಿಡ್ಯೂರ್ ಕೋಡ್ ೪೫೩, ೪೯೧, ೫೩೬, ಮತ್ತು ೫೬೬ ಎ. ಸೆಕ್ಷನ್‌ಗಳನ್ನನುಸರಿಸಿ ಮಾಡಲ್ಪಡುವ ಹುಕುಂಗಳು.

(6.) ಕ್ರಿಮಿನಲ್ ಪ್ರೊಸಿಡ್ಯೂರ್ ಕೋಡ್ ೪೩೫, ಮತ್ತು ಸಿವಿಲ್ ಪ್ರೊಸಿಡ್ಯೂರ್‌ಕೋಡ್ ೬೨೨ನೇ ಸೆಕ್ಷನ್‌ಗಳನ್ನನುಸರಿಸಿ ರೆಕಾರ್ಡ್‌ಗಳನ್ನು ತರಿಸಿಕೊಳ್ಳುವ ಅಧಿಕಾರ.

(7.) ಸಿವಿಲ್‌ಪ್ರೊಸಿಡ್ಯೂರ್‌ಕೋಡ್ ೫೦೫ನೇ ಸೆಕ್ಷನ್ ಅನುಸರಿಸಿ ಕೊಡಲ್ಪಡುವ ಹುಕುಂಗಳು.

(8.) ಸಿವಿಲ್ ಪ್ರೊಸಿಡ್ಯೂರ್ ಕೋಡ್ ೫೫೧ನೇ ಸೆಕ್ಷನ್ ಅನುಸರಿಸಿ ನಡೆಯುವ ವಿಚಾರಣೆಗಳು.

(9.) ಅಪೀಲ್ ಅಥವಾ ಪುನರ್ವಿಮರ್ಶೆಯ ಬಗ್ಗೆ ಕೊಡಲ್ಪಡುವ ಅರ್ಜಿಗಳ ವ್ಯವಸ್ಥೆಯ ನಿರೀಕ್ಷಣೆಯಮೇಲೆ, ಡಿಕ್ರೀ ಅಮಲ್ ಜಾರಿಯನ್ನು ನಿಲ್ಲಿಸುವ ಬಗ್ಗೆ ಅಥವಾ ಮುಂದಿನ ನಡವಳಿಕೆಯನ್ನು ನಿಲ್ಲಿಸಿಡುವಬಗ್ಗೆ ಕೊಡಲ್ಪಡುವಅರ್ಜಿಗಳು.

(10.) ಸಿವಿಲ್ ಅಥವಾ ಕ್ರಿಮಿನಲ್ ದಾವೇ ಅರ್ಜಿಗಳು, ಪಿಟಿಷನ್‌ಗಳು ಮತ್ತು ಅಪೀಲ್‌ಗಳು, ಇವುಗಳನ್ನು ಹಿಡಿಯುವಣ.

(11.) ಸಿವಿಲ್ ಪ್ರೊಸಿಡ್ಯೂರ್ ಕೋಡ್ ೨೫ನೇ ಸೆಕ್ಷನ್ ಅನುಸರಿಸಿ ಮೊಕದ್ದಮೆಗಳನ್ನು ಒಂದು ಕೋರ್ಟಿನಿಂದ ಮತ್ತೊಂದು ಕೋರ್ಟಿಗೆ ವರ್ಗಮಾಡತಕ್ಕ ಬಗ್ಗೆ ಬರುವ ಅರ್ಜಿಗಳು.

(12.) ಅಡ್ವೋಕೇಟುಗಳು ಅಥವಾ ಪ್ಲೀಡರ್‌ಗಳಾಗಿ ದಾಖಲ್ ಮಾಡಿಕೊಳ್ಳುವಂತೆ ಬರುವ ಅರ್ಜಿಗಳು.

ಪರಂತು, ಚೀಫ್‌ಕೋರ್ಟ್ ಜಡ್ಜಿಗಳ ಪೈಕಿ ಒಬ್ಬರು ಮಾತ್ರ ಕುಳಿತು ಕೋರ್ಟ್‌ಮಾಡುವಲ್ಲಿ ಅವರು ಯಾವಕೋರ್ಟಿನ ಡಿಕ್ರಿಗಳು, ಹುಕುಂಗಳು, ದಂಡನೆಗಳು ಅಥವಾ ತೀರ್ಮಾನಗಳನ್ನು ರದ್ದುಮಾಡಕೂಡದು.

ಮತ್ತು ಒಬ್ಬ ಜಡ್ಜಿಯು ವಿಚಾರಣೆಯ ಬಗ್ಗೆ ತನ್ನ ಕಟ್ಟಿಗೆ ಸೇರಿಸಿ ಇಟ್ಟುಕೊಂಡಿರುವ ಯಾವ ಅರ್ಜಿಯನ್ನೇ ಆಗಲಿ, ತಾನು ವ್ಯವಸ್ಥೆ ಮಾಡುವದಕ್ಕೆ ಪೂರ್ವ ಯಾವಾಗಲಾದರು, ಅದನ್ನು ಇಬ್ಬರು ಜಡ್ಜಿಗಳು ಸೇರಿ ವಿಚಾರಿಸಿ ವ್ಯವಸ್ಥೆ ಮಾಡತಕ್ಕ ಬಗ್ಗೆ ಅವರಿಗೆ ರಿಫರ್ ಮಾಡಲು ಅಧಿಕಾರವುಳ್ಳವನಾಗಿರತಕ್ಕದ್ದು.

ಹುಕುಂ ಬಮೋಜಿಬ್,
ಎಲ್. ಅನಂತಸ್ವಾಮಿರಾವ್,
ರಿಜಿಸ್ಟ್ರಾರ್.

CORRESPONDENCE

ಮೇಲುಕೋಟೆಯಲ್ಲಿರುವ ದೇವಶಿಖಾಮಣಿ ತಿರುಮಲೈಯ್ಯಂಗಾರ್ರ್ರು ಸಾಂ|| ವಿಜ್ಞಾಪನೆ.

ಇಲ್ಲಿನ ಸಂಸ್ಕೃತ ಪಾಠಶಾಲಾಧ್ಯಕ್ಷರಾದ ಶ್ರೀ. ಉ. ವೆ. ವಿದ್ವಾಂಸರು ಸ್ವಾ|| ಕುಪ್ಪಣ್ಣಯ್ಯಂಗಾರ್ರವರಲ್ಲಿ ಶಾಸ್ತ್ರಶರಗತಿಯೊಳು ಓದುತಲಿರುವ ಶ್ರೀಮಾನ್ ಮಾಡಶ್ರೂಶಿ ಶ್ರೀನಿವಾಸಾಚಾರ್ಯರು, ಶ್ರೀಮಾನ್ ಕೊತ್ತಾಡಿ ತಿರುನಾರಣಯ್ಯಂಗಾರ್ರು, ಇವರುಗಳು ಮದ್ರಾಸ್ ತಿರುವಲ್ಲಿಕ್ಕೇಣಿಯಲ್ಲಿ ಸ್ಥಾಪಿತವಾಗಿರುವ ಶ್ರೀಮದ್ವೇದವೇದಾಂತ ವರ್ಧನೀ ಸಭೆಯಲ್ಲಿ ಅಲಂಕಾರ ಶಾಸ್ತ್ರ ವೇದಾಂತ ಶಾಸ್ತ್ರಗಳಲ್ಲಿ ಪರೀಕ್ಷೆಕೊಟ್ಟು ಅಲ್ಲಿನ ವಿದ್ವಾಂಸರುಗಳಿಂದ ಪ್ರಥಮವರೆ ಪರಿಗಣಿತರಾಗಿ, ೧ನೇ ಮಾಡಶ್ರೂಶಿ ಶ್ರೀನಿವಾಸಾಚಾರ್ಯರು ೩೦ ರೂಪಾಯಿ ಬಹುಮಾನವನ್ನೂ, ೨ನೇ ಕೊತ್ತಾಡಿ ತಿರುನಾರಣಯ್ಯಂಗಾರ್ರು ೨೦ ರೂಪಾಯಿ ಬಹುಮಾನವನ್ನು ಪಡೆದು ಆ ಸಭಾಧ್ಯಕ್ಷರಾದ ವಿದ್ವಾಂಸರುಗಳಿಂದ ಕೊಡಲ್ಪಟ್ಟ ವಿದ್ವದಭಿನಂದನ ಪತ್ರಿಕೆಯ ನಕಲುಗಳನ್ನು ಇದರೊಡನೆ ಕಳುಹಿಸಿದೇನೆ.

ಈಕಾಲದಲ್ಲಿ ಇಂತಾ ಶಾಸ್ತ್ರಪ್ರಚಾರಗಳಿಗೆ ಪ್ರೋತ್ಸಾಹ ವುಂಟುಮಾಡುವ ಘನವಾದ ಕೆಲಸಗಳು ಅತ್ಯಂತ ಶ್ಲಾಘ್ಯವಾಗಿರುವ ಸಂಗತಿಯನ್ನು ತಮ್ಮ ಪತ್ರಿಕೆಯಲ್ಲಿ ಪ್ರಕಟಿಸತಕ್ಕಬಗ್ಗೆ ಅತ್ಯಂತ ಸಂತೋಷದಿಂದ ವಿಜ್ಞಾಪಿಸಿದೇನೆ.

ತಾ|| ೨೨-೯-೮೮ ದೇ. ತಿರುಮಲೈಯ್ಯಂಗಾರ್.

ಭರತಖಂಡಾಂತಸ್ಥ ದ್ರಾವಿಡಜನಪದೇಷು.

ತುಂಡೀರಮಂಡಲ ಮಂಡನಾಯಮಾನ ಶ್ರೀಬೃಂದಾರಣ್ಯಕ್ಷೇತ್ರ ಶ್ರೀಮತ್ಕೈರವಿಣೀ ತೀರಾಲಂಕಾರ ಶ್ರೀ ಪಾರ್ಥಸಾರಥಿಸ್ವಾಮಿ ಸನ್ನಿಧಿ ಸಂಪ್ರದಾಯ ಸುಪ್ರತಿಷ್ಠಿತಾಯಾಂ ಶ್ರೀಮದ್ವೇದವೇದಾಂತವರ್ಧನೀ ಸಭಾಯಾಂ ವಿತೀರ್ಣೆಯಂ ವಿದ್ವದಭಿನಂದನ ಪತ್ರಿಕಾ.

ವೇದವೇದಾಂತ ವರ್ಧನೀ ಸಭಾ ಸಂಬಂಧಿನೀ. ಸ್ವಸ್ತಿಶ್ರೀ ವಿಜಯಾಭ್ಯುದಯ ಶ್ರೀಕೃಷ್ಣ ಪರಾಂಕುಶ ಯತಿವರ ವರವರಾದಿಕ್ರಮಾಗತ ಗುರುಪರಂಪರಾಬ್ದೇಷು, ೪೯೮೯ ತಮೆ ಸರ್ವಧಾರಿ ಸಂವತ್ಸರೆ, ಶ್ರೀಮಾನ್ ಕೊತ್ತಾಡಿ ತಿರುನಾರಾಯಣಾಚಾರ್ಯಃ ವಿದ್ವದ್ಭಿಃ ಶ್ರೀ ಉ|| ವೆ|| ವೆತ್ತಮಾನ್ಸ್ಥಿ ಶ್ರೀನಿವಾಸ ಅಪ್ಪಂಗಾರ್ಯೈ ಸ್ಸಾಹಿತ್ಯಾಲಂಕಾರೆ ಪ್ರಥಮ ಶಾಖಾಯಾಂ ಪರೀಕ್ಷ್ಯ ಅಸ್ಯಾಸ್ಸಭಾಯಾಂ ವಿಂಶತಿತಮ ವಾರ್ಷಿಕ ಮಹೋತ್ಸವ ಸಮಯೆ ಪ್ರಥಮಪದೆ ಸಂಭಾವಿತಃ.

ಸರ್ವಧಾರಿಸಂ||ಸಿಮ್ಹಮಾಸ ೨೩ದಿನೆಭಾನುವಾಸರಃ	ಮ|| ಅ. ಗೋಪಾಲಾಚಾರ್ಯಃ, ಕಾರ್ಯದರ್ಶೀ.

ಭರತಖಂಡಾಂತಸ್ಥ ದ್ರಾವಿಡಜನಪದೇಷು

ತುಂಡೀರಮಂಡಲ ಮಂಡನಾಯಮಾನ ಶ್ರೀಬೃಂದಾರಣ್ಯಕ್ಷೇತ್ರ ಶ್ರೀಮತ್ಕೈರವಿಣೀ ತೀರಾಲಂಕಾರ ಶ್ರೀ ಪಾರ್ಥಸಾರಥಿ ಸ್ವಾಮಿ ಸನ್ನಿಧಿ ಸಂಪ್ರದಾಯ ಸುಪ್ರತಿಷ್ಠಿತಾಯಾಂ ಶ್ರೀಮದ್ವೇದವೇದಾಂತ ವರ್ಧನೀ ಸಭಾಯಾಂ ವಿತೀರ್ಣೆಯಂ ವಿದ್ವದಭಿನಂದನ ಪತ್ರಿಕಾ.

ವೇದವೇದಾಂತ ವರ್ಧನೀ ಸಭಾ ಸಂಬಂಧಿನಿ. ಸ್ವಸ್ತಿಶ್ರೀ ವಿಜಯಾಭ್ಯುದಯ ಶ್ರೀ ಕೃಷ್ಣಪರಾಂಕುಶ ಯತಿವರ ವರವರಾದಿಕ್ರಮಾಗತ ಗುರುಪರಂಪರಾಬ್ದೇಷು ೪೯೮೯ ತಮೆ ಸರ್ವಧಾರಿ ಸಂವತ್ಸರೆ ಶ್ರೀಮಾನ್ ಪಿಸಾವಶ್ರೂಶಿ ಶ್ರೀನಿವಾಸಾಚಾರ್ಯಃ ವಿದ್ವದ್ಭಿಃ ಶ್ರೀ ಉ|| ವೆ|| ಕುಪ್ಪಪಾಕಂ ಶ್ರೀನಿವಾಸಾಚಾರ್ಯೈಃ ವೇದಾಂತಶಾಸ್ತ್ರೆ ತ್ರಿತೀಯಶಾಖಾಯಾಂ ಪ್ರಥಮಪದೆ, ಶ್ರೀ|| ಉ|| ವೆ|| ವೆತ್ತಮಾನ್ಸ್ಥಿ ಶ್ರೀನಿವಾಸ ಅಪ್ಪಂಗಾರ್ಯೈಸ್ಸಾಹಿತ್ಯಾಲಂಕಾರೆ ಪ್ರಥಮಶಾಖಾಯಾಂ ದ್ವಿತೀಯಪದೇಚ ಸಂಭಾವಿತಃ.

ಸರ್ವಧಾರಿಸಂ||ಸಿಮ್ಹಮಾಸ ೨೩ದಿನೆ ಭಾನುವಾಸರಃ	ಮ||ಅ. ಗೋಪಾಲಾಚಾರ್ಯಃ, ಕಾರ್ಯದರ್ಶೀ.

TELEGRAMS.

ತಂತಿ ವೃತ್ತಾಂತಗಳು.

ವಾಷಿಂಗ್ಟನ್, ೧೯ನೇ ಸೆಪ್ಟೆಂಬರ್—ಈದಿನ ಸೇರಿದ ಸೆನೆಟ್ ಸಭೆಯಲ್ಲಿ ಅದರ ಅಗ್ರಾಸನಾಧಿಪತಿಯವರಾದ ಮೆ|| ಜಾನ್‍ಸರ್‌ಮಾನ್ ಯೆಂಬವರು ಕನಡಾ ದೇಶವನ್ನು ಯುನೈಟೆಡ್ ಸ್ಟೇಟ್ಸಿನೊಡನೆ ಸೇರಿಸಿ, ಪರಂತು ಅವರವರ ಸ್ಥಳಾಧಿಕಾರವನ್ನು ಕಾಪಾಡಿಕೊಂಡು ಬರುವದುಚಿತವೆಂದು ತಿಳಿಸಿದರು.

ಲಂಡನ್, ೨೦ನೇ ಸೆಪ್ಟೆಂಬರ್—ಲಾರ್ಡ್‌ಲ್ಯಾನ್ಸ್‌ಡೌನ್‌ಯವರು ತಮ್ಮ ಭಾರ್ಯೆಯವರೊಡನೆ, ನವಂಬರ್ ೧೯ನೇ ತಾರೀಖಿನಲ್ಲಿ ಬ್ರಿಂಡಿಸಿ ಯೆಂಬ ಸ್ಥಳದಲ್ಲಿ, ಗ್ಯಾಂಜಸ್ ಯೆಂಬ ಹೊಗೇ ಜಹಜು ಹತ್ತಿ ಇಂಡ್ಯದೇಶಕ್ಕೆ ಪ್ರಯಾಣವಾಗುವರು.

ಆಫ್ಘಾನಿಸ್ಥಾನ್ ದೇಶದ ಅಮೀರರವರು ಯಕಾಯೇಕ್ ಮೃತಪಟ್ಟರೆಂದು ತಾಷ್ಕಂಡ್ ಎಂಬ ಶಹರಿಗೆ ವರ್ತಮಾನ ಬಂದಿರುತಿದೆ.

ಸಿಂಲಾ, ೧೯ನೇ ಸೆಪ್ಟೆಂಬರ್—ಅಕ್ಟೋಬರ್ ಗುರ್ಕ್ರೇ ತಾರೀಖಿನಲ್ಲಿ ಕಾಬೂಲಿಗೆ ರಾಯಭಾರ ಹೊರಡುವ ವಿಷಯದಲ್ಲಿ ಸರ್ವ ಸನ್ನಾಹಗಳೂ ಪೂರ್ತಿಯಾದವು.

ಅಲಹಾಬಾದ್, ೧೯ನೇ ಸೆಪ್ಟೆಂಬರ್—ಬೋಲಾನ್ ಘಾಟಿಯ ಮಾರ್ಗವಾಗಿ ಪಿನ್ನೆಯಮೇಲೆ ಹಾಕಲ್ಪಡುತಲಿದ್ದ ರೆಯಿಲ್ ರಸ್ತೆಯ ಕಾಮಗಾರಿಯು ಪೂರ್ತಿ ಆಯಿತು. ಅದರಿಂದ ಕ್ವೆಟಾವಿಗೆಅಗಲವಾದಯಿರದು ರೆಯಿಲ್‌ರಸ್ತೆಯಮೂಲಕಇಂಡಸ್‌ವ್ಯಾಲಿ ರೆಯಿಲ್‌ರಸ್ತೆಯ ಸಂಬಂಧವುಂಟಾಯಿತು.

ಇಂಡ್ಯ ದೇಶದ ಸಂರಕ್ಷಣೆಯ ಬಗ್ಗೆ ಮಾಡಲ್ಪಟ್ಟಿರುವ ಯೇರ್ಪಾಡನ್ನನುಸರಿಸಿ, ಕಾಶ್ಮೀರ ಸಂಸ್ಥಾನದ ಸೇನೆಯಂ ನೋಡಿಕೊಳ್ಳುವ ಮೇಜರ್ ಮೆಲಿಸ್‌ಯವರು ನಿನ್ನೆಯದಿನ ಸಿಂಲಾವಿಗೆ ಬಂದು ಸೇರಿದರು.

SUMMARY OF NEWS.

ವೃತ್ತಾಂತ ಸಂಗ್ರಹ.

ಕಳೆದ ಸೋಮವಾರದ ದಿನ ಮುಂಬೈಯಲ್ಲಿ ಮುಸಲ್ಮಾನರಿಗೂ ಹಿಂದೂಗಳಿಗೂ ದೊಡ್ಡ ಹೊಡದಾಟವಾಯಿತು. ಹಿಂದೂ ಜನರು ತಮ್ಮ ಗಣಪತಿ ಮೂರ್ತಿಯನ್ನು ಜಲವಾಸ ಮಾಡಿಸುವದಕ್ಕಾಗಿ ವಾದ್ಯಗಳು ಮೊದಲಾದ ವಿಜೃಂಭಣೆಗಳೊಡನೆ ಉತ್ಸವ ಮಾಡಿಕೊಂಡು ಹೋಗುತ್ತಿದ್ದರು. ಆ ಮಾರ್ಗದಲ್ಲೊಂದು ಮಸೀಜಿದ್ ಇರಲು ಅದರಮುಂದೆ ಹೋಗಕೂಡದೆಂದು ಅವರು ಅಟಕಾಯ್ ಮಾಡಲು ಹಿಂದೂಗಳು ಕೇಳಲಿಲ್ಲವು. ಅದರಮೇಲೆ ಅವರಿಬ್ಬರಿಗೂ ಕೈಕಲಿತು ಮಾರಾಮಾರಿಗಳಾಗಿ ಗಣಪತಿ ವಿಗ್ರಹಗಳನೇಕ ಚೂರುಚೂರಾಗಿ ಗುರಿಯಾದವು-ಸು.

ಝೂಂದೇಲಿಯಾ ಯೆಂಬದರಲ್ಲಿ ಸಿಕ್‌ಜನರ ಕೆಲವರು ಸೇರಿ, ಧುಲೀಪ್ ಸಿಂಗರವರನ್ನು ಹಿಂದುಸ್ಥಾನಕ್ಕೆ ತರುವದಕ್ಕಾಗಿ, ಅಲ್ಲಿನ ಮುಸಲ್ಮಾನ್ ಜನರನ್ನು ವಧಿಸಿ, ಅವರ ಅರಸನನ್ನು ಪದಚ್ಯುತನನ್ನಾಗಿ ಮಾಡಿ, ಆ ಸ್ಥಾನದಲ್ಲಿ ಧುಲೀಪ್ ಸಿಂಗರನ್ನು ಕೂಡಿಸಿ, ಅನಂತರ ಅವರನ್ನು ಹಿಂದುಸ್ಥಾನಕ್ಕೆ ತರಬೇಕೆಂದು ಉಪಜೀತ ಮಾಡುತ್ತಾರೆಂಬ ಅಂಶ ಅಮೃತಸರದ ಪೊಲೀಸ್ ಸೂಪರಿಂಟೆಂಡೆಂಟರಿಗೆ ತಿಳಿಯಬಂದು ಸಿಕ್ ಜನರನ್ನು ಹಿಡಿದು ಝಡ್ತೀ ಮಾಡುವಾಗ ಅವರಲ್ಲಿ ಒಂದು ಸಣ್ಣಬುಕ್ಕು ಸಿಕ್ಕಿ ಅದನ್ನು ನೋಡುವಲ್ಲಿ, ಬಂಗಾಳೆಯಲ್ಲಿರುವ ನೇಟಿವ್ ಸೈನ್ಯದ ಜನರಿಗೆ ಯಾವ ರೀತಿಯಿಂದ ಸಂಬಳಗಳು ಕೊಡತಕ್ಕದ್ದೆಂದು ಅದರಲ್ಲಿ ಬರೆಯಲ್ಪಟ್ಟಿತ್ತು. ಇದರಿಂದ ಕೆಲವರು ನೇಟಿವ್ ಶಿಪಾಯಿಗಳನ್ನು ತಮ್ಮ ಕಡೆಗೆ ಸೇರಿಸಿಕೊಳ್ಳುವದಕ್ಕೆ ಪ್ರಯತ್ನ ಪಡುವಂತೆ ಕಾಣುತಿದೆ. ಈ ವಿಷಯವನ್ನು ಕುರಿತು ವಿಚಾರಣೆಯಾಗುತಿದೆ.—ಪ. ಸು.

Signs of distress and drought.—ಕಡೆಗೆ, ಮುಂಬೈ ಪ್ರೆಸಿಡೆನ್ಸಿಯ ಡಿಸ್ಟ್ರಿಕ್ಟುಗಳಲ್ಲಿ ಜಲಾಭಾವವೂ ತತ್ಪ್ರಯುಕ್ತವಾದ ದುರ್ಭಿಕ್ಷವೂ ತಲೆದೋರುವಂತೆ ಕಾಣುತಿದೆ. ಅನೇಕ ಸ್ಥಳಗಳಲ್ಲಿ ಮಳೆ ಸಾಲದೆ ಕ್ಷಾಮ ಪ್ರಾಪ್ತವಾಗುವಂತಿದೆ. ಧಾರಣೆಗಳು ಹೆಚ್ಚಿಹೋದವು, ದನಗಳಿಗೆ ಮೇವು ಸಿಕ್ಕುವದಿಲ್ಲವು. ಕೆಲವು ಡಿಸ್ಟ್ರಿಕ್ಟುಗಳಲ್ಲಿ ರಿಲೀಫ್ ಕಾಮಗಾರಿಗಳಂ ಪ್ರಾರಂಭಿಸಬೇಕೆಂದು ಗವರ್ನಮೆಂಟಿನವರು ಪ್ರಾರ್ಥಿಸಲ್ಪಟ್ಟಿರುತ್ತಾರೆ. ಮುಂಬೈಯಲ್ಲಿ ಸಹ ಮಳೆ ಇಲ್ಲವು. ಈ ಕಾಲದಲ್ಲಿ ಬಿಸಿಲು ಏಪ್ರಿಲ್ ಮೇ ತಿಂಗಳಸಂತಿದೆ. ಅಹಮದ ನಗರದಲ್ಲಿರುವ ಒಬ್ಬ ದೊಡ್ಡಮನುಷ್ಯನು ಮುಂಬೈಯಲ್ಲಿನ ಒಬ್ಬ ಸ್ನೇಹಿತನಿಗೆ ಬರೆಯುತ್ತಾನೇನಂದರೆ—ಇಲ್ಲಿ ಪ್ರಾಯಶಃ ಮಳೆ ಇಲ್ಲವೆಂತಲೇ ಹೇಳಬೇಕಾಗಿದೆ. ಕೆಲವು ಸ್ಥಳಗಳಲ್ಲಿ ಮಾತ್ರವೇ ಮುಂಗಾರೆ ಫಸಲ್ ಹೆಚ್ಚಾಗಿ, ಹೊಲಕೆ ಯದ್ದವೆಲ್ಲ ಬಿಸಲಿನ ಝಳದಿಂದ ಬೆಂದುಹೋದವು. ಧಾನ್ಯಗಳಧಾರಣೆಗಳು ಯಾವಾಗಲೂ ಇರುವದಕ್ಕಿಂತಲೂ ಎರಡರಷ್ಟು ಜಾಸ್ತೀಯಾಗಿವೆ, ಹುಲ್ಲಿನಪ್ರಯವಾದರೊ ನಾಲ್ಕೈದರಷ್ಟುಹೆಚ್ಚಿಹೋಗಿದೆ. ದನಗಳುಮೇಯುವದಕ್ಕೆ ಪಚ್ಚಗಿರುವಂಥಾ ಪದಾರ್ಥವೇ ಪ್ರಾಯಶಃ ಇಲ್ಲವು. ಈ ಸ್ಥಿತಿಯಲ್ಲಿ ದನಗಳಂ ಇಟ್ಟುಕೊಂಡಿರುವಂಥಾದರ ಕಷ್ಟವೆಂತಾದ್ದಾಗಿರಬೇಕೋ ತಾವೇ ಯೋಚಿಸಬೇಕು. ಮಳೆ ಬಂದಾಗ್ಯೂ ರೈತರಿಗೆ ಬೀಜ ಧಾನ್ಯಕ್ಕೆ ಮಾರ್ಗವಿಲ್ಲವು, ಯಾತಕ್ಕಂದರೆ, ಅವರಲ್ಲಿದ್ದ ದುಡ್ಡೆಲ್ಲ ದನಗಳಿಗೆ ಹುಲ್ಲು ಕೊಂಡು ಹಾಕುವದಕ್ಕೆ ಸರಿಹೋಯಿತು. ಮಳೆಯ ಸೂಚನೆಯೇ ಕಾಣಬರಲಿಲ್ಲವು, ಎಂಬದು.—ಇಂದು. ಪ್ರ.

Police order anent the Ganapathi festival.—ಈಸಲ ವಿನಾಯಕನನ್ನು ನೀರಿನಲ್ಲಿ ಬಿಡುವ ಉತ್ಸವವೂ ಮೊಹರಂಹಬ್ಬದ ಕಡೇದಿನವೂ ಒಂದೇದಿನದಲ್ಲಿ, ಅಂದರೆ ಕಳೆದ ಸೋಮವಾರದದಿನ ಪ್ರಾಪ್ತವಾದದರಿಂದ ಮುಂಬೈ ಪೊಲೀಸ್ ಕಮಿಷನರಾದ ಕರ್ನಲ್ ವಿಲ್ಸನ್‌ಯವರು, ಹಿಂದೂಗಳು ಆದಿನ ಉತ್ಸವಮಾಡಕೂಡದೆಂದು ನಿಷೇಧಿಸಿ ಹುಕುಂಕೊಡಲು ಅದರಿಂದ ಹಿಂದೂ ಜನರಿಗೆ ಬಹಳ ಅಸಮಾಧಾನ ವುಂಟಾಯಿತು. ಈ ಹುಕುಂ ನ್ಯಾಯವಾದದ್ದು ಅಥವಾ ಅಕ್ರಮವಾದದ್ದೆಂಬ ವಿಷಯವನ್ನು ಕುರಿತು ಇಲ್ಲಿ ನಾವುವಿಚಾರಮಾಡುವದಿಲ್ಲವು, ಪರಂತು ಅದನ್ನು ನ್ಯಾಯಶಾಸ್ತ್ರಜ್ಞರ ವಿಮರ್ಶೆಗೆ ಬಿಡುವೆವು. ಆದರೆ ಪೊಲೀಸ್‌ಕಮಿಷನರು ಇಂತಾ ಹುಕುಂ ಕೊಡುವದಕ್ಕೆ ಗವರ್ನಮೆಂಟಿನವರು ಅವಕಾಶ ಕೊಟ್ಟದ್ದು ಕೇವಲ ಆಕ್ಷೇಪಣೀಯವಾದ ಕಾರ್ಯವೆಂದು ನಮ್ಮಬುದ್ಧಿಗ್ಯಾತೋರುತ್ತಿದೆ, ಯಾತಕ್ಕಂದರೆ, ಇದರಿಂದ ಗವರ್ನಮೆಂಟಿನವರಲ್ಲಿ ಒಂದು ಬಲಹೀನತೆಯನ್ನು ಒಪ್ಪಿಕೊಂಡಂತೆ ಯಾಗುತಿದೆ. ಸೋಮವಾರದದಿನ ಉಭಯಮತದವರಿಗೂ ಹಬ್ಬದ ದಿವಸವಾದ ಪಕ್ಷಕ್ಕೆ ಹಿಂದೂಗಳುಮಾತ್ರ ಅದನ್ನು ಆದಿನ ಆಚರಿಸಕೂಡದೆಂದು ಹುಕುಂಯಾಕ್ಕಬೇಕೆ? ಪೊಲೀಸ್ ಕಮಿಷನರು ಮಹಮ್ಮದಿಯನ್ ಜನಗಳಿಗೆ ಹೆದರಿ, ಹಿಂದೂಜನಗಳು ಸುಲಭವಾಗಿ ತಮ್ಮ ಹುಕುಂಮೇಲೆ ನಡೆಯುವರೆಂದು ಯೋಚಿಸಿದರೊ? ಬರಿಟ್ಸ್ಸರಾದಗವರ್ನಮೆಂಟಿನವರು ತಮ್ಮಲ್ಲಿ ಒಂದು ಬಲಹೀನತೆಯನ್ನು ವ್ಯಕ್ತಗೊಳಿಸುವ ಹುಕುಮನ್ನು ಕೊಡದೆ ಇರಬೇಕಾಗಿತ್ತು. ಸೋಮವಾರದ ದಿನ ಹಬ್ಬವನ್ನು ಮಾಡುವ ವಿಷಯದಲ್ಲಿ ಮುಸಲ್ಮಾನರಿಗೆ ಯೆಷ್ಟು ಬಾಧ್ಯತೆಯುಂಟೊ ಹಿಂದೂಗಳಿಗೂ ಅಷ್ಟು ಬಾಧ್ಯತೆ ಯಿರಲಾಯಿದೆ. ಆದಿನ ಅವರು ತಮ್ಮ ಹಬ್ಬವನ್ನು ಮಾಡಕೂಡದೆಂದು ಹುಕುಂ ಕೊಟ್ಟಮೇಲೆ ಅದಂ ಕೊಟ್ಟವರು ಪಕ್ಷಪಾತಮಾಡಿದರೆಂಬ ದೋಷಕ್ಕೆ ಗುರಿಯಾಗುತ್ತಾರೆ. ಪ್ರಜೆಗಳಲ್ಲಿ ಗದ್ದಲವೇನೂ ಆಗದಂತೆ ಕಾಪಾಡಿಕೊಳ್ಳ ಬೇಕಾದದ್ದು ಪೊಲೀಸ್ ಕಮಿಷನರವರ ಕರ್ತವ್ಯವೇ ಸರಿ, ಅದರ ಸಂರಕ್ಷಣೆಯ ಬಗ್ಗೆ ಸದರೀಮೇಲೆ ಹುಕುಂ ಕೊಟ್ಟರು. ಈ ಹುಕುಂ ಕೊಡುವ ಅಂಶದಲ್ಲಿ ಅವರ ಉದ್ದೇಶ ಒಳ್ಳೆಯದೆಂಬ ವಿಷಯದೊಳು ನಮಗೆ ಸ್ವಲ್ಪವಾದರು ಸಂಶಯವಿಲ್ಲವು. ಮಹಮ್ಮದೀಯನ್‌ರಿಗೆಅನುಕೂಲಮಾಡಿ ಹಿಂದೂಗಳನ್ನು ಅಗೌರವಿಸಬೇಕೆಂಬ ಅಭಿಪ್ರಾಯ ಕರ್ನಲ್ ವಿಲ್ಸನ್‌ಯವರಿಗೆ ಯೆಷ್ಟುಮಾತ್ರವೂ ಇದ್ದಿರಲಾರದು. ಅವರ ಮುಖ್ಯೋದ್ದೇಶವು ಕಲಹಕ್ಕೆ ಅವಕಾಶವಿರಕೂಡದೆಂಬದು, ಪರಂತು ದೌರ್ಭಾಗ್ಯವಶಾತ್ ಸದರೀ ಹುಕುಮು ಅನ್ಯಥಾ ಗ್ರಹಣಕ್ಕೆ ಅವಕಾಶವನ್ನುಂಟುಮಾಡುತಿದೆ, ಮತ್ತು ಹಾಗೆಯೇ ಅನೇಕರು ಭಾವಿಸಿರುತ್ತಾರೆ. ಇದಕ್ಕಿಂತಲೂ ಮಹಮ್ಮದೀಯರ ತಾಬೂತ್‌ಗಳು ಫಲಾನೇ ಮಾರ್ಗಗಳಲ್ಲೇ ಹೋಗತಕ್ಕದ್ದೆಂತಲೂ, ಹಿಂದೂಗಳ ಉತ್ಸವ ಫಲಾನೇಮಾರ್ಗದಲ್ಲಿ ಹೋಗತಕ್ಕದ್ದೆಂತಲೂ ವಿಧಿಸಿ ಇದ್ದಿರುವರಾದರೆ ಪೊಲೀಸ್ ಕಮಿಷನರವರ ಉದ್ದೇಶವು ಶ್ಲಾಘ್ಯವಾಗಿರುವದು. ಸೋಮವಾರದದಿನ ಹಿಂದೂಗಳು ಉತ್ಸವ ಮಾಡಕೂಡದೆಂದು ಹುಕುಂ ಕೊಟ್ಟದ್ದರಿಂದ ಗವರ್ನಮೆಂಟಿನವರಿಗೆ ಮಹಮ್ಮದನ್‌ಜನಗಳಲ್ಲಿ ಭಯವೆಂದು ಜನಗಳು ಎಣಿಸುವದಕ್ಕೆ ಅವಕಾಶ ವುಂಟಾಯಿತು.—ಇಂದುಪ್ರಕಾಶ.

EXTRACTS.

ಈಗ ರಜಾಪಡೆಕೊಂಡಿರುವ ಗವರ್ನಮೆಂಟ್ ಪ್ಲೀಡರ್ ಮೆ. ಇ. ಬಿ. ಪವಲ್‌ಯವರಕೆಲಸವನ್ನು ಬದಲೀನೋಡುವಂತೆ ಆನರೇಬಲ್ ಮೆ. ಎಸ್. ಸುಬ್ರಹ್ಮಣ್ಯಯ್ಯನವರುಮೊಕರರ್‌ಮಾಡಲ್ಪಟ್ಟಿರುವದಾಗಿ ಕಳೆದವಾರದ ಸರ್ಕಾರೀ ಗೆಜೆಟಿನಲ್ಲಿ ಘೋಷಿಸಮಾಡಲ್ಪಟ್ಟಿರುತಿದೆ. ಈ ದೊಡ್ಡಮನುಷ್ಯರು ಕಾನೂನ್‌ಗಳಲ್ಲಿ ಪಡೆದಿರುವ ಯೋಗ್ಯತೆಯನ್ನು ಉನ್ನತಾಧಿಕಾರಿಗಳು ಗೌರವಿಸಿ ಅವರನ್ನು ಸದರೀಕೆಲಸದಲ್ಲಿನಿಯಮಿಸಿದ್ದು, ಹಿಂದೂಸಮುದಾಯಕ್ಕೇನೇ ಗೌರವಾವಹವಾಗಿರುವದಲ್ಲದೆ, ಗವರ್ನರ್‌ರವರು ಜಾತಿ ಮತಪ್ರಯುಕ್ತವಾದ ಪಕ್ಷಪಾತವಿಲ್ಲದೆ ಕೇವಲ ಜವಾಬ್‌ದಾರೀಯುಕ್ತ ಸದರೀಕೆಲಸಕ್ಕೆ ಸಂಪೂರ್ಣ ಅರ್ಹರಾದವರನ್ನು ಚುನಾಯಿಸಿದರೆಂಬ ಗೌರವಕ್ಕೆ ಅವರನ್ನು ವಿಷಯರನ್ನಾಗಿಮಾಡಿರುತಿದೆ. ಮದರಾಸ್ ನೇಟಿವ್ ದೊಡ್ಡಮನುಷ್ಯರಪೈಕಿ ಇವರೇ ಮೊದಲು ಗವರ್ನಮೆಂಟ್‌ಪ್ಲೀಡರಾಗಿ ನಿಯಮಿಸಲ್ಪಟ್ಟವರು. ಆಬಗ್ಗೆ ನಾವು ಅಂತರವಾಗಿಅವರಿಗೆ ಶುಭವಾದನಮಾಡುವೆವು. ಕಾಯಿದಾಕಾನೂನ್‌ಗಳಲ್ಲಿ ಅವರು ಪಡೆದಿರುವ ಪ್ರಸಿದ್ಧವಾದ ಬಹುವಿಧ ಯೋಗ್ಯತೆಯೇ ಅವರು ತಮ್ಮಕೆಲಸವನ್ನು ಸರ್ವಜನ ಶ್ಲಾಘ್ಯವಾಗಿ ನಡೆಸುವರೆಂಬ ನಂಬಿಕೆಯನ್ನುಂಟುಮಾಡುತಿದೆ. ಈಯೊಸಸ್ಸೀಡರವರು ಲಾಯರ್‌ಗಳ ಮತ್ತು ಜಡ್ಜಿಗಳ ಗೌರವಸ್ಥಾನಗಳಿಗೆ ವಿಷಯರಾಗಿರುತ್ತಾರೆ. ಇವರ ಮೊಕರರಾತಿಯು ಯುರೋಪಿಯನ್‌ರಪೈಕಿ ಕೆಲವರಿಗೆ ಅನಿಷ್ಟವಾಗಿರುವದು, ಪರಂತು ಅಂತಹಮನಸ್ತಾಪ ಕಾನಿಮರಾಯಪರಚನಾಪಣೆವಿಷಯದಲ್ಲಿಅತ್ಯಸ್ಪರಾಗಿರಲಾರರೆಂದು ನಾವುನಂಬುತ್ತೇವೆ. ಜಾತಿಮತಪ್ರಯುಕ್ತವಾದಕಾಲುಷ್ಯವಿಲ್ಲದೆ,ಯೋಗ್ಯರಾದ ಸ್ವದೇಶೀಯರಿಗೆ ಪ್ರೋತ್ಸಾಹವನ್ನುಂಟುಮಾಡಬೇಕೆಂಬ ಸುಕಲ್ಪವುಳ್ಳ ನಮ್ಮ ಗವರ್ನರವರಲ್ಲಿ ಪ್ರಜೆಗಳಿಗೆ ಸಂಪೂರ್ಣ ನಂಬಿಕೆಯುಂಟಾಗಬೇಕಾಗಿರುತಿದೆ. ಇವರ ರಾಜ್ಯಭಾರದಲ್ಲಿ ಕೆಲವುಲೋಕಗಳಿರುತಿವೆ, ಪರಂತು ನೇಟಿವ್‌ಗಳ ಯೋಗ್ಯತೆಯನ್ನು ಪರಿಭಾವಿಸಿ ಅದಕ್ಕೆ ಅನುಗುಣವಾದ ಪದವಿಗಳಂ ಅವರಿಗೆ ಕಲ್ಪಿಸಿಕೊಡುವ ವಿಷಯದಲ್ಲಿ ಗವರ್ನರವರಿಗೆ ಉಂಟಾಗಿರುವ ಉದಾರ ಸ್ವಭಾವವಂ ಪರ್ಯಾಲೋಚಿಸಲಾಗಿ ಮೇಲಿನ ಲೋಪಗಳು ಲೋಪಗಳಲ್ಲವೆಂತಲೇ ಹೇಳಬೇಕು. ಆನರೆಬಲ್ ಸುಬ್ರಹ್ಮಣ್ಯಯ್ಯರವರನ್ನು ಗವರ್ನಮೆಂಟ್ ಪ್ಲೀಡರಾಗಿ ನಿಯಮಿಸಿದ್ದರಿಂದ ಯುರೋಪಿಯನ್ ಮತ್ತು ಯುರೇಷಿಯನ್ ಲಾಯರ್‌ಗಳ ವಿಷಯದಲ್ಲಿ ಒಂದು ಲೋಪವನ್ನು ತೋರಿಸಿದಂತಲ್ಲವು. ಸದರೀ ಕೆಲಸಕ್ಕೆ ಒಬ್ಬನೇಟಿವನ್ನು ಮೊಕರರ್‌ಮಾಡಬೇಕಾದ್ದರಿಂದ ಇವರ ನಿಯಾಮಕವು ಯೋಗ್ಯವಾದದ್ದೆಂತಲೂ, ಸರ್ವಜನ ಸಮ್ಮತವಾದದ್ದೆಂತಲೂ ನಮ್ಮ ಅಭಿಪ್ರಾಯವಾಗಿರುತಿದೆ. ಯಾರವಿಷಯದಲ್ಲೂ ಪಕ್ಷಪಾತವನ್ನು ತೋರಿಸುವದು ನಮಗೆ ಇಷ್ಟವಿಲ್ಲವು. ಗವರ್ನಮೆಂಟಿನವರು ಎಲ್ಲರವಿಷಯದಲ್ಲೂ ಸಮಾನ ಭಾವವುಳ್ಳವರೆಂಬ ಅಂಶವು ಸಕ್ತ ವಿಷಯದಲ್ಲಿ ಸ್ಥಿರಪಟ್ಟಿರುತಿದೆ.—ಪೀಪಲ್ಸ್‌ಫ್ರೆಂಡ್.

Bangalore:—Printed and pudlished at the Karnatic Press, No. 44, Hospital Road, Petta.—1888.

ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA.

ಪ್ರತಿ ಸೋಮವಾರ ಪ್ರಾತಃಕಾಲದಲ್ಲಿ ಪ್ರಕಟಿಸಲ್ಪಡುವದು.

Published every Monday Morning.

ಪ್ರಕಾಮುವಿವಿಧಸ್ವವ್ಯಸನಗಣಾರ್ಥ ಕರ್ಣಾಟಕಪ್ರಕಾಶನ [illegible] ॥ [illegible]

Vol. XV.] BANGALORE—MONDAY, OCTOBER 1, 1888. [No. 39.

ಸಂಪುಟ ೧೫.] ಬೆಂಗಳೂರು:—ಸರ್ ೧೮೮೮ನೇ ಇಸವಿ ಅಕ್ಟೋಬರ್ ೧ನೇ ತಾರೀಖ್ ಸೋಮವಾರ. [ಸಂಚಿಕೆ ೩೯.

ಕರ್ಣಾಟಕ ಪ್ರಕಾಶಿಕಾ

ಪತ್ರಿಕೆಯ ಚಂದಾ ದರಗಳು,
೧೮೮೮ನೇ ಇಸವಿ ಜನವರಿಯಿಂದಾಯಿತು
ಕಡಿಮೆಮಾಡಲ್ಪಟ್ಟಿರುತ್ತದೆ.

ಈ ಪತ್ರಿಕೆಯು ಚಂದಾದಾರರನ್ನೇಕಿ ಅನೇಕರ ಅಪೇಕ್ಷೆಯನ್ನೀಡೇರಿಸುವ ಉದ್ದೇಶದೊಡನೆಯೂ, ಪರಿಮಿತವಾದ ಆಯುತಿಯುಳ್ಳವರಿಗೆಲ್ಲ ಈ ಪತ್ರಿಕೆಯು ಸುಲಭವಾಗಿ ಲಭಿಸುವಂತೆ ಆಗಬೇಕೆಂಬ ಅಭಿಪ್ರಾಯದೊಡನೆಯೂ ಇದರ ಚಂದಾದರವನ್ನು ಇವರಡಿಕಂಡಂತೆ ಕಡಿಮೆಮಾಡಿರುತ್ತೇವೆ.—

ಇಂಗ್ಲಿಷ್ ಮತ್ತು ಕನ್ನಡಭಾಗಗಳಿಗೆ.

	ಸ್ಥಳದವರಿಗೆ	ಪರಸ್ಥಳದವರಿಗೆ
12 ತಿಂಗಳಿಗೆ	8—0—0	9—0—0
6 ,,	1—0—0	4—8—0
3 ,,	2—8—0	2—5—0

ಇಂಗ್ಲಿಷ್ ಅಥವಾ ಕನ್ನಡಭಾಗಗಳಿಗೆ.

	ಸ್ಥಳದವರಿಗೆ	ಪರಸ್ಥಳದವರಿಗೆ
12 ತಿಂಗಳಿಗೆ	4—0—0	5—0—0
6 ,,	2—0—0	2—8—0
3 ,,	1—1—0	1—5—0

ಸರಿ—ಅಂಚೆ ಮುಶ್ಸೂದಿಗಳು, ಪೋಲಿಸ್ ಮತ್ತು ತಾಲ್ಲೂಕ್ [illegible], [illegible], [illegible], ವಿದ್ಯಾರ್ಥಿಗಳು, ಇವರೆಲ್ಲ ಈ ಪತ್ರಿಕೆಯು [illegible] [illegible] [illegible]

ನೋಟುಗಳು [illegible] [illegible] ಪ್ರಕಟನೆಯ ವಿಷಯ.

ಮೊದಲನೆಯದಕ್ಕೆ ಪಂಕ್ತಿ ಒಂದಕ್ಕೆ ೦—೨—೦
ಎರಡನೆಯದಕ್ಕೆ ಪಂಕ್ತಿ ಒಂದಕ್ಕೆ ೦—೧—೦

ಸರಿ—ಎರಡಾವರ್ತಿಗಿಂತ [illegible] [illegible] [illegible]

"IT RECOMENDS ITSELF"

ALL WHO SUFFER FIND SURE RELIEF.

LITTLE'S ORIENTAL BALM

THE MOST EFFECTUAL MODERN REMEDY FOR PAIN.

ಲಿಟಲ್ ಎಂಬವರಿಂದ ತಯಾರಾಗಿರುವ "ವಾತಸಂಹಾರಿಣಿ" ಎಂಬ ಪೂರ್ವದೇಶ ಸಂಬಂಧವಾದ ಅಮೂಲ ತೈಲವು [illegible], ಮತ್ತು ಸಸಲವಾದ ನವೀನ ಪ್ರತಿಕ್ರಿಯಾರೂಪವಾದ ಔಷಧವು. ಇದರಿಂದ ಸಕಲ ವಾತರೋಗಗಳೂ, ವಾತಸಂಬಂಧಗಳಾದ ಸಂಧಿಬಂಧಗಳೂ ನಿವೃತ್ತಿಯಾಗುವವು. ಮುಖ್ಯವಾಗಿ [illegible] ವಾತರೋಗಗಳು, ಕಾಲ್, ಗಂಟ್ಲಿನಲ್ಲಿ ಉರಿ, ನಡುಪುನೋವು, ಕೀಲುವಾಯು, ಕಟಿವಾಯು, ಉಳುಕು ನೋವು, ತಲೆನೋವು, [illegible] ಮುಂತಾದ ರೋಗಗಳಿಗೆಲ್ಲ ನಿಸ್ಸಂದೇಹವಾಗಿ ಬಹಳ ಪ್ರಯೋಜನವನ್ನುಂಟು ಮಾಡತಕ್ಕದ್ದು. ಈ ತೈಲವನ್ನು ನೋವುಳ್ಳ ಸ್ಥಳಗಳಲ್ಲಿ [illegible] [illegible] ಉತ್ತಮ ತೈಲವಾಗಿರುತ್ತದೆ. [illegible] ಮತ್ತು [illegible] ನಿವೃತ್ತಿಯಾಗುವದು. [illegible] ಉರಿ ಅಥವಾ [illegible] ಈ ತೈಲವು ಅದ್ಭುತವಾದ ಮತ್ತು ಶೀಘ್ರವಾದ ಸಂಪೂರ್ಣ ಗುಣವನ್ನುಂಟುಮಾಡುವದು. ಅದ್ಭುತವಾದ ಈ ಔಷಧವನ್ನು [illegible] ಅದರ ಪ್ರಯೋಜನವು ಸ್ವತಃವೇ ವ್ಯಕ್ತವಾಗುವದು. ಈ ತೈಲವು ಶೀತಗಾಳಿ [illegible] ಸಂಚರಿಸುವಂಥಾ ಪ್ರಯಾಣಿಕರು, [illegible], ದೇಶಾಟನ ಮಾಡುವವರು, ಮುಂತಾದವರಿಗೆಲ್ಲ ಅಮೂಲ್ಯವಾದದ್ದು.

ಪರಿಶೀಲಕರ ಅಭಿಪ್ರಾಯವು.

ಐರ್ಲ್ಯಾಂಡ್ ದೇಶದ ಫಾರ್ಮಕ್ಯೂಟಿಕಲ್ ಸೊಸೈಟಿಯ [illegible] [illegible], ಸದರೀ ದೇಶದ [illegible] ಸೊಸೈಟಿ ಎಂಬ [illegible] ಸಮಾಜದ ಮೆಂಬರನಾಗಿಯೂ, "[illegible] ಲ್ [illegible] ಆಫ್ ಯೂರಪ್" ಎಂಬ ಗ್ರಂಥಕರ್ತರಾಗಿಯೂ, [illegible] ಅನೇಕ [illegible] ಇರುವ ಪ್ರೊಫೆಸರ್ ಟಿಚ್ ಬೋರ್ನ (C. R. TICHBORNE, L. L. D., F. C. S., M. R. I. A.,) ಎಂಬವರು ಅಭಿಪ್ರಾಯ ಪಟ್ಟಿರುತ್ತಾರೇನಂದರೆ—ಲಿಟಲ್‌ರವರ ಓರಿಯಂಟಲ್ ತೈಲವನ್ನು ಬಹಳ [illegible] [illegible] [illegible] [illegible]

ಇದರ ಕ್ರಯ—ಸೀಸೆ ಒಂದಕ್ಕೆ ೧ ರೂಪಾಯಿ.

ಇದು [illegible] ಔಷಧ ಶಾಲೆಯಲ್ಲಿಯೂ, ಮದರಾಸ್ [illegible] ಬೀದಿಯಲ್ಲಿ, ೨೦ನೇ ನಂಬರ್ [illegible] ಎ. ಸಿ. [illegible] ಯವರಲ್ಲಿಯೂ, ಈ ಪ್ರಾಂತದಲ್ಲಿರುವ ಅವರ ಏಜಂಟ್‌ಗಳಾದ ಜೆ. ವೆಸ್ಟ್ ಯವರ ಕಂಪನಿಯಲ್ಲಿಯೂ, [illegible] ಅಂಡ್ ಕಂಪನಿ [illegible] ದೊರೆಯುವದು.

AGENTS—} Messrs, J. WEST, Chemist, &c, Bangalore.
CAPLAIN & Co, Chemists, Bangalore.
RIGGS & Co, Chemists, Bangalore; and of
MAHOMED YOUSOFF AND SONS, The Cash Bazar, Bangalore
A. C BERKADIAN & Co.,
20 Sarthodoss Street Madras.

NOTICE.

VAIDYASARA SANGRAHA

A TREATISE ON THE PRINCIPLES OF

HINDU MEDICINE.

☞ Price including Postage Rs 5 6 0

ವೈದ್ಯಸಾರ ಸಂಗ್ರಹ.

ಈಗ್ರಂಥಾಪೇಕ್ಷೆಯುಳ್ಳವರು ಮೊಬಲಗಿನೊಡನೇ ಈ ಕೆಳಗೆ ರುಜುಮಾಡಿರತಕ್ಕವರ ಹೆಸರಿಗೆ ಬರೆದುಕೊಂಡರೆ ಪುಸ್ತಕ ಕೂಡಲೇ ಕಳುಹಿಸಲ್ಪಡುವದು. ಮೊಬಲಗು ಇಲ್ಲದ ದರಖಾಸ್ತುಗಳಿಗೆ ಸುತರಾಂ ನಿಗೇಕೊಡಲ್ಪಡಲಾರದು.

ಇದರ ಕ್ರಯ ... ...ರೂ॥ ೫—೦—೦
ಪ್ಯಾಕಿಂಗ್ ಮತ್ತು ಅಂಚೆಹಾಸಲ್, ೦—೬—೦

ಟಿ. ಬಿ. ವೆಂಕಟಾಚಾರ್,
ಆಸ್ಪತ್ರೆರೋಡ್ ಬೆಂಗಳೂರು.

ವಿಶೇಷ ವರ್ತಮಾನ



ಪುನೆ ಚಿತ್ರಶಾಲೆಯಲ್ಲಿ ಸ್ಥಾಪಿಸಲ್ಪಟ್ಟಿರುವ [illegible] ಲಾಯಂತ್ರದಲ್ಲಿ, ಹಿಂದೂ ದೇವತೆಗಳ, ಚರಿತ್ರೆಗಳ ಮೂಲಕ ಪ್ರಸಿದ್ಧಿಯಂ ಪಡೆದವರ, ಸುಂದರಿಯರಾದ ನೇಟಿವ್ ಹೆಂಗಸರು ಮತ್ತುಳಿದ [illegible] ತಸ್ವೀರುಗಳು ತಯಾರಾಗುತ್ತಲಿವೆ. ಇವುಗಳ ಕೆಲಸಗಾರಿಕೆಯು ನಾಜೂಕನ್ನು ಯೋಚಿಸಲಾಗಿ ಕ್ರಯ ಬಹಳ ಅಲ್ಪವಾಗಿದೆ. ಬೇಕಾದವರಿಗೆ ಕ್ರಯದಪಟ್ಟಿ ಕಳುಹಿಸಲ್ಪಡುವದು.

ಪುನೇ ಚಿತ್ರಶಾಲೆಯ ಮ್ಯಾನೇಜರ್.

ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA.

MONDAY, OCTOBER 1, 1888.

೧೮೮೮ನೇ ಅಕ್ಟೋಬರ್ ೧ನೇ ತಾ॥ಸೋಮವಾರ.

THE BANGALORE FORT.

ಲೋಕದಲ್ಲಿ ಒಂದು ಉದ್ದೇಶದೊಡನೆ ಒಬ್ಬರಿಂದ ಮಾಡಲ್ಪಟ್ಟ ಕಾರ್ಯವು, ಕಾಲಾಂತರದಲ್ಲಿ ಯಾವ [illegible] ಉದ್ದೇಶಕ್ಕಾಗಿಯೋ ಯಾರ್ಯಾರಿಂದಲೋ ಬೆಳೆಸಲ್ಪಟ್ಟು ಅವರಿಗೆ ಅದು [illegible] ಬೇರೊಂದು ರೂಪವಾಗಿ ಪರಿಣಮಿಸುತ್ತದೆ. ಪರಂತು ಅದರ ಸ್ವರೂಪವು ಅತ್ಯಂತಿಕವಾಗಿ [illegible] ಸುವವರಿಗೆ ಅದರ ಜ್ಞಾಪಕವು ಜನಗಳಿಗೆ [illegible] ದೆ ನೆಲಗೊಂಡಿರುತ್ತದೆ. ಪ್ರಸಕ್ತ ವಿಷಯವಾದ ಈಪಟ್ಟಣದ ಕೋಟೆಯನ್ನು [illegible] ರಿತು ಈಸಂದರ್ಭದಲ್ಲಿ ಕೆಲವು ಅಂಶಗಳ [illegible] ಸುವವಂತೆ ಅದರೆ—ಆಗ್ಯೆ ಮುಮಾರು ಮುನ್ನೂರು ವರುಷಗಳ ಹಿಂದೆ ಈ ಕೋಟೆಯೂ ಅದರಲ್ಲಿರುವ ಕಟ್ಟಡಗಳೂ [illegible] ರೂಪದ [illegible] ಪ್ರತ್ಯಕ್ಷವಾಗಿರಬಹುದು. ಮಾಗಡಿ ಕೆಂಪೇಗೌಡನೆಂಬ ಒಬ್ಬ ಪಾಳೇಗಾರನು ಸ್ವಲ್ಪವಾಗಿ ಒಂದು ಕೋಟೆಯಂ ಕಟ್ಟಿಸಿ ಅದರಲ್ಲಿ ಒಂದು ಶಿವದೇವಸ್ಥಾನವಂ ಸ್ಥಾಪಿಸಿದಂತೆ ತಿಳಿಯಬರುತ್ತದೆ. [illegible] ಲವುದಿವಸಗಳ ತರುವಾಯ ಆದೇವಾಲಯವು [illegible] ಸ್ತುದೇವಸ್ಥಾನವಾಗಿ [illegible] [illegible] ದರೊಳಗಿದ್ದ ಲಿಂಗವು ಅದೇಕೋಟೆಯ [illegible] ಮೂಲೆಯಲ್ಲಿ ಎಸೆಯಲ್ಪಟ್ಟಿತ್ತು. ಅದಕ್ಕೆ ಬದಲು ಸ್ಥಾಪಿತವಾದ ವೆಂಕಟರಮಣಸ್ವಾಮಿಯ [illegible] ಬ ವಿಷ್ಣುವಿಗ್ರಹಕ್ಕೆ ಆಗಿನ ಸರ್ಕಾರದವರು ತಸ್ತಿಕ್ ಏರ್ಪಡಿಸಿದರು. ಅದು ಅನೇಕ [illegible] ಬದಲಾವಣೆಗಳಿಗೆ ಒಳಗಾಗಿ ಇದುವರಿವಿಗೆ [illegible] ಮ್ಯಾಜೆಸ್ಟೀಸ್ ಗವರ್ನಮೆಂಟಿನವರಿಂದ [illegible] ಲ್ಪಡುತಲಿದ್ದು ಈಗ ಮಹಾರಾಜರವರಿಗೆ ಒಪ್ಪಿಸಲ್ಪಟ್ಟಿರುತ್ತದೆ. ಬಿಸಾಡಲ್ಪಟ್ಟ ವಿಗ್ರಹ [illegible] ಸ್ಥಿತಿಯೇನಾಯಿತೆಂದರೆ, ಆಮಹಾಕ್ಯಂ ಎಂಬ [illegible] ಮಸ್ಥರಾದ ವಲ್ಲಾಳ ಮೊದಲಿಯಾರ್ರವರಲ್ಲಿ [illegible] ರು ಆಗ್ಯೆ ಕಂಸೇರಿಯಾಟ್ ಇಲಾಖೆಯಲ್ಲಿ [illegible] ನೇಜರಾಗಿದ್ದು ಜಮಖಲೂರ್ ಬೆಳಗಾಂ [illegible] ಯಿಂದ ಈಪ್ರಾಂತಿಗೆಬಂದು ಈ ಕೋಟೆಯಲ್ಲಿ [illegible] ವುಕಾಲ ವಾಸಮಾಡುತಲಿದ್ದರು. ಅವರ [illegible] ಮಾರರಾದ ಅರುಣಾಚಲಮೊದಲಿಯಾರ್ರವರು [illegible] ಳ ಪ್ರಸಿದ್ಧರಾಗಿದ್ದು ತಮ್ಮ ಗ್ರಾಭವಕಾಲದಲ್ಲಿ ಒಂದು ದೇವಾಲಯವುಕಟ್ಟಿಸಿ ಅದರಲ್ಲಿ [illegible] ಲಿಂಗವನ್ನು ಪ್ರತಿಷ್ಠೆಮಾಡಿಸಿ ಅದಕ್ಕೆ [illegible] ಕೇಶ್ವರನೆಂಬ ಹೆಸರನ್ನಿಟ್ಟು ಕಾಲಾನುಗುಣವಾಗಿ ಅದಕ್ಕೂ ಮೈಸೂರು ಸರ್ಕಾರದಿಂದ [illegible] ಘೋಚಿತ ತಸ್ತಿಕೆಯೇರ್ಪಡಿಸಿದರು. [illegible] ತಿಯಾಗಿ ದೇವಾಲಯಗಳೂ ವಿಗ್ರಹಗಳೂ [illegible] ದ್ಯಾಪಿ ನೆಲಗೊಂಡಿವೆ. ಮೇಲಿಕಂಡ ಮಾಗಡಿ ಕೆಂಪೇಗೌಡನನ್ನು ನವಾಬ್ ಹೈದರಲ್ಲಿಖಾನರ [illegible] ರು ಮೈಸೂರು ಅರಸರ ಅಧ್ಯಾಪೆಯಮೇಲೆ [illegible] ಯಿಸಿದರು. (ಮೈಸೂರು ಅರಸರ ಚರಿತ್ರೆಕ್ಕೆ ನವಾಬ್ ಹೈದರಲ್ಲಿಖಾನರ ವೃತ್ತಾಂತವೂ [illegible] ಸಿದ್ಧಗಳಾಗಿರುವದರಿಂದ ಈ ಸಂದರ್ಭದಲ್ಲಿ [illegible] ಗಳ ವಿಚಾರವು ಬಿಟ್ಟಿರುವೆವು.) ಈಪ್ರಕಾರದಲ್ಲಿ

ಖಾನರವರು ಇಂಗ್ಲಿಷಿನವರು ಜೆಯಿಸುವದಕ್ಕಾಗಿ ಫ್ರೆಂಚಿನವರಸ್ನೇಹವು ಬೆಳಸಿ ಅವರ ತಾತ್ಪರ್ಯಾನುಸಾರವಾಗಿ ಪ್ರಸಕ್ತ ಕೋಟೆಯಂ ಅವರ ವಿಚಾರಣೆಯಲ್ಲಿ ಕಟ್ಟಿಸಿ ಅದರ ಸುತ್ತಲು ವಿಶಾಲವಾದ ಅಲಂಗವನ್ನು ಅಗೆಯಿಸಿದರು. ಆಗ ಕಾಮಗಾರಿ ಮುತ್ಸದಿಯಾಗಿದ್ದವರಿಗೆ ಅಲಂಗದ ಕ್ಯಾನಭೋಗನೆಂಬ ಹೆಸರುಂಟಾದದರಿಂದ ಅವರ ವಂಶಜರು ಅದೇ ಅಭಿಧಾನದೊಡನೆ ಅದ್ಯಾಪಿ ಇರುತಲಿದಾರಲ್ಲದೆ ಅವರಲ್ಲಿ ಆಗಿನ ಕಡತದ ಲೆಕ್ಕಗಳು ಸಹ ಇರುವಂತೆ ತಿಳಿಯಬರುತಿದೆ. ಈ ಆಡಳಿತೆಗಳೆಲ್ಲವೂ ಸುಮಾರ್ ೧೫೦ ವರುಷಗಳೊಳಗಾಗಿ ನಡೆದವಾಗಿರುತಿವೆ. ಈ ಅಲ್ಪ ಕಾಲದೊಳಗಾಗಿ ಈ ಕೋಟೆಯು ಯೆಷ್ಟೋ ಬದಲಾವಣೆಗಳಿಗೊಳಪಟ್ಟಿತು. ಹೈದರಲ್ಲೀಖಾನರು ಕೆಲವುಕಾಲ ಈ ಕೋಟೆಯಲ್ಲಿಯೇ ವಾಸವಾಗಿದ್ದರು. ಬಳಿಕ ಅವರ ಮಕ್ಕಳಾದ ಟೀಪ್ಪೂ ಸುಲ್ತಾನರವರು ಅದನ್ನಾಳುತಲಿರಲು ಲಾರ್ಡ್ ಕಾರ್ನವಾಲಿಸ್ ಸಾಹೆಬರವರು ಅದು ಸ್ವಾಧೀನಪಡಿಸಿಕೊಂಡರು. ಈ ಅಂಶವು ಈ ಪ್ರೊರು ಹಲಸೂರು ಬಾಗಿಲಬಳಿ ಇರುವ ಜಯಸ್ತಂಭದಲ್ಲಿ ನಮೂದಿಸಲ್ಪಟ್ಟಿದೆ. ತರುವಾಯ ಮರಳಿ ಸುಲ್ತಾನರವರ ವಶವಾಗಿ ಕೆಲವು ಕಾಲದ ತರುವಾಯ ಮೈಸೂರು ಮಹಾರಾಜರವರ ಅಧಿಕಾರಕ್ಕೊಳಗಾಯಿತು. ಆದಾಗ್ಯೂ ಅದುಮೊದಲು ಮಹಾರಾಜರವರ ಪ್ರಭುತ್ವ ತಪ್ಪುವವರೆಗೆ ಇಂಗ್ಲಿಷ್ ಮಿಲಿಟರಿ ಆಫಿಸರ್‌ಗಳಿಗೂ ಜಂಗೀ ಸರಂಜಾಂಗಳಿಗೂ ಆಶ್ರಯಸ್ಥಾನವಾಗಿತ್ತು. ಈ ರಾಜ್ಯವು ಬ್ರಿಟಿಷಿನವರ ಸುಪರ್ದಾದ ಬಳಿಕ ಮೈಸೂರು ಕೋಟೆಯಲ್ಲಿ ಸಾಬಿಕ್ ಮಹಾರಾಜರಿಂದ ನಡೆಸಲ್ಪಡುತಲಿದ್ದ ರಾಜ್ಯಾಡಳಿತವನ್ನು ಇಲ್ಲಿನ ಕೋಟೆಯಲ್ಲಿ ಚೀಫ್ ಕಮಿಷನರವರು ಜರಿಗಿಸುತಲಿದ್ದರು. ಇದರಲ್ಲಿ ಅಪರಿಮಿತವಾದ ಜಂಗೀ ಸರಂಜಾಂಗಳಿದ್ದವಲ್ಲದೆ ಎಂಭತ್ತು ಲಕ್ಷ ರೂಪಾಯಿಗಳ ಸಿಲ್ಕು ಮೊಬಲಗು ನಗದಾಗಿತ್ತು. ಕಾಲಗತಿಯು ವಿಚಿತ್ರವಾದದರಿಂದ ಚೀಫ್ ಕಮಿಷನರವರ ಆಫಿಸ್ ಅಲ್ಲಿಂದ ತೆಗೆಯಲ್ಪಟ್ಟು ನವಾಬ್ ಹೈದರಲ್ಲೀಖಾನರ ಅರಮನೆಯು ನಿರ್ಮೂಲ ಮಾಡಲ್ಪಟ್ಟಿತು. ಅಲಂಕಾರ ರೂಪವಾಗಿದ್ದ ಕೋಟೆಯ ಮಹಾದ್ವಾರವು ಹೋಗಿ ಬೇರೆಮಾರ್ಗ ಯೇರ್ಪಟ್ಟಿತು. ಅಲ್ಲಿದ್ದ ಬ್ರಿಟಿಷ್ ಸೋಲಿಜರ್ಸ್‌ಗಳ ಪಹರೆಯುಹೋದದ್ದಲ್ಲದೆ ಕ್ರಮೇಣ ಜಂಗೀ ಸರಂಜಾಂಗಳೆಲ್ಲ ಖಾಲೀ ಮಾಡಲ್ಪಟ್ಟವು. ಆಖೈರಿಗೆ ಕೋಟೆಯು ನಿರ್ನಾಮವಾಗುವಂತೆ ಕಲ್ಲುಗಳಂ ಕೀಳಲಿಕ್ಕೆ ಉಪಕ್ರಮವಾಯಿತು. ಇಷ್ಟರಲ್ಲಿ ಈಗಿನ ಮಹಾರಾಜಾ ಸರ್ಕಾರದವರ ಹಕ್ಕುದಾರಿಯೋ ಅಥವಾ ಅದರಲ್ಲಿ ಬ್ರಿಟಿಷ್ ಗವರ್ನಮೆಂಟನವರಿಗುಂಟಾದ ಔದಾಸೀನ್ಯವೋ ತಡೆಯಾಗಿ ಏರ್ಪಟ್ಟು ಕಡೆಗೆ ಪರಿವರ್ತನರೂಪವಾಗಿ ಮಹಾರಾಜರವರಿಗೆ ಕೊಡಲ್ಪಟ್ಟಿತು. ಮಹಾರಾಜರವರುಯಾವದಕ್ಕೆ ಅದಂ ಉಪಯೋಗಿಸಬೇಕೆಂದಿದಾರೆಯೋ ತಿಳಿಯಲಿಲ್ಲವು ಪ್ರಸಕ್ತ ಕೋಟೆಯನ್ನು ತಮ್ಮ ಸುಪರ್ದುಮಾಡಿಕೊಂಡಿರುವಂತೆ ಶ್ರೀಮನ್ಮಹಾರಾಜರವರು ಇದರಡಿಕಂಡ ಇಸ್ತಿಹಾರ್‌ಮೂಲಕ ಪ್ರಕಟಿಸಿರುತ್ತಾರೇನುವದೆ:—

ಮೊಕ್ಕಾಂ ನಂ. ೧೧೯೫, ತಾರೀಖ್ ೨೧ನೇ ಸೆಪ್ಟಂಬರ್ ೧೮೮೮.—ಘನವತ್ತು ಹೊಂದಿದ ಶ್ರೀಮರ್ ಮೈಸೂರು ಮಹಾರಾಜರವರು, ಬೆಂಗಳೂರಲ್ಲಿರುವ ಬ್ರಿಟಿಷ್ ರೆಸಿಡೆನ್ಸಿಬಾಗ್ಯೆಯು ಮತ್ತು ಅದಕ್ಕೆ ಸೇರಿದ ಜಮೀನುಗಳ ಸಂಪೂರ್ಣ ವಿಚಾರಣಾಧಿಕಾರವನ್ನು ಬ್ರಿಟಿಷ್ ಗವರ್ನಮೆಂಟನವರಿಗೆ ಕೊಟ್ಟು ಹಾಗೆ ಕೊಡಲ್ಪಟ್ಟ ಜಮೀನುಗಳ ಮತ್ತು ಕಟ್ಟಡಗಳ ಮೇಲಿರುವ ತಮ್ಮ ಅಧಿಕಾರವಂ ನಿವೃತ್ತಿಸಿಕೊಂಡಿರುತ್ತಾರೆ. ಘನವನ್ನು ಹೊಂದಿದವೈಸ್‌ರಾಯ್ ವ ಗವರ್ನರ್ ಜನರಲ್ಲವರು, ಬೆಂಗಳೂರು ಕೋಟೆಯನ್ನು, ಅದಕ್ಕೆಸೇರಿದ ಜಮೀನುಗಳು ಮತ್ತು ಅದರಲ್ಲಿರುವ ಕಟ್ಟಡಗಳು ಇವುಗಳೊಡನೆ ಘನಸಂಪನ್ನರಾದ ಶ್ರೀಮರ್ ಮೈಸೂರು ಮಹಾರಾಜರವರಿಗೆ ವರ್ಗ ಮಾಡಿರುವದರಿಂದ ಮೇಲೆಕಂಡ ಕೋಟೆ, ಅದರ ಜಮೀನುಗಳು ಮತ್ತು ಕಟ್ಟಡಗಳು, ಇವುಗಳ ಮೇಲಣ ಸಂಪೂರ್ಣಾಧಿಕಾರವಂ ಶ್ರೀಮನ್ಮಹಾರಾಜರವರು ಮರಳಿಪಡೆಸಿರುತ್ತಾರೆಂಬದು. ಇದಲ್ಲದೆ ನಾಳೆದಿನ ಮೈಸೂರು ಗವರ್ನಮೆಂಟಿನವರತರಫೆ ಬೆಂಗಳೂರು ಡಿಸ್ಟ್ರಿಕ್ಟು ಡೆಪ್ಯುಟಿ ಕಮಿಷನರ್ ಮೇಜರ್ ಮ್ಯಾಕಿಂಟೈರ್‌ಯವರು, ಸಿವಿಲ್ ವ ಮಿಲಿಟರಿ ಸ್ಟೇಷನಿನ ಅಫಿಷಿಯೇಟಿಂಗ್ ಕಲೆಕ್ಟರ್ ವ ಮ್ಯುನಿಸಿಪಲ್ ಪ್ರೆಸಿಡೆಂಟರಾದ ಮೆಸ್ಯೂಯೆಟಿರ್ಸ್‌ಯವರಿಂದ ಕೋಟೆಗೆ ಸಂಬಂಧಪಟ್ಟ ಕಾಗದ ಪತ್ರಗಳೊಡನೆ ಅದರ ಚಾರ್ಜನ್ನು ತೆಗೆದುಕೊಳ್ಳುವರೆಂತಲೂ, ಈಗ ಕೋಟೆಯಲ್ಲಿರುವ ಕಂಟೋನ್ಮೆಂಟ್ ಪೋಲೀಸ್ ಪಹರೆಯವರನ್ನು ವಾಪಸ್ ಕರೆಯಿಸಿಕೊಳ್ಳುವಂತೆ ಆಫಿಷಿಯೇಟಿಂಗ್ ಡಿಸ್ಟ್ರಿಕ್ಟು ಸೂಪರಿಂಟೆಂಡೆಂಟರಿಗೆ ತಿಳಿಸಲ್ಪಟ್ಟಿದೆಯೆಂತಲೂ ತಿಳಿಯಬರುತಿದೆ. ಕೋಟೆಯ ನಿವಾಸಿಗಳು ಇದುವರಿವಿಗೆ ಶ್ರೀಮನ್ಮಹಾರಾಜ್ಞೀಯವರ ಪ್ರಜೆಗಳೆನಿಸಿಕೊಂಡು ಆ ಸರ್ಕಾರಕ್ಕೆ ಸಕಲವಿಧ ಕಂದಾಯಗಳನ್ನು ಕೊಡುತಲಿದ್ದರು ಈದಿನ ಮೊದಲು ಶ್ರೀಮನ್ಮಹಾರಾಜರವರ ಪ್ರಜೆಗಳಾಗಿರುತ ಸದರೀ ಕಂದಾಯಗಳನ್ನು ಅವರಿಗೇ ಪಾವತೀ ಮಾಡಬೇಕಾದವರಾದರು. ಮುಖ್ಯವಾಗಿ ಮಹಾರಾಜರವರಿಗೆ ಈ ಕೋಟೆಯಿಂದ ಬೇರೆ ಯಾವವಿಧ ಪ್ರಯೋಜನವಿಲ್ಲದಿದ್ದರೂ ಅವರುತಮ್ಮ ಸವಾರ್ ಫೌಜಿನ ಪೈಕಿ ಈ ಊರಲ್ಲಿರತಕ್ಕದ್ದನ್ನು ಸದರೀ ಕೋಟೆಯಲ್ಲಿಟ್ಟಿರುವವಾದರೆ ನೋಡುವದಕ್ಕಾದರೂ ಕೆಲವುಕಾಲಯಥೋಚಿತ ಅಲಂಕಾರವಾಗಿರುವದು.

THE AGOBILA JEYAR OF TRIVELLORE.

ತಿರುವಳ್ಳೂರಲ್ಲಿರುವ ಶ್ರೀ ಅಹೋಬಿಲಮಠದ ಸ್ವಾಮಿಗಳವರು ಕಾಲಗತಿಯನ್ನೈದಿದ್ದನ್ನೂ, ಅವರಿಗೆ ಪ್ರತ್ಯಾಮ್ನಾಯರಾಗಿ ಬೇರೊಬ್ಬರು ಮೊಕರರಾದದ್ದನ್ನೂ, ಅವರ ಮೊಕರರಾತಿಯ ವಿಷಯದಲ್ಲಿ ಮಠದ ಶಿಷ್ಯರಲ್ಲಿ ಭಿನ್ನಾಭಿಪ್ರಾಯಗಳುಂಟಾಗಿ,ಅವರು ತಮ್ಮತಮ್ಮ ಉದ್ದೇಶಗಳಂ ಸಫಲಗೊಳಿಸುವದಕ್ಕಾಗಿ ಮಾಡಿದ ಬಹುವಿಧಪ್ರಯತ್ನಗಳನ್ನೂ, ಅದು ಆಖೈರಲ್ಲಿ ಪರ್ಯವಸಾನವಂ ಹೊಂದಿದಬಗೆಯನ್ನೂ ಈಗ್ಯೆ ಕೆಲವು ವಾರಗಳಹಿಂದೆ ಈ ಪತ್ರಿಕಾಮೂಲಕ ವಿವರವಾಗಿ ತಿಳಿಸಿರುತ್ತೇವೆಯಷ್ಟೆ. ಹೊಸದಾಗಿ ಆಶ್ರಮ ಸ್ವೀಕಾರ ಮಾಡಿಕೊಂಡ ಜೆಯ್ಯರಿಗೆ ಈಗ ಪ್ರಾಪ್ತವಾಗಿರುವ ದುರ್ದಶೆಯಂ ಕುರಿತು ಕಳೆದತಿಂಗಳ ೨೩ನೇ ತಾರೀಖಿನಲ್ಲಿ ತಿರುವಳ್ಳೂರಿಂದ ಒಬ್ಬ ಬಾತಮೀದಾರನು ಮದರಾಸ್ ಸ್ಟಾಂಡರ್ಡ್ ಪತ್ರಿಕೆಗೆ ಇದರಡಿ ಕಂಡಂತೆ ಬರೆದಿರುತ್ತಾನೇನಂದರೆ—"ಈಗ ಆರತಕ್ಕ ಜೆಯ್ಯರನ್ನು ಮೊಕರರ್ಮಾಡಿರುವಂತೆ ಬರೆಯಲ್ಪಟ್ಟಿದ್ದ ಹಿಂದು ಶ್ರೀಮುಖವು ಗತಿಸಿದ ಜೆಯ್ಯರ ಪೆಟ್ಟಿಗೆಯಲ್ಲಿ ದೊರೆತ ಅಂಶವು ಇದುವರಿವಿಗೆ ತಮ್ಮ ಪತ್ರಿಕೆಯನ್ನೋದಿದರತಕ್ಕವರಿಗೆಲ್ಲ ತಿಳದದ್ದಾಗಿಯೇ ಇರುತಿದೆ. ಇಂಡಿಯನ್ ಪೆನಲ್ ಕೋಡ್ ೪೭೧ನೇ ಸೆಕ್ಷನ್ ಪ್ರಕಾರ ಸೃಷ್ಟಿಸಲ್ಪಟ್ಟಿದ್ದೆಂದು ಜೆಯ್ಯರಿಗೆ ತಿಳದಿದ್ದರೂ ಅಂತಾ ಸೃಷ್ಟನ ಕಾಗದವನ್ನು ಅವರು ತಮಗೆ ಸಾಧನವಾಗಿ ಉಪಯೋಗಿಸಿದ ತಕ್ಸೀರ್‌ಬಗ್ಯೆ ಅವರಮೇಲೆ ಕೆಲವರು ಶಿಷ್ಯರು ಈಗ ಕ್ರಿಮಿನಲ್ ಚಾರ್ಜು ತಂದಿರುತ್ತಾರೆ. ಡೆಪ್ಯುಟಿ ಮ್ಯಾಜಿಸ್ಟ್ರೇಟ್ ಮ. ಪಾರ್ಥಸಾರಥಿಯ್ಯಂಗಾರ್ರವರಿಂದ ಪ್ರಥಮವಿಚಾರಣೆ ನಡೆಸಲ್ಪಡುತಲಿದೆ. ಫಿರ್ಯಾದಿಗಳ ಕಡೆ ಮಿ॥ಎ ಸುಬ್ರಹ್ಮಣ್ಯಂಯವರೂ, ಮಠದವರ ತರಫ್ ಮಿ॥ ರಾಮರಾಯರವರೂ,ಮೇಶಗೋಪಾಚಾರ್ಯರವರುಸಹ ಹಾಜರಾಗಿ ಮೊಕದ್ದಮೆಯಂ ನಡೆಸುತಲಿದಾರೆ ಕಳೆದಗುರುವಾರದದಿನಬೆಳಿಗ್ಯೆಫಿರ್ಯಾದಿಗಳ ತರಫ್ ಸಾಕ್ಷಿಗಳ ವಿಚಾರಣೆ ನಡೆಯುವಂತೆ ವ್ಯವಸ್ಥೆಯಾಗಿತ್ತು. ಇದರಿಂದ ಜೆಯ್ಯರವರು ತಮ್ಮ ದೇಶಸಂಚಾರವನ್ನು ಸದ್ಯಃ ನಿಲ್ಲಿಸಿಡುವಂತೆ ಪರಿಣಮಿಸಿದ್ದಲ್ಲದೆ, ವಿಚಾರಣೆಯಕಾಲದಲ್ಲಿ ಜೆಯ್ಯರಾಗಲಿ ಅವರಕಡೆ ಏಜಂಟರಾಗಲಿ ಹಾಜರಾಗುವ ಬಗ್ಯೆ ಅವರ ಏಜಂಟರಿಂದ ೩,೦೦೦ ರೂಪಾಯಿಗಳ ಜಾಮೀನ್ ತೆಗೆದುಕೊಳ್ಳಲ್ಪಟ್ಟಿರುತಿದೆ. ಈ ಮೊಕದ್ದಮೆಯು ಬಹುಶಃ ಫೈಸಲ್ ಆಗಲಿಕ್ಕೆ ಕೆಲವು ವಾರಗಳಕಾಲ ಹಿಡಿಯಬಹುದೆಂದು ತೋರುತಿದೆ. ಆಶ್ರಮ ಪರಿಗ್ರಹ ಕಾಲದಲ್ಲಿ ಅದಕ್ಕಾಗಿ ಸ್ವಾಮಿಗಳು ಅನುಭವಿಸಿದ ಕ್ರಮ ನಷ್ಟಗಳನ್ನು ತೀರಿಸಿಕೊಳ್ಳುವದರೊಳಗಾಗಿ ಅರ್ಥಪ್ರಯುಕ್ತ ಇದೊಂದು ಈಗ ಅವರಿಗೆ ಪ್ರಾಪ್ತವಾಗಿ ಲಾಯರ್‌ಗಳ ದ್ರವ್ಯಾರ್ಜನೆಗೆ ಸಹಾಯಕವಾಗಿರುತಿದೆ,"ಎಂಬದು. ಮುಖ್ಯವಾಗಿ (ವಿಷಯಾಶಾಪಾಶಾತೀತೋ ನಿರಾಲಂಬೋಪರಿಗ್ರಹಃ ॥ಜ್ಞಾನಧ್ಯಾನತಪೋರತ್ನ ಸ್ತಪಸ್ವೀತಿಪ್ರಕೀರ್ತ್ಯತೆ) ಎಂಬದಾಗಿ ತಪಸ್ವಿಯ ಲಕ್ಷಣವು ತಿಳಿಸಲ್ಪಟ್ಟಿರುವದರಿಂದ ಹಾಗೆ ವಿಷಯಾಶಾತೀತನಾಗಿಯೂ, ಉಭಯ ವಿಧ ಪರಿಗ್ರಹ ರಹಿತನಾಗಿಯೂ, ಅಕಳಂಕಾ ಕೃತಿಯುಳ್ಳವನಾಗಿಯೂ, ಜ್ಞಾನಧ್ಯಾನತಪೋನಿರತನಾಗಿಯೂ ಇರುವಂತಾ ಗುರುವಿಗೆ ಏನುಮಾಡಿ ಕಷ್ಟನಿಷ್ಠುರಗಳೆಂದಿಗೂ ಪ್ರಾಪ್ತವಾಗಲಾರವಲ್ಲದೆ, ಅಂತವನ ಮೂಲಕ ಪ್ರಕೃತಿ ಮಂಡಲಕ್ಕೆ ನಿಜವಾದಕ್ಷೇಮ ಪ್ರುಂಟಾಗುವದು, ಹಾಗಿಲ್ಲದಮೇಲೆ ಗುರುಶಿಷ್ಯ ಭಾವವೂ, ವ್ಯಾಪ್ಯವ್ಯಾಪಕ ಭೇದವೂ, ವಂದ್ಯ ನಿಂದ್ಯ ಪರಿಜ್ಞಾನವೂ, ಕೃತ್ಯಾಕೃತ್ಯ ವಿವೇಚನೆಯೂ, ಯುಕ್ತಾಯುಕ್ತ ವಿಮರ್ಶೆಯೂ ಶುದ್ಧಾಂಗ ನಾಶವನ್ನೈದಲಿಕ್ಕೂ, ಇಲ್ಲದವಾದ ಮಂಘಟಿಯಿಸಿಕೊಳ್ಳಲಿಕ್ಕೂ ಕಾರಣವಾಗುತಿದೆ.

MORAL GEMS FROM THE MAHABHARATA.

ಮಹಾಭಾರತ ನೀತಿರತ್ನಾವಳಿ.

VII.—Of Goodness—ಸಜ್ಜನತೆ.
The Hindu Excelsior Series No. IX.
(ಸೆಪಂಬರ್ ೧೫ನೇ ತಾರೀಖಿನ ಪತ್ರಿಕಾ ಶೇಷವು)

ಶ್ಲೋ॥ ಗುರುಶುಶ್ರೂಷಣಂಸತ್ಯಂಅಕ್ರೋಧೋದಾನಮೇವಚ ॥ ಏತಚ್ಚತುಷ್ಟಯಂಬ್ರಹ್ಮನ್‌ಶಿಷ್ಟಾಚಾರೇಷುನಿತ್ಯದಾ॥

ಅ॥ ಎಲೈ ಬ್ರಾಹ್ಮಣನೆ, ಗುರು ಶುಶ್ರೂಷೆ ಮಾಡುವಣ, ಸತ್ಯವಾದವನ್ನೇ ನುಡಿಯುವಣ, ಕ್ರೋಧವಿಲ್ಲದಿರುವಣ, ಈ ನಾಲ್ಕುಗುಣಗಳೂ ಸತ್ಪುರುಷರಲ್ಲಿ ಯಾವಾಗಲು ಕಂಡುಬರುವವು.

ಶ್ಲೋ ॥ ಧನ್ಯಾನಾಮುತ್ತಮಂದಾಕ್ಷ್ಯಂಧನ್ಯಾನಾಮುತ್ತಮಂಶ್ರುತಂ | ಲಾಭಾನಾಂಶ್ರೇಯಮಾರೋಗ್ಯಂಸುಖಾನಾಂತುಷ್ಟಿರುತ್ತಮಂ ॥

ಅ॥ ನಮ್ಮ ಅಪೇಕ್ಷಿತಾಂಶಗಳ ಪೈಕಿ ಶಕ್ತಿಯೇ ಶ್ರೇಷ್ಠವಾದದ್ದು, ಸದ್ವಿದ್ಯೆಯು ಉತ್ತಮವಾದ ಧನವಾಗಿಯೂ, ಶರೀರಾರೋಗ್ಯವು ಸಕಲ ಲಾಭಕ್ಕಿಂತ ಅತಿಶಯವಾದದ್ದಾಗಿಯೂ, ಸೌಖ್ಯಗಳಲ್ಲಿ ಸಂತೃಪ್ತಿಯು ಸರ್ವೋತ್ಕೃಷ್ಟವಾದದ್ದಾಗಿಯೂ ಇರುತಿವೆ.

ಶ್ಲೋ ॥ ನಹಾಯನೈರ್ನಪಲಿತೈರ್ನವಿತ್ತೇನಬಂಧುಭಿಃ ॥ ಋಷಯಶ್ಚಕ್ರಿರೇಧರ್ಮಂಯೋನೂಚಾನಸ್ಸನೋಮಹಾನ್ ॥

ಅ॥ ಲೋಕದಲ್ಲಿ ಮನುಷ್ಯನು ಶ್ರೇಷ್ಠನೆನಿಸಿಕೊಳ್ಳಲಿಕ್ಕೆ ನೆರತ ಕೂದಲುಗಳಾಗಲಿ, ವಿಶೇಷ ಸಂಪತ್ತಾಗಲಿ, ಬಹುಜನ ಬಂಧುಗಳಿರುವಣವಾಗಲಿ ಕಾರಣಗಳಾಗಲಾರವು. ಯಾವನು ಜ್ಞಾನಿಯಾಗಿರುವನೋ ಅವನೇ ಮಹಾತ್ಮನೆಂದು ಋಷಿಗಳು ಧರ್ಮ ನಿರ್ಣಯಮಾಡಿರುತ್ತಾರೆ.

ಶ್ಲೋ ॥ ನತೇನಸ್ಥವಿರೋಭವತಿಯೇನಾಸ್ಯಪಲಿತಂಶಿರಃ | ಬಾಲೋಪಿಯಃಪ್ರಜಾನಾತಿತಂದೇವಾಸ್ಥವಿರಂವಿದುಃ ॥

ಅ॥ ಮುಖ ತಲೆಗಳಲ್ಲಿ ಬಿಳೀಕೂದಲುಗಳಿರುವಮಾತ್ರದಿಂದಲೇ ಯಾವನೂ ದೊಡ್ಡವನೆನಿಸಿಕೊಳ್ಳಲಾರನು. ವಯಸ್ಸಿನೊಳು ಚಿಕ್ಕವನಾದರೂ ವಿಮಲವಾದಜ್ಞಾನವುಳ್ಳವನೇ ನಿಜವಾದಶ್ರೇಷ್ಠನೆಂಬದುದೇವತೆಗಳಅಭಿಪ್ರಾಯವಾಗಿರುತಿದೆ

ಶ್ಲೋ॥ ಅಸಂತೋಷಪರಾಮೂಢಾಃಸಂತೋಷಂಯಾಂತಿಪಂಡಿತಾಃ | ತಸ್ಮಾತ್ಸಂತೋಷಮೆವಹವರದವಸ್ಯಂತಿಪಂಡಿತಾಃ|

ಅ| ಸಾಮಾನ್ಯವಾಗಿ ವಿವೇಕಶೂನ್ಯರಾದವರು ಅಸಂತುಷ್ಟರಾಗಿಯೂ ವಿದ್ವಾಂಸರು ಸಂತೃಪ್ತರಾಗಿಯೂ ಇರುವರು. ಆದದರಿಂದ ಈಲೋಕದಲ್ಲಿ ಸಂತೃಪ್ತಿಯೆಂಬ ಒಂದುಗುಣಮಾತ್ರ ಸರ್ವಪ್ರಾಣಿ ನಿಯತವಾಗಿದ್ದರೆ ಸಾಧಾರಣವಾಗಿಯೆಲ್ಲರೂ ಸುಖ ಸಂತೋಷಗಳನ್ನನುಭವಿಸಬಹುದು.

ಶ್ಲೋ॥ವಿದ್ಯಾಮದೋಧನಮದಸ್ತೃತೀಯೋಭಿಜನೋಮದಃ ಮದಾಏತೇವಲಿಪ್ತಾನಾಮೇತಏವಸತಾಂದಮಾಃ ॥

ಅ ॥ ವಿದ್ಯೆ, ದ್ರವ್ಯ, ಮನೆ, ರೂಪಗಳೆಂಬವು ದುರ್ಜನರಿಗೆ ಮದಕಾರಕವಾಗಿಯೂ, ಸಜ್ಜನರಿಗೆ ದಮಕಾರಕವಾಗಿಯೂ ಇರುವದರಿಂದ ಇವು ಪ್ರಕೃತ್ಯನುಗುಣವಾಗಿ ಬದಲಾಯಿಸುತ ತದನುಸಾರಗಳಾದ ಇತರ ಗುಣಗಳನ್ನುಂಟುಮಾಡುತಲಿರುವವು.

ಶ್ಲೋ | ಅಸಂತುಷ್ಟಾಃಪ್ರಮುಹ್ಯಂತಿಸಂತೋಷಯಾಂತಿಪಂಡಿತಾಃ | ಪ್ರಜ್ಞಾಯಾಮಾನಸಂದಾಃಸುಖನ್ಯಾಯಾಚ್ಛಾರೀರಮುತಿಸವ್ಯೈಃ |

ಅ ॥ ಸಂತೃಪ್ತಿಯಿಲ್ಲದವರ್ಯಾವಾಗಲು, ಮೋಹಾಂಧಕಾರದಲ್ಲಿಸಿಕ್ಕಿಸಂಕಟಪಡುತಲಿರುವರು ವಿವೇಕಿಗಳದನ್ನರಿತು ಅಂತಾ ಅಂಧಕಾರವುಸಂತೃಪ್ತಿಯಿಂದ ನಿವೃತ್ತಿಸಿಕೊಂಡು ಮನೋವ್ಯಾಕುಲವನ್ನೈದದೆ ಸ್ವಶರೀರ ಸುರಕ್ಷಣೆಯಂಮಾಡಿಕೊಳ್ಳುತ ಅನ್ಯರಿಗೆ ಸಹಾಯಕರಾಗಿರುವರು.

Occasional Notes.

ನೈಮಿತ್ತಿಕ ವಿಷಯನ್ಯಾಸ.

Earthquake.—ಅಬ್ಬಾಟಬಾದ್ ಬಳಿ ಈಚೆಗೆ ಭೂಕಂಪವುಂಟಾಗಿ ಅದರ ದೆಸೆಯಿಂದ ಅನೇಕ ಗ್ರಾಮಗಳಿಗೆ ನಷ್ಟವುಂಟಾದದ್ದಲ್ಲದೆ ನೂರುಮಂದಿಗೆ ಜಾಸ್ತಿಯಾಗಿಯೇ ಜನಗಳು ಮೃತಪಟ್ಟರು.

Offer of a reward.—ಗೃಹಕೃತ್ಯನಿರ್ವಹಣೆಯಲ್ಲಿ ಮಿತವ್ಯಯವನ್ನೂ ಪಾರಿಶುದ್ಧ್ಯತೆಯನ್ನೂ ಕುರಿತು ಮಾತಾದೆಗಳಿಗೆ ಉಪಯುಕ್ತವಾಗಿರುವಂತೆ ಉತ್ತಮವಾದ ಒಂದು ಗ್ರಂಥವನ್ನು ಬರೆದವರಿಗೆ ೧,೦೦೦ ರೂಪಾಯಿಗಳು ಇನಾಂ ಕೊಡುವದಾಗಿ ಇಂಡ್ಯ ಗವರ್ನಮೆಂಟಿನವರು ಪ್ರಕಟಿಸಿರುತ್ತಾರೆ.

Damages from floods.—ಅತಿವೃಷ್ಟಿಯಿಂದುಂಟಾದ ಪ್ರವಾಹವು ಬರದ್ವಾನ್ ಡಿಸ್ಟ್ರಿಕ್ಟಿನಲ್ಲಿ ೧೫೦ ಮೈಲಿಗಳ ಘಾಸಲೆಯವರಿಗೆ ಭೂಮಿಯಮೇಲೆ ವ್ಯಾಪಿಸಿತೆಂತಲೂ, ಅದೇಕಾರಣದ ದೆಸೆಯಿಂದ ಮಿಡ್ನಾಪುರ ಡಿಸ್ಟ್ರಿಕ್ಟಿನಲ್ಲಿ ಬಹಳ ನಷ್ಟವುಂಟಾಯಿತೆಂತಲೂ ಕಲ್ಕತ್ತಾ ಗೆಜೆಟ್ ಪತ್ರಿಕೆ ತಿಳಸುತಿದೆ.

A proposal.—ಬ್ರಿಟಿಷ್‌ರಾಜ್ಯದ ಬಂದೋಬಸ್ತಿಯ ಬಗ್ಯೆ, ಕಾಶ್ಮೀರ ದೇಶದ ಮಹಾರಾಜರವರು ೨೫,೦೦೦ ಪ್ಪರಾ ತಯಾರೀ ಸೈನ್ಯವನ್ನು ಜಮ್ಮೂನಲ್ಲಿಟ್ಟಿರುವಂತೆಯೂ, ಸೀಲಕೋಟಿನಲ್ಲಿರುವ ಬ್ರಿಟಿಷ್ ಸೇನೆಯೊಡನೆ ಅವುಗಳನ್ನು ತಯಾರ್ಮಾಡಬೇಕೆಂತಲೂಹಿಂದುವಿಧಯೋಚನೆಮಾಡಿರುವಂತೆ ಪಯೋನಿಯರ್ ಪತ್ರಿಕೆ ಹೇಳುತಿದೆ.

Arrival of the Raja of Jam Khandi ಈಗ ಬಳ್ಳಾರಿಯಲ್ಲಿಬಿಜಮಾಡಿರುವ ಶ್ರೀ ಶೃಂಗೇರಿಸ್ವಾಮಿಗಳವರ ಸಂದರ್ಶನಾರ್ಥವಾಗಿ ಜಮಖಂಡಿ ರಾಜರಾದ ಶ್ರೀರಾಮಚಂದ್ರರಾವ್ ಅಪ್ಪಾಸಾಹೆಬ್ ಬಹದೂರ್‌ಯವರು ಕಳೆದತಿಂಗಳ ೪ನೇ ತಾ| ಸಾಯಂಕಾಲ ಅಲ್ಲಿಗೆ ದಯಮಾಡಿಸಿದಾರನೇ ದಿನವೆಲ್ಲ ಬಳ್ಳಾರಿಯಲ್ಲಿ ಶ್ರೀಯವರಿಗೆ ಸತ್ಕಾರವನ್ನುಮಾಡಿ ಮೂರನೇದಿನ ಪ್ರಾತಃಕಾಲ ಮರಳಿ ತಮ್ಮರಾಜ್ಯವನ್ನು ಕುರಿತು ತೆರಳಿದರು. ರಾಜರವರು ಶ್ರೀಗಳವರಿಗೆ ಬಹು ಬೆಲೆಯುಳ್ಳ ಬೆಳ್ಳಿ ಬಂಗಾರ ಸಾಮಾನುಗಳನ್ನು ಅರ್ಪಿಸಿದರಂತೆ.

LOCAL AND PROVINCIAL NEWS.

ಸ್ಥಳದೇಶಮತ್ತು ತಾಲ್ಲೂಕುಜಾತಿವೃತ್ತಾಂತಗಳು.

The Representative Assembly.—ಮಹಾರಾಜಶ್ರೀ ದೊಡ್ಡ ವೆಂಕಟರಮಣಶೆಟ್ಟರನ್ನು ಅಣ್ಣಯ್ಯಶೆಟ್ಟರನ್ನೂ ಇಲ್ಲಿನ ಮ್ಯುನಿಸಿಪಲ್ ಮೆಂಬರುಗಳು ತಮ್ಮ ತರ್ಫೆ ಪ್ರತಿನಿಧಿಗಳನ್ನಾಗಿ ಚುನಾಯಿಸಿ ದಸರಾ ದರ್ಬಾರಿಗೆ ಕಳುಹಿಸುವವರಾಗಿದಾರೆಂದು ಕೇಳುತ್ತೇವೆ.

Sir Oliver St. John.—ಈ ಸಂಸ್ಥಾನದ ರೆಸಿಡೆಂಟರಾಗಿ ನೇಮಕರ್ಮಾಡಲ್ಪಟ್ಟಿರುವ ಕರ್ನಲ್ ಸರ್. ಆಲಿವರ್ ಸೆಂಟ್ ಜಾನ್‌ಯವರು ಇಲ್ಲಿಗೆ ಬರುವದಕ್ಕೆ ಪೂರ್ವಭಾವಿಯಾಗಿಯೇ ಮೂರುತಿಂಗಳ ಪ್ರಿವಿಲೇಜ್ ರಜಾಪಡೆದು ಇಂಗ್ಲಾಂಡಿಗೆ ಹೋಗಿ ಬರುವರೆಂಬದಾಗಿಯೂ, ಅದುವರಿವಿಗೆ ಈಗಿರುವವರೇ ಆಕ್ಟಿಂಗ್ ತರೀಕೆ ಕೆಲಸ ನೋಡುತಲಿರುವರೆಂತಲೂ ಮದರಾಸು ಪತ್ರಿಕೆಯೊಂದು ತಿಳಿಸುತಿದೆ.

The opening of a pony breeding.—ಕುದುರೆ ತಳ್ಳಿಗಳನ್ನು ವೃದ್ಧಿಪಡಿಸುವಬಗ್ಗೆ ತುಮಕೂರಲ್ಲಿ ಒಂದು ಸಣ್ಣ ಠಲಾಯಿ ಏರ್ಪಾಡಾಗಿರುವಂತೆಯೂ, ಅಮೃತಮಹಲ್ ಇಲಾಖಾ ಆಫಿಸರಾದ ಕರ್ನಲ್ ಜೇ ಸಾಹೇಬರ ಸಾಕ್ಷಾದ್ವಿಚಾರಣೆಯಲ್ಲಿ ಸದರೀ ಠಲಾಯಿಯ ಕೆಲಸಗಳು ನಡೆಸಲ್ಪಡುವವೆಂತಲೂ, ಇದು ಲಾಭಕರವೆಂದು ಭಾವಿಸಿ ಮೈಸೂರು ಗವರ್ನಮೆಂಟಿನವರು ಮಂಜೂರ್ಮಾಡಿರುತ್ತಾರೆ ತಲೂ ತಿಳಿಯಬರುತಿದೆ. ಇದರ ಪ್ರಯೋಜನಮಾತ್ರ ಸ್ಪಷ್ಟವಾಗಲಿಲ್ಲವು.

Salt manufacture.—ಮೈಸೂರು ಸರ್ಕಾರದವರಿಗೆ ದರ್ಯಾ ನಮಕ್ ಮೂಲಕವಾದ ಆಯತಿಯಿಲ್ಲದಿದ್ದಾಗ್ಯೂ ಬ್ರಿಟಿಷ್‌ರಾಜ್ಯದ ಸರಹದ್ದಿಗೆ ೫ ಮೈಲಿಗಳೊಳಗಾಗಿ ಮಟ್ಟೀನಮಕ್ ತಯಾರ್ಮಾಡಿಕೊಳ್ಳಬಹುದಾದ ಸ್ವಾತಂತ್ರ್ಯವು ಕೊಡಲ್ಪಟ್ಟಿರುವದರಿಂದ, ಅವರು ಉಪ್ಪಿನವೋಳೆಗಳ ಮೇಲೆ ತೀರ್ವೆ ವಸೂಲ್ಮಾಡುತಲಿರುವದು ಪ್ರಸಿದ್ಧವಾಗಿದೆಯಷ್ಟೆ. ಬ್ರಿಟಿಷ್‌ರಾಜ್ಯಕ್ಕೆ ಐದು ಮೈಲುಗಳೊಳಗಾಗಿ ನಮಕ್ ತಯಾರ್ ಮಾಡಲಾಗದೆಂದು ಕಂಡಿತಾ ನಿಷೇಧಿಸಲ್ಪಟ್ಟದ್ದರೂ ಈ ನಿಬಂಧನೆಯನ್ನು ಉಲ್ಲಂಘಿಸಿ ಕೆಲವರು ಅಕ್ರಮವಾಗಿ ನಮಕ್ ತಯಾರ್ಮಾಡಿದ ವಿಷಯವು ಮೈಸೂರು ಸರ್ಕಾರದವರ ತಿಳುವಳಿಕೆಗೆ ಈಚೆಗೆ ಬರಲು, ಅವರು ಡಿಸ್ಟ್ರಿಕ್ಟ್ ಡೆಪ್ಯುಟಿ ಕಮಿಷನರ್‌ಗಳಿಗೆಲ್ಲ ಇದು ಕುರಿತು ಖಂಡಿತವಾದ ಹುಕುಂ ಕೊಟ್ಟಿರುತ್ತಾರೆಂದು ಕೇಳುತ್ತೇವೆ.

The Resident's Treasury.—ಸಿವಿಲ್ ವ ಮಿಲಿಟರಿಸ್ಟೇಷನ್ ಸರ್ಕಾರದ ಸ್ಯಾನಿಟರಿ ಇಂಜಿನೀರಾದ ಮ|| ಅಬ್ದುಲ್ ರಹಿಮಾನ್‌ರವರು ಮೊನ್ನೇದಿನ ರೆಸಿಡೆಂಟ ಖಜಾನೆಯ ಚಾರ್ಜನ್ನು ತೆಗದುಕೊಂಡವರಲ್ಲದೆ ಇವರು ಟ್ರೆಜರಿ ಆಫಿಸರರಾಗಿಯೂ ಸಬ್ ರಿಜಿಸ್ಟ್ರಾರಾಗಿಯೂ ಸಹ ಇರುವಂತೆ ಏರ್ಪಾಡಾಗಿರುವದಾಗಿ ಕೇಳುತ್ತೇವೆ. ಇವರ ತಲಬ್ ವಿಷಯ ಸಂದಿಗ್ಧವಾಗಿದೆ. ಮತ್ತು ಈಗಿರುವ ಟ್ರೆಜರಿ ಆಫಿಸರರಿಗೆ ಪೆನ್‌ಷನ್ ಕೊಡುವಂತೆ ತೀರ್ಮಾನವಾಗಿರುವಂತೆಯೂ, ಕೆಲವರು ನೌಕರರಿಗೆ ಕೂಡ ಪೆನ್‌ಷನ್ ಕೊಡಲ್ಪಡುವವೆಂತಲೂ, ಇನ್ನೂ ಕೆಲವರು ಮದರಾಸಿಗೆ ಕಳುಹಿಸಿಕೊಳ್ಳಲ್ಪಡುವರೆಂತಲೂ ಒಳದೇಶದ ಇಂಗ್ಲಿಷ್ ಪತ್ರಿಕೆಯೊಂದು ತಿಳಿಸುತಿದೆ. ಕಡೆಯಲ್ಲಿ ತಿಳಿಸಿದ ವಿಷಯ ಮಾತ್ರ ಎಷ್ಟರಮಟ್ಟಿಗೆ ನಿಜವೋ ನಾವರಿಯೆವು.

Col. A. C. Hay.—ಶ್ರೀಮನ್ಮಹಾರಾಜರವರ ಮಿಲಿಟರಿ ಸೆಕ್ರೆಟರಿಯವರಾದ ಕರ್ನಲ್ ಹೇಯವರು ದಸರಾ ದರ್ಬಾರ್ ಪೂರೈಸಿದಬಳಿಕ ರಜಾಮೇಲೆ ಇಂಗ್ಲಾಂಡಿಗೆ ಹೋಗುವರೆಂತಲೂ ಬಹುಶಃ ಅವರು ತಮ್ಮ ಕೆಲಸದಿಂದ ನಿವೃತ್ತರಾಗಲಿಕ್ಕೆ ಇದೇ ಪ್ರಥಮ ಸೂಚನೆಯೆಂತಲೂ ಅವರ ಕೆಲಸವನ್ನು ಬೆಂಗಳೂರು ಡಿ| ಡೆಪ್ಯುಟಿ ಕಮಿಷನರ್ ಮೇಜರ್ ಮ್ಯಾಕಿಂಟೈರ್‌ಯವರು ನೋಡುತಲಿರುವರೆಂತಲೂ, ಅವರ ಕೆಲಸವನ್ನು ಕಡೂರು ಡಿಸ್ಟ್ರಿಕ್ಟ ಡೆಪ್ಯುಟಿ ಕಮಿಷನರ್ ಮೆ|| ಮೆಯಿಕ್‌ಜಾನ್‌ಯವರು ನೋಡುವರೆಂತಲೂ ತಿಳಿಯಬರುತಿದೆ.

The weather.—ಕಳೆದ ವಾರದಲ್ಲಿ ಪ್ರಾಯಶಃ ಪ್ರತಿದಿನ ರಾತ್ರಿಯಲ್ಲಿ ಅಲ್ಪವಾಗಿಯೂ ಕದಾಚಿತ್ ಬಲವಾಗಿಯೂ ಮಳೆ ಬೀಳುತಲಿತ್ತು. ತಾಲ್ಲೂಕು ಜಾತ್ ರಿಪೋರ್ಟುಗಳ ಮೂಲಕ ಪ್ರಾಯಶಃ ಎಲ್ಲಕಡೆಯಲ್ಲೂ ಮಳೆ ಆದಂತೆ ತಿಳಿಯಬರುತಿದೆ. ರಾಗೀಪೈರು ಸಾಮಾನ್ಯವಾಗಿ ಒಳ್ಳೆಯ ಸ್ಥಿತಿಯಲ್ಲಿದೆ. ರಾಗಿಯೊಂದುವಿನಾ ಇತರ ಪದಾರ್ಥಗಳ ಧಾರಣೆಗಳು ಏರಿಕೆಯಾಗಿಯೇ ಇವೆ. ಪಶುರೋಗಗಳು ಅದ್ಯಾಪಿ ತಪ್ಪಲಿಲ್ಲವು.

A lecture.—ಅಮೆರಿಕಾ ಮೊದಲಾದ ಅನ್ಯದೇಶಗಳಿಗೆ ಹೋಗಿ ವೈದ್ಯಶಾಸ್ತ್ರಾಭ್ಯಾಸ ಮಾಡಿ ಡಾಕ್ಟರ್ ಪರೀಕ್ಷೆ ಕೊಟ್ಟು ಬಂದ ಆನಂದಬಾಯಿ ಜೋಷಿ ಯೆಂಬಾಕೆಯವರ ಪತಿಯಾದ ಮ. ಗೋಪಾಲವಿನಾಯಕ್ ಜೋಷಿಯೆಂಬವರು ಈಗ ಇಲ್ಲಿಗೆ ಬಂದಿರುತ್ತಾರಾಗಿ ಸದರೀಯವರು ಇಲ್ಲಿನವರು ಕೆಲವರ ಪ್ರಾರ್ಥನೆಯಮೇಲೆ ನಾಳೆಯ ದಿನ ಸಾಯಂಕಾಲ ಇಲ್ಲಿನ ಗವರ್ನಮೆಂಟ್ ಬಾಲಿಕಾ ಪಾಠಶಾಲೆಯೊಳು, ದೇಶ ಸಂಚಾರದಿಂದ ತಮಗೆ ಉಂಟಾದ ಅನುಭವವನ್ನು ಕುರಿತು ಉಪನ್ಯಾಸ ಮಾಡುವರು.

A rumour.—ಮೈಸೂರು ಚೀಫ್‌ಕೋರ್ಟಿನಲ್ಲಿ ನಾಲ್ಕನೇ ಜಡ್ಜಿಯವರೊಬ್ಬರು ನೇಮಕರಾಗುವರೆಂತಲೂ, ಅದು ಮೆ|| ಮೀನಾಕ್ಷಿಅಯ್ಯರವರಿಗೆ ಕೊಡಲ್ಪಡಬಹುದೆಂತಲೂ, ಈಗ್ಯೆ ಒಂದುತಿಂಗಳ ಮೊದಲು ಬಲವಾದ ಪ್ರವಾದ ಒಂದು ಸರ್ವತ್ರ ಹರಡಿತೋರಿದೆ. ಇದಕ್ಕೆ ಸೇರಿದಂತೆ ಈಚೆಗೆ ಮತ್ತೊಂದು ಅಂಕುರಿಸಿದೆ ಯೇನಂದರೆ:—ಈಪೂರಲ್ಲಿರುವ ಸಬ್‌ಜಡ್ಜಿಯವರ ಕೋರ್ಟಿಗೆ ವಜಾಮಾಡಿ ಮೆ|| ಕೃಷ್ಣಯ್ಯರವರನ್ನು ಮೈಸೂರು ಸಬ್‌ಜಡ್ಜಿ ಕೆಲಸಕ್ಕೆ ವರ್ಗಮಾಡಿ ಮೆ|| ಶ್ರೀನಿವಾಸಯ್ಯಂಗಾರ್ರವರನ್ನು ರೆವಿನ್ಯೂ ಖಾತೆಯಲ್ಲಿ ಜನರಲ್ ಅಸಿಸ್ಟೆಂಟ್ ಕಮಿಷನರಾಗಿ ನಿಯಮಿಸಿ, ಈಪೂರಲ್ಲಿ ಪೂರ್ವದಂತೆ ಒಂದು ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟನ್ನು ಸ್ಥಾಪಿಸಿ ಈಗ ಸಬ್‌ಜಡ್ಜಿಯವರಿಂದ ದರ್ಯಾಫ್ತುಮಾಡಲ್ಪಡತಕ್ಕ ಅಸಲ್ ಮೊಕದ್ದಮೆಗಳನ್ನೆಲ್ಲ ಚೀಫ್‌ಕೋರ್ಟ ಜಡ್ಜಿಗಳಲ್ಲೊಬ್ಬರು ವಿಚಾರಣೆಮಾಡಿ ಫೈಸಲ್ಮಾಡುವಂತೆ ಏರ್ಪಾಡು ನಡೆಯುವದೆಂಬದು. ಇದು ಎಂದುವೇಳೆಯಾಕೆ ನಿಜವಾಗಬಾರದು

The Young Mens' Union—ಕಳೆದ ಶನಿವಾರದದಿನ ಸಾಯಂಕಾಲ ಸುಮಾರು ಆರು ಘಂಟೆಗೆ ಯಂಗ್‌ಮೆನ್ಸ್ ಯೂನಿಯನ್ ಎಂಬ ಹೆಸರಿನಿಂದ ಈ ಪೂರು ತುಳಸೀತೋಟದಲ್ಲಿ ಇಲ್ಲಿನ ವಿದ್ಯಾರ್ಥಿಗಳು ಕೆಲವರು ಸೇರಿ ಮಾಡಿಕೊಂಡಿರುವ ಸಭೆಯು ೫ನೇ ಸಂವತ್ಸರದ ರಿಪೋರ್ಟನ್ನು ಓದುವದಕ್ಕಾಗಿ ಇಲ್ಲಿನ ಮ್ಯುನಿಸಿಪಲ್ ಸ್ಕೂಲ್ ಸೌಧದಲ್ಲಿ ಸಭೆಸೇರಿ, ಮೆ. ವಿ. ಎಸ್. ನರಸಿಂಹಯ್ಯಂಗಾರ್ರವರು ಅಗ್ರಾಸನವು ವಹಿಸಿದರು. ರೆವರೆಂಡ್ ಮೆ. ಸ್ಲೇಟರ್‌ಯವರು ಈಶ್ವರ ಸೃಷ್ಟಿಗೆ ಒಳಪಟ್ಟ ಮಾನವರೆಲ್ಲರಿಗೂ ತಾಯಿತಂದೆಗಳೊಬ್ಬರೇಯಾಗಿರುವದರಿಂದ ಎಲ್ಲರೂ ಸೋದರ ಭಾವವುಳ್ಳವರಾಗಿರ ತಕ್ಕದ್ದೆಂತಲೂ, ಜಾತಿ ಮತ ತಾರತಮ್ಯಗಳೆಲ್ಲವು ಕಲ್ಪಿತಗಳೆಂತಲೂ, ಸ್ವರೂಪತಃ ಅಂತಾ ತಾರತಮ್ಯದಿಂದ ಮನುಷ್ಯನಿಗೆ ಯಾವ ಪ್ರಯೋಜನವೂ ಇಲ್ಲವೆಂದು ವಕ್ಕಣೆ ಉಪನ್ಯಾಸಮಾಡಿದರು. ಅದರ ಮೇಲೆ ಪ್ರೆಸಿಡೆಂಟರವರು, ಈ ವಿಷಯದಲ್ಲಿ ಅಭಿಪ್ರಾಯಗಳು ಭಿನ್ನಗಳಾಗಿರುವದರಿಂದ ಅದು ಕುರಿತು ವಿಚಾರಿಸುವದಕ್ಕೆ ಇದು ಅಸಮಯವೆಂದು ಹೇಳಿದರು. ತರುವಾಯ ಸಭೆ ಬರಖಾಸ್ತಾಯಿತು.

H. H. the Maharaja.—ಶ್ರೀಮನ್ಮಹಾರಾಜರವರಿಗೆ ಬರುತಬರುತ ಸ್ವಪ್ರಜಾನುರಾಗವೂ, ಸ್ವದೇಶ ಕ್ಷೇಮಚಿಂತನೆಯೂ, ಅಧಿಕಾರ ನಿರ್ವಹಣ ವಿಚಾರವೂ ಅಧಿಕವಾಗುತ ಬರುತಿದೆಂಬದು ಅವರ ವರ್ತನೆಗಳಿಂದ ತಿಳಿದುಕೊಳ್ಳಲಿಕ್ಕೆ ನಾವು ಸಂತೋಷಿಸುತ್ತೇವೆ. ಮಹಾರಾಜರವರ ಸವಾರಿಯು ಚಿತ್ತೈಸಿದ ಮತ್ತು ಚಿತ್ತೈಸುವ ಸ್ಥಳಗಳಲ್ಲಿ ಅಲ್ಲಿನ ಅಧಿಕಾರಿಗಳ ಮೂಲಕ ಪ್ರಜೆಗಳ ಕ್ಷೇಮಲಾಭಗಳನ್ನೂ ಮಳೆ ಬೆಳೆಗಳ ಸ್ಥಿತಿಯನ್ನೂ ಆದರದೊಡನೆ ವಿಚಾರಿಸುತ ಪ್ರಜೆಗಳ ಅಹವಾಲ್‌ಗಳನ್ನು ಸ್ವತಃ ಕೇಳಲಿಕ್ಕೆ ಪ್ರಾರಂಭಿಸಿದಾರೆಂದು ಹೇಳಬಹುದಾಗಿದೆ. ಶ್ರೀಮನ್ಮಹಾರಾಜರವರ ಪರಾಮರಿಕೆಯು ಮೊದಲಿಂದಲೂ ಹೀಗೆಯೇ ಇದ್ದದ್ದಾದರೆ ಅವರ ಪ್ರಜೆಗಳ ಭಾಗ್ಯ ಸಂತೋಷಗಳು ವೃದ್ಧಿಯನ್ನೈದುವವು. ಹೀಗೆ ದೇಶದಸ್ಥಿತಿಯನ್ನು ಅಧಿಕಾರಿಗಳ ಮೂಲಕ ತಿಳಿದುಕೊಳ್ಳುವದಲ್ಲದೆ, ಸಾಕ್ಷಾತ್ತಾಗಿ ಪ್ರಜೆಗಳಮೂಲಕವೂ ತಿಳಿದುಕೊಂಡರೆ ನಿಜವಾದ ಸ್ಥಿತಿಯು ಹೊರಪಟ್ಟು ವಿಶೇಷ ಮೇಲುಂಟಾಗಬಹುದೆಂದೆಣಿಸುತ್ತೇವೆ.

Caste in the Mysore Police Force ಈ ಸಂಸ್ಥಾನದ ಒಟ್ಟು ಪೋಲೀಸ್ ನೌಕರಿಯಲ್ಲೀಗ ೮೫೩ ಜನ ಆಫಿಸರ್‌ಗಳೂ ೪,೨೯೧ ಮಂದಿ ಜವಾನರೂ ಇರುತಲಿದಾರೆ. ಇವರಪೈಕಿ

	ಆಫಿಸರ್‌ಗಳು	ಜವಾನರು
ಬ್ರಾಹ್ಮಣರು	೧೨೫	೩೧೧
ಇತರಜಾತಿಯವರು	೧೯೩	೨೦೮೨
ಮುಸಲ್ಮಾನರು	೧೩೮	೧೬೯೩

ಈ ರೀತಿಯಾಗಿರುತಲಿದಾರೆ. ಆಫಿಸರ್‌ಗಳ ದರ್ಜೆಯಲ್ಲಿರುವ ಮುಸಲ್ಮಾನರ ಸಂಖ್ಯೆಯು ಜವಾನ್ ಹುಕುಂಗಳಲ್ಲಿರುವದಕ್ಕೆ ಸರಿಯಾಗಿಯೇ ಇರುತಿದೆ. ಪರಂತು ಬ್ರಾಹ್ಮಣ ಆಫಿಸರ್‌ಗಳ ಸಂಖ್ಯೆಯು ಇತರ ಜಾತಿಯವರಿಗೆ ಗೊತ್ತಾಗಿರುವ ಸಂಖ್ಯೆಗಿಂತ ಅಧಿಕವಾಗಿರುತಿದೆಂದು ಒಳದೇಶದ ಸ್ಪೆಕ್ಟೇಟರ್ ಪತ್ರಿಕೆ ತಿಳಿಸುತಿದೆ. ಇದನ್ನು ಸರಿಮಾಡುವ ಸಾಮರ್ಥ್ಯವು ಇನ್ಸ್ಪೆಕ್ಟರ್ ಜನರಲ್ಲರವರಿಗಿರುವಾಗ್ಯೆ ಇದಕ್ಕಾಗಿ ಸ್ಪೆಕ್ಟೇಟರ್ ಪತ್ರಿಕೆ ಯಾತಕ್ಕೆ ಚಿಂತಿಸಬೇಕು ? ಮ|| ಡಿಕ್ಕೆನ್ಸಿಯವರು ಈ ದೇಶಕ್ಕೆ ಹಳಬರಲ್ಲಿ ಹಳಬರಾದದರಿಂದ ಅವರಿಗೆ ಪ್ರತಿ ಜಾತಿಯವರ ಶಕ್ತಿ ಯುಕ್ತಿಗಳಿನ್ನಂತರವು ತಿಳಿಯದಿರಲಿಲ್ಲವು. ಆದದರಿಂದ ಪೋಲೀಸ್ ಇಲಾಖೆಕ್ಕೆ ಇವರು ಸಮರ್ಥರೆಂಬ ತಾತ್ಪರ್ಯ ಪ್ರಬಲವಾಗಿ ಇವರು ಅದ್ಯಾಪಿ ನೌಕರಿಯಲ್ಲಿ ಉಳಿಸಿಕೊಳ್ಳಲ್ಪಟ್ಟಿದಾರೆ.

Objecting to a grog shop.—ಈ ಪೂರು ಪಟ್ಟಣಕ್ಕೆ ಸೇರಿದಂತಿರುವ ಅಗ್ರಹಾರದಲ್ಲಿ ಈಚೆಗೆ ಒಂದು ಶರಾಬ್ ದುಕಾನ್ ಇಡಲ್ಪಡಲು ಅದು ಬಹಳ ಹೇಸಿಕೆಯಾಗಿರುವದರಿಂದ ಅದು ತೆಗದುಹಾಕಿಸಬೇಕೆಂದು ಸದರೀ ಪ್ರದೇಶದ ನಿವಾಸಿಗಳೆಲ್ಲರೂ ಸೇರಿ ಈಪೂರು ಅಮಲ್ದಾರರಿಗೆ ಅರ್ಜಿ ಬರೆದುಕೊಂಡಿರುತ್ತಾರೆಂದು ತಿಳಿಸಿ ಅದರಮೇಲೆ ಸ್ಪೆಕ್ಟೇಟರ್ ಅಭಿಪ್ರಾಯ ಪಡುತಿದೆ ಯೇನೆಂದರೆ—ನವೀನ ನಾಗರಿಕತೆಗೆ ಅಭಿಮಾನಸ್ಥಾನವಾದ ಈಪೂರಿನ ಸಮೀಪದೊಳಿರುತಲಿರುವ ಕೆಲವು ಜಾತಿಯವರು, ಅಭಿವೃದ್ಧಿಯಂ ಪಡೆಯದೆ ಒಂದೇರೀತಿ ಮೌಢ್ಯದಶೆಯೊಳಿರುತಾರೆಂಬದಂ ಮೇಲ್ಕಂಡ ವಿಷಯವು ಚನ್ನಾಗಿ ಸೂಚಿಸುತಿದೆ. ಅಭಿವೃದ್ಧಿಗೆ ಜೀವಿತ ಲಾಂಛನಾ ರೂಪವಾಗಿರುವ ಶರಾಬ್ ಬಿಕರೀದಾರನನ್ನೂ ಅವನಿರುವ ಪ್ರದೇಶವನ್ನೂ ಪ್ರಶಂಸಿಸಲಿಕ್ಕೆ ಬದಲು ಜಿಗುಪ್ಸೆಗೊಳ್ಳುವಂತೆ ಪರಿಣಮಿಸಿದ್ದು ಈಗಿನ ಕಾಲದಲ್ಲಿ ಹೇಳನಾಸ್ಪದವಾಗಿದೆ. ಅಮಲ್ದಾರ್ ಮೆ|| ಶೀತಾರಾಮಯ್ಯನವರು ಸ್ವತಃ ಸದರೀ ಪ್ರದೇಶವನ್ನು ಅಜಮಾಯಿಷೀ ಮಾಡುವಬಗ್ಗೆ ಶರಾಬ್ ದುಕಾನಿರುವ ಸ್ಥಳಕ್ಕೆ ಹೋಗಿದ್ದರು. ಅವರು ನಿಮ್ಮ ಅಹವಾಲಿಗಳನ್ನು ಲಿಖಿತಮೂಲಕ ತಿಳಿಯಪಡಿಸಿಕೊಳ್ಳಿರೆಂದು ಅಲ್ಲಿನವರಿಗೆ ತಿಳಿಸಿದರಂತೆ. ಮುಖ್ಯವಾಗಿ ನಾವು ಈಗ ಹತ್ತೊಂಬತ್ತನೆಯ ಶತಮಾನದ ಉತ್ತರಾರ್ಧಾಂತದಲ್ಲಿರುತ, ವಿದ್ಯಾವೈಲಕ್ಷಣ್ಯವುಳ್ಳವರೆನಿಸಿಕೊಂಡು ಕೇಂದ್ರ ಶರಾಬ್ ದುಕಾನುಗಳನ್ನು ಜಿಗುಪ್ಸೆಯೊಡನೆ ನೋಡಿದಬಳಿಕ ಮತ್ತೇನಿದೆ? ಎಂಬದು—ವೈಲಕ್ಷಣ್ಯಕ್ಕೆ ಮದ್ಯಪಾನ ಮಾಂಸಾಶನವೂ, ಪರಸತಿಗೆ ಅನ್ಯಜಾತೀಯ ಸಂಬಂಧವೂ, ಮುಖ್ಯ ಲಕ್ಷಣಗಳೆಂಬ ತಿಳುವಳಿಕೆಯು ಈ ಕಾಲದಲ್ಲಿ ಪ್ರಾಯಶಃ ಸಾರ್ವಜನೀನವಾದದ್ದಾಗಿರುತಿದೆ. ಹಾಗಿದ್ದಾಗೂ ನಾಗರಿಕತೆ ವಿಹೀನರು ಕೆಲವರು, ಮೇಲೆ ಕಂಡಂತೆ ಅಲ್ಲಿಯಲ್ಲಿ ಇನ್ನೂ ಇರುತಲಿರುವದಕ್ಕಾಗಿ ನಿಜವಾಗಿ ನಾವು ಚಿಂತಿಸಬೇಕಾದದ್ದು. ಸರ್ವವ್ಯಾಪಕವಾದ ಕಾಲಗತಿಯು ಎಲ್ಲರನ್ನು ಒಂದೇಸಮನಾಗಿ ಮಾಡುವದಕ್ಕೆ ಶಕ್ತವಾಗಿರುವದರಿಂದ ಬ್ರಿಟಿಷರವರ ಆಳ್ವಿಕೆಯಲ್ಲಿ ಈ ತಾರತಮ್ಯವನ್ನು ಬಹುಕಾಲ ನೆಲೆಗೊಂಡಿರಲಾರದಾಗಿ ಸ್ಪೆಕ್ಟೇಟರ್ ಪತ್ರಿಕೆಯ ಧೈರ್ಯವಾಗಿರಬಹುದು.

THE MYSORE GAZETTE.

ಮೈಸೂರು ಗೆಜೆಟ್.

ಶ್ರೀಮನ್ಮಹಾರಾಜ ರಾಜಶೇಖರ್ ಬಹದೂರರವರ ದಿವಾನರವರಿಂದ ಹೊರಹೊರಟಾದ ಇಸ್ತಿಹಾರ್‌ನಾಮೆಗಳು.

ಮೊಕ್ಕಾಂ ನಂ. ೧೧೯೩—ತಾರೀಖ್ ೧೮.—ಅತ್ತಿಕುಪ್ಪೆ ತಾಲ್ಲೂಕ್ ಅಮಲ್ದಾರ್ ಕೃಷ್ಣಮೂರ್ತಿರಾಯರವರಿಗೆ ೧೮೮೮ನೇ ಇಸವಿ ಸೆಪ್ಟೆಂಬರ್ ೪ನೇ ತಾರೀಖ್ ಲಾಗಾಯಿತು, ಅಥವಾ ಅವರು ಉಪಯೋಗಿಸಿಕೊಳ್ಳುವ ತಾರೀಖ್ ಮೊದಲು ಎರಡುತಿಂಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿರುತಿದೆ.

ನಂ. ೧೩೧. ತಾ|| ೨೦ನೇ ಸೆಪ್ಟೆಂಬರ್ ೧೮೮೮ ಹಿರಿಯೂರ್ ತಾಲ್ಲೂಕ್ ಅಮಲ್ದಾರ್ ಸುಬ್ಬರಾಯ ನಾಯುಡರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖ್ ಮೊದಲು ೧೫ ದಿನಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿರುತಿದೆ. ಚಿತ್ರದುರ್ಗ ಡಿಸ್ಟ್ರಿಕ್ಟ್ ಆಫೀಸ್ ಹೆಡ್ ಅಕೌಂಟೆಂಟ್ ಚೌಡಯ್ಯನವರು, ಸುಬ್ಬರಾಯನಾಯುಡರ ಗೈರ್‌ಹಾಜರಿ ಕಾಲದಲ್ಲಿ ಅಥವಾ ಮತ್ತೊಂದು ಹುಕುಂ ಕೊಡಲ್ಪಡುವತನಕ ಹಿರಿಯೂರುತಾಲ್ಲೂಕು ಅಮಲ್ದಾರ್ ವ ಮೂರನೇಕ್ಲಾಸ್ ಮ್ಯಾಜಿಸ್ಟ್ರೇಟರಾಗಿ ಆಕ್ಟಿಂಗ್ ತರೀಕೆ ನೇಮಕರ್ಮಾಡಲ್ಪಟ್ಟಿರುತ್ತಾರೆ.

ನಂ. ೧೩೦—ಚಿಕ್ಕನಾಯಕನಹಳ್ಳಿ ತಾ|| ಅಮಲ್ದಾರ್ ಶ್ರೀಕಂಠಯ್ಯನವರಿಗೆ ಕಳೆದತಿಂಗಳ ೩೧ನೇ ತಾರೀಖ್ ೧೨೦ನೇ ನಂಬರುಳ್ಳ ಇಸ್ತಿಹಾರ್‌ಮೂಲಕ ಕೊಡಲ್ಪಟ್ಟಿದ್ದ ರಜಾವನ್ನು ಅವರು ಉಪಯೋಗಿಸಿಕೊಳ್ಳದ್ದರಿಂದ ಅದು ಇದರಿಂದ ರದ್ದುಮಾಡಲ್ಪಟ್ಟಿರುತಿದೆ.

ನಂ. ೧೩೩ ತಾ|| ೨೪ನೇ ಸೆಪ್ಟೆಂಬರ್ ೧೮೮೮. ತುಮಕೂರು ಡಿಸ್ಟ್ರಿಕ್ಟ್ ಗುಬ್ಬಿ ತಾಲ್ಲೂಕ್ ಅಮಲ್ದಾರ್ ವೆಂಕಟರಮಣರವರಿಗೆ ಬಗರ್ ತಲಬಿನಲ್ಲಿ ಅವರು ಉಪಯೋಗಿಸಿಕೊಳ್ಳುವ ತಾರೀಖ್ ಮೊದಲು ಹದಿನೈದು ದಿನಗಳ ರಜಾ ಕೊಡಲ್ಪಟ್ಟಿರುತಿದೆ. ತುಮಕೂರ್ ಡೆಪ್ಯುಟಿ ಕಮಿಷನರವರ ಆಫೀಸ್ ಜ್ಯುಡಿಷಲ್ ಹೆಡ್ ಮುನಿಷಿ ಕೃಷ್ಣರಾಯರವರು ವೆಂಕಟರಾಯರವರ ಗೈರ್‌ಹಾಜರೀ ಕಾಲದಲ್ಲಿ ಅಥವಾ ಮತ್ತೊಂದು ಹುಕುಂ ಕೊಡಲ್ಪಡುವ ತನಕ ಗುಬ್ಬಿ ತಾಲ್ಲೂಕ್ ಅಮಲ್ದಾರ್ ವ ಮೂರನೇಕ್ಲಾಸ್ ಮ್ಯಾಜಿಸ್ಟ್ರೇಟರಾಗಿ ಆಕ್ಟಿಂಗ್ ತರೀಕೆ ಕೆಲಸನೋಡುವಂತೆ ನೇಮಕರ್ಮಾಡಲ್ಪಟ್ಟಿರುತ್ತಾರೆ.

ಮೊಕ್ಕಾಂ ನಂ. ೧೨೦೯—ಈಸಲದ ದಸರಾ ಹಬ್ಬಕ್ಕಾಗಿ ೧೮೮೮ನೇ ಇಸವಿ ಅಕ್ಟೋಬರ್ ೧೧ನೇ ತಾರೀಖ್ ಮೊದಲು ೨೦ನೇ ತಾರೀಖ್ ವರಿವಿಗೆ ಉಭಯದಿನಗಳೂ ಸೇರಿ ೧೦ ದಿನಗಳ ರಜಾ ಕೊಡಲ್ಪಟ್ಟಿರುತಿದೆ.

ನಂ. ೧೩೪—ತಾರೀಖ್ ೨೮ನೇ ಸೆಪ್ಟೆಂಬರ್, ೧೮೮೮—ಮಾಹೇ ಮಜಕೂರ್ ೧೫ನೇ ತಾರೀಖಿನ ಪೂರ್ವಾಹ್ನದಲ್ಲಿ ಶಿವಮೊಗ್ಗ ಡಿಸ್ಟ್ರಿಕ್ಟ್ ಫಸ್ಟ್ ಅಸಿಸ್ಟೆಂಟ್ ಕಮಿಷನರ್ ಆಫೀಸ್ ಚಾರ್ಜನ್ನು ಮೆ|| ತಿರುಮಲಾಚಾರ್ಯರವರು ಮೆ|| ಹೆಚ್. ವಿ. ನಂಜುಂಡಯ್ಯನವರಿಗೆ ಒಪ್ಪಿಸಿರುತ್ತಾರೆ.

CORRESPONDENCE

ಅಯ್ಯಾ—ಇದರಡಿ ತಿಳಿಸುವನನ್ನ ಅಭಿಪ್ರಾಯವು ಕೇವಲ ಅಸೂಯಾಪ್ರೇರಿತವಾದದ್ದೆಂತಲಾಗಲಿ, ಅಸಂಬದ್ಧ ರೂಪವಾದದ್ದೆಂತಲಾಗಲಿ, ಅವಿಮರ್ಶಕತಾರೂಪ ವಾದದ್ದೆಂತಲಾಗಲಿ,ಯಾರಾದರು ಕೆಲವರು ಭಾವಿಸಬಹುದು, ಪರಂತು ಸಮದೃಷ್ಟಿಯುಳ್ಳವರು ಆಗ್ರಹಾಭಿನಿವೇಶವಂತೊರೆದು ನನ್ನಅಭಿಪ್ರಾಯವುಹ್ನಕಾಲಪರ್ಯಾಲೋಚಿಸಿ ನೋಡುವರಾದರೆ ಆಗ ಅದರ ಔಚಿತ್ಯವು ಸ್ಪಷ್ಟವಾಗಬಹುದೆಂದು ನಂಬುತ್ತೇನೆ.

ಈಚೆಗೆ ಈವೂರು ಶ್ರೀನಿವಾಸಮಂದಿರದಲ್ಲಿ ದೇವಾಲಯಗಳ ಉತ್ಪತ್ತಿಸ್ಥಿತಿ ವಿಪರ್ಯಯೋದ್ದೇಶಗಳಂಕುರಿತು ಪಂಡಿತ ಶ್ರೀಪರ್ಣ ಕದಡೆ ಭಾಷ್ಯಾಚಾರ್ಯರವರು ಮಾಡಿದ ಉಪನ್ಯಾಸವು ಅಸ್ಮದಾದಿಗಳಿಗೆಲ್ಲ ವಿಶೇಷ ಆನಂದ ವಿವೇಕಗಳನ್ನುಂಟುಮಾಡಿದ್ದರಿಂದಾಗಿ ನಾವೆಲ್ಲರೂ ಅವರವಿಷಯದಲ್ಲಿ ಬಹಳ ಕೃತಜ್ಞರಾಗಿರಬೇಕಾದದ್ದು ನ್ಯಾಯ್ಯವೆಂದೆಣಿಸುತ್ತೇನೆ.

ಸದರೀ ಆಚಾರ್ಯರವರ ಪ್ರಸಂಗವು, ಹಿಂದೂ ಮತ ಸಂಪ್ರದಾಯ ದೂಷಣೆಯೊಳು ಬದ್ಧಾದರಪ್ಪಳ "ವೃತ್ತಾಂತಪತ್ರಿಕೆ"ಯ ಹೃದಯೋಲ್ಲಾಸಕ್ಕೆಬಹಳಪ್ರೋತ್ಸಾಹಕರವಾಗಿದ್ದದರಿಂದಆಪತ್ರಿಕೆಯು ಮೇಲೆಕಂಡ ಪ್ರಸಂಗಕ್ಕಾಗಿ ಮುಖ್ಯವಾದ ತನ್ನ ಅವಕಾಶವನ್ನೆಲ್ಲ ವ್ಯಯಮಾಡಿ ಅಲ್ಲಿಗೂ ಸುತೃಪ್ತಿಯನ್ನೈದದೆ ಮುಂದಿನವಾರಕ್ಕೆ ಸಹ ನಿಲ್ಲಿಸಿಟ್ಟಿರುತಿದೆ.

ಶ್ರೀಪರ್ಣ ಭಾಷ್ಯಾಚಾರ್ಯರವರು ಪ್ರಸಂಗಕಾಲದಲ್ಲಿ ಪ್ರಸ್ತಾಪ ದೃಷ್ಟಾಂತರೂಪೇಣ ತಿಳಿಸಿದ ಕೆಲವುಮಾತುಗಳು ಗೂಢಗಳಾಗಿಯೂ ಅನುಮಾನಾಸ್ಪದಗಳಾಗಿಯೂ ಇದ್ದದರಿಂದ ಅವುಗಳಿಗೆ ತಕ್ಕ ಸಮಾಧಾನಗಳನ್ನುಪತ್ರಮೂಲಕ ತಿಳಿದುಕೊಳ್ಳುವದೇ ಉಚಿತವೆಂದೆಣಿಸುತ್ತೇನೆ. ಶ್ರೀಮದಾಚಾರ್ಯರವರು ಹಿಂದೂ ದೇವಾಲಯಗಳ ಪ್ರಕೃತಸ್ಥಿತಿಯಂಕುರಿತು ಬಹಳ ಅನುತಪಿಸುತ ಅವುಗಳದುಸ್ಥಿತಿಯಂ ವಿವರಿಸುವಾಗ್ಯೆ, ಉತ್ತಮತ್ವೇನ ಮುಸಲ್ಮಾನರ ಮಸ್‌ಜಿದ್‌ಗಳನ್ನೂ ಕ್ರಿಸ್ತಿಯರ್ ಚರ್ಚ್‌ಗಳನ್ನೂ ಉದಹರಿಸಿ ಅವುಗಳ ಪಾರಿಶುಧ್ಯಾದಿಗಳಂಕುರಿತು ಬಹಳಅಭಿನಂಸಿಸಿದರು. ಪದಾರ್ಥ ತಾರತಮ್ಯ ವಿವೇಚನೆಯೊಳು ಉತ್ತಮತ್ವನೀಚತ್ವವನ್ನರುಹುವಾಗ್ಯೆನಿಜವಾದಉತ್ತಮಗುಣಗಳುಳ್ಳದ್ದನ್ನುತಿಳಿಸಬೇಕೇ ಹೊರ್ತು ಸಮಾನ ದುರ್ಗುಣಗಳುಳ್ಳ ಅಥವಾ ಅದಕ್ಕಿಂತ ನೀಚಗುಣಗಳುಳ್ಳ ವಸ್ತುವಂ ತಿಳಿಸುವಣವು ಯೋಗ್ಯವಲ್ಲವೆಂದೆಣಿಸುತ್ತೇನೆ.

ಮಹಮ್ಮದೀಯ, ಯೂರೋಪಿಯರ್ನರಿಗೆ ನಮ್ಮದೇವಾಲಯಗಳು ಪರಿಹಾಸ್ಯಕ್ಕೂ, ನಿಂದೆಗೂ ಮುಖ್ಯವಿಷಯವಾಗಿವೆ. ಅವರು ಹೇಳುವ ದೋಷಗಳಿಂದ ನಾವು ಅಸೂಯೆಗೊಂದು ದುರಾಗ್ರಹದಿಂದ ಅವರನ್ನ ನಿಂದಿಸಿ ಬೈಯುವದು ಯುಕ್ತವೆ ? ನಮ್ಮ ದೇವಾಲಯಗಳಲ್ಲಿ ಪ್ರಕೃತ ನಾವು ಕಂಡಿರುವ ವಿರೋಧಗಳನ್ನೂ ಅನರ್ಥಗಳನ್ನೂ ಪರ್ಯಾಲೋಚಿಸುವದಲ್ಲದೆ, ಅವುಗಳನ್ನುಪರಿಹರಿಸುವದಕ್ಕೆ ಪಥಾವತ್ಕ ಯತ್ನಗಳನ್ನುಮಾಡದೆ ಅವರನ್ನುನಿಂದಿಸುವದು ಸರಿಯೆ ? ಅವರಮಸ್‌ಜಿದ್‌ಗಳೂ ಚರ್ಚ್‌ಗಳೂ ತ್ಯಾಗಶುಚಿಯಾಗಿಯೂ, ಪ್ರಶಸ್ತವಾಗಿ ವಿವೇಕ ವಿಜ್ಞಾನ ಸಂಪಾದಕವಾಗಿಯೂ, ಜ್ಞಾನ ಭಕ್ತಿ ವರ್ಧಕವಾಗಿಯೂ ಇರುತ್ತವೊ, ಹಾಗೆ ಮಹಾನಾಸ್ತಿಕ್ಯ, ದುರಾಧಜ್ಞಾನ, ಅಧರ್ಮವೃದ್ಧಿ, ದುರಾಚರಣ, ದುಷ್ಕಾರ್ಯಾಭಿರುಚಿ,ಹಿಂಸಾ,ಚೌರ್ಯ, ಅನೃತವಚನ, ಇವೇ ಮೊದಲಾದ ಸರ್ವಾನರ್ಥಪಾಪ ಜೀಕಾದವು ನಮ್ಮ ದೇವಾಲಯಗಳಿಂದ ಪ್ರಕೃತದಲ್ಲಿ ನಮ್ಮ ಜನಗಳಿಗೆಉಂಟಾಗುವದು" ಎಂದು ಶ್ರೀಪರ್ಣ ಭಾಷ್ಯಾಚಾರ್ಯರವರು ತಿಳಿಸಿರುತ್ತಾರೆ. ನಮಗಿಂತ ಗುಣಾಢ್ಯರಾದವರು ನಮ್ಮನ್ನು ಆಕ್ಷೇಪಿಸಿ ಹೇಳನ ಮಾಡುವರಾದರೆ ಆಗ ಅದಕ್ಕೆ ನಾವು ಲಜ್ಜಿಸಬೇಕಾಗಿರುವದೇ ಹೊರ್ತು ನಮಗಿಂತ ಅನೇಕ ವಿಷಯಗಳಲ್ಲಿ ಆಕ್ಷೇಪಣೆಗೆ ಪಾತ್ರರಾಗಿಯೂ ಹೇಳನ ದೂಷಣಗಳಿಗೆ ಕಾರಣಭೂತರಾಗಿಯೂ ಇರುವವರುಮಾಡುವ ಪರಿಹಾಸ್ಯವನ್ನೂ ನಿಂದೆಯನ್ನೂ ಪ್ರಬಲಗೊಳಿಸಿ ಅವುಗಳಿಗಾಗಿ ಬಾಚಿಸತಕ್ಕವರಲ್ಲಿ ಆಚಾರ್ಯರೇ ಮೊದಲನೆಯವರಾಗಿಯೂ ಕಡೆಯವರಾಗಿಯೂ ಇರುತ್ತಾರೆ. ಮೇಲೆಕಂಡ ಅಭಿಪ್ರಾಯವನ್ನು ವ್ಯಕ್ತಪಡಿಸಿದಾಗ ಕ್ರಿಸ್ತಿಯರ್ ಚರ್ಚ್‌ಗಳ ಮತ್ತು ಮುಸಲ್ಮಾನರ ಮಸ್‌ಜಿದ್‌ಗಳ ನಿಜಸ್ಥಿತಿಯು ಆಚಾರ್ಯರಿಗೆ ಜ್ಞಾಪಕದೊಳರಬೆಯೋಗಿರಲಾರದು, ಪರಂತು ಅವರ ಪಾರ್ಶ್ವದೊಳಿದ್ದ ಯೂರೋಪಿಯರ್ ದೊಡ್ಡಮನುಷ್ಯರಸಾನ್ನಿಧ್ಯವು ಅವಂವರಿಭಾವಿಸದಂತೆಮಾಡಿರಬಹುದು. ಹಿಂದೂದೇವಾಲಯಗಳು ಮಹಾನಾಸ್ತಿಕ್ಯ, ಮೂಢಜ್ಞಾನ, ಅಧರ್ಮವೃದ್ಧಿ, ದುರಾಚರಣ,ದುಷ್ಕಾರ್ಯಾಭಿರುಚಿ, ಹಿಂಸಾ, ಚೌರ್ಯ,ಅನೃತವೊದಲಾದವುಗಳಿಗೆಕಾರಣಭೂತವೆಂಬ ಆಚಾರ್ಯರ ತಾತ್ಪರ್ಯವು ಅಂಗೀಕರಿಸುವಣ, ಪರಂತು ಯಾರ ಚರ್ಚ್‌ಗಳೂ ಮಸ್‌ಜಿದ್‌ಗಳೂ ಶುಚಿಯಾಗಿಯೂ, ಪ್ರಶಸ್ತವಾದ ವಿವೇಕಜ್ಞಾನ ಸಂಪಾದಕವಾಗಿಯೂ, ಜ್ಞಾನಭಕ್ತಿ ವರ್ಧಕವಾಗಿಯೂ ಇರುತಿವೆಯೆಂದು ದೃಷ್ಟಾಂತರೂಪವಾಗಿ ತಿಳಿಸಿದರೋ ಅಂತಾ ಚರ್ಚ ಮುಂತಾದವುಗಳಲ್ಲಿ ನಡೆಯುವ ಹಿಂಸಾದಿ ಕೃತ್ಯಗಳನ್ನೂ ಯಥೋಚಿತ ವಿವರಿಸಿದ್ದರುವದಾದರೆ ಅವರ ನಿಷ್ಪಕ್ಷಪಾತತೆಯಂ ಪ್ರಶಂಸಿಸಬಹುದಾಗಿತ್ತು. ಅದಕ್ಕೆ ಆಚಾರ್ಯರವರು ಎಡಕಾದಿಕೊಡದೆಹೋದಬಗ್ಗೆ ಬಹಳ ವಿಷಾದಿಸುತ್ತೇನೆ. ಬಹುವಿಧ ದುಷ್ಕೃತ್ಯಗಳಿಗೆ ನಮ್ಮ ದೇವಾಲಯಗಳುಮಾತ್ರ ಆಚಾರ್ಯರು ಯಾತಕ್ಕೆ ಗುರಿಮಾಡಲೆತ್ನಿಸಿದರೋ ನಾನರಿಯೆನು. ಯಾವಜನಗಳು ಶುಚಿರ್ಭೂತರೆಂತಲೂ, ಗುಣಾಢ್ಯರೆಂತಲೂ ಕರೆಸಲ್ಪಡುವರೋ ಅಂತವರು ಪುಣ್ಯಸ್ಥಾನವೆಂತಲೂ, ಮೋಕ್ಷಸ್ಥಾನವೆಂತಲೂ ಕರೆಯುವ ಚರ್ಚ್‌ಗಳು ಮದ್ಯಪಾನಗಳಿಗೂ, ವ್ಯಭಿಚಾರಗಳಿಗೂ ಗುರಿಯಾಗಿ ಅಲ್ಲಿ ನಡೆಯುವ ಬಹುವಿಧ ದುಷ್ಕೃತ್ಯಗಳು ಜಗತ್ಪ್ರಸಿದ್ಧವಾಗಿಯೇಯಿವೆ.ಆಶ್ರಮರೂಪವಾಗಿ ಪರಿಭಾವಿಸಲ್ಪಟ್ಟಿರುವಂತಾ ಮತ್ತು ತಪೋಧನರಾಗಿ ಎಣಿಸಲ್ಪಟ್ಟಿರುವಂತಾ ಮಂಕ್ಸ್,ನನ್ಸ್ ಎಂದು ಹೆಸರಿಟ್ಟುಕೊಂಡಿರುವವರ ಕಾನ್ವೆಂಟುಗಳಲ್ಲಿ ನಡೆಯುವ ಅಕೃತ್ಯಗಳನ್ನು ಚಿಂತಿಸಿದರೆ ಅವುಗಳಿಗಿಂತ ನಮ್ಮದೇವಾಲಯಗಳು ಬಹಳ ಯೋಗ್ಯವಾದಸ್ಥಿತಿಯಲ್ಲಿವೆಯೆಂದು ಧಾರಾಳವಾಗಿಹೇಳಬಹುದು. ಸದರೀ ಪುಣ್ಯಾಶ್ರಮಗಳು ಶಿಶುಹತ್ಯ, ಭ್ರೂಣಹತ್ಯಾದಿಗಳಿಗೆ ಸ್ಥಾನಗಳಾಗಿರುತಿವೆ. ಹಿಂಸೆಯು ನಿರವಧಿಕವೆಂಬದಕ್ಕೆ ಉಪರಿ ಭರತಾರ್ಥ ಅವರು ಪ್ರತಿನಿತ್ಯ ಮಾಡುವ ಗೋವಧೆಗಳೇ ದೃಷ್ಟಾಂತಗಳಾಗಿರುತಿವೆ. ಮುಖ್ಯವಾಗಿ ಈ ಪ್ರಪಂಚವು ಗುಣದೋಷ ಸಂಮಿಶ್ರವಾದದ್ದಾಗಿರುತಿದೆಯೇ ಹೊರ್ತು ಕೇವಲ ಗುಣಮಯವಾದದ್ದಾಗಿಯಾಗಲಿ, ಅಥವಾ ದೋಷಮಯವಾದದ್ದಾಗಿಯಾಗಲಿ ಇರುವದಿಲ್ಲವು. ಆದದರಿಂದ ಗುಣದೋಷಗಳು ಸರ್ವಪ್ರಾಣಿ ನಿಸರ್ಗಸಿದ್ಧವಾಗಿರುತಿವೆ ಇಷ್ಟುಮಾತ್ರವಲ್ಲದೆ ಒಬ್ಬರದು ದೂಷ್ಯವೆಂತಲೂ, ಮತ್ತೊಬ್ಬರದು ಸ್ತುತ್ಯಾರ್ಹವೆಂತಲೂ, ಇನ್ನೊಬ್ಬರದು ಉಪಾದೇಯವೆಂತಲೂ, ಬೇರೊಬ್ಬರದು ಅನುಪಾದೇಯವೆಂತಲೂ ಅಭಿಪ್ರಾಯಪಡುವಣವು ಯುಕ್ತವೆಂದು ನನ್ನಬುದ್ಧಿಗೆತೋರಲಿಲ್ಲವು. ಆದರೆ ಅನ್ಯರು ದುರ್ನೀತರಾದರೆ ನಾವೂ ದುರ್ಮಾರ್ಗರಾಗಿರಬೇಕೆಂಬದು ನನ್ನ ಅಭಿಪ್ರಾಯವಲ್ಲವು. ನಮ್ಮ ದೋಷಗಳು ನಮಗೆ ತಿಳಿಯಬಂದಾಗ ಅವು ನಾವು ತಿದ್ದಿಕೊಳ್ಳಬೇಕಾದದ್ದೇನೋನಮ್ಮಧರ್ಮವಾಗಿರುತಿದೆ, ಆದರೆ ನಮ್ಮದೋಷಗಳನ್ನು ನಮಗೆ ತೋರಿಸಿ ಹೇಳನಮಾಡಲಿಕ್ಕೆ, ತಿಷ್ಯ ನ್ಯಾತ್ರರಾಗಿಯೂ ಪ್ರಾಣಿಹಿಂಸಕರಾಗಿಯೂ, ಮದಮಾಂಸ ಭಕ್ಷಕರಾಗಿಯೂ, ಆಚಾರಹೀನರಾಗಿಯೂ ಇರುವವರನ್ನು ಶ್ರೀ ಭಾಷ್ಯಾಚಾರ್ಯರವರು ಅರ್ಹರೆಂದುಭಾವಿಸಿ ಆರೋಪಿತಗಳಾದ ಅವರ ಗುಣಗಳನ್ನು ಪುರಸ್ಕರಿಸಿ ತಮ್ಮ ವಾಕ್ಯಕ್ಕೆ ಪೋಷಕವಾಗಿಮಾಡಿಕೊಂಡದ್ದು ಅವರಂತಾ ಪಂಡಿತೋತ್ತಮರಿಗೆ ಸಮುಚಿತವಲ್ಲವೆಂದು ತಿಳಿಸುವ,

ಬೆಂಗಳೂರು, ತಾ॥ ೩ನೇ ಸೆಪ್ಟಂಬರ್ | ರಮ್ಮವಿಧೇಯನಾದ, ಸ್ವಲಕ್ಷಣವಾದಿ.

SUMMARY OF NEWS.
ವೃತ್ತಾಂತ ಸಂಗ್ರಹವು.

Mr. Cox's interview with the Sringeri guru.—ಈ ತಿಂಗಳ ೧೫ನೇ ತಾರೀಖಿನಲ್ಲಿ ರೆವಿನ್ಯೂ ಸೆಟಲ್‌ಮೆಂಟ್ ಇಲಾಖಾ ಡಿಪ್ಯುಟಿ ಕಮಿಷನರ್ ಮೆ॥ ಕಾಕ್ಸ್‌ಯವರು ರೆವೆರೆಂಡ್ ಫರ್ಗುಸನ್ಯವರೊಡನೆ ಶ್ರೀ ಶೃಂಗೇರಿ ಗುರುಗಳವರ ದರ್ಶನಾರ್ಥವಾಗಿ ಗುರುಗಳ ಸನ್ನಿಧಿಗೆ ಬಂದಿದ್ದರು. ಪೂರ್ವಭಾವಿಯಾಗಿಯೇ ನಿಶ್ಚಯವಾದಂತೆ ಸೆಟಲ್‌ಮೆಂಟ್ ಆಫಿಸ್‌ರಿಸ್ತೆದಾರ್ ಮಹಾರಾಜಶ್ರೀ ವೆಂಕಾಜಿರಾವ್‌ಪಂತುಲುಯವರ ಮನೆಯಲ್ಲಿ ಮೆ॥ ಕಾಕ್ಸ್‌ಯವರಿಗೂ ಅವರ ಸಹವಾಸಿಗಳಿಗೂ ಶ್ರೀಗುರುಗಳ ಸಂದರ್ಶನವು ಪ್ರಾಪ್ತವಾಯಿತು. ಆಗ ಮೆ॥ ಕಾಕ್ಸ್‌ಯವರಿಗೂ ಶ್ರೀಗುರುಗಳವರಿಗೂ ತೆಲುಗಿನಲ್ಲಿ ಕೆಲವು ಸಂಭಾಷಣೆಗಳು ಜರಿಗಿದವು. ಅವು ಸ್ವಲ್ಪದೃಷ್ಟಿಗೆ ಮತಸಂಬಂಧವಾಗಿದ್ದಾಗ್ಯೂ ಯಾವಮತವನ್ನುದ್ದೇಶಿಸಿಯಾಗಲಿಅಥವಾಯಾವಮತಕ್ಕೂ ವಿರೋಧವಾಗಿಯಾಗಲಿ ಇರಲಿಲ್ಲವು. ಬೈಬಲಿ ಸಂಸ್ಕೃತಕ್ಕೆ ತರ್ಜುಮೆಮಾಡಲ್ಪಟ್ಟು ಅದರಪ್ರತಿಯೊಂದು ಫರ್ಗುಸನ್ಯವರು ಅರ್ಪಿಸಿದರು. ಕೊನೆಗೆ ಮೆ॥ ಕಾಕ್ಸ್‌ಯವರೂ ಅವರ ಸಹಪಾಟಿಗಳೂ ಸಮ್ಮಾನಿಸಲ್ಪಟ್ಟನಂತರತಮ್ಮಮಂದಿರಕ್ಕೆ ಹೊರಟರು.

An ingenious American lady.—ಮಾರ್ಥಾ ಪಾರಿಶಿಎಂಬ ಅಮೆರಿಕಾದೇಶಸ್ಥಳಾದ ಒಬ್ಬ ಯುವತಿಯು ಇದುವರಿವಿಗೆ ೧೧ ಸಾರಿ ವಿವಾಹಮಾಡಿಕೊಂಡಿದ್ದಾಳೆ. ಮದುವೆಯ ಸುಖವನ್ನು ಮತ್ತು ಪ್ರಯೋಜನವನ್ನು ಅನುಭವಿಸುವದಕ್ಕಲ್ಲ, ದ್ರವ್ಯವನ್ನು ಸಂಪಾದಿಸುವ ಒಂದು ಉದ್ದೇಶದಿಂದಲೇ ಮದುವೆಮಾಡಿಕೊಂಡಳು. ಹ್ಯಾಗೆಂದರೆ,—ಈಕೆಯು ಮದುವೆಯಾದ ಕೆಲವುದಿನಗಳುಮಾತ್ರ ಗಂಡನಬಳಿಯಿದ್ದು ತರುವಾಯ ತನ್ನತಾಯಿಯು ಕಾಹಿಲೆಯಾಗಿದ್ದಾಳೆಂತಲೂಆಕೆಯನ್ನುಹೋಗಿನೋಡಬೇಕೆಂತಲೂಹೇಳ ನಟಿಸಿ, ಆಗ್ಯೆ ಗಂಡನಾಗಿರುವಂತಾವನಿಂದ ತನ್ನ ಪ್ರಯಾಣ ವಗೈರೆ ಖರ್ಚಿಗಾಗಿಸಾವಿರಾರು ರೂಪಾಯಿಗಳನ್ನು ತೆಗೆದುಕೊಂಡು ಹೊರಟುಹೋಗಿ ಮತ್ತೊಬ್ಬನನ್ನು ಬೇರೊಂದು ಸ್ಥಳದಲ್ಲಿ ವರಿಸುತ್ತಾಳೆ, ಅಲ್ಲಿಯೂ ಅಂತಾ ಸುಳ್ಳನ್ನೇಹೇಳಿ ರೂಪಾಯಿಗಳನ್ನು ಅಪಹರಿಸಿಕೊಂಡು ಬೇರೊಂದುಸ್ಥಳಕ್ಕೆ ಹೋಗಿ ಅಲ್ಲಿ ಇನ್ನೊಬ್ಬನನ್ನು ಮದುವೆಂಗುತ್ತಾಳೆ. ಈರೀತಿಯಾಗಿ ಈಕೆಯು ಇದುವರಿವಿಗೆ ೧೧ಜನರನ್ನು ಮದುವೆಮಾಡಿದ್ದಕೊಂಳು.

An Extensive fraud.—ತಿರುನಲ್ವೇಲಿ ಡಿಸ್ಟ್ರಿಕ್ಟಿಗೆಸೇರಿದ ಶ್ರೀವಿಲ್ಲಿಪುತ್ತೂರಿನಲ್ಲಿರುವ ಒಬ್ಬ ನೇಟಿವ್ ಉದ್ಯೋಗಸ್ಥನು ಕಾಂಚೀಪುರದಲ್ಲಿರುವ ತನ್ನಬಂಧುವಾದ ಒಬ್ಬನಿಗೆ ಒಂದುಬಾಂಗಿಕಳುಹಿಸಿದನು. ಅದರಲ್ಲಿ ೮,೦೦೦ರೂಪಾಯಿಗಳಿದ್ದವು. ಅದರಕ್ರಯ ಒಟ್ಟು ರೂ॥೫೩೫,೦೦ ಅಷ್ಟುವೊಬಬಗ್ಗೆ ಇನ್ಶೂರಾಗಿತ್ತು. ಸದರೀ ಬಾಂಗಿಯನ್ನು ವಿಳಾಸದಾರನಿಗೆ ಪಾಸಲೇಬಗ್ಗೆ ತೆಗೆದುಕೊಳ್ಳಂದುಹೋಗಿ ಕೊಡುವಲ್ಲಿ ಆತನಿಗೆ ಸಂಶಯಹುಟ್ಟಿ ಆತನು ಅದನ್ನು ತೆಗೆದುಕೊಳ್ಳುವದಿಲ್ಲವೆಂದು ನಿರಾಕರಿಸಿಬಿಟ್ಟನು ಅದರಮೇಲೆ ಸದರೀ ಬಾಂಗಿಯು ರವಾನೆಯಾದಸ್ಥಳಕ್ಕೆ ವಾಪಸಮಾಡಲ್ಪಟ್ಟು ಪೋಸ್ಟ್‌ದಾರನಿಗೆ ನೋಟಿಸ್‌ಕೊಡುವಲ್ಲಿ ಆತನು ಸ್ಥಳಾಂತರ ಹೋಗಿದ್ದನು. ಅದರಮೊಹರುಗಳಮೈಕಿ ಒಂದುಕಾಯಾ ಆಗಿದ್ದದರಿಂದ ತಾನು ಅದನ್ನು ತೆಗೆದುಕೊಳ್ಳುವದಿಲ್ಲವೆಂದು ನಿರಾಕರಿಸಿಬಿಟ್ಟನು. ಅದರಮೇಲೆ ಸಬ್ ಪೋಸ್ಟ್‌ಮ್ಯಾಸ್ಟರು ಅದನ್ನು ಬಿಚ್ಚಿನೋಡುವಲ್ಲಿ ಅದರೊಳಗೆ ತಾಂಬ್ರನಾಣ್ಯಗಳು ತುಂಬಿದ್ದವು. ಬಾಂಗೀ ಕಳುಹಿಸಿದವನು ನಡದಸಂಗತಿಯನ್ನುಕುರಿತು ಪೋಲೀಸಿನವರಲ್ಲಿ ಫಿರ್ಯಾದುಮಾಡಿರುತ್ತಾನೆ. ಈಸಂಗತಿ ಪೋಸ್ಟ್‌ಮ್ಯಾಸ್ಟರ್ ಜನರಲ್‌ವರಿಗೆ ರಿಪೋರ್ಟಾಗಿ ಅವರು ಅದರ ವಿಚಾರಣೆಯಬಗ್ಗೆ ಕೂಡಲೇ ತಿರುನಲ್ವೇಲಿಗೆ ಹೋಗಿರುತ್ತಾರೆ.—ಮದರಾಸ್ ಮೆಯಿಲ್.

A meeting in the Sringeri Mutt.—ಕಳೆದ ಆದಿತ್ಯವಾರ ಸಾಯಂಕಾಲದಲ್ಲಿ ಈವೂರಿನ ವೈದಿಕ ಲೌಕಿಕ ಬ್ರಾಹ್ಮಣರು ವೈಶ್ಯರೇ ಮೊದಲಾಗಿ ಅನೇಕರು ಶ್ರೀ ಶೃಂಗೇರಿ ಗುರುಗಳವರ ಮಠದಲ್ಲಿ ಸಭೆ ಸೇರಿದ್ದರು. ಆಕಾಲದಲ್ಲಿ ಈ ನಗರಿನಲ್ಲಿ ಶೃಂಗೇರಿ ಗುರುಗಳವರ ಮಠಕ್ಕಾಗಿ ಒಂದುಮನೆಯನ್ನು ಖರೀದಿಗೆ ತೆಗೆದುಕೊಂಡು ಅದರಲ್ಲಿ ಒಂದು ಸಂಸ್ಕೃತ ಪಾಠಶಾಲೆಯನ್ನು ಸ್ಥಾಪಿಸಬೇಕೆಂದು ನಿರ್ಧರವಾಗಿ ಅಲ್ಲಿ ಕಲತಿದ್ದ ಬಹುಜನ ದೊಡ್ಡಮನುಷ್ಯರು ತಮ್ಮ ಔದಾರ್ಯವನ್ನು ದ್ರವ್ಯರೂಪದಲ್ಲಿ ತೋರಲ್ಪಡಿಸಿಕೊಂಡರು. ಈವಿಷಯವು ಇಲ್ಲಿಗೆ ಪೂರ್ತಿಯಾದುತಿಲ್ಲವೆಂದುನ್ನೂ ಮುಂದೆ ನಿರ್ಧರಿಸಲ್ಪಡುಗಲೆಂದುನನ್ನು ನಮ್ಮ ತಿಳುವಳಿಕೆಗೆಬಂದಿರುತದೆ. ಈಸಮಯದಲ್ಲಿ ಒಬ್ಬ ಲೌಕಿಕರು ಉಪನ್ಯಸಿಸಲುದ್ದೇಶಿಸಿ ಅಂದಮಾತುಗಳಿಗೆ ವೈದಿಕ ಮಂದಿಯವರು ಅರ್ಥಾಂತರವನ್ನುಮಾಡಿ ಲೌಕಿಕರನ್ನು ಮೂಗುಹಿಡಿದರೆಂದು ಜನರು ಹೇಳಿಕೊಳ್ಳುತ್ತಾರೆ. ಅದನ್ನು ಪೂರ್ಣವಾಗಿಅರಿತು ಮುಂದೆ ನಮ್ಮವಾಚಕರಿಗೆ ತಿಳಿಯಪಡಿಸುವೆವು ವಿಜಯಧ್ವಜ.

The Indian National Congress.—ಕಳೆದಆದಿತ್ಯವಾರ ಪ್ರಾತಃಕಾಲ ನ್ಯಾಷನಲ್ ಕಾಂಗ್ರೆಸ್ಸಿಗೆ ಸಂಬಂಧಿಸಿದಹಾಗೆ ಈ ಡಿಸ್ಟ್ರಿಕ್ಟಿನಲ್ಲಿಯೂ ಒಂದು ಸ್ಟ್ಯಾಂಡಿಂಗ್ ಕಮ್ಮಿಟಿಯನ್ನು ಏರ್ಪಡಿಸುವದಕ್ಕಾಗಿ ಇಲ್ಲಿನ ಪೀಪಲ್ಸ್ ಅಸೋಸಿಯೇಷನ್ ಸೌಧದಲ್ಲಿ ಒಂದು ಮೀಟಿಂಗ ಜರಿಗಿತು. ಅದರಲ್ಲಿ ಪೂರ್ವ ಕಾಂಗ್ರೆಸ್‌ಗಳಿಗೆ ಹೋಗಿದ್ದವರೆಲ್ಲರೂ ಮೆಂಬರ್‌ಗಳಾಗಿ ಏರ್ಪಡಿಸಲ್ಪಟ್ಟರಲ್ಲದೆ ಇನ್ನೂ ಇತರರನೇಕರು ಕೂಡಾ ಸೇರಿಸಲ್ಪಟ್ಟರು. ಇದನ್ನು ಚೆನ್ನಾಗಿ ಸ್ಥಾಪಿಸಬ ಮತ್ತು ಮೆಂಬರ್‌ಗಳೆಲ್ಲರು ಬರುವ ಆದಿತ್ಯವಾರಕ್ಕೆ ಎಂಟುದಿನಕ್ಕೆ ಅದೇಸ್ಥಳದಲ್ಲಿ ಮೀಟಿಂಗಸೇರುತ್ತಾರೆ. ನ್ಯಾಷನಲ್ ಕಾಂಗ್ರೆಸ್ಸಿನವಿಷಯವಾಗಿ ಅನೇಕಸಂಗತಿಗಳನ್ನು ಅವಿದ್ಯಾವಂತರಾದವರಿಗೆ ತಿಳಿಯಪಡಿಸಲು ತಕ್ಕ ಏರ್ಪಾಟನ್ನು ಸದರೀ ಕಮ್ಮಿಟಿಯವರು ಮಾಡುವರೆಂದು ನಿರೀಕ್ಷಿಸಿಕೊಂಡಿರುತ್ತಾರೆ, ಆದರೂ ಮುಂದೆ ಅವಕಾಶ ದೊರಿಕಿದಂತೆ ನಮ್ಮ ಯೋಗ್ಯತಾನುಸಾರವಾಗಿ ನಾವು ಕೊಂಚಹೇಳಲುದ್ಯಮಿಸುವೆವು. ಪ್ರಕೃತಕ್ಕೆ ಈ ವಿಷಯವನ್ನು ಇಲ್ಲಿ ಸಾಕುಮಾಡುವೆವು.—ವಿಜಯಧ್ವಜ.

The German Princes.—ಜರ್ಮನೀ ಚಕ್ರವರ್ತಿಯವರ ಕುಮಾರರಾದ ೫ ಮಂದಿ ಸಣ್ಣಹುಡುಗರಪೈಕಿ ೪ ಜನ ಮಕ್ಕಳು, ತಮ್ಮ ಆಟಗಳಲ್ಲಿಯೂಕೂಡ ಯುದ್ಧ ಕಲಾಕೌಶಲ್ಯವಾದ ಆಟಗಳನ್ನೇ ತಮಗೆ ತುಂಬಾ ಆಸಕ್ತಿಯನ್ನು ಟ್ಟಾಗಿದ್ದಾರೆ. ಅವರು ಏಟನ್ ಆಸ್‌ಎಂಬ ಒಂದು ಚಿಕ್ಕ ಕೋಟೆಯಲ್ಲಿ ೨ ಫಿರಂಗಿಗಳನ್ನುಇಟ್ಟುಕೊಂಡು ಒಂದು ಸೈನ್ಯದ ಪಾಳೆಯವನ್ನು ಮಾಡಿಕೊಂಡು ತಮ್ಮ ಸಾಕಾಲೆಯ ರಜಾದಿನಗಳನ್ನು ಕಳೆಯುವರು. ಪ್ರಾತಃಕಾಲದಲ್ಲಿ ಮೂವರು ಅರಸುಕುಮಾರರು ಶಿಪಾಯಿಗಳ ಉಡುಪನ್ನುಧರಿಸಿ ಭುಜಗಳಮೇಲೆ ತುಪಾಕಿಗಳನ್ನುಇಟ್ಟುಕೊಂಡು ಹೊರಡುತ್ತಾರೆ ಸಹೋದರರು ಊರ್ಜಿತಿಯಾಗಿ ಹೊರಟರೆ, ಚಕ್ರವರ್ತಿಯವರ ಜ್ಯೇಷ್ಠಪುತ್ರರಾದ ೬ ವರ್ಷದವಯಸ್ಸುಳ್ಳ ಯುವರಾಜರು ಅವರಮುಂದೆ ಯುದ್ಧರಂಗದಲ್ಲಿ ಉಪಯೋಗಿಸುವ ನಗಾರಿಯನ್ನು ಬಾರಿಸುತ್ತಾ ಹೋಗುವನು. ಮೂರುಮಂದಿ ಶಿಪಾಯಿಗಳು ಈಮಕ್ಕಳಸಂಗಡ ಇದ್ದುಕೊಂಡು ಕೋಟೆಯನ್ನು ಹಲ್ಲಾಮಾಡುವಂತಾ, ಯುದ್ಧವನ್ನುಮಾಡುವಂತಾ, ಈ ಮುಂತಾದ ವಿಧಾನಗಳನ್ನು ಅವರಿಗೆ ತೋರಿಸುತ್ತಾರೆ

Bangalore.—Printed and published at the Karnatic Press, No. 14, Hospital Road, Petta —1888.

ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA.

ಪ್ರತಿ ಸೋಮವಾರ ಪ್ರಾತಃಕಾಲದಲ್ಲಿ ಪ್ರಕಟಿಸಲ್ಪಡುವದು.

Published every Monday Morning.

ಪ್ರಕಾಶಮವಿವಿಧಪ್ರವೃತ್ತ್ಯುಪಗಮಾರ್ಥ ಕರ್ಣಾಟಕಪ್ರಕಾಶಕನಪರಾಭಿಧಾಪ್ರಥಿತಸಾಹಿತೀಶೋಭಿತಾ । ಮ್ಯಗಾಂಕಮಿತವಾಸರೇನಿಹಿತಮುದ್ರಣಾಸಜ್ಜನೈರ್ನಿ ಕಾಮುಪರಿಪೋಷಿತಾದಿಕತಿಮಾನಸುಸುಮುದಾ

Vol. XV.] BANGALORE.—MONDAY. OCTOBER 8, 1888. [No. 40.

ಸಂಪುಟ ೧೫.] ಬೆಂಗಳೂರು:—ಸನ್ ೧೮೮೮ನೇ ಇಸವಿ ಅಕ್ಟೋಬರ್ ೮ನೇ ತಾರೀಖು ಸೋಮವಾರ. [ಸಂಚಿಕೆ ೪೦.

ಕರ್ಣಾಟಕ ಪ್ರಕಾಶಿಕಾ

ಪತ್ರಿಕೆಯ ಚಂದಾ ದರಗಳು,
೧೮೮೮ನೇ ಇಸವಿ ಜನವರಿಯಿಂದಾಯಿತು
ಕಡಮೆಮಾಡಲ್ಪಟ್ಟಿರುತ್ತದೆ.

ಈ ಪತ್ರಿಕೆಯು ಬಹುದಿವಸದಿಂದಲೂ ಅನೇಕ ರ ಅಪೇಕ್ಷೆಯನ್ನು ನೆರವೇರಿಸುವ ಉದ್ದೇಶದೊಡನೆ ಯೂ, ಪರಿಮಿತವಾದ ಆದಾಯವುಳ್ಳವರಿಗೆಲ್ಲ ಈ ಪತ್ರಿಕೆಯು ಸುಲಭವಾಗಿ ಲಭಿಸುವಂತಿರ ಬೇಕೆಂಬ ಅಭಿಪ್ರಾಯದೊಡನೆಯೂ ಇದರ ಚಂ ದಾದರವನ್ನು ಇನಲಾಕಿಮಂತ ಕಡಮೆಮಾಡಿರು ತ್ತೇವೆ:—

ಇಂಗ್ಲಿಷ್ ಮತ್ತು ಕನ್ನಡಭಾಗಗಳಿಗೆ.

	ಸ್ಥಳದವರಿಗೆ	ಪರಸ್ಥಳದವರಿಗೆ.
12 ತಿಂಗಳಿಗೆ	8 0 0	9—0—0
6 „	4—0—0	4—8—0
3 „	2—8—0	2—8—0

ಇಂಗ್ಲಿಷ್ ಅಥವಾ ಕನ್ನಡಭಾಗಗಳಿಗೆ.

	ಸ್ಥಳದವರಿಗೆ	ಪರಸ್ಥಳದವರಿಗೆ.
12 ತಿಂಗಳಿಗೆ	4—0—0	5—0—0
6 „	2 0—0	2—8—0
3 „	1—4—0	1—8—0

ಪಠಾ- ಅಂದರೆ ಮಾಸ್ತರುಗಳು, ಮೋಡಿ ಮತ್ತು ತಾ ಲ್ಲೂಕ್ ಸ್ಕೂಲ್ ಮಾಸ್ತರುಗಳು, ಸ್ಥಾನಿಕರುಗಳು, ದತ್ತಿಲು, ವಿದ್ಯಾರ್ಥಿಗಳು, ಇವರಿಗೆಲ್ಲ ಈ ಪತ್ರಿಕೆಯು ಮೇಲ್ ಚಂದಾದರಕ್ಕೆ ಕೊಡಲ್ಪಡುವದು. [illegible]

[illegible]

[illegible]

[illegible]

"IT RECOMENDS ITSELF"

ALL WHO SUFFER FIND SURE RELIEF

LITTLE'S

ORIENTAL BALM

THE MOST EFFECTUAL MODERN REMEDY FOR PAIN.

ಲಿಟಿಲ್ ಯೆಂಬವರಿಂದ ತಯಾರಾದ [illegible] ಎಂಬ ಪ್ರಾಚ್ಯದೇಶ ಸಂಬಂಧವಾದ ಅಮೂಲ್ಯ ತೈಲವು ಸ್ವಲ್ಪವೂ ಪ್ರಯಾಸವಿಲ್ಲದ್ದು, ಮತ್ತು ಸಫಲವಾದ ನವೀನ ಚಿಕಿತ್ಸಾಕ್ರಮದ ಔಷಧವು. ಇದರಿಂದ ಸಕಲ ವಾತರೋಗಗಳೂ, [illegible] ನಿವೃತ್ತಿಯಾಗುವವು. ಮುಖ್ಯವಾಗಿ ಬಹುಕಾಲಿಕ ವಾದ ವಾತರೋಗಗಳು, ಕಾಲು, ಗಂಟುಗಳಲ್ಲಿ ಉರಿ, ನರೋವುನೋವು, ಕೀಲುವಾಯು, ಸೊಂಟವಾಯು, ಉಳುಕು ನೋವು, ತಲೆನೋವು, ತಿರುಗಾಟವು ಮುಂತಾದ ರೋಗಗಳಲ್ಲೆಲ್ಲ ನಿಸ್ಸಂದೇಹವಾಗಿ ಬಹಳ ಪ್ರಯೋಜನವನ್ನುಂಟು ಮಾಡತಕ್ಕದ್ದು. ಈ ತೈಲವನ್ನು ನೋವುಳ್ಳ ಸ್ಥಳಗಳಲ್ಲಿ [illegible] ಚೆನ್ನಾಗಿ ತಿಕ್ಕಿ ದಲ್ಲಿ [illegible] ನೋವುಗಳನ್ನು ನಿವೃತ್ತಿ [illegible] ತೈಲವಾಗಿರುತ್ತದೆ. [illegible] ಮತ್ತು [illegible] ನಿವೃತ್ತಿಯಾಗುವವು. ಗಂಟುಗಳಲ್ಲುಂಟಾಗುವ ಉರಿ ಅಥವಾ ಪ್ರಾಣಿಗಳಿಗೆ ಈ ತೈಲವು ಅದ್ಭುತವಾದ ಮತ್ತು ಶೀಘ್ರವಾದ ಸಂಪೂರ್ಣ ಗುಣವನ್ನುಂಟುಮಾಡುವದು. ಅದ್ಭುತವಾದ ಈ ಔಷಧವನ್ನು ಅಜನೂ ಉಪಯೋಗಿಸಿದಲ್ಲಿ ಅದರ ಪ್ರಯೋಜನವು ಸ್ವತಃವೇ ವ್ಯಕ್ತವಾಗುವದು. ಈ ತೈಲವು ಶೀತ [illegible] ಪ್ರಯಾಣಿಕರು, ಬೇಟೆಯಾಡುವವರು, ದೇಹಾಯಾಸ ಮಾ ಡುವವರು, ಮುಂತಾದವರಿಗೆಲ್ಲ ಅಮೂಲ್ಯವಾದದ್ದು.

ಪರಿಶೀಲಕರ ಅಭಿಪ್ರಾಯವು.

ಐರ್ಲ್ಯಾಂಡ್ ದೇಶದ ಫಾರ್ಮಸ್ಯುಟಿಕಲ್ ಸೊಸೈಟಿಯೆಂಬ ಔಷಧಶಾಲೆಯ ಪ್ರೆಸಿಡೆಂಟರಾಗಿಯೂ, ಸದರೀ ದೇ ಶದ [illegible] ಸೊಸೈಟಿ ಯೆಂಬ [illegible] ಸಮಾಜದ ಸಭಾಸದರಾಗಿಯೂ, [illegible] ಆಫ್ [illegible] ಎಂಬ [illegible] ದಿವಸದ ವಿಷಯಕವಾದ ಅನೇಕ ಲೇಖನಾ ಧಿಕಾರಿಯಾಗಿಯೂ, ಇರುವ ಸಿ. ಆರ್. ಟಿಚ್‌ಬೋರ್ನ್ (C. R. TICHBORNE, L. L. D., F. C. S., M. R. I. A.,) ಯೆಂಬವರು ಅಭಿಪ್ರಾಯ [illegible] —ಲಿಟಿಲ್ ಯವರ [illegible] ಬಾಸಲೋ ತೆಗೆದು [illegible] ತೈಲವೇ [illegible] ಇದು ರೋ ಗಕ್ಕೆ ಉಪಯೋಗಿಸಲ್ಪಡುವಾಗ [illegible] ನಿಜವಾಗಿ [illegible] ರೋಗ ನಿವಾರಕ ತಾಕತ್ತಿಯುಳ್ಳದ್ದಾಗಿರುತ್ತದೆ. ಈ [illegible] ತಂತಕ್ಕದ್ದಾಗಿರುವದರಿಂದ ಇದು ಯಾವ ತರದ ರೋಗಗಳಿಗೆ ಉಪಯುಕ್ತವೆಂದು ತಿಳಿಸಲ್ಪಟ್ಟಿದೆಯೋ ಸದರೀ ರೋಗಗಳಲ್ಲಿ ಅದರ ಪ್ರಯೋಜನವು ವ್ಯಕ್ತ ವಾಗುವದು. ಈ ತೈಲವು [illegible] ತಯಾರಾಗಿ [illegible].

ಇದರ ಕ್ರಯ —ಸೀಸೆ ಒಂದಕ್ಕೆ ೧ ರೂಪಾಯಿ.

ಇದು [illegible] ವಿವಿಧ ಕಾಯಿಲೆಗಳಿಗೂ, ಮದರಾಸ್ ಶಂಬುದಾಸ್ [illegible] ನಂಬರ್ [illegible] ನ, ಎ. ಸಿ. ಬೆರ್ರಿಮನ್ ಯವರಲ್ಲಿಯೂ, ಈ ಕೆಳಗೆ [illegible] ಏಜಂಟರುಗಳಾದ ಜೆ. ವೆಸ್ಟ್ ಯವರ ಕಂಪನಿ ಯಲ್ಲಿಯೂ, ಮೆ. ಕೆಪ್ಟೇನ್ ಅಂಡ್ ಕಂಪೆನಿ [illegible] ಕಂಪೆನಿಯವರಲ್ಲಿಯೂ ದೊರೆಯುವದು.

AGENTS.— Messrs, J. WEST, Chemist, Sr., Bangalore.
CAPPAIS & Co. Chemists, Bangalore.
RUSS & Co, Chemists, Bangalore; and of
MAHOMED YOUSOFF AND SONS, The Cash Bazar, Bangalore
A. C. BERRYMAN & Co.,
20 Sambodow Street Madras.

NOTICE.

VAIDYASARA SANGRAHA

A TREATISE ON THE PRINCIPLES OF

HINDU MEDICINE

Price including Postage Rs 5 6 0

ವೈದ್ಯಸಾರ ಸಂಗ್ರಹ.

ಕೊಳ್ಳಬೇಕೆಂಬ ಅಪೇಕ್ಷೆಯುಳ್ಳವರು ಮೊಬಲಗಿನೊ ಡನೆ ಈ ಕೆಳಗೆ ರುಜುಮಾಡಿರತಕ್ಕವರ ಹೆಸರಿಗೆ ಬರೆದುಕೊಂಡರೆ ಪುಸ್ತಕ ಕೂಡಲೇ ಕಳುಹಿ ಸಲ್ಪಡುವದು. ಮೊಬಲಗು ಇಲ್ಲದ ಅರ್ಜಿಗಳಿಗೆ ಸುತರಾಂ ನಿಗೇಕೊಡಲ್ಪಡಲಾರದು.

ಇದರ ಕ್ರಯ ... ...ರೂ|| ೫—೦—೦
ಪ್ಯಾಕಿಂಗ್ ಮತ್ತು ಅಂಚೆಖರ್ಚು, ೦—೬—೦

ಟಿ. ಬಿ. ವೆಂಕಟಾಚಾರ್,
ಆಸ್ಪತ್ರಿದೊಡ್ಡ ಬೆಂಗಳೂರು.

ವಿಶೇಷ ಪತ್ರಿಕಾಪತ್ರ

ಪುಣೆ ಚಿತ್ರಶಾಲೆಯಲ್ಲಿ ಅಚ್ಚುಹಾಕಲ್ಪಟ್ಟಿರುವ ಬಹಳ ಚಿ ತ್ರಗಳಲ್ಲಿ, ಹಿಂದೂ ದೇವತೆಗಳ, ಚರಿತ್ರೆಗಳ ಮೂಲಕ ಪ್ರಸಿದ್ಧರಾದ ಪುರುಷರ, ಸುಂದರಿಗಳಾದ ಸ್ತ್ರೀಯರ [illegible] ಈ ಪತ್ರಿಕೆಯ ಚಂದಾದಾರರಿಗೆ [illegible] ಕೊಡಲ್ಪಡುವದು [illegible] ಕಳುಹಿಸಲ್ಪಡುವವು.

ಪ್ರಕಾ ಮೇನೇಜರ್ ಚಿತ್ರಶಾಲೆಯ ಮ್ಯಾನೇಜರ್.

ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA.

MONDAY, OCTOBER 8, 1888.

೧೮೮೮ನೇ ಅಕ್ಟೋಬರ್ ೮ನೇ ತಾ|| ಸೋಮವಾರ.

A DUPUTY COLLECTOR IN TROUBLE.

ಕಲ್ಲಿಕೋಟೆ ಸಬಾರ್ಡಿನೇಟ್ ಜಡ್ಜಿಯವರಾದ ಕುಂಜನ್ ಮೇನನ್ ಯವರಮೇಲೆ ತರಲ್ಪಟ್ಟಿರುವ ಪತ್ ಮೊಕದ್ದಮೆಯು ಕಡೆಗೆ ಪರ್ಯವಸಾನವ ನ್ನೈದಿದ ಕ್ರಮವು ಆಶ್ಚರ್ಯಕರವೆಂದು ಯೆಲ್ಲರ ಜ್ಞಾ ಪಕದೊಳಗಿರಬಹುದಷ್ಟೆ. ಅದೇ ಡಿಸ್ಟ್ರಿಕ್ಟಿಗೆ ಸೇರಿದ ತತ್ಸಮಾನಾಧಿಕಾರಿಗಳಲ್ಲೊಬ್ಬರಾದ ಡೆ ಪ್ಯುಟಿ ಕಲೆಕ್ಟರ್ ವ ಮ್ಯಾಜಿಸ್ಟ್ರೇಟರಾದ ಮ|| ಕುಂಹಿ ಕಣ್ಣನ್ ಯೆಂಬವರ ಮೇಲೂ ಅವರ ಅ ಣ್ಣಂದಿರಾದ ಶ್ರೀಧರ್ ಮ|| ಅನಂತನ್ ಯೆಂಬವ ರಮೇಲೂ ಲಾಚುರುಷವತ್ ಮೊಕದ್ದಮೆಯೊಂದು ಈಚೆ ಗೆ ತರಲ್ಪಟ್ಟು ಅದೀಗ ಡಿಸ್ಟ್ರಿಕ್ಟ್ ಕೋರ್ಟಿನ ಲ್ಲಿ ಜಾಯಿಂಟ್ ಮ್ಯಾಜಿಸ್ಟ್ರೇಟ್ ಮ|| ಟ್ಯಾಗ್ ಯೆಂ ಬವರಿಂದ ಗತ ಸೋಮವಾರದವರೆವಿಗೂ ವಿಚಾರ ಣೆ ಮಾಡಲ್ಪಡುತಲಿದೆ. ಫಿರ್ಯಾದಿ ತರಫ್ ಸಾಕ್ಷಿ ಗಳಲ್ಲಿಕೆ ಇದುವರೆವಿಗೆ ಹತ್ತು ಹನ್ನೆರಡುಮಂ ದಿಯ ಡೈಪೋಸಿಷನ್ ತೆಗೆದುಕೊಳ್ಳಲ್ಪಟ್ಟಿತು. ಇ ನ್ನು ಮೊಕದ್ದಮೆ ಪೂರೈಸಲಿಕ್ಕೆ ಒಂದೆರಡು ದಿ ನಗಳು ಹಿಡಿಯಬಹುದೆಂದು ತೋರುತ್ತದೆ. ಡೆ ಪ್ಯುಟಿ ಕಲೆಕ್ಟರವರು ಸಸ್ಪೆಂಡ್ ಮಾಡಲ್ಪಟ್ಟು ಹತ್ತುಸಾವಿರ ರೂಪಾಯಿಗಳ ಸ್ವಂತ ಮತ್ತು ಹತ್ತುಸಾವಿರ ರೂಪಾಯಿಗಳಿಗೆ ಅನ್ಯರಿಬ್ಬರ ಜಾಮೀನುಗಳಮೇಲೆ ಬಿಡಲ್ಪಟ್ಟಿದಾರೆ. ಬಹು ಶಃ ಈ ಮೊಕದ್ದಮೆಯು ಸೆಷನ್ ದರ್ಯಾಪ್ತಿಯ ಬಗ್ಗೆ ಕಮಿಟ್ ಮಾಡಲ್ಪಡಬಹುದೆಂದು ತೋರು ತ್ತದೆ. ಆದದರಿಂದ ಅಪರಾಧಿಯು ತಮ್ಮ ಡಿ ಫೆನ್ಸನ್ನು ಸೆಷನ್ ಕೋರ್ಟಿನಲ್ಲಿ ತಿಳಿಸುವಂತೆ ಡೇಳ ಸಾಕ್ಷಿಗಳ ಫೈಸಲ್ ಮುಂತಾದವನ್ನೆ ಲ್ಲ ಅಮಾನತ್ತಾಗಿ ನಿಲ್ಲಿಸಿಟ್ಟಿದಾರೆ. ಈ ಮೊ ಕದ್ದಮೆಯು ಹೊರಪಟ್ಟ ಕ್ರಮವು ಕೇಳಲಿಕ್ಕೆ ಬಹಳ ವಿಚಿತ್ರವಾಗಿರುತ್ತದೆ. ಅದು ಹ್ಯಾಗೆಂದ ರೆ, ಈಗ್ಯೆ ಕೆಲವು ಕಾಲದಹಿಂದೆ ಸುಬ್ಬರಿಹಾಜ್ ಎಂಬಾತನಿಗೂ ಒಬ್ಬ ಮಾಪಿಳೆ ಜಾತಿಯವನಾದ ಲಬ್ಬೆಯವನಿಗೂ ಆಗಿದ್ದ ಒಂದು ಆಸ್ತಿಗಾಗಿ ಪಾಂಗಾಮಾತಿ ಸಹ ನಡೆದು ಕಡೆಗೆ ಲಬ್ಬೆಯವ ನು ಸುಬ್ಬರಿ ಹಾಜಿನಮೇಲೆ ಕ್ರಿಮಿನಲ್‌ನಲ್ಲಿ ಫಿ ರ್ಯಾದು ಮಾಡಿದನು. ಸದರೀ ಮೊಕದ್ದಮೆಯ ನ್ನು ಮ|| ಕುಂಹಿ ಕಣ್ಣನ್ ಯವರು ದರ್ಯಾಪ್ತಿ ಮಾಡಿ ಅದು ಒಂದೇ ದಿನದಲ್ಲಿ ಪೂರೈಸದೆ ಹೋ ದದರಿಂದ ಅಪರಾಧಿಯನ್ನು ಲಾಕಪಿನಲ್ಲಿಡುವಂ ತೆ ಹುಕುಂ ಮಾಡಿದ್ದರು. ಅದೇರೀತಿ ಲಾಕಪಿ ನೊಳಗಿದ್ದವನನ್ನು ಬಿಟ್ಟು ಬಿಡುವಂತೆ ಮ್ಯಾಜಿ ಸ್ಟ್ರೇಟರು ಮಾರನೇದಿನ ಹುಕುಂ ಹುಕುಂ ಮಾ ಡಿದ್ದರಮೇಲೆ ಅವನು ಬಿಡಲ್ಪಟ್ಟನು. ಹೀಗೆ ಮ್ಯಾಜಿಸ್ಟ್ರೇಟರು ಫೈನಲ್ ದಿನದಲ್ಲಿ ಕೊಟ್ಟ ದ್ದ ಹುಕುಮನ್ನು ಮಾರನೇ ದಿನ ಎಕಾಏಕಿ ರ ದ್ದು ಮಾಡಿ ಅಪರಾಧಿಯನ್ನು ಖುಲಾಸೆ ಮಾ ಡುವಂತೆ ವಿಧಿಸಲಿಕ್ಕೇನೋ ಪ್ರಬಲ ಕಾರಣವಿ

ವೇಕೆಂಬ ಅನುಮಾನವು ಅನೇಕರಿಗೆ ತಲೆದೋರಿತು. ಪರಂತು ಇದರ ಪ್ರಸ್ತಾಪವು ಹೊರಗಾಗದೆ ಗೂಢವಾಗಿರುತಲಿತ್ತು. ಹೀಗಿರಲಾಗಿ ಆ ಡಿಸ್ಟ್ರಿಕ್ಟು ಕಲೆಕ್ಟರ್ ಮ|| ಲೋಗರ್ಸಯವರು ತಮ್ಮ ಡಿಸ್ಟ್ರಿಕ್ಟು ಸಾಧಾರಣಾದ ರಿಪೋರ್ಟಿನಲ್ಲಿ ನೀಲಂಬರ ರಾಜರೆಂಬ ಒಬ್ಬ ಜಮೀನ್ದಾರರನ್ನು ಕುರಿತು ಆಕ್ಷೇಪಣೀಯವಾದ ಕೆಲವು ಅಂಶಗಳನ್ನು ಬರೆದಿದ್ದರು. ಅದಂ ಕಂಡು ಸದರೀ ರಾಜರು ಮ|| ಲೋಗರ್ಸಯವರಮೇಲೆ ಮಾನನಷ್ಟಪಡಿಸಿದಬಗ್ಗೆ ಫಿರ್ಯಾದು ಮಾಡಲಿಕ್ಕೆ ಗವರ್ನಮೆಂಟಿನವರ ಅನುಮತಿಯಂ ಪಡೆದರು. ಬಳಿಕ ಆ ಮೊಕದ್ದಮೆಯು ಅಲ್ಲಿನ ಸೆರ್ಷನ್ ಕೋರ್ಟಿಗೆ ವಿಚಾರಣೆಯಬಗ್ಗೆ ಕಳುಹಿಸಲ್ಪಟ್ಟಿತು. ಮ|| ಲೋಗರ್ಸಯವರು ಆಗ ರಜಾಮೇಲೆ ಇಂಗ್ಲಾಂಡಿಗೆ ಹೋಗಿದ್ದದರಿಂದ ಅವರಿಗಾಗಿ ಡಿಫೆನ್ಸ್ ತರ್ಫೆ ಹಾಜರಾಗಿ ಮೊಕದ್ದಮೆಯನ್ನು ನಡೆಸುವಂತೆ ಮೇಲೆಕಂಡ ಡೆಪ್ಯುಟಿ ಕಲೆಕ್ಟರ್ ಮ|| ಕರ್ಣಿಹಿಕನ್ನಿರ್ಗಯವರಿಗೆ ಗವರ್ನಮೆಂಟಿನವರು ಹುಕುಂ ಮಾಡಿದರು. ತರುವಾಯ ಸೆರ್ಷವಿಚಾರಣೆಯಲ್ಲಿ ಕೆಲವು ಲೆಕ್ಕ ಪುಸ್ತಕಗಳು ರುಜುವಾತಬಗ್ಗೆ ಕೋರ್ಟಿಗೆ ಹಾಜರ್ಮಾಡಲ್ಪಟ್ಟು ಅಜಮಾಯಿಷೀ ಮಾಡುವಾಗ್ಯೆ ಡೆಪ್ಯುಟಿ ಕಲೆಕ್ಟರಿಗೆ ಸಾವಿರ ರೂಪಾಯಿಗಳು ಕೊಟ್ಟಂತೆ ನಮೂದಾಗಿದ್ದದ್ದು ಕೋರ್ಟಿನವರ ತಿಳುವಳಿಕೆಗೆ ಬಂತು. ಕೆಷ್ಯಕೋಟೆ ಡಿಸ್ಟ್ರಿಕ್ಟು ಆಕ್ಟಿಂಗ ಕಲೆಕ್ಟರಾದ ಮ|| ಡಿಮಾರ್ಗಯವರು ಸದರೀ ವಿಷಯವನ್ನು ಗವರ್ನಮೆಂಟಿನವರಿಗೆ ತಿಳಿಯಪಡಿಸಲು ಅವರು ಡೆಪ್ಯು ಕಲೆಕ್ಟರನ್ನು ಸಸಪೆಂಡ್‌ಮಾಡಿ ಅವರನೇಲೆ ಚಾರ್ಜ ಮಾಡುವಂತೆ ಹುಕುಂ ಮಾಡಿದರು. ಪ್ರಸಕ್ತ ಮೊಕದ್ದಮೆಯು ಸಬ ಜಡ್ಜಿಯವರ ಮೊಕದ್ದಮೆಯಂತೆ ಪ್ರಬಲವಾದದ್ದಾಗಿರುವದರಿಂದ ಅಲ್ಲಿನ ಜನರು ಇದರಲ್ಲಿ ಬಹಳ ಆಸಕ್ತಿಯುಳ್ಳವರಾಗಿದಾರೆ. ಇದುವರಿವಿಗೆ ನಡೆದ ವಿಚಾರಣೆಯನ್ನೂ ಸಾಕ್ಷಿಗಳ ಕೈಫಿಯತ್ತನ್ನೂ ಓದಿ ನೋಡಲಾಗಿ ಅದು ಡೆಪ್ಯುಟಿ ಕಲೆಕ್ಟರಿಗೆ ಸರ್ವಾಂಶದಲ್ಲಿಯೂ ವಿರುದ್ಧಗಳಾಗಿಯೇ ಇರುತಲಿವೆ. ಪರಂತು ಅಪರಾಧಿಯ ಬಚಾವಣೆಗಿರುವ ಸಾಧನಗಳು ಗೊತ್ತಾಗದಿರುವದರಿಂದ ಸೆರ್ಷ ವಿಚಾರಣೆಯಲ್ಲಿಯೇ ಇತರ ಫಲಿತಾಂಶವು ವ್ಯವಸ್ಥೆಯಾಗಬೇಕಾಗಿರುತಿದೆ. ಮುಖ್ಯವಾಗಿ ಇಂತಾ ಮೊಕದ್ದಮೆಗಳು ಆಗಿಂದಾಗ್ಯೆ ಬಂದೆರತು ಬರುತಲಿದ್ದಹೊರ್ತು ಬ್ಯಾರಿಸ್ಟರಗಳ ಜೀವನವು ನಿರ್ಭರವಾಗಿ ಜರಗಲಾರದಾದ್ದರಿಂದ ಅವರ ಜೀವನಾರ್ಥವಾಗಿಯೂ ಮೊದಲೇ ಮೆಲ್ಲುವ ಬಾಯಿಗೆ ಹಿಡಿ ಅವಲಕ್ಕಿ ಹಾಕಿದಂತೆ ನೇಟಿವಗಳೆಲ್ಲರೂ ಅಪ್ರಾಮಾಣಿಕರೆಂದು ದೂಷಿಸುತಲಿರುವ ಆಂಗ್ಲೋಇಂಡಿಯನ್ ಜನರ ದೂಷಣ ತಿರಸ್ಕಾರಗಳಿಗೆ ಪೋಷಕವಾಗಿಯೂ, ದೊಡ್ಡ ದೊಡ್ಡ ನೇಟಿವ್ ಆಫಿಸರಗಳಮೇಲೆ ರುಸುವತ್ ಮೊಕದ್ದಮೆಗಳು ಬರುತಲಿದ್ದರೆ ರಾಜ್ಯಾಡಳಿತದ ವಿಷಯದಲ್ಲಿ ನಾವು ಪಡೆಯಬೇಕೆಂದಪೇಕ್ಷಿಸಿರುವ ಅಧಿಕಾರ ಸ್ವಾತಂತ್ರ್ಯ ಪ್ರಾಪ್ತಿಗೂ ನ್ಯಾಷನಲ್ ಕಾಂಗ್ರೆಸ್ಸಿನ ಉದ್ದೇಶಕ್ಕೂ ಬಹಳ ಅನುಕೂಲವಾಗಿರುವದು.

THE MYSORE GOVERNMENT ZULUM.

ಇದರಡಿ ಕಂಡ ವಿಷಯವಂಕುರಿತು ಇನಾಂದಾರರೊಬ್ಬರು ಬರೆಯುತ್ತಾರೇನೆಂದರೆ:—ಈಗ ನಾವು ತಿಳಿಸತಕ್ಕ ವಿಷಯವು ಪ್ರಜೆಗಳ ದೀರ್ಘಾಲೋಚನೆಗೆ ಅರ್ಹವಾದದ್ದಾಗಿರುತಿದೆ. ಲೋಕದಲ್ಲಿ ಪ್ರಬಲರು ದುರ್ಬಲರನ್ನು ಪೀಡಿಸಲಿಕ್ಕೆ ಅವಕಾಶವಿರುವದರಿಂದಲೂ, ಅಂತಾ ಅವಕಾಶ ಪ್ರದೈವಾನುಗ್ರಹದಿಂ ಅವರಿಗೆ ಲಭಿಸುವದರಿಂದಲೂ, ಅವರು ಆರೀತಿ ಮಾಡುವದು ನ್ಯಾಯವೆಂದು ನುಡಿಯುವವರಹಕ್ಕೆ ನಮ್ಮ ವಿಚಾರವು ನಿಷ್ಪ್ರಯೋಜನವಾಗುವದು. ಹಾಗಿಲ್ಲದೆ ಬಲಿಷ್ಠರು ದುರ್ಬಲರನ್ನು ಪೀಡಿಸಬಾರದೆಂದು ಹೇಳುವ ಪಕ್ಷಕ್ಕೆ ನಮ್ಮ ಬರವಣಿಗೆಯು ಪ್ರಯೋಜನಕರವಾಗುವದು, ಮತ್ತು ಅದರಂತೆ ಆಚರಿಸಬೇಕಾದದ್ದು ಅವಶ್ಯವೆಂದು ಏರ್ಪಡುವದು. ನಾವು ಇಲ್ಲಿನ ರಾಜಕೀಯ ವಿಷಯದಲ್ಲಿ ಪ್ರವೇಶಿಸುವದಿಲ್ಲವೆಂಬ ಸಂಕಲ್ಪವುಳ್ಳವರಾಗಿದ್ದರೂ ಮಹಾರಾಜಾ ಸರ್ಕಾರದವರಿಗೆ ರಾಜ್ಯದಮೇಲೂ, ಅವರ ಪ್ರಜೆಗಳಮೇಲೂ ಇರತಕ್ಕ ಹಕ್ಕಿನ ಪರಿಮಿತಿಯನ್ನು ಸ್ಪಷ್ಟಪಡಿಸಿ ತಿಳಿಸಬೇಕಾದಸಂದರ್ಭಗಳು ಆಗಿಂದಾಗ್ಯೆ ಪ್ರಾಪ್ತವಾಗುತಲಿರುತಿವೆ. ಈ ಸಂಸ್ಥಾನದ ಆಧಿಪತ್ಯವನ್ನು ಶ್ರೀಮನ್ಮಹಾರಾಜರವರಿಗೆ ಒಪ್ಪಿಸಿದಕಾಲದಲ್ಲಿ ಅದರಮೇಲೆ ಅವರಿಗೂ, ಪ್ರಜೆಗಳಿಗೂ, ಬ್ರಿಟಿಷ ಗವರ್ನಮೆಂಟಿನವರಿಗೂ ಇರುವ ಹಕ್ಕುದಾರಿಯು ನಿರ್ಧರಿಸಲ್ಪಟ್ಟಿರುತಿದೆಯಲ್ಲದೆ ಬ್ರಿಟಿಷ ಸರ್ಕಾರದವರು ಕೊಟ್ಟ ಕೌಲಕರಾರ ಹುಕುಂ ನ್ಯಾಯನಿಬಂಧನೆಗಳು ದೃಢಪಡಿಸಲ್ಪಟ್ಟಿರುತಿವೆ. ನದೀಗರ್ಭದಲ್ಲಿರುವ ಕಲ್ಲುಗಳ ವಿಷಯದಲ್ಲಿಯೂ, ರಸ್ತೆಯ ಬಾಜೂ ಜಮೀನುಗಳ ವಿಷಯದಲ್ಲಿಯೂ, ಜಲಾಧಾರಗಳ ವಿಷಯದಲ್ಲಿಯೂ, ತಮ್ಮ ಯುಕ್ತಾನುಸಾರ ಹುಕುಂ ಕೊಡಲಿಕ್ಕೆ ಸ್ವಾತಂತ್ರ್ಯವಿರುತಿದೆಯೆಂತಲೂ, ಅದನ್ನಡ್ಡಿಪಡಿಸುವವರು ತಮ್ಮ ಬಾಧ್ಯತೆಯನ್ನು ನಿರೂಪಿಸಬೇಕೆಂತಲೂ, ಈ ಪತ್ರಿಕೆಯ ಮತ್ತೊಂದು ಭಾಗದಲ್ಲಿ ಪ್ರಕಟಿಸಲ್ಪಟ್ಟಿರುವ ೧೮೮೮ನೇ ಇಸವಿ ಸೆಪ್ಟಂಬರ ಹದಿಮೂರನೇ ತಾರೀಖು ೧೨೮೫ನೇ ನುಂಬರುಳ್ಳ ದಿವಾನರವರ ಇಸ್ತಿಹಾರನಾಮೆಯ ಮೂಲಕ ಸ್ಪಷ್ಟವಾಗುತಿದೆ. ಜನಗಳ ಹಕ್ಕುದಾರಿ ಎಂಬದು ದೈವಕೃತ ರಾಜಕೃತ ಆತ್ಮಕೃತಗಳೆಂದು ಮೂರುವಿಧಗಳಾಗಿರುತಿದೆ. ಪೃಥಿವ್ಯಾದಿ ಪಂಚಭೂತಗಳಲ್ಲಿರುವ ಸ್ವಾತಂತ್ರ್ಯವು ದೈವಿಕವಾದದ್ದು. ರಾಜಭಾಗದವ್ಯಕೆ ಕೆಲವು ಭಾಗವನ್ನು ಬಿಡುವಣವು ರಾಜಮೂಲಕವಾದದ್ದು, ತಮ್ಮ ಬುದ್ಧಿಶ್ರಮ ಧನವ್ಯಯಗಳಿಂದುಂಟಾಗತಕ್ಕದ್ದು ಆತ್ಮಕೃತವಾದದ್ದು. ಈ ದೇಶದ ಇನಾಂದಾರ ಕಾಯಂಗುತ್ತೇದಾರ ಜಹಗೀರದಾರ ಮೊದಲಾದವರಿಗಾಗಿ ಸರ್ಕಾರದವರು ತಮ್ಮ ಹಕ್ಕಿನಪೈಕಿ ಯಾವ್ಟುಭಾಗ ಯಾವಮೂಲಕ ಬಿಟ್ಟದಾರೆಂಬವನ್ನು ನಿರ್ಧರಿಸಲಿಕ್ಕೆ ಆಗಿಂದಾಗ್ಯೆ ವಿವಾದಗಳುಂಟಾಗಿ, ಅವು ತತ್ತತ್ಕಾಲೋಚಿತವಾದ ಹುಕುಂಗಳ ಮೂಲಕ ವ್ಯವಸ್ಥೆಯಾಗುತಲಿದ್ದವು. ಇದರ ವಿಮರ್ಶೆಯಬಗ್ಗೆ ಇನಾಂ ಸೆಟಲ್‌ಮೆಂಟ ಏರ್ಪಟ್ಟು ರಾಜಭಾಗಪರಿವರ್ತನೆಗಾಗಿಮುನಾಸಬ್ ಇಂಡಮ್ನಿಫಿಕೇಷನ್ ಫಿ ಎಂಬ ಕ್ವಿಟರೆಂಟನ್ನು ಕರಾಯಿಸಿ ಅದರವಸೂಲ್‌ಬಗ್ಗೆ ವಿನಾ ಯಾವ ಸಂದರ್ಭದಲ್ಲಿಯೂ ತಾವು ಪ್ರವೇಶಿಸುವದಿಲ್ಲವೆಂದು ಗವರ್ನಮೆಂಟಿನವರು ಕೊಟ್ಟಿರುವ ಸನ್ನದುಗಳು ಅದ್ಯಾಪಿ ಊರ್ಜಿತಗಳಾಗಿರುತಿವೆ. ಮಹಾರಾಜರವರಿಗೆ ಕೊಡಲ್ಪಟ್ಟ ಸ್ವಾತಂತ್ರ್ಯವು, ನ್ಯಾಯಪರಿಪಾಲನೆ, ಸಮಿಷ್ಟಿಯಾಗಿ ಜನಗಳ ಪ್ರಯೋಜನಾರ್ಥ ಇಂಗ್ಲಿಷ್ ಗವರ್ನಮೆಂಟಿನವರ ಅನುಮತಿಯಮೇಲೆ ಲೋಕಲ್ ಶೆರಿಗೆ ವಸೂಲ್ ಮಾಡುವದು, ಇವುಗಳಾಗಿರುತಿವೆ. ಇನಾಂದಾರರ ಜಮೀನಿಗೆ ಸೇರಿರುವ ರಸ್ತೆ ಮುಂತಾದವು ಸರ್ಕಾರದವರ ಸ್ವತ್ತು ಅಲ್ಲದೆ ಇನಾಂದಾರರದೇ ಎಂಬ ಅಂಶ ಇನಾಂ ಸೆಟಲ್‌ಮೆಂಟಿಗೆ ಪೂರ್ವವೇ ನಿಜಾರವಾಗಿ ಈ ದೇಶದಲ್ಲಿಯೂ ಮದರಾಸ್ ಗವರ್ನಮೆಂಟಿನಲ್ಲಿಯೂ ಇನಾಂದಾರರದೇ ಯೆಂದು ವ್ಯವಸ್ಥೆಯಾಗಿರುತಿದೆ. ಜಲ, ತರು, ಪಾಷಾಣ, ನಿಕ್ಷೇಪ, ಅಕ್ಷೀಣ, ಆಗಾಮಿ, ಸಿದ್ಧ ಸಾಧ್ಯಗಳೆಂಬ ಅಷ್ಟಭೋಗತೇಜ ಸ್ವಾಮ್ಯಂಗಳು ಇನಾಂದಾರರಿಗೆ ಕಂಠೋಕ್ತವಾಗಿ ಕೊಟ್ಟಮೇಲೆ ಮರಳಿ ಅವುಗಳಲ್ಲಿ ಸರ್ಕಾರದವರಿಗೇನು ಬಾಧ್ಯತೆ ಇರುತಿದೆ? ಬಾಜೂ ಜಮೀನು ಮತ್ತು ನದೀ ಗರ್ಭದ ವಿಷಯದಲ್ಲಿ ಇನಾಂದಾರರಿಗೂ ಸರ್ಕಾರದವರಿಗು ಸಹ ಸಮಾನ ಬಾಧ್ಯತೆಯುಂಟೆಂದಾದರೂ ಯಾತಕ್ಕೆ ಅಂಗೀಕರಿಸಬಾರದು? ಅವುಗಳಲ್ಲಿ ಪ್ರವೇಶಿಸಬೇಕಾದ ಆವಶ್ಯಕತೆಯು ಈಗ ಯಾರಿಗೆ ಉಂಟಾಯಿತು? ಮೈಸೂರು ಸರ್ಕಾರಕ್ಕುಂಟಾದರೆ ತಮ್ಮ ಹಕ್ಕುದಾರಿಯನ್ನು ನಿರೂಪಿಸಬೇಕಾದ ಭಾರವು ಅವರಿಗೇ ಸೇರಿದ್ದಾಗಿರುತಿದೆ. ಅಂತಾ ಆವಶ್ಯಕತೆಯು ಸರ್ಕಾರದವರಿಗುಂಟಾಗಿದ್ದರೆ ಇನಾಂದಾರರು ತಮ್ಮ ತಮ್ಮ ಹಕ್ಕನ್ನು ನಿರೂಪಿಸಲಿಕ್ಕೆ ಯಾತಕ್ಕೆ ಪ್ರಯತ್ನ ಪಡಬೇಕು? ಸರ್ಕಾರ್ ಕಂದಾಯ ಕೊಡುವ ರೈತರಿಗೆ ಸಹ ಬಾಜೂ ಜಮೀನಿನಲ್ಲಿ ಹಕ್ಕಿರುವಾಗ್ಯೆ ಅನುಭವದಾರರಾದ ಇನಾಂದಾರರಿಗೆ ಹಕ್ಕಿಲ್ಲವೆಂದು ಹೇಳುವಣವು ಸರಿಯಲ್ಲವು. ನದೀ ಗರ್ಭ ಜಮೀನುಗಳು ಸಾಲಿಬನಾಲ್ ಕಮ್ಕಿ ಜಾಸ್ತೀಯಾಗುವದರಿಂದ ನೀರು ಹರಿಯುವ ಸ್ಥಳವನ್ನು ಮಾತ್ರ ಪರಂಪೋಕಿಗೆ ದಾಖಲ್ಮಾಡಿ ಬಾಕೀ ಜಮೀನನ್ನು ಸಾಗುವಳಿಯಾಯಿತೆಂದು ಸರ್ವೇ ಇಲಾಖೆಯವರು ಭಾವಿಸುತ್ತಾರೆ. ಅನೇಕ ನದೀ ಗರ್ಭಗಳಲ್ಲಿ ಕಬೂಜ್ ತಬರ್ಜಾಹ್ ಫಸಲ್‌ಗಳನ್ನಿಟ್ಟು ಜನಗಳೀಪಲಗಳನ್ನನುಭವಿಸುತ್ತಾರೆ. ಫಲಾನುಭವವುಳ್ಳವರಿಗೆ ಜಮೀನಿನಲ್ಲಿರುವ ಹಕ್ಕು ಅದರಲ್ಲಿರುವ ಕಲ್ಲು ಮರಳುಗಳಲ್ಲಿಲ್ಲವೆಂದು ನುಡಿಯುವದು ಬಹಳ ಆಶ್ಚರ್ಯಕರವಾಗಿದೆ. ಕೃಷ್ಣಾ ಗೋದಾವರೀ ಮುಂತಾದ ನದೀ ಪ್ರಾಂತಗಳಲ್ಲಿರುವ ಇನಾಂಜಮೀನುಗಳು ನದೀ ಪಾತವಾದರೆ ಅದು ದೈವಕೃತವಾದದರಿಂದ ಗವರ್ನಮೆಂಟಿನವರು ಅದಕ್ಕೆ ಈಡು ಜಮೀನು ಕೊಡದೆ, ಮರಳಿ ಯಾವಾಗಲಾದರೂ ತಿಟ್ಟಾಗಿಯೇರ್ಪಡುವ ಪಕ್ಷಕ್ಕೆ ಅನುಭವಿಸಬಹುದೆಂದು ಹುಕುಂ ಕೊಡುತ್ತಾರೆ. ಇದು ಹಾಗಿರಲಿ. ಕಂಟ್ರಾಕ್ಟುದಾರರು ಕಲ್ಲುಗಳನ್ನು ಸುಲಭವಾಗಿ ಸಂಪಾದಿಸಿಕೊಳ್ಳಲಿಕ್ಕೆ ಸರ್ಕಾರದವರು ಹುಕುಂ ಕೊಡುವದು ಸ್ವಪ್ರಯೋಜನಾರ್ಥವಾಗಿಯೇ ಅಥವಾ ಪಾರಮಾರ್ಥಿಕ ಜ್ಞಾನದಿಂದಲೇ ಎಂದು ಆಲೋಚಿಸಿದರೆ ಕೇವಲ ತಮ್ಮ ಖರ್ಚಿನ ಬಾಬನ್ನು ಕಡಮೆಮಾಡಿಕೊಳ್ಳುವದಕ್ಕೆಂದು ಸ್ಪಷ್ಟವಾಗಿರುತಿದೆ. ಇದೊಂದೇವಿಷಯವಲ್ಲವು ಕೆಂಡೀ ಖರಾಬ ಜಂಗಲ್ ಮೊದಲಾದವುಗಳಲ್ಲಿ ಸಹ ಮಹಾರಾಜಾ ಸರ್ಕಾರದವರು ಮನಸ್ವೀ ಪ್ರವೇಶಿಸಿ ಇಲ್ಲದ ನಿರ್ಬಂಧಗಳನ್ನುಂಟುಮಾಡುತ್ತಾರೆಂದು ತಿಳಿಯಬರುತಿದೆ. ಮುಖ್ಯವಾದ ಮೇಲೆಕಂಡ ಇಸ್ತಿಹಾರನ್ನು ಇದುವರಿವಿಗೂ ಕನ್ನಡದಲ್ಲಿ ಫಾಯಿಷ್ ಮಾಡದೆ ಇರುವದು ಈಗ ಸೇರತಕ್ಕ ಪ್ರಜಾ ಪ್ರತಿನಿಧಿ ಸಭೆಯವರ ತಿಳುವಳಿಕೆಗೆ ಬರಬಾರದೆಂಬ ಸಂಕಲ್ಪದಿಂದಲೇ ಯೆಂದು ಭಾವಿಸಬೇಕಾಗಿರುತಿದೆ.

ಮೇಲೆಕಂಡ ಲೇಖಕರ ಅಭಿಪ್ರಾಯವು ಸರಿಯಾದ್ದೆಂದು ನಾವು ಭಾವಿಸಲಾರೆವು. ಯಾತಕ್ಕೆಂದರೆ, ಅವರು ನಮೂದಿಸಿರುವ ಇಸ್ತಿಹಾರಿನ ಭಾವವು ಕಂಠೋಕ್ತವಾಗಿ ಅನ್ಯರಿಗೆ ಕೊಡಲ್ಪಟ್ಟ ಸ್ವತ್ತುಗಳ ವಿಷಯದಲ್ಲಿ ಸಂಬಂಧಿಸುವದಿಲ್ಲವು. ಪರಂತು ಮೊದಲುವಿಚಾರಿಸದೆ ಸರ್ಕಾರದವರು ಪ್ರವೇಶಿಸಿ ಬಳಿಕ ವಿಮರ್ಶಿಸತಮ ಜನಗಳಿಗೆತೋರುವದೆ ಎಂಬದಕ್ಕೆ ಸಂಶಯವಿಲ್ಲವು.

Occasional Notes.

ನೈಮಿತ್ತಿಕ ವಿಷಯನ್ಯಾಸ.

The Gaekwar of Baroda.—ಬಡೋದೇ ಗಾಯಕವಾಡಿ ಮಹಾರಾಜರವರು ಆರೋಗ್ಯಸಂಪಾದನಾರ್ಥ ಮರಳಿ ಯುರೋಪ ದೇಶಕ್ಕೆ ದಯಮಾಡಿಸಾರಷ್ಟೆ. ಇವರು ನಿನ್ನೆಯದಿನ ಮುಂಬೈಗೆ ಬರುವರೆಂದು ನಿರೀಕ್ಷಿಸಲ್ಪಟ್ಟದ್ದಂತೆ ಅಲ್ಲಿನ ಪತ್ರಿಕೆಯೊಂದು ತಿಳಿಸುತಿದೆ.

The Public Service Commision—ಪಬ್ಲಿಕ ಸರ್ವಿಸ ಕಮ್ಮಿಷನಿನ ರಿಪೋರ್ಟಿನಮೇಲೆ ಆಯಾ ಲೋಕಲ್ ಗವರ್ನಮೆಂಟಿನವರ ಅಭಿಪ್ರಾಯಗಳೆಲ್ಲ ಬಂದಿರುವದರಿಂದ ಸದರೀ ವಿಷಯವು ಕುರಿತು ಇಂಡ್ಯ ಗವರ್ನಮೆಂಟಿನವರು ಸ್ಟೇಟ ಸೆಕ್ರೆಟರಿಯವರಿಗೆ ಶೀಘ್ರದಲ್ಲಿ ಒಂದು ಡೆಸ್ಪಾಚ್ ಕಳುಹಿಸುವರೆಂದು ತಿಳಿಯಬರುತಿದೆ.

A Russian spy.—ರಷ್ಯಾ ಸಂಸ್ಥಾನದವರಕಡೆ ಗೂಢಚಾರನಾಗಿರಬಹುದೆಂಬ ಅನುಮಾನದಮೇಲೆ ಪರಸ್ಥಳದವನೊಬ್ಬನು ರಾವಲ್‌ಪಿಂಡಿಯಲ್ಲಿ ದಸ್ತಗಿರಿ ಮಾಡಲ್ಪಟ್ಟು ವಿಚಾರಣೆಯಬಗ್ಯೆ ನಿರ್ಬಂಧದಲ್ಲಿಡಲ್ಪಟ್ಟಿರುವನೆಂತೆ ತಿಳಿಯಬರುತಿದೆ. ಬೆದರಿದವರ ಕಣ್ಣುಗಳಿಗೆ ಕಂಡದ್ದೆಲ್ಲ ಪಿಶಾಚಗಳಾಗಿ ತೋರುವದೇನೂ ಆಶ್ಚರ್ಯವಲ್ಲವು

A donation.—ಈಚೆಗೆ ಹೊಸದಾಗಿ ಸ್ಥಾಪಿಸಲ್ಪಟ್ಟಿರುವ "ಸ್ವದೇಶಾಭಿಮಾನಪ್ರದರ್ಶಕ ಸಭೆ" ಎಂಬ ಒಂದು ಸಂಘದ ಉದ್ದೇಶ ಪ್ರಯೋಜನಗಳನ್ನು ಹೈದರಾಬಾದನಿಜಾಮರವರು ಕೇಳಿ ಅನುಮೋದಿಸಿ ಅದರ ಸಹಾಯಾರ್ಥ ೪,೦೦೦ ರೂಪಾಯಿಗಳು ಕೊಡುವಂತೆ ವಾಗ್ದಾನ ಮಾಡಿ ಸರ್‌ಸೈದ ಅಹಮದ್‌ಯವರಿಗೆ ಒಂದು ಕಾಗದ ಬರೆದಿರುತ್ತಾರೆಂದು ತಿಳಿಯಬರುತಿದೆ.

A fearful catastrophe.—ಚೀನಾ ರಾಜ್ಯಕ್ಕೆ ಸೇರಿದ ಪರ್ಶಿ ಎಂಬ ಪ್ರದೇಶದ ಬಳಿ ಅತಿ ಘೋರವಾದ ವಿಪತ್ತೊಂದು ಈಚೆಗೆ ಪ್ರಾಪ್ತವಾದಂತೆ ಕೇಳುತ್ತೇವೇನೆಂದರೆ, ಅಲ್ಲಿನ ಪ್ರವಾಹದಿಂದ ಸುಮಾರ್ ೫೦ ಗ್ರಾಮಗಳ ಪರಿಪಿಗೆ ನಷ್ಟವಾಗಿ, ಹತ್ತುಸಾವಿರ ಮಂದಿಗಿಂತ ಅಧಿಕವಾಗಿ ಪ್ರಾಣಗಳಂ ಕಳೆದುಕೊಂಡರೆಂದು ತಿಳಿಯಬರುತಿದೆ.

A trial station.—ಬೆಂಗಳೂರು ರೆಯಿಲ್ವೆ ಸ್ಟೇಷನ್‌ಯಲ್ಲಿ ಇಲ್ಲಿಗೆ ೫ನೇ ಮೈಲಿನೊಳು, ಅಂದರೆ ೧೫—೪ ಮತ್ತು ೧೫—೬ ಮೈಲಿನಲ್ಲಿ ಅಜಮಾಯಿಷೀ ತರೀಕ್ ದೇವನಗುಂದಿ ಎಂಬ ಒಂದು ಸ್ಟೇಷನನ್ನೇರ್ಪಡಿಸಬೇಕೆಂದು ಮದರಾಸ ರೆಯಿಲ್ವೇ ಇಲಾಖಾ ಏಜಂಟರವರು ತಿಳಿಸಿದ ಅಭಿಪ್ರಾಯವನ್ನು ಗವರ್ನಮೆಂಟಿನವರು ಅಂಗೀಕರಿಸಿದರೆಂದು ಕೇಳುತ್ತೇವೆ. ಇದು ಕಂಪೆನಿಯವರಿಗೆ ಲಾಭಕರವಾಗಿ ಕಂಡುಬಂದ ಪಕ್ಷಕ್ಕೆ ಮುಂದೆ ಅಲ್ಲಿ ಒಂದು ಸ್ಟೇಷನ್ ಕಾಯಮಾಗಿ ನೆಲೆಗೊಳಿಸಲ್ಪಡಬಹುದೆಂದೆಣಿಸುತ್ತೇವೆ.

A rumour.—ನಿಜಾಮರವರ ಪ್ರೈವೇಟ ಸೆಕ್ರೆಟರಿಯವರಾದ ಕರ್ನಲ್ ಮಾರ್ಷಲ್‌ಯವರು ತಮ್ಮ ಕೆಲಸದಿಂದ ನಿವೃತ್ತರಾಗಿ ಹೌಸ್ ಆಫ್ ಕಾಮನ್ಸ ಸಮಾಜದಲ್ಲಿ ಒಬ್ಬ ಮೆಂಬರಾಗಬೇಕೆಂಬ ಕೋರಿಕೆಯುಳ್ಳವರಾಗಿದಾರೆಂತಲೂ, ಸಿಂಲಾವಿಗೆ ಹೋದವರು ಹಿಂದಿರಿಗಿ ಬಾರದೆ ಹೋದ ಬಗ್ಯೆ ಹೈದರಾಬಾದನಲ್ಲಿ ಪ್ರಜೆಗಳೆಲ್ಲರು ಬಹಳ ಆಶ್ಚರ್ಯಪಡುತಲಿದಾರೆಂತಲೂ, ಸರ್ವಪ್ರಕಾರದಿಂದಲೂ ಅವರು ಮರಳಿ ಹೈದರಾಬಾದಿಗೆ ವಾಪಸ್ ಬರಲಾರರೆಂತಲೂ ಈಚೆಗೆ ಪ್ರವಾದವುಂಟಾಗಿದೆ.

A farewell Address.—ವೈಸರಾಯಿಯವರಾದ ಲಾರ್ಡ ಡಫರಿನ್‌ಯವರು ತಮ್ಮ ಭಾರ್ಯೆಯೊಡನೆ ಮುಂಬೈನಿಂದ ಆಟ್ಟೆರಾಗಿ ಸ್ವದೇಶಕ್ಕೆ ಪ್ರಯಾಣವಾಗುವಾಗ್ಯೆ, ಅವರ ಶುಭಪರಂಪರಾಪ್ರಾರ್ಥನಾ ಸೂಚಕವಾದ ಪ್ರಸ್ಥಾನ ವಿಜ್ಞಾಪನ ಪತ್ರಿಕೆಯನ್ನು ಅವರಿಗೆ ಮುಂಬೈ ಕಾರ್ಪೊರೇಷನ್ ಸಂಘದವರು ಒಪ್ಪಿಸಬೇಕೆಂಬ ಪ್ರಯತ್ನದೊಳವಾರೆಂತಲೂ, ಅವರಿಗೆ ಪ್ರತ್ಯಾಮ್ನಾಯರಾಗಿ ಮೊಕರರಾಗಿ ಬರತಕ್ಕ ಲಾರ್ಡ ಲಾನ್ಸ್ ಡೌನ್‌ಯವರು ಮುಂಬೈಯಲ್ಲಿ ಬಂದು ಇಳಿದಕೂಡಲೇ ಅವರಿಗೆಸಹ ಕುಶಲೋದಂತ ಸೂಚಕವಾದ ಸ್ವಾಗತ ಪತ್ರಿಕೆಯನ್ನೊಪ್ಪಿಸಬೇಕೆಂದಿದಾರೆಂತಲೂ ಇಂಗ್ಲಿಷ್ ಪತ್ರಿಕೆಯೊಂದು ತಿಳಿಸುತಿದೆ.

Mr. W. S. Caine, M. P.—ಪಾರ್ಲಿಮೆಂಟಿಮೆಂಬರಾದ ಮ|| ಕೇಯಿನ್ ಎಂಬವರು ಬರುವ ತಿಂಗಳಲ್ಲಿ ಇಂಡ್ಯದೇಶಕ್ಕೆ ಪ್ರಯಾಣವಾಗಿಬರುವರು. ಐರ್‌ಲ್ಯಾಂಡ್ ದ್ವೀಪಕ್ಕೆ ವ್ಯವಸ್ಥಿತವಾದ ಸ್ವದೇಶಪರಿಪಾಲನಾಧಿಕಾರಮಂಕಲ್ಪಿಸತಕ್ಕ ವಿಷಯದಲ್ಲಿ ಇವರು ಪ್ರತ್ಯಕ್ಷವಿರೋಧಿಯಾಗಿದ್ದಾಗ್ಯೂ ಈ ಇಂಡ್ಯದೇಶಕ್ಕೆಮಾತ್ರ ತತ್ಸಮಾನವಾದ ಅಧಿಕಾರವನ್ನುಂಟುಮಾಡಬೇಕೆಂಬದರಲ್ಲಿ ಬಹಳ ಕುತೂಹಲವುಳ್ಳವರಾಗಿರುತ್ತಾರೆ. ಬರುವ ಡಿಸಂಬರ್ ತಿಂಗಳ ಅಂತ್ಯಭಾಗದಲ್ಲಿ ಅಲಹಾಬಾದನೊಳು ಸೇರತಕ್ಕ ನ್ಯಾಷನಲ್ ಕಾಂಗ್ರೆಸ ಸಭೆಗೆ ತಾವುಬಂದು ಹಾಜರಾಗುವಂತೆ ಏರ್ಪಾಡು ಮಾಡಿರುತ್ತಾರೆ. ಇವರ ಸಂಗಡ ಮ|| ಈವಾರ್ ಎಂಬ ಸಾಬಕ್ ಮಿಷನರಿಯೊಬ್ಬರು ದುಬಾಷಿಯಾಗಿ ಬರುವರೆಂದು ತಿಳಿಯಬರುತಿದೆ.

Resignation.—ಅಮೆರಿಕಾದೇಶದ ನಾವಿಕ ಇಲಾಖೆಯ ಸೆಕ್ರೆಟರಿಯಾದ ಮಿ|| ವ್ಹೈಟನೀ ಎಂಬವರು ಶೀಘ್ರದಲ್ಲಿ ತಮ್ಮ ಕೆಲಸಕ್ಕೆ ರಾಜೀನಾಮೆ ಕೊಡುವರೆಂದು ತಿಳಿಯಬರುತಿದೆ. ಸದರೀ ದೊಡ್ಡ ಮನುಷ್ಯರು ತಮಗೆ ರಾಜಕೀಯವಾದ ಅತಿಕಾಂಕ್ಷೆಯಿಲ್ಲವೆಂತಲೂ, ಸರ್ಕಾರ್ ಉದ್ಯೋಗವು ತಮಗೆ ಲಾಭಕರವಲ್ಲವೆಂತಲೂ, ಅಲ್ಲದೆ ತಮಗೆ ಲೌಕಿಕ ವಿಷಯದಲ್ಲಿ ಬೇಸರಿಕೆಯು ಅಧಿಕವಾದದರಿಂದಲೇ ಕೆಲಸವು ಬಿಡಲು ಕೋರಿಸಿರುವದಾಗಿಯೂ ತಿಳಿಸುತಲಿದಾರೆಂದು ಕಾಣುತಿದೆ. ಆ ನಿವೃತ್ತಿಗೆ ಯಾವದಾದರೊಂದು ಕಾರಣ ಕೊಡಬೇಕು. ಅದಿಲ್ಲದೆ ವಿರಕ್ತಿಯುಂಟಾಗುವದು ಅಸಾಧ್ಯವು.

The population of St Petersburg.—ಕಳೆದ ಜೂನ್ ತಿಂಗಳ ೨೭ನೇ ತಾರೀಖಿನಲ್ಲಿ ತೆಗೆಯಲ್ಪಟ್ಟ ಖಾನೇಷುಮಾರಿ ಲೆಕ್ಕದ ದೆಸೆಯಿಂದ ರಷ್ಯಾ ರಾಜಧಾನಿಯಾದ ಸೇಂಟಪೀಟರ್ಸ್ ಬರ್ಗ್ ಪಟ್ಟಣದಲ್ಲಿ ಈಗ ೮೫,೦೮,೮೮೩ ಮಂದಿ ವಾಸವಾಗಿರುವರೆಂತಲೂ, ಅವರಲ್ಲಿ ೪,೪೪,೮೩೦ ಜನ ಗಂಡಸರಾಗಿರುವರೆಂತಲೂ, ಅವರಲ್ಲಿ ೧೬ ವರುಷಗಳ ವಯಸ್ಸಿಗೆ ಮೇಲ್ಪಟ್ಟ ಪುರುಷರು ೩,೪೩,೪೩೦ ಮಂದಿಯೆಂತಲೂ, ಹೆಂಗಸರು ೩,೭೭,೯೯೩ ಮಂದಿಯೆಂತಲೂ ತಿಳಿಯಬರುತಿದೆ. ೧೮೮೧ನೇ ಇಸವಿಯ ಖಾನೇಷುಮಾರಿ ಲೆಕ್ಕಕ್ಕೂ ಈಗಿನ ಲೆಕ್ಕಕ್ಕೂ ತಾಳೆಹಾಕಿ ನೋಡುವಲ್ಲಿ ರಷ್ಯಾ ರಾಜಧಾನಿಯ ಪ್ರಜಾಸಂಖ್ಯೆಯಲ್ಲಿ ೮೫,೧೩೩ ಜನ ಕಡಮೆಯಾದಂತೆ ಏರ್ಪಡುತಿದೆ. ಹೀಗಾದುದಕ್ಕೆ ಇದರ ಕಾರಣವೇನೆಂಬುದು ಸ್ಪಷ್ಟವಾಗುವದಿಲ್ಲವು.

A fresh field for the Indian Princes.—ಇನ್ನುಮುಂದೆ ಪರಿಷತ್ತುಗಳ ಕಲೆಕ್ಟರವರು ಪೊಲಿಟಿಕಲ್ ಏಜಂಟುಗಳ ಸೂಪರಿಂಟೆಂಡೆಂಟರಾಗಿ ಸಹ ಇರುವದರಿಂದ ಅವರು ಈಚೆಗೆ ಹಿಂದಿನ ಅಯೋಧ್ಯೆಯಲ್ಲಿರತಕ್ಕ ವಿದ್ಯಾವಂತರಾದ ರಾಜಪುತ್ರರನ್ನೆಲ್ಲ ತಮ್ಮ ಮನೆಗೆ ಕರೆಯಿಸಿ ಅವರಿಗೆ ತಿಳಿಸಿದದೇನೆಂದರೆ:—ನೀವು ಅಂಗೀಕರಿಸುವಿರಾದರೆ ನಿಮ್ಮ ವಿದ್ಯಾಬುದ್ಧಿ ಗೌರವಗಳಿಗೆ ಅನುಗುಣವಾದ ನೌಕರಿಗಳನ್ನು ಬರ್ಮ್ಮರಾಜ್ಯದಲ್ಲಿ ನಿಮಗೆ ಕೊಡಲಿಕ್ಕೆ ಇಂಡ್ಯ ಗವರ್ನಮೆಂಟಿನವರು ಬಹಳ ಕುತೂಹಲಪಟ್ಟವರಾಗಿದ್ದಾರೆಂಬದು. ಅವರ ಪೈಕಿ ಮಿರ್ಜಾ ಮಹಮದ್ ಜಲಾಲ್ ಬಹದೂರ್ ಮತ್ತು ಅಲ್ಲೀಮಿರ್ಜಾ ಬಹದೂರ್ ಎಂಬ ಇಬ್ಬರು ರಾಜಪುತ್ರರು ಬರ್ಮ್ಮ ರಾಜ್ಯದಲ್ಲಿ ನೌಕರಿ ಮಾಡಲಿಕ್ಕೆ ಸಮ್ಮತಿಸಿದರೆಂತಲೂ ಶೀಘ್ರದಲ್ಲಿಯೇ ಅವರಿಬ್ಬರೂ ಬರ್ಮ್ಮದೇಶಕ್ಕೆ ಪ್ರಯಾಣವಾಗುವರೆಂತಲೂ ಉತ್ತರದೇಶದ ಪತ್ರಿಕೆಯೊಂದು ತಿಳಿಸುತಿದೆ.

The Hydarabad Delegates.—ಹೈದರಾಬಾದ್ ಸಂಸ್ಥಾನದ ತರಫ್ ಪ್ರತಿನಿಧಿಯಾಗಿ ಇಂಗ್ಲಾಂಡಿಗೆ ಹೋಗಿರುವ ನವಾಬ್ ಮೆಹದೀ ಅಲ್ಲಿಯವರು, ನಿಜಾಂ ಸರ್ಕಾರದವರ ಆಜ್ಞಾನುಸಾರ ದಕ್ಕನ್ ಮೈನಿಂಗ್ ಏರುಬಡಿಕೆಗಳಿಗೆ ಸಂಬಂಧಿಸಿದ ವಿಷಯಗಳೆಲ್ಲ ತೃಪ್ತಿಕರವಾಗಿ ವ್ಯವಸ್ಥೆಯಾಗುವವರೆಗೆ ಇಂಗ್ಲಾಂಡ್ ದೇಶದಿಂದ ವಾಪಸ ಬರೋಣವನ್ನು ತಡೆಮಾಡಿದಾರೆಂತಲೂ ಹೈದರಾಬಾದ್ ಸಂಸ್ಥಾನದ ಪೇಷ್ ಜಿದ್ದೀಯವರಾದ ನವಾಬ್ ಮೊಹಸಿ ಹುಸೇನಯವರು ಇಂಗ್ಲಾಂಡಿನಲ್ಲಿರುತ್ತ ಸಂಸ್ಥಾನದ ತರಫ್ ಪ್ರತಿನಿಧಿಗೆ, ಮೇಲೆಕಂಡ ವಾಣಿಜ್ಯಸ್ಥಾನದ ವಿಷಯದಲ್ಲಿ ಸಹಾಯಕರಾಗಿರತಕ್ಕದ್ದೆಂದು ಇಂಡ್ಯದೇಶದಿಂದ ತಂತಿಮೂಲಕ ತಿಳಿಸಲ್ಪಟ್ಟದಾರೆಂತಲೂ ಹೈದರಾಬಾದ್ ಪತ್ರಿಕೆಯೊಂದರ ಮೂಲಕ ತಿಳಿಯಲಾದೆವು.

Formation of a Committee.—ಈ ಇಂಡ್ಯದೇಶದ ವಾಯುವ್ಯ ಸರಹದ್ದು ಪ್ರಾಂತದ ಬಂದೋಬಸ್ತಿಗಾಗಿ ಆಯಾ ನೇಟಿವ್ ಸಂಸ್ಥಾನಾಧಿಪತಿಗಳು ಸೈನ್ಯರೂಪವಾಗಿಯೂ, ದ್ರವ್ಯರೂಪವಾಗಿಯೂ ಸಹಾಯಮಾಡುವಂತೆ ಅನಪೇಕ್ಷಿತರಾಗಿ ಇಂಡ್ಯ ಗವರ್ನಮೆಂಟಿನವರಿಗೆ ವಾಗ್ದಾನಮಾಡುತಲಿದಾರೆಯಷ್ಟೆ. ಪಂಜಾಬದೇಶದ ಪ್ರಮುಖರು ಕೆಲವರು ಸರಹದ್ದು ಪ್ರಾಂತದ ಬಂದೋಬಸ್ತಿಗಾಗಿ ತಮಗೆ ಸಾಧ್ಯವಾದ ಸಹಾಯವು ಮಾಡುವಂತೆ ತಿಳಿಸಿರುವದರಿಂದ ಅವರ ವಾಗ್ದಾನವನ್ನು ಯಾವರೀತಿಯಿಂದ ಕಾರ್ಯತಃ ಆಚರಣೆಯಲ್ಲಿ ತಂದುಕೊಳ್ಳಬಹುದೆಂಬ ವಿಷಯವು ವಿಚಾರಮಾಡಿ ನಿರ್ಣಯಿಸುವದಕ್ಕಾಗಿ ಈಚೆಗೆ ಒಂದು ಕಮ್ಮಿಟಿ ಏರ್ಪಟ್ಟು ಅದಕ್ಕೆ ಕಮಾಂಡರಿನ್ ಚೀಫ್‌ರವರೂ, ಕೌನ್ಸಿಲಿನ ಮಿಲಿಟರಿ ಮೆಂಬರುಗಳೂ, ಪಂಜಾಬ್ ಲೆಫ್ಟಿನೆಂಟ್ ಗವರ್ನರವರೂ ಮೆಂಬರುಗಳಾಗಿ ಸೇರಿ ಈಗ ಅದಂ ಕುರಿತು ವಿಚಾರ ಮಾಡುತಲಿರುವಂತೆ ಉತ್ತರದೇಶದ ಇಂಗ್ಲಿಷ್ ಪತ್ರಿಕೆಯೊಂದು ಸೂಚಿಸುತಿದೆ.

The will of the late Emperor Frederick of Germany.—ಜರ್ಮ್ಮನೀ ಸಂಸ್ಥಾನದ ಸಾಬಕ್ ಚಕ್ರವರ್ತಿಯವರಾದ ಫ್ರೆಡರಿಕ್‌ಯವರು ಬರೆದಿಟ್ಟು ಹೋದ ವಿಲ್ ಅಂದರೆ ಮರಣಶಾಸನವು ಶೀಘ್ರದಲ್ಲಿ ಪ್ರಕಟಪಡಿಸತಕ್ಕದ್ದಾಗಿದೆ. ಸದರೀ ಶಾಸನದಲ್ಲಿ ಒಂದು ವಾಕ್ಯವೊಳು, ಪ್ರಜೆಗಳ ಹಕ್ಕುದಾರಿಗಳನ್ನು ವೃದ್ಧಿಗೊಳಿಸುವದರಿಂದಲೇ ಪ್ರಜಾಪಾಲಕರಿಗೆ ಪರಸ್ಪರ ಇರಬೇಕಾದ ಏಕಮತ್ಯವೆಂಬ ಸಂಬಂಧವು ದೃಢಪಡುವದೆಂದು ಚಕ್ರವರ್ತಿಯವರು ನಿರ್ಧರಿಸಿ ಬರೆದಿರುತಾರೆಂದು ತಿಳಿಯಬರುತಿದೆ. ಪ್ರಜೆಗಳ ಸ್ವಾತಂತ್ರ್ಯವು ಪುರಸ್ಕರಿಸಲ್ಪಡುವಾಗ್ಯೆ ಅರಸರ ಪ್ರಾಭವಾಧಿಕಾರಗಳು ಕೆಲವು ಮಟ್ಟಿಗೆ ತಪ್ಪದೆ ಕಡಮೆಯಾಗುತಿದೆ. ಅಂತಾ ಅಧಿಕಾರಗಳನ್ನು ಕಳೆದುಕೊಳ್ಳಲಿಕ್ಕೆ ಇಷ್ಟವಿಲ್ಲದವರಿಗೆ ಪ್ರಜಾ ಸ್ವಾತಂತ್ರ್ಯವನ್ನು ವೃದ್ಧಿಪಡಿಸಲಿಕ್ಕೆ ಇಷ್ಟವಿರುವದಿಲ್ಲವು. ಜನಗಳಿಗೆ ತಮ್ಮ ಹಕ್ಕುದಾರಿಯು ಉಪೇಕ್ಷಿಸಲ್ಪಡುವಾಗ ಅನುರಾಗವೆಂಬದು ಸ್ವಾತಃವ ತೊಲಗಿ ಹೋಗುತಿದೆ. ಸದರೀ ಅನುರಾಗವು ಕಳೆದುಹೋದ ಬಳಿಕ ಭಕ್ತಿ ಗೌರವಗಳಿಗೆ ಅವಕಾಶ ವುಂಟಾಗುವದಿಲ್ಲವು. ಇವುಗಳೆಲ್ಲ ಕ್ರಮೇಣ ನಶಿಸಿದ ತರುವಾಯ ಅರಸರು ಪ್ರಜೆಗಳೆಂಬ ತಾರತಮ್ಯಜ್ಞಾನವು ಹೋಗಿ ಒಬ್ಬರಿಗೊಬ್ಬರು ಶತ್ರುಗಳಾಗಿ ಏರ್ಪಡುವದು ಸ್ವಾಭಾವಿಕವಾದದರಿಂದ ಇದು ಪರ್ಯಾಲೋಚಿಸಿಯೇ ತಮ್ಮ ಕುಮಾರರ ಕ್ಷೇಮಾರ್ಥ ಚಕ್ರವರ್ತಿಯವರು ಮೇಲೆ ಕಂಡ ಮಾತುಗಳನ್ನು ಬರೆದಿರುವಂತೆ ತೋರುತಿದೆ.

The Mysore Female Dramatic Company.—ನಮ್ಮದೇಶದ ವರ್ತಮಾನ ಕಾಲದ ತರುಣಿಯರು ತಮ್ಮ ವಿದ್ಯಾಬುದ್ಧಿ ವೈದಗ್ಧ್ಯ ಪ್ರದರ್ಶನಕ್ಕೆ ಈ ಮೈಸೂರು ರಾಜ್ಯವು ಸಂಕುಚಿತವೆಂದು ಭಾವಿಸಿ ತಮ್ಮ ಪ್ರಾಥಿಮೆಯನ್ನು ಅನ್ಯತ್ರ ಸಹ ವ್ಯಕ್ತಪಡಿಸುವದಕ್ಕಾಗಿ ದೇಶಾಂತರ ಸಂಚಾರಾಸಕ್ತರಾಗಿರುವ ಅಂಶವೂ, ಸ್ವಪರ ಭೇದಗಳಿಲ್ಲದೆ ಸಾಮಾನ್ಯವಾಗಿ ಯೆಲ್ಲರನ್ನೂ ತೃಪ್ತಿಪಡಿಸಬೇಕೆಂಬ ಕೋರಿಕೆ ಯುಳ್ಳವರಾಗಿದಾರೆಂಬದೂ ನಮಗೆ ಆನಂದ ಸಂದಾಯಕವಾಗಿರುತ್ತಿದೆ, ಹ್ಯಾಗೆಂದರೆ—ಕಳೆದ ಸೋಮವಾರದ ದಿನ ರಾತ್ರಿ ಮೈಸೂರು ನಾಟಕ ಕಂಪೆನಿಯವರು ಬಳ್ಳಾರಿ ಶ್ರೀಪ್ರ್ಯನಿನಲ್ಲಿ ಯೂರೋಪಿಯರ್ನರಿಗಾಗಿ ಕಾಮಲತಾಪರಿಣಯವೆಂಬ ನಾಟಕವನ್ನು ಆಡಿ ಅಲ್ಲಿನ ಜನಗಳಿಗೆ ಆನಂದವನ್ನುಂಟುಮಾಡಿದರೆಂಬದಾಗಿ ಬಳ್ಳಾರಿ ವಿಜಯಧ್ವಜ ಪತ್ರಿಕೆ ತಿಳಿಸುತಿದೆ. ಕಾಮಲತಾಪಾಶಬದ್ಧನದಿಂ ಪರರನ್ನಾಕರ್ಷಿಸಿ ಸ್ವಾಧೀನಪಡಿಸಿಕೊಂಡು ಸಂತೃಪ್ತಿಗೊಳಿಸುವದು ಸಮರ್ಥರಾದ ಸ್ತ್ರೀಯರು ಮೈಸೂರುದೇಶದಲ್ಲಿದಾರೆಂಬ ಪ್ರತಿಷ್ಠೆಯೇ ಮೈಸೂರು ದೇಶೀಯರಿಗೆ ಕೀರ್ತಿಕರವಾಗಿರುತಿದೆ. ಹೀಗೆಯೇ ಸಕಲಕಲಾ ಪ್ರವೀಣೆಯರಾದ ಇಲ್ಲಿನ ಹೆಂಗಸರು ಪರಹೃದಯಾನುರಂಜನದೊಳು ವಿಶೇಷ ಸಮರ್ಥರೆಂಬ ಅಂಶವು ಇಲ್ಲಿಗೆ ಬಂದು ಅವರನ್ನೋಡಿ ಹೋದ ಪ್ರಸಿದ್ಧರನೇಕರು ಲಿಖಿತಮೂಲಕವಾಗಿ ವ್ಯಕ್ತಪಡಿಸಿರುವ ಅಂಶವು ಪ್ರಸಿದ್ಧವಾಗಿಯೇ ಇರುತಿದೆ.

The modern menials.—ಒಂದಾನೊಂದು ಲಾಹೂರ್ ಪತ್ರಿಕೆಗೆ ಒಬ್ಬ ಬಾತಮಿದಾರನು ಇದರಡಿ ಕಂಡಂತೆ ಬರೆಯುತಾನೇನೆಂದರೆ:—ಈ ಇಂಡ್ಯದೇಶದೊಳಕ್ತನೋಡಿದಾಗ್ಯೂ ಪೂರ್ವಿಕರಾದ ನೌಕರ ಜನರೆಲ್ಲರೂ ವಿರಳರಾಗುತ ಬರುತಲಿದಾರೆ. ಅವರ ಸ್ಥಾನಾಪನ್ನರಾಗಿ ನೌಕರರಾಗುವವರೆಲ್ಲರೂ ಯಾಚಿಸಲಿಕ್ಕೆ ಲಜ್ಜೆಪಡತಕ್ಕವರಾಗಿಯೂ, ಕೆಲಸ ಮಾಡಲಿಕ್ಕೆ ಬಹಳ ಸೋಮಾರಿಗಳಾಗಿಯೂ, ಸೋಮಾರಿಗಳಾದ ಕಳ್ಳರೆನಿಸಿಕೊಳ್ಳಲಿಕ್ಕೆ ಸಹ ಅರ್ಹರಲ್ಲದಂತಾ ಅಲ್ಪರಾಗಿಯೂ ಮತಿಹೀನರಾಗಿಯೂ ಇರುವ ಕಪಟಿಗಳಾದ ಕಳ್ಳರಾಗಿಯೂ ಇರುತಾರೆ. ಸಿಂಲಾದಿನಲ್ಲಿರುವ ನೌಕರರು, ಲಜ್ಜಾಹೀನತೆಯಲ್ಲಿಯೂ, ಅಪ್ರಾಮಾಣಿಕತೆಯಲ್ಲಿಯೂ, ದುವೃತ್ತಿಯಲ್ಲಿಯೂ ಅನ್ಯರು ಮೀರಲಶಕ್ಯರಾಗಿರುತಾರೆ. ಇಂತಹವರೊಡನೆ ಜನಗಳು ಹ್ಯಾಗೆ ಸೇರಿರುತ್ತಾರೆಯೋ ಅದು ಊಹಿಸಕೂಡದ್ದಾಗಿದೆ, ಎಂಬದು. ಇದರಮೇಲೆ ಮದರಾಸ್‌ಮೆಯಿಲ್ ಪತ್ರಿಕೆಯು, ಮೇಲೆಕಂಡಂತಾವರು ಉತ್ತರದೇಶದಲ್ಲಿರಬಹುದೇ ಹೊರತು ಮದರಾಸಿನಲ್ಲಿ ಅಂತವರೊಬ್ಬರೂ ಇಲ್ಲದ್ದರಿಂದ ತಾವು ಬಹಳ ಅದೃಷ್ಟಶಾಲಿಗಳೆಂದು ಸ್ವತಃ ಸಂತೋಷಪಡುತಿದೆ. ಮೇಲೆಕಂಡ ಸಿಂಲಾಜನಗಳಿಗೆ ಸಮಾನರಾದವರು ಈ ದೇಶದಲ್ಲಿಯೂ ಇರದೆ ಇಲ್ಲವು ಎಲ್ಲಾದೇಶಗಳಲ್ಲಿಯೂ ಇಂತವರು ಸ್ವಲ್ಪ ಹೆಚ್ಚುಕಡಮೆಯಾಗಿ ಇದ್ದೇ ಇರುವರು.

The Maharaja Dhuleep Sing.—ಈಗ ರಷ್ಯಾದವರ ಆಶ್ರಯದಲ್ಲಿರುತಲಿರುವ ಮಹಾರಾಜಾ ದುಲೀಪ ಸಿಂಗರವರು ಅವರ ಪೋಷಕರಾದ ಮಿ|| ಕಾಟ ಕಾಫ್ ಎಂಬವರು ಮೃತಪಟ್ಟ ಬಳಿಕ ಕೇವಲ ಅಜ್ಞಾತ ದಶೆಯೊಳು ಉಪೇಕ್ಷಿತರಾಗಿದಾರೆಂತಲೂ, ಅವರಿನ್ನೂ ರಷ್ಯಾ ರಾಜ್ಯದಲ್ಲಿಯೇ ವಾಸವಾಗಿದಾರೆಂತಲೂ, ಇಂಗ್ಲಾಂಡಿನಿಂದ ಹೊರಟುಹೋದದ್ದು ಮೊದಲು ಅವರು ತಮ್ಮ ಪೇಷನನ್ನು ತೆಗೆದುಕೊಳ್ಳಲಿಲ್ಲವೆಂತಲೂ, ಪರಂತು ಅವರ ಸಂಸಾರವನ್ನು ಮಹಾರಾಜ್ಞೀ ಸರ್ಕಾರದವರು ಬಹಳ ಆದರವೊಡನೆ ಕಾಪಾಡುತಲಿದಾರೆಂತಲೂ ಮ್ಯಾಂಚೆಸ್ಟರ್ ಗಾರ್ಡಿಯನ್ ಎಂಬ ಇಂಗ್ಲಿಷ್ ಪತ್ರಿಕೆಯೊಂದು ತಿಳಿಸುತಿದೆ. ಒಂದುವೇಳೆ ದುಲೀಪ ಸಿಂಗರವರು ಮರಳಿ ಬ್ರಿಟಿಷರವರ ಆಶ್ರಯವು ಕೋರಿ ತಾವಾಗಿ ಇಂಗ್ಲಾಂಡಿಗೆ ಬಂದರೆ ಅವರನ್ನು ಗವರ್ನಮೆಂಟಿನವರು ನಿರ್ಬಂಧ ಪಡಿಸದೆ ಪೂರ್ವದಂತೆ ಗೌರವದೊಡನೆ ಸಂರಕ್ಷಿಸುತ ಬರುವರೆಂಬ ನಂಬಿಕೆಯು ಅವರಿಗೆ ಕುದ್ಯಾಂಗ ತಪ್ಪಿರುವದರಿಂದಲೇ ಅಜ್ಞಾತದಶೆಯಲ್ಲಿ ಅನಾಮಧೇಯರಾಗಿಯಾದರೂ ಶರೀರ ರಕ್ಷಣೆಯಂ ಮಾಡಿಕೊಳ್ಳುವದುಚಿತವೆಂದೆಣಿಸಿ ಅನ್ಯರಾಜ್ಯದಲ್ಲಿ ಸಂಕಟ ಪಡುತಲಿದಾರೆ. ಅವರ ಪೈತೃಕ ರಾಜ್ಯವು ಸ್ವಾಧೀನಪಡಿಸಿಕೊಂಡು ಅವರಿಗೆ ನ್ಯಾಯವಾಗಿ ಸಲ್ಲಬೇಕಾಗಿದ್ದ ಸ್ವಂತ ಆಸ್ತಿಯನ್ನು ಸಹ ಕೊಡುವದಕ್ಕೆ ನಿರಾಕರಿಸಿದಂತಾ ಇಂಗ್ಲಿಷ್ ಸರ್ಕಾರದವರಿಗೆ ಮಹಾರಾಜರ ಕುಟುಂಬ ಸಂರಕ್ಷಣೆ ಸಹ ಕೇವಲ ಧರ್ಮಾರ್ಥವೆಂಬ ಭಾವನೆ ಯುಂಟಾಗಲಿಕ್ಕೆ ಅವರ ಶಸ್ತ್ರಮೂಲಕವಾದ ಪ್ರಾಭವವು ಕಾರಣವಲ್ಲದೆ ಮನಃಪೂರ್ವಕವಾದ ನ್ಯಾಯವು ನಿಮಿತ್ತವಾಗಲಾರದು.

LOCAL AND PROVINCIAL NEWS.

ಒಳದೇಶಮತ್ತು ತಾಲ್ಲೂಕ್ ಜಾತಿ ವೃತ್ತಾಂತಗಳು.

Increase of pay.—ಈ ಸಂಸ್ಥಾನದ ದಿವಾನರಾದ ಮಿಸ್ಟರ್ ಕೆ. ಶೇಷಾದ್ರಿ ಅಯ್ಯರ್, ಸಿ. ಎಸ್. ಐ. ಯವರಿಗೆ ಈಗ ಮಾಹೆಯಾನಾ ೩,೦೦೦ ರೂಪಾಯಿಗಳ ತಲಬ್ ಸಲ್ಲುತಲಿದೆಯಷ್ಟೆ, ಅದು ಮಾಹೆಯಾನಾ ೫,೦೦೦ ರೂಪಾಯಿಗಳಿಗೆ ಬಡ್ತೀ ಮಾಡಲ್ಪಟ್ಟತೆಂದು ಕೇಳಲಿಕ್ಕೆ ನಾವು ಬಹಳ ಸಂತೋಷಿಸುತ್ತೇವೆ.

ಬೆಂಗಳೂರು ಡಿಸ್ಟ್ರಿಕ್ಟ್ ರೆವಿನ್ಯೂ ಶಿರಸ್ತೇದಾರ್ ಮಿ|| ಎ. ಎಸ್. ರಾಘವಾಚಾರ್ಯರವರಿಗೆ ನೂರರಿಂದ ನೂರ ಐವತ್ತು ರೂಪಾಯಿಗಳ ವರಿವಿಗೆ ತಲಬ್ ಇಜಾಫೆ ಆಯಿತೆಂದು ಕೇಳಲಾದೆವು.

The weather.—ಕಳೆದ ವಾರದಲ್ಲಿ ಪ್ರಾಯಶಃ ಪ್ರತಿದಿನದಲ್ಲೂ ಮಳೆ ಬೀಳುತಲೇ ಇದ್ದು ಕೆರೆ ಕುಂಟೆಗಳಿಗೆ ಸ್ವಲ್ಪಮಟ್ಟಿಗೆ ನೀರು ಬಂದಿದೆ. ಮುಂದೆ ಕ್ರಮವಾಗಿ ಕಾಲದಲ್ಲಿ ಮಳೆ ಆದರೆ ರಾಗೀಪೈರು ಪ್ರಾಯಶಃ ಚನ್ನಾಗಿಯೇ ಕೈ ಹತ್ತುವದು. ರಾಗಿಯ ಧಾರಣೆ ಸ್ವಲ್ಪ ಕಡಮೆಯಾದಾಗ್ಯೂ ಇತರ ಪದಾರ್ಥಗಳ ಧಾರಣೆಗಳು ಹೆಚ್ಚಾಗಿಯೇ ಇರುತಿವೆ.

Mr Fawcett.—ಇಲ್ಲಿನ ಸಿವಿಲ್ ವ ಮಿಲಿಟರಿ ಸ್ಟೇಷನಿನ ಆಫೀಷಿಯೇಟಿಂಗ್ ಡಿಸ್ಟ್ರಿಕ್ಟ್ ಪೋಲೀಸ್ ಸೂಪರಿಂಟೆಂಡೆಂಟರಾದ ಮಿ|| ಫಾಸೆಟಿಯವರು ಮಾಹೇಮಜಕೂರ್ ೩ನೇ ತಾರೀಖಿನಲ್ಲಿ ಇಲ್ಲಿಂದ ಮುಂಬೈಗೆ ಹೋಗಿ ಅಲ್ಲಿಂದ ಮದರಾಸ್ ಮಾರ್ಗವಾಗಿ ಗಂಜಾಂ ಡಿಸ್ಟ್ರಿಕ್ಟಿಗೆ ಹೋಗಿ ತಮ್ಮ ಕೆಲಸದ ಚಾರ್ಜನ್ನು ತೆಗೆದುಕೊಳ್ಳುವರೆಂದು ತಿಳಿಯಬರುತಿದೆ.

The Jaganmohan Press.—ಜಗನ್ಮೋಹನ ಮುದ್ರಾಶಾಲೆಯು ಮೋಕೂಫ್ ಮಾಡಲ್ಪಡುವದೆಂತಲೂ, ಅದರ ಸಾಮಗ್ರಿಯು ಇತ್ಯರ್ಥದ ವಿಷಯದಲ್ಲಿ ಇನ್ನೂ ಮಹಾರಾಜರವರ ಆರ್ಡರಾಗಲಿಲ್ಲವೆಂತಲೂ ನಾವು ತಿಳಿಸಿದ್ದೆವಷ್ಟೆ. ಪೂರ್ವದಲ್ಲಿ ಲಕ್ಷ್ಮಣರಾಯರು ತೆಗೆದುಇದ್ದ ಸಾಮಾನುಗಳನ್ನೂ ಈಚೆಗೆ ಬೆಂಗಳೂರಿಂದ ಬಂದ ಸಾಮಾನುಗಳನ್ನೂ ವಿಂಗಡಿಸಿದರು. ಬೆಂಗಳೂರಿಂದ ಬಂದ ಸಾಮಾನುಗಳನ್ನು ದಿವಾನರವರು ಗವರ್ನ್ಮೆಂಟ್ ಸ್ಕೂಲಿಗೋಸ್ಕರವಾಗಿ ಮಿ|| ರಾ|| ನರಸಿಂಹಯ್ಯಂಗಾರ್ಯರಿಗೆ ಕೊಡುವಹಾಗೆಯೂ, ಅದೇ ಮೇರೆಗೆ ಲಕ್ಷ್ಮಣರಾಯರು ತಂದಿದ್ದ ಸಾಮಾನುಗಳನ್ನು ಮಹಾರಾಜರವರು ಕೊಡುವಹಾಗೆಯೂ ಯದ್ಯಪಿ ಅದು ಕೊನೆಗೆ ಗವರ್ನ್ಮೆಂಟ್ ಸ್ಕೂಲಿಗೇನೇ ವಿನಿಯೋಗವಾಗುವಂತೆ ತಿಳಿಯಬರುತಿದೆ.

Accident.—ಕಳೆದ ಮಂಗಳವಾರದ ದಿವಸ ಪರಕಾಲಸ್ವಾಮಿಗಳವರು ಚಾತುರ್ಮಾಸ್ಯ ಸಂಕಲ್ಪವಂ ಪೂರೈಸಿಕೊಂಡು ಮೈಸೂರಿಗೆ ದಯಮಾಡುತ್ತಿರುವಾಗ್ಯೆ ನಗರಪ್ರವೇಶವಂಗೈದು ಸರವಿರ್ನಾಚಾವಡಿಯ ಬಳಿಗೆ ಬರುತ್ತಿರುವಾಗ್ಯೆ ಯಾವನೋ ಒಬ್ಬ ಗಾಡಿಯವನ ಎತ್ತು ಬೆದರಿ ಗಾಡಿಯವನ ಸ್ವಾಧೀನಕ್ಕೆ ಬರದೆ ಗಾಡಿಯನ್ನು ಎಳೆದುಕೊಂಡು, ಸ್ವಾಮಿಯವರ ಪಲ್ಲಕ್ಕಿಗೆ ಡಿಕ್ಕಿಕೊಟ್ಟಿತು. ಮುಂಭಾಗದಲ್ಲಿ ಪಲ್ಲಕ್ಕಿಯನ್ನು ಹೊರುತ್ತಲಿದ್ದವರು ಹೆದರಿ ಪಲ್ಲಕ್ಕಿಯನ್ನು ಎತ್ತಿಹಾಕಿ ತಮ್ಮ ಪ್ರಾಣದ ಮೇಲೆ ಆಸೆಯಿಂದ ದೂರವಾಗಿ ಹೋದರು. ಸ್ವಾಮಿಗಳವರು ಮುಗ್ಗರಿಸಿ ಬೀಳುತ್ತಿದ್ದವರು ಪಲ್ಲಕ್ಕಿಗೆ ಕಟ್ಟಿದ್ದ ಹಗ್ಗದ ಬಲದಿಂದ ತಪ್ಪಿಸಿಕೊಂಡರು. ಗಾಡಿಯು ಹೋಗುವಾಗ್ಯೆ ಇನ್ನು ೩ ಜನ ರಾಜಾವಾರದವರಿಗೆ ಜಖಂ ಉಂಟಾಯಿತು.—ಮೈ. ವೃ.

A den for badcharacters.—ಈ ಪ್ರೂರು ಸುಲ್ತಾನಪೇಟೆಯಲ್ಲಿ ಮರಿಯಣ್ಣನವರ ಛತ್ರದ ಬಳಿ ದಂಡಮಯ್ಯನವರ ಮಠವೆಂಬದೊಂದಿರುವದು ಪ್ರಸಿದ್ಧವಾಗಿದೆಯಷ್ಟೆ. ಇದರಲ್ಲಿ ನಿಷಾಖೋರ್ ಜನಗಳು ಯಾವಾಗಲೂ ಗುಂಪುಗೂಡುತ, ಅಫಾಸ್ ಜನಗಳನ್ನೂ ಬೀದಿಯಲ್ಲಿ ಹೋಗುವ ಜನಗಳನ್ನೂ ದುಸ್ಸೀ ಜೈಯುತ, ಕೆಲವು ಸಂದರ್ಭಗಳಲ್ಲಿ ಚೋರಿ ಮೊದಲಾದ ದುಷ್ಕೃತ್ಯಗಳಂ ಸಹ ನಡೆಸುತ ಬರುವಂತೆ ಆಗಿಂದಾಗ್ಯೆ ನಮ್ಮ ಕೇಳ್ವಿಕೆಗೆ ಬರುವದಲ್ಲದೆ ಮೇಲೆ ಕಂಡಂತೆ ನಿಷಾ ಮಾಡುವದರಲ್ಲಿ ಅಭ್ಯಾಸವುಳ್ಳ ಪೊಲೀಸ್ ಜನರು ಕೆಲವರು ಸಹ ಅಲ್ಲಿ ಸೇರುವಂತೆ ತಿಳಿಯಬರುತಿದೆಯಾಗಿ, ಇಂತಾ ದುಷ್ಕೃತ್ಯಗಳನ್ನು ಅಣಗಿಸುವ ವಿಷಯದಲ್ಲಿ ಈ ಪಟ್ಟಣದ ಪೊಲೀಸ್ ಇನ್ಸ್‌ಪೆಕ್ಟರವರು ಸಂಪೂರ್ಣ ನಿಗ್ಗೆ ಕೊಟ್ಟು ಪ್ರಜೆಗಳಿಗೆ ನೆಮ್ಮದಿಯನ್ನುಂಟುಮಾಡಬೇಕೆಂದು ಕೋರುವೆವು.

THE MYSORE GAZETTE
ಮೈಸೂರು ಗೆಜೆಟು.

ಶ್ರೀಮನ್ಮಹಾರಾಜ ರಾಜಾಸಾಹೇಬ್ ಬಹದೂರವರ ದಿವಾನರವರಿಂದ ಕೊಡಲ್ಪಟ್ಟ ಇಸ್ತಿಹಾರ್‌ನಾಮೆಗಳು.

ನೊಕ್ಯಾಂ ನಂ. ೧೫೩೩, ತಾ ೨೮ನೇ ಸೆಪ್ಟಂಬರ್ ೧೮೮೮—ದಿವಾನರ ಆಫೀಸಿನಲ್ಲಿ ಈಗ ಕೆಲಸ ನೋಡುತಲಿರುವ ಅಸಿಸ್ಟೆಂಟ್ ಕಮೀಷನರ್ ಮೆ॥ ಹೆಚ್ ರಾಮಾನುಜೈಯ್ಯಂಗಾರ್ಯರವರಿಗೆ ಅವರು ಉಪಯೋಗಿಸಿಕೊಳ್ಳುವತಾರೀಖಿನಿಂದಾಗಾಯಿತುಬಂದು ತಿಂಗಳ ಪ್ರಿವಿಲೇಜ್‌ರಜಾ ಕೊಡಲ್ಪಟ್ಟಿರುತಿದೆ.

ನೊಕ್ಯಾಂನಂ. ೧೫೩೪—ಮೈಸೂರು ಡಿಸ್ಟ್ರಿಕ್ಟ್ ಫಾರೆಸ್ಟ್ ಸಬ್ ಅಸಿಸ್ಟೆಂಟ್ ಕನ್ಸರ್ವೇಟರ್ ಮ॥ರಾ ರಾಮಸ್ವಾಮಿ ಅಯ್ಯರವರಿಗೆ ೧೮೮೮ನೇ ಇಸವಿ ಸೆಪ್ಟಂಬರ್ ೧೦ನೇ ತಾರೀಖ್ ಲಾಗಾಯಿತು ಅಥವಾ ಅವರು ಉಪಯೋಗಿಸಿಕೊಳ್ಳುವ ತಾರೀಖ್ ಮೊದಲು ಹದಿಮೂರು ದಿನಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿರುತಿದೆ.

ನೊಕ್ಯಾಂ ನಂ. ೧೫೩೫, ತಾ ೨೯ನೇ ಸೆಪ್ಟಂಬರ್ ೧೮೮೮—ಮೈಸೂರು ಅರಮನೆ ಡಿಸ್ಪೆನ್ಸರಿಗೆ ಸೇರಿದ ಅಸಿಸ್ಟೆಂಟ್ ಸರ್ಜನ್ ರಾಮಾನುಜುಲು ನಾಯಡರವರಿಗೆ ೧೮೮೮ನೇ ಇಸವಿ ಸೆಪ್ಟಂಬರ್ ೮ನೇ ತಾರೀಖ್ ಲಗಾಯತು ಅಥವಾ ಅವರು ಉಪಯೋಗಿಸಿಕೊಳ್ಳುವ ತಾರೀಖ್ ಮೊದಲು ಯೇಳು ದಿವಸಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿರುತಿದೆ.

ಮೃತಪಟ್ಟ ಸುಬ್ಬರಾಯರವರಿಗೆ ಬದಲಾಗಿ, ೬೦+೧೫ ರೂಪಾಯಿಗಳ ಸಂಬಳದ ಸ್ಪೆಷಿಯಲ್ ರೇಂಜರ್ ಕೃಷ್ಣರಾಯರವರು ೭೦+೧೫ ರೂಪಾಯಿಗಳಿಗೆ ಬಡ್ತಿ ಮಾಡಲ್ಪಟ್ಟಿರುತ್ತಾರೆ. ಕೃಷ್ಣರಾಯರವರು ಬಿಡುಗಡೆ ಮಾಡಲ್ಪಟ್ಟ ಬಳಿಕ ಈಚೆಗೆ ಸುಬ್ಬರಾಯರವರ ವಿಚಾರಣೆಯಲ್ಲಿದ್ದ ಹೆಗ್ಗಡದೇವನ ಕೋಟೆ ರೇಂಜಿಗೆ ಹೋಗಿ ಸೇರತಕ್ಕದ್ದು. ಬಡ್ತಿಯಾದ ಕೃಷ್ಣರಾಯರವರಿಗೆ ಬದಲಾಗಿ ೫೦+೧೫ ರೂಪಾಯಿಗಳ ಸಂಬಳದ ರೇಂಜರ್ ಶ್ರೀನಿವಾಸರಾಯರವರು ೬೦+೧೫ರೂ॥ ಬಡ್ತಿ ಮಾಡಲ್ಪಟ್ಟಿರುತ್ತಾರೆ. ಇವರು ಶ್ರೀನಿವಾಸರಾಯರಿಂದ ಬಿಡುಗಡೆಯಾದ ಕೂಡಲೆ ಕೃಷ್ಣರಾಯರನ್ನು ಬಿಡುಗಡೆಮಾಡಬೇಕು. ಕೋಲಾರ ಡಿಸ್ಟ್ರಿಕ್ಟ ಅಗ್ರಿಕಲ್ಚುರಲ್ ಇನ್ಸ್ಪೆಕ್ಟರ್ ಮ॥ ಶ್ರೀನಿವಾಸರಾಯರವರು ೪೦+೧೫ ರೂಪಾಯಿಗಳ ಸಂಬಳದ ರೇಂಜರ್ ಕೆಲಸಕ್ಕೆ ಬಡ್ತಿ ಮಾಡಲ್ಪಟ್ಟಿರುತ್ತಾರೆ. ಅವರಿಗೆ ಬದಲಾಗಿ ನೊಕರರ್ ಮಾಡಲ್ಪಡತಕ್ಕ ಒಬ್ಬ ಅಗ್ರಿಕಲ್ಚುರಲ್ ಇನ್ಸ್ಪೆಕ್ಟರಿಂದ ಬಿಡುಗಡೆಯಾದ ಕೂಡಲೇ ತುಮಕೂರಿಗೆ ಹಾಜರಾಗತಕ್ಕದ್ದು. ೪೦+೧೫ ಸಂಬಳದಲ್ಲಿರುವ ರೇಂಜರ್ ಲಕ್ಷ್ಮಣರಾಯರವರು ೫೦+೧೫ ರೂಪಾಯಿಗಳ ಸಂಬಳದ ರೇಂಜರ್ ಕೆಲಸಕ್ಕೆ ಬಡ್ತಿ ಮಾಡಲ್ಪಟ್ಟಿರುತ್ತಾರೆ. ಮತ್ತು ಅವರು ಕಡೂರು ಡಿಸ್ಟ್ರಿಕ್ಟಿನಲ್ಲೇ ಕೆಲಸ ನೋಡುತಲಿರತಕ್ಕದ್ದು.

ಕೆಲವು ಇನಾಂದಾರರು, ತಮ್ಮ ಇನಾಂ ಜಮೀನುಗಳಿಗೆ ಸೇರಿದಂತಿರುವ ಕಾವೇರಿ ನದೀ ಗರ್ಭದಲ್ಲಿ ನಿರ್ಬಂಧಕರವಾದ ಹಕ್ಕುದಾರಿಗಳನ್ನುಂಟು ಮಾಡಿಕೊಂಡು ಸರ್ಕಾರ್ ಕೆಲಸಗಳಿಗೆ ಗವರ್ನ್ಮೆಂಟ್ ಕಂಟ್ರಾಕ್ಟರುಗಳು ಸದರೀ ನದೀಗರ್ಭದಿಂದ ಕಲ್ಲುಗಳನ್ನು ಅಗೆದು ತೆಗೆಯದಂತೆ ನಿರೋಧಿಸುತ್ತಾರೆಂಬ ಅಂಶ ಗವರ್ನ್‌ಮೆಂಟಿನವರ ತಿಳುವಳಿಕೆಗೆ ತರಲ್ಪಟ್ಟಿರುತಿದೆ. ಈ ವಿಷಯದಲ್ಲಿ ದೇಶದಪದ್ಧತಿ ಮತ್ತು ಆಚಾರವನ್ನನುಸರಿಸಿ ನ್ಯಾಯವಿರುವದೇನೆಂದರೆ:—

ತನಮಾಂ ಪಬ್ಲಿಕ್ ರಸ್ತೆಗಳು, ಸಂದುಗಳು ಮತ್ತು ಕಾಲ್‌ದಾರಿಗಳು, ಸೇತುವೆಗಳು, ಹಳ್ಳಗಳು, ಕಟ್ಟೆಗಳು ವ ಬೇಲಿಗಳು, ಇವುಗಳು ಯಾ ಇವುಗಳ ಹೊರ್ತು, ನದೀಗರ್ಭ, ಪ್ರವಾಹಗಳು, ನಾಲೆಗಳು, ಮಡುವುಗಳು, ವ ಕೆರೆಗಳು, ವಿಶಿಷ್ಟ ಕಾಲ್ವೆಗಳು, ಮತ್ತು ಜಲದಾರಿಗಳು, ನಿಂತಿರುವ ಮತ್ತು ಹರಿಯುತಕ್ಕ ವಿಶಿಷ್ಟ ನೀರು, ಜನಗಳಿಗೆ ಅಥವಾ, ಸ್ವತ್ತನ್ನು ಪಡೆಯಲಿಕ್ಕೆ ನ್ಯಾಯವಾಗಿ ಹಕ್ಕುದಾರರಾಗಿರುವಂತಾ ಜನಸಮುದಾಯದವರಿಗೆ ಸೇರದ ಸ್ವತ್ತಾದ ಎಲ್ಲಿಯಾದರೂ ಇರುವ ದರೋಬಸ್ತು ಜಮೀನುಗಳು, ಇವುಗಳಲ್ಲಿ ಅಥವಾ ಇವುಗಳಮೇಲೆ ಅಂತಾ ಜನಗಳ ಯಾನದಾರರು ಹಕ್ಕುದಾರಿಗಳು ಸ್ಥಾಪಿಸಲ್ಪಟ್ಟ ಹೊರ್ತು, ಮತ್ತು ತತ್ಕಾಲದಲ್ಲಿ ಜಾರಿಯೊಳು ಇರತಕ್ಕ ಯಾವದಾದರು ಕಾನೂನು ಮೂಲಕ ಅನ್ಯಥಾ ವಿಧಿಸಲ್ಪಟ್ಟ ಹೊರ್ತು, ಇವುಗಳಲ್ಲಿ ಯಾ ಇವುಗಳಮೇಲೆ ಅಥವಾ ಇವುಗಳಿಗೆ ಸಂಬಂಧಿಸಿದಂತೆ ಇರುವ ವಿಶಿಷ್ಟ ಹಕ್ಕುದಾರಿಗಳೊಡನೆ ಇವು ಗವರ್ನ್‌ಮೆಂಟಿನವರ ಸ್ವತ್ತುಗಳಾಗಿರುತಿವೆ. ನದೀಗರ್ಭದ ಸ್ವಂತ ಹಕ್ಕೆಂಬದು ಗವರ್ನ್‌ಮೆಂಟಿನವರಿಂದ ಸಮೂಪಿಸಿ ಕೊಡಲ್ಪಟ್ಟಿದ್ದರೇನೇ ನೆಲಗೊಂಡಿರುವದು. ಹಾಗೆ ಕೊಡಲ್ಪಟ್ಟ ಅಂಶವನ್ನು ನಿರೂಪಿಸಬೇಕಾದ ಭಾರವು, ಅಂತಾ ಹಕ್ಕುದಾರಿಯನ್ನು ಅಪೇಕ್ಷಿಸತಕ್ಕವನಿಗೆ ಸೇರಿದ್ದಾಗಿರುತಿದೆ.

ನೊಕ್ಯಾಂ ನಂಬರ್ ೧೧೦೩, ತಾರೀಖ್ ೧೮ನೇ ಸೆಪ್ಟಂಬರ್ ೧೮೮೮—ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನೆಂದರೆ, ಹಿಂದಿನ ಜಮೀನುಗಳಲ್ಲಿ ಯಾ ಖುಷ್‌ಬಾಷ್ ಜನಗಳ ಜಮೀನುಗಳಲ್ಲಿ ವಿನಾ ಇತರ ಸ್ಥಳಗಳಲ್ಲಿರುವಂತಾ ತಂಗಡಿ ಕುರುಚುಗಿಡಗಳನ್ನು, ವಿಧಿಸಿರೋಣದ ಲೈಸೆನ್ಸನ್ನು ಪಡೆಯದೆ ಯಾರೂ ಕಡಿಯಲೂ ಕೂಡದು, ಯಾ ಸಾಗಿಸಲೂ ಕೂಡದು, ಮತ್ತು ರೈತರೂ ವ ಇತರಜನಗಳೂ ಅಂತಾ ತಂಗಡಿ ಕುರುಚುಗಿಡಗಳು ಯಾ ರೆಂಗಡಿಪ್ರೋಪೆಗಳು ಜಂಗ್ಲೀಗಳಲ್ಲಿರಲಿ ಅಥವಾ ಸರ್ಕಾರದ ಬಂಜರ್ ಜಮೀನುಗಳಲ್ಲಿರಲಿ ಅವುಗಳನ್ನು ಕಡಿದು ಗೊಬ್ಬರಕ್ಕಾಗಿ ಉಪಯೋಗಿಸಕೂಡದೆಂದು ಇದರಿಂದ ನಿಷೇಧಿಸಲ್ಪಟ್ಟಿರುತಿವೆ. ಈ ಇಸ್ತಿಹಾರಿನ ಪ್ರಸಿದ್ಧಿಯಿಂದ ಈ ಬಗ್ಗೆ ಹಿಂದೆ ಹುಟ್ಟಿರುವ ನಿಬಂಧನೆಗಳೆಲ್ಲವೂ ರದ್ದುಮಾಡಲ್ಪಟ್ಟಿರುತಿವೆ.

TELEGRAMS.
ತಂತಿ ವೃತ್ತಾಂತಗಳು.

ಜಾಂಜಿಬಾರ್, ತಾ॥ ೫ನೇ ಸೆಪ್ಟಂಬರ್—ಜರ್ಮನೀಯರು ಸಮುದ್ರತೀರದಲ್ಲಿರುವ ತಮ್ಮ ಜಾಗಗಳ ಪೈಕಿ ಎರಡು ವಿನಾ ಮಿಕ್ಕವನ್ನೆಲ್ಲ ಬಿಟ್ಟು ಜಾಂಜಿಬಾರಿಗೆ ಓಡಿಹೋದರು. ಇಲ್ಲಿನ ನೇಟಿವ್‌ಗಳು ಸುಲ್ತಾನರ ಅಧಿಕಾರವನ್ನು ಪರಿತ್ಯಜಿಸುತ್ತಾರೆ.

ಲಂಡನ್, ತಾ ೩ನೇ ಸೆಪ್ಟಂಬರ್—ಮ್ಯಾಂಚೆಸ್ಟರಿನಲ್ಲಿ ಸರ್ ಜೇಂಸ್ ಫರ್ಗಸನ್‌ಯವರು ಒಂದು ವಿಷಯವು ಕುರಿತು ಪ್ರಸಂಗಿಸುವಾಗ್ಯೆ, ಈಗ್ಯೆ ಮೂರು ವರುಷಗಳ ಹಿಂದೆ ಇದ್ದದಕ್ಕಿಂತಲೂ ತತ್ಕಾಲದಲ್ಲಿ ಅನ್ಯದೇಶೀಯ ವಿಷಯಗಳು ಬಹಳ ಉಪಶಾಂತವಾಗಿರುತ್ತಲೆ ಕಾಣುತಿದೆ ಎಂದು ತಿಳಿಸಿದರು.

ಹೈದರಾಬಾದ್, ತಾ ೩ನೇ ಸೆಪ್ಟಂಬರ್—ಗತ ಸಂವತ್ಸರದ ಆದಿಭಾಗದಲ್ಲಿ ಯಾವ ವಿಶೇಷ ಕಾರ್ಯಕ್ಕಾಗಿ ಕರ್ನಲ್ ಮಾರ್ಷಲ್‌ಯವರು ನಿಯಮಿತರಾಗಿ ಹೈದರಾಬಾದಿಗೆ ಕಳುಹಿಸಲ್ಪಟ್ಟರೋ ಸದರೀ ಮುಖ್ಯಕಾರ್ಯವು ಅನುಕೂಲವಾಗಿ ನೆರವೇರಿಸಲ್ಪಟ್ಟಿತು. ಮತ್ತು ನಿಜಾಮರವರೂ ಹಾಲೀ ಇರತಕ್ಕ ಅವರ ಮಂತ್ರಿಯವರೂ ಮಿತ್ರಭಾವದಲ್ಲಿರುವದರಿಂದಲೂ, ಕರ್ನಲ್ ಮಾರ್ಷಲ್‌ಯವರು ಬರುವ ನವಂಬರ್ ತಿಂಗಳ ಮಧ್ಯಭಾಗದ ಮೊದಲು ಫರ್ಲೋ ರಜಾವನ್ನಪೇಕ್ಷಿಸಿರುವದರಿಂದಲೂ, ನಿಷ್ಕಳಂಕನಾಗಿರುವ ಎರಡು ವರುಷಗಳ ಅವಧಿಗಿಂತ ಅಧಿಕಕಾಲ ಸದರೀ ಪ್ರೈವೇಟ್ ಸೆಕ್ರೆಟರಿ ಕೆಲಸವನ್ನು ಇಟ್ಟಿರಬೇಕಾದ ಕಾರಣ ಒಂದೂ ಕಾಣಿಸಲಿಲ್ಲವೆಂದು ವೈಸರಾಯ್‌ಯವರು ತೀರ್ಮಾನಿಸಿರುತ್ತಾರೆ. ನಿಜಾಮರವರು ಆಸ್ಥಾನದಲ್ಲಿ ಇಂಗ್ಲಿಷ್ ಪ್ರೈವೇಟ್ ಸೆಕ್ರೆಟರಿ ಕೆಲಸವು ಕರ್ನಲ್ ಮಾರ್ಷಲ್‌ಯವರ ಪ್ರಯಾಣದೊಡನೆ ವಜಾ ಮಾಡಲ್ಪಡುವದು. ಕರ್ನಲ್ ಮಾರ್ಷಲ್‌ಯವರು ಮಾಡಿದ ನೌಕರಿಗಳನ್ನು, ನಿಜಾಮರವರಿಗೂ ಅವರ ಮಂತ್ರಿಯಾಗಿದ್ದ ಸಾಲಾರ್‌ಜಂಗರವರಿಗೂ ನೆಲಗೊಂಡಿದ್ದ ಸಂಬಂಧವು ಬಾಧಕ ಸಾಮಗ್ರಿಯಾಗಿ ಏರ್ಪಟ್ಟದ್ದ ಕಾಲದಲ್ಲಿ ನಿಜಾಮರವರ ಆಸ್ಥಾನದಲ್ಲಿ ಸದರೀ ಕರ್ನಲ್‌ಯವರನ್ನು ನಿಯಮಿಸಿದ್ದರಿಂದ ನಿಜಾಮರವರಿಗೂ ಹೈದರಾಬಾದ್ ಸಂಸ್ಥಾನಕ್ಕೂ ಉಂಟಾದ ಪ್ರಯೋಜನವನ್ನೂ, ಬಹಳ ಶ್ಲಾಘಿಸಿದೆವೆಂದು ವೈಸರಾಯ್‌ಯವರು ತಿಳಿಯಪಡಿಸಿದರು. ಮುಂದೆ ಬರುವ ಡಿಸೆಂಬರಿನಾದ ಸರ್ ಲೆಪೆಲ್ ಗ್ರಿಫಿನ್‌ಯವರು, ನಿಜಾಮರ ಆಸ್ಥಾನದಲ್ಲಿ ಬ್ರಿಟಿಷ್ ಆಫಿಸರ ನೊಕರರಾತಿಯು ವ್ಯತಿರಿಕ್ತವಾದ ಮತ್ತು ಅನಾವಶ್ಯಕವಾದ ಕೆಲಸವೆಂದು ನಿಂದಿಸಿ ಕಾಗದ ಬರೆದಿರುವದರಿಂದ ಅದು ಸಹ ಸದರೀ ಕೆಲಸವನ್ನು ವಜಾ ಮಾಡಲಿಕ್ಕೆ ಒಂದು ಜಾಸ್ತೀ ಕಾರಣವಾಗಿ ಏರ್ಪಟ್ಟಿರುತಿದೆ. ನಿಜಾಮರವರ ಅವರ ಮಂತ್ರಿಯವರೂ ವೈಸರಾಯಿಯವರ ಅಭಿಪ್ರಾಯಗಳನ್ನಂಗೀಕರಿಸಿದ್ದಾಗ್ಯೂ ಕರ್ನಲ್ ಮಾರ್ಷಲ್‌ಯವರ ನೌಕರಿಯನ್ನು ಕಳೆದುಕೊಳ್ಳುವದಕ್ಕಾಗಿ ಬಹಳ ವಿಷಾದಿಸುತ್ತಾರೆ.

ಈಗ ಫ್ರಾನ್ಸ್‌ರಾಜ್ಯದಲ್ಲಿ ಅನ್ಯದೇಶೀಯರು ಗೊತ್ತಿಲ್ಲದೆ ಬಹಳವಾಗಿ ಬಂದು ನೆಲಸುತಲಿರುವದು ಕಂಡು ಪ್ರೆಸಿಡೆಂಟರಾದ ಮ॥ ಕಾರ್‌ನಟ್ ಎಂಬವರು ಒಂದು ಆಜ್ಞಾ ಪತ್ರಿಕೆಯಂ ಪ್ರಾಯಿಷ್ ಮಾಡಿ ಅದರಲ್ಲಿ ತಿಳಿಸುತ್ತಾರೇನೆಂದರೆ-ಫ್ರಾನ್ಸ್‌ದೇಶದಲ್ಲಿ ನಿಯತ ವಾಸದಬಗ್ಯೆ ಬರತಕ್ಕ ಅನ್ಯದೇಶೀಯರೆಲ್ಲರೂ ತಾವು ಬಂದ ಹದಿನೈದು ದಿವಸಗಳೊಳಗಾಗಿ, ತಮ್ಮ ಹೆಸರು, ವಯಸ್ಸು, ಜನಿಸಿದ ಸ್ಥಳ ಮತ್ತು ವೃತ್ತಿ ಇವುಗಳನ್ನೆಲ್ಲ ವಿವರವಾಗಿ ಪ್ರಕಟಿಸಬೇಕು, ಮತ್ತು ಅವುಗಳನ್ನು ದೃಢಪಡಿಸಲಿಕ್ಕೆ ಸಾಧಕವಾದಂತಾ ದಾಖಲೆಗಳನ್ನು ಹಾಜರ್ಮಾಡಬೇಕು. ಕ್ರಮವಾಗಿ ಅಲ್ಲಿಯೇ ನೆಲಸತಕ್ಕವರಿಗೆ ಆವಶ್ಯಕಗಳಾದ ದಸ್ತಾವೇಜುಗಳನ್ನು ಸಂಪಾದಿಸಿಕೊಳ್ಳಲಿಕ್ಕೆ ಒಂದು ತಿಂಗಳ ವಾಯಿದೆ ಕೊಡಲ್ಪಟ್ಟಿರುತಿದೆ, ಎಂಬದು.

ದಾವನಗೆರೆ, ತಾ ೬ನೇ ಅಕ್ಟೋಬರ್—ಅಗ್ರಹಾರ ಸಂಸ್ಥಾನದ ದಾನಶರವು ಪೋಲೀಸ್ ಪಹರೆಯೊಡನೆ ಜಲಂಧರಿಗೆ ಕಳುಹಿಸಲ್ಪಟ್ಟಿದಾರೆ. ಅವರಿಂದ ವರಬಿದಿಗೆ ಮರ್ರಿ ಎಂಬ ಪ್ರದೇಶದಲ್ಲಿರುತಲಿದ್ದರು. ವರುಷ ಹಜಾರು ಜನರೊಡನೆ ಖತರೂರಿ ಮಾಡುತ್ತಾರೆಂಬ ಅನುಮಾನ ವುಂಟಾದದರಿಂದ ಅಲ್ಲಿಂದ ಬೇರೇ ಸ್ಥಳಕ್ಕೆ ಸಾಗಿಸಬೇಕಾಯಿತು.

ಪೆಯನಾ, ತಾ॥ ೩ನೇ ಅಕ್ಟೋಬರ್—ಜರ್ಮನ ಚಕ್ರವರ್ತಿಯವರಾದ ವಿಲಿಯಂಯವರು ಇಲ್ಲಿಗೆ ಬಂದು ಸೇರಿದರು. ಅವರಿಗೂ ಆಸ್ಟ್ರಿಯಾ ಚಕ್ರವರ್ತಿಯವರಾದ ಫ್ರಾನ್ಸಿಸ್ ಜೋಸಫ್‌ಯವರಿಗೂ ಉಂಟಾದ ಸಮಾಗಮವು ಕೇವಲ ಸುಸ್ನೇಹಪೂರ್ವಕವಾದದ್ದಾಗಿತ್ತು. ರೈಲ್ವೆ ಸ್ಟೇಷನ್ನಿಂದ ಅರಮನೆಯವರೆಗೆ ಮಾರ್ಗದ ಉಭಯಪಾರ್ಶ್ವದಲ್ಲಿಯೂ ಬಹುಜನ ಗುಂಪುಗೂಡಿ ಚಕ್ರವರ್ತಿಯವರ ಸವಾರಿ ಬರುತ್ತಿದ್ದಂತೆ ಸುಸ್ವಾಗತ ಶುಭವಾಚನ ಮಾಡಿದರು.

ಸಿಮ್ಲಾ, ತಾ ೩ನೇ ಅಕ್ಟೋಬರ್—ಸಿಕಿಂಇಂದಿರರವರು ತಮ್ಮ ಸಹೋದರರೊಡನೆ ಗ್ನೇಟಾಂಗ್ ಎಂಬ ಪ್ರದೇಶದಲ್ಲಿ ಜನರಲ್ ಗ್ರಹಾಂಯವರಿಗೆ ಶರಣಾಗತರಾದರೆಂದು ತಿಳಿಯಬರುತಿದೆ.

SUMMARY OF NEWS.
ವೃತ್ತಾಂತ ಸಂಗ್ರಹವು.

ಕಳೆದ ಶನಿವಾರ ಸಾಯಂಕಾಲ ೫ ಘಂಟೆಗೆ ಶ್ರೀ ಶೃಂಗೇರಿ ಜಗದ್ಗುರುಗಳವರಿಗೆ ಸಕಲ ಸಂಭ್ರಮದೊಡನೆ ನಡೆದ ಚಾತುರ್ಮಾಸ್ಯ ಸಂಕಲ್ಪಕ್ಕೆ ಅಂಗವಾಗಿ ಅವರ ಮೆರವಣಿಗೆಯು ನಡೆಯಿತು. ಅದನ್ನು ನೋಡಲು ಸುಮಾರು ೨೦ ಸಹಸ್ರ ಜನಗಳು ರೋಡುಗಳಲ್ಲಿಯೂ ಅಂಗಡಿಗಳಲ್ಲಿಯೂ ಮನೆಗಳ ಮಾಳಿಗೆಗಳಮೇಲೂ ಸೇರಿದ್ದರು. ಪೋಲೀಸ್ ಸ್ಟೇಷನ್ ಮಾರ್ಗವಾಗಿ ಹೋಗಿ ಅಲ್ಲಿಂದ ಬಸವಣ್ಣನಗುಡಿ ಮುಂದೆ ಹಾದು ತೇರುಬಜಾರಿನಲ್ಲಿ ಪೂರ್ವಭಾಗಕ್ಕೆ ಗುರುಗಳವರ ಸವಾರಿಯು ದಯಮಾಡಿಸುವಾಗ್ಯೆ ಮ॥ರಾ॥ ರಿಜಿಸ್ಟ್ರಾರ್ ಎಸ್. ರಾಮರಾಯರೂ ಟೌನಸಬ್ ಮೇಜಿಸ್ಟ್ರೇಟ್ ನಂಜುಂಡಯ್ಯನವರೂ ಮಾಳಿಗೆಗಳಮೇಲೆ ನಿಂತು ನೋಡುತಲಿದ್ದ ಜನಗಳನ್ನೆಲ್ಲ ಕೆಳಕ್ಕೆ ಇಳಿಯುವಂತೆ ಮಾಡಿಸಿ ಬಂದೋಬಸ್ತು ಮಾಡಿದರು. ಅನಂತರ ಗುರುಗಳವರು ಮಠಕ್ಕೆ ಸುಖವಾಗಿ ಬಂದುಸೇರಿದರು.

ಶ್ರೀ ಶೃಂಗೇರಿ ಜಗದ್ಗುರುಗಳವರ ಚಾತುರ್ಮಾಸ್ಯ ಸಂಕಲ್ಪವು ಮುಗಿಯಿತು. ಅವರು ಈ ಊರಿಗೆ ಬಿಜಯಂಗೈದ ೨ ತಿಂಗಳಾರಭ್ಯ ಸ್ಮಾರ್ತ ಬ್ರಾಹ್ಮಣ ವೈದಿಕರಲ್ಲಿ ಕೆಲವರು ತಮ್ಮ ಅಡಿಗೆ ಒಲೆಗಳನ್ನು ಆರಿಸಿಬಿಟ್ಟಿದ್ದರು, ಮತ್ತು ಕೆಲವರು ಒಂದೇ ಹೊತ್ತು ಒಲೆಗೆ ಬೆಂಕಿ ಹಾಕುತಿದ್ದರು. ಸಿಂತ ಸ್ವಲ್ಪ ಜನಗಳು ಮಾತ್ರ ಯಥಾರೀತಿಯಾಗಿ ಅಡಿಗೆ ಮಾಡಿಕೊಳ್ಳುತಿದ್ದರು. ಶ್ರೀ ಗುರುಗಳವರು ನಾಳೆಯದಿನ ಕೌಲ್ ಬಜಾರಿಗೆ ಹೋಗಿ ಅಲ್ಲಿ ೩—೪ ದಿನಗಳಿದ್ದು ಮುಂದಕ್ಕೆ ಆನವಾನಿಗೆ ಪ್ರಯಾಣ ಮಾಡುವದಾಗಿ ಗೊತ್ತಾಗಿರುವದರಿಂದ ಮೇಲ್ಕಂಡ ಎರಡು ತರಗತಿಗಳವರು ಈಗಲೇ ಖಿನ್ನತೆಯನ್ನು ಹೊಂದಿದವರಾಗಿದಾರೆ. ಮೊನ್ನೆಯದಿನ ಈ ಊರಿನ ವೈದಿಕರುಂವಳಿಯವರಿಗೆ ಉದುಗನೆ ಮೊದಲಾದ ಮರ್ಯಾದೆಗಳು ಮಠದ ಕಡೆಯಿಂದ ನಡೆದವು. ನಿನ್ನೆ ಇಲ್ಲಿನ ವೈಶ್ಯರಿಗೆಲ್ಲ ಮಠದಲ್ಲಿ ಭೋಜನ ಮೊದಲಾದ ಮರ್ಯಾದೆಗಳು ನಡೆದವು. ಈದಿನ ಲೌಕಿಕರಿಗೆ ಸನ್ಮಾನಾದಿಗಳು ನಡೆಸಲ್ಪಡುವವೆಂದು ನಮ್ಮ ತಿಳುವಳಿಕೆಗೆ ಬಂದಿರುತಿದೆ. ಈ ಗುರುಗಳವರು ಇಲ್ಲಿಗೆ ದಯಮಾಡಿದ್ದಕ್ಕೆ ಲೆಕ್ಕಕ್ಕೆ ಇಲ್ಲಿನವರಿಗೆ ಸುಮಾರು ೨೫ ಸಹಸ್ರ ರೂಪಾಯಿಗಳು ಖರ್ಚಾಗಿದ್ದರೂ ವಾಸ್ತವ್ಯವಾಗಿ ೫—೬ ಸಾವಿರ ರೂಪಾಯಿಗಳು ಮಾತ್ರವೇ ಇಲ್ಲಿನವರಕೈ ಬಿಟ್ಟಿರುತಲೂ ಮಿಕ್ಕ ೨೦ ಸಹಸ್ರ ರೂಪಾಯಿಗಳು ಇಲ್ಲಿನ ಅಂಗಡಿಗಳಲ್ಲಿಯೂ ಬ್ರಾಹ್ಮಣರಲ್ಲಿಯೂ ಉಳಿಕೊಂಡಿರುತಲೂ ಜನಗಳು ಅಭಿಪ್ರಾಯಪಡುತ್ತಾರೆ—ವಿಜಯಧ್ವಜ.

ಜಟಕಾ ಗಾಡಿಗಳಲ್ಲಿ ಜನಗಳನ್ನು ಕ್ಲುಪ್ತವಾದ ಸಂಖ್ಯೆಗಿಂತಲೂ ಜಾಸ್ತಿಯಾಗಿ ಕುಳ್ಳಿರಿಸುವ ಪದ್ಧತಿ ಯುಂಟಷ್ಟೆ. ಇದರಿಂದ ಪ್ರಯಾಣಿಕರು ಅಸ್ಥಿರಪಟ್ಟು ತಮಗೆ ಅನಾನುಕೂಲ ಸಂಭವಿಸುವದೆಂದು ಗೊಣಗುಟ್ಟಿಕೊಂಡು, ತಮ್ಮ ಗಾಡಿಗೆ ಹೆಚ್ಚಾಗಿ ಬರುವವರನ್ನು ನೋಡಿ ಹಾಗೆ ಬರಕೂಡದೆಂದು ಅಡ್ಡಿ ಮಾಡುತ್ತಾರೆ. ಬರುವಂತಾ ಪ್ರಯಾಣಿಕರು ಅವರ ಮಾತನ್ನು ಕೇಳುವದಿಲ್ಲ. ಗಾಡಿಯ ನೌಕರರು ಏನಾದರೂ ಮಾಡಿ ಜನಗಳನ್ನು ಗಾಡಿಗಳ ಒಳಕ್ಕೆ ನೂಕಿ ಅವುಗಳಿಗೆ ವೇಗವನ್ನು ಹಾಕುತ್ತಾರೆ. ಈ ಅಂಶಗಳೆಲ್ಲವೂ ಅನುಭವಗೋಚರವಾಗಿ ಇರುವವಲ್ಲವೆ? ಪ್ರವಾಸಿಕರು ಒಂದೇ ಕಂಪಾರ್ಟ್‌ಮೆಂಟಿನಲ್ಲಿ ಗುಂಪಾಗಿ ಕೂರುವಂಥಾ ಅನಾನುಕೂಲವನ್ನು ತಪ್ಪಿಸುವ ಉದ್ದೇಶದಿಂದ, ಅಮೆರಿಕಾ ದೇಶದವರು ಕೆಲವು ಯುಕ್ತವಾದ ಯಂತ್ರಗಳನ್ನು ಕಲ್ಪಿಸಿದ್ದಾರೆ. ೨ ಮುಳ್ಳುಗಳು ೩ ವಿಧವಾಗಿವೆ. ಪ್ರತಿಯೊಂದು ಮುಳ್ಳಿಗೂ ಒಂದೊಂದು ಗುಂಡಿಯನ್ನು ಹಾಕಿದ್ದಾರೆ. ಇಂತಾ ಗುಂಡಿಯನ್ನು ಅದುಮಿದರೆ ೧ನೇ ನಂಬರ್ ಮುಳ್ಳು ೬ ಗಂಟೆ ಮೊದಲಾದವು ತಿರುಗುತ್ತವೆ, ೨ನೇ ನಂಬರ್ ಮುಳ್ಳು ಮೂಲೆಗುತ್ತದೆ. ಮತ್ತು ಗೋಳಾಮಧ್ಯದ, ೩ನೇ ನಂಬರ್ ಮುಳ್ಳು ಅಬ್ಬರಿಸಿಕೊಳ್ಳುತ್ತದೆ. ಇವುಗಳ ಬೆಲೆಯು ಬಹಳ ಕಮ್ಮಿ. ಆದ್ದರಿಂದ ರೈಲ್ವೇ ಪ್ರಯಾಣಿಕರು, ಇಂತಾ ಒಂದೊಂದು ಮುಳ್ಳನ್ನು ಹತ್ತಿರದಲ್ಲಿಟ್ಟುಕೊಂಡಿದ್ದು, ತಾವಿರುವ ಅಂಕಣಕ್ಕೆ ಯಾರಾದರೂ ಹೆಚ್ಚಾಗಿ ಬರುವದಾದರೆ, ಅದರ ಗುಂಡಿಯನ್ನು ಅದುಮುತ್ತಾನೆ ಕ್ಲುಪ್ತವಾದ ಸಂಖ್ಯೆಯನ್ನು ಮೀರಿಬರುವ ಪ್ರಯಾಣಿಕರು, ಮುಳ್ಳಿನ ಮೇಲ್ಕಂಡ ರೀತಿಯಾದ ಶಬ್ದವನ್ನು ಕೇಳಬೇಕಾಗಿ ಕೇಳಲಾರದೆ ಅಲ್ಲಿಂದ ಇನ್ನೊಂದು ಗಾಡಿಯನ್ನು ನೋಡಿಕೊಂಡು ಮುಂದಕ್ಕೆ ಸಾಗಿ ಹೋಗುತ್ತಾರೆ—ವೃ. ಪ.

BANGALORE.—Printed and published at the KARNATIC PRESS, No. 44, Hospital Road, Petta.—1888.

ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA.

ಪ್ರತಿ ಸೋಮವಾರ ಪ್ರಾತಃಕಾಲದಲ್ಲಿ ಪ್ರಕಟಿಸಲ್ಪಡುವದು.

Published every Monday Morning.

ಪ್ರಕಾಮವಿವಿಧಪ್ರವೃತ್ತ್ಯುಪಗಮಾರ್ಥ ಕರ್ಣಾಟಕಪ್ರಕಾಶನವಿಲಾಭಿಧಾವ್ಯುತ್ಪನ್ನಸಾಹಿತೀಶೋಭಿತಾ ॥ ಮ್ಯಗಾಂಕಹಿತವಾಸರೇನಿಹಿತಮುದ್ರಣಾಸಜ್ಜನೈರ್ಧ್ವಿಕಾಸುಚರಿಪ್ರತಾಪಾದಿಕಶಿವಾನಸಂಸುಮುದ್ರ ॥

Vol. XV } ಸಂಪುಟ ೧೫.]

BANGALORE—MONDAY OCTOBER 22, 1888.

ಬೆಂಗಳೂರು:—ಸನ್ ೧೮೮೮ನೇ ಇಸವಿ ಅಕ್ಟೋಬರ್ ೨೨ನೇ ತಾರೀಖ್ ಸೋಮವಾರ.

[No. 41. [ಸಂಖ್ಯೆ ೪೧.

ಕರ್ಣಾಟಕ ಪ್ರಕಾಶಿಕಾ

ಪತ್ರಿಕೆಯ ಚಂದಾ ದರಗಳು,
೧೮೮೮ನೇ ಇಸವಿ ಜನವರಿಯಿಂದಾಯಿತು
ಕಡಿಮೆಮಾಡಲ್ಪಟ್ಟಿರುತಿದೆ.

ಈ ಪತ್ರಿಕೆಯು ಚಂದಾದಾರರಪ್ಪೆಕ್ಷಿ ಅನೇಕರ ಅಪೇಕ್ಷೆಯನ್ನೀಪೇರಿಸುವ ಉದ್ದೇಶದೊಡನೆಯೂ, ಪರಿಮಿತವಾದ ಆದಾಯವುಳ್ಳವರಿಗೆಲ್ಲ ಈ ಪತ್ರಿಕೆಯು ಸುಲಭವಾಗಿ ಲಭಿಸುವಂತಿರಬೇಕೆಂಬ ಅಭಿಪ್ರಾಯದೊಡನೆಯೂ ಇದರ ಚಂದಾದರವನ್ನು ಇದರಡಿಕಂಡಂತೆ ಕಡಿಮೆಮಾಡಿರುತ್ತೇವೆಂತೆಂದರೆ —

ಇಂಗ್ಲೀಷ್ ಮತ್ತು ಕನ್ನಡಭಾಗಗಳಿಗೆ.

	ಮುಂಗಡವಾಗಿ	ಪರ್ಭಾರದವರಿಗೆ
12 ತಿಂಗಳಿಗೆ	8—0 0	9—0—0
6 ,,	4—0—0	4—8—0
3 ,,	2—8—0	2—8—0

ಇಂಗ್ಲೀಷ್ ಅಥವಾ ಕನ್ನಡಭಾಗಗಳಿಗೆ.

	ಮುಂಗಡವಾಗಿ	ಪರ್ಭಾರದವರಿಗೆ
12 ತಿಂಗಳಿಗೆ	4—0—0	5—0—0
6 ,,	2—0—0	2—8—0
3 ,,	1—4—0	1—8—0

ಷರಾ—ಅಂದೆ ಮುಣ್ಸಿಪಲು, ಲೋಕಲ್ ಮತ್ತು ತಾಲೂಕ್ ಸ್ಕೂಲ್‌ಮಾಸ್ಟರುಗಳು, ಶ್ಯಾನಭೋಗರು, ಪಟೇಲರು, ವಿದ್ಯಾರ್ಥಿಗಳು, ಇವರಿಗೆಲ್ಲ ಈ ಪತ್ರಿಕೆಯು ಷರಾ ಚಂದಾದವರಿಗೆ ಕೊಡಲ್ಪಡುವದು. ಅಪೇಕ್ಷಿಸುವರು ಒಬ್ಬರ ಬರದ ದಸ್ತಾವೇಜುಗಳ ... ಸರ್ಟಿಫಿಕೇಟ್ ... ಚಂದಾದಾರರು ಇಂಗ್ಲೀಷ್ ಭಾಗವನ್ನಾಗಲಿ ಕನ್ನಡಭಾಗವನ್ನಾಗಲಿ ಅಥವಾ ಎರಡನ್ನಾಗಲಿ ತೆಗೆದುಕೊಳ್ಳಬಹುದು. ಚಂದಾದರವನ್ನು ಮುಂಗಡವಾಗಿಯೇ ಕಳುಹಿಸತಕ್ಕದ್ದು. ಮೂರು ತಿಂಗಳಿಗಿಂತ ಕಡಿಮೆಯಾಗಿ ಚಂದಾ ಮೊಬಲಗು ತೆಗೆದುಕೊಳ್ಳಲ್ಪಡುವದಿಲ್ಲ.

ನೋಟುಗಳು ರವಾನಿಸತಕ್ಕವರು ನೋಟಿನ ಅರ್ಧ ಭಾಗವನ್ನು ರಿಜಿಸ್ಟರ್ ಮಾಡಿ ಕಳುಹಿಸಿ ಬಾಕಿ ಅರ್ಧ ಭಾಗವನ್ನು ರವಾನಿಸತಕ್ಕದ್ದು. ಸ್ಟಾಂಪುಗಳು ಕಳುಹಿಸತಕ್ಕವರು ರೂಪಾಯಿ ಒಂದಕ್ಕೆ ಒಂದಾಣೆಯಂತೆ ಡಿಸ್ಕೌಂಟ್ ಸಹ ಸೇರಿಸಿ ಕಳುಹಿಸತಕ್ಕದ್ದು. ಅರ್ಧಾಣೆ ... ಸ್ಟಾಂಪುಗಳನ್ನು ಕಳುಹಿಸಬೇಕು. ಡಿಸ್ಕೌಂಟಿಲ್ಲದೆ ಕಳುಹಿಸಲ್ಪಡುವ ಮೊಬಲಗಿನಲ್ಲಿ ಆದ ಕಡಿಮೆಯು ಚಂದಾ ಮೊಬಲಗು ಲೆಕ್ಕಕ್ಕೆ ಜಮಾ ಮಾಡಲ್ಪಡುವದು.

ಪ್ರಕಟನೆಯ ರಿವಾಜ್.

ಮೊದಲನೆಯದಫಾ ಪಂಕ್ತಿ ಒಂದಕ್ಕೆ	೦—೨—೦
ಎರಡನೆಯದಫಾ ಪಂಕ್ತಿ ಒಂದಕ್ಕೆ	೦—೧—೦

ಷರಾ—ಎರಡಾವರ್ತಿಗಿಂತ ಜಾಸ್ತಿಯಾಗಿ ಎಷ್ಟು ತಡವೆ ಹಾಯಿಸ್ ಮಾಡಿದಾಗ್ಯೂ ಪಂಕ್ತಿ ಒಂದಕ್ಕೆ ೧ಆಣೆಯಂತೆ ಲೆಕ್ಕ ಮಾಡಲ್ಪಡುವದು. ಈ ಪತ್ರಿಕೆಯಲ್ಲಿ ಹಾಯಿಸ್ ಮಾಡುವುದಕ್ಕೆ ಪ್ರಕಟನೆಗಳು ಕಳುಹಿಸುವವರು ಅವು ಎಷ್ಟಾವರ್ತಿ ಹಾಯಿಸ್ ಮಾಡಲ್ಪಡಬೇಕೋ ಆ ಅಂಕವನ್ನು ಸ್ಪಷ್ಟವಾಗಿ ತಿಳಿಸತಕ್ಕದ್ದು. ಇಲ್ಲದಪಕ್ಷಕ್ಕೆ ಅವರು ನಮಗೆ ನಿಲ್ಲಿಸುವಂತೆ ಬರೆಯುವವರೆಗೆ ಅದು ಪ್ರಕಟಿಸುತ್ತಿದ್ದು ಹಾಗೆ ಎಷ್ಟಾವರ್ತಿ ಪ್ರಕಟಿಸಲ್ಪಟ್ಟಿದ್ದಾಗ್ಯೂ ಮೇಲ್ಕಂಡ ದರದಂತೆ ಕಿಮ್ಮತ್ ವಸೂಲ್ ಮಾಡಲ್ಪಡುವದು. ಪ್ರಕಟನೆಯ ಬಗ್ಗೆ ಕಳುಹಿಸಲ್ಪಡತಕ್ಕ ಪ್ರಕಟನೆಗಳನ್ನು ಆ ಯಾದಿನಾರದ ದಿನ ಮಧ್ಯಾಹ್ನ ೨ ಘಂಟೆ ಯೊಳಗಾಗಿ ಕಳುಹಿಸಬೇಕು. ಪ್ರಕಟನೆಯ ಬಗ್ಗೆ ಈ ಪತ್ರಿಕೆಗೆ ಕಳುಹಿಸಲ್ಪಡತಕ್ಕ ಕಾಗದಗಳಲ್ಲಿ ತಿಳಿಸಲ್ಪಡುವ ಅಭಿಪ್ರಾಯಗಳಿಗೆ ನಾವು ಜವಾಬ್ದಾರರಾಗಲಾರೆವು. ಶೀಘ್ರವಾಗಿ ರುಜುಮಾಡದೆ ಹೆಸರು ಯಾವಕಾಗದವನ್ನು ಪ್ರಕಟಿಸಲಾರೆವು. ನಿರಾಕರಿಸಲ್ಪಟ್ಟ ಕಾಗದಗಳು ಮರಳಿ ವಾಪಸ್ ಕಳುಹಿಸಲ್ಪಡಲಾರವು.

"IT RECOMENDS ITSELF"

ALL WHO SUFFER FIND SURE RELIEF.

LITTLE'S

ORIENTAL BALM

THE MOST EFFECTUAL MODERN REMEDY FOR PAIN.

ಲಿಟಲ್ ಕಂಪನಿಯಿಂದ ತಯಾರಾಗಲ್ಪಟ್ಟ "ಬಾಧಸಂಹಾರಿಣಿ" ಎಂಬ ಪೂರ್ವದೇಶ ಸಂಬಂಧವಾದ ಅಮೋಲ ತೈಲವು ಸ್ವಶಕ್ತಿ ಪ್ರಕಾಶಕವಾದದ್ದು, ಮತ್ತು ಸಫಲವಾದ ನವೀನ ಪ್ರತಿಕ್ರಿಯೋಪಯೋಗವಾದ ಔಷಧವು. ಇದರಿಂದ ಸಕಲ ವಾತರೋಗಗಳೂ, ವಾತಸಂಬಂಧಗಳಾದ ಸಂಧಿಬಂಧಗಳೂ ನಿವೃತ್ತಿಯಾಗುವವು. ಮುಖ್ಯವಾಗಿ ಬೆರಕಾಲಿಕವಾದ ವಾತರೋಗಗಳು, ಕಾಸ, ಗಂಟ್ಲಿನಲ್ಲಿ ಉರಿ, ನರದ ನೋವು, ಶೀತವಾಯು, ಕಟಿವಾಯು, ಉಳುಕು ನೋವು, ತಲೆನೋವು, ತಿಮಿರ್ವಾಯು ಮುಂತಾದ ರೋಗಗಳಿಗೆಲ್ಲ ನಿಸ್ಸಂದೇಹವಾಗಿ ಬಹಳ ಪ್ರಯೋಜನವನ್ನುಂಟು ಮಾಡತಕ್ಕದ್ದು. ಈ ತೈಲವನ್ನು ನೋವುಳ್ಳ ಸ್ಥಳಗಳಲ್ಲಿ ಕೆಲವಾವರ್ತಿ ಸವರಿ ಚಾಚುವಂತಾಗುವಂತೆ ಚೆನ್ನಾಗಿ ತಿಕ್ಕಿದಲ್ಲಿ ಸಕಲಗಳಾದ ಎಲ್ಲಾ ನೋವುಗಳನ್ನು ನಿವೃತ್ತಿ ಮಾಡುವಂಥಾ ಉತ್ತಮ ತೈಲವಾಗಿರುತ್ತದೆ. ಸರ್ಪ್ವಶೋಷಣೆಯಿಂದಲೇ ಅತಿಶೀತನೋವು ಮತ್ತು ಜೋಮು ಕುಜ್ಜಾಂಗ ನಿವೃತ್ತಿಯಾಗುವದು. ಗಂಟ್ಲಿನಲ್ಲಿಯುಂಟಾಗುವ ಉರಿ ಅಥವಾ ವ್ರಣಗಳಿಗೆ ಈ ತೈಲವು ಅದ್ಭುತವಾದ ಮತ್ತು ಶೀಘ್ರವಾದ ಸಂಪೂರ್ಣ ಗುಣವನ್ನುಂಟುಮಾಡುವದು. ಅದ್ಭುತವಾದ ಈ ಔಷಧವನ್ನು ಉಪಯೋಗಿಸಿದಲ್ಲಿ ಅದರ ಪ್ರಯೋಜನವು ಸ್ವತಃವೆ ವ್ಯಕ್ತವಾಗುವದು. ಈ ತೈಲವು ಶೀತಗಾಳಿ ಮಂಜುಮುಂತಾದವುಗಳೊಳಗಾಗಿ ಸಂಚರಿಸುವಂತಾ ಪ್ರಯಾಣಿಕರು, ಬೇಟೆಯಾಡುವವರು, ದೇಶಾಟನೆ ಮಾಡುವವರು, ಮುಂತಾದವರಿಗೆಲ್ಲ ಅಮೂಲ್ಯವಾದದ್ದು.

ಪರಿಶೀಲಕರ ಅಭಿಪ್ರಾಯವು.

ಐರ್‌ಲ್ಯಾಂಡ್ ದೇಶದ ಫಾರ್ಮಸ್ಯುಟಿಕಲ್ ಸೊಸೈಟಿಯಿಂದ ಔಷಧಶಾಲೆಯ ಪ್ರೊಫೆಸರರಾಗಿಯೂ, ಅದೇ ದೇಶದ ಮೆಡಿಕಲ್ ಸೊಸೈಟಿ ಎಂಬ ವೈದ್ಯಶಾಸ್ತ್ರಾಭ್ಯಾಸಿಗಳ ಸಮಾಜದ ಮೆಂಬರಾಗಿಯೂ, ಅದಿನ್ನರ ಲಾ ಡಾಕ್ಟರ್ ಆಫ್ ಯೂನಿಯನ್ ಎಂಬ ಗ್ರಂಥಕರ್ತರಾಗಿಯೂ, ರಸಾಯನ ವಿಷಯಕವಾದ ಅನೇಕ ಲೇಖನಾಧಿಕಾರಿಯೂ ಆಗಿ, ಇರುವ ಪ್ರೊಫೆಸರ್ ಟಿಚ್ ಬೋರ್ನ್ (C. R. TICHBORNE, L. L. D., F. C. S., M. R. I. A.) ಎಂಬುವರು ಅಭಿಪ್ರಾಯ ಪಟ್ಟಿರುತ್ತಾರೇನೆಂದರೆ—ಲಿಟಲ್‌ಯವರ ಓರಿಯಂಟಲ್ ತೈಲವನ್ನು ಬಾಗರೂಕತೆಯಿಂದ ಪರೀಕ್ಷಿಸಿದ ಮೇಲೆ ಇದು ಬಹುವಿಧವಾದ ಔಷಧಗಳ ಸಮ್ಮಿಶ್ರವಾದ ತೈಲವೆಂದೇ ಸ್ಪಷ್ಟವಾಗಿದೆ, ಇದು ಮೊದಲೇ ಉಪಯೋಗಿಸಲ್ಪಡುವಾಗ ರುದ್ರಾಂಗ ನಿಯಮಪ್ರಕಾರವಾದದ್ದಾಗಿದ್ದರೂ, ನಿಜವಾಗಿ ವ್ಯಾಧಿ ರೋಗ ನಿವಾರಕ ತಂತ್ರವುಳ್ಳದ್ದಾಗಿರುತ್ತದೆ. ಈ ಮಿಶ್ರಣದಲ್ಲಿ ವಸ್ತುಗಳನ್ನು ಸಮಿಶ್ರಕ್ಕೆ ತರತಕ್ಕದ್ದಾಗಿರುವದರಿಂದ ಇದು ಯಾವ ತರದ ರೋಗಗಳಿಗೆ ಉಪಯುಕ್ತವೆಂದು ತಿಳಿಯಲ್ಪಟ್ಟಿದೆಯೋ ಸದರೀ ರೋಗಗಳಲ್ಲಿ ಅದರ ಪ್ರಯೋಜನವು ವ್ಯಕ್ತವಾಗುವದು. ಈ ತೈಲವು ಸಂಪೂರ್ಣ ಜಾಗರೂಕತೆಯಿಂದ ತಯಾರಾಗಲ್ಪಟ್ಟಿರುತ್ತದೆ.

ಇದರ ಕ್ರಯ—ಸೀಸೆ ಒಂದಕ್ಕೆ ೧ ರೂಪಾಯಿ

ಇದು ಮಿಸ್ಟ್ರ ಔಷಧ ಶಾಲೆಯಲ್ಲಿಯೂ, ಮದರಾಸ್ ಶಂಬುದಾಸ್ ಬೀದಿಯಲ್ಲಿ, ೨೦ನೇ ನಂಬರ್ ಮನೆಯೊಳಗಿರುವ, ಮೆ ಎ. ಸಿ. ಬೆರ್ರಿಮನ್ ಯವರಲ್ಲಿಯೂ, ಈ ಪಟ್ಟಣದಲ್ಲಿರುವ ಅವರ ಏಜೆಂಟರಾದ ಜೆ. ವೆಸ್ಟ್ ಯವರ ಕಂಪೆನಿಯಲ್ಲಿಯೂ, ಮೆ. ಕೆಪ್ಟನ್ ಅಂಡ್ ಕಂಪೆನಿಯವರಲ್ಲಿಯೂ, ರಿಗ್ಸ್ ಯವರ ಕಂಪೆನಿಯಲ್ಲಿಯೂ ದೊರೆಯುವದು.

AGENTS — Messrs, J. WEST, Chemist, &c., Bangalore.
CAPTAIN & Co Chemists, Bangalore
RIGGS & Co, Chemists, Bangalore, and of
MAHOMED YOUSOFF AND SONS, The Cash Bazar, Bangalore
A. C. BERRYMAN & Co,
20 Sambodoss Street Madras.

Bangalore City Municipality.

ಬೆಂಗಳೂರು ಸಿಟಿ ಮ್ಯುನಿಸಿಪಾಲಿಟಿ.

ಸನ್ ೧೮೮೮ನೇ ಇಸವಿ ಅಕ್ಟೋಬರ್ ೨೭ನೇ ತಾರೀಖ್ ಶನಿವಾರದದಿನ ಪ್ರಾತಃಕಾಲ 21 ಘಂಟೆಗೆ ಸಿಟಿ ಮ್ಯುನಿಸಿಪಲ್ ಕಮ್ಮಿಷನರುಗಳು ತಮ್ಮ ಆಫೀಸಿನಲ್ಲಿ ಸಭೆ ಸೇರುವಲ್ಲಿ ಅವರ ಆಲೋಚನೆಗೆ ತರಲ್ಪಡುವದಾಗಿರುವ ವಿಷಯಗಳ ಯಾದಾಸ್ತು.

೧. ಸನ್ ೧೮೮೮ನೇ ಇಸವಿ ಸೆಪ್ಟೆಂಬರ್ ತಿಂಗಳ ಬಾಬತು ನಗದೀ ಜಮಾಖರ್ಚ್ ಲೆಕ್ಕ ಮತ್ತು ಮರಣ ಲೆಕ್ಕಗಳು.

೨. ಮುದರಸೆ ಮಹಮ್ಮದಿ ಪಾಠಶಾಲೆಯ ಶಾಖೆಯವರು ಪಾಠಶಾಲೆ ಕಟ್ಟುವದಕ್ಕೆ ದ್ರವ್ಯ ಸಹಾಯ ಮಾಡಬೇಕೆಂದು ಅಪೇಕ್ಷಿಸಿ, ಅದರ ನಮೂನೆ ಯೊಡನೆ ಬರೆದುಕೊಂಡ ಅರ್ಜಿಯ ಮೇಲ್ಕಂಡ ನಿಶಿ, ಮೈಸೂರು ಗವರ್ನಮೆಂಟ್ ವಿದ್ಯಾಭ್ಯಾಸದ ಇಲಾಖಾ ಸೆಕ್ರೆಟರಿಯವರು ಬರೆದ ಸನ್ ೧೮೮೮ನೇ ಇಸವಿ ಸೆಪ್ಟೆಂಬರ್ ೨೩ನೇ ಮಕರ್ರಮುಳ್ಳ ೨೩೭ನೇ ನಂಬರ್ ಲೆಟರ್.

೩. ಕಬ್ಬನ್‌ಪೇಟೆ ವಾಸಸ್ಥರಾದ ಮೊಹಿಸರ್ ಮರ್ ಯೆಂಬವರು ಹಲಸೂರುಪೇಟೆಗೆ ಹೋಗುವಂತೆ ಒಂದು ಹೊಸರಸ್ತೆಯನ್ನು ಹಾಕಿಸಬೇಕೆಂದು ಬರೆದುಕೊಂಡ ಅರ್ಜಿ.

೪. ಕೋಟೆಯ ಸಂರಕ್ಷಣೆ ವಗೈರೆ ವಿಷಯಕ್ಕೆ ಸಂಬಂಧಪಟ್ಟ ಕಾಗದಪತ್ರಗಳು.

ಸಿಟಿ ಮ್ಯುನಿಸಿಪಲ್‌ಆಫೀಸ್, ಬೆಂಗಳೂರು. ೧೦ನೇ ಅಕ್ಟೋಬರ್೧೮೮೮. }

A. H. MACINTIRE,
President,
City Municipal Commission

NOTICE.

VAIDYASARA SANGRAHA

A TREATISE ON THE PRINCIPLES OF

HINDU MEDICINE

☞ *Price including Postage Rs 3 6 0*

ವೈದ್ಯಸಾರ ಸಂಗ್ರಹ.

ಈಗ್ರಂಥಾಪೇಕ್ಷೆಯುಳ್ಳವರು ಮೊಬಲಗಿನೊದನೆಈ ಕೆಳಗೆ ರುಜುಮಾಡಿರತಕ್ಕವರ ಹೆಸರಿಗೆ ಬರೆದುಕೊಂಡರೆ ಪುಸ್ತಕ ಕೂಡಲೇ ಕಳುಹಿಸಲ್ಪಡುವದು. ಮೊಬಲಗು ಇಲ್ಲದ ದರಖಾಸ್ತುಗಳಿಗೆ ಸುತರಾಂ ನಿಗೇಕೊಡಲ್ಪಡಲಾರದು.

ಇದರಕ್ರಯ	ರೂ॥ ೫—೦—೦
ಪ್ಯಾಕಿಂಗ್ ಮತ್ತು ಅಂಚೇಹಾಸಲ್,	೦—೬—೦

ಟಿ. ಬಿ. ವೆಂಕಟಾಚಾರ್,
ಆಸ್ಪತ್ರಿರೋಡ್ ಬೆಂಗಳೂರು.

ವಿಶೇಷ ವರ್ತಮಾನ

ಪೂನೆ ಚಿತ್ರಶಾಲೆಯಲ್ಲಿ ಸಾಧ್ಯಗೊಳಿಸಲ್ಪಟ್ಟಿರುವ ಯೋಗ್ಯ ಚಿತ್ರಗಳಲ್ಲಿ, ಹಿಂದೂ ದೇವರುಗಳ, ಚರಿತ್ರೆಗಳ ಮೂಲಕ ಪ್ರಸಿದ್ಧಿಯಂ ಪಡೆದವರ, ಸುಂದರಿಯರಾದ ನೇಟಿವ್ ಹೆಂಗಸು ವಗೈರೇರ ಬಣ್ಣದ ತಸ್ವೀರ್‌ಗಳು ತಯಾರಾಗುವವೆ ಇವುಗಳ ಕೆಲಸಗಾರಿಕೆಯು ಪಾರುಪತ್ಯವನ್ನು ಯೋಚಿಸಲಾಗಿ ಕ್ರಯ ಬಹಳ ಅಲ್ಪವಾಗಿದೆ. ಲೇಕಾಪತವರಿಗೆ ಕ್ರಯಪಟ್ಟಿ ಕಳುಹಿಸಲ್ಪಡುವವು.

ಪೂನೇ ಚಿತ್ರಶಾಲೆಯ ವ್ಯಾನೇಜರ್.

ನೋಟೀಸು.

ಶಿವಮೊಗ್ಗೆಯಲ್ಲಿರುವ ಹೊಸಹಳ್ಳಿ ಜಯರಾಮಾಚಾರ್ಯರ ಮಗ ಕೃಷ್ಣಾಚಾರ್ರ ಹೆಂಡತಿ ವೆಂಕಮ್ಮನು ಪ್ರಸಿದ್ಧಪಡಿಸುವದೇನೆಂದರೆ.—

ನನ್ನ ಜೀವನಾಂಶಕ್ಕೋಸ್ಕರ ನನ್ನ ಮಾವಂದರು ಶಿವಮೊಗ್ಗಾ ತಾಲ್ಲೂಕು ಹೊಸಹಳ್ಳಿ ಗ್ರಾಮದಲ್ಲಿ ಕೆಲವು ಜಮೀನು ಬಿಟ್ಟಿದ್ದರು. ಅದನ್ನು ಒಬ್ಬರಿಗೆ ಗೇಣು ಮಾಡಿದ್ದೆ. ಅದರಲ್ಲಿ ಮೋಸಗತಿ ಅಂಶ ನಡೆವಂತೆ ಈಚೆಗೆ ನನಗೆ ತಿಳಿಯಬಂತು. ಈ ಸ್ವತ್ತುಗಳನ್ನೆಲ್ಲ ನನ್ನ ದತ್ತುಮಗ ಗೋವಿಂದಾಚಾರಿಗೆ ವಹಿಸಿ ಅವರಿಂದ ನಾನು ಜೀವನಾಂಶ ಹೊಂದಲು ಯೋಚನೆ ಮಾಡಿಕೊಂಡಿದ್ದೇನೆ. ನಾನು ಹುಟ್ಟಿದಂದಿನಿಂದ ಯಾರಾದರೂ ಸದರೀ ಸ್ವತ್ತು ಬಗ್ಗೆ ನನ್ನಿಂದ ಅಡವು ವಗೈರೆ ದಸ್ತಾವೇಜು ಆಗಿದೆಯೆಂತ ಹೇಳಬೇಕಾಗಿದ್ದರೆ ನನ್ನ ಮಗ ಗೋವಿಂದಾಚಾರ್ರ ಸಾಕ್ಷಿ ಇಲ್ಲದೆ ನನ್ನ ಹೆಸರಿನಲ್ಲಿ ಮಾತ್ರ ಇದ್ದರೆ ನಾನು ಬರೆದು ಕೊಟ್ಟದ್ದಲ್ಲವೆಂತ ಸರ್ವರೂ ತಿಳಿಯಬೇಕಾಗಿ ಇದರಿಂದ ತಿಳಿಸಿದ್ದೇನೆ.

೧೦-೧೦-೮೮ } ಶಿವಮೊಗ್ಗಾ. }
(ಮುದ್ರೆ) ವೆಂಕಮ್ಮನ ಮುದ್ರೆಗುರ್ತಿಗೆ ರಾಮಣ್ಣನಬರಹ.

ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA.

MONDAY, OCTOBER 22, 1888.

೧೮೮೮ನೇ ಅಕ್ಟೋಬರ್ ೨೨ನೇ ತಾ|| ಸೋಮವಾರ.

NOTICE TO OUR SUBSCRIBERS.

ಈಸಲ ದಸರಾಹಬ್ಬಕ್ಕೆ ಸೇರಿದಂತೆ ಮೈಸೂರು ರಾಜಧಾನಿಯಲ್ಲಿ ಅಗ್ರಿಕಲ್‌ಚ್ಯುರಲ್ ಎಗ್ಜಿಬಿಷನ್, ಅಂದರೆ ವ್ಯವಸಾಯಾದಿ ವಸ್ತು ಪ್ರದರ್ಶನ ಸಭೆಯೊಂದು ನಡೆದು, ಅದು ಈ ದೇಶೀಯರಿಗೂ ಅನ್ಯ ದೇಶೀಯರಿಗು ಸಹ ಕೇವಲ ಆಕರ್ಷಕವಾಗಿಯೂ ವಿನೋದಕಾರಿಯಾಗಿಯೂ ಏರ್ಪಟ್ಟದರಿಂದ, ಮೈಸೂರಿಗೆ ಹೋಗಿ ಅದಂ ನೋಡುವದರಲ್ಲಿ ಸ್ವಾಭಾವಿಕವಾದ ಕುತೂಹಲವುಳ್ಳ ಇತರರಂತೆ ನಮ್ಮ ಕಾರ್ಖಾನೆಯ ನೌಕರ್ಮನೇರು ಕೂಡ ವಿಶೇಷ ಆಸಕ್ತಿಯೊಡನೆ ನಮ್ಮನ್ನು ಬಹಳ ಕೇಳಿಕೊಂಡದ್ದರಿಂದ ಅವರ ಅಪೇಕ್ಷಾ ಪೂರ್ತಿಯಂ ಗೈಯುವದಕ್ಕಾಗಿ ನಿರ್ವಾಹವಿಲ್ಲದೆ ಗತವಾರದ ಪತ್ರಿಕೆಯಂ ಮುಂದಾಗಿ ತಿಳಿಸದೆ ನಿಲ್ಲಿಸಿದ ಬಗ್ಯೆ ನಮ್ಮ ಚಂದಾದಾರರೆಲ್ಲರೂ ಕ್ಷಮಿಸಬೇಕೆಂದು ಕೋರುತ್ತೇವೆ.

THE MYSORE REPRESENTATIVE ASSEMBLY,—1888.

ಈ ಸಲದ ನವರಾತ್ರಿ ಉತ್ಸವವೂ, ಅದರೊಡನೆ ನಡೆಸಲ್ಪಟ್ಟ ವಿವಿಧವಸ್ತು ಪ್ರದರ್ಶನ ಸಭೆಯೂ ಇದ್ದಮಟ್ಟಿಗೆ ತೃಪ್ತಿಕರವಾಗಿ ನೆರವೇರಿದವೆಂದು ತಿಳಿಯಬರುತಿದೆ. ಈ ಸಲ ಇದಕ್ಕಾಗಿ ನಾನಾ ದೇಶಗಳಿಂದ ಲಕ್ಷಾಂತರ ಪ್ರಜೆಗಳು ರಾಜಧಾನಿಗೆ ಹೋಗಿದ್ದರು, ಪರಂತು ಅಲ್ಲಿನ ಸ್ಥಳ ಸಂಕೋಚದಿಂದ ಅನೇಕರಿಗೆ ತಂಗಲಿಕ್ಕೆ ಸ್ಥಳಸಿಕ್ಕದೆ ಅವರು ಬಹಳಶ್ರಮಪಟ್ಟು ವಾಪಸ್ ಬಂದುಬಿಟ್ಟರು. ಎಗ್ಜಿಬಿಷನ್ ಕಾಲದಲ್ಲಿ ಮಾಡಲ್ಪಟ್ಟದ್ದ ಏರ್ಪಾಡುಗಳು ಶುದ್ಧಾಂಗ ತೃಪ್ತಿಕರವಾಗಿರಲಿಲ್ಲವೆಂತಲೂ, ಕೆಲವು ಪ್ರದೇಶಗಳಿಂದ ಕಳುಹಿಸಲ್ಪಟ್ಟದ್ದ ಪದಾರ್ಥಗಳು ಕೇವಲ ಸಾಮಾನ್ಯವಾಗಿದ್ದವೆಂತಲೂ ಕೇಳುತ್ತೇವೆ. ೧೭ನೇ ತಾರೀಖಿನ ಮಧ್ಯಾಹ್ನಾತ್ಪರ ಪ್ರಜಾ ಪ್ರತಿನಿಧಿ ಸಮಾಜವು ಮೆ|| ರಂಗಾಚಾರ್ಯರವರ ಮೆಮೋರಿಯಲ್ ಹಾಲಿನಲ್ಲಿ ಸೇರಿತ್ತು. ಆ ಕಾಲದಲ್ಲಿ ೨೦೪ ಪ್ರತಿನಿಧಿಗಳು ಬಂದಿದ್ದರು. ಇದಲ್ಲದೆ ಬ್ರಿಟಿಷ್ ರೆಸಿಡೆಂಟರೂ ಸಂಸ್ಥಾನದ ಇತರ ಆಫಸರ್‌ಗಳೂ ಹಾಜರಿದ್ದರು. ದಿವಾನರವರು ಕಳೆದ ಸಂವತ್ಸರದಲ್ಲಿ ತಾವು ನಡೆಸಿದ ಆಡಳಿತ ಕ್ರಮಗಳನ್ನೂ, ಸಂಸ್ಥಾನದ ನಗದ್ ಜಮಾಖರ್ಚನ್ನೂ ಬಾಬವಾರಾಗಿ ಪ್ರತಿನಿಧಿಗಳಿಗೆ ತಿಳಿಯಪಡಿಸಿದರು. ಈ ಸಂವತ್ಸರದಲ್ಲಿ ೧,೨೯,೩೬,೨೩೬ ರೂಪಾಯಿಗಳು ಹುಟ್ಟುವಳಿಯಾಗಿರುತಿದೆ. ಗತಸಾಲಿಗಿಂತಲೂ ಈಸಲ ೨,೨೫,೦೦೦ ರೂಪಾಯಿಗಳು ಜಾಸ್ತೀ ಉತ್ಪತ್ತಿಯಾಗಿರುವಂತೆಯೂ, ೧,೧೩,೯೮,೫೯೧ ರೂಪಾಯಿಗಳು ವ್ಯಯವಾದಂತೆಯೂ, ಫಸ್ಟ್ ಲ್ಯಾಂಡ್ ರೆವಿನ್ಯೂ ಮೂಲಕ ೮೫,೨೩,೮೭೯ ರೂಪಾಯಿಗಳು ವಸೂಲಾಗಿರುವಂತೆಯೂ, ೧೪,೭೭,೬೬೫ ರೂಪಾಯಿಗಳು ಸಿಲ್ಕು ನಿಂತಿರುವಂತೆಯೂ ತಿಳಿಯಬರುತಿದೆ. ಇದಲ್ಲದೆ ದಿವಾನರವರು ರೈಲ್ವೇ ವಿಷಯದಲ್ಲಿ ಮದ್ರಾಸು ಕಂಪೆನಿಯವರಿಗೂ, ಮೈಸೂರು ಸರ್ಕಾರಕ್ಕೂ ನಡೆದಿರುವ ಏರ್ಪಾಡುಗಳನ್ನೂ, ಮುಂದೆ ಮಾಡಲುದ್ದೇಶಿಸಿರುವ ನೀರಾವರಿ ಕಾಮಗಾರಿಗಳನ್ನೂ ಚಿನ್ನದ ಗನಿಗಳಿಂದುಂಟಾಗುವ ಲಾಭನಷ್ಟಗಳನ್ನೂ, ಈಗ ಜರಿಗಿದ ವ್ಯವಸಾಯಾದಿ ನಾನಾವಸ್ತು ಪ್ರದರ್ಶನ ಸಭೆಯಿಂದ ಲಭಿಸಬಹುದಾದ ಮುಂದಿನ ಪ್ರಯೋಜನಗಳನ್ನೂ ತಪಸೀಲಾಗಿ ತಿಳಿಸಿರುತ್ತಾರೆ. ಹೀಗೆ ಇನ್ನೂ ಅನೇಕ ಮುಖ್ಯ ವಿಷಯಗಳಿಂದ ದಿವಾನರವರ ಅಡ್ರೆಸ್ಸು ಎಲ್ಲರಿಂದಲೂ ಅವಶ್ಯ ತಿಳಿಯತಕ್ಕದ್ದಾಗಿರುವದರಿಂದ ಅದಂ ಮುಂದಿನವಾರದ ಪತ್ರಿಕೆಯಲ್ಲಿ ಪ್ರಕಟಿಸುವೆವು.

THE LATE MR. MAHADEV MORESWARA KUNTE.

ಪುನೇ ಹೈಸ್ಕೂಲ್ ಹೆಡ್‌ಮಾಸ್ಟರಾಗಿದ್ದ ಪ್ರಸಿದ್ಧರಾದ ರಾವ್‌ಸಾಹೇಬ ಮಹದೇವ ಮೋರೇಶ್ವರ ಕುಂಟೆ ಎಂ. ಎ. ಯವರು ಈಗ್ಯೆ ಒಂಬತ್ತು ತಿಂಗಳಕಾಲವಾಗಿ ಪಕ್ಷವಾಯುರೋಗದಿಂದ ಸಂಕಟ ಪಡುತಲಿದ್ದು ಮಾಹೇ ಮಜಕೂರು ೮ನೇ ತಾರೀಖ್ ಸೋಮವಾರದದಿನ ಸಾಯಂಕಾಲ ೬ ಘಂಟೆಗೆ ಕಾಲಗತಿಯನ್ನೈದಿದರೆಂಬ ವೃತ್ತಾಂತವಂ ತಿಳಿಸಲಿಕ್ಕೆ ನಾವು ಬಹಳ ವಿಷಾದಿಸುತ್ತೇವೆ. ಈ ಪಂಡಿತರು ಅಸಾಧಾರಣವಾದ ಮೇಧಾಶಕ್ತಿ ಯುಕ್ತರಾಗಿ ತಮ್ಮ ವಿದ್ಯಾ ವೈದಗ್ಧ್ಯದಿಂದ ಅನೇಕರ ಪ್ರೀತಿ ಗೌರವಗಳಿಗೆ ಮುಖ್ಯ ಪಾತ್ರರಾಗಿದ್ದರಲ್ಲದೆ ಯೂರೋಪ್ ವಗೈರೆ ಅನ್ಯದೇಶಗಳಲ್ಲಿಯೂ ಇವರ ಪಾಂಡಿತ್ಯವು ಪ್ರಕಟವಾಗಿ ಕೊಂಡಾಡಲ್ಪಡುತಲಿತ್ತು. ಈ ದೊಡ್ಡಮನುಷ್ಯರು ತಮ್ಮ ಜೀವಿತಕಾಲವನ್ನೆಲ್ಲ ವಿದ್ಯಾಭ್ಯಾಸದ ಇಲಾಖೆಯಲ್ಲೇ ಕಳೆದು ತಮ್ಮ ಜ್ಞಾನವನ್ನು ಸ್ವದೇಶೀಯರ ಪ್ರಯೋಜನಾರ್ಥ ನಾನಾ ರೂಪವಾಗಿ ವಿನಿಯೋಗಿಸುತಲಿದ್ದರು. ಮಿಸ್ಟರ್ ಕುಂಟೆ ಯವರು ಯಾವಾಗಲೂ ಯಾವದಾದರೊಂದು ಶಾಸ್ತ್ರಾರ್ಥವಂ ಕುರಿತು ವಿಚಾರ ಮಾಡುತ ಅನವರತ ವ್ಯಾಸಂಗಮಾಡುತಲಿರುವ ಸ್ವಭಾವ ವುಳ್ಳವರಾಗಿದ್ದರೇ ಹೊರ್ತು ನಿಷ್ಪ್ರಯೋಜಕಗಳಾದ ವಿಹಾರೋಪಭೋಗಗಳಿಂದ ವ್ಯರ್ಥವಾಗಿ ಕಾಲಹರಣ ಮಾಡಬೇಕೆಂಬ ಅಭಿಪ್ರಾಯ ವುಳ್ಳವರಾಗಿರುತಿರಲಿಲ್ಲವು. ಮತ್ತು ಇವರು ಅನ್ಯರಂತೆ ಒಂದೇ ವಿಷಯದಲ್ಲಿ ಪರಿಶ್ರಮ ಮಾಡಿ ಅದರೊಳು ಮಾತ್ರ ಪಾಂಡಿತ್ಯವಂ ಸಂಪಾದಿಸಿ ಪ್ರಸಿದ್ಧಿಯಂ ಪಡೆದವರಲ್ಲವು. ಪ್ರಸಕ್ತ ಪಂಡಿತರು ಇಂಗ್ಲಿಷ್, ಸಂಸ್ಕೃತ, ಮಹಾರಾಷ್ಟ್ರ ಭಾಷೆಗಳಲ್ಲಿ ಸಮಾನಾಧಿಕರಣವಾದ ಪಾಂಡಿತ್ಯವಂ ಸಂಪಾದಿಸಿ ಬಹು ವಿಷಯಗಳನ್ನರಿತು ಕೊಂಡು ಅವುಗಳನ್ನೆಲ್ಲ ತತ್ತದ್ಭಾಷೆಗಳಿಂದ ಪತ್ರಿಕಾ ಮೂಲಕವಾಗಿಯೂ ಉಪನ್ಯಾಸಗಳ ಮೂಲಕವಾಗಿಯೂ ಜನರಿಗೆ ವ್ಯಕ್ತಪಡಿಸುತಲಿದ್ದರು. ಇವರು ತರ್ಕ, ವೇದಾಂತ, ವ್ಯಾಕರಣಾಲಂಕಾರ, ಜ್ಯೋತಿಷ, ಶಿಲ್ಪ, ಸಂಗೀತ ಶಾಸ್ತ್ರಗಳಲ್ಲಿ ದೃಢವಾದ ಜ್ಞಾನವು ಪಡೆದಿದ್ದರು. ಇವರು ಸಭಾಮುಖದೊಳೆದ್ದುನಿಂತು ಕೊಂಡು ಯಾವ ವಿಷಯವಂ ಕುರಿತು ಮಾತನಾಡಲಿಚ್ಛಿಸಿದರೂ ತಮ್ಮ ಮೃದು ಮಧುರ ವಾಕ್ಪಾಟವದಿಂದ ಸಭಿಕರ ಮನವಂ ಅತಿ ಸುಲಭವಾಗಿ ಸಂತೃಪ್ತಿಗೊಳಿಸಿ ಆಕರ್ಷಿಸಿಕೊಳ್ಳುವಂತಾ ಅಪೂರ್ವ ಶಕ್ತಿಯುಳ್ಳವರಾಗಿದ್ದರು. ಮೆ|| ಕುಂಟೀಯವರು ಇಂಡ್ಯದೇಶ ಕಲಾಭಿವೃದ್ಧಿಯಲ್ಲಿ ಬಹಳ ಆಸಕ್ತರಾಗಿದ್ದದರಿಂದ ಅದಕ್ಕೆ ತಕ್ಕಂತೆ ಸ್ವಂತ ಲಾಗವಡಿನಿಂದ ಸೀಸದ ಪೆನ್ಸಲ್ ತಯಾರೀ ಕಾರ್ಖಾನೆ ಯೊಂದನ್ನು ಸ್ಥಾಪಿಸಿದರು. ಅಲ್ಲಿ ತಯಾರ್ಮಾಡಲ್ಪಟ್ಟ ಪದಾರ್ಥಗಳು ಗುಣದಲ್ಲಿ ಸ್ವಲ್ಪ ಹೆಚ್ಚು ಕಡಮೆಯಾಗಿ ಇಂಗ್ಲಾಂಡಿನಲ್ಲಿ ತಯಾರಾಗಿ ಬರತಕ್ಕವುಗಳಿಗೆ ಸಮಾನವಾಗಿರುವಂತೆ ಅನುಭವಶಾಲಿಗಳನೇಕರು ಅಭಿಪ್ರಾಯ ಪಟ್ಟಿರುತ್ತಾರೆ. ಈದೊಡ್ಡಮನುಷ್ಯರ ಶಿಕ್ಷಾ ಕ್ರಮವು ಅತಿಶ್ಲಾಘ್ಯವಾಗಿದ್ದದರಿಂದ ಅವರಿಂದ ಶಿಕ್ಷಿತರಾದವರೆಲ್ಲರೂ ಪ್ರಾಯೇಣ ಪ್ರಜ್ಞಾಶಾಲಿಗಳಾಗಿಯೂ ವಿದ್ಯಾವಂತರಾಗಿಯೂ ಇರುವರು. ಇವರು "ಷಡ್ದರ್ಶನಚಿಂತನಿಕಾ" ಎಂಬ ಒಂದು ಮಾಸಪತ್ರಿಕೆಯನ್ನು ಪ್ರಕಟಿಸುತಲಿದ್ದರು. ಅದರಲ್ಲಿ ಮೀಮಾಂಸಾದಿ ಶಾಸ್ತ್ರಾರ್ಥಗಳನ್ನು ಕುರಿತು ವಿಚಾರ ಮಾಡುತ ಅದು ಸಕಲಜನ ಪರಿಗ್ರಹಾರ್ಹವಾಗಿರುವಂತೆ ಮೂರು ಭಾಷೆಗಳಲ್ಲಿಯೂ ಬರೆಯುತಲಿದ್ದರು. ಸದರೀ ಪತ್ರಿಕೆಯು ಪ್ರಜೆಗಳಿಗೆ, ತತ್ರಾಪಿ ಪೂರ್ವಶಾಸ್ತ್ರ ಮರ್ಯಾದೆಗಳನ್ನರಿಯಬೇಕೆಂಬ ಕುತೂಹಲವುಳ್ಳವರಿಗೆಲ್ಲ ಬಹಳ ಪ್ರಯೋಜನಕರವಾಗಿತ್ತು. ದೌರ್ಭಾಗ್ಯದಿಂದದಕ್ಕೆ ತಕ್ಕ ಪ್ರೋತ್ಸಾಹವೂ ಅರ್ಥೋಪಪತ್ತಿಯೂ ಕಡಮೆಯಾಗಲು ಮೆ|| ಕುಂಟೀಯವರು ತಮ್ಮ ಪ್ರಯತ್ನವಂ ಕಡೆಗೆ ನಿಲ್ಲಿಸಿಬಿಟ್ಟರು. ಮೆ|| ಕುಂಟೀಯವರು ೧೮೬೪ನೇ ಇಸವಿಯಲ್ಲಿ ವಿದ್ಯಾಭ್ಯಾಸದ ಇಲಾಖೆಯಲ್ಲಿ ಪ್ರಥಮತಃ ನೌಕರಿಯೊಳು ಪ್ರವೇಶಿಸಿದರು. ಪೆನ್ಷನ್ ತೆಗದುಕೊಳ್ಳಲಿಕ್ಕೆ ಇನ್ನೂ ಏಳೆಂಟು ತಿಂಗಳಕಾಲ ಬಾಕೀ ನಿಂತಿರುತಿದೆ. ಇವರಿಗೆ ಈಗ ಐವತ್ತೊಂದು ವರುಷಗಳ ವಯಸ್ಸಾಗಿರುತಿದೆಂದು ತಿಳಿಯಬರುತಿದೆ.

ಮುಖ್ಯವಾಗಿ ಇಂತಾ ಪಂಡಿತರ ಮರಣವು ಯುಕ್ತವಾದ ಕ್ಲೇಶಕ್ಕೆ ಅವರ ಕುಟುಂಬದವರೊಡನೆ ನಾವೂ ಭಾಗಭಾಕ್ಕುಗಳಾಗಿರುವೆವಲ್ಲದೆ ಇವರ ವಿಶ್ಲೇಷವು ಇಂಡ್ಯದೇಶದ ಪಂಡಿತಮಂಡಲಿಗೆ ಪ್ರಬಲ ನಷ್ಟರೂಪವೆಂದು ಭಾವಿಸಿರುವೆವು. ಕಾಲ ಕೌಟಿಲ್ಯದಿಂದ ಇಂತಾ ಉತ್ತಮ ಪುರುಷರೆಲ್ಲರೂ ನಷ್ಟರಾಗುತ ಬರುವಣವು ಈದೇಶೀಯರ ದೌರ್ಭಾಗ್ಯವೆಂದು ಹೇಳಬೇಕಾಗಿದೆ. ಏವಮಾದಿ ನಷ್ಟಗಳನ್ನು ಭಗವಂತನು ಅನ್ಯವಿಧದಿಂ ಪರಿಹರಿಸಿ ಚಿರಕಾಲದಿಂದನುಸರಿಸುತಬರುವ ಇಂಡ್ಯದೇಶದ ಸಾರಸ್ವತ ಕೀರ್ತಿ ಪ್ರತಿಷ್ಠೆಗಳಂ ಕಾಪಾಡುವನೋ ಇಲ್ಲವೋ ನಾವರಿಯೆವು.

THE CHIEF COURT OF MYSORE.

ಇಲ್ಲಿನ ಚೀಫ್‌ಕೋರ್ಟಿಗೆ ನಾಲ್ಕನೇ ಜಡ್ಜಿಯೊಬ್ಬರು ಮೊಕರರ್ಮಾಡಲ್ಪಡುವರೆಂತಲೂ, ಅದು ಬಹುಶಃ ಬ್ಯಾರಿಸ್ಟರ್ ಮಿಸ್ಟರ್ ಮೀನಾಕ್ಷಿ ಅಯ್ಯರವರಿಗೆ ಕೊಡಲ್ಪಡುವದೆಂತಲೂ ಒಂದು ವಿಧ ಪ್ರವಾದ ಹುಟ್ಟಿದೆಯೆಂದು ಈಗ್ಯೆ ಕೆಲವು ವಾರಗಳ ಹಿಂದೆಯೇ ತಿಳಿಸಿದ್ದೆವಷ್ಟೆ. ಇದೇ ವಿಷಯವಂ ಕುರಿತು ವಿಚಾರ ಮಾಡುತ, ಮಾಹೇ ಮಜಕೂರ್ ಗುರ್ರೇ ತಾರೀಖಿನ ಮದರಾಸ್ ಹಿಂದೂ ಪತ್ರಿಕೆಯು ಅಭಿಪ್ರಾಯಪಡುತಿದೇನೆಂದರೆ:—"ಮಿಸ್ಟರ್ ಮೀನಾಕ್ಷಿ ಅಯ್ಯರವರ ಮೊಕರರಾತಿಯ ವಿಷಯದಲ್ಲಿ ವಿರುದ್ಧವಾಗಿ ನಾವು ತಿಳಿಸಬೇಕಾದ್ದೊಂದಂಶ ಇರುವದಿಲ್ಲವು. ಈಗ್ಯೆ ಹತ್ತುಹನ್ನೆರಡು ವರುಷಗಳ ಕಾಲದ ಮೊದಲು ಇವರು ಅನುಭವಶಾಲಿಯಾದ ಲಾಯರಾಗಿಯೂ ಬ್ಯಾರಿಸ್ಟರಾಗಿಯೂ ಇರುತಲಿರುವದರಿಂದ ಇತನು ತನ್ನನ್ನು ಮೊಕರರ್ಮಾಡಿದವರಿಗೆ ಒಂದು ಕೀರ್ತಿಯನ್ನುಂಟು ಮಾಡುವರೆಂಬದರೊಳೇನೂ ಸಂಶಯವಿಲ್ಲವು. ಆದಾಗ್ಯೂ ನಾವಿಲ್ಲಿ ಆಲೋಚಿಸಬೇಕಾಗಿರುವದೇನೆಂದರೆ,—ಈಗ ತಜವೀಜಿನಲ್ಲಿರುತಲಿರುವ ಏರ್ಪಾಡು ಮೈಸೂರು ದೇಶೀಯರ ಪ್ರಯೋಜನ ದೃಷ್ಟಿಯಿಂದ ಅಷ್ಟರ ಆವಶ್ಯಕವಾದದ್ದೆ ; ಮತ್ತೊಬ್ಬ ಹೊಸ ಜಡ್ಜಿಯನ್ನು ಮೊಕರರ್ಮಾಡುವದರಿಂದ ತಗಲುವ ಖರ್ಚನ್ನು ಭರಿಸಲಿಕ್ಕೆ ದೇಶವು ಶಕ್ತವಾದ ಸ್ಥಿತಿಯಲ್ಲಿ ಇದೆಯೆ ; ಕುಮ್ಮಕ್‌ಬಗ್ಯೆ ಮತ್ತೊಬ್ಬ ಹೊಸ ಇಸಂ ನಿರ್ವಾಹವಿಲ್ಲದೆ ಆವಶ್ಯಕವಾಗಿರುವಷ್ಟರ ಮಟ್ಟಿಗೆ ಸಿವಿಲ್‌ಕೋರ್ಟು ಅದಾಲತೆವು ತಾಮಸವಾಗಿದೆಯೆ ; ಎಂಬ ಮೂರು ಅಂಶಗಳು ಈಗ ವಿಮರ್ಶಿಸಲ್ಪಡಬೇಕಾದವಾಗಿರುತಿವೆ. ಸನ್ ೧೮೮೪ನೇ ಇಸವಿಯ ೧ನೇ ನಂಬರ್ ರೆಗ್ಯುಲೇಷನಿನ ದೆಸೆಯಿಂದ ಅದೇ ೮೪ನೇ ಇಸವಿ ಮೇ ೨೮ನೇ ತಾರೀಖಿನಲ್ಲಿ ಮೈಸೂರು ಚೀಫ್ ಕೋರ್ಟು ಪ್ರಥಮತಃ ನೆರೆಗೊಳಿಸಲ್ಪಟ್ಟಿತು. ಮತ್ತು ಆ ತಾರೀಖ್ ಲಾಗಾಯಿತು ನಂದೀದುರ್ಗ ಡಿವಿಜನ್ ಡಿಸ್ಟ್ರಿಕ್ಟುಕೋರ್ಟು ಮೌಕೂಫ್ ಮಾಡಲ್ಪಟ್ಟು ಅದರ ಕೆಲಸಗಳನ್ನೆಲ್ಲ ಚೀಫ್ ಕೋರ್ಟ್ ಜಡ್ಜಿಗಳೇ ಸರ್ಕಿಟ್‌ಪ್ರಕಾರ ನೋಡುವಂತೆ ವ್ಯವಸ್ಥೆಯಾಗಿತ್ತು. ಇದಕ್ಕಾಗಿ ಚೀಫ್‌ಕೋರ್ಟ್ ಶಿಬ್ಬಂದಿ ಖರ್ಚಿನೊಡನೆ ಸಾಲಿಯಾನಾ ೩೫,೦೦೦ ರೂಪಾಯಿಗಳು ಜಾಸ್ತಿಯಾಗಿ ಸೇರಿಸಲ್ಪಟ್ಟಿತು. ಪರಂತು ಉಚ್ಛೃಂಖಲವಾದ ನ್ಯಾಯ ವಿಮರ್ಶಕತಾ ಶಕ್ತಿಯುಳ್ಳ ಒಬ್ಬ ಜಡ್ಜಿಯ ಮೂಲಕ ಲಭಿಸುವ ನ್ಯಾಯಕ್ಕಿಂತಲೂ ವಿವೇಕಿಗಳಾದ ಮೂವರು ಜಡ್ಜಿಗಳಿಂದ ಸಮುದಾಯಕ್ಕೇನ ಮಾಡಲ್ಪಡುವ ನ್ಯಾಯವಿಮರ್ಶೆಯೊಳು ಜನರಿಗೆ ಉಂಟಾಗಿರುವ ನಂಬಿಕೆಯು ಅಷ್ಟರ ಲಾಗುವದಿಗೆ ಪ್ರತಿಫಲವೆಂದು ಹೇಳಬಹುದು. ಸನ್ ೧೮೮೫-೮೬ನೇ ಇಸವಿಯ ಸರ್ಕಾರೀ ಸಾಲಿನಲ್ಲಿ ಚೀಫ್‌ಕೋರ್ಟಿನವರು ಮಾಡಿದ ಕೆಲಸವು ಇಷ್ಟರದೆಂದು ಇದರಡಿಕಂಡ ಸಂಖ್ಯೆಗಳ ಮೂಲಕ ಸಿದ್ಧಾಂತಿಸಿ ತಿಳಿದುಕೊಳ್ಳಬಹುದಾಗಿರುತಿದೆ. ಸಿವಿಲ್ ತರಫಿನಲ್ಲಿ ೧೧ ಒರಿಜನಲ್ ಮೊಕದ್ದಮೆಗಳು, ಡಿಕ್ರೀ ಅಮಲ್‌ಜಾರೀ ಅರ್ಜಿಗಳು ೧೨, ಚಿಲ್ಲರೆ ಮೊಕದ್ದಮೆಗಳು ೧೩೦, ಕ್ರಮವಾದ ಅಪೀಲ್ ಮೊಕದ್ದಮೆಗಳು ೪೦೮, ಎರಡನೇ ಅಪೀಲುಗಳು ೧೫೬, ಚಿಲ್ಲರೆ ಅಪೀಲುಗಳು ೬೦, ಕ್ರಿಮಿನಲ್ ತರಫಿನಲ್ಲಿ ವಿಚಾರಣೆ ಬಗ್ಯೆ ಕಮ್ಮಿಟಾದ ಮೊಕದ್ದಮೆಗಳು ೪೬, ಅಪೀಲ್‌ಗಳು ೧೧೩, ಸಜಾಗಳನ್ನು ಕಾಯಂ ಮಾಡುವ ಬಗ್ಯೆ ಕಳುಹಿಸಲ್ಪಟ್ಟದ್ದು ೧೬, ರಿವಿಜನ್ ಮೊಕದ್ದಮೆಗಳು ೩೦೧. ಸನ್ ೧೮೭೫ನೇ ಇಸವಿಯಲ್ಲಿ ಮೈಸೂರು ರಾಜ್ಯವು ಬ್ರಿಟಿಷರವರ ಆಳ್ವಿಕೆಯಲ್ಲಿದ್ದಾಗ ಜ್ಯುಡಿಷಲ್ ಕಮ್ಮಿಷನರವರ ಕೋರ್ಟು ಬಗ್ಯೆ ಆಚ್ಯೆರ್ ಕೋರ್ಟು ಕಾಗಿತ್ತಲ್ಲದೆ ಅದಕ್ಕೆ ಒಬ್ಬರೇ ಜಡ್ಜಿ ಇರುತಲಿದ್ದರು. ಆ ಸಾಲಿನಲ್ಲಿ ಅವರೊಬ್ಬರಾಗಿ, ೧೮೪ ಕ್ರಿಮಿನಲ್ ಮೊಕದ್ದಮೆಗಳನ್ನೂ, ೧೧೦ ಸಿವಿಲ್ ಅಪೀಲ್ ಮೊಕದ್ದಮೆಗಳನ್ನೂ ಫೈಸಲ್ಮಾಡಿರುವಂತೆ ಸ್ಪಷ್ಟವಾಗುತಿದೆ. ಈಗ ಚೀಫ್‌ಕೋರ್ಟಿನೊಡನೆ ಸೇರಿ ಹೋಗಿರುವ ನಂದೀದುರ್ಗ ಡಿಸ್ಟ್ರಿಕ್ಟ್ ಕೋರ್ಟಿನಲ್ಲಿ ಒಂದು ಸಂವತ್ಸರದಲ್ಲಿ ೩೭ ಒರಿಜನಲ್ ಕ್ರಿಮಿನಲ್ ಮೊಕದ್ದಮೆಗಳು, ೩ ಒರಿಜನಲ್ ಸಿವಿಲ್ ಮೊಕದ್ದಮೆಗಳು, ೧೨ ಕ್ರಿಮಿನಲ್ ಅಪೀಲ್‌ಗಳು, ೩೫ ಸಿವಿಲ್ ಅಪೀಲ್‌ಗಳು ಫೈಸಲಾದವು. ಚಾಲ್ತೀ ಸಾಲಿನ ಬಾಬತು ಮೇಲ್ಕಂಡ ಲೆಕ್ಕಗಳ ಸಂಖ್ಯೆಯು ತಪಸೀಲ್‌ವಾರಾಗಿ ನಮಗೆ ತಿಳಿಯದ್ದರಿಂದ ಕೆಲಸ ಇಷ್ಟರಮಟ್ಟಿಗೆ ಜಾಸ್ತೀಯಾಯಿತೆಂದು ತಾಳೇ ಹಾಕಿ ತೋರಿಸಲಿಕ್ಕೆ ನಾವು ಶಕ್ತರಲ್ಲದೆ ಇದ್ದೇವೆ. ಬೇರೊಬ್ಬ ಜಡ್ಜಿಯನ್ನು ಮೊಕರರ್ಮಾಡಬೇಕಾದಷ್ಟು ಕೆಲಸದ ಗಲಾಟೆ ಇರುವಂತೆ ನಮಗೆ ತೋರಲಿಲ್ಲವು. ೧೮೮೫ನೇ ಇಸವಿಯಲ್ಲಿ ಚೀಫ್‌ಕೋರ್ಟಿಗೆ ಕಮ್ಮಿಟಾದ ಮೊಕದ್ದಮೆಗಳು ೪೬, ೧೮೭೫ನೇ ಇಸವಿಯಲ್ಲಿ ನಂದೀದುರ್ಗ ಡಿಸ್ಟ್ರಿಕ್ಟು ಕೋರ್ಟಿಗೆ ಕಮ್ಮಿಟ್ ಮಾಡಲ್ಪಟ್ಟ ಮೊಕದ್ದಮೆಗಳು ೩೭. ೧೮೮೫ನೇ ಇಸವಿಯಲ್ಲಿ ಚೀಫ್ ಕೋರ್ಟಿನಲ್ಲಿ ಕ್ರಮವಾಗಿ ೧೧೩ ಮತ್ತು ೪೦೮ ಕ್ರಿಮಿನಲ್ ವ ಸಿವಿಲ್ ಮೊಕದ್ದಮೆಗಳು ವ್ಯವಸ್ಥೆಯಾಗಿರುತಿವೆ. ೧೮೭೫ನೇ ಇಸವಿಯಲ್ಲಿ ಡಿಸ್ಟ್ರಿಕ್ಟು ಮತ್ತು ಜ್ಯುಡಿಷಲ್ ಕಮ್ಮಿಷನರವರ ಕೋರ್ಟುಗಳಲ್ಲಿ ೧೩೫ ಮತ್ತು ೧೯೬ ಸಿವಿಲ್ ವ ಕ್ರಿಮಿನಲ್ ಮೊಕದ್ದಮೆಗಳು ಫೈಸಲಾಗಿರುತಿವೆ. ೧೮೭೫ನೇ ಇಸವಿಗಿಂತ ೮೫ನೇ ಇಸವಿಯಲ್ಲಿ ಕಮ್ಮಿಟಾದ ಮೊಕದ್ದಮೆಗಳು ೯, ಕ್ರಿಮಿನಲ್ ಮತ್ತು ಸಿವಿಲ್ ಅಪೀಲ್‌ಗಳು ೧೯೦ ಜಾಸ್ತಿಯಾಗಿರುವಂತೆ ವ್ಯಕ್ತವಾಗುತಿದೆ. ಇತರ ಬಾಬಗಳಲ್ಲಿಯೂ ಯಥೋಚಿತ ಕೆಲಸ ಜಾಸ್ತಿಯಾಗಿರುತಿದೆಂಬವನ್ನು ನಾವು ಅಂಗೀಕರಿಸುವೆವು. ಆದಾಗ್ಯೂ ಚೀಫ್ ಕೋರ್ಟು ಜಡ್ಜಿಗಳನ್ನು ಹೆಚ್ಚಿಸಬೇಕಾದಷ್ಟರವರಿವಿಗೆ ಮೊಕದ್ದಮೆಗಳು ಜಾಸ್ತಿಯಾಯಿತೆಂದು ಭಾವಿಸಲಾರೆವು. ಮದರಾಸ್ ಹೈಕೋರ್ಟು ಜಡ್ಜಿಗಳಿಗೆ ಕೆಲಸದ ಗಲಾಟೆ ಅತ್ಯಧಿಕವೆಂಬ ಅಂಶವು ಈ ಪತ್ರಿಕೆ ಯನ್ನೋದತಕ್ಕವರಿಗೆಲ್ಲ ತಿಳಿದೇ ಇದೆ. ಜುಡಿಷಲ್ ಇಲಾಖಾ ಮೂಲಕ ಬ್ರಿಟಿಷ್ ಸರ್ಕಾರಕ್ಕೆ ವಿಶೇಷ ನಷ್ಟವುಂಟಾದಾಗ್ಯೂ ಸ್ಟೇಟ್ ಸೆಕ್ರಿಟರಿಯವರು ಕಾಯಮಾಗಿ ಮತ್ತೊಬ್ಬ ಜಡ್ಜಿಯನ್ನು ಮೊಕರರ್ಮಾಡಲಿಕ್ಕೆ ಸಮ್ಮತಿಸದೆಹೋದರು. ೧೮೮೫ನೇ ಇಸವಿಯಲ್ಲಿ ಸಿವಿಲ್ ಕೋರ್ಟುಗಳ ಮೂಲಕ ಆದ ೨,೦೩,೬೩೯ ರೂಪಾಯಿಗಳ ಹುಟ್ಟುವಳಿಯನ್ನೂ ೨,೪೮,೧೫೦ ರೂಪಾಯಿಗಳ ಖರ್ಚನ್ನೂ ನೋಡಲಾಗಿ ಸಂಸ್ಥಾನದ ಮೇಲೆ ಇಷ್ಟರ ಜಾಸ್ತಿ ಖರ್ಚನ್ನು ಹೊರಿಸುವದು ಮೈಸೂರು ಸರ್ಕಾರದವರಿಗೆ ಯೋಗ್ಯವಲ್ಲವೆಂದು ಮೇಲ್ಕಂಡ ಕಾರಣಗಳಿಂದ ತಿಳಿಸಬೇಕಾಗಿರುತಿದೆ. ಚೀಫ್ ಜಡ್ಜಿಯವರೇ ಬಂದೀಖಾನೆಗಳ ಇನ್ಸ್‌ಪೆಕ್ಟರ್ ಜನರಲಾಗಿ ಸಹ ಇರುವದರಿಂದ ಚೀಫ್ ಕೋರ್ಟಿನವರು ಮಾಡುವ ಸಂಖ್ಯೂ

ಈ ಕೆಲಸವನ್ನು ಮೇಲೆ ನಾವು ತಿಳಿಸಿದ ಸಂಖ್ಯೆಗಳಿಂದಲೇ ಗೊತ್ತುಮಾಡುವದಕ್ಕಾಗಲಾರದೆಂದು ಯಾರಾದರೂ ಹೇಳಬಹುದು. ಆದಾಗ್ಯೂ ನಾವು ತಿಳಿಸುವದೇನೆಂದರೆ.—ಮೈಸೂರು ಸಂಸ್ಥಾನಕ್ಕೆಲ್ಲ ಮೂರು ಜೆಯಿಲ್ ಖಾನೆಗಳು ಮೂರುಕಡೆಗಳಲ್ಲಿ ನೆಲಗೊಳಿಸಲ್ಪಟ್ಟಿರುತಿವೆ. ಇವುಗಳ ಕೆಲಸವಾದರೋ ಏಕರೂಪವಾದದ್ದಾಗಿಯೂ, ನಿಧಾನವಾಗಿ ನಿರ್ವಹಿಸಬಹುದಾದದ್ದಾಗಿಯೂ ಇರುವದರಿಂದ ಸದರೀ ಜೆಯಿಲ್‌ಖಾನೆಗಳ ವಿಚಾರಣೆಯು ಚೀಫ್‌ಕೋರ್ಟು ಕೆಲಸಕ್ಕೆ ಪ್ರತಿಬಂಧಕವಾಗಿರುವದೆಂದು ಒಬ್ಬರೂ ಹೇಳಲಾರರು. ಈಗ ನೂತನವಾಗಿ ಒಬ್ಬ ಜಡ್ಜಿಯನ್ನು ನೇಮಕರಮಾಡುವದರಿಂದ ಸಾಲೀಯಾನಾ ೧೮,೦೦೦ ರೂಪಾಯಿಗಳತನಕ ಸಂಸ್ಥಾನಕ್ಕೆ ಖರ್ಚುಬಾಬ ಒಂದು ಏರ್ಪಟ್ಟಂತೆಯಾಗುತಿದೆ. ೧೮೮೩ನೇ ಇಸಿವಿಯಲ್ಲಿ ದಸರಾ ಅಸ್ಸೆಂಬ್ಲಿನಲ್ಲಿ ದಿವಾನರವರು ಮೈಸೂರಲ್ಲಿಮಾತ್ರ ಒಂದು ಸಬಾರ್ಡಿನೇಟ ಜಡ್ಜಿ ಕೋರ್ಟನ್ನು ಇಟ್ಟುಕೊಳ್ಳಬೇಕೆಂಬ ಆಲೋಚನೆಯುಳ್ಳವರಾಗಿದೇವೆಂದು ತಿಳಿಸಿದ್ದರು. ಅದಕ್ಕೆ ಬದಲು ಈಗ ಮೈಸೂರು ಬೆಂಗಳೂರು ಈ ಎರಡುಕಡೆಗಳಲ್ಲಿ ಪ್ರತ್ಯೇಕ ಎರಡು ಸಬ್‌ಜಡ್ಜಿಕೋರ್ಟುಗಳು ಇರುತಲಿವೆ. ಆದದರಿಂದ ಚೀಫ್‌ಕೋರ್ಟಿಗೆ ಸಹಾಯವಿಲ್ಲದೆ ಹೋಗಲಿಲ್ಲವು. ಪೂರ್ವದೊಳು ಡಿಸ್ಟ್ರಿಕ್ಟುಕೋರ್ಟನಲ್ಲಿ ವ್ಯವಸ್ಥೆಯಾಗುತಲಿದ್ದ ಮೊಕದ್ದಮೆಗಳ ಪೈಕಿ ಬಹುಭಾಗವು ಈಗ ಬೆಂಗಳೂರು ಸಬ್‌ಜಡ್ಜಿ ಕೋರ್ಟನಲ್ಲಿ ಫೈಸಲಾಗುತಿವೆ. ನಾಬಕ್ ದಿವಾನ್ ವಿ॥ ರಂಗಾಚಾರ್ಯರವರು ಮಾಕೂಫಮಾಡಿದ್ದ ಕೆಲವು ತಾಲ್ಲೂಕುಗಳು ಮತ್ತು ಡಿಸ್ಟ್ರಿಕ್ಟುಗಳು ಮರಳಿ ಏರ್ಪಾಡಿಸಲ್ಪಟ್ಟದ್ದರಿಂದ ಮೈಸೂರು ಸಂಸ್ಥಾನದಲ್ಲಿ ಶಿಬ್ಬಂದಿ ಖರ್ಚು ಈಚೆಗೆ ಬಹಳ ಜಾಸ್ತಿಯಾಯಿತು. ಚೀಫ್‌ಕೋರ್ಟು ಜಡ್ಜಿಗಳನ್ನು ಹೆಚ್ಚಿಸಬೇಕಾದ್ದರ ಆವಶ್ಯಕತೆಯ ವಿಷಯದೊಳು ಈಗ ತಿಳಿಸಲಾದ ಕಾರಣಕ್ಕಿಂತಲೂ ಬಲೀಯವಾದ ಬೇರೆಕಾರಣಗಳನ್ನು ಕಲ್ಪಿಸಬೇಕಾಗಿರುತಿದೆ. ಆಗ ಸದರಿ ಸಾಲೀಯಾನಾ ೧೮,೦೦೦ ರೂಪಾಯಿಗಳ ತನಕ ಖರ್ಚನ್ನು ಹೆಚ್ಚಿಸುವದು ಅಯುಕ್ತವೆಂದು ನಮಗೆ ತೋರುತಿದೆ. ಚೀಫ್‌ಕೋರ್ಟು ಜಡ್ಜಿಗಳ ಕೆಲಸವನ್ನು ತಗ್ಗಿಸುವ ಬಗ್ಗೆ ದ್ರವ್ಯವ್ಯಯಮಾಡುವದಕ್ಕೆತ್ನಿಸುವದಕ್ಕಿಂತಲೂ ಸಂಸ್ಥಾನದ ಖರ್ಚುಬಾಬನ್ನು ಕಡಿಮೆಮಾಡಲಿಕ್ಕೆ ಪ್ರಯತ್ನಪಡುವ ಪಕ್ಷಕ್ಕೆ ಅದು ನಾವು ಬಹಳ ಅನುಮೋದಿಸುವೆವು” ಎಂಬದು.

ಚೀಫ್‌ಕೋರ್ಟ್ ಸ್ಥಾಪಿಸಿದ್ದರಿಂದ ಸಂಸ್ಥಾನಕ್ಕೇನಾದರೂ ಕಿಫಾಯತ್ತುಂಟೆ, ಮತ್ತು ಅಷ್ಟರಖರ್ಚನ್ನು ಸಂಸ್ಥಾನವ್ರಭರಿಸುವದೇ, ಇದರಿಂದ ಜನರಿಗೆ ಪೂರ್ವಕ್ಕಿಂತ ವಿಶೇಷ ಪ್ರಯೋಜನವುಂಟೇ ಎಂಬ ವಿಷಯಗಳು ಚರ್ಚಿಸಲ್ಪಡದೆ ಇರಲಿಲ್ಲವು. ಚೀಫ್‌ಕೋರ್ಟಿನಿಂದ ಸಂಸ್ಥಾನಕ್ಕೆ ಲಾಭವುಂಟಾಗಬೇಕೆಂಬ ಕೋರಿಕೆಯೊಡನೆಯಾಗಲಿ, ಅಥವಾ ಅಷ್ಟರಖರ್ಚನ್ನು ಭರಿಸಲಿಕ್ಕಾಗುವದೇ ಎಂಬ ಚಿಂತೆಯೊಡನೆಯಾಗಲಿ, ಅದು ನೇಮಕರಮಾಡಲ್ಪಟ್ಟಂತೆ ಒಬ್ಬರೂ ಹೇಳಲಾರರು. ಪರಂತು ಒಬ್ಬ ಜಡ್ಜಿಯ ಅಭಿಪ್ರಾಯಕ್ಕಿಂತಲೂ ಇಬ್ಬರು ಅಥವಾ ಮೂವರ ತಾತ್ಪರ್ಯಗಳು ಯಾವಾಗಲೂ ಪ್ರಜೆಗಳಿಗೆ ಕ್ಷೇಮಕರವೆಂಬ ಭಾವನೆಯೊಡನೆ ಸದರೀಕೋರ್ಟು ಮೊದಲು ಸ್ಥಾಪಿಸಲ್ಪಟ್ಟಿತು. ಅದು ಏರ್ಪಟ್ಟ ಬಳಿಕ ಒಂದೇಸ್ಥಳದಲ್ಲಿ ಪ್ರತ್ಯೇಕ ಡಿಸ್ಟ್ರಿಕ್ಟ ಜಡ್ಜಿಕೋರ್ಟು ಇರುವದು ಅನಾವಶ್ಯಕವೆಂದು ತೋರಿಬಂದದರಿಂದ ಅದು ಚೀಫ್‌ಕೋರ್ಟಿನೊಡನೆ ಸೇರಿಸಲ್ಪಟ್ಟಿತು. ಈಗ ಅದರಿಂದ ಜನರಿಗೆ ಮತ್ತೊಂದು ಬಗೆ ಅನರ್ಥವುಂಟಾಗಿದೆಯೇನೆಂದರೆ.—ಬೆಂಗಳೂರು ತುಮಕೂರ್ ಕೋಲಾರ್ ಈ ಮೂರು ಡಿಸ್ಟ್ರಿಕ್ಟು ಪ್ರಜೆಗಳಿಗೆ ವಿನಾ ಮಿಕ್ಕ ಡಿಸ್ಟ್ರಿಕ್ಟಿನವರಿಗೆಲ್ಲ ಎರಡನೆ ಅಪೀಲಿಗೆ ಅವಕಾಶವುಂಟಾಗಿರುತಿದೆ. ಸದರೀ ಮೂರುಡಿಸ್ಟ್ರಿಕ್ಟಿನವರಿಗೆ ಅದಕ್ಕೆ ಅವಕಾಶವಿಲ್ಲದೆಹೋಗಿರುವದುಮಾತ್ರವಲ್ಲದೆ ನಂದೀದುರ್ಗ ಡಿವಿಜನ ಸೆಷನ್‌ಮೊಕದ್ದಮೆಗಳಲ್ಲಿ ವಿಚಾರಣೆ ಮಾಡುವ ಜಡ್ಜಿಯೇ ಅಪೀಲ್ ಸೈಡನಲ್ಲಿ ಫುಲ್‌ಬೆಂಚ್‌ನಲ್ಲಿ ಕುಳಿತು ಮೊದಲಿನ ತಮ್ಮ ಫೈಸಲನ್ನು ಧೃಢಪಡಿಸಲೆತ್ನಿಸುವದರಿಂದ ಜಾಸ್ತೀ ಅಭಿಪ್ರಾಯದಮೇಲೆ ಪ್ರಾಯೇಣ ಮೊಕದ್ದಮೆಯು ಕಕ್ಷಿಗಾರರಿಗೆ ವಿರುದ್ಧವಾಗಿಯೆ ಪರಿಣಮಿಸುತಿದೆ. ಇದಕ್ಕೆ ಈಚೆಗೆ ಫೈಸಲಾದ ಬವರಿಂಗ್ ಪೇಟೆ ಮೊಕದ್ದಮೆಯೇ ನಿದರ್ಶನವಾಗಿರುತಿದೆ. ಈ ಬಾಧಕವನ್ನು ತಪ್ಪಿಸಬೇಕೆಂಬ ಉದ್ದೇಶದೊಡನೆ ಸೆಷನ್ ಮೊಕದ್ದಮೆಗಳಲ್ಲಿ ದರ್ಯಾಫ್ತಮಾಡತಕ್ಕ ಜಡ್ಜಿಗೆ ಅಪೀಲ್ ಮೊಕದ್ದಮೆಯ ಸಂಬಂಧವಿಲ್ಲದಂತೆ, ಒರಿಜನಲ್ ಮೊಕದ್ದಮೆಗಳಿಗೆ ಒಬ್ಬರೂ ಅಪೀಲು ಮೊಕದ್ದಮೆಗೆ ಮೂವರೂ ಪ್ರತ್ಯೇಕವಾಗಿರಬೇಕೆಂಬ ಸಂಕಲ್ಪದೊಡನೆ ಪ್ರಸಕ್ತ ಏರ್ಪಾಡನ್ನು ಸರ್ಕಾರದವರು ಮಾಡಲಾಲೋಚಿಸಿದಾರೆಯೋ ಹೊರತು ಅವರಿಗೆ ಕೆಲಸ ಅಧಿಕವಾದದರಿಂದ ಅದು ತಗ್ಗಿಸಬೇಕೆಂಬ ಭಾವನೆಯಿಂದಲ್ಲವು.ಆದದರಿಂದ ಪ್ರಸಕ್ತ ಏರ್ಪಾಡಿನ ಆವಶ್ಯಕತೆಯು ಯುಕ್ತೋಚಿತ ಇರದೇ ಇಲ್ಲವು. ಪರಂತು ಸಾಲೀಯಾನಾ ೧೮,೦೦೦ರೂಗಳು ವ್ಯಯಮಾಡುವಷ್ಟರದಾಗಿರುವದೆಂದುಮಾತ್ರನಾವು ಹೇಳಲಾರೆವು. ಪ್ರಜೆಗಳಪೈಕಿ ಕೆಲವುಭಾಗದವರಿಗೆ ಮಾತ್ರ ಪ್ರಯೋಜನವುಂಟಾಗಿರುವ ಮೇಲೆ ನಾವು ತಿಳಿಸಿದ ಅನಾನುಕೂಲವು ಮಿತವ್ಯಯದಿಂ ತೊಲಗಿಸಲ್ಪಡಬಹುದಾಗಿರುತಿದೆ, ಹ್ಯಾಗೆಂದರೆ.—ಈ ಬೆಂಗಳೂರಲ್ಲಿರುವ ಸಬಾರ್ಡಿನೇಟ ಜಡ್ಜಿಕೋರ್ಟನ್ನು ತೆಗೆದುಹಾಕಿ ಅದನ್ನುಬೇರೊಂದು ಸ್ಥಳಕ್ಕೆ ವರ್ಗಮಾಡುವದಕ್ಕಿಂತಲೂ ಅದಕ್ಕೆ ಈಗ ಇರುವ ಶಿಬ್ಬಂದಿ ಖರ್ಚನ್ನು ಮುನಾಸಿಬ್ ಜಾಸ್ತೀಮಾಡಿ ಈಗಿರುವ ಸಬ್‌ಜಡ್ಜಿಯವರನ್ನೇಯಾಗಲಿ ಅಥವಾ ಇತರರನ್ನಾಗಲಿ ಡಿಸ್ಟ್ರಿಕ್ಟು ಜಡ್ಜಿಯನ್ನಾಗಿ ನೇಮಕರಮಾಡಿದರೆ ಆಗ ಸೆಷನ್ ಮತ್ತು ಒರಿಜನಲ್ ಮೊಕದ್ದಮೆಗಳ ಗಲ್ಲಾಟೆಯು ಚೀಫ್‌ಕೋರ್ಟಿನವರಿಗೆ ತಪ್ಪಿಹೋಗುವದಲ್ಲದೆ ಮೂರು ಡಿವಿಜನಗೂ ಮೂರು ಡಿಸ್ಟ್ರಿಕ್ಟ ಕೋರ್ಟುಗಳಿರುವಂತೆ ಯಾಗುವದು. ಮತ್ತು ಎರಡನೇ ಅಪೀಲಿನ ಪ್ರಯೋಜನವನ್ನು ಸರ್ವಸಾಧಾರಣವಾಗಿ ಯೆಲ್ಲರಿಗೂ ಕಲ್ಪಿಸಿದಂತೆ ಯಾಗುವದು. ಈ ಏರ್ಪಾಡಿನಿಂದ ಸಂಸ್ಥಾನಕ್ಕೆ ಸಾಲೀಯಾನಾ ೬,೦೦೦ ರೂಪಾಯಿಗಳು ಜಾಸ್ತೀ ಖರ್ಚಾದಾಗ್ಯೂ ೧೨,೦೦೦ ರೂಪಾಯಿಗಳು ಕೊಡದರೆ ಯಾಗುವದರಲೆನ್ನುವಮಾತ್ರವೂ ಸಂಶಯವಿಲ್ಲವು. ಹಿಂದೂ ಪತ್ರಿಕೆಯು ತಿಳಿಸುವಂತೆ ಖರ್ಚುಬಾಬುಗಳನ್ನು ವೃದ್ಧಿ ಪಡಿಸುವದು ಅಯುಕ್ತವೆಂಬ ತಾತ್ಪರ್ಯವು ಸರ್ಕಾರದವರಿಗೆ ಇದ್ದಿರುವದಾದರೆ ಆಗ ಅವರು ಮಾಡುವ ಏರ್ಪಾಡುಗಳು ಬೇರೇವಿಧವಾಗಿದ್ದಿರುವವು. ಮುಖ್ಯವಾಗಿ ಮೈಸೂರು ಸರ್ಕಾರದವರು ಯಾವ ಸಿದ್ಧಾಂತದಮೇಲೆ ಪ್ರಸಕ್ತ ಏರ್ಪಾಡನ್ನು ಮಾಡಲಾಲೋಚಿಸಿದಾರೆಯೋ ಅದು ಹಿಂದೂ ಪತ್ರಿಕೆಯು ಅರಿತುಕೊಳ್ಳದೆ ಅದರನ್ನಾಕ್ಷೇಪಿಸಲೆತ್ನಿಸಿದ್ದಕ್ಕಾಗಿ ನಾವು ಬಹಳ ವಿಷಾದಿಸುವೆವು.

Occasional Notes.
ನೈಮಿತ್ತಿಕ ವಿಷಯನ್ಯಾಸ.

Sir Salar Jung, K. C. S. I.—ಹೈದರಾಬಾದ್ ಸಂಸ್ಥಾನದ ನಾಯಬ್ ಮಂತ್ರಿಯರಾದ ಸರ್ ಸಾಲಾರ್ ಜಂಗರವರು ಹೈದರಾಬಾದಿಗೆ ವಾಪಸ್ ಬಂದು ಬೊಲಾರಂನಲ್ಲಿರುವ ಸ್ವಗೃಹದಲ್ಲಿರುತಲಿರುವಂತೆ ಕೇಳುತ್ತೇವೆ.

Honorary Magistrates—ಮದರಾಸ್ ಕಸಬೆಯಲ್ಲಿ ಕೆಲವರು ಆನರೆರಿ ಮ್ಯಾಜಿಸ್ಟ್ರೇಟಗಳನ್ನು ನೇಮಕರಮಾಡುವ ಅಭಿಪ್ರಾಯವು ಆ ಗವರ್ನಮೆಂಟನವರಿಗೆ ಸದ್ಯಃ ತಪ್ಪಿಹೋಯಿತೆಂದು ಮದರಾಸ್ ಸ್ಟ್ಯಾಂಡರ್ಡ ಪತ್ರಿಕೆ ತಿಳಿಸುತಿದೆ. ಕಾರಣವೇನಿರುವದು ?

The Public Service Commission—ಪಬ್ಲಿಕ್ ಸರವಿಸ್ ಕಮ್ಮಿಶನಿನ ರಿಪೋರ್ಟನ ಮೇಲೆ ಬರೆಯಲ್ಪಟ್ಟ ಇಂಡ್ಯ ಗವರ್ನಮೆಂಟನವರ ಡೆಸ್ಪ್ಯಾಚ್‌ಒಂದು ಕಳೆದವಾರದಲ್ಲಿ ಇಂಗ್ಲಂಡಿಗೆ ಕಳುಹಿಸಲ್ಪಟ್ಟಂತೆಯೂ, ಅಂತರಾಳಕಗಳಾದ ಕೆಲವು ಚಿಲ್ಲರೆತಿದ್ದುಪಡಿಗಳು ವಿನಾ ರಿಪೋರ್ಟನಲ್ಲಿ ತಿಳಿಸಲ್ಪಟ್ಟದ್ದ ವಿಶಿಷ್ಟ ಭಾಗವನ್ನೂ ಇಂಡ್ಯ ಗವರ್ನಮೆಂಟನವರು ಘೋಷಿಸಿ ಬರೆದಿರುವಂತೆಯೂ ಕೇಳುತ್ತೇವೆ.

A donation.—ಪಾರ್ಸೀ ಜಾತಿಯವರ ಅನಾಥರಕ್ಷಕ ಶಾಲೆಯು ಮಾಹೇ ಮಜಕೂರ್ ೧೫ನೇ ತಾರೀಖಿನಲ್ಲಿ ಕ್ರಮವಾಗಿ ಆರಂಭಿಸಲ್ಪಟ್ಟಿತು. ಇದರಲ್ಲಿ ೧೦೦ಜನ ವಿದ್ಯಾರ್ಥಿಗಳನ್ನುದಾಖಲ್ಮಾಡಿಕೊಳ್ಳಲಿಕ್ಕೆ ಇದುವರಿವಿಗೆ ಅಪ್ಪಣೆಕೊಡಲ್ಪಟ್ಟಿರುವಂತೆ ಕೇಳುತ್ತೇವೆ. ಮೆ॥ ಡಿಂಸೆಟಿಜೀ ನಸರ್‌ವಾನ್‌ಜೀತಾತಾಯವರು ಸದರೀ ಶಾಲೆಗೆ ಸಹಾಯಾರ್ಥ ೧,೦೦೦ ರೂಪಾಯಿಗಳನ್ನು ಚಿತವಾಗಿ ಕೊಟ್ಟರೆಂದು ತಿಳಿಯಲಾದೆವು.

Stamp Revenue.—ಸನ್ ೧೮೮೭-೮೮ನೇ ಸರ್ಕಾರೀ ಸಾಲಿನಲ್ಲಿ ಮದರಾಸ್ ಪ್ರೆಸಿಡೆನ್ಸಿಯೊಳು ಒಟ್ಟು ೫೬,೮೦,೮೦೮ ರೂಪಾಯಿಗಳು ಸ್ಟ್ಯಾಂಪುಗಳ ಬಿಕರೀ ಮೂಲಕ ಹುಟ್ಟುವಳಿಯಾಯಿತೆಂತಲೂ, ಇಷ್ಟರ ಭಾರೀ ಮೊಬಲಗು ಹಿಂದಿನ ಯಾವವರುಷದಲ್ಲಿಯೂ ಆಗಲಿಲ್ಲವೆಂತಲೂ ಮದರಾಸ್ ಪತ್ರಿಕೆಯೊಂದು ತಿಳಿಸುತಿದೆ. ವಿವಾದಗಳಿಗೆ ಅನುಕೂಲ್ಯವು ವೃದ್ಧಿಯಾಗುತಬರುವಂತೆಲ್ಲ ಸ್ಟ್ಯಾಂಪ್ ಹುಟ್ಟುವಳಿ ಜಾಸ್ತೀಯಾಗುವದೇನೂ ಆಶ್ಚರ್ಯವಲ್ಲವು.

Retirement on pension.—ಬರೋಡೆ ಸಂಸ್ಥಾನದ ದಿವಾನರಾದ ರಾವ್ ಬಹದೂರ್ ಲಕ್ಷ್ಮಣ ಜಗನ್ನಾಥರವರು ಈ ಸಂವತ್ಸರಾಂತದಲ್ಲಿ ತಮ್ಮ ಕೆಲಸದಿಂದ ಪೆನ್ಶನ್‌ಮೇಲೆ ನಿವೃತ್ತರಾಗುವರೆಂದು ತಿಳಿಯಬರುತಿದೆ. ಪ್ರಸಿದ್ಧ ನೇಟಿವ್ ಸಂಸ್ಥಾನಗಳಲ್ಲಿ ಬರೋಡೆಯು ಮೂರನೆಯದಾಗಿಯೂ ಐಶ್ವರ್ಯದಲ್ಲಿ ಮೊದಲನೆಯದಾಗಿಯೂ ಇರುವದರಿಂದಲೂ, ಸದರೀ ಸಂಸ್ಥಾನದ ದಿವಾನರ ಕೆಲಸ ಮೈಸೂರಿನಂತೆ ಭಾರೀಯಾಗಿಯೂ ಆಕರ್ಷಕವಾದದ್ದಾಗಿಯೂ ಇರುವದರಿಂದಲೂ ದಿವಾನಗಿರಿಯ ಪೈಪೋಟಿಗೆ ಇದೊಂದು ಒಳ್ಳೆಯ ಸಂದರ್ಭವಾಗಿದೆಯೆಂದೆಣಿಸುವೆವು.

The Hanumanta Row Case—ಜಪ್ತೀಪಾಪ್ ಹನುಮಂತರಾಯರವರು ಕೆಳಕೋರ್ಟನವರ ಫೈಸಲಿನಮೇಲೆ ಪುನೆಡಿಸ್ಟ್ರಿಕ್ಟ ಕೋರ್ಟನಲ್ಲಿ ಅಪ್ಪೀಲ್ಮಾಡಿದ್ದರಷ್ಟೆ. ಈ ಅಪೀಲ್ ಮೊಕದ್ದಮೆಯನ್ನು ಡಿಸ್ಟ್ರಿಕ್ಟ ಕೋರ್ಟನಿಂದ ಬೇರೆಯೊಂದು ಕೋರ್ಟಿಗೆ ವರ್ಗಮಾಡಿಸಬೇಕೆಂಬದಾಗಿ ಮುಂಬೈ ಚೀಫ್‌ಕೋರ್ಟಿಗೆ ಅರ್ಜಿಕೊಟ್ಟಿದ್ದದರಮೇಲೆ ಅವರದನ್ನು ಅಂಗೀಕರಿಸುವದಿಲ್ಲವೆಂದು ನಿರಾಕರಿಸಿಬಿಟ್ಟರು. ತರುವಾಯ ಮೊಕದ್ದಮೆಯನ್ನು ಡಿಸ್ಟ್ರಿಕ್ಟ ಜಡ್ಜಿಯವರೇ ವಿಚಾರಣೆ ಮಾಡಿ ಕಡೆಗೆ ಕೆಳಕೋರ್ಟಿನವರು ವಿಧಿಸಿದ್ದ ದಂಡನೆಯನ್ನು ಖಾಯಂಮಾಡಿದರೆಂದು ಕೇಳುತ್ತೇವೆ. ಬಹುಶಃ ಹನುಮಂತರಾಯರವರು ಅದರಮೇಲೆ ಹೈಕೋರ್ಟಿಗೆ ಅಪೀಲ್ ಮಾಡಬಹುದೆಂದು ನಂಬುತ್ತೇವೆ.

Appeal to the Privy Council.—ತಲಚೇರಿ ಸಬಾರ್ಡಿನೇಟ ಜಡ್ಜಿಯರಾಗಿದ್ದ ರಾಯಬಹದೂರ್ ವಿ॥ ಕುಂಜನ್‌ಮೇನನ್‌ಯವರ ಮೇಲೆ ಈಚೆಗೆ ತರಲ್ಪಟ್ಟಿದ್ದ ಎರಡು ರುಷವತ್ ಮೊಕದ್ದಮೆಗಳಲ್ಲಿ ಡಿಸ್ಟ್ರಿಕ್ಟ ಜಡ್ಜಿಯವರು ಕೊಟ್ಟ ಫೈಸಲ್‌ಮೇಲೆ ಮದರಾಸ್ ಹೈಕೋರ್ಟಿಗೆ ಅಪೀಲ್‌ಮಾಡಿರಲು ಹೈಕೋರ್ಟನವರು ಮೊದಲನೆ ಮೊಕದ್ದಮೆಯಲ್ಲಿ ಕೊಡಲ್ಪಟ್ಟಿದ್ದ ಫೈಸಲನ್ನು ರದ್ದುಮಾಡಿ ಎರಡನೆಯದರಲ್ಲಿ ಕೆಳಕೋರ್ಟನ ತೀರ್ಪನ್ನು ಖಾಯಂ ಮಾಡಿದ್ದರಷ್ಟೆ. ಇವರ ತೀರ್ಮಾನದ ಮೇಲೆ ಪ್ರಿವಿಕೌನ್ಸಿಲಿನಲ್ಲಿ ಅಪೀಲ್‌ಮಾಡುವ ತಾತ್ಪರ್ಯವುಳ್ಳವರಾಗಿದಾರೆಂತಲೂ, ಇದಕ್ಕಾಗಿ ಹೈಕೋರ್ಟು ವಕೀಲರುಗಳಾದ ಮೆ॥ ಭಾಷ್ಯಂ ಅಯ್ಯಂಗಾರ್ ಮತ್ತು ಮೆ॥ ಶಂಕರನಾಯರವರು, ಇವರಿಬ್ಬರನ್ನೂ ತಮ್ಮ ತರಫ ವಕೀಲರನ್ನಾಗಿ ಮೆ॥ ಕುಂಜನ್‌ಮೇನನ್‌ಯವರು ನೇಮಕರಮಾಡಿರುತ್ತಾರೆಂತಲೂ ಕೇರಳ ಕೋಟೆ ಪತ್ರಿಕೆಯೊಂದು ತಿಳಿಸುತಿದೆ.

H. H. Sir Syaji Row.—ಬರೋಡೆ ಸಂಸ್ಥಾನದ ಮಹಾರಾಜರಾದ ಸರಿಸಯಾಜಿರಾವ್ ಗಾಯಕವಾಡಿಯವರು ತಮ್ಮ ಸಹೋದರರಾದ ಸಂಪತ್‌ರಾಯರವರು, ಬರೋಡೆಯ ರೆವಿನ್ಯೂ ಮತ್ತು ಸೆಟಲ್ಮೆಂಟ ಆಫಿಸರಾದ ಮೆ॥ ಎಲಿಯಟ್‌ರವರು, ಡಾಕ್ಟರ ಬಾಳಾರಾಂ ಮುಂತಾದವರೊಡನೆ ಮಾಹೇ ಮಜಕೂರ್ ೪ನೇ ತಾರೀಖಿನಲ್ಲಿ ಯೂರೋಪ್ ಖಂಡದಿಂದ ಪ್ಲಾಸಿ‍ಎಂಬ ಹೊಗೆಜಹಜನಲ್ಲಿ ಮುಂಬೈಗೆ ಬಂದುಸೇರಿ ಅದೇದಿನ ಸಾಯಂಕಾಲ ಬರೋಡೆಗೆ ದಯಮಾಡಿದರೆಂದು ಮುಂಬೈ ಟೈಂಸ್ ಆಫ್ ಇಂಡ್ಯಾಪತ್ರಿಕೆಯ ಮೂಲಕ ತಿಳಿಯಲಾದೆವು. ಗಾಯಕವಾಡಿಯವರ ಕುಮಾರರಾದ ಯಶೋವಂತರಾಯರವರು ಸಖ್ತ ಶಾಹಿಲೆಯಾಗಿದಾರೆಂತಲೂ, ಡಾಕ್ಟರ್ ಭಟ್ಟಚಂದ್ರರೆಂಬವರು ಚಿಕಿತ್ಸೆ ಮಾಡುತಲಿದಾರೆಂತಲೂ ತಿಳಿಯಬರುತಿದೆ. ಯೆರಡನೆಯ ದಫಾ ಯೂರೋಪ್‌ದೇಶದ ಪ್ರಯಾಣದ ದೆಸೆಯಿಂದ ಗಾಯಕವಾಡಿ ಯವರಿಗೆ ಬಹಳ ಪ್ರಯೋಜನ ಪ್ರಾಪ್ತವಾದಂತೆಯೂ, ಒಳ್ಳೇ ಆರೋಗ್ಯಭಾಗ್ಯ ವುಳ್ಳವರಾಗಿ ಕಂಡುಬಂದರೆಂತಲೂ ಮೇಲೆಕಂಡ ಪತ್ರಿಕೆ ಅಭಿಪ್ರಾಯ ಪಡುತಿದೆ.

The Nilgiri Railway.—ಈ ಸಂವತ್ಸರದ ಆಕ್ಟೋಬರ್‌ಭಾಗದಲ್ಲಿ ನೀಲಗಿರಿ ರೈಲ್‌ರಸ್ತೆಯಕಾಮಗಾರಿಯನ್ನು ಪ್ರಾರಂಭಿಸಲಿಕ್ಕೆ ಆವಶ್ಯಕಗಳಾದ ವಿಶಿಷ್ಟ ಯೇರ್ಪಾಡುಗಳೂ ಮಾಡಲ್ಪಟ್ಟಂತೆ ಪೂರ್ವದಲ್ಲಿ ತನಗೆ ತಿಳಿಯಬಂದಿದ್ದ ವೃತ್ತಾಂತವು ಈಗ ದೃಢವಟ್ಟಂತೆ ಉದಕಮಂಡಲದ ಪತ್ರಿಕೆ ಯೊಂದು ತಿಳಿಸುತಿದೆ. ಪ್ರಸಕ್ತ ಉದ್ದೇಶವು ಕಾರ್ಯತಃ ನೆರವೇರುವಂತೆ ವ್ಯವಸ್ಥೆಯಾಗಿ ಉಪಕ್ರಮವಾಗಲಿಕ್ಕೆ ಹನ್ನೊಂದು ವರುಷಗಳ ಕಾಲ ಹಿಡಿದದ್ದರಿಂದ ಇನ್ನೂ ರಸ್ತೆ ಪೂರೈಸಲಿಕ್ಕೆ ಇನ್ನೆಷ್ಟುಕಾಲ ಬೇಕಾಗಿರುವದೊ ನಾವರಿಯೆವು. ಇದರೆ ಒಂದು ಕೆಲಸವನ್ನು ಪ್ರಾರಂಭಿಸಲಿಕ್ಕೆ ಮುಂಚಿತವಾಗಿ ಅದರಲ್ಲಿರುವ ಸಾಧಕ ಬಾಧಕಗಳನ್ನು ಚೆನ್ನಾಗಿ ಪರ್ಯಾಲೋಚಿಸಬೇಕಾದ್ದು ವಿವೇಕಿಗಳ ಧರ್ಮವಾದದರಿಂದ ಕೆಲಸ ಕ್ಷಿಪ್ರದಲ್ಲಿಯೇ ಪೂರೈಸಬಹುದೆಂದು ನಂಬುತ್ತೇವೆ. ಮೈಸೂರು ಗವರ್ನಮೆಂಟನವರು ನಂಜನಗೂಡು ಮಾರ್ಗವಾಗಿ ಹಿಂದೆ ಉದ್ದೇಶಿಸಿದ್ದ ರೈಲ್‌ರಸ್ತೆಯನ್ನು ನೀಲಗಿರಿಯ ವರಿವಿಗೆ ಹಾಕಿಸಿದರೆ ವ್ಯಾಪಾರಾಭಿವೃದ್ಧಿಗೆ ಬಹಳ ಪ್ರೋತ್ಸಾಹಕರವಾಗಿರುವದು.

The Crawford Commission.—ಹನುಮಂತರಾಯರವರ ಮೊಕದ್ದಮೆಗೆ ಮುಖ್ಯಕಾರಣಭೂತರಾಗಿದ್ದ ಮಿ॥ ಕ್ರಾಫರ್ಡ್ ಯವರನ್ನು ದರ್ಯಾಫ್ತು ಮಾಡುವದಕ್ಕಾಗಿ ಯೇರ್ಪಟ್ಟ ಕಮ್ಮಿಶನ್‌ಬಗ್ಗೆ ೫ ಲಕ್ಷ ರೂಪಾಯಿಗಳ ತನಕ ವ್ಯಯವಾಗುವದೆಂದು ಅಂದಾಜಾಗಿ ಗವರ್ನಮೆಂಟನವರು ದಂಮಂಜೂರಮಾಡಿರುವಂತೆ ತಿಳಿಯಬರುತಿದೆ. ಅವರು ತೆಗೆದುಕೊಂಡರೆಂದು ಹೇಳುವ ರುಷುವತ್ ಮೊಬಲಗಿಗೆ ಇದೊಂದು ಬಡ್ಡೀ ರೂಪವಾಗಿರುತಿದೆ. ಮೆ॥ ಕ್ರಾಫರ್ಡಯವರಮೇಲೆ ತಕ್ಸೀರ್ ಸಾಬೀತಾದಾಗ್ಯೂ ಒಂದುವೇಳೆ ಸಾಬೀತಾಗದೆ ಹೋದಾಗ್ಯೂ ಸಹ ಇಷ್ಟರ ಭಾರೀ ಮೊಬಲಗು ದುರ್ವ್ಯಯ ಮಾಡಲ್ಪಟ್ಟಂತೆ ಭಾವಿಸಲ್ಪಡದೆ ಹೋಗಲಾರದು. ಕ್ರಾಫರ್ಡ ಯವರಿಗೆ ಲಂಚ ಕೊಟ್ಟು ಭಾರೀ ನೌಕರಿಗಳನ್ನು ಸಂಪಾದಿಸಿಕೊಂಡ ಕೆಲವು ದೊಡ್ಡಮನುಷ್ಯರ ಹೆಸರುಗಳನ್ನು ಬಹಿರಂಗವಾಗಿ ಮುಂಬೈ ಸುವಾರ್ತಾ ಪತ್ರಿಕೆಯು ಪ್ರಕಟಿಸಿರುತಿದೆ. ಇವರಲ್ಲಿ ಅಸಿಸ್ಟೆಂಟಗಳೂ ತಹಸೀಲ್ ದಾರ್‌ಗಳೂ ಅನೇಕರು ಸೇರಿರುತ್ತಾರೆ. ಒಬ್ಬ ನೇಟಿವಾದ ಹನುಮಂತರಾಯರ ಮೊಕದ್ದಮೆಯಲ್ಲಿ ಸಾಕ್ಷಾಗಿರುವಂತೆ ಭಾವಿಸಲ್ಪಟ್ಟ ಒಬ್ಬ ಮೇಜಿಸ್ಟ್ರೇಟರ ಮೂಲಕವಾದ ವಿಚಾರಣೆಯು ಅವರೊಡನೆ ಸೇರಿದವರಾದ ಮೆ॥ ಕ್ರಾಫರ್ಡಯವರಿಗೆ ಮಾತ್ರ ಸಾಲದೆ ಹೋದದಕ್ಕೆ ಕಾರಣವು ಸ್ಪಷ್ಟವಾಗಿಯೇ ಇದೆ.

An experimental Council of State.—ಕೊಚ್ಚಿ ಅರಸರವರು ತಮ್ಮ ಸಂಸ್ಥಾನದಲ್ಲಿ ಅಜಮಾಯಿಷೀ ತರೀಕ ಒಂದು ಮಂತ್ರಾಲೋಚನ ಸಭೆಯಂ ಸ್ಥಾಪಿಸಬೇಕೆಂದು ಉದ್ದೇಶಿಸಿದಾರೆಂತಲೂ, ಅದು ಕೇವಲ ನ್ಯಾಯವಿಧಾಯಕ ಸಭೆಯಾಗಿಯಾಗಲಿ ಅಥವಾ ಯೆಗ್ಜಿಕ್ಯೂಟಿವ್ ಸಭೆಯಾಗಿಯಾಗಲಿ ಇರಲಾರದೆಂತಲೂ, ಸಂಸ್ಥಾನಕ್ಕೆ ಸಂಬಂಧಿಸಿದ ಸಾಮಾನ್ಯಪ್ರಯೋಜನವುಳ್ಳ ವಿಷಯಗಳು ಚರ್ಚಿಸಿ ವಿಮರ್ಶಿಸಲ್ಪಡುವ ಬಗ್ಗೆ ಅದು ಉದ್ದಿಷ್ಟವಾದದ್ದಾಗಿರುವದೆಂತಲೂ ತಿಳಿಯಬರುತದೆ. ಸಂವತ್ಸರಕ್ಕೊಂದಾವರ್ತಿಗಿಂತ ಕಡಮೆಯಿಲ್ಲದೆ ರಾಜಧಾನಿಗಾದ ಯರ್ನ್ಯಾಕುಳಕ್ಕೆ ಆಯಾ ಇಲಾಖಾ ಮುಖ್ಯಾಧಿಕಾರಿಗಳನ್ನೆಲ್ಲಾ ದಿವಾನರವರು ಕರೆಯಿಸಿ ಅವರೊಡನೆ ಆಲೋಚಿಸಿ ಆಯಾ ಸಂವತ್ಸರದ ಬಜೆಟ್ ಅಂದಾಜ್ ಪಟ್ಟಿಯನ್ನು ತಯಾರ್ಮಾಡುವರೆಂದು ಕೇಳುತ್ತೇವೆ. ದಿವಾನರವರು ಮುಖ್ಯವಾಗಿ ತಮ್ಮ ಕೌನ್ಸಿಲ್ ಮೆಂಬರ್‌ಗಳ ಅಭಿಪ್ರಾಯಗಳಿಗೆ ಬದ್ಧರಾಗಿರಬೇಕಾದ್ದಿಲ್ಲವೆಂಬದು ಸ್ಪಷ್ಟವಾಗಿಯೇ ಇದೆಯಷ್ಟೆ. ಅದುನಿಮಿತ್ತ ನಡೆಯುವದೆಲ್ಲವೂ ಅವರ ಸ್ವಂತ ಜವಾಬ್ದಾರಿಯನ್ನನುಸರಿಸಿದ್ದಾಗಿರುವದು. ನೇಟಿವ್ ಸಂಸ್ಥಾನಗಳಲ್ಲಿ ನೆಲಗೊಳಿಸಲ್ಪಡುವ ಕೌನ್ಸಿಲ್‌ಗಳ ಪ್ರಯೋಜನೋದ್ದೇಶಗಳಂ ಪರ್ಯಾಲೋಚಿಸಿ ನೋಡಿದರೆ, ಬ್ರಿಟಿಷ್ ಗವರ್ನ್‌ಮೆಂಟಿನವರ ಪ್ರಭುತ್ವಕ್ರಮವನ್ನನುಸರಿಸುವದರಮೂಲಕ ತಾವೂ ಉದಾರಹೃದಯವುಳ್ಳ ನಾಗರಿಕರೆಂಬ ಪ್ರಶಂಸೆಗೆ ಪಾತ್ರರಾಗಬೇಕೆಂಬ ಕೋರಿಕೆ ವಿನಾ ಮತ್ತೊಂದೂ ವ್ಯಕ್ತವಾಗುವದಿಲ್ಲವು. ಈ ಕೌನ್ಸಿಲ್‌ಗಳಲ್ಲಿ ದಿವಾನರುಗಳ ಪ್ರಾಬಲ್ಯವು ಅಧಿಕವಾಗಿರುವದೇ ಹೊರ್ತು ಮೆಂಬರ್‌ಗಳ ಅಭಿಪ್ರಾಯಗಳನ್ನು ಪುರಸ್ಕರಿಸಬೇಕೆಂಬ ನಿಯಮವೇರ್ಪಟ್ಟಿರುವದಿಲ್ಲವು. ಅರಸರಿಗೆ ಅದರ ಚಿಂತೆಯೇ ಇಲ್ಲದಿರುವದರಿಂದ ಅಲ್ಲಿನ ಆಡಳಿತಗಳೆಲ್ಲವೂ ದಿವಾನರವರ ಇಷ್ಟಾನುಸಾರವಾಗಿ ಜರಗಬೇಕಾಗಿರುತದೆ, ಇಂತಾಸಭೆ ಇದ್ದರೇನು ಇಲ್ಲದಿದ್ದರೇನು ?

LOCAL AND PROVINCIAL NEWS.

ಒಳದೇಶಮತ್ತುತಾಲ್ಲೂಕುಜಾತಿವೃತ್ತಾಂತಗಳು.

The Fort.—ಈಗ ಕೋಟೆಯಲ್ಲಿರುವ ಪಾಳೀಜಮೀನ್‌ಪೈಕಿ ಕೆಲವು ಭಾಗವನ್ನು ಮನೆಗಳು ಕಟ್ಟಿಕೊಳ್ಳಬೇಕಾದವರಿಗೆ ಪರಾಕ್ ಮಾಡುವ ಆಲೋಚನೆಯುಂಟಾಗಿರುವಂತೆಯೂ, ಅದಕ್ಕಾಗಿ ಇದುವರೆವಿಗೆ ಕೆಲವು ದರಖಾಸ್ತುಗಳು ಕೊಡಲ್ಪಟ್ಟಿರುವಂತೆಯೂ ಕೇಳುತ್ತೇವೆ.

Honorary Magistrates.—ಈಗ ಸಿವಿಲ್ ವ ಮಿಲಿಟರಿ ಸ್ಟೇಷನಿನಲ್ಲಿ ನೆಲಗೊಳಿಸಲ್ಪಟ್ಟಿರುವಂತೆ ಕೆಲವರು ಆನರರಿ ಮ್ಯಾಜಿಸ್ಟ್ರೇಟರುಗಳನ್ನು ಬೆಂಗಳೂರು ಮತ್ತು ಮೈಸೂರು ಪಟ್ಟಣಗಳಲ್ಲಿ ಸಹ ಏರ್ಪಡಿಸಬೇಕೆಂಬ ಅಭಿಪ್ರಾಯವು ಈಗ ಮೈಸೂರು ಸರ್ಕಾರದವರಿಗೆ ಉಂಟಾಗಿರುವಂತೆ ತಿಳಿಯಬರುತದೆ.

Compassionate Pension.—ನಾಬಕ ಪೊಲೀಸ್ ಅಸಿಸಂಟ ಮೆ|| ಹಾರ್ಡಿಯವರಿಗೆ ಕೆಲಸ ತಪ್ಪಿ ಪೆನ್ಶನ್ ಅಥವಾ ಗ್ರಾಚ್ಯುಟಿ ಸಹ ಪ್ರಾಪ್ತಿಯಿಲ್ಲದೆ ಹೋಗಿತ್ತಷ್ಟೆ. ಈಚೆಗೆ ಮೆ ರಿಕ್ಕೆಟ್ಸ್‌ಯವರು ಅವರಿಗೆ ಕಂಪ್ಯಾಷನೇಟ್ ಪೆನ್ಶನ್ ಕೊಡಬೇಕೆಂಬದಾಗಿ ಗವರ್ನ್‌ಮೆಂಟಿಗೆ ಸಿಫಾರಸ್ಸು ಮಾಡಿದಾರೆಂದು ಕೇಳುತ್ತೇವೆ.

Famine in Ahmednuggur.—ಮುಂಬೈ ಪ್ರೆಸಿಡೆನ್ಸಿಗೆ ಸೇರಿದ ಅಹಮ್ಮದನಗರದಲ್ಲೀಗ ಕ್ಷಾಮವು ತಲೆದೋರಿರುವದರಿಂದ ಆ ಪ್ರಾಂತದ ದಳ್ಳಾಳಿಗಳು ದಾವಣಗೆರೆ, ಜಗಲೂರು ವಗೈರೆ ತಾಲ್ಲೂಕುಗಳಿಗೆ ಬಂದು ಅಲ್ಲಿ ದೊರಿಯತಕ್ಕ ದವಸಗಳನ್ನೆಲ್ಲ ಖರೀದಿ ಮಾಡಿ ರೈಲ್ ಮಾರ್ಗವಾಗಿ ಅಹಮ್ಮದನಗರಕ್ಕೆ ಸಾಗಿಸುತಲಿರುವಂತೆ ಕೇಳುತ್ತೇವೆ. ಪ್ರತಿ ವರುಷವೊಳೀಕಾಲದಲ್ಲಿ ರೂಪಾಯಿ ೧ಕ್ಕೆ ೬೦ ಸೇರುಗಳ ಪ್ರಕಾರ ಮಾರಲ್ಪಡುತಲಿದ್ದ ಜೋಳದ ಧಾರಣೆಯು ಈಗ ೩೨ ಸೇರಿಗಿಂತ ಅಧಿಕವಾಗಿಲ್ಲವು

Amildar.—ಕುಂಭಕೋಣಂ ಕಾಲೇಜಿನಲ್ಲಿ ಹಿಂದೆ ಪ್ರೊಫೆಸರಾಗಿದ್ದ ಮೆ|| ಗೋಪಾಲರಾಯರವರ ಕುಮಾರರಾದ ಮೆ|| ಭಾಸ್ಕರರಾವ್ ಬಿ. ಎ. ಯವರು ಈಚೆಗೆ ಲೋಕಲ್ ಟೆಸ್ಟ್ ಪರೀಕ್ಷೆಯ ರೆವಿನ್ಯೂ ಮತ್ತು ಕ್ರಿಮಿನಲ್ ಭಾಗಗಳೆರಡರಲ್ಲಿಯೂ ಮೊದಲನೆಯವರಾಗಿ ತೇರ್ಗಡೆಯಾದದರಿಂದ ಅವರಿಗೆ ಖಾಲೀಯಾಗಿದ್ದ ಶಿವಮೊಗ್ಗಾ ಡಿಸ್ಟ್ರಿಕ್ಟ್ ಸಾಗರ ತಾಲ್ಲೂಕ್ ಅಮಲ್ದಾರಿ ಕೆಲಸ ಕೊಡಲ್ಪಟ್ಟಿಂತೆ ಒಳದೇಶದ ಸ್ಪೆಕ್ಟೇಟರ್ ಪತ್ರಿಕೆ ತಿಳಿಸುತಿದೆ.

Initiation Ceremony.—ಕಳೆದ ವಿಜಯದಶಮಿದಿನ ಈ ಸಂಸ್ಥಾನದ ಯುವರಾಜರಾದ ಶ್ರೀ ಕೃಷ್ಣರಾಜ ಒಡೆಯರವರಿಗೆ ಅಕ್ಷರಾಭ್ಯಾಸ ಮಹೋತ್ಸವವು ಜರಿಗಿದಂತೆ ಕೇಳಿದಕ್ಕೆ ನಾವು ಬಹಳ ಸಂತೋಷಿಸುವೆವಲ್ಲದೆ ಈ ರಾಜಪುತ್ರರ ಭವಿಷ್ಯದ್ವಿದ್ಯಾಭ್ಯಾಸದ ವಿಷಯದೊಳು ಸ್ವತಸ್ಸಿದ್ಧಗಳಾದ ಅವರ ಮಹಾಗೌರವ ಕೀರ್ತಿಪ್ರಾಶಸ್ತ್ಯಗಳಿಗೆ ಅನುಗುಣಗಳಾದ ಏರ್ಪಾಡುಗಳು ಮಾಡಲ್ಪಟ್ಟು ತನ್ಮೂಲಕ ಅವರು ವಿದ್ಯಾವಿನಯ ಗಾಂಭೀರ್ಯಾದಿ ಸಕಲಗುಣ ಸಮನ್ವಿತರಾಗಿ ಜಗನ್ನುತರಾಗಬೇಕೆಂದು ಅಂತಃ ಕೋರುತಲಿದೇವೆ.

A sugar Factory.—ಈ ದೇಶದಲ್ಲಿ ಧನಿಕರಾಗಿರುವವರು ಕೆಲವರು ಸಕ್ಕರೆ ಮತ್ತು ಬೆಲ್ಲದ ತಯಾರೀ ಕಾರ್ಖಾನೆಯನ್ನು ಸ್ಥಾಪಿಸಬೇಕೆಂಬ ಆಲೋಚನೆಯುಳ್ಳವರಾಗಿದಾರೆಂದು ಒಳದೇಶದ ಇಂಗ್ಲಿಷ್ ಪತ್ರಿಕೆಯೊಂದು ತಿಳಿಸುತಿದೆ. ಹಿಂದೆ ಶ್ರೀರಂಗಪಟ್ಟಣ ತಾಲ್ಲೂಕ್ ಪಾಲಹಳ್ಳಿಯಲ್ಲಿ ನೆಲೆಗೊಂಡಿದ್ದ ಸದರಿ ಸಕ್ಕರೆ ತಯಾರೀ ಕಾರ್ಖಾನೆಯ ವ್ಯವಸಾಯವೂ ಅದರಿಂದ ಭಾಗಸ್ಥರಿಗೆ ಉಂಟಾದ ಪ್ರಯೋಜನವೂ ಪ್ರಸಿದ್ಧವಾಗಿರುವದರಿಂದ ಅವರ ಜ್ಞಾಪಕವೆಲ್ಲರ ಹೃದಯದಲ್ಲಿ ಅದ್ಯಾಪಿ ನೆಲಗೊಂಡಿರುವದೆಂದು ನಂಬುತ್ತೇವೆ.

Mr. Sitaramaiya.—ಈಸೂರ. ಅಮಲ್ದಾರ್ ವ ಎರವನೇಕ್ಸ್ಯಾಪ್ ಮ್ಯಾಜಿಸ್ಟ್ರೇಟರಾದ ಮೆ|| ಸೀತಾರಾಮಯ್ಯನವರಿಗೆ, ಸರ್ವೇ ಅಸಿಸ್ಟೆಂಟ್ ಕಮಿಷನರ್ ಕೆಲಸವಾದಂತೆ ಕೇಳುತ್ತೇವೆ. ಅವರ ಕೆಲಸಕ್ಕೆ ಬರತಕ್ಕವರು ಫಲಾನೆಯವರೆಂದು ಅದ್ಯಾಪಿ ಗೊತ್ತಾಗಲಿಲ್ಲವು. ಇತರ ತಾಲ್ಲೂಕ್ ಅಮಲ್ದಾರರುಗಳಿಗಿಂತಲೂ ಇಲ್ಲಿಗೆ ಅಮಲ್ದಾರರಾಗಿ ಬರುವವರಿಗೆ ಸ್ವಸಾಮರ್ಥ್ಯಪ್ರದರ್ಶನಕ್ಕೂ, ಪುರೋವೃದ್ಧಿಯನ್ನೈದಲಿಕ್ಕೂ ಅವಕಾಶಗಳುಂಟಾಗುವಂತೆ ಅನ್ಯತ್ರ ಇತರಕ್ಕವರಿಗೆ ಉಂಟಾಗಲಾರವೆಂಬವಕ್ಕೆ ಅವರವರ ಸ್ಥಿತಿಯೇ ನಿದರ್ಶನವಾಗಿರುತಿದೆ.

Sandal Coti.—ಇಲ್ಲಿನ ಸಿಟಿ ರೈಲ್ವೇಸ್ಟೇಷನಿನ ಬಳಿ ಇರುವ ಸಾಂಡಲ್ ಕೋಠಿಯು ಬಹಳ ಸಂಕುಚಿತವಾಗಿರುವದರಿಂದ ಅದು ಬದಲಾಯಿಸಿ ಕಟ್ಟಿಸಬೇಕೆಂಬ ತಾತ್ಪರ್ಯವು ಫಾರೆಸ್ಟ್ ಇಲಾಖೆಯವರಿಗುಂಟಾಗಿರುವಂತೆ ಕೇಳುತ್ತೇವೆ. ಬೇರೆಯಾಗುವದರಿಂದ ಈಗಿರುವ ಕಟ್ಟಡವು ಬತಾಯಿಸುವದಕ್ಕಿಂತಲೂ, ಈಗ ಮಹಾರಾಜಾ ಸರ್ಕಾರದವರ ಸುಫರ್ದಿಗೊಪ್ಪಿಸಲ್ಪಟ್ಟಿರುವ ಕೋಟೆಯಲ್ಲಿ ಬೇಕಾದಷ್ಟು ಕಟ್ಟಡಗಳು ಖಾಲಿಯಾಗಿರುವದರಿಂದಲೂ, ಗಾಡಿಗಳು ಬಂದುನಿಲ್ಲಲಿಕ್ಕೆ ಖಾಲೀ ಜಮೀನುಗಳಿರುವದರಿಂದಲೂ ಈಗಿರುವದಕ್ಕಿಂತ ಬಹಳ ಬಂದೋಬಸ್ತಾಗಿರುವದರಿಂದಲೂ ಪ್ರಸಕ್ತ ಕೋಠಿಯನ್ನು ಅಲ್ಲಿಗೆ ಸಾಗಿಸುವದೇ ಅನುಕೂಲವಾಗಿರುವದಲ್ಲದೆ ಪಬ್ಲಿಕಿನವರಿಗೆ ಅವಕಾಶವಿರಲಾರದೆಂದೆಣಿಸುತ್ತೇವೆ.

The Mari Kanave Project.—ಮಾರಿಕಣಿವೆ ನೀರಾವರಿ ಕಾಮಗಾರಿ ವಿಷಯದಲ್ಲಿ ಪಬ್ಲಿಕ್ ಸೆಕ್ರೆಟರಿಯಾದ ಕರ್ನಲ್ ಬರ್ವಾಯವರು ವಿಮರ್ಶಾಭಿಪ್ರಾಯವುಳ್ಳವರಾಗಿದ್ದಾಗ್ಯೂ ದಿವಾನರವರಿಗೆ ಮಾತ್ರ ಅದರ ಆಲೋಚನೆಯು ಅದ್ಯಾಪಿ ತಪ್ಪದೆ ಇರುತಲಿದೆಯೆಂದು ಕೇಳುತ್ತೇವೆ. ಸದರೀ ಪ್ರದೇಶವನ್ನು ಅಜಮಾಯಿಷೀ ಮಾಡಿ ನೋಡತಕ್ಕ ಬಗ್ಗೆ ಬರುವ ತಿಂಗಳಲ್ಲಿ ದಿವಾನರವರ ಸವಾರಿಯು ಅಲ್ಲಿಗೆ ಹೋಗುವದಾಗಿದೆ. ಈ ಕಾಮಗಾರಿಯು ಪ್ರಾರಂಭಿಸಿದರೆ ಬಹುಶಃ ಪ್ರಯೋಜನಕರವಾಗಿರಬಹುದೆಂದು ತೋರುತಿದೆ. ಮಾರಿಕಣಿವೆ ಕಾಮಗಾರಿ ಪ್ರಾರಂಭಿಸಿದಾಗ್ಯೂ ಅದರ ಲಾಗವದು ಮೊಬಲಗಿಗೆ ಬಡ್ಡಿ ಸಹ ಹುಟ್ಟುವಳಿಯಾಗಲಾರದೆಂದು ಕರ್ನಲ್‌ಬರ್ವ ಯವರು ಅಭಿಪ್ರಾಯಪಟ್ಟಿರುತ್ತಾರೆ. ಪರಂತು ಪ್ರತಿಸಂವತ್ಸರದಲ್ಲಿಯೂ, ಜಲಾಭಾವದಿಂದ ಅನೇಕ ಹಾಲ್ನವೆಗಳು ಮೃತ ಪಡುತಲಿರುವದನ್ನೂ ಅಂತಾ ನಿರ್ಜಲಪ್ರದೇಶದಲ್ಲಿ ವನಚರಗಳನ್ನು ಕಾಪಾಡಲಿಕ್ಕೆ ಸಾಧ್ಯವಲ್ಲದೆ ಹೋಗಲು ಅನೇಕ ಸುಪ್ಪೀ ಜಮೀನುಗಳು ಸಾಗುವಳಿಯಾಗದೆ ಬಂಜರ್ ಬಿದ್ದಿರುವದನ್ನೂ ಕರ್ನಲ್ ಬರ್ವಾಯವರು ಆಲೋಚಿಸದೆ ಹೋದದಕ್ಕಾಗಿ ಆಶ್ಚರ್ಯ ಪಡಬೇಕಾಗಿದೆ.

EXTRACTS

PUDUKOTA.

ಈಚೆಗೆ ಪುದುಕೋಟೆ ಸಂಸ್ಥಾನಕ್ಕೆ ಹೋಗಿ ಅಲ್ಲಿನ ಆಡಳಿತಗಳನ್ನೆಲ್ಲ ಸ್ವತಃ ನೋಡಿಬಂದ ಒಬ್ಬ ಬಾತಮೀದಾರನು ಪುನೆ ಮರಾಟಾ ಪತ್ರಿಕೆಗೆ, ಮಾರ್ಚಿ ಮಾಹೆ ೯ನೇ ತಾರೀಖಿನಲ್ಲಿ ವರದಿ ಕೊಟ್ಟ ಕೆಲವು ಅಂಶಗಳನ್ನು ಬರೆದಿರುತ್ತಾನೆನುವದೇ;—«ಪೊಲಿಟಿಕಲ್ ಏಜಂಟರುಗಳ ಕಾರ್ಪಣ್ಯಕ್ಕೂ, ಅಗೌರವಕ್ಕೂ, ತಿರಸ್ಕಾರಕ್ಕೂ ಹೀಂಗೂ ಒಳಪಡದೆ ಇರುವ ಸಂಸ್ಥಾನವೇ ಇಲ್ಲವು. ಪೊಲಿಟಿಕಲ್ ಏಜಂಟರು ಎದ್ದು ನಿಂತುಕೊಂಡರೆ ರಾಜರು ಕೂಡಾ ನಿಂತುಕೊಳ್ಳಬೇಕಾಗಿದೆ, ಅವರು ಕುಳಿತುಕೊಂಡರೆ ಇವರೂ ಕೂಡಲೆ ಕುಳಿತುಕೊಳ್ಳಬೇಕು. ಪುದುಕೋಟೆ ಮಹಾರಾಜರ ಕಾಲೇಜ್ ವಿದ್ಯಾರ್ಥಿಗಳಿಗೆ ಬಹುಮಾನಗಳು ಕೊಡಲ್ಪಟ್ಟ ಸಂದರ್ಭದಲ್ಲಿ ಪೊಲಿಟಿಕಲ್ ಏಜಂಟರು ಇನಾಮುಗಳಂ ಕೊಡುತ್ತ ಪ್ರಾರಂಭಿಸುವ ವರಿವಿಗೂ ಎದ್ದು ನಿಂತುಕೊಂಡೇ ಇದ್ದರು. ಅಲ್ಲಿನ ಅರಸರು ಕೂಡ, ತಮಗೆ ಇಷ್ಟವಿಲ್ಲದಿದ್ದಾಗ್ಯೂ ಅವರೊಡನೆ ತಾವೂ ಎದ್ದು ನಿಂತುಕೊಂಡಿರಬೇಕಾಯಿತು. ಆಗ ಅವರೊಡನೆ ಇತರ ತಾಬೇದಾರರೆಲ್ಲರೂ ನಿಂತಿರುವದೇನೂ ಆಶ್ಚರ್ಯವಲ್ಲವು. ಮೆ|| ಶೇಷಯ್ಯ ಶಾಸ್ತ್ರಿಗಳವರು ದಿವಾನರಾಗಿ ಮೊಕರರಾಗಿ ಬಂದಬಳಿಕ ಇನಾಮುಗಳು ಕೊಡುವ ಸಂದರ್ಭದಲ್ಲಿ ಪೊಲಿಟಿಕಲ್ ಏಜಂಟರೊಡನೆ ಅರಸರೂ ಎದ್ದು ನಿಂತುಕೊಳ್ಳುವ ಪದ್ಧತಿಯಂ ನೋಡಿ ಬಹಳ ಅಸಮಾಧಾನಪಟ್ಟರು, ಪರಂತು ಅರಸರನ್ನು ಪ್ರತ್ಯಕ್ಷವಾಗಿ ಕುಳಿತುಕೊಳ್ಳಬಹುದೆಂದು ಹೇಳುವದಕ್ಕಾಗದೆ ಸುಮ್ಮನಿರುತಲಿದ್ದರು. ಹೀಗಿರುವಲ್ಲಿ ಒಂದಾವರ್ತಿ ಪೊಲಿಟಿಕಲ್ ಏಜಂಟರು ಪ್ರೈಜ್ ಡಿಸ್ಟ್ರಿಬ್ಯೂಷನ್ ಬಗ್ಗೆ ಬಂದಿದ್ದ ಕಾಲದಲ್ಲಿ ಅವರೊಡನೆ ಅರಸರು ಮೊದಲು ನಿಶ್ಚಿಂತ ತಾಬೇದಾರರೂ ಎದ್ದು ನಿಂತುಕೊಂಡರು. ಮೆ|| ಶೇಷಯ್ಯ ಶಾಸ್ತ್ರಿಗಳು ಮಾತ್ರ ತಮ್ಮ ಸ್ಥಾನವಂಬಿಟ್ಟು ಕದಲದೆ ಸುಮ್ಮನಿದ್ದರು. ಇದನ್ನೆಲ್ಲರೂ ಕಂಡು ಶಾಸ್ತ್ರಿಗಳು ಮಾಡಿದ ಅಗೌರವದಿಂದ ಪುದುಕೋಟೆ ಸಂಸ್ಥಾನಕ್ಕೆ ಏನು ವಿಪತ್ತು ಬರುವದೋ ಯೆಂದು ಯೆಲ್ಲರೂ ಭಯಪಟ್ಟರು. ದಿವಾನರವರು ತಾವು ಮಾಡಿದ್ದು ಅಕೃತ್ಯವಲ್ಲವೆಂಬ ಚೆನ್ನಾಗಿ ತಿಳಿದುಕೊಂಡಿದ್ದದರಿಂದ ಅವರು ಸುಖವಾಗಿ ಕುಳಿತಿದ್ದರು. ಅರಸರವರು ತಮ್ಮ ದಿವಾನರವರು ಕುಳಿತಿರುವಾಗ್ಯೆ ತಾವು ಇಂತಿರುವದಂ ನೋಡಿ ಲಜ್ಜೆಪಟ್ಟು ತಾವು ಕುಳಿತುಕೊಂಡರು. ಅದು ಮೊದಲು ಇಂತಾ ಅಗೌರವದಿಂದ ಅರಸರು ತಪ್ಪಿದವರಾದರೆಂದು ತಿಳಿಯಬರುತಿದೆ.

ಪೊಲಿಟಿಕಲ್ ಉದ್ಯೋಗಸ್ಥರ ಸಂತೋಷಾರ್ಥವಾಗಿ ಸಂಸ್ಥಾನದ ಹುಟ್ಟುವಳಿಯಲ್ಲಿ ಅರ್ಧಭಾಗಕ್ಕಿಂತ ಅಧಿಕವಾಗಿ ವ್ಯಯವಾಗುತಲಿದೆ. ದುಂದುಗಾರರಾದ ಬ್ರಿಟಾನಿಯಾವಿನ ಮಕ್ಕಳಿಗಾಗಿ (ಪೊಲಿಟಿಕಲ್ ಆಫಿಸರ್‌ಗಳಿಗಾಗಿ) ಖರ್ಚಾಗುವ ಮೊಬಲಗಿಗೆ ಯಾವ ಸಂಸ್ಥಾನದಲ್ಲಿಯೂ ಕ್ರಮವಾದ ಲೆಕ್ಕ ಇಡಲ್ಪಡುವದಿಲ್ಲವು. ಪರಂತು ಪುದುಕೋಟೆ ಸಂಸ್ಥಾನದಲ್ಲಿ ಮಾತ್ರ ನಿರ್ಧನರಾದ ಪರಂತು ಬಲಿಷ್ಠರಾದ ಶ್ವೇತ ಮುಖಗಳ ಸತ್ಕಾರಕ್ಕೆಂಬದಾಗಿ ಪ್ರತಿ ವರುಷದ ಲೆಕ್ಕದಲ್ಲಿ ಖರ್ಚು ಬೀಳುತಲಿದೆ. ಪೊಲಿಟಿಕಲ್ ಏಜಂಟರೂ, ಅವರ ಇಷ್ಟಮಿತ್ರರೂ, ವಿಶೇಷತಃ ಕರೆಯಲ್ಪಡುವಂತಾವರೂ ತಿಂಗಳಿಗೊಂದಾವರ್ತಿ ಪುದುಕೋಟೆಗೆ ಬಂದು ಹೋಗುವ ಪದ್ಧತಿಯು ಪೂರ್ವದಲ್ಲಿ ನೆಲಗೊಂಡಿತ್ತು. ಅಂತಾ ಸಂದರ್ಭಗಳಲ್ಲಿ ಅಭ್ಯವಹಾರಾರ್ಥ ಅಭ್ಯಾಗತರಾಗಿ ಬರತಕ್ಕವರಿಗೆ ಸಂಸ್ಥಾನದಿಂದ ಕೆಲವು ಮೊಬಲಗು ವ್ಯಯ ಮಾಡಲ್ಪಡುತಲಿತ್ತು. ಔತನ ಮೊದಲಾದ ವಿನೋದಾರ್ಥ ವಿಶೇಷ ದ್ರವ್ಯ ವ್ಯಯ ಮಾಡಬೇಕಾದ ಆವಶ್ಯಕತೆಯಂ ಕುರಿತು ಮದರಾಸ್ ಗವರ್ನ್‌ಮೆಂಟಿನವರು ಸಂಸ್ಥಾನದ ಸಾಲ್ಯಿಯಾನಾದೇ ರಿಪೋರ್ಟಿನಮೇಲೆ ಆಕ್ಷೇಪಿಸುತಲಿದ್ದರು. ಅದರ ಮೇಲೆ ಸಾಲೀಯಾನಾ ಒಂದು ಸಾವಿರ ರೂಪಾಯಿಗಳಿಗಿಂತ ಮೀರಿ ಪೊಲಿಟಿಕಲ್ ಏಜಂಟರಿಗಾಗಿ ವ್ಯಯ ಮಾಡಲಾಗದೆಂದು ಗವರ್ನ್‌ಮೆಂಟಿನವರು ನಿಬಂಧನೆ ಮಾಡಿದರು. ಈ ಕಾರಣದಿಂದ ಈಗ ಸಂವತ್ಸರಕ್ಕೆ ಯೆರಡಾವರ್ತಿಗಿಂತ ಮೀರಿ ಪೊಲಿಟಿಕಲ್ ಏಜಂಟರು ಪುದುಕೋಟೆಗೆ ಬರುವದಿಲ್ಲವು. ಇದರಿಂದ ಕ್ಲುಪ್ತವಾದ ಸಾವಿರ ರೂಪಾಯಿಗಳಿಗಿಂತ ಅಧಿಕವಾಗಿ ಈಗ ಖರ್ಚಾಗುವದಿಲ್ಲವು. ಪೊಲಿಟಿಕಲ್ ಏಜಂಟರುಗಳು, ರೆಸಿಡೆಂಟರುಗಳು, ಇವರುಗಳಿಗಾಗಿ ಸಾಕ್ಷಾತ್ತಾಗಿಯೂ ಪರೋಕ್ಷವಾಗಿಯೂ ಖರ್ಚಾಗುವ ಮೊಬಲಗನ್ನೆಲ್ಲ ಸಾಲ್ಯಿಯಾನಾ ರಿಪೋರ್ಟಿನಲ್ಲಿ ಪ್ರತ್ಯೇಕ ರಕಮಾಗಿ ತೋರಿಸುವದು ಇತರ ನೇಟಿವ್ ಸಂಸ್ಥಾನಾಧಿಪತಿಗಳಿಗೆಲ್ಲ ಬಹಳ ಯೋಗ್ಯವಾಗಿರುವದೆಂದೆಣಿಸುತ್ತೇನೆ.

ಪುದುಕೋಟೆ ಸಂಸ್ಥಾನದ ಆಡಳಿತದಲ್ಲಿ ಪ್ರತಿ ವಿಷಯವೂ ಅನುಕೂಲವಾದದ್ದಾಗಿಯೇ ಇದೆ. ಪರಂತು, ಮುಖ್ಯವಾದ ಮತ್ತು ವಿಶೇಷ ಆಮತಿಯುಳ್ಳ ಚಾಕರೀಕೆಲಸಗಳಿಗೆಲ್ಲ ಅನ್ಯದೇಶೀಯರು ಹೇರಳವಾಗಿ ಮೊಕರರ್ಮಾಡಲ್ಪಟ್ಟಿದಾರೆ. ಇದರಿಂದುಂಟಾಗುವ ಕೆಡುಕೇನೆಂದರೆ—ಅನ್ಯದೇಶೀಯರಾದ ಉದ್ಯೋಗಸ್ಥರು ತಾವು ಅಲ್ಲಿ ಸಂಪಾದಿಸಿದ ದ್ರವ್ಯವನ್ನೆಲ್ಲ ಅಯ್ಯರಿಗೆ ತಮ್ಮ ದೇಶಕ್ಕೆ ಸಾಗಿಸಿಕೊಂಡು ಹೋಗುವದರಿಂದ ಸಂಸ್ಥಾನದಲ್ಲಿ ಕಾಯಮಾಗಿರುವವರು ಯಾವಾಗಲೂ ದರಿದ್ರರಾಗಿರತಕ್ಕೂ, ಅಲ್ಲಿನ ಐಶ್ವರ್ಯವು ಅನ್ಯರಪಾಲಾಗಿ ವಿದೇಶಕ್ಕೆ ಹೋಗತಕ್ಕೂ, ಕಾರಣವಾಗುತಿದೆ. ಅವರೆಲ್ಲರೂ ಪುದುಕೋಟೆ ಸಂಸ್ಥಾನದ ನಿವಾಸಿಗಳಾಗಿಯೇ ಇದ್ದಿರುವಪಕ್ಷಕ್ಕೆ ಅಪರಲ್ಲಿಯೇ ಕಾಯಮಾಗಿರುವ ತಾತ್ಪರ್ಯದೊಡನೆ ದಿವ್ಯಾಲಂಕಾರವುಳ್ಳ ಗೃಹಗಳನ್ನು ಕಟ್ಟಿಸಿ ಊರನ್ನು ಅಲಂಕರಿಸಿ ನೋಡುವವರಿಗೆ ಆಹ್ಲಾದವುಂಟಾಗುವಂತೆ ಮಾಡುತಿರುವರು. ದಿವಾನರವರು ಮತ್ತು ಅವರ ಅಸಿಸ್ಟೆಂಟರು ವಾಸವಾಗಿರುವ ಮನೆಗಳು ಕಟ್ಟಿದ್ದು ಮೊದಲು ಸುಣ್ಣ ಸಹ ಬಳಿಯಲ್ಪಟ್ಟವಲ್ಲವು. ಸದರೀ ಮನೆಗಳು ನಾಬಕ ದಿವಾನರುಗಳ ಬಂಧುವರ್ಗದವರ ವಾಸಕ್ಕೆ ಉಚಿತವಾಗಿ ಅವರಿಗೆ ಕೊಡಲ್ಪಟ್ಟಿರುವಂತೆ ತಿಳಿಯಬರುತಿದೆ. ಮೆ|| ಶೇಷಯ್ಯ ಶಾಸ್ತ್ರಿಗಳವರು ಕುಂಭಕೋಣದಲ್ಲಿ ಭಾರೀಲಾಗವುಳ್ಳ ಒಂದು ವಿಶಾಲವಾದ ವಾಸಗೃಹವಂ ಕಟ್ಟಿಸುತಲಿದಾರೆ. ಪುದುಕೋಟೆಯ ಸಂಸ್ಥಾನದ ವಿಚಾರವು ಇಷ್ಟಕ್ಕೆ ಸಾಕಾಗಿರುವದರಿಂದ ತಿರುಚನಾಪಲ್ಲಿ ಚಿದಂಬರು ಪುದುಚೇರಿ ಮೊದಲಾದ ಪ್ರದೇಶಗಳಂ ನೋಡಿಕೊಂಡು ಮದರಾಸ್ ಮಾರ್ಗವಾಗಿ ಮೈಸೂರಿಗೆ ಬಂದು ಸೇರಿದೆನು.

Bangalore.—Printed and published at the Karnatic Press, No. 44, Hospital Road, Petta.—1888.

ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA.

ಪ್ರತಿ ಸೋಮವಾರ ಪ್ರಾತಃಕಾಲದಲ್ಲಿ ಪ್ರಕಟಿಸಲ್ಪಡುವದು.

Published every Monday Morning.

ಪ್ರಕಾಮವಿವಿಧವೃತ್ತ್ಯವಗಮಾರ್ಥಂ ಕರ್ಣಾಟಕಪ್ರಕಾಶಿಕಾ ... ಸರ್ವಜನಾನುಕೂಲ ...

Vol. XV.] BANGALORE:—MONDAY, OCTOBER 29, 1888. [No. 43.

ಸಂಪುಟ ೧೫.] ಬೆಂಗಳೂರು:—ಸನ್ ೧೮೮೮ನೇ ಇಸವಿ ಅಕ್ಟೋಬರ್ ೨೯ನೇ ತಾರೀಖ್ ಸೋಮವಾರ. [ಸಂಚಿಕೆ ೪೩.

ಕರ್ಣಾಟಕ ಪ್ರಕಾಶಿಕಾ

ಪತ್ರಿಕೆಯ ಚಂದಾ ದರಗಳು,

೧೮೮೮ನೇ ಇಸವಿ ಜನವರಿಯಿಂದಾಯಾತು

ಕಡಮೆಮಾಡಲ್ಪಟ್ಟಿರುತ್ತಿದೆ.

ಈ ಪತ್ರಿಕೆಯ ಚಂದಾದಾರರಪ್ಪಿಕೆ ಅನೇಕರ ಅಪೇಕ್ಷೆಯನ್ನೀಡೇರಿಸುವ ಉದ್ದೇಶದೊಡನೆಯೂ, ಪರಿಮಿತವಾದ ಆಯತಿಯುಳ್ಳವರಿಗೆಲ್ಲ ಈ ಪತ್ರಿಕೆಯು ಸುಲಭವಾಗಿ ಲಭಿಸುವಂತಿರಬೇಕೆಂಬ ಅಭಿಪ್ರಾಯದೊಡನೆಯೂ ಇವರ ಚಂದಾದರವನ್ನು ಇವರಡಿಕಂಡಂತೆ ಕಡಮೆಮಾಡಿರುತ್ತೇವೆಂತೆಂದರೆ:—

ಇಂಗ್ಲಿಷ್ ಮತ್ತು ಕನ್ನಡಭಾಗಗಳಿಗೆ.

	ಸ್ಥಳದವರಿಗೆ.	ಪರಸ್ಥಳದವರಿಗೆ.
12 ತಿಂಗಳಿಗೆ	8—0—0	9—0—0
6 ,,	4—0—0	4—8—0
3 ,,	2—8—0	2—8—0

ಇಂಗ್ಲಿಷ್ ಅಥವಾ ಕನ್ನಡಭಾಗಗಳಿಗೆ.

	ಸ್ಥಳದವರಿಗೆ	ಪರಸ್ಥಳದವರಿಗೆ
12 ತಿಂಗಳಿಗೆ	4—0—0	5—0—0
6 ,,	2—0—0	2—8—0
3 ,,	1—4—0	1—8—0

ಷರಾ—ಅಂಬೆ ಮುನ್ಸಿಫಿಗಳು, ಪೋಲೀಸ್ ಮತ್ತು ತಾಲ್ಲೂಕ್ ಸಬ್ಬಾಲ್ಟರ್ನ್ ಗಳು, ಸ್ಕೂಲ್ ಮಾಸ್ಟರುಗಳು, ಪಟೇಲರು, ವಿದ್ಯಾರ್ಥಿಗಳು, ಇವರಿಗೆಲ್ಲ ಈ ಪತ್ರಿಕೆಯು ಸಹಾ ಚಂದಾದರದಕ್ಕೆ ಕೊಡಲ್ಪಡುವದು. ಅತ್ಯಾವಶ್ಯಕವೊಬ್ಬರು ಗುನಿಸಿ ಬಾಲದ ದರಖಾಸ್ತುಗಳಿಗೆ ಸುತರಾಂ ನಿಗೇಕೊಡಲ್ಪಡಲಾರದು. ಚಂದಾದಾರರು ಇಂಗ್ಲಿಷ್ ಭಾಗವನ್ನಾಗಲಿ ಕನ್ನಡಭಾಗವನ್ನಾಗಲಿ ಅಥವಾ ಎರಡನ್ನಾಗಲಿ ತೆಗದುಕೊಳ್ಳಬಹುದು. ಚಂದಾಹಣವನ್ನು ಮುಂಗಡವಾಗಿಯೇ ಸಲ್ಲಿಸತಕ್ಕದ್ದು. ಮೂರುತಿಂಗಳಿಗಿಂತ ಕಡಮೆಯಾಗಿ ಚಂದಾ ಮೊಬಲಗು ಅಂಗೀಕರಿಸಲ್ಪಡಲಾರದು.

ನೋಟುಗಳು ರವಾನಿಸತಕ್ಕವರು ಮೊದಲು ಕಳುಹಿಸುವ ಅರ್ಧನೋಟು ತಲಪಿದುಬಗ್ಗೆ ನಮ್ಮಕಾಗದವು ಬಂದ ಕೂಡಲೇ ಬಾಕೀ ಅರ್ಧ ನೋಟನ್ನು ರವಾನಿಸತಕ್ಕದ್ದು. ಸ್ಟ್ಯಾಂಪ್‌ಗಳು ಕಳುಹಿಸತಕ್ಕವರು ರೂಪಾಯಿ ಒಂದಕ್ಕೆ ಒಂದಾಣೆಮೇರೆ ಡಿಸ್ಕೌಂಟ್ ಸಹ ಸೇರಿಸಿ ಕಳುಹಿಸತಕ್ಕದ್ದು. ಆರ್ಧಾಣೆಗಿಂತ ಜಾಸ್ತೀ ಕ್ರಯವುಳ್ಳ ಸ್ಟ್ಯಾಂಪ್‌ಗಳನ್ನು ಕಳುಹಕೂಡದು. ಡಿಸ್ಕೌಂಟಯಿಲ್ಲದೆ ಕಳುಹಿಸಲ್ಪಡುವ ಮೊಬಲಗಿನಲ್ಲಿ ಅದು ವಜಾಮಾಡಲ್ಪಟ್ಟು ಮಿಕ್ಕಮೊಬಲಗು ಲೆಕ್ಕಕ್ಕೆ ಜಮಾಖರ್ಚು ಮಾಡಿಕೊಳ್ಳಲ್ಪಡುವದು.

ಪ್ರಕಟನೆಯ ರಿವಾಜ್.

ಮೊದಲನೆಸಾರಿಗಾ ಪಂಕ್ತಿ ಒಂದಕ್ಕೆ ೦—೨—೦

ಎರಡನೆಯದಕ್ಕಾ ಪಂಕ್ತಿ ಒಂದಕ್ಕೆ ೦—೧—೦

ಷರಾ—ಎರಡಾವರ್ತಿಗಿಂತ ಜಾಸ್ತೀಯಾಗಿ ಎಷ್ಟುತರದ ಘಾಯಿಷ್ ಮಾಡಿದಾಗ್ಯೂ ಪಂಕ್ತಿ ಒಂದಕ್ಕೆ ೧ಆಣೆಯಂತೆಯೇ ಲೆಕ್ಕ ಮಾಡಲ್ಪಡುವದು. ಈ ಪತ್ರಿಕೆಯಲ್ಲಿ ಪ್ರಕಟಿಸುವಬಗ್ಗೆ ಪ್ರಕಟನೆಗಳು ಕಳುಹಿಸುವವರು ಅವು ಎಷ್ಟಾವರ್ತಿ ಘಾಯಿಷ್ ಮಾಡಲ್ಪಡಬೇಕೋ ಆ ಅಂಕವನ್ನು ಸ್ಪಷ್ಟವಾಗಿ ತಿಳಿಸತಕ್ಕದ್ದು. ಇಲ್ಲದಪಕ್ಷಕ್ಕೆ ಅವರು ನಮಗೆ ನಿಲ್ಲಿಸುವಂತೆ ಬರೆಯುವತನಕ ಅವು ಪ್ರಕಟಿಸಲ್ಪಡುತ್ತಿದ್ದು ಹಾಗೆ ಎಷ್ಟಾವರ್ತಿ ಪ್ರಕಟಿಸಲ್ಪಟ್ಟಿದ್ದಾಗ್ಯೂ ಮೇಲೆ ತಂದ ದರಸಹಿ ಕಿಮ್ಮತ್ ವಸೂಲುಮಾಡಲ್ಪಡುವದು. ಪ್ರಕಟನೆಯುಬಗ್ಗೆ ಕಳುಹಿಸಲ್ಪಡತಕ್ಕ ಪ್ರಕಟನೆಗಳನ್ನು ಯಾಪತ್ರಿಕೆಯ ಮುದ್ರಣಕ್ಕೆ ೨ ಘಂಟೆಮೊದಲಾಗಿ ಕಳುಹಿಸಬೇಕು. ಪ್ರಕಟನೆಯುಬಗ್ಗೆ ಈ ಪತ್ರಿಕೆಗೆ ಕಳುಹಿಸಲ್ಪಡತಕ್ಕ ಕಾಗದಗಳಲ್ಲಿ ತಿಳಿಸಲ್ಪಡುವ ಅಭಿಪ್ರಾಯಗಳಿಗೆ ನಾವು ಜವಾಬ್ದಾರರಾಗಲಾರೆವು. ಕ್ರಮವಾಗಿ ರುಜುಮಾಡದಿರೊತ್ತರ್ ಯಾವಕಾಗದವನ್ನು ಪ್ರಕಟಿಸಲಾರೆವು. ನಿರಾಕರಿಸಲ್ಪಟ್ಟಕಾಗದಗಳು ಮರಳಿ ಕಳುಹಿಸಲ್ಪಡಲಾರವು.

"IT RECOMENDS ITSELF"

ALL WHO SUFFER FIND SURE RELIEF.

LITTLE'S

ORIENTAL BALM

THE MOST EFFECTUAL MODERN REMEDY FOR PAIN.

ಲಿಟಲ್ ಎಂಬವರಿಂದ ತಯಾರುಮಾಡಲ್ಪಟ್ಟ "ಬಾಧಕಸಂಹಾರಿಣೀ" ಎಂಬ ಪೂರ್ವದೇಶ ಸಂಬಂಧವಾದ ಅಮೂಲ್ಯ ತೈಲವು ಸ್ವಶಕ್ತಿ ಪ್ರದರ್ಶಕವಾದದ್ದು, ಮತ್ತು ಸಕಲವಾದ ನವೀನ ಚಿಕಿತ್ಸಾರೂಪವಾದ ಔಷಧವು. ಇದರಿಂದ ಸಕಲ ವಾತರೋಗಗಳೂ, ವಾತಸಂಬಂಧಗಳಾದ ಸಂಧಿಬಂಧಗಳೂ ನಿವೃತ್ತಿಯಾಗುವವು. ಮುಖ್ಯವಾಗಿ ಬಹುಕಾಲಿಕವಾದ ವಾತರೋಗಗಳು, ಕಾಸ, ಗಂಟಿನಲ್ಲಿ ಉರಿ, ನಡುಮನೋವು, ಕೀಲುವಾಯು, ಕಟಿವಾಯು, ಉಳುಕು ನೋವು, ತಲೆನೋವು, ತಿಮಿರವಾಯು ಮುಂತಾದ ರೋಗಗಳಿಗೆಲ್ಲ ನಿಸ್ಸಂದೇಹವಾಗಿ ಬಹಳ ಪ್ರಯೋಜನವನ್ನುಂಟುಮಾಡತಕ್ಕದ್ದು. ಈ ತೈಲವನ್ನು ನೋವುಳ್ಳ ಸ್ಥಳಗಳಲ್ಲಿ ಕೆಲವಾವರ್ತಿ ಸವರಿ ಶಾಖವುಂಟಾಗುವಂತೆ ಚೆನ್ನಾಗಿ ತಿಕ್ಕಿದಲ್ಲಿ ಸಹಜಗಳಾದ ಎಲ್ಲಾ ನೋವುಗಳನ್ನು ನಿವೃತ್ತಿ ಮಾಡುವಂತಾ ಉತ್ತಮ ತೈಲವಾಗಿರುತ್ತದೆ. ಸಕೃತ್ಸೇವನೆಯಿಂದಲೇ ಅರತಲೆನೋವು ಮತ್ತು ಜೋಮು ಕಟ್ಟಾಂಗ ನಿವೃತ್ತಿಯಾಗುವದು. ಗಂಟಿನಲ್ಲಿಉಂಟಾಗುವ ಉರಿ ಅಥವಾ ವ್ರಣಗಳಿಗೆ ಈ ತೈಲವು ಅದ್ಭುತವಾದ ಮತ್ತು ಶೀಘ್ರವಾದ ಸಂಪೂರ್ಣ ಗುಣವನ್ನುಂಟುಮಾಡುವದು. ಅದ್ಭುತವಾದ ಈ ಔಷಧವನ್ನು ಅಭ್ಯಾಸಮಾಡಿದಲ್ಲಿ ಅದರ ಪ್ರಯೋಜನವು ಸ್ವತಃವೇ ವ್ಯಕ್ತವಾಗುವದು. ಈ ತೈಲವು ಶೀತಗಾಳಿ ಮುಂತಾದವುಗಳಿಗೊಳಗಾಗಿ ಸಂಚರಿಸುವಂತಾ ಪ್ರಯಾಣಸ್ಥರು, ಬೇಟೆಯಾಡುವವರು, ದೇಶಾಟನ ಮಾಡುವವರು, ಮುಂತಾದವರಿಗೆಲ್ಲ ಅಮೂಲ್ಯವಾದದ್ದು.

ಪರಿಶೀಲಕರ ಅಭಿಪ್ರಾಯವು.

ಐರ್ಲ್ಯಾಂಡ್ ದೇಶದ ಫಾರ್ಮಸ್ಯೂಟಿಕಲ್ ಸೊಸೈಟಿಯೆಂಬ ಔಷಧಶಾಲೆಯ ಪ್ರೆಸಿಡೆಂಟರಾಗಿಯೂ, ಸದರೀ ದೇಶದ ಜಿಯಾಲಜಿಕಲ್ ಸೊಸೈಟಿ ಎಂಬ ಭೂಸ್ವಭಾವ ಪರೀಕ್ಷಕ ಸಮಾಜದ ಮೆಂಬರರಾಗಿಯೂ, "ಮಿನರಲ್ ವಾಟರ್ಸ್ ಆಫ್ ಯೂರಪ್" ಎಂಬ ಗ್ರಂಥಕರ್ತರಾಗಿಯೂ, ರಸಾಯನ ವಿಷಯಕವಾದ ಅನೇಕ ಲೇಖನಾಧಿಕಾರಿಯಾಗಿಯೂ, ಇರುವ ಪ್ರೊಫೆಸರ್ ಟಿಚ್‌ಬೋರ್ನ್ (C. R. TICHBORNE, L. L. D., F. C. S., M. R. I. A.,) ಎಂಬುವರು ಅಭಿಪ್ರಾಯ ಪಟ್ಟಿರುತ್ತಾರೇನೆಂದರೆ—ಲಿಟಲ್‌ರವರ ಓರಿಯಂಟಲ್ ತೈಲವನ್ನು ಚೆನ್ನಾಗಿ ಪರೀಕ್ಷಿಸಿದ್ದರಿಂದ ಇದು ಬಹುವಿಧ ಮೂಲಿಕೆಗಳ ಸಮ್ಮಿಶ್ರಣವಾದ ತೈಲವೆಂದು ಗೊತ್ತಾಗಿದೆ. ಇದು ಹೊರಗೆ ಉಪಯೋಗಿಸಲ್ಪಡುವಾಗ ಶೀಘ್ರವಾಗಿ ನಿರುಪದ್ರವಕರವಾದವುಗಳಾಗಿ, ಸಿದ್ಧವಾಗಿ ಸ್ಥೂಲ ರೋಗ ನಿವಾರಕ ಶಕ್ತಿಯುಳ್ಳದ್ದಾಗಿರುತ್ತದೆ. ಈ ಮಿಶ್ರಿತ ದ್ರವ್ಯಗಳನ್ನು ಸ್ಥಿತಿಗೆ ತಕ್ಕ ತರತಮ್ಯವಾಗಿರುವದರಿಂದ ಇದು ಯಾವ ತರದ ರೋಗಗಳಿಗೆ ಉಪಯುಕ್ತವೆಂದು ತಿಳಿಸಲ್ಪಟ್ಟಿದೆಯೋ ಸದರೀ ರೋಗಗಳಲ್ಲಿ ಅದರ ಪ್ರಯೋಜನವು ವ್ಯಕ್ತವಾಗುವದು. ಈ ತೈಲವು ಸಂಪೂರ್ಣ ಚಾತುರ್ಯದಿಂದ ತಯಾರುಮಾಡಲ್ಪಟ್ಟಿರುತ್ತದೆ.

ಇದರ ಕ್ರಯ—ಸೀಸೆ ಒಂದಕ್ಕೆ ೧ ರೂಪಾಯಿ.

ಇದು ಮಿಸ್ಟರ್ ಔಷಧ ಶಾಲೆಯಲ್ಲಿಯೂ, ಮದರಾಸ್ ಸಂಬುದಾಸ್ ಬೀದಿಯಲ್ಲಿ ೨೦ನೇ ನಂಬರ್ ಮನೆಯೊಳಗಿರುವ, ಮಿ. ಎ. ಸಿ. ಬೆರ್ರಿಮನ್ ಯವರಲ್ಲಿಯೂ, ಈ ಪೂರದಲ್ಲಿರುವ ಇವರ ಏಜಂಟ್‌ಗಳಾದ ಜೆ. ವೆಸ್ಟ್ ಯವರ ಕಂಪೆನಿಯಲ್ಲಿಯೂ, ಮಿ. ಕೆಪ್ಟನ್ ಅಂಡ್ ಕಂಪೆನಿಯವರಲ್ಲಿಯೂ, ರಿಗ್ಸ್‌ಯವರ ಕಂಪೆನಿಯಲ್ಲಿಯೂ ದೊರೆಯುವದು.

AGENTS.—Messrs. J. WEST, *Chemist, &c., Bangalore.*
CAPTAIN & Co. *Chemists, Bangalore.*
RIGGS & Co, *Chemists, Bangalore*; and of
MAHOMED YOUSOFF AND SONS, *The Cash Bazar, Bangalore*
A. C. BERRYMAN & Co.,
20 *Sambodoss Street Madras.*

NOTICE.

VAIDYASARA SANGRAHA

A TREATISE ON THE PRINCIPLES OF

HINDU MEDICINE.

☞ *Price including Postage Rs* 5 6 0

ವೈದ್ಯಸಾರ ಸಂಗ್ರಹ.

ಈಗ್ರಂಥಾಪೇಕ್ಷೆಯುಳ್ಳವರು ಮೊಬಲಗಿನೊಡನೆ ಕೆಳಗೆ ರುಜುಮಾಡಿರತಕ್ಕವರ ಹೆಸರಿಗೆ ಬರೆದುಕೊಂಡರೆ ಪುಸ್ತಕ ಕೂಡಲೇ ಕಳುಹಿಸಲ್ಪಡುವದು. ಮೊಬಲಗು ಇಲ್ಲದ ದರಖಾಸ್ತುಗಳಿಗೆ ಸುತರಾಂ ನಿಗೇಕೊಡಲ್ಪಡಲಾರದು.

ಇದರಕ್ರಯ ... ... ರೂ॥ ೫—೨—೦

ಪ್ಯಾಕಿಂಗ ಮತ್ತು ಅಂಚೆಹಾಸಲ್, ೦—೬—೦

ಟಿ. ಬಿ. ವೆಂಕಟಾಚಾರ್,

ಆಸ್ಪತ್ರೆಸ್ಟೋರ್ಸ್ ಬೆಂಗಳೂರು.

ವಿಶೇಷ ವರ್ತಮಾನ.

ಪೂನೆ ಚಿತ್ರಶಾಲೆಯಲ್ಲಿ ಸ್ಥಾಪಿಸಲ್ಪಟ್ಟಿರುವ ಹೊಸಕೆಲಸಗಳಾಯಿತ್ತಿದ್ದು, ಹಿಂದೂ ದೇವತೆಗಳು, ಚರಿತ್ರೆಗಳ ಮೂಲಕ ಪ್ರಸಿದ್ಧಿಯಂ ಪಡೆದವರ, ಸುಂದರಿಗಳಾದ ನೇಟಿವ್ ಹೆಂಗಸರ ವಗೈರೆದ ಬಣ್ಣದ ತಸ್ವೀರ್‌ಗಳು ತಯಾರಾಗುತ್ತಿವೆ. ಇವುಗಳ ಕೆಟಲಾಗ್ ಯ ನಮೂನೆಯನ್ನು ಯೋಚಿಸಲಾಗ ಕ್ರಯ ಬಹಳ ಅಲ್ಪವಾಗಿದೆ. ಬೇಕಾದವರಿಗೆ ಕ್ರಯದ ಪಟ್ಟಿ ಕಳುಹಿಸಲ್ಪಡುವದು.

ಪೂನೆ ಚಿತ್ರಶಾಲೆಯ ಮ್ಯಾನೇಜರ್.

ದಕ್ಷಿಣ ಮಹಾರಾಷ್ಟ್ರ ರೈಲ್ವೆ.

ಪ್ರಕಟನೆ.

ಸನ್ ೧೮೮೮ ನೇ ಇಸವಿ ೧ನೇ ನವಂಬರ್ ಆರಭ್ಯ ದಕ್ಷಿಣ ಮಹಾರಾಷ್ಟ್ರ ರೈಲ್ವೆಯ ಒಂದು ಸ್ಟೇಷನ್ನಿಂದ ಮತ್ತೊಂದು ಸ್ಟೇಷನ್ನಿಗೆ ರವಾನಿಸಲ್ಪಡುವ ಮಾಲಿನ ಮೇಲೆ ದರ ಮಣಕ್ಕೆ ೩ ಪೈ ಯಂತೆಯೂ ಮತ್ತು ದಕ್ಷಿಣ ಮಹಾರಾಷ್ಟ್ರ ರೈಲ್ವೆಯ ಸ್ಟೇಷನ್ನಿಂದ ಇತರ ರೈಲ್ವೆ ಸ್ಟೇಷನ್‌ಗಳಿಗೆ ರವಾನಿಸಲ್ಪಡುವ ಅಥವಾ ಇತರ ರೈಲ್ವೆ ಸ್ಟೇಷನ್‌ಗಳಿಂದ ತರಿಸಲ್ಪಡುವ ಮಾಲಿನ ಮೇಲೆ ದರ ಮಣಕ್ಕೆ ೩ ಪೈ ಯಂತೆಯೂ ಟರಮಿನಲ್ ಚಾರ್ಜು ವಸೂಲು ಮಾಡಲಾಗುವದು. ಈ ಟರಮಿನಲ್ ಚಾರ್ಜನ್ನು ಸಾಮಾನಿಗೆ ಕೊಡಬೇಕಾದ ಹಾಸಲಿನ ಹೊರ್ತು ಕೊಡತಕ್ಕದ್ದು. ದಕ್ಷಿಣ ಮಹಾರಾಷ್ಟ್ರ ರೈಲ್ವೆ ಸ್ಟೇಷನ್ನಿಂದ ಇತರರೈಲ್ವೆಸ್ಟೇಷನಿಗಾಗಲಿ, ಅಥವಾ ಇತರ ರೈಲ್ವೆ ಸ್ಟೇಷನ್ನಿಂದ ಈರೈಲ್ವೆ ಸ್ಟೇಷನಿಗಾಗಲಿ ಕಳುಹಿಸುವ ಮತ್ತು ತರಿಸುವ ಸಾಮಾನುಗಳಿಗೆ ಈ ರೈಲ್ವೆಗೆ ಕೊಡತಕ್ಕ ಟರಮಿನಲ್ ಚಾರ್ಜಲ್ಲದೆ ಇತರ ರೈಲ್ವೆಯ ಟರಮಿನಲ್ ಚಾರ್ಜು ಸಹ ಕೊಡಬೇಕಾಗುವದು. ಮಾಲೀಕರೇ ಗಾಡಿಗಳಲ್ಲಿ ಹೇರತಕ್ಕಂಥ ಮತ್ತು ಇಳಿಸತಕ್ಕಂಥಾ ಸಾಮಾನುಗಳಿಗೆ ಸಹ ಈ ಟರಮಿನಲ್ ಚಾರ್ಜು ಕೊಡಬೇಕು.

ಟ್ರಾಫಿಕ್ ಮ್ಯಾನೇಜರರಾಫೀಸ್, ಧಾರವಾಡ, ತಾ॥ ೨೦—೧೦—೧೮೮೮. } ಜೇಮ್ಸ್ ಕೀಫ್, ಟ್ರಾಫಿಕ್ ಮ್ಯಾನೇಜರ್.

ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA.

MONDAY, OCTOBER 29, 1888.

೧೮೮೮ನೇ ಅಕ್ಟೋಬರ್ ತಾ॥ ೨೯ನೇ ಸೋಮವಾರ.

A WORD TO THE MYSORE VRITTANTA CHINTAMANY.

ಈ ಸಂಸ್ಥಾನದ ದಿವಾನರಾದ ಮ॥ ಶೇಷಾದ್ರಿ ಅಯ್ಯರ್, ಸಿ. ಎಸ್. ಐ. ಯವರಿಗೆ ಈಚೆಗೆ ಕೊಡಲ್ಪಟ್ಟ ೨,೦೦೦ ರೂಪಾಯಿಗಳ ಜಾಸ್ತೀ ಸಂಬಳದ ವಿಷಯದಲ್ಲಿ ಸ್ವದೇಶಾನ್ಯದೇಶ ವೃತ್ತಾಂತಪತ್ರಿಕೆಗಳು ತತ್ತದ್ಭಾವನಾನುಗುಣವಾಗಿ ಕೆಲವು ಪ್ರಶಂಸಿಸಿ, ಮಹಾರಾಜರವರ ಉಚಿತಜ್ಞತೆಯಂ ಬಹಳವಾಗಿ ಕೊಂಡಾಡಿದವು. ಇನ್ನು ಕೆಲವು ಪತ್ರಿಕೆಗಳು ತಮಗೆ ತೋರಿದ ಕೆಲವು ಕಾರಣಗಳನ್ನು ನಮೂದಿಸಿ ವಿಶೇಷವಾಗಿ ಆಕ್ಷೇಪಿಸಿದವು. ಪರಂತು ಸದರೀ ಪತ್ರಿಕೆಗಳು ತಮಗೆ ಲಭ್ಯವಾಗಿರುವ ಅಧಿಕಾರ ಸ್ವಾತಂತ್ರ್ಯ ಸ್ವರೂಪಗಳಂ ಚೆನ್ನಾಗಿ ಬಲ್ಲವಾದಕಾರಣ ಅವು ತಮ್ಮ ಹದ್ದನ್ನು ಮೀರಿ ಪ್ರವರ್ತಿಸದೆ ಇದ್ದವು. ಹೀಗಿದ್ದಾಗ್ಯೂ ನಮ್ಮ ಸಹಚಾರಿಣಿಯಾದ ಮೈಸೂರು ವೃತ್ತಾಂತ ಚಿಂತಾಮಣಿ ಪತ್ರಿಕೆ ಮಾತ್ರ ಉಚ್ಛೃಂಖಲವಾಗಿ ದಿವಾನರವರ ಸಂಬಳ ಇಜಾಫೆಯಂ ಕುರಿತು ಆಕ್ಷೇಪಿಸುತ್ತ ಅವರ ಸ್ವಂತ ವ್ಯಾಪಾರಗಳನ್ನು ಮಧ್ಯೆ ನಮೂದ್ ಮಾಡಿ ಅನುಚಿತ ಶಬ್ದಗಳಿಂದ ಅಸಂಬದ್ಧವಾಗಿ ಮಿತ್ತು ಮೀರಿ ಇಲ್ಲದೆ

ಗತ ಎರಡು ವಾರಗಳಿಂದ ದೂಷಿಸುತಲಿರುವದು ನೋಡಲಾಗಿ ಇದರಡಿ ಕಂಡ ಕೆಲವು ಅಂಶಗಳನ್ನು ಸದರೀಪತ್ರಿಕೆಗೆತಿಳಿಸಲಿಕ್ಕೆ ಇದೊಂದುಒಳ್ಳೆಯ ಸಂದರ್ಭವೆಂದು ಭಾವಿಸಿ, ಹಿತ ಚಿಂತನೆಯೊದನೆ ಅರುಹುವ ನಮ್ಮ ಮಾತುಗಳನ್ನದು ಯುಕ್ತವಾಗಿ ಗ್ರಹಿಸಬಹುದೆಂದೆಣಿಸುತ್ತೇವೆ. ಈಚೆಗೆ ದಿವಾನರವರಿಗೆ ಕೊಡಲ್ಪಟ್ಟ ಇಜಾಫೆಯು ನ್ಯಾಯವಾದದ್ದೆ, ಅದಕ್ಕೆ ಅವರು ಅರ್ಹರಾದವರೇ, ಅವರು ಅದು ಪಡೆಯಲಿಕ್ಕೆ ಯೋಗ್ಯವಾದಷ್ಟು ಮೆಹನ್ನತ್ ಏನಾದರೂ ಮಾಡಿ ಇಲ್ಲಿದಾರೆಯೇ ಎಂಬ ಏವಮಾದಿ ವಿಷಯಗಳನ್ನು ನಿರೂಪಿಸುವದಕ್ಕೆಪೂರ್ವಭಾವಿಯಾಗಿ, ವೃತ್ತಾಂತ ಪತ್ರಿಕೆಗಳಿಗೂಗವರ್ನಮೆಂಟನವರಿಗೂ ಇರುವ ಪರಸ್ಪರ ಸಂಬಂಧವನ್ನೂ, ಮೊದಲನೆಯವರು ಎರಡನೆಯವರ ಆಡಳಿತವನ್ನು ಕುರಿತು ಎಷ್ಟುಮಟ್ಟಿಗೆ ವಿಚಾರ ಮಾಡಲಿಕ್ಕೆ ಅಧಿಕಾರ ವುಳ್ಳವರಾಗಿರುತ್ತಾರೆಂಬದನ್ನೂ ಚಿಂತಾಮಣಿಗೆ ತಿಳಿಯಪಡಿಸುವೆವು, ಹ್ಯಾಗಂದರೆ,—ಲೋಕದಲ್ಲಿ ಮನುಷ್ಯರು ಪೋಷ್ಯ ಪೋಷಕರೆಂಬದಾಗಿಯೂ, ರಕ್ಷ್ಯ ರಕ್ಷಕರೆಂಬದಾಗಿಯೂ, ಯಾಚಕ ದಾತರೆಂಬದಾಗಿಯೂ, ದರಿದ್ರ ಧನಿಕರೆಂಬದಾಗಿಯೂ, ಬೋಧ್ಯ ಬೋಧಕರೆಂಬದಾಗಿಯೂ, ಭೀತತ್ರಾತರೆಂಬದಾಗಿಯೂ, ಅಶಕ್ತ ಶಕ್ತರೆಂಬದಾಗಿಯೂ, ನಾನಾ ಭೇದಗಳುಳ್ಳವರಾಗಿರುತ್ತಾರೆಯಷ್ಟೆ. ಇವರುಗಳ ಪೈಕಿ ಅನುಪನ್ನರಾದ ಪೋಷ್ಯಾದಿ ಜನಗಳು ಶಕ್ತ್ಯುಪಪತ್ತಿಯುಳ್ಳ ಪೋಷಕಾದಿಗಳಿಗೆ ತಮ್ಮ ಅಪೇಕ್ಷಿತ ವಿಷಯಗಳಂ ತಿಳಿಯಪಡಿಸಿ ಅವರುಗಳಿಂದಭೀಷ್ಟ ಪ್ರಯೋಜನಗಳಂ ಪಡೆಯತಕ್ಕದ್ದು ಸಕಲಜನ ಸಾಧಾರಣವಾಗಿರುವದರಿಂದ ಅದಕ್ಕೆ ವೃತ್ತಾಂತ ಪತ್ರಿಕೆಯೆಂಬದು ಒಂದು ಸಾಧನ ರೂಪವಾಗಿ ಅಂಗೀಕರಿಸಲ್ಪಟ್ಟಿರುತಿದೆ. ಸದರೀ ಪತ್ರಿಕೆಯು ಯಾವಾಗಲು ಬಹುಜನ ಪಕ್ಷವನ್ನವಲಂಬಿಸಿದ್ದಾಗಿಯೂ, ನಿಜವಾದ ಅವರ ಅಭಿಪ್ರಾಯವನ್ನು ಹೊರಪಡಿಸತಕ್ಕದ್ದಾಗಿಯೂ, ಪರಸ್ಪರ ಅನ್ಯೋನ್ಯೈಕಮತ್ಯಾದಿ ಗುಣಗಳಂ ವೃದ್ಧಿಪಡಿಸತಕ್ಕದ್ದಾಗಿಯೂ, ಬುದ್ಧಿಪ್ರಮಾದಾದಿಗಳಿಂದುಂಟಾಗಬಹುದಾದ ಭವಿಷ್ಯದನರ್ಥಗಳನ್ನೂ, ಅವುಗಳ ಪರ್ಯವಸಾನವನ್ನೂ ಮುಂದಾಗಿ ವಿಚಾರ ಮಾಡಿ ಮೃದು ಮಧುರ ವಾಕ್ಯಗಳಿಂದ ಬೋಧಿಸತಕ್ಕಂತಾ ಆಪ್ತಸ್ವರೂಪವುಳ್ಳದ್ದಾಗಿಯೂ ಇರುತಿದೆ. ಮತ್ತು ಅದು ಲೇಖಕರ ಗಂಭೀರವಾದ ತಾತ್ಪರ್ಯವನ್ನೂ, ಅವರಕವಿತಾ ಸಾಮರ್ಥ್ಯವನ್ನೂ, ವಾಕ್ಯರಚನಾ ಕೌಶಲ್ಯವನ್ನೂ, ಶಬ್ದ ಪ್ರಯೋಗಾಲಂಕಾರ ಕ್ರಮಗಳನ್ನೂ ಸ್ಫುಟವಾಗಿ ಪ್ರಕಟಿಸುವದಲ್ಲದೆ ತಿಳಿಸತಕ್ಕ ವಿಷಯಗಳನ್ನುಚಿತವಾಗಿಯೂ ಸರಸವಾಗಿಯೂ, ವ್ಯಕ್ತಪಡಿಸುವದರ ಮೂಲಕ ರಸಜ್ಞರಿಗೆ ವಿಶೇಷ ಆನಂದವನ್ನುಂಟುಮಾಡತಕ್ಕದ್ದಾಗಿರುತಿದೆ. ಇಂತಾ ಪತ್ರಿಕೆಗಳಿಂದ ಜನರಿಗೆ ಅನೇಕಕಾರ್ಯಗಳು ಸಿದ್ಧಿಸುವದಲ್ಲದೆ ಅದರಿಂದವರಿಗೆವಿಶೇಷಪ್ರಯೋಜನವೂಉಂಟಾಗುವದು. ಪ್ರಜೆಗಳಿಗೂ ಗವರ್ನಮೆಂಟನವರಿಗೂ ಲೌಕಿಕವಿಷಯಗಳಲ್ಲಿರುವಪಾಲ್ಯಪಾಲಕಸಂಬಂಧವನ್ನಾಲೋಚಿಸಿನೋಡಿದರೆ, ನಾವ್ಯಯಾವಾಗಲೂ ನಮ್ಮ ಅಭೀಷ್ಟವಿಷಯಗಳನ್ನು ಪಾಲಕರಿಗೆ ಉಚಿತರೀತಿಯಿಂದ ತಿಳಿಸಲಿಕ್ಕೂ, ಹಾಗೆನಾವು ತಿಳಿಸಿದ್ದು ಉಪೇಕ್ಷಿಸಲ್ಪಟ್ಟು ನೆರವೇರದಿದ್ದರೆ ಅದರ ಆವಶ್ಯಕತೆಯಂ ಮರಳಿ ಮರಳಿ ಅವರಿಗೆ ವ್ಯಕ್ತಪಡಿಸಿ ಕೇಳಿಕೊಳ್ಳಲಿಕ್ಕೂ, ನಮ್ಮ ಯೋಗಕ್ಷೇಮಗಳಿಗೆ ಕಾರಣಭೂತರಾದ ಅರಸರು ಕದಾಚಿತ್ಪ್ರಮಾದವಶಾತ್ ವಿರುದ್ಧ ಮಾರ್ಗ ಪ್ರವರ್ತಕರಾದರೆ ಆಗ ಅವರಿಗೆ ಅದರಿಂದುಂಟಾಗುವ ನಷ್ಟವನ್ನು ನಿರೂಪಿಸಿ ಕ್ರಮ ಪಡಿಸಿಕೊಳ್ಳಲಿಕ್ಕೂ, ಗವರ್ನಮೆಂಟನವರು ನಡೆಸುವ ನಡವಳಿತ ವಿಷಯದಲ್ಲಿ ಪ್ರಜೆಗಳಿಗೆ ಯಾವಾಗಲಾದರುಅನ್ಯಥಾ ಜ್ಞಾನ ವುಂಟಾದರೆಅದನ್ನುಕ್ರಮಪಡಿಸಲಿಕ್ಕೂ ನಮಗೆ ಸಂಪೂರ್ಣಬಾಧ್ಯತೆ ನೆಲಗೊಂಡಿರುತಿದೆ. ಪರಂತು ಸದರೀ ಬಾಧ್ಯತೆಗೂ ಅರಸರ ಕೀರ್ತಿ ಪ್ರಾಶಸ್ತ್ಯಗಳಿಗೂ ಲೋಪವನ್ನುಂಟುಮಾಡುವಂತಾ ಅಗೌರವ ಕರಗಳಾದ ಮಾತುಗಳನ್ನುಪಯೋಗಿಸಲಿಕ್ಕೂ, ತನ್ಮೂಲಕ ನಮಗೆಸಂಬಂಧಿಸದ ವಿಷಯಗಳನ್ನೆಲ್ಲ ಮನಸ್ವೀ ಲಕ್ಷೀಪಿಸುತ ವ್ಯರ್ಥ ಮನಃ ಕಾಲುಷ್ಯವನ್ನುಂಟುಮಾಡಲಿಕ್ಕೂ ಸ್ವಲ್ಪವೂ ಸ್ವಾತಂತ್ರ್ಯವಿರುವದಿಲ್ಲವು. ಇಂತಾ ಸ್ವಾತಂತ್ರ್ಯಸ್ವರೂಪವನ್ನರಿಯದೆ ಪರುಷವಾಕ್ಯಗಳಿಂದ ಗವರ್ನಮೆಂಟನವರ ವರ್ತನೆಗಳನ್ನನವರತ ದೂಷಿಸುವ ಉತ್ತರದೇಶದ ಕೆಲವು ನೇಟಿವ್ ವೃತ್ತಾಂತ ಪತ್ರಿಕೆಗಳ ಲೇಖನಾಭಿಪ್ರಾಯಗಳ ವಿಷಯದಲ್ಲಿ ಗವರ್ನಮೆಂಟನವರು ಪಡೆದಿರುವ ತಾತ್ಪರ್ಯವೂ, ಅವುಗಳ ವಾಗ್ಬಂಧನಕ್ಕಾಗಿ ಅವರು ಬಹಿರಂಗವಾಗಿ ಮಾಡಿದ ಪ್ರಯತ್ನಗಳೂ, ಅವುಗಳ ವರ್ತನೆಗಳನ್ನವರು ಜಾಗರೂಕತೆಯೊಡನೆ ಅದ್ಯಾಪಿ ನೋಡುತಲಿರುವದೂ ಪ್ರಸಿದ್ಧ ವಿಷಯಗಳಾಗಿರುವದರಿಂದ ಅವು ಚಿಂತಾಮಣಿಗೂ ತಿಳಿಯದೆ ಹೋಗಿರಲಾರದು. ಆದಾಗ್ಯೂ ಸದರೀ ಪತ್ರಿಕೆಯು, ತನ್ನಕರ್ತವ್ಯವನ್ನರಿಯದೆಯೋ, ಅರಿತಿದ್ದರೂ ಅದಂ ಲಕ್ಷ್ಯಮಾಡದೆಯೋ, ಮತ್ಯಾವತಾತ್ಪರ್ಯದೊಡನೆಯೋ, ಈ ಸಂಸ್ಥಾನದ ಆಡಳಿತ ಕ್ರಮವಂ ಕುರಿತು ಆಕ್ಷೇಪಿಸಿ ಬರೆಯುವಾಗೆಲ್ಲ ದಿವಾನರವರ ಸಹಜಗುಣ ವ್ಯಾಪಾರಗಳಂ ನಿರ್ದೇಶಿಸಿ ನಿಂದಿಸುತ ಅಸಂಬದ್ಧವಾಕ್ಯಗಳಿಂದ ಅವರ ಮನವಂ ನೋಯಿಸಬೇಕಾದದ್ದೇ ತನಗೆ ಮುಖ್ಯ ಕರ್ತವ್ಯವೆಂದು ಭಾವಿಸಿರುವಂತೆ ತೋರುತಿದೆ.

ಯಾವ ಪ್ರಜೆಗಳಿಗೆ ಕ್ಷೇಮವನ್ನುಂಟುಮಾಡಿ ಅವರನ್ನಭಿವೃದ್ಧಿಗೆ ತರಬೇಕೆಂಬ ಉದ್ದೇಶದೊಡನೆ ಈರೀತಿ ಬರೆಯಲ್ಪಡುತಿದೆಯೋ ಅಂತಾ ಬರವಣಿಗೆಯು ಆ ಪ್ರಜೆಗಳಿಗೆ ಸುತ್ತಷ್ಟು ದುಃಖವನ್ನೂ ಸುಕಟವನ್ನೂ ಉಂಟುಮಾಡುವದೆಂಬದರೊಳೇನೂ ಸಂದೇಹವಿಲ್ಲವು. ದಿವಾನರವರಯೋಗಾಭ್ಯಾಸವಿಚಾರವುಲೌಕಿಕವ್ಯವಹಾರಕ್ಕೆಸಂಬಂಧಗ ಅನಾವಶ್ಯಕ ವಿಷಯಕವಾಗಿರುತಿದೆ. ಕರ್ಮಶ್ರದ್ಧೆಯುಳ್ಳವರೆಲ್ಲರೂ ಸರ್ಕಾರಿ ಕೆಲಸದೊಳುದಾಸೀನರಾಗಿರುತ್ತಾರೆಂತಲಾಗಲಿ, ಸರ್ಕಾರಿ ಉದ್ಯೋಗಸ್ಥರೆಲ್ಲರೂ ವೈದಿಕ ಕರ್ಮ ಬಾಹ್ಯರಾಗಿರಬೇಕೆಂತಲಾಗಲಿ ಹೇಳಲಾಗದು. ದೈವಭಕ್ತಿಯೂ ಕರ್ಮಶ್ರದ್ಧೆಯೂ ಉಳ್ಳ ವಿಪ್ರೋತ್ತಮನಾದ ಚಾಣಕ್ಯನು ಸ್ವವೃತ್ತಿಯಂ ಕಾಪಾಡಿಕೊಂಡು ಸಕಲರಾಜತಂತ್ರ ಪಾರಂಗತನಾಗಿ ಚಂದ್ರಗುಪ್ತನಿಗೆ ರಾಜ್ಯವನ್ನಾರ್ಜಿಸಿ ಕೊಟ್ಟದ್ದು ಪ್ರಸಿದ್ಧವಾಗಿಯೇಇದೆ. ಸಾಬಕ್‌ದಿವಾನ್ ಪೂರ್ಣಯ್ಯನವರು ರಾಜಪ್ರತಿನಿಧಿಯಾಗಿ ಈರಾಜ್ಯವಂ ಪಾಲಿಸುತಲಿರುವಾಗ್ಯೆ ತಮ್ಮ ರಾಜಕಾರ್ಯಕ್ಕೆ ಸ್ವಲ್ಪವೂ ಕೊರತೆಯಿಲ್ಲದಂತೆ ತಮ್ಮ ವೈದಿಕ ಕರ್ಮಗಳನ್ನೆಲ್ಲ ಸಾಂಗವಾಗಿ ನಡೆಸುತಲಿದ್ದರೆಂಬವಕ್ಕೆ ಅನೇಕ ದಾಖಲೆಗಳು ಕಂಡುಬರುತಿವೆ. ಆದದರಿಂದ ದಿವಾನರ ಪ್ರಸ್ತಾಪ ಬರುವಾಗಲೆಲ್ಲ ಅವರ ಅಂತರಂಗ ವ್ಯಾಪಾರಗಳನ್ನುದ್ಘಾಟನ ಮಾಡುವದು ಚಿಂತಾಮಣಿಯ ಉಚಿತಜ್ಞತೆಗೆ ಬಹಳ ಕೊರತೆಯಾಗಿರುತಿದೆ. ದಿವಾನರವರು ಕೆಲವುಸಂದರ್ಭಗಳಲ್ಲಿ ಅವಲಂಬಿಸಿದ್ದ ರಾಜ್ಯತಂತ್ರ ಕ್ರಮದವಿಷಯದೊಳು ನಾವು ಭಿನ್ನಾಭಿಪ್ರಾಯವುಳ್ಳವರಾಗಿದ್ದರೂ, ಅವರ ಇತರ ಗುಣಗಳು ನಿರ್ದುಷ್ಟವಾದವೆಂದು ದೃಢವಾಗಿ ಹೇಳುವೆವು. ಈಪ್ರಕಾರಬಾಹ್ಯದಿಂದ ದಿವಾನರವರಿಗೆ ಈಗ ಮೂರು ಪುರುಷಾರ್ಥಗಳು ಲಭಿಸಿರುವಾಗ್ಯೆ ಪ್ರಾಣಿಸಾಮಾನ್ಯಕ್ಕಿರಬೇಕಾದ ತುರೀಯ ಪುರುಷಾರ್ಥಾಭಿಲಾಷೆಯೂ, ತತ್ಸಾಧನೋಪಯುಕ್ತಗಳಾದ ವ್ಯಾಪಾರವೂ ಅದರಿಗುಂಟಾಗಿ ಅವರದಂ ನಿಷ್ಕಲ್ಮಷ ಹೃದಯದೊಡನೆ ಮಾಡುತಲಿರುವದಂ ನೋಡಿ ಸಂತೋಷಿಸಲಿಕ್ಕೆ ಬದಲಾಗಿ ಅದಂ ಪ್ರಬಲ ದೋಷಕ್ಕೇನ ಪರಿಗಣಿಸಿ ಅಲ್ಲಗಳೆಯುವದು ಗೌರವಾನಹವಲ್ಲವೆಂಬದಂ ಚಿಂತಾಮಣಿಯು ಭಾವಿಸದೆ ಹೋದದಕ್ಕಾಗಿ ನಾವು ಬಹಳ ಆಶ್ಚರ್ಯಪಡುತ್ತೇವೆ. ಇದಲ್ಲದೆ ದಿವಾನರವರು ‹‹ರಾಜಕಾರ್ಯಗಳಲ್ಲಿ ಔದಾಸೀನ್ಯವನ್ನು ಕ್ರಮೇಣ ಅವಲಂಬಿಸುತ ಮೆಲ್ಲಮೆಲ್ಲನೆ ಗೃಹಾರಾಮಾದಿಗಳನ್ನು ವೃದ್ಧಿ ಮಾಡುವದರಿಂದ ರಾಜ್ಯವನ್ನು ಚೆನ್ನಾಗಿ ಪರಿಪಾಲಿಸುವದಕ್ಕೆ ಪ್ರ್ಯಾಗೆ ತಾನೆ ಸಮರ್ಥರಾದಾರೆಂದು" ಸದರೀ ಪತ್ರಿಕೆಯು ಬಹಳವಾಗಿ ಚಿಂತಿಸುತಿದೆ. ಸಾಂಸಾರಿಕವೃತ್ತಿಯಿಂದ ನಿವೃತ್ತರಾಗಿ ವಿರಕ್ತಿಯೊಡನೆ ಸರ್ವಸ್ವವು ತ್ಯಜಿಸಿ ಅರಣ್ಯವಾಸ ಮಾಡಬೇಕೆಂದು ದಿವಾನರವರನ್ನು ಕೇಳುವದು ಎಷ್ಟರಮಟ್ಟಿಗೆ ನ್ಯಾಯವಾದದೋ ಚಿಂತಾಮಣಿಯು ಆಕ್ಷೇಪಣೆಯು ಸಹ ಅಷ್ಟರ ನ್ಯಾಯವಾದದ್ದಾಗಿರುತಿದೆ. ಇಂತಾ ಕ್ಷುಲ್ಲಕಾಭಿಪ್ರಾಯವನ್ನು ಪ್ರಾಜ್ಞರು ನಿಜವಾಗಿ ಹೇಳದ ಮಾಡಬಿರುವರೆ! ಪ್ರಕೃತ ದಿವಾನರಲ್ಲಿ ಚಿಂತಾಮಣಿಯ ದೃಷ್ಟ್ಯಾ ರಾಜ್ಯಭಾರಕ್ಕೆ ಆವಶ್ಯಕಗಳಾದ ಸ್ಥೈರ್ಯ ನಿಷ್ಪಕ್ಷಪಾತತೆಪ ಎಂತಾಪಗುಣಗಳೆಲ್ಲವಿದ್ದಾಗ್ಯೂ ಶ್ರೀಮನ್ಮಹಾರಾಜರವರ ದಿವ್ಯ ಚಿತ್ತದಲ್ಲಿ ಮೆ|| ಶೇಷಾದ್ರಿಅಯ್ಯರವರು ಬಹಳ ಸಮರ್ಥರೆಂಬದಾಗಿಯೂ, ಅಕುಟಿಲವಾದ ರಾಜಭಕ್ತಿಯುಳ್ಳವರೆಂಬದಾಗಿಯೂ, ಪ್ರಜಾ ಭಕ್ತಿಯೊಡನೆ ಪ್ರಸಾದ ತಕ್ಕವರೆಂಬದಾಗಿಯೂ, ತಮ್ಮ ಅಭಿಮಾನ ಗೌರವಗಳಿಗೆ ಅರ್ಹರೆಂಬದಾಗಿಯೂ ತೋರಿದ್ದರಿಂದಲೇ ಅವರ ತಲಬನ್ನು ಮೂರುಸಾವಿರ ರೂಪಾಯಿಗಳಿಂದ ೫,೦೦೦ ರೂಪಾಯಿಗಳಿಗೆ ಬಢ್ತೀಮಾಡಿ ಅವರ ಉದ್ಯೋಗ ಕಾಲನಿಯಮವನ್ನು ತಪ್ಪಿಸಿ ತಮಗೆ ಬೇಕಾದ ಕಾಲಪರಿವಿಗೆ ಅವರನ್ನು ನೌಕರಿಯಲ್ಲಿಟ್ಟುಕೊಳ್ಳುವದಕ್ಕೆ ಆವಶ್ಯಕಗಳಾದ ದಸ್ತುರ್ವಾದುಗಳಂ ಮಾಡಿದರು. ಇದಲ್ಲದೆ ಮೈಸೂರು ಸಂಸ್ಥಾನಕ್ಕೂ ಬ್ರಿಟಿಷ್‌ಸರ್ಕಾರಕ್ಕೂ ಇರುವ ಸಂಬಂಧಕ್ಕೆ ಲೋಪವನ್ನುಂಟುಮಾಡದೆಯೂ, ಹಿಂದಿನ ಬ್ರಿಟಿಷ್ ಆಳ್ವಿಕೆಯಲ್ಲಿ ನೆಲಗೊಳಿಸಲ್ಪಟ್ಟದ್ದ ಕ್ರಮಗಳನ್ನುಲ್ಲಂಘಿಸದೆಯೂ, ದೇಶದ ಹುಟ್ಟುವಳಿಯನ್ನು ಕೋಟಿ ಐದಾರುಲಕ್ಷದಿಂದ ಕೋಟಿ ಮೂವತ್ತು ಲಕ್ಷ ರೂಪಾಯಿಗಳ ವರಿವಿಗೆ ಹೆಚ್ಚಿ ಮಾಡುತಬಂದದ್ದು ಬ್ರಿಟಿಷ್ ಗವರ್ನಮೆಂಟನವರ ಪ್ರಶಂಸೆಗೆ ವಿಷಯವಾಗುತಲ್ಲದೆ ಅವರಿಗೆ ಸಿ. ಎಸ್. ಐ. ಎಂಬ ಅಸಾಧಾರಣವಾದ ಅಲ್ಕಾಬನ್ನು ಸಹ ಅವರು ಅಪ್ರಾರ್ಥಿತವಾಗಿ ಕೊಟ್ಟರು. ಇದಕ್ಕಿಂತ ನಿದರ್ಶನವು ಬೇರೇನು ಬೇಕಾಗಿವೆ. ‹‹ಪ್ರತಿನಿಧಿಗಳೆಲ್ಲರೂ ಸೇರಿ ಈ ವಿಷಯಗಳೆಲ್ಲ ವಾಸ್ತವವೆಂದು ತೋರಿಸಿದರೆ ಈದಿವಾನರವರಿಗೆ ದರ್ಕಾರಮಾಡಿಸಿ ಯೋಗ್ಯರಾದವರನ್ನು ಇನ್ಯಾರನ್ನಾದರೂ ಈಪದವಿಗೆ ನಿಲ್ಲಿಸಬೇಕೆಂದು ಶ್ರೀಮನ್ಮಹಾರಾಜರವರಿಗೆ ವಿಜ್ಞಾಪನೆ ಮಾಡಿಕೊಳ್ಳುವದು ಅತ್ಯಂತ ಆವಶ್ಯಕ"ವೆಂದು ಚಿಂತಾಮಣಿಯು ಸೂಚಿಸುತಿದೆ. ಪ್ರಕೃತ ದಿವಾನರು ಗೃಹಾರಾಮಾದಿಗಳನ್ನು ಮಾಡಿಕೊಂಡದ್ದೂ, ಬ್ರಾಹ್ಮಣ ಕೃತ್ಯಗಳಾದ ವೈದಿಕ ಕರ್ಮಗಳನ್ನಾಚರಿಸುತಲಿರುವದೂ, ಅವರ ಯೋಗ್ಯತೆಗೆ ಬಹಳ ಕೊರತೆಯೆಂಬ ಭಾವ ತಲೆದೋರಿದ್ದರಿಂದಲೇ ಚಿಂತಾಮಣಿಯು ಅವರನ್ನು ಕೆಲಸದಿಂದ ನಿವೃತ್ತಿಮಾಡುವಂತೆ ಮಹಾರಾಜರವರನ್ನು ಕೇಳಿಕೊಳ್ಳಬೇಕೆಂದು ಎಚ್ಚರಿಸುತಿದೆ. ಹಾಗಾಗದೆ ಐಹಿಕ ಭೋಗಭಾಗ್ಯಗಳನ್ನಾಶಿಸದೆ ದಂಡ ಕಮಂಡಲಗಳಂಧರಿಸಿ ಭೈಕ್ಷ್ಯಕವೃತ್ತಿಯಂ ಕೈಗೊಂಡು ಅರಣ್ಯವಾಸವಂ ಮಾಡಬೇಕೆಂಬ ಅಪೇಕ್ಷೆಯುಳ್ಳವರ್ಯಾರಾದರೂ ಈ ಸಂಸ್ಥಾನದ ದಿವಾನಗಿರಿಗೆ ಬರುವದಕ್ಕೆ ಇಷ್ಟಪಟ್ಟವರಾಗಿದ್ದರೆ ಅಂತಾ ಗುಣಾಢ್ಯರಂ ಚಿಂತಾಮಣಿಯು ತನ್ನ ದಿವ್ಯದೃಷ್ಟಿಯಿಂದ ಹುಡಿಕಿ ಕರತರುವಾಗ್ಯೆ ಜನರೆಲ್ಲರೂ ಸೇರಿ ಅವರಿಗಾಗಿ ದಿವಾನಗಿರಿಯನ್ನು ಖಾಲೀ ಮಾಡುವಂತೆ ಮೆ|| ಶೇಷಾದ್ರಿ ಅಯ್ಯರವರನ್ನು ಜನಗಳೆಲ್ಲರೂ ಸೇರಿ ಪ್ರಾರ್ಥಿಸಿಕೊಳ್ಳಬಹುದೆಂದು ತೋರುತದೆ. ಅಂತಾ ವಿರಕ್ತನಾದ ಪುರುಷನು ಲೌಕಿಕ ಸುಖ ಸಂತೋಷಗಳನ್ಯಾಕೆ ಆಶಿಸುವನೋ ನಾವರಿಯೆವು. ಮುಖ್ಯವಾಗಿ ಪತ್ರಿಕಾ ಲೇಖಕರಾದವರು ತಮ್ಮ ಗೌರವವನ್ನೂ ತಮ್ಮ ಲೇಖನಗೌರವವನ್ನೂ, ತಾವು ತಿಳಿಸತಕ್ಕ ವಿಷಯ ಗೌರವವನ್ನೂ ಚೆನ್ನಾಗಿ ಪರ್ಯಾಲೋಚಿಸಬೇಕಾದ್ದು ಆವಶ್ಯಕವಾಗಿರುತಿದೆ. ಹಾಗಿಲ್ಲದಮೇಲೆಅವರ ಮಾತುಗಳಲ್ಲಿ ಅನ್ಯರಿಗೆ ಸ್ವಲ್ಪವೂ ಗೌರವವುಂಟಾಗಲಾರದು. ಮತ್ತುಅದರಿಂದಉದ್ದಿಷ್ಟಪ್ರಯೋಜನಗಳು ಸಿದ್ಧಿಸಲಾರದೆಂಬದು ಚಿಂತಾಮಣಿಗೆ ತೋರದ ವಿಷಯವಲ್ಲವು.

MORAL GEMS FROM THE MAHABHARATA.

ಮಹಾಭಾರತ ನೀತಿರತ್ನಾವಳಿ.

VII.—On Bad men —ದುರ್ಜನರು.

The Hindu Excelsior Series No. IX

(ಅಕ್ಟೋಬರ್ ೧ನೇ ತಾರೀಖಿನ ಪತ್ರಿಕೆಯ ಶೇಷವು)

ಶ್ಲೋ|| ಧ್ರುಂವಾಸೋಯಹಿನಿಂದಂತಿವೃತ್ತ್ಯ
ನಾಧಿಜನೇನಚ ನಕೇನುನಿವಸೇತ್ಪ್ರಾ
ಜ್ಞಃಶ್ರೇಯೋರ್ಥೀನಪಬುದ್ಧಿಮಾ ||೨೮||

ಅ|| ಲೋಕದಲ್ಲಿ ಶ್ರೇಯಸ್ಸನ್ನು ಕೋರತಕ್ಕ ಪ್ರಾಜ್ಞನಾದ ಪುರುಷನು, ವೃತ್ತಿಯಲ್ಲಿಯೂ ಅಭಿಮಾನ್ಯದಲ್ಲಿಯೂ ನಿಕೃಷ್ಟನಾದ ಮತ್ತು ಪಾಪಕರ್ಮದೊಳಾಸಕ್ತಿಯುಳ್ಳವನ ಸಹವಾಸವನ್ನು ಮಾಡಲಾಗದು. ಅಂದರೆ, ಒಬ್ಬನ ಸ್ನೇಹವಂ ಕೋರತಕ್ಕ ಪುರುಷನು, ಆತನ ಗುಣವಂ ಪ್ರಥಮತಃ ಪರಿಶೋಧಿಸಿ ಅದು ನಿರ್ದುಷ್ಟವೆಂದು ತೋರಬಂದ ಬಳಿಕ ಅವನ ಮೈತ್ರಿಯಂ ವೃದ್ಧಿಗೊಳಿಸಬೇಕೆಂದು ಭಾವವು.

ಶ್ಲೋ|| ಕ್ರೋಧೋಹಂತಾ ಮನುಷ್ಯಾಣಾಂ
ಕ್ರೋಧೋಭಾವಯಿತಾಪುನಃ | ಕ್ರೋಧ
ಮೂಲೌವಿನಾಶಹಿಪ್ರಜಾನಾಮಿದ
ದೃಶ್ಯತೇ|| ||೨೯||

ಅ|| ಕ್ರೋಧವೆಂಬದು ಮನುಷ್ಯರಿಗೆ ನಾಶಕರವಾದ ಮತ್ತು ನೈರುತರ್ಯ ಮಾನಹಾನಿಯನ್ನುಂಟುಮಾಡುವಂತಾ ಶತ್ರುವಾಗಿರುತಿದೆ. ಈ ಪ್ರಪಂಚದಲ್ಲಿ ವಿನಾಶಕ್ಕೆ ಕೋಪವೇ ಮೂಲವಾದದ್ದಾಗಿರುತಿದೆ. ಕೋಪದಿಂದ ಮನುಷ್ಯನು ಕೃತ್ಯಾಕೃತ್ಯ ವಿವೇಚನೆಯಂ ತೊರೆದು ಮುಂದಿನ ಪರಿಣಾಮವಂ ಗಣಿಸದೆ ಮಹದನರ್ಥಗಳಿಗೆ ಗುರಿಯಾಗುತ್ತಾನೆ.

ಶ್ಲೋ|| ಕಾಮಕ್ರೋಧ ಸಮಾಯುಕ್ತೋ
ಹಿಂಸಾಲೋಭಸಮನ್ವಿತಃ | ಮನುಷ್ಯ
ತ್ವಾತ್ಪರಿಭ್ರಷ್ಟ ಸ್ತಿರ್ಯಗ್ಯೋನೌಪ್ರ
ಸೂಯತೇ|| ||೩೦||

ಅ|| ಕಾಮ, ಕ್ರೋಧ, ಹಿಂಸೆ, ಅತ್ಯಾಶೆ ಇವುಗಳಿಂದ ಕೂಡಿದವನಾದ ಪುರುಷನು ಮಾನುಷತ್ವವನ್ನು ಕಳೆದುಕೊಂಡು ಮೃಗಜಾತಿಯಲ್ಲಿ ಮರಳಿ ಜನ್ಮವನ್ನೆತ್ತುವನು. ಅದಕಾರಣ ದುಃಖನಿಮಿತ್ತನಾದ ನಿಕೃಷ್ಟಶರೀರ ಪರಿಗ್ರಹಕ್ಕೆ ಮೇಲೆ ಕಂಡ ಗುಣಗಳೇ ಕಾರಣಗಳೆಂದರಿಯುವದು.

ಶ್ಲೋ|| ಜಯೇತ್ಕದರ್ಯಂದಾನೇನಸತ್ಯೇನಾನೃ
ತವಾದಿನಂ | ಕ್ಷಮಯಾಕ್ರೂರಕರ್ಮಾ
ಣಂ ಅಸಾಧುಂಸಾಧುನಾಜಯೇತ್ ||೩೧||

ಅ|| ದರಿದ್ರನನ್ನು ದಾನದಿಂದಲೂ, ಅನೃತವಾದಿಯನ್ನು ಸತ್ಯದಿಂದಲೂ, ಕ್ರೂರಕರ್ಮಿಗಳನ್ನು ಕ್ಷಮೆಯಿಂದಲೂ, ದುರ್ಜನನನ್ನು ಸನ್ಮಾರ್ಗದಿಂದಲೂ ಸ್ವಾಧೀನ ಪಡಿಸಿಕೊಳ್ಳಬೇಕೇ ಹೊರ್ತು ಅವರು ಅನ್ಯಥಾ ಅನುಕೂಲರಾಗಲಾರರು.

ಶ್ಲೋ|| ಸ್ತ್ರಿಯೋಕ್ಷಮೃಗಯಾಪಾನ ಮೇತ
ತ್ಕಾಮಸಮುತ್ಥಿತಂ | ದುಃಖಚತು
ಷ್ಟಯಂಪ್ರೋಕ್ತಂ ಯೈರ್ನರೋಭ್ರಶ್ಯ
ತೇಶ್ರಿಯಃ ||೩೨||

ಅ|| ಪುರುಷನಿಗೆ ಕಾಮದಿಂದ ಮೋಹವೂ ದ್ಯೂತವೂ, ಮೃಗಯಾಸಕ್ತಿಯೂ, ಮದ್ಯಪಾನವೂ ತಪ್ಪದೆ ಉಂಟಾಗುತಿವೆ. ಕಡೆಗೆ ಇವುಗಳು ಒಂದೊಂದು ಒಂದೊಂದುಬಗೆ ದುಃಖವನ್ನುಂಟುಮಾಡುವದಾಗಿ ತನ್ಮೂಲಕ ಅವನು ತನ್ನ ಸಂಪತ್ಪ್ರಾಭವ ವೈಭವ ಪುಣ್ಯ ಕೀರ್ತಿಗಳನ್ನೆಲ್ಲ ಹೋಗಲಾಡಿಸಿ ಕೊಳ್ಳುವನು.

ಶ್ಲೋ|| ಬುದ್ಧಿಶ್ಚಹೀಯತೆಪುಂಸಾಂನೀಚೈ
ಸ್ಸಹಸಮಾಗಮಾತ್ | ಮಧ್ಯಮೈರ್ಮ
ಧ್ಯತಾಂಯಾತಿ ಶ್ರೇಷ್ಠತಾಂಯಾತಿಚೋ
ತ್ತಮೈಃ|| ||೩೩||

ಅ|| ವಿವೇಕ ಹೀನನಾದ ನೀಚ ಪುರುಷನ ಸಹವಾಸದಿಂದ ಜ್ಞಾನಿಯಾದ ಸಜ್ಜನನಿಗೆ ಸ-

ಬುದ್ಧಿಭ್ರಂಶ ವುಂಟಾಗದೆ ಹೋಗಲಾರದು. ಮ ಧ್ಯಮರ ಸಹವಾಸವು ಮಧ್ಯಮ ಗುಣವನ್ನೂ ಉತ್ತಮರ ಸಂಸರ್ಗವು ಉತ್ತಮಗುಣವನ್ನೂ ಉಂಟುಮಾಡುವದಾದರಿಂದ ಅವನವನು ಮಾಡು ವ ಸಹವಾಸಗಳ ಸ್ವರೂಪಗಳಂತೆ ಗುಣಗಳು ಏರ್ಪಡುವವು.

ಶ್ಲೋ || ಕುತಃ ಕೃತಘ್ನಸ್ಯ ಯಶಃ ಕುತಃ
ಸ್ಥಾನಂ ಕುತಃ ಸುಖಂ ಅಶ್ರದ್ಧೇಯಃ ಕೃ
ತಘ್ನೋ ಹಿ ಕೃತಘ್ನೇ ನಾಸ್ತಿ ನಿಷ್ಕೃತಿಃ ||

ಅ|| ಕೃತಘ್ನನಾದ ಪುರುಷನಿಗೆ ಕೀರ್ತಿ ಸ್ಥಾನ ಸುಖಗಳೆಂಬ ಈ ಮೂರೂ ಲಭಿಸಲಾರವು. ಕೃತಘ್ನತೆ ಯೆಂಬದು ಮಹಾ ದೋಷಗಳಲ್ಲಿ ಒಂದಾಗಿರುವದರಿಂದ ಅದಕ್ಕೆ ಪ್ರಾಯಶ್ಚಿತ್ತವೇ ಇಲ್ಲವು. ಅಂತಾ ದೋಷಿಯು ಸರ್ವಥಾ ತ್ಯಾಜ್ಯನಾದದರಿಂದ ಅವನ ಸಹವಾಸವು ಅನ್ಯನಿಗೆ ಘಾತಕಾವಹವೆಂಬದು ಧರ್ಮಜ್ಞರ ಮತವಾಗಿರುತಿದೆ.

Occasional Notes.

ನೈಮಿತ್ತಿಕ ವಿಷಯನ್ಯಾಸ.

Obituary.—ಇಂದೂರ ಸಂಸ್ಥಾನದ ಪ್ರಖ್ಯಾತ ಮಹಾರಾಜರವರ ತಾಯಿಯವರು ಕೆಲವು ದಿನಗಳ ಮೊದಲು ಅನಾರೋಗ್ಯ ಸ್ಥಿತಿಯಲ್ಲಿದ್ದು ಈ ತಿಂಗಳ ೧೭ ನೇ ತಾರೀಖ್ ಬುಧವಾರದ ದಿನ ಸಾಯಂಕಾಲ ಕಾಲಗತಿಯನ್ನೈದಿದರೆಂದು ತಿಳಿಯಬರುತಿದೆ.

The Calcutta High Court.—ಕಲ್ಕತ್ತಾ ಹೈಕೋರ್ಟ್ ಜಡ್ಜಿಯರ ಪೈಕಿ ಯೊಬ್ಬರಾದ ಮಿ|| ಕನ್ನಿಂಗ್ಹಾಂಯವರು ಕೆಲಸದಿಂದ ನಿವೃತ್ತರಾದರಾಗಿ ಅವರ ಸ್ಥಾನಕ್ಕೆ ಅದೇ ಕೋರ್ಟಿನಲ್ಲಿ ಅಡ್ವೋಕೇಟರಾಗಿದ್ದ ಬಾಬು ಗುರುದಾಸ್ ಬಾನರ್ಜಿಯವರು ನಿಯಮಿಸಲ್ಪಟ್ಟಂತೆ ಕೇಳಲಿಕ್ಕೆ ಬಹಳ ಸಂತೋಷಿಸುತ್ತೇವೆ.

Forfeiture of personal distinction.—ತಲಚ್ಚೇರಿ ಸಬಾರ್ಡಿನೇಟ್ ಜಡ್ಜಿಯರಾಗಿದ್ದ ಕುಂಜನ್ ಮೇನನ್ ಎಂಬವರಮೇಲೆ ತರಲ್ಪಟ್ಟ ರುಷುವತ್ ಮೊಕದ್ದಮೆಯಲ್ಲಿ ಅವರು ದಂಡಿಸಲ್ಪಟ್ಟರಷ್ಟೆ. ಸದರೀಯವರಿಗೆ ಕೊಡಲ್ಪಟ್ಟಿದ್ದ ರಾಯ ಬಹದ್ದೂರೆಂಬ ಪ್ರಶಸ್ತಿಯು ರದ್ದು ಮಾಡಿರುವಂತೆ ಇಂಡ್ಯ ಗೆಜೆಟಿನಲ್ಲಿ ಪ್ರಸಿದ್ಧ ಮಾಡಲ್ಪಟ್ಟಿರುತಿದೆ.

A trip to Bombay.—ವೈದ್ಯಶಾಸ್ತ್ರದ ಪ್ರೊಫೆಸರರಾದ ಲಾಡನ್ ಸಾಹೇಬರವರು ಪ್ರಕೃತ ತಮ್ಮ ಕೆಲಸವು ಬಿಟ್ಟು ಸ್ವದೇಶಕ್ಕೆ ಪ್ರಯಾಣ ಮಾಡುವ ಸಂದರ್ಭದಲ್ಲಿ ಅವರನ್ನು ಸಾಗ ಕಳುಹಿಸುವದಕ್ಕಾಗಿಯೂ ಮುಂದೆ ಬರತಕ್ಕ ವೈಸ್‌ರಾಯ್‌ಯವರನ್ನು ಬರಮಾಡಿಕೊಳ್ಳುವದಕ್ಕಾಗಿಯೂ ಪೋಲ್ಕ್ ಮಹಾರಾಜರವರು ಮುಂಬೈಗೆ ಪ್ರಯಾಣ ಮಾಡುದ್ದೇಶಿಸಿರುವಂತೆ ತಿಳಿಯಬರುತಿದೆ.

Liberality of Native Princes.—ಲಾಹೋರಲ್ಲಿ ಸರ್ ಯೆಚ್ಚಿಸನ್‌ರವರ ಹೆಸರಿನಿಂದ ಸ್ಥಾಪಿಸಲ್ಪಟ್ಟಿರುವ ಶಾಸ್ತ್ರಪಾಠಶಾಲೆಗೆ ಕಪುರ್ತಲಾ ಅರಸರವರು ಇದುವರಿವಿಗೆ ಮಾಡಿದ ದ್ರವ್ಯಸಹಾಯವಲ್ಲದೆ ಸದರೀ ಲೆಪ್ಟಿನೆಂಟ್ ಗವರ್ನರವರು ಕಪುರ್ತಲಾ ಸಂಸ್ಥಾನಕ್ಕೆ ಬರುವ ಸಂದರ್ಭದಲ್ಲಿ ಮರಳಿ ೫,೦೦೦ ರೂಪಾಯಿಗಳು ಕೊಡತಕ್ಕದೆಂದು ಯೋಚಿಸಿರುವಂತೆ ಪ್ರಕಟಿಸಿರುತ್ತಾರೆ.

Famine in Ganjam.—ಗಂಜಾಂ ಪ್ರಾಂತದಲ್ಲಿ ವರ್ಷಾಭಾವದಿಂದ ಪೈರುಗಳೆಲ್ಲ ಒಣಗಿ ಹೋಗಿ ಪ್ರಜೆಗಳಿಗೆ ಜೀವನಾಧಾರವಿಲ್ಲದೆ, ರಸಲ್ ಕೊಂಡ ಮತ್ತು ಆಸ್ಕಾ ತಾಲ್ಲೂಕುಗಳಲ್ಲಿ ಲೂಟಿ ಮಾಡುವದಕ್ಕೆ ಪ್ರಾರಂಭಿಸಿರುತ್ತಾರೆ. ಪ್ರಜೆಗಳ ಪ್ರಾಣ ಮಾನ ಧನಗಳಿಗೆ ಅಪಾಯ ವುಂಟಾಗಿದೆ. ಸದರೀ ಜನಗಳ ಪೈಕಿ ಎಪ್ಪತ್ತೆರಡು ಮಂದಿ ಪೋಲೀಸಿನವರಿಂದ ದಸ್ತಗಿರಿ ಮಾಡಲ್ಪಟ್ಟು ಬೈದಿನಲ್ಲಿರುತ್ತಾರೆ. ಇಷ್ಟು ಆದಾಗ್ಯೂ ಇದುವರಿವಿಗೆ ಕ್ಷಾಮ ನಿವಾರಕ ಕೆಲಸಗಳಿಗೆ ಪ್ರಾರಂಭವಾಗಲಿಲ್ಲವು, ಎಂದು ಪತ್ರಿಕೆ ತಿಳಿಯಬರುತಿದೆ.

Mysore.—ಮೈಸೂರು ಪಟ್ಟಣದಲ್ಲಿ ಕಟ್ಟಲ್ಪಡುತಲಿರುವ ದಿವಾನ್ ಆಫೀಸ್ ಕಟ್ಟಡದ ಮತ್ತು ಜ್ಯೂಬಿಲಿ ಇನ್‌ಸ್ಟಿಟ್ಯೂಟ್ ಕಟ್ಟಡದ ಕಾಮಗಾರಿಯು ಬಹಳ ತೀವ್ರವಾಗಿ ನಡೆಸಲ್ಪಡುತಲಿರುವಂತೆ ತಿಳಿಯಬರುತಿದೆ. ಲಾರ್ಡ್ ಡಫ್ರಿನ್‌ಯವರ ಹೆಸರಿನಲ್ಲಿ ಕಟ್ಟಲ್ಪಟ್ಟ ಸರೋವರದ ಕೆಲಸವೆಲ್ಲ ಪ್ರಾಯಶಃ ಪೂರೈಸುತಬಂತು. ಅದರಿಂದ ನೀರು ಹಿನ್ನೆಯಮೇಲೆ ಹರಿಯುವದಕ್ಕೆ ಸಾಧ್ಯವಿಲ್ಲದೆ ಇರುವದರಿಂದ ಅವರ ವಿಷಯದಲ್ಲಿ ಆಲೋಚಿಸಲ್ಪಡುತಲಿದೆ ಸದರೀ ಸರೋವರದ ಕಟ್ಟೆಯಮೇಲೆ ಘಡಿಯಾರ ಒಂದು ಇಡಲ್ಪಟ್ಟಿರುತಿದೆ. ಮೈಸೂರು ಪಟ್ಟಣಕ್ಕೆ ಒಂದು ಪಬ್ಲಿಕ್ ಮಾರ್ಕೆಟ್ ಅವಶ್ಯಕವಾಗಿ ಬೇಕಾಗಿರುವದರಿಂದ ಅದು ಸಹ ಮ್ಯುನಿಸಿಪಾಲಿಟಿಯವರಿಂದ ಆಲೋಚಿಸಲ್ಪಡುವದೆಂದು ನಂಬುತ್ತೇವೆ.—ಸ್ಪೆಕ್ಟೇಟರ್

Death of an Assistant Commissioner.—ಹಾಸನ ಡಿಸ್ಟ್ರಿಕ್ಟ ಪೊಲೀಸು ಅಸಿಸ್ಟೆಂಟ್ ಕಮಿಷನರಾದ ಮಿ|| ಪೊನ್ನುರಂಗಂ ಮೊದಲಿಯಾರ್‌ರವರು ಈಚ್ಗೆ ಕೆಲವು ದಿವಸಗಳ ಮೊದಲು ಜಿನ್ನುಜ್ವರ ದಿಂದ ಬಾಧೆಪಡುತಲಿದ್ದು ಗತ ಗುರುವಾರದ ದಿನ ಸಾಯಂಕಾಲ ಸುಮಾರು ೫½ ಘಂಟೆಯ ಸಮಯದಲ್ಲಿ ಕಾಲಗತಿಯನ್ನೈದಿದರೆಂಬದು ತಿಳಿಸಲಿಕ್ಕೆ ನಾವು ಬಹಳ ವಿಷಾದಿಸುತ್ತೇವೆ. ಈಗ ಇವರಿಗೆ ೪೪ ವರುಷಗಳ ವಯಸ್ಸೆಂದು ತಿಳಿಯಬರುತಿದೆ. ಈ ದೊಡ್ಡಮನುಷ್ಯರು ಚಿರಕಾಲದಿಂದ ಈ ದೇಶದಲ್ಲಿ ಮಾಡಿದ ನೌಕರಿಗೆ ಯಾವ ದೂಷಣೆಯೂ ಇಲ್ಲದಂತೆ ಕುಟುಂಬದವರು ಅನವರತ ಸ್ಮರಿಸಿ ದುಃಖಿಸುತಲಿರುವಂತೆ ಮಾಡಿ ಹೋದರೆಂಬ ವೃತ್ತಾಂತವು ಮತ್ತೂ ವಿಷಾದಕರವಾಗಿರುತಿದೆ.

Car festival to Chamundi.—ಆಚೇ ಭಾನುವಾರದ ದಿನ ಶ್ರೀಮನ್ಮಹಾರಾಜರವರ ಕುಲದೇವತೆಯಾದ ಚಾಮುಂಡೇಶ್ವರೀ ರಥೋತ್ಸವವು ಬೆಟ್ಟದಮೇಲೆ ಬಹಳ ವಿಭವದೊಡನೆ ಜರಿಗಿತು. ಶ್ರೀಮನ್ಮಹಾರಾಜರವರು, ರಾಜಮನೆತನಕ್ಕೆ ಸೇರಿದ ಇತರ ಅರಸುಗಳೊಡನೆ ಪ್ರಾತಃಕಾಲ ಸುಮಾರು ೪ ಘಂಟೆಯಲ್ಲಿ ಬೆಟ್ಟದಮೇಲಕ್ಕೆ ಪಾದಚಾರಿಗಳಾಗಿಯೇ ದಯಮಾಡಿ ಅಲ್ಲಿನ ಅರ್ಚಕರು ಮೊದಲಾದ ಅಧಿಕಾರಿಗಳಿಂದ ಮಾಡಲ್ಪಟ್ಟ ರಾಜೋಪಚಾರಗಳನ್ನು ಕೈಗೊಂಡು ಅನಂತರ ರಥೋತ್ಸವ ಜರಗುವವರೆಗೂ ಅಲ್ಲೇ ಇದ್ದು ಅನಂತರ ಪರಿವಾರ ಸಮೇತ ಭೋಜನಶಾಲೆಗೆ ದಯಮಾಡಿ ಭೋಜನಾನಂತರ ವಿನೋದದಿಂದ ಕಾಲಕಳೆದು ಸಾಯಂಕಾಲಕ್ಕೆ ಅರಮನೆಗೆ ವಾಪಸ್ ದಯಮಾಡಿದರೆಂದು ಚಾಮುಂಡಿ ಪತ್ರಿಕೆ ತಿಳಿಸುತಿದೆ.

An improvement.—ಈಗ ಕಾಗದಗಳನ್ನು ಕವರುಗಳಲ್ಲಿ ಇಟ್ಟು ಮೇಲೆ ಗೋಂದಿನಿಂದ ಅಂಟಿಸಿ ಕಳುಹಿಸುವ ಪದ್ಧತಿ ಇದೆಯಷ್ಟೆ. ಇಂತಾ ಕಾಗದಗಳನ್ನು ಬಹಳ ಉಪಾಯದಿಂದ ಸ್ವಲ್ಪವೂ ಗೊತ್ತಾಗದಂತೆ ತೆರದು ಒಳಗಿರತಕ್ಕ ನೋಟು ಚೆಕ್ ಮುಂತಾದವುಗಳನ್ನು ಸಂಗ್ರಹಿಸುವದಲ್ಲದೆ ಕಾಗದದಲ್ಲಿ ಬರೆದಿರತಕ್ಕ ಅಭಿಪ್ರಾಯವು ತಿಳಿದುಕೊಳ್ಳುವದಕ್ಕೂ ಕೆಲವು ದುಷ್ಟರು ಪ್ರಯತ್ನಮಾಡುವದು ಅನೇಕ ಸಂದರ್ಭಗಳಲ್ಲಿ ಗೊತ್ತಾಗಿರುತ್ತೆ. ಇದಕ್ಕೆ ಆಸ್ಪದವಿಲ್ಲದಂತೆ ನೂತನವಾದ ಕವರುಗಳನ್ನು ತಯಾರು ಮಾಡಿರುವದಾಗಿ ಕೇಳುತ್ತೇವೆ. ಅವುಗಳನ್ನು ತೆಗೆಯುವದಕ್ಕೆ ಪ್ರಯತ್ನಪಟ್ಟರೆ ಮೇಲೆ ಹಚ್ಚತಕ್ಕ ಸ್ಟ್ಯಾಂಪು ಹರಿದುಹೋಗುವದಲ್ಲದೆ ಕವರಿನ ಬಣ್ಣ ಕೂಡ ಬದಲಾಯಿಸಿಹೋಗುತ್ತದೆ. ಮುಂದೆ ಇವುಗಳನ್ನು ಚಲಾವಣೆಯಲ್ಲಿ ತಂದರೆ ಅವುಗಳಲ್ಲಿರತಕ್ಕ ಪದಾರ್ಥಗಳಿಗೆ ನಷ್ಟವುಂಟಾಗಲಾರದೆಂದೆಣಿಸುತ್ತೇವೆ.—ವೃ. ಚಿಂ.

Clothing of under-trial prisoners.—ಈ ಸಂಸ್ಥಾನದ ಜೈಲುಗಳ ಅಫಿಷಿಯೇಟಿಂಗ್ ಇನ್‌ಸ್ಪೆಕ್ಟರ್ ಜನರಲ್ಲವರು ಇದರಡಿಕಂಡಂತೆ ಹುಕುಂ ಮಾಡಿರುವದಾಗಿ ತಿಳಿಯಬರುತಿದೇನಂದರೆ, ದರ್ಯಾಫ್ತಿಯ ಬಗ್ಗೆ ಬೈದಿನಲ್ಲಿಡಲ್ಪಟ್ಟಿರುವ ತಹ ಮಾಂ ಅಪರಾಧಿಗಳು, ತಾವು ಬೈದಿನಲ್ಲಿರುವ ಕಾಲದೊಳು ಪರಿಶುದ್ಧರಾಗಿ, ತಮ್ಮ ಅನುಬಂಧಿಗಳ ಅಥವಾ ಸ್ನೇಹಿತರ ಮೂಲಕ ತಮ್ಮ ಸ್ವಂತ ಬಟ್ಟೆಗಳನ್ನು ತರಿಸಿಕೊಳ್ಳುವದಕ್ಕೆ ಇಷ್ಟಪಡುವಲ್ಲಿ ಅದಕ್ಕೆ ಜೈಲಿನ ಸೂಪರಿಂಟೆಂಡೆಂಟರು ಅವಕಾಶ ಕೊಡಬೇಕು, ಮತ್ತು ಅವರು ಜೈಲಿನ ಉಡುಪುಗಳನ್ನು ಹಾಕಿಕೊಳ್ಳಬೇಕೆಂದು ನಿರ್ಬಂಧಪಡಿಸಕೂಡದು. ದರ್ಯಾಫ್ತಿಯೊಳಿರುವ ಅಪರಾಧಿಗಳಪೈಕಿ ಯಾರಾದರು ಕೇವಲ ಬಡತನದಿಂದ ಸ್ವಂತ ಬಟ್ಟೆಗಳನ್ನು ತರಿಸಿಕೊಳ್ಳುವದಕ್ಕೆ ಅಶಕ್ತರಾಗಿ ಕಂಡುಬರುವ ಪಕ್ಷದಲ್ಲಿ ಅಲ್ಪ ಖರ್ಚಿನಿಂದ ಅವರು ಸಾಧಾರಣವಾಗಿ ಉಡುವ ಬಟ್ಟೆಗಳನ್ನು ಅವರಿಗೆ ತರಿಸಿಕೊಡಬಹುದು. ಪರಂತು ಕೇವಲ ಆವಶ್ಯಕವಾಗಿ ಕಂಡುಬರುವ ವಿಶೇಷ ಸಂದರ್ಭಗಳಲ್ಲಿ ಮಾತ್ರ ಆರೀತಿ ಮಾಡತಕ್ಕದ್ದು, ಎಂಬದು.

An imprudent step.—ಬರುವ ಡಿಸೆಂಬರ್ ತಿಂಗಳಲ್ಲಿ ಅಲಹಾಬಾದಿನೊಳು ಸೇರುವದಾಗಿರುವ ನ್ಯಾಷನಲ್ ಕಾಂಗ್ರೆಸ ಸಭೆಗೆ ಆಯಾದೇಶಗಳಿಂದ ಕಳುಹಿಸಲ್ಪಡುವ ಪ್ರತಿನಿಧಿಗಳ ಉಪಯೋಗಾರ್ಥ, ನ್ಯಾಷನಲ್ ಕಾಂಗ್ರೆಸ್ ಸಭೆಯ ಕಾರ್ಯನಿರ್ವಾಹಕ ಸಮಾಜದವರು ಕುರ್ಚಿ ಒಂದಕ್ಕೆ ನಾಲ್ಕುರೂಪಾಯಿಗಳಂತೆ ಒಂದುಸಾವಿರ ಕುರ್ಚಿಗಳು ಇಂಗ್ಲಂಡಿನಿಂದ ತರಿಸಬೇಕೆಂದು ಯೋಚಿಸಿರುವದಾಗಿ ತಿಳಿದು, ಅದರಮೇಲೆ ಇಂಡಿಯನ್ ಮಿರ್ರರ್ ಎಂಬ ಪತ್ರಿಕೆಯು ಆಕ್ಷೇಪಿಸುವದೇನಂದರೆ, ನೇಟಿವ್ ಕೆಲಸಗಾರಿಕೆಗೂ, ಸ್ವದೇಶದ ತಯಾರೀ ಸಾಮಾನುಗಳಿಗೂ ಪ್ರೋತ್ಸಾಹವನ್ನುಂಟುಮಾಡಿ ಅವನ್ನು ಅಭಿವೃದ್ಧಿಸ್ಥಿತಿಗೆ ತರಬೇಕೆಂದುದ್ದೇಶಿಸಿರುವ ಸದರೀ ಕಾಂಗ್ರೆಸ್ ಸಭೆಯವರು ಅನ್ಯದೇಶದ ಬಡಗೀಯವರಿಗೆ ಸಹಾಯಮಾಡಲೆತ್ನಿಸುವ ವಿಷಯದಲ್ಲಿ ಅವರ ಉಚಿತಜ್ಞತೆಯನ್ನು ನಾವು ಶ್ಲಾಘಿಸಲಾರೆವು, ಎಂಬದು.

A serious collision.—ಆಚೆ ಆದಿತ್ಯವಾರದ ದಿನ, ಮುರ್ಷಿದಾಬಾದ್ ಡಿಸ್ಟ್ರಿಕ್ಟಿಗೆ ಸೇರಿದ ಬೆಲಡಂಗಾಯೆಂಬ ಪ್ರದೇಶದಲ್ಲಿ ಮುಸಲ್ಮಾನರಿಗೂ ಹಿಂದೂಗಳಿಗೂ ಪ್ರಬಲ ಕಲಹವುಂಟಾಯಿತು. ಇದಕ್ಕೆ ಮುಸಲ್ಮಾನರೇ ಪ್ರಥಮ ಪ್ರವರ್ತಕರು, ಅದು ಹ್ಯಾಗಂದರೆ,—ಹಿಂದೂಜನರು ದುರ್ಗಾದೇವಿಯನ್ನು ಜಲವಾಸಮಾಡಿಸುವದಕ್ಕೆ ಮೆರವಣಿಗೆ ಮಾಡಿಕೊಂಡು ಹೋಗುವಲ್ಲಿ ತಮಗೆ ತೊಂದರೆಯುಂಟಾಗುವದೆಂದು ತಿಳಿದು ಪೊಲೀಸಿನವರ ಸಹಾಯವು ಅಪೇಕ್ಷಿಸಿ ಇಬ್ಬರು ಕಾನ್‌ಸ್ಟೆಬಲ್‌ಗಳನ್ನು ಕರೆದುಕೊಂಡು ಮಸೀದಿಮುಂದೆ ಮೆರವಣಿಗೆ ಮಾಡಿಕೊಂಡು ಹೋಗುತ್ತಿರುವಲ್ಲಿ ಮುಸಲ್ಮಾನರು ಕಲ್ಲುಗಳನ್ನೆಸೆಯುವದಕ್ಕೆ ಪ್ರಾರಂಭಿಸಿದ್ದರಲ್ಲದೆ ಕೈಗಳಲ್ಲಿ ದೊಣ್ಣೆಗಳು ಹಿಡಿದುಕೊಂಡುಬಂದು ಮೇಲೆ ಬಿದ್ದು ದುರ್ಗಾವಿಗ್ರಹವನ್ನು ಚೂರುಚೂರಾಗಿ ಒಡೆದುಹಾಕಿ ಉತ್ಸವದೊಡನೆ ಬಂದ ಜನರನ್ನು ಹೊಡೆದು, ಅವರಪೈಕಿ ಅನೇಕರಿಗೆ ಅಪಾಯಕರವಾದ ಘಾಯಗಳು ಮಾಡಿದರು. ಮುಸಲ್ಮಾನರಪೈಕಿ ಮೂವರು ದಸ್ತಗಿರಿಯಿಂದ ಪೊಲೀಸ್ ದರ್ಯಾಫ್ತಿಯಲ್ಲಿದ್ದಾರೆ, ಇದರ ಪರ್ಯವಸಾನ ಮುಂದೆ ತಿಳಿಯಬೇಕಾಗಿದೆ.

LOCAL AND PROVINCIAL NEWS.

ಒಳದೇಶಮತ್ತು ತಾಲ್ಲೂಕ ಜಾತಿ ವೃತ್ತಾಂತಗಳು.

The Criminal Sessions.—ನಂದಿದುರ್ಗ ಡಿವಿಜನ್ ಸೆಷನ್ ವಿಚಾರಣೆಯು ಬರುವ ತಿಂಗಳ ೫ ನೇ ತಾರೀಖ್ ಸೋಮವಾರದ ದಿವಸ ಪ್ರಾರಂಭವಾಗುವದು. ಈಸಲ ಕಮಿಟಾಗಿರುವ ಮೊಕದ್ದಮೆಗಳ ಸಂಖ್ಯೆ ಬಹಳ ಕಡಮೆಯಾಗಿರುವದರಿಂದ ವಿಚಾರಣೆಗಳೆಲ್ಲ ಒಂದು ವಾರದೊಳಗಾಗಿಯೇ ಪೂರೈಸಬಹುದೆಂದು ನಂಬುತ್ತೇವೆ. ಅಫಿಷಿಯೇಟಿಂಗ್ ಮೂರನೇ ಜಡ್ಜಿಯರಾದ ಮ ಮೀನಾಕ್ಷಿ ಅಯ್ಯರವರು ಸೆಷನ್ ವಿಚಾರಣೆಯನ್ನು ಮಾಡುವರು.

Cholera at Tumkur.—ತುಮಕೂರಲ್ಲಿ ಉಷ್ಣಶೀತಾದಿ ರೋಗವು ಅದ್ಯಾಪಿ ವ್ಯಾಪಕಸ್ಥಿತಿಯಲ್ಲಿರುವಂತೆ ತಿಳಿಯಬರುತಿದೆ. ಪ್ರತಿನಿತ್ಯ ಇದರಿಂದ ಹತ್ತುಹದಿನೈದುಮಂದಿಗಳ ಪ್ರಕಾರ ಮೃತಪಡುತಲಿದಾರೆಂದು ಒಳದೇಶದ ಸ್ಪೆಕ್ಟೇಟರ್ ಪತ್ರಿಕೆ ತಿಳಿಸುತಿದೆ. ಸ್ಕೂಲುಗಳು ಸಹ ಏತದರ್ಥ ಮುಚ್ಚಲ್ಪಟ್ಟಿರುವಂತೆಯೂ, ಅನೇಕರು ಪರಸ್ಥಳಗಳಿಗೆ ಹೊರಟು ಹೋದರೆಂತಲೂ ಕೇಳುತ್ತೇವೆ. ಕಡೆಗೆ ಈ ರೋಗಕ್ಕೆ ಕಾಲ ಕೂಡ ಗೊತ್ತಿಲ್ಲದೆ ಹೋದಂತೆ ತೋರುತಿದೆ.

A recent order.—ಈಚೆಗೆ ಮಹಾರಾಜಾ ಸರ್ಕಾರದವರು ಇದರಡಿ ಕಂಡುಬರುವ ಹುಕುಂ ಕೊಟ್ಟಿರುವಂತೆ ತಿಳಿಯಬರುತಿದೆ, ಏನಂದರೆ,—ಸರ್ಕಾರ ನೌಕರರ ಮಕ್ಕಳಿಗಾದರೂ, ಅಥವಾ ಅವರ ಇತರ ಬಂಧುಗಳಿಗಾದರೂ, ನೌಕರಿ ಮಾಡಿ ಕೊಡುವಂತೆ ವಾಗ್ದಾನ ಮಾಡಿ ತನ್ಮೂಲಕ ಸದರೀ ನೌಕರರ ಪೆನ್ಶನ್ ಸಂಬಂಧವಾದ ಹಕ್ಕುದಾರಿಗಳನ್ನು ಹೋಗಲಾಡಿಸಕೂಡದೆಂದು ಆಯಾ ಇಲಾಖಾ ಮುಖ್ಯಾಧಿಕಾರಿಗಳೂ, ಗವರ್ನಮೆಂಟ್ ಇತರ ಆಫೀಸರ್‌ಗಳು ಸಹ ಅಪೇಕ್ಷಿಸಲ್ಪಟ್ಟಿರುತ್ತಾರೆ. ಅಂತಾ ವಾಗ್ದಾನಗಳು ನೆರವೇರಿಸಲ್ಪಡುವ ಪಕ್ಷಕ್ಕೆ ಕೆಲವುಸಂದರ್ಭಗಳಲ್ಲಿ ಸರ್ಕಾರ ಉದ್ಯೋಗಗಳಿಗೆ ನಾಲಾಯಖಾದ ನೌಕರರು ದಾಖಲಾಗಲಿಕ್ಕೆ ಕಾರಣವಾಗುವದು. ಇದಲ್ಲದೆ ಯಾವ ಸರ್ಕಾರ್‌ನೌಕರಗಾಗಲಿ ಅವರು ಸಂಪಾದಿಸಬಹುದಾದಂತಾ ಪೆನ್ಶನ್ ಯಾ ಗ್ರಾಚ್ಯುಯಿಟಿಯನ್ನು ಹೋಗಲಾಡಿಸಕೂಡದೆಂಬದು ಬಹಳ ಅಪೇಕ್ಷಿತಾಂಶವಾಗಿರುತಿದೆ. ಕೆಲಸದಿಂದ ನಿವೃತ್ತರಾಗತಕ್ಕ ಉದ್ಯೋಗಸ್ಥರ ಮಕ್ಕಳಪೈಕಿ ಯಾರು ಅರ್ಹರೆಂದು ಕಂಡುಬರುತ್ತಾರೆಯೋ, ಅಂತವರ ಮೊಕರದಾತಿಯು ನಿಜವಾಗಿ ಕೋರತಕ್ಕದ್ದಾಗಿರುತಿದೆ. ಪರಂತು ಒಬ್ಬ ಸರ್ಕಾರ್ ನೌಕರನನ್ನು ಅವನ ವೃದ್ಧಾಪ್ಯದ ದಶೆಯಲ್ಲಿ ಸುಖಸಮಾಧಾನದಿಂ ಕಾಪಾಡುವದಕ್ಕಾಗಿ ಉದ್ದಿಷ್ಟವಾದಂತಾ ಅದುವರಿವಿಗೆ ಸಂಪಾದಿಸಿದ ಜೀವನವನ್ನು ಅವನಿಗೆ ಹೋಗಲಾಡಿಸಕೂಡದು" ಎಂಬದು. ಈ ಹುಕುಂ ನೂತನವಾದದ್ದೇನೂ ಅಲ್ಲವು ಸರ್‌ರಿಚರ್ಡ್ ಮೀಡ್ ಸಾಹೆಬರವರು, ಇಲ್ಲಿ ಚೀಫ್ ಕಮಿಷನರಾಗಿದ್ದ ಕಾಲದಲ್ಲಿ ಪೆನ್ಶನ್ ಹಕ್ಕನ್ನು ನಿವೃತ್ತಿಸಿಕೊಳ್ಳುವದಕ್ಕೆ ಯಾರು ಸಮ್ಮತಿಸುತ್ತಾರೆಯೋ ಅಂತವರ ಮಕ್ಕಳಿಗೆ ಆ ಷರತ್ತಿನಮೇಲೆ ನೌಕರಿಗಳು ಕೊಡಬಹುದೆಂದು ಹುಕುಂ ಕೊಟ್ಟಿದ್ದರು. ಪರಂತು ಅದರಂತೆ ಜಾರಿಯಲ್ಲಿ ಬಂದಹಾಗೆ ತೋರಲಿಲ್ಲವು. ಹೀಗಿರುವಲ್ಲಿ ಈ ರಾಜ್ಯವು ಮಹಾರಾಜರಿಗೆ ಒಪ್ಪಿಸಲ್ಪಡಲಿಕ್ಕೆ ಕೆಲವು ದಿನಗಳಮುಂದೆ ಮಾಲೂರ್ ತಾಲ್ಲೂಕಿನಿಂದ ಬಂದ ಅರ್ಜಿಯಮೇಲೆ ಗವರ್ನಮೆಂಟಿನವರು ಪೂರ್ವದ ಹುಕುಂವನ್ನು ರದ್ದುಮಾಡಿ ಲಾಯಖಾದವರಿಗೆ ನೌಕರಿಗಳನ್ನು ಕೊಟ್ಟು ಪುರಸ್ಕರಿಸಬೇಕಾದದ್ದು ಗವರ್ನಮೆಂಟಿನವರಿಗೆ ಕರ್ತವ್ಯವಾಗಿರುವಲ್ಲಿ ಅದಕ್ಕೂ ಪೆನ್ಶನಿಗೂ ಈಡುಮಾಡುವದು ಸರಿಯಲ್ಲವೆಂದು ನಿರ್ಣಯಿಸಿ ಅದರಂತೆ ಕೆಲವರಿಗೆ ಪೆನ್ಶನ್ ಕೊಟ್ಟು ಅವರ ಮಕ್ಕಳಿಗೆ ನೌಕರಿಗಳನ್ನು ಕೊಟ್ಟರು. ಪ್ರಸಕ್ತ ಹುಕುಂ ಸ್ವರೂಪತಃ ಶ್ಲಾಘ್ಯವಾಗಿದ್ದರೂ, ಹಕ್ಕುದಾರಿಯು ಕುಪ್ತಾಂಗವಾಗಿ ತಪ್ಪಲಿಕ್ಕೆ ಅದು ಬಹಳಮಟ್ಟಿಗೆ ಅನುಕೂಲವಾದದ್ದಾಗಿರುತಿದೆ. ಮುಂದೆ ಪೆನ್ಶನ್‌ದಾರರು ಲಾಯಖೀಯಿಲ್ಲದ ತಮ್ಮ ಮಕ್ಕಳಿಗೆ ಒಂದು ಕೆಲಸವಾಗುವದೆಂಬ ಭ್ರಾಂತಿಯನ್ನಿಟ್ಟುಕೊಳ್ಳದೆ ತಮ್ಮ ನೌಕರಿಯ ಫಲಪ್ರಾಪ್ತಿಯಿಂದಲೇ ತೃಪ್ತರಾಗತಕ್ಕವರೆಂದು ಸೂಚಿಸುವೆವು.

THE MYSORE REPRESENTATIVE ASSEMBLY,—1888.

೧೮೮೮ನೇ ಇಸವಿ ಅಕ್ಟೋಬರ್ ೧೭ನೇ ತಾರೀಖು ಬುಧವಾರದ ದಿನ ಮೈಸೂರು ಶೀಮೆಯ ಪ್ರಜಾಪ್ರತಿನಿಧಿಗಳಸಭೆಯು, ಮೈಸೂರಲ್ಲಿರುವ ರಂಗಾಚಾರ್ಲು ಮೆಮೋರಿಯಲ್ ಹಾಲಿನಲ್ಲಿ ಸಭೆ ಸೇರಿತು. ಆ ಕಾಲದಲ್ಲಿ ದಿವಾನರವರು ಈ ಶೀಮೆಯ ನೆಗದೀಯಾತ್ ಆಡಳತದ ಕ್ರಮದಲ್ಲಿ ಹೋದ ವರುಷದ ಜಮಾ ಖರ್ಚು ತಪಸೀಲನ್ನು ತಿಳುಹಿಸಿದರು. ಸಂಸ್ಥಾನದ ನಾನಾ ಪ್ರದೇಶಗಳಿಂದಲೂ ೨೦೮ ಮಂದಿ ಪ್ರಜಾಪ್ರತಿನಿಧಿಗಳು ಬಂದಿದ್ದರಲ್ಲದೆ, ಬ್ರಿಟಿಷ್ ರೆಸಿಡೆಂಟರವರೂ, ಅಸಿಸ್ಟೆಂಟ್ ರೆಸಿಡೆಂಟರವರೂ, ಮೈಸೂರು ಚೀಫ್ ಕೋರ್ಟು ಜಡ್ಜಿಗಳೂ, ಸಂಸ್ಥಾನದ ಇತರ ಅಲಾಹಿದಾ ಮೊಕ್ತೇಸರರೂ ಹಾಜರಿದ್ದರು. ಇವರೆಲ್ಲರ ಸಮಕ್ಷಮದಲ್ಲಿ ದಿವಾನರವರು ಈ ಕೆಳಗೆ ಬರೆಯಲ್ಪಟ್ಟಿರುವ ಅಡ್ರೆಸ್ಸನ್ನು ಓದಿದರು.

ದೊಡ್ಡಮನುಷ್ಯರೇ.—ಶ್ರೀಮನ್ಮಹಾರಾಜಾ ಸಾಹೇಬ್ ಬಹದೂರವರ ಆಜ್ಞಾನುಸಾರವಾಗಿ, ಈ ಶೀಮೆಯ ಆಡಳತದ ಹೋದ ವರುಷದ ಜಮಾಖರ್ಚಿನ ಮುಖ್ಯವಾದ ವಿಷಯಗಳನ್ನು ತಮ್ಮಗಳಿಗೆಲ್ಲರಿಗೂ ತಿಳುಹಿಸುತ್ತೇನೆ. ತರುವಾಯ ನೀವು ಪ್ರತಿನಿಧಿಗಳಾಗಿ ಸೂಚಿಸಲು ಬಂದಿರುವ ಅಂಶಗಳನ್ನು ಸೂಚಿಸಿ, ಶೀಮೆಯ ಆಡಳತದ ವಿಷಯದಲ್ಲಿರುವ ಕೊರತೆಗಳನ್ನು ತಿಳುಹಿಸಿ, ಅವುಗಳನ್ನು ಹೋಗಲಾಡಿಸುವ ಸಲಹೆಗಳನ್ನು ಕೊಡಬಹುದು. ಹೋದ ವರುಷದ ಉಪನ್ಯಾಸದಲ್ಲಿ, ಕಳೆದ ೫೦ ಸಂವತ್ಸರಗಳಿಂದಾದ ಹುಟ್ಟುವಳಿಗಿಂತಲೂ, ೧೮೮೬–೮೭ನೇ ಇಸವಿಯಲ್ಲಿ ಜಾಸ್ತಿಯೆಂತಲೂ, ಅಂತಾ ಹುಟ್ಟುವಳಿಯು ೧೨೭½ ಲಕ್ಷ ರೂಪಾಯಿಗಳೆಂತಲೂ ತಿಳುಹಿಸಿದೆನು. ೧೮೮೭—೮೮ನೇ ಇಸವಿಯ ಹುಟ್ಟುವಳಿಗಿಂತಲೂ ೧೩½ ಲಕ್ಷ ರೂಪಾಯಿ ಹೆಚ್ಚು ಹುಟ್ಟುವಳಿಯಾಯಿತು. ಈ ವರುಷ ಇನ್ನೂ ೨½ ಲಕ್ಷ ರೂಪಾಯಿಗಳು ಜಾಸ್ತೀ ಹುಟ್ಟುವಳಿ ಆಗಿದೆ. ಜಮಾ ಖರ್ಚು ವಿವರ:—

ಜಮಾ ಬಾಬು.

	1886--87.	1887--88.
	ರೂಪಾಯಿ.	ರೂಪಾಯಿ.
ಲ್ಯಾಂಡ್ ರೆವಿನ್ಯೂ ಯಾನೆ ಜಮೀನಿನ ಬಾಬು.	87,09,602.	85,13,879.
ಅಬ್ಕಾರಿ	11,78,165.	14,94,522.
ಫಾರೆಸ್ಟು	9,98,364.	10,08,417.
ಸ್ಟಾಂಪ್	5,15,326.	5,35,550.
ಸಾಯರ್	4,36,340.	4,12,462.
ಮೊಹತರ್ಫಾ	3,35,104.	3,40,181.
ಲಾ ಅಂಡ್ ಜಸ್ಟಿಸ್ ಯಾನೇ ಜುಡಿಷಲ್ ಮತ್ತು ಜೈಲುಗಳು.	49,983.	70,038
ಅಂಚೆ	68,008.	74,300.
ರಿಜಿಸ್ಟ್ರೇಷನ್	56,014.	53,823.
ಅಮೃತಮಹಲ್	77,425.	61,582.
ವಿದ್ಯಾಭ್ಯಾಸದಇಲಾಖೆ	23,588.	23,911
ಉಪ್ಪಿನಮೋಳೆ	26,107.	20,723
ಪಬ್ಲಿಕ್ ವರ್ಕಸ್‌ಯಾನೆ ಮರಮ್ಮತ್‌ಬಾಬ್	12,994.	13,671.
ಬಂಗಾರದ ಗಣಿ	51,248.	33,433.
ಆಸಪತ್ರೆ	8,015.	12,190.
ಚಿಲ್ಲರೆ ಬಾಬುಗಳು	8,323.	5,885.
ಲ್ಯಾಂಡ್ ರೆವಿನ್ಯೂಯಾನೆ ಜಮೀನು ಬಾಬಿನ ಬಾಕಿಯ ಬಡ್ಡಿ...	46,217.	33,358
ಗೌರ್ನಮೆಂಟ್ ಪ್ರೋನೋಟುಗಳ ಬಗೆ ಆದಾಯ	40,158.	61,666
ಗೌರ್ನಮೆಂಟ್ ಪ್ರೋನೋಟುಗಳ ಬಾಬ್ತು ಬಡ್ಡಿ	45,549	1,08,170
ಡಿಪಾಸಿಟ್ ಬ್ಯಾಂಕ್ ಡಿಪಾಜಿಟ್ ಚಲಾವಣಿ ಬಡ್ಡಿ ...		37,711
ಇತರೆ ಬಾಬು ...	76,978	90,504
ಜುಮ್ಲಾ ೧,೨೭,೫೮,೫೦೦.		1,29,76,276

ಖರ್ಚು ಬಾಬು.

A

	1886-87.	1887--88
	ರೂ.	ರೂ.
ಸಬ್‌ಸಿಡಿಯಾನೆ ಕಪ್ಪ...	24,50,00.	24,50,000
ಅರಮನೇ ಖರ್ಚು ...	13,00,000.	13,00,009
ಸರಕಾರಿ ಸಾಲದ ಬಡ್ಡಿ	4,96,955.	4,93,850
ಪೊಲಿಟಿಕಲ್ ಪೆನ್ಷನ್‌ಗಳು ಮತ್ತು ಜಹಗೀರಿಗೆ ಬದಲಾಗಿ ಕೊಡುವ ಅಲೋವೆನ್ಸ್.	1,01,901.	1,04,020
ಮಿಲಿಟರಿ ...	7,37,234,	7,17,875
ಜುಮ್ಲಾ ...	50,86,090.	50,65,745

B.

	1886-87.	1887--88
ಹುಜೂರು ಮತ್ತು ಇತರ ಇಲಾಖಾ ಖರ್ಚು.	2,36,699.	2,05,469
ಡೆಪ್ಯುಟಿ ಕಮ್ಮಿಷನರುಗಳು ಮತ್ತು ಅವರ ಸಿಬ್ಬಂದಿ.	1,60,776.	1,68,699
ಅಸಿಸ್ಟೆಂಟ್ ಕಮ್ಮಿಷನರುಗಳು ಅವರ ಸಿಬ್ಬಂದಿ	58,744.	57,341
ತಾಲ್ಲೂಕುಕಚೇರಿಗಳ ಸಿಬ್ಬಂದಿ...	3,18,715.	3,21,903
ರೆವಿನ್ಯೂ ಸರ್ವೆ ...	2,22,570.	1,94,069
ಇನಾಂ ಇಲಾಖೆ ...	7,964.	7,808
ಗ್ರಾಮ ನೌಕರರ ತಲಬು	4,24,472.	4,46,113
ಇತರ ಬಾಬುಗಳು ...	30,612.	38,449
ಅಬ್ಕಾರಿ ...	16,123.	28,591
ಫಾರೆಸ್ಟ ...	3,20,687,	3,97,529
ಸ್ಟಾಂಪು ...	25,455.	17,867
ಸಾಯರ್	12,839,	13,837
ಕಾವಲ್‌ವಾರ್ ಮತ್ತು ಭಾಗಾಯಿತು ...	69,718.	65,172
ಅಮೃತಮಹಲ್ ಇಲಾಖಾ	34,969.	29,904
ಇತರ ಚಿಲ್ಲರೆ ಇಲಾಖಾ ಬಾಬತು ...	62,516.	45,820
ಜುಮ್ಲಾ......	20,02,859	20,38,571

C.

	1886-87.	1887--88
ಲಾ ಅಂಡ್ ಜಸ್ಟಿಸ್ ಅಂದರೆ ಜ್ಯುಡಿಷಿಯಲ್ ಬಾಬು ಮತ್ತು ಜೈಲುಗಳು	7,45,289,	7,44,379
ಪೋಲೀಸ್ ...	5,36,992,	5,80,401
ವಿದ್ಯಾಭ್ಯಾಸದ ಇಲಾಖೆ	1,75,610,	1,78,172
ಮುಜರಾಯಿ ...	2,83,601,	2,78,932
ಆಸ್‌ಪತ್ರೆ ...	1,45,954.	1,64,221,
ಪೆನ್ಷನ್ ಮತ್ತು ಗ್ರಾಜ್ಯುಯಿಟಿಗಳು ...	2,44,109.	251,789
ಮರಮ್ಮತ್ ಇಲಾಖೆ	12,71,132.	15,79,906
ಅಂಚೆ ಇಲಾಖಾ ...	1,29,422.	1,35,076
ರಿಜಿಸ್ಟ್ರೇಷನ್ ...	25,532.	25,842
ಬ್ರಿಟಿಷ್ ಆಫಿಸರುಗಳ ಫರ್ಲೋ ಅಲೋವೆನ್ಸ್, ಗ್ರಾಜ್ಯುಯಿಟಿ, ಕಂಪೆನ್ಸೇಷನ್ ಲೀವು ಮತ್ತು ಪೆನ್ಷನ್ ಸಂಬಂಧವಾದ ಖರ್ಚುಗಳು.	33,825.	36,310
ಮೈಸೂರುಸೇವಿಂಗ್ಸ್ ಬ್ಯಾಂಕು ಡಿಪಾಜಿಟ್‌ಬಡ್ಡಿ.	46,660.	51,429
ವಾಪಸು, ...	66,543.	47,284
ಕೆರೆಗಳ ಕ್ರಯ ಮತ್ತು ರಿಪೇರಿ ...	5,188.	33,603
ಗೌರ್ನರ್ ಜನರಲ್‌ಯವರನ್ನು ಎದುರುಗೊಂಡ ಖರ್ಚು,	7,291.	10,461
ಶ್ರೀಮನ್ಮಹಾರಾಜರವರ ಉತ್ತರ ಹಿಂದೂಸ್ಥಾನದಪ್ರಯಾಣದ ಖರ್ಚಿನಲ್ಲಿ ಅರ್ಧ		63,012
ಲಂಡನ್ನಲ್ಲಿರುವ "ಇಂಡಿಯಾ ಕಲೋನಿಯಲ್" ಎಂಬ ವಿದ್ಯಾಶಾಲೆಗೆ	...	50,000
ಚಿಲ್ಲರೆ ಬಾಬು, ...	1,03,029.	62,858
ಜುಮ್ಲಾ, ...	38,20,204.	42,94,275
ಒಟ್ಟು ಜುಮ್ಲಾ,	1,09,09,153.	1,13,08,591

THE MYSORE AGRICULTUAL EXHIBITION.

ಈ ತಿಂಗಳ ೧೭ನೇ ತಾರೀಖಿನಲ್ಲಿ ಮೈಸೂರೊಳು ನಡೆದ ವಿವಿಧವಸ್ತುಪ್ರದರ್ಶನ ಸಂದರ್ಭದಲ್ಲಿ ಆ ಬಗ್ಯೆ ಏರ್ಪಟ್ಟದ್ದ ಕಮಿಟಿಯವರು ಶ್ರೀಮನ್ಮಹಾರಾಜರವರ ಸನ್ನಿಧಿಯಲ್ಲಿ ಒಪ್ಪಿಸಿದ ವಿಜ್ಞಾಪನ ಪತ್ರಿಕೆಯೂ ಅದಕ್ಕೆ ಮಹಾರಾಜರವರ ಆಜ್ಞಾನುಸಾರ ದಿವಾನರವರು ಕೊಟ್ಟ ಜವಾಬೂ ಕನ್ನಡಭಾಷೆಯಲ್ಲಿ ತರ್ಜುಮೆಯಾಗಿ ವೃತ್ತಾಂತಪತ್ರಿಕೆಯಲ್ಲಿ ಪ್ರಕಟಿಸಲ್ಪಟ್ಟದ್ದರಿಂದ ಅವನ್ನು ಈ ಪತ್ರಿಕೆಯನ್ನೋದತಕ್ಕವರಿಗಾಗಿ ಇದರಡಿ ಪ್ರಕಟಿಸುವೆವು.

ಈ ವಿಜ್ಞಾಪನ ಪತ್ರಿಕೆಯು ಶ್ರೀಮನ್ಮಹಾರಾಜರವರನ್ನು ಸಂತೋಷಪಡಿಸುವದಾಗಿಯೂ, ಮೆಚ್ಚಿಸುವದಾಗಿಯೂ ಇರಲಿ.—ಕೃಷಿ ಮತ್ತು ಕೈಗಾರಿಕೆ ಸಂಬಂಧವಾದ ವಸ್ತುಪ್ರದರ್ಶನ ಸಂಘದ ಅಧ್ಯಕ್ಷ ಮತ್ತು ಕಾರ್ಯದರ್ಶಿಗಳಾದ ನಾವು, ಮಹಾರಾಜರವರ ಸನ್ನಿಧಾನದಲ್ಲಿ ಹಾಜರಾಗಿ ಅರಿಕೆ ಮಾಡಿಕೊಳ್ಳುವದೇನಂದರೆ; ಈ ಪ್ರದರ್ಶನವನ್ನು ಪ್ರಾರಂಭ ಮಾಡುವ ವಿಷಯದೊಳು ಸಮ್ಮತಿಯನ್ನಿತ್ತ ಪ್ರಭುಗಳಿಗೆ ನಾವು ಮರ್ಯಾದೆಯುಕ್ತವಾದ ವಂದನೆಗಳನ್ನು ಸಮರ್ಪಿಸುತ್ತೇವೆ. ಈ ಸಂಸ್ಥಾನದೊಳು ಪ್ರದರ್ಶನವು ನಡೆದದ್ದು ಇದೇ ಮೊದಲನೇದಾಗಿದೆ, ಪಾಲಕರ ಅಭಿಮಾನದಿಂದಲೇ ಇದು ಉಂಟಾದದ್ದು, ಪ್ರಭುಗಳ ಪರಾಮರಿಕೆ ಮತ್ತು ಪ್ರೋತ್ಸಾಹ ಇವುಗಳಿಂದಲೇ ಇದು ನೆರವೇರುವದು. ಸಂಸ್ಥಾನದಲ್ಲಿ ಬೆಳೆಯುವ ಮತ್ತು ತಯಾರಾಗುವ ವಿವಿಧ ಫಲ ಪೈರು ಪದಾರ್ಥಗಳ ಪರಿಮಿತಿಯನ್ನು ಅರಿತುಕೊಳ್ಳುವದೂ, ಕೃಷಿ ಮತ್ತು ಕೈಗಾರಿಕೆ ಸಂಬಂಧವಾದ ಪದಾರ್ಥಗಳ ಅಭಿವೃದ್ಧಿಯನ್ನುಂಟು ಮಾಡುವಂತ ಪ್ರೋತ್ಸಾಹವನ್ನು ಕೊಡುವದೂ, ಈರ್ಷೆಯನ್ನು ಉಂಟು ಮಾಡುವದೂ, ನಮ್ಮ ಶೀಮೆಯೊಳು ಬೆಳೆಯುವ ಮತ್ತು ತಯಾರಾಗುವ ಪದಾರ್ಥಗಳಲ್ಲಿ ಶ್ರೇಷ್ಠವಾದವುಗಳನ್ನು ಬಿಚಮಾಡಿಕೊಳ್ಳುವದೂ, ಗಿರಾಕಿಯನ್ನು ಉಂಟುಮಾಡಿ ಅವುಗಳ ಬೆಲೆಯನ್ನು ಹೆಚ್ಚಿಸುವದೂ, ಈ ಮೊದಲಾದವುಗಳೇ ಪ್ರದರ್ಶನದ ಉದ್ದೇಶಗಳಾಗಿವೆ. ಇದರ ಮುಖ್ಯವಾದ ವಿಶೇಷತ್ವವೇನಂದರೆ—ಕೃಷಿ ಮತ್ತು ಶಿಲ್ಪಕಲಾ ಕೌಶಲ್ಯಾದಿಗಳ ಶ್ರೇಷ್ಠವಾದ ನಾನಾ ಪದಾರ್ಥಗಳ ನಮೂನೆಯು ಒಂದು ವಿಶಾಲಭವನವಾಗಿ ಏರ್ಪಡುವದೇ. ಪ್ರಜಾರಂಜಕವಾದ ಬೋಧನೆಯ ಸ್ವರೂಪವಾದಂತ ಈ ಪ್ರದರ್ಶನವು, ಮೈಸೂರು ಶೀಮೆಯ ಕೃಷಿ ಶಿಲ್ಪಕಲಾ ಕೌಶಲ್ಯಾದಿ ವಸ್ತುಗಳ ಚರಿತ್ರೆಯಲ್ಲಿ ಒಂದು ಮುಖ್ಯ ಪ್ರಕರಣವಾಗಿಯೂ, ಪ್ರಜೆಗಳ ಅಭಿವೃದ್ಧಿ ಸ್ಥಿತಿಗೆ ಪ್ರಭುಗಳು ಮಾಡಿದ ಪ್ರಯತ್ನಗಳಲ್ಲಿ ಮುಖ್ಯವಾದದ್ದಾಗಿಯೂ ಭಾವಿಸಲಾಗುವದು. ಅತ್ಯಂತ ವಿಶೇಷವಾಗಿ ಕಾರ್ಯಸಾಧನೆಯನ್ನು ಪೂರೈಸುವದಕ್ಕೆ ಸಾಕಾದಷ್ಟು ಪುರಸತ್ತು ನಮಗೆ ದೊರೆಯದೇ ಹೋದರೂ, ಸಂಸ್ಥಾನ ಮುಳೆ ಪ್ರತಿಒಂದು ತಾಲ್ಲೂಕಿನಿಂದಲೂ, ಜನರು ಪದಾರ್ಥಗಳನ್ನು ತಂದಿದ್ದಾಗ್ಯೆ, ಒಟ್ಟು ಪ್ರದರ್ಶನ ವಸ್ತುಗಳ ಸಂಖ್ಯೆಯು ೩,೦೦೦. ಇಂತಾ ಆಶ್ರಯ ಸ್ಥಾನದಲ್ಲಿ ಈಗ ಪ್ರಾರಂಭವಾಗುವ ಈ ಪ್ರದರ್ಶನವು, ಮುಂದೆ ನಡೆಯುವ ಅನೇಕ ಪ್ರದರ್ಶನಗಳಿಗೆ ಶುಭ ಸೂಚಕವಾಗಿರುವದೆಂದು ನಾವು ಕೋರುತ್ತೇವೆ. ಈ ವಿಜ್ಞಾಪನ ಪತ್ರಿಕೆಯನ್ನು ಅಂಗೀಕರಿಸಿದ ವಿಷಯದೋಳ್, ಪ್ರಭುಗಳಿಗೆ ನಾವು ವಂದನೆಗಳನ್ನು ಸಮರ್ಪಿಸಿದ್ದೇವೆ, ವಗೈರೆ.

ಶ್ರೀಮನ್ಮಹಾರಾಜರವರ ಅಪ್ಪಣೆಯಂತೆ, ದಿವಾನರವರು ಈ ವಿಜ್ಞಾಪನ ಪತ್ರಿಕೆಗೆ ಪ್ರತ್ಯುತ್ತರವಾಗಿ ಹೇಳಿದ್ದೇನಂದರೆ:—

ಈ ಪ್ರದರ್ಶನ ವಿಷಯ ಸೂಚಕವಾದ ಈ ವಿಜ್ಞಾಪನ ಪತ್ರಿಕೆಗಾಗಿ ನಾವು ಮನಃ ಪೂರ್ವಕವಾಗಿ ನಿಮ್ಮನ್ನು ವಂದಿಸಿ, ಇದನ್ನು ಪ್ರೀತಿಪುರಸ್ಸರವಾಗಿ ಅಂಗೀಕರಿಸಿದ್ದೇವೆ. ಈ ಸಂಸ್ಥಾನದಲ್ಲಿ ಪ್ರದರ್ಶನವು ನಡೆದದ್ದು ಇದೇ ಮೊದಲು. ಪ್ರದರ್ಶನಕ್ಕೆ ತರಬೇಕಾದ ಪದಾರ್ಥಗಳನ್ನು ಒದಗಿಸುವದಕ್ಕಾಗಿ ನಿಮಗೆ ಕೊಟ್ಟದ್ದ ಕಾಲವು ಸಾಲದ್ದಾಗಿದೆ. ಪ್ರದರ್ಶನೋತ್ಸವಕ್ಕಾಗಿ ಗೊತ್ತುಮಾಡಿದ ಈ ಸಂವತ್ಸರದ ಈ ಋತುವು ಈ ಉತ್ಸವಕ್ಕೆ ತಕ್ಕ ಕಾಲವಾಗಿಲ್ಲ. ಇಷ್ಟು ಅನಾನುಕೂಲಗಳಿಗೆ ಒಳಪಟ್ಟದ್ದರೂ, ಮೂವತ್ತುಸಾವಿರ ವಿವಿಧ ವಸ್ತುಗಳನ್ನು ಒದಗಿಸಿರುವ ವಿಷಯದಲ್ಲಿ ನಾವು ಆಶ್ಚರ್ಯಪಡದೆ ಇರಲಾರೆವು. ನಿಮ್ಮ ಕಾರ್ಯಸಾಧನೆಯು ಪೂರ್ತಿಯನ್ನೈದಿದ ಅಂಶವು ನಮಗೆ ತೃಪ್ತಿಕರವಾಗಿದೆ. ತತ್ಕಾಲದೊಳು ನಡೆಯುವ ಒಂದು ಪ್ರದರ್ಶನದಂತಾ ಪ್ರದರ್ಶನಗಳಿಂದ, ಸಂಸ್ಥಾನಮುಳೆ ವ್ಯವಸಾಯ ಮತ್ತು ಕೈಗಾರಿಕೆಈ ಸಂಬಂಧವಾದ ವಿಷಯಗಳಲ್ಲಿ ಉಂಟಾಗುವ ಪ್ರಯೋಜನಗಳು ನಮ್ಮ ಗ್ರಹಿಕೆಗೆ ಬಂದಿವೆ, ಇದಕ್ಕೆ ತಕ್ಕಂತೆ ನಮ್ಮ ಪ್ರಜೆಗಳೂ ಇದರ ಪ್ರಯೋಜನವನ್ನು ಎಲ್ಲೆಲ್ಲಿಯೂ ಪರಿಗಣಿಸುತಿರುವದು, ನಮಗೆ ಸಮಾಧಾನಕರವಾಗಿದೆ. ಪ್ರಾರಂಭ ಮಾಡುವದಕ್ಕೆ ನಾವು ಬಂದಿರುವ ಈ ಪ್ರದರ್ಶನವು, ಸಂಸ್ಥಾನಮುಳೆ ಸೌಖ್ಯವನ್ನೂ, ಅಭಿವೃದ್ಧಿಯನ್ನೂ ಸಹ ಉಂಟುಮಾಡುವ ಒಂದು ಪ್ರೋತ್ಸಾಹವಾಗಿರುವದೆಂದು ಕೋರುತ್ತೇವೆ. ಆಗಾಗ್ಯೆ ಸಂಸ್ಥಾನದ ನಾನಾಭಾಗಗಳಲ್ಲಿ ಇಂತಾ ಪ್ರದರ್ಶನಗಳನ್ನು ನಡೆಸಿ, ಆ ಮೂಲಕ ಕೃಷಿ ಶಿಲ್ಪ ಕಲಾ ಕೌಶಲ್ಯಾದಿಗಳನ್ನು ಅಭಿವೃದ್ಧಿಪಡಿಸಿ, ಈ ರೀತಿಯಾಗಿ ಸಂಸ್ಥಾನದ ಪ್ರಜೆಗಳನ್ನೆಲ್ಲಾ ಉನ್ನತಸ್ಥಿತಿಗೆ ತರಬೇಕೆಂಬುವದು, ನಮ್ಮ ಸುಕಲ್ಪವೆಂಬುವದಂ ವ್ಯಕ್ತಗೊಳಿಸುವೆವು. ದೊಡ್ಡಮನುಷ್ಯರೇ, ಈಗ ಪ್ರದರ್ಶನೋತ್ಸವವನ್ನು ಪ್ರಾರಂಭಮಾಡಬಹುದೆಂದು ಈಗ ನಾವು ದೃಢವಾಗಿ ಹೇಳುತ್ತೇವೆ.

THE MYSORE GAZETTE.
ಮೈಸೂರು ಗೆಜೆಟಿ.

—:o:—

ಶ್ರೀಮನ್ಮಹಾರಾಜ ರಾಜಾಸಾಹೇಬ್ ಬಹದೂರವರ ದಿವಾನರವರಿಂದ ಕೊಡಲ್ಪಟ್ಟ ಇಸ್ತಿಹಾರ್‌ನಾಮೆಗಳು.

ಮೊಕ್ಕಾಂ ನಂ॥ ೧೮೦೨—ತಾ. ೧೮ನೇ ಅಕ್ಟೋಬರ್ ೧೮೮೮—ಕ್ರಿಮಿನಲ್ ಪ್ರೊಸಿಜ್ಯೂರ್ ಕೋಡ್ ೨೦೬ನೇ ಸೆಕ್ಷನ್ ಅನುಸರಿಸಿ ಮೈಸೂರು ಡಿಸ್ಟ್ರಿಕ್ಟು ಸೆಕೆಂಡ್ ಜನರಲ್ ಅಸಿಸ್ಟೆಂಟ್ ಕಮ್ಮಿಷನರ್ ಮತ್ತು ಸೆಕೆಂಡ್‌ಕ್ಲಾಸ್ ಮ್ಯಾಜಿಸ್ಟ್ರೇಟರಾದ ಮ॥ ಅಣ್ಣಾಜಿರಾಯರವರಿಗೆ ವಿಚಾರಣೆ ಬಗ್ಯೆ ಸೆಷನ್ ಕಮ್ಮಿಟಿಮಾಡುವ ಅಧಿಕಾರ ಕೊಡಲ್ಪಟ್ಟಿರುತಿದೆ.

ಮೊಕ್ಕಾಂ ನಂ. ೧೮೦೩—ಹೆಗ್ಗಡದೇವನಕೋಟೆ ತಾಲ್ಲೂಕ್ ಅಮಲ್ದಾರ್ ರಾಮಯ್ಯಂಗಾರ್ರವರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖ್ ಲಾಗಾಯಿತು ಹದಿನೈದು ದಿನಗಳ ಪ್ರಿವಿಲೀಜ್ ರಜಾ ಕೊಡಲ್ಪಟ್ಟಿರುತಿದೆ. ರಾಮಯ್ಯಂಗಾರ್ರವರ ಗೈರ್‌ಹಾಜರಿಯಲ್ಲಿ ಅಥವಾ ಮತ್ತೊಂದು ಹುಕುಂ ಕೊಡಲ್ಪಡುವ ತನಕ ಶ್ರೀರಂಗಪಟ್ಟಣದ ಡೆಪ್ಯುಟಿ ಅಮಲ್ದಾರ್ ಮಾಧವರಾಯರವರು ಹೆಗ್ಗಡದೇವನಕೋಟೆ ತಾಲ್ಲೂಕ್ ಅಮಲ್ದಾರರಾಗಿ ಆಕ್ಟಿಂಗ್ ತರೀಕ್ ಮೊಕರರ್ ಮಾಡಲ್ಪಟ್ಟಿರುತ್ತಾರೆ.

ನಂ. ೧೮೦೪—ತಾ॥ ೨೦ನೇ ಅಕ್ಟೋಬರ್-ಮಾಹೇ ಮಜಕೂರ್ ೯ನೇ ತಾರೀಖಿನ ದಿನ ಶಿವಮೊಗ್ಗ ಡಿಸ್ಟ್ರಿಕ್ಟಿನ ಟ್ರೆಜರಿ ಚಾರ್ಜನ್ನು ಮ॥ ಮಾಧವರಾಯರವರು ಮ॥ ತಿರುಮಲಾಚಾರ್ಯರವರಿಗೆ ಒಪ್ಪಿಸಿರುತ್ತಾರೆ.

ನಂ. ೧೮೦೮—ದಾವಣಗೆರೆ ತಾಲ್ಲೂಕ್ ಅಮಲ್ದಾರ್ ರಾಮಯ್ಯಂಗಾರ್ರವರಿಗೆ ೧೮೮೮ನೇ ಇಸವಿ ಸಪ್ಟಂಬರ್ ೧೫ನೇ ಮರ್ಕೂಂ ಲಾಗಾಯಿತು ಒಂದುತಿಂಗಳ ಹದಿನೈದು ದಿನಗಳ ಪ್ರಿವಿಲೀಜ್ ರಜಾ ಕೊಡಲ್ಪಟ್ಟಿರುತದೆ. ಸದರೀ ತಾಲ್ಲೂಕ್ ಶಿರಸ್ತೇದಾರ್ ಚಿನ್ನಪ್ಪಾವು ಪಿಳ್ಳೆಯವರು ರಾಮಯ್ಯಂಗಾರ್ರವರ ಗೈರ್‌ಹಾಜರಿಯಲ್ಲಿ ಅಥವಾ ಮತ್ತೊಂದು ಹುಕುಂ ಕೊಡಲ್ಪಡುವ ತನಕ ತಾಲ್ಲೂಕ್ ಚಾರ್ಜಿನಲ್ಲಿರುತ ಮೂರನೇಕ್ಲಾಸ್ ಮ್ಯಾಜಿಸ್ಟ್ರೇಟ್ ಅಧಿಕಾರಿಗಳನ್ನು ಚಲಾಯಿಸುತಲಿರತಕ್ಕದ್ದು.

☞ BANGALORE :—Printed and published at the KARNATIC PRESS, No. 44, HOSPITAL ROAD, PETTA.—1888.

ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA.

ಪ್ರತಿ ಸೋಮವಾರ ಪ್ರಾತಃಕಾಲದಲ್ಲಿ ಪ್ರಕಟಿಸಲ್ಪಡುವದು.

Published every Monday Morning.

ಪ್ರಕಾಮವಿವಿಧಪ್ರವೃತ್ತ್ಯುಪಗಮಾರ್ಹ ಕರ್ಣಾಟಕಪ್ರಕಾಶಿಕಾಭಿಧಾ ಪ್ರತಿಸೋಮವಾಸರೀಭಿತಾ ॥ ವ್ಯಗ್ರಾಂಕಹತವಾಸರೇನಿಹಿತಮುದ್ರಣಾನಜ್ಞಸ್ಫೂರ್ತಿ ಕಾಸುಪರಿಪೂರ್ಣತಾದಿಶಿತಮಾನಸಾಂ ಮುದಂ

Vol. XV.] BANGALORE:—MONDAY, NOVEMBER 5, 1888. [No. 43.

ಸಂಪುಟ ೧೫.] ಬೆಂಗಳೂರು:—ಸನ ೧೮೮೮ನೇ ಇಸವಿ ನವಂಬರ್ ೫ನೇ ತಾರೀಖು ಸೋಮವಾರ. [ಸಂಚಿಕೆ ೪೩.

ಕರ್ಣಾಟಕ ಪ್ರಕಾಶಿಕಾ

ಪತ್ರಿಕೆಯ ಚಂದಾ ದರಗಳು,
೧೮೮೮ನೇ ಇಸವಿ ಜನವರಿಯಿಂದ ಜಾರಿಗೆ ಬರುವಂತೆ
ಕಡಮೆಮಾಡಲ್ಪಟ್ಟಿರುತ್ತದೆ.

ಈ ಪತ್ರಿಕೆಯ ಚಂದಾದಾರರಲ್ಲಿ ಅನೇಕರ ಅಪೇಕ್ಷೆಯನ್ನು ನೆರವೇರಿಸುವ ಉದ್ದೇಶದಿಂದಲೂ, ಪರಿಮಿತವಾದ ಆಯತಿಯುಳ್ಳವರಿಗೆಲ್ಲ ಈ ಪತ್ರಿಕೆಯು ಸುಲಭವಾಗಿ ಲಭಿಸುವಂತಿರಬೇಕೆಂಬ ಅಭಿಪ್ರಾಯದಿಂದಲೂ ಇದರ ಚಂದಾದರವನ್ನು ಇವರಡಿಕಂಡಂತೆ ಕಡಮೆಮಾಡಿರುತ್ತೇವೆ. ಹೇಗೆಂದರೆ:—

ಇಂಗ್ಲಿಷ್ ಮತ್ತು ಕನ್ನಡಭಾಗಗಳಿಗೆ.

	ಸ್ಥಳದವರಿಗೆ	ಪರಸ್ಥಳದವರಿಗೆ
12 ತಿಂಗಳಿಗೆ	8—0—0	9—0—0
6 ,,	4—0—0	4—8—0
3 ,,	2—8—0	2—8—0

ಇಂಗ್ಲಿಷ್ ಅಥವಾ ಕನ್ನಡಭಾಗಗಳಿಗೆ.

	ಸ್ಥಳದವರಿಗೆ	ಪರಸ್ಥಳದವರಿಗೆ
12 ತಿಂಗಳಿಗೆ	4—0—0	5—0—0
6 ,,	2—0—0	2—8—0
3 ,,	1—4—0	1—8—0

ಪರಾ—ಅಂಚೆ ಮುತ್ತೈದೆಗಳು, ಓದುವ ಮತ್ತು ತಾಲ್ಲೂಕ್ ಸ್ಕೂಲ್‌ಮಾಸ್ಟರುಗಳು, ಸ್ಕಾಲರ್‌ಗಳು, ಪಟೇಲರು, ವಿದ್ಯಾರ್ಥಿಗಳು, ಇವರಿಗೆಲ್ಲ ಈ ಪತ್ರಿಕೆಯು ಮೇಲಿನ ಚಂದಾದರಕ್ಕೆ ಕೊಡಲ್ಪಡುವದು. ಅವರ್ಗಳಿಗೆ ಮೊಬಲಗಿನಲ್ಲಿ ಬಾಕಿ ದರಖಾಸ್ತುಗಳಿಗೆ ರೂ ೧ರಂತೆ ನಿಗೇಕೊಡಲ್ಪಡುವದಿಲ್ಲ. ಚಂದಾದಾರರು ಇಂಗ್ಲಿಷ್ ಭಾಗವನ್ನಾಗಲಿ ಅಥವಾ ಎರಡನ್ನಾಗಲಿ ತೆಗೆದುಕೊಳ್ಳಬಹುದು. ಚಂದಾಹಣವನ್ನು ಮುಂಗಡವಾಗಿಯೇ ಕಳುಹಿಸತಕ್ಕದ್ದು. ಮೂರುತಿಂಗಳಿಗಿಂತ ಕಡಮೆಯಾಗಿ ಚಂದಾ ಮೊಬಲಗು ಅಂಗೀಕರಿಸಲ್ಪಡಲಾರದು.

ಸೋಮವಾರ ರವಾನಿಸತಕ್ಕವರು ಮೊದಲು ಕಳುಹಿಸುವ ಅರ್ಜಿಯೊಡನೆ ಚಂದಾಹಣವನ್ನು ಕಳುಹಿಸುವದು ಬಿಡದೆ ಕೊಡಬೇಕಾಗಿ ಆರ್ಡರ್ ನೋಟಿಸ್ ಮುದ್ರಾಂಕಿತವಾಗಿ ರವಾನಿಸತಕ್ಕದ್ದು. ಲೇಖಕರುಗಳು ಕಳುಹಿಸತಕ್ಕವರು ದಯಮಾಡಿ ಒಂದಕ್ಕೆ ಒಂದೂವರೆ ಆಣೆ ಸ್ಟಾಂಪುಗಳನ್ನು ಕಳುಹಿಸತಕ್ಕದ್ದು. ಅಡ್ರೆಸ್ ಬದಲಾಯಿಸಲು ಬಯಸುವವರು ಹಳೆಯ ಅಡ್ರೆಸ್ ಸಹಿತ ಮೊಬಲಗಿನ ವಿಷಯ ತಿಳಿಸತಕ್ಕದ್ದು. ಪತ್ರಿಕೆಯ ವ್ಯವಹಾರದಲ್ಲಿ ಮಿಕ್ಕ ಮೊಬಲಗು ಲೆಕ್ಕಕ್ಕೆ ಸಂದಾಯಮಾಡಿಕೊಳ್ಳಲ್ಪಡುವದು.

ಪ್ರಕಟನೆಯ ರಿವಾಜ್.

ಮೊದಲನೆಯದಕ್ಕೆ ಪಂಕ್ತಿ ಒಂದಕ್ಕೆ	೦—೨—೦
ಎರಡನೆಯದಕ್ಕೆ ಪಂಕ್ತಿ ಒಂದಕ್ಕೆ	೦—೧—೦

ಪರಾ—ಎರಡಾವರ್ತಿಗಿಂತ ಜಾಸ್ತಿಯಾಗಿ ಎಷ್ಟು ಸಾರೆ ಪ್ರಕಟನೆ ಮಾಡಿಸಬೇಕೋ ಅಷ್ಟು ಒಂದಕ್ಕೆ ಇಂತಿಷ್ಟೆಂದು ನಿರ್ಧರಿಸಿ ಲೆಕ್ಕ ಮಾಡಲ್ಪಡುವದು. ಈ ಪತ್ರಿಕೆಯಲ್ಲಿ ಖಾಯಂ ಪ್ರಕಟನೆಗಳನ್ನು ಪ್ರಕಟಿಸಬೇಕೆಂದು ಅಪೇಕ್ಷಿಸುವವರು ಅವು ಎಷ್ಟು ಕಾಲ ಪ್ರಕಟವಾಗಬೇಕೆಂಬುದನ್ನು ಸ್ಪಷ್ಟವಾಗಿ ತಿಳಿಸತಕ್ಕದ್ದು. ಇಲ್ಲದಿದ್ದಲ್ಲಿ ಅವರು ನಮಗೆ ನಿಲ್ಲಿಸುವಂತೆ ತಿಳಿಸುವವರೆಗೆ ಅವು ಪ್ರಕಟಿಸಲ್ಪಡುತ್ತವೆ. ಬಿಡ್ಡು ಹಾಗೆ ಎಷ್ಟಾವರ್ತಿ ಪ್ರಕಟಿಸಲ್ಪಟ್ಟಿದ್ದನ್ನೂ ಲೆಕ್ಕಹಾಕಿ ದರದಂತೆ ಹಣವನ್ನು ವಸೂಲುಮಾಡಲಾಗುವದು. ಪ್ರಕಟನೆಯನ್ನು ಕಳುಹಿಸುವವರು ಪ್ರಕಟನೆಗಳನ್ನು ಆ ವಾರದಲ್ಲಿ ಪ್ರಕಟಿಸಬೇಕಾದರೆ ಶನಿವಾರ ಮಧ್ಯಾಹ್ನ ೧ ಘಂಟೆಯೊಳಗಾಗಿ ಕಳುಹಿಸಬೇಕು. ಪ್ರಕಟನೆಯ ಮಾಲೀಕರು ಈ ಪತ್ರಿಕೆಗೆ ಕೊಡತಕ್ಕ ಹಣವನ್ನು ಆಯಾ ಕಾಲದಲ್ಲಿ ತಿಳಿಸಲ್ಪಡುವ ಅವಧಿಯೊಳಗೆ ಕಳುಹಿಸತಕ್ಕದ್ದು. ಶೀಘ್ರವಾಗಿ ರುಜುಮಾಡದ ದಿಕ್ಕಿನಲ್ಲಿ ಮುಂದೆ ಪ್ರಕಟನೆಗಳನ್ನು ಪ್ರಕಟಿಸಲಾಗುವದಿಲ್ಲ. ನಿಗೇ ಕಳುಹಿಸಲ್ಪಟ್ಟ ಹಣವು ಹಿಂತಿರುಗಿಸಲ್ಪಡಲಾರದು.

"IT RECOMENDS ITSELF"

ALL WHO SUFFER FIND SURE RELIEF.

LITTLE'S

ORIENTAL BALM

THE MOST EFFECTUAL MODERN REMEDY FOR PAIN.

ಲಿಟಿಲ್ ಯೆಂಬವರಿಂದ ತಯಾರಾಗ್ತಿಲ್ಪಟ್ಟ "ಓರಿಯಂಟಲ್ ಬಾಮ್" ಎಂಬ ಪೂರ್ವದೇಶ ಸಂಬಂಧವಾದ ಅಮೂಲ್ಯ ತೈಲವು ಸ್ವಪ್ರಶಂಸೆಯ ಪ್ರದರ್ಶಕವಾದದ್ದು, ಮತ್ತು ಸಕಲವಾದ ನೋವಿನ ಪ್ರತಿಬಂಧಕವಾದ ಔಷಧವು. ಇದರಿಂದ ಸಕಲ ವಾತರೋಗಗಳೂ, ವಾತಸಂಬಂಧವಾದ ಸಂಧಿನೋವುಗಳೂ ನಿವೃತ್ತಿಯಾಗುವವು. ಮುಖ್ಯವಾಗಿ ಚಿರಕಾಲಿಕವಾದ ವಾತರೋಗಗಳು, ಶ್ವಾಸ, ಗಂಟಲುನೋವು, ಉರಿ, ನರದುರ್ಬಲತೆ, ಶೀತವಾಯು, ಕಟಿವಾಯು, ಉಳುಕು, ನೋವು, ತಲೆನೋವು, ತಿಮಿರ್ವಾಯು ಮುಂತಾದ ರೋಗಗಳಲ್ಲೆಲ್ಲ ನಿಸ್ಸಂದೇಹವಾಗಿ ಬಹಳ ಪ್ರಯೋಜನವನ್ನುಂಟು ಮಾಡತಕ್ಕದ್ದು. ಈ ತೈಲವನ್ನು ನೋವುಳ್ಳ ಸ್ಥಳಗಳಲ್ಲಿ ಕೆಲವಾವರ್ತಿ ಸವರಿ ಹಚ್ಚುವುದಾಗುವಂತೆ ಚೆನ್ನಾಗಿ ತಿಕ್ಕಿದಲ್ಲಿ ಸಕಲವಿಧವಾದ ಯೊಳ್ಳಾ ನೋವುಗಳನ್ನು ನಿವೃತ್ತಿ ಮಾಡುವಂತಹ ಉತ್ತಮ ತೈಲವಾಗಿರುತ್ತದೆ. ಸರ್ಪದಂಶನದಲ್ಲಿ ಉಪಯೋಗಿಸಿದರೆ, ಮತ್ತು ಜೋಮು ಕುಟ್ಟಿದರೆ ನಿವೃತ್ತಿಯಾಗುವದು. ಗಂಟಲು ನೋವು ಉಳ್ಳ ರೋಗಿಗಳಿಗೆ ಈ ತೈಲವು ಅದ್ಭುತವಾದ ಮತ್ತು ಶೀಘ್ರವಾದ ಸಂಪೂರ್ಣ ಗುಣವನ್ನುಂಟುಮಾಡುವದು. ಅದ್ಭುತವಾದ ಈ ಔಷಧವನ್ನು ಅಭ್ಯಾಸಮಾಡಿಕೊಂಡಿದ್ದರೆ ಅದರ ಪ್ರಯೋಜನವು ಸ್ವತಃವೇ ವ್ಯಕ್ತವಾಗುವದು. ಈ ತೈಲವು ಶೀತಗಾತ್ರ ಮುಂತಾದವುಗಳಿಗೊಳಗಾಗಿ ಸಂಚರಿಸುವಂತಹ ಪ್ರಯಾಣಿಕರು, ಬೇಟೆಯಾಡುವವರು, ವ್ಯಾಯಾಮ ಮಾಡುವವರು, ಮುಂತಾದವರಿಗೆಲ್ಲ ಅನುಕೂಲವಾದದ್ದು.

ಪರಿಶೀಲಕರ ಅಭಿಪ್ರಾಯವು.

ಇಂಗ್ಲೆಂಡ್ ದೇಶದ ಫಾರ್ಮಾಸ್ಯೂಟಿಕಲ್ ಸೊಸೈಟಿಯ ಔಷಧಾಲಯದ ಪ್ರಯೋಗಕರನಾಗಿಯೂ, ಸರ್ಜೇ ಡೇ ಆದ ಜನಾಂಗಿಕಲ್ ಸೊಸೈಟಿ ಯೆಂಬ ಪ್ರಖ್ಯಾತವಾದ ಔಷಧಿ ವಿಚಾರಕ ಸಮಾಜದ ಮೆಂಬರನಾಗಿಯೂ, "ಫುಡ್ ಆಂಡ್ ವಾಟರ್ಸ್ ಆಫ್ ಯುರೋಪ" ಎಂಬ ಗ್ರಂಥಕರ್ತನಾಗಿಯೂ, ರಸಾಯನ ವಿದ್ಯೆಯ ವಿಷಯಕವಾದ ಅನೇಕ ಲೇಖನಾಧಿಕಾರಿಯಾಗಿಯೂ, ಇರುವ ಪ್ರೊಫೆಸರ್ ಟಿಚ್ ಬೋರ್ನ್ (C. R. TICHBORNE, L. L. D., F. C. S., M. P. (A.)) ಯೆಂಬುವರು ಅಭಿಪ್ರಾಯ ಪಟ್ಟು ಯುತ್ತಾರೆಂದರೆ—ಲಿಟಿಲ್‌ರವರು ಓರಿಯಂಟಲ್ ಬಾಮ್ ಎನ್ನುವ ಔಷಧದ ಶೇಷವನ್ನು ಪರೀಕ್ಷಿಸಿದ್ದೇನೆ. ಇದು ಬಹುವಿಧ ಪ್ರಕಾರಕ ಉಪಯುಕ್ತವಾದ ಪೈಲಗಳನ್ನು ಪಟ್ಟಿದ್ದವೆ, ಇದು ಬಹು ರೋಗ ಉಪಯೋಗ ನಿರೂಪಿಸಲ್ಪಡುವಾಗ ಕುಂದ್ಯಾಂಗ ನಿರುಪದ್ರವಕರವಾದದ್ದಾಗಿದ್ದರೂ, ನಿಜವಾಗಿ ಪ್ರಬಲ ರೋಗ ನಿವಾರಕ ತಾಕತ್ತುಯುಳ್ಳದ್ದಾಗಿರುತ್ತದೆ. ಈ ಮಿಶ್ರೌಷಧವು ನರಗಳನ್ನು ಸ್ಥಿಮಿತಕ್ಕೆ ತರತಕ್ಕದ್ದಾಗಿರುವದರಿಂದ ಇದು ಯಾವ ತರದ ರೋಗಗಳಿಗೆ ಉಪಯುಕ್ತವೆಂದು ತಿಳಿಸಲ್ಪಟ್ಟಿದೆಯೋ ಸರ್ವ ರೋಗಗಳಲ್ಲಿ ಅದರ ಪ್ರಯೋಜನವು ವ್ಯಕ್ತವಾಗುವದು. ಈ ತೈಲವು ಸಂಪೂರ್ಣ ಜಾಗರೂಕತೆಯೊಡನೆ ತಯಾರಾಗ್ತಿಸಲ್ಪಟ್ಟಿರುತ್ತದೆ.

ಇದರ ಕ್ರಯ—ಸೀಸೆ ಒಂದಕ್ಕೆ ೧ ರೂಪಾಯಿ.

ಇದು ವಿಸ್ಟ್ ಔಷಧ ಶಾಲೆಯಲ್ಲಿಯೂ, ಮದರಾಸ್ ಸಂಘದಾಸ್ ಬೀದಿಯಲ್ಲಿ, ೨೦ನೇ ನಂಬರ್ ಮನೆಯೊಳಗಿರುವ, ಎ. ಸಿ. ಬ್ರಿಮರ್ ಯವರಲ್ಲಿಯೂ, ಈ ಪ್ರಾಂತ್ಯದಲ್ಲಿರುವ ಅವರ ಏಜಂಟ್‌ಗಳಾದ ಜೆ. ವೆಸ್ಟ್ ಯವರ ಕಂಪನಿಯಲ್ಲಿಯೂ, ಮೆ ಕೆಪ್ಟನ್ ಅಂಡ್ ಕಂಪನಿಯವರಲ್ಲಿಯೂ, ರಿಗ್ಸ್ ಯವರ ಕಂಪನಿಯವರಲ್ಲಿಯೂ ದೊರೆಯುವದು.

AGENTS.—Messrs, J. West, Chemist, &c., Bangalore.
Captain & Co Chemists, Bangalore.
Riggs & Co, Chemists, Bangalore; and of
Mahomed Yousoff and Sons, The Cash Bazar, Bangalore
A. C Bellyman & Co.,
20 Sambodoss Street Madras.

NOTICE.

VAIDYASARA SANGRAHA

A TREATISE ON THE PRINCIPLES OF

HINDU MEDICINE.

Price including Postage Rs 5 6-0

ವೈದ್ಯಸಾರ ಸಂಗ್ರಹ.

ಈ ಗ್ರಂಥವು ಬೇಕೆನ್ನುವವರು ಮೊಬಲಗಿನೊಡನೆ ಕೆಳಗೆ ರುಜುಮಾಡಿರತಕ್ಕವರ ಹೆಸರಿಗೆ ಬರೆಯುತ್ತೇವೆಂದರೆ ಪುಸ್ತಕ ಕೊಡಲ್ಪಡುವದು ಕಳುಹಿಸಲ್ಪಡುವದು. ಮೊಬಲಗು ಇಲ್ಲದ ದರಖಾಸ್ತುಗಳಿಗೆ ಸುತರಾಂ ನಿಗೇಕೊಡಲ್ಪಡಲಾರದು.

ಇದರಕ್ರಯ ... ... ರೂ॥ ೫—೦—೦
ಪ್ಯಾಕಿಂಗ್ ಮತ್ತು ಅಂಚೆಹಾಸಲ್, ೦—೬—೦

ಟಿ. ಬಿ. ವೆಂಕಟಾಚಾರ್,
ಆಸ್ಪತ್ರೆಯೊಳಗೆ ಬೆಂಗಳೂರು.

ವಿಶೇಷ ವರ್ತಮಾನ.



ಪ್ರತಿ ಚಿತ್ರಶಾಲೆಯಲ್ಲಿ ಸಿದ್ಧಪಡಿಸಲ್ಪಟ್ಟಿರುವ ಜೋಡಿ ಕಿ ಅರಮನೆಯನ್ನು, ಹಿಂದೂ ದೇವರುಗಳ, ಚರಿತ್ರೆಗಳ ಮೂಲಕ ಪ್ರಸಿದ್ಧರಾದ ಪತಿವ್ರತೆಯರ, ಸುಂದರಿಯರಾದ ಸ್ತ್ರೀಯರ ಚಿತ್ರಗಳ ಚಿತ್ರಗಳ ಪಟ್ಟಿಯ ರೂಪವನ್ನು ಕಳುಹಿಸಿದರೆ ಆಹ್ವಾನ ಪತ್ರಗಳನ್ನು ತಯಾರಿಸಲಾಗುವದು. ಇವುಗಳ ಕ್ಯಾಟಲಾಗು ಬೇಕಾದವರು ಅಂಚೆ ಸ್ಟಾಂಪು ಕಳುಹಿಸಿ ಕ್ರಯ ಬಹಳ ಅಲ್ಪವಾಗಿದೆ. ಕ್ಯಾಟಲಾಗು ಕಳುಹಿಸಲ್ಪಡುವದು.

ಪೂನಾ ಸಾರ್ ಚಿತ್ರಶಾಲೆಯ ಮ್ಯಾನೇಜರ್.

ನೋಟೀಸ.

ಅಪ್ಸಲ್ ಬಾಬತು ಬಿನಸಾವರಿ ಅತ್ತರಗಳು !
ಬಾಧೆ ನಿವರ್ತಿ ಮಾಡುವ ದಂತಭಸ್ಮ ! !
ಅನೇಕ ಸುಗುಣಗಳುಳ್ಳ ಸುಗಂಧರಾಜ ತೈಲವು ! ! !
ನಾನಾತರದ ಅಪ್ಸಲ್‌ಬಾಬತು ಊದು ಬತ್ತಿಗಳು
ಮತ್ತು ಬಿಳ್ಳೆಗಳು ಹೊಸ ಬಿಳ್ಳೆಗಳು ವಗೈರೆ.

ಇವುಗಳೆಲ್ಲ ಬಹಳ ಪರಿಮಳದಿಂದ ತಯಾರಾಗಿ ಬಿಕರೀಗೆ ಸಿದ್ಧವಾಗಿರುತ್ತೆ. ಅಲ್ಲದೆ ೫ ಸಾವಿರ ಸೀಸೆಗಳಿಗೆ ಮೇಲ್ಪಟ್ಟು ಬಿಕರಿ ಆಗಿರುವ, ಬಹಳ ಸಂಕಟಗಳನ್ನು ಪರಿಹಾರ ಮಾಡಿ ಯಾವಾಗಲೂ ಸುವಾಸನೆ ಕೊಡುವ ಸುಗಂಧರಾಜ ತೈಲವು ರಾತ್ರಿ ಹಗಲು ಬಾಧಿಸುವ ಹಲ್ಲು ನೋವನ್ನು ಪರಿಹಾರ ಮಾಡುವ ದಂತ ಭಸ್ಮ ಸಹ ಒಡನೆ ಕಮ್ಮಿ ಚಾರ್ಜಿಗೆ ಸಿಕ್ಕುವದು. ಏಜಂಟ್ ಆ ಮಹಮದ್ ಖಾಸಿಂ, ಬೆಂಗಳೂರು ದೊಡ್ಡಪೇಟೆ ಅಂಚೆ ಕಚೇರಿ ರೂಬರೂ ಸಾಪ್‌ಕೀಪರ್.

ದಕ್ಷಿಣ ಮಹಾರಾಷ್ಟ್ರ ರೈಲ್ವೆ.

ಪ್ರಕಟನೆ.

ಸನ ೧೮೮೮ ನೇ ಇಸವಿ ೧ನೇ ನವಂಬರ್ ಲಗಾಯತು ದಕ್ಷಿಣ ಮಹಾರಾಷ್ಟ್ರ ರೈಲ್ವೆಯ ಒಂದು ಸ್ಟೇಷನ್ನಿಂದ ಮತ್ತೊಂದು ಸ್ಟೇಷನ್ನಿಗೆ ರವಾನಿಸಲ್ಪಡುವ ಮಾಲಿನ ಮೇಲೆ ದರ ಮಣಕ್ಕೆ ೬ ಪೈ ಯಂತೆಯೂ ಮತ್ತು ದಕ್ಷಿಣ ಮಹಾರಾಷ್ಟ್ರ ರೈಲ್ವೆಯ ಸ್ಟೇಷನ್ನಿಂದ ಇತರ ರೈಲ್ವೆ ಸ್ಟೇಷನ್‌ಗಳಿಗೆ ರವಾನಿಸಲ್ಪಡುವ ಅಥವಾ ಇತರ ರೈಲ್ವೆ ಸ್ಟೇಷನ್‌ಗಳಿಂದ ತರಿಸಲ್ಪಡುವ ಮಾಲಿನ ಮೇಲೆ ದರ ಮಣಕ್ಕೆ ೩ ಪೈ ಯಂತೆಯೂ ಟರಮಿನಲ್ ಚಾರ್ಜು ವಸೂಲು ಮಾಡಲಾಗುವದು. ಈ ಟರಮಿನಲ್ ಚಾರ್ಜನ್ನು ಸಾಮಾನಿಗೆ ಕೊಡಬೇಕಾದ ಹಾಸಲಿನ ಜೊತೆಗೆ ಕೊಡತಕ್ಕದ್ದು. ದಕ್ಷಿಣ ಮಹಾರಾಷ್ಟ್ರ ರೈಲ್ವೆ ಸ್ಟೇಷನ್ನಿಂದ ಇತರ ರೈಲ್ವೆ ಸ್ಟೇಷನಿಗಾಗಲಿ, ಅಥವಾ ಇತರ ರೈಲ್ವೆ ಸ್ಟೇಷನ್ನಿಂದ ಈ ರೈಲ್ವೆ ಸ್ಟೇಷನಿಗಾಗಲಿ ಕಳುಹಿಸುವ ಮತ್ತು ತರಿಸುವ ಸಾಮಾನುಗಳಿಗೆ ಈ ರೈಲ್ವೆಗೆ ಕೊಡತಕ್ಕ ಟರಮಿನಲ್ ಚಾರ್ಜಲ್ಲದೆ ಇತರ ರೈಲ್ವೆಯ ಟರಮಿನಲ್ ಚಾರ್ಜು ಸಹ ಕೊಡಬೇಕಾಗುವದು. ಮಾಲೀಕರೇ ಗಾಡಿಗಳಲ್ಲಿ ಹೇರತಕ್ಕಂಥ ಮತ್ತು ಇಳಿಸತಕ್ಕಂಥಾ ಸಾಮಾನುಗಳಿಗೆ ಸಹ ಈ ಟರಮಿನಲ್ ಚಾರ್ಜು ಕೊಡಬೇಕು.

ಟ್ರಾಫಿಕ್ ಮ್ಯಾನೇಜರಾಫೀಸ್, ಧಾರವಾಡ,
ತಾ॥ ೨೦—೧೦—೧೮೮೮. } ಜೇಮ್ಸ್ ಕ್ರೇಕ್, ಟ್ರಾಫಿಕ್ ಮ್ಯಾನೇಜರ್.

ನೋಟೀಸ್.

ನೆಲಮಂಗಲದ ಮುನಸಫ್ ಕೋರ್ಟಿನಿಂದ.

ಸನ 1888ನೇ ಇಸವಿ ಒರಿಜಿನಲ್ ನಂಬರ್ 391.

ವಾದಿ.

ದೊಡ್ಡ ಬಳ್ಳಾಪುರದ ತಾಲ್ಲೂಕು ಹೊನ್ನಾವಾರದ ಹೋಬಳಿ ಸಾಕಲ ಹೊಸವ ಪುರದಲ್ಲಿರುವ ವಕ್ಕಲಿಗರ ಬೈರೆ ಯ್ಯನಮಗ ಬೈರಣ್ಣ.

ಪ್ರತಿವಾದಿಗಳು.

1ನೇ-ದೇವನಹಳ್ಳಿ ತಾಲ್ಲೂಕು ಕುಂದಾಣದ ಹೋಬಳಿ ಗೋರವೂರಿನಲ್ಲಿರುವ ಬ್ರಾಹ್ಮಣ ಅಶ್ವತ್ಥರಾಮಯ್ಯನ ಮಗ ಕೃಷ್ಣಯ್ಯ. 2ನೇ-ದೊಡ್ಡ ಬಳ್ಳಾಪುರ ತಾಲ್ಲೂಕು ಹೊನ್ನಾವಾರದ ಹೋಬಳಿ ದೊಡ್ಡ ಹೆಜ್ಜಾಜಿಯಲ್ಲಿರುವ ಕಾಸ್ಸೆ ಧೋಗ ವೆಂಕಟಪ್ಪನಮಗ ಕಾಡ್ಡಯ್ಯ. 3ನೇ-ಸದರೀ ಊರಲ್ಲಿರುವ ಇವನ ಮಗ ಸಂಗಯ್ಯ. 4ನೇ-ಸದರಿ ಊರಲ್ಲಿರುವ ಇವನ ತಮ್ಮ ವೆಂಕಟರಾಮಯ್ಯ. 5ನೇ-ಇವನ ತಮ್ಮ

ವೆಂಕಟಕೃಷ್ಣಯ್ಯ, ಮೈನರು. ಇವರ ಕ್ಷೇಮಚಿಂತಕ, ಈತನ ತಂದೆ 2ನೇ ಪ್ರತಿವಾದಿ ಶಾಮಯ್ಯ. 6ನೇ-ಸದರೀ ಊರಲ್ಲಿ 2ನೇ ಪ್ರತಿವಾದಿ ಮನೆಯಲ್ಲಿರುವ 2ನೇ ಪ್ರತಿವಾದಿ ಅಳಿಯ ತೀರಿದವನಮಗ ನರಸಪ್ಪ. 7ನೇ-ಸದರೀ ಊರಲ್ಲಿರುವ ವೆಂಕಟರಾಮಯ್ಯನ ಮಗ ಪುಟ್ಟಯ್ಯ.

ಇದರಿಂದ ಈ ನಂಬರ್ 1ನೇ ಪ್ರತಿವಾದಿಗೆ ತಿಳಿಯಪಡಿಸುವದೇನಂದರೆ,—ನಿಮ್ಮಗಳಮೇಲೆ ವಾದಿಯು ಸನ್ 1883 ನೇ ಇಸವಿ ಅಕ್ಟೋಬರ್ 15ನೇ ತಾರೀಖಿನ ರಿಜಿಸ್ಟರು ಛಾ ತಮಸೂಕು ಬಾಬತು ಅಸಲ್ 460--0--0 ರೂಪಾಯಿ, ಬಡ್ಡಿ ಪತ್ರದ ತಾರೀಖ್ ಲಾಗಾಯತು ದಾವಾ ತಾರೀಖುವರಿವಿಗೆ ೮೧ ಬಡ್ಡೀ ಪೈಕಿ ವಸೂಲ್‌ಬಂದ 50-0 0 ರೂಪಾಯಿ ಮತ್ತು ವಜಾ ಬಿಟ್ಟಿಗೆ ಬಡ್ಡಿ ವಜಾ ಜಾತಾ ಬಾಕೀ 140-0-0 ರೂಪಾಯಿ, ಜುಮ್ಲಾ 600-0-0 ರೂಪಾಯಿ ಕೋರ್ಟು ಖರ್ಚು ವಗೈರೆ ಆಧಾರದ ಸ್ವತ್ತಿನಿಂದಲೂ, 1, 2, 3, 4, 5, 7ನೇ ಪ್ರತಿವಾದಿಗಳ ಖುದ್ದು ಜವಾಬ್ದಾರೀ ಇತರ ಸ್ವತ್ತಿನಿಂದಲೂ ಸಹ ಕೊಡಿಸಬೇಕೆಂದು ದಾವಾ ಮಾಡಿರುವ ಮೊಕದ್ದಮೆಯನ್ನು ಇಮ್ಮ ಸೆಟಲ್‌ಮೆಂಟ್ ಗೋಸ್ಕರ 1888ನೇ ಇಸವಿ ನವಂಬರ್ ತಿಂಗಳ 28ನೇ ತಾರೀಖಿಗೆ ಮುದ್ದತ್ ಆಗಿರುವದರಿಂದ ಆ ತಾರೀಖು ದಿವಿ 11 ಘಂಟೆಗೆ ನೇಮಂಗಲದ ಮೊಕ್ಕಾಂ ಮುನಸಫ್‌ಕೋರ್ಟಿಗೆ ಹಾಜರಾಗಬೇಕು, ತಪ್ಪಿದರೆ ನಿಮ್ಮ ಗೈರ್ಹಾಜರೀಯಲ್ಲಿ ಕ್ರಮಪ್ರಕಾರ ನಡೆಸಲ್ಪಡುತ್ತೆ.

ತಾ|| 29ನೇ ಅಕ್ಟೋಬರ್, ಸನ್ 1888ನೇ ಇಸವಿ.

S. N. RAMASAWMIENGAR,
ಮುನ್ಸಫ್.

ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA.

MONDAY, NOVEMBER 5, 1888.
೧೮೮೮ನೇ ನವಂಬರ್ ತಾ|| ೫ನೇ ಸೋಮವಾರ.

COMMENCEMENT OF MR. CRAWFORD'S TRIAL.

ಕಳೆದ ತಿಂಗಳ ೨೩ನೇ ತಾರೀಖಿನಲ್ಲಿ ಮೆ|| ಕ್ರಾಫರ್ಡ್‌ಯವರ ಮೊಕದ್ದಮೆಯ ದರ್ಯಾಪ್ತಿಯು ಅದಕ್ಕಾಗಿ ಏರ್ಪಟ್ಟ ಕಮಿಟಿಯವರಿಂದ ಉಪಕ್ರಮಿಸಲ್ಪಟ್ಟಿತು. ಈ ಮೊಕದ್ದಮೆಯು ಮುಂಬೈ ಪ್ರೆಸಿಡೆನ್ಸಿಯ ಪ್ರಜೆಗಳಿಗೆಲ್ಲ ವಿಶೇಷ ಉತ್ಸಾಹಕರವಾದದ್ದಾಗಿಯೂ, ಒಬ್ಬ ಯೂರೋಪಿಯನ್ ಆಫೀಸರರ ಪ್ರಾಮಾಣಿಕತೆಯನ್ನು ನಿರೂಪಿಸುವಂಥಾದ್ದಾಗಿಯೂ ಇರುವದರಿಂದ ಇದರ ಫಲಿತಾಂಶವನ್ನರಿಯುವದರಲ್ಲಿ ಪ್ರತಿಮನುಷ್ಯನೂ ವಿಶೇಷ ಅಕ್ಕರೆಯುಳ್ಳವನಾಗಿರುವಂತೆಯೂ ಮೊಕದ್ದಮೆಯ ವಿಚಾರಣೆ ಕಾಲದಲ್ಲಿ ಜನಗಳ ಸಮ್ಮರ್ದವು ಅತ್ಯಧಿಕವಾಗಿರುವಂತೆಯೂ ತಿಳಿಯಬರುತ್ತದೆ. ಪ್ರಸಕ್ತ ಕಮಿಟಿಗೆ ಕಲ್ಕತ್ತಾ ಹೈಕೋರ್ಟು ಜಡ್ಜಿಯಾದ ಮೆ|| ವಿಲ್ಸನ್ ಎಂಬವರು ಪ್ರೆಸಿಡೆಂಟರಾಗಿಯೂ, ವಾಯವ್ಯ ದೇಶದ ರೆವಿನ್ಯೂಬೋರ್ಡ್ ಮೆಂಬರಾದ ಆನರೆಬಲ್ ಜೆ. ಡಬ್ಲ್ಯು ಕ್ವಿಂಟನ್‌ಯವರೂ, ಮಧ್ಯರಾಷ್ಟ್ರಗಳ ಜುಡಿಷಿಯಲ್ ಕಮಿಷನರ್ ಮೆ|| ಆರ್. ಜೆ. ಕ್ರಾಸ್ತ್‌ವೈಟಿಯವರೂ, ಮೆಂಬರುಗಳಾಗಿಯೂ ನಿಯಮಿಸಲ್ಪಟ್ಟಿರುತ್ತಾರೆ. ಗವರ್ನಮೆಂಟ್ ತರಫ್ ಅಡ್ವೊಕೇಟ್ ಜನರಲ್ ಮೆ|| ಲೆಥಾಂ, ಮೆಸ್ಸರ್ಸ್ ಜಾರ್ಡೈನ್, ಮೆ|| ರಿಟ್ಲ ಎಂಬವರೂ, ಮೆ|| ಕ್ರಾಫರ್ಡ್‌ಯವರ ತರಫ್ ಮೆ|| ಇನ್ವೆರಾರಿಟಿ, ಮೆ|| ಲೆಂಗ್ ಎಂಬವರೂ ಹಾಜರಾಗಿ ಮೊಕದ್ದಮೆಯನ್ನು ಜರಿಗಿಸುತ್ತಲಿರುವಂತೆ ತಿಳಿಯಬರುತ್ತದೆ. ಕ್ರಮವಾಗಿ ಮೊಕದ್ದಮೆಯ ವಿಚಾರಣೆಯು ಪ್ರಾರಂಭವಾದ ಕೂಡಲೇ ಮೆ|| ಜಾರ್ಡೈನ್‌ಯವರು ಮೆ|| ಕ್ರಾಫರ್ಡ್‌ಯವರ ಮೇಲೆ ಆಪಾದಿಸಲ್ಪಟ್ಟಿರುವ ೩೩ ತಕ್ಸೀರುಗಳನ್ನು ಓದಿ ಅವುಗಳ ಕುರಿತು ಮೂರುಘಂಟೆಯಕಾಲ ಎಡೆಬಿಡದೆ ವಾದಿಸಿ ಮೊಕದ್ದಮೆಯನ್ನು ಚೆನ್ನಾಗಿ ನಿರೂಪಿಸಿದರು. ಮೆ|| ಕ್ರಾಫರ್ಡ್‌ಯವರು ೩೦ ಸಂದರ್ಭಗಳಲ್ಲಿ ಅನೇಕರಿಂದ ರುಷುವತ್ತುಗಳು ತೆಗೆದುಕೊಂಡಂತೆ ವ್ಯಕ್ತವಾಗುವದಲ್ಲದೆ ಇನ್ನೂ ಅನೇಕ ಬಾಬುಗಳು ದೊರಗುವವೆಂದು ಕೇಳುತ್ತೇವೆ. ೧೮೮೭ನೇ ಇಸವಿ ಜೂನ್ ಮೊದಲು ೮೮ನೇ ಇಸವಿ ಜನವರಿವರಿಗೆ ಮೆ|| ಕ್ರಾಫರ್ಡ್‌ಯವರು ಒಂದೊಂದು ಸಂದರ್ಭದಲ್ಲಿ ೫೦೦, ೧,೦೦೦. ೧,೫೦೦ ಈರೀತಿ ಹನುಮಂತರಾಯರವರ ಮೂಲಕ ರುಷುವತ್ತುಗಳು ತೆಗೆದುಕೊಂಡಂತೆ ಆಪಾದಿಸಲ್ಪಟ್ಟಿರುತ್ತಾರೆ. ಮೆಸ್ಸರ್ಸ್ ಕ್ರಾಫರ್ಡ್‌ಯವರು ಆಪ್ಯಾಯಿತ ಚಾರ್ಜಿನಲ್ಲಿ ಕೆಲವು ಭಾಗವನ್ನು ಮಾತ್ರ ಅಂಗೀಕರಿಸಿ ಮಿಕ್ಕ ದೋಷಗಳನ್ನೆಲ್ಲ ನಿರಾಕರಿಸಿಬಿಟ್ಟರು. ಇದನ್ನು ಲಿಖಿತ ಮೂಲಕವಾಗಿ ತಿಳಿಸಬೇಕೆಂದು ಪ್ರೆಸಿಡೆಂಟರು ಕೇಳಲು ಅವರು ತಮ್ಮ ಕೈಫಿಯತ್ತನ್ನು ಬರೆದುಕೊಟ್ಟರು. ತರುವಾಯ ಫಿರ್ಯಾದಿಕಡೆ ಸಾಕ್ಷಿಗಳ ದರ್ಯಾಪ್ತಿಯು ಪ್ರಾರಂಭವಾಗಿ ಅದೇ ಇನ್ನೂ ನಡೆಯುತ್ತಲಿರುವಂತೆ ಪುನೆ ಪತ್ರಿಕಾ ಮೂಲಕ ತಿಳಿಯಬರುತ್ತದೆ. ಹನುಮಂತರಾಯರವರು ಮೆ|| ಕ್ರಾಫರ್ಡ್‌ಯವರಿಗೆ ಹಿರೀಕಾಗಿ ರುಷುವತ್ ತೆಗದುಕೊಟ್ಟ ದರ ಫಲವನ್ನು ಅವರೀಗ ಬಂದೀಖಾನೆಯಲ್ಲಿ ಅನುಭವಿಸುತ್ತಲಿದ್ದಾರೆ. ಮೆ|| ಕ್ರಾಫರ್ಡ್‌ಯವರ ಅದೃಷ್ಟ ವಿಶೇಷವೆಂತಿರುವದೋ ನಾವರಿಯೆವು. ಪರಂತು ಈ ಮೊಕದ್ದಮೆಯನ್ನು ದರ್ಯಾಪ್ತೀ ಮಾಡುವದಕ್ಕಾಗಿ ನಿಯಮಿಸಲ್ಪಟ್ಟಿರುವ ದೊಡ್ಡಮನುಷ್ಯರು ಪರಸ್ಥಳದವರಾಗಿಯೂ, ಜವಾಬ್ದಾರೀಯುಳ್ಳ ಪದವಿಗಳಲ್ಲಿರತಕ್ಕವರಾಗಿಯೂ ಇರುವದರಿಂದ ಇವರ ಪ್ರಾಮಾಣಿಕತೆಯು ನಿರಾಕ್ಷೇಪಣೀಯ ವಾದದ್ದೆಂಬದರಲ್ಲಿ ಲೇಶ ಮಾತ್ರವೂ ಸಂಶಯವಿಲ್ಲವು. ಪರಂತು ಮೆ|| ಕ್ರಾಫರ್ಡ್‌ಯವರ ಜಾತಿ ಮತ ವಿಷಯಮಾತ್ರ ಸ್ವಲ್ಪ ಅನುಮಾನಕ್ಕೆ ಅವಕಾಶವನ್ನುಂಟುಮಾಡತಕ್ಕದ್ದಾಗಿದೆ. ಆದಾಗ್ಯೂ ಪ್ರತಿಮನುಷ್ಯನೂ ದೋಷಾಪವಾದಕ್ಕೆ ಅಂಜಿ ವರ್ತಿಸಬೇಕಾದದ್ದು ನ್ಯಾಯವಾದದರಿಂದ ಮೊಕದ್ದಮೆಯು ಸ್ವರೂಪಾನುಗುಣವಾಗಿಯೇ ಅದು ವಿಮರ್ಶಿಸಲ್ಪಡಬಹುದೆಂಬ ನಿರೀಕ್ಷಣೆಯು ಅನೇಕರಿಗುಂಟಾಗಿದೆ. ಸದರೀ ನಿರೀಕ್ಷಣೆ ಎಷ್ಟರಮಟ್ಟಿಗೆ ಸಫಲವಾಗುವದೋ ಅದು ನ್ಯಾಯವಿಮರ್ಶಕರ ತೀರ್ಮಾನದ ಮೇಲೆ ಏರ್ಪಡಬೇಕಾದದ್ದಾಗಿರುವದು. ಸದ್ಯಃ ಪ್ರಸಕ್ತ ಮೊಕದ್ದಮೆಯು ನ್ಯಾಯವಿಧಾಯಕ ಸಭೆಯವರ ಮುಂದೆ ವಿಚಾರಣೆಯಲ್ಲಿರುತ್ತಲಿರುವದರಿಂದ ಇವರ ತೀರ್ಮಾನವು ಕ್ರಮವಾಗಿ ಹೊರಗಾಗುವತನಕ ನಾವು ಯಾವ ವಿಧ ಅಭಿಪ್ರಾಯವನ್ನೂ ನಿರ್ಧರಿಸಿ ತಿಳಿಸಲಾರೆವು.

THE MAHARANI'S CASTE GIRLS' SCHOOL.

ಕಳೆದ ತಿಂಗಳ ೧೯ನೇ ತಾರೀಖ್ ಶುಕ್ರವಾರದ ದಿನ ಬೆಳಗ್ಗೆ ಮೈಸೂರು ಮಹಾರಾಣಿಯವರ ಬಾಲಿಕಾ ಪಾಠಶಾಲೆಯ ವಿದ್ಯಾರ್ಥಿನೀಯರಿಗೆ ಗತ ವರುಷದಲ್ಲಿ ಅವರು ಪಡೆದ ಪುರೋಭಿವೃದ್ಧಿಗೆ ಪ್ರೋತ್ಸಾಹ ರೂಪವಾಗಿ ಬಹುಮಾನಗಳು ಕೊಡಲ್ಪಟ್ಟ ಅಂಶವನ್ನೂ, ಸದರೀ ಪಾಠಶಾಲಾಭಿವೃದ್ಧಿಯನ್ನೂ, ಅದರ ಕ್ಷೇಮಚಿಂತಕರಾದವರನೇಕರು ಅದಕ್ಕೆ ಮಾಡಿದ ಸಹಾಯಗಳನ್ನೂ, ಅದರ ವಿಷಯದಲ್ಲಿ ಶ್ರೀಮನ್ಮಹಾರಾಜರವರು ತಮ್ಮ ದಿವಾನರ ಮೂಲಕ ವ್ಯಕ್ತಪಡಿಸಿದ ಸಂತೋಷ ಸೂಚಕವಾದ ಅಭಿಪ್ರಾಯವನ್ನೂ ಈ ಪತ್ರಿಕೆಯನ್ನೋದತಕ್ಕವರ ತಿಳುವಳಿಕೆಯ ಬಗ್ಗೆ ಇದರಡಿ ಸಂಗ್ರಹವಾಗಿ ಪ್ರಕಟಿಸುವೆವು. ಇದರಿಂದಲೇ ಈ ಸಂಸ್ಥಾನದಲ್ಲಿ ಇತರ ವಿಷಯಾಪೇಕ್ಷೆಯಾ ಸ್ತ್ರೀ ವಿದ್ಯಾಭ್ಯಾಸಕ್ಕೆ ಉಂಟಾಗಿರುವ ಪ್ರೋತ್ಸಾಹ ಪ್ರಶಸ್ತ್ಯಗಳನ್ನು ಸ್ವಾನುಭವದಿಂದಲೂ ಆಪ್ತವಾಕ್ಯದಿಂದಲೂ ನಿರ್ಧರಿಸಿ ತಿಳಿದುಕೊಂಡು, ತನ್ಮೂಲಕ ಸುಖಸಂತೋಷ ಪ್ರಯೋಜನಗಳನ್ನನುಭವಿಸಲಿಕ್ಕೆ ಈ ದೇಶೀಯರು ಸಮರ್ಥರಾಗಿರುವದರಿಂದ ಅದರ ವಿಷಯದಲ್ಲಿ ನಮ್ಮ ಅಭಿಪ್ರಾಯವು ಅನಾವಶ್ಯಕವೆಂದು ಭಾವಿಸುವೆವು.

ಮೇಲೆ ಕಂಡ ಉದ್ದೇಶದೊಡನೆ ಮೈಸೂರು ಜಗನ್ಮೋಹನ ಬಂಗ್ಲೆಯಲ್ಲಿ ಸೇರಿದ್ದ ಸಭೆಗೆ ಶ್ರೀಮನ್ಮಹಾರಾಜರವರು, ಅವರ ಜ್ಯೇಷ್ಠ ಪುತ್ರಿಯಾದ ಜಯಲಕ್ಷ್ಮಮ್ಮಣ್ಣಿಯವರು, ಬ್ರಿಟಿಷ್ ರೆಸಿಡೆಂಟರು, ಇವರ ಭಾರ್ಯೆಯವರು, ದಿವಾನರವರು ವಗೈರೆ ಅನೇಕಜನ ನೇಟಿವ್ ಮತ್ತು ಯೂರೋಪಿಯನ್ ದೊಡ್ಡಮನುಷ್ಯರು ಬಂದಿದ್ದರು. ಮಹಾರಾಜರವರು ಅಗ್ರಾಸನವನ್ನಂಗೀಕರಿಸಿದ ಕೂಡಲೇ ಸದರೀ ಬಾಲಿಕಾ ಪಾಠಶಾಲೆಯ ಆನರರಿ ಸೆಕ್ರೆಟರಿಯಾಗಿಯೂ ಅದಕ್ಕೆ ಮುಖ್ಯಾಭಿಮಾನಶಾಲಿಯಾಗಿಯೂ ಇರುವ ದರ್ಬಾರ್‌ಬಕ್ಷಿ ಮೆ|| ರಾಯಬಹದೂರ್ ಎ. ನರಸಿಂಹಯ್ಯಂಗಾರ್ರವರು ೧೮೮೭—೮೮ನೇ ಇಸವಿಯ ಫಸಲೆಯ ವರುಷದ ರಿಪೋರ್ಟನ್ನು ಓದಿದರು. ಸದರೀ ರಿಪೋರ್ಟಿನಲ್ಲಿ ಪ್ರಥಮತಃ ಸಾಬಕ್ ಕೌನ್ಸಿಲರ್ ಮೆ|| ಕೃಷ್ಣರಾಯರವರ ಗುಣಪ್ರಶಂಸೆಯೂ, ಅವರ ಮರಣದಿಂದ ಮುಖ್ಯವಾಗಿ ಪಾಠಶಾಲೆಗೆ ಉಂಟಾದ ನಷ್ಟಪ್ರಯುಕ್ತವಾದ ಖೇದವೂ ವ್ಯಕ್ತಗೊಳಿಸಲ್ಪಟ್ಟವು. ತರುವಾಯ ಸೆಕ್ರೆಟರಿಯವರು ಕಳೆದ ಸಾಲಿನಲ್ಲಿದ್ದ ಸ್ಕೂಲಿನ ತರಗತಿ ವಿಭಾಗ ಕ್ರಮಗಳನ್ನೂ ಅವುಗಳಲ್ಲಿ ಓದುತ್ತಲಿದ್ದ ವಿದ್ಯಾರ್ಥಿನೀಯರ ಸಂಖ್ಯೆಯನ್ನೂ ತಿಳಿಸಿದರು ಹ್ಯಾಗಂದರೆ:—

೧. ಹೈಸ್ಕೂಲ್ ತರಗತಿ.	ವಿದ್ಯಾರ್ಥಿನೀಯರು	೬
೨. ಮಿಡಿಲ್‌ಸ್ಕೂಲ್,,	,,	೩೨
೩. ಅಪ್ಪರ್‌ಪ್ರೈಮರಿ,,	,,	೧೮೫
೪. ಲೋವರ್‌ಪ್ರೈಮರಿ,,	,,	೬೯
೫. ಮಕ್ಕಳ ತರಗತಿ	,,	೧೫೧
೬. ಮನೆಯಲ್ಲಿ ವಿದ್ಯಾಭ್ಯಾಸ	,,	೫೧
	ಜುಮ್ಲಾ...	೪೯೪

ಗತವರುಷದ ಪ್ರಾರಂಭದಲ್ಲಿ ಪಾಠಶಾಲೆಯೊಳು ಒಟ್ಟು ೪೩೯ ಮಂದಿ ಹುಡಿಗಿಯರು ಇದ್ದರಲ್ಲದೆ ೧೦೪ ಮಂದಿ ಜಾಸ್ತಿಯಾಗಿ ದಾಖಲಾದರು. ಅವರಲ್ಲಿ ೧೩೧ ಮಂದಿ ಪಾಠಶಾಲೆಯಂ ಬಿಟ್ಟುಬಿಟ್ಟರು. ಏತೇನ ಕಳೆದ ಮಾರ್ಚ್ ಆಖೈರಿನಲ್ಲಿ ವಿದ್ಯಾರ್ಥಿನೀಯರ ಸಂಖ್ಯೆಯು ಒಟ್ಟು ೪೧೨ ಇದ್ದಂತೆ ಏರ್ಪಡುತ್ತದೆ. ಪ್ರತಿಸಂವತ್ಸರದಲ್ಲು ಕೆಲವು ತಿಂಗಳಲ್ಲಿ ಹುಡಿಗಿಯರ ಸಂಖ್ಯೆ ಕಡಮೆಯಾಗಲಿಕ್ಕೂ ಮತ್ತು ಕೆಲವು ಕಾಲದಲ್ಲಿ ಜಾಸ್ತಿಯಾಗಲಿಕ್ಕೂ ಉಂಟಾದ ನಿವಾರಣಾ ಕೆಲವು ಕಾರಣಗಳನ್ನು ಸೆಕ್ರೆಟರಿಯವರು ಸೂಚಿಸಿರುತ್ತಾರೆ. ಕಳೆದ ತಿಂಗಳ ಆದಿಭಾಗದಲ್ಲಿ ೫೨೩ ಹುಡಿಗಿಯರು ಹಾಜರಿದ್ದಂತೆ ಲೆಕ್ಕವಾಗಿದೆ. ಇಷ್ಟರ ಸಂಖ್ಯೆ ಹಿಂದೆ ಯಾವಾಗಲು ಇದ್ದಂತೆ ಯಾವ ರಿಪೋರ್ಟಿನಿಂದಲೂ ತಿಳಿಯಬರುವದಿಲ್ಲವು. ಈಸಲ ೧೮ ಮಂದಿ ಹುಡಿಗಿಯರು ಪರಸ್ಥಳಗಳಿಂದ ಶರೀರಶ್ರಮ ದ್ರವ್ಯ ವ್ಯಯದೊಡನೆ ವಿದ್ಯಾ ಸಂಗ್ರಹಣಾರ್ಥವಾಗಿ ಇಲ್ಲಿಗೆ ಕಳುಹಿಸಲ್ಪಟ್ಟದ್ದರಿಂದ ಅವರು ಮಿಡಿಲ್ ಸ್ಕೂಲ್ ಮತ್ತು ಅಪ್ಪರ್‌ಪ್ರೈಮರಿ ತರಗತಿಗಳಿಗೆ ದಾಖಲ್ಮಾಡಲ್ಪಟ್ಟದ್ದಾರೆ. ವಿದ್ಯಾಮೂಲಕವಾದ ಪ್ರಯೋಜನವನ್ನು ಕಂಡುಕೊಂಡು ಅನ್ಯರಿಗೆ ಉದಾಹರಣ ರೂಪವಾಗಿ ಸದರೀ ಹುಡಿಗಿಯರ ತಾಯಿ ತಂದೆಗಳು ಮೊದಲು ಪ್ರವರ್ತಿಸಿದ್ದು ಬಹಳ ಕೊಂಡಾಡತಕ್ಕ ಅಂಶವೆಂಬದಾಗಿ ಸೆಕ್ರೆಟರಿಯವರು ಅಭಿಪ್ರಾಯಪಡುತ್ತಾರೆ. ಇಂದ್ಯದೇಶದಲ್ಲಿ ಸ್ತ್ರೀಯರಿಗೆ ಬಾಲ್ಯ ದಶೆಯಲ್ಲಿಯೇ ಸಂಸಾರಿಕಭಾರವು ಪ್ರಾಪ್ತವಾಗುವದರಿಂದ ಅವರ ವಿದ್ಯಾಭಿವೃದ್ಧಿಗೆ ಇಲ್ಲಿ ಬಹಳ ಅಡಚಣೆಯುಂಟಾಗಿವೆಯೆಂತಲೂ, ಪರಂತು ಮನೆಗಳಿಗೆ ಹೋಗಿ ಪಾಠಹೇಳುವ ಕ್ರಮವು ಬಹಳ ಪ್ರಯೋಜನಕರವಾಗುತ ಬರುತ್ತಿದೆಯೆಂತಲೂ, ಏಳುಜನ ಪಂಡಿತರು ವಯಸ್ಸಾದ ಹೆಣ್ಣುಹುಡಿಗಿಯರಿಗೂ ದೊಡ್ಡದೊಡ್ಡ ಹೆಂಗಸರಿಗೂ ಅವರವರ ಮನೆಗಳಿಗೆಹೋಗಿ ಕನ್ನಡಸಂಸ್ಕೃತ ಪಾಠ ಹೇಳುವಂತೆ ಏರ್ಪಾಡುಮಾಡಲ್ಪಟ್ಟದೆಯೆಂತಲೂ, ಇನ್ನು ಕೆಲವು ಕಾಲದೊಳಗಾಗಿ ಸದರೀ ಎರಡು ಭಾಷೆಗಳನ್ನು ಬೋಧಿಸಲಿಕ್ಕೆ ಅವರು ಶಕ್ತರಾಗಬಹುದೆಂತಲೂ, ಗತ ಸಂವತ್ಸರದಲ್ಲಿ ಪಾಠಶಾಲೆಯು ಒಳ್ಳೆಯ ಅಭಿವೃದ್ಧಿ ದಶೆಯೊಳಿತ್ತೆಂತಲೂ, ಸೂಪರಿಂಟೆಂಡೆಂಟು, ಉಪಾಧ್ಯಾಯರುಗಳು, ಸೆಕ್ರೆಟರಿ ಮೊದಲಾದವರು ಮಾಡಿದ ಉತ್ಸಾಹ ಪೂರ್ವಕವಾದ ಪ್ರಯತ್ನಕ್ಕಾಗಿ ಅವರ ವಿಷಯದಲ್ಲಿ ಎಲ್ಲರೂ ಕೃತಜ್ಞರಾಗಿರಬೇಕೆಂತಲೂ ಸೆಕ್ರೆಟರಿಯವರು ಸೂಚಿಸಿದರು. ಗತ ವರುಷದಲ್ಲಿ ಬಾಲಿಕಾ ಪಾಠಶಾಲೆಯನ್ನು ನೋಡುವದಕ್ಕಾಗಿ ಬಂದಿದ್ದ ದೊಡ್ಡಮನುಷ್ಯರ ಹೆಸರುಗಳೂ, ಅವರು ಅದರ ವಿಷಯದಲ್ಲಿ ವ್ಯಕ್ತಪಡಿಸಿದ ಅಭಿಪ್ರಾಯಗಳೂ, ಪಾಠಶಾಲೆಯ ಉತ್ತರೋತ್ತರಾಭಿವೃದ್ಧಿಗೆ ಸಾಧಕಗಳಾದ ಅವರ ಸಲಹೆಗಳು ಸಹ ತಿಳಿಸಲ್ಪಟ್ಟವು. ಇದರಡಿ ಕಂಡ ದೊಡ್ಡಮನುಷ್ಯರು ಪಾಠಶಾಲೆಗೆ ನಗದು ರೂಪವಾಗಿಯೂ ಇತರವಿಧವಾಗಿಯೂ ಸಹಾಯ ಮಾಡಿದರೆಂದು ತಿಳಿಯಬರುತ್ತದೆ.

ಶ್ರೀಮನ್ಮಹಾರಾಜರವರು	ರೂ|| ೨೦೦
ದಿವಾನ್ ಮೆ|| ಕೆ. ಶೇಷಾದ್ರಿ ಅಯ್ಯರವರು	೫೦
ಜಡ್ಜಿ ಮೆ|| ತಂಬುಚೆಟ್ಟಿಯವರು	೨೫
ರಘುನಾಥ ತೊಂಡವರ್ಮ ಬಹದೂರವರು	೧೦೦
ಸಬ್‌ಜಡ್ಜಿ ಮೆ|| ನರಹರಿರಾಯರವರು	೫೦
ಸಾಹುಕಾರ್ ಚಿಕ್ಕಬಸಪ್ಪನವರು	೧೦೦
ಅಸಿಸ್ಟೆಂಟ್ ಮೆ|| ಗೋಪಾಲಯ್ಯಂಗಾರ್	೫೦
ಡಿಟ್ಟೊ ವೈದ್ಯನಾಥ ಅಯ್ಯರವರು	೨೫
ಮೆ|| ಪಿ. ರಾಘವೇಂದ್ರರಾಯರವರು	೧೦
ಬೆಂಗಳೂರು ಟೌನ್ ಮ್ಯಾಜಿಸ್ಟ್ರೇಟ್ ಮೆ|| ಸೈಯ್ಯದ್ ನಸುರುದ್ದೀನ್ ಸಾಹೇಬರು	೧ ಪೆಟ್ಟಿಗೆ
ಪ್ರೊಫೆಸರ್ ರಾಘವೇಂದ್ರರಾಯರವರ	೨ ಶೀಶೆ ಪದಾರ್ಥಗಳು
ಮೆ|| ಆನಂದರಾಯರವರು	೧೦
ಎ ಗೋಪಾಲಚಾರ್ಯರು	ಒಂದು ಭಾರಿಶೀಶೆ
ಸಾಹುಕಾರ್ ಪಿಂಗಣ್ಣನವರು	ಬೆಳ್ಳಿಪಾನ್‌ದಾನ್.

ಈ ಪಾಠಶಾಲೆಯಲ್ಲಿ ವಿದ್ಯಾರ್ಥಿನಿಯಾಗಿದ್ದ ಅಪೋತಿಕೇರಿ ರಾಘವಾಚಾರ್ಯರ ಭಾರ್ಯೆಯು ೧೫ ರೂಪಾಯಿಗಳ ಇನಾಂ ಕೊಡುವಂತೆ ಪ್ರಕಟಿಸಿರುವದಾಗಿ ತಿಳಿಯಬರುತ್ತದೆ. ಶ್ರೀಮನ್ಮಹಾರಾಜ ಪುತ್ರಿಯವರು ಇಂಥಾ ಪ್ರಬಲ ಸಂದರ್ಭದಲ್ಲಿ ಸ್ವತಃ ದಯಮಾಡಿ ಸಭೆಯನ್ನಲಂಕರಿಸಿದ್ದು ಸನ್ಮಾನಿತರಾದ ವಿದ್ಯಾರ್ಥಿನೀಯರಿಗೆ ವಿಶೇಷ ಸಂತೋಷಕರವಾಗಿಯೂ ಚಿರಸ್ಮರಣೀಯವಾಗಿಯೂ ಇರುವದೆಂದು ಸೂಚಿಸಿ ಸೆಕ್ರೆಟರಿಯವರು ರಿಪೋರ್ಟನ್ನು ಓದಿ ಪೂರೈಸಿದರು. ತರುವಾಯ ಮೆ|| ಶೇಷಾದ್ರಿ ಅಯ್ಯರವರು ಮಹಾರಾಜರವರಿಂದಾಜ್ಞಾಪ್ತರಾಗಿ ತಿಳಿಸಿದರೇನಂದರೆ—ಗತ ವರುಷದಲ್ಲೀ ಪಾಠಶಾಲೆಯ ಅಭಿವೃದ್ಧಿಗೆ ಕಾರಣಭೂತರಾದ ಮ್ಯಾನೇಜರುಗಳಿಗೆ ಅಭಿನಂದನ ಮಾಡುವಂತೆ ಶ್ರೀಮನ್ಮಹಾರಾಜರವರು ನನಗೆ ಆಜ್ಞಾಪಿಸಿರುತ್ತಾರೆ. ಮತ್ತು ಈ ಪಾಠಶಾಲೆಯು ಸಕಲ ಜನಾಂಗೀಕಾರಾರ್ಹವಾಗಿ ಅಭಿವೃದ್ಧಿಯನ್ನೈದುತ ಬರುವದನ್ನೂ, ಈ ದೇಶದಲ್ಲಿ ಸ್ತ್ರೀವಿದ್ಯಾಭ್ಯಾಸವನ್ನು ದೃಢವಾದ ಉತ್ತಮಸ್ಥಿತಿಗೆ ತಂದವರಾದೆವೆಂಬ ಕೀರ್ತಿ ಪ್ರತಿಷ್ಠೆಗಳಿಗೆ ನಾವು ಕೆಲವು ವರುಷಗಳೊಳಗಾಗಿ ಪಾತ್ರರಾಗುವವೆಂಬದನ್ನೂ ಕೇಳಲಿಕ್ಕೆ ನಾವು ಬಹಳ ಸಂತೋಷಿಸುತ್ತೇವೆ. ಬಾಲ್ಯದಲ್ಲಿ ಹುಡಿಗಿಯರಿಗೆ ಸ್ಕೂಲ್ ಸಂಬಂಧವನ್ನು ತಪ್ಪಿಸುವ ಪದ್ಧತಿಯು ಅವರ ವಿದ್ಯಾಭಿವೃದ್ಧಿಗೆ ಬಹಳ ಬಾಧಕವಾಗಿರುತ್ತದೆ. ಈ ನಿರ್ಬಂಧವು ಈ ಪಾಠಶಾಲೆಯಲ್ಲಿ ಕೆಲವುಮಟ್ಟಿಗೆ ನಿವೃತ್ತಿಯಾಯಿತಲ್ಲದೆ ಮೇಲ್ಪಟ್ಟ ತರಗತಿಗಳಲ್ಲಿರುವ ವಿದ್ಯಾರ್ಥಿನಿಯರು ಪ್ರಾಪ್ತವಯಸ್ಕರಾಗಿದ್ದರೂ ಪಾಠಶಾಲೆಗೆ ಅವರ ತಾಯಿತಂದೆಗಳು ವಿದ್ಯಾಸಂಗ್ರಹಣಾರ್ಥ ಕಳುಹಿಸುತಲಿದ್ದಾರೆ. ಈರೀತಿ ಕಳುಹಿಸಲ್ಪಡಲಿಕ್ಕೆ ಈ ಪಾಠಶಾಲೆಯಲ್ಲಿ ಅನುಸರಿಸಲ್ಪಟ್ಟಿರುವ ಬೋಧನಾಕ್ರಮವೂ, ಅದರಲ್ಲಿ ಕಲಿಸಲ್ಪಡುವ ಗ್ರಂಥಗಳೂ, ಕೇವಲ ಜಾತಿಮತಾಚಾರಗಳಿಗೆ ಸಂಬಂಧಪಟ್ಟವಾಗಿಯೂ ವೈದಿಕರಿಂದ ಸಹ ಕೊಂಡಾಡಲ್ಪಡತಕ್ಕವಾಗಿಯೂ ಇರುವದೇ ಮುಖ್ಯಕಾರಣವಾಗಿರುತ್ತದೆ. ಮೇಲ್ಪಟ್ಟ ತರಗತಿಯಲ್ಲಿ ಉಪಾಧ್ಯಾಯನೀಯರನ್ನು ಮೊಕರರ್ಮಾಡುವದಕ್ಕೆ ಶೀಘ್ರದಲ್ಲಿ ಈ ಪಾಠಶಾಲೆಯ ಮ್ಯಾನೇಜರುಗಳು ಸಮರ್ಥರಾಗುವರೆಂಬದು ಕೇಳಿ ಮಹಾರಾಜರವರು ಬಹಳ ಸಂತೋಷಿಸುತ್ತಾರೆ. ಯಾವಾಗ ಸದರೀ ಏರ್ಪಾಡು ಮಾಡಲ್ಪಡುವದೋ ಆಗ ಸ್ತ್ರೀ ವಿದ್ಯಾಭ್ಯಾಸವು ಸಂಪೂರ್ಣ ಸಾರ್ಥ್ಯವನ್ನು ಹೊಂದುವದು. ಈ ಪಾಠಶಾಲೆಯು ಪ್ರಜೆಗಳ ಅಭಿಮಾನಕ್ಕೂ ಸಹಾಯಕ್ಕೂ ಪಾತ್ರವಾಗಿ ಚಿರಕಾಲ ಊರ್ಜಿತವಾಗಿ ನೆಲೆಗೊಂಡಿರಬೇಕೆಂದು ಕೋರುವಂತೆ ಮಹಾರಾಜರವರು ಆಜ್ಞಾಪಿಸುತ್ತಾರೆ, ಎಂಬದು.

A PUBLIC MEETING.

ಈಚೆಗೆ ಘೋಷಿಸಲ್ಪಟ್ಟ ಒಂದು ನೋಟೀಸನ್ನನುಸರಿಸಿ ಗತ ಶನಿವಾರದದಿನ ಸಾಯಂಕಾಲ ಈಪ್ಪೂರು ಅಣ್ಣಯಮ್ಮನ ದೇವಸ್ಥಾನದ ಬಳಿ ನೂತನವಾಗಿ ಕಟ್ಟಲ್ಪಟ್ಟಿರುವ ಮೇಲವಾಪಣ್ಣನವರ ಛತ್ರದಲ್ಲಿ ವಿದ್ಯಾವಂತರಾದ ಬಹುಜನ ದೊಡ್ಡಮನುಷ್ಯರೂ, ವರ್ತಕರೂ, ವಿದ್ಯಾರ್ಥಿಗಳೂ, ಇತರ ಖುಷಬಾಷ ಜನಗಳೂ ಸನಿವೇಶರಿದ್ದರು. ಸದರೀ ಸಭೆಗೆ ಚೀಫ್‌ಕೋರ್ಟಿನ ಜಡ್ಜಿಯಾದ ಮ|| ಎ. ರಾಮಚಂದ್ರ ಐಯರವರು, ಕಡಪೆ ಪೆರ್ಮನೆಂಟ್ ಡೆಪ್ಯುಟಿ ಕಲೆಕ್ಟರ್ ಮ|| ಸುಬ್ಬರಾಯರವರು, ಪೋಲೀಸ್ ಅಸಿಸ್ಟೆಂಟ್ ಕಮಿಷನರ್ ಮ|| ಕೃಷ್ಣಸ್ವಾಮಿ ಅಯ್ಯಂಗಾರ್ರವರು, ಸರ್ವೆ ಅಸಿಸ್ಟೆಂಟ್ ಕಮಿಷನರ್ ಮ|| ನಾರಾಯಣರಾಯರವರು, ಅಮಲ್ದಾರರು ಮ|| ಸೀತಾರಾಮಯ್ಯನವರು, ಅಡ್ವೋಕೇಟ್ ಮ|| ಎಚ್. ಸುಬ್ಬರಾಯರವರು, ಮಿಸ್ಟರ್ ನಾರಾಯಣರಾಯರವರು, ಮ|| ನಂಜುಂಡಪ್ಪನವರು, ಮಿಸ್ಟರ್ ಚೆಂಗಲ್ರಾಯ ಮೊದಲಿಯಾರು), ಮ|| ಶ್ರೀನಿವಾಸಯ್ಯಂಗಾರ್ರು, ಮ|| ನರಸಿಂಹಯ್ಯಂಗಾರ್ರು, ಮ|| ವೆಂಕಟರಾಮಯ್ಯನವರು, ಮ|| ಮುರುಗೇಶ ಮೊದಲಿಯಾರ್ರವರು, ಮಿಸ್ಟರ್ ರಘುನಾಥರಾಯರವರು ಮ|| ವಿ. ಎನ್. ವೆಂಗಟಯ್ಯಂಗಾರ್ರವರು, ಮ|| ರಾ|| ಮುಂಡಿ ಚೆನ್ನಪ್ಪನವರು, ಮ|| ರಾ|| ತಿಪ್ಪರಾಮಣ್ಣನವರು, ಮ|| ರಾ|| ಕುಮಾರ್ ಪುಟ್ಟಣ್ಣನವರು ವಗೈರೆ ಸುಮಾರ್ ಒಂದು ಸಾವಿರಮಂದಿಯವರಿವರಿಗೆ ಬಂದಿದ್ದರು. ೮ ಘಂಟೆಗೆ 'ಠೀಕಾಗಿ ಮೀಟಿಂಗ್ ಪ್ರಾರಂಭವಾಗಿ ರಾತ್ರಿ ೧೧ ಘಂಟೆಗೆ ಪೂರ್ತಿಯಾಯ್ತು. ಮ|| ದಕನಾ ಸುಬ್ಬರಾಯರವರು ಪ್ರಸಕ್ತ ಸಭೆಯಲ್ಲಿ ಅಗ್ರಾಸನವನ್ನಂಗೀಕರಿಸಬೇಕೆಂದು ಮ|| ಗೋಪಾಲಾಚಾರ್ಯರವರು ಸೂಚಿಸಿದ ಅಭಿಪ್ರಾಯವನ್ನು ಮ|| ಎಚ್. ಸುಬ್ಬರಾಯರವರು ಅನುಮೋದಿಸಲು ಅದೇರೀತಿ ಸದರೀ ದೊಡ್ಡಮನುಷ್ಯರು ಸಭಾಧ್ಯಕ್ಷತೆಯ ವಹಿಸಿ, ಪುರುಷರಿಗೆ ಪರಾರ್ತ ಸ್ವಧರ್ಮರಕ್ಷಣೆಯು ಅತ್ಯಂತಾವಶ್ಯಕವಾದದ್ದೆಂತಲೂ, ಅದು ಐಹಿಕಾಮುಷ್ಮಿಕ ಸುಖ ಸಂತೋಷಾನುಭವಗಳಿಗೆ ಸಾಧನವಾಗಿರುವದೆಂತಲೂ, ಐಹಿಕ ಸುಖಕ್ಕೆ ಕಾರಣಭೂತವಾಗಿಯೂ ಮಾನುಷ ಜನ್ಮಕ್ಕೆ ಅಲಂಕಾರರೂಪವಾಗಿಯೂ ಇರುವ ವಿದ್ಯಾಭ್ಯಾಸ ಮೂಲಕವಾದ ಜ್ಞಾನಸಂಪಾದನೆಯು ಅವಶ್ಯ ಉಪಾದೇಯವೆಂತಲೂ, ಪತ್ನಿ ಪುತ್ರಾದಿಗಳಿಗೆ ಇದು ರೀತಿಯಲ್ಲಿ ಅವರಿಗೆ ಉಂಟಾಗಬೇಕಾದ ಸುಖಸಂತೋಷಗಳಿಗೂ, ಲಾಭನಷ್ಟಗಳಿಗೂ, ಭಾಗಬಾಧ್ಯಗಳಾದ ಸ್ತ್ರೀಯರುಕೂಡ ವಿದ್ಯಾವತಿಯರಾಗಬೇಕಾದದ್ದು ಕೇವಲ ಅವಶ್ಯವೆಂತಲೂ, ಪರಂತು ಅಂತಾ ವಿದ್ಯಾಭ್ಯಾಸವನ್ನು ಅವರಿಗೆ ಯೂರೋಪಿಯನ್ನರ ಮುಖಾಂತರವಾಗಿ ಯಾವಮೂಲಕ ಹಾಗೆ ಮಾಡಿಸಿದರೆ ಸುಸ್ಥಿತಿ ಸುಖ ಸಂತೋಷಗಳಿಗೆ ಲೋಪವುಂಟಾಗುವದರಿಂದ ಅದು ಚೆನ್ನಾಗಿ ಆಲೋಚಿಸಿಮಾಡದಿದ್ದರೆ ಪ್ರಬಲದುಃಖಕ್ಕೂ ಅನರ್ಥಗಳಿಗೂ ಅವಕಾಶವುಂಟಾಗುವದೆಂದು ತಿಳಿಸಿ ಅದಕ್ಕೆ ದೃಷ್ಟಾಂತವಾಗಿ ಅಲಸೂರು ಮುನ್ಸಿಪಲ್ ಹೆಲ್ತ್‌ಪ್ಸನಿಗೆ ಕೆಲವರು ಕ್ರಿಶ್ಚಿಯನ್ ಮಿಷನರಿಗಳಿಂದ ಪ್ರಾಪ್ತವಾದ ಪರವಶ್ಯೆಯನ್ನು ನಮೂದಿಸಿ ಇನ್ನುಮೇಲೆ ಹೆಣ್ಣುಮಕ್ಕಳನ್ನು ಮಿಷನ್ ಸ್ಕೂಲುಗಳಿಗೆ ಕಳುಹಿಸುವದನ್ನು ಎಲ್ಲರೂ ಐಕಮತ್ಯದೊಡನೆ ಮನ್ನಾ ಮಾಡಬೇಕೆಂದು ತಿಳಿಸಿದರು. ಅನಂತರ ಮ|| ನಾರಾಯಣರಾಮರವರು ಮೇಲ್ಕಂಡ ಮುದ್ದು ಲಕ್ಷ್ಮಿಯು ಕ್ರಿಶ್ಚಿಯನ್ ಮತಕ್ಕೆ ಸೇರಿದ ವಿಧವನ್ನೂ, ಆಕೆಯು ಅವಳ ಪೋಷಕರ ವಶದಿಂದತಪ್ಪಿಸಿ ಸ್ವೋದ್ದೇಶವು ಸಫಲಪಡಿಸಿಕೊಳ್ಳುವದಕ್ಕಾಗಿ ಮಿಷನರಿಗಳು ನಡೆಸಿದ ಕೃತ್ರಿಮೋಪಾಯಗಳನ್ನೂ, ಇಂತಾ ಕೃತ್ಯಗಳಿಂದ ಸಾಮಾನ್ಯೇನ ಹಿಂದೂಮತದವರಿಗೆ ಉಂಟಾಗ ಬಹುದಾದ ಅನರ್ಥಗಳನ್ನೂ ಸಭಿಕರಿಗೆಲ್ಲ ಚೆನ್ನಾಗಿ ನಿರೂಪಿಸಿ ತಿಳಿಸಿದರು.

ಬಳಿಕ ಮ|| ಎಸ್. ಶ್ರೀನಿವಾಸಯ್ಯಂಗಾರ್ರವರು, "ಈ ಸಭೆಗೆ ಈಗ ಬಂದಿರುವ ಹೆಣ್ಣುಮಕ್ಕಳ ತಂದೆ ಅಥವಾ ಪೋಷಕರು ತಮ್ಮ ಅಥವಾ ತಮ್ಮ ಪೋಷಣೆಯಲ್ಲಿ, ಯಾ ಆಧೀನದಲ್ಲಿರುವ ಹುಡಿಗಿಯರನ್ನು ಕ್ರಿಶ್ಚಿಯನ್ ಮಿಷನರಿಯವರಿಂದ ಸ್ಥಾಪಿಸಲ್ಪಟ್ಟಿರುವ ಪಾಠಶಾಲೆಗಳಿಗೆ ಕಳುಹಿಸಕೂಡದೆಂತಲೂ, ಇದುವರಿವಿಗೆ ಅಲ್ಲಿಗೆ ಹೋಗುತಲಿದ್ದವರನ್ನು ಹಾಗೆ ಮುಂದಕ್ಕೆ ಹೋಗದಂತೆ ತಡೆಯಬೇಕೆಂತಲೂ, ಹಿಂದೂ ಮತಸ್ಥರಿಂದಲೇ ಸ್ಥಾಪಿಸಲ್ಪಟ್ಟಿರುವ ಪಾಠಶಾಲೆಗಳಲ್ಲಿಯೇ ಅಂತಾ ಹುಡಿಗಿಯರಿಗೆ ವಿದ್ಯಾಭ್ಯಾಸ ಮಾಡಿಸಬೇಕೆಂತಲೂ, ಮತ್ತು ಇಲ್ಲಿರುವ ಪ್ರತಿ ಹಿಂದೂ ದೊಡ್ಡಮನುಷ್ಯರೂ ಇಲ್ಲಿಗೆ ಬಾರದಿರುವ ಬಾಲಿಕೆಯರ ಮಾತಾಪಿತೃಗಳಿಗೆ ಮೇಲ್ಕಂಡ ರೀತಿ ಮಾಡುವಂತೆ ಬೋಧಿಸಬೇಕೆಂತಲೂ, ಹಿಂದೂಜನಗಳ ಮನೆಗಳಿಗೆ ಕ್ರಿಶ್ಚಿಯನ್ ಮಿಷನ್ ಸ್ತ್ರೀಯರು ಹೋಗಿ ಹಿಂದೂ ಸ್ತ್ರೀ ಪುತ್ರ ಬಾಲೆಯರಿಗೆ ವಿದ್ಯಾಭ್ಯಾಸಮಾಡಿಸುವದನ್ನು ತಪ್ಪಿಸಬೇಕೆಂತಲೂ ಸೂಚಿಸಿದರು. ಈ ನಿರ್ಣಯವನ್ನು ಅಡ್ವೋಕೇಟ್ ಮ|| ಸುಬ್ಬರಾಯರವರು ಪೋಷಿಸಿ ಮತ್ತು ಲಕ್ಷ್ಮಮ್ಮನ ತಂದೆಯು ಕ್ಲೇಶಿಯುತ್ತಿಗೂ, ಮಿಷನರಿಗಳು ತಮ್ಮ ಕೃತ್ಯವನ್ನು ಪೋಷಿಸಕೊಳ್ಳುವದಕ್ಕಾಗಿ ಬರೆದ ಒಂದು ಕಾಗದಕ್ಕೂ ಇರುವ ಭೇದಗಳನ್ನು ತೋರಿಸಿ ಮಿಷನರಿಗಳ ಅಂತರವಾದ ಅಭಿಪ್ರಾಯವು ಜನರನ್ನು ಸಾಧ್ಯವಾದಮಟ್ಟಿಗೆ ಜಾತಿಭ್ರಷ್ಟರನ್ನಾಗಿ ಮಾಡಬೇಕೆಂದ್ದಾಗಿರುವದರಿಂದ ಅವಕ್ಕೆ ಸಾಧ್ಯವಾದ ಮಟ್ಟಿಗೆ ಅವಕಾಶಗಳಂ ತಪ್ಪಿಸಿ ನಮ್ಮ ಮಕ್ಕಳ ಯೋಗಕ್ಷೇಮಗಳಂ ನಾವೇ ನೋಡಿಕೊಳ್ಳಬೇಕೆಂದು ತಿಳಿಸಿದರು. ಮ|| ರಾಮಕೃಷ್ಣರಾಯರವರು ಆ ಅಭಿಪ್ರಾಯವನ್ನು ಪೋಷಿಸಿ ಸರ್ಕಾರದವರು ಯಾವಾಗಲು ಜಾತಿ ಮತ ಚಾರಗಳಲ್ಲಿ ಪ್ರವೇಶಿಸಬೇಕೆಂಬ ತಾತ್ಪರ್ಯ ಪುಳ್ಳವರಲ್ಲವೆಂತಲೂ, ಅವರವರು ತಮ್ಮ ಪರಂಪರೆಯ ಧರ್ಮಾಚಾರಗಳನ್ನು ಅನುಸರಿಸಿ ಬಾಮಾಡಿಕೊಂಡು ಸುಖವಾಗಿರಬೇಕೆಂಬ ಕೋರಿಕೆಯುಳ್ಳವರಾಗಿದ್ದಾರೆಂತಲೂ, ಅತಏವ ಪ್ರಸಕ್ತ ಪ್ರಯತ್ನವು ಸರ್ಕಾರದವರಿಗೆ ವೈಮನಸ್ಯವನ್ನುಂಟುಮಾಡುವದೆಂಬ ಭೀತಿಯು ಜನರಿಗೆ ಆವಶ್ಯಕವಿಲ್ಲವೆಂತಲೂ ತಿಳಿಸಿ ಮಿಷನ್‌ಸ್ಕೂಲ್ ಸಂಬಂಧವನ್ನು ನಮ್ಮ ಹುಡಿಗಿಯರಿಗೆ ತಪ್ಪಿಸಿ ಹಿಂದೂ ಸ್ಕೂಲುಗಳಿಗೆ ಕಳುಹಿಸಬೇಕಾದದ್ದು ಪ್ರಥಮಕರ್ತವ್ಯವೆಂದು ನಿರೂಪಿಸಿದರು.

ಹಿಂದೂ ಬಾಲೆಯರ ವಿದ್ಯಾಭ್ಯಾಸಕ್ಕಾಗಿ ಈ ಪ್ರಾಂತ್ಯದೊಳು ಅನುಕೂಲವಾದ ಪ್ರದೇಶಗಳಲ್ಲಿ ಹಿಂದೂಗಳ ವಿಚಾರಣಾಧಿಕಾರಗಳಿಗೆ ಒಳಪಟ್ಟ ಪಾಠಶಾಲೆಗಳನ್ನು ಸ್ಥಾಪಿಸಬೇಕೆಂತಲೂ, ಅವರವರ ಮನೆಗಳಿಗೆ ಹೋಗಿ ವಿದ್ಯಾಭ್ಯಾಸ ಮಾಡಿಕಲಿಸಕ್ಕೆ ಹಿಂದೂ ಸ್ತ್ರೀಯರನ್ನೇ ಗೊತ್ತುಮಾಡಬೇಕೆಂತಲೂ, ಸಹಾಯವನ್ನವಬಗ್ಗೆ ಗವರ್ನಮೆಂಟಿನವರನ್ನು ಕೇಳಿಕೊಳ್ಳುವದಲ್ಲದೆ ಅಂತಾ ಪಾಠಶಾಲೆಗಳ ಸ್ಥಾಪನೆಯ ವಿಷಯವು ಕುರಿತು ಮ್ಯುನಿಸಿಪಾಲಿಟಿಯವರಿಗೆ ಬರೆದುಕೊಳ್ಳಬೇಕೆಂತಲೂ, ಮ|| ಪುಟ್ಟಣ್ಣನವರು ತಕ್ಕ ಕಾರಣಗಳೊಡನೆ ನಿರ್ಧರಿಸಿ ಸೂಚಿಸಿದರು. ಇಂತಾ ಪಾಠಶಾಲೆಗಳ ಆವಶ್ಯಕತೆಯನ್ನೂ ಪ್ರಯೋಜನವನ್ನೂ ಸಭಿಕರಿಗೆ ಚೆನ್ನಾಗಿ ವ್ಯಕ್ತಪಡಿಸಿ, ಸದರೀ ನಿರ್ಣಯವನ್ನು ಮ|| ರಘುನಾಥರಾಯವರೂ ಮ|| ನಂಜುಂಡರಾಮರು ಸಹ ಪೋಷಿಸಿದರು.

ಮ|| ಡಿ. ವೆಂಕಟರಾಮಯ್ಯನವರು, ಸ್ವಮತಪ್ರಚಾರದಲ್ಲಿ ಮಿಷನರಿಗಳಿರುವ ಅಭಿನಿವೇಶವನ್ನು ಉದಹರಿಸಿ, ಏತದರ್ಥ ನಾನಾ ಉದ್ದೇಶಗಳೊಡನೆ ಅವರು ಅಪರಿಮಿತವಾಗಿ ದ್ರವ್ಯವ್ಯಯ ಮಾಡುವದನ್ನೂ, ಅದಕ್ಕೆ ಜನಗಳು ಚಂದಾವಾದಿ ಸಹಾಯ ಮಾಡುವದನ್ನೂ, ಏತನ್ಮೂಲಕ ಅವರಿಗೆ ಗತವರುಷದಲ್ಲಿ ಆದ ಲಕ್ಷಾಂತರ ರೂಪಾಯಿಗಳ ಉಯತಿಯನ್ನೂ, ತಕ್ಕ ಆಧಾರಗಳೊಡನೆ ತಿಳಿಸಿ ಪ್ರಸಕ್ತ ಪಾಠಶಾಲೆಗಳನ್ನು ಸ್ಥಾಪಿಸಲಿಕ್ಕೂ, ಜನಾನಾ ಹೊಗಸರಿಗೆ ಬೋಧಕರನ್ನು ನಿಯಮಿಸಲಿಕ್ಕೂ ಅರ್ಥೋಪಪತ್ತಿಯು ಕೇವಲ ಅಪೇಕ್ಷಿತವಾಗಿರುವದರಿಂದ ಇದಕ್ಕಾಗಿ ಒಂದು ಚಂದಾಪಟ್ಟಿಯನ್ನೂ ಡೊನೇಷನ್ ಪಟ್ಟಿಯನ್ನೂ ತಯಾರ್ಮಾಡಿ, ಉಪಪನ್ನರಾದವರ ಸಹಾಯವು ಕೋರತಕ್ಕದ್ದೆಂದು ತಿಳಿಸಿದರು.

ಚಂದಾ ಮುಂತಾದವಂ ವಸೂಲ್ಮಾಡಲಿಕ್ಕೂ ಮುಂದೆ ಪಾಠಶಾಲೆಗಳನ್ನು ಸ್ಥಾಪಿಸಿ ಅದಕ್ಕೆ ಬೇಕಾದ ಏರ್ಪಾಡುಗಳನ್ನು ಮಾಡುವದಕ್ಕೂ, ಕೆಲವರು ಕಾರ್ಯ ನಿರ್ವಾಹಕರು ಅವಶ್ಯಕವಾಗಿರುವದರಿಂದ ಸಂಭಾವಿತರಾದ ಕೆಲವರು ದೊಡ್ಡಮನುಷ್ಯರನ್ನು ಸೇರಿಸಿ ಒಂದುಕಮಿಟಿ ಏರ್ಪಾಡು ಮಾಡಬೇಕೆಂದು ಅಡ್ವೋಕೇಟ್ ಮ|| ಮುರುಗೇಶಮೊದಲಿಯಾರ್ರವರು ಸೂಚಿಸಿದ ಅಭಿಪ್ರಾಯದ ಔಚಿತ್ಯವನ್ನು ಮ|| ಟಿ. ಸಿ. ಶ್ರೀನಿವಾಸಾಚಾರ್ಯರವರು ಅನುಮೋದಿಸಿ ಪೋಷಿಸಿದರು ಅದೇ ರೀತಿ ಮ|| ರಾಮಚಂದ್ರಯ್ಯರವರು, ಮ|| ಕೃಷ್ಣಸ್ವಾಮ್ಯಯ್ಯಂಗಾರ್ರು, ಮ|| ಸೀತಾರಾಮಯ್ಯನವರು ವಗೈರೆ ಹತ್ತು ಹದಿನೈದು ಜನರುಳ್ಳ ಮತ್ತು ಇನ್ನೂ ಬೇಕಾದವರನ್ನು ಸೇರಿಸಿಕೊಳ್ಳುವ ಅಧಿಕಾರದೊಡನೆ ಬಂದು ಕಮಿಟಿ ಏರ್ಪಾಡಾಯಿತು ಪ್ರಸಕ್ತ ಪ್ರಯತ್ನವು ಸಾಮುದಾಯಕವಾಗಿ ಹಿಂದೂ ಮತಾವಲಂಬಿಗಳಾದವರೆಲ್ಲರಿಗೂ ಸಂಬಂಧಪಟ್ಟದ್ದಾಗಿ ಭಾವಿಸಬೇಕೆಂಬ ಮ|| ಶ್ರೀನಿವಾಸಾಚಾರ್ಯರ ಅಭಿಪ್ರಾಯವನ್ನು ಮ|| ನರಸಿಂಹಶಾಸ್ತ್ರಿಗಳವರು ಅನುಮೋದಿಸಿದರು.

ಈ ಮೀಟಿಂಗಿನಲ್ಲಿ ನಡೆದ ಪ್ರೊಸೀಡಿಂಗ್ಸ್ ಕಾಪಿಯನ್ನು ಮುಖ್ಯ ಮುಖ್ಯವಾದ ವೃತ್ತಾಂತ ಪತ್ರಿಕೆಗಳಿಗೂ, ಕಲ್ಕತ್ತೆ ಮುಂಬೈ ಮದರಾಸ್ ಮೊದಲಾದ ಮುಖ್ಯ ಪಟ್ಟಣಗಳಲ್ಲಿ ಪ್ರಮುಖರಾಗಿರುವವರಿಗೂ ಕಳುಹಿಸ ಬೇಕೆಂಬದಾಗಿ ತಿಳಿಸಿದ ಮ|| ಗೋಪಾಲಾಚಾರ್ಯರವರ ಅಭಿಪ್ರಾಯವನ್ನು ಅಡ್ವೋಕೇಟ್ ಮ|| ನಂಜಪ್ಪನವರು ಅನುಮೋದಿಸಿದರು.

ಪ್ರಸಕ್ತ ಪ್ರಯತ್ನವು ಬೆಂಗಳೂರು ಜನರಿಗೆ ಮಾತ್ರ ಸಂಬಂಧಿಸಿದ್ದಲ್ಲವಾಗಿ ಇಂತಾ ಅನರ್ಥಗಳು ಅತಿಲಾಘವದಲ್ಲಿಯೂ ಉಂಟಾಗದಿರುವಂತೆ ಮಾಡಬೇಕಾದ ಏರ್ಪಾಡುಗಳನ್ನು ಮಾಡುವಂತೆ ಅಲ್ಲಿ ಯಲ್ಲಿರತಕ್ಕವರನ್ನು ಪ್ರೇರಿಸಬೇಕಲ್ಲದೆ ಮೈಸೂರು ಶೀಮೆಗೆ ಸೇರಿದ ಇತರ ಡಿಸ್ಟ್ರಿಕ್ಟ್ ತಾಲ್ಲೂಕ್ ಜಾತಿಗೆ ಈ ನಿಬಂಧನೆಯ ಸಕಲನ್ನು ಕಳುಹಿಸಬೇಕೆಂದು ಮ|| ನರಸಿಂಹಯ್ಯಂಗಾರ್ರವರು ಸೂಚಿಸಿದ್ದನ್ನು ಮ|| ರಘುನಾಥರಾಮರವರು ಪೋಷಿಸಿದರು.

ಮೇಲ್ಕಂಡ ಏಳುವಿಧ ತೀರ್ಮಾನಗಳ ವಿಷಯದಲ್ಲಿ ಸಭಿಕರ ಅಭಿಪ್ರಾಯವನ್ನು ಪ್ರಸಿದ್ಧರು ಕೇಳಲು ಏಕಕಂಠ್ಯದೊಡನೆ ಎಲ್ಲರೂ ಅಂಗೀಕರಿಸಿ ಪೋಷಿಸಿದರು. ಕೂಡಲೆ ಚಂದಾಪಟ್ಟಿ ತಯಾರ್ಮಾಡಲ್ಪಟ್ಟು ಕೆಲವರು ದೊಡ್ಡ ಮನುಷ್ಯರ ರುಜು ತೆಗೆದುಕೊಳ್ಳಲ್ಪಟ್ಟಿತು. ಕಡೆಗೆ ಅಗ್ರಾಸನಾಧಿಪತಿಯವರು ಅವಿಚ್ಛಿನ್ನವಾಗಿ ನಾಲ್ಕು ಘಂಟೆಗಳಕಾಲ ಈಮೀಟಿಂಗಿನಲ್ಲಿ ಹಾಜರಿದ್ದು ವಿಶೇಷ ಶ್ರದ್ಧೆ ಮತ್ತು ಉತ್ಸಾಹದೊಡನೆ ಸಭೆಯ ಆತಳತವನ್ನೆಲ್ಲ ಸಕಲಜನ ಸಮ್ಮತವಾಗಿ ನಡೆಸಿದ ಬಗ್ಗೆ ಅವರಿಗೆ ಎಲ್ಲರೂ ಕರತಾಡನಪೂರ್ವಕ ವಂದನಮಾಡಿದರು. ತರುವಾಯ ಸಭೆ ಬರಖಾಸ್ತಾಯಿತು. ಈ ವಿಷಯದಲ್ಲಿ ನಾವು ಅರುಹಬೇಕಾಗಿರುವ ಕೆಲವು ವಿಷಯಗಳಂ ಮುಂದಿನ ವಾರದಲ್ಲಿ ತಿಳಿಸುವೆವು.

Occasional Notes
ನೈಮಿತ್ತಿಕ ವಿಷಯನ್ಯಾಸ.

An assault punished.—ಬಳ್ಳಾರಿ ಮಾಸ್ಟರನಾದ ರಾಜು ಎಂಬವನು ಮತ್ತೊಬ್ಬನೊಡನೆ ಗುದ್ದಾಡಿ ಸವಾರಿ ಮಾಡಿದನೆಂಬದಾಗಿ ಆಪಾದಿಸಲ್ಪಡಲು ಅವರಿಗೆ ಮ್ಯಾಜಿಸ್ಟ್ರೇಟರು ಎರಡು ಮಾಸಗಳ ಜುರ್ಮಾನೆ ಹಾಕಿದರೆಂದು ವಿಜಯಧ್ವಜ ಪತ್ರಿಕೆ ತಿಳಿಸುತಿದೆ. ಸ್ವತಃ ಶಿಕ್ಷಿಸಿಕೊಂಡವನಿಗೆ ಅನ್ಯರು ಶಿಕ್ಷಿಸಲ್ಯಾತಕ್ಕೆ?

Indian Jails.—ಈಗ ಇಂಡ್ಯಾದೇಶದಲ್ಲಿ ೭೪೦ ಬಂದೀಖಾನೆಗಳು ನೆಲಗೊಂಡಿರುತಿವೆ. ಇವುಗಳಲ್ಲಿರುವ ಖೈದಿಗಳು ಮಾಡಿದ ಕಾಮಗಾರಿಗಳ ಮೂಲಕ ಗತ ವರುಷದಲ್ಲಿ ಸರ್ಕಾರಕ್ಕೆ ೧೮ಲಕ್ಷ ರೂಪಾಯಿಗಳು ಶಿಷ್ಟಾಯಿತ್ತೆಂದು ತಿಳಿಯಬರುತಿದೆ. ಖೈದಿಗಳ ಸಂಖ್ಯೆ ಹೆಚ್ಚಿದಹಾಗೆಲ್ಲ ಲಾಭವೂ ವೃದ್ಧಿಯಾಗಬಹುದು.

Suspension.—ಧಾರವಾಡ ಡಿಸ್ಟ್ರಿಕ್ಟ್ ಡೆಪ್ಯುಟಿ ಕಲೆಕ್ಟರರಾದ ರಾಯಬಹದೂರ್ ವಿನಾಯಕ ರಾ|| ರಂಗರಾವ್, ಪುರಂದರೆಯವರು ಮ|| ಕಾರ್ಥರ್ಯವರ ಮೊಕದ್ದಮೆಯಲ್ಲಿ ಸಂಬಂಧಿಸಿದ್ದರೆಂದು ತಿಳಿಯಬಂದದರಮೇಲೆ ಅವರನ್ನು ಗವರ್ನಮೆಂಟಿನವರು ಸಸ್ಪೆಂಡ್ ಮಾಡಿದ್ದಾರೆಂದು ಕೇಳುತ್ತೇವೆ. ಅದೇ ಕಾರಣಕ್ಕಾಗಿ ಅಕ್ಕಲಕೋಟೆ ಸಂಸ್ಥಾನದ ಕಾರ್ಭಾರಿಗಳಾದ ಮ|| ವಿಠಲಪೇಕ್ಕಾಜಿ ಎಂಬವರು ಸಹ ಸಸ್ಪೆಂಡ್ ಮಾಡಲ್ಪಟ್ಟಿದ್ದಾರೆಂದು ಜ್ಞಾನಪ್ರಕಾಶ ಪತ್ರಿಕೆಯ ಮೂಲಕ ತಿಳಿಯಬರುತಿದೆ.

The Poona High School.—ಪುನೆ ಹೈಸ್ಕೂಲ್ ಪ್ರಿನ್ಸಿಪಲರಾಗಿದ್ದ ರಾವ್ ಸಾಹೇಬ್ ಮಹದೇವ್ ಮೋರೇಶ್ವರಕುಂಟೆಯವರು ಕಾಲಗತಿಯನ್ನೈದಿದ ವೃತ್ತಾಂತವನ್ನು ಆಚೇವಾರದಲ್ಲೇ ತಿಳಿಸಿರುತ್ತೇವೆಯಷ್ಟೆ. ಸದರೀದೊಡ್ಡ ಮನುಷ್ಯರಿಗೆ ಬದಲಾಗಿ ಅನ್ಯರೊಬ್ಬರಂ ಮುಕರರ್ಮಾಡುವ ತಾತ್ಪರ್ಯವು ಗವರ್ನಮೆಂಟಿನವರಿಗಿಲ್ಲವೆಂತಲೂ, ಅಲ್ಲಿನ ಹೈಸ್ಕೂಲನ್ನು ತೆಗೆದುಹಾಕಬೇಕೆಂದು ಅವರು ತಜವೀಜ್ ಮಾಡುತಲಿದ್ದಾರೆಂದಲೂ, ಆದರೆ ಪುನೆ ಸಾರ್ವಜನಿಕ ಸಭೆಯವರು ಆರೀತಿ ಮಾಡಲಾಗದೆಂದು ಪ್ರತಿಷೇಧಿಸಿ ಗವರ್ನಮೆಂಟಿನವರಿಗೊಂದು ಅರ್ಜಿ ಬರೆದುಕೊಳ್ಳುವ ಪ್ರಯತ್ನದೊಳಿದ್ದಾರೆಂತಲೂ ಮುಂಬೈ ಪತ್ರಿಕೆಯೊಂದು ತಿಳಿಸುತಿದೆ.

American opinion on the English nation.—ಇಂಗ್ಲೀಷಿನವರ ವಿಷಯದಲ್ಲಿ ಯೂರೋಪ ದೇಶದ ಒಂದೊಂದು ಸಂಸ್ಥಾನದವರು ಒಂದೊಂದುಬಗೆ ಅಭಿಪ್ರಾಯ ಪುಳ್ಳವರಾಗಿದ್ದದ್ದು ಸರಿಯಷ್ಟೆ. ಇವರ ಸ್ವಭಾವವಂ ಕುರಿತು, ಅಮೆರಿಕಾಖಂಡದ ವೃತ್ತಾಂತ ಪತ್ರಿಕೆಯೊಂದು ವಿಚಾರಮಾಡುತ ಸ್ವಾಭಾವಿಕವಾದ ಅವರ ಗುಣವನ್ನು ವಿವರಿಸುತಿದೇನೆಂದರೆ—"ಇಂಗ್ಲೀಷಿನವರು ತಮ್ಮಲ್ಲಿ ಬಲಾಢ್ಯರಾಗಿರುವರೊ ಅವರನ್ನು ಹಿಂಬಾಲಿಸಲ್ಲಿ ಕೆಣಕಿ ತಲೆಯೆತ್ತದಂತೆ ತುಳಿಯುವರು; ಯಾರು ಅವರ ಎದುರು ನಿಂತು ಧೈರ್ಯದಿಂದ ಬದರಿಸುವರೋ ಅಂತವರ ಮೈತ್ರಿಯಂ ಒಲಪಡಿಸಿಕೊಂಡು ಅವರಿಗೆ ದಾಸರಾಗಿ ವರ್ತಿಸುವರು" ಎಂಬದು. ಇದಕ್ಕೆ ಬರ್ಮಾ ಆಫ್ಘಾನಿಸ್ಥಾನ್ ರಾಜ್ಯಗಳೇ ಸಾಕಾದ ದೃಷ್ಟಾಂತಗಳಾಗಿರುವದಲ್ಲದೆ ಮೇಲ್ಕಂಡ ಪತ್ರಿಕಾಭಿಪ್ರಾಯವನ್ನು ಪೋಷಿಸುತಿವೆ.

Honorary Magistrates.—ಮುಂಬೈ ಪಟ್ಟಣದಲ್ಲಿ ಆನರೆರಿ ಮ್ಯಾಜಿಸ್ಟ್ರೇಟರನ್ನು ಮುಕರರ್ಮಾಡಬೇಕಾದ್ದು ಆವಶ್ಯಕವೇ ಇಲ್ಲವೇ ಎಂದು ಗವರ್ನಮೆಂಟಿನವರು ಅಲ್ಲಿನ ಹೈಕೋರ್ಟ್ ಜಡ್ಜಿಗಳ ಅಭಿಪ್ರಾಯವು ಕೇಳಿದ್ದರಮೇಲೆ ಅದಕ್ಕೆ ಅವರು, ದೊಡ್ಡದಾದ ಈ ಮುಂಬೈ ಪಟ್ಟಣದಲ್ಲಿ ಆನರೆರಿ ಮ್ಯಾಜಿಸ್ಟ್ರೇಟರುಗಳಿಂದುಂಟಾಗುವ ಪ್ರಯೋಜನವು ಅಲ್ಪವಾಗಿರುತಿದೆಯೆಂತಲೂ, ಕೆಲಸ ಜಾಸ್ತಿಯೆಂದು ಕಂಡುಬಂದರೆ ಒಬ್ಬ ಮ್ಯಾಜಿಸ್ಟ್ರೇಟರನ್ನು ತಲಬಕೊಟ್ಟು ಮುಕರರ್ಮಾಡಿಕೊಳ್ಳಬಹುದೆಂತಲೂ ಅಭಿಪ್ರಾಯ ಕೊಟ್ಟರೆಂದು ತಿಳಿಯಲಾದೆವು. ಹೈಕೋರ್ಟ್ ಜಡ್ಜಿಗಳ ಅಭಿಪ್ರಾಯವು, ಮುಂಬೈಗೆ ಪ್ರತ್ಯೇಕ ಆನರೆರಿ ಮ್ಯಾಜಿಸ್ಟ್ರೇಟುಗಳನ್ನು ಮುಕರರ್ಮಾಡಬೇಕಾದಷ್ಟರ ಕೆಲಸವಿಲ್ಲವೆಂಬದೋ ಅಥವಾ ತಲಬಿಲ್ಲದೆ ಮಾಡುವ ಕೆಲಸದಲ್ಲಿ ಶ್ರದ್ಧಾಜಾಗರೂಕತೆಗಳು ಸಾಕಾದಷ್ಟು ಇರಲಾರದೆಂಬದೋ ಸ್ಪಷ್ಟವಾಗುವದಿಲ್ಲವು.

An offender and his Vakeel.—ಈಚೆಗೆ ಒಬ್ಬ ಅಪರಾಧಿಗೆ ಒಬ್ಬ ಮ್ಯಾಜಿಸ್ಟ್ರೇಟರು ಒಂದು ತಕ್ಸೀರಿಗಾಗಿ ದಂಡನೆ ವಿಧಿಸಿ, ಅದಂ ಅವನಿಗೆ ತಿಳಿಸಿದ ಕೂಡಲೆ ಅಪರಾಧಿಯು ತನ್ನ ಸಮೀಪದೊಳಿದ್ದ ತನ್ನ ವಕೀಲನನ್ನು ನೋಡಿ, ತಿಳಿಸಿದನೇನಂದರೆ—ನನ್ನ ಪಕ್ಷವಾಗಿ ಮಾತನಾಡುವಬಗ್ಗೆ ಮೊಖ್ತ್ಯಾರ್‌ನಾಮೆ ಕೊಟ್ಟು ನಿಮ್ಮನ್ನು ನಾನು ಮೊಕರರ್ಮಾಡಿದೆನು. ಇದಕ್ಕಾಗಿ ನಿಮಗೆ ನ್ಯಾಯವಾದ ರುಸುಂ ಸಹ ಸಲ್ಲಿಸಿದೆನು. ಅದರಂತೆಯೇ ನನಗೆ ಈಗ ಮ್ಯಾಜಿಸ್ಟ್ರೇಟರಿಂದ ವಿಧಿಸಲ್ಪಟ್ಟ ದಂಡನೆಯನ್ನು ಅನುಭವಿಸಲಿಕ್ಕೆ ಸಹ ನಾನು ಮೊಖ್ತ್ಯಾರ್‌ನಾಮೆ ಕೊಟ್ಟು ನಿಮ್ಮನ್ನು ಮೊಕರರ್ಮಾಡಿದೇನೆ. ಈಗ ಕೊಟ್ಟಿರುವ ಮೊಬಲಗು ಸಾಲದಿದ್ದರೆ ವಕಾಲತ್ ರುಸುಮಿನಂತೆ ಇದಕ್ಕೂ ನ್ಯಾಯವಾಗಿ ಸಲ್ಲಬೇಕಾದ ರೂಪಾಯಿಗಳನ್ನು ನೀವು ಮನೆಗೆ ವಾಪಸು ಬಂದಮೇಲೆ ತಂದು ಒಪ್ಪಿಸುವೆನು, ಎಂಬದು. ಅದಂಕೇಳಿ ಮ್ಯಾಜಿಸ್ಟ್ರೇಟರು ಮುಂತಾದವರೆಲ್ಲರೂ ಬಹಳವಾಗಿ ನಕ್ಕಲಾರಂಭಿಸಿದರೆಂದು ತಿಳಿಯಲಾದೆವು. ಇನ್ನೊಂದು ಪ್ರಕರಣದಲ್ಲಿ ಮತ್ತೊಂದು ಮ್ಯಾಜಿಸ್ಟ್ರೇಟರು ಅಪರಾಧಿಯನ್ನು ನೋಡಿ, ನೀನು ಈತಕ್ಸೀರ್ ಮಾಡಿದ್ದುಂಟೋ ಯೆಂದು ಕೇಳಲು ಆಗ ಅವಂ ನೀವೀಗ ಪರೀಕ್ಷಿಸಿ ನೋಡಿರಿ. ನಾನೇ ಹೇಳಿದಬಳಿಕ ಅದಕ್ಕೆ ಫಲಾನೆ ಶಿಕ್ಷೆ ಯೆಂದು ಕ್ಲುಪ್ತವಾಗಿರುವಲ್ಲಿ ಸರ್ಕಾರದವರು ನಿಮಗಿಷ್ಟರ ತಲಬ್ ಕೊಟ್ಟು ಈ ನ್ಯಾಯಸ್ಥಾನದಲ್ಲಿಟ್ಟಿರಬೇಕಾದ ಆವಶ್ಯಕತೆ ಯೇನೂ ಕಂಡುಬರುವದಿಲ್ಲವೆಂದನು. ಅದಂಕೇಳಿ ಮ್ಯಾಜಿಸ್ಟ್ರೇಟರು ತಲೆಯಂ ಬಗ್ಗಿಸಿಕೊಂಡು ಸುಮ್ಮನಾದರು.

Pandita Ramabayi.—ಈಗ ಇಂಗ್ಲಾಂಡಿನಲ್ಲಿ ಜಾತಿಭ್ರಷ್ಟಳಾಗಿರುತಲಿರುವ ಪಂಡಿತ ರಮಾಬಾಯಿ ಯೆಂಬಾಕೆಯು ಕ್ಷಿಪ್ರದಲ್ಲಿ ಸ್ವದೇಶಕ್ಕೆ ಬರುವವಳಾಗಿದಾಳೆಂದು ತಿಳಿಯಬರುತಿದೆ. ಆಕೆಯು ಇಲ್ಲಿಗೆ ಬಂದಮೇಲೆ ಪುನಃ ಪಟ್ಟಣದಲ್ಲಾಗಲಿ, ಆಕೆಗೆ ಯೋಗ್ಯವೆಂದು ಕಂಡುಬರುವ ಇತರ ಯಾವ ಸ್ಥಳದಲ್ಲಾಗಲಿ, ಸ್ವದೇಶೀಯರಾಗಿಯೂ ಅನಾಥರಾಗಿಯೂ ಇರುವ ವಿಧವೆಯರ ಅನುಕೂಲ್ಯಕ್ಕಾಗಿ ಒಂದು ವಿಧವಾಶ್ರಮವಂ ಸ್ಥಾಪಿಸಬೇಕೆಂದುದ್ದೇಶಿಸಿದಾಳೆಂದು ಕೇಳಲಿಕ್ಕೆ ನಾವು ಸಂತೋಷಿಸುತ್ತೇವೆ. ಯಾತಕ್ಕೆಂದರೆ, ನಿರಾಶ್ರಯರಾದ ವಿತಂತುಗಳಿಗೆ ಆಶ್ರಯವನ್ನುಂಟುಮಾಡಿ ಅವರಿಗೆ ಅಪೇಕ್ಷಿತಾಂಶಗಳನ್ನೆಲ್ಲ ಕಲ್ಪಿಸಿಕೊಟ್ಟು ತನ್ನ ಸ್ಥಿತಿಗೆ ಅವರನ್ನು ಕೂಡ ತರಬೇಕೆಂಬ ಕೋರಿಕೆಯು ರಮಾಬಾಯಿಗೆ ಅನ್ಯದೇಶೀಯರ ಸಹವಾಸದಿಂದುಂಟಾದದ್ದು ಕೇವಲ ಇಲ್ಲಿನ ವಿಧವೆಯರ ಪುಣ್ಯ ಪರಿಪಾಕವೆಂತಲೇ ಭಾವಿಸಬೇಕಾಗಿದೆ. ಇಷ್ಟರ ಅನುಕೂಲ್ಯಗಳು ಕಲ್ಪಿಸಲ್ಪಟ್ಟ ಬಳಿಕ ಅವರಿಗೆ ವಿದ್ಯಾ ವೈದಗ್ಧ್ಯವೊಂದು ಇಲ್ಲದೆ ಹೋದರೆ ಇತರ ವಿಷಯಗಳು ಪ್ರಕಾಶಿಸಲಾರವಾಗಿ ಅವರಿಗೆ ವಿದ್ಯಾಭ್ಯಾಸವನ್ನು ಮಾಡಿಸಬೇಕೆಂಬ ಅಭಿಲಾಷೆ ಕೂಡ ರಮಾಬಾಯಿಗೆ ಅಧಿಕವಾಗಿರುವಂತೆ ಕೇಳುತ್ತೇವೆ. ಉದ್ದಿಷ್ಟ ವಿಧವಾಶ್ರಮದಲ್ಲಿರುವವರಿಗೆ ಜಾತಿ ಮತ ಧರ್ಮಸಂಬಂಧವಾದ ವಿಷಯಗಳು ಕುದ್ದಾಂಗ ತಿಳಿಸಲ್ಪಡಕೂಡದೆಂಬದೇ ಮುಖ್ಯಪ್ರವರ್ತಕರ ನಿಬಂಧನೆಯಾಗಿರುತಿದೆ. ಈ ಪ್ರಯತ್ನವು ಬಹುಶಃ ನಡೆದರೆ ಚಿರಕಾಲದಿಂದ ಹಿಂದೂ ಮತದಲ್ಲಿ ಇಲ್ಲದಿರುವ ಒಂದು ಪ್ರಬಲ ಕೊರತೆಯನ್ನು ಹೋಗಲಾಡಿಸಿದಂತೆ ಯಾಗುವದು. ಮತ್ತು ಇಂಗ್ಲಿಷ್ ಜನಗಳಲ್ಲಿ ರೋಮನ್ ಕ್ಯಾಥೊಲಿಕ್‌ಗಳಲ್ಲಿ ಗ್ರಾಹ್ಯವಾಗಿರುವ ನವೀನ ಸಂಪ್ರದಾಯಾಭಿರುಚಿಗಳಿಗೆ ತಕ್ಕ ಕಾನ್ವೆಂಟ್‌ಗಳನ್ನು ಬೇರೆ ಹೆಸರಿನಿಂದ ಕಲ್ಪಿಸಿದಂತಾಗುವದು. ಸದರೀ ಆಶ್ರಮವಾಸಿಗಳ ವಿದ್ಯಾಭ್ಯಾಸದ ವಿಷಯದಲ್ಲಿ ಲುಥರ್‌ಮಿಷನ್ ಸಂಘದವರಾಗಲಿ, ವೆಸ್ಲೆಯನ್ ಮಿಷನ್ ಸಂಘದವರಾಗಲಿ, ಇತರರಾಗಲಿ ಸಹಾಯ ಮಾಡುವದಕ್ಕೆ ಸನ್ನದ್ಧರಾಗಿರುತ್ತಾರೆ. ಇಂತಾ ಮಹತ್ಕಾರ್ಯಕ್ಕೆ ದ್ರವ್ಯಸಹಾಯವು ಇಲ್ಲಿ ಲಭಿಸುವದು ಅಸಾಧ್ಯವೆಂದು ಭಾವಿಸಿ ರಮಾಬಾಯಿಯು ಹಿಂದೂ ವಿಧವೆಯರ ಸ್ಥಿತಿಯನ್ನು ಅಮೆರಿಕಾ ದೇಶೀಯರಿಗೆ ತಿಳಿಯಪಡಿಸಿದ್ದರಿಂದ ಆರ್ದ್ರ ಹೃದಯರಾದ ಅಲ್ಲಿನವರು ಇಲ್ಲಿನ ನಿರ್ಭಾಗ್ಯರಿಗೆ ಸಹಾಯ ಮಾಡುವಂತೆ ವಾಗ್ದಾನ ಮಾಡಿರುತ್ತಾರೆ. ಈ ವಿಧವಾಶ್ರಮಕ್ಕೆ ಸಾಲೀಯಾನಾ ತಗಲುವ ಖರ್ಚಿಗಾಗಿ ಸಂವತ್ಸರಕ್ಕೆ ೫,೦೦೦ ಡಾಲರ್ (ಡಾಲರ್ ೧ಕ್ಕೆ ಸುಮಾರ್ ೨॥ ರೂ॥) ಗಳು ಕೊಡುವಂತೆಯೂ, ಆಶ್ರಮ ನಿರ್ಮಾಣಾರ್ಥ ೩೫,೦೦೦ ಡಾಲರ್‌ಗಳು ಪ್ರತ್ಯೇಕವಾಗಿ ಸಹಾಯ ಮಾಡುವಂತೆಯೂ ವಾಗ್ದಾನ ಮಾಡಿರುತ್ತಾರಲ್ಲದೆ ಆಪೈಕಿ ೯,೦೦೦ ಡಾಲರ್‌ಗಳನ್ನು ಈಗ ಕೊಟ್ಟಿದಾರೆಂತಲೂ ತಿಳಿಯಬರುತಿದೆ. ಲೋಕೋಪಕಾರಕವಾದ ಇಂತಾ ಮಹತ್ಕಾರ್ಯವನ್ನು ಅನುಮೋದಿಸಿ ಸಹಾಯ ಮಾಡತಕ್ಕವರು ಈ ಇಂಡ್ಯ ದೇಶದಲ್ಲಿಯೂ ಕೆಲವರಿಲ್ಲದೆ ಇರಲಾರರೆಂದೆಣಿಸುತ್ತೇವೆ.

A missionary and his munshi.—ಒಬ್ಬ ಕನ್ನಡ ಮುನಿಷಿಯು ಒಬ್ಬ ಮಿಷನೆರಿಗೆ ಕನ್ನಡ ಭಾಷೆಯನು ಕಲಿಸುತ್ತಾಬಂದನು. ಹೀಗಿರುವಲ್ಲಿ ಒಂದುದಿನ ಆ ಮಿಷನೆರಿಯು ಆ ಮುನಿಷಿಯನ್ನು ಕುರಿತು, ಅನೇಕ ಹಿಂದೂಜನರು ಕ್ರಿಸ್ತುಮತಕ್ಕೆ ಸೇರಿದರಲ್ಲ. ನೀವು ಯಾಕೆ ಸೇರಲಿಲ್ಲ ? ನೀವು ಈಗ ಆ ಮತಕ್ಕೆ ಸೇರಿ ಎಂದು ಹೇಳಿದನು. ಅದಕ್ಕೆ ಮುನಿಷಿಯು, ಅಯ್ಯಾ ದೊರೆಯೇ ! ನನ್ನನ್ನು ನಿನ್ನಂತೆಯೇ ವೈಷ್ಣವನೂ ತನ್ನ ಮತಕ್ಕೆ ಸೇರಬೇಕೆಂದು ಕರಿಯುತ್ತಾನೆ, ಶೈವನೂ ಕರಿಯುತ್ತಾನೆ, ಜೈನನೂ ಕರಿಯುತ್ತಾನೆ, ಇನ್ನು ಇತರ ಮತದವರೂ ಕರೆಯುತ್ತಾರೆ. ಯಾವ ಮತಕ್ಕೆ ನಾನು ಸೇರಲಿ ಎಂದು ನುಡಿದನು. ಮಿಷನೆರಿ—ಇತರ ಮತಗಳೆಲ್ಲವು ಸತ್ಯವಲ್ಲವು, ಅವುಗಳನ್ನು ನೀವು ನಂಬಬೇಡಿ. ಮುನಿಷಿ.—ಅಯ್ಯಾ, ಆಯಾ ಮತದವರು ಹಾಗೆಯೇ ಹೇಳುತ್ತಾರೆ. ಮಿಷನೆರಿ—ಆ ಮೂಢರು ಹೇಳುವ ಮಾತನ್ನು ನೀವು ಕೇಳಬೇಡಿ. ಮುನಿಷಿ— ಅವರೂ ಆ ಪ್ರಕಾರವೇ ನುಡಿಯುತ್ತಾರೆ. ಮಿಷನೆರಿ— ಕ್ರಿಸ್ತುವೇದವನ್ನು ನಂಬಿದವರಿಗೆ ಮೋಕ್ಷ ವುಂಟಾಗುವದು. ಮುನಿಷಿ—ಅಯ್ಯಾ ಮಿಷನೆರಿಯೆ, ಇತರರು ತಮ್ಮತಮ್ಮ ವೇದವೇ ಸತ್ಯವೆಂತಲೂ, ತಮ್ಮ ವೇದವನ್ನು ನಂಬಿದವರಿಗೆ ಮೋಕ್ಷ ವುಂಟಾಗುವದೆಂತಲೂ ಹೇಳುತ್ತಾರೆ. ಮಿಷನೆರಿ- ನೀವು ನಾನುಹೇಳುವದನ್ನುನಂಬಿರಿ, ಅವರಮಾತುಗಳನ್ನು ನಂಬಬೇಡಿ. ಮುನಿಷಿ-ಅವರುನೀನು ಹೇಳುವಂತೆಯೆ ಹೇಳುತ್ತಾರೆ. ನಾನು ಯಾರ ಮಾತನ್ನ ಕೇಳಲಿ ? ನಾನು ಒಬ್ಬರ ಮಾತನ್ನು ಕೇಳಿದರೆ, ಮತ್ತೊಬ್ಬರಿಗೆ ಮನಸ್ತಾಪ ವುಂಟಾಗುತದೆ ಇದಕ್ಕೆ ನಾನೇನುಮಾಡಲಿ ? ಮಿಷನೆರಿ- ಮುನಿಷಿಯರೇ, ನಿಮಗೆ ಮೋಕ್ಷವನ್ನು ಹೊಂದಿ ಸುಖವನ್ನು ಅನುಭವಿಸಬೇಕೆಂದು ಇಚ್ಛೆಯೊ? ನರಕವನ್ನು ಹೊಂದಿ ದುಃಖವನ್ನನುಭವಿಸುವದರಲ್ಲಿಷ್ಟವೊ ? ಮುನಿಷಿ—ಅಯ್ಯಾ ದೊರೆಯೇ, ಈಗ ನೀನು ಕೇಳಿದ ಪ್ರಶ್ನೆಯನ್ನೇ ಎಲ್ಲರೂ ಕೇಳುತ್ತಾರೆ. ಮಿಷನೆರಿ—ಸತ್ಯವೇದವು ದೇವರಿಂದ ಮಾಡಲ್ಪಟ್ಟದ್ದು. ಇತರ ವೇದಗಳು ಮನುಷ್ಯನಿಂದ ಮಾಡಲ್ಪಟ್ಟವು. ಮುನಿಷಿ— ಅಯ್ಯಾ, ಇತರರು ತಮ್ಮ ವೇದವು ಈಶ್ವರನಿಂದ ರಚಿತವಾದದ್ದೆಂತಲೂ, ಇತರವೇದಗಳು ಕಲ್ಪಿತಗಳೆಂತಲೂ, ಬೋಧಿಸಿ ತಮ್ಮ ಮತಕ್ಕೆ ಸೇರಿ ಯೆಂದು ಕರಿಯುತ್ತಾರೆ. ಮಿಷನೆರಿ—ನಾನು ಹೇಳಿದ ರೀತಿಯಾಗಿ ಇತರರು ಹೇಳಿದಾಗ್ಯೂ ಅದು ಎಂದಿಗೂ ಯುಕ್ತಿ ಯುಕ್ತವಾಗಿರಲಾರದು. ಕ್ರಿಸ್ತುವೇದವು ನೀತಿಭರಿತವಾದದ್ದು. ಇತರ ವೇದಗಳಲ್ಲಿ ಸ್ವಲ್ಪವೂ ನೀತಿ ಇಲ್ಲವು. ಮುನಿಷಿ—ಎಲ್ಲರೂ ಹೀಗೆಯೇ ಹೇಳುತ್ತಾರೆ. ಎಲ್ಲರಮನಸ್ಸಿಗೂ ತೃಪ್ತಿಯುಂಟಾಗುವಂತೆ ಮಾಡುವದಕ್ಕೆ ಒಬ್ಬರಿಂದ ಹ್ಯಾಗಾಗುವದು ? ಮಿಷನೆರಿ—(ಕ್ರಿಸ್ತುಮತದ ಬೈಬಲನ್ನು ಮುನಿಷಿಗೆ ತೋರಿಸಿ,) ನೋಡಿ, ಎಷ್ಟು ನೀತಿಗಳೂ ಯುಕ್ತಿಗಳೂ ಇದರಲ್ಲಿ ಹೇಳಲ್ಪಟ್ಟಿರುತ್ತವೆ. ಮುನಿಷಿ—ಅಯ್ಯಾ, ಎಲ್ಲರು ತಮ್ಮತಮ್ಮ ವೇದಪುಸ್ತಕಗಳನ್ನು ನನ್ನೆದುರಿಗೆ ತಂದುಹಾಕಿ, ಎಷ್ಟು ನೀತಿಗಳು ಹೇಳಲ್ಪಟ್ಟವೆ ನೋಡಿ ಎಂದೇ ಹೇಳುತ್ತಾರೆ. ನಾನು ಏನು ಮಾಡಲಿ ! ಮಿಷನೆರಿ—ನೀವು ಪಕ್ವವಾದ ಫಲವನ್ನು ಬಿಟ್ಟು ಕಾಯನ್ನು ಅಪೇಕ್ಷಿಸುತ್ತೀರಲ್ಲಾ ! ಮುನಿಷಿ— ದೊರೆಯೆ, ಒಬ್ಬೊಬ್ಬರು ತಮ್ಮತಮ್ಮ ಮತವನ್ನು ಪಕ್ವವಾದ ಫಲವೆಂತಲೂ ಇತರ ಮತಗಳನ್ನು ಕಾಯೆಂತಲೂ ಹೇಳುತ್ತಾರೆ. ನಾನು ಯಾರಮಾತನ್ನು ನಂಬಲಿ ? ಮಿಷನೆರಿ— ಇದೇನು ! ನೀವು ವಿತಂಡ ವಾದವನ್ನು ಮಾಡುತ್ತೀರಿ ! ಮುನಿಷಿ—ಅಯ್ಯಾ,ನೀನು ಹೇಳಿದಂತೆಯೇ ಎಲ್ಲರೂ ನಾನು ವಿತಂಡ ವಾದವನ್ನು ಮಾಡುವವನಾಗಿ ಹೇಳುತ್ತಾರೆ. ಮಿಷನೆರಿ—ನಿಮಗೆ ನಮ್ಮ ಮತಕ್ಕೆ ಸೇರುವದಕ್ಕೆ ಇಷ್ಟವಿಲ್ಲವೋ ? ಮುನಿಷಿ-ಎಲ್ಲರೂ ನಿನ್ನಂತೆಯೇ ಕೇಳುತ್ತಾರೆ.—ಮಿಷನೆರಿ—(ಕೋಪದಿಂದ ಮುಖವನ್ನು ಗಂಟುಹಾಕಿಕೊಂಡು) ಅಜ್ಞಾನಿಗಳೊಡನೆ ಮಾತನಾಡುವದು ಬಹಳ ಅನುಚಿತ. ಮುನಿಷಿ—ಆಯಾ ಮತಸ್ಥರಿಗೆ ತಮ್ಮ ಮತಕ್ಕೆ ಸೇರದಿದ್ದರೆ, ತಮ್ಮನ್ನು ತಾವು ಜ್ಞಾನಿಗಳೆಂತಲು ಇತರರನ್ನು ಅಜ್ಞಾನಿಗಳೆಂತಲೂ ಹೇಳುವದಲ್ಲದೆ ಮಾತಿಗೆ ಬದಲುಮಾತನಾಡಿದರೆ ಮುಖವನ್ನು ಗಂಟುಹಾಕಿಕೊಂಡು ಕೋಪಿಸಿಕೊಳ್ಳುತ್ತಾರೆ. ಆಯಾ ಮತದವರ ಕೋಪವನ್ನು ನಾನು ಹ್ಯಾಗೆ ಶಾಂತಮಾಡಲಿ ? ಯಾವ ಮತಕ್ಕೆ ಸೇರಿದರೂ ಇತರ ಮತದವರಿಂದ ಅಜ್ಞಾನಿಯೆಂಬ ಹೆಸರನ್ನು ಪಡೆಯಬೇಕಾಗಿಯೇ ಬರುತ್ತದೆ ! ಮಿಷನೆರಿ— ನಿಮ್ಮಿಷ್ಟ. ಮುನಿಷಿ-ನಾನು ಮಾತನಾಡಿದರೆ ಎಲ್ಲರೂ ನಿಮ್ಮಂತೆಯೇ ನುಡಿಯುತ್ತಾರೆ ಮಿಷನೆರಿಯು ಮೌನವನ್ನು ಅವಲಂಬಿಸಿಕೊಂಡರು. ಮುನಿಷಿ—ಇತರ ಮತದವರು ಹೀಗೆಯೇ ಮೌನವನ್ನವಲಂಬಿಸಿಕೊಳ್ಳುತ್ತಾರೆ. ಮಿಷನೆರಿ ಎದ್ದು ಹೋಗಿಬಿಟ್ಟನು. ಮುನಿಷಿ—ಇತರರು ನಿಮ್ಮಂತೆಯೇ ಎದ್ದು ಹೊರಟು ಹೋಗುತ್ತಾರೆ. ಮಿಷನೆರಿಯು ಅಧಿಕವಾದ ಲಜ್ಜೆಯನ್ನು ಹೊಂದಿ, ಯಾಕೆ ತಾನು ಈ ಮುನಿಷಿಯೊಡನೆ ಮಾತನಾಡಿದೆನೆಂದು ತನ್ನನ್ನೇ ನಿಂದಿಸಿಕೊಂಡು ಇನ್ನುಮೇಲೆ ಈ ವಿಷಯವನ್ನು ಕುರಿತು ಯಾರಲ್ಲಿಯೂ ಮಾತನಾಡುವದು ಸರಿಯಲ್ಲವೆಂದು ನಿಶ್ಚಯಿಸಿಕೊಂಡನು. ಆ ಮುನಿಷಿಗೆ ಆ ಮಿಷನೆರಿಯಿಂದ ಜೀವನವು ನಡಿಯಬೇಕಾಗಿದ್ದದ್ದರಿಂದ, ಪುನಃ ಮತವಿಷಯವನ್ನು ಕುರಿತು ಅವನು ತನ್ನಲ್ಲಿ ಮಾತನಾಡದಿರುವಂತೆ ಅವನು ತಂತ್ರವಾಗಿ ಮಾಡಿಕೊಂಡನು. ವಾಚಕರೆ, ಈ ಅದ್ಭುತವಾದ ಸಂವಾದವನ್ನು ಚೆನ್ನಾಗಿ ಓದಿ ಪರ್ಯಾಲೋಚಿಸಿರಿ ಇದರಿಂದ ಒಂದೊಂದು ಮತದವರಿಗೂ ತಮ್ಮ ಮತವೇ ಶ್ಲಾಘ್ಯವೆಂದುಹೇಳುವದೂ ಇತರ ಮತಗಳು ಶ್ಲಾಘ್ಯವಲ್ಲವೆಂದು ಹೇಳುವದೂ ಸಹಜವೆಂದು ಸ್ಪಷ್ಟವಾಗಿ ತಿಳಿಯಬಹುದು. ಅಭಿಜ್ಞರಾದವರು ಒಬ್ಬರು ಹೇಳುವದನ್ನು ಕೇಳಿದ ಆ ಮತಕ್ಕೆ ಸೇರದೆ ಯುಕ್ತಿಗೂ ಅನುಭವಕ್ಕೂ ಯಾವದು ಸರಿಯಾಗಿದೆಯೆಂದು ತೋರುವದೋ ಅದನ್ನು ಚೆನ್ನಾಗಿ ವಿಮರ್ಶಿಸಬೇಕು—ವಿಜಯಧ್ವಜ.

LOCAL AND PROVINCIAL NEWS.

ಒಳದೇಶ ಮತ್ತು ತಾಲ್ಲೂಕ್‌ಜಾತ್ಯವೃತ್ತಾಂತಗಳು.

The Mysore Herald.—ಬರುವ ಗುರುವಾರದ ಮೊದಲು “ಮೈಸೂರು ಹೆರಲ್ಡ್” ಎಂಬ ಒಂದು ಇಂಗ್ಲಿಷ್ ಪತ್ರಿಕೆಯು ಮೈಸೂರು ಟವನ್ನಲ್ಲಿ ಪ್ರಕಟಿಸಲ್ಪಡುವದೆಂದು ಈ ವಾರದಲ್ಲಿ ನಮಗೆ ಕಳುಹಿಸಲ್ಪಟ್ಟ ಒಂದು ಪ್ರಕಟನ ಪತ್ರಿಕೆಯ ಮೂಲಕ ತಿಳಿಯಲಾದೆವು.

Arts Examinations.—ಈ ಸಂವತ್ಸರದಲ್ಲಿ ಮದರಾಸ್ ಯೂನಿವರ್ಸಿಟಿಯ ಶಾಸ್ತ್ರ ಪರಿಕ್ಷೆಗಳಿಗೆ ೧೧,೦೦೦ ಮಂದಿ ಉಮೇದ್‌ವಾರರು ದರಖಾಸ್ತು ಕಳುಹಿಸಿರುತ್ತಾರೆ. ಇದರ ತಪಸಿಲ್ ಹ್ಯಾಗಂದರೆ,—ಮೆಟ್ರಿಕ್ಯುಲೇಷನಿಗೆ ೭,೮೬೫ ಜನ, ಎಫ್. ಎ. ಪರಿಕ್ಷೆಗೆ ೨,೦೧೫, ಬಿ. ಎ. ಪರಿಕ್ಷೆಗೆ ೫೩೫.

Middle School Examinations.—ಹೈಸ್ಕೂಲ್ ಪರೀಕ್ಷಾ ಕ್ರಮವು ಮುಂಜಾರಾಗಿ ಜಾರಿಯಲ್ಲಿ ತರಲ್ಪಟ್ಟ ಬಳಿಕ ಮಿಡಿಲ್‌ಸ್ಕೂಲ್ ಪರಿಕ್ಷೆಯನ್ನು ಇಟ್ಟುಕೊಳ್ಳುವದು ಯೋಗ್ಯವೆ ಅಥವಾ ವಜಾಮಾಡುವದು ಯೋಗ್ಯವೇ, ಅಥವಾ ಯಾವ ಶರತ್ತುಗಳನ್ನನುಸರಿಸಿ ಇಟ್ಟುಕೊಳ್ಳತಕ್ಕದ್ದು ಎಂಬ ವಿಷಯದಲ್ಲಿ ತಮ್ಮ ತಮ್ಮ ಅಭಿಪ್ರಾಯಗಳನ್ನು ತಿಳಿಸುವಂತೆ ಆಯಾ ಕಾಲೇಜುಗಳ ಮತ್ತು ಹೈಸ್ಕೂಲ್‌ಗಳ ಮುಖ್ಯಾಧಿಕಾರಿಗಳನ್ನು ಮದರಾಸ್ ವಿದ್ಯಾಭ್ಯಾಸದ ಇಲಾಖಾ ಡೈರೆಕ್ಟರವರು ಸೆಪ್ಟಂಬರ್ ೬ನೇ ಮಕುರ್ಂ ಉಳ್ಳ ಸರ್ಕ್ಯುಲರ್ ಲೆಟರ್ ಮೂಲಕ ಕೇಳಿರುತ್ತಾರೆಂದು ತಿಳಿಯಬರುತದೆ.

The weather.—ಗತ ಗುರುವಾರದ ಮೊದಲು ಕಾಲಸ್ಥಿತಿಯು ಕುದ್ದಾಂಗ ಬದಲಾಯಿಸಿ ಜನಗಳ ಭೀತಿಯನ್ನು ಹೋಗಲಾಡಿಸಿತು. ಈಚೆಗೆ ಒಳ್ಳೆಯ ಮಳೆಯಾಗಿ ಕೆರೆಕುಂಟೆಗಳಿಗೆ ಬಹಳ ಮಟ್ಟಿಗೆ ನೀರು ಬಂದಿರುತಿದೆ. ಮದರಾಸ್ ಪ್ರಾಂತದಲ್ಲಿ ತುಫಾನ್ ದೆಸೆಯಿಂದ ಪ್ರಬಲ ನಷ್ಟಗಳುಂಟಾಗಿ ಕೆಲವುಕಡೆ ರೈಲ್ ರಸ್ತೆಗಳು ಕೊಚ್ಚಲ್ಪಟ್ಟು ಗಾಡಿಗಳ ಆಮದುರಫ್ತು ನಿಂತುಹೋಗಿ ಟಪಾಲ್‌ಗಳು ಒಂದೆರಡುದಿನಗಳ ಸಾವಕಾಶದಿಂದ ಬಂದು ತಲಪುತಲಿವೆ. ಪ್ರಯಾಣಸ್ಥರಿಗೆ ಮಧ್ಯಮಾರ್ಗದಲ್ಲಿ ಬಹಳ ಅನಾನುಕೂಲವಾಗಿರುವಂತೆ ತಿಳಿಯಬರುತಿದೆ. ರಾಗಿ ಪೈರು ಉಳಿದುಕೊಂಡದ್ದರಿಂದ ಮೈಸೂರು ದೇಶೀಯರ ಚಿಂತೆ ನಿವೃತ್ತಿಯಾದಂತೆ ಎಣಿಸಬೇಕು. ಈಶ್ವರ ಕಟಾಕ್ಷ ವುಂಟಾದರೆ ಯಾವದುತಾನೆ ನಿವೃತ್ತಿ ಯಾಗಲಾರದು ?

THE MYSORE GAZETTE

ಮೈಸೂರು ಗೆಜೆಟ್.

ಶ್ರೀಮನ್ಮಹಾರಾಜ ರಾಜಾಸಾಹೇಬ್ ಬಹದೂರವರ ದಿವಾನರವರಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು

ಮೊಕ್ಕಾಂ ನಂ॥ ೧೫೦೨, ತಾ॥ ೨೨ನೇ ಅಕ್ಟೋಬರ್.—ಕಡೂರು ಡಿಸ್ಟ್ರಿಕ್ಟ್ ಆಕ್ಟಿಂಗ್ ಡೆಪ್ಯುಟಿ ಕಮಿಷನರ್ ಕರ್ನಲ್ ಜೆ. ಎ. ಕ್ಯಾಂಬೆಲ್ ಯವರು, ೧೮೮೮ನೇಇಸವಿ ಅಕ್ಟೋಬರ್ ೧೮ನೇ ತಾರೀಖ್ ಮೊದಲು ಅಥವಾ ಅವರು ಅದನ್ನುಪಯೋಗಿಸಿಕೊಳ್ಳುವ ತಾರೀಖ್ ಮೊದಲು ೧೮ ದಿನಗಳ ಪ್ರಿವಿಲೀಜ್ ರಜಾ ಕೊಡಲ್ಪಟ್ಟಿರುತ್ತಾರೆ.

ಜನರಲ್ ಆ॥ ಕ॥ ಮ್ಯ ಟಿ. ರಾಘವೇಂದ್ರರಾಯರವರು, ಕರ್ನಲ್ ಕ್ಯಾಂಬೆಲ್‌ಯವರು ರಜಾ ಮೇಲೆ ಗೈರ್‌ಹಾಜರಿರುವ ಕಾಲದಲ್ಲಿ ಅಥವಾ ಮತ್ತೊಂದು ಹುಕುಂ ಕೊಡಲ್ಪಡುವ ತನಕ ಕಡೂರು ಡಿಸ್ಟ್ರಿಕ್ಟ್ ಇನ್‌ಚಾರ್ಜಿನಲ್ಲಿರತಕ್ಕದ್ದು, ಮತ್ತು ಅವರು ಹಾಗಿರುವಕಾಲದಲ್ಲಿ ಡೆಪ್ಯುಟಿ ಕಮಿಷನರ್ ಮತ್ತು ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟ ಅಧಿಕಾರವನ್ನು ಚಲಾಯಿಸತಕ್ಕದ್ದು.

ಮೊಕ್ಕಾಂ ನಂ ೧೪೮೪, ತಾ॥ ೨೫ನೇ ಅಕ್ಟೋಬರ್.—ಸನ್ ೧೮೮೮ನೇ ಇಸವಿ ಜುಲೈ ೧೩ನೇ ಮಕುರ್ಂ ೭೯ನೇ ನಂ॥ ಈ ಆಫೀಸ್ ಇಸ್ತಿಹಾರ್‌ಮೂಲಕ ಮದ್ದಿಗಿರಿ ತಾಲ್ಲೂಕು ಅಮಲ್ದಾರ್ ವೇಲಾಯುಧಂಪಿಳ್ಳೆಯವರಿಗೆ ಕೊಡಲ್ಪಟ್ಟ ಮೂರುತಿಂಗಳ ಕಾಹಿಲೀ ರಜಾ ಇದರಿಂದ ಎರಡು ತಿಂಗಳಿಗೆ ಬದ್ಲೀ ಮಾಡಲ್ಪಟ್ಟಿರುತಿದೆ.

ಕೊಮಾರಸ್ವಾಮಿನಾಯುಡು ಬಿ. ಎ ಯವರು ವೇಲಾಯುಧಂ ಪಿಳ್ಳೆಯವರು ಕಾಹಿಲೀ ರಜಾ ಮೇಲಿರುವ ಕಾಲದಲ್ಲಿ ಅಥವಾ ಮತ್ತೊಂದು ಹುಕುಂ ಕೊಡಲ್ಪಡುವ ತನಕ, ಮದ್ದಿಗಿರಿ ತಾಲ್ಲೂಕು ಅಮಲ್ದಾರ್ ವ ೩ ನೇ ಕ್ಲಾಸ್ ಮ್ಯಾಜಿಸ್ಟ್ರೇಟರಾಗಿ ಕೆಲಸ ನೋಡುತಲಿರತಕ್ಕದ್ದು.

ಮೊಕ್ಕಾಂ ನಂ॥ ೧,೮೭೯, ೨೬ನೇ ಅಕ್ಟೋಬರ್—ಶಿವಮೊಗ್ಗಾ ಡಿಸ್ಟ್ರಿಕ್ಟ್ ಡೆಪ್ಯುಟಿ ಕಮಿಷನರ್ ಮೆ. ವಿ. ಪಿ. ಮಾಧವರಾಯರವರು ಈ ತಿಂಗಳ ೨೬ ನೇ ತಾರೀಖ್ ಮೊದಲು ೧೫ ದಿನಗಳ ಕ್ಯಾಜುಯಲ್ ರಜಾ ಕೊಡಲ್ಪಟ್ಟಿರುತ್ತಾರೆ.

☞ BANGALORE :—Printed and published at the KARNATIC PRESS, No. 44, HOSPITAL ROAD, PETTA.—1888.

ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA.

ಪ್ರತಿ ಸೋಮವಾರ ಪ್ರಾತಃಕಾಲದಲ್ಲಿ ಪ್ರಕಟಿಸಲ್ಪಡುವದು.

Published every Monday Morning.

[illegible]

Vol. XV]	BANGALORE—MONDAY, NOVEMBER 12, 1888.	[No. 44.
ಸಂಪುಟ ೧೫.]	ಬೆಂಗಳೂರು:—ಸನ್ ೧೮೮೮ನೇ ಇಸವಿ ನವಂಬರ್ ೧೨ನೇ ತಾರೀಖ್ ಸೋಮವಾರ.	[ಸಂಚಿಕೆ ೪೪

ಕರ್ಣಾಟಕ ಪ್ರಕಾಶಿಕಾ

ಪತ್ರಿಕೆಯ ಚಂದಾ ದರಗಳು,
೧೮೮೮ನೇ ಇಸವಿ ಜನವರಿಯಿಂದಾರಭ್ಯ
ಕಡಮೆಮಾಡಲ್ಪಟ್ಟಿರುತ್ತದೆ.

ಈ ಪತ್ರಿಕೆಯ ಚಂದಾದಾರರಲ್ಲಿಯ ಅನೇಕರ ಅಪೇಕ್ಷೆಯನ್ನು ನೆರವೇರಿಸುವ ಉದ್ದೇಶದಿಂದಲೇ ಯೂ, ಪರಿಮಿತವಾದ ಆಯತಿಯುಳ್ಳವರಿಗೆಲ್ಲ ಈ ಪತ್ರಿಕೆಯು ಸುಲಭವಾಗಿ ಲಭಿಸುವಂತಿರಬೇಕೆಂಬ ಅಭಿಪ್ರಾಯದಿಂದಲೇಯೂ ಇದರ ಚಂದಾದರವನ್ನು ಇದರಡಿಯಂತೆ ಕಡಮೆಮಾಡಿರುತ್ತೇವೆ:—

ಇಂಗ್ಲೀಷ್ ಮತ್ತು ಕನ್ನಡಭಾಗಗಳಿಗೆ.

		ಮುಂಗಡವಾಗಿ	ಹಿಂಗಡವಾಗಿ
12	ತಿಂಗಳಿಗೆ	8—0—0	9—0—0
6	,,	4—0—0	4—8—0
3	,,	2—8—0	2—8—0

ಇಂಗ್ಲೀಷ್ ಅಥವಾ ಕನ್ನಡಭಾಗಗಳಿಗೆ.

		ಮುಂಗಡವಾಗಿ	ಹಿಂಗಡವಾಗಿ
12	ತಿಂಗಳಿಗೆ	4—0—0	5—0—0
6	,,	2—0—0	2—8—0
3	,,	1—4—0	1—8—0

ಷರಾ—ಅಂಚೆ ಮುಸ್ಸೂಲುಗಳು, ಜವಾನರು ಮತ್ತು ಸ್ಕೂಲ್ ಮಾಸ್ಟರುಗಳು, ಗ್ರಾಮಶಾನುಭೋಗರು, ಪಟೇಲರು, ವಿದ್ಯಾರ್ಥಿಗಳು, ಇವರಿಗೆಲ್ಲ ಈ ಪತ್ರಿಕೆಯು ಹಿಂಗಡ ದರಕ್ಕೆ ಕೊಡಲ್ಪಡುವದು. ಅಡ್ವಾನ್ಸಾಗಿ ಬಾರದ ದರಖಾಸ್ತುಗಳಿಗೆ ಸುತರಾಂ ಸಿಗೆಕೊಡಲ್ಪಡಲಾರದು. ಚಂದಾದಾರರು ಇಂಗ್ಲೀಷ್ ಭಾಗವನ್ನಾಗಲಿ ಕನ್ನಡಭಾಗವನ್ನಾಗಲಿ ಅಥವಾ ಎರಡನ್ನಾಗಲಿ ತೆಗೆದುಕೊಳ್ಳಬಹುದು. ಚಂದಾಹಣವನ್ನು ಮುಂಗಡವಾಗಿ ಕೊಡತಕ್ಕದ್ದು. ಮುಂಗಡವಾಗಿಯೇ ಬಾರದ ಹಣವು ಅಂಗೀಕರಿಸಲ್ಪಡಲಾರದು.

ನೋಟುಗಳು ರವಾನಿಸತಕ್ಕವರು ನೋಟಿನ ಎರಡು ಅರ್ಧಗಳನ್ನು ಪ್ರತ್ಯೇಕವಾಗಿ ಕಳುಹಿಸಬೇಕು. ಮನಿಯಾರ್ಡರುಗಳನ್ನು ಕಳುಹಿಸತಕ್ಕವರು ಡಿಸ್ಕೌಂಟ್ ಸಹ ಕಳುಹಿಸಬೇಕು. ಆದರೆ ಸ್ಟಾಂಪುಗಳಲ್ಲಿ ಕಳುಹಿಸುವವರು ಡಿಸ್ಕೌಂಟ್ ಕಳುಹಿಸಲ್ಪಡುವ ಹಣದಲ್ಲಿ ಅದು ಮಜಾ ಮಾಡಲ್ಪಟ್ಟು ಮಿಕ್ಕ ಹಣವು ಲೆಕ್ಕಕ್ಕೆ ದಾಖಲು ಮಾಡಿಕೊಳ್ಳಲ್ಪಡುವದು.

ಪ್ರಕಟನೆಯ ರಿವಾಜ್.

ಮೊದಲನೆಯದಫಾ ಪಂಕ್ತಿ ಒಂದಕ್ಕೆ 0—2—0
ಎರಡನೆಯದಫಾ ಪಂಕ್ತಿ ಒಂದಕ್ಕೆ 0—1—0

ಷರಾ—ಎರಡಾವರ್ತಿಗಿಂತ ಜಾಸ್ತಿಯಾಗಿ ಪ್ರಕಟಿಸತಕ್ಕ ಪ್ರಾಮಿಸ್ ಮಾಡಿದವರು ಪಕ್ಕದಲ್ಲಿ ಒಂದಕ್ಕೆ ೧ ಅಣೆಯಂತೆ ಯೇ ಲೆಕ್ಕ ಮಾಡಲ್ಪಡುವದು. ಈ ಪತ್ರಿಕೆಯಲ್ಲಿ ಪ್ರಾಯಶ್ಚಿತ್ತ ಮಾಡುವಬಗ್ಗೆ ಪ್ರಕಟನೆಗಳು ಕಳುಹಿಸುವವರು ಅವು ಎಷ್ಟಾವರ್ತಿ ಪ್ರಕಟಿಸ್ ಮಾಡಲ್ಪಡಬೇಕೋ ಆ ಅಂಶವನ್ನು ಸ್ಪಷ್ಟವಾಗಿ ತಿಳಿಸತಕ್ಕದ್ದು. ಇಲ್ಲದಪಕ್ಷಕ್ಕೆ ಅವರು ನಮಗೆ ನಿಲ್ಲಿಸುವಂತೆ ಬರೆಯುವತನಕ ಅವು ಪ್ರಕಟಿಸುತ್ತಿದ್ದು ಹಾಗೆ ಎಷ್ಟಾವರ್ತಿ ಪ್ರಕಟಿಸಲ್ಪಟ್ಟಿದ್ದಾಗ್ಯೂ ಮೇಲೆ ಕಂಡ ದರದಂತೆ ಕಿಮ್ಮತ್ತು ವಸೂಲು ಮಾಡಲ್ಪಡುವದು. ಪ್ರಕಟನೆಯ ಬಗ್ಗೆ ಕಳುಹಿಸಲ್ಪಡತಕ್ಕ ಪ್ರಕಟನೆಗಳನ್ನು ಆ ಯಾ ವಾರದ ಮಧ್ಯಾಹ್ನ ೨ ಘಂಟೆಯೊಳಗಾಗಿ ಕಳುಹಿಸಬೇಕು. ಪ್ರಕಟನೆಯನ್ನು ಈ ಪತ್ರಿಕೆಗೆ ಕಳುಹಿಸಲ್ಪಡತಕ್ಕ ಕಾಗದಗಳಲ್ಲಿ ತಿಳಿಸಲ್ಪಡುವ ಅಭಿಪ್ರಾಯಗಳಿಗೆ ನಾವು ಜವಾಬ್ದಾರರಾಗಲಾರೆವು. ಕ್ರಯವಾಗಿ ಕಳುಹಿಸದೆ ದರ್ಖಾಸ್ತು ಯಾವಕಾಗದವನ್ನು ಪ್ರಕಟಿಸಲಾರೆವು. ನಿರಾಕರಿಸಲ್ಪಟ್ಟ ಕಾಗದಗಳು ಮರಳಿ ವಾಪಸು ಕಳುಹಿಸಲ್ಪಡಲಾರವು.

"IT RECOMMENDS ITSELF"

ALL WHO SUFFER FIND SURE RELIEF.

LITTLE'S

ORIENTAL BALM

THE MOST EFFECTUAL MODERN REMEDY FOR PAIN.

ಲಿಟಿಲ್ ಎಂಬುವರಿಂದ ತಯಾರುಮಾಡಲ್ಪಟ್ಟ "ಬಾಧಾಸಂಹಾರಿಣೀ" ಎಂಬ ಪೂರ್ವದೇಶ ಸಂಬಂಧವಾದ ಅಮೂಲ್ಯ ತೈಲವು ಸ್ವಶಕ್ತಿ ಪ್ರದರ್ಶಕವಾದದ್ದು, ಮತ್ತು ಸಫಲವಾದ ನವೀನ ಚಿಕಿತ್ಸಾರೂಪವಾದ ಔಷಧವು. ಇದರಿಂದ ಸಕಲ ವಾತರೋಗಗಳೂ, ವಾತಸಂಬಂಧಗಳಾದ ಸಂಧಿಬಾಧೆಗಳೂ ನಿವೃತ್ತಿಯಾಗುವವು. ಮುಖ್ಯವಾಗಿ ಚಿರಕಾಲಿಕವಾದ ವಾತರೋಗಗಳು, ಕಾಸ, ಗಂಟಲಿನಲ್ಲಿ ಉರಿ, ಸೆಡುವುನೋವು, ಕೀಲುವಾಯು, ಕಟಿವಾಯು, ಉಳುಕು ನೋವು, ತಲೆನೋವು, ತಿಮಿರವಾಯು ಮುಂತಾದ ರೋಗಗಳಿಗೆಲ್ಲ ನಿಸ್ಸಂದೇಹವಾಗಿ ಬಹಳ ಪ್ರಯೋಜನವನ್ನುಂಟುಮಾಡತಕ್ಕದ್ದು. ಈ ತೈಲವನ್ನು ನೋವುಳ್ಳ ಸ್ಥಳಗಳಲ್ಲಿ ಕೆಲಸಮರ್ಥ ಸವರಿ ಶಾಖವುಂಟಾಗುವಂತೆ ಚೆನ್ನಾಗಿ ತಿಕ್ಕಿದಲ್ಲಿ ಸಹಜಗಳಾದ ಎಲ್ಲಾ ನೋವುಗಳನ್ನು ನಿವೃತ್ತಿ ಮಾಡುವಂತಾ ಉತ್ತಮ ತೈಲವಾಗಿರುತ್ತದೆ. ಸಕ್ಷ್ಮವಾದೊಂದಲೇ ಅರತಲೆನೋವು ಮತ್ತು ಜೋಮು ಶುದ್ಧಾಂಗ ನಿವೃತ್ತಿಯಾಗುವದು. ಗಂಟಲಲ್ಲುಂಟಾಗುವ ಉರಿ ಅಥವಾ ವ್ರಣಗಳಿಗೆ ಈ ತೈಲವು ಅದ್ಭುತವಾದ ಮತ್ತು ಶೀಘ್ರವಾದ ಸಂಪೂರ್ಣ ಗುಣವನ್ನುಂಟುಮಾಡುವದು. ಅದ್ಭುತವಾದ ಈ ಔಷಧವನ್ನು ಉಪಯೋಗಿಸಿನೋಡಿದಲ್ಲಿ ಅದರ ಪ್ರಯೋಜನವು ಸ್ವತಃವೇ ವ್ಯಕ್ತವಾಗುವದು. ಈ ತೈಲವು ಶೀತಗಾಳಿ ಮಂಜುಮುಂತಾದವುಗಳೊಳಗಾಗಿ ಸಂಚರಿಸುವಂತಾ ಪ್ರಯಾಣಿಕರು, ಬೇಟೆಯಾಡುವವರು, ವ್ಯಾಯಾಮ ಮಾಡುವವರು, ಮುಂತಾದವರಿಗೆಲ್ಲ ಅಮೂಲ್ಯವಾದದ್ದು.

ಪರಿಶೀಲಕರ ಅಭಿಪ್ರಾಯವು.

ಐರ್ಲ್ಯಾಂಡ್ ದೇಶದ ಫಾರ್ಮಸ್ಯೂಟಿಕಲ್ ಸೊಸೈಟಿಯೆಂಬ ಔಷಧಶಾಲೆಯ ಪ್ರಸಿಡೆಂಟರಾಗಿಯೂ, ಸದರೀ ದೇಶದ ಜಿಯಾಲಜಿಕಲ್ ಸೊಸೈಟಿ ಎಂಬ ಪೃಥ್ವೀಶಾಸ್ತ್ರಾಭಿಮಾನಿಸಭೆಗೆ ಸಹಾಯಕ ಪ್ರೆಸಿಡೆಂಟರಾಗಿಯೂ, "ಮಿನರಲ್ ವಾಟರ್ಸ್ ಆಫ್ ಯೂರಪ್" ಎಂಬ ಗ್ರಂಥಕರ್ತರಾಗಿಯೂ, ರಸಾಯನಶಾಸ್ತ್ರ ವಿಷಯಕವಾದ ಅನೇಕ ಲೇಖನಾಧಿಕಾರಿಯಾಗಿಯೂ, ಇರುವ ಪ್ರೊಫೆಸರ್ ಟಿಚ್‌ಬೋರ್ನ್ (C. R. TICHBORNE, L. L. D, F. C. S., M. R. I. A.,) ಎಂಬುವರು ಅಭಿಪ್ರಾಯ ಪಟ್ಟಿರುತ್ತಾರೆನೆಂದರೆ—ಲಿಟಿಲ್‌ರವರ ಓರಿಯಂಟಲ್ ತೈಲವನ್ನು ಪರೀಕ್ಷೆ ಮಾಡಿನೋಡಿದ್ದೇನೆ. ಇದು ವಿಲಕ್ಷಣವಾದ ಔಷಧಿಗಳಿಂದ ತಯಾರಿಸಲ್ಪಟ್ಟಿದ್ದು, ಇದು ರೋಗಿಗಳ ಉಪಯೋಗಕ್ಕೆ ಹಾನಿಕರವಾದ ಯಾವ ಪದಾರ್ಥವೂ ಇಲ್ಲದ್ದಾಗಿಯೂ, ಸಿದ್ಧವಾಗಿ ಪ್ರಬಲ ರೋಗ ನಿವಾರಕ ಶಕ್ತಿಯುಳ್ಳದ್ದಾಗಿರುತ್ತದೆ. ಈ ಮಿಶ್ರೌಷಧವು ನರಗಳನ್ನು ಸ್ತಿಮಿತಕ್ಕೆ ತರತಕ್ಕದ್ದಾಗಿರುವದರಿಂದ ಇದು ಯಾವ ತರದ ರೋಗಗಳಿಗೆ ಉಪಯುಕ್ತವೆಂದು ತಿಳಿಸಲ್ಪಟ್ಟಿದೆಯೋ ಸದರೀ ರೋಗಗಳಲ್ಲಿ ಅದರ ಪ್ರಯೋಜನವು ವ್ಯಕ್ತವಾಗುವದು. ಈ ತೈಲವು ಸಂಪೂರ್ಣ ಜಾಗರೂಕತೆಯೊಡನೆ ತಯಾರುಮಾಡಲ್ಪಟ್ಟಿರುತ್ತದೆ.

ಇದರ ಕ್ರಯ—ಸೀಸೆ ಒಂದಕ್ಕೆ ೧ ರೂಪಾಯಿ.

ಇದು ವಿಶೇಷ ಗೌಡರ ಶಾಲೆಯಲ್ಲಿಯೂ, ಮದರಾಸ್ ಸಂಬುದಾಸ್ ಬೀದಿಯಲ್ಲಿ, ೨೦ನೇ ನಂಬರ್ ಮನೆಯೊಳಗಿರುವ, ಏ. ಸಿ. ಬೆರ್ರಿಮನ್ ಎಂಬವರಲ್ಲಿಯೂ, ಈ ಸ್ಥಳದಲ್ಲಿರುವ ಅವರ ಏಜಂಟ್‌ಗಳಾದ ಜೆ. ವೆಸ್ಟ್ ಯವರ ಕಂಪೆನಿಯಲ್ಲಿಯೂ, ಮಿ. ಕೆಪ್ಟನ್ ಅಂಡ್ ಕಂಪೆನಿಯವರಲ್ಲಿಯೂ, ರಿಸ್ಸ್‌ಯವರ ಕಂಪೆನಿಯಲ್ಲಿಯೂ ದೊರೆಯುವದು.

AGENTS.—Messrs, J. WEST, *Chemist, &c., Bangalore.*
CAPTAIN & Co *Chemists, Bangalore*
REES & Co., *Chemists, Bangalore*; and of
MAHOMED YOUSOFF AND SONS, *The Cash Bazar, Bangalore*
A. C. BERRYMAN & Co.,
20 *Sambodoss Street Madras.*

NOTICE.

VAIDYASARA SANGRAHA

A TREATISE ON THE PRINCIPLES OF

HINDU MEDICINE

Price including Postage Rs 5 6 0

ವೈದ್ಯಸಾರ ಸಂಗ್ರಹ.

ಈಗ್ರಂಥಾಪೇಕ್ಷೆಯುಳ್ಳವರು ಮೊಬಲಗಿನೊಡನೆ ಈ ಕೆಳಗೆ ರುಜುಮಾಡಿರತಕ್ಕವರ ಹೆಸರಿಗೆ ಬರೆದುಕೊಂಡರೆ ಪುಸ್ತಕ ಕೂಡಲೇ ಕಳುಹಿಸಲ್ಪಡುವದು. ಮೊಬಲಗು ಇಲ್ಲದ ದರಖಾಸ್ತುಗಳಿಗೆ ಸುತರಾಂ ಸಿಗೆಕೊಡಲ್ಪಡಲಾರದು.

ಇದರಕ್ರಯ ... ...ರೂ|| ೫—೦—೦
ಪ್ಯಾಕಿಂಗ್ ಮತ್ತು ಅಂಚೆಹಾಸಲ್, ೦—೬—೦

ಟಿ. ಬಿ. ವೆಂಕಟಾಚಾರ್,
ಆಸ್ಪತ್ರೆರೋಡ ಬೆಂಗಳೂರು.

ವಿಶೇಷ ವರ್ತಮಾನ.

ಪೂನೆ ಚಿತ್ರಶಾಲೆಯಲ್ಲಿ ಸ್ಥಾಪಿಸಲ್ಪಟ್ಟಿರುವ ದೊಡ್ಡ ಶಿಲಾಯಂತ್ರದಲ್ಲಿ, ಹಿಂದೂ ದೇವತೆಗಳ, ಚರಿತ್ರೆಗಳ ಸೂಚಕ ಪ್ರಸ್ತಾವ ಪಟಗಳು, ಸುಂದರಿಗಳ ನೇಟಿವ್ ಜನಗಳ ವಸ್ತ್ರಗಳ ಬಣ್ಣದ ಚಿತ್ರಗಳು ತಯಾರಾಗುತ್ತಲಿವೆ. ಇವುಗಳ ಕೆಟಲಾಗ್ ನಮೂನೆಗಳನ್ನು ಯೋಚಿಸಲಾಗಿ ಕ್ರಮ ಬಹಳ ಅಲ್ಪವಾಗಿದೆ. ಬೇಕಾದವರಿಗೆ ಕ್ರಯದಪಟ್ಟಿ ಕಳುಹಿಸಲ್ಪಡುವವು.

ಪೂನಾ ಮನೇಜರ್ ಚಿತ್ರಶಾಲೆಯ ಮ್ಯಾನೇಜರ್.

ನೋಟೀಸ.

ಅಪ್ಪಲ್ ಬಾಜಾರು ಬಿನರೀವಾರಿ ಅತ್ತರುಗಳು !
ಬಾಧೆ ನಿವಾರಣೆ ಮಾಡುವ ದಂತದಸ್ತ !!
ಅನೇಕ ಸುಗುಣಗಳುಳ್ಳ ಸುಗಂಧರಾಜ ತೈಲವು !!!
ನಾನಾತರದ ಅಪ್ಪಲ್ ಬಾಜಾರು ಊದು ಬತ್ತಿಗಳು
ಮತ್ತು ಬಿಲ್ಲೆಗಳು ಹೊಸ ಬಿಲ್ಲೆಗಳು ವಗೈರೆ.

ಇವುಗಳೆಲ್ಲ ಬಹಳ ಫರಮಾಯಿಷಿಯಿಂದ ತಯಾರಾಗಿ ಬಿಕರೀಬಗ್ಗೆ ಸಿದ್ಧವಾಗಿರುತ್ತೆ. ಅಲ್ಲದೆ ೫ ಸಾವಿರ ಕೀಟಾಣುಗಳಿಗೆ ಮೇಲ್ಪಟ್ಟು ಬೆಳೆಯಗುಡುವ, ಬಹಳ ಸಂಕಟಗಳನ್ನು ಪರಿಹಾರ ಮಾಡಿ ಯಾವಾಗಲೂ ಸುವಾಸನೆ ಕೊಡುವ ಸುಗಂಧರಾಜ ತೈಲವು ರಾತ್ರಿ ಹಗಲು ಬಾಧಿಸುವ ಹಲ್ಲು ನೋವನ್ನು ಪರಿಹಾರ ಮಾಡುವ ದಂತ ಭಸ್ಮ ಸಹ ಬಹಳ ಕಮ್ಮಿ ಚಾರ್ಜಿಗೆ ಸಿಕ್ಕುವವು. ಏಜಂಟ್ ಆ ಮಹಮದ್ ಖಾಸಿಂ, ಬೆಂಗಳೂರು ದೊಡ್ಡಪೇಟೆ ಅಂಚೇ ಕಚ್ಚೇರಿ ರೂಬರೂ ಬಾಬ್‌ಕಿಸ್ಸರ್.

ನೋಟಿಸ್.

ಇದರಿಂದಸರ್ವರಿಗೂತಿಳಿಯಪಡಿಸುವದೇನೆಂದರೆ. ಸನ್ ೧೮೮೯ನೇ ಏಪ್ರಿಲ್ ೧ನೇ ತಾರೀಖ್ ಲಾಗಾಯತು ಸನ್ ೧೮೯೦ನೇ ಮಾರ್ಚ ೩೧ನೇ ತಾರೀಖ್‌ವರಿವಿಗೆ, ಹೊಸೂರು ರಿಮೌಂಟ್ ಇಲಾಖೆಗೆ ಇದರಡಿ ನಮೂದ್ ಮಾಡಲ್ಪಡುವ ಜಿನಿಸುಗಳು ಬೇಕಾಗಿರುವದರಿಂದ ಅವುಗಳ ಸರಬರಾಯ್ ಬಗ್ಗೆ ಬರುವ ಮೊಹರ್ ಮಾಡಲ್ಪಟ್ಟ ದರಖಾಸ್ತುಗಳನ್ನು ರಿಮೌಂಟ್ ಡೆಪೋ ಸೂಪರಿಂಟೆಂಡೆಂಟರವರು, ಸನ್ ೧೮೮೮ನೇ ಇಸವಿ ಡಿಸೆಂಬರ್ ೮ನೇ ತಾರೀಖು ಶನಿವಾರ ಮಧ್ಯಾಹ್ನ ೧೨ ಘಂಟೆಯವರಿವಿಗೆ ಬರಮಾಡಿಕೊಳ್ಳುವರು.

ಇದನ್ನು ಕುರಿತ ಜಾಸ್ತೀ ತಫಸೀಲ್ ತಿಳಿಯಬೇಕಾದವರು, ಸನ್ ೧೮೮೮ನೇ ಇಸವಿ ಅಕ್ಟೋಬರ್ ೩೧ನೇ ತಾರೀಖು ೪೩ನೇ ನಂಬರ್ ಫೋರ್ಟ್ ಸೇಂಟ್‌ಜಾರ್ಜ್ ಗೆಜೆಟಿನ ೨ನೇ ಭಾಗ, ೧,೬೦೧ನೇ ಪುಟವನ್ನು ನೋಡಿ ತಿಳಿದುಕೊಳ್ಳತಕ್ಕದ್ದು.

ಹುರಳಿ.
ನೆಲ್ಲುಹುಲ್ಲು.
ರಾಗಿಹುಲ್ಲು.
ಹಸೀಹುಲ್ಲು.

JOHN EWING, COLONEL
Supdt, Reserve Remount Depot.
ರಿಮೌಂಟ್ ಡೆಪೊ, ಹೊಸೂರು,
೫ನೇ ನವಂಬರ್, ೧೮೮೮.

ದಕ್ಷಿಣ ಮಹಾರಾಷ್ಟ್ರ ರೆಯಿಲ್ವೆಕಂಪೆನಿ.
(ಮೈಸೂರು ಸ್ಟೇಟ್ ರೆಯಿಲ್ವೆ.)
ನೋಟೀಸ್.

೧. ಮೈಸೂರು ಸ್ಟೇಟ್ ರೆಯಿಲ್ ರಸ್ತೆಯ ಪೈಕಿ ಬೆಂಗಳೂರಿಂದ ಗುಬ್ಬಿಗೆ ಹೋಗುವ ಭಾಗದಲ್ಲಿ ಕೆಲವು ಬದಲಾವಣೆಗಳು ಮತ್ತು ಅಭಿವೃದ್ಧಿಗಳು ಮಾಡಬೇಕಾಗಿರುವದರಿಂದ ಆಬಗ್ಗೆ ದರಖಾಸ್ತು ಮಾಡತಕ್ಕವರು ತಮ್ಮ ದರಖಾಸ್ತನ್ನು ಸೀಲ್‌ಮಾಡಿ ಈ ತಿಂಗಳ ೧೫ನೇ ತಾರೀಖ್ ಸಾಯಂಕಾಲ ನಾಲ್ಕುಘಂಟೆಯೊಳಗಾಗಿ ಇದರಡಿ ರುಜು ಮಾಡಿರುವವರಿಗೆ ಕೊಡತಕ್ಕದ್ದು. ನಕ್ಷೆಗಳು, ಭಾಗಗಳು, ಪರಿಮಾಣ ವಗೈರೆಯನ್ನು ಇದರಡಿ ರುಜು ಮಾಡಿರುವವರ ಆಫೀಸಿನಲ್ಲಿ ನೋಡಿ ಪಡೆಯಬಹುದು.

೨. ಬೆಂಗಳೂರು ಗುಬ್ಬಿ ಭಾಗದಲ್ಲಿ ೧ರಸ್ತೆ ಪಕ್ಕವಾಗಿರುವ ಕೆರೆಗಳಲ್ಲಿ ಪಾಚ ಸರಿಸಾಡತಕ್ಕ

ಬಗ್ಯೆ ದರಖಾಸ್ತು" ಎಂದು ಪ್ರತಿ ದರಖಾಸ್ತಿನ ಲಿಫಾಫೆಯಮೇಲೆ ಬರೆದು ಅದರ ಸಂಗಡ ೨೦೦ ರೂಪಾಯಿಗಳ ಠೇವಣೀ ಮೊಬಲಗಿನೊಡನೆ ಕಳುಹಿಸತಕ್ಕದ್ದು.

೩. ಮಂಜೂರ್ಮಾಡಲ್ಪಟ್ಟ ದರಖಾಸ್ತುದಾರನು ತನ್ನ ದರಖಾಸ್ತು ಮಂಜೂರಾದ ೧೦ ದಿನಗಳೊಳಗಾಗಿ ಛಾಪಾಕಾಗದದಲ್ಲಿ ಕರಾರ್ ಬರೆದು ಕೊಟ್ಟು ತಾನು ಒಪ್ಪಿಕೊಳ್ಳುವ ಕಾಲದೊಳಗಾಗಿ ತನ್ನ ದರಖಾಸ್ತಿನ ಷರತ್ತುಗಳನ್ನು ನೆರವೇರಿಸುವದಕ್ಕೆ ಜಾಮೀನ್ ತರೀಕ ೨,೦೦೦ ರೂಪಾಯಿಗಳು ಠೇವಣೀ ಇಡಬೇಕಾಗುವದು.

೪. ಯಾವ ದರಖಾಸ್ತನ್ನಾದರೂ ಅಂಗೀಕರಿಸದೆ ಹೋದರೆ ಅದಕ್ಕೆ ಕಾರಣ ತಿಳಿಸಲ್ಪಡಲಾರದು, ಮತ್ತು ಯಾವ ದರಖಾಸ್ತು ಅಂಗೀಕರಿಸಲ್ಪಡುತ್ತದೆಯೋ ಅಂಥಾವನು ವಿನಾ ಇತರ ಯೆಲ್ಲಾ ದರಖಾಸ್ತುದಾರರ ಠೇವಣೀ ಮೊಬಲಗುಗಳು ದರಖಾಸ್ತುಗಳು ವ್ಯವಸ್ಥೆಯಾದಕೂಡಲೇ ಅವರವರಿಗೆ ವಾಪಸ್ ಕೊಡಲ್ಪಡುವವು.

ಬೆಂಗಳೂರು, ೩ನೇ ನವಂಬರ್ ೧೮೮೮.

A. J. Mollor,
Superintendent,
Way and Works,
Mysore State Railway.

ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA.

MONDAY, NOVEMBER 12, 1888.
೧೮೮೮ನೇ ನವಂಬರ್ ತಾ|| ೧೨ನೇ ಸೋಮವಾರ.

A SILLY THREAT.

ಈವೂರು ಸಿವಿಲ್ ವ ಮಿಲಿಟರಿ ಸ್ಟೇಷನಿನಲ್ಲಿ ಮಿಷನರಿಗಳಿಂದ ಪ್ರಕಟಿಸಲ್ಪಡುತ್ತಿರುವ ಮೂಯೇಮಬಕೂರ್ ೮ ನೇ ತಾರೀಖಿನ ವೃತ್ತಾಂತ ಪತ್ರಿಕೆಯು ಸ್ವಮತಾಭಿನಿವೇಶದಿಂ ಪ್ರೇರಿತವಾಗಿ, ಆಚೇ ಶನಿವಾರದದಿನ ಮೇಕಲ ಪಾವಣ್ಣನವರ ಛತ್ರದಲ್ಲಿ ಬಹುಜನ ನೇಟಿವ್ ದೊಡ್ಡಮನುಷ್ಯರು ಸಭೆ ಸೇರಿ ಮಾಡಿದ ತೀರ್ಮಾನಗಳನ್ನಾಕ್ಷೇಪಿಸುತ್ತ, ಆದಿನದ ಸಭೆಯಲ್ಲಿ ಐಕಮತ್ಯದೊಡನೆ ಮಾಡಲ್ಪಟ್ಟ ಪ್ರತಿ ತೀರ್ಮಾನವೂ ಸದರೀ ಪತ್ರಿಕೆಯ ಉದ್ದೇಶ ಪ್ರಯತ್ನಗಳಿಗೆ ಭಂಗಕಾರಿಯಾಗಿದ್ದದರಿಂದ ತತ್ಪ್ರಯುಕ್ತವಾದ ಅಸಮಾಧಾನವನ್ನು ಪ್ರಕಟವಾಗಿ ಹೊರಪಡಿಸಲಾರದೆ ಆ ಸಭೆಗೆ ಬಂದಿದ್ದ ದೊಡ್ಡ ಮನುಷ್ಯರನ್ನಾಕ್ಷೇಪಿಸುವದರ ಮೂಲಕ ತನ್ನ ಮನೋಗತ ಭಾವವನ್ನು ವ್ಯಕ್ತಪಡಿಸುತ್ತಿದೆ. ಪರಂತು ವೃತ್ತಾಂತ ಪತ್ರಿಕೆಯು ನೇಟಿವ್ ದೊಡ್ಡ ಮನುಷ್ಯರನ್ನೂ, ನೇಟಿವ್‌ಗಳ ಜಾತಿ ಮತ ಸಂಪ್ರದಾಯಗಳನ್ನೂ ಬಹು ಪ್ರಕಾರದಿಂ ದೂಷಿಸಿ ನೇಟಿವ್ ಸಮುದಾಯಕ್ಕೆ ವಿರೋಧವಾಗಿ ವರ್ತಿಸುತ್ತಿರುವದರಿಂದ ಅದರ ಅನವಸ್ಥಾ ಪ್ರಸಂಗಕ್ಕೆ ಉತ್ತರ ಹೇಳಬೇಕಾದ ಕೇವಲ ನಿರಸವಾದ ಕಾರ್ಯವೊಂದು ನಮಗೀಗ ಘಟಿಸಿದ್ದಕ್ಕೋಸ್ಕರ ಬಹಳ ವಿಷಾದಿಸುವೆವು. ಸದರೀ ಪತ್ರಿಕೆಯ ಉದ್ದೇಶ ಪ್ರಯತ್ನಗಳು ಅದರ ಮಾತುಗಳಿಂದಲೇ ಲೋಕಕ್ಕೆ ವ್ಯಕ್ತವಾಗಿರುವಲ್ಲಿ ಅವು ನಾವು ಪ್ರತ್ಯೇಕ ತಿಳಿಸಬೇಕಾದುದಿಲ್ಲವು. ವೃತ್ತಾಂತ ಪತ್ರಿಕೆಯು ಮಾನಿತರಾದ ದೊಡ್ಡಮನುಷ್ಯರು ನಿರ್ದೇಶಿಸಿ ಮಾಡಿರುವ ಆಕ್ಷೇಪಣೆಗಳನ್ನೂ, ಅವುಗಳಿಗೆ ನಾವು ಹೇಳತೊಡಗಿರುವ ಉತ್ತರಗಳನ್ನೂ ಇದರಡಿ ಸಂಗ್ರಹವಾಗಿ ತಿಳಿಸುವೆವು. ಅದರ ಆಕ್ಷೇಪಣೆಗಳೆಷ್ಟರಮಟ್ಟಿಗೆ ನಿಜವಾದವೋ ಅದು ವಿವೇಕಿಗಳ ಹೃದಯಕ್ಕನಗತವಾಗದಿರಲಾರದೆಂದೆಣಿಸುತ್ತೇವೆ. "ಕ್ರಿಶ್ಚಿಯನ್ ಸಂಘದವರು ತಮ್ಮ ಉದ್ದೇಶವನ್ನು ಬಲಾತ್ಕಾರದಿಂದಲಾಗಲಿ ಅಥವಾ ಹಣವು ಕೊಡುವದರಿಂದಲಾಗಲಿ ನೆರವೇರಿಸಿಕೊಳ್ಳಲಿಲ್ಲ, ಮುಂದೆಯೂ ನೆರವೇರಿಸಿಕೊಳ್ಳುವದಿಲ್ಲವು" ಎಂದು ಮಿಷನರಿಗಳನ್ನು ಹೊಗಳಲೆತ್ನಿಸಿದ ವೃತ್ತಾಂತ ಪತ್ರಿಕೆಯು, ಭಗವತ್ಪ್ರೋಕ್ತಗಳೆಂದು ಹೇಳುವ ದಶವಿಧ ಆಜ್ಞೆಗಳಲ್ಲಿ ಮುಖ್ಯವಾದವನ್ನೇ ಮರೆತಂತೆ ತೋರುತ್ತದೆ. ಈ ಸ್ವೈ ಕೆಲವು ತಿಂಗಳ ಹಿಂದೆ, ಜಾತಿಭ್ರಷ್ಟರಾಗಲಿಕ್ಕೆ ಸ್ತ್ರೀವ್ಯಭಿಚಾರಗಳು ಪ್ರೇರಕ ಸಾಮಗ್ರಿಗಳಾಗಿ ಏರ್ಪಟ್ಟಿರುವದರಿಂದ, ಅವು ಆಶಿಸಿ ಅನೇಕರು ಮಿಷನರಿಗಳ ಮೋಹಕ ವಾಕ್ಯಗಳಿಗೆ ಮರುಳಾಗಿ ಕೆಟ್ಟುಹೋಗಿ ಬಳಿಕ ಪಶ್ಚಾತ್ತಾಪ ಪಡುತ್ತಾರೆಂದು ನಾವು ಬರೆದಿದ್ದದಕ್ಕೆ, ವೃತ್ತಾಂತಪತ್ರಿಕೆಯಲ್ಲಿ ಒಬ್ಬ ಬಾತಮೀದಾರನು ಜವಾಬ್ ಬರೆಯುತ್ತಿನ್ನು ಕಡೆಗೆ ನಮ್ಮ ಅಭಿಪ್ರಾಯಗಳನ್ನೆಲ್ಲ ಬಹಳ ಮಟ್ಟಿಗೆ ಅಂಗೀಕರಿಸಿರುವದರಿಂದ ಅದು ಮತ್ತೊಂದಾವರ್ತಿ ಸದರೀ ಪತ್ರಿಕೆಯು ನೋಡಿದರೆ ಕ್ರಿಶ್ಚಿಯನ್‌ಸಂಘದವರು ತಮ್ಮ ಉದ್ದೇಶವನ್ನು ಬಲಾತ್ಕಾರದಿಂದಲಾಗಲಿ ದ್ರವ್ಯಮೂಲಕವಾಗಿಯಾಗಲಿ ನೆರವೇರಿಸುವದಿಲ್ಲವೆಂಬ ಅಂಥದ ಯಾವಾರ್ಥ್ಯವು ಅದಕ್ಕೇ ವ್ಯಕ್ತವಾಗಬಹುದು. ಅರ್ಥಾತುರರ ತೃಪ್ತಿಗೆ ಬೇಕಾದ ದ್ರವ್ಯಸಹಾಯವು ವಿಶೇಷವಾಗಿ ಮಿಷನರಿಗಳಿಗೆ ದೊರೆಯುವಷ್ಟರಲ್ಲಿ ಕ್ರಿಶ್ಚಿಯನ್ ಮತವು ಈ ಇಂಡಿಯಾದೇಶದಲ್ಲಿ ಪ್ರಚಾರಪಡೊಳ್ಳುವ ಬರಲಿಕ್ಕೆ ಅವಕಾಶವಿಡ್ಡಿರಲಾರದು. ಈಗ ಜಾತಿಭ್ರಷ್ಟರಾದವರನೇಕರು ತಮ್ಮ ಅವಿವೇಕದ ಫಲವನ್ನು ಉಂಡುಕೊಂಡು ದುಃಖ ಅನುಭವಿಸಿರುವದರಿಂದ ಅದಕ್ಕಾಗಿ ಮಿಷನರಿಗಳು ಅಂದು ಸುಕೃತ ಪಡುವಂತೆ ಪ್ರಾಪ್ತವಾಗಿದೆ. ಮಿಷನರಿಗಳು ಬಲಾತ್ಕಾರದಿಂ ಜನರನ್ನು ಮತಭ್ರಷ್ಟರನ್ನಾಗಿ ಮಾಡುವದಿಲ್ಲವೆಂಬ ವೃತ್ತಾಂತಪತ್ರಿಕಾ ಪ್ರತಿಜ್ಞೆಯನ್ನು ಕಾರ್ಯತಃ ನಡೆಸುವ ಪಕ್ಷಕ್ಕೆ ಕ್ರಿಸ್ತಮತಕ್ಕೆ ಈ ದೇಶದಲ್ಲಿ ಮುಂದೆ ಬಹಳ ವ್ಯಾಪಕತೆ ಉಂಟಾಗಲಾರದು.

ಮಿಷನರಿಗಳು ಮುದ್ದುಲಕ್ಷ್ಮಿಯನ್ನು ಕರೆದುಕೊಂಡು ಹೋಗಿ ತಮ್ಮ ಮನೆಯಲ್ಲಿಟ್ಟುಕೊಂಡಿದ್ದ ಕಾಲದಲ್ಲಿ ಆಕೆಯ ತಾಯಿಯು ಅವಳು ನೋಡಲಿಕ್ಕೆ ಹೋದಾಗ ಅವರಿಬ್ಬರೂ ಪರಸ್ಪರ ಆಲಿಂಗನ ಮಾಡಿಕೊಂಡು ಕಣ್ಣೀರು ಬಿಟ್ಟು ಅಳುತ ಮಗಳಂ ಕರೆತರುವದಕ್ಕೆ ಪ್ರಯತ್ನಪಟ್ಟಾಗ್ಯೂ ಅಲ್ಲಿದ್ದ ಕ್ರಿಶ್ಚಿಯನ್ ಹೆಂಗಸರು ಮೂವರು ನಾಲ್ವರು ಬಂದು ಆಕೆಯಂ ಹೊರಗೆ ತಳ್ಳಿ ಬಾಗಿಲು ಹಾಕಿ ಬಿಟ್ಟಂತೆಯೂ, ಇತರರು ಕೆಲವರು ಹೋದಾಗ ಸದರೀ ಹುಡಿಗಿಯನ್ನು ನೋಡುವದಕ್ಕೆ ಅವಕಾಶ ಕೊಡಲಿಲ್ಲವೆಂತಲೂ, ಅವಳ ತಂದೆಯು ಕೈಫಿಯತ್ತಿನಿಂದ ಸ್ಪಷ್ಟವಾಗಿ ತಿಳಿಯಬರುತ್ತದೆ. ಓ ದೇವೋತ್ತ ಸಾಹೇಬರುಗಳಿರಾ! ಇದು ನೀವೇನನ್ನುವಿರಿ? ಇದು ನಿಮ್ಮ ಬಲಾತ್ಕಾರವೋ ಅಲ್ಲವೆ? ಕ್ರಿಸ್ತ ಮತದ ಔತ್ಕೃಷ್ಟ್ಯ ಜ್ಞಾನಬೋಧನೆಯಿಂದುಂಟಾದದ್ದೋ? ದ್ರವ್ಯಾಶೆಯನ್ನು ನೀವು ತೋರಿಸಿ ಜನರು ಪ್ರೇರಿಸದ ಪಕ್ಷಕ್ಕೆ ಮುದ್ದುಲಕ್ಷ್ಮಿಯು ಕಸೂತಿ ಕೆಲಸವು ಹಿಂಬೆರಳ ಹೆಗಳ ಮೌಲ್ಯವುಳ್ಳದ್ದಾಗಿದ್ದರೂ ಅದು ಪ್ರಕಾಶಿಸಿ ಯೋಗ್ಯತೆಗೆ ಮೀರಿದ ಬೆಲೆಯಂ ಕೊಡುತ ಮರುಳುಗೊಳಿಸುತಬಂದದರ ಉದ್ದೇಶವನ್ನು ಪ್ರಜೋದ್ಧಾರಕರಾದ ಮಿಷನರಿಗಳೇ ಯಾತಕ್ಕೆ ದಯವಿಟ್ಟು ತಿಳಿಸಬಾರದು! ಮುದ್ದುಲಕ್ಷ್ಮಿಯನ್ನು ಸೇರಿಸಿಕೊಳ್ಳುವದರಲ್ಲಿ ಗೂಢವಾದ ಮತ್ತು ವಂಚಕವಾದ ನಿಮ್ಮ ಪ್ರಯತ್ನವಿಲ್ಲವೆಂತಲೇ ಹೇಳುವಣ, ಪರಂತು ಅವಳು ತನ್ನ ತಂದೆಯ ಮನೆಯಿಂದ ಅರ್ಧರಾತ್ರಿಯ ವೇಳೆಯಲ್ಲಿ ಒಬ್ಬಳಾಗಿ ಯಾರಿಗೂ ತಿಳಿಸದೆ ಬಂದಾಳೆಂದು ತಿಳಿಯಬಂದರೂ ನೀವು ಅನುಮಾನಿಸದೆ ಅವಳಂ ಬರಮಾಡಿಕೊಂಡು ಪುನಃ ಕಳುಹಿಸದಿರುವದರ ಭಾವವೇನು? ನಿಮ್ಮ ವರ್ತನವು ನಿಮ್ಮ ಅಭಿರುಚಿಯಂತಿದೆ, ನಿಮ್ಮ ಮತಕ್ಕೆ ಸೇರಿದವರ ವಿಷಯದಲ್ಲಿ ಬಳಿಕ ನೀವು ಮಾಡುವ ತಿರಸ್ಕಾರಗಳನ್ನೂ ವಂಚನೆಗಳನ್ನೂ ಬಹಿರಂಗಪಡಿಸಲಿಕ್ಕೆ ನಿಮ್ಮ ಸಂಘಕ್ಕೆ ಸೇರಿದವರನೇಕರು ಸನ್ನದ್ಧರಾಗಿದ್ದಾರೆ. ಕ್ರಿಶ್ಚಿಯನ್‌ಗಳು ತಮಗೆ ಸಾಧ್ಯವಾಗಿದ್ದ ಕಾಲದಲ್ಲಿ ಮತಕ್ಕಾಗಿ ಬೇಕಾದ ಕ್ರೂರ ಕೃತ್ಯಗಳನ್ನೆಲ್ಲ ನಡೆಸಿ ಅನೇಕ ಜೀವವಧೆಯನ್ನು ಮಾಡಿದ ಅಂಶವು ಅವರ ಪೂರ್ವವೃತ್ತಾಂತಗಳಿಂದಲೇ ಸ್ಪಷ್ಟವಾಗುತ್ತಿದೆ. ಈಗ ಅಂಥಾದ್ದಕ್ಕೆ ಅವಕಾಶವಿಲ್ಲವು. ಈಗ ನೇಟಿವ್‌ಗಳೆಲ್ಲರೂ ಸೇರಿ ಮಾಡುತಲಿರುವ ಸಾಮುದಾಯಿಕವಾದ ಪ್ರಯತ್ನವನ್ನು ಒಂದು ಗದ್ದಲರೂಪವೆಂದು ಭಾವಿಸಿ ಅದು "ಕೇವಲ ಸರಕಾರದ ದೊಡ್ಡಅಧಿಕಾರಿಗಳ ಪ್ರೇರಣೆಯಿಂದಲೇ ಬಂದದ್ದೆಂ"ದು ವೃತ್ತಾಂತ ಪತ್ರಿಕೆಯು ಅಭಿಪ್ರಾಯಪಡುತ್ತಿದೆ. ಆಚೇ ಶನಿವಾರದ ಸಭೆಯಲ್ಲಿ ಬಂದಿದ್ದವರೊಳೆಷ್ಟುಜನ ಸರ್ಕಾರ್ ಉದ್ಯೋಗಸ್ಥರಾಗಿದ್ದರೋ, ಮಿಕ್ಕವರೆಷ್ಟುಮಂದಿ ಇದ್ದರೋ ಅವರ ಸಂಖ್ಯೆಯನ್ನು ಸ್ವತಃ ನೋಡಿದ್ದರೆ ಆಗ ಪತ್ರಿಕೆಗೆ ತನ್ನ ಪರಿಭಾವನೆಯು ಅನಿರೂಪಕವಾದದ್ದೆಂದು ತಿಳಿಯಬಂದಿರಬಹುದು. ದ್ರವ್ಯಾರ್ಜನೆಗಾಗಿ ಉಪಾಯಾಂತರವಿಲ್ಲದೆ ದೂರದೇಶಗಳಿಗೆ ಬರುವಂತಹ ಮಿಷನರಿಗಳಿಗೆ ಸ್ವಮತಪ್ರಚಾರದೊಳು ಇರುವ ಅಕ್ಕರೆಗಿಂತ ಅಧಿಕವಾಗಿಯೇ ಹಿಂದೂಗಳಿಗೆ ಸ್ವಮತರಕ್ಷಣೆಯೊಳು ತಾತ್ಪರ್ಯ ಸ್ಫುಟವೆಂದು ನಾವು ಧಾರಾಳವಾಗಿ ಹೇಳುವೆವು. ಮಿಷನ್ ಸಹಾಯದ್ರವ್ಯ ಪ್ರಕಟವಾಯಾದರೆ ಆಗ ಮಿಷನರಿಗಳ ಮನೋಭಿನಿವೇಶವು ಸ್ವತಯೇವ ಸ್ಪಷ್ಟವಾಗುವದು. ಮತ್ತು ಸ್ವಮತ ಸಂರಕ್ಷಣೆಯಲ್ಲಿ ನಮ್ಮ ಪ್ರಯತ್ನಕ್ಕೆ ಸರ್ಕಾರ್ ಉದ್ಯೋಗಸ್ಥರು ಕಾರಣಭೂತರೆಂದು ಹೇಳುವದಕ್ಕೆ [illegible] ಗಿ ಪ್ರೇರಕಾನುಮೋದಕರೆಂಬದು ಸಹ ಸದರೀ ಪತ್ರಿಕೆ ಅಂಗೀಕರಿಸಬೇಕಾಗಿರುತ್ತದೆ. ಇದಲ್ಲದೆ ಅನುಭಾವ್ಯವಾದಗುಟ್ಟು ಸಭೆಗೆಬಂದಿದ್ದ ಪ್ರಮುಖರಾದ ಮೂವರು ದೊಡ್ಡ ಮನುಷ್ಯರ ಹೆಸರುಗಳು ತಿಳಿಸಿ "ಮಿಷನ್ ಬಾಲಿಕಾಪಾಠಶಾಲೆಗಳನ್ನು ಹಾಳುಮಾಡುವವಿಷಯದಲ್ಲಿ ತಮ್ಮಕೈಲಾದ ಮಟ್ಟಿಗೂ ಸಾಹಸವಾಮಾಡುವದಾಗಿ ಅವರು ತಮ್ಮ ಉದ್ದೇಶವನ್ನು ಬಹಿರಂಗವಾಗಿ ಪ್ರಸಿದ್ಧಪಡಿಸಿದರು" ಎಂದು ಸಹ ಅದೇ ಪತ್ರಿಕೆಯು ತಿಳಿಸುತ್ತಿದೆ. ಆದಿನದ ಸಭೆಯಲ್ಲಿ ಮ|| ರಾಮಚಂದ್ರಯ್ಯರವರಾಗಲಿ, ಮ|| ಶೀತಾರಾಮಯ್ಯನವರಾಗಲಿ, ಮ||ಕೃಷ್ಣಸ್ವಾಮಿಯ್ಯಂಗಾರ್ಯರವರಾಗಲಿ, ಹೀಗೆಂದು ಮಾತನ್ನಾಡಿದರು ನುಡಿದವರಲ್ಲವೆಂಬ ಅಂಶವು ಸಿದ್ಧವಿಷಯವಾಗಿರುತ್ತದೆ. ಆ ಸಭೆಯಲ್ಲಿ ಮಾತನಾಡಿದವರೆಲ್ಲರೂ ಪ್ರಾಯಶಃ ಸ್ವತಂತ್ರವೃತ್ತಿಯುಳ್ಳದೊಡ್ಡಮನುಷ್ಯರಾಗಿಯೇ ಇದ್ದರು. ಇದಲ್ಲದೆ ಪ್ರಾಸಂಗಿಕರೆಲ್ಲರೂ ಕ್ರಿಶ್ಚಿಯನ್ ಸ್ಕೂಲ್‌ಗಳಿಗೆ ಹಿಂದೂ ಬಾಲಕಿಯರನ್ನು ಕಳುಹಿಸುವದರಿಂದುಂಟಾಗುವ ಅನರ್ಥಗಳು ತಿಳಿಸಿ, ಅವುಗಳ ದೆಸೆಯಿಂದ ತಪ್ಪಿಸಿಕೊಳ್ಳುವದಕ್ಕಾಗಿ ಒಂದು ಉಪಾಯವು ಕಲ್ಪಿಸಬೇಕಾದ್ದು ಕರ್ತವ್ಯವೆಂದು ಹೇಳಿದರೇ ಹೊರತು ವೃತ್ತಾಂತಪತ್ರಿಕೆಯು ತನ್ನ ಸ್ವಾಗ್ರವಸ್ಥೆಯಲ್ಲಿ ಕಳವಳಪಟ್ಟು ನುಡಿದಂತಾ ಮಾತುಗಳನ್ನೊಬ್ಬರೂ ಹೇಳಲಿಲ್ಲವು. ತಮ್ಮ ಮಕ್ಕಳನ್ನು ತಮಗೆ ಇಷ್ಟವಿರುವ ಯಾವಪಾಠಶಾಲೆಗಾಗಲಿ, ಕಳುಹಿಸಿಕೊಡುವ ವಿಷಯದಲ್ಲಿ ಜನರು ಸಂಪೂರ್ಣವಾದ ಸ್ವಾತಂತ್ರ್ಯವುಳ್ಳವರಾಗಿದಾರೆಂಬದು ವೃ. ಪತ್ರಿಕೆಯಿಂ ಅಂಗೀಕರಿಸಿರುವದರಿಂದ ಮಿಷನರಿಗಳ ವರ್ತನಗಳನ್ನು ಅನುಭವಪೂರ್ವಕ ತಿಳಿದಿರುವ ಜನರಿಗೆ ಮ|| ಸೀತಾರಾಮಯ್ಯನವರಾಗಲಿ ಇತರರಾಗಲಿ, ಪ್ರೇರಿಸಿ ಬಲಾತ್ಕರಿಸಿ, ತಿಳಿಸಬೇಕಾದ ಅಂತಗತ್ಯವೂ ಇರುವದಿಲ್ಲವು. ಹೀಗಿರುವಲ್ಲಿ, "ಈವೂರು ಅಮಲ್ದಾರರು ಅನೇಕಸ್ಥಳಗಳಿಗೆಯೋಗಿ ಮಿಷನ್ ಪಾಠಶಾಲೆಗಳಿಗೆ ನಿಮ್ಮ ಹೆಣ್ಣುಮಕ್ಕಳನ್ನು ಕಳುಹಿಸಬೇಡಿರಿ, ಎಂದು ಆಯಾಯ ಬಾಲಕಿಯರ ತಾಯಿತಂದೆಗಳಿಗೆ ಬೋಧಿಸಿದ್ದಲ್ಲದೆ, ಹೊಸದಾಗಿ ಏರ್ಪಾಡು ಮಾಡುವ ಪಾಠಶಾಲೆಗೆ ಚಂದಾ ಹಾಕುವದಕ್ಕಾಗಿ ಐಶ್ವರ್ಯವಂತರನ್ನು ಕರೆಸಿಕೊಳ್ಳುತಿದ್ದಾರಂತೆ. ಇದು ನಿಜವಾಗಿದ್ದ ಪಕ್ಷದಲ್ಲಿ ಬಾಲಕಿಯರ ತಾಯಿತಂದೆಗಳೂ, ಇತರರೂ ಸಹ 'ಅಮಲ್ದಾರರು ಹೇಳಿದರು, ಸರಕಾರದ ಹುಕ್ಕುಂ' ಎಂದು ಭಾವಿಸುತ್ತಾರಲ್ಲವೇ? ಅಮಲ್ದಾರರ ಅಪೇಕ್ಷೆಯಂತೆ ತಾವು ನಡೆಯದೆ ಹೋದರೆ, ಅಮಲ್ದಾರರು ಅನೇಕ ವಿಷಯಗಳಲ್ಲಿ ತಮ್ಮ ಬೇಸರವನ್ನು ತೋರಿಸುವರೆಂದು, ಆಜನರು ಭಯಪಡುತ್ತಾರಲ್ಲವೆ?" ಎಂದು ಸದರೀ ಪತ್ರಿಕೆಯು ಉದ್ಘಾಟನಮಾಡಿರುವದು ಕೇವಲ ಅಸಂಬದ್ಧಪ್ರಲಾಪವಾಗಿರುತ್ತದೆ. ಮ|| ಶೀತಾರಾಮಯ್ಯನವರು ಅಧಿಕಾರ ನಡವಳಿಯಲ್ಲಿರುವ ತಮ್ಮ ಪದವಿಯನ್ನು ಯೆಂದಿಗೂ ಉಪಯೋಗಿಸಿರಲಾರರೆಂಬ ನಂಬಿಕೆಯು ನಮಗೆ ಸಂಪೂರ್ಣವಾಗಿದೆ. ಒಂದು ವೇಳೆ ಹಾಗೆ ಪ್ರವರ್ತಿಸುತ್ತಾರೆಂದು ಆರೋಪಿಸುವ ಪಕ್ಷಕ್ಕೆ ಸ್ವಮತಸ್ವಜನ ಸ್ವದೇಶಾಭಿಮಾನಿಯಾಗಿ ಅವುಗಳ ಅಭಿವೃದ್ಧಿಯಬಗ್ಯೆ ಅನೇಕರಲ್ಲೊಬ್ಬರಾಗಿ ಪ್ರಯತ್ನಮಾಡಿದರೆ ಅದು ತಪ್ಪೆಂದು ಹ್ಯಾಗೆ ನುಡಿಯುವದಕ್ಕಾಗುವದು? ಪಾಂಡುರೋಗಿಯ ಕಣ್ಣುಗಳಿಗೆ ಎಲ್ಲವೂ ಹಳದೀ ವರ್ಣವಾಗಿ ಕಾಣಿಸುವದು ಸ್ವಾಭಾವಿಕವಾಗಿರುವಂತೆ ದುಃಖಕಲುಷಿತವಾದ ಸದರೀ ಪತ್ರಿಕೆಯ ನೇತ್ರಗಳಿಗೆ ಭ್ರಾಂತಿಯಿಂದೆಲ್ಲವೂ ಅನ್ಯಥಾ ಕಾಣಿಸುವದೇನೂ ಆಶ್ಚರ್ಯವಲ್ಲವು. ಮುಖ್ಯವಾಗಿ ಇವೆಲ್ಲ ಒಬ್ಬ ಅಧಿಕಾರಿಯನ್ನು ಬದನಾಂ ಮಾಡಬೇಕೆಂಬ ಸಂಕಲ್ಪದೊಡನೆ ಹೇಳಲ್ಪಟ್ಟ ಕ್ಷುಲ್ಲಕೋಕ್ತಿಗಳೇ ಹೊರತು ಬೇರಲ್ಲವು.

ಬಿ.ಎ.,ಬಿ.ಎಲ್ ಪದ್ವಿಯರಾದ ಮ|| ರಾಮಚಂದ್ರಯ್ಯರವರು, ಕೊಂಪ್ಯಾನೇಸ್ಯಂಟ್ ಸಭೆಯಲ್ಲಿ ಅಧ್ಯಕ್ಷರಾಗಿದ್ದದಕ್ಕಾಗಿಯೂ, ಪೇಟೆಯಲ್ಲಿ ನಡೆದ ಸಭೆಗೆ ಬಾರದ್ದಕ್ಕಾಗಿಯೂ, ಅವರು "ಅನರ್ಹ"ರೆಂತಲೂ "ಅಯೋಗ್ಯರೆಂ"ತಲೂ ವೃತ್ತಾಂತ ಪತ್ರಿಕೆಯು ಬಹಳ ನಾಟ್ಯಮಾಡಿದೆ. ಮುದ್ದುಲಕ್ಷ್ಮಿಯ ಮೋಕದ್ದಮೆಯು ನಡೆದ ಪ್ರದೇಶಕ್ಕೂ, ಮಿಸ್ಟರ್ ರಾಮಚಂದ್ರಯ್ಯನವರಿಗೂ ಇರುವ ಸಂಬಂಧವನ್ನು ಸದರೀ ಪತ್ರಿಕೆಯು ಮರೆತು ಹೋದದಕ್ಕಾಗಿ ನಾವು ಬಹಳ ಆಶ್ಚರ್ಯಪಡುತ್ತೇವೆ. ಪರಮಾಪದೆಯಲ್ಲಿ ಬಹ್ವಾದರಪೂರ್ವಕ ಸದರೀ ಪತ್ರಿಕೆಗೆ ಅಧಿಕಾರ ನಿರವದ್ಯ ಸಹಸ್ಮರಣೆಯೊಳು ಬಾರದೆ ಹೋಯಿತಲ್ಲವೆ! ಮ|| ರಾಮಚಂದ್ರಯ್ಯರವರು ಸಾಮಾನ್ಯೇನ ಒಬ್ಬ ಹಿಂದೂವಾಗಿರುತ ಪ್ರಸಕ್ತ ಪ್ರಯತ್ನಗಳಿಗೆ ಅನುಮೋದಕರಾಗಿದ್ದರೇ ಹೊರತು ಚೀಫ್ ಕೋರ್ಟ್ ಜಡ್ಜಿ ಅಧಿಕಾರದೊಡನೆ ಯಾವ ಸಭೆಗೂ ಹೋಗಲಿಲ್ಲವು. ಇದಲ್ಲದೆ ಮುದ್ದುಲಕ್ಷ್ಮಿಯ ವಿಷಯದಲ್ಲಿ ಮಿಷನರಿಗಳು ನಡೆಸಿದ್ದು ಬಹಳ ಅಕ್ರಮವೆಂಬದು ಜಗತ್ಪ್ರಸಿದ್ಧವಾಗಿರುವಲ್ಲಿ ಅದಕ್ಕೆ ಪ್ರತಿಕ್ರಿಯೆಯಂ ಯೋಚಿಸಬೇಕಾದ ವಿಷಯದಲ್ಲಿ ಯೆಲ್ಲರೂ ಅರ್ಹರಾಗಿಯೇ ಇದ್ದಾರೆ. ಮಿಸ್ಟರ್ ರಾಮಚಂದ್ರಯ್ಯರವರು ಗತ ವರುಷದೊಳು ಲಂಡನ್‌ಮಿಷನ್ ಪಾಠಶಾಲೆಯಲ್ಲಿ ಬಾಲಕರಿಗೆ ಬಹುಮಾನಗಳು ಕೊಡುವಾಗ್ಯೆ "ಮಿಷನರಿಗಳ ಕಾರ್ಯಗಳನ್ನು ವಿಶೇಷವಾಗಿ ಶ್ಲಾಘನೆ ಮಾಡಿದರೆಂದು" ವೃ. ಪತ್ರಿಕೆಯು ಸೂಚಿಸುತ್ತದೆ. ಇರಬಹುದು. ಒಬ್ಬರಲ್ಲಿ ಸುಗುಣಗಳು ಕಂಡುಬಂದಾಗ ಅದು ಶ್ಲಾಘಿಸುವದೂ ದುರ್ಗುಣಗಳು ತೋರಿಬಂದಾಗ ಅದು ಖಂಡಿಸಿ ತಕ್ಕ ಪ್ರತಿಕ್ರಿಯೆಗಳು ಮಾಡುವದೂ ನಿಷ್ಪಕ್ಷಪಾತಿಗಳಾದ ನ್ಯಾಯವಿಮರ್ಶಕರಿಗೆ ಸಹಜ ಧರ್ಮವಾಗಿರುತ್ತದೆ. ಇದರಿಂದಲೇ ಮಿಸ್ಟರ್ ರಾಮಚಂದ್ರಯ್ಯರವರ ವರ್ತನವು ಯಾವಾಗಲೂ ನಿರಾಕ್ಷೇಪಣೀಯವಾದದ್ದೆಂಬದು ಸದರೀ ಪತ್ರಿಕೆಯು ಯಾತಕ್ಕೆ ಪರಿಭಾವಿಸದೆ ಹೋಯಿತೋ ನಾವರಿಯೆವು. "ಮಿಷನ್ ಸಂಘದವರಿಗೆ ಮ|| ರಾಮಚಂದ್ರಯ್ಯರವರು ಯಾವವಿಧ ಕೆಡುಕನ್ನೂ ಮಾಡಲಾರರು" ಎಂದು ಪತ್ರಿಕೆಯು ಹಿಯ್ಯಾಳಿಸುತ್ತದೆ. ಮಿಷನರಿಗಳ ಆಕ್ರೋಶಕ್ಕೂ ಬೆದರಿಕೆಗೂ ಸ್ವಲ್ಪಮಾತ್ರವೂ ಅಯ್ಯರವರು ಅಂಜುವರೆಂದು ಯಾರೂ ಯೆಣಿಸಬೇಕಾದ್ದಿಲ್ಲವು. ಕ್ರಿಶ್ಚಿಯನ್ ಕಾಲೀಜಿನ ವ್ಯಾಘಾತದಲ್ಲಿ ಹಿಂದೂಗಳ ಕ್ಷೇಮಾರ್ಥ ಪ್ರತ್ಯೇಕವಾಗಿ ಥಿಯೊಲಾಜಿಕಲ್‌ಕಾಲೀಜನ್ನು ಏರ್ಪಡಿಸಿ, ಅದರ ಸಂರಕ್ಷಣೆಗಾಗಿ ದ್ರವ್ಯ ಸಹಾಯಮಾಡಿ, ಅಭಿಮಾನಿಸಿರುವ ದಿವಾನ್ ಬಹದೂರ್ ಮ|| ರಘುನಾಥರಾಯರವರು ಮೊದಲಾದ ಸರ್ಕಾರ್‌ಉದ್ಯೋಗಸ್ಥರ ವರ್ತನಗಳುಆಕ್ಷೇಪಣೀ-

ಭವಾದವೆಂದು ವೃತ್ತಾಂತ ಪತ್ರಿಕೆಗೆ ತೋರಿದಂತೆ ಮದರಾಸ್ ಗವರ್ನ್ಮೆಂಟಿನವರಿಗೆ ಯಾತಕ್ಕೆ ತೋರಲಿಲ್ಲವು? ವರುಷ ೧೮೫೮ನೇ ಇಸವಿಯಲ್ಲಿ ಶ್ರೀಮತ್ ಮಹಾರಾಜ್ಞೀಯವರು ಕೊಟ್ಟ ಬಲವತ್ತರವಾದ ಅಭಯವು ಅವ್ಯಾಜ ಕ್ಷಾಂತಿಯುಳ್ಳವ್ರಾಗಿರುವವರಿಂದಲೇ ಸ್ವಮತಜನ ರಕ್ಷಣೆಯಲ್ಲಿ ಪ್ರತಿವ್ಯಕ್ತಿಗೂ ಇರುವ ಅಧಿಕಾರ ಸ್ವಾತಂತ್ರ್ಯದ ವಿಷಯದಲ್ಲಿ ತಾವು ಪ್ರವರ್ತಿಸತಕ್ಕವರೆಂದು, ಭಾವಿಸಿರಬಹುದೆಂದೆಣಿಸುತ್ತೇವೆ. ಕ್ರಿಶ್ಚಿಯನ್ ಮತಾವಲಂಬಿಯಾದ ಮಹಾರಾಜ್ಞೀಯವರ ಪಾಲನೆಗೊಳಗಾದ ಬ್ರಿಟಿಷ್ ರಾಜ್ಯದಲ್ಲಿಯೇ ಪ್ರಜೆಗಳಿಗಿಷ್ಟರ ಸ್ವಾತಂತ್ರ್ಯ ವಿರುವಾಗ್ಯೆ ಈ ರಾಜ್ಯವನ್ನು ಪಾಲಿಸುತಲಿರುವಂತಾ ಅರಸರು ಹಿಂದೂವಾಗಿಯೂ ವರ್ಣಾಶ್ರಮ ಧರ್ಮ ಪ್ರವಾಯಗಳಿಗೆ ಬದ್ಧರಾಗಿಯೂ ಅದಂ ಪೋಷಿಸುವದರಲ್ಲಿ ದೃಢ ಪ್ರತಿಜ್ಞಾಯುಕ್ತರಾಗಿಯೂ ಇರುವಲ್ಲಿ ಅಂತವರ ರಾಜ್ಯದಲ್ಲಿ ಅದರಿಂದ ಸುಷ್ಕೃತವಾದ ಮತಕ್ಕೆ ವಿಟ್ಟಿದ್ದಿಯುಂಟುಮಾಡತಕ್ಕದ್ದುಂಟು ಅವರ ಪ್ರಜೆಗಳು ಜಾತಿಮತ ನೀತಿಭ್ರಷ್ಟರಾಗುತ ಬರುವದಂ ನಿರೋಧಿಸುವ ವಿಷಯದಲ್ಲಿ ಅವರಿಂದ ನಿಯಮಿತರಾದ ಒಬ್ಬ ಅಧಿಕಾರಿಯು, ಸಾಮಾನ್ಯವಾಗಿ ಹಿಂದೂಜನರ ಹಿತಾರ್ಥ ಪ್ರವರ್ತಿಸಿ, ಯೋಗ್ಯವಾದ ಪರ್ವರ್ತಿಗೆ ಪ್ರೋತ್ಸಾಹಕರಾಗಿರುವದು ಹ್ಯಾಗೆ ಅಕ್ರಮವೆಂಬುವದು ತಿಳಿಯದು ನಮಗೆ. "ಬೆಂಗಳೂರು ಶ್ರೀ ತ್ರಿಕ್ಷೇತ್ರವಿರುವ ಒಂದು ಸುವರ್ಣ ಮಂದಿರಕ್ಕೆ ಶಿವಲಿಂಗ, ಹಿಂದು ಪುಣ್ಯ ಕ್ಷೇತ್ರಗಳನ್ನು ಕೂಡಿ ಸೆರೆತವೆಂದು, ತಾಲೂಕುಗಳಿಂದ ಬಂದ ನೀವು ಒಂದು ಪ್ರಮಾಣ ಮಾಡಬೇಕೆಂದು ಕೇಳಿಕೊಂಡದ್ದು ಒಂದು ಮೋಸವಾಗಿದೆ. ಈ ವಿಷಯಕವಾದ ಮೋಸವನ್ನು ಮುಖ್ಯವಾಗಿ ವಿಚಾರಣೆ ಮಾಡಬೇಕೆಂದು, ಮದರಾಸ್ ಗವರ್ನ್ಮೆಂಟಿನವರು ಹುಕುಂ ಕೊಟ್ಟಿದ್ದಾರೆಂದು ತಿಳಿಯಬಂದಿದೆ" ಎಂದು ವೃತ್ತಾಂತ ಪತ್ರಿಕೆಯು ಬಹಳ ಸಂತಸಪಡುತಿದೆ. ಇನ್ನೇನುಗತಿ! ನಾವೇನು ಮಾಡುವಣ! ಮ. ಅಯ್ಯರವರು ತಮ್ಮ ಅಧಿಕಾರಕ್ಕೊಳಪಡದ ವಿಷಯದಲ್ಲಿ ನಾಲ್ಕುರಾತೆ ಕರೆಯಲ್ಪಟ್ಟ ಸಭೆಗೆ ಹೋಗಿದ್ದದ್ದೂ, ಅಲ್ಲಿ ತಮಗೆ ತೋಚಿದ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದೂ, ಬಹಳ ಅಕ್ರಮವೆಂದು ಭಾವಿಸಿದ ವೃತ್ತಾಂತ ಪತ್ರಿಕೆಗೆ, ಮದರಾಸ್ ಗವರ್ನ್ಮೆಂಟಿನವರು ಮಹಾರಾಜ್ಞೀಯವರ ಪ್ರತಿಜ್ಞೆಗೆ ಪ್ರತ್ಯಕ್ಷ ವಿರುದ್ಧವಾಗಿ ಪ್ರವರ್ತಿಸಿ ಖುದ್ದಾಗಿ ವಿಚಾರಣೆ ಮಾಡಬೇಕೆಂದು ಹುಕುಂ ಕೊಟ್ಟಿರುವದು ತಪ್ಪಾಗಿ ತೋರದ್ದೆಂದು ಯಾತಕ್ಕೆ ತೋರಲಿಲ್ಲವೋ ನಾವರಿಯೆವು. ಮೆ|| ರಾಮಚಂದ್ರಯ್ಯರವರು ಮಾಡುವ ವಿಚಾರಣೆಗಳಿಗೆ ಇಷ್ಟವಿಲ್ಲದವರು ಒಂದುವೇಳೆ ಬದ್ಧರಾಗದೆ ಹೋದಾಗ್ಯೂ ಹೋಗಬಹುದು. ಸರ್ಕಾರದಿಂದ ಗವರ್ನ್ಮೆಂಟಿನವರ ಆಜ್ಞೆಯು ಅನುಲ್ಲಂಘನೀಯವಾದದರಿಂದ ಅದು ಮೀರಿ ವರ್ತಿಸಲಿಕ್ಕೆ ಒಬ್ಬರಿಗೂ ಸಾಧ್ಯವಲ್ಲವು. ಹೀಗಿರುವಲ್ಲಿ ಗವರ್ನ್ಮೆಂಟಿನವರೇ ಸ್ವಮತಾಭಿನಿವೇಶದೊಡನೆ ಪ್ರತಿಜ್ಞಾ ಭಂಗಕ್ಕೊಳಪಟ್ಟು ಪ್ರವರ್ತಿಸಿ ಜನರ ಸ್ವಾತಂತ್ರ್ಯವನ್ನು ಕಸುಗೊಳ್ಳಲಾರಂಭಿಸಿದರೆ ಬಳಿಕ ತಿಳಿಸಬೇಕಾದ್ದೇನಿದೆ. ಮುಖ್ಯವಾಗಿ ಜನರಿಗೆ ಮತವೆಂಬದು ಪ್ರಾಣಕ್ಕಿಂತಲೂ ಅತಿಶಯವಾದದೆಂಬದು ಮಿಷನೆರಿಗಳೇ ಅಂಗೀಕರಿಸಿ ಕಾರ್ಯತಃ ತೋರಿಸುತಲಿರುವದರಿಂದ ಅಂತಾ ಮತರಕ್ಷಣೆಗಾಗಿ ತಮ್ಮಂತೆ ಅನ್ಯರ್‍ಯಾರಾದರೂ ಪ್ರವೇಶಿಸಿದರೆ ಅವರು ಅಗೌರವ ಶಬ್ದಗಳಿಂದ ಮನಸ್ಸೋ ದೂಷಿಸುವಣವು ಕುದ್ದಾಗ ನ್ಯಾಯವಲ್ಲವೆಂಬದು ಮಿಷನೆರಿಗಳೂ ಅವರ ಪಕ್ಷಾವಲಂಬಿಯಾದ ವೃತ್ತಾಂತ ಪತ್ರಿಕೆಯೂ ಚನ್ನಾಗಿ ಆಲೋಚಿಸಬೇಕೆಂದು ಕೋರುತ್ತೇವೆ.

ABUSE FOR ARGUMENT.

ಕಳೆದತಿಂಗಳ ೨೯ನೇ ತಾರೀಖಿನ ಈಪತ್ರಿಕೆಯಲ್ಲಿ, ಈ ಸಂಸ್ಥಾನದ ರಾಜಕೀಯ ವಿಷಯಗಳಂ ಕುರಿತು ವಿಚಾರಮಾಡುವಾಗ್ಯೆ ದಿವಾನರ ಅಥವಾ ಇತರ ಉದ್ಯೋಗಸ್ಥರ ಸ್ವಕೀಯ ವಿಷಯಗಳನ್ನು ಹೊರಪಡಿಸಿ ದೂಷಿಸುವದು ವೃತ್ತಾಂತ ಪತ್ರಿಕೆಗಳಿಗೆ ಸಹಜ ಧರ್ಮವಲ್ಲವೆಂದು ಬರೆದಿದ್ದ ನಮ್ಮ ಲೇಖನಕ್ಕೆ ಉತ್ತರ ಬರೆಯುವದಕ್ಕಾಗಿ ೧೫ ದಿನಗಳಾಲೋಚಿಸಿ, ಕಡೆಗೆ ತಕ್ಕ ಸಮಾಧಾನದಿಂದಲ್ಲದೆ ಹ್ಯಾಗಾದರೂ ಜವಾಬ್ ಬರೆಯಬೇಕೆಂಬ ಸಂಕಲ್ಪದೊಡನೆ ಪಾಪೇ ಮಜಕೂರ್ ೬ ನೇ ತಾರೀಖಿನ ಚಿಂತಾಮಣಿ ಪತ್ರಿಕೆಯು, "ಕೇಡಂಕೋಳೇದೇಣಪೂರವೋಕ್ತಿ" ಎಂದು ಮರುಕ್ತಿಗಳಿಂದ ತನ್ನ ಬರವಣಿಗೆಯಂ ಕೊನೆ ಮುಟ್ಟಿಸಿರುತಿದೆ. ಅಸಮಾನರನ್ನು ಸಮಾನರನ್ನಾಗಿ ಎಣಿಸಿ ಅಸಂಬದ್ಧಗಳಾದ ಉನ್ಮತ್ತವಾಕ್ಯಗಳಿಗೆಲ್ಲ ಉತ್ತರ ಹೇಳುವದರ ಮೂಲಕ ಈ ಪತ್ರಿಕಾ ಅವಕಾಶವು ವ್ಯರ್ಥಗೊಳಿಸುವದಕ್ಕೆ ನಮಗೂ ಇದಂ ಓದತಕ್ಕವರಿಗೂ ಇಷ್ಟವಿರುವದಿಲ್ಲವು. ಚಿಂತಾಮಣಿಯು ಗರ್ಭಗತವಾಗಿ ಸುಪ್ತ ಒಲ್ಲಿದ್ದ ಕಾಲದಲ್ಲಿ ಜರಿಗಿದ ವಿಷಯಗಳನ್ನೀಗ, ಅದು ತನ್ನ ಜ್ಞಾನ ದೃಷ್ಟಿಯಿಂದ ಕಂಡುಕೊಂಡು ಲೋಕಕ್ಕೆ ಪ್ರಕಟಿಸುವಷ್ಟರ ಅಪೋಘವಾದ ಶಕ್ತಿಯನ್ನು ಅದಕ್ಕೆ ದೇವರು ಕೊಟ್ಟದ್ದಕ್ಕಾಗಿ ನಾವು ಬಹಳ ಆಶ್ಚರ್ಯ ಪಡುತ್ತೇವೆ. ಗವರ್ನ್ಮೆಂಟಿನವರ ಪಕ್ಷವನ್ನವಲಂಬಿಸಿ ವಾದಿಸುವದಕ್ಕಾಗಿ ನಮಗೆ ಅವರು ಯಾವಾಗಲು ಉಚಿತವಾಗಿ ದ್ರವ್ಯಸಹಾಯ ಮಾಡಲಿಲ್ಲವು. ವರುಷ ಇಲ್ಲಕಿಕ ಸ್ಟೂಟ್ ಮಾಷ್ಟರುಗಳಿಗಾಗಿ ಅವರು ಕನಿಷ್ಠದರಕ್ಕೆ ಹೆಗಡ ಕಳುಹಿಸುತಿದ್ದ ಕೆಲವು ಪತ್ರಿಕೆಯ ಚಂದಾ ಮೊಬಲಗನ್ನು ಅವರು ಕೊಡುತಿದ್ದರೇ ಹೊರತು ಬೇರಿಲ್ಲವು. ಅಮ್ಯೂಜಮಾತ್ರಕ್ಕೆ ನ್ಯೂನವಾದ ಅಕ್ಷೇಪಣಾಂಶಗಳನ್ನು ಪರಿಗೆ ತಿಳಿಸದೆ ನಾವು ಬಿಟ್ಟಿರಲಿಲ್ಲವು. ಹಾಗೆ ತಿಳಿಸಲ್ಪಟ್ಟ ಅನೇಕ ವಿಷಯಗಳು ಕೆಲವು ಸಂದರ್ಭಗಳಲ್ಲಿ ಉತ್ಸಾಹದೊಡನೆ ಅಂಗೀಕರಿಸಲ್ಪಡದಿರಲಿಲ್ಲವು. ಅವರಿಂದ ಆತ್ಮ ಪಿಕ್ರಯದ ವಿಷಯಕ್ಕೆ ನಾವು ಮುಟ್ಟನಾದ್ದೂ ಪಾತ್ರರಾಗಲಾರೆವು. ನಮ್ಮಮೇಲೆ ೧೮೭೯ನೇ ಇಸವಿಯಲ್ಲಿ ತರಪ್ಪಟ್ಟ ಮಾನನಷ್ಟ ಮೊಕದ್ದಮೆಯನ್ನು ಸೂಚಿಸಿ ೧,೦೦೦ ರೂ|| ಗಳಂ ನಾವು ದಂಡ ತೆತ್ತದ್ದನ್ನು ಚಿಂತಾಮಣಿ ಬಯಲ್ಪಡಿಸುತಿದೆ. ನಾವು ಜುರ್ಮಾನೆ ಕೊಡಲಿಲ್ಲವೆಂದು ಹೇಳಲಿಲ್ಲವು. ಅದಂ ಸವರೀ ಮೊಕದ್ದಮೆಗೆ ಕಾರಣಭೂತವಾಗಿ ಏರ್ಪಟ್ಟದ್ದ ಬರವಣಿಗೆಯು ಈ ಪತ್ರಿಕಾಲೇಖಕರದಲ್ಲವೆಂಬ ಅಂಶ ಪ್ರಸಿದ್ಧವಾಗಿರುವಾಗ್ಯೆ ನಮ್ಮ ಬರವಣಿಗೆ ಹ್ಯಾಗೆ ಉದ್ದೇಶಿಸುವಾದದ್ದೋ ಅದಂ ಪ್ರಾಜ್ಞರೇ ಆಲೋಚಿಸಬಹುದು. ಮಹಂತ ಕುಂಟ ವಿಷಯವು ಕುರಿತು ಈಗ ವಿಚಾರ ಮಾಡುವದಕ್ಕೆ ನಮಗೆ ಇಷ್ಟವಿಲ್ಲವು. "ಮುಂದ ಚಿತ್ತದ್ದು ಮೊದಲು ಇದುವರಿವಿಗೂ ನಾವು ದಿವಾನರ ದೋಷದೋಷಗಳ ವಿವೇಚಿಸುತಿದ್ದು ಈಗ ಅವರ ವಿಷಯದಲ್ಲಿ ನಿರಂತರವಾದುದು ಸರವೀಪತ್ರಿಕೆ ಮತ್ತೊಂದು ವಿಧವಾಗಿ ಪ್ರಕಟಿಸುತಿದೆ. ಕೆಲವು ಸಂದರ್ಭಗಳಲ್ಲಿ ದಿವಾನರು ಅವಲಂಬಿಸಿದ್ದ ರಾಜ್ಯತಂತ್ರಗಳನ್ನು ವಿಲ್ಲಿ ಕೆಲವು ಭಾಗದೊಳು ನಾವು ಭಿನ್ನಾಭಿಪ್ರಾಯ ಪ್ರಕಟಿಸಿರುವುದು ಹಿಂದೆಯೇ ತಿಳಿಸಿದ್ದೇವೆ. ಭಿನ್ನಾಭಿಪ್ರಾಯಗಳುಂಟಾದ ಸಂದರ್ಭಗಳಲ್ಲಿ ನಮ್ಮ ಸ್ವಾತಂತ್ರ್ಯಕ್ಕೆ ಲೋಪವಿಲ್ಲದಂತೆಯೂ, ದಿವಾನರವರ ಗೌರವಕ್ಕೆ ಹಾನಿ ಇಲ್ಲದಂತೆಯೂ ವಿಷಯಸ್ವರೂಪವನ್ನು ಗುಣವಾಗಿಯೂ ಪ್ರಜೆಗಳಿಗೆ ತಿಳಿಸುತ ಬಂದೆವು. ಈಶ್ವರ ಕಟಾಕ್ಷದಿಂದ ನಮಗೆ ಔದಾರ್ಯವು ಚನ್ನಾಗಿದ್ದರೆ ಮುಂದೆಯೂ ಆರೀತಿ ಲಕ್ಷೀಕರಣೀಯಗಳಂದ ಲೋಪಗಳನ್ನರುಹಲಿಕ್ಕೂ ಸನ್ನದ್ಧರಾಗಿದ್ದೇವೆ. ಪರಂತು ನಮ್ಮ ಆಕ್ಷೇಪಣೆಗೆ ವಿಷಯಗಳಾದವು. ಮೈಸೂರು ಸಂಸ್ಥಾನದ ಆಡಳಿತಗಳೇ ಹೊರತು ಮೆ|| ಶೇಷಾದ್ರಿ ಅಯ್ಯರವರ ಸ್ವಕಾರ್ಯಗಳಲ್ಲವು. ನಮ್ಮ ಆಕ್ಷೇಪಣೆಗೆ ಪಾತ್ರರಾಗಿದ್ದವರು, ಮೈಸೂರು ಸಂಸ್ಥಾನದ ದಿವಾನರೇ ಹೊರತು ಮೆ|| ಶೇಷಾದ್ರಿ ಅಯ್ಯರವರಲ್ಲವೆಂಬದಂ ಚಿಂತಾಮಣಿಯನ್ನಾಗಿ ತಿಳಿಯತಕ್ಕದ್ದು. ಪತ್ರಿಕಾಕರ್ತೃವಿನ ಯೋಗ್ಯತಾ ವಿಷಯದಲ್ಲಿ ಚಿಂತಾಮಣಿಯು ನಮ್ಮಲ್ಲಿ ಒಂದು ಅಜ್ಞಾನವಂ ಆರೋಪಿಸಿ ಪ್ರಕಟಪಡಿಸುತಿದೆ. ಈಅಂಶವನ್ನು ನಿರ್ಧರಿಸಲಿಕ್ಕೆ ಗತ ಇಪ್ಪತ್ತೈದು ವರುಷಗಳಿಗಿಂತ ಮೇಲ್ಪಟ್ಟು ನಮ್ಮನ್ನೂ ಕಳೆದ ವರುಷದಲ್ಲಿ ಹುಟ್ಟಿ ಕಣ್ಣುತೆರದ ಚಿಂತಾಮಣಿಯನ್ನೂ ಅರಿತಿರುವ ಸಮದರ್ಶಿಗಳಾದ ಜನಗಳೆ ಅರ್ಹರಾಗಿರುವದರಿಂದ ನಮ್ಮ ಇಬ್ಬರ ಗುಣಾಗುಣಗಳಂ ನಮ್ಮ ವರ್ತನೆಗಳಿಂದ ಅವರೇ ನಿರ್ಧರಿಸಿ ತಿಳಿದುಕೊಳ್ಳಲಿ. ಅಂತರಂಗ ವ್ಯಾಪಾರಗಳು ಲೋಕಹಿತಕ್ಕೆ ಪ್ರತಿ ಬಂಧಕಗಳಾದರೆ ಅವುಗಳನ್ನು ನಿರ್ಭೀತಿಯಿಂದ ವ್ಯಕ್ತಗೊಳಿಸಬಹುದೆಂದು ಚಿಂತಾಮಣಿ ತಿಳಿಸುತಿದೆ. ದಿವಾನರಲ್ಲಿ ಅವರ ಲೌಕಿಕ ಕಾರ್ಯಗಳಿಗೆ ಪ್ರತಿ ಬಂಧಕ ಸಾಮಗ್ರಿಯೆಂದು ಚಿಂತಾಮಣಿಗೆ ಕಂಡುಬರುವದು ಅವರ ವೈದಿಕ ಕರ್ಮಗಳು ವಿನಾ ಮತ್ಯಾವದೂ ತೋರದಿಲ್ಲವು. ಮೆ|| ಶೇಷಾದ್ರಿ ಅಯ್ಯರವರು ವೈದಿಕ ಕರ್ಮಾನುಷ್ಠಾನ ನಿರತರಾಗಿ ಸರ್ಕಾರಿ ಕೆಲಸಗಳಲ್ಲಿ ಅಶ್ರದ್ಧೆಯು ವ್ಯಕ್ತಪಡಿಸಿದಕಾಲದಲ್ಲಿ, ಗತಿಸಿದ ಮೆ. ರಂಗಾಚಾರ್ಲ್ಯರವರಿಂದ ನಿರ್ಮಿತವಾದ ಯಂತ್ರಚಕ್ರವನ್ನು ಚಿಂತಾಮಣಿಯು ತಿರಿಗಿಸುವ ಬಂದದರಿಂದಲೇ ದೇಶದ ಹುಟ್ಟುವಳಿಯು ಇಷ್ಟವನುಟ್ಟಿಗೆ ವೃದ್ಧಿಯಾಯಿತೋ? ನಮ್ಮರ್ಮ್ಯಾಕರನೆನಿರೂಢವಾದ ಕ್ರಿಷ್ಟಿಯೂ, ಕಠೀರವಾರ್ಥ್ಯವೂ, ಚಿತ್ತಸ್ಥೈರ್ಯವೂ, ಧೃಢಮೈರ್ಮಲ್ಯವೂ ಅಪೇಕ್ಷಿತನಾದವರಿಂದ ಅವು ಮಧ್ಯದಯನ್ನಿನ್ನರೂ ವಂತಿಕೆಗಳನ್ನವಲ್ಲಿ ಇದರಾರದಾಗಿ ಚಿಂತಾಮಣಿ ಯಾಕ್ಷೇಪಣೆಯು ನಿರಾಧಾರವಾದುದಾಗಿರುತಿದೆ. ಮೆ ರಂಗಾಚಾರ್ಲ್ಯರವರು ತನಗೆ ೫೦೦ ರೂಪಾಯಿ ಮುಂಗಡವಾಗುತಿದ್ದದಂ ದೇಶಸ್ಥಿತಿಯು ಯೋಚಿಸಿ ಇಷ್ಟುಸಂಬಳ ಬೇಕ್ಕೆಂದು ತಾವೇ ಹೋದೆಮಹಾಕಿಸಿ ೩,೦೦೦ ರೂಪಾಯಿಗಳಂ ತೆಗದುಕೊಂಡುತೆ ಚಿಂತಾಮಣಿಯು ತಿಳಿಸುತಿದೆ. ಅದರ ಮಾತುಗಳಿಗೆ ಅದೇ ಆಧಾರವೇ ಹೊರ್ತು ಬಹಿರಂಗವಾದ ಸರ್ಕಾರೀ ಕಾಗದಪತ್ರಗಳೊಂದೂ ಹೊರಗಾದಂತೆ ಕಾಣಿಸುವಿಲ್ಲವು. ಒಂದು ವೇಳೆ ಅದೇ ನಿಜವಾಗಿರುವ ಪಕ್ಷಕ್ಕೆ ಅವರ ಮಾತುಗಳು ನ್ಯಾಯವೆಂದೆಣಿಸುವೆವು. ಸರ್ ೧೮೮೧ನೇ ಇಸವಿಯಲ್ಲಿ ಆದ ದೇಶದ ಹುಟ್ಟುವಳಿಯನ್ನು ನೋಡಿ ಅವರಾರೀತಿ ಹೇಳಿದ್ದರೂ ಇರಬಹುದು. ೧೮೮೧ನೇ ಇಸವಿಯ ಮೊದಲು ೧೮೮೮ನೇ ಇಸವಿಯವರಿವಿಗೆ ಕ್ರಮೇಣ ಏಳುವರುಷಗಳಲ್ಲಿ ತೋರಿಸಲ್ಪಟ್ಟ ಹುಟ್ಟುವಳಿ ಜಾಸ್ತಿಯನ್ನು ನೋಡಲಾಗಿ ದಿವಾನರವರು ಇಜಾಫೆಯನ್ನು ಅಪೇಕ್ಷಿಸಿದ್ದೂ ಅದಂ ಮಹಾರಾಜರವರು ಅಂಗೀಕರಿಸಿದ್ದೂ ಸರಿಯಾದದ್ದೇ ಹೇಳಬೇಕಾಗಿದೆ. ಇನ್ನೂ ಕೆಲವು ಅನಿರೂಪಕ ಪ್ರವಾದಗಳನ್ನು ನಿರಾಧಾರವಾಗಿ ಚಿಂತಾಮಣಿ ಪ್ರಕಟಿಸಿದೆ. ಅವರ ಯಾವಾರ್ಥ್ಯದ ವಿಷಯದಲ್ಲಿ ಅದಕ್ಕೇ ಸಂಬಂಧಪಟ್ಟಿರುವದರಿಂದ ಅವು ನಮ್ಮ ಪ್ರಸ್ತಾವಕ್ಕೆ ಅರ್ಹವಾದವಲ್ಲವು. ಅರ್ಥಕುತ್ಕಾಟ ನ್ಯಾಯವಾಗಿ, ಮಹಾರಾಜರವರು ಇಂಗಿತಜ್ಞರೆಂತಲೂ, ರಾಜನೀತಿ ಕೋವಿದರೆಂದಲೂ, ದೇಶಸ್ಥಿತಿಯನ್ನರಿತವರೆಂದಲೂ, ಭಾವಿಸಿ ಅವರು ತಮ್ಮದಿವಾನರಿಗೆ ಕೊಟ್ಟ ಇಜಾಫೆಯನ್ನು ಮಾತ್ರ ಅಕ್ರಮವೆಂದು ಸರವೀ ಪತ್ರಿಕೆ ಆಕ್ಷೇಪಿಸುತಿದೆ. ಅವಾತ್ರದಲ್ಲಿ ಅವ್ಯವಸ್ಥಿತವಾಗಿ ಮಾಡುವದಾನವು ದಾತನ ದೋಷವನ್ನು ವ್ಯಕ್ತಪಡಿಸದಿರುವದಿಲ್ಲವಾಗಿ ಮಹಾರಾಜರನ್ನು ಇಂಗಿತಜ್ಞರೆಂದು ಅಂಗೀಕರಿಸಿದ ಚಿಂತಾಮಣಿಯು, ಇಂಗಿತಜ್ಞತೆಯೊಡನೆ ಮಾಡಲ್ಪಟ್ಟ ಅವರ ಕಾರ್ಯವನ್ನು ಕೂಡ ಅಂಗೀಕರಿಸಬೇಕಾಗಿರುತಿದೆ. ಯಾವವಿಧವಾದ ಮಹನ್ನತ್ತಿನ್ನೂ ಮಾಡದ ತಮ್ಮ ದಿವಾನರಿಗೆ ವ್ಯರ್ಥವಾಗಿ ಮಹಾರಾಜರವರು ೫೦೦ ರೂಪಾಯಿಗಳ ಇಜಾಫೆಕೊಟ್ಟರೆಂದು ನುಡಿದರೆ ಅವರ ಸರ್ವೋಚಿತಜ್ಞತೆಗೆ ಸಾರ್ಥಕವೆತ್ತಣದು? ನಮ್ಮ ಅಜ್ಞಾನಕ್ಕಾಗಿ ಚಿಂತಾಮಣಿ ಬಹಳ ಶೋಚಿಸುತಿದೆ. "ನಿಂತುಹೋಗಿರದಪ್ಪ (ಒಂದು ಕಾಲದಲ್ಲಿದ್ದರಪ್ಪ?) ಗ್ರಾಂಥಿ ಪುನಃ ಬರದಿ ಎಂಬದಾಗಿ ಈರೀತಿ" ಬರೆಯುತ್ತೇವೆಂದು ನುಡಿದು ನಮ್ಮಲ್ಲಿ ಇಲ್ಲದ ದೋಷಗಳನ್ನೆಲ್ಲಆರೋಪಿಸುತಿದೆ. ಗವರ್ನ್ಮೆಂಟಿನವರಿಂದ ನಾವು ಯಾವವಿಧ ಗ್ರಾಂಟನ್ನೂ ನಿರೀಕ್ಷಿಸುವದಿಲ್ಲವು. ಅದುಯಾರಿಗೂಅಲಭ್ಯವು. ಒಂದುವೇಳೆಹಾಗೆ ಏನಾದರೂ ಲಭಿಸಿದರೆ ಅದುಕೇವಲ ವೃತ್ತಾಂತ ಚಿಂತಾಮಣಿಯ ವೈಭವ ಪ್ರಾಭವಗಳ ಮೂಲಕ ಪ್ರಾಪ್ತವಾದಂತೆ ಭಾವಿಸುವೆವು. ಮುಖ್ಯವಾಗಿ ದುರಾಗ್ರಹ ಪ್ರೇರಿತಗಳಾದ ಇಂತಾ ಅಸಂಬದ್ಧ ಪ್ರಲಾಪಗಳಿಗೆ ಉತ್ತರ ಹೇಳುವದು ಯುಕ್ತವಲ್ಲವಾಗಿ ಪ್ರಸಕ್ತ ವಿಚಾರವಂ ಇಲ್ಲಿಗೆ ನಿಲ್ಲಿಸಿ ನಮ್ಮ ಲೇಖನವಲ್ಲಿರುವ ಗುಣದೋಷಗಳನ್ನು ವಿಮರ್ಶಿಸುವ ಭಾರವಂ ಪ್ರಜೆಗಳಿಗೆ ಒಪ್ಪಿಸಿರುವೆವು.

SALUTARY ADVICE

ಈ ಇಂಡ್ಯಾದೇಶದಲ್ಲಿ ಬಾಲ ವಿಧಂತುಗಳ ಸಂಖ್ಯೆಯು ದಿನೇ ದಿನೆ ವೃದ್ಧಿಯನ್ನೈದುತ ಬರಲಿಕ್ಕೂ, ದುರಂತವಾದ ಅವರ ಪರಿದೇವನವು ಅಪ್ರತೀಕಾರವಾಗುರ ಬರಲಿಕ್ಕೂ, ಅವರು ನೋಡಿದಾಗಲೆಲ್ಲ ಅನ್ಯರು ದುಃಖಿಸುತಲಿರಲಿಕ್ಕೂ ಕಾರಣಗಳು ಜನಗಳ ಭಾವನಾನು ಗುಣವಾಗಿ ಅನೇಕಗಳಾಗಿರುತಿವೆ. ತತ್ತತ್ಕಾರಣಾನುಗುಣಗಳಾದ ಪ್ರತಿಕ್ರಿಯೆಗಳು ನಡೆಸಲ್ಪಡದಿರಲಿಲ್ಲವು. ಆದಾಗ್ಯೂ ಕರ್ಮ ಪರಿಪಕ್ವ ಕಾಲವು ಅದ್ಯಾಪಿ ಸನ್ನಿಹಿತವಾಗದಿರುವದರಿಂದ ಒಬ್ಬರ ಪ್ರಯತ್ನವೂ ಸಂಪೂರ್ಣ ಫಲಕಾರಿಯಾಗದೆ ಹೋಗಿ ಅಭಿವೃದ್ಧಿಯನ್ನೈದುತಬರುವ ವಿಧಂತುಗಳ ಸಂಖ್ಯೆಯನ್ನು ಕಡಮೆ ಮಾಡಲಿಕ್ಕೆ ರಾಜಾ ಸರ್ ಟಿ. ಮಾಧವ ರಾಯರವರು ರಾಜ್ಯತಂತ್ರಾನುಭವದಿಂ ಪರಿಪಕ್ವವಾದ ತಮ್ಮ ಬುದ್ಧಿಯಿಂದ ಒಂದು ಕಾರಣವಂ ಕಂಡು ಹಿಡಿದು ಪ್ರಕಟಿಸಿರುತ್ತಾರೆ. ಬಾಲ್ಯ ವಿವಾಹವು ತೀವ್ರ ವೈಧವ್ಯಾನುಭವಕ್ಕೆ ಕಾರಣವೆಂತಲೂ, ಹಿಂದೂ ಜೋತಿಷ್ಕರು ಅಂತಾ ಬಾಲ್ಯ ವಿವಾಹಕ್ಕೆ ನಿಮಿತ್ತಕರೆಂತಲೂ ಅಭಿಪ್ರಾಯಪಟ್ಟು ನಮ್ಮ ಕಾಲಜ್ಞರಿಗೆಲ್ಲ ಇದರಡಿ ಕಂಡಂತ ಹಿತಬೋಧನೆ ಮಾಡುತ್ತಾರೆಯಾಗಿ ಅದಕ್ಕೆ ಯೆಲ್ಲರೂ ಅವಧಾನ ಕೊಡಬೇಕೆಂದು ಪ್ರಾರ್ಥಿಸುವೆವು.

ಅಯ್ಯಾ ಜ್ಯೋತಿಷ್ಕರೆ! ಈಗಿರತಕ್ಕ ವಿಧಂತುಗಳಲ್ಲಿ ಹತ್ತು ವರುಷಗಳ ವಯಸ್ಸಿನೊಳಗಾಗಿ ವಿವಾಹಿತರಾಗಿ ವೈಧವ್ಯವನ್ನನುಭವಿಸುತಲಿರುವವರೇ ಅಧಿಕವಾಗಿದ್ದಾರಲ್ಲದೆ ಅದಕ್ಕಿಂತ ಮೇಲ್ಪಟ್ಟ ವಯಸ್ಸಿನವರು ಬಹಳವಾಗಿಲ್ಲವೆಂಬದು ಅವರ ಸಂಖ್ಯೆಗಳಿಂದರೇ ನೀವುಅರಿಯಬಹುದಾಗಿರುತಿದೆ. ಹೀಗಿದ್ದಾಗ್ಯೂ, ಹತ್ತುವರುಷ ವಯಸ್ಸಿಗೆ ಮುಂಚಿತವಾಗಿಯೇ ಅನೇಕವಿವಾಹಗಳು ಜರುಗುತಲಿವೆಯಷ್ಟೆ. ಹೀಗೆ ಯಾತಕ್ಕೆ ನಡೆಯುತಿದೆಯೆಂದು ನೀವು ಯಾರನ್ನಾದರೂ ಪ್ರಶ್ನೆ ಮಾಡಿರುವಿರಾ? ಅಥವಾ ಇದರ ಕಾರಣವಂ ತಿಳಿದುಕೊಳ್ಳುವದಕ್ಕೆ ನಿಮ್ಮ ಮನವು ಒಂದು ಕ್ಷಣವಾದರೂ ಪ್ರಯತ್ನಪಟ್ಟಿರುವದೆ? ವಧೂವರರ ತಾಯಿ ತಂದೆಗಳು ತಮ್ಮ ಮಕ್ಕಳ ಜಾತಕಗಳಂ ನಿಮಗೆ ತೋರಿಸಿ ನಿಮ್ಮ ಸಲಹೆಯನ್ನು ಕೇಳುವಾಗ ನೀವು ಅವರ ಜಾತಕಗಳನ್ನು ಪರಿಶೋಧಿಸಿ ಸಕಲ ವಿಧ ಕೂಟಗಳೂ ಅನುಕೂಲಿಸಿವೆಯೆಂತಲೂ, ದಂಪತಿಗಳು ದೀರ್ಘಾಯುಷ್ಮಂತರಾಗಿ ಅನ್ಯೋನ್ಯಭಾವದಿಂದಿರುವರೆಂತಲೂ, ಧೈರ್ಯವಂ ಹೇಳುವಿರಿ. ತರುವಾಯ ಸದರೀ ತಾಯಿತಂದೆಗಳು ನಿಮ್ಮ ಮಾತುಗಳ ಮೇಲಿನ ಭರವಸೆಯಿಂದ ಅತಿಬಾಲ್ಯದಲ್ಲಿ ವಿವಾಹವಂ ಮಾಡುವಂತಾ ಪ್ರಬಲ ಪಾತಕಕ್ಕೊಳಪಡುತ್ತಾರೆ. ಬಳಿಕ ನಿಮ್ಮ ಭರವಸೆಗಳುಂಟಾದ ಅವರ ಧೈರ್ಯ ಸ್ಥೈರ್ಯಗಳೆಲ್ಲವೂ ಅಗ್ನಿಪಾಲಾಗುತಿವೆ. ಯಾತಕ್ಕೆಂದರೆ ಹತ್ತು ವರುಷಗಳಿಗೆ ಮುಂಚಿತವಾಗಿ ವಿವಾಹ ಮಾಡಲ್ಪಡುವ ಹುಡುಗಿಯರೇ ತ್ವರೆಯಾಗಿ ಮಾಂಗಲ್ಯವಂ ಕಿತ್ತೆಸೆದು ಬಿಡುತ್ತಾರೆ. ನೀವು ಈ ವಿಷಯವಂ ಕುರಿತು ಸ್ವಲ್ಪ ಆಲೋಚಿಸುವ ಪಕ್ಷಕ್ಕೆ ಇಂತಾ ಘೋರ ಕೃತ್ಯಕ್ಕೆ ನಾವೆಲ್ಲವೇ ಪಾತ್ರರೆಂದು ನಿಮಗೆ ಹೊರವೆ ಹೋಗಲಾರದು. ಈ ರೀತಿ ನಿಮ್ಮ

ಸ್ವಲಾಭದಮೇಲೆ ದೃಷ್ಟಿಯಿಟ್ಟು, ಆವಲಾವಗಳಿಂದ ಪ್ರೋತ್ಸಾಹ ಪಡಿಸುವಂತಾ ದುಷ್ಪದ್ಧತಿಯನ್ನು ನೀವು ಯಾತಕ್ಕೆ ನಿವೃತ್ತಿ ಮಾಡಿಕೊಳ್ಳಬಾರದು ; ಓ ಕಾಲಜ್ಞರೇ ! ನಿಮ್ಮ ದುರ್ಬೋಧನೆಯಿಂದಲ್ಲವೆ ಅನೇಕರು ಮೋಸಹೋಗುತ್ತಾರೆ. ಯದ್ವಿಧ ಪುಣ್ಯಬೋಧಗಳ ಸ್ಮರಿಯದಂತಾ ಅನೇಕ ಸಹಸ್ರ ಬಾಲವಿತಂತುಗಳ ಹೃದಯವು ಶೋಕಾಗ್ನಿಯಿಂದ ದಹಿಸಲ್ಪಟ್ಟ ಅವರನುಭವಿಸುವ ಸಂಕಟವು ನಿಮ್ಮ ಕಣ್ಣುಗಳಿಗೆ ಗೋಚರವಾಗದೆ ಹೋಯಿತೆ ? ತತ್ಪ್ರಯುಕ್ತವಾದ ಪಾತಕಕ್ಕೆ ನೀವು ಕಾರಣಭೂತರಾಗದೆ ಹೋಗಿನಿರಾ, ಅಂತಾ ಪಾಪವು ನಿಮ್ಮ ಜನ್ಮಜನ್ಮಾಂತರದಲ್ಲೂ ಅನುಸರಿಸಿ ಬಾರದೆ ಹೋಗುವದೆ ? ಇಂತಾ ಶಾಶ್ವತವಾದ ಅಪಖ್ಯಾತಿಗೂ ಪಾಪಕ್ಕೂ ಒಳಗಾಗುವದಕ್ಕಿಂತ ನೀವೊಂದು ಕೆಲಸವನ್ಯಾತಕೆ ಮಾಡಲಾಗದು ? ಅದೇನೆಂದರೆ,— ತಾಯಿತಂದೆಗಳು ತಮ್ಮ ಮಕ್ಕಳ ಜಾತಕಭಾವವನೋಡಿ ಹೇಳುವಂತೆ ಅವರ ಜನ್ಮಪತ್ರಿಕೆಗಳಂ ನಿಮ್ಮ ಕೈಯಲ್ಲಿ ಕೊಡುವಾಗ್ಯೆ ಹತ್ತು ವರುಷಗಳೊಳಗಾಗಿ ಮಕ್ಕಳಿಗೆ ವಿವಾಹ ಮಾಡಕೊಡದೆಂದು ನೀವು ಯಾತಕ್ಕೆ ಹೇಳಬಾರದು ? ಈ ರೀತಿ ತಿಳಸಲಿಕ್ಕೆ ನೀವು ಬಹಳವಾಗಿ ಗಾಬರಿಪಡುವಂತಾ ನಿಮ್ಮ ಶಾಸ್ತ್ರದಲ್ಲಿ ಯಾವ ಆಧಾರವೂ ನಿಮಗೆ ಕಾಣಬರಲಿಲ್ಲವೆ ? ಹಾಗೆ ಹೇಳಲಿಕ್ಕೆ ನಿಮಗೆ ಅಧಿಕಾರವಿಲ್ಲದಿರಲಿಲ್ಲವಲ್ಲಾ. ಮೃತಪಡತಕ್ಕವರ ಲೆಕ್ಕವನ್ನು ನೋಡಿದರೆ ೧೦ ವರುಷಗಳ ಗೊಳಪಟ್ಟ ವಯಸ್ಸುಳ್ಳವರ ಸಂಖ್ಯೆಯೇ ಅಧಿಕವಾಗಿರುತಿದೆ ಎಂಬ ಅಂಶ ನಿಮ್ಮೆಲ್ಲರಿಗೂ ತಿಳಿಯದೇ ? ನಿಮ್ಮ ಶಾಸ್ತ್ರದಲ್ಲಿ ಉದಹರಿಸಲ್ಪಟ್ಟಿರುವ ಬಾಲಾರಿಷ್ಟವೆಂಬದರ ಅರ್ಥವೇನೋ ಅದಂ ನೀವು ಸ್ವಲ್ಪ ಯಾತಕ್ಕೆ ಆಲೋಚಿಸಬಾರದು ? ಹನ್ನೆರಡು ವರುಷಗಳ ವರಿವಿಗೆ ಜಾತಕಭಾವವು ನಂಬತಕ್ಕದ್ದಲ್ಲವೆಂಬದು ಅದರ ಅರ್ಥವಲ್ಲವೆ ? ಹೀಗಿರುವಲ್ಲಿ ನಿಮ್ಮಲ್ಲಿ ಅಭಿಮಾನವನ್ನಿಟ್ಟು ಗೌರವದೊಡನೆ ಪ್ರಾರ್ಥನಾಪೂರ್ವಕ ಬರುವ ತಾಯಿ ತಂದೆಗಳಿಗೆ ಶಾಸ್ತ್ರವಿರುದ್ಧಗಳಾದ ಆಲೋಚನೆಗಳನ್ನು ಹೇಳುತ ಅವುಗಳಿಗೆ ಸಾಧನಗಳಾಗಿ ತಪ್ಪುಪ್ರಮಾಣ ವಚನಗಳನ್ನುದಹರಿಸುತ, ತನ್ಮೂಲಕ ಮಹದನರ್ಥಗಳಿಗೆ ಅವಕಾಶವನ್ನುಂಟುಮಾಡುವದು ಧರ್ಮವಲ್ಲವೆಂದು ತೋರದಿರಲಿಕ್ಕೆ ನಿಮ್ಮ ದ್ರವ್ಯಾಕಾಂಕ್ಷೆಯಲ್ಲವೆ ಕಾರಣವು, ಇದಕ್ಕಿಂತ ಇನ್ನೇನಾದರೂ ಉಂಟೊ ? ಇದು ನಿಮಗೆ ಧರ್ಮವೆ, ಓ ಜ್ಯೋತಿಷ್ಕರೆ ! ನೀವೇ ಆಲೋಚಿಸಿರಿ. ಹನ್ನೆರಡು ವರುಷಗಳಿಗೆ ಪೂರ್ವ ಜಾತಕಫಲವು ನಂಬಲಾಗದೆಂದು ನಿಜವನ್ಯಾಕೆ ನುಡಿಯಬಾರದು ? ಆ ರೀತಿ ವಸ್ತುಸ್ಥಿತಿಯಂ ಹೇಳದರೆ ಅವರೇನಾದರೂ ನಿಮ್ಮ ಶಿರಚ್ಛೇದನವಂ ಮಾಡುವರೊ ! ಇದು ಶ್ರೀಮನ್ಮಹಾರಾಜ್ಞೀಯವರ ನ್ಯಾಯ ಪರಿಪಾಲನಾ ಪ್ರಭುತ್ವವೆಂದು ನಿಮಗೆ ತಿಳಿಯದೆ ? ಈಕಾಲದಲ್ಲಿ ಹೆತ್ತ ಮಗನನ್ನು ದಂಡಿಸಲಿಕ್ಕೆ ತಂದೆಗೆ ಸ್ವಾತಂತ್ರ್ಯವಿರುವದಿಲ್ಲವೆಂಬದು ಪ್ರಸಿದ್ಧ ವಿಷಯವಾಗಿದೆಯಷ್ಟೆ. ವಿಶೇಷ ನುಡಿಯಲ್ಯಾತಕ್ಕೆ, ಬೀದಿಯಲ್ಲಿ ಅಲೆಯುತಲಿರುವ ಬೈರವನನ್ನು ಸಹ ಬೆದರಿಸಲಿಕ್ಕೆ ಸ್ವಾತಂತ್ರ್ಯವಿರುವದಿಲ್ಲವು. ನೀವು ಸತ್ಯವಂ ನುಡಿಯುವದರಿಂದ ನಿಮಗೆ ಇಹಪರ ಸಾಧನಗಳಿಗೆ ಅವಕಾಶ ವುಂಟಾಗುವದು. ಇಲ್ಲವಾದರೆ ಅನೇಕ ಸಹಸ್ರ ಬಾಲ ವಿಧವೆಯರ ವ್ಯಥೆಗೆ ನಿಮಿತ್ತಕರಾಗಿ ಅವರ ಸಂತಾಪ ಯುಕ್ತವಾದ ನಿಟ್ಟುಸಿರೆಂಬ ದಾವಾನಲದಿಂ ದಗ್ಧರಾಗುತ ಅನೇಕ ಜನ್ಮಗಳ ತನಕ ಮಹಾ ಪಾಪಾನುಭವಕ್ಕೆ ಪಾತ್ರರಾಗದೆ ಹೋಗಲಾರಿರಿ. ಇದಲ್ಲದೆ ನಿಮ್ಮಲ್ಲಿಯೂ ನೀವು ಪರಮ ಪಾವನವಾದದ್ದೆಂದು ಭಾವಿಸಿರುವ ನಿಮ್ಮ ಶಾಸ್ತ್ರದಲ್ಲಿಯೂ ಈಗಿನ ಕಾಲದ ನವನಾಗರಿಕರಿಗೆ ಶುದ್ಧಾಂಗ ನಂಬಿಕೆ ತಪ್ಪಿ ಅಪ್ರೀತಿ ಯುಂಟಾಗುವದರಲ್ಲೇನೂ ಸಂದೇಹವಿಲ್ಲವು. ಇದರಿಂದ ನಿಮ್ಮ ಜೀವನ ಗೌರವಗಳಿಗೆ ಹಾನಿಯುಂಟಾಗುವದೆಂಬದೇನೋ ನಿಶ್ಚಯವು. ಆದರಿಂದದ, ಓ ದೈವಜ್ಞರೆ! ನಿಮ್ಮ ಯೋಗಕ್ಷೇಮವನ್ನಾಲೋಚಿಸಿ ಶಾಸ್ತ್ರಕ್ಕನುಗುಣವಾಗಿ ನಡೆದುಕೊಳ್ಳಿರೆಂದು ನಿಮ್ಮನ್ನು ಬಹಳವಾಗಿ ಪ್ರಾರ್ಥಿಸುವೆನು, ಎಂಬವ.

THE TEMPLE AT SRIRANGAPATAM.

ಈಚೆಗೆ ಶ್ರೀರಂಗ ಪಟ್ಟಣದಲ್ಲಿನ ಶ್ರೀ ರಂಗನಾಥಸ್ವಾಮಿಯವರ ದೇವಸ್ಥಾನದ ಗೋಪುರಕ್ಕೆ ಬಂಗಾರದ ಕಲಶಗಳು ಸ್ಥಾಪನೆ ಆಯಿತೆಂದು ತಿಳಿಯಬರುತಿದೆ. ಶ್ರೀರಂಗಪಟ್ಟಣವು ಶ್ರೀ ರಂಗನಾಥ ದೇವರಿಂದಲೇ ಪ್ರಸಿದ್ಧಿಗೆ ಬಂದು ಆಲಯಾಶ್ರಯ ಗ್ರಾಮವಾಗಿರುವದಲ್ಲದೆ ಇಂಗ್ಲಿಷಿನವರಿಗೆ ಶತ್ರುಗಳಾಗಿದ್ದ ನವಾಬ್ ಹೈದರಲ್ಲೀಖಾನರು ಮತ್ತು ಟೀಪ್ಪೂ ಸುಲ್ತಾನರಿಗೆ ರಾಜಧಾನಿಯಾಗಿಯೂ ಯಿರುತಲಿದ್ದದರಿಂದ ಇವರ ಚರಿತ್ರೆ ಸಾಮಾನ್ಯವಾಗಿ ಯೆಲ್ಲರಿಗೂ ತಿಳದದ್ದಾಗಿಯೇ ಇದೆ. ಇದು ಪೂರ್ವದ ಅನೇಗೊಂದಿ ಸಂಸ್ಥಾನದವರ ರಾಜಧಾನಿಯಾಗಿಯೂ ಮೈಸೂರು ಮಹಾರಾಜರ ರಾಜಧಾನಿಯಾಗಿಯೂ ಬಹುಕಾಲದವರಿವಿಗೆ ಇರುತಲಿತ್ತು. ಆ ಕಾಲದಲ್ಲಿ ಶ್ರೀ ರಂಗನಾಥದೇವರ ಮಹಾತ್ಮ್ಯೆವೂ ಪ್ರಾಶಸ್ತ್ಯವೂ ಬಹುಮುಖವಾಗಿ ಪ್ರಜೆಗಳ ಪ್ರಶಂಶೆಗೆ ವಿಷಯವಾಗಿತ್ತು. ಹಿಂದೂ ಅರಸರನೇಕರ ತಮ್ಮ ಹೆಸರು ಬಹುಕಾಲದ ವರಿವಿಗೆ ನೆಲೆಗೊಂಡಿರಬೇಕೆಂಬ ಉದ್ದೇಶ್ಯದಿಂದ ತಮ್ಮತಮ್ಮ ಅಂಕಿತಗಳೊಡನೆ ನಾನಾವಿಧ ಆಭರಣಗಳಂ ದೇವರಿಗೆ ಸಮರ್ಪಿಸಿದ್ದರು. ಅವೆಲ್ಲವೂ ಟೀಪ್ಪೂ ಸುಲ್ತಾನರ ಕಾಲದಲ್ಲಿ ಅಪಹರಿಸಲ್ಪಟ್ಟು ಅವುಗಳಿಗೆ ಬದಲಾಗಿ ಶಿರಸ್ಸಿಗೂ ಪಾದಕ್ಕೂ ತಮ್ಮ ಅಂಕಿತದೊಡನೆ ಸುಲ್ತಾನರು ಬೇರೆ ಆಭರಣಗಳಂ ಕೊಟ್ಟರು. ಅವು ಅದ್ಯಾಪಿ ದೇವಸ್ಥಾನದಲ್ಲಿವೆ. ಸುಲ್ತಾನರ ಕಾಲಾನಂತರ ೭೩ ವರ್ಷಗಳ ಕಾಲದವರಿಗೂ, ಇಂಗ್ಲಿಷಿನವರು ತಮಗೆ ಉಂಟಾದ ಜಯಕ್ಕೆ ನಿದರ್ಶನರೂಪವಾಗಿ ಶ್ರೀರಂಗ ಪಟ್ಟಣವನ್ನು ಆಳುತಲಿದ್ದರು. ಆ ಕಾಲದಲ್ಲಿ ದೇವಸ್ಥಾನ ವಿಷಯದೊಳು ಯಾವ ಬದಲಾವಣೆಯೂ ಮಾಡಲ್ಪಡಲಿಲ್ಲವು. ಬಳಿಕ ಸಾಬಕ್ ಮಹಾರಾಜು ಕೃಷ್ಣರಾಜ ಒಡೆಯರ್ ಬಹದೂರವರು ಅದನ್ನು ಗುತ್ತಿಗೆಗೆ ತೆಗದುಕೊಂಡ ಮೇಲೆ ದೇವಸ್ಥಾನದ ಸೇವೆಗಳಿಗಾಗಿ ತಸ್ತೀಕ್ ಬಡಾಯಿಸಿದರು, ಪರಂತು ಸ್ವಲ್ಪ ಕಾಲದೊಳಗಾಗಿಯೇ ರಾಜ್ಯವು ಬ್ರಿಟಿಷಿನವರ ವಿಚಾರಣೆಗೆ ಒಳಪಟ್ಟದರಿಂದ ಇತರ ದೇವಸ್ಥಾನಗಳಂತೆಯೇ ಇದೂ ಇರಬೇಕಾಯಿತು. ದೇವರ ಕೃಪೆಯಿಂದ ಪ್ರಕೃತ ಮಹಾರಾಜರವರಿಗೆ ಸರ್ವಸ್ವಾತಂತ್ರ್ಯದೊಡನೆ ಶ್ರೀರಂಗಪಟ್ಟಣವು ಕೊಡಲ್ಪಟ್ಟದರಿಂದ ದೇವಸ್ಥಾನದ ಏಜಾವಿಗೆ ಹರಕತ್ತಾಗಿದ್ದ ವಿಶಿಷ್ಟ ಕಟ್ಟವಗಳೂ ನಿರ್ಮೂಲ ಮಾಡಲ್ಪಟ್ಟು ಆವಶ್ಯಕಗಳಾದ ಕ್ರಮಗಳೆಲ್ಲವೂ ಏರ್ಪಡಿಸಲ್ಪಟ್ಟವು. ಕಡೆಗೆ ಶ್ರೀ ಪರಕಾಲ ಸ್ವಾಮಿಯವರಿಂದ ಈ ತಿಂಗಳ ೮ ನೇ ತಾರೀಖಿನಲ್ಲಿ ಕಲಶಸ್ಥಾಪನೋತ್ಸವವು ಸಹ ವಿಶೇಷ ವಿಜೃಂಭಣೆಯೊಡನೆ ನಡೆದವೆಂದು ಕೇಳಿ ಸಂತೋಷಿಸುತ್ತೇವೆ.

Occasional Notes.
ನೈಮಿತ್ತಿಕ ವಿಷಯನ್ಯಾಸ.

The Governor's return to Madras.—ಮದರಾಸ್ ಗವರ್ನರಾದ ಲಾರ್ಡ್ ಕಾನಿಮಾರಾಯವರು ತಮ್ಮ ಸಕ್ಯೂರ್ಯಟನಿಂದ ಬರುವ ಗುರುವಾರದ ದಿನ ಮದರಾಸಿಗೆ ದಯಮಾಡುವರೆಂದು ತಿಳಿಯಬರುತಿದೆ.

A donation.—ಇಂಡ್ಯರಾಜ್ಯದ ವೈಸ್‌ರಾಯಿಯವರಾದ ಲಾರ್ಡ್ ಡಫರಿನ್ ಸಾಹೆಬರವರ ಭಾರ್ಯೆಯವರ ಹೆಸರಿನಲ್ಲಿ ಕಲ್ಕತ್ತೆಯೊಳು ಸ್ಥಾಪಿಸಲ್ಪಡುವದಾಗಿರುವ ಹೆಂಗಸರ ಆಸ್ಪತ್ರೆಕೆಗೆ ಮಹಾರಾಣಿ ಸ್ವರ್ಣಮಾಯಿ ಯವರು ೨,೦೦೦ ರೂಪಾಯಿಗಳು ಕೊಟ್ಟಿರುತ್ತಾರೆ

The revenue of India.—೧೮೮೮ನೇ ಏಪ್ರಿಲ್ ತಿಂಗಳಿಂದ ಜೂನ್ ತಿಂಗಳ ವರಿವಿಗೆ ವಿಶಿಷ್ಟ ಬಾಬುಗಳೂ ಸೇರಿ ಇಂಡ್ಯ ಗವರ್ನ್‌ಮೆಂಟಿಗೆ ೭,೧೩,೬೫,೩೦೦ ರೂಪಾಯಿಗಳು ಹುಟ್ಟುವಳಿಯಾಗಿ ೧,೯೮,೯೦,೮೦೦ ರೂಪಾಯಿಗಳು ಖರ್ಚಾಗಿರುವಂತೆ ಕಂಟ್ರೋಲರವರ ಲೆಕ್ಕದಿಂದ ಕಾಣಬರುತಿದೆ.

Dacoity.—ಈಚೆಗೆ ಕೆಲವು ದಿನಗಳ ಹಿಂದೆ ಗ್ವಾಲಿಯರಿಗೆ ಸುಮಾರು ನಾಲ್ವತ್ತು ಮೈಲಿಗಳ ದೂರದಲ್ಲಿರುವ ಒಂದು ಗ್ರಾಮದಲ್ಲಿ ಸುಮಾರು ೧೦೦ ಮಂದಿ ದರೋಡೇ ಕಳ್ಳರು ಆಯುಧಪಾಣಿಗಳಾಗಿ ಪ್ರವೇಶಿಸಿ, ಸದರೀ ಗ್ರಾಮದಲ್ಲಿ ಪ್ರಮುಖನಾಗಿರುವ ಒಬ್ಬ ಜಮೀನ್ದಾರನ ಮನೆಯೊಳು ನುಗ್ಗಿ ಹೆಂಗಸರನ್ನೆಲ್ಲ ಕೆಡಿಸಿ, ಒಡವೆಗಳೂ ನಗದೂ ಸೇರಿ ೩೦,೦೦೦ ರೂಪಾಯಿಗಳ ವರಿಗೆ ಲೂಟೀ ಮಾಡಿಕೊಂಡು ಹೋದರಂತೆ. ಈಗದ್ದಲದಲ್ಲಿ ಇಬ್ಬರಿಗೆ ಪ್ರಾಣಹಾನಿಗಳು ಸಹ ಪ್ರಾಪ್ತವಾದಂತೆ ತಿಳಿಯಬರುತಿವೆ.

Relief works.—ಭಾವನಗರ ಪ್ರಾಂತದಲ್ಲಿ ದುರ್ಭಿಕ್ಷ ತಲೆದೋರಿ ತನ್ಮೂಲಕ ಜೀವನಾಧಾರವಿಲ್ಲದೆ ಕಷ್ಟಪಡುತಲಿರುವ ಜನಗಳ ಪೋಷಣೆಯಬಗ್ಯೆ ಸದರೀಸರ್ಕಾರದವರು ಅಲ್ಲಿ ಯಲ್ಲಿ ಕ್ಷಾಮನಿವಾರಕ ಕಾಮಗಾರಿಗಳನ್ನು ಪ್ರಾರಂಭಿಸಿರುವದಲ್ಲದೆ ಕೆಲಸ ಮಾಡುವದಕ್ಕೆ ಅಶಕ್ತರಾದ ಜನಗಳನ್ನು ಮಹಾರಾಜರವರು ಸ್ವಂತ ಖರ್ಚಿನಿಂದ ಕಾಪಾಡುತ ಬರುತಲಿದಾರೆ. ಮತ್ತು ದುರ್ಭಿಕ್ಷ ಪೀಡಿತರಾದ ಜನಗಳು ಭಾವನಗರ ಮೊದಲಾದ ಪ್ರದೇಶಗಳಿಂದ ಬೇರೆಸ್ಥಳಗಳಿಗೆ ಹೊರಟುಹೋಗದಂತೆ ಅವರೂ ತಡೆಮಾಡತಕ್ಕದ್ದೆಂದು ಖಂಡಿತವಾದ ಹುಕುಂ ಕೊಡಲ್ಪಟ್ಟಿರುತಿದೆ.

The Dufferin Memorial Fund.—ಇಂಡಿಯಾ ರಾಜ್ಯದ ವೈಸ್‌ರಾಯಿಯವರಾದ ಲಾರ್ಡ್ ಡಫರಿನ್ ಸಾಹೆಬರವರ ಮತ್ತು ಅವರ ಭಾರ್ಯೆಯವರ ಜ್ಞಾಪಕಾರ್ಥ ಕಲ್ಕತ್ತೆಯೊಳು ಸ್ಥಾಪಿಸಲುದ್ದೇಶಿಸಲ್ಪಟ್ಟಿರುವ ತಸ್ವೀರ್ ಮತ್ತು ಪ್ರತಿಮೆಯ ಖರ್ಚಿನಬಗ್ಯೆ ಇದುವರಿವಿಗೆ ೬೦,೮೨೦ ರೂಪಾಯಿಗಳು ಚಂದಾ ಮಾಡಲ್ಪಟ್ಟು ಅದರ ಪೈಕಿ, ೬೦,೦೦೦ ರೂಪಾಯಿಗಳು ವಸೂಲಾಗಿರುತಿವೆ. ಪರಂತು ವೈಸ್‌ರಾಯ್‌ಯವರು ಕಲ್ಕತ್ತೆಗೆ ಬಂದು ಈ ವಿಷಯದಲ್ಲಿ ಅವರ ಅಭಿಪ್ರಾಯವನ್ನರಿತ್ತತರುವಾಯ ಮೇಲೆ ಹೇಳಿದ ತಸ್ವೀರನ್ನೂ ಪ್ರತಿಮೆಯನ್ನೂ ಮಾಡಿಸಲುಪಕ್ರಮಿಸಬೇಕೆಂದು ಆ ಬಗ್ಯೆ ಏರ್ಪಟ್ಟಿರುವಕಮಿಟಿಯವರು ಅವರ ಆಗಮನವನ್ನು ನಿರೀಕ್ಷಿಸುತಲಿದಾರೆ.

An accident.—ರಸಿಯಾ ದೇಶದ ಚಕ್ರವರ್ತಿಯವರು ಪರಸ್ಥಳಕ್ಕೆ ಹೋಗಿದ್ದು ರಾಜಧಾನಿಯಾದ ಸೇಂಟಿಪೀಟರ್ಸ್ ಬರ್ಗ್ ಎಂಬ ಪಟ್ಟಣಕ್ಕೆ ಸ್ಪೆಷಿಯಲ್ ಟ್ರೈನಿನಲ್ಲಿ ವಾಪಸು ಹೋಗುತ್ತಿರುವಲ್ಲಿ ಗಾಡಿಯು ಕಬ್ಬಿಣದಿಂದ ಕೆಳಗೆಬಿದ್ದು ಅದರ ದೆಸೆಯಿಂದ ೨೩ ಮಂದಿಗೆ ಪ್ರಾಣಹಾನಿಯುಂಟಾದದ್ದಲ್ಲದೆ ಯುದ್ಧ ಇಲಾಖಾ ಮಂತ್ರಿಯವರು ಸೇರಿ ೩೨ ಮಂದಿಗೆ ಬಲವಾದ ಪೆಟ್ಟುಗಳು ಸಹ ತಗಲಿದವು. ಈ ವಿಪತ್ತುಗಳು ದೈವಿಕವೆಂದು ಅಲ್ಲಿನ ಜನರು ಹೇಳಕೊಂಡಾಗ್ಯೂ ಸದರೀ ದೇಶದಲ್ಲಿ ಪ್ರಬಲಿಸಿರುವ ನೀಹಿಲಿಸ್ಟ್ ಎಂಬ ರಾಜದ್ವೇಷಿಗಳಿಂದ ಮಾಡಲ್ಪಟ್ಟ ಕಾರ್ಯವಾಗಿರಬೇಕೆಂಬ ನಂಬಿಕೆಯುಂಟಾಗಿದೆ, ಎಂದು ವಗ್ಗೈರೆ ಲಂಡನ್ ಪಟ್ಟಣದಿಂದ ಪಯೋನಿಯರ್ ಪತ್ರಿಕೆಗೆ ತಂತಿ ವೃತ್ತಾಂತ ಬಂದಿರುತಿದೆ.

LOCAL AND PROVINCIAL NEWS.
ಒಳದೇಶ ಮತ್ತು ತಾಲ್ಲೂಕಜಾತಿವೃತ್ತಾಂತಗಳು.

B. A. Examination.—ಮಾಹೇ ಮಜಕೂರ್ ೨೦ನೇ ತಾರೀಖಿನಲ್ಲಿ ಈ ಸಂವತ್ಸರದ ಬಿ. ಎ. ಪೂರ್ವಭಾಗ ಅಂದರೆ, ಭಾಷಾ ಪರಿಕ್ಷೆಯು ಪ್ರಾರಂಭವಾಗಿ ಇಲ್ಲಿನ ಸೆಂಟ್ರಲ್‌ಕಾಲೀಜ್ ಹಾಲಿನಲ್ಲಿ ನಡೆಯುವದು.

The coming Resident of Mysore.—ಈ ಸಂಸ್ಥಾನದಲ್ಲಿ ಬ್ರಿಟಿಷ್ ರೆಸಿಡೆಂಟರಾಗಿ ನಿಯಮಿಸಲ್ಪಟ್ಟಿರುವ ಸರ್ ಓಲಿವರ್ ಸೇಂಟಿಜಾನ್ ಯವರು ಮುಂದಿನ ಜನವರಿ ೧೫ನೇ ತಾರೀಖಿನಲ್ಲಿ ಬೆಂಗಳೂರಿಗೆ ಬಂದು ಸೇರುವರೆಂದು ತಿಳಿಯಬರುತಿದೆ.

An offer.—ಮದರಾಸ್ ಹಿಂದೂಪತ್ರಿಕೆಯಲ್ಲಿ ಶ್ರೀ ವೈಷ್ಣವ ಮತಸ್ಥಳಾದ ಇಲ್ಲಿನ ಒಬ್ಬ ಬಾಲವಿತಂತುವು ಒಂದು ಸ್ವಂತ ಪ್ರಕಟನೆಯನ್ನು ಘಾಯಿಷ್ ಮಾಡಿಸಿರುವಳಾಗಿ ಅದರ ಅರ್ಥವಂ ಇಲ್ಲಿನವರ ತಿಳುವಳಿಕೆಯ ಬಗ್ಯೆ ಪ್ರಕಟಿಸುವೆವೆಂತೆಂದರೆ,—ಶ್ರೀ ವೈಷ್ಣವಮತಕ್ಕೆ ಸೇರಿದ ಬಾಲವಿಧವೆಯ ಕರಗ್ರಹಣರಿ ಗೈಯಲಿಕ್ಕೆ ತನ್ಮತಸ್ಥನಾದ ವರ ನೊಬ್ಬನು ಬೇಕಾಗಿರುವನು. ಆತನು ಪೂರ್ಣ ವಯಸ್ಕನಾಗಿಯೂ, ಇಂಗ್ಲಿಷ್ ಬಾಷಾಜ್ಞಾನವುಳ್ಳವನಾಗಿಯೂ ಇರಬೇಕು. ಆತನು ಎಫ್ ಎ. ಪರಿಕ್ಷೆ ಕೊಟ್ಟದ್ದರೆ ಮುಂದಿನ ಬಿ ಎ. ಪರಿಕ್ಷೆಗೆ ಓದಲಿಕ್ಕೆ ಬೇಕಾದ ಏರ್ಪಾಡುಗಳು ಮಾಡಲ್ಪಡುವವು. ಅಪೇಕ್ಷೆಯುಳ್ಳವರು ಹಿಂದೂ ಪತ್ರಿಕೆಯ ಮ್ಯಾನೇಜರವರ ಮೂಲಕ ಎ. ಎಂಬವರಿಗೆ ಬರೆದುಕೊಳ್ಳತಕ್ಕದ್ದೆಂಬದು. ಈ ಪ್ರಕಟನೆಯಲ್ಲಿ ವಿವಾಹಾಕಾಂಕ್ಷಿಯಾದ ಸದರೀ ಹುಡಿಗಿಯ ಗೋತ್ರಸೂತ್ರ ರೂಪವಯೊ ವಿಭ್ರಮಾದಿಗಳು ತಿಳಸಲ್ಪಡದಿರುವದರಿಂದ ವಿಧವಾನುರಕ್ತರಾದವ ರನೇಕರಿಗೆ ದರಖಾಸ್ತು ಮಾಡಲಿಕ್ಕೆ ಆತಂಕವಾಗಿರಬಹುದೆಂದೆಣಿಸುತ್ತೇವೆ.

ಆರ್ಯಸಭಾ ಪ್ರಕಟನೆಗಳು.

ಇದರಿಂದ ಪ್ರಕಟಪಡಿಸುವದೇನೆಂದರೆ:—

ಈಚೆಗೆ ಬೆಂಗಳೂರಲ್ಲಿ ಯೇರ್ಪಾಡಾದ ಆರ್ಯಸಭೆಯು ಪರಿಶ್ರೋಷಣೆಯಲ್ಲಿ, ಈ ತಿಂಗಳ ೨೧ನೇ ತಾರೀಖ್ ಬುಧವಾರದ ದಿನ ಈ ಪೂರು ಶಿದ್ದೀಕಟ್ಟೆಯಲ್ಲಿ ಹಿಂದೂ ಬಾಲಿಕಾ ಪಾಠಶಾಲೆಯೊಂದು ಸ್ಥಾಪಿಸಲ್ಪಡುವದು. ಈ ಪಾಠಶಾಲೆಯಲ್ಲಿ ಕನ್ನಡ ಇಂಗ್ಲಿಷ್ ಭಾಷೆಗಳು, ಸಂಗೀತ, ಕಸೂತಿ ಕೆಲಸಗಳು ಕಲಿಸಲ್ಪಡುವವು. ಈ ಪಾಠಶಾಲೆಯನೌಕರಿಯಲ್ಲಿ ಸೇರುವದಕ್ಕೆ ಇಷ್ಟಪುಳ್ಳವರು ಆಯಾ ವಿದ್ಯೆಗಳಲ್ಲಿ ತಾವು ಪಡೆದಿರುವ ಯೋಗ್ಯತೆ ಮತ್ತು ನಡತೆಯ ವಿಷಯದಲ್ಲಿ ತಕ್ಕ ಸರ್ಟಿಫಿಕೇಟಿಗಳೊಡನೆ ಈ ತಿಂಗಳ ೧೫ನೇ ತಾರೀಖಿನೊಳಗಾಗಿ ತಮ್ಮದರಖಾಸ್ತುಗಳನ್ನು ಆರ್ಯಸಭಾ ಸೆಕ್ರೆಟರಿಗಳಿಗೆ ಕಳುಹಿಸಬೇಕಾದ್ದಲ್ಲದೆ ಈ ತಿಂಗಳ ೧೫ನೇ ತಾರೀಖ್ ಸಾಯಂಕಾಲದಲ್ಲಿ ದರಖಾಸ್ತುದಾರರು ಖುದ್ದು ಹಾಜರಾಗಬೇಕು. ತಲಬಗಳು ಮಾಹೆಯಾನಾ ೫ ರೂಪಾಯಿ ಮೊದಲು ೧೫ ರೂಪಾಯಿಗಳ ವರಿವಿಗೆ ಅವರವರ ಯೋಗ್ಯತಾನುಸಾರ ಕೊಡಲ್ಪಡುವದು.

ಪ್ರಕಟನೆ.

ಹಿಂದೂ ಹುಡಿಗಿಯರನ್ನು ಕ್ರಿಸ್ತುಮತದ ಪಾದ್ರಿಗಳಿಂದ ಸ್ಥಾಪಿಸಲ್ಪಟ್ಟಿರುವ ಬಾಲಿಕಾ ಪಾಠಶಾಲೆಗಳಿಗೆ ಕಳುಹಿಸಕೂಡದೆಂತಲೂ, ಸರ್ಕಾರದಿಂದ ಅಥವಾ ಹಿಂದೂಮತಸ್ಥರಿಂದ ಸ್ಥಾಪಿಸಲ್ಪಟ್ಟ ಪಾಠಶಾಲೆಗೇನೇ ವಿದ್ಯಾಭ್ಯಾಸಕ್ಕೆ ಕಳುಹಿಸಬೇಕೆಂತಲೂ, ನವಂಬರ್ ೩ನೇ ತಾರೀಖಿನಲ್ಲಿನಡೆದ ಸಭೆಯಲ್ಲಿ ನಿಶ್ಚಯಿಸಿದೆಯಷ್ಟೆ ! ಈ ವಿಷಯವಾಗಿ ಮುಂದೆ ನಡೆಸತಕ್ಕ ಕಾರ್ಯಗಳ ವಿಷಯವಾಗಿ ಎಲ್ಲರೂ ಸೇರಿ ಯೋಚನೆಮಾಡುವದು ಅವಶ್ಯಕವಾಗಿರುವದರಿಂದ, ಹಿಂದೂ ಮತಾಭಿಮಾನಿಗಳಾದ ನೀವುಗಳು ಎಲ್ಲರೂ ೧೨ನೇ ತಾರೀಖ್ ಸೋಮವಾರ ಸಾಯಂಕಾಲ ೪ ಘಂಟೆಗೆ ಸರಿಯಾಗಿ ಪೂರ್ಣಯ್ಯನವರ ಸತ್ರದಲ್ಲಿ ಸೇರಿ ನಿಮ್ಮ ಸಲಹೆಗಳನ್ನು ತಿಳಸಬೇಕೆಂದು ಕೋರುತ್ತೇವೆ.

ಬೆಂಗಳೂರು, ೧೧-೧೧-೮೮. — ಎಲ್. ಶ್ರೀನಿವಾಸಯ್ಯಂಗಾರ್. ಅಡ್ವೋಕೇಟ್ ಮತ್ತು ಜಾಯಿಂಟ್ ಸೆಕ್ರೆಟರಿ.

Bangalore :—Printed and published at the Karnatic Press, No. 44, Hispotal Road, Petta.—1888.

ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA.

ಪ್ರತಿ ಸೋಮವಾರ ಪ್ರಾತಃಕಾಲದಲ್ಲಿ ಪ್ರಕಟಿಸಲ್ಪಡುವದು.

Published every Monday Morning.

ಪ್ರಕಾಮನಿಶಿದಪ್ರವೃತ್ತ್ಯನಗನಾರ್ದ್ರ ಕರ್ಣಾಟಕಪ್ರಕಾಶನವರಾಭಿದಾಪ್ರಥಿತಸಾಹಿತೀಕೋಭಿತಾ । ವ್ಯಗ್ರಾಂತಕಹಿತಪಾಸನೆನಿಹಿತಮುದ್ರಣಾಸಜ್ಜನೈರ್ಧೃಕಾಸು ವರಿಪೋಷಿತಾ ಭಕತಿವಿಮಾನನಸಂಸುಮುದಂ॥

Vol. XV] BANGALORE—MONDAY, NOVEMBER 19, 1888. [No. 45.

ಸಂಪುಟ ೧೫.] ಬೆಂಗಳೂರು:—ಸನ್ ೧೮೮೮ನೇ ಇಸವಿ ನವಂಬರ್ ೧೯ನೇ ತಾರೀಖು ಸೋಮವಾರ. [ಸಂಚಿಕೆ ೪೫.

ಕರ್ಣಾಟಕ ಪ್ರಕಾಶಿಕಾ

ಪತ್ರಿಕೆಯ ಚಂದಾ ದರಗಳು,
೧೮೮೮ನೇ ಇಸವಿ ಜನವರಿಲಾಗಾಯತು
ಕಡಮೆಮಾಡಲ್ಪಟ್ಟಿರುತಿವೆ.

ಈ ಪತ್ರಿಕೆಯ ಚಂದಾದಾರರಲ್ಲಿ ಅನೇಕರ ಅಪೇಕ್ಷೆಯನ್ನೀಡೇರಿಸುವ ಉದ್ದೇಶದೊಡನೆಯೂ, ಪರಿಮಿತವಾದ ಆಯತಿಯುಳ್ಳವರಿಗೆಲ್ಲ ಈ ಪತ್ರಿಕೆಯು ಸುಲಭವಾಗಿ ಲಭಿಸುವಂತಿರಬೇಕೆಂಬ ಅಭಿಪ್ರಾಯದೊಡನೆಯೂ ಇವರ ಚಂದಾದರವನ್ನು ಇವರಡಿಕಂಡಂತೆ ಕಡಮೆಮಾಡಿರುತ್ತೇವೆಂದರೆ —

ಇಂಗ್ಲಿಷ್ ಮತ್ತು ಕನ್ನಡಭಾಗಗಳಿಗೆ.

	ಸ್ಥಳದವರಿಗೆ	ಪರಸ್ಥಳದವರಿಗೆ
12 ತಿಂಗಳಿಗೆ	8—0—0	9—0—0
6 ,,	4—0—0	4—8—0
3 ,,	2—8—0	2—8—0

ಇಂಗ್ಲಿಷ್ ಅಥವಾ ಕನ್ನಡಭಾಗಗಳಿಗೆ.

	ಸ್ಥಳದವರಿಗೆ	ಪರಸ್ಥಳದವರಿಗೆ
12 ತಿಂಗಳಿಗೆ	4—0—0	5—0—0
6 ,,	2—0—0	2—8—0
3 ,,	1—4—0	1—8—0

ಷರಾ—ಅಂಬೆ ಹುತ್ತುಗಳು, ಶೋಬಳ ಮತ್ತು ತಾಲ್ಲೂಕ್ ಸ್ಕೂಲ್‌ಮಾಸ್ಟರುಗಳು, ಶ್ಯಾನುಭೋಗರು, ಪಟೇಲರು, ವಿದ್ಯಾರ್ಥಿಗಳು, ಇವರಿಗೆಲ್ಲ ಈ ಪತ್ರಿಕೆಯು ಪರ್ಚೇಜಾದದರಕ್ಕೆ ಕೊಡಲ್ಪಡುವದು. ಅಡ್ವಾನ್ಸ್‌ವೊಬಲಗನಿಗೆ ಎರಡರ ದರವಂಸ್ತು ಇಗೆ ಸಂ ನಿಗದಿ ಪಡಿಸಿರುವ ಚಂದಾದಾರರು ಇಂಗ್ಲಿಷ್ ಭಾಗವನ್ನಾಗಲಿ ಕನ್ನಡಭಾಗವನ್ನಾಗಲಿ ಅಥವಾ ಎರಡನ್ನಾಗಲಿ ತೆಗದುಕೊಳ್ಳಬಹುದು. ಚಂದಾದವನ್ನು ಮುಂಗಡವಾಗಿ ಕೊಡತಕ್ಕದ್ದು. ಮುಂಗಡಕ್ಕಿಂತ ಕಡಮೆಯಾಗಿ ಚಂದಾ ಹಣವನ್ನು ಅಂಗೀಕರಿಸಲ್ಪಡಲಾರದು.

ನೋಟುಗಳು ರವಾನಿಸತಕ್ಕವರು ನೋಟಿನ ಕಳುಹಿಸುವ ಆರ್ಥಿಕವು ತಲುಪಿದನ್ನು ದಸ್ತಕವಾದವು ಬಂದ ಕೂಡಲೇ ಬಾಕಿ ಅರ್ಧ ನೋಟನ್ನು ರವಾನಿಸತಕ್ಕದ್ದು. ಸ್ಟಾಂಪುಗಳು ಕಳುಹಿಸತಕ್ಕವರು ರೂಪಾಯಿ ಒಂದಕ್ಕೆ ಒಂದಾಣೆಯಂತೆ ಡಿಸ್ಕೌಂಟ್ ಸೇರಿಸಿ ಕಳುಹಿಸತಕ್ಕದ್ದು. ಅರ್ಧಾಣೆ ಕಿಮ್ಮತ್ತಿನ ಸ್ಟಾಂಪುಗಳನ್ನು ಕಳುಹಿಸಕೂಡದು. ಡಿಸ್ಕೌಂಟಿಲ್ಲದೆ ಕಳುಹಿಸಲ್ಪಡುವ ಹಣದಲ್ಲಿ ಆ ಹಣವಾದ್ದನ್ನು ಚಿಕ್ಕವಣವಾದರೂ ಲೆಕ್ಕಕ್ಕೆ ದಾಖಲ್ಮಾಡಿಕೊಳ್ಳಲ್ಪಡುವದು.

ಪ್ರಕಟನೆಯ ರಿವಾಜ್.

ಮೊದಲನೆಯದಫಾ ಪಂಕ್ತಿ ಒಂದಕ್ಕೆ ೦—೨—೦
ಎರಡನೆಯದಫಾ ಪಂಕ್ತಿ ಒಂದಕ್ಕೆ ೦—೧—೦

ಷರಾ—ಎರಡಾವರ್ತಿಗಿಂತ ಜಾಸ್ತಿಯಾಗಿ ಎಷ್ಟುಕಡನೆ ಛಾಯಿಸ್ ಮಾಡಿಸಾಗ್ಯೂ ಪಂಕ್ತಿ ಒಂದಕ್ಕೆ ೧ಆಣೆಯಂತೆ ಲೆಕ್ಕ ಮಾಡಲ್ಪಡುವದು. ಈ ಪತ್ರಿಕೆಯ ೧ ಛಾಯಿಷನಿಗೋಸ್ಕರ ಪ್ರಕಟನೆಗಳು ಕಳುಹಿಸುವವರು ಅವು ಎಷ್ಟಾವರ್ತಿ ಛಾಯಿಸ್ ಮಾಡಲ್ಪಡಬೇಕೋ ಆ ಅಂಕವನ್ನು ಸ್ಪಷ್ಟವಾಗಿ ತಿಳಿಸತಕ್ಕದ್ದು. ಇಲ್ಲದಪಕ್ಷಕ್ಕೆ ಅವರು ಸಮಗೆ ನಿಲ್ಲಿಸುವಂತೆ ಬರೆಯುವತನಕ ಅವು ಪ್ರಕಟಿಸುತಲಿದ್ದು ಹಾಗೆ ಎಷ್ಟಾವರ್ತಿ ಪ್ರಕಟಿಸಲ್ಪಟ್ಟಿದ್ದಾಗ್ಯೂ ಮೇಲೆಕಂಡ ದರದಂತೆ ಕಿಮ್ಮತ್ ವಸೂಲ್ಮಾಡಲ್ಪಡುವವು. ಪ್ರಕಟನೆಯಬಗ್ಗೆ ಕಳುಹಿಸಲ್ಪಡತಕ್ಕ ಪ್ರಕಟನೆಗಳನ್ನು ಆ ಯಾಡಿಸಿವಾರದಮಿನ ಮಧ್ಯಾಹ್ನ ೨ ಘಂಟೆಯೊಳಗಾಗಿ ಕಳುಹಿಸಬೇಕು. ಪ್ರಕಟನೆಯಬಗ್ಗೆ ಈ ಪತ್ರಿಕೆಗೆ ಕಳುಹಿಸಲ್ಪಡತಕ್ಕ ಕಾಗದಗಳಲ್ಲಿ ತಿಳಿಸಲ್ಪಡುವ ಅಭಿಪ್ರಾಯಗಳಿಗೆ ನಾವು ಜವಾಬ್ದಾರರಾಗಲಾರೆವು. ಕ್ರಮವಾಗಿ ರುಜುಮಾಡಿ ದಸ್ತೂರ್ ಯಾವತ್ತಾದನ್ನು ಪ್ರಕಟಿಸಲಾರೆವು. ನಿರಾಕರಿಸಲ್ಪಟ್ಟ ಕಾಗದಗಳು ವಾಪಸ್ ಕಳುಹಿಸಲ್ಪಡಲಾರವು.

"IT RECOMENDS ITSELF"

ALL WHO SUFFER FIND SURE RELIEF.

LITTLE'S

ORIENTAL BALM

THE MOST EFFECTUAL MODERN REMEDY FOR PAIN

ಲಿಟಿಲ್ ಯೆಂಬವನಿಂದ ತಯಾರ್ಮಾಡಲ್ಪಟ್ಟ "ಬಾಧೆಸಂಹಾರಿಣೀ" ಎಂಬ ಪೂರ್ವದೇಶ ಸಂಬಂಧವಾದ ಅಮೂಲ್ಯ ತೈಲವು ಸ್ವಶಕ್ತಿ ಪ್ರದರ್ಶಕವಾದದ್ದು, ಮತ್ತು ಸಫಲವಾದ ನವೀನ ಪ್ರತಿಕ್ರಿಯಾರೂಪವಾದ ಔಷಧವು. ಇದರಿಂದ ಸಕಲ ವಾತರೋಗಗಳೂ, ವಾತಸಂಬಂಧಗಳಾದ ಸಂಧಿಬಾಧೆಗಳೂ ನಿವೃತ್ತಿಯಾಗುವವು. ಮುಖ್ಯವಾಗಿ ಬೆರಕಾಲಿಕವಾದ ವಾತರೋಗಗಳು, ಕಾಸ, ಗಂಟಲಿನಲ್ಲಿ ಉರಿ, ನರೊವುನೋವು, ಕೀಲುವಾಯು, ಕಟಿವಾಯು, ಉಳುಕು ನೋವು, ತಲೆನೋವು, ತಿಮಿರ್ವಾಯು ಮುಂತಾದ ರೋಗಗಳಿಗೆಲ್ಲ ನಿಸ್ಸಂದೇಹವಾಗಿ ಬಹಳ ಪ್ರಯೋಜನವನ್ನುಂಟುಮಾಡತಕ್ಕದ್ದು. ಈ ತೈಲವನ್ನು ನೋವುಳ್ಳ ಸ್ಥಳಗಳಲ್ಲಿ ಕೆಲವಾವರ್ತಿ ಸವರಿ ಶಾಖವುಂಟಾಗುವಂತೆ ಚೆನ್ನಾಗಿ ತಿಕ್ಕಿದಲ್ಲಿ ಸಹಜಗಳಾದ ಸೀಲ್ನಾ ನೋವುಗಳನ್ನು ನಿವೃತ್ತಿ ಮಾಡುವಂತಾ ಉತ್ತಮ ತೈಲವಾಗಿರುತ್ತದೆ. ಸರ್ವಸ್ವೇಷನೆಯಿಂದಲೇ ಆತಲನೋವು ಮತ್ತು ಜೋಮು ಕೂಡ್ಲೇ ನಿವೃತ್ತಿಯಾಗುವದು. ಗಂಟಲಿನಲ್ಲುಂಟಾಗುವ ಉರಿ ಅಥವಾ ವ್ರಣಗಳಿಗೆ ಈ ತೈಲವು ಅದ್ಭುತವಾದ ಮತ್ತು ಶೀಘ್ರವಾದ ಸಂಪೂರ್ಣ ಗುಣವನ್ನುಂಟುಮಾಡುವದು. ಅದ್ಭುತವಾದ ಈ ಔಷಧವನ್ನು ಉಪಯೋಗಮಾಡಿದಲ್ಲಿ ಅದರ ಪ್ರಯೋಜನವು ಸ್ವತಃ ವ್ಯಕ್ತವಾಗುವದು. ಈ ತೈಲವು ಶೀತಗಾಳಿ ಮಂಜುಮುಂತಾದವುಗಳಿಗೆ ಸಂಚರಿಸುವಂತಾ ಪ್ರಯಾಣಿಕರು, ಬೇಟೆಯಾಡುವವರು, ದೇಶಾಟನ ಮಾಡುವವರು, ಮುಂತಾದವರಿಗೆಲ್ಲ ಅಮೂಲ್ಯವಾದದ್ದು.

ಪರಿಶೀಲಕರ ಅಭಿಪ್ರಾಯವು.

ಐರ್ಲ್ಯಾಂಡ್ ದೇಶದ ಫಾರ್ಮಸ್ಯೂಟಿಕಲ್ ಸೊಸೈಟಿಯೆಂಬ ಔಷಧಶಾಲೆಯ ಪ್ರೆಸಿಡೆಂಟರಾಗಿಯೂ, ಸರ್ಕಾರಕ್ಕೆ ಸೇರಿದ ಕೆಮಿಕಲ್ ಸೊಸೈಟಿ ಎಂಬ ವ್ಯಾಧಿಶಾಸ್ತ್ರಾಧಿಕಾರ ನಿರ್ವಾಹಕ ಸಮಾಜದ ಮೆಂಬರಾಗಿಯೂ, "ಮಿನರಲ್ ವಾಟರ್ಸ್ ಆಫ್ ಯೂರೋಪ್" ಎಂಬ ಗ್ರಂಥಕರ್ತರಾಗಿಯೂ, ರಸಾಯನ ವಿದ್ಯಾ ವಿಷಯಕವಾದ ಅನೇಕ ಲೇಖನಾಧಿಕಾರಿಯಾಗಿಯೂ, ಇರುವ ಪ್ರೊಫೆಸರ್ ಟಿಚ್ ಬೋರ್ನ್ (C. R. TICHBORNE, L. L. D., F. C. S., M. R. I. A.,) ಇವರು ಅಭಿಪ್ರಾಯ ಪಟ್ಟಿರುತ್ತಾರೆ:— ಲಿಟಲ್‌ರವರ ಓರಿಯಂಟಲ್ ತೈಲವನ್ನು ಜಾಗರೂಕತೆಯಿಂದ ಪರೀಕ್ಷಿಸಿದ್ದೇನೆ. ಇದು ಬಹುವಿಧ ಮೂಲಿಕೆಗಳ ಮಿಶ್ರವಾದ ತೈಲವೆಂದೂ ಪರೀಕ್ಷಿಸಲ್ಪಟ್ಟಿದೆ. ಇದು ಹೊರಗೆ ಉಪಯೋಗಿಸಲ್ಪಡುವಾಗ ಶೀಘ್ರವಾಗಿ ನಿರುಪದ್ರವಕರವಾದದ್ದಾಗಿದ್ದರೂ, ನಿಜವಾಗಿ ಪ್ರಬಲ ರೋಗ ನಿವಾರಕ ಶಕ್ತಿಯುಳ್ಳದ್ದಾಗಿರುತ್ತದೆ. ಈ ಮಿಶ್ರೌಷಧವು ನರಗಳನ್ನು ಸ್ಥಿಮಿತಕ್ಕೆ ತರತಕ್ಕದ್ದಾಗಿರುವದರಿಂದ ಇದು ಯಾವ ತರದ ರೋಗಗಳಿಗೆ ಉಪಯುಕ್ತವೆಂದು ತಿಳಿಸಲ್ಪಟ್ಟಿದೆಯೋ ಅವೇ ರೋಗಗಳಲ್ಲಿ ಅದರ ಪ್ರಯೋಜನವು ವ್ಯಕ್ತವಾಗುವದು. ಈ ತೈಲವು ಸಂಪೂರ್ಣ ಜಾಗರೂಕತೆಯೊಡನೆ ತಯಾರ್ಮಾಡಲ್ಪಟ್ಟಿರುತ್ತದೆ.

ಇದರ ಕ್ರಯ—ಸೀಸೆ ಒಂದಕ್ಕೆ ೧ ರೂಪಾಯಿ.

ಇದು ವಿಷ್ಟ ಔಷಧ ಶಾಲೆಯಲ್ಲಿಯೂ, ಮದರಾಸ್ ಸೆಂಬುದಾಸ್ ಬೀದಿಯಲ್ಲಿ, ೨೦ನೇ ನಂಬರ್ ಮನೆಯೊಳಗಿರುವ, ಎ. ಸಿ. ಬೆರ್ರಿಮನ್ ಯವರಲ್ಲಿಯೂ, ಈ ಪೇಟೆಯಲ್ಲಿರುವ ಅವರ ಏಜಂಟ್‌ಗಳಾದ ಜೆ. ವೆಸ್ಟ್ ಯವರ ಕಂಪನಿಯಲ್ಲಿಯೂ, ಮೆ. ಕೆಪ್ಲಿನ್ ಅಂಡ್ ಕಂಪನಿಯವರಲ್ಲಿಯೂ, ರಿಗ್ಸ್‌ಯವರ ಕಂಪನಿಯಲ್ಲಿಯೂ ದೊರೆಯುವದು.

AGENTS.— } *Messrs,* J. WEST, *Chemist, &c., Bangalore.*
CAPLAIN & Co. *Chemists, Bangalore.*
RIGGS & Co., *Chemists, Bangalore;* and of
MAHOMED YOUSOFF AND SONS, *The Cash Bazar, Bangalore*
A. C. BERRYMAN & Co.,
20 *Sambodoss Street Madras.*

NOTICE.

VAIDYASARA SANGRAHA

A TREATISE ON THE PRINCIPLES OF

HINDU MEDICINE

☞ *Price including Postage Rs 5 6 0*

ವೈದ್ಯಸಾರ ಸಂಗ್ರಹ.

ಈಗ್ರಂಥಾಪೇಕ್ಷೆಯುಳ್ಳವರು ಮೊಬಲಗಿನೊಡನೆ ಈ ಕೆಳಗೆ ರುಜುಮಾಡಿರತಕ್ಕವರ ಹೆಸರಿಗೆ ಬರೆದುಕೊಂಡರೆ ಪುಸ್ತಕ ಕೂಡಲೇ ಕಳುಹಿಸಲ್ಪಡುವದು. ಮೊಬಲಗು ಇಲ್ಲದ ದರಖಾಸ್ತುಗಳಿಗೆ ಸುತರಾಂ ನಿಗೆಕೊಡಲ್ಪಡಲಾರದು.

ಇದರ ಕ್ರಯ ... ...ರೂ॥ ೫—೦—೦
ಪ್ಯಾಕಿಂಗ್ ಮತ್ತು ಅಂಚೆಕಾಸರಿ, ೦—೬—೦

ಟಿ. ಬಿ. ವೆಂಕಟಾಚಾರ್,
ಆಸ್ಪತ್ರಿರೋಡ್ ಬೆಂಗಳೂರು.

ವಿಶೇಷ ವರ್ತಮಾನ.

ಪೂನ ಚಿತ್ರಶಾಲೆಯಲ್ಲಿ ಸ್ಥಾಪಿಸಲ್ಪಟ್ಟಿರುವ ಹೊಸ ಶಿಲಾಯಂತ್ರದಲ್ಲಿ, ಹಿಂದೂ ದೇವತೆಗಳ, ಚರಿತ್ರೆಗಳ ಮೂಲಕ ಪ್ರಸಿದ್ಧಿಯುಂ ಪಡೆದವರ, ಸುಂದರಿಗಳಾದ ನೇಟಿವ್ ಹೆಂಗಸರ ವಗೈರೆ ಉಗ್ರಾದ ತಸ್ವೀರ್‌ಗಳು ತಯಾರಾಗುತಲಿವೆ. 'ಪಟಗಳ' ಕೆಲಸಗಾರಿಕೆಯು ನಾಜೂಕನ್ನು ಯೋಚಿಸಲಾಗಿ ಕ್ರಯ ಬಹಳ ಅಲ್ಪವಾಗಿದೆ. ಬೇಕಾದವರಿಗೆ ಕ್ರಯಪಟ್ಟಿ ಕಳುಹಿಸಲ್ಪಡುವವು.

ಪೂನಾ ಮರಾ ಚಿತ್ರಶಾಲೆಯ ಮ್ಯಾನೇಜರ್.

ನೋಟಿಸ.

ಅವ್ವಲ್ ಬಾಬತು ಬಿನಸಾವರಿ ಅತ್ತರ್‌ಗಳು !
ಜಾಡಿ ನಿವರ್ತಿ ಮಾಡುವ ಪ್ರಾಂತಭಸ್ಮ !!
ಅನೇಕ ಸುಗುಣಗಳುಳ್ಳ ಸುಗಂಧರಾಜ ತೈಲವು !!!
ನಾನಾತರಹ ಅವ್ವಲ್‌ಬಾಬತು ಊದು ಬತ್ತಿಗಳು ಮತ್ತು ಬಿಲ್ಲೆಗಳು ಹಸೀ ಬಿಲ್ಲೆಗಳು ವಗೈರೆ.

ಇವುಗಳೆಲ್ಲ ಬಹಳ ಫರಮಾಯಿಷಿ ಯಿಂದ ತಯಾರಾಗಿ ಬಿಕರೀಬಸ್ತಿ ಸಿದ್ಧವಾಗಿರುತ್ತೆ. ಅಲ್ಲದೆ ೫ ಸಾವಿರ ಕ್ರಿಯಾಗಳಿಗೆ ಮೇಲ್ಪಟ್ಟು ಬರ್ಕಾಗಿರುವ, ಬಹಳ ಸಂಕಟಗಳನ್ನು ಪರಿಹಾರ ಮಾಡಿ ಯಶಸ್ಸಾಗಲೂ ಸುವಾಸನೆ ಕೊಡುವ ಸುಗಂಧರಾಜ ತೈಲವು ರಾತ್ರಿ ಹಗಲು ಬಾಧಿಸುವ ತಲ್ಲು ನೋವನ್ನು ಪರಿಹಾರ ಮಾಡುವ ದಂತ ಭಸ್ಮ ಸಹ ಬಹಳ ಕಮ್ಮಿ ಬೆಲೆಗೆ ಸಿಕ್ಕುವದು. ಏಜಂಟ್ ಆ. ಮಹಮದ್ ಖಾಸೀಂ, ಬೆಂಗಳೂರು ದೊಡ್ಡಪೇಟೆ ಅಂಚೆ ಕಚ್ಚೇರಿ ರೂಬರೂ ಮಾಡೀಲ್ದರ್.

ನೋಟಿಸ.

ಇದರಿಂದಸರ್ವರಿಗೂತಿಳಿಯಪಡಿಸುವದೇನಂದರೆ.

ಸನ್ ೧೮೮೯ನೇ ಏಪ್ರಿಲ್ ೧ನೇ ತಾರೀಖ್ ಲಾಗಾಯತು ಸನ್ ೧೮೯೦ನೇ ಮಾರ್ಚ್ ೩೧ನೇ ತಾರೀಖ್‌ವರಿವಿಗೆ, ಹೊಸೂರು ರಿಮೌಂಟ್ ಇಲಾಖೆಗೆ ಇದರಡಿ ನಮೂದ್ ಮಾಡಲ್ಪಡುವ ಜಿನಿಸುಗಳು ಬೇಕಾಗಿರುವದರಿಂದ ಅವುಗಳ ಸರಬರಾಯ್ ಬಗ್ಗೆ ಬರುವ ಟೆಂಡರ್ ಮಾಡಲ್ಪಟ್ಟ ದರಖಾಸ್ತುಗಳನ್ನು ರಿಮೌಂಟ್ ಡಿಪ್ಪೋ ಸೂಪರಿಂಟೆಂಡೆಂಟರವರು, ಸನ್ ೧೮೮೮ನೇ ಇಸವಿ ಡಿಸೆಂಬರ್ ೮ನೇ ಮಕಾರ್ಂ ಶನಿವಾರ ಮಧ್ಯಾಹ್ನ ೧೨ ಘಂಟೆಯ ವರಿವಿಗೆ ಬರಮಾಡಿಕೊಳ್ಳುವರು.

ಇದನ್ನು ಕುರಿತ ಜಾಸ್ತೀ ತಪಸೀಲ್ ತಿಳಿಯಬೇಕಾದವರು, ಸನ್ ೧೮೮೮ನೇ ಇಸವಿ ಅಕ್ಟೋಬರ್ ೩೧ನೇ ಮಕಾರ್ಂ ೮೩ನೇ ನಂಬರ್ ಫೋರ್ಟ್ ಸೇಂಟ್‌ಜಾರ್ಜ್ ಗೆಜೆಟಿನ ೨ನೇ ಭಾಗ, ೧೬೦೧ನೇ ಪುಟವನ್ನು ನೋಡಿ ತಿಳಿದುಕೊಳ್ಳತಕ್ಕದ್ದು.

ಹುರಳಿ.
ನೆಲ್ಲುಹುಲ್ಲು.
ರಾಗಿಹುಲ್ಲು.
ಹಸೀಹುಲ್ಲು.

JOHN EWING, COLONEL

Suptt, Reserve Remount Depot.

ರಿಮೌಂಟ್ ಡಿಪ್ಪೋ, ಹೊಸೂರು,
೫ನೇ ನವಂಬರ್, ೧೮೮೮.

ಆರ್ಯಸಭಾ ಪ್ರಕಟನೆ.

ಇದರಿಂದ ಸಮಸ್ತರಿಗೂ ಪ್ರಕಟಪಡಿಸುವದೇನಂದರೆ.

ಸನ್ ೧೮೮೮ನೇ ಇಸವಿ ನವಂಬರ್ ತಿಂಗಳ ೨೧ನೇ ತಾರೀಖಿಗೆ ಸರಿಯಾದ ಈ ಸರ್ವಧಾರಿನಾಮ ಸಂವತ್ಸರ ಕಾರ್ತಿಕ ಬಹುಳ ತೃತೀಯಾ ಬುಧವಾರ ಮೃಗಶಿರಾ ನಕ್ಷತ್ರ ಈಬುಧ ದಿನದ ಸಾಯಂಕಾಲ ೪ ಘಂಟೆಯ ಮೇಲೆ, ಬೆಂಗಳೂರು ಸಿದ್ದಿಕಟ್ಟೆಯಲ್ಲಿರುವ ಅಮಲ್‌ದಾರ್ ಮ॥ ರಾ॥ ಕೆ. ಶಾಮಯ್ಯಂಗಾರ್ಯರವರ ಸ್ವಗೃಹದೊಳು, ಮೇಲೆ ತಿಳಿಸಲ್ಪಟ್ಟ ಸಭೆಯ ಪರಿಷ್ಕೋಮಣೆಯಲ್ಲಿ, ಆರ್ಯ ಬಾಲಿಕಾ ಪಾಠಶಾಲಾ ಎಂಬ ಅಭಿಧಾನದಿಂ ಒಂದು ಪಾಠಶಾಲೆಯು ಸ್ಥಾಪಿಸಲ್ಪಡುವದಾಗಿ ಸ್ತ್ರೀ ವಿದ್ಯಾಭಿಮಾನಿಗಳಾದ ದೊಡ್ಡ ಮನುಷ್ಯರೆಲ್ಲರು ಆ ಕಾಲಕ್ಕೆ ಸರಿಯಾಗಿ ಅಲ್ಲಿಗೆ ದಯಮಾಡಿ ಸಭೆಯನ್ನಲಂಕರಿಸಬೇಕೆಂದು ಪ್ರಾರ್ಥಿಸುತ್ತೇವೆ.

(ರುಜು) ಎ. ಗೋವಿಂದಾಚಾರ್ಯ,
,, ಎಲ್. ಶ್ರೀನಿವಾಸಯ್ಯಂಗಾರ್,
ಆನರರಿ ಸೆಕ್ರೆಟರಿಗಳು
ಬೆಂಗಳೂರು, ೧೯ನೇ ನವಂಬರ್ ೧೮೮೮.

Bangalore City Municipality.

ಬೆಂಗಳೂರು ಸಿಟಿ ಮ್ಯುನಿಸಿಪಾಲಿಟಿ.

ಸನ್ ೧೮೮೮ನೇ ಇಸವಿ ನವಂಬರ್ ೨೪ನೇ ತಾರೀಖ್ ಶನಿವಾರ ಪ್ರಾತಃಕಾಲ ೭½ ಘಂಟೆಗೆ ಸಿಟಿ ಮ್ಯುನಿಸಿಪಲ್ ಕಮ್ಮಿಷನರುಗಳು ತಮ್ಮ ಆಫೀಸ್‌ನಲ್ಲಿ ಸಭೆ ಸೇರುವಾಗ ಅವರ ಆಲೋಚನೆಗೆ ತರಲ್ಪಡುವ ವಿಷಯಗಳ ಯಾದಾಸ್ತು.

೧. ಸನ್ ೧೮೮೮ನೇ ಇಸವಿ ಅಕ್ಟೋಬರ್ ತಿಂಗಳ ಬಾಬತು ಚಾಲ್ತೀ ನಗದು ಜಮಾಖರ್ಚು ಲೆಕ್ಕ ಮತ್ತು ಮರಣ ಲೆಕ್ಕಗಳು.

೨. ಬೆಂಗಳೂರು ಷಹರಿಗೆ ಲಾಂದ್ರಾ ಹಚ್ಚುವಬಗ್ಗೆ ಬರುವ ದರಖಾಸ್ತುಗಳ ವ್ಯವಸ್ಥೆ.

೩. ಸನ್ ೧೮೮೯—೯೦ನೇ ಇಸವಿ ಬಜೆಟ್ ಲೆಕ್ಕದಲ್ಲಿ ಸೇರಿಸಬೇಕಾದ ಹೊಸ ಕಾಮಗಾರಿಗಳ ಪಟ್ಟಿ.

೪. ಬಂಡಿ ಮೋಟುಗಳ ವಿಷಯದಲ್ಲಿ, ಸನ್ ೧೮೭೭ನೇ ಇಸವಿ ಡಿಸಂಬರ್ ೨೪ನೇ ಮಾ.೯೦ ೫೬೭೯—೫೫೧ನೇ ನಂಬರುಳ್ಳ ಗವರ್ನಮೆಂಟ್ ಪ್ರೊಸೀಡಿಂಗ್ಸ್.

೫. ಸನ್ ೧೮೮೮—೮೯ನೇ ಇಸವಿ ಬಾಬತು ಬಜೆಟ್ ಲೆಕ್ಕದಲ್ಲಿ ಕೊಡಲ್ಪಟ್ಟಿರುವದನ್ನು ಮರಳಿ ಉಪಯೋಗಿಸಿ ಕೊಳ್ಳತಕ್ಕಬಗ್ಗೆ ತಯಾರ್ ಮಾಡಲ್ಪಟ್ಟ ಪಟ್ಟಿ.

೬. ಕೋಟೆಯ ಬಾಬತು ಬಜೆಟಿನಲ್ಲಿ ದಾಖಲ್ಮಾಡಲ್ಪಟ್ಟ ಜಮಾ ಖರ್ಚು.

೭. ಚರ್ಮದಕೆಲಸದವರನ್ನೂ ಮಾದಿಗರನ್ನೂ ಹೊಸ ಸ್ಥಳಕ್ಕೆ ಸಾಗಿಸುವ ವಿಷಯ, ಮತ್ತು ಅದಕ್ಕೆ ಸಂಬಂಧಪಟ್ಟ ಕಾಗದ ಪತ್ರಗಳು.

೮. ಹೊಸ ಅಗ್ರಹಾರದ ಕೆರೆಗೆ ಅಡ್ಡವಾಗಿ ಭೂಮಿಯೊಳಗೆ ಒಂದು ಮೋರಿಯಂ ಕಟ್ಟಿ, ಈಗಿನಂತೆ ಅದರ ಕಶ್ಮಲಗಳು ಕೆರೆಯೊಳಗೆ ಬಿದ್ದು, ಅದರ ನೀರನ್ನು ಕೆಡಿಸದಂತೆ ಮಾಡಬೇಕಾದ್ದು.

೯. ಊರ ಹೊರಗಣಸ್ಥಳಗಳ ಮತ್ತು ಹೊಸದಾಗಿ ಸೇರಿಸಲ್ಪಟ್ಟ ಕೋಟೆಯ ರಸ್ತೆಗಳಿಗಾಗಿ ಜಾಸ್ತೀ ಮೊಬಲಗು ಬೇಕೆಂದು ಮೈಸೂರು ಸೂಪರಿಂಟೆಂಡಿಂಗ್ ಇಂಜನಿಯರಿಗೆ ಬರೆದ ಲೆಟರ್.

೧೦. ಮುಂದಿನ ವರುಷದ ಮಾರ್ಕೆಟ್ ವಿನೋದಕ್ಕೆ ಮಾಡಬೇಕಾದ ಏರ್ಪಾಡುಗಳು.

ಸಿಟಿ ಮ್ಯುನಿಸಿಪಲ್ ಆಫೀಸ್,
ಬೆಂಗಳೂರು.
೧೪ನೇ ನವಂಬರ್ ೧೮೮೮.

A. S. RAGHAVACHARLU,
Acting Vice-President,
City Municipal Commission.

ಬೆಂಗಳೂರು ಸಿಟಿ ಮ್ಯುನಿಸಿಪಾಲಿಟಿ.
ಇಸ್ತಿಹಾರ್‌ನಾಮೆ.

ಸನ್ ೧೮೮೯ನೇ ಇಸವಿ ಜನವರಿ ೧ನೇ ತಾರೀಖ್ ಲಾಗಾಯತು ೧೮೮೯ನೇ ಡಿಸಂಬರ್ ೩೧ನೇ ತಾರೀಖ್ ವರಿವಿಗೆ, ಬೆಂಗಳೂರು ಸಿಟಿಯಲ್ಲಿ ಸಿಲ್ಲರ್ ದೀಪಗಳು ಹಚ್ಚತಕ್ಕಬಗ್ಗೆ ಬರತಕ್ಕ ಸೀಲ್ ಮಾಡಲ್ಪಟ್ಟ ದರಖಾಸ್ತುಗಳನ್ನು ಸನ್ ೧೮೮೮ನೇ ಇಸವಿ ನವಂಬರ್ ೨೩ನೇ ತಾರೀಖಿನ ವರಿವಿಗೆ ಇದರಡಿ ರುಜು ಮಾಡಿರುವವರು ಬರಮಾಡಿಕೊಳ್ಳುವರು.

೨. ಆದಿತ್ಯವಾರ ಮತ್ತು ರಜಾದಿನಗಳು ವಿನಾ ಇತರ ದಿನಗಳಲ್ಲಿ ಹಗಲು ೧೧ ಘಂಟೆಯಲಾಗಾಯತು ೪ ಘಂಟೆಯೊಳಗಾಗಿ ಸಿಟಿ ಮ್ಯುನಿಸಿಪಲ್ ಆಫೀಸಿಗೆ ಬಂದು ಅದರ ತಪಸೀಲ್ ತಿಳಿದುಕೊಳ್ಳಬಹುದು. "ಬೆಂಗಳೂರು ಸಿಟಿಯಲ್ಲಿ ದೀಪಗಳು ಹಚ್ಚತಕ್ಕ ಬಗ್ಗೆ ಕೊಡಲ್ಪಟ್ಟ ದರಖಾಸ್ತೆಂದು ಲಕೋಟೆಮೇಲೆ ಬರೆಯತಕ್ಕದ್ದು.

೩. ದರಖಾಸ್ತುಗಳ ಸಂಗಡ ಠೇವಣಾತಿ ಬಗ್ಗೆ ೨೦೦ ರೂಪಾಯಿಗಳು ನಗದು ಅಥವಾ ಅದಕ್ಕೆ ತಕ್ಕಷ್ಟು ಕರೆನ್ಸಿನೋಟು ಕಳುಹಿಸಿದ ಹೊರತು ಯಾವ ದರಖಾಸ್ತೂ ಅಂಗೀಕರಿಸಲ್ಪಡಲಾರದು.

೪. ಯಾರ ದರಖಾಸ್ತು ಅಂಗೀಕರಿಸಲ್ಪಡುತ್ತದೆಯೋ ಅಂಥಾ ದರಖಾಸ್ತುದಾರನಿಂದ ಪಾಜಮ್ಮಾಡಲ್ಪಡುವ ಠೇವಣಾತಿಯು ನಿಲ್ಲಿಸಿಕೊಳ್ಳಲ್ಪಡುವದು. ಅವನ ದರಖಾಸ್ತು ಮಂಜೂರ್ಮಾಡಲ್ಪಟ್ಟ ಸಂಗತಿ ಅವನಿಗೆ ತಿಳಿಸಲ್ಪಟ್ಟ ಒಂದು ವಾರದೊಳಗಾಗಿ ಆವಶ್ಯಕವಾಗಿ ಅವನು ಬರೆದು ಕೊಡಬೇಕಾದ ಕಂಟ್ರಾಕ್ಟು ಮುಚ್ಚಳಿಕೆಯನ್ನು ಬರೆದು ಕೊಡುವದಕ್ಕೆ ತಪ್ಪಿಹೋಗುವನಾದರೆ ಅವನ ಠೇವಣಾತಿ ಮೊಬಲಗು ವಾಪಸ್ ಕೊಡಲ್ಪಡಲಾರದು. ಯಾವ ದರಖಾಸ್ತನ್ನಾದರೂ ಸಬಬ್ ನಮೂದಿಸದೆ ತಿರಸ್ಕರಿಸುವ ಸ್ವಾತಂತ್ರ್ಯವನ್ನು ಬೋರ್ಡಿನವರು ಉಳಿಸಿಕೊಂಡಿರುತ್ತಾರೆ.

ಸಿಟಿ ಮ್ಯುನಿಸಿಪಲ್ ಆಫೀಸ್
ಬೆಂಗಳೂರು.
೬ನೇ ನವಂಬರ್.

A. S. RAGHAVACHARLU,
Ag. Vice President,
City Municipal Commission.

ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA.

MONDAY, NOVEMBER 19, 1888.
೧೮೮೮ನೇ ನವಂಬರ್ ತಾ|| ೧೯ನೇ ಸೋಮವಾರ.

A REPLY.

ಮಾಹೇ ಮಜಕೂರ್ ೧೫ನೇ ತಾರೀಖಿನ ಒಳದೇಶದ ವೃತ್ತಾಂತಪತ್ರಿಕೆಯು ಗತವಾರದಲ್ಲಿ ನಾವು ಪ್ರಕಟಿಸಿದ್ದ ಕೆಲವು ಪಕ್ಷೀಯ ಪ್ರವಾಸಂತಗಳ ಪೈಕಿ ಒಂದೆರಡಕ್ಕೆ ಮಾತ್ರ ಉತ್ತರಕೊಟ್ಟು, ನಿಜವನ್ನು ಮರೆಮಾಚಿ ಅನ್ಯಥಾ ತಿಳಿಸಿದೆವೆಂಬ ಅನೃತ ದೋಷಕ್ಕೆ ನಮ್ಮನ್ನು ಗುರಿಮಾಡಿ ನಮಗೆ ಅಂತರಂಗಕುಪ್ತಿ ಇಲ್ಲವೆಂದು ಪ್ರಕಟಿಸಿದಂತಾ ಲೋಕಾನುಗ್ರಹಕಾರಕವಾದ ಸದರೀ ಪತ್ರಿಕೆಯ ವಿಷಯದಲ್ಲಿ ನಾವು ಬಹಳ ಕೃತಜ್ಞರಾಗಿರುವೆವು. ನಮ್ಮ "ಅಬದ್ಧ ಪರ್ತಮಾನಗಳನ್ನು" ತಿದ್ದಿ ಸನ್ಮಾರ್ಗವನ್ನು ತೋರಿಸಿದ ಮೇಲೆಕುವ ಪತ್ರಿಕೆಗೆ ಉತ್ತರರೂಪವಾದ ನಮ್ಮ ವಾಕ್ಯಗಳು ಕಟುತರವಾಗಿ ಕಂಡುಬಂದಬಗ್ಗೆ ನಾವು ಬಹಳ ಆಶ್ಚರ್ಯಪಡುತ್ತೇವೆ. ಪರುಶು ನಮ್ಮ ಅಭ್ಯಂತರಗಳಿಗೆ ನಿಮಿತ್ತಕಗಳಾದವು ಯಾವುವೆಂದರೆ:—ಮಿಷನರಿಗಳು ಮುದ್ದುಲಕ್ಷ್ಮಿಯನ್ನು ಕರೆದುಕೊಂಡುಹೋಗಿ ತಮ್ಮ ಮನೆಯಲ್ಲಿಟ್ಟುಕೊಂಡಿದ್ದ ಕಾಲದಲ್ಲಿ ಅವಳ ತಾಯಿಯು ನೋಡುವದಕ್ಕೆ ಹೋದಾಗ ಆಕೆಗೆ ಅವಕಾಶ ಕೊಡಲ್ಪಡಲಿಲ್ಲವೆಂದು ನಾವು ಬರೆದಿದ್ದದ್ದು ಶುದ್ಧ ಕಲ್ಪನೆಯಾಗಿದೆಯೇ ಹೊರತು ಅನ್ಯಥಾ ಅಲ್ಲವೆಂತಲೂ, ತಂದೆಯಾಗಲಿ, ಅಥವಾ ಇತರರಾಗಲಿ, ಇದನ್ನು ದೃಢಪಡಿಸುವ ಅಂಶದಲ್ಲಿ ಸ್ವಲ್ಪವಾದರೂ ರುಜುವಾತನ್ನು ಕೊಡಲಾರರೆಂತಲೂ ವೃ. ಪತ್ರಿಕೆಯು ಕಂಠೋಕ್ತವಾಗಿ ನಿಷೇಧಿಸುತಿದೆ. ಇಂತಾ ನಿಷೇಧಕ್ಕೆ ಸದರೀ ಪತ್ರಿಕೆಗೆ ಎಷ್ಟರಮಟ್ಟಿಗೆ ಆಧಾರವಿರುತಿದೆಯೋ ನಾವು ಸೂಚಿಸಿದ್ದಕ್ಕೂ ಅಷ್ಟರ ಆಧಾರವಿಲ್ಲದೆ ಹೋಗಲಿಲ್ಲವು. ಮುದ್ದುಲಕ್ಷ್ಮಿಯನ್ನು ಅವಳ ತಾಯಿತಂದೆಗಳ ಇಷ್ಟಕ್ಕೆ ವಿರುದ್ಧವಾಗಿ ಮಿಷನರಿಗಳು ತಮ್ಮ ಮನೆಯಲ್ಲಿ ಅದ್ಯಾಪಿ ಬಂದೋಬಸ್ತು ಮಾಡಿಟ್ಟುಕೊಂಡಿರುವದೂ, ಅವಳ ಜನಗಳ್ಯಾರಾದರೂ ಬಂದರೆ ಅವರಂ ಅತಿಕ್ರಮ ಪ್ರವೇಶಕ್ಕಾಗಿ ಚಾರ್ಜ್ ಮಾಡುವಂತೆ ಬೆದರಿಸುತಲಿರುವದೂ ನಮ್ಮ ಮಾತುಗಳ ಯಥಾರ್ಥ್ಯವನ್ನು ಜನಗಳಿಗೆ ಹೊರಪಡಿಸದೆ ಇರುವದಿಲ್ಲವು. ಈವಿವಾದವು ಒಬ್ಬ ನ್ಯಾಯಾಧಿಪತಿಯಮುಂದೆ ತರಲ್ಪಡುವಾಗ್ಯೆ ಅದರ ಯಾಥಾರ್ಥ್ಯವು |ಸ್ವತಯೇವ ಹೊರಪಟ್ಟು ಮಿಷನರಿಗಳವರ್ತನಗಳು ಈರೂಪವಾದವೆಂದು ವ್ಯಕ್ತವಾಗಬಹುದು. ಮುದ್ದುಲಕ್ಷ್ಮಿಯ ಕಸೂಬಿಗೆ ಜಾಸ್ತಿ ಬೆಲೆಗಳಂಕೊಟ್ಟು ಮರುಳು ಗೊಳಿಸುತಬಂದರೆಂಬ ನಮ್ಮ ಮಾತುಗಳನ್ನು "ಕ್ಷುಲ್ಲಕದೋಷಾರೋಪಣ" ಎಂದು ಸದರೀ ಪತ್ರಿಕೆ ಅಧಿಕ್ಷೇಪಮಾಡಿ ಮುದ್ದುಲಕ್ಷ್ಮಿಯು ಯಾವ ಕಸೂಬೀಕೆಲಸವನ್ನೂ ದುಡ್ಡಿನ ಆಶೆಗಾಗಿ ಮಾಡಿರುವದಿಲ್ಲವೆಂತಲೂ, ಮಿಷನರಿಗಳಾಗಲಿ ಇತರರಾಗಲಿ ಆಕೆಯ ಕಸೂಬೀ ಕೆಲಸಗಳಿಗೆ ಯಾವಾಗಲು ಯೇನೂ ಕೊಟ್ಟಿಲ್ಲವೆಂತಲೂ ನುಡಿದು ಅದಕ್ಕೆ ಆಧಾರವಾಗಿ ರೆವರೆಂಡ್ ಪಿಕ್ಸ್‌ಟ್ ಯೆಂಬವರ ಮಾತುಗಳನ್ನು ಪ್ರಮಾಣವಾಗಿ ಉದಹರಿಸುತಿದೆ. ರೆವರೆಂಡ್ ಪಿಕ್ಸ್‌ಟಯವರ ಮಾತುಗಳಲ್ಲಿ ವೃತ್ತಾಂತ ಪತ್ರಿಕೆಗೆ ಯೆಷ್ಟರ ಪ್ರಾಮಾಣ್ಯಜ್ಞಾನ ಹುಟ್ಟಿರುತಿದೆಯೋ ಮುದ್ದು ಲಕ್ಷ್ಮಿಯ ತಾಯಿ ತಂದೆಗಳ ಮಾತುಗಳಲ್ಲಿಯೂ ನಮಗೆ ಅಷ್ಟರ ನಂಬಿಕೆಯುಂಟಾಗಿರುತಿದೆ. ರೆವರೆಂಡಯವರ ಕೈಫೀಯತ್ತಿಗಿಂತಲೂ ಸದರೀ ತಾಯಿತಂದೆಗಳ ಮಾತುಗಳಿಗೇ ನಿಷ್ಪಕ್ಷಪಾತಿಗಳಾದವರೆಲ್ಲರೂ ವಿಶೇಷ ಅವಧಾನ ಕೊಡಬೇಕಾಗಿರುತಿದೆ. ಅದು ಹ್ಯಾಗೆಂದರೆ,— ಮುದ್ದುಲಕ್ಷ್ಮಿಗೆ ಮೋಕ್ಷಮಾರ್ಗಪ್ರವರ್ತಕರಾಗಿ ಆಕೆಗೆ ಜ್ಞಾನಸ್ನಾನವಂ ಮಾಡಿಸಿ ಆಕೆಯ ವೃತ್ತಾಂತಗಳನ್ನೆಲ್ಲ ವಿಚಾರಿಸಿ ಫಲಾಪೆ ಕೊಟ್ಟವರು ರೆವರೆಂಡ್ ಪಿಕ್ಸ್‌ಟಯವರೇ ಎಂಬದಾಗಿ ಅವರು ಬರೆದಿರುವ ಕಾಗದದಿಂದಲೇ ಸ್ಪಷ್ಟವಾಗುವದರಿಂದಲೂ, ಕ್ರಿಸ್ತದವರನ್ನೆಲ್ಲ ಮತಭ್ರಷ್ಟರನ್ನಾಗಿ ಮಾಡಿ ಕ್ರಿಸ್ತುಮತವನ್ನು ಯಾವ ವಿಧದಿಂದಲಾದರೂ ಅಭಿವೃದ್ಧಿ ಪಡಿಸುವದಕ್ಕಾಗಿಯೇ ಅವರಿಲ್ಲಿಗೆ ಕಳುಹಿಸಲ್ಪಟ್ಟಿರುವದರಿಂದಲೂ, ಅವರು ತಮ್ಮ ಕರ್ತವ್ಯವನ್ನು ಮಾಡದಿದ್ದರೆ ಅವರಿಗೆ ಬರುವ ಸಂಬಳ ಬರುವದೆಂಬ ಭೀತಿಯೊಂದರ ಅವರು ತಪ್ಪ್ರಯುಕ್ತದಲ್ಲಿಯೇ ಅನುರಕ್ತರಾಗಿರುವದರಿಂದಲೂ, ಇಂತವರು ತಮ್ಮ ಬೋಧನೆಗಾಗಿ ಹೇಳಿರುವ ಮಾತುಗಳನ್ನು ನಂಬಬಹುದೋ ಅಲ್ಲದೆ ಸಕಲವಿಧ ಶುಭನಾಶ್ರಯವಾದ ಮತ್ತು ಪುತ್ರಿಯ ವಿಯೋಗದಿಂದ ಅಂದುಮೊದಲುತಲೆಬಡಿದುಕೊಳ್ಳುತ್ತಿರುವ ಆ ಮುದಿಗಿಯ ತಾಯಿ ತಂದೆಗಳಮಾತುಗಳಂ ನಂಬಬಹುದೋ ವಿವೇಕಿಗಳೇ ಆಲೋಚಿಸಬಹುದು. ಈ ಸಹ ವಿಚಾರಣೆ ಕಾಲದಲ್ಲಿ ನ್ಯಾಯಾಧಿಪರ ಪರಿಶೀಲನೆಗೆ ವಿಷಯವಾಗದೆ ಹೋಗಲಾರದೆಂದು ವೇಳುತ್ತೇವೆ. "ಸರಕಾರದವರ ಉಪ್ಪನ್ನು ತಿನ್ನುತಾವರು ಯಾರೋ ಅವರಿಗೆ ಸರ್ಕಾರದ ವಿಚಾರಗಳನ್ನು ಆಕ್ಷೇಪಿಸುವ ಹಕ್ಕಿರುವದಿಲ್ಲ" ವೆಂದು ವೃತ್ತಾಂತಪತ್ರಿಕೆಯು ಭಾವಿಸುತಿದೆ. ಮಿಷನ್ ಪಾಠಶಾಲೆಗಳಿಗೆ ಕೇವಲ ವಿದ್ಯಾಭಿವೃದ್ಧಿಗಾಗಿ ಸರ್ಕಾರದವರು ದ್ರವ್ಯ ಸಹಾಯ ಮಾಡುತ್ತಾರೆಯೇ ಹೊರತು ಅವರ ಪ್ರಜೆಗಳನ್ನು ಜಾತಿಹೀನರನ್ನಾಗಿ ಮಾಡುವದಕ್ಕಾಗಿ ಕೊಡುವದಿಲ್ಲವಷ್ಟೆ. ಹೀಗಿದ್ದಾಗ್ಯೂ ಅವರ ಸಹಾಯವು ಪಡೆದು ಅವರ ಉಪ್ಪನ್ನುತಿಂದು ಅವರ ಪ್ರಜೆಗಳಿಗೆ ದ್ರೋಹವನ್ನು ಎಣಿಸಿ ಅವರ ಜಾತಿಮತಾಚಾರಗಳನ್ನು ದೂಷಿಸಲಿಕ್ಕೆ ಯಾವಾಗ ಮಿಷನರಿಗಳಿಗೆ ಅಧಿಕಾರ ಪ್ರಾಪ್ತವಾಯಿತೋ ಆಗಲೇ ಸರ್ಕಾರ್ ಪೋಷಣೆಯುಳ್ಳತಕ್ಕ ಮಿಷನ್ ಪಾಠಶಾಲೆಗಳಿಂದುಂಟಾಗುವ ಅನರ್ಥಗಳನ್ನೂ ಅವುಗಳಿಗೆ ನಿಮಿತ್ತಕರಾದವರ ವರ್ತನಗಳನ್ನೂ ಖಂಡಿಸಿ ಅವುಗಳಿಗೆ ತಕ್ಕ ಪ್ರತಿಕ್ರಿಯೆಯಂ ಮಾಡಲಿಕ್ಕೆ ಸರ್ಕಾರ್ ಉದ್ಯೋಗಸ್ಥರು ಸಂಪೂರ್ಣಸ್ವಾತಂತ್ರ್ಯವುಳ್ಳವರಾಗಿರುತ್ತಾರೆ. ಪ್ರತ್ಯೇಕ ಪಾಠಶಾಲೆಯನ್ನು ಇಡತಕ್ಕ ವಿಷಯದಲ್ಲಿ ನಡೆದ ಸಭೆಗಳಿಗೆ ವೆ|| ರಾಮಚಂದ್ರಯ್ಯರವರು ಮೊದಲಾದವರು ಮುಖ್ಯ ಕಾರಣಭೂತರೆಂದು ವೃತ್ತಾಂತ ಪತ್ರಿಕೆಯು ಅಸೂಯೆ ಪಡುತಿದೆ. ಸಿವಿಲ್ ವ ಮಿಲಿಟರಿ ಸ್ಟೇಷನ್‌ನಲ್ಲಿ ನಡೆದಸಭೆಗೆ ಮೆ. ಎ. ನಾರಾಯಣಸ್ವಾಮಿ ಮೊದಲಿಯಾರ್ರವರೂ ಪೇಟೆಯಲ್ಲಿ ನಡೆದ ಸಭೆಗೆ ಪ್ರಮುಖರಾದ ಕೆಲವರು ಅಡ್ವೋಕೇಟುವಗೈರೇರೂ ಮುಖ್ಯಪ್ರವರ್ತಕರಾಗಿದ್ದ ವಿಷಯವು ಪಕ್ಷಪಾತಪ್ರೇರಿತವಾದ ವೃತ್ತಾಂತ ಪತ್ರಿಕೆಗೆ ಗೋಚರವಾಗದೆ ಹೋದದಕ್ಕಾಗಿ ನಾವು ಬಹಳ ಆಶ್ಚರ್ಯಪಡುತ್ತೇವೆ. ಒಬ್ಬ ಲಾಯರು ತಮ್ಮಮಗಳನ್ನು ಮೆ|| ರಾಮಚಂದ್ರಯ್ಯನವರ ದಾಕ್ಷಿಣ್ಯಕ್ಕಾಗಿ ಮಿಷನ್‌ಸ್ಕೂಲಿನಿಂದ ವಾಪಸ್ ಕರೆಯಿಸಿಕೊಂಡು, ಈಗ ಹೆಣ್ಣುಮಕ್ಕಳನ್ನು ಮಿಷನ್ ಪಾಠಶಾಲೆಗೆ ಕಳುಹಿಸಿಕೊಡುವದು ಬಹಳ ಕ್ಷೇಮೆಂದು ಬೋಧಿಸುತ್ತಾರೆಂಬದಾಗಿ ಸದರೀ ಪತ್ರಿಕೆ ನಿಂದಿಸುತಿದೆ. ಇತರ ವಿಷಯಗಳಲ್ಲಿ ಅನ್ಯರ ದಾಕ್ಷಿಣ್ಯವು ಕದಾಚಿತ್ ಪರಿಭಾವನೀಯವಾದದ್ದಾಗಿದ್ದರೂ ಮತ ವಿಷಯಗಳಲ್ಲಿ ಅದೇನೂ ಕಾರ್ಯಕಾರಿಯಾಗಲಾರದು. ಮಹಾ ಮೆಸ್ಸರ್ಸ್ ರಾಮಚಂದ್ರಯ್ಯರವರಂತೆ ಅಧಿಕಾರ ಗೌರವಗಳುಳ್ಳ ಮತ್ತೊಬ್ಬ ನ್ಯಾಯಾಧಿಪತಿಯು, ಕ್ರಿಶ್ಚಿಯನ್ ಮತವು ಸರ್ವೋತ್ಕೃಷ್ಟವಾದದ್ದೆಂದು ಹೇಳಿ ಅದಕ್ಕೆ ನಿಮ್ಮ ಹೆಣ್ಣು ಮಕ್ಕಳನ್ನು ಕಳುಹಿಸಿದರೆ ನನಗೆ ಬಹಳ ತೃಪ್ತಿಕರವಾಗಿರುವದೆಂದು ಹೇಳಿಸುವಪಕ್ಷಕ್ಕೆ ಸದರೀ ಲಾಯರ್‌ಗಳು ಅವರ ದಾಕ್ಷಿಣ್ಯಕ್ಕೊಳಪಟ್ಟು, ತಮ್ಮ ಹೆಣ್ಣು ಮಕ್ಕಳು ಕ್ರಿಶ್ಚಿಯನ್ ಮತದಲ್ಲಿ ಸೇರಿರಿಕ್ಕೆ ಸಮ್ಮತಿಸುವರೆಂಬದು ಅಸಹಜವಾದದ್ದಾಗಿರುತಿದೆ. ಅದೇರೀತಿ ಪ್ರಕೃತ ಸಂದರ್ಭದಲ್ಲಿ ವೃತ್ತಾಂತಪತ್ರಿಕೆ ತಿಳಿಸತಕ್ಕ ಲಾಯರು ತಮಗೆ ಉತ್ತರೋತ್ತರ ಪ್ರಾಪ್ತವಾಗಬಹುದಾದ ಅನರ್ಥಗಳಂ ಮಿಷನರಿಗಳ ವರ್ತನವುಂ ಮುಂದರಿತು ತಮ್ಮ ಮಗಳನ್ನು ಮಿಷನ್‌ಸ್ಕೂಲಿನಿಂದ ವಾಪಸ್ ಕರೆಯಿಸಿಕೊಂಡರ ಬಹುದೇ ಹೊರತು ಮೆಸ್ಸರ್ ರಾಮಚಂದ್ರಯ್ಯರವರ ಪ್ರೋತ್ಸಾಹದಿಂದ ಕರೆಯಿಸಿಕೊಂಡಂತೆ ಹೇಳುವದು ಕೇವಲ ನಿರಾಧಾರವಾದ್ದಾಗಿರುತಿದೆ. ಮಹಾವರಗಳ ಕಟ್ಟಿನಾಶಿಗೆ ಜಾತಿ ಮತಗಳನ್ನು ಗೌರವಿಸತಕ್ಕ ಪ್ರತಿ ಮನುಷ್ಯರೂ ಬದ್ಧನಾಗಿರತಕ್ಕದ್ದರಿಂದ ಅಕ್ಷೇಪ ಪರರೆಲ್ಲರೂ ರೀತಿ ಮಾಡಿದ ನಿರ್ಣಯಕ್ಕೆ ಸದರೀ ಲಾಯರೂ ಬದ್ಧರಾಗಬೇಕಾಯಿತು. ಮುಖ್ಯವಾಗಿ ಪ್ರಕೃತಕ್ಕೆ ಈ ಅಂಶಗಳೆಲ್ಲವೂ ನ್ಯಾಯಸ್ಥಾನದಲ್ಲಿ ಕ್ರಮವಾಗಿ ನಿರ್ಣಯಿಸಲ್ಪಡುವಂತೆ ಇರುವಾಗ ನಮ್ಮ ವಿಚಾರವು ಪ್ರಯೋಜನವಿಲ್ಲವೆಂದು ಭಾವಿಸಿ ಪ್ರಕೃತ ವಿಷಯವನ್ನಿಲ್ಲಿಗೆ ಬಿಟ್ಟಿರುವೆವು.

GRIEVANCES IN MISSION SCHOOLS

ಮಿಷನರಿಗಳ ಪ್ರಾಬಲ್ಯವು ಅಧಿಕವಾಗಿರುವ ಪ್ರದೇಶಗಳಲ್ಲೆಲ್ಲ ಅವರ ಮೂಲಕ ನೇಟಿವ್‌ಗಳಿಗೆ ಯಾವಪಾರೆಂಬದುಬಗೆ ನಿರ್ಬಂಧ ಪ್ರಾಪ್ತವಾಗದೆ ಇರುವದಿಲ್ಲವು. ಅವರಿಂದ ನಿರ್ಮಿತಗಳಾದ ಪಾಠಶಾಲೆಗಳು ಬರುತ ಬರುತ ಜನಗಳಿಗೆ ಪ್ರಯೋಜನಕಾರಿಗಳಾಗಲಿಕ್ಕೆ ಬದಲು ನಿಕ್ಷಾಪ್ಪರುದ್ಧ ಮಾರ್ಗವನ್ನವಲಂಬಿಸುತ ಬರುತಿವೆ. ಅಲ್ಲಿಗೆ ಹೋಗತಕ್ಕ ವಿದ್ಯಾರ್ಥಿಗಳಿಗೆ ನೆಮ್ಮದಿಯೆಂಬದು ಸಂಪೂರ್ಣವಾಗಿ ತಪ್ಪುತ ಬಂತು. ಸ್ವಕೀಯ ವ್ಯಾಪಾರಗಳಲ್ಲಿ ಸಹ ಮಿಷನರಿಗಳ ನಿರ್ಬಂಧವು ಜಾಸ್ತಿಯಾಗುತ ಬರುತಲಿದೆ. ಇವುಗಳಿಗೆ ನಮ್ಮವರ ಅಜ್ಞಾನವನ್ನು ಕಾರಣವನ್ನಾಗಿ ನುಡಿಯಬೇಕಾಗಿದೆಯೇ ಹೊರತು ಮಿಷನರಿಗಳನ್ನಾಕ್ಷೇಪಿಸಿ ಪ್ರಯೋಜನವಿಲ್ಲವು. ಹಿಂದೂ ಜಾತಿ ಮತಾಚಾರಗಳಿಗೆ ವಿರುದ್ಧವಾಗಿ ವರ್ತಿಸುವ ಮಿಷನ್ ಪಾಠಶಾಲೆಗಳಿಗೆ ನೇಟಿವ್‌ಗಳೆಲ್ಲರೂ ಐಕಮತ್ಯದೊಡನೆ ಹೋಗುವದಂ ನಿಲ್ಲಿಸುವತನಕ ಮಿಷನರಿಗಳು ತಮ್ಮ ಕರ್ತವ್ಯವಂ ಮಾಡದೆ ಬಿಡಲಾರರು. ಅದವರಿಂದ ನಮ್ಮ ಕೆಲಸವನ್ನು ಲೋಪವಿಲ್ಲದೆ ಮಾಡಿದರೆ ತನ್ಮೂಲಕ ಮಿಷನರಿಗಳ ಪ್ರಯತ್ನವು ಕ್ರಮೇಣ ಭಗ್ನವಾಗುವದರಲ್ಲೇನೂ ಸಂಶಯವಿಲ್ಲವು. ಇದಕ್ಕೆ ನಿದರ್ಶನವಾಗಿ ಒಂದು ಅಂಶವನ್ನು ಈ ಪತ್ರಿಕೆಯ ನ್ನೋದುವವರ ತಿಳುವಳಿಕೆಯ ಬಗ್ಗೆ ಇದರಡಿ ಪ್ರಕಟಿಸುವದೇನೆಂದರೆ:—ಮಧುರೆಯಲ್ಲಿ ಅಮೆರಿಕನ್ ಮಿಷನರಿಗಳಿಂದ ಸ್ಥಾಪಿಸಲ್ಪಟ್ಟಿರುವ ಹೈಸ್ಕೂಲೊಂದು ಈಗ್ಯೆ ಕೆಲವುಕಾಲದವೊದಲು ನೆಲಗೊಂಡು ನಡೆದು ಬರುತಲಿದೆ. ಈ ಪಾಠಶಾಲೆಗೆ ಇದುವರಿವಿಗೆ ಸ್ವಂತ ಕಟ್ಟಡ ವಿಲ್ಲದೆ ಇದ್ದದರಿಂದ ಇದೊಂದು ಬಾಡಿಗೆ ಮನೆಯಲ್ಲಿರುತಲಿತ್ತು. ಈಗ ಸದರೀ ಪಾಠಶಾಲೆಗಾಗಿ ಮಿಷನ್ ಸಂಘದವರು ಹೊಸದಾಗಿ ಒಂದು ಕಟ್ಟಡವಂ ಕಟ್ಟಿಸಿದ್ದರಿಂದ ಕಳೆದ ತಿಂಗಳ ೨೪ನೇ ತಾರೀಖಿನಲ್ಲಿ ಪಾಠಶಾಲೆಯು ಹಿಂದೆ ಇದ್ದ ಸ್ಥಳದಿಂದ ಅದಕ್ಕೆ ವರ್ಗ ಮಾಡಲ್ಪಟ್ಟಿತು. ಅದಕ್ಕೆ ಸೇರಿದಂತೆ ಕಟ್ಟಲ್ಪಟ್ಟಿರುವ ಒಂದು ಸಾಧವು ಸಾರ್ಥಕವಾಗುವಂತೆ ಸದರೀ ಸ್ಕೂಲ್ ಮುಖ್ಯಾಧಿ

ಕಾರಿಗಳು ಅದರಲ್ಲಿ ಪ್ರತಿನಿತ್ಯ ಯೆರಡು ವೇಳೆ ದುಲ್ಲಿಯೂ ಪ್ರಾರ್ಥನೆ ಮಾಡಲಾರಂಭಿಸಿ ಅಲ್ಲಿ ಹಾವು ಮಾಡುವ ಪ್ರೇಯರ್ ಕಾಲದಲ್ಲಿ ಉಪಾಧ್ಯಾಯರುಗಳೆಲ್ಲರೂ ತಮ್ಮ ಬಾಲಕರೊಡನೆ ಹಾಜರಾಗಿ ನಿಂತಿರಬೇಕೆಂದು ಹುಕುಂ ಮಾಡಿದರು ಟೀಚರ್‌ಗಳು ವಿಧಿ ಇಲ್ಲದೆ ಸದರೀ ಹುಕುಮಿಗೆ ಬದ್ಧರಾದಾಗ್ಯೂ ವಿದ್ಯಾರ್ಥಿಗಳು ಹುದ್ಧಂಗ ಅದಕ್ಕೆ ಒಡಂಬಡಲಿಲ್ಲವು. ಆದರಮೇಲೆ ನೇಟಿವ್ ಕ್ರಿಶ್ಚಿಯನ್ ಹೆಡ್‌ಮಾಸ್ಟರಾದ ಮೇಥಾಮಸ್ ಎಂಬವರು ಈ ಅಂಶವನ್ನು ಸ್ಕೂಲ್ ಮ್ಯಾನೇಜರಿಗೆ ತಿಳಿಯಪಡಿಸಲು ಅವರು ಸ್ವತಃ ಬಂದು ವಿದ್ಯಾರ್ಥಿಗಳನ್ನು ಎಷಳವಾಗಿ ಸಮಾಧಾನ ಮಾಡಿದರು. ಪರಂತು ಅನರ್ಬರ ಮ್ಯಾನೇಜರ ಮಾತುಗಳನ್ನು ಲಕ್ಷ್ಯದೊಳಕವೆ ಹೋದರು. ತರುವಾಯ ಅಲ್ಲಿನ ಟೀಚರ್‌ಗಳಲ್ಲಿ ಬ್ಬರಾದ ಮೆ|| ವೆಂಕಟಾಮಯ್ಯಂಗಾರ್‍ಯೆಂಬವರಿಂದಲೂ ಹುಡುಗರಿಗೆ ಬಹಳವಾಗಿ ಹೇಳಿಸಿದರು. ಕಡೆಗೆ ಯೆಲ್ಲವೂ ನಿಷ್ಪ್ರಯೋಜಕವಾದದ್ದರಿಂದ ಹೆಡ್‌ಮಾಸ್ಟರು ೩ನೇ ತಾರೀಖ್ ಮಂಗಳವಾರದವರೆ ಬಂದು ಸ್ಕೂಲಿಗೆ ಸಂಬಂಧದ ಪ್ರಸ್ಯಾಯ ನಿಬಂಧನಗಳಗೆಲ್ಲ ನಾವು ಬದ್ಧರಾಗುತ್ತೇವೆಂಬ ಕರಾರನ್ನೂ ಬರಸಿ ಒಂದು ನೋಟಿಸ್ ಬರೆದು ಅದಕ್ಕೆ ಪ್ರತಿ ವಿದ್ಯಾರ್ಥಿಯೂ ರುಜು ಮಾಡಬೇಕೆಂತಲೂ, ಹಾಗೆ ಮಾಡದವರು ಸ್ಕೂಲಿನಿಂದ ವಜಾ ಮಾಡಲ್ಪಡುವರೆಂತಲೂ ಬೆದರಿಸಿದರು. ಅದಕ್ಕೆ ಅಂಜಿ ಕೆಲವರು ಮಾತ್ರ ರುಜು ಹಾಕಿ ಪರಲ್ಲವೆ ಮಿಕ್ಕವರೆಲ್ಲರೂ ಬಹಿಷ್ಕಾರವನ್ನು ಮಾಡಿಕೊಳ್ಳುವುದೆಂಬದಾಗಿ ಯೋಚಿಸಿ ಬಿಟ್ಟರು. ಮೊರನೆಯವನ ರುಜು ಮಾಡಿದ ಹಾಗೆ ಗರಾಕೂಡ ತಾವು ರುಜು ಮಾಡಿದ್ದು ಮನಃಪೂರ್ವಕವಾದ್ದಲ್ಲವೆಂದು ನುಡಿದು ಬಗ್ಗಬ್ಯಾಗಿ ಸ್ಕೂಲಿಗೆ ಬಾರದೆ ನಿಂತುಹೋದರು. ಅನಂತರ ಡೀನ್‌ಗಳಿಗೆ ಪ್ರತ್ಯೇಕವಾಗಿ ಬುಧವಾರದ ವೇಳೆ ಭಾನುವಾರದ ನಡುವೆ ಸ್ಕೂಲಿಗೆ ರಜಾ ಕೊಡಲ್ಪಟ್ಟಿತು. ಇಷ್ಟರೊಳಗಾದರೂ ಮೇಲೆ ಕಂಡ ನೋಟಿಸಿಗೆ ರುಜು ಮಾಡದ ಪಕ್ಷಕ್ಕೆ ಅಂಥವರಿಗೆಲ್ಲ ಒಂದೊಂದು ರೂಪಾಯಿ ಜುಲ್ಮಾನೆ ಹಾಕುವಂತೆ ಹೆಡ್‌ಮ್ಯಾಸ್ಟರ್ ಹೇಳಿದರು. ಅದನ್ನು ಹುಡುಗರು ಲಕ್ಷ್ಯಮಾಡದೆ ಎಲ್ಲರೂ ಸುಕೇತವಾಡಿಕೆಯಂದು ನಿಂತುಹೋಗಿದ್ದು ಆತೆಯೂ, ಇವರೆಲ್ಲರಿಗಾಗಿ ತಾಯಿತಂದೆಗಳು ಪ್ರತ್ಯೇಕ ಸ್ಕೂಲನ್ನು ಸ್ಥಾಪಿಸುವ ಉದ್ದೇಶವೊದನ ಮದರಾಸ್ ಪ್ರಸಿಡೆನ್ಸಿಯ ವಿದ್ಯಾಭ್ಯಾಸದ ಡೈರೆಕ್ಟರ್ ಅವರಿಗೆ ತಂತಿ ಮೂಲಕವಾಗಿ ಸ್ಕೂಲು ಅಧಿಕಾರಿಗಳ ಅನ್ಯಾಯದಿಗೆ ಬದ್ಧರಾಗದವರು ಯೂನಿವರ್ಸಿಟಿ ಪರೀಕ್ಷೆಗೆ ಹೋಗಲಿಕ್ಕೇನಾದರೂ ಆಕ್ಷೇಪಣೆಯುಂಟೆ ಎಂಬದಾಗಿ ಕೇಳಿದಾರೆಂತಲೂ ಕೇಳುತ್ತೇವೆ. ಮದರಾಸ್ ಕ್ರಿಶ್ಚಿಯನ್ ಕಾಲೇಜಿನಲ್ಲಿ ನಡೆದ ಗದ್ದಲಕ್ಕೆ ತರುವಾಯ ಅಲ್ಲಿ ಯಲ್ಲಿರುವ ಮಿಶನ್ ಸ್ಕೂಲಿನವರಿಗೆ ನೇಟಿವ್‌ಗಳ ವಿಷಯದಲ್ಲಿ ಇಂಥಾ ದುರ್ಬುದ್ಧಿಯುಂಟಾದಂತೆ ಕಂಡುಬರುತಿದೆ. ಇದಕ್ಕೆ ತಕ್ಕಂತೆ ಸ್ವೇಚ್ಛಾಪರರೂ, ಜಾತ್ಯಭಿಮಾನದಿಂದ ಮಿಷನೆರಿಗಳ ಪಕ್ಷವನ್ನವಲಂಬಿಸಿ ಹಿಂದೂ ಜಾತಿ ಸಮೂಹಕ್ಕೆ ಅಸಮಾಧಾನಕರಗಳಾದ ಹುಕುಂಗಳನ್ನು ಕೊಡುವರಲಿದಾರೆ. ನೇಟಿವ್‌ಗಳಿಂದ ವಸೂಲಾಗುವ ತೆರಿಗೆ ಬೊಕ್ಕಸಗನ್ನು ಮಿಷನೆರಿ ಸ್ಕೂಲಿನಗಳ ಸಂರಕ್ಷಣಾರ್ಥ ಗವರ್ನಮೆಂಟಿನವರು ಹಂಚಿಕೊಡುವದೂ, ಅಂಥಾ ಸ್ಕೂಲುಗಳಿಂದಲೂ ಮಿಷನೆರಿಗಳಿಂದಲೂ, ಕಂಪಾಯದಾರರ ಮಕ್ಕಳಿಗುಂಟಾಗುವ ಈತಿಬಾಧೆಗಳನ್ನು ನಿವೃತ್ತಿಮಾಡದೆ ಉದಾಸೀನರಾಗಿರುವದೂ ಬಹಳ ಅಕ್ರಮವೆಂದು ಆಂಧ್ರಪ್ರಕಾಶಿಕೆಯು ಅಭಿಪ್ರಾಯಪಟ್ಟು ಈ ಅನ್ಯಾಯವು ಲಾರ್ಡ್ ಕಾನಿಮಾರಾ ಸರ್ಕಾರದವರ ಪರ್ಯಾಲೋಚನೆಗೆ ವಿಷಯವಾಗಬೇಕೆಂದು ಹೆಚ್ಚರಿಸುತಿದೆ. ಆಂಧ್ರಪ್ರಕಾಶಿಕೆಯ ಅಭಿಪ್ರಾಯವು ಬಹಳ ಕ್ಲಾಘ್ಯವಾಗಿರುವದರಿಂದ ಅದು ಮಹಾರಾಜಾ ಸರ್ಕಾರದವರ ಅವಧಾನಕ್ಕೆ ಸಹ ಅರ್ಹವಾಗಿರುತ್ತದೆ. ಜನಗಳು ಕೈಯಿಂದ ಮಡ್ಡಿಕೊಟ್ಟು ಮಿಷನೆರಿಗಳ ಮೂಲಕ ವಿದ್ಯೆ ಕಲಿತು, ಮತಭ್ರಷ್ಟರಾಗುವ ಕಾಲ ಪ್ರಾಪ್ತವಾಗಿದೆಯಲ್ಲದೆ ನಾವು ಅವರ ಪತ್ರಿಕೆಗಳಿಗೆ ಚಂದಾಮಾಡಿ ತನ್ಮೂಲಕ ನಮ್ಮ ಜಾತಿ ಮತಾಚಾರಗಳನ್ನೂ, ನಮ್ಮ ಪೂಜ್ಯವಸ್ತುಗಳನ್ನೂ ಗುರುದೇವತಾರಾಧನೆಗಳನ್ನೂ, ದೂಷಿಸಿಕೊಳ್ಳುವಂತೆ ಪರಿಣಮಿಸಿದೆ ಇದು ಅಯುಕ್ತವೆಂದು ಯಾವಕ್ಕೆ ನಮ್ಮವರ ಬುದ್ಧಿಗೆ ಸ್ಫುರಿಸದೆ ಹೋಯಿತೋ ನಾವರಿಯೆವು. ದುಡ್ಡುಕೊಟ್ಟು ಬಯ್ಸಿಕೊಳ್ಳುವಂಥಾ ನಮ್ಮ ಮೌಢ್ಯವನ್ನು ನೋಡಿಯೇ ಮಿಷನೆರಿಗಳು ನಮ್ಮನ್ನು (ಗುಡುಸರಾಗಿದ್ದರೆ ವೇತನರೂಪವಾಗಿಯೂ, ಪುಸ್ತಕರೂಪವಾಗಿಯೂ, ಉದ್ಯೋಗ ರೂಪವಾಗಿಯೂ, ಸ್ತ್ರೀಯರಾಗಿದ್ದರೆ, ವಸ್ತ್ರರೂಪವಾಗಿಯೂ, ಹೆಚ್ಚಿಗೆ ವಗ್ಯರೆ ಸದಾರ್ಥ ರೂಪವಾಗಿಯೂ, ನಗದು ರೂಪವಾಗಿಯೂ, ಮಕ್ಕಳಾಗಿದ್ದರೆ ಲಡ್ಡು ಮಿರಾಯಿ ಪೇಪೆ, ಬುಡು ಮುಂತಾದ ಬಾಲ್ಯವಿನೋದ ಸಾಮಗ್ರಿಗಳ ಮೂಲಕವಾಗಿಯೂ) ಮರುಳುಗೊಳಿಸಲೆತ್ನಿಸಿದಾರೆ. ಓ ಆರ್ಯಪುತ್ರರೇ? ಸರ್ವತಃ ಸ್ವತಂತ್ರರಾಗಿ ಮಹನೀಯರೆನಿಸಿಕೊಂಡು ಬಹಳ ಪ್ರಖ್ಯಾತ ಚಾರಿತ್ರರಾಗಿದ್ದ ಆರ್ಯವಂಶದಲ್ಲಿ ಜನಿಸಿ, ಅವರು ವಾಸಮಾಡುತಲಿದ್ದ ದೇಶದಲ್ಲೇ ಇರುತ್ತ, ಅವರ ಗೋತ್ರಸೂತ್ರಪ್ರವರಪಗಳಿಗೆ ಸಂಬಂಧಿಸಿದವರಾಗಿರುವದರಿಂದ ನಿಮ್ಮ ಪೂರ್ವಿಕರಿಂದಲೂ, ಕವೀಶ್ವರರಿಂದಲೂ, ನ್ಯಾಯವಿದಾಯಕರಿಂದಲೂ, ಸ್ಮೃತಿಕರ್ತರಿಂದಲೂ, ಶಿಲ್ಪ ಶಾಸ್ತ್ರ ವೇತ್ತರಿಂದಲೂ, ರಾಜತಂತ್ರಜ್ಞರಿಂದಲೂ, ಪ್ರತಿಷ್ಠಿತರಾಗಿದ್ದಂಥಾ ನೀವೀಗ ನಿಮ್ಮ ಶಾಸ್ತ್ರಗಳನ್ನುಪೇಕ್ಷಿಸಿ, ಜಾತಿಮತ ಸಂಪ್ರದಾಯಗಳನ್ನು ಹಾಸ್ಯಮಾಡಿ, ಸ್ವಮತವಂದಿಸುತ್ತ, ಪರಪ್ರಶಂಸಕಗಳಾದ ಘಾತಕ ವಾಕ್ಯಗಳಿಗೆ ಮೋಸಹೋಗುವೆ ಏನ್ನಾದರು ಎಚ್ಚೆತ್ತುಕೊಂಡು ಜಾಗರೂಕರಾಗಿ ನಮ್ಮಗಳಾದ ನಿಮ್ಮ ಕೀರ್ತಿ ಪ್ರಾಭವ ವೈಭವಗಳನ್ನು ಮರಳಿ ಪಡೆಯುವ ಮಾರ್ಗವನ್ನಾಲೋಚಿಸಿರುವ ನಿಮ್ಮನ್ನು ಬಹಳವಾಗಿ ಪ್ರಾರ್ಥಿಸುವೆವು ಇದೇ ನಮ್ಮ ಎಲ್ಲರೂ ಮುಖ್ಯವಾಗಿ ಐಕಮತ್ಯದೊಡನೆ ಸೇರಿ ಮಾಡಬೇಕಾದ ಪ್ರಥಮ ಕರ್ತವ್ಯವಾಗಿರುತಿದೆ

A DISGUISE.

ಕ್ರಿಸ್ತ ಮತಕ್ಕೆ ಸೇರಿದ ಕೆಲವರು ಕಪಟಸನ್ಯಾಸಿಗಳೂ ಸನ್ಯಾಸಿನೀಯರೂ ಜನಗಳಿಗೆ ಪರಲೋಕ ವಿಷಯಗಳನ್ನು ಬೋಧಿಸುವದಕ್ಕಾಗಿ ಈಚೆಗೆ ಇಂಗ್ಲಾಂಡಿನಿಂದ ಮುಂಬೈಗೆ ಬಂದು ಜ್ಞಾನ ಬೋಧಕರ ಉದಕ್ಪ್ರಿ ಸಿದ್ಧಾಂತದಾಗಿ ತಿಳಿಸಿ ಅವರ ವೇಷಗಳನ್ನು ಪದ್ಯಕಪಟದೋದ ಪತ್ರಿಕೆಯು ವಿವರಿಸುತಿದೆಯೆಂತೆಂದರೆ,—ಈ ಸನ್ಯಾಸಿಗಳನ್ನು ನೋಡಿದರೆ ಬಹಳ ವಿರಕ್ತರಂತೆ ಕಾಣುತ್ತಾರೆ. ಇವರು ಹಿಂದೂಗಳಂತೆ ಕಾವಿ ಬಟ್ಟೆಗಳನ್ನುಟ್ಟುಕೊಂಡು ತಲೆಗೆ ವಸ್ತ್ರಸುತ್ತಿಕೊಂಡು ಬರೀಕಾಲುನಲ್ಲಿ ಸಂಚರಿಸುತಲಿದಾರೆ. ಇದು ನೋಡಲಾಗಿ ಇವೆಲ್ಲಾ ಹಿಂದೂದವರನ್ನು ಒಲಿಸುವದಕ್ಕೆ ಅರ್ಹವಾದವೆಂದು ಅವರು ಭಾವಿಸಿರುವಂತೆ ಕಾಣುತ್ತಿದೆ. ಈ ವಿಷಯದಲ್ಲಿ ಸದರೀ ಪತ್ರಿಕೆ ಪ್ರಶ್ನೆಮಾಡುವದೇನಂದರೆ, ಏಸುಕ್ರಿಸ್ತನು ಕಾವಿವಸ್ತ್ರವ ಧರಿಸಬೇಕೆಂಬದಾಗಿ ಬೈಬಲ್ ಎಂಬ ಸದ್ವೇದದೊಳಲ್ಲಿಯಾದರೂ ಬರೆದಿರುತ್ತಾನೆಯೆ? ಹಾಗಿಲ್ಲದಿದ್ದರೆ ಇವರು ಈ ಕೃತ್ಯವನ್ನು ತಮ್ಮ ಮತದರ್ಮಕ್ಕೆ ವಿರುದ್ಧವಾಗಿ ಆಚರಿಸದಂತಾಗಲಿಲ್ಲವೆ? ಇಂಥಾ ನಡವಳಿಕೆಗಳಿಂದಲೇ ಇವರು ಕಪಟ ವೇಷಧಾರಿಗಳೆಂದು ಸಹಜವಾಗಿ ವ್ಯಕ್ತವಾಗುವದಿಲ್ಲವೆ? ಧರ್ಮಪ್ರಚಾರಕರಿಗೆ ಈ ವೇಷಗಳ್ಯಾತಕ್ಕೆ? ಏಸುಕ್ರಿಸ್ತನು ಇಂಥಾ ವಸ್ತ್ರಗಳಂ ಧರಿಸಿದರೇನೇ ಮೋಕ್ಷಪ್ರಾಪ್ತಿಯಾಗುವದೆಂದು ಸ್ವಪ್ನದಲ್ಲಿ ಪ್ರತ್ಯಕ್ಷನಾಗಿ ಏನಾದರು ನುಡಿದು ಹೋದನೊ? ಹಾಗೆ ತಿಳಿಸದ ಪಕ್ಷಕ್ಕೆ ಈ ಕಪಟವೇಷಗಳ ಉದ್ದೇಶವೇನು? ಎಂಬದು—" ವಿನಾಕೇನಾಪ್ಯುಪಾಯೇನ ಪ್ರಸಿದ್ಧ ಪುರುಷೋಭವ" ಎಂಬದಾಗಿ ಯಾವರೀತಿಯಿಂದಲಾದರೂ ತಮ್ಮ ಮತವನ್ನು ಅಭಿವೃದ್ಧಿಪಡಿಸಿ ಪ್ರಸಿದ್ಧರಾಗಬೇಕೆಂಬ ಆಲೋಚನೆಯು ಅವರಿಗೆ ಅಧಿಕವಾಗಿರುತಿದೆ.

A LECTURE

ಈ ಊರು ಶ್ರೀನಿವಾಸಮಂದಿರದ ರೋಡಿನಲ್ಲಿ ಹೊಸದಾಗಿ ಕಟ್ಟಲ್ಪಟ್ಟಿರುವ ಒರಿಯಂಟಲ್ ಮತ್ತು ಮಿಕ್ಸೆಡ್ ಲೈಬ್ರರಿ ಹಾಲಿನಲ್ಲಿ ಗತ ಶನಿವಾರ ಸಾಯಂಕಾಲ ಬ್ರಹ್ಮಶ್ರೀ ಪಂಡಿತ ಗೋಪಾಲಶಾಸ್ತ್ರಿಗಳವರು, ಆಧ್ಯಾತ್ಮ ವಿಷಯವಂ ಕುರಿತು ಉಪನ್ಯಾಸಮಾಡಿದರು. ಈ ಶಾಸ್ತ್ರಾರ್ಥವಂ ಕೇಳುವ ಕುತೂಹಲದೊಡನೆ ಅನೇಕಜನ ದೊಡ್ಡಮನುಷ್ಯರು ಬಂದಿದ್ದರು. ಮೆ|| ವರನುಶಿವಯ್ಯರವರು, ಆ ಕಾಲದಲ್ಲಿ ಸಭಿಕರ ಅಪೇಕ್ಷಾನುಸಾರ ಅಗ್ರಾಸನವಂ ವಹಿಸಿದ್ದರು. ಬ್ರಹ್ಮ ಶಾಸ್ತ್ರಿಗಳವರು, ಮಾನವಜನ್ಮ ಪ್ರಯೋಜನವನ್ನೂ, ಕ್ಷಣಭಂಗುರವಾದ ಆವನ ಜೀವಿತಕಾಲದಲ್ಲಿ ಆತನು ಮಾಡಬೇಕಾದ ಕರ್ತವ್ಯಗಳನ್ನೂ ತಿಳಿಸಿ, ಅಂಥಾ ಕರ್ತವ್ಯಗಳು ಐಹಿಕಾಮುಷ್ಮಿಕಗಳೆಂತಲೂ, ಐಹಿಕ ಸುಖಸಾಧನರೂಪಗಳಾದವು ಪ್ರಾಣಿ ಸಾಮಾನ್ಯಕ್ಕೆ ಅನುಭವದಲ್ಲಿರುವದರಿಂದ ಅದರ ವಿಚಾರವು ಪ್ರಕೃತ ಸಂದರ್ಭದಲ್ಲಿ ಅನಾವಶ್ಯಕವೆಂತಲೂ, ತತ್ಕಾಲದಲ್ಲಿ ವಿಚಾರಾರ್ಹವಾದ ಆ ಮುಷ್ಮಿಕವು ಶ್ರವಣ, ಮನನ, ನಿದಿಧ್ಯಾಸನರೂಪವಾದದ್ದೆಂತಲೂ, ಇವುಗಳಲ್ಲಿ ಶ್ರವಣವು ವೇದಾಂತವಿಚಾರ ರೂಪವಾಗಿಯೂ, ಮನನವು ಸಾಂಖ್ಯ ಶಾಸ್ತ್ರೋಕ್ತವಾದ ಪದಾರ್ಥವಿವೇಚನಾರೂಪವಾಗಿಯೂ, ನಿಧಿಧ್ಯಾಸನವು ಯೋಗ ಶಾಸ್ತ್ರೋಕ್ತವಾದ ಯಮ, ನಿಯಮ, ಆಸನ, ಪ್ರಾಣಾಯಾಮ ಪ್ರತ್ಯಾಹಾರ ಧಾರಣಾಧ್ಯಾನ ಸಮಾಧಿ ರೂಪಗಳಾದ ಅಷ್ಟಾಂಗಯುಕ್ತವಾಗಿಯೂ, ಇರುವದರಿಂದ ಇವು ಸರ್ವಸ್ತ್ರೀ ಸಾಮಾನ್ಯೇನ ಅಭ್ಯಾಸನೀಯವೆಂತಲೂ ಹೇಳಿ ಇವುಗಳ ಸ್ವರೂಪಗಳನ್ನು ವಿವರಿಸಿ ಇವುಗಳ ಅಭ್ಯಾಸಕ್ಕೆ ತೀವ್ರ ವೈರಾಗ್ಯವು ಕಾರಣವೆಂತಲೂ, ಅದಕ್ಕೆ ಯತಮಾನ, ವ್ಯತಿರೇಕ, ಏಕೇಂದ್ರಿಯ, ವಶೀಕಾರ, ವೈರಾಗ್ಯಗಳು ಮುಖ್ಯ ಆಧಾರಗಳೆಂತಲೂ ನುಡಿದು, ತೀವ್ರ ವೈರಾಗ್ಯ ಮೂಲಕ ಅಷ್ಟಾಂಗಗಳನ್ನಭ್ಯಸಿಸಿ ಪ್ರತಿಮನುಷ್ಯನೂ ತನ್ನ ಕಾಲದಲ್ಲಿ ಯಥೋಚಿತ ಅದಕ್ಕಾಗಿ ವಿನಿಯೋಗಿಸಬೇಕಾದದ್ದು ಅವಶ್ಯಕರ್ತವ್ಯವೆಂದು ಉಪದೇಶಿಸಿ ತಮ್ಮ ಶಾಸ್ತ್ರವಿಚಾರವಂ ಪೂರೈಸಿದರು. ಈ ವಿಷಯದಲ್ಲಿ ಬ್ರಹ್ಮಶ್ರೀ ಗೋಪಾಲ ಶಾಸ್ತ್ರಿಗಳವರಿಗೆ ಇರುವ ಪಾಂಡಿತ್ಯವು ಸಕಲಜನಾಭಿನಂದನೀಯವಾಗಿರುವದರಿಂದ ಈ ಪಂಡಿತರು ಇದೇ ವಿಷಯವಂ ಕುರಿತು ಮುಂದೆ ಮಾಡುವ ಶಾಸ್ತ್ರಾರ್ಥ ವಿಚಾರಗಳನ್ನು ಈ ಪತ್ರಿಕೆಯನ್ನೋದುವವರ ತಿಳುವಳಿಕೆಯ ಬಗ್ಗೆ ಆಗಿಂದಾಗ್ಯೆ ಪ್ರಕಟಿಸುತಲಿರುವೆವು.

Occasional Notes
ನೈಮಿತ್ತಿಕ ವಿಷಯನ್ಯಾಸ.

The sucusson of Lord Reay.—ಈಗ ಮುಂಬೈ ಗವರ್ನರಾಗಿರುವ ಲಾರ್ಡ್ ರೇಯವರ ನೌಕರಿಯ ಅವಧಿ ಪೂರ್ತಿಯಾಗಿ ಅವರು ತಮ್ಮ ಕೆಲಸವಂ ಬಿಟ್ಟು ಹೋಗುವಲ್ಲಿ ಅವರ ಸ್ಥಾನಕ್ಕೆ ಲಾರ್ಡ್ ಹಾರಿಸ್ ಎಂಬವರು ನಿಯಮಿಸಲ್ಪಡತಕ್ಕದ್ದೆಂದು ವ್ಯವಸ್ಥೆಯಾಗಿರುವುದಾಗಿ ಒಂದಾನೊಂದು ಪತ್ರಿಕೆ ತಿಳಿಸುತಿದೆ.

Introduction of universal weights, &c. ಮುಂಬೈ ವ್ಯಾಪಾರ ಸಂಘದವರು ಇಂಡ್ಯಾದೇಶಕ್ಕೆಲ್ಲ ಒಂದೇವಿಧವಾದ ತೂಕ ಅಳತೆ ವಗ್ಯರೆಯನ್ನು ಅಮಲಿನಲ್ಲಿ ತರಬೇಕಾದ ವಿಷಯವನ್ನು ಈಗ ತಮ್ಮ ಆಲೋಚನೆಗೆ ತೆಗದುಕೊಂಡು ಇದುವರಿವಿಗೇನೇ ಗಜಗಟ್ಟಿಯನ್ನು ಸರಿಮಾಡಿಕೊಂಡಿರುತ್ತಾರೆ ಆದರೆ ಪ್ರಜೆಗಳ ಕ್ಷೇಮಕ್ಕೆ ಮಹಾರಾಜ್ಞೀ ಸರ್ಕಾರದ ಇತರ ಅಳತೆಗಳನ್ನು ಸರಿಮಾಡಬೇಕಾದ್ದು ಮೇಲಿನಂತೆಯೇ ಆವಶ್ಯಕವಾಗಿದೆಯೆಂದು ಒಂದಾನೊಂದು ಪತ್ರಿಕೆ ಹೇಳುವದು ಯುಕ್ತವಾಗಿಯೇ ಕಾಣುತಿದೆ

Reception of the coming Viceroy.—ಇಂದ್ಯರಾಜ್ಯದ ವೈಸ್‌ರಾಯ್‌ಯವರಾಗಿ ನೇಮಕರಾಗಲ್ಪಟ್ಟು ಬರುವ ಲಾರ್ಡ್ ಲಾನ್ಸ್ ಡೌನ್‌ಯವರನ್ನು ಬರಮಾಡಿಕೊಳ್ಳುವ ವಿಷಯದಲ್ಲಿ ಮಾಡಬೇಕಾದ ಏರ್ಪಾಡುಗಳು ಇಂಡ್ಯಾ ಗವರ್ನಮೆಂಟ ಗೆಜೆಟಿನಲ್ಲಿ ಪ್ರಮಿಸಿದ್ಧಮಾಡಲ್ಪಟ್ಟಿರುತಿವೆ. ಬರುವತಿಂಗಳ ೩ನೇ ತಾರೀಖಿನಲ್ಲಿ ಸದರೀ ಯವರು ಮುಂಬೈ ದಡದಲ್ಲಿ ಹಡಗು ಇಳಿಯುವರು. ಇವರು ಅಲ್ಲಿಂದ ಕಲ್ಕತ್ತೆಗೆ ಪ್ರಯಾಣಮಾಡುವಲ್ಲಿ ಆಯಾಸ್ಥಳಿಕ ಗವರ್ನಮೆಂಟಿನ ಸಿವಿಲ್ ಆಫಿಸರ್‌ಗಳ ಪೈಕಿ ಪ್ರಮುಖರಾದವರೂ ಇತರ ಸಿವಿಲ್ ವ ಮಿಲಿಟರಿ ಆಫಿಸರ್‌ಗಳೂ ತಮ್ಮ ಸರಹದ್ದಿನಲ್ಲಿ ಕಾದಿದ್ದು ವೈಸ್‌ರಾಯಿಯವರನ್ನು ಎದುರುಗೊಂಡು ಬರಮಾಡಿಕೊಳ್ಳುವರು.

Progress of industries in Bombay.—ಇನ್ನು ಕೆಲವು ದಿವಸಗಳೊಳಗಾಗಿ ಮುಂಬೈಯಲ್ಲಿ ನಾನಾವಿಧ ಪದಾರ್ಥಗಳ ತಯಾರೀ ಕಾರ್ಖಾನೆಗಳು ಬಹಳ ಅಭಿವೃದ್ಧಿಸ್ಥಿತಿಗೆ ಬರುವಂತಿವೆ. ಬಹು ಪ್ರದೇಶಗಳಲ್ಲಿ ಅಲ್ಲಲ್ಲೇ ಯಂತ್ರಗಳು ಸ್ಥಾಪಿಸುವ ಯೋಚನೆ ನಡೆಯುತಿದೆ. ನೇಟಿವ್ [redacted] ಇದುವರಿವಿಗೆ ಯೂರೋಪ್ ದೇಶದಿಂದ ತರಿಸುತಲಿರುವ ನಾನಾವಿಧ ಪದಾರ್ಥಗಳಂ ಇಲ್ಲೇ ತಯಾರುಮಾಡಿಕೊಳ್ಳಬೇಕೆಂಬ ಉದ್ದೇಶದೊಡನೆ ಅದಕ್ಕೆ ಬೇಕಾದ ಯಂತ್ರೋಪಕರಣಗಳನ್ನು ತರಿಸುತಲಿದಾರೆ. ಇವೆಲ್ಲವಂ ನೋಡಲಾಗಿ ಮುಂದೆ ಮುಂಬೈ ಪಟ್ಟಣವು ಬಹಳ ಪ್ರಬಲಸ್ಥಿತಿಗೆ ಬರುವಂತೆ ಕಾಣುತಿದೆಯೆಂದು ಅಲ್ಲಿನ ಟೈಂಸ್‌ಪತ್ರಿಕೆ ಹೇಳುತಿದೆ.

LOCAL AND PROVINCIAL NEWS.
ಒಳದೇಶ ಮತ್ತು ತಾಲ್ಲೂಕು ಜಾತಿವೃತ್ತಾಂತಗಳು.

The Inspector General of Police.—ಇಲ್ಲಿನ ಪೋಲೀಸ್ ಇನ್ಸ್‌ಪೆಕ್ಟರ್ ಜನರಲ್ಲವರಾದ ಮೆ|| ರಿಕ್ಕೆಟಿಸ್‌ಯವರು ಈಹೊತ್ತು ನಾಳೆಯಲ್ಲಿ ಸರ್ಕ್ಯೂಟ್ ಹೊರಡುವರೆಂದು ಕೇಳುತ್ತೇವೆ.

His Highness' visit to Seringapatam.—ಶ್ರೀಮನ್ಮಹಾರಾಜರವರು ಜನ್ಮನಾಸ್ತೀತ ಕಾವೇರೀ ಸ್ನಾನಾರ್ಥ ನಿನ್ನೆಯ ದಿನ ಶ್ರೀರಂಗಪಟ್ಟಣಕ್ಕೆ ದಯಮಾಡಿದಂತೆ ತಿಳಿಯಬರುತಿದೆ

The weather.—ಕಳೆದ ವಾರದಲ್ಲಿ ಒಂದೆರಡು ದಿನಗಳಲ್ಲಿ ಮಾತ್ರ ಆಗಿಂದಾಗ್ಯೆ ತುಂತುರು ಮಳೆ ಬೀಳುತಲಿದ್ದು ತರುವಾಯ ಪ್ರತಿದಿನದಲ್ಲೂ ಬಿಸಿಲುಕಾಯುತ ಬೆಳಗಿನಹೊತ್ತು ವರ್ಷದೋಪಾದಿಯಲ್ಲಿ ಮಂಜು ಬೀಳುತಲಿರುವದರಿಂದ ಇಲ್ಲಿಗೆ ಈಸಲದ ವರ್ಷವು ಪೂರ್ತಿಯಾಯಿತೆಂದು ಕಾಣುತಿದೆ ಪದಾರ್ಥಗಳ ಧಾರಣೆಗಳು ಯೇಕ ರೂಪವಾಗಿ ಚೆನ್ನಾಗಿಯೇ ಇರುತ್ತಿವೆ.

Another lecture.—ಈತಿಂಗಳ ೮ನೇ ತಾರೀಖ್ ಶನಿವಾರದದಿನ ಸಾಯಂಕಾಲ ೬|| ಘಂಟೆಗೆ ಸರಿಯಾಗಿ ಓರಿಯಂಟಲ್ ಮತ್ತು ಮಿಕ್ಸೆಡ್ ಲೈಬ್ರರಿಹಾಲಿನಲ್ಲಿ ನಮ್ಮ ಜಾತಿ ಮತಾಚಾರಗಳಿಗೆ ಅನ್ಯರಿಂದುಂಟಾಗುವ ಉಪದ್ರವಿಯ ದೆಸೆಯಿಂದ ತಪ್ಪಿಸಿಕೊಳ್ಳಲಿಕ್ಕೆ ನಮಗೇನಾದರು ಉಪಾಯವಿದೆಯೇ? " ಎಂಬುವ ವಿಷಯವಂ ಕುರಿತು ಭಾ. ವೆಂಕಟಾಚಾರ್ಯರೆಂಬವರಿಂದ ವಿಚಾರ ಮಾಡಲ್ಪಡುವದೆಂದು ತಿಳಿಯಬರುತಿದೆ.

SUMMARY OF NEWS.
ವೃತ್ತಾಂತ ಸಂಗ್ರಹ.

ಮುಂಬೈಯಲ್ಲಿ ಹಗಲು ಹೊತ್ತಿನಲ್ಲೇ ಅನೇಕ ಘೋರಕೃತ್ಯಗಳು ನಿರ್ಭೀತಿಯಾಗಿ ನಡೆಸಲ್ಪಡುತಿದೆ. ಕಳವುಗಳೂ ಖೂನಿಗಳೂ, ಈಗ ಪ್ರಬಲಿಸಿದವು. ಈ ವಿಷಯದಲ್ಲಿ ಸರ್ಕಾರದವರು ಯಾವವಿಧ ಬಂದೋಬಸ್ತನ್ನೂ ಮಾಡದೆ ಉದಾಸೀನರಾಗಿರುವದು ಕೇವಲ ವಿಷಾದಕರವಾಗಿರುತಿದೆ.

ಮುಂಬೈಯಲ್ಲಿ ಗತ ವಾರದೊಳು ಯಥೋಚಿತ ಮಳೆ ಆಯಿತು. ಮಳೆಯ ದೆಸೆಯಿಂದ ಈ ಸಂವತ್ಸರದ ಶೀತಳಿಗೆ ಹಬ್ಬವು ಸಾಮಾನ್ಯ

ವಾಗಿ ನಡೆಯಿತು. ಈಚೆಗೆ ಸ್ವಲ್ಪ ಹವಾ ಬದಲಾಯಿಸಿದ್ದರಿಂದ ಜನಾರೋಗ್ಯವು ಕಡಮೆಯಾಗಿರುತಿದೆ. ಗತವಾರದಲ್ಲಿ ಒಬ್ಬ ಫಾರ್ಸೀ ದೊಡ್ಡಮನುಷ್ಯನ ಮನೆಗೆ ಬೆಂಕಿತಗಲಿ ಅದರ ದೆಸೆಯಿಂದ ಮೂವರು ದಗ್ಧರಾದಂತೆ ಕೇಳಲಾದೆವು.

ಗುಜರಾತ್, ಕಾಟೇವಾಡಿ, ಹೈದರಾಬಾದ್ ಮೊದಲಾದ ಪ್ರಾಂತಗಳಲ್ಲಿ ದುರ್ಭಿಕ್ಷವು ತಲೆದೋರುವದಾಗಿದ್ದದ್ದು ಈಚೆಗೆ ಆದ ಪ್ರಬಲ ವರ್ಷದ ದೆಸೆಯಿಂದ ಸ್ವಲ್ಪಮಟ್ಟಿಗೆ ಉಪಶಾಂತವಾದಂತೆ ಉತ್ತರದೇಶದ ಪತ್ರಿಕೆಯೊಂದು ಪ್ರಕಟಿಸುತಿದೆ. ಇದರಿಂದ ಅಲ್ಲಿನ ರೈತರ ಚಿಂತೆಯು ಬಹಳಮಟ್ಟಿಗೆ ನಿವೃತ್ತಿಯಾಗಿರಬಹುದೆಂದು ಭಾವಿಸುವೆವು. ಇದು ಮುಂದಿನ ಸಾಗುವಳೀ ಕೆಲಸಕ್ಕೆ ಬಹಳ ಅನುಕೂಲವಾಗಿರಬಹುದು.

ವಿಂಚೂರ್ ಸಂಸ್ಥಾನದ ಮಾಧವರಾವ್ ಉರಫ್ ದಾದಾಸಾಹೆಬರವರು ಮಾಹೇ ಮಜಕೂರ್ ೮ನೇ ತಾರೀಖ್ ಗುರುವಾರದದಿನ ಕಾಲಗತಿಯನ್ನೈದಿದರೆಂಬ ವೃತ್ತಾಂತವನ್ನು ತಿಳಿಸಲಿಕ್ಕೆ ನಾವು ಬಹಳ ವಿಷಾದಿಸುತ್ತೇವೆ. ಈ ದೊಡ್ಡಮನುಷ್ಯರು ಪೂರ್ವದೊಳಗೇ ಸಂಸ್ಥಾನದಲ್ಲಿಯೂ ಅಕ್ಕಲಕೋಟೆಯಲ್ಲಿಯೂ ಕಾರಬಾರೀ ಅಧಿಕಾರಿಯಾಗಿದ್ದರು. ಇವರಿಗೆ ಈಗ ೬೦ ವರುಷಗಳ ವಯಸ್ಸೆಂತಲೂ, ಇಬ್ಬರು ಪುತ್ರರಿದಾರೆಂತಲೂ ತಿಳಿಯಲಾದೆವು.

ಈ ಸಂವತ್ಸರದಲ್ಲಿ ಪ್ರಾಪ್ತವಾದ ಅತಿವೃಷ್ಟಿ ಅನಾವೃಷ್ಟಿಗಳ ದೆಸೆಯಿಂದ ಅನೇಕ ಪ್ರದೇಶಗಳಲ್ಲಿ ಜನಗಳು ಭಯಂಕರವಾದ ಸ್ಥಿತಿಯಲ್ಲಿರುತಲಿರುವಂತೆ ತಿಳಿಯಬರುತಿದೆ. ಪರಸ್ಥಳಗಳಿಂದ ಜನಗಳು ಗುಂಪು ಗುಂಪಾಗಿ ಬಂದು ಮುಂಬೈಯಲ್ಲಿ ಜಮಾಯಿಸುತಲಿರುವದರಿಂದ ಪದಾರ್ಥಗಳ ಧಾರಣೆವಾಸಿ ಬಹಳ ಚಡಾವಾಗಿರುತಿದೆ. ಇದರಂತೆ ಯೆಲ್ಲಾ ಪ್ರದೇಶಗಳಲ್ಲಿಯೂ ನಿರಖ್ ಜಾಸ್ತೀಯಾಗುತ ಬರುತಲಿದೆ. ಈ ವಿಷಯದಲ್ಲಿ ಸರ್ಕಾರದವರು ವಿಶೇಷ ಅವಧಾನ ಕೊಡದೆ ತಟಸ್ಥರಾಗಿದಾರೆ.

ಬರೋಡೆ ಪ್ರಾಂತದಲ್ಲೀಗ ಕ್ಷಾಮವು ಪ್ರಾಪ್ತವಾಗಿದೆಯೆಂತಲೂ ಅದರಿಂದ ಪ್ರಜೆಗಳು ಬಹಳ ಸಂಕಟ ಪಡುತಲಿದಾರೆಂತಲೂ ವೃತ್ತಾಂತ ಬಂದಿರುತಿದೆ. ಶ್ರೀಮನ್ಮಹಾರಾಜಾ ಸೈಯಾಜೀರಾವ್ ಗಾಯಕವಾಡ ಯವರು ತಮ್ಮ ಪ್ರಜೆಗಳ ದುರ್ದಸೆಯಂ ಕಂಡು ಬಹಳ ಅನುತಪಿಸುತ ಅವರಿರುವ ಪ್ರದೇಶಗಳಿಗೆ ಸ್ವತಃ ಹೋಗಿ ಪ್ರತಿ ಮನುಷ್ಯನ ಸ್ಥಿತಿಯನ್ನು ಕನಿಕರದೊಡನೆ ವಿಚಾರಿಸಿ ಅವನಿಗೆ ಬೇಕಾದ ವಸತಿಗಳಂ ಕಲ್ಪಿಸುತಲಿದಾರೆಂತಲೂ ಅನೇಕರಿಗೆ ಸರ್ಕಾರ್ ಕಂದಾಯಗಳನ್ನು ಮಾಫ್ ಮಾಡಿದರೆಂತಲೂ, ಈಗ ಅವರು ಪರಸ್ಥಳಗಳಲ್ಲಿ ಸಂಚರಿಸುತಲಿದಾರೆಂತಲೂ ಕೇಳಲಿಕ್ಕೆ ನಾವು ಬಹಳ ಸಂತೋಷಿಸುತ್ತೇವೆ. ಪ್ರಜಾನುರಕ್ತರಾದ ಅರಸರಿಗಿದೊಂದು ಮುಖ್ಯ ಕರ್ತವ್ಯವಾಗಿರುತಿದೆ. ಇಂತಾ ಗುಣವು ಸ್ವಾಭಾವಿಕವೇ ಹೊರ್ತು ಆಗಂತುಕವಲ್ಲವೆಂದರಿಯುವದು.

ಕಳೆದ ವಾರದಲ್ಲಿ ರಸ್ತಂಜಿ ರತನ್ಜೀ ಎಂಬ ಒಬ್ಬ ಫಾರ್ಸೀ ಗೃಹಸ್ಥನು ತನ್ನ ಭಾರ್ಯೆಯಂ ಖೂನ್ ಮಾಡಿ ಆ ವೃತ್ತಾಂತವನ್ನು ತಾನೇ ಪೊಲೀಸಿನವರಿಗೆ ತಿಳಿಸಿ ದಸ್ತಗಿರಿ ಗೊಳಗಾದನು. ಅವನ ಭಾರ್ಯೆಗೆ ಸ್ವಲ್ಪ ಜೀವವಿದ್ದದರಿಂದ ಅವಳಂ ಕೂಡಲೇ ಆಸ್ಪತ್ರಿಗೆ ಕಳುಹಿಸಲ್ಪಟ್ಟು ಈಗ ಚಿಕಿತ್ಸೆಯೊಳದಾಳೆಂದು ತಿಳಿಯಬರುತಿದೆ. ಇದರ ಕಾರಣವೇನಂದರೆ,—ಈಗ್ಯೆ ಕೆಲವು ದಿವಸಗಳ ಮೊದಲು ಸದರೀ ಹೆಂಗಸು ಮೆ॥ ದೊರಾಬ್ಜಿ ಅರ್ಫಮಾಲಾ ಎಂಬಾತನ ಬಳಿ ಅಡಿಗೆಯವಳಾಗಿದ್ದದರಿಂದ ಅವಳ ಗಂಡನಿಗೆ ಅವಳ ನಡತೆಯ ವಿಷಯದಲ್ಲಿ ಯೇನೋ ಅನುಮಾನವುಂಟಾಗಿ ಈ ರೀತಿ ಮಾಡಿದಂತೆ ತೋರುತಿದೆ. ಈ ಕೃತ್ಯ ನಡೆಯಲಿಕ್ಕೆ ಎರಡು ದಿನಗಳಹಿಂದೆ ತನ್ನ ಭಾರ್ಯೆಯು ತನಗೇನೋ ಕುಡಿಯುವದಕ್ಕೆ ಕೊಟ್ಟಳೆಂತಲೂ, ಅದು ಮೊದಲು ತಾನು ನಪುಂಸಕನಾದಂತೆಯೂ, ಅವಳು ಸ್ವತಃ ಆ ರೀತಿ ಮಾಡಿದ್ದರಿಂದ ತಾನು ಅವಳನ್ನು ಬರ್ಚಿಯಿಂದ ತಿವಿದಂತೆಯೂ, ರತನಜಿಯು ಕೈಫಿಯತ್ ಕೊಟ್ಟನು. ಈ ಮೊಕದ್ದಮೆ ಈಗ ವಿಚಾರಣೆಯಲ್ಲಿರುವದಾಗಿ ಕೇಳುತ್ತೇವೆ.

ಮೈಸೂರ್ ದೇಶಕ್ಕೆ ಸೇರಿದ, ಶಿವಮೊಗ್ಗಾ ಡಿಸ್ಟ್ರಿಕ್ಟ್ ಸಾಗರ ತಾಲ್ಲೂಕಿಗೆ ಮೂರು ಮೈಲಿಗಳ ಫಾಸಲೆಯಲ್ಲಿ ವರದಾ ಮೂಲವೆಂಬ ಅನಾದಿ ಕ್ಷೇತ್ರ ಒಂದು ನೆಲಗೊಂಡಿರುತಿದೆ ಈ ಕ್ಷೇತ್ರವು, ಶಾರದಾಂಬಾ ದೇವಸ್ಥಾನವೂ ಇತರ ದೇವತಾಂಕವಾದ ೬೪ ದೇವಾಲಯಗಳೂ ವರದಾ ಭಾಗೀರಥೀ ಅಗ್ನಿತೀರ್ಥ ಮೊದಲಾದ ಎಪ್ಪತ್ತೆಂಟು ತೀರ್ಥಗಳೂ ಉಳ್ಳದ್ದಾಗಿ ಪುರಾಣೋಕ್ತವಾದ ಪ್ರಸಿದ್ಧ ಯಾತ್ರೆಯುವೆನಿಸಿಕೊಂಡಿರುತಿದೆ. ಇಲ್ಲಿನ ಸ್ಥಳ ಮಹಾತ್ಮ್ಯವು ೪೦ ಅಧ್ಯಾಯಗಳಿಂದ ತಿಳಿಸಲ್ಪಟ್ಟಿರುತಿದೆ. ಇಂತಾ ಕ್ಷೇತ್ರವು ಬಹಳ ದುರ್ದಶೆಗೆಬಂದು ಈಗ ನೋಡಲಿಕ್ಕೆ ಅಸಮಾಧಾನಕರವಾಗಿರುವದರಿಂದ ಅದಂ ಅಬಾದಿಗೆ ತರಬೇಕೆಂಬ ಕುತೂಹಲವು ಆ ಪ್ರಾಂತದವರಿಗೆ ವಿಶೇಷ ವುಂಟಾಗಿ ಆ ಬಗ್ಯೆ ಅವರು ತಕ್ಕ ಪ್ರಯತ್ನ ಮಾಡುತಲಿರುವಂತೆ ಕೇಳುತ್ತೇವೆ. ಮೇಲೆಕಂಡ ವರದಾಮೂಲದಲ್ಲಿ ಪೂರ್ವದಲ್ಲಿ ಯಾವಾಗಲೋ ಪ್ರಬಲ ಯಜ್ಞ ಒಂದು ನಡೆದಿತ್ತೆಂತಲೂ, ಈಗಲೂ ಸರ್ಕಾರದವರಿಂದ ೧೮೦ ರೂಪಾಯಿಗಳು ತಸ್ತೀಕ್ ಕೊಡಲ್ಪಡುತಲಿದೆಯೆಂತಲೂ ಮುಂಬೈಹವ್ಯಕಸುಬೋಧಪತ್ರಿಕೆಗೆ ಒಬ್ಬ ಬಾತನೀದಾರನು ಬರೆದಿರುತ್ತಾನೆ.

ನ್ಯಾಷನಲ್ ಕಾನ್ಗ್ರೆಸ್ಸಿನ ವಿಷಯದಲ್ಲಿ ವಾಯವ್ಯದೇಶದ ಲೆಫ್ಟಿನೆಂಟ್ ಗವರ್ನರವರು ವಿರುದ್ಧಾಭಿಪ್ರಾಯವುಳ್ಳವರಾಗಿರುತ್ತಾರೆಂಬದಾಗಿ ಅವರು ಮೆ॥ ಹ್ಯೂಂ ಎಂಬವರಿಗೆ ಈಚೆಗೆ ಬರೆದ ಒಂದು ಲೇಖನದಿಂದ ವ್ಯಕ್ತ ಪಡುತಿದೆ. ಸದರೀ ಕಾಗದದಲ್ಲಿ ಲೆಫ್ಟಿನೆಂಟ್ ಗವರ್ನರವರು ಬರೆದಿರುವ ಅಭಿಪ್ರಾಯವು ಅದಂ ಓದಿದವರಿಗೆಲ್ಲ ಆಶ್ಚರ್ಯವನ್ನುಂಟುಮಾಡದೆ ಹೋಗಲಾರದು. ಅದೇನಂದರೆ—ಆದಿಯಲ್ಲಿ ತಾವು ಕಾನ್ಗ್ರೆಸ್ ವಿಷಯದೊಳು ಇಷ್ಟರ ವಿರುದ್ಧಾಭಿಪ್ರಾಯವುಳ್ಳವರಾಗಿರಲಿಲ್ಲವೆಂತಲೂ, ಸದರೀ ಸಭೆ ಮದರಾಸ್ನಲ್ಲಿ ಸೇರಿದ್ದಕಾಲದಲ್ಲಿ ಪ್ರಕಟಿಸಲ್ಪಟ್ಟದ್ದ ಒಂದೆರಡು ಸಣ್ಣ ಗ್ರಂಥಗಳನ್ನು ಓದಿ ನೋಡಿದ ಮೇಲೆ ಅದರಲ್ಲಿ ತನಗೆ ವುಂಟಾಗಿದ್ದ ಗೌರವವು ಶುದ್ಧಾಂಗ ನಿವೃತ್ತಿಯಾದಂತೆಯೂ, ಯಾರು ಆ ಸಭೆಗೆ ಸಂಬಂಧಿಸಿರುತ್ತಾರೆಯೋ ಅವರ ವಿಷಯದಲ್ಲಿ ಸಹ ಅಸಮಾಧಾನವುಳ್ಳವರಾಗಿರುವಂತೆಯೂ, ಕಡೆಗೆ ಅದರ ವಿರೋಧಿಗಳಾದವರಿಗೆ ಸಹಾಯಮಾಡಬೇಕೆಂಬವರ ಮಟ್ಟಿಗೆ ತಮ್ಮ ಮನಸ್ಸು ಬದಲಾಯಿಸಿತೆಂತಲೂ ಸೂಚಿಸಿರುತ್ತಾರೆ. ಇದಕ್ಕೆ ಮೆ॥ ಹ್ಯೂಂಯವರು ಬರೆದಿರುವ ಉತ್ತರವು ಅವರವಿರುದ್ಧಾಭಿಪ್ರಾಯಗಳನ್ನು ಖಂಡಿಸಿ ತಕ್ಕ ನಿದರ್ಶನಗಳೊಡನೆ ಕಾನ್ಗ್ರೆಸ್ಸಿನ ಪ್ರಯೋಜನವನ್ನು ನಿರೂಪಿಸತಕ್ಕದ್ದಾಗಿದೆ. ಪರಂತು ಲೆಫ್ಟಿನೆಂಟ್ ಗವರ್ನರವರ ಅಭಿಪ್ರಾಯವು ಶುದ್ಧಾಂಗವಾಗಿ ಬದಲಾಯಿಸಿರುವದರಿಂದ ಅವರ ಮನಸ್ಸನ್ನು ತಿರಿಗಿಸಲಿಕ್ಕೆ ಸದರೀ ಕಾಗದಕ್ಕೆ ಶಕ್ತಿಸಾಲದೆ ಹೋಗಿದೆ. ಇಂತಾ ವಿರುದ್ಧಾಭಿಪ್ರಾಯಗಳುಂಟಾಗಲಿಕ್ಕೆ ಕಾನ್ಗ್ರೆಸ್ ವಿರೋಧಿಗಳಾದ ಕೆಲವರು ಮುಸಲ್ಮಾನರೇ ಮುಖ್ಯ ನಿಮಿತ್ತಕರಾಗಿರಬಹುದೆಂದು ತೋರುತಿದೆ.

ಶ್ರೀ ಶೃಂಗೇರಿ ಮಠ, ಗೋಕರ್ಣದಿಂದ.
ನಂಬರ್ ೬೦೨.

(ಸಾಮಿ ಮೊಹರ್)

ಶ್ರೀಮತ್ಪರಮಹಂಸ ಪರಿವ್ರಾಜಕಾಚಾರ್ಯವರ್ಯ ಪದವಾಕ್ಯ ಪ್ರಮಾಣ ಪಾರಾವಾರ ಪಾರೀಣ ಯಮನಿಯಮಾಸನ ಪ್ರಾಣಾಯಾಮ ಪ್ರತ್ಯಾಹಾರ ಧ್ಯಾನಧಾರಣ ಸಮಾಧ್ಯಷ್ಟಾಂಗ ಯೋಗಾನುಷ್ಠಾನ ನಿಷ್ಠ ತಪಶ್ಚಕ್ರವರ್ತ್ಯನಾದ್ಯವಿಚ್ಛಿನ್ನ ಗುರು ಪರಂಪರಾಪ್ರಾಪ್ತ ಷಡ್ದರ್ಶನಸ್ಥಾಪನಾಚಾರ್ಯ ವ್ಯಾಖ್ಯಾನ ಸಿಂಹಾಸನಾಧೀಶ್ವರ ಸಕಲ ನಿಗಮಾಗಮ ಸಾರಹೃದಯ ಸಾಂಖ್ಯತ್ರಯ ಪ್ರತಿಪಾದಕ ವೈದಿಕ ಮಾರ್ಗ ಪ್ರವರ್ತಕ ಸರ್ವತಂತ್ರ ಸ್ವತಂತ್ರಾದಿ ರಾಜಧಾನೀ ವಿದ್ಯಾನಗರ ಮಹಾರಾಜಧಾನೀ ಕರ್ಣಾಟಕ ಸಿಂಹಾಸನ ಪ್ರತಿಷ್ಠಾಪನಾಚಾರ್ಯ ಶ್ರೀಮದ್ರಾಜಾಧಿರಾಜ ಗುರು ಭೂಮಂಡಲಾಚಾರ್ಯ ಋಷ್ಯಶೃಂಗ ಪುರವರಾಧೀಶ್ವರ ತುಂಗಭದ್ರಾತೀರವಾಸಿ ಶ್ರೀಮದ್ವಿದ್ಯಾಶಂಕರಪಾದ ಪದ್ಮಾರಾಧಕ ಶ್ರೀಮನ್ ನೃಸಿಂಹ ಭಾರತೀಸ್ವಾಮಿ ಗುರುಕರಕಮಲಸಂಜಾತ ಶೃಂಗೇರಿ ಶ್ರೀ ಸಚ್ಚಿದಾನಂದ ಶಿವಾಭಿನವ ನೃಸಿಂಹ ಭಾರತೀ ಸ್ವಾಮಿಭಿಃ,

ಅತ್ಯಂತ ಪ್ರಿಯಶಿಷ್ಯ ವೈಶ್ಯವರ್ಣಾಶ್ರಮ ಉತ್ತರ ಕನ್ನಡಜಿಲ್ಲಾ ದಕ್ಷಿಣ ಕನ್ನಡಜಿಲ್ಲಾ ಮುಂತಾದ ಸಮಸ್ತದೇಶ ವಾಸ್ತವ್ಯ ಆಂಧ್ರ, ದ್ರಾವಿಡ, ಕರ್ನಾಟ, ಹವೀಕ, ಕೋಟ, ಕಂದಾವರ, ಶಿವಳ್ಳಿ, ಚಿತ್ಪಾವನ, ಕರಾಡಸ್ಥ ಮುಂತಾದ ಅಶೇಷ ಗೃಹಸ್ಥ ನಿಚಯಮ ಶ್ರೀ ನಾರಾಯಣ ಸ್ಮರಣ ಪೂರ್ವಕಂ ವಿರಚಿತಾ ಆಶಿಷಃ ಸಮುಲ್ಲಸಂತುತರಾಂ ॥ ಅನೇಕಮಹಿಮಾತಿಶಯ ಪ್ರಸಿದ್ಧ ಶತ್ರುಭವ ಶ್ರೀಮಚ್ಛಂಕರ ಭಗವತ್ಪಾದಪೂಜ್ಯ ಪೀಠ ವಿಷಯಿಣೀ ಭಕ್ತಿರ್ಜನನವಧಿಕ ಶ್ರೇಯೋನಿಧಾನಮಿತಿ ಸರ್ವಜನಾಂ ವಿದಿತಮೇತತ್ ಸಂಪ್ರತಂ॥

ಸಕಲಪುರದವರೆಂದು ಪ್ರಸಿದ್ಧರಾಗಿರುವ ಬ್ರಾಹ್ಮಣರು ಹವೀಕರೇ ಮುಂತಾದ ಸಕಲವಿಧವಾದ ಬ್ರಾಹ್ಮಣರಿಗೂ ತಮಗೂ ಬಹುಕಾಲದಿಂದಲೂ ಭೋಜನ ಪ್ರತಿಭೋಜನಾದಿ ಸವ್ಯವಹಾರಗಳು ನಡೆದು ಬರುತ್ತಾ ಇದ್ದಾಗ್ಯೂ ಈಚೆಗೆ ರಾಮಚಂದ್ರಾಪುರದ ಮಠಸ್ಥರು ಮತ್ತು ಕೆಲವು ಜನ ಹವೀಕರು ಸಹ ಸಹ್ಯಾದ್ರಿ ಎಂಬ ಒಂದು ಗ್ರಂಥದಲ್ಲಿ ದೂಷಣೆಮಾಡುತ್ತಾ ಬಂದದರಿಂದ ಇದನ್ನು ವಿಚಾರಿಸಿ ವ್ಯವಸ್ಥೆ ಪಡಿಸಬೇಕೆಂದು ಶ್ರೀ ಸನ್ನಿಧಾನಕ್ಕೆ ವಿಜ್ಞಾಪನಾ ಪತ್ರಿಕೆ ಬರೆದುಕೊಂಡದ್ದರಮೇಲೆ ವಿಶೇಷವಾಗಿ ಹವೀಕರೇ ಮುಂತಾದ ಬ್ರಾಹ್ಮಣರು ಇರತಕ್ಕ ಗೋಕರ್ಣ ಕ್ಷೇತ್ರದಲ್ಲಿ ವಿಚಾರವನ್ನು ನಡಿಸಿ ಪೂರ್ವ ಸಂಪ್ರದಾಯವನ್ನು ಇದುವರೆಗಿನ ದಾಖಲೆಗಳನ್ನೂ ಸಹ್ಯಾದ್ರಿ ಖಂಡವೆಂಬ ಗ್ರಂಥವನ್ನು ಸಹ ನಿರುಕ್ತಿಯಿಂದ ನೋಡಲಾಗಿ, ಅನೇಕ ಕಾರಣಗಳಿಂದ ಸಹ್ಯಾದ್ರಿ ಖಂಡವೆಂಬ ಗ್ರಂಥವು ನಂಬಿಕೆಗೆ ಯೋಗ್ಯವಾದ ಪ್ರಮಾಣ ಗ್ರಂಥವಲ್ಲವೆಂದು ತಿಳಿಯಬರುತ್ತೆ. ಹವೀಕರೇ ಮುಂತಾದ ಸಕಲ ವಿಧವಾದ ಬ್ರಾಹ್ಮಣರನ್ನೂ ಈ ಸಕಲಪುರದ ಬ್ರಾಹ್ಮಣರೊಡನೆ ಭೋಜನ ಪ್ರತಿಭೋಜನ ಸಹ ಪಜ್ತಿ ಭೋಜನಾದಿ ಸವ್ಯವಹಾರಗಳನ್ನು ನಡಿಸುತ್ತಾ ಇರುವದಾಗಿಯೂ, ಕೆಲವು ದೇವಸ್ಥಾನಗಳಲ್ಲಿ ಎಲ್ಲವರಂತೆ ಇವರಿಗೆ ಪ್ರಾಪ್ತೆ ಇತರ ಉಪಾದಿ ಸಹ ನಡೆದುಬರುತ್ತಾ ಇರುವದಾಗಿಯೂ, ವೇದೋಕ್ತವಾದ ಷೋಡಶ ಕರ್ಮಗಳು ವೇದಾಧ್ಯಯನ ಸಹ ನಡಿಸುತ್ತಾ ಇರುವದಾಗಿಯೂ ತಿಳಿಯಬರುವದರಿಂದ ಪಂಚದ್ರಾವಿಡಾಂತರ್ಗತರಾದ ಸಕಲ ವಿಧವಾದ ಬ್ರಾಹ್ಮಣರೊಡನೆಯೂ ಭೋಜನ ಪ್ರತಿಭೋಜನ ಸಹ ಪಜ್ತಿ ಭೋಜನಾದಿ ಸವ್ಯವಹಾರವನ್ನು ನಡಿಸುವದಕ್ಕೆ ಮೇಲ್ಕಂಡ ಸಕಲಪುರದ ಬ್ರಾಹ್ಮಣರುನ್ನೂ ಅರ್ಹರಾದವರಾಗಿ ಇರುತ್ತಾರೆ. ಈ ವಿಷಯದಲ್ಲಿ ಸಪ್ರಮಾಣ ಉದಾಹೃತವಾಗಿ ಶ್ರೀ ಸಂಸ್ಥಾನದ ಅಧಿಕಾರಸ್ಥಾನದಿಂದ ಅಲಾಹಿದಾ ತೀರ್ಮಾನ ಪತ್ರಿಕೆಯನ್ನು ಕೊಡಿಸಿ ಇರುತ್ತೆ. ಆದಕಾರಣ ಇವರೊಡನೆ ಭೋಜನ ಪ್ರತಿಭೋಜನ ಸಹ ಪಜ್ತಿ ಭೋಜನಾದಿ ಸವ್ಯವಹಾರವನ್ನು ನಡಿಸುವದಕ್ಕೆ ಏನೂ ಅಭ್ಯಂತರ ಇರುವದಿಲ್ಲವೆಂಬ ಅಭಿಪ್ರಾಯವನ್ನು ಸರ್ವರೂ ತಿಳಿದು ಶ್ರೀ ಸಂಸ್ಥಾನದ ಆಜ್ಞಾನುಸಾರ ನಡೆದುಕೊಂಡು ಶ್ರೇಯಸ್ಸಂಪಾದನೆ ಮಾಡಿಕೊಳ್ಳತಕ್ಕ ವಿಷಯದಲ್ಲಿ ಪತ್ರದ್ವಾರಾ ವಿಶೇಷ ಅಪ್ಪಣೆ ಕೊಡಿಸತಕ್ಕದ್ದೇನಿಹ.

ಸರ್ವಜಿತು ಸಂವತ್ಸರದ ವೈಶಾಖ ಶುದ್ಧ ೧೫ಲ್ಲು ಶ್ರೀ ಸಂಸ್ಥಾನದ ಸ್ವಾರಿ, ಮೊಕ್ಕಾಂ ಕಾರವಾರ, ತಾಲ್ಲೂಕು ಶಿವಾಡ.

(ಚಿಕ್ಕ ಸಾಮಿ ಮೊಹರ್.)

THE MYSORE GAZETTE
ಮೈಸೂರು ಗೆಜೆಟ್.

—:o:—

ಶ್ರೀಮನ್ಮಹಾರಾಜ ರಾಜಾಸಾಹೇಬ್ ಬಹದೂರವರ ದಿವಾನರವರಿಂದ ಕೊಡೋಣಾದ ಇಸ್ತಿಹಾರ್ ನಾಮೆಗಳು.

ಮೊಕ್ಕಾಂ ನಂ ೧೫೮೯. ತಾ॥೨ನೇ ನವಂಬರ್ ೧೮೮೮—೧೮೮೮ನೇ ಇಸಿವಿ ಅಕ್ಟೋಬರ್ ೨೬ನೇ ಮರ್ಕೂಂ ಲಾಗಾಯತು ಆರು ತಿಂಗಳ ಎರಿವಿಗೆ ಅಜಸಾಯಿಷೀ ರಜೆಕ ಟಿ. ರಾಜೇಂದ್ರಯ್ಯ ಯವರು ೩ನೇ ಕ್ಲಾಸ್ ಆಸ್ಪತಲ್ ಅಸಿಸ್ಟೆಂಟರಾಗಿ ಮೊಕರರ್ ಮಾಡಲ್ಪಟ್ಟಿರುತಾರೆ.

ಮೊಕ್ಕಾಂ ನಂ ೧೫೮೨—೧೮೮೮ನೇ ಇಸಿವಿ ಅಕ್ಟೋಬರ್ ೧೮ನೇ ಮರ್ಕೂಮಿನ ಪೂರ್ವಾಹ್ನದಲ್ಲಿ ಕಡೂರು ಡಿಸ್ಟ್ರಿಕ್ಟ್ ಚಾರ್ಜನ್ನು ಜನರಲ್ ಅಸಿಸ್ಟೆಂಟ್ ಕಮಿಶನರ್ ಮೆ॥ ಟಿ ರಾಘವೇಂದ್ರರಾಯರವರು ಕರ್ನಲ್ ಜೆ. ಎ. ಕ್ಯಾಂಬಲ್ ಯವರಿಂದ ತೆಗದುಕೊಂಡಿರುತ್ತಾರೆ.

ಮೊಕ್ಕಾಂ ನಂ॥ ೧೫೯೧. ತಾ ೫ನೇನವಂಬರ್ ೧೮೮೮—೧೮೮೮ನೇ ಇಸಿವಿ ಸೆಪ್ಟಂಬರ್ ೩೦ನೇ ಮರ್ಕೂಂ ೧೯೫ನೇ ನಂಬರುಳ್ಳ ಇಸ್ತಿಹಾರ್ನಲ್ಲಿ ಕಂಡಂತೆ ಘನವನ್ನೈದಿದ ಶ್ರೀಮನ್ಮಹಾರಾಜರವರು ಬೆಂಗಳೂರು ಕೋಟೆ ಮತ್ತು ಅದಕ್ಕೆ ಸೇರಿದ ಜಮೀನ್, ಅವರಲ್ಲಿರತಕ್ಕ ಕಟ್ಟಡಗಳು ಇವುಗಳ ಮೇಲಿಣ ಸಂಪೂರ್ಣ ಅಧಿಕಾರವನ್ನು ಮರಳಿ ಪಡೆದಿರುವದರಿಂದ ಮಹಾರಾಜಾ ಸರ್ಕಾರದವರು ಇದರಿಂದ ಸಮಸ್ತಜನಗಳಿಗೂ ತಿಳಿಯಪಡಿಸುತ್ತಾರೇನಂದರೆ.—

೧. ಮೇಲೆಕಂಡ ಬೆಂಗಳೂರು ಕೋಟೆಯು ಮ್ಯೂನಿಸಿಪಲ್, ಸಿವಿಲ್, ಕ್ರಿಮಿನಲ್, ಪೊಲೀಸ್, ರೆವಿನ್ಯೂ ಮತ್ತು ಇತರ ಅವಳತಗಳ ವಿಷಯದಲ್ಲಿ ಬೆಂಗಳೂರು ಪಟ್ಟಣಕ್ಕೆ ಒಂದು ಭಾಗವೆಂದು ಭಾವಿಸಲ್ಪಡತಕ್ಕದ್ದು.

೨. ಬೆಂಗಳೂರು ಪಟ್ಟಣದಲ್ಲಿ ಜಾರಿಯೊಳಿರುವ ವಿಶಿಷ್ಟ ಕಾನೂನುಗಳೂ ಸದರೀ ಬೆಂಗಳೂರು ಕೋಟೆಯಲ್ಲಿ ಸಹ ಜಾರೀಲಿರುವಂತೆ ಭಾವಿಸಲ್ಪಡತಕ್ಕದ್ದು.

೩. ಬೆಂಗಳೂರು ಪಟ್ಟಣದಲ್ಲಿ ತತ್ಕಾಲದೊಳು ಅಧಿಕಾರ ಪಡೆದಿರುವ ಪಡಾ ಕೋರ್ಟುಗಳೂ ಮೇಲೆ ಕಂಡ ಬೆಂಗಳೂರು ಕೋಟೆಯೊಳಗೆ ಅದೇ ಅಧಿಕಾರವನ್ನು ಚಲಾಯಿಸತಕ್ಕದ್ದು. ಮತ್ತು,

೪. ಬೆಂಗಳೂರು ಪಟ್ಟಣದಲ್ಲಿ ಪೊಲೀಸ್ ಅಧಿಕಾರಗಳನ್ನು ಚಲಾಯಿಸುತಲಿರುವ ವಿಶಿಷ್ಟ ಆಫೀಸರ್ಗಳೂ ಅದೇ ಅಧಿಕಾರಗಳನ್ನು ಮೇಲೆ ಕಂಡ ಬೆಂಗಳೂರು ಕೋಟೆಯಲ್ಲಿ ಚಲಾಯಿಸತಕ್ಕದ್ದು.

ಮೊಕ್ಕಾಂ ನಂ॥ ೧೬೦೮—ಬೆಂಗಳೂರು ಪಟ್ಟಣ ಮ್ಯೂನಿಸಿಪಲ್ ಕಮಿಶನ್ ವೈಸ್ ಪ್ರೆಸಿಡೆಂಟರಾದ ರಾಯ ಬಹದೂರ್ ಮ ರಾ ಎ. ಶ್ರೀನಿವಾಸಾಚಾರ್ಯರವರಿಗೆ, ೧೮೮೮ನೇ ಇಸಿವಿ ನವಂಬರ್ ಗುರ್ರೀ ತಾರೀಖ್ ಮೊದಲು ಅಥವಾ ಅವರದಂ ಉಸ್ತೋಗಿಸಿಕೊಳ್ಳುವ ತಾರೀಖ್ ಮೊದಲು ಒಂದು ತಿಂಗಳ ರಜಾ ಕೊಡಲ್ಪಟ್ಟಿರುತಿದೆ. ಬೆಂಗಳೂರು ಡಿಸ್ಟ್ರಿಕ್ಟ್ ಆಫೀಸ್ ರೆವಿನ್ಯೂ ಶಿರಸ್ತೇದಾರ್ ಮೆ॥ ಎನ್ ರಾಘವಾಚಾರ್ಯರವರು ರಾಯಬಹದೂರ್ ಮ॥ರಾ॥ ಶ್ರೀನಿವಾಸಾಚಾರ್ಯರವರ ಗೈರಹಾಜರಿಯಲ್ಲಿ ಅಥವಾ ಮತ್ತೊಂದು ಹುಕುಂ ಕೊಡಲ್ಪಡುವತನಕ ಮ್ಯೂನಿಸಿಪಲ್ ಕಮಿಶನಿನ ವೈಸ್ ಪ್ರೆಸಿಡೆಂಟರಾಗಿ ಆಕ್ಟಿಂಗ್ ತರೀಕ ಮೊಕರರ್ಮಾಡಲ್ಪಟ್ಟಿರುತ್ತಾರೆ.

ಮೊಕ್ಕಾಂ ನಂ॥ ೧೬೩೪. ತಾ॥೮ನೇನವಂಬರ್ ೧೮೮೮—೧೮೮೮ನೇ ಇಸಿವಿ ಅಕ್ಟೋಬರ್ ೨೭ನೇ ಮರ್ಕೂಂ ೧೪೨೯ನೇ ನಂಬರಿನ ಈ ಆಫೀಸ್ ಇಸ್ತಿಹಾರನ್ನು ರದ್ದುಮಾಡಿ ಶಿವಮೊಗ್ಗಾ ಡಿಸ್ಟ್ರಿಕ್ಟ್ ಡೆಪ್ಯುಟಿ ಕಮಿಶನರ್ ಮೆ॥ ವಿ. ಪಿ. ಮಾಧವರಾಯರವರಿಗೆ ೧೮೮೮ನೇ ಇಸಿವಿ ಅಕ್ಟೋಬರ್ ೨೭ನೇ ತಾರೀಖ್ ಲಾಗಾಯತು ೩೩ ದಿನಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿರುತಿದೆ.

☞ BANGALORE:—Printed and published at the KARNATIC PRESS, No. 44, HOSPITIAL ROAD, PETTA.—1888.

ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA.

ಪ್ರತಿ ಸೋಮವಾರ ಪ್ರಾತಃಕಾಲದಲ್ಲಿ ಪ್ರಕಟಿಸಲ್ಪಡುವದು.

Published every Monday Morning.

[illegible]

Vol. XV.] BANGALORE—MONDAY, NOVEMBER 26, 1888 [No. 46.

ಸಂಪುಟ ೧೫.] ಬೆಂಗಳೂರು:—ಸರ್ ೧೮೮೮ನೇ ಇಸವಿ ನವಂಬರ್ ೨೬ನೇ ತಾರೀಖು ಸೋಮವಾರ. [ಸಂಚಿಕೆ ೪೬

ಕರ್ಣಾಟಕ ಪ್ರಕಾಶಿಕಾ

ಪತ್ರಿಕೆಯ ಚಂದಾ ದರಗಳು,
೧೮೮೮ನೇ ಇಸವಿ ಜನವರಿಯಿಂದಾಯಿತು
ಕಡಮೆ ಮಾಡಲ್ಪಟ್ಟಿರುತ್ತದೆ.

ಈ ಪತ್ರಿಕೆಯ ಚಂದಾದಾರರಲ್ಲಿ ಅನೇಕರ ಅಪೇಕ್ಷೆಯನ್ನು ನೆರವೇರಿಸುವ ಉದ್ದೇಶದೊಡನೆಯೂ, ಪರಿಮಿತವಾದ ಆಯುತಿಯುಳ್ಳವರಿಗೆಲ್ಲ ಈ ಪತ್ರಿಕೆಯು ಸುಲಭವಾಗಿ ಲಭಿಸುವಂತಿರಬೇಕೆಂಬ ಅಭಿಪ್ರಾಯದೊಡನೆಯೂ ಇದರ ಚಂದಾದರವನ್ನು ಇದರಡಿ ಕಂಡಂತೆ ಕಡಮೆ ಮಾಡಿರುತ್ತೇವೆ.—

ಇಂಗ್ಲಿಷ್ ಮತ್ತು ಕನ್ನಡಭಾಗಗಳಿಗೆ.

	ಸ್ಥಳದವರಿಗೆ	ಪರಸ್ಥಳದವರಿಗೆ
12 ತಿಂಗಳಿಗೆ	8—0—0	9—0—0
6 „	4—0—0	4—8—0
3 „	2—8—0	2—8—0

ಇಂಗ್ಲಿಷ್ ಅಥವಾ ಕನ್ನಡಭಾಗಗಳಿಗೆ.

	ಸ್ಥಳದವರಿಗೆ	ಪರಸ್ಥಳದವರಿಗೆ
12 ತಿಂಗಳಿಗೆ	4—0—0	5—0—0
6 „	2—0—0	2—8—0
3 „	1—4—0	1—8—0

ಷರಾ—[illegible]

[illegible]

ಪ್ರಕಟನೆಯ ರಿವಾಜು.

ಮೊದಲನೆಯದಕ್ಕೆ ಒಂದು ಸಾಲಿಗೆ ೦—೨—೦
ಎರಡನೆಯದಕ್ಕೆ ಒಂದು ಸಾಲಿಗೆ ೦—೧—೦

ಷರಾ—[illegible]

"IT RECOMENDS ITSELF"

ALL WHO SUFFER FIND SURE RELIEF.

LITTLE'S

ORIENTAL BALM

THE MOST EFFECTUAL MODERN REMEDY FOR PAIN.

ಲಿಟಲ್ ಯೆಂಬುವನಿಂದ ತಯಾರಾಗ್ಯಲ್ಪಟ್ಟ "ಓರಿಯಂಟಲ್ ಬಾಲಂ" ಎಂಬ [illegible] ಅಮೂಲ್ಯ ತೈಲವು [illegible] ಮತ್ತು [illegible] ಇದರಿಂದ ಸಕಲ ವಾತರೋಗಗಳೂ, ವಾತಸಂಬಂಧಗಳಾದ [illegible] ನಿವೃತ್ತಿಯಾಗುವವು. ಮುಖ್ಯವಾಗಿ [illegible] ವಾತರೋಗಗಳು, [illegible], ನರಗಳ ನೋವು, [illegible], ಕಟಿವಾಯು, [illegible] ನೋವು, ತಲೆನೋವು, [illegible] ಮುಂತಾದ [illegible] ಉಪಯೋಗವನ್ನು ಯು ಮಾಡತಕ್ಕದ್ದು. ಈ ತೈಲವನ್ನು [illegible] ತೈಲವಾಗಿರುತ್ತದೆ. [illegible] ಮತ್ತು [illegible] ಗಂಟಲಲ್ಲುಂಟಾಗುವ [illegible] ಅದ್ಭುತವಾದ ಮತ್ತು [illegible] ಗುಣವನ್ನುಂಟುಮಾಡುವದು. [illegible] ಈ ತೈಲವು [illegible] ಕುದುರೆ [illegible], ಬೇಟೆಯಾಡುವವರು, [illegible] ಮುಂತಾದವರಿಗೆಲ್ಲ ಅಮೂಲ್ಯವಾದದ್ದು.

ಪರಿಶೀಲಕರ ಅಭಿಪ್ರಾಯವು.

ಐರ್ಲ್ಯಾಂಡ್ ದೇಶದ ಫಾರ್ಮಸ್ಯೂಟಿಕಲ್ ಸೊಸೈಟಿಯೆಂಬ [illegible] ಲಂಡನ್ [illegible] ಸೊಸೈಟಿ ಯೆಂಬ [illegible] "[illegible] ಲ್ ವಾಟರ್ಸ್ ಆಫ್ ಯೂರೋಪ್" ಎಂಬ ಗ್ರಂಥಕರ್ತರೂ, [illegible] ಇರುವ ಪ್ರೊಫೆಸರ್ ಟಿಚ್ ಬೋರ್ನ್ (C. R. Tichborne, LL.D., F.C.S., M.R.I.A.) [illegible]

[illegible] ಈ ತೈಲವು [illegible]

ಇದರ ಕ್ರಯ—ಸೀಸೆ ಒಂದಕ್ಕೆ ೧ ರೂಪಾಯಿ

[illegible]

AGENTS— } Messrs, J. West, Chemist, &c., Bangalore.
Captain & Co. Chemists, Bangalore.
Biggs & Co, Chemists, Bangalore; and of
Mahomed Yousuf and Sons, The Cash Bazar, Bangalore
A. C. Berryman & Co.,
20 Sambodose Street Madras.

NOTICE.

VAIDYASARA SANGRAHA

A TREATISE ON THE PRINCIPLES OF

HINDU MEDICINE

☞ Price including Postage Rs 5 6 0

ವೈದ್ಯಸಾರ ಸಂಗ್ರಹ.

ಈಗುಂಭಾಪೇಕ್ಷೆಯುಳ್ಳವರು ಮೊಬಲಗಿನೊಡನೆ ಈ ಕೆಳಗೆ ರುಜುಮಾಡಿರತಕ್ಕವರ ಹೆಸರಿಗೆ ಬರೆಯುಕೊಂಡರೆ ಪುಸ್ತಕ ಕೂಡಲೇ ಕಳುಹಿಸಲ್ಪಡುವದು. ಮೊಬಲಗು ಇಲ್ಲದೆ ದರಖಾಸ್ತುಗಳಿಗೆ ಸುತರಾಂ ಸಿಗೇಕೊಡಲ್ಪಡಲಾರದು.

ಇದರ ಕ್ರಯ ... ...ರೂ|| ೫—೬—೦
ಪ್ಯಾಕಿಂಗ್ ಮತ್ತು ಅಂಚೇಖರ್ಚು, ೦—೬—೦

ಟಿ. ಬಿ. ವೆಂಕಟಾಚಾರ್,
ಆಸ್ಪತ್ರಿ ರೋಡು ಬೆಂಗಳೂರು.

ವಿಶೇಷ ವರ್ತಮಾನ



[illegible]

ನೋಟೀಸು.

ಅಪ್ಪೇಗ್ ಜಾಬತು [illegible] !
[illegible] ಮಾಡುವ ದಂತಭಸ್ಮ ! !
ಅನೇಕ ಸುಗುಣಗಳುಳ್ಳ ಸುಗಂಧರಾಜ ತೈಲವು ! ! !
[illegible] ಮತ್ತು ಬಿಸ್ಕಿಟ್ಸ್ [illegible]

[illegible] ಸುಗಂಧರಾಜ ತೈಲವು ರಾತ್ರಿ ಹಗಲು [illegible] ಕಮಿಷ್ಣ ಚಾರ್ಜಿಗೆ ಸಿಕ್ಕುವದು. ಏಜೆಂಟ್ [illegible] ಬೆಂಗಳೂರು ದೊಡ್ಡಪೇಟೆ [illegible]

ನೋಟೀಸು.

ಇದರಿಂದ ಸರ್ವರಿಗೂ ತಿಳಿಯಪಡಿಸುವದೇನೆಂದರೆ. ಸನ್ ೧೮೮೯ನೇ ಏಪ್ರಿಲ್ ಒಂದನೇ ತಾರೀಖು ಮೊದಲಾಯಿತು ಸನ್ ೧೮೯೦ನೇ ಮಾರ್ಚಿ ೩೧ನೇ ತಾರೀಖಿನವರೆಗೆ, ಹೊಸೂರು ರಿಮೌಂಟ್ ಡಿಪೋಗೆ ಇದರಡಿ ನಮೂದು ಮಾಡಲ್ಪಡುವ ಜಿನಿಸಿಗಳು ಬೇಕಾಗಿರುವವರಿಂದ ಅವುಗಳ ಸರಬರಾಯಿ ಬಗ್ಗೆ ಬರುವ ಮೊಹರ್ ಮಾಡಲ್ಪಟ್ಟ ದರಖಾಸ್ತುಗಳನ್ನು ರಿಮೌಂಟ್ ಡೆಪ್ಯೂಟಿ ಸೂಪರಿಂಟೆಂಡೆಂಟರವರು, ಸನ್ ೧೮೮೮ನೇ ಇಸವಿ ಡಿಸೆಂಬರ್ ೮ನೇ ಮಿತಿ ಶನಿವಾರ ಮಧ್ಯಾಹ್ನ ೧೨ ಘಂಟೆಯವರೆಗೆ ತೆಗೆದುಕೊಳ್ಳುವರು.

ಇದನ್ನು ಕುರಿತ ಜಾಸ್ತಿ ವಿವರ ತಿಳಿಯಬೇಕಾದವರು, ಸನ್ ೧೮೮೮ನೇ ಇಸವಿ ಅಕ್ಟೋಬರ್ ೩೧ನೇ ಮಿತಿ ೪೩ನೇ ನಂಬರ್ ಫೋರ್ಟ್ ಸೆಂಟ್ ಜಾರ್ಜ್ ಗೆಜೆಟಿನ ೨ನೇ ಭಾಗ, ೧,೬೦೦ನೇ ಪುಟವನ್ನು ನೋಡಿ ತಿಳಿದುಕೊಳ್ಳತಕ್ಕದ್ದು.

ಹುರಳಿ.
ನೆಲ್ಲುಹುಲ್ಲು.
ರಾಗಿಹುಲ್ಲು.
ಹಸಿಹುಲ್ಲು.

John Ewing, Colonel,
Suptt, Reserve Remount Depot.
ರಿಮೌಂಟ್ ಡೆಪೊ, ಹೊಸೂರು,
೫ನೇ ನವಂಬರ್, ೧೮೮೮.

ಪೋಸ್ಟಲ್ ನೋಟೀಸ್.

ಬೆಂಗಳೂರು ಪೇಟೆ ಟಪಾಲಾಫೀಸಿನಲ್ಲಿರುವ ಪೋಲೀಸ್ ಸ್ಟೇಷನಿನಲ್ಲಿ ಅಪಾಯಕರವಲ್ಲದ ತರೀಕೆ ಬಂದು ಹಾಕಿದ ಟಪಾಲ್ ಪೆಟ್ಟಿಗೆ ಇಡಲ್ಪಟ್ಟಿರುತ್ತದೆ. ಇದರಡಿ ಕಂಡ ಕಾಲಗಳಲ್ಲಿ ಅದರಿಂದ ಕಾಗದಗಳು ತೆಗೆದುಕೊಂಡು ಹೋಗಲ್ಪಡುವವು.

	ಬೆಳಿಗ್ಗೆ.	ಸಾಯಂಕಾಲ.
ಪ್ರತಿದಿನದಲ್ಲಿಯೂ,	5½ ಘಂಟೆ; 3 ಘಂಟೆ,	5 ಘಂಟೆ.
ಭಾನುವಾರದಲ್ಲಿ	5½ „	4 „

ಬೆಂಗಳೂರು, 16ನೇ ನವಂಬರ್ 1888 } H. M. D. Rozario, Postmaster.

ಆರ್ಯಸಭಾ ಪ್ರಕಟನೆ.

ಈ ಪುರದ ಶಿಕ್ಕೆ ಕೆಟ್ಟಿಯಲ್ಲಿ ಆರ್ಯ ಸಭೆಯವರ [illegible] ಮನೆಯಲ್ಲಿ [illegible] ವ್ಯಾಖ್ಯಾನ ನಡೆಯುತ್ತಿರುವದರಿಂದ ಆದಕ್ಕೆ ಸ್ವಮತ [illegible] ತೆಗೆದುಕೊಳ್ಳುವವರೆಲ್ಲರೂ [illegible] ಬರಬೇಕೆಂದು ಪ್ರಾರ್ಥಿಸುತ್ತೇವೆ.

ಸೆಕ್ರೆಟರಿಗಳು.

ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA.

MONDAY, NOVEMBER 26, 1888.

೧೮೮೮ನೇ ನವಂಬರ್ ತಾ|| ೨೬ನೇ ಸೋಮವಾರ.

THE OPENING CEREMONEY OF THE ARYA BALIKA PATHASALA.

ಈ ಶಹರ್ ನಿವಾಸಿಗಳಾದ ದೊಡ್ಡಮನುಷ್ಯರನೇಕರು ಸೇರಿ ಈಚೆಗೆ ಈವೂರಲ್ಲಿ ಸ್ಥಾಪಿಸಿದ ಆರ್ಯ ಸಭೆಯ ಪರಿಪೋಷಣೆಯಲ್ಲಿ ಈ ತಿಂಗಳ ೨೧ನೇ ತಾರೀಖ್ ಬುಧವಾರದಿನ ಬಾಲಿಕಾ ಪಾಠಶಾಲೆಯೊಂದೇರ್ಪಡಿಸಲ್ಪಡುವದೆಂದು ಕಳೆದ ವಾರದ ಈ ಪತ್ರಿಕೆಯ ಮೂಲಕ ಪ್ರಕಟಿಸಿರುತ್ತೇವೆಯಷ್ಟೆ. ಏತದರ್ಥ ಪೂರ್ವಭಾವಿಯಾಗಿ ನಿಷ್ಕೃಷ್ಟವಾಗಿದ್ದ ಗೃಹವು ತೋರಣ ಕದಳೀಸ್ತಂಭ ಲತಾದಿಗಳಿಂದಲಂಕೃತವಾಗಿ ಕಣ್ಗೊಳಿಸುತ್ತ, ನಾಗಸ್ವರ ಕ್ಯಾರ್ನೆಟಿ ಮೊದಲಾದ ವಾದ್ಯ ಘೋಷದಿಂ ನಿಬಿಡೀಕೃತವಾಗಿರುತಿರಲು ಆದಿನ ಸಾಯಂಕಾಲ ೮ ಘಂಟೆಗೆ ಸರಿಯಾಗಿ, ಈವೂರು ಮತ್ತು ಇಲ್ಲಿನ ಮಿಲಿಟರಿ ಸ್ಟೇಷನ್ ನಿವಾಸಿಗಳಾದ ನೇಟಿವ್ ಮತ್ತು ಮಹಮ್ಮದೀಯರ್ ದೊಡ್ಡಮನುಷ್ಯರು ಸಂತೋಷಪೂರ್ವಕವಾಗಿ ಯೆರಡು ಸಾವಿರ ಮಂದಿಗೆ ಮೇಲ್ಪಟ್ಟು ಶಾಲಾಮಂದಿರಕ್ಕೆ ಬಂದು ಸೇರಿದರು. ಈ ಪತ್ರಿಕೆಯಲ್ಲಿ ಸ್ಥಳ ಸಂಕೋಚದಿಂದ ಯೆಲ್ಲರ ಹೆಸರುಗಳಂ ಪ್ರಕಟಿಸುವದು ಸಾಧ್ಯವಲ್ಲವಾಗಿರುವದರಿಂದ ಅವರಲ್ಲಿ ಕೆಲವರ ಹೆಸರುಗಳಂ ಮಾತ್ರ ಇವರದಿ ತಿಳಿಸುವೆವು.–ಅವರು ಯಾರೆಂದರೆ–ಇಲ್ಲಿನ ಚೀಫ್ ಕೋರ್ಟ್ ಜಡ್ಜಿಗಳಾದ ಮೆಸ್ಸರ್ಸ್ ಟಿ. ಆರ್. ಎ. ತಂಬು ಚೆಟ್ಟರವರು, ಎ. ರಾಮಚಂದ್ರಯ್ಯರವರು, ಸಿ. ಮೀನಾಕ್ಷಿ ಅಯ್ಯರವರು, ಕಂಟ್ರೋಲರ್ ಎ. ರಂಗಸ್ವಾಮಯ್ಯಂಗಾರ್ರವರು, ಅಂಡರ್ ಸೆಕ್ರೆಟರಿ ಮಾದಯ್ಯನವರು, ಚಿತ್ರದುರ್ಗ ಡಿ ಕಾಯಂ ಡೆಪ್ಯುಟಿ ಕಮಿಷನರ್ ಖಾನ್‍ಬಹದೂರ್ ಮಹಮ್ಮದಲ್ಲೀ ಸಾಹೆಬರವರು, ಬೆಂಗಳೂರು ಟೌನ್ ಮ್ಯಾಜಿಸ್ಟ್ರೇಟರು ಸೈಯದ್ ನಸುರುದ್ದೀನ್ ಸಾಹೆಬರವರು, ಅಸಿಸ್ಟೆಂಟ್ ಕಮಿಷನರ್ ರಾಮಾನುಜಯ್ಯಂಗಾರ್ರವರು, ಅಂಚೇ ಬಕ್ಷಿ ಮರಿಗಂಗಯ್ಯನವರು, ಪೆನ್ಷನ್ ಅಸಿಸ್ಟೆಂಟ್ ಕಮಿಷನರ್ ಗಣೇಶ ಶಿಂಗರವರು, ರಿಜಿಸ್ಟ್ರೇಟಿ ದಾರ್ ರಾಮರಾವ್ ರಣನೋರೆ ಯವರು, ಸರ್ವೆ ಅಸಿಸ್ಟೆಂಟ್ ಕಮಿಷನರ್‍ಗಳಾದ ನಾನಾ ರಾಯರವರು, ಅಪ್ಪಾರಾಯರವರು, ಟಿ. ಶಾಮರಾಯರವರು, ರಾಮಸ್ವಾಮಯ್ಯಂಗಾರ್ರವರು, ಅಬ್ದುಲ್ ಕರೀಂಸಾಹೆಬರವರು, ಚೀಫ್‍ಕೋರ್ಟ್ ರಿಜಿಸ್ಟ್ರಾರ್ ಅನಂತಸ್ವಾಮಿರಾವ್ ಯವರು, ಶ್ವೇತಾದ್ರಿ ಅಯ್ಯಂಗಾರ್ರವರು, ಪರಮಶಿವಯ್ಯರವರು, ರೆಸಿಡೆನ್ಸಿ ಶಿರಸ್ತೇದಾರ್ ಕೃಷ್ಣರಾಯರವರು, ಅಡ್ವೊಕೇಟ್‍ಗಳಾದ ವೆಂಕಟ್ರಾಮಯ್ಯನವರು, ತಿಮ್ಮಕೃಷ್ಣರಾವ್ ಯವರು, ನಾರಾಯಣರಾಯರವರು, ಗರುಡಾಚಾರ್ಯರವರು, ಸುಬ್ಬರಾಯರವರು, ರಾಮಸ್ವಾಮಯ್ಯಂಗಾರ್ರವರು, ನರಸಿಂಹಯ್ಯಂಗಾರ್ರವರು, ಎಸ್. ಶ್ರೀನಿವಾಸಯ್ಯಂಗಾರ್ರವರು, ನಂಜಪ್ಪನವರು, ಚೆಂಗಲ್ರಾಯ ಮೊದಲಿಯಾರ್ರವರು, ಮುರುಗೇಶ ಮೊದಲಿಯಾರ್ರವರು, ರಾಮಸ್ವಾಮಿ ಚೆಟ್ಟರು, ಇನ್ನೂ ಬಹುಮಂದಿ ಒಂದೆರಡನೇ ಗ್ರೇಡ್ ಪ್ಲೀಡರ್‍ಗಳು, ಮುನಸಫ್ ಸುಬ್ಬರಾಯರವರು, ಈ ಶಹರ್ ಅಮಲ್ದಾರರು ಶೀತಾರಾಮಯ್ಯನವರು, ಪೆನ್ಷನ್ ಡೆಪ್ಯುಟಿ ಕಲೆಕ್ಟರ್ ಸುಬ್ಬರಾಯರವರು, ಸೆಂಟ್ರಲ್ ಕಾಲೀಜ್ ಅಸಿಸ್ಟೆಂಟ್ ಪ್ರೊಫೆಸರ್ ರಘುನಾಥರಾಯರವರು, ಮೃತ್ಯುಂಜಯ ಅಯ್ಯರವರು, ವೆಂಕಟೇಶಯ್ಯಂಗಾರ್ರವರು, ಚೀಫ್ ಕೋರ್ಟ್ ಟ್ರಾನ್ಸ್ಲೇಟರ್ ಪುಟ್ಟಣ್ಣನವರು, ಬಂಗಾಳೀ ದೇಶದಿಂದ ಬಂದಿರುವ ಬಾಬು ತ್ರೈಲೋಕ್ಯನಾಥ ಮುಕರ್ಜಿಯವರು, ಈದೇಶದಲ್ಲಿ ಪ್ರಸಿದ್ಧ ಸಾಹುಕಾರರಾದ ನೀಲಗಿರಿ ಚಿಕ್ಕಪಾಪಣ್ಣನವರು, ಆರ್ಕಾಟು ನಾರಾಯಣಸ್ವಾಮಿಮೊದಲಿಯಾರ್ರವರು, ದೊಡ್ಡಿ ವೆಂಕಟರಮಣಶೆಟ್ಟರವರು, ಚೆನ್ಸಿಲಾಲ್ ರಾಮರತನ್ ಸೇಠಿಯವರು, ಪರಮಶಿವ ಮೊದಲಿಯಾರ್ರವರು, ರಾಯಬಹದೂರ್ ಗಂಗಾಧರಶೆಟ್ಟರವರು, ವಿಜಯರಾಘವಲು ನಾಯುಡರವರು, ಮಹಾನಾಡು ಷಣ್ಮುಗಮೊದಲಿಯಾರ್ರವರು, ಕೃಷ್ಣಸಿಂಗರವರು, ಅಸಿಸ್ಟೆಂಟ್ ಸರ್ಜನ್ ಆರೋಗ್ಯಂ ಪಿಳ್ಳೆಯವರು, ಆರುಮೊಗಮೊದಲಿಯಾರ್ರವರು, ವೈದಿಕಮಂಡಲಿಯಲ್ಲಿ, ಬ್ರಹ್ಮಶ್ರೀ ವಾಸುದೇವ ಶಾಸ್ತ್ರಿಗಳವರು, ಗೋಪಾಲಶಾಸ್ತ್ರಿಗಳವರು, ಆನೆಕಲ್ ರಾಮಾಚಾರ್ರವರು, ವಿಶ್ವೇಶ್ವರ ಶಾಸ್ತ್ರಿಗಳವರು, ಶ್ರೀನಿವಾಸ ಶಾಸ್ತ್ರಿಗಳವರು, ನರಸಿಂಹಶಾಸ್ತ್ರಿಗಳವರುಮೊದಲಾದವರು ಇನ್ನು ಬಹುಮಂದಿ ಹಿಂದೂ ಮಹಮ್ಮದೀಯರ್ ಮತ್ತು ಕ್ರಿಶ್ಚಿಯನ್ ದೊಡ್ಡಮನುಷ್ಯರು ದಯಮಾಡಿದ್ದರು. ಆರ್ಯ ಸಭೆಯವರ ಪ್ರಾರ್ಥನೆಯ ಮೇರೆಗೆ ಈ ಸಂಸ್ಥಾನದ ಬ್ರಿಟಿಷ್ ರೆಸಿಡೆಂಟರಾದ ಸರ್ ಹ್ಯಾರಿ ಪ್ರೆಂಡರ್‍ಗ್ಯಾಸ್ಟ್ ಸಾಹೆಬರವರು ಈ ಸಭಾಧ್ಯಕ್ಷತೆಯಂ ವಹಿಸುವದಾಗಿ ಅಂಗೀಕರಿಸಿದ್ದಾಗ್ಯೂ ಅವರಿಗೆ ಕಾರ್ಯಾಂತರದಿಂ ತಮ್ಮ ವಾಗ್ದಾನವು ನೆರವೇರಿಸುವದಕ್ಕೆ ತಮಗೆ ಸಾಧ್ಯವಿಲ್ಲದೆಹೋದ ಅಂಶವು ಅವರು ಲಿಖಿತಮೂಲಕ ಸಭಾ ಸೆಕ್ರೆಟರಿಯವರಿಗೆ ತಿಳಿಸಲು, ಸಭ್ಯರ ಪ್ರಾರ್ಥನೆಯಂ ಅತ್ಯಾದರದಿಂ ಕೈಗೊಂಡು ಮ. ಮೀನಾಕ್ಷಿ ಅಯ್ಯರವರು ಅಗ್ರಾಸನವಂ ವಹಿಸಿದರು. ಕೂಡಲೆ ಈ ಸಂಸ್ಥಾನದ ದಿವಾನರವರಿಂದ ಮ. ರಾಮಚಂದ್ರಯ್ಯರವರ ಹೆಸರಿಗೆ ಅರ್ಧ ಘಂಟೆಗೆ ಮುಂಚಿತವಾಗಿ ಬಂದ ತಂತಿ ವೃತ್ತಾಂತವು ಸದರೀಯವರಿಂದ ಓದಲ್ಪಟ್ಟಿತು. ಅದರದೆಸೆಯಿಂದ ಪ್ರಕೃತಪ್ರಯತ್ನವನ್ನು ಶ್ರೀಮನ್ಮಹಾರಾಜರವರುಸಹ ಕೇಳಿ ಸಂತೋಷಿಸಿ, ಈ ಕಾರ್ಯಪ್ರವರ್ತಕರಿಗೆ ಶುಭವಾದವನುಗೈದಂತೆ ವ್ಯಕ್ತವಾಗುತಿದೆ. ತರುವಾಯ ಈ ಬಾಲಿಕಾ ಪಾಠಶಾಲಾಸ್ಥಾಪನಕ್ಕೆ ಉಂಟಾದ ಕಾರಣಗಳು ಕುರಿತು ಸಭಿಕರನ್ನುದ್ದೇಶಿಸಿ ಇಂಗ್ಲಿಷ್ ಭಾಷೆಯಲ್ಲಿ ಸಭೆಯ ಸೆಕ್ರೆಟರಿಗಳಾದ ಮ. ಶ್ರೀನಿವಾಸೈಯಂಗಾರ್ರವರಿಂದಲೂ, ಕನ್ನಡದಲ್ಲಿ ಮ. ಎ ಗೋಪಾಲಾಚಾರ್ರವರಿಂದಲೂ, ಎರಡು ವಿಜ್ಞಾಪನ ಪತ್ರಿಕೆಗಳು ಓದಲ್ಪಟ್ಟುವು. ಅವುಗಳ ಪೈಕಿ ಕನ್ನಡ ಭಾಗವನ್ನಿದರಡಿ ಪ್ರಕಟಿಸುತ್ತೇವೆ.—

ಬೆಂಗಳೂರು ಆರ್ಯಸಭಾ.

ಬೆಂಗಳೂರು ಆರ್ಯ ಸಭೆಯವರು ಮಹಾಜನರನ್ನು ಪ್ರಾರ್ಥಿಸುವದೇನೆಂದರೆ.—

ಮಹನೀಯರೆ,—

ಬೇರೆಯವರಲ್ಲಿ ಪ್ರಮುಖರಾದ ವಿದ್ಯಾವಂತರು ತಮ್ಮ ದೇಶದ ಸ್ತ್ರೀ ಪುರುಷರ ಸುಖಾಭಿವೃದ್ಧಿಗಾಗಿ ತಾವು ಭಾರವನ್ನು ವಹಿಸಿ ನೆರವೇರಿಸಬೇಕಾದ ಕರ್ತವ್ಯಗಳು ಲೋಕದಲ್ಲಿ ಅನೇಕವುಂಟೆಂಬ ಅಭಿಪ್ರಾಯವು ನಮ್ಮ ಗೋಷ್ಠಿಯಲ್ಲಿರತಕ್ಕ ಆಲೋಚನಾಪರರ ಮನಸ್ಸಿನಲ್ಲಿ ಬಹುಕಾಲದಿಂದ ನೆಲೆಗೊಂಡು ವೃದ್ಧಿಯನ್ನುಹೊಂದುತಲಿರುವದು. ಸಕಲ ಧರ್ಮಾಚಾರಗಳಿಗೂ ವಿರುದ್ಧವಾಗದ ಮತ್ತು ದೇಶಕಾಲಾನುಗುಣವಾಗಿರತಕ್ಕ ವಿದ್ಯಾಭ್ಯಾಸ ಕ್ರಮವೊಂದನ್ನು ಸ್ಥಾಪಿಸಿ, ವಿಶದತೆಯಿಂದ ಅದನ್ನು ಪ್ರಯತ್ನಪೂರ್ವಕವಾಗಿ ಪೋಷಿಸುವಂತಾ ಕರ್ತವ್ಯವು ಋಣತ್ರಯವಿಮೋಚನೆಗೆ ಸಮಾನವಾದದ್ದು ಮುಖ್ಯವನ್ನುಹೊಂದಿರುತ್ತೆ. ಲೋಕಸಮ್ಮತವಾದ ಈ ನಿರ್ಣಯವನ್ನು ಕಾರ್ಯತಃ ನಿರ್ವಹಿಸುವದಕ್ಕಾಗಿ ಬೆಂಗಳೂರು ಆರ್ಯಸಭೆಯೆಂಬ ಹೆಸರನ್ನಿಟ್ಟು ಒಂದು ಸಭೆಯನ್ನು ಸ್ಥಾಪಿಸಿರುತ್ತೇವೆ. ಈ ಸಭೆಯ ಕಾರ್ಯವು, ಅಲ್ಪಗಳಾದ ನಮ್ಮ ಪ್ರಯತ್ನಗಳು ಸಾಗುವ ಮಟ್ಟಿಗೂ, ಹಿಂದೂಜನರ ಕುಲಾಚಾರ ವಿದ್ಯಾಭ್ಯಾಸಾದಿ ವಿಷಯಗಳನ್ನಡಗಿಸಿಕೊಂಡಿರುವದು. ಈವಿನ ಇಲ್ಲಿ (ಶಿದ್ದೀಕಟ್ಟೆಯಲ್ಲಿ) ಶ್ರೀಮನ್ ಮೈಸೂರು ಮಹಾರಾಣೀಯವರ ಬಾಲಿಕಾ ಪಾಠಶಾಲೆಯ ಕ್ರಮವನ್ನನುಸರಿಸಿ ಆರ್ಯಬಾಲಿಕಾ ಪಾಠಶಾಲೆಯೆಂಬ ಹೆಸರಿನಿಂದ ಈ ಪಾಠಶಾಲೆಯನ್ನುಸ್ಥಾಪಿಸುವದು ಈ ಸಭೆಯವರ ಮಹತ್ಪ್ರಯತ್ನದಲ್ಲಿ ಪ್ರಥಮ ಕರ್ತವ್ಯವೆಂದು ಭಾವಿಸಿರುತ್ತೇವೆ. ನಮ್ಮ ಬಾಲಿಕೆಯರವಿದ್ಯಾಭ್ಯಾಸವನ್ನು ನಾವುಗಳೇ ಲೋಕಸಮ್ಮತವಾಗಿ ನಡಿಸತಕ್ಕದ್ದು ಅತ್ಯವಶ್ಯಕವಾದದ್ದಲ್ಲವೆ? ಮಕ್ಕಳ ಸೌಜನ್ಯ ನೈಪುಣ್ಯಗಳಿಗೆ ತಾಯಿಯರೇ ಕಾರಣಭೂತರೆಂಬದು ಮೊದಲಿನಿಂದಲೂ ಲೋಕಪ್ರಸಿದ್ಧವಾಗಿಲ್ಲವೆ? ಬಾಲ್ಯಾವಸ್ಥೆಯಲ್ಲಿ ಹೇಳಿಕೊಟ್ಟದ್ದನ್ನು ಮನಸ್ಸು ಅತ್ಯಾತುರದಿಂದ ಯುಕ್ತಾಯುಕ್ತ ವಿವೇಚನೆಯಿಲ್ಲದೆ ಗ್ರಹಿಸುವದೆಂಬುವದನ್ನು ಸಕಲರೂ ತಿಳಿದಿರುತ್ತಾರೆ. ಬಾಲ್ಯಾವಸ್ಥೆಯಂ ಕಳೆದು ಬಾಲಿಕೆಯರು ಸ್ವಗೃಹಗಳಲ್ಲಿ ಯಜಮಾನಿಯರಾಗಿ ಮಕ್ಕಳನ್ನು ಪೋಷಿಸಿಕೊಂಡು ಪತಿಸೇವೆ, ಅತಿಥಿಸತ್ಕಾರಾದಿ ಗೃಹಕೃತ್ಯಗಳನ್ನು ಸ್ವಕುಲದಮರ್ಯಾದೆಗಳಿಗೆ ಅನುಸಾರವಾಗಿ ನಿರ್ವಹಿಸುವದಕ್ಕೆ ಬೇಕಾದಂತಾ ವಿದ್ಯಾಭ್ಯಾಸವನ್ನು ಏರ್ಪಡಿಸಿ ಅದನ್ನು ವೃದ್ಧಿಪಡಿಸುವದಕ್ಕಾಗಿ ಎಷ್ಟು ಪ್ರಯತ್ನಗಳನ್ನು ಮಾಡಿದರೂ ಸಾಲದೆಂದು ಹೇಳಬೇಕಾಗಿರುವದು. ಇಂತಾ ಸತ್ಕಾರ್ಯದಲ್ಲಿ ನಮ್ಮ ವಿಬುಧಶಿರೋಮಣಿಗಳ ಸಹಾಯವನ್ನು ನಾವು ಪಡೆದಿರುವದು ನಮ್ಮ ಪುರಾಕೃತ ಪುಣ್ಯ ಪರಿಪಾಕವೆಂದೆಣಿಸಬೇಕಾಗಿದೆ. ಅಂತಾ ವಿಬುಧ ಶಿರೋಮಣಿಗಳು ಇಲ್ಲಿ ಇಷ್ಟು ವಿಶೇಷವಾಗಿ ಅನುಗ್ರಹಿಸಿ ದಯಮಾಡಿರುವದು ಮೇಲೆ ಹೇಳಿದ್ದನ್ನು ಸಂಪೂರ್ಣವಾಗಿ ಸ್ಥಾಪಿಸುವದು.

ದೈವಕೃಪೆಯಿಂದ ಇಂತಾ ಪಾಠಶಾಲೆಗಳು ಈ ಶೀಮೆಯ ಇತರ ಭಾಗಗಳಲ್ಲಿ ಸ್ಥಾಪಿತವಾಗುವಂತೆ ಸಹಾಯ ಮಾಡಬೇಕೆಂಬದೂ, ನಮ್ಮ ದೇಶೀಯರ ಐಹಿಕಾಮುಷ್ಮಿಕ ಸುಖಾಭಿವೃದ್ಧಿಗೆ ತಕ್ಕ ಏರ್ಪಾಡುಗಳನ್ನು ಮಾಡಬೇಕೆಂಬದೂ ನಮ್ಮ ಅಭಿಮತವಾಗಿರುತಿದೆ. ಈ ಮಹತ್ಪ್ರಯತ್ನದಲ್ಲಿ ಸಾಧ್ಯವಾದಷ್ಟನ್ನು ನೆರವೇರಿಸುವದಕ್ಕಾಗಿ ಹಿಂದೂ ಮತಸ್ಥರಾದ ನಮ್ಮ ಮಹನೀಯರ ವಿಶ್ವಾಸವನ್ನೂ ಪ್ರೋತ್ಸಾಹವನ್ನೂ ಬಹು ವಿನಯದಿಂದ ಪ್ರಾರ್ಥಿಸುತ್ತೇವೆ.

ಯಶೋವಂತರಾದ ನಮ್ಮ ಅಗ್ರಾಸನಾಧಿಪತಿಗಳು ಈ ಆರ್ಯ ಬಾಲಿಕಾ ಪಾಠಶಾಲೆಯು ಸ್ಥಾಪಿತವಾಯಿತೆಂದು ಈಗ ಪ್ರಸಿದ್ಧಪಡಿಸಬೇಕೆಂದು ಬೇಡಿಕೊಳ್ಳುತ್ತೇವೆ.

ಎ. ಗೋಪಾಲಾಚಾರ್ಯ,
ಎಲ್. ಶ್ರೀನಿವಾಸಯ್ಯಂಗಾರ್,
ಆನರರಿ ಸೆಕ್ರೆಟರಿಗಳು.

ಸಭಾಧ್ಯಕ್ಷರು ಸಭ್ಯರು ಅಧಿಕರಿಸಿ ತಿಳಿಸಿದ್ದೇನೆಂದರೆ—

ಈ ಶುಭಸಂದರ್ಭದಲ್ಲಿ ಅಗ್ರಾಸನವಂ ವಹಿಸುವಂತೆ ತಾವು ನನ್ನನ್ನಪೇಕ್ಷಿಸುವದರಮೂಲಕ ನನಗೆ ಉಂಟುಮಾಡಿದ ಗೌರವಕ್ಕಾಗಿ ನಾನು ತಮ್ಮ ವಿಷಯದಲ್ಲಿ ಬಹಳ ಕೃತಜ್ಞನಾಗಿರುತ್ತೇನೆ. ಇದಕ್ಕೆ ಕೆಲವು ನಿಮಿಷಗಳ ಹಿಂದಿನವರಿವಿಗೆ ಪ್ರಖ್ಯಾತಚಾರಿತ್ರರಾದ ಜನರಲ್ ಸರ್ ಹ್ಯಾರಿ ಪ್ರೆಂಡರ್ಗ್ಯಾಸ್ಟ್ ಸಾಹೆಬರವರು ಅಗ್ರಾಸನವಂ ವಹಿಸುವರೆಂದು ನಾವೆಲ್ಲರು ನಿರೀಕ್ಷಿಸುತಲಿದ್ದೆವಷ್ಟೆ. ಸದರೀ ದೊಡ್ಡಮನುಷ್ಯರು ಬರುವದಕ್ಕೆ ಉಂಟಾದ ಅನಾನುಕೂಲವನ್ನು ನನ್ನ ಸ್ನೇಹಿತರಾದ ಮೆ|| ರಾಮಚಂದ್ರಯ್ಯರವರು ತಮಗೆ ತಿಳಿಸಿಯಿರುತ್ತಾರೆ. ಪ್ರಕೃತ ನಮ್ಮ ಪ್ರಯತ್ನವು ಇಲ್ಲಿನ ಕೆಲವು ಪಾಠಶಾಲೆಗಳಿಗೆ ಪ್ರತಿಯಾಗಿ ಮಾಡಲ್ಪಟ್ಟಿದೆಯೆಂಬ ಭಾವವು ಕೆಲವು ಸ್ಥಳಗಳಲ್ಲಿ ತಲೆದೋರಿರುತಿದೆ, ಅದು ಯಥಾರ್ಥವಾದದ್ದೋ ಅಥವಾ ಅಬದ್ಧವಾದದ್ದೋ, ಪರಂತು ಇಲ್ಲಿನ ಕೆಲವು ವೃತ್ತಾಂತಪತ್ರಿಕೆಗಳು ಅದಂಕುರಿತು ಚರ್ಚಿಸುತಲೂ ತನ್ಮೂಲಕ ಪ್ರಕಟಿಸುತಲೂಯಿವೆ. ಇಂತಾ ಸಂದರ್ಭದಲ್ಲಿ ಸರ್ ಹ್ಯಾರೀ ಪ್ರೆಂಡರ್ಗ್ಯಾಸ್ಟ್ ಯವರು ಈ ಪ್ರಯತ್ನಕ್ಕೆ ಸಂಬಂಧಪಡುವದಕ್ಕೆ ಇಷ್ಟವಿಲ್ಲದವರಾದದ್ದು ಸಹಜವಾಗಿದೆ. ಮೇಲಿನಪ್ರವಾದವು ತಪ್ಪಾದದ್ದೆಂತಲೂ ಭ್ರಾಂತಿಜನ್ಯವಾದದ್ದೆಂತಲೂ ನಾನು ದೃಢವಾಗಿ ಹೇಳುವೆನು. ನಮ್ಮಮಕ್ಕಳಿಗೆ ವಿದ್ಯಾಭ್ಯಾಸವಂ ಗೈಸುವವಿಷಯದಲ್ಲಿ ತಕ್ಕ ಏರ್ಪಾಡುಗಳಂ ಮಾಡುವದಕ್ಕಾಗಿ ನಾವಿಲ್ಲಿ ಸಭೆಸೇರಿರುತ್ತೇವೆಯಲ್ಲದೆ ಕಲಹಾರಂಭಕ್ಕಲ್ಲವು. ಈಗ ನಾವು ಅತಿ ಮುಖ್ಯವಾದ ಮತ್ತು ಲೋಕೋಪಕಾರಕವಾದ ಕಾರ್ಯವಂ ಮಾಡಲಾರಂಭಿಸಿರುತ್ತೇವೆ. ನಮ್ಮ ಕರ್ತವ್ಯವಲ್ಲಿ ಬಹುಕಾಲದವರೆಗೂ ನಾವು ಅಶ್ರದ್ಧೆಯಂ ತೋರಿಸಿ, ಅದು ಹಿಂದೂಗಳಲ್ಲದವರ ಕೈಗೆ ಒಪ್ಪಿಸಿದ್ದು ನಮಗೆ ಅಗೌರವವಾದ ಕಾರ್ಯವೆಂದು ನಾವು ಒಪ್ಪಿಕೊಳ್ಳಬೇಕಾಗಿರುತಿದೆ. ಅಂತಾ ಕಾರ್ಯವನ್ನು ನಾವೇ ವಹಿಸತಕ್ಕದ್ದು ಅವಶ್ಯಕವೆಂದು ಈಗ ನಮಗೆ ತೋರಿರುತಿದೆ. ದೊಡ್ಡಮನುಷ್ಯರೆ, ಹೀಗಿರುವಲ್ಲಿ ನಾವು ಅನ್ಯರಪ್ರಯೋಜನಕ್ಕೆ ಭಂಗಕಾರಿಯಾದ ಕಾರ್ಯ ಯಾವದನ್ನಾದರೂ ಮಾಡುತಲಿರುತ್ತೇವೆಂದು ಹ್ಯಾಗೆ ಹೇಳುವದಕ್ಕಾಗುವದು ? ಅನ್ಯರ ಪ್ರಯತ್ನಗಳಿಗೆ ಯಾವಭಾಗದಲ್ಲಿ ನಾವು ವಿಘ್ನಕಾರಿಗಳಾಗುತ್ತೇವೆ ? ನಾವು ಮಾಡುವಪ್ರಯತ್ನಗಳು ಯಾವಾಗಲೂ ಒಬ್ಬುದ ಸ್ವಭಾವಗಳುಳ್ಳವೆಂತಲೂ, ಅನೇಕ ಕಾರ್ಯಗಳಿಗೆ ಪ್ರಾರಂಭಿಸುತ್ತೇವೆಯೇಹೊರತು ಒಂದನ್ನೂ ಊರ್ಜಿತವಾಗಿ ಮಾಡುವದಿಲ್ಲವೆಂತಲೂ ನಮ್ಮವಿಷಯದಲ್ಲಿ ಅಸೂಯಾಳುಗಳಾದವರು ಆಗಿಂದಾಗ್ಯೆ ಹೇಳಿಕೊಳ್ಳುತಲಿದಾರೆ. ಈ ಭಾಗದಲ್ಲಿ ಅವರಮಾತು ಅಸೂಯಾಜನಕವಾದದ್ದೆಂತಲೂ ಸುಳ್ಳೆಂತಲೂ ನಾವು ನಿರೂಪಿಸಬೇಕು. ಈ ಪಾಠಶಾಲಾಕಾರ್ಯವು ಪ್ರಾರಂಭಿಸಲ್ಪಟ್ಟಿತೆಂದು ಹೇಳುವದರೊಡನೆ ಇದರಮೂಲಕ ಅನೇಕ ಹಿಂದೂಕುಟುಂಬಗಳಿಗೆ ನಿಸ್ಸಂಶಯವಾದ ಸುಖಸಂತೋಷಗಳುಂಟಾಗಬೇಕೆಂದು ಆಂತರವಾಗಿ ಕೋರುವೆನು, ಎಂಬದು.

ತರುವಾಯ ಪಂಡಿತ ಬ್ರಹ್ಮಶ್ರೀ ಗೋಪಾಲ ಶಾಸ್ತ್ರಿಗಳವರು ಹೇಳಿದ್ದೇನೆಂದರೆ:—"ಲೋಕದಲ್ಲಿ ಪುರುಷರ ವಿದ್ಯಾಭ್ಯಾಸವು ಹ್ಯಾಗೆಶಾಸ್ತ್ರಸಮ್ಮತವಾಗಿರುತಿದೆಯೋ ತದ್ವತ್ ಸ್ತ್ರೀವಿದ್ಯಾಭ್ಯಾಸಕ್ಕೆ ಶಾಸ್ತ್ರಾಧಾರವು ಇರುವದಿಲ್ಲವು. ಹೀಗಿದ್ದಾಗ್ಯೂ ಈಚೆಗೆ ಕೆಲವು ಸಂವತ್ಸರಗಳ ಮೊದಲು, ವರ್ತಮಾನ ಕಾಲಿಕರ ಅಭಿರುಚಿಗೆ ಅನುಗುಣವಾಗಿ, ಪುರುಷರಂತೆಯೇ ಸ್ತ್ರೀಯರಿಗೂ ವಿದ್ಯಾಭ್ಯಾಸ ಮಾಡಿಸುವದು ಅವಶ್ಯಕರಣೀಯ್ಯವೆಂಬ ಭಾವವು ತಲೆದೋರಿ ಅದಕ್ಕಾಗಿ ಅಲ್ಲಿಯಲ್ಲಿ ಪಾಠಶಾಲೆಗಳುಏರ್ಪಟ್ಟು ಹಿಂದೂ ಬಾಲಿಕೆಯರಿಗೆ ವಿದ್ಯಾಭ್ಯಾಸಪಡಿಸಲ್ಪಡುತಬರುತಿದೆ. ಸ್ತ್ರೀಯರಿಗೆ ಸಹಜಗುಣಗಳಾಗಿರುವ ಈರ್ಷ್ಯಾ, ಅಸೂಯಾ, ಪೈಶುನ್ಯ, (ಅಂದರೆ ಚಾಡೀ ಹೇಳುವಿಕೆ) ರಾಗ, ಲೋಭ, ಪಕ್ಷಭೇದ, ಪರಾಪವಾದ, ಗುರುಜನ ತಿರಸ್ಕಾರ ಮೊದಲಾದ ಉಭಯಲೋಕಭೋಗ ಪ್ರತಿಬಂಧಕಗಳಾದ ಅನೇಕ ದುರ್ಗುಣಗಳಿರುತಿವೆಯಾಗಿ ಇವುಗಳ ನಿವೃತ್ತಿಗೂ, ಅವರಿಗೆ ಸಹಜವಾಗಿರುವ ಲಜ್ಜಾ, ಭಯ, ಆಚಾರ, ಕುಲಧರ್ಮ, ಇವುಗಳಿಗೆ ಲೋಪ ಬರದಂತೆಯೂ, ಅವರ ಪಾಠಶಾಲಾ ವಿದ್ಯಾಭ್ಯಾಸಕಾಲವನ್ನು ಹನ್ನೆರಡು ವರುಷಗಳಿಗೆ ಮಿತಪಡಿಸಿಯೂ ಯಾವರೀತಿಯಲ್ಲಿ ಅವರಿಗೆ ವಿದ್ಯೆಯಂ ಕಲಿಸುವದುಚಿತವೋ ಅದನ್ನು ಚೆನ್ನಾಗಿ ಪರಿಭಾವಿಸಿ ಅದಕ್ಕೆ ತಕ್ಕ ಏರ್ಪಾಡುಗಳಂ ಮಾಡಬೇಕಾದ್ದು ಅವಶ್ಯಕರಣೀಯ್ಯವು. ಸ್ತ್ರೀಷುದುಷ್ಟಾಸುವಾರ್ಷ್ಣೇಯ ಜಾಯತೇ ವರ್ಣಸಂಕರಃ ಎಂಬಂತೆ ಪುರುಷಾಪೇಕ್ಷೆಯಾ ಸ್ತ್ರೀದೋಷವೇ ಜಾತಿಸಂಕರಕ್ಕೆ ಕಾರಣವಾಗಿರುತಿದೆಯಾಗಿ ಅದರಿಂದುಂಟಾಗುವ ಐಹಿಕ ನಿಂದೆ, ಆಮುಷ್ಮಿಕ ನರಕಯಾತನೆಗೆ ಹೆಣ್ಣುಮಕ್ಕಳ ಮಾತಾಪಿತೃಗಳೇ ಗುರಿಯಾಗುವರು," ಎಂಬದು.

ಅನಂತರ ಬ್ರಹ್ಮಶ್ರೀ ಪಂಡಿತ ಆನೆಕಲ್ ರಾಮಾಚಾರ್ರವರು ತಿಳಿಸಿದ್ದೇನಂದರೆ:—

ಹಿಂದೂ ದೇಶವೆಂದು ಪ್ರಸಿದ್ಧವಾದ ಈ ದೇಶದಲ್ಲಿ ಆರ್ಯಾವರ್ತವೆಂಬ ವಿಂಧ್ಯ ಹಿಮಾಚಲಗಳ ಮಧ್ಯವರ್ತಿಯಾದ ದೇಶದಲ್ಲಿ ಬ್ರಹ್ಮ ಕ್ಷತ್ರಾದಿ ವರ್ಣಭೇದವೂ, ಬ್ರಹ್ಮಚರ್ಯಾದ್ಯಾಶ್ರಮ ಭೇದವೂ, ತತ್ತದ್ವರ್ಣಾಶ್ರಮೋಚಿತ ಆಚಾರ ವಿಶೇಷಗಳೂ ವ್ಯತ್ಯಾಸವಿಲ್ಲದಂತೆ ತತ್ತದ್ವರ್ಣಾಶ್ರಮಿಗಳಿಂದ ಅವಶ್ಯ ಕರ್ತವ್ಯವೆಂದು ವೇದ, ತದ

ಸಾರಿ ಮನ್ವಾದಿ ಸ್ಮೃತೀತಿಹಾಸ ಪುರಾಣಾದಿಗಳಿಂದ ದೃಢತರವಾಗಿ ನಿಶ್ಚಿತವಾಗಿರುತಿದೆ. "ಶ್ರುತಿಸ್ಮೃತಿರ್ಮಮೈವಾಜ್ಞಾ ಯಸ್ತಾಮುಲ್ಲಂಘ್ಯ ವರ್ತತೇ । ಆಜ್ಞಾಚ್ಛೇದೀ ಮಮ ದ್ರೋಹೀ ನಿರಯಾರ್ಣವ ಪ್ರತಿಪದ್ಯತೇ ॥" ಇತ್ಯಾದಿ ವಚನಗಳಿಂದ ಅವಶ್ಯ ಕರ್ತವ್ಯವಾದದ್ದು. ಕರ್ತವ್ಯವನ್ನು ಮಾಡದೆ ಹೋದರೆ ಅನರ್ಥ ಪ್ರಾಪ್ತಿಯು ಅನಿವಾರಣೀಯವಾದದ್ದು. ಹೀಗಿರುವಲ್ಲಿ ಹಿಂದೂ ಸ್ತ್ರೀ ಜನಗಳಿಗೆ ವಿದ್ಯಾಭ್ಯಾಸವೆಂಬುವದು ಯುಕ್ತವೆ ಅಯುಕ್ತವೆ ಯೆಂತ ವಿಮರ್ಶೆ ಮಾಡುವಲ್ಲಿ "ಸ್ತ್ರೀಶೂದ್ರೌನಾಧೀಯಾತಾಂ" ಎಂಬ ಶಾಸ್ತ್ರಾನುಸಾರ ಸ್ತ್ರೀಯರಿಗೆ ವೇದಾಧ್ಯಯನಾದಿಗಳು ನಿಷಿದ್ಧವೇ ಸರಿ. ಶಚೀದೇವಿ ಮೊದಲಾದ ದೇವತಾ ಸ್ತ್ರೀಯರುಗಳಿಗೂ, ಮೈತ್ರೇಯಿ ಮೊದಲಾದ ಉತ್ತಮ ಋಷಿಸ್ತ್ರೀಯರಿಗೂ ವೇದವಿದ್ಯಾಧಿಕಾರ ಸ್ಮೃತಿಯಲ್ಲಿ ಪ್ರಸಿದ್ಧವಾಗಿದ್ದರೂ ತಾದೃಶ ಸ್ತ್ರೀ ಸಾದೃಶ್ಯವಿಂದ ಅನೇಕ ಜನ್ಮ ದೋಷಾದಿ ದುಷ್ಟರಾದ, ಆಚಾರಹೀನರಾದ, ಅವಿಮುಗ್ಧರಾದ ಈ ಸ್ತ್ರೀ ಜನರಿಗೆ ಅಂತಾ ವೇದ ವಿದ್ಯಾಧಿಕಾರವು ದುರ್ಲಭವೆಂದು ತಿಳಿಯಬಹುದು, ಯಾಕೆಂದರೆ,— "ಪತಿಂಯಾನಾತಿಚರತಿ ಮನೋವಾಕ್ಕಾಯಸಂಯತಾ ॥ ಸಾಭರ್ತೃಲೋಕಮಾಪ್ನೋತಿ ಸದ್ಭಿಃ ಸಾಧ್ವೀತಿಚೋಚ್ಯತೇ" ಇತಿ ಸ್ಮೃತಿಸಿದ್ಧ ಲಕ್ಷಣ ವಿಶಿಷ್ಟವಾದ ಪಾತಿವ್ರತ್ಯವುಳ್ಳ ಸ್ತ್ರೀಯರು ಪ್ರಾಯೇಣ ಈ ಯುಗದಲ್ಲಿ ದುರ್ಲಭರಾಗಿ ಕಾಣುತ್ತಾರಾಗಿ ಪತಿವ್ರತೆಯರಾದ ಸ್ತ್ರೀಯರಿಗೆ ವೇದವಿದ್ಯಾಧಿಕಾರವು ದೂರಾದೂರವಾದಾಗ್ಯೂದರೂ, ಮತ್ತು "ಸ್ತ್ರೀಣಾಂಚ ಪತಿದೇವಾನಾಂ ತಚ್ಛುಶ್ರೂಷಾನುಕೂಲತಾ ॥ ತದ್ಬಂಧುಷ್ವನುವೃತ್ತಿಶ್ಚ ಧರ್ಮಶ್ಚ ಯೋಷಿತಾಂ" ಎಂಬ ವಚನಾನುಸಾರ ಪತಿಶುಶ್ರೂಷೆಯು ಶ್ರೇಷ್ಠವಾದ ಜ್ಞಾನಸಾಧನವಾದದ್ದು ಅವಶ್ಯಕವೆಂಬುವದು ಆಲೋಚನಾರ್ಹವೇ ಸರಿ. ಇದಕ್ಕೆ ಸಾಧಕವಾದದ್ದು ಪುರಾತನ ಸ್ತ್ರೀಜನರುಗಳ ಪ್ರಸ್ತುತ ಸಂಪ್ರದಾಯವೇ ಇಂದಿನವರಿಗೂ ಸಾಗಿರುವಲ್ಲಿ ಐಹಿಕವಿದ್ಯೆ ಈಕಾಲದಲ್ಲಿ ಅತಿಶಯಿತ ಪ್ರಭುತ್ವವನ್ನು ವಹಿಸಿರುವ ಯೂರೋಪದವರ ಸಂಬಂಧವುಳ್ಳವರು ಕೆಲವು ವಿಷಯಗಳಿಂದ ಬಾಲಿಕಾ ಪಾಠಶಾಲೆಗಳನ್ನೇರ್ಪಡಿಸಿರುವಲ್ಲಿ ಅಸ್ಮದ್ದೇಶೀಯ ಮಹಾರಾಜರೂ ಮಹೀಶೂರಲ್ಲಿ ಬಾಲಿಕಾ ಪಾಠಶಾಲೆಗಳನ್ನು ಏರ್ಪಡಿಸುವದರಿಂದ ಅಸ್ಮದ್ದೇಶೀಯ ಜನರಿಂದಲೂ ಬಾಲಸ್ತ್ರೀಯರುಗಳಿಗೆ ವಿದ್ಯಾಭ್ಯಾಸ ಮಾಡಿಸುವಲ್ಲಿ ತತ್ಪದ್ಧತ್ಯನುಸಾರ ಸ್ತ್ರೀಯರುಗಳ ಕೃತ್ಯಗಳೇನೆಂಬುವ ಬುದ್ಧಿ ಹುಟ್ಟಬೇಕೇ ಹೊರ್ತು ದೇಶಾಂತರೀಯರಾಗಿ ಅಸ್ಮದ್ದೇಶೀಯ ಆಚಾರಕ್ಕೆ ಅನುಕೂಲವಲ್ಲದೆಯೂ, ದೇವತಾಭಕ್ತಿಗುರುಭಕ್ತಿ ಪತಿಭಕ್ತ್ಯಾದಿಗಳು ಯಥಾಕ್ರಮ ಸಂಪಾದಿಸುವದಕ್ಕೆ ಸಾಧಕವಲ್ಲದೆಯೂ, ಬಾಲ್ಯದಲ್ಲಿಯೇ ಅತಿ ಮನೋಧ್ಯಾನವನ್ನುಳ್ಳ ಪತಿದ್ವೇಷಿಯ ಸ್ತ್ರೀ ಜನಗಳನ್ನು ತವಗೆ ಸಾಧಕವಲ್ಲದ ವಿದ್ಯಾಭ್ಯಾಸಗಳಿಗೆ ಕಳುಹಿಸುವವರಿಗಿಂತಲೂ, ವರ್ಣಸಾಂಕರ್ಯ ಸಂಪಾದಕರು ಅನ್ಯರಲ್ಲವೆಂದು ಜ್ಞಾನಿಗಳಾದವರು ಆಲೋಚನೆಮಾಡಿ ಇತಃಪರವಲ್ಲಾದರೂ, ಸ್ತ್ರೀಯರಿಗೆ ಅಸ್ಮದ್ದೇಶೀಯರಿಂದ ಮಾಡಲ್ಪಟ್ಟ ಸಾವಿತ್ರೀ ಚರಿತ್ರಗಳನ್ನೂ, ಮತ್ತು ದ್ರೌಪದೀ ಮೊದಲಾದ ಪರಮ ಪತಿವ್ರತಾಗ್ರಣಿಗಳಾದವರ ಚರಿತ್ರೆಯನ್ನೂ, ಸ್ಮರಣೆಗೆ ಬರುವ ಕಥಾಪುಸ್ತಕಗಳನ್ನೂ ಪಠನ ಮಾಡುವದಕ್ಕೆ ಅನುಕೂಲವಾದ ಅಕ್ಷರಜ್ಞಾನವನ್ನುಂಟು ಮಾಡಿಕೊಡುವ ಉಪಾಯಗಳುಳ್ಳ ಪಾಠಗಳು ಯಾವದು ಮಾಡಿದಾಗ್ಯೂ ಉಚಿತವಾಗಿರುವದು. ಆದ್ದರಿಂದ ಇದಕ್ಕನುಕೂಲವಾಗಿ ಈಗ ನಿರ್ಮಾಣ ಮಾಡಿರುವ ಆರ್ಯ ಬಾಲಿಕಾ ಪಾಠಶಾಲೆಯು, ಇಂತಾ ವಿದ್ಯಾಭಿವೃದ್ಧಿ ಪ್ರಯೋಗವಾಗುವದಾಗೆ ನವೆ ನೋಣವ್ರು, ನಮಗೆ ಸಂತೋಷವಾಗಿರುತ್ತೆ.

ಬ್ರಹ್ಮಶ್ರೀ ವಾಸುದೇವಶಾಸ್ತ್ರಿಗಳು ತಿಳಿಸಿದ್ದೇನೆಂದರೆ:—

"ಹೆಂಗಳೆಯರ ಆರ್ಯಸಭಾ ಸಾಮಾಜಿಕರುಗಳಿರಾ! ನೀವು ಮಾಡಿರುವ ಸಂಕಲ್ಪವೂ ನಿಮಗೆ ಹುಟ್ಟಿರುವ ಧೈರ್ಯಸ್ಥೈರ್ಯಾದಿಗಳು ಸದಾ ಶ್ಲಾಘ್ಯವಾದವುಗಳೆಂದು ನಾನು ದೃಢವಾಗಿ ನಂಬಿದ್ದೇನೆ. ನಿಮಗೆ ಈರೀತಿಯಾಗಿ ಪ್ರೇರಕನಾದ ಭಗವಂತನನ್ನು ಕುರಿತು ಪ್ರಾರ್ಥಿಸುವೆನು. ವೃದ್ಧನಾದ ನಾನು ಮಾಡುವ ಉಪನ್ಯಾಸದಲ್ಲಿ ಯೇನಾದರೂ ವ್ಯತ್ಯಾಸವಿದ್ದರೆ ಅಂತಾ ದೋಷಗಳನ್ನು ಎಣಿಸದೆ ಉಪನ್ಯಾಸದಲ್ಲಿ ಕಂಡ ಗುಣಗಳನ್ನು ಮಾತ್ರ ಕೊಂಡಾಡುವಿರೆಂದು ಬೇಡುವೆನು. ಈ ಸ್ತ್ರೀವಿದ್ಯಾಭ್ಯಾಸವು ವೇದಶಾಸ್ತ್ರ ವಿಹಿತವಾದದ್ದೆ ಅಥವಾ ಅಲ್ಲವೆ? ಎಂಬ ವಿಷಯದಲ್ಲಿ ವೇದ ಶಾಸ್ತ್ರ ವಿಹಿತವಾದದ್ದೆಂದು ಉದಹರಿಸುವೆನು. ಬೃಹದಾರಣ್ಯಕ ವೆಂಬ ಸರ್ವಜನ ಪ್ರಸಿದ್ಧವಾದ ಶುಕ್ಲ ಯಜುಶ್ಶಾಖೆಗೆ ಸಂಬಂಧಪಟ್ಟ ಉಪನಿಷತ್ತಿನಲ್ಲಿಯೂ, ಮತ್ತು ಛಾಂದೋಗ್ಯದಲ್ಲಿಯೂ, ಮೈತ್ರೇಯ್ಯುಪನಿಷತ್ತಿನಲ್ಲಿಯೂ, ಮೈತ್ರೇಯಿ ಮತ್ತು ಗಾರ್ಗೀ ಎಂಬ ಋಷಿಪತ್ನೀರು ಉದ್ದಾಲಕಾದಿ ಬೋಧಿತವಾದ ಬ್ರಹ್ಮವಿದ್ಯಾ ವಾಕ್ಯಗಳಿಗೆ ಪಾತ್ರಭೂತರಾಗಿ ಶ್ರವಣವನ್ನು ಮಾಡಿ, ಬಳಿಕ ಮನನ ನಿಧಿಧ್ಯಾಸನ ಕ್ರಮದಿಂದ ಬ್ರಹ್ಮ ವಿದ್ಯೆಯನ್ನು ಸಂಪಾದಿಸಿದ ಹಾಗೆ ತಿಳಿಯಬರುತಿದೆ. ಪೂರ್ವದಲ್ಲಿ ವೇದ ಶಾಸ್ತ್ರಗಳನ್ನು ಓದಿ, ತದುಕ್ತ ಕರ್ಮಾನುಷ್ಠಾನಕ್ಕೆ ಉಪಯುಕ್ತವಾದ ಭೋಕ್ತೃಭೋಗ್ಯ ಪ್ರಪಂಚವು ತಿಳಿದ ಹೊರ್ತು ಅದರಲ್ಲಿ ಸಾರಾಸಾರ ವಿವೇಚನವನ್ನು ಮಾಡುವ ಬ್ರಹ್ಮವಿದ್ಯಾಭ್ಯಾಸವನ್ನು ಮಾಡುವದಕ್ಕಾಗುವದಿಲ್ಲವಾಗಿ ಮೇಲೆ ಕಂಡ ಸ್ತ್ರೀಜನರು ಪೂರ್ವದಲ್ಲಿ ವೇದಶಾಸ್ತ್ರಗಳನ್ನು ಅಭ್ಯಾಸ ಮಾಡಿದವರೆಂದು ಸ್ಪಷ್ಟವಾಗಿ ಹೇಳಬೇಕಾಗಿದೆ.

೧. ಕರ್ಮ ವಿಚಾರಮೀಮಾಂಸಾ ಶಾಸ್ತ್ರದಲ್ಲಿ ನಿಷಾದಸ್ಥಪತ್ಯಧಿಕರಣವೆಂಬ ಒಂದಾನೊಂದು ನ್ಯಾಯವಿಚಾರದಲ್ಲಿ "ಸ್ತ್ರೀಶೂದ್ರೌನಾಧೀಯಾತಾಂ" ಎಂಬ ಶ್ರುತಿ ಪ್ರಸಕ್ತವಾಗಿ ಸ್ತ್ರೀಯರುಗಳಿಗೆ ಯಾಗೋಪಯುಕ್ತ ವೇದಾಧ್ಯಯನ ವುಂಟು, ತದತಿರಿಕ್ತ ವೇದಾಧ್ಯಯನವಿಲ್ಲವೆಂದು ನಿರ್ಣಯಿಸಲ್ಪಟ್ಟಿರುತದೆಯಾಗಿ ವೇದಾಧಿಕಾರವೇ ಇರಬಹುದು ವರೆ ಸ್ಮೃತೀತಿಹಾಸ ಪುರಾಣಾದಿಗಳಂ ಅಭ್ಯಾಸ ಮಾಡುವದರಲ್ಲಿ ಯಾವವಿಧವಾದ ಪ್ರತಿಬಂಧಕವೂ ಇರಲಾರದು.

೨. ಜಾಬಾಲನೆಂಬ ಋಷಿಪುತ್ರನು ಜಬಾಲಾ ಎಂಬ ತಾಯಿಯನ್ನು ಕುರಿತು ತಮ್ಮ ಗೋತ್ರ ಸೂತ್ರಗಳೇನೆಂದು ಕೇಳಲು ನಿನ್ನ ತಂದೆ ಬದುಕಿದ್ದಾಗ ಬಹುಮಂದಿ ಬ್ರಾಹ್ಮಣರು ಮನೆಗೆ ಬರುವರು. ಪತ್ಯುಚ್ಛೆಯಿಂದ ಅವರ ಪರಿಚರ್ಯೆಯಲ್ಲಿ ನನಗೆ ಕಾಲ ಕಳೆಯಿತು, ಮತ್ತು ನಾನು ಯೌವನಸ್ಥಳಾಗಿ ಸಂಕೋಚದಿಂದ ಗಂಡನ ಗೋತ್ರ ಸೂತ್ರಗಳನ್ನು ಕೇಳಲಿಲ್ಲವು. ಇತರ ಋಷಿಪತ್ನಿಗಳಂತೆ ನಾನು ವಿಶೇಷ ಓದಲಿಲ್ಲವೆಂದು ಅನುತಾಪ ಪಡುವದರಿಂದ ಇತರ ಋಷಿ ಪತ್ನಿಯರಿಗೆಲ್ಲ ವಿದ್ಯಾಭ್ಯಾಸವುಂಟಾಗಿತ್ತೆಂದು ಗೊತ್ತಾಗುತಿದೆ.

೩. ಮತ್ತು ಅರುಂಧತೀ, ಅನಸೂಯಾ, ಲೋಪಾಮುದ್ರಾ ಮೊದಲಾದ ಋಷಿಪತ್ನೀರುಗಳೂ, ಸುಕನ್ಯಾ, ದ್ರೌಪದೀ, ಸಾವಿತ್ರೀ, ದಮಯಂತೀ ಮೊದಲಾದ ರಾಜ ಸ್ತ್ರೀಯರೂ ಪುರಾಣಗಳಲ್ಲಿ ಉದಹರಿಸಲ್ಪಟ್ಟಿರುವ ಅವರವರಚರಿತ್ರಗಳಿಂದ ವಿಶೇಷವಿದ್ಯಾವಂತರಾಗಿದ್ದರೆಂದು ವ್ಯಕ್ತವಾಗುತ್ತೆ. ಈಕಾರಣಗಳಿಂದ ಸ್ತ್ರೀಜನರಿಗೆ ವಿದ್ಯಾಭ್ಯಾಸವು ಮಾಡಿಸುವದು ನಿಷಿದ್ಧವಲ್ಲವೆಂದು ನಾನು ಸ್ಪಷ್ಟವಾಗಿ ಹೇಳುವೆನು.

ಇಂತಾ ಸ್ತ್ರೀ ವಿದ್ಯಾಭ್ಯಾಸವು ಕಲ್ಯಾದಿಯಲ್ಲಿ ೧,೦೦೦ ವರುಷ ಪರ್ಯಂತವೂ ಪ್ರಚಾರಗೊಂಡಿದ್ದಾಗ್ಯೂ ಮಧ್ಯೆ ೨೪ ಸಾವಿರ ವರುಷಗಳು ಬೌದ್ಧಪ್ರಚಾರ ಹೆಚ್ಚಾಗಿ ಹಿಂದೂ ವೇದಶಾಸ್ತ್ರಗಳು ಲುಪ್ತವಾಗಿದ್ದ ನಿಮಿತ್ತ ಗಂಡಸರೇ ವಿದ್ಯಾವಿಹೀನರಾಗಿರುವಲ್ಲಿ ಹೆಂಗಸರಿಗೆ ವಿದ್ಯಾಭ್ಯಾಸಕ್ಕೆ ಕಾರಣ ಸುತರಾಂ ಇಲ್ಲವಾಯಿತು. ಶುದ್ಧ ಸ್ವರಾಚಾರ್ಯರು ಹುಟ್ಟಿ ಬೌದ್ಧಮತ ಪ್ರಚಾರವನ್ನು ಅಡಗಿಸಿ ಹಿಂದೂವೇದಶಾಸ್ತ್ರಗಳನ್ನು ಪ್ರಚಾರಗೊಳಿಸಿದ ಬಳಿಕ ಪುರುಷರಿಗೆ ಮಾತ್ರ ವೇದಶಾಸ್ತ್ರ ಪುರಾಣಾದಿಗಳ ಅಭ್ಯಾಸ ಅನುವರ್ತಿಸಿದೆವಿನಾ ಸ್ತ್ರೀಜನರಿಗೆಂದು ಅನುವರ್ತಿಸಲಿಲ್ಲವು. ಈಚೆಗೆ ನಮ್ಮ ಆರ್ಯಾವರ್ತ ಖಂಡದಲ್ಲಿ ಇಂಗ್ಲಿಷ್ ದೌಲತ್ ಪ್ರಚಾರಗೊಂಡ ಬಳಿಕ ಅವರುಗಳು ಅಲ್ಲಲ್ಲಿ ಪಾಠಶಾಲೆಗಳನ್ನು ಕಲ್ಪಿಸಿ ವಿದ್ಯಾಭ್ಯಾಸ ಕ್ರಮವನ್ನು ಪುರುಷರಿಗೆ ಹೇರಳವಾಗಿ ಮಾಡಿ, ಈಚೆಗೆ ಅಲ್ಲಲ್ಲಿ ಸ್ತ್ರೀ ವಿದ್ಯಾಭ್ಯಾಸಕ್ಕೋಸ್ಕರ ಬಾಲಿಕಾ ಪಾಠಶಾಲೆಗಳನ್ನು ಕಲ್ಪಿಸಿದರು. ಅದನ್ನು ನೋಡಿ ನಮ್ಮಲ್ಲೂ ಕೆಲವರು ವಿರಳವಾಗಿ ಒಬ್ಬಿಬ್ಬರು ವಿದ್ಯಾಭ್ಯಾಸವನ್ನು ಆರಂಭಿಸಿದರೂ ಅದು ಸಾರ್ವಜನೀನವಾಗಲಿಲ್ಲವು. ಈಗಲೂ ದೊಡ್ಡ ಪಟ್ಟಣಗಳಲ್ಲಿ ಮಾತ್ರ ಮಿಷನ್ ಜನಗಳಿಗೆ ಸಂಬಂಧಪಟ್ಟ ಬಾಲಿಕಾ ಪಾಠಶಾಲೆಗಳು ಇರುತಿವೇ ವಿನಾ ಚಿಕ್ಕ ತಾಲ್ಲೂಕುಗಳಲ್ಲಿ ಇಲ್ಲವು. ವಿದ್ಯಾಭ್ಯಾಸದಲ್ಲಿ ಅಪೇಕ್ಷೆಯುಳ್ಳ ನಮ್ಮ ಹೆಣ್ಣು ಹುಡಗೀರು ಸದ ಸದರೀ ಪಾಠಶಾಲೆಗಳಿಗೆ ಹೋಗಿ ವಿದ್ಯಾಭ್ಯಾಸವನ್ನು ಮಾಡುವದರಲ್ಲಿ ತಪ್ಪೇನೂ ಇರಲಾರದು. ಪಾದ್ರಿ ಜನಗಳು ಆ ಪಾಠಶಾಲೆಗಳಿಗೆ ಪೋಷಕರಾಗಿದ್ದಾಗ್ಯೂ ನಮ್ಮ ಬಾಲಿಕೆಯರನ್ನು ಪ್ರೀತಿ ವಿಶ್ವಾಸಗಳಿಂದ ಕಂಡು ವಿದ್ಯಾಭ್ಯಾಸವಂ ಮಾಡಿಸಿ ಲೇಸ್ಸಾಗಿಯಾದವರಿಗೆ ಬಹುಮಾನಗಳಂ ಕೊಟ್ಟು ಪ್ರಾಯೇಣ ನಮ್ಮ ಜನಗಳಿಗೆ ಉಪಕಾರವನ್ನೇ ಮಾಡುತ್ತಾರೆ. ಆದರೆ ಸದರೀ ಪಾದ್ರಿ ಜನಗಳು ತಮ್ಮ ತಿಳುವಳಿಕೆಗೆ ಗೋಚರವಾದ ವಿದ್ಯಾ ಬುದ್ಧಿಗಳನ್ನೂ ಆಚಾರಗಳನ್ನೂ ಅಲಂಕಾರಗಳನ್ನೂ ದೈವವನ್ನೂ ಬೋಧಿಸುವರೆ ವಿನಾ ನಮ್ಮ ಹಿಂದೂ ಮತಾಚಾರಗಳನ್ನೂ, ಹಿಂದೂಮತಕ್ಕೆ ಅಭಿಮತವಾದ ದೇವರನ್ನೂ, ಸಂಪ್ರದಾಯಗಳನ್ನೂ ಬೋಧಿಸಲಾರರು. ಬೋಧಿಸಬಾರದೆಂದು ಅಂತಾ ದ್ವೇಷವೂ ಅವರುಗಳಿಗೆ ಇಲ್ಲವು. ಅವರಿಗೆ ಅವರ ಪ್ರಚಾರವಿಲ್ಲದ್ದರಿಂದಲೂ ನಮ್ಮ ಧರ್ಮಗಳು ಶ್ರೇಷ್ಠವಾದವುಗಳೆಂಬ ನಂಬಿಕೆಯಿಂದಲೂ, ನಮ್ಮ ಮತಾಚಾರಗಳನ್ನು ಓದಿಸುವದಕ್ಕೆ ನಿಮಿತ್ತ ವಿಲ್ಲವಾಯಿತು. ಹೆಣ್ಣುಹುಡಿಗಿಯರಿಗೆ ೬–೭ ವರುಷಗಳ ಪರಿವಿಗೂ ವಿದ್ಯಾಭ್ಯಾಸಕ್ಕೆ ಕಾಲವೇ ಅಲ್ಲವಷ್ಟೆ. ೧೦ ವಯಸ್ಸಾದ ಬಳಿಕ ಗಂಡನಿಗೆ ಸಂಬಂಧಪಟ್ಟ ಅವನ ಆಜ್ಞಾಪ್ರತ್ಯಾಜ್ಞೆಗಳಿಗೆ ಬದ್ಧರಾಗಿ ಸಂಸಾರಭರಣ ಮಾಡಬೇಕಾಗಿರುವದರಿಂದ ಆಗಲೂ ವಿದ್ಯಾಭ್ಯಾಸಕ್ಕೆ ಅನುಕೂಲಿಸುವದಿಲ್ಲವು. ಮಧ್ಯೆ ೩ ವರುಷಗಳ ಲಾಗಾಯತು ೧೦ ವಯಸ್ಸಿನವರಿಗೆ ಓದುವದಕ್ಕೆ ರಕ್ತ ಕಾಲವಾಗಿರುತಿದೆ. ಆ ಸಮಯದಲ್ಲಿ ನಮ್ಮ ಪಾದ್ರಿ ಜನಗಳ ಪಾಠಶಾಲೆಗಳಿಗೆ ನಮ್ಮ ಬಾಲಿಕೆಯರನ್ನು ಕಳುಹಿಸಿದರೆ ಅವರು ಸ್ವಮತಾಚಾರ ಧರ್ಮಗಳನ್ನೂ ಅವರ ಅಭಿಮತ ದೇವರನ್ನೂ ಗುರುವನ್ನೂ ಬೋಧಿಸುವರಷ್ಟೆ. ಅಂತಾ ಬಾಲ್ಯದಲ್ಲಿ ಗ್ರಹಿಸಿದ ಅಂಶವು ಯೆಂದಿಗೂ ಮರೆಯದೆ ನಮ್ಮ ಮತಾಚಾರಗಳನ್ನು ನಾವು ಬೋಧಿಸಿದಾಗ್ಯೂ ಅವುಗಳು ಹಿಂದೆಬಿದ್ದು ಮೊದಲು ಪಾದ್ರಿಗಳ ಸ್ಕೂಲ್‌ಗಳಲ್ಲಿ ಅಭ್ಯಸ್ತವಾದ ವಿದ್ಯೆಗಳು, ಆಚಾರಗಳು, ಮತಾಭಿಮಾನಗಳೇ ತಲೆದೋರುವವೇ ವಿನಾ ಬಳಿಕ ಉಪದಿಷ್ಟವಾದ ನಮ್ಮ ಧರ್ಮಗಳು ಪ್ರಚಾರಕ್ಕೆ ಬರಲಾರವು. ಬಾಲ್ಯದಲ್ಲಿ ಕಲಿತ ವಿದ್ಯೆಯು, ಸಾಯಂಕಾಲ ಆರಂಭಿಸಿದ ಮಳೆಯಂತೆ ವೃದ್ಧಿ ಯೊಂದುವದು. ಅನಂತರ ಅಭ್ಯಸ್ತವಾದ ನಮ್ಮ ಮತಾಚಾರ ಧರ್ಮಗಳು ಪ್ರಭಾತದಲ್ಲಿ ಬಂದ ಮಳೆಯಂತೆ ಕ್ಷೀಣಗಳಾಗುವವು. ಮತ್ತು ಇಂಗ್ಲಿಷಿನವರ ಪಾಠಶಾಲೆಗಳಲ್ಲಿ ಓದತಕ್ಕ ಹೆಣ್ಣು ಹುಡಗೀರು ಪ್ರಾಯೇಣ ಲಜ್ಜಾವಿಹೀನರಾಗಿರುವದಕ್ಕೆ ಕಾರಣವೇನೆಂದರೆ, ಓದಿದ ವಿದ್ಯಾಪರೀಕ್ಷಾಕಾಲದಲ್ಲೂ ಪ್ರತಿದಿನ ವಿದ್ಯಾಭ್ಯಾಸವನ್ನೂ ನೋಡುವದಕ್ಕೆ ಬರುವ ಯೂರೋಪ ಹೆಂಗಸರು ಗಂಡಸರೊಡನೆ ಪರಸ್ಪರಸ್ನೇಹದಿಂದ ಸಂಕೋಚವಿಲ್ಲದೆಬಂದು ಅವರುಗಳನ್ನು ಆಗಾಗ್ಗೆ ನೋಡುವದರಿಂದಲೂ, ಬಹುಮಾನ ಕೊಡುವ ಕಾಲದಲ್ಲಿ ತೀಕ್ಷ್ಣದೆಯಾದ ಹುಡಿಗಿಯರೆಲ್ಲ ಅಗ್ರಾಸನವನ್ನು ವಹಿಸಿದವನಿಗೆ ಪುಷ್ಪ ಮಾಲಿಕೆಯಂ ಸಮರ್ಪಿಸುವ ಅಭ್ಯಾಸದಿಂದಲೂ, ಅವರುಗಳ ಮೂಲಕವೇ ಯೂರೋಪಜನಗಳು ಉತ್ಸವಕಾಲಗಳಲ್ಲಿ ನಡೆಸುವ ಬಾಲೆಗಳಲ್ಲಿ ಪತಿಪತ್ನೀರೆಂಬ ನಿರ್ಬಂಧವಿಲ್ಲದೆಯಾವಪುರುಷನಮೇಲೆ ಇಷ್ಟವೋ ಆಪುರುಷನೊಡನೆ ಬಾತು ಆಡೋಣವೆಂಬ ಸಂಗತಿಗಳನ್ನು ಕೇಳುವದರಿಂದಲೂ, ಅಲ್ಲಲ್ಲಿ ಸೇರುವ ಯೂರೋಪ ಸ್ತ್ರೀಪುರುಷರು ಅಲ್ಲಲ್ಲಿಸೇರುವ ಸಮಾಜಗಳಲ್ಲಿ ಪತಿಯಲ್ಲದ ಇತರ ಪುರುಷರಗಳಿಂದಲೂ ಪ್ರಯೋಗಿಸುವ ಪರಸ್ಪರಾಂಗ ಸಂಪರ್ಕವನ್ನು ನೋಡಿ ಕೇಳುವದರಿಂದಲೂ ನಾಚಿಕೆಯು ತಪ್ಪಿಹೋಗುವದು. ಇದು ಯೂರೋಪಜನಗಳಿಗೆ ಸ್ವಭಾವವಾಗಿ ಇರುವದರಿಂದ ದೂಷಣೆಗೆ ಒಳಪಡದೆಯಿರುತದೆ. ನಮ್ಮ ಹಿಂದೂಮತದ ಹೆಂಗಸರುಗಳಿಗೆ ಲಜ್ಜೆಯೇ ಭೂಷಣವೆಂದು ನಮ್ಮ ವೇದಶಾಸ್ತ್ರಗಳು ಹೇಳುತವೆ. "ಅನ್ಯಥಾಭೂಷಣಂಪುಂಸಾಂ ಶವೋಲಜ್ಜೈವಯೋಷಿತಾಂ ॥ ಪರಾಕ್ರಮಃ ಪರಿಭವೇವೈಯಾತ್ಯಂಸುರತೇಷ್ವಿವ ॥" ಎಂಬ ನೀತಿಶಾಸ್ತ್ರದಿಂದ ರತಿಕಾಲಬಿಟ್ಟು ಇತರಕಾಲಗಳಲ್ಲಿ ಲಜ್ಜೆಯನ್ನು ಬಿಡಕೂಡದೆಂದು ತಿಳಿಯಬರುವದರಿಂದ ಲಜ್ಜಾವಿಹೀನರಾಗಬಾರದು. ಮತ್ತು ಸ್ತ್ರೀಜನರು ಲತೆಗಳಿಗೆ ಸಮಾನ ಸ್ವಭಾವವುಳ್ಳವರು, ಹ್ಯಾಗೆಂದರೆ, ಲತೆಗಳು ಪುಷ್ಪಿಸಿಫಲಿಸುತಿವೆ. ಸಮೀಪದಲ್ಲಿ ಮುಳ್ಳುಮರಯಿದ್ದರೆ ಅದನ್ನೂ, ರುಜುವಾದ ಕದಳೀಸ್ತಂಭವಿದ್ದರೆ ಅದನ್ನೂ ಅನುಸರಿಸಿ ಅವಲಂಬಿಸಿ ಆಶ್ರಯಾನುಗುಣವಾಗಿ ವಕ್ರವಾಗಿ ಅಥವಾ ರುಜುವಾಗಿ ಪ್ರವರ್ತಿಸುವವು. ಪ್ರವರ್ಧಮಾನಕ್ಕೆಬಂದಬಳಿಕ ವಕ್ರವನ್ನು ತಪ್ಪಿಸಿ ರುಜುಗತಿಗೆ ತರಬೇಕೆಂದರೆ ಒಡದು ನಾಶವಾಗುವವು. ಅದರಂತೆ ಸ್ತ್ರೀಜನರನ್ನು ಬಾಲ್ಯದಿಂದ ದೇಶಾಂತರ ಸಂಪ್ರದಾಯಗಳನ್ನು ದೇಶಾಂತರೀಯರಿಂದ ತಿಳಿದು ಅದರಂತೆ ಅನುಷ್ಠಾನದಲ್ಲಿ ತಂದ ಪಕ್ಷದಲ್ಲಿ ಪುಷ್ಪವತಿಯರಾಗಿ ಮಕ್ಕಳನ್ನ ಹೆತ್ತ ಬಳಿಕಲೂ ಅದೇ ಸಂಪ್ರದಾಯಗಳೂ ಆಚಾರಗಳೂ ಅನುವರ್ತಿಸಬಹುದು ಅವುಗಳನ್ನ ನಿವರ್ತನಮಾಡುವದಕ್ಕೆ ಗಂಡನು ಅಥವಾ ಹಿತೇಜನರು ಪ್ರಯತ್ನಪಟ್ಟರೆ ಅಸಂಬದ್ಧ ಕೆಲಸಗಳಿಗೊಳಗಾಗುವದು. (ಸ್ತ್ರೀಷುದುಷ್ಟಾಸುವಾರ್ಷ್ಣೇಯಜಾಯತೇವರ್ಣಸಂಕರಃ) ಎಂಬ ಭಗವದ್ಗೀತಾ ಶಾಸ್ತ್ರದಿಂದ ಸ್ತ್ರೀಯರು ದುಷ್ಟರಾದರೆ ವರ್ಣಸಾಂಕರ್ಯಕ್ಕೆ ಕಾರಣವಾಗುವದು. ಪುರುಷರು ದುಷ್ಟರಾದರೆ ಅವರಿಂದಾರ್ಜಿತವಾದ ದೋಷಗಳನ್ನು ಕಾಲಾಂತರ ದೇಶಾಂತರದಲ್ಲಿ ಸಮುಪದೇಶದಿಂದ ಕಳೆಕೊಳ್ಳಲು ನಿಮಿತ್ತವುಂಟು. ಸ್ತ್ರೀಜನರು ಭ್ರಷ್ಟರಾದರೆ ನಾಯಿ ಮುಟ್ಟಿದಮಡಿಕೆಯಂತೆ ಸದಾ ಗ್ರಹಿತರುಗಳಾಗಲಾರರು. ಶಿಷ್ಟ ಸಂಪ್ರದಾಯ ಆಚಾರವಿಚಾರಗಳಿಗೂ ಶುಭಾಶುಭಗಳಿಗೂ ಅರ್ಹರಾಗಲಾರರು. ಆದ್ದರಿಂದ ಸಕಲಪ್ರಯತ್ನದಿಂದಲೂ ದುರ್ಮಾರ್ಗವನ್ನು ತಪ್ಪಿಸಿ ದೇಶಾಂತರೀಯ ಸಂಪ್ರದಾಯಗಳನ್ನು ತಪ್ಪಿಸಿ ಸನ್ಮಾರ್ಗ ಪ್ರವೃತ್ತಿಯುಂಟಾಗುವದಕ್ಕೆ ನಮ್ಮ ವೇದಶಾಸ್ತ್ರಗಳು ಸಂಪ್ರದಾಯಗಳನ್ನು ತಿಳಿದ ವೃದ್ಧಜನಗಳಿಂದಲೂ ವೇದಶಾಸ್ತ್ರಗಳ ಸಾರಾಂಶಗಳನ್ನೂ ಪತಿಭಕ್ತಿಯನ್ನೂ ತತ್ತದ್ಯೋಚಿತ ಉಪಾಸನೆಗಳನ್ನೂ ಹೇಳುವ ಪುರಾತನಪುಸ್ತಕಗಳಿಂದಲೂ ಅಥವಾ ಅದರಸಾರಾಂಶದಿಂದ ರಚಿಸೋಣವಾದನವೀನಪುಸ್ತಕಗಳಿಂದಲಾಗಲಿ ಪಾಠಶಾಲೆಗಳಲ್ಲಿ ಏಳುವರುಷದಲಾಗಾಯತು ಯೌವನಬರುವವರಿವಿಗೂ ಶಿಕ್ಷಿಸಲ್ಪಟ್ಟು ಬಳಿಕ ಅವರವರ ಪತಿಗಳ ಸ್ವಾಧೀನವನ್ನು ಮಾಡಿದ್ದೇ ಆದರೆ ಇವರಿವಿಗೆ ಮಾಡಲ್ಪಟ್ಟ ಶಿಕ್ಷೆಯಿಂದಲೂ ಸತ್ಸಂಪ್ರದಾಯ ಸ್ಮರಣೆಯಿಂದಲೂ ಪತಿ ಶುಶ್ರೂಷೆಯಂಮಾಡಿಕೊಂಡು ಪತಿಗೆ ಆಯಾಸವಿಲ್ಲದೆ ಸಂಸಾರಭರಣವಂ ಮಾಡುತ್ತಾ ಸಾಧ್ಯವಾದಮಟ್ಟಿಗೆ ವಿರಾಮವಾದಕಾಲದಲ್ಲಿ ಪರಲೋಕಚಿಂತನೆಯಂ ದೇವತಾಚಿಂತನೆಯಂ ಮಾಡುತ ಕಾಲವಂಕಳೆದು ಹೆತ್ತ ಮನೆಗೂ ಹೊಕ್ಕ ಮನೆಗೂ ಕೀರ್ತಿಯಂ ಸಂಪಾದಿಸಿಕೊಡತಕ್ಕವರಾಗುವರು. ಈಗಲೂ ಗಂಡುಹುಡುಗರು ದೇಶಾಂತರೀಯ ಭಾಷಾವೇಷಗಳನ್ನ ಅಭ್ಯಾಸವಂ ಮಾಡಿ ದೇಶಾಂತರೀಯರವಾಸನೆಯಿಂ ದಬ್ಬಿಕೆಟ್ಟು ಸಂಧ್ಯೆ ಯಾತಕ್ಕೆ ದೇವರಪೂಜೆಯಿಂದ ಯೇನುಫಲ, ಈ ಲೋಕದಲ್ಲಿ ಶ್ರಾದ್ಧ ನಾಡಿ ಲೋಕಾಂತರದಲ್ಲಿರುವ ಪಿತೃಗಳಿಗೆ ಹಿಂ

ಕೊಟ್ಟರೆ ಪ್ರಾಗಸೇರುತವೆ, ಎಂಬ ಅಭಿಪ್ರಾಯ ಕೆಗಳಿಂದ ಪೂರ್ವ ಸಂಪ್ರದಾಯಗಳನ್ನು ಕೆಡಿಸಬೇಕೆಂದು ಮನೆಗೆಬರುವಾಗ್ಯೂ ಈಗಲೂ ಮನೆಗೆ ಒಬ್ಬರಿಬ್ಬರು ವೃದ್ಧಸ್ತ್ರೀಯರುಗಳು ಇರುವದರಿಂದ ಇಂತಾ ದುರ್ನಡತೆಗಳಿಗೆ ಅವಕಾಶವಿಲ್ಲದೆಯಿರುತಿದೆ. ಹಾಗೆಯೇ ಹುಟ್ಟಿರುವ ಹುಟ್ಟುವ ಎಲ್ಲಾ ಸ್ತ್ರೀಜನಗಳಿಗೂ ನಾವು ಮೇಲಿಕಂಡ ಕ್ರಮವನ್ನನುಸರಿಸಿ ಸತ್ಸಂಪ್ರದಾಯಗಳನ್ನೆ ಬೋಧಿಸಿ ಸಿದ್ಧಪಡಿಸುವವಾದರೆ ಗಂಡಸರುಜೀವನಾರ್ಥ ನಾನಾದೇಶೀಯರಸಂಗವ ವ್ಯವಹರಿಸಿ ನಾನಾಸಂಪ್ರದಾಯಗಳಂ ಕಲಿತು ಮನೆಗೆಬಂದಾಗ್ಯೂ ಮನೆಯಲ್ಲಿ ಅಂತಾದುರ್ನಡತೆಗಳಿಗೆಅವಕಾಶವಿಲ್ಲದೆ ನಮ್ಮ ಶಿಷ್ಟ ಸಂಪ್ರದಾಯಗಳು ಊರ್ಜಿತಗಳಾಗಿ ನೆಲೆಗೊಂಡಿರುವವು. ಇದಕ್ಕೋಸ್ಕರ ಈ ಕಲ್ಯಾದಿಯಲ್ಲಿ ಅನರ್ಥನಿವರ್ತಿಯನ್ನೂ ಇಷ್ಟಸಿದ್ಧಿಯನ್ನು ಸಹ ಪುಂಬುಮಾಡಿ ಮತ್ತೂ ದುಷ್ಟನಿಗ್ರಹ ಶಿಷ್ಟಪರಿಪಾಲನವಂ ಮಾಡಿದ ಸಂಪೂರ್ಣಕಲೆಗಳಿಂದ ಅವತರಿಸಿದ ಕೃಷ್ಣದೇವರನ್ನ ಪ್ರಾರ್ಥಿಸುವೆನು. ಉದ್ಗೀರ್ಣಪೂರ್ಣಜಲಬಿಂದುಲಸಲ್ಲಲಾಟ ಲೋಲತ್ವಪಾಲಕನಿಷಂಗತುರಂಗರೇಣು ||ಪ್ರಾಯಾತ್ಸ್ವಯೋಧನಪಲಾಯನಮಾನಭಂಗ ಜಾತಸ್ಮಿತಂವದನಮರ್ಜುನಸಾರಥೇರ್ನಃ|| ತರುವಾಯ ಸಭ್ಯರಿಗೆ ಗಂಧಪುಷ್ಪ ತಾಂಬೂಲಾದಿ ಮರ್ಯಾದೆಗಳು ನಡೆದ ಬಳಿಕ ಸಂಗೀತವಿದ್ವಾಂಸರೊಬ್ಬರು ಸ್ವಲ್ಪಕಾಲ ವೀಣಾಗಾನ ಮಾಡಿದರು. ಕಡದಲೇ ಕೋಲಾಹಲ ಧ್ವನಿಯೊಡನೆ ಸಭೆ ಪೂರ್ತಿಯಾಗಿ ಸಭ್ಯರು ತಮ್ಮ ತಮ್ಮ ಗೃಹಗಳಂ ಕುರಿತು ತೆರಳಿದರು. ಗುರುವಾರದ ದಿನ ಬೆಳಗ್ಯೆ ಕಾರ್ಯ ನಿರ್ವಾಹಕ ಸಭೆಯವರೆಲ್ಲರೂ ಸೇರಿ ಆಯಾ ತರಗತಿಗಳನ್ನು ವಿಂಗಡಿಸಿ ವಿದ್ಯಾರ್ಥಿನೀಯರ ಪಾಠ ಪ್ರವಚನಗಳಿಗೆ ಬೇಕಾದ ಏರ್ಪಾಡುಗಳನ್ನೆಲ್ಲ ಮಾಡಿ ಪಾಠಶಾಲಾ ಕಾರ್ಯವನ್ನು ಪ್ರಾರಂಭಿಸಿದರೆಂದು ಕೇಳಲಿಕ್ಕೂ ಇದುವರಿವಿಗೆ ೧೨೦ ಮಂದಿಗಿಂತ ಅಧಿಕವಾಗಿ ಬಾಲಿಕೆಯರು ದಾಖಲಾಗಿ ಓದುತಲಿದಾರೆಂತಲೂ ಕೇಳಲಿಕ್ಕೆ ನಾವು ಬಹಳ ಸಂತೋಷಿಸುತ್ತೇವೆ.

LOCAL AND PROVINCIAL NEWS.

ಒಳದೇಶ ಮತ್ತು ತಾಲ್ಲೂಕು ವೃತ್ತಾಂತಗಳು.

The weather.—ಗತವಾರದ ಮೊದಲು ಮೇಘಾವರಣವಾಗಿ ರಾತ್ರಿಕಾಲದಲ್ಲಿ ಚಳೀ ಜಾಸ್ತಿಯಾಗಿದೆ. ಅಲ್ಲಿಯಲ್ಲಿ ಜ್ವರ ಕೆಮ್ಮು ವಗೈರೆ ರೋಗಗಳು ವ್ಯಾಪಿಸಿರುತಿವೆ.

The B. A. Examination.—ಬಿ. ಎ. ಪರೀಕ್ಷೆಯ ಪೂರ್ವಭಾಗವು ಮಾಹೇಮಜಕೂರ ೨೦ನೇ ತಾರೀಖ್ ಮಂಗಳವಾರದದಿನ ಪ್ರಾರಂಭವಾಗಿ ಗುರುವಾರದತನಕ ಇಲ್ಲಿನ ಸೆಂಟ್ರಲ್ ಕಾಲೇಜಿನಲ್ಲಿ ನಡೆಯಿತು.

An Expected arrival.—ತಿರುವಾಂಕೂರ್ ಸಂಸ್ಥಾನದ ಮಹಾರಾಜರವರ ಪ್ರೈವೇಟ್ ಸೆಕ್ರೆಟರಿಯವರು ಈವೂರಿಗೆ ಬಂದಿದ್ದಾರೆಂತಲೂ, ಸದರೀ ಮಹಾರಾಜರವರು ಇಲ್ಲಿಗೆ ದಯಮಾಡುವವರಾಗಿರುವದರಿಂದ ಅದಕ್ಕೆ ಬೇಕಾದ ಏರ್ಪಾಡುಗಳನ್ನೆಲ್ಲ ಮಾಡಿಸುತಲಿದಾರೆಂತಲೂ ತಿಳಿಯಬರುತಿದೆ.

Municipal arrangements.—ಈವೂರು ತರಗು ಪೇಟೆಯನ್ನು ಕೋಟೆಯಬಳಿ ಇರುವ ಮೈದಾನಿಗೆ ವರ್ಗಮಾಡಬೇಕೆಂಬ ವಿಷಯವು ಈಗ ಇಲ್ಲಿನ ಮ್ಯೂನಿಸಿಪಾಲಿಟಿಯವರ ಮುಖ್ಯವಧಾನಕ್ಕೆ ವಿಷಯವಾಗಿ ಅವರವರ ಮಂಡಿಗಳನ್ನು ಮೇಲೆಕಂಡ ಪ್ರದೇಶಕ್ಕೆ ವರ್ಗಮಾಡಬೇಕೆಂದು ಮಂಡೀದಾರರನ್ನು ಅವರು ಬಲಾತ್ಕರಿಸುತಲಿದಾರೆಂತಲೂ ಅದಕ್ಕೆ ಮಂಡೀದಾರರು ಸಮ್ಮತಿಸದೆ ಅಸಮಾಧಾನಪಡುತಲಿದಾರೆಂತಲೂ ಕೇಳುತ್ತೇವೆ.

The Revenue Code.—ಈಗ್ಯೆ ಐದಾರು ವರುಷಗಳ ಮೊದಲು ಈ ದೇಶೀಯರಿಂದ ನಿರೀಕ್ಷಿಸಲ್ಪಡುತಲಿದ್ದ ರೆವಿನ್ಯೂ ಕೋಡು ಇಂಡ್ಯ ಗವರ್ನಮೆಂಟಿನವರಿಂದ ಮಂಜೂರಾದುದೆಯೂ, ಅದು ಇನ್ನೊಂದು ವಾರದೊಳಗಾಗಿ ಘೋಷಿಷ್ಟ ಮಾಡಲ್ಪಟ್ಟು ಜಾರೀಗೆಬರುವದೆಂತಲೂ ತಿಳಿಯಬರುತಿದೆ. ಈ ರೆವಿನ್ಯೂಕೋಡು ರೈತರಿಗೆ ಅನೇಕವಿಷಯಗಳಲ್ಲಿ ನಿರ್ಬಂಧರೂಪವಾಗಿರುತಿದೆ.

Third Judge of the Chief Court.—ಇಲ್ಲಿನ ಚೀಫ್‌ಕೋರ್ಟಿನ ಮೂರನೇಜಡ್ಜಿಯರಾದ ಮಿಸ್ಟರ್ ರಾಮಚಂದ್ರಯ್ಯರವರು ಬರುವ ತಿಂಗಳ ೧೫ನೇ ಅಥವಾ ೨೦ನೇ ತಾರೀಖಿನೊವಲು ಮೂರುತಿಂಗಳ ಪ್ರಿವಿಲೇಜ್‌ರಜಾ ಪಡೆದು ಆತಿಂಗಳ ಆಖೈರಿನಲ್ಲಿ ಅಲಹಾಬಾದಿನೊಳು ನಡೆಯುವ ನ್ಯಾಷನಲ್ ಕಾಂಗ್ರೆಸ್ ಸಭೆಗೆಹೋಗಿ ಅಲ್ಲಿಂದ ಕಾಶಿ ಮುಂತಾದ ಪ್ರಸಿದ್ಧಸ್ಥಳಗಳಂ ನೋಡಿಕೊಂಡು ಬರುವರೆಂತಲೂ ಆ ಕಾಲದಲ್ಲಿ ಈಗಿನ ನಂಬಿ ಮೀನಾಕ್ಷಿಅಯ್ಯರವರು ಅವರಕೆಲಸವಂ ನೋಡುವರೆಂತಲೂ ತಿಳಿಯಬರುತಿದೆ.

Return of Mr. Justice Plumer.—ಫರ್ಲೋರಜಾಮೇಲೆ ಇಂಗ್ಲಂಡಿಗೆ ಹೋಗಿದ್ದ ಚೀಫ್‌ಕೋರ್ಟ ಚೀಫ್‌ಜಡ್ಜಿಯರಾದ ಮಿಸ್ಟರ್ ಸಿ. ಜೆ. ಪ್ಲ್ಯುಮರ್‌ಯವರು ಗತ ಗುರುವಾರದಿನ ಇಲ್ಲಿಗೆ ಬಂದರು. ಇವರು ಬರಮಾಡಿಕೊಳ್ಳುವಬಗ್ಯೆ ಚೀಫ್‌ಕೋರ್ಟ ಮೂವರುಜಡ್ಜಿಗಳೂ ಪ್ರಮುಖರಾದಲಾಯರ್‌ಗಳೂ ಆ ಕೋರ್ಟ ರಿಜಿಸ್ಟ್ರರವರೂ ರೈಲ್‌ಸ್ಟೇಷನಿಗೆಹೋಗಿದ್ದರು. ಮೆ|| ಪ್ಲ್ಯುಮರ್‌ಯವರು ಪರಸ್ಪರ ಕುಶಲಪ್ರಶ್ನೆಮಾಡುತ ತಮ್ಮ ಭಾರ್ಯೆಯೊದನೆ ಬಂಗ್ಲೆಗೆ ಹೊರಟುಹೋದರು. ಇವರು ಈದಿನ ತಮ್ಮಕೆಲಸದ ಚಾರ್ಜನ್ನು ತೆಗದುಕೊಳ್ಳುವರು.

Grihapravesam.—ಕಳೆದ ಬೃಹಸ್ಪತಿವಾರದದಿವಸ ಮ|| ರಾ|| ಕೆ. ಶೇಷಾದ್ರಯ್ಯರವರು ಗೃಹಪ್ರವೇಶ ಮಹೋತ್ಸವವನ್ನು ನಡಸಿದರು. ದೇವರಾಜಬಹದ್ದೂರವರ ಛತ್ರದಲ್ಲಿ ಸುಮಾರು ೧೫೦೦ ಜನಗಳಿಗೆ ಸಂತರ್ಪಣೆಯನ್ನು ಮಾಡಿಸಿದರು. ತಮ್ಮ ಹೊಸಮನೆಯಲ್ಲಿಯೂ, ಹಳೇಮನೆಯಲ್ಲಿಯೂ, ಅದೇದಿವಸ ಸುಮಾರು ೫೦೦ ಜನದವರೆಗೆಸಂತರ್ಪಣೆಯಾಯಿತು. ಗೃಹಪ್ರವೇಶಕಾಲದಲ್ಲಿ ೨,೦೦೦ ಮಂದಿಯ ವರಿಗೂ ವೈದಿಕರು ಸೇರಿದ್ದರು. ಇವರುಗಳಿಗೆಲ್ಲಾ ದಾನದಕ್ಷಿಣೆಗಳು ನಡೆದವು. ಆಕಾಲದಲ್ಲಿ ೫೦೦ ಜನಗಳವರಿಗೂ ಉದ್ಯೋಗಸ್ಥರು ಬಂದಿದ್ದರು. ಅವರಿಗೆ ತಾಂಬೂಲಗಳು ಹೂವಿನಹಾರಗಳು ಕೊಡಲ್ಪಟ್ಟವು. ಶುಕ್ರವಾರದದಿವಸ ಶ್ರೀಮನ್ಮಹಾರಾಜರವರು ಪರಿವಾರಸಮೇತರಾಗಿದಿವಾನರವರ ಮನೆಗೆ ಚಿತ್ತೈಸಿ ಅಲ್ಲಿಯೇ ಭೋಜನವನ್ನುಮಾಡಿ ದಿವಾನರಿಂದ ಮಾಡಲ್ಪಟ್ಟ ಮರ್ಯಾದೆಗಳನ್ನು ಸ್ವೀಕರಿಸಿದರು. ಆ ಸಾಯಂಕಾಲವೇ ಮೈಸೂರಿನಉದ್ಯೋಗಸ್ಥರುಗಳಿಗೆ ಔತಣವುನಡೆಯಿತು. —ಚಿಂತಾಮಣಿ.

A lecture.—ಕಳೆದ ಶುಕ್ರವಾರದದಿನ ಸಾಯಂಕಾಲ ಐದುವರೆಘಂಟೆಗೆ, ಈವೂರು ಬಳೇಪೇಟೆಯಲ್ಲಿರುವ ಶ್ರೀನಿವಾಸಮಂದಿರಕ್ಕೆ ಸೇರಿದ ಓರಿಯಂಟಲ್‌ಹಾಲ್ ಲೈಬ್ರೇರಿಯಲ್ಲಿ, ಮದರಾಸ್‌ನಿಂದ ಬಂದಿರುವ ಮ|| ರಾ|| ಶ್ರೀ ಶಿವಶಂಕರ ಪಾಂಡಿಯಾ, ಬಿ. ಎ. ಯವರು, ಮತ ಸಂಬಂಧವಾದ ವಿದ್ಯಾಭ್ಯಾಸದಿಂದುಂಟಾಗುವ ಪ್ರಯೋಜನವಂ ಕುರಿತು ಬಹುವಿಧ ನಿದರ್ಶನಗಳೊಡನೆ ಇಂಗ್ಲಿಷ ಭಾಷೆಯಲ್ಲಿ ವಿಸ್ತಾರವಾಗಿ ಒಂದೂವರೆ ಘಂಟೆಯಕಾಲ ಉಪಪಾದನಮಾಡಿದರು. ಇವರ ಉಪನ್ಯಾಸವಂ ಕೇಳುವದರಲ್ಲಿ ಉತ್ಕಟೇಚ್ಛೆಯಿಂದ ಇಲ್ಲಿನ ಚೀಫ್‌ಕೋರ್ಟಿನ ಜಡ್ಜಿಯರಾದ ಮ|| ರಾ|| ಶ್ರೀ ಎ. ರಾಮಚಂದ್ರಯ್ಯರವರು ಮೊದಲಾದ ಬಹುಮಂದಿ ದೊಡ್ಡಮನುಷ್ಯರು ಬಂದಿದ್ದು ಪ್ರಾಸಂಗಿಕರಿಗೆ ಹಿಂದೂಮತ ಗ್ರಂಥಗಳಲ್ಲೂ ವೃದ್ಧಾಚಾರಗಳಲ್ಲೂ ಇರುವ ಆಂತರವಾದ ನಂಬಿಕೆ, ದೈವಭಕ್ತಿ, ಅಂತಾ ಮತಗ್ರಂಥಗಳ ಪ್ರಚಾರ ವಿಷಯದಲ್ಲಿ ಅವರಿಗಿರುವ ಶ್ರದ್ಧಾಭಕ್ತಿ, ಇವುಗಳಂ ಬಹುಮುಖವಾಗಿ ಕೊಂಡಾಡಿ, ಅತ್ಯಾನಂದಭರಿತರಾದರು. ಸಭಿಕರ ಪ್ರಾರ್ಥನೆಯಮೇರೆ ಸದರೀದೊಡ್ಡಮನುಷ್ಯರು ನಿನ್ನೆಯದಿನ ಸಾಯಂಕಾಲ ನಾಲ್ಕುವರೆ ಘಂಟೆಗೆ ಇಲ್ಲಿನ ಗವರ್ನಮೆಂಟ್ ಬಾಲಿಕಾಪಾಠಶಾಲಾ ಮಂದಿರದಲ್ಲಿ ಆಂಧ್ರಭಾಷೆಯೊಳು,ಮದರಾಸ್‌ನಲ್ಲಿ ತಾವುಸ್ಥಾಪಿಸಿ ನಡೆಸುತಲಿರುವ ಮತಪ್ರಚಾರ ಪಾಠಶಾಲೆಯ ಉದ್ದೇಶವು ಕುರಿತು ಉಪನ್ಯಾಸ ಮಾಡಿದರು. ಈ ಸಂದರ್ಭದಲ್ಲೂ ಬಹುಮಂದಿ ದೊಡ್ಡಮನುಷ್ಯರು ಸೇರಿದ್ದರು. ಗತವಾರದಲ್ಲಿ ನಾವು ತಿಳಿಸಿದ್ದಂತೆ ಮೊನ್ನೆದಿನ ಸಾಯಂಕಾಲ ಮೇಲಿಕಂಡ ಲೈಬ್ರರಿ ಹಾಲಿನಲ್ಲಿ ಮ|| ರಾ|| ಬಾ. ವೆಂಕಟಾಚಾರ್ಯರವರು, ನಮ್ಮ ವರ್ಣಾಶ್ರಮ ಜಾತಿ ಕುಲಾಚಾರಗಳಿಗೆ ಅನ್ಯರಿಂದುಂಟಾಗುತ ಬರುತಲಿರುವ ಪ್ರತಿಬಂಧಕಗಳನ್ನು ಯಾವರೀತಿಯಿಂದ ತಪ್ಪಿಸಬಹುದೆಂಬ ವಿಷಯವು ಕುರಿತು ಅನೇಕ ನಿದರ್ಶನ ಪ್ರಮಾಣಗಳೊಡನೆ ಪ್ರಸಂಗಿಸಿ ಈಗ ಅಜ್ಞಾನವಶಾತ ಅನ್ಯ ಮತಾವಲಂಬಿಗಳಾಗಿರುವವರು ತಮ್ಮ ಅಜ್ಞಾನಕೃತ ದೋಷಕ್ಕಾಗಿ ಅನುತಪಿಸುತ ಮರಳಿ ತಮ್ಮ ಪೂರ್ವ ಮತಕ್ಕೆ ಬರುವೆವೆಂದು ಹೇಳುವರೆ ಅಂತವರನ್ನು ಪ್ರಾಯಶ್ಚಿತ್ತಾದಿಗಳ ಮೂಲಕ ಮರಳಿ ಅಂಗೀಕರಿಸಬಹುದೇ ಯೆಂದು ಪ್ರಶ್ನೆ ಮಾಡಿ ಅದಕ್ಕೆ ಸಾಧಕಗಳಾಗಿ ಅನೇಕ ಸ್ಮೃತಿವಚನಗಳನ್ನು ತಿಳಿಸಿದರು. ಅನಂತರ, ಸಭಾಧ್ಯಕ್ಷರಾಗಿದ್ದ ಪಂಡಿತ ಬ್ರಹ್ಮಶ್ರೀ ವಾಸುದೇವ ಶಾಸ್ತ್ರಿಗಳೂ ಸಭೆಗೆ ಬಂದಿದ್ದ ಇತರ ಪಂಡಿತರೂ ಪ್ರಾಸಂಗಿಕರ ಅಭಿಪ್ರಾಯವು ಶ್ಲಾಘ್ಯವೆಂದು ಅನುಮೋದಿಸಿ ಇದಕ್ಕೆ ಶಾಸ್ತ್ರದಲ್ಲಿ ಅವಕಾಶವಿರುವದೆಂದು ಐಕಮತ್ಯದೊಡನೆ ಯೆಲ್ಲರೂ ಅಭಿಪ್ರಾಯಪಟ್ಟರು.

EXTRACTS.

ಮಿಷನೇರಿಜನರು ಹಿಂದುಸ್ಥಾನದ ಜನರಮೇಲೆ ಮಾಡಿದ ಉಪಕಾರಗಳು—ವಿದ್ಯಾದಾನದ ಮುಖಾಂತರ—ಅಷ್ಟಿಷ್ಟೆಂದು ಹೇಳಕೂಡದು. ಆದರೆ ಅವರು ತಮ್ಮ ಸ್ವಾರ್ಥಸಾಧಕ ಕುಯುಕ್ತಿಗಳಿಂದ ಎಷ್ಟೋ ಮನೆತನಗಳನ್ನು ಹಾಳುಮಾಡಿ ನಮ್ಮಲ್ಲಿ ಪಸರಿಸಿದ ದುಃಖಗಳೂ ಅಷ್ಟಿಷ್ಟೆಂದು ಹೇಳಕೂಡದು. ಮಹಮ್ಮದನು ಒಂದು ಕೈಯಲ್ಲಿ ಕುರಾನನ್ನು ಒಂದು ಕೈಯಲ್ಲಿ ಕತ್ತಿಯನ್ನು ಹಿಡಿದು ತನ್ನ ಧರ್ಮವನ್ನು ಪಸರಿಸಿದನೆಂದು ಅವನನ್ನು ಹೀಯಾಳಿಸುತ್ತಾರೆ. ಆದರೆ ಆ ಕ್ರೂರ ಮಹಮ್ಮದನೊಳಗೂ ಈ ಗೋರುಖ ಪಾದ್ರಿಗಳೊಳಗೂ ಏನು ಭೇದವುಂಟೆಂದು ನಮಗೆ ತಿಳಿಯದು. ಇವರು ಮಹಮ್ಮದನಂತೆ ಒಂದು ಕೈಯಲ್ಲಿ ಸತ್ಯವೇದವನ್ನೂ ಇನ್ನೊಂದು ಕೈಯಲ್ಲಿ ಕತ್ತಿಯಬದಲು ಕಪಟವನ್ನೂ ಹಿಡಿದು ತಮ್ಮ ಧರ್ಮವನ್ನು ಪಸರಿಸುತಿದ್ದಾರೆ. ಪಾದ್ರಿಗಳ ಕೈಯಲ್ಲಿರುವ ಕಪಟವು ಮಹಮ್ಮದನ ಕೈಯಲ್ಲಿದ್ದ ಕತ್ತಿಯಕ್ಕಿಂತಲೂ ತೀಕ್ಷ್ಣವಾಗಿರುತದೆ. ಮಹಮ್ಮದನು ಇಗೋ ನಮ್ಮ ಧರ್ಮವನ್ನು ಅಂಗೀಕರಿಸಿರಿ, ಇಲ್ಲವೆ ನಿಮ್ಮ ತಲೆ ಹೊಡೆಯುತ್ತೇನೆಂದು ನಿಷ್ಕಪಟದಿಂದ ಅನ್ನುತ್ತಿದ್ದನು. ಆದರೆ ನಮ್ಮ ಪಾದ್ರಿಗಳು ಬಾಹ್ಯಾತ್ಕಾರಕ್ಕೆ ಬಹು ಸಾಮ್ಯತರವ ವೇಷವನ್ನುಹಾಕಿಕೊಂಡು ಕರಳು ಕರಗುವಂಥ ಪ್ರೇಮಯುಕ್ತ ಶೀಮಾತುಗಳಿಂದಲೂ ನಯ ನುಡಿಗಳಿಂದಲೂ ಚಿಕ್ಕ ಬಾಲಕರಿಗೂ ಅಜ್ಞ ಹೆಂಗಸರಿಗೂ ಭೋಳೆ ಪುರುಷರಿಗೂ ಹೊಟ್ಟೆಗಿಲ್ಲದೆ ಬಳಲುವ ಬಡಬಗ್ಗರಿಗೂ ಮೋಸಗೊಳಿಸುತ್ತಿದ್ದಾರೆ; ಇವರು ಸತ್ಯವೇದವೆಂದು ಕರೆದುಕೊಳ್ಳುವ ಬೈಬಲ್‌ಎಂಬ ಅಸಂಬದ್ಧ ವಾಕ್ಯಕೋಶದಲ್ಲಿ ಮನುಷ್ಯನ ಆದಿಚರಿತ್ರವಂಕುರಿತು ಒಂದುಕಥೆಯಲ್ಲಿ ಹೇಳಿರುವದೇನಂದರೆ, ಮಾನವರ ಆದಿ ತಂದೆ ತಾಯಿಗಳಾದ ಆಡಮ್ ಮತ್ತು ಈವ್ ಎಂಬವರನ್ನು ದೇವರು ಈಡನ್‌ಯೆಂಬ ತೋಟದಲ್ಲಿಟ್ಟಾಗ, ಇವರ ಶತ್ರುವಾದ ಸೈತಾನರು ಮನೋಹರವಾದ ಒಂದು ಸರ್ಪದರೂಪವನ್ನು ಧರಿಸಿಕೊಂಡು, ಶೀಮಾತುಗಳಿಂದ ಈ ನಮ್ಮವರ ಮನಸ್ಸು ಮೋಹಿಸಿ ಅವರಿಬ್ಬರನ್ನು ಮೋಸಗೊಳಿಸಿ ಅವರ ಸೌಖ್ಯವನ್ನು ಕೆಡಿಸಿ ಅವರಿಗೆ ಸಾವುತಂದನು! ಈ ಕಥಾಭಾಗವು ಪ್ರಕೃತ ಹಿಂದುಸ್ಥಾನದಲ್ಲಿ ಅನುಭವಕ್ಕೆ ಬರುತಿರುತ್ತದೆಂದು ಹೇಳಬಹುದು. ಸೈತಾನರೂಪಿಯಾದ ಈ ಪಾದ್ರಿಗಳು ನಾನಾತರದ ಮನಮೋಹಕ ವೇಷಗಳನ್ನುಧರಿಸಿ ನಮ್ಮಹೆಂಡರು ಮಕ್ಕಳನ್ನು ಬಗೆಬಗೆಯ ಶೀಮಾತುಗಳಿಂದ ಮೋಸಗೊಳಿಸಿ ನಮ್ಮ ಮನೆತನಗಳನ್ನೂ ನಮ್ಮಸೌಖ್ಯವನ್ನೂ ನಾಶಮಾಡಲಿಕ್ಕೆ ತೊಡಗಿರುತ್ತಾರೆ. ಆದದರಿಂದ ಜನರು ಇವರವಿಷಯದಲ್ಲಿ ಬಹು ಜಾಗ್ರತೆಯಾಗಿರಬೇಕೆಂದು ನಾವು ಸೂಚಿಸದೆ ಯಿರಲಾರೆವು. ಇವರು ತಿಳಗೇಡಿ ಹುಡುಗರನ್ನು ಆಗಿಂದಾಗ್ಯೆ ಮೋಸ ಗೊಳಿಸುವದು ಎಲ್ಲರಿಗೂ ತಿಳಿದಿರುತ್ತದೆ. ಆದರೆ ಇತ್ತಲಾಗಿ ಇವರು ನಮ್ಮಮನೆಯ ಒಳಹೊಕ್ಕು ನಮ್ಮ ಹೆಂಗಸರನ್ನುಸಹ ಮೋಸಗೊಳಿಸಲು ಪ್ರಾರಂಭಿಸಿದ್ದಾರೆ. "ಜನಾನಾಮಿಷನ್" ಎಂಬಹೆಸರಿನಿಂದ ಪಾದ್ರಿಗಳಸಂಘಕ್ಕೆ ಸೇರಿದ ಕೆಲವು ಹೆಂಗಸರು ಹಿಂದೂ ಮನೆತನಗಳಲ್ಲಿ ಸ್ತ್ರೀವಿದ್ಯೆಯನ್ನು ಪ್ರಸಾರಮಾಡುವ ನಿಮಿತ್ತದಿಂದ ಹೋಗುತಲಿರುತ್ತಾರೆ. ಇವರು ತಿಳಗೇಡಿಗಳಾದ ಹೆಂಗಸರನ್ನು ಸುಲಭವಾಗಿ ಮೋಸಗೊಳಿಸುತಿದ್ದಾರೆ. ಇಂತಾ ಪ್ರಮಾದಗಳು ಎಷ್ಟೋ ಕಡೆಯಲ್ಲಿ ಕಂಡುಬಂದವು. ಒಂದೆರಡುತಿಂಗಳ ಹಿಂದೆ ಬಂಗಾಳದಲ್ಲಿ ಇಂತಾದೊಂದು ಪ್ರಕರಣವಾಗಿ ಆಮೋಸಹೋದಹೆಂಗಸು ಕಟ್ಟಕಡೆಗೆ ಪಶ್ಚಾತ್ತಾಪಪಟ್ಟು ತನ್ನ ಸಂಸಾರವನ್ನು ಪಾದ್ರಿಗಳು ಹ್ಯಾಗೆ ಕೆಡಿಸಿದರೆಂದು ಒಂದು ವರ್ತಮಾನಪತ್ರಿಕೆಗೆ ಬರದಿದ್ದಳು. ಇದೇಪ್ರಕಾರ ಬೆಂಗಳೂರಿನಲ್ಲಿಯೂ ಇತ್ತಲಾಗಿ ಒಂದು ಪ್ರಕರಣವಾಯಿತು. ಮುದ್ದುಲಕ್ಷ್ಮಿಯೆಂಬ ಒಬ್ಬ ನಾಯಿಡು ಹುಡುಗಿಗೆ ಜನಾನಾ ಮಿಷನಿನ ಒಬ್ಬ ಹೆಂಗಸು ಪಾಠ ಹೇಳಿಕೊಡಲಿಕ್ಕೆ ಬರುತ್ತಿದ್ದಳು. ಇವಳು ತನ್ನ ಶೀಮಾತುಗಳಿಂದ ಈ ಮುದ್ದುಲಕ್ಷ್ಮಿಯನ್ನು ಮರುಳುಗೊಳಿಸಿದ್ದರಿಂದ ಇವಳು ಒಂದು ರಾತ್ರಿಯಲ್ಲಿ ತನ್ನ ತಂದೆಯ ಮನೆಯಿಂದ ಹೊರಟು ಪಾದ್ರಿಗಳ ಬಂಗಲೆಯಲ್ಲಿ ಸೇರಿದಳು. ಮತ್ತು ಸಹಜವಾಗಿಯೇ ನಮ್ಮವರ ಜಾತಿಗೆಟ್ಟಳು. ಇವಳ ತಂದೆ ತಾಯಿಗಳು ಇವಳನ್ನು ನೋಡಹೋದಾಗ, ತಾಯಿಯು ಮಗಳನ್ನು ಅಪ್ಪಿಕೊಂಡು ಮನೆಗೆ ಬಾಯೆಂತ ಹಲುಬುತ್ತಿರುವಾಗ, ಆ ಹುಡುಗಿಯನ್ನು ಮೋಸಗೊಳಿಸಿದ ದುಷ್ಟ ಹೆಂಗಸು ಬಂದು ಮರುಗುತ್ತಿರುವ ಆ ಬಡತಾಯಿಯನ್ನು ಹೊರಗೆ ನೂಕಿಬಿಟ್ಟಳಂತೆ! ಅಂದಮೇಲೆ ಈ ಕ್ರಿಶ್ಚನ್ ಪಾದ್ರಿ ಹೆಂಗಸರ ಸ್ವಭಾವವು ಎಷ್ಟೆಂದು ವರ್ಣಿಸಬೇಕು! ಈ ಹೃದಯವಿದ್ರಾವಕ ಸಂಗತಿಯಿಂದ ಬೆಂಗಳೂರು ಮಾತ್ರವಲ್ಲ ಮೈಸೂರು ಸಂಸ್ಥಾನದಲ್ಲೆಲ್ಲ ಜನರಮನಸ್ಸು ಕದಲಿಸಲ್ಪಟ್ಟಿದೆ. ಬೆಂಗಳೂರಿನಲ್ಲಿ ಆದ ಶನಿವಾರ ಸಾವಿರಾರು ಜನರು ಸಭೆಸೇರಿ ಈ ವಿಷಯ ಆಲೋಚಿಸಿದರು. ಈ ಸಭೆಯಲ್ಲಿ ಅನೇಕರು, ಹಿಂದೂಜನರು ತಮ್ಮ ಮಕ್ಕಳನ್ನು ಮಿಷನರಿಗಳ ಶಾಲೆಗಳಿಗೆ ಕಳುಹಿಸಿದ್ದರಿಂದ ಆಗುವ ದುಷ್ಪರಿಣಾಮಗಳ ಕುರಿತು ಪ್ರಸಂಗಿಸಿದರು. ಮತ್ತು ಇನ್ನು ಮುಂದೆ ಯಾರೂ ತಮ್ಮ ಹುಡುಗಿಯರನ್ನ ಮಿಷನ್ ಶಾಲೆಗಳಿಗೆ ಕಳುಹಿಸಬಾರದೆಂತಲೂ, ಅಲ್ಲಿ ಸೇರಿದವರೆಲ್ಲರೂ ಕೂಡಿ ವಂತಿಗೆಮಾಡಿ ಹಣ ಕೂಡಿಸಿ ಸ್ತ್ರೀ ಶಾಲೆಗಳನ್ನು ಸ್ಥಾಪಿಸಿ, ಆ ಶಾಲೆಗಳಿಗೆ ಮಾತ್ರ ತಮ್ಮ ಹುಡುಗಿಯರನ್ನು ಕಳುಹಿಸಬೇಕೆಂತಲೂ ಏಕ ಮತದಿಂದ ನಿಶ್ಚಯಿಸಿದರು. ಮತ್ತು ಆಪ್ರಕಾರ ಸಾವಿರಗಟ್ಲೆ ರೂಪಾಯಿಗಳನ್ನು ಅಲ್ಲಿಂದಲ್ಲೇ ವಂತಿಗೆ ಕೊಟ್ಟರು. ಶಾಬಾಸ್; ಇವರ ಅಭಿಮಾನವು ಶ್ಲಾಘನೀಯವಾಗಿದೆ. ಈ ಉದಾಹರಣೆಯಿಂದಲಾದರೂ ಜನರು ಬುದ್ಧಿ ಕಲಿತುಕೊಳ್ಳಲಿ, ಮತ್ತು ಇನ್ನು ಮುಂದೆ ಪರರ ಸಂಸಾರವನ್ನು ಕೆಡಿಸುವ ಈ ಮಿಷನೇರಿ ಜನರ ಸಹವಾಸವನ್ನು ಮಾಡುವಾಗ ಬಹುಜಾಗ್ರತೆಯಿಂದಿರಲಿ.—ಕನ್ನಡ ಸುವಾರ್ತೆ.

☞ Bangalore:—Printed and published at the Karnatic Press, No. 44, Hospital Road, Petta.—1888.

ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA.

ಪ್ರತಿ ಸೋಮವಾರ ಪ್ರಾತಃಕಾಲದಲ್ಲಿ ಪ್ರಕಟಿಸಲ್ಪಡುವದು.

Published every Monday Morning.

ಪ್ರಾಮವಿವಿದಪ್ರವೃತ್ತ್ಯಗನವಾರ್ತ್ತ ಕರ್ಣ್ಣಾಟಕಪ್ರಕಾಶನಪರಾಭಿದಾಪ್ರತಿಸಾಹಿತೀಶೋಭಿತಾ [illegible]

Vol. XV] BANGALORE—MONDAY DECEMBER 3, 1888. [No. 47.

ಸಂಪುಟ ೧೫.] ಬೆಂಗಳೂರು:—ಸನ್ ೧೮೮೮ನೇ ಇಸವಿ ಡಿಸೆಂಬರ್ ೩ನೇ ತಾರೀಖು ಸೋಮವಾರ. [ಸಂಖ್ಯೆ ೪೭.

ಕರ್ಣಾಟಕ ಪ್ರಕಾಶಿಕಾ

ಪತ್ರಿಕೆಯ ಚಂದಾ ದರಗಳು,
೧೮೮೮ನೇ ಇಸವಿ ಜನವರಿಯಿಂದ ಮೊದಲುಗೊಂಡು
ಕಡಿಮೆಮಾಡಲ್ಪಟ್ಟಿರುತ್ತದೆ.

ಈ ಪತ್ರಿಕೆಯ ಚಂದಾದಾರರನ್ನು ಅನೇಕರ ಅಪೇಕ್ಷೆಯನ್ನು ನೆರವೇರಿಸುವ ಉದ್ದೇಶದೊಡನೆಯೂ, ಪರಿಮಿತವಾದ ಆದಾಯವುಳ್ಳವರಿಗೆಲ್ಲ ಈ ಪತ್ರಿಕೆಯು ಸುಲಭವಾಗಿ ಲಭಿಸುವಂತಿರಬೇಕೆಂಬ ಅಭಿಪ್ರಾಯದೊಡನೆಯೂ ಇದರ ಚಂದಾದರವನ್ನು ಇದರಡಿಯಲ್ಲಿರುವಂತೆ ಕಡಿಮೆಮಾಡಿರುತ್ತೇವೆ. ಅವೇನೆಂದರೆ:—

ಇಂಗ್ಲಿಷ್ ಮತ್ತು ಕನ್ನಡಭಾಗಗಳಿಗೆ.

	ಸ್ಥಳೀಯರಿಗೆ	ಪರಸ್ಥಳದವರಿಗೆ
12 ತಿಂಗಳಿಗೆ	8—0—0	9—0—0
6 ,,	4—0—0	4—8—0
3 ,,	2—8—0	2—8—0

ಇಂಗ್ಲಿಷ್ ಅಥವಾ ಕನ್ನಡಭಾಗಗಳಿಗೆ.

	ಸ್ಥಳದವರಿಗೆ	ಪರಸ್ಥಳದವರಿಗೆ
12 ತಿಂಗಳಿಗೆ	4—0—0	5—0—0
6 ,,	2—0—0	2—8—0
3 ,,	1—1—0	1—8—0

ಷರಾ—ಅಂಚೆ ಪೋಸ್ಟುಗಳು, ಪೋಲೀಸ್ ಮತ್ತು [illegible] ಸ್ಕೂಲ್ ಮಾಸ್ಟರುಗಳು, [illegible], ವಿದ್ಯಾರ್ಥಿಗಳು, [illegible] ಚಂದಾದದರಕ್ಕೆ ಕೊಡಲ್ಪಡುವದು. [illegible] ದಲ್ಲಿರುತ್ತದೆ. [illegible] ಕನ್ನಡಭಾಗವನ್ನಾಗಲಿ [illegible] ಬಹುದು. [illegible] ಮೊಬಲಗು ಅಂಗೀಕರಿಸಲ್ಪಡಲಾರದು.

ನೋಟುಗಳು ರವಾನಿಸುವವರು ಮೊದಲು [illegible] ಅರ್ಧಗಳನ್ನು [illegible] ಕಳುಹಿಸತಕ್ಕವರು [illegible] ಬಂದಕ್ಕೆ [illegible] ಕಳುಹಿಸತಕ್ಕದ್ದು. [illegible] ಕಳುಹಿಸಲ್ಪಡುವ ಮೊಬಲಗಿನಲ್ಲಿ [illegible] ಲೆಕ್ಕಕ್ಕೆ ಹಾಕಲ್ಪಡುವದು.

ಪ್ರಕಟನೆಯ ವಿವರ.

ಮೊದಲನೆಯ ದಫಾ ಪಂಕ್ತಿ ೧ ಒಂದಕ್ಕೆ ೦—೨—೦

ಎರಡನೆಯ ದಫಾ ಪಂಕ್ತಿ ಒಂದಕ್ಕೆ ೦—೧—೦

ಷರಾ—ಎರಡಾವರ್ತಿಗಿಂತ ಜಾಸ್ತಿಯಾಗಿ [illegible] ಮಾಡಬೇಕಾದರೆ [illegible] ಕರಾರು [illegible]. [illegible]

"IT RECOMMENDS ITSELF"

ALL WHO SUFFER FIND SURE RELIEF.

LITTLE'S

ORIENTAL BALM

THE MOST EFFECTUAL MODERN REMEDY FOR PAIN.

[illegible]

ಪರಿಶೀಲಕರ ಅಭಿಪ್ರಾಯವು.

[illegible] (C. R. TICHBORNE, L L D, F C S., M. R. I. A.) [illegible]

ಇದರ ಕ್ರಯ—ಸೀಸೆ ೧ ಒಂದಕ್ಕೆ ೧ ರೂಪಾಯಿ

[illegible]

Agents — Messrs, J. West, Chemist, &c., Bangalore
Cullen & Co. Chemists, Bangalore,
Bi[illegible] & C[illegible], Chemists, Bangalore, and of
Mahomed Yousuf and Sons, The Cash Bazar, Bangalore
A C Bi[illegible] & Co,
20 Sunkolass Street Madras.

NOTICE.

VAIDYASARA SANGRAHA

A TREATISE ON THE PRINCIPLES OF

HINDU MEDICINE.

per Price including Postage Rs 3 6 0

ವೈದ್ಯಸಾರ ಸಂಗ್ರಹ.

ಈಗ್ರಂಥಾಪೇಕ್ಷೆಯುಳ್ಳವರು ಮೊಬಲಗಿನೊಡನೆ ಕೆಳಗೆ ರುಜುಮಾಡಿರತಕ್ಕವರ ಹೆಸರಿಗೆ ಬರೆದುಕೊಂಡರೆ ಪುಸ್ತಕ ತಪ್ಪದೇ ಕಳುಹಿಸಲ್ಪಡುವದು. ಮೊಬಲಗು ಇಲ್ಲದ ದರಖಾಸ್ತುಗಳಿಗೆ ಸುತರಾಂ ನಿಗೇಕೊಡಲ್ಪಡಲಾರದು.

ಇದರ ಕ್ರಯ ... ...ರೂ|| ೩—೦—೦

ಪ್ಯಾಕಿಂಗ್ ಮತ್ತು ಅಂಚೇಹಾಸಲ್, ೦—೬—೦

ಟಿ. ಎ. ವೆಂಕಟರಾವ್,
ಬಸ್ತಪ್ಪಿತೋಟ ಬೆಂಗಳೂರು.

ಪಿನಿಸ ವರ್ತಮಾನ.



[illegible]

ನೋಟಿಸ.

ಅಪ್ಪೆಲ್ ಬಾಬತು ಬಿನಸೂಪರಿ ಅತ್ತರಗಳು !!
ಬಾಧೆ ನಿವರ್ತಿ ಮಾಡುವ ದಂತಧಸ್ತ !!
ಅನೇಕ ಸುಗುಣಗಳುಳ್ಳ ಸುಗಂಧರಾಜ ತೈಲವು !!!
ನಾನಾತರದ ಅಪ್ಪೆಲ್‌ಬಾಬತು ಊದು ಬತ್ತಿಗಳು
ಮತ್ತು ಬಿಲ್ಲೆಗಳು ಹೊಸ ಬಿಲ್ಲೆಗಳು ವಗೈರೆ.

ಇವುಗಳೆಲ್ಲ ಬಹಳ ಪರಿಮಳಯುಕ್ತವಾಗಿ ತಯಾರಾಗಿ ಬಿಕರಿಗಾಗಿ ಸಿದ್ಧವಾಗಿರುತ್ತೆ. ಅಲ್ಲದೆ [illegible] ಯಗಳಿಗೆ ಮೇಲ್ಪಟ್ಟು ಉಪಯೋಗಿರುವ ಬಹಳ [illegible] ಪರಿಹಾರ ಮಾಡಿ [illegible] ಸುಗಂಧರಾಜ ತೈಲವು ರಾತ್ರಿ ಹಗಲು ಬಾಧಿಸುವ [illegible] ನೋವನ್ನು ಪರಿಹಾರ ಮಾಡುವ ದಂತ ಬಸ್ತ ಸಹ ಬಹಳ ಕಮ್ಮಿ ಕ್ರಯಕ್ಕೆ ಸಿಕ್ಕುವದು. ಏಜಂಟ್ ಎ. ಮಹಮ್ಮದ್ ಖಾಸಿಂ, ಬೆಂಗಳೂರು ದೊಡ್ಡಪೇಟೆ ಅಂಚೇ ಕಚೇರಿ ಎದುರು ಸಾಹುಕಾರ್.

ನೋಟಿಸ.

ನಾವು ಪ್ರತಿವರ್ಷದಲ್ಲಿಯೂ "ಇಂಗ್ಲೀಷ್ [illegible] ಪಾಕೆಟ್ ಡೈರಿ" ಎಂಬ ದಿನಚರಿ ಪುಸ್ತಕವನ್ನು ಪ್ರಿಂಟ್ ಮಾಡಿಸುತ್ತಿರುವೆವಷ್ಟೆ. ಅದರಂತೆಯೇ [illegible] ಸನ್ ೧೮೮೯ನೇ ಇಸವಿಯ ಹೊಸ ಪುಸ್ತಕವನ್ನು [illegible] ಗಳಿಗೆ ಕೊಡುವದಕ್ಕೆ ಅದೀಗ ತಯಾರಾಗಿ ವಿಕ್ರಯಕ್ಕೆ ಸಿದ್ಧವಾಗಿದೆ. ಅಂಚೇ ಹಾಸಲ್ ಸೇರಿ ಪ್ರತಿ ಒಂದಕ್ಕೆ ೭ ಆಣೆ, ಒಂದೇಸಲ ೧೦ ಪ್ರತಿ [illegible] ಒಂದಕ್ಕೆ ೭ ಆಣೆಯಂತೆ ಮುಂಗಡವಾಗಿಯೇ [illegible] ತರಿಸಿಕೊಳ್ಳಬಹುದು. [illegible]

ಬೆಂಗಳೂರು, } [illegible]
೩—೧೨—೮೮. } ಮ|| ಸ್ಟ್ಯಾಂಡರ್ಡ್ ಪ್ರೆಸ್ [illegible]

ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA.

MONDAY, DECEMBER 3, 1888.

೧೮೮೮ನೇ ಡಿಸಂಬರ್ ತಾ|| ೩ನೇ ಸೋಮವಾರ.

UNWARRANTED PRESUMPTION.

ಈಪ್ಪೂರಲ್ಲಿ ಈಚೆಗೆ ನಿರ್ಮಿತವಾದ ಆರ್ಯ ಸಭೆಯವರ ಪ್ರೋತ್ಸಾಹದಿಂದ ಕಳೆದ ತಿಂಗಳ ೨೧ನೇ ತಾರೀಖಿನಲ್ಲಿ ಸ್ಥಾಪಿಸಲ್ಪಟ್ಟ ಆರ್ಯಬಾಲಿಕಾಪಾಠಶಾಲೆಯ ವಿಷಯವಾಗಿ, ಹುಜೂರ್ ನಿವೇಶ ಪ್ರಕಟಿತವಾದ ಗತ ಗುರುವಾರದ ವೃತ್ತಾಂತಪತ್ರಿಕೆಯು ಅಸಂಗತಗಳಾದ ಕೆಲವು ದುರುಕ್ತಿಗಳಿಂದ ಪ್ರಸಕ್ತಪ್ರಯತ್ನವನ್ನು ನಿಷ್ಕಾರಣವಾಗಿ ಹೇಳನ ಮಾಡಿರುತ್ತದೆ. ಸದರೀ ಪತ್ರಿಕೆಯಲ್ಲಿರುವ ಅನಿರೂಪಕಗಳಾದ ಆಕ್ಷೇಪಣೆಗಳಲ್ಲಿ ಮುಖ್ಯಗಳಾದ ಕೆಲವನ್ನು ಮಾತ್ರ ಇದರಲ್ಲಿ ನಮೂದಿಸಿ ಅವುಗಳಿಗೆ ತಕ್ಕ ಉತ್ತರಗಳನ್ನು ಹೇಳುವೆವು, ಅವು ಯಾವವೆಂದರೆ:—

೧ ನೇದು —"ಮೈಸೂರು ಸಂಸ್ಥಾನದ ರೆಸಿಡೆಂಟರವರಾದ ಸರ್‌ಹಾರಿ ಪ್ರೆಂಡರ್‌ಗಾಸ್ಟ್ ಸಾಹೇಬರವರು ಬಾಲಿಕಾಪಾಠಶಾಲೆಯನ್ನು ಪ್ರಾರಂಭಿಸುವರೆಂಬ ನಿರೀಕ್ಷಣೆ ಪ್ರಬಲವಾಗಿದ್ದರೂ ತಾವು ಬರಲಾರೆವೆಂದು ಅವರು ಅದಿನ ಸಾಯಂಕಾಲ ಹೇಳಿ ಕಳುಹಿಸಿದರು, ಈ ಸಂದರ್ಭದಲ್ಲಿ ಅವರು ಬಹಳ ತಿಳುವಳಿಕೆಯಾಗಿ ನಡೆದುಕೊಂಡರು" ಎಂಬದು.

ನೂತನ ಬಾಲಿಕಾ ಪಾಠಶಾಲೆಯ ಉದ್ದೇಶಗಳು ವೃತ್ತಾಂತಪತ್ರಿಕೆಗಳಮೂಲಕ ಪೂರ್ವದಲ್ಲೇ ಪ್ರಕಟವಾಗಿದ್ದರೂ ಅದು ಪ್ರಾರಂಭವಾದ ದಿವಸದವರೆಗೆ

ತಿಳಿಯದೆ ಇತ್ತೆಂದು ಭಾವಿಸುವದು ಕೇವಲ ಅಸಂಭವವಾಗಿರುತಿದೆ. ಪ್ರಸಕ್ತ ಉದ್ದೇಶಪ್ರಯತ್ನಗಳನ್ನವರು ಅತಿಕೇ ಸಭಿಕರ ಆಹ್ವಾನವನ್ನಂಗೀಕರಿಸಿದರಲ್ಲದೆ ಬೇರಿಲ್ಲವು. ಹೀಗಿದ್ದಾಗ್ಯೂ ಪದುತ್ತರಕ್ಷಣದವರಿವಿಗೂ ಬರುವರೆಂಬ ನಿರೀಕ್ಷಣೆಯನ್ನು ಜನರಿಗುಂಟುಮಾಡಿ ಆ ಕಾಲಕ್ಕೆ ಸರಿಯಾಗಿ ಕಾರಣಗಳೊಂದನ್ನೂ ತಿಳಿಸದೆ "ತಾವುಬರಲಿಕ್ಕಾಗುವದಿಲ್ಲವೆಂದು" ಮಾತ್ರ ಬರೆದದ್ದನ್ನು ನೋಡಿದರೆ, ಅವರು ಮಾಡಿದ್ದ ಪ್ರತಿಜ್ಞೆಯು ಮಿಷನರಿಗಳ ಆರ್ತವಧ್ವನಿಯಿಂದ ಭಗ್ನವಾಗಿ ಇದಂಪೂರ್ವ್ಯೇಣ ಅವರ ದಾಕ್ಷಿಣ್ಯಕ್ಕೊಳಪಟ್ಟು ಈರೀತಿ ಬಹಳ ಮಂದಿಗೆ ಆಶಾಭಗ್ನವಂ ಮಾಡಿದರೆಂದು ವೃತ್ತಾಂತಪತ್ರಿಕೆಯ ಬರವಣಿಗೆಗೆ ಅರ್ಥ ಮಾಡಬೇಕಾಗಿದೆಯಷ್ಟೆ. ಹಿಂದೂ ಸಮುದಾಯಕ್ಕೆ ವಿರುದ್ಧವಾಗಿ ಮಾಡಲ್ಪಡುವ ಮಿಷನರಿಗಳ ಪ್ರಯತ್ನಕ್ಕೆ ಅವರೀರೀತಿ ಮಾಡುವರಾದರೆ ಆಗ ಅವರ ನೀತಿ ನಿಷ್ಪಕ್ಷಪಾತತೆ ಮೊದಲಾದವು ಸದರೀ ಪತ್ರಿಕೆಯ ಆಕ್ಷೇಪಣೆಗೆ ಗುರಿಯಾಗಿರುವವು, ಪರಂತು ಹಿಂದೂಗಳು ಸ್ವಾರ್ಥಕ್ಕಾಗಿ ಪರನಿಂದೆ ಮಾಡತಕ್ಕವರಲ್ಲವಾಗಿ ರೆಸಿಡೆಂಟರವರ ಮೂಲಕ ಪ್ರಾಪ್ತವಾದ ಆಶಾಭಂಗವಂ ಅವರು ಪ್ರಬಲವನ್ನಾಗಿ ಎಣಿಸಲಿಲ್ಲವು.

೨ನೇದು—"ಡಾಯುರಗಳೂ ಅಮಲ್ದಾರರೂ ಸರ್ಕಾರದ ಉದ್ಯೋಗದಿಂದ ನಿವೃತ್ತರಾದ ಪೆನ್ಶನ್‌ದಾರರೂ ಶಿದ್ದೀಕಟ್ಟೆ ಮಿಷನ್ ಪಾಠಶಾಲೆಯ ವಿದ್ಯಾರ್ಥಿನೀಯರ ತಂದೆತಾಯಿಗಳ ಬಳಿಗೆಯೋಗಿ ಅವರ ಹೆಣ್ಣುಮಕ್ಕಳನ್ನು ಅಲ್ಲಿಗೆ ಕಳುಹಿಸಕೂಡದೆಂದು ಅವರಿಗೆ ಬೋಧಿಸಲಿಕ್ಕೂ, ಶ್ರೇಷ್ಠವಾದ ಮಿಷನ್ ಪಾಠಶಾಲೆಯ ವಿಷಯದಲ್ಲಿ ಸುಳ್ಳು ವರ್ತಮಾನಗಳಂ ಕೊಡುತ ಅಯೋಗ್ಯವಾದ ತರ್ಕವಂ ಬೆಳಸುವದಕ್ಕೂ, ಹಳೇ ಪಾಠಶಾಲೆಯಿರುವ ಅತ್ಯಂತ ಸಮೀಪದ ಪ್ರದೇಶದಲ್ಲಿಯೇ ಈ ಪಾಠಶಾಲೆಯನ್ನು ಸ್ಥಾಪಿಸಿದ್ದಕ್ಕೂ, ಮಿಷನ್ ಪಾಠಶಾಲೆಯ ಕೆಲವು ಉಪಾಧ್ಯಾಯರನ್ನು ತಮ್ಮ ಕಡೆಗೆ ಬರುವ ಪ್ರಯತ್ನಗಳಂ ಮಾಡುತಿರುವದಕ್ಕೂ, ಪ್ರತಿಪಕ್ಷವಾದ ವಿರೋಧವಿಲ್ಲದೆ ಹೋದದ್ದಕ್ಕೆ ಕಾರಣವೇನು ?" ಎಂಬದು.

ಮಿಷನರಿಗಳ ಉದ್ದೇಶವು ಕೇವಲ ಹಿಂದೂ ಬಾಲೆಯರ ವಿದ್ಯಾಭಿವೃದ್ಧಿಯಂ ಕುರಿತದ್ದು ಮಾತ್ರವಾಗಿದ್ದರೆ ಅವರ ಪ್ರಯತ್ನೋಪಚಾರಗಳು ನಿರ್ದುಷ್ಟಗಳಾಗಿಯೂ ನಿರಾಕ್ಷೇಪಣೀಯಗಳಾಗಿಯೂ ಇರುವವಲ್ಲದೆ ಅವರಿಗೆ ವಿರುದ್ಧವಾಗಿ ಒಬ್ಬರೂ ಪ್ರವರ್ತಿಸಿರಲಾರರು, ಹಾಗಿಲ್ಲದೆ ಅವರು ಮಾಡತಕ್ಕ ಕಾರ್ಯವು ಹೃದಯಂಗಮವಾದ ಬೇರೊಂದುದ್ದೇಶಕ್ಕೆ ಕಾರಣವಾಗಿ, ತನ್ಮೂಲಕ ಮತವಿಚ್ಛೇದನವೇ ಮುಖ್ಯಫಲವಾಗಿ ಪರ್ಯಾಪ್ತ ಬಂದದರಿಂದ ಅದಂ ಜನರಿಗೆ ತಿಳಿಯಪಡಿಸಿ ಕ್ರಿಶ್ಚಿಯನ್ ಮಿಷನರಿಗಳಿಂದ ಅವರಿಗೆ ಮುಂದೆ ಉಂಟಾಗಬಹುದಾದ ಅನರ್ಥಗಳಂ ಚೆನ್ನಾಗಿ ತಿಳಿಸಿ ಅದರಿಂದ ತಪ್ಪಿಸುವ ಮಾರ್ಗವಂ ಹುಡುಕಬೇಕಾದ್ದು ಪ್ರತಿ ಹಿಂದೂವಿಗೂ ಅವಶ್ಯ ಕರ್ತವ್ಯವಾಗಿರುತಿದೆ. ಇದಂ ದೂಷ್ಯವೆಂದು ಆಕ್ಷೇಪಿಸುವ ವೃತ್ತಾಂತ ಪತ್ರಿಕೆಗೆ, ಪರಮತಗಳಂ ನಾಶನ ಮಾಡಬೇಕೆಂಬ ಸಂಕಲ್ಪದೊಡನೆ ತನ್ಮತಾವಲಂಬಿಗಳನ್ನೆಲ್ಲ ನಾನಾ ವಿಧ ದುರ್ಬೋಧನೆಗಳಿಂದ ಜಾತಿ ಹೀನರನ್ನಾಗಿ ಮಾಡತಕ್ಕ ಮಿಷನರಿಗಳ ವ್ಯಾಪಾರವು ಬಹಳ ಗರ್ಹಿತವಾದ್ದೆಂದು ತೋರದೆ ಹೋಗಲಿಕ್ಕೆ ಅದರ ದುರಭಿಮಾನ ವಿನಾ ಬೇರೇನಾದರೂ ಕಾರಣವುಂಟೋ? ಮಿಷನ್ ಪಾಠಶಾಲೆಗಳ ವಿಷಯದಲ್ಲಿ ಈಗ ಹೊಸದಾಗಿ ಯಾರೂ ಸುಳ್ಳು ವರ್ತಮಾನಗಳಂ ಕೊಟ್ಟು ಅಯೋಗ್ಯವಾದ ತರ್ಕವಂ ಬೆಳೆಸಬೇಕಾದುದಿಲ್ಲವು. ಅವುಗಳ ಬಾಹ್ಯಕೆ ಅವುಗಳ ವರ್ತನದಂತಿರುವದರಿಂದ ಅವುಗಳ ದ್ರೋಹಚಿಂತೆಯೇ ಆತ್ಮನಾಶಕ್ಕೆ ಕಾರಣವಾಯಿತು. ಅದರ ವಿಷಯದಲ್ಲಿ ನುಡಿಯಬೇಕಾದ ಸುಳ್ಳೇನಿದೆ? ಅದರಲ್ಲಿ ಓದುವಮಕ್ಕಳು ಸ್ವಜಾತಿ ಮತಾಚಾರಗಳಲ್ಲಿ ನಿರಭಿಮಾನಿಗಳಾಗುವದೂ, ಅಲ್ಲಿ ಅವರಿಗಿರುವ ಪ್ರೇರಕ ಸಾಮಗ್ರಿಗಳಿಂದ ಭ್ರಾಂತರಾಗಿ ಭ್ರಷ್ಟರಾಗುವದೂ, ಮಿಷನರಿಗಳ ವಂಚನ ವಾಕ್ಯಗಳಿಂದ ಮರುಳರಾಗಿ ಕೆಟ್ಟು ಹೋದಬಳಿಕ ಅವರು ಅಲ್ಲಿ ಅನ್ನವಸ್ತ್ರಗಳಿಗೆ ಸಹ ಇಲ್ಲದೆ ಸಂಕಟಪಡುತಲಿರುವದೂ, ಮಿಷನರಿಗಳ ಸಕರೋಪದೇಶವೂ ಪರಮತನಿಂದಾಪೂರ್ವಕವಾದ ಸ್ವಮತ ಪ್ರಶಂಸಾರೂಪವಾಗಿರುವದೂ, ಅವರ ಸರ್ವಪ್ರಯತ್ನವೂ ಸ್ವಮತಪ್ರಚಾರರೂಪವಾದದ್ದೆಂಬದೂ, ಪ್ರಸಕ್ತ ನೂತನ ಬಾಲಿಕಾಪಾಠಶಾಲೆಯಿಂದ ಮಿಷನರಿಗಳ ಸಂಕಲ್ಪಕ್ಕೆ ಯತ್ಕಿಂಚಿತ್ ವ್ಯಾಘಾತ ಪ್ರಾಪ್ತಿಯಾಯಿತೆಂಬ ಅಸೂಯೆಯಿಂದ ಅವರು ದುಃಖಿಸುತ ನಾನಾವಿಘ್ನಗಳನ್ನುಂಟುಮಾಡುತಲಿರುವದೂ ಪ್ರಸಿದ್ಧವಿಷಯಗಳಾಗಿರುವಾಗ್ಯೆ ಇವುಗಳಲ್ಲಿ ಸುಳ್ಳು ಹೇಳಬೇಕಾದ್ದೇನಿದೆ. ಇಂತಾ ಉದ್ದೇಶ ಪ್ರಯತ್ನಗಳೊಂದೂ ನಮಗಿಲ್ಲವೆಂದು ವೃತ್ತಾಂತಪತ್ರಿಕೆ ಯೇನಾದರೂ ಧೈರ್ಯವಾಗಿ ಹೇಳುವದೆ? ಶಿದ್ದೀಕಟ್ಟೆಯು ಹಿಂದೂಗಳವಾಸಸ್ಥಾನಕ್ಕೆ ಮಧ್ಯ ಪ್ರದೇಶವಾಗಿರುವದರಿಂದಲೂ, ಪ್ರಶಸ್ತವಾದಸ್ಥಳ ಅಲ್ಲಿ ದೊರೆತದ್ದರಿಂದಲೂ, ಹೆಣ್ಣುಮಕ್ಕಳು ನಾಲ್ಕುಕಡೆಗಳಿಂದ ಬರಲಿಕ್ಕೆ ಅನುಕೂಲವಾಗಿರುವದರಿಂದಲೂ, ಈಗ ಪಾಠಶಾಲೆಯು ಅಲ್ಲಿ ಸ್ಥಾಪಿಸಲ್ಪಟ್ಟಿತು. ಇದೇ ಮುಖ್ಯೋದ್ದೇಶಗಳು. ಇದುತಿಳಿಯದೆ ಮಿಷನ್ ಬಾಲಿಕಾ ಪಾಠಶಾಲೆಯನ್ನು ಹಾಳುಮಾಡುವದಕ್ಕಾಗಿ ಅಲ್ಲಿ ಇಡಲ್ಪಟ್ಟಿತೆಂದು ಭಾವಿಸುವಪಕ್ಷಕ್ಕೆ ಹಾಗೆ ಅಲ್ಲವೆಂದು ನಾವ್ಯಾತಕ್ಕೆ ನಿಷೇಧಿಸಬೇಕು ? ಸದ್ಧರ್ಮ ಬೋಧಕವಾದ ನೂತನ ಪಾಠಶಾಲೆಯು ದೈವಾನುಗ್ರಹದಿಂದ ವೃದ್ಧಿಯನ್ನೈದಿದರೆ, "ಅವರವರಪ್ರಯೋಜನಾರ್ಥ ಮಾಡಿಕೊಂಡ ಕಾರ್ಯಕ್ಕಾಗಿ ನಾವು ಮನಸ್ತಾಪ ಪಡಲ್ಯಾಕೆಂದು ಮಿಷನರಿಗಳು ಯಾತಕ್ಕೆ ನಿರ್ಭರರಾಗಿರಬಾರದು ? ಮಿಷನರಿಗಳಿಗೆ ಅಂತರವಾದ ಬೇರೆಯೊಂದುದ್ದೇಶವಿಲ್ಲದಿದ್ದರೆ, ಹಿಂದೂಗಳ ಕ್ಷೇಮಾಭಿವೃದ್ಧಿಗಾಗಿ ನಾವಿದುವರಿವಿಗೂ ಪಟ್ಟಶ್ರಮವು ಸಫಲವಾಗಿ ಅವರು ತಮ್ಮ ಕಾರ್ಯಗಳನ್ನು ಸ್ವತಃ ಮಾಡಿಕೊಳ್ಳಲಿಕ್ಕೆ ಶಕ್ತರಾದ ಮೇಲೆ ನಾವು ವಿಶ್ರಾಂತಿಯಂ ಹೊಂದುವಣವೆಂಬ ಅವರಿಗೆ ಯಾತಕ್ಕೆ ತೋರಲಿಲ್ಲವು ? ಅವರಮತದಿಂದನೆಯು ಅವರಿಗೆ ಹ್ಯಾಗೆ ಶ್ರೇಷ್ಠವಲ್ಲವೋ ಹಾಗೆಯೇ ಅನ್ಯರಿಗೂ ಇರುವದೆಂದು ಯಾತಕ್ಕೆ ಭಾವಿಸಕೂಡದು ? ಮಿಷನ್ ಸ್ಕೂಲಿನಲ್ಲಿದ್ದ ಉಪಾಧ್ಯಾಯರು ಕೆಲವರು ಅಲ್ಲಿ ಕೆಲಸವಂ ಬಿಟ್ಟು ಬಂದರೆ ಅವರು ಹೊಸ ಪಾಠಶಾಲೆಯಲ್ಲಿ ಸೇರಿಸಿಕೊಂಡದ್ದು ಸಹ ವೃತ್ತಾಂತ ಪತ್ರಿಕೆಯ ಆಕ್ಷೇಪಣೆಗೆ ವಿಷಯವಾಗಿದೆ. ಕೆಲಸವಂ ಬಿಟ್ಟು ಬಂದದ್ದು ಅವರು ಸೇರಿಸಿದ್ದೂ ತಪ್ಪೆಂದು ವೃತ್ತಾಂತಪತ್ರಿಕೆ ತಿಳಿಸುವ ಪಕ್ಷಕ್ಕೆ ಅವರು ಮಾಡಿದ್ದು ನ್ಯಾಯ್ಯವೆಂದು ಹೇಳುವೆವು. ಹ್ಯಾಗೆಂದರೆ—ಇದುವರಿವಿಗೆ ಹಿಂದೂಗಳು ತಮಗೆ ಬೇಕಾದ ವಿಷಯಗಳನ್ನು ಕಲ್ಪಿಸಿಕೊಳ್ಳದೆಯೂ, ಸ್ವಪ್ರಯೋಜನದ ಮೇಲೆ ದೃಷ್ಟಿ ಇಡದೆಯೂ ಹೋದದರಿಂದ ಸದರೀ ಟೀಚರುಗಳು ಉದರ ಭರಣಾರ್ಥ ಅನ್ಯಮತದವರಲ್ಲಿ ಸೇವಾವೃತ್ತಿಯಂ ಕೈಗೊಂಡು ತಮ್ಮ ಜಾತಿ ಮತಗಳಿಗೆ ಯಾವ ಕಾಲದಲ್ಲಿ ಏನು ಕೇಡುಂಟಾಗುವದೋ ಎಂಬ ಭೀತಿಯೊಡನೆ ಕಾಲವಂ ಕಳೆಯುತಲಿದ್ದರು. ಈಗ ದೈವಕೃಪೆಯಿಂದ ಹಿಂದೂಗಳಿಗೆ, ತಾವು ಇನ್ನು ಸವಕಾಶ ಮಾಡಿದರೆ ತಮ್ಮ ಜಾತಿ ಮತಗಳೆಲ್ಲ ನಿರ್ಮೂಲಗಳಾಗಿ ನಾಶವಾಗುವವೆಂಬ ಭೀತಿಯನ್ನು ಮಿಷನರಿಗಳು ಹುಟ್ಟಿಸಿ ಅವರಿಗೆ ಜಾಗರೂಕತೆಯನ್ನುಂಟುಮಾಡಿದ್ದರಿಂದ ಅವರು ಎಚ್ಚೆತ್ತುಕೊಂಡು ತಮ್ಮ ಪ್ರಯೋಜನಗಳಿಗೂ ಯೋಗಕ್ಷೇಮಗಳಿಗೂ ಸಾಧಕಗಳಾದ ವಿಷಯಗಳನ್ನು ಕಲ್ಪಿಸಿಕೊಳ್ಳಲಿಕ್ಕೆ ಪ್ರಾರಂಭಿಸಿದ್ದರಿಂದ ಇನ್ನು ಟೀಚರುಗಳೆಲ್ಲರೂ ಸಾಪಾಯಸ್ಥಿತಿಯಿಂದ ತಪ್ಪಿಸಿಕೊಂಡು ನಿರಪಾಯ ಪ್ರದೇಶವಂ ಸೇರಿ ಲಭಿಸಿದ್ದಕ್ಕೆ ತೃಪ್ತರಾಗಿ ಸುಖದಿಂದ ಕಾಲಹರಣ ಮಾಡುವಣವೆಂದು ಯೆಣಿಸಿ ತಮ್ಮ ಕೆಲಸಗಳಂ ಬಿಟ್ಟರಾಗಿ ಅವರ ಪ್ರಗೋದೃಷ್ಟಿಯು ಯಾತಕ್ಕೆ ಪ್ರಶಂಸಾರ್ಹವಾಗಲಾರದು ?

೩ನೇದು—"ಮಿಷನ್ ಪಾಠಶಾಲೆಗಳಿಗೆ ತಮ್ಮ ಹೆಣ್ಣುಮಕ್ಕಳನ್ನು ಕಳುಹಿಸುವದರಿಂದ, ಮತಕ್ಕೆ ಭ್ರಷ್ಟತನವು ಬರುತದೆಂಬ ಭಯದಿಂದ ಜನರು ಈ ಹೊಸ ಪಾಠಶಾಲೆಯನ್ನು ಸ್ಥಾಪಿಸಿದರು. ಇಗೋ! ವಿಚಾರಮಾಡಿರಿ. ಇದರಸ್ಥಾಪಕರು ಜಾತಿಯಿಂದತೆಗೆದುಹಾಕಿದ ಒಬ್ಬರನ್ನು ಪಾಠಶಾಲೆಯಂ ಪ್ರಾರಂಭ ಮಾಡುವ ಕಾಲದಲ್ಲಿ ಸಭಾಧ್ಯಕ್ಷರನ್ನು ಮಾಡಿ ಕೂಡಿಸಿದರು", ಎಂಬದು.

ಮಿಷನ್ ಪಾಠಶಾಲೆಗೆ ಹೆಣ್ಣು ಮಕ್ಕಳನ್ನು ಕಳುಹಿಸುವದರಿಂದ ಅವರು ಮತಭ್ರಷ್ಟರಾಗಿ ಅಸ್ವಾಧೀನರಾಗುವರೆಂಬ ಭಯವು ಪ್ರಬಲಗೊಂಡಿರುವಂತೆ "ಜಾತಿಯಿಂದತೆಗೆದುಹಾಕಿದವರನ್ನು ಸಭಾಧ್ಯಕ್ಷರನ್ನಾಗಿ ಮಾಡುವವರ ಮೂಲಕವುಂಟಾಗಲಾರದೆಂದರಿತೇ ಆರೀತಿ ಮೆ|| ಮೀನಾಕ್ಷಿಅಯ್ಯರವರನ್ನು ಸಭೆಯವರು ಚುನಾಯಿಸಿದರು. ರೆಸಿಡೆಂಟರವರು ಬಂದಿದ್ದರೆ ಅವರೇ ಪ್ರೆಸಿಡೆಂಟರಾಗಿರುವರು. ಕೇವಲ ಕ್ರಿಶ್ಚಿಯನ್‌ಯೆಂಬಮಾತ್ರದಿಂದಲೇ ಅವರು ತ್ಯಾಜ್ಯರೆಂದು ನಾವು ಹೇಳುವದಿಲ್ಲವಾಗಿ ಅವರು ಮತಾಭಿನಿವೇಶದೊಡನೆ ಅನ್ಯರಹಾನಿಯಂ ಬಯಸಿ ಅದು ಘಟಿಯಿಸಲಾರರೆಂಬ ನಂಬಿಕೆ ನಮಗೆಲ್ಲರಿಗೂ ಉಂಟಾಗಿದ್ದದರಿಂದಲೇ ಅವರು ಪ್ರೆಸಿಡೆಂಟರಾಗಿದ್ದರೆ ಪಾಠಶಾಲೆಗೆ ಗೌರವಾವಹವಾಗಿರುವದೆಂದು ಭಾವಿಸಲಾಯಿತು. ಇಷ್ಟಕ್ಕೂ ಮೆ|| ಮೀನಾಕ್ಷಿಅಯ್ಯರವರಾಗಲಿ, ರೆಸಿಡೆಂಟರಾಗಲಿ, ವಿದ್ಯಾರ್ಥಿನಿಯರಿಗೆ ಬೋಧಕರಾಗಿ ಮೊಕರರ್ಮಾಡಲ್ಪಡಲಿಲ್ಲವು. ಹಿಂದೂಮತ ವಿರುದ್ಧ ಧರ್ಮಾಚಾರಗಳಂ ಬೋಧಿಸಲಿಕ್ಕೆ ಅವರಿಗೆ ಅಲ್ಲಿ ಅವಕಾಶವೂ ಪ್ರವೃತ್ತಿಯೂ ಉಂಟಾಗಿಲ್ಲದಿರುವಾಗ್ಯೆ ತಾತ್ಕಾಲಿಕ ಪ್ರೆಸಿಡೆಂಟರು ಯಾರಿದ್ದರೇನುಬಾಧಕವು ? ಮುಖ್ಯವಾಗಿ ಅಸೂಯೆಯೂ ತನ್ಮೂಲಕ ವಿದ್ವೇಷವೂ ಪ್ರಾಪ್ತವಾದರೆ ಅವು ಮನುಷ್ಯನ ಉಚಿತಜ್ಞತೆಯಂ ಹೋಗಲಾಡಿಸಿ ಭ್ರಾಂತನನ್ನಾಗಿಮಾಡಿ ಜನರ ಹೇಳನಕ್ಕೆ ಗುರಿಮಾಡದೆಹೋಗಲಾರವು.

ಅಸೂಯೆ ಯೆಂಬುವದು ಪರಶ್ರೇಯಸ್ಸಂ ನೋಡಿ ಸಹಿಸದಿರುವ ಗರ್ಹಿತವಾದ ಚಿತ್ತವೃತ್ತಿಯಾಗಿರುತಿದೆ. ಇದರಿಂದ ಈರ್ಷ್ಯೆಯೆಂಬ ಮತ್ತೊಂದು ದುರ್ಗುಣವು ಜನಿಸುವದು. ಇದು ಅನ್ಯರಿಗೆ ಅನಿಷ್ಟವನ್ನುಂಟುಮಾಡತಕ್ಕ ವಿಷಯದೊಳುಂಟಾಗುವ ಒಂದು ಬಗೆಯಾದ ದುರಾಲೋಚನೆಯಾಗಿರುವದು. ಈರ್ಷ್ಯಾಸೂಯೆಗಳೆಂಬ ಈ ಎರಡು ಗುಣಗಳು ಪರಸ್ಪರ ಅಗಲಿರಲಾರವು. ಈ ದೋಷಗಳಂ ಪಡೆದವರಲ್ಲಿ ಕೆಲವರು, ಅನ್ಯರ ಭೋಗ ಭಾಗ್ಯಗಳಂ ನೋಡಿ ಸಹಿಸದೆ ಅವರನ್ನಾಗಲಿ, ಅವರ ಸಂಪತ್ಪ್ರಭವಗಳನ್ನಾಗಲಿ ನಾಶವಾದಲೆತ್ನಿಸಿ ಅದಕ್ಕೆ ಸಾಧಕಗಳಾದ ಕಾರ್ಯಗಳನ್ನ ಅನವರತ ಮಾಡುತಲಿರುವರು ; ಇನ್ನು ಕೆಲವರು ಅನ್ಯರ ಔತ್ಕೃಷ್ಟ್ಯವೆಂಕೆಂದು ಸಹಿಸಲಾರದೆ ಅವರಂ ಬಗೆಬಗೆಯಾಗಿ ನಿಂದಿಸುತಲಿರುವರು. ಮತ್ತು ಕೆಲವರು ಅನ್ಯರು ತಿರಸ್ಕರಿಸುವದಕ್ಕಾಗಿ ಸ್ವತಃ ಪ್ರಶಂಸಿಸಿಕೊಳ್ಳುವರು. ಇಂತಾ ಅಸೂಯೆಯೆಂಬ ದೋಷವುಳ್ಳವರು ಅನೇಕ ಪ್ರಭೇದದವರಾಗಿದ್ದರೂ, ಅವರೆಲ್ಲರೂ ಮೇಲೆ ಹೇಳಲ್ಪಟ್ಟ ಮೂರು ಭೇದದವರಲ್ಲಿಯೇ ಅಂತರ್ಭೂತರಾಗಿರುತ್ತಾರೆ. ಯಾತಕ್ಕೆಂದರೆ, ಅಸೂಯಾಳುಗಳು ಅನ್ಯರಿಗೆ ಲಭಿಸಿದ ಶ್ರೇಯಸ್ಸು ತಮಗೂ ಲಭಿಸದೆ ಹೋಯಿತೆಂದಾಗಲಿ, ತಮ್ಮಂತೆ ಅನ್ಯರಿರ ಬಾರದೆಂದಾಗಲಿ, ತಾವೇ ಸರ್ವೋತ್ಕೃಷ್ಟರೆಂದು ಭ್ರಮೆಗೊಂಡಾಗಲಿ, ವ್ಯರ್ಥವಾದ ಮನಃಕಾಲುಷ್ಯದಿಂ ಪೀಡಿಸಲ್ಪಡುತಲಿರುವರು. ಇವರಲ್ಲಿ ಮೊದಲನೆಯ ತರಗತಿಯವರು ಈ ಲೋಕದಲ್ಲಿ ಪ್ರಜೆಗಳೆಲ್ಲರಿಗೂ ಅನಿಷ್ಟರಾಗಿರುವರಲ್ಲದೆ, ಅವರ ದ್ವೇಷಕ್ಕೂ ವಿಷಯವಾಗಿ, ಜನವಿರೋಧ ರಾಜದಂಡನೆ ಮುಂತಾದ ಇಹ ಪರಲೋಕ ದುಃಖಗಳಿಗೆ ಗುರಿಯಾಗುತ್ತಾರೆ. ಇಂತವರಿಗೆ ಬಾಂಧವ್ಯವು ಕಾರ್ಯಕಾರಿಯಲ್ಲವು. ಸ್ನೇಹವು ವ್ಯರ್ಥವು, ಗುರುತ್ವವು ಪೊಳ್ಳವು, ಪರಿಚಯವು ನಾಸ್ತಿ, ದಾಕ್ಷಿಣ್ಯವು ಶೂನ್ಯ, ಮುಖ್ಯವಾಗಿ ಅಂತವರುದ್ದೇಶಿಸಿ ಮಾಡದಿರುವ ದುಷ್ಕೃತ್ಯಗಳು ಈ ಲೋಕದಲ್ಲಿ ಬಹಳ ದುರ್ಲಭಗಳಾಗಿರುತವೆ.

ಪರನಿಂದಾ ರೂಪವಾದ ಈರ್ಷ್ಯೆ ಅಥವಾ ಅಸೂಯೆಯುಳ್ಳವರು, ಅನ್ಯರ ಶ್ರೇಯಸ್ಸನ್ನು ಸಹಿಸದೆ ಅದಂ ನಿಂದಿಸಿದರೆ, ಪ್ರಪಂಚದಲ್ಲಿ ಗುಣಜ್ಞರೆಲ್ಲರೂ ಅದು ಕೊಂಡಾಡದಿರುವರಾಗಿ ತನ್ಮೂಲಕ ಅದು ನಷ್ಟವನ್ನೈದುವದೆಂಬ ಕುತ್ಸಿತವಾದ ಆಲೋಚನೆಯೊಡನೆ ಪರರು ದೂಷಿಸಲೆತ್ನಿಸುವರು. ತಾವನ್ಮಾತ್ರದಿಂದಲೇ ತಾದೃಕ ದೋಷಗಳಿಗೆ ಗುಣಜ್ಞರ ಚಿತ್ತದಲ್ಲಿ ಅವಕಾಶವುಂಟಾಗುವದೆದೆಣಿಸುವದು ಕೇವಲ ಭ್ರಾಂತಿಜನಿತವೆಂದು ಹೇಳಬೇಕಾಗಿರುತಿದೆ. ಅದು ಹ್ಯಾಗೆಂದರೆ—ಘೂಕಗಳಿಗೆ ಅಹಿತವಾದ ಸೂರ್ಯಕಿರಣಗಳು, ಕಮಲಗಳಿಗೆ ಹ್ಯಾಗೆ ಪ್ರಿಯಕರವಾದವೋ ಅವರಂತೆ ಅಸೂಯಾ ಪರರಿಗನಿಷ್ಟಗಳಾದ ತೋರತಕ್ಕ ಸುಗುಣಗಳು ಗುಣಜ್ಞರಿಗೆ ಶ್ಲಾಘ್ಯಗಳಾಗದೆ ಹೋಗಲಾರವು. ಏವಂಚ ಅಸೂಯೆ ಎಂಬುವದು ಪರರ ಪ್ರಾಭವವಂ ನೋಡಿ ಅಥವಾ ಕೇಳಿ ಸಹಿಸದಿರುವವರಿಂದುಂಟಾಗುವ ಮನೋ ವ್ಯಾಧಿಯಾಗಿರುವದರಿಂದ ಇಂತಾ ರೋಗಪೀಡಿತರಾದವರು ಅನ್ಯರ ವಿಷಯದಲ್ಲಿ ತಾವು ಕೋರುವ ಅನಿಷ್ಟಗಳನ್ನು ಆಯಾಕಾಲದಲ್ಲವರಿಗೆ ಘಟಿಯಿಸುವದರಿಂದ ತಮ್ಮ ರೋಗೋಪಶಾಂತಿಯಂ ಮಾಡಿಕೊಳ್ಳಲಪೇಕ್ಷಿಸುವರು. ತತ್ಕಾಲದಲ್ಲವರಿಗದು ರೋಗೋಪಶಾಮಕವಾಗಿದ್ದರೂ ಉತ್ತರ ಕಾಲದಲ್ಲಿ ತನ್ಮೂಲಕ ಅವರ ಉಭಯಲೋಕ ದುಃಖಗಳನ್ನನುಭವಿಸದೆ ಹೋಗಲಾರರು. ಮನುಷ್ಯರು ಅವರವರಿಗೆ ದೈವಕೃಪೆಯಿಂದ ಲಭ್ಯವಾದ ಭೋಗಭಾಗ್ಯಗಳನ್ನನುಭವಿಸುತ್ತ ಅವುಗಳಿಂದ ತಮ ತಮಗೆ ಆವಶ್ಯಕಗಳಾಗಿಯೂ, ನ್ಯಾಯಸಮ್ಮತವಾಗಿಯೂ ಇರುವ ಕಾರ್ಯಗಳಂ ಮಾಡಿಕೊಂಡು ತಕ್ಕ ಸಾಧನಗಳಿಂದ ಯೋಗ್ಯವಾದಫಲಗಳಂ ಹೊಂದಿದರೆ ಅಂತವರು ನೋಡಿ ದುಃಖಿಸುವುತಾವರಿಗೇನು ಅಭಿಪ್ರಾಯವಿರಬಹುದು ? ಪ್ರಾಯೇಣ ಇಂತಾ ಮನುಷ್ಯರ ಸ್ನೇಹವು ಸಕಲರಿಗೂ ಭಯಂಕರವಾಗಿಯೂ ಅಮಂಗಳಕರವಾಗಿಯೂ ಇರುವದಲ್ಲದೆ ಅನ್ಯರಿಂದವರಿಗುಂಟಾಗುವ ಪ್ರಯೋಜನಗಳೆಲ್ಲವೂ ನಾಶವನ್ನೈದುವವು. ಹೀಗೆ ಅಯೋಗ್ಯಗಳಾದ ಮತ್ತು ಆಹಾರವಾದಚಿಂತೆಯಿಂದ ಪೀಡಿತವಾದ ಅವರ ಚಿತ್ತದಲ್ಲಿ ತಮ್ಮಯೋಗಕ್ಷೇಮ ಚಿಂತೆಗೆ ಸ್ವಲ್ಪವೂ ಅವಕಾಶ ದೊರೆಯದೆ ಹೋಗುಲ ಕಡೆಗೆ ಅಸೂಯಾಳುಗಳ ಜನ್ಮವೇ ವ್ಯರ್ಥವಾಗುವದಲ್ಲದೆ, ವ್ಯಾಘ್ರ, ಸರ್ಪ, ವೃಶ್ಚಿಕಾದಿ ಕ್ಷುದ್ರಜಂತುಗಳಂತೆ ದುಃಖದಾಯಿಗಳಾಗುವರಾಗಿ ಅಂತಾ ದುಷ್ಟರ ನಾಶವಂ ಸಕಲರೂ ಅನವರತಪ್ರಾರ್ಥಿಸುತ ಅದು ಸುಲಭವಾಗಿಯೂ, ಶೀಘ್ರವಾಗಿಯೂ, ಅವರಿಗೆ ಸಂಭವಿಸಲಿಕ್ಕೆ ಆವಶ್ಯಕಗಳಾದ ಕಾರ್ಯಗಳಂ ಮಾಡಬೇಕಾಗುವದು ಪರ ದೂಷಕರಾಗಿಯೂ, ಆತ್ಮಪ್ರಶಂಸಕರಾಗಿಯೂ ಇರುವ ಅಸೂಯಾಳುಗಳಿಗೆ ಪಕ್ಷಪಾತ ಹೇತುವಾದ ದುರಭಿಮಾನವೆಂಬದು ಸಹ ಪ್ರಾಪ್ತವಾದರೆ ಅವರು ಕೇವಲ ಗುಣಶೂನ್ಯರಾಗಿ, ವಿವೇಕಿಗಳಿಗೆ ಜುಗುಪ್ಸೆಯನ್ನುಂಟುಮಾಡುತ ಹೇಯಗಳಾದ ಸ್ವಪ್ರಯೋಜನಗಳನ್ನೇಪ್ರಾಧಾನ್ಯವಾಗಿ ಭಾವಿಸುತಲಿರುವರು ಲೋಕನಿಂದೆಗೂ, ನೀತಿಶಾಸ್ತ್ರಕ್ಕೂ, ವಿರುದ್ಧವಾಗಿಯೂ, ಗೌರವಕ್ಕೆ ಹಾನಿಕರವಾಗಿಯೂ ಇರುವ ಮೇಲೆಕಂಡ ದುರ್ಗುಣಗಳಂ ಕೊಂಡಾಡುವ ದುರ್ಜನರು ತಮಗುಂಟಾಗುವ ಅನರ್ಥಗಳಂ ತಿಳಿಯಕೊಳ್ಳದೆ ಅವಿವೇಕದಿಂದ ಅವಂ ವೃದ್ಧಿಗೊಳಿಸುತ ಶ್ಲಾಘ್ಯಗಳಾದ ಇತರ ವಿಷಯಗಳನ್ನೆಲ್ಲ ನೋಡಿ ಅಸಹ್ಯಪಡುವದು ಅವರ ಧರ್ಮವಾಗಿರುತಿದೆ. ಮುಖ್ಯವಾಗಿ ಸಮದರ್ಶಿಗಳಾದ ವೃತ್ತಾಂತ ಪತ್ರಿಕಾ ಲೇಖಕರಲ್ಲಿ ಸದರೀ ದುರ್ಗುಣಗಳಿಗೆ ಆಶ್ರಯ ದೊರೆತರೆ ಅವರು ತಮ್ಮ ಸ್ವರೂಪ ಯೋಗ್ಯತೆಯನ್ನರಿಯದೆಯೂ, ಅನ್ಯರ ಸುಗುಣಗಳಂ ಸಹಿಸದೆಯೂ ಅವುಗಳ ಮೇಲೆ ದೋಷಗಳನ್ನಾರೋಪಿಸುತ, ಸ್ವತಃ ಯುಕ್ತಾಯುಕ್ತವನ್ನಾಲೋಚಿಸದೆ, ಪಂಡಿತರ ವಾಕ್ಯವಂ ತಿರಸ್ಕರಿಸುವರು. ಸಕಲಜನ ಪ್ರಯೋಜನೋದ್ದಿಷ್ಟವಾದ ಪತ್ರಿಕಾರೂಪವಾದ ಅವರ ಸಾಧನವೂ, ಜ್ಞಾನವೂ, ಅಸೂಯಾ

ಮೂಲಕವಾದ ದುರಭಿಮಾನದಿಂ ಮಾಲಿನ್ಯಮಂ ಹೊಂದಿದರೆ ಬ್ರಾಹ್ಮಣರ ನಿಂದೆಗೆ ಅವು ಪಾತ್ರಗಳಾಗುವವು. ಅವರಿಗೆ ವಿದ್ಯಾಶೂನ್ಯತೆಯಿಂದ ಗುಣದೋಷವಿಮರ್ಶಾಜ್ಞಾನವು ಸ್ಫುಟವಾಗದೆ ಹೋಗಿ ಆ ಅಜ್ಞಾನವು ಕ್ರಮೇಣ ವೃದ್ಧಿಯನ್ನೈದಿ ಪಂಡಿತರ ತಿರಸ್ಕಾರಕ್ಕೆ ಅವರು ಗುರಿಯಾಗದೆ ಹೋಗಲಾರರು.

Occasional Notes.
ನೈಮಿತ್ತಿಕ ವಿಷಯನ್ಯಾಸ.

The Maharaja of Endore.—ಇಂದೂರ್ ಮಹಾರಾಜರವರು ತಮ್ಮ ಭಾರ್ಯೆಯವರೊಡನೆಯೂ ಕೆಲವರು ನೇಟಿವ್ ಸೈನಿಕರೊಡನೆಯೂ ಕಳೆದತಿಂಗಳ ೩೦ನೇ ತಾರೀಖಿನದಿನ ಮಧ್ಯಾಹ್ನಾನಂತರ ಪುನೇಗೆ ಬಂದುಸೇರಿದರು ಸವಾರಿಯವರು ಶರೀರಾರೋಗ್ಯದಬಗ್ಯೆ ಪುನೇಯಲ್ಲೇ ಎರಡುತಿಂಗಳಕಾಲ ಕಳೆಯುವರೆಂದು ತಿಳಿಯಬರುತಿದೆ.

Dacoity in Gwalior—ಕಳೆದ ತಿಂಗಳ ೩೦ನೇ ತಾರೀಖಿನದಿನರಾತ್ರಿ ಗ್ವಾಲಿಯರ್‌ರಾಜ್ಯಕ್ಕೆ ಸೇರಿದ ಅಗಾರ್‌ಯೆಂಬ ಪ್ರದೇಶದಿಂದ ಉಜ್ಜೈನ್‌ಯೆಂಬದಕ್ಕೆ ಟಪಾಲ್‌ಗಾಡಿ ಹೋಗುತ್ತಿರುವಲ್ಲಿ ಬಟ್ಟೋತೆಕಳ್ಳರು ಕೆಲವರುಸೇರಿ ಅದನ್ನು ತಡೆಮಾಡಿ ಅದರಲ್ಲಿದ್ದವನ್ನೆಲ್ಲ ಲೂಟೀಮಾಡಿಕೊಂಡುಹೋದರೆಂದು ಅಲ್ಲಿಂದ ಮದರಾಸ್ ಮೆಯಿಲ್ ಪತ್ರಿಕೆಗೆ ತಂತಿವೃತ್ತಾಂತ ಬಂದಿರುತಿದೆ.

An infallible prediction.—ಕಚ್ ಸಂಸ್ಥಾನದ ಸಾಲಿಯಾನಾ ರಿಪೋರ್ಟಿನಲ್ಲಿ ದೇಶದ ವ್ಯವಸಾಯವಿಷಯವನ್ನುಕುರಿತು ವಿಚಾರಮಾಡುವ ಸಂದರ್ಭದೊಳು, ಶ್ರಾವಣಶುದ್ಧ ಸಪ್ತಮಿಯದಿನ ಮಳೆಬಿದ್ದರೆ ಕೆಲವು ಭೂಮಿಯಲ್ಲಿ ಬಿತ್ತುವ ಗೋಧೀಬೆಳೆಯು ಕೆಟ್ಟುಹೋಗುವದೆಂಬ ಒಂದು ತಪ್ಪಾದ ನಂಬಿಕೆಯುಂಟೆಂದು ತಿಳಿಸಲ್ಪಟ್ಟಿರುತಿದೆ. ಸದರೀದಿನದಲ್ಲಿ ಮಳೆಬಿದ್ದು ಗೋಧೀಬೆಳೆ ಅಲ್ಪಫಲವುಳ್ಳದ್ದಾಗಿ ಹೋದದರಿಂದ ಮೇಲೆಹೇಳಿದ ತಪ್ಪಾದನಂಬಿಕೆಯು ಅನುಭವಕ್ಕೆಬಂದು ಹೇಳಬೇಕಾಗಿದೆಯೆಂದು ವಗ್ಯೆರೆ ಒಂದಾನೊಂದುಪತ್ರಿಕೆ ಅಭಿಪ್ರಾಯಪಡುತಿದೆ.

A congratulation.—ಈಚೆಗೆ ಕಲ್ಕತ್ತಾ ಹೈಕೋರ್ಟ್ ಜಡ್ಜಿಯಕೆಲಸದಲ್ಲಿ ನೇಮಕಮಾಡಲ್ಪಟ್ಟ ಡಾಕ್ಟರ್ ಗುರುದಾಸ್ ಬಾನರ್ಜಿಯವರು ಆಚೆ ಸೋಮವಾರದಿನ ತಮ್ಮ ಹೊಸಕೆಲಸದ ಚಾರ್ಜನ್ನು ವಹಿಸಿ ಕೋರ್ಟಿನಲ್ಲಿಬಂದು ಕುಳಿತುಕೊಳ್ಳುತಕೊಡಲೇ ಅಲ್ಲಿನ ಗವರ್ನಮೆಂಟ್ ಪ್ಲೀಡರಾದ ಬಾಬು ಅನ್ನೋದಪ್ರಸಾದ್ ಬಾನರ್ಜಿಯವರು ಸ್ವಂತವಾಗಿಯೂ ಸೀನೀ ಪ್ಲೀಡರ್‌ಗಳ ತರಫಿನಲ್ಲೂ ಹೊಸಜಡ್ಜಿಯವರಿಗೆ ತಮ್ಮ ಶುಭವಾದನವ ತಿಳಿಸಲು, ತಮ್ಮ ವಿಷಯದಲ್ಲಿ ಪ್ಲೀಡರ್‌ಗಳಿಗೆ ಉಂಟಾಗಿರುವ ಒಳ್ಳೆಯ ಅಭಿಪ್ರಾಯದಬಗ್ಯೆ ಜಡ್ಜಿಯವರು ತಮ್ಮ ವಂದನವನ್ನವರಿಗೆ ತಿಳಿಯಪಡಿಸಿದರು.

The Maharaja Dhulip Singh.—ಇದ್ದಷ್ಟುಕಾಲವಾಗಿ ರಷ್ಯಾ ಸರ್ಕಾರದ ಆಶ್ರಯದೊಳಿರುತಲಿದ್ದ ಮಹಾರಾಜಾ ದುಲೀಪ್ ಸಿಂಗರವರು ಒಡೆಸಾ ಪಟ್ಟಣದಿಂದ ಹೊರಟು ಫ್ರಾನ್ಸ್ ರಾಜಧಾನಿಯಾದ ಪೇರಿಸ್ ಪಟ್ಟಣಕ್ಕೆ ಬಂದಿದಾರೆಂದು ಒಂದಾನೊಂದು ಲಂಡನ್ ಪಟ್ಟಣದ ವೃತ್ತಾಂತಪತ್ರಿಕೆಯ ಒಬ್ಬ ಬಾತಮೀದಾರನು ತಿಳಿಯಪಡಿಸಿರುತ್ತಾನೆ. ದುಲೀಪ್ ಸಿಂಗರವರು ಒಡೆಸಾ ಪಟ್ಟಣದಿಂದ ಪೇರಿಸ್ ಪಟ್ಟಣಕ್ಕೆ ಪ್ರಯಾಣೋನ್ಮುಖರಾಗಿ ತೆರಳುವ ಸಂದರ್ಭದಲ್ಲಿ ಹಾಜರಿದ್ದವರ ಸಂಗಡ ಮಾತನಾಡುವಲ್ಲಿ, ಇಂಡ್ಯಾ ದೇಶದೊಳು ತಮಗೆ ಇರುವ ಪಿತೃಪೈತಾಮಹವಾದ ಆಸ್ತಿಯನ್ನು ಕುರಿತು, ಮುಖ್ಯವಾಗಿ ತಮಗೆ ಐವತ್ತು ವರ್ಷಗಳ ವಯಸ್ಸು ಪೂರ್ತಿಯಾದಕೂಡಲೇ ತಮ್ಮ ರಾಜ್ಯವು ಮರಳಿ ತಮಗೆ ಸಿಕ್ಕುವದೆಂದು ಸಿಕ್ಕಜಾತಿ ಕಾಲಜ್ಞಾನಿಗಳು ಹೇಳಿರುವ ಮಾತುಗಳು ಕಾಣ್ಯವೆ. ಈಗ ಫಲಕಾರಿಯಾಗುವದರಲ್ಲಿ ತಮಗಿರುವ ಸಂಪೂರ್ಣ ನಂಬಿಕೆಯಂಕುರಿತು ಬಹಳಸ್ಪಷ್ಟವಾಗಿ ಮಾತನಾಡಿ, ಅದು ರಷ್ಯಾ ಸರ್ಕಾರದವರ ಸಹಾಯದ ಮೂಲಕ ನೆರವೇರುವದು, ಮತ್ತು ತಾವು ಇಂಗ್ಲಾಂಡಿನಿಂದ ರಷ್ಯಾ ದೇಶಕ್ಕೆ ಪ್ರಯಾಣವಾಗುವದಕ್ಕೆ ಮುಂಚೆ ರಷ್ಯಾ ದೇಶದವರ ಪಕ್ಷವಹಿಸಿಯಾಗತಕ್ಕದೆಂದು ಮಹಾರಾಜ್ಞೀಯವರು ಕಾಗದ ಬರೆದಿದ್ದರು, ಪರಂತು ಅಲ್ಲಿಗೆ ಹೊರಟುಹೋಗಬೇಕೆಂದು ತಾವು ನಿಶ್ಚಯಿಸಿದ್ದರಿಂದ ಆ ಸಂಗತಿಯನ್ನು ಮಹಾರಾಜ್ಞೀಯವರಿಗೆ ತಿಳಿಸಿದ್ದಾಗಿ ಹೇಳಿದ್ದಲ್ಲದೆ ತಾವು ಇಂಗ್ಲಾಂಡಿನಿಂದ ಹೊರಡುವದಕ್ಕೆ ಸ್ವಲ್ಪ ದಿನಗಳ ಹಿಂದಿನವರೆವಿಗೆ ತಮಗೆ ಸಾಲೀಯಾನಾ ನಾಲ್ವತ್ತು ಸಾವಿರ ಪೌಂಡುಗಳ ಪೆನ್ಷನ್ ಕೊಡಲ್ಪಡುತಬಂದು ಅದನ್ನು ಇಪ್ಪತ್ತು ಸಾವಿರ ಪೌಂಡುಗಳಿಗೆ ಇಳಿಸಿಬಿಟ್ಟರೆಂದು ಸಹ ಹೇಳಿದರು.

LOCAL AND PROVINCIAL NEWS.
ಒಳದೇಶ ಮತ್ತು ತಾಲ್ಲೂಕುಜಾತಿವೃತ್ತಾಂತಗಳು.

The Resident.—ಈ ಸಂಸ್ಥಾನದ ಆಕ್ಟಿಂಗ್ ಬ್ರಿಟಿಷ್ ರೆಸಿಡೆಂಟರಾದ ಸರ್ ಹ್ಯಾರಿ ಪ್ರೆಂಡರ್‌ಗಾಸ್ಟ್‌ಯವರು ತಿರುವಾಂಕೂರು ಮಹಾರಾಜರವರ ಸಂದರ್ಶನಾರ್ಥ ಈದಿನ ಮದರಾಸಿಗೆ ಹೋಗಿಬರುವರೆಂದು ತಿಳಿಯಬರುತಿದೆ.

The Museum.—ಈಪುರದಲ್ಲಿರುವ ವಿವಿಧವಸ್ತು ಪ್ರದರ್ಶಕ ಶಾಲೆಗೆ ಕ್ಲೋಸ್‌ಪೇಟೆ ಶಾನುಭೋಗರು ಹನ್ನೆರಡು ಅಡಿಗಳ ಉದ್ದ ಎರಡು ಅಡಿಗಳವಷ್ಟುದಪ್ಪ ಒಂದು ಅಜಗರವನ್ನು ಕಳುಹಿಸಿಕೊಟ್ಟಿದ್ದರು. ಅದನ್ನು ನೋಡಲಾಗಿ ಬಹಳ ಆಶ್ಚರ್ಯಕರವಾಗಿರುತಿದೆ.

The weather.—ಆಚೇವಾರದೊಡನೆ ಈವರ್ಷದ ಮಳೆ ಪೂರ್ತಿಯಾಯಿತೆಂದು ಹೇಳಬೇಕಾಗಿದೆ. ಚಳಿ ದಿನೇದಿನೇ ಹೆಚ್ಚುತಲಿದೆ. ಜ್ವರ ನೆಗಡಿ ಮೊದಲಾದ ರೋಗಗಳು ಅಲ್ಲಿಯಲ್ಲಿ ವ್ಯಾಪಿಸಿವೆ. ಪದಾರ್ಥಗಳಧಾರಣೆಗಳು ಏಕರೂಪವಾಗಿವೆ. ಪರಂತು ಶರಗಿನ ವರ್ತಕರು ಅತ್ಯಾತುರದಿಂದ ನಿರೀಕ್ಷಿಸುತಲಿದ್ದ ದುರ್ಭಿಕ್ಷವು ಸದ್ಯಃ ದೈವಾಜ್ಞೆಯಿಂದ ತಪ್ಪಿತೆಂದು ಹೇಳಬಹುದು.

The Central Jail.—ಈಗ ಇಲ್ಲಿನ ಸೆಂಟ್ರಲ್ ಜೆಯಿಲಿನಲ್ಲಿ ಒಟ್ಟು ೮೦೦ಜನ ಖೈದಿಗಳು ಸಜಾ ಅನುಭವಿಸುತಲಿದಾರೆಂದು ತಿಳಿಯಬರುತಿದೆ. ಇಷ್ಟುಜನರ ಸಂರಕ್ಷಣೆಯು ಸರ್ಕಾರದವರಿಗೆ ಒಂದು ಧರ್ಮರೂಪವಾದದ್ದೆಂತಲೇ ಯೆಣಿಸಬೇಕು! ಇದನ್ನರಿತೇ ಖುಲಾಸೆಯಾದವರನೇಕರು ತಮ್ಮ ಪೂರ್ವ ಸುಖವ ಸ್ಮರಿಸಿಕೊಂಡು ಮರಳಿ ಅದುವಡೆಯುವ ಕುತೂಹಲವುಳ್ಳವರಾಗಿ ತಕ್ಕ ಸಮಯ ನಿರೀಕ್ಷಣೆಯೊಳಿರುತ್ತಾರೆ.

A rumoured arrangement.—ಇದರಡಿ ತಿಳಿಸುವ ಪ್ರವಾದಕ್ಕೆ ಒಳದೇಶದ ಈವಿನಿಂಗ್ ಮೆಯಿಲ್‌ಪತ್ರಿಕೆಯು ಜವಾಬ್ದಾರಿಯುಳ್ಳದ್ದಾಗಿರುವದರಿಂದ ಅದರ ಮಾತಿನೊಳಿರುವ ಯಾಥಾರ್ಥ್ಯವು ಯೆಷ್ಟರದೋ ಅದಕ್ಕೇ ತಿಳಿದಿರಬಹುದೇನುದರೆ—ರೆಜಿಸ್ಟ್ರೇಟಿವ್ ಸೆಕ್ರೆಟೆರಿಯರಾದ ಮೆ|| ಎಸ್ ವೆಂಕಟವರದಯ್ಯಂಗಾರ್ರವರು ಆಬ್ಕಾರಿ ಕಮಿಷನರಾಗಿ ನೇಮಕಮಾಡಲ್ಪಡುವರೆಂದು ನಮಗೆ ತಿಳಿಯಬರುತಿವೆ ಎಂಬದು. ಇದಂ ನಾವು ನಂಬಲಾರೆವು.

The Arya Balika Pathasala—ಈಚೆಗೆ ಈ ಪುರದ ಚಿಕ್ಕಪೇಟೆಯಲ್ಲಿ ಸ್ಥಾಪಿಸಲ್ಪಟ್ಟಿರುವ ಆರ್ಯ ಬಾಲಿಕಾ ಪಾಠಶಾಲೆಯಲ್ಲಿ ವಿದ್ಯಾರ್ಥಿನೀಯರ ಸಂಖ್ಯೆ ದಿನೇದಿನೇ ವೃದ್ಧಿಯಾಗುತಿದೆ. ಇದರಪ್ರಾರಂಭದಲ್ಲಿ ಸುಮಾರು ೭೦ಮಂದಿ ವಿದ್ಯಾರ್ಥಿನೀಯರುಸೇರಿದ್ದರು. ಕಳೆದ ಶನಿವಾರದದಿನ ೧೪೦ ಮಂದಿಯವರೆವಿಗೆ ಹೆಚ್ಚಿ. ಹೀಗೆಯೇ ಕಾಲಕ್ರಮೇಣ ವಿಶೇಷ ಅಭಿವೃದ್ಧಿಸ್ಥಿತಿಗೆ ಬರುವದರಲ್ಲಿ ಯೆಷ್ಟುಮಾತ್ರವೂ ಸಂಶಯವಿಲ್ಲವು. ಹೀಗೆಯೇ ಡಿಸ್ಟ್ರಿಕ್ಟುಜಾತಿ ಮತ್ತು ತಾಲ್ಲೂಕು ಜನಗಳು ತಮ್ಮ ಹೆಣ್ಣುಮಕ್ಕಳ ವಿದ್ಯಾಭ್ಯಾಸಂಗಕ್ಕೆ ಸ್ವಂತ ಪಾಠಶಾಲೆಗಳನ್ನು ಯೇರ್ಪಡಿಸಿ ಕೊಳ್ಳುವರೆಂದು ನಂಬುತ್ತೇವೆ

Mr. C. Sreenivasacharyar, B A—ಪುನೆ ಇಂಜನಿಯರಿಂಗ್ ಕಾಲೇಜಿನಲ್ಲಿ ಓದುತಲಿದ್ದ ಇಲ್ಲಿನ ವಿದ್ಯಾರ್ಥಿಗಳಲ್ಪೈಕಿ ಒಬ್ಬರಾದ ಮೆ|| ಸಿ. ಶ್ರೀನಿವಾಸಾಚಾರ್ಯರವರು ಈಸಲದ ಸಿವಿಲ್ ಇಂಜನಿಯರಿಂಗ್ ಪರೀಕ್ಷೆಯಲ್ಲಿ ಪ್ರಥಮತರಗತಿಯೊಳು ಪೇರ್ಗಡೆಯಾದಂತೆ ಮೊನ್ನೇದಿನ ನಮ್ಮುಗಳಿಂದ ತಂತಿ ವೃತ್ತಾಂತದಮೂಲಕ ತಿಳಿದು ನಾವು ಬಹಳ ಸಂತೋಷಿಸುವೆವು. ಇವರಿಗೆ ಶೀಘ್ರದಲ್ಲಿಯೇ ಹಿಸ್ ಮ್ಯಾಜೆಸ್ಟೀಸ್ ಸೀಮೆಯಲ್ಲಿ ಅವರ ಯೋಗ್ಯತೆಗೂ, ಗೌರವಕ್ಕೂ ಕ್ರಮಕ್ಕೂ, ಗುಣಕ್ಕೂ ಅನುಗುಣವಾದ ನೌಕರಿಯೊಂದು ಕೊಡಲ್ಪಡುವದೆಂಬದಂಕೇಳಿ ನಾವು ಮತ್ತಷ್ಟು ಸಂತೋಷಿಸುತ್ತೇವೆ.

Infanticide.—ಒಬ್ಬ ಮುಸಲ್ಮಾನರವನು ವಿವಾಹವಿಲ್ಲದೆ ದುರಶಕ್ತ ತನ್ನನಾದಿನಿಯಲ್ಲಿ ವಿಷಯಾಸಕ್ತನಾಗಿ ಗರ್ಭೋತ್ಪತ್ತಿಯನ್ನುಮಾಡಿ ೯ ತಿಂಗಳು ಮುಗಿದಕೂಡಲೆ ಆಕೆಯು ಮಗುವನ್ನು ಪ್ರಸುವಿಸಿದಳು. ಮಾರನೇದಿನ ಮತ್ತೊಂದುಬೀದಿಯ ಚರಂಡಿಯಲ್ಲಿ ಅದೇಮಗು ಮೃತವಾಗಿ ಬಿದ್ದಿರಲು ಅದನ್ನು ಪೋಲೀಸಿನವರು ಕಂಡು ಪತ್ತೇಮಾಡುವದಕ್ಕೆ ಆರಂಭಿಸಿ ಕೊನೆಗೆ ಹಿಂದಿನದಿನ ಪ್ರಸವಿಸಿದ್ದ ಆ ಮುಸಲ್ಮಾನರ ಹೆಂಗಸನ್ನು ವಿಚಾರಣೆ ಮಾಡಲು ಆಕೆಯು ಮೃತವಾದ ಮಗುವು ತನ್ನದೆಂದು ಒಪ್ಪಿಕೊಂಡಳು. ಆದರೆ ಆ ಕ್ರೂರ ಕೃತ್ಯವನ್ನು ತಾನೇ ಮಾಡಲಿಲ್ಲವೆಂತಲೂ ತನ್ನ ಸಮೀಪದಲ್ಲಿ ಸೂಲಗಿತ್ತಿಯು ಇದ್ದದರಿಂದ ಆಕೆಯನ್ನು ಕೇಳಬೇಕೆಂತಲೂ ಪ್ರಸವಿಸಿದ ಕಾಲದಲ್ಲಿ ತನಗೆ ಜ್ಞಾನವಿರಲಿಲ್ಲವೆಂತಲೂ ತಿಳಿಸಿದಳು. ಆಸೂಲಗಿತ್ತಿಯನ್ನು ಕರೆಯಿಸಿ ಕೇಳುವಲ್ಲಿ ತನಗೆ ಹೆರಿಗೆಯನ್ನು ಸರಿಯಾಗಿ ಮಾಡಿಸಿದರೆ ಯೋಗ್ಯತಾನುಸಾರವಾಗಿ ಹಣವನ್ನು ಕೊಡುತ್ತೇನೆಂದು ಹೇಳಿದ್ದರಿಂದ ತಾನು ಹೆರಿಗೆಯನ್ನುಮಾಡಿಸಿ ಬಂದಳೆಂದು ಹೇಳಿದಳು. ಗರ್ಭೋತ್ಪಾದನವನ್ನು ಮಾಡಿದ ಇವಳ ಭಾವನನ್ನು ಕೇಳುವಲ್ಲಿ ಅವನು, ಪ್ರಸವವಾದಾಗ, ಸರ್ಕಾರದ ನೌಕರಿಯಲ್ಲಿಸಿಪಾಯಿ ಪಹರೆಯಮೇಲೆಇದ್ದೆನೆಂದು ತಿಳಿಸಿದನು. ಮೊಕದ್ದಮೆಯು ಇನ್ನೂ ವಿಚಾರಣೆಯಲ್ಲಿದೆ. ಸ್ತ್ರೀ ಪುನರ್ವಿವಾಹಕ್ಕೆ ಅವಕಾಶವಿಲ್ಲದಿರುವಂತಾ ಹಿಂದೂಗಳಲ್ಲಿ ಏವಮಾದಿ ಶಿಶುಹತ್ಯೆ, ಭ್ರೂಣಹತ್ಯಾದಿ, ದುಷ್ಕೃತ್ಯಗಳು ಜರುಗುವದು ಸ್ವಾಭಾವಿಕವೆಂದು ಭಾವಿಸಿದಾಗ್ಯೂ ಪುನರ್ವಿವಾಹರೂಪವಾದ ನಿಕ, ಅಂದರೆ, ಕೂಡಿಕೆಗೆ ಸಂಪೂರ್ಣ ಅವಕಾಶವೂ ಆಚಾರವೂ ಇರುವ ಮುಸಲ್ಮಾನರಿಂತಾ ದುಷ್ಕೃತ್ಯಗಳಿಗೆ ಯಾತಕ್ಕೆ ಪ್ರವರ್ತಿಸಬೇಕು? ಹಿಂದೂಗಳ ಸಹವಾಸದಿಂದಲೇ ಅಂದರೆ ಅವರು ಘೋಷಾವಿನಲ್ಲಿ ಸೂರ್ಯರಶ್ಮಿಯನ್ನು ಜನ್ಮಾರಭ್ಯ ನೋಡದವರಿಗೆ ಅನ್ಯರ ಸಂಬಂಧವೆಲ್ಲಿಯದು? ಮುಖ್ಯವಾಗಿ ಹಿಂದೂ ಬಾಲವಿಧವೆಯರಿಗಳ ದುರವಸ್ಥೆಯಂ ಅವರೂ ತಮ್ಮಗಂಡಂದರ ಮೂಲಕ ತಿಳಿದಿರಬಹುದೆಂಬದಕ್ಕೆ ಮೇಲೆಕಂಡ ವಿಷಯವೇ ಸಾಕಾದ ದೃಷ್ಟಾಂತವಾಗಿರುತಿದೆ. ಇವನ್ನೆಲ್ಲ ನೋಡಲಾಗಿ ಶಾಸ್ತ್ರಾಚಾರಗಳಿಗಿಂತಲೂ ಪ್ರಕೃತಿ ಸ್ವಭಾವವನ್ನೇ ಮುಖ್ಯಕಾರಣವನ್ನಾಗಿ ಭಾವಿಸಬೇಕಾಗಿದೆ. ಹಿಂದೂ ಬಾಲವಿಧವೆಯರ ಸಂಕಟ ನಿವಾರಣಕ್ಕೆ ಪ್ರವರ್ತಿಸಿರುವವರಿಗೆ ತಮ್ಮ ಉದ್ದಿಷ್ಟ ಪ್ರಯತ್ನ ಸುಸ್ಫೂರ್ತಿಯಾಗಿ ಸಫಲವಾಗುವವರೊಳಗಾಗಿ ಅವರ ಚಿಂತೆಗೆ ಕಾರಣಭೂತವಾದ ಮತ್ತೊಂದು ಬಗೆಯವರ ಕಾಟವು ಪ್ರಾಪ್ತವಾದದಕ್ಕಾಗಿ ನಾವು ಬಹಳವಾಗಿ ಚಿಂತಿಸುವೆವು.

CORRESPONDENCE.

ಮಹಾರಾಜಶ್ರೀ ಕರ್ಣಾಟಕ ಪ್ರಕಾಶಿಕಾ ಎಡಿಟರವರ ಸಮುಖಕ್ಕೆ.

ಅಯ್ಯಾ—೮೮ನೇ ಇಸವಿ ನವೆಂಬರ್ ೧೨ನೇ ತಾ|| ಸೋಮವಾರದ ಕರ್ಣಾಟಕ ಪ್ರಕಾಶಿಕಾ ಪತ್ರಿಕೆಯಲ್ಲಿ ಮಹಾರಾಜಶ್ರೀ ರಾಜಾ ಸರ್. ಟಿ. ಮಾಧವರಾಯರವರ ಅಭಿಪ್ರಾಯವೆಂದು ಒಂದು ಆರ್ಟಿಕಲ್ ಪ್ರಕಟಿಸಲ್ಪಟ್ಟಿದೆ. ಅದರಮುಖ್ಯಾಂಶ, ಹತ್ತುವರ್ಷದ ವಯಸ್ಸಿನೊಳಗಾಗಿ ವಿವಾಹಿತರಾಗಿ ವೈಧವ್ಯವನ್ನನುಭವಿಸುತಲಿರುವವರ ಸಂಖ್ಯೆ ಅಧಿಕವಾಗಿ ಕಂಡುಬಂದು ಅದಕ್ಕೆ ಕಾರಣವನ್ನು ಹುಡುಕುವಲ್ಲಿ ವಿವಾಹಕ್ಕೆ ಪ್ರೋತ್ಸಾಹಕರಾಗಿ ಜಾತಕ ಭಾವಗಳನ್ನು ಪುಷ್ಟೀಕರಿಸಿ ಹೇಳಿ ವಿವಾಹವನ್ನು ಮಾಡಿಸುವ ಜ್ಯೋತಿಷ್ಕರೇ ಕಾರಣರೆಂದು ಕಂಡುಬಂದ ಹಾಗೆ ವಿಸ್ತೃತವಾಗಿ ಬರೆಯಲ್ಪಟ್ಟಿದೆ. ಲೋಕೋಪಕಾರ ದೃಷ್ಟಿಯಿಂದ ಹೇಳುವವರ ಹಿತೋಕ್ತಿಗಳು ಆದರಣೀಯಗಳಾಗಿರುತ್ತವೆ. ಪರಂತು ಹತ್ತು ವರುಷಕ್ಕೆ ಅಧಿಕವಾಗದ ಬಾಲಿಕೆಗಳ ವಿವಾಹವೆನ್ನುವದು ಯಾವಕಾಲದಲ್ಲಿ ಪ್ರಾರಂಭವಾಯಿತೋ, ಅದಕ್ಕೆ ಶಾಸ್ತ್ರ ಯಾವಾಗ ಉಂಟಾಗಿ ಜ್ಯೋತಿಷ್ಕರು ಅದನ್ನು ಉಪಕ್ರಮಿಸಿದ ಕಾಲವ್ಯಾವದೊ ನಿಷ್ಕೃಷ್ಟವಾಗಿ ಹೇಳಲ್ಪಡಲಿಲ್ಲವು. ಅದನ್ನು ಯೋಚಿಸಿದರೆ ಯುಗಾಂತರ ವಿಧಾನ ಹ್ಯಾಗೂ ಇರಲಿ. ಕಲಿಯುಗಾದಿಯಿಂದ ಈರೀತಿ ನಡೆದು ಬರುತ್ತೆನ್ನುವವರಲ್ಲಿ ಅನುಮಾನಕಾಣಲ್ಪಡಲಿಲ್ಲ. ತದಾದಿಯಾಗಿ ಹತ್ತು ವರ್ಷದೊಳಗಿನ ಬಾಲಿಕೆಯರ ವಿವಾಹದಲ್ಲಿ ಇಂತಾ ಹಾನಿಕರವಾದ ಯಾವ ಸೂಚನೆಯೂ ಕಾಣಬಾರದೆ ಪ್ರಕೃತದಲ್ಲಿ ದಿನೇದಿನೆ ಅಭಿವೃದ್ಧಿಯಾಗಿ ಕಾಣುತ್ತಾ ಬರುವದಕ್ಕೆ ಬೇರೆಒಂದು ಕಾರಣ ಇರಬಹುದೆಂದು ಅನ್ವೇಷಣ ಮಾಡಿದ್ದರಲ್ಲಿ ಹಿಂದೂ ಮತಸ್ಥರು ಪ್ರಮಾಣ್ಯವಾಗಿ ನಂಬಿರುವ ಮನುಪ್ರೋಕ್ತವಾದ ಧರ್ಮಶಾಸ್ತ್ರ, ಮಹಾಭಾರತ ಈ ಗ್ರಂಥಗಳಲ್ಲಿ ಮನು ೪ನೇಅಧ್ಯಾಯ ೧ನೇಶ್ಲೋಕ «ಅನಭ್ಯಾಸೇನವೇದಾನಾಮಾಚಾರಸ್ಯಚವರ್ಜನಾತ್। ಆಲಸ್ಯಾದನ್ನದೋಷಾಚ್ಚ ಮೃತ್ಯುರ್ವಿಪ್ರಾನ್ಜಿಘಾಂಸತಿ” ಅಂದರೆ, ವಿಧ್ಯುಕ್ತನಿಯಮಾಚಾರದಿಂದ ವೇದಾಧ್ಯಯನ ಮಾಡದೆ ಬಿಡೋಣವು, ಉಕ್ತಕಾಲದಲ್ಲಿ ಸ್ನಾನಸಂಧ್ಯಾವಾಸನವೈಶ್ವದೇವ ಬಲಿಹರಣ, ಬ್ರಹ್ಮಯಜ್ಞ, ಅತಿಥಿದೇವಪೂಜಾದಿ ಆಚಾರವರ್ಜನವು, ಉದಯಾಸ್ತಮಯ ಕಾಲಗಳಲ್ಲಿ ನಿದ್ರಾ ಮತ್ತು ಕರ್ತವ್ಯತ್ಯಾಗ ಪೂರ್ವಕ ಆಲಸ್ಯವು, ಶ್ರೋತ್ರೀಯಾನ್ನವ್ಯತಿರಿಕ್ತ ಈ ನಾಗರೀಕ ಕಾಲದ ಹೋಟ್ಲೆಂಬ ಸ್ಥಾನದಲ್ಲಿ ಜಾತಿನೀತಿ ಕುಲಾಚಾರ ಒಂದೂ ಪರಿಗಣಿಸದೆ ಪಾಶ್ಚಿಮಾತ್ಯರ ವೇಷ ಭಾಷೆಗಳೊಡನೆ ಶರಶಲಿತ ಕಬಳಗ್ರಾಹಿಗಳಾಗಿ ಉದರಪೂರಣ ಮಾಡೋಣ, ಈದೃಶ ಚರಿತ್ರೆಗಳಿಂದ ಮೃತ್ಯುದೇವತೆಯು ಬ್ರಾಹ್ಮಣರನ್ನು ನಾಶಮಾಡುತ್ತದೆಂಬುವದರ್ಥವು.

ಕಿಂಚ-ಮಹಾಭಾರತದಲ್ಲಿ «ವೃತ್ತೇಯಕ್ಷನರಕ್ಷೇದ್ಬ್ರಾಹ್ಮಣಸ್ತುವಿಶೇಷತಃ|ಅಕ್ಷೀಣವೃತ್ತೋನಕ್ಷೀಣಃ ವೃತ್ತತಸ್ತುಹತೋಹತಃ” ಎಂದು ಮನುವಚನಾನುಸಾರವಾಗಿ ಹೇಳಲ್ಪಟ್ಟಿದೆ. ಈ ವಚನಗಳು ಬ್ರಾಹ್ಮಣ ಸಾಮಾನ್ಯಕ್ಕೆ ಶಾಸನಗಳೆಂದು ಗ್ರಹಿಸಬೇಕಾಗಿವೆ. ಪ್ರಕೃತ ಹತ್ತು ವರ್ಷದೊಳಗಿನ ವಿವಾಹದಿಂದ ವೈಧವ್ಯ ಪ್ರಾಪ್ತವಾಗುವದಕ್ಕೆ ಕಾರಣಗಳು. ಅಂತಾ ವಯಸ್ಸಿನ ಬಾಲಿಕೆಗಳ ವಿವಾಹವನ್ನು ಮಾಡಿಕೊಳ್ಳುವವರು ಪ್ರಾಯಶಃ ಹನ್ನೆರಡುವರ್ಷಕ್ಕಿಂತ ಅಧಿಕ ವಯಸ್ಸಿನವರೇ ಬಹಳವಾಗಿರಬಹುದೆಂದು ಲೋಕಸಂಪ್ರದಾಯದ ಮೇಲೆ ಎಲ್ಲರೂ ಗ್ರಹಿಸಬಹುದು. ಅಂತಾವರ ಮರಣಕ್ಕೆ ಬಾಲಾರಿಷ್ಟವೆಂದು ಹೇಳಬಹುದೆ? ಪರಂತು ಮೃತಪಟ್ಟಿರಬಹುದೆನ್ನುವವರಲ್ಲಿ ಸಂದೇಹವಿಲ್ಲವು, ಅದಕ್ಕೆ ಕಾರಣಾಂತರಗಳು ಗ್ರಹಿಸಬೇಕು. ಈಗಿನಕಾಲದಲ್ಲಿ ಅಂತಾವರ ವಿವಾಹವೆನ್ನುವದು ಯಾವ ಶಾಸ್ತ್ರ ಸಂಪ್ರದಾಯಗಳನ್ನೂ ಚಿಂತಿಸದೆ ಸ್ಥೂಲರೀತ್ಯಾ ತಾತ್ಕಾಲಿಕವಾಗಿ ತೋರುವ ಅನುಕೂಲ್ಯದ ಮೇಲೆ ಪೂರೈಸುತ್ತಾರೆ. ಅದೇ ವಿಪರೀತ ಫಲಕ್ಕೆ ಮುಖ್ಯ ಕಾರಣವಾದದ್ದು. ವಿವಾಹಕ್ಕೆ ಶಾಸ್ತ್ರರೀತ್ಯಾ ದ್ವಾದಶ ಕೂಟಗಳು, ವಧೂವರರ ಜನ್ಮ ಕಾಲ ಗ್ರಹಭಾವಗಳು, ವಿವಾಹ ಲಗ್ನದ ಗ್ರಹ ಭಾವಗಳು, ಇವು ಆಲೋಚಿಸಿ ತಿಳಿಸುವಂತಾ ಶಾಸ್ತ್ರ ಜ್ಞಾನವುಳ್ಳವರು ಪ್ರಾಯಶಃ ದುರ್ಲಭರಾಗಿರುತ್ತಾರೆ. «ಸುಲಭಾಃಪ್ರು

ಕುಪ್ರಾರಾರ್ಜನತತ್ಪರಾಃ | ಅಪ್ರಿಯಸ್ಯಚ ಪಥ್ಯಸ್ಯ ವಕ್ತಾ ಶ್ರೋತಾಚ ದುರ್ಲಭಃ" || ಎಂಬಂತೆ ಯಜಮಾನನ ಮುಖೋಲ್ಲಾಸಕ್ಕೂ, ತನ್ನ ಪ್ರಯೋಜನಕ್ಕೂ ಭಂಗವಾಗದಹಾಗೆ ಹಿತೋಕ್ತಿಗಳನ್ನು ಹೇಳುವ ಅಲ್ಪಜ್ಞರ ಆಲೋಚನೆಯಮೇಲೆ ನಡೆಸುವ ವಿವಾಹಗಳು ಅನಿಷ್ಟಫಲವನ್ನು ಹ್ಯಾಗೆ ಕೊಡದೆಯೇ ಇದ್ದೀತು? ಅಂತಾ ಶಾಸ್ತ್ರದಲ್ಲಿ ಸಂಪೂರ್ಣ ಪರಿಜ್ಞಾನವುಳ್ಳವರ ಅನ್ವೇಷಣೆ ಮಾಡಿ ತಿಳಿದುಕೊಳ್ಳುವಭಾರ ಮಕ್ಕಳನ್ನು ಹೆತ್ತ ತಂದೆ ತಾಯಿಗಳಗಲ್ಲದೆ, ಇತರರು ಅವರಿಂದುಂಟಾಗುವ ಶುಭಾಶುಭಗಳನ್ನನುಭವಿಸುವದಿಲ್ಲ. ಪ್ರಬಲ ರೋಗಿಯಾದವನು ತನ್ನ ರೋಗ ಪರಿಹಾರಕ್ಕೆ ಶಕ್ತನಾದ ಭಿಷಗ್ವರರನ್ನು ಹುಡಿಕಿ ಆತನ ಅನುಮತಿಯಂತೆ ಸೇವಿಸುವ ಔಷಧದಿಂದ ಸುಖಿಯಾಗುವನಲ್ಲದೆ ಅಲ್ಪವೈದ್ಯನ ಚಿಕಿತ್ಸೆಗೆ ಒಳಪಟ್ಟರೆ ಸಂಭವಿಸುವ ಪ್ರತಿಕೂಲಗಳನ್ನು ಆರೋಗಿ ಅಲ್ಲದೆ ಬೇರೊಬ್ಬನು ಅನುಭವಿಸುವನೆ?

ಈ ದೃಷ್ಟಾಂತದಿಂದ ಆಯಾಯ ಶಾಸ್ತ್ರಮುಖವುಳ್ಳ ವಿದ್ವಾಂಸರ ಆಲೋಚನೆಯ ಮೇಲೆ ಆಚರಿಸಬೇಕು. "ನಹಿಸರ್ವಸ್ಸರ್ವಂಜಾನಾತಿ" ಎಂಬಂತೆ ಅವರ ಹೇಳಿಕೆಯಲ್ಲಿಯೂ ತೃಪ್ತನಾಗದೆ ಗೃಹ್ಯಪರಿಶಿಷ್ಟ ಸೂತ್ರೋಕ್ತವಾದ ಧ್ಯಾನ ಸೂಚನೆಗಳನ್ನು ತೋರಿಸುವ ಪರೀಕ್ಷೆಯನ್ನು ತಿಳಿದು ಅವರಮೇಲೂ ಪ್ರತ್ಯಯ ಸಾಲದೆಹೋದರೆ ಪ್ರತ್ಯಕ್ಷ ದೈವಾಜ್ಞಾಸ್ವರೂಪವಾದ ಶಕುನ ಮನೋಜಯವನ್ನು ನಿಶ್ಚೈಸಿಕೊಂಡು ವೇದನಾಂತರ ವೇದಶಾಸ್ತ್ರ ಸಂಪನ್ನರಾಗಿಯೂ, ಪರಶ್ರೇಯೋಭಿಲಾಷಿಗಳಾಗಿಯೂ, ಗುಣದೋಷಗಳನ್ನ ತಿಳಿದುಕೊಳ್ಳುವದಕ್ಕೆ ಅರ್ಹರಾಗಿಯೂ ಇರುವ ಬ್ರಾಹ್ಮಣರನ್ನು ವಿನಯೋಕ್ತಿಗಳಿಂದ ಸೇರಿಸಿ ತಾನು ನಡಸಲುದ್ದೇಶಿಸಿರುವ ವೃತ್ತಾಂತವನ್ನು ಅವರಿಗೆ ಶ್ರುತಪಡಿಸಿ ಅವರ ಅನುಜ್ಞೆಯಂ ಪಡೆದು, ಸರ್ವಮಂಗಳಾಯತನಾದ ಭಗವಂತನನ್ನು ವಂದಿಸಿ ಆತನಮೇಲೆ ಭಾರವನ್ನಿಟ್ಟು ನಡಿಸುವ ಶುಭಕಾರ್ಯಗಳಲ್ಲಿ ಯೆಂದಿಗೂ ಯೆಷ್ಟುಮಟ್ಟಿಗೂ ಅಶುಭಪ್ರವೇಶಕ್ಕೆ ಆಸ್ಪದವಿರಲಾರದು.

ಕೆಲವರು ಇತೋವ್ಯತಿರಯವಾಗಿ ದಾವ್ರು ಆಚರಿಸಿದ್ದನ್ನೂ ಯಾಕೆ ದುಃಖಫಲ ಪ್ರಾಪ್ತವಾಯಿತೆಂದು ಶಂಕಿಸಬಹುದು. ಹಾಗೆ ನಡಿಸೋಣದರಲ್ಲಿ ಅಜ್ಞಾನದಿಂದಲೊ ಆಲಸ್ಯದಿಂದಲೊ ರಾಜಸ ತಾಮಸಗುಣದಿಂದಲೊ ಅಥವಾ ಉತ್ಸವೈಕ ಪ್ರಧಾನದಿಂದಲೊ ಪ್ರತಿಮುಹೂರ್ತದಲ್ಲಿಯೂ ಚಕ್ರಭ್ರಮಣದಂತೆ ಅವ್ಯಕ್ತ ವಿಷಕಾಲಗಳು ಸಂಚರಿಸುವದರಿಂದಲೂ ನಿರುಪಾಧಿಕವೆಂದು ನಿಶ್ಚೈಸಲ್ಪಟ್ಟ ಶುಭಲಗ್ನ ಕಾಲಾತಿಕ್ರಮವಾಗಿ ವಿಷಮಕಾಲದಲ್ಲಿ ಆಚರಿಸಲ್ಪಟ್ಟ ಫಲ ವಿಪರೀತವಲ್ಲದೆ ಹ್ಯಾಗೆ ತಪ್ಪೀತು?

ಈ ಕ್ರಮಗಳ್ಯಾವತ್ತೂ ಶಾಸ್ತ್ರೋಕ್ತವಾಗಿ ಆಚರಿಸಬೇಕಾದರೆ ಭಯಭಕ್ತಿಗಳೇ ಪ್ರಧಾನವಾದದ್ದು. ಹಾಗೆ ನಡಿಯುವಂತಾವರಿಗೆ ಆಗುವ ಫಲ ಭಗವದ್ಗೀತೆಯಲ್ಲಿ ಹೇಳಲ್ಪಟ್ಟಿದೆ. "ನಹಿಕಲ್ಯಾಣಕೃತ್ಕಶ್ಚಿದ್ದುರ್ಗತಿಂತಾತಗಚ್ಛತಿ" ಎಂದು ಕಿಂಚ ಈ ಕಾಲದ ಬಾಲವಿಧವೆಗಳ ಸಂಖ್ಯೆಯು ಅಧಿಕವೆಂದು ಹೇಳಲ್ಪಡುವದರಿಂದಲೂ ಪೂರ್ವಕಾಲದವರು ಯತ್ಕಿಂಚಿಚ್ಛಾಸ್ತ್ರಕ್ಕೆ ಬದ್ಧರಾಗಿ ನಡಿಯುತಲಿದ್ದರಾದ್ದರಿಂದ ಆಗಿನಕಾಲದಲ್ಲಿ ಇಂತಾ ಬಾಲ ವಿಧವೆಗಳ ಸಂಖ್ಯೆ ಕಡಿಮೆಯಾಗಿರುತ್ತಿರುವದಕ್ಕೆ ಕಾರಣ ಸ್ಪಷ್ಟವಾಗಿಯೇ ಇದೆ. ಇಷ್ಟುಮಾತ್ರವೇ ಅಲ್ಲ, ಕಾಲಾತ್ಮಕನಾದಭಗವಂತನು ಪ್ರಾಣಿ ಕರ್ಮಾನುಸಾರ ಫಲದಾಯಕನಲ್ಲದೆ ವೈಷಮ್ಯ ನೈರ್ಘೃಣ್ಯಗಳಿಗೊಳಗಾಗಿ ಸ್ವೇಚ್ಛೆಯಿಂದ ಕೆಲವರಿಗೆ ಶುಭ ಫಲವನ್ನೂ ಮತ್ತು ಕೆಲವರಿಗೆ ಅನರ್ಥಫಲವನ್ನು ಕೊಡುವನೆಂದು ಯಾವಮತಸ್ಥರೂ ಹೇಳಲಾರರು.

ಇವುಗಳನ್ನಾಲೋಚಿಸಿ ಆರ್ಯರಾದವರು ಪ್ರಾಣಿಗಳಿಗೆ ಹ್ಯಾಗೆ ಶುಭೋದರ್ಕ ಫಲವಾದೀತೋ ಹಾಗೆ ಪ್ರೇರೇಪಿಸುವರೆಂದು ಅಪೇಕ್ಷಿಸುತ್ತೇನೆ.

ನಲ್ಲೂರು ಸುಬ್ರಹ್ಮಣ್ಯ ಶಾಸ್ತ್ರಿ.

SUMMARY OF NEWS.
ವೃತ್ತಾಂತ ಸಂಗ್ರಹ.

Appointment.—ಹೋಲ್ಕರ ಮಹಾರಾಜರವರು ಮೆ|| ಎಸ್. ವಿ. ಧುರಂಧರ ಯೆಂಬವರನ್ನು ತಮ್ಮ ಸಂಸ್ಥಾನದ ಹೈಕೋರ್ಟ ಚೀಫ ಜಸ್ಟಿಸ ಕೆಲಸಕ್ಕೂ, ಮುಂಬೈ ವಾಸಸ್ಥರಾದ ಮಿ| ಖಾಡ ಛೇಡಯೆಂಬವರನ್ನು ಎರಡನೇಜಡ್ಜಿಯಾಗಿಯೂ ನೇಮಕರ್ಮಾಡಿರುತ್ತಾರೆ.

An attempt failed.—ಕಲ್ಕತ್ತೆಯ ಪ್ರೆಸಿಡೆನ್ಸೀ ಜೈಲಿನಲ್ಲಿರುವ ಯುರೋಪಿಯರ್ ಖೈದಿಗಳನ್ನೈಕೆ ಮೂವರು ಅಲ್ಲಿ ಓವರಸಿಯರ ಕೆಲಸದಲ್ಲಿದ್ದ ಸಾನೀಟ್ಯೆಂಬುವೊಬ್ಬನಿಂದ ಗಂಟುಮುಡಿಗಳಿಂದ ತೆಗೆದುಕೊಂಡು ಪರಾರಿಯಾಗುವದಕ್ಕೆ ತಕ್ಕ ಪ್ರಯತ್ನಗಳಂ ಮಾಡಿದರು. ಸದರೀ ಸಾನಿ ಟೈಡಿಯು ತಾನು ಇದಕ್ಕೆ ಸಹಿಸಿಯೆಂಬ ಸಂಶಯ ಪ್ರಯಾಣಿಕರು ಬಿಡುವಿದರು ... ಗಂಟೆ ಕೊಠಡಿಯ ಬೀಗವನ್ನು ಹೋಗಿರುತ್ತಿದ್ದು ರಿಪೋರ್ಟನಾಡಿದನು. ಕೂಡಲೇ ಜೈಲು ಅಧಿಕಾರಿಗಳು ಯೆಚ್ಚರಗೊಂಡು ಸದರೀ ಮೂವರನ್ನು ಪಡಿತ್ಯೆಡಿಗಳ ಕೊಠಡಿಗೆ ಸೇರಿಸಿ ಕಾಲ್ಗಳಿಗೆ ಬಲವಾದ ಬೇಡಿಗಳಂ ಹಾಕಿಸಿ ಒಬ್ಬೊಬ್ಬನನ್ನು ಒಂದೊಂದು ಕೊಠಡಿಯಲ್ಲಿರಿಸಿದರು.

A murder detected by a Monkey.—ಮುದರಾಸ ಸ್ಟ್ಯಾಂಡರ್ಡ ಪತ್ರಿಕೆಯ ವೈನಾಸ ಬಾತಮೀದಾರನೊಬ್ಬನು ಬರೆಯುತ್ತಾನೇನೆಂದರೆ:—ಒಬ್ಬ ದೊಂಬರವನು, ತನ್ನ ಹೆಂಡತಿ, ಒಂದು ಮೇಕೆ, ಮರದ ಕೋತಿ, ಇವುಗಳೊಡನೆ ದಾರಿಯಲ್ಲಿ ಹೋಗುತ್ತಿರುವಾಗ ಪಹಸ್ಸಾ ಜಾತಿಯವರಿಬ್ಬರು ಬಂದು ಅವರನ್ನು ಹೊಡೆದು ಅವರಲ್ಲಿದ್ದದನ್ನೆಲ್ಲ ಕಸುಗೊಂಡು ಸದರೀ ದೊಂಬರವನು, ಅವನ ಹೆಂಡತಿ, ಇವರನ್ನು ಖೂನ ಮಾಡಿ ಒಂದು ಮೇಕೆ, ಕೋತಿಗಳೆರವರ ಪ್ರೇತ ಹೆಣ್ಣುಕೋತಿ, ಇವುಗಳನ್ನು ಸಹ ಕೊಂದು ಹಾಕಿದರು. ಸದರೀ ಕಳ್ಳರು ಬಂದು ಯೆಲ್ಲವನ್ನು ಹೊಡೆಯುವದಕ್ಕೆ ಪ್ರಾರಂಭಿಸಿದ ಕೂಡಲೇ ಗಂಡುಕೋತಿಯು ಓಡಿಹೋಗಿ ಒಂದು ದೊಡ್ಡ ಮರದಮೇಲೆ ಹತ್ತಿಕೊಂಡು ಯೆಲ್ಲವನು ನೋಡಿಕ್ಕೊಂಡಿತ್ತು. ಕಳ್ಳರು ತಾವು ಖೂನ ಮಾಡಿದವರ ಮುರ್ದೆಯಂ ಕಾಡಿನಲ್ಲಿ ಹೂಳಿಟ್ಟು ಹೊರಟು ಹೋದರು. ಇದು ನಡೆದ ಸ್ವಲ್ಪ ಹೊತ್ತಿನಮೇಲೆ ಆದಾರಿಯಲ್ಲಿ ಒಬ್ಬ ಪೋಲೀಸು ಜವಾನನು ಬರುತಲಿರುವದನು ಮರದಮೇಲಿದ್ದ ಕೋತಿಯು ನೋಡಿ ಇಳಿದು ಓಡಿಬಂದು ಅವನ ಕಾಲ್ಗಳಂ ಗಟ್ಟಿಯಾಗಿ ಹಿಡಕೊಳ್ಳಲು ಅವನು ಅದನ್ನು ಹೊಡೆದನು ಆದಾಗ್ಯೂ ಕೋತಿಯು ಅವನನ್ನು ಬಿಡದೆ ಆತನ ಬಟ್ಟೆಯಂ ಬಲವಾಗಿ ಹಿಡಕೊಂಡು ಖೂನ ಮಾಡಲ್ಪಟ್ಟವರ ಮುರ್ದೆಗಳನ್ನು ಹೂಳಿರುವ ಸ್ಥಳಕ್ಕೆ ಸೆಳಕೊಂಡು ಹೋಗಿ ತೋರಿಸಿತು. ಅದರಮೇಲೆ ಸದರೀ ಪೋಲೀಸ ಕಾನ್ಸ್ಟೇಬಲಗೆ ಸಂಶಯಉಂಟಾಗಿ ಅಗಿದುನೋಡುವಲ್ಲಿ ಮುರ್ದೆಗಳು ಸಿಕ್ಕಿದವು. ತರುವಾಯ ಕೋತಿಯು ಕಳ್ಳರು ಹೊರಟುಹೋದ ದಾರಿಯನ್ನು ಪೋಲೀಸಿನವನಿಗೆ ತೋರಿಸಿ ಅದೇದಾರಿಯಲ್ಲಿಹೋಗಿ ನೋಡಿ ಅವರುಸಿಕ್ಕದೆ ಹೋಗಲು ಬೇರೆಯೊಂದು ದಾರಿಯಲ್ಲಿ ಕರೆದುಕೊಂಡುಹೋಗುತಿರುವಾಗ ಕೋತಿಯು ಯೆಕಾಏಕಿ ಅತಿವೇಗದೊಡನೆ ಓಡಿಹೋಗಿ, ಅಲ್ಲಿ ಒಂದು ಭಾವಿಯಲ್ಲಿ ಸ್ನಾನ ಮಾಡುವದಕ್ಕೆ ಪ್ರಯತ್ನ ಪಡುತಲಿದ್ದ ಒಬ್ಬ ಪಹಸ್ಸಾಜಾತಿಯವನ ಕುತ್ತಿಗೆಯಂ ಹಿಡಕೊಂಡು ಪೋಲೀಸಿನವನ ಬರುವಿಕೆಯನ್ನು ಯೆದುರು ನೋಡುತಲಿತ್ತು. ಇದರೊಳಗೆ ಅವನೂ ಅಲ್ಲಿಗೆ ಹೋಗಿ ಅವನನ್ನು ದಸ್ತಗಿರಿಮಾಡಿ ದರ್ಯಾಪ್ತಿ ಮಾಡುವಲ್ಲಿ ಈ ಕ್ರೂರ ಕೃತ್ಯಕ್ಕೆ ಸೇರಿದವರೆಲ್ಲರು ಪತ್ತೇಯಾಗಿ ಯೆಲ್ಲರು ಕಳ್ಳಕೋಟೆಗೆ ತರಲ್ಪಟ್ಟಿರುತ್ತಾರೆ. ಇಲ್ಲಿ ದರ್ಯಾಪ್ತಿಗುತಿದೆ. ಈ ಮೊಕದ್ದಮೆಯಲ್ಲಿ ಕೋತಿಯು ಅವ್ವಲ ಸಾಕ್ಷಿಯಾಗಿರುತಿದೆ. ಒಂದುಕೋತಿಯ ಮೂಲಕ ಇಂತಾ ಕೊಲೆಪಾತಕವು ಹೊರಗಾಗಿ ಅಪರಾಧಿಗಳು ದಂಡನೆಗೆ ಗುರಿಯಾದದ್ದು ಯೆಷ್ಟು ಆಶ್ಚರ್ಯಕರವಾದವಿಷಯವು, ಎಂಬದು.

EXTRACTS.

ಬೆಂಗಳೂರಿಂದ ಮುಂಬೈ ಹನ್ನೆಕಸುಬೋಧ ಪತ್ರಿಕೆಗೆ ಯಥಾರ್ಥವಾದಿಯೊಬ್ಬನು ಬರೆದಿರುತ್ತಾನೇನೆಂದರೆ—ಮೈಸೂರಿಂದ ಪ್ರಯಾಣಸ್ಥರಾಗಿ ಈ ನಗರಿಗೆ ಬರುತ್ತಿದ್ದ ತಾಯಿ ಮಗಳು ದ ಇಬ್ಬರು ವಿಧವೆಯರು, ಮದ್ದೂರು ಜಂಗ್ಷನಿನಲ್ಲಿ ಗಾಡಿ ಬಹಳಹೊತ್ತು ನಿಲ್ಲುತ್ತಿದ್ದದ್ದರಿಂದ, ಅವರು ಸ್ಟೇಷನ ಸಮೀಪದಲ್ಲಿರುವ ಹೊಳೆಗೆ ಹೋದರು. ಅತರಸ್ನೈಕಿ ಮಗಳಾದವಳು ಹೊಳೆಯಲ್ಲಿ ನೀರು ತುಂಬುವದಕ್ಕೆ ಹೋಗಲು ಕಾಲುಜಾರಿ ಹೊಳೆಯಲ್ಲಿಬಿದ್ದು ಹೊಡೆದುಕೊಂಡುಹೋದಳು. ತಾಯಿಯಾದ ಮುದುಕಿಯು ಅಲ್ಲಿ ಆಕೆಯನ್ನು ಬದುಕಿಸುವದಕ್ಕೆ ಸಹಾಯವಾಗುವದಕ್ಕೆ ಯಾರನ್ನೂ ಕಾಣದೆ, ವಿಸ್ಮಯಳನ್ನು ಹೊಂದಿ ಮಗಳು ಕಣ್ಣಿಗೆ ಮರೆಯಾಗುವ ವರಿಗೂ ನೋಡಿಕೊಳ್ಳುತ್ತ ನಿಂತಿದ್ದು ನಂತರ ಸ್ಟೇಷನಿಗೆ ಬಂದು ಗಾಡಿಯಲ್ಲಿ ಕೂತು ಇಲ್ಲಿಗೆ ಬಂದು ಸೇರಿದಳು. ... ಆ ಹುಡಿಗಿಯು ದಾಗಿನಾಭರಣಗಳು ಸೂರೆಕ, ಪ್ರಿಯತಮ ... ಗಳನ್ನು ಸಹ ಸೆರೆಹೋಗಿರುವದು. ಈ ಹುಡಿಗಿಯು ಸುಮಾರು ೨ ಮೈಲಿಗಳ ದೂರ ನೀರಿನಲ್ಲಿ ಹೋದ ಮೇಲೆ ದೈವವಶಾತ ಒಂದು ಗಿಡದ ಬುಡಾರದಮೇಲೆ ಅದನ್ನು ಹಿಡಿದುಕೊಂಡು ಘಟ್ಟಿಯಾಗಿ ಕೂತಿದ್ದಳು. ಆಗ ಆ ಮಾರ್ಗವಾಗಿ ಹೋಗುತ್ತಿದ್ದ ಒಬ್ಬ ಕ್ರೈಸ್ತ ಪಾದ್ರಿಗಳು ಈಕೆಯನ್ನು ಕಂಡು ಹೊರಕ್ಕೆ ತಂದು ಸಾಕಿದನು ... ಅನ್ನವನ್ನು ಕೊಡಿಸಿ ತನ್ನ ಮನೆಗೆ ಕರೆದುಕೊಂಡುಹೋಗಿ ೨—೩ ದಿವಸ ತನ್ನ ಮನೆಯಲ್ಲಿಯೇ ಇಟ್ಟುಕೊಂಡು ತರುವಾಯ ರೈಲು ಚಾರ್ಜ ಸಹ ಕೊಟ್ಟು ಇಲ್ಲಿಗೆ ಕಳುಹಿಸಿಕೊಟ್ಟನು. ಇಲ್ಲಿ ವಿಧವೆಯರಿಗಳ ಅನಾಥತನ ಬಹಳವಾಗಿರುವದರಿಂದ ಇಲ್ಲಿಯ ಅನೇಕಜನ ಹಿಂದೂವಾದರು ಸೇರಿ ಸ್ವಲ್ಪ ದಿವಸದಕೆಳಗೆ "ಬೆಂಗಳೂರು ಆರ್ಯಸಭಾ" ಎಂಬ ಸಭೆಯನ್ನು ಮಾಡಿದರು. ಈ ಮೇಲ್ಕಂಡ ಸಭೆಯವರು ನಿನ್ನೇ ದಿನ ಒಂದು ಬಾಲಿಕಾ ಪಾಠಶಾಲೆಯನ್ನು ಸ್ಥಾಪಿಸಿದರು. ಆ ಪಾಠಶಾಲೆಗೆ ಸುಮಾರು ೧೦೦ ಜನ ಸಭಾಸದರಿಗೂ, ಹುಡಿಗಿಯರು ಸೇರಿದರು. ಮಿಷನ ಸ್ಕೂಲುಗಳ ಪ್ರತಿ ಕಲ್ಪನಾಲ ಬಾಗಲುಗಳು ... ಮುಚ್ಚಲ್ಪಟ್ಟವೆ. ಈ ... ಪೇಟೆ ಎಂಬ ಬ್ರಾಹ್ಮಣರ ಕ್ರೇಣಿಯಲ್ಲಿರುವ ಈ ಸ್ಕೂಲಿನಲ್ಲಿ ಸುಮಾರು ೬೦ ಜನ ಹುಡುಗಿಯರು ಓದುತ್ತಿದ್ದರು. ಈಗ ೦ ಜನ ಇದ್ದಾರೆ. ಇವಕ್ಕೆಲ್ಲಾ ಮಿಷನರಿಗಳ ದುರ್ಬೋಧನೆಗಳು ಹೇಡಿತನಗಳೇ ಮುಖ್ಯ ಕಾರಣವೆಂದು ಯೋಚಿಸಬೇಕಾಗಿದೆ. ನಮ್ಮ ಹಿಂದೂ ಜನಗಳು ಹೀಗೆ ಒಳ ದಿಕ್ಕಿನ ... ದಿಂದ ಹಿಂದೂ ಮತವನ್ನು ... ಬರುತ್ತಾ ಬಂದರೆ ನಮಗೂ ಮತ್ತು ನಮ್ಮ ದೇಶಕ್ಕೂ, ಕ್ಷೇಮವಿಲ್ಲವೆಂಬುದು ಸ್ವಷ್ಟವಾಗಿಯೆ ತಿಳಿಯುವದಕ್ಕಾಗದು. ಇದಕ್ಕೋಸ್ಕರವಾಗಿ ಎಲ್ಲಾ ಪಟ್ಟ ದೊಡ್ಡ ಪಟ್ಟಣಗಳಲ್ಲಿಯೂ ಹಿಂದೂಗಳು ಸಭೆಗಳನ್ನುಮಾಡಿ ತಮ್ಮ ಸ್ವಂತ ಪಾಠಶಾಲೆಗಳನ್ನು ಯೇರ್ಪಡಿಸಿ ಈ ಮಿಷನರಿಗಳಿಗೆ ಆಸ್ಪದ ಕೊಡದೆ ಇರಬೇಕೆಂದು ತೋರುತ್ತೇನೆ.

Absurdities.—ಅಶ್ಯಕ್ತ, ಅಸಂಗತ, ಮತ್ತು ಅಸಾಧ್ಯಗಳಾದ ಅನೇಕ ವಿಷಯಗಳಲ್ಲಿ ಬಹಳ ಉದಾಹರಿಸಲ್ಪಡುವವು ಕೆಲವೆಂಬದಾಗಿರಾಪಾಸರ ಟಿ. ಮಾಧವರಾಯರವರು ತಿಳಿಸುತ್ತಾರೆ, ಅವುಗಳ ಧ್ಯಾನವಾವದೆ:—೧. ಮುಸ್ಸಲ್ಮಾನರುಗಳು ತಾವು ಹಿಂದೂಗಳೊಡನೆ ಸೇರದೆ ಪ್ರತ್ಯೇಕಿಸಿರುವದರಿಂದ ಇಂಡ್ಯಾದೇಶಾಭಿವೃದ್ಧಿಗೆ ಅಭ್ಯಂತರವುಂಟಾಗುವದೆಂದು ಭಾವಿಸಿರುವದು. ೨. ಜನರ ಅನುಮತಿಯ ಮೇಲೆ ಏರ್ಪಡಿಸಲ್ಪಟ್ಟ ಸಣ್ಣ ಸಾರ್ವಜನಿಕ ರೂಪವುಳ್ಳ ಸಭೆಗಳ ಮೂಲಕ ದೇಶ ವ್ಯವಹಾರಗಳು ಜರಿಗಿಸಲ್ಪಡುವ ಪಕ್ಷಕ್ಕೆ ಈ ಇಂಡ್ಯಾದೇಶವು ತಾತ್ಕಾಲಿಕಸ್ಥಿತಿಗಿಂತಲೂ ಬಹಳ ಚೆನ್ನಾಗಿ ಪರಿಪಾಲಿಸಲ್ಪಡಬಹುದೆಂದು ಹಿಂದೂಗಳು ಭ್ರಮಿಸಿರುವದು. ೩. ಪ್ರಜಾಕ್ಷೇಮವನ್ನು ಕೋರುವಂತಾ ನೇಟಿವ ದೊಡ್ಡಮನುಷ್ಯರ ಸಲಹೆಯಂ ಪಡೆಯದೆಯೇ ಪ್ರಜಾರಂಜಕವಾಗುವಂತೆ ಇಂಡ್ಯಾದೇಶವಂ ಆಳಿಸಲಿಕ್ಕೆ ಸಮರ್ಥವಾಗುವೆವೆಂದು ಬ್ರಿಟಿಷ ಗವರ್ನಮೆಂಟಿನವರು ಅಭಿಪ್ರಾಯಪಡುವದು. ೪. ದೇಶಾದಷ್ಟು ದ್ರವ್ಯೋಪವತ್ತಿಯಿಲ್ಲದೆ ಇಂಡ್ಯಾದೇಶದ ಕಾರ್ಯಗಳನ್ನು ತೃಪ್ತಿಕರವಾಗಿ ಜರಿಗಿಸುವೆವೆಂದು ಗವರ್ನಮೆಂಟಿನವರು ನಂಬಿರುವದು. ೫. ಅನ್ಯದೇಶಗಳಿಗೂ, ಅಲ್ಲಿಂದ ಇಲ್ಲಿಗೂ ಸಮುದ್ರಮಾರ್ಗವಾಗಿ ಹೋಗಿ ಬರತಕ್ಕ ಸರುಕುಗಳಮೇಲೆ ಕರಿಗೆ ವಸೂಲ್ಮಾಡದೆಯೇ ಅಧಿಕ ಆ ಯತಿಯನ್ನು ಪಡೆಯಬಹುದೆಂದು ಇಂಡ್ಯ ಗವರ್ನಮೆಂಟಿನವರು ಎಣಿಸಿರುವದು. ೬. ಇಂಡ್ಯಾದೇಶದ ಹುಟ್ಟುವಳಿಯ ಖರ್ಚಿನಿಂದ ಕೆಲವರು ಶಿಬ್ಬಂದಿಗಳನ್ನೇರ್ಪಡಿಸುಮಾಡಿ ಅವರ ಮೂಲಕ ಗವರ್ನಮೆಂಟಿನವರೇರ್ಪಡಿಸಿರುವ ಸರಹದ್ದನ್ನು ರಷ್ಯಾದವರು ಕಟಾಯಿಸಿ ಬರಲಾರರೆಂದು ಯಾರಾದರು ಭಾವಿಸಿರುವದು. ೭. ನಮ್ಮ ಇಂಡ್ಯಾದೇಶವೆಲ್ಲವೂ ಕ್ರಿಶ್ಚಿಯನ್ ಪ್ರಜಾ ಭರಿತವಾದದ್ದಾಗಿ, ಅಂದರೆ, ಅವರಪ್ರಜೆಗಳೆಲ್ಲರೂ ತಮ್ಮಂತಾವ ಲಂಬಿಗಳಾಗುವರೆಂದು ಪಾದರಿಗಳು ಭ್ರಮಿಸಿರುವದು. ೮. ಹಿಂದೂವಾಗಿರುತಲಿದ್ದು ದೌರ್ಭಾಗ್ಯವಶಾತ್ ಅನ್ಯರ ದುರ್ಬೋಧನೆಗಳೊಳಗಾಗಿ ಜಾತಿ ಭ್ರಷ್ಟರಾದರೆ ತಾವನ್ಮಾತ್ರದಿಂದವನು ಆಚಾರ ವ್ಯವಹಾರಗಳಲ್ಲೂ ಮನೋವ್ಯಾಪಾರಗಳಲ್ಲೂ ಹಿಂದೂವಾಗಿರಲಾರನೆಂದೆಣಿಸಿರುವದು. ೯. ಕ್ರಿಶ್ಚಿಯನ್ ಮತಸ್ಥರು ಸಮಬೀದಿಯಲ್ಲಿ ನಿಂದು ಉದ್ಘೋಷಿಸಿ ಉಪನ್ಯಾಸಮಾಡುವದು ಸ್ವಲ್ಪವಾದರೂ ಪ್ರಯೋಜನಕಾರಿಯಾಗದೆ ಹೋಗಲಾರದೆಂದು ಭ್ರಾಂತಿಪಟ್ಟಿರುವದು. ೧೦. ಬಾಲವಿಧವೆಯರು ಪರ ಪುರುಷಾನುರಕ್ತರಾಗಿ ಸ್ವತಃ ಪುನರ್ವಿವಾಹ ಮಾಡಿಕೊಳ್ಳುವದಕ್ಕೆ ಪ್ರಯತ್ನಪಡುವರೆಂದು ದೇಶ ಕ್ಷೇಮಾರ್ಥ ಶ್ರಮಿಸುತಕ್ಕವರಲ್ಲಿ ಕೆಲವರು ತಿಳಿದಿರುವದು. ೧೧. ಇಂಗ್ಲಿಷ ವಿದ್ಯಾಭ್ಯಾಸವು ಏನಾದರಕ್ಕೆ ಪ್ರತಿ ಮನುಷ್ಯನೂ ತನಗೆ ಗವರ್ನಮೆಂಟಿನವರು ನೌಕರಿ ಕೊಡುವರೆಂದು ಆಶಿಸುವದು. ೧೨. ಚಿರಕಾಲದವರಿಗೆ ಅಭ್ಯಾಸವಿಲ್ಲದೆ ಆಯಾ ಕಸಬುಗಳಿಗೆ ಸೇರಿದ ಕೈವಾದ ಕೆಲಸಗಳು ತೀವ್ರವಾಗಿ ಅಭ್ಯಸಿಸಲ್ಪಡದಕೂಡದ್ದಾಗಿದ್ದರೂ ಅವು ಸುಲಭ ಸಾಧ್ಯವೆಂದು ಬಾಲಕರು ಅರಿತಿರುವದು. ೧೩. ಸ್ವತಃ ಶ್ರಮಪಟ್ಟು ತಕ್ಕ ಪ್ರಯತ್ನಗಳಂ ಮಾಡದೇವರು ತಮಗೆ ಅನ್ನ ವಸ್ತ್ರಗಳಂ ಕೊಟ್ಟು ಸಂರಕ್ಷಿಸುವನೆಂದು ಮುಸಲ್ಮಾನರು ನಂಬಿರುವದು. ೧೪. ಕೆಲವು ಇಂಗ್ಲಿಷ ಶಬ್ದಗಳನ್ನು ಕಲಿತುಕೊಂಡ ಮಾತ್ರದಿಂದಲೇ ಗವರ್ನಮೆಂಟಿನವರು ಮಾಡುವ ಕಾರ್ಯಗಳನ್ನೆಲ್ಲ ಚರ್ಚಿಸಲಿಕ್ಕೆ ತಾನು ಸಮರ್ಥನಾಗಿರುವಂತೆ ಪ್ರತಿ ನೇಟಿವನೂ ಅಭಿಪ್ರಾಯ ಗೊಂಡಿರುವದು. ೧೫. ಮನೆಗಳ ಹಿಂಭಾಗದಲ್ಲಿ ದುರ್ಗಂಧ, ಮುರಿಕೆ, ಸುಲಭವಾಗಿ ದೊರೆಯುತಿವೆಯೆಂದು ಮುಗ್ಗಿ ಕೊಳೆತುಹೋದ ಪದಾರ್ಥಗಳನ್ನು ಉಪಯೋಗಿಸುವದು, ಇವು ಮುಂತಾದ ಅನಾರೋಗ್ಯ ಕರಗಳಾದ ವ್ಯಾಪಾರಗಳು ಬಿಡದೆ, ದೇವಸ್ಥಾನಗಳಿಗೆ ಹೋಗಿ ಪ್ರದಕ್ಷಿಣನಮಸ್ಕಾರಗಳಂ ಮಾಡುವದರಿಂದಲೂ, ಜಪ ಮುಂತಾದವುಗಳಿಂದಲೂ ಶರೀರಾರೋಗ್ಯ ವುಂಟಾಗುವದೆಂದು ಹಿಂದೂಗಳನೇಕರು ನಂಬಿರುವದು. ೧೬. ಧನಿಕನು ತನ್ನ ಆಯತಿಗೆ ತಕ್ಕಂತೆ ವ್ಯಯಮಾಡದಿದ್ದರೆ ತಾನು ಯಾವಾಗಲು ಐಶ್ವರ್ಯವಂತನಾಗಿಯೇ ಇರುವನೆಂದು ಭಾವಿಸುವದು. ೧೭. ವೃತ್ತಾಂತ ಪತ್ರಿಕಾ ಲೇಖಕರು ತಮ್ಮ ಪತ್ರಿಕೆಯನ್ನೋದತಕ್ಕವರನ್ನೆಲ್ಲ ತಮ್ಮ ಬರವಣಿಗೆಯಿಂದ ತೃಪ್ತಿಗೊಳಿಸಬಲ್ಲರೆಂದು ಎಣಿಸುವದು, ಇವೆಲ್ಲವು ಅಸಂಗತಗಳಾಗಿರುತಿವೆ.

BANGALORE:—Printed and published at the KARNATIC PRESS, No. 44, HOSPITAL ROAD, PETTA.—1888.

ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA.

ಪ್ರತಿ ಸೋಮವಾರ ಪ್ರಾತಃಕಾಲದಲ್ಲಿ ಪ್ರಕಟಿಸಲ್ಪಡುವದು.

Published every Monday Morning.

ವಿಶ್ವಮವಿವಿಧವೃತ್ತವ್ಯೂಹಗನಾರ್ಥಕರ್ಣಾಟಕಪ್ರಕಾಶನವರಾಭಿದಾವೃತ್ತಿತಪಾಹಿತಿಶೋಭಿತಾ ॥ ವ್ಯಾಗಾಂಕಹಿತವಾಸರೇನಿಹಿತಮುದ್ರಣಾಸಜ್ಜನೈರ್ನಿಕಾಮುಪರಿದೂಷಿತಾದಿಕತಿಮಾನಸಂಸುಮತಾ ॥

Vol. XV.] | BANGALORE:—MONDAY, DECEMBER 10, 1888. | [No. 48.

ಸಂಪುಟ ೧೫.] | ಬೆಂಗಳೂರು:—ಸನ್ ೧೮೮೮ನೇ ಇಸವಿ ಡಿಸಂಬರ್ ೧೦ನೇ ತಾರೀಖ್ ಸೋಮವಾರ. | [ಸಂಚಿಕೆ ೪೮.

ಕರ್ಣಾಟಕ ಪ್ರಕಾಶಿಕಾ

ಪತ್ರಿಕೆಯ ಚಂದಾ ದರಗಳು,
೧೮೮೯ನೇ ಇಸವಿ ಜನವರಿಲಾಗಾಯತು
ಕಡಮೆಮಾಡಲ್ಪಟ್ಟಿರುತಿದೆ.

ಈ ಪತ್ರಿಕೆಯ ಚಂದಾದಾರರಪ್ಪೈಕಿ ಅನೇಕರ ಅಪೇಕ್ಷೆಯನ್ನೀಡೇರಿಸುವ ಉದ್ದೇಶದೊಡನೆಯೂ, ಪರಿಮಿತವಾದ ಆಯತಿಯುಳ್ಳವರಿಗೆಲ್ಲ ಈ ಪತ್ರಿಕೆಯು ಸುಲಭವಾಗಿ ಲಭಿಸುವಂತಿರಬೇಕೆಂಬ ಅಭಿಪ್ರಾಯದೊಡನೆಯೂ ಇದರ ಚಂದಾದರವನ್ನು ಇದರಡಿಕಂಡಂತೆ ಕಡಮೆಮಾಡಿರುತ್ತೇವೆಂತೆಂದರೆ:—

ಇಂಗ್ಲಿಷ್ ಮತ್ತು ಕನ್ನಡಭಾಗಗಳಿಗೆ.

	ಸ್ಥಳದವರಿಗೆ	ಪರಸ್ಥಳದವರಿಗೆ
12 ತಿಂಗಳಿಗೆ	8—0—0	9—0—0
6 ,,	4—0—0	4—8—0
3 ,,	2—8—0	2—8—0

ಇಂಗ್ಲಿಷ್ ಅಥವಾ ಕನ್ನಡಭಾಗಗಳಿಗೆ.

	ಸ್ಥಳದವರಿಗೆ	ಪರಸ್ಥಳದವರಿಗೆ
12 ತಿಂಗಳಿಗೆ	4—0—0	5—0—0
6 ,,	2—0—0	2—8—0
3 ,,	1—4—0	1—8—0

ಸೂಚನೆ—ಅಂದರೆ ಮುನ್ಸಿಫರು, ಪೋಲೀಸು ಮತ್ತು ತಾಲ್ಲೂಕ್ ಸ್ಕೂಲ್‌ಮಾಸ್ಟರುಗಳು, ಶಾನಭೋಗರು, ಪಟೇಲರು, ವಿದ್ಯಾರ್ಥಿಗಳು, ಇವರಿಗೆಲ್ಲ ಈ ಪತ್ರಿಕೆಯು [illegible]

ಸೋಮವಾರ ರವಾನಿಸಲ್ಪಡುವ [illegible]

ಪ್ರಕಟಣೆಯ ದರ.

ಮೊದಲನೆಯದಕ್ಕೆ ಪಂಕ್ತಿ ಒಂದಕ್ಕೆ	೦—೨—೦
ಎರಡನೆಯದಕ್ಕೆ ಪಂಕ್ತಿ ಒಂದಕ್ಕೆ	೦—೧—೦

ಸೂಚನೆ—ಎರಡಾವರ್ತಿಗಿಂತ ಜಾಸ್ತಿಯಾಗಿ [illegible]

"IT RECOMENDS ITSELF"

ALL WHO SUFFER FIND SURE RELIEF.

LITTLE'S

ORIENTAL BALM

THE MOST EFFECTUAL MODERN REMEDY FOR PAIN.

[illegible]

ಪರಿಶೀಲಕರ ಅಭಿಪ್ರಾಯವು.

[illegible] (C. R. TICHBORNE, L. L. D., F. C. S., M. R. I. A.,) [illegible]

ಇದರ ಕ್ರಯ—ಸೀಸೆ ಒಂದಕ್ಕೆ ೧ ರೂಪಾಯಿ.

[illegible]

AGENTS.— Messrs, J. WISE, Chemist, &c., Bangalore.
CALLAIN & Co. Chemists, Bangalore.
RIGGS & Co., Chemists, Bangalore; and of
MAHOMED YOUSOFF AND SONS, The Cash Bazar, Bangalore
A. C. BILLYMAN & Co.,
20 Sambodoss Street Madras.

NOTICE.

VAIDYASARA SANGRAHA

A TREATISE ON THE PRINCIPLES OF

HINDU MEDICINE

☞ Price including Postage Rs. 5 6 0

ವೈದ್ಯಸಾರ ಸಂಗ್ರಹ.

ಈಗ್ರಂಥಾಪೇಕ್ಷೆಯುಳ್ಳವರು ಮೊಬಲಗಿನೊಡನೆತಾ ಕೆಳಗೆ ರುಜುಮಾಡಿರತಕ್ಕವರ ಹೆಸರಿಗೆ ಬರೆದುಕೊಂಡರೆ ಪುಸ್ತಕ ಕೂಡಲೇ ಕಳುಹಿಸಲ್ಪಡುವದು. ಮೊಬಲಗು ಇಲ್ಲದ ದರಖಾಸ್ತುಗಳಿಗೆ ಸುತರಾಂ ನಿಗೇಕೊಡಲ್ಪಡಲಾರದು.

ಇದರಕ್ರಯ ... ...ರೂ॥ ೫—೦—೦
ಪ್ಯಾಕಿಂಗ್ ಮತ್ತು ಅಂಚೇಹಾಸಲ್, ೦—೬—೦

ಟಿ. ಬಿ. ವೆಂಕಟಾಚಾರ್,
ಆಸ್ಪತ್ರಿರೋಡ್ ಬೆಂಗಳೂರು.

ಹೊಸ ಪದಕ.

[illegible]

ಪೂನಾ ಸಹರ್ ಚಿತ್ರಶಾಲೆಯ ಮ್ಯಾನೇಜರ್.

ನೋಟೀಸು.

ಅಪ್ಪಲಾ ಬಾಬತು ವಿನಸಾವದಿ ಅತ್ತರಗಳು !
ಚಾಫೆ ನಿವರ್ಣ ಮಾಡುವ ದಂತಪಿಸ್ತ !!
ಅನೇಕ ಸುಗುಣಗಳುಳ್ಳ ಸುಗಂಧರಾಜ ತೈಲವು !!!
ನಾನಾತರದ ಅಪ್ಪಲ್‌ಬಾಬತು ಊದು ಬತ್ತಿಗಳು
ಮತ್ತು ಬಿಳ್ಲೆಗಳು ಹೊಸ ಬಿಲ್ಲೆಗಳು ವಗೈರೆ.

ಇವುಗಳೆಲ್ಲ ಬಹಳ ಪರಿಶೋಧನೆಯಿಂದ ತಯಾರಾಗಿ ಬಿಕರೀಗೆ ಸಿದ್ಧವಾಗಿರುತ್ತೆ. ಅಲ್ಲದೆ ಈ ಸಾಹೇಬರ ಕೀಲುಯಿಗಳಿಗೆ ಮೇಲ್ಪಟ್ಟು ಬಿಕಾರ್ಗಿರುವ, ಬಹಳ ಸಂಕಟಗಳನ್ನು ಪರಿಹಾರ ಮಾಡಿ ಆರೋಗ್ಯವನ್ನೂ ಸುವಾಸನೆ ಕೊಡುವ ಸುಗಂಧರಾಜ ತೈಲವು ರಾತ್ರಿ ಹಗಲು ಬಾಧಿಸುವ ಹಲ್ಲುನೋವನ್ನು ಪರಿಹಾರ ಮಾಡುವ ದಂತ ಭಸ್ಮ ಸಹ ಬಹಳ ಕಮ್ಮಿ ಚಾರ್ಜಿಗೆ ಸಿಕ್ಕುವದು. ಏಜಂಟ್ ಅ. ಮಹಮದ್ ಖಾಸಿಂ, ಬೆಂಗಳೂರು ದೊಡ್ಡಪೇಟೆ ಅಂಗೇ ಸಿದ್ದೇಶ್ವರ ರಯರೂ ಮಾರ್ಕೀಟ್.

ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA.

MONDAY, DECEMBER 10, 1888.

೧೮೮೮ನೇ ಡಿಸಂಬರ್ ತಾ॥ ೧೦ನೇ ಸೋಮವಾರ.

THE VICEROY AND THE ARMIES OF NATIVE PRINCES.

[illegible] ನಿವೃತ್ತರಾಗಿ ಸ್ವದೇಶಕ್ಕೆ ಹೋಗುವವರಾಗಿರತಕ್ಕ ಲಾರ್ಡ್ ಡಫರಿನ್‌ಯವರು ಬಹಳ ರಾಜತಂತ್ರಜ್ಞರೆಂಬ ಅಂಶವು ಒಂದೊಂದು ಸಂದರ್ಭದಲ್ಲಿ ಅವರು ಮಾಡಿದ ಪ್ರಸಂಗದಿಂದ ವ್ಯಕ್ತವಾಗದಿರಲಿಲ್ಲವು. ಈ ದೇಶಕ್ಕೆ ಇವರ ಸಂಬಂಧವು ನಿವೃತ್ತಿಯಾಗುವಕಾಲ ಸನ್ನಿಹಿತವಾಯಿತು. ಮರಳಿ ಲಾರ್ಡ್ ಡಫ್ರಿನ್‌ಯವರನ್ನು ಇಲ್ಲಿ ನೋಡುವೆವೆಂಬ ನಂಬಿಕೆಯು ನಮಗಿಲ್ಲವು. ಆದದರಿಂದ ಈಗ ಪ್ರಯಾಣೋನ್ಮುಖರಾಗಿರುವ ಸದರೀ ದೊಡ್ಡಮನುಷ್ಯರ ವಿಚಾರವು ಆಪ್ಯರಾದಕಾರಣ ಅದು ಕೇವಲ ಆವಶ್ಯಕವೆಂದು ಭಾವಿಸುವೆವು. ಲಾರ್ಡ್ ಡಫ್ರಿನ್‌ಯವರು ಇಂಡ್ಯಾದೇಶದ ವೈಸ್‌ರಾಯಿ ಕೆಲಸವಂವಹಿಸಿದ್ದ ಗತ ಐದುವರುಷಗಳ ಕಾಲದಲ್ಲಿ ಇಲ್ಲಿನ ಪ್ರಜೆಗಳಿಗೆ ಪ್ರಯೋಜನಕರಗಳಾಗಿಯೂ, ಸ್ಮರಣೀಯಗಳಾಗಿಯೂ ಇರುವ ಯಾವದೊಂದು ಕೆಲಸವನ್ನೂ ಮಾಡಿದವರಲ್ಲವು. ಇವರು ತಮ್ಮ ಪ್ರಭುತ್ವ ಕಾಲದಲ್ಲಿ ಒಂದು ನೇಟಿವ್ ಪ್ರಭುತ್ವವನ್ನು ನಿರ್ಮೂಲವಮಾಡಿ ಆರಾಜ್ಯವನ್ನು ಸ್ವಾಧೀನಪಡಿಸಿಕೊಂಡ ಅಂಶವೊಂದೇ ಈ ಸಂದರ್ಭದಲ್ಲಿ ವಕ್ತವ್ಯಾಂಶವಾಗಿರುತಿದೆ. ರಾಜ್ಯ ಕೋಶಗಳನ್ನೆಲ್ಲ ಕಳೆದುಕೊಂಡ ತೀಬಾಯವರೊಬ್ಬರು ಬ್ರಿಟಿಷ್ ಸನಿಯರ್ಗಳ ಕೋಪಕೋಟಿಯ ಮಧ್ಯೆ ನಿಂತು ಒಂದು ಕಾರ್ಯಭಾಗವ ನಾಡುವರೆಂದು ಭಾವಿಸುವದು ಅಸಹಜವಾದಾಗ್ಯೂ ಅವರು ರಾಜದ್ರೋಹಿಯಂತೆ ನಿರ್ಬಂಧದೊಳಿಡಲ್ಪಡಲಿಕ್ಕೆ ಲಾರ್ಡ್ ಡಫ್ರಿನ್‌ಯವರೇ ಮುಖ್ಯಕಾರಣಭೂತರು. ಇವರ ಮಾತುಗಳ್ಯಾವಾಗಲೂ ಮೋಹಕಗಳಾಗಿಯೂ ಮಾಧುರ್ಯಪ್ರಧಾನವಾಗಿಯೂ, ವಶೀಕರಣ ಶಕ್ತಿಯುಳ್ಳವಾಗಿಯೂ ಇರುವದರಿಂದ ಅವರ ವರ್ತನಗಳು ಅವರ ಮಾತುಗಳಿಂದಲಂಕೃತವಾಗುವವು. ಕೆಲವರು ನೇಟಿವ್ ಸಂಸ್ಥಾನಾಧಿಪತಿಗಳನ್ನೂ ಪ್ರಮುಖರನ್ನೂ ಮಹತ್ತ್ವಕಗಳಾದ ಟುಕ್ಕ ವಾಕ್ಯಗಳಿಂದಲೂ ಪ್ರಶಂಸೆಗಳಿಂದಲೂ ಸಂತೋ

ಶೋಭಗೊಳಿಸಿ, ಅವರ ಯೋಗಕ್ಷೇಮ ವಿಚಾರಣಾರ್ಥವೆಂದು ಸೇತು ಶೀತಾಚಲದ ವರಿವಿಗೆ ಸಂಚರಿಸಿ ಅವರವರ ಆತಿಥ್ಯವಂ ಕೈಗೊಂಡರು. ಬ್ರಿಟಿಷ್ ಗವರ್ನಮೆಂಟಿನವರು ಅನ್ಯ ಸಹಾಯಾಪೇಕ್ಷೆಗಳಿಲ್ಲವಾಗಿ ಪ್ರಾರ್ಥನಾಪೂರ್ವಕ ಮಾಡುವ ಸಹಾಯಗಳನ್ನು ಕೂಡ ಅವರು ತಿರಸ್ಕರಿಸಬಿಡತಕ್ಕವರೆಂಬ ಪ್ರತಿಷ್ಠೆಯನ್ನುಂಟು ಮಾಡುವದಕ್ಕಾಗಿ ಆಯಾ ಸಂಸ್ಥಾನಾಧಿಪತಿಗಳು ಪರಪ್ರೇರಣೆಯಿಂದಲೂ, ಆತ್ಮೋತ್ಕೃಷ್ಟ ಜ್ಞಾನದಿಂದಲೂ, ಪ್ರಶಸ್ತ್ಯ ಸಂಪಾದನಾಭಿಲಾಷೆಯಿಂದಲೂ ಒಬ್ಬರಂ ಕಂಡು ಮತ್ತೊಬ್ಬರು ಮಾಡುವಂತೆ ಹೇಳಿದ ದ್ರವ್ಯ ಸೈನ್ಯ ಸಹಾಯಗಳನ್ನೆಲ್ಲ ಗಂಭೀರವಾಗಿ ನಿರಾಕರಿಸಿಬಿಟ್ಟರು. ಈಚೆಗೆ ಪಟಿಯಾಲಾ ಸಂಸ್ಥಾನದಲ್ಲಿ ನಡೆದ ದರ್ಬಾರಿನೊಳು, ಲಾರ್ಡ್ ಡಫ್ರಿನ್‌ಯವರು, ಪ್ರಸ್ತಾವಶ್ಯೇನ, ನೇಟಿವ್ ಸಂಸ್ಥಾನಾಧಿಪತಿಗಳಿಗೆ ಬ್ರಿಟಿಷ್ ಸರ್ಕಾರದಲ್ಲಿರುವ ಅಕುಟಿಲವಾದ ಭಕ್ತಿವಿಶ್ವಾಸಗಳಿಗೆ, ಅವರು ಅಪ್ರಾರ್ಥಿತರಾಗಿ (!) ಸರಹದ್ದು ಪ್ರಾಂತದ ಬಂದೋಬಸ್ತಿಯ ಬಗ್ಗೆ ಸಹಾಯವಾಗುವಂತೆ ಮಾಡಿದ ವಾಗ್ದಾನಗಳು ಸಾಕಾದ ನಿದರ್ಶನಗಳಾಗಿರುವಂತೆಯೂ, ಅವರಿಂದ ದ್ರವ್ಯ ಸಹಾಯವಂ ಹೊಂದುವದು ಇಂಡ್ಯ ಗವರ್ನಮೆಂಟಿನವರಿಗೆ ಅಭಿಮತ ವಿಷಯವಲ್ಲವೆಂತಲೂ, ಆವಶ್ಯಕತೆಯುಂಟಾದಾಗ ನೇಟಿವ್ ಅರಸರ ಸೈನ್ಯವು ಉಪಯೋಗಿಸಿಕೊಳ್ಳಲ್ಪಡಬಹುದೆಂತಲೂ, ಪರಂತು ಬ್ರಿಟಿಷ್ ಸರ್ಕಾರಕ್ಕೆ ಕೊಡುವಂತೆ ವಾಗ್ದಾನವಮಾಡಿದ ಮೊಬಲಗನ್ನು ಆಯಾ ಸಂಸ್ಥಾನಾಧಿಪತಿಗಳು ತಮ್ಮ ಸೈನ್ಯವನ್ನು ಕ್ರಮಪಡಿಸತಕ್ಕ ವಿಷಯದಲ್ಲಿ ವಿನಿಯೋಗಿಸಿ ಅವರು ಕವಾಯತ್ ಮುಂತಾದವುಗಳಲ್ಲಿ ಬ್ರಿಟಿಷ್ ಸೈನಿಕರಿಗೆ ಸಮಾನರನ್ನಾಗಿ ಮಾಡಿದರೆ, ಅದರಿಂದ ಯುದ್ಧಕಾಲದಲ್ಲಿ ಬ್ರಿಟಿಷ್ ಗವರ್ನಮೆಂಟಿನವರಿಗೆ ಸಹಾಯವಾಗುವಂತೆ ಯಾಗುವದಲ್ಲದೆ ತನ್ಮೂಲಕ ಸದರೀ ಸಂಸ್ಥಾನಾಧಿಪತಿಗಳ ರಾಜಭಕ್ತಿಯು ಮತ್ತಷ್ಟು ಗೌರವಿಸಲ್ಪಡಲಿಕ್ಕೆ ಕಾರಣವಾಗುವದೆಂತಲೂ, ಅವರು ತಮ್ಮ ಸೈನ್ಯಗಳಂ ಕ್ರಮಪಡಿಸುವದಾದರೆ ಅವರು ತರಬೇಯತ್ ಮಾಡಲಿಕ್ಕೆ ಕೆಲವರು ಯೂರೋಪಿಯನ್ ಇನ್‌ಸ್ಟ್ರಕ್ಟರ್ ಅಂದರೆ ಬೋಧಕರುಗಳನ್ನೂ, ಕೆಲವರು ನೇಟಿವ್ ಡ್ರಿಲ್ ಮ್ಯಾಸ್ಟರ್‌ಗಳು, ಅಂದರೆ, ಕವಾಯತ್ ಮಾಡಿಸತಕ್ಕವರನ್ನೂ, ಇದಲ್ಲದೆ ಕೆಲವು ಸ್ನೈಡರ್ ರೈಫಲ್‌ಗಳು ಅಂದರೆ ಬಂದೂಕ್‌ಗಳನ್ನೂ ಸರಬರಾಯಿ ಮಾಡಿಸುವೆವೆಂತಲೂ, ಪಂಜಾಬಿನಲ್ಲಿ ಸಂಸ್ಥಾನಾಧಿಪತಿಗಳೊಬ್ಬೊಬ್ಬರಿಗೆ ನಾಲ್ಕರಪ್ರಕಾರ ತೋಪ್‌ಗಳು ಕೊಡಿಸುವೆವೆಂತಲೂ ತಿಳಿಸಿದರು. ಗೂಢವಾದ ಬೇರೊಂದು ರಾಜಕೀಯೋದ್ದೇಶದೊಡನೆ ನುಡಿಯಲ್ಪಟ್ಟ ವೈಸ್‌ರಾಯಿಯವರ ಮಾತುಗಳು ಅಲ್ಲಿದ್ದವರಿಗೆಲ್ಲ ಬಹಳ ಶ್ರಾವ್ಯವಾಗಿಯೂ ಕೆಲವು ವೃತ್ತಾಂತಪತ್ರಿಕಾಲೇಖಕರ ಪ್ರಶಂಸೆಗೆ ಕಾರಣಗಳಾಗಿಯೂ ಏರ್ಪಟ್ಟವು. ವೈಸ್‌ರಾಯಿಯವರ ಉದ್ದೇಶವಂ ಬಹಿರಂಗವಾಗಿ ನಾವಿಲ್ಲಿ ತಿಳಿಸಲಾರೆವು. ಪರಂತು ನೇಟಿವ್ ಅರಸರ ಸೈನ್ಯಗಳನ್ನು ತಕ್ಕ ಶಿಕ್ಷೆಯಿಂದ ಅರ್ಹಾವಸ್ಥೆಗೆ ತರಬೇಕೆಂಬ ಅಭಿಪ್ರಾಯವನ್ನು ತಪ್ಪೆಂದು ನಾವು ಹೇಳಲಾರೆವು. ಆದರೆ ಈ ಸಂದರ್ಭದಲ್ಲಿ ಒಂದಂಶವನ್ನು ಮಾತ್ರ ಸ್ವಲ್ಪ ಸೂಚಿಸಬೇಕಾಗಿದೆ ಯೇನಂದರೆ,—೧೮೫೭ನೇ ಇಸವಿಯಲ್ಲಿ ನಡೆದ ಕಲಹದ ಕಾಲದೊಳು ಶಿಕ್ಷಿತವಾದ ಸೈನ್ಯವು ಬ್ರಿಟಿಷ್ ಗವರ್ನಮೆಂಟಿನವರಮೇಲೆ ತಿರುಗಿಬಿದ್ದು ಕಲಹಿಸಿದಾಗ ಅವರ ಕುಮ್ಮಕ್ ಬಗ್ಗೆ ಕೆಲವು ಸಂಸ್ಥಾನಾಧಿಪತಿಗಳು ತಮ್ಮ ಸೈನ್ಯಗಳನ್ನೆಲ್ಲ ಕಳುಹಿಸಿದ್ದೂ, ಅವರ ಸಹಾಯದಿಂದಲೇ ಬ್ರಿಟಿಷಿನವರು ಕಲಹಿಗಳನು ಜೈಸಿ ಸ್ವಾಧೀನ ಪಡಿಸಿಕೊಂಡದ್ದೂ, ಪ್ರಸಿದ್ಧವಿಷಯಗಳಾಗಿವೆಯಷ್ಟೆ. ಆ ಕಾಲದಲ್ಲಿ ಅಂದರೆ ಸುಮಾರ್ ೩೦ ವರುಷಗಳಿಂದೆ ಸದರೀ ನೇಟಿವ್ ಸೈನ್ಯಗಳಿಗೆ ಕವಾಯಿತ್ ಮುಂತಾದವು ಕಲಿಸಲಿಕ್ಕೆ ಯಾವ ಬ್ರಿಟಿಷ್ ಡ್ರಿಲ್ ಮ್ಯಾಸ್ಟರ್‌ಗಳು ಮೊಕರರಾಗಿದ್ದರೋ ನಾವರಿಯೆವು. ಇದಲ್ಲದೆ ಹೈದರಲೀಖಾನರ ಮತ್ತು ಟೀಪೂ ಸುಲ್ತಾನರ ಸೈನ್ಯವು ಬಹಳ ಶಿಕ್ಷಿತವಾಗಿದ್ದಂತೆ ಇಂಗ್ಲಿಷಿನವರೇ ಒಂದು ಕಾಲದಲ್ಲಿ ಒಪ್ಪಿಕೊಂಡಿದ್ದರೆಂದು ನಮ್ಮ ಕೇಳ್ವಿಗೆ ಬಂದಿರುತಿದೆ. ಅವರ ಸೈನ್ಯವು ಅಶಿಕ್ಷಿತವಾಗಿದ್ದರೆ ಅನೇಕ ಸಂದರ್ಭಗಳಲ್ಲಿ ಅವರಿಗೆ ಜಯವು ಕೈಗೂಡಿರಲಾರದು. ಹೀಗಿರಲಾಗಿ ಅವರು ಯಾವ ಇಂಗ್ಲಿಷ್ ಇನ್‌ಸ್ಟ್ರಕ್ಟರ್‌ಗಳ ಶಿಕ್ಷೆಗೆ ಗುರಿಮಾಡಲ್ಪಟ್ಟಿದ್ದರೋ ಅದು ಅವ್ಯಕ್ತವಾಗಿದೆ. ಮುಖ್ಯವಾಗಿ ನೇಟಿವ್ ಸಂಸ್ಥಾನಾಧಿಪತಿಗಳ ಸೈನ್ಯವು ಉಪಯೋಗಿಸಿಕೊಳ್ಳಲ್ಪಡಬೇಕಾದ ಸಂದರ್ಭ ಒಂದುವೇಳೆ ಪ್ರಾಪ್ತವಾದರೆ ಆಗ ಅದು ಒಳದೇಶದ ಬಂದೋಬಸ್ತಿಗೆ ಬೇಕಾದಷ್ಟರಮಟ್ಟಿಗೆ ಉಪಯೋಗಿಸಲ್ಪಡುವದೇಹೊರತು ಯುದ್ಧರಂಗಕ್ಕೆ ಕಳುಹಿಸಲ್ಪಡುವದೆಂಬ ನಂಬಿಕೆಯು ನಮಗೆ ಸುತರಾಂ ಯಿಲ್ಲವು. ಇದಕ್ಕೂ ರಾಜಕೀಯೋದ್ದೇಶ ಬೇರೊಂದಿಲ್ಲದೆ ಹೋಗಲಿಲ್ಲವು. ಏತೇನ ಲಾರ್ಡ್ ಡಫ್ರಿನ್‌ಯವರು ಒಂದೊಂದು ಪ್ರಕರಣದಲ್ಲಿ ಒಂದೊಂದುವಿಧ ಅನುನಯ ವಾಕ್ಯಗಳಂ ಒಂದೊಂದು ಜಾತೀಯವಾಗಿ ಕಡೆಗೆ ಎಲ್ಲರನ್ನೂ ಮಾತುಗಳಿಂದ ತೃಪ್ತಿಪಡಿಸಿ ತಾವೂ ಪ್ರಜಾರಂಜಕರಾಗಿದ್ದು ಪ್ರಭುತ್ವಮಾಡಿಹೋದರೆಂಬ ಸ್ವಸಂತೋಷದೊಡನೆ ಈ ಇಂಡ್ಯಾದೇಶವನ್ನು ಬಿಟ್ಟು ಹೊರಟುಹೋಗುವರಾಗಿ ಇವರುತಾ ವಾಚಾಲಕರಾದ ಪ್ರಭುವು ನಾವು ಮರಳಿ ಕಾಣಲಾರೆವು.

THE LATE Mr. S H. VARDON.

ಬೆಂಗಳೂರು ಡಿಸ್ಟ್ರಿಕ್ಟ್ ಅಸಿಸ್ಟೆಂಟ್ ಕಮಿಷನರ್ ಮೆ॥ ವಾರ್ಡನ್‌ಯವರು ಮಾಹೇ ಮಜಕೂರ್ ೮ನೇ ತಾರೀಖ್ ಶನಿವಾರದದಿನ ಬೆಳಗ್ಗೆ ಸುಮಾರ್ ೭ ಘಂಟೆಗೆ ಈ ಪ್ರೂರಲ್ಲಿ ಕಾಲಗತಿಯನ್ನೈದಿದರೆಂಬದಂ ತಿಳಿಸಲಿಕ್ಕೆ ನಾವು ಬಹಳ ವಿಷಾದಿಸುತ್ತೇವೆ. ಇವರು ಆನೆಕಲ್ ಪ್ರಾಂತಕ್ಕೆ ಸರಕ್ಯೂಟಿಹೋಗಿ ಬಂದದ್ದು ಮೊದಲು ಜ್ವರದ ಗಲ ಸ್ವಲ್ಪದಿನಗಳವರಿಗೆ ಕಾಹಿಲೆಯಾಗಿ ಮಲಗಿದ್ದರು. ಅವರಿಗೆ ಚಿಕಿತ್ಸೆ ಮಾಡುತಲಿದ್ದ ಡಾಕ್ಟರ್‌ಗಳು ತಿಳಿಸುತಲಿದ್ದಂತೆ ಬಹಳ ಮಟ್ಟಿಗೆ ಆರೋಗ್ಯಲಾಂಛನಗಳು ಕಂಡುಬರುತಲಿದ್ದವು. ಹೀಗಿದ್ದರೂ ಗತ ಶುಕ್ರವಾರದದಿನ ರಾತ್ರಿ ಮೆ॥ ವಾರ್ಡನ್‌ಯವರ ಶರೀರಸ್ಥಿತಿ ಏಕಾಏಕಿ ವಿರುದ್ಧ ಮಾರ್ಗವನ್ನವಲಂಬಿಸಿ ಕಡೆಗೆ ಪ್ರಾಣಾಪಾಯ ಶಂಕೆಯನ್ನುಂಟುಮಾಡುವದಾಗಿತ್ತು. ಗುರುವಾರದದಿನ ಅವರ ಯೋಗಕ್ಷೇಮವಂ ವಿಚಾರಿಸುವದಕ್ಕೆ ಹೋಗಿದ್ದ ಅವರ ಸ್ನೇಹಿತರು ಕೆಲವರು ಅವರು ನೋಡಿದ ವೇಳೆಯಲ್ಲಿ ಅವರಿಗೆ ಸ್ವಲ್ಪವೂ ಅನುಮಾನ ತೋರಲಿಲ್ಲವು. ಮೊನ್ನೆಯದಿನ ಅನಿರೀಕ್ಷಿತವಾಗಿ ತಿಳಿಯಬಂದ ಸದರೀ ದೊಡ್ಡಮನುಷ್ಯರ ಮರಣ ವೃತ್ತಾಂತವು ಪ್ರಾಯಶಃ ಎಲ್ಲರಿಗೂ ವಿಸ್ಮಯವನ್ನುಂಟುಮಾಡದಿರಲಿಲ್ಲವು. ಮೆ॥ ವಾರ್ಡನ್‌ಯವರಿಗೆ ಈಗ ೪೯ ವರ್ಷಗಳವಯಸ್ಸೆಂದು ಕೇಳುತ್ತೇವೆ. ಈದೊಡ್ಡ ಮನುಷ್ಯರು ಸ್ವಭಾವತಃ ಸ್ನೇಹಪರರಾಗಿಯೂ, ಶಾಂತಗುಣವುಳ್ಳವರಾಗಿಯೂ, ರಸಿಕರಾಗಿಯೂ ಇದ್ದದರಿಂದ ಅನೇಕರ ಸ್ನೇಹ ಗೌರವಗಳಿಗೆ ಪಾತ್ರರಾಗಿದ್ದರು. ಈಗ ಅಂತಹವರಿಗೆಲ್ಲ ಇವರ ವಿಶ್ಲೇಷವು ಬಹಳ ಖೇದವನ್ನುಂಟುಮಾಡದೆ ಹೋಗಿರಲಾರದೆಂದೆಣಿಸುತ್ತೇವೆ.

ಮೆ॥ ವಾರ್ಡನ್‌ಯವರು ಸರ್ ೧೮೩೯ನೇ ಇಸವಿ ಏಪ್ರಿಲ್ ೫ನೇ ತಾರೀಖಿನಲ್ಲಿ ಜನಿಸಿ ೬೧ನೇ ಇಸವಿಯ ಮೇ ೬ನೇ ತಾರೀಖಿನಲ್ಲಿ ಈ ಸಂಸ್ಥಾನದ ನೌಕರಿಯೊಳು, ಮೈಸೂರ್ ಪಟ್ಟಣದ ಪೊಲೀಸ್ ಹೆಡ್ ಇನ್ಸ್‌ಪೆಕ್ಟರಾಗಿ ಪ್ರವೇಶಿಸಿ, ೧೮೮೦ನೇ ಇಸವಿ ಜಾರ್ಡ್ಯ ೧ನೇ ತಾರೀಖುವರಿವಿಗೆ ಪೊಲೀಸ್, ರೆವಿನ್ಯೂ ಅಸಿಸ್ಟೆಂಟ್ ಕಮಿಷನರಾಗಿ ರುತ, ಮೈಸೂರು, ಬೆಂಗಳೂರು, ಕೋಲಾರ್, ಶಿವಮೊಗ್ಗ ವಗೈರೆ ಡಿಸ್ಟ್ರಿಕ್ಟುಗಳಲ್ಲಿ ಕೆಲಸ ನೋಡುತಲಿದ್ದರು. ೧೮೭೯ನೇ ಇಸವಿಯಲ್ಲಿ ಇವರು ಅರಮನೇಕೆಲಸದೊಳಿದ್ದಾಗ್ಯೂ ಅಲ್ಲಿನವದ ಜವಾಹಿರ್ ಕನ್ನಚೋರಿ ಮೊಕದ್ದಮೆಯ ಪತ್ತೇವಿಷಯದಲ್ಲಿ ಮಾಡಿದ ಮೆಹನತ್ತು ಬಹಳ ಪ್ರಶಂಸಾರ್ಹವಾಗಲು ಅದು ಅವರ ಇನಾಮಿಗೆ ಕಾರಣವಾಗಿ ಇವರವರಿವಿಗೆ ೮೦೦ ರೂಪಾಯಿಗಳು ತಲಬ್ ಸಲ್ಲುತಲಿತ್ತು. ಆದಾಗ್ಯೂ ತಮ್ಮ ಕುಟುಂಬಕ್ಕೆ ಯಾವವಿಧ ಉಪಪತ್ತಿಯನ್ನೂ ಕಲ್ಪಿಸದೆ ಅನಾಥರನ್ನಾಗಿ ಬಿಟ್ಟುಹೋದರೆಂತಲೂ ಮಹಾರಾಜಾ ಸರ್ಕಾರದವರು ಅವರ ಕುಟುಂಬ ಸಂರಕ್ಷಣಾರ್ಥ ಯಥೋಚಿತ ಪೆನ್ಷನ್ ಕೊಡಬೇಕೆಂತಲೂ, ಒಳದೇಶದ ಈವನಿಂಗ್‌ಮೆಯಿಲ್ ಪತ್ರಿಕೆಯು ಬಹಳ ಅನುತಾಪದೊಡನೆ ಶಿಫಾರಸ್ಸುಮಾಡುತಿದೆ. ಸದರೀ ಪತ್ರಿಕಾ ವಾಕ್ಯವನ್ನು ನಾವೂ ನಿಜವೆಂದು ಭಾವಿಸುವೆವು. ಯಾತಕ್ಕೆಂದರೆ,-ಮೆ॥ ವಾರ್ಡನ್‌ಯವರ ಮರಣಪ್ರಯುಕ್ತವಾದ ಖೇದವನ್ನು ಅವರ ಮಿತ್ರರಿಗಿಂತಲೂ, ಅವರೊಡನೆ ಲೇವಾದೇವಿ ಮಾಡುತಲಿದ್ದವರನೇಕರು ಬಹಳವಾಗಿ ಅನುಭವಿಸುತಲಿದ್ದಾರೆ. ಶ್ರೀಮನ್ ಮಹಾರಾಜರವರು ಆಧಿಪತ್ಯವಂ ಸ್ವತಃ ವಹಿಸಿದ್ದಾಗ್ಯೂ ಬ್ರಿಟಿಷ್ ಕಮಿಷನ್ನಲ್ಲಿದ್ದ ಯೂರೋಪಿಯನ್ ಆಫೀಸರ್‌ಗಳ ಸಂರಕ್ಷಣೆಯ ವಿಷಯದಲ್ಲಿ ವಿಶೇಷ ಶ್ರದ್ಧೆಯುಳ್ಳವರಾಗಿರುವದರಿಂದಲೇ ಅದ್ಯಾಪಿ ವಯೋವೃದ್ಧರಾದವರು ಕೆಲವರಂ ನೌಕರಿಯಲ್ಲಿಟ್ಟುಕೊಂಡು ಅವರಿಗೆಲ್ಲ ಪೋಷಣ ನಡೆಸುತಲಿದ್ದಾರೆ. ಹೀಗಿರುವಲ್ಲಿ ಮೆ॥ ವಾರ್ಡನ್‌ಯವರ ಕುಟುಂಬಕ್ಕೆ ಜೀವನೋಪಾಯವಂ ಕಲ್ಪಿಸಬೇಕಾದದ್ದು ಅನಾವಶ್ಯಕವೆಂದು ನಾವು ಹ್ಯಾಗೆ ಹೇಳಬಹುದು? ಈಗ್ಗೆ ನೌಕರಿಯಲ್ಲಿರುತಲಿರುವ ಅಸಿಸ್ಟೆಂಟ್ ಕಮಿಷನರ್‌ಗಳಲ್ಲಿ ಮೆ॥ ವಾರ್ಡನ್‌ಯವರೂ ಒಬ್ಬರಾಗಿದ್ದರು. ಇವರ ನೌಕರಿ ಮೆಹನತ್ತುಗಳು ಮಾತ್ರ ವಿಶೇಷತಃ ಪರಭಾವನೀಯಗಳಾಗ ಬೇಕಾದರೆ ಅವರು ನೇಟಿವ್ ಎನಿಸಿಕೊಳ್ಳದೆ ಗತಿಸಿದ್ದೇ ಕಾರಣವಾಗಬೇಕಾಗುವದು. ಮುಖ್ಯವಾಗಿ ಉದಾರಹೃದಯನುಳ್ಳ ಪ್ರಜಾಹಿತಕರರೂ ಧುರೀಣರಾದ ಪ್ರಭುವು ಅಭಿಮಾನಿಸಿ ಸನ್ಮಾನಿಸುವ ವಿಷಯದಲ್ಲಿ ನಾವೇನೂ ಅಸಮಾಧಾನಪಡುವದಿಲ್ಲವು. ಪರಂತು ಏತದಪೇಕ್ಷೆಯೂ, ಪ್ರಬಲಗಳಾದ ಸಂದರ್ಭಗಳಲ್ಲಿ ಕೂಡ ಇದೇಭಾವವು ಗವರ್ನಮೆಂಟಿನವರಿಗೆ ನಿರೂಢವಾಗಿರಬೇಕೆಂಬದೇ ನಮ್ಮ ಪ್ರಾರ್ಥನೆಯಾಗಿರುತಿದೆ. ಆರೋಗ್ಯದೃಢಾಂಗರಾಗಿದ್ದ ಮೆ॥ ವಾರ್ಡನ್‌ಯವರಿಗೆ ಅನಿರೀಕ್ಷಿತವಾಗಿ ಪ್ರಾಪ್ತವಾದ ಅಕಾಲಮೃತ್ಯುವಿಗಾಗಿ ಅವರ ಇಷ್ಟಮಿತ್ರರಲ್ಲಿ ನಾವೂ ಒಬ್ಬರಾಗಿ ವಿಷಾದಿಸುವೆವು. ಅಪ್ರತೀಕಾರವಾದ ಕಾಲಗತಿಗೆ ಮಾತ್ರ ಎಲ್ಲರೂ ತಾರತಮ್ಯವಿಲ್ಲದೆ ಒಳಗಾಗಬೇಕಾಗಿರುತಿದೆ.

THE MYSORE LAND REVENUE CODE.

ಹಿಂದಿನವಾರದಲ್ಲಿ ನಾವು ತಿಳಿಸಿದ್ದಂತೆ ಗತಶನಿವಾರದ ಮೈಸೂರು ಗೆಜೆಟಿನಲ್ಲಿ ಮೈಸೂರು ಲೇಮಿಯ ಲ್ಯಾಂಡ್ ರೆವಿನ್ಯೂಕೋಡ್ ಇಂಗ್ಲಿಷಿನಲ್ಲಿ ಶಾಯಿಷ ಮಾಡಲ್ಪಟ್ಟಿರುತಿದೆ. ಬಹುಶಃ ಮುಂದಿನ ಅಥವಾ ಆಚೇವಾರದೊಳಗಾಗಿ ಇದರ ಕನ್ನಡ ನಕಲು ಶಾಯಿಷಾಗಬಹುದೆಂದು ತೋರುತಿದೆ. ಈ ಕೋಡ್ ೧೫ ಪ್ರಕರಣಗಳಾಗಿ ವಿಭಾಗಿಸಲ್ಪಟ್ಟ ೨೩೯ ಸೆಕ್ಷನ್‌ಗಳುಳ್ಳದ್ದಾಗಿರುತಿದೆ. ಮೊದಲನೆಯದರಲ್ಲಿ ಅರ್ಥವಿವರಣಪ್ರಕರಣವೂ, ಎರಡನೆಯದರಲ್ಲಿ ರೆವಿನ್ಯೂ ಆಫೀಸರ್‌ಗಳಅಧಿಕಾರಗಳೂ ವಿಶೇಷತಃ ತಿಳಿಸಲ್ಪಟ್ಟಿರುತಿವೆ. ೩ನೆಯಪ್ರಕರಣವು, ಕೆಲವರು ರೆವಿನ್ಯೂ ಆಫೀಸರ್‌ಗಳು ಕೊಡಬೇಕಾದ ಜಾಮೀನ್‌ಗಳನ್ನೂ, ಅವರಿಗೂ ಅವರಿಗೆ ಜಾಮೀನಾಗತಕ್ಕವರಿಗೂ ಉಂಟಾದ ಜವಾಬ್‌ದಾರಿಯ ವಿಷಯವನ್ನೂ ಬೋಧಿಸುತಿವೆ. ೪ನೇದರಲ್ಲಿ ರೆವಿನ್ಯೂ ಆಫೀಸರ್‌ಗಳಿಂದ ಬಿಡಲ್ಪಡತಕ್ಕ ಕೆಲವು ಕಾರ್ಯಗಳೂ ಅವರ ಸಹಾಯತೆಗಾಗಿ ವಿಧಿಸಲ್ಪಡುವ ಪರಿಕ್ಷಗಳು ಸಹ ನಮೂದಾಗಿರುತಿವೆ. ೫ನೇ ಅಧ್ಯಾಯವು ಜಮೀನ್ ಮತ್ತು ಜಮೀನ್‌ಕಂದಾಯವನ್ನು ಕುರಿತದ್ದಾಗಿರುತಿದೆ. ೬ನೇದರಲ್ಲಿ ಸರಭಾರೆ ಮಾಡಲ್ಪಡದ ಜಮೀನಿನಹಿಡುವಳಿಯೂ ಹಿಡುವಳದಾರನ ಹಕ್ಕುದಾರಿಗಳು ಸಹ ವಿವರಿಸಲ್ಪಟ್ಟಿವೆ. ೭ನೇದರಲ್ಲಿ ಹೇಳಲ್ಪಟ್ಟ ಮತ್ತು ಬಿಕ್ಕೀಹಿಡುವಳದಾರರವಿಷಯವಾಗಿಯೂ, ೮ನೇದರಲ್ಲಿ ಸರ್ವೆಸೆಟಲ್‌ಮೆಂಟ್ ಮತ್ತು ಜಮೀನ್‌ವಿಭಾಗ ವಿಷಯವಾಗಿಯೂ, ೯ನೇದರಲ್ಲಿ ಸರಹದ್ದು ನಿರ್ಣಯ, ಬಾಂಡ್ ಹಾಕುವಣ, ಮತ್ತು ಅದು ಕಾಪಾಡುವಣ, ಇವುಗಳ ವಿಷಯವಾಗಿಯೂ, ೧೦ನೇದರಲ್ಲಿ ಗ್ರಾಮ, ಕಸಬ್, ವ ಪಟ್ಟಣಗಳ ಎಲ್ಲೆಗಳೊಳಗಿರುವ ಜಮೀನ್‌ಗಳ ವಿಷಯವಾಗಿಯೂ, ೧೧ನೇದರಲ್ಲಿ ಕಂದಾಯ ವಸೂಲೀ ವಗೈರೆ ವಿಷಯವಾಗಿಯೂ, ೧೨ನೇದರಲ್ಲಿ ರೆವಿನ್ಯೂ ಆಫೀಸರ್‌ಗಳು ನಡೆಸಬೇಕಾದ ಕ್ರಮಗಳಂ ಕುರಿತೂ, ೧೩ನೇದರಲ್ಲಿ ಅಪೀಲ್ ಮತ್ತು ರಿವಿಷನ್ ವಿಷಯವಾಗಿಯೂ, ೧೪ನೇದರಲ್ಲಿ ರೆವಿನ್ಯೂ ಜ್ಯುರಿಸ್ಡಿಕ್ಷನ್ ವಿಚಾರವಂ ಕುರಿತೂ, ಕಡೇ ಪ್ರಕರಣದಲ್ಲಿ ಚಿಲ್ಲರೆ ವಿಷಯವನ್ನು ಕುರಿತೂ, ಬಹಳಮಟ್ಟಿಗೆ ವಿವರಿಸಲ್ಪಟ್ಟಿರುತಿದೆ. ಈ ಕೋಡ್ ಬರುವ ಏಪ್ರಿಲ್ ತಿಂಗಳ ಗುರ್ರೇತಾರೀಖ್ ಮೊದಲು ಜಾರೀಯಲ್ಲಿ ಬರುವದು. ಮುಂದೆ ಸರ್ಕಾರ್ ಕಂದಾಯ ವಸೂಲೀವಿಷಯದಲ್ಲಿ ಗವರ್ನಮೆಂಟಿನವರಿಗೆ ಅನುಕೂಲಗಳಾದ ಮತ್ತು ಸಾಧ್ಯಗಳಾದ ಏರ್ಪಾಡುಗಳಿಗೆಬೇಕಾದಮಾರ್ಗಗಳಿಗೆಲ್ಲ ಪ್ರಸಕ್ತಕೋಡಿನ ಮೂಲಕ ಅವಕಾಶ ಪ್ರಬುಮಾಡಲ್ಪಟ್ಟಿದೆ. ಇದಲ್ಲದೆ ಈ ರೆಗ್ಯುಲೇಷನಿನ ನಿಯಮವನ್ನನುಸರಿಸಿ ಕಂದಾಯ ಕೊಡವವರಿಗೆ ಏಕಸ್ಟವೂ ಹೋಗುವದು ಮಾತ್ರವಲ್ಲದೆ, ಡೆಪ್ಯುಟಿಕಮಿಷನರ ಕೃಪೆಗೆ ಬಾಹ್ಯನಾಗಿದ್ದರೆ ಕಾರಾಗೃಹ ಪ್ರಾಪ್ತಿ ಸಹ ತಪ್ಪದೆ ಪ್ರಾಪ್ತವಾಗುವದರಲ್ಲಿ ಏನೇನೂ ಸಂಶಯವಿಲ್ಲವು. ರೆವಿನ್ಯೂ ಅಧಿಕಾರಿಗಳ ಸ್ವಾತಂತ್ರ್ಯಪ್ರದರ್ಶನಕ್ಕೂ ನಿರ್ಬಂಧಕ್ಕೂ ಬೇಕಾದಷ್ಟು ಅವಕಾಶವು ಈ ಕಾನೂನ್ ಮೂಲಕ ಮುಂದಿನ ಸಾಲ್‌ಮೊದಲು ಉಂಟಾಗುವದೇ ಇದರ ಪ್ರಯೋಜನವಾಗಿರುತಿದೆ.

Occasional Notes.
ನೈಮಿತ್ತಿಕ ವಿಷಯನ್ಯಾಸ.

Abolition of salt duty.—ಹೋಲ್ಕರ್ ಮಹಾರಾಜರವರು ತಮ್ಮ ದೇಶದಲ್ಲಿ ಉಪ್ಪಿನಮೇಲೆ ವಸೂಲ್ಮಾಡುತಲಿದ್ದ ತೆರಿಗೆಯನ್ನು ವಜಾ ಮಾಡಿರುತ್ತಾರೆ.

An appointment to be confirmed.—ಈಗ ಹೈದರಾಬಾದ್ ರೆಸಿಡೆನ್ಸಿ ಕೆಲಸವನ್ನು ಬದಲೀನೋಡುತಲಿರುವ ಮೆ॥ ಎ. ಪಿ. ಹಾವರ್ಡ್‌ಯವರು ಸದರೀ ಕೆಲಸದಲ್ಲಿ ಕಾಯಂಮಾಡಲ್ಪಡುವರೆಂದು ಮದರಾಸ್ ಪತ್ರಿಕೆ ಯೊಂದರ ಮೂಲಕ ತಿಳಿಯಬರುತಿದೆ.

Failure of crops.—ಬಿಹಾರ್‌ಪ್ರಾಂತದಲ್ಲಿ ಕೆಲವುಪ್ರದೇಶಗಳಲ್ಲಿ ಬತ್ತದಫಸಲು ಪೂರಾ ಕೆಟ್ಟುಹೋದದರಿಂದ ಆಸ್ಥಳಗಳಲ್ಲೆಲ್ಲ ರಿಲೀಫ್ ಕಾಮಗಾರಿಗಳಂ ಪ್ರಾರಂಭಿಸಬೇಕಾದ್ದು ಗವರ್ನಮೆಂಟಿನವರಿಗೆ ಅವಶ್ಯ ಕರಣೀಯವಾಗಿ ಏರ್ಪಟ್ಟಿದೆ.

A prediction.—ಇನ್ನು ಸ್ವಲ್ಪಕಾಲದೊಳಗಾಗಿಯೇ ಬೆಳ್ಳಿ ಔನ್ಸ್ ಒಂದಕ್ಕೆ (೨ರೂ ತೂಕ) ಎರಡು ಷಿಲ್ಲಿಂಗ್ ಕ್ರಮಕ್ಕೆ ಇಳಿದುಹೋಗುವದೆಂದು ಒಂದಾನೊಂದು ಪತ್ರಿಕೆ ಹೇಳುತಿದೆ. ಇದಕ್ಕೆ ಕಾರಣವೇನಂದರೆ, ಕೊಲೊರಾಡೊ ಎಂಬ ದೇಶದ ಗನಿಗಳಿಂದ, ಈ ಪ್ರಪಂಚಕ್ಕೆ ಎಷ್ಟು ಬೆಳ್ಳಿ ಬೇಕಾಗುವದೋ ಅಷ್ಟು ಸರಬರಾಯಿ ಮಾಡುವದಕ್ಕೆ ಸಾಕಾದಷ್ಟು ಬೆಳ್ಳಿಸಿಕ್ಕುತಿದೆ. ಇದಕ್ಕಿಂತಲೂ ಅಧಿಕವಾಗಿ ಟ್ರಾನ್ಸ್‌ವಾಲ್ ಪ್ರದೇಶದೊಳು ಸಿಕ್ಕುತಿದೆ.

An appointment sanctioned.—ಮೆ॥ ಎ. ಡಬ್ಲ್ಯು. ಡಾರ್ಕ್‌ಯೆಂಬವರನ್ನು ಮಾಹೇಯಾನಾ ೮೫೦ ರೂಪಾಯಿಗಳ ತಲಬಿನಮೇಲೆ ಮದರಾಸ್ ರೆಯಿಲ್ವೆ ಡೆಪ್ಯುಟಿ ಟ್ರಾಫಿಕ್ ಮ್ಯಾನೇಜರಾಗಿ ಮೊಕರರ್ಮಾಡುವಂತೆ ಇಂಡ್ಯ ಗವರ್ನಮೆಂಟಿನವರು ಮಂಜೂರ್ಮಾಡಿರುತ್ತಾರೆ. ಇವರ

ಪ್ರೋಫೆಸರರಾತಿಯು ಬರುವ ಜನವರಿ ಗುರ್ರೇತಾರೀಖಿನಿಂದ ಜಾರಿಗೆ ಬರುವದಲ್ಲದೆ ಇವರ ತಲಬ ೧,೨೦೦ ರೂಪಾಯಿಗಳಿಗೆ ಬಡ್ತಿಯಾಗುವತನಕ ಯಿರತು ಸಂವತ್ಸರಕ್ಕೊಂದಾವರ್ತಿ ೫೦ ರೂಪಾಯಿಗಳು ಇಜಾಫೆ ಕೊಡಲ್ಪಡುವದು.

A valuable present.—ಮದರಾಸಿನಲ್ಲಿ ಪ್ರಸಿದ್ಧರಾಗಿದ್ದು ಮೃತಪಟ್ಟ ಆನರೆಬಿಲ್ ರಾಮಯ್ಯಂಗಾರ್, ಸಿ. ಎಸ್. ಐ. ಯವರ ಭಾರ್ಯೆಯವರು ತಮ್ಮ ಪತಿಯವರ ಅಪ್ಪಣೆನುಸಾರ, ಅವರ ಪುಸ್ತಕಗಳನ್ನೆಲ್ಲ ಪಚ್ಚೆಯಪ್ಪ ಮೊದಲೀಯಾರ್ರವರ ಪಾಠಶಾಲೆಗೆ ಒಪ್ಪಿಸಿಬಿಟ್ಟರು. ಸದರೀ ಪುಸ್ತಕಗಳು ಕಾಲೇಜ ಲೈಬ್ರರಿ ಕಟ್ಟಡದೊಳಗೆ ಪ್ರತ್ಯೇಕವಾಗಿ ಒಂದು ಸ್ಥಳದಲ್ಲಿಡಲ್ಪಟ್ಟು, ಅವುಗಳಮೇಲೆ ಕೊಟ್ಟವರ ಹೆಸರುಳ್ಳ ಲೇಬಿಲ್‌ಗಳಂ ಅಂಟಿಸಿ ಇಟ್ಟಿರತಕ್ಕದ್ದೆಂಬ ಷರತ್ತಿಗೆ ಒಳಪಟ್ಟು ಕೊಡಲ್ಪಟ್ಟವು. ಈ ಪುಸ್ತಕಗಳ ಕ್ರಯ ಒಂದು ಸಾವಿರರೂಪಾಯಿಗಳಿಗೆ ಅಂದಾಜ್ ಮಾಡಲ್ಪಟ್ಟಿರುತದೆ.

Dhulip Singh's description of the English race.—ದುಲೀಪ ಸಿಂಗರವರು ಇಂಗ್ಲಿಷ್‌ನವರ ಗುಣಾತಿಶಯಗಳನ್ನು ಇದರಡಿಕಂಡಂತೆ ವರ್ಣಿಸುತ್ತಾರೆ ಯೆಂಗ್ಪತೆ:—ಇವರು ಕಳ್ಳರು, ಮೋಸಗಾರರು, ಪ್ರಪಂಚದಲ್ಲಿರತಕ್ಕದ್ದನ್ನೆಲ್ಲ ಅಪಹರಿಸಬೇಕೆಂಬ ಉದ್ದೇಶವುಳ್ಳವರು ಸ್ವಲ್ಪದಿನಗಳು ಕಳೆಯಲಿ, ಮೂರುವರ್ಷಗಳೊಳಗಾಗಿ ಅಥವಾ ಎರಡುವರುಷಗಳೊಳಗಾಗಿ ನನ್ನ ದೇಶೀಯರಾದ ಇಪ್ಪತ್ತೈದುಕೋಟಿ ಜನರುಸೇರಿ ಇವರನ್ನು ಇಂಡ್ಯಾದೇಶದಿಂದ ಓಡಿಸಿಬಿಡುವರು. ಅದಕ್ಕಾಗಿ ನಾನು ಗವ್ವಲವಿಲ್ಲದೆ ಅಂತರಂಗದಲ್ಲಿ ತಕ್ಕ ಪ್ರಯತ್ನಗಳಂ ಮಾಡುತಲಿದ್ದೇನೆ. ಯಾರು ಬಲಿಷ್ಠರಾಗುವರೋ ಕಾಲಕ್ರಮೇಣ ತಿಳಿಯುವದು. ಇಂಗ್ಲಿಷ್‌ನವರಿಗೆ ನಾನು ಸಮಾಧಾನಕ್ಕೆ ಒಳಗಾಗದವೈರಿಯಾಗಿರುತ್ತೇನೆ. ನನ್ನೊಬ್ಬನ ವಿಷಯದಲ್ಲಿ ನಾನು ಅವರಿಗೆ ವಿರೋಧಿಯಾದವನಲ್ಲವು. ಅವರದೇಶದಲ್ಲಿ ನಾನು ವಾಸವಾಗಿದ್ದ ಮೂವತ್ತುವರ್ಷಗಳಕಾಲ ನನ್ನನ್ನು ಅವರು ಬಹಳ ಆದರಿಸಿದರು. ಪರಂತು ಆ ಜಾತಿಯವರನ್ನು ನಾನು ದ್ವೇಷಿಸುತ್ತೇನೆ. ನಾನು ಒಂದು ದೊಡ್ಡ ಕಲಹಕ್ಕೆ ಪ್ರಯತ್ನಿಸುತಲಿದ್ದೇನೆ, ಎಂಬದು.

LOCAL AND PROVINCIAL NEWS.

ಒಳದೇಶಮತ್ತುತಾಲ್ಲೂಕಿಜಾತಿವೃತ್ತಾಂತಗಳು.

University Examinations:—ಬರುವ ಶನಿವಾರದ ಮೊದಲು ಈ ಸಲದ ಮೆಟ್ರಿಕ್ಯುಲೇಷನ್ ಎಫ್. ಎ. ಪರೀಕ್ಷೆಗಳು ಪ್ರಾರಂಭವಾಗಿ ಮೊದಲನೆಯದು ಸೆಂಟ್ರಲ್ ಕಾಲೇಜಿನಲ್ಲಿಯೂ, ಯೆರಡನೆಯದು ಲಂಡನ್ ಮಿಷನ್ ಸ್ಕೂಲಿನಲ್ಲಿಯೂ ನಡೆಯುವವು.

The Resident elect of Mysore.—ಈ ಸಂಸ್ಥಾನದ ಕಾಯಂ ರೆಸಿಡೆಂಟಾಗಿ ಮೊಕರರ್ ಮಾಡಲ್ಪಟ್ಟಿರುವ ಸರ್ ಓಲಿವರ್ ಸೇಂಟ್‌ಜಾನ್‌ರವರು ಈಗ ವಿಲಾಯತಿಯಲ್ಲಿರುತಲಿದ್ದಾರೆಯಷ್ಟೆ. ಸದರೀಯವರು ಈ ತಿಂಗಳ ೨೧ನೇ ತಾರೀಖಿನಲ್ಲಿ ತಮ್ಮ ಭಾರ್ಯೆಯ ಸಹೋದರಿ ನೇಪಲ್ಸ್ ಎಂಬ ಪ್ರದೇಶದೊಳು ಇಂಡ್ಯಾ ದೇಶಕ್ಕಾಗಿ ಹಡಗು ಹತ್ತುವರು.

Dhatri Havana.—ನಿನ್ನೆಯ ದಿನ ಈ ಪ್ರಾಂತಕ್ಕೆ ಸಮೀಪದಲ್ಲಿರುವ ಗವೀಪುರದಲ್ಲಿ ಇಲ್ಲಿನ ಸ್ಮಾರ್ತ ಬ್ರಾಹ್ಮಣರನೇಕರು ಸೇರಿ ಧಾತ್ರೀಹವನ, ಅಂದರೆ ಪ್ರತಿಯೊಂದು ಸಂವತ್ಸರದ ಈ ತಿಂಗಳಲ್ಲಿ ಮಾಡಿಸುವ ವನ ಭೋಜನೋತ್ಸವವನು ನಡೆಸಿದರು. ಇದಕ್ಕೆ ಸುಮಾರು ೨೦೦೦ ಮಂದಿ ಬ್ರಾಹ್ಮಣರು ಭೋಜನಕ್ಕೆ ಬಂದಿದ್ದರು. ಯಾವ ಭಾಗದಲ್ಲೂ ಕೊರತೆಯಿಲ್ಲದೆ ಎಲ್ಲವೂ ಸಾಭ್ರಮದೊಡನೆ ನೆರವೇರಿತು.

The weather.—ಈಚೆಗೆ ಬಿಸಿಲಿನ ಚಳಿ ಹೆಚ್ಚುತಲಿದೆ. ಮಳೆ ಯಿಲ್ಲದೆಹೋದಾಗ್ಯೂ ಸದ್ಯಃ ಜಲ ದೌರ್ಲಭ್ಯ ಭಯವಿಲ್ಲವು. ಪದಾರ್ಥಗಳಧಾರಣೆಗಳು ಏಕರೂಪವಾಗಿರುತಿವೆ.ರೋಗಾದ್ಯುಪದ್ರಗಳು ಅಲ್ಪಸ್ವಲ್ಪ ಯಲ್ಲಿಯಲ್ಲಿ ಇಲ್ಲದೆ ಹೋಗಲಿಲ್ಲವು ಹಿಮಬಿಲದಿಂದ ಎಲ್ಲಿನೋಡಿದಾಗ್ಯೂ ಮಕ್ಕಳಿಗೆ ಶೀತೋಪದ್ರವ ಪ್ರಬಲವಾಗಿದೆ.

The Assistant Resident.—ಈ ಸಂಸ್ಥಾನಕ್ಕೆ ಕಾಯಂ ರೆಸಿಡೆಂಟರಾಗಿ ಮೊಕರರ್ರು ಮಾಡಲ್ಪಟ್ಟಿರುವ ಸರ್ ಓಲಿವರ್ ಸೇಂಟ್ ಜಾನ್‌ಯವರಿಗೆ ಅಸಿಸ್ಟೆಂಟರಾಗಿ, ವಾಯುವ್ಯದೇಶದ ಲೆಪ್ಟಿನೆಂಟ್ ಗವರ್ನರರವರ ಪ್ರೈವೇಟ್ ಸೆಕ್ರೆಟರಿಯಾದ ಮೆ॥ ಇ. ಸಿ ಕಾಲ್‌ವಿನ್ ಯೆಂಬವರು ಮೊಕರರಾಗಿರುವಂತೆಯೂ, ಅವರು ಶೀಘ್ರದಲ್ಲಿ ಇಲ್ಲಿಗೆ ಬಂದು ತಮ್ಮಕೆಲಸವು ವಹಿಸುವರೆಂತಲೂ ಬಂಗಾಳೀದೇಶದ ಪತ್ರಿಕೆಯೊಂದರಮೂಲಕ ತಿಳಿಯಬರುತಿದೆ.

A conversion—ಒಳದೇಶದ ಈವನಿಂಗ್ ಮೆಯಿಲ್ ಪತ್ರಿಕೆಯು ಒಬ್ಬ ಬಾತಮಿದಾರರು ಬರೆಯುತ್ತಾನೇನೆಂದರೆ—ಶಾಬಿ ವಾಸುದೇವರಾವ್ ನಾಯುಡು ಯೆಂಬ ಬಾಲಕನು ಆದ ಆದಿತ್ಯವಾರದ ದಿನ ಬೆಳಿಗ್ಗೆ ಸೇಂಟ್ ಜಾರ್ಜ್ ಹಿಲ್ ಯೆಂಬ ಪ್ರದೇಶದಲ್ಲಿ ರೆವರೆಂಡ್ ಎ. ಎಫ್. ಬೇಕರ್ ಯವರಿಂದ ಕ್ರಿಸ್ತು ಮತಕ್ಕೆ ಸೇರಿಸಿಕೊಳ್ಳಲ್ಪಟ್ಟನು. ಬಾಲಕನಾದ ಸದರೀ ಹುಡುಗನು ಹಿಂದೂ ಗುರುವಾದವನೊಬ್ಬನಿಗೆ ಸಹಾಯಕನಾಗಿರುತಲಿದ್ದನು. ಕ್ರಿಶ್ಚಿಯನ್ ಮತದಲ್ಲಿ ಅವನಿಗೆ ಸಂಪೂರ್ಣ ನಂಬಿಕೆ ಯುಂಟಾಗಿ ಆತನು ರೆವರೆಂಡ್ ಬೇಕರವರ ಬಳಿ ಹೋಗಿ ತನ್ನನ್ನು ಕ್ರಿಸ್ತುಮತಕ್ಕೆ ಸೇರಿಸಿಕೊಳ್ಳಬೇಕೆಂದು ಮನಃಪೂರ್ವಕವಾಗಿ ಕೇಳಿಕೊಂಡನು. ಅದರಮೇಲೆ ರೆವರೆಂಡ್ ಬೇಕರ್‌ಯವರು ಆತನಿಗೆ ತಿಳಿಸಬೇಕಾದ ಅಂಶವನ್ನೆಲ್ಲ ತಿಳಿಸಿ, ಆತನ ವಿಷಯದಲ್ಲಿ ತಾವೂ ತೃಪ್ತರಾಗಿ ತಮ್ಮ ಮತಕ್ಕೆ ಸೇರಿಸಿಕೊಂಡರು. ಕೂಡಲೇ ಸದರೀ ಬಾಲಕನು ಮನೆಗೆ ಹೋಗಿ ತನ್ನ ಬಟ್ಟೆಗಳನ್ನೆಲ್ಲ ತೆಗೆದುಕೊಂಡು ಕೂಡಲೇ ಬರುತ್ತೇನೆಂದು ಹೇಳಿ ಹೊರಟು ಹೋದವನು ಮರಳಿ ಬರಲೇ ಇಲ್ಲವು. ಆತನು ಯೆಲ್ಲಿಗೆ ಹೋದನೋ ಯೇನಾದನೋ ಗೊತ್ತೇ ಇಲ್ಲವು. ಸದರೀ ಹುಡುಗನ ಸ್ನೇಹಿತರು ಸೇರಿ ಆತನನ್ನು ಮರಳಿ ಮಿಷನರಿ ಮನೆಗೆ ಹೋಗದಂತೆ ನಿರ್ಬಂಧ ಮಾಡಿಬಿಟ್ಟಂತೆ ಸ್ಪಷ್ಟವಾಗಿ ಕಾಣುತಿದೆ. ಸದರೀ ಬಾಲಕನಿಗೆ ವಯಸ್ಸು ೧೮ ಸಂವತ್ಸರಗಳು ಸದರೀ ಬಾಲಕನಿಗೆ ಕ್ರಿಸ್ತುಮತಕ್ಕೆ ಸೇರುವದಕ್ಕೆ ಪೂರ್ವದಲ್ಲಿ ಇದ್ದಂತಹ ನಂಬಿಕೆಯು ಸೇರಿದ ಉತ್ತರಕ್ಷಣದಲ್ಲೇ ನಿವೃತ್ತಿಯಾದಂತೆ ತೋರುತಿದೆ.

The trial of the Jier of the Ahobilum Mutt.—ತಿರುವಳ್ಳೂರಲ್ಲಿರುವ ಅಹೋಬಿಲ ಮಠದ ಶ್ರೀ ಸ್ವಾಮಿಗಳ ಮೇಲೆ ತರಲ್ಪಟ್ಟಿರುವ ಬನಾವಣೆ ಮೊಕದ್ದಮೆಯು ಈಗ ಚೆಂಗಲ್‌ಪಟ್ಟ ಡಿಸ್ಟ್ರಿಕ್ಟ್ ಸೆಷನ್ ಕೋರ್ಟಿನಲ್ಲಿ ದರ್ಯಾಪ್ತಾಗುತಲಿದೆ. ಸ್ವಾಮಿಗಳ ತರಫಿನಲ್ಲಿ ಬ್ಯಾರಿಸ್ಟರ್ ಮೆ॥ ನಾರ್ಟನ್ ಸಾಹೇಬರವರೂ, ರಾಜಾ ಟಿ. ರಾಮರಾಯರು ಮೊದಲಾದ ನಾಲ್ಕೈದು ಮಂದಿ ಪ್ರಸಿದ್ಧ ವಕೀಲರೂ ಮೊಕದ್ದಮೆಯನ್ನು ನಡೆಸುತಲಿದ್ದಾರೆ ಬರ್‍ಯಾದಿ ತರಫ್ ವಿಚಾರಣೆ ಪೂರ್ತಿಯಾಯಿತು. ಶ್ರೀಸ್ವಾಮಿಗಳವರ ತರಫ ವಿಚಾರಣೆ ನಡೆಯಬೇಕಾಗಿರುತಿದೆ. ತಿರುವಳ್ಳೂರು, ಮದರಾಸ್, ಮತ್ತು ಚೆಂಗಲ್ಪಟ್ಟು, ಕಾಂಚೀಪುರ, ಮಧುರಾಂತಕ ಮೊದಲಾದ ಪ್ರದೇಶಗಳಲ್ಲಿ ಶ್ರೀಮಠದ ಶಿಷ್ಯರಾದವರು ಬಹುಮಂದಿ ಇರುತ್ತಾರಾಗಿ ಅವರೆಲ್ಲರಿಗೂ ಈ ಮೊಕದ್ದಮೆಯ ಮೂಲಕ ಬಹಳ ಚಿಂತೆಗೆ ಅವಕಾಶ ವುಂಟಾಯಿತು. ಈಚೆಗೆ ಯೇಳೆಂಟು ವರ್ಷಗಳ ಲಾಗಾಯತು ಶ್ರೀಮಠದ ಸ್ವತ್ತುಗಳೆಲ್ಲ ನಾನಾವಿಧದಿಂ ನಾಶ ಹೊಂದಿದ್ದಲ್ಲದೆ ಈಗ ಶ್ರೀ ಸ್ವಾಮಿಗಳವರುಸಹ ಕ್ರಿಮಿನಲ್ ಕೋರ್ಟಿಗೆ ಹೋಗಿ ಸಾಮಾನ್ಯ ಜನಗಳಂತೆ ಅಪರಾಧಿ ಸ್ಥಾನದಲ್ಲಿ ನಿಂತುಕೊಳ್ಳತಕ್ಕ ಕಾಲ ಪ್ರಾಪ್ತವಾದಬಗ್ಗೆ ಯೆಷ್ಟು ಯೋಚಿಸಿದಾಗ್ಯೂ ಶೋಚನೀಯವಾಗಿರುತಿದೆ. ಪೂರ್ವಕಾಲದಲ್ಲಿ ಸಂಸ್ಥಾನಾಧಿಪತಿಗಳೂ ಪ್ರಮುಖರೂ ಈ ಮಠಗಳಿಗೆ ಯಾವ ಕಾರ್ಯಕ್ಕಾಗಿ ಪ್ರಬಲ ಆಯತಿಯಂ ಕಲ್ಪಿಸಿಕೊಟ್ಟರೊ ಅಂತಾ ಕಾರ್ಯಗಳಿಗೆ ಸ್ವಲ್ಪವಾದರೂ ಉಪಯೋಗವಿಲ್ಲದೆ ಈ ರೀತಿ ದುರ್ವ್ಯಯವಾಗುತಲಿದೆ.

THE MYSORE GAZETTE

ಮೈಸೂರು ಗೆಜೆಟ್.

—:o:—

ಶ್ರೀಮನ್ಮಹಾರಾಜ ರಾಜಾಸಾಹೇಬ್ ಬಹದೂರವರ ದಿವಾನರವರಿಂದ ಹೊರೋಣಾದ ಇಸ್ತಿಹಾರ್‌ನಾಮೆಗಳು.

ಮೊಕಾಂ ನಂ॥ ೧೮೩೫, ೨೬ನೇ ನವಂಬರ್.—ಸನ್ ೧೮೮೮ನೇ ಇಸವಿ ಸೆಪ್ಟಂಬರ್ ೨೮ನೇ ಮಕ್ಕಾಂ ೧೩೩ನೇ ನಂಬರುಳ್ಳ ಈ ಆಫೀಸ್ ಇಸ್ತಿಹಾರ್‌ನಾಮೆಯ ಮೂಲಕ ಗುಬ್ಬಿ ತಾಲ್ಲೂಕು ಅಮಲ್‌ದಾರರು ವೆಂಕಟಾಚಾರ್ಯರಿಗೆ ಬಗರ್ ತಲಬ ಕೊಡಲ್ಪಟ್ಟ ೧೫ ದಿನಗಳ ರಜಾ ಆರು ತಿಂಗಳಿಗೆ ಜಾಸ್ತೀ ಮಾಡಲ್ಪಟ್ಟದೆ.

ತುಮಕೂರು ಡೆಪ್ಯುಟಿ ಕಮ್ಮಿಷನರ್ ಆಫೀಸ್ ಜುಡಿಷಲ್ ಹೆಡ್‌ಮುನ್ಷಿ ಕೃಷ್ಣರಾಯರು, ವೆಂಕಟಾಚಾರ್ಯರ ಗೈರುಹಾಜರಿಕಾಲದಲ್ಲಿ ಅಥವಾ ಮತ್ತೊಂದು ಹುಕುಂ ಕೊಡಲ್ಪಡುವ ತನಕ ಗುಬ್ಬಿ ತಾಲ್ಲೂಕು ಅಮಲ್‌ದಾರ್ ವ ೩ನೇ ಕ್ಲಾಸ್ ಮ್ಯಾಜಿಸ್ಟ್ರೇಟ್ ಕೆಲಸವನ್ನು ಬದಲೀ ನೋಡುತಲಿರತಕ್ಕದ್ದು.

ಮೊಕಾಂ ನಂ॥ ೧೮೩೮.—ಕ್ರಿಸ್ಮಸ್ ಗಜಾಬ ಸ್ಯೆ ಸನ್ ೧೮೮೮ನೇ ಇಸವಿ ಡಿಸಂಬರ್ ೨೪ನೇ ತಾರೀಖ್ ಸೋಮವಾರದ ಮೊದಲು ೮೯ನೇ ಇಸವಿ ಜನವರಿ ೫ನೇ ತಾರೀಖ್ ಶನಿವಾರದ ವರಿವಿಗೆ ಉಭಯಂದಿನಗಳೂ ಸೇರಿ, ಈ ಸಂಸ್ಥಾನದ ತಮಾಂ ಇಲಾಖೆಗಳೂ ಮುಚ್ಚಲ್ಪಡುವವು. ಈ ರಜಾ ಕಾಲದಲ್ಲಿ ಜರೂರಿಯಾತ್ ಕೆಲಸಗಳ ನಿರ್ವಹಣೆಯಬಗ್ಗೆ ಇಲಾಖಾ ಮೊಖ್ತೇಸರರಿಂದ ಯೇರ್ಪಾಡುಗಳು ಮಾಡಲ್ಪಡುವವು. ತಾಲ್ಲೂಕು ಸಿಬ್ಬಂದಿಗಳಿಗೂ ಜಮಾಬಂದಿ ಕೆಲಸದಲ್ಲಿರತಕ್ಕವರಿಗೂ ಈ ಇಸ್ತಿಹಾರ್‌ನಾಮೆಯು ಅನ್ವಯಿಸುವದಿಲ್ಲವು.

ಮೊಕಾಂ ನಂ॥೧೮೪೩—ಮೆ॥ ಜಿ. ದೇಶರಾಜೆ ಅರಸಿನವರು, (ಮದರಾಸ್ ೩ನೇ ಲೈಟ್‌ಕ್ಯಾವಲ್ರಿ ಸುಬೇದಾರ್) ಶ್ರೀಮನ್ಮಹಾರಾಜರವರ ಮಿಲಿಟರಿ ಸೆಕ್ರೆಟರಿಗೆ ಅಸಿಸ್ಟೆಂಟರಾಗಿ ಮೊಕರರ್ರು ಮಾಡಲ್ಪಟ್ಟಿರುತ್ತಾರೆ.

ಮೊಕಾಂ ನಂ ೧೮೪೬—ಮಿಲಿಟರಿ ಸೆಕ್ರೆಟರಿಯವರ ಅಸಿಸ್ಟೆಂಟರಾದ ಮೆ॥ ಜಿ. ದೇಶರಾಜೆ ಅರಸಿನವರು, ಅವರ ಇತರ ಕೆಲಸಗಳೊಡನೆ, ಶ್ರೀಮನ್ಮಹಾರಾಜರವರ ಯೇಡಿಕಾಂಗರವರಾಗಿ ಮೊಕರರ್ರು ಮಾಡಲ್ಪಟ್ಟಿರುತ್ತಾರೆ.

ಮೊಕ್ಕಾಂ ನಂ. ೧೮೯೩.—ಮದ್ದಿಗಿರಿ ತಾಲ್ಲೂಕು ಅಮಲ್‌ದಾರರು ವೇಲಾಯುಧಪಿಳ್ಳೆಯವರಿಗೆ ಸನ್ ೧೮೮೮ನೇ ಇಸವಿ ಜುಲೈ ೩ನೇ ಮಕ್ಕಾಂ ೫೯ನೇ ನಂಬರ್ ನೋಟಿಫಿಕೇಷನ್‌ಮೂಲಕ ಕೊಡಲ್ಪಟ್ಟು, ೮೮ನೇ ಇಸವಿ ಅಕ್ಟೋಬರ್ ೨೫ನೇ ಮಕ್ಕಾಂ ೧೭೮೭ನೇ ನಂಬರ್ ಇಸ್ತಿಹಾರ್‌ನಾಮೆಯಮೂಲಕ ಜಾಸ್ತೀ ಮಾಡಲ್ಪಟ್ಟ ಮೂರುತಿಂಗಳ ಕಾಹಿಲೇರಜಾ ಮರಳಿ ಯೆರಡುತಿಂಗಳಿಗೆ ಜಾಸ್ತೀ ಮಾಡಲ್ಪಟ್ಟದೆ.

ವೇಲಾಯುಧಪಿಳ್ಳೆಯವರ ಗೈರುಹಾಜರೀಕಾಲದಲ್ಲಿ ಅಥವಾ ಮತ್ತೊಂದುಹುಕುಂ ಕೊಡಲ್ಪಡುವತನಕ ಕುಮಾರಸಾಮಿನಾಯುಡ್, ಬಿ.ಎ ಯವರು ಮದ್ದಿಗಿರಿತಾಲ್ಲೂಕು ಅಮಲ್‌ದಾರ್ ವ ೩ನೇ ಕ್ಲಾಸ್ ಮ್ಯಾಜಿಸ್ಟ್ರೇಟರಾಗಿ ಕೆಲಸನೋಡುತಲಿರತಕ್ಕದ್ದು.

ಮೊಕ್ಕಾಂ ನಂ ೧೯೧೧.—ಪಾವುಗಡತಾಲ್ಲೂಕು ಅಮಲ್‌ದಾರ್ ರಾಮಯ್ಯಂಗಾರ್‍ಯರಿಗೆ ೮೮ನೇ ಇಸವಿ ಅಕ್ಟೋಬರ್ ೨೩ನೇ ಮಕ್ಕಾಂ ೧೭೮೭ ನಂಬರ್ ಈ ಆಫೀಸ್ ಇಸ್ತಿಹಾರ್‌ನಾಮೆಯಮೂಲಕ ಕೊಡಲ್ಪಟ್ಟ ಒಂದುತಿಂಗಳು ಎರಡುದಿನಗಳ ಪ್ರಿವಿಲೇಜ್‌ರಜಾ ಸ್ವಂತಕೆಲಸದ ಮೇಲಿನರಜಾಕ್ಕೆ ಬದಲಾಯಿಸಲ್ಪಟ್ಟು ಅದು ಎರಡುತಿಂಗಳಿಗೆ ಜಾಸ್ತೀಮಾಡಲ್ಪಟ್ಟದೆ. ತಾಲ್ಲೂಕು ಶಿರಸ್ತೇದಾರ್ ಚಿನ್ನಪ್ಪಾಪುಪಿಳ್ಳೆಯವರು, ರಾಮಯ್ಯಂಗಾರ್‍ರು ರಜಾಮೇಲೆ ಗೈರುಹಾಜರಿರುವಕಾಲದಲ್ಲಿ ಅಥವಾ ಮತ್ತೊಂದುಹುಕುಂ ಕೊಡಲ್ಪಡುವತನಕ ಪಾವುಗಡತಾಲ್ಲೂಕು ಇನ್‌ಚಾರ್ಜ್‌ನಲ್ಲಿರುತ ೩ನೇಕ್ಲಾಸ್ ಮ್ಯಾಜಿಸ್ಟ್ರೇಟರ ಅಧಿಕಾರವನ್ನು ಚಲಾಯಿಸುತಲಿರತಕ್ಕದ್ದು.

EXTRACTS.

ADVICE TO CONGRESS DELEGATES.

ಈ ತಿಂಗಳ ಅಂತ್ಯಭಾಗದಲ್ಲಿ ಅಲಹಾಬಾದ್‌ನೊಳು ನಡೆಯುವ ನ್ಯಾಷನಲ್ ಇಂಡಿಯನ್ ಕಾಂಗ್ರೆಸ್ ಸಭೆಗೆ ಪ್ರತಿನಿಧಿಗಳಾಗಿಯೂ ದರ್ಶನಾರ್ಥವಾಗಿಯೂ ಹೋಗತಕ್ಕವರು ಹಾಗೆಯೇ ಕಾಶಿ ಮುಂತಾದ ಉತ್ತರದೇಶ ಸಂಚಾರಾರ್ಥ ಹೋಗಬಹುದಾದದರಿಂದ ಅಂತವರ ಶರೀರ ರಕ್ಷಣಾರ್ಥ ರಾಜಾ ಸರ್ ಟಿ. ಮಾಧವರಾಯರವರು ಇದರಡಿ ಕಂಡ ೧೪ ವಿಷಯಗಳನ್ನು ತಿಳಿಸುತ್ತಾರಾಗಿ ಅವುಗಳಿಗೆ ಅಂತವರೆಲ್ಲರೂ ಅವಧಾನ ಕೊಡಬೇಕೆಂದು ಕೋರುವೆವು. ಅವುಗಳ್ಯಾವವೆಂದರೆ,—೧. ನಿಮಗೆ ತಗಲಬಹುದಾದ ಖರ್ಚುಗಳನ್ನು ಮೊದಲೇ ನಿಷ್ಕರ್ಷಿಸಿಕೊಂಡು ಬೇಕಾದ ಮೊಬಲಗನ್ನು ಕಡಮೆಯಿಲ್ಲದೆ ಸಂಗಡ ತೆಗೆದುಕೊಂಡು ಹೋಗಬೇಕು. ನೀವು ಹೋದ ಸ್ಥಳಗಳಲ್ಲಿ ಮುಂಬಾದರೆಯು ಸುಲಭವಾಗಿ ನಿಮಗೆ ದೊರೆಯಲಾರದು. ೨. ಮದರಾಸ್ ನೋಟುಗಳಿಗೆ ಅಲ್ಲಿ ಸುಲಭವಾಗಿ ಹಣ ಸಿಕ್ಕಲಾರವು. ೩. ಹೋದ ಪ್ರದೇಶಗಳಲ್ಲಿ ಚೋರಿ ಛಪ್ಪಿಗಳು ಹೇರಳವಾಗಿರುವವು. ೪. ಮದರಾಸಿನಲ್ಲಿ ನೀವು ಅನುಭವಿಸಿದ ಚಳಿಗಿಂತ ಅಲ್ಲಿ ವಿಶೇಷವಾಗಿರುವದಾದದರಿಂದ ಶರೀರಾಭ್ಯಂತರಕ್ಕೂ ಹೊದ್ದುಕೊಳ್ಳಲಿಕ್ಕೆ ತಕ್ಕ ಕಂಬಳಿ ಮುಂತಾದ ವಸ್ತ್ರಗಳನ್ನು ಸಂಗಡ ತಪ್ಪದೆ ತೆಗದುಕೊಂಡು ಹೋಗಬೇಕು ೫. ಹೆಂಗಸರು, ಮಕ್ಕಳು, ವೃದ್ಧರು, ರೋಗಿಷ್ಠರು, ಅಶಕ್ತರು ಮುಂತಾದವರನ್ನು ಸಂಗಡ ಕರೆದುಕೊಂಡು ಹೋಗಿ ನೀವು ಸಂಕಟಪಡಬೇಡಿರಿ ೬. ನಿಮಗೆ ಬೇಕಾದ ಸ್ಥಳವಸತಿಯಂ ಮುಂಚಿತವಾಗಿ ಸಿದ್ಧಪಡಿಸಿಕೊಳ್ಳಬೇಕು. ಡೇರಾ ಚಪ್ಪರ ಮುಂತಾದವುಗಳಾಗಲಿ ಅಲ್ಲಿ ಕಾರ್ಯಕಾರಿಗಳಾಗಲಾರವು. ೭. ಅಗಿಂಡಾಗ್ಯೆ ಅಗ್ಗಿಷ್ಟಿಗೆಗಳನ್ನು ಇಟ್ಟುಕೊಂಡು ಬೆಂಕಿಕಾಯಿಸಿಕೊಳ್ಳುತಲಿರಬೇಕು. ೮. ಗಂಗೆಯಲ್ಲಾಗಲಿ ಯಮುನೆಯಲ್ಲಾಗಲಿ ಪದೆಪದೆ ಮುಳಗಬೇಡಿರಿ, ಬಿಸಿಲು ಚನ್ನಾಗಿ ಬಂದು ಸೆಕೆಯುಂಟಾದಬಳಿಕಲೇ ಸ್ನಾನ ಮಾಡಬೇಕು. ೯. ಸ್ವಭಾವತಃ ಜಲಗೆಗಿಳಗಿಂತ ಅಧಿಕವಾದ ಆಕರ್ಷಕ ಶಕ್ತಿಯುಳ್ಳವರಾದ ಗಂಗಾಪುತ್ರರು, ಪಂಡಾಜನರು, ಗಯಾವಾಳಗಳು ಬೃಂದಾವನವಾಸಿಗಳು ಮೊದಲಾದ ಯಾಚಕ ಬ್ರಾಹ್ಮಣರಿಗೆ ನಿಮ್ಮಲ್ಲಿ ಅವಕಾಶಕೊಡಬೇಡಿರಿ. ೧೦. ಸೌಖ್ಯವಾಗಿಯೂ ಅನುಕೂಲವಾಗಿಯೂ ಇರುತದ್ದಪ್ರದೇಶಗಳಲ್ಲಿ ವಾಸಮಾಡಿರಿ. ೧೧ ಶರೀರದಾರ್ಢ್ಯಕ್ಕೆ ಬೇಕಾದಷ್ಟು ಕಸರತ್ತನ್ನು ಅಲ್ಲಿ ಪ್ರತಿನಿತ್ಯವೂ ಮಾಡುತಲಿರಬೇಕು. ೧೨. ಮಂಚಗಳಮೇಲೆ ಶಾಕವಾದ ಕಂಬಳಿಗಳನ್ನು ಹಾಸಿಕೊಂಡು ಮಲಗಬೇಕೇಹೊರ್ತು ನೆಲದಮೇಲೆ ಚಾಪೆ ಬಟ್ಟೆಮೊದಲಾದವುಗಳನ್ನು ಹಾಕಿಕೊಂಡು ಮಲಗಕೂಡದು. ೧೩. ಮುಖ್ಯವಾಗಿಶರೀರ ರಕ್ಷಣೆಯಂ ಮಾಡಿಕೊಂಡು ಬರಬೇಕೆಂದು ಕೋರುತ್ತೇನೆ, ಎಂಬದು.

THE INDIAN CENSUS STATISTICS.

ಸನ್ ೧೮೮೧ನೇ ಇಸವಿಯಲ್ಲಿ ತೆಗೆಯಲ್ಪಟ್ಟ ಖಾನೇಷುಮಾರಿ ರಿಪೋರ್ಟಿನ ಮೂಲಕ ಬ್ರಿಟಿಷ್ ಇಂಡ್ಯಾದೇಶದಲ್ಲಿ, ಅಂದರೆ ಬ್ರಿಟಿಷಿನವರ ಸಾಕ್ಷಾತ್ಪಾಲನೆಯಲ್ಲಿರತಕ್ಕ ಪ್ರದೇಶಗಳೊಳು ೧೯,೮೨,೯೦,೮೫೩ ಮಂದಿ, ನೇಟಿವ್‌ಸಂಸ್ಥಾನಗಳಲ್ಲಿ ೫,೫೧,೯೧,೭೪೦ ಮಂದಿ, ಒಟ್ಟು ೨೫,೩೪,೮೨,೫೯೩ ಜನ ವಾಸವಾಗಿದ್ದಾರೆಂದು ತಿಳಿಯಬರುತಿದೆ. ಕಾಶ್ಮೀರದೇಶದಲ್ಲಿ ೧೮೭೩ನೇ ಸಂವತ್ಸರದಲ್ಲಿದ್ದ ೧೫,೦೦,೦೦೦ ಪ್ರಜಾಸಂಖ್ಯೆಯು ಮೇಲೆಕಂಡ ಒಟ್ಟು ಸಂಖ್ಯೆಯಲ್ಲಿ ಸೇರಲಿಲ್ಲವು. ೧೮೮೬ನೇ ಇಸವಿಯಲ್ಲಿ ಅಂದರೆ ಬರ್ಮಾರಾಜ್ಯದ ಮೇಲ್ಭಾಗವು ಬ್ರಿಟಿಷಿನವರ ಸುಪರ್ದಾಗದ

ಪಣಿ ತೆಗೆಯಲ್ಪಟ್ಟ ಖಾನೇಷುಮಾರಿ ಪ್ರಕಾರ ಅವರಲ್ಲಿ ೩೦,೦೦,೦೦೦ ಜನಗಳಿರುವಂತೆ ಲೆಕ್ಕವಾಗಿರುತಿದೆ. ಇವಲ್ಲದೆ ಅದಕ್ಕೆ ಸೇರಿದ ಷಾರ್ಗನ್ಸ್ಟೇಟ್ಸ್‌ಗಳಲ್ಲಿ ೭೦,೦೦,೦೦೦ ಜನಗಳಿರುತ್ತಾರೆ. ಪ್ರಜಾಸಂಖ್ಯೆಯು ಸಾಲೀಯಾನಾ ನೂರರಂತೆ ವೃದ್ಧಿಯಾಗುವಂತೆ ವ್ಯಕ್ತವಾಗುತಿದೆ. ಹೀಗೆ ವೃದ್ಧ್ಯಂಶವು ಸೇರಿಸಿಕೊಂಡಲ್ಲಿ ೧೮೮೧ನೇ ಇಸವಿ ಫೆಬ್ರವರಿತಿಂಗಳವೊದಲು ೧೮೮೩ನೇಇಸವಿ ಮಾರ್ಚ್ ಆಖೈರವರಿವಿಗೆ ಬ್ರಿಟಿಷ್ ಇಂಡ್ಯದೇಶದಲ್ಲಿ ೨೦,೩೩,೫೯,೫೨೮ ಜನ, ನೇಟಿವ್‌ಸಂಸ್ಥಾನಗಳಲ್ಲಿ ೬,೦೩,೮೭,೯೬೬ ಜನ, ಒಟ್ಟು ಇಂಡ್ಯದೇಶದ ಈಗಿನ ಪ್ರಜಾಸಂಖ್ಯೆಯು ೨೬,೮೧,೩೨,೦೯೪ ಎಂಬದಾಗಿ ಲೆಕ್ಕವಾಗಿರುತಿದೆ. ಬ್ರಿಟಿಷ್ ಇಂಡ್ಯದೇಶದಲ್ಲಿಯೂ ನೇಟಿವ್ ಸಂಸ್ಥಾನಗಳಲ್ಲಿಯೂ, ಸ್ತ್ರೀಯರಿಗಿಂತ ಪುರುಷರೇ ಅಧಿಕವಾಗಿದಾರೆ. ಸನ್ ೧೮೮೧ನೇ ಇಸವಿಯಲ್ಲಿ ಬ್ರಿಟಿಷ್ ಇಂಡ್ಯದೇಶದೊಳು ೧೦೧ ಮಂದಿ ಗಂಡುಸರಿಗೆ ೯೭ ರವ್ರಕಾರ ಸ್ತ್ರೀಯರಿದ್ದರು. ನೇಟಿವ್ ಸಂಸ್ಥಾನಗಳಲ್ಲಿ ೭೮ ಜನ ಗಂಡುಸರಿಗೆ ೭೬ಮಂದಿಹೆಂಗಸರಿರುತಿದ್ದರು. ಸದರಿ ಸಾಲಿನಲ್ಲಿ ಒಟ್ಟು ೬೨,೧೩,೯೧೯ ಗಂಡುಸರು ಹೆಂಗಸರಿಗಿಂತ ಜಾಸ್ತೀ ಯಾಗಿದ್ದರೆಂದು ತಿಳಿಯಬರುತಿದೆ. ಸನ್೮೧ನೇ ಇಸವಿಯು ಖಾನೇಷುಮಾರಿಯು ಪ್ರಕಾರಮದರಾಸ್ ಪ್ರೆಸಿಡೆನ್ಸಿಯ (ಪುದುಕೋಟೆ ಸಂಸ್ಥಾನಸೇರಿ) ಒಟ್ಟು ಪ್ರಜಾ ಸಂಖ್ಯೆಯು ೩,೧೧,೭೦,೬೩೧. ಈಪೈಕಿ ೧,೫೪,೭೧,೦೯೩ ಮಂದಿ ಗಂಡುಸರು; ೧,೫೭,೯೯,೫೮೮ ಹೆಂಗಸರು. ಇವರಲ್ಲಿ ಹಿಂದೂಗಳು, ೨,೮೪,೯೭,೬೬೭, ಮಹಮದಿಯರ್‌ರು ೧೯,೩೩,೫೭೧, ಕ್ರಿಶ್ಚಿಯನ್‌ಗಳು ೭,೧೧,೦೭೨, ಜೈನ್ಯರು ೭೪,೯೬೭, ಇತರ ಜಾತಿಯವರು ೩,೩೬೦, ಒಂದುವ್ಯೆಲಿಗೆ ಪ್ರಜಾಸಂಖ್ಯೆಯ ದಾಮಾಷಾಯಿ ಪ್ರಕಾರ ಹಿಂದೂಗಳು ೯೧೪, ಮಹಮ್ಮದಿಯರ್‌ರು ೬೨; ಕ್ರಿಶ್ಚಿಯನ್‌ಗಳು ೭೩, ಇತರ ಜಾತಿಯವರು ಒಬ್ಬರು. ಈರೀತಿ ವಾಸವಾಗಿರುವಂತೆ ಏರ್ಪಡುತಿದೆ.

SUPERIORITY OF HINDUISM OVER OTHER RELIGIONS.

ಈ ಪ್ರಪಂಚದಲ್ಲಿ ವ್ಯವಹಾರದೊಳಿರತಕ್ಕ ಸಕಲ ಮತಗಳಗಿಂತಲೂ ಹಿಂದೂಮತವು ಬಹಳ ಪ್ರಾಚೀನವಾದದ್ದಾಗಿರುತಿದೆ. ಚೀನಾದೇಶೀಯರ ಕಂಗ್‌ಮತವು ಹುಟ್ಟಿ ಈಗ್ಯೆ ಸುಮಾರ್ ೩,೫೦೦ ವರುಷಗಳಾದವು. ಪಾರಸೀಕರ ಜೊರಾಸ್ಟ್ರಿಯನ್ ಮತವೇರ್ಪಟ್ಟು ೩,೦೦೦ ವರುಷಗಳಾದವು. ಸ್ವಲ್ಪಹೆಚ್ಚು ಕಡಮೆಯಾಗಿ ಬೌದ್ಧಮತವು ೨,೫೦೦ಸಂವತ್ಸರಗಳಿಗೆ ಹಿಂದಿನದು ಮಹಮ್ಮದಿಯನ್ ಮತವು ೧,೩೦೦ ವರುಷಗಳ ಹಿಂದೆಏರ್ಪಟ್ಟವು. ಕ್ರಿಶ್ಚಿಯನ್‌ಮತವು ಒಂದು ಶತವಾಗಿ ನೆಲೆಗೊಂಡು ೧೮೮೮ ವರುಷಗಳಾದವು. ಹೀಗೆ ಇನ್ನೂ ಅನೇಕ ಮತಗಳು ಆಧುನಿಕಗಳಲ್ಲದೆ ಹಿಂದೂ ಮತದಂತೆ ಪ್ರಾಚೀನಗಳಲ್ಲವು. ಪೃಥ್ವೀ ತತ್ವವಿವೇಚಕ ಶಾಸ್ತ್ರಜ್ಞರಾದ ಇತರ ಮತದ ಪಂಡಿತರು ಹಿಂದೂಮತಾನುಸಾರವಾಗಿ ಭೂತಸೃಷ್ಟಿಯು ಅನಾದಿಸಿದ್ಧವಾದದ್ದೆಂದು ದೃಢವಾಗಿ ಹೇಳುತ್ತಾರೆ. ನಮ್ಮ ಶಾಸ್ತ್ರರೀತ್ಯಾ ಕ್ಲ್ಪಪ್ತಮಾಗಿರುವ ಯುಗಗಳು, ಮಹಾಯುಗಗಳು, ಕಲ್ಪಗಳು, ಮುಂತಾದ ಕಾಲಪ್ರಮಾಣಗಳೇ ಇದಕ್ಕೆ ನಿದರ್ಶನಗಳಾಗಿರುತಿವೆ. ಹೀಗಿರುವಾಗ್ಯೆ ಅತಿ ಪ್ರಾಚೀನವಾದ ನಮ್ಮ ಹಿಂದೂಮತ ಸ್ವರೂಪವು ಚೆನ್ನಾಗಿ ಪರಿಶೀಲನೆಮಾಡಿ ತಿಳದುಕೊಳ್ಳದೆ ನಮ್ಮವರಲ್ಲಿ ಅಜ್ಞರುಕೆಲವರು ಕ್ರಿಶ್ಚಿಯನ್ ಮಿಷನರಿ ಮುಂತಾದವರ ದುರ್ಬೋಧನೆಗಳಿಗೊಳಗಾಗಿ ಜಾತಿಮತಭ್ರಷ್ಟರಾಗಿ ಹೋಗುತಲಿದಾರೆ. ಇತರ ಮತಗಳಿಗಿಂತ ಅನಾದಿಯಾದ ಹಿಂದೂ ಮತದಲ್ಲಿ ನೀತಿ ಮತ ಬೋಧಕಗಳಾದ ಗ್ರಂಥಗಳನೇಕ ಇರುತಲಿವೆ. ನಾಲ್ಕುವೇದಗಳು, ಆರುಶಾಸ್ತ್ರಗಳು, ಅಷ್ಟಾದಶ ಸ್ಮೃತಿಗಳು ಮತ್ತು ಪುರಾಣಗಳು, ಕೆಲವು ಉಪಸ್ಮೃತಿಗಳು, ಮತ್ತು ಉಪಪುರಾಣಗಳು, ಭಾರತ ರಾಮಾಯಣಾದಿ ಇತಿಹಾಸ ಗ್ರಂಥಗಳು, ಶೈವವೈಷ್ಣವಾದಿ ಆಗಮಗಳು, ಮಹಾನಿರ್ವಾಣಾದಿ ತಂತ್ರಗಳು, ಅನೇಕ ಕ್ಷೇತ್ರ ಮಹಾತ್ಮ್ಯಗಳು, ಸೂತ್ರಭಾಷ್ಯಗಳು, ಅಷ್ಟೋತ್ತರಶತೋಪನಿಷತ್ತುಗಳು, ದೇಶಭಾಷೆಗಳಲ್ಲಿ ಸೀತಾರಾಮಾಂಜನೇಯ ಮುಂತಾದ ಅಸಂಖ್ಯಾಕ ಗ್ರಂಥಗಳು ನೆಲಗೊಂಡಿರುತಿವೆ. ಇವುಗಳಲ್ಲಿ ಒಂದೊಂದು ಗ್ರಂಥವನ್ನು ಚೆನ್ನಾಗಿ ಓದಿದಾಗ್ಯೂ ಹಿಂದೂವೆನಿಸಿಕೊಂಡ ಪ್ರತಿಮನುಷ್ಯನೂ ಕೃತಾರ್ಥನಾಗಬಹುದು. ಆರೀತಿ ಮಾಡದೆ ಜ್ಞಾನಶೂನ್ಯರು ಕೆಲವರು ಅನ್ಯಾಯವಾಗಿ ಕೆಟ್ಟು ಹೋಗುವದು ಕಂಡು ನಾವು ಬಹಳ ವಿಷಾದಿಸುತ್ತೇವೆ. ಇದುಯೋಗ್ಯವೆ ? ಎಷ್ಟುಮಾತ್ರವೂ ಅಲ್ಲವು. ಕ್ರಿಶ್ಚಿಯನ್‌ಗಳಿಗೆ ಬೈಬಲ್‌ವಿನಾ ಬೇರೊಂದು ಗತಿಯಿಲ್ಲವು. ಅದು ಸಹ ಅದರ ಮೇಲೆ ಅನ್ಯಮತದವರು ತಿಳಿಸುವ ಆಕ್ಷೇಪಣೆಗಳಿಗನುಗುಣವಾಗಿ ಸಂದರ್ಭಾನುಸಾರ ಬದಲಾಯಿಸಲ್ಪಡುತಲಿರತಕ್ಕದ್ದಾಗಿರುತಿದೆ. ಇವಲ್ಲದೆ ಅದು ಒಬ್ಬ ಪುರುಷನ ಚರಿತ್ರರೂಪವಾಗಿರುತಿದೆಯೇಹೊರತು ಈಶ್ವರಮಹಿಮೆಯನ್ನೂ, ಆತನ ಉಪಾಸನಾಕ್ರಮವನ್ನೂ, ಉಪಾಸಕ ಧರ್ಮವನ್ನೂ, ನ್ಯಾಯ ನೀತಿಗಳನ್ನೂ ನಮ್ಮ ಗ್ರಂಥಗಳಂತೆ ವಿಸ್ತಾರವಾಗಿ ಬೋಧಿಸುವದಿಲ್ಲವು. ಬೈಬಿಲ್ ಮತ್ತು ಕೆಲವು ಇತರ ಮತ ಗ್ರಂಥಗಳು ಸಾರವತ್ತಾಗಿ ಇರಕೂಡದುದವೆ, ಅಂತಾ ಸಾರಭೂತಕಗಳಾದ ವಿಷಯಗಳುಕೂಡ ನಮ್ಮ ಗ್ರಂಥಗಳಿಂದ ಪರಿಗ್ರಹಿಸಲ್ಪಟ್ಟತೆಂದು ನಿಜವಾಗಿ ನುಡಿಯಬಹುದಾಗಿದೆ. ಮುಖ್ಯವಾಗಿ ಸಗ್ರಹಣಶಕ್ತಿಯೇ ಪರಮ ಪ್ರಯೋಜನಕರವಾದದ್ದಾಗಿಯೂ ಮಹದಾನಂದಕಾರಿಯಾಗಿಯೂ ಇರುತಿದೆ. ಇನ್ನು ಮೇಲಾದರೂ ಕ್ರೈಸ್ತಮತ ಬೋಧಕರ ವಂಚನ ವಾಕ್ಯಗಳಿಂದ ಮರುಳರಾಗದೆ, ಅವರ ವೇಷಭಾಷೆಗಳಿಂದ ಭ್ರಾಂತಿಯನ್ನೈದದೆ, ನಮ್ಮವರೆಲ್ಲರೂ ನಮ್ಮ ಗ್ರಂಥಗಳು ಚೆನ್ನಾಗಿಓದಿ ವಿಚಾರಮಾಡಿ ಅವುಗಳಲ್ಲಿ ತಿಳಿಸಲ್ಪಟ್ಟಿರುವ ಶ್ಲಾಘ್ಯಗಳಾದ ವಿಷಯಗಳನ್ನು ಗ್ರಹಿಸಿ ಅವುಗಳಿಗೂ ಇತರ ಮತಗಳಲ್ಲಿರತಕ್ಕವುಗಳಿಗೂ ಉಂಟಾಗಿರುವ ತಾರತಮ್ಯವನ್ನರಿತು ವರ್ತಿಸಬೇಕೆಂದು ನಮ್ಮವರೆಲ್ಲರು ನಾವು ಪ್ರಾರ್ಥಿಸುತ್ತೇವೆ. ಸ್ವಮತ ಸ್ವರೂಪವನ್ನರಿಯದೆ ನಮ್ಮವರು ಪರಮತಗಳೆಂಬ ಘೋರಾರಣ್ಯದಲ್ಲಿ ಪ್ರವೇಶಿಸಿ ಅಳದುಹೋಗದೆ ಸ್ವೀಯವಾದ ಹಿಂದೂ ಮತವೆಂಬ ನಂದನವನವನ್ನಾಶ್ರಯಿಸಿ, ಶಾಸ್ತ್ರೋಕ್ತಗಳಾದ ಸತ್ಕರ್ಮಗಳೆಂಬ ಕಲ್ಪವೃಕ್ಷಗಳು ಸೇವಿಸಿ ಐಹಿಕಾ ಮುಷ್ಮಿಕ ಸುಖಗಳೆಂಬ ಉತ್ತಮ ಫಲಗಳು ಪಡೆದು ಮಹಾನಂದವನ್ನೈದಿ ಸರ್ವೇಜನಾಸ್ಸುಖಿನೋಭವಂತು ಎಂಬದಾಗಿ ಯೆಲ್ಲರೂ ಸ್ವಸ್ವೋಚಿತ ಧರ್ಮಾಚಾರ ರಕ್ಷಣೆಯೊಡನೆ ಸುಖವಾಗಿರಬೇಕೆಂದು ಧರ್ಮದೇವತೆಯಂ ಪ್ರಾರ್ಥಿಸುವೆವು.

HINTS TO GOVERNMENT OFFICERS

ಗವರ್ನಮೆಂಟ್ ನೌಕರಿಯಲ್ಲಿ ಪ್ರವೇಶಿಸತಕ್ಕವರೂ ಈಗ ಇರತಕ್ಕವರು ಸಹ ಇದರಡಿ ತಿಳಿಸಲ್ಪಡುವ ಹಿತವಾದಗಳಿಗೆ ಅವಧಾನವನ್ನಿತ್ತು ಅವುಗಳಪ್ರಕಾರ ನಡೆದುಕೊಳ್ಳುವರಾದರೆ ಅವರು ಅಸಾಧಾರಣ ಕೀರ್ತಿ ಪ್ರತಿಷ್ಟೆಗಳಿಂ ಶೀಘ್ರದಲ್ಲಿಯೇ ಪಡೆದು ಅಭಿವೃದ್ಧಿಯನ್ನೈದಬಹುದೆಂದೆಣಿಸುತ್ತೇವೆ. ಅವುಗಳ್ಯಾವವಂದರೆ:— ಉದ್ಯೋಗಾಪೇಕ್ಷಿಗಳಿರಾ! ೧—ಕುತ್ಸಿತಗಳಾದ ತಂತ್ರಗಳಿಗೆ ಯಾವಾಗಲು ಒಳಪಡಕೂಡದು. ೨—ಅಂತರಂಗವಾದ ಪ್ರದೇಶದಲ್ಲೇ ಅನವರತ ನೀವು ವಾಸಮಾಡುತಲಿರಿ. ೩—ನಿಮ್ಮಸಂಗಡ ಲೇವಾದೇವಿ ನಡೆಸತಕ್ಕವರೊಡನೆ ಉತ್ತರ ಪ್ರತ್ಯುತ್ತರಗಳಿಂನಡೆಸುವವಾಡಿಕೆಯನ್ನಿಡಬೇಡಿರಿ. ೪—ರಾತ್ರಿ ೧೦ ಘಂಟೆಗೆ ಮುಂಚಿತವಾಗಿ ಅಂದರೆ ಜನಸಂಚಾರವು ಕಡಮೆಯಾಗಲಿಕ್ಕೆ ಮುಂದಾಗಿ ಸರ್ಕಾರ್ ಕೆಲಸದಮೇಲೆ ಒಬ್ಬರನ್ನೂ ನಿಮ್ಮಬಳಿಗೆ ಬರಗೊಳಿಸಬೇಡಿರಿ. ಮತ್ತು ಹಾಗೆ ಅವರೊಂದುವೇಳೆಬಂದರೆ ಒಬ್ಬರದೃಷ್ಟಿಗೆಬೀಳದೆಬರುವಂತೆ ಏರ್ಪಾಡುಮಾಡಿರಿ. ೫—ನೀವು ಅಲ್ಪ ಮೊತ್ತಗಳನ್ನಾವಾಗಲು ಅಂಗೀಕರಿಸಬೇಡಿರಿ, ಅದರಿಂದ ನಿಮಗೆ ಗೌರವ ಹಾನಿ, ಭಾರಿಯಾದ ವ್ಯವಹಾರಗಳು, ಅಂದರೆ ಸಾವಿರರೂಪಾಯಿಗಳಿಗೆ ಕೊರತೆಯಿಲ್ಲದೆ ಬರತಕ್ಕ ವಿಷಯಗಳಲ್ಲಿಮಾತ್ರವೇ ಪ್ರವೇಶಿಸಿರಿ. ಅದಕ್ಕೆ ಕಡಮೆಯಾದವನ್ನು ನಿಮ್ಮ ತಾಬೇದಾರರ ತೃಪ್ತ್ಯರ್ಥಬಿಟ್ಟುಬಿಡಿರಿ. ೬—ನೀವು ತೆಗೆದುಕೊಳ್ಳುವ ಮೊಬಲಗು ಯಾವಾಗಲು ನಗದು, ಅಥವಾ ಬೆಳ್ಳಿ ಭಂಗಾರ ಒಡವೆಗಳ ರೂಪವಾದವಾಗಿರಬೇಕೇಹೊರ್ತು ನೋಟುಗಳಾಗಿರಕೂಡದು. ಯಾತಕ್ಕೆಂದರೆ ಅವು ಯಾವಾಗಲು ಅನುಮಾನಾಸ್ಪದವಾದವು ಮತ್ತು ಸುಲಭವಾಗಿ ಪತ್ತೆಯಾಗತಕ್ಕವು. ಆದದರಿಂದ ನೋಟುಗಳನ್ನು ತಂದುಕೊಟ್ಟರೆ ನಿರಾಕರಿಸಿರಿ. ೭—ಕಚೇರಿಗಾರರು ಪ್ರಮಾಣಿಕರಾಗಿದ್ದರೆ ಅವರ ಕೆಲಸವು ನೆರವೇರಿಸಿದಬಳಿಕ ಅವರಿಂದ ಮೊಬಲಗನ್ನು ತೆಗೆದುಕೊಳ್ಳಿರಿ. ಹಾಗೆ ಮಾಡಿದರೆ ಅವರ ಲೆಕ್ಕಪತ್ರಗಳಲ್ಲಿ ಅವರ ಮೊಕದ್ದಮೆ ಫೈಸಲಾದಬಳಿಕ ನೀವು ಪಡೆದ ಮೊಬಲಗು ಖರ್ಚು ಬೀಳುವದಾದದರಿಂದ ಅವು ಕಜಾಬತ್ ಹೊರಗಾದರೂ ಗುಮಾನಿಗೆ ಅವಕಾಶ ವಿರಲಾರದು. ೮—ನಿಮಗೆ ರುಸುಮತ್ ಕೊಡುವವನ್ನು ಮುಂದಾಗಿ ಛಪ್ಪರಪಡಿಸಿ ಅವನು ಕೊಡುವ ಮೊಬಲಗನ್ನು ೩೦ ದೇಶಪರ್ತಿ ಲೆಕ್ಕದಲ್ಲಿ ದಾಖಲ್ಮಾಡುವಂತೆ ನಿಮಗೆ ಕೊಟ್ಟದ್ದು ಒಂದೇ ಮೊತ್ತವಾಗಿದ್ದರೂ ಪ್ರತ್ಯೇಕ ಪ್ರತ್ಯೇಕ ಕಾಲದಲ್ಲಿ ಮಧ್ಯೆ ಸಾಕಾದ ವ್ಯವಧಾನವಿರುವಂತೆ ಚಿಲ್ಲರೆ ಚಿಲ್ಲರೆಯಾಗಿ ಅಂದರೆ, (ಮಸಲಾ ನಿಮಗೆ ೧೦೦ ಕೊಡಲ್ಪಟ್ಟದ್ದರೆ) ರಾಮನಿಗೆ ೫೦, ಭೀಮನಿಗೆ ೨೦, ಕಾಮನಿಗೆ ೧೫, ಸೋಮನಿಗೆ ೧೦ ತಿಮ್ಮನಿಗೆ ೧೫ ಈ ರೀತಿ ದಾಖಲ್ಮಾಡುವಂತೆ ಏರ್ಪಾಡು ಮಾಡುವದಾದರೆ ನೀವು ತೆಗೆದುಕೊಂಡ ಮೊಬಲಗನ್ನು ಯಾರೂ ಕಂಡು ಹಿಡಿಯಲಾರರು. ೯—ನೀವು ನಿಮ್ಮ ಮೇಲ್ಪಟ್ಟ ಯೂರೋಪಿಯನ್ ಆಫೀಸರ್‌ಗಳನ್ನು ಸಂಧಿಸಿದಾಗ ಅವರ ಶೀಲಸ್ವಭಾವಗಳು ಚೆನ್ನಾಗಿ ತಿಳದುಕೊಳ್ಳುವದಕ್ಕೆ ಮುಂದಾಗಿ ಗಂಭೀರವಾಗಿರಬೇಕಲ್ಲದೆ ಅನ್ಯತ್ರ ನಡೆಯುವ ರಿಪೋರ್ಟ್ 'ಪನ್ಯರೆ' ಅಕ್ರಮಗಳನ್ನು ಕುರಿತು ಅವನ್ನು ಮಾತಾಡಬಾರದು. ಇದರಿಂದ ನಿಮ್ಮ ಆಫೀಸರರ ಸ್ವಭಾವವು ಸುಲಭವಾಗಿ ತಿಳಿದುಕೊಳ್ಳಬಹುದು. ಹ್ಯಾಗೆಂದರೆ—ಅವರೊಂದುವೇಳೆ ನಿಜವಾಗಿ ಲಂಚವನ್ನಪೇಕ್ಷಿಸದೆ ಆಫೀಸರ ಸ್ವಭಾವವುಳ್ಳವನಾಗಿರುತ್ತಿದ್ದರೆ ನಿಮ್ಮ ಮಾತುಗಳ ನಿಷ್ಕೃಷ್ಟತೆಯಂ ನೋಡಿ ಬಹಳ ಪ್ರಾಮಾಣಿಕನೆಂಬ ಭಾವವು ಪಡೆಯುವನಾಗಿ ತರುವಾಯ ನಿಮ್ಮ ಮೇಲೇನಾದರು ಪುಕಾರ ಬಂದರೂ, ಅದರ ಪ್ರತ್ಯಭಿಪ್ರಾಯವೇ ನಿಮ್ಮನ್ನು ಕಾಪಾಡುವದು ಆದದರಿಂದ ಇದೊಂದುಪಾಯವು, ಹಾಗಿಲ್ಲದೆ ನಿಮಗೆ ಮೇಲ್ಪಟ್ಟ ಯೂರೋಪಿಯನ್ ಆಫೀಸರರು ಅತ್ಯಾತುರದಿಂದ ಧನಾರ್ಜನೆಯಲ್ಲೇ ತತ್ಪರರಾಗಿದ್ದರೆ ಆಗ ನೀವು ತಿಳಿಸುವ ನಿಷ್ಕೃಷ್ಟವಾಕ್ಯಗಳು ನಿಜವೆಂದು ನಂಬಿ ಬೇರೆಯವರನ್ನು ಸಂತೋಷಪಡಿಸುವಂತೆ ನಡಸಿದರೂ ಅವರ ಉದ್ದೇಶಕ್ಕೆ ನೀವು ಅನುಕೂಲರಾಗದೆ ಹೋದದಕ್ಕಾಗಿ ಅಂತು ನಿಮ್ಮ ವಿಷಯದಲ್ಲಿ ಸ್ವಲ್ಪ ಅತೃಪ್ತರಾಗುವರಲ್ಲದೆ ಅವರದು ಕ್ರಮೇಣ ವ್ಯಕ್ತಪಡಿಸಲಾರಂಭಿಸುವರು. ಅದು ನೀವು ಕೂಡಲೇ ಗ್ರಹಿಸಿಕೊಂಡು ಸ್ವಾಮಿಕಾರ್ಯಾಸಕ್ತರಾದವರೆಂಬ ಭಾವವನ್ನುಂಟುಮಾಡಿ ಅವರು ವ್ಯಾಜ್ಯಕರಿಸಿ ದ್ರವ್ಯ ಕೇಳುರತಕ್ಕೆತ್ನಿಸುವಿರಾದರೆ ನಿಮಗೆ ವಿಶೇಷ ಲಾಭ ವುಂಟಾಗುವದು. ಕದಾಚಿತ್ ಹೊರಗಾದರೆ ನಿಮ್ಮ ಆಫೀಸರರ ಸಂಬಂಧವು ನಿಮ್ಮನ್ನೂ, ಟೋಪಿ ಮತ್ತು ಬೂಟ್ಸ್‌ಗಳಿಂದ ಮಹಿಮೆಗೊಂಡ ಯೂರೋಪಿಯನ್ ಶಬ್ದವು ನಿಮ್ಮ ಆಫೀಸರನ್ನೂ ತಪ್ಪದೆ ಕಾಪಾಡುವವಾಗಿ ನೀವು ಧೈರ್ಯದೊಡನೆ ನಿಮ್ಮ ವ್ಯಾಪಾರವು ನಡೆಸಬಹುದು. ಪರಂತು ನೀವು ಹಾಗ್ಯಾನ ಮಾಡತಕ್ಕದ್ದರ ಪೈಕಿ ಒಂದನ್ನಾದರು ನೆರವೇರಿಸದಿರಬೇಡಿರಿ ಕಂಡಿರಾ! ಅಜೀರ್ಣದಿಂದ ಅತಿಸಾರವೂ, ಅತಿಸಾರದಿಂದ ಕೋಭೆಯೂ, ಕೋಭೆಯಿಂದ ಪ್ರಾಣಹಾನಿಯೂ ಉಂಟಾಗುವಂತೆ ಭ್ರಷ್ಟಾರ್ಜಿತಕ್ಕೆ ಸಹ ವ್ಯಯಮಾರ್ಗವಂ ಕಲ್ಪಿಸಿ ಕಡೆಗೆ ನಿಮ್ಮನ್ನು ಅನಾಮಧೇಯರನ್ನಾಗಿ ಮಾಡಿ ನಿರಂತರ ದುಃಖಕ್ಕೊಳಪಡಿಸುವದಾಗಿ ಅದಕ್ಕೆ ಸ್ವಲ್ಪಮಾತ್ರವೂ ಅವಕಾಶ ಕೊಡಬೇಡಿರಿ. ೧೦—ಚೆನ್ನಾಗಿ ಓದಿಕೊಂಡಂತಾ ಪಂಡಿತನಾದ ನೇಟಿವ್ ಯಾವಾಗಲಾದರು ನಿಮ್ಮನ್ನು ಸಂಧಿಸಿದರೆ ಆತನೊಡನೆ ಸಕಲ ವಿಷಯಗಳಂ ಕುರಿತು ಪ್ರಸ್ತಾಪಿಸದೆ ವಿದ್ಯೆಯಿಂದುಂಟಾಗುವ ಮಹತ್ಪ್ರಯೋಜನಗಳು, ಇತರ ಸುಗುಣಗಳು, ಸಹೋದರವಾತ್ಸಲ್ಯ ಮುಂತಾದ ವಿಷಯಗಳು ಕುರಿತೇ ಸಂಭಾಷಣೆಮಾಡಿರಿ. ೧೧. ನೀವು ಹೊರಗೆ ಯಾವಾಗಲು ಧರ್ಮಚಿಂತೆಯೂ, ಮತಾಭಿಮಾನವೂ ಉಳ್ಳವರಂತೆ ನಟಿಸುತಲಿರಿ, ಇದು ನಿಮಗೆ ಬಹಳ ಲಾಭಕಾರಿಯಾಗುವದು. ೧೨.—ನೀವು ಯಾವಾಗಲು ಸಾಲವನ್ನಿಟ್ಟುಕೊಂಡಿರಿ? ಸಮಯಸಂದರ್ಭದಲ್ಲಿ ನಿಮಗೆ ಅನುಕೂಲವಾದರೂ ಆಗಬಹುದು, ಅಲ್ಲದೆ ಪ್ರತಿಕೂಲವಾಗಿಯಾದರೂ ಪರಿಣಮಿಸಬಹುದು. ೧೩—ನಿಮ್ಮ ಮಾತುಗಳಿಂದ ನೀವು ಬಹಳ ಧರ್ಮೈಕಪರರೆಂಬ ಭಾವವು ಜನರಿಗೆ ಉಂಟುಮಾಡುತಲಿರಬೇಕು. ೧೪—ಸ್ತ್ರೀಮೂಲಕವಾದ ಮಾಧ್ಯಸ್ಥವು ನಿಮಗೆ ಯಾವಾಗಲು ಅನರ್ಥಕಾರಿಯಾದದರಿಂದ ಅದು ಶುದ್ಧಾಂಗ ವರ್ಜ್ಯವೆನಿಸುವದು ಯೋಗ್ಯವು. ೧೫—ನಿಮ್ಮ ತಾಬೇದಾರಿ ನೌಕರರಲ್ಲಿ ನಿಮಗೇನಾದರು ಅಕ್ರಮಗಳು ಕಂಡುಬಂದರೆ ಅವರಿಗೆ ವಿರುದ್ಧವಾಗಿ ಮೇಲಧಿಕಾರಿಗೆ ರಿಪೋರ್ಟ್ ಮಾಡಬೇಡಿರಿ. ಇದು ಒಂದು ಕಾಲದಲ್ಲಿ ನಿಮಗೆ ವಿರುದ್ಧವಾಗಿ ಪರಿಣಮಿಸುವದು. ೧೬—ನಿಮ್ಮ ಸೋದರಿಯರಾಗಲಿ, ಪುತ್ರಿಯರಾಗಲಿ, ಅಥವಾ ಬೇಕಾದ ಹುಡಿಗಿಯಲ್ಯಾರಾಗಲಿ ಇದ್ದರೆ ಅವರು ಪ್ರಸಿದ್ಧ ವಕೀಲ್‌ನಲ್ಲಿ ನಿಮಗೆ ಸನ್ನಿಹಿತರಾಗಿರುವಂತಾ ಯಾರಾದರು ವಕೀಲರಿಗೆಕೊಟ್ಟು ವಿವಾಹಮಾಡಿಸುವಿರಾದರೆ ನೀವು ಯಾವಾಗಲಾದರು ಮಹತ್ಪ್ರಯತ್ನದಲ್ಲಿ ಮಗ್ನರಾಗಿ ಸಹಾಯಾಂತರವನ್ನಪೇಕ್ಷಿಸುವಂತಾ ಆವಶ್ಯಕತೆಯುಂಟಾದರೆ ಅವರು ನಿಮ್ಮ ರಕ್ಷಣೆಗೆ ಬಾಧ್ಯರಾಗಿರುವರು. ೧೭—ತಪ್ಪದೆ ಯಾವಾಗಲು ಕೈಯಲ್ಲಿ ನಗದಾಗಿ ಸ್ವಲ್ಪ ಮೊಬಲಗನ್ನು ಇಟ್ಟುಕೊಂಡಿರಬೇಕು. ಸಮಯಬಂದಾಗ ವಕೀಲರನ್ನು ಸಾಕ್ಷಿದಾರರನ್ನು ಎದುರುಕಡೆ ಸಾಕ್ಷಿಗಳ ಬಾಯ್ಮುಚ್ಚಿಸುವದಕ್ಕೆ ಅದು ಬಹಳ ಅನುಕೂಲಿಸುವದು. ೧೮—ನಿಮ್ಮ ಸ್ನೇಹಿತರು ಸ್ನೇಹಿತರ ಸಹಾಯದಿಂದ ಒಂದುಕಾರ್ಯವು ನಿಮ್ಮ ಮೂಲಕ ನೆರವೇರಿಸಿಕೊಳ್ಳಬಹುದೆಂದು ಬಂದರೆ ಅವರಿಗೆ ನೀವು ಯಾವಾಗಲು ಅವಕಾಶಕೊಡಬೇಡಿರಿ ಅದರಿಂದ ನಿಮಗೆ ಪ್ರಯೋಜನ ಹಾನಿಯುಂಟಾಗದೆ ಹೋಗಲಾರದು. ೧೯—ನೀವು ಆರ್ಜಿಸಿದ ದ್ರವ್ಯವನ್ನೆಲ್ಲ ಮನೆಯಲ್ಲಿಟ್ಟುಕೊಂಡಿರಬೇಡಿರಿ. ನಿಮ್ಮ ಸ್ವಂತಕ್ಕೆ ಬೇಕಾದಷ್ಟುಮಾತ್ರ ಇಟ್ಟುಕೊಂಡು ಮಿಕ್ಕ ಭಾಗವನ್ನೆಲ್ಲ ನಿಮಗೆ ರಕ್ತಸಂಬಂಧಿಗಳಾದ ಅನ್ಯರ ಹೆಸರಿನಲ್ಲಿ ಅನ್ಯತ್ರ ಇಟ್ಟಿರಿ. ೨೦—ನಿಮ್ಮ ಆಯತಿಯನ್ನೊಬ್ಬರಿಗೂ ತಿಳಿಸಬೇಕಾದ್ದಿಲ್ಲವು. ಮತ್ತು ನಿಮ್ಮ ಅನುಪಪತ್ತಿಯನ್ನೇ ಅನವರತ ನಿಮ್ಮ ಮೇಲ್ಪಟ್ಟ ಅಧಿಕಾರಿಗೂ ಅನ್ಯರಿಗು ಸಹ ತಿಳಿಯಪಡಿಸುತಲಿರಿ. ೨೧—ಯಾವಾಗಲು ಸ್ವಂತವಾಗಿ ಮನೆಯಂ ಹೊಸದಾಗಿ ಕಟ್ಟಿಸಬೇಡಿರಿ. ಅದು ನಿಮಗೆ ಸ್ಥಾನಭ್ರಂಶವನ್ನುಂಟುಮಾಡುವದಲ್ಲದೆ ಅಂತರಗಳಾದ ನಿಮ್ಮವ್ಯಾಪಾರಗಳನ್ನೆಲ್ಲ ಹೊರಗಡಿಸಿ ಪ್ರಯೋಜನ ಹಾನಿಯನ್ನುಂಟು ಮಾಡುವದು, ಮತ್ತುನಿಮ್ಮ ಹೆಂಗಸರಿಗೆ ಆಭರಣಗಳನ್ನುಬಹಿರಂಗವಾಗಿ ಹಾಕಿಕೊಳ್ಳದಂತೆ ತಿಳಿಸುತಲಿರಬೇಕು. ಇದೂ ಒಂದುಕಾಲದಲ್ಲಿ ನಿಮಗೆ ಅಪಾಯಕರವು.

☞ BANGALORE :—Printed and published at the KARNATIC PRESS, No. 44, HOSPITAL ROAD, PETTA.—1888.

ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA.

ಪ್ರತಿ ಸೋಮವಾರ ಪ್ರಾತಃಕಾಲದಲ್ಲಿ ಪ್ರಕಟಿಸಲ್ಪಡುವದು.

Published every Monday Morning.

ಪ್ರಕಾಮವಿವಿಧವೃತ್ತ್ಯವಗಮಾರ್ಥ ಕರ್ಣಾಟಕಪ್ರಕಾಶನವರಾಭಿಧಾಪ್ರಥಿತಸಾಪ್ತಾಹಿಕೀಶೋಭಿತಾ ॥ ಮ್ಯಗಾಂಕಶಿತವಾಸರೇನಿಹಿತಮುದ್ರಣಾಸದ್ವತ್ಸ್ಯೈರ್ವಿ ಕಾಸುವರಿಪ್ರೋತ್ಸಾಹಿಕಶಿವಾನಸಂಸಂಮುದಂ ॥

Vol. XV.] BANGALORE—MONDAY, DECEMBER 17, 1888. [No. 49.

ಸಂಪುಟ ೧೫.] ಬೆಂಗಳೂರು:—ಸನ್ ೧೮೮೮ನೇ ಇಸವಿ ಡಿಸೆಂಬರ್ ೧೭ನೇ ತಾರೀಖು ಸೋಮವಾರ. [ಸಂಚಿಕೆ ೪೯.

ಕರ್ಣಾಟಕ ಪ್ರಕಾಶಿಕಾ

ಪತ್ರಿಕೆಯ ಚಂದಾ ದರಗಳು,
೧೮೮೮ನೇ ಇಸವಿ ಜನವರಿ ೧ನೇ ತಾರೀಖು
ಕಡಮೆ ಮಾಡಲ್ಪಟ್ಟಿರುತ್ತದೆ.

ಈ ಪತ್ರಿಕೆಯು ಚಂದಾದಾರರಪ್ಪೆಕ್ಷಿ ಅನೇಕರ ಅಪೇಕ್ಷೆಯನ್ನೀಡೇರಿಸುವ ಉದ್ದೇಶದೊಡನೆಯೂ, ಪರಿಮಿತವಾದ ಆಯತಿಯುಳ್ಳವರಿಗೆಲ್ಲ ಈ ಪತ್ರಿಕೆಯು ಸುಲಭವಾಗಿ ಲಭಿಸುವಂತಿರಬೇಕೆಂಬ ಅಭಿಪ್ರಾಯದೊಡನೆಯೂ ಇವರ ಚಂದಾ ದರವನ್ನು ಇವರಡಿಕಂಡಂತೆ ಕಡಮೆ ಮಾಡಿರುತ್ತೇವೆಂತೆಂದರೆ:—

ಇಂಗ್ಲಿಷ್ ಮತ್ತು ಕನ್ನಡಭಾಗಗಳಿಗೆ.

		ಸ್ಥಳದವರಿಗೆ	ಪರಸ್ಥಳದವರಿಗೆ
12	ತಿಂಗಳಿಗೆ	8—0—0	9—0—0
6	„	4—0—0	4—8—0
3	„	2—8—0	2—8—0

ಇಂಗ್ಲಿಷ್ ಅಥವಾ ಕನ್ನಡಭಾಗಗಳಿಗೆ.

		ಸ್ಥಳದವರಿಗೆ	ಪರಸ್ಥಳದವರಿಗೆ
12	ತಿಂಗಳಿಗೆ	4—0—0	5—0—0
6	„	2—0—0	2—8—0
3	„	1—4—0	1—8—0

ಷರಾ—ಅಂಚೆ ಮುತ್ಸದ್ದಿಗಳು, ಕೋಬಳ ಮತ್ತು ತಾಲ್ಲೂಕ್ ಸ್ಕೂಲ್‌ಮಾಸ್ತರುಗಳು, ಶ್ಯಾನಭೋಗರು, ಪಟೇಲರು, ವಿದ್ಯಾರ್ಥಿಗಳು, ಇವರಿನ್ನೆಲ್ಲ ಈ ಪತ್ರಿಕೆಯು ಷರಾ ಚಂದಾದವರಿಗೆ ಕೊಡಲ್ಪಡುವದು. ಅತ್ಯಾವಶ್ಯಕವೆಂಬ ಸುನಿಶ್ಚಿತ ಬಾರದ ದರಖಾಸ್ತುಗಳಿಗೆ ಸುತರಾಂ ನಿಗೇಕೊಡಲ್ಪಡಲಾರದು. ಚಂದಾದಾರರು ಇಂಗ್ಲಿಷ್ ಭಾಗವನ್ನಾಗಲಿ ಕನ್ನಡಭಾಗವನ್ನಾಗಲಿ ಅಥವಾ ಎರಡನ್ನಾಗಲಿ ತೆಗೆದುಕೊಳ್ಳಬಹುದು. ಚಂದಾ ಹಣವನ್ನು ಮುಂಗಡವಾಗಿಯೇ ಸಲ್ಲಿಸತಕ್ಕದ್ದು. ಮೂರು ತಿಂಗಳಿಗಿಂತ ಕಡಮೆಯಾಗಿ ಚಂದಾ ಮೊಬಲಗು ಅಂಗೀಕರಿಸಲ್ಪಡಲಾರದು.

ನೋಟುಗಳು ರವಾನಿಸತಕ್ಕವರು ಮೊದಲು ಕಳುಹಿಸುವ ಅರ್ಧನೋಟು ತಲಪಿದುದಾಗಿ ನಮ್ಮಿಂದಾಗದವು ಬಂದ ಕೂಡಲೇ ಬಾಕಿ ಅರ್ಧ ನೋಟನ್ನು ರವಾನಿಸತಕ್ಕದ್ದು. ಲೇಬಲ್‌ಗಳು ಕಳುಹಿಸತಕ್ಕವರು ರೂಪಾಯಿ ಒಂದಕ್ಕೆ ಒಂದು ಆಣೆ ಡಿಸ್ಕೌಂಟ್ ಸಹ ಸೇರಿಸಿ ಕಳುಹಿಸತಕ್ಕದ್ದು. ಅರ್ಧಾಣೆಗಿಂತ ಜಾಸ್ತಿ ಕ್ರಯವುಳ್ಳ ಲೇಬಲ್‌ಗಳನ್ನು ಕಳುಹಿಸಕೂಡದು. ಡಿಸ್ಕೌಂಟ್ ಇಲ್ಲದೆ ಕಳುಹಿಸಲ್ಪಡುವ ಮೊಬಲಗಿನಲ್ಲಿ ಆ ಮೊಬಲಗು ವಜಾಮಾಡಲ್ಪಟ್ಟು ಮಿಕ್ಕ ಮೊಬಲಗು ಲೆಕ್ಕಕ್ಕೆ ದಾಖಲ್ಮಾಡಿಕೊಳ್ಳಲ್ಪಡುವದು.

ಪ್ರಕಟನೆಯ ರಿವಾಜ್.

ಮೊದಲನೆಯ ದಫಾ ಪಂಕ್ತಿ ಒಂದಕ್ಕೆ ೦—೨—೦
ಎರಡನೆಯ ದಫಾ ಪಂಕ್ತಿ ಒಂದಕ್ಕೆ ೦—೧—೦

ಷರಾ—ಎರಡಾವರ್ತಿಗಿಂತ ಜಾಸ್ತಿಯಾಗಿ ಎಷ್ಟು ತಡವೆ ಪ್ರಕಟಿಸಬೇಕಾದಾಗ್ಯೂ ಪಂಕ್ತಿ ಒಂದಕ್ಕೆ ೧ ಆಣೆಯಂತೆಯೇ ಲೆಕ್ಕ ಮಾಡಲ್ಪಡುವದು. ಈ ಪತ್ರಿಕೆಯಲ್ಲಿ ಪ್ರಕಟಿಸಬೇಕಾದುದರ ಬಗ್ಗೆ ಪ್ರಕಟನೆಗಳು ಕಳುಹಿಸುವವರು ಅವು ಎಷ್ಟಾವರ್ತಿ ಪ್ರಕಟಿಸ್ ಮಾಡಲ್ಪಡಬೇಕೋ ಆ ಅಂಕವನ್ನು ಸ್ಪಷ್ಟವಾಗಿ ತಿಳಿಸತಕ್ಕದ್ದು. ಇಲ್ಲದಿದ್ದಕ್ಷ್ಕೆ ಅವು ನಮಗೆ ನಿಲ್ಲಿಸುವಂತೆ ಬರೆಯುವತನಕ ಅವು ಪ್ರಕಟಿಸುತ್ತಲಿದ್ದು ಹಾಗೆ ಎಷ್ಟಾವರ್ತಿ ಪ್ರಕಟಿಸಲ್ಪಟ್ಟಿದ್ದಾಗ್ಯೂ ಮೇಲೆ ಕಂಡ ದರದಂತೆ ಕಿಮ್ಮತ್ ವಸೂಲ್ಮಾಡಲ್ಪಡುವದು. ಪ್ರಕಟನೆಯ ಬಗ್ಗೆ ಕಳುಹಿಸಲ್ಪಡತಕ್ಕ ಪ್ರಕಟನೆಗಳನ್ನು ಆ ಯಾ ಶನಿವಾರದ ಮಧ್ಯಾಹ್ನ ೨ ಘಂಟೆ ಒಳಗಾಗಿ ಕಳುಹಿಸಬೇಕು. ಪ್ರಕಟನೆಯ ಬಗ್ಗೆ ಈ ಪತ್ರಿಕೆಗೆ ಕಳುಹಿಸಲ್ಪಡತಕ್ಕ ಕಾಗದಗಳಲ್ಲಿ ತಿಳಿಸಲ್ಪಡುವ ಅಭಿಪ್ರಾಯಗಳಿಗೆ ನಾವು ಜವಾಬ್ದಾರರಾಗಲಾರೆವು. ಕ್ರಮವಾಗಿ ರುಜುಮಾಡಿ ದಯೊರ್ತು ಯಾವ ಕಾಗದವನ್ನು ಪ್ರಕಟಿಸಲಾರೆವು. ಸಿರಾ ಹೊಸಲ್ಪಟ್ಟ ಕಾಗದಗಳು ಮರ. ವಾಪಸ್ ಕಳುಹಿಸಲ್ಪಡಲಾರವು.

"IT RECOMENDS ITSELF"

ALL WHO SUFFER FIND SURE RELIEF.

LITTLE'S

ORIENTAL BALM

THE MOST EFFECTUAL MODERN REMEDY FOR PAIN.

ಲಿಟಿಲ್ ಯೆಂಬವರಿಂದ ತಯಾರ್ಮಾಡಲ್ಪಟ್ಟ "ಓರಿಯಂಟಲ್ ಬಾಮ್" ಎಂಬ ಪೂರ್ವದೇಶ ಸಂಬಂಧವಾದ ಅಮೂಲ್ಯ ತೈಲವು ಸ್ವಶಕ್ತಿ ಪ್ರದರ್ಶಕವಾದದ್ದು, ಮತ್ತು ಸಫಲವಾದ ನವೀನ ಪ್ರತಿಕ್ರಿಯಾರೂಪವಾದ ಔಷಧವು. ಇದರಿಂದ ಸಕಲ ವಾತರೋಗಗಳೂ, ವಾತಸಂಬಂಧಗಳಾದ ಸಂಧಿಬಂಧಗಳೂ ನಿವೃತ್ತಿಯಾಗುವವು. ಮುಖ್ಯವಾಗಿ ಚಿರಕಾಲಿಕವಾದ ವಾತರೋಗಗಳು, ಕಾಸ, ಗಂಟ್ಲುನಲ್ಲಿ ಉರಿ, ನಡುವುನೋವು, ಕೀಲುವಾಯು, ಕಟಿವಾಯು, ಉಳುಕು ನೋವು, ತಲೆನೋವು, ತಿಮಿರವಾಯು ಮುಂತಾದ ರೋಗಗಳಿಗೆಲ್ಲ ನಿಸ್ಸಂದೇಹವಾಗಿ ಬಹಳ ಪ್ರಯೋಜನವನ್ನುಂಟು ಮಾಡತಕ್ಕದ್ದು. ಈ ತೈಲವನ್ನು ನೋವುಳ್ಳ ಸ್ಥಳಗಳಲ್ಲಿ ಕೆಲವಾವರ್ತಿ ಸವರಿ ಕಾವುಂಟಾಗುವಂತೆ ಚೆನ್ನಾಗಿ ತಿಕ್ಕಿದಲ್ಲಿ ಸಹಜಗಳಾದ ಎಲ್ಲಾ ನೋವುಗಳನ್ನು ನಿವೃತ್ತಿ ಮಾಡುವಂತಾ ಉತ್ತಮ ತೈಲವಾಗಿರುತ್ತದೆ. ಸಕೃತ್ಪ್ರಯೋಗದಲ್ಲೇ ಅರೆತಲೆನೋವು ಮತ್ತು ಜೋಮು ಶೀಘ್ರವಾಗಿ ನಿವೃತ್ತಿಯಾಗುವದು. ಗಂಟ್ಲುನಲ್ಲುಂಟಾಗುವ ಉರಿ ಅಥವಾ ವ್ರಣಗಳಿಗೆ ಈ ತೈಲವು ಅದ್ಭುತವಾದ ಮತ್ತು ಶೀಘ್ರವಾದ ಸಂಪೂರ್ಣ ಗುಣವನ್ನುಂಟುಮಾಡುವದು. ಅದ್ಭುತವಾದ ಈ ಔಷಧವನ್ನು ಉಪಯೋಗಿಸಿದಲ್ಲಿ ಅದರ ಪ್ರಯೋಜನವು ಸ್ವತಃವೇ ವ್ಯಕ್ತವಾಗುವದು. ಈ ತೈಲವು ಶೀತಗಾಳಿ ಮಂಜು ಮುಂತಾದವುಗಳಿಗೊಳಗಾಗಿ ಸಂಚರಿಸುವಂತಾ ಪ್ರಯಾಣಿಕರು, ಬೇಟೆಯಾಡುವವರು, ದೇಶಾಟನ ಮಾಡುವವರು, ಮುಂತಾದವರಿಗೆಲ್ಲ ಅಮೂಲ್ಯವಾದದ್ದು.

ಪರಿಶೀಲಕರ ಅಭಿಪ್ರಾಯವು.

ಐರ್ಲ್ಯಾಂಡ್ ದೇಶದ ಫಾರ್ಮಸ್ಯೂಟಿಕಲ್ ಸೊಸೈಟಿಯ ಔಷಧಶಾಲೆಯ ಪ್ರೊಫೆಸರರಾಗಿಯೂ, ಸರ್ಜನ್ ಡೇವಿಡ್ ಕೆಮಿಕಲ್ ಸೊಸೈಟಿ ಯೆಂಬ ಮೃತ್ಸಾಷಾಣಾದಿವಿವೇಚಕ ಸಭಾಸದರಾಗಿಯೂ, "ಮಿನರಲ್ ವಾಟರ್ಸ್ ಆಫ್ ಯೂರಪ್" ಎಂಬ ಗ್ರಂಥಕರ್ತರಾಗಿಯೂ, ರಸಾಯನ ವಿಷಯಕವಾದ ಅನೇಕ ಉದ್ಯೋಗಾಧಿಕಾರಿಯಾಗಿಯೂ, ಇರುವ ಪ್ರೊಫೆಸರ್ ಟಿಚ್‌ಬೋರ್ನ್ (C. R. Tichborne, L. L. D., F. C. S., M. R. I. A.,) ಯೆಂಬವರು ಅಭಿಪ್ರಾಯ ಪಟ್ಟಿರುತ್ತಾರೆನಂದರೆ—ಲಿಟಿಲ್‌ರವರ ಓರಿಯಂಟಲ್ ತೈಲವನ್ನು ಜಾಗರೂಕತೆಯಿಂದ ಪರೀಕ್ಷಿಸಿದ್ದರೊಳಗೆ ಇದು ಬಹುವಿಧ ಮೂಲಿಕೆಗಳ ಮಿಶ್ರಣವಾದ ತೈಲವೆಂದೇ ಹೇಳತಕ್ಕದ್ದು, ಇದು ಹೊರಗೆ ಉಪಯೋಗಿಸಲ್ಪಡುವದಾಗ ಶೀಘ್ರವಾಗಿ ನಿರುಪದ್ರವಕರವಾದದ್ದಾಗಿದ್ದರೂ, ನಿಜವಾಗಿ ಪ್ರಬಲ ರೋಗ ನಿವಾರಕ ಶಕ್ತಿಯುಳ್ಳದ್ದಾಗಿರುತ್ತದೆ. ಈ ಮಿಶ್ರೌಷಧವು ನರಗಳನ್ನು ಸ್ಥಿಮಿತಕ್ಕೆ ತರತಕ್ಕದ್ದಾಗಿರುವದರಿಂದ ಇದು ಯಾವ ತರದ ರೋಗಗಳಿಗೆ ಉಪಯುಕ್ತವೆಂದು ತಿಳಿಸಲ್ಪಟ್ಟಿದೆಯೋ ಸದರೀ ರೋಗಗಳಲ್ಲಿ ಅದರ ಪ್ರಯೋಜನವು ಸ್ಪಷ್ಟವಾಗುವದು. ಈ ತೈಲವು ಸಂಪೂರ್ಣ ಜಾಗರೂಕತೆಯೊಡನೆ ತಯಾರ್ಮಾಡಲ್ಪಟ್ಟಿರುತ್ತದೆ.

ಇದರ ಕ್ರಯ—ಸೀಸೆ ಒಂದಕ್ಕೆ ೧ ರೂಪಾಯಿ.

ಇದು ವಿಸ್ಕ್ ಔಷಧ ಶಾಲೆಯಲ್ಲಿಯೂ, ಮದರಾಸ್ ಶಂಭುದಾಸ್ ಬೀದಿಯಲ್ಲಿ, ೨೦ನೇ ನಂಬರ್ ಮನೆಯೊಳಿರುವ, ಮೆ. ಎ. ಸಿ. ಬೆರ್ರಿಮನ್ ಯವರಲ್ಲಿಯೂ, ಈ ಪ್ರಾಂತ್ಯದಲ್ಲಿರುವ ಅವರ ಏಜಂಟ್‌ಗಳಾದ ಜೆ. ವೆಬ್ ಯವರ ಕಂಪನಿಯಲ್ಲಿಯೂ, ಮೆ. ಕೆಪ್ಟನ್ ಅಂಡ್ ಕಂಪನಿಯವರಲ್ಲಿಯೂ, ರಿಗ್ಸ್ ಯವರ ಕಂಪನಿಯವರಲ್ಲಿಯೂ ದೊರೆಯುವದು.

AGENTS.— Messrs, J. Webb, Chemist, &c., Bangalore.
Captain & Co. Chemists, Bangalore.
Riggs & Co., Chemists, Bangalore; and of
Mahomed Yousoff and Sons, The Cash Bazar, Bangalore
A. C. Berryman & Co.,
20 Sambodoss Street Madras.

NOTICE.

VAIDYASARA SANGRAHA

A TREATISE ON THE PRINCIPLES OF

HINDU MEDICINE.

☞ Price including Postage Rs 5 6-0

ವೈದ್ಯಸಾರ ಸಂಗ್ರಹ.

ಈಗ್ರಂಥಾಪೇಕ್ಷೆಯುಳ್ಳವರು ಮೊಬಲಗಿನೊಡನೆ ಈ ಕೆಳಗೆ ರುಜುಮಾಡಿರತಕ್ಕವರ ಹೆಸರಿಗೆ ಬರೆದುಕೊಂಡರೆ ಪುಸ್ತಕ ಕೂಡಲೇ ಕಳುಹಿಸಲ್ಪಡುವದು. ಮೊಬಲಗು ಇಲ್ಲದ ದರಖಾಸ್ತುಗಳಿಗೆ ಸುತರಾಂ ನಿಗೇಕೊಡಲ್ಪಡಲಾರದು.

ಇದರ ಕ್ರಯ ... ...ರೂ॥ ೫—೦—೦
ಪ್ಯಾಕಿಂಗ್ ಮತ್ತು ಅಂಚೇಹಾಸಲ್, ೦—೬—೦

ಟಿ. ಬಿ. ವೆಂಕಟಾಚಾರ್,
ಆಸ್ಪತ್ರಿರೋಡ ಬೆಂಗಳೂರು.

ವಿಶೇಷ ವರ್ತಮಾನ.



ಪೂನೆ ಚಿತ್ರಶಾಲೆಯಲ್ಲಿ ಸ್ಥಾಪಿಸಲ್ಪಟ್ಟಿರುವ ಜೊಗೇ ಶಿಲಾಯಂತ್ರದಲ್ಲಿ, ಹಿಂದೂ ದೇವತೆಗಳ, ಚರಿತ್ರೆಗಳ ಮೂಲಕ ಪ್ರಸಿದ್ಧರಾದ ಪಟ್ಟದವರ, ಮುಂತಾದವರ ಚಿತ್ರಗಳ ಬಣ್ಣದ ತಿಸ್ವೀರುಗಳು ತಯಾರಾಗುತ್ತಲಿವೆ. ಅವುಗಳ ಕೆಲಸಗಾರಿಕೆಯು ನಾಜೂಕವನ್ನು ನೋಡಿದರೆ ಕ್ರಯ ಬಹಳ ಅಲ್ಪವಾಗಿದೆ. ಬೇಕಾದವರಿಗೆ ಕ್ರಯದಪಟ್ಟಿ ಕಳುಹಿಸಲ್ಪಡುವದು.

ಪೂನೇ ಮಹರ್ ಚಿತ್ರಶಾಲೆಯ ಮ್ಯಾನೇಜರ್.

ನೋಟೀಸು.

ಅವ್ವಲ್ ಬಾಬತು ಬಿನ್ನಾವರಿ ಅತ್ತರುಗಳು !
ಬಾಧೆ ನಿವರ್ತಿ ಮಾಡುವ ದಂತಭಸ್ಮ ! !
ಅನೇಕ ಸುಗುಣಗಳುಳ್ಳ ಸುಗಂಧರಾಜ ತೈಲವು ! ! !

ನಾನಾತರದ ಅವ್ವಲ್ ಬಾಬತು ಊದು ಬತ್ತಿಗಳು
ಮತ್ತು ಬಿಲ್ಲೆಗಳು ಹಸೀ ಬಿಲ್ಲೆಗಳು ವಗೈರೆ.

ಇವುಗಳೆಲ್ಲ ಬಹಳ ಘರವಾಯಿಲ್ಲದ ಮುಂದೆ ತಯಾರಾಗಿ ವಿಕರೀಬಗ್ಗೆ ಸಿದ್ಧವಾಗಿರುತ್ತೆ. ಅಲ್ಲದೆ ೫ ಸಾವಿರ ಶೀಸಾಯಿಗಳಿಗೆ ಮೇಲ್ಪಟ್ಟು ಖರ್ಚಾಗಿರುವ, ಬಹಳ ಸಂಕಟಗಳನ್ನು ಪರಿಹಾರ ಮಾಡಿ ಆಯುವಾಗಲೂ ಸುವಾಸನೆ ಕೊಡುವ ಸುಗಂಧರಾಜ ತೈಲವು ರಾತ್ರಿ ಹಗಲು ಬಾಧಿಸುವ ಹಲ್ಲು ನೋವನ್ನು ಪರಿಹಾರ ಮಾಡುವ ದಂತ ಭಸ್ಮ ಸಹ ಬಹಳ ಕೆಮ್ಮಿ ಚಾರ್ಜಿಗೆ ಸಿಕ್ಕುವದು. ಏಜಂಟ್ ಆ ಮಹಮದ್ ಖಾಸಿಂ, ಬೆಂಗಳೂರು ದೊಡ್ಡಪೇಟೆ ಅಂಚೇ ಕಚ್ಚೇರಿ ರೂಬರೂ ಸಾಹುಕಾರ್.

Bangalore City Municipality.

ಬೆಂಗಳೂರು ಸಿಟಿ ಮ್ಯುನಿಸಿಪಾಲಿಟಿ.

ಸನ್ ೧೮೮೮ನೇ ಇಸವಿ ಡಿಸೆಂಬರ್ ೨೧ನೇ ತಾರೀಖು ಶುಕ್ರವಾರದದಿನ ಪ್ರಾತಃಕಾಲ ೭½ ಘಂಟೆಗೆ ಸಿಟಿ ಮ್ಯುನಿಸಿಪಲ್ ಕಮಿಷನರ್‌ಗಳು ತಮ್ಮ ಆಫೀಸ್ ಕಟ್ಟಡದಲ್ಲಿ ಸಭೆ ಸೇರುವಾಗ ಅವರ ವಿಚಾರಕ್ಕೆ ತರಲ್ಪಡುವ ವಿಷಯಗಳ ಯಾದಾಸ್ತು.

೧. ಸನ್ ೧೮೮೮ನೇ ಇಸವಿ ನವಂಬರ್ ತಿಂಗಳ ಬಾಬತು ನಗದು ಜಮಾಖರ್ಚು ಲೆಕ್ಕ ಮತ್ತು ಮರಣ ಲೆಕ್ಕಗಳು.

೨. ಸನ್ ೧೮೮೯—೯೦ನೇ ಸರ್ಕಾರ ಸಾಲಿ ಬಜೆಟ್ ಲೆಕ್ಕದಲ್ಲಿ ಸೇರಿಸಬೇಕೆಂದು ಯೋಚಿಸಲ್ಪಟ್ಟಿರುವ ಹೊಸ ಕಾಮಗಾರಿಗಳ ವಿಷಯದಲ್ಲಿ ಸಬ್ ಕಮಿಟಿಯವರು ಕೊಟ್ಟ ರಿಪೋರ್ಟ್.

೩. ಗಳುಮಂಗಡಿಗಳನ್ನು ಈಗಿನ ಸ್ಥಳದಿಂದ ಬೇರೆ ಒಂದು ಸ್ಥಳಕ್ಕೆ ತೆಗೆದು ಹಾಕಿಸಬೇಕಾದ ವಿಷಯದಲ್ಲಿ ಸಬ್ ಕಮಿಟಿಯವರು ಕೊಟ್ಟಿರುವ ರಿಪೋರ್ಟ್.

೪. ಬಾಣ ಅಂಗಡಿಗಳನ್ನು ಬೇರೆ ಒಂದು ಸ್ಥಳಕ್ಕೆ ಸಾಗಿಸಬೇಕಾದ ವಿಷಯದಲ್ಲಿ ಸಬ್ ಕಮಿಟಿಯವರು ಕೊಟ್ಟಿರುವ ರಿಪೋರ್ಟ್.

೫. ಸನ್ ೧೮೮೮ನೇ ಇಸವಿ ನವಂಬರ್ ೨೮ನೇ ಮಕಾಂನಲ್ಲಿ ಬೋರ್ಡಿನವರು ಸಭೆ ಸೇರಿ ಮಾಡಿದ ನಿರ್ಣಯವನ್ನನುಸರಿಸಿ ಬಂಡಿಮೋಟಿಗಳ ವಿಷಯದಲ್ಲಿ ಮಾಡಲ್ಪಟ್ಟಿರುವ ಮುಸವಿದಾ ನಿಬಂಧನೆಗಳನ್ನು ಕುರಿತು ಮರಳಿ ಆಲೋಚಿಸಬೇಕಾದ ಅಂಶ.

೬. ಈ ಪಟ್ಟಣದಲ್ಲಿ ಸರ್ಕಾರ ಸಹಾಯಪೂರ್ವಕ ಸ್ಥಾಪಿಸಲ್ಪಟ್ಟಿರುವ ಮಹಾರಾಷ್ಟ್ರ ಪಾಠಶಾಲೆಯ ಉಪಾಧ್ಯಾಯರಾದ ಯಶೋದೆ ಯೆಂಬವರು ಬರೆದುಕೊಂಡಿರುವ ಅರ್ಜಿಯನ್ನು ಅನುಕೂಲವಾದ ಆಲೋಚನೆಗೆ ತರಬೇಕೆಂದು ವಿದ್ಯಾಭ್ಯಾಸದ ಇಲಾಖಾ ಸೆಕ್ರೆಟರಿಯವರು ಬರೆದ ಸನ್ ೧೮೮೮ನೇ ಇಸವಿ ಡಿಸೆಂಬರ್ ೨ನೇ ಮಕಾಂ ೩೭೮ನೇ ನಂಬರ್ ಲೆಟರ್.

೧೪ನೇ ಡಿಸಂಬರ್ ೮೮.

A. Srinivasa Charlu, R. B.,

Office of the City Municipality Bangalore, } Vice-President, City Municipal Commission.

ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA.

MONDAY, DECEMBER 17, 1888

೧೮೮೮ನೇ ಡಿಸೆಂಬರ್ ತಾ|| ೧೭ನೇ ಸೋಮವಾರ

HIDU SOCIAL RLFORMS.

ಹಿಂದೂಗಳು ತಮ್ಮ ಮತ ಸಂಬಂಧಗಳಾದ ಆಚಾರ ವ್ಯವಹಾರಗಳಲ್ಲಿ ಶಾಸ್ತ್ರಕ್ಕೆ ವಿರೋಧವಿಲ್ಲದಂತೆ, ಪಂಡಿತರ ಸಮ್ಮತಿಯಿಂದ, ಅಯುಕ್ತಗಳಾಗಿಯೂ ಅನಾವಶ್ಯಕಗಳಾಗಿಯೂ ಇರುವವು ತೊರೆದು, ಅತ್ಯಂತಾವಶ್ಯಕಗಳಾಗಿಯೂ, ಉಪಯುಕ್ತಗಳಾಗಿಯೂ, ಬಿಟ್ಟದ್ದರಿಂದ ಪ್ರತ್ಯವಾಯಕ್ಕೆ ಆಸ್ಪದವಿಲ್ಲವಾದವುಗಳಾಗಿಯೂ ಇರುವ ವಿಷಯಗಳನ್ನು ಮಾತ್ರ ಅಂಗೀಕರಿಸಿ ಆಚರಣೆಯೊಳು ತಂದರೆ ಕಾಲ ದೇಶ ವರ್ತಮಾನಗಳಿಗೆ ಸರಿಯಾಗಿರುವದೆಂಬ ತಾತ್ಪರ್ಯವಂ ಸೂಚಿಸುತ್ತ, ಒಂದಾನೊಂದು ಪತ್ರಿಕೆ ತಿಳಿಸುವದೇನೆಂದರೆ—"ಹಿಂದೂಗಳು ಬರುತ ಬರುತ ವೈಲಕ್ಷಣ್ಯವನ್ನು ಹೊಂದತಕ್ಕ ಬಗ್ಗೆ ತಮ್ಮ ತಮ್ಮ ಸಂಪ್ರದಾಯಗಳನ್ನು ತಿದ್ದಿಕೊಳ್ಳುವದು ಯುಕ್ತವೆಂದು ಕಾಣುತಿದೆ. ಮಹಲಾಹಿಂದೂಗಳ ವಿವಾಹ ವಿಷಯದೊಳು ಯೆಲ್ಲ ಅಂಶಗಳೂ ಯುಕ್ತಗಳಾದಾಗ್ಯೂ ಋಣ ಮಾಡಿ ಧನವ್ಯಯ ಮಾಡುವದೊಂದು ಮಾತ್ರ ಸರಿಯಲ್ಲವು. ವಿವಾಹಕಾಲದಲ್ಲಿ ಶಾಸ್ತ್ರಸಿದ್ಧಗಳಾದ ಕರ್ಮಗಳಿಗಾಗಿ ವ್ಯಯವಾಗುವ ಭಾಗವು ಬಹಳ ಅಲ್ಪವಾಗಿಯೇ ಇರುತಿದೆ. ಪರಂತು ಅನಾವಶ್ಯಕಗಳಾದ ಇತರ ವಿಷಯಗಳಿಗಾಗಿ ಬಹಳ ಧನವ್ಯಯವಾಗುತಿದೆ. ಅದು ವ್ಯವಸ್ಥೆ ಮಾಡಿದರೆ ಬಹಳ ಚೆನ್ನಾಗಿರುವದೆಂಬ ಅಭಿಪ್ರಾಯವು ಈಚೆಗೆ ಬಹುಮಂದಿಗೆ ತಲೆದೋರಿ ಅವರು ತಕ್ಕ ಏರ್ಪಾಡುಗಳಂ ಮಾಡುವಂತೆ ಆಗಿಂದಾಗ್ಯೆ ವೃತ್ತಾಂತ ಪತ್ರಿಕೆಗಳ ಮೂಲಕ ತಿಳಿಯಬರುತಿದೆ. ಎಂದು ನಮ್ಮ ಅನುಭವದಿಂದಲ್ಲಿ ಹಿಂದೂಗಳ ವಿವಾಹದೊಳು ವಿಶೇಷ ಧನವ್ಯಯ ಮಾಡುವದಕ್ಕಿಂತ ಜನಗಳಿಗೆ ಬಹಳ ಅನರ್ಥಕಾರಿಯಾದ ಮತ್ತೊಂದು ಪದ್ಧತಿ ಬಹಳ ಪ್ರಬಲಗೊಂಡಿದೆ, ಅದಂ ಪ್ರತ್ಯಗಾದರು ವ್ಯವಸ್ಥೆ ಮಾಡಿದರೆ ಮಿಕ್ಕವೆಲ್ಲವು ಸ್ವತಃ ಕ್ರಮಪಡಬಹುದು. ಅದೇನೆಂದರೆ—ಅಕಾಲದಲ್ಲಿ, ಅಂದರೆ, ಹುಡುಗರು ಅಪ್ರಾಪ್ತ ವಯಸ್ಕರಾಗಿ ಲೋಕಚರ್ಯಾನಭಿಜ್ಞರಾಗಿರುವಲ್ಲಿ ಕೇವಲ ವಾತ್ಸಲ್ಯಾತಿಶಯದಿಂ ವಿವಾಹ ಮಾಡುವದೂ, ತನ್ಮೂಲಕ ಮುಂದೆ ಉಂಟಾಗಬಹುದಾದ ಅನರ್ಥಪರಂಪರಾ ಫಲಗಳಂ ಪೂರ್ವಭಾವಿಯಾಗಿ ಚಿಂತಿಸದಿರುವದೂ ಕೇವಲ ಪ್ರಮಾದಕರವಾದವಾಗಿರುತಿವೆ. ಇದು ಲೌಕಿಕ ನ್ಯಾಯರೀತ್ಯಾ ಹುಡುಗಿಯರಿಗೂ ಹುಡುಗರಿಗು ಸಹ ಅಭಿವೃದ್ಧಿಕರವಲ್ಲವು. ಬ್ರಾಹ್ಮಣರಲ್ಲಿ ಹೆಣ್ಣು ಮಕ್ಕಳು ಮೈನೆರೆಯುವದಕ್ಕಿಂತ ಮುಂಚಿತವಾಗಿ ಮದುವೆ ಮಾಡಬೇಕೆಂಬದಾಗಿ ಶಾಸ್ತ್ರದಲ್ಲಿ ತಿಳಿಸಲ್ಪಟ್ಟಿರುವದರಿಂದ ಅದಂ ಶಾಸ್ತ್ರಬದ್ಧರಾದವರೆಷ್ಟು ಮಾತ್ರವೂ ಉಲ್ಲಂಘಿಸುವದಕ್ಕಾಗುವದಿಲ್ಲವು. ಅಂತಾ ನಿಯಮ ಗಂಡುಸರ ವಿಷಯದಲ್ಲಿರುವದಿಲ್ಲವಾಗಿ ಅವರು ಚೆನ್ನಾಗಿ ವಿದ್ಯಾಭ್ಯಾಸ ಮಾಡಿ ಪ್ರಾಪ್ತ ವಯಸ್ಕರಾದಮೇಲೆ ಅವರ ಅಭಿಪ್ರಾಯಾನುಗುಣವಾಗಿ ವಿವಾಹ ಮಾಡುವದು ಯುಕ್ತವಾಗಿರುತಿದೆ. ಹಾಗಿಲ್ಲದೆ ಆರೇಳುವಯಸ್ಸಿನಲ್ಲಿ ಹುಡುಗನಿಗೆ ಸಮಾನ ವಯಸ್ಸಿನಲ್ಲಿ ಹುಡುಗಿಯನ್ನು ಗಂಟು ಹಾಕುವದರಿಂದ ಅವರು ಪೂರ್ಣ ವಯಸ್ಸನ್ನೂ, ಜ್ಞಾನವನ್ನೂ ಹೊಂದಲಿಕ್ಕೆ ಪೂರ್ವವೇ ವಿಷಯಾಸಕ್ತರಾಗಿ, ಅದರಿಂದ ಕ್ಷೀಣಬಲವುಳ್ಳವರಾಗಿಯೂ, ಜ್ಞಾನ ಸಾಧನವಿಲ್ಲದವರಾಗಿಯೂ, ಸ್ಥೈರ್ಯ ಧೈರ್ಯೋತ್ಸಾಹ ಶೂನ್ಯರಾಗಿಯೂ ಆಗುತ್ತಾರೆ. ಈ ಕಾರಣಗಳಿಂದ ಅವರಿಗೆ ಜನಿಸುವ ಮಕ್ಕಳಾದರೋ ಅವರಿಗಿಂತ ದುರ್ಬಲರಾಗಿಯೂ, ಅಲ್ಪ ಬುದ್ಧಿಯುಳ್ಳವರಾಗಿಯೂ, ಧಾರಣಾಶಕ್ತಿ ಇಲ್ಲದವರಾಗಿಯೂ, ಅಲ್ಪಾಯುಗಳಾಗಿಯೂ ಆಗುತ್ತಾರೆ. ಬ್ರಾಹ್ಮಣರಲ್ಲಿ ಮಾತ್ರ ಈ ಪದ್ಧತಿ ನೆಲೆಗೊಂಡಿದೆಯೆಂದು ಹೇಳಲಾಗದು. ಎಲ್ಲಾ ಬಗೆಯವರಲ್ಲಿಯೂ ಇಂತಾ ವಿವಾಹಗಳು ಬಹಳವಾಗಿ ನಡೆಯುತಲಿವೆ. ದರಿದ್ರರಿಗಿಂತಲು ಧನಾಢ್ಯರಲ್ಲಿ ಈ ವಿವಾಹಗಳು ಹೇರಳವಾಗಿ ಜರುಗುವವು. ಅತ್ಯಂತ ದರಿದ್ರರು ಅನುಪಪತ್ತಿ ಪ್ರಾಬಲ್ಯದಿಂದ ಸದರೀ ಅಕಾಲ ವಿವಾಹವೆಂಬ ಅಪಾಯಕ್ಕೆ ಶೀಘ್ರವಾಗಿ ಗುರಿಯಾಗುವದಿಲ್ಲವು. ಇನ್ನು ವಿವಾಹದಲ್ಲಿ ನಡೆಯುವ ಖರ್ಚನ್ನು ಕುರಿತು ವಿಚಾರ ಮಾಡಿದರೆ, ಕೆಲವರು ಮಾತ್ರ ತಮ್ಮ ಹೆಣ್ಣು ಮಕ್ಕಳಿಗೆ ವಿವಾಹ ಮಾಡುವಾಗ್ಯೆ ಕನ್ಯಾದಾನ ಮಾಡುತ್ತಾರೆ. ಮಿಕ್ಕಾದವರೆಲ್ಲರೂ ಬೇಕಾದ ದ್ರವ್ಯವಂ ತೆಗದುಕೊಂಡು ಹೆಣ್ಣನ್ನು ಕೊಡುತ್ತಾರೆ. ಮಕ್ಕಳಿಗೆ ಅಕಾಲ ವಿವಾಹವನ್ನು ದೊಡ್ಡವರು ಮಾಡದೆ ಹೋದರೆ ಮಹಾದೋಷವೂ ಅಪಕೀರ್ತಿಯೂ ಉಂಟಾಗುವದೆಂಬ ಭಾವನೆ ಅನೇಕರಿಗೆ ನಿರೂಢವಾಗಿದೆ. ಇಂತಾ ಭಾವನೆಯಿಂದ ವಾಸಮಾಡುವ ಮನೆಯನ್ನೂ ಜೀವನಾಧಾರವಾದ ಜಮೀನನ್ನೂ ಮಾರಿ ಅವರವರ ಯೋಗ್ಯತಾನುಸಾರ ನೂರರವೊದಲು ಯೆರಡುಸಾವಿರ ರೂಪಾಯಿಗಳ ತನಕ ವ್ಯಯಮಾಡಿ, ಅಲ್ಲಿಗೂ ಸಾಲದೆ ಹೋದರೆ ಸಾಲಮಾಡಿ ವಿವಾಹಮಾಡುತ್ತಾರೆ. ಕಡೆಗೆ ಮದುವೆಯಾದ ಬಳಿಕ ಅವರು ಜೀವನಕ್ಕಿಲ್ಲದೆ ಭಿಕಾರಿಗಳಾಗಿ ಪಿಷ್ಟಾಚನ ಮಾಡುವಂತೆ ಪರಿಣಮಿಸುವಾಗ್ಯೆ ವಿವಾಹಕಾಲದಲ್ಲಿ ಸತ್ಕರಿಸಲ್ಪಟ್ಟವರಲ್ಲೊಬ್ಬರೂ ಕಣ್ಣೆತ್ತಿ ನೋಡುವದಿಲ್ಲವು. ಇದರಿಂದೇನು ತೋರುತ್ತಿದೆಯೆಂದರೆ, ಯಾವರೀತಿಯಿಂದಲಾದರು ವಿವಾಹಮಾಡುವದೇ ಪುರುಷಾರ್ಥವೆಂದು ಭಾವಿಸಲ್ಪಡುವಂತೆ ಏರ್ಪಡುತಿದೆಯೇ ಹೊರ್ತು ದಂಪತಿಗಳು ಉತ್ತರೋತ್ತರ ಸುಖವಾಗಿ ಜೀವಿಸುವ ಬಗೆಯೇ ಮುಖ್ಯಾಂಗವಾಗಿ ಚಿಂತಿಸಲ್ಪಡುವದಿಲ್ಲವು. ಆದದರಿಂದ ಈವಿಧ ವಿವಾಹಗಳಿಗೆ ಕಾರಣಭೂತವಾದದ್ದು ಕನ್ಯಾಶುಲ್ಕವೇ ಹೊರತು ಬೇರೊಂದಿಲ್ಲವು. ವಿವಾಹಾಕಾಂಕ್ಷಿಯಾದವನಿಗೆ ಸದರೀ ಕನ್ಯಾಶುಲ್ಕವೂ, ತನ್ನ ಗೌರವಾನುಗುಣವಾಗಿ ವ್ಯಯ ಮಾಡಿ ವಿವಾಹ ಮಾಡಿಕೊಳ್ಳಬೇಕೆಂಬ ಕೋರಿಕೆಯೂ, ಏಕಕಾಲದಲ್ಲಿ ಪ್ರಾಪ್ತವಾದರೆ ಅವನು ಮತ್ತಷ್ಟು ನಿರ್ಗತಿಕನಾಗಲಿಕ್ಕೆ ಬೇರೊಂದೂ ಅವಶ್ಯಕವಿರಲಾರದು. ಆದದರಿಂದ ಆಯಾ ಸ್ಥಳದಲ್ಲಿ ಪಂಡಿತರು ಪಕ್ಷಮಂಡಿಸೇರಿ, ಶಾಸ್ತ್ರವಿರುದ್ಧವಾಗಿ ಕನ್ಯಾ ಶುಲ್ಕ ತೆಗದುಕೊಳ್ಳುವ ಸಂಪ್ರದಾಯವು ಈಚೆಗೆ ಈ ದೇಶದಲ್ಲಿಯೂ ಪ್ರಬಲಿಸುತ ಬರುವದರಿಂದ ಅಂತಾ ಸಂಪ್ರದಾಯವನ್ನೂ ಅನಿರೂಪಕಗಳಾದ ಪ್ರತಿಷ್ಠಾ ಸಂಪಾದನಾರ್ಥ ವ್ಯರ್ಥವಾಗಿ ದ್ರವ್ಯ ವ್ಯಯ ಮಾಡುವದನ್ನೂ ನಿಲ್ಲಿಸತಕ್ಕ ಬಗ್ಗೆ ಯೇನಾದರು ವ್ಯವಸ್ಥೆ ಮಾಡಿದರೆ ಬಹಳ ಮೇಲುಂಟಾಗುವದು. ಕನ್ಯಾಶುಲ್ಕವಂ ಪರಿಗ್ರಹಿಸುವದಕ್ಕೂ, ಮಾಂಸ ವಿಕ್ರಯಕ್ಕೂ, ನಮ್ಮ ಬುದ್ಧಿಯಲ್ಲಿ ಯಾವತಾರತಮ್ಯವೂ ಕಾಣಿಸಲಿಲ್ಲವಾಗಿ ಅಂತಾ ಮಾಂಸ ವಿಕ್ರಯಕ್ಕೆ ಶಾಸ್ತ್ರದಲ್ಲಿ ತಿಳಿಸಲ್ಪಟ್ಟಿರುವ ದೋಷಗಳಾದರೋ ಅಪಾರಗಳಾಗಿಯೂ, ಪ್ರಾಯಶ್ಚಿತ್ತಗಳಾದರೋ ಅತಿ ಕ್ರೂರಗಳಾಗಿಯೂ, ಅದಂ ಮಾಡದೆ ಹೋದರೆ ಬಹಳ ಪ್ರತ್ಯವಾಯವಾಗಿಯೂ ಇರುತಿವೆ. ಅದಂ ಅನುಕೂಲಿಸಿದಾಗ ಬೇರೊಂದು ಸಂದರ್ಭದಲ್ಲಿ ಶಾಸ್ತ್ರಾಧಾರಗಳೊಡನೆ ತಿಳಿಸುವೆವು. ಇದು ನಮ್ಮ ಸಾಮಾಜಿಕ ಸ್ಥಿತಿ ಪರಿಷ್ಕರಣಾಭಿಲಾಷಿಗಳಾದ ವಿವೇಕಿಗಳು ಸ್ವಲ್ಪ ವ್ಯವಧಾನದೊಡನೆ ಆಲೋಚಿಸಬೇಕೆಂದು ಕೋರುವೆವು.

MISS MANNING'S VISIT TO THE GOVERNMENT GIRLS' SCHOOL.

ಲಂಡನ್ ಪಟ್ಟಣದೊಳು ಸ್ಥಾಪಿಸಲ್ಪಟ್ಟಿರುವ ನ್ಯಾಷನಲ್ ಇಂಡಿಯನ್ ಅಸೋಸಿಯೇಷನ್ ಯೆಂಬ ಸಂಘದ ಆನರರಿ ಸೆಕ್ರೆಟರಿಯಾಗಿಯೂ ಇಂಡ್ಯದೇಶೀಯರ ಸುಖ ಸೌಭಾಗ್ಯಾಭಿವೃದ್ಧಿಯಲ್ಲಿ ಆಂತರವಾದ ಅಕ್ಕರೆಯೂ, ತತ್ಪ್ರಯುಕ್ತಗಳಾದ ಕಾರ್ಯಗಳಲ್ಲಿ ಬದ್ಧಾಭಿನಿವೇಶವೂ ಉಳ್ಳ ಮಿಸ್ ಮ್ಯಾನಿಂಗ್ ಯೆಂಬ ಯೂರೋಪಿಯನ್ ಹೆಂಗಸೊಬ್ಬಳು ಕೆಯು ಈಚೆಗೆ ಇಂಡ್ಯದೇಶಕ್ಕೆ ಬಂದು, ಮುಂಬೈ, ಮದರಾಸ್ ಪಟ್ಟಣಗಳಂ ನೋಡಿಕೊಂಡು, ಅಲ್ಲಿಂದ ಈ ದೇಶಕ್ಕೆ ರಾಜಧಾನಿಯಾಗಿರುವ ಮೈಸೂರಿಗೆ ಹೋಗಿದ್ದು, ಅಲ್ಲಿನವರಿಂದ ಸತ್ಕರಿಸಲ್ಪಟ್ಟು, ಅಲ್ಲಿನ ವಿಶೇಷಗಳಂ, ಮುಖ್ಯವಾಗಿ ಮಹಾರಾಣಿಯವರ ಬಾಲಿಕಾಪಾಠಶಾಲೆ ಮೊದಲಾದ ವಿದ್ಯಾಶಾಲೆಗಳಂ ನೋಡಿಕೊಂಡು ಕಳೆದವಾರದಲ್ಲಿ ಈ ಊರಿಗೆ ಬರಲು ಆಕೆಯವರನ್ನು ಇಲ್ಲಿನ ದೊಡ್ಡ ಮನುಷ್ಯರು ಉಚಿತ ಮರ್ಯಾದೆಯೊಡನೆ ಬರಮಾಡಿಕೊಂಡರು. ಈ ತಿಂಗಳ ೧೨ನೇ ತಾ|| ಬುಧವಾರ ಪ್ರಾತಃಕಾಲ ೮ ಘಂಟೆಗೆ ಸರಿಯಾಗಿ, ಆಕೆಯವರು ಇಲ್ಲಿನ ಸೆಂಟ್ರಲ್ ಕಾಲೇಜ್ ಪ್ರಿನ್ಸಿಪಲರಾದ ಮಿಸ್ಟರ್ ಜೆ. ಕುಕ್ ಸಾಹೇಬರು, ಅವರ ಭಾರ್ಯೆಯವರು ಇನ್ನು ಒಬ್ಬರಿಬ್ಬರು ಯೂರೋಪಿಯನ್ ಲೇಡಿಗಳೊಡನೆ ಇಲ್ಲಿನ ಗವರ್ನಮೆಂಟ್ ಬಾಲಿಕಾ ಪಾಠಶಾಲೆಯಂ ನೋಡುವದಕ್ಕಾಗಿ ಬಂದಿದ್ದರು. ಏತದರ್ಥ ಪಾಠಶಾಲಾ ಮಂದಿರವು ತೋರಣ ಕದಳೀಸ್ತಂಭಾದಿಗಳಿಂದಲಂಕರಿಸಲ್ಪಟ್ಟು, ಮ್ಯುನಿಸಿಪಲ್ ವೈಸ್ ಪ್ರೆಸಿಡೆಂಟರಾದ ರಾಯಬಹದೂರ್ ಶ್ರೀನಿವಾಸಾಚಾರ್ಲು, ಕಂಟ್ರೋಲರ್ ಮ|| ರಂಗಸ್ವಾಮಯ್ಯಂಗಾರ್ರವರು, ಮ್ಯುನಿಸಿಪಲ್ ಕಮಿಷನರುಗಳ ಪೈಕಿ ಕೆಲವರು, ಪಾಠಶಾಲಾ ಕಮಿಟಿಯ ಆನರರಿ ಸೆಕ್ರೆಟರಿಯವರು ಮೊದಲಾದ ಬಹುಮಂದಿ ದೊಡ್ಡಮನುಷ್ಯರು ಹಾಜರಿದ್ದು ಆಕೆಯವರನ್ನು ಉಚಿತ ಮರ್ಯಾದೆಗಳೊಡನೆ ಬರಮಾಡಿಕೊಂಡರು. ಆಕೆಯವರು ಶಾಲಾ ಪ್ರವೇಶ ಮಾಡಿದ ಕೂಡಲೆ, ಈ ಸಂದರ್ಭಕ್ಕಾಗಿ ರಚಿಸಲ್ಪಟ್ಟದ್ದು ಸ್ವಾಗತ ಸೂಚಕವಾದ ಒಂದು ಪದವಂ ಉತ್ತಮ ತರಗತಿಗೆ ಸೇರಿದ ವಿದ್ಯಾರ್ಥಿನೀಯರು ನಾಲ್ವರು ಮಧುರ ಧ್ವನಿಯೊಡನೆ ಹಾಡಿದರು, ಹ್ಯಾಗೆಂದರೆ—

ಲಲನಾಮಣಿ ಮಿಸ್ ಮಾನಿಂಗ್ ಕುಶಲವೆ ನೀಂ
ಬಿಡಯಂಜನಹಿತೆ ಬಿಡಯಂಗ್ಯೆ ನೀಂ ||
ತಿಳಿಬಾಲೆಯರ ಕಲೆಗಳನೀಂ ||
ಮಮತೆಯೊಳೀಗ ||

ತರುವಾಯ ಕೆಲವರು ಸಂಸ್ಕೃತದಲ್ಲಿ ದೇವತಾ ಪ್ರಾರ್ಥನಾರೂಪವಾದ ಕೆಲವು ಪದಗಳಂ ಹೇಳಿದಮೇಲೆ ಅದರ ಅರ್ಥವನ್ನು ಇಂಗ್ಲಿಷ್ ಭಾಷೆಯಲ್ಲಿ ಮಿಸ್ ಮಾನಿಂಗಯವರಿಗೆ ಹೇಳಿದರು. ಅದನ್ನು ಕೇಳಿ ಆಕೆಯವರು ಬಹಳ ಸಂತೋಷಿಸಿದರು. ತರುವಾಯ ಇತರ ತರಗತಿಯ ಬಾಲೆಯರು ಕನ್ನಡದಲ್ಲಿ ಕೆಲವು ಪದಗಳಂ ಹಾಡಿದರು. ತರುವಾಯ ಆರೋಗ್ಯಶಾಸ್ತ್ರ, ಗಣಿತಶಾಸ್ತ್ರ, ಭೂಗೋಳ ಶಾಸ್ತ್ರಗಳಲ್ಲಿ ಮಾಡಿದ ಪ್ರಶ್ನೆಗಳಿಗೆ ಬಾಲೆಯರು ಸರಿಯಾದ ಉತ್ತರಗಳಂ ಕೊಟ್ಟರು. ತರುವಾಯ ಮೆ|| ಕೂಕಿಯವರು ಗಣಿತದಲ್ಲಿ ಕೆಲವು ಪ್ರಶ್ನೆಗಳಂ ಮಾಡಿದರು. ಅದಕ್ಕೂ ಬಾಲೆಯರು ಸರಿಯಾದ ಉತ್ತರಗಳಂ ಕೊಟ್ಟರು. ಅನಂತರ ಮಿಸ್ ಮಾನಿಂಗ್ ಮೊದಲಾದವರಿಗೆ ಪುಷ್ಪ ಹಾರಗಳು ಮೊದಲಾದ ಮರ್ಯಾದೆಗಳು ನಡೆಸಲ್ಪಟ್ಟವು. ಇವೆಲ್ಲವು ತೃಪ್ತಿಯಾಗಿ ಎಲ್ಲರು ಹೊರಡುವ ಸಂದರ್ಭದಲ್ಲಿ ಮಿಸ್ ಮಾನಿಂಗಯವರು, ಪಾಠಶಾಲೆಯಲ್ಲಿ ವೀಕ್ಷಣೀಯಗಳಾದ ವಿಷಯಗಳನ್ನೆಲ್ಲ ತಮಗೆ ತೋರಿಸಿ ತಮ್ಮನ್ನು ಗೌರವಿಸಿದ ಬಗ್ಗೆ ತಮಗೆ ಪ್ರಬಲವಾದ ಸಂತೋಷಾತಿಶಯವಂ ಸಭಾ ಪ್ರೆಸಿಡೆಂಟರವರಿಗೂ ಇತರ ಮೆಂಬರುಗಳಿಗೂ ತಿಳಿಸಿ ಅಲ್ಲಿಂದ ಆರ್ಯ ಬಾಲಿಕಾ ಪಾಠಶಾಲೆಗೆ ಹೋದರು. ಅಲ್ಲಿಯೂ ಅದರ ವಿಚಾರಣಾಧಿಕಾರಿಗಳು ಬಹುಮಂದಿ ಹಾಜರಿದ್ದು ಮರ್ಯಾದಾ ಪುರಸ್ಸರವಾಗಿ ಅವರನ್ನು ಬರಮಾಡಿಕೊಂಡರು. ಮಿಸ್ ಮಾನಿಂಗಯವರು ಅಲ್ಲಿಯೂ ಪ್ರತಿ ತರಗತಿಯನ್ನೂ ಚೆನ್ನಾಗಿ ಪರೀಕ್ಷಿಸಿ ಅತ್ಯಂತ ತೃಪ್ತರಾಗಿ ಅಲ್ಲಿಂದ ಹೊರಟು ಚಿಕ್ಕಪೇಟೆಯಲ್ಲಿ ಸ್ಥಾಪಿಸಲ್ಪಟ್ಟಿರುವ ವೆಸ್ಲೆಯನ್ ಮಿಷನ್ ಬಾಲಿಕಾ ಪಾಠಶಾಲೆಯಂ ನೋಡುವದಕ್ಕಾಗಿ ಹೋದರು.

MISS MANNING AND THE NATIVE LADIES.

ಗತ ಬುಧವಾರದ ದಿನ ಸಾಯಂಕಾಲ ಮಿಸ್ ಮಾನಿಂಗಯವರು ಇಲ್ಲಿನ ಚೀಫ್ ಕೋರ್ಟ್ ಜಡ್ಜಿಯವರಾದ ಮೆ|| ತಂಬುಶೆಟ್ಟಿರವರ ಬಾಗ್ಯೆಗೆ ಹೋಗುವಂತೆ ವ್ಯವಸ್ಥೆಯಾಗಿದ್ದದರಿಂದ ಮಿಸ್ ಮಾನಿಂಗಯವರನ್ನು ಬರಮಾಡಿಕೊಂಡು ಸತ್ಕರಿಸುವ ಬಗ್ಗೆ ಮೆ|| ತಂಬುಶೆಟ್ಟಿರವರ ಗೃಹವು ಸದರ್ಭೋತ್ಸಾಹಾನುಗುಣವಾಗಿ ತೋರಣ ಪಲ್ಲವ ಲತಾದಿಗಳಿಂದಲೂ ಪುಷ್ಪಗುಚ್ಛಗಳಿಂದಲೂ, ಪ್ರಸಿದ್ಧರಾದವರ ಚಿತ್ರ ಪಟಗಳಿಂದಲೂ ಮನೋಜ್ಞವಾಗಿ ಅಲಂಕರಿಸಲ್ಪಟ್ಟಿತು. ಏತದರ್ಥ ಪತ್ರಿಕಾಮೂಲಕ ಪ್ರಾರ್ಥಿತರಾಗಿಬಂದ ಬಹುಮಂದಿ ನೇಟಿವ್ ದೊಡ್ಡಮನುಷ್ಯರನ್ನೂ ಅವರ ಕುಮಾರಿಯರನ್ನೂ ಭಾರ್ಯೆಯರನ್ನೂ ಮೆ|| ತಂಬುಶೆಟ್ಟಿರವರೂ, ಅವರಭಾರ್ಯೆಯು ಸಹ ಬಹಳ ಗೌರವ ಮರ್ಯಾದೆಗಳೊಡನೆ ಬರಮಾಡಿಕೊಂಡು ಅಲಂಕೃತವಾಗಿದ್ದ ಸೌಧಕ್ಕೆ ಕರೆದುಕೊಂಡುಹೋಗಿ ಅಲ್ಲಿ ಸರಿಕಾಸ್ತವಾಗಿದ್ದ ಆಸನಗಳಲ್ಲಿ ಕುಳ್ಳರಿಸಿದರು. ಸದರೀ ಸಭೆಗೆ ಕರೆಯಲ್ಪಟ್ಟು ಬಂದಿದ್ದವರ್ಯಾರೆಂದರೆ–ಮೆ|| ರಾಮಚಂದ್ರಯ್ಯರವರು ಅವರಭಾರ್ಯೆಯವರು, ಕೌನ್ಸಿಲರ್ ಮೆ|| ಸಭಾಪತಿ ಮೊದಲಿಯಾರ್ರವರು ಅವರ ಸೊಸೆ, ಮೆ|| ಅಣ್ಣಾಮಲೆ ಮೊದಲಿಯಾರ್ರವರು, ಅವರಭಾರ್ಯೆ, ಕಂಟ್ರೋಲರ್ ಮೆ|| ರಂಗಸ್ವಾಮಯ್ಯಂಗಾರ್ರವರು, ಅವರಭಾರ್ಯೆ, ಸಾಬರ್ಡಿನೇಟ್ ಜಡ್ಜಿ ಮೆ|| ಏ. ಎ. ನರಸಿಂಹಯ್ಯಂಗಾರ್ರವರು ಅವರ ಕುಮಾರ್ತೆ, ಸೆಂಟ್ರಲ್ ಕಾಲೇಜ್ ಪ್ರೊಫೆಸರ್ ಮೆ|| ಕುಕಸಾ|| ಅವರಭಾರ್ಯೆ, ವೈಸ್ ಪ್ರೆಸಿಡೆಂಟ್ ಮೆ|| ಶ್ರೀನಿವಾಸಾಚಾರ್ಯರವರು, ಅವರಭಾರ್ಯೆ, ಅಸಿಸ್ಟೆಂಟ್ ಕಮಿಷನರ್ ಮೆ|| ಗೋಪಾಲಯ್ಯಂಗಾರ್ರವರು, ಅವರಭಾರ್ಯೆ ಹೀಗೆ ಇನ್ನೂ ಅನೇಕ ಮಂದಿ ನೇಟಿವ್ ದೊಡ್ಡಮನುಷ್ಯರು ತಮ್ಮ ತಮ್ಮ ಭಾರ್ಯಾಪುತ್ರಿಕೆಯರೊಡನೆ ಹೋಗಿದ್ದರು. ಕ್ಲುಪ್ತಕಾಲಕ್ಕೆ ಸರಿಯಾಗಿ ಮಿಸ್ ಮಾನಿಂಗಯವರು, ಕೆಲವರು ಯೂರೋಪಿಯನ್ ದೊರೆಸಾನಿಯರೊಡನೆಬರಲು ಅವರಂ ಮೆ|| ತಂಬುಶೆಟ್ಟಿರವರ ಭಾರ್ಯೆ ಮುಂತಾದವರೆಲ್ಲರೂ ಎದುರುಗೊಂಡು ಹೋಗಿ ಬಹಳ ಸಂಭ್ರಮದಿಂದ ಕರೆದುಕೊಂಡು ಬಂದರು. ಇಂಡ್ಯದೇಶೀಯರ ವಿಷಯದಲ್ಲಿ, ತತ್ರಾಪಿ ಹಿಂದೂ ಸ್ತ್ರೀಯರ ತಾತ್ಕಾಲಿಕ ಸಾಮಾಜಿಕ ಸ್ಥಿತಿಯನ್ನು ಅಭಿವೃದ್ಧಿಗೊಳಿಸುವದರಲ್ಲಿ ಸಾಧ್ಯವಾದ ಪ್ರಯತ್ನಗಳನ್ನೆಲ್ಲ ಮಾಡುತ ಅದಕ್ಕಾಗಿ ಶ್ರಮಿಸುತಲಿರುವಂತಾ ಮತ್ತು ವಿದ್ಯಾನಂತರ ಗೃಹಗಳಲ್ಲಿ ಪರೋಪಕಾರಿಯೆಂದು ಅಹರ್ನಿಶವೂ ಪ್ರಸಿದ್ಧವಾರ್ತರಾದಂತಾ ದೊರೆಸಾನಿಗೆ ತಮ್ಮ ಹೃದಯಂಗಮವಾದ ಪ್ರೀತಿ ಗೌರವ ಕೃತಜ್ಞತಾದಿ ಭಾವನೆಗಳಂ ವ್ಯಕ್ತ ಪಡಿಸುವದಕ್ಕಾಗಿ ಅಲ್ಲಿ ಹಾಜರಿದ್ದ ಹಿಂದೂ ಹೆಂಗಸರ ಮತ್ತು ದೊರೆಸಾನಿಗಳ ಹೆಸರುಗಳನ್ನೆಲ್ಲ ಮೆ|| ತಂಬುಶೆಟ್ಟಿರ ಭಾರ್ಯೆಯು ಆಕೆಗೆ ತಿಳಿಸಿ ಅವರ ಸಂದರ್ಶನ ಸೌಭಾಗ್ಯವಂ ಅವರಿಗೆ ಘಟಯಿಸಿದರು. ಅಪೂರ್ವ ಪುಣ್ಯ ಪರಿಪಾಕದಿಂ ಲಬ್ಧವಾದ ಹಿಂದೂಸ್ತ್ರೀಯರ ಜ್ಞಾನಸಕ್ತ ಅಭಿಮಾನ ದೇವತಾಸದೃಶರಾದ ಮಿಸ್ ಮಾನಿಂಗಯವರ ಸಂದರ್ಶನ ಸಲ್ಲಾಪಾದಿಗಳಿಂದೆಲ್ಲರೂ ಪ್ರಹೃಷ್ಟಾಂತರಂಗ ವುಳ್ಳವರಾಗಲು ಆಗ ಕ್ಷಣೇಕ್ಷಣ ವಿಲಸಿಸುತಲಿದ್ದ ಸಂತೋಷ ಸೂಚಕವಾದ ಸ್ಮಿತಜ್ಯೋತ್ಸ್ನೆಯಿಂದ ಸದರೀ ಸೌಧವು ಮತ್ತಷ್ಟು ಕಾಂತಿಮತ್ತಾಗಿ ಕಣ್ಗೊಳಿಸುತಲಿತ್ತು. ಅನಂತರ ಯೆಲ್ಲರೂ ತಮ್ಮ ಆಸನಗಳಂ ಪರಿಗ್ರಹಿಸಿದ ಬಳಿಕ ಮೆ|| ತಂಬುಶೆಟ್ಟರವರ ಭಾರ್ಯೆಯವರು ತಮಗಾಗಿಯೂ ಅಲ್ಲಿ ಬಂದಿದ್ದ ತಮ್ಮ ದೇಶ ಭಗಿನೀಯರ ತರಫಿನಲ್ಲಿಯೂ ಮಿಸ್ ಮಾನಿಂಗ್ಯವರಂ ಕುರಿತು ತಿಳಿಸಿದರೇನೆಂದರೆ–ಈ ಸಂದರ್ಭದಲ್ಲಿ ನಿಮ್ಮನ್ನು ಸ್ವಾಗತಪೂರ್ವಕ ಬರಮಾಡಿಕೊಳ್ಳುವದರಿಂದುಂಟಾದ ಸಂತೋಷಾತಿಶಯವಂ ತಿಳಿಸಲಿಕ್ಕೆ ನಾನು ಅಸಮರ್ಥಳಾಗಿರುವೆನು. ನನ್ನ ದೇಶೀಯರಾದ ಸ್ತ್ರೀಯರ ನೀತಿ ಜ್ಞಾನಾಭಿವೃದ್ಧಿಗಾಗಿಯೂ, ಅವರ ವಿದ್ಯಾಭಿವೃದ್ಧಿಗಾಗಿಯೂ, ನೀವು ಮಾಡುತಲಿರುವಂತಾ ದೇಶಾಭಿಮಾನ ಪೂರ್ವಕವಾದ ಪ್ರಯತ್ನಗಳೂ, ಅದಕ್ಕಾಗಿ ನೀವು ಮಾಡುತಿರುವಂತಾ ಮತ್ತು ಮಾಡುತಲಿರುವಂತಾ ಸಹಾಯಗಳೂ, ನಿಮಗೆ ಆಭರಣ ಪ್ರಾಯಗಳಾಗಿಯೂ, ಪ್ರತಿ

ಷ್ಠಾನದಗಳುಗಿಯೂ ಇರುವ ನಿಮ್ಮ ಅನೇಕ ಸದ್ಗುಣಗಳೂ, ಸದ್ವೃತ್ತಿಗಳೂ, ನಮ್ಮೆಲ್ಲರಿಗೂ ತಮ್ಮಲ್ಲಿರುವ ಅಭಿಮಾನವಂ ವೃದ್ಧಿಪಡಿಸ ಶಕ್ಯವಾಗಿರುತಿವೆ. ಮುಂಬೈ ಮತ್ತು ಮದರಾಸ್ ಮೊದಲಾದ ಕಡೆಗಳಲ್ಲಿ ನಿಮಗೆ ಮಾಡಲ್ಪಟ್ಟಷ್ಟು ಗೌರವ ಸತ್ಕಾರಗಳನ್ನು ಮಾಡಲಿಕ್ಕೆ ನಾವು ಅಶಕ್ತರಾಗಿದ್ದರೂ ಅವರಂತೆ ನಾವೂ ನಿಮ್ಮ ಕ್ಷೇಮಾಭಿವೃದ್ಧಿಯನ್ನೂ ದೈವಾನುಗ್ರಹವನ್ನೂ ಕಾರ್ಯಸಿದ್ಧಿಯನ್ನೂ ಅಂತರವಾಗಿ ಪ್ರಾರ್ಥಿಸುತಲಿರುವೆವು. ನಿಮ್ಮ ಪೋಷಣೆಯಲ್ಲಿ ಸ್ಥಾಪಿತವಾದ ಜನಾನಾ ಪಾಠಕ್ರಮವು ವಿಳಂಬವಾಗಿ ಅಭಿವೃದ್ಧಿಯಲ್ಲಿ ಬರುತಲಿದೆ. ಇದರ ಅಭಿವೃದ್ಧಿಗೆ ಭಂಜಕಗಳಾದ ಕಾರಣಗಳನೇಕ ಇದ್ದಾಗ್ಯೂ ಅವುಗಳಲ್ಲಿ ಮಾನ್ಯರಾದ ದೊಡ್ಡ ಮನುಷ್ಯರ ಮನೆಗಳಲ್ಲಿ ಪ್ರವೇಶಕ್ಕೆ ಅವಕಾಶವುಳ್ಳ ಉತ್ತಮಜಾತಿ ಬೋಧಕರು ದೊರೆಯದಿರುವದು ಮುಖ್ಯವಾದದ್ದಾಗಿರುತಿದೆ. ಈ ನಿರ್ಬಂಧವೂ ಕೆಲವು ಕಾಲದಲ್ಲೇ ನಿವೃತ್ತಿಯಾಗಬಹುದೆಂದೆಣಿಸುವೆನು. ಯಾತಕ್ಕಂದರೆ ನಮಗೆ ಸ್ತ್ರೀಬೋಧಕರಿಲ್ಲವೆನ್ನುವ ದೋಷವು, ಈಗ ಅಭಿವೃದ್ಧಿಗೆ ಬರುತಲಿರುವ ಮಹಾರಾಣೀ ಬಾಲಿಕಾ ಪಾಠಶಾಲೆ ಮುಂತಾದವುಗಳ ಮೂಲಕ ನಿವೃತ್ತಿಯಾಗುವದಾಗಿದೆ, ಎಂಬದಾಗಿ ಕೆಲವು ಪ್ರಶಂಸಾ ರೂಪಗಳಾದ ಮಾತುಗಳಿಂದ ಮಿಸೆಸ್ ಮಾನಿಂಗರವರನ್ನು ಬಹಳ ಕೊಂಡಾಡಿ ಹಿಂದೂ ಮಹಿಳಾಗುಣಗಣನಿರ್ಣಯಿಯಾದ ನಿಮ್ಮನ್ನು ಹಿಂದೂಪ್ರಜೆಯು ಮರೆಯದೆ ಎಂಬದಾಗಿ ಅನವರತ ಭಾವಿಸಿ ಸ್ಮರಿಸುತಲಿರುವೆವೆಂದು ತಿಳಿಸಿದರು. ಇಂಗ್ಲಿಷ್ ಭಾಷೆಯಲ್ಲಿ ಹೇಳಲ್ಪಟ್ಟ ಮೇಲ್ಕಂಡ ಪ್ರಸಂಗಾಭಿಪ್ರಾಯವನ್ನು ದೇಶ ಭಾಷೆಗಳಲ್ಲಿ ಮೆ|| ನರಸಿಂಹಯ್ಯಂಗಾರ್ರವರ ಮತ್ತು ಮೆ|| ವರದರಾಜಪಿಳ್ಳೆಯವರ ಕುಮಾರಿಯರು ಸ್ಪಷ್ಟವಾದ ಮತ್ತು ಮಧುರವಾದ ಧ್ವನಿಯಿಂದ ಮಿಕ್ಕವರಿಗೆಲ್ಲ ಶ್ರುತಪಡಿಸಿದರು. ಮೆ|| ತುಬುಶೆಟ್ಟರವರ ಭಾರ್ಯೆಯು ಅಪೇಕ್ಷಾನುಸಾರ ಮೆ|| ನರಸಿಂಹಯ್ಯಂಗಾರ್ರವರ ಕುಮಾರಿಯು ವೀಣಾಗಾನ ಶ್ರವಣವಂ ಮಾಡಿಸಿ ಸಭಿಕರಂ ಸಂತೃಪ್ತಿಗೊಳಿಸಲು, ಮಿಸ್ ಮಾನಿಂಗ್ ವಗೈರೇ ರೆಲ್ಲರೂ ಕೇಳಿ ಬಹಳ ಸಂತೃಪ್ತರಾದರು. ಮಿಸ್ ಮಾನಿಂಗಿಯವರು ಮನಃಪೂರ್ವಕವಾಗಿ ಯೆಲ್ಲರೂ ಸೇರಿ ಮಾಡಿದ ಸತ್ಕಾರಕ್ಕಾಗಿ ತಮ್ಮ ವಂದನವನ್ನರುಹಿದಮೇಲೆ ಮಿಸ್ಟರ್ ತುಬುಶೆಟ್ಟರವರ ಭಾರ್ಯೆಯೂ ಸೊಸೆಯೂ, ಬಂದಿದ್ದ ದೊಡ್ಡಮನುಷ್ಯರ ಹೆಂಗಸರಿಗೆಲ್ಲ ಗಂಧ ಪುಷ್ಪ ತಾಂಬೂಲಾದಿಗಳಂ ಕೊಟ್ಟರು. ಅನಂತರ ಕೋಲಾಹಲ ಧ್ವನಿಯೊಡನೆ ಸಭೆ ಬರಖಾಸ್ತಾಗಲು ದಂಪತಿಗಳೆಲ್ಲರೂ ರಥಾರೂಢರಾಗಿ ತಮ್ಮತಮ್ಮ ಮನೆಗಳಿಗೆ ವಾಪಸ್ ಹೋದರು, ಎಂಬದಾಗಿ ಒಳದೇಶದ ಸ್ಪೆಕ್ಟೇಟರ್ ಪತ್ರಿಕೆಯ ಮೂಲಕ ತಿಳಿಯಬರುತಿದೆ.

Occasional Notes.
ನೈಮಿತ್ತಿಕ ವಿಷಯನ್ಯಾಸ.

Appointment.—ಮೆ|| ಪನ್ನಲಾಲ್ ಉಮಾಶಂಕರ್ ಯಾಜನಿಕಯೆಂಬವರು, ಮುಂದಿನವರ್ಷಕ್ಕೆ ಮುಂಬೈ ಪರೀಕ್ಷೆ ಕೆಲಸಕ್ಕೆ ನಿಯಮಿಸಲ್ಪಟ್ಟಿರುತ್ತಾರೆ.

The President of the forthcoming Congress.—ಈ ತಿಂಗಳ ಆಖೈರಿನಲ್ಲಿ ಅಲಹಾಬಾದ್ ಪಟ್ಟಣದೊಳು ಸೇರುವದಾಗಿರುವ ನ್ಯಾಷನಲ್ ಕಾಂಗ್ರೆಸ್ ಸಭೆಯಲ್ಲಿ ಅಧ್ಯಕ್ಷತೆಯಂ ವಹಿಸುವದಕ್ಕೆ ಮೆ|| ಜಾರ್ಜ್‌ಯೂಲ್‌ಯೆಂಬ ಯೂರೋಪಿಯನ್ ದೊಡ್ಡಮನುಷ್ಯರು ಒಪ್ಪಿಕೊಂಡಿರುತ್ತಾರೆ.

A confidential circular.—ವಾಯವ್ಯದೇಶ ಮತ್ತು ಅಯೋಧ್ಯೆಯಲ್ಲಿರತಕ್ಕ ಸರ್ಕಾರ್ ನೌಕರರ್‍ಯಾರೇ ಆಗಲಿ ರಾಜಕೀಯ ಸ್ವಭಾವವುಳ್ಳ ಯಾವ ಪ್ರಯತ್ನಕ್ಕೂ ಚಂದಾ ಮಾಡಕೂಡದೆಂದು ನಿರೋಧಿಸಿ ಅಲ್ಲಿನ ಲೆಫ್ಟಿನೆಂಟ್ ಗವರ್ನರಾದ ಸರ್. ಅಕ್ಲ್ಯಾಂಡ್ ಕಾಲ್ವಿನ್‌ಯವರು ಅಂತರಂಗವಾದ ಹುಕುಂ ಕೊಟ್ಟಿರುತ್ತಾರೆಂಬ ಪ್ರಸ್ತಾವವುಂಟಾಗಿದೆ.

Another Deputy Collector in trouble.—ಮಲಬಾರ್ ಡಿಸ್ಟ್ರಿಕ್ಟಿಗೆ ಸೇರಿದ ಬೇರೆ ಒಬ್ಬ ಡೆಪ್ಯುಟಿ ಕಲೆಕ್ಟರ್ ರುಷುವತ್ ತೆಗೆದುಕೊಳ್ಳುವದಾಗಿ ತಿಳಿಯಬರುವದರಿಂದ ಅವರನ್ನು ಆಬಗ್ಯೆ ದರ್ಯಾಪ್ತು ಮಾಡುವದಕ್ಕೆ ಹುಕುಂ ಆಗಬೇಕೆಂದು ರೆವಿನ್ಯೂ ಬೋರ್ಡಿನವರು ಗವರ್ನಮೆಂಟಿಗೆ ಬರೆದಿರುತ್ತಾರೆಂದು ಮದರಾಸ್ ಪತ್ರಿಕೆ ಒಂದರ ಮೂಲಕ ತಿಳಿಯಬರುತಿದೆ.

Dewan Bahadurs.—ಮದರಾಸ್ ರೆವಿನ್ಯೂ ಬೋರ್ಡಿನಲ್ಲಿ ಒಂದು ದೊಡ್ಡ ಅಧಿಕಾರವಂ ಪಡೆದಿರುವ ಮೆ|| ರಾಜರತ್ನ ಮೊದಲಿಯಾರ್ರವರಿಗೂ, ಸೈದಾಪೇಟೆ ಡೆಪ್ಯುಟಿ ಕಲೆಕ್ಟರಾಗಿರುವ ಮೆ|| ಕಲ್ಯಾಣಸುಂದರಂ ಶೆಟ್ಟರಿಗೂ ದಿವಾನ್ ಬಹದೂರೆಂಬ ಪ್ರಶಸ್ತಿಯಂ ಕೊಡಬೇಕೆಂದು ಗವರ್ನ್‌ಮೆಂಟಿನವರು ಶಿಫಾರಸ್ ಮಾಡಿರುತ್ತಾರೆಂದು ಮದರಾಸ್ ಸ್ಟ್ಯಾಂಡರ್ಡ್ ಪತ್ರಿಕೆ ಹೇಳುತಿದೆ.

A liberal donation.—ಇಂಡ್ಯದೇಶದ ಸಾಬಕ್ ವೈಸರಾಯ್‌ಯವರಾದ ಲಾರ್ಡ್ ಡಫರಿನ್ ಸಾಹೆಬರವರ ಭಾರ್ಯೆಯವರು ಮಾಡಿದಕಾರ್ಯಗಳನ್ನು ಅನುಮೋದಿಸುವಂತೆ, ಇಂಡ್ಯದೇಶದ ಹೆಂಗಸರಿಗೆ ವೈದ್ಯವಿಷಯದಲ್ಲಿ ಸಹಾಯ ಮಾಡುವದಕ್ಕಾಗಿ ಪ್ರವರ್ತಿಸಿರುವ ನ್ಯಾಷನಲ್ ಅಸೋಸಿಯೇಷನ್ ಸಂಘದವರಿಗೆ ಕಾಶ್ಮೀರ ಮಹಾರಾಜರವರು ೫,೦೦೦ ರೂಪಾಯಿಗಳು ಕೊಟ್ಟರೆಂದು ತಿಳಿಯಲಾಯಿತು.

A new tipe-setting machine.—ಸೂತನಯಂತ್ರ ನಿರ್ಮಾಣ ಕೌಶಲ್ಯದಲ್ಲಿ ಪ್ರಸಿದ್ಧರಾದ ಅಮೆರಿಕಾ ದೇಶೀಯರು ಈಚೆಗೆ ಒಂದು ಯಂತ್ರವನ್ನು ನಿರ್ಮಾಣ ಮಾಡಿರುತ್ತಾರೆ. ಅದು ಒಂದು ಘಂಟೆಯಕಾಲದಲ್ಲಿ ಮದರಾಸ್ ಮೆಯಿಲ್ ಪತ್ರಿಕೆಯ ಅಳತೆಯಲ್ಲಿ, ಮೂರರಿಂದ ಅಯಿದು ಕಾಲಂಗಳು, ಅಂದರೆ ಐವತ್ತುಸಾವಿರಗಳಷ್ಟು ಅಕ್ಷರಗಳಂ ಜೋಡಿಸಿ, ಪಕ್ಕಗಳನ್ನೆಲ್ಲ ಸಮನಾಗಿ ತಟ್ಟಿ, ತಪ್ಪುಗಳನ್ನೆಲ್ಲ ತಿದ್ದಿ ಸರಿಮಾಡುತಿದೆ.

Prevention of early marriage.—ಹತ್ತುವರ್ಷಗಳಿಗೆ ಒಳಪಟ್ಟ ವಯಸ್ಸುಳ್ಳ ಕನ್ಯೆಯರನ್ನು ಮದುವೆಮಾಡಿ ಕೊಳ್ಳಬೇಡವೆಂದು ಜನಗಳಿಗೆ ಬೋಧಿಸುವದಕ್ಕಾಗಿ ಆಯಾಸ್ಥಳಗಳಲ್ಲಿ ಒಂದು ಸಂಘವನ್ನೇರ್ಪಡಿಸಬೇಕೆಂದು ರಾಜಾ ಸರ್. ಟಿ. ಮಾಧವರಾಯರವರು ಮದರಾಸ್ ಪ್ರೆಸಿಡೆನ್ಸಿಗೆಸೇರಿದ ವಿಶಿಷ್ಟ ಡಿಸ್ಟ್ರಿಕ್ಟು ಮತ್ತು ತಾಲ್ಲೂಕು ಬೋರ್ಡುಗಳಿಗೂ ಮ್ಯೂನಿಸಿಪಲ್ ಬೋರ್ಡುಗಳಿಗೂ ಕಾಗದಗಳು ಬರೆದಿರುತ್ತಾರೆಂದು ಮದರಾಸ್ ಮೆಯಿಲ್‌ಪತ್ರಿಕೆ ಹೇಳುತಿದೆ.

The revenue of Upper Burma.—ಸನ್ ೧೮೮೭-೮೮ನೇ ಇಸವಿಗೆ, ಬರ್ಮಾ ದೇಶದ ಪೈಕಿ ಉತ್ತರ ಭಾಗದ ಹುಟ್ಟುವಳಿಯು, ಕೆಂಪುಗನಿಗಳ ಬಾಬತು ಸೇರಿ, ೮೫,೭೯,೪೯೦ ರೂಪಾಯಿಗಳು. ಸನ್ ೧೮೮೮-೮೯ನೇ ಇಸವಿಗೆ, ಕೆಂಪು ಗನಿಗಳ ಗುತ್ತಿಗೆ ಮೊಬಲಗು ನಾಲ್ಕು ಲಕ್ಷ ರೂಪಾಯಿಗಳೂ, ಗನಿಗಳಿಂದ ಬರುವ ಲಾಭದ ಪೈಕಿ ಆರರಲ್ಲೊಂದು ಭಾಗವಂತೆ ಬರಬೇಕಾದ ರಾಜ ಪಾಲೂ ಸೇರಿ ೩೦,೦೦,೦೦೦ ರೂಪಾಯಿಗಳು ಅಂದಾಜಾಗಿರುತಿದೆ.

Native liberality.—ಮದರಾಸ್ ಮೆಯಿಲ್ ಪತ್ರಿಕೆಯ ವಿಶಾಖಪಟ್ಟಣದ ಬಾತಮಿದಾರನು ಬರೆಯುತ್ತಾನೇನಂದರೆ:-ಧರ್ಮಕಾರ್ಯಾಸಕ್ತರೆಂಬ ಪ್ರಖ್ಯಾತಿಯಂ ಪಡೆದಿರುವ ವಿಶಾಖಪಟ್ಟಣ ನಿವಾಸಿಯಾದ ಶ್ರೀ ರಾಜಾ ಗಜಪತಿರಾಯರವರು ಈ ತಿಂಗಳ ೭ನೇತಾರೀಖಿನಲ್ಲಿ ೧೦,೦೦೦ಮಂದಿಗೆ ಅನ್ನದಾನವಂ ಮಾಡಿದರು. ಇದಕ್ಕೆ ಬ್ರಾಹ್ಮಣ ಶೂದ್ರರೇ ಅಧಿಕವಾಗಿ ಬಂದಿದ್ದರು. ಈ ಪ್ರಭುಕಾರ್ಯವು ಸದರೀ ದೊಡ್ಡಮನುಷ್ಯರ ದಿವಾನರು ಮೊದಲಾದ ಬಹುಮಂದಿ ಅಧಿಕಾರಿಗಳ ಮೇಲ್ವಿಚಾರಣೆಯಲ್ಲಿ ನಡೆಯಿತು. ಗಲಾಟೆಗೆ ಅವಕಾಶವಿಲ್ಲದೆ ಪೊಲೀಸ್ ಉಸ್ತುವಾರಿ ಇಡಲ್ಪಟ್ಟಿತ್ತು. ಇದಲ್ಲದೆ ಪ್ರತಿ ದಿನದಲ್ಲೂ ನಾಲ್ಕು ಕಡೆಯಿಂದಲೂ ಬರುವ ಬಹಿರಾಗಿಗಳಿಗೆ ಸೀದಾ ಕೊಡುವಂತೆ ಏರ್ಪಾಡು ಮಾಡಿದಾರೆ, ಎಂಬದು.

Acquittal.—ತಿರುವಳ್ಳೂರಲ್ಲಿರುವ ಅಹೋಬಲ ಸ್ವಾಮಿಗಳವರ ಮೇಲೆ ತರಲ್ಪಟ್ಟ ಸ್ಪೆಶಿಯಲ್ ಮೊಕದ್ದಮೆಯು ಚಂಗಲ್‌ಪಟ್ ಸೆಷನ್ಸ್ ಕೋರ್ಟಿನಲ್ಲಿ ದರ್ಯಾಪ್ತಾಗುತಲಿದ್ದದ್ದು ಸರಿಯಷ್ಟೆ. ಸದರೀ ಮೊಕದ್ದಮೆಯಲ್ಲಿ ಉಭಯ ವಾದಿಗಳ ವಿಚಾರಣೆ ಪೂರ್ತಿಯಾಗಿ ಸೆಷನ್ ಜಡ್ಜಿಯವರು ಈ ತಿಂಗಳ ೧೬ನೇ ತಾರೀಖಿನಲ್ಲಿ ತಮ್ಮ ಫೈಸಲನ್ನು ಓದಿ ಅಪರಾಧಿಗಳು ಫಿರ್ಯಾದಿ ಹೇಳುವ ತಕ್ಸೀರುಗಳನ್ನು ಮಾಡಿದರೆಂಬ ವಿಷಯದಲ್ಲಿ ರುಜುವಾತು ಸಾಲದೆ ಅನುಮಾನಾಸ್ಪದವಾಗಿರುವದರಿಂದ ಪಂಚಾಯತರ ಅಭಿಪ್ರಾಯವನ್ನನುಸರಿಸಿ ಅಪರಾಧಿಗಳೆಲ್ಲರನ್ನು ಬಿಡುಗಡೆ ಮಾಡಿರುವದಾಗಿ ತಿಳಿಸಿದರು. ಅದು ಕೇಳಿದ ಕೂಡಲೇ ಶ್ರೀಸ್ವಾಮಿಗಳ ತರಫ್ ಜನಗಳೆಲ್ಲರು ಸಂತೋಷಾತಿಶಯದಿಂದ ಚಪ್ಪಾಳೆ ಹಾಕಿಕೊಂಡು, ಫಿರ್ಯಾದಿಗಳು ಮಳೆಗೆ ಸಿಕ್ಕಿದ ಕುರಿಗಳಂತೆ ತಲೆಗಳಂ ಬಗ್ಗಿಸಿಕೊಂಡೂ, ಹೊರಟುಹೋದರು.

Loyalty at other's cost.—ಕಲ್ಕತ್ತಾ ನ್ಯಾಷನಲ್ ಗಾರ್ಡಿಯನ್ ಎಂಬ ಪತ್ರಿಕೆ ಹೇಳುವದೇನಂದರೆ—ಈಗ ಕೆಲಸವಂಬಿಟ್ಟು ಹೊರಟುಹೋದ ವೈಸರಾಯ್‌ಯವರಿಗೆ ಒಂದು, ಅವರ ಸ್ಥಾನಕ್ಕೆ ಬರತಕ್ಕವರಿಗೆ ಒಂದು, ಈ ಮೇರೆ ಎರಡು ವಿಜ್ಞಾಪನಪತ್ರಿಕೆಗಳಂ ಕೊಡಲುದ್ದೇಶಿಸಿ ಅವನ್ನಿಟ್ಟುಕೊಡುವದಕ್ಕೆ ಬೇಕಾದ ಪೆಟ್ಟಿಗೆಗಳು ಅಥವಾ ಸಂಪುಟಗಳ ತಯಾರೀ ಬಗ್ಯೆ ಕಲ್ಕತ್ತಾ ಮ್ಯೂನಿಸಿಪಲ್ ಕಮಿಷನರ್‌ಗಳು ೬,೦೦೦ ರೂಪಾಯಿಗಳುಕೊಟ್ಟರು. ಇದು ಕೇವಲ ಅಕ್ರಮವಾದ ಕಾರ್ಯವಾಗಿರುತಿದೆ. ಕಲ್ಕತ್ತಾ ಮ್ಯೂನಿಸಿಪಲ್ ಆಕ್ಟಿನಲ್ಲಿ ಯಾವ ಕೆಲಸಕ್ಕಾಗಿ ಮ್ಯೂನಿಸಿಪಲ್ ಹಣವನ್ನು ವ್ಯಯಮಾಡುವದಕ್ಕೆ ಅಧಿಕಾರ ಕೊಡಲ್ಪಟ್ಟಿರುತಿದೆಯೋ ಅಂತಾ ಕೆಲಸಗಳ ಪಟ್ಟಿಯೊಂದು ಕೊಡಲ್ಪಟ್ಟಿರುತಿದೆ. ಸದರೀ ಪಟ್ಟಿಯಲ್ಲಿ ವೈಸರಾಯಿಗಳ ಅಡ್ರೆಸ್ ನಮೂದಾಗಿರುವದಿಲ್ಲವು. ಕಂದಾಯದಾರರ ಕಷ್ಟಾರ್ಜಿತದ್ರವ್ಯವು ಈರೀತಿ ದುರುಪಯೋಗ ವಾಗುತದೆಂಬದಕ್ಕೆ ಇದೊಂದೇ ನಿದರ್ಶನವಲ್ಲವು. ಡ್ಯೂಕಾಫ್ ಕಾನಾಟಿಯವರು ಕಲ್ಕತ್ತೆಗೆ ಬಂದಿದ್ದಕಾಲದಲ್ಲಿ ಬಾಣ ವಿನೋದಗಳಿಗಾಗಿ ೬,೦೦೦ ರೂಪಾಯಿಗಳು ಖರ್ಚುಮಾಡಲ್ಪಟ್ಟವು. ಜ್ಯೂಬಿಲೀಉತ್ಸವಕಾಲದಲ್ಲಿ ೧೫,೦೦೦ ರೂಪಾಯಿಗಳು ವ್ಯಯವಾದವು. ಇದೇರೀತಿ ಇತರ ಸಂದರ್ಭಗಳಲ್ಲೂ ಕುಮಾರು ಭಾರೀಮೊಬಲಗುಗಳೇ ವ್ಯಯವಾದವು. ಪ್ರಜೆಗಳ ದ್ರವ್ಯವನ್ನು ಈರೀತಿ ಖರ್ಚುಮಾಡುವದು ಕಮಿಷನರ್‌ಗಳ ದೃಷ್ಟಿಯಲ್ಲಿ ಏನೋ ಒಂದು ತಮಾಷೆಯಾಗಿ ಕಾಣುತಿದೆ. ಮೇಲೆ ತಿಳಿಸಿದಂತಾ ಕಾರ್ಯಗಳಿಗೆ ಅರ್ಥವ್ಯಯ ಮಾಡುವದಕ್ಕೆ ಅಧಿಕಾರ ಪ್ರಧಾನಮಾಡುವ ಕಾನೂನು ಬರುವ ಏಪ್ರಿಲ್‌ತಿಂಗಳಲ್ಲಿ ಜಾರೀಗೆ ಬರುವದೆಂದು ಕಮಿಷನರ್‌ಗಳ ಜ್ಞಾಪಕಕ್ಕೆ ತರುವದು ಈ ಸಂದರ್ಭದಲ್ಲಿ ಬಹಳ ಪ್ರಯೋಜನಕರವಾಗಿರಬಹುದು. ಈಗಿನ ಕಾನೂನನ್ನು ಅನುಸರಿಸಿ ಕಮಿಷನರ್‌ಗಳು ಮಾಡುವ ಕಾರ್ಯಗಳಿಗೆ ನಿರ್ಬಂಧವೇ ಇಲ್ಲದೆ ಇದೆ. ಈರೀತಿಮಾಡುವ ಕಮಿಷನರ್‌ಗಳ ಔದ್ಧತ್ಯವನ್ನಡಗಿಸುವದಕ್ಕೆ ತಕ್ಕನಾದ ಕಂದಾಯದಾರರ್‍ಯಾವನೂ ಕಲ್ಕತ್ತೆಯೊಳಿಲ್ಲವೆ ? ಎಂಬದು.

LOCAL AND PROVINCIAL NEWS.
ಒಳದೇಶಮತ್ತುತಾಲ್ಲೂಕುಜಾತವೃತ್ತಾಂತಗಳು.

:o:

Bad weather.—ಈ ತಿಂಗಳ ೧೩ನೇ ತಾ|| ಲಾಗಾಯತು ಮದರಾಸ್ ಮೊದಲು ನಾಗಪಟ್ಟಣದವರಿವಿಗೆ ಮೋಡಮುಸುಕಿಕೊಂಡು ಬಲವಾದ ಬಿರುಗಾಳಿ ಯೊಡನೆ ಮಳೆಯು ಬೀಳುತಲಿರುವದಲ್ಲದೆ ತುಫಾನಿನ ಚಿನ್ಹೆಗಳೂ ಕಾಣಬರುತ ಬಹಳ ಭೀತಿಯನ್ನುಂಟುಮಾಡಿರುವದಾಗಿ ಅಲ್ಲಿನ ಪತ್ರಿಕೆಗಳ ಮೂಲಕ ತಿಳಿಯಬರುತಿದೆ. ಈ ಊರಲ್ಲಿಯೂ ಕಳೆದ ಬೃಹಸ್ಪತಿವಾರದ ಮೊದಲು ಬಿರುಗಾಳಿ ದುಸ್ಸಹವಾಗಿರುತಿದೆ.

A man-eater.—ಮೈಸೂರು ಹಳೇ ಅಗ್ರಹಾರದಲ್ಲಿ ಚಾಮುಂಡೀಬೆಟ್ಟದ ಸರಹದ್ದಿನಿಂದ ಸುಮಾರು ೧ ತಿಂಗಳಿಂದಲೂ, ಏಕಿರಬ ರಾತ್ರಿ ೧೦ ಘಂಟೇಲಾಗಾಯಿತು ಅಗ್ರಹಾರದ ಬೀದಿಗಳಲ್ಲೆಲ್ಲಾ ಸುತ್ತಿಕೊಂಡು ಕತ್ತೆಗಳನ್ನೂ ನಾಯಿಗಳನ್ನೂ ಹಿಡಿದುಕೊಂಡು ರಕ್ತಪಾನಮಾಡಿ ಶರೀರಗಳನ್ನು ಬಿಸಾಡುತಲಿದ್ದವು. ಅಲ್ಲದೆ ತಿರುಗಾಡುವ ಜನಗಳಿಗೆ ಭಯೋತ್ಪಾದನವನ್ನೂ ಮಾಡುತಲಿದ್ದವು. ಈ ವಿಷಯವು ಮಹಾರಾಜರವರಿಗೂ ತಿಳಿಯಬಂದದ್ದರಿಂದ ಅದನ್ನು ಹಿಡಿಯುವಂತೆ ಹುಕುಂಮಾಡಲು, ೨ ದಿನಗಳಹಿಂದೆ ಆ ಮನುಷಿಗಳನ್ನು ಬೋನಿನಲ್ಲಿಕೂಡಿ ಜೀವನನ್ನು ಪೂರ್ಣಯ್ಯನವರ ಛತ್ರದಬಳೀ ಆನೆಯನ್ನು ಕಟ್ಟುವಸ್ಥಳದಲ್ಲಿಟ್ಟಿದ್ದರು. ಕಳೆದ ಶನಿವಾರ ರಾತ್ರಿ ೧೧ ಘಂಟೆಯಲ್ಲಿ ಆಡು ಕುರಿಯಮೇಲಿನ ಆಶೆಗೆ ಬೋನಿಗೆ ಕಿರುಬನು ನುಗ್ಗಿ ಒಳಗೆ ಸಿಕ್ಕಿಕೊಂಡಿತು. ಕೂಡಲೇ ಪಹರೆಯಲ್ಲಿದ್ದ ಜನರು ಬಾಗಿಲನ್ನು ಭದ್ರಪಡಿಸಿ ಮೇಲ್ಪಟ್ಟ ಅಧಿಕಾರಿಗಳಿಗೆ ಈ ವರ್ತಮಾನವನ್ನು ತಿಳಿಸಿದರು. ಮಾರನೇದಿನ ಶ್ರೀಮನ್ಮಹಾರಾಜರವರೇ ಆದಿಯಾಗಿ ಸಮಸ್ತರೂ ಮೃಗವನ್ನು ನೋಡುವದಕ್ಕೆ ಗುಂಪುಗುಂಪಾಗಿಬಂದು ಜನಗಳಿಗೂ ಪಶುಗಳಿಗೂ ಕಂಟಕವಾಗಿದ್ದ ಈ ಕಿರುಬಗೆ ಅಂತ್ಯಕಾಲ ಪ್ರಾಪ್ತವಾಯಿತೆಂದು ಹೇಳಿಕೊಂಡುಹೋದರು.—ವೃತ್ತಾಂತ ಚಿಂತಾಮಣಿ.

A summons.—ಈಚೆಗೆ ಸುಮಾರು ಎರಡು ತಿಂಗಳಹಿಂದೆ ಇಲ್ಲಿನ ಮಿಲಿಟರಿ ಸ್ಟೇಷನಿಗೆ ಸೇರಿದಂತಿರುವ ಹಲಸೂರು ವಾಸಸ್ಥಳದ ಮುದ್ದುಲಕ್ಷ್ಮಿಯೆಂಬ ಬಾಲಿಕೆಯು ಕ್ರಿಸ್ತುಮತವನ್ನವಲಂಬಿಸಿದ್ದಕ್ಕೆ ಉಂಟಾದ ಕಾರಣಗಳನ್ನೂ ಮುಂದೆ ಹಿಂದೂ ಬಾಲಿಕೆಯರಿಗೆ ಅಂತಾ ದುರ್ಗತಿಗಳುಂಟಾಗದಂತೆ ಇರುವ ಬಗ್ಯೆ ಇಲ್ಲಿನ ದೊಡ್ಡಮನುಷ್ಯರು ಬಹುಮಂದಿಸೇರಿ ಇಲ್ಲಿ ಮಾಡಿಯೂ ಮಾಡುತಲೂ ಇರುವ ಬಹುವಿಧಪ್ರಯತ್ನಗಳನ್ನೂ ಈ ಪತ್ರಿಕಾ ಮೂಲಕ ಪ್ರಕಟಿಸಿರುತ್ತೇವಷ್ಟೆ. ಸದರೀ ಮುದ್ದುಲಕ್ಷ್ಮಮ್ಮನ ತಂದೆಯ ತರಫಿನಲ್ಲಿ ಕಳೆದ ಬೃಹಸ್ಪತಿವಾರದದಿನ ಅಡ್ವೋಕೇಟ್ ಮೆ|| ರಾಮಸ್ವಾಮಯ್ಯರವರು ಮಿಲಿಟರಿ ಸ್ಟೇಷನ್ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರ ಕೋರ್ಟಿನಲ್ಲಿ ಹಾಜರಾಗಿ, ಸದರೀ ಬಾಲಿಕೆಯನ್ನು ಬೋಧಿಸಿ ಕ್ರಿಸ್ತುಮತಕ್ಕೆ ಸೇರಿಸಿಕೊಂಡ ರೆವರೆಂಡ್ ವೆ|| ಪಿಕ್ಫರ್ಡ್ ಎಂಬವರಮೇಲೂ ಬೇರೆ ಮೂವರು ಜನಾನಾ ಹೆಂಗಸರಮೇಲೂ, ಬಾಲ್ಯವಸ್ಥೆಯಲ್ಲಿರುವ ಒಬ್ಬ ಬಾಲಕಿಯನ್ನು ನ್ಯಾಯವಾದ ಅವಳ ಸಂರಕ್ಷಕನ ವಶದಿಂದ ಅಪಹರಿಸಿಕೊಂಡುಹೋದ ತಕ್ಸೀರ್ ಬಗ್ಯೆ ಅವರಮೇಲೆ ಸಮ್ಮನ್ಸ್ ಕೊಡಬೇಕೆಂದು ಕೇಳಿದರು. ಅದರಮೇಲೆ ಮ್ಯಾಜಿಸ್ಟ್ರೇಟರು ಬಹುವಿಧ ಪ್ರಶ್ನೆಗಳಂ ಮಾಡಿ ಅದಕ್ಕೆ ಫಿರ್ಯಾದಿ ತರಫ್ ಲಾಯರ್ ಹೇಳಿದ ಸಮಾಧಾನಗಳಂ ಕೇಳಿ ತೃಪ್ತರಾಗಿ ಸಮ್ಮನ್ಸ್ ಕೊಡುವಂತೆ ಹುಕುಂ ಮಾಡಿದ್ದಾಗಿ ತಿಳಿಯಬರುತಿದೆ. ಮುಂದೆ ಈ ಮೊಕದ್ದಮೆಯ ವಿಚಾರಣೆ ಕಾಲದಲ್ಲಿ ನಡೆಯುವ ವಿಶೇಷಾಂಶಗಳನ್ನು ಆಗಿಂದಾಗ್ಯೆ ಈ ಪತ್ರಿಕಾ ಮೂಲಕ ಪ್ರಕಟಿಸುತ ಬರುವೆವು.

THE SUTHA SAMHITA.

ಈ ಊರಲ್ಲಿರುವ ಸತ್ಸಂಪ್ರದಾಯ ಕಲಾನಿಧ್ಯಾಖ್ಯ ಮುದ್ರಾಕ್ಷರ ಶಾಲಾಧಿಕಾರಿಯಾದ ಮೆ|| ನಾರಣಯ್ಯರವರಿಂದ ಈಚೆಗೆ ಮುದ್ರಿಸಲ್ಪಟ್ಟ ಸೂತ ಸಂಹಿತೆ ಎಂಬ ಅಪೂರ್ವ ಗ್ರಂಥದ ಒಂದು

ಪ್ರತಿಯು ನಮಗೆ ಕಳುಹಿಸಲ್ಪಟ್ಟು ಬಹಳ ದಿವಸಗಳಾದರೂ ಅದರವಿಷಯದೊಳದುವರಿವಿಗೂ ನಮ್ಮ ಅಭಿಪ್ರಾಯವು ವ್ಯಕ್ತಪಡಿಸಲಿಕ್ಕೆ ತಕ್ಕ ಅವಕಾಶ ದೊರೆಯದ್ದರಿಂದ ಇಷ್ಟರ ಸವಕಾಶವಾದದಕ್ಕಾಗಿ ನಾವು ಗ್ರಂಥಪ್ರಚಾರಕರ ಮನ್ನಣೆಯಂ ಬೇಡುವೆವು.

ಶ್ರೀ ವೇದವ್ಯಾಸರಿಂದ ರಚಿಸಲ್ಪಟ್ಟ ಅಷ್ಟಾದಶ ಪುರಾಣಗಳಲ್ಲಿ ಶ್ರೀ ಸ್ಕಾಂದಪುರಾಣವು ಒಂದಾಗಿ ಪ್ರಸಿದ್ಧಿಯನ್ನೈದಿರುತಿದೆಯಷ್ಟೆ. ಈ ಸ್ಕಾಂದಪುರಾಣವು ಲಕ್ಷಗ್ರಂಥಗಳುಳ್ಳದ್ದಾಗಿಯೂ ಸನತ್ಕುಮಾರಸಂಹಿತೆ, ಸೂತಸಂಹಿತೆ, ಶಂಕರಸಂಹಿತೆ, ವೈಷ್ಣವಸಂಹಿತೆ, ಬ್ರಹ್ಮಸಂಹಿತೆ, ಸೌರಸಂಹಿತೆ ಎಂಬ ಷಟ್‌ಸಂಹಿತಾಯುಕ್ತವಾದದ್ದಾಗಿಯೂ ಇರುತಿದೆ. ಇವುಗಳಲ್ಲಿ ಎರಡನೆಯದಾದ ಪ್ರಸಕ್ತ ಸೂತ ಸಂಹಿತೆಯು ಷಟ್ ಸಹಸ್ರ ಗ್ರಂಥ ಪರಿಮಿತಿಯುಳ್ಳದ್ದಾಗಿಯೂ, ಪರಮತತ್ತ್ವಾರ್ಥ ಬೋಧಕವಾಗಿಯೂ, ಅತ್ಯಂತೋಪ ಯುಕ್ತವಾದದ್ದಾಗಿಯೂ ಇರುತಿದೆ. ಇದಕ್ಕೆ ನಿಖಿಲೋಪನಿಷತ್ಪ್ರತಿಪಾದಿತ ಪರಮತತ್ವಾರ್ಥ ಬೋಧಕರಾದ ಶ್ರೀ ಸಾಯನ ಮಾಧವಾಚಾರ್ಯರವರು ತಾತ್ಪರ್ಯ ದೀಪಿಕೆ ಯೆಂಬ ವ್ಯಾಖ್ಯಾನವು ಸಹ ಬರೆದಿರುತ್ತಾರೆ. ಶ್ಲಾಘ್ಯವಾದ ಈ ವ್ಯಾಖ್ಯಾನದೊಡನೆ ಪ್ರಕಟಿಸಲ್ಪಟ್ಟಿರುವ ಸೂತಸಂಹಿತೆಯು ಶಿವಮಹಾತ್ಮ್ಯ, ಜ್ಞಾನಯೋಗ, ಮುಕ್ತಿ, ಯಜ್ಞವೈಭವವೆಂಬ ನಾಲ್ಕು ಖಂಡಗಳುಳ್ಳದ್ದಾಗಿಯೂ ಪ್ರತಿ ಖಂಡವೂ ಜ್ಞಾತವ್ಯಗಳಾದ ಬಹ್ವಂಶಗಳನ್ನು ಬೋಧಿಸತಕ್ಕದ್ದಾಗಿಯೂ, ನಿಖಿಲಾಗಮ ಸಾರಾರ್ಥ ಪ್ರದರ್ಶಕವಾಗಿಯೂ ಇರುತಿದೆ. ಈ ಗ್ರಂಥವು ಇದುವರಿವಿಗೆ ಯಾರಿಂದಲೂ ಪ್ರಕಟಿಸಲ್ಪಡದೆ ಇದ್ದದರಿಂದ ಇಂತಾ ಉತ್ತಮ ಗ್ರಂಥವು ಪ್ರಕಟಿಸಿದರೆ ಜನರಿಗೆ ಬಹಳ ಪ್ರಯೋಜನಕರವಾಗಿರಬಹುದೆಂಬ ಅಭಿಪ್ರಾಯವು ಮೇಲೆ ತಿಳಿಸಿದ ಮುದ್ರಾಕ್ಷರ ಶಾಲಾಧಿಕಾರಿಗಳಿಗುಂಟಾಗಲು ಕೂಡಲೆ ಅದರದಂ ಪ್ರಕಟಿಸಲೆತ್ನಿಸಿದರು. ಅಪೂರ್ವವಾದ ಈ ಗ್ರಂಥವಂ ಇತರ ಮಾತೃಕೆಗಳೊಡನೆ ಶುದ್ಧವಾಗಿ ಶೋಧಿಸಿ ಪರಿಷ್ಕರಿಸಲಿಕ್ಕೆ ಸಮರ್ಥರಾದ ಪಂಡಿತರಸಹಾಯವು ಅವರಿಗೆ ಅಪೇಕ್ಷಿತವಾಗಿದ್ದದರಿಂದ ಆ ವಿಷಯದಲ್ಲಿ ಈ ಪೂರು ಸುಪ್ರಸಿದ್ಧಕಾಲೇಜಿನಲ್ಲಿ ಗೀರ್ವಾಣಭಾಷಾಪಂಡಿತರಾಗಿಯೂ, ತರ್ಕ ವೇದಾಂತ ಸಾಂಖ್ಯ ಪಾತಂಜಲಾದಿ ಶಾಸ್ತ್ರಪ್ರವೀಣರಾಗಿಯೂ ಪ್ರಥಿತರ ಸಾಹಿತ್ಯಜ್ಞಾನ ಪ್ರಶಸ್ತರಾಗಿಯೂ ಇರುವ ಬ್ರಹ್ಮಶ್ರೀ ಪಂಡಿತ ಚಪ್ಪಲ್ಲಿ ವಿಶ್ವೇಶ್ವರ ಶಾಸ್ತ್ರಿಗಳವರು ಸಹಾಯಕರಾಗಿಯೂ ಬಹಳ ಶ್ರದ್ಧೆಯೊಡನೆ ಗ್ರಂಥವಂ ಚೆನ್ನಾಗಿ ಶೋಧಿಸಿಕೊಟ್ಟರು. ಸುಮಾರು ೮೦೦ ಪುಟಗಳುಳ್ಳ ಈಗ್ರಂಥವು ಪ್ರಕಟಿಸಲ್ಪಡಲಿಕ್ಕೆ ಅರ್ಥವ್ಯಯವೂ ಶರೀರಶ್ರಮವೂ ಬಹಳವಾಗಿ ಹಿಡಿದಿರಬಹುದೆಂದೆಣಿಸುತ್ತೇವೆ. ಇದರ ಕ್ರಯವು ಪ್ರತಿಯೊಂದಕ್ಕೆ ೭ ರೂಪಾಯಿಗಳಂತೆ ನಿಷ್ಕರ್ಷೆ ಮಾಡಲ್ಪಟ್ಟದೆ. ಈಗ್ರಂಥವು ಶ್ಲಾಘ್ಯವಾಗಿಯೂ ಉಪಯುಕ್ತವಾಗಿಯೂ ಬ್ರಾಹ್ಮಣರೆನಿಸಿಕೊಂಡವರೆಲ್ಲರಿಗೂ ಅವಶ್ಯಪಠನೀಯವಾದದ್ದಾಗಿಯೂ ಇರುವದರಿಂದಇದನ್ನೆಲ್ಲರೂ ಪರಿಗ್ರಹಿಸಿ ಅಪೂರ್ವಗ್ರಂಥಪರಿಷ್ಕರಣ ಪ್ರಚಾರ ಪ್ರಯುಕ್ತವಾದ ಪ್ರತಿಷ್ಠಾಪ್ರಯೋಜನಗಳಿಗೆ ಮೇಲೆ ಕಂಡವರೆಲ್ಲರನ್ನೂ ಪಾತ್ರರನ್ನಾಗಿ ಮಾಡಬೇಕೆಂದು ಕೋರುವೆವು

SUMMARY OF NEWS.

ವೃತ್ತಾಂತ ಸಂಗ್ರಹ.

ಮದರಾಸ್ ಹೈಕೋರ್ಟಿನ ಲಾಯರ್‌ಗಳ ಗುಮಾಸ್ತೆಯರು ಮಾಹೆಯಾನಾ ಒಂದುರೂಪಾಯಿ ಮುಂಗಡವಾಗಿ ಕೊಡುವ ಪಕ್ಷಕ್ಕೆ ಬರುವ ಜನವರಿ ತಿಂಗಳ ಮೊದಲು ಆಯಾಯ ಜಡ್ಜಿಗಳ ಮುಂದೆ ವಿಚಾರಣೆಯಾಗುವ ಮೊಕದ್ದಮೆಗಳ ತಪಸೀಲ್ ಪಟ್ಟಿಯು ಅಚ್ಚುಹಾಕಲ್ಪಟ್ಟು ಅವರಿಗೆ ಸರಬರಾಯಿ ಮಾಡಲ್ಪಡುವದೆಂದು ಹೈಕೋರ್ಟಿನವರು ನಿರ್ಣಯಿಸಿರುತ್ತಾರೆ.

ಆಶ್ಚರ್ಯಕರವಾದ ಕರು.—ಬಂಗಾಳೆಗೆ ಒಬ್ಬನು ಬದುಕಿರುವ ೩ ವರುಷದ ಹಿಂಡು ಕರುವನ್ನು ತಂದಿದ್ದಾನೆ. ಇದಕ್ಕೆ ಒಂದೇ ಶರೀರ, ಆದರೆ ೩ ತಲೆಗಳವೆ, ಪ್ರತಿ ತಲೆಯಲ್ಲಿಯೂ ಸ್ಪಷ್ಟವಾಗಿಯೂ, ಸುಂದರವಾಗಿಯೂ ಇರುವ ೧ ಬಾಯಿ, ೨ ಕಣ್ಣುಗಳೂ, ೨ ಕಿವಿಗಳೂ, ೨ ಕೊಂಬುಗಳೂ ಇವೆ ಅದು ತನ್ನ ೩ ತಲೆಗಳ ಪೈಕಿ ಎಡಗಡೇ ತಲೆಯಲ್ಲಿರುವ ಬಾಯಿಂದಲೇ ಹುಲ್ಲನ್ನು ಮೇಯುವದು, ನೀರನ್ನು ಕುಡಿಯುವದು.—ವೃ. ಪ.

ಈತಿಂಗಳ ೯ನೇತಾರೀಖ್‌ರಾತ್ರಿ ೯ ಘಂಟೆಗೆ, ತಿರುವಾಂಕೂರು ಮಹಾರಾಜರವರು, ತಮ್ಮ ದಿವಾನರಾದ ಮೆ. ಟಿ. ರಾಮರಾಯರವರು, ಪುದುಕೋಟೆ ದಿವಾನರವರು ಮೆ. ಶೇಷಯ್ಯ ಶಾಸ್ತ್ರಿಗಳವರು, ಸಂಸ್ಥಾನ ಚೀಫ್ ಸೆಕ್ರೆಟರಿ ಮೊದಲಾದವರೊಡನೆ ದಕ್ಷಿಣ ಇಂಡಿಯಾ ರೈಲ್‌ಮಾರ್ಗದಲ್ಲಿ, ಸ್ಪೆಷಲ್ ಟ್ರೇನಿನಲ್ಲಿ ಕಡಲೂರಿಗೆ ಪ್ರಯಾಣವಾದರು. ಅವರನ್ನು ಸಾಗುಕಳುಹಿಸುವದಕ್ಕಾಗಿ ಮೆಕಂಗಿರಿ ಅರಸರವರು, ತಿರುವಾಂಕೂರು ರೆಸಿಡೆಂಟರವರು, ಪೋಲೀಸ್ ಕಮಿಷನರ್ ಮೆ. ವೆಲ್ಕರ್ಯವರು, ಇನ್ನುಬಹುಮಂದಿ ಯೂರೋಪಿಯರ್ ಮತ್ತು ನೇಟಿವ್ ದೊಡ್ಡಮನುಷ್ಯರು ಸ್ಟೇಷನಿಗೆ ಬಂದಿದ್ದು ಮಹಾರಾಜರವರನ್ನು ಉಚಿತಮರ್ಯಾದೆಯೊಡನೆ ಸಾಗುಕಳುಹಿಸಿದರು. ಮಹಾರಾಜರವರು ಮಧುರೆ ಮಾರ್ಗವಾಗಿ ಈ ತಿಂಗಳ ೧೭ನೇ ತಾರೀಖ್‌ನಲ್ಲಿ ತಿರುವಾಂಕೂರು ಸೇರುವರು.

ಭಾರವಾದ ಸಾಮಾನುಗಳನ್ನು ಮೇಲಕ್ಕೆ ಸುಲಭವಾಗಿ ಎತ್ತುವ ನಾನಾವಿಧವಾದ ಅನೇಕ ಯಂತ್ರಗಳವೆಯಷ್ಟೆ. ಈ ಯಂತ್ರಗಳನ್ನು ಚಲನೆಯಲ್ಲಿಡುವದಕ್ಕೆ ಜನಗಳುಬೇಕು. ಜನಸಹಾಯವಿಲ್ಲದೇಲೆ ಆ ಕಾರ್ಯವನ್ನು ನೆರವೇರಿಸಿಕೊಳ್ಳಬೇಕೆಂಬ ಉದ್ದೇಶದಿಂದ, ಕ್ಲೀವ್ಲ್ಯಾಂಡೆ ಎಂಬ ಊರಿನಲ್ಲಿರುವ ಒಂದು ಉಕ್ಕಿನ ಕಾರ್ಖಾನೆಯಲ್ಲಿ, ಅಲ್ಲಿನ ಜನರು, ಭಾರವಾದ ಸಾಮಾನುಗಳನ್ನು ಮೇಲಕ್ಕೆ ಎತ್ತುವ ಪಳೆಯಂತ್ರದ ಕೊಂಡಿಗೆ ವಿದ್ಯುಚ್ಛಕ್ತಿಯಿಂದ ಸಿದ್ಧಪಡಿಸಲ್ಪಟ್ಟ ಒಂದು ದೊಡ್ಡ ಸೂಜಿಕಾಂತ ಕಲ್ಲನ್ನು (ಲೋಹಕ ಚುಂಬಕವನ್ನು) ತಗಲಿಸಿದ್ದಾರೆ ಕಾರ್ಖಾನೆಯ ನೌಕರರು ತಯಾರಾದ ಉಕ್ಕಿನ ಗಡಾರಿಗಳನ್ನೂ ಹಾಳೆಗಳನ್ನೂ ಇದರದಿ ತಂದು ಹಾಕುತ್ತಾರೆ. ಆಲೋಹ ಚುಂಬಕವು ಒಂದೊಂದುಸಾರಿ ೫೦ ಮಣಗಳ ಭಾರವನ್ನು ಮೇಲಕ್ಕೆ ಸೆಳೆದುಕೊಂಡು, ಬೇರೊಂದು ಕಡೆ ಇಟ್ಟಿರುವ ಮತ್ತೊಂದು ಲೋಹ ಚುಂಬಕದ ಸಳವಿನಿಂದ ಬೇಕಾದ ಸ್ಥಳಕ್ಕೆ ಕೆಳಕ್ಕೆ ಬಿಟ್ಟು ಬಿಡುತ್ತದೆ.—ವೃ. ಪ.

ಮುಂಬೈ, ೧೬ನೇ ಡಿಸಂಬರ್.—ಈದಿನ ಸಾಯಂಕಾಲ ೫ ಘಂಟೆಗೆ ಲಾರ್ಡ ಡಫರಿನ್ ಸಾಹೆಬರವರು ತಮ್ಮ ಭಾರ್ಯೆಯವರು ಮತ್ತು ಪರಿಜನರೊಡನೆ ರೈಲಿನ್‌ಮಾರ್ಗವಾಗಿ ಇಲ್ಲಿಗೆಬಂದು ಸೇರಿದರು. ರೈಲಿನ ಸ್ಟೇಷನ್‌ನಲ್ಲಿ ಡ್ಯೂಕಾಫ್ ಕಾನಾಟಿಯವರು ಹಾಜರಿದ್ದು ಅವರನ್ನು ಬರಮಾಡಿಕೊಂಡರು. ಮೆ|| ಲೀವಾರ್ನರವರು ರತ್ಲಾಂಸಂಸ್ಥಾನದ ಮಹಾರಾಜರವರಿಗೂ, ಮುಂಬೈಮ್ಯೂನಿಸಿಪಾಲಿಟಿಯ ಪ್ರೆಸಿಡೆಂಟರಾದ ಆನರೆಬಲ್ ಮೆ|| ಸಯನಿಮಂಬವರಿಗೂ ವೈಸ್‌ರಾಯಿಯವರ ಪರಿಚಯಮಾಡಿಸಿದರು. ಮ್ಯೂನಿಸಿಪಲ್ ಅಡ್ರೆಸ್ ಓದಲ್ಪಟ್ಟಮೇಲೆ ಲಾರ್ಡ ಡಫರಿನ್ಯವರು ವಿಶಿಷ್ಟ ಮರ್ಯಾದೆಗಳೊಡನೆ ಗವರ್ನಮೆಂಟ ಹೌಸಿಗೆ ಹೊರಟುಹೋದರು. ಅಲ್ಲಿ ಲಾರ್ಡ ರೇಯವರು ತಮ್ಮ ಭಾರ್ಯೆಯವರೊಡನೆ ಯದಿರ್ಗೊಂಡು ಇವರನ್ನು ಬರಮಾಡಿಕೊಂಡರು. ವಿಕ್ಟೋರಿಯಾ ಟರ್ಮಿನಸ್ ಯೆಂಬ ರಯಿಲ್ ಸ್ಟೇಷನ್ ಕಟ್ಟಡವು ಅಲಂಕರಿಸಲ್ಪಟ್ಟು, ಸರ್ಕಾರನೌಕರರು, ಮುಖ್ಯವಾದ ಯೂರೋಪಿಯನ್ ಮತ್ತು ನೇಟಿವ್ ದೊಡ್ಡಮನುಷ್ಯರು ಬಹುಮಂದಿಹಾಜರಿದ್ದು ಲಾರ್ಡ ಡಫರಿನ್ಯವರನ್ನು ಉಚಿತ ಮರ್ಯಾದೆಯೊಡನೆ ಬರಮಾಡಿಕೊಂಡರು.

EXTRACTS

ಪ್ರಪಂಚದ ಯಾವಯಾವ ಭಾಗದಲ್ಲಿ ಎಂತೆಂತಾಜನಗಳಿರುವರೋ ? ಯಾವಯಾವ ಸನ್ಮತಗಳಿಂದ ಶೋಭಿಸುತ್ತಿರುವರೋ ಎಂಬವನ್ನು ಪರೀಕ್ಷಿಸುವದು ಮನುಷ್ಯನಾಗಿ ಹುಟ್ಟಿದ ಪ್ರತಿಒಬ್ಬನಿಗೂ ಮುಖ್ಯವಾದದ್ದಾಗಿದೆ. ಕೂಪಕೂರ್ಮ ನ್ಯಾಯದಿಂದ ಹುಟ್ಟಿದ ಸ್ಥಳದಲ್ಲಿಯೆ ತೃಪ್ತರಾಗಿ ನಡಸೆಯೇ ಉತ್ತಮೋತ್ತಮವಾದದ್ದು. ತಾನಿರುವದೇ ಕೈಲಾಸ ತನ್ನ ಐಶ್ವರ್ಯವೇ ಕುಬೇರನೈಶ್ವರ್ಯವೆಂದು ಇತರರನ್ನು ತಿಳಿಯದ ಕುರುಡನಂತೆ ಇರುವನಲ್ಲವೆ ? ಯಾರೇತಗರಿ ಪ್ರತಿಯೊಂದು ಗುಣವನ್ನು ಬಾಲ್ಯಪ್ರಾರಭ್ಯ ಸಹವಾಸವಂತೆಯೇ ಅನುಸರಿಸುತ್ತಿರುವದರಿಂದ ಆಜನರ ನಡತೆಗಿಂತಲೂ ಉತ್ಕೃಷ್ಟರಾಗಿರುವವರನ್ನುನೋಡಿ ಸಂತೋಷಿಸುವದಕ್ಕಾಗಿ ದೇಶಾಟನೆ ಅತ್ಯಾವಶ್ಯಕವು. ದೇಶವನ್ನುತಿರಿಗಿನೋಡುವದರಿಂದ ಪರರಲ್ಲಿ ನಾವು ನಡಿಯಕೊಳ್ಳಬೇಕಾದ ವಿನಯಾದಿ ಗುಣಗಳೂ, ತಾಳ್ಮೆಯೂ, ಸದ್ಗುಣವೂ, ಮನುಷ್ಯನಲ್ಲಿ ಅಷ್ಟಷ್ಟಾಗಿ ನೆರೆಗೊಳ್ಳುವದಾದ್ದರಿಂದ ಈ ಭಾಗವನ್ನು ಸರ್ವರೂ ಒಳ್ಳೇದೆಂದು ಹೇಳ್ಯಾರಲ್ಲದೆ, ಹುಟ್ಟುಕುರುಡರಂತೆ, ಒಂದೇಕಡೆಯಲ್ಲಿಯೇ ತೃಪ್ತಿ ಪಡುವಿಕೆಯು ವಿದ್ವಾಂಸರು ಮೆಚ್ಚರು.

ಪೂರ್ವ ಕಾಲದಲ್ಲಿ ರಾಜರುಗಳನೇಕರಾಳುತ್ತಿದ್ದ ನಮ್ಮ ದೇಶವು ದೇಶಾಟನೆಗೆ ಅನುಕೂಲಿಸುವ ಬಂಡಿಗಳು, ಧಾಸಿಕಾರ್ಡಿಗಳು, ಬೈಸಿಕಲ್‌ಗಳು, ಮುಂತಾದವುಗಳ ತಯಾರಿಯೂ, ಮನುಷ್ಯರಾದರೂ ಸುಖದಿಂದ ತಿರುಗುವ ರಸ್ತೆಗಳೂ, ಇಲ್ಲದೇ ಯಿದ್ದವು. ಈಗಿನ ಕಾಲದಲ್ಲಿ ಅಲ್ಲಲ್ಲಿ ರಸ್ತೆಗಳೂ, ಸೇತುವೆಗಳೂ, ಕಾಲು ಮುಳ್ಳುಗಳಿಲ್ಲದೆ, ಚೊಕ್ಕಟವಾಗಿರುವವು ರೈಲ್‌ಗಳೂ, ಪಡಗುಗಳೂ, ಸಹ ಸಿದ್ಧವಾಗಿರುತ್ತವೆ. ಈ ಕಾಲದಲ್ಲಿ ಮನೆಯಲ್ಲಿದ್ದರೆ, ಎಷ್ಟು ಸುಖವೋ ಹಾಗೆಯೇ ಪರಸ್ಥಳದಲ್ಲಿಯೂ, ಸುಮ್ಮನೆ ಕೇವಲ ಸೌಖ್ಯವನ್ನನುಭವಿಸುತ್ತಾ ಸುತ್ತಬಹುದು. ದೇಶಾಟನೆಯನ್ನು ಮಾಡುವದಕ್ಕೆ ಈ ಕಾಲಕ್ಕಿಂತಲೂ, ಸುಖ ಕಾಲವನ್ನು ಪೂರ್ವದವರು ಎಂದಿಗೂ ಕಾಣಲಿಲ್ಲವಾಗಿ ನೆನಸಬಹುದು. ಈಗ್ಯೂ ಸಹ ಅನೇಕ ಆಶ್ರಿತ ರಾಜರುಗಳ ದೇಶದಲ್ಲಿ ಇನ್ನೂ ಆ ದೇಶಕಲ್ಪಿತ ರಸ್ತೆಗಳೇ ಇರುತ್ತವೆ ಅದನ್ನೆಲ್ಲಾ ಸರಿಪಡಿಸಿ ಪ್ರಯಾಣೀಕರಿಗೆ ಅನುಕೂಲ ಪಡಿಸಿಕೊಳ್ಳುವರೆಂದು ಪ್ರಾರ್ಥಿಸುವೆವು ಪ್ರಯಾಣಿಕರಿಗೆ ಪ್ರತಿ ಕ್ಷೇತ್ರಗಳಲ್ಲಿಯೂ, ಕ್ಷೌರವಿಧಿ ಮುಂತಾದ ತೊಂದರೆಗಳದ್ದು, ಎಷ್ಟು ಹಣವನ್ನು ತೆಗದುಕೊಂಡು ಹೋಗಿದ್ದರೂ, ಒಂದು ಕ್ಷೇತ್ರವನ್ನು ಹೊಕ್ಕರೆ ಮುಂದಕ್ಕೆ ಭಿಕ್ಷ್ಯಾಗಾಡಿ ಬಾಡಿಗೆಗಾದರೂ, ಮೂರುಕಾಸು ಸಹ ನಿಲ್ಲದಂತೆ ಕೇಳುವದರಿಂದ ಅನೇಕರು ಯಾತ್ರೆಯ ಬಗ್ಗೆ ಹೆದರುತ್ತಾರೆ. ನಮ್ಮಲ್ಲಿ ಎಷ್ಟುದಿನದವರಿವಿಗೂ ವಿಚಾರವಿಲ್ಲವೋ ಅಲ್ಲಿಯ ವರಿಗೂ, ಈ ವಿಧ ಸೋಮಾರಿಗಳಾದ ಪಗಲುಗಳ್ಳರೆಂಬವರ ತೊಂದರೆಯು ಖಂಡಿತವಾಗಿ ತಪ್ಪುತ್ತಲೇ ಇರುತ್ತದೆ. ಪ್ರತಿ ಕ್ಷೇತ್ರಕ್ಕೂ ಕ್ಷೌರವಿಧಿ ಸಮಾರಾಧನೆ ಮುಂತಾದ್ದನ್ನು ಮಾಡುತ್ತಾ ಈ ಬ್ರಾಹ್ಮಣರ ಹೊಟ್ಟೆಯನ್ನು ಹೊರೆಯುತ್ತಾ ಹೋಗಲು, ಎಲ್ಲಾ ಕಡೆಯಲ್ಲಿಯೂ ಸುತ್ತಿದ್ದನೆಂದು ಹೇಳುವ ರಾಮಚಂದ್ರ ದೇವರು ಧರ್ಮರಾಯನು ಇವರುಗಳೇ (ಕುಬೇರನಲ್ಲಿಗೆ ಹೋಗಿ ಸಾಲ ತಂದು ಬ್ರಾಹ್ಮಣರಿಗೆ ಭೋಜನಮಾಡಿಸಿ ಮದುವೆ ಮಾಡಿಕೊಂಡು, ತಿರುಪತಿ ಶ್ರೀನಿವಾಸನಂತೆ) ಖರ್ಚುಮಾಡಿದರೆ, ಸಾಲವನ್ನಾರು ಕೊಟ್ಟಾರೋ ! ಹೀಗೆ ದಂಭಾಚಾರಿಗಳನ್ನು ಹೇಳುವದಿಂದರೆ ನಡಿಸುವವನು ತನ್ನ ಶಕ್ತಿಯನ್ನಾಲೋಚಿಸ ಬೇಕಲ್ಲವೇ ? ಇಲ್ಲಿಂದ ಕಾಶಿಗೆ ಹೊರಟರೆ ಪಿತೃ ದೇವತೆಗಳು ಇವನುಹೊಕ್ಕ ತೀರ್ಥಗಳಲ್ಲೆಲ್ಲಾ ಪಿಂಡವನ್ನು ಕೋರಿ ಬರುತ್ತಾ, ಇದ್ದರೆ ಅವರು ಎಂಥಾ ಕೂಳ ಬಾಕರಿರಬಹುದು.

ಪೂರ್ವ ಜನ್ಮದ ಪಾಪಗಳನ್ನು ಈ ಜನ್ಮದಲ್ಲಿ ಅನುಭವಿಸಬೇಕೆ ? ಹಾಗೆ ಒಂದುವೇಳೆ ಅನುಭವಿಸಬೇಕಾದರೂ, ದೇವರಿಂದ ನಿರ್ಮಿತವಾದ ದಂಡನೆಗಳು ಲೋಕದಲ್ಲಿ ಎಲ್ಲರಿಗೂ, ಸಮವಾಗಿ ರಬೇಕು. ಮುಸಲ್ಮಾನರಲ್ಲು, ಕ್ರಿಶ್ಚನರಲ್ಲು, ವಿಧವೆಯಾದ ಮಾತ್ರಕ್ಕೆ ಅದೇ ಒಂದು ದೋಷವೆಂದು ಎಣಿಸುತ್ತಾರೆಯೇ ? ಇಲ್ಲ. ಹಾಗೆಯೇ ನಮ್ಮಲ್ಲಿ ಯಾಕಿರಬಾರದು ? ಆ ದಯಾಳುವಾದ ಭಗವಂತನಿಗೆ ಲೋಕದಲ್ಲಿ ಇರುವ ಸಕಲ ಜನಗಳಲ್ಲಿಯೂ, ಮಮತೆ ಏಕರೀತಿಯಾಗಿ ಇರುತ್ತದೆಯೇಹೊರ್ತು ಮತ್ತೆ ಬೇರೆಯಿಲ್ಲ.

ಹೀಗಿರುವಾಗ ಹಿಂದೂ ವಿಧವೆಗಳಿಗಾಗಿ ಒಂದು ವಿಧಿಯನ್ನು, ಬೇರೆ ಜಾತಿಯವರಿಗೆ ಬೇರೆ ವಿಧಿಯನ್ನು ಕಲ್ಪಿಸುವನೇ ? ಎಷ್ಟು ಪರ್ಯಾಲೋಚಿಸಿ ನೋಡಿದಾಗ್ಯೂ ಈಗ ನಾವು ಪಡುವ ಕಷ್ಟಗಳು ದೇವತಾ ಸಮ್ಮತ ವಾದವುಗಳೆಂದು ತೋರಬರುವದಿಲ್ಲವಲ್ಲಾ ! ವಿಧವೆಗಳಾದ ಮಾತ್ರಕ್ಕೆ ಈ ಪ್ರಪಂಚದ ಇಂದ್ರಿಯ ವರ್ಗಗಳನ್ನೆಲ್ಲ ನಿಗ್ರಹಿಸಿ ವೈರಾಗ್ಯವನ್ನು ಅನುಸರಿಸುವದಕ್ಕಾಗುತ್ತೆ ? ಹೀಗೆ ಗ್ರಹಿಸುವದಕ್ಕೆ ದೇಹ ದಂಡನೆಯೇ ಮುಖ್ಯ ಸಾಧನವೆಂದು ಹೇಳುತ್ತಾರೆ. ಆದರೆ ಅದು ಆಚರಿಸುವದು ಕಠಿಣವಲ್ಲವೇ ? ಇಂದ್ರಿಯಗಳು ನೈಸರ್ಗಿಕಗಳಾದವು. ಪೂರ್ವ ಕಾಲದಲ್ಲಿ ಋಷಿಗಳು ಈ ಲೋಕವನ್ನೇ ವರ್ಜಿಸಿ ವನದಲ್ಲಿ ತಪಸ್ಸು ಮಾಡುತ್ತಿದ್ದರು. ತ್ರಿಮತೋದ್ಧಾರಕರಾದ ಶಂಕರಾಚಾರ್ಯರು, ಮಧ್ವಾಚಾರ್ಯರು, ರಾಮಾನುಜಾಚಾರ್ಯರು, ಪೂರ್ಣಪ್ರಜ್ಞಾಚಾರ್ಯರು, ಬಾಲವಯಸ್ಸಿನಲ್ಲಿಯೇ ಸನ್ಯಾಸಾಶ್ರಮವನ್ನವಲಂಬಿಸಿದರು. ಇದೇಪ್ರಕಾರ ಸಕಲರಿಗೂ, ವಿರಕ್ತಿಯನ್ನು ಹೊಂದುವದಕ್ಕಾದೀತೆ ? ಕ್ರಮವಾಗಿ ಹುಟ್ಟಿದ ಶಾಸ್ತ್ರಗಳಲ್ಲಿ ವಿಧಿಸಿರುವ ಪ್ರಕಾರ ಈಗಿನ ಕಲಿಜನಗಳೆಲ್ಲರೂ ನಡೆಯುತ್ತಾರೆಯೇ ? ಬ್ರಹ್ಮಚರ್ಯಗೃಹಸ್ಥವಾನಪ್ರಸ್ಥ, ಸನ್ಯಾಸಾಶ್ರಮಗಳ ಧರ್ಮಗಳಿಗೆ ಅನುಸಾರವಾಗಿ ಈಗಿನ ಜನಗಳು ಎಲ್ಲಾ ಭಾಗದಲ್ಲಿಯೂ, ನಡೆಯುತ್ತಾರೆಯೇ ? ಅರವತ್ತು ವರುಷದ ಅರಳು ಮರುಳುಳ್ಳ ವೃದ್ಧ ಪಿಶಾಚರು ತಾಯಿ ತಂದೆಗಳ ಮನಸ್ಸನ್ನು ಹೊನ್ನಿಂದ ಗಾಳದಿಂದ ಸೆಳದು ತನಗ ಮರಿಮಗಳ ಸ್ಥಾನದಲ್ಲಿರಬಹ ಬಾಲ, ಕೋಮಲಿ ಯಾಗಿಯೂ, ನಿಷ್ಕಪಟಚಿತ್ತೆಯಾಗಿಯೂ, ನಿರ್ದೋಷಿಯಾಗಿಯೂ ಇರುವ ಬಾಲೆಯನ್ನು ಹೊಂದಿಯೂ ಮದುವೆ ಮಾಡಿಕೊಂಡು, ತಾನು ಕಣ್ಣುಮುಚ್ಚಿಕೊಂಡು ಹೋಗಿ ಹೆಂಡತಿಯ ಕೈಯಲ್ಲಿ ಚಿಪ್ಪುಕೊಟ್ಟು, ಅವಳ ತಲೆಮೇಲೆ ಕಲ್ಲುಹಾಕುವದಿಲ್ಲವೇ ?

ಶಾಸ್ತ್ರವಯಸ್ಕರಲ್ಲದೆ, ಲೋಕ ವ್ಯವಹಾರದ ವಿಚಾರವೇ ನಮಗೆ ಗೋಚರವಿಲ್ಲದ ಕಾಲದಲ್ಲಿ ವಿವಾಹವೆಂಬ ಕಾಕಗಳಿಂದ ನಮ್ಮನ್ನು ಕಟ್ಟುತ್ತಾರೆ. ಆಕಸ್ಮಿಕವಾಗಿ ವಿವಾಹವಾಡಿಕೊಂಡ ಮಹಾ ಪುರುಷನು ಯಮಪುರಿಯನ್ನು ಸೇರಿದರೆ ಆ ಬಂಧನದಿಂದ ವಿಮೋಚನವೇ ಇಲ್ಲ. ಹೀಗೆ ನಿಷ್ಕರುಣದಿಂದ ನಮ್ಮ ಕೈ ಮೀರಿದ ಕೆಲಸದಲ್ಲಿ ನಮ್ಮನ್ನು ಬಾಧಿಸುವದು ಯಾವ ನ್ಯಾಯ ? ಶುಭ ಕಾರ್ಯದಲ್ಲಿ ಪ್ರವರ್ತಿಸುವರು ನಮ್ಮ ದರ್ಶನವೇ ಅಶುಭಸೂಚಕವೆಂದುಎಣಿಸಿ ಬಲೋದ್ಬಂಧದಿಂದ ನಮ್ಮನ್ನು ದಾಟಿಸುತ್ತಾರೆ. ಈ ದುಃಖವನ್ನೆಲ್ಲ ತಾಯಿ ತಂದೆಗಳಲ್ಲಿ ಹೇಳಿಕೊಂಡರೂ ಕೂಡ ಅವರಲ್ಲಿ ಕನಿಕರವು ಹುಟ್ಟುವದಿಲ್ಲವಲ್ಲಾ. ಪ್ರಾಕೃತ ಪುಣ್ಯ ಫಲಾನುಸಾರವಾಗಿ ಈ ಜನ್ಮದಲ್ಲಿ ನಡೆಯಬೇಕೇ ಹೊರ್ತು ಇತರ ತಿರಸ್ಕೃತ ವಾಕ್ಯಗಳಿಗೆ ವ್ಯಸನಪಟ್ಟದ್ದರಿಂದ ಯೇನೂ ಸಾರ್ಥಕವಿಲ್ಲವೆಂದು ಹೇಳುವರು. ಅಯ್ಯೋ ನಾವು ಮಾಡಿದ ಪಾಪಗಳನ್ನು ಈ ಪತ್ರಿಕೆಯ ವಾಚಕರಾದವರೂ ತಿಳಿಸ್ಯಾರೋ ?

ಬೆಂಗಳೂರು ಒಬ್ಬ ಬಾಲವಿಧವೆ.

BANGALORE.—Printed and published at the KARNATIC PRESS, No. 46, HOSPITAL ROAD, PETTA.—1888.

ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA.

ಪ್ರತಿ ಸೋಮವಾರ ಪ್ರಾತಃಕಾಲದಲ್ಲಿ ಪ್ರಕಟಿಸಲ್ಪಡುವದು.

Published every Monday Morning.

ಪ್ರಕಾಶವಿವಿಧಪ್ರವೃತ್ತ್ಯುಪಗಮಾರ್ಹ ಕರ್ಣಾಟಕಪ್ರಕಾಶನವರಾಭಿದಾಪ್ರಥಿತಗಾಹಿತೀಕೋಭಿತಾ । ಮ್ರುಗಾಂಕಹಿತವಾಸರನಿಹಿತಮುದ್ರಣಾಸಜ್ಜನೈರ್ನಿಕಾಸುಪರಿಪೋಷಿತಾಚಿಕಿತಿವಾನಸಂಸುಮುದೇ॥

Vol. XV] BANGALORE:—MONDAY, DECEMBER 24, 1888. [No. 50.

ಸಂಪುಟ ೧೫.] ಬೆಂಗಳೂರು:—ಸಣ ೧೮೮೮ನೇ ಇಸವಿ ಡಿಸಂಬರ್ ೨೪ನೇ ತಾರೀಖ್ ಸೋಮವಾರ. [ಸಂಖ್ಯೆ ೫೦.

ಕರ್ಣಾಟಕ ಪ್ರಕಾಶಿಕಾ

ಪತ್ರಿಕೆಯ ಚಂದಾ ದರಗಳು,
೧೮೮೮ನೇ ಇಸವಿ ಜನವರಿಯಿಂದ
ಕಡಮೆಮಾಡಲ್ಪಟ್ಟಿರುತಿದೆ.

ಈ ಪತ್ರಿಕೆಯು ಚಂದಾದಾರರಪ್ಪಿಕೆ ಅನೇಕರ ಅಪೇಕ್ಷೆಯನ್ನು ನೆರವೇರಿಸುವ ಉದ್ದೇಶದೊಡನೆಯೂ, ಪರಿಮಿತವಾದ ಆಯುತಿಯುಳ್ಳವರಿಗೆಲ್ಲ ಈ ಪತ್ರಿಕೆಯು ಸುಲಭವಾಗಿ ಲಭಿಸುವಂತಿರಬೇಕೆಂಬ ಅಭಿಪ್ರಾಯದೊಡನೆಯೂ ಇದರ ಚಂದಾದರವನ್ನು ಇದರಡಿಕಂಡಂತೆ ಕಡಮೆಮಾಡಿರುತ್ತೇವೆಂದರೆ --

ಇಂಗ್ಲಿಷ್ ಮತ್ತು ಕನ್ನಡಭಾಗಗಳಿಗೆ.

	ಸ್ಥಳದವರಿಗೆ	ಪರಸ್ಥಳದವರಿಗೆ
12 ತಿಂಗಳಿಗೆ	8-0-0	9-0-0
6 ,,	4-0-0	4-8-0
3 ,,	2-8-0	2-8-0

ಇಂಗ್ಲಿಷ್ ಅಥವಾ ಕನ್ನಡಭಾಗಗಳಿಗೆ.

	ಸ್ಥಳದವರಿಗೆ	ಪರಸ್ಥಳದವರಿಗೆ
12 ತಿಂಗಳಿಗೆ	4-0-0	5-0-0
6 ,,	2-0-0	2-8-0
3 ,,	1-4-0	1-9-0

ಷರಾ—ಇಂಡೆ ಮುನ್ಸಿಫಗಳು, ಗೋಬಳಿ ಮತ್ತು [illegible] ಸಸ್ಕೂಲ್‌ಮಾಸ್ತರುಗಳು, [illegible] ದು, ವಿದ್ಯಾರ್ಥಿಗಳು, [illegible] ಈ ಪತ್ರಿಕೆಯು [illegible] ಚಂದಾದಾರರಿಗೆ ಕೊಡಲ್ಪಡುವದು [illegible] [illegible]

[illegible]

ಪ್ರಕಟನೆಯ ರಿವಾಜ.

ಮೊದಲನೆಯ ದಫಾ ಪಂಕ್ತಿ ಒಂದಕ್ಕೆ ೦—೨—೦
ಎರಡನೆಯ ದಫಾ ಪಂಕ್ತಿ ಒಂದಕ್ಕೆ ೦—೧—೦

ಷರಾ—[illegible]

[illegible] ದಾವು ಜವಾಬ್ದಾರರಾಗಲಾರೆವು. [illegible] ಕಳಿಸಲ್ಪಟ್ಟಕಾಗದಗಳುಮರುವಾಪಸು ಕಳುಹಿಸಲ್ಪಡಲಾರವು

"IT RECOMENDS ITSELF"

ALL WHO SUFFER FIND SURE RELIEF.

LITTLE'S

ORIENTAL BALM

THE MOST EFFECTUAL MODERN REMEDY FOR PAIN.

[illegible]

ಪರೀಕ್ಷಕರ ಅಭಿಪ್ರಾಯವು.

[illegible] (C. R. TICHBORNE, LL. D, F. C. S., M. R. I. A.) [illegible]

ಇದರ ಕ್ರಯ—ಸೀಸೆ ಒಂದಕ್ಕೆ ೧ ರೂಪಾಯಿ.

[illegible]

AGENTS.— Messrs, J. WEST, Chemist, &c., Bangalore.
CAPTAIN & Co. Chemists, Bangalore.
BIGGS & Co, Chemists, Bangalore; and of
MAHOMED YOUSOFF AND SONS, The Cash Bazar, Bangalore
A. C. BERKMAN & Co.,
20 Sambodoss Street Madras.

NOTICE.

VAIDYASARA SANGRAHA

A TREATISE ON THE PRINCIPLES OF

HINDU MEDICINE

Price including Postage Rs 5 6 0

ವೈದ್ಯಸಾರ ಸಂಗ್ರಹ.

ಈಗ್ರಂಥಾಪೇಕ್ಷೆಯುಳ್ಳವರು ಮೊಬಲಗಿನೊಡನೇ ಕೆಳಗೆ ರುಜುಮಾಡಿರತಕ್ಕವರ ಹೆಸರಿಗೆ ಬರೆದುಕೊಂಡರೆ ಪುಸ್ತಕ ಕೊಡಲ್ಪಡುವದು. ಮೊಬಲಗು ಇಲ್ಲದ ಪರವಾನಿ [illegible] ಗಳಿಗೆ ಉತ್ತರಾ ಬರೆಯಲ್ಪಡಲಾರದು.

ಇದರಕ್ರಯ ... ... ರೂ॥ ೫—೦—೦
ಪ್ಯಾಕಿಂಗ್ ಮತ್ತು ಅಂಚೆಹಾಸಲ್ ೦—೬—೦
ಬಿ. ಪಿ. ವೆಂಕಟಾಚಾರ್ಯ,
ಆಸ್ಪತ್ರಿರೋಡ್ ಬೆಂಗಳೂರು.

ವಿಶೇಷ ವರ್ತಮಾನ.

[illegible]

ಪೂನೇ ಚಿತ್ರಶಾಲಾ ಪ್ರೆಸ್ [illegible].

ನೋಟೀಸು.

ಅಪ್ಜಲ್ ಬಾಬತು ದಿನಸಾವರಿ ಅತ್ತರುಗಳು !
ಬಾಧೆ ನಿವರ್ತಿ ಮಾಡುವ ದಂತಭಸ್ಮ ! !
ಅನೇಕ ಸುಗುಣಗಳುಳ್ಳ ಸುಗಂಧರಾಜ ತೈಲವು ! ! !
ಸನಾತನದ ಅಪ್ಜಲ್‌ಬಾಬತು ಊದು ಬತ್ತಿಗಳು ಮತ್ತು ಬಿಲ್ಲೆಗಳು ಹೊಸ ಬತ್ತಿಗಳು ವಗೈರೆ.

ಇವುಗಳೆಲ್ಲ ಬಹಳ ಪರಮೊಯಿಸೆ ಯಿಂದ ತಯಾರಾಗಿ ಬಿಕರಿಗೆ ಸಿದ್ಧವಾಗಿರುತ್ತೆ. ಅಲ್ಲದೆ ೫ ಸಾವಿರ ಕೀಟಾಯಿಗಳಿಗೆ ಮೇಲ್ಪಟ್ಟು ಖರ್ಚಾಗಿರುವ, ಬಹಳ ಸಂಶಯಗಳನ್ನು ಪರಿಹಾರ ಮಾಡಿ ಗುಣವಾಗಲೂ ಸುವಾಸನೆ ಕೊಡುವ ಸುಗಂಧರಾಜ ತೈಲವು ರಾತ್ರಿ ಹಗಲು ಬಾಧಿಸುವ ಹಲ್ಲು ನೋವನ್ನು ಪರಿಹಾರ ಮಾಡುವ ದಂತ ಭಸ್ಮ ಸಹ ಬಹಳ ಕಮ್ಮಿ ಚಾರ್ಜಿಗೆ ಸಿಕ್ಕುವದು. ಏಜಂಟ್ ಆ. ಮಹಮದ್ ಖಾಸಿಂ, ಬೆಂಗಳೂರು ದೊಡ್ಡಪೇಟೆ ಅಂಬೇ ಕಚ್ಚೇರಿ ರೂಬರೂ ಮಾರ್ಕೆಟ್.

Bangalore City Municipality.

ಬೆಂಗಳೂರು ಸಿಟಿ ಮುನ್ಸಿಪಾಲಿಟಿ.

ನೋಟೀಸ್.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ:—

ತಿರುಪತಿಯಲ್ಲಿ ಈಗ ವಾಂತಿ ಬೇಧಿ ರೋಗ ವ್ಯಾಪಿಸಿರುವದರಿಂದ ಸ್ವಲ್ಪ ದಿನಗಳಲ್ಲಿ ಸದರೀ ಸ್ಥಳದೊಳು ನಡೆಯುವ ಉತ್ಸವಕ್ಕಾಗಿ ಅಲ್ಲಿಗೆ ಹೋಗತಕ್ಕವರಿಗೆ ಉಂಟಾಗಬಹುದಾದ ಅಪಾಯವನ್ನು ಕುರಿತು ಎಚ್ಚರಿಸಲ್ಪಟ್ಟಿರುತ್ತಾರೆ.

ತಾ॥ ೨೧ನೇ ಡಿಸಂಬರ್ ೧೮೮೮.

A. SRINIVASA CHARLU, K. B.,
OFFICE OF THE CITY MUNICIPALITY BANGALORE, } Vice-President, City Municipal Commission.

NOTICE TO SUBSCRIBERS.

ಇದರಿಂದ ನಮ್ಮ ಚಂದಾದಾರರಿಗೆ ನಾವು ಕು ತಿಳಿಸುವ ದೇನಂದರೆ—ಈ ವಾರದೊಡನೆ ಈ ಸಾಲ್ ಪೂರ್ತಿಯಾಯಿತು. ನಮ್ಮ ಚಂದಾದಾರರ ಪೈಕಿ ಅನೇಕರು ಇದುವರಿವಿಗೆ ಈಸಾಲಿನ ಚಂದಾ ಮೊಬಲಗನ್ನು ಕಳುಹಿಸದೆಯೂ ಅಬ್ಯೆ ನಾವು ಅನೇಕಸಲ ಬರೆದಕಾಗದಗಳಿಗೆ ಜವಾಬ್ ಕೊಡದೆಯೂ ಬಾಕೀ ಮೊಬಲಗನ್ನು ಕಳುಹಿಸದೆಯೂ ಇರುತ್ತಾರೆ. ಅಂತವರೆಲ್ಲರಿಗೂ ಮುಂದಿನ ವರ್ಷದಿಂದಲು ಪತ್ರಿಕೆ ನಿಲ್ಲಿಸಲ್ಪಡುವದಲ್ಲದೆ ಬಾಕೀ ವಸೂಲೀ ವಿಷಯದಲ್ಲಿ ನಾವು ಅವಲಂಬಿಸುವಕ್ರಮವು ಬಹಳ ಕಠಿಣವಾಗಿರುವದೆಂದು ಇದರಿಂದ ಸೂಚಿಸಿಯಿರುತ್ತೇವೆ. ಇದಲ್ಲದೆ ಮುಂದಿನಸಾಲಿನಲ್ಲಿ ಈಪತ್ರಿಕೆಯು ಅಪೇಕ್ಷೆಯಿಲ್ಲದವರು ಕೂಡಲೇ ಲಿಖಿತಮೂಲಕ ನಮಗೆ ತಿಳಿಸಿ ನಿಲ್ಲಿಸಿಕೊಳ್ಳಬಹುದು. ಹೊಸದಾಗಿ ಪತ್ರಿಕೆಯ ನ್ನಪೇಕ್ಷಿಸುವಂತಾವರು ಚಂದಾ ಮೊಬಲಗಿನೊಡನೆ ದರವಾಸ್ತು ಮಾಡಿದಹೊರತು ಪತ್ರಿಕೆ ಕಳುಹಿಸಲ್ಪಡಲಾರದು.

ಪ್ರತಿಸಂವತ್ಸರದಲ್ಲೂ ಕ್ರಿಸ್‌ಮಸ್ ರಜಾಕಾಲದಲ್ಲಿ ಒಂದುವಾರದಪತ್ರಿಕೆಯು ನಿಲ್ಲಿಸಲ್ಪಡುವ ವಾಡಿಕೆಯನ್ನನುಸರಿಸಿ, ಈತಿಂಗಳ ೩೧ನೇತಾ॥ ಸೋಮವಾರದಪತ್ರಿಕೆಯು ನಿಲ್ಲಿಸಲ್ಪಡುವದು.

ತಾ॥ ೨೪ನೇ ಡಿಸಂಬರ್, ೧೮೮೮.

ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA.

MONDAY, DECEMBER 24, 1888.

೧೮೮೮ನೇ ಡಿಸೆಂಬರ್ ತಾ|| ೨೪ನೇ ಸೋಮವಾರ.

HIDU SOCIAL REFORMS.

ನಮ್ಮಲ್ಲಿ ಈಗ ನೆಲೆಗೊಂಡಿರುವ ವಿವಾಹ ಸಂಬಂಧವಾದ ಕೆಲವು ನಿಯಮಗಳು ಈಗಿನಕಾಲಕ್ಕೂ ಈಗಿನ ಸ್ಥಿತಿಗೂ ಅನುಗುಣವಾಗಿಲ್ಲವೆಂಬ ಅಭಿಪ್ರಾಯವು ಅನೇಕರಿಗೆ ಉಂಟಾಗಿ ಅದರ ಮೇಲೆ ಅವರು ಈಗ ಆಚರಣೆಯೊಳಗಿರುತಲಿರುವ ಬಾಲ್ಯ ವಿವಾಹವನ್ನು ನಿಲ್ಲಿಸಿ ಪ್ರಬುದ್ಧ ವಿವಾಹವನ್ನು ಮಾಡಿಸಬೇಕೆಂತಲೂ, ಆಜನ್ಮ ವೈಧವ್ಯಾನುಭವ ನಿರ್ಬಂಧವು ನಿವೃತ್ತಿಸಿ ಬಾಲ ವಿಧವೆಯರಿಗೆಲ್ಲ ಮರಳಿ ವಿವಾಹ ಮಾಡಿಸಬೇಕೆಂತಲೂ, ವರಣಾಧಿಕಾರವು ಮಾತಾ ಪಿತೃಗಳು ಅಥವಾ ಇಷ್ಟಬಂಧುಗಳು ಇಟ್ಟುಕೊಳ್ಳದೆ ಅದು ವಧೂವರರಿಗೆ ಒಪ್ಪಿಸಬೇಕೆಂತಲೂ ತಾತ್ಪರ್ಯಗೊಂಡು ತಕ್ಕ ಪ್ರಯತ್ನಗಳಂ ಅಲ್ಲಲ್ಲಿ ಲೇಖನಪ್ರಸಂಗ ಪ್ರೋತ್ಸಾಹ ರೂಪವಾಗಿ ಮಾಡುತಲಿರುವದು ಪ್ರಸಿದ್ಧವಾಗಿದೆಯಷ್ಟೆ. ಈಗ ಆಚರಣೆಯಲ್ಲಿರುವ ಅನಾದಿಸಿದ್ಧಗಳಾದ ಆಚಾರಗಳಂ ತ್ಯಜಿಸಿ ಪ್ರಾರ್ಥ್ಯೋಕ್ತನವೀನ ಸಂಪ್ರದಾಯಗಳನ್ನಂಗೀಕರಿಸುವಂತೆ ತಿಳಿಸತಕ್ಕವರಿಗೆ ಇಂತಾ ಜ್ಞಾನ ಪ್ರಂಟಾಗಲಿಕ್ಕೆ ವಿದ್ಯೆಯಲ್ಲಿಯೂ ವೈಲಕ್ಷಣ್ಯದಲ್ಲಿಯೂ ನಮಗಿಂತ ಶ್ರೇಷ್ಠರಾಗಿರುವಂತೆ ಭಾವಿಸಲ್ಪಟ್ಟಿರುವ ಬ್ರಿಟಿಷಿನವರು ಕಾರಣರಾಗಿರುತ್ತಾರೆ. ಇವರ ನಡವಳಿಕೆಯನ್ನು ಅನುಸರಿಸಬೇಕೆಂಬ ಕೋರಿಕೆ ಈಗ ನಮ್ಮವರಿಗೆ ಬಹಳವಾಗಿದೆ. ಇಂತವರ ಆಚಾರ ವ್ಯವಹಾರಗಳಂ ನೋಡಿದರೆ ಇವರಲ್ಲಿಯೂ ಭಿನ್ನಾಭಿಪ್ರಾಯಗಳು ಹೇರಳವಾಗಿರುವಂತೆ ತೋರುತಿವೆ. ನಮ್ಮವರು ಈಗಿರುವ ಸ್ಥಿತಿಗಿಂತ ಒಂದು ದರ್ಜೆ ಅಭಿವೃದ್ಧಿಯನ್ನು ಹೊಂದಬೇಕೆಂಬ ಕೋರಿಕೆಯುಳ್ಳವರಾಗಿದಾರೆ. ಬ್ರಿಟಿಷ ನವರಾದರೋ ಉತ್ತಮ ದರ್ಜೆಯಲ್ಲಿರುವಂತೆ ಯೆಲ್ಲರಿಗೂ ಒಂದು ಭಾವನೆಯುಂಟಾಗಿದೆ. ಇವರಲ್ಲಿ ಗಂಡಸರಿಗೂ ಹೆಂಗಸರಿಗು ಸಹ ಬೇಕಾದಷ್ಟು ಆವರ್ತಿ ಮದುವೆಮಾಡಿಕೊಳ್ಳ ಬಹುದೆಂಬ ಅನುಕೂಲ್ಯ ಇರುತಿದೆ. ಭರ್ತೃ ಭಾರ್ಯೆಯರ ಪೈಕಿ ಯಾರಿಗೆ ಇಷ್ಟವಿಲ್ಲದೆ ಹೋದಾಗ್ಯೂ ಒಬ್ಬರು ಮತ್ತೊಬ್ಬರನ್ನು ಧಾರಾಳವಾಗಿ ಬಿಟ್ಟುಬಿಡಬಹುದು. ಮುಖ್ಯವಾಗಿ ಇಂಗ್ಲೀಷಿನವರಲ್ಲಿ ವಿವಾಹವೆಂಬದು ಲೌಕಿಕ ಸುಖಸಂತೋಷಾರ್ಥ ಮಾಡಿಕೊಳ್ಳಲ್ಪಟ್ಟ ಸಿವಿಲ್ ಕಂಟ್ರಾಕ್ಟು ರೂಪವಾಗಿ ಭಾವಿಸಲ್ಪಟ್ಟಿರುತಿದೆಯೇ ಹೊರ್ತು ಅದೊಂದು ಆಮುಷ್ಮಿಕ ಸಾಧನೋಪಯೋಗಿ ಯಾದದ್ದೆಂದು ಎಣಿಸಲ್ಪಡುವದಿಲ್ಲವು. ಇದರಿಂದ ಅವರಲ್ಲಿ ಭರ್ತೃಭಾರ್ಯಾರೂಪವಾದ ಸಂಬಂಧವು ಪ್ರತಿ ಕ್ಷಣದಲ್ಲೂ ನೂತನವಾದದ್ದಾಗಿಯೂ ಸಾಮಾನ್ಯವಾದದ್ದಾಗಿಯೂ ಇರುತಿದೆ. ಹೀಗಿದ್ದಾಗ್ಯೂ ಕ್ಷಣಿಕಗಳಾದ ಅಂತಾ ಪಾರತಂತ್ರ್ಯ ವೃತ್ತಿಸಹ ಈಗ ಅವರಲ್ಲಿ ಅನೇಕರಿಗೆ ಸರಿಬೀಳದೆ ಹೋಗಲು ವಿವಾಹವು ಸ್ತ್ರೀಪುರುಷರಿಬ್ಬರಿಗೂ ದುಃಖ ರೂಪವಾದದ್ದೇ ಹೊರ್ತು ಸುಖದಾಯಕವಲ್ಲವಾಗಿ ಇದು ಅನಾವಶ್ಯಕವೆಂಬ ಒಂದು ಸಿದ್ಧಾಂತ ಏರ್ಪಟ್ಟದರಿಂದ ಅದನ್ನೀಗ ಬಹಳಮಂದಿ ಘೋಷಿಸಬೇಕೆಂಬ ಪ್ರಯತ್ನವೂ ಉತ್ಸಾಹವೂ ಉಳ್ಳವರಾಗಿದಾರೆ. ಮಿಸೆಸ್ ಕೇರ್ಡ್ ಎಂಬ ಯೂರೋಪಿಯನ್ ಹೆಂಗಸೊಬ್ಬಳು ಈಚೆಗೆ ವಿವಾಹ ಸ್ವರೂಪವನ್ನೂ ಅದರಿಂದ ಪುರುಷರಿಗಾಗಲಿ ಸ್ತ್ರೀಯರಿಗಾಗಲಿ ಉಂಟಾಗುವಂತಾ ದುಃಖ ಬಾಹುಳ್ಯವನ್ನೂ ಅನೇಕ ಅನುಭವ ನಿದರ್ಶನಗಳೊದನೆ ನಿರೂಪಿಸಿ ಅನೇಕ ಲೇಖನಗಳಂ ಬರೆದಿರುತ್ತಾಳೆ. ಆಕೆಯ ಬರವಣಿಗೆಯು ಇಂಗ್ಲಾಂಡಿನಲ್ಲಿರುವ ಉತ್ತಮದರ್ಜೆಯಲ್ಲಿರತಕ್ಕವರನೇಕರಿಗೆ ಸಮ್ಮತವಾಗಿದೆ. ಈ ಅಭಿಪ್ರಾಯವು ಎಲ್ಲಿ ಸಾರ್ವಜನೀನವಾದದ್ದಾಗುವದೋ ಎಂಬ ಭಯ ಈಗ ಕೆಲರಿಗುಂಟಾಗಿದೆ. ಸ್ವಮತ ಗೌರವವೂ ಶಿಷ್ಟಾಚಾರದಲ್ಲಿ ಅಭಿಮಾನವೂ ನಿವೃತ್ತಿಯಾಗಲಿಕ್ಕೆ ಹೆಡತುತುಕತನವು ಸಾಧನ ಸಾಮಗ್ರಿಯಾಗಿರುವದರಿಂದ ಅದು ಗವರ್ನಮೆಂಟಿನವರು ಪರಂಪರೆಯಾ ಪ್ರೋತ್ಸಾಹ ಪಡಿಸುತಲಿದಾರೆ. ಅದರೊಡನೆ ಈ ವಿವಾಹವು ಅನಪೇಕ್ಷಿತವೆಂದೇರ್ಪಟ್ಟ ಅಂತಾ ನಿರ್ಬಂಧವು ತಪ್ಪಿದರೆ ಜಾತಿಮತ ಪ್ರಯುಕ್ತವಾದ ಸಂಕಟಗಳೆಲ್ಲ ನಿವಾರಣೆಗಳಾಗಿ ಭೋಗೇಚ್ಛೆಯುಳ್ಳವರಿಗೆ ಮಧುಪಾನವಾದಂತೆ ಬಹಳ ಹಿತಕರವಾಗಿರುವದು. ಇದು ನಾವು ಆಲೋಚಿಸಿ ನೋಡಿದರೆ ಒಂದುವಿಧದಲ್ಲಿ ವರ್ಣವ್ಯವಸ್ಥಿತಿಯೊಳು ಶಾಸ್ತ್ರತಃ ಅಲ್ಲದೆ ಹೋದಾಗ್ಯೂ ಜನಗಳ ಭಾವನಾನುಗುಣವಾಗಿ ಯೋಗ್ಯವೆಂದು ನುಡಿಯುವೆವು. ಅದು ಹ್ಯಾಗಂದರೆ,—ವಿವಾಹವೆಂಬ ಒಂದು ನಿಯಮವನ್ನೇರ್ಪಡಿಸಿ ಇಷ್ಟವಿಲ್ಲದ ಕಾಲದೊಳುಕೂಡ ಅದಕ್ಕೆ ಬದ್ಧರಾಗಿರುತ ಅದು ಸ್ವಲ್ಪ ಉಲ್ಲಂಘಿಸಿದ ಮಾತ್ರದಿಂದ ದೂಷಣ ತಿರಸ್ಕಾರಗಳಿಗೆ ಪಾತ್ರರಾಗಬೇಕಾಗಿರುವದು ಮಾತ್ರವಲ್ಲದೆ ಫಲೋಪಭೋಗಕ್ಕೆ ಅವಕಾಶವು ಕಡಮೆಯಾಗಿ ಯಾವಾಗಲು ಸಂತೃಪ್ತಿಯನ್ನೇ ಬಾಯಿಂದುಚ್ಚರಿಸುತಲಿರಬೇಕಾಗಿರುತಿದೆ ಮಸಲಾ ಐದಾರು ತಪ್ಪಗಳಲ್ಲಿ ಐದಾರುವಿಧ ಫಲಗಳನ್ನಿಟ್ಟಿರುವ ಕಾಲದಲ್ಲಿ ಅವು ನೋಡಿದಾತಂಗೆ ಯೆಲ್ಲವು ಆಸ್ವಾದಿಸಿ ರಸಗ್ರಹಣ ಗೈಯಬೇಕೆಂಬ ಕೋರಿಕೆಯುಂಟಾಗಬಹುದಲ್ಲದೆ ಒಂದು ಫಲದಿಂದ ತೃಪ್ತನಾಗಿ ಮಿಕ್ಕವು ತುಚ್ಛವನ್ನಾಗಿ ಭಾವಿಸುವನೆಂಬದು ಅಸಹಜವಾಗಿರುತಿದೆ. ಹಾಗೆಯೇ ಒಬ್ಬನೆ ಪುರುಷನನ್ನು ಒಂದು ವಿವಾಹರೂಪವಾದ ನಿರ್ಬಂಧದಿಂ ತಡೆದಾದಿದರೆ, ಅವನಿಗದು ಇಷ್ಟಹಿತವಾಗಿರಲಾರದು. ಇದಲ್ಲದೆ ಸ್ತ್ರೀಯರ ವಿಷಯದಲ್ಲಿ ಸಹ ಆಲೋಚಿಸಬೇಕಾಗಿದೆ. ಈಗೊಂದು ಸಂದರ್ಭದಲ್ಲಿ ಪುನರ್ವಿವಾಹ ವಿಷಯದೊಳು ವಿದ್ಯಾವತಿಯಾದ ಒಬ್ಬ ಬಾಲವಿಧವೆಯ ಅಭಿಪ್ರಾಯವು ಕೇಳಲ್ಪಟ್ಟಕ್ಕೆ ಆಕೆ ಸಹ ನಿವೃತ್ತಿಯಾದ ಪಾರತಂತ್ರ್ಯವನ್ನು ನಾನಾಗಿ ಮರಳಿ ಸಂಪಾದಿಸಿಕೊಂಡಂತೆ ಯಾಗುತಿದೆಯೇ ಹೊರ್ತು ಅದರಿಂದ ಬೇರೇವಿಧ ಸುಖವಿಲ್ಲವೆಂದು ನುಡಿದಳು. ಆಕೆಯ ಅಭಿಪ್ರಾಯದಲ್ಲಿ ಆಗ್ಯೆ ನಮಗೆ ತೋರಿದ್ದೇನೆಂದರೆ-ವಿವಾಹಿತರಾದ ಸ್ತ್ರೀಯರಿಗೆ ಪತಿ ಅನುಕೂಲನಾಗಿದ್ದರೂ, ಅತ್ತೆ ನಾದಿನಿ ಮುಂತಾದವರ ತೊಂದರೆಯು ಅಧಿಕವಾಗಿ ಬಹುವಿಧ ಸಂಕಟಗಳಿಗೆ ಪಾತ್ರರಾಗಬೇಕಾಗುತಿದೆ. ಅಂತಾ ನಿರ್ಬಂಧವು ನಿವೃತ್ತಿಯಾದ ಮೇಲೆ ಮರಳಿ ಮತ್ತೊಬ್ಬನನ್ನು ಪರಿಗ್ರಹಿಸಿ ಆತನ ಮೂಲಕವಾದ ನಿರ್ಬಂಧಗಳಂ ಅನುಭವಿಸುವದಕ್ಕಿಂತಲು ಸ್ವಚ್ಛಂದವಾಗಿರುವದು ಸುಖವೆಂಬ ಅಭಿಪ್ರಾಯವಿರಬಹುದೆಂದೆಣಿಸುತ್ತೇವೆ. ಹಾಗಿರುವ ಪಕ್ಷಕ್ಕೆ ಅವರಿಗೆ ಇಚ್ಛಾ ವೃತ್ತಿಯನ್ನು ಹೋಗಲಾಡಿಸಿ ಪಾರತಂತ್ರ್ಯವನ್ನುಂಟುಮಾಡುವ ವಿಷಯದಲ್ಲಿ ಅವರಿಗೆ ಸರ್ವಾತ್ಮನಾ ಅಭಿಪ್ರಾಯವಿರಲಾರದು. ಏಕೆನೆ ಈಗ ಬ್ರಿಟಿಷಿನವರಲ್ಲಿ ಏಕ ದೇಶೀಯರಲ್ಲಿ ಉಂಟಾಗಿರುವ ಮೇಲೆಕಂಡ ತಾತ್ಪರ್ಯವನ್ನು ಈಗಿನ ನಾಗರಿಕಾಭಿಲಾಷಿಗಳು, ಬಾಲವಿಧವೆಯರುಗಳಿಗೆ ಉಂಟುಮಾಡುವದಾದರೆ ಬಳಿಕ ಬಾಲ್ಯ ಅಥವಾ ವಿಕ್ರಿತರೂ ವಿವಾಹರೂಪವಾದ ನಿರ್ಬಂಧಗಳಿಗೆ ಅವಕಾಶವಿಲ್ಲದಂತೆ ಯೆಲ್ಲರೂ ಯಥಾ ಸಂತುಷ್ಟರಾಗಿರಬಹುದೆಂದೆಣಿಸುತ್ತೇವೆ. ಈ ಕ್ರಮವು ಸರ್ವತ್ರ ನೆಲೆಗೊಂಡರೆ ಆಗ ಕನ್ಯಾ ವಿಕ್ರಯಕ್ಕೆ ಸಹ ಅವಕಾಶವಿರಲಾರದಾಗಿ ಇದೊಂದು ವಿಚಾರವು ಈಗ ವೈಲಕ್ಷಣ್ಯಾಭಿಲಾಷಿಗಳ ಪರ್ಯಾಲೋಚನೆಗೆ ವಿಷಯವಾಗದೆ ಹೋಗಲಾರದೆಂದು ಭಾವಿಸುತ್ತೇವೆ.

THE SEPARATION OF LORD AND LADY CONNEMARA.

ಮದರಾಸ್ ಗವರ್ನರಾದ ಲಾರ್ಡ್ ಕಾನಿಮಾರಾಯವರಿಗೂ ಅವರ ಭಾರ್ಯೆಯವರಿಗೂ ಈಚೆಗೆ ಯಾವದೋ ಒಂದು ವಿಷಯಕ್ಕಾಗಿ ವೈಮನಸ್ಯವುಂಟಾಗಿ ಅವರಮೇಲೆ ಗವರ್ನರವರ ಭಾರ್ಯೆಯವರು ಕೋಪಾವಿಷ್ಟರಾಗಿ ತಮ್ಮ ಪತಿಗೆ ತಿಳಿಸದೆ ಗವರ್ನಮೆಂಟ್ ಹೌಸ್‌ನಿಂದ ಹೊರಟುಹೋಗಿ ಒಂದು ಹೋಟೆಲ್‌ನಲ್ಲಿ ಇಬ್ಬರಾಗಿರುತಲಿದಾರೆಂತಲೂ, ಶೀಘ್ರದಲ್ಲಿ ಅವರು ಇಂಗ್ಲಾಂಡಿಗೆ ಪ್ರಯಾಣವಾಗುವರೆಂತಲೂ ತಿಳಿಯಬರುತಿದೆ. ಈ ವಿಷಯವು ಕುರಿತು ಅಲಹಾಬಾದ್ ಮಾರ್ನಿಂಗ್ ಪೋಸ್ಟ್ ಪತ್ರಿಕೆಯ ಮದರಾಸ್ ಬಾತಮಿದಾರನು ಸದರೀ ಪತ್ರಿಕೆಗೆ ತಂತಿಮೂಲಕ ತಿಳಿಸಿರುತ್ತಾನೇನಂದರೆ:—

"ಈಗ ಮದರಾಸಿನೊಳೆತ್ತ ನೋಡಿದಾಗ್ಯೂ ಲಾರ್ಡ್ ಮತ್ತು ಲೇಡೀ ಕಾನಿಮಾರಾಯವರ ಪರಸ್ಪರ ವೈಮನಸ್ಯ ಪ್ರಯುಕ್ತವಾದ ವಿಶ್ಲೇಷವು ವಿಚಾರಾರ್ಹವಾಗಿ ಏರ್ಪಟ್ಟ ಭಿನ್ನಭಿನ್ನಾಭಿಪ್ರಾಯಗಳಿಗೆ ವಿಷಯವಾಗಿದೆ. ಈ ದಿನ ಬೆಳಿಗ್ಗೆ ನಾನು ತಂತಿಮೂಲಕ ತಿಳಿಸಿದ್ದಂತೆ ಗವರ್ನರವರ ಭಾರ್ಯೆಯವರು ಗತಬುಧವಾರದದಿನ ಗವರ್ನಮೆಂಟ್ ಹೌಸಿನಿಂದ ಹೊರಟುಹೋಗಿ ಇಲ್ಲಿನ ಒಂದು ಹೋಟಲ್‌ನಲ್ಲಿರುತಲಿದಾರೆ. ಶೀಘ್ರದಲ್ಲಿ ಹೊರಡುವ ಸ್ಟೀಮರ್‌ನಲ್ಲಿ ಅವರು ಇಂಗ್ಲಾಂಡಿಗೆ ಪ್ರಯಾಣವಾಗುವರು. ಈ ಸಂದರ್ಭದಲ್ಲಿ ಗವರ್ನರವರ ಏಡಿಕಾಂಗ್ ಅಂದರೆ ಮುಸಾಹೇಬರಾಗಿದ್ದ ಕೆಪ್ಟೆನ್ ಮಿಡೆಹಾಂ ಕ್ವೀನ್ ಎಂಬವರು ರಜಾ ಅಪೇಕ್ಷಿಸಿದ್ದೂ, ಗವರ್ನರವರ ಖಾಸಾ ವೈದ್ಯರಾಗಿದ್ದ ಬ್ರಿಗೇಡ ಸರ್ಜನ್ ಬ್ರಿಗ್ಸ್ ಎಂಬವರು ತಮ್ಮ ಕೆಲಸಕ್ಕೆ ರಾಜೀನಾಮೆ ಕೊಟ್ಟದ್ದೂ ಬಹಳವಿಶೇಷಾಂಶವಾಗಿ ಭಾವಿಸಲ್ಪಡಬೇಕಾಗಿರುತಿದೆ. ಆಚೆಸೋಮವಾರ ಪ್ರತಿಲಾರ್ಡ್ ಕಾನಿಮಾರಾ ದೊರೆಸಾನಿಯವರು ಉಪಕಾಮಂಡಲೇಶ್ವರ ಮದರಾಸಿಗೆ ಬಂದು ಅದರ ಮಾರನೆಯದಿನ ಅಂದರೆ, ಬುಧವಾರದದಿನ ರಾತ್ರಿ ಅವರ ರಾಜಭವನದಲ್ಲಿ ಬಾಲ್ ಅಂದರೆ ಔತಣವೂ ತದನಂತರ ನರ್ತನವೂ ನಡೆದವು. ಆಕಾಲದಲ್ಲಿ ದಾನಮೂರನೇ ಬಹುಮಂದಿ ಯೂರೋಪಿಯನ್ ಸಿರದಾರರುಗಳೂ ಅವರವರ ಭಾರ್ಯೆ ಮುಂತಾದವರೂ ಕರೆಯಲ್ಪಟ್ಟು ಬಂದಿದ್ದರು. ಸದರೀದಿನ ರಾತ್ರಿ ನರ್ತನಕಾಲದಲ್ಲಿ ಗವರ್ನರವರ ಭಾರ್ಯೆಯವರು ಏಕಾಏಕಿ ಕಣ್ಣಿಗೆ ಮರೆಯಾದ ಅಂಶ ಹೊರಗಾಯಿತು. ತರುವಾಯ ದೊರೆಸಾನಿಯವರು ತಲಾಷುಮಾಡಲು ಅವರು ಯೆಲ್ಲಿಯೂ ದೊರೆಯಲಿಲ್ಲವೆಂತಲೂ, ಆ ದಿನವೇ ಅಲ್ಲಿಂದ ಹೊರಟು ಆಲ್ಬಿನಿ ಹೋಟಲಿಗೆ ಹೋಗಿ ಬಿಡಾರಮಾಡಿದರೆಂತಲೂ, ಇದಕ್ಕೆ ಭರ್ತೃ ಭಾರ್ಯೆಯರಿಗೆ ಉಂಟಾಗಿರುವ ಸಾಂಸಾರಿಕ ವಿದ್ವೇಷವು ಮೂಲಕಾರಣವೆಂತಲೂ ತಿಳಿಯಬರುತಿದೆ. ದೊರೆಸಾನಿಯು ಅದೃಶ್ಯರಾದ ಮಾತ್ರದಿಂದಲೇ ಅಲ್ಲಿನ ಉತ್ಸಾಹಗಳಿಗೂ ವಿನೋದಗಳಿಗೂ ಯಾವವಿಧ ಕೊರತೆಯೂ ಉಂಟಾಗಲಿಲ್ಲವು. ಲಾರ್ಡ್ ಕಾನಿಮಾರಾಯವರು ಅಚಲಿತರಾದ ಉಲ್ಲಾಸದೊಡನೆ ನರ್ತನಮಾಡುತಲಿದ್ದರು. ದೊರೆಸಾನಿಯು ಏಕಾಏಕಿ ತಮ್ಮ ಬಂಗ್ಲೆಯಂಬಿಟ್ಟು ಆವೇಳೆಯಲ್ಲಿ ಹೋದದಕ್ಕೆ ಕಾರಣವಾದ ಸಂಗತಿಗಳು ಬಹಳ ರಹಸ್ಯ ಸ್ವರೂಪವುಳ್ಳವಾದದರಿಂದ ಅದುಕುರಿತು ಸಮ್ಯಕ್ ಬಹಿರಂಗವಾಗಿ ವಿಚಾರ ಮಾಡುವದು ಉಚಿತವಲ್ಲವು. ಆದರೆ ದೊರೆಸಾನಿಯವರು ಇಷ್ಟರಮಟ್ಟಿಗೆ ವರ್ತಿಸಬೇಕಾದರೆ ಯೇನೋ ಪ್ರಬಲತರ ಕಾರಣವಿರದೆ ಹೋಗಿರಲಾರದು. ಇವರ ವಿಚಾರವಾಗಿ ಪ್ರಚುರಗೊಂಡಿರುವ ವರ್ತಮಾನವು ಕೇಳಿದರೆ ಆಕೆಯವರ ವಿಷಯದಲ್ಲಿ ಬಹಳ ಕನಿಕರ ಪಡಬೇಕಾಗಿದೆ. ಆದರೆ ಅವರು ಈರೀತಿ ತಮ್ಮ ಬಂಗ್ಲೆಯನ್ನು ಬಿಟ್ಟುಹೋಗಿ ಇಷ್ಟರ ಅಪಪ್ರಥೆಗೆ ಅವಕಾಶವನ್ನುಂಟುಮಾಡಿದ್ದು ಯೋಗ್ಯವಲ್ಲವೆಂಬದಾಗಿ ಇಲ್ಲಿನ ಜನಗಳೆಲ್ಲರೂ ಅಭಿಪ್ರಾಯಪಟ್ಟಿದಾರೆ. ಮರಳಿ ತಮ್ಮ ಬಂಗ್ಲೆಗೆ ಬಂದು ತಮ್ಮ ಪತಿಯೊಡನೆ ಇರಬೇಕೆಂದು ಅವರ ಮಿತ್ರರನೇಕರು ಎಷ್ಟು ಹೇಳಿದಾಗ್ಯೂ ಪ್ರಯೋಜನಕಾರಿಯಾಗಲಿಲ್ಲವು. ಕೆಪ್ಟೆನ್ ಕ್ವೀನ್ ಯವರಿಗೆ ರಜಾ ಕೊಡಲ್ಪಟ್ಟಿರುವತಯೂ ಅವರು ತಮ್ಮ ಭಾರ್ಯೆಯೊಡನೆ ಕಲ್ಕತ್ತೆಗೆ ಹೋದರೆಂತಲೂ, ಇವರಿಬ್ಬರು ಮರಳಿ ಬರಲಾರರೆಂತಲೂ ತಿಳಿಯಬರುತಿದೆ" ಎಂಬದು. ಈ ವಿಷಯವು ಕುರಿತು ಇತರ ಪತ್ರಿಕೆಗಳಲ್ಲಿನವು ಇದುವರೆವಿಗೆ ಪ್ರಸ್ತಾಪಿಸಿದಂತೆ ಕಾಣಲಿಲ್ಲವು. ಮೇಲೆ ಕಂಡ ದೊರೆಸಾನಿಯವರ ಪೂರ್ವೋತ್ತರವು ವಿಚಾರಿಸಿದರೆ ಆಕೆಯವರು ಪ್ರಸಿದ್ಧರಾಗಿದ್ದ ಲಾರ್ಡ್ ಡಲ್‌ಹೌಸಿಯವರ ಕುಮಾರ್ತೆಯಾಗಿಯೂ, ಒಬ್ಬ ಲಾರ್ಡನ ಭಾರ್ಯೆಯಾಗಿಯೂ, ಅನೇಕ ಲಕ್ಷ ಪ್ರಜೆಗಳ ಯೋಗಕ್ಷೇಮಕ್ಕೆ ಕಾರಣಭೂತರಾದ ಒಂದು ಪ್ರೆಸಿಡೆನ್ಸಿ ಗವರ್ನರಿಗೆ ಪ್ರಿಯಳಾಗಿಯೂ ಇರುವಂತೆ ಏರ್ಪಡುವದರಿಂದ ಇಂತವರು ಯಾವದೋ ಒಂದು ಅಲ್ಪ ಕಾರಣಕ್ಕಾಗಿ ರಾಜಾರ್ಹಗಳಾದ ತಮ್ಮ ಭೋಗ ಭಾಗ್ಯಗಳನ್ನೂ ದಿವ್ಯವಾದ ರಾಜಭವನವನ್ನೂ ತೊರೆದು ಅಜ್ಞಾರುತ ಹೋಗಿ ಒಂದು ಹೋಟಲಿನಲ್ಲಿರಲಾರರು. ಲಾರ್ಡ್ ಕಾನಿಮಾರಾಯವರು ಸ್ವಭಾವತಃ ಉದಾತ್ತರಾಗಿಯೂ, ದೀರ್ಘಾಲೋಚನೆಯುಳ್ಳವರಾಗಿಯೂ, ಆತ್ಮಗೌರವ ರಕ್ಷಣೆಯಲ್ಲಿ ವಿಶೇಷ ಆಸಕ್ತಿಯುಳ್ಳವರಾಗಿಯೂ, ಲೋಕ ತಂತ್ರಗಳನ್ನು ಚೆನ್ನಾಗಿ ಅರಿತವರಾಗಿಯೂ ಇರುವದರಿಂದ ಇಂತವರು ಯಾವದೋ ಒಂದು ಸಾಮಾನ್ಯ ನಿಮಿತ್ತಕ್ಕಾಗಿ ತಮ್ಮ ಭಾರ್ಯಾವಿಶ್ಲೇಷಕ್ಕೆ ಅವಕಾಶವಂ ಕೊಟ್ಟಿರಲಾರರು. ಗವರ್ನರವರು ತಮ್ಮ ದೇಹರಕ್ಷಕರ ವಿಷಯದಲ್ಲಿ ಸಂಪೂರ್ಣ ನಂಬಿಕೆಯನ್ನೂ ಪ್ರೀತಿ ಗೌರವಗಳನ್ನೂ ಇಟ್ಟದ್ದರು. ಹೀಗಿರುವಲ್ಲಿ ಸರ್ಜನ್ ಬ್ರಿಗ್ಸ್ ಯವರು ಅನಿರೀಕ್ಷಿತವಾಗಿ ತಮ್ಮ ಕೆಲಸಕ್ಕೆ ರಾಜೀನಾಮೆ ಕೊಡಬೇಕಾಗಿದ್ದರೆ ಬಹಳ ಆಶ್ಚರ್ಯವಾಗಬೇಕಾಗಿದೆ ತದ್ವತ್ತು ಪಾರ್ಶ್ವರಕ್ಷಕರಾಗಿದ್ದ ಕೆಪ್ಟೆನ್ ಮಿಡೆಹಾಂ ಕ್ವೀನ್ ಯವರು ಈ ಸಂದರ್ಭದಲ್ಲೇ ರಜಾ ಪಡೆದು ತಮ್ಮ ಭಾರ್ಯೆಯೊಡನೆ ಕಲ್ಕತ್ತೆಗೆ ಹೋಗಿ ಅಲ್ಲಿಂದ ಜಹಾಜಿ ಹತ್ತಿ ಇಂಗ್ಲಾಂಡಿಗೆ ಹೋಗಬೇಕಾದರೆ ಅಲ್ಪ ವಿಷಯವೆಂದು ಯೋಚಿಸಲಾಗುವದೆ? ಮುಖ್ಯವಾಗಿ ಇವುಗಳನ್ನೆಲ್ಲ ಪರ್ಯಾಲೋಚಿಸಲಾಗಿ ಇದರ ಕಾರಣ ಭೂತವಾದ ವಿಷಯವು ಬಹಳ ಸೂಕ್ಷ್ಮವಾದದ್ದಾಗಿಯೂ, ಅದು ಕ್ರಮವಾಗಿ ಬಹಿರಂಗವಾಗತಕ್ಕ ಪ್ರಾಶಸ್ತ್ಯವುಳ್ಳದ್ದಾಗಿಯೂ ಇರುವದರಿಂದ ಇದರ ಪರ್ಯವಸಾನವು ಏನಾಗುವದೋ ಅದು ನಾವು ಸಹನೆಯಿಂದ ನಿರೀಕ್ಷಿಸಿನೋಡುತಲಿರುವೆವು.

DISTRIBUTION OF PRIZES IN THE SANSKRIT COLLEGE, BANGALORE

ಈ ಪ್ರಾಂತ್ಯದಲ್ಲಿ ಸ್ಥಾಪಿಸಲ್ಪಟ್ಟಿರುವ ಸಂಸ್ಕೃತ ಶಾಸ್ತ್ರ ಪಾಠಶಾಲೆಯ ವಿದ್ಯಾರ್ಥಿಗಳಿಗೆ ಇನಾಮುಗಳು ಕೊಡುವ ಉದ್ದೇಶದೊಡನೆ ಮಾಹೆ ಡಿಸೆಂಬರ್ ೨ನೇ ತಾರೀಖ್ ಗುರುವಾರದ ದಿನ ಬೆಳಿಗ್ಗೆ ೮ ಘಂಟೆಯ ಸಮಯದಲ್ಲಿ ಇಲ್ಲಿನ ತಾಲೂಕು ಕಚೇರಿಯು ನಡೆಯುತ್ತಿರುವ ಗವರ್ನಮೆಂಟ್ ಬಾಲಿಕಾ ಪಾಠಶಾಲೆಯ ಸೌಧದಲ್ಲಿ ಬಹುಮಂದಿ ದೊಡ್ಡ ಮನುಷ್ಯರ ಸಭೆಯೊಂದು ಸೇರಿತ್ತು. ಇದಕ್ಕೆ ಈ ಸಂಸ್ಥಾನದ ದಿವಾನರಾದ ಮೆ|| ಕೆ. ಶೇಷಾದ್ರಿ ಅಯ್ಯರ್, ಸಿ. ಎಸ್. ಐ. ಯವರು, ಚೀಫ್ ಕೋರ್ಟ್ ಮುಖ್ಯ ಜಡ್ಜಿಯವರಾದ ಮೆ. ತುಂಬುಸೆಟ್ಟರವರು, ಕೌನ್ಸಿಲ್ ಮೆ. ರಂಗಸ್ವಾಮಯ್ಯಂಗಾರ್ಯರವರು, ಪ್ರೈವೇಟ್ ಸೆಕ್ರೆಟರಿಯವರಾದ ಮೆ|| ರಾಯಬಹದೂರ್ ಶ್ರೀನಿವಾಸಾಚಾರ್ಯರವರು, ಮಹಾರಾಜರ ಪ್ರೈವೇಟ್ ಸೆಕ್ರೆಟರಿಯವರಾದ ಮೆ|| ಕೆ. ದೊರೆಸ್ವಾಮಿ ಅಯ್ಯರವರು, ಮೆ|| ವಿ. ಎನ್. ನರಸಿಂಹಯ್ಯಂಗಾರ್ಯರವರು, ಮೆ|| ಸ್ವಾಮಿನಾಥಯ್ಯರವರು, ಬ್ರಹ್ಮಶ್ರೀಗಳಾದ ವಾಸುದೇವಶಾಸ್ತ್ರಿಗಳು, ಗೋಪಾಲಶಾಸ್ತ್ರಿಗಳು, ಶ್ರೀನಿವಾಸ ರಾಮಾಚಾರ್ಯರು, ಸುಗ್ಗನಹಳ್ಳಿ ತಿರುಮಲಾಚಾರ್ಯರು ಮಾದರಿಸ್ವಾಮಿ ತಿರುಮಲಾಚಾರ್ಯರು ಮೊದಲಾದಬಹುಜನವಿದ್ವಾಂಸರೂ ಇತರರು ಸಹ ಬಂದಿದ್ದರು. ತರುವಾಯ ಮೆ|| ಶೇಷಾದ್ರಿ ಅಯ್ಯರವರು ಪ್ರಾಕ್ ನಿಷ್ಕೃಷ್ಟವಾಗಿದ್ದಂತೆ ಅಗ್ರಾಸನವು ವಹಿಸಿದ ಬಳಿಕ ಪಾಠಶಾಲೆಯ ಗತ ಸಂವತ್ಸರದ ಅಭಿವೃದ್ಧಿಯು ವ್ಯಕ್ತಪಡಿಸುವಂತಾ ಸಾಂವತ್ಸರಿಕ ರಿಪೋರ್ಟನ್ನು ಪ್ರಥಮತಃ ಸಂಸ್ಕೃತದಲ್ಲಿಯೂ ಅನಂತರ ಕನ್ನಡ ಭಾಷೆಯಿಂದಲೂ ಬ್ರಹ್ಮಶ್ರೀ ವಾಸು

...ಶೀನ ಶಾಸ್ತ್ರಿಗಳಿಂದ ಓದಲ್ಪಟ್ಟವು. ಸದರೀ ಮುದ್ರಿತ ರಿಪೋರ್ಟು ಬಹಳ ಪ್ರೋತ್ಸಾಹಕವಾಗಿಯೂ, ಕಾಲೇಜ್ ಮುಂತಾದ ಪರಿಶ್ರಮವು ತೋರ್ಪಡಿಸುವಂತಾಗಿಯೂ, ವಿದ್ಯಾರ್ಥಿಗಳ ವ್ಯಾಸಂಗ ಕ್ರಮವು ವ್ಯಕ್ತಪಡಿಸಿ ತದ್ಭಾಷಾಭ್ಯಾಸದಲ್ಲಿ ಅವರಿಗೆ ಎಷ್ಟರ ಮಟ್ಟಿಗೆ ಪುಷ್ಟಿ ಉತ್ಸಾಹಗಳು ಪ್ರಕಟವಾದ್ದಾಗಿಯೂ ಇದ್ದವು. ಇದಲ್ಲದೆ ಸದರೀ ರಿಪೋರ್ಟಿನಿಂದ ತಿಳಿಯಬರುವದೇನೆಂದರೆ, ಪ್ರಸಕ್ತ ಪಾಠಶಾಲೆಯು ಪ್ರಥಮತಃ ಸಾಮಾನ್ಯಸ್ಥಿತಿಯೊಳು ಪ್ರಜೆಗಳಿಂದಲೂ ಸರ್ಕಾರದಿಂದಲೂ ಯಥೋಚಿತ ಸಹಾಯ ಪ್ರಯತ್ನವು ಪಡೆದು ನೆಲೆಗೊಳಿಸಲ್ಪಟ್ಟಿತು. ಇದರಲ್ಲಿ ಆಗ್ಗೆ ಕಾವ್ಯ ನಾಟಕ ಗ್ರಂಥಗಳು ಮಾತ್ರ ಪಾಠ ಹೇಳಲ್ಪಡುತಲಿದ್ದವು. ತರುವಾಯ ಈ ಪಾಠಶಾಲೆಯನ್ನು ಅಭಿವೃದ್ಧಿಪಡಿಸಿ ಅದರಲ್ಲಿ ತರ್ಕವ್ಯಾಕರಣಾಲಂಕಾರ ಸಾಂಖ್ಯ ಮೀಮಾಂಸಾದಿ ಶಾಸ್ತ್ರಗಳನ್ನೂ, ಭಾಷ್ಯತ್ರಯೋಪನಿಷತ್ತುಗಳನ್ನೂ, ವೇದಾಂತವನ್ನೂ ಬೋಧಿಸಿ, ಸಂಸ್ಕೃತ ವಿದ್ಯಾಭಿವೃದ್ಧಿಗೆ ಪ್ರಾಧಾನ್ಯವನ್ನುಂಟುಮಾಡಬೇಕೆಂಬ ಕುತೂಹಲವು ರಾಯಬಹದ್ದೂರ್ ಮ|| ಶ್ರೀನಿವಾಸಾಚಾರ್ಯರವರು ಪಟ್ಟಿಕೆ ಪ್ರಮುಖರಾದ ಕೆಲವು ದೊಡ್ಡಮನುಷ್ಯರಿಗೆ ಉಂಟಾಗಿ, ಅವರು ಪಾಠಶಾಲಾ ಸಂರಕ್ಷಣಾರ್ಥ ಶ್ರೀಮನ್ಮಹಾರಾಜಾ ಸರ್ಕಾರದವರಿಂದ ಧನಸಹಾಯವನ್ನು ಅಪೇಕ್ಷಿಸಲು, ಉದಾರ ಹೃದಯರಾಗಿಯೂ, ಸ್ವದೇಶ ಭಾಷಾ ಪ್ರಾಚುರ್ಯಾಭಿಲಾಷಿಗಳಾಗಿಯೂ, ತತ್ರಾಪಿ ಮಾತೃಭಾಷೆಯಾದ ಗೀರ್ವಾಣಭಾಷೆಯ ಔತ್ಕೃಷ್ಟ್ಯ ಪ್ರಯೋಜನಗಳು ಚನ್ನಾಗಿ ಅರಿತವರಾಗಿಯೂ ಇರುವ ಅವರು ತಕ್ಕ ಸಹಾಯ ಮಾಡಿದರು. ಈ ಸಹಾಯವು ಉದ್ದಿಷ್ಟವಾದ ಫಲಕ್ಕೆ ಸಾಲದ್ದಾಗಿ ಕಾಣಬರಲು ಆಸ್ತಿಕಮತ ಸಿದ್ಧಾಂತಪರಿಪೋಷಕರಾಗಿಯೂ, ವೇದಶಾಸ್ತ್ರ ಪ್ರಚಾರ ತತ್ಪರರಾಗಿಯೂ ಇರುವ ಮಠಾಧಿಪತಿಗಳ ಸಹಾಯವು ಅಪೇಕ್ಷಿಸಲ್ಪಟ್ಟಿತು. ಅದರ ಮೇಲೆ ಶ್ರೀಶೃಂಗೇರಿ, ಶ್ರೀಪರಕಾಲ, ಶ್ರೀಶಿವಗಂಗೆ ಮಠದ ಸ್ವಾಮಿಗಳು ತಮ್ಮ ತಮ್ಮ ಮಠ ಭಾಷ್ಯ ಪೀಠಗಳಿಗಾಗಿ ಸಹಾಯಮಾಡಬಹುದಾಗಿ ಅಭಿಸಿದರು, ಮೇಲ್ಕಂಡ ಶಾಸ್ತ್ರ ಪಾಠಶಾಲೆಯು ಸ್ಥಾಪಿಸಿ ಅದರ ಕಾರ್ಯನಿರ್ವಹಣೆಯ ಬಗ್ಗೆ ಒಂದು ಸಭೆ ಏರ್ಪಾಟಾಗಿ ಅದಕ್ಕೆ ಮ|| ಶ್ರೀನಿವಾಸಾಚಾರ್ಯರವರು ಅಧ್ಯಕ್ಷರಾಗಿಯೂ, ಮ|| ರಂಗಸ್ವಾಮಿ ಅಯ್ಯಂಗಾರ್ರವರ ಮುಂತಾದ ದೊಡ್ಡಮನುಷ್ಯರು ಮೆಂಬರುಗಳಾಗಿಯೂ, ಯೋಗ್ಯವಾದ ಕೆಲವು ಲಾಭಾಂಶಗಳು ನಡೆಯುತಬರುತಲಿದೆ. ಈ ಪಾಠಶಾಲೆಯಲ್ಲಿ ಗತ ವರುಷದೊಳು ೧೬ ಮಂದಿ ವಿದ್ಯಾರ್ಥಿಗಳು ವಿದ್ಯಾಭ್ಯಾಸಮಾಡುತಲಿದ್ದರೆಂತಲೂ ಈಗ ಇನ್ನೂ ೩೦ ಮಂದಿಯಿದ್ದಾರೆಂತಲೂ ತಿಳಿಯಬರುತದೆ. ವಿದ್ಯಾರ್ಥಿಗಳು ಪ್ರಾಯೇಣ ಅನನ್ಯಗತಿಕರಾಗಿ, ಭೋಜನಾದಿಗಳಿಗೆ ಅನುಕೂಲವಿಲ್ಲದೆ ಬಹಳ ಶ್ರಮಪಡುತ ವಿದ್ಯಾವ್ಯಾಸಂಗಕ್ಕೆ ನಿರ್ಬಂಧವುಂಟಾಗಿ ಅವರವರು ಬಿಟ್ಟುಹೋದದ್ದರಿಂದಲೇ ಅವರ ಸಂಖ್ಯೆ ಇಷ್ಟರಮಟ್ಟಿಗೆ ಕಡಿಮೆಯಾಗಲಿಕ್ಕೆ ಕಾರಣವಾಯಿತೆಂದು ತಿಳಿಯಬರುತದೆ. ಎರಡನೇದು-ಇಂಗ್ಲಿಷ್ ಭಾಷೆಯಂತೆ ಸಂಸ್ಕೃತವಿದ್ಯೆಯು ಅರ್ಥಸಂಪಾದನೋಪಯುಕ್ತವಾದದ್ದಲ್ಲವೆಂಬ ಭಾವದೊಡನೆ ಅನೇಕರು ಸಂಸ್ಕೃತದಿಂದ ಇಂಗ್ಲಿಷ್ ಭಾಷಾಭ್ಯಾಸಕ್ಕೆ ಅವಕಾಶ ಕಡಿಮೆಯಾಗುತದೆಂದು ಭಾವಿಸಿ ಹೊರಟುಹೋದರು. ಕನ್ನಡ ರಿಪೋರ್ಟು ಓದಲ್ಪಟ್ಟಬಳಿಕ ದಿವಾನರವರು ಕನ್ನಡಭಾಷೆಯಲ್ಲಿ ತತ್ಸಂದರ್ಭೋಚಿತಗಳಾಗಿಯೂ, ವಿದ್ಯಾವ್ಯಾಸಂಗಮಾಡುವ ಶಿಕ್ಷಿತರಾದ ಬಾಲಕರಿಗೆ ಪ್ರೋತ್ಸಾಹಕರಗಳಾಗಿಯೂ, ಶ್ಲಾಘ್ಯವಾದ ಅವರ ಮನೋಗತ ಭಾವವು ವ್ಯಕ್ತಪಡಿಸುವದಕ್ಕಾಗಿಯೂ, ಇರುವ ಕೆಲವು ಅಂಶಗಳು ತಿಳಿಸಿದರು. ಅವುಗಳಲ್ಲಿ ಸಾರವತ್ತಾಗಿಯೂ, ಪ್ರಶಂಸನೀಯವಾಗಿಯೂ ಇರುವವು ಯಾವವೆಂದರೆ,- ವಿದ್ಯಾಭಿವೃದ್ಧಿಗಾಗಿ ಸಹಾಯಮಾಡುವವರೊಳಗೆ ಶ್ರೀಮನ್ಮಹಾರಾಜಾ ಸರ್ಕಾರದವರು ಯಾವಾಗಲೂ ಬದ್ಧಸಂಕಲ್ಪವುಳ್ಳವರಾಗಿಯೂ ಕುತೂಹಲವುಳ್ಳವರಾಗಿಯೂ ಇರುತ್ತಾರೆ ಅವರಿಗೆ ವಿದ್ಯಾಭಿವೃದ್ಧಿಯೊಳುಂಟಾಗಿರುವ ಉತ್ಸಾಹವನ್ನು ಮೈಸೂರು ಮತ್ತು ಇಲ್ಲಿನ ಸಂಸ್ಕೃತ ಕಾಲೇಜ್ ವಿಷಯದೊಳು ಅವರು ವ್ಯಕ್ತಪಡಿಸುವ ಅಭಿಪ್ರಾಯಗಳಿಂದಲೇ ಊಹಿಸಿಕೊಳ್ಳಬಹುದಾಗಿರುತದೆ. ಯಾರು ಸಂಸ್ಕೃತವನ್ನಭ್ಯಸಿಸಿ ಅದರೊಡನೆ ಕನ್ನಡಭಾಷಾ ಪರಿಚಯವನ್ನುಮಾಡಿ ಲೋಕಲ್ ಟೆಸ್ಟ್ ಪರೀಕ್ಷೆಯಲ್ಲಿ ತೇರ್ಗಡೆಯಾಗುವರೋ ಅಂಥಾವರಿಗೆಲ್ಲ ಇಂಗ್ಲಿಷ್ ಪರೀಕ್ಷೆಗಳು ಕೊಟ್ಟವರಂತೆ, ಸರ್ಕಾರ್ ನೌಕರಿಗಳು ಕೊಡಲ್ಪಡತಕ್ಕದ್ದೆಂದು ಅವರು ಈಚೆಗೆ ನಿಬಂಧಿಸಿರುತ್ತಾರೆ. ಸಂಸ್ಕೃತ ವಿದ್ಯಾಭ್ಯಾಸ ಮಾಡತಕ್ಕವರಿಗೆ ಅಶನವಸನಾದಿಗಳಲ್ಲಿರುವ ಅನಾನುಕೂಲ್ಯವು ಪ್ರಬಲತರವಾದದ್ದೆಂಬ ಅಂಶ ಅವರಿಗೆ ತಿಳಿಯದೆ ಇರಲಿಲ್ಲವು. ಕೇವಲ ವೇದೋಪನಿಷದ್ವ್ಯಾಸಂಗಗಳುಮಾಡಿ ಜ್ಞಾನ ಸಂಪಾದಿಸಿದ ಮಾತ್ರದಿಂದಲೇ ಸರ್ಕಾರಿ ಕೆಲಸಗಳು ಮಾಡಲಿಕ್ಕೆ ಸಾಧ್ಯವಾಗುವದಿಲ್ಲವಾಗಿ ಅವರವರು ಸಂಸ್ಕೃತದೊಡನೆ ದೇಶಭಾಷೆಯನ್ನು ಸಹ ಅಭ್ಯಸಿಸಿ ಜೀವನ ಮಾರ್ಗವು ಕಲ್ಪಿಸಿಕೊಳ್ಳುವ ಪ್ರಯತ್ನವು ತಪ್ಪದೆ ಮಾಡಬೇಕು, ಎಂಬದು. ಬಳಿಕ ದಿವಾನರವರು ಸ್ವತಃ ವಿದ್ಯಾರ್ಥಿಗಳಿಗೆಲ್ಲ ನಗದಾಗಿಯೂ, ಪುಸ್ತಕ ರೂಪವಾಗಿಯೂ ಇನಾಮುಗಳನ್ನು ಕೊಟ್ಟರು. ಪೋಸ್ಟ್ ಶಿರಸ್ತೇದಾರ್ ಮ|| ರಾ|| ಸುಬ್ರಹ್ಮಣ್ಯಯ್ಯನವರು, ದಿವಾನರವರಿಗೆ ವಿದ್ಯಾಭಿವೃದ್ಧಿಯಲ್ಲಿರುವ ಅಕ್ಕರೆಯನ್ನು ಬಹಳವಾಗಿ ಕೊಂಡಾಡಿ ಅಂಥವರು ಶ್ರೀಮನ್ಮಹಾರಾಜಾ ಸರ್ಕಾರದ ರಾಜಪ್ರತಿನಿಧಿಯಾಗಿರುವದು ಅದೃಷ್ಟ ವಿಶೇಷವೆಂದು ಹೇಳಿದರು. ಅನಂತರ ದಿವಾನರು ಮುಂತಾದವರಿಗೆಲ್ಲ ಪುಷ್ಪ ಹಾರಗಳು ಹಾಕಲ್ಪಟ್ಟವು. ಕೆಲವರು ವಿದ್ಯಾರ್ಥಿಗಳು ಆಕಾಲದಲ್ಲಿ ಅವರಿಂದ ರಚಿಸಲ್ಪಟ್ಟ ಕೆಲವು ಸಂಸ್ಕೃತ ಕನ್ನಡ ಶ್ಲೋಕಗಳನ್ನೂ ಪದ್ಯಗಳನ್ನೂ ಓದಿದರು. ಬಳಿಕ ಕೋಲಾಹಲಧ್ವನಿಯೊಡನೆ ಸಭೆ ಬರಖಾಸ್ತಾಯಿತು.

ಈ ಪಾಠಶಾಲೆಯು ಇಷ್ಟರ ಅಭಿವೃದ್ಧಿಸ್ಥಿತಿಗೆ ಬರಲಿಕ್ಕೆ ಶ್ರೀಮನ್ಮಹಾರಾಜಾ ಸರ್ಕಾರದವರ ಸಹಾಯವೂ ಅದಕ್ಕೆ ಕಾರಣಭೂತರಾದ ಪ್ರಕೃತ ದಿವಾನರ ಔದಾರ್ಯವೂ, ವಿದ್ಯಾಭಿವೃದ್ಧಿಯಲ್ಲಿ ಅವರಿಗಿರುವ ಉತ್ಸಾಹವೂ ಮುಖ್ಯ ಕಾರಣಗಳೆಂದು ಭಾವಿಸುವೆವು. ಅದಲ್ಲದೆ ಈ ಪಾಠಶಾಲೆಯಲ್ಲಿ ಬ್ರಹ್ಮಶ್ರೀ ವಾಸುದೇವ ಶಾಸ್ತ್ರಿಗಳು, ಗೋಪಾಲ ಶಾಸ್ತ್ರಿಗಳು, ವಿಶ್ವೇಶ್ವರ ಶಾಸ್ತ್ರಿಗಳು ಮುಂತಾದ ಅಧ್ಯಾಪಕರುಗಳಿಗೆ ತಮ್ಮ ತಮ್ಮ ಪಾಂಡಿತ್ಯ ಪ್ರದರ್ಶನಕ್ಕೆ ಅವಕಾಶ ಪ್ರಾಪ್ತವಾಗಿರುವದರಿಂದ ಅವರ ಅಭಿವೃದ್ಧಿಗೆ ನಿಮಿತ್ತಕರರಾದ ಅವರ ವಿಷಯದಲ್ಲಿ ಯೆಲ್ಲರೂ ಬಹಳ ಕೃತಜ್ಞರಾಗಿರಬೇಕೆಂದು ನೆನಸುವೆವು.

Occasional Notes.
ನೈಮಿತ್ತಿಕ ವಿಷಯನ್ಯಾಸ.

Erection of a temple.—ಜಯಪುರದ ಮಹಾರಾಜರವರು ಬೃಂದಾವನದಲ್ಲಿ ಈಗ ಒಂದು ದೇವಾಲಯವು ಕಟ್ಟಿಸುತಲಿದ್ದಾರೆ. ಅದಕ್ಕೆ ಇಪ್ಪತ್ತು ಲಕ್ಷ ರೂಪಾಯಿಗಳು ಖರ್ಚಾಗುವವು. ಎರಡು ವರುಷಗಳ ಕಾಲದ ಮೊದಲು ಮುನ್ನೂರುಮಂದಿ ಕೆಲಸಗಾರರು ಕೆಲಸ ಮಾಡುತಲಿದ್ದಾರೆ. ಆದಾಗ್ಯೂ ಅದರ ಕೆಲಸ ಪೂರ್ತಿಯಾಗುವದಕ್ಕೆ ಇನ್ನು ಮೂರು ವರುಷಗಳು ಕಾಲ ಹಿಡಿಯುವದು.

A proposal.—ಅಲಹಾಬಾದಿನಲ್ಲಿ ಸೇರುವ ನ್ಯಾಷನಲ್ ಕಾಂಗ್ರೆಸ್ ಸಭೆಯಲ್ಲಿ ನಡೆಯುವ ನಡವಳಿಕೆಗಳನ್ನು ತಂತಿ ಮೂಲಕ ಮುಖ್ಯ ಮುಖ್ಯವಾದ ಇಂಗ್ಲಿಷ್ ಪತ್ರಿಕೆಗಳಿಗೆ ತಿಳಿಸಬೇಕೆಂದು ಯೋಚಿಸಲ್ಪಟ್ಟು ಅದಕ್ಕಾಗಿ ನಾಲ್ಕುಸಾವಿರ ರೂಪಾಯಿಗಳು ಖರ್ಚಾಗುವದೆಂದು ಅಂದಾಜ್ ಮಾಡಲ್ಪಟ್ಟಿರುತದೆ.

A meeting.—ಕಳೆದ ತಿಂಗಳ ೩೧ನೇ ತಾರೀಖಿನಲ್ಲಿ ಜಲಂಧರ್ ಎಂಬ ಪಟ್ಟಣದೊಳು, ಬಾಲ್ಯ ವಿವಾಹವನ್ನು ನಿರೋಧಿಸತಕ್ಕ ಬಗ್ಗೆ ಒಂದು ಪಂಚಾಯತ್ ಸಭೆಯನ್ನೇರ್ಪಡಿಸುವದಕ್ಕಾಗಿ ಒಂದು ಪ್ರಬಲ ಸಮಾಜ ಸೇರಿತು. ಯೆಕ್ಸ್ಟ್ರಾ ಅಸಿಸ್ಟೆಂಟ್ ಕಮಿಷನರಾದ ಲಾಲ್ ಬಹದೂರ್ ರಾಜಾ ಜಹಂದಾದ್‌ಖಾನರವರು ಸದ್ಯೋಕ್ತ ಸಂದರ್ಭದಲ್ಲಿ, ವಿವಾಹಗಳಿಗಾಗಿಯೂ ಉತ್ತರಕ್ರಿಯೆಗಳಿಗಾಗಿಯೂ ಸಾಲಗಳು ಮಾಡಿ ವೃಥಾ ಖರ್ಚುಮಾಡುವದರ ಮೂಲಕ ಪ್ರಜೆಗಳು ಕೆಟ್ಟು ಅದರಿಂದ ಸಾಲಕೊಡುವವರು ತಾವು ಒಂದು ಪ್ರಯೋಜನವೂ ಹೊಂದುವದು ಕುರಿತು ಗ್ರಾಮಗಳ ಪ್ರಜೆಗಳಿಗೆ ಬುದ್ಧಿವಾದ ರೂಪವಾಗಿ ಉಪನ್ಯಾಸ ಮಾಡಿದರೆಂದು ಒಂದಾನೊಂದು ಪತ್ರಿಕೆ ಹೇಳುತದೆ.

Loyalty of a native prince.—ಬಿಕಾನೀರ್ ಸಂಸ್ಥಾನದ ಅರಸರವರಿಗೆ ವೈಸರಾಯ್‌ರವರು ರಾಜಾಯೆಂಬ ಪ್ರಶಸ್ತಿಯುಂಕೊಟ್ಟು ಅದಕ್ಕಾಗಿ ಬರೆದ ಸನ್ನದನ್ನು, ಕಳೆದ ತಿಂಗಳ ೩೦ನೇ ತಾರೀಖಿನಲ್ಲಿ ಒಂದು ದರ್ಬಾರ್ ಮಾಡಿ ಆ ಕಾಲದಲ್ಲಿ ಅವರಿಗೆ ಒಪ್ಪಿಸುವ ಸಂದರ್ಭದೊಳು ಅಲ್ಲಿನ ಕಲೆಕ್ಟರವರು ಮಾಡಿದ ಉಪನ್ಯಾಸಕ್ಕೆ ಉತ್ತರ ಕೊಡುವಲ್ಲಿ, ಸಂದರ್ಭವುಂಟಾದಾಗ ತಮ್ಮ ಸಂಸ್ಥಾನದ ಆದಾಯವನ್ನೆಲ್ಲ ಗವರ್ನಮೆಂಟಿನವರಿಗೆ ಯುಕ್ತ ತೋರುವಂತೆ ವಿನಿಯೋಗಿಸಿಕೊಳ್ಳುವಂತೆ ಅವರವರು ಮಾಡಬೇಕೆಂಬದು ಯಾವಾಗಲೂ ತಮ್ಮ ಅಭಿಪ್ರಾಯವೆಂದು ತಿಳಿಸಿದರು.

Presentation of a cup.—ಕಚ್ ಬಿಹಾರ್ ಸಂಸ್ಥಾನದ ಅರಸರವರ ತೃತೀಯ ಪುತ್ರನ ನಾಮಕರಣೋತ್ಸವ ಸಂದರ್ಭದಲ್ಲಿ ಮಹಾರಾಜ್ಞೀಯವರು ನಿಚಕ್ರವಾದ ಬೇರುವಾರೀ ಕೆಲಸಗಳುಳ್ಳ ಒಂದು ಬೆಳ್ಳಿಪಾತ್ರೆಯನ್ನು ಇನಾಮುಕೊಟ್ಟರು. ಅದರಮೇಲೆ "ಕುಮಾರವಿಕ್ಟರ್ ನಿತ್ಯೇಂದ್ರ ನಾರಾಯಣರವರಿಗೆ ಗ್ರೇಟ್ ಬ್ರಿಟನ್ ಮತ್ತು ಐರ್ಲೆಂಡ್ ದ್ವೀಪಗಳ ರಾಣಿಯವರಾಗಿಯೂ ಇಂಡ್ಯಾ ಚಕ್ರವರ್ತಿನೀಯವರಾಗಿಯೂ, ಸದರೀ ರಾಜಕುಮಾರರ ಜ್ಞಾನ ಮಾತೆಯಾದ ವಿಕ್ಟೋರಿಯಾಯವರಿಂದ ಕೊಡಲ್ಪಟ್ಟದ್ದು" ಎಂದು ಕೆತ್ತಲ್ಪಟ್ಟಿರುತದೆ.

The Patna conversion case.—ಕೆಲವು ತಿಂಗಳಹಿಂದೆ ಪಾಟ್ನಾ ಎಂಬ ಸ್ಥಳದೊಳು ವೈಶ್ಯರಾದ ಒಬ್ಬ ಹುಡಿಗಿಯನ್ನು ಮಿಷನರಿಗಳು ಕ್ರಿಸ್ತಮತಕ್ಕೆ ಸೇರಿಸಿಕೊಳ್ಳಲು ಸದರೀ ಹುಡಿಗಿಯ ತಾಯಿಯಾದವಳು ಮ್ಯಾಜಿಸ್ಟ್ರೇಟು ಕೋರ್ಟಿನಲ್ಲಿ ಫಿರ್ಯಾದು ಮಾಡಿದಳು. ಮ್ಯಾಜಿಸ್ಟ್ರೇಟರು ಹುಡಿಗಿಯನ್ನು ಮರಳಿ ತಾಯಿಯವಶಕ್ಕೆ ಕೊಡಿಸಿಬಿಟ್ಟರು. ಅದರ ಮೇಲೆ ಮಿಷನರಿಗಳು ಇಂಡ್ಯಾದೇಶದಲ್ಲಿ ಗವರ್ನರ್ ಜನರಲ್‌ವರಿಗೆ ಅಪೀಲುಗಳು ಮಾಡಿ, ಯೆಲ್ಲಿಯೂ ಪ್ರಯೋಜನ ಪ್ರಾಪ್ತವಾಗದೆ ಹೋಗಿ, ಕಡೆಗೆ ಇಂಗ್ಲೆಂಡಿನ ಕ್ರಿಶ್ಚಿಯನ್ ಮತ ಪ್ರಚಾರಕ ಸಮಾಜಕ್ಕೆ ಅಪೀಲ್ ಮಾಡಿಕೊಂಡರು. ಅಲ್ಲಿಯೂ ಅವರ ಉದ್ದೇಶ ಪೂರ್ತಿಯಾಗದೆ ಪಾರ್ಲಿಮೆಂಟಿಗೆ ಬರೆದುಕೊಂಡರು. ಸದರೀ ಸಮಾಜದ ಮೆಂಬರುಗಳ ಪೈಕಿ ಮಿಷನರಿಗಳ ವಿಷಯದಲ್ಲಿ ಅಭಿಮಾನ ಶಾಲಿಯಾದ ಒಬ್ಬರು ಸದರೀ ಮೊಕದ್ದಮೆಯನ್ನು ಪ್ರಸ್ತಾಪಕ್ಕೆ ತರಲು, ಇಂಡ್ಯಾರಾಜ್ಯದ ಅಂಡರ್ ಸೆಕ್ರೆಟರಿಯವರು ಅದಕ್ಕೆ ಉತ್ತರ ರೂಪವಾಗಿ, ಇಂಡ್ಯಾದೇಶದ ಮ್ಯಾಜಿಸ್ಟ್ರೇಟರು ನ್ಯಾಯವನ್ನನುಸರಿಸಿ ಮೊಕದ್ದಮೆಗಳು ವ್ಯವಸ್ಥೆ ಮಾಡುವದಕ್ಕೆ ಬದ್ಧರಾಗಿರುತ್ತಾರೆಂತಲೂ, ಹಿಂದೂಗಳ ಮತಾಚಾರ ಸಂಪ್ರದಾಯಗಳು ಗೌರವಿಸುವದಕ್ಕೆ ಮಹಾರಾಜ್ಞೀ ಸರ್ಕಾರದವರು ಸಂಪೂರ್ಣವಾಗಿ ಬದ್ಧರಾಗಿರುತ್ತಾರೆಂತಲೂ ಜವಾಬುಕೊಟ್ಟಿರುತ್ತಾರೆ.

LOCAL AND PROVINCIAL NEWS.
ಒಳದೇಶಮತ್ತು ತಾಲ್ಲೂಕಿನ ವೃತ್ತಾಂತಗಳು.

:o:

Recovery of stolen property—ಬಳ್ಳಾರಿ ವಿಜಯಧ್ವಜ ಪತ್ರಿಕೆಯಿಂದ ಸಂಗ್ರಹಿಸಿ ಈ ಪತ್ರಿಕೆಯ ಮತ್ತೊಂದು ಕಡೆ ಪ್ರಕಟಿಸಿರುವ ವೃತ್ತಾಂತದ ದೆಸೆಯಿಂದ ಈಚೆಗೆ ಶೃಂಗೇರಿ ಶ್ರೀ ಮಠದಲ್ಲಿ ಕಳವು ನಡೆದದ್ದಾಗಿ ತಿಳಿಯಬರುತದೆ ಯಷ್ಟೆ. ನಿನ್ನೆಯದಿನ ಈ ಪ್ರಾಂತದಲ್ಲಿರುವ ನಮ್ಮ ಮಿತ್ರರೊಬ್ಬರಿಗೆ ಶ್ರೀ ಸ್ವಾಮಿಗಳವರು ಈಗ ಮೊಕ್ಕಾಂ ಮಾಡಿರುವ ಪ್ರದೇಶದಿಂದ ಬಂದ ಕಾಗದದ ಮೂಲಕ, ಶ್ರೀ ಚಂದ್ರಮೌಳೀಶ್ವರರು ಮತ್ತು ರತ್ನಗರ್ಭಗಣಪತಿ ವಿಗ್ರಹಗಳು ಮಾತ್ರ ಈಚೆಗೆ ಸಿಕ್ಕಿದುವೆಂತ ತಿಳಿಯಬರುತದೆ.

Mr. Devraj Urs.—ಕಳೆದ ತಿಂಗಳ ೩೦ನೇ ತಾರೀಖಿನಲ್ಲಿ ನಾಬಕ ದಳವಾಯಿ ಮ|| ರಾ|| ನಂಜರಾಜೇ ಅರಸಿನವರ ಭಾರ್ಯೆಯಾದ ಕಮಲಾಜಮ್ಮಣ್ಣಿಯವರು ಕಾಲಗತಿಯನ್ನೈದಿದ್ದರಿಂದ ಅವರ ಸ್ವೀಕೃತ ಪುತ್ರರಾದ ಮ|| ರಾ|| ದೇವರಾಜೆ ಅರಸಿನವರು ಫ್ರಂಚ್‌ರಾಕ್ಸ್ ಸಬ್ ಡಿವಿಜನ್ ಕೆಲಸಗಳನ್ನು ಇದುವರಿವಿಗೆ ಮೈಸೂರಲ್ಲಿರುತ ನಿರ್ವಹಿಸುತಲಿದ್ದರು. ಮೊನ್ನೆ ಶನಿವಾರದ ಗೆಜೆಟಿನಿಂದ ಅವರಿಗೆ ಫಸ್ಟ್‌ಕ್ಲಾಸ್ ಮ್ಯಾಜಿಸ್ಟ್ರೇಟ್ ಅಧಿಕಾರಗಳು ಕೊಡಲ್ಪಟ್ಟಂತೆ ತಿಳಿಯಬರುವದರಿಂದ ಇನ್ನು ಮೈಸೂರು ವಾಸವು ಅವರಿಗೆ ಬಹಳ ದುರ್ಲಭವಾಗಬಹುದು. ಹಾಸನಕ್ಕೆ ಅವರು ಈಗಿನ ಏರ್ಪಾಡನ್ನನುಸರಿಸಿ ಹೋಗುವ ಪಕ್ಷಕ್ಕೆ ಅವರಿಗೆ ಮೈಸೂರು ಸಂಬಂಧವೇ ಶುದ್ಧಾಂಗ ತಪ್ಪುವಂತೆಯಾಗುವದು.

THE MYSORE GAZETTE.
ಮೈಸೂರು ಗಜೆಟ್.

ಶ್ರೀಮನ್ಮಹಾರಾಜ ರಾಜಸಾಹೆಬ್ ಬಹದೂರರವರ ದಿವಾನರವರಿಂದ ಹೊರಡಿಸಲ್ಪಟ್ಟ ಇಸ್ತಿಹಾರ್‌ನಾಮೆಗಳು.

ನಂ. ೧೬೦, ತಾ ೧೨ನೇ ಡಿಸಂಬರ್, ೧೮೮೮. ತುರುವೇಕೆರೆ ಸಬ್ ತಾಲ್ಲೂಕ್ ಡೆಪ್ಯುಟಿ ಅಮಲ್ದಾರ್ ಮಹಮದ್ ವಲ್ಲೀಖಾನರಿಗೆ ಅವರುಪಯೋಗಿಸಿಕೊಳ್ಳುವ ತಾರೀಖ್ ಆಗಾಯತು ಹದಿನೈದು ದಿನಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿರುತದೆ. ತಿಪಟೂರ್ ತಾಲ್ಲೂಕ್ ಅಮಲ್ದಾರ್ ರಾಮಸ್ವಾಮಯ್ಯನವರು, ತಮ್ಮ ಕೆಲಸದೊಡನೆ ಮಹಮದ್ ವಲ್ಲೀಖಾನರ ಗೈರ್ಹಾಜರೀ ಕಾಲದಲ್ಲಿ ಅಥವಾ ಮತ್ತೊಂದು ಹುಕುಂ ಕೊಡಲ್ಪಡುವ ತನಕ, ತುರುವೇಕೆರೆ ಸಬ್ ತಾಲ್ಲೂಕ್ ಇನ್ ಚಾರ್ಜನಲ್ಲಿರತಕ್ಕದ್ದು.

ನಂ|| ೧೬೨, ೧೮ನೇ ಡಿಸಂಬರ್.—ಎಡಹಳ್ಳಿ ಡೆಪ್ಯುಟಿ ಅಮಲ್ದಾರ್ ಅಳಸಿಂಗ್ರಯ್ಯಂಗಾರ್ರವರಿಗೆ, ಅವರುಪಯೋಗಿಸಿಕೊಳ್ಳುವ ತಾರೀಖ್ ಆಗಾಯತು ಒಂದುತಿಂಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿರುತದೆ.

ನಂ|| ೧೬೩.—೮೮ನೇ ಇಸವಿ ಡಿಸಂಬರ್ ೧೩ನೇ ಮಾರ್ಚ್ ಆಗಾಯತು ಅಜಮಾಯಿಷೀ ರಜೀಕ್ ಆರುತಿಂಗಳಕಾಲ, ಬಿ. ಕೃಷ್ಣರಾಯರವರು ೧ನೇ ಕ್ಲಾಸ್ ಆಸ್ಪತ್ರೆ ಅಸಿಸ್ಟೆಂಟರಾಗಿ ಖಾಯಂ ಮಾಡಿ ಕೊಳ್ಳಲ್ಪಟ್ಟಿರುತ್ತಾರೆ.

ನಂ|| ೧೬೪, ೧೯ನೇ ಡಿಸಂಬರ್.—ದೊಡ್ಡಬಳ್ಳಾಪುರ ತಾಲ್ಲೂಕ್ ಅಮಲ್ದಾರ್ ಕೃಷ್ಣಸ್ವಾಮಿನಾಯುಡುರವರಿಗೆ ಅವರುಪಯೋಗಿಸಿಕೊಳ್ಳುವ ತಾರೀಖ್ ಆಗಾಯತು ಮೂರುತಿಂಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿರುತದೆ.

ಬೆಂಗಳೂರುಡಿಸ್ಟ್ರಿಕ್ಟು ಹೆಡ್‌ಕ್ವಾರ್ಟರ್ಸ್ ಇನ್ಸ್‌ಪೆಕ್ಟರ್ ನಂಜುಂಡ ನಾಯುಡುಯವರು, ಕೃಷ್ಣಸ್ವಾಮಿ ನಾಯುಡುರ ಗೈರ್ಹಾಜರೀ ಕಾಲದಲ್ಲಿ ಅಥವಾ ಮತ್ತೊಂದು ಹುಕುಂ ಕೊಡಲ್ಪಡುವ ತನಕ ದೊಡ್ಡಬಳ್ಳಾಪುರ ತಾಲೂಕು ಅಮಲ್ದಾರ್ ವ ೩ನೇ ಕ್ಲಾಸ್ ಮ್ಯಾಜಿಸ್ಟ್ರೇಟರಾಗಿ ಆಕ್ಟಿಂಗ ತರೀಕ್ ಕೆಲಸನೋಡುವಂತೆ ಮೊಕರರ್.

ನಂ|| ೧೬೫, ತಾ|| ೨೦ನೇ ಡಿಸಂಬರ್.—ಶಿವಮೊಗ್ಗ ಡಿಸ್ಟ್ರಿಕ್ಟು ಅ|| ಕಮಿಷನರ್ ಮ|| ಬಿ. ತಿರುಮಲಾಚಾರ್ರವರಿಗೆ, ಬರುವ ಜನವರಿ ತಿಂಗಳ ೩ನೇ ತಾರೀಖ್ ಆಗಾಯತು ಎರಡುತಿಂಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿದೆ. ಸದರಿ ರಜಾ ಪೂರೈಸಿದಬಳಿಕ ಅವರು ಫ್ರೆಂಚ್‌ರಾಕ್ಸ್ ಸಬ್ ಡಿವಿಜನ್ ಚಾರ್ಜನ್ನು ವಹಿಸತಕ್ಕದ್ದು.

ಅಸಿಸ್ಟೆಂಟ್ ಕಮಿಷನರ್, ಮೆ|| ಎಸ್. ಚೆಲುವಯ್ಯಂಗಾರ್ರವರು ಜನರಲ್ ಡ್ಯೂಟಿ ಬಗ್ಗೆ ಹಾಸನದಿಂದ ಶಿವಮೊಗ್ಗಾ ಡಿಸ್ಟ್ರಿಕ್ಟಿಗೆ ವರ್ಗ ಮಾಡಲ್ಪಟ್ಟು ಬರುವ ಜನವರಿ ತಿಂಗಳ ೭ನೇ ತಾರೀಖಿನಲ್ಲಿ ಮೆ|| ತಿರುಮಲಾಚಾರ್ರವರನ್ನು ಅವರ ಕೆಲಸದಿಂದ ಬಿಡುಗಡೆ ಮಾಡತಕ್ಕದ್ದು.

ಅಸಿಸ್ಟೆಂಟ್ ಕಮಿಷನರ್ ಮೆ|| ಬಿ. ಜೆ. ಕೃಷ್ಣಯ್ಯಂಗಾರ್ರವರು ಜನರಲ್ ಡ್ಯೂಟಿ ಬಗ್ಗೆ ಕಡೂರಿಂದ ಹಾಸನ ಡಿಸ್ಟ್ರಿಕ್ಟಿಗೆ ವರ್ಗಮಾಡಲ್ಪಟ್ಟು ಕೂಡಲೇ ಹೋಗಿ ಕೆಲಸದ ಮೇಲೆ ಹಾಜರಾಗತಕ್ಕದ್ದು.

ಮೈಸೂರು ಡಿಸ್ಟ್ರಿಕ್ಟು ಅ|| ಕ|| ಮ. ದೇವರಾಜೇ ಅರಸಿನವರು ಫ್ರಂಟನಾಕ್ಸ್ ಸಬ್ ಡಿವಿಜನ್ ಚಾರ್ಜಿನಿಂದ ಬಿಡುಗಡೆ ಮಾಡಲ್ಪಟ್ಟಮೇಲೆ ಹಾಸನ ಪೊಲೀಸ್ ನೌಕರಿ ಬಗ್ಗೆ ಹಾಸನ ಡಿಸ್ಟ್ರಿಕ್ಟಿಗೆ ಹೋಗಿ ಸೇರತಕ್ಕದ್ದು.

ನೆಲಮಂಗಲ ತಾಲ್ಲೂಕು ಅಮಲ್ದಾರ್ ಮೆಸ್ಟರ್ ವಿ. ಎಸ್. ಗೋಪಾಲಯ್ಯಂಗಾರ್ರವರು, ಮೆ|| ದೇವರಾಜೇ ಅರಸಿನವರು ಇತರ ಕೆಲಸದಮೇಲೆ ಗೈರ್ಹಾಜರಿರುವ ಕಾಲದಲ್ಲಿ ೪ನೇ ಕ್ಲಾಸ್ ಅ|| ಕಮಿಷನರಾಗಿ ಆಕ್ಟಿಂಗ್ ತರೀಕ್ ಕೆಲಸನೋಡುತ ಪೊಲೀಸ್ ಕೆಲಸದಬಗ್ಗೆ ಹಾಸನ ಡಿಸ್ಟ್ರಿಕ್ಟಿಗೆ ಸೇರತಕ್ಕದ್ದು.

ಶ್ರೀರಂಗಪಟ್ಟಣದ ಮುನಸಫ್ ಮೆ|| ರಾಮಸ್ವಾಮಯ್ಯನವರು ಅಜಮಾಯಿಷೀ ತರೀಕ್ ನಾಲ್ಕನೇ ಕ್ಲಾಸ್ ಅಸಿಸ್ಟೆಂಟ್ ಕಮಿಷನರಾಗಿ ಆಕ್ಟ್ ಮಾಡುತ ಜನರಲ್ ಡ್ಯೂಟೀಬಗ್ಗೆ ಹಂಗಾಮಿ ತರೀಕ್ ಮೈಸೂರು ಡಿಸ್ಟ್ರಿಕ್ಟಿಗೆ ಸೇರಿರತಕ್ಕದ್ದು.

ತುಮಕೂರು ಡಿಸ್ಟ್ರಿಕ್ಟು ಅ|ಕಮಿಷನರ್ ಮೆ|| ಕೃಷ್ಣರಾಯರವರಿಗೆ ಅವರುಪಯೋಗಿಸಿಕೊಳ್ಳುವ ತಾರೀಖ್ ಮೊದಲು ಬಗರ್ ರುಸುಂ ಮೂರುತಿಂಗಳ ವಿಶೇಷ ರಜಾ ಕೊಡಲ್ಪಟ್ಟಿರುತ್ತದೆ. ಸದರೀ ರಜಾ ಪೂರೈಸಿದ ಬಳಕ ಅವರು ಕೆಲಸದ ಬಗ್ಗೆ ಬೆಂಗಳೂರು ಡಿಸ್ಟ್ರಿಕ್ಟು ಡೆಪ್ಯೂಟಿ ಕಮಿಷನರಲ್ಲಿ ಹಾಜರಾಗತಕ್ಕದ್ದು.

ಅಟ್ಟಾಚಿ ಮೆ|| ಸುಜೂಂತರಾಜೇ ಅರಸಿನವರು ಅಜಮಾಯಿಷೀ ತರೀಕ್ ನಾಲ್ಕನೇ ಗ್ರೇಡ್ ಅ|| ಕಮಿಷನರಾಗಿ ನೌಕರರ್ಮಾಡಲ್ಪಟ್ಟುಡಿಸ್ಟ್ರಿಕ್ಟು ಟ್ರಜರೀ ಚಾರ್ಜಿನಬಗ್ಗೆ ಕೂಡಲೇ ತುಮಕೂರು ಡಿಸ್ಟ್ರಿಕ್ಟಿಗೆ ಹೋಗಿ ಸೇರತಕ್ಕದ್ದು.

ಬೆಂಗಳೂರು ಮುನಸಫ್ ಮೆ|| ಸುಬ್ಬರಾಯರವರು ಅಜಮಾಯಿಷೀ ತರೀಕ್ ೫ನೇ ಕ್ಲಾಸ್ ಅ|| ಕಮಿಷನರಾಗಿ ಹಂಗಾಮಿತರೀಕ್ ಬೆಂಗಳೂರು ಡಿಸ್ಟ್ರಿಕ್ಟಿನಲ್ಲಿಜನರಲ್ಡ್ಯೂಟಿ ಮೇಲಿರತಕ್ಕದ್ದು.

ಚಿತ್ರದುರ್ಗ ಡಿಸ್ಟ್ರಿಕ್ಟು ಅ|ಕಮಿಷನರ್ ಮೆ|| ಎಸ್. ನರಸಿಹ್ಮಯ್ಯಂಗಾರ್ರವರು ಪೊಲೀಸ್ ಕೆಲಸದಬಗ್ಗೆ ತುಮಕೂರು ಡಿಸ್ಟ್ರಿಕ್ಟಿಗೆ ವರ್ಗಮಾಡಲ್ಪಟ್ಟು ಕೂಡಲೇ ಹಾಜರಾಗತಕ್ಕದ್ದು.

ಅಮೃತಮಹಲ್ ಇಲಾಖಾ ಇನ್‌ಚಾರ್ಜ್ ಆಫಿಸರ ಅಸಿಸ್ಟೆಂಟರಾದ ಮೆ|| ಗೋಪಾಲಯ್ಯಂಗಾರ್ರವರು ಅಜಮಾಯಿಷೀತರೀಕ್ ೪ನೇ ಕ್ಲಾಸ್ ಅಸಿಸ್ಟೆಂಟರಾಗಿ ನೌಕರರ್ಮಾಡಲ್ಪಟ್ಟು ಈಸರ್ಕಾರೀಸಾಲೆ ಪೂರೈಸಿದಮೇಲೆ ಪೊಲೀಸ್ ಕೆಲಸದಬಗ್ಗೆ ಚಿತ್ರದುರ್ಗಡಿಸ್ಟ್ರಿಕ್ಟಿಗೆ ಹೋಗಿ ಸೇರತಕ್ಕದ್ದು.

ಚಿತ್ರದುರ್ಗ ತಾಲ್ಲೂಕು ಅಮಲ್ದಾರ್ ಮೆಸ್ಟರ್ ನಾರಣಯ್ಯಂಗಾರ್ರವರು, ಮೆ|| ಗೋಪಾಲಯ್ಯಂಗಾರ್ರವರು ಇತರ ಕೆಲಸದಮೇಲೆ ಗೈರ್ಹಾಜರಿರುವಕಾಲದಲ್ಲಿ ಪೊಲೀಸ್‌ಕೆಲಸವನ್ನು ನೋಡತಕ್ಕಬಗ್ಗೆ, ೪ನೇ ಕ್ಲಾಸ್ ಅಸಿಸ್ಟೆಂಟ್ ಕಮಿಷನರಾಗಿ ನೌಕರರ್ಮಾಡಲ್ಪಟ್ಟು ಚಿತ್ರದುರ್ಗ ಡಿಸ್ಟ್ರಿಕ್ಟಿಗೆ ನಿಯಮಿಸಲ್ಪಟ್ಟಿರುತ್ತಾರೆ.

ಚಿತ್ರದುರ್ಗಡಿಸ್ಟ್ರಿಕ್ಟು ಡೆಪ್ಯೂಟಿ ಕಮಿಷನರ್ ಆಫೀಸ್ ಹೆಡ್ ಅಕೌಂಟೆಂಟ್ ಚೌಡಯ್ಯನವರು ಮೆಸ್ಟರ್ ನಾರಣಯ್ಯಂಗಾರ್ರವರು ಇತರ ಕೆಲಸದಮೇಲೆ ಗೈರ್ಹಾಜರಿರುವಕಾಲದಲ್ಲಿ ಅಥವಾ ಮತ್ತೊಂದುಹುಕುಂ ಕೊಡಲ್ಪಡುವತನಕ ಚಿತ್ರದುರ್ಗತಾಲ್ಲೂಕು ೫ನೇ ಗ್ರೇಡ್ ಅಮಲ್ದಾರ್ ಪ೩ನೇ ಕ್ಲಾಸ್ ಮ್ಯಾಜಿಸ್ಟ್ರೇಟರಾಗಿ ಬದಲೀನೋಡುವಂತೆ ನೌಕರರ್.

ನಂ. ೧೬೬. ತಾ|| ೨೧ನೇ ಡಿಸೆಂಬರ್ ೮೮.— ಚಿತ್ರದುರ್ಗದ ಮುನಸಫ್ ಮತ್ತು ೨ನೇ ಕ್ಲಾಸ್ ಮ್ಯಾಜಿಸ್ಟ್ರೇಟರಾದ ತಿರುನಾರಾಯಣಾಚಾರ್ರವರಿಗೆ, ೧೮೫೯ನೇ ಇಸವಿ ೧೩ನೇ ನಂಬರ್ ಆಕ್ಟನ್ನನುಸರಿಸಿ ಒಬ್ಬ ಪೊಲೀಸ್ ಮ್ಯಾಜಿಸ್ಟ್ರೇಟರ ಅಧಿಕಾರಗಳು ಕೊಡಲ್ಪಟ್ಟಿರುತ್ತವೆ.

ನಂ. ೧೬೭.—ಕ್ರಿಮಿನಲ್ ಪ್ರೊಸಿಡ್ಯೂರ್‌ಕೋಡ್ ೧೦ನೇ ಸೆಕ್ಷನ್ ಅನುಸರಿಸಿ, ಅ|| ಕಮಿಷನರ್ ಮೆ|| ಎಫ್. ಬಿ. ಕೈಕ್‌ನಯವರಿಗೆ ಫಸ್ಟು ಕ್ಲಾಸ್ ಮ್ಯಾಜಿಸ್ಟ್ರೇಟ್ ಅಧಿಕಾರಗಳು ಕೊಡಲ್ಪಟ್ಟಿರುತ್ತವೆ.

ನಂ. ೧೬೮.—ಕ್ರಿಮಿನಲ್ ಪ್ರೊಸಿಡ್ಯೂರ್ ಕೋಡ್ ೧೦ನೇ ಸೆಕ್ಷನ್ ಅನುಸರಿಸಿ ಫ್ರಂಟನಾಕ್ಸ್ ಸಬ್ ಡಿವಿಜನ್ ಇನ್‌ಚಾರ್ಜಿನಲ್ಲಿರುವ ಅ|| ಕ|| ಮ|| ದೇವರಾಜೇಅರಸಿನವರಿಗೆ ಫಸ್ಟ್‌ಕ್ಲಾಸ್‌ಮ್ಯಾಜಿಸ್ಟ್ರೇಟ್ ಅಧಿಕಾರಗಳು ಕೊಡಲ್ಪಟ್ಟಿರುತ್ತವೆ.

SUMMARY OF NEWS.
ವೃತ್ತಾಂತ ಸಂಗ್ರಹ.

A boat overturned.—ನರ್ಮದಾನದಿಯೊಳು ನವಂಬರ್ ೨೧ನೇ ತಾರೀಖಿನದಿನ ಕೆಲವರುಯಾತ್ರಿಕರು ಒಂದುದೋಣಿಯಲ್ಲಿ ಕುಳಿತು ಬರುತಿರುವಲ್ಲಿ ದೋಣಿಯು ಬೋರ್ಲುಬಿದ್ದು ಸುಮಾರು ೩೦ಜನರು ಮೃತಪಟ್ಟರು.

Letter carrying pigeons.—ಜರ್ಮನೀ ದೇಶದ ಸರಕಾರದವರು ೬೦,೦೦೦ ರೂಪಾಯಿಗಳ ಖರ್ಚಿಟ್ಟು ಯುದ್ಧಕಾಲದಲ್ಲಿ ಸಮಾಚಾರದ ಕಾಗದಗಳನ್ನು ಅಂತರಿಕ್ಷಮಾರ್ಗದಲ್ಲಿ ಶತ್ರುಗಳ ಕೈವಶವಾಗದಂತೆ ಕಳುಹಿಸುವ ಪ್ರವ್ರೇಶದಂಥ ಪಾರಿವಾಳಪಕ್ಷಿಗಳನ್ನು ತಯಾರ್ಮಾಡುತಲಿದಾರೆ.

The Middle School Examination.—ತಲಚ್ಚೇರಿಯಲ್ಲಿಕಳೆದಮಿಡಿಲ್‌ಸ್ಕೂಲ್‌ಪರೀಕ್ಷೆಯ ಪ್ರಶ್ನಪತ್ರಿಕೆಗಳು ಪರೀಕ್ಷೆಯಕಾಲಕ್ಕಿಂತ ೩-೪ ದಿನಗಳಮುಂದೆ ಬಹಿರಂಗವಾದಲ್ಪಟ್ಟವೆಂತಲೂ, ಕೆಲವು ವಿದ್ಯಾರ್ಥಿಗಳು ಪರೀಕ್ಷಾಸ್ಥಳದಲ್ಲಿ ಪತ್ರಿಕೆಗಳನ್ನು ಕೊಡುವದಕ್ಕೆ ಮುಂಚೆಯೇ ಪ್ರಶ್ನೆಗಳನ್ನು ಇತರ ಹುಡುಗರೊಡನೆ ಹೇಳುತಿದ್ದರೆಂತಲೂ ತಿಳಿದು ಬಂದದ್ದರಿಂದ ಈ ಅಂಶವನ್ನು ಮೇಲ್ಪಟ್ಟ ಅಧಿಕಾರಿಗಳಿಗೆ ತಿಳಿಸಲು ಅವರು ವಿಚಾರಣೆಗೆ ಒಳಪಡಿಸಲ್ಪಟ್ಟದಾರುತೆ.

Theft in Sringeri Mutt.—ಶ್ರೀಶೃಂಗೇರಿ ಜಗದ್ಗುರುಗಳು ಈ ಪ್ರಾಂತ ಸಂಚರಿಸಿಕೊಂಡು ಮರಳಿ ತಮ್ಮ ಸ್ವಗ್ರಾಮಕ್ಕೆ ತೆರಳುತ ಮಾರ್ಗವಶಾತ್ ರಾಯದುರ್ಗದ ತಾಲ್ಲೂಕು ಬೆಳಗುಪ್ಪೆಗ್ರಾಮದಲ್ಲಿ ಇಳಿದುಕೊಂಡು ಅಲ್ಲಿರುವ ಶಿಷ್ಯವರ್ಗದಿಂದ ಸತ್ಕೃತರಾಗಿದ್ದರು. ಈ ತಿಂಗಳು ೧೧ನೇ ತಾರೀಖಿನರಾತ್ರಿ ಶ್ರೀಮಠದಲ್ಲಿದ್ದ ಚಂದ್ರಮೌಳೀಶ್ವರ ರತ್ನಗರ್ಭ ಗಣಪತಿವಿಗ್ರಹಗಳನ್ನೂ ೫-೬ನೇರು ಭಂಗಾರ ಸಾಮಾನುಗಳನ್ನೂ ಕೆಲವುಬೆಳ್ಳಿಪಾತ್ರೆಗಳೊಳನೆ ಯಾರೋ ಚೋರೀಮಾಡಿಕೊಂಡು ಹೊರಟುಹೋದರೆಂದು ಇಲ್ಲಿ ಸಮಾಚಾರ ಸಿಗುತದೆ. ತಿಳಿಯದಜನಗಳು ಲಕ್ಷಾಂತರರೂಪಾಯಿಗಳ ಬೆಲೆಯುಳ್ಳ ಸಾಮಾನುಗಳು ಹೋಗಿರುತ್ತವೆಂದುಕೂಡಾ ಹೇಳಿಕೊಳ್ಳುತ್ತಾರೆ. ಕೆಲವು ಗುತ್ತಿತಾಲ್ಲೂಕು ಬ್ರಾಹ್ಮಣರು ಮಠದಲ್ಲಿರುವ ಒಬ್ಬರಿಬ್ಬರ ಸಹಾಯದಿಂದ ಈ ಕೃತ್ಯವನ್ನು ಜರಿಗಿಸಿದ್ದಾರೆಂದು ಜನಗಳು ಬಹುವಿಧವಾಗಿ ಅಂದುಕೊಳ್ಳುತ್ತಾರೆ. ಈಕಳವನ್ನು ಪೊಲೀಸಿನವರು ಪತ್ತೇಮಾಡದಿರಲಾರರು. ರಾಯದುರ್ಗದ ತಾಲ್ಲೂಕು ಇನ್‌ಸ್ಪೆಕ್ಟರವರ ಬುದ್ಧಿ ಕೌಶಲ್ಯ ಈಕಳವಿನ ಪತ್ತೆಯಲ್ಲಿ ವ್ಯಕ್ತವಾಗುತವೆ. ಪೊಲೀಸಿನವರು ನಾಲ್ಕುಮಂದಿ ಸಾಕ್ಷಿಗಳಕಡೆಯಿಂದ ಇವರೇ ನೇರಸ್ತರೆಂದು ಕೆಲವರಮೇಲೆ ತಪ್ಪುಹೊರಿಸಿ ಶಿಕ್ಷೆ ಮಾಡಿಸಿದರೆಪ್ರಯೋಜನವಿಲ್ಲವು. ಕಳವಾದಮಾಲನ್ನು ಪತ್ತೇಮಾಡಿದರೆ ಸಾರ್ಥಕ.

A wonder.—ಕೊಂಕಣದಲ್ಲಿ ಒಂದು ಹಳ್ಳಿಯಲ್ಲಿ ಒಬ್ಬ ಮನುಷ್ಯನು ಬಹಳದಿವಸದಿಂದ ಕಾಹಿಲೆಯಿದ್ದನು. ಈಕಾಹಿಲೆಯಲ್ಲಿ ಅವನಿಗೆರೊಟ್ಟಿಗೆ ಮತ್ತು ಸಕ್ಕರೆಯಮೇಲೆ ಪ್ರೀತಿ ಪುಂಟಾಗಿತ್ತು. ತನ್ನಆಶೆಯನ್ನು ತನ್ನತಂಗಿಗೆ ಹೇಳಿ ಅವುಗಳನ್ನು ತರಲಿಕ್ಕೆ ಕಳುಹಿಸಿದನು. ಆದರೆ ದುರದೃಷ್ಟದಿಂದ ಅವಳು ತಿರಿಗಿ ಬರುವದರೊಳಗೆ ಅವನುಸಾಯಲಾಗಿ ಅವನ ಉತ್ತರಕ್ರಿಯಗಳನ್ನು ಮಾಡುವದಕ್ಕೆ ಸ್ಮಶಾನಕ್ಕೆ ತೆಗದುಕೊಂಡುಹೋದರು. ಅಷ್ಟರಲ್ಲಿ ಅವನತಂಗಿಯು ಬಯ್ಕೆಯ ಪದಾರ್ಥಗಳನ್ನು ತೆಗದುಕೊಂಡು ಮನೆಗೆಬಂದುನೋಡುತ್ತಲೆ ಅಣ್ಣನನ್ನು ಸುಡಲಿಕ್ಕೆ ತೆಗದುಕೊಂಡುಹೋದರು. ಅವಳು ಹಾಗೆ ಆಜಿನಗಸಳುನ್ನು ತೆಗದುಕೊಂಡು ಸ್ಮಶಾನದ ದಾರಿಹಿಡಿದು ದೂರದಿಂದ ಅಣ್ಣನನ್ನು ಒದರುತ್ತನಡೆದು ಸ್ಮಶಾನ ಮುಟ್ಟಿದಕೂಡಲೇ ಅವನಬಾಯಿಯಲ್ಲಿ ಸಕ್ಕರೆ ರೊಟ್ಟಿ ಹಾಕಿದಳು. ಆಗ ಅವನು ಎದ್ದು ಕೂತು ಆಜಿನಸನ್ನು ತಿಂದು ಹುಷಾರಾದನು. ಅವನು ಈಗಲೂ ಜೀವದಿಂದಿದ್ದು ತನ್ನ ಮನೆತನವನ್ನು ನಡಿಸುತ್ತಾನೆಂದು ತಿಳಿಯಬರುತದೆ. ಇದುನಿಜವಾಗಿದ್ದರೆ ಪರಮಾಶ್ಚರ್ಯಕರವೇಸರಿ—ವಿಜಯಧ್ವಜ.

EXTRACTS.

THE FOURTH INDIAN NATIONAL CONGRESS AT ALLAHABAD.

ಈ ತಿಂಗಳ ಆಖೈರಿನಲ್ಲಿ ನ್ಯಾಷನಲ್ ಕಾಂಗ್ರೆಸ್ ಎಂಬ ಇಂಡ್ಯದೇಶದ ಪ್ರಜಾ ಪ್ರತಿನಿಧಿಸಮಾಜವು ಈ ಸಂವತ್ಸರ ಅಲಹಾಬಾದ್ ಪಟ್ಟಣದೊಳು ಸೇರುತಿರುವುದಕ್ಕೆ ಸಭಗೆಸಭೆಗೆಹೊರಗಣ ಪ್ರತಿನಿಧಿಗಳನ್ನು ಬರಮಾಡಿಕೊಳ್ಳುವದಕ್ಕಾಗಿ ಏರ್ಪಡಿಸಲ್ಪಟ್ಟಿರುವ ಕಮಿಟಿಯವರು ಪ್ರಕಟಿಸಿರುವದೇನೆಂದರೆ—ಪ್ರತಿನಿಧಿಗಳಾಗಿ ಬರತಕ್ಕವರ ವಸತಿಯಬಗ್ಗೆ, ಹಿಂದೆ ವಾಯುವ್ಯ ದೇಶದ ಲೆಫ್ಟಿನೆಂಟ್ ಗವರ್ನರವರು ವಾಸಮಾಡುತಿದ್ದ ಲೌಥರ್ ಕ್ಯಾಸಲ್‌ಎಂಬಕಟ್ಟಡವು ನಿಶ್ಚಯಿಸ್ಪಟ್ಟವಾಗಿದೆ. ಇದುಅಲಹಾಬಾದ್ ಪಟ್ಟಣದ ಮಧ್ಯಪ್ರದೇಶದೊಳು ಆಲ್ ಪ್ರೆಡ್‌ಪಾರ್ಕ ಎಂಬತೋಟಕ್ಕೆ ಎದುರಾಗಿರುತ್ತದೆ. ಈಕಟ್ಟಡದಲ್ಲಿ ಸಂಘಕ್ಕೆಸೇರಿದ ವಿಶಿಷ್ಟಕೆಲಸಗಳಿಗೂ ಸ್ಥಳವಿರುತ್ತದೆ. ಅದರ ಆವರಣದೊಳಗೆ ಪ್ರತಿನಿಧಿಗಳ ವಾಸಕ್ಕಾಗಿ ೭೦ ಡೇರೆಗಳು ಹಾಕಲ್ಪಟ್ಟಿರುತ್ತವೆ ಡೇರೆಗಳಲ್ಲಿ ವಾಸಮಾಡುವದಕ್ಕೆ ಇಷ್ಟವಿಲ್ಲದವರಿಗಾಗಿ ಬೇರೆಸ್ಥಳಗಳು ಕಲ್ಪಿಸಲ್ಪಟ್ಟಿರುತವೆ. ಸಮಾಜ ಸೇರುವದಕ್ಕಾಗಿ ಮೇಲೆಹೇಳಿದ ಆವರಣದೊಳಗೆ, ೫,೦೦೦ ಜನರು ಕುಳಿತುಕೊಳ್ಳುವದಕ್ಕೆ ಅನುಕೂಲವಾಗಿರುವಂತೆ ಚಪ್ಪರಹಾಕಲ್ಪಟ್ಟಿರುತ್ತದೆ. ಪರಸ್ಥಳಗಳಿಂದ ಈ ಸಮಾಜವನ್ನು ನೋಡುವದಕ್ಕಾಗಿ ಬರತಕ್ಕವರ ಅನುಕೂಲ್ಯಕ್ಕಾಗಿ ಒಂದು ಗಡಿಬಿಡಿಯೊಂದು ಮಾಡಲ್ಪಟ್ಟು ಅದರೊಳಗೆ ಎಲ್ಲ ಪದಾರ್ಥಗಳೂ ಮಾರಲ್ಪಡುವವು. ಈಪ್ರದೇಶಕ್ಕೆಸೇರಿದಂತೆ ಆಲ್‌ಫ್ರೆಡ್‌ಪಾರ್ಕಿನೊಳಿರುವ ತೋಟವೂ ಮೂರ್‌ಸ್ ಪಬ್ಲಿಕ್ ಲೈಬ್ರೇರಿಯೂ ಇರುವದರಿಂದ ಬೇಕಾದಷ್ಟು ಗಾಡಿಗಳು ಸಿಕ್ಕುವದರಲ್ಲಿ ಅಭ್ಯಂತರವಿಲ್ಲವು. ಪ್ರತಿನಿಧಿಗಳಾಗಿ ಬರತಕ್ಕವರ ಜಾತಿ ಮತ ಸಂಪ್ರದಾಯಗಳಿಗೆ ಹಾನಿಯಿಲ್ಲದಂತೆ ಅನ್ನೋದಕಗಳು ಸರಬರಾಯಿಮಾಡಲ್ಪಡುವವು. ಎಲ್ಲಾಜಾತಿಯ ಅಡಿಗೆಯವರು ನಿಯಮಿಸಲ್ಪಟ್ಟಿರುತ್ತಾರೆ. ಪ್ರತ್ಯೇಕವಾಗಿ ಅಡಿಗೆಮಾಡಿಕೊಳ್ಳಲು ಅಪೇಕ್ಷಿಸುವಂತಾವರಿಗೆ ಭೋಜನ ಪದಾರ್ಥಗಳು ಸರಬರಾಯಿ ಮಾಡಲ್ಪಡುವವು. ಪ್ರತಿಯೊಬ್ಬ ಪ್ರತಿನಿಧಿಗೂ ಹಾಸಿಗೆ ತಲೆದಿಂಬು ಮೊದಲಾದವು ಸರಬರಾಯಿಮಾಡಲ್ಪಡುವವು. ಪ್ರತಿಯೊಂದು ಡೇರೆಯಲ್ಲೂ ಕುರ್ಚಿಗಳು, ಮೇಜುಗಳು, ನೆಲಗನ್ನಡಿಗಳು, ದೀಪಗಳು, ಇನ್ನು ಯೂರೋಪಿಯನ್ನರಿಗೆ ಅವಶ್ಯಬೇಕಾದ ಸಾಮಗ್ರಿಗಳು ಇಡಲ್ಪಟ್ಟಿರುವವು, ಇಷ್ಟಾದಾಗ್ಯೂ ಪ್ರತಿನಿಧಿಗಳು ದಪ್ಪವಾದ ರಜಾಯಿಗಳನ್ನೂ ಕಂಬಳಿಗಳನ್ನೂ ಶಾಲುವಾದವಸ್ತುಗಳನ್ನೂ ಸೊಳ್ಳೇಪರದೆಗಳನ್ನೂ ತಮ್ಮಸಂಗಡ ತರಬೇಕು. ರಿಸೆಪ್ಷನ್ ಕಮಿಟಿಯವರ ಕಡೆಯ ಜನರು ರೈಲ್‌ವೇಸ್ಟೇಷನ್‌ಬಳಿ ಹಾಜರಿದ್ದು ಪ್ರತಿನಿಧಿಗಳನ್ನು ಬರಮಾಡಿಕೊಂಡು ಗಾಡಿಗಳಲ್ಲಿ ಅವರನ್ನು ಅವರ ಸಾಮಾನುಗಳೊಡನೆ ನಿಶ್ಚಯಿಸ್ಪಟ್ಟವಾದ ಸ್ಥಳಕ್ಕೆ ಕರೆದುಕೊಂಡುಹೋಗುವರು. ಈ ಖರ್ಚನ್ನು ಕಮಿಟಿಯವರು ವಹಿಸುವರು. ಪ್ರತಿನಿಧಿಗಳು ಅವರವರಸ್ಥಳಗಳಿಗೆ ವಾಪಸ್ ಹೋಗುವಕಾಲದಲ್ಲಿ ಸಹ ಇದೇ ಏರ್ಪಾದುಗಳು ಮಾಡಲ್ಪಡುವವು. ಸಮಾಜದ ಖರ್ಚಗಾಗಿ ಪ್ರತಿಯೊಬ್ಬ ಪ್ರತಿನಿಧಿಯೂ ೧೦ರೂಪಾಯಿಗಳು ಕೊಡಬೇಕು. ಸ್ಥಳಕ್ಕೂ ಭೋಜನಕ್ಕಾಗಿಯೂ ಬೇರೆ ಕೊಡಬೇಕಾದ್ದಿಲ್ಲವು. ಯೂರೋಪಿಯನ್ ಕ್ರಮದನ್ನನುಸರಿಸುವಂತಾವರು ಅವರ ಭೋಜನಕ್ಕಾಗಿ ದಿನ ಒಂದಕ್ಕೆ ೨ರೂಪಾಯಿಗಳು ಕೊಡಬೇಕಾಗುವದು. ಔಷಧಶಾಲೆಯೊಂದು ಏರ್ಪಾದು ಮಾಡಲ್ಪಟ್ಟಿರುತ್ತದೆ. ಒಬ್ಬಡಾಕ್ಟರು ಯಾವಾಗಲೂ ಸದರೀಸ್ಥಳದಲ್ಲಿರುವನು. ಜನಗಳ ಆರೋಗ್ಯಕ್ಕೆ ಆವಶ್ಯಕಗಳಾದ ವಿಶಿಷ್ಟ ಏರ್ಪಾತುಗಳೂ ಮಾಡಲ್ಪಟ್ಟಿರುತವೆ, ಎಂಬದು.

ಈ ತಿಂಗಳ ಆಖೈರುಭಾಗದಲ್ಲಿ ಅಲಹಾಬಾದಿನಲ್ಲಿ ಕೂಡುವ ನೇಷನಲ್ ಕಾಂಗ್ರೆಸ್ ಸಭೆಗೆ ನಾನಾಪ್ರದೇಶದಲ್ಲಿ ನೋಡಿದರೂ ಅಲ್ಲಲ್ಲಿ ಜನಗಳೇನು, ಸಂಘಗಳೇನು, ತಮಗಾಗಿ ಕಾಂಗ್ರೆಸ್ಸಿನಲ್ಲಿ ವರ್ತಿಸಲು ಯೋಗ್ಯರಾದ ಪ್ರತಿನಿಧಿಗಳನ್ನು ಚುನಾಯಿಸುತ್ತಿರುತ್ತಾರೆ. ಈಸಾರಿ ಕಲ್ಕತ್ತಾದಲ್ಲಿ ಪ್ರಸಿದ್ಧ ವ್ಯಾಪಾರಿಗಳಾದ ಮೆಸ್ಟರ್ ಜಾರ್ಜ್ ಯೂಲ್ ಯೆಂಬ ಒಬ್ಬ ಯೂರೋಪಿಯನ್ ದೊಡ್ಡಮನುಷ್ಯರು ಸಭಾಧ್ಯಕ್ಷರಾಗಲು ಒಪ್ಪಿಕೊಂಡಿರುತ್ತಾರೆ. ಕಳೆದ ಮೂರುವರ್ಷಗಳಿಗಿಂತ ಈಸರ್ತಿ ಈ ದೇಶದಲ್ಲಿರುವ ಅನೇಕ ಯೂರೋಪಿಯನ್ ಯೂರೇಷಿಯನ್‌ದೊಡ್ಡಮನುಷ್ಯರು ಈಸಭೆಗೆ ಬರುತ್ತಾರಲ್ಲದೆ ಇಂಗ್ಲಾಂಡಿನಿಂದ ಕೆಲವುಮಂದಿ ಪಾರ್ಲಿಮೆಂಟ್ ಸಭಿಕರುಕೂಡಾ ಈ ಸಭಾಕಾರ್ಯವನ್ನು ನೋಡುವದಕ್ಕೆ ಬಯಸುತ್ತಿರುವರೆಂದು ತಿಳಿಯಬರುತದೆ. ಈ ಕಾಂಗ್ರೆಸ ಸಭೆಗೆ ವಿರೋಧವಾಗಿ ಕಾರ್ಯಭಾಗವನ್ನು ನಡೆಸುವ ಪ್ರವೃತ್ತಿ, ಅಲ್ಲಿ ನಡೆದಲ್ಲಿ ಸರ್ ಸಯ್ಯದ್ ಅಹಮದ್ ಎಂಬ ಪೆಟ್ರಿಯಾಟಿಕ್ ಅಸೋಸಿಯೇಷನ್ ಎಂಬ ಹೆಸರಿನಸಂಘವೊಂದನ್ನು ನಿರ್ಮಿಸಿ ನೇಷನಲ್ ಕಾಂಗ್ರೆಸ್ಸಿಗೆ ವಿರೋಧಗಳಾದ ಅನೇಕ ಸಂಗತಿಗಳನ್ನು ಅದರಮುಖೇನ ಉದ್ಘೋಷಿಸುವದಕ್ಕೆ ಪ್ರಾರಂಭಿಸಿದರು. ಇದನ್ನು ನೋಡಿ ಅನೇಕ ಪ್ರದೇಶಗಳಲ್ಲಿ ಮುಸಲ್ಮಾನರು ನೇಷನಲ್ ಕಾಂಗ್ರೆಸ್ಸಿಗೆ ಹಾಜರಾಗಕೂಡದೆಂದು ತೀರ್ಮಾನಿಸಿಕೊಂಡರು. ಈ ಪೆಟ್ರಿಯಾಟಿಕ್ ಅಸೋಸಿಯೇಷನ್ ಯೆಂಬ ಸಂಘಕ್ಕೆ ಆದಿಯಲ್ಲಿ ಮುಸಲ್ಮಾನರೇ ಮೆಂಬರ್ಗಳಾಗಿದ್ದರು. ಈಚೆಗೆ ಸರ್ ಸಯ್ಯದ್ ಅಹಮದ್‌ಯವರ ಪ್ರಾರ್ಥನಾಪ್ರಕಾರ ಹಿಂದುಗಳಲ್ಲಿ ಕೆಲವರುಕೂಡ ಅದಕ್ಕೆಸೇರಿದರು. ತರುವಾಯಮುಸಲ್ಮಾನರೂ ಹಿಂದುಗಳೂಸೇರಿ ಲಾಯಲ್ ಅಸೋಸಿಯೇಷನ್ ಯೆಂಬ ಮಿಳಿತಸಂಘವನ್ನು ಏರ್ಪಡಿಸಿದರು. ಈ ಸಂಘದದ್ವಾರಾ ಅವರು ನೇಷನಲ್ ಕಾಂಗ್ರೆಸ್ಸಿಗೆ ವಿರೋಧವಾಗಿ ಅನೇಕ ಚೇಷ್ಟೆಗಳನ್ನು ಜರಿಗಿಸಿದರು. ಇಷ್ಟರಲ್ಲಿಯೇ ದೈವಸಂಕಲ್ಪ ಬೇರೆಯಿದ್ದಕಾರಣ ಕಾಂಗ್ರೆಸ ವಿರೋಧಿಗಳ ಗುಂಪಿನಲ್ಲಿ ಭಿನ್ನಾಭಿಪ್ರಾಯಗಳು ಲೇಪೋಲಿ ಆಗುಂಪು ಒಡೆದುಹೋಯಿತು. ಈಗ ಅನೇಕ ಪ್ರದೇಶಗಳಲ್ಲಿ ಮುಸಲ್ಮಾನ್, ಹಿಂದು, ಪಾರ್ಸಿ, ಯೂರೋಪಿಯನ್, ಯೂರೇಷಿಯನ್, ಕ್ರಿಶ್ಚಿಯನ್ ಮೊದಲಾದ ಜಾತಿಗಳಲ್ಲಿ ದೊಡ್ಡಮನುಷ್ಯರು ಪ್ರತಿನಿಧಿಗಳಾಗಿ ಏರ್ಪಡಿಸಲ್ಪಟ್ಟಿರುತ್ತಾರೆ, ಈಸಾರಿ ಅಲಹಾಬಾದಿನಲ್ಲಿ ನಡೆಯುವ ಸಭೆಯು ಅತಿ ಸಂಭ್ರಮವಾಗಿರುವದೆಂಬುವದಕ್ಕೆಸಂಶಯ ತೋರ.ವದಿಲ್ಲವು.—ವಿಜಯಧ್ವಜ.

☞ BANGALORE:—Printed and published at the KARNATIC PRESS, No. 44, HOSPITAL ROAD, PETTA.—1888.